ಕರ್ನಾಟಕ ಸರ್ಕಾರ

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು



೬

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮತ್ತು

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ ಹಿಂಭಾಗ

ಮಲ್ಲತ್ತಹಳ್ಳಿ, ಬೆಂಗಳೂರು-560 056

PÀ£ÀßqÀ ¸ÀÄ®¨sÀ ¸Á»vÀå ªÀiÁ¯É 94
«ZÁgÀ ¸Á»vÀå ªÀiÁ¯É 16

# qÁ. ¨Á¨Á ¸Á»ç©ü CA¨ÉÃqÀÌgï CªÀgÀ
# ¸ÀªÀÄUÀæ §gÀºÀUÀ¼ÀÄ

ªÀÄvÀÄÛ

# ¨sÁµÀtUÀ¼ÀÄ

¸ÀA¥ÀÄl 6

# ¸A¥Áz£ ¸«Äw

| | |
|---|---|
| CzåPëgÄ, PÄªAªÅ ¨ÁµÁ ¨Ágw ¥Á¢PÁg | CzåPgÄ |
| qÁ. ¹z|°AUAiÄå | ¸z¸ågÄ |
| qÁ. zÃª£Æg ªÄºzÃª | ¸z¸ågÄ |
| ¤zðÃ±PgÄ, P£ßq ªÄvÄ ¸A¸ìøw E¯ÁS | ¸z¸å PÁAiÄðz²ðU¼Ä |

# qÁ. ¨Á¨Á¸ÁºÉÃ§ CA¨ÉÃqÀÌgï CªÀgÀ
# ¸ÀªÀÄUÀæ §gÀºÀUÀ¼ÀÄ

ªÀÄvÀÄÛ

# ¨sÁµÀtUÀ¼ÀÄ

(¸ÀA¥ÀÄl 6)


PÀ£ÀßqÀ ªÀÄvÀÄÛ ¸ÀA¸ÀÌøw E¯ÁSÉ

ªÀÄvÀÄÛ

PÀÄªÉA¥ÀÄ ¨sÁµÁ ¨sÁgÀw ¥ÁæPÁgÀ

P¯ÁUÁæªÀÄ, eÁÕ£À¨sÁgÀw

¨ÉAUÀ¼ÀÆgÀÄ «±Àé«zÁå®AiÀÄ DªÀgÀt »A¨sÁU, ªÀÄ®èvÀºÀ½î

¨ÉAUÀ¼ÀÆgÀÄ - 560 056

**Dr. Baba Saheb Ambedkar Avara Samagra Barehagalu Mattu Bhashanagalu: Samputa 6** — Kannada translation of Collected Works of Baba Saheb Ambedkar; Published by **Kannada Mattu Samskruti Ilakhe**; **Kuvempu Bhasha Bharati Pradhikara**, Kalagrama, Jnanabharathi, Behind Bangalore University Campus, Mallattahalli, Bangalore - 560 056 ; Third Edition : 2015; Pp. xxxii + 907; Price: Rs. 50/-.

© : ºPÀÄÜ¼£ÀÄ PÁ¢jºz

ªÀÄÆg£Ã ªÀÄÄzt : 2015
¥ÀÄlU¼À : xxxii + 907
¨É : gÆ. 50/-
¥wU¼À : 5000

¥PÁ±PgÀÄ :
PÀ£ÀßqÀ ªÀÄvÀÄÛ ¸ÀA¸ÀÌöÈw E¯ÁSÉ
ªÀÄvÀÄÛ
PÀÄªÉA¥ÀÄ ¨sÁµÁ ¨sÁgÀw ¥ÁæPÁgÀ
P¯ÁUÁæªÀÄ, eÁÕ£À¨sÁgÀw
¨ÉAUÀ¼ÀÆgÀÄ «±Àé«zÁå®AiÀÄ DªÀgÀt »AzÉ
ªÀÄ®èvÀ̽î, ¨ÉAUÀ¼ÀÆgÀÄ - 560 056
zÀÆ. : 23183311, 23183312

ªÀÄÄR¥ÀÄl «£Áå¸À : ªÀÄ£ÀÄ gÁeÁ ¦æAlgïì

ISBN : 978-81-906513-5-6

ªÀÄÄzÀPgÀÄ :
ªÀÄ£ÀÄ gÁeÁ ¦æAlgïì
£ÀA. 59, 4£Ã PÁæ¸ï, ¯Á¯ï¨ÁUï gÀ¸ÉÛ
P.J¸ï. UÁqð£ï, UÁAUÁzgÀ¥Éà ¨ÁPï
¨ÉAUÀ¼ÀÆgÀÄ - 560 027
zÀÆ: 080-22234066, 080-22219965

PÀ£ÁðlPÀ ¸ÀPÁðgÀ

¹zÀÝgÁªÀÄAiÀÄå
ªÀÄÄRåªÀÄAwæUÀ¼ÀÄ

«zsÁ£À¸ËzsÀ
¨ÉAUÀ¼ÀÆgÀÄ - 560 001
¢£ÁAPÀ : 05.06.2015

¹JA/¦J¸ïï/150/2015

# ¸ÀAzÉñÀ

DzÀ¤PÀ PÀ£ÀßqÀ ¸Á»vÀåzÀ CvÀå£ÀÄßvÀ ¸Á»vÀåPÀ ¸ÁzÀ£ÉAiÀÄ ¥ÀwÃPÀªÁVgÀÄªÀ gÁµÀÖPÀ« qÁ. PÀÄ¥ÉàªÀAPÀlÖ¥Àà ¥ÀÄlÖ¥Àà CªÀgÀ ºÀ¸ÀÛ¥Àæw ¸ÀA¦vÀªÁVgÀÄªÀ PÀªÀA¥ÀÄ ¨sÁµÁ ¨sÁgÀw ¥ÁæPÁgÀªÀÅ ¸Á»vÀåPÀ, ¸ÁA¸ÀÌøwPÀ, ªÉÊeÁ¤PÀ ªÀÄvÀÄÛ vÁAwæPÀ ªÀÄºÀvÀézÀ UÀæxÀUÀ¼À£ÀÄß ºÉÆgÀvÀgÀÄªÀ ¢QÌ£À°è ºÉÆ¸À zÁR¯ÉAiÀÄ£ÀÄß ¸ÀÈ¦ü¸ÀÄvÀÛ ªÀÄÄ£ÀßqÉAiÀÄÄwÛgÀÄªÀÅzÀÄ CvÀåAvÀ ¸ÀAvÀ¸ÀzÀ ¸ÀAUÀwAiÀiÁVzÉ.

««zÀ «zÁ²Ã ªÀÄvÀÄÛ ¨ÁgÀwÃAiÀÄ ¨sÁµÁ-¸Á»vÀåUÀ¼À CvÀÄåvÀÛªÀÄ PÀÈwUÀ¼À£ÀÄß PÀ£ÀßqÀ ¨sÁµÉAiÀÄ°è ºÁUÉ PÀ£ÀßqÀzÀ ±ÉæµÀ× PÀÈwUÀ¼À£ÀÄß EvÀgÀ ¨sÁµÉUÀ½°è ºÉÆgÀvÀgÀÄwÛgÀÄªÀ £ÀªÀÄä PÀªÀÄ¥ÀÄ ¨sÁµÁ ¨sÁgÀw ¥ÁæPÁgÀªÀÅ gÁµÀÖç ¥À±ÀÑ¹ ¥ÀÄgÀ¸ÀÌøvÀ ¯ÃRPÀgÀ ºÁUÀÆ PÀ£ÀßqÀzÀ EvÀgÀ ¥Àw¶ÖvÀ ¯ÃRPÀgÀ CvÀÄåvÀÛªÀÄ ¥ÁwæPÀ gÀZÀ£ÉU¼À ¸ÀAZÀAiÀÄUÀ¼À£ÀÄß ºÉÆgÀvÀgÀÄwÛgÀÄªÀÅzÀÄ C©£ÀAzÀ¤ÃAiÀÄ ªÀÄvÀÄÛ C£ÀÄPÀgÀtÂAiÀÄÆÃUÀå. PÀÄªÀA¥ÀÄ, ¥ÀÄ. w. £Àg¹AºÁZÁgïï ªÀÄvÀÄÛ f. J¸ï. ²ªÀgÀÄzÀæ¥Àà CªÀgÀ ¸ÀAZÀAiÀÄUÀ¼À£ÀÄß FUÁUÀ¯Éà ¥ÀPn¹gÀÄªÀ PÀªÀA¥ÀÄ ¨sÁµÁ ¨sÁgÀw ¥ÁæPÁgÀªÀÅ E¤ßvÀg eÁ£À¦æAo ¥Àæ±À¹Û ºÁUÀÆ ¸Àg¸ÀwÃ ¸ÀªÀiÁ£Àï ¥Àæ±À¹Û ¥ÀÄgÀ¸ÀÌøvÀg ¸ÀAZÀAiÀÄUÀ¼À£ÀÆß ¹zÀÝ¥Àr¸ÀÄwÛgÀÄªÀÅzÀÄ £À£ÀUÉ C©ªÀiÁ£À ªÀÄvÀÄÛ ºÀªÀÄð ªÀÄÆr¹zÉ.

EªÀÅUÀ¼À®èzÉ »A¢ ªÀÄvÀÄÛ EAVèµïï DªÀÈwÛUÀ¼ÀÄ ¥ÀPÀlªÁzÀÄzÀÄ PÀ£ÀßqÀ »jªÀÄ ªÀÄvÀÄÛ UjªÀÄ ¸Ág¸ÀvÀ ¯ÉÆÃPÀzÀ°è ªÀÄvÀÛµÀÄ ¥Àd°¸À°zÉ. eÁ£À, «eÁ£À ºÁUÀÆ vÀAvÉeÁ£À PÉëvÀU½UÉ PÉÆqÀÄUÉAiÀiÁUÀ§®è ªÀÄºÀvÀé ªÀiËèPÀ PÀÈwUÀ¼À£ÀÄß PÀªÀA¥ÀÄ ¨sÁµÁ ¨sÁgÀw ¥ÁæPÁgÀªÀÅ ªÀÄvÀÛµÀÄ ºÉÆgÀvÀgÀ° JA§ÄzÀÄ £À£ÀßªÀÄ ¸ÀPÁðgÀzÀ ¸ÀzÁ±ÀAiÀÄ.

¨ÁgÀvÀzÀ ¸ÀA«zsÁ£À ²°à ¨ÁgÀvÀgÀvÀß qÁ. ©. Dgïï. CA¨ÉÃqÀÌgïï CªÀgÀ J¯Áè §gÀºÀUÀ¼À£ÀÄß ªÀÄvÀÄÛ ¨sÁµÀtUÀ¼À£ÀÄß PÀ£ÀßqÀ ¨sÁµÉUÉ C£ÀÄªÀÁ¢¹ ¥ÀPn¸ÀÄªÀ AiÉÆÃd£ÉAiÀÄ£ÀÄß AiÀÄ±À¹éAiÀiÁV C£ÀÄµÁ×£ÀUÉÆ½¹zÀ PÀªÀA¥ÀÄ ¨sÁµÁ ¨sÁgÀw ¥ÁæPÁgÀ ºÁUÀÆ ¨sÁµÁAvÀgÀ ºÉÆuÉ ºÉÆvÀÛ C£ÀÄªÁzÀPÀ PÁAiÀÄðªÀ£ÀÄß CZÀÄÑPÀmÁÖV ¤ªÀð»¹zÀ J¯Áè ¸ÀzÀ¸ÀåjUÉ £À£Àß CPÀÌgÀAiÀÄ C©£ÀAzÀ£ÉUÀ¼ÀÄ ºÁUÀÆ DwäÃAiÀÄ ªÀAzÀ£ÉUÀ¼ÀÄ.

(¹zÀÝgÁªÀÄAiÀÄå)

P£ÁðlP ¸PÁðg


ºÉï. DAd£ÃÉÄiÀ

¸ªiÁd P¯Áåt ªÄvÀÄ

»AzÀÄ½z ªUÀðU¼ P¯Áåt ¸aªgÀ

ºÁUÆ

avzÀUð f¯Á G¸ÀªÁj ¸aªgÀ



zÆ.¸A. 080 2235 3104

2203 3988

PÆor ¸ASå: 340/340J,

3£Ã ªÀºr, «zÁ£ ¸Ëz,

¨AU¼ÆgÀ - 560 001


¢£ÁAP: 12.1.2016

# ¸ÀÀzÉñÀ

£ªÀÄ ¸Ävt ¸ªiÁdzº EgÀª C¸ªiÁ£vU½U PÁgtU¼Ã£Ã Egº, D C¸ªiÁ£vAiÀÄ ¨¼AiÀÄª ªÀP¼ zÊ»P ªÄvÀ ªiÁ£¹P «PÁ¸P CrU¼£ÀB GAIÀ ªiÁq¨ÁgzÀ. EAvº CrU¼À EgzAv £ÆÃrPÆ¼®À ¸PÁðgU¼À vP AiÆÃd£U¼£ÀB gÆ¦¹PÆAqÀ eÁjU PÆqÀwª. PÁðlP ¸gPÁgªÇ PÆq v£B ¸ªiÁd P¯Áåt E¯ÁSAiÀ ªÀÆ®P F ¤n£º º®ªÀ AiÆÃd£U¼£ÀB C£ÄµÁ£UÆ½¹z. £Ár£ ¥j²µ eÁw ªÄvÀ ¥j²µ ¥AUqU¼ ªÀP¼À Nz£ÀB ªÀÄAzÀªj¸®À C£ÀPÆ®ªÁUÀªAv «zÁåyð¤®AiÀU¼£ÀB £q¸ÀwzÀ. ®PÁAvg ªÀP¼À F «zÁåyð¤®AiÀ U¼ºzÀPÆAqÀ vªÀ ²Ptª£ÀB ªÀÄAzÀªg¸ÀwzÁg. Cªg ¨ËwP CUvåU½U ¨ÃPÁz J® ¸Ë®¨åU¼À Cº zÆgPÀªAv £ÆÃrPÆ¼¯ÁVz.

Eª®zg eÆvU D «zÁåyðU½U ¨Ë¢P ¨¼ªtUU ¨ÃPÁz CªPÁ±U¼£ÀB Pº¸ÀªÀzÀ PÆq E¯ÁSAiÀ ºÆuAiiÁVz. F ¤n£º E¥v£AiÀ ±vªiÁ£z ¢ÃªÀÄAv aAvPgÁV J® §UAiÀ C¸ªiÁ£vU¼ «gÀz ¤gAvg ºÆÃgÁl ªiÁrz ¨Á¨Á¸Áº̈ Ã¨ï qÁ. ©. Dgï. CA¨Ãqgï Cªg «ZÁgU¼ ¥jZAiÀªiÁrPÆqÀªÀzÀ CUvåª¤¹ E¯ÁS MAzÀ AiÆÃd£AiÀ£ÀB gÆ¦¹vÀ. CA¨Ãqgï Cªg J® §gºU¼À ªÄvÀ ¨ÁµtU¼À P£ßq C£ÀªÁzz ¸A¥ÀlU¼£ÀB F «zÁåyð¤®AiÀU½U MzV¸ÀªÀzÃ F AiÆÃd£. gÁdåz ªiÁ£å ªÀÄRåªÀÄAwU¼À 2015-16£Ã ¸Áº£ ªµðz vªÀ DAiÀªÀAiÀª£ÀB ªÀAq£ ªiÁqÀªÁU F AiÆÃd£AiÀ£ÀB WÆÃ¶¹zgÀ. CzgAv F ¸A¥ÀlU¼£ÀB CZÀªiÁr «zÁåyð¤®AiÀU½U MzV¸Àª ºÆuAiÀ£ÀB P£ßq ªÄvÀ ¸A¸Ìw E¯ÁSU ª»¸¯Á¬ÄvÀ. P£ßq ªÄvÀ ¸A¸Ìw E¯ÁSAiÀÄ F ¸A¥ÀlU¼£ÀB C£ÀªÁ¢¹ ¥Pn¸Àª P®¸ª£ÀB PÀªA¥À ¨ÁµÁ ¨Ágw ¥Á¢PÁgP ª»¹vÀ. FU F ¸A¥ÀlU¼£ÀB ¹zÀUÆ½¹ ¥Á¢PÁgªÀ v£ß ºÆuAiÀ£ÀB AiÀ±¹AiiÁV ¥Ægå¹z.

F AiÆÃd£U ZÁ®£AiÀ£ÀB ¤Ãrz gÁdåz ¸£Á£å ªÀÄRåªÀÄAwU½U, PÁAiÀðgÆ¥P vAz P£ßq ªÄvÀ ¸A¸Ìw E¯ÁSAiÀ ªiÁ£å ¸aªjU ªÄvÀ PÀªA¥À ¨ÁµÁ ¨Ágw ¥Á¢PÁgP C©£Az£U¼£ÀB ¸º¸ÄvÃ£.

(ºÉï.DAd£ÃÉÄiÀ)

P£ÁðlP ¸PÁðg

# GªÀÄ²Ãæe

ªÀÄ»¼Á ªÀÄvÀÄ ªÀÄPÀ¼À C©ªÀÈ¢Ý
«P®ZÃv£g ªÀÄvÀÄ »jAiÀÄ £ÁUÀjPg
¸§°ÃPgt, P£ßq ªÀÄvÀÄ ¸A¸Æw ¸aªgÀÄ

zÆgªÁt: PbÃj : 22255282
22033469
PÆor ¸ASÉ: 252, 2£Ã ªÀÄºr
«zÁ£ ¸Ëz, ¨AUÀ¼ÆgÀÄ

¸A: ªÀÄ.ªÀÄ.C.P.¸A.¸/248/2015

¢£ÁAP: 04.6.2015

## ¸ÀAzÉñÀ

gÁµÀÖP« ²Ã PÀÄªA¥ÀÄ Cªg º¸j£° PÉÁðlP ¸PÁðg ¸ÁÌ¦¹gÀÄª PÀÄªA¥ÀÄ ¨ÁµÁ ¨Ágw ¥Á¢PÁg, «eÁ£ - vAveÁ£ ªÀÄvÀÄ ¸Á»vÀ «µAiÀÄUÀ½U ¸A§A¢¹zAv £ÆgÁgÀÄ ªÀÄºvÀz ªiË°P ºÁUÆ C£ÀÄªÁ¢v UAxU¼£ÀÄß ºÆgvA¢gÀÄªÀzÀÄ vÀÄA§ ±ÁW¤ÃAiÀÄ «ZÁgªÁVz. P£ßrUjU ¨ÁgwÃAiÀÄ ¸Á»vÀz ªÀÄvÀÄ «±¸Á»vÀz ªÀÄºvÀz PÈwU¼£ÀÄß ¥jZ¬Ä¹PÆqÀÄª PÁAiÀÄðU¼ eÆvU gÁ¶ÃAiÀÄ ¥±¹-¥Äg¸ÁgU¼£ÀÄß U½¹gÀÄª £ªÀÄ ¯ÃRPg ¥Áw¤¢P ¸AP®£U¼£ÀÄß ºÆgvAzÀÄ CªÀU¼£ÀÄß ¨Ãg ¨ÁµU¼° ¥Pn¸ÀwgÀÄªÀzÀÄ vÀÄA§ ªÀÄºvÀz PÁAiÀÄðªÁVz.

P£ßq ªÀÄvÀÄ ¸A¸Æw E¯ÁSAiÀÄ ªÀÄºvÁPÁAPAiÀÄ AiÆÃd£U¼° ¨ÁgvgvÀß ¨Á¨Á ¸ÁºÃ¨ï qÁ. ©. Dgï. CA¨ÃqÌgï Cªg §gº ªÀÄvÀÄ ¨ÁµtU¼£ÀÄß P£ßqz° C£ÀÄªÁ¢¹ ¥Pn¸ÀÄªÀzÀÄ MAzÁVz. F AiÆÃd£AiÀÄ£ÀÄß ¤ªð»¸®Ä ¸®ºÁ ¸«ÄwAiÆAz£ÀÄß gÆ¦¸¯ÁVz. F ¸«ÄwAiÀÄ £ÃvÈvz° C£ÀÄªÁ¢v PÈwU¼£ÀÄß ºÆgvA¢gÀÄª PÀÄªA¥ÀÄ ¨ÁµÁ ¨Ágw ¥Á¢PÁgª£ÀÄß E¯ÁSAiÀÄ ¥gªÁV C©£A¢¸ÄvÃ£. ¥PlªÁz J® ¸A¥ÄlU¼À d£ªÀÄ£ßu U½¹ª. CªÀU¼£ÀÄß ªÄgÀÄªÀÄ¢¹ NzÀUjU MzV¸®Ä £ªÀÄ E¯ÁSAiÀÄÀ ªÀÄÀAzÁVz ªÀÄvÀÄ F ºÆuAiÀÄ£ÀÄß PÀÄªA¥ÀÄ ¨ÁµÁ ¨Ágw ¥Á¢PÁgPÌ ¤Ãrz. ¥Á¢PÁgªÀ FU F ¸A¥ÀlU¼£ÀÄß NzUg ªÀÄÀAz Ej¹z. EzPÁV ¸A§A¢¹z J®g£Æß E¯ÁSAiÀÄ ¥gªÁV C©£A¢¸ÄvÃ£.

(GªÀÄ²Ãæe)

P£ÁðlP ¸PÁðg

qÁ. J£ï.J¸ï. ZÀAzÀæ±ÉÃRgï ¨Á.D.¸Ã.,
¸PÁðgz PÁAiÀðz²ðU¼Ä
P£ßq, ¸A¸Ìøw ªÀvÀ ªÁvÁð E¯ÁS

PÆor ¸ASÉ: 3, £®ªÀÄºr
«PÁ¸¸Ëz
¨AU¼ÆgÀ - 560 001
ªÆ.: +91 80 22034002
¥ÁPï: +91 80 22353105

# ºÁgÉÊPÉ

gÁµÀP« ²Ã PÀªA¥Ä Cªg º¸j£º ¸Á¦vªÁVgÀª PÀªA¥Ä ¨ÁµÁ ¨Ágw ¥Á¢PÁg, PÀªA¥Ä Cªg D±AiÀzAv ¸Á»vÀ, ¸A¸Ìøw ªÀvÀ eÁ£-«eÁ£ PÃvU½U ªÀºvz PÆqÀUAiiÁU§®Ax UAxU¼£ÀÄß ºÆgvgÀwgÀªÁzÀ vÀA§ ªÀºvz ¸AUwAiÀÃ DVz. Evg AiiÁª ¨ÁµU¼®Æ E£Æß ºÆg§gzÃ EgÀª «¯ï qÆÃgÁAmï Cªg '£ÁUjPvAiÀ Px', e. r. §£Áð¯ï Cªg 'EwºÁ¸zº «eÁ£'zAx ªÀºvz ¸A¥ÄlU¼£Æß, eÁ£¦Ão ¥±¹ ¥Äg¸Ìøvg ªÀºvz gZ£U¼£ÀÄß M¼UÆAq ¸AZAiÀU¼£Æß ºÆgvgÀwgÀªÁzÆ, £Ár£ Evg ¥w¶v ¸A¸ÜU¼ÆA¢U ¸A§AzªÁ£ÀÄß K¥ðr¹PÆAqÀ ªÀºvz PÈwU¼£ÀÄß ¨¼QU vgÀwgÀªÁzÆ P£ÁðlP ¸PÁðgPÌ ªiÁvª®z, P£ßq d£vU ºªÀAiÀ£ÀÄß vgÀªAx ¸AUwAiiÁVgÀvz.

EzÀªgU ¥PlªÁVgÀª qÁ. ©. Dgï. CA¨ÃqÌgï Cªg §gº ªÀvÀ ¨ÁµtU¼£ÀÄß P£ßqPÌ C£ÀªÁ¢¸Àª AiÆÃd£AiÀ£ÀÄß PÈUÆAqÀ, CªÀU¼£ÀÄß ºÆgvgÀwgÀªÁzÀ ºÁUÆ EzÀªgU ¥PlªÁU¢gÀª CA¨ÃqÌgï Cªg aAv£U¼£ÆÃ¼UÆAq Evg ¸A¥ÄlU¼£ÀÄß ºÆgvgÀª PÁAiÀðª£ÀÄß º«ÄPÆArgÀªÁzÀ «±ÃµªÁV ¸ÀvÀºðªÁz PÁAiÀðªÁVz. E¥vgqÀ ¸A¥ÄlU¼º º®ªÀ FUÁU¯Ã ºÆg§A¢zÀ P£ßq NzÀUg ªÀZÀUU ¥ÁvªÁVª. P£ÁðlP ¸PÁðgªÀ F ¸A¥ÄlU¼£ÀÄß ªÀgÀ ªÀÀ¢¸Àª AiÆÃd£U CUvÀªÁz C£ÀzÁ£ª£ÀÄß P£ßq ªÀvÀ ¸A¸Ìøw E¯ÁSAiÀ ªÀÆ®P PÀªA¥À ¨ÁµÁ ¨Ágw ¥Á¢PÁgPÌ MzV¹z. FU F J® ¸A¥ÄlU¼Ä ºÆ¸ ªÀgÀV£ÆA¢U ¥PlUÆ¼ÀwgÀªÁzÀ ¸Av¸z ¸AUwAiiÁVz.

Mn£º ¸Á»vÀ-¸A¸Ìøw-«eÁ£ vAveÁ£U¼ ¨¼ª tUAiÆA¢U Dz±ð jÃwAiÀº ¥Á¢PÁg ºeÌ ºÁPÀvÁ ªÀÀ£ßqAiÀ¯AzÆ, ºÆ¸-ºÆ¸ «PªÀU¼£ÀÄß ¸Á¦¸¯AzÆ ºÁgÉ¸ÀvÃ£.

(qÁ. J£ï.J¸ï. ZÀAzÀæ±ÉÃRgï)

²ÃæPÉJ. zÀAiÀiÁ£ÀAzÀ
¤zÉðÃ±PgÀ
P£Àßq ªÀÄvÀÄ ¸ÀA¸ÀÌøw E¯ÁSÉ

PÀ£ÁðlP ¸PÁðg

P£Àßq ¨ª£, e.¹. g¸,
¨AUÀ¼ÆgÀÄ - 560 002
¢£ÁAP : 10.6.2015

# ¸ÀAzÉñÀ

P£ÁðlP ¸PÁðg PÄªA¥Ä ¨ÁµÁ ¨Ágw ¥Á¢PÁgª£Àß ¸ÁÜ¦¹ ¸Á»wÛP-¸ÁA¸ÀÌøwP ZlÄªnPU½U ºÆ¸ DAiiÁªÀU¼£Àß ¤Ãr z. P£ÀßqzÆq£ ¨ÁgwÃAiÄ ºÁUÆ «zÃ²ÃAiÄ ¨ÁµU¼ £qÄª t ¸A§AzU¼£Àß ¨¼¹PÆAqÄ §gÀªÀzÄ, D ¨ÁµU¼ ±Ãµ PÈwU¼£Àß P£ÀßqPÌ vgÀªÀzg ªÀÆ®P P£Àßq ¸Á»vÀª£Àß ¸Aª¢ÞUÆ½¸ÀªÀzÄ; P£Àßq ¸Á»vÀz ±Ãµ PÈwU¼£Àß Evg ¨ÁµU½U PÆAqÆAiÀÄªÀzÄ; ªiÁ£«P, ªÉeÁ¤P ªÀvÄ vÁAwP PÃvU¼º P£Àßqz §¼PU ¥ÇÃvÁº ¤ÃqÄªAx PÁAiÀðPªÀU¼£Àß º«ÄPÆ¼ÀªÀzÄ ªÀvÄ ¸ÆP ¥PluU¼£Àß ºÆgvgÀªÀzÄ F ¥Á¢PÁgz ªÀÄRå zÃAiÆÃzÀ±ªÁVgÀvz. EzP ¥ÆgPªÁV ªÀvÄ ¥ÆÃµPªÁV gÁ¶ÃAiÄ ¥ÁzÃ²P «ZÁgUÆÃ¶U¼£Àß K¥ðr¸ÀªÀzÄ F zÃAiÀU¼ CAUªÃ DVz. EAvº PÁAiÀðPªÀU¼£Àß AiÆÃf¸ÀwgÀª ºÁUÆ «±«zÁ®AiÀU¼ ªiÁ£vAiÀ£Àß ¥qzÀPÆAqÄ F ±ÉPtP PÁAiÀðPªÀU¼£Àß ªÀÄAzÄªj¹PÆAqÄ ºÆÃUÀwgÀª «ZÁg £EU ªÉAiÄQPªÁVAiÀÆ vÀA§ ¸AvÆÃµª£ÀßAlÄªiÁr z.

F P®ªÃ ªµðU¼º PÄªA¥Ä ¨ÁµÁ ¨Ágw ¥Á¢PÁg ºÆgvA¢gÀª ¥PluU¼Ä vÀA§ ªÄºvzªÃ DVª. «¯ï qÆ®gÁAmï Cªg `£ÁUjPvAiÄ EwºÁ¸', e.r.§£Áð¯ï Cªg `«eÁ£z EwºÁ¸' ¸A¥ÄlU¼Ä AiiÁªÀzÃ ¨ÁµU UÈgª¥ÁAiÄªÁz PÈwU¼Ã DUÀvª. CAx ¸Áº¸ª£Àß ¨ÁgwÃAiÄ ¨ÁµU¼º ªÆz® ¨ÁjU DUÄªiÁqÀwgÀªÀzÄ «±ÃµªÁV C©£Az¤ÃAiÄªÁz PÁAiÀðªÁVz. ¨Ágvgvß qÁ. ©. Dgï. CA¨ÃqÌgï Cªg C£ÄªÁ¢v PÈwU¼ ¥jµÌgt AiÆÃd£ ªÀvÄ Cªg Evg ¸A¥ÄlU¼ ºÆ¸ C£ÄªÁzz ¥Plu AiÆÃd£, PÈµÁ LwÃ¦ð£ P£Àßq C£ÄªÁz AiÆÃd£ ªÀÄAvÁzªÀ - ºÆ¸ «PªÄª£Àß ¸ÁÜ¦¸ºª.

¥Á¢PÁgªÀ ¥Pn¹zÌ `qÁ. CA¨ÃqÌgï Cªg §gºU¼Ä ªÀvÄ ¨ÁµtU¼Ä' ªiÁ°PAiÄ º®ªÀ ¸A¥ÄlU¼Ä FU ªÄg½ ªÀÄ¢vªÁUÀwª. F ¸A¥ÄlU¼Ä NzÄUjU ¸zÁPÁ®ªÀ zÆgAiÀÄwg¨ÃPA§ÄzÄ P£Àßq ªÀvÄ ¸A¸ÀÌøw E¯ÁSAiÄ UÀjAiiÁVz. CzPÁV CUvÀªÁz C£ÄzÁ£ª£Àß E¯ÁSAiÀÄ ¥Á¢PÁgPÌ ¤Ãr z. F ¸A¥ÄlU¼£Àß ¹zÞ¥r¸®Ä £gªÁz ¸®ºÁ ¸«ÄwAiÄ ¸z¸ÀjU, C£ÄªÁzPjU ªÀvÄ ¥Á¢PÁgPÌ ££ß C©£Az£U¼Ä ¸®Ävª.

ªÀÄAzAiÀÆ PÄªA¥Ä ¨ÁµÁ ¨Ágw ¥Á¢PÁg EAx «²µ PÁAiÀðPªÀU¼£Àß, ªÄºvz ¥PluU¼£Àß ºÆgvgÀª PÁAiÀðPªÀU¼£Àß AiÀ±¹AiiÁV £q¹PÆAqÄ §g°, P£Àßq £Ár£ ªÄa£ ¸Á»vP-¸ÁA¸ÀÌøwP ¸A¸AiiÁV ¨¼AiÄ° JAzÄ ºÁgÉ¸ÀvÃ£.

# ¥ÀjµÀKªÀÄzÀæPÉÀ£Àr

qÁ. ¨Á¨Á ¸ÁºÃ¨ï CA¨ÃqÀgï (1891 jAz 1956) vªÀÄ PÁ®ªÀiÁ£ª£ÀÄ ªÀÄn¤AvÀ UÆÃ¥ÀgÆÃ¥ªÀÄªÁV ¨¼zÀ¤Av ªÀÄºÁªÀiÁ£ªgÀ° M§gÀ. gÁ¶ÃAiÀÄvÁªÁ¢AiiÁV, PÁ£Æ£À vdÕgÁV, gÁdQÃAiÀ £ÃvÁggÁV, QAiiÁ²Ã® ¸ÁªiÁfP PÁAiÀðPvðgÁV, ±Ãµ EwºÁ¸PÁggÁV, ªÀºÁ zÁ±ð¤PgÁV, C¥wªÀ aAvPgÁV, ªiÁ£ª±Á¸dgÁV, SÁåv Cxð±Á¸dgÁV, ¸ªÀÄz §gºUÁggÁV, PÁAwPÁjAiiÁV, C¸ÁªiÁ£ ªÁPÌÀªÁV, ¨Ëz zªÀðz ¥Ä£gÀfÃªPgÁV, ¨ÁgwÃAiÀ ¸A«zÁ£z ¥ªÀÄR ²°AiiÁV CªgÀ ªiÁrgÀª ªÀºvg ¸Áz£U¼£ÀÄ UªÀ¤¹zg, M§ ªQ MAzÀ fÃªªiÁ£z° Eµ® ¸Áz£U¼£ÀÄ ªiÁq®À ¸ÁzªÃ JAzÀ ¨gUÁV ¤®ÀªAv DUÀvz. DzÀ¤P Cxðz° Cªg£ÀÄ `¥ªÁq ¥gÀµ'gAzÃ º¸j¸¨ÃPÁUÀvz.

¸ÁªiÁfP ¨Ãz¨ÁªPÆ¼UÁV £g¼Àwz §q PÀÌÀA§z° ºÀnz CªgÀ vªÀ ErÃ fÃªªiÁ£ª£ÀÄ F ¸ÁªiÁfP ¨Ãz¨ÁªP, ¸ªiÁdz J® ¦qÀUÀU½UÆ PÁgtªÁVgÀª eÁw¥zwAiÀ «gÀzªÁV ºÆÃgÁqÀªzP «ÀÃ¸¯ÁV Eq¨ÃPÁ¬ÀvÀ. vªÀ F C«gv ºÆÃgÁÌ¢Az, F »A¢£ ¸ªiÁd ¸ÀzÁgPgÀ AiiÁgÆ ¸Á¢¸¢zAx ªÀºÁPÁAwAiÀ£ÀÄ J¸V ºÆ¸ EwºÁ¸ª£Ã ¸¶¹zgÀ. ¸ÁªiÁfP-DyðP ¸APµU¼£ÀÄ «ÀÃj ¤AvÀ C£ÃP ¥xªÀU¼£ÆÄ CªgÀ ¸Á¢¹zgÀ. PÁ¯ÃdÀ ²Ptª£ÀÄ ¥qz z°vg°AiÀÆ ªÆz°UgÁVzªg° CªgÀ ¥ªÀÄRgÁzgÀ. £ÁAiÀ±Á¸, Cxð±Á¸, gÁd±Á¸ ¸A§AzªÁz vªÀ CzAiÀ£ ªÀvÀ ¸A±ÆÃz£U½AzÁV PÆ®A©AiiÁzAx «±«zÁ¤®AiÀ¢Az, ®Aq¤£ Cxð±Á¸ ±Á¯¬ÀAz qÁPÆgÃmï ¥z«U¼£ÀÄ ¥qz ªÀºÁªÀÄzÁ«U¼®Æ CªgÆ§gÁzgÀ. »ÃU ±Ãµ «zÁA¸gÁV ¨ÁgvP »A¢gÀV §Az CªgÀ ¸ªiÁdz P¼ªUðU¼ ¸ÁªiÁfP ¸ÁvAv÷PÁV, gÁdQÃAiÀ ºPÀU½UÁV Cº¤ð² zÀrzgÀ. §gºU¼-¨Áµt U¼ ªÀÆ®P, ªZÁjP ZZð-¸AªÁzU¼ ªÀÆ®P ¸ÁªiÁfP-gÁdQÃAiÀ eÁUwAiÀ£Ã ªÀÆr¹zgÀ; `DzÀ¤P ¨ÆÃ¢¸v'gA§ QÃwðUÆ ¥ÁvgÁzgÀ. ¸ªiÁdz J® ªUðU¼°, ««z zªÀðU¼° ¥vPªÁV, ¥Z£ªÁV ¨ÃgÀ©nz ¸ÁªiÁfP PqPÀU¼ «gÀz z¤AiÀwz »jªÀAiÀÆ CªgzÁVz. CAwªÀªÁV zñ «¨d£AiÀ C¤ªÁAiÀðvAiÀ£ÀÄ M¦zgÁzgÆ, Czg ¨AiiÁ£P ¥juÁªÀU¼ «gÀz JZjPAiÀ UAmAiÀ£ÆÄ CªgÀ ªÆz¯Ã ªÆ¼V¹zgA§ÀzÀ UªÀ£ÁºðªÁz ¸AUw.

§ÀzÌ, P©Ãgï, K¸À, C±ÆÃP, ²ªÁf, eÁeïð ªÁ¶AUïÌ£ï, xÁªÀ¸ï ¥Ã£ï, C§ºÁA °AP£ï, JqAqï §Pïð, ªiÁnð£ï ®Æxgï, ±ÁºÆ ªÀºÁgÁeï, ªÀºÁgÁd ¸AiiÁfgÁªï UÁAiÀPïªÁqï-III ªÀÄAvÁzªg aAv£U½Az ¥¨Á«vgÁVz CA¨ÃqÀgï CªgÀ Fa£ v¯ªiÁj£ ²Ã J.JZï. ¸Á¼ÀAP CªjAz »rzÀ PÀ. ªiÁAiiÁªwAiÀªg ªgU C£ÃP ¸ªiÁd aAvPgÀ ªÀvÀ gÁdQÃAiÀ £ÃvÁgg ªÀÃ¯ CZ½AiÀz ¥¨Áªª£ÀÄ ©Ãjz Ág. Cªg C¸ÁªiÁ£

fÃ«v-¸ÁzÉ£U¼£Àß PÀjvAv ««z ¨ÁµU¼°£ »j-QjAiÀ ¯ÃRPgÀU¼À ºvÁgÀ fÃª£-ZjvU¼£Àß ga¹gÀªÀzÀ D±AiÀðz ¸AUwAiÀÄÃ£Æ C®. zº°AiÀÆ ¸ÃjzAv £Ár£ C£ÃP PqU¼° Cªg ¸ÁgPU¼À ¤ªiÁðtUÆArª. º£zgÁ¨Á¢£° `qÁ. ¨Á¨Á ¸ÁºÃ¨ï CA¨ÃqÌgï ªÀÄP «±«zÁ¤®AiÀ', ªÀÄd¥gï¥gz°£ `©.Dgï. CA¨ÃqÌgï ©ºÁgï «±«zÁ¤®AiÀ'U¼À ¸Á¥£UÆArgÀªÀz®z, £ÁU¥gz°£ CAvg-gÁ¶ÃAiÀ «ªiÁ£ ¤¯Á tPÆ CA¨ÃqÌgï Cªg º¸g¤q¯ÁVz. ¸A¸vï ¨ª£z°AiÀÆ Cªg ¨Áªavª£Àß C£ÁªgtUÆ½¸¯ÁVz. Cªg ºÀlÀº§ª£Àß (K¦¯ï 14) ªÀvÀ ¥j¤ªÁðt ¢£ª£Àß (r¸A§gï 6) £Ár£ÁzÀAv DZj¸¯ÁUÀwz. Cªg §ºÀªÀÄTÃ ¸Áz£AiÀ£Àß UÀgÀw¹, ªÀguÆÃvgªÁV 1990g° CªjU `¨Ágv gv' ¥±¹AiÀ£Æß ¤Ãq¯ÁVz. CA¨ÃqÌgï CªgÀ ``²Pt! ¸AWl£!! ºÆÃgÁl!!! (Educate! Organize!! Agitate!!!) JA§ vvU¼£Àß vªÀ C£ÀAiiÁ¬ÀU½U ºÁUÆ £ÁrU ¤ÃrzÁg.

ªÀºÁªiÁ£ªgÃ DVz CA¨ÃqÌgï ¸ªÀzªÁV §gª tUAiÀ£Æß ªiÁrzÁg-¸A¸w£ M¼U, ºÆgU ºÁUÆ ¥wPÆÃzªÀz ªÀÆ®P. Eª® Lwº Á¹P ¥ÁªÀÄRz §gª tUU¼Ã DVª. Eª U¼ Lwº Á¹P, ¸ÁªiÁfP ªÀvÀ ¸ÁA¸wP ªÀºvª£Àß UÀgÀw¹z ªÀÄA§¬À ¸PÁðg qÁ. CA¨ÃqÌgï Cªg ¸ªÀU §gºU¼À ªÀvÀ ¨ÁµtU¼£Àß E¥vÆAzÀ ¸A¥lU¼° ºÆgvA¢z. F ¸A¥lU¼£Àß P£qz°AiÀÆ ºÆgvg¨ÃPAzÀ, D ªÀÆ®P qÁ. CA¨ÃqÌgï Cªg «ZÁgzÁgAiÀ£Àß P£rUjUÆ CªgzÃ ¨ÁµAiÀ° ªÀÄn¸¨ÃPAzÀ ¸AP°¹z P£Áðl P ¸PÁðg, P£Áðl P «± «zÁ¤®AiÀz gÁd±Á¸ ¥ÁzÁ¥PgÁVz qÁ. J.JA. gÁd±ÃRgAiÀ£ªg CzPvAiÀ° C£ÀªÁz ¸A¥Áz£ ¸«ÀwAiÆAz£Àß £Ã«À¹, 14 ¸A¥ÀlU¼ P£q DªwAiÀ£Àß ºÆgvA¢vÀ. qÁ. CA¨ÃqÌgï Cªg «ZÁgzÁgAiÀ£Àß P£qP C¼ªr¸Àª ªÀºÁ¸Áº¸z PÁAiÀðª£Àß D ¸«Àw ¤ªð»¹vÀ. £Ár£ º®ªÁgÀ Ut «zÁA¸gÀ D ªÀºÁPÁAiÀðz° ¸ºPj¹zgÀ. CA¨ÃqÌgï Cªg EAVµï CvAv «zvï¥Çtðª Ç, «²µªÇ DVzÀ, C£ÃP §UAiÀ ¸ªÁ®ÀU¼£Àß MqÀªAxzÁVzÀzjAz, P£q C£ÀªÁzz° P®ªÇAzÀ CgPÆgU¼À G½zÀPÆAqÀ ©lÀzÀ ¸ºdªÃ DVvÀ. vd «zÁA¸gÀ EAx CgPÆgU¼v ¨lÀªiÁr vÆÃj¹zÆ GAlÀ. F DªwAiÀ ¥wU¼Æ ªÀÄVzÀ ºÆÃV, CA¨ÃqÌgï Cªg PwU½U Ez ¨ÃrPAiÀ£Àß UªÀ¤¹, Ezg ¥jµv DªwAiÆAz£Àß ºÆgvgÀª AiÆÃd£AiÀ£Æß P£Áðl P ¸PÁðg º«ÀPÆArvÀ. F ºÆwU `PÀªA¥À ¨ÁµÁ ¨Ágw'AiÀ CAUªÁV P£Áðl P C£ÀªÁz ¸Á»v CPÁq«À C¹vP §A¢zÀzjAz, F ºÆuAiÀ£Àß ¸zj CPÁq«ÀU ª»¸¨ÃPAzÀ wÃªiÁð¤¹, P£q ªÀvÀ ¸A¸w E¯ÁSU F ¸A§AzªÁV ªÀAdÆgÀ ªiÁq¯ÁVz 95 ®P gÆ¥Á¬ÀU¼ ¸ºÁAiÀz£ª£Æß, PÁAiÀð¤ªðºuAiÀ ºÆuAiÀ£Æß C£ÀªÁz ¸Á»v CPÁq«ÀU ªUÁð¬À¸¯Á¬ÀvÀ. F ¸A§AzªÁV C£ÀªÁz ¸A¥Áz£ ¸«ÀwAiÀ£Àß £Ã«À¸¯Á¬ÀvÀ. C£ÀªÁz ¸Á»v CPÁq«ÀAiÀ CzPgÁVz qÁ. ¥zÁ£ï UÀgÀzv Cªg CzPvAiÀ° ga¸¯Áz F ¸«ÀwAiÀ° F P¼PAq ªÀº¤ÃAiÀg£Àß ¸z¸gÁV £ÁªÀPgt ªiÁq¯Á¬ÀvÀ (DzÃ± ¸ASå: ¸A ªÁ ¥ 28 Pgº 2008 ¢£ÁAP 24-3-2008)

1. qÁ. ¹zÀ°AUÀAiÀå, CzÀåPgÀ, P£ÀßqÀ C©ªÀÈ¢Þ ¥ÁæÀ¢PÁg; 12-6-2008jAzÀ FZÀU P£ÀßqÀ ¥ÀĸÀPÀ ¥ÁæÀ¢PÁgzÀ CzÀåPgÀ
2. ²æÃ zÃªÀ£Ægï ªÀĺÁzÃªÀ, SÁåvÀ ¸Á»wÀå
3. ¤zÀðÃ±PgÀ, P£ÀßqÀ ªÀÄvÀÄÛ ¸ÀA¸ÀÌøw E¯ÁSÉ

C£ÀªÀÄ CPÁqÉ«ÄAiÀÄ£ÀÄß «zÀå¥PªÁV PÀªÀA¥Ä ¨ÁµÁ ¨ÁgÀw ¥ÁæÀ¢PÁgzÀ° «°Ã£ÀUÆ½¹zÀÄjAzÀ ºÁUÉ qÁ. ¥zÁ£ï UÀÄgÀÄzÀv CªÀg£ÀßÃ PÀªÀA¥Ä ¨ÁµÁ ¨ÁgÀw ¥ÁæÀ¢PÁgzÀ CzÀåPg£ÁßV £Ã«Ä¹zÀÄjAzÀ EzÃ ¸À¥ÁzÀ£À ¸«ÄÀw qÁ. CA¨ÃqÀÌgï CªÀgÀ ¸ªÀÄUÀæ PÈwUÀ¼À ¸À¥ÁzÀ£À ªÀÄvÀÄÛ ¥PÀluÀAiÀÄ PÁAiÀÄðUÀ¼À£ÀÄß ªÀÄÄAzÀĪÀjÀ¹PÆAqÀÄ§gÀÄwÛzÉ.

¸À¥ÀÄÄlUÀ¼À ¥jµÀÌgÀt PÁAiÀÄðzÀ ¸ÀgÆ¥zÀ §UÉÎAiÀÄÆ ªÀÄå¥PªÁzÀ ZZÀðAiÀÄ£ÀÄß £qÉ¸À¯Á¬ÄvÀÄ. SÁåvÀ «zÁA¸ÀgÀÄU¼ÀÄ F C£ÀªÀÄzÀ PÁAiÀÄðzÀ° ¨ÁVAiÀiÁVgÀĪÀÅzÀ£ÀÄß UªÀĤ¹, JzÀÄ PÁtÄªÀÄx ¯ÆÃ¥zÀÆÃµUÀ¼ÀÄ EgÀĪÀ° ªiÁvªÃ CªÀÄUÀ¼À£ÀÄß ¸ÀjÃ¥r¸ÀĪÀ, NgÀPÆÃgÀUÀ¼À£ÀÄß wzÀÄÛªÀ P®¸ªiÁq¨ÃPAzÉ ¤zÀðj¸À¯Á¬ÄvÀÄ. CzgÀAv, ªÆz® ¥jµÀÌgÀuÁv ¸À¥ÀÄlªÀ£ÀÄß 19-8-2009gÀAzÀ ºÆgvÀg¯Á¬ÄvÀÄ. F PÁAiÀÄðªÀ£ÀÄß ªÀÄÄAzÀĪÀj¹ 2, 3 ªÀÄvÀÄ 4£Ã ¸À¥ÀÄlUÀ¼À ¥jµÀÌgÀuÁv DªÈwAiÀÄ£ÀÄß 6.12.2010 gÀAzÀÄ ©qÀÄUqÉ ªiÁq¯Á¬ÄvÀÄ. F PÁAiÀÄðzÀ° F P¼PAqÀ «zÁA¸ÀgÀÄ ¸ºPj¹zÀÄgÀÄ.

1. ²æÃ «. PÈµÀ, ¨ÁUÀ¼ÆgÀÄ (2£ÀAiÀÄ ¸À¥ÀÄl)
2. ²æÃ PÃ±ª ªÀĽV, ¨ÁUÀ¼ÆgÀÄ (3£ÀAiÀÄ ¸À¥ÀÄl)
3. ²æÃ e.J£ï. ±ÁªÀÄgÁªÀï, ¨ÁUÀ¼ÆgÀÄ (4£ÀAiÀÄ ¸À¥ÀÄl)

P®ªÀÄA¢ ¥jµÀÌgÀtPÁgg CwªÀÄ¸v¬ÄAzÁV, ¥jµÀÌgÀt PÁAiÀÄðzÀ°AiÀÄÆ «¼A§ªÁ¬ÄvÀÄ. £ªÀÄä MvÁAiÀÄ-MvqÀU¼£ÀÄß ªÀĤß¹ CªÀgÀÄ £ªÀÄU £gªÀÄ ¤ÃrzÁÝgÉ. F «zÁA¸ÀgÀÄ ¸ÁzÀå«zÀĵÀÄ ªÀÄnÖ F ¸À¥ÀÄlUÀ¼À£ÀÄß ¥jµÀÌj¹zÁÝgÉ. FUÀ 5, 6, 7, 8 ªÀÄvÀÄ 9 ¸À¥ÀÄlUÀ¼À ¥jµÀÌøvÀ DªÈwAiÀÄ£ÀÄß ºÆgvÀg¯ÁUÀÄwÛzÉ. EªÀÄUÀ¼À ¥jµÀÌgÀt PÁAiÀÄðzÀ° F P¼PAqÀ ªÀĺ¤ÃAiÀÄgÀÄ ¸ºPj¹zÁÝgÉ.

1. ²æÃªÀÄw ©.J£ï. ±ÁAvÁ (¸À. 5)
2. ²æÃ «. PÈµÀ (¸À. 6)
3. ²æÃ P.J¯ï. ZÀAz±ÃRg (¸À. 7)
4. ²æÃ ¨Á®¸ÀÄ§ºÀætå PÀAd¥ðu (¸À. 8)
5. ²æÃ e.J£ï. ±ÁªÀÄgÁªÀï (¸À. 9)

CªÀg F ¸ºÁAiÀÄ-¸ºPÁgÀU½UÁV £ÁªÀÅ PÈvdgÁVzÀÝêÀ. CªÀg UªÀÄ£ªÀ£ÀÄß v¦¹ ©lÄÖ ºÆÃVzÀ ¨ÁUÀU¼£ÀÄß ¸Ãj¸¯ÁVz; ¸ÁgtUÀ¼À ªiÁ»wAiÀÄ£ÀÄß ¸ÀjÃ¥r¸¯ÁVz; G¯ÃRUÀ¼À£ÀÄß, CAQv£ÁªÀÄUÀ¼À£ÀÄß ¥jµÀÌj¸¯ÁVz. »ÃUÀ ¥jµÀÌøvªÁz ¥oÀåz ¥PÀluÀ C£ÀªÀÄz ¸À¥ÁzÀ£ ¸«ÄwAiÀÄ M¦UÀAiÀÄ£ÆßÃ ¥qzÀÄPÆ¼¯ÁVz.

ºÆ¸ DPÁgzº ºÁUÆ ¸gÆ¥zº ºÆgvg¯Áz ªÆz®£AiÀ ¸A¥ÀÌ ¸ÁªðwP ªÄZÀUAiÀ£ÀB U½¹zÀjAz, CzÃ «£ÁÀ¸ª£ÀB Evg ¸A¥ÀÌU¼Æ Cª¼ªr¹PÆ¼¯ÁVz.

F ¢Q£º £ªÀU J® ¸ºÁAiÀ ¸ºPÁg ªiÁUðz±ð£U¼£ÀB EwgÀª P£Àq ªÁvÀ ¸A¸Àw, ºÁUÆ ªÁvÁð E¯ÁSAiÀ ¸£Á£À PÁAiÀðz²ðU¼Áz ²Ã gªÀÃ±ï ©. gÀ¼Q CªjU £ªÀ PÀvdvU¼À.

«¼A§UÆArzÀ F AiÆÃd£ ¸ÆwðAiÀÀvªÁV ºÁUÆ ²ÃWÁw²ÃWªÁV ªÀÀ£ÀqAiÀÀªÀzP PÁg tgÁVgÀªªgÀ P£Àq ªÁvÀ ¸A¸Àw E¯ÁSAiÀ ¸£Á£À ¤zðÃ±PgÁz ²Ã ªÀ£À §½UÁgï CªgÀ. CªjU £ªÀ PÀvdvU¼À ¸®Àvª.

CA¨ÃqÀgï Cªg §gºU¼À ªÁvÀ ¨Áµ tU¼ ªÀÆ® ¥wU¼À ºÁUÆ C£ÄªÁzz J® ¸A¥ÀÌU¼À £ªÀºAiiÁUºÃ, ºÆgUÁUºÃ ®¨À«®z EzÀzjAz, C¤ªÁAiÀðªÁz «¼A§P JqzÆg¬ÀvÀ. CA¨ÃqÀgï ¸Á»vÁ¸P P®ªÀ «Àvg SÁ¸V UAx ¸AUºU½Az P®ªÀ ¸A¥ÀÌU¼£ÀB ¸AU»¸¯Á¬ÀvÀ. ¸A¥Áz£ ¸«ÀwAiÀ ªiÁ£À ¸z¸ÀgÀU¼À vªÀ «ÀvgÀU¼ SÁ¸V ¸AUºU½Az®Æ P®ªÀ ¸A¥ÀÌU¼£ÀB MzV¹PÆqÀª PÀ¥AiÀ£ÀB vÆÃjzgÀ. Cªg F PÀ¥UÁV ºÁUÆ ¸A¥Áz£ PÁAiÀðzº CªgÀ ¤ÃqÀwgÀª DwÃAiÀ ¸ºPÁgPÁV ªAz£U¼£ÀB ¸º¸§AiÀ¸ÀvÃ£.

PgqÀ ¥j²Ã®£AiÀº £ªÀU £gªÁVgÀª ²Ã «. PÀµ ªÁvÀ ²ÃªÀw Dgw £ÁUÃ±ï CªjU £ªÀ ªAz£U¼À ¸®Àvª.

¥Á¢PÁgz P®¸-PÁAiÀðU¼º ºÁUÆ ¥PÌuAiÀ «ZÁgzº ºÀvÆªðPªÁV vªÀ£ÀB vÆqV¹PÆArgÀª ¥Á¢PÁgz jf¸Ágï ²Ã ¦. £ÁgÁAiÀt¸Á«À ªÁvÀ Evg ¹§A¢ ªUðzªjUÆ ºÁUÆ ¸ÀAzgªÁV ªÀÀ¢¸Àªº ¸ºPj¹gÀª ªÀ|| ªÀAiÀÆg ¦Amï Dqï£ ²Ã ©.J¯ï. ²Ã¤ªÁ¸ ªÁvÀ Cªg ¹§A¢ ªUðzªjUÆ £ªÀ ªAz£U¼À.

¥ÀæÃ£ï UÀÄgÀÄzÀvÀÛ
CzÀP
¸A¥Áz£ ¸«Àw

# JgÀvÀ£É ªÀÄÄzÀætzÀ ªÀÄÄ£ÀÄßr

`qÁ. ¨Á¨Á ¸ÁºÃ¨ï CA¨ÃqÉgï Cªg ¸ªÀÄUÀæ §gºÀUÀ¼ÀÄ ªÀÄvÀÄÛ ¨ÁµÀtUÀ¼ÀÄ' ªiÁ¯ÁPÉAiÀÄ ºÀ®ªÀÅ ºÆvÀÛUÀ¼ÀÄ CZÁÑV P£ÀßqÀ NzÀÄUÀgÀ PÉÊ¸ÃjªÀ. ¥wUÀ¼ÀÄ ªÀÄÄVÉ¢gÀªÀ »£À߯ÉAiÀÄ°è ªÀÄgÀªÀÄÄzÀæt PÉÊUÉÆ¼ÀîªÀ AiÆÃd£ÉU P£ÁðlP ¸PÁðgÀ C£ÀÄzÁ£À ªÀÄvÀÄÛ C£ÀĪÀÄw ¤Ãr zÀ. PÀªÀA¥ÀÄ ¨ÁµÁ ¨ÁgÀw ¥Á¢PÁgÀªÀÅ F ºÆ¸À DªÀÈwÛAiÀÄ°è ¸ÀA¥ÀÄlUÀ¼À C¼ÀªÀrPÉ ªÀÄvÀÄÛ ºÆ¢PÉAiÀÄ «£ÁåÀ¸zÀ°è PÆAZÀ §z¯ÁªÀuÉ ªÀiÁrzÀ. F ¸ÀA¥ÀÄlUÀ¼ÀÄ NzÀÄUÀjUÉ D¥ÀåªÁUÀÄvªÀA§ £ÀA©PÉ £ªÀÄäzÀÄ. F PÁgÀåzÀ°è £gªÁzÀ J®jUÆ ¥Á¢PÁgÀzÀ ¥gªÁV ªÀAz£ÉUÀ¼À£ÀÄß ¸°è¸ÀÄvÃª.

PÉ«. £ÁgÁAiÀÄt  
CzÀåPÀë  
¸A¥ÁzÀ£À ¸«Äw

# ªÆzÀ® ªÀÄÄzÀætzÀ ªÀÄÄ£ÀÄßr

P£ÁðlP ¸PÁðgÀªÀÅ ¨ÁgvgvÀß ¨Á¨Á ¸ÁºÃ¨ï qÁ. ©. Dgï. CA¨ÃqÉgï Cªg ¸ªÀÄUÀæ §gºÀUÀ¼ÀÄ ªÀÄvÀÄÛ ¨ÁµÀtUÀ¼À£ÀÄß P£ÀßqÀzÀ°è ¥Pn¸®ÀÄ AiÆÃf¹ CzÀ£ÀÄß AiÀıÀ¹ÃAiiÁV ¥ÆgÉÊ¹zÀ. ºÀ®ªÀÅ ¸ÀA¥ÀÄlUÀ¼À°è ¥PlUÆArgÀĪÀ CA¨ÃqÉgï Cªg §gºÀUÀ¼À P£ÀßqÀ C£ÀĪÁzÀ ¥jµÀÌgtUÆAqÀÄ ªÀÄvÀÄÛ ªÀÄv CZÁÑUÀÄwªÀ. E¢ÃU J® ¸ÀA¥ÀÄlUÀ¼ÀÄ MªÀÄÄäU ªÀÄvÆªÀÄä CZÁÑV ¥PlUÆ¼ÀÄîwªÀ. FªgÉU P£ÀßqÀzÀ°è zÆgPzÃ EzÀÝ CA¨ÃqÉgï Cªg ªÀÄgÁp §gºÀUÀ¼ÀÄ ªÀÄvÀÄÛ ¨ÁµÀtUÀ¼ÀÄ FU ªÆz® ¨ÁjUÉ CZÁÑUÀÄwªÀ. MlÄÖ E¥vgqÀÄ ¸ÀA¥ÀÄlUÀ¼À£ÀÄß FU «µAiÀÄ¸ÆaAiÆA¢U ¥Pn¸¯ÁUÀÄwzÀ. »A¢£ ªÀÄÄzÀætUÀ¼À°è «µAiÀÄ¸ÆaUÀ¼ÀÄ E®¢zÀÝzÀjAz ¸ÀA¥ÀÄlUÀ¼À£ÀÄß NzÀĪÀªÀjUÉ CUÀvÀå «µAiÀÄUÀ¼À£ÀÄß UÀÄgÀÄw¸®ÀÄ PµªÁUÀÄwzÀÄÝzÀ£ÀÄß UªÀĤ¹ F PªÀÄ PÉÊUÉÆ¼Àî¯ÁVzÀ. C®zÀ J® ¸ÀA¥ÀÄlUÀ¼À «µAiÀÄ¸ÆaUÀ¼À ¸AP®£ªÇ FU ºÆg§A¢zÀ. EzjAz AiiÁª ¸ÀA¥ÀÄlzÀ°è AiiÁª «µAiÀÄz §UU ªiÁ»w EzÀ JA§ÄzÀ£ÀÄß UÀÄgÀÄw¹PÆ¼ÀîªÀÅzÀÄ NzÀÄUÀjUÉ ¸ÀÄ®¨ªÁUÀ°zÀ. »AzÀ ¥PlUÆArzÀÝ ¸ÀA¥ÀÄlUÀ¼À°è C®° G½¢zÀÝ Ca£À v¥ÀÄÛUÀ¼À£ÀÄß w¢Ý ¸j¥r¸®ÀÄ PªÀÄ ª»¸¯ÁVzÀ.

F ¸ÀA¥ÀÄlUÀ¼À£ÀÄß CZÀÄ ªiÁq®ÀÄ P£ÁðlP ¸PÁðgÀªÀÅ «±Ãµ C£ÀÄzÁ£ÀªÀ£ÀÄß MzV¹zÀ. CZÁz ¸ÀA¥ÀÄlUÀ¼ÀÄ gÁdåzÀ J¯q EgÀĪÀ ¸ªiÁd P¯ÁåtÀ E¯ÁSAiÀÄ ªÀÄå¦AiÀÄ ¥j²µÀÖ eÁw ªÀÄvÀÄÛ ¥j²µÀÖ d£ÁAUÀ¼À «zÁåyð¤®AiÀÄUÀ½U GavªÁV zÆgPÀ¨ÃPA§ÄzÀÄ ¸PÁðgzÀ ¸zÁ±AiÀÄ. EzjAz qÁ. CA¨ÃqÉgï Cªg aAv£ÉUÀ¼ÀÄ ªÀÄÄA¢£ v¯ªiÁjUÆ ºjAiÀÄĪÀ CªPÁ± ¸ÉÊ¶AiiÁVzÀ.

PÀªA¥À ¨ÁµÁ ¨ÁgwU EAvº C¥ÆªÀð ºÆuAiÀ£ÀÄß ¤Ãrz P£ÁðlP ¸PÁðgPÉ ªÀvÀÛ P£Àßq ªÀvÀÄÛ ¸A¸ÀÌøw E¯ÁSU £ªÀÄä PÈvdvU¼ÀÄ ¸®ÀèvªÉ. F ¸A¥ÀlU¼ ¹zÀÞvU ¤AiÀÄÄQÛUÆArgÀªÀ ¸A¥ÁzP ªÀÄAqºAiÀÄ ¸z¸ÀågÁz qÁ. zÃª£Æg ªÀÄºzÃª, qÁ. ¹zÀÝºAUAiÀÄå ªÀvÀÄÛ P£Àßq ªÀvÀÄÛ ¸A¸ÀÌøw E¯ÁSAiÀ ¤zðÃ±PgÁzÀ ²Ã P. J. zAiiÁ£Az CªgÀ vªÀÄä ¸PÁºP ¸ÆPÀ ¸®ºU¼ ªÀÄÆ®P £ªÀÄä P®¸À ºZÀÄ ¥j¥Æ tðªÁUÀªAv ªiÁrzÁÝg.

PÉ«. £ÁgÁAiÀtt
CzÀåPÀë
¸A¥ÁzP ¸«Äw

# ¸ÀÁ¥ÁzÀQÃAiÀ

¸ÁvAvÀæ÷¥Çªð ¨Ágvz gÁdQÃAiÀ Qwdz° C£ÃP GzÁ¨ªÀ ªÀQU¼Ä, ¥w¨Á¤v ªÀÄRAqgÀ, gÁdPÁg tU¼Ä, ªÀÄv¢U¼Ä ªÄvÀ zÃ±¥Ã«ÄU¼Ä PÁ t¹PÆAqÀ zÃ±z «ªÆÃZ£UÁV vªÄ ¸ªð¸ª£Æ vÁU ªiÁr ag¸g tÃAiÀgÁVzÁg. qÁ|| ©ÃªÀgÁªï gÁªiïf CA¨ÃqgïCªgÀ zÃ±z EAx £ÁAiÀPg° M§gÁVzgÀ. CªgÀ ¨Ágvz ¢Ã£z°vg «ªÆÃZ£UÁV vÁª £q¹z ºÆÃgÁI ª£À zÃ±z ¸ÁvAvÀæ ºÆÃgÁIz CAUªÁVAiÀÃ ¸AWn¹ C¸ø±vÁ ¤ªÁgu ªÄvÀ J¯Á zÀ§ð® ªUðU¼ «ªÆÃZ£AiiÁUz ºÆgvÀ zÃ±z ¸ÁvAvÀæ Cxðg»v JA§ ªÀÆ®vvª£À ¥w¥Á¢¹z KPÉP £ÁAiÀPgÁVzgÀ. CªgÀ PÃª® C¸ø±g £ÁAiÀPgÁVgz ErÃ ªiÁ£ª PÄ®z ºPÀU¼Ä, ¸ÁvAvÀæ ¸ªiÁ£v ªÄvÀ ¨ÁvÈvz ¸Á¥£UÁV ºÆÃgÁrz ªÄºÁ£À¨ÁªgÁVzgÀ. CªgÀ vªÄ ErÃ fÃª£ª£À F UÄj¸Áz£UÁV ªÄÄr¥ÁVIgÀ.

CªgÀ eÁvÀwÃv ¸ªiÁdªÁ¢ ¥eÁ¥¨Ävªª¸AiÀ° CZ®«±Á¸ ºÆA¢zgÀ. CªgÀ ªiÁ£«ÃAiÀvAiÀ ¸ÁPÁgªÄÆwðU¼ÁVzÄ ¢Ã£z°vg £ÆÃ«U ¸zÁ ¸A¢¸ÄwzªÄºÁ¥gÀµgÁVzgÀ.

qÁ|| CA¨ÃqgïCªgÀ PÃª® gÁdQÃAiÀ ªÀÄRAqgÁVgzÃ, DzÀ¤P ¨Ágvz ¤ªiÁð¥PgÆ DVzgAzg Cw±AiÆÃQAiiÁU¯ÁgzÄ. CªgÀ M§ W£ «zÁA¸gÆ, «ZÁgªÃvgÆ, ¥Ëq ¯ÃRPgÆ, PÁ£ÆÆ£Ä ¥ArvgÆ ºÁUÆ ¸A«zÁ£vdgÆ DVzg®z Ut ¸ªiÁd±Á¸dgÆ, SÁv ¸A±ÆÃzPgÆ DVzgÀ. eÁw ¥zw, C¸ø±v, §qv£ ªÄÄAvÁz ¸ÁªiÁfP Dyðp ¸ªÄ¸U¼ D¼ªÁz CzAiÀ£ ªiÁr EªU¼ GUªÄ, ¨¼ª tU ªÄvÀ ª¸Ä¹wAiÀ §U «²µ ¹zÁAvU¼£À vªÄzÃ Dz jÃwAiÀ° ¥¸Äv¥r¹zg®z EªU¼ ¤ªÁguAiÀ «zÁ£U¼£À ¤gÆ¦¹zgÀ. Czµª±Ávï CªgÀ vªÄ CªÄÆ®ªÁz «ZÁgU¼£À vªÄ C£ÃP ¸A±ÆÃz£ÁvP UAxU¼Ä, ¯ÃR£U¼Ä ªÄvÀ «zvÆtð ¨ÁµtU¼° ªP¥r¹zÁg. Cªg fÃ«v PÁ®z°AiÀÃ ¸ÀªiÁgÀ º¢ªÀÆgÀ UAxU¼Ä EAV¶£° ¥PIªÁVzÄ, EªU¼° eÁw ¤ªÀÆð®£; ±ÆzgÀ AiiÁgÀ; C¸ø±gÀ AiiÁgÀ-CªgÀ ºÃU ªÄvÀ KP C¸ø±gÁzgÀ?; gÆ¥Á¬ÄAiÀ ¸ªÄ¸; ¥ÁQ¸Á£ CxªÁ ¨Ágvz «¨d£-¥ªÀÄRªÁVª. '§Äz ªÄvÀ Cª£ zªÄ' Cªg ªÄguÆÃvg ¥PIu. EªU¼Æ C®zÃ Cªg C¥Pnv §gºU¼Ä C¸ASÁv. Cªg ªÄguÁ£Avg EªD¹ «ªÁzz° ¹®ÄQPÆArzjAz EwÃa£ªgU CªU¼ ¥PIu ¸ÁzªÁVg°®. »ÃUÁV CªU¼ CzAiÀ£ ¸Áz«g°®. Dzg ªÄºÁgÁµ ¸PÁðgz ¸vv ¥AiÄv, ¥j±ªÀ¢AzÁV ªÄvÀ qÁ. CA¨ÃqgïCªg PÄIÄA§z ¸z¸g ¸ºPÁg, ¸ªÄw¬ÄAzÁV FU EªU¼ ¥PIuAiÀÆ ¸ÁzªÁVz.

qÁ. CA¨ÃqgïCªgÀ ºZÁV EAVµï ¨ÁµAiÀ°AiÀ §g¢zÁg. Cªg §gª tUAiÀ P® ¨ÁUU¼Ä, Czg°AiÀÆ CªgÀ vÁªÃ DgA©¹ £q¹PÆAqÀ §Az ¥ÁQPU¼Áz ¸ªÄvÁ,

d£vÁ ªÀvÀ §»µÀÌv ¨Ágv EªÀÄU¼° ªÀgÁpAiÀ°AiÀÆ CU ¯ÃR£U¼ÁV §A¢ª. CªgÀ ªiÁrz C£ÃP ¸ÁªðdÁ¤P ¨Áµ tU¼Æ ªÀgÁp ¨ÁµAiÀ°AiÀÃ Eª.

qÁ. CA¨Ãq¸gï CªgÀ vªÀÄ P®ªÀ «zÁvÆ tð ¥§AzU¼£Àß vÁªÀ CªÀjPzº «zÁ±yðAiiÁVzÁ¤U¯Ã ¹z¥r¹ 1918 jAz¯Ã ¥Pn¹zgÀ. £Avg 1923 jAz 1955g ªgU Cªg Evg UAxU¼Ä ¥P I ªÁzªÀ. CªÇ C®z vªÀÄ ¸ÁªðdÁ¤P fÃª£z ¸ÀªiÁgÀ ªÀÆgÀ z±PU¼ Cª¢AiÀ° CªgÀ C£ÃP ¸«ÄwU¼Ä, DAiÆÃUU¼Ä ªÀvÀ zÀAqÀªÀÃf£ ¥jµvÀU½U ¸º¹z ªÀ£«U¼Ä, «eÁ¥£Á ¥vU¼Ä, ªiÁrz ¨Áµ tU¼Ä, Cªg gÁdQÃAiÀ ªÀvÀ ¸A«zÁ£z «ZÁgU¼Ä ªÀºvzªÀU¼ÁVª ªÀvÀ CªgÀ ªÀÄA§¬Ä ¥ÁAvÀ ªÀvÀ PÃAz ±Á¸£¸¨U¼°, £Avg ¸A«zÁ£ ¸¨AiÀ ¸z¸gÁV, Pgq ¸«ÄwAiÀ CzPgÁV ¹z¥r¹, ªÀAr¹z Pgq ¸A«zÁ£ ªÀvÀ Czg ªÀÃ¯ £qz ZZðU CªgÀ ¤Ãrz Gvg, ¸ªiÁzÁ£, «ªguU¼Ä ªÀvÀ ¸vAv ¨Ágvz ¥xªÀ PÁ£Æ£Ä ªÀAwAiiÁV CªgÀ ªP¥r¹z «ZÁgU¼Ä, ªÀAr¹z ªÀ¸ÆzU¼Ä, ªÀÄAvÁzªÀ M§ ªÀÃzÁ« ºÁUÆ ªÀÄv¢ ªP¥r¹z CªÀÆ®Ä «ZÁgU¼ÁVzÀ EA¢UÆ ¸A«zÁ£z ¥¸Á¥ §AzÁU¯¯Á CªgÀ CAzÀ ¤Ãrz «ªguU¼Ã PÆ£AiÀ ªiÁvAzÀ ¥jUt¸¯ÁVz. DzjAz qÁ. CA¨Ãq¸gï Cªg «ZÁgU¼Ä CA¢UÆ C®z EA¢UÆ ¥¸ÀvªÁVzÀ CªÀU¼ CzAiÀ£ ªÀvÀ ¥jZAiÀ C¤ªÁgÀ.

Dzg EwÃZU Cªg ¥Pnv PwU¼Ä ®¨ªÁUÀw® ªÀvÀ CªÀ ªÀÄAz zÆgAiÀÄª ¸ÁzvAiÀÆ E®ªÁUÀwvÀ. CªÀU¼®ªÀ ¸A¥Çtð ªÁV C½zÀºÆÃUÀª C¥ÁAiÀ«vÀ. Cz£jv ªÀºÁgÁµ ¸PÁðgzªgÀ qÁ. CA¨Ãq¸gï Cªg EAV¶£°gÀª J¯Á ¥Pnv ªÀvÀ C¥Pnv PwU¼£ÀB ¸AU»¹, ªÀÄ¢¹, ¥Pn¸Àª CvAv Dª±P ªÀvÀ G¥AiÀÄP AiÆÃd£AiÀ£ÀB ºÁQPÆArzÀ, F AiÆÃd£AiÀ gÆ¥gÃµU¼£ÀB ¹z¥r¹ PÁAiÀðUvUÆ½¸®Ä D gÁdz ²Pt ¸aªg CzPvAiÀ° qÁ. CA¨Ãq¸gï Cªg Mq£ÁrU¼Ä, vdgÀ ªÀvÀ ªÀÄRAqgÀU½Az PÆrz "qÁ. ¨Á¨Á¸ÁºÃ¨ï CA¨Ãq¸gï Cªg ªÀÆ® «µAiÀU¼ ¥PI£Á ¸«Äw, ªÀºÁgÁµ ¸PÁðg" JA§ ¸«ÄwAiÀ£ÀB ga¹zgÀ. CzÀ PÁAiÀðvvgªÁ¬ÄvÀ. F ¸«ÄwAiÀ£ÀB 1976g° CA¢£ ªÀÄRªÀAw ²Ã ±gzï ¥ªÁgï Cªv £ÃvvzººgÀ ga¸¯Á¬ÄvÀ. F ¸«ÄwAiÀ AiÀ±¹U Czg «±Ãµ C¢PÁj ²Ã ª¸Av ªÀÆ£ï Cªg ¥j±ªÀ ªÀÄRPÁgt. F ¸«ÄwAiÀÄ qÁ. CA¨Ãq¸gï Cªg J¯Á §gºU¼£ÆB ¸AU»¹ M I Ä º¢£Á®Ä §ºvï ¸A¥ÀIU¼° "qÁ. ¨Á¨Á¸ÁºÃ¨ï CA¨Ãq¸gï §gºU¼Ä ªÀvÀ ¨Áµ tU¼Ä" JA§ ²Ã¶ðPAiÀ° ¥Pn¸Àª AiÆÃd£ ºÁQPÆAqÀ EzÀªgU M I Ä º¢ªÀÆgÀ ¸A¥ÀIU¼£ÀB ¥Pn¹z. E£ÆB MAzÀ ¸A¥ÀI §g¨ÃPÁVz. EzÀªgU ¥PnvªÁz º¢ªÀÆgÀ ¸A¥ÀIU¼° §º¼µÀ Cªg ¥Pnv ªÀvÀ C¥Pnv §gºU¼Ä ¸Ãjª. 1979g° ©qÀUqAiiÁz MAz£AiÀ ¸A¥ÀIz° eÁw ¤ªÀÆð®£; ¨ÁµÁªgÀ ¥ÁAvU¼Ä; gÁ£q, UÁA¢, f£ÁB; gÁdU¼Ä ªÀvÀ C®¸ASÁvgÀ; ¸AAiÀÄP gÁdªÃ CxªÁ ¸ÁvAvöªÃ ªÀÄAvÁz ¥jav ªÀvÀ ¥Pnv PwU¼Ä ¸Ãjª. Jgq£AiÀ ¸A¥ÀI (1982)z° ªÀÄA§¬Ä ±Á¸PÁAUz° ªÀvÀ zÀAqÀªÀÃf£ ¥jµvÀU¼° CªgÀ ªiÁrz ¨Áµ tU¼Æ C®z ¸ªÀ£ï

DAiÆÃUP Cªgİ ¤Ãrz ºÃ½PU¼Æ ªÄ£«U¼Æ ¸Ãjª. ªÄÆg£Aiİ ¸A¥Ä I (1987)zº Cªg C¥Pnv PÈwU¼Áz »AzÆzªÄð z±ð£; ¥ÁaÃ£ ¨Ágvzº PÁAw ªÄvİ ¥wPÁAw; ¨Ágv ªÄvİ ¸ªÄvÁªÁzz ¥Çªð¨Á« Dª±ÀPvU¼Ä; §Äzï Cxªİ PÁ¯ïðªiÁPïð, ªÄÄAvÁzªÄ ¸Ãjª. 1987gºAiÄÃ C¥P l ªÁz £Á®£Aiİ ¸A¥Ä I ªÄºÁgÁµzº «ªÁzz C¯AiÄ£Ã J©¹vÄ. Ezgº Cªg E£ÆÄAzİ C¥Pnv §gº ªiÁ¯ '»AzÆ zªÄðz ¸A¢UÀU¼Ä' ¥P l ªÁVzÃ DAzÆÃ®£P ¥ZÆÃz£AiiÁ¬ÄvÄ. EzjAzÁV ªÄºÁgÁµ ¸PÁðg F ¸A¥Ä I z ªiÁgÁ l ª£ÄB P®PÁ® vq»rAiÄ¨ÃPÁ¬ÄvÄ. £Avg Dz M¥Az¢Az ¥Ä£B Czg ªiÁgÁ l ªÄÄAzÄªj¬ÄvÄ. 1989gº ¥P l ªÁz Lz£Aiİ ¸A¥Ä I ªÄ ¸A¥Çtðª ÁV C¥Pnv §gºU½Az PÆrzÄ, Ezgº C¸ø±gÄ ªÄvİ C¸ø±vAiİ §UÉ Cªg ¸ÁªiÁfP, gÁdQÃAiİ, zÁ«ÄðP «±ÃµuAiİ ¯ÃR£U½ª. CzÃ ªµð ¥P l ªÁz Dg£Aiİ ¸A¥Ä I zº ¸ÃjgÄª J¯Á ¯ÃR£U¼Æ Cxð±Á¸ ¸A§AzªÁVzÄ 'gÆ¥Á¬ÄAiİ ¸ªÄ¸ï'AiÄÆ Ezgº ¸Ãjz. 1990gº ¥P l ªÁVgÄª K¼£Aiİ ¸A¥Ä I zº ±ÆzgÄ AiiÁgÄ? ªÄvİ C¸ø±gÄ AiiÁgÄ? CªgÄ ºÃU ªÄvİ KP C¸ø±gÁzgÄ JA§ Cªg F JgqÄ ¸A±ÆÃz£ÁvP ªÄvİ Cw ªÄºvz UAxU¼£ÄB ¥Ä£gïªÄÄ¢¸¯ÁVz. EzÃ ªµð ¥Pn¸¯ÁVgÄª JA l £Aiİ ¸A¥Ä I zº qÁ. CA¨ÃqÌgï Cªg CvÀAv «ªÁzÁvP, Dzg CµÃ «zvï¥Çtð ºÁUÆ ªÁ¸«Pv¬ÄAz ¥ÃjvªÁz Cªg UAx '¥ÁQ¸Á£ Cxªİ ¨Ágvz «¨d£'Aiİ ¥Ä£gï ªÄÄztªÁVz. EzÄ Cªg ªÄÃgÄPÈw. ªÄÄA§gÄª ¸A¥Ä I U¼º Uª£ðgï d£g¯ï ¥jµvÄ. ¸A«zÁ£ ¸¨ ªÄvİ ¸A¸w£º qÁ. CA¨ÃqÌgï CªgÄ ¨ÁUª»¹gÄªÄzÄ (1942 jAz 1956), PÁAU¸ï ªÄvİ «Ä¸gï UÁA¢ C¸ø±jU ªiÁrzÄzİ K£Ä?; ºÁUÆ «Ä¸gï UÁA¢ ºÁUÆ C¸ø±g «ªÆÃZ£ (9£Aiİ ¸A¥Ä I, 1991), ªÄÄA§¬ÄAiİ ¦Ã¥¯ï JdÄPÃ±£ï ¸Æ¸Èn ¤ÃrgÄª E£ÆÄ P®ªÄ C¥Pnv §gºU¼Ä ªÄvİ Evg ¸«Ä± §gºU¼Ä ¥P l ªÁVª. ºv£Aiİ ¸A¥Ä I zº (1991) CªgÄ Uª£ðgï d£g¯ïgªg PÁAiÄðPÁj ¸«ÄwAiİ ¸z¸ÌgÁVzÁV£ zÁR¯U½ª. 1992gº ¥P l ªÁVgÄª 11£Aiİ ¸A¥Ä I ªÄ "§Äzï ªÄvİ Cª£ zªÄ" UAxz ¥Ä£gï ªÄÄzt. 1993gº ¥P l ªÁVgÄª 12£Aiİ ¸A¥Ä I zº Cªg C¥Pnv PÈwU¼Áz '¥ÁaÃ£ ¨Ágvz ªÁtdï'; 'C¸ø±gÄ ªÄvİ ©nµï ¸ÁªiÁdï'; 'EAVµï ¸A«zÁ£z ªÄÃ¯ G¥¸ÁÌ¸U¼Ä'; 'PÁAiÄ ªÄvİ PÁ£ÆÆÄU¼ ªÄÃ¯ n¥tU¼Ä'; '«Ã¸ÁPÁV PÁ¢zÄ' ªÄvİ Evg ¸«Ä± ¯ÃR£U¼Ä ¸Ãjª. 1994gº ¥P l ªÁVgÄª º¢ªÄÆg£Aiİ ¸A¥Ä I ªÄ §º¼ ªÄºvzÁVzÄ CvÀAv G¥AiÄÄPªÇ DVz. Ezgº qÁ. CA¨ÃqÌgïgªgÄ ¨Ágv ¸A«zÁ£z ¥ªÄÄR ²ºAiiÁV ¨Ágv ¸A«zÁ£ ¸¨AiÄº ¤ªð»¹z dªÁ¨ÁjAiİ ¸A¥Çtð ¥jZAiÄª£ÄB zÁR¯U¼ÆA¢U ªiÁq¯ÁVz. Ezgº ¸A«zÁ£z ¹zÁÀAvU¼Ä ªÄvİ ¤AiÄªÄU¼Ä ºÁUÆ CªÄU½Az GzÌ«¸§ºÄzÁz ¸ªÄ¸ÌU¼£ÄB ªÄÄAUAqÄ CªÄU½U qÁ. CA¨ÃqÌgïgªgÄ ¤Ãrz «ªguU¼Æ ¸Ãjª. EAx ¸Ävİ G¥PªÄPÁV ªÄºÁgÁµ ¸PÁðg C©£Az£Áºð. C®z ¥w ¸A¥Ä I ¸gÁ¸j 500 ¥Ä I U½VAv ºazÁUÆ ¥wAiÆAzg ¨¯ PÃª® £®ªvÄ gÆ¥Á¬ÄU½gÄªÄzÄ (ªÆz®£Aiİ ¸A¥Ä I z ¨¯ PÃª® ºvÄ gÆ¥Á¬Ä) CvÀAv ¸ÁUvÁºð

¸AUwAiiÁVz. qÁ. CA¨Ãqïgï Cªg F CªÄÆ®å ªÀvÀ ¸ªÀU ªÉZÁjP ¸Á»vÀåªÀ£ÀÄß MAzÀq ¸AU»¹ NzÀÄUjU CvÀåAv PrªÀÄ ¨É¯ÉAiÀÄ° zÆgÀPÀªÀAv ªÀiÁqÀÄªÀ ªÀÄÆ®P ªÀÄvÀÄ ªÉZÁjP ¸Á»vÀåP ºÁUÆ qÁ. ¨Á¨Á¸ÁºÃ¨ï CA¨Ãqïgï Cªg «ZÁgÀU¼£ÀÄß EA¢£ ºÁUÆ ªÀÄÄA¢£ ¦Ã½UU½U ¤ÃqÀÄªÀ ªÀÄÆ®P ªÀÄºÁgÁµÖç ¸PÁðgªÀÅ ªÀÄºÀvgªÁz ¸ÃªÉ ¸°¹z.

qÁ. ¨Á¨Á¸ÁºÃ¨ï CA¨Ãqïgï Cªg F ¸ªÀÄU ¸Á»vÀå EAVµï ¨ÁµAiÀÄ°è ¥PlªÁVgÀÄªÀÅzjAz F ¨ÁµAiÀÄ£ÀÄß ZÉ£ÁßV §®ªÀgÀÄ ªÀiÁv Ezg G¥AiÆÃU ºÆAz§ºÀÄzÁVz. DzÀåjAz F ¨ÁµAiÀÄ° ¥j±ªÀÄ«®z Evg ¨Á¶PjU qÁ. CA¨Ãqïgïgªg G¥AiÀÄÄP ¸ÁªiÁfP, DyðP, gÁdQÃAiÀÄ «ZÁgÀU¼À ®¨sÀå«®. EzÀÄ MAzÀÄ zÆqÀØ PÆgv. Ez£ÀÄß ¤ªÁj¸ÀÄªÀ KPÉP ªiÁUðªAzg J¯Á §gºÀU¼£ÀÄß ¨Ágvz ««z ¥ÁzÃ²P ¨ÁµU¼° C£ÀªÁ¢¹ ¥Pn¸ÀªÀÅzÀÄ. F P®¸À J¯Á ¨ÁµU¼° vÀvÁðV DU¨ÃPÁVz.

F Dª±ÀPvAiÀÄ£ÀÄß ªÆlªÆz®Ä ªÀÄ£UAq P£Áð l P gÁdå ¸PÁðg 1988g dÆ£ï wAU¼° qÁ. CA¨Ãqïgï Cªg PÈwU¼£ÀÄß P£ÀßqÀP ¨ÁµÁAvj¸®À ªÀÄºÀvÀz ¤tðAiÀÄ vUzÀÄPÆAqÀÄ F P¼PAqªg£ÆÀ¼UÆAq ¸A¥ÁzP ¸«ÄwAiÀÄ£ÀÄß £Ã«Ä¹ DzÃ± ºÆgr¹vÀÄ.

1) qÁ.J.JA. gÁd±ÃRgAiÀå - ¸A¥ÁzPgÀÄ
2) qÁ. ¹zÀÝ°AUAiÀå - ¸z¸ÀågÀÄ
3) ²Ã zÃª£Æg ªÀÄºÁzÃª - ¸zÀå¸gÀÄ
4) ¤zðñÃ±PgÀÄ, P£ÀßqÀ ªÀÄvÀÄ - ¸z¸Àå-PÁAiÀÄðz²ð
¸A¸ÀÌøw E¯ÁS, ¨AU¼ÆgÀÄ

¸«ÄwAiÀÄ ¥xªÀÄ ¸¨sÉ 30-8-1988 gAzÀÄ ¨AU¼Æj£° ¸Ãj qÁ. CA¨Ãqïgï Cªg ¥Pnv, ¸À¥javªÁz º¢£Á®Ä ©r PÈwU¼£ÀÄß ªÀiÁv ¨ÁµÁAvg ªÀiÁqz, ªÀÄvÀÄ CªÀÅU¼° P®ªÀÅ ®¨sÀå«®¢gÀÄª PÁg t¢Az®Æ, ªÀÄºÁgÁµÖç ¸PÁðgz AiÆÃd£AiÀÄAv ¥PnvªÁUÀÄwgÀÄª J¯Á ¸A¥ÀÅlU¼£ÀÄß ªÀÄºÁgÁµÖç ¸PÁðgz C£ÀÄªÀÄw ¥qzÀÄPÆAqÀÄ P£ÀßqÀP ¨ÁµÁAvj¸¨ÃPAzÀÄ ¤tðAiÀÄ vUzÀÄPÆArvÀÄ. F ¥PÁg ªÀÄºÁgÁµÖç ¸PÁðgz C£ÀÄªÀÄw PÆÃj ¥v §gAiÀÄ¯Á¬ÄvÀÄ. ªÀÄºÁgÁµÖç ¸PÁðgzªgÀÄ ¢£ÁAP 2-5-1989g ¥vz° vªÀÄä C£ÀÄªÀÄw ¤Ãr, P£Áð l P ¸PÁðgPÌ w½¹zgÀÄ. D£Avgª Ã ¨ÁµÁAvg PÁgåª£ÀÄß ªÀåª¹vªÁV PÉUwPÆ¼¯Á¬ÄvÀÄ.

---

¨ÁµÁAvg PÁAiÀÄðz° ¨ÁVU¼ÁVzÀªgÀÄ : (1) qÁ.f. gÁªÀÄPÈµ, (2) ²Ã P.«. ¸À§Ät, (3) qÁ.J¸ï.f. eÉ£Á¥Äg (4) ¥Æ|| J.J¯ï. ²ªgÀÄz¥ (5) ²Ã JZï.J¸ï. ²ª¥PÁ±ï ªÀÄvÀÄ (6) qÁ. zÃªÃAz PÀªiÁg ºPÁj (5£AiÀÄ ¸A¥ÀÄl); (7) ¥Æ.PÀ.². ºjzÁ¸ ¨l, (8) qÁ.¹.P. gÃtÄPÁAiÀÄð, (9) qÁ.JA.¹. PÆr (10) ¥Æ. J£ï.©. WÆÃqÀ, (11) qÁ. f.n. ªÄgÀ¼¹zÀ¥, (12) qÁ. JA.J¸ï. P®Æg, (13) qÁ.Dgï. PÃ±ª, (14) ¥Æ|| r.J¸ï. PÀvðPÆÃn (6£AiÀÄ ¸A¥ÀÄl: ¨ÁU-1 ªÀÄvÀÄ ¨ÁU-2); (15) ²Ã P.J¸ï. ¨UªÁ£ï, (16) f.©. ¸d£, (17) qÁ. ¹.Dgï. AiÀÄg«£ v°ªÀÄo, (18) qÁ.f. gÁªÀÄPÈµ, (19) ²Ã ªÃtÄUÆÃ¥Á® ¸Æg§ (7£AiÀÄ ¸A¥ÀÄl).

£ªÀ ¸A¥ÁzP ¸«ÄwAiÀÄ ¨ÁµÁAvg PÁgïPÁV £Ár£ U t «zÁA¸g£ÀÄ UÄgÄw¹ Cªg ¸ªÄw, ¸ºPÁg PÆÃjvÀ.* Cªg M¦U ¥qz £Avg ¥wAiÆ§jUÆ ªÄÆ® PÈwAiÀ ¸ÀªiÁgÀ MAzÀ £ÆgÀ ¥À l U¼£ÀÄ ª»¸¯Á¬ÄvÀ. qÁ. CA¨Ãqïgï Cªg §gºU¼À ¨Áµ ªÄvÀ «ZÁgU¼À CvÀv Qµ ºÁUÆ Uº£ªÁzÀªÀU¼ÁVgÀªÀz j Az CªÀU¼ ¨ÁµÁAvg ¸À®¨ ¸ÁzÀª®. ¨ÁµÁAvg ªiÁqÀª ªÆz®À Czg D¼ªÁz CzÀAiÀ£ ªÄvÀ ªÀ££ Dª±ïP. Dz jAz ¨ÁµÁAvgPÁgjU ºZÀ Cª¢ ¨ÃPÁ¬ÄvÀ. P®ªgÀ ¨ÁµÁAvg ªiÁr P¼À»¹z £Avg ¨Áµ ±Ê°, ¥Áj¨Á¶P ¥zU¼À ªÄÄAvÁzªÀU¼ ¥j²Ã®£ CUvÀª¤¹vÀ. F PÁgïz° ¨ÁµÁvdg £gªÀ ¥qAiÀ¨ÃPAzÀ ¸A¥ÁzP ¸«Äw wÃªiÁ¤¹ P¼PAq ªÀº¤ÃAiÀg£ÀÄ DºÁ¤¸¯Á¬ÄvÀ.

1) qÁ.Dgï.¹.»gÃªÄo, ªiÁf PÀ®¥wU¼À, P£Áðl P «±«zÁ®AiÀ, zÁgªÁq 2) qÁ.zÃ. dªgÃUËq, ªiÁf PÀ®¥wU¼À, ªÄÊ¸ÆgÀ «±«zÁ®AiÀ, ªÄÊ¸ÆgÀ ªÄvÀ 3) ²Ã ªÊ.JA.¹. ±ªÀð CA¢£ CzïPgÀ, P£Áðl P gÁd¨ÁµÁ DAiÆÃU, ¨AU¼ÆgÀ, £Avg ¢.²Ã PApÃgÁªï EªgÀ C£ÀªÁ¢v ¨ÁUU¼ ¥j²Ã®£ ªiÁq®À M¦PÆAqgÀ. C£ÀªÁz ªiÁrz ¨ÁUU¼° ¥z §¼P, ¨Áµ, ±Ê° ªÄÄAvÁzªÀU¼° ¸ÁzïªÁzµÀ KPgÆ¥v vgÀª PÁAiÀð ¨ÁµÁAvg ªiÁqÀªÀzQAv®Æ ºZÀ Ppt ªÄvÀ ¥AiiÁ¸Pg. gÁdïz ««z ¨ÁUU¼ C£ÀªÁzPgÀ vªÄvªÀ ¥ÁzÃ²P ¨Áµ, ±Ê°AiÀ£ï£À¸j¸ÀªÀzÀ ¸ºd. DzµÀ F ¥ÁzÃ²P ªÊ«zïª£ÀÄ G½¹PÆAqÀ §g¯ÁVz. F »jAiÀ vdgÀ vªÀ CªÄÆ® ¸ªÀAiÀª£ÀÄ F PÁgïPÁV ¸ÄzÁj¸Àª ¥AiÀv ªiÁrzÁg. Eªg ¸ºPÁg«®z F PÁg ¸ÄUªÀªÁUÄwg°®. EªgÀ ªÆz®À ªÄÊ¸ÆgÀ Dq½v vg¨Ãw ¸A¸AiÀ° £Avg ¨AU¼Æj£° K¥ðr¸¯ÁVz ªÄÆgÀ ¢£U¼ ¨ÁµÁAvg PªÀlz° ¨ÁUª»¹ ªiÁUðz±ð£ ªiÁrzgÀ. F vdjU ¸A¥ÁzP ¸«Äw CvÀAv lÄtAiiÁVz.

FU ¥Pl ªÁUÄwgÀª K¼£AiÀ ¸A¥Äl ªÀ qÁ. CA¨Ãqïgïgªg JgqÀ ªÀºvgªÁz PÈwU¼ ¥À£gï ªÄÄz tU½Az PÆrz. F ªÀºvg PÈwU¼À CªgÀ DzÀ¤P ¨Ágvz ¸ÁªiÁfP ¸Á»vP ¤ÃrgÀª JgqÀ ¸g tÃAiÀ UAxU¼¤¹gÀª 1) ``±ÆzgÀ AiiÁgÀ? ªÄvÀ CªgÀ »AzÆ-DAiÀð ¸ªiÁdz £Á®£AiÀ ª tðzªgÁzÄzÀ ºÃU?'' ªÄvÀ 2) ``C¸ø±gÀ AiiÁgÀ ªÄvÀ CªgÀ C¸ø±gÁzÄzÀ ºÃU?'' EªÀU½Az PÆrz. F JgqÆ PÈwU¼À E¥v£AiÀ ±vªiÁ£z «ZÁgzÁgAiÀ° ªQU ¸ªiÁ£v ªÄvÀ ¸ÁvAvöª£ÀÄ PÆqªiÁqÀª° ªÀºvgªÁz ¥ÁvªÀ£ÀÄ ª»¹ª. EªÀ £ªÀ EwºÁ¸z° ªÊZÁjPvAiÀ AiÄÄUP £ÁA¢AiiÁVª. F PÈwU¼° ªÊZÁjPvAiÀ®z LwºÁ¹P DzÁgªÇ Ez. £ªÀ ¸ÁªiÁfP ªª¸AiÀ£ÀÄ §®ªÁV ©V¢ngÀª ªÄvÀ ¸zÁ ¤AiÀAw¸ÀwgÀª eÁw¥zïwAiÀ£ÀÄ PÀjv «ªÄ±ðAiÀÆ ªÄÆr §A¢z. F »£ï¯AiÀ° qÁ. CA¨ÃqïggÀ eÁw¥zïw AiiÁª jÃwAiÀ° ¸ÁªiÁfP fÃª£z ªÄÆ®¨Æv CA±ªÁVz JA§Äz£ÀÄ LwºÁ¹P ¤z±ð£U¼ ¸ºÁAiÀ¢Az F PÈwU¼° vÆÃj¹zÁg.

±ÆzgÀ AiiÁgÀ? JA§ vªÀ PÈwAiÀ£ÀÄ CªgÀ DzÀ¤P ¨Ágvz `ªÀºÁ±ÆzgÀ'gÁVzï ªÀºÁvÁ eÆÃw¨Á ¥Æ¯AiÀªg ¥Àtï¸guU C¦ð¹gÀªÀzÀ AiÀxÆÃavªÁVz.

Cªg Jgq£AiÀ PÈw `C¸ø±ÌgÀ' Cªg `±ÆzgÀ AiiÁgÀ?' JA§ PÈwAiÀ ¥juÁªÀªÃ DVz. F UAxzº Cªg C¸ø±ÌvAiÀ GUªÀ, ¨¼ª tU ªÀvÀ C¸ø±ÌgÁzªgÀ AiiÁgÀ JA§ ¥±ßU ¸ªÀ¥ðPªÁz Gvg PÆnzÁg. EzÆ C®z C¸ø±ÌvAiÀ DZgu Q.±. 400g £Avg DZguU §A¢vÀ JAzÀ C©¥ÁAiÀ ¥nzÁg. EzÀ Lwº Á¹P ªÀvÀ ¸ÁªiÁfP ¨¼ª tUU¼ DzÁg ºÁUÆ ¸A±ÆÃz£AiÀ ¥®ªÁV gÆ¥ÀUÆArgÀª C©¥ÁAiÀªÁVz. EzÆ C®z F UAxU¼º qÁ. CA¨ÃqÌgïgªgÀ ºÃU eÁw ¥zÌw C¥¸ÀvªÁVz ªÀvÀ CzÀ ªÌQ ¸ÁvAvöPÌ ªÀvÀ ¸ÁªiÁfP ¨¼ª tUU ºÃU CrAiÀÀAIÀªiÁrz JA§ CA±ª£Àß DzÁg¸»vªÁV ©A©¹zÁg. EzÀ F UAxU¼ ªÀÆ®P CªgÀ ¤Ãrz ªÀºvg PÆqÀUAiiÁVz. DzjAz Eªl ¥wAiÆ§ ¸ªiÁd±Á¸ïz «zÁyðAiÀÆ Cª±ÌªÁV Nz¯Ã¨ÃPÁz UAxU¼ÁVª.

F ¸A¥Ál z ¨ÁµÁAvg PÁAiÀðª£Àß §ºÀ D¸Ì¬ÀAz ªiÁrPÆngÀª J¯Á ¨ÁµÁAvPÁgjU ªÀvÀ ¥jµÌgt PÁAiÀðª£Àß ªiÁrPÆngÀª qÁ. ¹z°AUAiÀ£ªjU ¸A¥ÁzP ¸«Àw IÀtAiiÁVz. F ¸A¥Ál z ¥PIuUÁV ±«À¹z P£ßq ªÀvÀ ¸A¸Ìw ¤zðÃ±£Á®AiÀz ¤zðÃ±PgÁz ²Ã ªÉ.P. ªÀÀzÀPȵ CªjU ªÀvÀ Cªg ¹§A¢AiÀªjU ¸A¥ÁzP ¸«Àw D¨ÁjAiiÁVz. ¸A¥Ál z ªÀÀz tPÁAiÀðª£Àß ¤ªð»¹z E¼Á ªÀÀz tzªjU ¸«ÀwAiÀ PÈvdvU¼À.

zÁgªÁq
28-7-95

qÁ. J.JA. gÁd±ÉÃRgÀAiÀ
¸A¥ÁzP ¸«ÀwAiÀ ¥gªÁV

# ¥Àj«r


¸AzÃ±U¼Ä v
¥jµÌv ªÄÄz tPÌ ªÄÄ£Äß r x
Jgq£Ã ªÄÄz tPÌ ªÄÄ£Äß r xiv
ªÄÆg£Ã ªÄÄz tPÌ ªÄÄ£Äß r xiv
¸A¥ÁzQÃAiÄ xvi


## 1
## ±ÆzgÄ


¦ÃpP 1
CzÁåAiÄ 1 : ±Æzg MUÌÄ 11
CzÁåAiÄ 2 : ±Æzg GUªÄz §UÉ ¨Á¼ÀÌt ¹zÁÞAv 28
CzÁåAiÄ 3 : ±Æzg ¸ÁÜ£ªiÁ£z §UÉ ¨Á¼ÀÌt ªÁz 34
CzÁåAiÄ 4 : ±ÆzgÄ ªÄvÄ DAiÄðgÄ 58
CzÁåAiÄ 5 : DAiÄðg «gÄzÞ DAiÄðgÄ 80
CzÁåAiÄ 6 : ±ÆzgÄ ºÁUÆ zÁ¸gÄ 99
CzÁåAiÄ 7 : AiiÁgÄ ±ÆzgÁVzÌgÄ? 112
CzÁåAiÄ 8 : ªtðU¼ ¸ASÉå - ªÄÆgÆÃ £Á¯ÆÌÃ? 134
CzÁåAiÄ 9 : ¨Á¼ÀÌt jU JzÄgÁV ±ÆzgÄ 142
CzÁåAiÄ 10 : ±Æzg vÃeÆÃªz 162
CzÁåAiÄ 11 : ¨Á¼ÀÌtgÄ ªÄvÄ ±ÆzgÄ gÁfAiiÁz Px 196
CzÁåAiÄ 12 : ¹zÁÞAvz ¸v¥jÃP 214
C£Ä§AzU¼Ä 219-226


## 2
## C¸ÊøÀ±ÀågÄ

¨ÁU - I

## MAzÄ vË®¤P ¸«ÄÃPë


CzÁåAiÄ 1 : »AzÆU¼®zªg°è C¸ÊøÀ±ÀåvÉ 241
CzÁåAiÄ 2 : »AzÆU¼°è C¸ÊøÀ±ÀåvÉ 248

¨ÁU - **II**
ª¸wAiÄ ¸ªÀ¸å
CzÁåAiÀ 3 : C¸ØÜ±ÀgÀ Hg ºÆgU KP ªÁ¹¸ÀvÁg? 265
CzÁåAiÀ 4 : C¸ØÜ±ÀgÀ ©r d£ÁAUª? 271
CzÁåAiÀ 5 : CAx GzÁºguU¼Ä ¨Ãgq GAm? 274
CzÁåAiÀ 6 : ¨ÃgqAiÄ° ©rd£jUÁV ¤«Äð¹z ¥vÀÃP ª¸ÁºvÀU¼Ä
ºÃUªiÁAiÀªÁzªÀ? 277

¨ÁU - **III**
C¸ØÜ±ÀvAiÄ GUªÄz º¼AiÄ ¹zÁÞAvU¼Ä
CzÁåAiÀ 7 : C¸ØÜ±ÀvAiÄ GUªÀP DzÁgªÁV d£ÁAVÃAiÀ ©£Àv 281
CzÁåAiÀ 8 : C¸ØÜ±ÀvAiÄ GUªÀP P¸À©£ DzÁg 301

¨ÁU - **IV**
C¸ØÜ±ÀvAiÄ GUªÄz ºÆ¸ ¹zÁÞAvU¼Ä
CzÁåAiÀ 9 : C¸ØÜ±ÀvU ªÄÆ® PÁgtgAzÀ ¨Ëzg §UÉ C£Ázg 307
CzÁåAiÀ 10 : C¸ØÜ±ÀvU ªÄÆ® PÁgtªÁV UÆÃªiÁA¸ ¨Pu 315

¨ÁU - **V**
ºÆ¸ ¹zÁÞAvU¼Ä ºÁUÆ P®ªÅ ¥±ßU¼Ä
CzÁåAiÀ 11 : »AzÆU¼Ä UÆÃªiÁA¸ª£Äß JAzÆ w£ÀÄßwg°®ª? 321
CzÁåAiÀ 12 : ¨ÁºÌuÃvggÀ UÆÃªiÁA¸ ¨PuAiÄ£Äß ªfð¹zÃP? 328
CzÁåAiÀ 13 : ¨ÁºÌtgÀ ¸¸ÁåºÁjU¼ÁU®Ä K£Ä PÁgt? 334
CzÁåAiÀ 14 : UÆÃªiÁA¸ ¨Pu, eÁw¨µg£Äß
C¸ØÜ±Àg£ÁßVAiiÁP ªiÁq¨ÃPÄ? 352

¨ÁU - **VI**
C¸ØÜ±Àv ªÀvÀ Czg d£À ¢£ÁAP
CzÁåAiÀ 15 : C¥«vgÀ ªÀvÀ C¸ØÜ±ÀgÀ 361
CzÁåAiÀ 16 : ºvÁ±gÁz d£gÀ C¸ØÜ±ÀgÁzzÀ AiiÁªÁU? 371

¨ÁU - **VII**

## ¥ÁQ¸Á£z ¥gªÁV ªÄÄ¸¯Á£g ªÁz


CzÁåAiÄ 17 : ºÃUï PÃ¼ÀwgÀªÁzÃ£Ä? 385

CzÁåAiÄ 18 : D±AiÀ PÃ¼ÀwgÀª MAzÀ gÁµ 93

CzÁåAiÄ 19 : ¥v£¢Az ¥ÁgÁUÀªÁzÀ 404


¨ÁU - **VIII**

## ¥ÁQ¸Á£z «gÀz »AzÆ CºªÁ®Ä


CzÁåAiÄ 20 : KPvAiÀ ¨AU 415

CzÁåAiÄ 21 : QÃt¸Äª gPu 431

CzÁåAiÄ 22 : ¥ÁQ¸Á£ ªÄvÀ PÆÃªÄÄ±ÁAw 462


¨ÁU - **IX**

## ¥ÁQ¸Á£ª®¢zg ªÄvÃ£Ä?


CzÁåAiÄ 23 : ¥ÁQ¸Á£P »AzÀ ¥AiiÁðAiÀ 485

CzÁåAiÄ 24 : ¥ÁQ¸Á£: ªÄÄ¹A ¥AiiÁðAiÄ 554

CzÁåAiÄ 25 : «zÃ±U½Az PºAiÄ¨ÃPÁz ¥ÁoU¼Ä 563


¨ÁU - **X**

## ¥ÁQ¸Á£ ªÄvÀ eÁqÀ


CzÁåAiÄ 26 : ¸ÁªiÁfP dqv 581

CzÁåAiÄ 27 : PÆÃªÄÄ DPªÄt 607

CzÁåAiÄ 28 : gÁ¶ÃAiÀ ºvÁ± 630


¨ÁU - **XI**


CzÁåAiÄ 29 : ¥ÁQ¸Á£ Eg¨ÃP? 715

CzÁåAiÄ 30 : ¥ÁQ¸Á£z ¸ªÄ¸ÉU¼Ä 736

CzÁåAiÄ 31 : ¤zðj¸ÀªªgÀ AiiÁgÄ? 751

»£Äß r 769

C£Ä§AzU¼Ä 781

«µAiÄ¸Æa 864

1

±Æzg Ä

AiiÁgÄ ±ÆzgÁVzgÄ?

# ªÀºÁvÀä eÆåÃw¨Á ¥Æ¯

(1827-1890)

Cªg ¸ÀguÚ CAQv

»AzÆ P¼eÁw d£gÀ ªÀÃ®ÀeÁw
d£jU UÀ¯Áª ÀgÁVzÁg
JA§ Cjª ÅA I Àª iÁr
«zÃ² D½P¬ÀAz ¸ÁvAvöå ¥qAiÀÀªÅzQÌAv
¨ÁgvPÌ ¸ÁªiÁfP ¥eÁ¥¨Àv ºZÀ ªÀÄRå
JAzÀ ¨ÆÃ¢¹z
DzÀ¤P ¨Ágvz ªÀºÆÃ£ßv ±Æz

# AiiÁgÄ ±ÆzgÁVzÀgÄ?

*CªgÄ ºÃU ¨ÁgwÃAiÄ-DAiÄð ¸ªiÁdz*
*£Á®£AiÄ ªtðzªgÁzgÄ?*

©.Dgï. CA¨ÃqÀgï

# ಪೀಠಿಕೆ

ಈ ವಿಷಯ ಕುರಿತು ಸಾಹಿತ್ಯದ ಸದ್ಯದ ಸ್ಥಿತಿಯಲ್ಲಿ ಶೂದ್ರರ ಬಗ್ಗೆ ಇನ್ನೊಂದು ಪುಸ್ತಕ ಅನಾವಶ್ಯಕವಾಗಲಾರದು. ಅದು ಒಂದು ಕ್ಷುದ್ರ ಸಮಸ್ಯೆಯನ್ನು ಕುರಿತದ್ದೆಂದು ಹೇಳಲು ಸಾಧ್ಯವಿಲ್ಲ. ಹಿಂದೂ–ಆರ್ಯರ ಸಾಮಾಜಿಕ ವ್ಯವಸ್ಥೆ ಚಾತುರ್ವರ್ಣ್ಯ ತತ್ವದ ಮೇಲೆ ಆಧಾರಿತವಾಗಿದೆ, ಹಾಗೂ ಚಾತುರ್ವರ್ಣ್ಯ ಎಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ಸಾಮಾಜಿಕ ವಿಭಜನೆ ಎನ್ನುವ ಸಾಮಾನ್ಯಾಭಿಪ್ರಾಯ ಶೂದ್ರ ಸಮಸ್ಯೆಯ ನಿಜವಾದ ಸ್ವರೂಪವನ್ನಾಗಲಿ ಅಥವಾ ಅದರ ವಿಸ್ತಾರವನ್ನಾಗಲಿ ಸೂಚಿಸುವುದಿಲ್ಲ. ಸಮಾಜವನ್ನು ಕೇವಲ ನಾಲ್ಕು ವರ್ಣಗಳನ್ನಾಗಿ ವಿಭಜಿಸುವುದೇ ಆಗಿದ್ದರೆ ಚಾತುರ್ವರ್ಣ್ಯ ತೀರಾ ಅಮಾಯಕ ತತ್ವವಾಗಿಬಿಡುತ್ತಿತ್ತು. ದುರದೃಷ್ಟವಶಾತ್ ಚಾತುರ್ವರ್ಣ್ಯ ತತ್ವ ಇದಕ್ಕಿಂತಲೂ ಹೆಚ್ಚಿನದನ್ನು ಒಳಗೊಂಡಿದೆ. ಸಮಾಜವನ್ನು ನಾಲ್ಕು ವರ್ಗಗಳನ್ನಾಗಿ ವಿಂಗಡಿಸುವುದರ ಜೊತೆಗೆ ಈ ನಾಲ್ಕು ವರ್ಣಗಳ ನಡುವಣ ಸಾಂಘಿಕ ಜೀವನದ ನೀತಿಯನ್ನು ನಿರ್ಧರಿಸಲು ಶ್ರೇಣೀಕೃತ ಅಸಮಾನತೆಯ ತತ್ವವನ್ನು ಆಧಾರ ಮಾಡುವ ತನಕ ಆ ತತ್ವ ಹೋಗುತ್ತದೆ. ಮತ್ತೆ ಶ್ರೇಣೀಕೃತ ಅಸಮಾನತೆಯ ಈ ವ್ಯವಸ್ಥೆ ಕೇವಲ ಕಾಲ್ಪನಿಕವಲ್ಲ; ಅದು ಶಾಸನಬದ್ಧ ಮತ್ತು ದಂಡನಾರ್ಹ. ಚಾತುರ್ವರ್ಣ್ಯ ಪದ್ಧತಿಯಲ್ಲಿ ಶೂದ್ರನನ್ನು ಕೆಳದರ್ಜೆಯಲ್ಲಿ ಇಡುವುದಷ್ಟೆ ಅಲ್ಲದೆ, ಧರ್ಮ ನಿರ್ಧರಿಸಿರುವ ಸ್ಥಿತಿಯಿಂದ ಮೇಲೇಳದಂತೆ ಅವನನ್ನು ತಡೆಗಟ್ಟಲೂ ಅಸಂಖ್ಯಾತ ಅಗೌರವಗಳಿಗೂ ಅನರ್ಹತೆಗಳಿಗೂ ಅಧೀನಗೊಳಿಸಲಾಗಿದೆ. ವಾಸ್ತವವಾಗಿ ಅಸ್ಪೃಶ್ಯರ ಪಂಚಮ ವರ್ಣ ಅಸ್ತಿತ್ವಕ್ಕೆ ಬರುವವರೆಗೆ ಹಿಂದೂಗಳ ದೃಷ್ಟಿಯಲ್ಲಿ ಶೂದ್ರರು ಅಧಮರಲ್ಲಿ ಅತ್ಯಂತ ಅಧಮರಾಗಿದ್ದರು. ಶೂದ್ರರ ಸಮಸ್ಯೆ ಎಂದು ಕರೆಯಬಹುದಾದುದರ ಸ್ವರೂಪವನ್ನು ಇದು ತೋರಿಸುತ್ತದೆ. ಈ ಸಮಸ್ಯೆಯ ವಿಸ್ತಾರದ ಕಲ್ಪನೆ ಜನರಿಗೆ ಬಾರದಿದ್ದರೆ, ಅದಕ್ಕೆ ಕಾರಣ, ಅವರು ಶೂದ್ರರ ಜನಸಂಖ್ಯೆ ಎಷ್ಟಿದೆ ಎಂದು ತಿಳಿದುಕೊಳ್ಳಲು ಲಕ್ಷ್ಯ ವಹಿಸದಿರುವುದೇ ಆಗಿದೆ. ದುರದೃಷ್ಟದಿಂದ ಅವರ ಜನಸಂಖ್ಯೆಯನ್ನು ಜನಗಣತಿ ಪ್ರತ್ಯೇಕವಾಗಿ ತೋರಿಸುತ್ತಿಲ್ಲ. ಆದರೆ ಅಸ್ಪೃಶ್ಯರನ್ನು ಬಿಟ್ಟರೆ ಶೂದ್ರರು ಹಿಂದೂ ಜನಸಂಖ್ಯೆಯಲ್ಲಿ ಸುಮಾರು ಶೇಕಡ ೭೫ ಅಥವಾ ೮೦ ಇದ್ದಾರೆ. ಅಷ್ಟು ವಿಪುಲ ಜನಸಂಖ್ಯೆಯನ್ನು ಕುರಿತ ಒಂದು ಪ್ರಬಂಧವನ್ನು ಕ್ಷುಲ್ಲಕ ಸಮಸ್ಯೆಯನ್ನು ಕುರಿತದ್ದೆಂದು ಪರಿಗಣಿಸಬಾರದು.

ಈ ಕೃತಿ ಹಿಂದೂ–ಆರ್ಯ ಸಮಾಜದಲ್ಲಿರುವ ಶೂದ್ರರನ್ನು ಕುರಿತಿದೆ. ಈ ಸಮಸ್ಯೆಗಳ ಬಗೆಗಿನ ಶೋಧನೆ ವರ್ತಮಾನದಲ್ಲಿ ಪ್ರಮುಖವಲ್ಲ ಎಂಬ ಒಂದು ಅಭಿಪ್ರಾಯವಿದೆ. ಅದನ್ನು 'ಹಿಂದೂ ಬುಡಕಟ್ಟುಗಳು ಮತ್ತು ಜಾತಿಗಳು'[೧] ಎಂಬ ತಮ್ಮ ಗ್ರಂಥದಲ್ಲಿ ಶ್ರೀ ಶೆರಿಂಗ್ ಹೇಳುತ್ತಾರೆ.

"ಶೂದ್ರರು ಆರ್ಯರಾಗಿದ್ದರೆ? ಅಥವಾ ಭಾರತದ ಮೂಲನಿವಾಸಿಗಳಾಗಿದ್ದರೆ? ಅಥವಾ ಇವುಗಳ ಸಂಯೋಗದಿಂದ ಹುಟ್ಟಿದ ಬುಡಕಟ್ಟುಗಳೇ? ಎಂಬುದು ಸದ್ಯಕ್ಕೆ ಅಷ್ಟು ಮುಖ್ಯವಲ್ಲ. ಆರಂಭ ಕಾಲದಲ್ಲಿ ಅವರು ಸ್ವತಃ ಒಂದು ವರ್ಗವಾಗಿದ್ದರು; ಕೊನೆಗೆ ನಾಲ್ಕನೆಯ ವರ್ಣವಾದರು; ಆದರೂ ಮೇಲಿನ ಮೂರು ವರ್ಣಗಳಿಂದ ಬಹಳ ದೂರದಲ್ಲಿರಬೇಕಾಯಿತು. ಪ್ರಾರಂಭದಲ್ಲಿ ಅವರು ಆರ್ಯರಲ್ಲವೆಂದು

---

೧. Sherring : *Hindu Tribes and Castes,* Vol. I, Introduction, p.xxi

ಒಪ್ಪಿಕೊಂಡರೂ, ಮೂರು ವರ್ಣದವರ ಜೊತೆ ನಡೆದ ವ್ಯಾಪಕ ಅಂತರ್‌ವಿವಾಹಗಳಿಂದ ಅವರು ಬಹುಮಟ್ಟಿಗೆ ಆರ್ಯರೇ ಆಗಿಬಿಟ್ಟಿದ್ದಾರೆ; ಈಗಾಗಲೇ ತೋರಿಸಿರುವಂತೆ, ಅವರು ಕಳೆದುಕೊಂಡಿದ್ದಕ್ಕಿಂತ ಹೆಚ್ಚಾಗಿ ಗಳಿಸಿಕೊಂಡಿದ್ದಾರೆ; ಈಗ ಶೂದ್ರರೆಂದು ನಾಮಕರಣಗೊಂಡಿರುವ ಕೆಲವು ಬುಡಕಟ್ಟುಗಳು ವಾಸ್ತವವಾಗಿ ಹೆಚ್ಚು ಬ್ರಾಹ್ಮಣರು ಮತ್ತು ಕ್ಷತ್ರಿಯರೇ ಆಗಿದ್ದಾರೆ. ಒಟ್ಟಿನಲ್ಲಿ ಇವರು ಇಂಗ್ಲೆಂಡಿನ ಸೆಲ್ಟಿಕ್ ಜನಾಂಗಗಳು ಆಂಗ್ಲೋ–ಸ್ಯಾಕ್ಸನ್ ಜನಾಂಗದಲ್ಲಿ ಬೆರೆತುಹೋಗಿರುವಂತೆ ಇತರ ಜನಾಂಗಗಳಲ್ಲಿ ಬೆರೆತು ಹೋಗಿದ್ದಾರೆ; ಅವರ ಸ್ವಂತ ಪ್ರತ್ಯೇಕ ವ್ಯಕ್ತಿತ್ವ, ಎಂದಾದರೂ ಒಂದು ಪಕ್ಷ ಇದ್ದಲ್ಲಿ, ಈಗ ಸಂಪೂರ್ಣವಾಗಿ ಮಾಯವಾಗಿದೆ.''

ಈ ಅಭಿಪ್ರಾಯ ಎರಡು ತಪ್ಪುಗಳಿಂದ ಬಂದಿದೆ. ಮೊದಲನೆಯದಾಗಿ, ಭಿನ್ನ ಮೂಲಗಳಿಂದ ಬಂದ ಜಾತಿಗಳ ಕೂಟವೆ ಈಗಿನ ಶೂದ್ರರು ಹಾಗೂ ಇವರು ಹಿಂದೂ–ಆರ್ಯ ಸಮಾಜದ ಮೂಲ ಶೂದ್ರರಿಗಿಂತ ಜನಾಂಗಿಕವಾಗಿ ಭಿನ್ನವಾಗಿದ್ದಾರೆ. ಎರಡನೆಯದಾಗಿ, ಶೂದ್ರರ ವಿಷಯದಲ್ಲಿ ಆಸಕ್ತಿಯ ಕೇಂದ್ರವಿರುವುದು ಶೂದ್ರರು ಒಂದು ಜನಾಂಗವಾಗಿ ಅಲ್ಲ, ಪೀಡನೆ ಮತ್ತು ದಂಡನೆಗಳ ಕಾನೂನು ವ್ಯವಸ್ಥೆಗೆ ಅವರನ್ನು ಅಧೀನವಾಗಿಟ್ಟಿರುವುದರಲ್ಲಿದೆ. ಹಿಂದೂ–ಆರ್ಯ ಸಮಾಜದ ಶೂದ್ರರ ಜೊತೆ ವ್ಯವಹರಿಸುವುದಕ್ಕಾಗಿ ಪೀಡನೆ ಮತ್ತು ದಂಡನೆಗಳ ಪದ್ಧತಿಯನ್ನು ಮೂಲತಃ ಬ್ರಾಹ್ಮಣರು ರೂಪಿಸಿದರೆಂಬುದರಲ್ಲಿ ಅನುಮಾನವಿಲ್ಲ; ಶೂದ್ರರು ಈಗ ಒಂದು ವಿಶಿಷ್ಟವಾದ ಪ್ರತ್ಯೇಕವಾಗಿ ಗುರುತಿಸಲ್ಪಡುವ ಸಮುದಾಯವಾಗಿ ಉಳಿದಿಲ್ಲ. ಇದು ವಿಚಿತ್ರವಾಗಿ ಕಂಡರೂ ಅವರಿಗೆ ಸಂಬಂಧಿಸಿದ ಈ ಸಂಹಿತೆ ಈಗಲೂ ಜಾರಿಯಲ್ಲಿದೆ; ಮೂಲ ಶೂದ್ರರ ಜೊತೆ ಯಾವ ಸಂಬಂಧವೂ ಇಲ್ಲದ ಕೆಳಜಾತಿಯವರಿಗೆಲ್ಲ ಅದು ಅನ್ವಯವಾಗುತ್ತಿದೆ. ಇದು ಹೇಗಾಯಿತು ಎಂಬುದು ಎಲ್ಲರಿಗೂ ಕುತೂಹಲದ ವಿಷಯವಾಗಬೇಕು. ಬ್ರಾಹ್ಮಣ ಧರ್ಮದ ಉಗ್ರ ಕಟ್ಟಳೆಗಳ ಪರಿಣಾಮದಿಂದಾಗಿ ಹಿಂದೂ–ಆರ್ಯ ಸಮಾಜದ ಶೂದ್ರರು ಕಾಲಾಂತರದಲ್ಲಿ ಸಾರ್ವಜನಿಕ ಜೀವನದಲ್ಲಿ ತೀರಾ ಕೆಳದರ್ಜೆಗೆ ಬರಬೇಕಾಯಿತು ಎಂಬುದೇ ನನ್ನ ವಿವರಣೆ. ಇದರಿಂದ ಎರಡು ಪರಿಣಾಮಗಳು ಬಂದವು. ಶೂದ್ರ ಪದದ ಅರ್ಥದಲ್ಲಿ ಆದ ಬದಲಾವಣೆ ಒಂದನೇ ಪರಿಣಾಮ. ಒಂದು ನಿರ್ದಿಷ್ಟ ಸಮುದಾಯದ ಹೆಸರಾಗಿದ್ದ ಶೂದ್ರ ಪದ ತನ್ನ ಮೂಲಾರ್ಥವನ್ನು ಕಳೆದುಕೊಂಡು ನಾಗರಿಕತೆ, ಸಂಸ್ಕೃತಿ, ಗೌರವ ಮತ್ತು ಸ್ಥಾನ ಇಲ್ಲದ ಕೆಳವರ್ಗದವರಿಗೆ ಒದಗಿದ ಸಾಮಾನ್ಯ ಹೆಸರಾಯಿತು. ಶೂದ್ರ ಪದದ ಅರ್ಥವ್ಯಾಪ್ತಿಯನ್ನು ಅನುಸರಿಸಿ 'ಮನುಸ್ಮೃತಿ'ಯ ಅನ್ವಯ ವಿಸ್ತಾರವಾಯಿತು. ಹೀಗೆ ಈಗಿನ ಶೂದ್ರರೆಂಬುವವರು ಆ ಪದದ ಮೂಲಾರ್ಥದಲ್ಲಿ ಶೂದ್ರರಲ್ಲದಿದ್ದರೂ. ಸ್ಮೃತಿಗೆ ಅಧೀನರಾದರು. ಅಷ್ಟೇ ಅಲ್ಲದೆ, ಮೂಲ ಅಪರಾಧಿಗಳಿಗೆ ಉದ್ದೇಶಿತವಾದ ಸ್ಮೃತಿಯನ್ನು ಈಗ ಮುಗ್ಧರಿಗೂ ಅನ್ವಯಿಸಲಾಗುತ್ತದೆ. ಈಗಿನ ಕೆಳವರ್ಗದ ಜನರಿಗಿಂತ ಮೂಲ ಶೂದ್ರರು ಭಿನ್ನವಾಗಿದ್ದರೆಂಬ ಸಾಕಷ್ಟು ಐತಿಹಾಸಿಕ ಪ್ರಜ್ಞೆ ಹಿಂದೂ ಸ್ಮೃತಿಕಾರರಿಗೆ ಇದ್ದರೆ ಈ ದುರಂತ – ಮುಗ್ಧರ ಹತ್ಯಾಕಾಂಡ – ವನ್ನು ನಿವಾರಿಸಬಹುದಿತ್ತು. ಮೂಲ ಶೂದ್ರರಿಗೆ ಅನ್ವಯವಾದಷ್ಟು ಉಗ್ರ ರೀತಿಯಲ್ಲಿ ಈಗಿನ ಶೂದ್ರರಿಗೆ ಸ್ಮೃತಿ ಅನ್ವಯವಾಗುತ್ತಿರುವುದು ದುರದೃಷ್ಟಕರವಾದರೂ ಸತ್ಯಸಂಗತಿಯಾಗಿದೆ. ಆದ್ದರಿಂದ ಅಂಥ ಸ್ಮೃತಿ ಹೇಗೆ ಅಸ್ತಿತ್ವಕ್ಕೆ ಬಂತೆಂಬುದು ಕೇವಲ ಪ್ರಾಚೀನಾನ್ವೇಷಕ ಆಸಕ್ತಿ ಎಂದು ಭಾವಿಸಲು ಸಾಧ್ಯವಿಲ್ಲ.

ಶೂದ್ರರನ್ನು ಕುರಿತ ಅಧ್ಯಯನ ಸ್ವಾಗತಾರ್ಹವಾದರೂ ಆ ವಿಷಯದ ಬಗ್ಗೆ ನನಗಿರುವ ಅರ್ಹತೆಯನ್ನು ಕೆಲವರು ಪ್ರಶ್ನಿಸಬಹುದು. ಭಾರತದ ರಾಜಕೀಯದ ಮೇಲೆ ಮಾತನಾಡಲು ನನಗೆ ಹಕ್ಕಿದ್ದರೂ ಭಾರತದ ಧರ್ಮ ಮತ್ತು ಧಾರ್ಮಿಕ ಇತಿಹಾಸ ನನ್ನ ಕ್ಷೇತ್ರವಲ್ಲ, ಆದ್ದರಿಂದ ಅಲ್ಲಿಗೆ ಪ್ರವೇಶ ಬೇಡವೆಂದು ನನಗೀಗಾಲೇ

ಎಚ್ಚರಿಕೆ ಬಂದಿದೆ. ನನಗೆ ಎಚ್ಚರಿಕೆಯನ್ನು ಕೊಡುವುದು ಅಗತ್ಯವೆಂದು ನನ್ನ ಟೀಕಾಕಾರರಿಗೆ ಏಕೆ ಅನ್ನಿಸಿತೋ ನನಗೆ ಗೊತ್ತಿಲ್ಲ. ನಾನೊಬ್ಬ ಚಿಂತಕ ಅಥವಾ ಲೇಖಕ ಎಂದು ನಾನು ವಿಪರೀತ ಕೊಚ್ಚಿಕೊಂಡಿದ್ದು ಅದಕ್ಕೆ ಇದು ಪ್ರತಿ ವಿಷವೆಂದು ಹೇಳಿದರೆ, ಅದು ಅನಾವಶ್ಯಕ. ಏಕೆಂದರೆ ಭಾರತದ ರಾಜಕೀಯದ ಮೇಲೆ ಮಾತನಾಡಲು ನನಗೆ ಅರ್ಹತೆ ಇಲ್ಲವೆಂಬುದನ್ನು ನಾನು ಒಪ್ಪಿಕೊಳ್ಳಲು ಸಿದ್ಧವಿದ್ದೇನೆ. ಸಂಸ್ಕೃತ ಭಾಷೆಯ ಮೇಲೆ ನನಗೆ ಪ್ರಭುತ್ವವಿಲ್ಲ ಎಂಬ ಕಾರಣಕ್ಕಾಗಿ ನನಗೆ ಈ ಎಚ್ಚರಿಕೆ ಕೊಟ್ಟಿದ್ದರೆ ಈ ಕೊರತೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈ ಕ್ಷೇತ್ರದಲ್ಲಿ ಕೆಲಸ ಮಾಡಲು ಏಕೆ ಅದು ನನ್ನನ್ನು ಅನರ್ಹನನ್ನಾಗಿ ಮಾಡಬೇಕೆಂಬುದು ನನಗೆ ಅರ್ಥವಾಗುವುದಿಲ್ಲ. ಇಂಗ್ಲಿಷಿನಲ್ಲಿ ಸಿಗದಂಥ ಸಂಸ್ಕೃತ ಭಾಷೆಯ ಸಾಹಿತ್ಯ ಯಾವುದೂ ಇಲ್ಲ. ಆದ್ದರಿಂದ ವರ್ತಮಾನದ ವಿಷಯವನ್ನು ನಿರ್ವಹಿಸಲು ಸಂಸ್ಕೃತ ಭಾಷಾಜ್ಞಾನದ ಕೊರತೆ ಅಡ್ಡಿಯಾಗಬೇಕಾಗಿಲ್ಲ. ಆದರೆ ಸಾಧಾರಣ ಬುದ್ಧಿಶಕ್ತಿಯುಳ್ಳ ಈ ಕೆಲಸಕ್ಕಾಗಿ ಅರ್ಹತೆ ಸಾಕಷ್ಟು ಇರುವ ನನ್ನಂಥ ವ್ಯಕ್ತಿಗೆ ೧೫ ವರ್ಷಗಳವರೆಗೆ ಇಂಗ್ಲಿಷ್ ಅನುವಾದಗಳ ಮೂಲಕ ಈ ಅಧ್ಯಯನಕ್ಕೆ ಬೇಕಾದ ಸಾಹಿತ್ಯವನ್ನು ಓದಿದ್ದೇನೆಂದು ಹೇಳುವ ಸಾಹಸ ಮಾಡುತ್ತೇನೆ. ಈ ವಿಷಯವನ್ನು ಕುರಿತು ಮಾತನಾಡಲು ನನ್ನ ಅರ್ಹತೆಯ ನಿಖರ ಪ್ರಮಾಣಕ್ಕೆ ಅತ್ಯುತ್ತಮ ಸಾಕ್ಷಿಯನ್ನು ಈ ಕೃತಿ ಒದಗಿಸುತ್ತದೆ. ದೇವದೂತರು ಕ್ರಮಿಸಲು ಹೆದರುವ ಕಡೆ ಮೂರ್ಖರು ನುಗ್ಗುತ್ತಾರೆಂಬ ಗಾದೆ ಮಾತಿನ ದೃಷ್ಟಾಂತವಾಗಿ ನನ್ನ ಈ ಪ್ರಯತ್ನ ಪರಿಣಮಿಸಬಹುದು. ಆದರೆ ಮೂರ್ಖನಿಗೂ ನಿರ್ವಹಿಸಬೇಕಾದ ಕರ್ತವ್ಯವಿದೆ ಎಂಬುದು ನನ್ನ ನಂಬಿಕೆ. ಅಂದರೆ, ದೇವದೂತ ನಿದ್ದೆ ಹೋದಾಗ ಅಥವಾ ಸತ್ಯವನ್ನು ಘೋಷಿಸಲು ಇಚ್ಛಿಸದಿದ್ದಾಗ ಮೂರ್ಖ ತನ್ನ ಯಥಾಶಕ್ತಿಯೊಂದಿಗೆ ಕೆಲಸ ಮಾಡಬೇಕಾಗುತ್ತದೆ. ನಿಷಿದ್ಧ ಕ್ಷೇತ್ರವನ್ನು ಪ್ರವೇಶಿಸಿದ್ದಕ್ಕಾಗಿ ನಾನು ಕೊಡುವ ಸಮರ್ಥನೆ ಇದು.

ಈ ಕೃತಿಯಲ್ಲಿ ಗಮನಾರ್ಹವಾದ ವಿಷಯವೇನು? ನನ್ನ ಸಂಶೋಧನೆಯ ಫಲವಾಗಿ ನಾನು ನಿಸ್ಸಂದೇಹವಾಗಿ ಎರಡು ತೀರ್ಮಾನಗಳಿಗೆ ತಲುಪಿದ್ದೇನೆ. ಈ ಕೃತಿಯಲ್ಲಿ ಎರಡು ಪ್ರಶ್ನೆಗಳನ್ನು ಎತ್ತಲಾಗಿದೆ: (೧) ಯಾರು ಶೂದ್ರರಾಗಿದ್ದರು? ಹಾಗೂ (೨) ಅವರು ಹಿಂದೂ–ಆರ್ಯ ಸಮಾಜದ ನಾಲ್ಕನೆಯ ವರ್ಣ ಹೇಗಾದರು? ಇವುಗಳಿಗೆ ನನ್ನ ಉತ್ತರಗಳನ್ನು ಕೆಳಕಂಡಂತೆ ಸಂಗ್ರಹಿಸಬಹುದು:

೧) ಶೂದ್ರರು ಸೂರ್ಯವಂಶದ ಆರ್ಯ ಸಮುದಾಯಗಳಲ್ಲಿನ ಒಂದು ಸಮುದಾಯವಾಗಿದ್ದರು.

೨) ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರೆಂಬ ಮೂರು ವರ್ಣಗಳನ್ನು ಮಾತ್ರ ಒಂದು ಕಾಲದಲ್ಲಿ ಆರ್ಯ ಸಮಾಜ ಮಾನ್ಯ ಮಾಡಿತ್ತು.

೩) ಶೂದ್ರರು ಒಂದು ಪ್ರತ್ಯೇಕ ವರ್ಣವಾಗಿರಲಿಲ್ಲ. ಅವರು ಹಿಂದೂ–ಆರ್ಯ ಸಮಾಜದ ಕ್ಷತ್ರಿಯ ವರ್ಣದ ಭಾಗವಾಗಿದ್ದರು.

೪) ಶೂದ್ರ ರಾಜರು ಮತ್ತು ಬ್ರಾಹ್ಮಣರ ನಡುವೆ ನಿರಂತರ ಕಲಹ ನಡೆಯುತ್ತಿತ್ತು. ಇದರಲ್ಲಿ ಅನೇಕ ದಬ್ಬಾಳಿಕೆಗಳಿಗೂ ಅವಮಾನಗಳಿಗೂ ಬ್ರಾಹ್ಮಣರು ತುತ್ತಾದರು.

೫) ಶೂದ್ರರ ದಬ್ಬಾಳಿಕೆ ಮತ್ತು ದಮನಗಳಿಂದ ಉಂಟಾದ ದ್ವೇಷದ ಫಲವಾಗಿ ಶೂದ್ರರಿಗೆ ಉಪನಯನವನ್ನು ಮಾಡಲು ಬ್ರಾಹ್ಮಣರು ನಿರಾಕರಿಸಿದರು.

೬) ಉಪನಯನದ ನಿರಾಕರಣೆಯಿಂದ ಕ್ಷತ್ರಿಯರಾಗಿದ್ದ ಶೂದ್ರರು ಸಾಮಾಜಿಕವಾಗಿ ಕೆಳದರ್ಜೆಗಿಳಿದರು; ವೈಶ್ಯರ ದರ್ಜೆಗಿಂತ ಕೆಳಗಿಳಿದರು; ಹಾಗಾಗಿ ನಾಲ್ಕನೆಯ ವರ್ಣವಾದರು.

ಈ ತೀರ್ಮಾನಗಳ ಬಗ್ಗೆ ನಾನು ವಿದ್ವಾಂಸರ ತೀರ್ಪನ್ನು ಕಾಯಬೇಕಾಗಿದೆ, ನಿಜ. ಈ ತೀರ್ಮಾನಗಳು

ಅಸಲಿಯಾಗಿರುವುದಷ್ಟೇ ಅಲ್ಲದೆ, ಈಗ ಪ್ರಚಲಿತವಾದವುಗಳನ್ನು ತೀವ್ರವಾಗಿ ವಿರೋಧಿಸುತ್ತವೆಂಬುದು ಸ್ಪಷ್ಟವಾಗಿದೆ. ಈ ತೀರ್ಮಾನಗಳನ್ನು ಒಪ್ಪಬಹುದೇ ಅಥವಾ ಬೇಡವೇ ಎಂಬುದು ಈ ಸಮಸ್ಯೆಯ ಬಗ್ಗೆ ತೀರ್ಪು ಕೊಡಲು ತನಗೆ ಹಕ್ಕಿದೆ ಎಂದು ಕುಳಿತಿರುವ ವ್ಯಕ್ತಿಯ ಮನಸ್ಥಿತಿಯನ್ನು ಅವಲಂಬಿಸಿದೆ. ಅವನು ಬೇರೊಂದು ನಿರ್ದಿಷ್ಟ ವಾದಕ್ಕೆ ಅಂಟಿಕೊಂಡಿದ್ದರೆ ನನ್ನದನ್ನು ತಿರಸ್ಕರಿಸುತ್ತಾನೆ. ಆದಾಗ್ಯೂ ಅವನ ತೀರ್ಪಿನ ಬಗ್ಗೆ ನಾನು ತಲೆಕೆಡಿಸಿಕೊಳ್ಳುವುದಿಲ್ಲ, ಏಕೆಂದರೆ ವಿರೋಧವಿಲ್ಲದೆ ಮತ್ತೇನನ್ನೂ ಈ ವೈರಿಯಿಂದ ನಿರೀಕ್ಷಿಸಲು ಸಾಧ್ಯವಿಲ್ಲ. ಆದರೆ ವ್ಯಕ್ತಿ ಪ್ರಾಮಾಣಿಕ ವಿಮರ್ಶಕನಾಗಿದ್ದರೆ, ಅವನು ಎಷ್ಟೇ ಜಾಗರೂಕನಾಗಿದ್ದರೂ, ಎಷ್ಟೇ ಸಂಪ್ರದಾಯಶೀಲನಾಗಿದ್ದರೂ, ವಸ್ತುಸಂಗತಿಗಳನ್ನು ಒಪ್ಪಿಕೊಳ್ಳುವ ಮುಕ್ತ ಮನಸ್ಸಿದ್ದರೆ ಅಂಥವನನ್ನು ನನ್ನ ಅಭಿಪ್ರಾಯಕ್ಕೆ ಒಪ್ಪಿಸುವುದರಲ್ಲಿ ನನಗೆ ಹತಾಶೆಯಿಲ್ಲ. ಈ ನಿರೀಕ್ಷೆ ಕೈಗೂಡಲು ವಿಫಲವಾಗಬಹುದು, ಆದರೆ ಒಂದು ವಿಷಯದ ಬಗ್ಗೆ ನಾನು ಖಚಿತವಾಗಿದ್ದೇನೆ. ಈ ಕೃತಿ ಹೊಸ ಒಳನೋಟಗಳಿಂದ ಹೊಸ ದೃಷ್ಟಿಕೋನಗಳಿಂದ ಶ್ರೀಮಂತವಾಗಿದೆಯೆಂದು ನನ್ನ ಟೀಕಾಕಾರರು ಒಪ್ಪಿಕೊಳ್ಳಬೇಕಾಗುತ್ತದೆ.

ವಿದ್ವಾಂಸರನ್ನು ಬಿಟ್ಟರೆ ಹಿಂದೂ ಸಾರ್ವಜನಿಕರು ಹೇಗೆ ಪ್ರತಿಕ್ರಿಯಿಸುತ್ತಾರೆಂಬುದು ಸ್ವಾರಸ್ಯಕರ ಊಹೆಯಾಗಬಹುದು. ಇಂದಿನ ಹಿಂದೂಗಳು ಐದು ಖಚಿತ ವರ್ಗಗಳಾಗಿ ಇದ್ದಾರೆ. ಹಿಂದೂಗಳ ಒಂದು ವರ್ಗವಿದೆ; ಇವರು ಸಂಪ್ರದಾಯ ಶರಣರಾಗಿದ್ದಾರೆ; ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ದೋಷವಿದೆ ಎಂಬುದನ್ನು ಅವರು ಒಪ್ಪುವುದಿಲ್ಲ. ಸುಧಾರಣೆ ಮಾತು ಅವರಿಗೆ ಮಹಾ ಪಾಖಂಡಿತನವಾಗಿದೆ. ಆರ್ಯ ಸಮಾಜ ಎಂದು ಹೆಸರಾದ ಹಿಂದೂಗಳ ಇನ್ನೊಂದು ವರ್ಗವಿದೆ. ಅವರು ವೇದಗಳನ್ನು ನಂಬುತ್ತಾರೆ; ವೇದಗಳಲ್ಲದೆ ಬೇರೇನನ್ನೂ ನಂಬುವುದಿಲ್ಲ. ವೇದಗಳಲ್ಲಿ ಏನೇನು ಇಲ್ಲವೊ ಅವೆಲ್ಲವನ್ನೂ ತಿರಸ್ಕರಿಸುವಷ್ಟರ ಮಟ್ಟಿಗೆ ಅವರು ಸಂಪ್ರದಾಯ ಶರಣರಿಂದ ಭಿನ್ನವಾಗುತ್ತಾರೆ. ವೇದಗಳಿಗೆ ಹಿಂದಿರುಗಿ ಎಂಬುದೇ ಅವರ ಸಂದೇಶವಾಗಿದೆ. ಹಿಂದೂ ಸಾಮಾಜಿಕ ವ್ಯವಸ್ಥೆಯೆಲ್ಲ ದೋಷಪೂರಿತವಾಗಿದೆ; ಆದರೆ ಅದನ್ನು ಖಂಡಿಸುವ ಅಗತ್ಯವಿಲ್ಲವೆಂದು ಹೇಳುವ ಹಿಂದೂಗಳ ಒಂದು ವರ್ಗವಿದೆ. ಕಾನೂನು ಅದನ್ನು ಮಾನ್ಯ ಮಾಡದೆ ಇರುವುದರಿಂದ ಅದು ಸತ್ತಿಲ್ಲದಿದ್ದರೂ ಸಾಯುತ್ತಿರುವ ವ್ಯವಸ್ಥೆ ಎಂಬುದು ಅವರ ವಾದವಾಗಿದೆ. ರಾಜಕೀಯ ಪ್ರಜ್ಞೆಯುಳ್ಳ ಹಿಂದೂಗಳ ಒಂದು ವರ್ಗವಿದೆ. ಅಂಥ ಪ್ರಶ್ನೆಗಳಿಗೆ ಅವರು ಅನಾಸಕ್ತರಾಗಿದ್ದಾರೆ. ಅವರಿಗೆ ಸಾಮಾಜಿಕ ಸುಧಾರಣೆಗಿಂತ ಸ್ವರಾಜ್ಯ ಹೆಚ್ಚು ಮುಖ್ಯವಾಗಿದೆ. ಹಿಂದೂಗಳ ಐದನೆಯ ವರ್ಗವಾದ ವಿಚಾರವಾದಿಗಳು ಸ್ವರಾಜ್ಯಕ್ಕಿಂತಲೂ ಸಾಮಾಜಿಕ ಸುಧಾರಣೆಗಳಿಗೆ ಮೊದಲ ಪ್ರಾಮುಖ್ಯತೆ ಕೊಡಬೇಕೆಂದು ಹೇಳುತ್ತಾರೆ.

ಈ ಕೃತಿ ಅನಾವಶ್ಯಕವೆಂದು ಭಾವಿಸುವ ಎರಡನೆಯ ವರ್ಗದ ಹಿಂದೂಗಳ ಅಭಿಪ್ರಾಯವನ್ನು ನಾನು ಒಪ್ಪಲಾರೆ. ಹಿಂದೂ ಸಮಾಜದಲ್ಲಿ ಪ್ರಚಲಿತವಿರುವ ಜಾತಿ ಪದ್ಧತಿಯನ್ನು ಬ್ರಿಟಿಷ್–ಭಾರತದ ಕಾನೂನುಗಳು ಮಾನ್ಯ ಮಾಡುವುದಿಲ್ಲವೆಂದು ಅವರು ಹೇಳುವುದು ಒಂದು ರೀತಿಯಲ್ಲಿ ಸರಿ. ತಾನು ಒಂದು ನಿರ್ದಿಷ್ಟ ವರ್ಣಕ್ಕೆ ಸೇರಿದವನೆಂಬ ಘೋಷಣಪತ್ರವನ್ನು ದಿವಾಣಿ (ಸಿವಿಲ್) ನ್ಯಾಯಾಲಯದಿಂದ ದಿವಾಣಿ ಪ್ರಕ್ರಿಯಾ ಸಂಹಿತೆಯ ೧೧ನೇ ಪರಿಚ್ಛೇದದ ಪ್ರಕಾರ ಪಡೆಯಲು ಹಿಂದೂವಿಗೆ ಸಾಧ್ಯವಾಗುವುದಿಲ್ಲವೆನ್ನುವುದು ನಿಜ. ಒಬ್ಬ ವ್ಯಕ್ತಿ ಒಂದು ನಿರ್ದಿಷ್ಟ ವರ್ಣಕ್ಕೆ ಸೇರಿದವನೆಂದು ಬ್ರಿಟಿಷ್ ಇಂಡಿಯಾದ ನ್ಯಾಯಾಲಯಗಳಿಗೆ ಒಂದು ಪಕ್ಷ ಸಾಧ್ಯವಾಗುವುದಾದರೆ ಅದು ಮದುವೆ, ವಾರಸುತನ, ದತ್ತು ಸ್ವೀಕಾರ ಇವುಗಳಲ್ಲಿ ಮಾತ್ರ; ಇವುಗಳ ಬಗೆಗಿನ ನಿಯಮಗಳು ವರ್ಣದಿಂದ ವರ್ಣಕ್ಕೆ ಬದಲಾಯಿಸುತ್ತವೆ. ಬ್ರಿಟಿಷ್ ಇಂಡಿಯಾದ ಕಾನೂನು ಹಿಂದೂಗಳ ನಾಲ್ಕು ವರ್ಣಗಳನ್ನು ಮಾನ್ಯ ಮಾಡುವುದಿಲ್ಲವೆಂಬುದು

ನಿಜವಾದರೂ ಅದರ ಅರ್ಥವನ್ನು ತಪ್ಪಾಗಿ ತಿಳಿಯದೆ ಜಾಗರೂಕವಾಗಿರಬೇಕು. ಸಂಗ್ರಹವಾಗಿ ಹೇಳುವುದಾದರೆ: (೧) ವರ್ಣವ್ಯವಸ್ಥೆಯ ಆಚರಣೆ ಒಂದು ಅಪರಾಧವೆಂದು ಅದು ಹೇಳುವುದಿಲ್ಲ; (೨) ವರ್ಣವ್ಯವಸ್ಥೆ ಮಾಯವಾಗಿದೆ ಎಂದು ಅದರ ಅರ್ಥವಲ್ಲ; (೩) ನಾಗರಿಕ ಹಕ್ಕುಗಳನ್ನು ಪಡೆಯಲು ಆಚರಣೆಯ ಅದರ ನಿಯಮಗಳು ಅವಶ್ಯಕವಿರುವ ಕಡೆ ವರ್ಣವ್ಯವಸ್ಥೆಯನ್ನು ಜಾರಿ ಮಾಡಿಲ್ಲವೆಂದು ಅದರ ಅರ್ಥವಲ್ಲ; (೪) ವರ್ಣವ್ಯವಸ್ಥೆಯ ಹಿಂದಿದ್ದ ಸಾಮಾನ್ಯ ಕಾನೂನು ಅನುಮೋದನೆಯನ್ನು ಹಿಂತೆಗೆದುಕೊಳ್ಳಲಾಗಿದೆ ಎಂಬುದೇ ಅದರ ಅರ್ಥ. ಆದರೆ ಸಾಮಾಜಿಕ ಸಂಸ್ಥೆಗಳನ್ನು ಪೋಷಿಸಲು ಕಾನೂನೊಂದೇ ಸಾಲದು. ಅವುಗಳಲ್ಲಿ ಧಾರ್ಮಿಕ ಅನುಮೋದನೆ ಮತ್ತು ಸಾಮಾಜಿಕ ಅನುಮೋದನೆ ಅತ್ಯಂತ ಮುಖ್ಯವಾದವು. ವರ್ಣ ಪದ್ಧತಿಗೆ ಧಾರ್ಮಿಕ ಅನುಮೋದನೆ ಇದ್ದೇ ಇದೆ. ಧಾರ್ಮಿಕ ಅನುಮೋದನೆ ಇದೆ ಎಂಬ ಕಾರಣಕ್ಕಾಗಿ ವರ್ಣವ್ಯವಸ್ಥೆಗೆ ಹಿಂದೂ ಸಮಾಜದ ಸಂಪೂರ್ಣ ಸಾಮಾಜಿಕ ಸಮ್ಮತಿ ಇದೆ. ಕಾನೂನಿನ ನಿಷೇಧವಿಲ್ಲದೆಯೂ ವರ್ಣವ್ಯವಸ್ಥೆಯನ್ನು ಜಾರಿಗೊಳಿಸಲು ಈಗ ಕಾನೂನಿಲ್ಲದಿದ್ದರೂ ಹಿಂದೂ ಸಮಾಜದಲ್ಲಿ ಶೂದ್ರರು ಮತ್ತು ಅಸ್ಪೃಶ್ಯರ ಸ್ಥಾನದ ವಾಸ್ತವ ಸಂಗತಿಯು ಅದು ಹಾಗೇ ಉಳಿದಿರುವುದನ್ನು ದೊಡ್ಡ ಸಾಕ್ಷಿಯಾಗಿ ಕಾಣಬಹುದು. ಆದ್ದರಿಂದ ಇಂಥ ಒಂದು ಅಧ್ಯಯನ ಅನಗತ್ಯವೆಂದು ಹೇಳಲು ಸಾಧ್ಯವಿಲ್ಲ.

ರಾಜಕೀಯ ಪ್ರಜ್ಞೆಯುಳ್ಳ ಹಿಂದೂವಿನ ಬಗ್ಗೆ ಹೇಳುವುದಾದರೆ ಅವನನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾಗಿಲ್ಲ. ಅವನ ಆಲೋಚನಾ ವಿಧಾನ ದೀರ್ಘದೃಷ್ಟಿಯ ಪರಿಗಣನೆಗಳಿಗಿಂತ ಹೆಚ್ಚಾಗಿ ಅಲ್ಪಕಾಲೀನ ದೃಷ್ಟಿಕೋನದಿಂದ ಸಾಮಾನ್ಯವಾಗಿ ನಿಯಂತ್ರಿತವಾಗಿದೆ. ಯಾವುದೇ ವಿಷಯ ಅವನನ್ನು ಜನರಿಗೆ ಅಪ್ರಿಯನಾದ ವ್ಯಕ್ತಿಯನ್ನಾಗಿ ಮಾಡುವುದಾದರೆ, ಅದು ಎಷ್ಟೇ ಜರೂರಾಗಿದ್ದರೂ, ಅವನು ಸಂಘರ್ಷಕ್ಕಿಳಿಯುವ ದಾರಿಯನ್ನು ಆರಿಸಿಕೊಳ್ಳದೆ ಅದನ್ನು ಮುಂದೂಡಲು ಇಚ್ಛಿಸುತ್ತಾನೆ. ಆದ್ದರಿಂದ ರಾಜಕೀಯ ಮನೋಭಾವದ ಹಿಂದೂ ಈ ಪುಸ್ತಕವನ್ನು ಒಂದು ಅನಿಷ್ಟವೆಂದು ಪರಿಗಣಿಸುವುದು ತುಂಬ ಸಹಜವಾಗಿದೆ.

ಈ ಕೃತಿ ಆರ್ಯ ಸಮಾಜದವರ ಮಾರ್ಗವನ್ನು ಕಟುವಾಗಿ ವಿರೋಧಿಸುತ್ತದೆ. ಎರಡು ಅತ್ಯಂತ ಮುಖ್ಯ ವಿಷಯಗಳಲ್ಲಿ ನನ್ನ ತೀರ್ಮಾನಗಳು ಅವರ ಸಿದ್ಧಾಂತದ ಜೊತೆ ತೀವ್ರ ವಿರೋಧವನ್ನು ವ್ಯಕ್ತಪಡಿಸುತ್ತವೆ. ಆರಂಭ ಕಾಲದಿಂದಲೂ ಹಿಂದೂ ಆರ್ಯ ಸಮಾಜದಲ್ಲಿ ನಾಲ್ಕು ವರ್ಣಗಳು ಅಸ್ತಿತ್ವದಲ್ಲಿದ್ದುವೆಂದು ಆರ್ಯ ಸಮಾಜಿಗರು ನಂಬುತ್ತಾರೆ. ಈ ಕೃತಿ ಹಿಂದೂ ಆರ್ಯ ಸಮಾಜದಲ್ಲಿ ಒಂದು ಕಾಲದಲ್ಲಿ ಮೂರು ವರ್ಣಗಳು ಮಾತ್ರ ಇದ್ದವೆಂದು ತೋರಿಸುತ್ತದೆ. ವೇದಗಳು ಅನಂತ ಮತ್ತು ಪರಮಪವಿತ್ರವೆಂದು ಆರ್ಯ ಸಮಾಜದವರು ನಂಬುತ್ತಾರೆ. ಆರ್ಯ ಸಮಾಜದವರ ಮೂಲಾಧಾರವಾಗಿರುವ ವೇದಗಳು ಮತ್ತು ಅದರ ಕೆಲವು ಭಾಗಗಳು, ವಿಶೇಷವಾಗಿ 'ಪುರುಷಸೂಕ್ತ', ಬ್ರಾಹ್ಮಣರು ತಮ್ಮ ಸ್ವಾರ್ಥ ಸಾಧನೆಗಾಗಿ ಕಟ್ಟಿರುವ ಕತೆಗಳು ಎಂಬುದನ್ನು ಈ ಗ್ರಂಥ ಸಾಬೀತುಪಡಿಸುತ್ತದೆ. ಈ ಎರಡು ತೀರ್ಮಾನಗಳು ಆರ್ಯ ಸಮಾಜದವರ ಸಿದ್ಧಾಂತಗಳ ಮೇಲೆ ಅಣುಬಾಂಬುಗಳಾಗಿ ಬೀಳುವುದರಲ್ಲಿ ಅನುಮಾನವಿಲ್ಲ.

ಆರ್ಯ ಸಮಾಜದವರ ಜೊತೆ ಈ ಕಲಹಕ್ಕಾಗಿ ನನಗೆ ವ್ಯಥೆಯಿಲ್ಲ. ವೇದಗಳು ಶಾಶ್ವತ ಅನಂತ, ಅನಾದಿ, ಸತ್ಯಸ್ಯಸತ್ಯ ಎಂದು ಬೋಧಿಸಿ ಹಿಂದೂ ಸಮಾಜವನ್ನು ಜಡಸಮಾಜವನ್ನಾಗಿ ಮಾಡಿರುವುದಲ್ಲದೇ, ವೇದಗಳ ಆಧಾರದ ಮೇಲೆ ನಿಂತಿರುವ ಹಿಂದೂ ಸಾಮಾಜಿಕ ಸಂಸ್ಥೆಗಳು ಕೂಡ ಅನಂತ, ಅನಾದಿ, ಸತ್ಯಸ್ಯ ಸತ್ಯ, ಆದ್ದರಿಂದ ಬದಲಾವಣೆ ಅನಗತ್ಯ ಎಂದು ಬೋಧಿಸಿ ಆರ್ಯ ಸಮಾಜಗಳು ಮಹಾಪರಾಧ ಮಾಡಿದ್ದಾವೆ. ಇಂಥ ನಂಬಿಕೆ ಒಂದು ಸಮುದಾಯದಲ್ಲಿ ಸರ್ವವ್ಯಾಪಿಯಾದರೆ ಅದು ಆ ಸಮುದಾಯಕ್ಕೆ

ಸಂಭವಿಸುವ ಅತ್ಯಂತ ಕೆಟ್ಟ ಘಟನೆ. ಆರ್ಯ ಸಮಾಜದವರ ಈ ಸಿದ್ಧಾಂತವನ್ನು ಸಂಪೂರ್ಣವಾಗಿ ನಾಶಮಾಡದ ಹೊರತು ಹಿಂದೂ ಸಮಾಜವು ಸುಧಾರಣೆಯ ಅಗತ್ಯವನ್ನು ಒಪ್ಪಿಕೊಳ್ಳುವುದಿಲ್ಲವೆಂದು ನನಗೆ ಮನವರಿಕೆಯಾಗಿದೆ. ಇನ್ನೇನಲ್ಲದಿದ್ದರೂ ಈ ಕೃತಿ ಆ ಕೆಲಸವನ್ನು ಮಾಡುತ್ತದೆ.

ಈ ಕೃತಿಯನ್ನು ಕುರಿತು ಸನಾತನ ಹಿಂದೂ ಏನು ಹೇಳುತ್ತಾನೆಂದು ನಾನು ಚೆನ್ನಾಗಿ ಊಹಿಸಬಲ್ಲೆ; ಏಕೆಂದರೆ ನಾನು ಹಲವಾರು ವರ್ಷಗಳಿಂದ ಅವನ ಜೊತೆ ಸಮರ ಮಾಡುತ್ತಿದ್ದೇನೆ, ತನ್ನ ಧಾರ್ಮಿಕ ಗ್ರಂಥಗಳನ್ನು ಯಾರಾದರೂ ಖಂಡಿಸಿದಾಗ ಸಾಧುವೂ ಅಹಿಂಸಾತ್ಮಕವೂ ಆಗಿ ಕಾಣುವ ಹಿಂದೂ ಹೇಗೆ ಹಿಂಸಾತ್ಮಕನಾಗುತ್ತಾನೆಂಬುದು ಮಾತ್ರ ನನಗೆ ಗೊತ್ತಿರಲಿಲ್ಲ. ನಾನು ಮದರಾಸಿನಲ್ಲಿ ಆ ವಿಷಯವಾಗಿ ಭಾಷಣ ಮಾಡಿದಾಗ ಹಿಂದೂಗಳು ಸಂಪೂರ್ಣವಾಗಿ ಸಮಚಿತ್ತವನ್ನು ಕಳೆದುಕೊಂಡು ಬರೆದ ಪತ್ರಗಳ ಮಹಾಪೂರವೇ ಹರಿದು ಬಂದಾಗ ನನಗೆ ಆ ಬಗ್ಗೆ ಅರಿವುಂಟಾಯಿತು. ಅ ಪತ್ರಗಳು ಹೇಳಲಾಗದಂಥ, ಅಚ್ಚು ಮಾಡಲಾಗದಂಥ ಅಶ್ಲೀಲ ಬೈಗುಳಗಳಿಂದಲೂ ನನ್ನ ಜೀವಕ್ಕೆ ಭಯಂಕರ ಬೆದರಿಕೆಗಳಿಂದಲೂ ತುಂಬಿಹೋಗಿದ್ದವು. ಕಳೆದ ಬಾರಿ ಅವು ನನ್ನನ್ನು ಪ್ರಥಮ ಅಪರಾಧಿಯಂತೆ ಕಂಡು ಕೇವಲ ಬೆದರಿಕೆಗಳನ್ನು ಮಾತ್ರ ಒಡ್ಡಿದ್ದವು. ಈ ಬಾರಿ ಅವರು ಏನು ಮಾಡುತ್ತಾರೊ ನನಗೆ ತಿಳಿಯದು. ಏಕೆಂದರೆ ಈ ಪುಸ್ತಕವನ್ನು ಓದುವುದರಿಂದ ಅವರು ತಮ್ಮ ಸಿಟ್ಟಿಗೆ ಇನ್ನೂ ಹೆಚ್ಚಿನ ಕಾರಣವನ್ನು ಕಾಣುತ್ತಾರೆ; ಅವರ ದೃಷ್ಟಿಯಲ್ಲಿ ಹಿಂದಿನ ಅಪರಾಧವೇ ಪುನರಾವರ್ತನೆಯಾದಂತೆ ಕಾಣುತ್ತದೆ; ಧಾರ್ಮಿಕ ಗ್ರಂಥಗಳೆಂಬ ಹೆಸರಿನಲ್ಲಿ ರಚಿತವಾಗಿರುವ ಈ ಕಟ್ಟುಕತೆಗಳು ತಮ್ಮ ರಚನೆಯಲ್ಲಿ ಪಕ್ಷಪಾತಿಯಾಗಿಯೂ, ಉದ್ದೇಶದಲ್ಲಿ ರಾಜಕೀಯ ಮತ್ತು ವಂಚಕ ದೃಷ್ಟಿಯುಳ್ಳವಾಗಿಯೂ ಇರುವುದನ್ನು ಅಧ್ಯಾಯ ಮತ್ತು ಶ್ಲೋಕಗಳಸಮೇತ ಇಲ್ಲಿ ತೋರಿಸಿರುವುದರಿಂದ ಅವರ ಕೋಪ ಇನ್ನೂ ಹೆಚ್ಚಾಗುತ್ತದೆ. ಅವರ ನಿಂದನೆಗಳನ್ನಾಗಲೀ ಅಥವಾ ಅವರ ಬೆದರಿಕೆಗಳನ್ನಾಗಲೀ ನಾನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಏಕೆಂದರೆ ತಮ್ಮ ಧರ್ಮವನ್ನು ರಕ್ಷಿಸುತ್ತೇವೆಂದುಕೊಂಡು ಅದನ್ನು ಒಂದು ವ್ಯಾಪಾರೀ ಸರಕನ್ನಾಗಿ ಮಾಡಿರುವ ಅವರದು ಒಂದು ನೀಚ ಗುಂಪೆಂದು ನಾನು ಚೆನ್ನಾಗಿ ಬಲ್ಲೆ. ಪ್ರಪಂಚದ ಯಾವುದೇ ಗುಂಪಿಗಿಂತ ಅವರು ಹೆಚ್ಚು ಸ್ವಾರ್ಥಿಗಳಾಗಿದ್ದಾರೆ; ತಮ್ಮ ಜಾತಿಯ ಪಟ್ಟಭದ್ರ ಹಿತಾಸಕ್ತಿಗಳನ್ನು ಬೆಂಬಲಿಸಲು ತಮ್ಮ ಬುದ್ಧಿಯನ್ನು ಹಾದರಗೊಳಿಸುತ್ತಿದ್ದಾರೆ. ಯಾವುದೇ ವ್ಯಕ್ತಿ ಹಿಂದೂ ಧರ್ಮ ಗ್ರಂಥಗಳ ವಿರುದ್ಧ ಧೈರ್ಯದಿಂದ ದನಿಯೆತ್ತಿದರೆ ಸಂಪ್ರದಾಯ ಶರಣರು ಅವನ ಮೇಲೆ ಹುಚ್ಚುನಾಯಿಗಳ ಹಾಗೆ ಬೀಳುತ್ತಾರೆ; ಆಗ ಉನ್ನತ ವಿದ್ಯಾವಂತರೆಂದು, ಅನಾಸಕ್ತರಾಗಿ ಮುಕ್ತ ಮನಸ್ಸುಳ್ಳವರಾಗಿದ್ದಾರೆಂದು ಹೇಳಿಕೊಳ್ಳುವ ಉನ್ನತ ಹುದ್ದೆಗಳನ್ನಲಂಕರಿಸಿರುವ ಪ್ರಮುಖ ಹಿಂದೂಗಳು ಪಕ್ಷಪಾತಿಗಳಾಗಿ ಈ ಗದ್ದಲದಲ್ಲಿ ಸೇರಿಕೊಂಡು ಬಿಡುವುದು ದೊಡ್ಡ ಅಚ್ಚರಿಯೇ ಸರಿ. ಉನ್ನತ ನ್ಯಾಯಾಲಗಳ ಹಿಂದೂ ನ್ಯಾಯಾಧೀಶರು ಮತ್ತು ಭಾರತೀಯ ರಾಜ್ಯಗಳ ಹಿಂದೂ ಪ್ರಧಾನಮಂತ್ರಿಗಳು ಕೂಡ ಅವರ ಜೊತೆ ಸೇರಿಕೊಳ್ಳಲು ಹಿಂಜರಿಯುವುದಿಲ್ಲ. ಅವರು ಇನ್ನೂ ಮುಂದೆ ಹೋಗುತ್ತಾರೆ. ಅವನ ವಿರುದ್ಧ ಅವರು ಹುಯಿಲೆಬ್ಬಿಸಲು ಮುಂದಾಗುವುದಷ್ಟೇ ಅಲ್ಲದೆ ಅವನನ್ನು ಬೇಟೆಯಾಡಲು ಅವರ ಜೊತೆ ಸೇರಿಕೊಳ್ಳುತ್ತಾರೆ. ತಾವು ಜೀವನದಲ್ಲಿ ಉನ್ನತ ಸ್ಥಾನಗಳಲ್ಲಿರುವುದರಿಂದ ತಮ್ಮ ಮಾತುಗಳಿಗೆ ಭಯವೊಡ್ಡುವ ಬಲವಿದೆಯೆಂದೂ, ಅದರಿಂದ ಸಂಪ್ರದಾಯ ಶರಣತೆಯ ಪ್ರತಿಯೊಬ್ಬ ವಿರೋಧಿಯನ್ನೂ ಹೆದರಿಸಬಹುದೆಂದು ಅವರು ನಂಬುವುದು ಅಸಹ್ಯಕರವಾಗಿದೆ. ನಿಮ್ಮ ನಿಂದನೆಗಳಿಂದ ನನ್ನನ್ನು ತಡೆಗಟ್ಟಲು ಸಾಧ್ಯವಿಲ್ಲವೆಂದು ಈ ಸಜ್ಜನರಿಗೆ ನಾನು ಹೇಳಲು ಇಚ್ಛೆಪಡುತ್ತೇನೆ. ಇಂಥದೇ ಪರಿಸ್ಥಿತಿಯಲ್ಲಿ ಡಾ. ಜಾನ್ಸನ್ ಹೇಳಿದ ಗಂಭೀರ ಹಾಗೂ ಅರ್ಥಪೂರ್ಣ ಮಾತುಗಳು ಅವರಿಗೆ ಗೊತ್ತಿಲ್ಲವೆಂದು

ಕಾಣುತ್ತದೆ: "ಗೂಂಡಾಗಳ ಹಾವಳಿಗೆ ಹೆದರಿ ವಂಚಕನನ್ನು ಹಿಡಿಯಲು ನಾನು ಅಂಜುವುದಿಲ್ಲ". ಈ ಉನ್ನತ ಸ್ಥಾನೀ ಟೀಕಾಕಾರರ ಬಗ್ಗೆ ಒರಟಾಗಿರಲು ನನಗಿಷ್ಟವಿಲ್ಲ. ಅವರು ವಂಚಕನ ಪಲಾಯನಕ್ಕೆ ನೆರವು ನೀಡುವ ಗೂಂಡಾನ ಪಾತ್ರ ವಹಿಸುತ್ತಿದ್ದಾರೆಂದು ಹೇಳಲೂ ನನಗೆ ಮನಸ್ಸಿಲ್ಲ. ಆದರೆ ಅವರಿಗೆ ನಾನು ಎರಡು ಸಂಗತಿಗಳನ್ನು ಹೇಳಬಯಸುತ್ತೇನೆ; ಮೊದಲನೆಯದಾಗಿ, ಏನೇ ಆಗಲಿ, ಐತಿಹಾಸಿಕ ಸತ್ಯದ ಅನ್ವೇಷಣೆಯಲ್ಲಿ, ಹಿಂದೂ ಧರ್ಮಗ್ರಂಥಗಳನ್ನು ಬಹಿರಂಗಪಡಿಸುವುದರ ಮೂಲಕ ಅವುಗಳಲ್ಲಿ ಅಡಕವಾಗಿರುವ ಸಿದ್ಧಾಂತಗಳೇ ಅವರ ದೇಶ ಮತ್ತು ಸಮಾಜದ ಅವನತಿ ಮತ್ತು ಪತನಕ್ಕೆ ಕಾರಣವೆಂದು ಹಿಂದೂಗಳಿಗೆ ಅರಿವುಂಟುಮಾಡಲು ನಾನು ಡಾ. ಜಾನ್ಸನ್‌ನ ಮಾರ್ಗವನ್ನೇ ಅನುಸರಿಸುತ್ತೇನೆ. ಎರಡನೆಯದಾಗಿ, ನಾನು ಹೇಳುವುದನ್ನು ಹಿಂದೂಗಳ ಈಗಿನ ತಲೆಮಾರು ಗಮನಿಸದಿದ್ದರೂ ಮುಂದಿನ ತಲೆಮಾರು ಗಮನಿಸುತ್ತದೆಂದು ನನಗೆ ಭರವಸೆಯಿದೆ. ಗೆಲುವಿನ ಬಗ್ಗೆ ನನಗೆ ಆಸಕ್ತಿಯಿಲ್ಲ. ಏಕೆಂದರೆ ಕವಿ ಭವಭೂತಿಯ "ಕಾಲ ಅನಂತವಾಗಿದೆ, ಭೂಮಿ ವಿಶಾಲವಾಗಿದೆ; ನನ್ನ ಮಾತನ್ನು ಮೆಚ್ಚುವ ವ್ಯಕ್ತಿ ಮುಂದೆ ಎಂದಾದರೊಂದು ದಿನ ಹುಟ್ಟುತ್ತಾನೆ" ಎಂಬ ಮಾತುಗಳಲ್ಲಿ ನಾನು ಸಮಾಧಾನವನ್ನು ಕಂಡುಕೊಳ್ಳುತ್ತೇನೆ. ಅದೇನೇ ಆಗಲಿ, ಈ ಕೃತಿ ಸಂಪ್ರದಾಯ ಶರಣರಿಗೆ ಒಂದು ಸವಾಲಾಗಿದೆ.

ಸಾಮಾಜಿಕ ಸುಧಾರಣೆಯ ಅಗತ್ಯ ಮತ್ತು ತುರ್ತಿನಲ್ಲಿ ನಂಬಿಕೆ ಇರುವ ಹಿಂದೂಗಳು ಮಾತ್ರ ಈ ಗ್ರಂಥವನ್ನು ಸ್ವಾಗತಿಸಬಹುದು. ಈ ಸಮಸ್ಯೆಯನ್ನು ಪರಿಹರಿಸಲು ದೀರ್ಘಕಾಲವೂ ಅನೇಕ ತಲೆಮಾರುಗಳ ಪ್ರಯತ್ನವೂ ಆವಶ್ಯಕ ಎಂಬ ಅವರ ಅಭಿಪ್ರಾಯದಲ್ಲಿ ಈ ಸಮಸ್ಯೆಯ ಅಧ್ಯಯನವನ್ನು ಮುಂದೂಡಬೇಕೆನ್ನುವುದಕ್ಕೆ ಸಮರ್ಥನೆಯಿಲ್ಲ. ಉತ್ಸಾಹಿ ಹಿಂದೂ ರಾಜಕಾರಣಿ ಕೂಡ, ಅವನು ಪ್ರಾಮಾಣಿಕನಾಗಿದ್ದರೆ, ಕೋಮುವಾದಿ ವಿಷದಿಂದ ಹುಟ್ಟುವ ಸಮಸ್ಯೆಗಳು ಪ್ರತಿ ಹಂತದಲ್ಲೂ ಅದೇ ರಾಜಕಾರಣಿಗಳಿಗೇ ಪಿಡುಗಾಗುವುದು ಖಂಡಿತವೆಂದು ಒಪ್ಪಿಕೊಳ್ಳುತ್ತಾನೆ; ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಅಂತರ್ಗತವಾಗಿರುವ ಈ ಕೋಮುವಾದವನ್ನು ರಾಜಕೀಯ ಮನೋಭಾವದ ಹಿಂದೂಗಳು ಕಡೆಗಣಿಸಲು ಇಲ್ಲವೆ ಮುಂದೂಡಲು ಇಷ್ಟಪಡುತ್ತಾರೆ. ಈ ಸಮಸ್ಯೆಗಳು ಈ ಕ್ಷಣದ ತೊಂದರೆಗಳೇನಲ್ಲ. ಅವು ಶಾಶ್ವತ ತೊಂದರೆಗಳು, ಅಂದರೆ ಪ್ರತಿ ಕ್ಷಣದ ತೊಂದರೆಗಳು. ಹಿಂದೂಗಳಲ್ಲಿ ಅಂಥ ಜನರಿದ್ದಾರೆ ಎನ್ನುವುದೇ ನನಗೆ ಸಂತೋಷವನ್ನುಂಟುಮಾಡುತ್ತದೆ. ಅವರ ಸಂಖ್ಯೆ ಸಣ್ಣದಿರಬಹುದು, ಅವರೇ ನನ್ನ ಪ್ರಮುಖ ಆಧಾರ, ಅವರಿಗಾಗಿ ಈ ಕೃತಿಯನ್ನು ಬರೆದಿದ್ದೇನೆ.

ಪ್ರತಿ ಧಾರ್ಮಿಕ ಸಾಹಿತ್ಯಕ್ಕೆ ತೋರಬೇಕಾದ ಗೌರವವನ್ನು ನಾನು ಹಿಂದೂ ಧಾರ್ಮಿಕ ಸಾಹಿತ್ಯದ ಬಗ್ಗೆ ತೋರಿಸಿಲ್ಲವೆಂದು ಹೇಳಬಹುದು. ಈ ಆಪಾದನೆ ನಿಜವಾದರೆ ನನ್ನನ್ನು ಸಮರ್ಥಿಸಿಕೊಳ್ಳಲು ನಾನು ಎರಡು ಸನ್ನಿವೇಶಗಳನ್ನು ಉದಾಹರಿಸಬಹುದು. ಮೊದಲನೆಯದಾಗಿ, ಸತ್ಯವನ್ನು ಕಾಣಬೇಕೆಂಬ ಏಕೈಕ ಉದ್ದೇಶದಿಂದ ಎಲ್ಲ ಸಾಹಿತ್ಯವೂ ಜನತೆಯದು, ಅದನ್ನು ಧಾರ್ಮಿಕ ಮತ್ತು ಲೌಕಿಕ ಎಂದು ಭೇದಭಾವ ಮಾಡದೆ ಸಾಕ್ಷ್ಯಾಧಾರಗಳ ಪ್ರಕಾರ ಪರೀಕ್ಷಿಸಬೇಕೆಂಬ ಇತಿಹಾಸಕಾರನ ಶ್ರೇಷ್ಠ ಪರಂಪರೆಯ ನಿರ್ದೇಶನದಲ್ಲಿ ಈ ಸಂಶೋಧನೆಯನ್ನು ಮಾಡಿದ್ದೇನೆ. ಈ ಪರಂಪರೆಯನ್ನು ಅನುಸರಿಸುವಲ್ಲಿ ನಾನು ಹಿಂದೂ ಧಾರ್ಮಿಕ ಸಾಹಿತ್ಯದ ಬಗ್ಗೆ ಭಕ್ತಿ ಗೌರವಗಳನ್ನು ತೋರಿಸದಿದ್ದರೆ ಅದಕ್ಕೆ ಕಾರಣ ವಿದ್ವಾಂಸನಾಗಿ ತನ್ನ ಕರ್ತವ್ಯವನ್ನು ನಾನು ನಿರ್ವಹಿಸಿರುವುದೇ ಆಗಿದೆ. ಎರಡನೆಯದಾಗಿ, ಧಾರ್ಮಿಕ ಸಾಹಿತ್ಯದ ಬಗ್ಗೆ ಭಕ್ತಿ ಗೌರವಗಳನ್ನು ಇಟ್ಟುಕೊಳ್ಳಬೇಕೆಂದು ಆಜ್ಞಾಪಿಸಲು ಸಾಧ್ಯವಿಲ್ಲ. ಅವು ಸಾಮಾಜಿಕ ಅಂಶಗಳ ಪರಿಣಾಮಗಳಾಗಿದ್ದು ಆ ಭಾವನೆಗಳು ಒಬ್ಬನಲ್ಲಿ ಸಹಜವಾಗಿದ್ದು ಇನ್ನೊಬ್ಬನಲ್ಲಿ ತೀರಾ ಅಸಹಜವಾಗಿ ಕಾಣಬಹುದು. ಹಿಂದೂ

ಧಾರ್ಮಿಕ ಸಾಹಿತ್ಯದ ಬಗ್ಗೆ ಭಕ್ತಿ ಗೌರವಗಳು ಬ್ರಾಹ್ಮಣ ವಿದ್ವಾಂಸನಿಗೆ ಸಹಜವಾದವು. ಆದರೆ ಬ್ರಾಹ್ಮಣೇತರ ವಿದ್ವಾಂಸನಿಗೆ ಸಂಪೂರ್ಣವಾಗಿ ಅಸಹಜವಾಗುತ್ತವೆ. ಈ ವ್ಯತ್ಯಾಸದ ವಿವರಣೆ ಪೂರಾ ಸರಳವಾದುದು. ಈ ಧಾರ್ಮಿಕ ಸಾಹಿತ್ಯದ ಬಗ್ಗೆ ಬ್ರಾಹ್ಮಣ ವಿದ್ವಾಂಸ ವಿಮರ್ಶಾತೀತ ಗೌರವವನ್ನು ತಾಳುವುದರಿಂದ ಬರಿಯ ಅಕ್ಷರಸ್ಥರಗಿಂತ ಭಿನ್ನವಾಗಿ ನಿರಂಕುಶಮತಿಯ ನಿರ್ವಿಕಾರ ಮನೋಭಾವದಿಂದ ನೋಡಲು ಅವನಿಗೆ ಸಾಧ್ಯವಿಲ್ಲ ಎಂದು ಹೇಳಬಹುದು. ಈ ಧಾರ್ಮಿಕ ಸಾಹಿತ್ಯ ಏತಕ್ಕಾಗಿ? ಈ ಸಾಹಿತ್ಯ ಸಂಪೂರ್ಣವಾಗಿ ಬ್ರಾಹ್ಮಣರ ಸೃಷ್ಟಿ. ಎರಡನೆಯದಾಗಿ, ಅಬ್ರಾಹ್ಮಣರಿಗಿಂತ ಬ್ರಾಹ್ಮಣರು ಶ್ರೇಷ್ಠ ಅವರಿಗೆ ಎಲ್ಲ ಸೌಲಭ್ಯಗಳೂ ಸಲ್ಲಬೇಕು ಎಂಬ ಏಕೈಕ ಉದ್ದೇಶದಿಂದ ಅದು ಚೋದಿತವಾಗಿದೆ. ಬ್ರಾಹ್ಮಣರು ಅಂಥ ಸಾಹಿತ್ಯದ ಪಾವಿತ್ರ್ಯತೆಯನ್ನು ಏತಕ್ಕೆ ಎತ್ತಿ ಹಿಡಿಯಬಾರದು? ಬ್ರಾಹ್ಮಣ ಅದನ್ನು ಎತ್ತಿ ಹಿಡಿಯುವುದರಿಂದಲೇ ಅಬ್ರಾಹ್ಮಣ ಅದನ್ನು ದ್ವೇಷಿಸುತ್ತಾನೆ. ತಮ್ಮ ಸಾಮಾಜಿಕ ಅವನತಿಗೆ ಕಾರಣವಾಗಿರುವ ಅಸಹ್ಯವಾದ ಸಾಮಾಜಿಕ ತತ್ವವನ್ನು ಈ ಧಾರ್ಮಿಕ ಸಾಹಿತ್ಯ ಒಳಗೊಂಡಿರುವುದರಿಂದ ಅದಕ್ಕೆ ಅಬ್ರಾಹ್ಮಣನ ಪ್ರತಿಕ್ರಿಯೆಯು ಬ್ರಾಹ್ಮಣನದಕ್ಕಿಂತ ಸಂಪೂರ್ಣ ವಿರುದ್ಧವಾಗಿರುತ್ತದೆ. ಹಿಂದೂಗಳ ಧಾರ್ಮಿಕ ಸಾಹಿತ್ಯದ ಬಗ್ಗೆ ನನಗೆ ಭಯ ಭಕ್ತಿಗಳಿಲ್ಲದಿದ್ದರೆ ಅದರಿಂದ ಯಾರೂ ಅಚ್ಚರಿಪಡಬಾರದು, ಕಾರಣ ನಾನು ಅಬ್ರಾಹ್ಮಣ, ಅಬ್ರಾಹ್ಮಣನಷ್ಟೇ ಅಲ್ಲ, ಒಬ್ಬ ಅಸ್ಪೃಶ್ಯ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಈ ಧಾರ್ಮಿಕ ಸಾಹಿತ್ಯದ ಬಗ್ಗೆ ನನ್ನ ದ್ವೇಷ ಸಹಜವಾಗಿಯೇ ಅಬ್ರಾಹ್ಮಣನದಕ್ಕಿಂತ ಕಡಿಮೆಯಾಗಿರಲು ಸಾಧ್ಯವಿಲ್ಲ. ಪ್ರೊ. ಥಾರ್ನ್‌ಡೈಕ್ ಹೇಳುವಂತೆ "ಮನುಷ್ಯ ಯೋಚಿಸುತ್ತಾನೆಂಬುದು ಜೀವಶಾಸ್ತ್ರೀಯ ಸತ್ಯ; ಏನು ಯೋಚಿಸುತ್ತಾನೆಂಬುದು ಸಾಮಾಜಿಕ ಸತ್ಯ."

ಹಿಂದೂಗಳ ಸಾಮಾಜಿಕ ಚರಿತ್ರೆಯ ಸಮಸ್ಯೆಗಳ ಅಧ್ಯಯನಕ್ಕೆ ಮೂಲ ಸಾಮಗ್ರಿಯನ್ನು ಒದಗಿಸುವ ಈ ಧಾರ್ಮಿಕ ಸಾಹಿತ್ಯದ ಬಗ್ಗೆ ಬ್ರಾಹ್ಮಣ ವಿದ್ವಾಂಸನ ಮನೋಭಾವಕ್ಕೂ ಅಬ್ರಾಹ್ಮಣ ವಿದ್ವಾಂಸನ ಮನೋಭಾವಕ್ಕೂ ವ್ಯತ್ಯಾಸವಿದೆ; ಬ್ರಾಹ್ಮಣ ವಿದ್ವಾಂಸನ ಮನೋಭಾವ ಅವಿಮರ್ಶಾತ್ಮಕ ಪ್ರಶಂಸೆಯದಾಗಿದ್ದರೆ, ಅಬ್ರಾಹ್ಮಣನದು ಸಮಗ್ರ ಖಂಡನೆಯಾಗಿದೆ; ಇವೆರಡು ಮನೋಭಾವಗಳೂ ಐತಿಹಾಸಿಕ ಸಂಶೋಧನೆಗೆ ಅತ್ಯಂತ ಹಾನಿಕರವಾಗಿವೆ ಎಂಬ ಅರಿವು ನನಗಿದೆ.

ಐತಿಹಾಸಿಕ ಸಂಶೋಧನೆಗೆ ಬ್ರಾಹ್ಮಣ ವಿದ್ವಾಂಸರಿಂದ ಆಗಿರುವ ಹಾನಿ ಸ್ಪಷ್ಟವಾಗಿದೆ. ಈ ಸಾಹಿತ್ಯದ ಪಾವಿತ್ರ್ಯವನ್ನು ರಕ್ಷಿಸುವುದರಲ್ಲಿ ಬ್ರಾಹ್ಮಣ ವಿದ್ವಾಂಸನಿಗೆ ಎರಡು ಬಗೆಯ ಆಸಕ್ತಿಯಿದೆ. ಮೊದಲನೆಯದಾಗಿ ಅದು ತನ್ನ ಪೂರ್ವಜರ ಸೃಷ್ಟಿಯಾಗಿರುವುದರಿಂದ ಸತ್ಯವನ್ನು ಬಲಿಕೊಟ್ಟಾದರೂ ಅದನ್ನು ರಕ್ಷಿಸಬೇಕೆಂಬ ಪುತ್ರಧರ್ಮದಿಂದ ಮುನ್ನಡೆಯುತ್ತಾನೆ. ಎರಡನೆಯದಾಗಿ, ಅದು ಬ್ರಾಹ್ಮಣರ ಸವಲತ್ತುಗಳನ್ನು ಬೆಂಬಲಿಸುವುದರಿಂದ ಅದರ ಪ್ರಾಮಾಣ್ಯವನ್ನು ಹೋಗಲಾಡಿಸಲು ಏನನ್ನೂ ಮಾಡದಷ್ಟು ಎಚ್ಚರಿಕೆಯಿಂದಿರುತ್ತಾನೆ. ಈ ವ್ಯವಸ್ಥೆಯನ್ನು ಎತ್ತಿ ಹಿಡಿಯುವುದರಿಂದ ತನಗೆ ಲಾಭವಿದೆ ಹಾಗೂ ಈ ವ್ಯವಸ್ಥೆಯ ಸಂಸ್ಥಾಪಕರು ತನ್ನ ಪೂರ್ವಜರು ಎಂದು ಹೇಳಿಕೊಳ್ಳುವ ಪ್ರತಿಷ್ಠೆಯ ಅಗತ್ಯ ಅವನ ಮನಸ್ಸಿನಲ್ಲಿ ಸದಾ ಇರುವುದರಿಂದ ಅದು ಮೌನ ಅಕಳಂಕ ವಾದವಾಗಿ ಬ್ರಾಹ್ಮಣ ವಿದ್ವಾಂಸನ ಮನಸ್ಸಿನಲ್ಲಿ ನಿರಂತರವಾಗಿರುವುದರಿಂದ ಅದು ಸತ್ಯವನ್ನು ತಿಳಿಯಲು ಅಥವಾ ಬೋಧಿಸಲು ಅವನಿಗೆ ಅಡ್ಡಿಯಾಗುತ್ತಿದೆ. ಆದ್ದರಿಂದಲೇ ಕಾಲವನ್ನು ನಿರ್ಧರಿಸುವಲ್ಲಿ ಅಥವಾ ವಂಶಾವಳಿಗಳನ್ನು ಗುರುತಿಸುವ ವಿಷಯವನ್ನು ಬಿಟ್ಟರೆ ಬ್ರಾಹ್ಮಣ ವಿದ್ವಾಂಸರು ಐತಿಹಾಸಿಕ ಸಂಶೋಧನೆಯ ಕ್ಷೇತ್ರದಲ್ಲಿ ಮಾಡಿರುವ ಕೆಲಸ ಅಷ್ಟೇನೂ ಅಸಲಿ ಅಲ್ಲವೆಂದು ಗೊತ್ತಾಗುತ್ತದೆ. ಅಬ್ರಾಹ್ಮಣ ವಿದ್ವಾಂಸನಿಗೆ ಈ ಯಾವ ಮಿತಿಗಳೂ ಇಲ್ಲ, ಆದ್ದರಿಂದಲೇ

ಅವನು ಸತ್ಯದ ಅನ್ವೇಷಣೆಯಲ್ಲಿ ತನ್ನನ್ನೇ ತಾನು ನಿರ್ದಾಕ್ಷಿಣ್ಯವಾಗಿ ತೊಡಗಿಸಿಕೊಳ್ಳುತ್ತಾನೆ. ಅಂಥ ವ್ಯತ್ಯಾಸ ಈ ಎರಡು ವರ್ಗದ ವಿದ್ವಾಂಸರಲ್ಲಿ ಕಂಡುಬರುವುದು ಕೇವಲ ಊಹೆಯ ವಿಷಯವಲ್ಲ. ಈ ಪುಸ್ತಕವೇ ಅದಕ್ಕೆ ನಿದರ್ಶನವಾಗಿದೆ. ಶೂದ್ರರ ವಿರುದ್ಧ ನಡೆಸಿದ ಪಿತೂರಿಯ ನೈಜಸ್ವರೂಪವನ್ನು ಈ ಗ್ರಂಥ ಬಹಿರಂಗಗೊಳಿಸುತ್ತದೆ; ಇದನ್ನು ಮಾಡಲು ಯಾವ ಬ್ರಾಹ್ಮಣ ವಿದ್ವಾಂಸನಿಗೂ ಧೈರ್ಯವಿಲ್ಲ.

ಬ್ರಾಹ್ಮಣ ವಿದ್ವಾಂಸನ ಸಂಕೋಚಗಳು ಅಬ್ರಾಹ್ಮಣ ವಿದ್ವಾಂಸನಿಗೆ ಇಲ್ಲವೆಂಬುದು ನಿಜವಾದರೂ ಅವನು ಇನ್ನೊಂದು ಅತಿರೇಕಕ್ಕೆ ಹೋಗಿ ಈ ಇಡೀ ಸಾಹಿತ್ಯವನ್ನು ಗಂಭೀರ ಅಧ್ಯಯನಕ್ಕೆ ಅರ್ಹವಲ್ಲದ ಕಟ್ಟುಕತೆಗಳ ಕಗ್ಗಂಟೆಂದು, ತಿಪ್ಪೆಗುಂಡಿಗೆ ಎಸೆಯಲು ಮಾತ್ರ ಯೋಗ್ಯವಾದುದೆಂದೂ ನಿರ್ಧರಿಸಬಹುದು. ಇದು ಇತಿಹಾಸಕಾರನ ಧರ್ಮವಲ್ಲ. ಈಗಾಗಲೇ ಹೇಳಿರುವಂತೆ ಇತಿಹಾಸಕಾರ ಖಚಿತವಾಗಿರಬೇಕು, ಪ್ರಮಾಣಿಕನಾಗಿರಬೇಕು, ನಿಷ್ಪಕ್ಷಪಾತಿಯಾಗಿರಬೇಕು; ರಾಗದ್ವೇಷಗಳಿಂದ ಮುಕ್ತನಾಗಿರಬೇಕು, ಸ್ವಹಿತಾಸಕ್ತಿ, ಭಯ, ಹೇವರಿಕೆ ಅಥವಾ ಒಲವು ಇವುಗಳಿಂದ ದೂರವಾಗಿರಬೇಕು; ಅವನು ಸತ್ಯಕ್ಕೆ ನಿಷ್ಠನಾಗಿರಬೇಕು, ಏಕೆಂದರೆ ಸತ್ಯವೇ ಇತಿಹಾಸದ ತಾಯಿ, ಇತಿಹಾಸ ಮಹಾನ್‌ಕಾರ್ಯಗಳ ಸಂರಕ್ಷಕ, ವಿಸ್ಮರಣೀಯ ಶತ್ರು, ಭೂತದ ಸಾಕ್ಷಿ, ಭವಿಷ್ಯದ ನಿರ್ದೇಶಕ. ಒಟ್ಟಿನಲ್ಲಿ ಅವನಿಗೆ ಮುಕ್ತ ಮನಸ್ಸಿರಬೇಕು, ಅಂದರೆ ಖಾಲಿ ಮನಸ್ಸಿರಬಾರದು, ಸಾಕ್ಷ್ಯಾಧಾರಗಳು ಖೊಟ್ಟಿಯಾಗಿದ್ದರೂ ಅವುಗಳನ್ನು ಪರೀಕ್ಷಿಸುವ ಸಿದ್ಧತೆಯಿರಬೇಕು. ಇತಿಹಾಸಕಾರನ ಈ ಮನೋಧರ್ಮಕ್ಕೆ ಬದ್ಧವಾಗಿರಲು ಅಬ್ರಾಹ್ಮಣ ವಿದ್ವಾಂಸನಿಗೆ ಕಷ್ಟವಾಗಬಹುದು. ಪ್ರಾಚೀನ ಸಾಹಿತ್ಯದ ಸತ್ಯಾಸತ್ಯತೆಯನ್ನು ಪರಿಶೀಲಿಸುವಾಗ ಅಬ್ರಾಹ್ಮಣ–ರಾಜಕೀಯವನ್ನು ಅವನು ತಂದರೆ ಸಮರ್ಥನೀಯವಾಗುವುದಿಲ್ಲ. ಅಂಥ ಪೂರ್ವಾಗ್ರಹದಿಂದ ನನ್ನ ಸಂಶೋಧನೆಯಲ್ಲಿ ನನ್ನನ್ನೇ ನಾನು ಮುಕ್ತವಾಗಿಟ್ಟುಕೊಂಡಿದ್ದೇನೆಂದು ಖಚಿತವಾಗಿ ಭಾವಿಸುತ್ತೇನೆ. ಈ ದೇಶದಲ್ಲಿ ಶೂದ್ರರ ರಾಜಕೀಯ ಚಳವಳಿ ನಡೆಯುತ್ತಿದ್ದು ಅದು ಬ್ರಾಹ್ಮಣೇತರ ಚಳವಳಿಯೆಂಬುದು ಎಲ್ಲರಿಗೂ ಗೊತ್ತಿದೆ. ಅದರ ಜೊತೆ ನಾನು ಸಂಬಂಧ ಹೊಂದಿರುವುದು ಕೂಡ ಸರ್ವವಿದಿತ. ಆದರೆ ಬ್ರಾಹ್ಮಣೇತರ ರಾಜಕೀಯಕ್ಕೆ ಈ ಕೃತಿಯನ್ನು ನಾನು ಪೀಠಿಕೆಯನ್ನಾಗಿ ಮಾಡಿಲ್ಲ ಎನ್ನುವುದನ್ನು ಓದುಗ ತಿಳಿಯುತ್ತಾನೆಂದು ನನಗೆ ಭರವಸೆಯಿದೆ.

ವಸ್ತು ಪ್ರತಿಪಾದನೆಯಲ್ಲಿ ಅನೇಕ ನ್ಯೂನತೆಗಳಿವೆಯೆಂಬುದನ್ನು ನಾನು ಬಲ್ಲೆ. ಬಹಳ ದೀರ್ಘವಾದ ಹಾಗೂ ಅಸಂಖ್ಯಾತವಾದ ಉದ್ಧರಣೆಗಳಿಂದ ಈ ಪುಸ್ತಕ ತುಂಬಿಹೋಗಿದೆ. ಈ ಪುಸ್ತಕ ಒಂದು ಕಲಾಕೃತಿಯಲ್ಲ, ಇದನ್ನು ಓದಲು ವಾಚಕರಿಗೆ ಬೇಸರವಾಗಬಹುದು. ಆದರೆ ಈ ತಪ್ಪು ಸಂಪೂರ್ಣ ನನ್ನದಲ್ಲ, ನನ್ನಿಷ್ಟಕ್ಕೆ ಆಗಿದ್ದರೆ ನಾನು ಸವಣಿಸುವ ಕತ್ತಿಯನ್ನು ಮನಃಪೂರ್ವಕವಾಗಿ ಬಳಸುತ್ತಿದ್ದೆ. ಆದರೆ ತಾವು ಯಾರು, ಏಕೆ ಈ ಸ್ಥಿತಿಗೆ ಬಂದೆವು ಎಂದು ಗೊತ್ತಿಲ್ಲದ ಅಜ್ಞಾನಿ ಶೂದ್ರರಿಗಾಗಿ ಈ ಪುಸ್ತಕ ರಚಿತವಾಗಿದೆ. ವಿಷಯವನ್ನು ಎಷ್ಟು ಕಲಾತ್ಮಕವಾಗಿ ಹೇಳಿದೆ ಎಂಬುದರ ಕಡೆ ಅವರು ಲಕ್ಷಿಸುವುದಿಲ್ಲ. ಅಪಾರ ವಿಷಯ ಸಂಗ್ರಹಣೆಯನ್ನು ಕೊಟ್ಟಷ್ಟೂ ಉತ್ತಮವೆಂದು ಅವರು ಭಾವಿಸುತ್ತಾರೆ. ನಾನು ಯಾರು ಯಾರಿಗೆ ಇದರ ಹಸ್ತಪ್ರತಿಯನ್ನು ತೋರಿಸಿದೆನೊ ಅವರೆಲ್ಲ ಉದ್ಧರಣೆಗಳನ್ನು ತೆಗೆಯಬೇಡಿ ಎಂದು ಒತ್ತಾಯಿಸಿದ್ದಾರೆ. ವಾಸ್ತವವಾಗಿ ಗ್ರಂಥದ ಒಡಲಲ್ಲಿ ಇಂಗ್ಲೀಷ್ ಅನುವಾದವನ್ನು ಕೊಡುವುದರ ಜೊತೆಗೆ ಅನುಬಂಧದಲ್ಲಿ ಮೂಲ ಸಂಸ್ಕೃತದ ಪಾಠಗಳನ್ನು ಕೊಡಬೇಕೆಂದು ಒತ್ತಾಯಿಸುವಷ್ಟರ ಮಟ್ಟಿಗೆ ಅವರು ಇಂಥ ವಿಷಯದ ಬಗ್ಗೆ ತೀವ್ರಾಸಕ್ತಿಯನ್ನು ತೋರಿದರು. ಮೂಲ ಸಂಸ್ಕೃತ ಪಾಠಗಳನ್ನು ಉದ್ಧರಿಸಲೇಬೇಕೆಂಬ ಅವರ ಕೋರಿಕೆಯನ್ನು ನಾನು ನಿರಾಕರಿಸಿದರೂ ಈ ಸಾಮಾಗ್ರಿ ಅವರಿಗೆ ಸುಲಭವಾಗಿ ದೊರಕದೆ ಇರುವುದರಿಂದ ಇಂಗ್ಲೀಷ್ ಅನುವಾದಗಳನ್ನು ಕೊಡಬೇಕೆಂಬ ಅವರ ಮನವಿಯನ್ನು ನಾನು ತಳ್ಳಿ ಹಾಕಲಾಗಲಿಲ್ಲ. ಕುಖ್ಯಾತವಾದ

ಚಾತುರ್ವರ್ಣ ವ್ಯವಸ್ಥೆ ಉಳಿದುಕೊಂಡು ಬರಲು ಶೂದ್ರರೇ ಸಾಧನವಾಗಿದ್ದರೂ, ಚಾತುರ್ವರ್ಣವೇ ಅವರ ಹೀನಸ್ಥಿತಿಗೆ ಪ್ರಪ್ರಥಮ ಕಾರಣವಾಗಿದ್ದರೂ, ಅದನ್ನು ನಿರ್ನಾಮ ಮಾಡಲು ಅವರಿಂದ ಮಾತ್ರವೇ ಸಾಧ್ಯ ಎಂಬುದನ್ನು ನೆನಪಿಟ್ಟುಕೊಂಡರೆ, ನಾನು ಶೂದ್ರರಿಗೆ ತಿಳುವಳಿಕೆ ಕೊಟ್ಟು ಚಾತುರ್ವರ್ಣ ವಿನಾಶದ ಪವಿತ್ರ ಕಾರ್ಯಕ್ಕೆ ಅವರನ್ನು ಸಿದ್ಧಗೊಳಿಸಬೇಕೆಂಬ ಪರಿಗಣನೆಯಿಂದ ಉದ್ಧರಣೆಗಳನ್ನು ಬಿಡದೆ ಸಂಕ್ಷಿಪ್ತವಾಗಿ ಕೊಟ್ಟಿರುವುದು ಅರ್ಥವಾಗುತ್ತದೆ.

ಮೂವರು ವ್ಯಕ್ತಿಗಳಿಗೆ ನಾನು ನನ್ನ ಕೃತಜ್ಞತೆ ಹೇಳಬೇಕಾಗಿದೆ. ಮೊದಲನೆಯದಾಗಿ ಮಹಾಭಾರತದ ಶಾಂತಿಪರ್ವದ ೬೦ನೇ ಅಧ್ಯಾಯದ ಕರ್ತೃವಿಗೆ. ಈ ಕರ್ತೃ ವ್ಯಾಸನೆ, ವೈಶಂಪಾಯನೆ, ಸೂತನೆ, ಲೋಮ ಹರ್ಷಣನೆ ಅಥವಾ ಭೃಗುವೆ ಎಂದು ಹೇಳುವುದು ಕಷ್ಟ. ಅದು ಯಾರೇ ಆಗಲಿ ಅವನು ಪೈಜವನ ಸಂಪೂರ್ಣ ವಿವರಣೆಯನ್ನು ಕೊಟ್ಟು ಮಹೋಪಕಾರ ಮಾಡಿದ್ದಾನೆ. ಅವನೇನಾದರೂ ಪೈಜವನ ಎಂಬುವವನು ಶೂದ್ರ ಎಂದು ವರ್ಣಿಸದಿದ್ದರೆ ಶೂದ್ರರ ಉಗಮಕ್ಕೆ ಸಂಬಂಧಿಸಿದ ಸುಳಿವು ಸಂಪೂರ್ಣವಾಗಿ ಇಲ್ಲವಾಗುತ್ತಿತ್ತು. ಮುಂದಿನ ಜನಾಂಗಕ್ಕಾಗಿ ಈ ಅತಿಮುಖ್ಯವಾದ ವಿಚಾರವನ್ನು ಕಾಪಾಡಿದ್ದಕ್ಕಾಗಿ ಆ ಲೇಖಕನಿಗೆ ನನ್ನ ಕೃತಜ್ಞತೆಯನ್ನು ಸೂಚಿಸುತ್ತೇನೆ. ಅದು ಸಿಗದಿದ್ದರೆ ಈ ಪುಸ್ತಕದ ರಚನೆ ಸಾಧ್ಯವಾಗುತ್ತಿರಲಿಲ್ಲ. ಎರಡನೆಯದಾಗಿ, ಬಾಂಬೆಯ ಅಂಧೇರಿಯಲ್ಲಿರುವ ಇಸ್ಮೈಲ್ ಯೂಸಫ್ ಕಾಲೇಜಿನ ಪ್ರೊ. ಕಾಂಗ್ಲೆ ಅವರಿಗೆ ನನ್ನ ನಮನಗಳು. ಅವರು ನನ್ನ ನೆರವಿಗೆ ಬಂದು ಈ ಕೃತಿಯಲ್ಲಿ ಉಧೃತವಾಗಿರುವ ಸಂಸ್ಕೃತ ಶ್ಲೋಕಗಳ ಅನುವಾದವನ್ನು ಪರಿಶೀಲಿಸಿದ್ದಾರೆ. ನಾನು ಸಂಸ್ಕೃತದ ವಿದ್ವಾಂಸನಲ್ಲವಾದ್ದರಿಂದ, ಸಂಸ್ಕೃತದಲ್ಲಿರುವ ಈ ಸಾಮಗ್ರಿಯನ್ನು ತಪ್ಪಾಗಿ ಅರ್ಥೈಸಿಲ್ಲವೆಂಬ ವಿಶ್ವಾಸ ನನಗೆ ಅವರ ಸಹಾಯದಿಂದ ಬಂದಿದೆ. ಈ ಪುಸ್ತಕದಲ್ಲಿ ದೋಷಗಳೂ, ತಪ್ಪುಗಳೂ ವಿಮರ್ಶಕರಿಗೆ ಕಂಡುಬಂದರೆ ಅದಕ್ಕೆ ನನಗೆ ಸಹಾಯ ಮಾಡಿದ ಅವರು ಜವಾಬ್ದಾರರೆಂದು ಅರ್ಥವಲ್ಲ. ಬಾಂಬೆಯ ಸಿದ್ದಾರ್ಥ ಕಾಲೇಜಿನ ಪ್ರೊ. ಮನೋಹರ್ ಚಿಟ್ನೀಸ್ ಅವರಿಗೆ ವಿಷಯಸೂಚಿಯನ್ನು ತಯಾರಿಸಿಕೊಟ್ಟಿದ್ದಕ್ಕಾಗಿ ನನ್ನ ವಂದನೆಗಳು ಸಲ್ಲಬೇಕು.

ಮ್ಯಾಡಿಸನ್ ಗ್ರ್ಯಾಂಟ್‌ನ *Passing of the Great Race* (ಮಹಾನ್ ಜನಾಂಗದ ಪರ್ಯವಸಾನ) ಎಂಬ ಪುಸ್ತಕದಿಂದ ಮೂರು ನಕ್ಷೆಗಳನ್ನು ಬಳಸಿಕೊಳ್ಳಲು ಅನುಮತಿ ನೀಡಿದ ನ್ಯೂಯಾರ್ಕಿನ ಚಾರ್ಲ್ಸ್ ಸ್ಕ್ರಿಬ್ನರ್ಸ್‌ಸನ್ಸ್ ಪಬ್ಲಿಶರ್ಸ್ ಎಂಬ ಸಂಸ್ಥೆಗೆ ಕೃತಜ್ಞನಾಗಿದ್ದೇನೆ. ಆ ಮೂರು ನಕ್ಷೆಗಳನ್ನು ಈ ಪುಸ್ತಕದ ೨, ೩ ಮತ್ತು ೪ನೆಯ ಅನುಬಂಧಗಳಾಗಿ ಕೊಡಲಾಗಿದೆ.

೧೦ನೇ ಅಕ್ಟೋಬರ್ ೧೯೪೬ **ಬಿ.ಆರ್. ಅಂಬೇಡ್ಕರ್**
'ರಾಜಗೃಹ', ದಾದರ್
ಬೊಂಬಾಯಿ – ೧೪

# ಅಧ್ಯಾಯ ೧

# ಶೂದ್ರರ ಒಗಟು

## ೧

ಹಿಂದೂ–ಆರ್ಯ ಸಮಾಜದ ನಾಲ್ಕನೆಯ ವರ್ಣದವರೇ ಶೂದ್ರರು ಎಂಬುದು ಎಲ್ಲರಿಗೂ ತಿಳಿದಿದೆ. ಆದರೆ ಯಾರು ಈ ಶೂದ್ರರಾಗಿದ್ದರು, ಅವರು ಹೇಗೆ ನಾಲ್ಕನೆಯ ವರ್ಣವಾಗಿದ್ದರು ಎಂಬ ಬಗ್ಗೆ ತಿಳಿಯಲು ಯಾರೂ ಗಮನ ಹರಿಸಿಲ್ಲ. ಅಂಥ ಒಂದು ಅಧ್ಯಯನ ಅತ್ಯಂತ ಪ್ರಮುಖವಾದದ್ದು ಎಂಬುದು ಪ್ರಶ್ನಾತೀತ. ಏಕೆಂದರೆ ಶೂದ್ರರು ನಾಲ್ಕನೆಯ ಸ್ಥಾನಕ್ಕೆ ಹೇಗೆ ಬಂದರು, ಅದು ವಿಕಾಸದ ಪರಿಣಾಮವೋ ಅಥವಾ ಕ್ರಾಂತಿಯಿಂದ ಉಂಟಾಯಿತೊ ಎಂದು ತಿಳಿಯುವುದು ಸೂಕ್ತವಾಗಿದೆ.

ಶೂದ್ರರು ಯಾರಾಗಿದ್ದರು, ಅವರು ಹೇಗೆ ನಾಲ್ಕನೆಯ ವರ್ಣವಾದರು ಎಂಬುದನ್ನು ತಿಳಿಯಬೇಕಾದರೆ ಹಿಂದೂ–ಆರ್ಯ ಸಮಾಜದಲ್ಲಿದ್ದ ಚಾತುರ್ವರ್ಣ್ಯದ ಉಗಮವನ್ನು ಶೋಧಿಸಬೇಕು. ಚಾತುರ್ವರ್ಣ್ಯದ ಅಧ್ಯಯನ 'ಋಗ್ವೇದ'ದ ಹತ್ತನೆಯ ಮಂಡಲದಲ್ಲಿ ಬರುವ ತೊಂಬತ್ತನೆಯ ಸೂಕ್ತದಿಂದ ಆರಂಭವಾಗಬೇಕು. ಈ ಸೂಕ್ತವೇ ಸುಪ್ರಸಿದ್ಧವಾಗಿರುವ 'ಪುರುಷಸೂಕ್ತ'.[೧]

ಈ ಸೂಕ್ತ ಏನು ಹೇಳುತ್ತದೆ? ಅದರ ಪ್ರಕಾರ[೧]:

೧. ಪುರುಷನಿಗೆ ಸಾವಿರ ತಲೆಗಳಿವೆ, ಸಾವಿರ ಕಣ್ಣುಗಳಿವೆ, ಸಾವಿರ ಪಾದಗಳಿವೆ. ಇವನು ಬ್ರಹ್ಮಾಂಡ ರೂಪವಾದ ವಿಶ್ವವನ್ನು ಸಕಲ ದಿಕ್ಕುಗಳಿಂದಲೂ ಸುತ್ತುವರಿದು ಅದಕ್ಕಿಂತಲೂ ಹತ್ತು ಅಂಗುಲದಷ್ಟು ಆಚೆಯೂ ಸ್ಥಾಪಿತನಾಗಿದ್ದಾನೆ.

೨. ನಮಗೆ ಗೋಚರವಾಗುವ ಸಕಲ ಜಗತ್ತು ಆ ಪುರುಷನೇ ಆಗಿದೆ. ಈಗಿರುವ ಜಗತ್ತು ಅವನೆ, ಮುಂದೆ ಸಂಭವಿಸುವುದೂ ಅವನೆ. ಅವನು ಅಮರತ್ವಕ್ಕೆ ಒಡೆಯನು. ಅವನು ಅನ್ನದಿಂದ ಬೆಳೆಯುತ್ತಾನೆ.

೩. ಇದು ಅವನ ಮಹತ್ತು, ಪುರುಷ ಎಲ್ಲದಕ್ಕಿಂತಲೂ ಶ್ರೇಷ್ಠ, ಎಲ್ಲ ಸೃಷ್ಟಿಯೂ ಅವನ ಕಾಲು ಭಾಗ ಮಾತ್ರ; ಇನ್ನು ಮುಕ್ಕಾಲು ಭಾಗ ಆಕಾಶದ ಅಮರತ್ವವೇ ಆಗಿದೆ.

೪. ಮುಕ್ಕಾಲು ಭಾಗದಿಂದ ಪುರುಷ ಮೇಲೇರಿದನು. ಅವನ ಕಾಲುಭಾಗ ಮತ್ತೆ ಇಲ್ಲೆ ಬೆಳೆಯಿತು. ತಿನ್ನುವ ಮತ್ತು ತಿನ್ನದೆ ಇರುವ ಎಲ್ಲ ವಸ್ತುಗಳಲ್ಲಿ ಅವನು ವ್ಯಾಪಿಸಿದ್ದಾನೆ.

೫. ಅವನಿಂದ ವಿರಾಜ ಜನಿಸಿದನು, ವಿರಾಜನಿಂದ ಪುರುಷ ಉದ್ಭವಿಸಿದನು. ಅವನು ಹುಟ್ಟಿದಾಗ ಲೋಕಾತೀತನಾದನು.

೬. ದೇವತೆಗಳು ಪುರುಷನನ್ನು ಹವಿಸ್ಸನ್ನಾಗಿ ಯಜ್ಞದಲ್ಲಿ ಅರ್ಪಿಸಿದಾಗ, ವಸಂತ ಋತುವು ತುಪ್ಪವಾಯಿತು, ಗ್ರೀಷ್ಮ ಋತುವು ಸಮಿತ್ತಾಯಿತು, ಶರದೃತುವು ಹವಿಸ್ಸಾಯಿತು.

---

೧. Muir, *Original Sanskrit Texts,* Vol. I, p. 9

೭. ಜಗತ್ ಸೃಷ್ಟಿಗಿಂತಲೂ ಮೊದಲು ಹುಟ್ಟಿದವನೂ, ಯಜ್ಞಕ್ಕೆ ಸಾಧನಭೂತನೂ ಆದ ಆ ಪುರುಷನನ್ನು ದರ್ಭಾಸನದ ಮೇಲೆ ಸ್ಥಾಪಿಸಿ ಪ್ರೋಕ್ಷಣೆ ಮಾಡಿದರು. ಅವನೊಂದಿಗೆ ದೇವತೆಗಳು, ಸಾಧ್ಯರೂ, ಋಷಿಗಳೂ ಯಜ್ಞ ಮಾಡಿದರು.

೮. ಆ ವಿಶ್ವ ಯಾಗದಿಂದ ಮೊಸರು ಮತ್ತು ಬೆಣ್ಣೆ ಉತ್ಪತ್ತಿಯಾದವು. ಆದರಿಂದ ವಾಯುಲೋಕದ ದುಷ್ಟ ಮತ್ತು ಸಾಧು ಪ್ರಾಣಿಗಳು ಉತ್ಪನ್ನವಾದವು.

೯. ಆ ವಿರಾಟ್ ಪುರುಷನ ಯಜ್ಞದಿಂದ ಋಕ್ ಮಂತ್ರಗಳೂ, ಸಾಮ ಮಂತ್ರಗಳೂ, ಛಂದಸ್ಸುಗಳೂ ಮತ್ತು ಯಜುಸ್ಸೂ ಉತ್ಪನ್ನವಾದವು.

೧೦. ಅದರಿಂದ ಅಶ್ವಗಳು ಹುಟ್ಟಿದವು, ಎರಡು ಸಾಲು ಹಲ್ಲುಗಳಿರುವ ಎಲ್ಲ ಪ್ರಾಣಿಗಳೂ ಸೃಷ್ಟಿಯಾದವು, ಗೋವುಗಳು ಉದಿಸಿದವು, ಆಡು ಕುರಿಗಳು ಸೃಷ್ಟಿಯಾದವು.

೧೧. ಈ ಪುರುಷನನ್ನು ದೇವತೆಗಳು ಎಷ್ಟು ಭಾಗವಾಗಿ ಕತ್ತರಿಸಿದರು. ಈ ಪುರುಷನ ಮುಖ ಯಾವುದು? ಇವನ ಬಾಹುಗಳು ಯಾವುವು ? ಇವನ ತೊಡೆಗಳು, ಪಾದಗಳು ಯಾವುವು?

೧೨. ಅವನ ಮುಖದಿಂದ ಬ್ರಾಹ್ಮಣನು ಉದಿಸಿದನು, ಅವನ ತೋಳುಗಳಿಂದ ಕ್ಷತ್ರಿಯನು ಉದಿಸಿದನು, ಅವನ ತೊಡೆಗಳಿಂದ ವೈಶ್ಯನೂ, ಅವನ ಪಾದಗಳಿಂದ ಶೂದ್ರನೂ ಉದಿಸಿದನು.

೧೩. ಅವನ ಮನಸ್ಸಿನಿಂದ ಚಂದ್ರನೂ, ಕಣ್ಣುಗಳಿಂದ ಸೂರ್ಯನೂ, ಅವನ ಬಾಯಿಂದ ಇಂದ್ರಾಗ್ನಿಗಳು, ಅವನ ಉಸಿರಿನಿಂದ ವಾಯು ಜನಿಸಿದರು.

೧೪. ಪುರುಷನ ಹೊಕ್ಕಳಿನಿಂದ ಅಂತರಿಕ್ಷವೂ, ಅವನ ತಲೆಯಿಂದ ಆಕಾಶವೂ, ಅವನ ಪಾದಗಳಿಂದ ಭೂಲೋಕವೂ, ಅವನ ಕಿವಿಯಿಂದ ನಾಲ್ಕು ದಿಕ್ಕುಗಳೂ, ಈ ತೆರನಾಗಿ ದೇವತೆಗಳು ಲೋಕಗಳನ್ನು ಸೃಷ್ಟಿಸಿದರು.

೧೫. ದೇವತೆಗಳು ಯಜ್ಞ ಮಾಡುತ್ತಿರುವಾಗ ಈ ಪುರುಷನನ್ನು ಬಲಿಯಾಗಿ ಅರ್ಪಿಸಿದರು, ಅದರಲ್ಲಿ ಏಳು ಸಮಿತ್ತುಗಳು ಇದ್ದವು, ಈ ಏಳು ಸಮಿತ್ತುಗಳನ್ನು ಮೂರು ಬಾರಿ ಅರ್ಪಿಸಿದರು.

೧೬. ಈ ಯಜ್ಞ ಸಾಧನಗಳಿಂದ ದೇವತೆಗಳು ಯಜ್ಞವನ್ನು ಪೂರೈಸಿದರು. ಈ ಯಜ್ಞ ಪ್ರಕಾರಗಳೇ ಮುಖ್ಯ ಧರ್ಮಗಳಾಗಿ ಪ್ರಸಿದ್ಧವಾದವು. ಯಾವ ಸ್ವರ್ಗದಲ್ಲಿ ಪುರಾತನರಾದ ದೇವತೆಗಳೂ ಸಾಧ್ಯರೂ ಇರುವರೊ ಆ ಸ್ವರ್ಗವನ್ನು ವಿರಾಟ್ ಪುರುಷನನ್ನು ಉಪಾಸನೆ ಮಾಡುವ ಮಹಾತ್ಮರು ಪಡೆಯುತ್ತಾರೆ.

'ಪುರುಷಸೂಕ್ತ'ವು ವಿಶ್ವದ ಉಗಮದ ಬಗ್ಗೆ ಒಂದು ಸಿದ್ಧಾಂತವಾಗಿದೆ. ಬೇರೆ ಮಾತಿನಲ್ಲಿ ಹೇಳುವುದಾದರೆ ಅದು ಸೃಷ್ಟಿಶಾಸ್ತ್ರವಾಗಿದೆ. ಆಲೋಚನೆಯ ಉನ್ನತ ಮಟ್ಟವನ್ನು ತಲುಪಿರುವ ಯಾವುದೇ ರಾಷ್ಟ್ರ ಒಂದು ಬಗೆಯ ಸೃಷ್ಟಿಶಾಸ್ತ್ರವನ್ನು ಬೆಳೆಸುವುದರಲ್ಲಿ ವಿಫಲವಾಗಿಲ್ಲ. 'ಪುರುಷಸೂಕ್ತ'ದಲ್ಲಿ ಪ್ರತಿಪಾದಿಸಿರುವಂಥ ಸೃಷ್ಟಿಶಾಸ್ತ್ರವನ್ನು ಹೆಚ್ಚು ಕಡಿಮೆ ಈಜಿಪ್ಷಿಯನ್ನರು ಬೆಳೆಸಿದರು. ಅದರ ಪ್ರಕಾರ[೧] 'ಖ್ನುಮು', ಅಂದರೆ 'ಸೃಷ್ಟಿಕರ್ತ'ನಾದ ಕುಂಬಾರನ ಚಕ್ರದ ಮೇಲೆ ಎಲ್ಲ ಜೀವಂತ ವಸ್ತುಗಳನ್ನು ಸೃಷ್ಟಿಸಿದನು. 'ಇರುವುದನ್ನೆಲ್ಲ ಸೃಷ್ಟಿಸಿದನು, ಅಸ್ತಿತ್ವದಲ್ಲಿರುವುದನ್ನೆಲ್ಲ ರೂಪಿಸಿದನು, ಅವನು ತಂದೆಯರ ತಂದೆ ತಾಯಂದಿರ ತಾಯಿ.......ಅವನು

---

೧. *Encyclopaedia of Religion and Ethics,* Vol. IV, p. 145

ಮನುಷ್ಯರನ್ನು ರೂಪಿಸಿದನು, ದೇವತೆಗಳನ್ನು ಸೃಷ್ಟಿಸಿದನು, ಆದಿಯಿಂದಲೂ ಅವನು ಜನಕ.... ಅವನೇ ಸ್ವರ್ಗ, ಮರ್ತ್ಯ, ಪಾತಾಳ, ಜಲ, ಪರ್ವತಗಳನ್ನೆಲ್ಲ ಸೃಷ್ಟಿಸಿದನು.... ಅವನೇ ಎಲ್ಲ ಪಕ್ಷಿಗಳಲ್ಲಿಯೂ, ಎಲ್ಲ ಮೀನುಗಳಲ್ಲಿಯೂ, ಕಾಡುಮೃಗಗಳಲ್ಲಿಯೂ, ದನಕರುಗಳಲ್ಲಿಯೂ ಮತ್ತು ಎಲ್ಲ ಕ್ರಿಮಿಕೀಟಗಳಲ್ಲಿಯೂ ಹೆಣ್ಣು ಮತ್ತು ಗಂಡನ್ನು ಸೃಷ್ಟಿಸಿದನು.' ಬೈಬಲಿನ ಹಳೆ ಒಡಂಬಡಿಕೆಯ ಒಂದನೆ ಅಧ್ಯಾಯವಾದ ಲೋಕಸೃಷ್ಟಿಯಲ್ಲಿ ಇದೇ ಬಗೆಯ ಸೃಷ್ಟಿ ನಿರೂಪಣೆಯಿದೆ.

ಸೃಷ್ಟಿಶಾಸ್ತ್ರಗಳು ವಿದ್ವದಾಸಕ್ತಿಯ ವಿಷಯಗಳಷ್ಟೇ ಹೊರತು ಬೇರೇನೂ ಅಲ್ಲ; ವಿದ್ವಾಂಸರ ಕುತೂಹಲವನ್ನು ತಣಿಸಲೂ, ಮಕ್ಕಳಿಗೆ ವಿನೋದವನ್ನೊದಗಿಸಲೂ ಇರುವ ಉದ್ದೇಶವನ್ನು ಬಿಟ್ಟರೆ ಅವು ಬೇರಾವುದೇ ರೀತಿಯಲ್ಲಿ ಪ್ರಯೋಜನಕಾರಿಯಲ್ಲ. ಈ ಮಾತು 'ಪುರುಷಸೂಕ್ತ'ದ ಕೆಲವು ಭಾಗಗಳಿಗೆ ಅನ್ವಯಿಸುತ್ತದೆ. ಆದರೆ ಇಡಿಯಾಗಿ ಖಂಡಿತ ಅದಕ್ಕೆ ಅನ್ವಯಿಸುವುದಿಲ್ಲ. ಕಾರಣ 'ಪುರುಷಸೂಕ್ತ'ದ ಎಲ್ಲ ಶ್ಲೋಕಗಳಿಗೂ ಒಂದೇ ಬಗೆಯ ಪ್ರಾಮುಖ್ಯತೆಯಿಲ್ಲ, ಒಂದೇ ಬಗೆಯ ಮಹತ್ವವಿಲ್ಲ. ೧೧ ಮತ್ತು ೧೨ನೆಯ ಶ್ಲೋಕಗಳು ಒಂದು ವರ್ಗವಾದರೆ ಇನ್ನುಳಿದ ಶ್ಲೋಕಗಳೆಲ್ಲ ಇನ್ನೊಂದು ಬಗೆಯಾಗುತ್ತದೆ. ೧೧ ಮತ್ತು ೧೨ನೇ ಶ್ಲೋಕಗಳನ್ನು ಬಿಟ್ಟರೆ ಉಳಿದವು ವಿದ್ವದಾಸಕ್ತಿಯ ವಿಷಯಗಳಲ್ಲ. ಅವುಗಳನ್ನು ಯಾರೂ ನಂಬುವುದಿಲ್ಲ. ಯಾವ ಹಿಂದೂ ಕೂಡ ಅವುಗಳನ್ನು ಸ್ಮರಿಸುವುದಿಲ್ಲ. ಆದರೆ ೧೧ ಮತ್ತು ೧೨ನೇ ಶ್ಲೋಕಗಳು ಸಂಪೂರ್ಣ ಭಿನ್ನವಾಗಿವೆ. ಮೇಲ್ನೋಟಕ್ಕೆ ಈ ಶ್ಲೋಕಗಳು ನಾಲ್ಕು ವರ್ಣಗಳು, ಅಂದರೆ (೧) ಬ್ರಾಹ್ಮಣರು ಅಥವಾ ಪುರೋಹಿತರು, (೨) ಕ್ಷತ್ರಿಯರು ಅಥವಾ ಸೈನಿಕರು, (೩) ವೈಶ್ಯರು ಅಥವಾ ವರ್ತಕರು, ಮತ್ತು (೪) ಶೂದ್ರರು ಅಥವಾ ಶ್ರಮಿಕರು –ಹೇಗೆ ವಿರಾಟ್ ಪುರುಷನ ದೇಹದಿಂದ ಉದ್ಭವಿಸಿದರೆಂದು ಹೇಳುತ್ತವೆ. ಆದರೆ ಈ ಶ್ಲೋಕಗಳು ಸೃಷ್ಟಿಯ ಕೇವಲ ವಿವರಣೆಯೆಂದು ನಂಬುವಂತಿಲ್ಲ. ಅದನ್ನು ಕೇವಲ ಕವಿಕಲ್ಪನೆಯೆಂದು ಹಿಂದೂ ಆರ್ಯರು ಭಾವಿಸಿದ್ದರೆಂದು ತಿಳಿಯುವುದು ದೊಡ್ಡ ತಪ್ಪಾಗುತ್ತದೆ. 'ಪುರುಷಸೂಕ್ತ'ದಲ್ಲಿ ಹೇಳಿರುವಂತೆ ನಾಲ್ಕು ವರ್ಣಗಳ ಆಧಾರದ ಮೇಲೆ ಸಮಾಜವನ್ನು ರೂಪಿಸಿ ನಡೆಸಬೇಕೆಂದು ಸೃಷ್ಟಿಕರ್ತನ ಆದೇಶವೆಂದು ಭಾವಿಸುತ್ತಾರೆ. ಅವುಗಳಲ್ಲಿ ಬಳಕೆಯಾಗಿರುವ ಭಾಷೆಯ ಆಧಾರದ ಮೇಲೆ ಅಂಥ ಒಂದು ಶ್ಲೋಕಗಳ ರಚನೆ ಸೂಚಿತವಾಗಿದೆಯೆಂದು ಭಾವಿಸುವಂತಿಲ್ಲ. ಆದರೆ ಪರಂಪರೆಯ ಪ್ರಕಾರ ಈ ಶ್ಲೋಕಗಳಿಗೆ ಈ ಅರ್ಥ ಬಂದಿದೆ ಎಂಬುದರಲ್ಲಿ ಅನುಮಾನವಿಲ್ಲ; 'ಪುರುಷಸೂಕ್ತ'ದ ಕವಿಯ ಇಷ್ಟಕ್ಕೆ ಅನುಸಾರವಾಗಿ ಈ ಸಾಂಪ್ರದಾಯಿಕ ರಚನೆ ಆಗಿಲ್ಲ ಎನ್ನುವುದು ನಿಜವಾಗಿಯೂ ಕಷ್ಟವಾಗುತ್ತದೆ. ಆದ್ದರಿಂದ 'ಪುರುಷಸೂಕ್ತ'ದ ೧೧ ಮತ್ತು ೧೨ನೆ ಶ್ಲೋಕಗಳು ಬರಿಯ ಸೃಷ್ಟಿಶಾಸ್ತ್ರವಲ್ಲ. ಅವು ಒಂದು ವಿಶಿಷ್ಟ ರೂಪದ ಸಮಾಜ ರಚನೆಯನ್ನು ನಿಗದಿಪಡಿಸುವ ದೈವಾದೇಶವಾಗಿದೆ.

'ಪುರುಷಸೂಕ್ತ' ವಿಧಿಸುವ ಸಮಾಜ 'ಚಾತುರ್ವರ್ಣ್ಯ'ವೆಂದು ಪ್ರಸಿದ್ಧವಾಗಿದೆ. ದೈವನಿಯಮವಾದ್ದರಿಂದ ಅದು ಸಹಜವಾಗಿಯೇ ಹಿಂದೂ ಆರ್ಯ ಸಮಾಜದ ಆದರ್ಶವಾಯಿತು. ಆರಂಭದಲ್ಲಿ ಅಥವಾ ಸ್ಥಿತ್ಯಂತರ ಸ್ಥಿತಿಯಲ್ಲಿ ಹಿಂದೂ ಆರ್ಯ ಸಮಾಜದ ಜೀವನವು 'ಚಾತುರ್ವರ್ಣ'ದ ಆದರ್ಶದ ಚೌಕಟ್ಟಿನಲ್ಲಿ ರೂಪಿತವಾಯಿತು. ಈ ಚೌಕಟ್ಟೇ ಹಿಂದೂ ಆರ್ಯ ಸಮುದಾಯದ ನಿರ್ದಿಷ್ಟ ರೂಪ ಮತ್ತು ರಚನೆಯಾಯಿತು.

ತನ್ನ ಆದರ್ಶವಾದ 'ಚಾತರ್ವರ್ಣ' ಪದ್ಧತಿಗೆ ಹಿಂದೂ ಆರ್ಯ ಸಮಾಜ ತೋರಿದ ಗೌರವ ಪ್ರಶ್ನಾತೀತವಷ್ಟೇ ಅಲ್ಲ, ಅದು ವರ್ಣನಾತೀತವೂ ಹೌದು. ಹಿಂದೂ ಆರ್ಯ ಸಮಾಜದ ಮೇಲೆ ಅದು ಬೀರಿದ ಪ್ರಭಾವ ತುಂಬ ಗಾಢವಾಗಿಯೂ ಅಚ್ಚಳಿಯದಂತೆಯೂ ಇದೆ. ಬುದ್ಧನನ್ನು ಬಿಟ್ಟರೆ 'ಪುರುಷಸೂಕ್ತ' ವಿಧಿಸಿದ ಸಾಮಾಜಿಕ ವ್ಯವಸ್ಥೆಯನ್ನು ಬೇರಾರೂ ಎಂದೆಂದೂ ಪ್ರಶ್ನಿಸಿಲ್ಲ, ಬುದ್ಧನಿಗೆ ಕೂಡ ಅದನ್ನು

ಅಲುಗಾಡಿಸಲಾಗಲಿಲ್ಲ. ಕಾರಣ, ಬೌದ್ಧ ಧರ್ಮದ ಅವನತಿಯ ನಂತರವೂ, ಬೌದ್ಧ ಧರ್ಮ ಉಚ್ಛ್ರಾಯ ಕಾಲದಲ್ಲಿದ್ದಾಗಲೂ ಸಾಕಷ್ಟು ಸ್ಮೃತಿಕಾರರು ಇದ್ದರು; ಅವರ ಮುಖ್ಯ ಕರ್ತವ್ಯ 'ಪುರುಷಸೂಕ್ತ'ದ ಆದರ್ಶವನ್ನು ಸಮರ್ಥಿಸುವುದಷ್ಟೇ ಅಲ್ಲದೆ ಅದನ್ನು ಪ್ರಚಾರ ಮಾಡಿ ವಿಸ್ತರಿಸಬೇಕಿತ್ತು.

'ಪುರುಷಸೂಕ್ತ'ದ ಈ ಪ್ರಚಾರ ಕಾರ್ಯದ ಬೆಂಬಲವಾಗಿ ಕೆಲವು ನಿದರ್ಶನಗಳನ್ನು 'ಆಪಸ್ತಂಭ ಧರ್ಮ ಸೂತ್ರ'ದಿಂದಲೂ 'ವಸಿಷ್ಠ ಧರ್ಮಸೂತ್ರ'ದಿಂದಲೂ ಕೊಡಬಹುದು. 'ಆಪಸ್ತಂಭ ಧರ್ಮಸೂತ್ರ'ದ ಪ್ರಕಾರ:

"ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ನಾಲ್ಕು ವರ್ಣಗಳಿವೆ.

ಇವುಗಳಲ್ಲಿ ಪ್ರತಿಯೊಂದು ವರ್ಣವೂ ಹುಟ್ಟಿನಿಂದ ತನ್ನ ಕೆಳ ವರ್ಣಕ್ಕಿಂತ ಶ್ರೇಷ್ಠವಾದುದು.[೧]

ಇವರಲ್ಲಿ ಶೂದ್ರರನ್ನೂ ಪಾಪಕಾರ್ಯಗಳನ್ನು ಮಾಡಿದವರನ್ನೂ ಬಿಟ್ಟರೆ ಉಳಿದವರಿಗೆ (೧) ಉಪನಯನ ಅಥವಾ ಜನಿವಾರ ಧಾರಣೆ, (೨) ವೇದಾಧ್ಯಯನ, ಮತ್ತು (೩) ಯಜ್ಞಮಾಡುವ ಹಕ್ಕುಗಳನ್ನು ವಿಧಿಸಿದ್ದಾರೆ.[೨]

ಇದನ್ನೇ 'ವಸಿಷ್ಠ ಧರ್ಮಸೂತ್ರ' ಪುನರುಚ್ಚರಿಸುತ್ತದೆ :

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳಿವೆ.

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ವರ್ಣಗಳನ್ನು ದ್ವಿಜರೆಂದು ಕರೆಯುತ್ತಾರೆ.

ಅವರ ಮೊದಲನೆಯ ಜನ್ಮ ಅವರ ತಾಯಿಯ ಉದರದಿಂದ, ಎರಡನೆಯ ಜನ್ಮ ಯಜ್ಞೋಪವೀತದಿಂದ. ಈ ಎರಡನೆಯ ಜನ್ಮದಿಂದ ಅವರ ತಾಯಿ ಸಾವಿತ್ರಿ (ಗಾಯತ್ರಿ ಮಂತ್ರ)ವಾದರೆ ಗುರುವೇ ಅವರ ತಂದೆ ಆಗಿರುತ್ತಾನೆ.

ಅವರು ಗುರುವನ್ನು ತಂದೆಯೆಂದು ಕರೆಯುತ್ತಾರೆ. ಕಾರಣ ಅವನು ಅವರಿಗೆ 'ವೇದ'ವನ್ನು ಬೋಧಿಸುತ್ತಾನೆ.[೩]

ಈ ನಾಲ್ಕು ವರ್ಣಗಳು ತಮ್ಮ ಹುಟ್ಟಿನಿಂದಲೂ ನಿರ್ದಿಷ್ಟ ಸಂಸ್ಕಾರಗಳಿಂದಲೂ ವಿಭಿನ್ನವಾಗಿವೆ.

ವೇದದಲ್ಲಿ ಈ ಮುಂದಿನ ಮಾತು ಕೂಡ ಇದೆ: "ದೇವರ ಮುಖದಿಂದ ಬ್ರಾಹ್ಮಣ ಜನಿಸಿದನು, ಅವನ ತೋಳುಗಳಿಂದ ಕ್ಷತ್ರಿಯ ಮೂಡಿದನು, ಅವನ ತೊಡೆಗಳಿಂದ ವೈಶ್ಯ ಉದಿಸಿದನು, ಅವನ ಪಾದಗಳಿಂದ ಶೂದ್ರ ಹುಟ್ಟಿದನು."

ಶೂದ್ರನನ್ನು ಸಂಸ್ಕಾರವಂತನನ್ನಾಗಿ ಮಾಡಬಾರದೆಂದು ಮುಂದಿನ ಮಾತಿನಲ್ಲಿ ಘೋಷಿಸಲಾಗಿದೆ.

'ಪುರುಷಸೂಕ್ತ'ದ ಈ ವಿಚಾರವನ್ನು ಇನ್ನಿತರ ಅನೇಕ ಸ್ಮೃತಿಕಾರರು ಪದೇ ಪದೇ ಗಿಳಿಪಾಠ ಒಪ್ಪಿಸಿದ್ದಾರೆ ಮತ್ತು ಅದರ ಪಾವಿತ್ರ್ಯವನ್ನು ಎತ್ತಿಹಿಡಿದಿದ್ದಾರೆ. ಅವರ ಮಾತನ್ನು ಪುನರುಚ್ಚರಿಸುವ ಅಗತ್ಯವಿಲ್ಲ. 'ಪುರುಷಸೂಕ್ತ'ದಲ್ಲಿ ಪ್ರತಿಪಾದಿತವಾಗಿರುವ ಆದರ್ಶ ಪಾವಿತ್ರ್ಯದ ವಿರುದ್ಧ ದನಿಯೆತ್ತಿದ ಎಲ್ಲರನ್ನೂ ಅಂತಿಮವಾಗಿ ಹಿಂದೂ ಸಮಾಜದ ಶಿಲ್ಪಿಯಾದ ಮನು ಮಕಾಡೆ ಮಲಗಿಸಿದ್ದಾನೆ. ಏಕೆಂದರೆ ಮನು ಎರಡು ಕೆಲಸ ಮಾಡಿದನು. ಮೊದಲನೆಯದಾಗಿ, ದೈವಾದೇಶವೆಂದು 'ಪುರುಷಸೂಕ್ತ'ದ ಆದರ್ಶವನ್ನು ಮತ್ತೆ ಹೊಸದಾಗಿ ನಿರೂಪಿಸಿದನು:

---

೧. Prasna ೧. Patala ೧. Khanda ೧. Sutras 4-5

೨. Prasna ೧. Patala ೧. Khanda ೧. Sutras 6

೩. Chapter II, Verses 1-4

"ಲೋಕಗಳ ಅಭ್ಯುದಯಕ್ಕಾಗಿ ಸೃಷ್ಟಿಕರ್ತನು ತನ್ನ ಬಾಯಿ, ತೋಳು, ತೊಡೆ ಮತ್ತು ಪಾದಗಳಿಂದ ಕ್ರಮವಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರನ್ನು ಸೃಷ್ಟಿಸಿದನು."[೧]

"ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರು ದ್ವಿಜಜಾತಿಗೆ ಸೇರಿದ್ದಾರೆ. ಆದರೆ ನಾಲ್ಕನೆಯವನಾದ ಶೂದ್ರನಿಗೆ ಕೇವಲ ಒಂದೇ ಜನ್ಮ"[೨]

ಮನು ತನ್ನ ಹಿಂದಿನವರನ್ನು ಕೇವಲ ಅನುಸರಿಸುತ್ತಿದ್ದಾನೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಆದರೆ ಅವನು ಒಂದು ಹೆಜ್ಜೆ ಮುಂದೆ ಹೋಗಿ ಇನ್ನೊಂದು ವಿಚಾರವನ್ನು ಘೋಷಿಸಿದನು. ಅದೇನೆಂದರೆ:

"ಧರ್ಮಕ್ಕೆ ವೇದವೇ ಮೂಲ, ಪರಮ ಅಧಿಕಾರ."[೩]

'ಪುರುಷಸೂಕ್ತ'ವು ವೇದದ ಒಂದು ಭಾಗವೆಂದು ಭಾವಿಸಿದರೆ, ಅದರಲ್ಲಿ ಅಡಕವಾಗಿರುವ 'ಚಾತುರ್ವರ್ಣ್ಯ'ವೆಂಬ ಸಾಮಾಜಿಕ ಆದರ್ಶಕ್ಕೆ ಮನು ಆ ಮುನ್ನ ಇಲ್ಲದಿದ್ದ ದೈವತ್ವವನ್ನೂ ಪರಿಪೂರ್ಣತೆಯನ್ನೂ ಕೊಟ್ಟನೆಂದು ತಿಳಿಯಲು ಕಷ್ಟವಾಗುವುದಿಲ್ಲ.

## ೨

ಆದ್ದರಿಂದ 'ಪುರುಷಸೂಕ್ತ'ದ ವಿಮರ್ಶಾತ್ಮಕ ವಿಶ್ಲೇಷಣೆ ತುಂಬ ಅವಶ್ಯವಾಗಿದೆ.

'ಪುರುಷಸೂಕ್ತ' ಅಪ್ರತಿಮವಾದುದೆಂದು ಹಿಂದೂಗಳು ಹೇಳುತ್ತಾರೆ. ಮಾನವನ ಮನಸ್ಸು ಪ್ರಾಚೀನ ಸ್ಥಿತಿಯಲ್ಲಿದ್ದಾಗ, ಆಧುನಿಕ ಕಾಲದಲ್ಲಿ ಸಿಗುವ ವೈವಿಧ್ಯಮಯ ಆಲೋಚನೆಯ ಲಭ್ಯತೆ ಇಲ್ಲದಿದ್ದಾಗ, ಇಂಥ ಆಲೋಚನೆಯ ಬಗ್ಗೆ ಉತ್ಪ್ರೇಕ್ಷೆ ಮಾಡುವುದು ಅಸಹಜವೇನಲ್ಲ. ಆದರೆ ಯಾವ ಅರ್ಥದಲ್ಲಿ 'ಪುರುಷಸೂಕ್ತ' ಅಪ್ರತಿಮವಾದುದು ಎಂದು ಗೊತ್ತಾದರೆ ಆಗ ಅವರ ಉತ್ಪ್ರೇಕ್ಷೆಯನ್ನು ಒಪ್ಪಿಕೊಳ್ಳಲು ಹೆಚ್ಚು ಕಷ್ಟವಾಗಲಾರದು. ಪುರುಷಸೂಕ್ತವು ಎತ್ತಿಹಿಡಿಯುವ ಚಾತುರ್ವರ್ಣ್ಯ ಪದ್ಧತಿ ಎಂಬ ಸಾಮಾಜಿಕ ಸಂಘಟನೆ ಅಪ್ರತಿಮವಾದುದು ಎಂಬ ಆಧಾರದ ಮೇಲೆಯೇ ಪುರುಷಸೂಕ್ತವೂ ಅಪ್ರತಿಮವಾದುದು. 'ಪುರುಷಸೂಕ್ತ' ಅಪ್ರತಿಮವಾದುದು ಎಂದು ಹೇಳಲು ಈ ವಾದ ಸಾಕೆ? ವರ್ಣರಹಿತ ಸಮಾಜವನ್ನು ಸಾಮಾಜಿಕ ಆದರ್ಶವೆಂದು ಬೋಧಿಸಿದ್ದರೆ 'ಪುರುಷಸೂಕ್ತ' ನಿಜವಾಗಿಯೂ ಅಪ್ರತಿಮವಾಗುತ್ತಿತ್ತು. ಆದರೆ 'ಪುರುಷಸೂಕ್ತ' ಏನು ಹೇಳುತ್ತದೆ? ಅದು ವರ್ಣಬದ್ಧ ಸಮಾಜವನ್ನೇ ತನ್ನ ಆದರ್ಶವೆಂದು ಬೋಧಿಸುತ್ತದೆ. ಇದನ್ನು ಅಪ್ರತಿಮವೆಂದು ಹೇಳಲು ಸಾಧ್ಯವೆ? ಈ ಪ್ರಶ್ನೆಗೆ ರಾಷ್ಟ್ರೀಯವಾದಿ ಮತ್ತು ದೇಶಪ್ರೇಮಿಯಾದವರು ಮಾತ್ರ ಸಕಾರಾತ್ಮಕ ಉತ್ತರ ಕೊಡಬಲ್ಲರು. ಸಂಪೂರ್ಣ ಪ್ರಾಚೀನವಲ್ಲದ ಪ್ರತಿಯೊಂದು ಸಮಾಜದಲ್ಲಿಯೂ ವರ್ಗಗಳು ಇದ್ದೇ ಇರುತ್ತವೆ. ಸಾಕಷ್ಟು ಮುಂದುವರಿದ ಸಮಾಜದಲ್ಲಿಯೂ ಪ್ರಪಂಚದ ಎಲ್ಲೆಡೆ ವರ್ಗಗಳ ಅಸ್ತಿತ್ವ ಒಂದು ಸಹಜಸ್ಥಿತಿಯಾಗಿ ಕಂಡುಬರುತ್ತದೆ. ಈ ದೃಷ್ಟಿಯಿಂದ ಅದನ್ನು ನೋಡಿದಾಗ 'ಪುರುಷಸೂಕ್ತ'ದಲ್ಲಿ ಏನು ಅಪ್ರತಿಮತೆಯಿದೆ? ಅದು ಹಿಂದೂ–ಆರ್ಯ ಸಮಾಜದಲ್ಲಿ ಅಸ್ತಿತ್ವದಲ್ಲಿದ್ದ ವರ್ಣ ವ್ಯವಸ್ಥೆಯನ್ನು ಮಾತ್ರ ಗುರುತಿಸುತ್ತದೆ.

ಆದಾಗ್ಯೂ ಇನ್ನೂ ಇತರ ಕಾರಣಗಳಾಗಿ 'ಪುರುಷಸೂಕ್ತ'ವನ್ನು ಅಪ್ರತಿಮವಾದುದೆಂದು ಒಪ್ಪಿಕೊಳ್ಳಬೇಕಾಗಿದೆ. ದುರದೃಷ್ಟದ ಸಂಗತಿಯೆಂದರೆ 'ಪುರುಷಸೂಕ್ತ' ಏಕೆ ಅಪ್ರತಿಮವೆಂದು ಅನೇಕರಿಗೆ

---

೧. Manu, Chapter I, Verse 31

೨. ಅದೇ ಅಧ್ಯಾಯ 10, ಶ್ಲೋಕ 4

೩. ಅದೇ ಅಧ್ಯಾಯ 2, ಶ್ಲೋಕ 6.

ಗೊತ್ತಿಲ್ಲ. ಆದರೆ ನಿಜವಾದ ಕಾರಣಗಳು ಗೊತ್ತಾದರೆ 'ಪುರುಷಸೂಕ್ತ' ಮಾನವನ ಬುದ್ಧಿಶಕ್ತಿಯ ಅಪೂರ್ವ ಸೃಷ್ಟಿ ಎಂದು ಒಪ್ಪಿಕೊಳ್ಳಲು ಜನರು ಹಿಂಜರಿಯದಿದ್ದರೂ ಅದು ಮಾನವನ ಜಾಣ್ಮೆಯ ಅಸಾಧಾರಣ ಸೃಷ್ಟಿ ಎಂದು ತಿಳಿದರೆ ಅವರಿಗೆ ಬಹುಶಃ ಗಾಬರಿಯಾಗಬಹುದು.

'ಪುರುಷಸೂಕ್ತ'ದ ಸಾಮಾಜಿಕ ಆದರ್ಶದ ಲಕ್ಷಣಗಳೇನು? ಅದು ಅದ್ವಿತೀಯವಾಗಲು ಆ ಲಕ್ಷಣಗಳ ವೈಶಿಷ್ಟ್ಯವೇನು? ವರ್ಗಗಳ ಅಸ್ತಿತ್ವ ಪ್ರತಿಯೊಂದು ಸಮಾಜದ ವಾಸ್ತವ ಸ್ಥಿತಿಯಾದರೂ ಈ ವಸ್ತುಸ್ಥಿತಿಯನ್ನೆ ಯಾವುದೇ ಸಮಾಜ ನ್ಯಾಯಬದ್ಧವಾದ ಆದರ್ಶ ಸಮಾಜವನ್ನಾಗಿ ಪರಿವರ್ತಿಸಿಲ್ಲ. ವಾಸ್ತವವನ್ನೇ ಆದರ್ಶದ ಘನತೆಗೆ ಏರಿಸಿರುವ ಏಕೈಕ ನಿದರ್ಶನವೆಂದರೆ 'ಪುರುಷ ಸೂಕ್ತ'ದ ಯೋಜನೆಯಾಗಿದೆ. 'ಪುರುಷಸೂಕ್ತ'ದಲ್ಲಿ ಹೇಳಿರುವ ಯೋಜನೆಯ ಮೊಟ್ಟ ಮೊದಲ ಅದ್ವಿತೀಯ ಗುಣವೆಂದರೆ ಇದೇ ಆಗಿದೆ. ಎರಡನೆಯದಾಗಿ, ಯಾವುದೇ ಸಮುದಾಯ ವರ್ಗ ರಚನೆಯ ವಾಸ್ತವ ಸ್ಥಿತಿಯನ್ನೆ ಒಪ್ಪಿಕೊಂಡು ಅದಕ್ಕೆ ಕಾನೂನುಬದ್ಧವಾದ ಆದರ್ಶ ಸಮಾಜದ ಅರ್ಥವನ್ನು ಕೊಟ್ಟಿಲ್ಲ. ಈ ವಿಷಯದಲ್ಲಿ ಗ್ರೀಕರದು ಒಂದು ಒಳ್ಳೆಯ ಉದಾಹರಣೆ. ಪ್ಲೇಟೋವಿನಂಥ ಪ್ರತಿಪಾದಕನೇ ಆದರ್ಶ ಸಾಮಾಜಿಕ ರಚನೆಗೆ ವರ್ಗ ಪದ್ಧತಿ ಇರಬೇಕು ಎಂದು ಹೇಳಿದನು. ಆದರೆ ಗ್ರೀಕರು ಅದಕ್ಕೆ ಕಾನೂನಿನ ಮುದ್ರೆಯನ್ನು ಕೊಟ್ಟು ಅದನ್ನೇ ವಾಸ್ತವವನ್ನಾಗಿ ಮಾಡಲು ಎಂದೂ ಯೋಚಿಸಿರಲಿಲ್ಲ. ವಾಸ್ತವವನ್ನೇ ಆದರ್ಶವನ್ನಾಗಿ ಕಾನೂನಿನ ಮುದ್ರೆಯೊತ್ತುವ ಪ್ರಯತ್ನವನ್ನು 'ಪುರುಷಸೂಕ್ತ'ದಲ್ಲಿ ಮಾತ್ರ ನೋಡುತ್ತೇವೆ. ಮೂರನೆಯದಾಗಿ, ವರ್ಗ ರಚನೆ ಒಂದು ಆದರ್ಶವೆಂದು ಯಾವುದೇ ಸಮಾಜ ಒಪ್ಪಿಕೊಂಡಿಲ್ಲ. ಅದು ಸ್ವಾಭಾವಿಕವೆಂಬುದನ್ನು ಮಾತ್ರ ಒಪ್ಪಿಕೊಂಡಿದ್ದಾರೆ. 'ಪುರಷಸೂಕ್ತ' ಇನ್ನೂ ಮುಂದೆ ಹೋಗುತ್ತದೆ. ಅದು ವರ್ಗ ವಿರಚನೆಯನ್ನು ಸ್ವಾಭಾವಿಕ ಮತ್ತು ಆದರ್ಶಯುತ ಎಂದಷ್ಟೇ ಅಲ್ಲದೆ ಪವಿತ್ರ ಮತ್ತು ದೈವದತ್ತವಾದುದು ಎಂದು ಕೂಡ ಭಾವಿಸುತ್ತದೆ. ನಾಲ್ಕನೆಯದಾಗಿ, ಇತಿಹಾಸಕ್ಕೆ ಪರಿಚಿತವಾಗಿರುವ ಯಾವುದೇ ಸಮಾಜದಲ್ಲಿ ವರ್ಗಗಳ ಸಂಖ್ಯೆ ಎಂದೂ ಸೈದ್ಧಾಂತಿಕ ವಿಷಯವಾಗಿಲ್ಲ. ರೋಮ್‌ನಲ್ಲಿ ಎರಡೇ ವರ್ಗಗಳಿದ್ದವು. ಈಜಿಪ್ಟಿನವರಿಗೆ ಮೂರೇ ವರ್ಗಗಳು ಸಾಕಾದವು. ಹಿಂದೂ–ಇರಾನಿನವರೆಗೆ ಕೂಡ ಮೂರಕ್ಕಿಂತ ಹೆಚ್ಚು ವರ್ಗಗಳು ಬೇಕಾಗಲಿಲ್ಲ.[೧] ೧) ಅತ್ರವಣರು (ಪುರೋಹಿತರು), (೨) ರಥೇಸ್ತರರು (ಯೋಧರು), ಮತ್ತು (೩) ವಾಸ್ತ್ರ್ಯ–ಶೂಯರು (ರೈತಾಪಿಗಳು). 'ಪುರುಷಸೂಕ್ತ' ಸಮಾಜವನ್ನು ನಾಲ್ಕು ವರ್ಗಗಳಾಗಿ ವಿಭಜಿಸಿ ಅದನ್ನು ಒಂದು ಸೈದ್ಧಾಂತಿಕ ವಿಷಯವನ್ನಾಗಿ ಮಾಡಿತು. ಅದರ ಪ್ರಕಾರ ವರ್ಗಗಳು ಹೆಚ್ಚಾಗಲೀ ನಾಲ್ಕಕ್ಕಿಂತ ಕಡಿಮೆಯಾಗಲೀ ಇರಲು ಸಾಧ್ಯವಿರದಂತಾಯಿತು. ಐದನೆಯದಾಗಿ, ಕ್ರಿಯಾಶೀಲವಾದ ಬಣಗಳು ಕಾಲದಿಂದ ಕಾಲಕ್ಕೆ ನಿರ್ಧರಿಸುವ ಪ್ರಾಮುಖ್ಯತೆಯಿಂದಾಗಿ ಪ್ರತಿಯೊಂದು ಸಮಾಜದಲ್ಲಿಯೂ ಒಂದು ವರ್ಗ ಉಳಿದ ವರ್ಗಗಳ ಎದುರು ಮುಖಾಮುಖಿಯಾಗಿ ತನ್ನ ಸ್ಥಾನವನ್ನು ಕಂಡುಕೊಳ್ಳುತ್ತದೆ. ಶ್ರೇಣಿಯಲ್ಲಿ ಮೇಲು ಹೋಗುತ್ತ ಪುರಸ್ಕಾರ, ಕೆಳ ಹೋಗುತ್ತ ಹೋದಂತೆ ತಿರಸ್ಕಾರ ಎಂದು ನಿರ್ದಿಷ್ಟಪಡಿಸಿರುವ ಶಾಶ್ವತ ಅಧಿಕೃತ ಶ್ರೇಣಿ ಯಾವ ಸಮಾಜದಲ್ಲಿಯೂ ಇಲ್ಲ. ನಾನಾ ವರ್ಣಗಳ ನಡುವಣ ಸಂಬಂಧ ಶ್ರೇಣೀಕೃತ ಆದ್ಯತೆಗೆ ಶಾಶ್ವತವಾಗಿ ಬದ್ಧವಾಗಿರುವುದರಿಂದ ಅದನ್ನು ಯಾವ ಕಾಲದೇಶಗಳೂ ಬದಲಾವಣೆ ಮಾಡಲು ಸಾಧ್ಯವಿಲ್ಲ. ಆದ್ದರಿಂದ 'ಪುರುಷಸೂಕ್ತ'ದ ವಿಧಾನ ಅಪ್ರತಿಮವಾಗಿದೆ. ಚಾತುರ್ವರ್ಣಗಳ ನಡುವೆ ಇರುವ ಶೇಣೀಕೃತ ಅಸಮಾನತೆಯ ತತ್ವದ ಮೇಲೆ ಈ ಆದ್ಯತೆಯ ನಿಯಮ ನಿಂತಿರುವುದರಿಂದ, ಅದು ಎಲ್ಲರಿಗಿಂತ ಮೇಲೆ ಬ್ರಾಹ್ಮಣನನ್ನೂ,

---

೧. Gaiger : *Civilization of the Eastern Iranians in Ancient Times,* Vol. II, p.64

ಬ್ರಾಹ್ಮಣನಿಗಿಂತ ಕೆಳಗೆ, ಆದರೆ ವೈಶ್ಯ ಮತ್ತು ಶೂದ್ರರಿಗಿಂತ ಮೇಲೆ ಕ್ಷತ್ರಿಯನನ್ನೂ, ಕ್ಷತ್ರಿಯನ ಕೆಳಗೆ ಆದರೆ ಶೂದ್ರನಿಗಿಂತ ಮೇಲೆ ವೈಶ್ಯನನ್ನೂ, ಎಲ್ಲರಿಗಿಂತ ಕೆಳಗೆ ಶೂದ್ರನನ್ನೂ ಮಾನ್ಯಮಾಡುತ್ತದೆ.

## ೩

'ಪುರುಷಸೂಕ್ತ' ಅದ್ವಿತೀಯವಾಗಿರುವುದಕ್ಕೆ ಇವು ನಿಜವಾದ ಕಾರಣಗಳು. ಆದರೆ 'ಪುರುಷಸೂಕ್ತ' ಕೇವಲ ಅದ್ವಿತೀಯವಷ್ಟೇ ಅಲ್ಲ, ಅಸಾಧಾರಣ ಕೂಡ ಆಗಿದೆ. ಅದು ಅಸಾಧಾರಣ ಏಕೆಂದರೆ, ಅದು ಒಗಟುಗಳಿಂದ ತುಂಬಿಹೋಗಿದೆ. ಈ ಒಗಟುಗಳ ಬಗ್ಗೆ ಯಾರೂ ಅಷ್ಟಾಗಿ ಗಮನಹರಿಸಿದಂತಿಲ್ಲ. ಆದರೆ ಈ ಒಗಟು ಸ್ವಭಾವತಃ ಎಷ್ಟು ನಿಜವಾಗಿವೆ, ಎಷ್ಟು ವಿಚಿತ್ರವಾಗಿವೆ ಎಂಬುದು ಪರಿಶೀಲಿಸಲು ಹೊರಡುವ ಯಾರಿಗಾದರೂ ಗೊತ್ತಾಗುತ್ತದೆ. ಋಗ್ವೇದದಲ್ಲಿ ಕಾಣುವ ಸೃಷ್ಟಿಶಾಸ್ತ್ರ 'ಪುರುಷಸೂಕ್ತ'ದಲ್ಲಿ ಹೇಳಿರುವ ಏಕೈಕ ಸೃಷ್ಟಿಶಾಸ್ತ್ರವಲ್ಲ. ಅಲ್ಲಿ ಇನ್ನೂ ಒಂದು ಸೃಷ್ಟಿಶಾಸ್ತ್ರವಿದೆ. ಅದು ಋಗ್ವೇದದ ೧೦ನೆಯ ಮಂಡಲದ ೭೨ನೆಯ ಸೂಕ್ತದಲ್ಲಿ ಪ್ರತಿಪಾದಿತವಾಗಿದೆ. ಅದು ಈ ರೀತಿ ಇದೆ:[೧]

೧. ಈ ಕೊನೆಗಾಲದಲ್ಲಿ ನಾವು ದೇವತೆಗಳನ್ನು ಹಾಡಿ ಹೊಗಳಿದರೆ ಅವರು ನಮ್ಮ ಮೇಲೆ ಕೃಪೆದೋರುತ್ತಾರೆಂದು ನಾವು ದೇವತೆಗಳನ್ನು ಸ್ಪಷ್ಟ ದನಿಯಲ್ಲಿ ಸ್ತುತಿಸೋಣ.

೨. ಕಮ್ಮಾರ ತಿದಿಗಳಿಗೆ ಗಾಳಿಯೂದುವ ರೀತಿಯಲ್ಲಿ ಬೃಹಸ್ಪತಿಯು ಈ ದೇವತೆಗಳಿಗೆ ಚೈತನ್ಯ ಕೊಟ್ಟಿದ್ದಾನೆ; ಆದಿಯುಗದಲ್ಲಿ ಶೂನ್ಯದಿಂದ ದೇವತೆಗಳ ಉದ್ಭವವಾಯಿತು.

೩. ಆದಿಯುಗದಲ್ಲಿ ಶೂನ್ಯದಿಂದ ದೇವತೆಗಳು ಮತ್ತು ಉಳಿದ ಜೀವರಾಶಿಗಳ ಸೃಷ್ಟಿಯಾಯಿತು; ಆಮೇಲೆ ನಾಲ್ಕು ದಿಕ್ಕುಗಳು ಸೃಷ್ಟಿಯಾದವು, ಅನಂತರ ಮೇಲ್ಮುಖವಾಗಿ ಬೆಳೆಯುವ ವೃಕ್ಷಗಳು ಸೃಷ್ಟಿಯಾದವು.

೪. ಈ ಊರ್ಧ್ವಮುಖಿ ವೃಕ್ಷದಿಂದ ಭೂಮಿ ಹುಟ್ಟಿತು, ದಿಕ್ಕುಗಳು ಭೂಮಿಯಿಂದ ಹುಟ್ಟಿದವು. ಅದಿತಿಯಿಂದ ದಕ್ಷ ಹುಟ್ಟಿದನು, ಪುನಃ ದಕ್ಷನಿಂದ ಅದಿತಿ ಹುಟ್ಟಿದಳು.

೫. ದಕ್ಷನ ಮಗಳಾದ ಅದಿತಿ ಹುಟ್ಟಿದಳು; ಅವಳ ನಂತರ ಪೂಜಾರ್ಹರಾದ ದೇವತೆಗಳು ಹುಟ್ಟಿದರು, ಅವರು ಅಮರರು.

೬. ಈ ಸುವ್ಯವಸ್ಥಿತವಾದ ಸರೋವರದಲ್ಲಿ ನೀವಿದ್ದಾಗ ದೇವತೆಗಳೇ, ನೀವು ನೃತ್ಯ ಮಾಡುತ್ತಿರುವಂತೆ ಒಂದು ತೀಕ್ಷ್ಣವಾದ ತೇಜಸ್ಸಿನ ಅಂಶ ನಿಮ್ಮಿಂದ ಹೊರಟಿತು.

೭.. ಆಗ, ದೇವತೆಗಳೇ, ನೀವು ನಿಮ್ಮ ತೇಜಸ್ಸಿನಿಂದ ಲೋಕವನ್ನು ತುಂಬಿದಿರಿ, ಮೋಡಗಳು ಮಳೆಯಿಂದ ಭೂಮಿಯನ್ನು ಆವರಿಸುವಂತೆ; ಆಮೇಲೆ ನೀವು ಸಾಗರದಲ್ಲಿ ಅಡಗಿದ್ದ ಸೂರ್ಯನನ್ನು ಹೊರತಂದಿರಿ.

೮. ಅದಿತಿಯ ಹೊಟ್ಟೆಯಿಂದ ಅಷ್ಟಪುತ್ರರು ಉದಿಸಿದರು; ಮಾರ್ತಾಂಡನನ್ನು ಅಂತರಿಕ್ಷಕ್ಕೆ ಕಳುಹಿಸಿ, ಉಳಿದ ಏಳು ಜನ ಪುತ್ರರೊಂದಿಗೆ ದೇವತೆಗಳ ಬಳಿ ಹೋದಳು.

೯. ತನ್ನ ಏಳು ಜನ ಪುತ್ರರೊಂದಿಗೆ ಮುನ್ನಿನ ತಲೆಮಾರಿಗೆ ಸೇರಿದಳು, ಆದರೆ ಮಾನವರ ಹುಟ್ಟು ಸಾವಿಗಾಗಿ ಮಾರ್ತಾಂಡನನ್ನು ಅಂತರಿಕ್ಷದಲ್ಲಿ ಸ್ಥಾಪಿಸಿದಳು.

---

೧. Wilson's *Rigveda,* Vol. VI, p. 129

ವಿವರ ಮತ್ತು ತತ್ವದಲ್ಲಿ ಈ ಎರಡು ಸೃಷ್ಟಿಶಾಸ್ತ್ರಗಳು ಮೂಲಭೂತವಾಗಿ ಭಿನ್ನವಾಗಿವೆ. ಮೊದಲನೆಯದು ಶೂನ್ಯದಿಂದ ಸೃಷ್ಟಿಯಾಯಿತೆಂದು ಹೇಳುತ್ತದೆ. ಒಂದೇ ಗ್ರಂಥದಲ್ಲಿ ಏಕೆ ಅಂಥ ಎರಡು ವಿರೋಧವಾದ ಸೃಷ್ಟಿಶಾಸ್ತ್ರಗಳನ್ನು ಪ್ರತಿಪಾದನೆ ಮಾಡಲಾಗಿದೆ? 'ಪುರುಷಸೂಕ್ತ'ದ ಕವಿ ಪುರುಷನನ್ನು ಏಕೆ ಅನಿವಾರ್ಯವಾಗಿಸಿ ಅವನಿಂದಲೇ ಎಲ್ಲಾ ಸೃಷ್ಟಿಯಾಯಿತೆಂದು ಮಾಡಿದ್ದಾನೆ?

'ಪುರುಷಸೂಕ್ತ'ವನ್ನು ಓದುವ ಯಾರಿಗೇ ಆದರೂ ಅದು ಕತ್ತೆಗಳು, ಕುದುರೆಗಳು ಮತ್ತು ಮೇಕೆಗಳ ಸೃಷ್ಟಿಯಿಂದ ಪ್ರಾರಂಭವಾಗುತ್ತದೆಂದೂ, ಆದರೆ ಮಾನವಸೃಷ್ಟಿಯ ಬಗ್ಗೆ ಏನನ್ನೂ ಹೇಳುವುದಿಲ್ಲವೆಂದೂ ಗೊತ್ತಾಗುತ್ತದೆ. ಮಾನವ ಸೃಷ್ಟಿಯ ಬಗ್ಗೆ ಮಾತಾಡುವುದು ಸ್ವಾಭಾವಿಕವಾಗಿದ್ದ ಸಂದರ್ಭದಲ್ಲಿ ಅದು ತನ್ನ ವಿಚಾರಸರಣಿಯಲ್ಲಿ ತುಂಡಾಗಿ ಆರ್ಯ ಸಮಾಜದ ವರ್ಣಗಳ ಉಗಮದ ಬಗ್ಗೆ ವಿವರಿಸಲು ಹೊರಡುತ್ತದೆ. ಸತ್ಯವಾಗಿ 'ಪುರುಷಸೂಕ್ತ' ಆರ್ಯ ಸಮಾಜದ ನಾಲ್ಕು ವರ್ಣಗಳನ್ನು ವಿವರಿಸುವುದನ್ನೇ ತನ್ನ ಪ್ರಧಾನ ಆಸಕ್ತಿಯನ್ನಾಗಿ ಮಾಡಿಕೊಂಡಿದೆ. ಹೀಗೆ ಮಾಡುತ್ತಾ 'ಪುರುಷಸೂಕ್ತ' ಇನ್ನಿತರ ದೈವಶಾಸ್ತ್ರಗಳ ವಿರುದ್ಧವಾಗಷ್ಟೇ ಅಲ್ಲದೆ ಋಗ್ವೇದದ ಉಳಿದ ಭಾಗಗಳ ಜೊತೆ ಕೂಡ ಸಂಪೂರ್ಣವಾಗಿ ಭಿನ್ನವಾಗಿದೆ.

ಸಮಾಜದಲ್ಲಿ ವರ್ಣಗಳ ಉತ್ಪತ್ತಿಯನ್ನು ವಿವರಿಸುವುದನ್ನೇ ತನ್ನ ಉದ್ದೇಶವನ್ನಾಗಿ ಯಾವ ದೈವಶಾಸ್ತ್ರವೂ ಮಾಡಿಕೊಂಡಿಲ್ಲ. 'ಪುರುಷಸೂಕ್ತ'ದ ಇಂಗಿತ ಮತ್ತು ಉದ್ದೇಶಕ್ಕೆ ಅನುರೂಪವಾಗಿರುವ ಹಳೆ ಒಡಂಬಡಿಕೆಯ ವಿಶ್ವಸೃಷ್ಟಿಯ ಪ್ರಥಮ ಅಧ್ಯಾಯದಲ್ಲಿ ಮನುಷ್ಯ ಸೃಷ್ಟಿಯ ಬಗ್ಗೆ ಮಾತ್ರ ಹೇಳಲಾಗಿದೆ. ಪ್ರಾಚೀನ ಯಹೂದಿ ಸಮಾಜದಲ್ಲಿ ಸಾಮಾಜಿಕ ವರ್ಗಗಳು ಇರಲಿಲ್ಲವೆಂದಲ್ಲ. ಎಲ್ಲ ಸಮಾಜಗಳಲ್ಲೂ ಸಾಮಾಜಿಕ ವರ್ಗಗಳು ಅಸ್ತಿತ್ವದಲ್ಲಿದ್ದವು. ಹಿಂದೂ ಆರ್ಯರು ಇದಕ್ಕೆ ಅಪವಾದವಾಗಿರಲಿಲ್ಲ. ಆದಾಗ್ಯೂ ವರ್ಗಗಳು ಹೇಗೆ ಉದ್ಭವಿಸಿದವು ಎಂಬುದನ್ನು ವಿವರಿಸುವ ಅಗತ್ಯ ಯಾವ ದೈವಶಾಸ್ತ್ರಕ್ಕೂ ಎಂದೂ ಕಾಣಲಿಲ್ಲ. ಹಾಗಿದ್ದ ಮೇಲೆ 'ಪುರುಷಸೂಕ್ತ' ಏಕೆ ಸಾಮಾಜಿಕ ವರ್ಣಗಳ ಉಗಮವನ್ನು ವರ್ಣಿಸುವುದನ್ನೇ ತನ್ನ ಪ್ರಧಾನ ಆಸಕ್ತಿಯನ್ನಾಗಿ ಮಾಡಿಕೊಂಡಿದೆ?

ಋಗ್ವೇದದಲ್ಲಿ 'ಪುರುಷಸೂಕ್ತ'ವೊಂದರಲ್ಲಿ ಅಷ್ಟೇ ಸೃಷ್ಟಿಯ ಮೂಲದ ಬಗ್ಗೆ ಚರ್ಚೆಯಾಗಿರುವುದಲ್ಲ. ಋಗ್ವೇದದ ಇತರ ಭಾಗಗಳಲ್ಲಿಯೂ ಈ ವಿಷಯದ ಬಗ್ಗೆ ಉಲ್ಲೇಖವಿದೆ. ಈ ಸಂಬಂಧ ಋಗ್ವೇದದ ಈ ಮುಂದಿನ ಉಲ್ಲೇಖವನ್ನು ಕೊಡಬಹುದು:[೧]

ಋಗ್ವೇದ, ೧.೯೬.೨ "ಪ್ರಥಮ ನಿವಿದದಿಂದ, ಆಯುವಿನ ಜ್ಞಾನದಿಂದ, ಅಗ್ನಿಯು ಈ ಮಾನವ ಮಕ್ಕಳನ್ನು ಸೃಷ್ಟಿಸಿದನು. ತನ್ನ ಜ್ವಾಲೆಯಿಂದ ಅವನು ಭೂಮಿಯನ್ನು ನದಿಗಳನ್ನೂ ಸೃಷ್ಟಿಸಿದನು, ದೇವತೆಗಳು ಸಂಪತ್ತನ್ನು ನೀಡುವ ಅಗ್ನಿಯನ್ನು ಪೋಷಿಸಿದರು."

ಋಗ್ವೇದದ ಕಾಲದಲ್ಲಿ ಹಿಂದೂ– ಆರ್ಯ ಸಮಾಜ – ವರ್ಣಗಳಾಗಿ ವಿಭಜಿತವಾಗಿತ್ತು ಎಂಬುದರ ಬಗ್ಗೆ ಅನುಮಾನವಿಲ್ಲದ್ದರೂ ಸಹ ವರ್ಣಗಳ ಪ್ರತ್ಯೇಕ ಸೃಷ್ಟಿಯ ಬಗ್ಗೆ ಯಾವುದೇ ಉಲ್ಲೇಖ ಇಲ್ಲಿ ಕಂಡುಬರುವುದಿಲ್ಲ; ಆದಾಗ್ಯೂ ಋಗ್ವೇದದ ಈ ಭಾಗವು ವರ್ಣಗಳ ಬಗ್ಗೆ ಗಮನವೀಯದೆ ಮಾನವ ಸೃಷ್ಟಿಯ ಬಗ್ಗೆ ಮಾತ್ರ ಹೇಳುತ್ತದೆ. 'ಪುರುಷಸೂಕ್ತ' ಮುಂದೆ ಹೋಗಿ ವರ್ಣಗಳ ಉಗಮದ ಬಗ್ಗೆ ಮಾತನಾಡುವ ಅಗತ್ಯವನ್ನು ಏಕೆ ಕಂಡುಕೊಂಡಿತು?

---

೧. Muir, Vol. I, p.180

ಇನ್ನೂ ಒಂದು ಅರ್ಥದಲ್ಲಿಯೂ 'ಪುರುಷಸೂಕ್ತ'ವು ಋಗ್ವೇದವನ್ನು ವಿರೋಧಿಸುತ್ತದೆ. ಹಿಂದೂ–ಆರ್ಯರ ಉಗಮದ ಬಗ್ಗೆ ಒಂದು ಜಾತ್ಯತೀತ ಸಿದ್ಧಾಂತವನ್ನು ಋಗ್ವೇದ ಪ್ರತಿಪಾದಿಸುತ್ತದೆ. ಆ ಭಾಗಗಳು ಈ ರೀತಿ ಇವೆ :

೧. ಋಗ್ವೇದ ೧.೮೦.೧೬ : "ಸ್ತೋತ್ರಗಳು ಮತ್ತು ಸೂಕ್ತಿಗಳು ಮೊದಲು ಇಂದ್ರನಲ್ಲಿಯೂ, ಅಥರ್ವನ್, ಪಿತೃ ಮನು ಮತ್ತು ದಧ್ಯಂಚ ನೆರವೇರಿಸಿದ ವ್ರತಾಚರಣೆಯಲ್ಲಿಯೂ ಸೇರಿದ್ದವು."[೧]

೨. ಋಗ್ವೇದ ೧.೧೧೪.೨ : "ಓ ರುದ್ರ, ಯಜ್ಞದಿಂದ ಪ್ರಜಾಪತಿ ಮನುವು ಏನೆಲ್ಲ ಸಂಪತ್ತು ಅಥವಾ ಸಂರಕ್ಷಣೆ ಗಳಿಸಿದನೋ ಅದನ್ನೆಲ್ಲ ನಿನ್ನ ನಿರ್ದೇಶನದಲ್ಲಿ ನಾವು ಪಡೆಯುವಂತಾಗಲಿ."[೨]

೩. ಋಗ್ವೇದ ೨.೩೩.೧೩ : "ಓ ಮರುತರೇ, ನಿಮ್ಮ ಆ ಪರಿಶುದ್ಧ ರೋಗಹಾರಕಗಳನ್ನೆಲ್ಲ; ಬಲಿಷ್ಠ ದೇವತೆಗಳೇ, ಆ ಅತ್ಯಂತ ಶುಭಕಾರಕ ಮತ್ತು ಲಾಭದಾಯಕವಾದವುಗಳನ್ನೆಲ್ಲ; ನಮ್ಮ ಪ್ರಜಾಪತಿ ಮನುವು ಆರಿಸಿದವುಗಳನ್ನೆಲ್ಲ; ರುದ್ರನ ಆ ಆಶೀರ್ವಾದ ಮತ್ತು ರಕ್ಷಣೆಗಳನ್ನೆಲ್ಲ ನಾನು ಬಯಸುತ್ತೇನೆ."[೩]

೪. ಋಗ್ವೇದ ೮.೫೨.೧ : "ಪ್ರಬಲ ದೇವತೆಗಳ ಶಕ್ತಿಯಿಂದ ಪ್ರಾಚೀನ ಸ್ನೇಹಿತನು (ಆದಿತ್ಯ?) ಸಜ್ಜಿತನಾಗಿದ್ದಾನೆ. ದೇವತೆಗಳಿಗೆ ಸೋಪನಗಳಾಗುವಂತೆ ಪ್ರಜಾಪತಿ ಮನುವು ಅವನಿಗೋಸ್ಕರ ಸೂಕ್ತಿಗಳನ್ನು ರಚಿಸಿದ್ದಾನೆ."[೪]

೫. ಋಗ್ವೇದ ೩.೩.೬ : "ಅಗ್ನಿಯು ದೇವತೆಗಳು ಮತ್ತು ಮಾನವರ ಜೊತೆಗೂಡಿ ಸೂಕ್ತಗಳನ್ನು ಪಠಿಸುತ್ತಾ ಶತರೂಪಯಜ್ಞವನ್ನು ಆಚರಿಸಿದನು." [೫]

೬. ಋಗ್ವೇದ ೪.೩೭.೧ : "ಎಲೈ ದೇವತೆಗಳೇ, ವಾಜಸ್ ಮತ್ತು ರಿಭುಕ್ಷಣರೇ, ದೇವಯಾನದಿಂದ ಬಂದು ನಮ್ಮ ಯಜ್ಞದಲ್ಲಿ ಪಾಲ್ಗೊಳ್ಳಿ; ಎಲೈ ಮಂಗಳಕರ ದೇವತೆಗಳೇ, ಶುಭದಿನಗಳಲ್ಲಿ ಮನುಷ್ಯರಿಗಾಗಿ ಒಂದು ಯಜ್ಞವನ್ನು ರೂಪಿಸಿ."[೬]

೭. ಋಗ್ವೇದ ೬.೧೪.೨ : "ಹೋತೃವಾದ ಅಗ್ನಿಯನ್ನು ಯಜ್ಞದಲ್ಲಿ ಮನುಷ್ಯರು ಸ್ತುತಿಸುತ್ತಾರೆ."[೭]

ಋಗ್ವೇದದ ಸೂಕ್ತಗಳ ಕರ್ತೃಗಳಾದ ಋಷಿಗಳು ಮನುವನ್ನು ಹಿಂದೂ ಆರ್ಯರ ಮೂಲ ಪುರುಷನೆಂದು ಪರಿಗಣಿಸಿರುವುದು ಈ ಉದ್ಧರಣೆಗಳಿಂದ ಅನುಮಾನಕ್ಕೆ ಆಸ್ಪದವಿಲ್ಲದಂತೆ ಸ್ಪಷ್ಟವಾಗುತ್ತದೆ. ಹಿಂದೂ–ಆರ್ಯರ ಮೂಲಪುರುಷ ಮನು ಎಂಬ ಈ ತತ್ವ ಎಷ್ಟು ಆಳವಾಗಿ ಬೇರೂರಿದೆಯೆಂದರೆ ಅದು 'ಬ್ರಾಹ್ಮಣ'ಗಳಲ್ಲಿಯೂ, 'ಪುರಾಣ'ಗಳಲ್ಲಿಯೂ ಮುಂದುವರಿದಿದೆ. ಅದನ್ನು 'ಐತರೇಯ ಬ್ರಾಹ್ಮಣ'[೮] 'ವಿಷ್ಣುಪುರಾಣ'[೯] ಮತ್ತು ಮತ್ಸ್ಯ ಪುರಾಣ[೧೦]ಗಳಲ್ಲಿ ಪ್ರತಿಪಾದಿಸಲಾಗಿದೆ. ಅವು ಬ್ರಹ್ಮನನ್ನು 'ಮನು'ವಿನ ಮೂಲಪುರುಷನನ್ನಾಗಿ ಮಾಡಿರುವುದು ನಿಜ; ಆದರೆ 'ಮನು'ವೇ ಮೂಲಪುರುಷ ಎಂಬ

---

೧. Muir, ಅದೇ, Vol. I, p.162
೨. ಅದೇ, ಪು. 163
೩. Muir, Vol. I, p.163
೪. ಅದೇ, ಪು. 163
೫. ಅದೇ, ಪು. 165
೬. ಅದೇ, ಪು. 165
೭. ಅದೇ, ಪು. 165
೮. Quoted by Muir, Vol. I, p..1008
೯. Quoted by Muir, Vol. I, p..105-107
೧೦. Quoted by Muir, Vol. I, p..110-112

'ಋಗ್ವೇದದ'ವಾದವನ್ನು ಅವು ಒಪ್ಪಿಕೊಂಡು ಮುಂದುವರಿಸಿವೆ.[೧] 'ಪುರುಷಸೂಕ್ತ' ಏಕೆ ಮನುವಿನ ಹೆಸರನ್ನೇ ಹೇಳುವುದಿಲ್ಲ. ಇದು ಆಶ್ಚರ್ಯಕರವಾಗಿದೆ, ಏಕೆಂದರೆ 'ಪುರುಷಸೂಕ್ತ'ದ ಋಷಿಗೆ ಮನು ಸ್ವಯಂಭುವನ್ನು 'ವಿರಾಜ'ನೆಂದು ಕರೆಯುವ ವಿಚಾರ ಗೊತ್ತಿರುವಂತಿದೆ, ಈ 'ವಿರಾಜ'ನನ್ನೇ 'ಆದಿ ಪುರುಷ'[೨] ಎಂದು ಕರೆಯಲಾಗಿದೆ; ಏಕೆಂದರೆ 'ಪುರುಷಸೂಕ್ತ'ದ ಐದನೆಯ ಋಕ್ಕಿನಲ್ಲಿ 'ವಿರಾಜೋ ಅಧಿ ಪುರುಷಃ' ಎಂದು ಕೂಡ ಅವನು ಹೇಳುತ್ತಾನೆ.

ಋಗ್ವೇದದ ಆಚೆಗೂ 'ಪುರುಷಸೂಕ್ತ' ಬೆಳೆದಿದೆ ಎಂಬ ಮೂರನೆಯ ಅಂಶವಿದೆ. ಶ್ರಮ ವಿಭಜನೆ ಮಾಡುವಷ್ಟರ ಮಟ್ಟಿಗೆ ವೇದಕಾಲೀನ ಆರ್ಯರ ನಾಗರಿಕತೆ ಸಾಕಷ್ಟು ಬೆಳೆದಿತ್ತು. ವೇದಕಾಲೀನ ಆರ್ಯರಲ್ಲಿಯೇ ಭಿನ್ನ ವ್ಯಕ್ತಿಗಳು ಭಿನ್ನ ಕಸುಬುಗಳನ್ನು ಮಾಡುತ್ತಿದ್ದರು. ಈ ಮುಂದಿನ ಋಕ್ಕಿನಿಂದ ಅವರಿಗೆ ಅದು ಗೊತ್ತಿತ್ತೆಂದು ತಿಳಿಯುತ್ತದೆ:

ಋಗ್ವೇದ, ೧.೧೧೩.೬ : "ಕೆಲವರು ಅಧಿಕಾರಕ್ಕಾಗಿ, ಕೆಲವರು ಕೀರ್ತಿಗಾಗಿ, ಕೆಲವರು ಸಂಪತ್ತಿಗಾಗಿ, ಕೆಲವರು ಕೆಲಸಕ್ಕಾಗಿ ಪ್ರಯತ್ನಿಸಬಹುದು; ಉಷೆ ಜನರನ್ನು ಎಚ್ಚರಿಸಿರುವದರಿಂದ ಪ್ರತಿಯೊಬ್ಬನೂ ತನಗಿಷ್ಟವಾದ ರೀತಿಯಲ್ಲಿ ಜೀವನೋಪಾಯ ಮಾಡಬಹುದು."

ಇದು 'ಋಗ್ವೇದ' ಕಂಡುಕೊಂಡ ರೀತಿ. 'ಪುರುಷಸೂಕ್ತ' ಇದರಾಚೆಗೆ ಹೋಗುತ್ತದೆ. ಅದು ಶ್ರಮ ವಿಭಜನೆಯ ವಿಚಾರವನ್ನು ಅನುಸರಿಸಿ ಕಸುಬಿನ ವಿಭಜನೆಯ ವಿಧಾನವನ್ನು ಕಸುಬುದಾರರ ವಿಭಜನೆಯ ವಿಧಾನವನ್ನಾಗಿ ಪರಿವರ್ತಿಸುತ್ತದೆ; ಇದು ನಿರ್ದಿಷ್ಟ ಹಾಗೂ ಶಾಶ್ವತವಾದ ಕಸುಬುಗಳಾಗಿವೆ. ಇಂಥ ಹುಚ್ಚಾಟಕ್ಕೆ 'ಪುರುಷಸೂಕ್ತ' ಏಕೆ ಕೈಯಿಟ್ಟಿತು?

'ಋಗ್ವೇದ'ದಿಂದ 'ಪುರುಷಸೂಕ್ತ' ಇನ್ನೂ ಒಂದು ಅಂಶದಲ್ಲಿ ದೂರವಾಗುತ್ತದೆ. 'ಋಗ್ವೇದ' ಕೇವಲ ಮನುಷ್ಯನ ಬಗ್ಗೆ ಮಾತನಾಡುವುದಿಲ್ಲ. ಅದು ಹಿಂದೂ–ಆರ್ಯ ಜನಾಂಗದ ಬಗ್ಗೆ ಕೂಡ ಹೇಳುತ್ತದೆ. ಈ ಜನಾಂಗ ಐದು ಬುಡಕಟ್ಟುಗಳಿಂದ ರಚಿತವಾಗಿತ್ತು. ಅದು ಹಿಂದೂ–ಆರ್ಯ ಜನರೆಂಬ ಸಮಾನ ಸಮುದಾಯದಲ್ಲಿ ಬೆರೆತುಹೋಗಿತ್ತು. ಈ ಐದು ಬುಡಕಟ್ಟುಗಳು ಸೇರಿ ಒಂದು ಜನಾಂಗವಾದುದರ ಬಗ್ಗೆ ಮುಂದಿನ ಸೂಕ್ತಗಳು ಹೇಳುತ್ತವೆ:

೧. ಋಗ್ವೇದ ೬, ೧೧.೪ : "ಅಗ್ನಿದೇವನು ಮನುಷ್ಯನೋ ಎಂಬಂತೆ ಐದು ಬುಡಕಟ್ಟುಗಳು ಅವನಿಗೆ ಹವಿಸ್ಸು ಅರ್ಪಿಸಿ ಸಾಷ್ಟಾಂಗ ಪ್ರಣಾಮ ಮಾಡುತ್ತವೆ."[೩]

---

೧. ಆದಾಗ್ಯೂ ವಿವರಗಳನ್ನು ನೋಡಿದಾಗ ಭಾರಿ ಗೊಂದಲವುಂಟಾಗುತ್ತದೆ. ಬ್ರಹ್ಮ ತನ್ನನ್ನು ಎರಡು ಭಾಗ ಮಾಡಿಕೊಂಡನು, ಒಂದು ಭಾಗ ಗಂಡಾಯಿತು, ಇನ್ನೊಂದು ಭಾಗ ಹೆಣ್ಣಾಯಿತು. ಹೆಣ್ಣಿಗೆ 'ಶತರೂಪ' ಎಂದು ಹೆಸರಾಯಿತು. ಅವಳು ತನ್ನ ಕಠಿಣ ವ್ರತಗಳಿಂದಲೂ, ತಪಸ್ಸಿನಿಂದಲೂ 'ಮನು ಸ್ವಯಂಭುವ' ಎಂಬ ಗಂಡನನ್ನು ಪಡೆದಳು ಎಂದು ವಿಷ್ಣುಪುರಾಣ ಹೇಳುತ್ತದೆ. ವಿಷ್ಣುಪುರಾಣದಲ್ಲಿ ಬ್ರಹ್ಮನು ತನ್ನ ಮಗಳ ಜೊತೆ ನಡೆಸಿದ ನಿಷಿದ್ಧ ಲೈಂಗಿಕ ಸಂಬಂಧದ ಸೂಚನೆಯಿಲ್ಲ. ಆದರೆ ಬ್ರಹ್ಮ ತನ್ನ ಪುತ್ರಿಯಾದ ಶತರೂಪೆಯ ಜೊತೆ ಲೈಂಗಿಕ ಸಂಬಂಧ ನಡೆಸಿ ಮನುವನ್ನು ಪಡೆದನೆಂದು ಐತರೇಯ ಬ್ರಾಹ್ಮಣ ಮತ್ತು ಮತ್ಸ್ಯ ಪುರಾಣ ಹೇಳುತ್ತವೆ. ಮನು ತನ್ನ ಕಠಿಣ ತಪಸ್ಸಿನಿಂದ ಪರಮ ಸುಂದರಿಯಾದ 'ಅನಂತ' ಎಂಬುವವಳನ್ನು ಹೆಂಡತಿಯಾಗಿ ಪಡೆದನೆಂದು ಮತ್ಸ್ಯ ಪುರಾಣ ಹೆಚ್ಚಿನ ವಿವರಣೆ ಕೊಡುತ್ತದೆ. ರಾಮಾಯಣದ ಪ್ರಕಾರ (ನೋಡಿ, ಮ್ಯೂರ್. I, ಪು.೧೧೭), 'ಮನು' ಗಂಡಲ್ಲ, ಹೆಣ್ಣು ಹಾಗೂ ದಕ್ಷ ಪ್ರಜಾಪತಿಯ ಮಗಳು ಮತ್ತು ಕಶ್ಯಪನ ಹೆಂಡತಿ.

೨. 'ಮತ್ಸ್ಯ ಪುರಾಣ' – ಮ್ಯೂರ್, Vol. I, P.III f.m.

೩. ಮ್ಯೂರ್, Vol. I, ಪು. 178

೨. ಋಗ್ವೇದ, ೭. ೧೫.೨ : "ಜ್ಞಾನಿಯೂ ಯೌವನಸ್ಥನೂ ಆಗಿರುವ ಗೃಹಪತಿಯಾದ ಅಗ್ನಿಯು ಐದು ಬುಡಕಟ್ಟುಗಳ ಪ್ರತಿಯೊಂದು ಮನೆಯಲ್ಲಿಯೂ ನೆಲೆಸಿದ್ದಾನೆ."[೧]

ಈ ಐದು ಬುಡಕಟ್ಟುಗಳು ಯಾವುವು ಎಂಬುದರ ಬಗ್ಗೆ ಸ್ವಲ್ಪ ಭಿನ್ನಾಭಿಪ್ರಾಯವಿದೆ. ಯಾಸ್ಕ ತನ್ನ 'ನಿರುಕ್ತ'ದಲ್ಲಿ ಅದಕ್ಕೆ ಗಂಧರ್ವರು, ಪಿತೃಗಳು, ದೇವತೆಗಳು, ಅಸುರರು ಮತ್ತು ರಾಕ್ಷಸರು ಎಂದು ಅರ್ಥಮಾಡುತ್ತಾನೆ. ಅದು ನಾಲ್ಕು ವರ್ಣಗಳನ್ನೂ ನಿಷಾದರನ್ನೂ ಸೂಚಿಸುತ್ತದೆಂದು ಔಪಮಾನ್ಯವ ಹೇಳುತ್ತದೆ. ಇವೆರಡು ವಿವರಣೆಗಳೂ ಅರ್ಥಹೀನವಾಗಿರುವಂತೆ ಕಾಣುತ್ತವೆ. ಏನೆಂದರೆ ಮೊದಲನೆಯದಾಗಿ ಈ ಮುಂದಿನ ಸೂಕ್ತಗಳಲ್ಲಿ ಈ ಐದು ಬುಡಕಟ್ಟುಗಳನ್ನು ಒಟ್ಟಾಗಿ ಸ್ತುತಿಸಿದೆ:

೧. ಋಗ್ವೇದ, ೨.೨.೧೦: "ಈ ಐದು ಬುಡಕಟ್ಟುಗಳ ಮೇಲೆ ನನ್ನ ಕೀರ್ತಿ ಪ್ರಕಾಶಿಸಲಿ, ಅಸದೃಶ ಸೂರ್ಯನಂತೆ."[೨]

೨. ಋಗ್ವೇದ, ೪.೪೬.೭ : "ಎಲೈ ಇಂದ್ರನೆ, ನಹುಷ ಬುಡಕಟ್ಟಿನಲ್ಲಿ ಏನು ವೀರ್ಯವಂತಿಕೆ ಇದೆಯೋ ಅಥವಾ ಆ ಐದು ಬುಡಕಟ್ಟುಗಳಿಗೆ ಏನು ಕೀರ್ತಿ ಸಂದಿದೆಯೋ ಅದನ್ನು ನಮಗೆ ದಯಪಾಲಿಸು."[೩]

ಆ ಐದು ಬುಡಕಟ್ಟುಗಳಲ್ಲಿ ಶೂದ್ರರು ಸೇರಿದ್ದರೆ ಅಂಥ ಸ್ತೋತ್ರರೂಪವಾದ ಮಾತುಗಳನ್ನು ಆಡುತ್ತಿರಲಿಲ್ಲ; ಜೊತೆಗೆ ಅಲ್ಲಿ ವರ್ಣಗಳು ಎಂಬ ಮಾತನ್ನು ಬಳಸಿಲ್ಲ. ಅಲ್ಲಿ ಬಳಸಿರುವ ಮಾತು 'ಜನಾಃ' – ಜನರು. ಅದು ಐದು ಬುಡಕಟ್ಟುಗಳನ್ನು ಸೂಚಿಸುತ್ತದೆಯೇ ಹೊರತು ನಾಲ್ಕು ವರ್ಣಗಳನ್ನು ನಿಷಾದರನ್ನೂ ಅಲ್ಲ ಎಂಬುದು 'ಋಗ್ವೇದ'ದ ಮುಂದಿನ ಸೂಕ್ತದಿಂದ ಸಂಪೂರ್ಣವಾಗಿ ಸ್ಪಷ್ಟವಾಗುತ್ತದೆ:

ಋಗ್ವೇದ, ೧.೧೦೮.೮ : "ಎಲೈ ಇಂದ್ರಾಗ್ನಿಗಳೇ, ನೀವು ಯದುಗಳು, ತುರ್ವಸರು, ದ್ರುಹ್ಯುಗಳು, ಅನುಗಳು, ಪುರುಗಳಲ್ಲಿ ನೆಲೆಸಿದ್ದರೆ, ಇಲ್ಲಿಗೆ ಬನ್ನಿ, ದಶದಿಕ್ಕುಗಳಲ್ಲಿಯೂ ಬಲಶಾಲಿಗಳಾದ ವೀರರೇ, ನಿಮಗೆ ಅರ್ಪಿಸಿರುವ ಈ ಸೋಮವನ್ನು ಸ್ವೀಕರಿಸಿ."[೪]

ಈ ಐದು ಬುಡಕಟ್ಟುಗಳು ಸೇರಿ ಒಂದು ಆರ್ಯ ಜನಾಂಗವಾಗಿತ್ತೆಂಬುದನ್ನು ಅಥರ್ವವೇದ (೩.೨೪.೨)ದಿಂದ ತಿಳಿಯಬಹುದು. ಅದು ಹೀಗಿದೆ:

"ಈ ಐದು ಪ್ರಾಂತ್ಯಗಳು, ಈ ಐದು ಬುಡಕಟ್ಟುಗಳು ಮನುವಿನಿಂದ ಉದ್ಭವಿಸಿವೆ."

ಸಮಗ್ರ ದೃಷ್ಟಿಯಿಂದ ನೋಡಿದಾಗ ಮಾತ್ರ ಋಗ್ವೇದದ ಸೂಕ್ತಗಳ ಋಷಿಗಳು ಈ ಐದು ಬುಡಕಟ್ಟುಗಳ ಬಗ್ಗೆ ಈ ರೀತಿಯಾಗಿ ಹೇಳಲು ಕಾರಣವೇನೆಂಬುದಕ್ಕೆ ವಿವರಣೆ ದೊರಕುತ್ತದೆ. ಈ ಐದು ಬುಡಕಟ್ಟುಗಳ ಏಕತೆಯನ್ನು 'ಪುರಷಸೂಕ್ತ' ಮಾನ್ಯಮಾಡದೆ ಅವರ ಉಗಮಕ್ಕೆ ಏಕೆ ಕಾಲ್ಪನಿಕ ವಿವರಣೆಯನ್ನು ಕೊಟ್ಟಿತು? ಇದನ್ನು ಬಿಟ್ಟು ಅದು ಏಕೆ ಬುಡಕಟ್ಟುಗಳ ಒಳಗೇನೇ ವರ್ಣ ವಿಂಗಡಣೆಗಳನ್ನು ಮಾನ್ಯಮಾಡಿತು? 'ಪುರುಷಸೂಕ್ತ' ರಾಷ್ಟ್ರೀಯತೆಗಿಂತ ಮುಖ್ಯವಾಗಿ ಜಾತೀಯತೆಯನ್ನೇ ಏಕೆ ಪರಿಗಣಿಸಿತು? ಇವು ಮುಖ್ಯವಾದ ಪ್ರಶ್ನೆಗಳು.

---

೧. ಅದೇ, Vol. I, ಪು. 178

೨. Muir, Vol. I, p. 178

೩. ಅದೇ, Vol. I, P. 180

೪. Muir, I, p. 179

'ಋಗ್ವೇದ'ದ ಜೊತೆ 'ಪುರುಷಸೂಕ್ತ'ವನ್ನು ಹೋಲಿಸಿದಾಗ ಬೆಳಕಿಗೆ ಬರುವ ಕೆಲವು ಒಗಟುಗಳು ಇವು. 'ಪುರುಷಸೂಕ್ತ'ವನ್ನು ಸಮಾಜಶಾಸ್ತ್ರೀಯ ದೃಷ್ಟಿಯಿಂದ ಪರಿಶೀಲಿಸಿದಾಗ ಇನ್ನೂ ಕೆಲವು ಒಗಟುಗಳು ಬಯಲಾಗುತ್ತವೆ.

ಆದರ್ಶಗಳು ಮಾನದಂಡವಾಗಿ ಉತ್ತಮವೂ ಅಗತ್ಯವೂ ಆಗಿವೆ. ಯಾವುದೇ ಮಾನದಂಡವಿಲ್ಲದೇ ಒಂದು ಸಮಾಜವಾಗಲೀ ಒಬ್ಬ ವ್ಯಕ್ತಿಯಾಗಲೀ ಬದುಕಲು ಸಾಧ್ಯವಿಲ್ಲ. ಆದರೆ ಕಾಲದೇಶಗಳಿಗೆ ಅನುಗುಣವಾಗಿ ಆದರ್ಶ ಬದಲಾಗಬೇಕು. ಯಾವುದೇ ಆದರ್ಶ ಶಾಶ್ವತವಾಗಿ ಇರಲು ಸಾಧ್ಯವಿಲ್ಲ. ನಮ್ಮ ಆದರ್ಶದ ಮೌಲ್ಯಗಳ ಪುನರ್‌ಮೌಲ್ಯೀಕರಣಕ್ಕೆ ಅವಕಾಶ ಯಾವತ್ತೂ ಇರಬೇಕು. ಒಂದು ಸಂಸ್ಥೆಗೆ ಪರಮಪಾವಿತ್ರ್ಯವನ್ನು ಕೊಡದಿದ್ದಾಗ ಮಾತ್ರ ಮೌಲ್ಯಗಳ ಪುನರ್ ಮೌಲ್ಯೀಕರಣದ ಸಾಧ್ಯತೆಗೆ ಮುಕ್ತ ಅವಕಾಶವಿರುತ್ತದೆ. ಪರಮಪಾವಿತ್ರ್ಯ ಮೌಲ್ಯಗಳ ಪುನರ್ ಮೌಲ್ಯೀಕರಣವನ್ನು ತಡೆಗಟ್ಟುತ್ತದೆ. ಒಮ್ಮೆ ಪರಮ ಪವಿತ್ರವೆಂದು ಒಪ್ಪಿಕೊಂಡರೆ ಸದಾ ಪರಮ ಪವಿತ್ರವಾಗಿ ಉಳಿಯುತ್ತದೆ. 'ಪುರುಷಸೂಕ್ತ' ಚಾತುರ್ವರ್ಣ್ಯವನ್ನು ಪರಮ ಪವಿತ್ರ ಸಂಸ್ಥೆಯಾಗಿ ದೈವಾಜ್ಞೆಯೆಂದು ಮಾಡಿಬಿಟ್ಟಿದೆ. ಪುರುಷಸೂಕ್ತ ಒಂದು ನಿರ್ದಿಷ್ಟ ಸಾಮಾಜಿಕ ವ್ಯವಸ್ಥೆಯನ್ನು ಅಷ್ಟೊಂದು ಪವಿತ್ರವೆಂದೂ ಪ್ರಶ್ನಾತೀತವೆಂದೂ ಪರಿವರ್ತನಾತೀತವೆಂದೂ ಏಕೆ ಮಾಡಿತು? ಅದು ಏಕೆ ಚಾತುರ್ವರ್ಣ್ಯವನ್ನು ಶಾಶ್ವತ ಆದರ್ಶವನ್ನಾಗಿ ಮಾಡಿ ಅದರ ಬದಲಾವಣೆ ಆಗಬಾರದೆಂದೂ ಹಾಗೂ ಅದನ್ನು ಪ್ರಶ್ನಿಸಲೂಬಾರದು ಎಂದೂ ಮಾಡಿತು? ಸಮಾಜಶಾಸ್ತ್ರಜ್ಞನನ್ನು ಕೆಣಕುವ 'ಪುರುಷಸೂಕ್ತ'ದ ಮೊದಲ ಒಗಟು ಇದು.

ಚಾತುರ್ವರ್ಣ್ಯ ತತ್ವವನ್ನು ಪ್ರತಿಪಾದಿಸಿರುವುದರಲ್ಲಿ ಪುರುಷ 'ಸೂಕ್ತ' ಇಬ್ಬಂದಿತನ ತೋರಿಸುತ್ತದೆ. ಮೊದಲನೆಯದಾಗಿ, ಅದು ವಾಸ್ತವವನ್ನು ಅಂದರೆ ಹಿಂದೂ ಆರ್ಯ ಸಮಾಜದ ಎಲ್ಲಾ ನಾಲ್ಕು ವರ್ಣಗಳ ಅಸ್ತಿತ್ವವನ್ನು ಆದರ್ಶ ಸ್ಥಾನಕ್ಕೆ ಏರಿಸಲು ಹೊರಡುತ್ತದೆ, ಇದೊಂದು ಮೋಸ. ಏಕೆಂದರೆ ಈ ಆದರ್ಶ ವಸ್ತುಸ್ಥಿತಿಯ ಇರುವಿಕೆಗೆ ಯಾವ ರೀತಿಯಲ್ಲೂ ಭಿನ್ನವಾಗಿಲ್ಲ. ವಾಸ್ತವವನ್ನೇ ಆದರ್ಶದ ಮಟ್ಟಕ್ಕೆ ಏರಿಸಿದ ನಂತರ ಅದು ತಾನು ಆದರ್ಶವೆಂದು ಭಾವಿಸಿರುವುದನ್ನೇ ಆದರ್ಶವೆಂದು ಜಾರಿಗೆ ತರುವ ನಾಟಕವಾಡುತ್ತದೆ, ಇದು ಮೋಸ. ಏಕೆಂದರೆ ವಾಸ್ತವವಾಗಿ ಆದರ್ಶ ಆಗಲೇ ಅಸ್ತಿತ್ವದಲ್ಲಿದೆ. ವಾಸ್ತವವನ್ನು ಆದರ್ಶಗೊಳಿಸುವ ಹಾಗೂ ಆದರ್ಶವನ್ನು ಕೈಗೆಟುಕಿಸಿಕೊಳ್ಳುವ 'ಪುರುಷಸೂಕ್ತ'ದ ಪ್ರಯತ್ನ ಒಂದು ಬಗೆಯ ರಾಜಕೀಯ ದೊಂಬರಾಟವಾಗಿದೆ; ಇಂಥಾದ್ದು ಬೇರಾವ ಧರ್ಮಗ್ರಂಥದಲ್ಲಿಯೂ ಸಿಗಲಾರದು ಎಂದು ನನ್ನ ದೃಢ ನಂಬಿಕೆ. ಇದು ಮೋಸ, ವಂಚನೆಯಲ್ಲದೆ ಮತ್ತೇನು? ಬರೀ ಅನ್ಯಾಯಗಳಿಂದಲೇ ತುಂಬಿ ಹೋಗಿರುವ ವಾಸ್ತವವನ್ನು ಆದರ್ಶಗೊಳಿಸುವುದು ತುಂಬಾ ಸ್ವಾರ್ಥಸಾಧನೆಯ ಕೆಲಸವಾಗುತ್ತದೆ. ವಸ್ತುಸ್ಥಿತಿಯಲ್ಲಿ ವೈಯಕ್ತಿಕ ಅನುಕೂಲ ಇರುವಾಗ ಮಾತ್ರ ವ್ಯಕ್ತಿ ವಾಸ್ತವವನ್ನೇ ಆದರ್ಶಗೊಳಿಸಲು ಪ್ರಯತ್ನಿಸುತ್ತಾನೆ. ಅಂಥ ಆದರ್ಶವನ್ನೇ ವಾಸ್ತವಗೊಳಿಸುವುದು ಅಪರಾಧವಲ್ಲದೆ ಬೇರೇನೂ ಅಲ್ಲ. ಒಮ್ಮೆ ತೀರ್ಮಾನವಾದದ್ದೇ ಸರ್ವಕಾಲದ ತೀರ್ಮಾನವೂ ಹೌದು ಎಂಬ ಆಧಾರದ ಮೇಲೆ ಹೋದರೆ ಅದು ಅನ್ಯಾಯವನ್ನು ನಿರಂತರಗೊಳಿಸಿದಂತೆ. ಅಂಥ ದೃಷ್ಟಿ ಎಂಬ ನೈತಿಕತೆಗೂ ವಿರುದ್ಧವಾದುದು. ಸಾಮಾಜಿಕ ಅಂತಃಸಾಕ್ಷಿ ಇರುವ ಯಾವುದೇ ಸಮಾಜ ಅದನ್ನು ಎಂದೂ ಒಪ್ಪಿಕೊಂಡಿಲ್ಲ. ಬದಲಾಗಿ ಇತಿಹಾಸದುದ್ದಕ್ಕೂ ವ್ಯಕ್ತಿಗಳು ಮತ್ತು ವರ್ಗಗಳ ನಡುವಣ ಸಾಂಘಿಕ ಜೀವನವನ್ನು ಉತ್ತಮಪಡಿಸಬೇಕೆಂಬ ಭಾವನೆ ಸಂಪೂರ್ಣವಾಗಿ ನೈತಿಕ ತತ್ವಕ್ಕೆ ಸಂಬಂಧಿಸಿದ್ದು, ಯಾವುದು ತಪ್ಪಾಗಿ ತೀರ್ಮಾನವಾಗಿದೆಯೋ ಅದು ಎಂದೆಂದಿಗೂ ಅನ್ವಯಿಸುವ ತೀರ್ಮಾನವಲ್ಲ, ಅದನ್ನು ಮತ್ತೆ ತೀರ್ಮಾನಿಸಬೇಕು. ಆದ್ದರಿಂದ 'ಪುರುಷಸೂಕ್ತ'ದಲ್ಲಿ ಅಂತರ್ಗತವಾಗಿರುವ ತತ್ವ ಉದ್ದೇಶದಲ್ಲಿ ಅಪರಾಧಾತ್ಮಕವಾಗಿದೆ, ಪರಿಣಾಮದಲ್ಲಿ ಸಮಾಜವಿರೋಧಿಯಾಗಿದೆ.

ಏಕೆಂದರೆ ಅದು ಒಂದು ವರ್ಗ ಅನ್ಯಾಯವಾಗಿ ಗಳಿಸಿದುದನ್ನು ಶಾಶ್ವತಗೊಳಿಸಲು ಹಾಗೂ ಇನ್ನೊಂದು ವರ್ಗದ ಮೇಲೆ ಅನ್ಯಾಯವಾಗಿ ಕೆಡುಕನ್ನು ಮುಂದುವರಿಸಲು ಉದ್ದೇಶಿಸುತ್ತದೆ. 'ಪುರುಷಸೂಕ್ತ'ದ ಈ ದೊಂಬರಾಟದ ಹಿಂದೆ ಇರುವ ಉದ್ದೇಶವಾದರೂ ಏನು? ಇದು ಎರಡನೆಯ ಒಗಟು.

'ಪುರುಷಸೂಕ್ತ'ದ ಸಮಾಜಶಾಸ್ತ್ರೀಯ ಪರೀಕ್ಷೆಯಿಂದ ಹೊರಬರುವ ಈ ಎಲ್ಲ ಒಗಟುಗಳಲ್ಲಿ ಕೊನೆಯ ಮತ್ತು ಮಹತ್ತರವಾದ ಒಗಟೆಂದರೆ 'ಶೂದ್ರ'ನ ಸ್ಥಾನಕ್ಕೆ ಸಂಬಂಧಿಸಿದುದು. 'ಪುರುಷಸೂಕ್ತ' ವರ್ಣಗಳ ಹುಟ್ಟಿನ ಬಗ್ಗೆ ಆಸಕ್ತವಾಗಿ, ಅವುಗಳು ದೈವಸೃಷ್ಟಿಯೆಂದು ಹೇಳುತ್ತದೆ–ಈ ತತ್ವವನ್ನು ಯಾವುದೇ ದೈವಶಾಸ್ತ್ರವೂ ಇಂಥ ಪ್ರತಿಪಾದನೆ ವಿವೇಕಯುತವಾದದ್ದೆಂದು ಭಾವಿಸಿಲ್ಲ. ಇದು ತನ್ನಷ್ಟಕ್ಕೆ ತಾನೇ ವಿಚಿತ್ರವಾಗಿದೆ. ಆದರೆ ಆಶ್ಚರ್ಯಗೊಳಿಸುವ ವಿಷಯವೆಂದರೆ ಸೃಷ್ಟಿಕರ್ತನ ಶರೀರದ ವಿವಿಧ ಭಾಗಗಳಿಗೆ ವಿವಿಧ ವರ್ಣಗಳನ್ನು ಸಮೀಕರಿಸಿರುವ ಯೋಜನೆ. ಅವನ ಶರೀರದ ವಿವಿಧ ಭಾಗಗಳಿಗೆ ವಿವಿಧ ವರ್ಣಗಳನ್ನು ಸಮೀಕರಿಸಿರುವ ವಿಷಯ ಆಕಸ್ಮಿಕವಲ್ಲ. ಅದು ಉದ್ದೇಶಪೂರ್ವಕವಾಗಿದೆ. ಈ ಯೋಜನೆಯ ಹಿಂದೆ ಇರುವ ಉದ್ದೇಶ ಎರಡು ಸಮಸ್ಯೆಗಳನ್ನು ಪರಿಹರಿಸುವ ಸೂತ್ರವನ್ನು ಕಂಡುಕೊಳ್ಳುವುದಾಗಿದೆ. ಒಂದು, ನಾಲ್ಕು ವರ್ಣಗಳ ಕರ್ತವ್ಯಗಳನ್ನು ಸ್ಥಿರಪಡಿಸುವುದು; ಇನ್ನೊಂದು, ಪೂರ್ವಕಲ್ಪಿತ ಯೋಜನೆಯಂತೆ ನಾಲ್ಕು ವರ್ಣಗಳ ಸ್ಥಾನಮಾನಗಳನ್ನು ದೃಢಪಡಿಸುವುದು. ಸೃಷ್ಟಿಕರ್ತನ ಶರೀರದ ವಿವಿಧ ಭಾಗಗಳಿಗೆ ವಿವಿಧ ವರ್ಣಗಳನ್ನು ಸಮೀಕರಿಸುವ ಈ ಸೂತ್ರದಲ್ಲಿ ಈ ಅನುಕೂಲವಿದೆ. ವರ್ಣದ ಸ್ಥಾನಮಾನವನ್ನು ಶರೀರ ಭಾಗ ಸ್ಥಿರಪಡಿಸುತ್ತದೆ, ಆ ಸ್ಥಾನಮಾನ ಪರ್ಯಾಯವಾಗಿ ವರ್ಣದ ಕರ್ತವ್ಯವನ್ನು ಸ್ಥಿರಪಡಿಸುತ್ತದೆ. ಪುರುಷನ ಬಾಯಿಗೆ ಬ್ರಾಹ್ಮಣನನ್ನು ಸಮೀಕರಿಸಲಾಗಿದೆ. ಅಂಗ ರಚನೆಯ ಅತ್ಯುತ್ತಮ ಭಾಗ ಬಾಯಿ ಆಗಿರುವುದರಿಂದ ನಾಲ್ಕು ವರ್ಣಗಳಲ್ಲಿ ಬ್ರಾಹ್ಮಣ ಶ್ರೇಷ್ಠನಾಗುತ್ತಾನೆ. ಶ್ರೇಣಿಯಲ್ಲಿ ಅವನು ಶ್ರೇಷ್ಠನಾಗಿರುವುದರಿಂದ ಅವನಿಗೆ ಶ್ರೇಷ್ಠ ಕೆಲವನ್ನು ವಹಿಸಲಾಗಿದೆ, ಅದೆಂದರೆ ಜ್ಞಾನ ಮತ್ತು ಪಾಂಡಿತ್ಯದ ಸಂರಕ್ಷಕನಾಗಿದ್ದಾನೆ. ಪುರುಷನ ತೋಳುಗಳಿಗೆ ಕ್ಷತ್ರಿಯನನ್ನು ಸಮೀಕರಿಸಲಾಗಿದೆ, ಮನುಷ್ಯನ ಅಂಗಾಂಗಗಳಲ್ಲಿ ಬಾಯಿಯ ಕೆಳಗೆ ತೋಳುಗಳಿವೆ. ತತ್ಪರಿಣಾಮವಾಗಿ, ಬ್ರಾಹ್ಮಣನ ಕೆಳಗೆ ಕ್ಷತ್ರಿಯನಿಗೆ ಸ್ಥಾನ ಕೊಡಲಾಗಿದೆ, ಜ್ಞಾನಕ್ಕೆ ದ್ವಿತೀಯ ಸ್ಥಾನದಲ್ಲಿರುವ ಅಂದರೆ ಯುದ್ಧ ಮಾಡುವ ಕೆಲಸವನ್ನು ಅವನಿಗೆ ವಹಿಸಲಾಗಿದೆ. ಪುರುಷನ ತೊಡೆಗಳಿಗೆ ವೈಶ್ಯನನ್ನು ಸಮೀಕರಿಸಲಾಗಿದೆ. ಅಂಗಾಂಗಗಳ ಶ್ರೇಣಿಯಲ್ಲಿ ತೋಳಿನ ಕೆಳಗೆ ತೊಡೆಗಳು ಇವೆ. ತತ್ಪರಿಣಾಮವಾಗಿ ವೈಶ್ಯನನ್ನು ಕ್ಷತ್ರಿಯನ ಕೆಳಗೆ ಇಡಲಾಗಿದೆ. ಅವನಿಗೆ ಬೇಸಾಯ ಮತ್ತು ವ್ಯಾಪಾರವನ್ನು ವಹಿಸಲಾಗಿದೆ, ಇದು ಪ್ರಾಚೀನ ಕಾಲದಲ್ಲಿ ಕ್ಷತ್ರಿಯನ ಕೆಲಸಕ್ಕಿಂತ ಕೆಳಸ್ಥಾನದಲ್ಲಿತ್ತು. ಶೂದ್ರನನ್ನು ಪುರುಷನ ಪಾದಗಳಿಗೆ ಸಮೀಕರಿಸಲಾಗಿದೆ. ಪಾದಗಳು ಮಾನವನ ದೇಹದಲ್ಲಿ ಅತ್ಯಂತ ಕನಿಷ್ಠ ಮತ್ತು ಹೀನಾಯವಾದ ಭಾಗವಾಗಿವೆ. ಇದಕ್ಕೆ ಅನುಸಾರವಾಗಿ ಸಾಮಾಜಿಕ ವ್ಯವಸ್ಥೆಯಲ್ಲಿ ಶೂದ್ರನದು ಕೊಟ್ಟ ಕೊನೆಯ ಸ್ಥಾನ ಹಾಗೂ ಅವನಿಗೆ ಅತ್ಯಂತ ಕೊಳಕು ಕೆಲಸವನ್ನು ಅಂದರೆ ದಾಸ್ಯ ವೃತ್ತಿಯಾದ ಸೇವೆಯನ್ನು ವಹಿಸಲಾಗಿದೆ.

ಈ ನಾಲ್ಕು ವರ್ಣಗಳ ಉಗಮವನ್ನು ವರ್ಣಿಸಲು 'ಪುರುಷಸೂಕ್ತ' ಏಕೆ ಇಂಥ ಕ್ರಮವನ್ನು ಆರಿಸಿಕೊಂಡಿತು? ಪಾದಗಳಿಗೆ ಶೂದ್ರರನ್ನು ಏಕೆ ಸಮೀಕರಿಸಿತು? ನಾಲ್ಕು ವರ್ಣಗಳು ಹೇಗೆ ಹುಟ್ಟಿದವೆಂದು ಹೇಳಲು ಅದು ಬೇರೊಂದು ನಿದರ್ಶನವನ್ನು ಏಕೆ ತೆಗೆದುಕೊಳ್ಳಲಿಲ್ಲ? ಸೃಷ್ಟಿಯನ್ನು ವಿವರಿಸಲು 'ಪುರುಷ'ವೊಂದೇ ಲಭ್ಯವಿರುವ ಹೋಲಿಕೆಯಲ್ಲ. ಛಾಂದೋಗ್ಯ ಉಪನಿಷತ್ತಿನಲ್ಲಿ ಬರುವ ವೇದಗಳ

---

೧. Muir, Vol. III, p. 5

ಉಗಮದ ಬಗೆಗೆ ಇರುವ ವಿವರಣೆಯನ್ನು ಹೋಲಿಸಿ; ಅದರ ಪ್ರಕಾರ[೧]

"ಪ್ರಜಾಪತಿಯ ಶಾಖವನ್ನು ಲೋಕಗಳಿಗೆ ತುಂಬಿದನು. ಆ ಶಾಖದಿಂದ ಅವನು ಅವುಗಳ ಸಾರವನ್ನು ತೆಗೆದನು. ಅಂದರೆ, ಭೂಮಿಯಿಂದ ಅಗ್ನಿ, ಗಾಳಿಯಿಂದ ವಾಯು, ಆಕಾಶದಿಂದ ಸೂರ್ಯ, ಈ ಮೂವರು ದೇವತೆಗಳಿಗೆ ಅವನು ಶಾಖವನ್ನು ತುಂಬಿದನು. ಆ ಶಾಖದಿಂದ ಅವರನ್ನು ಕುದಿಸಿ ಅವರ ಸಾರವನ್ನು ಹೊರತೆಗೆದು – ಅಗ್ನಿಯಿಂದ ಋಕ್ಕುಗಳು (ಋಗ್ವೇದ), ವಾಯುವಿನಿಂದ ಯಜುಸ್‌ಗಳು (ಯಜುರ್ವೇದ) ಮತ್ತು ಸೂರ್ಯನಿಂದ ಸಾಮಮಂತ್ರಗಳು (ಸಾಮವೇದ). ಆಮೇಲೆ ಅವನು ಈ ಮೂರು ಜ್ಞಾನಗಳಿಗೆ ಶಾಖವನ್ನು ತುಂಬಿ ಅವುಗಳನ್ನು ಕುದಿಸಿದನು. ಹಾಗೆ ಕುದಿಸಿ ಅವನು ಅವುಗಳ ಸಾರವನ್ನು ಹೊರತೆಗೆದು – ಋಕ್ಕುಗಳಿಂದ 'ಭೂಃ', ಯಜುಸ್‌ಗಳಿಂದ 'ಭೂವಃ' ಮತ್ತು ಸಾಮಮಂತ್ರಗಳಿಂದ 'ಸ್ವರ್' ಶಬ್ದಗಳು ಬಂದುವು".

ಇಲ್ಲಿ ಬೇರೆ ಬೇರೆ ದೇವತೆಗಳಿಂದ ವೇದಗಳ ಉಗಮವಾಯಿತೆಂದು ವಿವರಣೆಯಿದೆ. ಹಿಂದೂ–ಆರ್ಯರಿಗೆ ಸಂಬಂಧಿಸಿದಂತೆ ಹೇಳುವುದಾದರೆ ದೇವತೆಗಳಿಗೆ ಕೊರತೆ ಇರಲಿಲ್ಲ. ಅವರು ಮೂವತ್ತು ಕೋಟಿ ಇದ್ದರು. ನಾಲ್ಕು ದೇವತೆಗಳಿಂದ ನಾಲ್ಕು ವರ್ಣಗಳು ಬಂದುವೆಂಬ ವಿವರಣೆ ಕೊಟ್ಟಿದ್ದರೆ ಎಲ್ಲ ನಾಲ್ಕು ವರ್ಣಗಳ ಹುಟ್ಟಿಗೂ ಸಮಾನ ಘನತೆ ಬಂದುಬಿಡುತ್ತಿತ್ತು. ಈ ವಿವರಣೆಯ ವಿಧಾನವನ್ನು ಏಕೆ ಪುರುಷಸೂಕ್ತ ಅನುಸರಿಸಲಿಲ್ಲ?

'ಪುರುಷ'ನ ನಾನಾ ಬಾಯಿಗಳಿಂದ ನಾನಾ ವರ್ಣಗಳು ಹುಟ್ಟಿದುವೆಂದು ಹೇಳಲು 'ಪುರುಷಸೂಕ್ತ'ನ ಕರ್ತೃವಿಗೆ ಸಾಧ್ಯವಿರಲಿಲ್ಲವೆ? ಅಂಥ ಒಂದು ಕಲ್ಪನೆ ಕಷ್ಟವಾಗಿರಲಿಲ್ಲ. ಏಕೆಂದರೆ, 'ಪುರುಷಸೂಕ್ತ'ದ ಪುರುಷನಿಗೆ ಒಂದು ಸಾವಿರ ತಲೆಗಳಿವೆ; ಸೃಷ್ಟಿಯ ಒಂದೊಂದು ಸಂತತಿಯನ್ನು ಒಂದೊಂದು ತಲೆಗೆ ಕೊಡಲು ಅವಕಾಶವಿದೆ. 'ಪುರುಷಸೂಕ್ತ'ದ ಕರ್ತೃವಿಗೆ ಸೃಷ್ಟಿ ವಿವರಣೆಯ ಅಂಥ ವಿಧಾನ ಗೊತ್ತಿಲ್ಲದೆ ಇರಲಿಲ್ಲ. ಏಕೆಂದರೆ ವಿವಿಧ ವೇದಗಳ ಉಗಮವನ್ನು 'ವಿಷ್ಣುಪುರಾಣ' ಕೊಡುವುದನ್ನು ನಾವು ಬಲ್ಲೆವು; ಮುಂದಿನ ಉದ್ಧರಣೆಯನ್ನು ನೋಡಿ.[೧]

"ಬ್ರಹ್ಮ ತನ್ನ ಪೂರ್ವಮುಖದಿಂದ ಗಾಯತ್ರಿ, ಋಕ್ಕುಗಳು, ತ್ರಿವೃತ, ಸಾಮರಥಾಂತರ, ಯಜ್ಞಗಳು ಮತ್ತು ಅಗ್ನಿಸ್ತೋಮವನ್ನು ಸೃಷ್ಟಿಸಿದನು. ತನ್ನ ದಕ್ಷಿಣ ಮುಖದಿಂದ ಯಜುಸ್ ಮಂತ್ರಗಳು, ತ್ರಿಷ್ಟುಪ್ ಛಂದಸ್ಸು, ಪಂಚದಶಸ್ತೋಮ, ಬೃಹತ್‌ಸಾಮ ಮತ್ತು ಉಕ್ಥ್ಯವನ್ನು ಸೃಷ್ಟಿಸಿದನು. ತನ್ನ ಪಶ್ಚಿಮ ಮುಖದಿಂದ ಸಾಮಮಂತ್ರಗಳು, ಜಾಗತಿ ಛಂದಸ್ಸು, ಸಪ್ತದಶ ಸ್ತೋಮ, ವೈರೂಪ ಮತ್ತು ಅತಿರಾತ್ರ ಸೃಷ್ಟಿಸಿದನು. ತನ್ನ ಉತ್ತರ ಮುಖದಿಂದ ಏಕವಿಂಶ, ಅಥರ್ವನ್, ಅನುಷ್ಟುಪ್ ಮತ್ತು ವಿರಾಜ್ ಛಂದಸ್ಸುಗಳನ್ನು ಆಪ್ತೋರ್ಯಮಾನ್ ಅನ್ನು ಸೃಷ್ಟಿಸಿದನು."

ವೇದಗಳ ಉಗಮವನ್ನು 'ಹರಿವಂಶ' ಬೇರೊಂದು ರೀತಿಯಲ್ಲಿ ವಿವರಿಸುತ್ತದೆ. ಅದರ ಪ್ರಕಾರ:[೨]

"ದೇವರು ತನ್ನ ಕಣ್ಣುಗಳಿಂದ ಋಗ್ವೇದ ಮತ್ತು ಯಜುರ್ ವೇದಗಳನ್ನು, ತನ್ನ ನಾಲಗೆಯ ತುದಿಯಿಂದ ಸಾಮವೇದವನ್ನು, ತನ್ನ ತಲೆಯಿಂದ ಅಥರ್ವವೇದವನ್ನು ರೂಪಿಸಿದನು."

ಪುರುಷನ ದೇಹವನ್ನೂ, ನಾಲ್ಕು ವರ್ಣಗಳ ಉಗಮ ಮತ್ತು ಸಂಬಂಧವನ್ನು ವಿವರಿಸಲು ಅದರ

---

೧. Muir, Vol. I, p. II

೨. Muir, Vol. III, p. 13

ಭಾಗಗಳನ್ನು ಹೆಸರಿಸುವುದನ್ನು 'ಪುರುಷಸೂಕ್ತ' ಕರ್ತೃ ನಿವಾರಿಸಲು ಸಾಧ್ಯವಾಗಲಿಲ್ಲವೆಂದು ಭಾವಿಸಿದರೂ ಅವನು ಏಕೆ ವಿವಿಧ ವರ್ಣಗಳನ್ನು ಪುರುಷನ ವಿವಿಧ ಅಂಗಗಳಿಗೆ ಸಮೀಕರಿಸಲು ಹೊರಟ ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ.

ಸಮಾಜದ ವಿವಿಧ ವರ್ಣಗಳ ಉಗಮವನ್ನು ವಿವರಿಸಲು ಪುರುಷನ ದೇಹದ ವಿವಿಧ ಭಾಗಗಳನ್ನು ನಿದರ್ಶನಗಳನ್ನಾಗಿ ಉಪಯೋಗಿಸಿರುವುದು 'ಪುರುಷಸೂಕ್ತ'ದ ಏಕೈಕ ಉದಾಹರಣೆಯಲ್ಲ ಎಂದು ತಿಳಿದುಕೊಂಡರೆ ಈ ಪ್ರಶ್ನೆಯ ಪ್ರಾಮುಖ್ಯತೆ ಗಣನೀಯವಾಗಿ ಹೆಚ್ಚುತ್ತದೆ. ಯಜ್ಞಗಳ ನಿರ್ವಹಣೆಯಲ್ಲಿ ತೊಡಗಿದ ಪುರೋಹಿತರ ನಾನಾ ವರ್ಗಗಳ ಉಗಮವನ್ನು ವಿವರಿಸಲು ವೈಶಂಪಾಯನ ಮಹರ್ಷಿ ಅದೇ ವಿವರಣೆಯನ್ನು ಕೊಟ್ಟಿದ್ದಾನೆ. ಆದರೆ ಈ ಇಬ್ಬರಲ್ಲಿ ಎಂಥ ವ್ಯತ್ಯಾಸವಿದೆ! ಹರಿವಂಶದಲ್ಲಿ ನಿರೂಪಿತವಾಗಿರುವ ವೈಶಂಪಾಯನನ ವಿವರಣೆ ಈ ರೀತಿ ಇದೆ.[೧]

"ಹೀಗೆ ಸಮಸ್ತ ಜಲರಾಶಿಯನ್ನು ವ್ಯಾಪಿಸಿಕೊಂಡು ಅಖಂಡ ಸಮುದ್ರವಾಗಿದ್ದ ಜಗತ್ತಿನ ಮೇಲೆ, ಒಂದು ಮಹಾಸಾಗರವನ್ನು ಹೋಲುತ್ತಿದ್ದ ಅನಂತ ರಜಸ್ಸಿನ ಮಧ್ಯದಲ್ಲಿ ಸ್ವತಃ ವಿರಕ್ತನೂ ಬಲಿಷ್ಠ ಬಾಹುಗಳುಳ್ಳವನೂ ಆದ ಕೀರ್ತಿಶೇಷನಾದ ಜಗದ್ರಕ್ಷಕ ಶ್ರೀಮನ್ನಾರಾಯಣನು ಪವಡಿಸಿದ್ದನು; ಅವನು ಅವಿನಾಶಿಯೆಂದು ಬ್ರಾಹ್ಮಣರು ಬಲ್ಲವರಾಗಿದ್ದಾರೆ. ಉಗ್ರ ತಪಸ್ಸಿನಿಂದ ತೇಜೋವಂತನಾದ ಶ್ರೀಮನ್ನಾರಾಯಣನು ತ್ರಿಕಾಲಗಳನ್ನು ಹೊದ್ದುಕೊಂಡು ಆಗ ಮಲಗಿದ್ದನು. ಪರಮ ಪುರುಷೋತ್ತಮನಾದ ವಿಷ್ಣುವೇ ಎಲ್ಲರಿಗಿಂತಲೂ ಮಹಿಮಾನ್ವಿತನು. ಪುರುಷನೇ ಯಜ್ಞ ಮತ್ತು ಪುರುಷನ ಹೆಸರಿನ ಮೇಲೆಯೇ ಸರ್ವವೂ ವಿಧಿತವಾಗಿದೆ. ಋತ್ವಿಜರೆಂದು ಕರೆಯಲಾದ ಈ ಯಜ್ಞನಿಷ್ಠ ಬ್ರಾಹ್ಮಣರನ್ನು ಯಾಗಾದಿಗಳನ್ನು ಮಾಡುವುದಕ್ಕಾಗಿ ಅವನು ತನ್ನ ದೇಹದಿಂದಲೇ ಅವರನ್ನು ಸೃಷ್ಟಿಸಿದನು. ವಿಷ್ಣುವು ತನ್ನ ಬಾಯಿಯಿಂದ ಬ್ರಾಹ್ಮಣನನ್ನು ಸೃಷ್ಟಿಸಿದನು; ಇವನು ಮುಖಂಡ ಮತ್ತು ಸಾಮಮಂತ್ರವನ್ನು ಪಠಿಸುವ ಉದ್ಗಾತೃ; ವಿಷ್ಣುವು ತನ್ನ ತೋಳುಗಳಿಂದ ಹೋತೃ ಮತ್ತು ಅಧ್ವರ್ಯುಗಳನ್ನು ಸೃಷ್ಟಿಸಿದನು. ಆಮೇಲೆ ಅವನು ಪ್ರಸ್ತೋತ್ರಿ, ಮೈತ್ರಾವರುಣ ಮತ್ತು ಪ್ರತಿಷ್ಠಾತ್ರಿಯರನ್ನು ಸೃಷ್ಟಿಸಿದನು; ತನ್ನ ಉದರದಿಂದ ಪ್ರತಿಹಾರ್ತಿ ಮತ್ತು ಪೋತ್ರಿಯರನ್ನೂ, ತನ್ನ ತೊಡೆಗಳಿಂದ ಅಚ್ಛವಕ ಮತ್ತ ನೇಷ್ಟ್ರಿಗಳನ್ನೂ, ತನ್ನ ಕೈಗಳಿಂದ ಅಗ್ನಿಧ್ರ ಮತ್ತು ಯಾಜ್ಞಿಕನಾದ ಬ್ರಾಹ್ಮಣ್ಯನನ್ನೂ, ತನ್ನ ತೋಳುಗಳಿಂದ ಗ್ರವನ ಮತ್ತು ಯಾಜ್ಞಿಕನಾದ ಉನ್ನೇತ್ರಿಯನ್ನೂ ಸೃಷ್ಟಿಸಿದನು. ಹೀಗೆ ಲೋಕದೊಡೆಯನಾದ ಮಹಾನಾರಾಯಣನು ಸರ್ವಯಜ್ಞ ಉದ್ಘೋಷಕರಾದ ಹದಿನಾರು ಮಂದಿ ಶ್ರೇಷ್ಠ ಋತ್ವಿಜರನ್ನು ಸೃಷ್ಟಿಸಿದನು. ಆದ್ದರಿಂದ ಈ ಪುರುಷನೇ ಯಜ್ಞವಾಗಿದ್ದಾನೆ, ಅವನೇ ವೇದವಾಗಿದ್ದಾನೆ; ವೇದಾಂಗಗಳನ್ನೊಳಗೊಂಡ ಎಲ್ಲ ವೇದಗಳೂ, ಉಪನಿಷತ್ತುಗಳೂ ಮತ್ತು ಕರ್ಮಕಾಂಡಗಳೆಲ್ಲ ಅವನ ಸಾರರೂಪವಾಗಿವೆ."

ಒಂದು ಯಜ್ಞವನ್ನು ಮಾಡಲು ಒಟ್ಟು ಹದಿನೇಳು ಭಿನ್ನ ವರ್ಗದ ಪುರೋಹಿತರು ಬೇಕಾಗಿತ್ತು. ಪ್ರತಿಯೊಂದು ವರ್ಗದ ಉಗಮವನ್ನು ವಿವರಿಸಲು ಸೃಷ್ಟಿಕರ್ತನ ಶರೀರದ ಪ್ರತಿಯೊಂದು ಭಾಗವನ್ನು ಸಮೀಕರಿಸಿ ಹೇಳುವಾಗ, ಪುರುಷನ ಅಂಗಾಂಗಗಳು ಬಹಳ ಕಡಿಮೆಯೂ ಪುರೋಹಿತರ ಸಂಖ್ಯೆ ಅಪಾರವೂ ಇರುವುದರಿಂದ ಒಂದು ವರ್ಗದ ಉಗಮಕ್ಕೆ ಪುರುಷನ ಪಾದವೂ ಮೂಲ ಎಂದು ಹೇಳದೇ ಇರಲಾಗುವುದಿಲ್ಲ. ಆದರೂ ವೈಶಂಪಾಯನ ಏನು ಮಾಡುತ್ತಾನೆ? ಒಂದಕ್ಕಿಂತ ಹೆಚ್ಚು ವರ್ಗವಿರುವ

೧. Muir, Vol. I, Pp. 154-155

ಪುರೋಹಿತರ ಉಗಮವನ್ನು ವಿವರಿಸಲು ಸೃಷ್ಟಿಕರ್ತನ ಶರೀರದ ಅದೇ ಭಾಗವನ್ನು ಉಪಯೋಗಿಸಲು ಅವನು ಹಿಂಜರಿಯುವುದಿಲ್ಲ. ಅವರಲ್ಲಿ ಯಾರೇ ಆಗಲೀ ಪಾದದಿಂದ ಉದ್ಭವಿಸಿದರು ಎಂದು ಹೇಳುವುದನ್ನು ಉದ್ದೇಶಪೂರ್ವಕವಾಗಿ ಕೈಬಿಡುತ್ತಾನೆ.

'ಪುರುಷಸೂಕ್ತ'ದಲ್ಲಿ ಶೂದ್ರರನ್ನು ಕಂಡಿರುವ ತಿರಸ್ಕಾರಕ್ಕೂ, ಹರಿವಂಶದಲ್ಲಿ ಬ್ರಾಹ್ಮಣರನ್ನು ನೋಡಿರುವ ಪುರಸ್ಕಾರಕ್ಕೂ ಇರುವ ವ್ಯತ್ಯಾಸವನ್ನು ಹೋಲಿಸಿದರೆ ಅವರು ಉಗಮದ ಸಂದರ್ಭದ ವಿಷಯ ತೀರಾ ಸ್ವಾರಸ್ಯಕರವಾಗುತ್ತದೆ. ಪುರುಷನ ಪಾದದಿಂದ ಶೂದ್ರ ಹುಟ್ಟಿದ ಹಾಗೂ ಸೇವೆ ಮಾಡುವುದೇ ಅವನ ಕರ್ತವ್ಯ ಎಂದು 'ಪುರುಷಸೂಕ್ತ' ಹಿಂಜರಿದು ಹೇಳುವುದಕ್ಕೆ ದ್ವೇಷ ಕಾರಣವೇ? ಹಾಗಿದ್ದರೆ ಈ ದ್ವೇಷದ ಕಾರಣವಾದರೂ ಏನು?

೪

ಪುರುಷಸೂಕ್ತವನ್ನು ಸಮಾಜಶಾಸ್ತ್ರೀಯ ಅಧ್ಯಯನಕ್ಕೆ ಒಳಪಡಿಸಿದಾಗ ಶೂದ್ರರ ಬಗ್ಗೆ ಮೇಲೆ ಹೇಳಿದ ಒಗಟುಗಳು ಉದ್ಭವಿಸುತ್ತವೆ. ಚಾತುರ್ವರ್ಣ್ಯದ ಆದರ್ಶದ ಆಮೇಲಿನ ಬೆಳವಣಿಗೆಗಳಿಂದಾಗಿ ಶೂದ್ರನ ಸ್ಥಾನದ ಬಗ್ಗೆ ಇನ್ನೂ ಇತರ ಒಗಟುಗಳಿವೆ. ಇದರ ಪರಿಣಾಮಗಳನ್ನು ಅರ್ಥ ಮಾಡಿಕೊಳ್ಳಲು ಆಮೇಲಿನ ಬೆಳವಣಿಗೆಗಳನ್ನು ಮೊದಲು ಗಮನಿಸಬೇಕಾಗಿದೆ. ಚಾತುರ್ವರ್ಣ್ಯದ ಆಮೇಲಿನ ಬೆಳವಣಿಗೆಗಳು ಮುಖ್ಯವಾಗಿ ಎರಡು. ಮೊದಲನೆಯದು, ಶೂದ್ರರಿಗಿಂತ ಕೆಳಗೆ ಪಂಚಮರ ಸೃಷ್ಟಿ. ಎರಡನೆಯದು, ಮೊದಲ ಮೂರು ವರ್ಣಗಳಿಂದ ಶೂದ್ರರನ್ನು ಪ್ರತ್ಯೇಕಿಸಿದ್ದು. ಪುರುಷಸೂಕ್ತದ ಮೂಲ ಯೋಜನೆಗೆ ಈ ಬದಲಾವಣೆಗಳು ತುಂಬ ಹೊಂದಿಕೊಂಡಿವೆ. ಅದರಿಂದಾಗಿ ವಿಚಿತ್ರ ಪದಗಳು, ಮಾತುಗಳು ಹುಟ್ಟಿಕೊಂಡಿವೆ. ಇವುಗಳು ಏನನ್ನು ಪ್ರತಿನಿಧಿಸುತ್ತವೆ ಎಂಬುದು ಎಲ್ಲರಿಗೂ ಚೆನ್ನಾಗಿ ಗೊತ್ತು. ಈ ಮಾತುಗಳೆಂದರೆ ಸವರ್ಣರು, ಅವರ್ಣರು, ದ್ವಿಜರು, ಅದ್ವಿಜರು ಮತ್ತು ತ್ರೈವರ್ಣಿಕರು. ಇವು ಮೂಲ ನಾಲ್ಕು ವರ್ಣಗಳ ಉಪವಿಭಜನೆಗಳನ್ನು ಸೂಚಿಸುತ್ತವೆ. ಹಾಗೂ ಅವುಗಳ ನಡುವೆ ಇರುವ ಪ್ರತ್ಯೇಕತೆಯ ಮಟ್ಟವನ್ನು ಪ್ರತಿನಿಧಿಸುತ್ತವೆ. ಅವು ಒಂದು ಹೊಸ ಒಗಟನ್ನು ಪ್ರಕಟಿಸುವುದರಿಂದ ಈ ವರ್ಗಗಳ ಸಾಪೇಕ್ಷ ಸಂಬಂಧವನ್ನು ತಿಳಿಯುವುದು ಅಗತ್ಯ. ಈ ಒಗಟು ಜನರ ಗಮನವನ್ನು ಸೆಳೆಯದಿದ್ದರೆ ಅದಕ್ಕೆ ಎರಡು ಕಾರಣಗಳಿವೆ. ಮೊದಲನೆಯದಾಗಿ, ಈ ಹೆಸರುಗಳು ಕೇವಲ ಹೆಸರುಗಳಾಗಿರದೆ ಅವು ನಿರ್ದಿಷ್ಟ ಹಕ್ಕು ಮತ್ತು ಸವಲತ್ತುಗಳನ್ನು ಪ್ರತಿನಿಧಿಸುತ್ತವೆ ಎಂಬುದನ್ನು ವಿದ್ವಾಂಸರು ಗಮನಿಸದೇ ಇರುವುದು, ಏಕೆಂದರೆ ಈ ಹೆಸರುಗಳ ವತಿಯಲ್ಲಿ ಅವರ ಹಕ್ಕುಗಳು ಮತ್ತು ಸವಲತ್ತುಗಳನ್ನು ತಾರ್ಕಿಕವಾಗಿ ಸೂಚಿಸುತ್ತವೆಯೋ ಎಂದು ಪತ್ತೆ ಹಚ್ಚಲು ಅವರು ಗಮನ ಹರಿಸಿಲ್ಲ.

ಆದ್ದರಿಂದ ಈ ಮಾತುಗಳ ನ್ಯಾಯವಾದ ಅರ್ಥವನ್ನು ತಿಳಿದುಕೊಳ್ಳೋಣ. 'ಸವರ್ಣ'ವನ್ನು ಸಾಮಾನ್ಯವಾಗಿ 'ಅವರ್ಣ'ದ ಜೊತೆ ವೈದೃಶ್ಯವಾಗಿ ಬಳಸುತ್ತಾರೆ. 'ಸವರ್ಣ' ಎಂದರೆ ನಾಲ್ಕು ವರ್ಣಗಳಿಗೆ ಸೇರಿದವನು. 'ಅವರ್ಣ' ಎಂದರೆ ನಾಲ್ಕು ವರ್ಣಗಳಲ್ಲಿ ಯಾವುದಕ್ಕೂ ಸೇರದವನು ಎಂದು ಅರ್ಥ. 'ಬ್ರಾಹ್ಮಣರು', 'ಕ್ಷತ್ರಿಯರು', 'ವೈಶ್ಯರು' ಮತ್ತು 'ಶೂದ್ರರು', 'ಸವರ್ಣೀ'ಯರು. ಅಸ್ಪೃಶ್ಯರು ಅಥವಾ 'ಅತಿಶೂದ್ರ'ರನ್ನು ಅವರ್ಣೀಯರೆಂದು ಕರೆಯಲಾಗಿದೆ. ಅಂದರೆ ವರ್ಣವಿಲ್ಲದವರು. ತಾರ್ಕಿಕವಾಗಿ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು ಚಾತುರ್ವರ್ಣ್ಯದ ಹೊರಗಿದ್ದಾರೆ. 'ದ್ವಿಜ' ಶಬ್ದವನ್ನು 'ಅದ್ವಿಜ'ದ ಜೊತೆ ಸಾಮಾನ್ಯವಾಗಿ ವೈದೃಶ್ಯವಾಗಿ ಬಳಸುತ್ತಾರೆ. 'ದ್ವಿಜ' ಅಂದರೆ ಅಕ್ಷರಶಃ ಎರಡು ಬಾರಿ ಜನಿಸಿದವನು

ಹಾಗೂ 'ಅದ್ವಿಜ' ಎಂದರೆ ಒಂದು ಸಲ ಮಾತ್ರ ಜನಿಸಿದವನು ಎಂದು ಅರ್ಥ. ಈ ತಾರತಮ್ಯ ಉಪನಯನದ ಹಕ್ಕಿನ ಮೇಲೆ ಆಧಾರಿತವಾಗಿದೆ. ಉಪನಯನವನ್ನು ಎರಡನೆಯ ಹುಟ್ಟೆಂದು ಪರಿಗಣಿಸುತ್ತಾರೆ. ಜನಿವಾರ ಹಾಕಿಕೊಳ್ಳಲು ಹಕ್ಕಿರುವವರನ್ನು 'ದ್ವಿಜ'ರೆಂದು ಕರೆಯುತ್ತಾರೆ. ಅದನ್ನು ಹಾಕಿಕೊಳ್ಳಲು ಹಕ್ಕಿಲ್ಲದವರನ್ನು 'ಅದ್ವಿಜರು' ಎಂದು ಕರೆಯಲಾಗಿದೆ. ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರಿಗೆ ಜನಿವಾರ ಧಾರಣೆ ಮಾಡಲು ಹಕ್ಕಿದೆ. ತಾರ್ಕಿಕವಾಗಿ ಅವರು 'ದ್ವಿಜರು'. 'ಶೂದ್ರರು' ಮತ್ತು 'ಅತಿಶೂದ್ರ'ರಿಗೆ ಜನಿವಾರ ಧಾರಣೆಯ ಹಕ್ಕಿಲ್ಲ. ತಾರ್ಕಿಕವಾಗಿ ಅವರಿಬ್ಬರೂ 'ಅದ್ವಿಜರು', 'ತ್ರೈವರ್ಣಿಕ' 'ಶೂದ್ರ'ದ ಜೊತೆ ವೈದೃಶ್ಯವಾಗಿದೆ. ಆದರೆ ಈ ವೈದೃಶ್ಯದಲ್ಲಿ ವಿಶೇಷವಾದದ್ದೇನೂ ಇಲ್ಲ. ಈ ವೈದೃಶ್ಯ 'ಶೂದ್ರ'ನಿಗೆ ಸೀಮಿತವಾಗಿ 'ಅತಿಶೂದ್ರ'ನವರೆಗೆ ಹೋಗದೇ ಇರುವುದರಿಂದ 'ದ್ವಿಜ'ರಿಗೂ 'ಅದ್ವಿಜ'ರಿಗೂ ಇರುವ ತಾರತಮ್ಯವನ್ನೇ ಅದು ಸೂಚಿಸುತ್ತದೆ ಎಂಬುದನ್ನು ಬಿಟ್ಟರೆ ಅದು ಇನ್ನಾವ ತಾರತಮ್ಯವನ್ನೂ ಸೂಚಿಸುವುದಿಲ್ಲ. ಬಹುಶಃ ಇದಕ್ಕೆ ಕಾರಣವೆಂದರೆ ಈ ಶಬ್ದಗಳು ಒಂದು ಪ್ರತ್ಯೇಕ ವರ್ಗವಾದ ಅತಿಶೂದ್ರರು ಎಂಬ ಶಬ್ದ ಪ್ರಯೋಗವಾಗುವುದಕ್ಕೆ ಮುನ್ನವೇ ಅಸ್ತಿತ್ವಕ್ಕೆ ಬಂದಿರುವುದು.

'ಶೂದ್ರ' ಮತ್ತು 'ಅತಿ ಶೂದ್ರರು' 'ಅದ್ವಿಜ'ರೆಂಬುದನ್ನು ನೆನಪಿನಲ್ಲಿ ಇಟ್ಟುಕೊಂಡರೆ ಶೂದ್ರನನ್ನು 'ಸವರ್ಣ'ನೆಂದೂ 'ಅತಿಶೂದ್ರ'ನನ್ನು 'ಅವರ್ಣ'ನೆಂದೂ ಏಕೆ ಪರಿಗಣಿಸಲಾಯಿತು? ಮೊದಲನೆಯವನು ಏಕೆ ಚಾತುರ್ವರ್ಣ್ಯದ ಒಳಗೂ, ಕೊನೆಯವನು ಏಕೆ ಚಾತುರ್ವರ್ಣ್ಯದ ಹೊರಗೂ ಇದ್ದಾನೆ? ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು ಇವರೆಲ್ಲ ಚಾತುರ್ವರ್ಣ್ಯದ ಚೌಕಟ್ಟಿನಲ್ಲಿ ಇದ್ದಾರೆ. ಇವರೆಲ್ಲ ಸವರ್ಣೀಯರು, ಹಾಗಾದರೆ ಏಕೆ 'ಶೂದ್ರ'ನಿಗೆ ತ್ರೈವರ್ಣಿಕರ ಹಕ್ಕನ್ನು ನಿರಾಕರಿಸಲಾಯಿತು?

ಶೂದ್ರರ ಒಗಟಿಗಿಂತ ದೊಡ್ಡದಾದ ಒಗಟು ಬೇರೊಂದಿದೆಯೆ? ಖಂಡಿತವಾಗಿಯೂ ಇದು ಶೂದ್ರರು ಆರ್ಯರ ಸಮಾಜದ ನಾಲ್ಕನೆಯ 'ವರ್ಣ' ಹೇಗಾದರು, ಅವರು ಯಾರಾಗಿದ್ದರು ಎಂಬುದರ ತಪಾಸಣೆ ಮತ್ತು ವಿವರಣೆಗಳನ್ನು ಒತ್ತಾಯಿಸುತ್ತದೆ.

♦

# ಅಧ್ಯಾಯ ೨

## ಶೂದ್ರರ ಉಗಮದ ಬಗ್ಗೆ ಬ್ರಾಹ್ಮಣ ಸಿದ್ಧಾಂತ

ಶೂದ್ರರ ಉಗಮದ ಬಗ್ಗೆ ಏನಾದರೂ ವಿವರಣೆಯನ್ನು ಬ್ರಾಹ್ಮಣ ಸಾಹಿತ್ಯ ಕೊಡುತ್ತದೆಯೆ? ವಿಶ್ವ, ಮನುಷ್ಯ ಮತ್ತು ವಿವಿಧ ವರ್ಣಗಳ ಸೃಷ್ಟಿಯ ವಿಚಾರವಾಗಿ ಬ್ರಾಹ್ಮಣ ಸಾಹಿತ್ಯದಲ್ಲಿ ಪುರಾಣ ಕತೆಗಳು ತುಂಬಿವೆ ಎಂಬ ಬಗ್ಗೆ ಅನುಮಾನವಿಲ್ಲ. ಶೂದ್ರರ ಉಗಮದ ಬಗ್ಗೆ ಅವು ಏನಾದರೂ ಸೂಚನೆಯನ್ನು ಕೊಡಲಿ ಬಿಡಲಿ, ಶೂದ್ರರನ್ನು ಕುರಿತ ಎಲ್ಲ ಮಾಹಿತಿಯೂ ಒಂದೆಡೆ ಸೇರಬೇಕು, ತನ್ಮೂಲಕ ಅವರ ಕತೆ ಪೂರ್ಣವಾಗಬೇಕು ಎಂಬ ಕಾರಣಕ್ಕಾಗಿ ಶೂದ್ರರನ್ನು ಕುರಿತ ಗ್ರಂಥದಲ್ಲಿ ಅಂಥ ಎಲ್ಲ ವಾದಗಳಿಗೂ ಸ್ಥಾನವಿರಬೇಕು. ಬ್ರಾಹ್ಮಣ ಸಾಹಿತ್ಯದ ಪ್ರತಿಯೊಂದು ಭಾಗವನ್ನೂ ಪ್ರತ್ಯೇಕವಾಗಿ ತೆಗೆದುಕೊಂಡು ಅದು ಈ ವಿಷಯಕ್ಕೆ ಸಂಬಂಧಿಸಿದಂತೆ ಏನು ಕೊಡುಗೆ ನೀಡಬಲ್ಲದು ಎಂದು ಪರಿಶೀಲಿಸುವುದು ಸೂಕ್ತವಾಗುತ್ತದೆ.

### ೧

ವೇದಗಳಿಂದ ಪ್ರಾರಂಭಿಸೋಣ. ಋಗ್ವೇದದ ಬಗ್ಗೆ ಹೇಳುವುದಾದರೆ, ಹಿಂದಿನ ಅಧ್ಯಾಯದಲ್ಲಿ ಪುರುಷಸೂಕ್ತ ಎಂಬ ಸೂಕ್ತದಲ್ಲಿ ಸೃಷ್ಟಿಯನ್ನು ಕುರಿತ ದಂತಕಥೆ ಇರುವುದನ್ನು ಈಗಾಗಲೇ ನೋಡಿದ್ದೇವೆ. ಈಗ ಇತರ ವೇದಗಳಲ್ಲಿ ಇರುವ ದಂತಕಥೆಗಳನ್ನು ಪರಿಶೀಲಿಸೋಣ.

'ಯಜುರ್‌ವೇದ'ದಲ್ಲಿ ಎರಡು ಭಾಗಗಳಿವೆ: (೧) 'ಶುಕ್ಲ ಯಜುರ್‌ವೇದ' ಮತ್ತು (೨) 'ಕೃಷ್ಣ ಯಜುರ್‌ವೇದ', ಮೊದಲು 'ಶುಕ್ಲ ಯಜುರ್‌ವೇದ'ವನ್ನು ತೆಗೆದುಕೊಳ್ಳೋಣ. 'ಶುಕ್ಲ ಯಜುರ್‌ವೇದ'ದ ವಾಜಸನೇಯಿ ಸಂಹಿತ ಎರಡು ವಾದಗಳನ್ನು ಮುಂದಿಡುತ್ತದೆ. ಒಂದು ಋಗ್ವೇದದ ಪುರುಷಸೂಕ್ತದ ಪುನರುಕ್ತಿ; ಇದರಲ್ಲಿ ೨೨ ಶ್ಲೋಕಗಳಿದ್ದರೆ ಋಗ್ವೇದದ ಮೂಲದಲ್ಲಿ ೧೬ ಶ್ಲೋಕಗಳಿವೆ. ಶುಕ್ಲ ಯಜುರ್‌ವೇದದಲ್ಲಿರುವ ಅಧಿಕ ಆರು ಶ್ಲೋಕಗಳು ಈ ರೀತಿ ಇವೆ:

೧೭. ಜಲಧಿಗಳಿಂದಲೂ ಪೃಥ್ವಿಯ ಸತ್ವದಿಂದಲೂ ವಿಶ್ವಕರ್ಮನು ಆದಿಯಲ್ಲಿ ಅವನನ್ನು ಸೃಷ್ಟಿಸಿದನು. ತ್ವಷ್ಟ ಅವನಿಗೆ ರೂಪವನ್ನು ಕೊಟ್ಟನು; ಆದಿಯಲ್ಲಿ ಎಲ್ಲ ದಿಕ್ಕಿನಿಂದಲೂ ಅದೇ ಪುರುಷನ ವಿಶ್ವವಾಯಿತು.

೧೮. ತಮಸ್ಸಿನ ಆಚೆಗಿರುವ ಸೂರ್ಯ ವರ್ಣದ ಈ ಪುರುಷನನ್ನು ನಾನು ಬಲ್ಲೆ. ಅವನನ್ನು ತಿಳಿಯುವುದರಿಂದ ಮಾತ್ರ ಮೃತ್ಯುವನ್ನು ದಾಟಬಹುದು; ಇದನ್ನು ಬಿಟ್ಟರೆ ಬೇರೆ ಮಾರ್ಗವಿಲ್ಲ.

೧೯. ಪ್ರಜಾಪತಿ ಗರ್ಭದ ಒಳಗೆ ಚಲಿಸುತ್ತಾನೆ; ಅವನು ಅಜಾತನಾದರೂ ಅನೇಕ ರೂಪಗಳಲ್ಲಿ ಜನಿಸಿದ್ದಾನೆ. ಜ್ಞಾನಿಗಳು ಅವನ ಮೂಲವನ್ನು ಬಲ್ಲರು; ಜ್ಞಾನಿಗಳು ಮಾರೀಚಿಗಳ ಸ್ಥಾನವನ್ನು ಬಯಸುತ್ತಾರೆ.

೨೦. ಯಾರು ದೇವತೆಗಳಿಗಾಗಿ ಪ್ರಕಾಶಿಸುತ್ತಾನೊ, ಯಾರು ದೇವತೆಗಳ ಪುರೋಹಿತನಾಗಿದ್ದಾನೊ, ಯಾರು ದೇವತೆಗಳಿಗಿಂತ ಮೊದಲು ಹುಟ್ಟಿದನೊ – ಆ ಪ್ರಕಾಶಮಾನವಾದ ಬ್ರಹ್ಮ

ಸಂತಾನಕ್ಕೆ ನಮನಗಳು.

೨೧. ಈ ಪ್ರಕಾಶಮಾನವಾದ ಬ್ರಹ್ಮ ಸಂತಾನವನ್ನು ದೇವತೆಗಳು ನೋಡಿ ಆದಿಯಲ್ಲಿ ಹೀಗೆ ಹೇಳಿದರು: "ಇದನ್ನು ಅರಿತ ಬ್ರಾಹ್ಮಣನಿಗೆ,–ದೇವತೆಗಳು ಅವನ ವಶದಲ್ಲಿರುತ್ತಾರೆ."

೨೨. ಶ್ರೀ ಮತ್ತು ಲಕ್ಷ್ಮಿ ಅವನ ಪತ್ನಿಯರು; ಹಗಲು ರಾತ್ರಿ ಅವನ ಪಾರ್ಶ್ವಗಳು; ನಕ್ಷತ್ರಗಳು ಅವನ ಆಭರಣ; ಅಶ್ವಿನಿಗಳು ಅವನ ಹೊಳೆಯುವ ಮುಖ. ನನ್ನ ಆಸೆಗಳನ್ನು ಈಡೇರಿಸು; ನನಗೆ ಅದನ್ನು ದಯಪಾಲಿಸು; ನನಗೆ ಎಲ್ಲವನ್ನೂ ದಯಪಾಲಿಸು.

ವಾಜಸನೇಯಿ ಸಂಹಿತೆಯಲ್ಲಿರುವ ಎರಡನೆಯ ವಿವರಣೆ ಪುರುಷಸೂಕ್ತಕ್ಕಿಂತ ಸಂಪೂರ್ಣವಾಗಿ ಭಿನ್ನವಾಗಿದೆ. ಅದು ಮುಂದಿನಂತಿದೆ:

ವಾ.ಸಂ. ೧೪. ೨೮[೧]–"ಅವನು ಒಂದು ಸ್ತೋತ್ರ ಮಾಡಿದನು, ಜೀವ ಸಂತತಿಗಳು ಹುಟ್ಟಿದವು. ಅವನು ಮೂರು ಸ್ತೋತ್ರಗಳನ್ನು ಮಾಡಿದನು, ಬ್ರಹ್ಮದ ಸೃಷ್ಟಿಯಾಯಿತು; 'ಬ್ರಾಹ್ಮಣಸ್ಪತಿ' ಅಧಿಪತಿಯಾದನು. ಅವನು ಐದು ಸ್ತೋತ್ರಗಳನ್ನು ಮಾಡಿದನು, ವಿಶ್ವದ ರಚನೆಯಾಯಿತು; ಭೂತಾನಾಂಪತಿ ಅಧಿಪತಿಯಾದನು. ಅವನು ಏಳು ಸ್ತೋತ್ರಗಳನ್ನು ಮಾಡಿದನು, ಸಪ್ತರ್ಷಿಗಳು ಹುಟ್ಟಿದರು; ಧಾತ್ರಿ ಅಧಿಪತಿಯಾದನು. ಅವನು ಒಂಬತ್ತು ಸ್ತೋತ್ರಗಳನ್ನು ಮಾಡಿದನು, ಪಿತೃಗಳು ಹುಟ್ಟಿದರು; ಅದಿತಿ ಅಧಿಪತಿಯಾದಳು. ಅವನು ಹನ್ನೊಂದು ಸ್ತೋತ್ರಗಳನ್ನು ಮಾಡಿದನು, ಋತುಗಳು ರಚನೆಯಾದುವು; ಆರ್ತವಸ ಅಧಿಪತಿಗಳಾದರು. ಅವನು ಹದಿಮೂರು ಸ್ತೋತ್ರಗಳನ್ನು ಮಾಡಿದನು, ಮಾಸಗಳು ಸೃಷ್ಟಿಯಾದವು; ಸಂವತ್ಸರ ಅಧಿಪತಿಯಾಯಿತು. ಅವನು ಹದಿನೈದು ಸ್ತೋತ್ರಗಳನ್ನು ಮಾಡಿದನು, ಕ್ಷತ್ರಿಯರು ಹುಟ್ಟಿದರು; ಇಂದ್ರನು ಅಧಿಪತಿಯಾದನು. ಅವನು ಹದಿನೇಳು ಸ್ತೋತ್ರಗಳನ್ನು ಮಾಡಿದನು. ಪ್ರಾಣಿಗಳು ಸೃಷ್ಟಿಯದವು, ಬೃಹಸ್ಪತಿ ಅಧಿಪತಿಯಾದನು; ಅವನು ಹತ್ತೊಂಬತ್ತು ಸ್ತೋತ್ರಗಳನ್ನು ಮಾಡಿದನು, ಶೂದ್ರ ಮತ್ತು ಆರ್ಯ ವೈಶ್ಯರು ಹುಟ್ಟಿದರು. ಹಗಲು ರಾತ್ರಿ ಅಧಿಪತಿಯಾದವು. ಅವನು ಇಪ್ಪತ್ತೊಂದು ಸ್ತೋತ್ರಗಳನ್ನು ಮಾಡಿದನು, ಒಂದೇಗೊರಸಿನ ಪ್ರಾಣಿಗಳು ಸೃಷ್ಟಿಯಾದವು; ವರುಣ ಅಧಿಪತಿಯಾದನು. ಅವನು ಇಪ್ಪತ್ತುಮೂರು ಸ್ತೋತ್ರಗಳನ್ನು ಮಾಡಿದನು, ಸಣ್ಣ ಪ್ರಾಣಿಗಳು ಸೃಷ್ಟಿಯಾದವು; ಪೂಷನ್ ಅಧಿಪತಿಯಾದನು. ಅವನು ಇಪ್ಪತ್ತೈದು ಸ್ತೋತ್ರ ಮಾಡಿದನು, ಕ್ರೂರ ಪ್ರಾಣಿಗಳು ಸೃಷ್ಟಿಯಾದವು; ವಾಯು ಅಧಿಪತಿಯಾದನು (ಹೋಲಿಸಿ : ಋಗ್ವೇದ ೧೦.೯೦.೮). ಅವನು ಇಪ್ಪತ್ತೇಳು ಸ್ತೋತ್ರಗಳನ್ನು ಮಾಡಿದನು, ಸ್ವರ್ಗ ಮತ್ತು ಭೂಮಿ ಬೇರೆ ಬೇರೆಯಾದವು; ವಸ್ತುಗಳು, ರುದ್ರರು ಮತ್ತು ಆದಿತ್ಯರು ಅದೇ ರೀತಿಯಲ್ಲಿ ಬೇರೆ ಬೇರೆಯಾದರು, ಅವರೇ ಅಧಿಪತಿಗಳಾದರು. ಅವನು ಮೂವತ್ತೊಂದು ಸ್ತೋತ್ರಗಳನ್ನು ಮಾಡಿದನು, ಸಜೀವ ವಸ್ತುಗಳು ಸೃಷ್ಟಿಯಾದವು; ಕೃಷ್ಣ ಪಕ್ಷ ಮತ್ತು ಶುಕ್ಲ ಪಕ್ಷ ಅಧಿಪತಿಗಳಾದವು. ಅವನು ಮೂವತ್ತ್ಮೂರು ಸ್ತೋತ್ರಗಳನ್ನು ಮಾಡಿದನು, ಎಲ್ಲವೂ ಶಾಂತಸ್ಥಿತಿಗೆ ಬಂದವು; ಪ್ರಜಾಪತಿ ಪರಮೇಷ್ಠಿ ಅಧಿಪತಿಯಾದನು.

ಈಗ ಕೃಷ್ಣ ಯಜುರ್‌ವೇದವನ್ನು ನೋಡೋಣ. ಈ ಕೃಷ್ಣ ಯಜುರ್‌ವೇದದ ತೈತ್ತಿರೀಯ ಸಂಹಿತೆ ಐದು ವಿವರಣೆಗಳನ್ನು ಕೊಡುತ್ತದೆ. IV.೩.೧೦.ರಲ್ಲಿ ಇರುವುದು ಶುಕ್ಲಯಜುರ್ವೇದದಲ್ಲಿ ಬರುವ (XIV.೨೮.) ವಾಜಸನೇಯಿ ಸಂಹಿತೆಯಲ್ಲಿ ಹೇಳಿರುವುದೇ ಆಗಿದೆ; ಇದನ್ನು ಈಗಾಗಲೇ ಉಲ್ಲೇಖಿಸಲಾಗಿದೆ. ಶೂದ್ರನ ಉಗಮದ ಬಗ್ಗೆ ಉಳಿದವು ವಿವರಿಸುವುದನ್ನು ಈ ಮುಂದೆ ದಾಖಲಿಸಲಾಗಿದೆ.

---

೧. Muir, Vol. I , p. 18

ತೈ.ಸಂ. ೧೧.೪.೧೩.೧.[೧]–"ರಾಜನ್ಯ ಗರ್ಭದಲ್ಲಿದ್ದಾಗಲೇ ದೇವತೆಗಳು ಅವನ ಬಗ್ಗೆ ಭಯಭೀತರಾದರು. ಅವನು ಗರ್ಭದಲ್ಲಿದ್ದಾಗಲೇ ಅವನನ್ನು ಪಾಶಗಳಿಂದ ಬಂಧಿಸಿದರು. ತತ್ಪರಿಣಾಮವಾಗಿ ಈ ರಾಜನ್ಯ ಬಂಧಿತನಾಗಿಯೇ ಜನಿಸಿದನು. ಅವನು ಬಂಧನರಹಿತವಾಗಿ ಹುಟ್ಟಿದ್ದರೆ ತನ್ನ ಶತ್ರುಗಳನ್ನು ಅವನು ಕೊಲ್ಲುತ್ತಾ ಹೋಗುತ್ತಿದ್ದನು. ರಾಜನ್ಯ ನಿರ್ಬಂಧಿತನಾಗಿ ಜನಿಸಿ ತನ್ನ ಶತ್ರುಗಳನ್ನು ವಧಿಸುತ್ತಾ ಹೋಗಲೆಂದು ಆಶಿಸುವವರು ಐಂದ್ರ ಬಾರ್ಹಸ್ಪತ್ಯ ಆಹುತಿಯನ್ನು ಅವನಿಗೆ ಅರ್ಪಿಸಲಿ. ರಾಜನ್ಯನಿಗೆ ಇಂದ್ರನ ವ್ಯಕ್ತಿತ್ವವಿದೆ, ಬ್ರಹ್ಮನ್ ಎಂದರೆ ಬೃಹಸ್ಪತಿ. ಈ ಬ್ರಹ್ಮನ್‌ನಿಂದ ರಾಜನ್ಯನನ್ನು ಬಂಧನದಿಂದ ಯಾರೇ ಆಗಲಿ ಬಿಡುಗಡೆ ಮಾಡುತ್ತಾನೆ. ಸ್ವರ್ಣಪಾಶವೆಂಬ ವರದಾನವು ಅವನನ್ನು ಸಂಕೋಲೆಯಿಂದ ಸಂಪೂರ್ಣವಾಗಿ ಬಿಡುಗಡೆ ಮಾಡುತ್ತದೆ."

(೨) ತೈ.ಸಂ. ೭.೧.೧.೪.[೨]–'ತಾನು ಸಂತಾನೋತ್ಪತ್ತಿ ಮಾಡಬೇಕೆಂದು ಪ್ರಜಾಪತಿ ಇಷ್ಟಪಟ್ಟನು. ತನ್ನ ಬಾಯಿಂದ ಅವನು ತ್ರಿವೃತ (ಸ್ತೋಮ)ವನ್ನು ರೂಪಿಸಿದನು. ಅದರಿಂದ ಅಗ್ನಿದೇವನನ್ನು, ಗಾಯತ್ರಿ ಛಂದಸ್ಸನ್ನು ಸಾಮನ್ ಎಂಬ ರಥಾಂತರವನ್ನೂ, ಮನುಷ್ಯರಲ್ಲಿ ಬ್ರಾಹ್ಮಣರನ್ನೂ, ಪ್ರಾಣಿಗಳಲ್ಲಿ ಮೇಕೆಗಳನ್ನೂ ಸೃಷ್ಟಿಸಿದನು. ಅವನ ಮುಖದಿಂದ ಸೃಷ್ಟಿಯಾದುದರಿಂದ ಅವುಗಳನ್ನು ಮುಖ್ಯವೆಂದು ಪರಿಗಣಿಸಲಾಗಿದೆ. ಅವನು ತನ್ನ ಎದೆಯಿಂದಲೂ, ತೋಳುಗಳಿಂದಲೂ ಪಂಚದಶರನ್ನು (ಸ್ತೋಮ) ರೂಪಿಸಿದನು. ಅದರಿಂದ ದೇವತೆಗಳಲ್ಲಿ ಇಂದ್ರನನ್ನೂ, ತ್ರಿಷ್ಟುಭ್ ಛಂದಸ್ಸನ್ನೂ, ಸಾಮನ್ ಎಂಬ ಬೃಹತ್‌ಅನ್ನೂ, ಮಾನವರಲ್ಲಿ ರಾಜನ್ಯರನ್ನೂ, ಪ್ರಾಣಿಗಳಲ್ಲಿ ಕುರಿಗಳನ್ನೂ ಸೃಷ್ಟಿಸಿದನು. ಅವು ಶೌರ್ಯದಿಂದ ಸೃಷ್ಟಿಯಾದುದರಿಂದ ಅವು ಶೌರ್ಯವಂತವಾಗಿವೆ. ಅವನು ತನ್ನ ಮಧ್ಯದಿಂದ ಸಪ್ತದಶ (ಸ್ತೋಮ)ವನ್ನು ರೂಪಿಸಿದನು. ಅದರಿಂದ ವಿಶ್ವದೇವರೆಂಬ ದೇವತೆಗಳನ್ನೂ, ಜಗತಿ ಛಂದಸ್ಸನ್ನೂ, ಸಾಮನ್ ಎಂಬ ವೈರೂಪ್ಯವನ್ನೂ, ಮಾನವರಲ್ಲಿ ವೈಶ್ಯರನ್ನೂ, ಪ್ರಾಣಿಗಳಲ್ಲಿ ಗೋವುಗಳನ್ನೂ ಸೃಷ್ಟಿಸಿದನು. ಅವು ಆಹಾರ(ಜಠರ)ಕೋಶದಿಂದ ಸೃಷ್ಟಿಯಾದುದರಿಂದ ಅವುಗಳನ್ನು ತಿನ್ನಬೇಕು. ಸಪ್ತದಶದಿಂದ ಅನೇಕಾನೇಕ ದೇವತೆಗಳು ಸೃಷ್ಟಿಯಾದುದರಿಂದಲೇ ಅವರು ಇತರರಿಗಿಂತ ಅಸಂಖ್ಯಾತರಾಗಿದ್ದಾರೆ. ತನ್ನ ಪಾದದಿಂದ ಅವನು ಏಕವಿಂಶ (ಸ್ತೋಮ)ವನ್ನು ರೂಪಿಸಿದನು. ಅದರಿಂದ ಅನುಷ್ಟುಪ್ ಛಂದಸ್ಸನ್ನು, ಸಾಮನ್ ಎಂಬ ವೈರಾಜವನ್ನೂ, ಮಾನವರಲ್ಲಿ ಶೂದ್ರನನ್ನೂ, ಪಶುಗಳಲ್ಲಿ ಅಶ್ವವನ್ನೂ ಸೃಷ್ಟಿಸಿದನು. ಆದ್ದರಿಂದಲೇ ಇವೆರಡು ಅಂದರೆ ಅಶ್ವ ಮತ್ತು ಶೂದ್ರ ಇತರ ಪ್ರಾಣಿಗಳ ವಾಹಕರಾಗಿದ್ದಾರೆ. ಆದ್ದರಿಂದಲೇ ಶೂದ್ರ ಯಜ್ಞಕ್ಕೆ ಅಸಮರ್ಥನಾಗಿದ್ದಾನೆ, ಏಕೆಂದರೆ ಏಕವಿಂಶದಿಂದ ಯಾವ ದೇವತೆಗಳೂ ಸೃಷ್ಟಿಯಾಗಲಿಲ್ಲ. ಹಾಗಾಗಿ ಇವು ತಮ್ಮ ಪಾದಗಳಿಂದಲೇ ಬದುಕಬೇಕಾಗಿದೆ, ಏಕೆಂದರೆ ಇವು ಪಾದದಿಂದಲೇ ಸೃಷ್ಟಿಯಾಗಿವೆ."

ಅರ್ಥವೇದಕ್ಕೆ ಬಂದರೆ ಅಲ್ಲಿ ನಾಲ್ಕು ವಿವರಣೆಗಳಿವೆ. ಅವುಗಳಲ್ಲಿ ಒಂದು ಋಗ್ವೇದದ ಪುರುಷಸೂಕ್ತದ ಹಾಗೇ ಇದೆ. ಅದು ೧೯.೯ರಲ್ಲಿ ಬರುತ್ತದೆ. ಉಳಿದವುಗಳನ್ನು ಮುಂದೆ ಕೊಡಲಾಗಿದೆ:

(೧) ಅ.ವೇ.,[೩] ೪.೯.೧.–"ಬ್ರಹ್ಮ ಮೊದಲು ಹತ್ತು ತಲೆಗಳಿಂದಲೂ ಹತ್ತು ಮುಖಗಳಿಂದಲೂ ಹುಟ್ಟಿದನು. ಅವನು ಮೊದಲು ಸೋಮವನ್ನು ಕುಡಿದನು; ಅವನು ವಿಷವನ್ನು ದುರ್ಬಲಗೊಳಿಸಿದನು."

---

೧. Muir, Vol. I, p. 22

೨. Muir, Vol. I, p. 16

೩. Muir, Vol. I, p. 21

(೨) ಅ.ವೇ.,[೧] ೧೫.೮.೧೦–"ಅವನು (ವ್ರಾತ್ಯ) ಕೋಪಾವಿಷ್ಟನಾದನು, ಅದರಿಂದ ರಾಜನ್ಯ ಜನಿಸಿದನು."

(೩) ಅ.ವೇ.,[೨] ೧೫.೯.೧ –"ರಾಜನ ಮನೆಗೆ ಈ ವ್ರಾತ್ಯ ಅತಿಥಿಯಾಗಿ ಆಗಮಿಸಿದರೆ ಅವನನ್ನು ಶ್ರೇಷ್ಠನೆಂದು ಗೌರವಿಸಬೇಕು. ಹಾಗೆ ಮಾಡುವುದರಿಂದ ಅವನು ತನ್ನ ರಾಜಪದವಿಗೆ ಅಥವಾ ತನ್ನ ರಾಜ್ಯಕ್ಕೆ ಹಾನಿಯುಂಟು ಮಾಡುವುದಿಲ್ಲ. ಅವನಿಂದಲೇ ಬ್ರಾಹ್ಮಣ ಮತ್ತು ಕ್ಷತ್ರಿಯರು ಉದಿಸಿದರು. 'ನಾವು ಯಾರನ್ನು ಪ್ರವೇಶಿಸೋಣ' ಎಂದು ಇತ್ಯಾದಿಯಾಗಿ ಅವರು ಹೇಳಿದರು.

## ೨

ಈಗ ಬ್ರಾಹ್ಮಣಗಳಿಗೆ ಹೋಗೋಣ. ಶತಪಥ ಬ್ರಾಹ್ಮಣದಲ್ಲಿ ಆರು ವಿವರಣೆಗಳಿವೆ. ಅವುಗಳಲ್ಲಿ ಎರಡು ವರ್ಣಗಳ ಉಗಮಕ್ಕೆ ಸಂಬಂಧಿಸಿವೆ. ಅವೆರಡರಲ್ಲಿ ಒಂದು ಅಂದರೆ ಶೂದ್ರನ ಉಗಮವನ್ನು ವಿವರಿಸುವುದನ್ನು ಮುಂದೆ ಕೊಡಲಾಗಿದೆ.

ಶ.ಬ್ರಾ.[೩] ೧೪.೪.೨.೨೩ –"ಬ್ರಹ್ಮ (ಇಲ್ಲಿ, ಭಾಷ್ಯಕಾರನ ಪ್ರಕಾರ, ಅಗ್ನಿರೂಪದಲ್ಲಿದ್ದಾನೆ, ಬ್ರಾಹ್ಮಣ ಜಾತಿಯನ್ನು ಪ್ರತಿನಿಧಿಸುತ್ತಾನೆ) ಮೊದಲಿಗೆ ಈ (ವಿಶ್ವದಲ್ಲಿ), ಏಕೈಕನಾಗಿದ್ದ. ಏಕವಾದ್ದರಿಂದ ಅದು ಬೆಳೆಯಲಿಲ್ಲ. ಅದು ಉತ್ಕೃಷ್ಟ ರೂಪವಾದ ಕ್ಷಾತ್ರವನ್ನು ಬಲಿಷ್ಠವಾಗಿ ಸೃಷ್ಟಿಸಿತು, ಅಂದರೆ ದೇವತೆಗಳಲ್ಲಿ ಇರುವ ಶಕ್ತಿಗಳಿಂದ (ಕ್ಷತ್ರಾಣಿ) ಇಂದ್ರ, ವರುಣ, ಸೋಮ, ರುದ್ರ, ಪರ್ಜನ್ಯ, ಯಮ, ಮೃತ್ಯು, ಈಶಾನ. ಆದ್ದರಿಂದ ಕ್ಷಾತ್ರಕ್ಕಿಂತ ಶ್ರೇಷ್ಠವಾದುದು ಯಾವುದೂ ಇಲ್ಲ. ಆದ್ದರಿಂದಲೇ ರಾಜಸೂಯ ಯಾಗದಲ್ಲಿ ಕ್ಷತ್ರಿಯನಿಗಿಂತ ಕೆಳಸ್ಥಾನದಲ್ಲಿ ಬ್ರಾಹ್ಮಣ ಕೂರುತ್ತಾನೆ; ಅವನು ಆ ಮಹಿಮೆಯನ್ನು ಕ್ಷಾತ್ರನ (ರಾಜಶಕ್ತಿ) ಮೇಲೆ ಪ್ರದಾನ ಮಾಡುತ್ತಾನೆ. ಬ್ರಹ್ಮವೇ ಕ್ಷಾತ್ರನ ಮೂಲ. ಹಾಗಾಗಿ ರಾಜ ಅತ್ಯುನ್ನತ ಸ್ಥಾನದಲ್ಲಿದ್ದರೂ ತನ್ನ ಮೂಲಕ್ಕೆ ಬ್ರಾಹ್ಮಣನೇ ಕಾರಣವೆಂದು ಅವನಿಗೆ ಮೊರೆಹೋಗುತ್ತಾನೆ. ಯಾರು ಅವನನ್ನು (ಬ್ರಹ್ಮನನ್ನು) ನಾಶಮಾಡುತ್ತಾನೋ ಅವನು ತನ್ನ ಮೂಲ ಸ್ರೋತವನ್ನೇ ನಾಶಮಾಡಿಕೊಳ್ಳುತ್ತಾನೆ. ಶ್ರೇಷ್ಠನನ್ನು ಘಾಸಿಗೊಳಿಸಿದವನಂತೆ ಅವನು ಅತ್ಯಂತ ಚಿಂತಾಜನಕ ವ್ಯಕ್ತಿಯಾಗುತ್ತಾನೆ. ಅವನು ಬೆಳೆಯುವುದಿಲ್ಲ. ಅವನು ವಿಶ್ ಅಂದರೆ ದೇವತೆಗಳಲ್ಲಿ ಗಣಗಳೆಂದು ಪರಿಗಣಿಸಲ್ಪಟ್ಟಿರುವ ವಸುಗಳು, ರುದ್ರರು, ಆದಿತ್ಯರು, ವಿಶ್ವೇದೇವರು, ಮರುತರು ಎಂಬ ವರ್ಗಗಳನ್ನು ಸೃಷ್ಟಿಸಿದನು. ಈ ಭೂಮಿಯು ಪೂಶನ್, ಏಕೆಂದರೆ ಅವಳು ಎಲ್ಲ ಜೀವ ಸಂತತಿಗೂ ಪೋಷಣೆ ಮಾಡುತ್ತಾಳೆ. ಅವನು ಬೆಳೆಯಲಿಲ್ಲ. ಅವನು ಉತ್ಕೃಷ್ಟ ರೂಪವಾದ ಧರ್ಮವನ್ನು ಶಕ್ತಿಯುತವಾಗಿ ಸೃಷ್ಟಿಸಿದನು. ಇದೇ ಕ್ಷಾತ್ರದ ಒಡೆಯನಾದ ಧರ್ಮ. ಆದ್ದರಿಂದ ಧರ್ಮಕ್ಕಿಂತ ಶ್ರೇಷ್ಠವಾದುದು ಯಾವುದೂ ಇಲ್ಲ. ಆದ್ದರಿಂದಲೇ ದುರ್ಬಲನಾದವನು ಪ್ರಬಲನಾದವನನ್ನು ಧರ್ಮದ ಮೂಲಕ ರಾಜನಂತೆ ಗೆಲ್ಲಲು ಆಶಿಸುತ್ತಾನೆ. ಈ ಧರ್ಮವೇ ಸತ್ಯ. ತತ್ಪರಿಣಾಮವಾಗಿ ಯಾರು ಸತ್ಯವನ್ನು ನುಡಿಯುತ್ತಾನೋ ಅವನು ಧರ್ಮವನ್ನು ಹೇಳುತ್ತಾನೆ ಎಂದು ಹೇಳುವುದು ಪ್ರತೀತಿ. ಏಕೆಂದರೆ ಇದು ಈ ಎರಡೂ ಆಗಿದೆ. ಇದೇ ಬ್ರಹ್ಮ, ಕ್ಷಾತ್ರ, ವಿಶ್ ಮತ್ತು ಶೂದ್ರ ಆಗಿದೆ. ಇದು ಅಗ್ನಿಯ ಮುಖಾಂತರ

---

೧. Muir, Vol. I, p. 22

೨. Muir, Vol. I, p. 22

೩. Muir, Vol. I, p. 20

ದೇವತೆಗಳಲ್ಲಿ ಬ್ರಹ್ಮವಾಯಿತು ಮಾನವರಲ್ಲಿ ಬ್ರಾಹ್ಮಣವಾಯಿತು, (ದೇವ) ಕ್ಷತ್ರಿಯನ ಮೂಲಕ (ಮಾನವ) ಕ್ಷತ್ರಿಯನಾಯಿತು, (ದೇವ) ವೈಶ್ಯನ ಮೂಲಕ (ಮಾನವ) ವೈಶ್ಯನಾಯಿತು, (ದೇವ) ಶೂದ್ರನ ಮೂಲಕ (ಮಾನವ) ಶೂದ್ರನಾಯಿತು. ಆದ್ದರಿಂದಲೇ ದೇವತೆಗಳಲ್ಲಿ ಅಗ್ನಿಯನ್ನು, ಮಾನವರಲ್ಲಿ ಬ್ರಾಹ್ಮಣನನ್ನೂ ಜನ ಆಶ್ರಯಿಸುತ್ತಾರೆ."

ತೈತ್ತಿರೀಯ ಬ್ರಾಹ್ಮಣ ಮುಂದಿನ ವಿವರಣೆಗಳನ್ನು ನೀಡುತ್ತದೆ.

೧) ತೈ.ಬ್ರಾ[೧] ೧.೨.೬.೭. – "ಬ್ರಾಹ್ಮಣ ಜಾತಿ ದೇವತೆಗಳಿಂದ ಉದ್ಭವಿಸಿತು; ಶೂದ್ರರು ಅಸುರರಿಂದ ಬಂದರು."

೨) ತೈ.ಬ್ರಾ.[೨] ೩.೨.೩.೯. –"ಈ ಶೂದ್ರ ಅವಾಸ್ತವದಿಂದ ಅಥವಾ ಶೂನ್ಯದಿಂದ ಉದಿಸಿದ್ದಾನೆ."

## ೩

ನಾಲ್ಕು ವರ್ಣಗಳು ಮತ್ತು ಶೂದ್ರರ ಹುಟ್ಟಿನ ಬಗ್ಗೆ ಬ್ರಾಹ್ಮಣರ ವಾದಗಳೆಲ್ಲವನ್ನೂ ಇಲ್ಲಿ ಸಮಗ್ರವಾಗಿ ಸಂಗ್ರಹಿಸಲಾಗಿದೆ. ನಾಲ್ಕು ವರ್ಣಗಳ ಉಗಮ ಅಸಾಮಾನ್ಯ ಮತ್ತು ಅಸಾಧಾರಣವಾದ ಸಾಮಾಜಿಕ ಸಂಗತಿ, ಅದರಲ್ಲಿ ಶೂದ್ರನ ಸ್ಥಾನ ತೀರಾ ಅಸ್ವಾಭಾವಿಕವಾದುದು, ಆದ್ದರಿಂದ ಸ್ವಲ್ಪ ವಿವರಣೆ ಅಗತ್ಯ ಎಂಬ ವಸ್ತುಸ್ಥಿತಿಯ ಸ್ಪಷ್ಟವಾದ ಅರಿವು ಪ್ರಾಚೀನ ಬ್ರಾಹ್ಮಣರಿಗೆ ಇತ್ತು, ಅಲ್ಲದಿದ್ದರೆ ಚಾತುರ್ವರ್ಣ್ಯ ಮತ್ತು ಶೂದ್ರರ ಉಗಮದ ಬಗ್ಗೆ ಇಷ್ಟೊಂದು ಅಸಂಖ್ಯಾತ ಪ್ರಯತ್ನಗಳನ್ನು ವಿವರಿಸುವುದು ಕಷ್ಟವಾಗುತ್ತದೆ.

ಆದರೆ ಈ ವಿವರಣೆಗಳ ಬಗ್ಗೆ ಏನು ಹೇಳಬಹುದು? ಅವುಗಳ ವೈವಿಧ್ಯ ಸಂಪೂರ್ಣವಾಗಿ ಗಾಬರಿ ಹುಟ್ಟಿಸುವಂಥದ್ದು. ನಾಲ್ಕು ವರ್ಣಗಳ ಉಗಮಕ್ಕೆ 'ಪುರುಷ'ನೇ ಕಾರಣ ಎಂದು ಕೆಲವರೂ, ಅವುಗಳ ಉಗಮಕ್ಕೆ ಬ್ರಹ್ಮವೇ ಕಾರಣ ಎಂದು ಕೆಲವರೂ, ಇನ್ನು ಕೆಲವರು ಪ್ರಜಾಪತಿ ಎಂದೂ, ಮತ್ತೆ ಕೆಲವರು ವ್ರಾತ್ಯ ಕಾರಣವೆಂದೂ ಆರೋಪಿಸುತ್ತಾರೆ. ಒಂದೇ ಮೂಲ ಭಿನ್ನ ವಿವರಣೆಗಳನ್ನು ನೀಡುತ್ತದೆ. ಶುಕ್ಲ ಯಜುರ್ವೇದದಲ್ಲಿ ಎರಡು ವಿವರಣೆಗಳಿವೆ: ಒಂದು ಪುರುಷನಿಗೆ ಸಂಬಂಧಿಸಿದೆ, ಇನ್ನೊಂದು ಪ್ರಜಾಪತಿಗೆ ಸಂಬಂಧಿಸಿದೆ, ಮೂರನೆಯದು ಬ್ರಹ್ಮನಿಗೆ ಸಂಬಂಧಿಸಿದೆ. ಅಥರ್ವವೇದದಲ್ಲಿ ನಾಲ್ಕು ವಿವರಣೆಗಳಿವೆ, ಒಂದು ಪುರುಷನಿಗೆ ಸಂಬಂಧಿಸಿದೆ, ಎರಡನೆಯದು ಬ್ರಹ್ಮಕ್ಕೆ, ಮೂರನೆಯದು ವ್ರಾತ್ಯಕ್ಕೆ, ನಾಲ್ಕನೆಯದು ಈ ಮೂರಕ್ಕಿಂತ ಸಂಪೂರ್ಣವಾಗಿ ಭಿನ್ನವಾಗಿದೆ. ವಾದ ಏಕರೀತಿಯಲ್ಲಿದ್ದರೂ ಕೂಡ ವಿವರಣೆಗಳು ಏಕರೀತಿಯಲ್ಲಿ ಇಲ್ಲ. ಪ್ರಜಾಪತಿ ಅಥವಾ ಬ್ರಹ್ಮಕ್ಕೆ ಸಂಬಂಧಿಸಿದ ಕೆಲವು ವಿವರಣೆಗಳು ದೈವಶಾಸ್ತ್ರೀಯವಾಗಿವೆ. ಉಳಿದವು ಮನು ಅಥವಾ ಕಾಶ್ಯಪರಿಗೆ ಸಂಬಂಧಿಸಿದ್ದು ಮಾನವಶಾಸ್ತ್ರೀಯವಾಗಿವೆ. ಇದು ಕಂಡಾಬಟ್ಟೆ ಕಲ್ಪನೆಯಾಯಿತು. ಅವುಗಳಲ್ಲಿ ಇತಿಹಾಸವೂ ಇಲ್ಲ, ವಿವೇಕವೂ ಇಲ್ಲ. ಬ್ರಾಹ್ಮಣಗಳ ಬಗ್ಗೆ ವ್ಯಾಖ್ಯಾನಿಸುತ್ತಾ ಪ್ರೊ. ಮ್ಯಾಕ್ಸ್ ಮುಲ್ಲರ್ ಹೇಳಿರುವುದನ್ನು ನೋಡಿ:

"ಭಾರತೀಯ ಮನಸ್ಸಿನ ಇತಿಹಾಸದಲ್ಲಿ ಬ್ರಾಹ್ಮಣಗಳು ಅತ್ಯಂತ ಸ್ವಾರಸ್ಯಕರ ಘಟ್ಟವನ್ನು ಪ್ರತಿನಿಧಿಸುತ್ತವೆ ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಅವುಗಳನ್ನು ಸಾಹಿತ್ಯಕ ಸೃಷ್ಟಿಗಳೆಂದು ತೀರ್ಮಾನಿಸಿದರೆ ಅವು ತೀರಾ ನಿರಾಶಾದಾಯಕವಾಗಿವೆ. ಅಷ್ಟೊಂದು ಪ್ರಾಚೀನ ಕಾಲದಲ್ಲೇ ಸಮಾಜ ಅಷ್ಟೊಂದು ಆದಿಮಾನವ

---

೧. Muir, Vol. I, p. 21

೨. Muir, Vol. I, p. 21

ಸ್ಥಿತಿಯಲ್ಲಿದ್ದಾಗಲೇ ಬೇರೆಲ್ಲೂ ಹೋಲಿಕೆಗೆ ಸಿಗದ ಒಣಪಾಂಡಿತ್ಯ ಮತ್ತು ಸಂಪೂರ್ಣ ಅಸಾಂಗತ್ಯ ತುಂಬಿದ ಸಾಹಿತ್ಯ ಉದ್ಭವಿಸಿತು. ಗಮನ ಸೆಳೆಯುವ ಚಿಂತನೆ, ಆಲೋಚನೆ, ದಿಟ್ಟ ಅಭಿವ್ಯಕ್ತಿ, ಸ್ವಸ್ಥ ವಿಚಾರ, ಕುತೂಹಲಕರ ಸಂಪ್ರದಾಯಗಳಿಗೆ, ಈ ಕೃತಿಗಳಲ್ಲಿ ಬರವಿಲ್ಲ. ಆದರೆ ಇವು ಮುಂಡಭಾಗದ ಅವಶೇಷಗಳಂತಿವೆ, ಹಿತ್ತಾಳೆ ಮತ್ತು ಸೀಸದಲ್ಲಿ ಹುದುಗಿದ ಅಮೂಲ್ಯ ರತ್ನಗಳಂತಿವೆ. ಅಲ್ಪಮತಿಯ ನೀರಸ ವಾಗಾಡಂಬರ ಪುರೋಹಿತ ಕುತಂತ್ರ, ಹಳೆಯ ಒಣ ಪಾಂಡಿತ್ಯಗಳು ಈ ಕೃತಿಗಳ ಸಾಮಾನ್ಯ ಲಕ್ಷಣವಾಗಿವೆ. ಒಂದು ರಾಷ್ಟ್ರದ ಯೌವ್ವನೋದಯ ಮತ್ತು ಆರೋಗ್ಯಕರ ಬೆಳವಣಿಗೆಯನ್ನು ಪೌರೋಹಿತ್ಯ ಮತ್ತು ಮೂಢ ನಂಬಿಕೆಗಳು ಹಾಳುಮಾಡುತ್ತವೆಂಬುದನ್ನು ಇತಿಹಾಸಕಾರ ಅತ್ಯಂತ ಮುಖ್ಯವಾಗಿ ತಿಳಿಯಬೇಕಾಗಿದೆ. ರಾಷ್ಟ್ರಗಳು ತಮ್ಮ ಯೌವ್ವನ ಮತ್ತು ಮುಪ್ಪಿನ ಕಾಲದಲ್ಲಿ ಇಂಥ ಸಾಂಕ್ರಾಮಿಕಗಳಿಗೆ ತುತ್ತಾಗುತ್ತವೆ ಎಂಬುದನ್ನು ಅವನು ಅತಿ ಮುಖ್ಯವಾಗಿ ತಿಳಿಯಬೇಕಾಗಿದೆ. ತಿಳಿಗೇಡಿಗಳ ಗೊಡ್ಡು ಹರಟೆ ಮತ್ತು ಹುಚ್ಚರ ಆರ್ಭಟವನ್ನು ವೈದ್ಯ ಪರೀಕ್ಷಿಸುವಂತೆ ಈ ಕೃತಿಗಳನ್ನು ಅಧ್ಯಯನ ಮಾಡಬೇಕು."[೧]

ನಾಲ್ಕು ವರ್ಣಗಳ, ವಿಶೇಷವಾಗಿ ಶೂದ್ರರ, ಉಗಮವನ್ನು ಕುರಿತು ಬ್ರಾಹ್ಮಣರ ಈ ಊಹೆಗಳನ್ನು ಓದಿದಾಗ ಪ್ರೊ.ಮ್ಯಾಕ್ಸ್ ಮುಲ್ಲರರ ಈ ಮಾತುಗಳು ಬಹಳವಾಗಿ ನೆನಪಿಗೆ ಬರುತ್ತವೆ. ಈ ಎಲ್ಲ ವಾದಗಳು ನಿಜವಾಗಿಯೂ ತಿಳಿಗೇಡಿಗಳ ಗೊಡ್ಡುಹರಟೆ ಮತ್ತು ಹುಚ್ಚರ ಆರ್ಭಟವಾಗಿವೆ. ಆದ್ದರಿಂದ ಅವು ಮಾನವ ಸಮಸ್ಯೆಯ ಬಗ್ಗೆ ಒಂದು ಸ್ವಾಭಾವಿಕ ವಿವರಣೆಯನ್ನು ಹುಡುಕುವ ಇತಿಹಾಸಕಾರನಿಗೆ ಪ್ರಯೋಜನಕಾರಿಯಾಗಿಲ್ಲ.

♦

---

೧. Muir, Muller, *Ancient Sanskrit Literature* (Panini Office Edition). p. 200

# ಅಧ್ಯಾಯ ೩

# ಶೂದ್ರರ ಸ್ಥಾನಮಾನದ ಬಗ್ಗೆ ಬ್ರಾಹ್ಮಣ ವಾದ

ಇದಿಷ್ಟೂ ಶೂದ್ರರ ಉಗಮದ ಬಗ್ಗೆ ಬ್ರಾಹ್ಮಣರ ದೃಷ್ಟಿ. ಶೂದ್ರನ ನಾಗರಿಕ ಸ್ಥಾನಮಾನದ ಬಗ್ಗೆ ಬ್ರಾಹ್ಮಣ ದೃಷ್ಟಿ ಏನಿತ್ತೆಂದು ನೋಡಿದರೆ ಬ್ರಾಹ್ಮಣ ಸ್ಮೃತಿಕಾರರು ಶೂದ್ರನ ಅನರ್ಹತೆಗಳ ಬಗ್ಗೆ ದೀರ್ಘ ಪಟ್ಟಿ ಮಾಡಿ ಅವನನ್ನು ನೋವು ಶಿಕ್ಷೆಗಳ ಅತ್ಯಂತ ಕ್ರೂರ ವ್ಯವಸ್ಥೆಗೆ ಗುರಿಪಡಿಸಿರುವುದನ್ನು ನಮ್ಮ ಗಮನ ಸೆಳೆಯುತ್ತದೆ.

ಸಂಹಿತೆಗಳು ಮತ್ತು ಬ್ರಾಹ್ಮಣಗಳಲ್ಲಿ ಶೂದ್ರನ ಅನರ್ಹತೆಗಳು ಮತ್ತು ಶಿಕ್ಷೆಗಳು ಕಡಿಮೆಯಿದ್ದವು. ಅದನ್ನು ಮುಂದಿನ ಉಲ್ಲೇಖಗಳಲ್ಲಿ ನೋಡಬಹುದು.

೧. ಕಾಠಕ ಸಂಹಿತೆ (೩೧.೨) ಮತ್ತು ಮೈತ್ರಾಯಣೀ ಸಂಹಿತೆ (IV.೧.೩;i, ೮.೩) ಪ್ರಕಾರ:
"ಅಗ್ನಿಹೋತ್ರಕ್ಕೆ ಯಾವ ಹಸುವಿನ ಹಾಲನ್ನು ಬಳಸುತ್ತಾರೋ ಆ ಹಸುವಿನ ಹಾಲು ಕರೆಯಲು ಶೂದ್ರನನ್ನು ಬಿಡಬಾರದು."

೨. ಶತಪಥ ಬ್ರಾಹ್ಮಣ (*III*,೧,೧,೧೦), ಮೈತ್ರಾಯಣೀ ಸಂಹಿತೆ (VII.೧.೧.೬) ಮತ್ತು ಪಂಚವಿಂಶ ಬ್ರಾಹ್ಮಣ ಹೀಗೆ ಹೇಳುತ್ತವೆ:
"ಯಜ್ಞ ಮಾಡುವಾಗ ಶೂದ್ರನ ಜೊತೆ ಮಾತನಾಡಬಾರದು, ಯಜ್ಞ ನಡೆಯುವಾಗ ಶೂದ್ರ ಹಾಜರಿರಬಾರದು."

೩. ಶತಪಥ ಬ್ರಾಹ್ಮಣ (XIV.೧.೩೧) ಮತ್ತು ಕಾಠಕ ಸಂಹಿತೆ (XI.೧೦) ಮತ್ತೂ ಹೇಳುತ್ತವೆ.
"ಸೋಮಪಾನಕ್ಕೆ ಶೂದ್ರನನ್ನು ಸೇರಿಸಕೂಡದು."

೪. ಐತರೇಯ ಬ್ರಾಹ್ಮಣ (VII.೨೯.೪) ಮತ್ತು ಪಂಚವಿಂಶ ಬ್ರಾಹ್ಮಣ (IV.೧.೧೧) ಕಟ್ಟಕಡೆಯ ಮಾತನ್ನು ಹೇಳುತ್ತವೆ:

"ಶೂದ್ರ ಬೇರೊಬ್ಬನ ಸೇವಕ (ಅಷ್ಟಲ್ಲದೆ ಬೇರೇನೂ ಅಲ್ಲ)." ಆದರೆ ಯಾವುದು ಪ್ರಾರಂಭದಲ್ಲಿ ಮನುಷ್ಯನ ಹಸ್ತಕ್ಕಿಂತ ದೊಡ್ಡದಲ್ಲದ ಮೋಡವಾಗಿತ್ತೋ ಅದು ಒಂದು ಚಂಡಮಾರುತವಾಗಿ ಬೆಳೆದು ಶೂದ್ರರನ್ನು ಅಕ್ಷರಶಃ ಮುಳುಗಿಸಿತು. ಏಕೆಂದರೆ, ಆಮೇಲೆ ಬಂದ ಆಪಸ್ತಂಭ, ಬೌಧಾಯನ ಮುಂತಾದ ಸೂತ್ರಕಾರರು ಹಾಗೂ ಮನು ಮುಂತಾದ ಸ್ಮೃತಿಕಾರರ ಶಿಕ್ಷಾರ್ಹ ಶಾಸನಗಳಿಂದ ಶೂದ್ರರ ಅನರ್ಹತೆಗಳು ಹುಚ್ಚು ವೇಗದಲ್ಲಿ ಬೆಳೆದು ಊಹಿಸಲಾಗದಷ್ಟು ಮಟ್ಟಕ್ಕೆ ಏರಿದುದನ್ನು ಮುಂದಿನ ಉಲ್ಲೇಖಗಳಲ್ಲಿ ಕಾಣಬಹುದು.

ಈ ಅನರ್ಹತೆಗಳು ಎಷ್ಟು ಮರಣಕಾರಕವಾಗಿದ್ದವು ಎಂಬುದನ್ನು ತಿಳಿಯಲು ನೈಜ ಬರವಣಿಗೆಯನ್ನು ನೋಡಿದ ಹೊರತು ನಂಬುವುದು ಸಾಧ್ಯವಾಗುವುದಿಲ್ಲ. ಆದರೂ ಅವು ಅಸಂಖ್ಯಾತವಾಗಿರುವುದರಿಂದ ಅವುಗಳನ್ನು ಸಮಗ್ರವಾಗಿ ಉಲ್ಲೇಖಿಸುವುದು ಅಸಾಧ್ಯವಾಗಿದೆ. ಅವುಗಳ ಪರಿಚಯವಿಲ್ಲದವರಿಗೆ

ತೋರಿಸುವುದಕ್ಕಾಗಿ ಈ ಅನರ್ಹತೆಗಳ ಸ್ಥೂಲ ಪರಿಚಯ ಮಾಡಿಸುವುದಕ್ಕಾಗಿ ಈ ಮುಂದೆ ಒಂದೆಡೆ ಭಿನ್ನ ಸೂತ್ರಕಾರರು ಮತ್ತು ಸ್ಮೃತಿಕಾರರು ಶೂದ್ರನ ಅನರ್ಹತೆಗಳ ಬಗ್ಗೆ ತಮ್ಮ ಧರ್ಮಶಾಸ್ತ್ರಗಳಲ್ಲಿ ಮಾಡಿರುವ ಹೇಳಿಕೆಗಳನ್ನು ಸಂಗ್ರಹಿಸಿದ್ದೇನೆ.

೧

(ಅ) ಆಪಸ್ತಂಭ ಧರ್ಮಸೂತ್ರ ಹೇಳುತ್ತದೆ:

"ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು ಎಂಬ ನಾಲ್ಕು ವರ್ಣಗಳಿವೆ. ಇವುಗಳಲ್ಲಿ ಒಂದು ಅದರ ನಂತರದ ವರ್ಣಕ್ಕಿಂತ ಹುಟ್ಟಿನಲ್ಲಿ ಶ್ರೇಷ್ಠವಾದುದು:[೧]

ಶೂದ್ರರನ್ನೂ ಕೆಟ್ಟಕೆಲಸ ಮಾಡಿದವರನ್ನೂ ಬಿಟ್ಟು ಉಳಿದವರಿಗೆಲ್ಲ (೧) ಉಪನಯನ (ಜನಿವಾರ ಧಾರಣೆ), (೨) ವೇದಾಧ್ಯಯನ, ಮತ್ತು (೩) ಯಜ್ಞಾಗ್ನಿ ಹೊತ್ತಿಸುವುದು (ಅಂದರೆ ಯಜ್ಞಮಾಡುವ ಹಕ್ಕು) ಇವನ್ನು ವಿಧಿಸಲಾಗಿದೆ."[೨]

(ಆ) ವಸಿಷ್ಠ ಧರ್ಮಸೂತ್ರ ಹೀಗೆ ಹೇಳುತ್ತದೆ:

"ಬ್ರಾಹ್ಮಣರು ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು ಎಂಬ ನಾಲ್ಕು ವರ್ಣಗಳಿವೆ.

ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರು ದ್ವಿಜರು.

ಅವರ ಮೊದಲ ಹುಟ್ಟು ಮಾತೃಗರ್ಭದಿಂದ, ಎರಡನೆಯದು ಜನಿವಾರ ಧಾರಣೆಯಿಂದ. ಈ ಎರಡನೆಯ ಹುಟ್ಟಿನಲ್ಲಿ ಸಾವಿತ್ರಿಯೇ ತಾಯಿ, ಆದರೆ ಪಿತೃ ಗುರುವೆಂದು ಹೇಳುತ್ತಾರೆ. ವೇದ ದೀಕ್ಷೆಯನ್ನು ಕೊಡುವುದರಿಂದ ಗುರುವನ್ನು ಪಿತೃವೆಂದು ಕರೆಯುತ್ತಾರೆ.[೩]

ನಾಲ್ಕುವರ್ಣಗಳು ತಮ್ಮ ಹುಟ್ಟಿನಿಂದಲೂ ವಿಶಿಷ್ಟ ಕರ್ತವ್ಯಗಳಿಂದಲೂ ಭಿನ್ನವಾಗಿವೆ.

"ಅವನ ಮುಖದಿಂದ ಬ್ರಾಹ್ಮಣನು, ಅವನ ತೋಳುಗಳಿಂದ ಕ್ಷತ್ರಿಯನೂ, ಅವನ ತೊಡೆಗಳಿಂದ ವೈಶ್ಯನೂ, ಅವನ ಪಾದಗಳಿಂದ ಶೂದ್ರನೂ ಜನಿಸಿದರು" ಎಂದು ವೇದದಲ್ಲಿ ಕೂಡ ಹೇಳಿದೆ. ಶೂದ್ರನಿಗೆ ಸಂಸ್ಕಾರಗಳನ್ನು ಕೊಡಬಾರದೆಂದು ವೇದಗಳ ಮುಂದಿನ ವಾಕ್ಯ ಘೋಷಿಸುತ್ತದೆ : "ಅವನು ಬ್ರಾಹ್ಮಣನನ್ನು ಗಾಯತ್ರಿ ಛಂದಸ್ಸಿನಿಂದಲೂ, ಕ್ಷತ್ರಿಯನನ್ನು ತ್ರಿಷ್ಟುಪ್‌ನಿಂದಲೂ, ವೈಶ್ಯನನ್ನು ಜಗತಿಯಿಂದಲೂ, ಶೂದ್ರನನ್ನು ಯಾವುದೇ ಛಂದಸ್ ಇಲ್ಲದೆಯೂ ಸೃಷ್ಟಿಸಿದನು."[೪]

(ಇ) ಮನುಸ್ಮೃತಿ ಈ ವಿಷಯದ ಬಗ್ಗೆ ಮುಂದಿನ ಮಾತನ್ನು ಪ್ರತಿಪಾದಿಸುತ್ತದೆ:

"ಲೋಕೋದ್ಧಾರಕ್ಕಾಗಿ ಅವನು (ಸೃಷ್ಟಿಕರ್ತ) ತನ್ನ ಬಾಯಿ, ತೋಳು, ತೊಡೆ ಮತ್ತು ಪಾದಗಳಿಂದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರನ್ನು ಸೃಷ್ಟಿಸಿದನು." [೫]

---

೧. ಪ್ರಶ್ನೆ ೧, ಪಟಲ ೧, ಖಂಡ ೧, ಸೂತ್ರ ೪–೫

೨. ಅದೇ ಸೂತ್ರ ೬

೩. ಅಧ್ಯಾಯ ೨, ಶ್ಲೋಕ ೧–೪

೪. ಅಧ್ಯಾಯ ೪, ಶ್ಲೋಕ ೩

೫. ಅಧ್ಯಾಯ ೧, ಶ್ಲೋಕ ೩೧

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂವರು ದ್ವಿಜ ಜಾತಿಗೆ ಸೇರಿದ್ದಾರೆ. ಆದರೆ ನಾಲ್ಕನೆಯವನಾದ ಶೂದ್ರನಿಗೆ ಮಾತ್ರ ಒಂದೇ ಹುಟ್ಟು."[೧]

೨

(ಅ) ಆಪಸ್ತಂಬ ಧರ್ಮಸೂತ್ರದ ಪ್ರಕಾರ :

"ತ್ರೈವರ್ಣಿಕನಾದವನು ವೇದವನ್ನು ಶ್ಮಶಾನದಲ್ಲಾಗಲೀ ಅಥವಾ ಅದರ ಹತ್ತಿರ ಒಂದು ಕಲ್ಲೆಸೆತದ ದೂರದಲ್ಲಾಗಲೀ ಓದಕೂಡದು.

ಶ್ಮಶಾನದಲ್ಲಿ ಒಂದು ಹಳ್ಳಿ ನಿರ್ಮಿತವಾಗಿದ್ದರೆ ಅಥವಾ ಆ ಜಾಗದಲ್ಲಿ ಸಾಗುವಳಿ ಮಾಡಿದ್ದರೆ ಅಂಥ ಸ್ಥಳದಲ್ಲಿ ವೇದ ಪಠಣವನ್ನು ನಿಷೇಧಿಸಿಲ್ಲ.

ಆದರೆ ಅಂಥ ಸ್ಥಳ ಶ್ಮಶಾನವಾಗಿತ್ತೆಂದು ಗೊತ್ತಾದರೆ ಅಲ್ಲಿ ವೇದಪಠಣ ಮಾಡಕೂಡದು.

ಶೂದ್ರ ಮತ್ತು ಅಂತ್ಯಜರೇ ಸ್ಮಶಾನವೆಂದು ಪರಿಗಣಿತರಾಗಿದ್ದಾರೆ (ಈ ನಿಯಮಕ್ಕೆ ೬ನೇ ಸೂತ್ರ ಅನ್ವಯಿಸುತ್ತದೆ).

ಅವರು ಒಂದೇ ಮನೆಯಲ್ಲಿ ವಾಸವಾಗಿದ್ದರೆ ವೇದಾಧ್ಯಯನ ಮಾಡಕೂಡದೆಂದು ಕೆಲವರು ಹೇಳುತ್ತಾರೆ.

ಆದರೆ ವಿದ್ಯಾರ್ಥಿ ಮತ್ತು ಶೂದ್ರಸ್ತ್ರೀ ಪರಸ್ಪರ ನೋಡಿದರೆ ವೇದಾಧ್ಯಯನವನ್ನು ನಿಲ್ಲಿಸಬೇಕು.[೨]

ಮೈಲಿಗೆಯಾದ ಬ್ರಾಹ್ಮಣ ಅಥವಾ ಇತರ ಮೇಲುಜಾತಿಯ ವ್ಯಕ್ತಿ ಮುಟ್ಟಿದ ಆಹಾರ ಮಲಿನವಾಗುತ್ತದೆ, ಆದರೆ ತಿನ್ನಲು ಅನರ್ಹವಾಗುವುದಿಲ್ಲ.

ಆದರೆ ಶೂದ್ರ ತಂದ ಆಹಾರವನ್ನು ಅವನು ಮುಟ್ಟಿರಲಿ, ಮುಟ್ಟದಿರಲಿ ತಿನ್ನಬಾರದು.

ಶೂದ್ರ ಅವನನ್ನು ಮುಟ್ಟಿದರೆ ಅವನು ತಿನ್ನುವುದನ್ನು ನಿಲ್ಲಿಸಬೇಕು."[೩]

(ಆ) ವಿಷ್ಣುಸ್ಮೃತಿ ಪ್ರಕಾರ :

"ಮೃತನ ಸಂಬಂಧಿಯಾಗಿದ್ದರೂ ಕೂಡ ಶೂದ್ರ ದ್ವಿಜಾತಿಯ ವ್ಯಕ್ತಿಯನ್ನು ಸಾಗಿಸಲು ಅವಕಾಶ ಕೊಡಬಾರದು.

ದ್ವಿಜಾತಿಯ ವ್ಯಕ್ತಿ ಶೂದ್ರನನ್ನು ಸಾಗಿಸಬಾರದು.

ತಂದೆ ತಾಯಂದಿರ ಜಾತಿಗಳಿಗೆ ಸಮಾನರಾದ ಪುತ್ರರು ಮಾತ್ರ ಅವರ ತಂದೆ ತಾಯಿಗಳನ್ನು ಸಾಗಿಸಬಹುದು.

ದ್ವಿಜಾತಿಯ ಮನುಷ್ಯ ತಮ್ಮ ತಂದೆಯಾಗಿದ್ದರೂ ಕೂಡ ಅವನನ್ನು ಶೂದ್ರರು ಹೊರಬಾರದು."[೪]

---

೧. ಅಧ್ಯಾಯ ೧೦, ಶ್ಲೋಕ ೪

೨. ಪ್ರಶ್ನ ೧, ಪಟಲ ೩, ಖಂಡ ೯, ಸೂತ್ರ ೬–೧೧

೩. ಪ್ರಶ್ನ ೧, ಪಟಲ ೫, ಖಂಡ ೧೬, ಸೂತ್ರ ೨೧–೨೨

೪. ಅಧ್ಯಾಯ ೧೯, ಸೂತ್ರ ೧–೪

(ಇ) ವಸಿಷ್ಠ ಧರ್ಮಸೂತ್ರದ ಪ್ರಕಾರ :

"ಆದ್ದರಿಂದ ಈಗ ನಾವು ಏನನ್ನು ತಿನ್ನಬಹುದು ಮತ್ತು ಏನನ್ನು ತಿನ್ನಬಾರದು ಎಂಬುದನ್ನು ಘೋಷಿಸುತ್ತೇವೆ.

ವೈದ್ಯ, ಬೇಡ, ಕೆಟ್ಟ ಚಾರಿತ್ರ್ಯದ ಹೆಂಗಸು, ಗದೆ ಹೊರುವವನು, ಕಳ್ಳ, ಅಭಿಶಾಸ್ತ, ನಪುಂಸಕ ಅಥವಾ ಅಂತ್ಯಜ ಕೊಟ್ಟ ಆಹಾರವನ್ನು ತಿನ್ನಬಾರದು.

ಜಿಪುಣ, ಶ್ರೌತಯಜ್ಞವನ್ನು ಮಾಡಿಸಿದ ವ್ಯಕ್ತಿ, ಖೈದಿ, ರೋಗಿ, ಸೋಮಲತೆಯ ಮಾರಾಟಗಾರ, ಬಡಗಿ, ಅಗಸ, ಮದ್ಯಮಾರಾಟಗಾರ, ಗೂಢಚಾರ, ಲೇವಾದೇವಿಗಾರ ಅಥವಾ ಚಮ್ಮಾರ ಕೊಟ್ಟ ಆಹಾರವನ್ನು ತಿನ್ನಬಾರದು.

ಶೂದ್ರ ಕೊಟ್ಟದನ್ನು ತಿನ್ನಬಾರದು.[೧]

ಶೂದ್ರ ಜನಾಂಗವೇ ಶ್ಮಶಾನವೆಂದು ಹೇಳುತ್ತಾರೆ. ಆದ್ದರಿಂದ ವೇದವನ್ನು ಶೂದ್ರನ ಎದುರಿನಲ್ಲಿ ಓದಕೂಡದು."

ಈಗ ಅವರು ಯಮ ಉಪದೇಶಿಸಿದ ಮುಂದಿನ ಶ್ಲೋಕಗಳನ್ನು ಕೂಡ ಉದ್ಧರಿಸುತ್ತಾರೆ:

ದುಷ್ಟ ಶೂದ್ರ ಜನಾಂಗ ಸ್ಪಷ್ಟವಾಗಿಯೇ ಶ್ಮಶಾನವಾಗಿದ್ದಾರೆ. ಆದ್ದರಿಂದ ವೇದವನ್ನು ಶೂದ್ರನ ಎದುರಿನಲ್ಲಿ ಎಂದೂ ಪಠಿಸಬಾರದು.[೨]

ಕೆಲವರು ವೇದಾಧ್ಯಯನದಿಂದ ದಾನಕ್ಕೆ ಪಾತ್ರರಾಗುತ್ತಾರೆ, ಮತ್ತೆ ಕೆಲವರು ಕಠಿಣ ವ್ರತಗಳಿಂದ ಅದಕ್ಕೆ ಪಾತ್ರರಾಗುತ್ತಾರೆ. ಆದರೆ ಶೂದ್ರನ ಆಹಾರವನ್ನು ಸೇವಿಸದ ಹೊಟ್ಟೆಯಿರುವ ಬ್ರಾಹ್ಮಣ ದಾನಕ್ಕೆ ಪಾತ್ರರಾಗಿರುವವರಲ್ಲೆಲ್ಲ ಶ್ರೇಷ್ಠನಾದವನು.[೩]

ಶೂದ್ರನ ಆಹಾರ ಹೊಟ್ಟೆಯಲ್ಲಿದ್ದಾಗ ಬ್ರಾಹ್ಮಣ ಸತ್ತರೆ ಅವನು ತನ್ನ ಮುಂದಿನ ಜನ್ಮದಲ್ಲಿ ಹಳ್ಳಿಯ ಹಂದಿಯಾಗಿ ಹುಟ್ಟುತ್ತಾನೆ ಅಥವಾ ಆ ಶೂದ್ರನ ಮನೆಯಲ್ಲಿ ಹುಟ್ಟುತ್ತಾನೆ.

ಶೂದ್ರನ ಆಹಾರದ ಸತ್ವದಿಂದ ಪುಷ್ಟವಾಗಿ ಬೆಳೆದ ದೇಹವುಳ್ಳ ಬ್ರಾಹ್ಮಣ ಪ್ರತಿದಿನ ವೇದಪಠಣವನ್ನು ಮಾಡಿದರೆ, ಅವನು ಅಗ್ನಿಹೋತ್ರವನ್ನೂ ಪ್ರಾರ್ಥನೆಗಳನ್ನು ಮಾಡಿದರೂ ಸಹ ಅವನಿಗೆ ಪರಲೋಕದ ದಾರಿ ಸಿಗುವುದಿಲ್ಲ.

ಆದರೆ ಶೂದ್ರನ ಆಹಾರ ತಿಂದು ತನ್ನ ಸ್ವಜಾತಿಯ ಹೆಂಡತಿಯ ಜೊತೆ ಅವನು ಸಂಭೋಗ ನಡೆಸಿ ಪುತ್ರರನ್ನು ಪಡೆದರೆ ಅವರು ಆಹಾರ ನೀಡಿದ ಶೂದ್ರನಿಗೆ ಸಲ್ಲುತ್ತಾರೆ; ಆ ಬ್ರಾಹ್ಮಣ ಸ್ವರ್ಗಕ್ಕೇರುವುದಿಲ್ಲ:"[೪]

(ಈ) ಮನುಸ್ಮೃತಿಯ ಪ್ರಕಾರ:

"ಬ್ರಾಹ್ಮಣ ಶೂದ್ರರ ರಾಜ್ಯದಲ್ಲಿ ವಾಸಿಸಬಾರದು ಅಥವಾ ಅನಾಚಾರವಂತರ ಮಧ್ಯೆ ವಾಸಿಸಬಾರದು ಅಥವಾ ಪಾಖಂಡಿಗಳು ಅಕ್ರಮಿಸಿದ ರಾಜ್ಯದಲ್ಲಿ ಇರಬಾರದು ಅಥವಾ ಕೀಳು ಜಾತಿಯ ಜನರು ಆಳುವ

---

೧. ಅಧ್ಯಾಯ ೧೪, ಶ್ಲೋಕಗಳು ೧–೪

೨. ಅಧ್ಯಾಯ ೧೮, ಶ್ಲೋಕಗಳು ೧೧–೧೫

೩. ಅಧ್ಯಾಯ ೬, ಶ್ಲೋಕ ೨೬

೪. ಅಧ್ಯಾಯ ೬, ಶ್ಲೋಕಗಳು ೨೬–೨೯

ರಾಜ್ಯದಲ್ಲಿ ಇರಬಾರದು."[೧]

ಶೂದ್ರನಿಗೋಸ್ಕರ ಯಜ್ಞ ಮಾಡಿರುವ ಬ್ರಾಹ್ಮಣನನ್ನು ಶ್ರಾದ್ಧದ ಊಟದಲ್ಲಿ ಇತರ ಬ್ರಾಹ್ಮಣರ ಜೊತೆ ಕುಳಿತು ಊಟಮಾಡಲು ಆಹ್ವಾನಿಸಬಾರದು. ಅವನ ಸಹವಾಸದಿಂದ ಅಂಥ ಭೋಜನದಿಂದ ಬರಬಹುದಾದ ಪುಣ್ಯವೆಲ್ಲ ನಾಶವಾಗುತ್ತದೆ.[೨]

ಶೂದ್ರ ಸತ್ತಾಗ ದಕ್ಷಿಣ ದ್ವಾರದಲ್ಲಿ ಕೊಂಡೊಯ್ಯಬೇಕು, ಆದರೆ ದ್ವಿಜರನ್ನು ಪಶ್ಚಿಮ, ಉತ್ತರ ಮತ್ತು ಪೂರ್ವ ದ್ವಾರಗಳಲ್ಲಿ ಕ್ರಮವಾಗಿ ಕೊಂಡೊಯ್ಯಬೇಕು.

(೩)

(ಅ) ಆಪಸ್ತಂಬ ಧರ್ಮಸೂತ್ರ ವಿಧಿಸುತ್ತದೆ:

"ಬ್ರಾಹ್ಮಣ ತನ್ನ ಕಿವಿಯ ಮಟ್ಟಕ್ಕೆ ಬಲಗೈಯನ್ನು ಎತ್ತಿ ನಮಸ್ಕರಿಸಬೇಕು; ಕ್ಷತ್ರಿಯ ತನ್ನ ಎದೆಮಟ್ಟಕ್ಕೆ ಅದನ್ನು ಎತ್ತಿ ನಮಸ್ಕರಿಸಬೇಕು; ವೈಶ್ಯ ತನ್ನ ಸೊಂಟದ ಮಟ್ಟಕ್ಕೆ ಅದನ್ನು ಎತ್ತಿ ನಮಸ್ಕರಿಸಬೇಕು; ಶೂದ್ರ ಅಡ್ಡಬಿದ್ದು ಎರಡು ಕೈಗಳನ್ನು ಜೋಡಿಸಿ ನಮಸ್ಕರಿಸಬೇಕು.[೩]

ಮೊದಲ ಮೂರು ಜಾತಿಗಳಿಗೆ ಸೇರಿದ ವ್ಯಕ್ತಿ ಪ್ರತಿನಮಸ್ಕಾರ ಮಾಡುವಾಗ ಉದ್ದೇಶಿಸಲ್ಪಟ್ಟ ವ್ಯಕ್ತಿಯ ಹೆಸರಿನ ಕೊನೆಯಕ್ಷರಗಳು ಮೂರು ಮಾರಿನವರೆಗೆ ಕೇಳಿಸಬೇಕು.[೪]

ಬ್ರಾಹ್ಮಣನ ಮನೆಗೆ ಶೂದ್ರ ಅತಿಥಿಯಾಗಿ ಬಂದರೆ ಅವನಿಂದ ಕೆಲಸ ಮಾಡಿಸಿಕೊಳ್ಳಬೇಕು. ಆ ಕೆಲಸ ಮಾಡಿಸಿಕೊಂಡ ಮೇಲೆ ಆಹಾರ ಕೊಡಬಹುದು. ಕೆಲಸ ಮಾಡಿಸಿಕೊಳ್ಳದೆ ಅವನಿಗೆ ಊಟವಿಕ್ಕಿದರೆ ಅವನನ್ನು ಗೌರವಿಸಿದಂತಾಗುತ್ತದೆ.

ಅಥವಾ ಬ್ರಾಹ್ಮಣನ ಮನೆಯ ಆಳುಗಳು ರಾಜನ ಉಗ್ರಾಣದಿಂದ ಅಕ್ಕಿ ತಂದು ಶೂದ್ರನನ್ನು ಅತಿಥಿಯಾಗಿ ಗೌರವಿಸತಕ್ಕದ್ದು"[೫]

(ಆ) ವಿಷ್ಣುಸ್ಮೃತಿ ವಿಧಿಸುತ್ತದೆ:

"ದೇವತೆಗಳು ಅಥವಾ ಪಿತೃಗಳಿಗೆ ತರ್ಪಣ ಕೊಡುವಾಗ ಶೂದ್ರನಿಗೆ ಅಥವಾ ಸನ್ಯಾಸಿಗೆ ಅತಿಥಿ ಸತ್ಕಾರ ಮಾಡಿದರೆ ಅದೇ ಶಿಕ್ಷೆಯನ್ನು ಅಂದರೆ ನೂರು ಪಣಗಳ ದಂಡವನ್ನು ಕೂಡ ವಿಧಿಸಿದೆ."[೬]

(ಇ) ಮನುಸ್ಮೃತಿ ಆದೇಶಿಸುತ್ತದೆ:

"ತಂದೆ ಮತ್ತು ಮಗನಾಗಿ ಬ್ರಾಹ್ಮಣನನ್ನು ಹತ್ತು ವರ್ಷ ಹಿರಿಯನೆಂದೂ, ಕ್ಷತ್ರಿಯನನ್ನು ನೂರು ವರ್ಷ ಹಿರಿಯನೆಂದೂ ಪರಿಗಣಿಸಬೇಕು; ಅವರಲ್ಲಿ ಬ್ರಾಹ್ಮಣನೇ ತಂದೆ.

---

೧. ಅಧ್ಯಾಯ ೪, ಶ್ಲೋಕ ೬೧
೨. ಅಧ್ಯಾಯ ೩, ಶ್ಲೋಕ ೧೭೮
೩. ಪ್ರಶ್ನ ೧, ಪಟಲ ೨, ಖಂಡ ೫, ಸೂತ್ರ ೧೬
೪. ಅದೇ ಸೂತ್ರ ೧೭
೫. ಪ್ರಶ್ನೆ ೨, ಪಟಲ ೨, ಖಂಡ ೪, ಸೂತ್ರಗಳು ೧೯–೨೦
೬. ಅಧ್ಯಾಯ ೫, ಸೂತ್ರ ೧೧೫

ಐಶ್ವರ್ಯ, ನೆಂಟಸ್ತಿಕೆ, ವಯಸ್ಸು, ಪಂಗಡಗಳು ಮತ್ತು ಐದನೆಯದಾಗಿ ಜ್ಞಾನ; ಇವುಗಳು ಮಾನ್ಯತೆಗೆ ಕಾರಣಗಳು, ಅವುಗಳಲ್ಲಿ ಕೊನೆಯದೇ ಅತ್ಯಂತ ಮುಖ್ಯವಾದುದು.

ತ್ರೈವರ್ಣಿಕವಾದ ದ್ವಿಜರಲ್ಲಿ ಜ್ಞಾನವುಳ್ಳ ಬ್ರಾಹ್ಮಣನೇ ಅತ್ಯಂತ ಶ್ರೇಷ್ಠನು ಮತ್ತು ಗೌರವಕ್ಕೆ ಪಾತ್ರನು; ಶೂದ್ರನಿಗೆ ಎಷ್ಟೇ ಸಂಪತ್ತು ಅಥವಾ ಜ್ಞಾನ ಇದ್ದರೂ ಅವನಿಗೆ ಗೌರವ ಸಲ್ಲದು; ಅವನಿಗೆ ನೂರು ವರ್ಷ ಆಗಿದ್ದರೆ ಮಾತ್ರ ಅವನು ಗೌರವಕ್ಕೆ ಅರ್ಹ.[೧]

ವಯಸ್ಸು, ನರೆಗೂದಲು ಅಥವಾ ಸಂಪತ್ತು ಅಥವಾ ಸಂಬಂಧದಿಂದ ಶ್ರೇಷ್ಠತೆ ಬರುವುದಿಲ್ಲ; ಯಾರು ವೇದವನ್ನು ಸಂಪೂರ್ಣವಾಗಿ ಬಲ್ಲನೋ ಅವನೇ ದೊಡ್ಡವನು ಎಂದು ಋಷಿಗಳು ಅಪ್ಪಣೆ ಕೊಡಿಸಿದ್ದಾರೆ.

ಬ್ರಾಹ್ಮಣನ ಶ್ರೇಷ್ಠತೆ ಜ್ಞಾನದಿಂದ, ಕ್ಷತ್ರಿಯನದು ಶೌರ್ಯದಿಂದ, ವೈಶ್ಯನದು ಆಸ್ತಿಪಾಸ್ತಿಯಿಂದ ಮತ್ತು ಶೂದ್ರನದು ವಯಸ್ಸಿನಿಂದ.

ತಲೆ ಬೆಳ್ಳಗಾದರೆ ವಯಸ್ಸಾದಂತಲ್ಲ; ಯುವಕನಾಗಿದ್ದರೂ ವೇದಪಾರಂಗತನಾದವನನ್ನು ದೇವತೆಗಳು ಹಿರಿಯನೆಂದು ಪರಿಗಣಿಸುತ್ತಾರೆ.[೨]

ಬ್ರಾಹ್ಮಣನ ಮನೆಯಲ್ಲಿ ಕ್ಷತ್ರಿಯನಾಗಲೀ, ವೈಶ್ಯನಾಗಲೀ, ಶೂದ್ರನಾಗಲೀ ಅತಿಥಿಯಲ್ಲ; ಅವರು ಆ ಗೃಹಸ್ಥನ ಗೆಳೆಯ, ಜ್ಞಾನಿ ಅಥವಾ ಗುರುವೂ ಅಲ್ಲ. ಅಂದರೆ ಬ್ರಾಹ್ಮಣನ ಮನೆಯಲ್ಲಿ ಬ್ರಾಹ್ಮಣ ಮಾತ್ರ ಅತಿಥಿಯಾಗಿರುವ ಗೌರವವುಂಟು.

ಆದರೆ ಬ್ರಾಹ್ಮಣನ ಮನೆಗೆ ಕ್ಷತ್ರಿಯ ಬಂದರೆ ಬ್ರಾಹ್ಮಣರು ಊಟ ಮಾಡಿದ ನಂತರ ಅವನಿಗೆ ಅವನು ಕೇಳಿದರೆ ಊಟ ಹಾಕಬೇಕು.

ಬ್ರಾಹ್ಮಣನ ಮನೆಗೆ ವೈಶ್ಯ ಅಥವಾ ಶೂದ್ರ ಅತಿಥಿಗಳಾಗಿ ಬಂದರೆ ಅವನ ಮನೆಯ ಆಳುಗಳ ಜೊತೆ ಕರುಣೆಯಿಂದ ಊಟ ಹಾಕಬೇಕು."[೩]

(೪)

(ಅ) ಆಪಸ್ತಂಬ ಧರ್ಮಸೂತ್ರದ ಪ್ರಕಾರ:

"ಕ್ಷತ್ರಿಯನನ್ನು ಕೊಂದರೆ ಆ ಪಾಪಪರಿಹಾರಕ್ಕಾಗಿ ಬ್ರಾಹ್ಮಣನಿಗೆ ಒಂದು ಸಾವಿರ ಗೋವುಗಳನ್ನು ದಾನ ಕೊಡತಕ್ಕದ್ದು.

ವೈಶ್ಯನನ್ನು ಕೊಂದರೆ ನೂರು ಗೋವುಗಳು, ಶೂದ್ರನನ್ನು ಕೊಂದರೆ ಕೇವಲ ಹತ್ತು ಗೋವುಗಳನ್ನು ದಾನವಾಗಿ ಕೊಡತಕ್ಕದ್ದು."[೪]

(ಆ) ಗೌತಮ ಧರ್ಮಸೂತ್ರದ ಪ್ರಕಾರ:

---

೧. ಅಧ್ಯಾಯ ೨, ಶ್ಲೋಕಗಳು ೧೩೫–೧೩೭

೨. ಅಧ್ಯಾಯ ೨, ಶ್ಲೋಕಗಳು ೧೫೪–೧೫೬

೩. ಅಧ್ಯಾಯ ೩, ಶ್ಲೋಕಗಳು ೧೧೦–೧೧೨

೪. ಪ್ರಶ್ನ ೧, ಪಟಲ ೯, ಖಂಡ ೨೪, ಸೂತ್ರಗಳು ೧–೩

"ಬ್ರಾಹ್ಮಣನನ್ನು ಕ್ಷತ್ರಿಯ ನಿಂದಿಸಿದರೆ ಒಂದು ನೂರು ಪಣಗಳ ದಂಡ ವಿಧಿಸತಕ್ಕದ್ದು.
ಒಂದು ಪಕ್ಷ ಬ್ರಾಹ್ಮಣನನ್ನು ಥಳಿಸಿದರೆ ಅದರ ಎರಡರಷ್ಟು ದಂಡ ವಿಧಿಸತಕ್ಕದ್ದು.
ಬ್ರಾಹ್ಮಣನನ್ನು ಬೈದ ವೈಶ್ಯನು ಕ್ಷತ್ರಿಯನಿಗಿಂತ ಒಂದೂವರೆ ಪಟ್ಟು ಹೆಚ್ಚು ದಂಡ ತೆರಬೇಕು.
ಆದರೆ ಕ್ಷತ್ರಿಯನನ್ನು ಬೈದ ಬ್ರಾಹ್ಮಣ ಐವತ್ತು ಪಣಗಳನ್ನು ಕೊಡತಕ್ಕದ್ದು.
ಆ ಹಣದಲ್ಲಿ ಅರ್ಧ ಅವನೇನಾದರೂ ವೈಶ್ಯನನ್ನು ಬೈದರೆ ಕೊಡತಕ್ಕದ್ದು.
ಶೂದ್ರನನ್ನು ಬೈದರೆ ಏನನ್ನೂ ಕೊಡಬೇಕಾದ್ದಿಲ್ಲ."[೧]

(ಇ) ಬೃಹಸ್ಪತಿ ಧರ್ಮಶಾಸ್ತ್ರದ ಪ್ರಕಾರ:

"ಕ್ಷತ್ರಿಯನನ್ನು ಬೈದ ಬ್ರಾಹ್ಮಣ ಅರ್ಧ ನೂರು ಪಣಗಳನ್ನು ದಂಡ ಕೊಡಬೇಕು, ವೈಶ್ಯನನ್ನು ಬೈದರೆ ಅದರಲ್ಲಿ ಅರ್ಧ (ಇಪ್ಪತ್ತೈದು) ಕೊಡಬೇಕು, ಶೂದ್ರನನ್ನು ಬೈದರೆ ಹನ್ನೆರಡೂವರೆ ಪಣ ದಂಡ ಕೊಡತಕ್ಕದ್ದು.

ಏನೂ ತಪ್ಪು ಮಾಡದೆ ಶೀಲವಂತ ಶೂದ್ರನನ್ನು (ಅಂದರೆ ತನ್ನ ನೀಚ ಸ್ಥಾನವನ್ನು ಒಪ್ಪಿಕೊಂಡು ಅದಕ್ಕನುಸಾರವಾಗಿ ಮನಃಪೂರ್ವಕವಾಗಿ ಸೇವೆ ಸಲ್ಲಿಸುವ ಶೂದ್ರನನ್ನು) ಬೈದರೆ ಈ ಶಿಕ್ಷೆಯನ್ನು ವಿಧಿಸತಕ್ಕದ್ದು; ಗುಣಹೀನನಾದ ಶೂದ್ರನನ್ನು ಬೈದರೆ ಬ್ರಾಹ್ಮಣನಿಗೆ ಯಾವುದೇ ದಂಡನೆಯಿಲ್ಲ.

ಕ್ಷತ್ರಿಯನನ್ನು ಬೈದ ವೈಶ್ಯನಿಗೆ ನೂರು ಪಣ ದಂಡ ವಿಧಿಸತಕ್ಕದ್ದು; ವೈಶ್ಯನನ್ನು ಕ್ಷತ್ರಿಯ ಬೈದರೆ ಅದರ ಅರ್ಧವನ್ನು ದಂಡ ವಿಧಿಸತಕ್ಕದ್ದು.

ಶೂದ್ರನನ್ನು ಕ್ಷತ್ರಿಯ ಬೈದರೆ ಇಪ್ಪತ್ತು ಪಣ ದಂಡ ವಿಧಿಸತಕ್ಕದ್ದು; ವೈಶ್ಯನನ್ನು ಬೈದರೆ ಅದರ ಎರಡು ಪಟ್ಟು ದಂಡವನ್ನು ವಿಧಿಸತಕ್ಕದೆಂದು ಧರ್ಮಶಾಸ್ತ್ರಜ್ಞರು ಘೋಷಿಸಿದ್ದಾರೆ.

ಶೂದ್ರ ವೈಶ್ಯನನ್ನು ಬೈದರೆ ಮೊದಲ ದಂಡವನ್ನು, ಕ್ಷತ್ರಿಯನನ್ನು ಬೈದರೆ ಎರಡನೆಯ ದಂಡವನ್ನು, ಬ್ರಾಹ್ಮಣನನ್ನು ಬೈದರೆ ಅತ್ಯಂತ ಹೆಚ್ಚು ದಂಡವನ್ನು ಕೊಡುವಂತೆ ತಾಕೀತು ಮಾಡಬೇಕು."[೨]

(ಈ) ಮನುಸ್ಮೃತಿ ಪ್ರಕಾರ :

"ಬ್ರಾಹ್ಮಣನನ್ನು ಬೈದ ಕ್ಷತ್ರಿಯನಿಗೆ ನೂರು ಪಣ ದಂಡ ವಿಧಿಸಬೇಕು; ವೈಶ್ಯ ಬೈದರೆ ೧೫೦ ಅಥವಾ ೨೦೦ ಪಣ; ಆದರೆ ಶೂದ್ರನಿಗೆ ದೇಹದಂಡನೆ ಮಾಡತಕ್ಕದ್ದು.

ಬ್ರಾಹ್ಮಣ ಕ್ಷತ್ರಿಯನನ್ನು ಅವಮಾನ ಮಾಡಿದರೆ ಐವತ್ತು ಪಣ ದಂಡ ವಿಧಿಸತಕ್ಕದ್ದು, ವೈಶ್ಯನನ್ನು ನಿಂದಿಸಿದರೆ ಐವತ್ತರಲ್ಲಿ ಅರ್ಧ ಮತ್ತು ಶೂದ್ರನನ್ನು ಬೈದರೆ ಹನ್ನೆರಡು ಪಣ ದಂಡ ವಿಧಿಸತಕ್ಕದ್ದು"[೩] ಬ್ರಾಹ್ಮಣ ಕ್ಷತ್ರಿಯನನ್ನು ಕೊಂದರೆ, ಹತ್ಯೆ ಮಾಡಿದ್ದಕ್ಕಾಗಿ ೧/೪ ಭಾಗ ತಪಸ್ಸು ಮಾಡಬೇಕು; ವೈಶ್ಯನನ್ನು ಕೊಂದರೆ ೧/೮ ಭಾಗ ತಪಸ್ಸು; ಶೀಲವಂತ ಶೂದ್ರನನ್ನು ಕೊಂದರೆ ೧/೧೬ ಭಾಗ ಮಾತ್ರ ತಪಸ್ಸು ಮಾಡಬೇಕು.

---

೧. ಅಧ್ಯಾಯ ೧೨, ಸೂತ್ರಗಳು ೮–೧೩

೨. ಅಧ್ಯಾಯ ೨೦, ಶ್ಲೋಕಗಳು ೭–೧೧

೩. ಅಧ್ಯಾಯ ೮, ಶ್ಲೋಕಗಳು ೨೬೭–೨೬೮

ಆದರೆ ದ್ವಿಜರಲ್ಲಿ ಉತ್ತಮ ಜಾತಿಗೆ ಸೇರಿದ ಬ್ರಾಹ್ಮಣನು ಕ್ಷತ್ರಿಯನನ್ನು ಕೊಂದರೆ ಆ ಪಾಪ ಪರಿಹಾರಕ್ಕಾಗಿ ೧,೦೦೦ ಹಸುಗಳನ್ನೂ ಮತ್ತು ಒಂದು ಗೂಳಿಯನ್ನೂ ಅನೈಚ್ಛಿಕವಾಗಿ ಕೊಡಬಹುದು.

ಅಥವಾ ಅವನು ಮೂರು ವರ್ಷ ಇಂದ್ರಿಯನಿಗ್ರಹ ಮಾಡಿ, ಜಟಾಧಾರಿಯಾಗಿ, ಬ್ರಾಹ್ಮಣನನ್ನು ಕೊಂದವನು ಅನುಸರಿಸುವ ಕಠಿಣ ವ್ರತಗಳನ್ನು ಆಚರಿಸಿಕೊಂಡು ನಗರದಿಂದ ದೂರವಿದ್ದು ಮರದ ಬುಡದಲ್ಲಿ ಕಾಲ ಕಳೆಯತಕ್ಕದ್ದು.

ಶೀಲವಂತ ವೈಶ್ಯನನ್ನು ಕೊಂದದ್ದಕ್ಕಾಗಿ ದ್ವಿಜೋತ್ತಮನಾದ ಬ್ರಾಹ್ಮಣನು ತನ್ನ ಪಾಪ ಪರಿಹಾರಾರ್ಥವಾಗಿ ೧೦೦ ಗೋವುಗಳನ್ನು ಕೊಡತಕ್ಕದ್ದು.

ಶೂದ್ರನನ್ನು ಕೊಂದವನು ಆರು ತಿಂಗಳ ಕಾಲ ಇದನ್ನೆಲ್ಲ ಆಚರಿಸಬೇಕು; ಇಲ್ಲದಿದ್ದರೆ ಅವನು ಪುರೋಹಿತನಿಗೆ ೧೦ ಬಿಳಿ ಹಸುಗಳೂ ಮತ್ತು ಒಂದು ಗೂಳಿಯನ್ನೂ ಕೊಡಬಹುದು."[೧]

(ಉ) ವಿಷ್ಣುಸ್ಮೃತಿ ಪ್ರಕಾರ:

"ಕೀಳು ಜಾತಿಯವನು ತನ್ನ ಯಾವ ಅಂಗದಿಂದ ಮೇಲುಜಾತಿಯವನನ್ನು ಅವಮಾನಗೊಳಿಸುತ್ತಾನೋ ಆ ಅಂಗವನವನೇ ಊನಗೊಳಿಸುವಂತೆ ರಾಜನು ಶಿಕ್ಷೆ ವಿಧಿಸತಕ್ಕದ್ದು.

ಮೇಲುಜಾತಿಯವನ ಜೊತೆ ಕುಳಿತುಕೊಂಡರೆ ಅವನ ಅಂಡಿನ ಮೇಲೆ ಬರೆ ಎಳೆದು ಗಡೀಪಾರು ಮಾಡತಕ್ಕದ್ದು.

ಮೇಲುಜಾತಿಯವನ ಮೇಲೆ ಉಗಿದರೆ ಅವನ ಎರಡು ತುಟಿಗಳನ್ನು ಕತ್ತರಿಸತಕ್ಕದ್ದು. ಮೇಲುಜಾತಿಯವನ ಕಡೆ ಹೂಸಿದರೆ, ಅವನ ಅಂಡುಗಳನ್ನೇ ಕತ್ತರಿಸತಕ್ಕದ್ದು.

ದ್ವಿಜೋತ್ತಮನ ಕರ್ತವ್ಯವನ್ನು ಕುರಿತು ಕೀಳು ಜಾತಿಯವನು ಅಹಂಕಾರದಿಂದ ಉಪದೇಶ ನೀಡಿದರೆ ಅವನ ಬಾಯಿಗೆ ಕುದಿಯುವ ಎಣ್ಣೆಯನ್ನು ಸುರಿಯುವಂತೆ ರಾಜನು ಆಜ್ಞಾಪಿಸತಕ್ಕದ್ದು.

ಬ್ರಾಹ್ಮಣನ ಹೆಸರು ಅಥವಾ ಜಾತಿಯನ್ನು ಶೂದ್ರ ನಿಂದಿಸಿ ಮಾತನಾಡಿದರೆ ಹತ್ತು ಅಂಗುಲ ಉದ್ದದ ಕಬ್ಬಿಣದ ಮೊಳೆಯನ್ನು ಕೆಂಪಗೆ ಕಾಯಿಸಿ ಅವನ ಬಾಯಿಗೆ ಗಿಡಿಯತಕ್ಕದ್ದು."[೨]

**(೫)**

(ಅ) ಬೃಹಸ್ಪತಿಸ್ಮೃತಿ ಪ್ರಕಾರ :

"ಶೂದ್ರ ಧರ್ಮೋಪದೇಶ ಮಾಡಿದರೆ ಅಥವಾ ವೇದೋಚ್ಚಾರಣೆ ಮಾಡಿದರೆ ಅಥವಾ ಬ್ರಾಹ್ಮಣನನ್ನು ಅವಮಾನಗೊಳಿಸಿದರೆ ಅವನ ನಾಲಗೆಯನ್ನು ಕತ್ತರಿಸುವ ಶಿಕ್ಷೆಯನ್ನು ವಿಧಿಸತಕ್ಕದ್ದು."[೩]

(ಆ) ಗೌತಮ ಧರ್ಮಸೂತ್ರದ ಪ್ರಕಾರ :

"ವೇದೋಚ್ಚಾರಣೆಯನ್ನು ಅವನು ಉದ್ದೇಶಪೂರ್ವಕವಾಗಿ ಕೇಳಿದರೆ ಅವನ ಕಿವಿಗಳನ್ನು ಕಾದ ಅರಗು ಮತ್ತು ಸೀಸದಿಂದ ತುಂಬಿಬಿಡಬೇಕು.

---

೧. ಅಧ್ಯಾಯ ೧೧, ಶ್ಲೋಕಗಳು ೧೨೭–೧೩೧

೨. ಅಧ್ಯಾಯ ೫, ಸೂತ್ರಗಳು ೧೯–೨೫

೩. ಅಧ್ಯಾಯ ೧೨, ಶ್ಲೋಕ ೧೨

ಅವನು ವೇದೋಚ್ಚಾರಣೆ ಮಾಡಿದರೆ ಅವನ ನಾಲಗೆಯನ್ನು ಕತ್ತರಿಸಿ ಹಾಕಬೇಕು. ಅವನಿಗೆ ವೇದ ಕಂಠಸ್ಥವಾಗಿದ್ದರೆ ಅವನ ದೇಹವನ್ನು ಸೀಳಿಬಿಡಬೇಕು."[೧]

(ಇ) ಮನುಸ್ಮೃತಿ ಪ್ರಕಾರ :

"ದುಡ್ಡಿಗಾಗಿ ಪಾಠ ಹೇಳುವವನು, ಶೂದ್ರನಿಗೆ ದುಡ್ಡು ಕೊಟ್ಟು ಪಾಠ ಕಲಿತುಕೊಳ್ಳುವವನು ಮತ್ತು ಅವನಿಂದ ವಿದ್ಯೆ ಪಡೆಯುವವನು ದೇವತೆಗಳು ಮತ್ತು ಪಿತೃಗಳ ಗೌರವಾರ್ಥವಾಗಿ ನಡೆಯುವ ಆಚರಣೆಯಲ್ಲಿ ಆಹ್ವಾನಗೊಳ್ಳಲು ಅನರ್ಹರು.[೨]

ಶೂದ್ರನಿಗೆ ಉಪದೇಶ ಮಾಡುವುದಾಗಲೀ, ಉಂಡ ಮೇಲೆ ಉಳಿದ ಆಹಾರವನ್ನು ಕೊಡುವುದಾಗಲೀ ಅಥವಾ ದಾನವಾಗಿ ಬಂದ ಬೆಣ್ಣೆಯನ್ನು ಕೊಡುವುದಾಗಲೀ ಕೂಡದು.

ಅವನಿಗೆ ಧರ್ಮೋಪದೇಶವನ್ನಾಗಲೀ ಅಥವಾ ಧರ್ಮಾಚರಣೆಯನ್ನಾಗಲೀ ಹೇಳಿಕೊಡಬಾರದು.

ಏಕೆಂದರೆ ಧರ್ಮೋಪದೇಶ ಮಾಡಿದವನು ಮತ್ತು ಧರ್ಮಾಚರಣೆಯನ್ನು ತಿಳಿಸಿಕೊಟ್ಟವನು ಇಬ್ಬರೂ ಆ ಶೂದ್ರನ ಜೊತೆ ಅಸಂವೃತ ಎಂಬ ನರಕದ ಕಗ್ಗತ್ತಲಿಗೆ ಬೀಳುತ್ತಾರೆ.[೩]

ವೇದವನ್ನು ಅಸ್ಪಷ್ಟವಾಗಿ ಉಚ್ಚರಿಸಬಾರದು ಅಥವಾ ಶೂದ್ರನ ಎದುರು ಉಚ್ಚರಿಸಬಾರದು; ರಾತ್ರಿಯ ಕೊನೆಯಲ್ಲಿ ವೇದೋಚ್ಚಾರಣೆ ಮಾಡಿದರೆ, ಎಷ್ಟೇ ದಣಿವಾಗಿದ್ದರೂ ನಿದ್ರಿಸಬಾರದು."[೪]

**(೬)**

ಮನುಸ್ಮೃತಿ ಹೀಗೆ ಹೇಳುತ್ತದೆ :

"ಶೂದ್ರನ ಸಂಪತ್ತನ್ನು ಬ್ರಾಹ್ಮಣ, ನಿಸ್ಸಂಕೋಚವಾಗಿ ಕಿತ್ತುಕೊಳ್ಳಬಹುದು, ಏಕೆಂದರೆ ಶೂದ್ರನಿಗೆ ತನ್ನ ಆಸ್ತಿಯೆಂಬುದೇ ಇಲ್ಲ. ಇವನು ಬ್ರಾಹ್ಮಣನ ಆಸ್ತಿಯಾಗಿರುವುದರಿಂದ ಅವನ ಯಜಮಾನ ಅವನಿಂದ ಏನನ್ನು ಬೇಕಾದರೂ ಎತ್ತಿಕೊಳ್ಳಬಹುದು.[೫]

ಶೂದ್ರನಿಗೆ ಸಂಪತ್ತನ್ನು ಕೂಡಿಸುವ ಶಕ್ತಿಯಿದ್ದರೂ ಅದನ್ನು ಅವನು ಗಳಿಸಬಾರದು; ಶೂದ್ರ ಐಶ್ವರ್ಯವಂತನಾಗಿದ್ದರೆ ಅದನ್ನು ನೋಡುವುದರಿಂದಲೇ ಬ್ರಾಹ್ಮಣನಿಗೆ ನೋವುಂಟಾಗುತ್ತದೆ"[೬]

**(೭)**

ರಾಜನಿಗೆ ಮನುಸ್ಮೃತಿ ಈ ರೀತಿ ಆದೇಶಿಸುತ್ತದೆ :

"ತನ್ನ ಹುಟ್ಟಿನ ಕಾರಣದಿಂದಾಗಿಯೇ ಬ್ರಾಹ್ಮಣನಾಗಿರುವವನು ಅಥವಾ ತಾನು ಬ್ರಾಹ್ಮಣ ಎಂದು ಹೇಳಿಕೊಳ್ಳುವವನು ರಾಜನಿಗೆ ಧರ್ಮೋಪದೇಶ ಮಾಡುವ ಹಕ್ಕುಳ್ಳವನಾಗಿದ್ದಾನೆ. ಆದರೆ ಅದು ಶೂದ್ರನಿಗೆ ಎಂದೂ ಇಲ್ಲ.

---

೧. ಅಧ್ಯಾಯ ೨೦, ಸೂತ್ರಗಳು ೪–೬
೨. ಅಧ್ಯಾಯ ೩, ಶ್ಲೋಕ ೧೫೬
೩. ಅಧ್ಯಾಯ ೪, ಶ್ಲೋಕಗಳು ೭೮–೮೧
೪. ಅಧ್ಯಾಯ ೪, ಶ್ಲೋಕ ೯೯
೫. ಅಧ್ಯಾಯ ೮, ಶ್ಲೋಕ ೪೧೭
೬. ಅಧ್ಯಾಯ ೧೦, ಶ್ಲೋಕ ೧೨೯

ಶೂದ್ರನು ಕೊಡುವ ನ್ಯಾಯ ತೀರ್ಮಾನವನ್ನು ರಾಜನಾದವನು ಸುಮ್ಮನೆ ನಿಂತು ನೋಡಿದರೆ, ಉಸುಕಿನಲ್ಲಿ ಸಿಕ್ಕಿಕೊಂಡ ಹಸುವಿನಂತೆ ಅವನ ರಾಜ್ಯ ಅಧೋಗತಿಗೆ ಇಳಿಯುತ್ತದೆ.

ಪ್ರಧಾನವಾಗಿ ಶೂದ್ರರೂ, ಪಾಖಂಡಿಗಳೂ ಇದ್ದು ಬ್ರಾಹ್ಮಣರಿಲ್ಲದ ರಾಜ್ಯ ಕ್ಷಾಮಡಾಮರಗಳಿಂದ ಬಹುಬೇಗನೆ ಸಂಪೂರ್ಣವಾಗಿ ನಾಶವಾಗುತ್ತದೆ."[೧]

(೮)

(ಅ) ಆಪಸ್ತಂಭ ಧರ್ಮಸೂತ್ರ ಹೇಳುತ್ತದೆ :

"ಧರ್ಮಾಚರಣೆಗಳನ್ನು ಈಡೇರಿಸಬೇಕೆಂಬ ಉದ್ದೇಶದಿಂದ ಕಠಿಣ ವ್ರತಗಳನ್ನು ಆಚರಿಸುವವರು. ಬ್ರಾಹ್ಮಣನ ಪಾದ ತೊಳೆದು ಜೀವಿಸುವ ಶೂದ್ರನೂ, ಹಾಗೂ ಕುರುಡ, ಮೂಕ, ಕಿವುಡ ಮತ್ತು ರೋಗಿಷ್ಠ ವ್ಯಕ್ತಿಗಳು (ಅವರ ಈ ಅಂಗವಿಕಲತೆ ಇರುವವರೆಗೂ) ತೆರಿಗೆಗಳಿಂದ ಮುಕ್ತರಾಗುತ್ತಾರೆ.[೨]

ಮೇಲಿನ ಮೂರು ವರ್ಣಗಳನ್ನು ಸೇವೆ ಮಾಡುವುದೇ ಶೂದ್ರರ ಕರ್ತವ್ಯ.

ಅವನು ಸೇವೆ ಮಾಡುವ ಜಾತಿ ಉಚ್ಚತರವಾಗಿದ್ದರೆ, ಅವನ ಪುಣ್ಯವೂ ಉನ್ನತಕರವಾಗಿರುತ್ತದೆ."[೩]

(ಆ) ಮನುಸ್ಮೃತಿ ಹೀಗೆನ್ನುತ್ತದೆ :

"ಈ ಸೃಷ್ಟಿಯನ್ನೆಲ್ಲ ರಕ್ಷಿಸುವುದಕ್ಕೋಸ್ಕರ ಸ್ವಯಂಭೂವು ತನ್ನ ಬಾಯಿ, ತೋಳು, ತೊಡೆ ಮತ್ತು ಪಾದಗಳಿಂದ ಉದ್ಭವಿಸಿದವರಿಗೆಲ್ಲ ಪ್ರತ್ಯೇಕ ಕರ್ತವ್ಯಗಳನ್ನು ಹಂಚಿದನು.

ಅಧ್ಯಯನ, ಅಧ್ಯಾಪನ, ಯಜ್ಞಯಾಗಗಳಲ್ಲಿ ಪುರೋಹಿತರಾಗಿ ಕೆಲಸ ಮಾಡುವುದು, ದಾನ ಕೊಡುವುದೂ, ತೆಗೆದುಕೊಳ್ಳುವುದೂ ಇವನ್ನು ಬ್ರಾಹ್ಮಣರಿಗೆ ವಿಧಿಸಿದನು.

ಜನರ ರಕ್ಷಣೆ, ದಾನ ಕೊಡುವುದು, ಯಜ್ಞ ಮಾಡಿಸುವುದು, ವೇದಾಧ್ಯಯನ ಮತ್ತು ಇಂದ್ರಿಯ ವಿಷಯಗಳಿಗೆ ಅಂಟಿಕೊಳ್ಳದಿರುವುದು ಇವುಗಳನ್ನು ಕ್ಷತ್ರಿಯನಿಗೆ ವಿಧಿಸಿದನು.

ಪಶುಪಾಲನೆ, ದಾನ ಮಾಡುವುದು, ಯಜ್ಞ ಮಾಡಿಸುವುದು, ವೇದಾಧ್ಯಯನ, ವ್ಯಾಪಾರ, ಲೇವಾದೇವಿ ಹಾಗೂ ಬೇಸಾಯ ಇವುಗಳನ್ನು ವೈಶ್ಯನಿಗೆ ವಿಧಿಸಿದನು.

ಮೇಲೆ ಹೇಳಿದ ಎಲ್ಲ ವರ್ಣಗಳವರನ್ನು ಮತ್ಸರವಿಲ್ಲದೆ ಸೇವೆ ಮಾಡಬೇಕೆಂದು ಸ್ವಯಂಭೂ ಶೂದ್ರನಿಗೆ ವಿಧಿಸಿದನು"[೪]

(೯)

(ಅ) ಆಪಸ್ತಂಭ ಧರ್ಮಸೂತ್ರ ಹೇಳುತ್ತದೆ :

"ತ್ರೈವರ್ಣಿಕರಲ್ಲಿ ಯಾರಾದರೂ ಶೂದ್ರ ಜಾತಿಯ ಹೆಂಗಸಿನೊಡನೆ ವ್ಯಭಿಚಾರ ಮಾಡಿದರೆ ಅವನನ್ನು ಗಡೀಪಾರು ಮಾಡಬೇಕು.

---

೧. ಅಧ್ಯಾಯ ೮, ಶ್ಲೋಕಗಳು ೨೦-೨೨

೨. ಪ್ರಶ್ನ ೨, ಪಟಲ ೧೦, ಖಂಡ ೨೬, ಸೂತ್ರಗಳು ೧೪-೧೬

೩. ಪ್ರಶ್ನ ೧, ಪಟಲ ೧, ಖಂಡ ೧, ಸೂತ್ರಗಳು ೭-೮

೪. ಅಧ್ಯಾಯ ೧, ಶ್ಲೋಕಗಳು ೮೭-೯೧

ತ್ರೈವರ್ಣಿಕರ ಜಾತಿಗೆ ಸೇರಿದ ಹೆಂಗಸಿನ ಜೊತೆ ಶೂದ್ರ ವ್ಯಭಿಚಾರ ಮಾಡಿದರೆ ಅವನಿಗೆ ಮರಣ ದಂಡನೆ ವಿಧಿಸತಕ್ಕದ್ದು."[೧]

(ಆ) ಗೌತಮ ಧರ್ಮಸೂತ್ರ ಹೇಳುತ್ತದೆ.

ಆರ್ಯ ಹೆಣ್ಣಿನ ಜೊತೆ ಶೂದ್ರ ಬಲವಂತವಾಗಿ ಸಂಭೋಗ ಮಾಡಿದರೆ ಅವನ ಲಿಂಗವನ್ನು ಕತ್ತರಿಸಿ ಹಾಕಿ ಅವನ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು.

ಆ ಸ್ತ್ರೀಗೆ ಪೋಷಕನಿದ್ದರೆ, ಶೂದ್ರನಿಗೆ ಮೇಲೆ ಹೇಳಿದ ಎಲ್ಲ ಶಿಕ್ಷೆಗಳನ್ನೂ ಕೊಟ್ಟು, ಮರಣದಂಡನೆ ವಿಧಿಸಬೇಕು.[೨]

(ಇ) ಮನುಸ್ಮೃತಿ ಹೇಳುತ್ತದೆ :

ಶೂದ್ರ ಗಂಡಸು ಬ್ರಾಹ್ಮಣ ಹೆಣ್ಣಿನ ಜೊತೆ ಕೂಡಿದರೆ ಅವನಿಗೆ ದೇಹದಂಡನೆ ವಿಧಿಸತಕ್ಕದ್ದು.[೩]

ದ್ವಿಜ (ಜಾತಿಯ) ಹೆಂಗಸಿನ ಜೊತೆ ಶೂದ್ರ ಮಲಗಿದರೆ, ಅವಳಿಗೆ ರಕ್ಷಣೆ ಇರಲಿ, ಇಲ್ಲದಿರಲಿ ಅವನ ಲಿಂಗವನ್ನು ಕತ್ತರಿಸಿ ಹಾಕಿ ಅವನ ಆಸ್ತಿಯೆಲ್ಲವನ್ನೂ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.[೪]

ದ್ವಿಜ (ಜಾತಿಯ) ಪುರುಷರು ತನ್ನ ಜಾತಿಯ ಹೆಣ್ಣನ್ನೇ ಮದುವೆಯಾಗತಕ್ಕದ್ದು; ಆದರೆ ಭೋಗಾಕಾಂಕ್ಷಿಗಳು ಕೆಳಜಾತಿಯ ಹೆಣ್ಣುಗಳನ್ನು ಅನುಕ್ರಮವಾಗಿ ಹೆಂಡತಿಯರನ್ನಾಗಿ ಮಾಡಿಕೊಳ್ಳಬಹುದು.

ಶೂದ್ರನಿಗೆ ಶೂದ್ರ ಹೆಂಗಸರು ಮಾತ್ರ ಹೆಂಡತಿಯಾಗತಕ್ಕದ್ದು; ವೈಶ್ಯನಿಗೆ ತನ್ನ ಜಾತಿಯವಳೂ ಮತ್ತು ಶೂದ್ರ ಜಾತಿಯ ಹೆಂಗಸು ಹೆಂಡತಿಯರಾಗಬಹುದು; ಕ್ಷತ್ರಿಯನಿಗೆ ತನ್ನ ಜಾತಿಯ ಹೆಂಗಸು ಮತ್ತು ಕೆಳಜಾತಿಯ ಇನ್ನಿಬ್ಬರು; ಬ್ರಾಹ್ಮಣನಿಗೆ ತನ್ನ ಜಾತಿಯ ಹೆಂಗಸರು ಮತ್ತು ಉಳಿದ ಮೂರು ಜಾತಿಯ ಹೆಂಗಸರು ಹೆಂಡತಿಯರಾಗಬಹುದು.

ಶೂದ್ರ ಸ್ತ್ರೀ ಹೆಂಡತಿಯಾಗಿದ್ದರೆ ಅವಳ ಕಷ್ಟಗಳನ್ನು ಬ್ರಾಹ್ಮಣ ಕ್ಷತ್ರಿಯರ ಇತಿಹಾಸದಲ್ಲಿ ತರಬಾರದು.

ಶೂದ್ರ ಸ್ತ್ರೀಯಲ್ಲಿ ಮೋಹಪರವಶರಾಗಿ ದ್ವಿಜ ಜಾತಿಯ ಪುರುಷರು ಅವಳನ್ನು ಮದುವೆಯಾದರೆ ಅವರು ಶೀಘ್ರವಾಗಿ ತಮ್ಮ ಕುಟುಂಬಗಳನ್ನೂ ತಮ್ಮ ಸಂತಾನವನ್ನೂ ಶೂದ್ರರ ಸ್ಥಿತಿಗೆ ಇಳಿಸುತ್ತಾರೆ.[೫]

ಶೂದ್ರ ಹೆಣ್ಣನ್ನು ಕೂಡುವ ಬ್ರಾಹ್ಮಣ ಹೀನಸ್ಥಿತಿಗೆ ಇಳಿಯುತ್ತಾನೆ; ಅವಳಲ್ಲಿ ಮಗನನ್ನು ಪಡೆದರೆ ಅವನು ಖಂಡಿತವಾಗಿ ತನ್ನ ಬ್ರಾಹ್ಮಣತ್ವವನ್ನು ಕಳೆದುಕೊಳ್ಳುತ್ತಾನೆ.

ಅವಳನ್ನು ಅವಲಂಬಿಸಿರುವ ಮನುಷ್ಯ ದೇವತೆಗಳಿಗೆ, ಪಿತೃಗಳಿಗೆ ಮತ್ತು ಅತಿಥಿಗಳಿಗೆ ಕೊಡುವ ತರ್ಪಣವನ್ನು ದೇವತೆಗಳು ಮತ್ತು ಪಿತೃಗಳು ಸ್ವೀಕರಿಸುವುದಿಲ್ಲ. ಅವನು ಸ್ವರ್ಗಾರೋಹಣ ಮಾಡಲಾರ.

---

೧. ಪ್ರಶ್ನ ೨, ಪಟಲ ೧೦, ಖಂಡ ೨೭, ಸೂತ್ರಗಳು ೮–೯

೨. ಅಧ್ಯಾಯ ೧೨, ಸೂತ್ರಗಳು ೨–೩

೩. ಅಧ್ಯಾಯ ೮, ಶ್ಲೋಕ ೩೬೬

೪. ಅಧ್ಯಾಯ ೮, ಪದ್ಯ ೩೭೪

೫. ಅಧ್ಯಾಯ ೩, ಶ್ಲೋಕಗಳು ೧೨–೧೫

ಶೂದ್ರ ಹೆಣ್ಣಿನ ತುಟಿಯ ರಸವನ್ನು ಹೀರಿ, ಅವಳ ಉಸಿರಿನ ಜೊತೆ ಒಂದಾಗಿ ಅವಳಲ್ಲಿ ಪುತ್ರನನ್ನು ಪಡೆದ ದ್ವಿಜನಿಗೆ ಪಾಪಪರಿಹಾರವಿಲ್ಲ.[೧]

(೧೦)

(ಅ) ವಸಿಷ್ಠ ಧರ್ಮಸೂತ್ರ ಹೇಳುತ್ತದೆ :

"ದ್ವೇಷ, ಅಸೂಯೆಪಡುವುದು, ಸುಳ್ಳು ಹೇಳುವುದು, ಬ್ರಾಹ್ಮಣ ನಿಂದೆ ಮಾಡುವುದು, ಚಾಡಿ ಹೇಳುವುದು ಮತ್ತು ಹಿಂಸೆ ಮಾಡುವುದು ಇವು ಶೂದ್ರನ ಲಕ್ಷಣಗಳೆಂದು ತಿಳಿಯಬೇಕು."[೨]

(ಆ) ವಿಷ್ಣುಸ್ಮೃತಿ ಹೀಗೆ ನಿಗದಿಪಡಿಸುತ್ತದೆ :

ಬ್ರಾಹ್ಮಣನ ಹೆಸರು ಶುಭವನ್ನು ಸೂಚಿಸಬೇಕು,
ಕ್ಷತ್ರಿಯನ ಹೆಸರು ಶೌರ್ಯವನ್ನು ಸೂಚಿಸಬೇಕು,
ವೈಶ್ಯನ ಹೆಸರು ಐಶ್ವರ್ಯಸೂಚಕವಾಗಿರಬೇಕು,
ಶೂದ್ರನ ಹೆಸರು ತಿರಸ್ಕಾರವನ್ನು ಸೂಚಿಸಬೇಕು.[೩]

(ಇ) ಗೌತಮ ಧರ್ಮಸೂತ್ರ ಹೇಳುತ್ತದೆ :

"ಶೂದ್ರ ನಾಲ್ಕನೆಯ ವರ್ಣಕ್ಕೆ ಸೇರಿದ್ದಾನೆ. ಅವನಿಗಿರುವುದು ಒಂದೇ ಹುಟ್ಟು, ಅವನು ತನ್ನ ಮೇಲಿನ ವರ್ಣಗಳ ಸೇವೆ ಮಾಡಬೇಕು; ಅವರಿಂದ ಯಾಚಿಸಿ ತನ್ನ ಹೊಟ್ಟೆ ಹೊರೆದುಕೊಳ್ಳಬೇಕು; ಅವರ ಹಳೆ ಮೆಟ್ಟುಗಳನ್ನು ಉಪಯೋಗಿಸಬೇಕು; ಅವರು ತಿಂದುಳಿದುದನ್ನು ಅವನು ಉಣ್ಣಬೇಕು.[೪]

ದ್ವಿಜರನ್ನು ಉದ್ದೇಶಪೂರ್ವಕವಾಗಿ ಶೂದ್ರ ಬೈದರೆ ಅಥವಾ ಹೊಡೆದರೆ ಹೊಡೆಯಲು ಬಳಸಿದ ಅಂಗವನ್ನೇ ಛೇದಿಸಬೇಕು.

ದ್ವಿಜರ ಜೊತೆ ಸಮಾನವಾಗಿ ಕುಳಿತುಕೊಂಡರೆ, ಮಲಗಿಕೊಂಡರೆ, ಮಾತನಾಡಿದರೆ, ಅಥವಾ ನಡೆದರೆ ಅವನಿಗೆ ಉಗ್ರ ಶಿಕ್ಷೆ ವಿಧಿಸಬೇಕು."[೪]

(ಈ) ಮನುಸ್ಮೃತಿ ಇದನ್ನೇ ಅನುಸರಿಸಿ ಹೇಳುತ್ತದೆ :

"ಚಾತುರ್ವರ್ಣ್ಯ ವ್ಯವಸ್ಥೆಗೆ ಪ್ರವೇಶ ಪಡೆಯಲು ಉಪನಯನ ದೀಕ್ಷೆಯನ್ನು ಪಡೆದಿರುವ ದ್ವಿಜರನ್ನು ಅವರು ಇಚ್ಛೆಪಡದಿದ್ದರೂ ದಾಸ್ಯ ವೃತ್ತಿ ಮಾಡುವಂತೆ ಬ್ರಾಹ್ಮಣನು ತನಗೆ ಅಧಿಕಾರವಿದೆಯೆಂದು ದುರಾಸೆಯಿಂದ ಒತ್ತಾಯಪಡಿಸಿದರೆ ಅವನಿಗೆ ರಾಜನು ಆರು ನೂರು ಪಣಗಳ ದಂಡ ವಿಧಿಸತಕ್ಕದ್ದು.

ಆದರೆ ಬ್ರಾಹ್ಮಣನು ಶೂದ್ರನನ್ನು ಕೊಂಡುಕೊಂಡು ಅಥವಾ ಕೊಂಡುಕೊಳ್ಳದಿದ್ದರೂ ಅವನನ್ನು

---

೧. ಅದೇ ಶ್ಲೋಕಗಳು ೧೭–೧೯

೨. ಅಧ್ಯಾಯ ೬, ಶ್ಲೋಕ ೨೪

೩. ಅಧ್ಯಾಯ ೨೭, ಸೂತ್ರ ೬–೯

೪. ಅಧ್ಯಾಯ ೧೦, ಸೂತ್ರಗಳು ೫೦, ೫೬–೫೯ ಮತ್ತು ಅಧ್ಯಾಯ ೧೨, ಸೂತ್ರಗಳು ೧–೩

ಸೇವಾವೃತ್ತಿ ಮಾಡಲು ಬಲವಂತಪಡಿಸಬಹುದು, ಏಕೆಂದರೆ ದೇವರು ಅವನನ್ನು ಬ್ರಾಹ್ಮಣ ಸೇವೆ ಮಾಡಲೆಂದೇ ಸೃಷ್ಟಿಸಿದ್ದಾನೆ.

ಒಂದು ಪಕ್ಷ ಅವನ ಯಜಮಾನ ಅವನನ್ನು (ಶೂದ್ರನನ್ನು) ಬಿಡುಗಡೆ ಮಾಡಿದರೂ ಅವನಿಗೆ ಬಿಡುಗಡೆಯಿಲ್ಲ; ಏಕೆಂದರೆ ದಾಸ್ಯವೇ ಅವನ ಮೂಲಸ್ವಭಾವವಾಗಿದೆ; ಆದ್ದರಿಂದ ಅವನನ್ನು ಯಾರು ತಾನೇ ಬಿಡುಗಡೆ ಮಾಡಲು ಸಾಧ್ಯ.[೧]

ಒಳ್ಳೆಯವರು ಅನುಸರಿಸುವ ಜೀವನಮಾರ್ಗವನ್ನು ಯಾರು ಗೊಣಗದೆ ಅನುಸರಿಸುತ್ತಾನೊ ಅವನಿಗೆ ನಿಂದೆಯಿಲ್ಲ, ಅವನು ಇಹ ಮತ್ತು ಪರಲೋಕಗಳ ಲಾಭವನ್ನು ಪಡೆಯುತ್ತಾನೆ.[೨]

ವೇದಪಾರಂಗತರೂ ಸಂಸಾರಿಗಳೂ ಆದ ಪೂಜ್ಯ ಪುರೋಹಿತರನ್ನು ವಿನಯದಿಂದ ಸೇವೆ ಮಾಡಿದರೆ ಶೂದ್ರನಿಗೆ ಆನಂದ ಲಭಿಸುತ್ತದೆ ಮತ್ತು ಅದೇ ಅವನ ಶ್ರೇಷ್ಠ ಕರ್ತವ್ಯವಾಗುತ್ತದೆ.

ಅವನು ಬ್ರಾಹ್ಮಣನಿಗೆ ಸದಾ ಶರಣಾಗತನಾಗಿ, ಪರಿಶುದ್ಧನಾಗಿ ಮೇಲುವರ್ಣದವರಿಗೆ ವಿಧೇಯನಾಗಿ ವಂಚನೆಯಿಲ್ಲದೆ ಮೆದು ಮಾತುಗಳನ್ನಾಡುವುದರಿಂದ ಅವನು ಮುಂದಿನ ಜನ್ಮದಲ್ಲಿ ಮೇಲಿನ ಜಾತಿಯಲ್ಲಿ ಹುಟ್ಟುತ್ತಾನೆ.[೩]

ಈಗ ತನ್ನ ಹೊಟ್ಟೆಪಾಡಿಗಾಗಿ ಶೂದ್ರ ಕ್ಷತ್ರಿಯನ ಸೇವೆ ಮಾಡಬಹುದೆಂದು ಶಾಸ್ತ್ರ ಹೇಳುತ್ತದೆ; ಅಥವಾ ಜೀವನೋಪಾಯಕ್ಕಾಗಿ ಶೂದ್ರನು ಶ್ರೀಮಂತ ವೈಶ್ಯನ ಸೇವೆಯನ್ನು ಕೈಗೊಳ್ಳಬಹುದು.

ಆದರೆ ಅವನಿಗೆ ಸ್ವರ್ಗ ಬೇಕಾದರೆ ಅಥವಾ ಸ್ವರ್ಗ ಮತ್ತು ಜೀವನೋಪಾಯ ಎರಡೂ ಬೇಕಾದರೆ ಅವನು ಬ್ರಾಹ್ಮಣನ ಸೇವೆ ಮಾಡತಕ್ಕದ್ದು; ಅವನು ತಾನು ಮಾಡುವಾಗಲೆಲ್ಲಾ ಬ್ರಾಹ್ಮಣನ ನಾಮೋಚ್ಚಾರಣೆ ಮಾಡುವುದರಿಂದ ಅವನಿಗೆ ಪರಮ ಪದವೇ ಲಭಿಸುತ್ತದೆ.

ಕೇವಲ ಬ್ರಾಹ್ಮಣರ ಸೇವೆ ಮಾಡುವುದೇ ಶೂದ್ರನ ಪರಮ ಪವಿತ್ರ ಕೆಲಸ; ಏಕೆಂದರೆ ಇದನ್ನು ಮಾಡದೆ ಬೇರೆ ಏನನ್ನೇ ಮಾಡಿದರೂ ಅವನಿಗೆ ಕಿಂಚಿತ್ತೂ ಲಾಭವಿಲ್ಲ.

ಅವನ ಸಾಮರ್ಥ್ಯ, ಜಾಣತನ ಮತ್ತು ಅವನನ್ನು ಎಷ್ಟು ಜನ ಆಶ್ರಯಿಸಿಕೊಂಡಿದ್ದಾರೆ ಎಂಬುದರ ಆಧಾರದ ಮೇಲೆ ಬ್ರಾಹ್ಮಣರು ತಮ್ಮ ಮನೆಯಲ್ಲಿರುವ ಕಾಳುಕಡ್ಡಿಗಳನ್ನು ಕೊಟ್ಟು ಅವನ ಜೀವನೋಪಾಯಕ್ಕೆ ವ್ಯವಸ್ಥೆ ಮಾಡತಕ್ಕದ್ದು.

ತಾವು ತಿಂದುಳಿದ ಆಹಾರವನ್ನು, ಹಳೆಯ ಬಟ್ಟೆಗಳನ್ನು, ಮುಗ್ಗಲು ದವಸ ಧಾನ್ಯಗಳನ್ನು, ಮುರುಕಲು ಪೀಠೋಪಕರಣಗಳನ್ನು ಅವನಿಗೆ ಕೊಡತಕ್ಕದ್ದು.[೪]

ಬ್ರಾಹ್ಮಣನ ಹೆಸರು ಶುಭವನ್ನೂ, ಕ್ಷತ್ರಿಯನ ಹೆಸರು ಶೌರ್ಯವನ್ನೂ, ವೈಶ್ಯನ ಹೆಸರು ಐಶ್ವರ್ಯವನ್ನೂ ಮತ್ತು ಶೂದ್ರನ ಹೆಸರು ಜಿಗುಪ್ಸೆಯನ್ನೂ ಸೂಚಿಸುವಂತಿರಬೇಕು.

ಬ್ರಾಹ್ಮಣನ ಹೆಸರು ಅಭ್ಯುದಯವನ್ನೂ, ಕ್ಷತ್ರಿಯನ ಹೆಸರು ರಕ್ಷಣೆಯನ್ನೂ, ವೈಶ್ಯನ ಹೆಸರು ಸಂಪತ್ತನ್ನೂ, ಶೂದ್ರನ ಹೆಸರು ಸೇವೆಯನ್ನೂ ಸೂಚಿಸುವಂತಿರಬೇಕು.[೫]

---

೧. ಅಧ್ಯಾಯ ೮, ಶ್ಲೋಕಗಳು ೪೧೨–೪೧೪

೨. ಅಧ್ಯಾಯ ೧೦, ಶ್ಲೋಕಗಳು ೧೨೮

೩. ಅಧ್ಯಾಯ ೯, ಶ್ಲೋಕಗಳು ೩೩೪–೩೩೫

೪. ಅಧ್ಯಾಯ ೧೦, ಶ್ಲೋಕಗಳು ೧೨೧–೧೨೫

೫. ಅಧ್ಯಾಯ ೨, ಶ್ಲೋಕಗಳು ೩೧–೩೨

ಏಕಜನಾದ ಶೂದ್ರನು ದ್ವಿಜರಾದ ಬ್ರಾಹ್ಮಣರನ್ನು ಕಟುನುಡಿಗಳಿಂದ ಬೈದರೆ ಅವನ ನಾಲಗೆಯನ್ನು ಕತ್ತರಿಸಿಹಾಕಬೇಕು; ಏಕೆಂದರೆ ಅವನು ಅತ್ಯಂತ ನಿಕೃಷ್ಟ ಜನ್ಮದವನು.

ಶೂದ್ರನು ಬ್ರಾಹ್ಮಣರ ಹೆಸರು ಮತ್ತು ಜಾತಿಯನ್ನು ಹೇಳಿ ಅವಮಾನ ಮಾಡಿದರೆ ಹತ್ತು ಅಂಗುಲ ಉದ್ದದ ಬರೆಗುಳವನ್ನು ಕೆಂಪಗೆ ಕಾಯಿಸಿ ಅವನ ಬಾಯಿಯ ಒಳಗೆ ತುರುಕಬೇಕು.

ಶೂದ್ರನು ಗರ್ವದಿಂದ ಬ್ರಾಹ್ಮಣರಿಗೆ ಧರ್ಮಬೋಧನೆ ಮಾಡಿದರೆ ಅವನ ಬಾಯಿ ಮತ್ತು ಕಿವಿಗೆ ಕುದಿಯುವ ಎಣ್ಣೆಯನ್ನು ರಾಜ ಹುಯ್ಯಿಸತಕ್ಕದ್ದು.[೧]

ಬ್ರಾಹ್ಮಣನ ಯಾವುದೇ ಅಂಗವನ್ನು ಶೂದ್ರನು ತನ್ನ ಅಂಗದಿಂದ ಗಾಯಗೊಳಿಸಿದರೆ ಅವನ ಆ ಅಂಗವನ್ನೇ ಕತ್ತರಿಸಿಹಾಕಬೇಕು; ಇದು ಮನುವಿನ ಕಟ್ಟಾಜ್ಞೆ.

ಬ್ರಾಹ್ಮಣನ ವಿರುದ್ಧ ಶೂದ್ರನು ಕೈಯೆತ್ತಿದರೆ ಆ ಕೈಯನ್ನೇ ಕತ್ತರಿಸಬೇಕು; ಅವನು ಸಿಟ್ಟಿನಲ್ಲಿ ತನ್ನ ಕಾಲಿನಲ್ಲಿ ಒದ್ದರೆ ಆ ಕಾಲನ್ನೇ ಕತ್ತರಿಸಬೇಕು.

ಬ್ರಾಹ್ಮಣನ ಜೊತೆಯಲ್ಲಿ ಶೂದ್ರ ಕುಳಿತುಕೊಳ್ಳಲು ಪ್ರಯತ್ನಿಸಿದರೆ ಅವನ ಅಂಡಿನ ಮೇಲೆ ಬರೆಯೆಳೆದು ಅವನನ್ನು ಗಡಿಪಾರು ಮಾಡತಕ್ಕದ್ದು, ಅಥವಾ ರಾಜನು ಅವನ ಕುಂಡಿಯನ್ನು ಕತ್ತರಿಸತಕ್ಕದ್ದು.

ಶೂದ್ರನು ಗರ್ವದಿಂದ ಬ್ರಾಹ್ಮಣನ ಮೇಲೆ ಉಗಿದರೆ ಅವನ ಎರಡು ತುಟಿಗಳನ್ನೂ ರಾಜನು ಕತ್ತರಿಸಿಹಾಕತಕ್ಕದ್ದು; ಅವನ ಮೇಲೆ ಉಚ್ಚೆ ಹೊಯ್ದರೆ ಅವನ ಗುಪ್ತಾಂಗವನ್ನು, ಅವನ ಮೇಲೆ ಹೂಸಿದರೆ ಅವನ ಗುದದ್ವಾರವನ್ನು ಕತ್ತರಿಸತಕ್ಕದ್ದು.

ಶೂದ್ರನು ಬ್ರಾಹ್ಮಣನ ಮುಂದಲೆಯನ್ನು ಹಿಡಿದೆಳೆದರೆ ಕಾಲನ್ನೂ, ಗಡ್ಡವನ್ನೂ, ಕುತ್ತಿಗೆಯೂನ್ನು ಅಥವಾ ವೃಷಣವನ್ನು ಜಗ್ಗಿದರೆ (ರಾಜನು) ಹಿಂದು ಮುಂದೂ ನೋಡದೆ ಅವನ ಎರಡೂ ಕೈಗಳನ್ನೂ ಕತ್ತರಿಸಿಹಾಕತಕ್ಕದ್ದು.

ಶೂದ್ರನು ಬ್ರಾಹ್ಮಣನ ಚರ್ಮವನ್ನು ಕಿತ್ತು ರಕ್ತ ಬರಿಸಿದರೆ, ಅವನಿಗೆ ಐದು ನೂರು ಪಣ ದಂಡ ವಿಧಿಸತಕ್ಕದ್ದು; ಅವನು ಮಾಂಸವನ್ನು ಕತ್ತರಿಸಿದರೆ, ಆರು ನಿಷ್ಕಗಳ ದಂಡ ವಿಧಿಸತಕ್ಕದ್ದು, ಮೂಳೆಯನ್ನು ಮುರಿದರೆ ಗಡಿಪಾರು ಮಾಡತಕ್ಕದ್ದು.[೨]

(ಉ) 'ನಾರದಸ್ಮೃತಿ' ಹೀಗೆ ಹೇಳುತ್ತದೆ :

ಶೂದ್ರರು ಬ್ರಾಹ್ಮಣರ ಮೇಲೆ ವಿನಾಕಾರಣ ಆಪಾದನೆ ಹೊರಿಸಿದರೆ ರಾಜನು ತನ್ನ ಅಧಿಕಾರಿಗಳಿಂದ ಅವರ ನಾಲಗೆಯನ್ನು ಸೀಳಿಸತಕ್ಕದ್ದು ಮತ್ತು ಅವರನ್ನು ಹರಾಜು ಮಾಡತಕ್ಕದ್ದು.

ಶೂದ್ರನು ಬ್ರಾಹ್ಮಣನನ್ನು ಹೀನಾಮಾನಬೈದರೆ ಅವನ ನಾಲಗೆಯನ್ನು ಕತ್ತರಿಸಿ ಹಾಕಬೇಕು; ಏಕೆಂದರೆ ಅವನು ಕೀಳುಜಾತಿಯವನು.

ಶೂದ್ರನು ಬ್ರಾಹ್ಮಣರ ಜಾತಿ ಅಥವಾ ಹೆಸರನ್ನು ತಿರಸ್ಕಾರದಿಂದ ಹೇಳಿದರೆ ಹತ್ತು ಅಂಗುಲ ಉದ್ದದ ಕೆಂಪಗೆ ಕಾಯಿಸಿದ ಬರೆಗುಳವನ್ನು ಅವನ ಬಾಯಿಗೆ ಗಿಡಿಯತಕ್ಕದ್ದು.

---

೧. ಅಧ್ಯಾಯ ೮, ಶ್ಲೋಕಗಳು ೨೭೦–೨೭೨

೨. ಅಧ್ಯಾಯ ೮, ಶ್ಲೋಕಗಳು ೨೭೯–೨೮೪

ಶೂದ್ರನು ಗರ್ವದಿಂದ ಬ್ರಾಹ್ಮಣರಿಗೆ ಧರ್ಮೋಪದೇಶ ಮಾಡಿದರೆ, ರಾಜನು ಅವನ ಬಾಯಿ ಮತ್ತು ಕಿವಿಗಳಿಗೆ ಮರಳುವ ಎಣ್ಣೆಯನ್ನು ಸುರಿಯುವಂತೆ ಆಜ್ಞಾಪಿಸತಕ್ಕದ್ದು.

ಶೂದ್ರನು ಯಾವ ಅಂಗದಿಂದ ಬ್ರಾಹ್ಮಣನಿಗೆ ನೋವುಂಟುಮಾಡುತ್ತಾನೊ ಆ ಅಂಗವನ್ನೇ ಕತ್ತರಿಸತಕ್ಕದ್ದು; ಏಕೆಂದರೆ ಆ ಅಪರಾಧಕ್ಕೆ ಅದೇ ಸರಿಯಾದ ಶಿಕ್ಷೆ.

ಶೂದ್ರನು ಬ್ರಾಹ್ಮಣನ ಜೊತೆ ಸಮಪೀಠದಲ್ಲಿ ಕುಳಿತುಕೊಳ್ಳಲು ಪ್ರಯತ್ನಿಸಿದರೆ ಅವನ ಕುಂಡಿಯ ಮೇಲೆ ಬರೆಯೆಳೆದು, ಗಡಿಪಾರು ಮಾಡತಕ್ಕದ್ದು ಅಥವಾ ರಾಜನು ಅವನ ಕುಂಡಿಗಳನ್ನು ಕತ್ತರಿಸತಕ್ಕದ್ದು.

ಶೂದ್ರನು ಗರ್ವದಿಂದ ಬ್ರಾಹ್ಮಣನ ಮೇಲೆ ಉಗುಳಿದರೆ, ಅವನ ಎರಡು ತುಟಿಗಳನ್ನು ರಾಜನು ಕತ್ತರಿಸಿಹಾಕಬೇಕು; ಅವನ ಮೇಲೆ ಉಚ್ಚೆ ಹುಯ್ದರೆ ಅವನ ಗುಪ್ತಾಂಗವನ್ನೂ, ಹೂಸಿದರೆ ಅಂಡನ್ನೂ ಕತ್ತರಿಸಿ ಹಾಕಬೇಕು.[೧]

೩

ಇವು ಶೂದ್ರರ ಬಗ್ಗೆ ಬ್ರಾಹ್ಮಣ ಸ್ಮೃತಿಕಾರರು ಮಾಡಿರುವ ಕಾನೂನುಗಳು. ಅವುಗಳ ಸಾರಾಂಶವನ್ನು ಮುಂದಿನ ಶೀರ್ಷಿಕೆಗಳಲ್ಲಿ ಸಂಗ್ರಹಿಸಬಹುದು:

(೧) ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಶೂದ್ರನದು ಕೊನೆಯ ಸ್ಥಾನ.

(೨) ಶೂದ್ರ ಅಶುದ್ಧನಾದುದರಿಂದ ಯಾವುದೇ ಧಾರ್ಮಿಕ ವಿಧಿಯನ್ನೂ ಅವನಿಗೆ ಕಾಣುವಂತೆ ಅಥವಾ ಕೇಳುವಂತೆ ಮಾಡಬಾರದು.

(೩) ಉಳಿದ ಮೂರು ವರ್ಣಗಳನ್ನು ಗೌರವಿಸುವ ರೀತಿಯಲ್ಲಿ ಶೂದ್ರನನ್ನು ಗೌರವಿಸಬಾರದು.

(೪) ಶೂದ್ರನ ಜೀವನಕ್ಕೆ ಬೆಲೆಯಿಲ್ಲ. ಆದ್ದರಿಂದ ಯಾವುದೇ ಪರಿಹಾರ ಕೊಡದೆ ಅವನನ್ನು ಯಾರು ಬೇಕಾದರೂ ಕೊಲ್ಲಬಹುದು; ಒಂದು ಪಕ್ಷ ಅವನಿಗೆ ಬೆಲೆಯಿದ್ದರೆ, ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರಿಗೆ ಹೋಲಿಸಿದಾಗ ಅದು ತೀರ ಅಲ್ಪ ಬೆಲೆಯುಳ್ಳದ್ದಾಗಿರುತ್ತದೆ.

(೫) ಶೂದ್ರ ಜ್ಞಾನವನ್ನು ಗಳಿಸಕೂಡದು, ಗಳಿಸಿದರೆ ಅದು ಪಾಪವಾಗುತ್ತದೆ. ಅವನಿಗೆ ವಿದ್ಯೆ ಕೊಡುವುದೇ ಅಪರಾಧ.

(೬) ಶೂದ್ರನಿಗೆ ಆಸ್ತಿ ಮಾಡುವ ಹಕ್ಕಿಲ್ಲ. ಬ್ರಾಹ್ಮಣ ತನ್ನಿಷ್ಟದಂತೆ ಅದನ್ನು ಕಿತ್ತುಕೊಳ್ಳಬಹುದು.

(೭) ಸರ್ಕಾರಿ ಸೇವೆಯಲ್ಲಿ ಶೂದ್ರ ಯಾವುದೇ ಅಧಿಕಾರ ವಹಿಸಕೂಡದು.

(೮) ಮೇಲಿನ ವರ್ಣಗಳ ಸೇವೆ ಮಾಡುವುದೇ ಶೂದ್ರನ ಕರ್ತವ್ಯ ಮತ್ತು ಅದರಿಂದಲೇ ಅವನಿಗೆ ಮೋಕ್ಷ.

(೯) ಮೇಲಿನ ವರ್ಣದವರು ಶೂದ್ರನನ್ನು ಮದುವೆಯಾಗಬಾರದು, ಆದರೆ ಅವರು ಶೂದ್ರ ಸ್ತ್ರೀಯರನ್ನು ಸೂಳೆಯರನ್ನಾಗಿಟ್ಟುಕೊಳ್ಳಬಹುದು. ಶೂದ್ರನೇನಾದರೂ ಮೇಲುಜಾತಿಯ ಹೆಣ್ಣನ್ನು ಮುಟ್ಟಿದರೆ ಅವನಿಗೆ ಉಗ್ರಶಿಕ್ಷೆ ವಿಧಿಸತಕ್ಕದ್ದು.

(೧೦) ಶೂದ್ರ ಗುಲಾಮಗಿರಿಯಲ್ಲಿ ಹುಟ್ಟಿರುವುದರಿಂದ ಅವನನ್ನು ಸದಾ ಗುಲಾಮಗಿರಿಯಲ್ಲೇ ಇಟ್ಟಿರಬೇಕು.

---

೧. ಅಧ್ಯಾಯ ೧೫, ಶ್ಲೋಕಗಳು ೨೨–೨೭

ಈ ತಾತ್ಪರ್ಯವನ್ನು ಓದುವ ಯಾರೇ ಆಗಲಿ ಎರಡು ವಿಚಾರಗಳಿಂದ ಪ್ರಭಾವಿತರಾಗುತ್ತಾರೆ. ಬ್ರಾಹ್ಮಣ ಸ್ಮೃತಿಕಾರರು ತಮ್ಮ ಕಾನೂನು ರಚನೆಯ ಅಧಿಕಾರಕ್ಕೆ ಶೂದ್ರನನ್ನು ಮಾತ್ರ ಬಲಿಪಶುವನ್ನಾಗಿ ಮಾಡಿದ್ದಾರೆಂಬುದು ಅವರ ಗಮನ ಸೆಳೆಯುತ್ತದೆ. ಪ್ರಾಚೀನ ಹಿಂದೂ ಆರ್ಯ ಸಮಾಜದಲ್ಲಿ ತುಳಿತಕ್ಕೊಳಗಾದ ವರ್ಗವೆಂದರೆ ವೈಶ್ಯರು, ಶೂದ್ರರಲ್ಲ ಎಂಬುದು ಗೊತ್ತಾದರೆ ಅವರ ಸೋಜಿಗ ಇನ್ನೂ ಹೆಚ್ಚಾಗುತ್ತದೆ. ಈ ಸಂಬಂಧವಾಗಿ ಐತ್ತರೇಯ ಬ್ರಾಹ್ಮಣದ ಒಂದು ಉಲ್ಲೇಖವನ್ನು ಕೊಡಬಹುದು. ವಿಶ್ವಂತರ ಮಹಾರಾಜ ಮತ್ತು ಶ್ಯಾಪರ್ಣ ಬ್ರಾಹ್ಮಣರ ಕಥೆಯನ್ನು ಹೇಳುವ ಐತ್ತರೇಯ ಬ್ರಾಹ್ಮಣ ಸೋಮರಸವನ್ನು ಕುಡಿಯಲು ಯಾವ ಯಾವ ವರ್ಗಗಳಿಗೆ ಹಕ್ಕು ಇದೆ ಎಂಬುದರ ಬಗ್ಗೆ ಹೇಳುತ್ತದೆ. ಆ ಕಥೆಯನ್ನು ಹೇಳುತ್ತಾ ಅದು ವೈಶ್ಯನ ಬಗ್ಗೆ ಮುಂದಿನಂತೆ ಹೇಳುತ್ತದೆ :

"ಆಮೇಲೆ, ವೈಶ್ಯನ ಕುಡಿತವಾದ ಮೊಸರನ್ನು ಪುರೋಹಿತ ತಂದರೆ, ಅದರಿಂದ ನೀನು ವೈಶ್ಯರನ್ನು ಸಂತೃಪ್ತಿಗೊಳಿಸು. ನಿನ್ನ ಸಂತತಿಯಲ್ಲಿ ವೈಶ್ಯನಂಥ ಒಬ್ಬನು ಹುಟ್ಟಲಿ, ಅವನು ಇನ್ನೊಬ್ಬನಿಗೆ ಸಹಾಯಕನಾಗಲಿ, ಅವನನ್ನು ಮತ್ತೊಬ್ಬ ಸ್ವಾಹಾ ಮಾಡಲಿ, ಅವನನ್ನು ಸ್ವೇಚ್ಛೆಯಿಂದ ದಮನ ಮಾಡಲಿ"[೧]

ಇಲ್ಲಿ ಪ್ರಶ್ನೆ ಏನೆಂದರೆ : ವೈಶ್ಯನನ್ನು ಬಿಟ್ಟು ಬಿಟ್ಟು ಶೂದ್ರರನ್ನೇ ಏಕೆ ಬ್ರಾಹ್ಮಣರು ತಮ್ಮ ಕೋಪಾಗ್ನಿಗೆ ಗುರಿಪಡಿಸಿದ್ದಾರೆ?

ಬ್ರಾಹ್ಮಣನಿಗಿರುವ ಸವಲತ್ತುಗಳಿಗೂ ಶೂದ್ರನಿಗಿರುವ ಅನರ್ಹತೆಗಳಿಗೂ ಇರುವ ನಿಕಟ ಸಂಬಂಧ ಯಾರ ಗಮನವನ್ನಾದರೂ ಸೆಳೆಯುತ್ತದೆ. ಶೂದ್ರನದು ತ್ರೈವರ್ಣಿಕರಿಗಿಂತ ಕೆಳಗಿನ ಅಂತಸ್ತು; ಹಾಗಾಗಿ ಅವನನ್ನು ತ್ರೈವರ್ಣಿಕರ ಜೊತೆ ವೈಷಮ್ಯದಿಂದ ನೋಡಲಾಗಿದೆ. ಹಾಗಿದ್ದ ಪಕ್ಷದಲ್ಲಿ ಎಲ್ಲ ತ್ರೈವರ್ಣಿಕರಿಗೂ ಒಂದೇ ಬಗೆಯ ಹಕ್ಕುಗಳಿರಬೇಕೆಂದು ನಿರೀಕ್ಷಿಸುವುದು ಸರಿಯಲ್ಲವೆ? ಆದರೆ ವಸ್ತುಸ್ಥಿತಿ ಏನು? ಶೂದ್ರನಿಗಿಂತ ಹೆಚ್ಚು ಹಕ್ಕುಗಳು ಕ್ಷತ್ರಿಯರಿಗಾಗಲೀ ವೈಶ್ಯರಿಗಾಗಲೀ ಇಲ್ಲ ಎಂಬುದು ವಸ್ತುಸ್ಥಿತಿ. ತ್ರೈವರ್ಣಿಕರಲ್ಲಿ ವಿಶೇಷ ಹಕ್ಕು ಮತ್ತು ಸವಲತ್ತುಗಳಿರುವುದು ಬ್ರಾಹ್ಮಣನಿಗೆ ಮಾತ್ರ. ಉದಾಹರಣೆಗೆ ಬ್ರಾಹ್ಮಣನಿಗೆ ಶೂದ್ರ ಅಪರಾಧ ಮಾಡಿದರೆ ಅವನು ಕ್ಷತ್ರಿಯ ಅಥವಾ ವೈಶ್ಯನಿಗಿಂತಲೂ ಬ್ರಾಹ್ಮಣನಿಗೆ ಶೂದ್ರ ಅಪರಾಧ ಮಾಡಿದರೆ ಅವನು ಕ್ಷತ್ರಿಯ ಅಥವಾ ವೈಶ್ಯನಿಗಿಂತಲೂ ಹೆಚ್ಚು ಶಿಕ್ಷೆಯನ್ನು ಶೂದ್ರನಿಗೆ ಕೊಡಿಸಲು ತಗಾದೆ ಮಾಡಬಹುದು. ಯಜ್ಞ ಮಾಡುವ ಉದ್ದೇಶದಿಂದ ಅಗತ್ಯವಿದ್ದರೆ ಯಾವುದೇ ಅಪರಾಧಿ ಭವನೆಯಿಲ್ಲದೆ ಶೂದ್ರನ ಆಸ್ತಿಯನ್ನು ಬ್ರಾಹ್ಮಣ ಕಿತ್ತುಕೊಳ್ಳಬಹುದು. ಶೂದ್ರನು ಸಂಪತ್ತನ್ನು ಸಂಗ್ರಹಮಾಡಬಾರದು, ಏಕೆಂದರೆ ಅದರಿಂದ ಬ್ರಾಹ್ಮಣನಿಗೆ ಬಾಧೆಯಾಗುತ್ತದೆ. ಏಕೆ ಹೀಗೆ? ಶೂದ್ರನನ್ನು ತನ್ನ ವಿಶೇಷ ಶತ್ರುವನ್ನಾಗಿ ಕಾಣಲು ಬ್ರಾಹ್ಮಣನಿಗೇನಾದರೂ ಕಾರಣವಿತ್ತೆ?

ಇವುಗಳೆಲ್ಲಕ್ಕಿಂತಲೂ ಒಂದು ಮುಖ್ಯ ವಿಚಾರವಿದೆ. ಅದೇನೆಂದರೆ, ಸಾಮಾನ್ಯ ಬ್ರಾಹ್ಮಣ ಶೂದ್ರನ ಈ ಅನರ್ಹತೆಗಳ ಬಗ್ಗೆ ಏನೆಂದು ಯೋಚಿಸುತ್ತಾನೆ? ತಮ್ಮ ಪರಿಕಲ್ಪನೆಗಳಲ್ಲಿ ಅವು ಅಸಾಧಾರಣವೂ, ತಮ್ಮ ಸ್ವಭಾವದಲ್ಲಿ ಅವಮಾನಕಾರಕವೂ ಆಗಿವೆಯೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಇದನ್ನು ಬ್ರಾಹ್ಮಣ ಒಪ್ಪಿಕೊಳ್ಳುತ್ತಾನೆಯೆ? ಅನರ್ಹತೆಗಳ ಈ ಪಟ್ಟಿ ಅವನ ಮೇಲೆ ಯಾವುದೇ ಪರಿಣಾಮ ಮಾಡದೇ ಹೋದರೆ, ಅದು ಅಸಹಜವಾಗುವುದಿಲ್ಲ. ಮೊದಲನೆಯದಾಗಿ, ದೀರ್ಘ ಕಾಲದ ಪದ್ಧತಿ ಮತ್ತು ರೂಢಿಯಿಂದ

---

೧. Muir, ಸಂಪುಟ ೧, ಪು. ೪೩೯–೪೪೦, ೪೨ ಅಧ್ಯಾಯ ೧೨, ಸೂತ್ರಗಳು ೨–೩

ಅವನ ನೈತಿಕ ಪ್ರಜ್ಞೆ ತೀರಾ ಮಂಕಾಗಿರುವುದರಿಂದ ಶೂದ್ರನ ಬಗೆಗಿನ ಈ ಅನರ್ಹತೆಗಳ ಬಗ್ಗೆ ಏಕಾಯಿತು ಮತ್ತು ಹೇಗಾಯಿತು ಎಂದು ಅವನು ತಲೆಕೆಡಿಸಿಕೊಳ್ಳುವುದನ್ನೇ ಬಿಟ್ಟುಬಿಟ್ಟಿದ್ದಾನೆ. ಎರಡನೆಯದಾಗಿ, ಇದೇ ಬಗೆಯ ಅನರ್ಹತೆಗಳು ಇತರ ದೇಶಗಳಲ್ಲಿ ಕೆಲವು ವರ್ಗಗಳ ಮೇಲೆ ಹೇರಲ್ಪಟ್ಟಿವೆ ಎಂದು ಬಲ್ಲವರು, ಶೂದ್ರರ ಈ ಅನರ್ಹತೆಗಳ ಬಗ್ಗೆ ಅಸಾಧಾರಣವಾದುದಾಗಲೀ ಅವಮಾನಕರವಾದುದಾಗಲೀ ಏನೂ ಇಲ್ಲ ಎಂದುಬಿಡುತ್ತಾರೆ. ಇಲ್ಲಿ ಎರಡನೆಯ ಧೋರಣೆಯನ್ನು ನಾವು ಬಯಲಿಗೆಳೆಯಬೇಕಾಗಿದೆ.

ಈ ಧೋರಣೆ ಬಹಳ ಅನುಕೂಲಕರವಾಗಿದೆ ಹಾಗೂ ತಮ್ಮ ಕೀರ್ತಿಯನ್ನು ಉಳಿಸಿಕೊಳ್ಳಲು ದಾಸ್ಯ ವೃತ್ತಿ ಅನಿವಾರ್ಯವೆಂದು ಹೇಳಿಕೊಳ್ಳುವ ಪ್ರಜ್ಞೆಯನ್ನೂ ಅದು ಬೆಂಬಲಿಸುವುದರಿಂದ ಉಳಿಸಿಕೊಂಡು ಬಂದಿದ್ದಾರೆ. ಆದರೆ ವಸ್ತುಸ್ಥಿತಿಯನ್ನು ಹಾಗೆಯೇ ಬಿಡುವುದು ಸರಿಯಲ್ಲ. ಈ ಅನರ್ಹತೆಗಳಿಗೆ ಪ್ರಪಂಚದ ಬೇರಾವ ಕಡೆಗೂ ಹೋಲಿಕೆಯಿಲ್ಲ ಎಂಬುದನ್ನು ತೋರಿಸುವುದು ಅತ್ಯಗತ್ಯವಾಗಿದೆ. ಹಕ್ಕುಗಳು ಮತ್ತು ಅನರ್ಹತೆಗಳ ಬಗ್ಗೆ ಇರುವ ಇತರ ನ್ಯಾಯಪದ್ಧತಿಯನ್ನು ಬ್ರಾಹ್ಮಣ ಸ್ಮೃತಿಕಾರರ ಜೊತೆ ಹೋಲಿಸುವುದು ಅಸಾಧ್ಯವಾಗಿದೆ. ರೋಮಿನ ಕಾನೂನು ಮತ್ತು ಬ್ರಾಹ್ಮಣ ಕಾನೂನು ಇವೆರಡನ್ನೂ ತುಲನೆ ಮಾಡಿದರೆ ಸಾಕಾಗುತ್ತದೆ.

೪

ರೋಮಿನ ಕಾನೂನಿನ ಅಡಿಯಲ್ಲಿ ಹಕ್ಕುಗಳಿದ್ದ ವರ್ಗಗಳ ಜೊತೆ ಅನರ್ಹತೆಗಳಿಂದ ನಲುಗಿದ ವರ್ಗಗಳ ತುಲನೆಯನ್ನು ಮಾಡುವುದರಿಂದ ಈ ಚರ್ಚೆಯನ್ನು ಪ್ರಾರಂಭಿಸುವುದು ಒಳ್ಳೆಯದು. ರೋಮಿನ ನ್ಯಾಯಗಾರರು ಜನರನ್ನು ಐದು ಪಂಗಡ ಮಾಡಿದ್ದಾರೆ : (೧) ಉತ್ತಮರು ಮತ್ತು ಸಾಮಾನ್ಯರು; (೨) ಸ್ವತಂತ್ರ ಪ್ರಜೆಗಳು ಮತ್ತು ಗುಲಾಮರು; (೩) ಪೌರರು ಮತ್ತು ವಿದೇಶೀಯರು; (೪) ಪ್ರಾಪ್ತ ವಯಸ್ಕರಾದ ದೇಶೀ ಪ್ರಜೆಗಳು, ಪ್ರಾಪ್ತ ವಯಸ್ಕರಾದ ಪರದೇಶೀ ಪ್ರಜೆಗಳು, ಹಾಗೂ (೫) ಕ್ರಿಶ್ಚಿಯನ್ನರು ಮತ್ತು ಕ್ರೈಸ್ತೇತರರು.

ರೋಮಿನ ಕಾನೂನಿನ ಪ್ರಕಾರ ಸವಲತ್ತುಗಳನ್ನು ಪಡೆದಿದ್ದ ಜನರೆಂದರೆ : (೧) ಶ್ರೀಮಂತರು, (೨) ಸ್ವತಂತ್ರರು; (೩) ಪೌರರು; (೪) ದೇಶೀ ಪ್ರಾಪ್ತ ವಯಸ್ಕರು, ಮತ್ತು (೫) ಕ್ರಿಶ್ಚಿಯನ್ನರು. ಇವರಿಗೆ ಹೋಲಿಸಿದರೆ ಅನರ್ಹತೆಗಳಿಂದ ರೋಮಿನ ಕಾನೂನಿನ ವತಿಯಲ್ಲಿ ನರಳಿದ ಜನರೆಂದರೆ (೧) ಸಾಮಾನ್ಯರು (೨) ಗುಲಾಮರು; (೩) ವಿದೇಶೀಯರು; (೪) ಪರದೇಶೀ ಪ್ರಾಪ್ತ ವಯಸ್ಕರು, ಮತ್ತು (೫) ಕ್ರೈಸ್ತೇತರರು.

ರೋಮಿನ ಕಾನೂನಿನ ಅಡಿಯಲ್ಲಿ ಸ್ವತಂತ್ರ ವ್ಯಕ್ತಿ ಪ್ರಜೆಯಾಗಿದ್ದು ನಾಗರಿಕ ಹಕ್ಕುಗಳನ್ನೂ ರಾಜಕೀಯ ಹಕ್ಕುಗಳನ್ನೂ ಹೊಂದಿದ್ದನು. ಪ್ರಜೆಯ ಪೌರ ಹಕ್ಕುಗಳಲ್ಲಿ ವಿವಾಹದ ಮತ್ತು ವಾಣಿಜ್ಯದ ಹಕ್ಕುಗಳು ಸೇರಿದ್ದವು. ವಿವಾಹದ ಹಕ್ಕಿನ ಆಧಾರದ ಮೇಲೆ ಪೌರ ಹಕ್ಕಿನ ಪ್ರಕಾರ ಪ್ರಜೆಯಾದವನು ನ್ಯಾಯಯುತ ಮದುವೆ ಒಪ್ಪಂದವನ್ನು ಮಾಡಿಕೊಳ್ಳಬಹುದಾಗಿತ್ತು; ಅದರಿಂದ ವಿಶೇಷವಾಗಿ ಪಿತ್ರಾರ್ಜಿತ ಅಧಿಕಾರ ಮತ್ತು ಉಯಿಲು ಬರೆದಿಡದೆ ಸತ್ತ ವ್ಯಕ್ತಿಗಳ ಆಸ್ತಿಗೆ ಕಾನೂನಿನ ಪ್ರಕಾರ ಉತ್ತರಾಧಿಕಾರಿಯಾಗಲು ಅವನಿಗೆ ಸಂಪೂರ್ಣವಾಗಿ ನೆರವಾಗುತ್ತಿದ್ದ ಸಗೋತ್ರ ಸಂಬಂಧದಿಂದ ಬಂದ ನಾಗರಿಕ ಸಂಬಂಧ ಹಕ್ಕುಗಳು ಅವನಿಗೆ ಬರುತ್ತಿದ್ದವು. ರೋಮಿನ ಕಾನೂನಿನ ವಿವಿಧ ರೂಪಗಳು ಮತ್ತು ವಿಚಿತ್ರ ಸವಲತ್ತುಗಳಿಗನುಸಾರವಾಗಿ ವ್ಯವಹಾರ ಹಕ್ಕಿನ ಆಧಾರದ ಮೇಲೆ ಅವನು ಯಾವುದೇ ಬಗೆಯ ಆಸ್ತಿಯನ್ನು ಹೊಂದಿ ವಿಲೇವಾರಿ ಮಾಡಬಹುದಿತ್ತು. ಸಾರ್ವಜನಿಕ ಚುನಾವಣೆಗಳಲ್ಲಿ ಮತದಾನದ ಹಕ್ಕು ಮತ್ತು ಸರ್ಕಾರಿ ನೌಕರಿ ಹಕ್ಕುಗಳನ್ನು ರೋಮಿನ ಪ್ರಜೆಯ ರಾಜಕೀಯ ಹಕ್ಕುಗಳು ಒಳಗೊಂಡಿದ್ದವು.

ಗುಲಾಮ ತನ್ನ ಒಡೆಯನ ಆಸ್ತಿಯಾದುದರಿಂದಲೂ, ಅವನಿಗೆ ಹಕ್ಕುಗಳನ್ನು ಪಡೆಯುವ ಸಾಮರ್ಥ್ಯವಿಲ್ಲದಿದ್ದುದರಿಂದಲೂ ಅವನು ಸ್ವತಂತ್ರ ಮನುಷ್ಯನಿಗಿಂತ ಭಿನ್ನವಾಗಿದ್ದನು.

ವಿದೇಶೀಯರು ಪೌರರಲ್ಲವಾದುದರಿಂದ ಪೌರತ್ವದ ಜೊತೆ ಬರುತ್ತಿದ್ದ ರಾಜಕೀಯ ಅಥವಾ ನಾಗರಿಕ ಹಕ್ಕುಗಳು ಅವರಿಗೆ ಇರಲಿಲ್ಲ. ಯಾವುದೇ ಪೌರನ ರಕ್ಷಣೆ ಇಲ್ಲದಿದ್ದರೆ ವಿದೇಶೀಯನಿಗೆ ರಕ್ಷಣೆ ಸಿಗುತ್ತಿರಲಿಲ್ಲ.

ಪ್ರಾಪ್ತವಯಸ್ಕರಾದ ದೇಶೀ ಪ್ರಜೆಗಳಿಗಿಂತ ಪ್ರಾಪ್ತವಯಸ್ಕರಾದ ವಿದೇಶೀ ವ್ಯಕ್ತಿಗಳು ತಾವು ಬೇರೊಬ್ಬ ವ್ಯಕ್ತಿಯ ಅಧೀನದಲ್ಲಿದ್ದುದರಿಂದ ಅವರು ಮೊದಲಿನವರಂತೆ ಸ್ವತಂತ್ರರಾಗಿರಲಿಲ್ಲ. ಈ ಅಧಿಕಾರವನ್ನು (೧) Potestas, (೨) Manus, ಮತ್ತು (೩) Manicipum ಎಂದು, ಅವುಗಳೆಲ್ಲದರ ಪರಿಣಾಮ ಒಂದೇ ಆದರೂ ಅವುಗಳನ್ನು ನಾನಾ ವಿಧವಾಗಿ ಕರೆಯುತ್ತಿದ್ದರು. ರೋಮಿನ ಕಾನೂನಿನ ಅಡಿಯಲ್ಲಿ Potestas ಎರಡು ವರ್ಗವಾಗಿದ್ದರು. Potestas ಅಡಿಯಲ್ಲಿ ಬರುತ್ತಿದ್ದ ವ್ಯಕ್ತಿಗಳೆಂದರೆ, (೧) ಗುಲಾಮರು, (೨) ಮಕ್ಕಳು, ಮತ್ತು (೩) ಹೆಂಡತಿ, (Manus ಅಡಿಯಲ್ಲಿ) (೪) ಸಾಲ ಕೊಟ್ಟವನಿಗೆ ನ್ಯಾಯಾಲಯ ಒಪ್ಪಿಸಿದ ಸಾಲಗಾರ, ಮತ್ತು (೪) ಬಾಡಿಗೆ ಖಡ್ಗದಾಳುಗಳು. ಅವರಲ್ಲಿ ಯಾರೇ ಏನೇ ತಪ್ಪು ಮಾಡಿದರೂ ಅದನ್ನು ಸಮರ್ಥಿಸಿ ಅವರನ್ನು ನೋಡಿಕೊಳ್ಳುವ ಹಕ್ಕನ್ನು ಪಟ್ಟಭದ್ರ ಹಿತಾಸಕ್ತಿ Potestasಗೆ ಒಪ್ಪಿಸಿತ್ತು.

Potestasಗೆ ಅಧೀನವಾಗಿದ್ದುದರ ಪರಿಣಾಮವಾಗಿ ವಿದೇಶೀ ಪ್ರಾಪ್ತ ವಯಸ್ಕರು ತತ್ಸಂಬಂಧವಾದ ಅನರ್ಹತೆಗಳಿಗೆ ಅಧೀನರಾಗಿದ್ದರು : (೧) ಅವರು ಸ್ವತಂತ್ರರಲ್ಲ, (೨) ಅವರಿಗೆ ಆಸ್ತಿ ಪಡೆಯುವ ಹಕ್ಕಿರಲಿಲ್ಲ, ಮತ್ತು (೩) ತಮಗೆ ಆದ ಅನ್ಯಾಯ ಅಥವಾ ನೋವನ್ನು ಅವರು ನೇರವಾಗಿ ದೂರುವಂತಿರಲಿಲ್ಲ.

ಕ್ರೈಸ್ತಮತದ ಆಗಮನದಿಂದ ಅನ್ಯಧರ್ಮೀಯರ ಅನರ್ಹತೆಗಳು ತೋರಲು ಪ್ರಾರಂಭವಾದವು. ಮೂಲತಃ ಎಲ್ಲಾ ರೋಮನ್ನರು ವಿಧರ್ಮೀಯ ಪೂಜೆಯನ್ನು ಮಾಡುತ್ತಿದ್ದಾಗ ನಾಗರಿಕ ಹಕ್ಕುಗಳ ಅನುಭೋಗದಲ್ಲಿ ಯಾವುದೇ ಭಿನ್ನತೆಗೆ ಅವಕಾಶವಿರಲಿಲ್ಲ. ಕ್ರೈಸ್ತಮತೀಯ ಚಕ್ರವರ್ತಿಗಳ ಆಡಳಿತದಲ್ಲಿ ಪಾಖಂಡಿಗಳು ಮತ್ತು ಧರ್ಮಭ್ರಷ್ಟರು, ವಿಧರ್ಮೀಯರು ಮತ್ತು ಯಹೂದಿಗಳು ಕಷ್ಟಕರ ನಿರ್ಬಂಧಗಳಿಗೆ ಒಳಗಾಗಿದ್ದರು, ವಿಶೇಷವಾಗಿ ಆಸ್ತಿಯ ಹಕ್ಕುದಾರರಾಗುವ ಮತ್ತು ಸಾಕ್ಷಿಗಳಾಗಿ ಹೇಳಿಕೆ ನೀಡುವ ಅವಕಾಶವಿರಲಿಲ್ಲ. ವಿಶ್ವಕ್ರೈಸ್ತ ಚತುರ್ ಸಭೆಗಳ ತೀರ್ಮಾನಗಳನ್ನು ಒಪ್ಪಿಕೊಂಡ ಸಂಪ್ರದಾಯಸ್ಥ ಕ್ರಿಶ್ಚಿಯನ್ನರಿಗೆ ಮಾತ್ರ ನಾಗರಿಕ ಹಕ್ಕುಗಳ ಸಂಪೂರ್ಣ ಅನುಭೋಗಕ್ಕೆ ಅವಕಾಶವಿತ್ತು.

ಕೆಲವು ವರ್ಗಗಳನ್ನು ಅನರ್ಹತೆಗಳಿಗೆ ದೂಡುವ ಪಾಪ ಮಾಡಿದ್ದು ಬ್ರಾಹ್ಮಣ ಕಾನೂನು (ಸ್ಮೃತಿ) ಮಾತ್ರವೇ ಅಲ್ಲ, ರೋಮಿನ ಕಾನೂನು ಕೂಡ ಅನರ್ಹತೆಗಳನ್ನು ಕೆಲವರಿಗೆ ವಿಧಿಸಿತ್ತು ಎಂಬ ಭಾವನೆಯನ್ನು ಈ ಕಾನೂನುಗಳ ಹಕ್ಕುಗಳ ಸಮೀಕ್ಷೆ ಹಿಂದೂಗಳಿಗೆ ಸಮಾಧಾನ ನೀಡಿದರೂ, ಬ್ರಾಹ್ಮಣ ಸ್ಮೃತಿಕಾರರು ವಿಧಿಸಿದ ಅನರ್ಹತೆಗಳಲ್ಲಿ ಕಂಡುಬರುವ ಕ್ರೌರ್ಯವನ್ನು ರೋಮಿನ ಕಾನೂನಿನಲ್ಲಿ ಕಾಣುವುದಿಲ್ಲ. ಆದರೆ ಬ್ರಾಹ್ಮಣ ಕಾನೂನಿನ ಜೊತೆ ರೋಮಿನ ಕಾನೂನಿನ ತತ್ವಗಳನ್ನು ತುಲನೆ ಮಾಡಿದಾಗ ಬ್ರಾಹ್ಮಣ ಕಾನೂನಿನ ನೀಚತನ ಸ್ಪಷ್ಟವಾಗುತ್ತದೆ.

ಈಗ ನಾವು ಮೊದಲು ಕೇಳಬೇಕಾದ ಪ್ರಶ್ನೆ : ರೋಮಿನ ಕಾನೂನಿನ ವತಿಯಲ್ಲಿ ಹಕ್ಕುಗಳು ಮತ್ತು ಅನರ್ಹತೆಗಳಿಗೆ ಇದ್ದ ಆಧಾರವೇನು? ಇವು (೧) Caput, ಮತ್ತು (೨) Existimatio ಎಂಬುದರ ಮೇಲೆ ಆಧಾರಿತವಾಗಿದ್ದವು ಎಂಬುದನ್ನು ರೋಮಿನ ಕಾನೂನಿನ ಸಾಮಾನ್ಯ ವಿದ್ಯಾರ್ಥಿ ಕೂಡ ಬಲ್ಲವನಾಗಿದ್ದನು.

Caput ಎಂದರೆ ವ್ಯಕ್ತಿಯ ನಾಗರಿಕ ಸ್ಥಾನಮಾನ. ರೋಮನ್ನರ ನಾಗರಿಕ ಸ್ಥಾನಮಾನ ಮುಖ್ಯವಾಗಿ ಮೂರು ಅಂಶಗಳಿಗೆ ಅಂದರೆ ಸ್ವಾತಂತ್ರ್ಯ, ಪೌರತ್ವ ಮತ್ತು ಕುಟುಂಬಗಳಿಗೆ ಸಂಬಂಧಪಟ್ಟಿತ್ತು. Libertatis ಸ್ಥಾನಮಾನ ಮುಕ್ತ ಮನುಷ್ಯನ ರೀತಿಯದಾಗಿತ್ತು, ಗುಲಾಮನದಲ್ಲ. ಈ ಗುಣದಿಂದ ರಾಜಕೀಯ ಹಕ್ಕುಗಳನ್ನು ಅನುಭೋಗಿಸುವುದು ಮಾತ್ರವೇ ಅಲ್ಲದೆ ಪೌರಾಡಳಿತದಲ್ಲಿ ಭಾಗವಹಿಸುವ ಸಾಮರ್ಥ್ಯವನ್ನೂ ಪಡೆದಿದ್ದನು. ಅಂತಿಮವಾಗಿ, ಪ್ರಜೆಯ ಕೌಟುಂಬಿಕ ಸ್ಥಾನಮಾನವು ಅವನು ಒಂದು ನಿರ್ದಿಷ್ಟ ಕುಟುಂಬಕ್ಕೆ ಸೇರುವುದರಿಂದಲೂ, ಆ ಕುಟುಂಬದ ಸದಸ್ಯರು ಅನುಭೋಗಿಸುವ ನಿರ್ದಿಷ್ಟ ಹಕ್ಕುಗಳನ್ನು ಪಡೆಯುವುದರಿಂದಲೂ, ಅಂದರೆ ಸಗೋತ್ರಸಂಬಂಧಿ ಗುಣದಿಂದ ಮಾತ್ರ ಅವನಿಗೆ ಭಾಗವಹಿಸಲು ಸಾಧ್ಯವಾಗುತ್ತಿತ್ತು.

ಹಾಲಿ ಇದ್ದ ಸ್ಥಾನಮಾನ ಹೋಗುವಂತಿದ್ದರೆ ಅಥವಾ ಬದಲಾಗುವಂತಿದ್ದರೆ ಆ ಸಂತ್ರಸ್ತ ವ್ಯಕ್ತಿಯನ್ನು Capitis diminutio ಎಂದು ಕರೆಯುತ್ತಿದ್ದರು. ಅಂದರೆ ಅವನು ತನ್ನ ಮೊದಲಿನ ನ್ಯಾಯಯುತ ಸಾಮರ್ಥ್ಯವನ್ನು ಸಂಪೂರ್ಣವಾಗಿ ಅಥವಾ ಸ್ವಲ್ಪಮಟ್ಟಿಗೆ ಕಳೆದುಕೊಳ್ಳುತ್ತಿದ್ದನು. ಮ್ಯಾಕ್ಸಿಮ (ಗರಿಷ್ಠ), ಮೀಡಿಯ (ಮಧ್ಯಮ) ಮತ್ತು ಮಿನಿಮ (ಕನಿಷ್ಠ) ಎಂಬ ಸ್ಥಾನಮಾನದ ಮೂರು ಬದಲಾವಣೆಗಳಿಗೆ ಅಥವಾ ಸ್ಥಿತಿಗಳಿಗೆ ಅವನು ಗುರಿಯಾಗುತ್ತಿದ್ದನು. ಗರಿಷ್ಠತಮ ಬದಲಾವಣೆಯೆಂದರೆ ಸ್ವಾತಂತ್ರ್ಯ, ಪೌರತ್ವ ಮತ್ತು ಕುಟುಂಬವನ್ನು ಕಳೆದುಕೊಳ್ಳುವುದು; ರೋಮಿನ ಪ್ರಜೆ ಯುದ್ಧದಲ್ಲಿ ಸೆರೆಸಿಕ್ಕಿದಾಗ ಅಥವಾ ತನ್ನ ಅಪರಾಧಗಳಿಗಾಗಿ ಗುಲಾಮಗಿರಿಯ ಸ್ಥಿತಿಗೆ ತಳ್ಳಲ್ಪಟ್ಟಾಗ ಇದು ಸಂಭವಿಸುತ್ತಿತ್ತು. ಆದರೆ ಶತ್ರುವಿಗೆ ಸೆರೆಯಾದ ಪ್ರಜೆ ಬಂಧನದಿಂದ ಬಿಡುಗಡೆ ಪಡೆದು ವಾಪಸ್ಸಾದಾಗ ಅವನಿಗೆ ಅವನ ಎಲ್ಲ ನಾಗರಿಕ ಹಕ್ಕುಗಳೂ ಪುನಃ ಸಿಗುತ್ತಿದ್ದವು.

ಸ್ಥಾನಮಾನದ ಮುಂದಿನ ಬದಲಾವಣೆ ಪೌರತ್ವ ಮತ್ತು ಕೌಟುಂಬಿಕ ಹಕ್ಕುಗಳ ನಷ್ಟವನ್ನು ಒಳಗೊಂಡಿತ್ತು. ಆದರೆ ಅವನ ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯುಂಟಾಗುತ್ತಿರಲಿಲ್ಲ; ಪ್ರಜೆ ಬೇರೊಂದು ರಾಜ್ಯದ ಸದಸ್ಯನಾದಾಗ ಹೀಗಾಗುತ್ತಿತ್ತು. ಆಗ ಅವನಿಗೆ ಬೆಂಕಿ ಬಿಸಿನೀರು ಕೊಡದೆ ಅವನನ್ನು ರೋಮಿನ ಗಡಿಯಾಚೆಗೆ ತೊಲಗುವಂತೆ ಬಲಾತ್ಕರಿಸುತ್ತಿದ್ದರು ಅಥವಾ ತಮ್ಮ ರಾಜ್ಯದಿಂದ ಗಡಿಪಾರು ಮಾಡುತ್ತಿದ್ದರು.

ಅಂತಿಮವಾಗಿ, ಒಬ್ಬ ವ್ಯಕ್ತಿಯು ತನ್ನ ಸ್ವಾತಂತ್ರ್ಯ ಅಥವಾ ಪೌರತ್ವವನ್ನು ಕಳೆದುಕೊಳ್ಳದೆ ಒಂದು ನಿರ್ದಿಷ್ಟ ಕುಟುಂಬದ ಸಂಬಂಧ ತಪ್ಪಿದರೆ ಅವನ ಸ್ಥಾನಮಾನದಲ್ಲಿ ಕನಿಷ್ಠ ಬದಲಾವಣೆಯೂ ಆಗುವುದಿಲ್ಲ; ಉದಾಹರಣೆಗೆ ಪ್ರಾಪ್ತವಯಸ್ಕನಾದ ದೇಶಿಗೆ ಇನ್ನೊಬ್ಬ ವ್ಯಕ್ತಿಯ ಅಹಂಕಾರದಿಂದ ಅವನ ವಶಕ್ಕೆ ಬಂದರೆ, ಅಥವಾ ಕುಟುಂಬದ Potestasನ ಅಧೀನದಲ್ಲಿ ಇರುವ ಮಗನನ್ನು ತಂದೆ ಕಾನೂನುಬದ್ಧವಾಗಿ ಬಿಡುಗಡೆಗೊಳಿಸಬಹುದು.

ಮೊದಲು ಪೌರತ್ವ ಹುಟ್ಟಿನಿಂದ ಬರುತ್ತಿತ್ತು. ಗರ್ಭಧಾರಣೆಯ ಸಮಯದಲ್ಲಿ, ಕಾನೂನುಬದ್ಧವಾದ ಮದುವೆಯಿಂದ ಹುಟ್ಟಿದ ಮಗುವಿನ ತಂದೆ ಪೌರನಾಗಿದ್ದರೆ ಆ ಮಗುವಿಗೂ ಪೌರತ್ವ ಲಭಿಸುತ್ತಿತ್ತು. ಮಗು ಧರ್ಮಪತ್ನಿಯ ಕೂಸಾಗದಿದ್ದರೆ ತನ್ನ ಹುಟ್ಟಿನ ಸಮಯದಲ್ಲಿ ತನ್ನ ತಾಯಿಗೆ ಯಾವ ಸ್ಥಾನಮಾನ ಇತ್ತೋ ಅದನ್ನೇ ಅನುಸರಿಸುತ್ತಿತ್ತು. ಎರಡನೆಯದಾಗಿ, ಗುಲಾಮನನ್ನು ಬಿಡುಗಡೆ ಮಾಡುವ ಕಾನೂನಿಗೆ ಅನುಸಾರವಾಗಿ ರೋಮಿನ ಪ್ರಜೆಯ ಗುಲಾಮ ಪೌರನಾಗುತ್ತಿದ್ದ. ಈ ನಿಯಮವನ್ನು ಕಾನೂನುಬದ್ಧವಾಗಿ ಬದಲಾಯಿಸಲಾಯಿತು. Aelia Sentia ಮತ್ತು Junia Norbana ಪ್ರಕಾರ ಕೆಲವು ನಿರ್ದಿಷ್ಟ ಸಂಗತಿಗಳಲ್ಲಿ ಬಿಡುಗಡೆಗೊಂಡ ವ್ಯಕ್ತಿ ವಿದೇಶೀಯನ ಸ್ಥಾನಮಾನವನ್ನು ಪಡೆಯುತ್ತಿದ್ದ ಅಥವಾ ಲ್ಯಾಟಿನ್ ಸಂಜಾತನ ಸ್ಥಾನಮಾನವನ್ನು ಪಡೆಯುತ್ತಿದ್ದ. ಜಸ್ಟಿನಿಯನ್ ಪ್ರಾಚೀನ ತತ್ವವನ್ನು ಪುನರ್ ಸ್ಥಾಪಿಸಿದನು; ಅದರ ಪ್ರಕಾರ

ನಿಯಮಿತವಾಗಿ ಬಿಡುಗಡೆಗೊಂಡ ಪ್ರತಿಯೊಬ್ಬ ಗುಲಾಮನೂ ಸಂಪೂರ್ಣ ಹಕ್ಕಿನಿಂದ ರೋಮಿನ ಪ್ರಜೆಯಾಗುತ್ತಿದ್ದ. ಮೂರನೆಯದಾಗಿ, ಒಂದು ಇಡೀ ಸಮುದಾಯಕ್ಕೆ ಅಥವಾ ಒಬ್ಬ ವ್ಯಕ್ತಿಗೆ ಪೌರತ್ವದ ಹಕ್ಕನ್ನು ಒಂದು ಕೃಪಾದೃಷ್ಟಿಯಿಂದ ಗಣರಾಜ್ಯದ ಅವಧಿಯಲ್ಲಿ ಜನರು ಅಥವಾ ಸೆನೆಟ್ ಮತ್ತು ಚಕ್ರಾಧಿಪತ್ಯದ ಕಾಲದಲ್ಲಿ ಆಳುವ ದೊರೆ ದಯಪಾಲಿಸುತ್ತಿದ್ದರು; ಇದು ಆಧುನಿಕರು ಕರೆಯುವ ಸ್ವದೇಶೀಕರಣಕ್ಕೆ ಸಮಾನಾರ್ಥಕವಾಗಿದೆ.

ರೋಮಿನ ಪ್ರಜೆ ಯುದ್ಧ ಖೈದಿಯಾದಾಗ– ಮೊದಲನೆಯದಾಗಿ, ವ್ಯಕ್ತಿ ಸ್ವಾತಂತ್ರ್ಯ ಕಳೆದುಕೊಂಡಾಗ; ಎರಡನೆಯದಾಗಿ, ಇನ್ನೊಂದು ರಾಜ್ಯದ ಪೌರತ್ವ ಪಡೆದು ರೋಮಿನ ಪೌರತ್ವದ ರೀತಿನೀತಿಗಳನ್ನು ಪರಿತ್ಯಜಿಸಿದಾಗ; ಮೂರನೆಯದಾಗಿ, ಅಪರಾಧಕ್ಕೆ ಶಿಕ್ಷೆಯಾಗಿ ಗಡಿಪಾರು ಅಥವಾ ದೇಶಭ್ರಷ್ಟನಾಗಿ ಮಾಡುವ ತೀರ್ಪು ಕೊಟ್ಟಾಗ– ಪೌರತ್ವ ಹೋಗುತ್ತಿತ್ತು.

ರೋಮಿನ ಕಾನೂನಿನ ವತಿಯಲ್ಲಿ ವ್ಯಕ್ತಿಯ ನಾಗರಿಕ ಸ್ಥಾನಮಾನ *Civis optino jure* ಆಗಿರಬಹುದು ಇಲ್ಲವೆ ಆಗಿಲ್ಲದಿರಬಹುದು *Civis optino jure* ಕೇವಲ ನಾಗರಿಕ ಹಕ್ಕುಗಳನ್ನು ಅನುಭವಿಸುವುದಷ್ಟೇ ಅಲ್ಲದೆ, ಮತದಾನ ಮಾಡುವ ಹಕ್ಕು ಮತ್ತು ಸರ್ಕಾರಿ ನೌಕರಿಯನ್ನು ಪಡೆಯುವ ಸಾಮರ್ಥ್ಯದ ರಾಜಕೀಯ ಹಕ್ಕುಗಳನ್ನು ಕೂಡ ಒಳಗೊಂಡಿತ್ತು. ವ್ಯಕ್ತಿಗೌರವದ ಮೇಲೆ ರಾಜಕೀಯ ಹಕ್ಕುಗಳು ಅವಲಂಬಿತವಾಗಿದ್ದವು. ವ್ಯಕ್ತಿಗೌರವ ಅಂದರೆ ಕಾನೂನಿನ ದೃಷ್ಟಿಯಲ್ಲಿ ನಿರಪರಾಧಿಯಾದವನು. ರೋಮಿನ ಪ್ರಜೆಗೆ ವ್ಯಕ್ತಿಯ ನಾಗರಿಕ ಸ್ಥಾನಮಾನ ಮತ್ತು ಕಾನೂನಿನ ಪ್ರಕಾರ ಗೌರವಾರ್ಹತೆಯಿತ್ತು. ಇನ್ನೊಂದು ದೃಷ್ಟಿಯಲ್ಲಿ, ರೋಮಿನ ಪ್ರಜೆಗೆ ನಾಗರಿಕನ ಸ್ಥಾನಮಾನ ಇದ್ದು, ಕಾನೂನಿನ ಗೌರವಾರ್ಹತೆ ಇಲ್ಲದಿರಬಹುದಿತ್ತು. ಯಾರಿಗೆ ನಾಗರಿಕ ಸ್ಥಾನಮಾನ ಮತ್ತು ಕಾನೂನಿನ ಗೌರವಾರ್ಹತೆ ಎರಡೂ ಇದ್ದವೋ ಆತನಿಗೆ ನಾಗರಿಕ ಹಕ್ಕುಗಳೂ ಮತ್ತು ರಾಜಕೀಯ ಹಕ್ಕುಗಳೂ ಇರುತ್ತಿದ್ದುವು. ಯಾರಿಗೆ ನಾಗರಿಕ ಸ್ಥಾನಮಾನ ಇದ್ದು ಕಾನೂನಿನ ಗೌರವಾರ್ಹತೆ ಇರಲಿಲ್ಲವೋ ಅವನು ನಾಗರಿಕ ಹಕ್ಕುಗಳನ್ನು ಮಾತ್ರ ಪಡೆಯಬಹುದಿತ್ತು. ಅವನು ರಾಜಕೀಯ ಹಕ್ಕುಗಳನ್ನು ಕೇಳಲು ಸಾಧ್ಯವಿರಲಿಲ್ಲ.

ವ್ಯಕ್ತಿಯ ಗೌರವಾರ್ಹತೆ ಎರಡು ವಿಧದಲ್ಲಿ ನಷ್ಟವಾಗುತ್ತಿತ್ತು. ಅದು ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದರಿಂದ ಅಥವಾ ಅಪರಾಧ ಮಾಡಿದಾಗ ಕೊಡುವ ಶಿಕ್ಷೆಯಿಂದ ನಷ್ಟವಾಗುತ್ತಿತ್ತು. ವ್ಯಕ್ತಿ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡಾಗ ಕಾನೂನುದೃಷ್ಟಿಯ ಅವನ ಗೌರವಾರ್ಹತೆ ಸಂಪೂರ್ಣವಾಗಿ ನಂದಿಹೋಗುತ್ತಿತ್ತು. ಅಪರಾಧದ ಗಂಭೀರತೆಗೆ ಅನುಸಾರವಾಗಿ ಅಪರಾಧದ ಶಿಕ್ಷೆಯಿಂದ ಕಾನೂನಿನ ಗೌರವಾರ್ಹತೆಯ ನಷ್ಟ ವ್ಯತ್ಯಾಸವಾಗುತ್ತಿತ್ತು.[೧] ಅಪರಾಧ ಗಂಭೀರವಾಗಿದ್ದರೆ ಅವನ ಗೌರವಾರ್ಹತೆಯನ್ನು ಮೊಟಕು ಮಾಡುವುದನ್ನು infamia (ಅಪಖ್ಯಾತಿ) ಎಂದು ಕರೆಯುತ್ತಿದ್ದರು. ಅಪರಾಧ ಅಷ್ಟು ಗಂಭೀರವಲ್ಲದಿದ್ದರೆ ಅದನ್ನು *turpitudo* (ಅಧಮತಮ) ಎಂದು ಕರೆಯುತ್ತಿದ್ದರು. ಗೌರವಾರ್ಹತೆ ನಾಶವಾಗುವುದರಿಂದ ಅಪಖ್ಯಾತಿ ಉಂಟಾಗುತ್ತಿತ್ತು. ರೋಮಿನ ಕಾನೂನಿನ ಅಡಿಯಲ್ಲಿ ಪ್ರತಿವಾದಿಯು ಅಪಖ್ಯಾತಿಯ ಜೊತೆಗೆ ಸಾಧಾರಣ ಪರಿಹಾರಕ್ಕೂ ಗುರಿಯಾಗುತ್ತಿದ್ದನು. ಕಳ್ಳತನ, ದರೋಡೆ, ಹಿಂಸೆ ಅಥವಾ ವಂಚನೆಗಳಿಗಾಗಿ ದಂಡಿಸಲ್ಪಟ್ಟಾಗ ಅಪಖ್ಯಾತಿ ಬರುತ್ತಿತ್ತು. ಹಾಗೆಯೇ ಭಾಗೀದಾರ, ಒಬ್ಬ

೧. ಅಂದರೆ ದರೋಡೆ, ಕಳ್ಳತನ, ಸುಳ್ಳುಸಾಕ್ಷಿ, ವಂಚನೆ, ನಟನಾಗಿ ಅಥವಾ ಖಡ್ಗಮಲ್ಲನಾಗಿ ರಂಗದ ಮೇಲೆ ಕಾಣಿಸಿಕೊಳ್ಳುವುದು, ಸೈನ್ಯದಿಂದ ಅವಮಾನಕರವಾಗಿ ಹೊರದೂಡಲ್ಪಡುವುದು, ವೇಶ್ಯಾವಾಟಿಕೆಯಿಂದ ಜೀವನ ನಡೆಸುವುದು ಮತ್ತು ಇತರ ಅಗೌರವ ಕಸುಬುಗಳು ಮತ್ತು ಇನ್ನಿತರ ಬಗೆಬಗೆಯ ಅನೈತಿಕ ಕೆಲಸಗಳಲ್ಲಿ ತೊಡಗುವುದು.

*mandatarius,* ಒಬ್ಬ *depositarius, tutor,* ಗಿರವಿದಾರ (*contractus fiducioe* ನಲ್ಲಿ) ಉದ್ದೇಶಪೂರ್ವಕವಾಗಿ ಕರ್ತವ್ಯಭ್ರಷ್ಟನಾದರೆ ಅವನಿಗೆ ಅಪಖ್ಯಾತಿ ಬರುತ್ತಿತ್ತು.

ಅಪಖ್ಯಾತಿಯ ಪರಿಣಾಮವೆಂದರೆ ರಾಜಕೀಯ ಹಕ್ಕುಚ್ಯುತನಾಗುವುದು,[೧] ಕೇವಲ ಗೌರವಾನ್ವಿತ ಪದವಿಗಳಿಂದಷ್ಟೇ ಅಲ್ಲದೆ, ಚುನಾವಣೆಗಳಲ್ಲಿ ಮತ ನೀಡುವ ಹಕ್ಕನ್ನೂ ಕಳೆದುಕೊಳ್ಳುತ್ತಿದ್ದನು.

ರೋಮಿನ ಕಾನೂನಿನಲ್ಲಿರುವ ಹಕ್ಕುಗಳು ಮತ್ತು ಅನರ್ಹತೆಗಳಿಗೆ ಆಧಾರವಾಗಿರುವುದರ ಈ ಸಂಕ್ಷಿಪ್ತ ಸಮೀಕ್ಷೆಯಿಂದ ಆ ಆಧಾರ ಎಲ್ಲರಿಗೂ ಒಂದೇ ಆಗಿತ್ತೆಂದು ಸ್ಪಷ್ಟವಾಗುತ್ತದೆ. ಅವುಗಳು ಸಮುದಾಯದಿಂದ ಸಮುದಾಯಕ್ಕೆ ಭಿನ್ನವಾಗಿರಲಿಲ್ಲ. ರೋಮಿನ ಕಾನೂನಿನ ಪ್ರಕಾರ ಸಾಮಾನ್ಯ ವಿಷಯಗಳಾದ caput ಮತ್ತು existimatioಗಳಿಂದ ಹಕ್ಕುಗಳು ಮತ್ತು ಅನರ್ಹತೆಗಳು ನಿಯಂತ್ರಿತವಾಗುತ್ತಿದ್ದವು. ಯಾರಿಗೆ caput ಮತ್ತು existimatio ಇತ್ತೊ ಆತನಿಗೆ ಹಕ್ಕುಗಳಿದ್ದವು. ಯಾರು caput ಮತ್ತು existimatio ಕಳೆದುಕೊಂಡನೋ ಅವನು ಅನರ್ಹತೆಗಳನ್ನು ಅನುಭವಿಸಬೇಕಾಗಿತ್ತು. ಬ್ರಾಹ್ಮಣ ಕಾನೂನಿನ ವತಿಯಲ್ಲಿ ಏನು ಸ್ಥಾನ? ಹಕ್ಕುಗಳು ಮತ್ತು ಅನರ್ಹತೆಗಳು ಯಾವುದೇ ಸಾಮಾನ್ಯ ಏಕರೂಪ ವಿಚಾರಗಳ ಮೇಲೆ ನಿಂತಿರಲಿಲ್ಲವೆಂಬುದು ಮತ್ತೆ ಸಂಪೂರ್ಣವಾಗಿ ಸ್ಪಷ್ಟವಾಗುತ್ತದೆ. ಅವುಗಳು ಜಾತಿವಾರು ವಿಷಯಗಳ ಮೇಲೆ ಅವಲಂಬಿತವಾಗಿದ್ದವು. ಎಲ್ಲಾ ಹಕ್ಕುಗಳೂ ಮೊದಲ ಮೂರು ವರ್ಣಗಳಿಗೆ ಎಲ್ಲ ಅನರ್ಹತೆಗಳೂ ಶೂದ್ರರಿಗೆ ಎಂಬ ತತ್ವದ ಮೇಲೆ ಬ್ರಾಹ್ಮಣ ಕಾನೂನು ನಿಂತಿದೆ.

ಈ ಹೋಲಿಕೆ ರೋಮಿನ ಕಾನೂನಿಗೆ ತುಂಬ ಅನುಕೂಲಕರವಾಗಿದೆ ಮತ್ತು ಹಕ್ಕುಗಳು ಮತ್ತು ಅನರ್ಹತೆಗಳನ್ನು ಜಾತಿ ಆಧಾರದ ಮೇಲೆ ರೋಮಿನ ಕಾನೂನು ವಿತರಿಸುತ್ತಿರಲಿಲ್ಲ ಎಂಬುದು ಸರಿಯಲ್ಲ ಎಂದು ಬ್ರಾಹ್ಮಣ ಕಾನೂನಿನ ಸಮರ್ಥನಕಾರರು ವಾದಿಸಬಹುದು. ಇದನ್ನು ಒಪ್ಪಬಹುದು, ಏಕೆಂದರೆ patricians ಮತ್ತು plebiansಗೆ ಸಂಬಂಧಪಟ್ಟಂತೆ ಹಕ್ಕುಗಳು ಮತ್ತು ಅನರ್ಹತೆಗಳ ವಿತರಣೆ ಜಾತಿಯನ್ನೇ ಅವಲಂಬಿಸಿತ್ತು. ಆದರೆ ಈ ಸಂಬಂಧವಾಗಿ ಮುಂದಿನ ಸಂಗತಿಗಳನ್ನು (ವಸ್ತುಸ್ಥಿತಿಯನ್ನು) ಗಮನಿಸಲೇಬೇಕು.

ಮೊದಲನೆಯದಾಗಿ, plebians ಗುಲಾಮರಲ್ಲ ಎಂಬುದನ್ನು ಮನಗಾಣಬೇಕಾಗಿದೆ. ಆಸ್ತಿಯನ್ನು ಪಡೆಯುವ, ಹೊಂದುವ, ವಿಲೇವಾರಿ ಮಾಡುವ ಹಕ್ಕು ಅವರಿಗೆ ಇದ್ದು ಅಷ್ಟರ ಮಟ್ಟಿಗೆ ಅವರು ಸ್ವತಂತ್ರರು. ರಾಜಕೀಯ ಮತ್ತು ಸಾಮಾಜಿಕ ಹಕ್ಕುಗಳ ನಿರಾಕರಣೆಯಿಂದ ಅವರಿಗೆ ಅನರ್ಹತೆಗಳು ಉಂಟಾಗುತ್ತಿದ್ದವು. ಎರಡನೆಯದಾಗಿ, ಅವರ ಅನರ್ಹತೆಗಳು ಶಾಶ್ವತವಾದುವಲ್ಲ ಎಂಬುದನ್ನು ಅರಿಯಬೇಕು.

---

೧. ಅಪಖ್ಯಾತಿಯ ಇನ್ನಿತರ ಪರಿಣಾಮಗಳೆಂದರೆ ಅಟಾರ್ನಿ ಹುದ್ದೆಯಿಂದ ಬಹಿಷ್ಕಾರ, ಇನ್ನೊಬ್ಬನ ಪರವಾಗಿ ಕಾನೂನು ಮೊಕದ್ದಮೆಯಲ್ಲಿ ವಕೀಲಿ ಅಥವಾ ಪ್ರಮಾಣ ನೀಡುವ ಅನರ್ಹತೆ. ಅಪಖ್ಯಾತಿಗೆ ಗುರಿಪಡಿಸುವ ಅಧಿಕಾರ ಸೆನ್ಸಾರ್ ಅಧಿಕಾರಿಗಳಿಗೆ ಅಥವಾ ನ್ಯಾಯಾಲಯದ ತೀರ್ಪಿಗೆ ಮಾತ್ರ ಇತ್ತು. ಸಾರ್ವಜನಿಕ ರೀತಿ ನೀತಿಯನ್ನು ನೋಡಿಕೊಳ್ಳುವ ಮೇಲ್ವಿಚಾರಣೆ, ಸೆನೆಟರುಗಳ ಸ್ಥಾನಮಾನವನ್ನು ಕಿತ್ತುಹಾಕುವ ಅಧಿಕಾರ, ಅಶ್ವದಳದಿಂದ ವೀರರನ್ನು ತೆಗೆದು ಹಾಕುವುದು ಮತ್ತು ಪ್ರಜೆಯ ಎಲ್ಲ ರಾಜಕೀಯ ಹಕ್ಕುಗಳನ್ನೂ ಕಿತ್ತುಹಾಕಿ ಅವನನ್ನು aerariiಗಳ ಜೊತೆ ವರ್ಗೀಕರಿಸುವ ಅಧಿಕಾರ ಕೂಡ ಸೆನ್ಸಾರಿನವರಿಗೆ ಇತ್ತು. ಪ್ರಜೆಗಳ ಪಟ್ಟಿಯಲ್ಲಿ ವ್ಯಕ್ತಿಯ ಹೆಸರಿನ ಮುಂದೆ nota censoria ಎಂದು ಕೂಡ ಸೆನ್ಸಾರಿನವರು ಷರಾ ಬರೆಯುತ್ತಿದ್ದರು; ಇದನ್ನು ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ಮಾಡುತ್ತಿದ್ದರು; ಸಾರ್ವಜನಿಕ ಅಭಿಪ್ರಾಯಕ್ಕೆ ಅನುಗುಣವಾಗಿ ಅವರು ಇದನ್ನು ಮಾಡುತ್ತಿದ್ದರೇ ಹೊರತು ವಿಶೇಷ ತನಿಖೆಯಿಂದಲ್ಲ. ಸೆನ್ಸಾರ್ ಮಂಡಳಿಯಿಂದ nota censoria ಜಾರಿಯಾಗದಿದ್ದರೆ ಅದರಿಂದ ಯಾವ ಪರಿಣಾಮವೂ ಉಂಟಾಗುತ್ತಿರಲಿಲ್ಲ. ಈ ದೃಷ್ಟಿಯಲ್ಲಿ ಅದು ಅಪಖ್ಯಾತಿಗಿಂತ ಮೂಲಭೂತವಾಗಿ ಭಿನ್ನವಾಗಿತ್ತು. ಅದು ಈ ಕಳಂಕವನ್ನು ಜನರ ಅಥವಾ ಚಕ್ರವರ್ತಿಯ ವಿಶೇಷ ಅಧಿಕಾರದಿಂದ ತೆಗೆದುಹಾಕದ ಹೊರತು, ನಿರಂತರವಾಗಿ ಜಾರಿಯಲ್ಲಿರುತ್ತಿತ್ತು.

ಅವರು ಅನುಭವಿಸುತ್ತಿದ್ದ ಎರಡು ಸಾಮಾಜಿಕ ಅನರ್ಹತೆಗಳಿದ್ದವು. ಒಂದು, Twelve Tables[೧] ಎಂಬ ಕಾಯಿದೆ ಅವರ ಮತ್ತು Patricians ನಡುವೆ ಆಗುವ ಅಂತರ್ಜಾತಿ ವಿವಾಹದ ಮೇಲೆ ವಿಧಿಸಿದ್ದ ನಿಷೇಧದಿಂದ ಬಂದುದಾಗಿತ್ತು. ಶ್ರೀಮಂತರು ಮತ್ತು ಸಾಮಾನ್ಯರ ನಡುವಣ ಅಂತರ್ಜಾತಿ ಮದುವೆಯನ್ನು Canulenian ಕಾನೂನು ನ್ಯಾಯಬದ್ಧಗೊಳಿಸಿದುದರಿಂದ ಈ ಅನರ್ಹತೆ ಕ್ರಿ.ಪೂ. ೪೪೫ರಲ್ಲಿ ತೆರವಾಯಿತು. ಇನ್ನೊಂದು ರೋಮಿನ ಸಾರ್ವಜನಿಕ ದೇವಾಲಯಗಳಲ್ಲಿ ಅವರು ಪುರೋಹಿತರು ಮತ್ತು ಶಕುನಕಾರರಾಗಿ ಕರ್ತವ್ಯ ನಿರ್ವಹಿಸದಿರುವ ಅನರ್ಹತೆಯಿತ್ತು. ಕ್ರಿ.ಪೂ. ೩೦೦ರಲ್ಲಿ ತಂದ Ogulnian ಕಾನೂನು ಈ ಅನರ್ಹತೆಯನ್ನು ಕಿತ್ತುಹಾಕಿತು.

Plebianರ ರಾಜಕೀಯ ಅನರ್ಹತೆಗಳನ್ನು ಕುರಿತು ಹೇಳುವುದಾದರೆ, ರೋಮಿನ ಆರನೆಯ ದೊರೆ ಸರ್ವಿಯಸ್ ಟುಲಿಯಸ್‌ನ ರಾಜ್ಯಾಂಗದಡಿಯಲ್ಲಿ ಅವರು ಜನಪ್ರಿಯ ವಿಧಾನಸಭೆಗಳಿಗೆ ಮತ ಹಾಕುವ ಹಕ್ಕನ್ನು ಪಡೆದುಕೊಂಡಿದ್ದರು. ಪರಿಹಾರವಾಗುವ ರಾಜಕೀಯ ಅನರ್ಹತೆಗಳೆಂದರೆ ನೌಕರಿ ಪಡೆಯುವ ವಿಷಯಕ್ಕೆ ಸಂಬಂಧಿಸಿದ್ದು. ಇದು ಕೂಡ ಕ್ರಿ.ಪೂ. ೫೦೯ರಲ್ಲಿ ಸ್ಥಾಪನೆಯಾದ ಗಣರಾಜ್ಯದ ನಂತರದ ಸಮಯದಲ್ಲಿ ತೆರವಾಯಿತು. ಈ ದಿಸೆಯಲ್ಲಿ ತೆಗೆದುಕೊಂಡ ಮೊಟ್ಟಮೊದಲ ಕ್ರಮವೆಂದರೆ ಕ್ರಿ.ಪೂ. ೪೯೪ರಲ್ಲಿ ಆದ Plebian Tribunes (ಜನಸಾಮಾನ್ಯರ ನ್ಯಾಯಮಂಡಳಿ)ಗಳ ನೇಮಕಾತಿ; ಕ್ರಿ.ಪೂ. ೪೨೧ರಲ್ಲಿ ಅವರಿಗೆ ನ್ಯಾಯಾಧಿಪತಿ ಸ್ಥಾನ ಕೊಡುವುದನ್ನು ಔಪಚಾರಿಕವಾಗಿ ತೆರೆಯಲಾಯಿತು; ಅದು ವಾಸ್ತವವಾಗಿ ಆದದ್ದು ಕ್ರಿ.ಪೂ. ೪೦೯ರಲ್ಲಿ; ದಂಡಾಧಿಕಾರ ಪದವಿ ಬಂದದ್ದು ಕ್ರಿ.ಪೂ. ೩೬೭ರಲ್ಲಿ; Curule-aedileship ಬಂದದ್ದು ಕ್ರಿ.ಪೂ. ೩೬೬; ಸರ್ವಾಧಿಕಾರ ಪದವಿ ಕ್ರಿ.ಪೂ. ೩೫೬; Censorship ಬಂದದ್ದು ಕ್ರಿ.ಪೂ. ೩೫೧; ನ್ಯಾಯಾಧಿಪತಿ ಪದವಿ ಸಿಕ್ಕಿದ್ದು ಕ್ರಿ.ಪೂ. ೩೩೭ರಲ್ಲಿ; ಕ್ರಿ.ಪೂ. ೨೮೭ರಲ್ಲಿ ಶಾಸನಗೊಳಿಸಿದ ಹಾರ್ಟೆನ್ಸಿಯನ್ ಕಾಯಿದೆ Plebianರಿಗೆ ದೊರೆತ ಸಂಪೂರ್ಣ ದಿಗ್ವಿಜಯವಾಯಿತು. ಈ ಕಾನೂನುಗಳಿಂದ ಬುಡಕಟ್ಟುಗಳ ಸಭೆಗಳ ನಿರ್ಣಯಗಳನ್ನು ನೇರವಾಗಿ ಮತ್ತು ಬದಲಾಯಿಸದೆ, ನಿಯಂತ್ರಿಸದೆ ಅಥವಾ ನಿಧಾನಿಸದೆ ಇಡೀ ರೋಮಿನ ಜನತೆಯ ಮೇಲೆ ಜಾರಿಗೊಳಿಸುವಂತಾಯಿತು.

ಇದು ಶ್ರೀಮಂತರು ಮತ್ತು ಜನಸಾಮಾನ್ಯರು ಸಮಾನತೆಯ ತತ್ವದ ಮೇಲೆ ಸಂಪೂರ್ಣವಾಗಿ ರಾಜಕೀಯವಾಗಿ ಒಂದಾದುದನ್ನು ಸೂಚಿಸುತ್ತದೆ.

ಶ್ರೀಮಂತರ ಜೊತೆ ರಾಜಕೀಯ ಸಾಮರ್ಥ್ಯ ಮತ್ತು ಸಾಮಾಜಿಕ ಸ್ಥಾನಮಾನವನ್ನು ಸಮಾನವಾಗಿ ಜನಸಾಮಾನ್ಯರು ಪಡೆಯುವುದಷ್ಟೇ ಅಲ್ಲದೆ ಅವರಿಗೆ ಕುಲೀನತೆಗೇರಲು ದಾರಿ ಕೂಡ ತೆರೆಯಿತು. ರೋಮಿನ ಸಮಾಜದಲ್ಲಿ ಹುಟ್ಟು ಮತ್ತು ಸಂಪತ್ತು, ಪದವಿ ಮತ್ತು ವೈಯಕ್ತಿಕ ವಿಶಿಷ್ಟತೆಯ ಎರಡು ಮಹಾನ್ ಆಕರಗಳಾಗಿದ್ದವು. ಆದರೆ ಇದರ ಜೊತೆಗೆ Curule magistracyಯ ಅಧಿಕಾರ ಕೂಡ ಅದನ್ನು ಹೊಂದಿದ ವ್ಯಕ್ತಿಗೆ ಉನ್ನತಿಯನ್ನು ಕೊಡುವಂಥದಾಗಿತ್ತು. ಪ್ರತಿಯೊಬ್ಬ ಪ್ರಜೆ, ಶ್ರೀಮಂತನಾಗಿರಲಿ ಅಥವಾ ಸಾಮಾನ್ಯನಾಗಿರಲಿ, ಪೌರಾಧಿಕಾರದಿಂದ Curule magistracyಗೆ ತನ್ನ ಪಥವನ್ನು ಗಳಿಸಿ ವೈಯಕ್ತಿಕ ಪ್ರತಿಷ್ಠೆಯನ್ನು ಪಡೆದುಕೊಂಡು ಅದನ್ನು ತನ್ನ ಸಂತತಿಯವರಿಗೆ ರವಾನಿಸಿದಾಗ ಅವರು Nobiles ಅಥವಾ ಪ್ರಖ್ಯಾತರು ಎಂಬ ವರ್ಗವಾದರು, ignobiles ಅಥವಾ ಅಜ್ಞಾತರಿಂದ ತಮ್ಮನ್ನೇ ತಾವು

---

೧. ಅದು Twelve Tables ಕಾಯಿದೆಗಿಂತಲೂ ಹಳೆಯದಾಗಿತ್ತು. Twelve Tables ಅದನ್ನು ಕೇವಲ ಮಾನ್ಯ ಮಾಡಿತ್ತು.

ಪ್ರತ್ಯೇಕಿಸಿಕೊಳ್ಳುವ ಸಲುವಾಗಿ. ಈ ಅಧಿಕಾರವನ್ನು ಜನಸಾಮಾನ್ಯರಿಗೆ ತೆರೆದಿದ್ದರಿಂದ ಅನೇಕ ಸಾಮಾನ್ಯರು[೧] ಕುಲೀನರಾದರು ಹಾಗೂ ಕುಲೀನತೆಯ ಅಂಶದಲ್ಲಿ ಅವರು ಶ್ರೀಮಂತರನ್ನು ಕೂಡ ಮೀರಿಸಿದರು.

ಹಕ್ಕುಗಳು ಮತ್ತು ಅನರ್ಹತೆಗಳನ್ನು ವಿತರಿಸುವಲ್ಲಿ ರೋಮಿನ ಕಾನೂನು ಕೋಮು ತಾರತಮ್ಯವನ್ನು ಮಾನ್ಯಮಾಡಿದೆ ಎಂದು ಹೇಳಬಹುದು. ಆದರೆ ಜನಸಾಮಾನ್ಯರ ಅನರ್ಹತೆಗಳು ಶಾಶ್ವತವೆಂದು ಪರಿಗಣಿಸಲಿಲ್ಲ ಎಂಬ ಅಂಶ ಗಮನೀಯ. ಅವು ಅಸ್ತಿತ್ವದಲ್ಲಿದ್ದಾಗ್ಯೂ ಅವುಗಳನ್ನು ಕಾಲಾಂತರದಲ್ಲಿ ತೆಗೆದುಹಾಕಲಾಯಿತು. ಹಾಗಿರುವುದರಿಂದ, ಬ್ರಾಹ್ಮಣ ಕಾನೂನಿನ ಪ್ರತಿಪಾದಕರು ರೋಮಿನ ಕಾನೂನಿನಲ್ಲಿ ಇರುವ ಒಂದು ಸಮಾನಾಂತರವನ್ನು ಕಂಡುಕೊಳ್ಳುವುದರಲ್ಲಿ ಕೇವಲ ತೃಪ್ತಿಪಟ್ಟುಕೊಳ್ಳದೆ ಶ್ರೀಮಂತರ ಜೊತೆ ಸಾಮಾನ್ಯರನ್ನು ಸಮಗೊಳಿಸಿದ ರೋಮಿನ ಕಾನೂನಿನ ಹಾಗೆ ಏಕೆ ಬ್ರಾಹ್ಮಣ ಕಾನೂನು ತ್ರೈವರ್ಣಿಕರು ಮತ್ತು ಶೂದ್ರರ ನಡುವಣ ಭೇದವನ್ನು ತೊಡೆದು ಹಾಕಲಿಲ್ಲ ಎಂಬುದಕ್ಕೆ ಉತ್ತರಿಸಬೇಕಾಗಿದೆ. ಆದ್ದರಿಂದ ಹಕ್ಕುಗಳು ಮತ್ತು ಅನರ್ಹತೆಗಳ ವಿಷಯದಲ್ಲಿ ರೋಮಿನ ಕಾನೂನು ಮತೀಯವಾಗಿರಲಿಲ್ಲ, ಆದರೆ ಬ್ರಾಹ್ಮಣ ಕಾನೂನು ಹಾಗಿತ್ತು ಎಂಬುದಾಗಿ ವಾದಿಸಬಹುದು.

ರೋಮಿನ ಕಾನೂನು ಮತ್ತು ಬ್ರಾಹ್ಮಣ ಕಾನೂನಿನ ನಡುವೆ ಇದೊಂದೇ ವ್ಯತ್ಯಾಸವಲ್ಲ. ಇನ್ನೂ ಎರಡು ಭಿನ್ನತೆಗಳಿವೆ. ಅಪರಾಧದ ವಿಷಯದಲ್ಲಿ ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂಬುದು ಒಂದು. ಪೌರ ಮತ್ತು ರಾಜಕೀಯ ಹಕ್ಕಿನ ವಿಷಯಗಳಲ್ಲಿ ಸಮಾನತೆಯನ್ನು ರೋಮಿನ ಕಾನೂನು ಮಾನ್ಯ ಮಾಡದೇ ಇದ್ದಿರಬಹುದು. ಆದರೆ ಅಪರಾಧೀ ಕಾನೂನಿನ ವಿಷಯದಲ್ಲಿ ಒಬ್ಬ ಪ್ರಜೆಗೂ ಇನ್ನೊಬ್ಬನಿಗೂ ಅಷ್ಟೇ ಅಲ್ಲ, ಶ್ರೀಮಂತನಿಗೂ ಜನಸಾಮಾನ್ಯನಿಗೂ ನಡುವೆ ಯಾವುದೇ ಭೇದವನ್ನೂ ಮಾಡಲಿಲ್ಲ. ಕಕ್ಷಿ ಮತ್ತು ಅಪರಾಧಿ ಯಾರೇ ಆಗಲಿ ಒಂದೇ ತರದ ಅಪರಾಧಕ್ಕೆ ಒಂದೇ ತರದ ಶಿಕ್ಷೆ. ಒಮ್ಮೆ ಅಪರಾಧ ಸಾಬೀತಾದರೆ, ಒಂದೇ ಬಗೆಯ ಶಿಕ್ಷೆಯನ್ನು ಕೊಡುತ್ತಿದ್ದರು. ಆದರೆ ಧರ್ಮಸೂತ್ರಗಳು ಮತ್ತು ಸ್ಮೃತಿಗಳು ಏನು ಮಾಡುತ್ತವೆ? ಅವು ಸಂಪೂರ್ಣವಾಗಿ ವಿಭಿನ್ನವಾದ ತತ್ವವನ್ನು ಅನುಸರಿಸುತ್ತವೆ. ಒಂದೇ ಬಗೆಯ ಅಪರಾಧಕ್ಕೆ ವರ್ಣದಿಂದ ವರ್ಣಕ್ಕೆ ಅಪರಾಧಿ ಮತ್ತು ಪ್ರತಿವಾದಿಯ ಜಾತಿಗೆ ಅನುಸಾರವಾಗಿ ಶಿಕ್ಷೆ ಬದಲಾಗುತ್ತದೆ. ಪ್ರತಿವಾದಿ ಶೂದ್ರನಾಗಿದ್ದು, ಅಪರಾಧಿ ತ್ರೈವರ್ಣಿಕರಲ್ಲಿ ಒಬ್ಬನಾಗಿದ್ದರೆ ಶಿಕ್ಷೆ ಕಡಿಮೆಯಾಗುತ್ತದೆ. ಆದರೆ ಇದು ತಲೆಕೆಳಗಾದರೆ ಶೂದ್ರನಿಗೆ ಶಿಕ್ಷೆ ಮೊದಲನೆಯದಕ್ಕಿಂತ ಹೆಚ್ಚು ಉಗ್ರವಾಗುತ್ತದೆ. ಇದು ರೋಮಿನ ಕಾನೂನನ್ನು ಬ್ರಾಹ್ಮಣ ಕಾನೂನಿನಿಂದ ಪ್ರತ್ಯೇಕಿಸುವ ಇನ್ನೊಂದು ಬರ್ಬರತೆ.

ರೋಮಿನ ಕಾನೂನಿನಿಂದ ಬ್ರಾಹ್ಮಣ ಕಾನೂನನ್ನು ಪ್ರತ್ಯೇಕಿಸುವ ಮುಂದಿನ ಅಂಶ ಅತ್ಯಂತ ಗಮನೀಯವಾಗಿದೆ. ಅದು ಅನರ್ಹತೆಗಳನ್ನು ಅಳಿಸುವುದಕ್ಕೆ ಸಂಬಂಧಿಸಿದೆ. ಅದರಲ್ಲಿ ಎರಡು ಅಂಶಗಳನ್ನು ಮನದಟ್ಟು ಮಾಡಿಕೊಳ್ಳಬೇಕು. ಮೊದಲನೆಯದಾಗಿ, ರೋಮಿನ ಕಾನೂನಿನ ವತಿಯಲ್ಲಿ ಅನರ್ಹತೆಗಳು ಕೇವಲ ಆಕಸ್ಮಿಕವಾಗಿದ್ದವು. ನಿರ್ದಿಷ್ಟ ಸ್ಥಿತಿ ಇರುವವರೆಗೆ ಅವು ನಿರ್ದಿಷ್ಟ ಅನರ್ಹತೆಗಳಿಗೆ ಅವಕಾಶವೀಯುತ್ತಿದ್ದವು. ಆ ಸ್ಥಿತಿಗತಿಗಳು ಬದಲಾದ ಕೂಡಲೇ ಅನರ್ಹತೆಗಳು ನಿರ್ನಾಮವಾಗುತ್ತಿದ್ದವು, ಕಾನೂನಿನ ಮುಂದೆ ಎಲ್ಲರೂ ಸಮ ಎಂಬ ಅಂಶ ಪರಿಗಣಿತವಾಗುತ್ತಿತ್ತು. ಎರಡನೆ ಅಂಶವೆಂದರೆ ಸ್ಥಿತಿಗತಿಗಳನ್ನು ನಿರ್ದಿಷ್ಟಗೊಳಿಸಲು ರೋಮಿನ ಕಾನೂನು ಎಂದೂ ಪ್ರಯತ್ನಿಸಲಿಲ್ಲ, ತನ್ಮೂಲಕ ಅನರ್ಹತೆಗಳನ್ನು ಶಾಶ್ವತಗೊಳಿಸಲಿಲ್ಲ. ಬದಲಿಗೆ

---

೧. Curule ಅಧಿಕಾರವನ್ನು ಪ್ರಪ್ರಥಮವಾಗಿ ಪಡೆದು, ಕುಲೀನ ಕುಟುಂಬ ಸ್ಥಾಪಿಸಿದ ಸಾಮಾನ್ಯನನ್ನು ರೋಮನ್ನರು novus homo ಅಥವಾ ಹೊಸ ಮನುಷ್ಯ ಎಂದು ಕರೆದರು.

ಸಾಮಾನ್ಯರು, ಗುಲಾಮರು, ವಿದೇಶೀಯರು ಮತ್ತು ಅನ್ಯಧರ್ಮೀಯರಿಗೆ ಅಂಟಿದ್ದ ಈ ಅನರ್ಹತೆಗಳನ್ನು ಕಿತ್ತುಹಾಕಲು ಅದು ಸದಾ ಸಿದ್ಧವಿತ್ತು.

ರೋಮಿನ ಕಾನೂನಿನ ಅಡಿಯಲ್ಲಿರುವ ಅನರ್ಹತೆಗಳ ಬಗ್ಗೆ ಈ ಎರಡು ಅಂಶಗಳನ್ನು ಗಮನದಲ್ಲಿಟ್ಟುಕೊಂಡರೆ ಧರ್ಮಸೂತ್ರಗಳು ಮತ್ತು ಸ್ಮೃತಿಗಳು ಶೂದ್ರನಿಗೆ ಅನರ್ಹತೆಗಳನ್ನು ವಿಧಿಸುವ ಕಿಡಿಗೇಡಿತನವನ್ನು ಕೂಡಲೇ ಅರ್ಥಮಾಡಿಕೊಳ್ಳಬಹುದು. ಅನರ್ಹತೆಗಳು ಪರಿಸ್ಥಿತಿಗಳ ಮೇಲೆ ಅವಲಂಬಿತವಾಗಿದ್ದರೆ, ಅಸಹಾಯಕರು ಈ ಪರಿಸ್ಥಿತಿಗಳನ್ನು ಮೀರುವ ಸ್ವಾತಂತ್ರ್ಯವಿದ್ದರೆ ಅನರ್ಹತೆಗಳ ಹೇರಿಕೆ ಇಷ್ಟೊಂದು ಘೋರವಾಗುತ್ತಿರಲಿಲ್ಲ. ಆದರೆ ಅನರ್ಹತೆಗಳನ್ನು ಬ್ರಾಹ್ಮಣ ಕಾನೂನು ಹೇರುವುದಷ್ಟೇ ಅಲ್ಲದೆ ಆ ಪರಿಸ್ಥಿತಿಯನ್ನು ಉಲ್ಲಂಘಿಸಿದರೆ ಉಗ್ರ ದಂಡನೆಯಾಗುತ್ತದೆ ಎಂಬ ಕಾಯಿದೆಯನ್ನೂ ಮಾಡಿದೆ. ಆದ್ದರಿಂದ ಬ್ರಾಹ್ಮಣ ಕಾನೂನು ಅನರ್ಹತೆಗಳನ್ನು ಹೇರುವುದಲ್ಲದೆ ಅವುಗಳನ್ನು ಶಾಶ್ವತಗೊಳಿಸಲು ಪ್ರಯತ್ನಿಸುತ್ತದೆ. ಒಂದು ನಿದರ್ಶನ ಸಾಕು. ವೇದಮಂತ್ರಗಳನ್ನು ಉಚ್ಚರಿಸಲು ಶೂದ್ರನಿಗೆ ಸಾಮರ್ಥ್ಯವಿಲ್ಲದಿರುವುದರಿಂದ ಅವನು ವೈದಿಕ ಯಜ್ಞಗಳನ್ನು ಮಾಡಲು ಹಕ್ಕಿಲ್ಲ. ಇಂಥ ಅನರ್ಹತೆಯ ಬಗ್ಗೆ ಯಾರೂ ಜಗಳವಾಡಲಾರರು. ಆದರೆ ಧರ್ಮಸೂತ್ರಗಳು ಇಲ್ಲಿಗೇ ನಿಲ್ಲುವುದಿಲ್ಲ. ಅವು ಇನ್ನೂ ಮುಂದೆ ಹೋಗಿ ಶೂದ್ರನು ವೇದಗಳನ್ನು ಓದುವುದು ಅಥವಾ ಅದರ ಪಠಣವನ್ನು ಕೇಳುವುದು ಅಪರಾಧ ಮತ್ತು ಅವನು ಅಂಥ ಅಪರಾಧ ಮಾಡಿದರೆ ಅವನ ನಾಲಗೆಯನ್ನು ಕತ್ತರಿಸಿಹಾಕಬೇಕು ಅಥವಾ ಅವನ ಕಿವಿಗೆ ಕುದಿಯುವ ಸೀಸವನ್ನು ಸುರಿಯಬೇಕೆಂದು ಹೇಳುತ್ತವೆ. ಮನುಷ್ಯ ತನ್ನ ಅನರ್ಹತೆಯನ್ನು ಮೀರಿ ಬೆಳೆಯುವುದನ್ನು ತಡೆಗಟ್ಟುವುದಕ್ಕಿಂತ ಬರ್ಬರ ಕೃತ್ಯ ಇನ್ನೊಂದು ಇದೆಯೆ? ಈ ಅನರ್ಹತೆಗಳ ಬಗ್ಗೆ ವಿವರಣೆ ಏನು? ಶೂದ್ರರ ಬಗ್ಗೆ ಬ್ರಾಹ್ಮಣ ಕಾನೂನುಕರ್ತರು ಅಷ್ಟೊಂದು ಕ್ರೂರ ಧೋರಣೆಯನ್ನು ಏಕೆ ತಾಳಿದರು? ಬ್ರಾಹ್ಮಣ ಕಾನೂನು ಗ್ರಂಥಗಳು ಅನರ್ಹತೆಗಳನ್ನು ಮಾತ್ರ ಹೇಳುತ್ತವೆ. ಶೂದ್ರರಿಗೆ ಉಪನಯನಕ್ಕೆ ಹಕ್ಕಿಲ್ಲ ಎಂದು ಅವು ಹೇಳುತ್ತವೆ. ಶೂದ್ರನಿಗೆ ಯಾವುದೇ ಅಧಿಕಾರವಿಲ್ಲವೆಂದು ಅವು ಹೇಳುತ್ತವೆ. ಶೂದ್ರನಿಗೆ ಆಸ್ತಿಯಿರಕೂಡದೆಂದು ಅವು ಹೇಳುತ್ತವೆ. ಆದರೆ ಏತಕ್ಕಾಗಿ ಎಂದು ಅವು ಹೇಳುವುದಿಲ್ಲ. ಇಡೀ ವಿಷಯವೇ ಸ್ವೇಚ್ಛಾಚಾರವಾಗಿದೆ. ಶೂದ್ರನ ಅನರ್ಹತೆಗಳು ಅವನ ವೈಯಕ್ತಿಕ ನಡತೆಗೆ ಸಂಬಂಧಿಸಿಲ್ಲ. ಅದು ಅಪಖ್ಯಾತಿಯ ಪರಿಣಾಮವಲ್ಲ. ಶೂದ್ರನನ್ನು ಶೂದ್ರನೆಂಬ ಕಾರಣಕ್ಕಾಗಿಯೇ ಶಿಕ್ಷಿಸಲಾಗಿದೆ. ಈ ನಿಗೂಢವನ್ನು ಬಿಡಿಸುವ ಅಗತ್ಯವಿದೆ. ಇದನ್ನು ಬಿಡಿಸಲು ಬ್ರಾಹ್ಮಣ ಕಾನೂನು ಗ್ರಂಥಗಳು ನಮಗೆ ನೆರವು ನೀಡದಿರುವುದರಿಂದ ಅದಕ್ಕೆ ಬೇಕಾದ ವಿವರಣೆಯನ್ನು ಬೇರೆಡೆ ಹುಡುಕಬೇಕಾಗಿದೆ.

♦

# ಅಧ್ಯಾಯ ೪

# ಶೂದ್ರರು ಮತ್ತು ಆರ್ಯರು

೧

ಯಾರು ಶೂದ್ರರಾಗಿದ್ದರು ಮತ್ತು ಅವರು ಹೇಗೆ ನಾಲ್ಕನೆಯ ವರ್ಣವಾದರು ಎಂಬ ಬಗ್ಗೆ ಯಾವುದೇ ಸುಳಿವನ್ನೂ ಬ್ರಾಹ್ಮಣ ಲೇಖಕರು ಕೊಡುವುದಿಲ್ಲ ಎಂಬುದು ಇದುವರೆಗೆ ಹೇಳಿರುವುದರಿಂದ ಸ್ಪಷ್ಟವಾಗುತ್ತದೆ. ಆದ್ದರಿಂದ ಈ ವಿಷಯದ ಬಗ್ಗೆ ಪಾಶ್ಚಾತ್ಯ ಬರಹಗಾರರು ಏನು ಹೇಳುತ್ತಾರೆಂದು ನೋಡುವುದು ಅಗತ್ಯವಾಗಿದೆ. ಶೂದ್ರರ ಹುಟ್ಟಿನ ಬಗ್ಗೆ ಪಾಶ್ಚಾತ್ಯ ಲೇಖಕರಲ್ಲಿ ಒಂದು ಖಚಿತ ಸಿದ್ಧಾಂತವಿದೆ. ಈ ಸಿದ್ಧಾಂತದ ಪ್ರತಿಯೊಂದು ಅಂಶದ ಬಗ್ಗೆ ಅವರಲ್ಲಿ ಒಮ್ಮತ ಇಲ್ಲದಿದ್ದರೂ ಕೆಲವು ಅಂಶಗಳ ಬಗ್ಗೆ ಏಕಾಭಿಪ್ರಾಯವಿರುವುದು ಕಾಣುತ್ತದೆ. ಆ ಅಂಶಗಳು ಯಾವುವೆಂದರೆ;

(೧) ವೈದಿಕ ಸಾಹಿತ್ಯವನ್ನು ಸೃಷ್ಟಿಸಿದ ಜನ ಆರ್ಯ ಜನಾಂಗಕ್ಕೆ ಸೇರಿದ್ದರು.

(೨) ಈ ಆರ್ಯ ಜನಾಂಗ ಭಾರತದ ಹೊರಗಿನಿಂದ ಬಂದು ಭಾರತವನ್ನು ಆಕ್ರಮಿಸಿತು.

(೩) ಆರ್ಯರಿಗಿಂತ ಜನಾಂಗಿಕವಾಗಿ ಭಿನ್ನವಾಗಿದ್ದ ಭಾರತದ ಮೂಲ ನಿವಾಸಿಗಳನ್ನು ದಾಸರು ಮತ್ತು ದಸ್ಯುಗಳೆಂದು ಕರೆಯುತ್ತಿದ್ದರು.

(೪) ಆರ್ಯರು ಬಿಳಿಯ ಜನಾಂಗವಾಗಿದ್ದರು. ದಾಸರು ಮತ್ತು ದಸ್ಯುಗಳು ಕಪ್ಪು ಜನಾಂಗವಾಗಿದ್ದರು.

(೫) ಆರ್ಯರು ದಾಸರು ಮತ್ತು ದಸ್ಯುಗಳನ್ನು ಸೋಲಿಸಿದರು.

(೬) ದಾಸರು ಮತ್ತು ದಸ್ಯುಗಳು ಸೋತುಹೋದ ನಂತರ ಗುಲಾಮಗಿರಿಗೆ ತಳ್ಳಲ್ಪಟ್ಟು ಶೂದ್ರರೆಂದು ಕರೆಯಲ್ಪಟ್ಟರು.

(೭) ಆರ್ಯರು ವರ್ಣ ತಾರತಮ್ಯದಲ್ಲಿ ನಂಬಿಕೆಯಿಟ್ಟಿದ್ದರು; ಆದ್ದರಿಂದ ಚಾತುರ್ವರ್ಣ್ಯವನ್ನು ಸ್ಥಾಪಿಸಿದರು; ಅದರಿಂದ ದಾಸರು ಮತ್ತು ದಸ್ಯುಗಳಾದ ಕಪ್ಪು ಜನಾಂಗವನ್ನು ಬಿಳಿಯ ಜನಾಂಗದಿಂದ ಪ್ರತ್ಯೇಕಿಸಿದರು.

ಹಿಂದೂ ಆರ್ಯ ಸಮಾಜದಲ್ಲಿ ಶೂದ್ರರ ಹುಟ್ಟು ಮತ್ತು ಸ್ಥಾನದ ಬಗ್ಗೆ ಪಾಶ್ಚಾತ್ಯ ಸಿದ್ಧಾಂತದಲ್ಲಿ ಇವು ಪ್ರಮುಖ ಅಂಶಗಳು. ಇದು ಸರಿಯೇ, ಅಲ್ಲವೇ ಎಂಬುದು ಬೇರೆ ವಿಷಯ. ಆದರೆ ಒಂದು ಸಾಮಾಜಿಕ ವಸ್ತುಸ್ಥಿತಿಯನ್ನು ಒಂದು ದೈವನಿಯಾಮಕವೆಂದು ಪರಿಗಣಿಸಿ ಬ್ರಾಹ್ಮಣ ಸಿದ್ಧಾಂತಗಳು ಕೊಡುವ ದೀರ್ಘ ಮತ್ತು ಪ್ರಯಾಸಕರ ವಿವರಣೆಗಳನ್ನು ಅಭ್ಯಸಿಸಿದ ನಂತರ ಇಷ್ಟನ್ನು ಹೇಳಲೇಬೇಕಾಗುತ್ತದೆ, ಒಂದು ಸಾಮಾಜಿಕ ವಸ್ತುಸ್ಥಿತಿಯ ಸ್ವಾಭಾವಿಕ ವಿವರಣೆ ಕೊಡುವ ದಿಸೆಯಲ್ಲಿ ಈ ಸಿದ್ಧಾಂತ ಸ್ವಲ್ಪಮಟ್ಟಿನ ಸಮಾಧಾನ ನೀಡುತ್ತದೆನ್ನುವುದನ್ನು ಅಲ್ಲಗಳೆಯಲಾಗುವುದಿಲ್ಲ. ಈ ಬ್ರಾಹ್ಮಣ ಸಿದ್ಧಾಂತಗಳನ್ನು ಮೂಢಬುದ್ಧಿಯ ಅರ್ಥಹೀನ ಉದ್ರೇಕಗಳೆಂದು ಕರೆಯಬಹುದೇ ಹೊರತು ಮತ್ತೇನೂ ಮಾಡುವಂತಿಲ್ಲ. ಅವು ಸಮಸ್ಯೆಯನ್ನು ಹಾಗೆಯೇ ಬಿಡುತ್ತವೆ. ಈ ಆಧುನಿಕ ಸಿದ್ಧಾಂತದಿಂದ ಕೊನೆಯ ಪಕ್ಷ ನಮ್ಮ ದಾರಿಯನ್ನು ನಾವು ಕಂಡುಕೊಳ್ಳಬಹುದು.

ಈ ಸಿದ್ಧಾಂತದ ಸಮಂಜಸತೆಯನ್ನು ಪರೀಕ್ಷಿಸಲು ಅದನ್ನು ಕೂಲಂಕುಷವಾಗಿ ಎಷ್ಟರಮಟ್ಟಿಗೆ ಆಧಾರಸಹಿತವಾಗಿದೆ ಎಂದು ಪರೀಕ್ಷಿಸಿ ನೋಡುವುದೇ ಅತ್ಯುತ್ತಮ ಕೆಲಸ.

ಆರ್ಯ ಜನಾಂಗವೆಂಬ ಹೆಸರಿನ ಒಂದು ಜನತೆ ಬದುಕಿತ್ತು ಎಂಬ ಅಭಿಪ್ರಾಯದ ತಳಹದಿಯ ಮೇಲೆ ಈ ಸಿದ್ಧಾಂತದ ಚೌಕಟ್ಟು ನಿಂತಿದೆ. ಆದ್ದರಿಂದ ಈ ಸಮಸ್ಯೆಯನ್ನು ಮೊದಲು ಪರಿಶೀಲಿಸುವುದು ಸೂಕ್ತವಾಗಿದೆ.

ಈ ಆರ್ಯ ಜನಾಂಗ ಎಂದರೆ ಯಾವುದು? ಆರ್ಯ ಜನಾಂಗದ ಪ್ರಶ್ನೆಯನ್ನು ನಾವು ಪರಿಶೀಲಿಸುವ ಮೊದಲು "ಜನಾಂಗ" ಎಂಬ ಪದವನ್ನು ನಾವು ಯಾವ ಅರ್ಥದಲ್ಲಿ ತೆಗೆದುಕೊಳ್ಳುತ್ತೇವೆ ಎಂಬುದನ್ನು ಖಚಿತಪಡಿಸಬೇಕಾಗಿದೆ. ಈ ಪ್ರಶ್ನೆಯನ್ನು ಎತ್ತುವುದು ಅಗತ್ಯವಾಗಿದೆ. ಏಕೆಂದರೆ ಜನಾಂಗವನ್ನು ಒಂದು ಜನತೆಯೆಂದು ತಪ್ಪಾಗಿ ಗ್ರಹಿಸುವ ಸಾಧ್ಯತೆ ಇಲ್ಲದಿಲ್ಲ. ಅಂಥ ತಪ್ಪು ಗ್ರಹಿಕೆಯ ಅತ್ಯುತ್ತಮ ನಿದರ್ಶನವೆಂದರೆ ಯಹೂದಿಗಳು ಒಂದು ಜನಾಂಗವೆಂದು ಬಹಳ ಮಂದಿ ನಂಬಿದ್ದಾರೆ. ಬರಿಗಣ್ಣಿಗೆ ಅವರು ಹಾಗೆಯೇ ಕಾಣುತ್ತಾರೆ, ಆದರೆ ಪರಿಣತರ ತೀರ್ಮಾನವೇನು? ಯಹೂದಿಗಳ ಬಗ್ಗೆ ಪ್ರೊ. ರಿಪ್ಲಿ[೧] ಹೀಗೆ ಹೇಳುತ್ತಾರೆ:

"ಆದ್ದರಿಂದ ನಮ್ಮ ಅಂತಿಮ ನಿರ್ಣಯ ಇದು : ಇದು ವಿರೋಧಾಭಾಸವಾದರೂ ಸತ್ಯವೆಂದು ನಾವು ಖಂಡಿತವಾಗಿ ಹೇಳುತ್ತೇವೆ. ಯಹೂದಿಗಳು ಒಂದು ಜನಾಂಗವಲ್ಲ, ಆದರೆ ಕೇವಲ ಒಂದು ಜನತೆ ಅಷ್ಟೆ. ಅವರ ಮುಖಗಳಲ್ಲಿ ಇದನ್ನು ನಾವು ಖಾತ್ರಿಪಡಿಸಬಹುದು, ಆದರೂ ಅವರ ಇನ್ನಿತರ ಲಕ್ಷಣಗಳ ವಿಷಯದಲ್ಲಿ ಅವರಿಗಿರುವ ವ್ಯಕ್ತಿವಿಶಿಷ್ಟತೆ– ಖಂಡಿತವಾಗಿಯೂ ಅಮೂಲ್ಯವಲ್ಲ– ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿನಲ್ಲಿ ಅವರೇ ರೂಪಿಸಿದ್ದೇ ಹೊರತು ಭೌತಿಕ ಆವಿರ್ಭಾವದ ಅಪೂರ್ವ ಪರಿಶುದ್ಧತೆಯ ಉತ್ಪನ್ನವಲ್ಲ."

ಜನಾಂಗ ಎಂದರೇನು? ಆನುವಂಶಿಕವಾಗಿ ಬಂದ ಕೆಲವು (ನಿರ್ದಿಷ್ಟ) ಪ್ರಾತಿನಿಧಿಕ ಲಕ್ಷಣಗಳುಳ್ಳ ಒಂದು ಜನಸಮೂಹವನ್ನು ಜನಾಂಗ ಎಂದು ವ್ಯಾಖ್ಯಾನಿಸಬಹುದು. ಒಂದು ಜನಾಂಗವನ್ನು ರೂಪಿಸುವ ಲಕ್ಷಣಗಳು ಇವುಗಳೆಂದು ಒಂದು ಕಾಲದಲ್ಲಿ ನಂಬಲಾಗಿತ್ತು; (೧) ತಲೆಯ ರಚನೆ, (೨) ಕೂದಲು ಮತ್ತು ಕಣ್ಣುಗಳ ಬಣ್ಣ, (೩) ಮೈಬಣ್ಣ, ಮತ್ತು (೪) ಎತ್ತರ. ಎತ್ತರ ಮತ್ತು ಬಣ್ಣ, ವಾಯುಗುಣ ಮತ್ತು ವಾಸಸ್ಥಳಗಳಿಗೆ ಅನುಗುಣವಾಗಿ ಬದಲಾಗುವ ಲಕ್ಷಣಗಳೆಂದು ಸಾಮಾನ್ಯ ಅಭಿಪ್ರಾಯ ಈಗಿನದಾಗಿದೆ; ಪರಿಣಾಮವಾಗಿ ಒಂದು ಜನತೆಯ ಜನಾಂಗಿಕತೆಯನ್ನು ನಿರ್ಧರಿಸುವ ಅಂಶಗಳಲ್ಲವೆಂದು ಅವುಗಳನ್ನು ತಿರಸ್ಕರಿಸಬೇಕಾಗಿದೆ. ಅಚಲವಾದ ಏಕೈಕ ಲಕ್ಷಣವೆಂದರೆ ಮಾನವ ತಲೆಯ ಆಕಾರ; ಇದರಿಂದ ಉದ್ದ, ಅಗಲ ಮತ್ತು ಎತ್ತರಗಳು ಸಾಮಾನ್ಯ ಪ್ರಮಾಣಗಳೆಂದು ಅರಿಯಬೇಕಾಗಿದೆ; ಆದ್ದರಿಂದಲೇ ಮಾನವ ಶಾಸ್ತ್ರಜ್ಞರು ಹಾಗೂ ಮಾನವಕುಲಶಾಸ್ತ್ರಜ್ಞರು ಇದನ್ನು ಜನಾಂಗವನ್ನು ನಿರ್ಧರಿಸಲು ಇರುವ ಅತ್ಯುತ್ತಮ ಸಾಧನವೆಂದು ಭಾವಿಸಿದ್ದಾರೆ.

ವ್ಯಕ್ತಿ ಯಾವ ಜನಾಂಗಕ್ಕೆ ಸೇರುತ್ತಾನೆಂಬುದನ್ನು ನಿರ್ಧರಿಸಲು ಈ ಶಿರೋರೂಪಗಳ ಬಳಕೆಯನ್ನು ನಿಖರ ವಿಜ್ಞಾನವನ್ನಾಗಿ ಮಾನವಶಾಸ್ತ್ರಜ್ಞರು ಬೆಳೆಸಿದ್ದಾರೆ. ಇದನ್ನು ಮಾನವಮಾಪಕಶಾಸ್ತ್ರವೆಂದು ಕರೆಯುತ್ತಾರೆ. ಶಿರೋರೂಪವನ್ನು ಅಳೆಯಲು ಎರಡು ವಿಧಾನಗಳನ್ನು ಈ ಮಾನವಮಾಪಕಶಾಸ್ತ್ರ ರೂಪಿಸಿದೆ : (೧) ಕಪಾಲಸೂಚಿ, ಮತ್ತು (೨) ಮುಖಸೂಚಿ. ಈ ಸೂಚಿ ಜನಾಂಗದ ಗುರುತಾಗಿದೆ.

---

೧. Ripley W.E. : *The Races of Europe*, p. 400

ಶಿರಸೂಚಿ ಎಂದರೆ ಕಿವಿಯ ಮೇಲ್ಭಾಗದ ತಲೆಯ ಅಗಲ ಮತ್ತು ಹಣೆಯಿಂದ ಹಿಂಭಾಗದವರೆಗೆ ಇರುವ ಉದ್ದವನ್ನು ತೋರಿಸುವ ಶೇಕಡಾತಿ. ಈ ಉದ್ದ ೧೦೦ ಎಂದು ಭಾವಿಸಿದರೆ, ಅದರ ಅಗಲವನ್ನು ಒಂದು ಅಂಶವನ್ನಾಗಿ ತೆಗೆದುಕೊಳ್ಳಬಹುದು. ತಲೆ ಪ್ರಮಾಣಾನುಸಾರವಾಗಿ ದೊಡ್ಡದಾದರೆ–ಅಂದರೆ ಮೇಲಿನಿಂದ ಕೆಳಗೆ ನೋಡಿದರೆ ಹೆಚ್ಚು ದುಂಡಾಕಾರವಾಗಿ–ಶಿರಸೂಚಿ ವಿಸ್ತರಿಸುತ್ತದೆ. ಅದು ೮೦ಕ್ಕಿಂತ ಹೆಚ್ಚಾದರೆ ಆಗ ತಲೆಯನ್ನು ಹ್ರಸ್ವಶಿರವೆಂದು ಕರೆಯುತ್ತಾರೆ. ಅದು ೭೫ಕ್ಕಿಂತ ಕಡಿಮೆಯಾದರೆ ಅದನ್ನು ದೀರ್ಘಶಿರವೆಂದು ಕರೆಯುತ್ತಾರೆ. ೭೫ ಮತ್ತು ೮೦ರ ನಡುವೆ ಇರುವ ಶಿರಸೂಚಿಗಳನ್ನು ಮಧ್ಯಶಿರ ಎಂದು ಕರೆಯುತ್ತಾರೆ. ಇವು ಪಾರಿಭಾಷಿಕ ಶಬ್ದಗಳು. ಜನಾಂಗ ಸಮಸ್ಯೆಗಳನ್ನು ಕುರಿತ ಸಾಹಿತ್ಯದಲ್ಲಿ ಇವು ಸತತವಾಗಿ ಬರುತ್ತವೆ; ಅವು ಏನನ್ನು ಸೂಚಿಸುತ್ತವೆ ಎಂದು ತಿಳಿಯದಿದ್ದರೆ ಆ ಬಗ್ಗೆ ನಡೆಯುವ ಚರ್ಚೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಅವುಗಳ ಜನಪ್ರಿಯ ಸಮಾನಾರ್ಥಕ ಪದಗಳನ್ನು ಕೊಡುವುದಕ್ಕಾಗಿ ನಾನು ನಿಂತರೆ ಅದು ಅಪ್ರಯೋಜನಕಾರಿಯಾಗಲಾರದು. ಮಧ್ಯಶಿರಕ್ಕೆ ನಡುತಲೆ ಎಂಬುದು ಜನಪ್ರಿಯ ಸಮಾನಾರ್ಥಕ. ತಲೆಬುರುಡೆ ಅಗಲದ ನಾಲ್ಕನೇ ಮೂರು ಮತ್ತು ಐದನೇ ನಾಲ್ಕು ಭಾಗದ ಉದ್ದವನ್ನು ಸೂಚಿಸುವ ಮಧ್ಯಮ ಶಿರಸೂಚಿ. ದೀರ್ಘಶಿರ ಎಂದರೆ ಉದ್ದನೆ ತಲೆ, ಇದರ ತಲೆ ಬುರುಡೆಯ ಅಳತೆ ಉದ್ದದ ಐದನೆ ನಾಲ್ಕು ಭಾಗಕ್ಕಿಂತ ಕಡಿಮೆ ಇರುವ ಶಿರಸೂಚಿಯಾಗಿದೆ.

ಮುಖದ ರೂಪ ತಲೆಯ ಪ್ರಮಾಣಗಳ ನಡುವಣ ಪರಸ್ಪರ ಸಂಬಂಧವೇ ಮುಖಸೂಚಿ. ಬಹುಪಾಲು ಸಂಗತಿಗಳಲ್ಲಿ, ಅಗಲವಾದ ತಲೆಗೆ ದುಂಡನೆಯ ಮುಖವಿರುತ್ತದೆ, ಈ ಮುಖದಲ್ಲಿ ಕೆನ್ನೆಬಳಿಯ ಹಿಂಭಾಗದ ಅಗಲ ಕಪಾಲ ಮತ್ತು ಹಣೆಯ ಎತ್ತರಕ್ಕೆ ಹೋಲಿಸಿದರೆ ಗಣನೀಯವಾಗಿರುತ್ತದೆ. ಈ ಅಳತೆ ಮಾಡುವ ವಿಧಾನಗಳಲ್ಲಿ ಏಕರೂಪತೆ ಇಲ್ಲದಿರುವುದರಿಂದ ನಿಖರ ಹೋಲಿಕೆಯನ್ನು ಮಾಡಲು ಅಷ್ಟಾಗಿ ಆಗುತ್ತಿಲ್ಲ. ಆದರೂ ಉದ್ದತಲೆಯಾದರೆ ಅಂಡಾಕಾರದ ಮುಖ, ಹ್ರಸ್ವತಲೆಯಾದರೆ ದುಂಡನೆ ಮುಖ ಎಂಬ ನಿಯಮವನ್ನು ಒಪ್ಪಿಕೊಳ್ಳುವುದು ಕ್ಷೇಮವಾಗಿ ಕಂಡಿದೆ.

ಮಾನವಮಾಪಕಶಾಸ್ತ್ರದ ಈ ಅಳತೆಗಳನ್ನು ಅನ್ವಯಿಸುವ ಜನಾಂಗ ಸಮಸ್ಯೆಯ ಬಗ್ಗೆ ಅಧಿಕಾರಯುತವಾಗಿ ಪ್ರೊ. ರಿಪ್ಲೆಯವರು ಶಿರ ಮತ್ತು ಮುಖ ಸೂಚಿಗಳಿಗೆ ಅನುಸಾರವಾಗಿ ಮೂರು ಭಿನ್ನ ಜನಾಂಗಗಳಿಗೆ ಯೂರೋಪಿನ ಜನತೆ ಸೇರುತ್ತಾರೆ ಎಂಬ ನಿರ್ಣಯಕ್ಕೆ ಬಂದಿದ್ದಾರೆ. ಅವರ ತೀರ್ಮಾನಗಳ ಸಾರಾಂಶವನ್ನು ಪಟ್ಟಿ ರೂಪದಲ್ಲಿ ಮುಂದೆ ಕೊಡಲಾಗಿದೆ.[೧]

೧. Ripley : *Races of Europe,* P. 121

| ಯುರೋಪಿನ ಜನಾಂಗೀಯ ಮಾದರಿಗಳು | | | | | | |
|---|---|---|---|---|---|---|
| ಜನಾಂಗ | ಶಿರ | ಮುಖ | ಕೇಶ | ಕಣ್ಣು | ಎತ್ತರ | ಮೂಗು |
| ೧. ಟ್ಯುಟಾನಿಕ್ | ಉದ್ದ | ಉದ್ದ | ತುಂಬ ತೆಳು | ನೀಲಿ | ಎತ್ತರ | ಗಿಡ್ಡ ಗರುಡ ಮೂಗು |
| ೨. ಆಲ್ಪೈನ್ (ಕೆಲ್ಟಿಕ್) | ದುಂಡು | ಅಗಲ | ತೆಳು ಕೆಂಗಂದು | ಕೆಂಗಂದು | ಮಧ್ಯಮ ಗಿಡ್ಡ ಬಲಿಶಾಲಿ | ವ್ಯತ್ಯಯ : ಬಹುವಾಗಿ ಅಗಲ, ದಪ್ಪ |
| ೩. ಮೆಡಿಟರೇನಿಯನ್ | ಉದ್ದ | ಉದ್ದ | ಕಡುಗಂದು ಅಥವಾ ಕಪ್ಪು | ಕಪ್ಪು | ಮಧ್ಯಮ ತೆಳು | ತುಂಬ ಅಗಲ |

ಆರ್ಯ ಜನಾಂಗ ಎಂಬ ಅದರ ಭೌತಿಕ ಅರ್ಥದಲ್ಲಿ ಆ ಜನಾಂಗ ಇದೆಯೆ? ಈ ವಿಷಯದಲ್ಲಿ ಎರಡು ಅಭಿಪ್ರಾಯಗಳಿರುವಂತೆ ಕಾಣುತ್ತದೆ. ಒಂದು ಅಭಿಪ್ರಾಯ ಆರ್ಯ ಜನಾಂಗದ ಇರುವಿಕೆಯ ಪರವಿದೆ. ಅದರ ಪ್ರಕಾರ:[೨]

ಆರ್ಯ ಮಾದರಿ ಸಾಪೇಕ್ಷವಾಗಿ ಉದ್ದ ತಲೆಯಿಂದ ನೀಳ ಸುಂದರ ಮೂಗು, ಉದ್ದನೆಯ ಸಮಪ್ರಮಾಣದ ಕೋಲುಮುಖ, ಚೆನ್ನಾಗಿ ಬೆಳವಣಿಗೆಯಾಗಿರುವ ನಿರ್ದಿಷ್ಟ ಲಕ್ಷಣಗಳು ಮತ್ತು ಉನ್ನತ ಮುಖಕೋನಗಳಿಂದ ಗುರುತಿಸಲ್ಪಡುತ್ತದೆ. ಎತ್ತರ ಸಾಕಷ್ಟು ಉನ್ನತವಾದುದು–ಸಮರೂಪವಾಗಿದ್ದು ದಢೂತಿಯಲ್ಲದ ತೆಳುವಾದ ಮೈಕಟ್ಟು.

ಇನ್ನೊಂದು ಅಭಿಪ್ರಾಯ ಪ್ರೊ. ಮ್ಯಾಕ್ಸ್‌ಮುಲ್ಲರ್ ಅವರದು. ಅವರ ಪ್ರಕಾರ ಈ ಪದ ಮೂರು ಭಿನ್ನವಾದ ಅರ್ಥಗಳಲ್ಲಿ ಬಳಕೆಯಾಗಿದೆ. ಇದನ್ನು ಅವರು ತಮ್ಮ 'ಭಾಷಾ ವಿಜ್ಞಾನ' (*The Science of Language*) ಎಂಬ ಉಪನ್ಯಾಸ ಮಾಲೆಯಲ್ಲಿ ಹೇಳುತ್ತಾರೆ :

"ಆರ್ ಅಥವಾ ಅರ ಎನ್ನುವುದು ಭೂಮಿಯ ಅತ್ಯಂತ ಹಳೆಯ ಹೆಸರುಗಳಲ್ಲಿ ಒಂದೆಂದು ನಾನು ಗುರುತಿಸುತ್ತೇನೆ; ಆರ್ ಅಥವಾ ಅರ ಅದರ ಅರ್ಥ ಉತ್ತ ನೆಲ, ಈ ಅರ್ಥ ಸಂಸ್ಕೃತದಲ್ಲಿ ಲುಪ್ತವಾಗಿ ಗ್ರೀಕ್‌ನಲ್ಲಿ 'ಇರ' ಎಂಬುದಾಗಿ ಉಳಿದುಕೊಂಡಿದೆ. ಆದ್ದರಿಂದ ಆರ್ಯ ಎಂದರೆ ಮೂಲತಃ ಜಮೀನ್ದಾರ, ಬೇಸಾಯಗಾರ ಎಂದು ಅರ್ಥವಾದರೆ, ವೈಶ್ಯ ಎಂಬುದು ವಿಶ್ ಧಾತುವಿನಿಂದ ನಿಷ್ಪತ್ತಿಯಾಗಿ ಗೃಹಸ್ಥ ಎಂಬರ್ಥ ಕೊಡುತ್ತಿತ್ತು; ಮನುವಿನ ಮಗಳಾದ 'ಇಳ' ಎಂಬ ಹೆಸರಿನ ಅರ್ಥ ಉತ್ತ ನೆಲ, ಇದು ಬಹುಶಃ ಅರ ಎಂಬುದರ ರೂಪಾಂತರವಿರಬಹುದು."

ಎರಡನೆಯ ಅರ್ಥದಲ್ಲಿ ಅದನ್ನು ಭೂಮಿಯನ್ನು ಉಳುವ ಅರ್ಥವನ್ನು ಸೂಚಿಸಲು ಬಳಸಲಾಯಿತು. ಈ ಬಗ್ಗೆ ಪ್ರೊ. ಮ್ಯಾಕ್ಸ್‌ಮುಲ್ಲರ್ ಮುಂದಿನಂತೆ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

"ಆರ್ಯ ಶಬ್ದಕ್ಕೆ ನಿಷ್ಪತ್ತಿಶಾಸ್ತ್ರದ ಅರ್ಥಕ್ಕನುಗುಣವಾಗಿ ಭೂಮಿಯನ್ನು ಉಳುವವನು ಎಂದು ಅರ್ಥ ಹೇಳಬಹುದು ಎನಿಸುತ್ತದೆ. 'ತುರ' ಎಂದರೆ ಶೀಘ್ರ ಅಶ್ವಾರೋಹಿಗಳು ಎಂಬ ಮೂಲ ಹೆಸರಿನಿಂದ

---

೧. ಅದೇ ಸಂ. ೧, ಪು. ೧೨೧

ಬಂದಿರುವ ತುರೇನಿಯನ್ನರು ಎಂಬ ಅಲೆಮಾರಿ ಜನಾಂಗಕ್ಕಿಂತ ತಾವು ಭಿನ್ನವೆಂದು ಸೂಚಿಸಲು ಆರ್ಯರು ತಮ್ಮ ಹೆಸರನ್ನು ಆಯ್ದುಕೊಂಡಿರುವಂತೆ ಕಾಣುತ್ತದೆ"

ಮೂರನೆಯ ಅರ್ಥದಲ್ಲಿ ಇಡೀ ಜನಸಮುದಾಯವನ್ನು ರೂಪಿಸಿದ ಸಮಗ್ರ ಜನತೆಗೆ ವೈಶ್ಯರು ಎಂಬ ಸಾಮಾನ್ಯ ಹೆಸರಿನಲ್ಲಿ ಈ ಪದ ಬಳಕೆಯಾಯಿತು. ಈ ಬಗ್ಗೆ ತಮ್ಮ ಪ್ರಮಾಣವಾಗಿ ಪ್ರೊ. ಮ್ಯಾಕ್ಸ್‌ಮುಲ್ಲರ್ ಪಾಣಿನಿಯನ್ನು (III,೧,೧೦೩) ಆಶ್ರಯಿಸುತ್ತಾರೆ. ಆಮೇಲೆ ನಾಲ್ಕನೆಯ ಅರ್ಥದಲ್ಲಿ ಆಮೇಲಿನ ಅವಧಿಯಲ್ಲಿ ಈ ಪದ 'ಕುಲೀನ ಸಂಜಾತ' ಎಂಬ ಅರ್ಥವನ್ನು ಪಡೆದುಕೊಂಡಿತು.

ಆರ್ಯ ಜನಾಂಗದ ಪ್ರಶ್ನೆಯ ಬಗ್ಗೆ ವಿಶೇಷವಾಗಿ ಪ್ರಮುಖವಾದ ಅಂಶವೇನೆಂದರೆ ಪ್ರೊ. ಮ್ಯಾಕ್ಸ್‌ಮುಲ್ಲರ್ ಅಭಿಪ್ರಾಯ. ಆ ವಿಷಯದ ಬಗ್ಗೆ ಅವರು ಹೀಗೆನ್ನುತ್ತಾರೆ:[೧]

"ರಕ್ತದ ವಿಷಯದಲ್ಲಿ ಆರ್ಯ ಜನಾಂಗ ಎಂಬುದಿಲ್ಲ. ವೈಜ್ಞಾನಿಕ ಭಾಷೆಯಲ್ಲಿ ಜನಾಂಗಕ್ಕೆ ಆರ್ಯ ಎಂದು ಅನ್ವಯಿಸುವುದು ಸುತರಾಂ ಸಾಧ್ಯವಿಲ್ಲ. ಅದರ ಅರ್ಥ ಭಾಷೆ, ಭಾಷೆಯಲ್ಲದೆ ಬೇರೇನೂ ಅಲ್ಲ; ನಾವು ಆರ್ಯ ಜನಾಂಗ ಎಂದು ಹೇಳಿದರೆ ಅದರ ಅರ್ಥ ಆರ್ಯ ಭಾಷೆ ಎಂಬುದಷ್ಟೆ ಎಂದು ನಾವು ತಿಳಿಯಬೇಕಾಗಿದೆ."

* * *

ಆರ್ಯ ಎಂದು ನಾನು ಹೇಳಿದರೆ ಅದು ರಕ್ತ ಅಥವಾ ಅಸ್ಥಿಪಂಜರ ಅಥವಾ ಕೂದಲು ಅಥವಾ ಕೆನ್ನೆ ಎಂದು ಅರ್ಥವಲ್ಲ ಎಂದು ನಾನು ಪದೇ ಪದೇ ಘೋಷಿಸಿದ್ದೇನೆ. ಆರ್ಯರೆಂದರೆ ಆರ್ಯಭಾಷೆಯನ್ನು ಮಾತನಾಡುವ ಜನ ಎಂಬುದಷ್ಟೇ ನನ್ನ ಅರ್ಥ. ಇದೇ ಮಾತು ಹಿಂದೂಗಳಿಗೆ, ಗ್ರೀಕರಿಗೆ, ರೋಮನ್ನರಿಗೆ ಜರ್ಮನ್ನರಿಗೆ, ಕೆಲ್ಟಿಕ್ಕರಿಗೆ ಮತ್ತು ಸ್ಲಾವರಿಗೆ ಅನ್ವಯವಾಗುತ್ತದೆ. ನಾನು ಅವರ ಬಗ್ಗೆ ಮಾತನಾಡಿದಾಗ ಅವರ ಅಂಗಾಂಗ ರಚನೆಯ ಲಕ್ಷಣಗಳನ್ನು ಸೂಚಿಸುವುದಿಲ್ಲ. ನೀಲಿಗಣ್ಣಿನ ಸುಂದರಗೂದಲಿನ ಸ್ಕಾಂಡಿನೇವಿಯನ್ನರು ಗೆದ್ದವರು ಅಥವಾ ಸೋತವರು ಆಗಿರಬಹುದು, ಅವರು ತಮ್ಮ ಕಪ್ಪು ದಣಿಗಳ ಅಥವಾ ಪ್ರಜೆಗಳ ಅಥವಾ ತಿರುಗಾಮುರುಗವಾಗಿ ಅವರ ಭಾಷೆಯನ್ನು ಅಂಗೀಕರಿಸಬಹುದು. ನಾನು ಅವರನ್ನು ಹಿಂದೂಗಳು, ಗ್ರೀಕರು, ರೋಮನ್ನರು, ಜರ್ಮನ್ನರು, ಕೆಲ್ಟರು ಮತ್ತು ಸ್ಲಾವರು ಎಂದು ಕರೆದಾಗ ಅವರ ಭಾಷೆಯನ್ನಲ್ಲದೆ ಬೇರೇನನ್ನೂ ನಾನು ಸೂಚಿಸುವುದಿಲ್ಲ ಮತ್ತು ಆ ಅರ್ಥದಲ್ಲಿ ಮಾತ್ರ ಅತ್ಯಂತ ಸುಂದರ ಸ್ಕಾಂಡಿನೇವಿಯನ್ನರಿಗಿಂತ ಅತ್ಯಂತ ಕಪ್ಪಾದ ಹಿಂದೂಗಳು ಆರ್ಯಭಾಷೆ ಮತ್ತು ಆಲೋಚನೆಯ ಪ್ರಾರಂಭಿಕ ಘಟ್ಟವನ್ನು ಪ್ರತಿನಿಧಿಸುತ್ತಾರೆಂದು ನಾನು ಹೇಳುತ್ತೇನೆ. ಇದು ಒರಟು ಮಾತಾಗಿ ಕಾಣಬಹುದು, ಆದರೆ ಅಂಥ ಪ್ರಮುಖ ವಿಷಯಗಳಲ್ಲಿ ನಮ್ಮ ಭಾಷೆ ಬಳಕೆಯಲ್ಲಿ ನಾವು ತೀರಾ ನಿರ್ಣಾಯಕವಾಗಿರಲು ಸಾಧ್ಯವಿಲ್ಲ. ದೀರ್ಘಶಿರಸೂಚಿ ನಿಘಂಟು ಅಥವಾ ಹ್ರಸ್ವಶಿರಸೂಚಿ ನಿಘಂಟು ಭಾಷೆಯಲ್ಲಿ ಮಾತಾಡುವ ಭಾಷಾಶಾಸ್ತ್ರಜ್ಞ ಆರ್ಯ ಜನಾಂಗ, ಆರ್ಯ ರಕ್ತ, ಆರ್ಯ ಕಣ್ಣು ಮತ್ತು ಕೇಶ ಎಂದು ಮಾತನಾಡುವ ಮಾನವಕುಲಶಾಸ್ತ್ರಜ್ಞನಷ್ಟೆ ದೊಡ್ಡ ಪಾಪಿಯಾಗುತ್ತಾನೆಂದು ನನ್ನ ಅಭಿಪ್ರಾಯ. ಇದು ಭಾಷೆಗಳ ಬಗ್ಗೆ ಬ್ಯಾಬಿಲೋನಿಯಾದ ಗೊಂದಲಕ್ಕಿಂತಲೂ ಕನಿಷ್ಠವಾದುದು– ಇದು ಮುಚ್ಚುಮರೆಯಿಲ್ಲದ ಕಳ್ಳತನ, ಭಾಷೆಯ ವರ್ಗೀಕರಣಕ್ಕಾಗಿ ನಾವು ನಮ್ಮದೇ ಆದ ಪಾರಿಭಾಷಿಕ ಕೋಶವನ್ನು ತಯಾರು ಮಾಡಿದ್ದೇವೆ; ಹಾಗೆಯೇ ತಲೆ, ಕೂದಲು ಮತ್ತು ರಕ್ತಗಳ ವರ್ಗೀಕರಣಕ್ಕಾಗಿ ಮಾನವಕುಲಶಾಸ್ತ್ರಜ್ಞರು

೧. *Biography of Words,* Pp. 89 120–121

ತಮ್ಮದೇ ಪಾರಿಭಾಷಿಕ ಕೋಶವನ್ನು ತಯಾರುಮಾಡಲಿ.”

ಆರ್ಯ ಜನಾಂಗದ ಸಿದ್ಧಾಂತದಲ್ಲಿ ನಂಬಿಕೆಯಿಟ್ಟು ಅದನ್ನು ಪ್ರಚುರಪಡಿಸಲು ಬಹಳವಾಗಿ ಜವಾಬ್ದಾರರು ಮ್ಯಾಕ್ಸ್‌ಮುಲ್ಲರ್ ಅವರೇ ಎಂಬುದನ್ನು ಬಲ್ಲವರು ಈ ಅಭಿಪ್ರಾಯವನ್ನು ಬಹಳವಾಗಿ ಮೆಚ್ಚುತ್ತಾರೆ.

ಈ ಎರಡು ಅಭಿಪ್ರಾಯಗಳು ವಾಸ್ತವವಾಗಿ ಸುಸಂಗತವಾಗಿವೆ. ಒಂದು ಅಭಿಪ್ರಾಯದ ಪ್ರಕಾರ ನಿರ್ದಿಷ್ಟ ತಲೆಬುರುಡೆಯ ಮತ್ತು ಮುಖದ ಸೂಚಿಯುಳ್ಳ ವಿಶಿಷ್ಟ ಅನುವಂಶೀಯ ಲಕ್ಷಣಗಳುಳ್ಳದ್ದೆಂಬ ಅಂಗಶಾಸ್ತ್ರೀಯ ಅರ್ಥದಲ್ಲಿ ಆರ್ಯ ಜನಾಂಗ ಅಸ್ತಿತ್ವದಲ್ಲಿತ್ತು. ಪ್ರೊ. ಮ್ಯಾಕ್ಸ್‌ಮುಲ್ಲರ್ ಪ್ರಕಾರ ಒಂದು ಸಮಾನ ಭಾಷೆಯನ್ನು ಮಾತನಾಡುವ ಜನರ ಸಮುದಾಯ ಎಂಬ ಭಾಷಾಶಾಸ್ತ್ರೀಯ ಅರ್ಥದಲ್ಲಿ ಆರ್ಯ ಜನಾಂಗ ಅಸ್ತಿತ್ವದಲ್ಲಿತ್ತು.

ಅಭಿಪ್ರಾಯಗಳ ಈ ತಾಕಲಾಟದಲ್ಲಿ, ವೈದಿಕ ಸಾಹಿತ್ಯದ ಪುರಾವೆ ಏನು ಎಂದು ಪ್ರಶ್ನಿಸಬೇಕಾಗುತ್ತದೆ. ವೈದಿಕ ಸಾಹಿತ್ಯದ ಪರಿಶೀಲನೆಯಲ್ಲಿ ಋಗ್ವೇದದಲ್ಲಿ ಎರಡು ಶಬ್ದಗಳು–ಒಂದು ಹ್ರಸ್ವ ಸ್ವರದ ‘ಅರ್ಯ’, ಇನ್ನೊಂದು ದೀರ್ಘಸ್ವರದ ‘ಆರ್ಯ’ ಎಂದು ಗೊತ್ತಾಗುತ್ತದೆ. ಹ್ರಸ್ವ ಸ್ವರದ ‘ಅರ್ಯ’ ಶಬ್ದವು ಋಗ್ವೇದದಲ್ಲಿ[೧] ೮೮ ಕಡೆಗಳಲ್ಲಿ ಬಳಕೆಯಾಗಿದೆ. ಅದನ್ನು ಯಾವ ಅರ್ಥದಲ್ಲಿ ಬಳಸಲಾಗಿದೆ? ಈ ಶಬ್ದವನ್ನು[೨] ನಾಲ್ಕು ವಿಭಿನ್ನ ಅರ್ಥಗಳಲ್ಲಿ ಬಳಸಲಾಗಿದೆ:

(೧) ಶತ್ರು, (೨) ಗೌರವಾನ್ವಿತ ವ್ಯಕ್ತಿ, (೩) ಭಾರತದ ಹೆಸರು, ಮತ್ತು (೪) ಒಡೆಯ, ವೈಶ್ಯ ಅಥವಾ ಪ್ರಜೆ.

ದೀರ್ಘಸ್ವರದ ‘ಆರ್ಯ’ ಶಬ್ದವನ್ನು ಋಗ್ವೇದದಲ್ಲಿ ೩೧ ಕಡೆ[೩] ಬಳಸಲಾಗಿದೆ. ಆದರೆ ಈ ಯಾವೆಡೆಯೂ ಅದನ್ನು ಜನಾಂಗ ಎಂಬರ್ಥದಲ್ಲಿ ಬಳಸಿಲ್ಲ.

‘ಅರ್ಯ’ ಮತ್ತು ‘ಆರ್ಯ’ ಶಬ್ದಗಳು ವೇದಗಳಲ್ಲಿ ಜನಾಂಗ ಎಂಬ ಅರ್ಥದಲ್ಲಿ ಬಳಕೆಯಾಗಿಲ್ಲ ಎಂಬ ನಿರ್ವಿವಾದವಾದ ತೀರ್ಮಾನಕ್ಕೆ ಮೇಲಿನ ಚರ್ಚೆಯಿಂದ ಬರಬಹುದು.

ಈ ವಿಷಯದಲ್ಲಿ ಮಾನವಮಾಪಕಶಾಸ್ತ್ರದ ಆಧಾರ ಏನು ಎಂದು ಕೂಡ ಹೇಳಬಹುದು. ಆರ್ಯ ಜನಾಂಗವನ್ನು ಉದ್ದನೆ ತಲೆಯುಳ್ಳವರೆಂದು ವರ್ಣಿಸಲಾಗಿದೆ. ಈ ವರ್ಣನೆಯಷ್ಟೇ ಸಾಕಾಗುವುದಿಲ್ಲ. ಏಕೆಂದರೆ ಪ್ರೊ. ರಿಪ್ಲೆ ಕೊಟ್ಟಿರುವ ಪಟ್ಟಿಯ ಪ್ರಕಾರ ಎರಡು ಜನಾಂಗಗಳು ಉದ್ದನೆಯ ತಲೆಯುಳ್ಳವರೆಂದು ಗೊತ್ತಾಗಿದೆ. ಈ ಎರಡರಲ್ಲಿ ಆರ್ಯ ಜನಾಂಗ ಯಾವುದು ಎಂಬ ಪ್ರಶ್ನೆ ಹಾಗೆಯೇ ಉಳಿಯುತ್ತದೆ.

## ೨

ಈಗ ನಾವು ಆರ್ಯರು ಭಾರತಕ್ಕೆ ಹೊರಗಿನಿಂದ ಬಂದವರು, ಭಾರತದ ಮೇಲೆ ದಾಳಿ ಮಾಡಿದವರು ಮತ್ತು ಇಲ್ಲಿನ ಮೂಲ ನಿವಾಸಿಗಳನ್ನು ಗೆದ್ದವರು ಎಂಬ ವಾದವನ್ನು ನೋಡೋಣ. ಈ ಪ್ರಶ್ನೆಗಳನ್ನು ಪ್ರತ್ಯೇಕವಾಗಿ ಪರಿಶೀಲಿಸುವುದು ಒಳ್ಳೆಯದು.

---

೧. ಋಗ್ವೇದದ ಉಲ್ಲೇಖಗಳ ಪಟ್ಟಿಯನ್ನು ಪರಿಶಿಷ್ಟ ೧ರಲ್ಲಿ ನೋಡಿ.

೨. ಈ ಶಬ್ದವನ್ನು ಯಾವ ಅರ್ಥದಲ್ಲಿ ಎಷ್ಟು ಕಡೆ ಬಳಸಿದ್ದಾರೆ ಎಂಬ ಉಲ್ಲೇಖಗಳಿಗೆ ಪರಿಶಿಷ್ಟ ೨ ನೋಡಿ.

೩. ಉಲ್ಲೇಖಗಳ ಪಟ್ಟಿಗೆ ಪರಿಶಿಷ್ಟ ೨ ನೋಡಿ.

ಆರ್ಯ ಜನಾಂಗ ಭಾರತಕ್ಕೆ ಎಲ್ಲಿಂದ ಬಂತು? ಆರ್ಯ ಜನಾಂಗದ ಮೂಲನೆಲೆಯನ್ನು ನಿರ್ಧರಿಸುವ ವಿಷಯದಲ್ಲಿ ಕಂಗೆಡಿಸುವ ಭಿನ್ನ ಭಿನ್ನ ಅಭಿಪ್ರಾಯಗಳು ಮತ್ತು ವಾದಗಳು ಇವೆ. ಬೆನ್ಫೆ ಪ್ರಕಾರ ಆರ್ಯ ಜನಾಂಗದ ಮೂಲ ನೆಲೆಯನ್ನು ಸಮಾನ ಶಬ್ದಭಂಡಾರದಿಂದ ತೀರ್ಮಾನಿಸಬೇಕಾಗುತ್ತದೆ. ಈ ವಿಷಯದಲ್ಲಿ ಅವನ ಅಭಿಪ್ರಾಯಗಳನ್ನು ಪ್ರೊ. ಐಸಾಕ್ ಟೇಲರ್[೧] ಮುಂದಿನ ಮಾತುಗಳಲ್ಲಿ ಚೆನ್ನಾಗಿ ಸಂಗ್ರಹಿಸಿದ್ದಾರೆ :

"ಭಾಷಿಕ ಪ್ರತ್ಯೇಕತೆ ಉಂಟಾಗುವ ಮೊದಲು ಆರ್ಯರು ನೆಲೆಸಿದ ಪ್ರದೇಶವನ್ನು ಸೂಚಿಸಲು ಆರ್ಯರ ಇಡೀ ಭಾಷೆಗಳ ಸಮಾನ ಶಬ್ದಭಂಡಾರದ ಪರಿಶೀಲನೆ ಅಗತ್ಯವಿದೆ. ಪ್ರಾಚೀನ ಆರ್ಯರಿಗೆ ಪರಿಚಿತವಾಗಿದ್ದ ಕರಡಿ, ತೋಳ ಮುಂತಾದ ಕೆಲವು ಪ್ರಾಣಿಗಳು, ಬೀಚ್ ಮತ್ತು ಬರ್ಚ್ ಎಂಬ ಕೆಲವು ಕಾಡು ಜಾತಿಯ ಮರಗಳೆಲ್ಲ ಸಮಶೀತೋಷ್ಣವಲಯ ಮತ್ತು ಯುರೋಪಿನಲ್ಲಿ ಹುಟ್ಟಿ ಬೆಳೆದವು; ಆದರೆ ದಕ್ಷಿಣ ಏಷ್ಯಾದ ಸಿಂಹ, ಹುಲಿ ಮತ್ತು ತಾಳೆಮರಗಳಂಥ ಪ್ರಾಣಿಗಳು ಮತ್ತು ಮರಗಳು ಭಾರತೀಯರು ಮತ್ತು ಇರಾನಿಯನ್ನರಿಗೆ ಮಾತ್ರ ಗೊತ್ತಿದ್ದವು. ಏಷ್ಯಾದ ಎರಡು ಕಾಡು ಪ್ರಾಣಿಗಳಾದ ಸಿಂಹ ಮತ್ತು ಹುಲಿಗಳಿಗೂ, ಅಥವಾ ಏಷ್ಯಾದ ಮುಖ್ಯ ಸರಕುವಾಹಕ ಪ್ರಾಣಿಯಾದ ಒಂಟೆಗೂ ಸಮಾನ ಹೆಸರುಗಳು ಪ್ರಾಚೀನ ಆರ್ಯರ ಶಬ್ದ ಭಂಡಾರದಲ್ಲಿ ಇಲ್ಲದಿರುವುದರಿಂದ ಕ್ಯಾಸ್ಪಿಯನ್ ಸಮುದ್ರದ ಪೂರ್ವಪ್ರದೇಶದಿಂದ ಆರ್ಯರು ವಲಸೆ ಬಂದರು ಎಂಬುದನ್ನು ವಿವರಿಸುವುದು ಕಷ್ಟ ಎಂದು ವಾದಿಸಿದರು. ಗ್ರೀಕರು ಸಿಂಹವನ್ನು ಅದರ ಸೆಮಿಟಿಕ್ ಹೆಸರಿನಲ್ಲಿ ಕರೆದುದರಿಂದಲೂ, ಭಾರತೀಯರು ಅದಕ್ಕೆ ಕೊಟ್ಟ ಹೆಸರು ಯಾವುದೇ ಆರ್ಯ ಶಬ್ದನಿಷ್ಪತ್ತಿಯನ್ನು ಸೂಚಿಸದೆ ಇರುವುದರಿಂದಲೂ, ಗ್ರೀಕರು ಮತ್ತು ಭಾರತೀಯರಿಗೆ ಸಮಾನ ನೆಲೆಯಲ್ಲಿ ಸಿಂಹ ಅಪರಿಚಿತವಾಗಿತ್ತು ಎಂದು ವಾದಿಸುತ್ತಾನೆ.

* * *

ಬೆನ್ಫೆಯ ಘೋಷಣೆ ಶೀಘ್ರ ಫಲ ನೀಡಿತು, ಗೀಗರ್ ತಕ್ಷಣವೇ ಈ ಬಣಕ್ಕೆ ಸೇರಿದನು, ಆದರೆ ಅವನು ಆರ್ಯರ ನೆಲೆಯನ್ನು ಬೆನ್ಫೆಯಂತೆ ಕಪ್ಪು ಸಮುದ್ರದ ಉತ್ತರ ಪ್ರದೇಶಕ್ಕೆ ಸೇರಿಸದೆ, ಮಧ್ಯ ಮತ್ತು ಪಶ್ಚಿಮ ಜರ್ಮನಿಯ ವಾಯವ್ಯ ಪ್ರದೇಶಕ್ಕೆ ಸೇರಿಸಿದನು. ಈ ವಾದಕ್ಕೆ ಗೀಗರನ ಕೊಡುಗೆ ಕಡಿಮೆ ಬೆಲೆಯದಾಗಿರಲಿಲ್ಲ. ಪ್ರಾಚೀನ ಆರ್ಯರ ಶಬ್ದಭಂಡಾರಕ್ಕೆ ಸೇರಿರುವ ಮೂರು ಮರಗಳ ಹೆಸರಿನ ಆಧಾರದ ಮೇಲೆ ತನ್ನ ತೀರ್ಮಾನಗಳನ್ನು ನೀಡುತ್ತಾನೆ. ಫರ್ ಮರ, ವಿಲ್ಲೊ ಮರ, ಆಶ್ ಮರ, ಆಲ್ಡರ್ ಮರ ಮತ್ತು ಹೇಸಲ್ ಮರಗಳ ಜೊತೆಗೆ ಬರ್ಚ್, ಮತ್ತು ಓಕ್ ಮರಗಳ ಹೆಸರುಗಳು ವಿಶೇಷವಾಗಿ ನಿರ್ಣಾಯಕವಾಗಿವೆ ಎಂದು ಹೇಳುತ್ತಾನೆ. ಗ್ರೀಕರ 'ಫೆಗೊಸ್' ಓಕ್ ಮರವನ್ನು ಸೂಚಿಸುವುದರಿಂದ ಟ್ಯೂಟಾನಿಕ್ ಭಾಷೆಯ 'ಬೀಚ್' ಶಬ್ದಕ್ಕೆ ಅದು ಸಮಾನಾರ್ಥಕವಾಗಿದೆ ಮತ್ತು ಲ್ಯಾಟಿನ್ ಭಾಷೆಯ 'ಫೇಗ್' ಶಬ್ದದಿಂದ ಗ್ರೀಕರು ಬೀಚ್ ಮರಗಳ ನಾಡಿನಿಂದ ಓಕ್ ಮರಗಳ ನಾಡಿಗೆ ತಿನ್ನುವ ಹಣ್ಣಿನ ಮರದ ಹೆಸರನ್ನು ಅಂಥದೇ ಇನ್ನೊಂದು ಮರಕ್ಕೆ ವರ್ಗಾಯಿಸುವುದರಿಂದ ವಲಸೆ ಬಂದರೆಂಬ ತೀರ್ಮಾನಕ್ಕೆ ಬರುತ್ತಾನೆ."

ಆರ್ಯ ಜನಾಂಗದ ಮೂಲ ನೆಲೆ ಕಕೇಶಿಯಾ ಎಂದು ಇನ್ನೊಂದು ವಾದವಿದೆ; ಏಕೆಂದರೆ ಕಕೇಶಿಯನ್ನರು ಆರ್ಯನ್ನರಂತೆ ಹೊಂಬಣ್ಣದವರು, ನೇರ ಚೂಪು ಮೂಗಿನವರು ಮತ್ತು ಸುಂದರ

---

೧. ಐಸಾಕ್ ಟೇಲರ್, *The Origin of the Aryans,* ಪು. ೨೪–೨೬.

ಮುಖವುಳ್ಳವರು. ಈ ವಿಷಯವಾಗಿ ಪ್ರೊ. ರಿಪ್ಲೆಯವರ ಅಭಿಪ್ರಾಯ ಉದ್ಧರಿಸಲು ಯೋಗ್ಯವಾಗಿದೆ. ಈ ವಿಷಯದ ಬಗ್ಗೆ ಪ್ರೊ. ರಿಪ್ಲೆ[೧] ಹೀಗೆ ಹೇಳುತ್ತಾರೆ :

"ಪಶ್ಚಿಮ ಯುರೋಪಿನ ನೀಲಿಗಣ್ಣಿನ ಸುಂದರ ತಲೆಯ 'ಆರ್ಯ'(?) ಜನಾಂಗಕ್ಕೆ ಕಕೇಶಿಯನ್ ಎಂಬ ತಪ್ಪು ಹೆಸರನ್ನು ಕೊಟ್ಟಿರುವ ಸಂಪೂರ್ಣ ಅರ್ಥಹೀನತೆಯನ್ನು ಎರಡು ಅಂಶಗಳು ನಿರ್ವಿವಾದವಾಗಿ ಸ್ಪಷ್ಟಪಡಿಸುತ್ತವೆ. ಮೊದಲನೆಯದಾಗಿ, ಕಕೇಶಿಯದ ನೂರಾರು ಮೈಲಿಗಳ ಅಂತರದಲ್ಲಿ ಈ ಆದರ್ಶ ಹೊಂಬಣ್ಣದ ಮಾದರಿ ಸಿಗುವುದಿಲ್ಲ, ಮತ್ತು ಎರಡನೆಯದಾಗಿ, ಸಂಪೂರ್ಣವಾಗಿ ವಿಭಕ್ತಿ ಪ್ರತ್ಯಯವುಳ್ಳ ಅಥವಾ ಆರ್ಯಭಾಷೆಯನ್ನು ಬಳಸುವ ಯಾವ ಒಂದು ಮೂಲ ಬುಡಕಟ್ಟಿನ ಜನಾಂಗವೂ ಆ ಮಹಾ ಕಕೇಶಿಯಾದ ಸರಪಣಿಯಲ್ಲಿ ಇಲ್ಲ.

ಬಹುಶಃ ವಿಭಕ್ತಿ ಪ್ರತ್ಯಯವುಳ್ಳ ಏಕೈಕ ಭಾಷೆಯನ್ನು ಮಾತಾಡುವ ಆಸಿಟೀಸರು (Ossetes) ಆರ್ಯ ಎಂಬ ಗೌರವಕ್ಕೆ ತಮ್ಮ ಹಕ್ಕುಗಳನ್ನು ಇದುವರೆಗೂ ಸ್ಪಷ್ಟವಾಗಿ ಚಲಾಯಿಸಿಲ್ಲ. ಒಂದು ಪಕ್ಷ ಈ ಆಸಿಟಿಯನ್ನರು ಆರ್ಯರಾದರೂ ಅವರು ಸ್ವದೇಶಿ ಕಕೇಶಿಯನರಲ್ಲ, ಇರಾನ್ ಕಡೆಯಿಂದ ವಲಸೆ ಬಂದ ಜನಾಂಗ ಎಂದು ಭಾವಿಸಲು ಅವಕಾಶವಿದೆ. ಅವರ ತಲೆಯ ಆಕಾರ, ದಕ್ಷಿಣದಿಂದ ಬರುವ ಸರಪಳಿಗೆ ಅಡ್ಡವಾಗುವ ಏಕೈಕ ರಾಜಮಾರ್ಗವಾದ ಡೇರಿಯಲ್ ಕಣಿವೆಯ ಉದ್ದಕ್ಕೂ ಇರುವ ಅವರ ವೃತ್ತಿಯ ಸರಹದ್ದು ಈ ಊಹೆಗೆ ಸಮರ್ಥನೆಯನ್ನು ಒದಗಿಸುತ್ತದೆ. ಆಸಿಟೀಸರು ಆರ್ಯರೋ ಅಲ್ಲವೋ ಗೊತ್ತಿಲ್ಲ, ಆದರೆ ಅವರು ತಮ್ಮ ಸುತ್ತ ಇರುವ ಜನಾಂಗಗಳಿಗಿಂತ ಹೆಚ್ಚಿನ ಪ್ರಾಮುಖ್ಯತೆಯನ್ನು ಖಂಡಿತವಾಗಿಯೂ ಪಡೆಯುವುದಿಲ್ಲ. ಅವರು ಪ್ರತಿಭಟನೆಯ ಲವಲೇಶವೂ ಇಲ್ಲದೆ ಕೇವಲ ತುಚ್ಛವಾಗಿ ರಷ್ಯನರಿಗೆ ಶರಣಾದ ಅಪಕೀರ್ತಿಯ ಆಧಾರದ ಮೇಲೆ ಅವರ ಬಗ್ಗೆ ತೀರ್ಪು ನೀಡುವುದಾದರೆ, ಕೆಚ್ಚು ಮತ್ತು ದೈಹಿಕ ಸೌಂದರ್ಯಗಳಿಗೆ ಹೆಸರುವಾಸಿಯಾಗಿರುವ ಈ ಪ್ರದೇಶದ ಆ ಎರಡು ಗುಣಗಳೂ ಅವರಲ್ಲಿ ಇಲ್ಲ.

* * *

ಈ ಕಕೇಶಿಯನ್ನರಲ್ಲಿ ಯಾರೊಬ್ಬರೂ 'ಕೊಂಚಮಟ್ಟಿನ ನಮೂನೆ'ಯುಳ್ಳವರಾಗಿದ್ದಾರೆನ್ನುವುದೂ ನಿಜವಲ್ಲ. ಆದ್ದರಿಂದ ಅವರು ಯಾವುದರ ಮೂಲ ಮಾದರಿಯೂ ಆಗಲು ಸಾಧ್ಯವಿಲ್ಲ. ಕಕೇಶಿಯಾ ಹೆಸರು ಬಹುಮಟ್ಟಿಗೆ ಎಲ್ಲಾ ದೈಹಿಕ ಮಾದರಿಯನ್ನೂ, 'ಆರ್ಯ' ಎಂಬ ಹೆಸರನ್ನು ನಿರ್ದಿಷ್ಟವಾಗಿ ಉಳ್ಳ ಹೊಂಬಣ್ಣ ಮತ್ತು ಎತ್ತರ ಇರುವ ಯುರೇಶಿಯಾ ಖಂಡದ ಜನರನ್ನು ಬಿಟ್ಟರೆ ಎಲ್ಲ ಭಾಷಾ ಕುಟುಂಬವನ್ನೂ ಒಳಗೊಳ್ಳುತ್ತದೆ. ಇದೆಲ್ಲ ಸುಳ್ಳು; ಕೇವಲ ಅಸಂಭಾವ್ಯವಷ್ಟೇ ಅಲ್ಲ, ಅರ್ಥಹೀನ ಕೂಡ. ಜನರ, ಭಾಷೆಗಳ, ಸಂಪ್ರದಾಯಗಳ ಮತ್ತು ದೈಹಿಕ ಮಾದರಿಗಳ ತೊಟ್ಟಿಲಷ್ಟೇ ಅಲ್ಲ, ಸಮಾಧಿ ಕೂಡ ಈ ಕಾಕಸಸ್ ಆಗಿದೆ. ಈ ಅಂಶವನ್ನು ಪ್ರಾರಂಭದಲ್ಲಿಯೇ ನಾವು ದೃಢಪಡಿಸಿಕೊಳ್ಳಬೇಕಾಗಿದೆ. ಈ ಕಾಕಸಸ್ ಪರ್ವತ ಶ್ರೇಣಿಯ ಉದ್ದಕ್ಕೂ ಒಂದೇ ಸ್ಥಳದಲ್ಲಿ ವಿಭಿನ್ನ ಬಗೆಯ ಜನ, ಭಾಷೆ ಮತ್ತು ಧರ್ಮಗಳು ಒಟ್ಟುಗೂಡಿರುವಂತೆ ಬಹುಶಃ ಪ್ರಪಂಚದ ಬೇರಾವ ಕಡೆಯೂ ಇಲ್ಲ".

ಆರ್ಕ್‌ಟಿಕ್ ಪ್ರದೇಶವೇ ಆರ್ಯ ಜನಾಂಗದ ಮೂಲ ನೆಲೆಯೆಂದು ಶ್ರೀ ತಿಲಕ್ ಸೂಚಿಸಿದ್ದಾರೆ. ಅವರ ವಾದವನ್ನು ಅವರ ಮಾತುಗಳಲ್ಲಿಯೇ ಸಂಗ್ರಹಿಸಬಹುದು. ಉತ್ತರ ಧ್ರುವದ ಸುತ್ತಮುತ್ತಲಿನ ಪ್ರದೇಶದಲ್ಲಿರುವ ಖಗೋಳಶಾಸ್ತ್ರೀಯ ಮತ್ತು ವಾಯುಗುಣಕ್ಕೆ ಸಂಬಂಧಿಸಿದ ಸಂಗತಿಯನ್ನು ಗಮನಕ್ಕೆ

---

೧. Ripley, *Races of Europe,* ಪು. ೪೩೬–೪೩೭

ತೆಗೆದುಕೊಂಡು ಅವರು ಹೀಗೆನ್ನುತ್ತಾರೆ.[೧]

"ವ್ಯತ್ಯಾಸಗಳಲ್ಲಿ ಎರಡು ಗುಂಪುಗಳಿವೆ. ಒಂದು ಸರಿಯಾಗಿ ಉತ್ತರ ಧ್ರುವದ ನೆಲದ ಮೇಲೆ ನಿಂತಿರುವ ಒಬ್ಬ ವೀಕ್ಷಕನಿಗೆ; ಇನ್ನೊಂದು, ಪರಿಧ್ರುವ ಪ್ರದೇಶದಲ್ಲಿ, ಅಥವಾ ಉತ್ತರ ಧ್ರುವ ಮತ್ತು ಆರ್ಕ್‌ಟಿಕ್ ವೃತ್ತದ ನಡುವಣ ಭೂ ಪ್ರದೇಶದಲ್ಲಿ ನಿಂತಿರುವ ವೀಕ್ಷಕನಿಗೆ ವಿಶಿಷ್ಟವಾಗಿವೆ."

ಈ ಎರಡು ಭಿನ್ನ ಗುಂಪುಗಳನ್ನು ಧ್ರುವ ಮತ್ತು ಪರಿಧ್ರುವಗಳೆಂದು ಕರೆದು ಅವುಗಳನ್ನು ಶ್ರೀ ತಿಲಕ್ ಈ ರೀತಿಯಾಗಿ ಸಂಗ್ರಹಿಸುತ್ತಾರೆ :

### ೧. ಧ್ರುವಗಳ ಲಕ್ಷಣಗಳು

(೧) ಸೂರ್ಯ ದಕ್ಷಿಣದಲ್ಲಿ ಹುಟ್ಟುತ್ತಾನೆ.

(೨) ನಕ್ಷತ್ರಗಳು ಹುಟ್ಟುವುದಿಲ್ಲ, ಮುಳುಗುವುದಿಲ್ಲ; ಆದರೆ ಇಪ್ಪತ್ನಾಲ್ಕು ಗಂಟೆಗಳಲ್ಲಿ ಒಂದು ಸುತ್ತನ್ನು ಪೂರ್ತಿಮಾಡಿ, ಸಮತಲದ ಪ್ರದೇಶದಲ್ಲಿ ಮತ್ತೆ ಮತ್ತೆ ಸುತ್ತುತ್ತಿರುತ್ತವೆ. ಉತ್ತರ ದಿಕ್ಕಿನ ಆಕಾಶದ ಗೋಳಾರ್ಧ ಮಾತ್ರ ಇಡೀ ವರ್ಷ ನೆತ್ತಿಯ ಮೇಲೆ ಕಾಣುತ್ತದೆ; ದಕ್ಷಿಣದ ಅಥವಾ ಕೆಳಗಿನ ಆಕಾಶ ಲೋಕ ಸದಾ ಮರೆಯಾಗಿರುತ್ತದೆ.

(೩) ವರ್ಷದಲ್ಲಿ ಆರು ತಿಂಗಳು ದೀರ್ಘ ಹಗಲು, ಆರು ತಿಂಗಳು ದೀರ್ಘ ರಾತ್ರಿ.

(೪) ಅಲ್ಲಿ ಒಂದೇ ಒಂದು ಮುಂಜಾವು ಮತ್ತು ಒಂದೇ ಒಂದು ಸಂಜೆ, ಅಥವಾ ಸೂರ್ಯ ವರ್ಷದಲ್ಲಿ ಒಂದೇ ಒಂದು ಬಾರಿ ಹುಟ್ಟುತ್ತಾನೆ, ಮುಳುಗುತ್ತಾನೆ. ಆದರೆ ಮುಂಜಾನೆಯ ಅಥವಾ ಮುಸ್ಸಂಜೆಯ ಸಂಧ್ಯಾಕಾಲ ನಿರಂತರವಾಗಿ ಸುಮಾರು ಎರಡು ತಿಂಗಳು, ಅಥವಾ ೨೪ ಗಂಟೆಗಳ ೬೦ ಅವಧಿಗಳವರೆಗೆ ಇರುತ್ತದೆ. ಅರುಣೋದಯ ಅಥವಾ ಸಂಧ್ಯಾಕಾಲ ನಮ್ಮಲ್ಲಿರುವಂತೆ (ಪೂರ್ವ ಅಥವಾ ಪಶ್ಚಿಮ) ದಿಗಂತದ ನಿರ್ದಿಷ್ಟ ಭಾಗಕ್ಕೆ ಸೀಮಿತವಾಗಿಲ್ಲ; ಆದರೆ ಆ ಜಾಗದ ನಕ್ಷತ್ರಗಳು ಪ್ರತಿ ೨೪ ಗಂಟೆಗಳಿಗೆ ಒಂದು ಸುತ್ತನ್ನು ಮುಗಿಸಿ, ಕುಂಬಾರನ ಚಕ್ರದಂತೆ, ದಿಗಂತದ ಸುತ್ತ ಸುತ್ತುತ್ತವೆ. ಹಾಗೆಯೇ ಸೂರ್ಯ ಆರು ತಿಂಗಳ ಅಂಥದೇ ಯಾನವನ್ನು ಮುಗಿಸುತ್ತಾನೆ, ಅಂದರೆ ಪ್ರತಿ ೨೪ ಗಂಟೆಗಳಲ್ಲಿ ಒಂದು ಸುತ್ತನ್ನು ಮುಗಿಸಿ, ಮುಳುಗದೆ ಆ ವೀಕ್ಷಕನ ಸುತ್ತ ಸುತ್ತುತ್ತದೆ.

### ೨. ಪರಿಧ್ರುವದ ಲಕ್ಷಣಗಳು

(೧) ಸೂರ್ಯ ಯಾವಾಗಲೂ ವೀಕ್ಷಕನ ದಿಗಂತದ ದಕ್ಷಿಣಕ್ಕೆ ಇರುತ್ತಾನೆ, ಆದರೆ ಸಮಶೀತೋಷ್ಣವಲಯದಲ್ಲಿ ನಿಂತಿರುವ ವೀಕ್ಷಕನ ವಿಷಯದಲ್ಲಿ ಕೂಡ ಇದೇ ಆಗುವುದರಿಂದ ಇದನ್ನು ವಿಶೇಷ ಲಕ್ಷಣವೆಂದು ಭಾವಿಸಲು ಸಧ್ಯವಿಲ್ಲ.

(೨) ಬಹುಪಾಲು ನಕ್ಷತ್ರಗಳು ಪರಿಧ್ರುವದವಾಗಿವೆ; ಅಂದರೆ ಅವು ತಮ್ಮ ಚಲನೆಯ ಸಂಪೂರ್ಣ ಅವಧಿಯಲ್ಲಿ ದಿಗಂತದ ಮೇಲೆ ಇರುತ್ತವೆ, ಹಾಗಾಗಿ ಸದಾ ಗೋಚರಿಸುತ್ತವೆ. ಉಳಿದ ನಕ್ಷತ್ರಗಳು ಸಮಶೀತೋಷ್ಣವಲಯದಲ್ಲಿರುವಂತೆ ಹುಟ್ಟಿ ಮುಳುಗುತ್ತವಾದರೂ, ಅಪರೋಕ್ಷ ವೃತ್ತಗಳಲ್ಲಿ ಹೆಚ್ಚಾಗಿ ಸುತ್ತುತ್ತವೆ.

---

೧. Tilak B.G. : *The Arctic Home in the Vedas,* ಪು. 58–60

(೩) ವರ್ಷವನ್ನು ಮೂರು ವಿಭಾಗ ಮಾಡಲಾಗಿದೆ : (i) ಆ ಸ್ಥಳದ ಅಕ್ಷಾಂಶದ ಪ್ರಕಾರ ೨೪ ಗಂಟೆಗಳಿಗಿಂತ ಹೆಚ್ಚು ಹಾಗೂ ಆರು ತಿಂಗಳಿಗಿಂತ ಕಡಿಮೆ ಅವಧಿಯವರೆಗೆ ಉಳಿಯುವ ಮಾಗಿ ಕಾಲದಲ್ಲಿ ಉಂಟಾಗುವ ಅಯನ ಸಂಕ್ರಾಂತಿಯ ಒಂದು ದೀರ್ಘ ನಿರಂತರ ರಾತ್ರಿ; (ii) ಇದರೊಂದಿಗೆ ಹೊಂದಾಣಿಕೆಯಾಗುವಂಥ, ಬೇಸಗೆಯ ಕಾಲದಲ್ಲಿ ಉಂಟಾಗುವ ಅಯನ ಸಂಕ್ರಾಂತಿಯ ಒಂದು ದೀರ್ಘ ನಿರಂತರ ಹಗಲು; ಮತ್ತು (iii) ೨೪ ಗಂಟೆಗಳ ಅವಧಿಯನ್ನು ಮೀರದ ಹಗಲು ರಾತ್ರಿಗಳಿರುವ ವರ್ಷದ ಉಳಿದ ದಿನಗಳಲ್ಲಿ ಬರುವ ಸಾಮಾನ್ಯ ಹಗಲು ಮತ್ತು ರಾತ್ರಿಗಳು– ದೀರ್ಘ ನಿರಂತರ ರಾತ್ರಿಯಾದ ಮೇಲೆ ಬರುವ ಹಗಲು, ಮೊದಲು ಆ ರಾತ್ರಿಗಿಂತ ಕಡಿಮೆ ಇರುತ್ತದೆ. ಆದರೆ ದೀರ್ಘ ನಿರಂತರ ಹಗಲಾಗುವ ತನಕ ಅದು ಹೆಚ್ಚುತ್ತಾ ಹೋಗುತ್ತದೆ. ಆ ದೀರ್ಘ ಹಗಲಿನ ಕೊನೆಯಲ್ಲಿ ಮೊದಲಿಗೆ ಆ ಹಗಲಿಗಿಂತ ಕಡಿಮೆ ಇರುವ ರಾತ್ರಿ ಇರುತ್ತದೆ; ಆದರೆ ಅದರ ಸರದಿ ಬಂದಾಗ, ವರ್ಷ ಕೊನೆಗೊಳ್ಳುವ ದೀರ್ಘ ನಿರಂತರ ರಾತ್ರಿ ಪ್ರಾರಂಭವಾಗುವವರೆಗೆ ಅದು ಹಗಲಿನ ಮೇಲೆ ಪ್ರಭುತ್ವ ಸಾಧಿಸುತ್ತಾ ಹೋಗುತ್ತದೆ.

(೪) ಆ ದೀರ್ಘ ನಿರಂತರ ರಾತ್ರಿಯ ನಂತರ ಬರುವ ಉಷಃಕಾಲ ಅನೇಕ ದಿನಗಳವರೆಗೆ ಇರುತ್ತದೆ; ಆದರೆ ಆ ಸ್ಥಳದ ಅಕ್ಷಾಂಶದ ಪ್ರಕಾರ ಅದರ ಅವಧಿ ಮತ್ತು ಶೋಭೆ ಉತ್ತರ ಧ್ರುವದಲ್ಲಿರುವುದಕ್ಕಿಂತ ಪ್ರಮಾಣಾನುಸಾರವಾಗಿ ಕಡಿಮೆಯಿರುತ್ತದೆ. ಆ ಉಷಃಕಾಲದ ಹೆಚ್ಚು ಭಾಗ ಉತ್ತರ ಧ್ರುವದ ಕೆಲವು ಕೋನಾಂಶಗಳ ಒಳಗಿರುವ ಪ್ರದೇಶಗಳಲ್ಲಿ ಸಂಚರಿಸುವ ಮುಂಜಾವದ ಬೆಳಕಾಗಿ ಇನ್ನೂ ಕಾಣಸಿಗುತ್ತದೆ. ಸಮಶೀತೋಷ್ಣ ವಲಯದ ಉಷಃಕಾಲಗಳಂತೆ ಸಾಧಾರಣ ಹಗಲು ರಾತ್ರಿಗಳ ನಡುವೆ ಬರುವ ಉಳಿದ ಉಷಃಕಾಲಗಳು ಕೇವಲ ಕೆಲವು ಗಂಟೆಗಳವರೆಗೆ ಮಾತ್ರ ಉಳಿಯುತ್ತವೆ. ಧ್ರುವದಲ್ಲಿರುವಂತೆ, ಸೂರ್ಯ ಮುಳುಗದೆ ಆ ದೀರ್ಘ ಹಗಲಿನಲ್ಲಿ ದಿಗಂತದ ಮೇಲಿರುವಾಗ ವೀಕ್ಷಕನ ಸುತ್ತ ಸುತ್ತುವುದು ಕಾಣುತ್ತದೆ. ಆದರೆ ಪರೋಕ್ಷವಾದ ಮತ್ತು ಸಮತಟ್ಟಾಗಿರುವ ವೃತ್ತಗಳಲ್ಲಿ, ದೀರ್ಘ ರಾತ್ರಿಯಲ್ಲಿ ಸೂರ್ಯ ಸಂಪೂರ್ಣವಾಗಿ ದಿಗಂತದ ಕೆಳಗಿದ್ದರೆ, ಗ್ರಹಣದ ಸಮಯದಲ್ಲಿ ಸೂರ್ಯನ ಸ್ಥಾನ ಅದಲು ಬದಲಾಗುವ ಕ್ರಮದಲ್ಲಿ ವರ್ಷದ ಉಳಿದ ಅವಧಿಯಲ್ಲಿ ಹುಟ್ಟಿ ಮುಳುಗುವ ಸೂರ್ಯ ೨೪ ಗಂಟೆಗಳವರೆಗೂ ದಿಗಂತದ ಮೇಲಿರುತ್ತಾನೆ.

ತಮ್ಮ ನಿಲುವನ್ನು ವಿಶ್ಲೇಷಿಸಿದನಂತರ ಶ್ರೀ ತಿಲಕ್ ಮುಂದಿನಂತೆ ತಮ್ಮ ಅಭಿಪ್ರಾಯವನ್ನು ಉಪಸಂಹರಿಸುತ್ತಾರೆ :

"ಈಗ ನಮ್ಮ ಮುಂದೆ ಎರಡು ಪ್ರತ್ಯೇಕ ಗುಂಪುಗಳು ಅಥವಾ ಧ್ರುವ ಮತ್ತು ಪರಿಧ್ರುವದ ಪ್ರದೇಶಗಳ ವಿಶೇಷ ಲಕ್ಷಣಗಳು ಇವೆ– ಭೂಗೋಳದ ಯಾವ ಭಾಗದಲ್ಲೂ ಈ ಲಕ್ಷಣಗಳು ಕಾಣಸಿಗುವುದಿಲ್ಲ. ಮತ್ತೆ ದಶಲಕ್ಷಾಂತರ ವರ್ಷಗಳ ಹಿಂದೆ ಇದ್ದಂತೆಯೇ ಈಗಲೂ ಭೂಮಿಯ ಧ್ರುವಗಳು ಇವೆ, ಪ್ಲೀಸ್ಟೋಸೀನ್ ಅವಧಿ (Pleistocene Period)ಯಲ್ಲಿ ಧ್ರುವಗಳ ಹವಾಗುಣ ಭಾರೀ ಬದಲಾವಣೆಯಾದರೂ ಮೇಲಿನ ಖಗೋಳಶಾಸ್ತ್ರೀಯ ಲಕ್ಷಣಗಳು ಎಲ್ಲ ಕಾಲಗಳಲ್ಲಿಯೂ ಒಂದೇ ಸಮನಾಗಿರುತ್ತದೆ"

ಆರ್ಕ್‌ಟಿಕ್ ಪ್ರದೇಶದ ಸ್ಥಿತಿಯನ್ನು ಹೀಗೆ ಗಮನಿಸಿದ ಮೇಲೆ ಶ್ರೀ ತಿಲಕ್ ಮುಂದಿನಂತೆ ವಾದಿಸುತ್ತಾರೆ:

"ಮೇಲೆ ಹೇಳಿದ ಲಕ್ಷಣಗಳಲ್ಲಿ ಯಾವುದನ್ನಾದರೂ ವೈದಿಕ ವರ್ಣನೆ ಅಥವಾ ಪರಂಪರೆ ಪ್ರಕಟಪಡಿಸಿದರೆ ಆ ಪರಂಪರೆಯನ್ನು ನಾವು ಮೂಲತಃ ಧ್ರುವಕ್ಕೆ ಅಥವಾ ಪರಿಧ್ರುವಕ್ಕೆ ಸೇರಿದ್ದೆಂದು ಸುಲಭವಾಗಿ ಹೇಳಬಹುದು; ಸ್ವತಃ ಕವಿ ವಾಸ್ತವವಾಗಿ ಅದನ್ನು ನೋಡಿರದೆ ಪ್ರಾಮಾಣಿಕವಾಗಿ ಆ ಸಂಗತಿ

ಪರಂಪರಾನುಗತವಾಗಿ ತಲೆಮಾರಿನಿಂದ ತಲೆಮಾರಿಗೆ ರವಾನಿಸಲ್ಪಟ್ಟಿದೆಯೆಂದು ಗೊತ್ತಾಗುತ್ತದೆ. ಅದೃಷ್ಟವಶಾತ್ ವೈದಿಕ ಸಾಹಿತ್ಯದಲ್ಲಿ ಅಂಥ ಭಾಗಗಳು ಅಥವಾ ಉಲ್ಲೇಖಗಳು ಅನೇಕವಿವೆ; ಅನುಕೂಲಕ್ಕಾಗಿ ಅವುಗಳನ್ನು ಎರಡು ವಿಭಾಗ ಮಾಡಬಹುದು: ಒಂದನೆಯದು ಆ ದೀರ್ಘ ರಾತ್ರಿ ಅಥವಾ ಆ ದೀರ್ಘ ಉಷಃಕಾಲವನ್ನು ನೇರವಾಗಿ ವರ್ಣಿಸುವ ಅಥವಾ ಉಲ್ಲೇಖಿಸುವ ಭಾಗಗಳನ್ನು ಒಳಗೊಂಡಿರುವಂಥದು; ಎರಡನೆಯದು, ಈ ಮೊದಲನೆಯದನ್ನು ದೃಢಪಡಿಸಿ ಅಪ್ರತ್ಯಕ್ಷವಾಗಿ ಬೆಂಬಲಿಸುವ ಪುರಾಣಗಳು ಮತ್ತು ದಂತಕತೆಗಳನ್ನುಳ್ಳ ಭಾಗ.”

ಉತ್ತರ ಧ್ರುವದ ಹತ್ತಿರದಲ್ಲಿ ಅಸ್ತಿತ್ವದಲ್ಲಿರುವಂತಹ ನೈಸರ್ಗಿಕ ಸಂಗತಿ ವೇದಗಳಲ್ಲಿರುವ ಪುರಾಣಗಳು ಮತ್ತು ದಂತಕತೆಗಳು ಹಾಗೂ ಅದಕ್ಕೆ ಅನುರೂಪವಾದ ವರ್ಣನೆಗೆ ಹೊಂದಿಕೊಳ್ಳುವುದನ್ನು ನೋಡಿ ಶ್ರೀ ತಿಲಕ್ ಹರ್ಷಿತರಾಗಿ ವೈದಿಕ ಕವಿಗಳ, ಅಂದರೆ ವೈದಿಕ ಆರ್ಯರ ಮೂಲನೆಲೆ ಆರ್ಕ್‌ಟಿಕ್ ಪ್ರದೇಶವಾಗಿತ್ತೆಂದು ತೀರ್ಮಾನಿಸುತ್ತಾರೆ.

ವಾಸ್ತವವಾಗಿ ಇದು ಬಹಳ ಅನನ್ಯ ಸಿದ್ಧಾಂತ. ಅದರಲ್ಲಿ ಒಂದು ಅಂಶ ಕಡೆಗಣಿಸಲ್ಪಟ್ಟಿರುವಂತೆ ಕಾಣುತ್ತದೆ. ಕುದುರೆ ವೈದಿಕ ಆರ್ಯರ ಪ್ರಿಯವಾದ ಪ್ರಾಣಿ. ಅವರ ಬದುಕು ಮತ್ತು ಧರ್ಮದ ಜೊತೆ ಅದು ಅತ್ಯಂತ ನಿಕಟವಾಗಿ ಬೆರೆತುಹೋಗಿತ್ತು. ವೈದಿಕ ಆರ್ಯರ ಬದುಕಿನಲ್ಲಿ ಕುದುರೆಗೆ ಎಂಥ ಬೆಲೆ ಇತ್ತು ಎಂಬುದನ್ನು ‘ಅಶ್ವಮೇಧ ಯಾಗ’[೧]ದಲ್ಲಿ ಅಶ್ವದ ಜೊತೆ ಸಂಭೋಗಿಸಲು ಆ ಮಹಾರಾಣಿಯರು ಒಬ್ಬರ ಜೊತೆ ಒಬ್ಬರು ಪೈಪೋಟಿ ನಡೆಸುವುದನ್ನು ನೋಡಿದರೆ ಗೊತ್ತಾಗುತ್ತದೆ. ಆರ್ಕ್‌ಟಿಕ್ ಪ್ರದೇಶದಲ್ಲಿ ಅಶ್ವ ಇತ್ತೆ ಎಂಬುದೇ ಪ್ರಶ್ನೆ. ಇದಕ್ಕೆ ನಕಾರಾತ್ಮಕವಾದ ಉತ್ತರ ಸಿಕ್ಕಿದರೆ, ಆರ್ಕ್‌ಟಿಕ್ ನೆಲೆಯ ಸಿದ್ಧಾಂತ ತುಂಬ ಶಿಥಿಲವಾಗುತ್ತದೆ.

೩

ಆರ್ಯ ಜನಾಂಗ ಭಾರತವನ್ನು ದಾಳಿಮಾಡಿ, ಅಲ್ಲಿನ ಮೂಲ ನಿವಾಸಿಗಳನ್ನು ದಾಸ್ಯಕ್ಕೆ ದೂಡಿದರು ಎಂಬುದಕ್ಕೆ ಯಾವ ಆಧಾರವಿದೆ? ಋಗ್ವೇದಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಭಾರತದ ಹೊರಗಿನಿಂದ ಆರ್ಯರು ಬಂದು ಭಾರತವನ್ನು ದಾಳಿಮಾಡಿದರೆಂಬುದಕ್ಕೆ ಅದರಲ್ಲಿ ಒಂದು ಲವಲೇಶವೂ ಆಧಾರವಿಲ್ಲ. ಶ್ರೀ ಪಿ.ಟಿ.ಶ್ರೀನಿವಾಸ ಅಯ್ಯಂಗಾರ್[೨] ಹೇಳುವಂತೆ :

“ ‘ಮಂತ್ರ’ಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ ಅವುಗಳಲ್ಲಿ ಆರ್ಯ, ದಾಸ ಮತ್ತು ದಸ್ಯು ಪದಗಳು ಬರುವುದನ್ನು ನೋಡಿದರೆ ಅವು ಜನಾಂಗಕ್ಕೆ ಸಂಬಂಧಿಸಿರದೆ ಪಂಥಕ್ಕೆ ಸಂಬಂಧಿಸಿವೆ ಎಂದು ತಿಳಿಯುತ್ತದೆ. ಈ ಪದಗಳು ಹೆಚ್ಚಾಗಿ ಋಗ್ವೇದ ಸಂಹಿತೆಯಲ್ಲಿ ಬರುತ್ತವೆ, ಅಲ್ಲಿ ‘ಆರ್ಯ’ ಶಬ್ದ ‘ಮಂತ್ರ’ಗಳಲ್ಲಿ ೩೩ ಸಾರಿ ಬರುತ್ತದೆ. ಈ ಮಂತ್ರಗಳಲ್ಲಿರುವ ಪದಗಳ ಒಟ್ಟು ಸಂಖ್ಯೆ ೧,೫೩,೯೭೨. ಆರ್ಯರೆಂದು ಕರೆದುಕೊಂಡ ಬುಡಕಟ್ಟುಗಳು ಈ ದೇಶವನ್ನು ಗೆದ್ದು ಇಲ್ಲಿನ ಜನರನ್ನು ನಿರ್ನಾಮ ಮಾಡಿದ ದಾಳಿಕಾರರಲ್ಲ ಎನ್ನುವುದಕ್ಕೆ ಆ ಶಬ್ದ ಅಪರೂಪವಾಗಿ ಬರುವುದೇ ಸಾಕ್ಷಿಯಾಗಿದೆ. ಏಕೆಂದರೆ ದಾಳಿಕೋರ ಬುಡಕಟ್ಟು ಸ್ವಾಭಾವಿಕವಾಗಿಯೇ ತನ್ನ ಸಾಧನೆಗಳನ್ನು ಒಂದೇ ಸಮನೆ ಕೊಚ್ಚಿಕೊಳ್ಳುತ್ತದೆ.”

---

೧. ನೋಡಿ, ಮಧ್ವಾಚಾರ್ಯರ ಭಾಷ್ಯವನ್ನುಳ್ಳ ‘ಯಜುರ್ವೇದ’

೨. *Life in Ancient India in the Age of the Mantras,* pp 11–12.

ವೈದಿಕ ಸಾಹಿತ್ಯದ ಪುರಾವೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಆರ್ಯರು ಭಾರತದ ಹೊರಗಿನವರು ಎಂಬುದು ಸುಳ್ಳಾಗುತ್ತದೆ. ಋಗ್ವೇದದಲ್ಲಿ (X, ೭೫,೫) ಬರುವ ಏಳು ನದಿಗಳಿಗೆ('ಸಪ್ತಸಿಂಧುಷು') ಸಂಬಂಧಿಸಿದ ಭಾಷೆ ತುಂಬ ಅರ್ಥಪೂರ್ಣವಾಗಿದೆ. ಪ್ರೊ. ಡಿ.ಎಸ್. ತ್ರಿವೇದಿ[೧] ಹೇಳುವಂತೆ ಈ ನದಿಗಳನ್ನು "ನನ್ನ ಗಂಗಾ, ನನ್ನ ಯಮುನಾ, ನನ್ನ ಸರಸ್ವತಿ" ಎಂಬ ಮಾತುಗಳಲ್ಲಿ ಸಂಬೋಧಿಸಲಾಗಿದೆ. ಇಷ್ಟು ಆತ್ಮೀಯವಾದ ಪ್ರೀತಿಯ ಮಾತುಗಳಲ್ಲಿ ಆ ನದಿಗಳ ಜೊತೆ ದೀರ್ಘಕಾಲದ ಭಾವಸಂಬಂಧವನ್ನು ಬೆಳೆಸಿಕೊಳ್ಳದಿದ್ದರೆ ವಿದೇಶಿಗಳು ನದಿಯನ್ನು ಆ ರೀತಿ ಸಂಬೋಧಿಸುವುದಿಲ್ಲ.

ದಿಗ್ವಿಜಯ ಮತ್ತು ದಾಸ್ಯಕ್ಕೊಳಪಡಿಸಿದ ಪ್ರಶ್ನೆಯನ್ನು ಕುರಿತು ಹೇಳುವುದಾರೆ, ಋಗ್ವೇದದಲ್ಲಿ ನಿಸ್ಸಂದೇಹವಾಗಿ ಉಲ್ಲೇಖಗಳಿವೆ; ದಾಸರು ಮತ್ತು ದಸ್ಯುಗಳು ಆರ್ಯರ ಶತ್ರುಗಳೆಂದು ಅಲ್ಲಿ ವರ್ಣಿಸಲಾಗಿದೆ; ಅವರನ್ನು ಕೊಂದು ನಿರ್ನಾಮ ಮಾಡಿ ಎಂದು ದೇವತೆಗಳಿಗೆ ವೈದಿಕ 'ಋಷಿ'ಗಳು ಪ್ರಾರ್ಥಿಸುವುದನ್ನು ಅನೇಕ ಸೂಕ್ತಗಳಲ್ಲಿ ಕಾಣಬಹುದು. ಆದರೆ ಆರ್ಯರು ಗೆದ್ದರು, ದಾಸ್ಯಕ್ಕೆ ದೂಡಿದರು ಎಂಬುದರ ಪರವಾಗಿ ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಮುನ್ನ ಈ ಮುಂದಿನ ಅಂಶಗಳನ್ನು ಪರಿಗಣಿಸಲೇಬೇಕು.

ಮೊದಲನೆಯದಾಗಿ, ಆರ್ಯರು ಒಂದು ಕಡೆ, ದಾಸರು ಅಥವಾ ದಸ್ಯುಗಳು ಇನ್ನೊಂದು ಕಡೆ, ಈ ಇಬ್ಬರ ನಡುವೆ ನಡೆದ ಯುದ್ಧಗಳ ಉಲ್ಲೇಖಗಳು ಋಗ್ವೇದದಲ್ಲಿ ತೀರಾ ಕಡಿಮೆ. ಋಗ್ವೇದದಲ್ಲಿ ಈ ಶಬ್ದ ಬರುವ ೩೩ ಕಡೆಗಳಲ್ಲಿ ೮ ರಲ್ಲಿ ಮಾತ್ರ ದಾಸರಿಗೆ ವಿರೋಧವಾಗಿ ಬಳಕೆಯಾಗಿದೆ. ಮತ್ತು ೭ ಕಡೆ ದಸ್ಯುಗಳಿಗೆ ವಿರೋಧವಾಗಿ ಬಳಕೆಯಾಗಿದೆ. ಈ ಎರಡು ಬಣಗಳಿಗೆ ನಡೆಯುತ್ತಿದ್ದ ವಿರಳ ಗಲಭೆಗಳನ್ನು ಇದು ತೋರಿಸುತ್ತದೆ. ಅದು ಖಂಡಿತವಾಗಿಯೂ ದಿಗ್ವಿಜಯ ಅಥವಾ ದಾಸ್ಯಕ್ಕೊಳಪಡಿಸುವುದರ ದಾಖಲೆಯಲ್ಲ.

ಆರ್ಯರ ಜೊತೆ ಯಾವುದೇ ಸಂಘರ್ಷದಲ್ಲಿ ಈ ಎರಡು ಬಣಗಳು ತೊಡಗಿದ್ದರೂ, ಗೌರವಾನ್ವಿತ ಶಾಂತಿ ಆಧಾರದ ಮೇಲೆ ಅವು ಪರಸ್ಪರ ಹೊಂದಾಣಿಕೆಗೆ ಬಂದಿರುವ ಎರಡನೆಯ ಅಂಶ ಗೊತ್ತಾಗುತ್ತದೆ. ಸಮಾನ ಶತ್ರುಗಳ ವಿರುದ್ಧ ದಾಸರು ಮತ್ತು ಆರ್ಯರು ಒಗ್ಗಟ್ಟಾಗಿ ನಿಂತಿರುವುದನ್ನು ಋಗ್ವೇದದ ಉಲ್ಲೇಖಗಳಿಂದ ಸಾಧಿಸಬಹುದು. ಋಗ್ವೇದದ ಮುಂದಿನ ಋಕ್ಕುಗಳನ್ನು (ಶ್ಲೋಕಗಳನ್ನು) ಗಮನಿಸಿ:

| | | |
|---|---|---|
| ಋಗ್ವೇದ – | ೬.೩೩.೩ | ೮.೫೧.೯ |
| | ೭.೮೩.೧ | ೧೦.೧೦೨.೩ |

ಸಂಘರ್ಷದ ಪ್ರಮಾಣ ಏನೇ ಇರಲಿ ಅದು ಜನಾಂಗದ ಘರ್ಷಣೆಯಲ್ಲ ಎಂಬ ಮೂರನೆಯ ಅಂಶವನ್ನು ಗಮನಿಸಬೇಕು.

ಅದು ಮತಾಚಾರಗಳ ವ್ಯತ್ಯಾಸಗಳಿಂದ ಹುಟ್ಟಿದ ಘರ್ಷಣೆ. ಇದು ಮತೀಯ ಸಂಘರ್ಷವೇ ಹೊರತು ಜನಾಂಗಿಕ ಘರ್ಷಣೆಯಲ್ಲ ಎಂಬುದಕ್ಕೆ ಋಗ್ವೇದವೇ ಆಧಾರವಾಗಿದೆ. ದಸ್ಯುಗಳನ್ನು ಕುರಿತು ಅದು[೨] ಹೀಗೆ ಹೇಳುತ್ತದೆ.

"ಅವರು ಅವ್ರತರು, ಆರ್ಯರ ಆಚರಣೆಗಳನ್ನು ಮಾಡದವರು (ಋ.ವೇ.,I.೫೧.೮,೯; I.೧೩.೨.೪; IV.೪೧.೨; VI.೧೪.೩); ಅಪವ್ರತ (ಋ.ವೇ.,V.೪೨.೨); ಅನ್ಯವ್ರತ, ವಿಭಿನ್ನ ವ್ರತಾಚಾರಿಗಳೂ

೧. 'The Original Home of the Aryans' by D.S. Trivedi, *Annals of the Bhandarkar Oriental Research Institute,* Vol. XX, P. 62

೨. ಅಯ್ಯಂಗಾರ್, ಅದೇ ಪು. ೧೩.

(ಋ.ವೇ.VIII.೫೯,೧೧; X.೨೨,೮; VIII.೫೯, ೧೧); ಅನಗ್ನಿತ್ರ, ಅಗ್ನಿರಹಿತರು (ಋ.ವೇ.V.೧೮೯.೩) ಆಯಜ್ಯು, ಆಯಜ್ವನ್, ಬಲಿಯಿಲ್ಲದಿರುವುದು (ಋ.ವೇ.I.೧೩೧,೪೪; I.೩೩,೪; VIII.೫೯,೧೧); ಅಬ್ರಂಭ ಪ್ರಾರ್ಥನೆಗಳಿಲ್ಲ (ಬ್ರಾಹ್ಮಣ ಪುರೋಹಿತನಿಲ್ಲದಿರುವಿಕೆ), (ಋ.ವೇ.IV.೧೫.೯; X.೧೦೫,೮); ಅನೃಚಹಃ, ಋಕ್ಕುಗಳಿಲ್ಲದಿರುವಿಕೆ (ಋ.ವೇ.X.೧೦೫,೮); ಬ್ರಹ್ಮದ್ವಿಷ, (ಬ್ರಾಹ್ಮಣರು ಅಥವಾ) ಪ್ರಾರ್ಥನೆಗಳ ವಿದ್ವೇಷಕರು (ಋ.ವೇ.V.೪೨,೯); ಮತ್ತು ಅನಿಂದ್ರ, ಇಂದ್ರನಿಲ್ಲದವರು, ಇಂದ್ರನನ್ನು ದ್ವೇಷಿಸುವವರು (ಋ.ವೇ.I.೧೩೩,೧; V.೨,೩; VII.೧೮,೬; X.೨೭,೬; X.೪೮.೭) 'ಅವರು ಕ್ಷೀರಬಿಂದುಗಳನ್ನು ಚಿಮುಕಿಸುವುದಿಲ್ಲ, (ಅವರು ಕ್ಷೀರಾಭಿಷೇಕ ಮಾಡುವುದಿಲ್ಲ) ಅವರು ಕಡಾಯಿ ಕುದಿಸುವುದಿಲ್ಲ' (ಋ.ವೇ.III.೫೩.೪) ಅವರು ಬ್ರಾಹ್ಮಣನಿಗೆ ದಾನ ಕೊಡುವುದಿಲ್ಲ (ಋ.ವೇ.V.೭,೧೦)."

ಋಗ್ವೇದದ X.೨೨,೮ರ ಕಡೆಗೆ ಗಮನ ಸೆಳೆಯಬೇಕು :

"ನಾವು ದಸ್ಯು ಜನರಿಂದ ಸುತ್ತವರಿಯಲ್ಪಟ್ಟಿದ್ದೇವೆ; ಅವರು ಯಜ್ಞ ಮಾಡುವುದಿಲ್ಲ, ಅವರು ನಾಸ್ತಿಕರು, ಅವರಿಗೆ ತಮ್ಮದೇ ಆದ ಆಚಾರಗಳಿವೆ, ಅವರನ್ನು ಮನುಷ್ಯರೆಂದು ಕರೆಯಲು ಸಾಧ್ಯವಿಲ್ಲ. ಓ! ಶತ್ರುಹಂತಕನೆ, ಅವರನ್ನು ನಿರ್ನಾಮ ಮಾಡು, ದಾಸ ಜನರನ್ನು ಕೊಲ್ಲು."

ಋಗ್ವೇದದ ಈ ಹೇಳಿಕೆಗಳ ಆಧಾರದ ಮೇಲೆ ಹೇಳುವುದಾದರೆ, ಆರ್ಯ ಜನಾಂಗ ಅನಾರ್ಯ ಜನಾಂಗಗಳಾದ ದಾಸರು ಮತ್ತು ದಸ್ಯುಗಳನ್ನು ಸೈನಿಕ ದಿಗ್ವಿಜಯದಿಂದ ಗೆದ್ದರೆಂಬ ವಾದಕ್ಕೆ ಖಂಡಿತಾಗಿಯೂ ಯಾವುದೇ ಆಧಾರವಿಲ್ಲ.

೪

ಇದಿಷ್ಟು ಆರ್ಯರ ಬಗ್ಗೆ, ಆರ್ಯರು ಭಾರತವನ್ನು ದಾಳಿಮಾಡಿ ಅಲ್ಲಿನ ದಾಸರು ಮತ್ತು ದಸ್ಯುಗಳನ್ನು ದಾಸ್ಯಕ್ಕೆ ಒಳಪಡಿಸಿದುದರ ಬಗ್ಗೆ. ಈ ವಿಷಯವನ್ನು ಕುರಿತು ಆರ್ಯರ ಕಡೆಯಿಂದ ಮಾತ್ರ ಈ ಪ್ರಶ್ನೆಯನ್ನು ಇದುವರೆಗೆ ಪರಿಗಣಿಸಲಾಗಿದೆ. ಅದನ್ನು ದಾಸರು ಮತ್ತು ದಸ್ಯುಗಳ ಕಡೆಯಿಂದ ಚರ್ಚಿಸುವುದು ಪ್ರಯೋಜನಕಾರಿಯಾಗಬಹುದು. ದಾಸ ಮತ್ತು ದಸ್ಯುಗಳ ಹೆಸರುಗಳನ್ನು ಯಾವ ಅರ್ಥದಲ್ಲಿ ಬಳಸಲಾಗಿದೆ. ಅವುಗಳನ್ನು ಜನಾಂಗದ ಅರ್ಥದಲ್ಲಿ ಬಳಸಲಾಗಿದೆಯೆ?

ದಾಸ ಮತ್ತು ದಸ್ಯು ಪದಗಳು ಜನಾಂಗದ ಅರ್ಥದಲ್ಲಿ ಬಳಕೆಯಾಗಿವೆ ಎಂದು ಅಭಿಪ್ರಾಯಪಡುವವರು ಈ ಮುಂದಿನ ಸಂದರ್ಭಗಳನ್ನು ಆಧರಿಸುತ್ತಾರೆ : (೧) ಋಗ್ವೇದದಲ್ಲಿ ಬರುವ 'ಮೃಧ್ರವಾಕ್' ಮತ್ತು 'ಅನಾಸ' ಎಂಬ ಪದಗಳು ದಸ್ಯುಗಳ ಗುಣವಾಚಕಗಳಾಗಿ ಬಳಸಲಾಗಿದೆ. (೨) ಋಗ್ವೇದದಲ್ಲಿ ದಾಸರುಗಳ ವರ್ಣನೆ ಮಾಡುತ್ತಾ ಅವರು ಕೃಷ್ಣವರ್ಣದವರೆಂದು ಹೇಳಲಾಗಿದೆ.

'ಮೃಧ್ರವಾಕ್'ಪದ ಋಗ್ವೇದದಲ್ಲಿ ಮುಂದೆ ಸೂಚಿಸಿರುವ ಸ್ಥಳಗಳಲ್ಲಿ ಬರುತ್ತದೆ.

(೧) ಋಗ್ವೇದ, I, ೧೭೪.೨;

(೨) ಋಗ್ವೇದ, V, ೩೨.೮;

(೩) ಋಗ್ವೇದ, VII, ೬.೩;

(೪) ಋಗ್ವೇದ, VII, ೧೮.೩;

'ಮೃಧ್ರವಾಕ್' ಗುಣವಾಚಕದ ಅರ್ಥವೇನು? 'ಮೃಧ್ರವಾಕ್' ಎಂದರೆ ಒರಟಾಗಿ ಮಾತನಾಡುವವನು, ನಯವಿಲ್ಲದ ಭಾಷೆ ಎಂದು ಅರ್ಥ. ನಯವಿಲ್ಲದ ಒರಟು ಭಾಷೆಯನ್ನು ಜನಾಂಗಿಕ ವ್ಯತ್ಯಾಸದ ಪುರಾವೆಯೆಂದು

ತೆಗೆದುಕೊಳ್ಳಲು ಸಾಧ್ಯವೆ? ಇದನ್ನು ಜನಾಂಗ ಭೇದದ ಅರಿವಿಗೆ ಆಧಾರವೆಂದು ನಂಬುವುದು ಬಾಲಿಶವಾಗುತ್ತದೆ.

ಋಗ್ವೇದ, V.೨೯.೧೦ರಲ್ಲಿ 'ಅನಾಸ' ಶಬ್ದ ಬರುತ್ತದೆ. ಈ ಶಬ್ದದ ಅರ್ಥವೇನು? ಅದಕ್ಕೆ ಎರಡು ವ್ಯಾಖ್ಯಾನಗಳಿವೆ. ಒಂದು ಪ್ರೊ. ಮ್ಯಾಕ್ಸ್‌ಮುಲ್ಲರರ ಪ್ರಕಾರ ಅದರ ಅರ್ಥ 'ಮೂಗಿಲ್ಲದವನು', ಅಥವಾ 'ಚಪ್ಪಟೆ ಮೂಗಿನವನು' ಎಂದು; ದಸ್ಯುಗಳಿಗಿಂತ ಆರ್ಯರು ಭಿನ್ನ ಜನಾಂಗವಾಗಿದ್ದರು ಎಂಬ ಅಭಿಪ್ರಾಯಕ್ಕೆ ಬೆಂಬಲವಾಗಿ ಇದನ್ನು ಆಧಾರವಾಗಿ ಭಾವಿಸುತ್ತಾರೆ. ಸಾಯಣಾಚಾರ್ಯ ಅದನ್ನು 'ಬಾಯಿಲ್ಲದವನು', ಅಂದರೆ ಒಳ್ಳೆಯ ಮಾತಿಲ್ಲದವನು ಎಂದರ್ಥ ಎಂದು ವ್ಯಾಖ್ಯಾನಿಸುತ್ತಾನೆ. ಈ ಅರ್ಥದಲ್ಲಿ ಈ ವ್ಯತ್ಯಾಸ ಏಕೆಂದರೆ 'ಅನಾಸ' ಪದವನ್ನು ಸರಿಯಾಗಿ ಓದಿಕೊಳ್ಳದೆ ಹೋದುದರಿಂದ ಉಂಟಾದ ವ್ಯತ್ಯಾಸ. ಸಾಯಣಾಚಾರ್ಯ ಅದನ್ನು 'ಅನ್+ಆಸ' ಎಂದೂ ಓದಿಕೊಂಡರೆ, ಪ್ರೊ. ಮ್ಯಾಕ್ಸ್‌ಮುಲ್ಲರ್ ಅದನ್ನು 'ಅ+ನಾಸ' ಎಂದು ಓದಿಕೊಳ್ಳುತ್ತಾರೆ. ಪ್ರೊ. ಮ್ಯಾಕ್ಸ್‌ಮುಲ್ಲರ್ ಓದಿನಲ್ಲಿ ಅದರ ಅರ್ಥ ಮೂಗಿಲ್ಲದವನು ಎಂದು. ಈ ಎರಡು ಅರ್ಥಗಳಲ್ಲಿ ಯಾವುದು ಸರಿ ಎಂಬುದೇ ಪ್ರಶ್ನೆ. ಸಾಯಣನ ಓದು ತಪ್ಪು ಎಂದು ಹೇಳಲು ಆಧಾರವಿಲ್ಲ. ಬದಲಿಗೆ ಅದು ಸರಿಯೆಂದು ಸೂಚಿಸಲು ಎಲ್ಲ ಕಾರಣಗಳೂ ಇವೆ. ಮೊದಲನೆಯದಾಗಿ, ಅದು ಶಬ್ದದ ಅರ್ಥವನ್ನು ಅನರ್ಥಗೊಳಿಸುವುದಿಲ್ಲ. ಎರಡನೆಯದಾಗಿ, ಆ ಶಬ್ದಕ್ಕೆ ಸಂಪೂರ್ಣವಾಗಿ ಹೊಸ ಅರ್ಥ ಕೊಡುವ ರೀತಿಯಲ್ಲಿ ಅದನ್ನೇಕೆ ಓದಬಾರದು ಎಂಬುದಕ್ಕೆ ಕಾರಣ ಕೊಟ್ಟಿಲ್ಲ.

ಅದನ್ನು 'ಮೃಧ್ರವಾಕ್' ಶಬ್ದದ ಸಮಾನಾರ್ಥಕವೆಂದು ಓದಿಕೊಳ್ಳುವುದೇ ಸರಿ. ಆದ್ದರಿಂದ ದಸ್ಯುಗಳು ಭಿನ್ನ ಜನಾಂಗಕ್ಕೆ ಸೇರಿದ್ದರೆಂದು ತೀರ್ಮಾನಿಸುವ ಬೆಂಬಲಕ್ಕೆ ಯಾವುದೇ ದಾಖಲೆಯಿಲ್ಲ.

ದಾಸರ ಬಗ್ಗೆ ಹೇಳುವುದಾದರೆ, ಋಗ್ವೇದದ VI.೪೭.೨೧ರಲ್ಲಿ ದಾಸರನ್ನು 'ಕೃಷ್ಣಯೋನಿ'ಯವರೆಂದು ವರ್ಣಿಸಿರುವುದು ನಿಜ, ಆದರೆ ಈ ಊಹೆಯನ್ನು ಒಪ್ಪಿಕೊಳ್ಳುವ ಮುನ್ನ ಅನೇಕ ಅಂಶಗಳನ್ನು ಪರಿಗಣಿಸಬೇಕಾಗಿದೆ. ಮೊದಲನೆಯದಾಗಿ, ಋಗ್ವೇದದಲ್ಲಿ ದಾಸರನ್ನು 'ಕೃಷ್ಣಯೋನಿ'ಯವರೆಂದು ಕರೆದಿರುವುದು ಇದೊಂದೇ ಕಡೆ. ಎರಡನೆಯದಾಗಿ, ಈ ಮಾತನ್ನು ಅಕ್ಷರಶಃ ಅಥವಾ ಆಲಂಕಾರಿಕವಾದ ಅರ್ಥದಲ್ಲಿ ಬಳಸಲಾಗಿದೆಯೆ ಎಂಬ ಬಗ್ಗೆ ಖಚಿತತೆಯಿಲ್ಲ. ಮೂರನೆಯದಾಗಿ, ಅದು ವಸ್ತುಸ್ಥಿತಿಯ ಹೇಳಿಕೆಯ ಅಥವಾ ಬೈಗುಳದ ಮಾತೇ ಎಂಬುದು ನಮಗೆ ತಿಳಿಯದು. ಈ ಅಂಶಗಳನ್ನು ಸ್ಪಷ್ಟಪಡಿಸದ ಹೊರತು ದಾಸರನ್ನು 'ಕೃಷ್ಣಯೋನಿ'ಯವರೆಂದು, ಆದ್ದರಿಂದ ಅವರು ಕಪ್ಪು ಜನಾಂಗದವರೆಂದು ಹೇಳುವ ಅಭಿಪ್ರಾಯವನ್ನು ಒಪ್ಪಲು ಸಾಧ್ಯವಿಲ್ಲ.

ಈ ಸಂಬಂಧವಾಗಿ ಋಗ್ವೇದದ ಮುಂದಿನ ಮಂತ್ರಗಳ ಬಗ್ಗೆ ಗಮನ ಸೆಳೆಯಬಹುದು :

(೧) ಋಗ್ವೇದ, VI.೨೨–೧೦.– "ಎಲೈ, ವಜ್ರಿಯೆ, ನೀನು ನಿನ್ನ ಶಕ್ತಿಯಿಂದ ದಾಸರನ್ನು ಆರ್ಯರನ್ನಾಗಿ ಮಾಡಿರುವೆ, ಕೆಟ್ಟವರನ್ನು ಒಳ್ಳೆಯವರನ್ನಾಗಿ ಮಾಡಿರುವೆ. ನಮಗೆ ಆ ಶಕ್ತಿಯನ್ನು ದಯಪಾಲಿಸು, ಅದರಿಂದ ನಾವು ನಮ್ಮ ಶತ್ರುಗಳನ್ನು ಗೆಲ್ಲುವಂತೆ ಅನುಗ್ರಹಿಸು."

(೨) ಋಗ್ವೇದ, X.೪೯.೩ (ಇಂದ್ರ ಹೇಳುತ್ತಾನೆ)– "ನಾನು ದಸ್ಯುಗಳಿಗೆ ಆರ್ಯ ಹೆಸರು ಇಲ್ಲದಂತೆ ಮಾಡಿದ್ದೇನೆ."

(೩) ಋಗ್ವೇದ, I.೧೫೧.೮– "ಎಲೈ ಇಂದ್ರನೆ, ಯಾರು ಆರ್ಯ ಯಾರು ದಸ್ಯು ಎಂಬುದನ್ನು ಪತ್ತೆಮಾಡಿ ಅವರನ್ನು ಪ್ರತ್ಯೇಕಿಸು." ಈ ಮಂತ್ರಗಳು ಏನನ್ನು ಸೂಚಿಸುತ್ತವೆ? ಒಂದು ಕಡೆ ಆರ್ಯರು, ಇನ್ನೊಂದು ಕಡೆ ದಾಸರು ಮತ್ತು ದಸ್ಯುಗಳ ನಡುವಣ ಭಿನ್ನತೆಯನ್ನು ಸೂಚಿಸುತ್ತವೆ,

ಅದು ವರ್ಣ ಮತ್ತು, ಅಂಗರಚನಾಶಾಸ್ತ್ರದ ಪ್ರಕಾರ ಜನಾಂಗದ ಭಿನ್ನತೆಯನ್ನು ಸೂಚಿಸುವುದಿಲ್ಲ. ಆದ್ದರಿಂದಲೇ ದಾಸ ಅಥವಾ ದಸ್ಯು ಆರ್ಯನಾಗಬಹುದಿತ್ತು. ಆದ್ದರಿಂದಲೇ ಅವರನ್ನು ಆರ್ಯರಿಂದ ಪ್ರತ್ಯೇಕಿಸುವ ಕೆಲಸವನ್ನು ಇಂದ್ರನಿಗೆ ವಹಿಸಲಾಗಿದೆ.

೫

ಪಾಶ್ಚಾತ್ಯ ಲೇಖಕರು ಹುಟ್ಟುಹಾಕಿರುವ ಈ ಆರ್ಯ ಜನಾಂಗದ ಸಿದ್ಧಾಂತ ಪ್ರತಿಯೊಂದು ಅಂಶದಲ್ಲಿಯೂ ನೆಲಕ್ಕುರುಳುತ್ತದೆ ಎಂಬುದನ್ನು ಮತ್ತೆ ಹೇಳುವ ಅಗತ್ಯವಿಲ್ಲ. ಇದು ಕೊಂಚಮಟ್ಟಿಗೆ ಆಶ್ಚರ್ಯಕರವಾದುದು, ಏಕೆಂದರೆ ಪಾಶ್ಚಾತ್ಯ ವಿದ್ವತ್ತು ಖಚಿತ ಸಂಶೋಧನೆ ಮತ್ತು ಸೂಕ್ಷ್ಮ ವಿಶ್ಲೇಷಣೆಗಳಿಗೆ ಸಾಮಾನ್ಯವಾಗಿ ಹೆಸರಾಗಿದೆ. ಈ ಸಿದ್ಧಾಂತ ಏತಕ್ಕೆ ಉರುಳಿತು? ಅದು ಏಕೆ ಉರುಳಿತು ಎಂಬ ಕಾರಣಗಳನ್ನು ತಿಳಿಯುವುದು ಮುಖ್ಯವಾಗಿದೆ. ಈ ಸಿದ್ಧಾಂತವನ್ನು ಪರಿಶೀಲಿಸಲು ಪ್ರಯತ್ನಿಸುವ ಯಾರಿಗಾದರೂ ಅದು ಎರಡು ಬಗೆಯ ಸಾಂಕ್ರಾಮಿಕತೆಯಿಂದ ಬಳಲುತ್ತಿದೆ ಎಂಬುದು ಗೊತ್ತಾಗುತ್ತದೆ. ಮೊದಲನೆಯದಾಗಿ, ಈ ಸಿದ್ಧಾಂತ ಊಹೆಗಳು ಮತ್ತು ಕಲ್ಪನೆಗಳ ಮೇಲೆ ಆಧಾರಿತವಾಗಿವೆ. ಎರಡನೆಯದಾಗಿ, ಈ ಸಿದ್ಧಾಂತ ವೈಜ್ಞಾನಿಕ ಶೋಧನೆಗೆ ವಿರುದ್ಧವಾಗಿದೆ. ಅದು ವಸ್ತುಸ್ಥಿತಿಯ ಮೇಲೆ ಬೆಳೆಯಲು ಅವಕಾಶವಾಗಿಲ್ಲ. ಬದಲಿಗೆ ಈ ಸಿದ್ಧಾಂತ ಪೂರ್ವಗ್ರಹಪೀಡಿತವಾಗಿದೆ ಹಾಗೂ ಅದನ್ನು ಸಾಧಿಸಲು ಸಂಗತಿಗಳನ್ನು ಆರಿಸಿಕೊಳ್ಳಲಾಗಿದೆ.

ಆರ್ಯ ಜನಾಂಗದ ಸಿದ್ಧಾಂತ ಕೇವಲ ಊಹೆಯಲ್ಲದೆ ಬೇರೇನೂ ಅಲ್ಲ. ೧೮೩೫ರಲ್ಲಿ ಪ್ರಕಟವಾದ ಡಾ. ಬಾಪ್ ಅವರ ಯುಗ ನಿರ್ಮಾಪಕ ಕೃತಿ Comparative Grammar ('ತೌಲನಿಕ ವ್ಯಾಕರಣ')ಯಲ್ಲಿ ಪ್ರತಿಪಾದಿಸಿದ ಭಾಷಾ ವೈಜ್ಞಾನಿಕ ಹೇಳಿಕೆಯ ಮೇಲೆ ಅದು ಆಧಾರಿತವಾಗಿದೆ. ಈ ಪುಸ್ತಕದಲ್ಲಿ ಯೂರೋಪಿನ ಬಹುಪಾಲು ಭಾಷೆಗಳು ಮತ್ತು ಏಷ್ಯಾದ ಕೆಲವು ಭಾಷೆಗಳನ್ನು ಒಂದು ಸಮಾನ ಪಿತ್ರಾರ್ಜಿತ ಭಾಷೆಗೆ ಸೇರಿಸಬೇಕೆಂದು ಡಾ. ಬಾಪ್ ತೋರಿಸಿದ್ದಾರೆ. ಬಾಪ್ ಹೇಳಿರುವ ಐರೋಪ್ಯ ಭಾಷೆಗಳು ಮತ್ತು ಏಷ್ಯಾದ ಭಾಷೆಗಳು ಇಂಡೋ–ಜರ್ಮಾನಿಕ್‌ಗೆ ಅನ್ವಯವಾಗುತ್ತವೆ. ಸಾಮೂಹಿಕವಾಗಿ ಅವುಗಳನ್ನು ಆರ್ಯ ಭಾಷೆಗಳೆಂದು ಸ್ಥೂಲವಾಗಿ ಕರೆಯಲಾಗಿದೆ. ಏಕೆಂದರೆ ವೈದಿಕ ಭಾಷೆ ಆರ್ಯರಿಗೆ ಸಂಬಂಧಿಸಿದೆ ಮತ್ತು ಇಂಡೋ–ಜರ್ಮಾನಿಕ್ ಎಂಬ ಅದೇ ಕುಟುಂಬಕ್ಕೆ ಕೂಡ ಸೇರುತ್ತದೆ.

ಈ ಊಹೆಯಿಂದ ಎರಡು ತರ್ಕ ಹುಟ್ಟುತ್ತವೆ : (೧) ಜನಾಂಗದ ಐಕ್ಯತೆ, ಮತ್ತು (೨) ಆ ಜನಾಂಗವೇ ಆರ್ಯ ಜನಾಂಗ. ಈ ಭಾಷೆಗಳು ಸಮಾನ ಪಿತ್ರಾರ್ಜಿತ ನುಡಿಯಿಂದ ಹುಟ್ಟಿದ್ದರೆ ಆಗ ಈ ಮಾತೃಭಾಷೆಯುಳ್ಳ ಒಂದು ಜನಾಂಗ ಅಸ್ತಿತ್ವದಲ್ಲಿರಲೇಬೇಕಾಗಿತ್ತು. ಏಕೆಂದರೆ ಆ ಮಾತೃಭಾಷೆಯೇ ಆರ್ಯ ಭಾಷೆ, ಅದನ್ನು ಮಾತನಾಡಿದ ಜನರೇ ಆರ್ಯ ಜನಾಂಗ ಎಂಬ ವಾದವಿದೆ. ಒಂದು ಪ್ರತ್ಯೇಕ ವಿಶಿಷ್ಟ ಆರ್ಯ ಜನಾಂಗದ ಅಸ್ತಿತ್ವ ಆದುದರಿಂದ ಅದು ಒಂದು ಕೇವಲ ಊಹೆ. ಈ ಊಹೆಯಿಂದ ಇನ್ನೊಂದು ಊಹೆ ಬರುತ್ತದೆ. ಅದೇನೆಂದರೆ ಒಂದು ಸಮಾನ ಮೂಲನೆಲೆ, ಸಮಾನ ನೆಲೆಯ ನಿಕಟ ಸಂಪರ್ಕವಿಲ್ಲದ ಹೊರತು ಒಂದು ಭಾಷಾ ಸಮುದಾಯ ಇರಲು ಸಾಧ್ಯವಿಲ್ಲ ಎಂಬ ಇನ್ನೊಂದು ಊಹೆ ಬರುತ್ತದೆ. ಆದ್ದರಿಂದ ಸಮಾನ ಮೂಲ ನೆಲೆ ಒಂದು ಊಹೆಯಿಂದ ಬಂದ ಇನ್ನೊಂದು ಊಹೆಯೂ ಆಗಿದೆ.

ದಾಳಿಯ ಸಿದ್ಧಾಂತ ಕಟ್ಟುಕತೆಯಾಗಿದೆ. ಈ ಕಟ್ಟುಕತೆ ಅಗತ್ಯವಾಗಿದೆ, ಏಕೆಂದರೆ ಇದು ಪಾಶ್ಚಾತ್ಯ

ಸಿದ್ಧಾಂತದ ಅಕಾರಣ ಊಹೆಯ ಮೇಲೆ ನಿಂತಿದೆ. ಮೂಲ ಆರ್ಯ ಜನಾಂಗದ ಆಧುನಿಕ ಪ್ರತಿನಿಧಿಗಳಾದ ಇಂಡೋ–ಜರ್ಮಾನಿಕ್ ಜನರೇ ಅತ್ಯಂತ ಪರಿಶುದ್ಧರಾದವರು ಎಂಬುದೇ ಆ ಕಲ್ಪನೆ. ಅದರ ಪ್ರಥಮ ನೆಲೆ ಎಲ್ಲೋ ಯೂರೋಪಿನಲ್ಲಿದೆ ಎಂದು ಭಾವಿಸಲಾಗಿದೆ. ಈ ಊಹೆಗಳು ಈ ಪ್ರಶ್ನೆಯನ್ನು ಎತ್ತುತ್ತವೆ: ಆರ್ಯರ ಭಾಷೆ ಭಾರತಕ್ಕೆ ಹೇಗೆ ಬಂತು? ಆರ್ಯರು ಭಾರತಕ್ಕೆ ಹೊರಗಿನಿಂದ ಬಂದಿರಬೇಕು ಎಂಬ ಊಹೆಯಿಂದ ಮಾತ್ರ ಈ ಪ್ರಶ್ನೆಯನ್ನು ಉತ್ತರಿಸಬಹುದು. ಆದ್ದರಿಂದಲೇ ಈ ದಾಳಿಯ ಸಿದ್ಧಾಂತವನ್ನು ಕಟ್ಟುವ ಅಗತ್ಯವಿದೆ. ಮೂರನೆಯ ಊಹೆಯೆಂದರೆ, ಆರ್ಯರು ಶ್ರೇಷ್ಠ ಜನಾಂಗ ಎಂಬುದು. ಆರ್ಯರು ಐರೋಪ್ಯ ಜನಾಂಗದವರು ಮತ್ತು ಐರೋಪ್ಯ ಜನಾಂಗ ಏಷ್ಯಾದ ಜನಾಂಗಗಳಿಗಿಂತ ಶ್ರೇಷ್ಠರಾದವರು ಎಂಬ ಕಲ್ಪನೆಯ ಮೇಲೆ ಈ ಸಿದ್ಧಾಂತದ ಹುಟ್ಟು ಅಡಗಿದೆ. ಅದರ ಶ್ರೇಷ್ಠತೆಯನ್ನು ಊಹಿಸಿಕೊಂಡ ಮೇಲೆ ಅದರ ಶ್ರೇಷ್ಠತೆಯ ಅಂಶವನ್ನು ಸ್ಥಾಪಿಸುವುದೇ ಮುಂದಿನ ತಾರ್ಕಿಕ ಹಂತ. ಸ್ಥಳೀಯ ಜನಾಂಗಗಳ ಮೇಲೆ ದಾಳಿ ಮಾಡಿ ಅವರನ್ನು ಆರ್ಯ ಜನಾಂಗ ಗೆದ್ದಿತು ಎಂಬುವುದರಿಂದ ಆರ್ಯ ಜನಾಂಗದ ಶ್ರೇಷ್ಠತೆಯನ್ನು ಬೇರೆಲ್ಲದಕ್ಕಿಂತ ಚೆನ್ನಾಗಿ ಸಾಧಿಸಬಹುದು ಎಂದು ತಿಳಿದುಕೊಂಡ ಪಾಶ್ಚಾತ್ಯ ಲೇಖಕರು, ಆರ್ಯರು ಭಾರತದ ಮೇಲೆ ದಾಳಿ ಮಾಡಿದರು ಮತ್ತು ದಾಸರು ಮತ್ತು ದಸ್ಯುಗಳನ್ನು ತಮ್ಮ ಅಧೀನಕ್ಕೆ ಒಳಪಡಿಸಿದರು ಎಂಬ ಕಟ್ಟುಕತೆಯನ್ನು ಸೃಷ್ಟಿಸಲು ಮುಂದಾದರು.

ನಾಲ್ಕನೆಯ ಊಹೆಯೆಂದರೆ, ಐರೋಪ್ಯ ಜನಾಂಗಗಳು ಬೆಳ್ಳಗಿದ್ದವು[೧] ಮತ್ತು ಅವು ಕಪ್ಪು ಜನಾಂಗಗಳ ವಿರುದ್ಧ ವರ್ಣ ತಾರತಮ್ಯವನ್ನು ಇಟ್ಟುಕೊಂಡಿದ್ದವು ಎಂಬುದು. ಆರ್ಯರು ಐರೋಪ್ಯ ಜನಾಂಗವಾಗಿದ್ದರಿಂದ ಅವರಿಗೆ ವರ್ಣ ತಾರತಮ್ಯ ಇತ್ತೆಯ ಭಾವಿಸಲಾಗಿದೆ. ಭಾರತಕ್ಕೆ ಬಂದ ಆರ್ಯರಲ್ಲಿ ವರ್ಣ ತಾರತಮ್ಯ ಇತ್ತು ಎಂಬುದಕ್ಕೆ ಆಧಾರ ಹುಡುಕಲು ಈ ಸಿದ್ಧಾಂತ ಸಾಗುತ್ತದೆ. ಹಿಂದೂ ಆರ್ಯರು ಭಾರತಕ್ಕೆ ಬಂದ ಮೇಲೆ ಸ್ಥಾಪಿಸಿದ ಸಂಸ್ಥೆಯಾದ ಚಾತುರ್ವರ್ಣ್ಯದಲ್ಲಿ ಅದು ಕಾಣುತ್ತದೆ; ಈ ವಿದ್ವಾಂಸರ ಪ್ರಕಾರ ಅದು ವರ್ಣದ ಮೇಲೆ ನಿಂತಿದೆ; ವರ್ಣ ಎಂದರೆ ಬಣ್ಣ ಎಂದು ಅವರು ಅರ್ಥೈಸುತ್ತಾರೆ.

ಈ ಊಹೆಗಳಲ್ಲಿ ಯಾವುದೂ ಸತ್ಯ ಸಂಗತಿಗಳ ಮೇಲೆ ಆಧಾರಿತವಾಗಿಲ್ಲ. ಆರ್ಯ ಜನಾಂಗದ ವಿಷಯವನ್ನೇ ತೆಗೆದುಕೊಳ್ಳಿ, ಶರೀರಶಾಸ್ತ್ರದ ದೃಷ್ಟಿಯಲ್ಲಿ ಆರ್ಯ ಜನಾಂಗ ಎನ್ನುವುದು ಬೇರೆ, ಭಾಷಾಶಾಸ್ತ್ರದ ದೃಷ್ಟಿಯಲ್ಲಿ ಆರ್ಯ ಜನಾಂಗ ಎನ್ನುವುದೇ ಬೇರೆ ಹಾಗೂ ಆರ್ಯ ಜನಾಂಗ ಎಂಬುದು ಇದ್ದರೆ, ಶರೀರಶಾಸ್ತ್ರದ ದೃಷ್ಟಿಯಿಂದ ಅದಕ್ಕೊಂದು ನೆಲೆಯಿರಬಹುದು. ಹಾಗೆಯೇ ಭಾಷಾಶಾಸ್ತ್ರದ ದೃಷ್ಟಿಯಿಂದ ಅದಕ್ಕೆ ಬೇರೆಯೇ ನೆಲೆಯಿದೆ ಎಂಬ ಸಾಧ್ಯತೆಯನ್ನು ಈ ಸಿದ್ಧಾಂತ ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ; ಆರ್ಯ ಜನಾಂಗದ ಸಿದ್ಧಾಂತ ಒಂದು ಸಮಾನ ಭಾಷೆಯ ಊಹೆಯ ಮೇಲೆ ನಿಂತಿದೆ; ಸಮಾನ ಎಂದು ಏಕೆ ಭಾವಿಸಲಾಗಿದೆ ಎಂದರೆ ಅದಕ್ಕೆ ವಾಕ್ಯರಚನೀಯ ಸಂಬಂಧವಿದೆ. ಆರ್ಯರು ಭಾರತದಿಂದ ಹೊರಗಿನಿಂದ ಬಂದರು, ಭಾರತವನ್ನು ದಾಳಿ ಮಾಡಿದರು ಎಂಬ ಹೇಳಿಕೆಯನ್ನು ಸಾಬೀತುಗೊಳಿಸಿಲ್ಲ ಹಾಗೂ ದಾಸರು ಮತ್ತು ದಸ್ಯುಗಳು ಭಾರತದ ಮೂಲ ನಿವಾಸಿಗಳು[೨] ಎಂಬ ವಾದ ಸುಳ್ಳೆಂದು ತೋರಿಸಲಾಯಿತು.

ಆರ್ಯರ ಆಂತರಿಕ ವರ್ಣ ತಾರತಮ್ಯ ಪ್ರತಿಫಲನವೇ 'ಚಾತುರ್ವರ್ಣ್ಯ' ಸಂಸ್ಥೆ ಎಂದು ಮತ್ತೆ

---

೧. ದಾಸರು ಮತ್ತು ದಸ್ಯುಗಳು ಆಗಿದ್ದವರು ಯಾರು ಎಂಬ ಚರ್ಚೆಗೆ ೬ನೇ ಅಧ್ಯಾಯವನ್ನು ನೋಡಿ.

೨. ತಮ್ಮ ಹುಟ್ಟಿನಿಂದ ಐರೋಪ್ಯ ಜನಾಂಗಗಳು ಬಿಳಿಯರೆ ಅಥವಾ ಕರಿಯರೆ ಎಂಬ ಚರ್ಚೆಗೆ ಮುಂಚೆ ಪು.೭೬ರಲ್ಲಿನ ಪ್ರೊ. ರಿಪ್ಲೆಯವರ ಅಭಿಪ್ರಾಯಗಳನ್ನು ನೋಡಿ.

ಹೇಳುವುದು ನಿಜವಾಗಿಯೂ ವಿಪರೀತವಾಗುತ್ತದೆ. ವರ್ಗಭೇದದ ಹುಟ್ಟಿಗೆ ವರ್ಣವೇ ಕಾರಣ ಎನ್ನುವುದಾದರೆ, 'ಚಾತುರ್ವರ್ಣ್ಯದಲ್ಲಿರುವ ಭಿನ್ನವರ್ಗವನ್ನು ಪರಿಗಣಿಸಲು ನಾಲ್ಕು ಭಿನ್ನ ವರ್ಣಗಳು ಇರಲೇಬೇಕು. ಆ ನಾಲ್ಕು ವರ್ಣಗಳು ಯಾವುವು ಮತ್ತು ಆ ನಾಲ್ಕು ವರ್ಣ ಜನಾಂಗಗಳು ಸೇರಿ 'ಚಾತುರ್ವರ್ಣ್ಯ' ಹೇಗಾಯಿತು ಎನ್ನುವುದನ್ನು ಯಾರೂ ವಿವರಿಸಿಲ್ಲ. ಈಗಿರುವಂತೆ, ಒಂದು, ಬಿಳಿಯರೆಂದು ಭಾವಿಸಲಾಗಿರುವ ಆರ್ಯರು ಮತ್ತು ಇನ್ನೊಂದು, ಕರಿಯರೆಂದು ಭಾವಿಸಿರುವ ದಾಸರು ಎಂಬ ಈ ಎರಡು ಜನಾಂಗಗಳಿಗೆ ಮಾತ್ರ ಇರುವ ವಿರೋಧದೊಂದಿಗೆ ಈ ಸಿದ್ಧಾಂತ ಪ್ರಾರಂಭವಾಗುತ್ತದೆ.

ಆರ್ಯ ಜನಾಂಗ ಸಿದ್ಧಾಂತದ ಪ್ರವರ್ತಕರು ತಮ್ಮ ವಾದ ಮಂಡಿಸುವ ಉತ್ಸಾಹದಲ್ಲಿ ತಾವು ಎಂಥ ಅರ್ಥಹೀನತೆಗಳಿಗೆ ಪಕ್ಕಾಗುತ್ತೇವೆ ಎಂಬುದನ್ನು ಗಮನಿಸುವಷ್ಟೂ ಸಹನೆಯಿಲ್ಲದವರಾಗಿದ್ದಾರೆ. ಅವರು ತಾವು ಏನನ್ನು ಸಾಬೀತು ಮಾಡಲು ಹೊರಟಿರುವರೋ ಅದನ್ನು ಸಾಬೀತು ಮಾಡಲು ತಮಗೆ ಸರಿಯೆಂದು ಕಂಡ ಆಧಾರಗಳನ್ನು ವೇದಗಳಿಂದ ಹೆಕ್ಕಿ ತೆಗೆಯಲು ಅವರು ಹಿಂಜರಿಯುವುದಿಲ್ಲ.

'ಊಹೆಯೇ ವಿಜ್ಞಾನದ ಉಪ್ಪು' ಎಂದು ಪ್ರೊ. ಮೈಕೆಲ್ ಫಾಸ್ಟರ್ ಒಂದೆಡೆ ಹೇಳಿದ್ದಾರೆ. ಊಹೆಯಿಲ್ಲದಿದ್ದರೆ ಫಲಕಾರಿಯಾದ ಶೋಧನೆ ಸಾಧ್ಯವಿಲ್ಲ. ಆದರೆ ಯಾವುದೇ ಊಹೆಯನ್ನು ಸಾಧಿಸುವ ಆಸೆ ಪ್ರಬಲವಾದರೆ ಆ ಊಹೆಯೇ ವಿಜ್ಞಾನಕ್ಕೆ ವಿಷವಾಗುತ್ತದೆ ಎಂಬುದು ಅಷ್ಟೇ ಸತ್ಯ. ಊಹೆ ವಿಜ್ಞಾನದ ವಿಷವಾಗಬಲ್ಲದು ಎಂಬುದಕ್ಕೆ ಪಾಶ್ಚಾತ್ಯ ವಿದ್ವಾಂಸರ ಆರ್ಯ ಜನಾಂಗ ಸಿದ್ಧಾಂತ ಒಂದು ಒಳ್ಳೆಯ ಉದಾಹರಣೆಯಾಗುತ್ತದೆ.

ಈ ಆರ್ಯ ಜನಾಂಗ ಸಿದ್ಧಾಂತ ಎಷ್ಟು ಅರ್ಥಹೀನವಾಗಿದೆಯೆಂದರೆ ಅದು ಬಹಳ ಹಿಂದೆಯೇ ಸಾಯಬೇಕಾಗಿತ್ತು. ಆದರೆ ಸಾಯುವುದಕ್ಕೆ ಬದಲು ಈ ಸಿದ್ಧಾಂತ ಜನರ ಮೇಲೆ ಗಣನೀಯ ಹಿಡಿತ ಸಾಧಿಸಿದೆ. ಈ ಸಂಗತಿಯ ಪರಿಶೀಲನೆಗಾಗಿ ಎರಡು ವಿವರಣೆಗಳಿವೆ. ಒಂದನೆಯದು, ಬ್ರಾಹ್ಮಣ ವಿದ್ವಾಂಸರು ಈ ಸಿದ್ಧಾಂತಕ್ಕೆ ಕೊಡುವ ಬೆಂಬಲ. ಇದು ಬಹಳ ವಿಚಿತ್ರವಾದ ಸಂಗತಿ. ಏಷ್ಯಾದ ಜನಾಂಗಗಳಿಗಿಂತ ಐರೋಪ್ಯ ಜನಾಂಗಗಳು ಶ್ರೇಷ್ಠ ಎಂಬುದನ್ನು ಕಂಠೋಕ್ತವಾಗಿ ಒಪ್ಪಿಕೊಂಡಿರುವ ಆರ್ಯ ಸಿದ್ಧಾಂತದ ಬಗೆಗೆ ಹಿಂದೂಗಳಾದ ಅವರು ಸಾಧಾರಣವಾಗಿ ತಮ್ಮ ಬೇಸರವನ್ನು ವ್ಯಕ್ತಪಡಿಸಬೇಕಾಗಿತ್ತು. ಆದರೆ ಅದರ ಬಗ್ಗೆ ಬ್ರಾಹ್ಮಣ ವಿದ್ವಾಂಸನಿಗೆ ಅಂಥ ಹಿಂಜರಿಕೆಯೇನೂ ಇರದೆ ಅದನ್ನು ಮನಃಪೂರ್ವಕವಾಗಿ ಒಪ್ಪುತ್ತಾನೆ. ಇದಕ್ಕೆ ಕಾರಣಗಳು ಸ್ಪಷ್ಟವಾಗಿವೆ. ದ್ವಿರಾಷ್ಟ್ರ ಸಿದ್ಧಾಂತದಲ್ಲಿ ಬ್ರಾಹ್ಮಣನಿಗೆ ನಂಬಿಕೆ. ತಾನು ಆರ್ಯ ಜನಾಂಗದ ಪ್ರತಿನಿಧಿ ಎಂದೂ ಉಳಿದ ಹಿಂದೂಗಳೆಲ್ಲ ಅನಾರ್ಯ ಸಂಜಾತರು ಎಂದೂ ಅವನು ಹೇಳುತ್ತಾನೆ. ಐರೋಪ್ಯ ಜನಾಂಗಗಳ ಜೊತೆ ತನ್ನ ರಕ್ತಸಂಬಂಧವನ್ನು ಸ್ಥಾಪಿಸಿ ಅವರ ಗರ್ವ ಮತ್ತು ಶ್ರೇಷ್ಠತೆಯನ್ನು ಹಂಚಿಕೊಳ್ಳಲು ಈ ಸಿದ್ಧಾಂತ ಅವನಿಗೆ ನೆರವಾಗುತ್ತದೆ. ಆರ್ಯ ದಾಳಿಕಾರ ಮತ್ತು ಅನಾರ್ಯ ಸ್ಥಳೀಯ ಜನಾಂಗಗಳನ್ನು ಗೆದ್ದ ವಿಜಯಿ ಎಂಬ ಆ ಸಿದ್ಧಾಂತದ ಭಾಗವನ್ನು ಅವನು ವಿಶೇಷವಾಗಿ ಇಷ್ಟಪಡುತ್ತಾನೆ. ಏಕೆಂದರೆ, ಬ್ರಾಹ್ಮಣೇತರರ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಿ ಸಮರ್ಥಿಸಲು ಅದು ಅವನಿಗೆ ಸಹಕಾರಿಯಾಗಿದೆ.

ಐರೋಪ್ಯ ವಿದ್ವಾಂಸರು ವರ್ಣ ಎಂದರೆ ಬಣ್ಣ ಎಂಬ ಅರ್ಥದ ಮೇಲೆ ಸಾಮಾನ್ಯವಾಗಿ ಒತ್ತುಕೊಡುವುದರಿಂದಲೂ, ಆ ಅಭಿಪ್ರಾಯವನ್ನು ಬಹುಮಂದಿ ಬ್ರಾಹ್ಮಣ ವಿದ್ವಾಂಸರು ಒಪ್ಪಿಕೊಳ್ಳುವುದರಿಂದಲೂ ಆರ್ಯ ಜನಾಂಗದ ಸಿದ್ಧಾಂತ ಸತ್ತಿಲ್ಲ, ಎಂಬುದು ಎರಡನೆಯ ವಿವರಣೆ. ವಾಸ್ತವವಾಗಿ ಆರ್ಯ ಸಿದ್ಧಾಂತಕ್ಕೆ ಇದೇ ಮೂಲಾಧಾರ. ಎಲ್ಲಿಯವರೆಗೆ ವರ್ಣ ಶಬ್ದದ ಈ ವಿವರಣೆಯನ್ನು

ಒಪ್ಪಿಕೊಳ್ಳಲಾಗುತ್ತದೆಯೋ ಅಲ್ಲಿಯವರೆಗೆ ಆರ್ಯ ಸಿದ್ಧಾಂತ ಬದುಕಿರುತ್ತದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದ್ದರಿಂದ ಆರ್ಯ ಸಿದ್ಧಾಂತದ ಈ ಭಾಗ ಬಹಳ ಮುಖ್ಯವಾದುದು ಮತ್ತು ಸಮಗ್ರ ಪರಿಶೀಲನೆಯನ್ನು ಅದು ಒತ್ತಾಯಿಸುತ್ತದೆ. ಅದನ್ನು ಮೂರು ಭಿನ್ನ ದೃಷ್ಟಿಕೋನಗಳಿಂದ ಪರೀಕ್ಷಿಸುವ ಅಗತ್ಯವಿದೆ :

(೧) ಐರೋಪ್ಯ ಜನಾಂಗಗಳು ಬಿಳಿಯರೆ ಅಥವಾ ಕರಿಯರೆ? (೨) ಹಿಂದೂ ಆರ್ಯರು ಬಿಳಿಯರೆ?, ಮತ್ತು (೩) ವರ್ಣ ಶಬ್ದ ಮೂಲಾರ್ಥವೇನು?

ಪ್ರಾಚೀನ ಯೂರೋಪಿಯನ್ನರ ಬಣ್ಣದ ವಿಷಯವಾಗಿ ಹೇಳುತ್ತಾ ಪ್ರೊ. ರಿಪ್ಲೆ ಅವರು ಕಪ್ಪನೆಯ ಮೈಬಣ್ಣದವರೆಂದು ತೀರಾ ಖಚಿತವಾಗಿ ಹೇಳುತ್ತಾರೆ. ಪ್ರೊ. ರಿಪ್ಲೆ ಮುಂದುವರಿದು ಹೇಳುತ್ತಾರೆ:[೧]

"ಪ್ರಾಚೀನ ಐರೋಪ್ಯರು ಉದ್ದನೆಯ ತಲೆಯುಳ್ಳವರಷ್ಟೇ ಅಲ್ಲದೆ ಕಪ್ಪನೆಯ ಮೈಬಣ್ಣದವರೂ ಆಗಿದ್ದರು ಎಂಬ ನಮ್ಮ ಊಹೆಯನ್ನು ನಾವು ಇದುವರೆಗೆ ಮಾಡಿದ ಸಂಶೋಧನೆಯ ಅನೇಕ ಅಂಶಗಳು ಬಲಪಡಿಸುತ್ತವೆ. ದಕ್ಷಿಣ ಫ್ರಾನ್ಸಿನಲ್ಲಿ ಬದುಕಿರುವ ಕ್ರೋ–ಮ್ಯಾಗ್ನನ್ ಮಾದರಿ ಮನುಷ್ಯ ಇತಿಹಾಸ ಪೂರ್ವದ ಅವಶೇಷ ಎಂಬುದನ್ನು ನಾವು ತೋರಿಸಿದ್ದೇವೆ; ಮತ್ತು ಈ ರೈತರಲ್ಲಿ ಕಪ್ಪನೆಯ ಕೂದಲು ಮತ್ತು ಕಣ್ಣುಗಳು ಇರುವುದು ಹೆಚ್ಚು ಗಮನ ಸೆಳೆಯುವ ಅಂಶವಾಗಿದೆ ಎಂಬುದನ್ನು ನಾವು ನೋಡಿದ್ದೇವೆ. ಬ್ರಿಟಿಷ್ ದ್ವೀಪಗಳಲ್ಲಿರುವ ಮಾದರಿಗಳನ್ನು ಹೋಲಿಸುತ್ತಾ ಎಲ್ಲ ಅಂಶಗಳೂ ವೇಲ್ಸ್, ಐರ್ಲೆಂಡ್ ಮತ್ತು ಸ್ಕಾಟ್ಲೆಂಡಿನ ಬ್ರೂನೆಟ್ ಜನಾಂಗಗಳು ಬ್ರಿಟನ್ನಿನಲ್ಲಿರುವ ಜನಸಮುದಾಯದ ಅತ್ಯಂತ ಪ್ರಾಚೀನ ಶ್ರೇಣಿಯನ್ನು ಸ್ಥಾಪಿಸಿತು ಎಂಬುದನ್ನು ನಾವು ನೋಡಿದೆವು. ಅಲ್ಲದೆ, ಉತ್ತರ ಇಟಲಿಯ ಪ್ರಾಚೀನ ಲಿಗುರಿಯಾ ಜನಸಮುದಾಯ ವಾಸವಾಗಿದ್ದ ಗಾರ್ಫಗ್ನಾನದ ಆ ಕುತೂಹಲಕಾರಿ ಸ್ಥಳದಲ್ಲಿ ಕೂಡ ಜನ ವಿಶಿಷ್ಟವಾಗಿ ಕಪ್ಪಾಗಿದ್ದರು. ಆದ್ದರಿಂದ, ಸಾಮಾನ್ಯ ನಿಯಮಗಳು ಅಥವಾ ಸ್ಥಳೀಯ ವಿವರಣೆಗಳ ಬೆಳಕಿನಲ್ಲಿ ತೀರ್ಮಾನಿಸಿದರೆ ಯುರೋಪಿನ ಪ್ರಾಚೀನ ಜನಾಂಗ ತುಂಬ ಕಪ್ಪಾಗಿದ್ದರೆಂದು ಕಾಣುತ್ತದೆ... ಅದು ಮೈಬಣ್ಣದಲ್ಲಿ ಮೆಡಿಟರೇನಿಯನ್ ರೀತಿ ಇತ್ತೇ ಹೊರತು ಸ್ಕಾಂಡಿನೇವಿಯನ್ ರೀತಿ ಅಲ್ಲ."

ಆರ್ಯರಿಗೇನಾದರೂ ವರ್ಣ ತಾರತಮ್ಯ ಇತ್ತೇ ಎಂಬುದನ್ನು ತಿಳಿಯಲು ವೇದಗಳನ್ನು ಗಮನಿಸಿದರೆ ಋಗ್ವೇದದ ಈ ಭಾಗಗಳನ್ನು ಉಲ್ಲೇಖಿಸಬಹುದು :

ಋಗ್ವೇದದ I.೧೧೭.೮ರಲ್ಲಿ, ಶ್ಯವ್ಯ ಮತ್ತು ಋಷತಿ ಎಂಬವರ ಮದುವೆಯನ್ನು ಅಶ್ವಿನಿಗಳು ಮಾಡಿದ್ದರ ಬಗ್ಗೆ ಉಲ್ಲೇಖವಿದೆ. ಶ್ಯವ್ಯ ಕಪ್ಪಗೆ ಮತ್ತು ಋಷತಿ ಬೆಳ್ಳಗೆ ಇದ್ದರು.

ಋಗ್ವೇದದ I.೧೧೭.೫ರಲ್ಲಿ, ಹೊಂಬಣ್ಣದಂತಿದ್ದ ವಂದನನನ್ನು ಕಾಪಾಡಿದ್ದಕ್ಕಾಗಿ ಅಶ್ವಿನಿಗಳಿಗೆ ಸಲ್ಲಿಸಿದ ಪ್ರಾರ್ಥನೆಯಿದೆ.

ಋಗ್ವೇದದ II.೩.೯ರಲ್ಲಿ, ನಿರ್ದಿಷ್ಟ ಗುಣಗಳುಳ್ಳ ಪಿಶಂಗ (ಎಣ್ಣೆಗೆಂಪು) ಮೈ ಬಣ್ಣದ ಮಗನನ್ನು ಕೊಡಿರೆಂದು ದೇವತೆಗಳಿಗೆ ಆರ್ಯನೊಬ್ಬ ಮಾಡುವ ಪ್ರಾರ್ಥನೆಯಿದೆ.

ಈ ಉದಾಹರಣೆಗಳು ವೈದಿಕ ಆರ್ಯರಿಗೆ ವರ್ಣ ತಾರತಮ್ಯವಿರಲಿಲ್ಲವೆಂದು ತೋರಿಸುತ್ತವೆ. ಅವರಿಗೆ ಇರಲು ಹೇಗೆ ಸಾಧ್ಯ? ಏಕೆಂದರೆ ವೈದಿಕ ಆರ್ಯರು ಒಂದೇ ಬಣ್ಣದವರಾಗಿರಲಿಲ್ಲ. ಅವರ ಮೈಬಣ್ಣದಲ್ಲಿ ವ್ಯತ್ಯಾಸವಿತ್ತು. ಕೆಲವರು ತಾಮ್ರ ವರ್ಣದವರಾಗಿದ್ದರು. ಕೆಲವರು ಬೆಳ್ಳಗೆ, ಇನ್ನು ಕೆಲವರು

---

೧. Ripley : *Races of Europe,* p. 466

ಕಪ್ಪಗೆ ಇದ್ದರು. ದಶರಥನ ಮಗನಾದ ರಾಮನನ್ನು 'ಶ್ಯಾಮ', ಕಪ್ಪನೆಯ ಮೈಬಣ್ಣದವನೆಂದು ವರ್ಣಿಸಲಾಗಿದೆ. ಹಾಗೆಯೇ ಆರ್ಯರ ಇನ್ನೊಂದು ಬಣವಾದ ಯಾದವರಲ್ಲಿ ಹುಟ್ಟಿದ ಕೃಷ್ಣ ಸಹ ಕಪ್ಪಗಿದ್ದನು. ಋಗ್ವೇದದ ಅನೇಕ ಮಂತ್ರಗಳ ಕರ್ತೃವಾದ ಋಷಿ ದೀರ್ಘತಮಸ್. ಅವನ ಹೆಸರು ಅವನ ಮೈಬಣ್ಣ ಸೂಚಿಸುವುದಾದರೆ, ಕಪ್ಪಗಿದ್ದನು. ಆರ್ಯ ಋಷಿಯಾದ ಕಣ್ವ ಮಹಾನ್ ಕೀರ್ತಿವಂತ. ಋಗ್ವೇದದ ೧೦.೩೧.೧೧ರ ವರ್ಣನೆಯ ಪ್ರಕಾರ ಕಪ್ಪನೆಯ ಬಣ್ಣದವನಾಗಿದ್ದನು.

ಮೂರನೆಯ ಮತ್ತು ಕೊನೆಯ ಅಂಶವಾದ ವರ್ಣ ಶಬ್ದದ ಅರ್ಥದ ಕಡೆಗೆ ಈಗ ಗಮನ ಹರಿಸೋಣ. ಋಗ್ವೇದದಲ್ಲಿ ಅದನ್ನು ಯಾವ ಅರ್ಥದಲ್ಲಿ ಪ್ರಯೋಗಿಸಲಾಗಿದೆ[೧] ಎಂಬುದನ್ನು ಮೊದಲು ತಿಳಿಯೋಣ.

ವರ್ಣ ಶಬ್ದವನ್ನು ಋಗ್ವೇದದಲ್ಲಿ ೨೨ ಕಡೆ ಬಳಸಲಾಗಿದೆ.[೨] ಇವುಗಳಲ್ಲಿ ೧೭ ಕಡೆ ಈ ಶಬ್ದವನ್ನು ಉಷೆ, ಅಗ್ನಿ, ಸೋಮ ಮುಂತಾದ ದೇವತೆಗಳ ವಿಷಯದಲ್ಲಿ ಬಳಸಲಾಗಿದೆ. ಅದನ್ನು ದೇವತೆಗಳ ವಿಷಯದಲ್ಲೂ ಬಳಸಿರುವುದರಿಂದ ಋಗ್ವೇದದಲ್ಲಿ ವರ್ಣ ಶಬ್ದವನ್ನು ಮಾನವ ಜೀವಿಗಳ ವಿಷಯದಲ್ಲಿ ಯಾವ ಅರ್ಥದಲ್ಲಿ ಬಳಸಲಾಗಿದೆ ಎಂದು ದೃಢಪಡಿಸುವುದು ಅಪಾಯಕರವಾಗಿದೆ. ನಾಲ್ಕು ಹೆಚ್ಚೆಂದರೆ ಐದು ಕಡೆ ಈ ಶಬ್ದವನ್ನು ಋಗ್ವೇದದಲ್ಲಿ ಮಾನವಜೀವಿಗಳ ಬಗ್ಗೆ ಬಳಸಲಾಗಿದೆ. ಅವು ಯಾವುವೆಂದರೆ:

೧) ೧.೧೦೪.೨; ೩) ೨.೧೨.೪ ೫) ೯.೭೧.೨

೨) ೧.೧೭೯.೬; ೪) ೩.೩೪.೫.

ಈ ಉಲ್ಲೇಖಗಳು ವರ್ಣ ಮತ್ತು ಮೈಬಣ್ಣ ಎಂಬರ್ಥದಲ್ಲಿ 'ವರ್ಣ' ಶಬ್ದವು ಋಗ್ವೇದದಲ್ಲಿ ಬಳಕೆಯಾಗಿದೆ ಎಂಬುದನ್ನು ತೋರಿಸುತ್ತವೆಯೆ?

ಋಗ್ವೇದ, ೩.೩೪.೫ ಅನುಮಾನಾಸ್ಪದ ಅರ್ಥವನ್ನು ಕೊಡುವಂತಿದೆ. 'ಶುಕ್ಲವರ್ಣವನ್ನು ವರ್ಧಿಸುವಂತೆ ಮಾಡಿದನು' ಎಂಬ ಮಾತು ದ್ವಂದ್ವಾರ್ಥಕ್ಕೆ ಎಡೆಗೊಡುತ್ತದೆ. ಉಷೆ ತನ್ನ ಬೆಳಕನ್ನು ಬೀರಿ ಶುಕ್ಲವರ್ಣವನ್ನು ವರ್ಧಿಸುವಂತೆ ಇಂದ್ರ ಮಾಡಿದ ಎಂಬ ಅರ್ಥವನ್ನು ಅದು ಕೊಡುತ್ತದೆ, ಅಥವಾ ಆ ಸೂಕ್ತ ಕರ್ತೃ ಬಿಳಿ ಬಣ್ಣದವನಾದ್ದರಿಂದ ತನ್ನ ಶ್ವೇತವರ್ಣೀಯ ಜನರನ್ನು ವೃದ್ಧಿಸಿದನು ಎಂಬ ಅರ್ಥವನ್ನೂ ಅದು ಕೊಡಬಹುದು. ಉಷೆ ಬೆಳಕು ಬೀರಿದುದರ ಪರಿಣಾಮವಾಗಿ ಬಿಳಿಯ ಬಣ್ಣ ಉಂಟಾಯಿತು ಎಂಬ ವಿಸ್ತೃತವಾದ ಅರ್ಥವನ್ನು ಕೊಡುವ ಸರಳ ಕಾರಣಕ್ಕಾಗಿಯೇ ಎರಡನೆಯ ಅರ್ಥ ತುಂಬ ಅತಿಯಾಗಿಬಿಡುತ್ತದೆ.

ಋಗ್ವೇದದ ೯.೭೧.೨ರಲ್ಲಿ ಬರುವ 'ಅಸುರ ವರ್ಣವನ್ನು ತ್ಯಜಿಸಿದರು' ಎಂಬ ಮಾತು ಈ ಸೂಕ್ತದ ಇತರ ಮಂತ್ರಗಳ ಬೆಳಕಲ್ಲಿ ಓದಿದರೆ ಸ್ಪಷ್ಟವಾಗುವುದಿಲ್ಲ. ಈ ಸೂಕ್ತದ ಕರ್ತೃ ಸೋಮ ಪವಮಾನ. ಇದನ್ನು ಮನಸ್ಸಿನಲ್ಲಿಟ್ಟುಕೊಂಡರೆ, 'ಅಸುರ ವರ್ಣವನ್ನು ತ್ಯಜಿಸಿದರು' ಎಂಬ ಮಾತು ಸೋಮನ ವರ್ಣನೆಯೆಂದು ತಿಳಿಯಬೇಕಾಗುತ್ತದೆ. ಇಲ್ಲಿ ವರ್ಣ ಪದವನ್ನು 'ರೂಪ' ಎಂಬ ಅರ್ಥದಲ್ಲಿ ಬಳಸಲಾಗಿದೆ. ಈ ಮಂತ್ರದ ಉತ್ತರಾರ್ಧ ಹೀಗಿದೆ: 'ಅವನು ತನ್ನ ಕಪ್ಪನೆಯ ಹೊದಿಕೆಯನ್ನು ಎಸೆದು ಬಿಳಿಯ ಹೊದಿಕೆಯನ್ನು ತೆಗೆದುಕೊಂಡನು.' ಇದರಿಂದ ವರ್ಣ ಶಬ್ದ ಕತ್ತಲೆಯನ್ನು ಸೂಚಿಸುವ ಪದವೆಂದು ಸ್ಪಷ್ಟವಾಗುತ್ತದೆ.

ಋಗ್ವೇದದ, ೧.೧೭೯.೬ ತುಂಬ ಸಹಾಯಕವಾಗಿದೆ. ಮಕ್ಕಳು ಮತ್ತು ಬಲವನ್ನು ಪಡೆಯುವುದಕ್ಕಾಗಿ

---

೧. ಮುಂದಿನ ವಿವರಣೆಗೆ ಮಹಾರಾಷ್ಟ್ರ ಜ್ಞಾನಕೋಶ, ಸಂ.೩, ಪು. ೩೯–೪೨ ನೋಡಿ.

೨. ಅಧ್ಯಾಯ ನೋಡಿ : ೪

ಲೋಪಾಮುದ್ರೆಯ ಜೊತೆ ಅಗಸ್ತ್ಯ ಸಂಸಾರ ಮಾಡಿದನು ಎಂದೂ ಹಾಗೂ ತತ್ಪರಿಣಾಮವಾಗಿ ಎರಡು ವರ್ಣಗಳು ವರ್ಧಿಸಿದವು ಎಂದೂ ಈ ಮಂತ್ರ ವಿವರಿಸುತ್ತದೆ. ಆರ್ಯರು ಮತ್ತು ದಾಸರ ಬಗ್ಗೆ ಹೇಳುವಂತಿದ್ದರೂ ಆ ಎರಡು ವರ್ಣಗಳು ಯಾವುವು ಎಂಬುದನ್ನು ಆ ಸೂಕ್ತ ಸ್ಪಷ್ಟಪಡಿಸುವುದಿಲ್ಲ. ಅದು ಹಾಗಿರಲಿ, ಈ ಮಂತ್ರದಲ್ಲಿ ವರ್ಣ ಎಂದರೆ ವರ್ಗ, ಬಣ್ಣ ಅಲ್ಲ ಎಂಬುದು ಸಂಶಯಾತೀತವಾಗಿದೆ.

ಋಗ್ವೇದದ ೧.೧೦೪.೨ ಮತ್ತು ಋಗ್ವೇದದ ೨.೧೨.೪– ಈ ಎರಡು ಮಂತ್ರಗಳು ವರ್ಣ ಶಬ್ದವನ್ನು ದಾಸರಿಗೆ ಅನ್ವಯಿಸುತ್ತದೆ. ದಾಸನಿಗೆ ಅನ್ವಯಿಸಿದಾಗ ವರ್ಣ ಶಬ್ದದ ಅರ್ಥವೇನು? ಅದು ದಾಸನ ವರ್ಗ ಮತ್ತು ಮೈ ಬಣ್ಣಕ್ಕೆ ಸಂಬಂಧಿಸಿದೆಯೆ ಅಥವಾ ದಾಸರು ಒಂದು ಪ್ರತ್ಯೇಕ ವರ್ಗವಾಗಿದ್ದರು ಎಂಬುದನ್ನು ಸೂಚಿಸುತ್ತದೆಯೇ ಎಂಬುದೇ ಪ್ರಶ್ನೆ. ಈ ಎರಡು ಅರ್ಥಗಳಲ್ಲಿ ಯಾವುದು ಸರಿ ಎಂಬ ಸಕಾರಾತ್ಮಕ ತೀರ್ಮಾನಕ್ಕೆ ಬರಲು ಬೇರೆ ದಾರಿಯಿಲ್ಲ.

ಋಗ್ವೇದದ ಆಧಾರ ತೀರಾ ಅಪರಿಪೂರ್ಣವಾಗಿದೆ. ಈ ಸಂಬಂಧದಲ್ಲಿ ಈ ಶಬ್ದ ಹಿಂದೂ–ಇರಾನಿಯನ್ನರ ಸಾಹಿತ್ಯದಲ್ಲಿ ಬಂದಿದೆಯೆ, ಬಂದಿದ್ದರೆ ಯಾವ ಅರ್ಥದಲ್ಲಿ ಬಳಕೆಯಾಗಿದೆ ಎಂದು ತಿಳಿಯುವುದು ತುಂಬಾ ಪ್ರಯೋಜನಕಾರಿಯಾಗಿದೆ.[೧]

ಅದೃಷ್ಟವಶಾತ್, 'ಝೆಂಡ್ ಅವೆಸ್ತ'ದಲ್ಲಿ ವರ್ಣ ಶಬ್ದ ಬಳಕೆಯಾಗಿದೆ. ಅದು 'ವರಣ' ಅಥವಾ 'ವರೇಣ' ಎಂಬ ರೂಪವನ್ನು ತಾಳಿದೆ. ಅದನ್ನು ಸ್ಪಷ್ಟವಾಗಿ "ನಂಬಿಕೆ, ಧಾರ್ಮಿಕ ಸಿದ್ಧಾಂತ, ಪಂಥ ಅಥವಾ ನಂಬಿಕೆಯ ಆಯ್ಕೆ" ಎಂಬ ಅರ್ಥದಲ್ಲಿ ಬಳಸಲಾಗಿದೆ. ಅದು 'ವರ್' ಎಂಬ ಧಾತುವಿನಿಂದ ಬಂದಿದೆ. ಅದರರ್ಥ ನಂಬಿಕೆಯಿಡು, ವಿಶ್ವಾಸವಿಡು ಎಂದು. ಗಾಥಾಗಳಲ್ಲಿ 'ವರಣ' ಅಥವಾ 'ವರೇಣ'ವನ್ನು ನಂಬಿಕೆ, ಸಿದ್ಧಾಂತ, ಪಂಥ ಅಥವಾ ವಿಶ್ವಾಸ ಎಂಬ ಅರ್ಥದಲ್ಲಿ ಆರು ಕಡೆ ಬಳಸಲಾಗಿದೆ.

ಗಾಥಾ ಅಹುನ ವೈಥಿ–ಯಾಸ್ನ ಹ ೩೦ ಶ್ಲೋಕ ೨ರಲ್ಲಿ ಅದು ಬರುತ್ತದೆ; ಅದರ ಅನುವಾದ ಹೀಗಿದೆ:

"ಕಿವಿಗೊಟ್ಟು ಕೇಳು, ಪರಮ ಸತ್ಯವನ್ನು ಧ್ಯಾನಿಸು ಎಂದು ನಾನು ಘೋಷಿಸುತ್ತೇನೆ; ನಿನ್ನ ಪ್ರಖರ ಬುದ್ಧಿಯಿಂದ ಭೇದಿಸು. ಪ್ರತಿಯೊಬ್ಬ ಮನುಷ್ಯನೂ ತನ್ನ ಶ್ರದ್ಧೆಯನ್ನು (ಅವರೇಣವೊ) ತಾನೇ ಕಂಡುಕೊಳ್ಳಬೇಕು. ಮಹಾನ್ ಘಟನೆ ನಡೆಯುವ ಮುನ್ನ ಪ್ರತಿಯೊಬ್ಬ ವ್ಯಕ್ತಿಯೂ ನಾವು ಬೋಧಿಸುವ ಈ ಸತ್ಯದ ಕಡೆ ಜಾಗೃತನಾಗಲಿ."

ಇದು ಗಾಥಾದ ಒಂದು ಅತ್ಯಂತ ಸುಪ್ರಸಿದ್ಧ ಹಾಡಿನ ಚರಣ; ಇದರಲ್ಲಿ ಪ್ರತಿಯೊಂದು ಗಂಡು ಹೆಣ್ಣು ತನ್ನ ಮತವನ್ನು ಸ್ವತಂತ್ರ ಮನಸ್ಸಿನಿಂದ ಆರಿಸಿಕೊಳ್ಳಲು ಝುರತೃಷ್ಟ್ರ ಆದೇಶಿಸುತ್ತಾನೆ. ಇಲ್ಲಿ ಬರುವ ಶಬ್ದಗಳು 'ಅವರೇಣವೋ ವಿಚಿತಹ್ಯ', ಇದರರ್ಥ 'ಅವರೇಣವೊ' –ಎಂದರೆ ಮತ, ನಂಬಿಕೆ ಮತ್ತು 'ವಿಚಿ–ತಹ್ಯ' ಎಂದರೆ 'ವಿವೇಕ, ತಾರತಮ್ಯ ವಿವೇಚನೆ'.

ಗಾಥಾ ಅಹುನವೈಥಿ–ಯಾಸ್ನ ಹ ೩೧ ಶ್ಲೋಕ ೧೧ರಲ್ಲಿ ಅದು ಬರುತ್ತದೆ. ಅಲ್ಲಿ ಬಳಕೆಯಾಗಿರುವ ಶಬ್ದ 'ವರೇಣೆಂಗ್'; ಇದು 'ವರೇಣ' ಶಬ್ದದ ದ್ವಿತೀಯಾ ವಿಭಕ್ತಿಯ ಬಹುವಚನ, ಇದರರ್ಥ 'ನಂಬಿಕೆ, ಶ್ರದ್ಧೆ'. ಈ ಶ್ಲೋಕದಲ್ಲಿ ಮನುಷ್ಯ ಸೃಷ್ಟಿಯ ತತ್ವವನ್ನು ಝುರತೃಷ್ಟ್ರ ಪ್ರತಿಪಾದಿಸುತ್ತಾನೆ. ಮನುಷ್ಯನ ಸೃಷ್ಟಿ

---

೧. ಈ ಶಬ್ದ ಹಿಂದೂ–ಇರಾನಿ ಸಾಹಿತ್ಯದಲ್ಲಿ ಬರುತ್ತದೆಂದು ನನ್ನ ಸನ್ಮಿತ್ರ ದಸ್ತೂರ್ ಬೋಡೆ ತಿಳಿಸಿದ್ದಕ್ಕಾಗಿ ಅವರಿಗೆ ಕೃತಜ್ಞತೆಗಳು.

ಪೂರ್ಣವಾಯಿತು ಎಂಬ ಮಾತಿನ ನಂತರ ಕೊನೆಯ ಅರ್ಧ ಚರಣದಲ್ಲಿ "ವೈಯಕ್ತಿಕ ನಂಬಿಕೆಗಳನ್ನು (ಮಾನವನಿಗೆ) ನೀಡಲಾಯಿತು" ಎಂದು ಝುರತ್ರುಷ್ಟ್ರ ಹೇಳುತ್ತಾನೆ.

ಗಾಥಾ ಉಷ್ಟವೈತಿ–ಯಾಸ್ನ ಹ ೪೫ ಶ್ಲೋಕ ೧ ರಲ್ಲಿ 'ವರೇಣ' ರೂಪದಲ್ಲಿ ಅದು ಕಾಣಿಸಿಕೊಳ್ಳುತ್ತದೆ. ಈ ಹಾಡಿನ ಕೊನೆಯ ಸಾಲಿನಲ್ಲಿ, "ಪಾಪಕರವಾದ ನಂಬಿಕೆಯಿಂದ ದುಷ್ಟನ ನಾಲಗೆ ಕೆಡುಕಿನದಾಗಿರುತ್ತದೆ" ಎಂದು ಝುರತ್ರುಷ್ಟ್ರ ಹೇಳುತ್ತಾನೆ.

ಗಾಥಾ ಉಷ್ಟವೈತಿ–ಯಾಸ್ನ ಹ ೪೫ ಶ್ಲೋಕ ೨ ರಲ್ಲಿ ಮೇಲಿನ 'ವರೇಣ' ಎಂಬ ರೂಪದಲ್ಲಿ ನಂಬಿಕೆ, ಮತ, ಶ್ರದ್ಧೆ ಇತ್ಯಾದಿಗಳ ಅರ್ಥದಲ್ಲಿ ಅದು ಬರುತ್ತದೆ. ಈ ಶ್ಲೋಕದಲ್ಲಿ ಝುರಾತ್ರುಷ್ಟ್ರ ತನ್ನ ತತ್ವವಾದ ಒಳಿತು ಕೆಡಕನ್ನು ಮಾನವ ಮನಸ್ಸಿನ ದ್ವಂದ್ವ ರೂಪಗಳನ್ನೂ ಪ್ರತಿಪಾದಿಸುತ್ತಾನೆ. ಈ ಶ್ಲೋಕದಲ್ಲಿ, ಪುಣ್ಯದ ಮನಸ್ಸು ಮತ್ತು ಪಾಪದ ಮನಸ್ಸು ಎಂಬ ಎರಡು ಮನೋಭಾವಗಳನ್ನು ಹೇಳಿ, "ಮನಸ್ಸು, ಮಾತು, ಬುದ್ಧಿ, ಶ್ರದ್ಧೆ (ಮತ ಅಥವಾ ಧರ್ಮ ಅಥವಾ ಸಿದ್ಧಾಂತ), ಉಕ್ತಿ ಕಾರ್ಯ, ಅಂತಃಸಾಕ್ಷಿ, ಅಂತರಾತ್ಮ ಇವಾವುಗಳಲ್ಲಿಯೂ ನಾವು ಪರಸ್ಪರ ನಂಬುವುದಿಲ್ಲ" ಎಂದು ಝುರತ್ರುಷ್ಟ್ರ ಹೇಳುತ್ತಾನೆ.

ಗಾಥಾ ಸ್ಪೆಂಟ ಮೈನ್ಯು–ಯಾಸ್ನ ಹ ೪೮ ಶ್ಲೋಕ ೪ ರಲ್ಲಿ 'ವರೇಣೆಂಗ್' ಎಂಬ ರೂಪ ಧರ್ಮ, ಶ್ರದ್ಧೆ ['ವೆರೆ' ಧಾತುವಿಗೆ ಪಾರ್ಸಿ ಭಾಷೆಯಲ್ಲಿ ಜರ್ವಿಡನ್ (Gervidon)=ನಂಬಿಕೆಯಿಡು] ಎಂಬ ಅರ್ಥದಲ್ಲಿ ಬಳಕೆಯಾಗಿದೆ. ಈ ಶ್ಲೋಕದಲ್ಲಿ, "ಯಾರು ತನ್ನ ಮನಸ್ಸನ್ನು ಶುದ್ಧವಾಗಿಯೂ, ಪವಿತ್ರವಾಗಿಯೂ ಮಾಡಿಕೊಳ್ಳುತ್ತಾನೋ ಕಾಯಾ ವಾಚಾ ತನ್ನ ಅಂತಃಸಾಕ್ಷಿಯನ್ನು ಪರಿಶುದ್ಧವಾಗಿಟ್ಟುಕೊಳ್ಳುತ್ತಾನೋ ಅಂಥ ಮನುಷ್ಯನ ಆಸೆ ಅವನ ಧರ್ಮಕ್ಕನುಸಾರವಾಗಿರುತ್ತದೆ" ಎಂದು ಝುರಾತ್ರುಷ್ಟ್ರ ಹೇಳುತ್ತಾನೆ.

ಗಾಥಾ ಸ್ಪೆಂಟ ಮೈನ್ಯು–ಯಾಸ್ನ ಹ ೪೯ ಶ್ಲೋಕ ೩ರಲ್ಲಿ ಅದು 'ವರೇಣಯ್' ರೂಪದಲ್ಲಿ ಚತುರ್ಥಿ ವಿಭಕ್ತಿಯಲ್ಲಿ 'ಧರ್ಮ' ಎಂಬ ಅರ್ಥದಲ್ಲಿ ಬಳಕೆಯಾಗಿದೆ. ಅದೇ ಶ್ಲೋಕದಲ್ಲಿ 'ಥೇಶಾಯ್' (Thaeshai) ಎಂಬ ಪದ ಧರ್ಮ, ಪಂಥ, ವಿಧಿ ಎಂಬ ಅರ್ಥದಲ್ಲಿಯೂ ಕೂಡ ಬಳಕೆಯಾಗಿದೆ. ಈ ಒಂದೇ ಶ್ಲೋಕದಲ್ಲಿ 'ವರೇಣಯ್' ಮತ್ತು 'ಥೇಶಾಯ್' ಎಂಬ ಈ ಎರಡು ಪದಗಳು ಬಂದು "ಥ್ಕೇಶ' ಎಂದರೆ ಸ್ಪಷ್ಟವಾಗಿ ಧರ್ಮ ಎಂಬ ಅರ್ಥ. 'ಅಹುರತ್‌ಕೇಶ' ಎಂಬ ಸಂಯುಕ್ತ ಪದದಲ್ಲಿ 'ಅಹುರಿ ಧರ್ಮ' ಎಂಬ ಅರ್ಥ ಇರುವುದರಿಂದ ವಾದವನ್ನು ಇವು ಬಲಪಡಿಸುತ್ತವೆ. 'ಥ್ಕೇಶ' ಎಂಬ ಈ ಪದವನ್ನು ಪಹ್ಲವಿ 'ಕಿಶ್' ಎಂದು ಅನುವಾದಿಸಿರುವುದರಿಂದ ಅದರ ಅರ್ಥ ಧರ್ಮ ಎಂದು.

ವೆಂಡಿಡಾಡ್ (ಅವೆಸ್ತ ಭಾಷೆಯಲ್ಲಿ ಬರೆದಿರುವ ಝುರತ್ರುಷ್ಟ್ರಾದ ನೈರ್ಮಲ್ಯ ಕಾನೂನು ಗ್ರಂಥ)ದಲ್ಲಿ 'ಅನ್ಯೋ ವರೇಣ' ಎಂಬ ಮಾತು ಬರುತ್ತದೆ. ಇಲ್ಲಿ 'ಅನ್ಯೋ' ಎಂದರೆ ಬೇರೆ, 'ವರೇಣ' ಎಂದರೆ ಧರ್ಮ, ಅರ್ಥಾತ್ ಅನ್ಯಧರ್ಮ, ಶ್ರದ್ಧೆ, ನಂಬಿಕೆಯ ಮನುಷ್ಯ. ಹಾಗೆಯೇ, ವೆಂಡಿಡಾಡ್‌ದಲ್ಲಿ 'ಅನ್ಯೋ–ಥ್ಕೇಶ' ಎಂಬ ಮಾತು ಅನ್ಯಧರ್ಮೀಯ ಎಂಬ ಅರ್ಥದಲ್ಲಿ ಕೂಡ ಬರುತ್ತದೆ.

ಗಾಥಾದ ಅನೇಕ ಶಬ್ದರೂಪಗಳು ಈ ಧಾತುವಿನಿಂದ ಬಂದಿರುವುದನ್ನು ನಾವು ಕಾಣಬಹುದು. ಉದಾಹರಣೆಗೆ, ಅಹುನವೈತಿ ಗಾಥಾ ಯಾಸ್ನ, ೩೧, ಶ್ಲೋಕ ೩, ಝುರಾತುಷ್ಟ್ರ 'ಯ ಜ್ವಂತೋ ವಿಸ್ಪೆಂಗ್ ವವ್‌ರಾಯ' ಎಂದು ಘೋಷಿಸುತ್ತಾನೆ; ಇಲ್ಲಿ 'ಯವ್‌ರಾಯ' ಎಂಬ ಕ್ರಿಯಾಪದಕ್ಕೇ ನಾನು (ದೇವರಲ್ಲಿ) ಸಕಲ ಜೀವಿಗಳಲ್ಲಿ ನಂಬಿಕೆಯನ್ನು, ಶ್ರದ್ಧೆಯನ್ನು ಉಂಟುಮಾಡುತ್ತೇನೆ' ಎಂದು ಅರ್ಥ. ಯಾಸ್ನ ಹ ೨೮, ಶ್ಲೋಕ ೫ ರಲ್ಲಿ 'ವವ್‌ರಾಯ್ ಮೈದಿ' ಎಂಬ ಕ್ರಿಯಾಪದ ಬರುತ್ತದೆ. ಅದರರ್ಥ 'ನಾವು ನಂಬಿಕೆಯಿಡುತ್ತೇವೆ'. ಈ ಶಬ್ದದ ಇನ್ನೊಂದು ಸ್ವಾರಸ್ಯಕರ ರೂಪವನ್ನು ಗಾಥಾ ವಹಿಸ್ಟೈಸ್ಟಿಶ್, ಯಾಸ್ನ ೫೩, ಶ್ಲೋಕ ೯ರಲ್ಲಿ

'Duz Varenaish' ಎಂಬ ರೂಪದಲ್ಲಿ ನೋಡಿ. ಅದು ತೃತೀಯಾ ವಿಭಕ್ತಿಯ ಬಹುವಚನ, ಇದರ ಮೊದಲನೆಯ ಭಾಗ ಡುಸ್ (Dus) ಎಂದರೆ ದುಷ್ಟ, ಸುಳ್ಳು ಎಂದರ್ಥ, 'ವರೇಣ್ಯೈ' ಎಂದರೆ ನಂಬುಕಸ್ತ. ಹೀಗೆ ಈ ಪದ "ಸುಳ್ಳು ಅಥವಾ ದುಷ್ಟ ಧರ್ಮಕ್ಕೆ ಸೇರಿದವನು ಅಥವಾ ಸುಳ್ಳು ಅಥವಾ ಕೆಟ್ಟ ನಂಬಿಗಸ್ತ" ಎಂದು ಅರ್ಥ ಕೊಡುತ್ತದೆ.

ಯಾಸ್ನ ಹ ೧೨ರಲ್ಲಿ ಝುರಾತುಷ್ಟ್ರನ ನಂಬಿಕೆ ಅಥವಾ ಶ್ರದ್ಧೆಯನ್ನು ಸೂಚಿಸುವ ಪದ 'ಫ್ರವರನೆ' (Fravarane) ಎಂದರೆ ನನ್ನ ನಂಬಿಕೆಯನ್ನು, ಶ್ರದ್ಧೆಯನ್ನು ಒಪ್ಪಿಕೊಳ್ಳುತ್ತೇನೆ ಎಂದು ಅರ್ಥ. Mazdayasno Zarathustrish ಎಂದರೆ ಝುರತೃಷ್ಟ್ರನ ಧರ್ಮವನ್ನು 'ಮಜ್ದ ಆರಾಧಿಸುತ್ತಾನೆ' ಎಂದು. ಈ ಮಾತು ಝುರತೃಷ್ಟ್ರನ ಬಹುತೇಕ ಎಲ್ಲ ಪ್ರಾರ್ಥನೆಗಳಲ್ಲೂ ಬರುತ್ತದೆ. ಝುರತೃಷ್ಟ್ರನ ಸಿದ್ಧಾಂತ ಯಾಸ್ನ ೧೨ರಲ್ಲಿ ಇನ್ನೊಂದು "ಯಾವರೇಣ" ಎಂಬ ರೂಪವಿದೆ. ಇಲ್ಲಿ 'ಯಾ' ಎಂಬುದು ಸಂಬಂಧಾರ್ಥಕ ಸರ್ವನಾಮವಾಗಿದೆ; ಅದರ ಅರ್ಥ 'ವರೇಣ' ಎಂದರೆ ನಂಬಿಕೆ, ಧರ್ಮ. ಹೀಗೆ ಈ ಪದ 'ಇಂಥ ಧರ್ಮಕ್ಕೆ' ಎಂದು ಅರ್ಥ ಕೊಡುತ್ತದೆ. ಯಾಸ್ನ ೧೨ರಲ್ಲಿ 'ಯಾ ವರೇಣ' ಎಂಬ ರೂಪ ಒಂಬತ್ತು ಬಾರಿ ಶ್ರದ್ಧೆ ಅಥವಾ ಧರ್ಮ ಎಂಬ ಸ್ಪಷ್ಟ ಅರ್ಥದಲ್ಲಿ ಬಳಕೆಯಾಗಿದೆ. ಇಲ್ಲಿ ಮತ್ತೆ 'ವರೇಣ' ಶಬ್ದವನ್ನು ಧರ್ಮ ಎಂಬ ಅರ್ಥವನ್ನು ಕೊಡುವ 'ತ್ಕೇಶ' ಎಂಬ ಪದದ ಜೊತೆ ಬಳಸಲಾಗಿದೆ.

ಯಾಸ್ನ ೧೬ರಲ್ಲಿ ಒಂದು ಸ್ವಾರಸ್ಯಕರ ಉಲ್ಲೇಖ ಕಾಣುತ್ತದೆ, ಅದು 'Zarathushtrahe Varenemcha tkaeshemcha Yazamaide'. ಇಲ್ಲಿ ಝುರತೃಷ್ಟ್ರನ 'ವರೇಣ' ಮತ್ತು 'ತ್ಕೇಶ'ವನ್ನು ಆರಾಧಿಸಲಾಗಿದೆ. ಈ ಅನುರೂಪವಾದ ಸಹಬಂಧವುಳ್ಳ ಪದಗಳಲ್ಲಿ ಝುರತೃಷ್ಟ್ರನ ನಂಬಿಕೆ ಮತ್ತು ಧರ್ಮ ಎಂಬರ್ಥದಲ್ಲಿ ಬಳಕೆಯಾಗಿರುವುದನ್ನು ನೋಡಬಹುದು. ಮೇಲಿನ ಪಂಕ್ತಿಯ ಅನುವಾದ: "ಝುರತೃಷ್ಟ್ರನ ಧರ್ಮ ಮತ್ತು ಶ್ರದ್ಧೆಯನ್ನು ನಾವು ಆರಾಧಿಸುತ್ತೇವೆ".

ಝೆಂಡ ಅವೆಸ್ತದ ಈ ಆಧಾರದಿಂದ ವರ್ಣಶಬ್ದ ಮೂಲತಃ ಒಂದು ವಿಶಿಷ್ಟ ನಂಬಿಕೆಗೆ ಆತುಕೊಂಡಿದ್ದ ವರ್ಗ ಎಂಬ ಅರ್ಥವನ್ನು ನಿಸ್ಸಂದೇಹವಾಗಿ ಕೊಡುತ್ತದೆ ಹಾಗೂ ಅದಕ್ಕೆ ವರ್ಣ ಅಥವಾ ಮೈಬಣ್ಣ ಎಂಬ ಯಾವುದೇ ಅರ್ಥ ಇರಲಿಲ್ಲವೆಂಬುದು ಸಂದೇಹಾತೀತವಾಗಿದೆ.

ಪಾಶ್ಚಾತ್ಯ ಸಿದ್ಧಾಂತದ ಈ ಪರಿಶೀಲನೆಯಿಂದ ಬರುವ ತೀರ್ಮಾನಗಳನ್ನು ಈಗ ಹೀಗೆ ಸಂಗ್ರಹಿಸಬಹುದು. ಅವೆಂದರೆ :

(೧) ಆರ್ಯ ಜನಾಂಗ ಎಂಬಂಥ ಯಾವುದೇ ಜನಾಂಗ ವೇದಗಳಿಗೆ ತಿಳಿಯದು.

(೨) ಭಾರತವನ್ನು ಆರ್ಯ ಜನಾಂಗ ಆಕ್ರಮಣ ಮಾಡಿತು ಮತ್ತು ಭಾರತದ ಮೂಲನಿವಾಸಿಗಳಾದ ದಾಸರು ಮತ್ತು ದಸ್ಯುಗಳನ್ನು ಸೋಲಿಸಿತು ಎಂಬುದಕ್ಕೆ ವೇದಗಳಲ್ಲಿ ಯಾವುದೇ ಆಧಾರವಿಲ್ಲ.

(೩) ಆರ್ಯರು, ದಾಸರು ಮತ್ತು ದಸ್ಯುಗಳ ನಡುವೆ ಜನಾಂಗಿಕ ಪ್ರತ್ಯೇಕತೆ ಇತ್ತು ಎಂಬುದಕ್ಕೆ ಯಾವ ಆಧಾರವಿಲ್ಲ.

(೪) ದಾಸರು ಮತ್ತು ದಸ್ಯುಗಳಿಗಿಂತ ವರ್ಣದಲ್ಲಿ ಆರ್ಯರು ಭಿನ್ನವಾಗಿದ್ದರು ಎಂಬ ವಾದವನ್ನು ವೇದಗಳು ಬೆಂಬಲಿಸುವುದಿಲ್ಲ.

♦

## ಅಧ್ಯಾಯ ೫

# ಆರ್ಯರ ವಿರುದ್ಧ ಆರ್ಯರು

ಪಾಶ್ಚಾತ್ಯ ವಿದ್ವಾಂಸರು ಪ್ರತಿಪಾದಿಸಿ, ಅವರ ಬ್ರಾಹ್ಮಣ ಅನುಯಾಯಿಗಳು ಸುಲಭವಾಗಿ ಒಪ್ಪಿಕೊಂಡಿರುವ ಆರ್ಯ ಸಿದ್ಧಾಂತ ಎಷ್ಟು ಸೋರುಗಂಡಿಯದಾಗಿದೆ ಎಂಬುದನ್ನು ತೋರಿಸಲು ಸಾಕಷ್ಟು ಚರ್ಚಿಸಲಾಯಿತು. ಆದರೂ ಸಾಮಾನ್ಯವಾಗಿ ಈ ಸಿದ್ಧಾಂತ ಜನರ ಮೇಲೆ ತನ್ನ ಹಿಡಿತವನ್ನು ಸ್ಥಾಪಿಸಿರುವುದರಿಂದ ಅದರ ವಿರುದ್ಧ ಎಷ್ಟೇ ಹೇಳಿದರೂ ಅದು ಕೇವಲ ಗಾಯಮಾಡಿದಂತಾಗುತ್ತದೆಯೇ ಹೊರತು ಕೊಂದಂತಾಗುವುದಿಲ್ಲ. ಅದನ್ನು ಹಾವನ್ನು ಕೊಲ್ಲುವಂತೆ ಕೊಲ್ಲಬೇಕು. ಆದ್ದರಿಂದ ಈ ಸಿದ್ಧಾಂತದ ಪೊಳ್ಳುತನವನ್ನು ಸಂಪೂರ್ಣವಾಗಿ ಬಹಿರಂಗಪಡಿಸುವ ಉದ್ದೇಶದಿಂದ ಅದರ ಪರಿಶೀಲನೆ ಮಾಡುವುದು ಅಗತ್ಯವಾಗಿದೆ.

ಭಾರತವನ್ನು ಆರ್ಯ ಜನಾಂಗ ದಾಳಿ ಮಾಡಿತು ಹಾಗೂ ದಾಸರು ಮತ್ತು ದಸ್ಯುಗಳನ್ನು ಗೆದ್ದಿತು ಎಂಬ ಸಿದ್ಧಾಂತವನ್ನು ಎತ್ತಿಹಿಡಿಯುವವರು 'ಋಗ್ವೇದ'ದ ಕೆಲವು ಋಕ್ಕುಗಳನ್ನು ಗಮನಿಸಿಲ್ಲ. ಈ ಋಕ್ಕುಗಳು ನಿರ್ಣಾಯಕವಾದ ರೀತಿಯಲ್ಲಿ ಪ್ರಮುಖವಾಗಿದೆ. ಆರ್ಯ ಜನಾಂಗ ಹೊರಗಿನಿಂದ ಬಂದು ಭಾರತದ ಮೇಲೆ ಆಕ್ರಮಣ ಮಾಡಿತು ಮತ್ತು ಅನಾರ್ಯ ಸ್ಥಳೀಯ ಬುಡಕಟ್ಟುಗಳನ್ನು ಗೆದ್ದಿತು ಎಂಬ ವಾದವನ್ನು ಈ ಮುಂದಿನ ಋಕ್ಕುಗಳನ್ನು ಉಲ್ಲೇಖಿಸದೆ ಹೇಳುವುದು ಸಂಪೂರ್ಣ ನಿರರ್ಥಕವಾಗುತ್ತದೆ. ಮನಸ್ಸಿನಲ್ಲಿರುವ ಆ ಋಕ್ಕುಗಳನ್ನು ನಾನು ಉದ್ಧರಿಸುತ್ತಿದ್ದೇನೆ :

(೧) ಋಗ್ವೇದ, ೬.೩೩.೩– "ಎಲೈ ಇಂದ್ರನೆ, ನಮ್ಮ ವಿರೋಧಿಗಳಾದ ದಾಸರು ಮತ್ತು ಆರ್ಯರು ಈ ಇಬ್ಬರನ್ನೂ ನೀನು ಹತ್ಯೆಮಾಡಿದ್ದೀಯೆ."

(೨) ಋಗ್ವೇದ, ೬.೬೦.೩– "ಒಳಿತು ಮತ್ತು ಧರ್ಮರಕ್ಷಕರಾದ ಇಂದ್ರ ಮತ್ತು ಅಗ್ನಿ, ನಮ್ಮನ್ನು ಬಾಧಿಸುವ ದಾಸರು ಮತ್ತು ಆರ್ಯರನ್ನು ದಮನ ಮಾಡುತ್ತಾರೆ."

(೩) ಋಗ್ವೇದ, ೭.೮೧.೧– "ಸುದಾಸನ ಶತ್ರುಗಳಾದ ದಾಸರು ಮತ್ತು ಆರ್ಯರನ್ನು ಇಂದ್ರ ಮತ್ತು ವರುಣ ಹತ್ಯೆಗೈದು, ಅವರಿಂದ ಸುದಾಸನನ್ನು ರಕ್ಷಿಸಿದರು."

(೪) ಋಗ್ವೇದ, ೮.೨೪.೨೭– "ಎಲೈ ಇಂದ್ರನೆ, ನೀನು ನಮ್ಮನ್ನು ಸಿಂಧೂ ನದಿಯ ದಡದ ಮೇಲೆ ವಾಸಿಸುವ ಕ್ರೂರ ರಾಕ್ಷಸರು ಮತ್ತು ಆರ್ಯರ ಕೈಯಿಂದ ಪಾರು ಮಾಡಿರುವೆ; ಈ ದಾಸರನ್ನು ಶಸ್ತ್ರಹೀನರನ್ನಾಗಿ ಮಾಡು."

(೫) ಋಗ್ವೇದ, ೧೦.೩೮.೩– "ಎಲೈ ಮಹಾಪೂಜ್ಯ ಇಂದ್ರನೆ, ಅಧರ್ಮಿಗಳೂ ನಮ್ಮ ಶತ್ರುಗಳೂ ಆದ ಆ ದಾಸರು ಮತ್ತು ಆರ್ಯರನ್ನು ನಾವು ಸುಲಭವಾಗಿ ಸೋಲಿಸುವಂತೆ ನಮ್ಮನ್ನು ಆಶೀರ್ವದಿಸು. ನಿನ್ನ ನೆರವಿನಿಂದ ನಾವು ಅವರನ್ನು ಕೊಲ್ಲುತ್ತೇವೆ."

(೬) ಋಗ್ವೇದ, ೧೦.೮೬.೧೯– "ಎಲೈ ಮಮೇಯುವೆ, ನಿನ್ನನ್ನು ಸ್ತುತಿಸುವವರಿಗೆ ನೀನು ಸರ್ವಶಕ್ತಿಗಳನ್ನೂ ದಯಪಾಲಿಸುವೆ. ನಿನ್ನ ಸಹಾಯದಿಂದ ನಾವು ನಮ್ಮ ಆರ್ಯ ಮತ್ತು ದಸ್ಯು ವೈರಿಗಳನ್ನು ನಿರ್ನಾಮ ಮಾಡುತ್ತೇವೆ."

ಈ ಶ್ಲೋಕಗಳನ್ನು ಓದುವ ಮತ್ತು ಅವು ತಣ್ಣಗೆ ಪ್ರಶಾಂತವಾಗಿ ಹೇಳುವುದನ್ನು ಅರ್ಥಮಾಡಿಕೊಳ್ಳುವ ಯಾರೇ ಆಗಲೀ ಇವು ಪಾಶ್ಚಾತ್ಯ ಸಿದ್ಧಾಂತದ ಮೂಲಾಂಶಗಳಿಗೆ ವಿರುದ್ಧವಾಗಿವೆ ಎಂಬುದನ್ನು ಅರಿತುಕೊಳ್ಳುತ್ತಾರೆ ಹಾಗೂ ದಿಗ್ಭ್ರಾಂತರಾಗುತ್ತಾರೆ. ಋಗ್ವೇದದ ಈ ಶ್ಲೋಕಗಳ ಕರ್ತೃಗಳು ಆರ್ಯರೇ ಆಗಿದ್ದ ಪಕ್ಷದಲ್ಲಿ ಆರ್ಯರಲ್ಲಿ ಎರಡು ಭಿನ್ನವಾದ ಸಮುದಾಯಗಳು ಇದ್ದುವಲ್ಲದೆ ಒಂದಕ್ಕೊಂದು ವಿರೋಧವಾಗಿಯೂ ಅಪಾಯಕಾರಿಯಾಗಿಯೂ ಇದ್ದುವೆಂಬ ಅಂಶವನ್ನು ಈ ಮಂತ್ರಗಳು ಸೂಚಿಸುತ್ತವೆ. ಎರಡು ಆರ್ಯ ಬಣಗಳ ಅಸ್ತಿತ್ವ ಕೇವಲ ಕಲ್ಪನೆಯ ಅಥವಾ ವ್ಯಾಖ್ಯಾನದ ವಿಷಯವಲ್ಲ. ಈ ವಿಷಯವನ್ನು ಸಮರ್ಥಿಸಲು ಅಪಾರ ಆಧಾರವಿದೆ.

## ೨

ವಿವಿಧ ವೇದಗಳ ಪವಿತ್ರ ಗುಣವಾದ ಮಾನ್ಯತೆಯ ವಿಷಯದಲ್ಲಿ ಬಹುಕಾಲದವರೆಗೂ ಇದ್ದ ತಾರತಮ್ಯ ಭಾವನೆಯ ಅಂಥ ಆಧಾರದ ಪ್ರಥಮ ದಾಖಲೆಯ ಕಡೆಗೆ ಗಮನವನ್ನು ಸೆಳೆಯಬೇಕಾಗಿದೆ. ವೈದಾಧ್ಯಯನ ಮಾಡುವವರಿಗೆಲ್ಲ ಇರುವುದು ಎರಡೇ ವೇದಗಳು ಎಂಬುದು ನಿಜವಾಗಿ ಗೊತ್ತಿದೆ : ಅವು (೧) ಋಗ್ವೇದ, ಮತ್ತು (೨) ಅಥರ್ವವೇದ. ಸಾಮವೇದ ಮತ್ತು ಯಜುರ್ವೇದಗಳು ಋಗ್ವೇದದ ಭಿನ್ನರೂಪಗಳು, ಅಷ್ಟೇ. ಬಹಳ ಕಾಲದವರೆಗೆ ಋಗ್ವೇದದಷ್ಟು ಅಥರ್ವವೇದ ಪವಿತ್ರವಲ್ಲ ಎಂಬ ಭಾವನೆ ಬ್ರಾಹ್ಮಣರಲ್ಲಿ ಇದ್ದುದನ್ನು ವೇದಗಳನ್ನು ಅಧ್ಯಯನ ಮಾಡುವ ಎಲ್ಲರೂ ಬಲ್ಲವರಾಗಿದ್ದಾರೆ. ಅಂಥ ವ್ಯತ್ಯಾಸವನ್ನು ಏಕೆ ಮಾಡಲಾಯಿತು? ಋಗ್ವೇದವನ್ನು ಏಕೆ ಪವಿತ್ರವೆಂದು ಭಾವಿಸಿದರು? ಅಥರ್ವ ವೇದವನ್ನು ಕೀಳೆಂದು ಏಕೆ ಕಂಡರು? ಇದಕ್ಕೆ ನಾನು ಕೊಡುವ ಉತ್ತರವೆಂದರೆ, ಈ ಎರಡು ವೇದಗಳು ಆರ್ಯರ ಎರಡು ಭಿನ್ನ ಜನಾಂಗಗಳಿಗೆ ಸೇರಿದವುಗಳಾಗಿದ್ದವು ಮತ್ತು ಅವರಿಬ್ಬರೂ ಒಟ್ಟಾದ ನಂತರ ಅಥರ್ವ ವೇದವನ್ನು ಋಗ್ವೇದದ ಸಮವೆಂದು ಒಪ್ಪಿಕೊಳ್ಳಲಾಯಿತು.

ಇದಲ್ಲದೆ, ಎರಡು ಭಿನ್ನ ತತ್ವಗಳ ಅಸ್ತಿತ್ವವನ್ನು, ವಿಶೇಷವಾಗಿ ಸೃಷ್ಟಿಗೆ ಸಂಬಂಧಪಟ್ಟ ವರ್ಣನೆ ಎರಡು ಭಿನ್ನ ತತ್ವಗಳ ಆರ್ಯ ಜನಾಂಗಗಳ ಅಸ್ತಿತ್ವವನ್ನು ಮತ್ತೆ ಸೂಚಿಸುವಂತೆ ಸಾಕಷ್ಟು ಆಧಾರ ಇಡೀ ಬ್ರಾಹ್ಮಣ ಸಾಹಿತ್ಯದಲ್ಲಿ ಚದುರಿಹೋಗಿದೆ. ಇದಕ್ಕೆ ಸಂಬಂಧಪಟ್ಟ ಉಲ್ಲೇಖವನ್ನು ಎರಡನೆಯ ಅಧ್ಯಾಯದಲ್ಲಿ ಈಗಾಗಲೇ ಕೊಟ್ಟಿದೆ ಈಗ ಉಳಿದಿರುವುದು ತತ್ವದ ಎರಡನೆಯ ಮಾದರಿಯ ಕಡೆಗೆ ಗಮನ ಸೆಳೆಯುವುದು.

ವೇದಗಳಿಂದ ಪ್ರಾರಂಭಿಸೋಣ. ಈ ಮುಂದಿನ ತತ್ವ ತೈತ್ತಿರೀಯ ಸಂಹಿತದಲ್ಲಿ ಕಾಣಬರುತ್ತದೆ:

ತೈ.ಸಂ.೧ ೬.೫.೬.[೧]. – "ಪುತ್ರಾಕಾಂಕ್ಷಿಯಾದ ಅದಿತಿಯು ಸಾಧ್ಯರೆಂಬ ದೇವತೆಗಳಿಗೆ ನೈವೇದ್ಯವನ್ನು ಅರ್ಪಿಸಲು ಬ್ರಹ್ಮಾಂಡವನ್ನು ಬೇಯಿಸಿದಳು. ಅವರು ತಾವು ತಿಂದು ಉಳಿದುದನ್ನು ಅವಳಿಗೆ ಕೊಟ್ಟರು. ಅವಳು ಅದನ್ನು ತಿಂದಳು. ಅವಳು ಗರ್ಭ ಧರಿಸಿದಳು. ಅವಳಿಗೆ ನಾಲ್ವರು ಆದಿತ್ಯರು ಹುಟ್ಟಿದರು. ಅವಳು ಎರಡನೆ ಬಾರಿ ನೈವೇದ್ಯಕ್ಕಾಗಿ ಬೇಯಿಸಿದಳು. 'ಉಳಿದ ನೈವೇದ್ಯವನ್ನು ನಾನು ತಿಂದುದರಿಂದ ನನಗೆ ಈ ಮಕ್ಕಳು ಹುಟ್ಟಿದರು; ನಾನೇ ಮೊದಲು ನೈವೇದ್ಯವನ್ನು ಭಕ್ಷಿಸಿದರೆ ಇನ್ನೂ ಹೆಚ್ಚು ಪ್ರಜ್ವಲರಾದ ಪುತ್ರರು ನನಗೆ ಹುಟ್ಟುತ್ತಾರೆ' ಎಂದು ಅವಳು ಯೋಚಿಸಿದಳು. ಅದನ್ನು ಅವಳು ಮೊದಲು ತಿಂದಳು; ಗರ್ಭ ಧರಿಸಿದಳು; ಒಂದು ಅಪರಿಪೂರ್ಣ ಅಂಡ ಹೊರಬಂತು. ಅವಳು ಮೂರನೆ ಬಾರಿ ಆದಿತ್ಯರಿಗಾಗಿ ಈ ಮಂತ್ರ ಜಪಿಸುತ್ತಾ 'ನನ್ನ ಆನಂದಕ್ಕಾಗಿ ಈ ಧಾರ್ಮಿಕ ಕ್ರಿಯೆ ನಡೆಯಲಿ' ಎಂದು ಬೇಯಿಸಿದಳು. ನಾವು

---

೧. Muir, Vol. I, ಪುಟ ೨೬

ಒಂದು ವರವನ್ನು ಆರಿಸೋಣ; ಇದರಿಂದ ಹುಟ್ಟಿದವನು ಮಾತ್ರ ನಮ್ಮವನಾಗುತ್ತಾನೆ; ಅವನ ಸಂತತಿ ವರ್ಧಿಸುತ್ತಾ ನಮಗೆ ಸಂತೋಷದ ಮೂಲವಾಗುತ್ತದೆ' ಎಂದು ಆದಿತ್ಯರು ಅಂದುಕೊಂಡರು. ಇದರ ಪರಿಣಾಮವಾಗಿ ಆದಿತ್ಯ ವೈವಸ್ವತ ಜನಿಸಿದನು. ಅವನ ಸಂತಾನವೇ ಮನುಷ್ಯರು. ಅವರಲ್ಲಿ ಯಾರು ಯಜ್ಞ ಮಾಡುತ್ತಾನೊ ಅವನು ಯಶಸ್ಸು ಪಡೆಯುತ್ತಾನೆ, ಮತ್ತು ದೇವತೆಗಳ ಆನಂದಕ್ಕೆ ಕಾರಣವಾಗುತ್ತಾನೆ."

ಈಗ ಬ್ರಾಹ್ಮಣಗಳ ಕಡೆ ತಿರುಗೋಣ. ಶತಪಥ ಬ್ರಾಹ್ಮಣಗಳಲ್ಲಿ ಸಂಕಲಿತವಾಗಿರುವ ಸೃಷ್ಟಿಯ ಕತೆಗಳನ್ನು ಮುಂದೆ ಕೊಡಲಾಗಿದೆ :

ಶ.ಬ್ರಾ.[೧] ೧.೮.೧.(೧)– ಮನುಷ್ಯರು ಕೈತೊಳೆದುಕೊಳ್ಳುವ ರೂಢಿಯಂತೆ, ಶುಚಿರ್ಭೂತ ಕ್ರಿಯೆಗೆ ನೀರನ್ನು ಮುಂಜಾನೆ ಮನುವಿಗೆ ತಂದುಕೊಟ್ಟರು. ಅವನು ಹಾಗೆ ತೊಳೆಯುತ್ತಿರುವಾಗ ಅವನ ಕೈಗೆ ಒಂದು ಮೀನು ಸಿಕ್ಕಿ ಹೀಗೆ ಹೇಳಿತು : 'ನನ್ನನ್ನು ಕಾಪಾಡು; ನಿನ್ನನ್ನು ಉಳಿಸುತ್ತೇನೆ'. ಮನು 'ಯಾವುದರಿಂದ ನನ್ನನ್ನು ಉಳಿಸುವೆ?' ಎಂದು ಕೇಳಿದನು. ಮೀನು, 'ಇಲ್ಲಿರುವ ಜೀವಿಗಳನ್ನೆಲ್ಲಾ ಪ್ರವಾಹವು ಕೊಚ್ಚಿಕೊಂಡು ಹೋಗುತ್ತದೆ; ಅದರಿಂದ ನಾನು ನಿನ್ನನ್ನು ರಕ್ಷಿಸುತ್ತೇನೆ' ಎಂದು ಉತ್ತರಿಸಿತು. ಮನು, 'ನಿನ್ನನ್ನು ಉಳಿಸುವುದಾದರೂ ಹೇಗೆ?' ಎಂದು ಪ್ರಶ್ನಿಸಿದನು. ಅದಕ್ಕೆ ಮೀನು, 'ನಾವು ಸಣ್ಣ ಪ್ರಾಣಿಗಳಾಗಿರುವವರೆಗೂ ಭಾರೀ ಅಪಾಯವಿದೆ, ಏಕೆಂದರೆ ಮೀನು ಮೀನನ್ನು ನುಂಗುತ್ತದೆ; ನೀನು ನನ್ನನ್ನು ಒಂದು ಹೂಜಿಯಲ್ಲಿ ಮೊದಲು ಹಾಕಿಡು. ನಾನು ಹೂಜಿಗಿಂತ ದೊಡ್ಡದಾಗಿ ಬೆಳೆದಾಗ, ನೀನು ಒಂದು ಕಂದಕವನ್ನು ತೋಡಿ ಅದರಲ್ಲಿ ನನ್ನನ್ನಿಡು. ನಾನು ಆ ಕಂದಕವನ್ನು ಮೀರಿ ಬೆಳೆದರೆ, ಆಗ ನೀನು ನನ್ನನ್ನು ಒಯ್ದು ಸಮುದ್ರಕ್ಕೆ ಬಿಡು. ಆಗ ನಾನು ಅಪಾಯದಿಂದ ಪಾರಾಗುತ್ತೇನೆ,' ಹಾಗೆಂದು ಅದು ಕೂಡಲೇ ಒಂದು ದೊಡ್ಡ ಮೀನಾಯಿತು; ಅದು ಎಷ್ಟು ದೊಡ್ಡದಾಗಬಹುದೋ ಅಷ್ಟೂ ದೊಡ್ಡದಾಯಿತು. 'ಮುಂದೆ ಇಂಥ ವರ್ಷದಲ್ಲಿ ಪ್ರವಾಹ ಬರುತ್ತದೆ; ಪ್ರವಾಹ ಏರಿದಾಗ ನೀನು ನಾವೆಯನ್ನು ಹತ್ತು, ನಾನು ನಿನ್ನನ್ನು ಅದರಿಂದ ಪಾರು ಮಾಡುತ್ತೇನೆ', ಎಂದು ಮೀನು ಹೇಳಿತು. ಹೀಗೆ ಮೀನನ್ನು ಕಾಪಾಡಿದ ಮೇಲೆ, ಮನು ಅದನ್ನು ಎತ್ತಿಕೊಂಡು ಸಮುದ್ರಕ್ಕೆ ಹೋದನು. ಆಗ ಅವನು ಅದೇ ವರುಷ ಮೀನು ಹೇಳಿದಂತೆ ಒಂದು ನಾವೆಯನ್ನು ನಿರ್ಮಿಸಿಕೊಂಡನು. ಪ್ರವಾಹ ಏರಿದಾಗ, ಮನು ನಾವೆಯನ್ನು ಏರಿದನು. ಮೀನು ಅವನ ಬಳಿ ಈಜಿಕೊಂಡು ಬಂದಿತು. ಅವನು ನಾವೆಯ ಹಗ್ಗವನ್ನು ಮೀನಿನ ಮುಂತುದಿಗೆ ಕಟ್ಟಿದನು. ಈ ವಿಧಾನದಿಂದ ಅವನು ಉತ್ತರದ ಪರ್ವತವನ್ನು ದಾಟಿದನು. ಆಗ ಮೀನು, 'ನಿನ್ನನ್ನು ನಾನು ಉಳಿಸಿದ್ದೇನೆ, ನಾವೆಯನ್ನು ಮರಕ್ಕೆ ಕಟ್ಟಿಹಾಕು. ಆದರೆ ನೀನು ಬೆಟ್ಟದ ಮೇಲಿರುವಾಗ ನೀರು ನನ್ನನ್ನು ಪ್ರತ್ಯೇಕಿಸದಂತೆ ಇರಲು ನೀನು ಪ್ರವಾಹ ಇಳಿದ ಹಾಗೆ, ನೀನೂ ಕೆಳಗೆ ಬಾ' ಎಂದು ಮೀನು ಹೇಳಿತು. ಅದು ಹೇಳಿದಂತೆ ಅವನು ಪ್ರವಾಹ ಇಳಿದುದನ್ನು ಕಂಡು ಕೆಳಗೆ ಬಂದನು. ಆದ್ದರಿಂದ ಈ ಉತ್ತರದ ಪರ್ವತಕ್ಕೆ 'ಮನುವಿನ ಅವರೋಹಣ' ಎಂದು ಹೆಸರಾಯಿತು. ಈಗ ಎಲ್ಲ ಜೀವಿಗಳನ್ನೂ ಪ್ರವಾಹ ಕೊಚ್ಚಿಬಿಟ್ಟಿದ್ದರಿಂದ ಮನು ಒಬ್ಬನೇ ಇಲ್ಲಿ ಉಳಿಯಬೇಕಾಯಿತು. ಸಂತಾನಾಪೇಕ್ಷಿಯಾದ ಅವನು ಕಠಿಣ ವ್ರತಗಳನ್ನು ಆಚರಿಸುತ್ತಾ ಪೂಜೆಗೈಯುತ್ತಿದ್ದನು. ಇವುಗಳ ಜೊತೆ ಅವನು ನೈವೇದ್ಯ ಮಾಡಿದನು. ಅವನು ತುಪ್ಪವನ್ನೂ, ಗಟ್ಟಿ ಹಾಲನ್ನೂ, ಮಜ್ಜಿಗೆ ಮತ್ತು ಮೊಸರನ್ನು ನೈವೇದ್ಯವಾಗಿ ಸಮುದ್ರಕ್ಕೆ ಸುರಿದನು. ಒಂದು ವರ್ಷವಾದ ನಂತರ ಒಬ್ಬ ಸ್ತ್ರೀ ಹುಟ್ಟಿದಳು. ಅವಳು ಲೋಳೆಯಂತೆ ಮೇಲೆದ್ದು ಬಂದಳು. ತುಪ್ಪ ಅವಳ ಕಾಲಿಗೆ

---

೧. Muir, Vol. I, ಪುಟಗಳು. ೧೮೧, ೧೮೪

ಮೆತ್ತಿಕೊಂಡಿತ್ತು. ಮಿತ್ರ ಮತ್ತು ವರುಣ ಅವಳನ್ನು ಸಂಧಿಸಿದರು. 'ನೀನು ಯಾರು?' ಎಂದು ಅವರು ಅವಳನ್ನು ಕೇಳಿದರು. 'ಮನುವಿನ ಮಗಳು' ಎಂದು ಅವಳು ಉತ್ತರಿಸಿದಳು. 'ನೀನು ನಮ್ಮವಳು ಎಂದು ಹೇಳು' ಎಂಬುದಾಗಿ ಅವರು ಮತ್ತೆ ಹೇಳಿದರು. ಅದಕ್ಕೆ ಅವಳು, 'ಇಲ್ಲ, ನನ್ನನ್ನು ಯಾರು ಹಡೆದರೊ ಅವರಿಗೆ ನಾನು ಸೇರಿದ್ದೇನೆ' ಎಂದಳು. ಅವರು ಇವಳಲ್ಲಿ ಪಾಲು ಕೇಳಿದರು. ಅವಳು ಯಾವ ಮಾತನ್ನೂ ಆಡದೆ ಮುಂದೆ ಸಾಗಿದಳು. ಅವಳು ಮನುವಿನ ಬಳಿ ಬಂದಳು. ಮನು ಅವಳಿಗೆ 'ನೀನು ಯಾರು?' ಎಂದು ಪ್ರಶ್ನಿಸಿದನು. 'ನಿನ್ನ ಮಗಳು' ಎಂದು ಉತ್ತರಿಸಿದಳು. 'ಸುಂದರಿಯೇ, ನೀನು ಹೇಗೆ ನನ್ನ ಮಗಳು?' 'ನೀನು ಸಮುದ್ರಕ್ಕೆ ಅರ್ಪಿಸಿದ ಬೆಣ್ಣೆ, ಗಟ್ಟಿ ಹಾಲು, ಮೊಸರು, ಮಜ್ಜಿಗೆ ಮುಂತಾದ ನೈವೇದ್ಯಗಳಿಂದ ನೀನು ನನ್ನನ್ನು ಹಡೆದಿರುವೆ. ನಾನು ವರಪ್ರಸಾದವಾಗಿದ್ದೇನೆ. ನನ್ನನ್ನೂ ಯಜ್ಞದಲ್ಲಿ ತೊಡಗಿಸು. ನನ್ನನ್ನು ಯಜ್ಞದಲ್ಲಿ ಸೇರಿಸಿಕೊಂಡರೆ ನಿನ್ನ ಸಂತಾನ ಮತ್ತು ಗೋಸಂಪತ್ತು ವೃದ್ಧಿಸುತ್ತದೆ. ನೀನು ನನ್ನ ಮೂಲಕ ಕೇಳುವ ವರಗಳು ಸಿದ್ಧಿಸುತ್ತವೆ' ಎಂದು ಹೇಳಿದಳು. ಆ ಪ್ರಕಾರ ಅವನು ಅವಳನ್ನು ಯಜ್ಞದ ಮಧ್ಯದಲ್ಲಿ ನಿಲ್ಲಿಸಿದನು; ಏಕೆಂದರೆ 'ನಾಂದಿ, ಮತ್ತು 'ಉಪಸಂಹಾರ' ರೂಪಗಳ ನಡುವೆ ಅದು ಬರುತ್ತದೆ, ಸಂತಾನಾಪೇಕ್ಷಿಯಾಗಿ ನಿಷ್ಠುರವಾದ ಜಪತಪಗಳನ್ನು ಮಾಡುತ್ತಾ ಅವಳೊಡನೆಯೇ ಅವನು ವಾಸಿಸುತ್ತಿದ್ದನು. ಅವಳಿಂದ ಅವನು ಈ ಮನುವಿನ ಸಂತಾನವನ್ನು ಪಡೆದನು. ಅವಳ ಜೊತೆ ಅವನು ಕೇಳಿದ ವರಗಳೆಲ್ಲ ಫಲಿಸಿದವು. ಇದೇ ಮೂಲತಃ ಇಡಾ (ಇಳಾ). ಯಾರೇ ಆಗಲೀ ಇದನ್ನರಿತು ಇಡಾ ಜೊತೆ ಬದುಕಿದರೆ ಮನು ಹಡೆದ ಈ ಸಂತಾನವನ್ನು ಹಡೆಯುತ್ತಾನೆ. ಅವಳ ಜೊತೆ ಅವನು ಪ್ರಾರ್ಥಿಸುವ ವರಗಳೆಲ್ಲ ಅವನಿಗೆ ಕೈಗೂಡುತ್ತವೆ".

(೨) ಶ.ಬ್ರಾ.[೧] ೬.೧.೨.೧೧– ಹಾಗಾಗಿ ಅವರು ಹೇಳುತ್ತಾರೆ, "ಆ ಲೋಕಗಳನ್ನು ಸೃಷ್ಟಿಸಿದ ಪ್ರಜಾಪತಿಗೆ ಈ ಭೂಮಿಯೇ ಆಧಾರವಾಯಿತು. ಅವನಿಗಾಗಿ ಈ ಗಿಡಮೂಲಿಕೆಗಳನ್ನು ಆಹಾರವಾಗಿ ಅಡುಗೆ ಮಾಡಲಾಯಿತು. ಅವನು ಆ ಆಹಾರವನ್ನು ತಿಂದನು. ಅವನು ಬಸುರಾದನು. ಅವನು ತನ್ನ ಮೇಲಿನ ಜೀವಪೋಷಕ ವಾಯುವಿನಿಂದ ದೇವತೆಗಳನ್ನು ಸೃಷ್ಟಿಸಿದನು, ತನ್ನ ಕೆಳಗಿನ ಜೀವತಾರಕ ವಾಯುವಿನಿಂದ ಮಾನವ ಸಂತತಿಯನ್ನು ಹಡೆದನು. ಅವನು ಸೃಷ್ಟಿಸಿದ್ದೆಲ್ಲ, ಅವನ ಸೃಷ್ಟಿಯೇ ಆಯಿತು. ಏನೇನು ಸೃಷ್ಟಿಯಾಗಿದೆಯೊ, ಅವೆಲ್ಲವನ್ನೂ ಪ್ರಜಾಪತಿಯೇ ಸೃಷ್ಟಿಸಿದನು."

(೩) ಶ.ಬ್ರಾ.[೨] ೭.೫.೨.೬– ಮೊದಲು ಪ್ರಜಾಪತಿಯೇ ಈ ವಿಶ್ವವಾಗಿದ್ದನು, ಅಖಂಡವಾಗಿದ್ದನು. ಅವನು 'ನಾನು ಆಹಾರವನ್ನು ಉತ್ಪಾದಿಸುತ್ತೇನೆ, ಪ್ರಜೋತ್ಪಾದನೆ ಮಾಡುತ್ತೇನೆ' ಎಂದುಕೊಂಡನು. ಅವನು ತನ್ನ ಉಸಿರಿನಿಂದ ಪ್ರಾಣಿಗಳನ್ನೂ, ಆತ್ಮದಿಂದ ಮನುಷ್ಯನನ್ನೂ, ಕಣ್ಣಿನಿಂದ ಕುದುರೆಯನ್ನೂ, ತನ್ನ ಉಸಿರಿನಿಂದ ಗೂಳಿಯನ್ನೂ, ಕಿವಿಯಿಂದ ಕುರಿಯನ್ನೂ, ದನಿಯಿಂದ ಮೇಕೆಯನ್ನೂ ರೂಪಿಸಿದನು. ಅವನು ತನ್ನ ಉಸಿರುಗಳಿಂದ ಪ್ರಾಣಿಗಳನ್ನು ಸೃಷ್ಟಿಸಿದ್ದರಿಂದ 'ಉಸಿರುಗಳೇ ಪ್ರಾಣಿಗಳಾಗಿವೆ' ಎಂದು ಮನುಷ್ಯರು ಹೇಳುತ್ತಾರೆ. ಆತ್ಮ ಉಸಿರುಗಳಲ್ಲಿ ಮೊದಲನೆಯದು. ಅವನು ತನ್ನ 'ಆತ್ಮ'ದಿಂದ ಮನುಷ್ಯನನ್ನು ರೂಪಿಸಿದ್ದರಿಂದ 'ಪ್ರಾಣಿಗಳಲ್ಲಿ ಮನುಷ್ಯನೇ ಪ್ರಪ್ರಥಮ ಮತ್ತು ಪ್ರಬಲತಮ' ಎಂದು ಜನ ಹೇಳುತ್ತಾರೆ. ಆತ್ಮವೇ ಎಲ್ಲ ಉಸಿರುಗಳಾಗಿವೆ; ಏಕೆಂದರೆ ಎಲ್ಲ ಉಸಿರುಗಳೂ ಆತ್ಮದ ಮೇಲೆ ಅವಲಂಬಿತವಾಗಿವೆ; ಅವನು ಮನುಷ್ಯನನ್ನು

---

೧. Muir, Vol. I, ಪುಟ ೨೦

೨. Muir, Vol. I, ಪುಟ ೨೪

ತನ್ನ ಆತ್ಮದಿಂದ ರೂಪಿಸಿದ್ದರಿಂದ ಮನುಷ್ಯನೇ ಎಲ್ಲ ಪ್ರಾಣಿಗಳಾಗಿದ್ದಾನೆ; ಏಕೆಂದರೆ ಇವುಗಳೆಲ್ಲ ಮನುಷ್ಯನವು' ಎಂದು ಅವರು ಹೇಳುತ್ತಾರೆ.

(೪) ಶ.ಬ್ರಾ.[೧] ೧೦.೧.೩.೧– "ಜೀವಂತ ವಸ್ತುಗಳನ್ನು ಪ್ರಜಾಪತಿ ಸೃಷ್ಟಿಸಿದನು. ಅವನು ತನ್ನ ಮೇಲಿನ ಮುಖ್ಯ ವಾಯುಗಳಿಂದ ದೇವತೆಗಳನ್ನು ಸೃಷ್ಟಿಸಿದನು; ತನ್ನ ಕೆಳಗಿನ ಮುಖ್ಯ ವಾಯುಗಳಿಂದ ನಶ್ವರ ಜೀವಿಗಳನ್ನು ಸೃಷ್ಟಿಸಿದನು. ಆಮೇಲೆ ಅವನು ಸರ್ವಜೀವಿಗಳ ಭಕ್ಷಕನಾದ ಸಾವನ್ನು ಸೃಷ್ಟಿಸಿದನು".

(೫) ಶ.ಬ್ರಾ.[೨] ೧೪.೪.೨.೧.– "ಈ ವಿಶ್ವ ಮೊದಲಿಗೆ ಪುರುಷ ರೂಪದ ಆತ್ಮ ಮಾತ್ರವಾಗಿತ್ತು. ನಿಕಟವಾಗಿ ಗಮನಿಸಿದ ಅವನಿಗೆ, ತಾನು (ಅಥವಾ ಆತ್ಮ) ಅಲ್ಲದೆ ಬೇರೇನೂ ಕಾಣಲಿಲ್ಲ. ಅವನು ಮೊದಲು, 'ಇದೆಲ್ಲ ನಾನೇ' ಎಂದನು. ಆಗ ಅವನು ನಾನು ಎಂಬ ಹೆಸರಿನ ಒಬ್ಬನಾದನು. ಆದ್ದರಿಂದ ಇವತ್ತು ಕೂಡ ಮನುಷ್ಯನನ್ನು ಕರೆದಾಗ ಅವನು 'ನಾನು' ಎಂದು ಉತ್ತರಿಸುತ್ತಾನೆ, ಆಮೇಲೆ ಅವನು ತನ್ನ ಹೆಸರು ಹೇಳುತ್ತಾನೆ. ಆದ್ದರಿಂದಲೇ ಅವನು ಮೊದಲು ತನ್ನೆಲ್ಲ ಪಾಪಗಳನ್ನೂ ಭಸ್ಮಮಾಡಿ 'ಪುರುಷ' ಆಗಿದ್ದನು. ಇದನ್ನು ಅರಿತ ಮನುಷ್ಯ ತನ್ನ 'ಅಹಂ'ಅನ್ನು ಸುಟ್ಟುಹಾಕಿ ಅವನಾಗಲು ಬಯಸುತ್ತಾನೆ. ಅವನು ಹೆದರಿದ್ದನು. ಆದ್ದರಿಂದ ಮನುಷ್ಯ ಒಬ್ಬಂಟಿ ಇದ್ದಾಗ ಹೆದರುತ್ತಾನೆ. 'ನನ್ನನ್ನು ಬಿಟ್ಟರೆ ಬೇರೇನೂ ಇಲ್ಲ. ಆದ್ದರಿಂದ ನಾನೇಕೆ ಹೆದರಬೇಕು?' ಎಂದು ಆಲೋಚಿಸಿದನು. ಆಗ ಭಯ ತೊಲಗಿತು. ಅವನೇಕೆ ಹೆದರಬೇಕಾಗಿತ್ತು? ಜನ ಎರಡನೆಯ ವ್ಯಕ್ತಿಗೆ ಹೆದರುತ್ತಾರೆ. ಸಂತೋಷವನ್ನು ಅನುಭವಿಸಲಿಲ್ಲ. ಆದ್ದರಿಂದಲೇ ಮನುಷ್ಯ ಒಬ್ಬಂಟಿಯಾಗಿದ್ದಾಗ ಅವನು ಸುಖವನ್ನು ಅನುಭವಿಸಲಾರ. ಅವನು ಎರಡನೆಯ ವ್ಯಕ್ತಿಯನ್ನು ಬಯಸಿದನು. ಅವನು ಅಪ್ಪುಗೆಯಲ್ಲಿದ್ದಾಗ ಗಂಡು ಹೆಣ್ಣು ಎರಡೂ ಆಗಿದ್ದನು. ಅವನು ಈ ಆತ್ಮವನ್ನೇ ಎರಡು ಭಾಗ ಮಾಡಿದನು. ಅದರಿಂದ ಗಂಡ ಮತ್ತು ಹೆಂಡತಿ ಎಂದು ಉದಯವಾದರು. ಆದ್ದರಿಂದಲೇ ಯಾಜ್ಞವಲ್ಕ್ಯ 'ವ್ಯಕ್ತಿ ಆತ್ಮ ಒಡೆದ ಬಟಾಣಿ ಕಾಳಿನ ಒಂದು ಹೋಳಿನಂತಿದೆ' ಎಂದು ಹೇಳಿದ್ದಾನೆ. ಹಾಗಾಗಿ ಈ ಶೂನ್ಯವನ್ನು ಹೆಣ್ಣು ತುಂಬಿದ್ದಾಳೆ. ಅವನು ಅವಳ ಜೊತೆ ಸಂಗ ಮಾಡಿದನು. ಅವರಿಂದ ಮನುಷ್ಯರು ಹುಟ್ಟಿದರು. ಆಗ ಅವಳು, 'ತನ್ನಿಂದಲೇ ನನ್ನನ್ನು ಸೃಷ್ಟಿಸಿದ ಅವನು ನನ್ನ ಜೊತೆಯೇ ಮಲಗಲು ಹೇಗೆ ಸಾಧ್ಯ? ಆ, ನಾನಿನ್ನು ಮರೆಯಾಗುತ್ತೇನೆ' ಎಂದು ಯೋಚಿಸಿದಳು. ಅವಳು ಹಸುವಾದಳು, ಅವನು ಗೂಳಿಯಾದನು; ಅವನು ಅವಳ ಜೊತೆ ಸಂಗ ಮಾಡಿದನು. ಆಗ ಅವರಿಂದ ಗೋವುಗಳು ಹುಟ್ಟಿದವು. ಆಮೇಲೆ ಅವಳು ಹೆಣ್ಣು ಕುದುರೆಯಾದಳು, ಅವನು ಗಂಡು ಕುದುರೆಯಾದನು; ಆಮೇಲೆ ಅವಳು ಹೆಣ್ಣು ಕತ್ತೆಯಾದಳು, ಅವನು ಗಂಡು ಕತ್ತೆಯಾದನು. ಅವನು ಅವಳನ್ನು ಭೋಗಿಸಿದನು. ಅವರಿಂದ ಏಕಗೊರಸಿನ ಪ್ರಾಣಿಗಳು ಉದ್ಭವವಾದವು. ಅವಳು ಮೇಕೆಯಾದಳು, ಅವನು ಹೋತವಾದನು; ಅವಳು ಹೆಣ್ಣು ಕುರಿಯಾದಳು, ಅವನು ಟಗರಾದನು. ಅವನು ಅವಳನ್ನು ಕೂಡಿದನು. ಆಗ ಅವರಿಂದ ಆಡುಗಳೂ ಕುರಿಗಳೂ ಉತ್ಪನ್ನವಾದವು. ಈ ರೀತಿಯಾಗಿ ಇರುವೆಗಳವರೆಗೆ ಎಲ್ಲ ಪ್ರಾಣಿಗಳ ಜೋಡಿಗಳೂ ಹುಟ್ಟಿದವು."

ತೈತ್ತಿರೀಯ ಬ್ರಾಹ್ಮಣದಲ್ಲಿ ಮುಂದಿನ ಕತೆಯಿದೆ :

ತೈ.ಬ್ರಾ.[೩] ೨.೨.೯.೧– "ಪ್ರಾರಂಭದಲ್ಲಿ ಈ ವಿಶ್ವ ಏನೂ ಆಗಿರಲಿಲ್ಲ. ಆಗ ಆಕಾಶ, ಭೂಮಿ, ಗಾಳಿ

---

೧. Muir, Vol. I ಪು. 31

೨. ಅದೇ I ಪು. 25

೩. ಅದೇ I ಪು. 28–29

ಇರಲಿಲ್ಲ. ಅಸ್ತಿತ್ವರಹಿತವಾಗಿದ್ದರಿಂದ ಅದು 'ನಾನು ಮೈದೋರುತ್ತೇನೆ' ಎಂದು ನಿರ್ಧರಿಸಿತು. ಅದು ಕಾವೇರಿತು. ಆ ಕಾವಿನಿಂದ ಹೊಗೆ ಹೊರಟಿತು. ಅದು ಮತ್ತೆ ಕಾವೇರಿತು. ಆ ಕಾವಿನಿಂದ ಬೆಂಕಿ ಬಂದಿತು. ಅದು ಮತ್ತೆ ಕಾವೇರಿತು. ಆ ಕಾವಿನಿಂದ ಬೆಳಕು ಹೊರಟಿತು. ಅದು ಮತ್ತೆ ಕಾವೇರಿತು. ಆ ಕಾವಿನಿಂದ ಜ್ವಾಲೆ ಹೊರಟಿತು. ಅದು ಮತ್ತೆ ಕಾವೇರಿತು. ಆ ಕಾವಿನಿಂದ ಕಿರಣಗಳು ಹೊರಟವು. ಅವು ಮತ್ತೆ ಕಾವೇರಿತು. ಆ ಕಾವಿನಿಂದ ಜ್ವಾಲೆಗಳು ಹೊರಟವು. ಅದು ಮತ್ತೆ ಕಾವೇರಿತು. ಅದು ಮೋಡದಂತೆ ಘನೀಕರಣವಾಯಿತು. ಅದರ ಚೀಲ ಒಡೆಯಿತು. ಅದು ಸಮುದ್ರವಾಯಿತು. ಆದ್ದರಿಂದಲೇ ಮನುಷ್ಯರು ಸಮುದ್ರದ ನೀರನ್ನು ಕುಡಿಯುವುದಿಲ್ಲ. ಏಕೆಂದರೆ ಅವರು ಅದನ್ನು ಜನನ ಪ್ರದೇಶವೆಂದು ಭಾವಿಸುತ್ತಾರೆ. ಆದ್ದರಿಂದಲೇ ಪ್ರಾಣಿ ಹುಟ್ಟುವಾಗ ಮೊದಲು ನೀರು ಬರುತ್ತದೆ. ಆಮೇಲೆ ದಶಹೋತ್ರಿ ಸೃಷ್ಟಿಯಾಯಿತು. ಈ ದಶಹೋತ್ರಿಯೇ ಪ್ರಜಾಪತಿಯಾಗಿದ್ದಾನೆ. ಯಾರು ಆ ಕಠಿಣ ಕಾವಿನ (ತಪಸ್ಸು) ಶಕ್ತಿಯನ್ನು ಅರ್ಥ ಮಾಡಿಕೊಂಡು ಅನುಷ್ಠಾನ ಮಾಡುತ್ತಾನೋ ಅವನು ಯಶಸ್ವಿಯಾಗುತ್ತಾನೆ. ಆದ್ದರಿಂದ ಇದು ನೀರಾಯಿತು, ದ್ರವವಾಯಿತು; ಪ್ರಜಾಪತಿ, 'ಯಾವ ಆಧಾರವಿಲ್ಲದ ಇದರಿಂದ ನಾನು ಹುಟ್ಟಿದ್ದರೆ, ಯಾವ ಉದ್ದೇಶಕ್ಕಾಗಿ ಹುಟ್ಟಿದ್ದೇನೆ' ಎಂದು ಪ್ರಲಾಪಿಸಿದನು. ಈ ಜಲರಾಶಿಗೆ ಬಿದ್ದುದು ಭೂಮಿಯಾಯಿತು, ಅವನು ಒರೆಸಿದ್ದು ಗಾಳಿಯಾಯಿತು. ಅವನು ಒರೆಸಿ ಮೇಲಕ್ಕೆಸೆದದ್ದು ಆಕಾಶವಾಯಿತು. ಅವನು ಪ್ರಲಾಪಿಸಿದ ಸಂದರ್ಭದಿಂದ ಈ ಎರಡು ಪ್ರದೇಶಗಳಿಗೆ 'ರೋದಸಿ' (ಪದಗಳು) ಎಂಬ ಹೆಸರು ಬಂತು. ಇದನ್ನು ಅರಿತ ಮನುಷ್ಯನ ಮನೆಯಲ್ಲಿ ಅವರು ಅಳುವುದಿಲ್ಲ. ಹೀಗೆ ಈ ಲೋಕಗಳ ಜನನವಾಯಿತು. ಈ ಲೋಕಗಳ ಜನನವನ್ನು ಬಲ್ಲವನು ಈ ಲೋಕಗಳಲ್ಲಿ ನೋವನ್ನು ಅನುಭವಿಸುವುದಿಲ್ಲ. ಅವನು ಈ ಭೂಮಿಯನ್ನೇ ಆಧಾರವಾಗಿ ಇಟ್ಟುಕೊಂಡನು. ಈ ಭೂಮಿಯನ್ನು ಆಧಾರವಾಗಿಟ್ಟುಕೊಂಡಮೇಲೆ ಅವನು 'ನಾನು ಸಂತಾನೋತ್ಪತ್ತಿ ಮಾಡಬೇಕು' ಎಂದು ಆಶಿಸಿದನು. ಅವನು ಉಗ್ರ ತಪಸ್ಸನ್ನು ಮಾಡಿದನು. ಅವನು ಬಸಿರಾದನು. ತನ್ನ ಹೊಟ್ಟೆಯಿಂದ ಅವನು ಅಸುರರನ್ನು ಹೆತ್ತನು. ಅವರಿಗೆ ಮಣ್ಣಿನ ಪಾತ್ರೆಯಲ್ಲಿ ಹಾಲು ಕುಡಿಸಿದನು. ಅವನು ತನ್ನ ದೇಹವನ್ನು ಬಿಸುಡಿದನು. ಆಗ ಕತ್ತಲಾಯಿತು. ಅವನು 'ನಾನು ಸಂತಾನೋತ್ಪತ್ತಿ ಮಾಡಬೇಕು' ಎಂದು ಆಶಿಸಿದನು. ಉಗ್ರ ತಪಸ್ಸನ್ನು ಮಾಡಿದನು. ಅವನು ಗರ್ಭ ಧರಿಸಿದನು. ತನ್ನ ಸಂತಾನೋತ್ಪತ್ತಿ ಸಾಧನದಿಂದ ಅವನ್ನು ಜೀವಿಗಳನ್ನು ಸೃಷ್ಟಿಸಿದನು. ಆದ್ದರಿಂದ ಅವನು ತನ್ನ ಸಂತಾನ ಸಾಧನದಿಂದ ಅವರನ್ನು ಸೃಷ್ಟಿಸಿದ್ದರಿಂದಲೇ ಅವರು ಅಸಂಖ್ಯಾತರಾಗಿದ್ದಾರೆ. ಅವರಿಗೆ ಅವನು ಮರದ ಪಾತ್ರೆಯಿಂದ ಹಾಲೂಡಿದನು. ಅವನು ತನ್ನ ಆ ದೇಹವನ್ನು ವಿಸರ್ಜಿಸಿದನು. ಅದು ತಿಂಗಳ ಬೆಳಕಾಯಿತು. ಆಮೇಲೆ ಅವನು, 'ನಾನು ಸಂತಾನೋತ್ಪತ್ತಿ ಮಾಡಬೇಕು' ಎಂದು ಬಯಸಿದನು. ಅವನು ಉಗ್ರ ತಪಸ್ಸು ಆಚರಿಸಿದನು. ಅವನು ಗರ್ಭವತಿಯಾದನು. ತನ್ನ ಕಂಕುಳಿನಿಂದ ಅವನು ಋತುಗಳನ್ನು ಸೃಷ್ಟಿಸಿದನು. ಅವುಗಳಿಗೆ ಬೆಳ್ಳಿ ಪಾತ್ರೆಯಿಂದ ಬೆಣ್ಣೆಯನ್ನು ಊಡಿದನು. ಅವನು ತನ್ನ ಆ ದೇಹವನ್ನು ವಿಸರ್ಜಿಸಿದನು. ಅದು ಹಗಲು ಇರುಳನ್ನು ಸೇರಿಸುವ ಸಮಯವಾಯಿತು. ಆಮೇಲೆ ಅವನು 'ನಾನು ಹೆರಬೇಕು' ಎಂದು ಆಸೆಪಟ್ಟನು. ಉಗ್ರ ತಪಸ್ಸು ಮಾಡಿದನು. ಗರ್ಭಧಾರಣೆ ಮಾಡಿದನು. ಅವನು ತನ್ನ ಬಾಯಿಂದ ದೇವತೆಗಳನ್ನು ಸೃಷ್ಟಿಸಿದನು. ಅವರಿಗೆ ಸೋಮರಸವನ್ನು ಚಿನ್ನದ ಪಾತ್ರೆಯನ್ನು ಕುಡಿಸಿದನು. ಆ ದೇಹವನ್ನು ಕೂಡ ಅವನು ತ್ಯಜಿಸಿದನು. ಅದು ಹಗಲಾಯಿತು. ಇವು ಪ್ರಜಾಪತಿ ಹಡೆದ ಸಂತಾನ. ಇದನ್ನು ಬಲ್ಲವನು ಸಂತಾನವನ್ನು ಸೃಷ್ಟಿ ಮಾಡುತ್ತಾನೆ. 'ಹೀಗೆ ನಮಗೆ ದಿವಸ ಬಂದಿತು!' ಈ ಉದ್ಗಾರ ದೇವತೆಗಳ ದೇವತ್ವವನ್ನು ವ್ಯಕ್ತಪಡಿಸುತ್ತದೆ. ದೇವತೆಗಳ ದೇವತ್ವವನ್ನು ಬಲ್ಲವನು ದೇವತೆಗಳನ್ನು ಹೊಂದುತ್ತಾನೆ. ಹೀಗೆ

ಹಗಲು ಮತ್ತು ರಾತ್ರಿಗಳು ಹುಟ್ಟಿದವು. ಹಗಲು ರಾತ್ರಿಗಳ ಹುಟ್ಟನ್ನು ಬಲ್ಲವನು ಹಗಲು ಮತ್ತು ರಾತ್ರಿಗಳ ಸಮಯದಲ್ಲಿ ನೋವನ್ನು ಅನುಭವಿಸುವುದಿಲ್ಲ. ಶೂನ್ಯದಿಂದ ಮನಸ್ಸು (ಅಥವಾ ಆತ್ಮ) ಮೂಡಿತು. ಮನಸ್ಸು ಪ್ರಜಾಪತಿಯನ್ನು ಸೃಷ್ಟಿಸಿತು. ಪ್ರಜಾಪತಿ ಸಂತಾನೋತ್ಪತ್ತಿ ಮಾಡಿದನು. ಇದೆಲ್ಲ, ಅಸ್ತಿತ್ವದಲ್ಲಿರುವುದೆಲ್ಲ, ಸಂಪೂರ್ಣವಾಗಿ ಮನಸ್ಸಿನ ಮೇಲೆ ನಿಂತಿದೆ. ಇದನ್ನೇ ಆ ಬ್ರಹ್ಮ ಸ್ವೋವಸ್ಯಾಸ ಎಂದು ಕರೆದನು. ಹೀಗೆ ಉಷೆಯನ್ನು ಬಲ್ಲ ಮನುಷ್ಯ ಹೆಚ್ಚು ಹೆಚ್ಚು ಪ್ರತಿಭಾವಂತನಾಗುತ್ತಾನೆ; ಅವನು ಸಂತಾನದಲ್ಲಿ ಸಮೃದ್ಧಿ ಹೊಂದುತ್ತಾನೆ, ಗೋಸಂಪತ್ತಿನಿಂದ ಶ್ರೀಮಂತನಾಗುತ್ತಾನೆ; ಅವನು ಪರಮೇಷ್ಠಿ ಎಂಬ ಸ್ಥಾನವನ್ನು ಪಡೆಯುತ್ತಾನೆ."

(೩)ತೈ.ಬ್ರಾ.[೧] ೨.೩.೮.೧– "ಪ್ರಜಾಪತಿ, 'ನಾನು ಸಂತಾನ ಪಡೆಯಬೇಕಲ್ಲ' ಎಂದು ಆಸೆಪಟ್ಟನು. ಅವನು ಉಗ್ರತಪಸ್ಸು ಆಚರಿಸಿದನು. ಗರ್ಭವತಿಯಾದನು. ಅರಿಶಿಣ ಕಂದುಬಣ್ಣವಾದನು. ಆದ್ದರಿಂದ ಹೆಂಗಸು ಬಸುರಿಯಾದಾಗ ಅರಿಶಿಣ ಬಣ್ಣವಾಗುವುದರಿಂದ ಕಂದುಬಣ್ಣಕ್ಕೆ ತಿರುಗುತ್ತಾಳೆ. ಅವನು ಭ್ರೂಣಧಾರಣೆ ಮಾಡಿದ್ದರಿಂದ ಬಳಲಿ ಬೆಂಡಾದನು. ಅವನು ಸುಸ್ತಾದುದರಿಂದ ಕಪ್ಪುಮಿಶ್ರಿತ ಕಂದುಬಣ್ಣವಾದನು. ಹಾಗಾಗಿ ಬಸವಳಿದ ಮನುಷ್ಯ ಕಪ್ಪುಮಿಶ್ರಿತ ಕಂದುಬಣ್ಣವಾಗುತ್ತಾನೆ. ಅವನ ಉಸಿರು ಸಜೀವವಾಯಿತು. ಆ ಉಸಿರಿನಿಂದ (ಅಸು) ಅವನು ಅಸುರರನ್ನು ಸೃಷ್ಟಿಸಿದನು. ಅಸುರರಿಂದ ಅಸುರ ಸ್ವಭಾವ ಬಂದಿತು. ಅಸುರರ ಈ ಅಸುರ ಸ್ವಭಾವವನ್ನು ಬಲ್ಲವನು ಉಸಿರನ್ನುಳ್ಳ ಮನುಷ್ಯನಾಗುತ್ತಾನೆ. ಉಸಿರು ಅವನನ್ನು ಬಿಟ್ಟುಹೋಗುವುದಿಲ್ಲ. ಅವನು ಅಸುರರನ್ನು ಸೃಷ್ಟಿಸಿದ ಮೇಲೆ ತನ್ನನ್ನೇ ಜನಕನೆಂದು ಭಾವಿಸಿದನು. ಆಮೇಲೆ ಅವನು ಪಿತೃಗಳನ್ನು ಸೃಷ್ಟಿಸಿದನು. ಅದರಿಂದ ಪಿತೃಗಳ ಪಿತೃತ್ವ ಸ್ಥಾಪನೆಯಾಯಿತು. ಯಾರು ಪಿತೃಗಳ ಪಿತೃತ್ವವನ್ನು ಅರಿತಿರುವನೋ ಅವನು ತನಗೆಯೇ ಪಿತೃವಾಗುತ್ತಾನೆ; ಪಿತೃಗಳು ಅವನ ನೈವೇದ್ಯಕ್ಕೆ ಬರುತ್ತಾರೆ. ಪಿತೃಗಳನ್ನು ಸೃಷ್ಟಿಸಿದ ಮೇಲೆ ಅವನು ಯೋಚಿಸಿದನು. ಆಮೇಲೆ ಮನುಷ್ಯರನ್ನು ಸೃಷ್ಟಿಸಿದನು. ಅದರಿಂದ ಮಾನವರ ಮನುಷ್ಯತ್ವ ಸ್ಥಾಪಿತವಾಯಿತು. ಯಾರು ಮಾನವರ ಮನುಷ್ಯತ್ವವನ್ನು ಅರಿತಿರುವನೋ ಅವನು ಬುದ್ಧಿವಂತನಾಗುತ್ತಾನೆ. ಅವನನ್ನು ಮನಸ್ಸು ಪರಿತ್ಯಜಿಸುವುದಿಲ್ಲ. ಅವನು ಮನುಷ್ಯರನ್ನು ಸೃಷ್ಟಿಸುತ್ತಿದ್ದಾಗ ನಭದಲ್ಲಿ ಹಗಲು ಕಾಣಿಸಿತು. ಆಮೇಲೆ ಅವನು ದೇವತೆಗಳನ್ನು ಸೃಷ್ಟಿಸಿದನು. ಇದರಿಂದ ದೇವತೆಗಳ ಅಧಿದೇವತ್ವ ಸ್ಥಾಪಿತವಾಯಿತು. ಹೀಗೆ ಯಾರು ದೇವತೆಗಳ ಅಧಿದೇವನವನ್ನು ಬಲ್ಲವನಾಗಿರುತ್ತಾನೊ ಅವನಿಗೆ ನಭದಲ್ಲಿ ಹಗಲು ಕಾಣಿಸುತ್ತದೆ. ಇವೇ ಆ ನಾಲ್ಕು ಝರಿಗಳು, ಅಂದರೆ ದೇವತೆಗಳು, ಮನುಷ್ಯರು, ಪಿತೃಗಳು ಮತ್ತು ಅಸುರರು. ಇವುಗಳಲ್ಲೆಲ್ಲಾ ನೀರು ಗಾಳಿಯಂತಿದೆ."

(೪) ತೈ.ಬ್ರಾ.[೨] ೩.೨.೩.೯– "ಈ ಶೂದ್ರ ಶೂನ್ಯದಿಂದ ಹುಟ್ಟಿ ಬಂದಿದ್ದಾನೆ"

ತೈತ್ತಿರೀಯಾರಣ್ಯಕದಲ್ಲಿ ಸೃಷ್ಟಿಯ ಉಗಮದ ಬಗ್ಗೆ ಈ ಮುಂದಿನ ವಿವರಣೆಯನ್ನು ಕೊಡಲಾಗಿದೆ:

ತೈ.ಆ.[೩] ೧.೧೨.೩.೧– "ಜಲ, ದ್ರವ, ಪದ್ಮಪತ್ರದ ಮೇಲೆ ಪ್ರಜಾಪತಿ ಒಬ್ಬನನ್ನೇ ಸೃಜಿಸಲಾಯಿತು. ಅವನೊಳಗೆ, ಅವನ ಮನಸ್ಸಿನಲ್ಲಿ ಆಸೆ ಹುಟ್ಟಿತು: 'ಇದನ್ನು ನಾನು ಸೃಷ್ಟಿಸುತ್ತೇನೆ', ಅಲ್ಲಿಂದೀಚೆಗೆ, ಮನುಷ್ಯ ತನ್ನ ಮನಸ್ಸಿನಲ್ಲಿ ಉದ್ದೇಶಿಸಿದ್ದನ್ನು ಮಾತಿನಲ್ಲಿ ಘೋಷಿಸುತ್ತಾನೆ, ಕ್ರಿಯೆಯಲ್ಲಿ ಆಚರಿಸುತ್ತಾನೆ. ಆದ್ದರಿಂದಲೇ,

---

೧. Muir, Vol. I ಪು. 23

೨. Muir, Vol. I ಪು. 21

೩. Muir, Vol. I ಪು. 32

'ಮೊದಲು ಅಲ್ಲಿ ಆಸೆ ಹುಟ್ಟಿತು, ಅದೇ ಮನಸ್ಸಿನ ಅದಿಬೀಜ. ಇದನ್ನು ತಮ್ಮ ಬುದ್ಧಿಯಿಂದ ಶೋಧಿಸಿದ ಋಷಿಗಳು, ಸತ್ ಮತ್ತು ಅಸತ್‌ನ ನಡುವಣ ಬಾಂಧವ್ಯವೆಂದು ಹೃದಯದಲ್ಲಿ ಕಂಡುಕೊಂಡರು' (ಋಗ್ವೇದ ೧೦.೧೨೯.೪) ಎಂಬ ಈ ಮಂತ್ರ ಘೋಷಿತವಾಯಿತು. ಇದನ್ನು ಬಲ್ಲ ಮನುಷ್ಯನಿಗೆ ಬಯಸಿದುದೆಲ್ಲ ಕೈಗೂಡುತ್ತದೆ. ಅವನು ಉಗ್ರ ತಪಸ್ಸನ್ನು ಆಚರಿಸಿದನು. ಉಗ್ರ ತಪಸ್ಸನ್ನು ಆಚರಿಸಿ ಅವನು ತನ್ನ ದೇಹವನ್ನು ಅಲುಗಿಸಿದನು. ಅದರ ಮಾಂಸದಿಂದ ಅರುಣರು, ಕೇತುಗಳು ಮತ್ತು ವಾತರಾಶನರು ಎಂಬ ಋಷಿಗಳು ಹುಟ್ಟಿದರು. ಅವನ ಉಗುರುಗಳು ವೈಖಾನಸರಾದವು, ಅವನ ರೋಮಗಳು ವಾಲಖಿಲ್ಯರಾದರು. ಅವನ ಮೈ ಬೆವರಿನಿಂದ ನೀರಿನಲ್ಲಿ ಚಲಿಸುವ ಆಮೆ ಹುಟ್ಟಿತು. ಆಗ ಅವನು, 'ನೀನು ನನ್ನ ಚರ್ಮ ಮಾಂಸಗಳಿಂದ ಹುಟ್ಟಿರುವೆ' ಎಂದು ಹೇಳಿದನು. 'ಇಲ್ಲ, ನಾನು ಇಲ್ಲಿ ಮೊದಲೇ ಇದ್ದೆ' ಎಂದು ಆಮೆಯ ಉತ್ತರಿಸಿತು. ನಾನು ಮೊದಲೇ ಇದ್ದೆ ಎಂಬ ಮಾತಿನಲ್ಲಿ ಮನುಷ್ಯನ ಪುರುಷತ್ವ ಅಡಗಿದೆ. ಅವನು ಸಾವಿರ ತಲೆಯ, ಸಾವಿರ ಕಣ್ಣಿನ, ಸಾವಿರ ಕಾಲಿನ (ಋ.ವೇ.೧೦.೯೦.೧) ಪುರುಷನಾದನು. ಅವನಿಗೆ ಪ್ರಜಾಪತಿ, 'ನೀನು ನನಗಿಂತ ಮೊದಲು ಹುಟ್ಟಿದೆ, ನೀನೇ ಇದನ್ನು ಮೊದಲು ಮಾಡು' ಎಂದು ಹೇಳಿದನು. ತನ್ನ ಎರಡೂ ಕೈಗಳ ಬೊಗಸೆಯಲ್ಲಿ ನೀರು ತೆಗೆದುಕೊಂಡು ಅದನ್ನು ಪೂರ್ವಕ್ಕೆ ಇಟ್ಟು, 'ತಥಾಸ್ತು, ಓ ಸೂರ್ಯ ಭಗವಾನ್' ಎಂದು ಜಪಿಸಿದನು. ಅದರಿಂದ ಸೂರ್ಯ ಹುಟ್ಟಿದನು. ಅದು ಪೂರ್ವ ದಿಕ್ಕಾಯಿತು. ಆಗ ಅರುಣಕೇತು ಆ ನೀರನ್ನು ದಕ್ಷಿಣಕ್ಕೆ ಇಟ್ಟು, 'ತಥಾಸ್ತು, ಓ ಅಗ್ನಿ' ಎಂದು ಹೇಳಿದನು. ಆಗ ಅಗ್ನಿ ಹುಟ್ಟಿದನು. ಅದೇ ದಕ್ಷಿಣ ದಿಕ್ಕಾಯಿತು. ಆಮೇಲೆ ಅರುಣಕೇತು ಆ ನೀರನ್ನು ಪಶ್ಚಿಮಕ್ಕೆ ಇಟ್ಟು, 'ತಥಾಸ್ತು, ಓ ವಾಯು' ಎಂದನು. ಆಗ ವಾಯು ಹುಟ್ಟಿದನು. ಅದು ಪಶ್ಚಿಮ ದಿಕ್ಕಾಯಿತು. ನಂತರ ಅರುಣಕೇತು ಆ ನೀರನ್ನು ಉತ್ತರಕ್ಕೆ ಇಟ್ಟು, 'ತಥಾಸ್ತು, ಓ ಇಂದ್ರ' ಎಂದನು. ಆಗ ಇಂದ್ರ ಮೂಡಿದನು. ಅದು ಉತ್ತರ ದಿಕ್ಕಾಯಿತು. ಆಮೇಲೆ ಅರುಣಕೇತು ಆ ನೀರನ್ನು ಮಧ್ಯದಲ್ಲಿ ಇಟ್ಟು, 'ತಥಾಸ್ತು, ಓ ಪೂಷನ್' ಎಂದನು. ಆಗ ಪೂಷನ್ ಹುಟ್ಟಿದನು. ಇದೊಂದು ದಿಕ್ಕಾಯಿತು. ಆಗ ಅರುಣಕೇತು ಆ ನೀರನ್ನು ಮೇಲಿಟ್ಟು 'ತಥಾಸ್ತು, ದೇವತೆಗಳೆ' ಎಂದನು. ಆಗ ದೇವತೆಗಳು, ಮನುಷ್ಯರು, ಪಿತೃಗಳು, ಗಂಧರ್ವರು ಮತ್ತು ಅಪ್ಸರೆಯರು ಉದ್ಭವಿಸಿದರು. ಇದು ಮೇಲಿನ ದಿಕ್ಕಾಯಿತು. ಅದರಿಂದ ಬಿದ್ದ ಹನಿಗಳಿಂದ ಅಸುರರು, ರಾಕ್ಷಸರು ಮತ್ತು ಪಿಶಾಚರು ಹುಟ್ಟಿದರು. ಆದ್ದರಿಂದ ಅವರು ವಿನಾಶವಾದರು. ಏಕೆಂದರೆ ಅವರು ಬಿದ್ದ ಹನಿಗಳಿಂದ ಹುಟ್ಟಿದವರು, ಹಾಗಾಗಿ ಈ ಮಂತ್ರವನ್ನು ಹೇಳಲಾಗಿದೆ: 'ಜ್ಞಾನವುಳ್ಳ ಮತ್ತು ಸ್ವಯಂಭೂವನ್ನು ಉತ್ಪಾದಿಸುವ ಸಾಗರಗಳು ಬಸುರಾದವು; ಅವುಗಳಿಂದ ಈ ಜೀವಿಗಳು ಹುಟ್ಟಿದವು. ಇದೆಲ್ಲ ಸಾಗರ ಜಲರಾಶಿಯಿಂದ ಉತ್ಪನ್ನವಾಯಿತು. ಆದ್ದರಿಂದ ಇದೆಲ್ಲವೂ ಬ್ರಹ್ಮ ಸ್ವಯಂಭೂವಿನಿಂದ ಆಗಿದೆ.' ಆದ್ದರಿಂದ ಇದೆಲ್ಲವೂ ಅಸ್ಥಿರವಾಗಿದ್ದಷ್ಟೇ ಸಡಿಲವಾಗಿತ್ತು. ಪ್ರಜಾಪತಿಯೂ ಹಾಗೇ ಇದನ್ನು. ತನ್ನನ್ನು ತಾನೇ ಸೃಷ್ಟಿಸಿಕೊಂಡ ಅವನು ಅದರೊಳಕ್ಕೆ ಹೋದನು. ಅದನ್ನು ಈ ಶ್ಲೋಕದಲ್ಲಿ ಹೇಳಿದೆ: 'ಪ್ರಪಂಚವನ್ನೂ, ಅಲ್ಲಿರುವ ಎಲ್ಲಾ ವಸ್ತುಗಳನ್ನೂ, ಎಲ್ಲಾ ಮಧ್ಯವರ್ತಿ ದಿಕ್ಕುಗಳನ್ನೂ ಸೃಷ್ಟಿಸಿದ ಪ್ರಥಮ ಯಜ್ಞದಲ್ಲೆ ಹುಟ್ಟಿದ ಪ್ರಜಾಪತಿ ತನ್ನೊಳಗೆ ತಾನೇ ಪ್ರವೇಶಿಸಿದನು'.

೬

ಈ ವಿಷಯದ ಬಗ್ಗೆ ಮಹಾಭಾರತ ತನ್ನದೇ ಆದ ಕಾಣಿಕೆ ನೀಡಿ ಅದು ಸೃಷ್ಟಿ ಸಿದ್ಧಾಂತ ಮನುವಿನದೆಂದು ಪ್ರತಿಪಾದಿಸುತ್ತದೆ.

ಅರಣ್ಯಪರ್ವ[೧]ದಲ್ಲಿ ಹೀಗಿದೆ:

"ವೈವಸ್ವತ ಸುತನಾದ ಮನು ಮಹರ್ಷಿ ಗಾಂಭೀರ್ಯದಲ್ಲಿ ಕಾಂತಿಯಲ್ಲಿ ಪ್ರಜಾಪತಿಗೆ ಸಮನಾಗಿದ್ದನು. ಶಕ್ತಿಯಲ್ಲಿ, ಪ್ರಚಂಡ ಪರಾಕ್ರಮದಲ್ಲಿ, ಐಶ್ವರ್ಯದಲ್ಲಿ, ತಪಃಪ್ರಭೆಯಲ್ಲಿ ಅವನು ತನ್ನ ತಂದೆ ಮತ್ತು ತನ್ನ ತಾತರಿಬ್ಬರನ್ನೂ ಮೀರಿಸಿದನು. ಒಂಟಿಕಾಲಿನ ಮೇಲೆ ತೋಳನ್ನು ಮೇಲೆತ್ತಿ, ವಿಶಾಲವಾದ ಬದರಿಯ ಮೇಲೆ ನಿಂತು ಉಗ್ರ ತಪಸ್ಸನ್ನು ಮಾಡಿದನು. ಈ ಉಗ್ರ ತಪಸ್ಸನ್ನು ಅವನು ತಲೆಕೆಳಗೆ ಮಾಡಿ, ಕಣ್ಣುರೆಪ್ಪೆ ಮಿಟುಕಿಸದೆ ೧೦,೦೦೦ ವರ್ಷಗಳ ಕಾಲ ಆಚರಿಸಿದನು. ಒಮ್ಮೆ ಹರಿದು ಉದುರುತ್ತಿದ್ದ ಬಟ್ಟೆಯನ್ನು ತೊಟ್ಟು, ಜಟಾಧಾರಿಯಾಗಿ ಚಿರಿಣಿ ನದಿಯ ದಡದ ಮೇಲೆ ಅವನಿದ್ದಾಗ ಅಲ್ಲಿಗೆ ಒಂದು ಸಣ್ಣ ಮೀನು ಬಂದು ಹೀಗೆ ಹೇಳಿತು : 'ಮಹಾಸ್ವಾಮಿ, ನಾನೊಂದು ಸಣ್ಣ ಮೀನು; ದೊಡ್ಡ ಮೀನುಗಳನ್ನು ಕಂಡರೆ ನನಗೆ ಹೆದರಿಕೆ, ಅವುಗಳಿಂದ ನೀನು ನನ್ನನ್ನು ಕಾಪಾಡಬೇಕು. ಏಕೆಂದರೆ ಪ್ರಬಲ ಮೀನುಗಳು ದುರ್ಬಲವಾದವುಗಳನ್ನು ತಿಂದುಬಿಡುತ್ತವೆ; ಇದೇ ನಮ್ಮ ಜೀವನ ಮಾರ್ಗವಾಗಿ ಅನೂಚಾನವಾಗಿ ಬಂದಿದೆ. ಭಯದ ಈ ಪ್ರವಾಹದಲ್ಲಿ ಮುಳುಗಿಹೋಗುತ್ತಿರುವ ನನ್ನನ್ನು ನೀನು ಉಳಿಸು. ನಿನ್ನ ಉಪಕಾರಕ್ಕೆ ಪ್ರತ್ಯುಪಕಾರ ಮಾಡುತ್ತೇನೆ.' ಇದನ್ನು ಕೇಳಿದ ಮನು, ಕರುಣಾಭರಿತನಾದನು; ಆ ಮೀನನ್ನು ತನ್ನ ಕೈಗೆತ್ತಿಕೊಂಡು ನೀರಿಗೆ ತಂದು ಚಂದ್ರನ ಬೆಳಕಿನಂತೆ ಹೊಳೆಯುತ್ತಿದ್ದ ಜಾಡಿಗೆ ಹಾಕಿದನು. ಅದರಲ್ಲಿ ಸಾಕಲ್ಪಟ್ಟ ಮೀನು ದೊಡ್ಡದಾಗಿ ಬೆಳೆಯಿತು. ಏಕೆಂದರೆ ಮನು ಅದನ್ನು ತನ್ನ ಮಗನಂತೆಯೇ ನೋಡಿಕೊಂಡನು. ಬಹಳ ಸಮಯವಾದ ಮೇಲೆ ಅದು ತುಂಬ ದೊಡ್ಡದಾಗಿ ಬೆಳೆದು ಆ ಜಾಡಿಗೆ ಹಿಡಿಸದಾಯಿತು. ಆಗ ಮನುವನ್ನು ನೋಡಿ ಅದು ಹೀಗೆಂದಿತು: 'ನಾನು ಹೇಗೊ ಬದುಕಿಕೊಳ್ಳುತ್ತೇನೆ; ನನ್ನನ್ನು ಬೇರೆಡೆ ಬಿಟ್ಟುಬಿಡು.' ಆಗ ಅದನ್ನು ಜಾಡಿಯಿಂದ ಹೊರತೆಗೆದು ಒಂದು ದೊಡ್ಡ ಕೊಳದೊಳಕ್ಕೆ ಮನು ಬಿಟ್ಟನು. ಅಲ್ಲಿ ಅದು ಅನೇಕ ವರ್ಷಗಳವರೆಗೆ ಬೆಳೆಯಿತು. ಆ ಕೊಳ ಎರಡು ಯೋಜನ ಉದ್ದ ಒಂದು ಯೋಜನ ಅಗಲದಷ್ಟಿದ್ದರೂ ಆ ಕಮಲನೇತ್ರದ ಮೀನಿಗೆ ಚಲಿಸಲು ಸ್ಥಳ ಸಾಲದಾಯಿತು. ಅದು ಮತ್ತೆ ಮನುವಿಗೆ ಹೇಳಿತು, 'ಸಾಗರ ರಾಜನ ಪ್ರೀತಿಯ ರಾಣಿಯಾದ ಗಂಗೆಗೆ ನನ್ನನ್ನು ತೆಗೆದುಕೊಂಡು ಹೋಗು. ಅಲ್ಲಿ ನಾನು ಬದುಕಿಕೊಳ್ಳುತ್ತೇನೆ; ಅಥವಾ ನಿನಗೆ ಸರಿ ತೋರಿದಂತೆ ಮಾಡು, ಏಕೆಂದರೆ ನಿನ್ನಿಂದಾಗಿ ನಾನು ಬಹಳ ದೊಡ್ಡದಾಗಿ ಬೆಳೆದಿದ್ದೇನೆ, ನಿನ್ನ ಅಧಿಕಾರಕ್ಕೆ ಶರಣು ಹೋಗುತ್ತೇನೆ.' ಅದೇ ಪ್ರಕಾರವಾಗಿ ಮನು ಮೀನನ್ನು ತೆಗೆದುಕೊಂಡು ಹೋಗಿ ಗಂಗಾನದಿಗೆ ಬಿಟ್ಟನು. ಅಲ್ಲಿ ಅದು ಸ್ವಲ್ಪ ಕಾಲವಿದ್ದು ಇನ್ನೂ ಬೆಳೆಯಿತು; ಮತ್ತೆ ಅದು ಮನುವಿಗೆ ಹೇಳಿತು, 'ನನ್ನ ಸ್ಥೂಲಶರೀರದಿಂದಾಗಿ ಗಂಗೆಯಲ್ಲಿ ನಾನು ಚಲಿಸಲಾರೆ; ನನ್ನ ಮೇಲೆ ದಯೆ ತೋರಿ ನನ್ನನ್ನು ಸಾಗರಕ್ಕೆ ಕೊಂಡೊಯ್ಯಿ'. ಅದನ್ನು ಮನು ಗಂಗೆಯಿಂದ ತೆಗೆದುಕೊಂಡು ಹೋಗಿ ಸಮುದ್ರಕ್ಕೆ ಬಿಟ್ಟನು. ಅದು ಬೃಹತ್ ಗಾತ್ರವಾಗಿದ್ದರೂ ಮನು ಆ ಮೀನನ್ನು ಸುಲಭವಾಗಿ ಹೊತ್ತುಕೊಂಡು ಹೋದನು. ಅದು ಸ್ಪರ್ಶಕ್ಕೂ ವಾಸನೆಗೂ ಹಿತವಾಗಿತ್ತು. ಅದನ್ನು ಸಾಗರಕ್ಕೆ ಬಿಟ್ಟಾಗ ಅದು ಮನುವಿಗೆ ಹೀಗೆಂದಿತು: 'ಮಹಾಸ್ವಾಮಿ, ತಾವು ನನ್ನನ್ನು ಎಲ್ಲ ರೀತಿಯಿಂದಲೂ ಕಾಪಾಡಿದ್ದೀರಿ;

---

೧. Muir, Vol. I ಪು. 199–201

ಕಾಲ ಬಂದಾಗ ನೀವು ಏನು ಮಾಡಬೇಕೆಂಬುದನ್ನು ಈಗ ಹೇಳುತ್ತೇನೆ ಕೇಳಿ, ಭೂಮಿಯ ಮೇಲಿರುವ ಚರಾಚರ ವಸ್ತುಗಳೆಲ್ಲ ಬಹುಬೇಗ ನಾಶಹೊಂದುತ್ತವೆ. ಲೋಕವನ್ನು ಶುದ್ಧಿ ಮಾಡುವ ಕಾಲ ಈಗ ಬಂದಿದೆ. ಆದ್ದರಿಂದ ನಿಮಗೆ ಅತ್ಯುತ್ತಮವಾದುದನ್ನು ಹೇಳುತ್ತೇನೆ. ಚರಾಚರವಾದ ಈ ವಿಶ್ವಕ್ಕೆ ಭಯಂಕರ ಕಾಲ ಬಂದಿದೆ. ನೀನು ಬಲವಾದ ಹಡಗನ್ನು ಮಾಡಿಕೊ ಅದಕ್ಕೆ ಹಗ್ಗವಿರಲಿ; ಅದನ್ನು ಸಪ್ತರ್ಷಿಗಳ ಜೊತೆ ಹತ್ತಿಕೊ; ಹಿಂದಿನ ಕಾಲದಲ್ಲಿ ಬ್ರಾಹ್ಮಣರು ವರ್ಣಿಸಿರುವ ಬಗೆಬಗೆಯ ಮತ್ತು ಎಚ್ಚರದಿಂದ ಆರಿಸಿ ಉಳಿಸಿದ್ದ ಬೀಜಗಳನ್ನು ಅದರಲ್ಲಿ ತುಂಬಿಕೊಂಡು ಹೊರಡು. ಹಡಗಿನಲ್ಲಿ ಕುಳಿತಾಗ, ನನಗಾಗಿ ಹುಡುಕು. ನನ್ನ ಕೊಂಬಿನಿಂದ ನೀನು ನನ್ನನ್ನು ಗುರುತು ಹಿಡಿಯಬಹುದು. ಸರಿ ಹಾಗೆಯೇ ಮಾಡು; ನಿನಗೆ ಒಳ್ಳೆಯದಾಗಲಿ, ಹೊರಡು. ನಾನಿಲ್ಲದೆ ಈ ಮಹಾಸಾಗರವನ್ನು ನೀನು ದಾಟಲಾರೆ. ನನ್ನ ಮಾತನ್ನು ಅನುಮಾನಿಸಬೇಡ.' ಅದಕ್ಕೆ ಮನು ಉತ್ತರಿಸಿದ: 'ನೀನು ಹೇಳಿದ ಹಾಗೆ ಮಾಡುತ್ತೇನೆ.'

ಅವರು ಪರಸ್ಪರ ಬೀಳ್ಕೊಂಡ ಮೇಲೆ ತಮ್ಮ ದಾರಿಯಲ್ಲಿ ಹೋದರು. ಆಗ ಮನು ತನಗೆ ಆಜ್ಞಾಪಿಸಿದಂತೆ ಆ ಬೀಜಗಳನ್ನು ತೆಗೆದುಕೊಂಡು ಸುಂದರವಾದ ಹಡಗಿನಲ್ಲಿ ಭಾರೀ ಅಲೆಯ ಸಮುದ್ರದಲ್ಲಿ ತೇಲಿದನು. ಅವನು ಆ ಮೀನನ್ನು ನೆನೆಸಿಕೊಂಡಾಗ ಅದು ಅವನ ಆಸೆಯನ್ನು ಅರಿತು, ಬೇಗ ಬಂದು ತನ್ನ ತುದಿಭಾಗದ ಗುರುತು ಹೇಳಿಕೊಂಡಿತು. ಮನು ಈ ಕೊಂಬುಳ್ಳ ಪರ್ವತಾಕಾರದ ಮತ್ಸ್ಯವನ್ನು ನೋಡಿ ಅದರ ಕೊಂಬಿಗೆ ಹಡಗಿನ ಹಗ್ಗವನ್ನು ಕಟ್ಟಿದನು. ಹಾಗೆ ಕಟ್ಟಿದ ಮೇಲೆ ಮೀನು ಹಡಗನ್ನು ಭಯಂಕರ ವೇಗದಲ್ಲಿ ಎಳೆದುಕೊಂಡು ಹೋಯಿತು; ಅದು ಆ ಉಪ್ಪುಸಮುದ್ರದಲ್ಲಿ ಅಲೆಗಳ ಮೇಲೆ ನರ್ತಿಸುವಂತೆ, ಗುಡುಗಿನಂತೆ ಸದ್ದುಮಾಡುತ್ತಾ ಹೋಯಿತು. ಬಿರುಗಾಳಿಗೆ ಸಿಕ್ಕಿ ಓಲಾಡಿದ ಹಡಗು ಅಮಲೇರಿದ ಹೆಣ್ಣಿನಂತೆ ಗಿರ್ರನೆ ತಿರುಗಿತು. ಭೂಮಿಯಾಗಲೀ ದಿಕ್ಕುಗಳಾಗಲೀ ಗೋಚರಿಸಲಿಲ್ಲ; ಅಲ್ಲಿ ನೀರು, ಗಾಳಿ ಮತ್ತು ಆಕಾಶ ಯಾವುದೂ ಇರಲಿಲ್ಲ. ಹೀಗೆ ದಿಙ್ಮೂಢವಾದ ಜಗತ್ತಿನಲ್ಲಿ ಸಪ್ತರ್ಷಿಗಳು, ಮನು ಮತ್ತು ಆ ಮೀನು ಕಾಣಿಸಿಕೊಂಡರು. ಆದ್ದರಿಂದ, ಆ ಮೀನು ಅನೇಕ ವರ್ಷಗಳ ಕಾಲ ದಣಿಯದೆ ಆ ಹಡಗನ್ನು ಸಮುದ್ರದಲ್ಲಿ ಎಳೆಯಿತು; ಕೊನೆಗೆ ಅದನ್ನು ಹಿಮವತ್‌ನ ಅತ್ಯುನ್ನತ ಶಿಖರಕ್ಕೆ ಎಳೆದು ತಂದಿತು. ಆಗ ಅವನು ಮೃದುವಾಗಿ ನಗುತ್ತಾ ಋಷಿಗಳಿಗೆ, 'ಈ ಹಡಗನ್ನು ಕೂಡಲೇ ಈ ಶಿಖರಕ್ಕೆ ಬಂಧಿಸಿ' ಎಂದನು. ಅವರು ಹಾಗೆ ಮಾಡಿದರು. ಇವತ್ತಿಗೂ ಕೂಡ ಹಿಮಾಲಯದ ಅತ್ಯುನ್ನತ ಶಿಖರ ನೌಕಾಬಂಧನ ಎಂಬ ಹೆಸರಿನಿಂದ ಪ್ರಖ್ಯಾತವಾಗಿದೆ. ಆ ಸ್ನೇಹಮಯಿ ಮತ್ಸ್ಯ (ಅಥವಾ ದೇವತೆ, ಅನಿಮಿಷ) ಆಗ ಆ ಋಷಿಗಳಿಗೆ, 'ನಾನು ಪ್ರಜಾಪತಿ ಬ್ರಹ್ಮ, ನಾನಿಲ್ಲದೆ ಅತ್ಯುನ್ನತವಾದುದನ್ನು ಮುಟ್ಟಲು ಸಾಧ್ಯವಿಲ್ಲ. ಮೀನಿನ ರೂಪದಲ್ಲಿ ನಾನು ನಿಮ್ಮನ್ನು ಈ ಮಹಾದುರಂತದಿಂದ ಪಾರುಮಾಡಿದ್ದೇನೆ. ಮನು ಎಲ್ಲ ಸಜೀವ ಪ್ರಾಣಿಗಳನ್ನು, ದೇವತೆಗಳನ್ನು, ಅಸುರರನ್ನು, ಮನುಷ್ಯರನ್ನು ಎಲ್ಲ ಲೋಕಗಳ ಜೊತೆ ಚರಾಚರ ವಸ್ತುಗಳ ಜೊತೆ ಸೃಷ್ಟಿ ಮಾಡತಕ್ಕದ್ದು. ಅವನು ನನ್ನ ಕೃಪೆಯಿಂದಲೂ, ಉಗ್ರ ತಪಸ್ಸಿನ ಮೂಲಕವಾಗಿಯೂ ತನ್ನ ಸೃಜನಾತ್ಮಕ ಕೆಲಸದಲ್ಲಿ ಪರಿಪೂರ್ಣ ಒಳನೋಟವನ್ನು ಪಡೆಯುತ್ತಾನೆ, ಅವನು ಗಾಬರಿಯಾಗಬೇಕಾದ್ದಿಲ್ಲ' ಎಂದಿತು. ಹೀಗೆ ಹೇಳಿ ಆ ಮೀನು ಕೂಡಲೇ ಮಾಯವಾಯಿತು. ಎಲ್ಲ ಜೀವಿಗಳನ್ನು ಸೃಷ್ಟಿಸಲು ಆಶಿಸಿದ ಮನು ತನ್ನ ಕೆಲಸದಲ್ಲಿ ಮಹಾ ಉಗ್ರತಪಸ್ಸನ್ನು ಕೈಗೊಂಡನು; ಆಗ ಅವನು ಎಲ್ಲ ಜೀವಂತ ಪ್ರಾಣಿಗಳನ್ನು ಸೃಷ್ಟಿಸುವುದು ಕಾಣತೊಡಗಿತು."

ಸೃಷ್ಟಿಯ ಕತೆಯ ಇನ್ನೊಂದು ವಿವರವನ್ನು ಸ್ವಲ್ಪ ಹೆಚ್ಚು ಕಡಿಮೆ ಮಹಾಭಾರತದ ಆದಿಪರ್ವ ನೀಡುತ್ತದೆ:[೧]

"ವೈಶಂಪಾಯನು ಹೇಳಿದನು: ಸ್ವಯಂಭೂವಿಗೆ ಪ್ರಣಾಮ ಮಾಡಿದ ಮೇಲೆ ದೇವತೆಗಳು ಮತ್ತು ಇನ್ನಿತರ ಜೀವಿಗಳ ಹುಟ್ಟು ಮತ್ತು ನಾಶವನ್ನು ನಿಮಗೆ ನಿಖರವಾಗಿ ತಿಳಿಸುತ್ತೇನೆ. ಆರು ಜನ ಮಹರ್ಷಿಗಳು, ಬ್ರಹ್ಮ ಮಾನಸಪುತ್ರರೆಂದು ಪ್ರಸಿದ್ಧರಾಗಿದ್ದಾರೆ; ಯಾರೆಂದರೆ, ಮರೀಚಿ, ಅತ್ರಿ, ಅಂಗೀರಸ, ಪುಲಸ್ತ್ಯ, ಪುಲಹ ಮತ್ತು ಕ್ರತು. ಮರೀಚಿಯ ಮಗ ಕಶ್ಯಪ; ಕಶ್ಯಪನಿಂದ ಈ ಜೀವಿಗಳು ಹುಟ್ಟಿದವು. ದಕ್ಷನಿಗೆ ಹದಿಮೂರು ಜನ ಪ್ರಖ್ಯಾತ ಪುತ್ರಿಯರು ಹುಟ್ಟಿದರು; ಅವರೆಂದರೆ, ಅದಿತಿ, ದಿತಿ, ದಾನು, ಕಲಾ, ದಾನಯು, ಸೀಮುಖಾ, ಕ್ರೋಧಾ, ಪ್ರಧಾ, ವಿಶ್ವಾ, ವಿನತಾ, ಕಪಿಲಾ ಮತ್ತು ಮುನೀ. ಅವರಲ್ಲಿ ಕದ್ರೂ ಕೂಡ ಸೇರಿದ್ದಾಳೆ. ಈ ಪುತ್ರಿಯರಿಗೆ ಶೂರರಾದ ಪುತ್ರರೂ, ಪೌತ್ರರೂ ಅಸಂಖ್ಯಾತವಾಗಿದ್ದರು.

ಬ್ರಹ್ಮನ ಬಲ ಹೆಬ್ಬೆರಳಿನಿಂದ ಪ್ರಶಾಂತ ಮನಸ್ಕನೂ, ಮಹಾನ್ ತಪಸ್ ಶಕ್ತಿಯುಳ್ಳವನೂ ಆದ ಕೀರ್ತಿಶಾಲಿಯಾದ ಋಷಿ ದಕ್ಷ ಹುಟ್ಟಿದನು. ಬ್ರಹ್ಮನ ಎಡ ಹೆಬ್ಬೆರಳಿನಿಂದ ಆ ಮಹಾಮುನಿಯ ಹೆಂಡತಿ ಉದ್ಭವಿಸಿ ಅವಳಿಂದ ಅವನಿಗೆ ಐವತ್ತು ಜನ ಪುತ್ರಿಯರು ಹುಟ್ಟಿದರು. ಇವರಲ್ಲಿ ಹತ್ತು ಮಂದಿಯನ್ನು ಅವನು ಧರ್ಮನಿಗೆ, ಇಂದು (ಸೋಮ)ವಿಗೆ ಇಪ್ಪತ್ತೇಳು ಜನರನ್ನು, ಜ್ಯೋತಿಷದ ಪ್ರಕಾರ ಕಾಶ್ಯಪನಿಗೆ ಹದಿಮೂರು ಜನರನ್ನು ಕೊಟ್ಟನು. ಜೀವಿಗಳ ದೇವರು ಮತ್ತು ದೊರೆಯಾದ ಪಿತಾಮಹನ ಸಂತಾನವಾದ ಮನು ಅವನ (ಯಾರು ಎಂಬುದು ಸ್ಪಷ್ಟವಿಲ್ಲ) ಮಗ, ಈಗ ನಾನು ಹೇಳುವ ಅಷ್ಟವಸುಗಳು ಅವನ ಪುತ್ರರು. ಬ್ರಹ್ಮನ ಬಲ ಎದೆಯನ್ನು ಹಂಚಿಕೊಂಡು ತೇಜೋವಂತನಾದ ಧರ್ಮ ಮಾನವ ರೂಪ ತಾಳಿ ಎಲ್ಲ ಜನರಿಗೂ ಸುಖವನ್ನು ತಂದನು. ಅವನಿಗೆ ಮೂರು ಜನ ಹೆಸರಾಂತ ಪುತ್ರರು- ಶಮ, ಕಾಮ ಮತ್ತು ಹರ್ಷ ಇದ್ದರು; ಇವರು ಎಲ್ಲ ಜೀವಿಗಳಿಗೂ ಆನಂದದಾಯಕವಾಗಿದ್ದರು, ತಮ್ಮ ಬಲದಿಂದ ಜಗತ್ತಿಗೆ ಆಧಾರವಾಗಿದ್ದರು...... ಮನುವಿನ ಮಗಳಾದ ಆರುಷಿ (ಭೃಗುವಿನ ಮಗನಾದ ಚ್ಯವನ) ಮಹರ್ಷಿಯ ಮಡದಿಯಾಗಿದ್ದಳು...... ಬ್ರಹ್ಮನ ಇನ್ನಿಬ್ಬರು ಪುತ್ರರಿದ್ದರು, ಅವರ ಹೆಸರು ಲೋಕದಲ್ಲಿ ಉಳಿದಿದೆ, ಅವರೇ ಧಾತ್ರಿ ಮತ್ತು ವಿಧಾತ್ರಿ, ಇವರು ಮನುವಿನ ಜೊತೆ ಇದ್ದರು. ಅವರ ತಂಗಿಯೇ ಸುಂದರಿಯಾದ ದೇವತೆ ಲಕ್ಷ್ಮಿ, ಕಮಲ ಅವಳ ಆವಾಸಸ್ಥಾನ. ಅವಳ ಮಾನಸಪುತ್ರರೇ ಆಕಾಶದಲ್ಲಿ ಚಲಿಸುವ ಅಶ್ವಗಳು...... ಆಹಾರಾಕಾಂಕ್ಷಿಗಳಾದ ಜೀವಿಗಳು ಒಬ್ಬರನ್ನೊಬ್ಬರು ಭಕ್ಷಿಸಿದಾಗ, ಸರ್ವಜೀವಿಗಳ ಅಂತಕನಾದ ಅಧರ್ಮ ಪ್ರಕಟವಾದನು. ಅವನ ಹೆಂಡತಿಯೇ ನಿರ್‍ರೀತಿ, ಆದ್ದರಿಂದ ರಾಕ್ಷಸರನ್ನು ನೈರೀತರು ಅಥವಾ ನಿರ್‍ರೀತಿಯ ಸಂತಾನ ಎಂದು ಕರೆಯುತ್ತಾರೆ. ಅವಳಿಗೆ ಮುವರು ಭಯಂಕರ ಪುತ್ರರಿದ್ದರು, ಅವರು ನಿರಂತರವಾಗಿ ಪಾಪಕಾರ್ಯಗಳಲ್ಲಿ ನಿರತರಾಗಿದ್ದರು, ಅವರೇ ಭಯ, ಮಹಾಭಯ ಮತ್ತು ಮೃತ್ಯು. ಅವನೇ ಆತಂಕ ನಾದುದರಿಂದ ಅವನಿಗೆ ಹೆಂಡತಿಯಾಗಲೀ ಮಗನಾಗಲೀ ಇಲ್ಲ".

"ಪರಮ ಪಾವನರೂ, ಸದ್ಗುಣ ಸಂಪನ್ನರೂ ಎಂದು ಕೀರ್ತಿತರಾದ ಪ್ರಾಚೇತಸನ ದಶಪುತ್ರರಾದ ಮಹಾನ್ ಋಷಿಗಳಂತೆ ತೇಜೋವಂತನಾಗಿ ಜನಿಸಿದರು; ಅವರ ಬಾಯಿಯಿಂದ ಹೊರಡುತ್ತಿದ್ದ ಜ್ವಾಲೆಯಲ್ಲಿ ಆ ಕೀರ್ತಿಕರ ಜೀವಿಗಳು ಮೊದಲು ಅವರಿಂದ ಸುಟ್ಟು ಭಸ್ಮವಾದರು. ಅವರಿಂದ ದಕ್ಷ ಪ್ರಾಚೇತಸನು ಹುಟ್ಟಿದನು; ಲೋಕಪಿತನಾದ ದಕ್ಷನಿಂದ ಈ ಜೀವಿಗಳು ಜನಿಸಿದವು. ವಿರಿಣಿ ಜೊತೆ ಕೂಡಿ ದಕ್ಷ

೧. Muir, Vol. I ಪು. 122-126

ಮುನಿಯು ತನ್ನಂಥ ಸಾವಿರ ಪುತ್ರರನ್ನು ಪಡೆದನು, ಅಪ್ರತಿಮ ಜ್ಞಾನವಾದ, ಅಂತಿಮ ವಿಮೋಚನೆಯ ಸಿದ್ಧಾಂತವಾದ ಸಾಂಖ್ಯ ತತ್ವವನ್ನು ನಾರದ ಆ ಧರ್ಮಪರಾಯಣರಾದ ಅವನ ಮಕ್ಕಳಿಗೆ ಬೋಧಿಸಿದನು. ಸಂತಾನಾಪೇಕ್ಷಿಯಾದ ಪ್ರಜಾಪತಿ ದಕ್ಷನು ಆಮೇಲೆ ಐವತ್ತು ಪುತ್ರಿಯರನ್ನು ರೂಪಿಸಿದನು, ಅವರಲ್ಲಿ ಹತ್ತು ಮಂದಿಯನ್ನು ಧರ್ಮನಿಗೂ, ಹದಿಮೂರು ಮಂದಿಯನ್ನು ಕಾಶ್ಯಪನಿಗೂ ಹಾಗೂ ನೇಮನಿಷ್ಠರಾದ ಇಪ್ಪತ್ತೇಳು ಮಂದಿಯನ್ನು ಇಂದು (ಸೋಮ)ವಿಗೂ ಕೊಟ್ಟನು..... ತನ್ನ ಹದಿಮೂರು ಪತ್ನಿಯರಲ್ಲಿ ಅತ್ಯಂತ ಶೋಭಾಯಮಾನಳಾದ ದಾಕ್ಷಾಯಿಣಿಯಿಂದ ಮರೀಚಿಯ ಪುತ್ರನಾದ ಕಶ್ಯಪನು, ತಮ್ಮ ಶಕ್ತಿಯಿಂದ ವಿಶಿಷ್ಟನೂ ಇಂದ್ರನ ನೇತೃತ್ವವುಳ್ಳವರೂ ಆದ ಆದಿತ್ಯರನ್ನೂ ಮತ್ತು ವೈವಸ್ವತನನ್ನೂ ಕೂಡ ಪಡೆದನು. ವೈವಸ್ವತನಿಗೆ ಮಹಾ ಬಲಶಾಲಿಯಾದ ಯಮ ವೈವಸ್ವತನೆಂಬ ಮಗ ಹುಟ್ಟಿದನು. ಮಾರ್ತಾಂಡನಿಗೆ (ಅಂದರೆ ವೈವಸ್ವತ, ಸೂರ್ಯ) ಜ್ಞಾನಿಯೂ ಬಲಶಾಲಿಯೂ ಆದ ಮನು, ಹಾಗೂ ಅವನ ಕಿರಿಯ ಸೋದರನಾದ ಕೀರ್ತಿಶಾಲಿ ಯಮ ಕೂಡ ಹುಟ್ಟಿದನು. ಈ ಜ್ಞಾನಿಯಾದ ಮನು ಧರ್ಮವಂತನಾಗಿದ್ದನು, ಅವನಿಂದ ಒಂದು ಜನಾಂಗ ಸ್ಥಾಪಿತವಾಯಿತು. ಈ ಕುಟುಂಬದ ಜನರು ಮನುವಿನ ಜನಾಂಗವೆಂದು ಹೆಸರಾದರು. ಈ ಮನುವಿನಿಂದ ಬ್ರಾಹ್ಮಣರು, ಕ್ಷತ್ರಿಯರು ಮತ್ತು ಇತರ ಜನಾಂಗಗಳು ಹುಟ್ಟಿದವು. ಎಲೈ ರಾಜನೇ, ಈತನಿಂದ ಕ್ಷತ್ರಿಯರ ಜೊತೆ ಬ್ರಾಹ್ಮಣರೂ ಉದಿಸಿದರು. ಅವರಲ್ಲಿ ಮನುವಿನ ಮಕ್ಕಳಾದ ಬ್ರಾಹ್ಮಣರು ವೇದವೇದಾಂಗ ಪಾರಂಗತರಾದರು. ಮನುವಿನ ಮಕ್ಕಳು ಯಾರೆಂದರೆ, ವೇಣ, ಧಿಷ್ಣು, ನರಿಷ್ಯಂತ, ನಭಾಗ, ಇಕ್ಷ್ವಾಕು, ಕರೂಷ, ಸರಯತಿ, ಎಂಟನೇ ಇಳಾ, ಕ್ಷತ್ರಿಯ ಕರ್ತವ್ಯಕ್ಕೆ ನಿಷ್ಠನಾದ ಒಂಬತ್ತನೆಯ ಪೃಷಧ್ರ ಮತ್ತು ಹತ್ತನೆಯ ನಭಾಗರಿಷ್ಟ. ಮನುವಿಗೆ ಇತರ ಐವತ್ತು ಪುತ್ರರು ಕೂಡ ಇದ್ದರೂ; ಆದರೆ ಅವರೆಲ್ಲ ಪರಸ್ಪರ ಭಿನ್ನಾಭಿಪ್ರಾಯಗಳ ಪರಿಣಾಮವಾಗಿ ನಾಶವಾದರೆಂದು ನಾವು ಕೇಳಿದ್ದೇವೆ. ಮುಂದೆ ಇಳಾಗೆ ಜ್ಞಾನಿ ಪುರೂರವ ಹುಟ್ಟಿದನು; ಈ ಇಳಾ ತನ್ನ ಮಗನಿಗೆ ತಂದೆತಾಯಿ ಇಬ್ಬರೂ ಆಗಿದ್ದನು.

೭

ರಾಮಾಯಣ ಕೂಡ ಸೃಷ್ಟಿ ವಿಷಯದ ಬಗ್ಗೆ ವರ್ಣಿಸುತ್ತದೆ. ಅಯೋಧ್ಯಾ ಕಾಂಡ[೧]ದಲ್ಲಿ ಒಂದು ವಿವರ ಇದೆ. ಅದರ ಪ್ರಕಾರ :

"ರಾಮನು ಕೋಪಾವಿಷ್ಟನಾಗುವುದನ್ನು ಕಂಡು ವಸಿಷ್ಠ ಹೇಳಿದನು : "ಈ ಜಗತ್ತಿನ ವಿನಾಶ ಮತ್ತು ಮರುಸೃಷ್ಟಿ ಜಾಬಾಲಿಗೂ ಕೂಡ ಗೊತ್ತು. ಆದರೆ ನೀನು ವಾಪಸ್ಸು ಬರಬೇಕೆನ್ನುವ ಉದ್ದೇಶದಿಂದ ಅವನು ಹಾಗೆ ಮಾತಾಡಿದನು. ಎಲೈ ಭೂಪಾಲನೇ, ಈ ಲೋಕದ ಹುಟ್ಟಿನ ವಿವರಣೆಯನ್ನು ನನ್ನಿಂದ ತಿಳಿದುಕೊ. ಜಲವಲ್ಲದೆ ವಿಶ್ವ ಬೇರೇನೂ ಆಗಿರಲಿಲ್ಲ. ಅದರಿಂದಲೇ ಈ ಭೂಮಿ ವಿನ್ಯಾಸಗೊಂಡಿತು. ನಂತರ ಬ್ರಹ್ಮ ಸ್ವಯಂಭೂ ದೇವತೆಗಳ ಜೊತೆ ಅಸ್ತಿತ್ವಕ್ಕೆ ಬಂದನು. ಆಮೇಲೆ ಅವನು ವರಾಹವಾಗಿ ಭೂಮಿಯನ್ನು ಎತ್ತಿ ಹಿಡಿದನು, ಇಡೀ ಲೋಕ ಅವನ ಮಕ್ಕಳಾದ ಸಂತರು, ನಿತ್ಯವೂ, ನಿರಂತರವೂ, ಅವಿನಾಶಿಯಾದ ಬ್ರಹ್ಮವನ್ನು ಆಕಾಶದಿಂದ ಸೃಷ್ಟಿಸಿದನು. ಅವನಿಂದ ಮರೀಚಿಯೂ, ಇವನಿಂದ ಕಶ್ಯಪನೂ ಹುಟ್ಟಿದರು. ಕಶ್ಯಪನಿಂದ ವೈವಸ್ವತನೂ, ಇವನಿಂದ ಪ್ರಜಾಪತಿಯಾದ ಮನು ಹುಟ್ಟಿದನು. ಇಕ್ಷ್ವಾಕು ಮನುವಿನ ಮಗ,

---

೧. Muir, Vol. I, ಪು. 115

ಅವನಿಗೆ ಈ ಸಂಪದ್ಭರಿತ ಭೂಮಂಡಲವನ್ನು ಅವನ ತಂದೆ ಕೊಟ್ಟನು. ಈ ಇಕ್ಷ್ವಾಕು ಅಯೋಧ್ಯೆಯ ಹಿಂದಿನ ರಾಜನಾಗಿದ್ದನು."

ಇದರ ಜೊತೆಗೆ ಸೃಷ್ಟಿಯ ಇನ್ನೊಂದು ಕತೆಯಿದೆ. ಮೂರನೆಯ ಕಾಂಡದಲ್ಲಿ ಬರುವ ಅದು ಈ ರೀತಿ ಇದೆ:[೧]

"ರಾಮನ ಮಾತು ಕೇಳಿದ ಜಟಾಯು ಪಕ್ಷಿ ಅವನಿಗೆ ತನ್ನ ಜನಾಂಗದ ಬಗ್ಗೆ, ತನ್ನ ಬಗ್ಗೆ ಹಾಗೂ ಎಲ್ಲಾ ಜೀವಿಗಳ ಬಗ್ಗೆ ಹೀಗೆ ತಿಳಿಯಿತು: 'ಆದಿಕಾಲದಲ್ಲಿ ಅಸ್ತಿತ್ವಕ್ಕೆ ಬಂದ ಎಲ್ಲ ಪ್ರಜಾಪತಿಗಳ ಆರಂಭದ ಬಗ್ಗೆ ನಾನು ಹೇಳುವುದನ್ನು ಎಚ್ಚರಿಕೆಯಿಂದ ಕೇಳು. ಮೊದಲನೆಯವನು ಕರ್ದಮ, ಆಮೇಲೆ ವಿಕ್ರೀತ, ಶೇಷ, ಸಂಶ್ರಯ, ಬಲಶಾಲಿಯಾದ ಬಹುಪುತ್ರ, ಸ್ಥಾಣು, ಮರೀಚಿ, ಅತ್ರಿ, ಬಲಿಷ್ಠ ಕ್ರತು, ಪುಲಸ್ತ್ಯ, ಅಂಗೀರಸ, ಪ್ರಾಚೇತನ, ಪುಲಹ, ದಕ್ಷ, ಆಮೇಲೆ ವೈವಸ್ವತ, ಅರಿಷ್ಟನೇಮಿ, ಆಮೇಲೆ ಕೊನೆಯವನಾದ ಕೀರ್ತಿಶಾಲಿ ಕಶ್ಯಪ. ಈ ಪ್ರಜಾಪತಿ ದಕ್ಷನಿಗೆ ಅರುವತ್ತು ಜನ ಹೆಣ್ಣು ಮಕ್ಕಳಿದ್ದರು. ಅವರಲ್ಲಿ ಎಂಟು ಜನ ಮನೋಹರವಾದ ಕನ್ಯೆಯರಾದ ಅದಿತಿ, ದಿತಿ, ದಾನು, ಕಲಕ, ತಾಮ್ರ, ಕ್ರೋಧವಶ, ಮನು ಮತ್ತು ಅನಲ ಇವರನ್ನು ಕಶ್ಯಪ ಮದುವೆಯಾದನು. ಸಂತುಷ್ಟನಾದ ಕಶ್ಯಪ ಆಗ ಈ ಕನ್ಯೆಯರಿಗೆ ಹೀಗೆಂದನು: 'ತ್ರಿಲೋಕಪಾಲಕರಾದ ನನ್ನಂಥ ಪುತ್ರರನ್ನು ನೀವು ಹಡೆಯಿರಿ.' ಅದಿತಿ, ದಿತಿ, ದಾನು ಮತ್ತು ಕಲಕ ಅದಕ್ಕೆ ಒಪ್ಪಿಕೊಂಡರು; ಆದರೆ ಉಳಿದವರು ಒಪ್ಪಲಿಲ್ಲ. ಅದಿತಿಯು ಆದಿತ್ಯರು, ವಸುಗಳು, ರುದ್ರರು ಮತ್ತು ಇಬ್ಬರು ಅಶ್ವಿನಿಗಳಾದ ಮೂವತ್ಮೂರು ದೇವತೆಗಳನ್ನು ಹಡೆದಳು. ಕಶ್ಯಪನ ಹೆಂಡತಿಯಾದ ಮನು, ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರೆಂಬ ಜನರನ್ನು ಹಡೆದಳು. ಬ್ರಾಹ್ಮಣರು ಬಾಯಿಂದಲೂ, ಕ್ಷತ್ರಿಯರು ಎದೆಯಿಂದಲೂ, ವೈಶ್ಯರೂ ತೊಡೆಗಳಿಂದಲೂ ಮತ್ತು ಶೂದ್ರರು ಅವರ ಪಾದಗಳಿಂದಲೂ ಹುಟ್ಟಿದರು ಎಂದು ವೇದ ಹೇಳುತ್ತದೆ. ಅನಲೆಯು ಶುದ್ಧವಾದ ಹಣ್ಣಿನ ಎಲ್ಲ ಮರಗಳಿಗೂ ಜನ್ಮವಿತ್ತಳು".

## ೮

ಪುರಾಣಗಳು ಏನು ಹೇಳುತ್ತವೆ ಎಂಬ ಒಂದು ದೃಷ್ಟಾಂತವಾಗಿ ವಿಷ್ಣು ಪುರಾಣ[೨]ದಿಂದ ಮುಂದಿನ ಭಾಗವನ್ನು ಕೊಡುತ್ತಿದ್ದೇನೆ:

"ಬ್ರಹ್ಮಾಂಡಕ್ಕಿಂತ ಮೊದಲು ಎಲ್ಲ ಲೋಕಗಳ ಶಾಶ್ವತಜನಕನಾದ ಹಿರಣ್ಯಗರ್ಭವೆಂಬ ದಿವ್ಯ ಬ್ರಹ್ಮನು ಅಸ್ತಿತ್ವದಲ್ಲಿದ್ದನು; ಅವನು ಬ್ರಹ್ಮದ ರೂಪ ಮತ್ತು ಸತ್ವವಾಗಿದ್ದನು; ಅವನು ದಿವ್ಯ ವಿಷ್ಣುವಾಗಿದ್ದನು; ಅವನೇ ಋಕ್, ಯಜುರ್, ಸಾಮ ಮತ್ತು ಅಥರ್ವ ವೇದಗಳಿಗೆ ಸಮನಾಗಿದ್ದನು. ಬ್ರಹ್ಮನ ಬಲ ಹೆಬ್ಬೆರಳಿನಿಂದ ಪ್ರಜಾಪತಿ ದಕ್ಷ ಹುಟ್ಟಿದನು; ದಕ್ಷನಿಗೆ ಅದಿತಿ ಎಂಬ ಮಗಳಿದ್ದಳು; ಅವಳಿಂದ ವೈವಸ್ವತ ಹುಟ್ಟಿದನು; ಅವನಿಂದ ಮನು ಹುಟ್ಟಿದನು. ಮನುವಿಗೆ ಇಕ್ಷ್ವಾಕು, ನೃಗ, ದೃಷ್ಟ, ಸರ್ಯಾತಿ, ನರಿಶ್ಯಂತ, ಪ್ರಾಂಸು, ನಭಗನೇದಿಷ್ಟ, ಕರೂಷ ಮತ್ತು ಪೃಶಾಧ್ರ ಎಂಬ ಪುತ್ರರಿದ್ದರು. ಪುತ್ರಾಪೇಕ್ಷಿಯಾದ ಮನು ಮಿತ್ರ ಮತ್ತು ವರುಣರಿಗೆ ಬಲಿಕೊಟ್ಟನು, ಆದರೆ ಕ್ರಮ ತಪ್ಪಿದ ಹೋತ್ರಿ ಪುರೋಹಿತನ ತಪ್ಪು ಉಚ್ಚಾರಣೆಯ ಪರಿಣಾಮವಾಗಿ ಇಳಾ ಎಂಬ ಮಗಳು ಹುಟ್ಟಿದಳು. ಆಮೇಲೆ ಮಿತ್ರ ಮತ್ತು ವರುಣರ ಕೃಪೆಯಿಂದ ಅವಳು ಮನುವಿಗೆ

---

೧. Muir, ೧, ಪು. ೧೧೬

೨. Vol. ೧, ಪು. ೨೨೦–೨೨೧

ಸುದ್ಯುಮ್ನ ಎಂಬ ಪುತ್ರನಾಗಿ ಪರಿವರ್ತಿತಳಾದಳು. ಆದರೆ ಈಶ್ವರನ ಶಾಪದಿಂದ ಮತ್ತೆ ಹೆಣ್ಣಾದ ಅವಳು ಸೋಮ (ಚಂದ್ರ)ನ ಮಗ ಬುಧನ ಆಶ್ರಮದ ಹತ್ತಿರ ಅಡ್ಡಾಡುತ್ತಿದ್ದಳು; ಅವಳಿಂದ ಮೋಹಿತನಾದ ಅವನು ಅವಳಿಂದ ಪುರೂರವ ಎಂಬ ಮಗನನ್ನು ಪಡೆದನು. ಅವನ ಜನನಾನಂತರ, ಯಜ್ಞದಿಂದ, ಋಕ್, ಯಜುರ್, ಸಾಮ ಮತ್ತು ಅಥರ್ವ ವೇದಗಳಿಂದ, ಸರ್ವ ವಸ್ತುಗಳಿಂದ, ಮನಸ್ಸಿನಿಂದ ರೂಪಿತನಾದ ಯಜ್ಞಪುರುಷನ ರೂಪದಲ್ಲಿರುವ ದೇವತೆಯನ್ನು ಮಹಿಮಾವಂತರಾದ ಋಷಿಗಳು ಆರಾಧಿಸಿ ಸುದ್ಯುಮ್ನನಿಗೆ ಮತ್ತೆ ಪುರುಷತ್ವವನ್ನು ಕರುಣಿಸಬೇಕೆಂದು ಬೇಡಿದನು. ಈ ದೇವತೆಯ ಕೃಪೆಯಿಂದ ಇಳಾ ಮತ್ತೆ ಸುದ್ಯುಮ್ನನಾದಳು."

ಆಮೇಲೆ ಮನುವಿನ ಪುತ್ರನ್ನು ಕುರಿತು ವಿಷ್ಣುಪುರಾಣ ಮುಂದಿನ ವಿವರಗಳನ್ನು ನೀಡುತ್ತದೆ:

"(೧) ತನ್ನ ಧರ್ಮ ಗುರುವಿನ ಗೋವನ್ನು ಕೊಂದುದರ ಪರಿಣಾಮವಾಗಿ ಪೃಷಧ್ರ ಶೂದ್ರನಾದನು.

(೨) ಕರೂಷಳಿಂದ ಕರೂಷರು ಅಂದರೆ ಮಹಾನ್ ಶಕ್ತಿಶಾಲಿಗಳಾದ ಕ್ಷತ್ರಿಯರು ಜನಿಸಿದರು.

(೩) ನೇದಿಷ್ಟನ ಮಗನಾದ ನಭಗನು ವೈಶ್ಯನಾದನು."

ಮೇಲಿನದು ಸೂರ್ಯವಂಶದ ಕಥೆ. ಮನುವಿನಿಂದ ಸೂರ್ಯವಂಶ ಹುಟ್ಟಿದಂತೆಯೇ ಅತ್ರಿಯಿಂದ ಚಂದ್ರವಂಶ ಹುಟ್ಟಿತೆಂಬ ಸಮಾನಾಂತರ ಕಥೆಯನ್ನು ಕೂಡ ವಿಷ್ಣುಪುರಾಣ[೧] ನಿರೂಪಿಸುತ್ತದೆ:

"ಅತಿ ಬ್ರಹ್ಮನ ಮಗ, ಸೋಮ (ಚಂದ್ರ)ನ ತಂದೆ, ಇವನನ್ನು ಬ್ರಹ್ಮ ಗಿಡಗಳು, ಬ್ರಾಹ್ಮಣರು ಮತ್ತು ನಕ್ಷತ್ರಗಳ ಒಡೆಯನಾಗಿ ಸ್ಥಾಪಿಸಿದನು. ರಾಜಸೂಯ ಯಾಗ ಮಾಡಿದ ಮೇಲೆ ಸೋಮನು ಗರ್ವಿಷ್ಟನಾಗಿ ದೇವಗುರುವಾದ ಬೃಹಸ್ಪತಿಯ ಹೆಂಡತಿ ತಾರೆಯನ್ನು ಅಪಹರಿಸಿದನು; ಬ್ರಹ್ಮಾದಿ ದೇವತೆಗಳು, ಋಷಿಗಳು ಅವನಿಗೆ ಬುದ್ಧಿವಾದ ಹೇಳಿ ಬೇಡಿಕೊಂಡರೂ ಸೋಮ ಅವಳನ್ನು ವಾಪಸ್ಸು ಕೊಡಲು ಇಷ್ಟಪಡಲಿಲ್ಲ. ಸೋಮನ ಜಾಗಕ್ಕೆ ಉಷನಸ್ ಬಂದನು; ಅಂಗೀರಸನ ಶಿಷ್ಯನಾದ ರುದ್ರ ಬೃಹಸ್ಪತಿಗೆ ನೆರವಾದನು. ಎರಡು ಪಕ್ಷಗಳೂ ದೇವತೆಗಳು ಮತ್ತು ದೈತ್ಯರಿಂದ ಕ್ರಮವಾಗಿ ಬೆಂಬಲಗೊಂಡಿದ್ದರಿಂದ ಉಗ್ರ ಕದನ ನಡೆಯಿತು. ಬ್ರಹ್ಮ ಮಧ್ಯೆ ಪ್ರವೇಶಿಸಿ ತಾರೆಯನ್ನು ಅವಳ ಗಂಡನಿಗೆ ವಾಪಸ್ಸು ಕೊಡುವಂತೆ ಸೋಮನನ್ನು ಒತ್ತಾಯಿಸಿದನು. ಆದರೆ ಅವಳು ಏತನ್ಮಧ್ಯೆ ಗರ್ಭವತಿಯಾಗಿ ಬುಧನೆಂಬ ಪುತ್ರನನ್ನು ಹೆತ್ತಳು; ಇವನು ಯಾರ ಮಗನೆಂದು ಬಲವಂತವಾಗಿ ಕೇಳಿದಾಗ ಅವನು ಸೋಮನ ಮಗನೆಂದು ಅವಳು ಒಪ್ಪಿಕೊಂಡಳು. ಮನುವಿನ ಮಗಳಾದ ಇಳೆಯಿಂದ ಬುಧ ಪಡೆದ ಮಗನೇ ಪುರೂರವ.[೨]

ಪುರೂರವನಿಗೆ[೩] ಆರು ಜನ ಪುತ್ರರಿದ್ದರು; ಇವರಲ್ಲಿ ಹಿರಿಯವನು ಆಯುಸ್. ಈ ಆಯುಸ್‌ಗೆ ನಹುಷ, ಕ್ಷಾತ್ರವೃದ್ಧ, ರಂಭ, ರಜಿ ಮತ್ತು ಅನೇನಸ್ ಎಂಬ ಐವರು ಪುತ್ರರಿದ್ದರು.

ಕ್ಷಾತ್ರವೃದ್ಧನಿಗೆ ಸುನಹೋತ್ರ ಎಂಬ ಮಗನಿದ್ದನು, ಇವನಿಗೆ ಕಶ, ಲೇಶ ಮತ್ತು ಗೃತ್ಸಮದ ಎಂಬ ಮೂವರು ಪುತ್ರರಿದ್ದರು. ಕೊನೆಯ ಮಗನಿಂದ ಸೌನಕನೆಂಬ ಮಗ ಹುಟ್ಟಿದ, ಇವನು ಚಾತುರ್ವರ್ಣ್ಯ

---

೧. Muir, Vol. I, ಪು. ೨೨೫–೨೨೬

೨. ಪುರೂರವ ಮತ್ತು ಅಪ್ಸರೆ ಊರ್ವಶಿಯ ಪ್ರೇಮ ಪ್ರಕರಣ ಶತಪಥ ಬ್ರಾಹ್ಮಣ ೧೧.೫.೧೧ರಲ್ಲಿ; ವಿಷ್ಣು ಪುರಾಣ ೬.೬.೧೯ರಲ್ಲಿ; ಭಾಗವತ ಪುರಾಣ ೯.೧೪ರಲ್ಲಿ; ಮತ್ತು ಹರಿವಂಶ ೨೬ನೇ ಪರಿಚ್ಛೇದದಲ್ಲಿ ನಿರೂಪಿತವಾಗಿದೆ. ಮಹಾಭಾರತ, ಆದಿಪರ್ವ ೨೫ನೇ ಅಧ್ಯಾಯ, ಬ್ರಾಹ್ಮಣರ ಜೊತೆ ಪುರೂರವ ಸ್ಪರ್ಧೆಯಲ್ಲಿ ತೊಡಗಿದ್ದನೆಂದು ಉಲ್ಲೇಖಿಸುತ್ತದೆ. ಈ ಭಾಗವನ್ನು ಇನ್ನು ಮುಂದೆ ಉದ್ಧರಿಸಲಾಗುವುದು.

೩. ವಿಷ್ಣುಪುರಾಣ, ೪.೭.೧.

ವ್ಯವಸ್ಥೆಯನ್ನು ಹುಟ್ಟುಹಾಕಿದ. ಕಶನ ಮಗ ಕಾಶೀರಾಜ, ಇವನ ಮಗ ದೀರ್ಘತಮಸ್; ಧನ್ವಂತರಿ ದೀರ್ಘತಮಸ್‌ನ ಮಗ"

ಸೃಷ್ಟಿಯ ಈ ಕಥೆಗಳನ್ನು ಎರಡನೆ ಅಧ್ಯಾಯದಲ್ಲಿ ಉಲ್ಲೇಖಿಸಿದ ಸಿದ್ಧಾಂತಗಳ ಜೊತೆ ಹೋಲಿಸಿದರೆ ನಮಗೆ ಕಾಣುವುದೇನು? ತುಲನೆಯ ಫಲಿತಾಂಶವನ್ನು ಈ ಮುಂದಿನಂತೆ ಪ್ರತಿಪಾದಿಸಬಹುದು: (೧) ವರ್ಣ ಮತ್ತು ಸ್ವಭಾವದಲ್ಲಿ ಒಂದು ಪೌರೋಹಿತ್ಯಜನ್ಯವಾದರೆ, ಇನ್ನೊಂದು ಮತಾತೀತವಾದುದು; (೨) ಒಂದು, ಆದಿಜನಕ ಮಾನವನಾದ ಮನು ಎಂದು ಹೇಳಿದರೆ, ಇನ್ನೊಂದು ಬ್ರಹ್ಮದೇವ ಅಥವಾ ಪ್ರಜಾಪತಿಯನ್ನು ಮೂಲಪುರುಷನೆಂದು ಹೇಳುತ್ತದೆ; (೩) ಒಂದು ಕಾಲಪ್ರವಾಹದಲ್ಲಿ ಐತಿಹಾಸಿಕವಾಗಿದ್ದರೆ, ಇನ್ನೊಂದು ಅತಿಮಾನುಷವಾಗಿದೆ; (೪) ಒಂದು ಪ್ರಳಯದ ಬಗ್ಗೆ ಹೇಳಿದರೆ, ಇನ್ನೊಂದು ಆ ಬಗ್ಗೆ ಸಂಪೂರ್ಣ ಮೌನವಾಗಿದೆ; (೫) ನಾಲ್ಕು ವರ್ಣಗಳು ಹೇಗೆ ಹುಟ್ಟಿದುವೆಂದು ವಿವರಿಸಲು ಒಂದು ಉದ್ದೇಶಿಸಿದರೆ, ಇನ್ನೊಂದು ಸಮಾಜದ ಉಗಮವನ್ನು ವಿವರಿಸಲು ಮಾತ್ರ ಉದ್ದೇಶಿಸಿದೆ.

ಈ ವ್ಯತ್ಯಾಸಗಳು ಅನೇಕವಾಗಿವೆ ಮತ್ತು ಮೂಲಭೂತವಾಗಿವೆ. ವಿಶೇಷವಾಗಿ ಚಾತುರ್ವರ್ಣ್ಯದ ಬಗೆಗಿನ ವ್ಯತ್ಯಾಸ ಮೂಲಭೂತವಾದುದೆಂದು ಕಾಣುತ್ತದೆ. ಪೌರೋಹಿತ್ಯ ಸಿದ್ಧಾಂತ ಅದನ್ನು ಮಾನ್ಯ ಮಾಡುತ್ತದೆ, ಆದರೆ ಮತಾತೀತ ಸಿದ್ಧಾಂತ ಅದನ್ನು ಒಪ್ಪುವುದಿಲ್ಲ. ರಾಮಾಯಣ ಮತ್ತು ಪುರಾಣಗಳಲ್ಲಿ ನಡೆದಿರುವಂತೆ ಹೇಗೆ ಮನು ಸಂತತಿ ನಾಲ್ಕು ವರ್ಣಗಳಾಗಿ ಬೆಳೆಯಿತು ಎಂಬುದನ್ನು ಈ ಎರಡು ಸಿದ್ಧಾಂತಗಳನ್ನು ಒಗ್ಗೂಡಿಸಿ ವಿವರಿಸಲು ಪ್ರಯತ್ನಿಸಲಾಗಿದೆ. ಆದರೆ ವಾಸ್ತವವಾಗಿ ಇದು ಆ ಎರಡು ಸಿದ್ಧಾಂತಗಳನ್ನು ಒಂದು ರೂಪಕ್ಕೆ ತರುವ ಪ್ರಯತ್ನವಾಗಿದೆ. ಈ ಪ್ರಯತ್ನ ಪ್ರಜ್ಞಾಪೂರ್ವಕವಾದುದು ಹಾಗು ಲೆಕ್ಕಾಚಾರದಿಂದ ಬಂದುದು. ಆದರೆ ಈ ಎರಡು ಸಿದ್ಧಾಂತಗಳ ವ್ಯತ್ಯಾಸ ಎಷ್ಟು ಮೂಲಭೂತವಾದುದು ಎಂದರೆ ಈ ಪ್ರಯತ್ನ ಮಾಡಿದಾಗ್ಯೂ ಅವು ಎರಡು ಪ್ರತ್ಯೇಕ ಸಿದ್ಧಾಂತಗಳಾಗಿರಲು ಒತ್ತಾಯಿಸುತ್ತವೆ. ಒಟ್ಟಾರೆ ಏನಾಗಿದೆ ಎಂದರೆ ಒಂದು ಸಿದ್ಧಾಂತಕ್ಕೆ ಬದಲು, ಪುರುಷನಿಂದ ಉತ್ಪತ್ತಿಯಾದ ಅತಿಮಾನುಷ ಚಾತುರ್ವರ್ಣ್ಯ ಮತ್ತು ಮನುವಿನ ಪುತ್ರರಿಂದ ಬೆಳೆದ ಸ್ವಾಭಾವಿಕ ಚಾತುರ್ವರ್ಣ್ಯ ಎಂಬ ಎರಡು ವಿವರಣೆಗಳು ನಮಗೆ ಲಭ್ಯವಾಗಿವೆ. ಫಲಿತಾಂಶ ಎಂಬುದು ಎಷ್ಟು ಗೊಂದಲವಾಗಿದೆ ಎಂದರೆ ಈ ಎರಡು ಸಿದ್ಧಾಂತಗಳೂ ಮೂಲಭೂತವಾಗಿ ಭಿನ್ನವೂ ಸಾಮರಸ್ಯರಹಿತವೂ ಆಗಿರುವುದು ಕಾಣುತ್ತದೆ. ಈ ವಿಷಯವನ್ನು ಕುರಿತು ಬರೆದಿರುವ ವಿದ್ವಾಂಸರು ಬ್ರಾಹ್ಮಣ ಸಾಹಿತ್ಯದಲ್ಲಿ ಈ ಎರಡು ಸಿದ್ಧಾಂತಗಳ ಅಸ್ತಿತ್ವಗಳು ದಾಖಲೆಯಾಗಿರುವುದನ್ನು ಗಮನಿಸದಿರುವುದು ಶೋಚನೀಯವಾಗಿದೆ. ಆದರೆ ಅವುಗಳ ಅಸ್ತಿತ್ವ ಮತ್ತು ಮಹತ್ವವನ್ನು ಕಡೆಗಣಿಸಲು ಸಾಧ್ಯವಿಲ್ಲ. ಮೂಲಭೂತವಾಗಿ ಭಿನ್ನ ಮತ್ತು ಹೊಂದಾಣಿಕೆ ಇಲ್ಲದ ಇಂಥ ಎರಡು ಸಿದ್ಧಾಂತಗಳ ಇರುವಿಕೆಯ ಮಹತ್ವವೇನು? ನನಗನ್ನಿಸುವಂತೆ ಎರಡು ಪ್ರತ್ಯೇಕ ಆರ್ಯ ಜನಾಂಗಗಳು– ಚಾತುರ್ವರ್ಣ್ಯದಲ್ಲಿ ನಂಬಿಕೆಯಿರುವ ಒಂದು ಜನಾಂಗ ಮತ್ತು ಚಾತುರ್ವರ್ಣ್ಯವನ್ನು ನಂಬದ ಇನ್ನೊಂದು ಜನಾಂಗ–ನಂತರದ ಘಟ್ಟದಲ್ಲಿ ಒಂದಾಗಿ ಕೂಡಿಕೊಂಡ ಎರಡು ಆರ್ಯ ಜನಾಂಗಗಳ ಸಿದ್ಧಾಂತಗಳೆಂದು ತೋರುತ್ತವೆ. ಈ ತರ್ಕ ಸಾಧಾರವಾಗಿ ಕಂಡರೆ ಆಗ ಬ್ರಾಹ್ಮಣ ಸಾಹಿತ್ಯದಲ್ಲಿ ಸಿದ್ಧಾಂತಗಳ ಈ ಭಿನ್ನತೆ ಪ್ರಕಟವಾಗುವುದರಿಂದ ಈ ಹೊಸ ಸಿದ್ಧಾಂತದ ಬೆಂಬಲಕ್ಕೆ ಇನ್ನೂ ಹೆಚ್ಚಿನ ಆಧಾರ ಸಿಗುತ್ತದೆ.

೬

ಮೂರನೆಯ ಮತ್ತು ಅತ್ಯಂತ ದೋಷಾತೀತ ಆಧಾರ ನನ್ನ ಸಿದ್ಧಾಂತದ ಬೆಂಬಲಕ್ಕೆ ಭಾರತೀಯ ಜನರ ಮಾನವಶರೀರಮಾಪನ ಸಮೀಕ್ಷೆಯಿಂದ ಸಿಗುತ್ತದೆ. ಅಂಥ ಒಂದು ಸಮೀಕ್ಷೆಯನ್ನು ೧೯೦೧ರಲ್ಲಿ ಸರ್ ಹರ್ಬರ್ಟ್ ರಿಸ್ಲೆ ಪ್ರಥಮವಾಗಿ ಮಾಡಿದರು. ಶಿರಸೂಚಿಯ ಆಧಾರದ ಮೇಲೆ ಭಾರತದ ಜನರು (೧) ಆರ್ಯರು, (೨) ದ್ರಾವಿಡರು, (೩) ಮಂಗೋಲಿಯನ್ನರು, ಮತ್ತು (೪) ಸಿಥಿಯನ್ನರು ಎಂಬ ನಾಲ್ಕು ಜನಾಂಗಗಳ ಮಿಶ್ರಣ ಎಂಬ ತೀರ್ಮಾನಕ್ಕೆ ಅವರು ಬಂದರು. ತಾವು ಬೀಡುಬಿಟ್ಟಿದ್ದ ತಾಣಗಳನ್ನು ವಿವರಿಸುವ ಮಟ್ಟದವರೆಗೂ ಅವರು ಹೋದರು. ಅವರ ಸಮೀಕ್ಷೆ ಬಹಳ ಸ್ಥೂಲವಾದುದು. ೧೯೩೬ರಲ್ಲಿ ಅವನ ತೀರ್ಮಾನಗಳನ್ನು ಡಾ. ಗುಹಾ ಪರೀಕ್ಷೆಗೊಳಪಡಿಸಿದರು. ಭಾರತೀಯ ಮಾನವಶಾಸ್ತ್ರದ ಕ್ಷೇತ್ರದಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಅವರ ವರದಿ ಬಹಳ ಅಮೂಲ್ಯವಾದ ದಾಖಲೆಯಾಗಿದೆ. ಭಾರತದ ಜನರ ತಲೆಯ ಅಳತೆಯ ಪ್ರಕಾರ ಅವರ ಹಂಚಿಕೆಯಾಗಿರುವುದನ್ನು ತೋರಿಸುವ ಡಾ. ಗುಹಾ ಅವರು ತಯಾರಿಸಿರುವ ನಕ್ಷೆ ಭಾರತದ ಜನರ ಜನಾಂಗಿಕ ಸಂಯೋಗದ ಮೇಲೆ ಅಪಾರ ಬೆಳಕು ಚೆಲ್ಲುತ್ತದೆ. ಉದ್ದ ತಲೆಯವರು ಮತ್ತು ಗಿಡ್ಡ ತಲೆಯವರು ಅವರ ಪ್ರಕಾರ ಉದ್ದ ತಲೆಯವರು ಭಾರತದ ಒಳನಾಡಿನಲ್ಲಿದ್ದಾರೆ, ಗಿಡ್ಡ ತಲೆಯವರು ಭಾರತದ ಹೊರ ವಲಯದಲ್ಲಿದ್ದಾರೆ– ಈ ಎರಡು ಜನಾಂಗಿಕ ಬುಡಕಟ್ಟುಗಳಿಂದ ಭಾರತದ ಜನರ ಸಂರಚನೆಯಾಗಿದೆ ಎಂಬ ತೀರ್ಮಾನವನ್ನು ಡಾ. ಗುಹಾ ನೀಡುತ್ತಾರೆ.[೧]

ಭಾರತದ ವಿವಿಧ ಭಾಗಗಳಲ್ಲಿ ದೊರಕಿರುವ ತಲೆಬುರುಡೆಗಳ ಆಧಾರ ಕೂಡ ಇದನ್ನೇ ದೃಢಪಡಿಸುತ್ತದೆ. ಈ ಅಂಶದ ಬಗೆಗಿರುವ ಆಧಾರವನ್ನು ಕುರಿತು ಡಾ. ಗುಹಾ ಹೀಗೆ ಉಪಸಂಹರಿಸುತ್ತಾರೆ:

"ಮೇಲೆ ಕೊಟ್ಟಿರುವ ಇತಿಹಾಸಪೂರ್ವ ಸ್ಥಳಗಳಲ್ಲಿ ಸಿಗುವ ಮಾನವ ಅವಶೇಷಗಳ ವಿವರಗಳು, ಸಿಂಧೂ ಕಣಿವೆಯ ಅವಶೇಷಗಳನ್ನು ಬಿಟ್ಟರೆ, ತೀರಾ ಕಡಿಮೆಯಿದ್ದಾಗ್ಯೂ ಈ ಕಾಲದ ಭಾರತದ ಜನಾಂಗಿಕ ಇತಿಹಾಸದ ಸ್ಥೂಲ ರೂಪುರೇಷೆಗಳನ್ನು ಚಿತ್ರಿಸಿಕೊಳ್ಳಲು ನಮಗೆ ನೆರವಾಗುತ್ತವೆ. ನೇರ ಪ್ರಧಾನ ಮೂಗಿನ ದಪ್ಪ ತಲೆಯ ಜನರು ವಾಯವ್ಯ ಭಾರತದಲ್ಲಿ ಕ್ರಿ.ಪೂ. ನಾಲ್ಕು ಸಾವಿರ ವರ್ಷಗಳಿಂದಲೂ ನೆಲೆಸಿದ್ದಾರೆಂದು ತೋರುತ್ತದೆ. ಅವರ ಅಕ್ಕಪಕ್ಕದಲ್ಲೇ ಬಹಳ ಗಟ್ಟಿಮುಟ್ಟಾಗಿದ್ದ ಇನ್ನೊಂದು ಜನಾಂಗ ಅಸ್ತಿತ್ವದಲ್ಲಿತ್ತೆಂದು ನಮಗೆ ತಿಳಿಯುತ್ತದೆ; ಅದಕ್ಕೆ ಉದ್ದ ತಲೆ ಆದರೆ ಸಣ್ಣ ಮಿದುಳು ಕೋಶ ಇತ್ತು, ಅಷ್ಟೇ ಸಮಾನವಾದ ಉದ್ದಮುಖ ಮತ್ತು ನೇರ ಮೂಗಿತ್ತು, ಆದರೆ ಮುಖದ ಪ್ರಮಾಣಕ್ಕನುಗುಣವಾಗಿ ಮೂಗಿರಲಿಲ್ಲ.

ದಪ್ಪ ತಲೆಯ, ಸ್ಪಷ್ಟವಾಗಿ ಆರ್ಮೇನಿಯಾ ಜನಾಂಗದ ಸಾದೃಶ್ಯಗಳಿದ್ದ ಮೂರನೆಯ ಮಾದರಿಯೊಂದು ಕೂಡ ಇಲ್ಲಿ ಅಸ್ತಿತ್ವದಲ್ಲಿತ್ತು; ಈ ಮಾದರಿಯ ಹೆಚ್ಚಿನ ತಲೆಬುರುಡೆಗಳು ಸಿಕ್ಕಿದ ಹರಪ್ಪದಂಥ ಪ್ರದೇಶದ ಕಾಲಮಾನವನ್ನು ಗಣನೆಗೆ ತೆಗೆದುಕೊಂಡು ಹೇಳುವುದಾದರೆ, ಬಹುಶಃ ಆಮೇಲೆ ಈ ಜನಾಂಗದ ಆಗಮನವಾಗಿರಬೇಕು".

ಆಲ್ಪೈನ್ ಮತ್ತು ಮೆಡಿಟರೇನಿಯನ್ ಜನಾಂಗದ ಪರಿಭಾಷೆಯಲ್ಲಿ ಹೇಳುವುದಾದರೆ ಭಾರತದ ಜನರು, (೧) ಮೆಡಿಟರೇನಿಯನ್ ಅಥವಾ ಉದ್ದ ತಲೆಯ ಜನಾಂಗ, ಮತ್ತು (೨) ಆಲ್ಪೈನ್ ಅಥವಾ ಗಿಡ್ಡ ತಲೆಯ ಜನಾಂಗ ಎಂಬ ಎರಡು ಬುಡಕಟ್ಟುಗಳ ಸಂಯೋಗವೆಂದು ಹೇಳಬಹುದು.

---

೧. ಅನುಬಂಧ ೫ ನೋಡಿ.

ಮೆಡಿಟರೇನಿಯನ್ ಜನಾಂಗದ ಬಗ್ಗೆ ಕೆಲವು ಸಂಗತಿಗಳು ಸ್ವೀಕೃತವಾಗಿವೆ. ಅದು ಆರ್ಯರ ಭಾಷೆಯನ್ನು ಆಡುತ್ತಿದ್ದ ಒಂದು ಜನಾಂಗವೆಂದು ಒಪ್ಪಿಕೊಳ್ಳಲಾಗಿದೆ. ಅದರ ಮೂಲನೆಲೆ ಯೂರೋಪಿನಲ್ಲಿ ಮೆಡಿಟರೇನಿಯನ್ ಸಮುದ್ರದ ಪ್ರದೇಶವೆಂದೂ ಅಲ್ಲಿಂದ ಅದು ಭಾರತಕ್ಕೆ ವಲಸೆ ಬಂದಿತೆಂದೂ ನಂಬಲಾಗಿದೆ. ಅದರ ಸ್ಥಳೀಕರಣದಿಂದ, ಆಲ್ಪೈನ್ ಜನಾಂಗ ಬರುವುದಕ್ಕೆ ಮುನ್ನವೇ ಅದು ಭಾರತಕ್ಕೆ ಬಂದಿರಬೇಕೆಂಬುದು ಸ್ಪಷ್ಟವಾಗಿದೆ.

ಇಂಥದೇ ಸಂಗತಿಗಳು ಆಲ್ಪೈನ್ ಜನಾಂಗದ ಬಗೆಗೆ ಸ್ಥಾಪಿತವಾಗಬೇಕಾಗಿದೆ. ಮೊದಲು ಆಲ್ಪೈನ್ ಜನಾಂಗದ ಮೂಲ ನೆಲೆ, ಎರಡನೆಯದು ಅದರ ಮಾತೃಭಾಷೆ. ಪ್ರೊ. ರಿಪ್ಲೇ ಪ್ರಕಾರ ಆಲ್ಪೈನ್ ಜನಾಂಗದ ಮೂಲ ನೆಲೆ ಹಿಮಾಲಯ ತಪ್ಪಲಿನಲ್ಲೆಲ್ಲೊ ಇತ್ತು. ಅವನ ವಾದವನ್ನು ಅವನ ಮಾತುಗಳಲ್ಲೇ ಕೊಡಬಹುದು. ಪ್ರೊ. ರಿಪ್ಲೇ ಹೀಗೆ ಹೇಳುತ್ತಾನೆ.[೧]

"ಏಷ್ಯಾ ಕಡೆಯಿಂದ ಹರಿದು ಬಂದ ಈ ಜನರನ್ನು ಪೂರ್ವದಿಂದ ಆಕ್ರಮಣಪೂರ್ವಕವಾಗಿ ವಲಸೆ ಬಂದವರು ಎಂದು ಖಚಿತಪಡಿಸಲು ನಮಗೇನು ಅಧಿಕಾರವಿದೆ? ಏಕೆಂದರೆ, ಅದು ದಿಗ್ವಿಜಯವಾಗಿರದೆ, ಕಾಲಾಂತರದಲ್ಲಾದ ಶಾಂತಿಯುತ ವಲಸೆಯೆಂದೂ, ಅದು ಬಹುವಾಗಿ ನಿರ್ವಸತಿ ಪ್ರದೇಶದಲ್ಲಿ ನೆಲೆಸುವಿಕೆ ಮಾತ್ರವಾಗಿತ್ತೆಂದೂ ಹೇಳಲು ಎಲ್ಲ ಆಧಾರಗಳಿವೆ. ಆ ಖಂಡದ ಪಶ್ಚಿಮ ಹಿಮಾಲಯದ ಉನ್ನತ ಪ್ರದೇಶದ, ವಿಶೇಷವಾಗಿ ಪಾಮಿರ್ ಪ್ರಾಂತದಲ್ಲಿರುವ, ಜನರ ಬಗೆಗಿನ ನಮ್ಮ ತಿಳುವಳಿಕೆಯ ಮೇಲೆ ಬಹುವಾಗಿ ಈ ಪುರಾವೆ ನಿಂತಿದೆ. ಮ್ಯಾಕ್ಸ್ ಮುಲ್ಲರ್ ಮತ್ತು ಪ್ರಥಮ ಭಾಷಾತಜ್ಞರು ಆರ್ಯ ನಾಗರಿಕತೆಯ ಪ್ರಾಚೀನ ನೆಲೆಯೆಂದು ಗುರುತಿಸಿದ ಉನ್ನತ ಪರ್ವತಶ್ರೇಣಿಯಾದ ಈ ಜಾಗದಲ್ಲೆ, ನಮ್ಮ ಆದರ್ಶ ಅಲ್ಪೈನ್ ಅಥವಾ ಕೆಲ್ಟಿಕ್ ಐರೋಪ್ಯ ಜನಾಂಗದ ಜೊತೆ ಬಹುಮಟ್ಟಿಗೆ ನಿಖರವಾಗಿ ಹೋಲುತ್ತಿದ್ದ ಒಂದು ಮಾನವ ಮಾದರಿ ಪ್ರಚಲಿತವಿತ್ತು.

ಡಿ ಉಜ್‌ಫಲ್ವಿ, ಟೊಪಿನಾರ್ಡ್ ಮತ್ತು ಇತರರ ಸಂಶೋಧನೆಗಳು ಅದರ ಸುತ್ತಮುತ್ತಲ ವಿಶಾಲ ಪ್ರದೇಶದಲ್ಲಿನ ಆ ಜನಾಂಗದ ವಿಶಿಷ್ಟ ಲಕ್ಷಣಗಳು ಈ ಸ್ಥಳದವೆಂದು ಹೇಳುತ್ತವೆ. ಗಾಲ್ಚಾಸರು, ಗಿರಿ ಪ್ರದೇಶದ ತಾಜಿಕರು ಮತ್ತು ಅವರ ಸಹಮಾನವರು ಗಾಜುಕಣ್ಣಿನ, ಕಪ್ಪು ಚರ್ಮದ, ಠೊಣಪ ದೇಹದವರಾಗಿದ್ದರು; ಅವರ ಶಿರಸೂಚಿಗಳು ಬಹುವಾಗಿ ೮೬ಕ್ಕೂ ಹೆಚ್ಚಿದ್ದವು. ಇದೇ ದೈಹಿಕ ಮಾದರಿಯ ಜನರ ದೀರ್ಘ ಸರಪಳಿ ಈ ಪ್ರದೇಶದಿಂದಲೇ ವಿಸ್ಕೃತವಾಗಿ ಅಡೆತಡೆಯಿಲ್ಲದೆ ಪಶ್ಚಿಮದ ಕಡೆಗೆ ಏಷ್ಯಾ ಮೈನರ್ ದಾಟಿ ಯೂರೋಪನ್ನು ಪ್ರವೇಶಿಸುತ್ತದೆ. ಆದರ್ಶ ಆಲ್ಪೈನ್ ಮಾದರಿಯ ನೆಲೆಸಿಗರು ವಶಪಡಿಸಿಕೊಂಡ ಪಶ್ಚಿಮ ಏಷ್ಯಾದ ವಿಶಾಲ ಪ್ರದೇಶವನ್ನು ಕಂಡುಹಿಡಿದರೆಂಬ ಅಂಶವೇ ಈ ವಿಶಿಷ್ಟ ಜನಾಂಗದ ಸಂಬಂಧಗಳನ್ನು ಒತ್ತಿ ಹೇಳುತ್ತದೆ. ಅದು ಏಷ್ಯಾದಿಂದ ಬಂದ ನೇರ ವಲಸೆ ಎಂಬುದಕ್ಕೆ ಪುರಾವೆಯಿಲ್ಲ ಎಂದು ತಾಪನೆರ್ ಹೇಳುತ್ತಾರೆ. ದಪ್ಪ ತಲೆಯುಳ್ಳ ಮಾದರಿಯ ಹುಟ್ಟನ್ನು ನಾವು ಹುಡುಕುವಾಗ ನಮ್ಮ ಕಣ್ಣುಗಳನ್ನು ಅದು ಪೂರ್ವಾಭಿಮುಖವಾಗಿ ನಡೆಸುತ್ತದೆ. ಈ ದಿಕ್ಕಿನಲ್ಲಿ ಎಲ್ಲೊ ಮೂಲ ಜನಾಂಗದ ತಾಣದಿಂದ ಜನರು ಬರುತ್ತಿದ್ದರೆಂದು ಅಸ್ಪಷ್ಟವಾಗಿ ಗೊತ್ತಾಗುತ್ತದೆ. ಅದು ಪಶ್ಚಿಮಾಭಿಮುಖವಾಗಿ ಇರಲು ಸಾಧ್ಯವಿಲ್ಲ, ಏಕೆಂದರೆ ಅಟ್ಲಾಂಟಿಕ್‌ನ ಉದ್ದಕ್ಕೂ ಈ ಜನಾಂಗ ಕ್ರಮೇಣ ಕಣ್ಮರೆಯಾಗುತ್ತದೆ ಎಂದು ಹೇಳಬಹುದು. ಆಲ್ಪೈನ್ ಮಾದರಿ ವಿಶೇಷವಾಗಿ ತಲೆಯ ರಚನೆ, ತಲೆಗೂದಲು, ಮೈಬಣ್ಣ ಮತ್ತು ನಿಲುವಿನಲ್ಲಿಯೂ ಕೂಡ ಏಷ್ಯಾ

೧. *Races of Europe, Pp.* 473–74

ಖಂಡದ ಮಿಲಿಯಗಟ್ಟಲೆ ಇತರ ಮಾನವರ ಹತ್ತಿರ ಬರುವುದರಿಂದ ನಮ್ಮ ಮನಸ್ಸನ್ನು ಈ ವಿಷಯದಲ್ಲಿಯೂ ಪೂರ್ವಗ್ರಹಗೊಳಿಸುತ್ತದೆ; ಉದ್ದ ತಲೆಯ, ತೀರಾ ಕಂದುಗೂದಲಿನ ನಮ್ಮ ಮೆಡಿಟರೇನಿಯನ್ ಜನಾಂಗ ಆಫ್ರೀಕಾದ ನೀಗ್ರೋಗಳಿಗೆ ಜನಕನಾದ ಯಾವುದೋ ಮಾದರಿಯಿಂದ ಬಂದಿತೆಂದು ಅಭಿಪ್ರಾಯ ತಾಳಲು ಈ ಹಿಂದೆ ನಮಗೆ ದಾರಿ ಮಾಡಿತ್ತು, ಆದ್ದರಿಂದ ಈ ಅಂಶಗಳು ಖಚಿತವಾಗಿವೆ; ಆಲ್ಪೈನ್ ಬೇರುಗಳು ಪೂರ್ವಾಭಿಮುಖವಾಗಿ ಹರಿಯುತ್ತವೆ; ಮೆಡಿಟರೇನಿಯನ್ ಮಾದರಿಯವು ದಕ್ಷಿಣಾಭಿಮುಖವಾಗಿವೆ."

ಅದರ ಭಾಷೆಗೆ ಸಂಬಂಧಿಸಿದ ವಿಷಯವಾಗಿ ಯೂರೋಪಿನಲ್ಲಿ ಆರ್ಯರ ಭಾಷೆಯನ್ನು (ಹಿಂದೂ ಜರ್ಮನ್ನರ ಅತ್ಯಂತ ಪರಿಶುದ್ಧರಾದ) ನಾರ್ಡಿಕರು ಅಥವಾ ಆಲ್ಪೈನರು ಪರಿಚಯಿಸಿದರು ಎಂಬ ವಿಷಯವಾಗಿ ಸಾಕಷ್ಟು ವಾದ ವಿವಾದಗಳಿವೆ.[೧] ಆದರೆ ಆ ಭಾಷೆ ಆಲ್ಪೈನ್ ಜನಾಂಗದ್ದು ಎಂಬ ಬಗ್ಗೆ ವಿವಾದವಿಲ್ಲ. ಆದ್ದರಿಂದ, ಭಾಷಾಶಾಸ್ತ್ರದ ದೃಷ್ಟಿಯಲ್ಲಿ ಅದನ್ನು ಆರ್ಯ ಜನಾಂಗವೆಂದು ಕರೆಯಬಹುದು.

## ೧೦

ಇದುವರೆಗಿನ ನಿರೂಪಣೆಗಳ ವಿವರಣೆಗಳಿಂದ ಭರತಖಂಡದಲ್ಲಿ ಒಂದಲ್ಲ, ಎರಡು ಜನಾಂಗಗಳಿದ್ದುವು ಎಂಬುದಕ್ಕೆ ಋಗ್ವೇದದಲ್ಲಿ ಆಧಾರವಿದೆ ಹಾಗೂ ಮಾನವ ಶರೀರ ಮಾಪನದಲ್ಲಿ ಮತ್ತು ಇತಿಹಾಸದಲ್ಲಿ ಗಟ್ಟಿಯಾದ ಆಸ್ತಿಭಾರವಿದೆ. ಇದನ್ನು ಮಾನ್ಯ ಮಾಡಿದರೆ, ಪಾಶ್ಚಾತ್ಯ ಸಿದ್ಧಾಂತಕ್ಕೂ ಋಗ್ವೇದದ ಪ್ರಮಾಣಕ್ಕೂ ನೇರ ಘರ್ಷಣೆ ಇದೆ ಎಂಬುದನ್ನು ಒಪ್ಪಿಕೊಳ್ಳಲು ಯಾರೂ ನಿರಾಕರಿಸಲಾರರು. ಪಾಶ್ಚಾತ್ಯ ಸಿದ್ಧಾಂತ ಒಂದು ಆರ್ಯ ಜನಾಂಗವೆಂದು ಹೇಳಿದರೆ ಋಗ್ವೇದವು ಎರಡು ಆರ್ಯ ಜನಾಂಗಗಳೆಂದು ಹೇಳುತ್ತದೆ. ಒಂದು ಪ್ರಮುಖ ಸಮಸ್ಯೆಯ ಬಗ್ಗೆ ಹೀಗೆ ಋಗ್ವೇದ ಪಾಶ್ಚಾತ್ಯ ಸಿದ್ಧಾಂತದ ಜೊತೆ ಘರ್ಷಣೆಯಲ್ಲಿದೆ. ಈ ವಿಷಯದ ಬಗ್ಗೆ ಅತ್ಯುತ್ತಮ ಆಧಾರ ಋಗ್ವೇದವೇ ಆಗಿರುವುದರಿಂದ ಪಾಶ್ಚಾತ್ಯ ಸಿದ್ಧಾಂತವನ್ನು ತಿರಸ್ಕರಿಸಬೇಕಾಗುತ್ತದೆ; ಬೇರೆ ಉಪಾಯವಿಲ್ಲ.

ಪ್ರಮುಖ ಸಮಸ್ಯೆಯ ಬಗೆಗಿನ ಈ ಘರ್ಷಣೆ, ಆಕ್ರಮಣ ಮತ್ತು ದಿಗ್ವಿಜಯದ ಸಮಸ್ಯೆಯನ್ನು ಕುರಿತು ಒಂದು ಘರ್ಷಣೆಯನ್ನು ಹುಟ್ಟುಹಾಕುತ್ತದೆ. ಎರಡು ಆರ್ಯ ಜನಾಂಗಗಳಲ್ಲಿ ಭರತ ಖಂಡಕ್ಕೆ ಮೊದಲು ಯಾವುದು ಬಂತು ಎಂದು ನಮಗೆ ಗೊತ್ತಿಲ್ಲ. ಆದರೆ ಅವರು ಆಲ್ಪೈನ್ ಜನಾಂಗಕ್ಕೆ ಸೇರಿದ್ದರೆ ಆಗ ಅದರ ನೆಲೆ ಹಿಮಾಲಯದ ಹತ್ತಿರವಾಗುತ್ತಿತ್ತು. ಹೊರಗಿನಿಂದ ಆಕ್ರಮಣವಾಯಿತು ಎಂಬ ವಾದಕ್ಕೆ ಅವಕಾಶವಿಲ್ಲ. ಸ್ಥಳೀಯ ಬುಡಕಟ್ಟುಗಳನ್ನು ಗೆದ್ದರೆಂಬ ಅಂಶವನ್ನು ಒಪ್ಪಿಕೊಳ್ಳುವುದಾದರೆ ಈ ಸಮಸ್ಯೆ ಪಾಶ್ಚಾತ್ಯ ಲೇಖಕರು ಊಹಿಸಿದಷ್ಟು ಸರಳವಾಗಿಲ್ಲ. ಆರ್ಯರಿಗಿಂತ ಜನಾಂಗಿಕವಾಗಿ ದಾಸರು ಮತ್ತು ದಸ್ಯುಗಳು ಭಿನ್ನವಾಗಿದ್ದರೆಂಬ ನೆಲೆಗಟ್ಟಿನ ಮೇಲೆ, ದಾಸರು ಮತ್ತು ದಸ್ಯುಗಳ ದಿಗ್ವಿಜಯದ ಸಾಧ್ಯತೆ ಇದೆ ಎಂಬ ವಿವರವನ್ನು ಒಪ್ಪಿಕೊಂಡರೆ ಆರ್ಯರಿಂದ ಆರ್ಯರ ದಿಗ್ವಿಜಯದ ಸಾಧ್ಯತೆಯನ್ನು ಕೂಡ ಒಪ್ಪಿಕೊಳ್ಳಬೇಕಾಗುತ್ತದೆ. ದಾಸರು ಮತ್ತು ದಸ್ಯುಗಳನ್ನು ಆರ್ಯರು ಗೆದ್ದಿರುವುದೇ ಆದರೆ, ಎರಡು ಆರ್ಯ ಜನಾಂಗಗಳಲ್ಲಿ ಯಾವುದು ಅವರನ್ನು ಗೆದ್ದಿತು ಎಂಬುದನ್ನು ಕೂಡ ವಿವರಿಸಬೇಕಾಗುತ್ತದೆ.

ಪಾಶ್ಚಾತ್ಯ ಸಿದ್ಧಾಂತವು ಸಂಗತಿಗಳ ಅಪೂರ್ಣ ಪರೀಕ್ಷೆಯಿಂದ ಮಾತ್ರ ತೆಗೆದುಕೊಂಡ ಅವಸರದ ತೀರ್ಮಾನವಾಗಿದೆ. ಪ್ರಾಚೀನ ಆರ್ಯರ ಮನೋಭಾವದ ಬಗ್ಗೆ ಕೆಲವು ಪೂರ್ವಕಲ್ಪಿತ ಭಾವನೆಗಳ ಜೊತೆ

---

೧. Madison Grant, *The Passing of the Great Race* (೧೯೯೨), Pp. 238–239

ತಾಳೆಯಾದುದರಿಂದ ಅದು ಸರಿಯೆಂದು ನಂಬಲಾಗಿದೆ; ಪ್ರಾಚೀನ ಆರ್ಯರ ಆಧುನಿಕ ಸಂತತಿಯವರೆಂದು ಹೇಳಲಾದ ಹಿಂದೂ ಜರ್ಮನಿಯ ಜನಾಂಗಗಳಿಗೆ ಇದ್ದ ಆಧಾರಗಳೆಂದು ಹೇಳುವುದನ್ನು ಬಿಟ್ಟರೆ ಇದಕ್ಕೆ ಬೇರಾವ ಆಧಾರವೂ ಇಲ್ಲ ಎಂಬುದು ಸ್ಪಷ್ಟವಾಗಿದೆ. ಸತ್ಯಗಳೆಂದು ನಂಬಲಾಗಿರುವ ಕೆಲವು ಆಯ್ದ ಸಂಗತಿಗಳ ಮೇಲೆ ಈ ವಾದವನ್ನು ನಿರ್ಮಿಸಲಾಗಿದೆ. ಇಷ್ಟು ತೆಳುವಾದ ಮತ್ತು ಅಭದ್ರವಾದ ತಳಪಾಯದ ಮೇಲೆ ಪಾಶ್ಚಾತ್ಯ ವಿದ್ವಾಂಸರು ಗಂಭೀರ ವಿದ್ವಾಂಸರಿಗಾಗಿ ಈ ವಾದವನ್ನು ಪ್ರತಿಪಾದಿಸಿರುವುದೂ, ಅದನ್ನು ಅವರು ಇಷ್ಟೊಂದು ದೀರ್ಘಕಾಲ ಮನ್ನಣೆ ಮಾಡಿರುವುದೂ ಅಸಾಧಾರಣವಾಗಿದೆ. ಈ ಅಧ್ಯಾಯದಲ್ಲಿ ಪ್ರತಿಪಾದಿಸಿದ ಹೊಸ ಸಂಗತಿಗಳ ಸಂಶೋಧನೆಯ ಎದುರಿನಲ್ಲಿ ಅವರ ವಾದ ಇನ್ನು ಮುಂದೆ ನಿಲ್ಲಲಾರದು ಹಾಗೂ ಅದನ್ನು ತಿಪ್ಪೆಗುಂಡಿಗೆ ಎಸೆಯತಕ್ಕದ್ದು.

♦

# ಅಧ್ಯಾಯ ೬

# ಶೂದ್ರರು ಹಾಗೂ ದಾಸರು

ಪಾಶ್ಚಾತ್ಯ ಸಿದ್ಧಾಂತವು ಎಷ್ಟು ಹುರುಳಿಲ್ಲದುದು ಎಂದು ತೋರಿಸಲ್ಪಟ್ಟಿದೆಯಷ್ಟೆ. ಈಗ 'ಶೂದ್ರರೆಂದರೆ ಯಾರು?' ಎಂಬ ಆ ಸಿದ್ಧಾಂತದ ಅಂಶವನ್ನು ಮಾತ್ರ ವಿವೇಚಿಸಲಿಕ್ಕಿದೆ.

ಶ್ರೀ ಎ.ಸಿ. ದಾಸ[೧] ಎಂಬುವವರು ಈ ರೀತಿ ಹೇಳಿದ್ದಾರೆ: "ದಾಸರು ಮತ್ತು ದಸ್ಯುಗಳು ಕಾಡುಜನಗಳಿರಬೇಕು ಇಲ್ಲವೇ ವೇದಗಳ ಕಾಲಕ್ಕೆ ಹೊರತಾದ ಆರ್ಯ ಬುಡಕಟ್ಟಿನ ಜನಾಂಗಗಳಾಗಿರಬೇಕು. ಯುದ್ಧದಲ್ಲಿ ಸೆರೆಯಾಳಾಗಿ ಕೊಂಡೊಯ್ಯಲ್ಪಟ್ಟವರು ಗುಲಾಮರೆಂದು ನಡೆಸಿಕೊಳ್ಳಲ್ಪಟ್ಟು, ಅವರದೇ ಆದ ಶೂದ್ರಜಾತಿಯೆಂಬುದೊಂದು ಹುಟ್ಟಿಕೊಂಡಿರಬೇಕು."

ಇನ್ನೊರ್ವ ವೇದವಿಷಯದ ಪಂಡಿತರೂ, ಪಾಶ್ಚಾತ್ಯ ಸಿದ್ಧಾಂತದ ಸಮರ್ಥಕರೂ ಆದ ಶ್ರೀ ಕಾಣೆಯವರು[೨] ಈ ಅಭಿಪ್ರಾಯ ವ್ಯಕ್ತಮಾಡಿದ್ದಾರೆ.

'ದಾಸ' ಎಂಬ ಶಬ್ದ ನಂತರದ ಸಾಹಿತ್ಯದಲ್ಲಿ 'ತೊತ್ತು' ಅಥವಾ 'ಗುಲಾಮ' ಎಂಬ ಅರ್ಥ ಪಡೆದಿದೆ. ಅಂದಮೇಲೆ, ಋಗ್ವೇದದ ಕಾಲದಲ್ಲಿ ಆರ್ಯರಿಗೆ ಎದುರಾಗಿ ನಿಂತಂಥ ಈ 'ದಾಸ' ಬುಡಕಟ್ಟಿನ ಜನಾಂಗಗಳು ಕ್ರಮೇಣವಾಗಿ ಆರ್ಯರಿಗೆ ಶರಣಾಗತರಾಗಿ ಅವರ ದಾಸರಾಗಿರಬೇಕೆಂಬುದು ತಿಳಿಯುತ್ತದೆ. ಮನುಸ್ಮೃತಿಯಲ್ಲಿ (VIII. ೪೧೩) ಶೂದ್ರನು ಬ್ರಾಹ್ಮಣನ ಸೇವೆಗೆಂದೇ ದೇವರಿಂದ ಸೃಷ್ಟಿಸಲ್ಪಟ್ಟವನು ಎಂದು ಹೇಳಲಾಗಿದೆ. ತೈತ್ತಿರೀಯ ಸಂಹಿತೆ, ತೈತ್ತಿರೀಯ ಬ್ರಾಹ್ಮಣ ಹಾಗೂ ಇತರ ಬ್ರಾಹ್ಮಣ ಕೃತಿಗಳಲ್ಲಿ ಕಂಡುಬರುವ ಶೂದ್ರನ ಸ್ಥಾನ ಸ್ಮೃತಿಗಳಲ್ಲಿನದಕ್ಕಿಂತ ಭಿನ್ನವಾಗಿಲ್ಲದುದನ್ನು ನಾವು ಕಾಣುತ್ತೇವೆ. ಆದ್ದರಿಂದ 'ದಾಸರು ಹಾಗೂ ದಸ್ಯು'ಗಳು ಆರ್ಯರ ಪ್ರಾಬಲ್ಯಕ್ಕೊಳಗಾಗಿ ಕ್ರಮೇಣ ಶೂದ್ರರಾಗಿ ಪರಿವರ್ತಿಸಲ್ಪಟ್ಟರು ಎಂಬ ಅನುಮಾನಕ್ಕೆ ನಾವು ಬರಬಹುದಾಗಿದೆ."

ಈ ಅಭಿಮತದ ಪ್ರಕಾರ ಶೂದ್ರರೆಂದರೆ ಈ 'ದಾಸ' 'ದಸ್ಯು'ಗಳೇ ಎಂದಂತಾಯಿತು. ಅಲ್ಲದೆ, ಇವರುಗಳು ಕಾಡು ಹಾಗೂ ಅನಾಗರಿಕ ಸ್ಥಿತಿಯಲ್ಲಿದ್ದ, ಭಾರತದ ಆರ್ಯೇತರ ಮೂಲನಿವಾಸಿಗಳೇ ಎಂದಂತಾಯಿತು. ನಾವೀಗ ಪರಿಶೀಲಿಸಬೇಕಾಗಿರುವುದು ಈ ಪ್ರಸ್ತಾವನೆಗಳನ್ನೇ.

ಮೊದಲ ಪ್ರಸ್ತಾವನೆ ಮೇಲುನೋಟಕ್ಕೆ ಒಂದಾಗಿ ಕಂಡರೂ ಅದರಲ್ಲಿ ನಿಜವಾಗಿ ಎರಡು ಪ್ರಸ್ತಾವನೆಗಳು ಅಡಕವಾಗಿವೆ: ಅವು ಯಾವುದೆಂದರೆ, (೧) ದಾಸರೂ, ದಸ್ಯುಗಳೂ ಒಂದೇ ಎಂಬುದು, ಹಾಗೂ (೨) ಇವರುಗಳೆಂದರೂ ಒಂದೇ, ಶೂದ್ರರೆಂದರೂ ಒಂದೇ ಎಂಬುದು.

ದಾಸರೂ ದಸ್ಯುಗಳೂ ಒಂದೇ ಎಂಬುದು ಅನುಮಾನಾರ್ಹ ಮೌಲ್ಯವುಳ್ಳ ಮಂಡನೆ. ಋಗ್ವೇದದಲ್ಲಿ ಬರುವ ಅವರ ಬಗೆಗಿನ ಪ್ರಸ್ತಾಪಗಳು, ಉಲ್ಲೇಖಗಳು ನಿರ್ಣಾಯಕವಲ್ಲ. ಕೆಲವೆಡೆ 'ದಾಸ' ಮತ್ತು 'ದಸ್ಯು'

---

೧. *Rig Vedic Culture,* p.133

೨. *Dharma Shastra,* II (I) p.33

ಎಂಬ ಪದಗಳು ಸಮಾನ ಪದಗಳೆಂದೇ ಉಪಯೋಗವಾಗಿವೆ. ಶಂಬಳ, ಶುಷ್ನ, ವೈತ್ರ ಮತ್ತು ಪಿಪ್ರು ಇವರುಗಳು ದಾಸರೆಂದೂ ದಸ್ಯುಗಳೆಂದೂ ವರ್ಣಿಸಲ್ಪಟ್ಟಿದ್ದಾರೆ. ಈ ದಾಸರು, ದಸ್ಯುಗಳು ಇಂದ್ರ ಹಾಗೂ ಇತರ ದೇವತೆಗಳ, ವಿಶೇಷತವಾಗಿ ಅಶ್ವಿನೀಕುಮಾರರ, ವೈರಿಗಳೆಂದು ವರ್ಣಿಸಲ್ಪಟ್ಟಿದ್ದಾರೆ. ದಾಸ–ದಸ್ಯುಗಳ ಪಟ್ಟಣಗಳನ್ನು ಇಂದ್ರ ಹಾಗೂ ದೇವತೆಗಳು ನೆಲಸಮ ಮಾಡಿದರೆಂಬ ವರ್ಣನೆ ಬರುತ್ತದೆ. ಇವರುಗಳ ಸೋಲಿನ ಪರಿಣಾಮವಾಗಿ ನೀರು ಬಿಡುಗಡೆಯಾಯಿತು ಹಾಗೂ ಬೆಳಕು ಮೂಡಿಬಂತು ಎಂಬ ವರ್ಣನೆಯೂ ಬರುತ್ತದೆ. ದಧೀಚಿಯ ಬಿಡುಗಡೆಯ ವರ್ಣನೆಯಲ್ಲಿ ಇವೆರಡರ ಪ್ರಸ್ತಾಪವೂ ಬರುತ್ತದೆ. ಆದರೆ ಒಂದೆಡೆ ದಧೀಚಿ ದಾಸರಿಂದ ಬಿಡುಗಡೆ ಹೊಂದಿದ ಎಂಬ ಉಲ್ಲೇಖ ಇದ್ದರೆ, ಇನ್ನೊಂದೆಡೆ ಆತ ದಸ್ಯುಗಳಿಂದ ಬಿಡುಗಡೆ ಹೊಂದಿದ ಎಂಬ ಉಲ್ಲೇಖ ಇದೆ.

ಈ ಉಲ್ಲೇಖಗಳು ದಾಸರೂ ದಸ್ಯುಗಳೂ ಒಂದೇ ಎಂಬುದನ್ನು ಸೂಚಿಸುವಂತಿದ್ದರೆ, ಇನ್ನು ಬೇರೆ ಉಲ್ಲೇಖಗಳು ಅವರಿಬ್ಬರೂ ಬೇರೆ ಬೇರೆ ಎಂಬುದನ್ನು ಸೂಚಿಸುತ್ತವೆ. ಈ ಮಾತು ಅವರ ಬಗೆಗಿನ ಪ್ರತ್ಯೇಕ ಉಲ್ಲೇಖಗಳಿಂದ ಸ್ಪಷ್ಟವಾಗುತ್ತದೆ – ಇದರಲ್ಲಿ ದಾಸರನ್ನು ಕುರಿತು ೫೪ ಉಲ್ಲೇಖಗಳು ಇವೆ, ದಸ್ಯುಗಳನ್ನು ಕುರಿತು ೭೮ ಉಲ್ಲೇಖಗಳು ಇವೆ. ಅವರಿಬ್ಬರಿಗೂ ಪ್ರತ್ಯೇಕ ಅಸ್ತಿತ್ವ ಇರದಿದ್ದರೆ, ಈ ಪ್ರತ್ಯೇಕವಾದ ಉಲ್ಲೇಖಗಳು ಏಕಿರಬೇಕಾಗಿತ್ತು? ಆದ್ದರಿಂದ, ಅವೆರಡೂ ಬೇರೆಬೇರೆಯಾದ ಸಮುದಾಯಗಳಾಗಿದ್ದಿರುವ ಸಂಭವ ಇದೆ.

ಶೂದ್ರರೆಂದರೂ ಒಂದೇ ದಾಸ–ದಸ್ಯುಗಳೆಂದರೂ ಒಂದೇ ಎಂಬ ಪ್ರಸ್ತಾವನೆಯ ಬಗೆಗೆ ಅದು ನಿರಾಧಾರವಾದುದು ಎಂದು ನಿಶ್ಚಿತವಾಗಿ ಹೇಳಬಹುದು.

ಶೂದ್ರರನ್ನು ದಾಸ–ದಸ್ಯುಗಳೊಂದಿಗೆ ಸಮೀಕರಿಸುವ ವಾದದ ಪುಷ್ಟೀಕರಣಕ್ಕೋಸುಗ, 'ಶೂದ್ರ ಎಂಬ ಪದವು ಸ್ವತಂತ್ರ ಪದವಲ್ಲ, ಅದು ಇನ್ನೊಂದು ಪದದಿಂದ ಬಂದುದು' ಎಂಬಂತೆ ಅದನ್ನು ಬಳಸುವ ಪ್ರಯತ್ನ ಮಾಡಲಾಗಿದೆ. ಅದು **'ಶುಕ್'** (ಎಂದರೆ ಶೋಕ) ಹಾಗೂ **'ದ್ರು'** (ಎಂದರೆ, 'ಆವರಿಸು') ಎಂಬ ಪದಗಳಿಂದುತ್ಪನ್ನವಾದ **'ಶೋಕಾವೃತ'** ಎಂಬರ್ಥದ ಶಬ್ದ ಎಂದು ವಾದಿಸಲಾಗಿದೆ. ಈ ಸಂಬಂಧದಲ್ಲಿ ವೇದಾಂತಸೂತ್ರ (I.೩.೩೪)ದಲ್ಲಿ ಬರುವ ಕತೆಯನ್ನು ಆಧಾರವಾಗಿ ಮಾಡಿಕೊಳ್ಳಲಾಗಿದೆ. ಆ ಕತೆ ಏನೆಂದರೆ, ಜನಶ್ರುತಿ ಎಂಬಾತನು ಉಷ್ಟ್ರಪಕ್ಷಿಗಳು ತನ್ನ ಬಗೆಗೆ ಅಪಹಾಸ್ಯದಿಂದ ಮಾತನಾಡಿದುದನ್ನು ಕೇಳಿ ಖಿನ್ನಗೊಳ್ಳುತ್ತಾನೆ.[೧] ವಿಷ್ಣುಪುರಾಣದಲ್ಲಿಯೂ ಶೂದ್ರ ಎಂಬ ಶಬ್ದಕ್ಕೆ ಇದೇ ವ್ಯುತ್ಪತ್ತಿಯನ್ನು ನೀಡಲಾಗಿದೆ.[೨]

ಈ ಹೇಳಿಕೆಗಳು ಎಷ್ಟರಮಟ್ಟಿಗೆ ಸಾಧಾರವಾದವು?

**'ಶೂದ್ರ'** ಎಂಬ ಶಬ್ದವು ಅಂಕಿತನಾಮವಾಗಿರದೆ ವ್ಯುತ್ಪನ್ನ ಪದ (derivative) ಎಂಬ ವಾದ ತೀರ ಹಾಸ್ಯಾಸ್ಪದವಾದುದು. ಶಬ್ದೋತ್ಪತ್ತಿಗಳನ್ನು ಸೃಷ್ಟಿಮಾಡುವಲ್ಲಂತೂ ಬ್ರಾಹ್ಮಣ ಲೇಖಕರಿಗೆ ಯಾರೂ ಸಮನಾಗಲಾರರು. ಅವರು ವ್ಯುತ್ಪತ್ತಿಯನ್ನು ನೀಡದ ಶಬ್ದವೇ ಇಲ್ಲ. 'ಉಪನಿಷತ್' ಶಬ್ದದ ಅನೇಕ ವ್ಯುತ್ಪತ್ತಿಗಳ ಬಗೆಗೆ ಮಾತನಾಡುತ್ತಾ ಮ್ಯಾಕ್ಸ್‌ಮುಲ್ಲರ್ ಅವರು ಹೀಗೆ ಅಂದದ್ದುಂಟು:[೩]

**"**ಈ ವಿವರಗಳು ಬುದ್ಧಿಪೂರ್ವಕವಾಗಿ ವಕ್ರವಾದವುಗಳಾಗಿದ್ದು, ಭಾರತೀಯ ವಿದ್ವಾಂಸರಲ್ಲಿ ಅವುಗಳ ಬಗೆಗಿರುವ ಒಮ್ಮತವು ಅರ್ಥವಾಗುವುದಿಲ್ಲ. ಈ ಸಂದರ್ಭದಲ್ಲಿ ನಾವು ಅರ್ಥಂಬರ್ಥ ಶಿಕ್ಷಣ ಪಡೆದು

೧. ಕಾಣೆಯವರ ಧರ್ಮಶಾಸ್ತ್ರದಲ್ಲಿ ಉಲ್ಲೇಖಿತವಾಗಿದೆ. II(I), p.೧೫೫

೨. Muir, Vol.೧, p.97

೩. *Upanishads,* Introduction, pp. ixxix - ixxxi

ಜನರಲ್ಲಿನ ಯಾವುದೇ ಶಬ್ದದ ಪ್ರಚಲಿತ ಅರ್ಥಕ್ಕೆ ಹೊಂದುವ ರೂಪನಿಷ್ಪತ್ತಿಯನ್ನೊಪ್ಪಿಕೊಳ್ಳುವ ಪ್ರವೃತ್ತಿಯನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಅರಣ್ಯಕಗಳಲ್ಲಿ ಇಂಥ ಶಬ್ದೋತ್ಪತ್ತಿಗಳು ಹೇರಳವಾಗಿವೆ. ಬಹುಶಃ ಇವುಗಳ ರೂಪನಿಷ್ಪತ್ತಿ ನೀಡಿದವರು ಅವುಗಳನ್ನು ಗಂಭೀರವಾಗಿ ಪರಿಗಣಿಸದೆ ಕೇವಲ ಅವುಗಳ ಪ್ರಚಲಿತ ಅರ್ಥಕ್ಕೆ ಸಮಜಾಯಿಷಿ ನೀಡುವ, ಶಬ್ದದೊಡನಾಟದ, ಪ್ರಯತ್ನವಾಗಿದೆ."

'ಶೂದ್ರ'ವೆಂಬ ಶಬ್ದ ಸಾಧಿತಶಬ್ದವೆಂದು ಹೇಳಿ ಅದನ್ನು ಶೋಕತಪ್ತ (ದುಃಖಿತ) ಜನಗಳು ಎಂದು ಅರ್ಥೈಸುವ ವೇದಾಂತಸೂತ್ರ ಹಾಗೂ ವಾಯುಪುರಾಣದ ಪ್ರಯತ್ನಕ್ಕೂ ಇದೇ ಎಚ್ಚರದ ಮಾತು ಅನ್ವಯಿಸುತ್ತದೆ. ಆದ್ದರಿಂದ ಅದನ್ನು ಅಸಂಬದ್ಧ ಹಾಗೂ ಅರ್ಥಹೀನ ಎಂದು ನಾವು ನಿರಾಕರಿಸಬೇಕಾದುದು ಸೂಕ್ತ.

ಆದರೆ, 'ಶೂದ್ರ' ಎಂಬುದು ಸಾಧಿತಶಬ್ದವಾಗಿರದೆ, ಅದು ಒಂದು ಬುಡಕಟ್ಟಿನ ಅಥವಾ ಕುಲದ ಅಂಕಿತನಾಮವೆಂದು ವಿವರಿಸುವ ಪ್ರಸ್ತಾವನೆಗೆ ನೇರವಾದ ಸಾಕ್ಷ್ಯಾಧಾರ ನಮಗೆ ಲಭ್ಯವಿದೆ. ಈ ಸಾಕ್ಷ್ಯಾಧಾರದ ವಿವಿಧ ಅಂಶಗಳನ್ನು ನಾವು ಸಾದರಪಡಿಸಬಹುದು. ಅಲೆಕ್ಸಾಂಡರನು ಭಾರತದ ಮೇಲೆ ದಂಡೆತ್ತಿ ಬಂದ ಕಾಲದ ಚರಿತ್ರಕಾರರು ಆತನು ಎದುರಿಸಿದ ಅನೇಕ ಸ್ವಾತಂತ್ರ್ಯ ಸ್ವಾಯತ್ತ ಗಣರಾಜ್ಯಗಳನ್ನು ವರ್ಣಿಸಿದ್ದಾರೆ. ಅವುಗಳು ಬೇರೆ ಬೇರೆ ಬುಡಕಟ್ಟು ಜನಾಂಗಗಳಿಂದ ರಚಿತವಾಗಿದ್ದವೆಂಬುದು ನಿಸ್ಸಂಶಯ. ಅಲ್ಲದೆ, ಅವುಗಳು ಆಯಾ ಜನಾಂಗಗಳ ಹೆಸರುಗಳನ್ನೇ ಹೊತ್ತಿದ್ದವು. ಇವುಗಳಲ್ಲಿ 'ಸೋದರಿ' ಎಂಬ ಜನಾಂಗವೊಂದಿದ್ದುದಾಗಿ ಉಲ್ಲೇಖಗಳು ಸಿಕ್ಕುತ್ತವೆ. ಇದೊಂದು ಸಾಕಷ್ಟು ಮಹತ್ವವನ್ನು ಪಡೆದ ಜನಾಂಗವಾಗಿದ್ದಿತು. ಇದು ಅಲೆಕ್ಸಾಂಡರನಿಗೆ– ಕೊನೆಯಲ್ಲಿ ಅವನ ಕೈಯಲ್ಲಿ ಪರಾಭವಗೊಂಡರೂ– ಬಲವಾದ ಪ್ರತಿರೋಧವನ್ನೊಡ್ಡಿದ ಜನಾಂಗಗಳಲ್ಲೊಂದಾಗಿತ್ತು. ಲ್ಯಾಸನ್ (Lassen) ಎಂಬುವವನು ಇವರನ್ನು ಪ್ರಾಚೀನಕಾಲದ ಶೂದ್ರರೆಂದೇ ಗುರುತಿಸುತ್ತಾನೆ. ಪತಂಜಲಿಯು ತನ್ನ ಮಹಾಭಾಷ್ಯ (೧,೨,೩)ದಲ್ಲಿ ಶೂದ್ರರನ್ನು ಪ್ರಸ್ತಾಪಿಸಿ, ಅವರನ್ನು ಅಭೀರರ ಸಂಬಂಧೀಕುಲವೊಂದೆಂಬಂತೆ ಪರಿಗಣಿಸಿದ್ದಾನೆ. ಮಹಾಭಾರತದ ಸಭಾಪರ್ವದ ೩೨ನೆ ಅಧ್ಯಾಯದಲ್ಲಿ ಶೂದ್ರರ ಗಣರಾಜ್ಯದ ಬಗ್ಗೆ ಪ್ರಸ್ತಾಪ ಬರುತ್ತದೆ. ವಿಷ್ಣುಪುರಾಣ, ಮಾರ್ಕಂಡೇಯಪುರಾಣ ಹಾಗೂ ಬ್ರಹ್ಮ ಪುರಾಣಗಳು ಶೂದ್ರರನ್ನು ಅನೇಕ ಬುಡಕಟ್ಟು ಜನಾಂಗಗಳಲ್ಲೊಂದು ಎಂದು ಉಲ್ಲೇಖಿಸುತ್ತ, ಅವರ ನೆಲೆ ವಿಂಧ್ಯದ ಮೇಲಕ್ಕೆ ಪಶ್ಚಿಮ ಭಾಗದ ಪ್ರದೇಶ ಎಂದು ಗುರುತಿಸಿವೆ.[೧]

ಈಗ ಎರಡನೆಯ ಪ್ರಸ್ತಾವನೆಯ ಕಡೆಗೆ–ಅದರ ವಿವಿಧ ಘಟಕಗಳ ಕಡೆಗೆ–ಲಕ್ಷ್ಯ ಹೊರಳಿಸೋಣ. ಅದರಲ್ಲಿ ಎರಡು ಅಂಶಗಳಿವೆ. ಮೊದಲನೆಯದು: 'ದಾಸ' ಹಾಗೂ 'ದಸ್ಯು' ಎಂಬ ಎರಡೂ ಶಬ್ದಗಳು ಆರ್ಯೇತರ ಬುಡಕಟ್ಟು ಜನಾಂಗಗಳೆಂಬರ್ಥದ ಜನಾಂಗಸೂಚಕ ಪದಗಳೇ? ಎರಡನೆಯ ಅಂಶವೆಂದರೆ, ಅವರಿಬ್ಬರೂ ಇಂಥ ಜನಾಂಗಗಳು ಎಂದು ಒಪ್ಪಿಕೊಂಡರೂ ಅವು ಭಾರತದ ಮೂಲಜನಾಂಗಗಳೆಂಬುದಕ್ಕೆ ಏನಾದರೂ ಆಧಾರ ಇದೆಯೇ? ಇವೆರಡೂ ಪ್ರಶ್ನೆಗಳಿಗೆ ಇತ್ಯಾತ್ಮಕ ಉತ್ತರ ದೊರೆಯುವವರೆಗೆ, ದಾಸ–ದಸ್ಯುಗಳನ್ನು 'ಶೂದ್ರ'ರೊಂದಿಗೆ ಸಮೀಕರಿಸುವ ಸಾಧ್ಯತೆ ಇಲ್ಲ.

'ದಸ್ಯು'ಗಳೆಂಬ ಶಬ್ದ ಅವರು ಆರ್ಯೇತರ ಜನಾಂಗ ಎಂಬ ಜನಾಂಗವಾಚಕ ಶಬ್ದ ಎಂಬುದರ ಬಗೆಗೆ ಸಾಕ್ಷ್ಯಾಧಾರವಿಲ್ಲ. ಇದಕ್ಕೆ ವಿರುದ್ಧವಾಗಿ, ಯಾವ ವಿಧದಲ್ಲೂ ಆರ್ಯರ ಧರ್ಮವನ್ನು ಪಾಲಿಸದೆ ಜನವೆಂದು ಸೂಚಿಸುವ ಪದವದು ಎಂಬುದಕ್ಕೆ ಸಾಕ್ಷ್ಯಾಧಾರ ಇದೆ.

---

೧. See references in *Tribes in Ancient India* by B.C. Law, p.೩೫೦

ಮಹಾಭಾರತದ ಶಾಂತಿಪರ್ವದ ೬೫ನೇ ಅಧ್ಯಾಯದ ೨೩ನೆಯ ಶ್ಲೋಕವನ್ನು ನೋಡಬಹುದು. ಅದರಲ್ಲಿ ಹೀಗೆ ಹೇಳಲಾಗಿದೆ.

**ದೃಶ್ಯಂತೇ ಮಾನುಷೇಲೋಕೇ ಸರ್ವವರ್ಣೇಷು ದಸ್ಯವಃ।**
**ಲಿಂಗಾಂತರೇ ವರ್ತಮಾನಾ ಆಶ್ರಮೇಷು ಚತುರ್ಷ್ವಪಿ॥**

ಶ್ಲೋಕವು ಹೀಗೆ ಅರ್ಥವನ್ನು ಕೊಡುತ್ತದೆ :

"ಎಲ್ಲ ವರ್ಣಗಳಲ್ಲೂ, ಎಲ್ಲ ಆಶ್ರಮಗಳಲ್ಲೂ ದಸ್ಯುಗಳ ಇರವನ್ನು ಕಾಣಬಹುದಾಗಿದೆ."

ದಸ್ಯು ಶಬ್ದದ ಮೂಲವೇನೆಂಬುದು ಉತ್ತರಿಸಲು ಕಠಿಣವಾದ ಪ್ರಶ್ನೆ. ಇದೊಂದು ಇಂಡೋ-ಆರ್ಯನ್ನರು ಇಂಡೋ-ಇರಾನಿಯನ್ನರಿಗೆ ಉಪಯೋಗಿಸುತ್ತಿದ್ದ ಬೈಗುಳ ಪದವೆಂಬ ಒಂದು ವಾದವನ್ನೂ[೧] ಮಂಡಿಸಲಾಗಿದೆ. ಈ ಸೂಚನೆಯಲ್ಲಿ ಅಸ್ವಾಭಾವಿಕ ಅಥವಾ ಕಲ್ಪನಾತೀತವಾದುದೇನು ಇಲ್ಲ. ಈ ಎರಡೂ ಬಣಗಳು ಪರಸ್ಪರ ತಿಕ್ಕಾಟದಲ್ಲಿ ತೊಡಗಿರುತ್ತದ್ದುವೆಂಬ ಸಂಗತಿ ಇತಿಹಾಸದಿಂದ ತಿಳಿದುಬರುತ್ತದೆ. ಆದ್ದರಿಂದ ಇಂಡೋ-ಆರ್ಯನ್ನರು ತಮ್ಮ ವೈರಿಗಳನ್ನು ಸೂಚಿಸುವುದಕ್ಕೆ ಇಂಥ ತಾತ್ಸಾರದ ಪದವನ್ನು ಬಳಸಿರಬೇಕು. ಇದು ಒಂದು ವೇಳೆ ಸತ್ಯವಾಗಿದ್ದಲ್ಲಿ, ದಸ್ಯುಗಳನ್ನು ಈ ದೇಶದ ಮೂಲನಿವಾಸಿಗಳೆಂದು ಪರಿಗಣಿಸಲಿಕ್ಕಾಗದು.

ದಾಸರ ಸಂಬಂಧದಲ್ಲಿ ನಾವು ವಿವೇಚಿಸಬೇಕಾದ ಪ್ರಶ್ನೆ : ಜ಼ೆಂಡ್-ಅವೆಸ್ತಾದಲ್ಲಿ ಉಲ್ಲೇಖಿತವಾದ ಆಝಿ-ದಾಹಕರಿಗೂ ಇವರಿಗೂ ಏನಾದರೂ ಸಂಬಂಧವಿದೆಯೋ ಹೇಗೆ ಎಂಬುದು. ಆಝಿ-ದಾಹಕ ಎಂಬುದೊಂದು ಸಂಯುಕ್ತಪದ : ಅದರಲ್ಲಿ ಅಡಕವಾದ ಪದಗಳ ಅರ್ಥ ('ಅಹಿ' ಎಂದರೆ 'ಸರ್ಪ' 'ದಾಹಕ' ಎಂದರೆ 'ಕಡಿಯುವ')- 'ಕಡಿಯುವ ಸರ್ಪ' ಎಂದು. ಇಂಡೋ-ಇರಾನಿಯನ್ ಪರಂಪರೆಯಲ್ಲಿ 'ಝೋಹಕ್' ಎಂದರೆ ದಾಹಕ. ಯಷ್ಟ್ ಸಾಹಿತ್ಯದಲ್ಲಿ ಆತ ಅನೇಕ ಬಾರಿ ಉಲ್ಲೇಖಿತನಾಗಿದ್ದಾನೆ. ಆತ ಬ್ಯಾಬಿಲಾನಿನಲ್ಲಿ ವಾಸವಾಗಿದ್ದು ಅಲ್ಲಿ ಒಂದು ಅರಮನೆಯನ್ನು ಕಟ್ಟಿಸಿದ್ದಾನೆಂಬ ಪ್ರತೀತಿ ಇದೆ. ಬ್ಯಾಬಿಲಾನಿನಲ್ಲಿ ಆತ ನಿರೀಕ್ಷಣಾ ಗೋಪುರವೊಂದನ್ನೂ ಕಟ್ಟಿಸಿದ್ದಾನೆ ಎಂಬ ಗ್ರಹಿಕೆ ಇದೆ. ಲೌಕಿಕ ಜಗತ್ತಿನ ಪುಣ್ಯರಾಜ್ಯವನ್ನು ವಿನಾಶಪಡಿಸಲು ದಾನವೇಶ್ವರನಾದ ಅಂಗ್ರ ಮೈನ್ಯುವಿನಿಂದ ಈ ಅಝಿ-ದಾಹಕ ಸೃಷ್ಟಿಸಲ್ಪಟ್ಟವನಂತೆ. ಇಂಡೋ-ಇರಾನಿಯನ್ನರ ಸುಪ್ರಸಿದ್ಧ ದೊರೆಯಾದ ಯಮನೊಂದಿಗೆ ಅಝಿ-ದಾಹಕ ಯುದ್ಧಗೈದುದಲ್ಲದೆ ಆತನನ್ನು ಸೋಲಿಸಿ ಕೊಂದನು ಕೂಡ.

ಜೆಂಡ್-ಅವೆಸ್ತಾದಲ್ಲಿ ಯಮರಾಜನು ಯಾವತ್ತೂ ಕ್ಷಯೇತ ಎಂಬ ಹೆಸರಿನಿಂದ ಕರೆಯಲ್ಪಟ್ಟಿದ್ದಾನೆ. 'ಕ್ಷಯೇತ' ಎಂದರೆ 'ಪ್ರಕಾಶಮಾನ' ಅಥವಾ 'ಆಳುವ' ಎಂದರ್ಥ. 'ಕ್ಷೀ' ಎಂಬ ಧಾತುವಿಗೆ 'ಆಳು' ಅಥವಾ 'ಹೊಳೆ' ಎಂಬ ಎರಡು ಅರ್ಥಗಳು. ಸಾಮಾನ್ಯವಾಗಿ ಯಿಮನಿಗೆ ಬಳಸುವ ಇನ್ನೊಂದು ವಿಶೇಷಣವೆಂದರೆ 'ಹ್ವಂತ್ವ' ಅದರ ಅರ್ಥ 'ಒಳ್ಳೆಯ ದೊಡ್ಡದಾದ'; 'ಕುರಿಹಿಂಡು'. ಈ ಅವೆಸ್ತಾದ ಯಿಮ ಕ್ಷೈತನೇ ಪರ್ಷಿಯನ್ ಭಾಷೆಯಲ್ಲಿ ನಂತರ 'ಜಮಶಿದ್' ಎಂದಾದನು. ಪರಂಪರೆಯ ಮೇರೆಗೆ ಪರ್ಷಿಯನ್ ಭಾಷೆಯಲ್ಲಿ ನಂತರ 'ಜಮಶಿದ್' ಎಂದಾದನು. ಪರಂಪರೆಯ ಮೇರೆಗೆ ವಿವಂಘವಂತನ ಮಗನಾದ ಜಮ್‌ಶಿದ್ ದೊರೆಯು ಇರಾನಿನ ಚರಿತ್ರೆಯ ಅತ್ಯಂತ ಘನಮಹಿಮ ನಾಯಕನು. ಆತನೇ ಪರ್ಷಿಯನ್ ಸಂಸ್ಕೃತಿಯ ಸಂಸ್ಥಾಪಕ. ಪೆಷ್ಡಿಯಾಡ್ಯನ್ ವಂಶದಲ್ಲಿ ಜನಿಸಿದನು.ಕೊಯಿಮಾಯತಿಯ ಯಸ್ನ ೯ ಹಾಗೂ ೫ರಲ್ಲಿ, ಈ ರೀತಿ ಹೇಳಲಾಗಿದೆ: "ವಿವಂಶಸ್ ಎಂಬಾತನು ಹಸ್ಮ (ಸಂಸ್ಕೃತ 'ಸಸ್ಮ') ನನ್ನು ಈ ಪ್ರಾಪಂಚಿಕ ಲೋಕದಲ್ಲಿ

---

೧. ಇದಕ್ಕೆ ನೀಡಬೇಕಾದ ಉಲ್ಲೇಖ ಕಳೆದುಹೋಗಿದೆ. ಒದಗಿಸಲಾಗದುದಕ್ಕೆ ವಿಷಾದಿಸುತ್ತೇನೆ.

ಸದೆಬಡಿದ ಮೊದಲಿಗನು; ಇದಕ್ಕೆ ವರವಾಗಿ ಆತನಿಗೆ ಪ್ರಕಾಶಮಾನವಾದ ಹಾಗೂ ದೊಡ್ಡ ಕುರಿಹಿಂಡಿನ ಆಸ್ತಿ ಹೊಂದಿದ ಯಿಮನೆಂಬ ಮಹಿಮಾನ್ವಿತ ಮಗನನ್ನು ಪಡೆದನು. ಪ್ರಪಂಚದಲ್ಲೇ ಕೀರ್ತಿವೆತ್ತ ಹಾಗೂ ಸೂರ್ಯನೋಪಾದಿ ಪ್ರಕಾಶಮಾನನಾದ ಯಿಮನು ತನ್ನ ಆಳ್ವಿಕೆಯ ಕಾಲದಲ್ಲಿ ಕುಲೀನರಿಗೂ ತುರುಮಂದೆಗಳಿಗೂ ಅಮರತ್ವ ಕಲ್ಪಿಸಿಕೊಟ್ಟನು. ಆತನ ಮಹಿಮೆಯು ಅಚ್ಚಳಿಯದಾಗಿತ್ತು. ಆತನು ಆಳುತ್ತಿರಲು ದೇಶದಲ್ಲಿ ಅತಿ ಉಷ್ಣ, ಅತಿ ಶೀತವೆಂಬುವಿರಲಿಲ್ಲ, ಮುಪ್ಪು, ಸಾವು, ಅಸೂಯೆ ಎಂಬುವೂ ಇರಲಿಲ್ಲ.

ಜೆಂಡ್ ಅವೆಸ್ತಾದ 'ದಾಹಕ'ವೆಂಬುವವನೂ ಋಗ್ವೇದದ 'ದಾಸ' ಎಂಬುವವನೂ ಒಬ್ಬನೇ ವ್ಯಕ್ತಿಯೇ? ನಾಮಸಾದೃಶ್ಯವನ್ನು ಆಧಾರವಾಗಿಟ್ಟುಕೊಳ್ಳುವುದಾದರೆ, ಆ ಹೆಸರುಗಳು ಒಬ್ಬನೇ ವ್ಯಕ್ತಿಯವು ಎಂಬ ತೀರ್ಮಾನಕ್ಕೆ ಎಡೆಮಾಡಿ ಕೊಡುತ್ತವೆ. ಸಂಸ್ಕೃತದ 'ದಾಸ' ಅವೆಷ್ಟಾದಲ್ಲಿ 'ದಾಹ' ಆಗಿರಲು ಸಾಕು (ಸಂಸ್ಕೃತದ 'ಸ', ಪರ್ಶಿಯನ್ ಭಾಷೆಯಲ್ಲಿ ಸ್ವಾಭಾವಿಕವಾಗಿಯೇ 'ಹ' ಎಂದು ಪರಿವರ್ತನೆಗೊಳ್ಳುವುದರಿಂದ). ಸಾಕ್ಷ್ಯಾಧಾರ ಇದೊಂದೇ. ಆದರೆ, ಋಗ್ವೇದದ 'ದಾಸ' ಹಾಗೂ ಝೆಂಡಾ ಅವೆಷ್ಟಾದ 'ದಾಹಕ' ಎಂಬುವು ಒಂದೇ ವ್ಯಕ್ತಿ ಎಂಬ ತೀರ್ಮಾನ ಬರೀ ಊಹೆಯ ನೆಲೆಯಲ್ಲಿ ಉಳಿಯಬಹುದಾಗಿತ್ತು. ಆದರೆ, ಅವರಿಬ್ಬರೂ ಒಂದೇ ಎಂಬ ಬಗ್ಗೆ ಇದಲ್ಲದೆ ಬೇರೆ, ಹಾಗೂ ಹೆಚ್ಚು ಸುಸಂಬದ್ಧ ಪ್ರಮಾಣ ಸಿಕ್ಕುತ್ತವೆ. ಯಸ್ನ ಹಾ ೯ರಲ್ಲಿ (ಇದು ಹಾರ್ನ ಯಾಶೆಯೇ ಆಗಿದೆ) ಅಝಿ ದಾಹಕ ಎಂಬಾತನು ಮೂರು ತಲೆ, ಮೂರು ಬಾಯಿ, ಹಾಗೂ ಆರು ಕಣ್ಣುಗಳವನಾಗಿದ್ದನೆಂದು ಹೇಳಲಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿ ಏನೆಂದರೆ, ಋಗ್ವೇದ (X.೯೯.೬)ದಲ್ಲಿಯೂ ದಾಸನ ವರ್ಣನೆ ಇದೇ ಪ್ರಕಾರ ಬರುತ್ತದೆ– ಆತನಿಗೂ ಮೂರು ತಲೆ, ಆರು ಕಣ್ಣು.[೧] ಅಂದಮೇಲೆ, ಋಗ್ವೇದದ ದಾಸ ಹಾಗೂ ಅವೆಷ್ಟಾದ ದಾಹಕ ಇಬ್ಬರೂ ಒಂದೇ ಎಂಬ ವಾದವನ್ನು ಒಪ್ಪಿಕೊಂಡದ್ದಾದರೆ, ದಾಸರು ಭಾರತದ ಮೂಲ ನಿವಾಸಿಗಳಾಗಿರಲಿಲ್ಲವೆಂದೇ ಸಿದ್ಧವಾಗುತ್ತದೆ.

## III

ಅವರು ಅನಾಗರಿಕರಾಗಿದ್ದರೇ? ದಾಸರು ಹಾಗೂ ದಸ್ಯುಗಳು ಕಾಡುಸ್ಥಿತಿಯಲ್ಲಿನ ಜನಾಂಗಗಳಾಗಿರಲಿಲ್ಲ; ಅವರು ಆರ್ಯರಷ್ಟೇ ನಾಗರಿಕತೆ ಹೊಂದಿದ, ಆದರೆ ಅವರಿಗಿಂತ ಇನ್ನೂ ಪ್ರಬಲರಾದ ಜನಗಳಾಗಿದ್ದರು; ಋಗ್ವೇದದ ಪುರಾವೆಯೇ ಈ ರೀತಿ ಇದೆ. ಅಯ್ಯಂಗಾರ್ ಅವರು ಈ ಕೆಳಗಣ ಶಬ್ದಗಳಲ್ಲಿ ಅದರ ಸಾರವನ್ನು ಸಂಗ್ರಹಿಸಿದ್ದಾರೆ.

"ದಸ್ಯುಗಳು ನಗರಗಳಲ್ಲಿ ವಾಸಿಸುತ್ತಿದ್ದರು (R.V. i ೫೩.೮, i.೧೦೩.೩) ಹಾಗೂ ಅವರನ್ನಾಳಿದ ಅರಸರಲ್ಲ ನೇಕರ ಹೆಸರುಗಳೂ ಉಕ್ತವಾಗಿವೆ. ಅವರು ಗೋವು ಕುದುರೆ ಹಾಗೂ ರಥಗಳ ರೂಪದಲ್ಲಿ (R.V. ii.೧೫.೪) ಸಂಚಿತ ಆಸ್ತಿಯನ್ನು ಹೊಂದಿದವರಾಗಿದ್ದರು. (R.V. viii ೪೦.೬) ಇವುಗಳನ್ನು ಅವರು ನೂರು ಹೆಬ್ಬಾಗಿಲುಗಳ ನಗರಗಳಲ್ಲಿ (R.V., x. ೯೯.೩) ಇಟ್ಟಿದ್ದರೂ ಇಂದ್ರನು ಅವುಗಳನ್ನು ವಶಪಡಿಸಿಕೊಂಡು ಕೊಂಡೊಯ್ದನು (R.V. i. ೩೩.೪) ಹಾಗೂ ಉತ್ತರ ಪ್ರದೇಶದಲ್ಲೂ ಬಯಲುನಾಡಿನಲ್ಲೂ (R.V. x ೬೯.೬) ಆಸ್ತಿಯನ್ನು ಹೊಂದಿದ್ದರು. ಸುವರ್ಣ ಹಾಗೂ ಮುತ್ತುರತ್ನದ ಒಡವೆಗಳಿಂದ ಅಲಂಕೃತರಾಗಿರುತ್ತಿದ್ದರು (R.V. i ೩೩.೮). ಅವರು ಅನೇಕ ಕೋಠಿಗಳನ್ನು ನಿರ್ಮಿಸಿದ್ದರು (R.V., i

---

೧. ದಾಸ ಹಾಗೂ ದಾಹಕ ಎಂಬುವವರು ಒಂದೇ ವ್ಯಕ್ತಿ ಎಂಬ ಸಿದ್ಧಾಂತಕ್ಕಾಗಿ ನಾನು ಮಹಾರಾಷ್ಟ್ರ ಜ್ಞಾನಕೋಶಕ್ಕೆ *(Vol.III, p.53) ಋಣಿಯಾಗಿದ್ದೇನೆ.*

೩೩.೧೩; viii.೧೭.೧೪) ದಸ್ಯು ದಾನವರೂ ಹಾಗೂ ಆರ್ಯದೇವತೆಗಳೂ ಕಬ್ಬಿಣ, ಬೆಳ್ಳಿ ಹಾಗೂ ಬಂಗಾರದ ಕೋಠಿ (ವಾಡೆ)ಗಳಲ್ಲಿ ವಾಸಿಸುತ್ತಿದ್ದರು. (sss. vi. ೨೩.A.V., v ೨೮.೯; R.V., ii.೨೦.೮.) ತನ್ನ ಆರಾಧಕನಾದ ದಿವೋದಾಸನನ್ನು (ಈತ ಋಕ್ಕುಗಳಲ್ಲಿ ಅನೇಕ ಬಾರಿ ಉಲ್ಲೇಖಿತನಾಗಿದ್ದಾನೆ) ಸಂತುಷ್ಟಪಡಿಸುವುದಕ್ಕೋಸ್ಕರ ದಸ್ಯುಗಳ ನೂರುಕಲ್ಲಿನ ಕೋಠಿಗಳನ್ನು (R.V. iv. ೩೦.೨೦) ಧ್ವಂಸಪಡಿಸಿದನು. ಆರ್ಯರಿಂದ ಪೂಜಿತವಾದ ಅಗ್ನಿದೇವನು ದಸ್ಯುಗಳ ಅಗ್ನಿರಹಿತ ನಗರಗಳನ್ನು ಸುಟ್ಟು ಹಾಕಿದನು. (R.V. vii ೫.೩.) ಅವರು ಆರ್ಯರಿಂದ ದೋಚಿಕೊಂಡೊಯ್ದ ತುರುಮಂದೆಗಳನ್ನು ಕಟ್ಟಿದ ಕಲ್ಲಿನ ಕಾರಾಗೃಹಗಳನ್ನು ಬೃಹಸ್ಪತಿಯು ಒಡೆದುಹಾಕಿದನು. (R.V. iv. ೬೭.೩.) ದಸ್ಯುಗಳೂ ರಥಗಳನ್ನು ಹೊಂದಿದವರಾಗಿದ್ದು ಆರ್ಯರಂತೆ ಅವರು ಅವುಗಳನ್ನು ಯುದ್ಧದಲ್ಲಿ ಉಪಯೋಗಿಸುತ್ತಿದ್ದರು ಹಾಗೂ ಆರ್ಯರಂಥ ಆಯುಧಗಳನ್ನು ಬಳಸುತ್ತಿದ್ದರು (R.V. viii.೨೪.೨೭, iii.೩.೫. ii.೧೫.೪).

ಶೂದ್ರರೆಂದರೇನೇ ಈ ದಾಸರು, ದಸ್ಯುಗಳು ಎಂಬ ಸಿದ್ಧಾಂತ ಕೇವಲ ಸ್ವಕಪೋಲಕಲ್ಪಿತ ಬೊಂತೆ. ಅದೊಂದು ತುದಿಮೊದಲಿಲ್ಲದ ಊಹೆ. ಗಣ್ಯ ವಿದ್ವಾಂಸರು ಮಂಡಿಸಿದ ಊಹೆಯೆಂದು ಅದನ್ನು ಸಹಿಸಲಾಗಿದೆಯಷ್ಟೆ. ಅದಕ್ಕೆ ಸಾಕ್ಷ್ಯಾಧಾರವೆಂಬುದು ಎಳ್ಳುಕಾಳಿನಷ್ಟೂ ಇಲ್ಲ. 'ದಾಸ'ವೆಂಬ ಶಬ್ದ ಋಗ್ವೇದದಲ್ಲಿ ೫೪ ಸಲ ಬರುತ್ತದೆ, ಹಾಗೂ 'ದಸ್ಯು' ಎಂಬುದು ೭೮ ಸಲ ಬಂದಿದೆ ಎಂದು ಈ ಮೊದಲೇ ಪ್ರಸ್ತಾಪಿಸಲಾಗಿದೆಯಷ್ಟೆ. ಈ ದಾಸ ದಸ್ಯುಗಳನ್ನು ಒಮ್ಮೊಮ್ಮೆ ಒಟ್ಟಿಗೇ ಪ್ರಸ್ತಾಪಿಸಲಾಗಿದೆ. 'ಶೂದ್ರ'ವೆಂಬ ಶಬ್ದ ಒಂದೇ ಒಂದು ಸಲ ಬಂದಿದೆ; ಅದೂ, ದಾಸ ಹಾಗೂ ದಸ್ಯುಗಳಿಗೆ ಸಂಬಂಧಪಡದ ಸಂದರ್ಭದಲ್ಲಿ. ಈ ಎಲ್ಲ ಆಲೋಚನೆಗಳ ಬೆಳಕಿನಲ್ಲಿ, ಯಾವುದೇ ಬುದ್ಧಿ ಸ್ತಿಮಿತದಲ್ಲಿರುವ ವ್ಯಕ್ತಿ 'ದಾಸ–ದಸ್ಯುಗಳು ಹಾಗೂ ಶೂದ್ರರು ಒಂದೇ' ಎಂದು ವಾದಿಸುವುದು ಸಾಧ್ಯವಿಲ್ಲ. ಗಮನಿಸಬೇಕಾದ ಇನ್ನೊಂದು ಸಂಗತಿಯೆಂದರೆ, ದಾಸ ಹಾಗೂ ದಸ್ಯು ಎಂಬ ಹೆಸರುಗಳು ನಂತರದ ವೈದಿಕ ಸಾಹಿತ್ಯದಿಂದ ಪೂರ್ತಿ ಮರೆಯಾಗಿ ಹೋಗಿವೆ. ಇದರರ್ಥ, ಅವರು ವೇದಕಾಲದ ಆರ್ಯರೊಂದಿಗೆ ಸಂಪೂರ್ಣ ಬೆರೆತುಹೋಗಿದ್ದರು ಎಂದು. ಆದರೆ, ಶೂದ್ರರ ಮಾತೇ ಬೇರೆ. ಪೂರ್ವಕಾಲದ ವೈದಿಕ ಸಾಹಿತ್ಯ ಅವರ ಬಗೆಗೆ ಪ್ರಸ್ತಾಪಿಸುವುದೇ ಇಲ್ಲ. ಆದರೆ, ನಂತರದ ವೈದಿಕ ಸಾಹಿತ್ಯದಲ್ಲಿ ಅವರ ಪ್ರಸ್ತಾಪ ಹೇರಳವಾಗಿ ಬರುತ್ತದೆ. ಇದು ಏನನ್ನು ನಿದರ್ಶಿಸುತ್ತದೆಂದರೆ ಶೂದ್ರರು ದಾಸ–ದಸ್ಯುಗಳಿಂದ ಭಿನ್ನರಾಗಿದ್ದರೆಂಬುದನ್ನು.

## IV

ಶೂದ್ರರು ಆರ್ಯೇತರರೇ? ಎಂಬ ಪ್ರಶ್ನೆ. ಕಾಣೆಯವರ ಪ್ರಕಾರ : "ಬ್ರಾಹ್ಮಣ ಕೃತಿಗಳ ಹಾಗೂ ಧರ್ಮಸೂತ್ರಗಳ ಕಾಲದಲ್ಲಿ ಆರ್ಯ ಹಾಗೂ ಶೂದ್ರರ ಮಧ್ಯೆ ಸ್ಪಷ್ಟವಾದ ಸೀಮಾರೇಖೆಯು ಎಳೆಯಲ್ಪಟ್ಟಿತ್ತು. ತಾಂಡ್ಯ ಬ್ರಾಹ್ಮಣವು ಒಂದು ಹುಸಿ ಕಾಳಗವನ್ನು ವರ್ಣಿಸುತ್ತಾ ಹೀಗೆ ಹೇಳುತ್ತದೆ: ಶೂದ್ರನೊಬ್ಬ ಹಾಗೂ ಆರ್ಯನೊಬ್ಬ ಚರ್ಮದ ಮೇಲೆ ಹೊಡೆಯುತ್ತಾರೆ; ಆರ್ಯವರ್ಣ ಕೊನೆಯಲ್ಲಿ ಜಯಶಾಲಿಯಾಗಬೇಕು ಎಂಬ ಒಪ್ಪಂದ ಮೊದಲೇ ಏರ್ಪಟ್ಟಿರುತ್ತದೆ. Ap. Dh.S (ಆಪದ್ಧರ್ಮಸೂತ್ರ)– i..೩.೪೦.೪೧– ಹೇಳುವಂತೆ ಬ್ರಹ್ಮಚಾರಿಯೊಬ್ಬ ತಾನು ಭಿಕ್ಷೆ ಬೇಡಿ ತಂದ ಅನ್ನವನ್ನೆಲ್ಲ ಉಣಲಾಗದಿದ್ದರೆ ಆತ ಉಳಿದ ಅನ್ನವನ್ನು ಇನ್ನೊಬ್ಬ ಆರ್ಯನ ಹತ್ತಿರ ಇಡಬಹುದು ಅಥವಾ ತನ್ನ ಗುರುವಿನ ಗುಲಾಮನಾದ ಒಬ್ಬ ಶೂದ್ರನಿಗೆ ಕೊಡಬಹುದಾಗಿದೆ. ಅದೇ ಪ್ರಕಾರ, ಗೌತಮ x.೬೯. ಅನಾರ್ಯನೆಂಬ ಶಬ್ದವನ್ನು 'ಶೂದ್ರ'ನೆಂಬರ್ಥದಲ್ಲಿ ಉಪಯೋಗಿಸಿದೆ."

ಈ ಸೀಮಾರೇಖೆಗೆ ಸಂಬಂಧಿಸಿದಂತೆ, ನಾವು ಆರ್ಯರ ಹಾಗೂ ಶೂದ್ರರ ಮಧ್ಯದ ಈ ವಿಷಯವನ್ನು ಕೂಲಂಕಷವಾಗಿ ವಿವೇಚಿಸಬೇಕಿದೆ.

ಶೂದ್ರರು ಆರ್ಯರಾಗಿರಲಿಲ್ಲ ಎಂಬ ವಾದದ ಬಲವು ಈ ಕೆಳಗಣ ಉಕ್ತಿಗಳಲ್ಲಿ ಕಂಡುಬರುತ್ತದೆ.

A.V. iv.೨೦.೪೦.– "ಸಹಸ್ರನೇತ್ರದ ದೇವನು ಈ ಸಸ್ಯವನ್ನು ನನ್ನ ಬಲಗೈಯಲ್ಲಿ ಇರಿಸುತ್ತಾನೆ; ಅದರ ಸಹಾಯದಿಂದ ನಾನು ಪ್ರತಿಯೊಬ್ಬನನ್ನು– ಅವನು ಆರ್ಯನಿರಲಿ, ಶೂದ್ರನಿರಲಿ' ಕಾಣುವಂಥವನಾಗುತ್ತೇನೆ."

ಕಾಠಕ ಸಂಹಿತೆ xxxiv.೫– "ಶೂದ್ರನೂ ಆರ್ಯನೂ ಚರ್ಮದ ಬಗೆಗೆ ಜಗಳವಾಡುತ್ತಾರೆ; ಸುರರು ಹಾಗೂ ಅಸುರರು ಸೂರ್ಯನ ಸಲುವಾಗಿ ಜಗಳವಾಡಿದರು– ಸುರರು ಸೂರ್ಯನನ್ನು ಗೆದ್ದುಕೊಂಡರು. (ಶೂದ್ರರೊಂದಿಗೆ ಜಗಳವಾಡುವುದರಿಂದ) ಆರ್ಯನು ಆರ್ಯವರ್ಣವು ಗೆಲ್ಲುವಂತೆ ಮಾಡುತ್ತಾನೆ, ಅಲ್ಲದೆ ತಾನೂ ಜಯಶಾಲಿಯಾಗುತ್ತಾನೆ. ಆರ್ಯನು ಪವಿತ್ರ ವೇದಿಕೆಯ ಒಳಗಡೆ ಇರಬೇಕು, ಶೂದ್ರನು ಜಗುಲಿಯ ಹೊರಗಿರಬೇಕು. ಚರ್ಮವು ಸೂರ್ಯನಂತೆ ಬಿಳಿದಾಗಿರಬೇಕು ದುಂಡಾಗಿರಬೇಕು."

ವಾಜಸನೇಯಿ ಸಂಹಿತೆ, xxiii, ೩೦–೩೧– "ಜಿಂಕೆಯೊಂದು ಹೊಲದಲ್ಲಿನ ಜವೆಗೋಧಿಯನ್ನು ತಿಂದಾಗ, ಹೊಲದ ಒಡೆಯನು ಆ ಪುಷ್ಟವಾದ ಪ್ರಾಣಿಯನ್ನು ನೋಡಿ ಸಂತುಷ್ಟನಾಗುವುದಿಲ್ಲ; ಶೂದ್ರಳೊಬ್ಬಳು ಆರ್ಯ ಪ್ರಿಯಕರನನ್ನು ಹೊಂದಿದ್ದರೆ ಆಕೆಯ ಗಂಡನು ಆ ಸಂಬಂಧದಿಂದೊದಗಬಹುದಾದ ಉತ್ಕರ್ಷಕ್ಕೆ ಇಷ್ಟಪಡುವುದಿಲ್ಲ.

ಜಿಂಕೆ ಹೊಲದಲ್ಲಿನ ಜವೆಗೋಧಿಯನ್ನು ತಿಂದಾಗ ಹೊಲದೊಡೆಯ ಆ ಪುಷ್ಟ ಪ್ರಾಣಿಯ ಬಗ್ಗೆ ತನ್ನ ಮೆಚ್ಚಿಕೆ ಸೂಚಿಸುವುದಿಲ್ಲ; ಶೂದ್ರನೊಬ್ಬ ಆರ್ಯ ಹೆಂಗಸಿನ ಪ್ರಿಯಕರನಾಗಿದ್ದಾಗ ಆಕೆಯ ಗಂಡ ಅದರಿಂದೊದಗಬಹುದಾದ ಉತ್ಕರ್ಷವನ್ನೊಪ್ಪನು."

ಆರ್ಯನೂ ಶೂದ್ರನೂ ಬೇರೆ ಬೇರೆ, ಹಾಗೂ ಪರಸ್ಪರ ವಿರೋಧಿಗಳು, ಎಂಬಂತೆ ಅವರ ಬಗ್ಗೆ ಪ್ರಸ್ತಾಪಿಸುವ ಈ ಶ್ಲೋಕಗಳೇ 'ಶೂದ್ರರು ಆರ್ಯೇತರರು' ಎಂಬ ಸಿದ್ಧಾಂತದ ತಳಹದಿ. ಇಂಥ ಸಿದ್ಧಾಂತದ ಬಗೆಗೆ ಕನಿಷ್ಠ ಮಾತ್ರದ ಟೀಕೆಯೆಂದರೆ, ಅದು ಬಹಳ ಅವಸರದ ನಿರ್ಧಾರ ಎಂದು. ಮೇಲೆ ಉದ್ಧೃತವಾದ ಹೇಳಿಕೆಗಳ ಆಧಾರದ ಮೇಲೆ ನಾವೇನಾದರೂ ತೀರ್ಮಾನಕ್ಕೆ ಬರುವ ಮೊದಲು, ಎರಡು ಗಮನಾರ್ಹ ಅಂಶಗಳನ್ನು ನೆನಪಿಡಬೇಕು. ಮೊದಲಲ್ಲಿ, ಋಗ್ವೇದದ ಸಾಕ್ಷ್ಯಾಧಾರದ ಪ್ರಕಾರ ಹಾಗೂ ಈ ಮುಂಚೆ ಮಂಡಿಸಲ್ಪಟ್ಟ ವಾದಗಳ ಪ್ರಕಾರ, ಎರಡು ಪ್ರಕಾರದ ಆರ್ಯರಿದ್ದರೆನ್ನುವದು (ವೇದಕಾಲದ, ಹಾಗೂ ವೇದಪೂರ್ವ–ಕಾಲದ) ಒಂದು. ಇದನ್ನೊಪ್ಪಿದರೆ, ಒಂದು ವರ್ಗದ ಆರ್ಯನು ಇನ್ನೊಂದು ವರ್ಗದ ಆರ್ಯನ ಬಗೆಗೆ, ಆತನು ಬೇರೆಯೇ ಆದ, ಹಾಗೂ ವಿರೋಧಿ ಬಣಕ್ಕೆ ಸೇರಿದವನೆಂಬುವಂತೆ ಮಾತನಾಡುವುದು ಸಹಜವೇ ಎಂದೆನಿಸುವುದು. ಈ ರೀತಿಯ ವಿವರಣೆಯನ್ನು ನಾವು ಕೊಡುವುದಾದರೆ, ಶೂದ್ರರು ಆರ್ಯರಿಗೆ ವಿರೋಧಿಯಾದಂತೆ ನಿರೂಪಿಸುವ ಮೇಲಣ ಉಕ್ತಿಗಳು 'ಶೂದ್ರರು ಆರ್ಯರಾಗಿರಲಿಲ್ಲ' ಎಂದು ಹೇಳುತ್ತವೆ ಎಂದರ್ಥವಲ್ಲ– ಅವರು ಆರ್ಯರ ಬೇರೆಯೇ ಒಂದು ಬಣ ಅಥವಾ ವರ್ಗ ಆಗಿದ್ದರು ಎಂಬುವುದು ಅವುಗಳ ಉದ್ದಿಶ್ಯ.

ವಸ್ತುಸ್ಥಿತಿ ಹೀಗೂ ಇರಲು ಸಾಧ್ಯ ಎಂಬುದನ್ನು, ಹಿಂದೂಗಳ ಪವಿತ್ರ ಗ್ರಂಥ ಸಾಹಿತ್ಯದಿಂದಾಯ್ದ ಈ ಮುಂದಿನ ಉಲ್ಲೇಖಗಳಿಂದ ಮನಗಾಣಬಹುದಾಗಿದೆ:

(೧) A.V.xix.೩೨.೮. – "ಓ ದರ್ಭೆಯೇ, ನನ್ನನ್ನು ಬ್ರಾಹ್ಮಣ, ಕ್ಷತ್ರಿಯ ಹಾಗೂ ಶೂದ್ರನಿಗೆ, ಅದರಂತೆ

ಆರ್ಯನಿಗೂ, ನಾವು ಪ್ರೀತಿಸುವ ಪ್ರತಿಯೊಬ್ಬನಿಗೂ, ಪ್ರಿಯವಾಗಿಸು."

(೨) A.V.xix.೬.೨.೧. – "ದೇವತೆಗಳ ಮಧ್ಯೆ, ಅರಸುಕುಮಾರರ ಮಧ್ಯೆ ನನ್ನನ್ನು ಪ್ರಿಯವಾಗಿಸು; ಅದರಂತೆ ಕಣ್ಣಿದ್ದು ಕಾಣುವ ಪ್ರತಿಯೊಬ್ಬನಿಗೂ, ಶೂದ್ರನಿಗೂ, ಆರ್ಯನಿಗೂ ನನ್ನನ್ನು ಪ್ರಿಯವಾಗಿಸು."

(೩) ವಾಜಸನೇಯಿ ಸಂಹಿತೆ xviii. ೪೮ – "(ಓ ಅಗ್ನಿಯೇ) ಬ್ರಾಹ್ಮಣರ ಮಧ್ಯೆ, ಅರಸರ ಮಧ್ಯೆ, ವೈಶ್ಯರ ಮಧ್ಯೆ, ಶೂದ್ರರ ಮಧ್ಯೆ ನನಗೆ ಓಜಸ್ಸನ್ನು ನೀಡು; ನನ್ನನ್ನು ವೃದ್ಧಿಸುವ ಓಜಸ್ಸನ್ನು ನೀನು ನೀಡುವಂತಾಗಲಿ."

(೪) ವಾಜಸನೇಯಿ ಸಂಹಿತೆ xx ೧೭. – "ನಮ್ಮ ಇಂದ್ರಿಯಗಳಿಂದಾಗಿ, ಗ್ರಾಮದಲ್ಲಾಗಲೀ, ವನದಲ್ಲಾಗಲೀ, ಸಭೆಯಲ್ಲಾಗಲೀ, ಶೂದ್ರನ ವಿರುದ್ಧವಾಗಲೀ ಯಾವುದೇ ಪಾಪಕೃತ್ಯವನ್ನು ನಮ್ಮಿಬ್ಬರಲ್ಲಿ ಯಾರೊಬ್ಬರಾದರೂ (ಯಜಮಾನ, ಯಜಮಾನಿ) ಎಸಗಿದ್ದರೆ, ಆ ಪಾಪವನ್ನು ತೊಡೆಯುವವನು ನೀನೇ."

(೫) ವಾಜಸನೇಯಿ ಸಂಹಿತೆ, xviii.೪೮ – "ಸರ್ವಜನಕ್ಕೆ ಬ್ರಾಹ್ಮಣನಿಗೆ, ಕ್ಷತ್ರಿಯನಿಗೆ, ಶೂದ್ರನಿಗೆ ಹಾಗೂ ಆರ್ಯನಿಗೆ, ಅದರಂತೆ ನನ್ನ ವೈರಿಗೆ ನಾನು ಈ ಶಬ್ದಗಳನ್ನು ನುಡಿಯುತ್ತಿದ್ದಂತೆ ನಾನು ದೇವತೆಗಳಿಗೆ, ಹಾಗೂ ಈ ಪ್ರಪಂಚದಲ್ಲಿ ದಕ್ಷಿಣೆ ನೀಡುವವರಿಗೆ, ಪ್ರಿಯನಾಗಲಿ ಎಂದು ಆಶಿಸುತ್ತೇನೆ. ಈ ನನ್ನ ಆಶಯ ಈಡೇರಲಿ. ನನ್ನ ವೈರಿಯು ನನಗೆ ಶರಣಾಗತನಾಗಲಿ."

ಈ ಹೇಳಿಕೆಗಳೆಲ್ಲ ನಿದರ್ಶಿಸುವುದೇನನ್ನು? ಮೊದಲನೆಯದು, ಬ್ರಾಹ್ಮಣರ ಹಾಗೂ ಆರ್ಯರ ಮಧ್ಯೆ ಭಿನ್ನತೆಯನ್ನು ಕಲ್ಪಿಸುತ್ತದೆ. ಆದ್ದರಿಂದ ಬ್ರಾಹ್ಮಣರು ಆರ್ಯೇತರರಾಗಿದ್ದರೆಂದು ಹೇಳಲಾದೀತೇ? ಇನ್ನಿತರ ಉಕ್ತಿಗಳಲ್ಲಿ ಶೂದ್ರರ ಪ್ರೀತಿ ಹಾಗೂ ಸದ್ಭಾವನೆಗಾಗಿ ಪ್ರಾರ್ಥನೆ ಸಲ್ಲಿಸಲಾಗಿದೆ. ಶೂದ್ರನು ಕಾಡುಸ್ಥಿತಿಯಲ್ಲಿನ ಮೂಲನಿವಾಸಿ ಆರ್ಯೇತರನಾಗಿದ್ದಿದ್ದರೆ, ಇಂಥ ಪ್ರಾರ್ಥನೆ ಕಲ್ಪನಾಸಾಧ್ಯವೇ? ಯಾವ ಉಕ್ತಿಗಳನ್ನಾಧರಿಸಿ ಶೂದ್ರರು ಆರ್ಯೇತರರಾಗಿದ್ದರೆಂಬ ಸಿದ್ಧಾಂತ ಮಂಡಿಸಲಾಗಿದೆಯೋ ಆ ಉಕ್ತಿಗಳು ಈ ಮಾತನ್ನು ಸಿದ್ಧಮಾಡುವುದಿಲ್ಲ.

ಧರ್ಮಶಾಸ್ತ್ರಗಳು ಶೂದ್ರನನ್ನು ಅನಾರ್ಯನೆಂದು ಕರೆದಿವೆ ಎನ್ನುವ ಸಂಗತಿಯಾಗಲೀ ವಾಜಸನೇಯೀ ಸಂಹಿತೆ ಶೂದ್ರ ಹೆಂಗೆಳೆಯರ ಬಗೆಗೆ ತಾತ್ಸಾರಭರಿತವಾದ ಮಾತುಗಳನ್ನಾಡಿದೆ ಎಂಬುದಾಗಲೀ, ಏನನ್ನೂ ಪುಷ್ಟೀಕರಿಸುವುದಿಲ್ಲ. ಧರ್ಮಸೂತ್ರದ ಸಾಕ್ಷ್ಯವನ್ನು ಅಂಗೀಕರಿಸುವುದಕ್ಕೆ ಎದುರಾಗುವ ಎರಡು ವಾದಗಳಿವೆ. ಮೊದಲನೆಯದಾಗಿ, ಧರ್ಮಸೂತ್ರ ಹಾಗೂ ಇತರೆ ಗ್ರಂಥಗಳು ಶೂದ್ರರಿಗೆ ವಿರೋಧಿಗಳಾಗಿದ್ದವರಿಂದ ರಚಿಸಲ್ಪಟ್ಟಿವೆಯೆಂಬುದೊಂದು. ಈ ಕಾರಣದಿಂದಲೇ ಅವುಗಳಿಗೆ ಯಾವ ಸಾಕ್ಷ್ಯಾಧಾರದ ಮೌಲ್ಯವೂ ಇಲ್ಲ. ಅಲ್ಲದೆ, ಇಂಥ ಶೂದ್ರವಿರೋಧಿ ಉಕ್ತಿಗಳು ಕೇವಲ ಜರಿಕೆಯ ಮಾತುಗಳೇ, ಅಥವಾ ವಿದ್ಯಮಾನಗಳ ಯಥಾವತ್ ನಿರೂಪಣೆಗಳೇ ಎಂಬುದು ಸಂದೇಹಾಸ್ಪದ. ಬೇರೆ ಕೃತಿಗಳಲ್ಲಿ ವರದಿಗೊಂಡ ಸಂಗತಿಗಳಿಗೆ ಇವು ವ್ಯತಿರಿಕ್ತವಾಗಿವೆ.

ಶೂದ್ರನಿಗೆ ಉಪನಯನದ ಅಧಿಕಾರವಿಲ್ಲ ಹಾಗೂ ಉಪವೀತವನ್ನು ಧರಿಸುವ ಹಕ್ಕೂ ಇಲ್ಲ ಎಂದು ಧರ್ಮಶಾಸ್ತ್ರ ಹೇಳುತ್ತದೆ. ಆದರೆ, ಸಂಸ್ಕಾರಗಣಪತಿಯು ಶೂದ್ರನು ಉಪನಯನಕ್ಕೆ ಅರ್ಹನೆಂದು ಘೋಷಿಸುವ[೧] ಮೂಲಕ ಆತನಿಗೆ ಈ ಅವಕಾಶ ಮಾಡಿಕೊಡುತ್ತದೆ.

---

೧. *Ancient Sanskrit Literature* (೧೮೬೦)ನಲ್ಲಿ ಮ್ಯಾಕ್ಸ್ ಮುಲ್ಲರ್‌ನಿಂದ ಉಲ್ಲೇಖಿತವಾಗಿದೆ (p.೨೦೭)

ಶೂದ್ರನಿಗೆ ವೇದಗಳನ್ನೋದುವ ಹಕ್ಕು ಇಲ್ಲವೆಂದು ಧರ್ಮಸೂತ್ರಗಳು ಹೇಳುತ್ತವೆ. ಆದರೆ, ಜನಶ್ರುತಿ ಎಂಬ ಶೂದ್ರನಿಗೆ ರೈಕ್ವನೆಂಬ ಗುರು ವೇದವಿದ್ಯೆಯನ್ನು ಹೇಳಿಕೊಟ್ಟನೆಂಬ ಕಥೆಯೊಂದು ಛಾಂದೋಗ್ಯ ಉಪನಿಷತ್ತಿನಲ್ಲಿ (iv:೧–೨) ಬರುತ್ತದೆ. ಇನ್ನೂ ವಿಶೇಷವೇನೆಂದರೆ, ಕವಶ ಐಲೂಷ[೧]ನೆಂಬ ಶೂದ್ರನು ಋಷಿಯಾಗಿದ್ದನು. ಈತನು ಋಗ್ವೇದದ ಹತ್ತನೆಯ ಉಪಸರ್ಗದಲ್ಲಿ ಬರುವ ಋಕ್ಕುಗಳ ಪೈಕಿ ಬಹಳಷ್ಟನ್ನು ರಚಿಸಿದಾತ.

ಶೂದ್ರನಿಗೆ ವೈದಿಕ ಕರ್ಮಾದಿಗಳನ್ನೂ ಯಜ್ಞಯಾಗಾದಿಗಳನ್ನೂ ನಡೆಯಿಸುವ ಹಕ್ಕೂ ಇಲ್ಲವೆಂದು ಧರ್ಮಸೂತ್ರಗಳು ಹೇಳುತ್ತವೆ. ಆದರೆ, ಪೂರ್ವಮೀಮಾಂಸೆ[೨]ಯ ಕರ್ತೃವಾದ ಜೈಮಿನಿಯು ಮಾಡಲು ಬರುತ್ತದೆ ಎಂದು ಹೇಳಿದ. ಆತ ಬದರಿ ಎಂಬ ಋಷಿಯ ಹೆಸರನ್ನು ಉಲ್ಲೇಖಿಸುತ್ತಾ (ಈತನ ಕೃತಿ ಈಗ ಲಭ್ಯವಿಲ್ಲ), ಆತನು ಈ ವಿರೋಧಿ ಅಭಿಪ್ರಾಯದ ಪ್ರತಿಪಾದಕನೆಂದು ಹೇಳುತ್ತಾನೆ. ವೈದಿಕ ಯಜ್ಞವನ್ನು ನೆರವೇರಿಸುವುದಕ್ಕೆ ಅವಶ್ಯವಾದ ಮೂರು ಪವಿತ್ರಾಗ್ನಿಗಳನ್ನು ಪವಿತ್ರೀಕರಿಸಲು ಶೂದ್ರನಿಗೂ ಸಾಧ್ಯವಿದೆಯೆಂಬುದನ್ನು ಪ್ರತಿಪಾದಿಸುವ ಇನ್ನೊಂದು ವಿಚಾರ ಪಂಥವಿರುವುದನ್ನು ಭಾರದ್ವಾಜ ಶ್ರೌತಸೂತ್ರವು (v.೨೮) ಒಪ್ಪುತ್ತದೆ. ಅದರಂತೆಯೇ, ಶೂದ್ರನು ವೈದಿಕ ಕರ್ಮಾಚರಣೆಗಳನ್ನು ಮಾಡಲು ಅರ್ಹನೆಂಬ ಊಹೆಗೆ ಆಸ್ಪದ ನೀಡುವ ಕೆಲ ವೈದಿಕ ಗ್ರಂಥಗಳಿವೆಯೆಂದು ಕಾತ್ಯಾಯನ ಶ್ರೌತಸೂತ್ರದ (೧.೪.೧೬) ಭಾಷ್ಯಕಾರನೂ ಒಪ್ಪಿಕೊಂಡಿದ್ದಾನೆ.

ಧರ್ಮಸೂತ್ರಗಳು ಶೂದ್ರನಿಗೆ ಪವಿತ್ರ ಪೇಯವಾದ ಸೋಮರಸವನ್ನು ಕುಡಿಯಲೂ ಹಕ್ಕಿಲ್ಲ ಎಂದು ಹೇಳುತ್ತವೆ. ಆದರೆ, ಅಶ್ವಿನಿಯರ ಕಥೆಯಲ್ಲಿ ಶೂದ್ರನಿಗೆ ಆ ಹಕ್ಕು ಇದ್ದಿತೆಂಬುದರ ಬಗೆಗೆ ಸಾಕ್ಷ್ಯಾಧಾರ ಸಿಕ್ಕುತ್ತದೆ. ಆ ಕಥೆ ಹೀಗಿದೆ. ಅಶ್ವಿನೀಕುಮಾರರ ದೃಷ್ಟಿ ಒಮ್ಮೆ ಅದೇ ಆಗ ಸ್ನಾನ ಮುಗಿಸಿ ಇನ್ನೂ ಬಟ್ಟೆ ತೊಟ್ಟಿರದಿದ್ದ ಸುಕನ್ಯೆಯ ಮೇಲೆ ಬಿದ್ದಿತು. ಆಕೆ, ಚ್ಯವನನೆಂಬ ಋಷಿಗೆ ಮದುವೆಮಾಡಿಕೊಟ್ಟ ತರುಣ ಕನ್ಯೆಯಾಗಿದ್ದಳು. ಚ್ಯವನನೋ ಮದುವೆಯ ವೇಳೆಯಲ್ಲಿ ಈಗಲೋ ಆಗಲೋ ಸಾಯುವಷ್ಟು ಮುಪ್ಪಾಗಿದ್ದನು. ಅಶ್ವಿನೀಕುಮಾರರು ತರುಣಿಯ ಸೌಂದರ್ಯಕ್ಕೆ ಮಾರುಹೋಗಿ ಆಕೆಗೆ ಹೇಳಿದರು, "ನಮ್ಮಿಬ್ಬರಲ್ಲಿ ಬೇಕಾದ ಒಬ್ಬನನ್ನು ಗಂಡನೆಂದು ಆಯ್ದುಕೋ. ಈ ರೀತಿ ನೀನು ನಿನ್ನ ಯೌವನವನ್ನು ವ್ಯರ್ಥಗಳೆಯುವುದು ತರವಲ್ಲ" ಎಂದು. ಆಕೆ ತನ್ನ ಗಂಡನಿಗೆ ನಿಷ್ಠಳಾಗಿದ್ದುದಾಗಿ ಹೇಳಿ ಅವರ ಮಾತನ್ನು ತಳ್ಳಿಹಾಕಿದಳು. ಅವರು ಮತ್ತೊಮ್ಮೆ ತಮ್ಮ ಪ್ರಸ್ತಾಪವನ್ನುಚ್ಚರಿಸಿ ಒಂದು ಷರತ್ತನ್ನು ಒಡ್ಡಿದರು. "ನಾವೀರ್ವರು ದೇವಲೋಕದ ಖ್ಯಾತವೈದ್ಯರು. ನಾವು ನಿನ್ನ ಗಂಡನಿಗೆ ಪುನಃ ತಾರುಣ್ಯ ಬರುವಂತೆ ಮಾಡುತ್ತೇವೆ. ಆಗಲಾದರೂ ನೀನು ನಮ್ಮಲ್ಲೊಬ್ಬರನ್ನು ವರಿಸುವೆಯಾ?" ಆಕೆ ತನ್ನ ಗಂಡನ ಹತ್ತಿರ ಹೋಗಿ ಅಶ್ವಿನೀಕುಮಾರರ ಷರತ್ತಿನ ಬಗೆಗೆ ಹೇಳಿದಳು. ಚ್ಯವನನು ಸುಕನ್ಯಾಳಿಗೆ, "ಆಗಲಿ, ಹಾಗೇ ಮಾಡು" ಎಂದು ಹೇಳಿದ. ಷರತ್ತಿನ ಮೇರೆಗೆ ಅಶ್ವಿನೀಕುಮಾರರು ಚ್ಯವನನನ್ನು ತರುಣನಾಗಿ ಮಾರ್ಪಡಿಸಿದರು. ಕಾಲಾನಂತರದಲ್ಲಿ ಅಶ್ವಿನಿಯರು ಸೋಮರಸವನ್ನು ಕುಡಿಯಲು ಬಾಧ್ಯಸ್ಥರೇ ಎಂಬ ಪ್ರಶ್ನೆ ಉದ್ಭವಿತವಾದಾಗ, ಅವರು ಶೂದ್ರರು, ದೇವಪಾನೀಯವಾದ ಸೋಮರಸವನ್ನು ಕುಡಿಯಲು ಅವರಿಗೆ ಹಕ್ಕಿಲ್ಲ ಎಂದು ಇಂದ್ರನು ಆಕ್ಷೇಪಿಸಿದ. ಆಗ, ಅಶ್ವಿನಿಯರಿಂದ ಚಿರಯೌವನವನ್ನು ಪಡೆದ ಚ್ಯವನನೇ, ಆ ಆಕ್ಷೇಪಣೆಯನ್ನು ತೆಗೆದುಹಾಕಿ,

---

೧. Max Muller's *Ancient Sanskrit Literature* (೧೮೬೦), p. ೫೮

೨. Adhyaya ೬, Pada I, Sutra ೨೭.

ಇಂದ್ರನು ಅವರಿಗೆ ಸೋಮರಸವನ್ನು ನೀಡುವುದಕ್ಕೆ ಬಲವಂತ ಮಾಡಿದ.[೧]

ಶೂದ್ರರು ಆರ್ಯರಲ್ಲ ಎಂಬ ವಾದಕ್ಕೆ ಧರ್ಮಸೂತ್ರಗಳು ನೀಡುವ ಸಾಕ್ಷ್ಯಾಧಾರವನ್ನು ಅಂಗೀಕರಿಸಬಾರದು ಎನ್ನುವುದಕ್ಕೆ ಇನ್ನೊಂದು ಕಾರಣವೂ ಉಂಟು. ಮೊದಲನೆಯದಾಗಿ, ಅದು ಮನು ತಳೆದಿರುವ ಅಭಿಪ್ರಾಯಕ್ಕೆ ವಿರುದ್ಧವಾಗಿದೆ. ಶೂದ್ರನು ಆರ್ಯನೇ ಅಥವಾ ಅರ್ಯೇತರನೇ ಎಂಬ ಪ್ರಶ್ನೆಯ ಇತ್ಯರ್ಥದ ಸಂಬಂಧದಲ್ಲಿ ಮನುವಿನ ಈ ಕೆಳಗಣ ಸೂತ್ರಗಳನ್ನು ನಾವು ಸೂಕ್ಷ್ಮವಾಗಿ ನೋಡಬೇಕು.

"ಬ್ರಾಹ್ಮಣನೊಬ್ಬನಿಗೆ ಶೂದ್ರ ಹೆಂಗಸಿನಲ್ಲಿ ಹೆಣ್ಣು ಮಗುವಾಗಿ, ಆ ಮಗುವು ಉಚ್ಚ ಕುಲದ ಗಂಡೊಬ್ಬನಿಗೆ ಸಂತಾನ ಪಡೆದಲ್ಲಿ, ಈ ಕೀಳುಕುಲವು ಏಳನೆಯ ತಲೆಮಾರಿನಲ್ಲಿ ಅತ್ಯುಚ್ಚ ಜಾತಿಯ ಮಟ್ಟಕ್ಕೇರುತ್ತದೆ."

"ಹೀಗೆ ಶೂದ್ರನೊಬ್ಬನು ಬ್ರಾಹ್ಮಣ ಪದವಿಗೆ ಏರುತ್ತಾನೆ, ಹಾಗೂ ಅದೇ ರೀತಿಯಲ್ಲಿ, ಬ್ರಾಹ್ಮಣನೊಬ್ಬನು ಶೂದ್ರನ ಮಟ್ಟಕ್ಕೆ ಇಳಿಯುತ್ತಾನೆ; ನೆನಪಿಡಿ, ಕ್ಷತ್ರಿಯ ಹಾಗೂ ವೈಶ್ಯರ ಸಂತತಿಯ ವಿಷಯದಲ್ಲೂ ಇದೇ ನಿಯಮ ಅನ್ವಯಿಸುತ್ತದೆ."

"ಆರ್ಯನೊಬ್ಬನಿಗೆ ಆರ್ಯೇತರ ಹೆಣ್ಣೊಬ್ಬಳಲ್ಲಿ ಹುಟ್ಟಿದ ಮಗನು ಶ್ರೇಷ್ಠನೋ, ಅಥವಾ ಬ್ರಾಹ್ಮಣ ಹೆಣ್ಣೊಬ್ಬಳಲ್ಲಿ ಆರ್ಯೇತರನಿಗೆ ಹುಟ್ಟಿದ ಮಗನು ಶ್ರೇಷ್ಠನೋ ಎಂಬ ವಿಷಯದಲ್ಲಿ ಅನುಮಾನವುಂಟಾದ ಪಕ್ಷದಲ್ಲಿ, ನಿರ್ಣಯ ಹೀಗಿದೆ:

ಆರ್ಯನಿಗೆ ಆರ್ಯೇತರ ಹೆಣ್ಣಿನಲ್ಲಿ ಹುಟ್ಟಿದ ಮಗನು ತನ್ನ ಸದ್ಗುಣಗಳಿಂದ ಆರ್ಯನಂತಾಗಬಲ್ಲ; ಆದರೆ, ಆರ್ಯ ತಾಯಿಯಲ್ಲಿ ಆರ್ಯೇತರ ತಂದೆಗೆ ಜನಿಸಿದವನು ಆರ್ಯನಿಗೆ ಭಿನ್ನವಾಗಿಯೇ ಉಳಿಯುತ್ತಾನೆ."[೨]

ಮನುವಿನ ೬ಳನೆಯ ಸೂತ್ರವು ಗೌತಮ ಧರ್ಮಸೂತ್ರ (uv.೨೨)ದಲ್ಲೂ ಕಾಣಿಸಿಕೊಳ್ಳುತ್ತದೆ. ಈ ಶ್ಲೋಕದ ಸರಿಯಾದ ಅರ್ಥ ವಿವರಣೆಯ ಕುರಿತು ವಿವಾದವಿದ್ದಂತಿದೆ. ಅದರ ಬೇರೆ ಬೇರೆ ಅರ್ಥ ವಿವರಣೆಗಳನ್ನೆಲ್ಲ ಕ್ರೋಡೀಕರಿಸಿ, ಬ್ಯೂಹ್‌ಲರ್ (Buhler) ಹೀಗೆ ಹೇಳುತ್ತಾನೆ.

ಮೇಧಾತಿಥಿ, ಗೋವರ್ಧನ ಕುಲ್ಯ ಮತ್ತು ರಘುವೀರ ಇವರ ಪ್ರಕಾರ ಇದರ ಅರ್ಥವೇನೆಂದರೆ, ಒಬ್ಬ ಬ್ರಾಹ್ಮಣನಿಗೆ ಶೂದ್ರ ಹೆಣ್ಣಿನಲ್ಲಿ ಹುಟ್ಟಿದ ಮಗಳು, ಹಾಗೂ ಆಕೆಯ ಸಂತಾನ ಎಲ್ಲರೂ ಬ್ರಾಹ್ಮಣರನ್ನೇ ಮದುವೆಯಾದ ಪಕ್ಷದಲ್ಲಿ, ಮೂಲ ಜೋಡಿಯ ಆರನೆಯ ಹೆಣ್ಣು ಸಂತಾನದ ಮಗು ಬ್ರಾಹ್ಮಣನಾಗುವುದು. ಈ ವಿವರಣೆ ಗೌತಮದಲ್ಲಿ ಬರುವ ಸಮಾನ ಪರಿಚ್ಛೇದದ ಮೇಲಣ ಹರದತ್ತನ ವ್ಯಾಖ್ಯಾನಕ್ಕೆ ಹೊಂದಿಕೆಯಾಗುವಂತಿದ್ದರೆ ನಾರದ ಹಾಗೂ ನಾನ್ಯ ಇವರು ಆ ಸೂತ್ರವನ್ನು ಬೇರೆಯಾಗಿಯೇ ವ್ಯಾಖ್ಯಾನಿಸುತ್ತಾರೆ. ಅವರು ಹೇಳುವ ಪ್ರಕಾರ, ಬ್ರಾಹ್ಮಣ ಪುರುಷ ಹಾಗೂ ಶೂದ್ರ ಸ್ತ್ರೀಯ ಸಂತಾನವಾದ 'ಪರಸವ'ನು, ಒಳ್ಳೆಯ ಚಾರಿತ್ರ್ಯ ಹಾಗೂ ಇತರ ಸದ್ಗುಣಗಳುಳ್ಳ ಶ್ರೇಷ್ಠ 'ಪರಸವ' ಹೆಣ್ಣಿನೊಡನೆ ಲಗ್ನವಾದರೆ, ಹಾಗೂ ಆತನ ವಂಶಜರೂ ಅದೇ ಪ್ರಕಾರ ಮಾಡಿದಲ್ಲಿ, ಆರನೆಯ ಪೀಳಿಗೆಯಲ್ಲಿ ಹುಟ್ಟಿದ ಮಗು ಬ್ರಾಹ್ಮಣನಾಗುತ್ತದೆ. ನಂದನನು ತನ್ನ ಅಭಿಪ್ರಾಯಕ್ಕೆ ಸಮರ್ಥನೆಯಾಗಿ ಉದ್ಧರಿಸುವ ಬೌದ್ಧಾಯನನ ವಾಕ್ಯಗಳು (i.೧.೧೩.೧೪)– ಪೌರ್ವಾತ್ಯ ಪವಿತ್ರ ಗ್ರಂಥಗಳ ನನ್ನ ಭಾಷಾಂತರದಲ್ಲಿ ಇವುಗಳನ್ನು ಕೈಬಿಡಲಾಗಿದೆ

---

೧. V. Fausboll, *Indian Mythology,* pp. 128–134

೨. Chapter X, Verses 64–67

(ii, ಪಿ. ೧೯೭)– ಇಂತಿವೆ: "ನಿಷಾದನಿಗೆ ನಿಷದಿಯಲ್ಲಿ ಹುಟ್ಟಿದ ಸಂತತಿಯ ಶೂದ್ರತ್ವ ಐದನೆಯ ಪೀಳಿಗೆಯಲ್ಲಿ ನಿವಾರಣೆಯಾಗುತ್ತದೆ– ಐದನೆಯ ಪೀಳಿಗೆಯವನಿಗೆ ದೀಕ್ಷೆ ಕೊಡಬಹುದಾಗಿದೆ; ಆರನೆಯ ಪೀಳಿಗೆಯವನಿಗಾಗಿ ಯಜ್ಞವನ್ನು ನೆರವೇರಿಸಬಹುದು." ಬೌದ್ಧಾಯನದ ಈ ಪರಿಚ್ಛೇದ ಮದ್ರಾಸಿನಿಂದ ಬಂದ ಹೊಸ ಹಸ್ತಪ್ರತಿಯ ಈ ಪಾಠಾಂತರವನ್ನು ಪುಷ್ಟೀಕರಿಸುತ್ತದೆ– ಬ್ರಾಹ್ಮಣ ಪುರುಷ ಹಾಗೂ ಶೂದ್ರ ಸ್ತ್ರೀಯ ಗಂಡು ಸಂತಾನ ಆರ್ಯರ ಸ್ಥಾನಮಾನಕ್ಕೇರಿಸಲ್ಪಡುವುದನ್ನು (ಬೌದ್ಧಾಯನವು) ಅನುಮತಿಸಿತ್ತೆಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಮನುವಿನ ಸೂತ್ರದ ಅರ್ಥವೂ ಇದೆ ಆಗಿರುವುದು ಅಸಂಭವವೇನಲ್ಲ; ಆ ಪಕ್ಷದಲ್ಲಿ, ಭಾಷಾಂತರ ಹೀಗಿರಬೇಕಾಗುತ್ತದೆ: ಬ್ರಾಹ್ಮಣ ಪುರುಷ ಹಾಗೂ ಶೂದ್ರ ಸ್ತ್ರೀಯ ಸಂತತಿ ಅತ್ಯುತ್ತಮವಾದವನೊ(ಳೊ)ಂದಿಗೆ (ಬ್ರಾಹ್ಮಣ ಪುರುಷ ಅಥವಾ ಪರಸವ ಕುಲದ ಹೆಣ್ಣು) ಸಮಾಗಮ ಹೊಂದಿ ಸಂತಾನ ಪಡೆದಲ್ಲಿ, ಕೆಳಮಟ್ಟಿನ ಕುಲವು ಏಳನೆಯ ತಲೆಮಾರಿನಲ್ಲಿ ಅತ್ಯುಚ್ಚ ಜಾತಿಗೆ ಸಲ್ಲುತ್ತದೆ."

ವ್ಯಾಖ್ಯಾನ ಏನೇ ಇರಲಿ, ಶೂದ್ರನು ಕೆಲವೊಂದು ಸನ್ನಿವೇಶಗಳಲ್ಲಿ ಏಳನೆಯ ಪೀಳಿಗೆಯಲ್ಲಿ[೧] ಬ್ರಾಹ್ಮಣನಾಗಬಲ್ಲವನಾಗಿದ್ದನೆಂಬ ಸಂಗತಿ ಸುಸ್ಪಷ್ಟ. ಶೂದ್ರನು ಒಂದು ವೇಳೆ ಆರ್ಯನಾಗಿರದಿದ್ದಲ್ಲಿ ಇಂತಹ ಕಲ್ಪನೆ ಸಾಧ್ಯವಿರಲಿಲ್ಲ. ಶೂದ್ರನು ಆರ್ಯನಾಗಿರಲಿಲ್ಲವೆಂಬ ಸಿದ್ಧಾಂತ ಅರ್ಥಶಾಸ್ತ್ರದ ವಿಚಾರಪಂಥಕ್ಕೆ ವಿರುದ್ಧವಾದುದಾಗಿದೆ. ಈ ಪ್ರಶ್ನೆಯ ಬಗೆಗೆ ಆ ಪಂಥದ ವಿಚಾರಧಾರೆಯ ಪ್ರತಿನಿಧಿಯಾಗಿ ಕೌಟಿಲ್ಯನ ಅಭಿಪ್ರಾಯ ಮಹತ್ವದ್ದಾಗಿದೆ. ದಾಸ್ಯದ ಕಟ್ಟಳೆಯನ್ನು ವಿಧಿಸುವಾಗ ಕೌಟಿಲ್ಯನು ಹೇಳುವುದು ಹೀಗೆ:

ಗುಲಾಮನಾಗಿ ಹುಟ್ಟಿರದ, ಪ್ರಬುದ್ಧ ವಯಸ್ಕನಾಗಿರದ, ಆದರೆ ಹುಟ್ಟಿನಲ್ಲಿ ಆರ್ಯನಾಗಿದ್ದ ಶೂದ್ರನ ಜೀವನವನ್ನು ಆತನ ಸಂಬಂಧಿಕರು ಮಾರಿಕೊಳ್ಳುವುದಾಗಲೀ, ಒತ್ತೆ ಇಡುವುದಾಗಲೀ ಮಾಡಿದರೆ ಅದಕ್ಕೆ ದಂಡ ೧೨ ಪಣಗಳು.

ಆರ್ಯನಾಗಿ ಹುಟ್ಟಿದ ಗುಲಾಮನನ್ನು ವಂಚಿಸಿ ಆತನ ಹಣ ದೋಚಿಕೊಂಡರೆ, ಅಥವಾ ಆತನ ಹಕ್ಕುಬಾಧ್ಯತೆಗಳನ್ನು ಕಸಿದುಕೊಂಡರೆ, ಅದಕ್ಕೆ ದಂಡ (ಆತನನ್ನು ಗುಲಾಮನಾಗಿಸುವ ಅಪರಾಧಕ್ಕೆ ವಿಧಿಸಲಾಗುವ ದಂಡದ) ಅರ್ಧದಷ್ಟು.

ನಿಗದಿತ ಬಂಧ ವಿಮೋಚನಾ ಶುಲ್ಕವನ್ನಿತ್ತಾಗಲೂ ಗುಲಾಮನನ್ನು ಬಿಡುಗಡೆ ಮಾಡದಿದ್ದರೆ ಅದಕ್ಕೆ ದಂಡ ೧೨ ಪಣಗಳು; ವಿನಾಕಾರಣ ಗುಲಾಮನೊಬ್ಬನನ್ನು ಬಂಧನಕ್ಕೊಳಗಾಗಿಸಿದರೆ ಈ ರೀತಿಯ ದಂಡ ತೆರಬೇಕಾಗುವುದು.

ತನ್ನನ್ನು ಗುಲಾಮನೆಂದು ಮಾರಿಕೊಂಡ ವ್ಯಕ್ತಿಯ ಸಂತಾನ ಆರ್ಯನಾಗುವನು. ಗುಲಾಮನು ತನ್ನ ತಂದೆಯಿಂದ ಪಡೆದ ಪಿತ್ರಾರ್ಜಿತಕ್ಕೆ ಬಾಧ್ಯಸ್ಥನಾಗುವಂತೆ ತಾನು ಗಳಿಸಿದ ಸಂಪಾದನೆಗೂ ಬಾಧ್ಯಸ್ಥನಾಗುತ್ತಾನೆ.

ಅತ್ಯಂತ ಸ್ಪಷ್ಟೋಕ್ತಿಯಲ್ಲಿ, ಖಡಾಖಂಡಿತವಾದ ಮಾತುಗಳಲ್ಲಿ, ಶೂದ್ರನನ್ನು ಆರ್ಯನೆಂದು ಹೇಳುವ ಈ ಧ್ವನಿ ಕೌಟಿಲ್ಯನದು.

---

೧. ಒಬ್ಬ ಮನುಷ್ಯ ತನ್ನ ಕುಲೀನತೆಯನ್ನು ಸ್ಥಾಪಿಸಲು (ಸಾಬೀತುಗೊಳಿಸಲು) ಅವ್ಯಾಹತವಾಗಿ ಆರು ತಲೆಮಾರುಗಳ ನಿಷ್ಕಳಂಕ ವಂಶಾವಳಿಯನ್ನು ಲೇಖಿಸುವುದು ಅವಶ್ಯ ಎಂಬ ಕಟ್ಟಳೆ ಪ್ರಾಚೀನಕಾಲದಲ್ಲಿ ಸಾರ್ವತ್ರಿಕವಾಗಿತ್ತು. *The Aryan Household,* Chap. VIII ನೋಡಿ.

## V

ಶೂದ್ರನನ್ನು ಗುಲಾಮರನ್ನಾಗಿಸಿದ ಪ್ರಶ್ನೆಗೆ ನಾವು ತಿರುಗಿದಾಗ, ಅದೊಂದು ಅಪ್ಪಟ ಸುಳ್ಳು ಎಂದೆನ್ನಲಾಗದಿದ್ದರೂ, ಅದೊಂದು ಅಸಂಬದ್ಧ ಪ್ರಲಾಪ ಎನ್ನದೆ ವಿಧಿಯಿಲ್ಲ. ಅದು ಎರಡು ಗ್ರಹಿಕೆಗಳ ಮೇಲೆ ಆಧಾರಿತವಾಗಿದೆ. ಒಂದೆಂದರೆ, ಋಗ್ವೇದದಲ್ಲಿ ದಾಸರು ಗುಲಾಮರೆಂದು ವರ್ಣಿಸಲ್ಪಟ್ಟುದು; ಎರಡನೆಯದೆಂದರೆ, ದಾಸರೂ ಶೂದ್ರರೂ ಒಂದೇ ಎಂಬುದು.

'ದಾಸ'ನೆಂಬ ಶಬ್ದ ಋಗ್ವೇದದಲ್ಲಿ 'ಗುಲಾಮ' ಅಥವಾ 'ಸೇವಕ'ನೆಂಬ ಅರ್ಥದಲ್ಲಿ ಬಳಕೆಯಾದುದು ನಿಜ. ಆದರೆ, ಆ ಅರ್ಥದಲ್ಲಿ ಈ ಶಬ್ದ ಉಪಯೋಗಿಸಲ್ಪಟ್ಟುದು ಐದೇ ಐದು ಸಂದರ್ಭಗಳಲ್ಲಿ. ಆದರೆ, ಈ ಶಬ್ದ ಆ ಅರ್ಥದಲ್ಲಿ ಐದಕ್ಕಿಂತ ಹೆಚ್ಚು ಸಲ ಬಳಕೆಯಾಗಿದ್ದ ಪಕ್ಷದಲ್ಲಿ ಅದು 'ಶೂದ್ರರು ಗುಲಾಮರಾಗಿಸಲ್ಪಟ್ಟರು' ಎಂಬುದನ್ನು ಸಿದ್ಧಮಾಡುವುದೇ? 'ದಾಸ' ಹಾಗೂ 'ಶೂದ್ರ' ಎಂಬುವವರು ಬೇರೆ ಬೇರೆ ಜನಗಳಾಗಿರದೆ ಒಂದೇ ಜನಗಳು ಎಂಬುದು ಸಾಬೀತಾಗದ ಹೊರತು, ಈ ವಾದ ಅಸಂಬದ್ಧ ಹಾಗೂ ಅದು ನಾವು ಬಲ್ಲ ಸಂಗತಿಗಳಿಗೆ ವ್ಯತಿರಿಕ್ತ.

ಶೂದ್ರರು ರಾಜನ ಪಟ್ಟಾಭಿಷೇಕ ಸಮಾರಂಭದಲ್ಲಿ ಪಾಲ್ಗೊಳ್ಳುತ್ತಿದ್ದರು. ವೇದೋತ್ತರ ಅಥವಾ ಬ್ರಾಹ್ಮಣಗಳ ಕಾಲದಲ್ಲಿ ರಾಜನ ಪಟ್ಟಾಭಿಷೇಕವೆಂದರೆ ವಾಸ್ತವದಲ್ಲಿ ಅದು ರಾಜನಿಗೆ ಪ್ರಭುತ್ವವನ್ನು ಸಮರ್ಪಿಸುವ ಪ್ರಸಂಗವಾಗಿತ್ತು. ಇದು ಪ್ರಜಾಪ್ರತಿನಿಧಿಗಳಿಂದ ಜರುಗುವ ಕಾರ್ಯವಾಗಿತ್ತು. ಇವರಿಗೆ ರತ್ನಿಗಳು ಎಂದು ಹೆಸರು– ರಾಜನ ಪಟ್ಟಾಭಿಷೇಕ ಸಮಾರಂಭದಲ್ಲಿ ಇವರದು ಮಹತ್ವದ ಪಾತ್ರವಾಗಿರುತ್ತಿತ್ತು. 'ರತ್ನ'ವು ಪ್ರಭುತ್ವದ ಸಂಕೇತವಾಗಿದ್ದು, ಇದನ್ನು ರತ್ನಿಗಳು ರಾಜನಿಗೆ ಸಮರ್ಪಿಸುವವರಾದ್ದರಿಂದ, ಅವರಿಗೆ ಆ ಹೆಸರು ಬಂದಿತು. ರತ್ನವನ್ನು ಸ್ವೀಕರಿಸಿದ ನಂತರ ಅರಸನು ಪ್ರತಿಯೊಬ್ಬ ರತ್ನಿಯ ಮನೆಗೆ ಹೋಗಿ ಉಡುಗೊರೆ ನೀಡುತ್ತಿದ್ದನು. ಈ ರತ್ನಿಗಳ ಪೈಕಿ ಒಬ್ಬನು ಯಾವ ಕಾಲಕ್ಕೂ ಶೂದ್ರನಾಗಿರಬೇಕಿತ್ತೆಂಬುದು ಮಹತ್ವದ ಸಂಗತಿ.[೧]

ನೀತಿಮಯೂಖದ ಕರ್ತೃವಾದ ನೀಲಕಂಠನು ನಂತರಕಾಲದ ಪಟ್ಟಾಭಿಷೇಕ ಸಮಾರಂಭವನ್ನು ವರ್ಣಿಸಿದ್ದಾನೆ. ಅವರ ಪ್ರಕಾರ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ – ಈ ನಾಲ್ಕೂ ವರ್ಣಗಳಿಗೆ ಸೇರಿದ ನಾಲ್ಕು–ಮುಖ್ಯಮಂತ್ರಿಗಳು ಹೊಸ ರಾಜನಿಗೆ ವಿಧ್ಯುಕ್ತವಾದ ಅಭಿಷೇಕ ಮಾಡುತ್ತಿದ್ದರು. ಅನಂತರ, ಪ್ರತಿಯೊಂದು ವರ್ಣದ ಹಾಗೂ, ಇನ್ನೂ ಕೆಳಗಣ ಜಾತಿಯ, ಮುಖಂಡರು ಆತನಿಗೆ ಪವಿತ್ರೋದಕವನ್ನು ಚಿಮುಕಿಸುತ್ತಿದ್ದರು. ಅನಂತರ ದ್ವಿಜರು[೨] ಜಯಘೋಷಣೆ ಮಾಡುತ್ತಿದ್ದರು.

ಶೂದ್ರರೂ ಬ್ರಾಹ್ಮಣರಂತೆ ರಾಜನ ಪಟ್ಟಾಭಿಷೇಕ ಸಮಾರಂಭಕ್ಕೆ ಆಮಂತ್ರಿಸಲ್ಪಡುತ್ತಿದ್ದರೆಂಬ ಸಂಗತಿಗೆ ಮಹಾಭಾರತ[೩]ದಲ್ಲಿ ಬರುವ ಪಾಂಡವ ಜ್ಯೇಷ್ಠನಾದ ಯುಧಿಷ್ಠಿರನ ಪಟ್ಟಾಭಿಷೇಕದ ವರ್ಣನೆಯೇ ಸಾಕ್ಷಿ.

ಶೂದ್ರರು ಪ್ರಾಚೀನ ಕಾಲದ ಎರಡು–ಜನಪದ ಹಾಗೂ ಪೌರ ಎಂಬ ರಾಜ್ಯ ಸಭೆಗಳ ಸದಸ್ಯರಾಗಿರುತ್ತಿದ್ದರು. ಹಾಗೂ ಈ ಸಭೆಗಳ ಸದಸ್ಯನಾದ ನಿಮಿತ್ತ ಶೂದ್ರನಿಗೆ ಬ್ರಾಹ್ಮಣನಿಂದಲೂ ವಿಶೇಷ ಮನ್ನಣೆ ಸಲ್ಲಬೇಕಿತ್ತು.[೪]

---

೧. ಈ ಸಂಗತಿಯ ಬಗೆಗೆ Jayasswal ಅವರ *Hindu Polity* (೧೯೪೩) ನೋಡಿರಿ (ಪು. 200–201)

೨. ಅದೇ ಗ್ರಂಥ, ಪು. 233

೩. *Mahabharata,* Sabha Parvan, Chap.xxxiii, Verses 41–42

೪. See Jaiswal, *Hindu Polity,* P. 248

ಮನುಸ್ಮೃತಿ (VI–೬೧)ಯ ಹಾಗೂ ವಿಷ್ಣುಸ್ಮೃತಿ (xxi–೬೪)ಯ ಪ್ರಕಾರವೂ ರಾಜ್ಯ ವ್ಯವಸ್ಥೆ ಹೀಗಿದ್ದುದು ಕಂಡುಬರುತ್ತದೆ. ಇಲ್ಲದಿದ್ದರೆ ಶೂದ್ರನು ರಾಜನಾಗಿದ್ದ ದೇಶದಲ್ಲಿ ಬ್ರಾಹ್ಮಣನು ವಾಸವಾಗಿರಬಾರದು ಎಂದು ಮನು ಹೇಳುತ್ತಿದ್ದನೇಕೆ? ಅಂದಮೇಲೆ, ಶೂದ್ರರೂ ಅರಸರಾಗಿರುತ್ತಿದ್ದರು ಎಂದಂತಾಯಿತು.

ಮಹಾಭಾರತದ ಶಾಂತಿಪರ್ವದಲ್ಲಿ[೧] ಭೀಷ್ಮನು ಯುಧಿಷ್ಠಿರನಿಗೆ ರಾಜ್ಯಶಾಸ್ತ್ರದ ಪಾಠಗಳನ್ನು ಹೇಳುತ್ತಿದ್ದಾಗ ಹೀಗೆ ಎಂದಿದ್ದಾನೆ: "ನಾನು ನಿನಗೆ ಎಂಥ ಮಂತ್ರಿಗಳನ್ನು ನೇಮಿಸಿಕೊಳ್ಳಬೇಕೆಂಬುದನ್ನು ಹೇಳಿಕೊಡಲಿದ್ದೇನೆ. ವೇದಪಾರಂಗತರಾದ, ಘನತೆವೆತ್ತ, ಸ್ನಾತಕವರ್ಗಕ್ಕೆ ಸೇರಿದ ಹಾಗೂ ಶುದ್ಧ ನಡವಳಿಕೆಯ ನಾಲ್ಕು ಜನ ಬ್ರಾಹ್ಮಣರು; ದೇಹ ದಾರ್ಢ್ಯವುಳ್ಳ ಮತ್ತೂ ಶಸ್ತ್ರ ಸಮರ್ಥರಾದ ಎಂಟು ಜನ ಕ್ಷತ್ರಿಯರು; ಪ್ರತಿಯೊಬ್ಬರೂ ಐಶ್ವರ್ಯವಂತರಾಗಿದ್ದ ೨೧ ಜನ ವೈಶ್ಯರು; ಹಾಗೂ, ಪ್ರತಿಯೊಬ್ಬರೂ ವಿನೀತರಾದಂಥ, ಶುದ್ಧ ನಡವಳಿಕೆಯ ತಮ್ಮ ದೈನಂದಿನ ಕರ್ತವ್ಯಕ್ಕೆ ನಿಷ್ಠರಾದ, ಮೂವರು ಶೂದ್ರರು; ಇದಲ್ಲದೆ, ಪುರಾಣಗಳನ್ನು ಬಲ್ಲವನಾದ ಹಾಗೂ ಅಷ್ಟ ಸದ್ಗುಣಗಳಿಂದ ಭೂಷಿತನಾದ ಸೂತನೊಬ್ಬ–ಇವರು ನಿನ್ನ ಮಂತ್ರಿಗಳಾಗಿರಬೇಕು."

ಈ ಮಾತುಗಳು ಶೂದ್ರರೂ ಮಂತ್ರಿಗಳಾಗಿರುತ್ತಿದ್ದರು ಹಾಗೂ ಅವರ ಸಂಖ್ಯೆ ಬ್ರಾಹ್ಮಣರ ಸಂಖ್ಯೆ, ಹೆಚ್ಚು ಕಡಿಮೆ ಸಮನಾಗಿದ್ದಿತೆಂಬುದನ್ನು ಸಾಬೀತುಪಡಿಸುತ್ತವೆ.[೨]

ಶೂದ್ರರು ಬಡವರು ಹಾಗೂ ಕೆಳಮಟ್ಟದವರು ಆಗಿರುತ್ತಿರಲಿಲ್ಲ; ಅವರೂ ಶ್ರೀಮಂತರಿರುತ್ತಿದ್ದರು ಎಂಬ ಸಂಗತಿಗೆ ಮೈತ್ರಾಯಣಿ ಸಂಹಿತೆ (IV.೨.೭.೧೦) ಹಾಗೂ ಪಂಚವಿಂಶ ಬ್ರಾಹ್ಮಣ[೩] (vi.೧.೧೧) ಸಾಕ್ಷಿಯಾಗಿವೆ.

ಈ ಪ್ರಶ್ನೆಗೆ ಇನ್ನೆರಡು ಮಗ್ಗುಲುಗಳಿವೆ. ಶೂದ್ರರನ್ನು ಗುಲಾಮರನ್ನಾಗಿ ಮಾಡಲಾಯಿತು ಎಂಬ ಅಂಶ ಸತ್ಯಸಂಗತಿಯೇ ಆಗಿತ್ತೆಂದು ಒಪ್ಪಿದರೂ ಅದಕ್ಕೆ ಇರುವ ವಿಶೇಷ ಅರ್ಥವೇನು? ಆರ್ಯರಿಗೆ ಗುಲಾಮಗಿರಿ ಎಂಬುದು ಗೊತ್ತಿರಲಿಲ್ಲ ಅಥವಾ ಅವರು ಆರ್ಯರನ್ನು ಗುಲಾಮರನ್ನಾಗಿಸಲು ಇಷ್ಟಪಡುತ್ತಿರಲಿಲ್ಲವೆಂದಾಗ ಮಾತ್ರ ಅ ಅಂಶಕ್ಕೆ ಅರ್ಥ ಬಂದೀತು. ಆದರೆ, ಸತ್ಯಸಂಗತಿ ಏನಿದೆಯೆಂದರೆ, ಆರ್ಯರಿಗೆ ಗುಲಾಮಗಿರಿ ಪದ್ಧತಿ ಗೊತ್ತಿತ್ತು ಹಾಗೂ ಆರ್ಯರನ್ನು ಗುಲಾಮರಾಗಗೊಟ್ಟದ್ದೂ ಉಂಟು. ಇದು ಋಗ್ವೇದದಿಂದ (vii ೮೬.೭ viii.೧೯.೩೬, ಹಾಗೂ viii.೫೬.೩) ಸ್ಪಷ್ಟವಾಗುತ್ತದೆ. ವಸ್ತುಸ್ಥಿತಿ ಹೀಗಿದ್ದು, ಅವರು ವಿಶೇಷವಾಗಿ ಶೂದ್ರರನ್ನು ಗುಲಾಮರನ್ನಾಗಿಸಲು ಏಕೆ ಇಷ್ಟಪಡಬೇಕು? ಇನ್ನೂ ಹೆಚ್ಚಿನ ಮಹತ್ವದ ಪ್ರಶ್ನೆಯೆಂದರೆ ಅವರು ಶೂದ್ರ ಗುಲಾಮರಿಗಾಗಿಯೇ ಪ್ರತ್ಯೇಕ ಕಟ್ಟಳೆಗಳನ್ನೇಕೆ ಮಾಡಬೇಕು?

ಸಂಕ್ಷೇಪವಾಗಿ ಹೇಳಬೇಕೆಂದರೆ, ಪಾಶ್ಚಾತ್ಯ ಸಿದ್ಧಾಂತವು ನಮ್ಮ ಈ ಪ್ರಶ್ನೆಗಳನ್ನು ಉತ್ತರಿಸಲು ಸಹಾಯಕಾರಿ ಆಗಲಾರದು: 'ಶೂದ್ರರೆಂದರೆ ಯಾರಾಗಿದ್ದರು? ಅವರು ನಾಲ್ಕನೆಯ ವರ್ಣ ಹೇಗಾದರು?'

♦

---

೧. Roy's translation, Vol. II. p. ೧೯೭

೨. ಕೋಮುವಾರು ಪ್ರಾತಿನಿಧ್ಯದ ಔಚಿತ್ಯದಲ್ಲಿ ಭೀಷ್ಮನಿಗೆ ನಂಬಿಕೆ ಇತ್ತು.

೩. Referred to in the *Vedic Index,* vol.II, p.೩೬೦

# ಅಧ್ಯಾಯ ೭

# ಯಾರು ಶೂದ್ರರಾಗಿದ್ದರು?

ಆರ್ಯೇತರರಾದ ಮೂಲನಿವಾಸಿ ಜನಾಂಗವಲ್ಲದಿದ್ದರೆ, ಈ ಶೂದ್ರರು ಯಾರು? ಎಂಬ ಪ್ರಶ್ನೆಯನ್ನು ನಾವೀಗ ಎದುರಿಸಬೇಕಿದೆ. ನಾನು ಮಂಡಿಸಬೇಕೆಂದಿರುವ ಸಿದ್ಧಾಂತವನ್ನು ಈ ಕೆಳಗಣ ಮೂರು ಪ್ರಸ್ತಾವನೆಗಳ ರೂಪದಲ್ಲಿ ಹೇಳಬಹುದಾಗಿದೆ:

೧. ಶೂದ್ರರು ಆರ್ಯರಾಗಿದ್ದರು.

೨. ಶೂದ್ರರು ಕ್ಷತ್ರಿಯವರ್ಗಕ್ಕೆ ಸಂಬಂಧಿಸಿದವರಾಗಿದ್ದರು.

೩. ಶೂದ್ರರು ಕ್ಷತ್ರಿಯಗಣದ ಎಂತಹ ಉಪವರ್ಗವಾಗಿದ್ದರೆಂದರೆ ಪ್ರಾಚೀನ ಆರ್ಯಸಮುದಾಯಗಳ ಕೆಲ ಶ್ರೇಷ್ಠ ಹಾಗೂ ಪ್ರಬಲ ರಾಜರುಗಳು ಶೂದ್ರರಾಗಿದ್ದರು.

ಶೂದ್ರರ ಮೂಲದ ಸಂಬಂಧದಲ್ಲಿನ ಈ ಸಿದ್ಧಾಂತವು ಕ್ರಾಂತಿಕಾರಿಯಲ್ಲದಿದ್ದರೂ ದಿಗ್ಭ್ರಮೆಗೊಳಿಸಬಹುದಾಗಿದೆ. ಅದು ಎಷ್ಟೊಂದು ದಂಗುಬಡಿಸುವಂಥದ್ದಾಗಿದೆಯೆಂದರೆ, ಅದಕ್ಕೆ ಆಧಾರವಾಗಿ ಸಾಕಷ್ಟು ಪುರಾವೆ ಇದ್ದರೂ ಬಹಳಷ್ಟು ಜನ ಅದನ್ನು ಒಪ್ಪಲು ತಯಾರಿಲ್ಲ. ನನ್ನ ಪಾಲಿನ ಕರ್ತವ್ಯವೆಂದರೆ ಆ ಪುರಾವೆಯನ್ನು ಒದಗಿಸುವುದು; ಅದರ ತೂಕವನ್ನು ನಿರ್ಧರಿಸುವುದು ಜನಕ್ಕೆ ಬಿಟ್ಟಿದ್ದು.

ಈ ಸಿದ್ಧಾಂತಕ್ಕೆ ಮೂಲಭೂತ ಪುರಾವೆಯನ್ನೊದಗಿಸಿದ ಪದ್ಯ ಭಾಗ ಮಹಾಭಾರತದ ಶಾಂತಿಪರ್ವದಲ್ಲಿ ೬೦ನೇ ಅಧ್ಯಾಯದಲ್ಲಿ ಬರುವ ೨೮ರಿಂದ ೪೦ರವರೆಗಿನ ಶ್ಲೋಕಗಳಲ್ಲಿ ಬರುತ್ತದೆ. ಅದು ಹೀಗಿದೆ

> *"ಪೂರ್ವಕಾಲದಲ್ಲಿ ಪೈಜವನ ಎಂಬ ಶೂದ್ರನೊಬ್ಬನು ತಾನು*
> *ನಡೆಸುತ್ತಿದ್ದ ಯಜ್ಞದಲ್ಲಿ ಐಂದ್ರಗ್ನಿಯೆಂಬ ಕಟ್ಟಳೆಯ ಮೇರೆಗೆ?*
> *ಒಂದು ಲಕ್ಷ ಪೂರ್ಣಪತ್ರಗಳನ್ನು ದಕ್ಷಿಣೆಯಾಗಿ ನೀಡಿದನೆಂದು*
> *ಹೇಳಲಾಗುತ್ತದೆ."*

ಈ ವಾಕ್ಯವೃಂದದಲ್ಲಿ ಬರುವ ಮಹತ್ವದ ಮಾತುಗಳೆಂದರೆ ಮೂರು: (೧) ಪೈಜವನನೆಂಬುವವನು ಶೂದ್ರನಾಗಿದ್ದನೆಂಬುದು; (೨) ಈ ಪೈಜವನನೆಂಬ ಶೂದ್ರನು ಯಜ್ಞವನ್ನು ನೆರವೇರಿಸಿದ, ಹಾಗೂ ಆತನಿಗೋಸ್ಕರ ಬ್ರಾಹ್ಮಣರು ಯಜ್ಞ ಯಾಗಾದಿಗಳನ್ನು ನಡೆಯಿಸಿಕೊಟ್ಟರಲ್ಲದೆ ಅವನಿಂದ ದಕ್ಷಿಣೆಯನ್ನೂ ಸ್ವೀಕರಿಸಿದರು.

ಮೇಲಣ ಉದ್ಧರಣೆ ರಾಯ್‌ರಿಂದ ಸಂಪಾದಿಸಲ್ಪಟ್ಟ ಮಹಾಭಾರತದಿಂದ ಆಯ್ದುಕೊಳ್ಳಲಾಗಿದೆ. ಇಲ್ಲಿ ನಾವು ಮಾಡಬೇಕಾದ ಮೊದಲ ಕೆಲಸವೆಂದರೆ ಪಾಠ ದೋಷರಹಿತವಾಗಿದೆಯಾ ಹಾಗೂ ಬೇರೆ ಏನಾದರು ಪಾಠಾಂತರಗಳಿವೆಯಾ ಎಂದು ನೋಡುವುದು. ತಾನು ಅನುಸರಿಸಿದ ಪಾಠದ ನಿತ್ವದ ಬಗೆಗೆ ರಾಯ್ ಅವರು[೧] ಹೇಳುವುದೇನೆಂದರೆ:

---

೧. Quoted in Sukthankar Memorial Edition, Vol.I, pp ೪೩–೪೪

*"ನನ್ನ ಆವೃತ್ತಿಗೆ ಮಾತ್ರ ಸಂಬಂಧಪಟ್ಟಂತೆ ಹೇಳಬೇಕಾದುದೇನೆಂದರೆ ಅದು ರಾಯಲ್ ಏಶಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್ ಆವೃತ್ತಿಯ ಮೇಲೆ ಆಧಾರಿತವಾಗಿದೆ. ಈ ಆವೃತ್ತಿ ೪೫ ವರ್ಷಗಳ ಹಿಂದೆಯೇ (ನಾನು ತಿಳಿದಂತೆ) ಬಂಗಾಲದ ಕೆಲ ಗಾಢಪಾಂಡಿತ್ಯದ ವಿದ್ವಾಂಸರುಗಳ ಮಾರ್ಗದರ್ಶನದಲ್ಲಿ ಹೆಸರಾಂತ ಪೌರ್ವಾತ್ಯಶಾಸ್ತ್ರಜ್ಞನಾದ, ಇಂಗ್ಲಿಷು ಮನುಷ್ಯನಿಂದ ಸಿದ್ಧಪಡಿಸಿ ಪ್ರಕಾಶಿಸಲ್ಪಟ್ಟುದು. ಹಸ್ತಪ್ರತಿಗಳು (ದಕ್ಷಿಣ ಭಾರತವನ್ನು ಹೊರತು ಪಡಿಸಿ) ದೇಶದ ಎಲ್ಲ ಭಾಗಗಳಿಂದ ತರಿಸಲ್ಪಟ್ಟು, ಪಾಠಾಂತರಗಳನ್ನು ತಾಳೆಹಾಕಿ ನೋಡಲಾಗಿತ್ತು. ಇಷ್ಟೊಂದು ಶ್ರದ್ಧೆ ಹಾಗೂ ಎಚ್ಚರದಿಂದ ಸಿದ್ಧಪಡಿಸಿದುದಾದರೂ, ಈ ಸಂಸ್ಥೆಯ ಆವೃತ್ತಿಯನ್ನು ನಾನು ಕುರುಡನಂತೆ ಅನುಸರಿಸಿಕೊಂಡು ಹೋಗಿಲ್ಲ. ಇದಕ್ಕಿಂತಲೂ ಹೆಚ್ಚಿನ ಶ್ರದ್ಧೆ ಹಾಗೂ ಎಚ್ಚರದಿಂದ ಸಿದ್ಧಪಡಿಸಿದ ಬರದ್ವಾನ್ ಮಹಾರಾಜರವರ ಬಂಗಾಲೀ ಲಿಪಿಯಲ್ಲಿದ್ದ, ಆವೃತ್ತಿಯೊಂದಿಗೆ ಲಕ್ಷ್ಯಪೂರ್ವಕ ಹೋಲಿಸಿ ನೋಡಿದ್ದೇನೆ. ಬರದ್ವಾನ್ ಪಂಡಿತರು ಯಾವುದೇ ಶ್ಲೋಕವನ್ನು ಸರಿಯೆಂದು ಅಂಗೀಕರಿಸುವ ಮುನ್ನ ಭಾರತದ ಎಲ್ಲ ಭಾಗಗಳಿಂದ (ದಕ್ಷಿಣ ಭಾರತವನ್ನು ಹೊರತುಪಡಿಸದೆ) ತರಿಸಿದ ಸುಮಾರು ೧೮ ಹಸ್ತಪ್ರತಿಗಳ ಪಾಠಾಂತರಗಳನ್ನು ತಾಳೆಹಾಕಿ ನೋಡಿದ್ದರು."*

ಮಹಾಭಾರತದ ಪರಿಷ್ಕೃತ ಆವೃತ್ತಿಯನ್ನು ಸಂಪಾದಿಸಿದ ಘನಪಂಡಿತ ಪ್ರೊ. ಸುಕ್‌ಠಣಕರ್ ಅವರು ಮಹಾಭಾರತದ ಅನೇಕ ಆವೃತ್ತಿಗಳನ್ನು ಪರಿಶೀಲಿಸಿ ನೋಡಿದನಂತರ ಈ ರೀತಿಯ ತೀರ್ಮಾನಕ್ಕೆ ಬಂದಿದ್ದಾರೆ.[೧]

"೧೮೫೬ ರಲ್ಲಿ ಕಲ್ಕತ್ತೆಯಿಂದ ಪ್ರಕಾಶಿತವಾದ ಜನಪ್ರಿಯ ಸಂಪುಟದ ಮೂಲ ಆವೃತ್ತಿಯು ಒಂದು ಶತಮಾನ ಕಳೆದರೂ ಇಂದಿಗೆ ಅತ್ಯುತ್ತಮವಾದ ಆವೃತ್ತಿಯಾಗಿದೆ."

ರಾಯ್ ಅವರ ಆವೃತ್ತಿಯ ನಿಜತ್ವವನ್ನು ಸಂಶಯಿಸಲಾಗದಿದ್ದರೂ, ಶೂದ್ರರ ಮೂಲದ ಬಗೆಗಿನ ಈ ಹೊಸ ಸಿದ್ಧಾಂತಕ್ಕೆ ಆಧಾರನೆಲೆಯಾಗಿರುವ ಇನ್ನಿತರ ಯಾವುದೇ ಹಸ್ತಪ್ರತಿ ಇದ್ದರೆ, ಅದನ್ನು ನೋಡಬೇಕೆಂದು ವಿಮರ್ಶಕರು ಅಪೇಕ್ಷಿಸಿದಲ್ಲಿ ಅದು ಅನುಚಿತವೇನಲ್ಲ. ಈ ತರಹದ ಅನ್ವೇಷಣೆ ಕೈಕೊಳ್ಳುವ ಮೊದಲು ಪರ್ಯಾಲೋಚಿಸಬೇಕಾದ ಎರಡು ಅಂಶಗಳನ್ನೆತ್ತಿ ತೋರಿಸುವುದವಶ್ಯ. ಇವುಗಳಲ್ಲಿ ಒಂದೆಂದರೆ:[೨] ಮಹಾಭಾರತದ ಎಲ್ಲ ೧೮ ಪರ್ವಗಳನ್ನೊಳಗೊಂಡ ಪೂರ್ತಿಯಾದ ಬೇರೆ ಬೇರೆ ಹಸ್ತಪ್ರತಿಗಳೆಂಬುವು ಇಲ್ಲ. ಪ್ರತಿಯೊಂದು ಪರ್ವವೂ ಪ್ರತ್ಯೇಕ ಘಟಕವೆಂದೇ ಪರಿಗಣಿಸಲಾಗಿದೆ. ಇದರ ಪರಿಣಾಮ ಏನಾಗಿದೆಯೆಂದರೆ, ಬೇರೆ ಬೇರೆ ಪರ್ವಗಳ ಲಭ್ಯವಿರುವ ಹಸ್ತಪ್ರತಿಗಳ ಸಂಖ್ಯೆಯಲ್ಲಿ ಬಹಳಷ್ಟು ವ್ಯತ್ಯಾಸವಿದೆ. ಆದ್ದರಿಂದ, ಯಾವುದು ಅತ್ಯಂತ ನಿಖರವಾದ ಪಾಠವೆಂದು ನಿರ್ಣಯಿಸಲು ಬೇಕಾದ ಹಸ್ತಪ್ರತಿಗಳ ಸಂಖ್ಯೆ ಪ್ರತಿ ಪರ್ವದ ಸಂಬಂಧದಲ್ಲೂ ಬೇರೆಬೇರೆಯೇ ಆಗಿದೆ.

---

೧. ಅದೇ ಗ್ರಂಥ ನೋಡಿರಿ, Vol I, p. 131

೨. ಸುಕ್‌ಠಣಕರ್, ಪೂರ್ವೋಕ್ತತ ಗ್ರಂಥ, ಪು. 14

ಗಮನಕ್ಕೆ ತೆಗೆದುಕೊಳ್ಳಬೇಕಾದ ಇನ್ನೊಂದು[೧] ಅಂಶವೆಂದರೆ ಮಹಾಭಾರತದ ಪಾಠ ತಲೆತಲಾಂತರದಿಂದ ಎರಡು ಭಿನ್ನ ರೂಪಗಳಲ್ಲಿ ನಮ್ಮ ಕೈಗೆ ಬಂದಿದೆ: ಆರ್ಯಾವರ್ತ ಹಾಗೂ ದಕ್ಷಿಣಾಪಥಕ್ಕೆ ಅನುರೂಪವಾದ ಔತ್ತರೇಯ ಹಾಗೂ ದಾಕ್ಷಿಣಾತ್ಯ ಪರಿಷ್ಕೃತ ಪಾಠಗಳು.

ಹಸ್ತಪ್ರತಿಯ ಆಧಾರವನ್ನು ಶೋಧಿಸುವುದೆಂದರೆ, ನಾನು ಸಾಕಷ್ಟು ಸಂಖ್ಯೆಯಲ್ಲಿ ಹಸ್ತಪ್ರತಿಗಳನ್ನು ಕಲೆಹಾಕಿರಬೇಕು ಹಾಗೂ ಇವುಗಳು ಉತ್ತರ ಹಾಗೂ ದಕ್ಷಿಣ ಭಾರತಗಳ ಮಧ್ಯೆ ನ್ಯಾಯಯುತವಾದ ಹಂಚಿಕೆಯಾಗಿರಬೇಕು, ಎಂಬುದು ಸರ್ವವಿದಿತ. ಈ ಅಂಶಗಳನ್ನು ಗಮನದಲ್ಲಿರಿಸಿಕೊಂಡು ನಾವು ನೋಡಿದಾಗ ನಾವು ಪ್ರಮುಖವಾಗಿ ಪರಿಶೀಲಿಸಬೇಕಾದ ಮಹಾಭಾರತದ ಶಾಂತಿಪರ್ವದಲ್ಲಿ ಬರುವ ೬೦ನೆಯ ಅಧ್ಯಾಯದ ೩೮ನೆಯ ಶ್ಲೋಕದ ಪಾಠವನ್ನು ಬೇರೆಬೇರೆ ಹಸ್ತಪ್ರತಿಗಳಿಂದ ತಾಳೆಹಾಕಿ ನೋಡಿದಾಗ[೨] ಈ ಫಲಶ್ರುತಿ ಸಿಕ್ಕುತ್ತದೆ

| | | |
|---|---|---|
| ೧. ಶೂದ್ರ : | ಪೈಜವನೋ ನಾಮ | (K)S |
| ೨. ಶೂದ್ರ : | ಪೈಲವನೋ ನಾಮ | (M/೧:M/೨)S |
| ೩. ಶೂದ್ರ : | ಯೈಲನನೋ ನಾಮ | (M/೩:M/೪)S |
| ೪. ಶೂದ್ರ : | ಯೈಜನನೋ ನಾಮ | (F) |
| ೫. ಶೂದ್ರೋಪಿ : | ಯಜನೇ ನಾಮ | (L) |
| ೬. ಶೂದ್ರ : | ಪೌಂಜಲಕ ನಾಮ | (TC)S |
| ೭. ಶುದ್ಧೋ : | ವೈಭವನೋ ನಾಮ | (G)N |
| ೮. ಪುರಾ : | ವೈಜವನೋ ನಾಮ | (A,D/೨) |
| ೯. ಪುರಾ : | ವೈಜನನೋ ನಾಮ | (M)N |

ಒಂಬತ್ತು ಹಸ್ತಪ್ರತಿಗಳ ತಾಳೆಯ ಫಲಶ್ರುತಿ ಇಲ್ಲಿದೆ. ಅಂಗೀಕರಿಸುವುದಕ್ಕೆ ಅನೇಕ ಪಾಠಾಂತರಗಳಿರುವ ಒಂದು ಪಾಠ್ಯವನ್ನು ನಿರ್ದುಷ್ಟವೆಂದು ಅಂತಿಮವಾಗಿ ಅಂಗೀಕರಿಸುವುದಕ್ಕೆ ಒಂಬತ್ತು ಹಸ್ತಪ್ರತಿಗಳು ಸಾಕೇ? ಇಡೀ ಮಹಾಭಾರತಕ್ಕೆ ಸಂಬಂಧಿಸಿದಂತೆ, ಶುದ್ಧಪಾಠವನ್ನು ಅಂಗೀಕರಿಸುವುದಕ್ಕೆ ಕನಿಷ್ಠವಾಗಿ ಬೇಕೇಬೇಕಾದ ಹಸ್ತಪ್ರತಿಗಳ ಸಂಖ್ಯೆ ಕೇವಲ ಹತ್ತು.[೩] ಎಂದಾಗ, ಒಂಬತ್ತು ಕಡಿಮೆಯೇನಲ್ಲ ಅಲ್ಲವೇ? ಈ ಒಂಬತ್ತು ಹಸ್ತಪ್ರತಿಗಳ ಹಂಚಿಕೆ ಉತ್ತರ ಭಾರತ ಹಾಗೂ ದಕ್ಷಿಣ ಭಾರತ ಹೀಗೆ ಎರಡೂ ಪ್ರದೇಶಗಳಲ್ಲಿ ಹರಡಿಕೊಂಡಿದೆ. M೧, M೨, M೩, M೪ ಮತ್ತು TC ಇವುಗಳು ದಾಕ್ಷಿಣಾತ್ಯ ಪರಿಷ್ಕೃತ ಪಾಠಕ್ಕೆ ಸಂಬಂಧಿಸಿವೆ. A,M.G,D೨ ಇವು ಔತ್ತರೇಯ ಪರಿಷ್ಕೃತ ಪಾಠಕ್ಕೆ ಸಂಬಂಧಿಸಿವೆ. ಹೀಗಿದ್ದು, ಹಸ್ತಪ್ರತಿಗಳ ಆಯ್ಕೆ ತಜ್ಞರು ವಿಧಿಸಿರುವ ಎರಡು ಪ್ರಮಾಣಸೂತ್ರಗಳ ಪ್ರಕಾರ ಒಪ್ಪಿತವಾಗುವಂತಿದೆ.

---

೧. ಅದೇ ಗ್ರಂಥ ಪು. ೯–೪೨

೨. ಈ ತಾಳೆಯ ಪಟ್ಟಿಯನ್ನು ನನಗೆ ಉಪಯೋಗ ಮಾಡಿಕೊಳ್ಳಲು ಅನುಮತಿಸಿದ ಭಂಡಾರಕರ ಪ್ರಾಚ್ಯ ಸಂಶೋಧನಾ ಸಂಸ್ಥೆಗೆ ನಾನು ಋಣಿಯಾಗಿದ್ದೇನೆ. ಕಂಸದಲ್ಲಿನ ಅಕ್ಷರಗಳು ಸಂಸ್ಥೆಯು ಹಸ್ತಪ್ರತಿಗಳಿಗೆ ನೀಡಿದ ಅನುಕ್ರಮಣಿಕಾ ಸಂಖ್ಯೆಯನ್ನು ಸೂಚಿಸುತ್ತದೆ. ಎನ್ ಅಥವಾ ಎಸ್ ಹಸ್ತಪ್ರತಿ ಉತ್ತರ ಭಾರತದ್ದೋ ದಕ್ಷಿಣ ಭಾರತದ್ದೋ ಎಂಬುದನ್ನು ಸೂಚಿಸುತ್ತದೆ. ಕೆ ಎಂಬುದು ಕುಂಭಕೋಣಂ ಎಂಬುದಕ್ಕೆ ಸಂಕೇತ.

೩. Sukthankar, Vol I, p. ೧೪

ಪಾಠಾಂತರಗಳ ಸೂಕ್ಷ್ಮಾವಲೋಕನವು ಈ ಅಂಶಗಳನ್ನು ನಿರ್ದೇಶಿಸುತ್ತದೆ:

(೧) ಪೈಜವನನ ವರ್ಣನೆಯಲ್ಲಿ ವ್ಯತ್ಯಾಸವಿದ್ದುದು;

(೨) ಪೈಜವನನ ಹೆಸರಿನಲ್ಲಿ ವ್ಯತ್ಯಾಸವಿದ್ದುದು;

(೩) ಒಂಬತ್ತು ಪಾಠಗಳ ಪೈಕಿ ಆರು ಆತನನ್ನು ಶೂದ್ರನೆಂದು ವರ್ಣಿಸುತ್ತವೆ. ಒಂದು ಆತನನ್ನು ಶುದ್ಧನೆಂದು ಕರೆಯುತ್ತದೆ; ಎರಡು ಆತನು ಯಾವ ವರ್ಗದವನೆಂದು ಹೇಳದೆ, ಆತನು ಜೀವಿಸಿದ್ದ ಕಾಲವನ್ನು ನಿರ್ದೇಶಿಸುತ್ತ 'ಪುರ' ಎಂಬ ಶಬ್ದವನ್ನು ಬಳಸುತ್ತವೆ.

(೪) ಹೆಸರಿಗೆ ಸಂಬಂಧಿಸಿದಂತೆ, ಯಾವುದೇ ಎರಡು ಹಸ್ತಪ್ರತಿಗಳ ಮಧ್ಯೆ ಹೊಂದಾಣಿಕೆ ಇಲ್ಲ; ಒಂಬತ್ತೂ ಹಸ್ತಪ್ರತಿಗಳು ಬೇರೆ ಬೇರೆ ಪಾಠಾಂತರಗಳನ್ನೊಳಗೊಂಡಿವೆ.

ಈ ರೀತಿಯ ಫಲಶ್ರುತಿ ಬಂದಾಗ, ಋಜುವಾದ ಪಾಠ ಯಾವುದೆಂದು ಸ್ವೀಕರಿಸುವುದು? ಮೊದಲು, ಹೆಸರಿಗೆ ಸಂಬಂಧಿಸಿದಂತೆ ಪಾಠಗಳನ್ನು ವಿಮರ್ಶಿಸೋಣ: ಈ ವಿಷಯದಲ್ಲಿ ಅರ್ಥದ ಪ್ರಶ್ನೆಯೆಂಬುದೇ ಇಲ್ಲ. ಅಂದಮೇಲೆ, ಇಲ್ಲಿ ಅರ್ಥೈಸುವ ಪ್ರಮೇಯ ಇದೆಯೋ ಅಥವಾ ಪಾಠವನ್ನು ತಿದ್ದುವ ಪ್ರಮೇಯ ಇದೆಯೋ ಎನ್ನುವ ಪ್ರಶ್ನೆಗೆ ಅವಕಾಶವಿಲ್ಲ. ಅಥವಾ ಒಂದು ಪಾಠಕ್ಕೆ ಪ್ರಾಶಸ್ತ್ಯ ನೀಡಿ, ಉಳಿದ ಪಾಠಾಂತರಗಳು ಹೇಗೆ ಉದ್ಭವಿಸಿರಬಹುದು ಎಂದು ನಿರ್ಧರಿಸುವ ಪ್ರಶ್ನೆಯೂ ಏಳದು. ಪ್ರಶ್ನೆ ಇರುವುದು, ಯಾವುದು ಸರಿಯಾದ ಹೆಸರು ಹಾಗೂ ಯಾವ ಪಾಠಾಂತರಗಳು ಲಿಪಿಕಾರರು ಮಾಡಿದ ಬರೆಹದೋಷ ಇರಬಹುದು, ಎಂಬುದು.

ಪೈಜವನ ಎಂಬುವುದು ಶುದ್ಧ ಪಾಠ್ಯ ಎಂಬುದರ ಬಗೆಗೆ ಸಂದೇಹ ಇರುವಂತಿಲ್ಲ. ಅದನ್ನು ಔತ್ತರೇಯ ಹಾಗೂ ದಾಕ್ಷಿಣಾತ್ಯ ಪರಿಷ್ಕೃತ ಹಸ್ತಪ್ರತಿಗಳೆರಡೂ ಪೋಷಿಸುತ್ತವೆ; ಯಾಕೆಂದರೆ, ನಂ. ೮ರಲ್ಲಿರುವ 'ವೈಜವನೊ' ಎಂಬುವುದು 'ಪೈಜವನೊ' ಎಂಬುದೇ ಆಗಿದೆ, ಬೇರೇನಲ್ಲ. ಉಳಿದ ಪಾಠಾಂತರಗಳು ಲಿಪಿಕಾರರು ತಮ್ಮ ಅಜ್ಞಾನದಿಂದಾಗಿ ಮೂಲಪಾಠವನ್ನು ಸರಿಯಾಗಿ ಓದಲಾಗದೆ, ಅದನ್ನು ತಮ್ಮದೇ ಆದ ರೀತಿಯಲ್ಲಿ ನಿರ್ಣಯಿಸುವಲ್ಲಿ ಉಂಟಾದ ವ್ಯತ್ಯಾಸಗಳು.

ಪೈಜವನನ ವರ್ಣನೆಯನ್ನು ಅನುಲಕ್ಷಿಸಿದಾಗ 'ಶೂದ್ರ'ದಿಂದ 'ಪುರ'ಕ್ಕೆ ಆದ ಬದಲಾವಣೆ ಆಕಸ್ಮಿಕವಲ್ಲ ಎಂದು ಒಪ್ಪಲೇಬೇಕು. ಅದು ಬುದ್ಧಿಪೂರ್ವಕ ಮಾಡಿದ್ದೆಂದು ತೋರುತ್ತದೆ. ಈ ಬದಲಾವಣೆ ಏಕಾಗಿದೆ ಎಂಬುದನ್ನು ನಿರ್ದಿಷ್ಟವಾಗಿ ಹೇಳುವುದು ಕಠಿಣ. ಎರಡು ಅಂಶಗಳು ಮಾತ್ರ ಸುಸ್ಪಷ್ಟ; ಒಂದೆಂದರೆ, ಬದಲಾವಣೆ ಸ್ವಾಭಾವಿಕವೆಂದೆನಿಸುವುದು; ಇನ್ನೊಂದೆಂದರೆ, ಪೈಜವನನು ಶೂದ್ರನಾಗಿದ್ದನೆಂಬ ತೀರ್ಮಾನಕ್ಕೆ ಇದು ವಿರುದ್ಧವಾಗಿರದೆ ಇರುವುದು. ಈ ತೀರ್ಮಾನ, ನಾವು ೩೮–೪೦ ಶ್ಲೋಕಗಳ ಸಂದರ್ಭವನ್ನು ನೆನಪಿನಲ್ಲಿಟ್ಟಾಗ, ಸ್ವಾಭಾವಿಕ ಎನ್ನಿಸದಿರದು. ಸಂದರ್ಭವನ್ನು ಸ್ಪಷ್ಟಪಡಿಸುವುದಕ್ಕೋಸ್ಕರ, ಆ ಮುಂಚೆ ಬರುವ ಶ್ಲೋಕಗಳನ್ನು ಈ ಕೆಳಗೆ ಕೊಡಲಾಗಿದೆ :

> "ಶೂದ್ರನಾದವನು ಎಂಥ ಕಷ್ಟವೇ ಬರಲಿ, ಎಷ್ಟೇ ತಾಪತ್ರಯ ಇರಲಿ, ತನ್ನ ಒಡೆಯನನ್ನೆಂದೂ ಬಿಟ್ಟು ಹೋಗಕೂಡದು. ಒಡೆಯನು ಸಂಪತ್ತನ್ನು ಕಳೆದುಕೊಂಡರೆ, ಆತನು ಅತ್ಯಂತ ಉತ್ಸಾಹದಿಂದ ಒಡೆಯನಿಗೆ ಆಧಾರವಾಗಿ ನಿಲ್ಲಬೇಕು. ಶೂದ್ರನು ತನ್ನದೆನ್ನುವ ಸಂಪತ್ತನ್ನು ಹೊಂದಿರಬಾರದು. ಆತ ಏನನ್ನೇ ಹೊಂದಿರಲಿ ಅದು ಒಡೆಯನಿಗೆ ಸಂಬಂಧಿಸಿದ್ದು. ಉಳಿದ ಮೂರು ವರ್ಣಗಳಿಗೆ ಯಜ್ಞವು ಕರ್ತವ್ಯವೆಂದು ವಿಧಿಸಲಾಗಿದೆ. ಓ ಭರತನೇ,

ಅದು ಶೂದ್ರನಿಗೂ ವಿಧಿಸಲ್ಪಟ್ಟಿದೆ. ಆದರೆ, ಆತನಿಗೆ 'ಸ್ವಾಹಾ' ಅಥವಾ 'ಸ್ವಧಾ' ಎನ್ನಲು, ಅಥವಾ ಇತರ ಯಾವುದೇ ಮಂತ್ರವನ್ನುಚ್ಚರಿಸಲುಬಾರದು– ಆತನು ಅದಕ್ಕೆ ಅಸಮರ್ಥನೆಂದು ಪರಿಗಣಿಸಲಾಗಿದೆ. ಈ ಕಾರಣದಿಂದಾಗಿ ಶೂದ್ರನು ವೇದಗಳಲ್ಲಿ ವಿಧಿಸಲಾದ ವ್ರತಗಳನ್ನು ಪಾಲಿಸದೆ, ಪಾಕಯಜ್ಞಗಳೆಂಬ ಸಣ್ಣ ಪ್ರಮಾಣದ ಯಜ್ಞಗಳ ಮೂಲಕ, ದೇವತೆಗಳಿಗೆ ಪೂಜೆ ಸಲ್ಲಿಸಬೇಕು. ಪೂರ್ಣಪಾತ್ರವೆಂಬ ಕಾಣಿಕೆಯು ಇಂಥ ಯಜ್ಞಗಳ ದಕ್ಷಿಣೆಯೆಂದು ಘೋಷಿಸಲಾಗಿದೆ."

ಮುಂಚೆಯೇ ಬರುವ ಈ ಶ್ಲೋಕಗಳ ಸಂದರ್ಭದಲ್ಲಿ ೩೮ರಿಂದ ೪೦ನೇ ಶ್ಲೋಕಗಳನ್ನು ಪರಿಶೀಲಿಸಿ ನೋಡಿದಾಗ ಆ ಇಡೀ ಭಾಗ ಶೂದ್ರನ ಬಗೆಗಿದ್ದುದು ಸುಸ್ಪಷ್ಟವಾಗುತ್ತದೆ. ಪೈಜವನನ ಕಥೆ ದೃಷ್ಟಾಂತ ಮಾತ್ರ. ಈ ಹಿನ್ನೆಲೆಯಲ್ಲಿ, ಪೈಜವನನ ಹೆಸರಿನ ಮೊದಲಲ್ಲಿ 'ಶೂದ್ರ'ನೆಂದು ಪುನರುಚ್ಚರಿಸುವುದು ಅನವಶ್ಯಕ ಎನ್ನಿಸುತ್ತದೆ. ಆ ಎರಡು ಹಸ್ತಪ್ರತಿಗಳಲ್ಲಿ ಪೈಜವನನ ಹೆಸರಿನ ಮುಂಚೆ 'ಶೂದ್ರ' ಎಂಬ ಶಬ್ದ ಏಕೆ ಬಂದಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತದೆ. 'ಶೂದ್ರ' ಎಂಬುದಕ್ಕೆ ಬದಲಾಗಿ 'ಪುರ' ಎಂಬ ಶಬ್ದ ಬಂದ ಕಾರಣ ಏನೆಂಬುದರ ಸಂಬಂಧದಲ್ಲಿ ನಾವು ಪೈಜವನನ ಕಥೆ ಬಹಳ ಹಳೇ ಕಾಲದಲ್ಲಿ ನಡೆದು ಹೋದುದೆಂಬುದನ್ನು ನೆನಪಿಡಬೇಕು. ಆದ್ದರಿಂದ, ಲಿಪಿಕಾರನು ಈ ಸಂಗತಿಯನ್ನು ಸ್ಪಷ್ಟವಾದ ಮಾತುಗಳಲ್ಲಿ ದಾಖಲಿಸುವುದು ವಿಹಿತ ಎಂದು ಬಗೆದಿದ್ದರೆ ಅದು ಸ್ವಾಭಾವಿಕ. ಪೈಜವನನು ಶೂದ್ರನೆಂಬುದು ಸಂದರ್ಭದ ಮೇಲಿಂದಲೇ ಸ್ಪಷ್ಟವಿದೆ. 'ಆತ ಶೂದ್ರನಾಗಿದ್ದ' ಎಂಬುದನ್ನು ತಾನು ಒತ್ತಿ ಹೇಳಬೇಕಾದುದಿಲ್ಲ ಎಂಬ ಪ್ರಜ್ಞೆ ಲಿಪಿಕಾರನಿಗೆ ಇದ್ದುದರಿಂದ, ಆ ಸಂಗತಿ ಪುನರುಕ್ತವಾಗಿಲ್ಲ ಅಷ್ಟೆ.

ಮಹಾಭಾರತದ ಶಾಂತಿಪರ್ವದಲ್ಲಿ ಬರುವ ಈ ಪದ್ಯ ಭಾಗದಲ್ಲಿ ಉಲ್ಲೇಖಿತವಾದ ವ್ಯಕ್ತಿ ಪೈಜವನ ಹಾಗೂ ಈತ ಶೂದ್ರನಾಗಿದ್ದನೆಂಬ ವಿವರಣೆ ಸುಧಾರಿತವೆಂದೆನಿಸಿದಲ್ಲಿ, ಅದು ಪ್ರತಿಷ್ಠಾಪಿತವೆಂದು ನಾವು ತಿಳಿಯಲು ಅಡ್ಡಿ ಇಲ್ಲ.

## II

ಇನ್ನು ಮುಂದೆ, ವಿವೇಚಿಸಲಿಕ್ಕಿರುವುದು 'ಈ ಪೈಜವನ ಯಾರು?' ಎಂಬ ಪ್ರಶ್ನೆ.

ಯಾಸ್ಕನ ನಿರುಕ್ತ ನಮಗೆ ಈ ವಿಷಯದಲ್ಲಿ ಸುಳಿವು ನೀಡುವಂತಿದೆ. ನಿರುಕ್ತ ೨.೨೪[೧]ರಲ್ಲಿ ಯಾಸ್ಕನು ಹೇಳುತ್ತಾನೆ:

"ಋಷಿ ವಿಶ್ವಾಮಿತ್ರನು ಪಿಜವನನ ಮಗನಾದ ಸುದಾಸನಿಗೆ ಪುರೋಹಿತನಾಗಿದ್ದನು. ಎಲ್ಲರೂ ಒಟ್ಟಿಗೇ ನಡೆದಿದ್ದರು– ದಾನಶೂರ ಸುದಾಸ, ಪಿಜವನನ ಮಗ ಪೈಜವನ, ಹಾಗೂ ಯಾರ ನಡಿಗೆ ಅನುಕರಿಸಲಾಗುತ್ತಿರಲಿಲ್ಲವೋ ಮತ್ತು ಇತರರು ಅಸೂಯೆಪಡುವಷ್ಟು ರಭಸದ್ದಾಗಿತ್ತೋ ಅಂಥವನು ಪಿಜವನನು."

ಯಾಸ್ಕನ ನಿರುಕ್ತದಿಂದ ಎರಡು ಮಹತ್ವದ ಸಂಗತಿಗಳು ನಮಗೆ ವಿದಿತವಾಗುತ್ತವೆ:

---

೧. Lakshman Sarup, *The Nighantu and Nirukta,* pp.೩೫–೩೬

(೧) ಪೈಜವನ ಎಂದರೆ ಪಿಜವನನ ಮಗ; ಹಾಗೂ (೨) ಪೈಜವನನ ಮಗ ಸುದಾಸನೆಂಬುವವನು. ಯಾಸ್ಕನ ನೆರವಿನಿಂದ ನಾವು ಈ ಪ್ರಶ್ನೆಗೆ ಉತ್ತರಿಸಬಹುದಾಗಿದೆ: 'ಮಹಾಭಾರತದಲ್ಲಿ ಬರುವ ಪೈಜವನನು ಯಾರು?' ಉತ್ತರ: 'ಪೈಜವನ ಎಂಬುದು ಸುದಾಸನ ಇನ್ನೊಂದು ಹೆಸರು' ಅಷ್ಟೆ.

ಮುಂದಿನ ಪ್ರಶ್ನೆ: ಈ ಸುದಾಸನು ಯಾರು? ಹಾಗೂ ಆತನ ಬಗೆಗೆ ನಮಗೆ ಏನು ಗೊತ್ತಿದೆ? ಬ್ರಾಹ್ಮಣ ಸಾಹಿತ್ಯದಲ್ಲಿ ಶೋಧಿಸಲಾಗಿ ಈ ಹೆಸರಿನವರು ಮೂವರು ಸಿಕ್ಕುತ್ತಾರೆ. ಒಬ್ಬ ಸುದಾಸನು ಋಗ್ವೇದದಲ್ಲಿ[೧] ಉಲ್ಲೇಖಿಸಲ್ಪಟ್ಟಿದ್ದಾನೆ. ಆತನ ಕೌಟುಂಬಿಕ ವಿವರಗಳು ಈ ಕೆಳಗಣ ಶ್ಲೋಕಗಳಲ್ಲಿ ಕೊಡಲ್ಪಟ್ಟಿವೆ.

೧. ಋಗ್ವೇದ, vii.೧೮.೨೧. "ನೂರು ರಾಕ್ಷಸರನ್ನು ಸಂಹರಿಸಿದ ಪರಾಶರನೇ ಹಾಗೂ ವಸಿಷ್ಠನೇ, ಯಾರು ಭಕ್ತಿಯಿಂದ ನಿಮ್ಮ ಮಹಿಮೆಯನ್ನು ಪ್ರತಿಯೊಂದು ಮನೆಯಲ್ಲಿ ಮೆರೆಯಿಸಿದ್ದಾರೆಯೋ ಅವರು ಉಪಕಾರಿಯಾದ ನಿನ್ನ ಗೆಳೆತನವನ್ನು ಕಡೆಗಣಿಸರು."
೨. ಋಗ್ವೇದ, vii.೧೮.೨೨– "ಪೈಜವನನ ಮಗನೂ, ದೇವವ್ರತನ ಮೊಮ್ಮಗನೂ ಆದ, ೨೦೦ ಗೋವುಗಳನ್ನು ದಾನವಾಗಿ ಕೊಟ್ಟು, ಎರಡು ರಥಗಳನ್ನೂ ಇಬ್ಬರು ಹೆಂಡಿರನ್ನೂ ಪಡೆದ, ಸುದಾಸನ ಔದಾರ್ಯವನ್ನು ಕೊಂಡಾಡುತ್ತಾ (ಆ ಕಾಣಿಕೆಗೆ ಪಾತ್ರನಾದ) ನಾನು ಯಜ್ಞಶಾಲೆಯಲ್ಲಿ ಆಚಾರ್ಯನು ಪ್ರದಕ್ಷಿಣೆ ಹಾಕುವಂತೆ, ಓ ಅಗ್ನಿಯೇ, ನಿನ್ನನ್ನು ಪ್ರದಕ್ಷಿಣೆ ಹಾಕುತ್ತೇನೆ"
೩. ಋಗ್ವೇದ, vii.೧೮.೨೩– "ಪಿಜವನನ ಮಗನಾದ ಸುದಾಸನು ನನಗೆ ಕಾಣಿಕೆಯಿತ್ತ ನಾಲ್ಕು ಸುವರ್ಣ ಹಾಕಿದಂಥ, ಕಠಿಣ ಪಥದಲ್ಲಿ ನಡೆದ, ಜಗತ್ಪ್ರಸಿದ್ಧ ಅಶ್ವಗಳು ನನ್ನನ್ನು ಅನ್ನ ಹಾಗೂ ಸಂತಾನ ಪಡೆಯುತ್ತ ಹೊತ್ತುಕೊಂಡು ನಡೆದಿವೆ".
೪. ಋಗ್ವೇದ, vii.೧೮.೨೪– "ಯಾರ ಕೀರ್ತಿ ಧರೆ ಆಕಾಶಗಳಲ್ಲಿ ಮೊಳಗುತ್ತಿದೆಯೋ, ಯಾರು ತನ್ನ ಸಂಪತ್ತನ್ನು ಪ್ರತಿಯೊಬ್ಬ ಪುರುಷೋತ್ತಮನಿಗೆ ಧಾರಾಳವಾಗಿ ಕೊಡಮಾಡಿದ್ದಾನೆಯೋ ಹಾಗೂ ಯಾರ ಸಲುವಾಗಿ ಹರಿವ ನದಿಗಳು ಯುದ್ಧದಲ್ಲಿ ಯುಧ್ಯಮಧಿಯನ್ನು ನಾಶಪಡಿಸಿದವೋ, ಅಂಥ ಸುದಾಸನನ್ನು ಆತ ಇಂದ್ರನೋ ಎಂಬಂತೆ, ಸಪ್ತಲೋಕಗಳು ಸ್ತುತಿಸುತ್ತವೆ."
೫. ಋಗ್ವೇದ, vii.೧೮.೨೫– "ಅಧ್ವರ್ಯುಗಳಾದ ಮರುತರೇ, ನೀವು ಸುದಾಸನ ತಂದೆ ದಿವೋದಾಸನಿಗೆ ಸೇವೆ ಸಲ್ಲಿಸಿದಂತೆ ಈ ರಾಜಕುಮಾರನಿಗೂ ನಿಮ್ಮ ಸೇವೆ ಸಲ್ಲಲಿ. ಪಿಜವನನ ಮಗನ ಭಕ್ತಿಪುರಸ್ಸರ ಪ್ರಾರ್ಥನೆಗಳನ್ನು ಈಡೇರಿಸಿರಿ; ತಮ್ಮ ಅನುಗ್ರಹದಿಂದಾಗಿ ಆತನ ಬಲ ಎಂದಿಗೂ ಕುಂದದಿರಲಿ."

ಉಳಿದಿಬ್ಬರು (ಸುದಾಸರು) ವಿಷ್ಣುಪುರಾಣದಲ್ಲಿ ಉಲ್ಲೇಖಿತರಾಗಿದ್ದಾರೆ. ಒಬ್ಬ ಸುದಾಸನು ಸಗರನ ವಂಶಜನೆಂದು ನಾಲ್ಕನೇ ಅಧ್ಯಾಯದಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದಾನೆ. ಈ ಸುದಾಸನು ಸಗರನಿಗೆ ಹೇಗೆ ಸಂಬಂಧ ಎನ್ನುವುದನ್ನು ತೋರಿಸುವ ವಂಶಾವಳಿ[೨] ಇಲ್ಲಿ ಕೊಡಲ್ಪಟ್ಟಿದೆ.

ಕಶ್ಯಪನ ಮಗಳಾದ ಸುಮತಿ ಹಾಗೂ ರಾಜಾ ವಿದರ್ಭನ ಮಗಳಾದ ಕೇಶಿನಿ, ಇವರಿಬ್ಬರೂ ಸಗರನ ಹೆಂಡತಿಯರಾಗಿದ್ದರು. ಮಕ್ಕಳಿಲ್ಲದ ಸಗರ ಮಹಾರಾಜನು ಓರ್ವ ಋಷಿಯಲ್ಲಿ ಸಂತಾನ ದಯಪಾಲಿಸಬೇಕೆಂದು ದೈನ್ಯ ಮತ್ತು ಆಸೆಯಿಂದ ಬೇಡಿಕೊಂಡ. ಆಗ ಋಷಿಯ ಇಂಥದೊಂದು ವರವಿತ್ತ: ಒಬ್ಬ ಹೆಂಡತಿಯ ಹೊಟ್ಟೆಯಲ್ಲಿ ಕುಲವನ್ನುದ್ಧರಿಸುವಂಥ ಒಬ್ಬ ಮಗ ಹುಟ್ಟಬೇಕು; ಇನ್ನೊಬ್ಬಾಕೆಯ

---

೧. Wilson's *Rig Veda,* Vol.IV (Poona Reprint), p. ೧೪೬

೧. Wilson's *Vishnu Purana*, pp. ೩೩೭–೩೮೦.

ಹೊಟ್ಟೆಯಲ್ಲಾದರೆ ೬೦,೦೦೦ ಪುತ್ರರು ಜನಿಸಬೇಕು– ಇವುಗಳಲ್ಲಿ ಯಾವುದನ್ನು ಆಯ್ದುಕೊಳ್ಳುತ್ತೀರೋ ಆಯ್ದುಕೊಳ್ಳಿ ಎಂದು ಅವರಿಗೆ ಹೇಳಿದ. ಕೇಶಿನಿಯ ಆ ಏಕಮೇವಪುತ್ರವನ್ನು ಪಡೆಯಲಿಚ್ಛಿಸಿದಳು; ಸುಮತಿಯು ಅರುವತ್ತು ಸಾವಿರ ಸಂತತಿಯನ್ನು ಆಯ್ದುಕೊಂಡಳು. ಮುಂದೆ ಸ್ವಲ್ಪ ಅವಧಿಯಲ್ಲಿ ಮೊದಲಿನಾಕೆಗೆ ಅಸಮಂಜಸನೆಂಬ ಪುತ್ರನು ಹುಟ್ಟಿದ. ಅವನ ಮೂಲಕ ಸಗರನ ವಂಶ ಮುಂದುವರಿಯಿತು. ವಿನತೆಯ ಮಗಳಾದ ಸುಮತಿಯು ಅರುವತ್ತು ಸಾವಿರ ಪುತ್ರರನ್ನು ಪಡೆದಳು. ಅಸಮಂಜಸನ ಪುತ್ರನೇ ಅಂಶುಮತ್.

* * *

> *"ಅಂಶುಮಾನನ ಪುತ್ರ ದಿಲೀಪ; ದಿಲೀಪನ ಪುತ್ರ ಭಗೀರಥ. ಭಗೀರಥನು ಗಂಗೆಯನ್ನು ಸ್ವರ್ಗದಿಂದ ಭೂಮಿಗೆ ತಂದ ಕಾರಣ ಆಕೆಗೆ ಭಾಗೀರಥಿಯೆಂಬ ಹೆಸರು ಬಂತು. ಭಗೀರಥನ ಮಗ ಶ್ರುತ; ಆತನ ಮಗ ನಭಗ; ನಭಗನ ಮಗ ಅಂಬರೀಶ; ಅಂಬರೀಶನ ಮಗ ಸಿಂಧುದ್ವೀಪ; ಆತನ ಮಗ ಅಯುತಾಶ್ವ; ಅವನ ಮಗ ಋತುಪರ್ಣ. ಈತನು ನಳನ ಸ್ನೇಹಿತ ಹಾಗೂ ದ್ಯೂತದಲ್ಲಿ ನಿಷ್ಣಾತ. ಋತುಪರ್ಣನ ಮಗ ಸರ್ವಕಾಮ; ಆತನ ಮಗ ಸುದಾಸ; ಸುದಾಸನ ಮಗ ಸೌದಾಸ–ಮಿತ್ರಸಹನೆಂಬ ಇನ್ನೊಂದು ಹೆಸರು ಆತನಿಗೆ".*

ಇನ್ನೊಬ್ಬ ಸುದಾಸನು ಪುರುವಿನ ವಂಶಜನೆಂದು XIXನೇ ಅಧ್ಯಾಯದಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದಾನೆ. ಪುರುವಿನೊಂದಿಗಿನ ಆತನ ಸಂಬಂಧವನ್ನು ತೋರಿಸುವ ವಂಶಾವಳಿ ಹೀಗಿದೆ:[೧]

"ಜನಮೇಜಯನು ಪುರುವಿನ ಮಗನು; ಆತನ ಮಗ ಪ್ರಚಿನ್ವತ್; ಪ್ರಚಿನ್ವತ್ತನ ಮಗ ಪ್ರವೀರ; ಅವನ ಮಗ ಮನಸ್ಯು. ಮನಸ್ಯುವಿನ ಮಗ ಭಯದ; ಭಯದನ ಮಗ ಸುಧಮ್ನು; ಆತನ ಮಗ ಬಹುಗವ; ಬಹುಗವನ ಮಗ ಸಮ್ಯತಿ; ಆತನ ಮಗ ಭಮ್ಯತಿ; ಭಮ್ಯತಿಯ ಮಗ ರೌದ್ರಾಶ್ವ– ಆತನಿಗೆ ಹತ್ತು ಜನ ಗಂಡುಮಕ್ಕಳು; ಋತೇಯು, ಕಕೇಯು, ಸ್ಥಂದಿಲೆಯು, ಘೃತೇಯು, ಜಲೇಯು, ಸ್ಥಲೇಯು, ಧನೇಯು, ವನೇಯು ಹಾಗೂ ವೃತೇಯು. ಋತೇಯುವಿನ ಮಗ ರಂತಿನರ. ಆತನಿಗೆ ತಂಸು, ಅಪರ್ತಿರಥ ಹಾಗೂ ಧೃವ ಎಂಬ ಮಕ್ಕಳು. ಇವರ ಪೈಕಿ ಎರಡನೆಯವನ ಮಗ ಕಣ್ವನೆಂಬಾತ. ಕಣ್ವನ ಮಗ ಮೇಧತಿಥಿ– ಅವರಿಂದ ಕಣ್ವಾಯನ ಬ್ರಾಹ್ಮಣರ ವಂಶ ಹುಟ್ಟಿದುದು. ತಂಸುವಿನ ಮಗ ಅನಿಲ. ಅನಿಲನಿಗೆ ನಾಲ್ಕು ಗಂಡುಮಕ್ಕಳು. ಅವರ ಪೈಕಿ ದುಷ್ಯಂತನೇ ಹಿರಿಯ. ಆತನ ಮಗನೇ ಭರತ ಚಕ್ರವರ್ತಿ....

ಭರತನಿಗೆ ಬೇರೆ ಬೇರೆ ಹೆಂಡಂದಿರಿಂದ ಒಟ್ಟು ಒಂಬತ್ತು ಜನ ಗಂಡು ಮಕ್ಕಳು, ಆದರೆ ಅವರೆಲ್ಲರೂ ಅವರ ತಾಯಂದಿರಿಂದಲೇ ಕೊಲ್ಲಲ್ಪಟ್ಟರು– ಕಾರಣವೇನೆಂದರೆ, ಭರತನು ಅವರಲ್ಲಿ ತನ್ನ ಹೋಲಿಕೆ ಇಲ್ಲ ಅಂತ ಅಂದನಂತೆ; ತನ್ನಿಮಿತ್ತ, ಭರತನು ತಮ್ಮನ್ನು ಬಿಟ್ಟುಕೊಡಬಹುದೆಂಬ ಭೀತಿ ಅವರಿಗುಂಟಾಯಿತಂತೆ. ತನಗೆ ಹುಟ್ಟಿದ ಮಕ್ಕಳು ತನಗಾಗಲಿಲ್ಲವೆಂದು ಭರತನು ಮರುತರನ್ನು ಸಂತುಷ್ಟಗೊಳಿಸಲು ಯಜ್ಞ ಕೈಕೊಂಡ; ಅವರು ಆತನಿಗೆ, ಉತಥ್ಯನ ಹೆಂಡತಿಯಾದ ಮಮತಾಳಲ್ಲಿ ಬೃಹಸ್ಪತಿಗೆ ಹುಟ್ಟಿದ ಭಾರದ್ವಾಜನನ್ನು ಕೊಟ್ಟರು.....

* * *

---

೧. Wilson's *Vishnu Purana,* Pp. ೪೪೭–೪೫೬

ಆತನಿಗೆ ವಿತಥ ಎಂಬ ಅನ್ವರ್ಥಕ ನಾಮವೂ ಇತ್ತು–ಭರತನಿಗೆ ಅಷ್ಟೊಂದು ಮಕ್ಕಳು ಹುಟ್ಟಿಯೂ ನಿರರ್ಥಕವಾದ ಕಾರಣದಿಂದಾಗಿ. ವಿತಥನ ಮಗ ಭವನಮನರ ಮತ್ತು ಗರ್ಗ. ಆತನಿಗೆ ಅನೇಕ ಮಂದಿ ಗಂಡುಮಕ್ಕಳು; ಅವರಲ್ಲಿ ಪ್ರಮುಖರಾದವರು ಬೃಹತ್‌ಕ್ಷಾತ್ರ, ಮಹಾವೀರ್ಯ. ನರನಿಗೆ ಸಂಕೃತಿಯೆಂಬ ಮಗನು; ಆತನ ಮಕ್ಕಳು ರುಚಿರಾಧಿ ಹಾಗೂ ರಂತಿದೇವ. ಗರ್ಗನಿಗೆ ಸಿನಿ ಎಂಬ ಮಗನು; ಅವನ ವಂಶಜರಾದ ಗಾರ್ಗ್ಯರು ಹಾಗೂ ಸೈನ್ಯರು, ಹುಟ್ಟಿನಿಂದ ಕ್ಷತ್ರಿಯರಾದರೂ, ಬ್ರಾಹ್ಮಣರಾದರು. ಮಹಾವೀರ್ಯನ ಮಗ ಉರುಕ್ಷಯ. ಆತನಿಗೆ ಮೂವರು ಗಂಡು ಮಕ್ಕಳು– ತ್ರಯ್ಯಾರುಣ ಪುಷ್ಕರಿನ್ ಮತ್ತು ಕಪಿ. ಇವರಲ್ಲಿ ಕಡೆಯವನು ಬ್ರಾಹ್ಮಣನಾದನು. ಬೃಹತ್‌ಕ್ಷಾತ್ರನ ಮಗ ಸುಹೋತ್ರ; ಆತನ ಮಗ ಹಸ್ತಿನ್. ಈತನು ಹಸ್ತಿನಾಪುರವನ್ನು ಸ್ಥಾಪಿಸಿದ. ಹಸ್ತಿನ್ನನ ಮಕ್ಕಳು ಅಜಾಮಿಧ, ದ್ವಿಮಿಧ ಹಾಗೂ ಪುರುಮಿಧ ಎಂಬುವವರು. ಅಜಾಮಿಧನ ಒಬ್ಬ ಮಗ ಕಣ್ವ; ಆತನ ಮಗ ಮೇಧಾತಿಥಿ. ಅಜಾಮಿಧನ ಇನ್ನೊಬ್ಬ ಮಗ ಬೃಹದಿಶು. ಆತನ ಮಗ ಬೃಹದ್ವಸು. ಬೃಹದ್ವಸುವಿನ ಮಗ ಬೃಹತ್ಕರ್ಮನ್. ಆತನ ಮಗ ಜಯದ್ರಥ. ಜಯದ್ರಥನ ಮಗ ವಿಶ್ವಜಿತ್. ಆತನ ಮಗ ಸೇನಜಿತ್. ಆತನಿಗ ರುಚಿರಾಶ್ವ, ಕಸ್ಯ, ದೃಧಧನುಷ್ ಮತ್ತು ವಸಾಹನು ಎಂಬ ಮಕ್ಕಳು. ರುಚಿರಾಶ್ವನ ಮಗ ಪೃಥುಸೇನ; ಆತನ ಮಗ ಪರ; ಪರನ ಮಗ ನೀಪ. ನೀಪನಿಗೆ ನೂರು ಗಂಡು ಮಕ್ಕಳು. ಅವರಲ್ಲಿ ಮುಖ್ಯನಾದ ಸಮರನೆಂಬುವವನು ಕಾಂಪಿಲ್ಯದ ರಾಜ. ಸಮರನಿಗೆ ಮೂವರು ಗಂಡು ಮಕ್ಕಳು–ಪರ, ಸಂಪರ, ಸದಾಶ್ವ– ಎಂದು. ಪರನ ಮಗು ಪೃಥು; ಆತನ ಮಗ ಸುಕೃತಿ; ಸುಕೃತಿಯ ಮಗ ವಿಭ್ರಾತ್ರ್ಯ. ಆತನ ಮಗನಾದ ಅನೂಹನೆಂಬುವವನು (ವ್ಯಾಸನ ಮಗ) ಶುಕನ ಮಗಳಾದ ಕೃತ್ವಿಯನ್ನು ಮದುವೆಯಾಗಿ ಅವಳಿಂದ ಬ್ರಹ್ಮದತ್ತನೆಂಬ ಮಗನನ್ನು ಪಡೆದನು. ಆತನ ಮಗ ವಿಶ್ವಕ್ಸೇನ; ಅವನ ಮಗ ಉದಕ್ಸೇನ. ಉದಕ್ಸೇನನ ಮಗ ಭಲ್ಲಟ.

ದ್ವಿಮಿಧನ ಮಗ ಯವಿನಾರ; ಆತನ ಮಗ ಧೃತಿಮತ್; ಅವನ ಮಗ ಸತ್ಯಧೃತಿ; ಸತ್ಯಧೃತಿಯ ಮಗ ದೃಧನೇಮಿ; ಆತನ ಮಗ ಸುಪ್ವಾರ್ಶ; ಆತನ ಮಗ ಸುಮತಿ; ಅವನ ಮಗ ಸನ್ನತಿಮತ; ಸನ್ನಿತಿಮತನ ಮಗ ಕೃತ– ಈತನಿಗೆ ಹಿರಣ್ಯನಾಭನು ಯೋಗವನ್ನು ಕಲಿಸಲಾಗಿ, ಆತ ಸಾಮವೇದವನ್ನೋದುವ ಪೌರ್ವಾತ್ಯ ಬ್ರಾಹ್ಮಣರಿಗಾಗಿ ೨೪ ಸಂಹಿತೆಗಳನ್ನು ರಚಿಸಿದ. ಕೃತನಿಗೆ ಉಗ್ರಾಯುಧನೆಂಬ ಮಗನಿದ್ದನು. ಈತನ ಪರಾಕ್ರಮದಿಂದಾಗಿ ನೀಪ ಎಂಬ ಕ್ಷತ್ರಿಯ ಕುಲವು ನಾಶಹೊಂದಿತು ಆತನ ಮಗ ಕ್ಷೇಮ್ಯ. ಕ್ಷೇಮ್ಯನ ಮಗ ಸುವೀರ. ಆತನ ಮಗ ನೃಪಂಜಯ. ಅವನ ಮಗ ಬಹುರಥ. ಇವರೆಲ್ಲರೂ ಪೌರವರೆಂದು ಕರೆಯುಲ್ಪಡುತ್ತಿದ್ದರು.

ಅಜಾಮಿಧನಿಗೆ ನಳಿನಿ ಎಂಬ ಹೆಂಡತಿ. ಆಕೆಯಿಂದ ಅಜಾಮಿಧನಿಗೆ ನೀಲನೆಂಬ ಮಗ; ಆತನ ಮಗ ಸಂತಿ; ಸಂತಿಯ ಮಗ ಸುಸಂತಿ; ಆತನ ಮಗ ಪುರಂಜನು; ಪುರಂಜನುವಿನ ಮಗ ಚಕ್ಷು; ಆತನ ಮಗ ಹರ್ಯಾಶ್ವ; ಆತನಿಗೆ ಐದು ಮಂದಿ ಗಂಡುಮಕ್ಕಳು; ಮುದ್ಗಲ, ಸೃಂಜಯ, ಬೃಹದಿಶು, ಪ್ರವೀರ ಹಾಗೂ ಕಾಂಪಿಲ್ಯ. ಅವನ ತಂದೆ "ಈ ನನ್ನ ಐದು ಮಕ್ಕಳು ದೇಶವನ್ನು ರಕ್ಷಿಸುವಂಥವರಾಗಿದ್ದಾರೆ" ಎಂದ ಕಾರಣ ಅವರಿಗೆ 'ಪಾಂಚಾಲರು' ಎಂಬ ಅನ್ವರ್ಥನಾಮ. ಮುದ್ಗಲನಿಂದ ಮುದ್ಗಲ ಬ್ರಾಹ್ಮಣವಂಶ ಹುಟ್ಟಿಕೊಂಡಿತು. ಅವನಿಗೆ ಬಹ್ವಾಶ್ವನೆಂಬ ಮಗ ಇದ್ದನು. ಈತನಿಗೆ ದಿವೋದಾಸ ಹಾಗೂ ಅಹಲ್ಯಾ ಎಂಬ (ಗಂಡು–ಹೆಣ್ಣು) ಅವಳಿ–ಜವಳಿ ಮಕ್ಕಳು.

ದಿವೋದಾಸನಿಗೆ ಮಿತ್ರಾಯು ಎಂಬ ಮಗ; ಆತನ ಮಗ ಚ್ಯವನ; ಚ್ಯವನನ ಮಗ ಸುದಾಸ; ಸುದಾಸನ ಮಗ ಸೌದಾಸ–ಆತನಿಗೆ ಸಹದೇವ ಎಂಬ ಇನ್ನೊಂದು ಹೆಸರು. ಆತನ ಮಗ ಸೋಮಕ.

ಸೋಮಕನಿಗೆ ನೂರು ಜನ ಗಂಡುಮಕ್ಕಳು. ಅವನ ಪೈಕಿ ಜಂತು ಎಂಬುವವನು ಎಲ್ಲರಿಗೂ ಹಿರಿಯ, ಪೃಶತ ಎಂಬುವವನು ಅತ್ಯಂತ ಕಿರಿಯ. ಪೃಶತನ ಮಗ ದ್ರುಪದ; ಆತನ ಮಗ ಧೃಷ್ಟದ್ಯುಮ್ನ. ಧೃಷ್ಟದ್ಯುಮ್ನನ ಮಗ ದೃಷ್ಟಕೇತು.

ಅಜಾಮಿಧನ ಇನ್ನೊಬ್ಬ ಮಗನ ಹೆಸರು ಋಕ್ಷ. ಋಕ್ಷನ ಮಗ ಸಂವರಣ; ಸಂವರಣನ ಮಗ ಕುರು–ಆತನೇ ಪವಿತ್ರ ಕುರುಕ್ಷೇತ್ರಕ್ಕೆ ತನ್ನ ಹೆಸರನ್ನಿಟ್ಟ. ಆತನಿಗೆ ಸುಧಾಂಶು, ಪರೀಕ್ಷಿತ ಎಂಬಿಬ್ಬರಲ್ಲದೆ ಅನೇಕ ಮಕ್ಕಳು. ಸುಧಾನುಶನ ಮಗ ಸುಹೋತ್ರ; ಆತನ ಮಗ ಚ್ಯವನ; ಚ್ಯವನನ ಮಗ ಕೃತಾಕ; ಆತನ ಮಗ ಉಪರಿಚರ ವಸು. ಅವನಿಗೆ ಬೃಹದ್ರಥ, ಪ್ರತ್ಯಗ್ರ, ಕುಶಂಬ, ಮಾವೆಲ್ಲ, ಮತ್ಸ್ಯ ಇತ್ಯಾದಿ ಏಳು ಜನ ಮಕ್ಕಳು. ಬೃಹದ್ರಥನ ಮಗ ಕುಶಾಗ್ರನಿಗೆ ಋಷಭನೆಂಬ ಮಗ; ಅವನ ಮಗ ಪುಷ್ಪವತ್; ಪುಷ್ಪವತನ ಮಗ ಸತ್ಯಧೃತ; ಆತನ ಮಗ ಸುಧನ್ವನ್; ಆತನ ಮಗ ಜಂತು. ಬೃಹದ್ರಥನಿಗೆ ಇನ್ನೊಬ್ಬ ಮಗನೂ ಇದ್ದ–ಆತನು ಎರಡು ಹೋಳುಗಳಾಗಿ ಹುಟ್ಟಿದ್ದು, ಆತನನ್ನು ಜರಾ ಎಂಬ ರಾಕ್ಷಸಿ ಜೋಡಿಸಿ ಒಂದು ಮಾಡಿದ ಕಾರಣ ಆತನಿಗೆ ಜರಾಸಂಧನೆಂಬ ಹೆಸರು ಬಂತು. ಆತನ ಮಗ ಸಹದೇವ; ಅವನ ಮಗ ಸೋಮಾಪಿ; ಸೋಮಾಪಿಯ ಮಗ ಶ್ರುತಶ್ರವಸ್ ಎಂಬಾತ. ಇವರೆಲ್ಲ ಮಗಧದ ಅರಸರು".

ಮೂವರೂ ಸುದಾಸರು ಒಬ್ಬನೇ ವ್ಯಕ್ತಿಯಾಗಿದ್ದರೇ, ಇಲ್ಲವೆ ಮೂವರು ಬೇರೆ ಬೇರೆ ವ್ಯಕ್ತಿಗಳಾಗಿದ್ದರೇ ಎಂಬ ಪ್ರಶ್ನೆಯನ್ನು ಬಗೆಹರಿಸಲು ಸಹಾಯಕಾರಿಯಾಗಲೆಂದು ಅವರವರ ಅತಿ ಸಮೀಪದ ಪೂರ್ವಜರ ಹೆಸರುಗಳನ್ನು ಈ ಕೆಳಗಣ ಮೂರು ಸಮಾಂತರ ಅಂಕಣಗಳಲ್ಲಿ ಕೊಡಲಾಗಿದೆ.

| ಋಗ್ವೇದದಲ್ಲಿನ (ಅವರವರ) ನೆಲೆ | | | ವಿಷ್ಣು ಪುರಾಣದಲ್ಲಿ ಬರುವ ಸುದಾಸ | |
|---|---|---|---|---|
| VII,೧೮:೨೨ | VII,೧೮:೨೩ | VII,೧೮:೨೫ | ಸಗರನ ಕುಟುಂಬದಲ್ಲೆ | ಪುರುವಿನ ಕುಟುಂಬದಲ್ಲಿ |
| ದೇವವಾತ | ಪಿಜವನ | ದಿವೋದಾಸ | ಋತುಪರ್ಣ | ಬಹ್ವಶ್ವ |
| | | ಪಿಜವನ | ಸರ್ವಕಾಮ | ದಿವೋದಾಸ |
| ಪಿಜವನ | ಸುದಾಸ | | ಸುದಾಸ | ಮಿತ್ರಾಯು |
| ಸುದಾಸ | | ಸುದಾಸ | ಸೌದಾಸ | ಚ್ಯವನ |
| | | | ಮಿತ್ರಸಹ | ಸುದಾಸ |
| | | | | ಸೌದಾಸ |
| | | | | ಸೋಮಕ |

ಮೇಲಿನ ಅಂಕಣದಿಂದ ಎರಡು ಅಂಶಗಳು ಸುಸ್ಪಷ್ಟ. ಒಂದೆಂದರೆ, ವಿಷ್ಣುಪುರಾಣದಲ್ಲಿ ಹೆಸರಿಸಲಾದ ಇಬ್ಬರು ಸುದಾಸರಲ್ಲಿ ಯಾವನಿಗೂ ಋಗ್ವೇದದ ಸುದಾಸನೊಂದಿಗೆ ಸಂಬಂಧ ಇಲ್ಲ. ಎರಡನೆಯದೆಂದರೆ, ಮಹಾಭಾರತದಲ್ಲಿ ಹೆಸರಿಸಲ್ಪಟ್ಟ ಪೈಜವನನು, ಪ್ರಾಚೀನ ಕಾಲದಲ್ಲಿ ಜೀವಿಸಿದಂಥ ಯಾವುದೇ ವ್ಯಕ್ತಿ

ಆಗಿರಲಿ ಈತನೇ ಅಂತ ಗುರುತಿಸಬಹುದಾದರೆ, ಅದು ದಿವೋದಾಸನೆಂಬ[೧] ಇನ್ನೊಂದು ಹೆಸರೂ ಉಳ್ಳ (ಪಿಜವನನ ಮಗನಾದ್ದರಿಂದ) ಪೈಜವನ ಎಂದು ಕರೆಯಲ್ಪಟ್ಟ ಋಗ್ವೇದದ ಸುದಾಸನೇ.

ಸುದೈವದಿಂದ, ನನ್ನ ತೀರ್ಮಾನವೂ ಪ್ರೊ. ವೀಬರ್ ಅವರ ತೀರ್ಮಾನವೂ ಒಂದೇ ಆಗಿವೆ. ನನ್ನ ಪ್ರತಿಪಾದನೆಗೆ ಆಧಾರವಾದ, ಮಹಾಭಾರತದ ಶಾಂತಿಪರ್ವದಲ್ಲಿನ ಪದ್ಯಭಾಗದ ಬಗೆಗೆ ವ್ಯಾಖ್ಯಾನಿಸುತ್ತಾ ಪ್ರೊ. ವೀಬರ್ ಅವರು ಹೀಗೆ ಹೇಳುತ್ತಾರೆ.[೨]

> *"ಋಗ್ವೇದದಲ್ಲಿ ವಿಶ್ವಾಮಿತ್ರನ ಪೋಷಕನಾದ ಹಾಗೂ ವಸಿಷ್ಠನ ವೈರಿಯೆಂದೇ ನಾಮಾಂಕಿತನಾದ ಹಾಗೂ ತನ್ನ ಯಜ್ಞಯಾಗಾದಿಗಳಿಗಾಗಿ ಕೀರ್ತಿವೆತ್ತ ಪೈಜವನನು– ಅಂದರೆ ಸುದಾಸನು–ಶೂದ್ರನಾಗಿದ್ದನೆಂಬ ವಿಲಕ್ಷಣವಾದ ಸಂಪ್ರದಾಯ ದಾಖಲಿಸಲ್ಪಟ್ಟಿದೆ."*

ಪ್ರೊ. ವೀಬರರು ಈ ಪದ್ಯಭಾಗದ ಪೂರ್ಣ ಮಹತ್ವವನ್ನು ಅರಿಯದೆಹೋದುದು ವಿಷಾದಕರ. ಅದು ಬೇರೇಯೇ ವಿಷಯ. ನನ್ನ ಉದ್ದೇಶಕ್ಕೆ ಪ್ರಸ್ತುತವಾದುದೇನೆಂದರೆ ಪ್ರೊ. ವೀಬರರೂ, ಮಹಾಭಾರತದ ಪೈಜವನನು ಬೇರೆಯಲ್ಲ, ಋಗ್ವೇದದ ಸುದಾಸನು ಬೇರೆಯಲ್ಲ–ಅವರಿಬ್ಬರೂ ಒಂದೇ ವ್ಯಕ್ತಿ ಎಂದು ಬಗೆದುದು.

## III

ನಾವು ಪಿಜವನನ ಮಗನಾಗ (ಪೈಜವನ) ಸುದಾಸನ ಬಗೆಗೆ ಏನು ಬಲ್ಲೆವು?

ಆತನ ಬಗೆಗೆ ಈ ಕೆಳಗಣ ಅಂಶಗಳು ಲಭ್ಯವಿವೆ:

I ಸುದಾಸನು ದಾಸನೂ ಆಗಿರಲಿಲ್ಲ, ಆರ್ಯನೂ ಆಗಿರಲಿಲ್ಲ. ಆರ್ಯರೂ ದಾಸರೂ, ವೈರಿಗಳಾಗಿದ್ದರು.[೩] ಇದರರ್ಥ ಏನೆಂದರೆ, ಆತನು ವೈದಿಕ ಆರ್ಯನಾಗಿದ್ದ.

---

೧. ಋಗ್ವೇದದಲ್ಲಿ ಈ ಸುದಾಸನ ವಂಶಾವಳಿಯ ಬಗೆಗೆ ಸ್ವಲ್ಪ ತೊಡರು ಇದೆ. 'ದಿವೋದಾಸ' ಹಾಗೂ 'ದೇವವ್ರತ' ಎಂಬುವವರು ಒಂದೇ ವ್ಯಕ್ತಿ ಎಂದು ಗುರುತಿಸುವುದರ ಮೂಲಕ, ಇದನ್ನು ನಿವಾರಿಸುವ ಪ್ರಯತ್ನ ಮಾಡಲಾಗಿದೆ. ಈ ತೊಡಕು ತಲೆದೋರಿದ್ದು ಪ್ರಮುಖವಾಗಿ ಶ್ಲೋಕ ೨೨, ೨೩ ಹಾಗೂ ೨೫ ಅವುಗಳ ಪಾಠಾಂತರದಿಂದಾಗಿ, ಇವುಗಳನ್ನು ಲಕ್ಷ್ಯಪೂರ್ವಕ ಹೊಂದಿಸಿನೋಡುವ ಪ್ರಯತ್ನ ಯಾರೂ ಮಾಡಿದಂತಿಲ್ಲ. ಚಿತ್ರವ ಶಾಸ್ತ್ರಿಗಳು ಸಂಪಾದಿಸಿದ ಋಗ್ವೇದದಲ್ಲಿ ಎಲ್ಲ ಕಡೆಗೂ 'ಪಿಜವನ' ಎಂದೇ ಬಂದಿದೆ. ಸಾತವಲೇಕರರ ಆವೃತ್ತಿಯಲ್ಲಿ ಎಲ್ಲಕಡೆಗೂ 'ಪೈಜವನ' ಎಂದಿದೆ. ವಿಲ್ಸನ್ನರು ೨೨ ಹಾಗೂ ೨೩ರಲ್ಲಿ ಪೈಜವನ ಎಂದಿಟ್ಟುಕೊಂಡರು, ೨೫ರಲ್ಲಿ 'ಪಿಜವನ' ಎಂದಿಟ್ಟುಕೊಂಡಿದ್ದಾರೆ. ಯಾಸ್ಕನು ಕೂಡ ತನ್ನ ನಿರುಕ್ತದಲ್ಲಿ 'ಪೈಜವನ' ಎಂಬ ಹೆಸರಿನ ಇರವನ್ನು ಅನುಲಕ್ಷಿಸಿ ಅದಕ್ಕೆ ವಿವರಣೆ ನೀಡಲು ಪ್ರಯತ್ನಿಸಿದ್ದಾನೆ. ವಿಲ್ಸನ್‌ರವರ ೨೫ನೇ ಶ್ಲೋಕದ ಪಾಠ್ಯವನ್ನು ಸರಿಯಾದ ರೂಪ ಎಂದು ಗಣಿಸಿದ್ದಾದರೆ, ತೊಡರು ಉದ್ಭವಿಸುವ ಪ್ರಮೇಯವಿಲ್ಲ. ಆಗ ಪಿಜವನ ಎಂಬುದು ದಿವೋದಾಸನ ಇನ್ನೊಂದು ಹೆಸರು ಇರುವುದಾಗಿಯೂ, ಹಾಗೂ 'ಪೈಜವನ' ಎಂಬುದು ಸುದಾಸನ ಇನ್ನೊಂದು ಹೆಸರು ಇದ್ದುದಾಗಿಯೂ ತೋರಬರುತ್ತದೆ.

೨. Muir, Vol. I, p. 366

೩. Rigveda, VII. 83.1

II ಸುದಾಸನ ತಂದೆ ದಿವೋದಾಸನಾಗಿದ್ದ, ಆತನು ವಧ್ರ್ಯಶ್ವನ[೧] ದತ್ತುಪುತ್ರನಾಗಿದ್ದನೆಂದು ತೋರುತ್ತದೆ. ದಿವೋದಾಸನು ಅರಸನಾಗಿದ್ದನು. ಆತನು ತುರ್ವಸರು ಹಾಗೂ ಯದುಗಳು[೨] ಶಂಬರ,[೩] ಪರವ ಹಾಗೂ ಕರಂಜ[೪] ಮತ್ತು ಗುಂಗು[೫] ಇವರುಗಳೊಂದಿಗೆ ಅನೇಕ ಯುದ್ಧಗಳನ್ನು ಮಾಡಿದ್ದ.

ತುರ್ಯವನನಿಗೂ ದಿವೋದಾಸ ಹಾಗೂ ಆತನ ಮಿತ್ರಪಕ್ಷದವರಾದ ಆಯು ಮತ್ತು ಕುತ್ಸ ಇವರ ಮಧ್ಯೆ ಒಂದು ಕಾಳಗವಾಗಿತ್ತು. ತೂರ್ಯವನನೇ[೬] ಜಯಶಾಲಿಯಾಗಿದ್ದ.

ಒಂದು ಕಾಲದಲ್ಲಿ ಇಂದ್ರನೇ ಆತನ ವಿರುದ್ಧವಾಗಿದ್ದ ವಿಶೇಷತಃ, ತೂರ್ಯನೊಂದಿಗಿನ ಕಾಳಗಳಲ್ಲಿ ಅಂತ ತೋರುತ್ತದೆ. ಭಾರದ್ವಾಜನು[೭] ಆತನ ಪುರೋಹಿತನಾಗಿದ್ದ– ದಿವೋದಾಸನು ಭಾರದ್ವಾಜನಿಗೆ ಅನೇಕ ಕಾಣಿಕೆಗಳನ್ನಿತ್ತಿದ್ದ.[೮] ಭಾರದ್ವಾಜನು ದಿವೋದಾಸನ ವಿರುದ್ಧ ತೂರ್ಯವನನೊಂದಿಗೆ ಕೂಡಿಕೊಂಡು ದಿವೋದಾಸನಿಗೆ ದ್ರೋಹಬಗೆದಿದ್ದನೆಂದೂ ತೋರುತ್ತದೆ.[೯]

ಸುದಾಸನ ತಾಯಿಯ ಉಲ್ಲೇಖ ಎಲ್ಲಿಯೂ ಬರುವುದಿಲ್ಲ. ಆದರೆ, ಸುದಾಸನ ಹೆಂಡತಿಯ ಉಲ್ಲೇಖ ಒಂದೆಡೆ ಬರುತ್ತದೆ. ಆಕೆಯ ಹೆಸರು ಸುದೇವಿ[೧೦] ಎಂದು ಕಾಣಿಸಲಾಗಿದೆ. ಅಶ್ವಿನೀಕುಮಾರರೇ ಆಕೆಯನ್ನು ಸುದಾಸನಿಗಾಗಿ ಹುಡುಕಿ ತಂದರೆಂಬುದಾಗಿ ತಿಳಿಯುತ್ತೇವೆ.

III ಸುದಾಸನು ಅರಸನಾಗಿದ್ದ. ಆತನ ಪಟ್ಟಾಭಿಷೇಕ ಸಮಾರಂಭವನ್ನು ಬ್ರಹ್ಮರ್ಷಿಯಾದ ವಸಿಷ್ಠರು ನೆರವೇರಿಸಿದರು.

ಐತ್ತರೇಯ ಬ್ರಾಹ್ಮಣದಲ್ಲಿ ಬರುವ ಅರಸರ ಹೆಸರುಗಳು ಹಾಗೂ ಅವರವರ ಮಹಾಭಿಷೇಕ ಸಮಾರಂಭದಲ್ಲಿ ಯಾರು ಯಾರು ಪುರೋಹಿತರಾಗಿ ಕಾರ್ಯನಿರ್ವಹಿಸಿದರೆಂಬ ಮಾಹಿತಿಯನ್ನು ಈ ಮುಂದೆ ಕೊಡಲಾಗಿದೆ.[೧೧]

"ಈ ಸಮಾರಂಭದ ಮೂಲಕ ಮನುವಿನ ಮಗನಾದ ಶರ್ಯತನಿಗೆ ಭೃಗುವಿನ ಮಗನಾದ ಚ್ಯವನನು ಅಭಿಷೇಕಗೈದ. ಆಮೇಲೆ ಶರ್ಯತನು ಇಡೀ ಪೃಥ್ವಿಯ ಮೇಲೆಲ್ಲ ಸಂಚರಿಸಿ ದಿಗ್ವಿಜಯ ಸಾಧಿಸಿ ಬಂದು, ಯಜ್ಞಾಶ್ವವನ್ನು ಬಲಿಕೊಟ್ಟ, ಕುಲದೇವತೆಗಳು ನಡೆಯಿಸಿದ ಯಜ್ಞದಲ್ಲೂ ಆತ ಭಾಗಿಯಾಗಿದ್ದ."

"ಈ ಸಮಾರಂಭದ ಮೂಲಕ ಸತ್ರಾಜಿತನ ಮಗನಾದ ಶತಾನೀಕನಿಗೆ ಅಭಿಷೇಕವನ್ನು ವಾಜರತ್ನದ ಮಗನಾದ ಸಮಸುಶಮನು ನೆರವೇರಿಸಿದ. ತದನಂತರ, ಶತಾನೀಕನು ಈ ಪೃಥ್ವಿಯ ಮೂಲೆಮೂಲೆಗೂ ಹೋಗಿ ದಿಗ್ವಿಜಯ ಸಾಧಿಸಿ ಬಂದು ಯಜ್ಞಾಶ್ವವನ್ನು ಬಲಿಕೊಟ್ಟ."

"ಈ ಸಮಾರಂಭದ ಮೂಲಕ, ಪರ್ವತ ಹಾಗೂ ನಾರದರು ಅಂಬಷ್ಠ್ಯನಿಗೆ ಅಭಿಷೇಕಗೈದರು. ಆಮೇಲೆ ಅಂಬಷ್ಠ್ಯನು ಪೃಥ್ವಿಯ ಮೂಲೆಮೂಲೆಗೂ ಹೋಗಿ, ದಿಗ್ವಿಜಯ ಸಾಧಿಸಿ ಬಂದ ನಂತರ ಯಜ್ಞಾಶ್ವವನ್ನು ಬಲಿಕೊಟ್ಟನು."

---

1. Rigveda, VII. 61.1; VII.19.8
2. Rigveda, IX. 61.2
3. Rigveda, I. 130.7
4. Rigveda, I. 53.10
5. Rigveda, X. 48
6. Rigveda, I. 53.8; VI.18.13
7. Rigveda, I. 116.18
8. Rigveda, VI. 16.5
9. Rigveda, VI. 18.13
10. Rigveda, I. 112.19
11. Rigveda, I. 112.19

"ಈ ಸಮಾರಂಭದ ಮೂಲಕ ಪರ್ವತ ಹಾಗೂ ನಾರದರು ಉಗ್ರಸೇನನ ಮಗನಾದ ಯುಧಾಮಶ್ರೌಷ್ಟಿಯ ಅಭಿಷೇಕ ನೆರವೇರಿಸಿದರು. ಯುಧಾಮಶ್ರೌಷ್ಟಿಯು ಪೃಥ್ವಿಯ ಮೂಲೆಮೂಲೆಗೂ ಹೋಗಿ ದಿಗ್ವಿಜಯ ಸಾಧಿಸಿ ಬಂದು ಯಜ್ಞಾಶ್ವವನ್ನು ಬಲಿಗೊಟ್ಟನು."

"ಈ ಅಭಿಷೇಕ ಸಮಾರಂಭದ ಮೂಲಕ ಕಶ್ಯಪನು ಭುವನನ ಮಗನಾದ ವಿಶ್ವಕರ್ಮನನ್ನು ವಿಧ್ಯುಕ್ತವಾಗಿ ದಿಗ್ವಿಜಯಕ್ಕೆ ಅಣಿಗೊಳಿಸಿದ. ಅನಂತರ ವಿಶ್ವಕರ್ಮನು ಎಲ್ಲೆಡೆ ಹೋಗಿ ದಿಗ್ವಿಜಯ ಸಾಧಿಸಿ ಬಂದು ಯಜ್ಞಾಶ್ವವನ್ನು ಬಲಿಗೊಟ್ಟನು."

"ವಿಶ್ವಕರ್ಮನಿಗೆ ಪೃಥ್ವಿಯು ಈ ಶ್ಲೋಕವನ್ನು ಹೇಳಿತು ಎಂದು ಪ್ರತೀತಿ:

"ಯಾವ (ಮರಣಾಧೀನ) ಮಾನವನೂ ನನ್ನನ್ನು ದಾನ–ರೂಪವಾಗಿ ಕೊಡಲಾರನು. ಆದರೆ, ಓ ವಿಶ್ವಕರ್ಮನೇ, ನೀನು ನನ್ನನ್ನು ಹಾಗೆ ಕೊಟ್ಟಿರುವಿ. ಆದ್ದರಿಂದ ನಾನು ಸಮುದ್ರದಲ್ಲಿ ಜಿಗಿದು ಮುಳುಗಿ ಹೋಗುತ್ತೇನೆ. ನೀನು ಕಶ್ಯಪನಿಗೆ ಮಾಡಿದ ವಾಗ್ದಾನ ನಿರರ್ಥಕವಾದದ್ದು."

"ಈ ಸಮಾರಂಭದ ಮೂಲಕ ವಸಿಷ್ಠನು ಪಿಜವನನ ಮಗನಾದ ಸುದಾಸನ ಅಭಿಷೇಕವನ್ನು ನೆರವೇರಿಸಿದನು. ತದನಂತರ ಸುದಾಸನು ಎಲ್ಲೆಡೆ ಸಂಚರಿಸಿ ದಿಗ್ವಿಜಯ ಗೈದು ಬಂದು ಯಜ್ಞಾಶ್ವವನ್ನು ಬಲಿಗೊಟ್ಟನು."

"ಈ ಅಭಿಷೇಕ ಸಮಾರಂಭದ ಮೂಲಕ ಅವಿಕ್ಷಿತನ ಮಗನಾದ ಮರುತನನ್ನು ಅಂಗಿರಸನ ಮಗನಾದ ಸಂವರ್ತನು ವಿಧ್ಯುಕ್ತವಾಗಿ ಅಣಿಗೊಳಿಸಿದನು. ತದನಂತರ ಮರುತನು ಪೃಥ್ವಿಯ ಮೇಲೆಲ್ಲ ಸಂಚರಿಸಿ ದಿಗ್ವಿಜಯ ಸಾಧಿಸಿ ಬಂದು ಯಜ್ಞಾಶ್ವವನ್ನು ಬಲಿಗೊಟ್ಟನು."

ಈ ಮೇಲಣ ಪಟ್ಟಿಯಲ್ಲಿ ಸುದಾಸನನ್ನು, ಹಾಗೂ ವಸಿಷ್ಠರು ನೆರವೇರಿಸಿದ ಆತನ ಪಟ್ಟಾಭಿಷೇಕವನ್ನು, ಕುರಿತಾದ ನಿರ್ದಿಷ್ಟ ಪ್ರಸ್ತಾಪ ಬಂದಿದೆ.

ಋಗ್ವೇದದಲ್ಲಿ ವರ್ಣಿಸಲ್ಪಟ್ಟ ಖ್ಯಾತ ದಶರಾಜ್ಞಯುದ್ಧ (ಹತ್ತು ರಾಜರ ಯುದ್ಧ)ದ ವೀರನೂ ಹೌದು ಸುದಾಸ. ಈ ಪ್ರಖ್ಯಾತ ಯುದ್ಧದ ಉಲ್ಲೇಖಗಳು ಋಗ್ವೇದದ ಏಳನೆಯ ಮಂಡಲದಲ್ಲಿನ ಅನೇಕ ಸೂಕ್ತಗಳಲ್ಲಿ ಬರುತ್ತದೆ.

ಸೂಕ್ತ ೮೩ ಹೀಗೆ ಹೇಳುತ್ತದೆ:

೪. "ಇಂದ್ರ ಹಾಗೂ ವರುಣರೇ, ನೀವುಗಳು ಅಜಿತ್ಯನಾದ ಭೇದನನ್ನು ನಿಮ್ಮ ಅಸ್ತ್ರಗಳಿಂದ ದಿಗ್ಭ್ರಮೆಗೊಳಿಸಿ, ಸುದಾಸನನ್ನು ರಕ್ಷಿಸಿದಿರಿ. ಯುದ್ಧಾರಂಭದ ಈ ಕಾಲದಲ್ಲಿ ಈ ತ್ರಿತ್ಸುಗಳ ಪ್ರಾರ್ಥನೆಗಳನ್ನಾಲಿಸಿರಿ; ಅಂದರೆ, ನನ್ನ ಉಪಾಸನೆಯ ಫಲ ಅವರಿಗೆ ದಕ್ಕಬಹುದಾಗಿದೆ."

೬ ಸುದಾಸ ಹಾಗೂ ತೃತ್ಸುಗಳಾದ ದಶರಾಜರು ದಾಳಿ ಮಾಡಿರಲು ಸುದಾಸ ಹಾಗೂ ತೃತ್ಸಗಳಾದ ನಮ್ಮನ್ನು ನೀವು ರಕ್ಷಿಸುವಾಗ, ಓ ಇಂದ್ರ ವರುಣರೇ, ನಮಗೆ ಐಶ್ವರ್ಯ ಲಭಿಸುವಂತೆ ನಿಮ್ಮಲ್ಲಿ ಬೇಡಿಕೊಳ್ಳುತ್ತೇವೆ."

೭. "ಇಂದ್ರ ಹಾಗೂ ವರುಣರೇ, ಒಗ್ಗೂಡಿದ ಆ ಹತ್ತು ಅಧರ್ಮಿ ರಾಜರುಗಳು ಸುದಾಸನ ವಿರುದ್ಧ ಜಯಿಸಲಿಲ್ಲ; ಯಜ್ಞದಲ್ಲಿನ ಅಧ್ವರ್ಯುಗಳ ಸ್ತುತಿಪಠಗಳು ಹೋಮ–ಹವನ ಗೈದ ಜನಗಳ ಸ್ತುತಿಯೂ ಫಲಪ್ರದವಾಯಿತು. ಅವರ ಯಜ್ಞಗಳಲ್ಲಿ ಸ್ವತಃ ದೇವತೆಗಳೇ ಪ್ರತ್ಯಕ್ಷರಾದರು."

೮. "ನಿಮ್ಮಿಬ್ಬರಲ್ಲೊಬ್ಬರು ಯುದ್ಧದಲ್ಲಿ ವೈರಿಗಳನ್ನು ವಿಧ್ವಂಸಗೊಳಿಸುತ್ತೀರಿ; ಇನ್ನೊಬ್ಬರು ಧಾರ್ಮಿಕ ವಿಧಿ–ಆಚರಣೆಗಳನ್ನು ರಕ್ಷಿಸುತ್ತೀರಿ. ವರಗಳನ್ನು ದಯಪಾಲಿಸುವ ಇಂದ್ರ–ವರುಣರೇ ನಾವು ನಿಮ್ಮನ್ನು

ಸ್ತುತಿಸುತ್ತೇವೆ. ನಮಗೆ ನೀವು ಪರಮಸುಖವನ್ನು ನೀಡಿ ಕಾಪಾಡಿರಿ."

ಸೂಕ್ತ ೩೩ ಹೀಗೆ ಹೇಳುತ್ತದೆ :

೨. "ಪಾಶದ್ಯುಮ್ನನನ್ನು ಅವಮಾನಗೊಳಿಸಿ, ಆತನ ಯಜ್ಞದಲ್ಲಿ ಸೋಮರಸ ಪಾನ ಮಾಡುತ್ತಿದ್ದ (ಭಯಂಕರನಾದ) ಇಂದ್ರನನ್ನು ಸುದಾಸನ ಮದ್ಯತರ್ಪಣೆಯನ್ನು ಸ್ವೀಕರಿಸಲು ಕರೆತರಲಾಯಿತು. ವಾಯತನ ಮಗನಾದ ಪಾಶದ್ಯುಮ್ನನ ಸೂಸುತ್ತಿದ್ದ ಸೋಮರಸ ಪಾತ್ರೆಯನ್ನು ಒಗೆದು ಇಂದ್ರನು ವಸಿಷ್ಠರೆಡೆಗೆ ಧಾವಿಸಿದನು."

೨. "ಅದೇ ರೀತಿ ಸುದಾಸನು ಅವರ (ಇಂದ್ರ–ವರುಣರ) ಸಹಾಯದಿಂದ ಸಿಂಧು ನದಿಯನ್ನು ಸುಲಭವಾಗಿ ದಾಟಿದನು; ಅದೇ ರೀತಿ ಸುದಾಸನು ಅವರ ಮುಖಾಂತರವೇ ತನ್ನ ವೈರಿಗಳನ್ನು ಸಂಹರಿಸಿದನು; ಅದೇ ರೀತಿ, ವಾಸಿಷ್ಠರೇ, ನಿಮ್ಮ ಪ್ರಾರ್ಥನೆಗಳ ಮೂಲಕ ಹತ್ತು ರಾಜರೊಂದಿಗಿನ ಯುದ್ಧದಲ್ಲಿ ಇಂದ್ರನು ಸುದಾಸನನ್ನು ರಕ್ಷಿಸಿದನು.

"ದಶರಾಜರೊಂದಿಗಿನ ಯುದ್ಧದಲ್ಲಿ ತೃತ್ಸುಗಳಿಂದ ಬೆಂಬಲಿಸಲ್ಪಟ್ಟ (ಸುದಾಸನು) ನೀರಡಿಕೆಯಿಂದ ಕಂಗಾಲಾಗಿ ಮಳೆಗೆ ಪ್ರಾರ್ಥಿಸಲು, ವಸಿಷ್ಠರು ಇಂದ್ರನನ್ನು ಸೂರ್ಯಸಮ ಪ್ರಕಾಶಮಾನನನ್ನಾಗಿ ಮಾಡಿದರು. ಇಂದ್ರನು ತನ್ನ ಮಹಿಮೆಯನ್ನು ಕೊಂಡಾಡುವ ವಸಿಷ್ಠರ ಮಾತುಗಳನ್ನು ಕೇಳಿ ಸಂಪ್ರೀತನಾಗಿ ತೃತ್ಸುಗಳಿಗೆ ವಿಶಾಲವಾದ ಪ್ರಾಂತ್ಯವೊಂದನ್ನು ದಯಪಾಲಿಸಿದನು."

ಸೂಕ್ತ ೧೯ ಹೀಗೆ ಹೇಳುತ್ತದೆ.

೩. (ನಿರ್ಭೀತನಾದ) ಇಂದ್ರನೇ, ನಿನ್ನೆಲ್ಲ ರಕ್ಷಣಾವಿಧಾನಗಳಿಂದ ನೈವೇದ್ಯವನ್ನರ್ಪಿಸುವ ಸುದಾಸನನ್ನು ರಕ್ಷಿಸಿದ್ದೀಯಾ; ಪೃಥ್ವಿಯ ಸ್ವಾಮ್ಯಕ್ಕಾಗಿ ವೈರಿಗಳೊಂದಿಗೆ ಹೋರಾಡುವಾಗ, ನೀನು ಪುರುಕುತ್ಸ ಹಾಗೂ ಪುರುವಿನ ಮಗನಾದ ತ್ರಸದಸ್ಯುವನ್ನು ರಕ್ಷಿಸಿದ್ದೀಯೆ."

೬. "ಇಂದ್ರನೇ, ನೈವೇದ್ಯವನ್ನರ್ಪಿಸುವ, ಹಾಗೂ ಬಲಿಯನ್ನು ನೀಡುವ ಸುದಾಸನಿಗೆ ನೀನು ಮಾಡಿದ ಉಪಕಾರಗಳು ಅನಂತ. ಅಸಂಖ್ಯಾತ ವರಗಳನ್ನು ದಯಪಾಲಿಸುವಾತನೇ, ನಾನು ನಿನ್ನ ಸಲುವಾಗಿ ನಿನ್ನ ಕುದುರೆಗಳನ್ನು ಹೂಡುತ್ತಿದ್ದೇನೆ. ಹಲವು ಶಾಸ್ತ್ರೋಕ್ತ ವಿಧಿಗಳಿಗೆ ಸಂಬೋಧನಾ ಬಿಂದುವಾದ, ಹಾಗೂ ಸರ್ವಶಕ್ತನಾದ ನಿನಗೆ, ನಮ್ಮ ಪ್ರಾರ್ಥನೆಗಳು ಮುಟ್ಟಲಿ."

ಏಳನೇ ಮಂಡಲದ ೧೮ನೇ ಸೂಕ್ತ ಹೀಗೆ ಹೇಳುತ್ತದೆ:

೫. "ಪೂಜ್ಯ ಇಂದ್ರನು ಪರುಷ್ಣಿನದಿಗೆ ತನ್ನ ನೀರಿನ ಆಳವನ್ನು ತಗ್ಗಿಸಿ ಸುದಾಸನಿಗೆ ದಾಟಿ ಹೋಗಲು ದಾರಿ ಮಾಡಿಕೊಡುವಂತೆ ಮಾಡಿದ. ಹಾಗೂ ಯಜ್ಞವನ್ನಾಚರಿಸುತ್ತಿದ್ದವನು ಏಳುತ್ತಿದ್ದಂತೆಯೇ ಹೇಳಿದ ಆವೇಶಭರಿತ ಶಾಪವು ನದಿಗಳ ನಿಂದನೆಯಾಗಿ ಮಾರ್ಪಡುವಂತೆ ಮಾಡಿದ."

೬. "ಯಜ್ಞದಲ್ಲಿ ತತ್ಪರನಾದ, ಹಾಗೂ ವಿಧ್ಯುಕ್ತ ಕರ್ಮಾಚರಣೆಯಲ್ಲಿ ಮುಂದಿದ್ದ ತುರ್ವಶನು ಸುದಾಸನ ಕಡೆಗೆ ಸಂಪತ್ತಿಗಾಗಿ ಹೋದ. ಆದರೆ, ಭೃಗುಗಳು ಹಾಗೂ ಧೃಹ್ಯುಗಳು ನೀರಿನಲ್ಲಿಯ ಮೀನುಗಳು ಮುಗಿಬಿದ್ದಂತೆ ಅವರ ಮೇಲೆ ಮುಗಿಬಿದ್ದರು. ಇವರಿಬ್ಬರೂ ಎಲ್ಲಿಯೇ ಹೋಗಲಿ ಅವರ ಪೈಕಿ ಸುದಾಸನನ್ನು ಆತನ ಮಿತ್ರನಾದ ಇಂದ್ರನು ಉಳಿಸುತ್ತಿದ್ದ."

೭. "ನೈವೇದ್ಯವನ್ನು ತಯಾರಿಸುವವರು, ಮಂಗಲ ಶಬ್ದಗಳನ್ನು ಹೇಳುವವರು, ತಪಸ್ಸಿನಿಂದ ದೂರಿವಿದ್ದವರು, ಕೈಯಲ್ಲಿ ಕೊಂಬು ಹಿಡಿದಿದ್ದವರು, ತಮ್ಮ ಯಜ್ಞಯಾಗಾದಿಗಳ ಮೂಲಕ ಜಗತ್ತಿಗೆ ಸೌಖ್ಯ ಉಂಟುಮಾಡುವವರು– ಇವರೆಲ್ಲರೂ, ಗೋವುಗಳನ್ನು ದೋಚಿಕೊಂಡು ಹೋದವರಿಂದ ಅವುಗಳನ್ನು

ಬಿಡಿಸಿ ತಂದು ಆರ್ಯನಿಗೊಪ್ಪಿಸಿದ, ಹಾಗೂ ವೈರಿಗಳನ್ನು ರಣರಂಗದಲ್ಲಿ ನಿರ್ನಾಮ ಮಾಡಿದ, ಆ ಇಂದ್ರನ ವೈಭವವನ್ನು ಕೊಂಡಾಡುತ್ತಾರೆ."

೮. "ದುರುಳರೂ ಬುದ್ಧಿಗೇಡಿಗಳೂ ಆದ ಸುದಾಸನ ವೈರಿಗಳು ಪರುಷ್ಣಿ ನದಿಯನ್ನು ದಾಟುವಾಗ ಅದರ ದಂಡೆಗಳನ್ನೆಲ್ಲ ಒಡೆದು ಹಾಕಿದ್ದಾರೆ. ಆದರೆ ಆತ (ಇಂದ್ರ) ತನ್ನ ಮಹಿಮೆಯಿಂದಾಗಿ ಇಡೀ ಪೃಥ್ವಿಯನ್ನೆಲ್ಲ ವ್ಯಾಪಿಸಿದ್ದಾನೆ. ಹಾಗೂ ಛಾಯಾಮನನ ಮಗನಾದ ಕವಿಯು, ನೆಲಕ್ಕುರುಳಿದ ಬಲಿಪಶುವಿನಂತೆ, ಮರಣದ ನಿದ್ರೆಯಲ್ಲಿದ್ದಾನೆ."

೯. "ನೀರು ಯಥಾಪ್ರಕಾರ ಪರುಷ್ಣಿಗೆ ಹರಿದು ಬರುತ್ತಿತ್ತು: ನದಿಯ ಪಾತ್ರವನ್ನು ಬಿಟ್ಟು ಅದು ಬೇರೆಡೆ ಕೊರೆದುಕೊಂಡು ಹೋಗಲಿಲ್ಲ. ಅರಸನ ತೀವ್ರಗತಿಯ ಸಂಚಲನ ಇಂಬು ಇದ್ದೆಡೆ ಬಂದಿತು. ಹಾಗೂ ಇಂದ್ರನು ಹರಟೆ ಕೊಚ್ಚುತ್ತಿದ್ದ ವೈರಿಗಳನ್ನು, ಅವರ ಸಂತತಿಯೊಂದಿಗೆ, ಸುದಾಸನ ಪ್ರಜೆಗಳಾಗುವ ಹಾಗೆ ಮಾಡಿದ."

೧೦. "ಪರುಷ್ಣಿಯಿಂದ ಪ್ರೇರಿತರಾಗಿ, ಮಣ್ಣಿನ ಬಣ್ಣದ ದನಕರುಗಳು ಮೇಲೆ ಸವಾರಿ ಮಾಡಿದ ಮರುತರು ತಮ್ಮ ಮಿತ್ರನಾದ ಇಂದ್ರನಿಗೆ ನೀಡಿದ ವಚನವನ್ನು ನೆನಪಿಸಿಕೊಳ್ಳುತ್ತ, ಗೋಪಾಲನಿಲ್ಲದೆ ಗೋಮಾಳದಿಂದ ಮರಳುವ ಗೋವುಗಳಂತೆ ಬಂದರು. ಆನಂದದಿಂದ ನೆಗೆಯುತ್ತಿದ್ದ ನಿಯುತ ವಾಜಿಗಳು ಅವರನ್ನು ವೈರಿಗಳಿದ್ದೆಡೆ ತ್ವರಿತವಾಗಿ ತಂದವು."

೧೧. "ಕಲಿಯಾದ ಇಂದ್ರನು (ಅರಸನ ಸಹಾಯಕ್ಕೆಂದು) ಮರುತರನ್ನು ಸೃಷ್ಟಿಸಿದ. ಅವರು, ಯಜ್ಞಶಾಲೆಯಲ್ಲಿ ಸಭ್ಯವಾಗಿ ಕಾಣುವ ಪುರೋಹಿತನು ದರ್ಭೆಯನ್ನು ಕತ್ತರಿಸುವ ಹಾಗೆ, ಪರುಷ್ಣಿಯ ದಡದ ಮೇಲಿನ ೨೧ ಜನರನ್ನು (ಕೀರ್ತಿಯನ್ನು ಸಾಧಿಸುವುದಕ್ಕೋಸ್ಕರ) ತರಿದು ಹಾಕಿದರು.

೧೨. "ಓ ವಜ್ರಾಯುಧನೇ, ನೀನು ಶ್ರುತ, ಕವಶ, ವೃದ್ಧ ಹಾಗೂ (ಅನಂತರದಲ್ಲಿ) ದೃಹ್ಯು ಇವರನ್ನು ನೀರಿನಲ್ಲಿ ಮುಳುಗಿಸಿದೆ. ಈ ನಿನ್ನ ಕೃತ್ಯ ನಿನ್ನನ್ನು ಕೊಂಡಾಡುವ ಭಕ್ತರಿಗೆ, ಆಪ್ಯಾಯಮಾನ."

೧೩. "ಇಂದ್ರನು, ತನ್ನ ಅಸಮ ಬಲದಿಂದಾಗಿ, ಅವರ ಎಲ್ಲ ದುರ್ಗಗಳನ್ನೂ, ಅವರ ಏಳು ರೀತಿಯ ನಗರಗಳನ್ನೂ, ನೆಲಸಮ ಮಾಡಿದನು. ಆತನು ಅನುವಿನ ಮಗನ ಸೌಧವನ್ನು ತೃತ್ಸುವಿಗೆ ಇತ್ತಿದ್ದಾನೆ. ಇಂದ್ರನೆ, ನಾವು ನಿನ್ನನ್ನು ಸಂತುಷ್ಟಪಡಿಸುವುದರ ಮೂಲಕ ನಮ್ಮ ನಿಂದಕವನ್ನು ದಮನ ಮಾಡುವಂತಾಗಲಿ."

೧೪. "ಧರ್ಮಿಷ್ಠನಾದ ಸುದಾಸನಿಗೆ ವಿರೋಧಿಗಳಾದ ಅನು ಹಾಗೂ ದ್ರುಹ್ಯುಗಳ ಸೈನಿಕರು, ಆತನ ಗೋವುಗಳನ್ನು ಕೊಂಡೊಯ್ಯಲಿಚ್ಛಿಸಿ ೬೬೬೦ರಷ್ಟು ದೊಡ್ಡ ಸಂಖ್ಯೆಯಲ್ಲಿ ಹತರಾದರು."

೧೫. "ವೈರಿಗಳಾದ ತೃತ್ಸುಗಳು ತಮ್ಮ ಅಜ್ಞಾನದಿಂದಾಗಿ ಇಂದ್ರನೊಡನೆ ಹೋರಾಡಿ ಸೋತು ಬೆನ್ನಟ್ಟಲ್ಪಟ್ಟು, ತಮ್ಮೆಲ್ಲ ಸ್ವತ್ತುಗಳನ್ನು ಸುದಾಸನಿಗೆ ಬಿಟ್ಟು ಕೊಟ್ಟು, ಇಳಿಜಾರಿನ ನದಿಗಳು ಹರಿಯುವಂತೆ, ಬೇಗ ಬೇಗ ಪಲಾಯನಗೈದರು."

೧೬. "(ಸುದಾಸನ) ನೈವೇದ್ಯವನ್ನು ಸ್ವೀಕರಿಸುವ ಇಂದ್ರನು, ತನಗಿಂತ ಹಿರಿಯನಾದ, (ಕಲಿ) ಸುದಾಸನ ಪ್ರತಿದ್ವಂದ್ವಿಯನ್ನು, ನಾಲ್ಕೂ ನಿಟ್ಟಿನಲ್ಲಿ ಚದುರಿಸಿದ್ದಾನೆ. ಕೋಪಾವಿಷ್ಟನಾದ ಕಡುವೈರಿಯನ್ನು ಇಂದ್ರನು ದಿಗ್ಭ್ರಮೆಗೊಳಿಸಿ ಸುದಾಸನ ಮೇಲೇರಿ ಬರುವುದರ ಬದಲಾಗಿ, ಓಡಿಹೋಗುವಂತೆ ಮಾಡಿದ."

೧೭. "ಇಂದ್ರನು ಒಬ್ಬ ದರಿದ್ರನ ಮೂಲಕ ಬಹುಮೌಲ್ಯದ ದಾನ ಸಲ್ಲುವಂತೆ ಮಾಡಿದ್ದಾನೆ. ಒಂದು ಮೇಕೆಯ ಮೂಲಕ ಮುದಿ ಸಿಂಹವೊಂದನ್ನು ಸಂಹರಿಸಿದ್ದಾನೆ. ಯಜ್ಞಸ್ತೂಪದ, ಓರೆಕೋರೆಗಳನ್ನು

ಒಂದು ಸೂಜಿಯ ಮೂಲಕ ಕೆತ್ತಿದ್ದಾನೆ. ಯುದ್ಧಾನಂತರ ದಕ್ಕಿದ ವೈರಿಗಳ ಸಮಸ್ತ ವಸ್ತುಗಳನ್ನು ಸುದಾಸನಿಗೆ ಕೊಡಮಾಡಿದ್ದಾನೆ."

೧೮. "ಇಂದ್ರನೆ, ಅಸಂಖ್ಯಾತ ವೈರಿಗಳೆಲ್ಲ ಶರಣಾಗತರಾಗಿದ್ದಾರೆ. ಯಾವಾಗಲಾದರೊಮ್ಮೆ ನಿನ್ನನ್ನು ಸ್ತುತಿಸುವ ಜನಗಳನ್ನು ದುಷ್ಟರೆಂದು ಬಗೆಯುವ, ಪುಂಡ ಭೇದವನ್ನು ನಿಗ್ರಹಿಸಲ್ಪಡುವಂತೆ ಮಾಡು. ಅವನ ಮೇಲೆ ನಿನ್ನ ವಜ್ರಾಯುಧವನ್ನು ಪ್ರಯೋಗಿಸು."

೧೯. "ಯಮುನೆಯ ದಡದಲ್ಲಿ ವಾಸಿಸುವವರು ಹಾಗೂ ತೃತ್ಸುಗಳು, ಇಂದ್ರನು ಯುದ್ಧದಲ್ಲಿ ಭೇದನನ್ನು ಕೊಂದಾಗ, ಆತನ ಮಹಿಮೆಯನ್ನು ಕೊಂಡಾಡಿದರು. ಅಜರು, ಶಿಗ್ರುಗಳು ಹಾಗೂ ಯಕ್ಷರು ಯುದ್ಧದಲ್ಲಿ ಕೊಲ್ಲಲ್ಪಟ್ಟ ಕುದುರೆಗಳ ತಲೆಗಳನ್ನು ಆತನಿಗೆ ಬಲಿಯಾಗಿ ಅರ್ಪಿಸಿದರು."

೨೦. "ಇಂದ್ರನೇ, ನೀನು ದಯಪಾಲಿಸಿದ ಅನುಗ್ರಹಗಳನ್ನು, ಔದಾರ್ಯರ ಕೊಡುಗೆಗಳನ್ನು, ಅವು ಹಳೆಯವೇ ಇರಲಿ, ಹೊಸವೇ ಇರಲಿ, ನಾವು ಪ್ರತಿನಿತ್ಯ ಕಾಣುವ ಮುಂಜಾವುಗಳನ್ನು ಎಣಿಸಿದಂತೆ, ಎಣಿಕೆಗೆ ಒಳಪಡಿಸಲಾಗದು. ಮನ್ಯಮಾನನ ಮಗನಾದ ದೇವಕನನ್ನು ನೀನು ಸಂಹರಿಸಿದ್ದೀಯಾ. ಮತ್ತು ನಿನ್ನಿಚ್ಛೆಯಿಂದಲೇ ಶಂಬರನನ್ನು ವಿಶಾಲ ಪರ್ವತದ ಮೇಲಿಂದ ಕೆಳಗೆ ತಳ್ಳಿದ್ದೀಯ."

ಈ ಕಾಳಗಲ್ಲಿ ಸುದಾಸನ ವಿರುದ್ಧ ಹೋರಾಡಿದ ಅರಸರ ಹೆಸರುಗಳು ಇಂತಿವೆ:[೧]

(೧) ಶಿನ್ಯು, (೨) ತುರ್ವಶ, (೩) ದ್ರುಹ್ಯು, (೪) ಕವಶ, (೫) ಪುರು, (೬) ಅನು, (೭) ಭೇದ, (೮) ಶಂಬರ, (೯) ವೈಕರ್ಣ, (೧೦) ಇನ್ನೊಬ್ಬ ವೈಕರಣ, (೧೧) ಯದು, (೧೨) ಮತ್ಸ್ಯ, (೧೩) ಪಾಕ್ಥ, (೧೪) ಭಾಲನಸ್, (೧೫) ಅಲೀನ, (೧೬) ವಿಷಾನಿನ್, (೧೭) ಅಜ, (೧೮) ಶಿವ, (೧೯) ಶಿಗ್ರು, (೨೦) ಯಕ್ಷು, (೨೧) ಯುದ್ಧ್ಯಮಾಧಿ, (೨೨) ಯದ್ವ, (೨೩) ದೇವಕ ಮನ್ಯಮಾನ, (೨೪) ಛಾಯಾಮನ ಕವಿ, (೨೫) ಸುತೂಕ, (೨೬) ಉಚಥ, (೨೭) ಶ್ರುತ, (೨೮) ವೃದ್ಧ, (೨೯) ಮನ್ಯು ಹಾಗೂ (೩೦) ಪೃಥು.

ಈ ಯುದ್ಧ, ಅದರ ಹೆಸರು ಸೂಚಿಸಬಹುದಾದದ್ದಕ್ಕಿಂತಲೂ ದೊಡ್ಡ ಪ್ರಮಾಣದ್ದಾಗಿತ್ತು ಎಂಬುದು ಸುಸ್ಪಷ್ಟ. ಭಾರತೀಯ ಆರ್ಯರ (ಇಂಡೋ ಆರ್ಯನ್ನರ) ಇತಿಹಾಸದಲ್ಲೇ ಈ ಯುದ್ಧ ಅತ್ಯಂತ ಮಹತ್ವದ ಘಟನೆಯಾಗಿದ್ದಿರಬೇಕು. ಆದ್ದರಿಂದ ಜಯಶಾಲಿಯಾದ ಸುದಾಸನು ತನ್ನ ಕಾಲದ ಧೀರೋದಾತ್ತ ನಾಯಕನಾದುದು ಕೌತುಕವೇನಲ್ಲ.[೨]

ಈ ಯುದ್ಧಕ್ಕೆ ಕಾರಣವೇನಾಗಿತ್ತು ಎಂಬುದು ನಮಗೆ ನಿಖರವಾಗಿ ಗೊತ್ತಿಲ್ಲ. ಆದರೆ ಋಗ್ವೇದದಲ್ಲಿ (vii. ೮೨.೭) ಇದರ ಸೂಚನೆಯೊಂದು ಸಿಕ್ಕುತ್ತದೆ. ಈ ಸಂದರ್ಭದಲ್ಲಿ ಸುದಾಸನ ವಿರುದ್ಧ ಹೋರಾಡಲು ಸನ್ನದ್ಧರಾದ ಅರಸರು ಅಧರ್ಮಿಗಳೆಂದು ವರ್ಣಿಸಲ್ಪಟ್ಟಿದ್ದಾರೆ. ಇದರಿಂದ, ಆ ಯುದ್ಧವು ಧರ್ಮಯುದ್ಧವಾಗಿತ್ತೆಂದು ತಿಳಿಯಬಹುದಾಗಿದೆ.

---

೧. ಈ ಪಟ್ಟಿಯು ಚಿತ್ರವ ಶಾಸ್ತ್ರಿಗಳ ಪ್ರಾಚೀನ ಚರಿತ್ರ ಕೋಶ (ಪಿ. ೬೨೪)ದಿಂದ ತೆಗೆದುಕೊಳ್ಳಲಾಗಿದೆ. ಈ ಎಲ್ಲ ಹೆಸರುಗಳು ಅರಸರವೇ ಎಂಬುದರ ಬಗೆಗೆ ಒಮ್ಮತವಿಲ್ಲ. ೧೩ ರಿಂದ ೧೬ರ ಹೆಸರುಗಳು ಪುರೋಹಿತರವು ಎಂದು ಸಾಯಣಾಚಾರ್ಯರು ಹೇಳುತ್ತಾರೆ. ೨೭ ರಿಂದ ೨೯ರವರೆಗಿನ ಹೆಸರುಗಳ ಬಗೆಗೂ ಅನುಮಾನವಿದೆ.

೨. ಸುದಾಸನ ಹೆಸರು ಋಗ್ವೇದದಲ್ಲಿ ೨೭ ಕಡೆ ಬರುತ್ತದೆ. ಈ ಸಂಗತಿ ಆತ ವೇದಕಾಲದ ಜನರ ದೃಷ್ಟಿಯಲ್ಲಿ ಎಂಥ ಕಲಿಯೆಂದು ಗಣಿಸಲ್ಪಟ್ಟಿದ್ದನೆಂಬುದು ವ್ಯಕ್ತವಾಗುತ್ತದೆ.

IV. ಈ ಕೆಳಗೆ ಹೆಸರಿಸಲ್ಪಟ್ಟ ಅರಸರು ಅವರವರೆದುರು ಉಲ್ಲೇಖಿಸಲ್ಪಟ್ಟ ಋಗ್ವೇದದ ಋಕ್ಕುಗಳನ್ನು ರಚಿಸಿದ ಋಷಿಗಳೆಂದು ಸಾಯಣಾಚಾರ್ಯರೂ ಹೇಳುತ್ತಾರೆ–ಅದೇ ಪ್ರಕಾರ ಪರಂಪರೆಯೂ ಹೇಳುತ್ತದೆ:

> *"ವೀತಹವ್ಯ (ಅಥವಾ ಭಾರದ್ವಾಜ) x.೯, ಅಂಬರೀಷನ ಮಗನಾದ ಸಿಂಧುದ್ವೀಪ (ಅಥವಾ ತ್ವಷ್ಟ್ರೀಯ ಮಗನಾದ ತ್ರಿಶಿರಸ್) x.೭೫, ಪ್ರಿಯಮೇಧನ ಮಗನಾದ ಸಿಂಧುಕ್ಷಿತ; x.೬೩೩, ಪಿಜವನನ ಮಗನಾದ ಸುದಾಸ; x.೧೩೪ ಯುವನಾಸನ ಮಗನಾದ ಮಂಧಾತ್ರಿ; x.೧೭೯, ಉಶೀನರನ ಮಗ ಶಿಬಿ, ದಿವೋದಾಸನ ಮಗನೂ ಕಾಳಿಯ ರಾಜನೂ ಆದ ಪ್ರತರ್ದನ, ಹಾಗೂ ರೋಹಿದಾಶ್ವನ ಮಗನಾದ ವಸುಮನಸ್; ಹಾಗೂ x.೧೪೮ನ್ನು ರಚಿಸಿದವ ಪೃಥಿ ವೈನ್ಯನು."*

ವೈದಿಕ ಋಕ್ಕುಗಳನ್ನು ರಚಿಸಿದವನೆಂದು ಸುದಾಸನ ಹೆಸರು ಈ ಪಟ್ಟಿಯಲ್ಲಿ ಬಂದಿರುವುದನ್ನು ನೀವು ಗಮನಿಸಿರಬಹುದು.

V. ಸುದಾಸನು ಅಶ್ವಮೇಧಯಜ್ಞವನ್ನು ಮಾಡಿದ. ಋಗ್ವೇದ (iii.೫೩) ದಲ್ಲಿ ಇದರ ಉಲ್ಲೇಖ ಇದೆ.

೯. "ದೇವದೇವತೆಗಳ ಪಿತನೂ, ಪವಿತ್ರಕರ್ಮಗಳನ್ನಾಚರಿಸುವಲ್ಲಿ ಅಧ್ವರ್ಯುಗಳನ್ನುಪೇಕ್ಷಿಸುವವನೂ ಆದ ಮಹರ್ಷಿ ವಿಶ್ವಾಮಿತ್ರನು, ಸುದಾಸನಿಗಾಗಿ ಯಜ್ಞವನ್ನು ನೆರವೇರಿಸಿದಾಗ ನೀರಿನ ಪ್ರವಾಹವನ್ನು ತಡೆಗಟ್ಟಿದ. ಆಗ ಇಂದ್ರನು ಕೌಶಿಕನೊಂದಿಗೆ ಸಂತುಷ್ಟನಾದ."

೧೦. "ಕೌಶಿಕನೇ, ಸುದಾಸನ ಅಶ್ವದ ಬಳಿ ಬಂದು ಅದಕ್ಕೆ ಚೈತನ್ಯ ತುಂಬುವಂಥವನಾಗು, ಹಾಗೂ ಅದು ರಾಜನಿಗೆ ಐಶ್ವರ್ಯವನ್ನು ತರಲೆಂದು ಬಿಚ್ಚಿಬಿಡು; ಯಾಕೆಂದರೆ, ದೇವತೆಗಳ ರಾಜನು ವೃತ್ರನನ್ನು ಪೂರ್ವ, ಪಶ್ಚಿಮ, ಉತ್ತರ ದಿಕ್ಕುಗಳಲ್ಲಿ ಸಂಹರಿಸಿದ್ದಾನೆ. ಆದರಿಂದ, ಸುದಾಸನನ್ನು ಈ ಪೃಥ್ವಿಯ ಉತ್ಕೃಷ್ಟ ಪ್ರದೇಶಗಳಲ್ಲೆಲ್ಲ ಆತನಿಗೆ ಪೂಜೆ ಸಲ್ಲಿಸಗೊಡು."

VI. ಸುದಾಸನು ಬ್ರಾಹ್ಮಣರಿಗೆ ನೀಡುತ್ತಿದ್ದ ದಾನಕ್ಕಾಗಿ ಸುಪ್ರಸಿದ್ಧನಾಗಿದ್ದ. ಅವರು ಆತನಿಗೆ ದಾನಶೂರನೆಂದು ಕರೆಯುತ್ತಿದ್ದರು. ಬ್ರಾಹ್ಮಣರು ಆತನನ್ನು ಈ ಲೋಕೋಪಕಾರಿತ್ವಕ್ಕಾಗಿ ಕೊಂಡಾಡುತ್ತಿದ್ದರೆಂಬುದನ್ನು ಋಗ್ವೇದದ ಈ ಕೆಳಗಣ ಉಲ್ಲೇಖಗಳಿಂದ ತಿಳಿಯಬಹುದಾಗಿದೆ.

i.೪೭.೬. "ಓ ಅತ್ಯಾತುರದಲ್ಲಿ ಸವಾರಿಗೈಯುವ ಅಶ್ವಿನೀಕುಮಾರರೇ, ಐಶ್ವರ್ಯದಿಂದ ತುಂಬಿದ ನಿಮ್ಮ ರಥಗಳಲ್ಲಿ ಸುದಾಸನಿಗಾಗಿ ಪೋಷಣೆಯನ್ನು ಹೊತ್ತು ತನ್ನಿ. ನಮಗೆ ಜನರು ಅತಿಯಾಗಿ ಬಯಸುವ ಐಶ್ವರ್ಯವನ್ನು ಕಳುಹಿಸಿರಿ."

i.೬೩.೭. "ಓ ಗುಡುಗುಡಿಸುವ ಇಂದ್ರನೇ, ನೀನು ಪುರುಕುತ್ಸನ ವಿರುದ್ಧ ಯುದ್ಧಮಾಡಿ ಆತನ ಏಳು ನಗರಗಳನ್ನು ಧ್ವಂಸಗೈದು ಸುದಾಸನ ಆಪತ್ತನ್ನು, ಒಂದು ಹುಲ್ಲಿನ ಸಿವುಡನ್ನು ಹಾರಿಸಿ ಒಗೆದಷ್ಟು ಸುಲಭವಾಗಿ, ನಿವಾರಿಸಿದೆ ಹಾಗೂ ಪುರುವಿಗೆ ಸಂಪತ್ತನ್ನು ನೀಡಿದೆ."

i.೧೧೨.೧೯. "ಓ ಅಶ್ವಿನ್ನರೆ, ಬನ್ನಿ, ಹಾಗೂ ಯಾವ ಸಹಾಯದ ಮೂಲಕ ನೀವು ಸುದಾಸನಿಗೆ ವೈಭವೋಪೇತವಾದ ಸತ್ತೆಯನ್ನು ನೀಡಿದಿರೋ ಅಂಥ ಸಹಾಯವನ್ನು ತನ್ನಿರಿ."

vii.೧೯.೩. "ಓ ಭಯಾನಕ ಇಂದ್ರನೇ, ನಿನಗೆ ನೈವೇದ್ಯ ನೀಡಿದುದಕ್ಕಾಗಿ, ನೀನು ಸುದಾಸನಿಗೆ

ಎಲ್ಲ ತರಹದ ಸಹಾಯ ಸಲ್ಲಿಸಿ ಆತನನ್ನು ತ್ವರಿತಗತಿಯಿಂದ ರಕ್ಷಿಸಿದೆ. ನೀವು ಪುರು ಹಾಗೂ ಪುರುಕುತ್ಸರ ಮಗನಾದ ತ್ರಸದಸ್ಯುವಿಗೆ ರಾಜ್ಯವನ್ನು ಗೆಲ್ಲುವುದರಲ್ಲಿ ಹಾಗೂ ವೈರಿಗಳನ್ನು ತರಿದು ಕೊಲ್ಲುವಲ್ಲಿ ನೆರವಾಗಿ ಆತನನ್ನು ಕಾಪಾಡಿದೆ."

vii.೨೦.೨. "ಬಲದಲ್ಲಿ ಮಿಗಿಲಾಗಿ ಇಂದ್ರನು ವೃತ್ರನನ್ನು ಕೊಲ್ಲುತ್ತಾನೆ. ಕಲಿಯಾದ ಇಂದ್ರನು ತನ್ನನ್ನು ಸ್ತುತಿಸುವವರನ್ನು ರಕ್ಷಿಸುತ್ತಾನೆ. ಅವನು ಸುದಾಸನಿಗೆ ಅಥವಾ ಧಾರಾಳವಾಗಿ ಯಜ್ಞಮಾಡುವ ಸಾಯಣನಿಗೆ, ಅವಕಾಶ ಮಾಡಿಕೊಡುತ್ತಾನೆ. ತನ್ನನ್ನು ಪೂಜಿಸುವವರಿಗೆ ಆತ ಮೇಲಿಂದಮೇಲೆ ಐಶ್ವರ್ಯವನ್ನು ದಯಪಾಲಿಸುತ್ತಾನೆ."

vii.೨೫.೩. "ಸುದಾಸನಿಗೆ ನೂರೊಂದು ತರದ ನೆರವು, ಸಾವಿರಗಟ್ಟಲೆ ಅಪೇಕ್ಷಣೀಯ ಕೊಡುಗೆಗಳು ಮತ್ತು ಉಚ್ಛ್ರಾಯ ಒದಗಿಬರಲಿ. ಕೊಲೆಗಡುಕರ ಶಸ್ತ್ರಗಳನ್ನು ಮುರಿದುಹಾಕು. ನಮಗೆ ಐಶ್ವರ್ಯ ಹಾಗೂ ಕೀರ್ತಿಯನ್ನು ದಯಪಾಲಿಸು."

vii.೩೨.೧೦. "ಸುದಾಸನ ರಥವನ್ನು ಯಾರೂ ಎದುರಿಸಲಾರರು, ತಡೆಯಲಾರರು. ಯಾವನನ್ನು ಇಂದ್ರನು ಹಾಗೂ ಮರುತರು ರಕ್ಷಿಸುವರೋ ಅಂಥ ಸುದಾಸನು ಗೋವುಗಳಿಂದ ತುಂಬಿದ ಹುಲ್ಲುಗಾವಲಿನಲ್ಲಿ ಅಡ್ಡಾಡುತ್ತಾನೆ."

vii.೫೩.೩. "ಓ ಪೃಥ್ವಿಯೇ ಹಾಗೂ ಆಕಾಶವೇ, ನಿಮ್ಮ ಅನೇಕ ಐಶ್ವರ್ಯದ ವರದಾನಗಳು ಸುದಾಸನಿಗಾಗಿ ಕಾದಿರಲಿ."

vii.೬೦.೮. "ಅದಿತಿ, ಮಿತ್ರ ಹಾಗೂ ವರುಣರು ಉದಾರಿಯಾದ ಸುದಾಸನಿಗೆ ಭದ್ರವಾದ ಸುರಕ್ಷೆಯನ್ನೊದಗಿಸಿ, ಸಂತಾನವನ್ನೂ ದಯಪಾಲಿಸಿರುತ್ತಾರೆ. ಓ ದೇವತೆಗಳೇ, ನಾವು ದೇವರುಗಳ ವಿರುದ್ಧ ಯಾವ ಅಪರಾಧವನ್ನೂ ಗೈಯದಿರಲಿ. ಆರ್ಯಮಾನನು ನಮ್ಮನ್ನು ವೈರಿಗಳಿಂದ ಮುಕ್ತಗೊಳಿಸಲಿ. ಓ ಓಜಸ್ವಿ ದೇವತೆಗಳೇ, ಸುದಾಸನಿಗೆ ವ್ಯಾಪಕವಾದ ಪ್ರದೇಶವನ್ನು ನೀಡಿರಿ."

ಇವು ಮಹಾಭಾರತದ ಶಾಂತಿಪರ್ವದಲ್ಲಿ ಉಲ್ಲೇಖಿತವಾದ ಪೈಜವನನ ಜೀವನ ಚರಿತ್ರೆಯ ತುಣುಕುಗಳು. ಇವುಗಳನ್ನು ಅತ್ಯಂತ ನಿಖರ ಆಕರವಾದ ಋಗ್ವೇದದಿಂದ ಆಯ್ದುಕೊಳ್ಳಲಾಗಿದೆ. ಋಗ್ವೇದದಿಂದ ಆತನ ಹೆಸರು ಸುದಾಸನಾಗಿತ್ತೆಂದು ಹಾಗೂ ಆತನು ಕ್ಷತ್ರಿಯನಾಗಿದ್ದನೆಂದು ನಾವು ತಿಳಿಯುತ್ತೇವೆ. ಆತ ಕ್ಷತ್ರಿಯನಷ್ಟೆ ಆಗಿರಲಿಲ್ಲ. ಆತ ಒಬ್ಬ ಅರಸನೂ ಆಗಿದ್ದ–ಬಲಾಢ್ಯನಾದ ಅರಸು. ಇದಕ್ಕೆ ಮಹಾಭಾರತವು ಒಂದು ಹೊಸ ಅಂಶವನ್ನು ಸೇರಿಸುತ್ತದೆ. ಅದೇನೆಂದರೆ, ಆತ ಶೂದ್ರನಾಗಿದ್ದನೆಂದು. ಒಬ್ಬ ಶೂದ್ರನು ಆರ್ಯನಾಗಿರುವುದು, ಒಬ್ಬ ಶೂದ್ರ ಕ್ಷತ್ರಿಯನಾಗಿರುವುದು, ಒಬ್ಬ ಶೂದ್ರನು ಅರಸನಾಗಿರುವುದು?! ಇದಕ್ಕಿಂತ ಹೆಚ್ಚಿನ ಸತ್ಯದ ಕೋಲ್ಮಿಂಚಿನ ಹೊಳಹು ಇರಲು ಸಾಧ್ಯವೇ? ಇದಕ್ಕಿಂತ ಹೆಚ್ಚಿಗೆ ಕ್ರಾಂತಿಕಾರಿಯಾದುದು ಏನಿರಲು ಸಾಧ್ಯ?

ಈ ಚಾರಿತ್ರಿಕ ಅಂಶಗಳ ಅನ್ವೇಷಣೆಯನ್ನು ಮೂರು ಮಹತ್ವದ ಪ್ರಶ್ನೆಗಳ ಚರ್ಚೆಯೊಂದಿಗೆ ಮುಕ್ತಾಯಗೊಳಿಸೋಣ:

ಸುದಾಸನು ಆರ್ಯನಾಗಿದ್ದನೇ? ಆತ ಆರ್ಯನಾಗಿದ್ದರೆ ಯಾವ ಪಂಗಡ ಅಥವಾ ಗೋತ್ರಕ್ಕೆ ಸಂಬಂಧಿಸಿದವನು? ಸುದಾಸನು ಶೂದ್ರನಾಗಿದ್ದರೆ, 'ಶೂದ್ರ'ದ ಅರ್ಥವೇನು?

ಎರಡನೇ ಪ್ರಶ್ನೆಯಿಂದಲೇ ಪ್ರಾರಂಭಿಸುವುದು ಸಮಂಜಸವಾದೀತು. ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವಲ್ಲಿ ಋಗ್ವೇದದಲ್ಲಿ ಬರುವ ಉಲ್ಲೇಖದ ಸಹಾಯ ತೆಗೆದುಕೊಳ್ಳಬಹುದಾಗಿದೆ. ಋಗ್ವೇದವು ಅನೇಕ ಪಂಗಡಗಳನ್ನು

ಹೆಸರಿಸುತ್ತದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ; ತೃತ್ಸುಗಳು, ಭರತರು, ತುರ್ವಸರು, ದುಹ್ರ್ಯುಗಳು, ಯದುಗಳು, ಪುರುಗಳು ಹಾಗೂ ಅನುಗಳು. ಆದರೆ ಋಗ್ವೇದದ ಉಲ್ಲೇಖಗಳ ಪ್ರಕಾರ ಸುದಾಸನಿಗೆ ಸಂಬಂಧಪಟ್ಟವು ಮೂರೇ ಪಂಗಡಗಳು, ನಾವು ನಮ್ಮ ವಿಚಾರಣೆಯನ್ನು ಇದೇ ಮೂರು ಪಂಗಡಗಳಿಗೆ ಸೀಮಿತಗೊಳಿಸಿಕೊಳ್ಳೋಣ. ತೃತ್ಸುಗಳ ಹಾಗೂ ಸುದಾಸನ ಮಧ್ಯ ಇದ್ದ ಬಾಂಧವ್ಯದ ಬಗೆಗೆ ಬೆಳಕು ಚೆಲ್ಲುವ ಅತ್ಯಂತ ಮಹತ್ವದ ಋಗ್ವೇದ ಶ್ಲೋಕಗಳೆಂದರೆ: i.೬೩.೭.; i.೧೩೦.; vii.೧೮.೧೫.; vii.೩೩.೫.: vii.೩೩.೬,, vii.೮೩.೪.೬.

ಶ್ಲೋಕ i.೬೩.೭ರಲ್ಲಿ ದಿವೋದಾಸರು ಪುರುಗಳ ರಾಜನಾಗಿದ್ದನೆಂದು ಹೇಳಲಾಗಿದೆ, ಹಾಗೂ i.೧೩೦.೭ರಲ್ಲಿ ದಿವೋದಾಸನು ಪೌರ್ವೆ ಅಂದರೆ ಪುರುಗಳಿಗೆ ಸಂಬಂಧಪಟ್ಟವನೆಂದು ಹೇಳಲಾಗಿದೆ.

ಋಗ್ವೇದದ vii.೧೮.೬ ಮತ್ತು vii.೮೩.೬ರಲ್ಲಿ ಸುದಾಸನು ತೃತ್ಸುವಾಗಿರಲಿಲ್ಲ ಎಂಬ ಸುಳಿವು ಇದೆ. ಮೊದಲನೆಯದರಲ್ಲಿ, ಸುದಾಸನು ತೃತ್ಸುಗಳ ಪಾಳೆಯದಲ್ಲಿ ನುಗ್ಗಿ ಅವರನ್ನೋಡಿಸಿ ಅವರ ಸಂಪತ್ತನ್ನು ವಶಪಡಿಸಿಕೊಂಡನೆಂಬ ಸೂಚನೆ ಇದೆ. ಎರಡನೆಯದರಲ್ಲಿ, ಸುದಾಸನೂ ತೃತ್ಸುಗಳೂ ದಶರಾಜರೊಡನಾದ ಯುದ್ಧದಲ್ಲಿ ಒಂದೇ ಪಕ್ಷದಲ್ಲಿದ್ದರಾದರೂ ಅವರು ಬೇರೆ ಬೇರೆ ಎಂಬ ಸೂಚನೆ ಇದೆ. ಶ್ಲೋಕ vii.೩೫.೫ ಹಾಗೂ vii.೮೩.೪ರಲ್ಲಿ ಸುದಾಸ ತೃತ್ಸುಗಳಲ್ಲೊಬ್ಬನಾಗುತ್ತಾನೆ; ಅಷ್ಟೇ ಏಕೆ ಮೊದಲನೆಯದರಲ್ಲಿ, ಸುದಾಸನು ತೃತ್ಸುಗಳ ಅರಸನಾಗಿಬಿಡುತ್ತಾನೆ.

ತೃತ್ಸುಗಳ ಹಾಗೂ ಭರತರ ಮಧ್ಯದ ಹಾಗೂ ಅವರಿಬ್ಬರೂ ಮತ್ತು ಸುದಾಸನ ಮಧ್ಯದ ಬಾಂಧವ್ಯದ ಪ್ರಶ್ನೆಯ ಮೇಲೆ ನಮಗೆ ಋಗ್ವೇದದ ಶ್ಲೋಕ vii.೩೩.೬ ಹಾಗೂ v.೧೬.೪,೬,೧೯ ಇವುಗಳು ಸಾಕ್ಷ್ಯ ಒದಗಿಸುತ್ತವೆ. ಮೊದಲನೆಯದರ ಪ್ರಕಾರ, ತೃತ್ಸುಗಳೆಂದರೂ ಒಂದೇ ಭರತರೆಂದರೂ ಒಂದೇ ಆಗಿದ್ದರು. ಎರಡನೆಯದರ ಪ್ರಕಾರ, ಸುದಾಸನ ತಂದೆಯಾದ ದಿವೋದಾಸನು ಭರತರಿಗೆ ಸಂಬಂಧಪಟ್ಟವನೆಂದು ಹೇಳಲಾಗಿದೆ.

ಇವೆಲ್ಲ ಉಲ್ಲೇಖಗಳಿಂದ ಒಂದು ಮಾತು ಸ್ಪಷ್ಟವಾಗುತ್ತದೆ. ಅದೇನೆಂದರೆ, ಪುರುಗಳು, ತೃತ್ಸುಗಳು ಹಾಗೂ ಭರತರು–ಇವರೆಲ್ಲ ಒಂದೇ ಜನಪದವಾಗಿದ್ದು, ಬೇರೆ ಬೇರೆ ಬಣಗಳಿಗೆ ಸಂಬಂಧಪಟ್ಟವರಾಗಿದ್ದರು, ಇಲ್ಲವೆ ಇವು ಮೊದಲಲ್ಲಿ ಬೇರೆ ಬೇರೆ ಬುಡಕಟ್ಟುಗಳಾಗಿದ್ದು ಕಾಲಾನುಕ್ರಮದಲ್ಲಿ ಒಂದೇ ಜನಪದವಾದರು ಎಂಬುದು. ಇದು ಅಸಂಭವವೇನಲ್ಲ. ಒಂದೇ ಒಂದು ಪ್ರಶ್ನೆಯೆಂದರೆ: ಅವರೆಲ್ಲ ಬೇರೆ ಬೇರೆ ಆಗಿದ್ದರು ಎಂದು ಒಪ್ಪಿಕೊಂಡರೆ, ಸುದಾಸನು ಮೂಲತಃ ಯಾರಿಗೆ ಸಂಬಂಧಪಟ್ಟವನು–ಪುರುಗಳಿಗೋ, ತೃತ್ಸುಗಳಿಗೋ ಅಥವಾ ಭರತರಿಗೋ? ಪುರುಗಳಿಗೂ ಹಾಗೂ ಭರತರಿಗೂ ಸುದಾಸನ ತಂದೆ ದಿವೋದಾಸನೊಂದಿಗಿದ್ದ ಬಾಂಧವ್ಯವನ್ನು ಗಮನಿಸಿದರೆ, ಸುದಾಸನು ಮೂಲದಲ್ಲಿ ಪುರುಗಳಿಗಾಗಲೀ ಭರತರಿಗಾಗಲೀ ಸಂಬಂಧ ಪಟ್ಟವನೆಂದು ಊಹಿಸುವುದು ಸಹಜ–ಆದರೆ ಅವರಿಬ್ಬರಲ್ಲಿ ಖಚಿತವಾಗಿ ಯಾರು ಎಂಬ ಪ್ರಶ್ನೆಗೆ ಉತ್ತರಿಸುವುದು ಕಷ್ಟ.

ಆತ ಪುರುಗಳಿಗೆ ಸಂಬಂಧಪಟ್ಟಿರಲಿ, ಸಂಬಂಧಪಟ್ಟಿರದೆ ಇರಲಿ, ಸುದಾಸನ ತಂದೆ ದಿವೋದಾಸನು ಭರತರಿಗೆ ಸಂಬಂಧಪಟ್ಟವನು ಎಂದು ಹೇಳಲಾಗಿದೆಯೆಂಬುದನ್ನು ಗಮನಿಸಿದರೆ ಸುದಾಸನು ಭರತರಿಗೆ ಸಂಬಂಧಪಟ್ಟವನು ಎಂಬುದರ ಬಗೆಗೆ ಸಂದೇಹಕ್ಕೆಡೆ ಇಲ್ಲ. ಇನ್ನು ಮುಂದಿನ ಪ್ರಶ್ನೆ: ಈ ಭರತರು ಯಾರಾಗಿದ್ದರು; ಹಾಗೂ ಯಾರಿಂದ ಹಿಂದುಸ್ತಾನವು ಭರತಭೂಮಿ ಅಥವಾ ಭಾರತನಾಡು ಎಂಬ ಹೆಸರು ಪಡೆಯಿತೋ ಅದೇ ಜನಗಳೇ? ಇದು ಮಹತ್ವದ ಪ್ರಶ್ನೆ, ಯಾಕೆಂದರೆ, ಬಹಳ ಜನ

ಸತ್ಯಸಂಗತಿಗಳನ್ನರಿಯರು, ಹಿಂದುಗಳು ಭರತರ ಬಗೆಗೆ ಮಾತನಾಡುವಾಗ ಅವರ ತಲೆಯಲ್ಲಿ ದೌಷ್ಯಂತೀ ಭರತರ–ಅಂದರೆ, ದುಷ್ಯಂತ ಹಾಗೂ ಶಕುಂತಲೆಯಿಂದ ಹುಟ್ಟಿದ ಹಾಗೂ ಮಹಾಭಾರತದಲ್ಲಿ ವರ್ಣಿಸಲ್ಪಟ್ಟ ಯುದ್ಧವನ್ನು ಮಾಡಿದ ಭರತರ– ಕಲ್ಪನೆಯೇ ಇರುತ್ತದೆ. ಅವರಿಗೆ ಇನ್ನುಳಿದ ಯಾವುದೇ ಭರತರ ಕಲ್ಪನೆಯೂ ಇರುವುದಿಲ್ಲ ಅಲ್ಲದೆ ಅವರು ದೌಷ್ಯಂತೀ ಭರತರಿಂದಲೇ ಭಾರತಭೂಮಿಗೆ ಆ ಹೆಸರು ಬಂದದ್ದು ಎಂದು ನಂಬುತ್ತಾರೆ.

ಇಬ್ಬರು ಪ್ರತ್ಯೇಕ ಭರತರೇ ಇದ್ದಾರೆ. ಒಂದು ಭರತ ಸಂಕುಲ ಇವರು ಋಗ್ವೇದದಲ್ಲಿ ಉಲ್ಲೇಖಿತರಾದವರು– ಮನುವಿನ ವಂಶಜರು ಹಾಗೂ ಸುದಾಸನು ಇದೇ ಭರತರಿಗೆ ಸಂಬಂಧಪಟ್ಟವ. ಇನ್ನೊಂದು ಭರತ ಸಂಕುಲ ದೌಷ್ಯಂತೀ ಭರತರದು. ಇದಕ್ಕಿಂತ ಹೆಚ್ಚಿನ ಮಹತ್ವದ ಸಂಗತಿಯೆಂದರೆ, ಹಿಂದುಸ್ತಾನಕ್ಕೆ ಭರತಭೂಮಿ ಎಂಬ ಹೆಸರು ಬಂದದ್ದು ಈ ಋಗ್ವೇದೀಯ ಭರತರಿಂದಲೇ ಹೊರತು ದೌಷ್ಯಂತೀ ಭರತನಿಂದಲ್ಲ. ಇದು ಭಾಗವತ ಪುರಾಣದಲ್ಲಿನ ಈ ಶ್ಲೋಕದಿಂದ ಸ್ಪಷ್ಟವಾಗುತ್ತದೆ:

ಪ್ರಿಯಂವದೋ ನಾಮ ಸುತೋ ಮನೋಃ ಸ್ವಾಯಂಭುವಸ್ಯ ಹ।
ತಸ್ಯಾಗ್ನೀಪ್ರಸ್ತತೋ ನಾಭಿಋಷಭಶ್ವ ಸುತಸ್ತತಃ॥
ಅವತೀರ್ಣ ಪುತ್ರಶತಂ ತನ್ಯಾಸೀದ್ರ ಹ್ಯಪಾರಗಮ್।
ತೇಷಾಂ ವೈ ಭರತೋ ಜ್ಯೇಷ್ಠೋ ನಾರಾಯಣಪರಾಯಣಃ।
ವಿಖ್ಯಾತಂ ವರ್ಷಮೇತಧ್ಯಾನ್ಯಾಮ್ನಾ ಭಾರತಮುತ್ತಪ್ರಮ್॥

"ಸ್ವಯಂಭುವಿನ ಮಗನಾದ ಮನುವಿಗೆ ಪ್ರಿಯಂವದನೆಂಬ ಮಗನಿದ್ದ. ಆತನ ಮಗನು ಅಗ್ನಿಧ್ರ : ಆತನ ಮಗ ನಾಭಿ; ನಾಭಿಗೆ ರಿಷಭನೆಂಬ ಮಗನು. ಆತನಿಗೆ ನೂರು ಮಂದಿ ಮಕ್ಕಳು – ಅವರೆಲ್ಲರೂ ವೇದಪಾರಂಗತರು. ಅವರಲ್ಲಿ ಭರತನೆಂಬುವವನೇ ಹಿರಿಯ. ಆತನು ನಾರಾಯಣನ ಭಕ್ತ. ಆತನಿಂದಲೇ ಈ ಶ್ರೇಷ್ಠ ಭೂಮಿ ಭಾರತವೆಂಬ ಹೆಸರನ್ನು ಪಡೆಯಿತು."

ಇದರಿಂದ ಎಂಥ ಸುಪ್ರಸಿದ್ಧ ರಾಜರ ವಂಶಕ್ಕೆ ಈ ಶೂದ್ರ ಸುದಾಸನು ಸಂಬಂಧಪಟ್ಟಿದ್ದ ಎನ್ನುವುದು ವಿದಿತವಾಗುತ್ತದೆ.

ಇನ್ನು ಮುಂದೆ ನಾವು ಶೋಧಿಸಬೇಕಿರುವುದು : ಸುದಾಸನು ಆರ್ಯನಾಗಿದ್ದನೇ ಎಂಬ ಪ್ರಶ್ನೆಗೆ ಉತ್ತರ. ಭರತರು ಆರ್ಯರಾಗಿದ್ದರು. ಅಂದಮೇಲೆ, ಸುದಾಸನೂ ಆರ್ಯನಾಗಿರಲೇಬೇಕು. ಋಗ್ವೇದದ vii.೧೮.೭ನ್ನು ನೋಡಿದರೆ ತೃತ್ಸುಗಳು ಆರ್ಯರೊಡನೆ ಹೊಂದಿದ ಸಂಬಂಧ ಸುದಾಸನ ಆರ್ಯಮೂಲದ ಬಗೆಗೆ ಶಂಕೆಯನ್ನುಂಟುಮಾಡುತ್ತದೆ. ಈ ಶ್ಲೋಕದ ತಾತ್ಪರ್ಯವೇನೆಂದರೆ, ಇಂದ್ರನು ಆರ್ಯರ ಗೋವುಗಳನ್ನು ತೃತ್ಸುಗಳಿಂದ ರಕ್ಷಿಸಿ ತೃತ್ಸುಗಳನ್ನು ಕೊಂದನು ಎಂದು. ಇದರಿಂದ ತೃತ್ಸುಗಳು ಆರ್ಯರ ವೈರಿಗಳಾಗಿದ್ದರು ಎಂಬ ಸುಳಿವು ದೊರೆಯುತ್ತದೆ. ಇಲ್ಲಿ ತೃತ್ಸುಗಳು ಆರ್ಯೇತರರು ಎಂದು ಕಾಣಿಸಲ್ಪಟ್ಟುದರಿಂದಾಗಿ ಗ್ರಿಫಿಥ್ಸ್‌ರು ವಿಚಲಿತರಾಗಿದ್ದಾರೆ. ಇದು ಶಬ್ದಶಃ ಭಾಷಾಂತರದಿಂದಾದ ಪ್ರಮಾದವಿರಬೇಕು ಎಂದು ಊಹಿಸಿ ಈ ತೊಂದರೆ ನಿವಾರಿಸಲು, ಅವರು ಇಲ್ಲಿ 'ಗೋವುಗಳು' ಎಂಬ ಪದವನ್ನು 'ಸಖ' ಎಂದು ಅರ್ಥೈಸುತ್ತಾರೆ.[೧] ಋಗ್ವೇದವು ಎರಡು ತೆರನಾದ ಆರ್ಯರ ಕತೆಯನ್ನೊಳಗೊಂಡಿದೆ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಂಡದ್ದಾದರೆ

೧. ಅವರ ಭಾಷಾಂತರ ಹೀಗಿದೆ : "ಆದರೂ ಆರ್ಯರ ಸಖನು ತೃತ್ಸುಗಳೆಡೆಗೆ ಯುದ್ಧಾನಂತರದ ಪ್ರಾಪ್ತಿಯ ಹಾಗೂ ಕಲಿಗಳ ಯುದ್ಧ ಮೋಹದಿಂದಾಗಿ, ಅವರ ಮುಂದಾಳಾಗಲು ಬಂದ."

ಇದು ಅವಶ್ಯಕವಾಗುವುದೇನೋ ಸೈ, ಆದರೆ ಈ ಭೇದ ಉಂಟಾದದ್ದು ಧರ್ಮದಿಂದಲೋ ಜನಾಂಗೀಯತೆಯಿಂದಲೋ ಹೇಳುವುದು ಕಷ್ಟ. ಈ ಸಂಗತಿಯ ಬೆಳಕಿನಲ್ಲಿ ಆ ಪದ್ಯವನ್ನು ನೋಡಿದುದಾದರೆ, ಅದರರ್ಥ ಅಷ್ಟೇ ಆಗುತ್ತದೆ. ಏನೆಂದರೆ ಅದು ಬರೆಯಲ್ಪಟ್ಟ ಕಾಲದಲ್ಲಿ ತೃತ್ಸುವೆಂದೇ ಪರಿಗಣಿಸಲಿ ಅಥವಾ ಭರತನೆಂದೇ ಪರಿಗಣಿಸಲಿ, ಆತ ಆರ್ಯನಾಗಿದ್ದುದು ನಿರ್ವಿವಾದ.

ಈಗ ಕೊನೆಯ (ಕೊನೆಯದಾದರೂ ಅದರ ಮಹತ್ವ ಕನಿಷ್ಠವೇನಲ್ಲ) ಪ್ರಶ್ನೆಯನ್ನು ವಿವೇಚಿಸೋಣ: 'ಶೂದ್ರ'ವೆಂಬ ಪದ ಏನನ್ನು ಸೂಚಿಸುತ್ತದೆ. ಸುದಾಸನು ಶೂದ್ರನಾಗಿದ್ದನು ಎಂಬ ಈ ಹೊಸ ಶೋಧದ ಬೆಳಕಿನಲ್ಲಿ ಆ ಶಬ್ದಕ್ಕೆ ಹೊಸದೊಂದು ಅರ್ಥವೇ ಸಿಗುತ್ತದೆ. ಈ ಶಬ್ದವು ಗುಲಾಮೀ ಅಂತಸ್ತಿನ ಮೂಲ ನಿವಾಸಿಗಳ ವರ್ಗವನ್ನು ಸೂಚಿಸುವ ಹೆಸರಾಗಿತ್ತು ಎಂದು ನಂಬುವ ಹಳೆಯ ಕಾಲದ ಪಂಡಿತರಿಗೆ ಈ ಹೊಸ ಶೋಧ ಅವರು ನಡೆಸಿದ ಯಾವ ಸಂಶೋಧನೆಗಳೂ ಉತ್ತರಿಸದ ಸೋಜಿಗವಾಗಿ ಪರಿಣಮಿಸಬಹುದು. ನನ್ನ ಸ್ಥಿತಿಯೂ ಅಷ್ಟೆ. ಕಾರಣವೇನೆಂದರೆ, ವೇದಕಾಲದ ಆರ್ಯರ ಸಾಮಾಜಿಕ ಸಂಘಟನೆ ಇನ್ನೂ ಅಭ್ಯಸಿಸಲ್ಪಡಬೇಕಿದೆ. ಆದಿಕಾಲದ ಮಾನವ ಜನಾಂಗಗಳ ಅಭ್ಯಾಸದಿಂದ ನಾವು ತಿಳಿಯುವುದೇನೆಂದರೆ ಅವು ಗುಂಪುಗಳಾಗಿ ಸಂಘಟಿಸಲ್ಪಟ್ಟಿರುತ್ತಿದ್ದುವು, ಇಲ್ಲವೆ ಗುಂಪುಗಳಾಗಿ ಕಾರ್ಯಮಾಡುತ್ತಿದ್ದವು. ಗುಂಪುಗಳು ವಿವಿಧ ಬಗೆಯವಾಗಿದ್ದವು : ಕುಲಗಳು, ಗೋತ್ರಗಳು, ದಾಯಾದಿ–ಕುಲಗಳು ಹಾಗೂ ಪಂಗಡಗಳು. ಕೆಲವು ಸಂದರ್ಭಗಳಲ್ಲಿ, ಬುಡಕಟ್ಟೇ ಪ್ರಾಥಮಿಕ ಘಟಕವಾಗಿತ್ತು; ಇನ್ನು ಬೇರೆ ಸಂದರ್ಭಗಳಲ್ಲಿ ಕುಲವು ಪ್ರಾಥಮಿಕ ಘಟಕವಾಗಿತ್ತು. ಇನ್ನಿತರ ಸಂದರ್ಭಗಳಲ್ಲಿ, ಗೋತ್ರವೇ ಈ ಘಟಕವಾಗಿತ್ತು. ಕೆಲವು ಸಂದರ್ಭಗಳಲ್ಲಿ, ಬುಡಕಟ್ಟುಗಳು ಬಣಗಳಾಗಿ ಇಬ್ಭಾಗವಾಗಿವೆ. ಇನ್ನು ಬೇರೆ ಸಂದರ್ಭಗಳಲ್ಲಿ, ಬಣಗಳೇ ಇಲ್ಲ. ಒಂದೇ ಒಂದು ಬುಡಕಟ್ಟು ಆಗಿದ್ದಂಥ ಸ್ಥಿತಿ.

ಕುಲವೆಂದರೆ ಒಬ್ಬನೇ ಒಬ್ಬ ಪೂರ್ವಜನ ವಂಶಜರಿಗೆ ವ್ಯಾಪಿಸಿದ್ದು, ಅವರನ್ನೆಲ್ಲ ಒಂದೇ ವಂಶದವರೆಂಬ ನಂಟು ಭಾವನೆ ಬೆಸದಿರುತ್ತದೆ. ಸಾಮಾಜಿಕ ಹಾಗೂ ಧಾರ್ಮಿಕ ಆಚರಣೆಗಳು ಒಂದೇ ಆಗಿರುವ ಎರಡು ಕುಲಗಳು ಗೋತ್ರಗಳೆಂಬ ಭ್ರಾತೃತ್ವ ಸಂಬಂಧ ಪಡೆಯಬಹುದು. ಎರಡು ಗೋತ್ರಗಳಲ್ಲಿನ ಬೆಸುಗೆ ಅಷ್ಟೊಂದು ಗಟ್ಟಿಮುಟ್ಟಾದದ್ದು ಆಗಿರಲಿಕ್ಕಿಲ್ಲ. ಅಂದರೆ ಅದು ಕಟ್ಟುನಿಟ್ಟಾಗಿರದೆ, ಒಂದು ತರಹದ ಸ್ನೇಹಪ್ರಾಶಸ್ತ್ಯ ಎನ್ನುವಂಥ ಸಂಬಂಧವಾಗಿರಬಹುದು. ಇದೇ ಬಣ ಮುಂದೆ ಇಬ್ಭಾಗವಾಗಿ ಒಂದೊಂದು ದಾಯಾದಿಕುಲವೆಂಬ ರೂಪ ತಾಳಬಹುದು. ಆದರೆ ಇದು ಇಬ್ಭಾಗವಾಗುವ ಒಂದು ಪ್ರಕ್ರಿಯೆ ಇಲ್ಲದೆಯೂ ಎರಡು ಕುಲಗಳು ಒಂದೇ ಕುಲದ ಶಾಖೆಗಳಾಗಿರಬಹುದು. ಈ ಎಲ್ಲ ಸಂಘಟನಾ ರೂಪಗಳು – ಅದು ಕುಲವಿರಲಿ, ಗೋತ್ರವಿರಲಿ, ಸೋದರಸಂಬಂಧಿ ಬಣವಿರಲಿ ಅಥವಾ ಬುಡಕಟ್ಟಿರಲಿ – ರಕ್ತಸಂಬಂಧದ ನಂಟಿನ ಮೇಲೆ ನಿಂತಿವೆ.

ವೇದ ಕಾಲದ ಆರ್ಯರು ಇಂಥದೇ ಯಾವುದೋ ಒಂದು ಸಾಮಾಜಿಕ ಸಂಘಟನೆ ಉಳ್ಳವರಾಗಿದ್ದರು. ಇದು ನಾಮಕರಣ ಪದ್ಧತಿಯಿಂದಲೇ ಸ್ಪಷ್ಟವಾಗುತ್ತದೆ. ಪ್ರೊ. ಸೆನಾರ್ಟರು[೧] ತಮ್ಮ ಗ್ರಂಥದಲ್ಲಿ ಇದನ್ನು ಎತ್ತಿ ತೋರಿಸಿದ್ದಾರೆ :

> *"ವೈದಿಕ ಮಂತ್ರಗಳು ನೀಡುವ (ಸಮಕಾಲೀನ) ಸಾಮಾಜಿಕ ಅಥವಾ ಭೌತಿಕ ಜೀವನದ ವಿವರಗಳು ತೀರ ಅಸ್ಪಷ್ಟವಾಗಿವೆ. ನಾವು ಅವುಗಳ*

---

೧. *Castes in India*, Emile Senart, p. ೧೯೨.

> *ಮೂಲಕ ಇಷ್ಟನ್ನಾದರೂ ತಿಳಿಯುತ್ತೇವೆ : ಆರ್ಯ ಜನತೆಯು ಬುಡಕಟ್ಟುಗಳು ಅಥವಾ ಸಣ್ಣ ಜನಪದಗಳೆಂಬ ಅನೇಕ ಗುಂಪುಗಳಲ್ಲಿ ಭಾಗವಾಗಿದ್ದಿತು, ಎಂದು. ಇವುಗಳು ರಕ್ತಸಂಬಂಧದಿಂದ ಬೆಸೆಯಲ್ಪಟ್ಟ ಕುಲಗಳಲ್ಲಿ ವಿಭಜನೆಗೊಂಡವು. ಈ ಬಾಬತ್ತಿನಲ್ಲಿ ಋಗ್ವೇದದ ಪರಿಭಾಷೆ ನಿರ್ಣಾಯಕವಲ್ಲದಿದ್ದರೂ ಒಂದು ಸಾಮಾನ್ಯ ಸಂಗತಿ ಮಾತ್ರ ಸ್ಪಷ್ಟ. ಅಥರ್ವವೇದದಲ್ಲಿ 'ಸುಜಾತ' ಅಂದರೆ 'ಜಾತಿಬಂಧು' ಅಥವಾ ರಕ್ತ ಸಂಬಂಧಿ ಎಂಬರ್ಥ. 'ಒಂದೇ ಕುಲದವ' ಎಂಬರ್ಥದಲ್ಲೂ ಬಳಕೆಯಾಗಿದೆ. ಇನ್ನೂ ಹೆಚ್ಚಿನ ಅರ್ಥವ್ಯಾಪ್ತಿಯನ್ನು ಹೊಂದಿದ 'ಜನ' ಎಂಬ ಪದವು ಅವೆಸ್ತಾದಲ್ಲಿನ 'ಕುಲಕ್ಕೆ' ಸಮಾನವಾದ 'ಝಂಟು', ಹಾಗೂ 'ಜಾತಿ'ಯನ್ನು ನೆನಪಿಸುತ್ತದೆ. ಕುಲ ಅಥವಾ ಬುಡಕಟ್ಟಿನ ವಿಭಾಗಗಳಿಗೆ ವ್ರಜನ, ವ್ರಜ, ವ್ರತ ಎಂಬ ಸಮಾನಾರ್ಥಕ ಪದಗಳು ಬಳಕೆಯಾದುದೂ ಕಂಡುಬರುತ್ತದೆ. ಋಕ್ಕುಗಳು ರಚಿತವಾದ ಕಾಲಖಂಡದಲ್ಲಿ ಆರ್ಯಜನತೆಯು ಒಂದು ವ್ಯವಸ್ಥೆಯ ಅಂಗವಾಗಿ ಜೀವಿಸಿದ್ದಂತೆ, ಹಾಗೂ ಈ ವ್ಯವಸ್ಥೆ ಕುಲ ಅಥವಾ ಅದಕ್ಕೂ ಕೆಳಗಣ, ಅಥವಾ ಅಂಥದೇ ಆದ ತಂಡದ ಸಂಪ್ರದಾಯಗಳಿಗೆ ಬದ್ಧವಾಗಿತ್ತು. ಈ ವ್ಯವಸ್ಥೆ ಭಿನ್ನ ಭಿನ್ನ ಹೆಸರುಗಳಿಂದ ಸೂಚಿತವಾಗಿರುವುದನ್ನು ನೋಡಿದರೆ ಈ ಸಂಘಟನೆ ಇನ್ನೂ ನೆಲೆನಿಂತಿರಲಿಲ್ಲ (ಎಂದು ತೋರುತ್ತದೆ).*

ಈ ಪದಗಳಲ್ಲಿ ಯಾವುದು ಕುಲಕ್ಕೆ, ಯಾವುದು ಬಣಕ್ಕೆ, ಯಾವುದು ಬುಡಕಟ್ಟಿಗೆ[೧] ಸಮಾನವಾಗಿತ್ತೆಂಬುದನ್ನು ನಿರ್ಧರಿಸುವುದಕ್ಕೆ ಬೇಕಾದ ಮಾಹಿತಿ ನಮಗೆ ಲಭ್ಯವಿಲ್ಲ. ವಸ್ತುಸ್ಥಿತಿ ಹೀಗಿದ್ದಾಗ 'ಶೂದ್ರ'ವೆಂಬುದು ಒಂದು ಕುಲದ ಹೆಸರಾಗಿತ್ತೋ, ಅಥವಾ ಬಣ ಇಲ್ಲವೆ ಬುಡಕಟ್ಟಿನ ಹೆಸರಾಗಿತ್ತೋ ಎಂದು ಹೇಳುವುದು ಕಠಿಣ. ಈ ಸಂಬಂಧದಲ್ಲಿ ಶತಪಥಬ್ರಾಹ್ಮಣದ ಒಂದು ಪದ್ಯಭಾಗವನ್ನು ವ್ಯಾಖ್ಯಾನಿಸುತ್ತಾ ಪ್ರೊ. ವೀಬರರು ವ್ಯಕ್ತಮಾಡಿದ ಅಭಿಪ್ರಾಯವನ್ನು ಗಮನಿಸುವುದು ಸ್ವಾರಸ್ಯಕರವಾದೀತು. ಪ್ರಸ್ತುತ ಪದ್ಯ ಭಾಗವು ಯಜ್ಞವನ್ನು ಆಚರಿಸಲು ಯಜಮಾನನನ್ನು ಕರೆಯುವುದಕ್ಕೆ ಉಪಯೋಗಿಸಲ್ಪಡುವ ವಿವಿಧ ಸಂಬೋಧನಾ ಪದಗಳ ಬಗೆಗಿದೆ. ಆತ ಬ್ರಾಹ್ಮಣನಾಗಿದ್ದರೆ 'ದಯಮಾಡಿ' ಎನ್ನಬೇಕು; ಕ್ಷತ್ರಿಯನಾಗಿದ್ದರೆ 'ಇಲ್ಲಿಗೆ ಬೇಗ ಬನ್ನಿ ಎನ್ನಬೇಕು'; ಅದೇ ಪ್ರಕಾರ ವೈಶ್ಯನಾಗಿದ್ದರೆ ಇಲ್ಲಿಗೆ 'ಬೇಗ ಬನ್ನಿ ಎನ್ನಬೇಕು'; ಶೂದ್ರನಾಗಿದ್ದರೆ 'ಇಲ್ಲಿಗೆ ಓಡಿ ಬನ್ನಿ' ಎನ್ನಬೇಕು.

---

೧. ಅವುಗಳ ಬದಲಾಗುತ್ತಿರುವ ಮೈತ್ರಿಕೂಟಗಳನ್ನು ನೋಡಿದಾಗ ಆರ್ಯಬುಡಕಟ್ಟುಗಳು ಸೋದರಸಂಬಂಧಿ ಬಣಗಳಾಗಿದ್ದುವೆಂದು ತೋರುತ್ತದೆ.

ಪ್ರೊ. ವೀಬರರು ಹೀಗೆ ಹೇಳುತ್ತಾರೆ,[೧]

> *"ಇಡೀ ಪದ್ಯಭಾಗ ಬಹಳ ಮಹತ್ವದ್ದಾಗಿದೆ, ಯಾಕೆಂದರೆ ಅದು (ಈ ಪತ್ರಿಕೆಯ ಮೊದಲ ಸಂಪುಟದ ಪುಟ ೮೩ರ ಮೇಲೆ ಉಕ್ತವಾಗಿರುವ ರಾಥ್ ಅವರ ಅಭಿಪ್ರಾಯಕ್ಕೆ ವಿರುದ್ಧವಾಗಿ) ಶೂದ್ರರಿಗೆ ಆರ್ಯರ ಪವಿತ್ರ ಯಜ್ಞಯಾಗಾದಿಗಳಿಗೆ ಪ್ರವೇಶವಿತ್ತು; ಅವರು ಆರ್ಯರ ಭಾಷೆಯನ್ನು ಆಡದಿದ್ದರೂ, ತಿಳಿದುಕೊಳ್ಳಬಲ್ಲವರಾಗಿದ್ದರು ಎಂಬುದನ್ನು ಎತ್ತಿ ತೋರಿಸುತ್ತದೆ. ಎರಡನೆಯದಾಗಿ ಪ್ರಸ್ತಾಪಿಸಲ್ಪಟ್ಟ ಅಂಶ ಖಚಿತವಲ್ಲದಿದ್ದರೂ, ಇಷ್ಟು ಮಾತ್ರ ಸಂಭಾವ್ಯ: ಶೂದ್ರರು ಹಿಂದುಸ್ತಾನದಲ್ಲಿ ಇತರರು ಬರುವ ಮೊದಲು ವಲಸೆ ಬಂದ ಒಂದು ಆರ್ಯ ಬುಡಕಟ್ಟು. ಆದ್ದರಿಂದ ನನ್ನ ಅಭಿಪ್ರಾಯವೂ ಶೂದ್ರರನ್ನು ಹೀಗೆಂದು ಪರಿಗಣಿಸುವವರ ಅಭಿಪ್ರಾಯದತ್ತ ವಾಲುತ್ತದೆ."*

ಶೂದ್ರರು ಆರ್ಯರಾಗಿದ್ದರೆಂಬ ಆತನ ತೀರ್ಪು ಹೇಳಬೇಕಾದ್ದನ್ನು ಅತ್ಯಂತ ಪರಿಣಾಮಕಾರಿಯಾಗಿ ಹೇಳಿದಂತಿದೆ. ಒಂದೇ ಒಂದು ಸಂದೇಹಾಸ್ಪದ ವಿವರವೆಂದರೆ ಶೂದ್ರರು ಒಂದು ಬುಡಕಟ್ಟು ಆಗಿದ್ದರೇ ಎಂಬ ಪ್ರಶ್ನೆ. ಅವರು ಆರ್ಯರಾಗಿದ್ದರು ಹಾಗೂ ಕ್ಷತ್ರಿಯರಾಗಿದ್ದರು ಎಂಬುದು ಸಂದೇಹಾತೀತವಾಗಿದೆ. ♦

---

೧. Muir, Vol. I, p. ೩೬೬.

# ಅಧ್ಯಾಯ ೮

# ವರ್ಣಗಳ ಸಂಖ್ಯೆ – ಮೂರೋ ನಾಲ್ಕೋ?

## I

ಇಂಡೋ–ಆರ್ಯನ್ (ಭಾರತೀಯ ಆರ್ಯ) ಸಮಾಜದಲ್ಲಿ ಮೊದಲಿನಿಂದಲೂ ನಾಲ್ಕು ವರ್ಣಗಳಿದ್ದವು ಎಂಬ ಅಭಿಪ್ರಾಯ ಹಿಂದುಗಳಲ್ಲಿ ಎಲ್ಲ ವರ್ಗದವರಿಂದ, ಸಾರ್ವತ್ರಿಕವಾಗಿ, ಸ್ವೀಕೃತವಾದಂಥದ್ದು: ಅದೇ ರೀತಿ ಐರೋಪ್ಯ ವಿದ್ವಾಂಸರಿಂದಲೂ. ಹಿಂದಿನ ಅಧ್ಯಾಯದಲ್ಲಿ ಮಂಡಿಸಲಾದ ಸಿದ್ಧಾಂತವನ್ನು, ಅಂದರೆ ಶೂದ್ರರು ಕ್ಷತ್ರಿಯರಾಗಿದ್ದರು ಎಂಬ ಪ್ರತಿಪಾದನೆಯನ್ನು, ಒಪ್ಪಿದ್ದಾದರೆ, ಈ ಊಹಾಧಾರಿತ ಪ್ರತಿಪಾದನೆ (ಅಂದರೆ, ವರ್ಣಗಳು ನಾಲ್ಕು ಎಂಬುದು) ಸುಳ್ಳೆಂದು ಸಿದ್ಧವಾಗುತ್ತದೆಯಲ್ಲದೆ ಭಾರತೀಯ–ಆರ್ಯ ಸಮಾಜದಲ್ಲಿ ಮೂರೇ ಮೂರು–ಬ್ರಾಹ್ಮಣ, ಕ್ಷತ್ರಿಯ, ವೈಶ್ಯ – ಎಂಬ ವರ್ಣಗಳಿದ್ದ ಕಾಲವೂ ಒಂದಿದ್ದಿತು ಎಂಬುದೂ ಸಿದ್ಧವಾಗುತ್ತದೆ. ಹೀಗಾಗಿ ನಮ್ಮ ಸಿದ್ಧಾಂತ ಒಂದು ಸಮಸ್ಯೆಯನ್ನು ಪರಿಹರಿಸುವಲ್ಲಿ ಇನ್ನೊಂದನ್ನು ಸೃಷ್ಟಿಸುತ್ತದೆ. ಬೇರೆ ಯಾರಿಗಾದರೂ ಈ ಸಮಸ್ಯೆಯ ಮಹತ್ವ ಕಾಣುತ್ತದೆಯೋ ಇಲ್ಲವೋ, ನನಗಂತೂ ಕಾಣುತ್ತದೆ. ನಾನು ಈ ಸಂಗತಿಯ ಬಗೆಗೂ ಅರಿವುಳ್ಳವನಾಗಿದ್ದೇನೆ. ಏನೆಂದರೆ ನಾನು ಮೊದಲಲ್ಲಿ ಮೂರೇ ವರ್ಣಗಳಿದ್ದುವು ಎಂಬುದನ್ನು ಸಿದ್ಧಮಾಡುವುದರಲ್ಲಿ ಯಶಸ್ವಿಯಾಗದೆ, ಶೂದ್ರರು ಕ್ಷತ್ರಿಯರಾಗಿದ್ದರು ಎಂಬ ನನ್ನ ಸಿದ್ಧಾಂತ ಸಂಶಯಾತೀತವಾಗಿ ಸ್ಥಾಪಿಸಲ್ಪಟ್ಟಿತು ಎನ್ನಲಾಗುವುದಿಲ್ಲ.

ಒಂದು ಸಮಸ್ಯೆಯನ್ನು ನಿವಾರಿಸುವ ಯತ್ನದಲ್ಲಿ ಇನ್ನೊಂದನ್ನು ಸೃಷ್ಟಿಸುವ ಸಿದ್ಧಾಂತಕ್ಕೆ ನಾನು ಬಂದು ಮುಟ್ಟಿದುದು ದುರದೃಷ್ಟಕರ ಸಂಗತಿ ಎನ್ನಬಹುದಾದರೂ ಭಾರತೀಯ–ಆರ್ಯರಲ್ಲಿ ಮೂಲತಃ ಮೂರೇ ವರ್ಣಗಳಿದ್ದವು ಎಂದು ಪ್ರತಿಪಾದಿಸಲು ಸುಸಂಬದ್ಧವಾದ ಹಾಗೂ ಗಟ್ಟಿಮುಟ್ಟಾದ ಪುರಾವೆ ನನ್ನಲ್ಲಿದ್ದುದು ನನ್ನ ಅದೃಷ್ಟ ಎಂದೇ ಹೇಳಬೇಕು.

ನಾನು ಅವಲಂಬಿಸಿರುವ ಮೊದಲ ಪುರಾವೆಯೆಂದರೆ ಋಗ್ವೇದವೇ. ಋಗ್ವೇದದ ಕಾಲದಲ್ಲಿ ವರ್ಣಗಳೇ ಇರಲಿಲ್ಲ ಎಂದು ವಾದಿಸುವ ವಿದ್ವಾಂಸರೂ ಇದ್ದಾರೆ. ಈ ವಾದಕ್ಕೆ ಆಧಾರವೆಂದರೆ ಪುರುಷಸೂಕ್ತವು ಒಂದು ಸೇರಿಸಲ್ಪಟ್ಟ ಭಾಗ–ಋಗ್ವೇದದ ರಚನೆ ಮುಕ್ತಾಯಗೊಂಡ ಮೇಲೆ ಬಹಳ ಕಾಲಾನಂತರ ಸೇರಿಸಲ್ಪಟ್ಟದ್ದು–ಎಂಬ ವಾದ. ಪುರುಷಸೂಕ್ತ ಒಂದು ಸೇರಿಸಿದ ಭಾಗವೆಂದೊಪ್ಪಿಕೊಂಡರೂ, ಋಗ್ವೇದದ ಕಾಲದಲ್ಲಿ ವರ್ಣಗಳಿರಲಿಲ್ಲ ಎಂಬ ಮಾತನ್ನು ಒಪ್ಪಿಕೊಳ್ಳುವುದು ಕಷ್ಟ. ಇಂಥ ವ್ಯವಸ್ಥೆ ಋಗ್ವೇದದ ಪಾಠಕ್ಕೇನೇ ವಿರೋಧವಾದದು. ಯಾಕೆಂದರೆ, ಪುರುಷಸೂಕ್ತ ಇಂತಿರಲಿ, ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು – ಇವರನ್ನು ಋಗ್ವೇದವು ಒಂದಲ್ಲ ಹಲವಾರು ಸಲ ಪ್ರಸ್ತಾಪಿಸುತ್ತದೆ. ಬ್ರಾಹ್ಮಣರು ಪ್ರತ್ಯೇಕ ವರ್ಣವೆಂಬ ಮಾತು ಹದಿನೈದು ಸಲ ಬಂದಿದೆ. ಶೂದ್ರರು ಪ್ರತ್ಯೇಕ ವರ್ಣವಾಗಿದ್ದಿದ್ದರೆ, ಋಗ್ವೇದವು ಅವರ ಬಗೆಗೆ ಪ್ರಸ್ತಾಪಿಸದೆ ಇರುವುದಕ್ಕೆ ಕಾರಣವಿಲ್ಲ. ಋಗ್ವೇದದ ಆಧಾರದ ಮೇಲೆ ನಾವು ಯಾವ ತೀರ್ಮಾನಕ್ಕೆ ಬರಬಹುದೆಂದರೆ, ಆಗ ಯಾವ ವರ್ಣ ವ್ಯವಸ್ಥೆಯೇ ಇರಲಿಲ್ಲ ಎಂಬುದಲ್ಲ; ಆದರೆ, ಆಗ ಮೂರೇ,

ಮೂರು ವರ್ಣಗಳಿದ್ದುವು ಹಾಗೂ ಶೂದ್ರರು ನಾಲ್ಕನೆಯ ಹಾಗೂ ಪ್ರತ್ಯೇಕ ವರ್ಣವೆಂದು ಪರಿಗಣಿಸಲ್ಪಟ್ಟಿರಲಿಲ್ಲ ಎನ್ನಬಹುದು.

ನಾನು ನಂಬಿರುವ ಎರಡನೆಯ ಪುರಾವೆ ಯಾವುದೆಂದರೆ, ಶತಪಥ ಹಾಗೂ ತೈತ್ತಿರೀಯ ಬ್ರಾಹ್ಮಣಗಳ ಸಾಕ್ಷ್ಯ. ಎರಡೂ ಗ್ರಂಥಗಳು ಮೂರೇ ಮೂರು ವರ್ಣಗಳ ಸೃಷ್ಟಿಯ ಬಗೆಗೆ ಪ್ರಸ್ತಾಪಿಸುತ್ತವೆ. ಶೂದ್ರರು ಪ್ರತ್ಯೇಕ ವರ್ಣವಾಗಿ ಸೃಷ್ಟಿಸಲ್ಪಟ್ಟಿರುದುದರ ಬಗೆಗೆ ಅವು ಏನನ್ನೂ ಹೇಳುವುದಿಲ್ಲ.

ಶತಪಥ ಬ್ರಾಹ್ಮಣವು[೧] ಹೇಳುವುದೇನೆಂದರೆ :

> *II.೧.೪.೧೧– " 'ಭೂಃ' ಎಂದುಚ್ಚರಿಸುತ್ತ ಪ್ರಜಾಪತಿಯು ಪೃಥ್ವಿಯನ್ನು ಸೃಷ್ಟಿಸಿದ. 'ಭುವಃ' ಎಂದುಚ್ಚರಿಸುತ್ತ ಆತ ವಾಯುವನ್ನು, 'ಸ್ವಾಃ' ಎಂದುಚ್ಚರಿಸುತ್ತ ಆಕಾಶವನ್ನು, ಸೃಷ್ಟಿಸಿದ. ವಿಶ್ವವು ಈ ಲೋಕಗಳೊಂದಿಗೆ ಸಮವ್ಯಾಪಿಯಾಗಿದೆ. ಅಗ್ನಿ ಇದೆಲ್ಲದರೊಟ್ಟಿಗೆ ಸಂಯೋಜಿಸಲಾಗಿದೆ. 'ಭೂಃ' ಎನ್ನುತ್ತ ಪ್ರಜಾಪತಿಯು ಬ್ರಾಹ್ಮಣನನ್ನು ಸೃಷ್ಟಿಸಿದ. ಭುವಃ ಎನ್ನುತ್ತ ಆತ ಕ್ಷಾತ್ರನನ್ನು ಸೃಷ್ಟಿಸಿದ. ಹಾಗೂ ಸ್ವಾಃ ಎನ್ನುತ್ತ ಆತ ವೈಶ್ಯನನ್ನು ಸೃಷ್ಟಿಸಿದ. ಅಗ್ನಿಯು ಎಲ್ಲದರೊಂದಿಗೆ ಬೆರೆಸಲ್ಪಟ್ಟಿತು. 'ಭೂಃ' ಎನ್ನುತ್ತ ಪ್ರಜಾಪತಿಯು ತನ್ನನ್ನೇ ಸೃಷ್ಟಿಸಿಕೊಂಡ. 'ಭುವಃ' ಎನ್ನುತ್ತ ಆತ ಸಂತತಿಯನ್ನು ನಿರ್ಮಿಸಿದ; 'ಸ್ವಾಃ' ಎನ್ನುತ್ತ ಆತ ಪ್ರಾಣಿವರ್ಗವನ್ನು ಸೃಷ್ಟಿಸಿದ. ಈ ಪ್ರಪಂಚವು (ದೇವನ) ಸ್ವತ್ವ, ಸಂತತಿ ಹಾಗೂ ಪ್ರಾಣಿಸೃಷ್ಟಿಗಳಿಂದಾಗಿದೆ. ಅಗ್ನಿಯು ಎಲ್ಲದರೊಟ್ಟಿಗೆ ಕೂಡಿಸಲ್ಪಟ್ಟಿದೆ."*

ತೈತ್ತಿರೀಯ ಬ್ರಾಹ್ಮಣವು[೨] ಹೀಗೆ ಹೇಳುತ್ತದೆ.

> *III.೧೨.೯.೨– "ಈ ಇಡೀ ವಿಶ್ವವು ಬ್ರಹ್ಮನಿಂದ ಸೃಷ್ಟಿಸಲ್ಪಟ್ಟಿದೆ. ವೈಶ್ಯವರ್ಗವು ಋಕ್ಕುಗಳಿಂದ ನಿರ್ಮಾಣವಾಯಿತೆಂದು ಜನ ಹೇಳುತ್ತಾರೆ. ಕ್ಷತ್ರಿಯನು ಹುಟ್ಟಿಬಂದ ಗರ್ಭ ಯಾವುದೆಂದರೆ ಅದು ಯಜುರ್ವೇದ ಎಂದೂ ಅವರು ಹೇಳುತ್ತಾರೆ. ಸಾಮವೇದದಿಂದ ಬ್ರಾಹ್ಮಣರು ಹುಟ್ಟಿಬಂದರು. ಈ ಮಾತನ್ನು ಪ್ರಾಚೀನರು ತಮ್ಮ ಪೂರ್ವಜರಿಗೆ ಹೇಳಿದರು."*

ನನ್ನ ಪುರಾವೆಯು ಇಲ್ಲಿದೆ. ಅದು ಋಗ್ವೇದದ ಮೇಲೆ ಆಧಾರಿತವಾದ ಅನುಮಾನವೊಂದಾದರೆ, ವೇದಗಳಿಗೆ ಸಮನಾದ ಅಧಿಕಾರವುಳ್ಳ ಎರಡು ಬ್ರಾಹ್ಮಣಗಳಲ್ಲಿ ಬರುವ ಎರಡು ಮಾತುಗಳು. ಎರಡೂ ಶ್ರುತಿಗಳೇ. ಎರಡೂ ನಿಶ್ಚಿತವಾದ, ನಿಖರವಾದ ಮಾತುಗಳಲ್ಲಿ ಹೇಳುವದೇನೆಂದರೆ, ಮೂರೇ ಮೂರು ವರ್ಣಗಳು ಇದ್ದವು ಎಂದು. ಶೂದ್ರರು ನಾಲ್ಕನೆಯ ವರ್ಗವಾಗಿರುವುದೊತ್ತಟ್ಟಿಗಿರಲಿ, ಅವರು ಬೇರೆಯೇ ಹಾಗೂ ವಿಶಿಷ್ಟವಾದ ಒಂದು ವರ್ಣವಾಗಿದ್ದಿರಲಿಲ್ಲ ಎಂದು ಹೇಳುವಲ್ಲಿ ಎರಡಕ್ಕೂ ಸಹಮತ ಇದೆ. ಮೂಲದಲ್ಲಿ ಮೂರೇ ಮೂರು ವರ್ಣಗಳಿದ್ದವು ಹಾಗೂ ಶೂದ್ರರು ಎರಡನೇ ವರ್ಣದ ಒಂದು ಭಾಗವಾಗಿದ್ದರು ಎನ್ನುವ ನನ್ನ ವಾದದ ಪುಷ್ಟಿಗೆ ಇದಕ್ಕಿಂತ ಉತ್ತಮವಾದ ಪುರಾವೆ ಇರಲು ಸಾಧ್ಯವಿಲ್ಲ.

---

೧. Muir, Vol. I, p. ೧೭

೨. Quoted by Muir, Vol. I, p. ೧೭

## II

ನನ್ನ ಪುರಾವೆಯು ಹೀಗಿದೆ. ಇನ್ನೊಂದು ಕಡೆ, ಮೊದಲಿನಿಂದಲೂ ನಾಲ್ಕು ವರ್ಣಗಳಿದ್ದವು ಎಂದು ಹೇಳುವ ಋಗ್ವೇದದ ಪುರುಷಸೂಕ್ತದಲ್ಲಿ ಅಡಕವಾದ ಪುರಾವೆಯಷ್ಟೆ. ಈಗ ನಮ್ಮ ಮುಂದಿರುವ ಪ್ರಶ್ನೆ : ಇವೆರಡರಲ್ಲಿ ಯಾವುದನ್ನು ಸರಿಯಾದುದೆಂದು ಅಂಗೀಕರಿಸುವುದು? ಈ ಪ್ರಶ್ನೆಯನ್ನು ಬಗೆಹರಿಸುವುದು ಹೇಗೆ? ಇದಕ್ಕೆ ಮೀಮಾಂಸೆಯ ನಿಯಮಾವಳಿಯನ್ನು ಅನ್ವಯಿಸಿ ಬಗೆಹರಿಸಲಿಕ್ಕಾಗದು. ಅದನ್ನು ಅನ್ವಯಿಸಿದ ಪಕ್ಷದಲ್ಲಿ, ನಾವು ಹೇಳಿಕೆಗಳನ್ನು ನಾಲ್ಕು ವರ್ಣಗಳಿದ್ದವೆಂಬ ಪುರುಷಸೂಕ್ತದ್ದೊಂದು ಹಾಗೂ ಮೂರು ವರ್ಣಗಳಿದ್ದವೆಂಬ ಎರಡು ಬ್ರಾಹ್ಮಣಗಳಿದ್ದಿನ್ನೊಂದು – ನಿಜವೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಇದೊಂದು ಅಸಂಬದ್ಧ ಸ್ಥಿತಿ. ಈ ವಿಷಯವನ್ನು ನಾವು ಐತಿಹಾಸಿಕ ವಿಮರ್ಶಾತತ್ವಗಳ – ಅಂದರೆ, ಕಾಲಾನುಕ್ರಮತೆ ಅನುಸರಿಸಿ ಹಾಗೂ ನಿರಪೇಕ್ಷ (intrinsic) ವಿಮರ್ಶೆಯ ಬೆಳಕಿನಲ್ಲಿ ನಿರ್ಣಯಿಸಬೇಕು. ಮುಖ್ಯ ಪ್ರಶ್ನೆಯೆಂದರೆ, ಪುರುಷಸೂಕ್ತವು ಮೂಲ ಋಗ್ವೇದಕ್ಕೆ ಸೇರಿಸಲಾದ (ಪ್ರಕ್ಷೇಪಿಸಲ್ಪಟ್ಟ) ಆನಂತರದ ರಚನೆಯೇ ಎಂಬುದು. ಈ ಪ್ರಶ್ನೆಯ ನಿರ್ಧಾರವು ಪುರುಷಸೂಕ್ತದ ಭಾಷೆಯ ಮೇಲೆ ಆಧಾರಿತವಾದುದು–ಅಂದರೆ, ಋಗ್ವೇದದ ಇತರ ಭಾಗದ ಭಾಷೆಯೊಂದಿಗೆ ಹೋಲಿಸಲಾಗಿ ಏನಾದರೂ ವ್ಯತ್ಯಾಸ ಕಂಡುಬರುತ್ತದೆಯೇ? ಅದು (ಸೂಕ್ತವು)ನಂತರದ ರಚನೆಯೆಂಬುದು ವಿದ್ವಾಂಸರೆಲ್ಲರ ಅಭಿಪ್ರಾಯ. Colebrooke[೧] ಎಂಬುವವರು ಹೇಳುವುದೇನೆಂದರೆ :

> *"ಆ ಗಮನಾರ್ಹ ಮಂತ್ರವು (ಪುರುಷಸೂಕ್ತ) ಭಾಷೆಯಲ್ಲಿ, ಛಂದಸ್ಸಿನಲ್ಲಿ ಹಾಗೂ ಶೈಲಿಯಲ್ಲಿ ಅದರ ಜೊತೆಗಿನ ಇನ್ನುಳಿದ ಸ್ತೋತ್ರಗಳಿಗಿಂತ ಭಿನ್ನವಾಗಿದೆ. ಅದರ ಧ್ವನಿಯುಲ್ಲಿ ನಿಜಕ್ಕೂ ಆಧುನಿಕತೆ ಇದೆ. ಅದು ಸಂಸ್ಕೃತ ಭಾಷೆ ಪರಿಷ್ಕರಣಗೊಂಡನಂತರ, ಅದರ ವ್ಯಾಕರಣ ಹಾಗೂ ಲಯ ಪರಿಪೂರ್ಣತೆಯನ್ನು ಮುಟ್ಟಿದ ನಂತರದ ಕಾಲದಲ್ಲಿ ರಚಿತವಾಗಿರಬೇಕು. ಅದು ಒದಗಿಸುವ ಆಂತರಿಕ ಸಾಕ್ಷ್ಯ ಯಾವ ಒಂದು ಮಹತ್ವದ ಸಂಗತಿಯನ್ನು ಸ್ಪಷ್ಟವಾಗಿ ತೋರಿಸುತ್ತದೆ ಎಂದರೆ, ವೇದಗಳ ಸಂಪಾದನೆ ಹಾಗೂ ಅವುಗಳ ಈಗಿನ ಕ್ರಮದಲ್ಲಿನ ಜೋಡಣೆ ಆದದ್ದು, ಸಂಸ್ಕೃತ ಭಾಷೆ ಒಂದು ಪ್ರಾದೇಶಿಕ ಭಾಷೆಯ ಘಟ್ಟದಿಂದ (ಯಾವ ಭಾಷೆಯಲ್ಲಿ ವೇದದ ಅಸಂಖ್ಯಾತ ಮಂತ್ರ ಹಾಗೂ ಸ್ತೋತ್ರಗಳು ರಚಿತವಾಗಿವೆಯೋ ಅಂಥದು) ಸುಸಂಸ್ಕೃತವಾದ, ಹಾಗೂ ಕರ್ಣರಸಾಯನವಾದ ಭಾಷೆ (ಯಾವುದರಲ್ಲಿ ಪವಿತ್ರ ಪುರಾಣ ಕಾವ್ಯಗಳು ಹಾಗೂ ಇತರ ಲೌಕಿಕ ಕಾವ್ಯಗಳು ರಚಿತವಾಗಿವೆಯೋ ಅಂಥದು) ಆಗಿ ವಿಕಸಿತಗೊಂಡನಂತರ ಇರಬೇಕು."*

ಪ್ರೊ. ಮ್ಯಾಕ್ಸ್ ಮುಲ್ಲರ್[೨] ಅವರ ಅಭಿಪ್ರಾಯದ ಮೇರೆಗೆ :

> *"ಹತ್ತನೆಯ ಆಶ್ವಾಸದಲ್ಲಿನ ತೊಂಬತ್ತನೆಯ ಋಕ್ಕು ಸ್ವರೂಪ ಹಾಗೂ ಪದಬಂಧದಲ್ಲಿ ಆಧುನಿಕವಾಗಿದೆ ಎಂಬುವುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಅದರಲ್ಲಿ ಯಜ್ಞದ*

---

೧. Quoted in *Muir,* Vol. I, p. ೧೩

೨. Quoted in *Muir,* Vol. I, p. ೧೩

*ಶಾಸ್ತ್ರೋಕ್ತ ವಿಧಿಗಳನ್ನು ಕುರಿತು ಪ್ರಸ್ತಾಪಗಳಿವೆ. ಹಾಗೂ ಅದು ತತ್ವಜ್ಞಾನದ ಪಾರಿಭಾಷಿಕ ಪದಗಳನ್ನು ಉಪಯೋಗಿಸಿದೆ. ಅಲ್ಲದೆ, ಅದು ಮೂರು ಋತುಗಳನ್ನು– ವಸಂತ, ಗ್ರೀಷ್ಮ ಹಾಗೂ ಶರತ್–ಈ ಕ್ರಮದಲ್ಲಿ ಹೆಸರಿಸುತ್ತದೆ. ಮೇಲಾಗಿ, ನಾಲ್ಕು ವರ್ಣಗಳು ಪ್ರಸ್ತಾಪಿತವಾದಂಥ ಒಂದೇ ಒಂದು ಪದ್ಯ ಋಗ್ವೇದದಲ್ಲಿ ಸಿಕ್ಕುವುದೆಂದರೆ ಇಲ್ಲಿಯೇ. ಇದರ ರಚನೆಯ ಕಾಲ ಆಧುನಿಕವಾಗಿದ್ದುದರ ಬಗ್ಗೆ ಇದರ ಭಾಷೆ ಒದಗಿಸುವ ಪುರಾವೆ ಗಟ್ಟಿಮುಟ್ಟಾದದ್ದು. ಉದಾಹರಣಾರ್ಥವಾಗಿ, ಬೇಸಗೆಯ ಕಾಲವೆಂಬರ್ಥದ 'ಗ್ರೀಷ್ಮ' ಪದ ಋಗ್ವೇದದ ಇನ್ನಾವ ಋಕ್ಕಿನಲ್ಲಿಯೂ ಪ್ರಯೋಗವಾಗಿಲ್ಲ. ಹಾಗೂ, ಚೈತ್ರ ಋತುವಿಗೆ ಇನ್ನೊಂದು ಹೆಸರಾದ 'ವಸಂತ'ವೆಂಬ ಪದ ವೈದಿಕ ಕವಿಗಳ ಮೊದಲಮೊದಲಿನ ಶಬ್ದ ಭಂಡಾರಕ್ಕೆ ಸಂಬಂಧಿಸಿದುದಲ್ಲ. ಅದು ಋಗ್ವೇದದಲ್ಲಿ ಇನ್ನೊಂದೇ ಸಲ ಬರುತ್ತದೆ–ಅದೆಂದರೆ, ಮೂರು ಋತುಗಳು – ಶರತ್, ಹೇಮಂತ (ಚಳಿಗಾಲ) ಹಾಗೂ ವಸಂತ ಎಂಬ ಕ್ರಮದಲ್ಲಿ ಹೆಸರಿಸಲ್ಪಟ್ಟಿರುವ ಋಕ್ಕಿನಲ್ಲಿ (X.೧೬೧.೪)"*

ಪ್ರೋ. ವೀಬರ್[೧] ಅವರು ಈ ರೀತಿ ವ್ಯಾಖ್ಯಾನಿಸಿದ್ದಾರೆ :

*"ಪುರುಷಸೂಕ್ತವು ಋಗ್ವೇದದ ಒಂದು ಋಕ್ಕು ಎಂದು ಪರಿಗಣಿಸಿದಾಗ, ಅದು ಆ ಋಕ್ಕುಗಳ ಸಂಗ್ರಹದಲ್ಲಿ ಅತ್ಯಂತ ಇತ್ತೀಚಿನ ಭಾಗವಾಗಿದೆಯೆಂಬುದು ಅದರ ತಾತ್ಪರ್ಯದ ಮೇಲಿಂದ ತಿಳಿದುಬರುತ್ತದೆ. ಸಾಮಸಂಹಿತೆಯು ಅದರಿಂದ ಯಾವ ಶ್ಲೋಕವನ್ನೂ ತೆಗೆದುಕೊಂಡಿಲ್ಲ ಎಂಬ ಸಂಗತಿಗೆ ಅರ್ಥ ವಿಶೇಷತೆ ಇಲ್ಲದೆ ಇಲ್ಲ. (ನಾನು ತಾತ್ವಿಕ ಮುನ್ನೋಟದಲ್ಲಿ ಮಾಡಿದ ಟೀಕೆಗಳೊಂದಿಗೆ ಈ ಮಾತನ್ನು ಹೋಲಿಸಿ ನೋಡಿರಿ) ಇದರ ವಿಶೇಷತೆ ಎನಿಸಿದ ಮೊದಲ ಅರ್ಚಿಕದ ಏಳನೆಯ ಪ್ರಪಥಕದ ಮೊದಲ ಐದು ಶ್ಲೋಕಗಳನ್ನು ನೈಗೇಯ ಪಂಥ ಎತ್ತಿಕೊಂಡಂತೆ ತೋರುತ್ತದೆ. (ಅದಾಗ್ಯೂ, ಇದು ಅಷ್ಟೊಂದು ನಿಖರವಾದ ಸಂಗತಿಯಾಗಿಲ್ಲ).*

## III

ಇದು ಒಂದು ವಾದಸರಣಿಯಾಯಿತು. ಪುರುಷಸೂಕ್ತವು ಮೊದಲ ರಚನೆಯೋ ನಂತರದ ರಚನೆಯೋ ಎಂಬ ಪ್ರಶ್ನೆಯನ್ನು ನಿರ್ಣಯಿಸುವಲ್ಲಿ ಸಹಾಯಕಾರಿಯಾಗುವ ಇನ್ನೊಂದು ವಾದಸರಣಿಯೂ ಇದೆ. ಆದರೆ ಇದಕ್ಕಾಗಿ ವೇದದ ಎಷ್ಟು ಸಂಹಿತೆಗಳು ಪುರುಷಸೂಕ್ತವನ್ನು ಅಂಗೀಕರಿಸಿವೆ ಎಂಬುದನ್ನು ಕಂಡುಕೊಳ್ಳುವುದು ಅವಶ್ಯ. ಬೇರೆಬೇರೆ ವೇದ ಹಾಗೂ ಸಂಹಿತೆಗಳನ್ನು ಪರಿಶೀಲಿಸಿದಾಗ ಹೊರಡುವ ತಥ್ಯ ಇಷ್ಟು :

ಸಾಮವೇದದಲ್ಲಿ ಪುರುಷಸೂಕ್ತದ ಐದು ಪದ್ಯಗಳು ಮಾತ್ರ ಕಾಣಸಿಗುತ್ತವೆ. ಶುಕ್ಲಯಜುರ್ವೇದದ ಬಗೆಗೆ ಹೇಳುವುದಾದರೆ, ವಾಜಸನೇಯಿ ಸಂಹಿತೆಯಲ್ಲಿ ಅದು ಅಡಕವಾಗಿದೆಯಾದರೂ, ಎರಡರಲ್ಲೂ

---

೧. Quoted in *Muir,* Vol. I, p. 14

ಬಹಳಷ್ಟು ವ್ಯತ್ಯಾಸ ಇದೆ. ಋಗ್ವೇದದಲ್ಲಿ ಕಾಣಬರುವ ರೂಪದಲ್ಲಿ ಪುರುಷಸೂಕ್ತವು ೧೬ ಶ್ಲೋಕಗಳನ್ನು ಮಾತ್ರ ಒಳಗೊಂಡಿದೆ. ಆದರೆ ವಾಜಸನೇಯಿ ಸಂಹಿತೆಯಲ್ಲಿನ ಪುರುಷಸೂಕ್ತವು ೨೨ ಶ್ಲೋಕಗಳನ್ನೊಳಗೊಂಡಿದೆ. ಕೃಷ್ಣ ಯಜುರ್ವೇದದ ಮೂರು ಸಂಹಿತೆಗಳು ಸದ್ಯ ಲಭ್ಯವಿದೆ. ಆದರೆ, ಈ ಮೂರು ತೈತ್ತಿರೀಯ, ಕಠ ಹಾಗೂ ಮೈತ್ರಾಯಣಿ–ಸಂಹಿತೆಗಳ ಪೈಕಿ ಯಾವುದರಲ್ಲೂ ಪುರುಷಸೂಕ್ತಕ್ಕೆ ಸ್ಥಾನವಿಲ್ಲ. ಋಗ್ವೇದದ ಪುರುಷಸೂಕ್ತದ ಯಥಾವತ್ ಪುನರುಕ್ತಿ ಅಥರ್ವವೇದ ಒಂದರಲ್ಲಿ ಮಾತ್ರ ಕಾಣಸಿಗುತ್ತದೆ.

ಬೇರೆ ಬೇರೆ ವೇದಗಳಲ್ಲಿ ಬಂದಿರುವ ಪುರುಷಸೂಕ್ತದ ಪಠ್ಯ ಒಂದೇ ತೆರನಾಗಿಲ್ಲ. ವಾಜಸನೇಯಿ ಸಂಹಿತೆಯ ಆರು ಹೆಚ್ಚಿನ ಶ್ಲೋಕಗಳು ಅದಕ್ಕಷ್ಟೇ ವಿಶಿಷ್ಟವಾದುವು; ಇವುಗಳು ಋಗ್ವೇದದಲ್ಲಾಗಲೀ, ಸಾಮವೇದದಲ್ಲಾಗಲೀ, ಅಥರ್ವವೇದದಲ್ಲಾಗಲೀ ಬರುವ ಪಠ್ಯದಲ್ಲಿಲ್ಲ. ೧೬ನೇ ಶ್ಲೋಕಕ್ಕೆ ಸಂಬಂಧಿಸಿದಂತೆ ಇನ್ನೂ ಒಂದು ವ್ಯತ್ಯಾಸವಿದೆ. ೧೬ನೇ ಶ್ಲೋಕ ಋಗ್ವೇದದಲ್ಲಾಗಲೀ, ಸಾಮವೇದದಲ್ಲಾಗಲೀ, ಅಥರ್ವವೇದದಲ್ಲಾಗಲೀ, ಕಾಣಸಿಗದು. ಅದೇ ರೀತಿ, ಅಥರ್ವವೇದದಲ್ಲಿ ಬರುವ ೧೬ನೇ ಶ್ಲೋಕವು ಋಗ್ವೇದ ಹಾಗೂ ಯಜುರ್ವೇದದಲ್ಲಿಲ್ಲ. ಮೂರು ವೇದಗಳಲ್ಲಿ ಕಾಣಸಿಗುವ ೧೬ ಶ್ಲೋಕಗಳೂ ಒಂದೇ ತರಹದ ಪಠ್ಯವನ್ನು ಹೊಂದಿಲ್ಲ. ಆ ಶ್ಲೋಕಗಳ ಕ್ರಮವೂ ಮೂರು ವೇದಗಳಲ್ಲಿ ಒಂದೇ ತೆರನಾಗಿಲ್ಲವೆಂಬುದನ್ನು ಈ ಕೆಳಗಿನ ಕೋಷ್ಟಕದಿಂದ ಕಂಡುಕೊಳ್ಳಬಹುದು :

| ಯಜುರ್ವೇದ | ಋಗ್ವೇದ | ಸಾಮವೇದ | ಅಥರ್ವವೇದ |
|---|---|---|---|
| ೧ | ೧ | ೩ | ೧ |
| ೨ | ೨ | ೫ | ೪ |
| ೩ | ೩ | ೬ | ೩ |
| ೪ | ೪ | ೪ | ೨ |
| ೫ | ೫ | ೭ | ೯ |
| ೬ | ೮ | * | ೧೦ |
| ೭ | ೯ | * | ೧೧ |
| ೮ | ೧೦ | * | ೧೪ |
| ೯ | ೭ | * | ೧೩ |
| ೧೦ | ೧೧ | * | ೧೨ |
| ೧೧ | ೧೨ | * | ೫ |
| ೧೨ | ೧೩ | * | ೬ |
| ೧೩ | ೧೪ | * | ೭ |
| ೧೪ | ೬ | * | ೮ |
| ೧೫ | ೧೫ | * | ೧೫ |

* ಚಿಹ್ನೆ ಈ ಶ್ಲೋಕಗಳು ಕಾಣಸಿಗವು ಎಂಬುದನ್ನು ಸೂಚಿಸುತ್ತದೆ.

| ಯಜುರ್ವೇದ | ಋಗ್ವೇದ | ಸಾಮವೇದ | ಅಥರ್ವವೇದ |
|---|---|---|---|
| ೧೬ | ೧೬ | * | ೧೬** |
| ೧೭ | * | * | * |
| ೧೮ | * | * | * |
| ೧೯ | * | * | * |
| ೨೦ | * | * | * |
| ೨೧ | * | * | * |
| ೨೨ | * | * | * |

ಮಹತ್ವದ ಅಂಶವೇನೆಂದರೆ, ಒಂದು ವೇಳೆ ಪುರುಷಸೂಕ್ತವು ಪರಂಪರಾಗತವಾದ ಮಹತ್ವವನ್ನು ಪಡೆದ ಪ್ರಾಚೀನ ರಚನೆಯಾಗಿದ್ದಿದ್ದರೆ ಉಳಿದ ವೇದಗಳು ಅದರೊಂದಿಗೆ ಇಂಥ ಸ್ವೇಚ್ಛೆಯಿಂದ ವರ್ತಿಸಬಹುದಿತ್ತೆ? ಅದನ್ನು ಕಡಿದು, ಬಡಿದು ಹೀಗೆ ಬದಲಿಸಬಹುದಿತ್ತೇ?

ಬೇರೆ ಬೇರೆ ವೇದಗಳ ಋಕ್ಕುಗಳಲ್ಲಿ ಪುರುಷಸೂಕ್ತವು ಪಡೆದ ಸ್ಥಾನವೂ ಅರ್ಥಪೂರ್ಣವಾಗಿದೆ. ಋಗ್ವೇದದಲ್ಲಿ ಸಂಕೀರ್ಣಗಳ ವಿಭಾಗದಲ್ಲಿ ಬಂದಿದ್ದರೆ, ಅಥರ್ವವೇದದಲ್ಲಿ ಅದು ಪುರವಣಿಯ ಭಾಗದಲ್ಲಿ ಬಂದಿದೆ. ಅದು ಒಂದು ವೇಳೆ ಋಗ್ವೇದದ ಮೊದಮೊದಲಿನ ರಚನೆ ಆದದ್ದೇ ಆಗಿದ್ದರೆ, ಇಂಥ ಅಮುಖ್ಯ ಸಂಗ್ರಹದಲ್ಲೇಕೆ ಅದಕ್ಕೆ ಸ್ಥಾನವೀಯಬೇಕಾಗಿತ್ತು? ಈ ಅಂಶಗಳ ತಾತ್ಪರ್ಯವೇನು?

ಅವುಗಳು ಸೂಚಿಸುವುದೇನೆಂದರೆ :

(೧) ಪುರುಷಸೂಕ್ತವು ಕೃಷ್ಣಯಜುರ್ವೇದದ ತೈತ್ತಿರೀಯ, ಕಠ ಹಾಗೂ ಮೈತ್ರಾಯಣಿ ಸಂಹಿತೆಗಳಲ್ಲಿ ಅಡಕಗೊಂಡಿಲ್ಲವೆಂದಾಗ ಇವುಗಳ ರಚನೆಯಾದನಂತರವೇ ಆ ಸೂಕ್ತವು ಋಗ್ವೇದಕ್ಕೆ ಸೇರ್ಪಡೆಯಾಯಿತು ಎಂದರ್ಥ.

(೨) ಅದಕ್ಕೆ ವೇದಗಳ ಸಂಕೀರ್ಣ ವಿಭಾಗದಲ್ಲಿ ಹಾಗೂ ಪುರವಣಿಯ ವಿಭಾಗದಲ್ಲಿ ಸ್ಥಾನವೀಯಲ್ಪಟ್ಟಿರಬೇಕಾದರೆ ಆ ಸೂಕ್ತವು ಅನಂತರದ ಘಟ್ಟದಲ್ಲಿ ರಚಿತವಾಗಿದೆಯೆಂಬುದನ್ನು ತೋರಿಸುತ್ತದೆ.

(೩) ಅದರ ಶ್ಲೋಕಗಳನ್ನು ಜೋಡಣೆ ಮಾಡುವಲ್ಲಿ–ಸೇರಿಸುವಲ್ಲಿ ಬಿಡುವಲ್ಲಿ–ವಿವಿಧ ಸಂಹಿತೆಗಳ ಕರ್ತೃಗಳು ಪ್ರದರ್ಶಿಸುವ ಸ್ವಾತಂತ್ರ್ಯವು ಸೂಚಿಸುವುದೇನೆಂದರೆ, ಅವರು ಅದನ್ನು ಪ್ರಾಚೀನ ಮಂತ್ರವೆಂದು ಬಗೆದಿರಲಿಲ್ಲ; ಅದಕ್ಕೆಂದೇ, ಅವರು ಅದನ್ನು ಅದರ ಮೂಲರೂಪದಲ್ಲಿ ಪುನರುಚ್ಚರಿಸಬೇಕಾದುದು ಅವಶ್ಯ ಎಂದು ಬಗೆಯಲಿಲ್ಲ.

ಈ ಎಲ್ಲ ಅಂಶಗಳು ಪುರುಷಸೂಕ್ತವು ನಂತರ ಸೇರಿಸಿದ ಭಾಗವೆಂದು ಬಗೆಯುವ ಪ್ರೊ. ಮ್ಯಾಕ್ಸ್ ಮುಲ್ಲರ್ ಹಾಗೂ ಇತರರ ಅಭಿಪ್ರಾಯವನ್ನು ಪೋಷಿಸುವ ಪುರಾವೆಯನ್ನೊದಗಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ.

---

** ಈ ಚಿಹ್ನೆ ಅವುಗಳು ಒಂದೇ ತೆರನಾಗಿಲ್ಲ ಎಂಬುದನ್ನು ಸೂಚಿಸುತ್ತದೆ.

## IV

ಪುರುಷಸೂಕ್ತದಲ್ಲಿನ ಶ್ಲೋಕಗಳ ರೂಪದಲ್ಲಿಯೂ ಇರುವ ವ್ಯತ್ಯಾಸ ಗಮನಾರ್ಹವಾಗಿದೆ. ೧೧ ಹಾಗೂ ೧೨ನೇ ಶ್ಲೋಕಗಳನ್ನು ಹೊರತುಪಡಿಸಿ ಉಳಿದೆಲ್ಲ ಭಾಗವು ಕಥಾನಿರೂಪಣೆಯ ಶೈಲಿಯಲ್ಲಿದ್ದುದನ್ನು ಪುರುಷಸೂಕ್ತದ ಯಾವ ಓದುಗನೂ ಗಮನಿಸದಿರಲಾರ. ನಾಲ್ಕು ವರ್ಣಗಳ ಉತ್ಪತ್ತಿಯನ್ನು ವಿವರಿಸುವ ಈ ಎರಡು ಶ್ಲೋಕಗಳಾದರೋ ಪ್ರಶ್ನೋತ್ತರ ರೂಪದಲ್ಲಿವೆ. ಇಲ್ಲಿ ಉದ್ಭವಿಸುವ ಪ್ರಶ್ನೆ ಏನೆಂದರೆ: ಕಥಾನಿರೂಪಣಾ ವಿಧಾನವನ್ನು ಬಿಟ್ಟು ಪ್ರಶ್ನೋತ್ತರ ರೂಪದಲ್ಲೇಕೆ ಈ ಎರಡು ಶ್ಲೋಕಗಳು ಸೇರಿಸಲ್ಪಟ್ಟಿರಬೇಕು? ಇದಕ್ಕಿರುವ ಒಂದೇ ಒಂದು ವಿವರಣೆಯೆಂದರೆ, ಲೇಖಕನು ಹೊಸ ವಿಷಯವನ್ನು, ಗಮನ ಸೆಳೆಯುವ ರೀತಿಯಲ್ಲಿ, ಸೇರಿಸಬೇಕೆಂದಿರಬೇಕು. ಇದರಿಂದ ವ್ಯಕ್ತವಾಗುವುದೇನೆಂದರೆ, ಪುರುಷಸೂಕ್ತವು ಋಗ್ವೇದಕ್ಕೆ ನಂತರದ ಸೇರ್ಪಡೆಯಾಗಿರಬೇಕಷ್ಟೇ ಅಲ್ಲದೆ, ಈ ಎರಡು ಶ್ಲೋಕಗಳು ಪುರುಷಸೂಕ್ತಕ್ಕಿಂತಲೂ ನಂತರದವು ಆಗಿರಬೇಕು.

ಕೆಲವು ವಿಮರ್ಶಕರು ಯಾವ ಹಂತಕ್ಕೆ ಹೋಗಿದ್ದಾರೆಂದರೆ, ತಮ್ಮ ಮೇಲ್ಮೆಯನ್ನು ಸಾಧಿಸುವುದಕ್ಕೆ ಒತ್ತಾಸೆಯಾಗಿ ಬ್ರಾಹ್ಮಣರು ಪುರುಷಸೂಕ್ತದ ಸುಳ್ಳು ಸೃಷ್ಟಿ ಮಾಡಿದರು ಎಂಬುದಾಗಿ ಹೇಳುತ್ತಾರೆ. ಪುರೋಹಿತರು ಅನೇಕ ಸುಳ್ಳುಗಳನ್ನು ಸೃಷ್ಟಿ ಮಾಡಿದ್ದುದು ಸರ್ವವಿದಿತ. ಬಿಶಪ್ ಇಜಿಡೋರನಿಂದ ಸಂಗ್ರಹಿಸಲ್ಪಟ್ಟವೆಂದು ತಿಳಿಯಲ್ಪಟ್ಟ ಪೋಪನ ಆದೇಶಗಳೂ, ಹಾಗೂ ರೋಮ್ ಮತ್ತು ಇಟಲಿಯ ಮೇಲೆ ಲೌಕಿಕ ಸತ್ತೆಯನ್ನು ಪೋಪನಿಗೆ ನೀಡಲಾಯಿತೆಂದು ಘೋಷಿಸುವ ಚಕ್ರವರ್ತಿ ಕಾನ್ಸ್ಟಂಟಾಯಿನ್ ದತ್ತಿ – ಇವುಗಳು ಸುಳ್ಳು ಸೃಷ್ಟಿಗಳೆಂದು ಈಗ ಜಗದ್ವಿದಿತವಾಗಿದೆ. ಹಿಂದುಸ್ತಾನದ ಬ್ರಾಹ್ಮಣರು ಕೂಡ ಇಂಥ ಕುತಂತ್ರಗಳಿಂದ ಮುಕ್ತರಿರಲಿಲ್ಲ. 'ಅಗ್ರೆ' ಎಂಬುದನ್ನು 'ಅಗ್ನಿ' ಎಂಬುದಕ್ಕೆ ಬದಲಿಸಿ, ಋಗ್ವೇದವು ವಿಧವೆಯರ ದಹನಕ್ಕೆ ಸಮ್ಮತಿ ನೀಡುವಂತೆ ಮಾಡಿದ್ದುದನ್ನು ಮ್ಯಾಕ್ಸ್ ಮುಲ್ಲರ್‌ನಂತರ ವಿದ್ವಾಂಸನೂ ಎತ್ತಿ ತೋರಿಸಿದ್ದಾನೆ. ಈಸ್ಟ್ ಇಂಡಿಯಾ ಕಂಪನಿಯ ಕಾರಭಾರದ ಕಾಲದಲ್ಲಿ ಒಬ್ಬ ವಾದಿಯ ಪಕ್ಷವನ್ನು ಬಲಪಡಿಸುವುದಕ್ಕೋಸ್ಕರ ಒಂದು ಇಡೀ ಸ್ಮೃತಿಯೇ ಸೃಷ್ಟಿಸಲ್ಪಟ್ಟಿತು ಎಂಬುದು ಸುವಿಖ್ಯಾತ ಸಂಗತಿಯಾಗಿದೆ. ಬ್ರಾಹ್ಮಣರು ಪುರುಷಸೂಕ್ತವನ್ನು – ಅದನ್ನು ಇಡಿಯಾಗಿ ಅಲ್ಲದಿದ್ದರೂ, ಅದರಲ್ಲಿನ ೧೧ ಹಾಗೂ ೧೨ನೆಯ ಶ್ಲೋಕಗಳನ್ನು – ನಾಲ್ಕನೆಯ ವರ್ಣವು ಅಸ್ತಿತ್ವದಲ್ಲಿ ಬಂದ ಮೇಲೆ ಬಹಳ ವರ್ಷಗಳ ನಂತರ, ಚಾತುರ್ವರ್ಣ್ಯವ್ಯವಸ್ಥೆಗೆ ಮನ್ನಣೆ ದೊರಕಿಸಿಕೊಡುವ ಉದ್ದೇಶದಿಂದ ಸುಳ್ಳು ಸೃಷ್ಟಿ ಮಾಡಿದ್ದರೆ ನಾವು ಆಶ್ಚರ್ಯ ಪಡಬೇಕಾದುದಿಲ್ಲ.

## V

ಪುರುಷಸೂಕ್ತವು ಬ್ರಾಹ್ಮಣಗಳಿಗಿಂತ ಮುಂಚಿನದೇ? ಈ ಪ್ರಶ್ನೆ ಮೊದಲಿನದಕ್ಕಿಂತ ವಿಶಿಷ್ಟ ಹಾಗೂ ಬೇರೆಯಾದುದು. ಪುರುಷಸೂಕ್ತವು ಋಗ್ವೇದದ ಉತ್ತರಾರ್ಧಕ್ಕೆ ಸಂಬಂಧಿಸಿದುದು ಆಗಿರಲೂ ಸಾಧ್ಯ. ಆದರೆ, ಇಡೀ ಋಗ್ವೇದವೇ ಬ್ರಾಹ್ಮಣಗಳಿಗಿಂತ ಮುಂಚಿನ ರಚನೆ ಆಗಿದ್ದ ಪಕ್ಷದಲ್ಲಿ, ಪುರುಷಸೂಕ್ತವು ಬ್ರಾಹ್ಮಣಗಳಿಗಿಂತ ಮುಂಚಿನದು ಎಂದೇ ಸಾಬೀತಾಗುತ್ತದೆ. ಆದ್ದರಿಂದ, ಈ ಪ್ರಶ್ನೆಯನ್ನು ನಾವು ಪ್ರತ್ಯೇಕವಾಗಿಯೇ ಪರಿಶೀಲಿಸಬೇಕಾಗುತ್ತದೆ.

ಮ್ಯಾಕ್ಸ್ ಮುಲ್ಲರ್‌ನ ದೃಷ್ಟಿಯಲ್ಲಿ, ವೈದಿಕ ಸಾಹಿತ್ಯದಲ್ಲಿ ಮೊದಲು ವೇದಗಳು, ಅನಂತರ ಬ್ರಾಹ್ಮಣಗಳು, ತದನಂತರ ಸೂತ್ರಗಳು–ಈ ಕ್ರಮದಲ್ಲಿ ರಚಿತವಾದುವು. ಈ ಮಂಡನೆಯನ್ನು ನಾವು ಅಂಗೀಕರಿಸಿದರೆ, ಪುರುಷಸೂಕ್ತವು ಬ್ರಾಹ್ಮಣಗಳಿಗಿಂತ ಮುಂಚೆ ರಚಿತವಾದುದು ಎಂದು ಒಪ್ಪಿಕೊಂಡಂತೆ. ಆದರೆ ಪ್ರಶ್ನೆ

ಇರುವುದು : ಪ್ರೊ. ಮ್ಯಾಕ್ಸ್ ಮುಲ್ಲರ್ ಅವರ ಮಂಡನೆಯನ್ನು ನಿರಪೇಕ್ಷವಾಗಿ ಒಪ್ಪಲಾದೀತೇ? ಹಾಗೆ ಒಪ್ಪಿದ ಪಕ್ಷದಲ್ಲಿ ಪ್ರಸ್ತುತ ಮಂಡನೆಯು ಎರಡು ತೀರ್ಮಾನಗಳಿಗೆ ಎಡೆಮಾಡಿ ಕೊಡುತ್ತದೆ. ಅವೆಂದರೆ :

(೧) ಋಗ್ವೇದದ ಕಾಲದಲ್ಲಿ ನಾಲ್ಕು ವರ್ಣಗಳಿದ್ದುವು : ಅವು ಶತಪಥ ಬ್ರಾಹ್ಮಣದ ಕಾಲದಲ್ಲಿ ಮೂರಾದುವು – ಎಂಬುದೊಂದು ;

ಅಥವಾ

(೨) ಶತಪಥ ಬ್ರಾಹ್ಮಣದಲ್ಲಿ ಸಂಪ್ರದಾಯವು ಸಂಪೂರ್ಣವಾಗಿ ದಾಖಲಿಸಲ್ಪಟ್ಟಿಲ್ಲ ಎಂದು.

ಇವೆರಡೂ ತೀರ್ಮಾನಗಳು ಅಸಂಬದ್ಧವಾದುವೆಂಬುದು ಮೇಲುನೋಟಕ್ಕೆ ಸ್ಪಷ್ಟವಿದೆ. ಹಾಗಾಗಿ ಅವುಗಳು ನಿರಾಕರಣೀಯ. ಮೊದಲನೆಯದಂತೂ, ಮೇಲುನೋಟಕ್ಕೇನೇ ಅಸಂಬದ್ಧವಾಗಿ ಕಾಣುತ್ತದೆ. ಎರಡನೆಯದು ಅಸಮರ್ಥನೀಯ, ಯಾಕೆಂದರೆ, ವರ್ಣಗಳ ವಿಕಸನದ ಬಗೆಗಿನ ಸಿದ್ಧಾಂತ ಎರಡೂ ಬ್ರಾಹ್ಮಣಗಳಲ್ಲಿ ಪ್ರತಿಪಾದಿತವಾದುದಕ್ಕಿಂತ ಪುರುಷಸೂಕ್ತದಲ್ಲಿ ಭಿನ್ನವಾಗಿದೆ, ಹಾಗೂ ಸ್ವಯಂಪರಿಪೂರ್ಣವಾಗಿದೆ. ಮ್ಯಾಕ್ಸ್ ಮುಲ್ಲರ್ ಅವರ ಮಂಡನೆ ನಿರಪೇಕ್ಷ ಹಾಗೂ ಪ್ರಶ್ನಾತೀತವೆಂದೊಪ್ಪಿಕೊಂಡರೆ ಹೊರಡುವ ಫಲಶ್ರುತಿಯ ಅಸಂಬದ್ಧತೆ ಅನಿವಾರ್ಯ. ಎಲ್ಲ ಸಂಹಿತೆಗಳು ಅಸ್ತಿತ್ವದಲ್ಲಿ ಬರುವವರೆಗೆ ಯಾವ ಬ್ರಾಹ್ಮಣವೂ ರಚಿತವಾಗಿರಲಿಲ್ಲ ಎಂಬರ್ಥದಲ್ಲಿ, ನಿರಾತಂಕವಾಗಿ, ಈ ಮಂಡನೆಯನ್ನು ನಾವು ಅಂಗೀಕರಿಸಲಿಕ್ಕಾಗದು. ಇದಕ್ಕೆ ವ್ಯತಿರಿಕ್ತವಾಗಿ, ಪ್ರಾಧ್ಯಾಪಕರಾದ ಬೆಳವಲ್ಕರ್ ಹಾಗೂ ರಾನಡೆಯವರು ಎತ್ತಿ ತೋರಿಸಿದಂತೆ, ಈ ಕೃತಿಗಳು ಬೇರೆ ಬೇರೆ ಹಸ್ತಗಳಿಂದ ಏಕಕಾಲಕ್ಕೆ ರಚಿಸಲ್ಪಟ್ಟಿರಬೇಕು. ಆದ್ದರಿಂದ ವೇದಗಳ ಒಂದು ಭಾಗ, ಇನ್ನೊಂದು ಭಾಗಕ್ಕಿಂತ ಮುಂಚಿನದಾಗಿರಲಿಕ್ಕೆ, ಹಾಗೂ ಬ್ರಾಹ್ಮಣಗಳ ಕೆಲವೊಂದು ಭಾಗಗಳು ವೇದಗಳ ಕೆಲಭಾಗಗಳಿಗಿಂತ ಮುಂಚಿನವು ಆಗಿರಲಿಕ್ಕೆ ಸಾಧ್ಯ. ಇದು ಸಾಧುವಾದ ಅಭಿಪ್ರಾಯವಾದಲ್ಲಿ, ಒಂದು ಕಾಲಕ್ಕೆ ಕೇವಲ ಮೂರು ವರ್ಣಗಳಿದ್ದವು ಎಂಬ ಪ್ರತೀತಿಯನ್ನು ದಾಖಲಿಸುವ ಶತಪಥ ಬ್ರಾಹ್ಮಣ ಹಾಗೂ ತೈತ್ತಿರೀಯ ಬ್ರಾಹ್ಮಣದ ಭಾಗಗಳು ಋಗ್ವೇದದ ಪುರುಷಸೂಕ್ತಕ್ಕಿಂತ ಮುಂಚಿನವು ಎಂದು ಅಭಿಪ್ರಾಯ ತಳೆಯುವುದರಲ್ಲಿ ಅಸಂಭವನೀಯವಾದುದೇನೂ ಇಲ್ಲ.

ಪುರುಷಸೂಕ್ತದ ಈ ಪರಿಶೀಲನೆಯಿಂದ ಹೊರಡುವ ತೀರ್ಮಾನವೇನು? ಒಂದೇ ಒಂದು ತೀರ್ಮಾನ ಸಾಧ್ಯ. ಅದೆಂದರೆ : ಈ ಸೂಕ್ತವು ಋಗ್ವೇದಕ್ಕೆ ನಂತರದ ಕಾಲದಲ್ಲಿ ಸೇರಿಸಲ್ಪಟ್ಟುದು; ಆದ್ದರಿಂದ ಮೊದಲಿನಿಂದಲೂ ಆರ್ಯ ಸಮಾಜದಲ್ಲಿ ನಾಲ್ಕು ವರ್ಣಗಳಿದ್ದವು ಎಂಬ ವಾದಕ್ಕೆ ಸಮರ್ಥನೆಯಾಗುವುದಿಲ್ಲ.

ಮೇಲೆ ಉಲ್ಲೇಖಿಸಿದ ಕಾರಣಗಳಿಂದಾಗಿ, ಶೂದ್ರರ ಉಗಮದ ಬಗೆಗಿನ ನನ್ನ ಅಭಿಮತವು ಈ ಅಧ್ಯಾಯದ ಮೊದಲಲ್ಲಿ ಪ್ರಸ್ತಾಪಿಸಲ್ಪಟ್ಟ ಯಾವ ಸಮಸ್ಯೆಯನ್ನೂ ಹುಟ್ಟುಹಾಕುವುದಿಲ್ಲ. ಅದು ಸಮಸ್ಯೆಯನ್ನೇನಾದರೂ ಹುಟ್ಟಿಸುವಂತೆ ಕಂಡಿದ್ದರೆ, ಅದು ಪುರುಷಸೂಕ್ತವು ಹೇಳಲುದ್ದೇಶಿಸಿದ ಸಂಗತಿಗಳ ನೈಜ ಹಾಗೂ ನಂಬಲರ್ಹವಾದ ದಾಖಲಾತಿ ಇರಬಹುದೇ ಎಂಬ ಗ್ರಹಿಕೆಯಿಂದಾಗಿ, ಆ ಗ್ರಹಿಕೆಯು ನಿರಾಧಾರವಾದುದೆಂದು ಈಗ ತೋರಿಸಲ್ಪಟ್ಟಿದೆಯಾದ್ದರಿಂದ, ಆರ್ಯರ ಸಮಾಜ ಮೂರೇ ವರ್ಣಗಳನ್ನು ಹೊಂದಿತ್ತು ಹಾಗೂ ಶೂದ್ರರು ಎರಡನೇ ವರ್ಗಕ್ಕೆ ಅಥವಾ ಕ್ಷತ್ರಿಯ ವರ್ಣಕ್ಕೆ ಸಂಬಂಧಿಸಿದವರಾಗಿದ್ದರು ಎಂಬ ತೀರ್ಮಾನಕ್ಕೆ ಬರುವುದರಲ್ಲಿ ಯಾವ ತೊಡಕೂ ಕಾಣಿಸದು.

♦

# ಅಧ್ಯಾಯ ೯

# ಬ್ರಾಹ್ಮಣರಿಗೆ ಎದುರಾಗಿ ಶೂದ್ರರು

ಶೂದ್ರರು ಕ್ಷತ್ರಿಯರಾಗಿದ್ದರು, ಹಾಗೂ ಅವರು ನಾಲ್ಕನೆಯ ದರ್ಜೆಯವರಾದರು ಎಂದಾದರೆ ಅವರನ್ನು ಆ ಕೆಳದರ್ಜೆಗೆ ಇಳಿಸಲಾಯಿತು, ಎಂಬ ಪಂಡಿತಾಭಿಪ್ರಾಯ ಸಮಸ್ಯೆಯನ್ನು ಪೂರ್ತಿ ಬಗೆಹರಿಸುವುದಿಲ್ಲ. ಅದು ಇನ್ನೊಂದು ಸಮಸ್ಯೆಯನ್ನು ಹುಟ್ಟಿಸುತ್ತದೆ ಅಷ್ಟೆ. ಈ ಸಮಸ್ಯೆಯೆಂದರೆ : ಶೂದ್ರರು ಕೆಳದರ್ಜೆಗೆ ಏಕೆ ಇಳಿಸಲ್ಪಟ್ಟರು?

ಈ ಸಮಸ್ಯೆ ಹೊಸದು. ಈ ಮೊದಲು ಅದು ಎಂದೂ ಎತ್ತಲ್ಪಟ್ಟಿರಲಿಲ್ಲ. ಆದ್ದರಿಂದ, ಈ ವಿಷಯದ ಮೇಲೆ ಲಭ್ಯವಿರುವ ಸಾಹಿತ್ಯದಲ್ಲಿ ಈ ಸಮಸ್ಯೆಗೆ ಉತ್ತರ ಸಿಕ್ಕುವುದಿಲ್ಲ. ಈ ಪ್ರಶ್ನೆ, ನನ್ನಿಂದಲೇ ಮೊದಲ ಸಲ ಎತ್ತಲ್ಪಟ್ಟಿದ್ದು. ಈ ಪ್ರಶ್ನೆಯ ಮೇಲೆಯೇ ಶೂದ್ರ ಬಗೆಗಿನ ನನ್ನ ಸಿದ್ಧಾಂತ ನಿಂತಿರುವುದರಿಂದ, ಅದಕ್ಕೆ ಸಮಾಧಾನಕರವಾದ ಉತ್ತರವನ್ನು ಕೊಡಬಲ್ಲೆನೆಂಬ ಆತ್ಮವಿಶ್ವಾಸ ನನಗಿದೆ. ನನ್ನ ಉತ್ತರವೇನೆಂದರೆ : ಶೂದ್ರ ಹಾಗೂ ಬ್ರಾಹ್ಮಣರ ಮಧ್ಯೆ ತೀವ್ರ ಸಂಘರ್ಷ ಉಂಟಾದುದರ ಪರಿಣಾಮವಾಗಿ ಶೂದ್ರರು ಕೆಳದರ್ಜೆಗೆ ಇಳಿಸಲ್ಪಟ್ಟರು. ಸುದೈವದಿಂದ, ನನ್ನ ಈ ಅಭಿಮತದ ಪುಷ್ಟೀಕರಣಕ್ಕೆ ಸಾಕಷ್ಟು ಪುರಾವೆ ಇದೆ.

## I

ಶೂದ್ರ ಅರಸನಾದ ಸುದಾಸನಿಗೂ ಬ್ರಾಹ್ಮಣ ಋಷಿಯಾದ ವಸಿಷ್ಠನಿಗೂ ತೀವ್ರತರದ ಸಂಘರ್ಷ ಉಂಟಾದುದರ ಬಗ್ಗೆ ನೇರವಾದ ಪುರಾವೆ ಸಿಕ್ಕುತ್ತದೆ. ಈ ಸಂಘರ್ಷದ ಬಗೆಗಿನ ಸಂಗತಿಗಳು ಮಾತ್ರ ಗೊಂದಲಮಯ ರೀತಿಯಲ್ಲಿ ಹೇಳಲ್ಪಟ್ಟಿವೆ. ನಾನು ಅವುಗಳನ್ನು ಚೊಕ್ಕ ಹಾಗೂ ಕ್ರಮಬದ್ಧ ರೀತಿಯಲ್ಲಿ ಹೇಳಲು ಪ್ರಯತ್ನಿಸಿದ್ದೇನೆ.

ಸಂಘರ್ಷದ ಸ್ವರೂಪವನ್ನು ತಿಳಿದುಕೊಳ್ಳುವುದಕ್ಕೆ ವಸಿಷ್ಠ–ವಿಶ್ವಾಮಿತ್ರರ ಸಂಬಂಧವನ್ನು ಮೊದಲು ತಿಳಿದುಕೊಳ್ಳುವುದು ಅವಶ್ಯವಾಗುತ್ತದೆ.

ವಸಿಷ್ಠ ಹಾಗೂ ವಿಶ್ವಾಮಿತ್ರರು ವೈರಿಗಳಾಗಿದ್ದರು – ಅಂತಿಂಥ ವೈರಿಗಳಲ್ಲ : ಮೊದಲಲ್ಲೂ ವೈರಿಗಳು, ಕಡೆಯಲ್ಲೂ ವೈರಿಗಳು. ಅವರಿಬ್ಬರಲ್ಲಿ ಒಬ್ಬರು ಪಾಲ್ಗೊಂಡು, ಇನ್ನೊಬ್ಬರು ಎದುರಾಳಿಯೆಂದು ಪಾಲ್ಗೊಳ್ಳದ ಯಾವುದೇ ಘಟನೆ ಸಂಭವಿಸಲಿಲ್ಲ. ಅವರ ವೈರತ್ವದ ಪುರಾವೆಯೆಂದು ಕೆಲ ಘಟನೆಗಳನ್ನು ಉಲ್ಲೇಖಿಸಬಯಸುತ್ತೇನೆ. ಮೊದಲನೆಯದು ತ್ರಿಶಂಕು ಎಂಬ ಉಪನಾಮವುಳ್ಳ ಸತ್ಯವ್ರತನಿಗೆ ಸಂಬಂಧಿಸಿದುದು. ಹರಿವಂಶ[೧]ದಲ್ಲಿ ನಿರೂಪಿತವಾದ ಕತೆ ಇಂತಿದೆ :

---

೧. Quoted by Muir, Vol. I, p. ೩೭೭–೩೭೮

ಈ ಮಧ್ಯೆ ವಸಿಷ್ಠನು ಅರಸನ (ಸತ್ಯವ್ರತನ ತಂದೆಯ) ಹಾಗೂ ತನ್ನ ಮಧ್ಯದ ಗುರು–ಶಿಷ್ಯ ಸಂಬಂಧದಿಂದಾಗಿ, ಅಯೋಧ್ಯಾ ನಗರವನ್ನು, ದೇಶವನ್ನು ಹಾಗೂ ಅರಮನೆಯ ಅಂತಃಪುರದ ಮೇಲೂ ಅಧಿಪತ್ಯ ಸ್ಥಾಪಿಸಿದ್ದ. ಆದರೆ ಸತ್ಯವ್ರತನು, ತನ್ನ ಮೂರ್ಖತನದಿಂದಲೋ ಅಥವಾ ಪ್ರಾರಬ್ಧ ಕರ್ಮದಿಂದಾಗಿಯೋ ವಸಿಷ್ಠರ ಬಗೆಗೆ ದಿನೇ ದಿನೇ ಕೋಪವನ್ನು ಬೆಳೆಸಿಕೊಳ್ಳುತ್ತಿದ್ದ – ಕಾರಣವೇನೆಂದರೆ, ತನ್ನ ತಂದೆ ತನ್ನನ್ನು ಅರಸೊತ್ತಿಗೆಯ ಅಧಿಕಾರದಿಂದ ಹೊರಗಿಡುವ ವಿಚಾರಮಾಡಿದಾಗ ವಸಿಷ್ಠರು ತನ್ನ ಪಕ್ಷ ವಹಿಸಿ ಅದನ್ನು ತಪ್ಪಿಸಲು ಪ್ರಯತ್ನಿಸಲಿಲ್ಲವೆಂಬುದು ಆತನ ಕೋಪ. ಮದುವೆಯ ಸೂತ್ರಗಳು ಬಂಧನಕಾರಿಯಾಗುವುದು ಯಾವಾಗ ಎಂದರೆ ಸಪ್ತಪದಿಯ ಏಳನೇ ಸುತ್ತನ್ನು ಹಾಕಿದಾಗ. ನಾನು ಆ ಲಲನಾಮಣಿಯನ್ನು ಎತ್ತಿಕೊಂಡು ಬಂದಾಗ, ಪ್ರದಕ್ಷಿಣೆ ಹಾಕಿ ಮುಗಿದಿರಲಿಲ್ಲ. ಆದರೆ, ಕಾನೂನಿನ ನಿಯಮಗಳನ್ನು ಬಲ್ಲವರಾದ ವಸಿಷ್ಠರು ಏಕೆ ನನ್ನ ಸಹಾಯಕ್ಕೆ ಬರಲಿಲ್ಲ? ಯುಕ್ತಾಯುಕ್ತಜ್ಞಾನದಿಂದ ವರ್ತಿಸಿದ ವಸಿಷ್ಠರ ಬಗೆಗೆ ಸತ್ಯವ್ರತನು ಹೀಗೆ ಕೆಂಡಕಾರುತ್ತಿದ್ದ. ಇತ್ತ ತನ್ನ ತಂದೆ ಪ್ರಾಯಶ್ಚಿತ್ತ ವಿಧಿಸಿದ್ದುದರ ಔಚಿತ್ಯವನ್ನು ಆತ ಅರ್ಥಮಾಡಿಕೊಳ್ಳುವವನಾಗಿರಲಿಲ್ಲ. ಪೂಜ್ಯರಾದ ವಸಿಷ್ಠ ಋಷಿಗಳು ತಮ್ಮ ತಂದೆ ತಮ್ಮನ್ನು ಪಟ್ಟದಿಂದ ದೂರಮಾಡುವುದನ್ನು ತಪ್ಪಿಸಲಿಲ್ಲವಷ್ಟೇ ಅಲ್ಲ, ತಮ್ಮ ಮಗನನ್ನೇ ಪಟ್ಟಕ್ಕೆ ಕೂಡಿಸುವ ಹೊಂಚು ಹಾಕಿದ್ದಾರಲ್ಲಾ ಎಂಬ ಸಿಟ್ಟು ಆತನದು. ಹನ್ನೆರಡು ವರ್ಷ ತಪಸ್ಸುಗೈದಾದಮೇಲೆ ಆ ಬಲಶಾಲಿಯಾದ ರಾಜಕುಮಾರ ನೋಡಿದ : ತನಗೆ ತಿನ್ನಲು ಮಾಂಸವಿಲ್ಲ, ವಸಿಷ್ಠರ ಹತ್ತಿರ ಬೇಡಿದ್ದನ್ನು ಕೊಡುವ ಕಾಮಧೇನು ಇದೆ. ಹಸಿವಿನಿಂದ ಕಂಗೆಟ್ಟ ಸ್ಥಿತಿಯಲ್ಲಿದ್ದ ಆತ ಆಗ ವಿಭ್ರಮೆ, ಕೋಪಗಳಿಗೊಳಗಾಗಿ, ಆ ಗೋವನ್ನು ಕೊಯ್ದು ಅದರ ಮಾಂಸವನ್ನು ತಾನೂ ತಿಂದನಲ್ಲದೆ ವಿಶ್ವಾಮಿತ್ರನ ಮಕ್ಕಳಿಗೂ ತಿನ್ನಲು ಕೊಟ್ಟ. ಇದನ್ನು ಕೇಳಿ ತಿಳಿದ ವಸಿಷ್ಠರು ಮೂರು ಪಾಪಗಳೆಸಗಿದ ಆತನಿಗೆ ತ್ರಿಶಂಕು ಎಂಬ ಹೆಸರನ್ನಿತ್ತರು. ಮನೆಗೆ ಮರಳಿದಾಗ ತಮ್ಮ ಮಡದಿಗೆ ಸಿಕ್ಕ ಆತಿಥ್ಯದ ಬಗೆಗೆ ತಿಳಿದು ಸಂತುಷ್ಟರಾದ[೧] ವಿಶ್ವಾಮಿತ್ರರು ತ್ರಿಶಂಕುವಿಗೆ 'ನಿನಗೆ ಬೇಕಾದ ಒಂದು ವರವನ್ನು ಕೇಳಿಕೋ' ಎಂದು ಹೇಳಿದರು. ಇಂಥ ವರದಾನ ಸಿಕ್ಕಿದಾಗ ತಾನು ಸ್ವರ್ಗಕ್ಕೆ ದೇಹಸಮೇತ ಏರಬೇಕೆಂಬ ವರವನ್ನು ಕೇಳಿದ. ಹನ್ನೆರಡು ವರ್ಷಗಳ ಕ್ಷಾಮದ ಭೀತಿ ದೂರವಾದ ಕಾರಣ, ವಿಶ್ವಾಮಿತ್ರರು, ತ್ರಿಶಂಕುವನ್ನು ಆತನ ತಂದೆಯ ರಾಜ್ಯಕ್ಕೆ ಪಟ್ಟಗಟ್ಟಿ, ಆತನ ಪರವಾಗಿ ಯಜ್ಞಯಾಗಾದಿಗಳನ್ನು

---

೧. ಹರಿವಂಶದಲ್ಲಿ ಹೀಗೆಂದು ಹೇಳಿದೆ : "ಇಂಥ ಪಾಪಕೃತ್ಯ ಎಸಗಲ್ಪಟ್ಟ ಕಾರಣ ಇಂದ್ರನು ಹನ್ನೆರಡು ವರುಷ ಮಳೆಯನ್ನು ಅನುಗ್ರಹಿಸಲಿಲ್ಲ. ಆಗ ವಿಶ್ವಾಮಿತ್ರರು ತಮ್ಮ ಹೆಂಡಿರು–ಮಕ್ಕಳನ್ನು ಬಿಟ್ಟು ಸಮುದ್ರ ತೀರದಲ್ಲಿ ಘೋರ ತಪಶ್ಚರ್ಯಗೈಯಲು ಹೋಗಿದ್ದರು. ಮನೆಯಲ್ಲಿ ತಿನ್ನುಣ್ಣಲು ಏನೂ ಇಲ್ಲದ ಕಾರಣ ವಿಶ್ವಾಮಿತ್ರನ ಹೆಂಡತಿ ನೂರು ಗೋವುಗಳಿಗಾಗಿ ತನ್ನ ಎರಡನೇ ಮಗನನ್ನು ಮಾರಿಕೊಳ್ಳಲು ತಯಾರಾಗಿದ್ದಳು. ಅದನ್ನು ತಪ್ಪಿಸಿ, ಅವರಿಗೆ ವನ್ಯಪಶುಗಳ ಮಾಂಸ ಒದಗಿಸಿ, ತನ್ನ ತಂದೆಯ ಆಜ್ಞೆಯಂತೆ ೧೨ ವರ್ಷ ತಪಶ್ಚರ್ಯಕ್ಕಾಗಿ ಅಣಿಯಾದವನು ಸತ್ಯವ್ರತ.

ಹರಿವಂಶದಲ್ಲಿಯೇ ಇನ್ನೊಂದೆಡೆ ಹೇಳಿದಂತೆ ತ್ರಿಶಂಕುವು ಕಾಮಪರವಶನಾಗಿ ಒಬ್ಬ ಸಾಮಾನ್ಯ ಪ್ರಜೆಯ ಹೆಂಡತಿಯನ್ನು ಹೊತ್ತುಕೊಂಡುಹೋದ ಅಪರಾಧಕ್ಕಾಗಿ ಮನೆಯಿಂದ ಹೊರಹಾಕಲ್ಪಟ್ಟಿದ್ದನು. ಆ ಕಾರಣವೇ ವಸಿಷ್ಠರು ಆತನ ಗಡಿಪಾರು ಶಿಕ್ಷೆಯನ್ನು ತಡೆದಿರಲಿಲ್ಲ. ಈ ಪಾಠ್ಯಕ್ಕೇನೇ ಇಲ್ಲಿ ಉಲ್ಲೇಖ ಸಂಬಂಧಿಸಿದುದು.

ನೆರವೇರಿಸಿದರು. ಅನಂತರ ಬಲಾಢ್ಯರಾದ ಮುನಿವರ್ಯ(ಕೌಶಿಕ)ರು, ದೇವತೆಗಳ ಹಾಗೂ ವಸಿಷ್ಠರ ವಿರೋಧವನ್ನು ಲೆಕ್ಕಿಸದೆ, ತ್ರಿಶಂಕು ರಾಜನನ್ನು ಸಜೀವವಾಗಿ ಸ್ವರ್ಗಕ್ಕೆ ಏರಿಸಿದರು".

ಈ ಮುನಿವರ್ಯರೀರ್ವರು ವಿರುದ್ಧ ಪಕ್ಷಗಳನ್ನು ವಹಿಸಿಕೊಂಡು ಪರಸ್ಪರ ಎದುರಾದ ಮುಂದಿನ ಪ್ರಸಂಗವೆಂದರೆ, ತ್ರಿಶಂಕುವಿನ ಮಗನಾದ ಹರಿಶ್ಚಂದ್ರನಿಗೆ ಸಂಬಂಧಿಸಿದುದು. ಅದರ ಕತೆಯನ್ನು ವಿಷ್ಣುಪುರಾಣ ಹಾಗೂ ಮಾರ್ಕಂಡೇಯ ಪುರಾಣಗಳಲ್ಲಿ ಹೇಳಲಾಗಿದೆ.[೧] ಆ ಕತೆ ಹೀಗಿದೆ :

"ಒಂದು ಸಲ ಹರಿಶ್ಚಂದ್ರ ಮಹಾರಾಜನು ಬೇಟೆಯಾಡಲು ಹೋಗಿದ್ದಾಗ, ಹೆಣ್ಣಿನ ಆರ್ತಸ್ವರವೊಂದನ್ನು ಕೇಳಿದನು. ಅದು ಘೋರ ತಪಸ್ವಿಯಾದ ವಿಶ್ವಾಮಿತ್ರನು ಶಾಸ್ತ್ರಗಳ ಮೇಲೆ ಸಾಧಿಸಿದ ಜಯದ ಕಾರಣದಿಂದಾಗಿ ಅದು ನರಳುತ್ತಿದ್ದ ಹಾಗೆ ಕಾಣಿಸಿತು. ಆತನ ಮೈಯಲ್ಲಿ ಪ್ರವೇಶಿಸಿದ ಗಣೇಶನ ಪ್ರೇರಣೆಯಿಂದಾಗಿ, ಹಾಗೂ ದುರ್ಬಲರ ರಕ್ಷಣೆ ಮಾಡಬೇಕಾದ ಕ್ಷಾತ್ರಧರ್ಮ ಪರಿಪಾಲನಾ ಬುದ್ಧಿಯಿಂದಾಗಿ, ಉದ್ಗರಿಸಿದ : 'ಅದಾವ ಪಾಪಿಯು ತನ್ನ ಪ್ರಭುವಾದ, ಹಾಗೂ ಭುಜಬಲ ಮತ್ತು ಅಗ್ನಿ ಸದೃಶ ಪರಾಕ್ರಮವನ್ನು ಮೆರೆಯುವ ನಾನು ಇಲ್ಲಿರುತ್ತಿರಲಾಗಿ ಬೆಂಕಿಯನ್ನು ತನ್ನ ಉಡಿಯಲ್ಲಿ ಕಟ್ಟಿಕೊಳ್ಳುತ್ತಿದ್ದಾನೆ? ನಭೋಮಂಡಲವನ್ನೇ ಬೆಳಗಿಸುವ ನನ್ನ ಬಾಣಪ್ರಯೋಗದಿಂದ ವಿಶ್ವಾಮಿತ್ರನು ಮರಣವನ್ನು ಹೊಂದುವನು.' ಇದನ್ನು ವಿಶ್ವಾಮಿತ್ರನು ಕೇಳಿ ಕಿಡಿಕಿಡಿಯಾದನು. ಆತನ ಕೋಪಾಗ್ನಿಯಿಂದಾಗಿ ಶಾಸ್ತ್ರಗಳು ಸುಟ್ಟು ಭಸ್ಮವಾದವು. ಹರಿಶ್ಚಂದ್ರನು, ಅಶ್ವತ್ಥದ ಎಲೆಯಂತೆ ನಡುಗುತ್ತಾ, ವಿನೀತನಾಗಿ ಋಷಿಗೆ ತಲೆಬಾಗಿ, ಹೀಗೆಂದನು : 'ಋಷಿವರ್ಯನೇ, ವೈರಿಗಳ ವಿರುದ್ಧ ಸಮರ ಹಾಗೂ ದುರ್ಬಲರ ರಕ್ಷಣೆ ಮಾಡಬೇಕಾದ, ಅಲ್ಲದೆ ನಿರ್ಗತಿಕರಿಗೆ ಹಾಗೂ ಬ್ರಾಹ್ಮಣರಿಗೆ ದಾನ ಮಾಡಬೇಕಾದ ನನ್ನ ಕರ್ತವ್ಯವನ್ನು ಮಾತ್ರ ನಾನು ಮಾಡಿದ್ದೇನೆ.' ಆಗ ವಿಶ್ವಾಮಿತ್ರನು ತಾನೂ ಒಂದು ದಾನವನ್ನು ಪಡೆಯಲಿಚ್ಛಿಸಿದುದಾಗಿ ಹೇಳಿದನು. ಅರಸನು 'ಏನು ಬೇಡುತ್ತೀರೋ ಬೇಡಿರಿ – ನನ್ನ ಹೆಂಡತಿ – ಮಗನನ್ನೋ, ರಾಜ್ಯವನ್ನೋ ಇನ್ನೇನು ಬೇಕೋ ಅದನ್ನು ಕೇಳಿರಿ' ಎಂದನು. ಋಷಿಯು ಮೊದಲು ರಾಜಸೂಯಯಾಗದ ದಕ್ಷಿಣೆಯನ್ನು ಕೇಳುತ್ತಾನೆ. 'ಆಗಲಿ, ಇನ್ನೂ ಏನು ಬೇಕೋ ಬೇಡಿರಿ' ಎಂದೆನ್ನಲಾಗಿ ವಿಶ್ವಾಮಿತ್ರನು 'ನಿನ್ನನ್ನು ಹೊರತುಪಡಿಸಿ, ನಿನ್ನ ಹೆಂಡತಿ, ಮಗನನ್ನು ಹೊರತುಪಡಿಸಿ, ಹಾಗೂ ನಿನ್ನನ್ನಾಶ್ರಯಿಸಿ ಹಿಂಬಾಲಿಸುವ ಸತ್ವಗುಣವನ್ನು ಹೊರತುಪಡಿಸಿ, ನನಗೆ ಇಡೀ ಭೂ ಸಾಮ್ರಾಜ್ಯವೇ ಬೇಕು' ಎನ್ನುತ್ತಾನೆ. ಹರಿಶ್ಚಂದ್ರ 'ಆಗಲಿ, ಮುನಿವರ್ಯ' ಎನ್ನುತ್ತಾನೆ. ಆಗ ವಿಶ್ವಾಮಿತ್ರನು ಹರಿಶ್ಚಂದ್ರನನ್ನು ಉದ್ದೇಶಿಸಿ ಹೀಗೆ ನುಡಿಯುತ್ತಾನೆ. 'ಹಾಗಾದರೆ, ವಸ್ತ್ರಾಲಂಕಾರಗಳನ್ನು ತೆಗೆದಿರಿಸಿ, ಮರದ ತೊಗಟೆಯನ್ನು ತೊಟ್ಟುಕೋ ಹಾಗೂ ನಿನ್ನ ಹೆಂಡತಿ ಶೈವ್ಯಾ ಮತ್ತು ಮಗನ ಜೊತೆಗೂಡಿ, ರಾಜ್ಯವನ್ನು ಬಿಟ್ಟು ತೆರಳಲು ಸಿದ್ಧನಾಗು.' ಹರಿಶ್ಚಂದ್ರನು ಹೊರಟು ನಿಂತಾಗ ಆತನನ್ನು ತಡೆದು, 'ಹೂಂ, ಇನ್ನೂ ನನಗೆ ಸಂದಾಯವಾಗಬೇಕಿದ್ದ ಯಜ್ಞದ ಶುಲ್ಕವೆಲ್ಲಿ?' ಎಂದು ಕೇಳುತ್ತಾನೆ. ಆಗ ಹರಿಶ್ಚಂದ್ರನು "ನಾನು, ನನ್ನ ಹೆಂಡತಿ, ಮಗ ಇವರ ದೇಹಗಳು ಹಾಗೂ ನನ್ನ ಸತ್ವಗುಣ ಇವುಗಳನ್ನು

---

೧. *Muir,* Vol. I, Pp. ೩೭೯–೩೮೭ರಲ್ಲಿ ಉದ್ಧೃತ.

ಬಿಟ್ಟು ನನ್ನಲ್ಲೇನು ಉಳಿದಿದೆ?' ಎಂದು ಕೇಳುತ್ತಾನೆ. ವಿಶ್ವಾಮಿತ್ರನು 'ಆದಾಗ್ಯೂ, ನೀನು ಅದನ್ನು ಕೊಡಲೇಬೇಕು, ಬ್ರಾಹ್ಮಣರಿಗೆ ನೀಡಿದ ವಾಗ್ದಾನ ಪೂರೈಸದೇ ಹೋದಲ್ಲಿ, ದಾನಿಗೆ ವಿನಾಶವುಂಟು ಎಂಬುದು ನಿನಗೆ ಗೊತ್ತಿಲ್ಲವೇ? ನೋಡು. ಇಲ್ಲದಿದ್ದರೆ ಶಾಪ ಕೊಡಬೇಕಾದೀತು' ಎನ್ನುತ್ತಾನೆ. ಆಗ ದುರ್ದೈವೀ ರಾಜನು ಒಂದು ತಿಂಗಳೊಳಗಾಗಿ ಕೊಡುವ ಭರವಸೆ ನೀಡುತ್ತಾನೆ. ಕಷ್ಟವೆಂದರೇನೆಂದೇ ಅರಿಯದ ಹೆಂಡತಿಯೊಡನೆ ಅರಸನು ರಾಜ್ಯ ಬಿಟ್ಟು ಹೊರಟು ನಿಲ್ಲಲು ಎಲ್ಲ ಪ್ರಜೆಗಳು ಅಳುತ್ತಾ ಅವರೊಡನೆ ನಡೆಯುತ್ತಾರೆ. 'ಪ್ರಭುಗಳೇ, ತಾವು ರಾಜ್ಯ ತೊರೆಯಬೇಕೇಕೆ? ನಮ್ಮ ಗತಿಯೇನು?' ಎಂದು ಕೇಳುತ್ತಾ ಪ್ರಜೆಗಳು ಬೆನ್ನು ಹತ್ತಿರಲು, ರಾಜ ನಿಧಾನಿಸುತ್ತಾನೆ. ಆಗ ವಿಶ್ವಾಮಿತ್ರನು ಹರಿಶ್ಚಂದ್ರನಲ್ಲಿಗೆ ನಡೆದು ಬಂದು ರಾಜನ ಹಿಂಜರಿಕೆಯ ಬಗೆಗೆ ಸಿಟ್ಟಿಗೇಳುತ್ತಾನೆ ಹಾಗೂ ಶೈವ್ಯಾಳಿಗೆ ತನ್ನ ದಂಡದಿಂದ ಹೊಡೆಯುತ್ತಾನೆ. ಆಗ ರಾಜನು ಹೆಂಡತಿಯನ್ನು ಎಳೆದುಕೊಂಡು ಹೊರಡುತ್ತಾನೆ. ಅಲ್ಲಿಂದ ರಾಜನು ಹೆಂಡತಿ–ಮಗನೊಡನೆ ಕಾಶಿಗೆ ಬರುತ್ತಾನೆ – ಕಾಶಿ ಶಿವನ ತಾಣ, ಅದನ್ನಾವ ಮನುಷ್ಯನೂ ತನ್ನದೆನ್ನುವುದಕ್ಕೆ ಅವಕಾಶವಿಲ್ಲ ಎಂದು ತಿಳಿದು, ಇಲ್ಲಿಯೂ ಆ ನಿರ್ದಯಿ ವಿಶ್ವಾಮಿತ್ರನು ಅರಸನಿಗಿಂತ ಮುಂಚೆಯೇ ಬಂದು ಕಾಯುತ್ತಿರುತ್ತಾನೆ – ಒಂದು ತಿಂಗಳ ಅವಧಿ ಸವೆಯುವುದಕ್ಕೆ ಮುಂಚೆಯೇ ತನಗೆ ಸಲ್ಲಬೇಕಾದ ಹಣದ ಬಗೆಗೆ ಒತ್ತಾಯಿಸಲು, ಶೈವ್ಯಾಳು ದುಃಖಿಸುತ್ತ ತನ್ನನ್ನು ಮಾರಿಕೊಳ್ಳಲು ಸೂಚಿಸುತ್ತಾಳೆ ತನ್ನ ಗಂಡನಿಗೆ. ಇದನ್ನು ಕೇಳಿದ ಹರಿಶ್ಚಂದ್ರ ಮೂರ್ಛೆಹೋಗುತ್ತಾನೆ; ಮೂರ್ಛೆ ತಿಳಿದೆದ್ದ ನಂತರ ಶೋಕಿಸುತ್ತಾನೆ, ಮತ್ತೆ ಮೂರ್ಛೆ ಹೋಗುತ್ತಾನೆ. ಆತನ ಸ್ಥಿತಿಯನ್ನು ನೋಡಿ ಹೆಂಡತಿಯೂ ಮೂರ್ಛೆ ಹೋಗುತ್ತಾಳೆ. ಅವರಿಬ್ಬರೂ ಸ್ಮೃತಿತಪ್ಪಿ ಬಿದ್ದಿದ್ದಾಗ, ಅವರ ಹಸಿದ ಮಗು 'ಓ ಅಪ್ಪಾಜೀ, ನನಗೆ ರೊಟ್ಟಿ ಕೊಡಿ; ಅವ್ವಾ, ನನಗೆ ಅನ್ನ ಕೊಡು. ಹಸಿವಿನಿಂದ ನನ್ನ ನಾಲಗೆ ಬತ್ತುತ್ತಿದೆ' ಅನ್ನುತ್ತದೆ. ಇದೇ ಕ್ಷಣದಲ್ಲಿ ವಿಶ್ವಾಮಿತ್ರನು ಪುನಃ ಅಲ್ಲಿಗೆ ಬರುತ್ತಾನೆ, ಹಾಗೂ ಹರಿಶ್ಚಂದ್ರನ ಮೈಮೇಲೆ ನೀರು ಚಿಮುಕಿಸಿ ಎಚ್ಚರ ಬರುವಂತೆ ಮಾಡಿ, ಮತ್ತೆ ಯಜ್ಞಶುಲ್ಕದ ಹಣಕ್ಕಾಗಿ ಒತ್ತಾಯಿಸುತ್ತಾನೆ. ಅರಸನು ಮತ್ತೊಮ್ಮೆ ಮೂರ್ಛೆ ಹೋಗಿ ತಿಳಿದೇಳುತ್ತಾನೆ. ಸೂರ್ಯಾಸ್ತದೊಳಗಾಗಿ ಹಣ ಸಂದಾಯವಾಗದಿದ್ದರೆ ಶಾಪ ನೀಡುತ್ತೇನೆಂದು ಋಷಿ ಗದರಿಸುತ್ತಾನೆ. ಆಮೇಲೆ ಹೆಂಡತಿಯ ಒತ್ತಾಯಕ್ಕೆ ಮಣಿದು ಆಕೆಯನ್ನು ಮಾರಲು ಒಪ್ಪಿ, ಊರೊಳಗೆ ಹೋಗಿ ಹೆಂಡತಿಯನ್ನು ದಾಸಿಯೆಂದು ಕೊಳ್ಳುವವರಿಗೆ ಕ್ರಯಕ್ಕೆ ಕೊಡಲು ಸಿದ್ಧನಾಗುತ್ತಾನೆ. ಒಬ್ಬ ಶ್ರೀಮಂತ ಮುದಿಬ್ರಾಹ್ಮಣನು ಆಕೆಯನ್ನು ಮನೆಗೆಲಸಕ್ಕಾಗಿ ಕೊಳ್ಳಲು ತಯಾರಾಗುತ್ತಾನೆ. ತಾಯಿಯನ್ನು ಎಳೆದುಕೊಂಡು ಹೋಗುವುದನ್ನು ನೋಡಿ 'ಅವ್ವಾ, ಅವ್ವಾ' ಎಂದು ಮಗು ಅಳುತ್ತಾ ಬೆನ್ನು ಹತ್ತುತ್ತದೆ. ಆದರೆ, ಆ ಮುದಿಬ್ರಾಹ್ಮಣನು ಬಾಲಕನನ್ನು ಒದ್ದು ಆಚೆಗೆ ದಬ್ಬುತ್ತಾನೆ. ಮಗು ಮತ್ತೂ ಅಳುತ್ತಾ ಬೆನ್ನು ಹತ್ತಿರಲು, ತಾಯಿ ಆ ಬ್ರಾಹ್ಮಣನಿಗೆ ಅಂಗಲಾಚಿ ಬೇಡಿಕೊಳ್ಳುತ್ತಾಳೆ : 'ನಿಮ್ಮ ದಮ್ಮಯ್ಯಾ, ದಯವಿಟ್ಟು ನನ್ನೊಂದಿಗೆ ನನ್ನ ಮಗನನ್ನೂ ಕೊಂಡುಕೊಳ್ಳಿರಿ. ತಾಯಿ ಹಸುವಿನೊಂದಿಗೆ ಕೂಡಿಕೊಳ್ಳಲು ಕರುವನ್ನು ಬಿಡುವಂತೆ, ನನ್ನ ಮಗುವನ್ನು ನನ್ನೊಂದಿಗೆ ಕೂಡಿಸಿರಿ. ಬ್ರಾಹ್ಮಣನು ಹಾಗೆಯೇ ಮಾಡಿ, ಮುಂದೆ ಹೋಗಲು, ವಿಶ್ವಾಮಿತ್ರ ಮತ್ತೆ

ಬಂದು ರಾಜನನ್ನು ಕಾಡುತ್ತಾನೆ. ಹೆಂಡತಿ–ಮಗುವನ್ನು ಮಾರಿ ಬಂದ ಅಲ್ಪ ಹಣವನ್ನು ನೀಡಲಾಗಿ ಆತ ಹರಿಶ್ಚಂದ್ರನಿಗೆ ಹೇಳುತ್ತಾನೆ : 'ಎಲೋ ಬಡಪಾಯಿ ಕ್ಷತ್ರಿಯಾ, ಇಷ್ಟೊಂದು ಅಲ್ಪ ಹಣವನ್ನು ನನ್ನಂಥ ಗುರುವಿಗೆ ಸಲ್ಲಿಸುವ ಯಜ್ಞದ ಶುಲ್ಕವೆಂದು ಬಗೆದೆಯಾ?' ಹರಿಶ್ಚಂದ್ರನು ಮತ್ತೂ ಒಂದು ಕಾಣಿಕೆ ಕೊಡುವುದಾಗಿ ಹೇಳುತ್ತಾನೆ. ವಿಶ್ವಾಮಿತ್ರನು ಅವನಿಗೆ ಅದನ್ನು ತೀರಿಸಲು ಆ ದಿನದ ಉಳಿದ ಕಾಲುಭಾಗವನ್ನು ಗಡುವಾಗಿ ನೀಡುತ್ತಾನೆ. ಚಿಂತಾಕ್ರಾಂತನಾದ ರಾಜನು ತನ್ನನ್ನೇ ಮಾರಾಟಕ್ಕೆ ಇರಿಸಿದಾಗ ಸ್ವತಃ ಧರ್ಮರಾಯನೇ (ಸಾತ್ವಿಕ ಗುಣ) ವಿಕೃತಾಕಾರದ ಚಂಡಾಲನ ರೂಪದಲ್ಲಿ ಬಂದು, ಹರಿಶ್ಚಂದ್ರನು ಹೇಳಿದ ಕ್ರಯಕ್ಕೇನೇ ಕೊಳ್ಳಲು ಮುಂದಾಗುತ್ತಾನೆ. ಇಂಥವನ ದಾಸನಾಗುವುದಕ್ಕೆ ಹರಿಶ್ಚಂದ್ರನು ಒಪ್ಪುವುದಿಲ್ಲ – ಇಂಥ ವಿಧಿಗೆ ತಲೆ ಬಾಗುವುದಕ್ಕಿಂತ ಋಷಿಯ ಶಾಪದಿಂದ ಭಸ್ಮವಾಗಿ ಹೋಗುವುದೇ ಲೇಸೆಂದು ಬಗೆಯುತ್ತಾನೆ. ವಿಶ್ವಾಮಿತ್ರನು ಮತ್ತೆ ಅಲ್ಲಿ ಕಾಣಿಸಿಕೊಂಡು 'ಚಂಡಾಲನು ತುಂಬಾ ಮೊತ್ತವನ್ನೀಯುವಾಗ ಅದೇಕೆ ಒಪ್ಪುವುದಿಲ್ಲ?' ಎಂದು ಕೇಳಲಾಗಿ, ಹರಿಶ್ಚಂದ್ರ ಸೂರ್ಯವಂಶಜನಾದ ತನಗೆ ಅದು ತೀರ ಅವಮಾನಕರವೆಂದು ಹೇಳುತ್ತಾನೆ. ತನ್ನ ಋಣವನ್ನು ತೀರಿಸಲು ಇಂಥ ಅವಕಾಶವಿರುವಾಗ, ಅದಕ್ಕೆ ಸಮ್ಮತಿಸದಿರುವ ಆತನಿಗೆ ಶಾಪ ನೀಡಲೇಬೇಕಾದೀತೆಂದು ವಿಶ್ವಾಮಿತ್ರ ಮತ್ತೆ ಬೆದರಿಕೆ ಒಡ್ಡುತ್ತಾನೆ. 'ಇಂಥ ಅಧಃಪತನದಿಂದ ಉಳಿಸಬೇಕು, ಮುನಿವರ್ಯಾ, ಬೇಕಿದ್ದರೆ ನಿನ್ನ ಸಾಲದ ಬಾಕಿಯನ್ನು ತೀರಿಸಲು ನಿನ್ನ ದಾಸನಾಗುತ್ತೇನೆ' ಎಂದೆನ್ನಲಾಗಿ, ವಿಶ್ವಾಮಿತ್ರನು, 'ನೀನು ನನ್ನ ದಾಸನೆಂದಾದ ಮೇಲೆ ನಿನ್ನನ್ನು ನಾನು ಈ ಚಂಡಾಲನಿಗೆ ಸಹಸ್ರ ಲಕ್ಷ ವರಹಗಳಿಗೆ ಮಾರಿಕೊಳ್ಳುತ್ತೇನೆ' ಎನ್ನುತ್ತಾನೆ. ಚಂಡಾಲನು ಋಷಿಯಿಂದ ಹಣವನ್ನು ಎಣಿಸಿ, ಹರಿಶ್ಚಂದ್ರನನ್ನು ಕೈ ಕಟ್ಟಿಸಿ, ಹೊಡೆದು–ಬಡಿದು ತನ್ನ ವಾಸಸ್ಥಾನಕ್ಕೆ ಕೊಂಡೊಯ್ಯುತ್ತಾನೆ. ಚಂಡಾಲನು ಹರಿಶ್ಚಂದ್ರನಿಗೆ ಒಪ್ಪಿಸಿದ ಕೆಲಸ ಎಂದರೆ, ಶ್ಮಶಾನದಲ್ಲಿ ಹೆಣಗಳ ಮೈಮೇಲಿನ ಅರಿವೆಗಳನ್ನು ಕದಿಯುವುದು. 'ಅವುಗಳ ಮೌಲ್ಯದಲ್ಲಿ ನಿನಗೆ ಆರರಲ್ಲಿ ಎರಡು ಪಾಲು, ಒಡೆಯನಾದ ನನಗೆ ಆರರಲ್ಲಿ ಮೂರು, ಉಳಿದೊಂದು ಭಾಗ ರಾಜನಿಗೆ ಸಲ್ಲುವುದು' ಎಂದು ಹೇಳುತ್ತಾನೆ ಚಂಡಾಲ. ಇಂಥ ಭೀಷಣ ಪ್ರದೇಶದಲ್ಲಿ, ಇಂಥ ಹೀನಕಾಯಕ ಮಾಡುತ್ತ ಹನ್ನೆರಡು ತಿಂಗಳು ನೂಕಿದ ಹರಿಶ್ಚಂದ್ರ. ಒಂದು ದಿನ ತೂಕಡಿಸಿ ನಿದ್ರೆ ಹೋದಾಗ ತನ್ನ ಹೇಯ ಕಾಯಕಕ್ಕೆ ಸಂಬಂಧಿಸಿದ ಕನಸುಗಳನ್ನೇ ಕಾಣುತ್ತಾನೆ. ಎಚ್ಚರಾಗುವಷ್ಟರಲ್ಲಿ ಆತನ ಹೆಂಡತಿಯೇ ಹಾವು ಕಡಿದು ಸಾವನ್ನಪ್ಪಿದ ಮಗನ ಶವಸಂಸ್ಕಾರಕ್ಕೋಸ್ಕರ ಬಂದಿರುತ್ತಾಳೆ. ಕಷ್ಟದಿಂದಾಗಿ ಇಬ್ಬರ ಮುಖಚರ್ಯೆಯಲ್ಲುಂಟಾದ ಬದಲಾವಣೆಯ ಕಾರಣ ಅವರು ಒಬ್ಬರನ್ನೊಬ್ಬರು ಗುರುತಿಸಲಿಕ್ಕಾಗುವುದಿಲ್ಲ. ಹರಿಶ್ಚಂದ್ರನೇ ಮೊದಲು ದುಃಖಾಲಾಪದ ಮೇಲಿಂದ ಅವಳನ್ನು ಗುರುತಿಸಲು ಶಕ್ತನಾದ. ಅದನ್ನು ತಿಳಿದು ಆತನಿಗೆ ಮೂರ್ಛೆ ಬಂದಿತು. ಅದರಂತೆಯೇ, ಹೆಂಡತಿಗೂ ಗಂಡನ ಗುರುತು ಸಿಕ್ಕು ಆಕೆಯೂ ಮೂರ್ಛೆಹೋಗುತ್ತಾಳೆ. ಸ್ಮೃತಿ ಮರಳಿದಾಗ ಇಬ್ಬರಿಗೂ ದುಃಖ ಒತ್ತರಿಸಿಬರುತ್ತದೆ. ತನ್ನ ಮಗನಿಗುಂಟಾದ ದೆಸೆಯನ್ನು ನೆನೆದು ಅರಸ ಶೋಕಿಸುತ್ತಾನೆ. ಅರಸನಿಗುಂಟಾದ ದುರ್ದೆಸೆಯನ್ನು ನೆನದು ಹೆಂಡತಿ ಆಲಾಪಿಸುತ್ತಾಳೆ. ಆಕೆ ದಿಙ್ಮೂಢಳಾಗಿ ಗಂಡನ ಕೊರಳಿಗೆ ಬಿದ್ದು, 'ಇದೆಲ್ಲ ಕನಸೇ, ವಾಸ್ತವವೇ?' ಎಂದು

ಕೇಳುತ್ತಾಳೆ. 'ಇದು ನಿಜಸಂಗತಿಯಾದಲ್ಲಿ ಸಾತ್ವಿಕ ಮಾನವನಿಗೆ ಆತನ ಸದ್ಗುಣದಿಂದ ಯಾವ ಪ್ರಯೋಜನವೂ ಇಲ್ಲವೇ?' ಎಂದು ಹಲುಬುತ್ತಾಳೆ. ಹರಿಶ್ಚಂದ್ರನು ಮಗನ ಚಿತೆಯನ್ನೇರಲು ನಿರ್ಧರಿಸಿ, 'ಒಡೆಯನ ಅಪ್ಪಣೆ ಇಲ್ಲದೆ ಹೇಗೆ?' ಎಂದು ಕೆಲಕ್ಷಣ ಅನುಮಾನಿಸುತ್ತಾನೆ. ಕೊನೆಗೆ, 'ನಾನು ಧಾನ–ಧರ್ಮ, ಯಜ್ಞ–ಯಾಗಾದಿಗಳನ್ನು ಮಾಡಿದ್ದುದು ನಿಜವೇ ಆಗಿದ್ದಲ್ಲಿ, ಹಾಗೂ ಧರ್ಮಗುರುಗಳನ್ನು ಸಂತುಷ್ಟಪಡಿಸಿದುದು ನಿಜವಾಗಿದ್ದಲ್ಲಿ, ನಾನು ನನ್ನ ಮಗನೊಂದಿಗೆ ಹಾಗೂ ಹೆಂಡತಿಯಾದ ನಿನ್ನೊಂದಿಗೆ ಪರಲೋಕದಲ್ಲಿ ಕೂಡಿಕೊಳ್ಳುವಂತಾಗಲಿ' ಎಂದು ಸಂಕಲ್ಪ ಮಾಡುತ್ತಾನೆ. ರಾಣಿಯು ಅದೇ ಪ್ರಕಾರ ಚಿತೆಯನ್ನೇರಲು ನಿಶ್ಚಿಯಿಸುತ್ತಾಳೆ. ಯಾವಾಗ್ಗೆ ಹರಿಶ್ಚಂದ್ರನು ಮಗನ ಶವವನ್ನು ಚಿತೆಯ ಮೇಲಿರಿಸಿ, 'ಹರಿನಾರಾಯಣ' ಎಂದು ಜಪಿಸುತ್ತಾನೆಯೋ ಆಗ ಕೃಷ್ಣ ಪರಮಾತ್ಮ ಹಾಗೂ ಯಮಧರ್ಮ ಮೊದಲಾದ ಇತರ ದೇವತೆಗಳೂ ವಿಶ್ವಾಮಿತ್ರನೊಂದಿಗೆ ಪ್ರತ್ಯಕ್ಷರಾಗುತ್ತಾರೆ. ಧರ್ಮನು ರಾಜನಿಗೆ ಆತನು ಕೈಕೊಂಡ ಸಂಕಲ್ಪವನ್ನು ನೆರವೇರಿಸದಿರಲಿಕ್ಕೆ ಕೇಳಿಕೊಳ್ಳುತ್ತಾನೆ. ಇಂದ್ರನು ಹರಿಶ್ಚಂದ್ರನಿಗೆ 'ನೀನು, ನಿನ್ನ ಮಡದಿ ಹಾಗೂ ನಿನ್ನ ಮಗ, ನಿಮ್ಮ ಸುಕೃತಗಳಿಂದ ದೇವಲೋಕವನ್ನು ಗೆದ್ದಿದ್ದೀರಿ' ಎಂದು ಹೇಳುತ್ತಾನೆ. ಆಕಾಶದಿಂದ ದೇವತೆಗಳು ಅಮೃತ ಹಾಗೂ ಪುಷ್ಪಗಳ ಮಳೆಯನ್ನು ಕರೆಯುತ್ತಾರೆ. ಹರಿಶ್ಚಂದ್ರನ ಮಗನ ಜೀವ ಹಾಗೂ ಯೌವನ ಮರಳುತ್ತವೆ. ದೇವಲೋಕದ ವಸ್ತ್ರ–ಪುಷ್ಪಮಾಲೆಗಳಿಂದ ಅಲಂಕೃತನಾದ ರಾಜನು ಹಾಗೂ ರಾಣಿಯು, ಮಗನನ್ನು ಅಪ್ಪುತ್ತಾರೆ. ಹರಿಶ್ಚಂದ್ರನು, ಒಡೆಯ ಚಂಡಾಲನ ಅಪ್ಪಣೆ ಪಡೆಯುವ ಮುನ್ನ ತಾನು ದೇವಲೋಕಕ್ಕೆ ತೆರಳಲಿಕ್ಕಾಗದು ಎಂದು ಘೋಷಿಸುತ್ತಾನೆ. ಧರ್ಮರಾಜನು ತಾನೇ ಚಂಡಾಲನ ರೂಪ ತಾಳಿ ಬಂದಿದ್ದುದಾಗಿ ರಹಸ್ಯವನ್ನು ಬಯಲು ಮಾಡುತ್ತಾನೆ. ಆಮೇಲೆ, ರಾಜನು ತನ್ನ ಪುಣ್ಯದಲ್ಲಿ ಭಾಗಿಗಳಾದ ನಿಷ್ಠಾವಂತ ಪ್ರಜೆಗಳನ್ನೂ, ಒಂದು ದಿನದ ಮಟ್ಟಿಗಾದರೂ, ತನ್ನೊಂದಿಗೆ ದೇವಲೋಕಕ್ಕೆ ಬರಲು ಬಿಡದಿದ್ದರೆ ತಾನೂ ಅಲ್ಲಿಗೆ ಹೋಗಲು ಒಲ್ಲೆನೆಂಬುದಾಗಿ ಹಠ ಹಿಡಿಯುತ್ತಾನೆ. ಇಂದ್ರನು ಅದಕ್ಕೆ ಅನುಮತಿಸುತ್ತಾನೆ. ಆಮೇಲೆ ವಿಶ್ವಾಮಿತ್ರನು ಅರಸುಕುಮಾರನಾದ ರೋಹಿತಾಶ್ವನಿಗೆ ಪಟ್ಟಾಭಿಷೇಕ ಮಾಡಿಸಿದ ನಂತರ ಹರಿಶ್ಚಂದ್ರ, ಆತನ ಆಪ್ತಸ್ನೇಹಿತರು, ಅನುಯಾಯಿಗಳು – ಎಲ್ಲರೂ ಸ್ವರ್ಗಕ್ಕೆ ಏರುತ್ತಾರೆ. ಹೀಗೆ ಹರಿಶ್ಚಂದ್ರನ ಬವಣೆ ಸುಖಾಂತದಲ್ಲಿ ಪರಿಸಮಾಪ್ತಿಗೊಂಡಾಗಲೂ ಗಂಗಾಜಲದಲ್ಲಿಯೇ ಹನ್ನೆರಡು ವರ್ಷ ವಾಸಗೈದ ಕುಲಗುರು ವಸಿಷ್ಠನು ಕೋಪಾವಿಷ್ಠನಾಗಿ ಹೀಗೆ ನುಡಿದ : 'ನನ್ನ ನೂರು ಜನ ಮಕ್ಕಳನ್ನು ವಿಶ್ವಾಮಿತ್ರನು ಹತ್ಯೆ ಮಾಡಿದಾಗಲೂ ನನಗೆ ಇಷ್ಟೊಂದು ಕೋಪ ಬಂದಿರಲಿಲ್ಲ. ದೇವತೆಗಳ ಬಗೆಗೂ ಬ್ರಾಹ್ಮಣರ ಬಗೆಗೂ ಇಂಥ ಭಕ್ತಿಯುಳ್ಳ ಸಾತ್ವಿಕ ಮಹಾರಾಜನನ್ನು ಇಂಥ ಘೋರ ಪರಿತಾಪಕ್ಕೆ ಗುರಿಪಡಿಸುವುದೆಂದರೇನು? ಆದ್ದರಿಂದ, ವಿಶ್ವಾಮಿತ್ರನು ಬಕಪಕ್ಷಿಯ ರೂಪ ತಾಳಲಿ' ಎಂದು ಸಂಕಲ್ಪಿಸಿ ನುಡಿದದ್ದೇನೆಂದರೆ 'ಬ್ರಾಹ್ಮಣಶತ್ರುವಾದ ಆ ದುಷ್ಟ ಮನುಷ್ಯ ಮಾನವ ಸಹಜವಾದ ತಿಳುವಳಿಕೆಯನ್ನು ಕಳೆದುಕೊಂಡು ಬಕಪಕ್ಷಿಯಾಗಲಿ ಎಂದು ಶಾಪವೀಯುತ್ತೇನೆ'. ವಿಶ್ವಾಮಿತ್ರನೂ ಪ್ರತಿಯಾಗಿ ಶಪಿಸುತ್ತಾನೆ. ವಸಿಷ್ಠನನ್ನು ಅರಿಯೆಂಬ ಜಾತಿಯ ಪಕ್ಷಿಯಾಗಿ ಪರಿವರ್ತಿಸುತ್ತಾನೆ. ತಮ್ಮ ಹೊಸ ರೂಪದಲ್ಲಿ ಅವರಿಬ್ಬರೂ ಕಾದಾಡುತ್ತಾರೆ. ಅರಿಪಕ್ಷಿಯು

ಎರಡು ಸಾವಿರ ಯೋಜನೆಗಳಷ್ಟು ಎತ್ತರದ್ದಾದರೆ, ಬಕವು ೩೦೯೦ ಯೋಜನಗಳಷ್ಟಾಗಿರುತ್ತದೆ. ಮೊದಮೊದಲು ಅವೆರಡೂ ತಮ್ಮ ರೆಕ್ಕೆಗಳಿಂದ ಪ್ರಹಾರ ಮಾಡುತ್ತವೆ. ನಂತರ ಅರಿಯು ಬಕವನ್ನು ತನ್ನ ನಖಗಳಿಂದ ಬಡಿಯುತ್ತದೆ. ಅವುಗಳ ರೆಕ್ಕೆಗಳ ಬಡಿತದಿಂದ ಹುಟ್ಟಿಕೊಂಡ ಝಂಝಾವಾತದಿಂದ ಪರ್ವತಗಳಿರಲಿ ಇಡೀ ಪೃಥ್ವಿಯೇ ನಡುಗುವಂತಾಗುತ್ತದೆ, ಸಮುದ್ರದ ನೀರು ಉಕ್ಕಿ ಹರಿಯುತ್ತದೆ, ಪೃಥ್ವಿಯು ತನ್ನ ಸಮತೋಲನ ಕಳೆದುಕೊಂಡು ಪಾತಾಳದ ಕಡೆಗೆ ವಾಲುತ್ತದೆ. ಈ ಅಲ್ಲೋಲಕಲ್ಲೋಲದಿಂದಾಗಿ ಅನೇಕ ಜೀವಿಗಳು ಪ್ರಾಣ ಕಳೆದುಕೊಂಡವು. ಈ ಎಲ್ಲ ಅಸ್ತವ್ಯಸ್ತ ಸ್ಥಿತಿಯನ್ನು ನೋಡಿ ಬ್ರಹ್ಮನು, ಉಳಿದೆಲ್ಲ ದೇವತೆಗಳ ಸಮೇತ, ಅಲ್ಲಿಗೆ ಬರುತ್ತಾನೆ, ಹಾಗೂ ಕಾದಾಡುತ್ತಿರುವ ಉಭಯತರಿಗೂ ಕಾದಾಟ ನಿಲ್ಲಿಸಲು ಆದೇಶಿಸುತ್ತಾನೆ. ಆದರೆ, ಉಗ್ರ ಕೋಪಾವಿಷ್ಠರಾದ ಅವರು ಆತನ ಆದೇಶವನ್ನು ಲಕ್ಷಿಸುವುದಿಲ್ಲ. ಆಗ ಬ್ರಹ್ಮನು ಅವರೀರ್ವರನ್ನೂ ಅವರವರ ಮುಂಚಿನ ರೂಪಕ್ಕೆ ಪರಿವರ್ತಿಸಿ, ವೈರತ್ವ ತೊಡೆದು, ಮಿತ್ರತ್ವ ಸಾಧಿಸಲು ಬೋಧಿಸಿ ಕಳಿಸುತ್ತಾನೆ".

ಅವರಿಬ್ಬರೂ ಮತ್ತೆ ವಿರೋಧಿಗಳಾಗಿ ಕಾಣಿಸಿಕೊಳ್ಳುವುದು ಯಾವ ಪ್ರಸಂಗದಲ್ಲಿ ಎಂದರೆ ಅಯೋಧ್ಯೆಯ ಅರಸನಾದ ಅಂಬರೀಷನಿಗೆ ಸಂಬಂಧಪಟ್ಟಿದ್ದರಲ್ಲಿ.

"ಕಥೆಯಲ್ಲಿ[೧] ಬರುವ ಹಾಗೆ ಅಂಬರೀಷನು ಒಂದು ಯಜ್ಞವನ್ನು ನೆರವೇರಿಸುತ್ತಿದ್ದ. ಆಗ ಇಂದ್ರನು ಯಜ್ಞಪಶುವನ್ನು ಕೊಂಡೊಯ್ದ. ಪುರೋಹಿತನು, ಈ ಅಪಶಕುನದ ಘಟನೆ ನಡೆದದ್ದು ರಾಜನ ದುರಾಡಳಿತದಿಂದಾಗಿ ಎಂದು ಹೇಳಿದ. ಇದಕ್ಕೆ ಪರಿಹಾರವೇನೆಂದರೆ, ಮಾನವನನ್ನು ಆಹುತಿಯಾಗಿ ನೀಡಬೇಕು, ಇಲ್ಲವಾದರೆ ಬಹುದೊಡ್ಡ ಪ್ರಾಯಶ್ಚಿತ್ತದ ಮಾರ್ಗವನ್ನು ತಾನು ಸೂಚಿಸುವುದಾಗಿ ಹೇಳಿದ. ಬಹಳ ಶೋಧದ ನಂತರ ರಾಜರ್ಷಿಯಾದ ಅಂಬರೀಷನು ಭೃಗುವಿನ ವಂಶಜನಾದ ಬ್ರಾಹ್ಮಣ ಋಷಿ ರೀಚಿಕನನ್ನು ಭೆಟ್ಟಿಯಾದ. ಅಂಬರೀಷನು ಆತನಿಗೆ ಅವನ ಮಕ್ಕಳಲ್ಲೊಬ್ಬನನ್ನು ಒಂದು ಲಕ್ಷ ಗೋವುಗಳಿಗೆ ನೀಡಬಹುದೇ ಎಂದು ಕೇಳಿದ. ಆಗ ಆತ ಹೇಳಿದ : 'ನಾನು ಹಿರಿಯ ಮಗನನ್ನು ಕೊಡಲಾರೆ.' ಆತನ ಹೆಂಡತಿ ಹೇಳಿದಳು : 'ನಾನು ಚಿಕ್ಕವನನ್ನು ಕೊಡಲಾರೆ. ಯಾಕೆಂದರೆ ಎಲ್ಲ ಮಕ್ಕಳಲ್ಲೂ ಕಿರಿಯರೇ ತಾಯಿಗೆ ಅತ್ಯಂತ ಪ್ರೀತಿಯವರಲ್ಲವೇ?' ಆಗ ಎರಡನೆಯ ಮಗನಾದ ಶುನಶ್ಶೇಪನು ಹೇಳಿದ : 'ಅಂದಮೇಲೆ, ಮಾರಿಕೊಳ್ಳಬಹುದಾದವನು ನಾನೇ ಎಂದಂತಾಯಿತು. ಆದ್ದರಿಂದ, ಮಹಾರಾಜರೇ ನನ್ನನ್ನು ಕೊಂಡೊಯ್ಯಿರಿ.' ಲಕ್ಷ ಗೋವುಗಳಲ್ಲದೆ, ಸಹಸ್ರ ಲಕ್ಷ ಬಂಗಾರದ ನಾಣ್ಯಗಳನ್ನೂ, ಹೇರಳ ರತ್ನಗಳನ್ನೂ ಕೊಟ್ಟು ಅರಸನು ಶುನಶ್ಶೇಪನನ್ನು ಕೊಂಡೊಯ್ದ. ಪುಷ್ಕರದಲ್ಲಿ ಹಾಯ್ದು ಹೋಗುತ್ತಿರುವಾಗ ಶುನಶ್ಶೇಪನು ತನ್ನ ಸೋದರಮಾವನಾದ ವಿಶ್ವಾಮಿತ್ರನು ಇತರ ಋಷಿಗಳೊಂದಿಗೆ ತಪಸ್ಸು ಮಾಡುತ್ತಿರುವುದನ್ನು ನೋಡಿ, ಆತನನ್ನು ಆಲಿಂಗಿಸಿ, ತನ್ನ ಅನಾಥ, ಅಸಹಾಯಕ ಸ್ಥಿತಿಯನ್ನು ನಿವೇದಿಸಿಕೊಂಡು ಸಹಾಯ ಮಾಡಬೇಕೆಂದು ಯಾಚಿಸಿದ. ವಿಶ್ವಾಮಿತ್ರನು ಆತನಿಗೆ ಸಮಾಧಾನ ಹೇಳಿದನಲ್ಲದೆ ಶುನಶ್ಶೇಪನ ಸ್ಥಾನದಲ್ಲಿ ತನ್ನ ಮಕ್ಕಳಿಗೇ ಬಲಿಯಾಗಬೇಕೆಂದು ಒತ್ತಾಯಿಸಿದ. ಆದರೆ ರಾಜರ್ಷಿಯ

---

೧. Quoted by *Muir*, Vol. I, p. 405–407

ಮಕ್ಕಳಾದ ಮಧುಶ್ಯಂದ ಹಾಗೂ ಇತರರ ಮನಸ್ಸಿಗೆ ಅದು ಒಪ್ಪಿತವಾಗಲಿಲ್ಲ. ಅವರು ಅಟ್ಟಹಾಸದಿಂದ ಗಹಿಗಹಿಸುತ್ತ ತಂದೆಯನ್ನು ಕೇಳಿದರು : 'ಇತರರ ಮಕ್ಕಳನ್ನು ಉಳಿಸಲು ನಿನ್ನ ಹೊಟ್ಟೆಯ ಮಕ್ಕಳನ್ನು ಅದ್ಹೇಗೆ ಬಲಿ ಕೊಡುತ್ತೀಯಾ?' ಮುಂದುವರಿದು, ಇದು ಅನ್ಯಾಯವಷ್ಟೇ ಅಲ್ಲದೆ ತನ್ನ ಮಕ್ಕಳ ಮಾಂಸವನ್ನು ತಂದೆಯೇ ತಿಂದುದಕ್ಕೆ ಸಮಾನ ಎಂದರು. ಇದನ್ನು ಕೇಳಿ ಕಿಡಿಕಿಡಿಯಾದ ಋಷಿಯು ಅವರಿಗೆ ಶಾಪವಿತ್ತ. ಅವರು ವಸಿಷ್ಠನ ಮಕ್ಕಳಂತೆಯೇ ಅತಿ ಹೀನಕುಲದಲ್ಲಿ ಹುಟ್ಟಿ ಸಾವಿರ ವರುಷ ನಾಯಿಯ ಮಾಂಸ ತಿನ್ನುವಂತಾಗಲಿ, ಎಂದು, ಆಮೇಲೆ ಅವನು ಶುನಶ್ಯೇಪನಿಗೆ ಇಂತೆಂದ : 'ನೀನು ಅಂಬರೀಷನ ಯಜ್ಞದಲ್ಲಿ ಅಭ್ಯಂಜನ ಸ್ನಾನ ಮಾಡಿಸಲ್ಪಟ್ಟು, ಕೆಂಪು ಹಾರ ತೊಟ್ಟು, ಪವಿತ್ರ ರಜ್ಜುವಿನಿಂದ ಯಜ್ಞಯೂಪಕ್ಕೆ ಬಂಧಿಸಲ್ಪಟ್ಟು, ನಿಂತಾಗ ಈ ಎರಡು ಮಂತ್ರಗಳನ್ನು ಹಾಡುತ್ತ ಅಗ್ನಿದೇವನಿಗೆ ಮೊರೆ ಹೋಗು. ಅಂದರೆ ನಿನ್ನ ಇಚ್ಛೆಪೂರ್ತಿಯಾಗುವುದು'. ಆ ಎರಡು ಮಂತ್ರಗಳನ್ನು, ಕರಗತಮಾಡಿಕೊಂಡು ಶುನಶ್ಯೇಪನು ಅಂಬರೀಷನಿಗೆ 'ನಡೆಯಿರಿನ್ನು ಹೋಗೋಣ' ಎನ್ನುತ್ತಾನೆ. ಕೆಂಪು ವಸ್ತ್ರ ಧರಿಸಿ, ಯಜ್ಞಯೂಪಕ್ಕೆ ಕಟ್ಟಲ್ಪಟ್ಟು ಬಲಿದಾನಕ್ಕೆ ತಯ್ಯಾರಿಯಾದಾಗ, ಆತನು ಇಂದ್ರ ಹಾಗೂ ಆತನ ತಮ್ಮನಾದ ವಿಷ್ಣು–ಇಬ್ಬರೂ–ದೇವತೆಗಳನ್ನು ನೆನದನು. ಇಂದ್ರನು ಆ ರಹಸ್ಯಮಯ ಮಂತ್ರದಿಂದಾಗಿ ಸಂತುಷ್ಟನಾಗಿ ಶುನಶ್ಯೇಪನಿಗೆ ದೀರ್ಘಾಯುಷ್ಯವನ್ನು ದಯಪಾಲಿಸಿದನು."

ಈ ಇಬ್ಬರು ಋಷಿಗಳು ವಿರುದ್ಧ ಪಕ್ಷಗಳನ್ನು ಬೆಂಬಲಿಸಿ ಒಬ್ಬರಿಗೊಬ್ಬರು ಎದುರಾದ ಕೊನೆಯ ಪ್ರಸಂಗವು ಅರಸು ಕಲ್ಮಶಪಾದನಿಗೆ ಸಂಬಂಧಿಸಿದೆ. ಆ ಪ್ರಸಂಗವು ಮಹಾಭಾರತದ ಆದಿಪರ್ವದಲ್ಲಿ ಬರುತ್ತದೆ.[೧]

"ಕಲ್ಮಶಪಾದನು ಇಕ್ಷ್ವಾಕು ವಂಶದ ರಾಜನಾಗಿದ್ದನು. ವಿಶ್ವಾಮಿತ್ರನು ಆತನ ಯಜ್ಞದಲ್ಲಿ ಅಧ್ವರ್ಯು ಆಗಬಯಸಿದ್ದ. ಆದರೆ ಅರಸನು ವಸಿಷ್ಠರನ್ನು ಆಯ್ದುಕೊಂಡ. ಒಮ್ಮೆ ಪ್ರಸಂಗ ಹೀಗೆ ಒದಗಿಬಂದಿತು – ಅರಸ ಬೇಟೆಗೆ ಹೋದಾಗ ಬಹಳಷ್ಟು ಬೇಟೆಯ ಪ್ರಾಣಿಗಳನ್ನು ಕೊಂಡು ತರುವಾಗ ಬಳಲಿ, ಹಸಿದು, ನೀರಡಿಸಿ ಕಂಗಾಲಾದ. ಆಗ ವಸಿಷ್ಠರ ನೂರು ಮಕ್ಕಳಲ್ಲಿ ಹಿರಿಯವನಾದ ಶಕ್ತಿಯನ್ನು ರಸ್ತೆಯಲ್ಲಿ ಕಂಡು ತನ್ನ ದಾರಿಯಲ್ಲಿ ಅಡ್ಡಬರದಿರಲು ಆಜ್ಞಾಪಿಸಿದ. ಆಚಾರ್ಯನು ಸಾಕಷ್ಟು ಗೌರವದಿಂದಲೇ ನುಡಿದ. 'ಹಾದಿ ನನ್ನದಿದೆ ಮಹಾರಾಜಾ. ಇದು ಎಂದಿನಿಂದಲೂ ನಡೆದುಕೊಂಡು ಬಂದ ಕಟ್ಟಳೆ–ಏನೆಂದರೆ ಪ್ರತಿಯೊಂದು ವ್ಯವಹಾರದಲ್ಲೂ ಅರಸನು ಬ್ರಾಹ್ಮಣನಿಗೆ ಪ್ರಾಶಸ್ತ್ಯ ನೀಡಬೇಕು.' ಇಬ್ಬರಲ್ಲಿ ಯಾರೂ ಜಗ್ಗಲಿಲ್ಲ. ವಾದ ಬೆಳೆಯುತ್ತ ಹೋಗಿ ಅರಸ ಮುನಿಗೆ ಚಾಟಿಯಿಂದ ಒಂದು ಏಟನ್ನು ಕೊಟ್ಟ. ಆಗ ಮುನಿಯು ಅರಸನಿಗೆ ಕುಪಿತ ಮುನಿಗಳ ವಾಡಿಕೆಯ ಅಸ್ತ್ರವಾದ ಶಾಪವನ್ನು ಕೊಟ್ಟ – 'ನೀನು ನರಭಕ್ಷಕನಾಗು' ಎಂದು. ಅದು ವಿಶ್ವಾಮಿತ್ರ ಹಾಗೂ ವಸಿಷ್ಠರ ಮಧ್ಯೆ, ಕಲ್ಮಶಪಾದದ ಯಜ್ಞದಲ್ಲಿ ತಾನು ಪುರೋಹಿತನಾಗಬೇಕು, ತಾನು ಪುರೋಹಿತನಾಗಬೇಕು ಎಂಬ ಈರ್ಷೈ ಇದ್ದ ಸಂದರ್ಭ. ವಿಶ್ವಾಮಿತ್ರನು ಅರಸನು ಹೋದ

೧. Quoted by *Muir,* Vol. I, pp. 415–417

ದಾರಿಯಲ್ಲೇ ಹೊರಟಿದ್ದು, ಶಕ್ತಿಯೊಂದಿಗೆ ವಾದ ಉಂಟಾದಾಗ, ಅಲ್ಲಿಗೆ ಬಂದನು. ತನ್ನ ವೈರಿ ವಸಿಷ್ಠನ ಮಗನನ್ನು ನೋಡಿ ಆತ ಅದೃಶ್ಯನಾದ ಹಾಗೂ ಅವರನ್ನು ದಾಟಿ ಮುಂದಕ್ಕೆ ಹೋದ. ಅರಸನು ಶಕ್ತಿಯ ಕ್ಷಮಾದಾನವನ್ನು ಯಾಚಿಸುತ್ತಿದ್ದಾಗ, ಅದು ವಿಶ್ವಾಮಿತ್ರನಿಗೆ ಬೇಡವಾಗಿ, ಒಬ್ಬ ರಾಕ್ಷಸನಿಗೆ ಅರಸನ ದೇಹವನ್ನು ಪ್ರವೇಶಿಸುವಂತೆ ಆಜ್ಞಾಪಿಸಿದ. ಬ್ರಾಹ್ಮಣ – ಋಷಿಯ ಶಾಪದ ಪ್ರಭಾವದಿಂದಾಗಿಯೂ, ವಿಶ್ವಾಮಿತ್ರನ ಆಜ್ಞೆಯಿಂದಾಗಿಯೂ, ಆ ರಾಕ್ಷಸನು ಋಷಿಯ ಅನುಜ್ಞೆಯನ್ನು ಪಾಲಿಸಿದ. ತನ್ನ ಉದ್ದೇಶ ಈಡೇರಿತೆಂದು, ಹಾಗೂ ಇನ್ನು ಮುಂದೆ ಯಥಾಪ್ರಕಾರ 'ಏನು ನಡೆಯಬೇಕೋ ನಡೆಯಲಿ' ಎಂದು ವಿಶ್ವಾಮಿತ್ರನು ದೇಶಾಂತರ ಹೊರಟುಹೋದನು. ಅರಸನು ಹಸಿದ ಬ್ರಾಹ್ಮಣನೊಬ್ಬನನ್ನು ಭೆಟ್ಟಿಯಾಗಿ ತನ್ನ ಅಡುಗೆಯಾಳಿನೊಂದಿಗೆ ನರಮಾಂಸವನ್ನು ಆ ಬ್ರಾಹ್ಮಣನಿಗೆ ತಿನ್ನಲು ಕಳಿಸಿದ. ಕಾರಣ ಅವನೂ ಶಕ್ತಿ ಕೊಟ್ಟ ಶಾಪದಂತಹ ಶಾಪವನ್ನೇ ಕೊಟ್ಟ. ಶಾಪ ಈಗ ಇನ್ನಷ್ಟು ಬಲಗೊಂಡು ಪರಿಣಾಮ ಬೀರಲಾಗಿ, ಅದಕ್ಕೆ ಮೊದಲ ಆಹುತಿಯೇ ಶಕ್ತಿ ಆದ – ಅಂದರೆ ಆತನನ್ನು ಅರಸನು ತಿಂದುಹಾಕಿದ. ವಿಶ್ವಾಮಿತ್ರನ ಪ್ರಚೋದನೆಯಿಂದಾಗಿ, ವಸಿಷ್ಠರ ಇನ್ನಿತರ ಮಕ್ಕಳಿಗೂ ಅದೇ ಗತಿ ಆಯಿತು. ಶಕ್ತಿಯು ಮರಣಹೊಂದಿದುದನ್ನು ಕಂಡು, ವಿಶ್ವಾಮಿತ್ರನು ರಾಕ್ಷಸನನ್ನು ವಸಿಷ್ಠರ ಇತರ ಮಕ್ಕಳ ವಿರುದ್ಧ ಪ್ರಚೋದಿಸಿದ. ವಿಶ್ವಾಮಿತ್ರನಿಂದಾಗಿ ತನ್ನ ಮಕ್ಕಳು ವಿನಾಶಹೊಂದಿದುದನ್ನು ತಿಳಿದು ವಸಿಷ್ಠರು, ಭೂಮಿ ಪರ್ವತದ ಭಾರವನ್ನು ತಾಳುವಂತೆ, ತಮ್ಮ ದುಃಖದ ಭಾರವನ್ನು ಸಹಿಸಿಕೊಂಡರು. ಅವರು ತಮ್ಮ ಆತ್ಮಾರ್ಪಣೆಯ ಬಗೆಗೆ ಆಲೋಚಿಸಿದರೇ ಹೊರತು ವಿಶ್ವಾಮಿತ್ರರನ್ನು ಅಳಿಸಿಹಾಕುವ ವಿಚಾರಮಾಡಲಿಲ್ಲ. ಈ ಬ್ರಹ್ಮರ್ಷಿ ಪ್ರಾಣಾರ್ಪಣೆ ಮಾಡಲು ಮೇರುಪರ್ವತದ ಮೇಲಿಂದ ಹಾರಿಕೊಂಡ, ಆದರೆ ಕಲ್ಲು ಬಂಡೆಯ ಮೇಲೆ ಬಿದ್ದರೂ ಒಂದು ಅರಳೆಯ ದಿಂಡಿನ ಮೇಲೆ ಬಿದ್ದಂತಾಯಿತು. ಜಿಗಿತದಿಂದ ಪ್ರಾಣ ಹೋಗದೆ ಉಳಿದ ಮುನಿಯು ಅರಣ್ಯದಲ್ಲಿ ಕಾಡ್ಗಿಚ್ಚನ್ನು ಹೊಕ್ಕ, ಆದರೆ ಧಗಧಗಿಸುವ ಅಗ್ನಿ ಆತನನ್ನು ಸುಡಲಿಲ್ಲ, ಆಗ ಮುನಿಯು ಕೊರಳಿಗೆ ಒಂದು ದೊಡ್ಡ ಕಲ್ಲನ್ನು ಕಟ್ಟಿಕೊಂಡು ಸಮುದ್ರಕ್ಕೆ ಜಿಗಿದ. ಆದರೆ, ತೆರೆಗಳು ಆತನನ್ನು ತೀರಕ್ಕೆ ಎತ್ತಿತಂದು ಒಗೆದವು. ಆಗ ಋಷಿಯು ತನ್ನ ಆಶ್ರಮಕ್ಕೆ ನಡೆತಂದ. ಆದರೆ ಆಶ್ರಮ ನಿರ್ಜನವಾಗಿದ್ದು ಹಾಳುಬಿದ್ದುದನ್ನು ಕಂಡು ದುಃಖಿತನಾಗಿ ಮತ್ತೆ ಹೊರಹೊರಟ. ವಿಪಾಶಾ ಎಂಬ ನದಿ ಧಾರಾಕಾರದ ಮಳೆಯಿಂದ ತುಂಬಿ ಹರಿಯುತ್ತಿದ್ದುದನ್ನು ನೋಡಿದ ಋಷಿ ಅದರಲ್ಲಿ ಜಿಗಿದು ಮುಳುಗುವ ವಿಚಾರ ಮಾಡಿದ. ಅದರಂತೆ ಹಗ್ಗದಿಂದ ಬಂಧಿಸಿಕೊಂಡು ಜಿಗಿದ. ಆದರೆ ನದಿಯು ಆತನು ಕಟ್ಟಿಕೊಂಡ ಹಗ್ಗವನ್ನು ಕತ್ತರಿಸಿ ಆತನನ್ನು ದಡದ ಒಣನೆಲದ ಮೇಲೆ ತಂದು ಹಾಕಿತು – ಆದ್ದರಿಂದಲೇ ಆ ನದಿಗೆ ಋಷಿಯು ಕೊಟ್ಟ (ವಿಪಾಶಾ ಎಂಬ) ಹೆಸರು ಬಂದದ್ದು, ಆಮೇಲೆ ಭಯಂಕರವಾದ ಶತದ್ರೂ (ಸತ್ಲಜ) ನದಿಯ ಪ್ರವಾಹ ನೋಡಿ ಅದರಲ್ಲಿ ಜಿಗಿದುಕೊಂಡ. ಅಗ್ನಿಜ್ವಾಲೆಯಂತೆ ಹೊಳೆಯುವ ಬ್ರಾಹ್ಮಣನನ್ನು ನೋಡಿ ನದಿಯು ದಿಕ್ಕೆಟ್ಟು ನೂರೊಂದು ದಿಕ್ಕಿನಲ್ಲಿ ಓಡತೊಡಗಿದ ಕಾರಣ ಅದಕ್ಕೆ ಆ ಹೆಸರು ಬಂತು. ಇದೆಲ್ಲದರ ಫಲವಾಗಿ, ಋಷಿ ವಿವಶನಾಗಿ ಮತ್ತೆ ಆಶ್ರಮಕ್ಕೆ ತಿರುಗಿ ಬಂದ".

ವಸಿಷ್ಠ ಮತ್ತು ವಿಶ್ವಾಮಿತ್ರ ಮಧ್ಯೆ ಸಂಪರ್ಕ ಹುಟ್ಟಿಕೊಂಡ ವಿಶಿಷ್ಟ ಸನ್ನಿವೇಶಗಳೂ ಇವೆ. ಆಗೀಗ ಸಂಭವಿಸಿದ ಇಂಥ ಕದನದ ಪ್ರಸಂಗಗಳಿಗೆ ಸೀಮಿತವಾಗಿಲ್ಲ ಅವರ ಮಧ್ಯದ ವೈರ. ಆ ಹಗೆತನ ಕೊಲ್ಲುವ ಮಟ್ಟಕ್ಕೆ ಕೂಡ ಹೋಗಿದ್ದಿತು. ಎಷ್ಟರಮಟ್ಟಿಗೆ ಎಂದರೆ, ಮಹಾಭಾರತದ ಶಲ್ಯಪರ್ವದಿಂದ ತಿಳಿದು ಬರುವಂತೆ, ವಿಶ್ವಾಮಿತ್ರನು ವಸಿಷ್ಠರ ಕೊಲೆ ಕೂಡ ಮಾಡಬೇಕೆಂದಿದ್ದ. ಮಹಾಭಾರತದ ಕರ್ತೃ ಹೇಳುವಂತೆ.[೧]

> "ವಿಶ್ವಾಮಿತ್ರ ಹಾಗೂ ಬ್ರಾಹ್ಮಣಋಷಿಯಾದ ವಸಿಷ್ಠರ ಮಧ್ಯೆ ತಪಸ್ಸಿನ ಸಂಬಂಧದಲ್ಲಿನ ಪೈಪೋಟಿಯಿಂದಾಗಿ ಕಡುತರವಾದ ಹಗೆತನವೇ ಬೆಳೆದಿತ್ತು. ಸ್ಥಾಣುತೀರ್ಥದಲ್ಲಿ ವಸಿಷ್ಠರ ವಿಸ್ತಾರವಾದ ಆಶ್ರಮವಿತ್ತು. ಅದರ ಪೂರ್ವದೆಡೆಗೆ ವಿಶ್ವಾಮಿತ್ರರ, ಆಶ್ರಮವಿತ್ತು. ಇವರಿಬ್ಬರೂ ಘೋರ ತಪಸ್ಸನ್ನಾಚರಿಸುವ ಪರಸ್ಪರ ಪೈಪೋಟಿ ನಡೆಸುತ್ತಿದ್ದರು. ಆದರೆ ವಸಿಷ್ಠರ ತಪೋಬಲವನ್ನು ನೋಡಿ ವಿಶ್ವಾಮಿತ್ರ ಕನಲಿದ್ದ. ಆತ ಗಂಭೀರವಾಗಿ ಯೋಚಿಸಿದ : 'ಜಪತಪದಲ್ಲಿ ಮಿಗಿಲಾದ ವಸಿಷ್ಠನನ್ನು ಸರಸ್ವತೀ ನದಿಯು ತನ್ನ ಪ್ರವಾಹದೊಂದಿಗೆ ಕೊಚ್ಚಿಕೊಂಡು ಬಂದಾಗ ಆತನನ್ನು ಕೊಂದು ಬಿಡುವೆನು,' ಹೀಗೆ ನಿಶ್ಚಯಿಸಿ ಬ್ರಹ್ಮರ್ಷಿಯಾದ ವಿಶ್ವಾಮಿತ್ರನು ಕೋಪಾಗ್ನಿಯಲ್ಲಿ ಧಗಧಗಿಸುತ್ತ ನದಿಗಳ ಅಧಿದೇವತೆಯನ್ನು ನೆನಪಿಸಿಕೊಂಡ. ಋಷಿಯ ಮುಂಗೋಪಿ ಸ್ವಭಾವ ಹಾಗೂ ಆತನ ತಪೋಬಲವನ್ನು ಅರಿತಿದ್ದ ಆಕೆ ಚಿಂತಿತಳಾದಳು. ಮುಗಿದ ಕೈಗಳಿಂದ, ನಡುಗುತ್ತ, (ಗಂಡನನ್ನು ಕಳೆದುಕೊಂಡವಳಂತೆ) ಸರಸ್ವತಿಯು ಋಷಿಯ ಎದುರು ಪ್ರತ್ಯಕ್ಷಳಾಗಿ 'ಏನಾಗಬೇಕು, ಮುನಿವರ್ಯನೇ' ಎಂದಳು. ಆಗ ಕೋಪಾವಿಷ್ಠನಾದ ವಿಶ್ವಾಮಿತ್ರನು : 'ವಸಿಷ್ಠನನ್ನು ಇಲ್ಲಿಗೆ ತೆಗೆದುಕೊಂಡು ಬಾ – ನಾನವನನ್ನು ಕೊಲೆಗೈಯಬೇಕಾಗಿದೆ' ಎನ್ನುತ್ತಾನೆ. ಕಮಲನಯನೆಯಾದ ಸರಸ್ವತಿಯು ಬಿರುಗಾಳಿಯಲ್ಲಿ ಸಿಕ್ಕ ಲತೆಯಂತೆ ನಡುಗಿದಳು. ಆಕೆಯ ಸ್ಥಿತಿಯನ್ನು ಮನಗಂಡು ವಿಶ್ವಾಮಿತ್ರ ತನ್ನ ಆಜ್ಞೆಯನ್ನು ಪುನರುಚ್ಚರಿಸಿದ. ಆತನ ಉದ್ದೇಶ ಎಂಥ ಪಾಶವೀಯವಾಗಿತ್ತೆಂದು ಗೊತ್ತಿದ್ದ ಸರಸ್ವತಿಯು – ಆಕೆ ವಸಿಷ್ಠರ ತಪೋಬಲ ಎಂಥದೆಂಬುದನ್ನೂ ಬಲ್ಲವಳಾಗಿದ್ದಳು – ಇಬ್ಬರಿಂದಲೂ ಶಾಪಕ್ಕೆ ಗುರಿಯಾಗುವ ಭಯದಿಂದ ನಡುಗುತ್ತ ವಸಿಷ್ಠರೆಡೆಗೆ ಹೋಗಿ ಅವರ ವೈರಿ ಹೇಳಿದ್ದನ್ನು ನಿವೇದಿಸಿಕೊಂಡಳು. ಭಯ ತುಂಬಿಕೊಂಡು ಕಂಪಿಸುತ್ತಿದ್ದ ಆಕೆಯನ್ನುದ್ದೇಶಿಸಿ ವಸಿಷ್ಠರು ಹೀಗೆ ನುಡಿದರು : 'ಓ ನದಿಗಳ ಅಧಿದೇವತೆಯೇ, ನೀನು ವಿಶ್ವಾಮಿತ್ರನ ಶಾಪಕ್ಕೆ ಗುರಿಯಾಗುವ ಬದಲು ನನ್ನನ್ನು ಅವನಲ್ಲಿಗೆ ಕೊಂಡೊಯ್ದು ಬಿಡುಗಡೆಯನ್ನು ಪಡೆ.' ದಯಾಳುವಾದ ವಸಿಷ್ಠರ ಈ ಮಾತನ್ನು ಕೇಳಿ ಸರಸ್ವತಿ ತಾನು ಅತಿಚಾತುರ್ಯದಿಂದ ಏನು ಮಾಡಬೇಕೆಂದು ಯೋಚಿಸಿದಳು. 'ವಸಿಷ್ಠರಂತೂ ನನ್ನ ಮೇಲೆ ಸದಾ ಕರುಣೆಯನ್ನು ತೋರಿದ್ದಾರೆ. ಅವರ ಹಿತವನ್ನು ನಾನು ಕಾಪಾಡಬೇಕು.' ಅನಂತರ, ಕೌಶಿಕ ಮಹರ್ಷಿಯು ತನ್ನ ದಡದಲ್ಲಿ ಪ್ರಾರ್ಥನೆ–ಹೋಮ–ಹವನ ಸಲ್ಲಿಸುವುದನ್ನು ನೋಡಿದ ಆಕೆ 'ಇದುವೆ ಸದವಕಾಶ' ಎಂದು ತನ್ನ ದಡವನ್ನು ಕೊಚ್ಚಿಕೊಂಡು ಹರಿದಳು. ಮಿತ್ರಾ ಹಾಗೂ ವರುಣರ ಮಗನಾದ ವಸಿಷ್ಠನು ಪ್ರವಾಹದಲ್ಲಿ ಕೊಚ್ಚಿಕೊಂಡು ನಡೆದಾಗ, ಆತ ನದಿಯನ್ನು ಈ ರೀತಿ ಸ್ತುತಿಸಿದ : 'ಬ್ರಹ್ಮನ ಸರೋವರದಿಂದ ಉದಯಿಸಿದ

---

೧. Quoted by Muir, Vol. I, p. 420–422

ಸರಸ್ವತಿಯೇ, ನೀನು ನಿನ್ನ ಶ್ರೇಷ್ಠ ಜಲದಿಂದ ಇಡೀ ಭೂಮಿಯನ್ನೇ ವ್ಯಾಪಿಸಿರುವೆ. ಆಕಾಶದಲ್ಲಿಯೂ ವಾಸಿಸುವ ನೀನು ಮೋಡಗಳಿಗೆ ನೀರನ್ನು ಸುರಿಯುವೆ. ಜಲವೆಲ್ಲವೂ ನೀನೇ'. ನಿನ್ನ ದಡದಲ್ಲಿ ನಾವು ಅಧ್ಯಯನಗೈಯ್ಯುವೆವು. ನಿನ್ನಿಂದಲೇ ನಮ್ಮ ಪ್ರಾಣಪೋಷಣೆ, ತೇಜಸ್ಸು ಕೀರ್ತಿ, ಧೀಮಂತಿಕೆ, ಜ್ಞಾನಪ್ರಕಾಶ. ನೀನು ನುಡಿಶಾರದೆ, ನೀನು ಸ್ವಾಹಾ; ಈ ಜಗತ್ತು ನಿನಗೆ ಅಧೀನವಾಗಿದೆ. ನೀನು ನಿನ್ನ ನಾಲ್ಕು ರೂಪಗಳಲ್ಲಿ ಚರಾಚರವಸ್ತುಗಳಲ್ಲಿ ವಾಸಿಸುವೆ. ಸರಸ್ವತಿಯಿಂದ ವಸಿಷ್ಠರು ತನ್ನ ಸಮೀಪಕ್ಕೆ ತರಲ್ಪಟ್ಟುದನ್ನು ನೋಡಿ, ವಿಶ್ವಾಮಿತ್ರನು ಆ ಬ್ರಾಹ್ಮಣ ಋಷಿಯನ್ನು ಸಂಹರಿಸುವುದಕ್ಕೆ ಅತ್ತಿತ್ತ ಶಸ್ತ್ರಕ್ಕಾಗಿ ಹುಡುಕಾಡಿದ. ಆತನ ಕೋಪವನ್ನು ಗಮನಿಸಿ, ಹಾಗೂ ಬ್ರಹ್ಮಹತ್ಯೆ ಸಂಭವಿಸಬಾರದೆಂದು, ಸರಸ್ವತಿಯು ವಸಿಷ್ಠರನ್ನು ತ್ವರಿತವಾಗಿ ಪೂರ್ವದಿಕ್ಕಿಗೆ ಕೊಚ್ಚಿಕೊಂಡು ಹೋದಳು. ಇಬ್ಬರೂ ಋಷಿವರ್ಯರ ಅನುಜ್ಞೆಯನ್ನು ಪಾಲಿಸಿಯೂ ಆಗಿತ್ತು. ವಿಶ್ವಾಮಿತ್ರನ ಕೈಯಿಂದ ಜಾರಿಕೊಂಡುದೂ ಆಗಿತ್ತು. ವಸಿಷ್ಠನು ಈ ರೀತಿ ತನ್ನ ಕೈಯಿಂದ ಜಾರಿಕೊಂಡು ಹೋಗುವುದನ್ನು ನೋಡಿದ ವಿಶ್ವಾಮಿತ್ರನು ಗುಡುಗಿ ನುಡಿದ : 'ನದಿಗಳ ಅಧಿದೇವತೆಯಾದ ಸರಸ್ವತಿಯೇ, ನನ್ನಿಂದ ದೂರ ಸರಿದು ಜಾರಿಕೊಂಡು ಹೋಗಿದ್ದೀಯಾ. ನಿನ್ನ ಗರ್ಭದಲ್ಲಿ ದಾನವೇಶ್ವರನಿಗೆ ಪ್ರಿಯವಾದ ರಕ್ತದ ತೆರೆಗಳು ಹರಿಯುವಂತಾಗಲಿ.' ಈ ರೀತಿ ಶಾಪಗ್ರಸ್ತಳಾದ ಸರಸ್ವತಿಯು ಒಂದು ವರ್ಷಕಾಲ ರಕ್ತಮಿಶ್ರಿತ ಪ್ರವಾಹದೊಂದಿಗೆ ಹರಿದಳು. ಎಲ್ಲಿ ವಸಿಷ್ಠರು ಕೊಚ್ಚಿಕೊಂಡೊಯ್ಯಲ್ಪಟ್ಟಿದ್ದರೋ ಅಲ್ಲಿಗೆ ರಾಕ್ಷಸರು ತೀರ್ಥಯಾತ್ರೆಗೆಂದು ಬಂದು, ರಕ್ತದ ಪ್ರವಾಹವನ್ನು ಮನದಣಿವಂತೆ ದಾನಮಾಡಿ, ನಕ್ಕು ನಲಿದು ಹೋಗುತ್ತಿದ್ದರು (ಅವರಿಗೆ ಸ್ವರ್ಗವನ್ನೇ ಗೆದ್ದುಕೊಂಡ ಸಂತೋಷವುಂಟಾಗಿತ್ತು) ಕೆಲ ಋಷಿಗಳು ಅಲ್ಲಿಗೆ ಬಂದಾಗ ರಕ್ತಮಿಶ್ರಿತ ನೀರನ್ನು ನೋಡಿ, ಹಾಗೂ ಅದನ್ನು ರಾಕ್ಷಸರು ಗಟಗಟ ಕುಡಿಯುವುದನ್ನು ನೋಡಿ, ಆಘಾತಹೊಂದಿ, ಸರಸ್ವತಿಯನ್ನು ರಕ್ಷಿಸಲು ಹೋಗಿದ್ದುಂಟು.'

ವಸಿಷ್ಠ ವಿಶ್ವಾಮಿತ್ರರ ವೈರ ಇಬ್ಬರು ಪುರೋಹಿತರ ಮಧ್ಯದ ವೈರವಾಗಿರಲಿಲ್ಲ. ಅದು ಒಬ್ಬ ಬ್ರಾಹ್ಮಣ ಪುರೋಹಿತ ಹಾಗೂ ಒಬ್ಬ ಕ್ಷತ್ರಿಯ ಪುರೋಹಿತ ಇವರ ವೈರವಾಗಿತ್ತು. ವಸಿಷ್ಠನು ಬ್ರಾಹ್ಮಣನಾಗಿದ್ದ; ವಿಶ್ವಾಮಿತ್ರನು ಕ್ಷತ್ರಿಯನಾಗಿದ್ದ – ಆತ ರಾಜವಂಶಜನಾದ ಕ್ಷತ್ರಿಯನಾಗಿದ್ದ. ಋಗ್ವೇದದಲ್ಲಿ (iii.೩೩,೧೧) ವಿಶ್ವಾಮಿತ್ರನು ಕುಶಿಕನ ಮಗನೆಂದು ಹೇಳಲಾಗಿದೆ. ವಿಷ್ಣುಪುರಾಣವು[೧] ವಿಶ್ವಾಮಿತ್ರನ ಬಗೆಗೆ ಇನ್ನೂ ಹೆಚ್ಚಿನ ವಿವರಗಳನ್ನು ಒದಗಿಸುತ್ತದೆ. ಪುರೂರವಸ್ ಎಂಬ ರಾಜನ ವಂಶಜಳಾದ ಗಾಧಿಯ ಮಗ ವಿಶ್ವಾಮಿತ್ರ ಎಂದು ಅಲ್ಲಿ ಹೇಳಲಾಗಿದೆ. ಇದನ್ನು ಹರಿವಂಶ[೨] ದೃಢೀಕರಿಸುತ್ತದೆ. ವಿಶ್ವಾಮಿತ್ರನ ಗೋತ್ರವು ತಲೆತಲಾಂತರದಿಂದ ಅಗ್ನಿಯನ್ನು ಆರದಂತೆ ಕಾಯ್ದುಕೊಂಡು ಬಂದಿದೆಯೆಂಬುದನ್ನು ಋಗ್ವೇದ[೩] (iii:೧:೨೧)ದಿಂದ ಅರಿಯುತ್ತೇವೆ. ಋಗ್ವೇದದಿಂದ ಗೊತ್ತಾಗುವ ಇನ್ನೂ ಒಂದು ಸಂಗತಿಯೇನೆಂದರೆ ವಿಶ್ವಾಮಿತ್ರನು ಆ ವೇದದ ಅನೇಕ ಋಕ್ಕುಗಳ ಕರ್ತೃವಾಗಿದ್ದ ಹಾಗೂ ರಾಜರ್ಷಿಯೆಂದು ಪ್ರತೀತನಾಗಿದ್ದ.

---

೧. Quoted by Muir, Vol. I, p. 349

೨. Quoted by Muir, Vol. I, p. 353

೩. Quoted by Muir, Vol. I, p. 316

ವೇದಗಳಲ್ಲೇ ಅತ್ಯಂತ ಪವಿತ್ರವಾದ, ಋಗ್ವೇದದ (iii.೫೨.೧೦) ಗಾಯತ್ರೀ ಮಂತ್ರದ ಕರ್ತೃವು ಆತ. ಆತನ ಬಗೆಗೆ ನಮ್ಮ ನಿದರ್ಶನಕ್ಕೆ ಬರುವ ಇನ್ನೊಂದು ಅಂಶವೆಂದರೆ ಆತ ಕ್ಷತ್ರಿಯನಾಗಿದ್ದು ಆತನ ಕುಟುಂಬ ಭರತರ[೧] ಕುಲಕ್ಕೆ ಹೊಂದಿದುದಾಗಿತ್ತು ಎಂಬುದು.

ಈ ಸಮಯದ ಬಹಳಷ್ಟು ಬ್ರಾಹ್ಮಣರು ಹಾಗೂ ಕ್ಷತ್ರಿಯರ ಮಧ್ಯೆ ಈ ಕೆಳಕಾಣಿಸಿದ ಅಂಶಗಳ ಕುರಿತು ಒಂದು ವಾದವಿವಾದ ನಡೆದಿತ್ತೆಂದು ಕಾಣುತ್ತದೆ.

(೧) ದಾನ ಸ್ವೀಕರಿಸುವ ಹಕ್ಕು. ದಾನವೆಂದರೆ ಯಾವ ಕೆಲಸ (ಕಾಯಕ)ವನ್ನು ಮಾಡದೆ ನೀಡಲ್ಪಡುವ ಕೊಡುಗೆ. ಇಂಥ ದಾನಗಳನ್ನು ಸ್ವೀಕರಿಸುವ ಹಕ್ಕು ಬ್ರಾಹ್ಮಣರಿಗೆ ಮಾತ್ರ ಇದೆ.[೨] ಇತರರಾರಿಗೂ ಇಲ್ಲ ಎಂಬುದು ಬ್ರಾಹ್ಮಣರ ವಾದ.

(೨) ವೇದಗಳನ್ನು ಕಲಿಸುವ ಹಕ್ಕು. ಬ್ರಾಹ್ಮಣರ ವಾದದ ಪ್ರಕಾರ, ಕ್ಷತ್ರಿಯನಿಗೆ ವೇದಗಳನ್ನು ಅಧ್ಯಯನ ಮಾಡುವ ಹಕ್ಕು ಮಾತ್ರ ಇದೆ, ಕಲಿಸುವ ಹಕ್ಕು ಆತನಿಗಿಲ್ಲ. ಅದು ಕೇವಲ ಬ್ರಾಹ್ಮಣರ ವಿಶೇಷ ಹಕ್ಕು.

(೩) ಯಜ್ಞಯಾಗಾದಿಗಳಲ್ಲಿ ಅಧ್ವರ್ಯು ಆಗುವ ಹಕ್ಕು. ಈ ವಿಷಯದ ಮೇಲೆ ಬ್ರಾಹ್ಮಣರ ವಾದವೇನಾಗಿತ್ತೆಂದರೆ ಕ್ಷತ್ರಿಯನಿಗೆ ಯಜ್ಞಯಾಗ ಮಾಡುವ ಹಕ್ಕು ಇದೆಯೇ ಹೊರತು ಅದರಲ್ಲಿ ಪುರೋಹಿತನಾಗಿ ಕಾರ್ಯನಿರ್ವಹಿಸಲು ಬರುವುದಿಲ್ಲ. ಆ ವಿಶೇಷಾಧಿಕಾರ ಬ್ರಾಹ್ಮಣರಿಗೆ ಮಾತ್ರ ಮೀಸಲಾದುದು.

ಈ ಸಂದರ್ಭದಲ್ಲಿ ಗಮನಿಸಬೇಕಾದ ಮಹತ್ವದ ಸಂಗತಿಯೇನೆಂದರೆ ಇಂಥ ಅಂಶಗಳ ಬಗೆಗಿನ ವಾದದಲ್ಲಿಯೂ ವಿಶೇಷವಾಗಿ ಮೂರನೆಯ ಅಂಶದ ಸಂಬಂಧದಲ್ಲಿ ಅವರು (ಬ್ರಾಹ್ಮಣರು ಹಾಗೂ ಕ್ಷತ್ರಿಯರು) ಪರಸ್ಪರ ವಿರೋಧಿಗಳ ಪಾತ್ರವನ್ನಾಡದೆ ಇರಲಿಲ್ಲ. ಈ ಸಂಗತಿ ರಾಮಾಯಣ[೩]ದಲ್ಲಿ ನಿರೂಪಿತವಾದ ತ್ರಿಶಂಕುವಿನ ಕಥೆಯಿಂದ ದೃಢಪಡುತ್ತದೆ. ಆಕೆ ಹೀಗಿದೆ :

> "ಇಕ್ಷ್ವಾಕು ವಂಶಜರಲ್ಲೊಬ್ಬನಾದ ತ್ರಿಶಂಕುರಾಜನು ತಾನು ದೇಹಸಮೇತ ಸ್ವರ್ಗಕ್ಕೇರಲು ಸಾಧ್ಯವಾಗುವಂತಹ ಯಜ್ಞವೊಂದನ್ನು ನೆರವೇರಿಸಬೇಕೆಂದು ಸಂಕಲ್ಪಿಸಿದ. ವಸಿಷ್ಠರನ್ನು ಕರೆಯಿಸಿ ಕೇಳಲಾಗಿ, 'ಇದು ಸಾಧ್ಯವಿಲ್ಲ' ಎಂದು ನುಡಿದರು. ಆಗ ತ್ರಿಶಂಕುರಾಜನು ವಸಿಷ್ಠರ ನೂರು ಪುತ್ರರು ತಪಸ್ಸಿನಲ್ಲಿ ತೊಡಗಿದ ಪ್ರದೇಶವಾದ ದಕ್ಷಿಣಾಪಥದೆಡೆಗೆ ನಡೆದ, ಹಾಗೂ ಅವರ ತಂದೆ ನಿರಾಕರಿಸಿದುದನ್ನು ಅವರಿಗೆ ಮಾಡಲು ಕೇಳಿಕೊಂಡ. ಅವರನ್ನು ಅರಸನು ಅತ್ಯಂತ ಗೌರವ ಹಾಗೂ ವಿನಯದೊಂದಿಗೆ ಸಂಬೋಧಿಸಿ, ಇಕ್ಷ್ವಾಕು ವಂಶಜರು ಯಾವ ಕಷ್ಟಕಾಲದಲ್ಲೂ ತಮ್ಮ ಕುಲಗುರುಗಳಿಗೇ ಮೊರೆಹೋಗಿದ್ದಾಗಿಯೂ ಹಾಗೂ ತಾನು ಸದ್ಯದ ಪರಿಸ್ಥಿತಿಯಲ್ಲಿ ಅವರನ್ನೇ ಸಂರಕ್ಷಣೆ ಮಾಡುವ ದೇವತೆಗಳೆಂದು ತಿಳಿದಿದ್ದಾಗಿಯೂ ಹೇಳುತ್ತಾನೆ. ಇಷ್ಟಾದರೂ ಆ ಸೊಕ್ಕಿದ ಪುರೋಹಿತರು ಅರಸನಿಗೆ ಆತನ ಧಾರ್ಷ್ಟ್ಯದ ಬಗೆಗೆ ಚುಚ್ಚಿ ಮಾತನಾಡುತ್ತಾರೆ : 'ಮೂರ್ಖ' ಸತ್ಯಸಂಧನಾದ

೧. Quoted by *Muir,* Vol. I, p. 345

೨. ಆದ್ದರಿಂದಲೇ ಮನು ಹೇಳುತ್ತಾನೆ : "ಅರಸನು ಒಂದು ವೇಳೆ ಶೂದ್ರನೊಬ್ಬನಿಗೆ ದಾನ ಮಾಡಬೇಕೆಂದಿದ್ದರೆ, ಅವನನ್ನು ದುಡಿತಕ್ಕೆ ಹಚ್ಚಬೇಕು".

೩. *Muir,* Vol.I.P.p. 401–404

ಆಚಾರ್ಯನು (ನಮ್ಮ ತಂದೆಯು) ಒಲ್ಲೆ ಎನ್ನಲು ನೀನು ಆತನ ಅಧಿಕಾರವನ್ನು ಕಡೆಗಣಿಸಿ ಅನ್ಯಪಂಥಕ್ಕೆ ಮೊರೆಹೋಗುವಿಯಾ? ಇಕ್ಷ್ವಾಕುಗಳಿಗೆ ಕುಲಗುರುವೆಂದರೆ ದಿವ್ಯಜ್ಞಾನವಾಣಿ. ಅಂದಮೇಲೆ, ಆತನ ಅನುಜ್ಞೆಯನ್ನು ಹೇಗೆ ಉಲ್ಲಂಘಿಸಲಿಕ್ಕಾದೀತು? ಬ್ರಹ್ಮರ್ಷಿಯಾದ ವಸಿಷ್ಠರು 'ಇದು ಸಾಧ್ಯವಿಲ್ಲ' ಎಂದು ಹೇಳಿದಾಗ, ನಾವು ಹೇಗೆ ಯಜ್ಞಪೌರೋಹಿತ್ಯ ಕೈಕೊಳ್ಳೋಣ? ನೀನು ಮೂರ್ಖನಿದ್ದೀ – ಹೊರಟುಹೋಗು ನಿನ್ನ ರಾಜಧಾನಿಗೆ.' ಆಗ ತ್ರಿಶಂಕು ಅವರಿಗೆ ಹೇಳಿದ : 'ನನ್ನ ವಿನಂತಿಯನ್ನು ಗುರುವೂ ಗುರುವಿನ ಮಕ್ಕಳೂ ಪೂರೈಸದಿದ್ದ ಮೇಲೆ, ನನಗೆ ಅನ್ಯಮಾರ್ಗವೇ ಗತಿ.' ಈ ತರಹದ ಮನೋರಥವನ್ನು ಅವನು ವ್ಯಕ್ತಮಾಡಿದಾಗ, ಅವರು ಆತನನ್ನು ತೆಗಳಿ, 'ಚಾಂಡಾಲನಾಗಹೋಗು' ಎಂದು ಶಪಿಸಿದರು. ಶಾಪವು ಕೂಡಲೇ ಪ್ರಭಾವ ಬೀರಿದ ಕಾರಣ ಆ ನತದೃಷ್ಟ ರಾಜನ ರೂಪ ಅಧಮನ ವಿಕೃತರೂಪಕ್ಕೆ ತಿರುಗಿತು. ಆಗ ತ್ರಿಶಂಕು ಈ ಅವಧಿಯಲ್ಲಿ ದಕ್ಷಿಣಾಪಥದಲ್ಲಿ ವಾಸಿಸುತ್ತಿದ್ದ ವಿಶ್ವಾಮಿತ್ರನ ಮೊರೆಹೋಗಿ, ತನ್ನ ಧರ್ಮನಿಷ್ಠೆ ಹಾಗೂ ಸದ್ಗುಣಗಳ ಬಗೆಗೆ ಹೇಳಿಕೊಂಡು ತನ್ನ ದುರ್ಗತಿಗಾಗಿ ರೋದಿಸಿದ. ವಿಶ್ವಾಮಿತ್ರನಿಗೆ ಮರುಕಹುಟ್ಟಿತು. ಆತ ತಾನು ಯಜ್ಞವನ್ನು ನಡೆಸಿಕೊಡುವುದಾಗಿಯೂ, ಗುರುವಿನ ಶಾಪದಿಂದ ತ್ರಿಶಂಕು ತಾಳಿದ ಚಾಂಡಾಲ ರೂಪದಲ್ಲೇ ಆತನನ್ನು ಸ್ವರ್ಗಕ್ಕೆ ಏರಿಸುವುದಾಗಿಯೂ, ಭಾಷೆಯಿತ್ತ : 'ನೀನು ಕುಶಿಕನ ಮಗನಾದ ನನ್ನನ್ನು ಆಶ್ರಯಿಸಿದ ಕಾರಣ ಸ್ವರ್ಗ ನಿನ್ನ ಕೈಯಲ್ಲಿ ಇದ್ದಂತೆಯೇ ಎಂದು ತಿಳಿದುಕೋ. ಯಜ್ಞದ ಎಲ್ಲ ತಯ್ಯಾರಿ ನಡೆಯಲಿ ಹಾಗೂ, ವಸಿಷ್ಠನ ಕುಟುಂಬವನ್ನೊಳಗೊಂಡಂತೆ, ಎಲ್ಲ ಋಷಿಗಳಿಗೂ ಆಮಂತ್ರಣ ಹೋಗಲಿ' ಎಂದು ಹೇಳಿದ.

ವಿಶ್ವಾಮಿತ್ರನ ಸಂದೇಶವನ್ನು ಕೊಂಡೊಯ್ದ ಶಿಷ್ಯರು ತಿರುಗಿ ಬಂದು ಹೀಗೆ ಹೇಳಿದರು : 'ನಿಮ್ಮ ಸಂದೇಶ ಕೇಳಿ ಎಲ್ಲ ದೇಶಗಳಲ್ಲೂ ಬ್ರಾಹ್ಮಣರು ಕಲೆಯುತ್ತಿದ್ದಾರೆ, ಹಾಗೂ ಮಹೋದಯ ವಸಿಷ್ಠರೊಬ್ಬರನ್ನು ಹೊರತುಪಡಿಸಿ, ಅವರೆಲ್ಲ ಬಂದಿದ್ದಾರೆ. ಆದರೆ ನೂರು ವಾಸಿಷ್ಠರು ಎಂಥ ಮಾತುಗಳನ್ನಾಡಿದರೆಂದಿರ? 'ಆತ ಚಾಂಡಾಲನಾದರೆ, ಆತನ ಯಜ್ಞದಲ್ಲಿ ಒಬ್ಬ ಕ್ಷತ್ರಿಯನು ಪೌರೋಹಿತ್ಯ ವಹಿಸಿದ್ದುದಾದರೆ, ದೇವತೆಗಳಾಗಲೀ ಬ್ರಾಹ್ಮಣರಾಗಲೀ ಆತನ ಯಜ್ಞದ ಹವಿಸ್ಸನ್ನು ಹೇಗೆ ಸೇವಿಸುತ್ತಾರೆ? ಒಬ್ಬ ಚಾಂಡಾಲನ ಅನ್ನವನ್ನು ಉಂಡನಂತರ, ಹಾಗೂ ವಿಶ್ವಾಮಿತ್ರನ ಆತಿಥ್ಯ ಸ್ವೀಕರಿಸಿದನಂತರ, ಪ್ರಖ್ಯಾತ ಬ್ರಾಹ್ಮಣರು ಅದು ಹೇಗೆ ಸ್ವರ್ಗಕ್ಕೇರಬಲ್ಲರು?' ಇಂಥ ನಿರ್ದಾಕ್ಷಿಣ್ಯ ಮಾತುಗಳನ್ನು ಆ ಮಹೋದಯರು ಹಾಗೂ ವಾಸಿಷ್ಠರು, ತಮ್ಮ ಕೋಪಾವೇಶದಲ್ಲಿ, ಆಡಿದರು.' ಈ ವರದಿಯನ್ನು ಕೇಳಿದ ವಿಶ್ವಾಮಿತ್ರನು ಕಿಡಿಕಿಡಿಯಾಗಿ ವಾಸಿಷ್ಠರೆಲ್ಲ ಬೆಂದು ಬೂದಿಯಾಗಲಿ, ಏಳು ನೂರು ಮರುಜನ್ಮಗಳಲ್ಲಿ ಅವರು ಅಧಮ ಅಸ್ಪೃಶ್ಯರಾಗಿ ಹುಟ್ಟಲಿ, ವಸಿಷ್ಠನು ನಿಷಾದನಾಗಿಲಿ, ಎಂಬ ಶಾಪ ನೀಡಿದ.

ಈ ಶಾಪವು ಆಗಲೇ ಕಾರ್ಯಮಾಡತೊಡಗಿದೆಯೆಂಬುದನ್ನರಿತ ಮೇಲೆ ವಿಶ್ವಾಮಿತ್ರನು ತ್ರಿಶಂಕುವನ್ನು ಶ್ಲಾಘಿಸುತ್ತ ನೆರೆದ ಋಷಿಗಳಿಗೆ ಯಜ್ಞಸಮಾರಂಭವು ಸಾಂಗವಾಗಿ ನೆರವೇರಲಿ ಎಂದು ಸೂಚಿಸಿದ. ಇದಕ್ಕೆ ಅವರೆಲ್ಲ ಉಗ್ರಸ್ವಭಾವದ ಋಷಿಯ ಕೋಪಕ್ಕಂಜಿ 'ಆಗಲಿ'

ಎಂದರು. ವಿಶ್ವಾಮಿತ್ರನೇ ಸ್ವತಃ 'ಯಾಜಕ'ನೆಂದು ಕಾರ್ಯನಿರ್ವಹಿಸಿದ. ಉಳಿದ ಋಷಿಗಳು 'ಋತ್ವಿಜ'ರೆಂದು ಉಳಿದ ವಿಧಿಗಳನ್ನು ನೆರವೇರಿಸಿದರು.

ವಸಿಷ್ಠ–ವಿಶ್ವಾಮಿತ್ರರ ಈ ವಾದವಿವಾದದಲ್ಲಿ ಸುದಾಸನು ಮಹತ್ವದ ಪಾತ್ರ ಆಡಿದಂತಿದೆ. ಆತನ ಪಟ್ಟಾಭಿಷೇಕ ನಡೆಸಿಕೊಟ್ಟವರೇ ವಸಿಷ್ಠರು. ದಶರಾಜರ ವಿರುದ್ಧ ಜಯಗಳಿಸಲು ಆತನಿಗೆ ನೆರವಾದವರು ವಸಿಷ್ಠರು. ಹೀಗಿದ್ದೂ, ಸುದಾಸನು ವಸಿಷ್ಠರನ್ನು ಆ ಹುದ್ದೆಯಿಂದ ತೆಗೆದುಹಾಕಿದ. ಅವರ ಸ್ಥಾನದಲ್ಲಿ ಯಜ್ಞವನ್ನು ನಡೆಸಿಕೊಡಲು ವಿಶ್ವಾಮಿತ್ರನನ್ನು ಪುರೋಹಿತನೆಂದು[೧] ನೇಮಿಸಿದ. ಇದು ಸುದಾಸನ ಹಾಗೂ ವಸಿಷ್ಠರ ಮಧ್ಯೆ ವೈರ ಏರ್ಪಡಲು ಕಾರಣವಾದ (ಸುದಾಸನ) ಮೊದಲ ಕ್ರಿಯೆ. ಈ ವೈರ ಗಾಢವಾಗಲು ಹಾಗೂ ಹೆಚ್ಚಾಗಲು ಸುದಾಸನ ಇನ್ನೊಂದು ಕೃತಿಯೂ ಕಾರಣ. ಆತನು ವಸಿಷ್ಠನ ಮಗನಾದ ಶಕ್ತಿಯನ್ನು ಅಗ್ನಿಯಲ್ಲಿ ಒಗೆದು ಜೀವಂತವಾಗಿ ಸುಟ್ಟ. ಈ ಕತೆಯು ಸತ್ಯಾಯನ ಬ್ರಾಹ್ಮಣ[೨]ದಲ್ಲಿ ವರದಿಯಾಗಿದೆ. ಸತ್ಯಾಯನ ಬ್ರಾಹ್ಮಣವು ಇಂಥ ಹೇಯಕೃತ್ಯಕ್ಕೆ ಕಾರಣವೇನೆಂಬುದನ್ನು ವಿವರಿಸುವುದಿಲ್ಲ. ಋಗ್ವೇದ ಅನುಕ್ರಮಣಿಕೆಗೆ ಬರೆದ ತನ್ನ ಭಾಷ್ಯದಲ್ಲಿ ಷಡ್ಗುರುಶಿಷ್ಯನು ಸ್ವಲ್ಪ ಬೆಳಕನ್ನು ಚೆಲ್ಲುತ್ತಾನೆ. ಷಡ್ಗುರುಶಿಷ್ಯನ ಪ್ರಕಾರ, ಸುದಾಸನು ನೆರವೇರಿಸಿದ ಒಂದು ಯಜ್ಞದಲ್ಲಿ ವಿಶ್ವಾಮಿತ್ರ ಹಾಗೂ (ವಸಿಷ್ಠನ ಮಗನಾದ) ಶಕ್ತಿಯ ನಡುವೆ ಒಂದು ಬಹಿರಂಗ ವಾದವೇ ಏರ್ಪಟ್ಟಿತ್ತು. ಈ ವಾದದಲ್ಲಿ ಷಡ್ಗುರುಶಿಷ್ಯನ ಮಾತಿನಲ್ಲೇ ಹೇಳುವುದಾದರೆ, "ವಸಿಷ್ಠನ ಮಗನಾದ ಶಕ್ತಿಯ ಮುಂದೆ ವಿಶ್ವಾಮಿತ್ರನ ಶಕ್ತಿ ಹಾಗೂ ನಾಲಗೆ ಉಡುಗಿ ಹೋದವು. ಗಾಧಿಯ ಮಗನಾದ ವಿಶ್ವಾಮಿತ್ರನು ಈ ರೀತಿ ಪರಾಭವಗೊಂಡು ಹತಾಶನಾದನು."

ಸುದಾಸನು ಶಕ್ತಿಯನ್ನು ಅಗ್ನಿಯಲ್ಲಿ ಏಕೆ ನೂಕಿದನೆಂಬುದಕ್ಕೆ ಇಲ್ಲಿ ಕಾರಣ ಸಿಕ್ಕುತ್ತದೆ. ವಿಶ್ವಾಮಿತ್ರನಿಗಾದ ಅವಮಾನದ ಪ್ರತೀಕಾರವನ್ನು ಸುದಾಸನು ಈ ರೀತಿ ತೆಗೆದುಕೊಂಡ. ವಸಿಷ್ಠ ಹಾಗೂ ಸುದಾಸರ ಮಧ್ಯೆ ಬೆಳೆಯುತ್ತಿದ್ದ ಕಡುವೈರವನ್ನು ಯಾವ ಶಕ್ತಿಯೂ ತೊಡೆದುಹಾಕುವಂತಿರಲಿಲ್ಲ.

ಈ ವೈರ ಸುದಾಸ ಹಾಗೂ ವಸಿಷ್ಠರೊಂದಿಗೇ ಅಂತ್ಯವಾಗಲಿಲ್ಲ. ಅದು ಮುಂದೆ ಅವರ ಮಕ್ಕಳಿಗೂ ಹಬ್ಬಿಕೊಂಡಂತಿದೆ. ತೈತ್ತಿರೀಯಸಂಹಿತೆ[೪] ಇದಕ್ಕೆ ಪುಷ್ಟಿ ನೀಡುತ್ತದೆ :

> "ತನ್ನ ಮಗನೂ ಹತನಾದ ಮೇಲೆ ವಸಿಷ್ಠನು : 'ನನಗೆ ಸಂತಾನವಾಗಲಿ; ಸೌದಾಸರನ್ನು ನಾನು ಸದೆಬಡಿಯುವಂತಾಗಲಿ' ಎಂದು ಆಶಿಸಿದ. ಆ ಕ್ಷಣದಲ್ಲಿ ಆತ ಈ 'ಏಕಸ್ಮಾನ್ನಪಂಚಸ'ವನ್ನು ನೋಡಿ ಅದರಿಂದ ಯಜ್ಞಮಾಡಿ ತತ್ಪರಿಣಾಮವಾಗಿ ಮಕ್ಕಳನ್ನು ಪಡೆದ ಹಾಗೂ ಸೌದಾಸರನ್ನು ಸದೆಬಡಿದ."

---

೧. ಇದಕ್ಕೆ ನೇರವಾದ ಪುರಾವೆ ಇಲ್ಲ. ಸಾಂಪ್ರದಾಯಿಕವಾದ ನಂಬುಗೆ ಇದನ್ನು ಸತ್ಯವೆಂದು ಅಂಗೀಕರಿಸಿದೆ. ಈ ನಂಬುಗೆ ಋಗ್ವೇದದ ಅಧ್ಯಾಯ III.೫೩.೯ನ್ನು ಆಧರಿಸಿದೆ. ಇದನ್ನು ಯಾಸ್ಕ ದೃಢಪಡಿಸಿರುತ್ತಾನೆ. ಆತನ ನಿರುಕ್ತದಲ್ಲಿ (II.೨೪) ಹೀಗೆ ಹೇಳುತ್ತಾನೆ: "ಆಮೇಲೆ ಅವರೊಂದು ಕತೆ ಹೇಳುತ್ತಾರೆ. ವಿಶ್ವಾಮಿತ್ರನು ಪೀಜವನನ ಮಗನಾದ ಸುದಾಸನ ಪುರೋಹಿತನಾಗಿದ್ದ".

೨. Muirನು (ಸಂ. I, ಪು. ೩೭೮) ಉದ್ಧರಿಸಿದ ಅನುಕ್ರಮಣಿಕೆಯ ಪ್ರಾಮಾಣಿಕ ಆಧಾರದ ಮೇಲೆ ಸಾಯಣನು ಋಗ್ವೇದ (VII.೩೨)ಕ್ಕೆ ತಾನು ಬರೆದ ಪ್ರಸ್ತಾವನೆಯಲ್ಲಿ ಇದನ್ನು ಉಲ್ಲೇಖಿಸಿದ್ದಾನೆ.

೩. ಸಾಯಣನು ಋಗ್ವೇದದ ಮೂರನೇ ಮಂಡಲದಲ್ಲಿ ಬರುವ ೫೩ನೇ ಸೂಕ್ತದ ೧೫ ಹಾಗೂ ೧೬ನೇ ಪದ್ಯಗಳಿಗೆ ತಾನು ನೀಡಿದ ಪ್ರಸ್ತಾವನೆಯಲ್ಲಿ ಇದರ ಉಲ್ಲೇಖ ಮಾಡಿದ್ದಾನೆ. ಇದು Muirನಿಂದ (ಸಂ.I, ಪುಟ. ೩೪೩) ಉದ್ಧೃತವಾಗಿದೆ.

೪. *Muir*, Vol. I. p. 328

ಇದನ್ನು ಕೌಶಿತಕಿಬ್ರಾಹ್ಮಣ[೧] ದೃಢಪಡಿಸುತ್ತದೆ. ಅದು ಹೇಳುವಂತೆ ವಸಿಷ್ಠನು, ತನ್ನ ಮಗನು ಹತನಾದ ಮೇಲೆ, "ನಾನು ಸಂತಾನೋತ್ಪತ್ತಿಯಲ್ಲಿ, ದನಕರುಗಳ ಸಂಪತ್ತಿನಲ್ಲಿ ಹಾಗೂ ಸೌದಾಸರನ್ನು ಸದೆಬಡಿಯುವುದರಲ್ಲಿ ಯಶಸ್ವಿಯಾಗಲಿ ಎಂದು ಇಚ್ಛಿಸಿದ. ಹಾಗೂ ವಸಿಷ್ಠ–ಯಾಗವನ್ನು ನೆರವೇರಿಸಿ ಸೌದಾಸರನ್ನು ಬಗ್ಗು ಬಡಿದ."[೨]

## II

ಸುದಾಸನ ಹಾಗೂ ವಸಿಷ್ಠರ ಮಧ್ಯದ ಸಂಘರ್ಷ ರಾಜರುಗಳ ಹಾಗೂ ಬ್ರಾಹ್ಮಣರ ಮಧ್ಯೆ ಹುಟ್ಟಿಕೊಂಡ ಒಂದೇ ಒಂದು ಸಂಘರ್ಷವಾಗಿರಲಿಲ್ಲ. ಬ್ರಾಹ್ಮಣರ ಹಾಗೂ ರಾಜರುಗಳ ಮಧ್ಯೆ ಇತರ ಸಂಘರ್ಷ–ಪ್ರಕರಣಗಳನ್ನೂ ಪುರಾಣಗಳು ದಾಖಲಿಸಿವೆ. ಅವುಗಳನ್ನೆಲ್ಲ ಇಲ್ಲಿ ಸಂಗ್ರಹಿಸುವುದು ಅಪೇಕ್ಷಣೀಯ. ಮೊದಲನೆಯದು ಅರಸು ವೇಣನಿಗೆ ಸಂಬಂಧಿಸಿದೆ. ಬ್ರಾಹ್ಮಣರೊಂದಿಗಿನ ಆತನ ಸಂಘರ್ಷದ ಕತೆ ವಿವಿಧ ಅಧಿಕೃತ ಮೂಲಗಳಿಂದ ನಿರೂಪಿತವಾಗಿದೆ. ಕೆಳಗಣ ವೃತ್ತಾಂತ[೩] ಹರಿವಂಶದಿಂದ ಬಂದುದಾಗಿದೆ.

"ಮೊದಲಲ್ಲಿ ಒಬ್ಬ ಪ್ರಜಾಪತಿ (ಸಕಲ ಜೀವರಾಶಿಗೆ ಅಧಿಪತಿ), ಅತ್ರಿಯ ವಂಶದವನಾದ, ಶಕ್ತಿ ಸಾಮರ್ಥ್ಯದಲ್ಲಿ ಅತ್ರಿಯನ್ನು ಹೋಲುವವನಿದ್ದ. ಆತನಿಗೆ ಅಂಗನೆಂಬ ಹೆಸರು. ಆತ ಸತ್ವಗುಣದ ರಕ್ಷಕನಾಗಿದ್ದ. ಆತನ ಮಗ ಪ್ರಜಾಪತಿ ವೇಣನೆಂಬುವವನು ಮೃತ್ಯುವಿನ ಮಗಳಾದ ಸುನೀತಳೆಂಬುವವಳಿಗೆ ಹುಟ್ಟಿದವ. ಕರ್ತವ್ಯದಲ್ಲಿ ಉದಾಸೀನಭಾವದವನಾಗಿದ್ದ. (ತಾಯಿಯ ಕಡೆಯ) ಮುತ್ತಜ್ಜನ ಕಳಂಕದಿಂದ ಇಳಿದುಬಂದದ್ದರಿಂದ ಈ ಕಲಾಳ (ಮೃತ್ಯು) ಮಗಳ ಮಗನು ಕರ್ತವ್ಯವನ್ನು ನಿರ್ಲಕ್ಷಿಸಿ, ಆಶೆ ಅತ್ಯಾಶೆಯ ಬೆಂಬತ್ತಿ ಹೋದ. ಆತ ಅಧರ್ಮದ ನೀತಿ–ನಡವಳಿಕೆಯ ವ್ಯವಸ್ಥೆಯನ್ನು ಸ್ಥಾಪಿಸಿದ. ವೇದದ ನೀತಿ–ಸಂಹಿತೆಯನ್ನುಲ್ಲಂಘಿಸಿ, ಪುಂಡಾಟಿಕೆಯ ಆರಾಧಕನಾದ. ಆತನ ಆಳ್ವಿಕೆಯಲ್ಲಿ ಜನರು ಪವಿತ್ರ ಗ್ರಂಥಗಳ ಅಧ್ಯಯನ ಬಿಟ್ಟುಬಿಟ್ಟರು, ಹಾಗೂ ವಿಧೇಯತೆ ಕಲಿಯಲಿಲ್ಲ. ದೇವತೆಗಳಿಗೆ ಕುಡಿಯಲು ಸೋಮರಸ ಯಜ್ಞಯಾಗಾದಿಗಳಲ್ಲಿ ಅರ್ಘ್ಯವೆಂದು ಅರ್ಪಿಸಲ್ಪಡಲಿಲ್ಲ. ಆ ಪ್ರಜಾಪತಿಯು, ದೇವತೆಗಳಿಗೆ ಯಾವುದೇ ತರಹದ ಬಲಿ ಅಥವಾ ನೈವೇದ್ಯ ಕೊಡಕೂಡದು ಎಂದು ಕಟ್ಟಪ್ಪಣೆ ವಿಧಿಸಿದ್ದನು. ಆತನ ಅವಸಾನಕಾಲ ಸಮೀಪಿಸಿದ ಹಾಗೆ, 'ನಾನೇ ಯಜಮಾನ, ನಾನೇ ಯಜ್ಞ. ಯಾರಿಗೆ, ಯಜ್ಞಸಲ್ಲಬೇಕಾಗಿದೆಯೋ ಅಂಥ ದೇವತೆಯೂ

---

೧. Ibid.

೨. ವಸಿಷ್ಠನ ಈ ವೈರಸಂಬಂಧ ಸುದಾಸನ ಬಗೆಗೊ ಸೌದಾಸರ ಬಗೆಗೊ ಎಂಬುದರ ಬಗೆಗೆ ಸ್ವಲ್ಪ ಅನುಮಾನ ಇದ್ದಂತಿದೆ. ಸತ್ಯಾಯನ ಹಾಗೂ ಕೌಶೀತಕ್ತೀ ಬ್ರಾಹ್ಮಣಗಳು ಸೌದಾಸ ಎಂಬ ಪದಪ್ರಯೋಗ ಮಾಡುತ್ತವೆ. ಅದರಿಂದ ವಸಿಷ್ಠನ ವೈರತ್ವ ಸುದಾಸನೊಂದಿಗಲ್ಲದೆ ಆತನ ಪುತ್ರರೊಂದಿಗೆ ಇತ್ತು ಎಂದು ಸೂಚಿತವಾಗಿದೆ. ಆದರೆ ಮನುವು ಅಪರಾಧಿ ಸುದಾಸನೇ ಎಂದು ಖಚಿತವಾಗಿ ಹೇಳುತ್ತಾನೆ. ಷಡ್ಗುರುಶಿಷ್ಯನು ಸುದಾಸನ ಬಗೆಗೆ ಹೇಳುತ್ತಾನೆಯೇ ಹೊರತು ಸೌದಾಸರ ಬಗೆಗಲ್ಲ. 'ಬೃಹದ್ದೇವತಾ' 'ಸುದಾಸ'ನೆಂದು ಹೇಳುತ್ತಾನೆ. ಸೌದಾಸರು ಎಂಬುದಕ್ಕೆ 'ಸುದಾಸನ ಕುಟುಂಬ' ಎಂದು ಅರ್ಥ ಮಾಡಿದರೆ ಈ ತೊಡಕು ನಿವಾರಣೆಯಾಗುತ್ತದೆ. (ಅದರಲ್ಲಿ ಸುದಾಸನೂ ಸುದಾಸನ ಮಕ್ಕಳೂ ಅಡಕವಾಗುತ್ತಾರೆ).

೩. Quoted by *Muir,* Vol. I, p. 302

ನಾನೇ. ಸರ್ವ ಅರ್ಘ್ಯ ನೈವೇದ್ಯಗಳು ನನಗೇ ಅರ್ಪಿತವಾಗಬೇಕು,' ಎನ್ನತೊಡಗಿದ. ಈ ಧರ್ಮಭ್ರಷ್ಟನೆಡೆಗೆ ಮಾರೀಚಿಯ ನೇತೃತ್ವದಲ್ಲಿ ಎಲ್ಲ ಋಷಿಗಳ ನಿಯೋಗವೊಂದು ಬಂದು ಹೇಳಿತು : 'ಬಹಳ ವರ್ಷಗಳವರೆಗೆ ನಡೆಯಬಹುದಾದ ಒಂದು ಸಮಾರಂಭಕ್ಕಾಗಿ ನಮ್ಮನ್ನು ನಾನು ಸಮರ್ಪಿಸಿಕೊಳ್ಳಲಿದ್ದೇವೆ. ಆದ್ದರಿಂದ ಓ ವೇಣನೇ, ದೌರ್ಜನ್ಯವೆಸಗದಿರು. ನೀನು ಮಾಡುತ್ತಿರುವುದು ಸದ್ಧರ್ಮದ ಶಾಶ್ವತ ಆಳ್ವಿಕೆಯಲ್ಲ. ನೀನು ಅತ್ರಿಯ ಕುಲದ ಪ್ರಜಾಪತಿಯೇನೋ ಸೈ, ಆದರೆ ಪ್ರಜೆಗಳನ್ನು ರಕ್ಷಿಸುವ ಹೊಣೆ ಹೊತ್ತಿದ್ದೀಯಾ, ಅದು ನೆನಪಿರಲಿ.' ನ್ಯಾಯಾನ್ಯಾಯ ಪ್ರಜ್ಞೆ ಇಲ್ಲದ ಮೂರ್ಖ ವೇಣನು ಅಪಹಾಸ್ಯದ ನಗೆ ನಕ್ಕು ಉತ್ತರಿಸಿದ : 'ಧರ್ಮದ ಬಗ್ಗೆ ನಾನಲ್ಲದೆ ಇನ್ನಾರು ವ್ಯಾಖ್ಯಾನಿಸಬೇಕು? ಧರ್ಮಶಾಸ್ತ್ರ ಪ್ರವೀಣತೆಯಲ್ಲಿ, ಪರಾಕ್ರಮದಲ್ಲಿ, ತಪೋಸಾಧನೆಯಲ್ಲಿ, ನನ್ನನ್ನು ಈ ಪ್ರಪಂಚದಲ್ಲಿ ಸರಿಗಟ್ಟುವವರಾರು? ಬುದ್ಧಿಭ್ರಮಣೆಯಾದ ನಿಮಗೆ ನಾನೇ ಜೀವೋತ್ಪತ್ತಿಯ ಹಾಗೂ ಧರ್ಮದ ಆಕರ. ನಾನು ಮನಸ್ಸು ಮಾಡಿದರೆ, ಈ ಭೂಮಿಯನ್ನು ಸುಟ್ಟುಹಾಕಬಲ್ಲೆ ಅಥವಾ ಪ್ರಳಯ ಸೃಷ್ಟಿಸಿ ಮುಳುಗಿಸಬಲ್ಲೆ. ಅಥವಾ ದೇವಲೋಕ ಭೂಲೋಕಗಳನ್ನು ಮುಚ್ಚಿಹಾಕಬಲ್ಲೆ.' ತನ್ನ ಭ್ರಮೆ ಹಾಗೂ ಅಹಂಕಾರದಿಂದಾಗಿ ವೇಣನು ಯಾರ ಮಾತಿಗೂ ಬಗ್ಗುವಂತಿರಲಿಲ್ಲ ಆಗ ಆ ಋಷಿಗಳೆಲ್ಲರೂ ಕೂಡಿ, ಬಲಿಷ್ಠನಾದ ಪ್ರಜಾಪತಿಯು ಕೊಸರಿಕೊಳ್ಳುತ್ತಿದ್ದರೂ ಆತನನ್ನು ಹಿಡಿದುಕೊಂಡರು ಹಾಗೂ ಆತನ ಎಡ ತೊಡೆಯನ್ನು ತಿಕ್ಕಿದರು. ಅದರಿಂದ ಒಬ್ಬ ಕಪು ಮನುಷ್ಯ ಹುಟ್ಟಿದ. ಆತ ಕುಳ್ಳನೂ ಆಗಿದ್ದ. ಭಯಭೀತನಾಗಿ ಆತ ಕೈಮುಗಿದು ನಿಂತ. ಆತನ ಉದ್ವಿಗ್ನತೆಯನ್ನು ಅವಲೋಕಿಸಿದ ಅತ್ರಿಯು ಆತನಿಗೆ 'ಕೂತುಕೋ' (ನಿಷಿದ) ಎಂದು ಹೇಳಿದ. ಆತ ನಿಷಾದರ ಜನಾಂಗದ ಸಂಸ್ಥಾಪಕನಾದ, ಹಾಗೂ ಧಿವಾರ (ಬೆಸ್ತ)ರಿಗೆ ಮೂಲ ಪುರುಷನೂ ಆದ."

ಬ್ರಾಹ್ಮಣರೊಂದಿಗೆ ಕಲಹಸಂಬಂಧ ಉಂಟಾದ ಮುಂದಿನ ಅರಸನೆಂದರೆ ಪೂರೂರವಸ್. ಈ ಪುರೂರವನು ಇಳೆಯ ಮಗ ಹಾಗೂ ವೈವಸ್ವತ ಮನುವಿನ ಮೊಮ್ಮಗ. ಬ್ರಾಹ್ಮಣರೊಂದಿಗಿನ ಆತನ ಕಲಹದ ವಿವರಗಳು ಮಹಾಭಾರತದ[೧] ಆದಿಪರ್ವದಲ್ಲಿ ಸಿಕ್ಕುತ್ತವೆ :

"ನಂತರದಲ್ಲಿ, ಜ್ಞಾನಿಯಾದ ಪುರೂರವನು ಇಳೆಗೆ ಹುಟ್ಟಿದನು. ನಾವು ಕೇಳಿತಿಳಿದ ಹಾಗೆ, ಆಕೆಯೇ ಆತನಿಗೆ ತಂದೆ, ತಾಯಿ ಎರಡೂ ಆಗಿದ್ದಳು. ಮಹಾಸಾಗರದಲ್ಲಿನ ಹದಿಮೂರು ದ್ವೀಪಗಳನ್ನು ಆಳುತ್ತಿದ್ದು, ಅತಿಮಾನವರೇ ಆದಂಥ ವ್ಯಕ್ತಿಗಳಿಂದ ಸುತ್ತುವರಿಯಲ್ಪಟ್ಟು, ಸ್ವತಃ ಸುವಿಖ್ಯಾತನಾಗಿದ್ದ ಪುರೂರವನು ಅಧಿಕಾರ ಮದೋನ್ಮತ್ತನಾಗಿ ಬ್ರಾಹ್ಮಣರೊಂದಿಗೆ ಸಂಘರ್ಷಕ್ಕಿಳಿದ. ಅವರ ಪ್ರತಿಭಟನೆಯನ್ನು ಲೆಕ್ಕಿಸದೆ ಅವರ ವಸ್ತು–ಒಡವೆಗಳನ್ನು ಅಪಹರಿಸಿದ. ಬ್ರಹ್ಮಲೋಕದಿಂದ ಸನತ್ಕುಮಾರನು ಇಳಿದು ಬಂದು ಆತನಿಗೆ ಸದುಪದೇಶ ಮಾಡಿದ. ಆದರೆ, ಪುರೂರವನ ಕಿವಿಯಲ್ಲಿ ಅದು ಹೋಗಲಿಲ್ಲ. ಆಗ ಕುಪಿತರಾದ ಋಷಿಗಣವು ಶಾಪವೀಯಲಾಗಿ ಈ ಅರಿವುಗೆಟ್ಟ ಅಧಿಕಾರಮದೋನ್ಮತ್ತ, ಲೋಭಿ ಅರಸನು ಅವಸಾನ ಹೊಂದಿದ."

---

೧. Quoted by *Muir,* Vol. I, p. 307

ಈ ಸರಣಿಯಲ್ಲಿ ಮೂರನೆಯವನು ನಹುಷ. ಈತನು ಮೇಲೆ ಉಲ್ಲೇಖಿತನಾದ ಪುರೂರವನ ಮೊಮ್ಮಗನೇ. ಈತನ ಬ್ರಾಹ್ಮಣರೊಂದಿಗಿನ ಕಲಹದ ವೃತ್ತಾಂತ ಮಹಾಭಾರತದಲ್ಲಿ ಎರಡು ಕಡೆ ಬರುತ್ತದೆ – ಒಂದು ಸಲ ವನಪರ್ವದಲ್ಲಿ, ಇನ್ನೊಂದು ಸಲ ಉದ್ಯೋಗಪರ್ವದಲ್ಲಿ. ಮುಂದಣ ವಿವರಗಳು ಉದ್ಯೋಗಪರ್ವದಿಂದ[೧] ತೆಗೆದುಕೊಂಡವು :

> "ವೃತ್ರಾಸುರನ ಹತ್ಯೆ ನಂತರ ಇಂದ್ರನು ಬ್ರಾಹ್ಮಣನೊಬ್ಬನ (ವೃತ್ರನು ಬ್ರಾಹ್ಮಣನೆಂದು ತಿಳಿಯಲ್ಪಟ್ಟಿದ್ದನು) ಹತ್ಯೆ ಆಯಿತಲ್ಲ ಎಂದು ಭಯಭೀತನಾಗಿ ನೀರೊಳಕ್ಕೆ ಹೊಕ್ಕು ಅಡಗಿ ಕುಳಿತುಕೊಂಡ. ದೇವತೆಗಳ ರಾಜನೇ ಕಾಣದಾದ ಮೇಲೆ ದೇವಲೋಕದ, ಅದರಂತೇ ಭೂಲೋಕದ, ಸರ್ವ ವ್ಯಾಪಾರಗಳು ಅಸ್ತವ್ಯಸ್ತಗೊಂಡವು. ಆಗ ಋಷಿಗಳು ಹಾಗೂ ದೇವತೆಗಳು ನಹುಷನನ್ನು ತಮ್ಮ ರಾಜನಾಗಲು ಕೇಳಿಕೊಂಡರು. 'ಕ್ಷಮಿಸಿ, ಅಷ್ಟೊಂದು ಬಲ ನನ್ನಲ್ಲಿಲ್ಲ' ಎಂದು ನಹುಷ ನಿರಾಕರಿಸಿದ. ಕೊನೆಯಲ್ಲಿ ಅವರೆಲ್ಲರ ಆಗ್ರಹಕ್ಕೆ ಮಣಿದು, ಆತ ಆ ಹುದ್ದೆಯನ್ನೊಪ್ಪಿಕೊಂಡ. ಆ ಉನ್ನತ ಪದವಿಗೇರುವ ಪೂರ್ವದಲ್ಲಿ ಆತ ಸದಾಚಾರದ ಬಾಳನ್ನು ಬಾಳಿದವನು; ಆದರೆ ಈಗ ಆತ ವಿಲಾಸೀಪ್ರವೃತ್ತಿಗೆ, ಇಂದ್ರಿಯ ಸುಖೋಪಭೋಗದ ಜೀವನಕ್ಕೆ, ಅಂಟಿಕೊಂಡ. ಇಷ್ಟೇ ಅಲ್ಲದೆ, ಇಂದ್ರನ ಮಡದಿಯಾದ ಇಂದ್ರಾಣಿ ಮೇಲೂ ಕಣ್ಣು ಹಾಕಿದ. ಇಂದ್ರನ ರಾಣಿ ಆಂಗೀರಸ ಬೃಹಸ್ಪತಿಯ ಮೊರೆಹೊಕ್ಕಳು. ದೇವತೆಗಳ ಗುರುವಾದ ಆತ ಆಕೆಯನ್ನು ರಕ್ಷಿಸುವ ಹೊಣೆ ಹೊತ್ತ. ಬೃಹಸ್ಪತಿಯ ಮಧ್ಯ ಪ್ರವೇಶದಿಂದ ನಹುಷನು ಕಿಡಿಕಿಡಿಯಾದ. ದೇವತೆಗಳು ಆತನನ್ನು ಶಾಂತಗೊಳಿಸಲು ಪ್ರಯತ್ನಿಸಿದರು, ಹಾಗೂ ಇನ್ನೊಬ್ಬನ ಪತ್ನಿಯನ್ನು ಅಪಹರಿಸುವುದು ಮಹಾಪಾಪ ಎಂದು ತಿಳಿಹೇಳಲೆತ್ನಿಸಿದರು. ಆದರೆ, ನಹುಷ ಇಂಥ ಬುದ್ಧಿವಾದಕ್ಕೆ ಕಿವಿಗೊಡುವಂತಿರಲಿಲ್ಲ. ಆತ ಹೇಳಿದ : 'ಇಂಥ ವ್ಯಭಿಚಾರಿ ಹೊಂಚುಗಾರಿಕೆಯಲ್ಲಿ ನಾನೇನೂ ಇಂದ್ರನಿಗಿಂತ ಕೆಟ್ಟವನಲ್ಲ' 'ಋಷಿಪತ್ನಿಯಾದ ಹೆಸರಾಂತ ಅಹಲ್ಯೆಯನ್ನು ಇಂದ್ರನು ಆಕೆಯ ಪತಿಯ ಜೀವಿತಾವಧಿಯಲ್ಲಿಯೇ ಕೆಡಿಸಿರಲಿಲ್ಲವೇ? ಇಂಥ ಅನೇಕ ಅನೀತಿಯ, ಮೋಸಗಾರಿಕೆಯ ಕೃತಿಗಳನ್ನು ಇಂದ್ರನು ಎಸಗಿದಾಗಲೂ, ನೀವು ಸುಮ್ಮನಿದ್ದಿರಿ. ಆಗೇಕೆ ಹೇಳಲಿಲ್ಲ ನೀವು ಇಂದ್ರನಿಗೆ?' ಎಂದು ವಾದಿಸಿದ. ನಹುಷನ ಒತ್ತಾಯಕ್ಕೆ ಮಣಿದು, ದೇವತೆಗಳು ಇಂದ್ರಾಣಿಯನ್ನು ಕರೆತರಲು ಹೋದರು. ಆದರೆ ಬೃಹಸ್ಪತಿಯು ಆಕೆಯನ್ನು ಬಿಟ್ಟುಕೊಡಲೊಪ್ಪಲಿಲ್ಲ. ಆತನ ಸಲಹೆಯಂತೆ, ಆಕೆ ನಹುಷನಿಂದ ಸ್ವಲ್ಪ ಸಮಯಾವಕಾಶ ಕೇಳಿಕೊಂಡಳು–ತನ್ನ ಗಂಡನಿಗೆ ಏನಾಗಿದೆ ಎಂದು ತಿಳಿಯುವ ತನಕ ಸಮಯ ಬೇಕೆಂದಳು. ನಹುಷ ಒಪ್ಪಿದ. ಇಂದ್ರಾಣಿಯು ಗಂಡನ ಶೋಧಕ್ಕಾಗಿ ಹೊರಟಳು. ರಾತ್ರಿಯ ಅಧಿದೇವತೆ – ಆದ್ದರಿಂದ ರಹಸ್ಯಗಳನ್ನು ತಿಳಿಸಬಲ್ಲಾಕೆ – ಆದ ಉಪಶ್ರುತಿಯ ಸಹಾಯದಿಂದ, ಹಿಮಾಲಯದ ಉತ್ತರ ದಿಕ್ಕಿನಲ್ಲಿ ಮಹಾಸಾಗರವೊಂದರ ಮಧ್ಯದ ಖಂಡದಲ್ಲಿನ ಸರೋವರದಲ್ಲಿ ಬೆಳೆದ ಕಮಲದ ದಂಟಿನಲ್ಲಿ ಸೂಕ್ಷ್ಮ ರೂಪದಲ್ಲಿದ್ದ ಗಂಡನನ್ನು ಪತ್ತೆ ಹಚ್ಚಿದಳು. ಆತನಿಗೆ ನಹುಷನ ದುಷ್ಟ ಉದ್ದೇಶವನ್ನು ತಿಳಿಸಿದಳು; ಹಾಗೂ ತನ್ನ ಸರ್ವಶಕ್ತಿಯನ್ನು

೧. Quoted by *Muir,* Vol. I, p. 310–313

> ಉಪಯೋಗಿಸಿ ತನ್ನನ್ನು (ಇಂದ್ರಾಣಿಯನ್ನು) ರಕ್ಷಿಸಬೇಕು ಹಾಗೂ ರಾಜ್ಯ ಪುನಃ ಪಡೆಯಬೇಕು ಎಂದು ಬೇಡಿಕೊಂಡಳು. ನಹುಷನ ಅಧಿಕ ಬಲದೆದುರು ತನ್ನ ಆಟ ನಡೆಯದೆಂದು, ಕೂಡಲೇ ತನಗೆ ಮಧ್ಯೆ ಪ್ರವೇಶಿಸುವುದಾಗುವುದಿಲ್ಲವೆಂದು ಇಂದ್ರ ಹೇಳಿದ. 'ಆದರೆ ನಹುಷನನ್ನು ಆತನ ಪದದಿಂದ ತಳ್ಳುವ ಉಪಾಯವೊಂದಿದೆ, ಕೇಳು' ಎಂದ. ಋಷಿಗಳು ಹೊತ್ತು ತರುವ ವಾಹನವೊಂದರಲ್ಲಿ ಆತನು (ನಹುಷ) ತನ್ನೆಡೆ ಬರುವುದಾದರೆ, ತಾನು ಸಂತೋಷದಿಂದ ಆತನ ವಶಳಾಗಬಹುದೆಂದು ಹೇಳಬೇಕು – ಎಂದ.

ದೇವತೆಗಳ ರಾಣಿಯು ಅದೇ ಪ್ರಕಾರ ನಹುಷನಿಗೆ ಹೇಳಿಕಳಿಸಿದಳು. 'ದೇವತೆಗಳ ರಾಜನೇ, ನಿನ್ನ ವಾಹನವು ಹಿಂದೆಂದೂ ಕೇಳಿ ಅರಿಯದಂಥದ್ದು, ವಿಷ್ಣು, ರುದ್ರ ಅಥವಾ ಅಸುರರು ಉಪಯೋಗಿಸಿರದಂಥದ್ದು, ಆಗಿರಬೇಕೆಂದು ನನ್ನಿಚ್ಛೆ. ಎಲ್ಲ ಘನತೆವೆತ್ತ, ಋಷಿಗಳು ಒಟ್ಟಾಗಿ ನಿಮ್ಮನ್ನೊಂದು ಪಲ್ಲಕ್ಕಿಯಲ್ಲಿ ಹೊತ್ತು ತರಲಿ – ಅದುವೇ ನನಗೆ ಇಷ್ಟ.' ನಹುಷನ ಅಹಮಿಕೆಗೆ ಇದರಿಂದ ಕಚಗುಳಿ ಇಟ್ಟಂತಾಗಿ, ಆತ ಅದಕ್ಕೆ ಒಪ್ಪಿದ. ಆತ್ಮಪೌರುಷ ಕೊಚ್ಚಿಕೊಳ್ಳುತ್ತಾ ಆತ ಹೀಗೆ ನುಡಿದ : 'ಮುನಿಗಳನ್ನು ತನ್ನ ವಾಹನ ಹೊರುವವರನ್ನಾಗಿ ಮಾಡುವವನು ಅಂತಿಂಥ ಸಾಮಾನ್ಯ ಪುರುಷನಲ್ಲ. ನಾನು ಶಕ್ತಿಯ ಆರಾಧಕ–ಭೂತ, ಭವಿಷ್ಯತ್ತು ಹಾಗೂ ವರ್ತಮಾನದ ಅಧಿಪತಿ. ನಾನು ಸಿಟ್ಟಿಗೆದ್ದರೆ ಜಗತ್ತು ಉಳಿಯಲಿಕ್ಕಿಲ್ಲ, ನನ್ನ ಮೇಲೆಯೇ ಎಲ್ಲವೂ ನಿಂತಿದೆ. ಆದ್ದರಿಂದ, ದೇವಿಯೇ, ನೀನು ಹೇಳಿದ್ದನ್ನು ನಾನು ಖಂಡಿತಾ ಈಡೇರಿಸುವೆ. ಸಪ್ತರ್ಷಿಗಳು ಹಾಗೂ ಎಲ್ಲ ಬ್ರಾಹ್ಮಣ ಋಷಿಗಳು ನನ್ನನ್ನು ಹೊರುವರು. ಸ್ಫುರದ್ರೂಪಿ ದೇವತೆಯೇ ನನ್ನ ವೈಭವವನ್ನೂ ಉತ್ಕರ್ಷವನ್ನೂ ನೋಡುವಿಯಂತೆ."

ಕಥೆ ಹೀಗೆಯೇ ಮುಂದುವರಿಯುತ್ತದೆ :

"ಅದೇ ಮೇರೆಗೆ, ಈ ದುಷ್ಟ, ಅಧರ್ಮಿ, ಕ್ರೂರ ಅರಸು, ಅಹಂಕಾರಮದದಿಂದ ಉನ್ಮತ್ತನಾಗಿ, ಋಷಿಗಳನ್ನು ತನ್ನ ಮೇನೆಯನ್ನು ಹೊರಲು ಹಚ್ಚಿದ. ಅವರು ಮರುಮಾತಾಡದೆ ಹೆಗಲುಕೊಟ್ಟರು. ಆಗ ಇಂದ್ರಾಣಿ ಬೃಹಸ್ಪತಿಯೆಡೆಗೆ ಧಾವಿಸಲಾಗಿ ಆತ ಹೇಳಿದ, 'ದೇವೀ ಗಾಬರಿಗೊಳ್ಳಬೇಡ. ನಹುಷನ ಅಹಂಕಾರದಿಂದಾಗಿ ಆತನ ಪತನವಾಗಲಿದೆ. ಹಾಗೂ, ಈ ದರ್ಪದ ಅರಸನ ನಾಶಕ್ಕಾಗಿ ಹಾಗೂ ಇಂದ್ರನು ಅಡಗಿರುವ ಜಾಗದ ಶೋಧಕ್ಕಾಗಿ ನಾನೇ ಒಂದು ಯಜ್ಞ ಕೈಕೊಳ್ಳಲಿರುವೆ.' ಅಗ್ನಿಯನ್ನು ಇಂದ್ರನ ಶೋಧಕ್ಕಾಗಿ ಕಳಿಸಿಕೊಡಲಾಗಿ ಆತ ಇಂದ್ರನನ್ನು ಹುಡುಕಿದ. ಬೃಹಸ್ಪತಿ ಇಂದ್ರನಿಗೆ ಆತನ ಅನುಪಸ್ಥಿತಿಯಲ್ಲಿ ನಡೆದುದೆಲ್ಲವನ್ನೂ ನಿರೂಪಿಸುತ್ತಾನೆ. ಇಂದ್ರನು ಕುಬೇರ, ಯಮ, ಸೋಮ ಹಾಗೂ ವರುಣರೊಂದಿಗೆ ನಹುಷನನ್ನು ನಾಶಮಾಡುವ ವಿಧಾನಗಳನ್ನು ಚರ್ಚಿಸಿ ರೂಪಿಸುತ್ತಿರಲಾಗಿ, ಅಗಸ್ತ್ಯ ಋಷಿಗಳು ಅಲ್ಲಿಗೆ ಬರುತ್ತಾರೆ. ಹಾಗೂ ಇಂದ್ರನ ವೈರಿಯ ಪತನದ ಬಗೆಗೆ ತಿಳಿಸುತ್ತಾ, ಇಂದ್ರನನ್ನು ಅಭಿನಂದಿಸುತ್ತಾರೆ. ಹಾಗೂ ಅದು ಹೇಗೆ ಸಂಭವಿಸಿತೆಂಬುದನ್ನು ವಿವರಿಸುತ್ತಾರೆ.

"ಪಾಪಿಷ್ಠ ನಹುಷನನ್ನು ಹೊತ್ತೊಯ್ಯುತ್ತಿದ್ದ ಬ್ರಹ್ಮರ್ಷಿಗಳೂ ಹಾಗೂ ನಿಷ್ಕಲಂಕ ಬ್ರಾಹ್ಮಣ ಋಷಿಗಳೂ ದಣಿದು ಆತನಿಗೆ ಒಂದು ಸಂಶಯ ನಿವಾರಣೆ ಮಾಡಲು ಕೇಳಿಕೊಂಡರು : 'ಓ ವಿಜಯಿಗಳಲ್ಲಿ ಶ್ರೇಷ್ಠನಾದ ವಾಸವನೇ, ಅರಸನು ಆತ್ಮಾಹುತಿ ಮಾಡಿಕೊಳ್ಳುವ ಸಮಯದಲ್ಲಿ ಪಠಿಸಲಾಗುವ ಬ್ರಾಹ್ಮಣಗಳಲ್ಲಿನ ಪಠ್ಯಗಳನ್ನು ಪರಮಪ್ರಮಾಣವೆಂದು ನೀವು ನಂಬುವಿರೋ ಇಲ್ಲವೋ?' "ಇಲ್ಲ" ಎಂದ, ಬುದ್ಧಿಗೆ ಮಂಕು ಕವಿದ ನಹುಷನು. ಆಗ ಋಷಿಗಳು ಪ್ರತಿಸವಾಲು ಒಡ್ಡಿದರು : 'ಅಧರ್ಮದಲ್ಲಿ ಮುಳುಗಿರುವ ನೀನು ಧರ್ಮದೆಡೆಗೆ ತಿರುಗಲಾರೆ. ಹಳೇ ಕಾಲದಲ್ಲಿ ಮಹಾಋಷಿಗಳಿಂದ ಉಚ್ಚರಿಸಲ್ಪಟ್ಟ ಈ ಪಠ್ಯಗಳನ್ನು ನಾವು ಆತ್ಯಂತಿಕ

ಪ್ರಮಾಣವೆಂದು ನಂಬುತ್ತೇವೆ.' ಆಗ ತನ್ನ ದುಷ್ಟತನದಿಂದಾಗಿ ಋಷಿಗಳೊಂದಿಗೆ ವಾದಿಸುತ್ತಾ – ಹೀಗೆಂದು ಅಗಸ್ತ್ಯರು ಮುಂದುವರಿದು ಹೇಳಿದರು – 'ನಹುಷನು ತನ್ನ ಪಾದವನ್ನು ನನ್ನ ತಲೆಯ ಮೇಲಿಟ್ಟ. ತತ್ಪರಿಣಾಮವಾಗಿ ರಾಜನ ಮಹಿಮೆಗೆ ಚ್ಯುತಿಯುಂಟಾಯಿತು. ಆತನ ವೈಭವ ಅಡಗಿತು. ಆತನು ಭಯದಿಂದ ವಿಹ್ವಲನಾದಾಗ ನಾನು ಹೇಳಿದೆ : 'ಎಲೋ ಮೂರ್ಖ' ಪ್ರಾಚೀನ ಋಷಿಗಳಿಂದ ರಚಿತವಾದ ಪವಿತ್ರ ಪಠ್ಯಗಳನ್ನು ನೀನು ಮನ್ನಿಸುವುದಿಲ್ಲವಾದ್ದರಿಂದ, ಹಾಗೂ ನನ್ನ ತಲೆಯಮೇಲೆ ಪಾದ ಇಟ್ಟೆಯಾದ್ದರಿಂದ, ಪಾಪಿಯೇ, ನಿನ್ನೆಲ್ಲ ಓಜಸ್ಸು, ಪುಣ್ಯ ಅಳಿಸಿಹೋಗಿ ನೀನು ದೇವಲೋಕದಿಂದ ಭೂಲೋಕಕ್ಕೆ ಇಳಿಯುವಂತಾಗಲಿ. ಹತ್ತು ಸಾವಿರ ವರ್ಷ ಕಾಲ, ನೀನು ಸರ್ಪರೂಪದಲ್ಲಿ ತೆವಳುವಂತಾಗಲಿ. ಆ ಅವಧಿ ಮುಗಿದ ಮೇಲೆ ಮತ್ತೆ ದೇವಲೋಕಕ್ಕೆ ಮರಳುವಿ.' ಹೀಗೆ ಆ ದುಷ್ಟನು ದೇವತೆಗಳ ಮೇಲಿನ ಅಧಿಪತ್ಯದಿಂದ ಉರುಳಿಬಿದ್ದ. 'ಓ ಇಂದ್ರನೇ, ಇನ್ನು ನಮಗೆ ಒಳ್ಳೆಯ ಕಾಲ. ಯಾಕೆಂದರೆ ಬ್ರಾಹ್ಮಣರ ವೈರಿ ಹತನಾದ. ಓ ಶಚೀರಮಣನೇ, ಮಹಾನ್ ಋಷಿಗಳಿಂದ ಸ್ತುತಿಸಲ್ಪಟ್ಟವನೇ, ಇಂದ್ರಿಯಗಳನ್ನು ನಿಗ್ರಹಿಸಿ, ವೈರಿಗಳನ್ನು ಸದೆಬಡಿದು, ಮೂಲೋಕಗಳನ್ನು ವಶಪಡಿಸಿಕೊಂಡು, ಅಲ್ಲಿ ಪ್ರಜೆಗಳನ್ನು ಕಾಪಾಡು.'

ಬ್ರಾಹ್ಮಣರೊಂದಿಗೆ ಕಲಹಕ್ಕಿಳಿದ ನಾಲ್ಕನೆಯ ಅರಸನೆಂದರೆ ನಿಮಿ. ಈ ಕತೆಯ ವಿವರಗಳು ವಿಷ್ಣುಪುರಾಣದಲ್ಲಿ[೧] ಸಿಗುತ್ತವೆ. ಅದು ನಿರೂಪಿಸುವಂತೆ :

> "ನಿಮಿಯು ಬ್ರಾಹ್ಮಣ ಋಷಿಯಾದ ವಸಿಷ್ಠರನ್ನು ಒಂದು ಸಾವಿರ ವರುಷ ನಡೆಯುವ ಯಜ್ಞವೊಂದರಲ್ಲಿ ಪೌರೋಹಿತ್ಯ ವಹಿಸಲು ಕೇಳಿಕೊಂಡಿದ್ದ. ಆದರೆ, ವಸಿಷ್ಠರು ಐದು ನೂರು ವರ್ಷಗಳತನಕ ತಮಗೆ ಇನ್ನೊಂದು ಕಾರ್ಯವಿರುವುದರ ನಿಮಿತ್ತ 'ಆಗದು' ಎಂದು ಹೇಳಿದರು. 'ಹಾಂ, ಆ ಐದುನೂರು ವರ್ಷಗಳು ಗತಿಸಲಾಗಿ ನಾನು ಬರುತ್ತೇನೆ' ಎಂದರು. ಅರಸನು ಮರುಮಾತನಾಡಲಿಲ್ಲ. ಅರಸನು ಒಪ್ಪಿದನೆಂದೇ ತಿಳಿದು ವಸಿಷ್ಠರು ಹೊರಟುಹೋದರು. ತಿರುಗಿ ಬಂದ ಮೇಲೆ ನೋಡುತ್ತಾರೆ, ಅರಸ ಗೌತಮನನ್ನು (ಆತನೂ ವಸಿಷ್ಠರಿಗೆ ಸರಿದೊರೆಯಾದ ಬ್ರಾಹ್ಮಣ ಋಷಿಯೇ) ಹಾಗೂ ಇತರರನ್ನು ನೇಮಿಸಿಕೊಂಡಿದ್ದಾನೆ – ಯಜ್ಞ ನೆರವೇರಿಸಿಕೊಡಲು; ವಸಿಷ್ಠರು ಕುಪಿತರಾಗಿ, ಅರಸನ ಶಾರೀರಿಕರೂಪ ಕಳೆದುಹೋಗಲಿ ಎಂದು ಶಾಪವಿತ್ತರು. ಆಗ ಅರಸ ನಿದ್ರೆಯಲ್ಲಿದ್ದ. ನಿಮಿಗೆ ಎದ್ದಮೇಲೆ ತಿಳಿಯಿತು – ವಸಿಷ್ಠರು ತನಗೆ ಮುಂಚೆ ಏನೂ ಹೇಳದೆ ಕೇಳದೆ ಶಾಪವಿತ್ತಿದ್ದಾರೆ ಎಂದು. ಆತ ವಸಿಷ್ಠರಿಗೂ ಅಂಥದೇ ಶಾಪವಿತ್ತು ಸತ್ತು ಹೋದ. ಆತನ ಮೃತದೇಹವನ್ನು ಸುಗಂಧದ್ರವ್ಯ ಪೂಸಿ ಕೆಡದಂತೆ ಕಾಯ್ದಿರಿಸಲಾಯಿತು. ಯಜ್ಞ ಮುಗಿದಾದಮೇಲೆ ಬ್ರಾಹ್ಮಣರು ಮಧ್ಯಸ್ಥಿಕೆ ವಹಿಸಿದ್ದರು, ಆತನ ಪ್ರಾಣ ಪುನಃ ಬರುವಂತೆ ಮಾಡಲು ದೇವತೆಗಳು ತಯಾರಿದ್ದರು. ಆದರೆ ಆತ ಬೇಡವೆಂದ. ಆಗ, ಆತನ ಇಚ್ಛೆಯ ಮೇರೆಗೆ, ದೇವತೆಗಳು ಆತನನ್ನು ಎಲ್ಲ ಜೀವಿಗಳ ಕಣ್ಣುಗಳಲ್ಲಿ ಇರುವಂತೆ ಮಾಡಿದರು. ಆ ಕಾರಣವೇ ಜೀವಿಗಳೆಲ್ಲರೂ ಯಾವಾಗಲೂ ಕಣ್ಣು ಮುಚ್ಚುವುದು ತೆಗೆಯುವುದು ಮಾಡುವಂತಾಯಿತು (ನಿಮಿಷ ಎಂದರೆ 'ರೆಪ್ಪೆ ಬಡಿಯುವಿಕೆ') ಈ ಎಲ್ಲ ಕಲಹಗಳ ಉಲ್ಲೇಖ ಮನು ತನ್ನ ಸ್ಮೃತಿಯಲ್ಲಿ[೨] ಮಾಡಿದ್ದಾನೆ :

೧. Quoted by *Muir,* Vol. I, p. 316

೨. Max Muller's *Sacred Books of the East,* Vol. XXV, p. 222

> "ತಕ್ಕ ವಿನಯಶೀಲತೆ ಇಲ್ಲದುದಕ್ಕಾಗಿ ಅನೇಕ ರಾಜರು, ತಮ್ಮೆಲ್ಲ ಸಂಪದದೊಂದಿಗೆ ತಾವೂ ವಿನಾಶ ಹೊಂದಿದ್ದಾರೆ; ವಿನಯದಿಂದಾಗಿ ಅರಣ್ಯದಲ್ಲಿ ವಾಸಿಸುವ ಋಷಿಗಳೂ ರಾಜ್ಯಗಳನ್ನು ಪಡೆದಿದ್ದಾರೆ.
> ವಿನಮ್ರತೆ ಇಲ್ಲದುದಕ್ಕಾಗಿ ವೇಣ ವಿನಾಶಹೊಂದಿದ; ಹಾಗೆಯೇ ನಹುಷ, ಪೀಜವನನ ಮಗ ಸುದಾಸ, ಸುಮುಖ, ನಿಮಿ ಇವರು ಕೂಡ."

ಆದರೆ, ಈ ಪ್ರಕರಣಗಳು ಶೂದ್ರನ ಸ್ಥಿತಿ – ಗತಿಯ ಮೇಲೆ ಯಾವ ಬೆಳಕನ್ನು ಚೆಲ್ಲಬಲ್ಲವೆಂಬ ಬಗೆಗೆ ಎಷ್ಟರಮಟ್ಟಿನ ತಿಳುವಳಿಕೆ ಉಂಟಾಗಬೇಕಿತ್ತೋ ಅಷ್ಟರಮಟ್ಟಿನ ತಿಳುವಳಿಕೆ ಆಗದುದು ವಿಷಾದನೀಯ. ಇದು ಮೂಲಭೂತವಾಗಿ ಶೂದ್ರ ಹಾಗೂ ಬ್ರಾಹ್ಮಣರ ಮಧ್ಯದ ಸಂಘರ್ಷವೆಂಬುದನ್ನು ಯಾರೂ ಮನಗಂಡಿಲ್ಲ. ಸುದಾಸನು ನಿಶ್ಚಿತವಾಗಿ ಶೂದ್ರನಾಗಿದ್ದ. ಉಳಿದವರು ಶೂದ್ರರೆಂದು ವರ್ಣಿಸಲ್ಪಟ್ಟಿರದಿದ್ದರೂ ಅವರು ಇಕ್ಷ್ವಾಕುವಂಶದವರೆಂದು ವರ್ಣಿಸಲ್ಪಟ್ಟಿದ್ದಾರೆ. ಅವರೆಲ್ಲ ಶೂದ್ರರಾಗಿದ್ದರೆಂದು ಹೇಳುವುದು ಅವಾಸ್ತವ ಕಲ್ಪನೆಯೇನಲ್ಲ. ಮನುವಿಗೂ ಇದರ ಕಲ್ಪನೆ ಇರಲಿಲ್ಲ. ಆತನು ಈ ಪ್ರಕರಣಗಳನ್ನು ಬ್ರಾಹ್ಮಣರ ಹಾಗೂ ಕ್ಷತ್ರಿಯರ ಮಧ್ಯದ ಕಲಹಗಳು ಎಂದು ನಿರೂಪಿಸುತ್ತಾನೆ. ಡಾ. ಮೂರ್ ಅವರೂ ಸುದಾಸನು ಶೂದ್ರನೆಂಬುವುದನ್ನು ಅರಿಯಲಾರದೆ ಹೋಗಿದ್ದಾರೆ. ಆ ಕಾರಣ ಈ ಕತೆಗಳನ್ನು ಹೇಳುವಾಗ ಒಂದು ಪಕ್ಷ ಬ್ರಾಹ್ಮಣರದು, ಇನ್ನೊಂದು ಪಕ್ಷ ಕ್ಷತ್ರಿಯರದು ಎಂದೇ ನಿರೂಪಿಸಿದ್ದಾರೆ. ಒಂದರ್ಥದಲ್ಲಿ, ಇದು ಸತ್ಯವೂ ಹೌದು, ಯಾಕೆಂದರೆ ಶೂದ್ರರೂ ಕ್ಷತ್ರಿಯರ ಒಂದು ಶಾಖೆಯಾಗಿದ್ದರು. ಆದರೆ, ಇವುಗಳು ಬ್ರಾಹ್ಮಣರ ಹಾಗೂ ಶೂದ್ರರ ಮಧ್ಯದ ಕಲಹಗಳು ಎಂದು ನಿಖರವಾಗಿ ನಿರೂಪಿಸಲ್ಪಟ್ಟಿದ್ದಿದ್ದರೆ, ವಸ್ತುಸ್ಥಿತಿಯ ಮೇಲೆ ಹೆಚ್ಚಿನ ಬೆಳಕು ಚೆಲ್ಲಿದಂತಾಗುತ್ತಿತ್ತು. ಈ ಸಂಬಂಧದಲ್ಲಿ ಉಂಟಾದ ತಪ್ಪು ತಿಳುವಳಿಕೆ ಹಾಗೆಯೇ ಮುಂದುವರಿದುಕೊಂಡು ಬಂದು ಹಿಂದೂ – ಆರ್ಯ ಸಮಾಜದ ಇತಿಹಾಸದ ಒಂದು ಮಹತ್ವದ ಭಾಗವನ್ನು ಮರೆಮಾಚಿದೆ. ಈ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸುವ ಸಲುವಾಗಿಯೇ ಆ ಅಧ್ಯಾಯದ ಶೀರ್ಷಿಕೆಯನ್ನು "ಬ್ರಾಹ್ಮಣರಿಗೆ ಎದುರಾಗಿ ಶೂದ್ರರು" ಎಂದು ನೀಡಲಾಗಿದೆ. ಇದು ಬ್ರಾಹ್ಮಣರ ಹಾಗೂ ಶೂದ್ರರ ಮಧ್ಯದ ಸಂಘರ್ಷದ ಚರಿತ್ರೆ ಎಂದು ಅದರ ನಿಜಸ್ವರೂಪದಲ್ಲಿ ಅರ್ಥೈಸಲ್ಪಟ್ಟಾಗ, ಶೂದ್ರರು ಎರಡನೇ ಶ್ರೇಣಿಯಿಂದ ನಾಲ್ಕನೇ ಶ್ರೇಣಿಗೆ ಹೇಗೆ ಇಳಿಸಲ್ಪಟ್ಟರು ಎಂಬುದನ್ನು ತಿಳಿಯಲು ಸಹಾಯಕವಾಗುವುದು.

♦

# ಅಧ್ಯಾಯ ೧೦

# ಶೂದ್ರರ ತೇಜೋವಧೆ

ಶೂದ್ರರನ್ನು ಎರಡನೆಯ ವರ್ಣದಿಂದ ನಾಲ್ಕನೆಯ ವರ್ಣಕ್ಕೆ ಇಳಿಸಲು ಬ್ರಾಹ್ಮಣರು ಬಳಸಿದ ತಂತ್ರ ಯಾವುದು?

ಇಲ್ಲಿನವರೆಗೆ ಚರ್ಚೆ ಎರಡು ಪ್ರಶ್ನೆಗಳ ಮೇಲೆ ಕೇಂದ್ರೀಕೃತವಾಗಿದೆ. ಅವು ಯಾವುವೆಂದರೆ : ಶೂದ್ರರು ಎರಡನೆಯ ಶ್ರೇಣಿಯಾದ ಕ್ಷತ್ರಿಯರ ಪಂಗಡ ಹೌದೇ ಅಲ್ಲವೇ? ಹಾಗೂ ಬ್ರಾಹ್ಮಣರಿಗೆ ಅವರ ತೇಜೋವಧೆ ಮಾಡುವಂತಾಗಲು ಸಾಕಷ್ಟು ಪ್ರಚೋದನೆ ಅವರಿಗೆ ಸಿಕ್ಕಿತ್ತೇ ಇಲ್ಲವೇ? ಎನ್ನುವುದು. ಈ ತಾರ್ಕಿಕ ವಿಚಾರಧಾರೆಯಲ್ಲಿ ಸಹಜವಾಗಿಯೇ ಉದ್ಭವವಾಗುವ ಮುಂದಿನ ಪ್ರಶ್ನೆಯೆಂದರೆ : ಶೂದ್ರರ ಈ ತೇಜೋವಧೆಗೆ ಬ್ರಾಹ್ಮಣರು ಬಳಸಿದ ತಂತ್ರ ಯಾವುದು?

ಈ ಪ್ರಶ್ನೆಗೆ ನನ್ನ ಉತ್ತರ : ಬ್ರಾಹ್ಮಣರು ಶೂದ್ರರ ಉಪನಯನ ಮಾಡಲು ನಿರಾಕರಿಸಿದುದೇ ಆ ಅಸ್ತ್ರ. ಈ ತಂತ್ರದಿಂದಲೇ ಬ್ರಾಹ್ಮಣರು ತಮ್ಮ ಗುರಿಸಾಧನೆಯನ್ನು ಮಾಡಿದರು ಹಾಗೂ ತನ್ಮೂಲಕ ಶೂದ್ರರ ಮೇಲೆ ಸೇಡು ತೀರಿಸಿಕೊಂಡರು ಎಂಬುದರ ಬಗೆಗೆ ನನಗೆ ಯಾವ ಸಂಶಯವೂ ಇಲ್ಲ.

ಬಹುಶಃ ಉಪನಯನ ಎಂದರೇನು, ಮತ್ತು ಹಿಂದೂ–ಆರ್ಯಸಮಾಜದಲ್ಲಿ ಅದಕ್ಕಾವ ಮಹತ್ವ ಇದ್ದಿತು ಎಂಬುದನ್ನು ವಿವರಿಸುವುದು ಅವಶ್ಯವಿದೆ. ಉಪನಯನದ ಕಲ್ಪನೆ ನೀಡುವ ಅತ್ಯುತ್ತಮ ಮಾರ್ಗವೆಂದರೆ ಆ ಸಮಾರಂಭದ ವರ್ಣನೆ ನೀಡುವುದಾಗಿದೆ.

ಒಂದು ಧಾರ್ಮಿಕ ವಿಧಿಯಾದ ಈ ಸಮಾರಂಭ ಮೂಲದಲ್ಲಿ ಬಹಳ ಸರಳವಾದುದಾಗಿತ್ತು. ಉಪನಯನವಾಗಲಿರುವ ಬಾಲಕ ತನ್ನ ಕೈಯಲ್ಲೊಂದು ಸಮಿತ್ತನ್ನು (ಹುಲ್ಲು ಗರಿಕೆಯನ್ನು) ಹಿಡಿದುಕೊಂಡು ಆಚಾರ್ಯನ ಕಡೆಗೆ ಬರುತ್ತಿದ್ದ. ಬಂದು ತಾನು ಬ್ರಹ್ಮಚಾರಿ(ವಿದ್ಯಾರ್ಥಿ)ಯಾಗಲು ಅಪೇಕ್ಷಿಸುವುದಾಗಿಯೂ ಹಾಗೂ ಅಧ್ಯಯನಕ್ಕೋಸುಗ ಆಚಾರ್ಯನೊಂದಿಗೆ ವಾಸಿಸಲು ಅನುಮತಿ ನೀಡಬೇಕೆಂದು ಯಾಚಿಸುತ್ತಿದ್ದ. ಕಾಲಾನುಕ್ರಮದಲ್ಲಿ ಇದೊಂದು ಸುದೀರ್ಘವಾದ ಶಾಸ್ತ್ರೋಕ್ತ ಸಮಾರಂಭವಾಯಿತು. ಎಷ್ಟೊಂದು ಸಂಕೀರ್ಣ ಹಾಗು ಸುದೀರ್ಘವಾಗಿತ್ತೆಂಬುದನ್ನು ಅಶ್ವಲಾಯನ ಗೃಹ್ಯಸೂತ್ರದಿಂದ[೧] ಉದ್ಧರಿಸಿದ ಈ ಕೆಳಗಣ ವರ್ಣನೆಯಿಂದ ತಿಳಿದು ಬಹುದಾಗಿದೆ :

> "ಆತನು ತನ್ನೆಡೆಗೆ ತಲೆಗೂದಲನ್ನು ಬೋಳಿಸಿಕೊಂಡು ಹೊಸಬಟ್ಟೆ ತೊಟ್ಟು, ಇಲ್ಲವೆ ಬ್ರಾಹ್ಮಣನಾದರೆ ಕೃಷ್ಣಾಜಿನವನ್ನು, ಕ್ಷತ್ರಿಯನಾದರೆ ರೂರು ಚರ್ಮವನ್ನು, ವೈಶ್ಯನಾದರೆ ಆಡಿನ ಚರ್ಮವನ್ನು, ಹೊದ್ದುಕೊಂಡು ಸಜ್ಜಾಗಿ ಬಂದ ಬಾಲಕನಿಗೆ ದೀಕ್ಷೆ ನೀಡಲಿ, ಬಾಲಕರು ಬಟ್ಟೆ ತೊಡುವುದಾದರೆ (ಕ್ರಮವಾಗಿ) ಬ್ರಾಹ್ಮಣರು ಕೆಂಪು–ಹಳದಿ, ಕ್ಷತ್ರಿಯರು ಕೆಂಪು ಹಾಗೂ ವೈಶ್ಯರು ಹಳದಿ – ಈ ಪ್ರಕಾರ ಬಣ್ಣಹಾಕಿದ ಬಟ್ಟೆಗಳನ್ನು ತೊಡಬೇಕು.

---

೧. Kane, *History of Dharmashastra* Vol. II (i), pp. ೨೮೧–೨೮೩

(ಮೇಲೆ ಹೇಳಲಾದಂತೆ) ಅವರು ಉಡಿದಾರ ಹಾಕಿರಬೇಕು. ಹಾಗೂ ದಂಡ ಹಿಡಿದಿರಬೇಕು. ಬಾಲಕನು ಆಚಾರ್ಯನ ಕೈ ಹಿಡಿಯುತ್ತಿದ್ದಂತೆ, ಆಚಾರ್ಯನು ಅಗ್ನಿಯಲ್ಲಿ ತುಪ್ಪದ ಹವನವನ್ನು ಸುರಿದು ಅಗ್ನಿಯ ಉತ್ತರ ದಿಕ್ಕಿಗೆ ಪೂರ್ವಾಭಿಮುಖವಾಗಿ ಕೂರುತ್ತಾನೆ; ಹುಡುಗನು ಆಚಾರ್ಯನೆದುರಲ್ಲಿ ಪಶ್ಚಿಮಾಭಿಮುಖವಾಗಿ ಕೂರುತ್ತಾನೆ. ಆಮೇಲೆ ಆಚಾರ್ಯನು ಬಾಲಕನ ಹಾಗೂ ತನ್ನ ಜೋಡಿಸಿದ ಕೈಗಳಲ್ಲಿ ನೀರನ್ನು ತುಂಬಿ, 'ನಾವು ಸವಿತ್ರಿಯನ್ನು ಆಯ್ದುಕೊಳ್ಳುತ್ತೇವೆ' (ಋಗ್ವೇದ V.೮೨.೧) ಎನ್ನುತ್ತಾ ತನ್ನ ಬೊಗಸೆಯಲ್ಲಿನ ನೀರನ್ನು ಬಾಲಕನ ಬೊಗಸೆಯ ನೀರಲ್ಲಿ ಸುರುವುತ್ತಾನೆ. ಹೀಗೆ ನೀರನ್ನು ಸುರುವಿಯಾದ ಮೇಲೆ, ಆತನು ಈ ಸೂತ್ರವನ್ನು ('ಸವಿತೃ ದೇವತೆಯ ಪ್ರೇರಣೆಯಿಂದಾಗಿ, ಅಶ್ವಿನಿದ್ವಯರ ತೋಳ್ಗಳಿಂದ, ಪುಶಾನನ ಕೈಗಳಿಂದ ನಿನ್ನ ಕೈಯನ್ನು ಹಿಡಿಯುತ್ತಿದ್ದೇನೆ') ಉಚ್ಚರಿಸುತ್ತ ತನ್ನ ಕೈಯಿಂದ ಬಾಲಕನ ಕೈಹೆಬ್ಬೆರಳನ್ನು ಹಿಡಿದುಕೊಳ್ಳಬೇಕು. ಎರಡನೆಯ ಸಲ ಬಾಲಕನ ಕೈ ಹಿಡಿಯುವಾಗ ಈ ಶಬ್ದಗಳನ್ನು ಉಚ್ಚರಿಸಬೇಕು : 'ಈ ಹೆಸರಿನವನೇ, ಸವಿತೃವು ನಿನ್ನ ಕೈಯನ್ನು ಹಿಡಿದಿದ್ದಾಳೆ.' ಮೂರನೆಯ ಸಲ 'ಈ ಹೆಸರಿನವನೇ, ಅಗ್ನಿಯು ನಿನ್ನ ಆಚಾರ್ಯನು' ಎಂದೆನ್ನುತ್ತ ಕೈಹಿಡಿಯಬೇಕು. ಬಾಲಕನ ದೃಷ್ಟಿ ಸೂರ್ಯನಲ್ಲಿ ನೆಡುವ ಹಾಗೆ ಮಾಡಿ ಆಚಾರ್ಯನು, 'ಸವಿತೃ ದೇವತೆಯೇ, ಈತನು ನಿನ್ನ ಬ್ರಹ್ಮಚಾರಿ, ಆತನನ್ನು ರಕ್ಷಿಸು, ಆತನು ಚಿರಂಜೀವಿಯಾಗಲಿ' ಎಂದು ಮತ್ತೆ ಮತ್ತೆ ಉಚ್ಚರಿಸಬೇಕು. ಮುಂದುವರಿದು, ಆತ 'ನೀನ್ಯಾರ ಬ್ರಹ್ಮಚಾರಿ?' ನೀನು ಪ್ರಾಣನ ಬ್ರಹ್ಮಚಾರಿ. ನಿನಗೆ ಯಾರು ದೀಕ್ಷೆ ಕೊಡುತ್ತಿದ್ದಾರೆ? ಆತ ಯಾರಿಗೆ ದೀಕ್ಷೆ ಕೊಡುತ್ತಿದ್ದಾನೆ? ನಿನ್ನನ್ನು ನಾನು ಕಾನಿಗೆ (ಪ್ರಜಾಪತಿಗೆ) ಕೊಡುತ್ತಿದ್ದೇನೆ, ಎಂದೆನ್ನಬೇಕು. 'ತೊಟ್ಟು, ಉಟ್ಟು, ಸಜ್ಜಾದ ಬಾಲಕನೇ ಇತ್ತ ಬಾ' ಎಂಬ ಋಗ್ವೇದದ ಶ್ಲೋಕವನ್ನುಚ್ಚರಿಸುತ್ತ, ಆಚಾರ್ಯನು ಬಾಲಕನನ್ನು ತನ್ನ ಬಲಕ್ಕೆ ತಿರುಗುವಂತೆ ಮಾಡಿ, ಆತನ ಹೆಗಲಮೇಲೆ ತನ್ನೆರಡೂ ಕೈಗಳನ್ನಿರಿಸಿ, ಋಗ್ವೇದದ (III.೮.೪.) ಉಳಿದರ್ಧ ಮಂತ್ರವನ್ನು ಪುನಃ ಪುನಃ ಉಚ್ಚರಿಸುತ್ತ ಬಾಲಕನ ಹೃದಯ ಸ್ಥಲದಲ್ಲಿ ಕೈಯಿಡಬೇಕು. ಅಗ್ನಿಯ ಸುತ್ತಣ ಪ್ರದೇಶವನ್ನು ಶುಚಿಗೊಳಿಸಿ, ಬ್ರಹ್ಮಚಾರಿಯು ಒಂದು ಉರುವಲ ಕಟ್ಟಿಗೆಯನ್ನು ಮೌನವಾಗಿ ಅಗ್ನಿಯ ಮೇಲೆ ಇಡಬೇಕು (ಯಾಕೆಂದರೆ, ಪ್ರಜಾಪತಿಗೆ ಸಂಬಂಧಿಸಿದುದನ್ನು ಮೌನವಾಗಿ ಮಾಡಬೇಕು ಎಂದು ಶ್ರುತಿ ಹೇಳುತ್ತದೆ). ಈ ಉರುವಲು ಕಟ್ಟಿಗೆಯನ್ನು ಹಾಕುವುದನ್ನು ಕೆಲವರು ಅಗ್ನಿಗೆ ಈ ಮಂತ್ರ ಹೇಳುತ್ತ ಮಾಡುತ್ತಾರೆ : 'ಘನ ಜಾತವೇದಗಳಿಗೆ ನಾನೊಂದು ಉರುವಲು ಕಟ್ಟಿಗೆ ತಂದಿದ್ದೇನೆ. ಓ ಅಗ್ನಿಯೇ, ಈ ಉರುವಲಿನಿಂದ ನೀನು ಆಧಿಕ್ಯವನ್ನು ಪಡೆ; ಅದರಂತೆಯೇ ನಾವು ಬ್ರಹ್ಮನ (ಆತ್ಮವಿದ್ಯೆಯ) ಮೂಲಕ ವರ್ಧಿಸುವಂತಾಗಲಿ. ಸ್ವೀಕರಿಸು' ಉರುವಲು ಕಟ್ಟಿಗೆಯನ್ನು ಅಗ್ನಿಯ ಮೇಲೆ ಇಟ್ಟುದಲ್ಲದೆ, ಅಗ್ನಿಯನ್ನು ಮುಟ್ಟಿ, ಆತ (ವಿದ್ಯಾರ್ಥಿ) 'ನಿನ್ನ ಪ್ರಭೆಯಿಂದ ನನ್ನನ್ನು ಪೂಸಿಕೊಳ್ಳುತ್ತೇನೆ' ಎನ್ನುತ್ತ ಮೂರು ಸಲ ತನ್ನ ಮುಖವನ್ನು ಒರೆಸಿಕೊಳ್ಳುತ್ತಾನೆ. (ಯಾಕೆಂದರೆ ಆತ ಅಗ್ನಿಪ್ರಭೆಯಿಂದ ಪೂಸಿಕೊಳ್ಳುತ್ತಾನೆ ಎಂದು ಶ್ರುತಿ ಹೇಳುತ್ತದೆ) 'ಅಗ್ನಿಯು ನನಗೆ ಸಂತತಿ, ಸೂಕ್ಷ್ಮ ಜ್ಞಾನ ಹಾಗೂ ತೇಜಸ್ಸನ್ನು ದಯಪಾಲಿಸಲಿ; ನನಗೆ ಇಂದ್ರನು ಸೂಕ್ಷ್ಮ ಜ್ಞಾನ, ಸಂತತಿ ಹಾಗೂ ಬಲವನ್ನು ನೀಡಲಿ; ನನಗೆ ಸೂರ್ಯದೇವನು ಸೂಕ್ಷ್ಮಜ್ಞಾನ,

ಸಂತತಿ ಹಾಗೂ ಬಲವನ್ನು ದಯಪಾಲಿಸಲಿ; ಓ ಅಗ್ನಿಯೇ, ನಿನ್ನ ಪ್ರಭೆಯೇ ನನ್ನ ಪ್ರಭೆಯಾಗಲಿ; ನಿನ್ನ ಬಲ ನನ್ನಲ್ಲಿ ಮೈಗೂಡಲಿ; ನಿನ್ನ ಭುಂಜಕ ಶಕ್ತಿಯು ನನ್ನಲ್ಲಿ ಮೈಗೂಡಲಿ' ಈ ಎಲ್ಲ ಸೂತ್ರಗಳಿಂದ ಅಗ್ನಿಯನ್ನು ಪೂಜಿಸಿ, ಮೊಣಕಾಲನ್ನು ಬಗ್ಗಿಸಿ, ಆಚಾರ್ಯನ ಪಾದಸ್ಪರ್ಶಮಾಡಿ ಹೀಗೆ ಹೇಳಬೇಕು : 'ಗುರುಗಳೇ ಸಾವಿತ್ರಿಯನ್ನು ಪಠಿಸಿರಿ.' ಉತ್ತರೀಯದಿಂದ ವಿದ್ಯಾರ್ಥಿಯ ಕೈಗಳನ್ನು ಹಾಗೂ ತನ್ನ ಕೈಗಳನ್ನು ಹಿಡಿದುಕೊಂಡು ಮೊದಲು ಸಾವಿತ್ರಿಯನ್ನು ಪಾದ – ಪಾದವಾಗಿ ಪಠಿಸುತ್ತಾನೆ; ಮುಂದೆ ಅರ್ಧಚರಣದಂತೆ ಪಠಿಸುತ್ತಾನೆ; ಆಮೇಲೆ ಇಡೀ ಶ್ಲೋಕವನ್ನೇ ಪಠಿಸುತ್ತಾನೆ. ಆಚಾರ್ಯನು ವಿದ್ಯಾರ್ಥಿಯ ಕಡೆಯಿಂದ ಸಾಧ್ಯವಾದಮಟ್ಟಿಗೆ ಸಾವಿತ್ರಿಯನ್ನು ಪಠಿಸುವಂತೆ ಮಾಡಬೇಕು. ವಿದ್ಯಾರ್ಥಿಯ ಎದೆಯ ಮೇಲೆ ತನ್ನ ಅಂಗೈಯನ್ನು (ಬೆರಳು ಮೇಲೆ ಮಾಡಿ) ಇಡುತ್ತ ಈ ಸೂತ್ರ ಹೇಳುತ್ತಾನೆ : 'ನನಗಾಗಿ ಮಾಡಬೇಕಾದ ಕರ್ತವ್ಯಕ್ಕೆ ನಿನ್ನ ಹೃದಯವನ್ನು ತೊಡಗಿಸುತ್ತೇನೆ. ನಿನ್ನ ಮನಸ್ಸು ನನ್ನ ಮನಸ್ಸನ್ನು ಅನುಸರಿಸಲಿ. ಏಕಚಿತ್ತದಿಂದ ನೀನು ನನ್ನ ಶಬ್ದಗಳನ್ನು ಆಲಿಸುವಂತಾಗಲಿ. ಬೃಹಸ್ಪತಿಯು ನಿನ್ನನ್ನು ನನಗೆ ಒಪ್ಪಿಸಲಿ.' ಬಾಲಕನ ಸೊಂಟಕ್ಕೆ ಉಡದಾರ ಕಟ್ಟಿ, ಕೈಯಲ್ಲಿ ದಂಡ ಕೊಟ್ಟು, ಆಚಾರ್ಯನು ಆತನಿಗೆ ಬ್ರಹ್ಮಚಾರಿಯ ಆಚರಣೆಗಳ ಬಗೆಗೆ ಹೀಗೆ ಬೋಧಿಸಬೇಕು : 'ನೀನು ಬ್ರಹ್ಮಚಾರಿ ಆಗಿರುವೆ. ನೀರನ್ನು ಆಪೋಷಣ ಮಾಡಿ ಸೇವಿಸು. ಹಗಲು ನಿದ್ರಿಸಬೇಡ. ಗುರುವಿನ ಮೇಲೆ ಶ್ರದ್ಧೆ ಇರಿಸಿ ವೇದವನ್ನು ಅಭ್ಯಸಿಸು.' ವಿದ್ಯಾರ್ಥಿಯಾದವನು ಮುಂಜಾವು, ಸಂಜೆ ಅನ್ನವನ್ನು ಭಿಕ್ಷೆ ಬೇಡಿ ತರಬೇಕು. ಆತನು ಮುಂಜಾವು ಹಾಗೆ ಸಂಜೆ ಅಗ್ನಿಯ ಮೇಲೆ ಒಂದು ಉರುವಲು ಕಟ್ಟಿಗೆ ಇಡಬೇಕು. ಬೇಡಿ ತಂದದ್ದನ್ನು ಗುರುವಿಗೆ ಅರ್ಪಿಸಬೇಕು. ದಿನದ ಉಳಿದ ಭಾಗ ಆತ ನಿಂತೇ ಇರಬೇಕು, ಕೂಡಬಾರದು."

ಉಪನಯನವು ಆಚಾರ್ಯನು ಬಾಲಕನಿಗೆ 'ಗಾಯತ್ರೀಮಂತ್ರ'ವೆಂದು ಪ್ರಸಿದ್ಧವಾದ ವೇದಮಂತ್ರವನ್ನು ಬೋಧಿಸುವುದರೊಂದಿಗೆ ಕೊನೆಗೊಳ್ಳುತ್ತದೆ. ಗಾಯತ್ರೀ ಮಂತ್ರ ಬೋಧನೆಗೆ ಮೊದಲು ಉಪನಯನಕರ್ಮ ಆಗಿರಬೇಕು ಎನ್ನುವಷ್ಟು ಮಹತ್ವ ಅದಕ್ಕೇಕೆ ಬಂದಿತೋ ಹೇಳುವುದು ಕಷ್ಟ.

ಈ ಉಪನಯನಕರ್ಮದ ವರ್ಣನೆಯಿಂದ ಎರಡು ಅಂಶಗಳು ಸ್ಪಷ್ಟವಾಗುತ್ತವೆ : ಆಚಾರ್ಯನಿಂದ ಬ್ರಹ್ಮಚಾರಿಗೆ ಗಾಯತ್ರೀ ಮಂತ್ರ ಬೋಧನೆಯಿಂದ ಪ್ರಾರಂಭವಾಗುವ ವೇದಾಧ್ಯಯನಕ್ಕೆ ಪ್ರವೇಶ ನೀಡುವುದೇ ಉಪನಯನದ ಉದ್ದೇಶವಾಗಿದೆಯೆಂಬುದು. ಎರಡನೆಯದೆಂದರೆ, ಕೆಲವೊಂದು ವಸ್ತುಗಳು ಉಪನಯನ ಕರ್ಮಕ್ಕೆ ಅವಶ್ಯವಾಗಿದ್ದವು ಎಂಬುದು. ಅವು : (೧) ಎರಡು ವಸ್ತ್ರಗಳು – ಒಂದು ದೇಹದ ಕೆಳಭಾಗಕ್ಕೆ, ಅದಕ್ಕೆ ವಾಸ ಎಂದು ಹೆಸರು, ಇನ್ನೊಂದು ದೇಹದ ಮೇಲು ಭಾಗಕ್ಕೆ – ಅದಕ್ಕೆ ಉತ್ತರೀಯ ಎಂದು ಹೆಸರು; (೨) ದಂಡ ಅಥವಾ ಬಡಿಗೆ; (೩) ಮೇಖಲಾ ಅಥವಾ ದರ್ಭೆಯ ಉಡಿದಾರ, ಸೊಂಟಕ್ಕೆ ಬಳಸಿ ಕಟ್ಟುವುದಕ್ಕೆ.

ಪ್ರಾಚೀನ ಕಾಲದಲ್ಲಿ ಆಚರಿಸಲ್ಪಡುತ್ತಿದ್ದ ಉಪನಯನ ಕರ್ಮದ ಈ ವರ್ಣನೆಯೊಂದಿಗೆ ನಂತರದ ಕಾಲದಲ್ಲಿನ ಈ ಕರ್ಮದ ವಿವರಗಳೊಂದಿಗೆ ಯಾರಾದರೂ ಹೋಲಿಸಿ ನೋಡಿದಾಗ, ಬ್ರಹ್ಮಚಾರಿಯು ಉಪನಯನ ಕರ್ಮದ ಅಂಗವಾಗಿ ತಾನು ಧರಿಸಬೇಕಾದ ಯಜ್ಞೋಪವೀತದ ಉಲ್ಲೇಖ ಇಲ್ಲದಿರುವ ಅಂಶ ಅವರಿಗೆ ಆಶ್ಚರ್ಯ ಉಂಟುಮಾಡುವುದು ನಿಸ್ಸಂಶಯ. ಈ ಯಜ್ಞೋಪವೀತವನ್ನು ಧರಿಸುವುದೇ

ಆಧುನಿಕ ಉಪನಯನ ಕರ್ಮದ ಕೇಂದ್ರಬಿಂದುವಾಗಿದೆ ಹಾಗೂ ಉಪನಯನ ಕರ್ಮದ ಇಡೀ ಉದ್ದೇಶವೇ ಯಜ್ಞೋಪವೀತವನ್ನು[೧] ಧರಿಸುವುದೆಂದಾಗಿದೆ. ಯಜ್ಞೋಪವೀತ ಎಷ್ಟೊಂದು ಮಹತ್ವದ ಪಾತ್ರವಹಿಸುವಂತಾಗಿದೆಯೆಂದರೆ ಅದರ ತಯಾರಿಕೆ ಹಾಗೂ ಅದರ ಉಪಯೋಗದ ಬಗೆಗೆ ವಿಶದವಾದ ನಿಯಮಗಳು ರಚಿಸಲ್ಪಟ್ಟಿವೆ.

ಯಜ್ಞೋಪವೀತವು ಮೂರು ಎಲೆಗಳಿಂದಾಗಿರಬೇಕು. ಪ್ರತಿಯೊಂದು ದಾರ ಒಂಬತ್ತು ಎಳೆಗಳಿಂದಾಗಿದ್ದು ಚೆನ್ನಾಗಿ ಹುರಿಗೊಂಡಿರಬೇಕು. ಒಂದೊಂದು ಎಳೆಯೂ ಒಬ್ಬೊಬ್ಬ ದೇವತೆಯನ್ನು ಪ್ರತಿನಿಧಿಸುತ್ತದೆ.

ಯಜ್ಞೋಪವೀತವು ನಾಭಿಯ[೨] ತನಕ ಬರಬೇಕು–ಅದು ನಾಭಿಯ ಕೆಳಕ್ಕೂ ಇಳಿಯಬಾರದು. ಎದೆಯ ಮೇಲ್ಗಡೆಗೂ ಇರಬಾರದು.

ಒಬ್ಬ ವ್ಯಕ್ತಿ ಒಂದಕ್ಕಿಂತ ಹೆಚ್ಚು ಯಜ್ಞೋಪವೀತಗಳನ್ನು ಧರಿಸಬಹುದಾಗಿತ್ತು.

ಒಬ್ಬ ಮನುಷ್ಯ ಯಜ್ಞೋಪವೀತವನ್ನು ಯಾವಾಗಲೂ ಧರಿಸಿರಲೇಬೇಕು. ಆತ ಅದನ್ನು ಧರಿಸದೆ ಊಟ ಮಾಡಿದರೆ, ಅಥವಾ ಅದನ್ನು ಬಲಗಿವಿಯಮೇಲೆ ಹಾಕಿಕೊಳ್ಳದೆ ಬಹಿರ್ದಿಶೆಗೆ ಹೋದರೆ, ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾಗುತ್ತಿತ್ತು – ಅಂದರೆ, ಸ್ನಾನ ಮಾಡಿ, ಸ್ತೋತ್ರಗಳನ್ನು ಹೇಳಿ ಉಪವಾಸ ಮಾಡುವುದು.

ಇನ್ನೊಬ್ಬರ ಮೆಟ್ಟು, ಆಭರಣ, ಹೂಮಾಲೆ, ಕಮಂಡಲದಂತಹ ಇತರ ಯಾವುದೇ ವಸ್ತುಗಳನ್ನು ಧಾರಣ ಮಾಡುವುದನ್ನು ನಿಷೇಧಿಸಿದಂತೆ, ಬೇರೆಯವರ ಯಜ್ಞೋಪವೀತನವನ್ನು ಧರಿಸುವುದೂ ನಿಷೇಧಿಸಲಾಗಿದೆ.[೩]

ಯಜ್ಞೋಪವೀತವನ್ನು ಧರಿಸುವ ಮೂರು ವಿಧಾನಗಳು ಮನ್ನಣೆ ಪಡೆದಿವೆ, (೧) ನಿವೀತ, (೨) ಪ್ರಾಚೀನಾವೀತ ಹಾಗೂ (೩) ಉಪವೀತ. ಯಜ್ಞೋಪವೀತವು ಕುತ್ತಿಗೆ, ಹೆಗಲು ಹಾಗೂ ಎದೆಯ ಮೇಲಿನಿಂದ ಹಾಯಿಸಲ್ಪಟ್ಟು ಎರಡೂ ಹೆಬ್ಬೆರಳುಗಳ ಮಧ್ಯೆ ಹಿಡಿಯಲ್ಪಟ್ಟು, ವಕ್ಷಸ್ಥಲದಿಂದ ಕೆಳಮಟ್ಟದಲ್ಲಿ, ಆದರೆ ನಾಭಿಯಿಂದ ಮೇಲಕ್ಕೆ ಇದ್ದದ್ದಾದರೆ, ಅದು ನಿವೀತ ಎಂದು ಕರೆಯಲ್ಪಡುತ್ತದೆ. ಎಡಹೆಗಲ ಮೇಲಿನಿಂದ ಬಲಬಾಜುವಿನಲ್ಲಿ ಜೋತು ಬೀಳುವಂತೆ ಮಾಡಿದರೆ ಅದಕ್ಕೆ ಉಪವೀತ ಎಂದು ಹೆಸರು.

---

೧. ಯಜ್ಞವಲ್ಕ್ಯನು (ಸಾಲು ೧೬ ಹಾಗೂ ೧೩೩) ಅದನ್ನು ಬ್ರಹ್ಮಸೂತ್ರ ಎಂದು ಕರೆದಿದ್ದಾನೆ.

೨. ಕಾಣೆ, *ಧರ್ಮಶಾಸ್ತ್ರದ ಇತಿಹಾಸ,* II (i) p.೨೯೨

ದೇವಲಸ್ಮೃತಿಯ ಪ್ರಕಾರ ಈ ಒಂಬತ್ತು ದೇವತೆಗಳು, ಓಂಕಾರ, ಅಗ್ನಿ, ನಾಗ, ಸೇಮ, ಪಿತೃಗಳು, ಪ್ರಜಾಪತಿ, ವಾಯು, ಸೂರ್ಯ ಹಾಗೂ ವಿಶ್ವೇದೇವ ಆಗಿದ್ದಾರೆ. ಈ ಅಭಿಮತದಲ್ಲಿ ಸ್ವಲ್ಪ ಬದಲಾವಣೆ ಆದಂತಿದೆ. ಯಾಕೆಂದರೆ, ಮೇಧಾತಿಥಿ (ಕಾಣೆಯವರ ಗ್ರಂಥ ನೋಡಿ) ಹೇಳುವಂತೆ ಇಷ್ಟಿಗಳಲ್ಲಿ, ಪಶುಯಾಗ ಹಾಗೂ ಸೋಮಯಾಗಗಳಲ್ಲಿ ಯಜ್ಞೋಪವೀತ ಮೂರು ಎಳೆಗಳ ಒಂದು ದಾರದ್ದಾಗಿರಬೇಕು; ಆದರೆ, ಅಹಿನ ಏಕ, ಹಾಗೂ ಸತ್ರಾ ಎಂಬ ಮೂರು ವಿಧದ ಯಾಗಗಳಲ್ಲಿ, ಮೂರು ಅಗ್ನಿಗಳಿರುವುದರಿಂದ, ಅದು ಮೂರು ದಾರದ್ದಾಗಿರಬೇಕು, ಹಾಗೂ ಏಳು ಸೋಮಸಂಸ್ಥೆಗಳಲ್ಲಿ ಏಳು ಪಟ್ಟು ಹಾಗೂ ಮೂರು ಸವನಗಳು ಎರಡು ಸಂಧ್ಯಾಗಳನ್ನು ಗಣಿಸಿದಾಗ ಐದು ಪಟ್ಟು ಬ್ರಹ್ಮಚಾರಿಯು ಒಂದೇ ಯಜ್ಞೋಪವೀತ ಧರಿಸಬೇಕು. ಸನ್ಯಾಸಿಗಳೂ ಯಜ್ಞೋಪವೀತ ಇಟ್ಟುಕೊಂಡಿದ್ದರೆ ಅವರೂ ಒಂದೇ – ಈ ರೀತಿ ಕಟ್ಟಳೆ ಇತ್ತು. ಸ್ನಾತಕನು (ಬ್ರಹ್ಮಚರ್ಯಾವಸ್ಥೆಯ ನಂತರ ಗುರುಕುಲದಿಂದ ಮನೆಗೆ ಹೋದವನು) ಹಾಗೂ ಗೃಹಸ್ಥನು ಎರಡನ್ನು ಧರಿಸಬೇಕು. ಹಾಗೂ ದೀರ್ಘಕಾಲ ಬದುಕಬೇಕೆನ್ನುವವನು ಎರಡಕ್ಕಿಂತ ಹೆಚ್ಚು ಧರಿಸಬೇಕಾಗಿದ್ದಿತು; ಸ್ನಾತಕನು ಯಾವಾಗಲೂ ಎರಡು ಯಜ್ಞೋಪವೀತ ಧರಿಸಬೇಕು. ಗೃಹಸ್ಥನಾದವನು ಹತ್ತರವರೆಗೆ ಬೇಕಾದಷ್ಟು ಧರಿಸಬಹುದಿತ್ತು.

೩. Kane, *History of Dharmashastra,* Vol. II (I) p.293.

ಬಲ ಹೆಗಲ ಮೇಲಿನಿಂದ ಎಡಬಾಜುವಿನಲ್ಲಿ ಜೋತು ಬೀಳುವಂತೆ ಮಾಡಿದರೆ ಅದು ಪ್ರಾಚಿನಾವೀತ ಆಗುತ್ತದೆ.

ಈ ಯಜ್ಞೋಪವೀತ ಬಂದುದು ಹೇಗೆ? ಟಿಳಕರು[೧] ಒಂದು ವಿವರಣೆ ನೀಡಿದ್ದಾರೆ. ಅದನ್ನಿಲ್ಲಿ ಉದ್ಧರಿಸುವುದು ಅವಶ್ಯ ಎನ್ನಿಸುತ್ತೆ :

> ವೇದಗಳಲ್ಲಿ ಮೃಗಶಿರ – ಇಂಗ್ಲೀಷಿನಲ್ಲಿ ಒರಿಯನ್ – ಎಂಬ ನಕ್ಷತ್ರಕ್ಕೆ ಪ್ರಜಾಪತಿ ಎಂದು ಕರೆದಿದ್ದಾರೆ. ('ಯಜ್ಞ' ಎಂದು ಇನ್ನೊಂದು ಹೆಸರು.) ಈ ಮೃಗಶಿರ ಅಥವಾ ಯಜ್ಞನ ಸೊಂಟದ ಸುತ್ತು ಸುತ್ತಿದ ಅರಿವೆ ಪಟ್ಟಿ ಅಥವಾ ಉಡದಾರ ಆತನ ಹೆಸರಿನಿಂದ ಕರೆಯಲ್ಪಡುವುದು – ಅಂದರೆ, ಯಜ್ಞನ ನಡುಪಟ್ಟಿ ಎಂದು ಕರೆಯಲ್ಪಡುವುದು – ಸ್ವಾಭಾವಿಕವೇ ಆಗಿದೆ. ಆದರೆ, ಆ ಪದವು ಈಗ ಬ್ರಾಹ್ಮಣರ ಪವಿತ್ರದಾರವನ್ನು ಸೂಚಿಸುತ್ತದೆ. ಆದ್ದರಿಂದ, ಅದರ ಮೂಲವಲ್ಲದಿದ್ದರೂ ಸ್ವರೂಪ ಮೃಗಶಿರನ ನಡುಪಟ್ಟಿಯಿಂದ ಬಂದುದೇ? ಎಂಬ ಪ್ರಶ್ನೆ ಕೇಳಲ್ಪಡುವುದು ಸ್ವಾಭಾವಿಕ. ಈ ಪ್ರಕಾರ ಅದು ಉದ್ಭವವಾಗಿದೆಯೆಂದು ನಾನು ತಿಳಿಯುತ್ತೇನೆ:
>
> ದೇಶೀಯ ಪಂಡಿತರೆಲ್ಲರೂ ಆ ಶಬ್ದದ ವ್ಯುತ್ಪತ್ತಿ–ಯಜ್ಞ ಉಪವೀತ – ಹೀಗೆಂದು ಹೇಳುತ್ತಾರೆ. ಆದರೆ, ಸಮಾಸ ಪದದ ಅರ್ಥವನ್ನು ನಾವು 'ಯಜ್ಞಕ್ಕೋಸುಗ (ತೊಟ್ಟ) ಉಪವೀತ' ಎಂದು ಮಾಡಬೇಕೇ, ಅಥವಾ 'ಯಜ್ಞದ ಉಪವೀತ' ಎಂದು ಮಾಡಬೇಕೇ ಎಂಬುದರ ಬಗೆಗೆ ಭಿನ್ನಾಭಿಪ್ರಾಯವಿದೆ. ಮೊದಲನೆಯದು ತಪ್ಪೇನಿಲ್ಲ, ಆದರೆ ಪ್ರಾಮಾಣ್ಯ ಅಭಿಪ್ರಾಯ ಎರಡನೆಯದರ ಪರವಾಗಿದೆ. ಹೋತೃಗಳು ಪರಮಾತ್ಮನಿಗೆ ಯಜ್ಞವೆನ್ನುತ್ತಾರೆ. ಆ ಕಾರಣ, ಆತನ ಉಪವೀತವಾದ ಇದು 'ಯಜ್ಞೋಪವೀತ' ಎಂಬ ಸ್ಮೃತಿ ವಾಕ್ಯವನ್ನು ಪ್ರಯೋಗ – ಕರ್ತರು ಉದ್ಧರಿಸುತ್ತಾರೆ. ಪವಿತ್ರವಾದ ದಾರವನ್ನು ಧರಿಸುವ ವೇಳೆಯಲ್ಲಿ ಹೇಳುವ ಮಂತ್ರದಲ್ಲಿ ಈ ಶಬ್ದಗಳು ಬರುತ್ತವೆ : 'ನಾನು ನಿನ್ನನ್ನು ಯಜ್ಞದ ಉಪವೀತದಿಂದ ಬಂಧಿಸುತ್ತೇನೆ; ಆದರೆ, ಬ್ರಾಹ್ಮಣನು ಅದನ್ನು ಧರಿಸುವಾಗ ಯಾವಾಗಲೂ ಅನ್ನುವ ಸಾಮಾನ್ಯ ಸೂತ್ರದ ಪೂರ್ವಾರ್ಧ ಇಂತಿದೆ :
>
> 'ಯಜ್ಞೋಪವೀತಂ ಪರಮಂ ಪವಿತ್ರಂ ಪ್ರಜಾಪತೇರ್ಯತ್ಸಹಜಂ ಪುರಸ್ತಾತ್'
>
> ಈ ಮಂತ್ರವು, ಲಭ್ಯವಿರುವ ಸಂಹಿತೆಗಳ ಪೈಕಿ ಯಾವುದರಲ್ಲೂ ಸಿಕ್ಕದು, ಆದರೆ ಬ್ರಹ್ಮೋಪನಿಷತ್ತಿನಲ್ಲಿ ಕೊಡಲ್ಪಟ್ಟಿದೆ, ಹಾಗೂ ಬೌಧಾಯನನೂ ಹೇಳಿದ್ದಾನೆ. ಈ ಪದ್ಯ ಮೇಲೆ ಹಮೋಮ–ಯೆಷ್ಟ್‌ನಿಂದ ಉದ್ಧೃತವಾದ ಪದ್ಯದಂತೆಯೇ ಇದೆ. 'ಯಜ್ಞೋಪವೀತವು ಘನವಾದದ್ದು, ಪವಿತ್ರವಾದದ್ದು. ಅದು ಪ್ರಾಚೀನ ಪ್ರಜಾಪತಿಯೊಂದಿಗೆ ಹುಟ್ಟಿತು' ಎಂದು ಅದು ಹೇಳುತ್ತದೆ. 'ಪುರಸ್ತಾತ್' ಎಂಬ ಶಬ್ದ ಅವೆಸ್ತಾದ ಪದ್ಯದಲ್ಲಿನ 'ಪೌರ್‍ವನಿಂ' ಎಂಬ ಶಬ್ದಕ್ಕೆ ಸಂವಾದಿಯಾಗಿದೆ. ಹೀಗಿದ್ದು ಅದು ಡಾ. ಹೌಗ್ ಅವರು ಎತ್ತಿದ ಪ್ರಶ್ನೆಯನ್ನು ನಿರ್ಣಯಿಸುತ್ತದೆ. ಅದೇ ಪ್ರಕಾರ 'ಸಹಜ' (ಪ್ರಜಾಪತಿಯ ಅವಯವಗಳೊಂದಿಗೆ ಜನಿಸಿದ ಎಂಬರ್ಥದ) ಪದ 'ಮೈನ್ಯುತಸ್ತಂ' ಎಂಬ ಪದದ ಅರ್ಥವನ್ನೇ ಸೂಚಿಸುತ್ತದಾದ್ದರಿಂದ,

೧. Orion, pp. 154–155

ಎರಡೂ ಪದ್ಯಗಳ ಅನುರೂಪತೆ ಆಕಸ್ಮಿಕವಾಗಿರಲಿಕ್ಕಿಲ್ಲ. ಈ ಪವಿತ್ರ ದಾರವು ಓರಿಯಾನ್ನನ ನಡುಪಟ್ಟಿಯಿಂದಲೇ ಬಂದದ್ದು ಎಂದು ನನ್ನ ನಂಬಿಕೆ. 'ಉಪವೀತ' (ವೀ–ನೆಯ್ಯು) ಎಂಬುದರ ಶಬ್ದಶಃ ಅರ್ಥ 'ಅರಿವೆಯ ತುಂಡು' ಎಂದಾಗುತ್ತದೆಯೇ ವಿನಃ 'ದಾರ'ವಲ್ಲ. ಆದ್ದರಿಂದ ಯಜ್ಞೋಪವೀತದ ಆದಿಕಾಲದ ರೂಪ ಸೊಂಟಕ್ಕೆ ಸುತ್ತಿಕೊಳ್ಳುವ ನಡುಪಟ್ಟಿಯೇ ಆಗಿರಬೇಕು. ಅದರ ಪಾವಿತ್ರ್ಯದ ಕಲ್ಪನೆ, ಅದು ಪ್ರಜಾಪತಿಯ ನಡುಪಟ್ಟಿಯ ಸಂಕೇತ ಎಂಬ ಸಿದ್ಧಾಂತದ ಮೇಲಿಂದ ಸೇರ್ಪಡೆಯಾಗಿರಬೇಕು".

ಟಿಳಕರ ಈ ವಿವರಣೆಯು ಸ್ವಾರಸ್ಯಕರವಾಗಿದೆಯೇನೋ ಸೈ. ಆದರೆ ಇದು ಕೆಲ ತೊಡಕುಗಳನ್ನು ವಿವರಿಸುವುದಕ್ಕೆ ನೆರವಾಗುವುದಿಲ್ಲ. ಇದು ಉಪನಯನದ ಕಾಲಕ್ಕೆ, ಉಪನಯನಕ್ಕೆ ಅಣಿಯಾಗಿರುವ ವ್ಯಕ್ತಿ ಧರಿಸಬೇಕಾದ – 'ಉತ್ತರೀಯ' ಹಾಗೂ 'ವಾಸ' ಎಂಬ – ಎರಡು ಬಟ್ಟೆಗಳೊಂದಿಗೆ ಯಜ್ಞೋಪವೀತ ಯಾವ ಸಂಬಂಧ ಹೊಂದಿದೆಯೆಂಬುದನ್ನು ವಿವರಿಸುವುದಿಲ್ಲ. ಯಜ್ಞೋಪವೀತವು, ಆ ಎರಡು ವಸ್ತ್ರಗಳನ್ನು ಹೊರತುಪಡಿಸಿಯೋ? ಹಾಗಿದ್ದರೆ, ಉಪನಯನ ಕರ್ಮದ ಮೊದಮೊದಲು ವರ್ಣನೆಗಳಲ್ಲಿ ಅದರ ಉಲ್ಲೋಖವೇಕಿಲ್ಲ? ಇನ್ನೊಂದು ತೊಡಕು ಇದೆ. ಆ ದಾರವು ಅರಿವೆ ಪಟ್ಟಿಗೆ ಪರ್ಯಾಯವಾಗಿದ್ದರೆ, ಉಪನಯನ ಕರ್ಮದಲ್ಲಿ ಅರಿವೆ ಧರಿಸುವುದನ್ನು ಉಳಿಸಿಕೊಳ್ಳಲಾಗಿದೆಯಲ್ಲ, ಅದೇಕೆ?

ಇನ್ನೊಂದು ವಿವರಣೆಯೂ ಇದ್ದಂತೆ ತೋರುತ್ತದೆ. ಅದರ ಮೌಲ್ಯ ಏನೇ ಇರಲಿ, ಅದನ್ನು ಇಲ್ಲಿ ಕೊಡುತ್ತಿದ್ದೇನೆ. ಅದರ ಪ್ರಕಾರ, ಪವಿತ್ರ ದಾರದ ಧಾರಣೆ ಗೋತ್ರ ಸ್ವೀಕಾರಕ್ಕೆ ಸಂಬಂಧಿಸಿತ್ತು. ಅದರ ಉದ್ದೇಶ (ಒಬ್ಬ ವ್ಯಕ್ತಿ ತನ್ನನ್ನು) ಯಾವುದೇ ಒಂದು ಗೋತ್ರಕ್ಕೆ ಗಂಟುಹಾಕಿಕೊಳ್ಳುವುದಾಗಿತ್ತು. ಉಪನಯನ ಕರ್ಮದೊಂದಿಗೆ ಅದರ ಸಂಬಂಧವೇ ಇರಲಿಲ್ಲ. ಅದರ ಉದ್ದೇಶ ಉಪನಯನವಾಗುವ ವ್ಯಕ್ತಿಗೆ ವೇದಾಧ್ಯಯನದ ಪ್ರವೇಶ ನೀಡುವುದಾಗಿತ್ತು. ಪ್ರಾಚೀನ ಆರ್ಯ ಧರ್ಮಶಾಸ್ತ್ರದ ಪ್ರಕಾರ, ಮಗನು ತಂದೆಯ ಗೋತ್ರವನ್ನು ಉತ್ತರಾಧಿಕಾರದಿಂದ ಪಡೆಯುತ್ತಿರಲಿಲ್ಲ ಎಂಬ ಅಂಶ ಸಾಕಷ್ಟು ಸ್ಪಷ್ಟವಾಗಿ ತಿಳಿಯಲ್ಪಟ್ಟಿಲ್ಲ. ಈ ಸಂಬಂಧದಲ್ಲಿ ಹಿಂದೂ–ಆರ್ಯ ಸಮಾಜದ ಎರಡು ಕಟ್ಟಳೆಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ : ಒಂದು ಸೂತಕಕ್ಕೆ ಸಂಬಂಧಿಸಿದುದು. ಇನ್ನೊಂದು ದತ್ತುಸ್ವೀಕಾರಕ್ಕೆ ಸಂಬಂಧಿಸಿದುದು. ಸಾವು ಸಂಭವಿಸಿ ಬರಬಹುದಾದ ಸೂತಕ, ಸೂತಕದ ಕಟ್ಟಳೆಯ ಪ್ರಕಾರ, ಎಷ್ಟು ದಿನಗಳದ್ದು ಎನ್ನುವ ಪ್ರಶ್ನೆ ಮೃತ ವ್ಯಕ್ತಿಯೊಂದಿಗಿನ ಸಂಬಂಧದ ಮೇಲೆ ಆಧಾರಿತವಾಗಿತ್ತು. ಸಂಬಂಧ ಬಹಳ ನಿಕಟವಾಗಿದ್ದಿದ್ದರೆ, ಸೂತಕದ ದಿನಗಳು, ಸಂಬಂಧ ಹೆಚ್ಚು ದೂರದ್ದಾಗಿದ್ದರೆ ಸೂತಕದ ಅವಧಿ ಕಡಿಮೆ ಆಗಿರುತ್ತವೆ. ಉಪನಯನ ಆಗದೆ ಮೃತನಾದ ಬಾಲಕನ ಮರಣಸಂಬಂಧೀ ಸೂತಕ ಬಹಳ ಇರುವುದಿಲ್ಲ[೧] ಅದು ಕೆಲವೇ ದಿನಗಳದ್ದಾಗಿರುತ್ತದೆ. ದತ್ತು ತೆಗೆದುಕೊಳ್ಳುವ ಸಂಬಂಧದಲ್ಲಿನ ಕಟ್ಟಳೆ[೨] ಏನು ಹೇಳುತ್ತದೆಂದರೆ, ಉಪನಯನವಾಗಿರುವಂಥ ಬಾಲಕ ದತ್ತು ಸ್ವೀಕಾರಕ್ಕೆ ಅರ್ಹನಾಗುವುದಿಲ್ಲ. ಈ ಕಟ್ಟಳೆಗಳ ಹಿಂದಿನ ಮರ್ಮ ಏನು? ಅದು ಸ್ಪಷ್ಟವಾಗಿದೆ. ಉಪವೀತ ಇಲ್ಲದೆ ಇರುವ ಬಾಲಕ ತಂದೆಯ ಗೋತ್ರವನ್ನು ಇನ್ನೂ ಪ್ರವೇಶಿಸಿಲ್ಲ ಎಂದಂತಾಯಿತು. ಅಂದಮೇಲೆ ಸೂತಕಗಳು ನಾಮಮಾತ್ರದವಾಗಿರುತ್ತವೆ. ದತ್ತು ಎಂದರೆ,

೧. See *Manusmriti,* Chapter V, Verses ೬೬–೭೦

೨. 'ಕಾಲಿಕಾಪುರಾಣ'ದಲ್ಲಿ ವ್ಯವಹಾರ ಮಯೂಖನಿಂದ ಇದು ಉದ್ಧೃತವಾಗಿದೆ. ಕಾಣೆಯವರಿಂದ ಸಂಪಾದಿತವಾದ 'ಕಾಲಿಕಾಪುರಾಣ' ನೋಡಿ (ಪು. ೧೧೪). ನ್ಯಾಯಾಲಯದ ವಿವಿಧ ಪ್ರಕರಣಗಳಲ್ಲಿ ಕಕ್ಷಿಗಾರರು ಈ ವಾದವನ್ನೇ ಮುಂದುಮಾಡಿದ್ದುದನ್ನು ಕಾಣೆಯವರು ಉಲ್ಲೇಖಿಸಿದ್ದಾರೆ.

ದತ್ತು ತಂದೆಯ ಗೋತ್ರದಲ್ಲಿ ಪ್ರವೇಶಿಸುವಿಕೆ ಎಂದರ್ಥ. ಉಪನಯನ ಆಗಲೇ ಆಗಿದ್ದರೆ, ಬೇರೊಂದು ಗೋತ್ರದಲ್ಲಿ ಆ ಬಾಲಕ ಪ್ರವೇಶ ಪಡೆದಿದ್ದಾನೆಂದೇ ಅರ್ಥ – ಅದನ್ನು ರದ್ದು ಪಡಿಸಲಾಗುವುದಿಲ್ಲ. ಅಂದ ಮೇಲೆ, ದತ್ತು ಹೋಗುವುದಕ್ಕೆ – ಸ್ವೀಕರಿಸಲ್ಪಡುವುದಕ್ಕೆ ಅವಕಾಶವೇ ಇಲ್ಲವೆಂದಂತಾಯಿತು. ಆದ್ದರಿಂದ, ಇವೆರಡೂ ಕಟ್ಟಳೆಗಳು ತೋರಿಸಿಕೊಡುವುದೇನೆಂದರೆ, ಜನಿವಾರ ಕರ್ಮವು ಗೋತ್ರಕ್ಕೆ ಸಂಬಂಧಿಸಿದ್ದಾಗಿತ್ತೇ ಹೊರತು ಉಪನಯನಕ್ಕಲ್ಲ ಎಂದು.

ದಾರ(ಜನ್ನಿವಾರ)ವು ಗೋತ್ರದೊಂದಿಗೆ ಸಂಬಂಧ ಹೊಂದಿದೆ ಎಂಬ ಅಭಿಪ್ರಾಯಕ್ಕೆ ಜೈನ ಸಾಹಿತ್ಯದಲ್ಲಿ ಪುಷ್ಟಿ ಸಿಕ್ಕುತ್ತದೆ. ಆಚಾರ್ಯ ರವಿಷೇಣನ[೧] ಪದ್ಮಪುರಾಣ ಕೃತಿಯ ನಾಲ್ಕನೇ ಪರ್ವದಲ್ಲಿ ಬರುವ ೮೭ನೇ ಶ್ಲೋಕ ಇಂತಿದೆ :

*"ಭಗವಾನನೇ, ನೀನು ನಮಗೆ ಕ್ಷತ್ರಿಯ, ವೈಶ್ಯ ಹಾಗೂ ಶೂದ್ರನ ಉಗಮದ ಬಗೆಗೆ ಹೇಳಿದ್ದೀಯಾ. ನನಗೆ ಕೊರಳಲ್ಲಿ ದಾರ ಧರಿಸುವವನ ಮೂಲೋತ್ಪತ್ತಿಯ ಬಗೆಗೆ ತಿಳಿಯುವ ಕುತೂಹಲ."*

'ಕೊರಳಲ್ಲಿ ದಾರ ಧರಿಸುವವರು' ಎಂಬ ಉಕ್ತಿ ಮಹತ್ವಪೂರ್ಣವಾಗಿದೆ. ಅದು ಬ್ರಾಹ್ಮಣರ ವರ್ಣನೆಯೆಂಬುದರ ಬಗೆಗೆ ಸಂಶಯವೇ ಇಲ್ಲ. ಇದರಿಂದ ಸ್ಪಷ್ಟವಾಗುವ ಒಂದಂಶ ಏನೆಂದರೆ ಬ್ರಾಹ್ಮಣರಷ್ಟೇ ಈ ಪವಿತ್ರ ದಾರವನ್ನು ಧರಿಸುತ್ತಿದ್ದರು, ಇನ್ನಾವ ವರ್ಗವೂ ಧರಿಸುತ್ತಿರಲಿಲ್ಲ ಎನ್ನುವ ಕಾಲ ಒಂದಿತ್ತು ಎಂಬುದು. ಗೋತ್ರಸಂಬಂಧವೂ ಬ್ರಾಹ್ಮಣರಿಗೆ ಮೀಸಲಾಗಿತ್ತೆಂಬ ಸಂಗತಿಯೊಂದಿಗೆ ಈ ಅಂಶವನ್ನೂ ಓದಿ ನೋಡಿದಾಗ ಸ್ಪಷ್ಟವಾಗುವುದೇನೆಂದರೆ, ಪವಿತ್ರಧಾರ-ಧಾರಣ ಸಮಾರಂಭವು ಬಾಲಕನನ್ನು ಆತನ ತಂದೆಯ ಗೋತ್ರಕ್ಕೆ ಗಂಟುಹಾಕುವುದಕ್ಕೆ ಸಂಬಂಧಿಸಿತ್ತೇ ಹೊರತು ಉಪನಯನ ಕರ್ಮಕ್ಕಲ್ಲ – ಉಪನಯನವು ಬಾಲಕನನ್ನು ವೇದಾಭ್ಯಾಸಕ್ಕೆ ಪ್ರವೇಶ ನೀಡುವುದಕ್ಕೆ ಸಂಬಂಧಿಸಿತ್ತು.

ಇದು ನಿಜವಾದರೆ ಜನಿವಾರ ಧಾರಣ ಸಮಾರಂಭ ಹಾಗೂ ಉಪನಯನ ಸಮಾರಂಭ ಎರಡೂ ಬೇರೆ ಬೇರೆಯೇ ಉದ್ದೇಶಗಳಿಗಾಗಿಯೇ ಮಾಡುವ ವಿಧಿಗಳು. ಕಾಲಾನುಕ್ರಮದಲ್ಲಿ, ಇವೆರಡೂ ಬೆರೆತು ಒಂದಾದವು. ಇವು ಬೆರೆಯುವುದಕ್ಕೂ ಒಂದು ಸ್ವಾಭಾವಿಕ ಕಾರಣವಿದೆ. ಜನಿವಾರ ಧಾರಣವಾಗದೇ ಹೋದರೆ ಉಪನಯನ ಕರ್ಮಕ್ಕೆ ಅಣಿಯಾದ ಬಾಲಕನನ್ನು ಆಚಾರ್ಯನು ತನ್ನ ಗೋತ್ರಕ್ಕೆ ಸೇರಿಸಿಕೊಳ್ಳಬಹುದಾದ ಅಪಾಯವಿತ್ತು. ಈ ಅಪಾಯವನ್ನು ತೊಡೆಯುವುದಕ್ಕೇನೇ, ತಂದೆಯಾದವನು ಬಾಲಕನನ್ನು ಆಚಾರ್ಯನಿಗೊಪ್ಪಿಸುವ ಪೂರ್ವದಲ್ಲಿ ಆತನ ಜನಿವಾರ-ಧಾರಣ ಕರ್ಮವನ್ನು ಮುಗಿಸುತ್ತಿದ್ದ. ಎರಡೂ ಸಮಾರಂಭಗಳು ಏಕಕಾಲಕ್ಕೆ ನೆರವೇರುವುದಕ್ಕೆ ಪ್ರಾಯಶಃ ಇದೇ ಕಾರಣ.

ಅದೇನೇ ಇರಲಿ, ಉಪನಯನವೆಂದರೆ ವೈದಿಕ ಬ್ರಾಹ್ಮಣನು ವೇದವನ್ನು ಬೋಧಿಸುವುದು ಎಂದರ್ಥ.

## III

ಈ ನನ್ನ ಸಿದ್ಧಾಂತವು ಗಟ್ಟಿಮುಟ್ಟಾಗಿದೆಯೆಂಬ ಮನವರಿಕೆ ನನಗಿದೆಯಾದರೂ, ಅದಕ್ಕೆ ಆಕ್ಷೇಪಣೆ ಎತ್ತಬಹುದಾದವರು ಯಾರೂ ಸಿಕ್ಕಲಾರರು ಎಂದು ತಿಳಿಯುವುದು ಅತಿಶಯ ಆತ್ಮ ವಿಶ್ವಾಸದ ಮಾತಾದೀತು. ಈ ಕೆಳಗಣ ಆಕ್ಷೇಪಣೆಗಳು ಬರಬಹುದೆಂದು ನನ್ನ ಅಂದಾಜು :

(೧) ಉಪನಯನವಾಗದೆ ಇರುವುದು ಶೂದ್ರತೆಯ ಲಕ್ಷಣವೇ?

(೨) ಶೂದ್ರನೆಂದಾದರೂ ಉಪನಯನದ ಹಕ್ಕನ್ನು ಪಡೆದಿದ್ದನೇ?

---

೧. Quoted by Nathuram Premi in his *Jain Sahitya aur Ithihas* (Hindi), p.೫೫ a.

(೩) ಉಪನಯನದ ನಷ್ಟ ಶೂದ್ರರ ಅವನತಿಯಾಗಿ ಹೇಗೆ ಪರಿಣಮಿಸುತ್ತದೆ?
(೪) ಶೂದ್ರರಿಗೆ ಉಪನಯನ ನಿರಾಕರಿಸುವುದಕ್ಕೆ ಬ್ರಾಹ್ಮಣರಿಗೆ ಯಾವ ಅಧಿಕಾರವಿತ್ತು?
ಸಿದ್ಧಾಂತದ ಬಗೆಗೆ ಎತ್ತಬಹುದಾದ ಆಕ್ಷೇಪಣೆಗಳನ್ನು ಹೇಳಿ, ಅವುಗಳಿಗೆ ನನ್ನ ಉತ್ತರವನ್ನು ನೀಡಬಯಸುತ್ತೇನೆ.

## IV

ಮೊದಲನೆಯದರೊಂದಿಗೆ ಪ್ರಾರಂಭಿಸೋಣ. ಈ ಆಕ್ಷೇಪಣೆಗೆ ಉತ್ತರಿಸುವ ಅತ್ಯುತ್ತಮ ಮಾರ್ಗವೆಂದರೆ, ಶೂದ್ರ ಯಾರೆಂದು ನಿರ್ಧರಿಸಲು ಯಾವುದು ಅತ್ಯಂತ ವಿಶಿಷ್ಟ ಲಕ್ಷಣವೆಂದು ನ್ಯಾಯಾಲಯಗಳು ಬಗೆದಿವೆಯೋ ಅದನ್ನು ತಿಳಿಯಲು ನ್ಯಾಯಿಕ ತೀರ್ಪುಗಳನ್ನು ಅನುಲಕ್ಷಿಸೋಣ. ಉಲ್ಲೇಖಿಸಬಹುದಾದ ಮೊದಲ ಪ್ರಕರಣವು ೭.M.I.A.೧೮[೧]ರಲ್ಲಿ ಸಿಕ್ಕುತ್ತದೆ. ಇದು ೧೮೩೭ರಲ್ಲಿ ಪ್ರಿವಿ ಕೌನ್ಸಿಲ್‌ನಿಂದ ನಿರ್ಣಯಿಸಲ್ಪಟ್ಟಿತು. ಇತ್ಯರ್ಥವಾಗಬೇಕಿದ್ದ ಪ್ರಶ್ನೆ ಏನಾಗಿದ್ದಿತೆಂದರೆ ಪ್ರಸ್ತುತ ಸಮಯದಲ್ಲಿ ಭಾರತದಲ್ಲಿ ಯಾರಾದರೂ ಕ್ಷತ್ರಿಯರೆಂಬುವವರು ಇರುವರೆ? ಒಂದು ಪಕ್ಷದ ವಾದ–ಇದ್ದಾರೆ ಎಂಬುದಾಗಿತ್ತು. ಇನ್ನೊಂದು ಪಕ್ಷದ ವಾದ 'ಅಂಥವರಾರೂ ಇಲ್ಲ' ಎಂಬುದಾಗಿತ್ತು. ಎರಡನೆಯ ವಾದವು ಬ್ರಾಹ್ಮಣರು ಪ್ರಚುರಪಡಿಸಿದ ಸಿದ್ಧಾಂತದ ತಳಹದಿಯ ಮೇಲೆ ನಿಂತದ್ದಾಗಿತ್ತು. ಈ ಸಿದ್ಧಾಂತದ ಪ್ರಕಾರ, ಭೂಮಿಯ ಮೇಲಣ ಎಲ್ಲ ಕ್ಷತ್ರಿಯರನ್ನು ಬ್ರಾಹ್ಮಣನಾದ ಪರಶುರಾಮನು ಕೊಂದುಹಾಕಿದ್ದ, ಹಾಗೂ ಅಳಿದುಳಿದವರನ್ನು ಶೂದ್ರ ಅರಸು ಮಹಾಪದ್ಮನಂದನು ತರಿದುಹಾಕಿದ್ದ – ಹೀಗಾಗಿ, ಕ್ಷತ್ರಿಯರೆಂಬುವವರು ಯಾರೂ ಉಳಿಯದೆ ಬರೀ ಬ್ರಾಹ್ಮಣರು ಹಾಗೂ ಶೂದ್ರರೆಂಬುವವರು ಇದ್ದದ್ದಾಗಿತ್ತು. ಈ ಸಿದ್ಧಾಂತವನ್ನು, ಬ್ರಾಹ್ಮಣರು ಸೃಷ್ಟಿಸಿದ ಕತೆಯೆಂದು, ಪ್ರಿವಿ ಕೌನ್ಸಿಲ್ಲು ಮಾನ್ಯ ಮಾಡಲಿಲ್ಲ. ಕ್ಷತ್ರಿಯರೆಂಬುವವರು ಇನ್ನೂ ಭಾರತದಲ್ಲಿದ್ದಾರೆ ಎಂಬ ವಾದವನ್ನು ಅದು ಎತ್ತಿ ಹಿಡಿಯಿತು. ಆದರೆ, ಶೂದ್ರನಿಂದ ಕ್ಷತ್ರಿಯನು ಬೇರೆ ಎಂದು ಗುರುತಿಸಲ್ಪಡಲು ಆಧಾರವಾಗುವ ಲಕ್ಷಣ ಇಂಥದೇ ಎಂದು ಪ್ರಿವಿ ಕೌನ್ಸಿಲ್ಲು ವ್ಯಾಖ್ಯಾನಿಸಲಿಲ್ಲ. ಅವರು ತಳೆದ ನಿಲುಮೆಯೆಂದರೆ, ಪ್ರತಿಯೊಂದು ಪ್ರಕರಣದಲ್ಲೂ ಈ ಪ್ರಶ್ನೆಯನ್ನು ಅದರ ಸಾಕ್ಷ್ಯಾಧಾರ–ಬಲಾಬಲಗಳ ಮೇಲೆ ತೀರ್ಮಾನಿಸಲ್ಪಡಬೇಕೆಂಬುದಾಗಿತ್ತು.

ಈ ವಿಷಯಕ್ಕೆ ಸಂಬಂಧಿಸಿದ ಎರಡನೇ ಪ್ರಕರಣ I.L.R.೧೦ Cal–೬೮೮[೨]ರಲ್ಲಿ ಸಿಕ್ಕುತ್ತದೆ. ನ್ಯಾಯಾಲಯದ ಮುಂದೆ ಇಡಲಾಗಿದ್ದ ಪ್ರಶ್ನೆ ಯಾವುದೆಂದರೆ : ಬಿಹಾರದ ಕಾಯಸ್ಥರು ಕ್ಷತ್ರಿಯರೇ? ಶೂದ್ರರೇ? ಎಂಬುದು. ಉಚ್ಚ ನ್ಯಾಯಾಲಯವು ಅವರು ಶೂದ್ರರೆಂದು ತೀರ್ಪು ನೀಡಿತು. ಕಾಯಸ್ಥರ ಪರವಾದ ವಾದಿಗಳ ನಿಲುವು ಏನಾಗಿತ್ತೆಂದರೆ, ಬಿಹಾರದ ಕಾಯಸ್ಥರು, ಬಂಗಾಲ, ಉತ್ತರ ಪ್ರಾಂತಗಳು ಹಾಗೂ ಬನಾರಸ – ಈ ಪ್ರದೇಶಗಳ ಕಾಯಸ್ಥರಿಂದ ಭಿನ್ನರಾಗಿದ್ದು, ಅಲ್ಲಿನವರು ಶೂದ್ರರಾಗಿದ್ದರೆ, ಬಿಹಾರದ ಕಾಯಸ್ಥರು ಕ್ಷತ್ರಿಯರು ಎಂಬುದು. ನ್ಯಾಯಾಲಯವು ಈ ವಿಭಿನ್ನತೆಯನ್ನೊಪ್ಪಲು ನಿರಾಕರಿಸಿತು, ಹಾಗೂ ಬಿಹಾರದ ಕಾಯಸ್ಥರೂ ಶೂದ್ರರೇ ಎಂಬ ತೀರ್ಪು ನೀಡಿತು.

ಈ ತೀರ್ಪಿನ ಸಿಂಧುತ್ವವನ್ನು ಅಲಹಾಬಾದ ಉಚ್ಚನ್ಯಾಯಾಲಯವು ಒಪ್ಪಲಿಲ್ಲ. I.L.R.೧೨ All.೩೨೮[೩]ನಲ್ಲಿ (ಪು ೩೩೪ ನೋಡಿ), ನ್ಯಾಯಮೂರ್ತಿ ಮೆಹಮೂದ ಅವರು ಈ ರೀತಿಯ ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ :

---

೧. Chuohirya Run Murdan Syn *versus* Sahub Purhulad Syn.

೨. Raj Coomar Lal *versus* Bissessur Dyla

೩. Tulsi Ram *versus* Behind Lal

"ಮನುಸ್ಮೃತಿಯಲ್ಲಾಗಲೀ, ಇನ್ನಿತರ ಯಾವುದೇ ಹಿಂದೂ ಕಾಯ್ದೆಯ ಪ್ರಾಮಾಣ್ಯ ಗ್ರಂಥಗಳಲ್ಲಾಗಲೀ ಮಾನವಕುಲವು ವಿಂಗಡಿಸಲ್ಪಟ್ಟ ಪ್ರಕಾರ, ಈ ವಾದಕ್ಕೆ ಸಂಬಂಧಿಸಿದಂತೆ, ಈ ಪ್ರದೇಶದವರೇ ಆದ ಪಕ್ಷ–ಪ್ರತಿಪಕ್ಷದ ಕಾಯಸ್ಥರಿಬ್ಬರೂ ಶೂದ್ರವರ್ಗಕ್ಕೆ ಸಲ್ಲುತ್ತಾರೆ ಎಂಬ, ಎರಡೂ ಕೆಳಗಿನ ನ್ಯಾಯಾಲಯಗಳು ತಳೆದ ಅಭಿಪ್ರಾಯದ ಸಿಂಧುತ್ವದ ಬಗೆಗೆ ನನಗೆ ತೀವ್ರತರವಾದ ಆಶಂಕೆಗಳಿವೆ. ಈ ಮಹತ್ವದ ಜನವರ್ಗಕ್ಕೆ ಸಂಬಂಧಿಸಿದಂತೆ ಹಿಂದೂ ಕಾಯ್ದೆ ಜಾರಿಯ ವಿಷಯದಲ್ಲಿ, ಕಾಯ್ದೆಯ ದೃಷ್ಟಿಯಿಂದಲೂ ಹಾಗೂ ವಂಶವಿಜ್ಞಾನದ ದೃಷ್ಟಿಯಿಂದಲೂ, ಈ ಪ್ರಶ್ನೆ ಸಾಕಷ್ಟು ತೊಡರುಗಳನ್ನುಂಟುಮಾಡುತ್ತದೆ. ಶ್ರೀ ನಾರಾಯಣ ಮಿಟ್ಟರ್ ವಿರೋಧ ಪಕ್ಷ ಶ್ರೀ ಮಟ್ಟಿ ಕಿಶೆನ್ ಸುಂದರಿ ದಾಸಿ[೧] ಅಥವಾ ಮಹಾಶೋವ ಶೋಶಿನಾಥ ಘೋಷ್ ವಿರುದ್ಧ ಪಕ್ಷ ಶ್ರೀಮತಿ ಕೃಷ್ಣಾ ಸುಂದರಿ ದಾಸಿ[೨] ಎಂಬ ನಿಮ್ನ (ಕೆಳಗಣ) ಬಂಗಾಲದ ಕಾಯಸ್ಥರು ದತ್ತು ಸಂಬಂಧದಲ್ಲಿ ನಡೆಸಲಾದ ಎರಡು ಮೊಕದ್ದಮೆಗಳಲ್ಲಿ ಪ್ರಿವಿ ಕೌನ್ಸಿಲ್‌ನವರ ತೀರ್ಪಿನಿಂದಾಗಿ ಪ್ರಶ್ನೆ ಬಗೆಹರಿದಿದೆ ಎಂದು ನಾನು ತಿಳಿಯುವುದಿಲ್ಲ. ಈ ಕಾಯಸ್ಥರು ವಾಯವ್ಯ ಪ್ರಾಂತ್ಯಗಳು ಹಾಗೂ ಅವಧ್ ಮೊದಲಾದ ಉತ್ತರ ಭಾರತದ ಹನ್ನೆರಡು ಕಾಯಸ್ಥ ಜಾತಿಗಳಿಗಿಂತ ಭಿನ್ನವಾಗಿರಬಹುದಾಗಿದೆ. ಅಲ್ಲದೆ, ಚೌಧರಿ ಹಜಾರೀಲಾಲ್ ವಿರುದ್ಧ ಪಕ್ಷ ಬಿಷ್ಣು ದಯಾಲ (ಮೊದಲನೆಯ ಮೇಲ್ಮನವಿ ನಂ. ೧೩೩, ಸನ್ ೧೮೮೬, ತೀರ್ಪು ಇತ್ತ ದಿನಾಂಕ ೧೫ ಜೂನ್ ೧೮೮೭) ಮೊಕದ್ದಮೆಯಲ್ಲಿ (ವರದಿ ಮಾಡಲ್ಪಟ್ಟಿರದ) ಮುಖ್ಯ ನ್ಯಾಯಾಧೀಶರ ಮತ್ತು ನನ್ನ ಬಂಧು ಟಿರೆಲ್ ಅವರ ನಿರ್ಣಯವು ಪ್ರಶ್ನೆಯನ್ನು ಬಗೆಹರಿಸುತ್ತದೆಯೆಂದೂ ನಾನು ತಿಳಿದಿಲ್ಲ. ಆದರೆ ಈ ವಿಷಯವನ್ನು ನಾನು ಮುಂದುವರಿಸುವ ಅಗತ್ಯವಿಲ್ಲ....."

ಮೂರನೆಯ ಪ್ರಕರಣ (೧೯೧೬) ೨೦ Cal.W.N.೯೦೧[೩]ನಲ್ಲಿ ವರದಿಯಾಗಿದೆ. ಈ ಪ್ರಕರಣದಲ್ಲಿ ಎತ್ತಲ್ಪಟ್ಟ ಪ್ರಶ್ನೆಯೆಂದರೆ ಬಂಗಾಲದ ಕಾಯಸ್ಥರು ಕ್ಷತ್ರಿಯರೇ? ಶೂದ್ರರೇ? ಎಂಬುದು. ಕಲಕತ್ತೆ ಉಚ್ಚನ್ಯಾಯಾಲಯವು ಅವರು ಶೂದ್ರರೆಂದು ತೀರ್ಪು ನೀಡಿತು. ಕಲಕತ್ತಾ ಉಚ್ಚನ್ಯಾಯಾಲಯದ ನಿರ್ಣಯದ ವಿರುದ್ಧ ಪ್ರಿವಿ ಕೌನ್ಸಿಲ್ಲಿಗೆ ಮೇಲ್ಮನವಿ ಸಲ್ಲಿಸಿ ವ್ಯಾಜ್ಯ ಮುಂದುವರಿಯಿತು. ಪ್ರಿವಿ ಕೌನ್ಸಿಲ್ಲಿನ ನಿರ್ಣಯ (೧೯೨೬) ೪೭ I.A.೧೪೦ರಲ್ಲಿ ವರದಿಯಾಗಿದೆ. ಬಂಗಾಲೀ ಕಾಯಸ್ಥರು ಶೂದ್ರರೇ, ಕ್ಷತ್ರಿಯರೇ ಎಂಬ ಪ್ರಶ್ನೆಯನ್ನು ಪ್ರಿವಿ ಕೌನ್ಸಿಲ್ಲಿನವರು ನಿರ್ಣಯಿಸದೆ ಹಾಗೇ ಬಿಟ್ಟರು. ೧೯೧೬ ಹಾಗೂ ೧೯೨೬ರ ಮಧ್ಯೆ ಕಲ್ಕತ್ತಾ ಉಚ್ಚ ನ್ಯಾಯಾಲಯವು ಬಂಗಾಲೀ ಕಾಯಸ್ಥರು ಹಾಗೂ ನಿಮ್ನ ಜಾತಿಗಳಾದ ತಂತಿ[೪]ಗಳು ಮತ್ತು ಡೋಮರು[೫]ಗಳ ಮಧ್ಯದ ಅಂತರ್ವಿವಾಹಗಳು, ಅವೆರಡೂ ಶೂದ್ರರ ಉಪಜಾತಿಗಳಾದ್ದರಿಂದ, ಕಾನೂನುಬದ್ಧ ಎಂದು ಪರಿಗಣಿಸುವ ಎರಡು ತೀರ್ಪು ನೀಡಿತು.

ಕಾಯಸ್ಥರ ಸ್ಥಾನವನ್ನು ತೀರ ಕೆಳಮಟ್ಟಕ್ಕೆ ನೂಕುವ ಈ ತೀರ್ಪುಗಳ ಬೆನ್ನಿಂದಲೇ ಇನ್ನೊಂದು ಹೊರಬಿತ್ತು – ಅದು I.L.R೬ಪಾಟ್ನಾ ೫೦೬[೬]ರಲ್ಲಿ ವರದಿಯಾಗಿದೆ. ೪೭ ಪುಟಗಳಷ್ಟು ವಿಸ್ತೃತವಾದ ಹಾಗೂ ಸುದೀರ್ಘವಾದ ಈ ತೀರ್ಪಿನಲ್ಲಿ ನ್ಯಾಯಮೂರ್ತಿ ಶ್ರೀ ಜ್ವಾಲಾ ಪ್ರಸಾದರು ಕಾಯಸ್ಥರ

೧. L.R.I.A. Sup., Vol. ೧೪೯

೨. L.R.೭. I.A., ೨೫೦

೩. Asita Mohan Ghosh *versus* Nirod Mohan Ghosh Maulik

೪. (೧೯೨೧) ೪೮ Cal. ೬೨೬ Bishwanath Ghosh *versus* Srimati Balai Desai

೫. (೧೯೨೪) ೫೧ Cal. ೭೮೮ Bholanath Mitter *versus* King Emperor.

೬. (೧೯೨೯) Iswariprasad *versus* Rai Hari Prasad Lal.

ಉಲ್ಲೇಖವಿರುವ ಪ್ರತಿಯೊಂದು ಪುರಾಣ ಹಾಗೂ ಸ್ಮೃತಿಯನ್ನು ಹೆಕ್ಕಿ ನೋಡಿದರು. ಅವರು ಕಲ್ಕತ್ತಾ ಉಚ್ಚನ್ಯಾಯಾಲಯ ನೀಡಿದ ತೀರ್ಪಿಗೆ ಸಮ್ಮತಿಸದೆ ಬಿಹಾರದ ಕಾಯಸ್ಥರು ಕ್ಷತ್ರಿಯರು ಎಂಬ ತೀರ್ಮಾನಕ್ಕೆ ಬಂದರು.

ಇನ್ನು ಮುಂದೆ ಬರಲಿರುವ ಪ್ರಕರಣಗಳಲ್ಲಿ ನಿರ್ಣಯಿಸಬೇಕಾದ ಪ್ರಶ್ನೆ : ಮರಾಠರು ಕ್ಷತ್ರಿಯರೋ ಶೂದ್ರರೋ ಎನ್ನುವುದು. ಈ ಪ್ರಶ್ನೆ ಎತ್ತಲ್ಪಟ್ಟ ಮೊಟ್ಟಮೊದಲ ಪ್ರಕರಣ ೪೮ Mad ೧[೧]ನಲ್ಲಿ ವರದಿಯಾಗಿದೆ. ಇದೊಂದು ವಕೀಲ – ವಕೀಲರ ಮಧ್ಯದ ಮೊಕದ್ದಮೆ. ತಂಜಾವೂರಿನ ಅರಸನ ಆಸ್ತಿಯ ನಿರ್ವಾಹಕ ಹೂಡಿದ ದಾವೆ. ಇದರಲ್ಲಿ ಅರಸನ ಮಕ್ಕಳು ಮೊಮ್ಮಕ್ಕಳಲ್ಲದೆ ಆತನ ದೂರದ ರಕ್ತಸಂಬಂಧಿಗಳು (ತಂದೆಯ ಕಡೆಯಿಂದ, ತಾಯಿಯ ಕಡೆಯಿಂದ) ಕೂಡ ಪ್ರತಿವಾದಿಗಳಾಗಿ ಮಾಡಲ್ಪಟ್ಟಿದ್ದರು. ತಂಜಾವೂರಿನ ರಾಜ ವೆಂಕೋಜಿ ಉರ್ಫ ಎಕೋಜಿಯಿಂದ ಸ್ಥಾಪಿಸಲ್ಪಟ್ಟಿದ್ದಿತು. ಆತನು ಮರಾಠನಾಗಿದ್ದಲ್ಲದೆ ಮರಾಠಾ ಸಾಮ್ರಾಜ್ಯದ ಸ್ಥಾಪಕನಾದ ಶಿವಾಜಿಯ ಸಹೋದರನಾಗಿದ್ದನು. ಈ ಪ್ರಕರಣದ ಮೇಲಿನ ತೀರ್ಪು ೨೨೯ ಪುಟಗಳಷ್ಟು ಸುದೀರ್ಘವಾಗಿದ್ದು, ಇದರಲ್ಲಿ 'ಮರಾಠರು ಕ್ಷತ್ರಿಯರೇ?' ಎಂಬ ಪ್ರಶ್ನೆ ಸಮಗ್ರವಾಗಿ ಪರಿಶೀಲಿಸಲ್ಪಟ್ಟಿದೆ. ಮದ್ರಾಸ್ ಉಚ್ಚನ್ಯಾಯಾಲಯದ ತೀರ್ಪು 'ಮರಾಠರು ಶೂದ್ರರು, (ಪ್ರತಿವಾದಿಗಳು ವಾದಿಸಿದಂತೆ) ಕ್ಷತ್ರಿಯರು ಅಲ್ಲ' ಎಂದಾಯಿತು.

ಮರಾಠರಿಗೆ ಸಂಬಂಧಿಸಿದ ಮುಂದಿನ ಪ್ರಕರಣದ I.L.R.(೧೯೨೮) ೫೨ Bo ೪೯೭[೨]ನಲ್ಲಿ ವರದಿಯಾಗಿದೆ. ನ್ಯಾಯಾಲಯ ಹೀಗೆ ನಿರ್ಣಯಿಸಿತು :

"ಮುಂಬೈ ಪ್ರಾಂತ್ಯದಲ್ಲಿನ ಮರಾಠರಲ್ಲಿ ಮೂರು ವರ್ಗಗಳಿವೆ. (೧) ಒಂದು ಗುಂಪಿನ ಐದು ಕುಟುಂಬಗಳು; (೨) ಇನ್ನೊಂದು ಗುಂಪಿನ ೯೬ ಕುಟುಂಬಗಳು; (೩) ಉಳಿದವರು. ಇವರ ಪೈಕಿ ಮೊದಲಿನ ಎರಡು ವರ್ಗದವರು ಕಾನೂನುಬದ್ಧವಾಗಿ ಕ್ಷತ್ರಿಯರು".

ನಾವು ಉಲ್ಲೇಖಿಸಬಹುದಾದ ಕೊನೆಯ ಪ್ರಕರಣ I.L.R.(೧೯೨೭) ೫೨ Mad ೬೧.[೩] ಈ ಪ್ರಕರಣದಲ್ಲಿ ಇತ್ಯರ್ಥವಾಗಬೇಕಿದ್ದ ಪ್ರಶ್ನೆಯು ಮಥುರೆಯ ಯಾದವರು ಕ್ಷತ್ರಿಯರೇ ಎಂಬುದು. ಯಾದವರು ತಾವು ಕ್ಷತ್ರಿಯರೆಂದು ಹೇಳಿಕೊಳ್ಳುತ್ತಿದ್ದರು. ಆದರೆ ಮದ್ರಾಸ್ ಉಚ್ಚನ್ಯಾಯಾಲಯವು ಅವರ ಹಕ್ಕು–ಮಾಗಣಿಯನ್ನು ತಳ್ಳಿಹಾಕಿತು ಹಾಗೂ ಅವರು ಶೂದ್ರರೆಂದು ನಿರ್ಣಯಿಸಿತು.

ಯಾವನು ಕ್ಷತ್ರಿಯ, ಯಾವನು ಶೂದ್ರ ಎಂಬ ಪ್ರಶ್ನೆಯನ್ನು ಇತ್ಯರ್ಥಗೊಳಿಸುವ ಸಂಬಂಧದಲ್ಲಿನ ನ್ಯಾಯಾಲಯದ ನಿರ್ಣಯಗಳ ಗತಿಚಕ್ರ ಇಂತಿವೆ. ಅದರಿಂದ ಯಾವುದೇ ಪ್ರಶ್ನೆ ಇತ್ಯರ್ಥವಾಗುವುದಂತಿರಲಿ, ಇದ್ದ ಸ್ವಚ್ಛ ನೀರನ್ನೇ ಕಲಕಿದಂತಿದೆ. ಬಿಹಾರದ, ಉತ್ತರ ಪ್ರಾಂತಗಳ (ಈಗ ಉ.ಪದೇಶ.) ಹಾಗೂ ಬನಾರಸ ಕಾಯಸ್ಥರು ಶೂದ್ರರು! ಮದ್ರಾಸ್ ಉಚ್ಚನ್ಯಾಯಾಲದದ ಪ್ರಕಾರ, ಮರಾಠರು ಶೂದ್ರರು! ಆದರೆ ಮುಂಬೈ ಉಚ್ಚನ್ಯಾಯಾಲಯದ ಪ್ರಕಾರ, ೫ ಕುಟುಂಬಗಳ ಒಂದು ಗುಂಪಿನ, ೯೬ ಕುಟುಂಬಗಳ ಇನ್ನೊಂದು ಗುಂಪಿನ ಮರಾಠರು ಕ್ಷತ್ರಿಯರು, ಉಳಿದವರೆಲ್ಲ ಶೂದ್ರರು! ಕೃಷ್ಣನ ಕುಲವಾದ ಯಾದವ ಕುಲದವರು ಕ್ಷತ್ರಿಯರು ಎಂದು ಜನಜನಿತವಾಗಿದೆ. ಆದರೆ, ಮದ್ರಾಸ್ ಉಚ್ಚನ್ಯಾಯಾಲಯದ ಪ್ರಕಾರ, ಯಾದವರು ಶೂದ್ರರು!

---

೧. (೧೯೨೪) Maharaja of Kolhapur *versus* Sundaram Ayyar.

೨. Subbarao Hambirao Patil *versus* Radha Hambirao Patil.

೩. Mokka Kone *versus* Ammakutti.

ನಮ್ಮ ಉದ್ದೇಶಕ್ಕೆ ಹೆಚ್ಚು ಪ್ರಸ್ತುತವಿರುವುದು, ಈ ಪ್ರಕರಣಗಳಲ್ಲಿ ನ್ಯಾಯಾಲಯಗಳು ತಲುಪಿದ ನಿರ್ಣಯಗಳಿಗಿಂತಲೂ, ಅವು ತಮ್ಮ ನಿರ್ಣಯಕ್ಕೆ ಬರುವ ಪ್ರಕ್ರಿಯೆಯಲ್ಲಿ ಆಧಾರವಾಗಿಟ್ಟುಕೊಂಡ ವಿಶಿಷ್ಟ ಲಕ್ಷಣಗಳು. ನ್ಯಾಯಾಲಯಗಳು ಹಾಕಿಕೊಂಡ ಮಾರ್ಗದರ್ಶಿ ಸೂತ್ರಗಳಲ್ಲಿ ಈ ಕೆಳಗಿನವುಗಳನ್ನು ಗಮನಿಸಬಹುದಾಗಿದೆ :

(೧) I.L.R.೧೦ Cal–೬೮೮ರಲ್ಲಿ ನ್ಯಾಯಾಲಯದ ಅಂಗೀಕರಿಸಿದ ವಿಶಿಷ್ಟ ಲಕ್ಷಣಗಳೆಂದರೆ : (i) ದಾಸ್ ಎಂಬ ಅಡ್ಡ ಹೆಸರಿನ ಬಳಕೆ, (ii) ಜನಿವಾರ ಧರಿಸುವುದು, (iii) ಹೋಮ ನೆರವೇರಿಸುವ ಸಾಮರ್ಥ್ಯ, (iv) ಸೂತಕದ ಅವಧಿ, (v) ವಿವಾಹ ಬಾಹಿರ – ಸಂಜಾತ ಮಕ್ಕಳಿಗೆ ಆಸ್ತಿಯ ಬಾಧ್ಯಸ್ಥಿಕೆ ಅಥವಾ ಹಕ್ಕು ಇಲ್ಲದಿರುವಿಕೆ.

(೨) I.L.R.೬ ಪಾಟ್ನಾ ೬೦೬ರಲ್ಲಿ, ವಿಶಿಷ್ಟ ಲಕ್ಷಣವೆಂದು ಬಗೆಯಲ್ಪಟ್ಟುದೇನೆಂದರೆ 'ಸಾಮಾನ್ಯ ಪ್ರತೀತಿ' ಒಂದು ಸಮುದಾಯ ಸಾಮಾನ್ಯ ಪ್ರತೀತಿ ಅಥವಾ ವದಂತಿಯ ಪ್ರಕಾರ ಕ್ಷತ್ರಿಯವಾಗಿದ್ದರೆ ಅದನ್ನು ಕ್ಷತ್ರಿಯ ಸಮುದಾಯವೆಂದೇ ಬಗೆಯಬೇಕು.

(೩) ೪೮ ಮದ್ರಾಸ್ ೧ರಲ್ಲಿ ವಿವಿಧ ಅಂಶಗಳು ವಿಶಿಷ್ಟ ಲಕ್ಷಣಗಳೆಂದು ಅಂಗೀಕೃತವಾಗಿದ್ದವು : ಒಂದೆಂದರೆ, ಕುಲಪ್ರಜ್ಞೆ : ಎರಡನೆಯದೆಂದರೆ, ಉಪನಯನವಾಗಿರುವಿಕೆ (ಬರೀ ಜನಿವಾರ ಧರಿಸಿರುವುದಿಲ್ಲ); ಮೂರನೆಯದೆಂದರೆ, ಎಲ್ಲ ಬ್ರಾಹ್ಮಣೇತರರು (ಅವರು ತಾವು ಕ್ಷತ್ರಿಯರು ಅಥವಾ ವೈಶ್ಯರು ಎಂದು ಸಿದ್ಧಪಡಿಸದ ಹೊರತು) ಶೂದ್ರರೇ.

(೪) I.L.R.ಮುಂಬೈ ೪೯೭೭ರಲ್ಲಿ, ಇವುಗಳು ಒರೆಗಲ್ಲಾಗಿದ್ದವು ; (i) ಜಾತಿಪ್ರಜ್ಞೆ, (iii) ಅದರ ರೂಢಿಗತ ಪದ್ಧತಿಗಳು (ವಾಡಿಕೆಗಳು), ಹಾಗೂ (iii) ಉಳಿದ ಜಾತಿಗಳು ಈ ಜಾತಿಪ್ರಜ್ಞೆಯನ್ನು ಒಪ್ಪಿರುವಿಕೆ.

ಈ ವಿಷಯದ ಬಗೆಗೆ ಸ್ವಲ್ಪಂಶವಾದರೂ ಬಲ್ಲಂಥ ಯಾರೂ, ವಿವಿಧ ಕೋರ್ಟುಗಳು ಒಪ್ಪಿಕೊಂಡ ಮಾರ್ಗಸೂತ್ರಗಳು ಸರಿಯಾದುವೆಂದು ಒಪ್ಪಲಾರರು. ಸೂತಕಾವಧಿಯಂತಹ ವಿಶಿಷ್ಟ ಲಕ್ಷಣ ಅಪ್ರಸ್ತುತ ಹಾಗೂ ಪ್ರಶ್ನೆಯ ಇತ್ಯರ್ಥದ ಸಂಬಂಧದಲ್ಲಿ ಯಾವ ಬೆಲೆಯೂ ಇಲ್ಲದ್ದು. ಹೋಮ ನೆರವೇರಿಸುವ ಸಾಮರ್ಥ್ಯದ ಒರೆಗಲ್ಲು ಪ್ರಸ್ತುತವಾಗಬಹುದು, ಆದರೆ ಅದಕ್ಕೆ ಕಾನೂನು ಆಧಾರ ಅಥವಾ ಬಲವಿಲ್ಲ. ಅದು ಪರಿಣಾಮವನ್ನೇ ಕಾರಣವೆಂದು ಭ್ರಮಿಸುತ್ತದೆ. ಜಾತಿಪ್ರಜ್ಞೆ ನ್ಯಾಯವಾದ ಒರೆಗಲ್ಲೇನಲ್ಲ. ತನ್ನ ಅಳತೆಗೆ ಮೀರಿದ ಪರಿಸ್ಥಿತಿಯಿಂದಾಗಿ ಒಂದು ಕುಲ ಅವಶ್ಯಕ ಧರ್ಮಾಚರಣೆಗಳನ್ನು ಬಿಟ್ಟುಬಿಡುವುದರಿಂದ ಮೀರಿದ ಜಾತಿ ಪ್ರಜ್ಞೆ ಮಾಯವಾಗಿರಬಹುದು. ಉಪನಯನವಾಗಿರುವಿಕೆ ಮತ್ತೊಂದು ನೆಲೆಯಲ್ಲಿರುವ ಒರೆಗಲ್ಲು. ನ್ಯಾಯಾಲಯಗಳು ಅದನ್ನು ಸರಿಯಾದ ಶಬ್ದಗಳಲ್ಲೂ ಹೇಳಿಲ್ಲ. ಆದರೆ ಸರಿಯಾಗಿ ತಿಳಿದುಕೊಂಡಲ್ಲಿ, ಹಾಗೂ ಸರಿಯಾದ ಶಬ್ದಗಳಲ್ಲಿ ಹೇಳಿದ್ದಾದರೆ, ಉಪನಯನದ ಒರೆಗಲ್ಲು ಟೊಳ್ಳಾದುದೇನಲ್ಲ. ನ್ಯಾಯಾಲಯಗಳು, ಉಪನಯನಕ್ಕೆ ಸಂಬಂಧಿಸಿದಂತೆ, ಆ ಸಮಾಜದ ನ್ಯಾಯಿಕ ಸ್ಥಾನಮಾನಕ್ಕೂ ವಾಸ್ತವ ಸ್ಥಾನಮಾನಕ್ಕೂ ಭೇದ ಕಲ್ಪಿಸಿಲ್ಲ. ಆದ್ದರಿಂದ, ಯಾವುದು ವಾಸ್ತವವಾಗಿದೆಯೋ ಅದನ್ನೇ ನ್ಯಾಯಿಕ ಎಂಬ ತರ್ಕದ ಮೇಲೆ ಹೊರಟಿವೆ. ಉಪನಯನದ ಒರೆಗಲ್ಲಿನಿಂದ ನೋಡುವಾಗ ಹೀಗೆ ಎಡವಿದ್ದುದೇ ಅಸಂಬದ್ಧತೆಗಳಿಗೆ ಕಾರಣವಾಗಿದೆ; ಉದಾ : ಒಂದೇ ಸಮಾಜ ಒಂದು ಪ್ರದೇಶದಲ್ಲಿ ಒಂದು ಸ್ಥಾನಮಾನ ಪಡೆದಿದ್ದು, ಇನ್ನೊಂದೆಡೆ ಬೇರೆಯದೇ ಆದ ಸ್ಥಾನಮಾನ ಪಡೆದಿರುವುದು; ಅಥವಾ, ಯಾವುದೇ ಸೋಗುಹಾಕುವ ಸಮಾಜಕ್ಕೆ ಜನಿವಾರ ಹಾಕಿಕೊಳ್ಳಲು ಬಿಡುವುದು ಹಾಗೂ ಸೋಗುಗಾರಿಕೆಯನ್ನು ಕೆಲವೊಂದು ಅವಧಿಯವರೆಗೆ ಮುಂದುವರಿಸಿದ ನಂತರ ಅದಕ್ಕೆ ಪಟ್ಟಭದ್ರ ಹಕ್ಕನ್ನು ಪಡೆಯಲು ಬಿಡುವುದು; ಅಥವಾ ಅದಕ್ಕೆ ತದ್ವಿರುದ್ಧವಾಗಿ,

ಒಂದು ಸಮಾಜ ವಾಸ್ತವದಲ್ಲಿ ಜನಿವಾರವನ್ನು ಧರಿಸುತ್ತಿಲ್ಲವಾದ್ದರಿಂದ ಅದಕ್ಕೆ ಜನಿವಾರ ಧರಿಸುವ ಹಕ್ಕು ಇಲ್ಲ ಎಂದು ಅದನ್ನು ಶಿಕ್ಷಿಸುವುದು. ನಿಜವಾದ ಒರೆಗಲ್ಲಾಗಿರುವುದು ಪವಿತ್ರ ದಾರವನ್ನು ಧರಿಸುವುದು ಅಲ್ಲ, ಆದರೆ ಅದನ್ನು ಧರಿಸುವ ಹಕ್ಕು, ಅದರ ಸರಿಯಾದ ಅರ್ಥದಲ್ಲಿ ನಾವು ಅದನ್ನು ತಿಳಿದುಕೊಂಡಲ್ಲಿ, ಉಪನಯನದ ಹಕ್ಕೇ ನಿಜವಾದ ಒರೆಗಲ್ಲು, ಹಾಗೂ ಒಬ್ಬ ವ್ಯಕ್ತಿ ಶೂದ್ರನೋ, ಕ್ಷತ್ರಿಯನೋ ಎಂದು ಅವನ ಸ್ಥಾನಮಾನವನ್ನು ನಿರ್ಧರಿಸುವುದಕ್ಕೆ ಏಕಮೇವ ಪ್ರಾಮಾಣ್ಯ ಲಕ್ಷಣ ಎಂದರೆ ಉಪನಯನದ ಹಕ್ಕು ಎಂದು ನಾವು ಪ್ರಶ್ನಾತೀತವಾಗಿ ಹೇಳಬಹುದು.

## V

ಎರಡನೆಯ ಆಕ್ಷೇಪಣೆಯು ಹುರುಳಿಲ್ಲದುದು. ಆಕ್ಷೇಪಣೆಯ ಗ್ರಹಿಕೆಯಂತೆ, ಆರ್ಯ ಸಮಾಜವು ಮುಂಚಿನಿಂದಲೂ ತನ್ನ ವಿವಿಧ ವರ್ಗಗಳನ್ನು ಉಪನಯನದ ಸಂಬಂಧದಲ್ಲಿ ಬೇರೆ ಬೇರೆಯಾಗಿಯೇ ನೋಡುತ್ತಿತ್ತು ಅಥವಾ ನಡೆಸಿಕೊಳ್ಳುತ್ತಿತ್ತು ಎಂದು ಗ್ರಹಿಸುವುದು, ನನ್ನ ಅನಿಸಿಕೆಯ ಮಟ್ಟಿಗೆ ತೀರ ಅಸ್ವಾಭಾವಿಕ ಗ್ರಹಿಕೆಯಾದೀತು. ಆದಿಕಾಲದ ಸಮಾಜ ತಾರತಮ್ಯದೊಂದಿಗೆ ಶುರು ಮಾಡುವುದಿಲ್ಲ. ಅದು ಏಕರೂಪತೆಯಲ್ಲಿ ಪ್ರಾರಂಭವಾಗಿ ವೈವಿಧ್ಯಮಯತೆಯಲ್ಲಿ ಕೊನೆಗಾಣುತ್ತದೆ. ಆದ್ದರಿಂದ ಉಪನಯನದ ವಿಷಯದಲ್ಲಿ ಪ್ರಾಚೀನ ಆರ್ಯ ಸಮಾಜವು ತನ್ನ ಎಲ್ಲ ವರ್ಗಗಳನ್ನು ಒಂದೇ ನೆಲೆಯಲ್ಲಿ (ಸಮಾನತೆಯ ತಳಹದಿಯ ಮೇಲೆ) ಕಾಣುತ್ತಿತ್ತು ಎಂದು ತಿಳಿಯುವುದೇ ಸಹಜವೆನಿಸೀತು. ಇನ್ನೊಂದು ಪಕ್ಷದ ಪರವಾಗಿ ಹೀಗೂ ವಾದಿಸಲು ಸಾಧ್ಯವಿದೆ : ಏನೆಂದರೆ, ಏಕರೂಪಕ್ಕೆ ಪರವಾದ ಮೂಲ ಒಲವು ಸಾರ್ವತ್ರಿಕವಾಗಿರುತ್ತದೆ ಎಂದು ಒಪ್ಪಲೇಬೇಕಾಗಿದ್ದಿಲ್ಲ ; ಪ್ರಾಚೀನ ಆರ್ಯ ಸಮಾಜದಲ್ಲಿ ಶೂದ್ರರೂ ಸ್ತ್ರೀಯರೂ ಉಪನಯನ ಕರ್ಮದಿಂದ ಹೊರಗಿಡಲ್ಪಟ್ಟಿದ್ದರೆಂಬುದೂ ವಾಸ್ತವ ಸಂಗತಿಯಾಗಿರಲು ಸಾಧ್ಯವಿದೆ. ಸುದೈವದಿಂದ, ತರ್ಕ ನನ್ನನ್ನೇ ಬೆಂಬಲಿಸುತ್ತದೆಯೆಂದು ನನಗೆ ಖಾತ್ರಿ ಇದ್ದಾಗಲೂ, ನನಗೆ ಬರೀ ತರ್ಕದ ಮೇಲೆ ಅವಲಂಬಿಸುವುದು ಅನಿವಾರ್ಯವೇನಲ್ಲ. ಯಾಕೆಂದರೆ, ಶೂದ್ರರೂ ಹೆಂಗಳೆಯರೂ ಒಂದು ಕಾಲಕ್ಕೆ ಪವಿತ್ರದಾರ (ಉಪವೀತ)ವನ್ನು ಧರಿಸುವ ಹಕ್ಕನ್ನು ಪಡೆದವರಾಗಿದ್ದರು ಎಂದು ತೋರಿಸಲು ನೇರ ಹಾಗೂ ಸಾಂದರ್ಭಿಕ ಪುರಾವೆಗಳಿವೆ.

ಪ್ರಾಚೀನ ಆರ್ಯಸಮಾಜವು ಉಪನಯನ ಎಲ್ಲರಿಗೂ ಅವಶ್ಯ ಎಂದು ಭಾವಿಸಿದ್ದುದು ಈ ಕೆಳಗಣ ನಿಜಾಂಶಗಳನ್ನು ಗಮನದಲ್ಲಿಟ್ಟುಕೊಂಡರೆ ಸ್ವಯಂವೇದ್ಯವಾಗುತ್ತದೆ.

ಉಪನಯನವನ್ನು ಮೂಕರಿಗೂ, ಕಿವುಡರಿಗೂ, ಮಂದಬುದ್ಧಿಯವರಿಗೂ ಹಾಗೂ ನಪುಂಸಕರಿಗೂ ಮಾಡಲು ಬರುತ್ತಿತ್ತು. ಮೂಕರಿಗೆ, ಕಿವುಡರಿಗೆ ಹಾಗೂ ಮಂದಬುದ್ಧಿಯವರಿಗೆ ಉಪನಯನ ಮಾಡುವುದಾದರೆ ಅದಕ್ಕೊಂದು ವಿಶಿಷ್ಟ ವಿಧಾನವಿತ್ತು. ಉಳಿದವರ ಉಪನಯನಕ್ಕಿಂತ ಅವರದು ಯಾವ ಪ್ರಮುಖ ಅಂಶಗಳಲ್ಲಿ ಭಿನ್ನವಾಗಿತ್ತೆಂದರೆ, ಸಮಿತ್ತನ್ನು (ಪವಿತ್ರಾಗ್ನಿಗರ್ಪಿಸುವ ಉರುವಲು) ಅರ್ಪಿಸುವುದು, ಕಲ್ಲಿನ ಮೇಲೆ ಹೆಜ್ಜೆ ಇಡುವುದು, ಬಟ್ಟೆ ಧರಿಸುವುದು, ಮೇಖಲೆ (ಉಡದಾರ, ಸೊಂಟಪಟ್ಟಿ)ಯನ್ನು ಕಟ್ಟಿಕೊಳ್ಳುವುದು, ಕೃಷ್ಣಾಜಿನ ಹಾಗೂ ದಂಡವನ್ನು ಕೊಡುವುದು – ಇವೆಲ್ಲ ಮೌನವಾಗಿ ಮಾಡಲ್ಪಡುತ್ತವೆ, ಹಾಗೂ ಬಾಲಕ ತನ್ನ ಹೆಸರನ್ನು ಹೇಳುವುದಿಲ್ಲ. ಆಚಾರ್ಯನೇ ಎಲ್ಲ ಮಂತ್ರಗಳನ್ನು ಮೆಲುದನಿಯಲ್ಲಿ ಗುನುಗಿಸುತ್ತಾ ಹವಿಸ್ಸು ಮತ್ತು ತುಪ್ಪವನ್ನು ಅರ್ಪಿಸುತ್ತಾನೆ. ನಪುಂಸಕರು, ಕುರುಡರು, ಹುಚ್ಚರು, ಅಪಸ್ಮಾರ ಮತ್ತು ಕುಷ್ಠರೋಗಿಗಳಿಗೂ ಇದೇ ವಿಧಾನವು ಅನುಸರಿಸಲ್ಪಡುತ್ತಿತ್ತು.

ಆರು ಅನುಲೋಮ ಜಾತಿಗಳವರೂ ಉಪನಯನಕ್ಕೆ ಅರ್ಹರೆಂದು ಗಣಿಸಲಾಗಿದ್ದಿತು. ಇದು ಕ್ಷತ್ರಿಯರ, ವೈಶ್ಯರ ಹಾಗೂ ರಥಕಾರ, ಅಂಬಷ್ಟ– ಇವೇ ಮುಂತಾದ ಮಿಶ್ರ ಜಾತಿಗಳ ಉಪನಯನ ಸಂಬಂಧದಲ್ಲಿನ ನಿಯಮಗಳಿಂದ[೧] ಸ್ಪಷ್ಟವಾಗುತ್ತದೆ.

ಪತಿತ ಸಾವಿತ್ರಿಕರಿಗೂ ಉಪನಯನವು ಅನುಮತಿಸಲ್ಪಟ್ಟಿತ್ತು. ಬ್ರಾಹ್ಮಣ ಬಾಲಕನ ಉಪನಯನ ಕರ್ಮಕ್ಕೆ ಸರಿಯಾದ ವಯಸ್ಸೆಂದರೆ, ಎಂಟನೆಯ ವರುಷ; ಕ್ಷತ್ರಿಯ ಬಾಲಕನಾದರೆ ೧೧ನೆಯ ವರುಷ, ವೈಶ್ಯನಾದರೆ ೧೨ನೆಯ ವರುಷ. ಆದರೆ ಇದರಲ್ಲಿ ಸ್ವಲ್ಪಮಟ್ಟಿನ ಸಡಿಲಿಕೆ ಇದ್ದಿತು. ಅಂದರೆ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಬಾಲಕರಿಗೆ, ಅನುಕ್ರಮವಾಗಿ, ೧೬, ೨೨ ಹಾಗೂ ೨೪ನೇ ವಯಸ್ಸಿನ ತನಕ, ಉಪನಯನದ ಸಮಯ ಮೀರಿತೆಂದು ಎಣಿಸಲಾಗುತ್ತಿರಲಿಲ್ಲ. ಈ ವಯಸ್ಸುಗಳು ಉಪನಯನವಿಲ್ಲದೆ ದಾಟಿದುವೆಂದರೆ ಆ ವ್ಯಕ್ತಿ 'ಸವಿತ್ರಿ' (ಪವಿತ್ರ ಗಾಯತ್ರೀ ಮಂತ್ರ)ವನ್ನು ಕಲಿಯಲು ಅನರ್ಹನೆಂದೇ ತಿಳಿಯಲಾಗುತ್ತಿದ್ದುತು. ಇಂಥ ವ್ಯಕ್ತಿಗಳು ಆಮೇಲೆ ಪತಿತ ಸವಿತ್ರಿಕ ಅಥವಾ ಸವಿತ್ರಿಪತಿತ ಎಂದು ಕರೆಯಲ್ಪಡುತ್ತಿದ್ದರು. ನಿಯಮಗಳ ಕಟ್ಟುನಿಟ್ಟಾದ ಅರ್ಥವಿವರಣೆಯ ಪ್ರಕಾರ ಅಂಥವರಿಗೆ ಉಪನಯನ ಕರ್ಮ ಮಾಡಲೇಕೂಡದು, ಅವರಿಗೆ ವೇದ ಹೇಳಿಕೊಡಕೂಡದು, ಹಾಗೂ ಅವರು ನೆರವೇರಿಸಿದ ಯಜ್ಞಯಾಗಾದಿಗಳಲ್ಲಿ ಯಾರೂ ಪುರೋಹಿತರೆಂದು ಕಾರ್ಯ ನಿರ್ವಹಿಸಕೂಡದು, ಅಲ್ಲದೆ ಅವರೊಂದಿಗೆ ಯಾವ ತೆರನಾದ ಸಾಮಾಜಿಕ ವ್ಯವಹಾರ ಸಂಬಂಧವನ್ನೂ ಇಟ್ಟುಕೊಳ್ಳಕೂಡದು (ಅಂದರೆ ಅವರೊಂದಿಗೆ ಮದುವೆ ಆಗುವ ಹಾಗಿಲ್ಲ). ಆದರೆ, ಅಂಥವರ ವಿಷಯದಲ್ಲೂ, ಕೆಲವೊಂದು ಪ್ರಾಯಶ್ಚಿತ್ತಗಳಿಗೊಳಪಟ್ಟರೆ, ನಿಯಮಗಳನ್ನು[೨] ಸಡಿಲುಗೊಳಿಸುವುದಕ್ಕೆ ಅವಕಾಶವಿತ್ತು.

ಉಪನಯನವು ಬ್ರಹ್ಮಘ್ನರ ವಿಷಯದಲ್ಲಿ ಅನುಮತಿಸಲ್ಪಟ್ಟಿತ್ತು. ಬ್ರಹ್ಮಘ್ನನೆಂದರೆ ಯಾರ ಉಪನಯನ ಕರ್ಮವನ್ನು ಆತನ ತಂದೆಯಾಗಲೀ ಮುತ್ತಜ್ಜನಾಗಲೀ ನೆರವೇರಿಸಿಲ್ಲವೋ ಅಂಥವನು. ಮೂಲದಲ್ಲಿ, ನಿಯಮ[೩]ವೇನಾಗಿತ್ತೆಂದರೆ, ಯಾವ ವ್ಯಕ್ತಿಯ ತಂದೆ, ಅಜ್ಜ, ಮುತ್ತಜ್ಜನಿಗೆ ಉಪನಯನ ಕರ್ಮ ಆಗಿರಲಿಲ್ಲವೋ

೧. Baud.Gr.Sutra (II.೮) Kane, *History of Dharmashastra II* (೧),p. ೨೯೯

೨. ದರ್ಮಶಾಸ್ತ್ರ (I.೧ ಸಾಲು ೨೮–೩೧) ವಿಧಿಸುವುದೇನೆಂದರೆ, ೧೬ನೆಯ ಅಥವಾ ೨೪ನೆಯ ವಯಸ್ಸು ದಾಟಿದ ನಂತರ, ಉಪಯನಯವಾಗಲಿರುವ ವ್ಯಕ್ತಿ ಉಪನಯನವಾಗಿ ಮೂರು ವೇದಗಳನ್ನು ಅಧ್ಯಯನ ಮಾಡಬೇಕೆಂದಿರುವವರಂತೆಯೇ, ಎರಡು ತಿಂಗಳ ವಿದ್ಯಾರ್ಥಿ ದೆಸೆಯ ನಿಯಮಗಳನ್ನು ಅನುಸರಿಸಬೇಕು, ಅವರಂತೆ ಭಿಕ್ಷೆ ಬೇಡುವುದು ಮುಂತಾದ, ಇತರ ವ್ರತಗಳನ್ನು ಪಾಲಿಸಿಯಾದ ಮೇಲೆ ಅವನಿಗೆ ವೇದ ಕಲಿಸಲ್ಪಡಬೇಕು. ಇದು ಸ್ವಲ್ಪ ಹಗುರವಾದ ಪ್ರಾಯಶ್ಚಿತ್ತ. ಆದರೆ ಉಳಿದವರು ಇದಕ್ಕಿಂತ ಕಠಿಣ ಪ್ರಾಯಶ್ಚಿತ್ತವನ್ನು ವಿಧಿಸುವರು. Vas.Dh.S.XI, ೭೬ ಹಾಗೂ Vaik.Smarta.,೧೧.೩ ವಿಧಿಸುವುದೇನೆಂದರೆ ಪತಿತ ಸವಿತ್ರಿಕನೆಂದಾದವನು ಒಂದೋ ಉದ್ಧಾಲಕ ವ್ರತವನ್ನಾಚರಿಸಬೇಕು ಇಲ್ಲವೇ ಅಶ್ವಮೇಧ ಯಾಗವನ್ನು ಆಚರಿಸುವವನೊಂದಿಗೆ ಸ್ನಾನಮಾಡಬೇಕು ಇಲ್ಲವೇ ವ್ರಾತ್ಯ ಸ್ತೋಮಯಾಗವನ್ನು ನೆರವೇರಿಸಬೇಕು–ಕಾಣೆಯವರ *ಅದೇ ಗ್ರಂಥ ನೋಡಿ* (ಪು.೩೭೭)

೩. Ap.Dh.S., I.೧.I.೩೨–೨.೪.ಇಂಥ ಸಂದರ್ಭಗಳಲ್ಲಿ ವಿಧಿಸಲ್ಪಡುವ ಪ್ರಾಯಶ್ಚಿತ್ತವೇನಾಗಿದ್ದತೆಂದರೆ, ಆ ವ್ಯಕ್ತಿಯು ವಿದ್ಯಾರ್ಥಿ ದೆಸೆಯ ನಿಯಮಗಳನ್ನು (ಉಪನಯನ ಕರ್ಮಕ್ಕೊಳಪಡದ) ಪ್ರತಿ ತಲೆಮಾರಿಗೆ ಒಂದು ವರ್ಷದಂತೆ ಆಚರಿಸುವುದಾಗಿತ್ತು. ಆಮೇಲೆ ಉಪನಯನ. ಅನಂತರ ಅವರು ಮೂರು ಅಥವಾ ಒಂದು ಸಲ ಸ್ನಾನ ಮಾಡುವಾಗ ಪ್ರತಿದಿವಸ, ಒಂದು ವರ್ಷದ ಅವಧಿಯವರೆಗೆ, ಕೆಲವೊಂದು ಮಂತ್ರಗಳನ್ನು 'ಯದ್' ಅಂತಿ ಯಚ್ಚಾದೃಕೆ' (ಋಗ್ವೇದ, IX.೬೭.೨೧–೨೭) ಎಂದು ಮೊದಲಾಗುವ ಏಳು ಪವಮಾನ ಪದ್ಯಗಳನ್ನು 'ಯಜುಸ್ ಪವಿತ್ರ' (ತೈ.ಸಂ.,೨.೧೧– ಋ.X.೧೭.೧೦) 'ಸಮಪವಿತ್ರ' ಮತ್ತು ಅಂಗಿರಸ (ಋ.IV.೪೦.೫)ಎಂದು ಕರೆಯಲ್ಪಡುವ ಮಂತ್ರಗಳನ್ನು ಪಠಿಸುತ್ತ ಸ್ನಾನಮಾಡಬೇಕು. ಇಲ್ಲವೇ ಕೇವಲ ವ್ಯಾಹೃತಿಗಳೊಂದಿಗೆ ನೀರು ಹುಯ್ದುಕೊಳ್ಳಬೇಕು. ಇದೆಲ್ಲವನ್ನು ಆತ ಮಾಡಿಯಾದಮೇಲೆ ಆತನಿಗೆ ವೇದ ಬೋಧಿಸಲ್ಪಡಬೇಕು. (ಕಾಣೆಯವರ ಧರ್ಮಶಾಸ್ತ್ರದ ಇತಿಹಾಸ ನೋಡಿ.ಪು.೩೭೮).

ಅಂಥವರು (ಅಂದರೆ, ಮೂರು ತಲೆಮಾರುಗಳೂ) ಬ್ರಹ್ಮನನ್ನು (ಪವಿತ್ರ ಜ್ಞಾನವನ್ನು) ಹತ್ಯೆ ಮಾಡಿದವರು ಎಂದು ಕರೆಯಲ್ಪಡುತ್ತಿದ್ದರು. ಜನರು ಅವರೊಂದಿಗೆ ಯಾವ ಸಾಮಾಜಿಕ ಸಂಬಂಧ ಇಟ್ಟುಕೊಳ್ಳಕೂಡದು, ಅವರ ಆಹಾರ ಸ್ವೀಕರಿಸಬಾರದು ಅಥವಾ ಅವರೊಂದಿಗೆ ವೈವಾಹಿಕ ಸಂಬಂಧ ಮಾಡಕೂಡದು. ಆದರೆ ಅಂಥವರ ಸಂಬಂಧದಲ್ಲಿಯೂ, ಅವರು ವಿಧಿಸಿದ ಪ್ರಾಯಶ್ಚಿತ್ತ ಮಾಡಿಕೊಂಡರೆ, ನಿಯಮ ಸಡಿಲಿಸಲಾಗುತ್ತಿತ್ತು ಹಾಗೂ ಅವರು ಅಪೇಕ್ಷೆಪಟ್ಟರೆ, ಅವರ ಉಪನಯನಕ್ಕೆ ಅನುಮತಿಸಿಗುತ್ತಿತ್ತು.

ಇನ್ನೂ ಹೆಚ್ಚಿನ ಒಂದು ಸಡಿಲಿಕೆಯೆಂದರೆ, ಯಾವುದೇ ವ್ಯಕ್ತಿಯ ಮುತ್ತಾತನ[೧] ತಲೆಮಾರಿನಿಂದಲೂ ಉಪನಯನವಾಗಿರದಿದ್ದರೆ, ಅಂಥವನ ಉಪನಯನ ಕೂಡ ಮಾಡಲಾಗುತ್ತಿತ್ತು. ಅವರು ಅಪೇಕ್ಷಿಸಿದಲ್ಲಿ, ಒಂದು ಕರಾರಿನ ಮೇಲೆ, ಅವರ ಉಪನಯನ ಕರ್ಮ ಅನುಮತಿಸಲ್ಪಡುತ್ತಿತ್ತು : ಅದೆಂದರೆ, ೧೨ ವರ್ಷದ ವಿದ್ಯಾರ್ಥಿದೆಸೆ ಹಾಗೂ ದಿನವೂ ಪವಮಾನ ಮತ್ತಿತರ ಮಂತ್ರಗಳ ಉಚ್ಚಾರದೊಂದಿಗೆ ಸ್ನಾನ ಮಾಡಬೇಕೆಂಬ ಪ್ರಾಯಶ್ಚಿತ್ತ. ಉಪನಯನವಾದ ಮೇಲೆ, ಆತನಿಗೆ ಗೃಹಸ್ಥನ ಕರ್ತವ್ಯಗಳಾವುವು ಎಂಬುದು ಹೇಳಿಕೊಡಲ್ಪಡುತ್ತಿತ್ತು; ಹಾಗೂ, ಆತನಿಗೆ ವೇದವನ್ನು ಕಲಿಸಲಿಕ್ಕಾಗದಿದ್ದರೂ, ಆತನ ಮಗನು ಆ ಸಂಸ್ಕಾರವನ್ನು, ಪತಿತ ಸಾವಿತ್ರಿಕನಂತೆ, ಪಡೆಯಬಹುದಿತ್ತು. ಅಂದರೆ, ಆತನ ಮಗನಾದರೂ ಇತರ ಆರ್ಯರಂತೆ ತಾನೂ ಒಬ್ಬ ಆರ್ಯನಾಗಲಿಕ್ಕಾಗುತ್ತಿತ್ತು.

ವ್ರಾತ್ಯರಿಗೂ ಉಪನಯನ ಕರ್ಮ ಪೂರೈಸಲು ಅನುಮತಿ ಇತ್ತು. ಈ ವ್ರಾತ್ಯರೆಂದರೆ ಯಾರು? – ಅವರೇನು ಮೂರು ತಲೆಮಾರುಗಳಿಗೆ ಮೇಲ್ಪಟ್ಟು ಉಪನಯನ ಸಂಸ್ಕಾರ ಆಗದವರಾಗಿದ್ದರೋ ಅಥವಾ ಯಾರನ್ನು ಆರ್ಯರು ಆರ್ಯರನ್ನಾಗಿ ಪರಿವರ್ತಿಸಬೇಕೆಂದಿದ್ದರೋ ಅಂಥ, ಆರ್ಯಸಮೂಹಕ್ಕೆ ಹೊರತಾದ, ಆರ್ಯೇತರರಾಗಿದ್ದರೋ, ಹೇಳುವುದು ಕಷ್ಟ. ಆ ಪದದ ವ್ಯಾಪ್ತಿಯಲ್ಲಿ ಬಹುಶಃ ಇವೆರಡೂ ನಮೂನೆಯ ಜನಗಳು ಸೇರ್ಪಡೆಯಾಗುತ್ತಿದ್ದರು ಎನ್ನಿಸುತ್ತದೆ. ಅದೇನೇ ಇದ್ದರೂ ವ್ರಾತ್ಯರಿಗೆ, ಒಂದು ವೇಳೆ ಅವರು ವ್ರಾತ್ಯಸ್ತೋಮಗಳನ್ನು ಮಾಡಿದರೆ, ಉಪನಯನ ಸಂಸ್ಕಾರ ಹೊಂದಲು ಮುಕ್ತಾವಕಾಶವಿತ್ತು. ವ್ರಾತ್ಯರೆಂದರೆ ವ್ರಾತ್ಯರ ಜೀವನ ಮಾಡುತ್ತಿದ್ದವರು, ಮೊದಲೇ ಅಧಮರಾಗಿದ್ದು, ವಿದ್ಯಾರ್ಥಿದೆಸೆಯ ಬ್ರಹ್ಮಚರ್ಯ ಪಾಲಿಸದೆ ಅಥವಾ ನೆಲವನ್ನು ಉಳುಮೆ ಮಾಡದೆ, ಅಥವಾ ಯಾವುದೊಂದು ವ್ಯಾಪಾರ – ಉದ್ಯೋಗ ಮಾಡದೆ, ಇನ್ನೂ ಅಧಮತರ ಮಟ್ಟಕ್ಕೆ ಇಳಿಸಲ್ಪಟ್ಟವರು ಎಂದರ್ಥ. ವ್ರಾತ್ಯಸ್ತೋಮಗಳು ನಾಲ್ಕು ತೆರನಾಗಿದ್ದವು. ಮೊದಲನೆಯ ತೆರನಾದದ್ದು ಎಲ್ಲ ವ್ರಾತ್ಯರಿಗಾಗಿ ಇತ್ತು; ಎರಡನೆಯದು, ಯಾರು 'ಅಭಿಶಸ್ತ' (ದೋಷಾರೋಪಣೆಗೊಳಗಾದವ)ರಾಗಿದ್ದಾರೆಯೋ, ದುಷ್ಟರು ಅಥವಾ ಘೋರ ಪಾಪಕೃತ್ಯ ಎಸಗಿದವರಾಗಿದ್ದು ಖಂಡನೆಗೊಳಗಾಗಿ ವ್ರಾತ್ಯರ ಜೀವನ ಮಾಡುತ್ತಿದ್ದಾರೆಯೋ ಅಂಥವರಿಗಾಗಿ; ಮೂರನೆಯದು, ವಯಸ್ಸಿನಲ್ಲಿ ಅತಿ ಚಿಕ್ಕವರಾಗಿದ್ದು ವ್ರಾತ್ಯಜೀವನ ನಡೆಸುತ್ತಿದ್ದವರಿಗಾಗಿ; ನಾಲ್ಕನೆಯದು, ಮುಪ್ಪಾಗಿದ್ದರೂ ವ್ರಾತ್ಯಜೀವನ ನಡೆಸುವಂಥವರಿಗಾಗಿ, ನಾಲ್ಕು ವ್ರಾತ್ಯಸ್ತೋಮಗಳಲ್ಲಿ ಪ್ರತಿಯೊಂದರಲ್ಲೂ ಷೋಡಶಸ್ತೋಮ[೨] ವನ್ನಾಚರಿಸುವುದರಿಂದಲೇ ಅವರು ಉಚ್ಚಸ್ಥಾನವನ್ನು ಪಡೆಯುವುದು. ಷೋಡಶಸ್ತೋಮವು

೧. *Ap.Dh.S.* I. ೧.೨. ೫–೧೦

೨. ಕಾಣೆಯವರ ಅದೇ ಗ್ರಂಥ (ಪು.೩೪೫)ವು ತಾಂಡ್ಯ ಬ್ರಾಹ್ಮಣ (೧೭.೧.೧)ದಲ್ಲಿ ಬರುವ ಕಥೆಯ ಉಲ್ಲೇಖ ಮಾಡುತ್ತದೆ. ಈ ಕಥೆ ಏನೆಂದರೆ, ದೇವತೆಗಳೊಮ್ಮೆ ಸ್ವರ್ಗಲೋಕಕ್ಕೆ ಹೋದಾಗ ಅವರ ಮೇಲೆ ಅವಲಂಬಿಸಿದವರಲ್ಲಿ ಕೆಲವರು – ವ್ರಾತ್ಯಜೀವನವನ್ನು ನಡೆಸುತ್ತಿದ್ದವರು – ಹಿಂದೆ ಭೂಲೋಕದಲ್ಲಿ ಉಳಿದುಕೊಂಡರು. ಆಮೇಲೆ ದೇವತೆಗಳ ಅನುಗ್ರಹದಿಂದಾಗಿ, ಮರುತರ ಕೈಯಲ್ಲಿ ಷೋಡಶಸ್ತೋಮ (ಹದಿನಾರು ಸ್ತೋತ್ರಗಳುಳ್ಳದ್ದು)ವನ್ನು ಹಾಗೂ ಅದರ (ಅನುಷ್ಟುಬ್) ಛಂದಸ್ಸನ್ನು ಪಡೆದು ಆ ಅವಲಂಬಿತರು ಸ್ವರ್ಗಲೋಕಕ್ಕೆ ಹೋದರು.

ಇವರ ಪಾಪಕಳಂಕವನ್ನು ತೊಡೆದುಹಾಕುವ ಶಕ್ತಿಯುಳ್ಳದ್ದೆಂದು ನಂಬಲಾಗುತ್ತಿತ್ತು. ವ್ರಾತಸ್ತೋಮ ಯಾಗವನ್ನು ಆರ್ಯರೊಂದಿಗೆ ಸಾಮಾಜಿಕ ವ್ಯವಹಾರ ಸಂಬಂಧ ಹೊಂದಲು ಅರ್ಹರಾಗುತ್ತಿದ್ದರು. ಅಲ್ಲದೆ ಉಪನಯನ ಸಂಸ್ಕಾರಕ್ಕೆ ಅರ್ಹರಾಗುತ್ತಿದ್ದರು. ಆಮೇಲೆ ಅವರಿಗೆ ವೇದಾಧ್ಯಯನದ ಅಧಿಕಾರ ಪ್ರಾಪ್ತವಾಗುತ್ತಿತ್ತು.

ವ್ರಾತ್ಯತಾಶುದ್ಧಿ ಸಂಗ್ರಹ[೧]ದಲ್ಲಿ ವ್ರಾತ್ಯರಿಗೆ ಹನ್ನೆರಡು ತಲೆಮಾರುಗಳ ನಂತರವೂ ಅವರ ಶುದ್ಧೀಕರಣಕ್ಕೆ ಅವಕಾಶ ಮಾಡಿಕೊಡಲಾಗಿದೆ. ಆದರೆ ಅದಕ್ಕೆ ತಕ್ಕುದಾದ ಪ್ರಾಯಶ್ಚಿತ್ತಗಳನ್ನು ಮಾಡಿಕೊಳ್ಳಬೇಕಷ್ಟೆ. ಉಪನಯನದ ಬಗೆಗೆ ಎಷ್ಟೊಂದು ಉದಾತ್ತ ಕಲ್ಪನೆ ಇದ್ದಿತೆಂದರೆ ಬೌಧಾಯನಸೂತ್ರದಲ್ಲಿ (ii,೧೦) ಅಶ್ವತ್ಥ ವೃಕ್ಷಕ್ಕೂ ಉಪನಯನ ಮಾಡುವುದಕ್ಕೆ ಅವಕಾಶ ಕಲ್ಪಿಸಲ್ಪಟ್ಟಿದೆ.

ಇವೆಲ್ಲ ಸಂಗತಿಗಳ ಬೆಳಕಿನಲ್ಲಿ ನೋಡಿದಾಗ, ಆರ್ಯ ಸಮಾಜವು ಮುಂಚಿನಿಂದಲೂ ಹೆಂಗಳೆಯರನ್ನು ಹಾಗೂ ಶೂದ್ರರನ್ನು ಉಪನಯನ ಸಂಸ್ಕಾರದಿಂದ ಬಹಿಷ್ಕೃತರನ್ನಾಗಿ ಮಾಡಿದ್ದುದನ್ನು ನಂಬುವುದು ಕಷ್ಟ. ಈ ಸಂಬಂಧದಲ್ಲಿ ಸಂಸ್ಕೃತಿ ಹಾಗೂ ಧರ್ಮದ ವಿಷಯದಲ್ಲಿ ಇಂಡೋ–ಇರಾನಿಯನ್ನರಲ್ಲಿ ಪ್ರಚಲಿತವಿದ್ದ ರಿವಾಜುಗಳ ಕಡೆಗೆ ಗಮನಹರಿಸಬಹುದಾಗಿದೆ. ಇಂಡೋ–ಇರಾನಿಯನ್ನರಲ್ಲಿ ಹೆಣ್ಣು ಗಂಡುಗಳಿಗಷ್ಟೇ ಅಲ್ಲ, ಎಲ್ಲ ವರ್ಗದ ಸ್ತ್ರೀ ಹಾಗೂ ಪುರುಷರಿಗೆ ಪವಿತ್ರದಾರವನ್ನು ತೊಡಿಸಲಾಗುತ್ತಿತ್ತು. ಆದರೆ, ಇಂಡೋ–ಆರ್ಯನ್ನರಲ್ಲಿ ಈ ಪದ್ಧತಿ ಬೇರೆ ಏಕಾಗಿತ್ತೆಂಬುದನ್ನು ಪ್ರತಿಪಕ್ಷಗಳು ಸಿದ್ಧಮಾಡಿ ತೋರಿಸಬೇಕು.

ಕೇವಲ ಸಾಂದರ್ಭಿಕ ಪುರಾವೆಯನ್ನು ಅವಲಂಬಿಸುವುದು ಅವಶ್ಯವೇನಲ್ಲ. ಹೆಂಗಳೆಯರಿಗೂ ಶೂದ್ರರಿಗೂ ಉಪನಯನ ಸಂಸ್ಕಾರ ಹೊಂದುವ ಹಕ್ಕು ಒಂದು ಕಾಲದಲ್ಲಿ ಇದ್ದಿತು, ಹಾಗೂ ಅವರು ಅದನ್ನು ಪಡೆಯುತ್ತಿದ್ದರು ಎಂಬುದಕ್ಕೆ ಸಾಕಷ್ಟು ನೇರ ಸಾಕ್ಷ್ಯಾಧಾರ ಲಭ್ಯವಿದೆ.

ಸ್ತ್ರೀಯರ ಉಪನಯನಕ್ಕೆ ಸಂಬಂಧಿಸಿದಂತೆ ಹಿಂದೂ ಧರ್ಮಗ್ರಂಥಗಳಲ್ಲಿ ಬರುವ ಉಕ್ತಿಗಳು[೨] ಸುಸ್ಪಷ್ಟವೇ ಇವೆ. ಇವುಗಳನ್ನು ನೀಡಿದ ಯಾರೂ, ಹೆಣ್ಣುಮಕ್ಕಳಿಗೂ ಉಪನಯನ ಸಂಸ್ಕಾರಕ್ಕೆ ಮುಕ್ತದ್ವಾರವಿತ್ತು ಎಂಬುದನ್ನು ಕಂಡುಕೊಳ್ಳಬಹುದಾಗಿದೆ. ಸ್ತ್ರೀಯರು ವೇದಗಳನ್ನು ಕಲಿಯುತ್ತಿದ್ದರಷ್ಟೇ ಅಲ್ಲ, ಅವುಗಳನ್ನು ಕಲಿಸುವ ಶಾಲೆಗಳನ್ನು ನಡೆಸುತ್ತಿದ್ದರು ಕೂಡ. ಅಷ್ಟೇ ಏಕೆ, ಸ್ತ್ರೀ ಪೂರ್ವಮೀಮಾಂಸೆಯ ಮೇಲೆ ಭಾಷ್ಯವನ್ನು ಬರೆದವರಿದ್ದಾರೆ.

ಶೂದ್ರರ ಬಗೆಗೂ, ಸಾಕ್ಷ್ಯಾಧಾರಗಳು ಅಷ್ಟೇ ಇತ್ಯಾತ್ಮಕವಾಗಿವೆ. ಸುದಾಸನು ಅರಸನಾಗಿದ್ದುದು, ಶೂದ್ರನಾಗಿದ್ದುದು, ಆತನ ಪಟ್ಟಾಭಿಷೇಕ ವಸಿಷ್ಠರಿಂದ ನೆರವೇರಿಸಲ್ಪಟ್ಟುದು, ಆತ ರಾಜಸೂಯ–ಯಾಗವನ್ನು ನೆರವೇರಿಸಿದ್ದುದು – ಇವೆಲ್ಲ ನಿಜವಾದರೆ, ಶೂದ್ರರು ಒಂದು ಕಾಲಕ್ಕೆ ಉಪವೀತವನ್ನು ಧರಿಸುತ್ತಿದ್ದರು ಎಂಬುದರ ಬಗೆಗೆ ಸಂಶಯವಿಲ್ಲ. ಸಾಂದರ್ಭಿಕ ಪುರಾವೆಗಳಲ್ಲದೆ, ಹಾಗೂ ಮೇಲೆ ಉಲ್ಲೇಖಿಸಲ್ಪಟ್ಟ ಗ್ರಂಥಕರ್ತರ ಸಾಕ್ಷ್ಯಾಧಾರವಲ್ಲದೆ, ಮ್ಯಾಕ್ಸ್ ಮುಲ್ಲರರು[೩] ಉಲ್ಲೇಖಿಸಿದ ಸಂಸ್ಕಾರ ಗಣಪತಿಯು ಶೂದ್ರನು ಉಪನಯನ ಸಂಸ್ಕಾರಕ್ಕೆ ಅರ್ಹನು ಎಂದು ಸ್ಪಷ್ಟೋಕ್ತಿಯಲ್ಲಿ ಅವಕಾಶ ಮಾಡಿಕೊಟ್ಟಿದ್ದಾನೆ.

ಹೆಣ್ಣು ಮಕ್ಕಳ ಹಾಗೂ ಶೂದ್ರರ ಮಧ್ಯೆ ಇರುವ ಒಂದೇ ಒಂದು ಅಂತರವೆಂದರೆ, ಹೆಣ್ಣುಮಕ್ಕಳ ಪಕ್ಷದಲ್ಲಿ ಅವರ ಉಪನಯನ ಏಕೆ ನಿಲ್ಲಿಸಲ್ಪಟ್ಟಿತು ಎಂಬುದಕ್ಕೆ ಸಮಂಜಸವೆನಿಸುವ ಸ್ಪಷ್ಟೀಕರಣ ನೀಡಲಾಗಿದೆ,

---

೧. Kane, *Op.Cit.* p. 387

೨. ಪುರುಷಾರ್ಥದ ಸೆಪ್ಟೆಂಬರ್ ೧೯೪೦ರ ಸಂಚಿಕೆ ನೋಡಿ – ಇಲ್ಲಿ ಎಲ್ಲ ತಜ್ಞರ ಅಭಿಪ್ರಾಯಗಳನ್ನು ಒಂದೆಡೆ ಸಂಕಲಿಸಲಾಗಿದೆ.

೩. *History of Ancient Sanskrit Literature* (1860). p.207.

ಆದರೆ ಶೂದ್ರರ ಉಪನಯನ ನಿಲ್ಲಿಸಲ್ಪಟ್ಟುದಕ್ಕೆ ಇಂಥ ಸ್ಪಷ್ಟೀಕರಣ ನೀಡಲಾಗಿಲ್ಲ. ಎಲ್ಲಿಯವರೆಗೆ ಹೆಣ್ಣುಮಕ್ಕಳ ಉಪನಯನದ ವಯಸ್ಸು ಹಾಗೂ ಮದುವೆಯ ವಯಸ್ಸು ಬೇರೆಬೇರೆಯಾಗಿದ್ದುವೋ ಅಲ್ಲಿಯವರೆಗೆ ಅವರ ಉಪನಯನ ಮುಂದುವರಿದಿತ್ತು ಎಂಬ ವಾದವೂ ಮಂಡಿಸಲಾಗಿದೆ. ಈ ಸಂದರ್ಭದಲ್ಲಿ ಹೆಣ್ಣುಮಕ್ಕಳ ಉಪನಯನ ವಯಸ್ಸು ಎಂಟು ಹಾಗೂ ಮದುವೆಯ ವಯಸ್ಸು ಸಾಕಷ್ಟು ಅಂತರ ಎಂದು ಹೇಳಲಾಗುತ್ತದೆ. ಆದರೆ, ನಂತರದ ಘಟ್ಟದಲ್ಲಿ ಮದುವೆಯ ವಯಸ್ಸು ಎಂಟಕ್ಕೆ ಇಳಿಸಲಾಯಿತು. ಹೀಗಾಗಿ ಉಪನಯನವೆಂಬುದು ಒಂದು ಸ್ವತಂತ್ರ ಕರ್ಮವಾಗಿ (ವಿಧಿಯಾಗಿ) ಉಳಿಯಲಿಲ್ಲ ಹಾಗೂ ಮದುವೆಯಲ್ಲೇ ಬೆರೆತುಹೋಯಿತು. ಈ ವಿವರಣೆ ಸರಿಯೋ, ತಪ್ಪೋ ಎಂಬುದು ಬೇರೆಯೇ ಮಾತು. ಆದರೆ, ನಮ್ಮ ಮುಂದೆ ಪರಿಹರಿಸಬೇಕಾಗಿರುವ ಪ್ರಶ್ನೆ ಇದಾಗಿದೆ; ಶೂದ್ರನಿಗೆ ಒಂದು ಕಾಲಕ್ಕೆ ಉಪನಯನ ಸಂಸ್ಕಾರ ಬೇಕೆಂದರೆ ಪಡೆಯಬಹುದಾಗಿತ್ತು, ಆದರೆ ನಂತರದ ಘಟ್ಟದಲ್ಲಿ ಅದು ಮುಚ್ಚಿದ ದ್ವಾರವಾಯ್ತು ಹಾಗೂ ಈ ಬದಲಾವಣೆ ಬಗ್ಗೆ ವಿವರಣೆ ಇಲ್ಲ.

ನಾನು ಉಲ್ಲೇಖಿಸಿದ ಸಾಕ್ಷ್ಯಾಧಾರವಿರುತ್ತಿರಲಾಗಿಯೂ, ತಮ್ಮ ಅಕ್ಷೇಪಣೆಯನ್ನೇ ಪುನಃ ಪುನಃ ಉಚ್ಚರಿಸುವವರು ತಮ್ಮ ವಾದದ ದೌರ್ಬಲ್ಯವನ್ನು ನೆನಪಿಡಬೇಕು. ಶೂದ್ರರು ಉಪನಯನದ ಪ್ರಯೋಜನ ಎಂದೂ ಪಡೆದಿರಲಿಲ್ಲ ಎಂದು ವಾದಕ್ಕಾಗಿ ನಾವು ಒಪ್ಪಿಕೊಂಡರೂ, ಅವರಿಗೆ ಎದುರಾಗುವ ಪ್ರಶ್ನೆ : **'ಶೂದ್ರರಿಗೆ ಉಪನಯನದ ಪ್ರಯೋಜನೆ ಏಕೆ ನೀಡಲ್ಪಟ್ಟಿರಲಿಲ್ಲ?'**, ಸಾಂಪ್ರದಾಯಿಕ ಸಿದ್ಧಾಂತವು ಶೂದ್ರರಿಗೆ ಉಪನಯನವಿಲ್ಲ ಎಂದಷ್ಟೇ ಹೇಳುತ್ತದೆ. ಆದರೆ, ಶೂದ್ರನು ತನ್ನ ಉಪನಯನವನ್ನು ಏಕೆ ಮಾಡಿಸಿಕೊಳ್ಳಲಾರ ಎಂಬುದರ ಬಗೆಗೆ ಅದು ಏನನ್ನೂ ಹೇಳುವುದಿಲ್ಲ. ಶೂದ್ರನಿಗೆ ಉಪನಯನ ಏಕೆ ಇರಲಿಲ್ಲವೆಂದರೆ ಆತ ಆರ್ಯೇತರನಾಗಿದ್ದ ಎಂಬ ವಿವರಣೆಯು ಆಧುನಿಕ ಶೋಧ – ಅದು ಪೂರ್ತಿ ನಿರಾಧಾರವಾದುದೆಂದು ತೋರಿಸಲ್ಪಟ್ಟಿದೆ. ಒಂದು ಕಾಲಕ್ಕೆ (ಶೂದ್ರನಿಗೆ) ಉಪನಯನ ಎಂಬುದೊಂದು ಸಂಸ್ಕಾರ ಇತ್ತು. ಆದರೆ ಆ ಸಂಸ್ಕಾರ ಕಾಲಾಂತರದಲ್ಲಿ ನಿಲ್ಲಿಸಲ್ಪಟ್ಟಿತು; ಇಲ್ಲವೆ, ಮುಂಚಿನಿಂದಲೂ, ಆ ಸಂಸ್ಕಾರ ಆತನಿಗೆ ಲಭ್ಯವಾಗದಂತೆ ತಡೆಹಿಡಿಯಲ್ಪಟ್ಟಿತು – ಇವೆರಡರಲ್ಲಿ ಯಾವುದಾದರೊಂದು ಸತ್ಯವಿರಬೇಕಲು. ಆದರೆ, ಯಾವುದೇ ಆಗಲಿ, ಸತ್ಯವೆಂದು ನಾನು ಒಪ್ಪಿಕೊಳ್ಳುವ ಪೂರ್ವದಲ್ಲಿ ಆ ವಾದವು ಕಾರಣಸಹಿತ ಮಂಡಿಸಲ್ಪಡಬೇಕು. ಶೂದ್ರನಿಂದ ಉಪನಯನ ಕರ್ಮದ ಪ್ರಯೋಜನ ತಡೆಹಿಡಿಯಲ್ಪಟ್ಟಿರಲು ಯಾವ ಕಾರಣವೂ ಕಾಣುತ್ತಿಲ್ಲವಾದ್ದರಿಂದ, ನಾವು ಶೂದ್ರರಿಗೆ ಉಪನಯನದ ಹಕ್ಕು ಇದ್ದಿತು ಎಂಬ ನನ್ನ ಸಿದ್ಧಾಂತದ ಪರವಾಗಿಯೇ ನಮ್ಮ ಊಹೆಯ ನಿಲುಗಡೆ ಆಗಬೇಕಾಗುತ್ತದೆ. ಆ ಸಿದ್ಧಾಂತವೆಂದರೆ, ಅವರಿಗೆ ಉಪನಯನದ ಹಕ್ಕು ಇದ್ದಿತು, ಆದರೆ ಕೆಲವು ಕಾರಣಗಳಿಂದಾಗಿ, ಆ ಹಕ್ಕು ಅವರಿಂದ ಕಸಿದುಕೊಳ್ಳಲ್ಪಟ್ಟಿತು.

## VI

ಮೂರನೆಯ ಆಕ್ಷೇಪಣೆಯು ಆಕ್ಷೇಪಣೆಯೇ ಅಲ್ಲ. ಯಾವನಿಗೆ ಉಪನಯನದ ಎಲ್ಲ ಕ್ರಿಯೆಗಳು ಗೊತ್ತಿಲ್ಲವೋ ಅಂಥವನು ಈ ಅಕ್ಷೇಪಣೆಯ ಸಿಂಧುತ್ವವನ್ನು ಹಠಮಾರಿತದಿಂದ ಎತ್ತಿಹಿಡಿಯಬಹುದಾಗಿದೆ.

ಆರ್ಯ ಸಮಾಜವು ಕೆಲ ವಿಧಿಗಳನ್ನು ಸಂಸ್ಕಾರಗಳೆಂದು ಗಣಿಸಿದ್ದಿತು. ಗೌತಮ ಧರ್ಮಶಾಸ್ತ್ರವು (vii.೧೪–೨೪) ಈ ಸಂಸ್ಕಾರಗಳ ಸಂಖ್ಯೆ ನೆಲವತ್ತು ಎಂದು ಹೇಳುತ್ತದೆ. ಅವು ಯಾವುವೆಂದರೆ :

*ಗರ್ಭದಾನ ಪುಂಸವನ; ಸೀಮಂತೋನ್ನಯನ; ಜಾತಕರ್ಮ, ನಾಮಕರಣ; ಅನ್ನಪ್ರಾಶನ; ಚೌಲ, ಉಪನಯನ; ವೇದದ ನಾಲ್ಕು ವ್ರತಗಳು, ಸ್ನಾನ (ಅಥವಾ ಸಮಾವರ್ತನ)*

*ವಿವಾಹ; ಐದು ದೈನಂದಿನ ಮಹಾಯಜ್ಞಗಳು (ವೇದ, ಪಿತೃ, ಮನುಷ್ಯ, ಭೂತ ಹಾಗೂ ಬ್ರಹ್ಮ ಇವರೆಲ್ಲರಿಗೆ); ಏಳು ಪಾಕಯಜ್ಞಗಳು (ಅವೆಂದರೆ, ಅಷ್ಟಕ, ಪರ್ವನಸ್ಥಳೀಪಾಕ, ಶ್ರಾದ್ಧ, ಶ್ರಾವಣಿ, ಅಗ್ರಹಾಯಣಿ, ಚೈತ್ರಿ ಅಶ್ವಯುಜಿ); ಏಳು ಹವಿರ್ ಯಜ್ಞಗಳು (ಇವುಗಳಲ್ಲಿ ಸೋಮ ನೀಡಲಾಗುವುದಿಲ್ಲ, ಬರೀ ಹೋಮಗಳನ್ನಷ್ಟೇ ಅರ್ಪಿಸಲಾಗುತ್ತದೆ – ಅಂದರೆ, ಅಗ್ನ್ಯಧೇಯ, ಅಗ್ನಿಹೋತ್ರ, ದಶಪೂರ್ಣಮಾಸ, ಅಗ್ರಾಯಣ, ಚಾತುರ್ಮಾಸ್ಯಗಳು, ನಿರುದ್ಧಪಶುಬಂಧ ಹಾಗೂ ಸೌತ್ರಮಣಿ); ಏಳು ಸೋಮಯಾಗಗಳು (ಅಗ್ನಿಸ್ತೋಮ, ಅತ್ಯಗ್ನಿಸ್ತೋಮ, ಉಕ್ಥ್ಯ, ಷೋಡಶಿನ್, ವಾಜಪೇಯ, ಅತಿರಾತ್ರ ಅಪ್ತೋರ್ಯಾಮ).*

ಕಾಲಾನಂತರದ ಘಟ್ಟವೊಂದರಲ್ಲಿ ಸಂಕುಚಿತಾರ್ಥದಲ್ಲಿನ ಸಂಸ್ಕಾರಗಳು ಹಾಗೂ ವಿಶಾಲಾರ್ಥದಲ್ಲಿನ ಸಂಸ್ಕಾರಗಳು – ಇವುಗಳ ಮಧ್ಯೆ ಒಂದು ಭೇದವನ್ನು ಕಲ್ಪಿಸಿದಂತಿದೆ. ವಿಶಾಲಾರ್ಥದಲ್ಲಿ ಸಂಸ್ಕಾರಗಳೆಂದರೆ ಅವುಗಳು ಯಜ್ಞಗಳೇ ಆಗಿದ್ದವು; ಹೀಗಾಗಿ, ನಿಜಾರ್ಥದ ಸಂಸ್ಕಾರಗಳ ಪಟ್ಟಿಯಲ್ಲಿ ಅಡಕವಾಗಿರಲಿಲ್ಲ. ನಂತರ ಇವುಗಳು ಹದಿನಾರಕ್ಕೆ ಇಳಿಸಲ್ಪಟ್ಟಿದ್ದುವು.

ಸಂಸ್ಕಾರಗಳ ಬಗೆಗೆ ವಿಚಿತ್ರವಾದುದೇನೂ ಇಲ್ಲ. ಪ್ರತಿಯೊಂದು ಸಮಾಜವೂ ಅವುಗಳನ್ನು ಮನ್ನಿಸುತ್ತದೆ. ಉದಾಹರಣೆಗೆ, ಕ್ರಿಶ್ಚಿಯನ್ನರಲ್ಲಿ Baptism, Confirmation, Matrimony (ವಿವಾಹ), Extreme Unction (ಸಾವಿನಂಚಿನಲ್ಲಿದ್ದವನಿಗೆ ಪುರೋಹಿತ ತೈಲಲೇಪನಗೈಯುವುದು), ಪ್ರಭುಭೋಜನ Eucharist, the Lord's Supper ಹಾಗೂ ಪ್ರಭುಭೋಜನದಲ್ಲಿ ಭಾಗಿಯಾಗುವಿಕೆ (Holy Communion) ಇವೇ ಪವಿತ್ರ ಸಂಸ್ಕಾರಗಳು. ಆದರೆ, ಸಂಸ್ಕಾರಗಳ ಕಲ್ಪನೆಯಲ್ಲಿ, ಇಂಡೋ ಆರ್ಯನ್ನರಿಗೂ ಕ್ರಿಶ್ಚಿಯನ್ನರಿಗೂ ಒಂದು ಭೇದ ಇದ್ದಂತೆ ತೋರುತ್ತದೆ. ಕ್ರಿಶ್ಚಿಯನ್ ಕಲ್ಪನೆಯ ಪ್ರಕಾರ, ಸಂಸ್ಕಾರವೆಂಬುದು ಆಧ್ಯಾತ್ಮಿಕ ವಿಷಯ – ದೇವರ ಅನುಗ್ರಹವನ್ನು ಕೆಲವು ವಿಧಿಗಳ ಮೂಲಕ ನಮ್ಮೆಡೆ ಬರಮಾಡಿಕೊಳ್ಳುವುದು. ಅದಕ್ಕೆ ಸಾಮಾಜಿಕ ಮಹತ್ವ ಏನೂ ಇರಲಿಲ್ಲ. ಇಂಡೋ–ಆರ್ಯನ್ನರಲ್ಲಿ ಸಂಸ್ಕಾರಗಳಿಗೆ ಮೂಲದಲ್ಲಿ ಅಪ್ಪಟವಾದ ಆಧ್ಯಾತ್ಮಿಕ ಮಹತ್ವ ಇತ್ತು. ಸಂಸ್ಕಾರಗಳ ಸಂಬಂಧದಲ್ಲಿ ಪೂರ್ವಮೀಮಾಂಸೆಯ ಕರ್ತೃವಾದ ಜೈಮಿನಿಯು ಹೇಳುವುದನ್ನು ಗಮನಿಸಿದಾಗ ಇದು ಸ್ಪಷ್ಟವಾಗುತ್ತದೆ. ಜೈಮಿನಿಯ ಪ್ರಕಾರ, ಸಾಮಾನ್ಯ ಸಿದ್ಧಾಂತವೇನೆಂದರೆ, ಸಂಸ್ಕಾರಗಳು ಅರ್ಹತೆಯನ್ನು, ನೀಡುವಂಥ ವಿಧಿಗಳು. ಅವು ಎರಡು ರೀತಿಯಲ್ಲಿ ಪರಿಣಾಮವನ್ನುಂಟು ಮಾಡುತ್ತವೆ : ಅವು ಕಳಂಕವನ್ನು ತೊಡೆಯುತ್ತವಲ್ಲದೆ ಹೊಸ ಗುಣಗಳನ್ನು ಸೃಷ್ಟಿಸುತ್ತವೆ. ಇಂಥ ಸಂಸ್ಕಾರಗಳಿಲ್ಲದೆ, ಒಬ್ಬ ವ್ಯಕ್ತಿ ತನ್ನ ಯಜ್ಞದ ಫಲವನ್ನು ಪಡೆಯದೆ ಹೋಗಬಹುದು – ಏಕೆಂದರೆ, ಆತ ಯಜ್ಞ ಕೈಗೊಳ್ಳಲಿಕ್ಕೇ ಅರ್ಹನಿರುವುದಿಲ್ಲ. ಉಪನಯನವೂ ಒಂದು ಸಂಸ್ಕಾರವಾಗಿತ್ತು, ಹಾಗೂ ಉಳಿದ ಸಂಸ್ಕಾರಗಳಂತೆ, ಅದೂ ಬರೀ ಆಧ್ಯಾತ್ಮಿಕ ಮಹತ್ವ ಪಡೆದುದಾಗಿತ್ತು. ಶೂದ್ರನಿಗೆ ಅದರ ಹಕ್ಕು ನಿರಾಕರಣೆ ಖಂಡಿತ ಅದರ ಮಹತ್ವದಲ್ಲಿ ಬದಲಾವಣೆಯನ್ನುಂಟುಮಾಡಿತು. ಆಧ್ಯಾತ್ಮಿಕ ಮಹತ್ವದೊಂದಿಗೆ, ಅದು, ಮೂಲದಲ್ಲಿ ಇರದ ಸಾಮಾಜಿಕ ಮಹತ್ವವನ್ನೂ ಗಳಿಸಿತು.

ಉಪನಯನದ ಹಕ್ಕು ಆರ್ಯ ಹಾಗೂ ಆರ್ಯೇತರರೆಲ್ಲರಿಗೂ ಮುಕ್ತವಾಗಿದ್ದಾಗ, ಅದು ಸಾಮಾಜಿಕ ಅರ್ಥವತ್ತತೆಯನ್ನು ಪಡೆದಿರಲಿಲ್ಲ. ಅದು ಎಲ್ಲರ ಸಾಮಾನ್ಯ ಹಕ್ಕಾಗಿತ್ತು. ಕೆಲವೊಂದೇ ಜನರ ವಿಶೇಷ ಹಕ್ಕು ಬಾಧ್ಯತೆ ಆಗಿರಲಿಲ್ಲ. ಒಮ್ಮೆ ಶೂದ್ರರಿಗೆ ನಿರಾಕರಿಸಲ್ಪಟ್ಟ ಮೇಲೆ, ಅದರ ಒಡೆತನ ಪ್ರತಿಷ್ಠೆಯ ಕುರುಹು ಆಯ್ತು, ಹಾಗೂ ಅದರ ನಿರಾಕರಣೆ ದಾಸ್ಯರ ಕುರುಹಾಯಿತು. ಶೂದ್ರರಿಗೆ ಉಪನಯನದ ಹಕ್ಕು ನಿರಾಕರಣೆ ಇಂಡೋ–ಆರ್ಯನ್ ಸಮಾಜದಲ್ಲಿ ಹೊಸದೊಂದು ಅಂಶವನ್ನು ತಂದಿತು. ಅದು ಶೂದ್ರರು

ಮೇಲುವರ್ಗದವರನ್ನು ತಮಗಿಂತ ಶ್ರೇಷ್ಠರೆಂದು ಬಗೆಯುವಂತೆ ಮಾಡಿತು. ಅದೇ ಪ್ರಕಾರ, ಮೇಲಣ ಮೂರು ವರ್ಗದವರು ಶೂದ್ರರನ್ನು ತಮಗಿಂತ ಕನಿಷ್ಠರು ಎಂದು ಬಗೆಯುವಂತೆ ಮಾಡಿತು. ಉಪನಯನದ ಹಕ್ಕು ಕಳೆದುಕೊಳ್ಳುವುದರಿಂದ ಶೂದ್ರರು ಕೆಳಮಟ್ಟಕ್ಕಿಳಿಯುವಂತಾದ ಒಂದು ರೀತಿ ಇದು.

ಉಪನಯನಕ್ಕೆ ಸಂಬಂಧಿಸಿದ ಇನ್ನೂ ಕೆಲ ಅಂಶಗಳಿವೆ. ಪೂರ್ವಮೀಮಾಂಸೆಯಲ್ಲಿ[೧] ವಿಧಿಸಲ್ಪಟ್ಟ ನಿಯಮಾವಳಿಯನ್ನು ಅವಲೋಕಿಸಿದರೆ ಯಾರಿಗೂ ಇವುಗಳ ಬಗೆಗೆ ಸ್ಪಷ್ಟ ಕಲ್ಪನೆ ಬರಬಹುದಾಗಿದೆ. ಒಂದು ನಿಯಮಾವಳಿಯ ಪ್ರಕಾರ ಎಲ್ಲ ಆಸ್ತಿಪಾಸ್ತಿಯು ಮೂಲಭೂತವಾಗಿ ಆಸ್ತಿಹೊಂದಿದ ವ್ಯಕ್ತಿಗೆ ಯಜ್ಞವನ್ನು ನೆರವೇರಿಸಲು ಒಂದು ಸಾಧನ (ಸಂಪನ್ಮೂಲ) ಆಗಬೇಕು ಎಂಬ ಉದ್ದೇಶಕ್ಕಾಗಿ ಇದೆ. ಆಸ್ತಿಯ ಹಕ್ಕು ಯಜ್ಞವನ್ನು ನೆರವೇರಿಸುವ ಸಾಮರ್ಥ್ಯದ[೨] ಮೇಲೆ ಅವಲಂಬಿಸಿದೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಯಾರೇ ಯಜ್ಞವನ್ನು ನೆರವೇರಿಸಲು ಅಸಮರ್ಥರಾದರೆ, ಅವರು ಆಸ್ತಿಯನ್ನು ಹೊಂದಲೂ ಅನರ್ಹರು. ಯಜ್ಞಸಾಮರ್ಥ್ಯ ಉಪನಯನದ ಮೇಲೆ ನಿಂತಿದೆ. ಇದರರ್ಥ ಏನೆಂದರೆ, ಯಾರು ಉಪನಯನ ಹಕ್ಕಿಗೆ ಬಾಧ್ಯತೆ ಪಡೆದಿದ್ದಾರೋ ಅವರಿಗಷ್ಟೇ ಆಸ್ತಿಯ ಹಕ್ಕಿದೆ.

ಪೂರ್ವಮೀಮಾಂಸೆಯ ಎರಡನೆಯ ನಿಯಮ ಏನು ಹೇಳುತ್ತದೆಂದರೆ, ಯಜ್ಞದ ಜೊತೆ ವೇದಮಂತ್ರಗಳನ್ನು ಪಠಿಸಬೇಕು. ಇದರರ್ಥ ಏನಾಗುತ್ತದೆಯೆಂದರೆ, ಯಜ್ಞ ನೆರವೇರಿಸುವವನು ವೇದಾಭ್ಯಾಸದ ಒಂದು ಪಠ್ಯಕ್ರಮವನ್ನು ಅಭ್ಯಸಿಸಿರಬೇಕಾಗುತ್ತದೆ. ವೇದಗಳನ್ನು ಯಾವನು ಅಭ್ಯಸಿಸಿಲ್ಲವೋ ಆತನು ಯಜ್ಞಗಳನ್ನು ನೆರವೇರಿಸಲಿಕ್ಕೆ ಅಸಮರ್ಥನು. ಆದರೆ ವೇದಾಧ್ಯಯನ ಮಾಡಲಿಕ್ಕೆ ಯಾರಿಗೆ ಮುಕ್ತಾವಕಾಶ ಇದೆಯೆಂದರೆ, ಯಾರು ಉಪನಯನ ಸಂಸ್ಕಾರ ಹೊಂದಿದ್ದಾರೆಯೋ ಅಂಥವರಿಗಷ್ಟೇ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ವೇದಾಧ್ಯಯನ, ಅಂದರೆ ವಿದ್ಯೆಯನ್ನು ಜ್ಞಾನವನ್ನು, ಗಳಿಸುವ ಸಾಮರ್ಥ್ಯ ಉಪನಯನದ ಮೇಲೆ ಅವಲಂಬಿಸಿದೆಯೆಂದಂತಾಯಿತು. ಉಪನಯನವಿಲ್ಲದಿದ್ದರೆ ಜ್ಞಾನಾರ್ಜನೆಯ ಮಾರ್ಗ ಮುಚ್ಚಿದಂತೆ. ಉಪನಯನವು ಶುಷ್ಕ ಅಥವಾ ಅರ್ಥವಿಹೀನವಾದ ಒಂದು ವಿಧಿಯಲ್ಲ. ಆಸ್ತಿಯ ಹಕ್ಕು ಹಾಗೂ ವಿದ್ಯಾರ್ಜನೆಯ ಹಕ್ಕು ಇವೆರಡೂ ಉಪನಯನದೊಂದಿಗೋ ಹೋಗುವ ಅಂಶಗಳು.

ಉಪನಯನ ಸಂಸ್ಕಾರದ ಹಕ್ಕು ಕಳೆದುಕೊಳ್ಳುವುದರಿಂದ ಶೂದ್ರರು ಹೇಗೆ ಕೆಳಮಟ್ಟಕ್ಕೆ ತಳ್ಳಲ್ಪಡುತ್ತಿದ್ದರು ಎಂಬುದನ್ನು ಯಾರು ತಿಳಿದುಕೊಳ್ಳಲಾರರೋ ಅವರು ಮೇಲೆ ಉಲ್ಲೇಖಿಸಲ್ಪಟ್ಟ ಪೂರ್ವಮೀಮಾಂಸೆಯ ನಿಯಮಗಳನ್ನು ಅನುಲಕ್ಷಿಸಿದರೆ ಸಾಕು, ವಿಷಯ ಅರ್ಥಮಾಡಿಕೊಳ್ಳಲು ದುಸ್ತರವಾಗದು. ಒಮ್ಮೆ ಉಪನಯನ ಹಾಗೂ ಆಸ್ತಿ ಮತ್ತು ಶಿಕ್ಷಣದ ಸಂಬಂಧ ತಿಳಿಯಿತೆಂದರೆ ಸಾಕು, ಶೂದ್ರನು ಉಪನಯನದ ಹಕ್ಕು ಕಳೆದುಕೊಂಡಿದ್ದರಿಂದಾಗಿ ಅವನ ಅಧಃಪತನ ಉಂಟಾಯಿತೆಂಬ ಸಿದ್ಧಾಂತವನ್ನೊಪ್ಪಲು ಯಾವ ತೊಡಕೂ ಉಳಿಯುವುದಿಲ್ಲ.

---

೧. See Ganganath Jha, *Purva Mimansa,* pp.೩೬೮–೩೬೯ ಮತ್ತು ೧೭೧–೧೭೨

೨. ಮನುಸ್ಮೃತಿಯಾಗಲೀ ಇತರ ಸ್ಮೃತಿಗಳಾಗಲೀ, ಸ್ತ್ರೀಯರಿಗೆ ಹಾಗೂ ಶೂದ್ರರಿಗೆ ಆಸ್ತಿ ಹೊಂದಿರುವ ಹಕ್ಕನ್ನು ಅದೇಕೆ ನಿರಾಕರಿಸುತ್ತವೆ ಎಂಬುದನ್ನು ತಿಳಿದುಕೊಳ್ಳಲು ಅನೇಕರು ಅಸಮರ್ಥರಾಗಿದ್ದಾರೆ. ಪೂರ್ವಮೀಮಾಂಸೆಯಲ್ಲಿ ವಿಧಿಸಲಾದ ನಿಯಮದ ಪರಿಣಾಮವಾಗಿ ಈ ಊನತೆಗಳು ಉಂಟಾದದ್ದು ಎಂಬ ಅಂಶವನ್ನು ಗಮನದಲ್ಲಿಟ್ಟರೆ, ಒಗಟುಗಳು ತಾನೇತಾನಾಗಿ ಬಿಚ್ಚಿಕೊಳ್ಳುತ್ತವೆ. ಸ್ತ್ರೀಯರೂ ಶೂದ್ರರೂ ಆಸ್ತಿ ಹೊಂದಲು ಏಕೆ ಅನರ್ಹರೆಂದರೆ, ಅವರು ಸ್ತ್ರೀ ಅಥವಾ ಶೂದ್ರರಾಗಿರುವುದು ಕಾರಣವಲ್ಲ. ಅವರನ್ನು ಯಜ್ಞ ನೆರವೇರಿಸಲು ಅನರ್ಹಗೊಳಿಸಿದ್ದು ಕಾರಣವಾಗಿದೆ.

ಮೇಲೆ ಏನು ಹೇಳಲಾಗಿದೆಯೋ ಅದರಿಂದ ಇಷ್ಟು ಮಾತ್ರ ಸ್ಪಷ್ಟವಾಗುತ್ತದೆ: ಏನೆಂದರೆ, ಪ್ರಾಚೀನ ಆರ್ಯಸಮಾಜದಲ್ಲಿ ಉಪನಯನ ಸಂಸ್ಕಾರವು ಹೇಗೆ ಆಧಾರ ಭೂತವಾಗಿದ್ದಿತು ಮತ್ತೂ ಹೇಗೆ ಅದರ ಮೇಲೆ ವ್ಯಕ್ತಿಯ ಸಾಮಾಜಿಕ ಸ್ಥಾನಮಾನ ಹಾಗೂ ವ್ಯಕ್ತಿಗತ ಹಕ್ಕುಗಳು ಅವಲಂಬಿಸಿದ್ದವು ಎಂಬುದನ್ನು ಮನಗಾಣಬಹುದಾಗಿದೆ. ಉಪನಯನವಿಲ್ಲದಿದ್ದರೆ ಒಬ್ಬ ವ್ಯಕ್ತಿಯ ಸಾಮಾಜಿಕ ಅಂತಸ್ತು ಕುಸಿಯಿತೆಂದೇ ಭಾವಿಸಬೇಕು, ಹಾಗೂ ಅದರ ಜೊತೆಗೆ ಆತ ಅಜ್ಞಾನಕೂಪಕ್ಕೆ ಮತ್ತು ಬಡತನಕ್ಕೆ ಇಳಿಯುತ್ತಿದ್ದ. ಶೂದ್ರರ ಮೇಲಿನ ಸೇಡು ತೀರಿಸಿಕೊಳ್ಳಲು ಉಪನಯನದ ನಿರಾಕರಣೆಯೆಂಬುದು ಬ್ರಾಹ್ಮಣರು ಕಂಡುಹಿಡಿದ ಭಾರೀ ಮಾರಕ ಅಸ್ತ್ರವಾಗಿದ್ದಿತು. ಅದೊಂದು ಅಣುಬಾಂಬಿನ ಪರಿಣಾಮವನ್ನೇ ಹೊಂದಿದ್ದಿತೆಂದು ಹೇಳಬಹುದು. ಬ್ರಾಹ್ಮಣರ ಭಾಷೆಯಲ್ಲೇ ಹೇಳುವುದಾದರೆ, ಅದು ಶೂದ್ರನನ್ನು ಶ್ಮಶಾನವಾಗಿಸಿತು.

## VII

ಬ್ರಾಹ್ಮಣರು ಉಪನಯನವನ್ನು ನಿರಾಕರಿಸುವ ಅಧಿಕಾರ ಹೊಂದಿದ್ದರು ಎಂಬುದು ಪ್ರಶ್ನಾತೀತ. ಆದರೆ, ಸಂದೇಹ ಏಕೆ ತಲೆದೋರುತ್ತದೆಯೆಂದರೆ, ಅವರಿಗೆ ಈ ಅಧಿಕಾರ ನೀಡಲಾದ ಬಗೆಗೆ ಎಲ್ಲೂ ಸ್ಪಷ್ಟೋಕ್ತಿ ಇಲ್ಲ. ಆದಾಗ್ಯೂ, ಇಂಡೋ-ಆರ್ಯನ್ನರ ಧಾರ್ಮಿಕ ವ್ಯವಸ್ಥೆಯ ಕ್ರಿಯಾಶೀಲವಾದ ಅಂಶಗಳ ಬಗೆಗೆ ಅರಿವು ಇಲ್ಲದವರ ತಲೆಯಲ್ಲಿ ಯಾವುದಾದರೂ ಸಂದೇಹ ಉಳಿದಿದ್ದರೆ ಅವರು ಈ ಎರಡು ಅಂಶಗಳನ್ನು ಗಮನದಲ್ಲಿ ತೆಗೆದುಕೊಂಡರೆ ಅದು ಪರಿಹಾರವಾಗುವುದು : (೧) ಉಪನಯನದಲ್ಲಿ ಪುರೋಹಿತನೆಂದು ಕಾರ್ಯನಿರ್ವಹಿಸುವ ಹಕ್ಕು ಬ್ರಾಹ್ಮಣನಿಗಷ್ಟೇ ಇದ್ದುದು, ಹಾಗೂ (೨) ಅನಧಿಕೃತವಾದ ಉಪನಯನಗಳನ್ನು ನೆರವೇರಿಸುವುದಕ್ಕೆ ಬ್ರಾಹ್ಮಣನ ಮೇಲೆ ಹೇರಲಾದ ದಂಡ – ಶಿಕ್ಷೆಗಳು.

ಅತಿ ಪ್ರಾಚೀನ ಕಾಲದಲ್ಲಿ ಮಗನಿಗೆ ಗಾಯತ್ರೀ ಮಂತ್ರವನ್ನು (ಯಾವುದರಿಂದ ವೇದಾಧ್ಯಯನ ಪ್ರಾರಂಭವಾಗಬೇಕೋ ಹಾಗೂ ಯಾವುದಕ್ಕಾಗಿಯೇ ನಂತರದ ಘಟ್ಟದಲ್ಲಿ, ಉಪನಯನ ಎಂಬ ವಿಧಿ ಕಲ್ಪಿಸಲ್ಪಟ್ಟಿತೋ ಅಂಥ ಗಾಯತ್ರೀ ಮಂತ್ರವನ್ನು) ಹೇಳಿಕೊಡುತ್ತಿದ್ದವನು ತಂದೆಯೇ ಆಗಿರುವ ಸಂಭವವಿದೆ. ಆದರೆ ಬಹಳ ಮುಂಚಿನ ಕಾಲದಿಂದಲೂ ಉಪನಯನವನ್ನು ನೆರವೇರಿಸುವ ಕೆಲಸವು ಒಬ್ಬ ಗುರುವಿಗೆ, ಅಥವಾ ಆಚಾರ್ಯನೆಂದು ಕರೆಯಲ್ಪಟ್ಟ ಶಿಕ್ಷಕನಿಗೆ, ವಹಿಸಿಕೊಡಲಾಗಿತ್ತು, ಹಾಗೂ ಬಾಲಕನು ಆತನಲ್ಲಿಗೆ ಹೋಗಿ ಅವನ ಮನೆಯಲ್ಲೇ ಇರುತ್ತಿದ್ದ.

ಯಾರು ಆಚಾರ್ಯನಾಗಿರಬೇಕು ಹಾಗೂ ಆತನ ವಿದ್ಯಾರ್ಹತೆ ಏನಾಗಿರಬೇಕು ಎಂಬ ಪ್ರಶ್ನೆಗಳು ಬಹಳ ಪ್ರಾಚೀನ ಕಾಲದಿಂದಲೂ ಚರ್ಚಿಸಲ್ಪಡುತ್ತಾ ಬಂದಿವೆ.

ಆಚಾರ್ಯನಾದವನು ವೇದಗಳಲ್ಲಿ ಪಾರಂಗತನಾಗಿರಬೇಕು. ಒಂದು ಬ್ರಾಹ್ಮಣ ಗ್ರಂಥ[೧] ಹೇಳುವ ಪ್ರಕಾರ "ಯಾವಾತನಿಗೆ ವಿದ್ವತ್ತು ಇಲ್ಲದ ಶಿಕ್ಷಕನೊಬ್ಬನು ದೀಕ್ಷೆ ನೀಡುತ್ತಾನೋ ಅಂಥವನು ಕತ್ತಲಿನಿಂದ ಕತ್ತಲಿಗೆ ಕಾಲಿಟ್ಟಂತೆ, ಹಾಗೂ ಇಂಥ ವಿದ್ಯಾಹೀನ ಗುರುವೂ ಕತ್ತಲಿನೆಡೆಗೆ ಸಾಗಿದಂತೆ."

ಆಪದ್ಧರ್ಮಶಾಸ್ತ್ರವು (I.೧೧.೧೨-೧೩) ಈ ನಿಯಮವನ್ನು ಹೇಳುತ್ತದೆ : ಒಬ್ಬ ವ್ಯಕ್ತಿ ತನ್ನ ಉಪನಯನಕ್ಕಾಗಿ ಆಯ್ದುಕೊಂಡಂಥ ಆಚಾರ್ಯನು ಸ್ವತಃ ವಿದ್ವಾಂಸನಾಗಿರಬೇಕಲ್ಲದೆ, ಆತನ ಮನೆತನವೂ

---

೧. Quoted in the *Ap.Dh.S.*, I.i.i,೧೧, Kane, II (I),p. ೩೨೪

ಆನುವಂಶಿಕವಾಗಿ ವಿದ್ವಾಂಸರದಾಗಿರಬೇಕು, ಹಾಗೂ ಆತ ಶಾಂತಚಿತ್ತನಾಗಿರಬೇಕು. ಅಂಥವನಲ್ಲಿ ವೇದಾಧ್ಯಯನ ಮಾಡುವವನು ಬ್ರಹ್ಮಚರ್ಯದ ಕೊನೆಯವರೆಗೂ ವೇದಗಳನ್ನು ಅಭ್ಯಸಿಸಬೇಕು – ಅದೂ ಎಲ್ಲಿಯವರೆಗೆ ಆಚಾರ್ಯನು ಧರ್ಮಪಥವನ್ನು[೧] ಬಿಟ್ಟು ನಡೆಯುವದಿಲ್ಲವೋ ಅಲ್ಲಿಯವರೆಗೆ.

ಆದರೆ ಆಚಾರ್ಯನಾದವನ ಬಹುಮುಖ್ಯವಾದ ಅರ್ಹತೆಯೆಂದರೆ, ಆತ ಬ್ರಾಹ್ಮಣನಾಗಿರಬೇಕೆಂಬುದು. ಅತ್ಯಂತ ತೊಂದರೆಯ ಪರಿಸ್ಥಿತಿಯಲ್ಲಷ್ಟೇ (ಅಂದರೆ ಬ್ರಾಹ್ಮಣನು ಲಭ್ಯವಿರದಾಗ)[೨] ಒಬ್ಬ ಕ್ಷತ್ರಿಯ ಅಥವಾ ವೈಶ್ಯ–ಗುರುವನ್ನಾಯ್ದು ಕೊಳ್ಳಬಹುದಾಗಿತ್ತು. ಈ ಅಪವಾದವೂ ಕೂಡ ಯಾವ ಕಾಲದಲ್ಲಿ ವೇದಾಧ್ಯಯನದ ಹಕ್ಕು ಹಾಗೂ ವೇದಾಧ್ಯಾಪನದ ಹಕ್ಕು ಇವೆರಡರ ಮಧ್ಯೆ ವ್ಯತ್ಯಾಸವಿರಲಿಲ್ಲವೋ ಆ ಕಾಲದಲ್ಲಿ ಮಾತ್ರ ಅನುಮತಿಸಲಾಗಿತ್ತು. ಆ ಕಾಲವೂ ಬಹಳ ಮುಂಚಿನ ಕಾಲ – ವಸಿಷ್ಠ – ವಿಶ್ವಾಮಿತ್ರರ ಕಲಹವೂ ಇದೇ ವಿಷಯದ ಮೇಲೆ ಹುಟ್ಟಿಕೊಂಡು ಆಗಿತ್ತು. ಆದರೆ ಒಮ್ಮೆ ಆ ಭೇದ ಮಾಡುವುದಕ್ಕೆ ಮೊದಲಾದ ಮೇಲೆ ಬ್ರಾಹ್ಮಣನು ಮಾತ್ರ ಉಪನಯನ ಸಮಾರಂಭದಲ್ಲಿ ಆಚಾರ್ಯನಾಗಿ ಕಾರ್ಯನಿರ್ವಹಿಸುವ ಹಕ್ಕನ್ನು ಪಡೆಯುವಂತಾದ.

ಒಂದು ಅಂಶ ಮಾತ್ರ ವಿವಾದಾತೀತವಾಗಿ ಪ್ರತಿಷ್ಠಾಪಿತ ಎಂದು ಗಣಿಸಬಹುದು– ಅದೇನೆಂದರೆ, ಬ್ರಾಹ್ಮಣನಲ್ಲದೆ ಇನ್ನಾರೂ ಉಪನಯನ ನೆರವೇರಿಸಲು ಸಮರ್ಥರಾಗಿರಲಿಲ್ಲ ಎಂಬುದು. ಬೇರೆ ಯಾರಾದರೂ ನೆರವೇರಿಸಿದ ಉಪನಯನ ಉಪನಯನವೇ ಅಲ್ಲ ಎನ್ನುವಮಟ್ಟಿಗೆ.

ಇಂಡೋ–ಆರ್ಯನ್ ಧಾರ್ಮಿಕ ವ್ಯವಸ್ಥೆಯ ಕ್ರಿಯಾತ್ಮಕವಾದ ಇನ್ನೊಂದು ಅಂಶ ಯಾವುದಾಗಿತ್ತೆಂದರೆ, ಯಾವುದೇ ಧಾರ್ಮಿಕ ಸ್ವರೂಪದ ಕ್ರಿಯೆಯನ್ನು ಅನಧಿಕೃತವಾಗಿ ಬ್ರಾಹ್ಮಣನಾದವನು ಜರುಗಿಸಕೂಡದೆಂದು ಆತನ ಮೇಲೆ ಹೇರಿದ ಒಂದು ಕಟ್ಟುಪಾಡು. ಇಂಥ ನಡತೆಯ ಅಪರಾಧವೆಸಗಿದ ಬ್ರಾಹ್ಮಣನು ಶಿಕ್ಷೆಗೆ ಇಲ್ಲವೆ ಪ್ರಾಯಶ್ಚಿತ್ತಕ್ಕೆ ಒಳಪಡುತ್ತಿದ್ದ. ಪ್ರಾಚೀನ ಧರ್ಮಶಾಸ್ತ್ರಗ್ರಂಥಗಳಲ್ಲಿ ಇಂಥ ಅನೇಕ ಶಾಸ್ತಿ (ಜುಲ್ಮಾನೆ)ಗಳ ಪ್ರಸ್ತಾಪ ಕಾಣಸಿಗುತ್ತದೆ. ನಾನು ಮನು ಹಾಗೂ ಪರಾಶರರನ್ನು ಉಲ್ಲೇಖಿಸಬಯಸುತ್ತೇನೆ.

ಮನುವು (III.೧೫೦ರಿಂದ) ಯಾವ ವರ್ಗದ ಬ್ರಾಹ್ಮಣರು, ದೇವರಿಗೆ ಹಾಗೂ ಪಿತೃಗಣಕ್ಕೆ ಸಮರ್ಪಿಸಲಾಗುವ ನೈವೇದ್ಯದಲ್ಲಿ ಪಾಲ್ಗೊಳ್ಳಲು ಅರ್ಹರಲ್ಲ ಎಂಬುದನ್ನು ನಮೂದಿಸುತ್ತಾನೆ. ಆ ಪಟ್ಟಿಯಲ್ಲಿ ಅವನು ಈ ಕೆಳಗಿನವರನ್ನು ಸೇರಿಸುತ್ತಾನೆ :

---

೧. ವ್ಯಾಸನ ಪ್ರಕಾರ (ಸಂ.ದಲ್ಲಿ ಉದ್ಧೃತವಾಗಿದೆ. ಪು.೩೨೪). ಆಚಾರ್ಯನಾದವನು ವೇದಾಭ್ಯಾಸದಲ್ಲಿ ತನ್ನನ್ನು ಸಂಪೂರ್ಣ ತೊಡಗಿಸಿಕೊಂಡವನಾಗಿರಬೇಕು. ಧರ್ಮದ ಜ್ಞಾನ ಆತನಿಗಿರಬೇಕು, ಒಳ್ಳೆಯ ಮನೆತನದವನಾಗಿರಬೇಕು; ಶುದ್ಧ ಆಚಾರ ವಿಚಾರದವನಾಗಿರಬೇಕು, ತನ್ನ ವೇದ ಶಾಖೆಯನ್ನು ಅಭ್ಯಸಿಸಿದ ಶ್ರೋತ್ರಿಯನಾಗಿರಬೇಕು, ಹಾಗೂ ಆಲಸಿಯಾಗಿರಬಾರದು. 'ಶ್ರೋತ್ರಿಯ' ಎಂದರೆ, ವೇದದ ಒಂದು ಶಾಖೆಯನ್ನು ಅಭ್ಯಸಿಸಿದವ ಎಂದರ್ಥ.

೨. ಬಹು ಸೋಜಿಗದ ಅಂಶವೇನೆಂದರೆ, ಇಂಥ ಸಂದರ್ಭಗಳಲ್ಲಿ ಒಬ್ಬ ಬ್ರಾಹ್ಮಣ ವಿದ್ಯಾರ್ಥಿ ತನ್ನ ಕ್ಷತ್ರಿಯ ಅಥವಾ ವೈಶ್ಯ ಗುರುವಿಗೆ ಮಾಡಬೇಕಾಗಿದ್ದ ಸೇವೆಯೇನೆಂದರೆ, ಆತನನ್ನು ಹಿಂಬಾಲಿಸುವುದು. ಆತನು ಯಾವ ದೈಹಿಕ ಸೇವೆ (ಪಾದ ತೊಳೆಯುವುದು ಮುಂತಾದಂಥ)ಯನ್ನೂ ಮಾಡಬೇಕಾಗಿರಲಿಲ್ಲ – ನೋಡಿ, *Ap.Dh.S. II,* ೨.೪ ೨೫–೨೮, *Gaut,*೭.೧–೩ *Baud, Dh.S.I.* ೨, ೪೦–೪೨, *Manu II,* ೨೪೧. ಅಲ್ಲದೆ, ಕ್ಷತ್ರಿಯನಾಗಲೀ, ವೈಶ್ಯನಾಗಲೀ ಒಬ್ಬ ಬ್ರಾಹ್ಮಣನಿಗೆ ಕಲಿಸಬೇಕೆಂದರೆ ಆತನು ದೈನ್ಯಾಸೆಯಿಂದ ಕೇಳಿಕೊಂಡಾಗ ವಿನಃ ತನ್ನಿಚ್ಛೆಯಿಂದಿಲ್ಲ.

> *III. ೧೫೬. – "ಯಾವನು ನಿರ್ದಿಷ್ಟ ಶುಲ್ಕಕ್ಕಾಗಿ ಕಲಿಸುತ್ತಾನೆಯೋ ಅವನು, ಹಾಗೂ ಅವನು ಆ ಕರಾರಿನ ಮೇಲೆ ಕಲಿಸಲ್ಪಡುತ್ತಾನೆಯೋ ಅವನು; ಯಾವನು ಶೂದ್ರ ವಿದ್ಯಾರ್ಥಿಗಳಿಗೆ ಬೋಧಿಸುತ್ತಾನೆಯೋ ಆತ, ಹಾಗೂ ಯಾವಾತನ ಶಿಕ್ಷಕ ಶೂದ್ರನಾಗಿದ್ದಾನೆಯೋ ಆತ, ಯಾವನು ಒರಟಾಗಿ ಮಾತನಾಡುತ್ತಾನೆಯೋ ಅವನು ವ್ಯಭಿಚಾರಿಯ ಮಗನಾಗಿದ್ದವನು, ಹಾಗೂ ವಿಧವೆಯ ಮಗನಾಗಿದ್ದವನು."*

ಪರಾಶರನು[೧] ಹೇಳುವಂತೆ :

> *"ಯಾವ ಬ್ರಾಹ್ಮಣನು ದಕ್ಷಿಣೆಗಾಗಿ ಶೂದ್ರನ ಪರವಾಗಿ ಯಜ್ಞ ಕುಂಡದಲ್ಲಿ ನೈವೇದ್ಯ ನೀಡುತ್ತಾನೆಯೋ ಅವನು ಶೂದ್ರನಾಗುತ್ತಾನೆ ; ಹಾಗೂ ಯಾವ ಶೂದ್ರನಿಗಾಗಿ ಅವನು ಈ ನೈವೇದ್ಯವನ್ನು ಅರ್ಪಿಸುತ್ತಾನೆಯೋ ಆ ಶೂದ್ರನು ಬ್ರಾಹ್ಮಣನಾಗುತ್ತಾನೆ. ಮಾಧವನ ಪ್ರಕಾರ ಆ ಯಜ್ಞವಿಧಿಯ ಪುಣ್ಯಫಲ ಶೂದ್ರನಿಗೆ ಹೋಗಿ, ಅದರ ಪಾಪವನ್ನು ಬ್ರಾಹ್ಮಣ ಕಟ್ಟಿಕೊಳ್ಳುತ್ತಾನೆ."*

ಶೂದ್ರನಿಂದ ಉಪನಯನದ ಹಕ್ಕನ್ನು ಕಸಿದುಕೊಳ್ಳುವುದಕ್ಕೆ ಬ್ರಾಹ್ಮಣನಿಗೆ ಯಾವ ಅಧಿಕಾರವಿತ್ತು ಎಂದು ಪ್ರಶ್ನಿಸುವವರು ಈ ಎರಡು ಸಂಗತಿಗಳ ಜಂಟಿ ಪರಿಣಾಮವನ್ನು ಲಕ್ಷ್ಯಕ್ಕೆ ತಂದುಕೊಳ್ಳಲಿ : (೧) ಉಪನಯನದಲ್ಲಿ ಆಚಾರ್ಯನಾಗಿ ಕಾರ್ಯನಿರ್ವಹಿಸುವುದಕ್ಕೆ ಬ್ರಾಹ್ಮಣನಿಗೆ ಮಾತ್ರವೇ ಇರುವ ಅಧಿಕಾರ, ಹಾಗೂ (೨) ಅನಧಿಕೃತ ಉಪನಯನವನ್ನು ನೆರವೇರಿಸಿದಲ್ಲಿ ಆತನಿಗೆ ವಿಧಿಸಬಹುದಾಗಿದ್ದ ಜುಲ್ಮಾನೆಗಳು. ಹೀಗೆ ಮಾಡಿದಲ್ಲಿ, ಇವೆರಡೂ ಅಂಶಗಳ ಜಂಟಿ ಪರಿಣಾಮವಾಗಿ, ಬ್ರಾಹ್ಮಣನಿಗೆ ಉಪನಯನ ಮಾಡಿಸುವ ಮತ್ತು ಮಾಡಲು ನಿರಾಕರಿಸುವ ಹಕ್ಕನ್ನು ನೀಡುವುದಾಗಿತ್ತು. ಎಂಬುದರ ಬಗೆಗೆ ಸಂಶಯ ಉಳಿಯಲಾರದು. ನಿಜ, ಈ ಅಧಿಕಾರವನ್ನು ಬ್ರಾಹ್ಮಣನಿಗೆ ನೀಡಿದ ಬಗೆಗೆ ಎಲ್ಲೂ ಸ್ಪಷ್ಟವಾಗಿ ಹೇಳಲಾಗಿಲ್ಲ. ಕಾರಣವೇನೆಂದರೆ, ಯಾವುದನ್ನು ಪರೋಕ್ಷವಾಗಿ, ಪರಿಣಾಮಕಾರಿಯಾಗಿ ಮಾಡಲು ಸಾಧ್ಯವಿದ್ದಿತೋ ಅದನ್ನು ಸ್ಪಷ್ಟವಾಗಿ ಹೇಳುವುದು ಅನವಶ್ಯಕವಾಗಿತ್ತು. ಬ್ರಾಹ್ಮಣರಿಗೆ ಉಪನಯನವನ್ನು ನಿರಾಕರಿಸುವ ಹಕ್ಕು ತಮ್ಮ ಕೈಯಲ್ಲಿದೆಯೆಂಬುದರ ಅರಿವು ಇದ್ದುದು ನಿಸ್ಸಂಶಯ. ದಾಖಲೆಗಳ ಪ್ರಕಾರ, ಈ ಅಧಿಕಾರವನ್ನು ಚಲಾಯಿಸುವುದರ ಮೂಲಕ ಬೇರೆಬೇರೆ ಸಮಾಜದವರನ್ನು ಅವರು ದಬಾಯಿಸಿದ ೧೬ ಉಲ್ಲೇಖಿತ ಪ್ರಕರಣಗಳಿವೆ. ಒಂಬತ್ತು ಪ್ರಕರಣಗಳಲ್ಲಿ ಅವರು ಕಾಯಸ್ಥರಿಗೆ ಸವಾಲು ಹಾಕಿದರು; ನಾಲ್ಕರಲ್ಲಿ ಪಂಚಾಲರಿಗೆ ಸವಾಲೊಡ್ಡಿದರು; ಒಂದರಲ್ಲಿ ಪಾಳ್ಶೆ(Palshe)ಗಳಿಗೆ ಸವಾಲೊಡ್ಡಿದರು. ಮಹತ್ವದ ಸಂಗತಿಯೇನೆಂದರೆ, ಅವರು ಒಬ್ಬರು ಮರಾಠಾ ಅರಸರಿಗೂ ಸವಾಲೆಸೆದರು. ಈ ಉದಾಹರಣೆಗಳು ಕ್ರಿ.ಶ. ೫೫೬ ರಿಂದ ೧೯೦೪ರ ಮಧ್ಯ ಜರುಗಿದ್ದವು. ಈ ಉದಾಹರಣೆಗಳು ಪ್ರಾಚೀನ ಕಾಲಕ್ಕೆ ಸಂಬಂಧಿಸಿದುವಲ್ಲವೆಂಬುದು ನಿಜ. ಆದರೆ, ಇವು ಬ್ರಾಹ್ಮಣರು ತಮ್ಮ ಉಪನಯನ – ನಿರಾಕರಣಾಧಿಕಾರವನ್ನು ಚಲಾಯಿಸಿದ ಪುರಾವೆಗಳು ಎಂಬುದನ್ನು ನಾವು ನೆನಪಿಡಬೇಕು. ಆದರೆ, ಆ ಅಧಿಕಾರ ಅದಕ್ಕೂ ಹಿಂದಿನ ಕಾಲದಲ್ಲಿ ಗಳಿಸಿಕೊಂಡದ್ದಿರಬೇಕು. ಅವರು ಆ ಅಧಿಕಾರವನ್ನು ಅದಕ್ಕೂ ಹಿಂದಿನ ಕಾಲದಲ್ಲಿ ಪಡೆದರೆಂಬುದು ನಿರಾಧಾರವಾದ ಪೊಳ್ಳು ಮಾತಲ್ಲ. ಅತಿ ಪ್ರಾಚೀನವಾದ ಸತ್ಯಕಾಮ–ಜಾಬಾಲಿಯ ಕಥೆ ಅಥವಾ ಪ್ರಸಂಗ, ಒಬ್ಬ ಮನುಷ್ಯನ ವರ್ಣ

---

೧. Quoted by *Vyavahara Mayukha* (edited by Kane, p.೧೫೫)

ಆತನ ಜನ್ಮದಿಂದಲ್ಲದೆ, ಗುಣದಿಂದ (ಮಾನಸಿಕ ಹಾಗೂ ನೈತಿಕ ಗುಣಗಳು) ನಿರ್ಧರಿಸಲ್ಪಡುತ್ತಿತ್ತೆಂಬ ಸಂಗತಿಗೆ ಉದಾಹರಣೆಯೆಂದು ಸಾಮಾನ್ಯವಾಗಿ ನೀಡಲಾಗುತ್ತದೆ. ಇದು ಸತ್ಯವೇನೋ ಸೈ, ಆದರೆ ಪ್ರಾಚೀನ ಕಾಲದಲ್ಲೂ ಬ್ರಾಹ್ಮಣರು ಉಪನಯನವನ್ನು ನಿರಾಕರಿಸುವ ಅಧಿಕಾರವನ್ನು ಪಡೆದಿದ್ದರು ಎಂಬ ಸಂಗತಿಯನ್ನು ಸಹ ಜಾಬಾಲಿಯ ಪ್ರಕರಣ ಸಿದ್ಧಮಾಡುತ್ತದೆ.

ನನ್ನ ಪ್ರಸ್ತುತ ಉದ್ದೇಶಕ್ಕೆ ಈ ಎಲ್ಲ ಪ್ರಕರಣಗಳನ್ನು ಉದಾಹರಿಸುವುದು ಅಷ್ಟೊಂದು ಉಪಯುಕ್ತವಿಲ್ಲವಾದರೂ, ಅವುಗಳಲ್ಲಿನ ನಿರ್ಣಯಗಳ ಮೇಲಿಂದ ನಾವು ಯಾವ ನಿರ್ಧಾರಗಳಿಗೆ ಬರಬಹುದಾಗಿದೆಯೋ, ಅವುಗಳಿಗೆ ಮಹತ್ವ ಇದೆ. ಹಾಗೆ ಮಾಡುವಾಗ, ನಾವು ಪ್ರತಿಯೊಂದು ಪ್ರಕರಣದ ವಿವರಗಳನ್ನು ಅರಿತಿರಬೇಕು. ಆದರೆ ಬಹಳಷ್ಟು ಪ್ರಕರಣಗಳಲ್ಲಿ ನಿರ್ಣಯದ ಹೊರತು ಇನ್ಯಾವ ವಿವರಗಳೂ ಸಿಕ್ಕದಿರುವುದು ದುರದೃಷ್ಟಕರ. ಪೂರ್ಣವಿವರಗಳು ಲಭ್ಯವಿರುವ ಮತ್ತು ಸಾಕಷ್ಟು ಪ್ರಚಾರ ಪಡೆದಿರುವ ಒಂದೇ ಒಂದು ಪ್ರಕರಣ – ಬ್ರಾಹ್ಮಣರು ಮತ್ತು ಶಿವಾಜಿಯ ಮಧ್ಯದ್ದು – ಲಭ್ಯವಿದೆ. ಪ್ರಕರಣ ಸಾಕಷ್ಟು ಮಹತ್ವದ್ದೂ ಇದ್ದು, ಕೂಲಂಕಷ ವಿಚಾರಣೆಗೆ ಯೋಗ್ಯವಾದದ್ದೂ ಇದೆ. ಹಾಗೂ, ಅದರ ಮೇಲಿಂದ ನಾವು ತಲುಪಬಹುದಾದ ಊಹೆಗಳೂ ಸ್ವಾರಸ್ಯಕರ ಹಾಗೂ ಬೋಧಪ್ರದವಾಗಿವೆಯಷ್ಟೇ ಅಲ್ಲದೆ ನಾವು ಚರ್ಚಿಸುತ್ತಿರುವ ಅಂಶದ ಮೇಲೆ ಬೆಳುಕು ಚೆಲ್ಲುತ್ತವೆ.

## VIII

ಶಿವಾಜಿಯು ಮಹಾರಾಷ್ಟ್ರದ ಪಶ್ಚಿಮ ಭಾಗದಲ್ಲಿ ಸ್ವತಂತ್ರ ಹಿಂದೂ ರಾಷ್ಟ್ರವೊಂದನ್ನು ಸ್ಥಾಪಿಸಿದ ಮೇಲೆ, ಆತ ಪಟ್ಟಾಭಿಷೇಕ ಮಾಡಿಸಿಕೊಂಡು ತನ್ನನ್ನು ಅರಸನೆಂದು ಘೋಷಿಸಿಕೊಳ್ಳಬಯಸಿದ್ದ ಎನ್ನುವ ಸಂಗತಿ ಸರ್ವವಿದಿತವಿದೆ. ಈ ಪಟ್ಟಾಭಿಷೇಕಕ್ಕೇನಾದರೂ ಕಿಮ್ಮತ್ತು ಇರಬೇಕಾದರೆ ಇದು ವೈದಿಕ ವಿಧಿಗಳ ಪ್ರಕಾರ ನೆರವೇರಬೇಕು ಎಂದು ಶಿವಾಜಿಗೂ ಆತನ ಸ್ನೇಹಿತರಿಗೂ ಅನ್ನಿಸಿತು. ಆದರೆ, ತನ್ನ ಮನೀಷೆಯನ್ನು ಪೂರೈಸಿಕೊಳ್ಳುವಲ್ಲಿ ಶಿವಾಜಿಗೆ ಅನೇಕ ತೊಡರುಗಳು ಎದುರಾದವು. ತನ್ನ ಪಟ್ಟಾಭಿಷೇಕ ವೈದಿಕವಿಧಿಗಳ ಪ್ರಕಾರ ನೆರವೇರುವುದು ಬಿಡುವುದು ಪೂರ್ತಿಯಾಗಿ ಬ್ರಾಹ್ಮಣರನ್ನೇ ಅವಲಂಬಿಸಿದೆ ಎಂದು ಶಿವಾಜಿಗೆ ಕಂಡುಬಂದಿತು. ಆ ಸಮಾರಂಭವನ್ನು ನಡೆಸಿಕೊಡಲು ಬ್ರಾಹ್ಮಣನ ಹೊರತು ಇನ್ಯಾವನೂ, ಧಾರ್ಮಿಕ ದೃಷ್ಟಿಯಿಂದ, ಅರ್ಹನಾಗಿರಲಿಲ್ಲ. ಎರಡನೆಯದಾಗಿ, ತಾನು ಕ್ಷತ್ರಿಯನೆಂದು ಸಿದ್ಧವಾಗದೆ, ಇಂಥ ಸಮಾರಂಭವು ನೆರವೇರುವಂತಿರಲಿಲ್ಲ ಎಂಬುದೂ ಆತನಿಗೆ ತಿಳಿದಿತ್ತು. ಇನ್ನೂ ಒಂದು (ಮೂರನೆಯದು) ತೊಡಕು ಇತ್ತು. ಅದೇನೆಂದರೆ, ಆತನು ಕ್ಷತ್ರಿಯನೆಂದು ಸಿದ್ಧವಾದರೂ ಆತ ಉಪನಯನದ ವಯಸ್ಸನ್ನು ಮೀರಿದ್ದ; ಮತ್ತು ಉಪನಯನವಿಲ್ಲದೆ ಪಟ್ಟಾಭಿಷೇಕ ಅಸಂಭವ. ಈ ಮೂರನೆಯ ತೊಡಕೇನೋ ಗೌಣವಾದದ್ದಾಗಿತ್ತು. ಯಾಕೆಂದರೆ, ವ್ರಾತ್ಯಸ್ತೋಮವಿಧಿಯನ್ನು ನೆರವೇರಿಸಿ ಅದನ್ನು ತೊಡೆದುಕೊಳ್ಳಬಹುದಾಗಿತ್ತು. ಮೊದಲನೆಯದೇ ಅತಿ ದುಸ್ತರವಾದ ತೊಡಕಾಗಿತ್ತು. ಅದು ಶಿವಾಜಿಯ ಸ್ಥಾನಮಾನಕ್ಕೆ ಸಂಬಂಧಿಸಿದುದಾಗಿತ್ತು. 'ಆತನು ಕ್ಷತ್ರಿಯನೇ?' ಎಂಬುದು ಪ್ರಶ್ನೆ. ಇದೊಂದು ಕಂಟಕವನ್ನು ದಾಟಿದರೆ ಉಳಿದೆಲ್ಲ ಸುಲಭವಾಗಿತ್ತು. ಶಿವಾಜಿ ತಾನು ಕ್ಷತ್ರಿಯನೆಂದು ಮುಂದುಮಾಡಿದ ವಾದಕ್ಕೆ ಅನೇಕರು ವಿರೋಧಿಯಾಗಿದ್ದರು. ಆತನ ಪ್ರಮುಖ ಎದುರಾಳಿಗಳೆಂದರೆ, ಸ್ವತಃ ತನ್ನ ಪ್ರಧಾನಿಯಾದ ಮೋರೋಪಂತ ಪಿಂಗಳೆಯ ನೇತೃತ್ವದಲ್ಲಿ ವಿರೋಧಗೈಯುತ್ತಿದ್ದ ಬ್ರಾಹ್ಮಣರು. ದುರದೃಷ್ಟವೆಂದರೆ, ಶಿವಾಜಿಯ ಮರಾಠಾ ಸರದಾರರೇ ಆತನಿಗೆ ಹೆಚ್ಚಿನ ಸಾಮಾಜಿಕ

ಸ್ಥಾನಮಾನ[೧] ಕೊಡಲು ತಯಾರಿರಲಿಲ್ಲ. ಹೀಗಾಗಿ ಅವರೂ ಅವನಿಗೆ ಎದುರಾಗಿದ್ದರು. ಅವನ ದೃಷ್ಟಿಯಲ್ಲಿ ಆತನೊಬ್ಬ ಶೂದ್ರ. ಶಿವಾಜಿಯ ಹಕ್ಕು ಸ್ಥಾಪನೆಗೆ ಕೂಡ 'ಕಲಿಯುಗದಲ್ಲಿ ಕ್ಷತ್ರಿಯರೇ ಇಲ್ಲ' ಎಂದು ಬ್ರಾಹ್ಮಣರು ಪ್ರತಿಪಾದಿಸುತ್ತಿದ್ದ ನಿರ್ವಿವಾದ ಸಿದ್ಧಾಂತಕ್ಕೆ ವಿರುದ್ಧವಾಗಿಯೇ ಇದ್ದಿತು. ಆತನು ಕಲಿಯುಗದಲ್ಲಿ ಜೀವಿಸುತ್ತಿದ್ದನಾದ್ದರಿಂದ ಕ್ಷತ್ರಿಯನಾಗಿರಲು ಸಾಧ್ಯವಿಲ್ಲವೆಂದೇ ಆಯಿತು. ಕ್ಷತ್ರಿಯನ ಸ್ಥಾನಮಾನಕ್ಕೆ ತನ್ನ ಬಾಧ್ಯತೆಯನ್ನು ಮುಂದೆಮಾಡಿದ ಶಿವಾಜಿಯ ವಾದಕ್ಕೆ ಎತ್ತಲ್ಪಟ್ಟ ಈ ಆಕ್ಷೇಪಣೆಗೆ ಇನ್ನೊಂದು ಸಂಗತಿಯಿಂದಲೂ ಪುಷ್ಟಿ ದೊರೆಯಿತು. ಅದೇನೆಂದರೆ, ಆತನಿಗೆ ಸಕಾಲದಲ್ಲಿ ಅಂದರೆ, ಶಾಸ್ತ್ರಗಳು ನಿಗದಿಪಡಿಸಿದ ಪ್ರಕಾರ, (ಕ್ಷತ್ರಿಯನ) ಹನ್ನೊಂದನೆಯ ವಯಸ್ಸಿನಲ್ಲಿ – ಉಪನಯನ ಅಥವಾ ಯಜ್ಞೋಪವೀತಧಾರಣ ಸಂಸ್ಕಾರವು ಜರುಗಿರಲಿಲ್ಲ. ಇದುವೇ ಆತನು ಶೂದ್ರನೆಂದು ತೋರಿಸಿಕೊಡುತ್ತದೆ ಎಂದು ವಾದಿಸಲಾಯಿತು. ಆದಾಗ್ಯೂ, ವೇದ ಶಾಸ್ತ್ರಗಳಲ್ಲಿ ಪಾರಂಗತನಾದ ಕಾಶಿಯ ಗಗಾಭಟ್ಟನೆಂಬ ಪ್ರಖ್ಯಾತ ಬ್ರಾಹ್ಮಣ ಪಂಡಿತನು ಅವನಿಗೆ ತನ್ನ ಸೇವೆಯನ್ನೊದಗಿಸಲು ಮುಂದಾದುದು ಸುದೈವದ ಸಂಗತಿ. ಗಗಾಭಟ್ಟನು ಎಲ್ಲ ತೊಡಕುಗಳನ್ನು ನಿವಾರಣೆ ಮಾಡಿದ. ಹಾಗೂ, ಶಿವಾಜಿಯ ಕಡೆಯಿಂದ ವ್ರಾತ್ಯಸ್ತೋಮ ಮಾಡಿಸಿ, ಆತನ ಉಪನಯನವನ್ನು ನೆರವೇರಿಸಿದ ನಂತರ, ರಾಯಗಡದಲ್ಲಿ ೧೬೭೪ರ ಜೂನ್ ೬ರಂದು ಶಿವಾಜಿಯ ಪಟ್ಟಾಭಿಷೇಕ[೨] ನೆರವೇರಿಸಿಕೊಟ್ಟ.

---

೧. Kinkaidನು ಪಟ್ಟಾಭಿಷೇಕದ ವಿಚಾರ ಹೇಗೆ ಹುಟ್ಟಿತು ಎಂಬುದರ ಬಗೆಗೆ ಸ್ವಾರಸ್ಯಕರ ಮಾತುಗಳನ್ನು ಹೇಳಿದ್ದಾನೆ : "ಕೆಚ್ಚೆದೆಯ ಡೆಕ್ಕನ್ ಸರದಾರರು ಶಿವಾಜಿಯನ್ನು ರಣರಂಗದಲ್ಲಿ ಹಿಂಬಾಲಿಸಲಿಕ್ಕೆ ಹಿಂದುಮುಂದೆ ನೋಡದಿದ್ದರೂ, ಖಾಸಗಿ ಜೀವನದಲ್ಲಿ ಆತನಿಗೆ ತಮಗಿಂತ ಶ್ರೇಷ್ಠಸ್ಥಾನ ನೀಡುವುದಕ್ಕೆ ತಯಾರಿರಲಿಲ್ಲ. ಅಧಿಕೃತ ಭೋಜನ ಕೂಟಗಳಲ್ಲಿ ಮೋಹಿತೆಗಳೂ, ನಿಂಬಾಳ್ಕರರೂ, ಸಾವಂತರೂ, ಘೋರ್ಪಡೆಗಳೂ ಆದ ತಮ್ಮ ಮಧ್ಯೆ ಭೋಸಲೆ ಆದವನೊಬ್ಬ ತಮಗಿಂತ ಎತ್ತರದ ಸ್ಥಾನದಲ್ಲಿ ಕೂಡುವುದು ಅವರಿಗೆ ಹಿಡಿಸುತ್ತಿರಲಿಲ್ಲ. ಶಿವಾಜಿ ತನ್ನ ಆಪ್ತ ಕಾರ್ಯದರ್ಶಿಯಾದ ಬಾಳಾಜಿ ಅವಜಿ ಚಿಟ್ನೀಸನಿಗೆ ಇದನ್ನು ಹೇಳಿದ. ಆತನ ಸಲಹೆ ಏನಾಗಿತ್ತೆಂದರೆ, ಶಿವಾಜಿ, ತನ್ನ ಕಿರೀಟವನ್ನು ಮೊಘಲ್ ಬಾದಶಹನಿಂದ ಪಡೆಯದೆ ಕಾಶೀ ಬ್ರಾಹ್ಮಣನೊಬ್ಬನ ಕೈಯಿಂದ ತೊಡಿಸಿ ಕೊಳ್ಳುವಂತಾಗಬೇಕು ಎಂದು. ಅರಸನು ತನ್ನ ತಾಯಿ ಜೀಜಾಬಾಯಿ, ಗುರು ರಾಮದಾಸ ಹಾಗೂ ತನ್ನ ಇಷ್ಟದೇವತೆಯಾದ ಭವಾನಿಯೊಂದಿಗೆ ಸಮಾಲೋಚಿಸಿದ. ಅವರೆಲ್ಲರೂ ಆತನ ಕಾರ್ಯದರ್ಶಿಯ ಸಲಹೆಯ ಪರವಾಗಿ ಅಭಿಪ್ರಾಯಪಟ್ಟರು. ಮಹಾರಾಷ್ಟ್ರದ ಇತಿಹಾಸ, ಪು. ೨೨೪.

ಇದರಿಂದ ತಿಳಿದುಬರುವುದೇನೆಂದರೆ, ವೈದಿಕ ಸಂಪ್ರದಾಯದ ಮೇರೆಗೆ ಪಟ್ಟಾಭಿಷೇಕ ನೆರವೇರಿಸಿಕೊಳ್ಳಬೇಕೆಂಬ ವಿಚಾರದ ಹಿಂದಿನ ಉದ್ದೇಶ ಸಾಮಾಜಿಕ ಸ್ಥಾನಮಾನ ಗಳಿಸಿಕೊಳ್ಳುವುದಾಗಿತ್ತೇ ಹೊರತು, ರಾಜಕೀಯವಾಗಿ, ಶಾಸನಬದ್ಧ ಸಾರ್ವಭೌಮತ್ವವನ್ನು ಪಡೆಯುವುದಾಗಿರಲಿಲ್ಲ.

೨. ಕೆಲ ಬ್ರಾಹ್ಮಣರು ಶಿವಾಜಿಯ ಪಟ್ಟಾಭಿಷೇಕವನ್ನು ವೈದಿಕ ರೀತಿಯಲ್ಲಲ್ಲದೆ, (ಶೂದ್ರನ ಪಕ್ಷದಲ್ಲಿ ನಡೆಸುವಂತೆ) ಪೌರಾಣಿಕ ರೀತಿಯಲ್ಲಿ ನೆರವೇರಿಸಿಕೊಡಲು ತಯಾರಿದ್ದರೆಂದು ತೋರುತ್ತದೆ. ವೈದಿಕ ವಿಧಿ–ವಿಧಾನಗಳ ಪ್ರಕಾರ ಪಟ್ಟಾಭಿಷೇಕ ನೆರವೇರಿಸಿದ ಪಕ್ಷದಲ್ಲಿ ಎಲ್ಲ ತರಹದ ಕಂಟಕಗಳು ಎದುರಾಗುವ ಸಂಭವ ಇದೆಯೆಂದು ಅವರು ಭವಿಷ್ಯ ನುಡಿದರು. ದುರ್ದೈವವಶಾತ್, ಈ ಕಂಟಕಗಳು ಎದುರಾಗಿಯೇಬಿಟ್ಟವು. ಹೀಗಾಗಿ, ಅಂಧಶ್ರದ್ಧೆಯುಳ್ಳ ಶಿವಾಜಿ ವೈದಿಕೇತರ ರೀತಿಯಲ್ಲೂ ಒಂದು ಪಟ್ಟಾಭಿಷೇಕ ಮಾಡಿಸಿಕೊಂಡ. ಮರಾಠಾ ಸ್ವರಾಜ್ಯದ ಸಂಸ್ಥಾಪಕ ಶಿವಾಜಿ ಎಂಬ ಎಂ.ಡಿ.ವೈದ್ಯರ ಗ್ರಂಥದಲ್ಲಿ ಶಿವಾಜಿಯ ಎರಡನೆಯ ಪಟ್ಟಾಭಿಷೇಕದ ಬಗೆಗೆ ಬರುವ ಸ್ವಾರಸ್ಯಕ ವೃತ್ತಾಂತವನ್ನು ಓದಿ ನೋಡಬಹುದಾಗಿದೆ :

ಯಾವ ಕಾಲದಲ್ಲಿ ಇರುವಂತೆ ಅಸಂತುಷ್ಟ ಹಾಗೂ ಅಡ್ಡಗಾಲು ಹಾಕುವ ಬ್ರಾಹ್ಮಣರು ಆ ಕಾಲದಲ್ಲೂ ಇದ್ದರು. ಇಡೀ ಮಹಾರಾಷ್ಟ್ರವೇ ಅದನ್ನು ಜಯಜಯಕಾರದಿಂದ ಸ್ವೀಕರಿಸಿದ್ದಾಗಲೂ, ಅವರು ಆ ಸಮಾರಂಭವನ್ನು ಸಮಾಧಾನಕರವೆಂದು ಬಗೆಯಲಿಲ್ಲ. ಬೆಂಗಾಲ್ ರಾಯಲ್ ಏಶಿಯಾಟಿಕ್ ಸೊಸೈಟಿಯ ಗ್ರಂಥಾಲಯದಲ್ಲಿ ಲಭ್ಯವಿರುವ 'ರಾಜ್ಯಾಭಿಷೇಕ ಕಲ್ಪತರು' ಎಂಬ ಕವನದಲ್ಲಿ – ಇದು ಪುಣೆಯ ಇತಿಹಾಸ ಸಂಶೋಧಕ ಮಂಡಳಿಯ ವತಿಯಿಂದ

ಶಿವಾಜಿಯ ಪ್ರಕರಣವು ಹಲವಾರು ಕಾರಣಗಳಿಂದ ಮಹತ್ವದ್ದಾಗಿದೆ. ಎರಡು ಅಂಶಗಳನ್ನು ಅದು ಸಿದ್ಧಮಾಡುತ್ತದೆ : ಉಪನಯನವನ್ನು ನೆರವೇರಿಸುವ ಅಧಿಕಾರ ಬ್ರಾಹ್ಮಣನ ಹೊರತು ಇನ್ಯಾರಿಗೂ ಇಲ್ಲ; ಹಾಗೂ ಬ್ರಾಹ್ಮಣನು ಅದನ್ನು ನೆರವೇರಿಸಲು ತಯಾರಿಲ್ಲದಿದ್ದರೆ ಅವನನ್ನು ಯಾರೂ ಬಲವಂತ ಮಾಡುವ ಹಾಗಿಲ್ಲ. ಶಿವಾಜಿ ಸ್ವತಂತ್ರ ರಾಜ್ಯವೊಂದರ ಅರಸನಾಗಿದ್ದ, ಮತ್ತು ಆಗಲೇ ಆತ ತನ್ನನ್ನು 'ಮಹಾರಾಜಾ' ಹಾಗೂ 'ಛತ್ರಪತಿ' ಎಂದು ಕರೆದುಕೊಳ್ಳತೊಡಗಿದ್ದ. ಆತನ ಪ್ರಜೆಗಳಲ್ಲಿ ಅನೇಕರು ಬ್ರಾಹ್ಮಣರಿದ್ದರು. ಆದಾಗ್ಯೂ, ಅವರಲ್ಲಿ ಯಾರನ್ನೂ ತನ್ನ ಪಟ್ಟಾಭಿಷೇಕ ನೆರವೇರಿಸಿಕೊಡಲು ಬಲಾತ್ಕರಿಸುವಂತಿರಲಿಲ್ಲ.

ಇದು ಮಹತ್ವದ ಅಂಶ. ಯಾಕೆಂದರೆ, ಬ್ರಾಹ್ಮಣನಿಂದ ನೆರವೇರಿಸಲ್ಪಡದಿದ್ದರೆ ಅದು ವಿಧ್ಯುಕ್ತ ಸಂಸ್ಕಾರವಾಗುತ್ತಿರಲಿಲ್ಲ. ಒಬ್ಬ ಬ್ರಾಹ್ಮಣೇತರನಿಂದ ನೆರವೇರಿಸಲ್ಪಟ್ಟ ಸಂಸ್ಕಾರವು ನಿರರ್ಥಕವಾಗುತ್ತಿತ್ತು. ಶಿವಾಜಿಗೆ ತನ್ನ ಪಟ್ಟಾಭಿಷೇಕವನ್ನು ಬ್ರಾಹ್ಮಣೇತರ ನೊಬ್ಬನಿಂದ ಮಾಡಿಸಿಕೊಳ್ಳಲಿಕ್ಕೆ ಬರುತ್ತಿತ್ತು. ಆದರೆ ಹಾಗೆ ಮಾಡುವುದಕ್ಕೆ ಆತ ಧೈರ್ಯ ಮಾಡಲಿಲ್ಲ.[೧] ಯಾಕೆಂದರೆ, ಸಾಮಾಜಿಕವಾಗಿಯಾಗಲೀ ಧಾರ್ಮಿಕವಾಗಿಯಾಗಲೀ ಅದು ಪರಿಣಾಮಕಾರಿ ಆಗುವುದಿಲ್ಲವೆಂಬುದು ಆತನಿಗೆ ಗೊತ್ತಿತ್ತು.

---

(ತ್ರೈಮಾಸಿಕ ಸಂಪುಟ, X-I) ಪ್ರಕಾಶನಗೊಂಡಿದೆ ಕೂಡ–ಎರಡನೇ ಪಟ್ಟಾಭಿಷೇಕದ ಬಗೆಗೆ ಎತ್ತಲಾದ ಆಕ್ಷೇಪಣೆಗಳೆಲ್ಲ ಸಾಕಾರಗೊಂಡಿವೆ. ಹಾಗೆ ನೋಡಿದರೆ, ಈ ಕವನ ತೀರ ಸಮಕಾಲೀನವೇನಲ್ಲ – ಯಾಕೆಂದರೆ, ಇದರಲ್ಲಿ, ಮುಂಚಿನ ಶಿವಭಾರತದಲ್ಲಿ ಹೇಳಲಾದಂತೆ, ಶಿವಾಜಿಯು ವಿಷ್ಣುವಿನ ಅವತಾರವೆಂದು ಹೇಳಲಾಗಿಲ್ಲ. ಅದಕ್ಕೆ ಬದಲಾಗಿ (ನಂತರದ ಕಲ್ಪನೆಯ ಪ್ರಕಾರ) ಆತ ಶಿವನ ಅವತಾರವೆಂದು ಹೇಳಲಾಗಿದೆ. ಇದು ರಾಜಾರಾಮನ ಕಾಲದ್ದು. ಇದು ಗಗಾಭಟ್ಟನ ಎದುರಾಳಿಯಾದ ನಿಶ್ಚಲಪುರಿ ಎಂಬ ಕಾಶಿಯ ವಿದ್ವಾಂಸ ಬ್ರಾಹ್ಮಣ ಸಾಧು ಹಾಗೂ ಗೋವಿಂಧಭಟ್ಟ ಬರ್ವೆಯ ಮಧ್ಯೆ ನಡೆದದ್ದೆಂದು ತಿಳಿಯಲಾದ ಕಾಲ್ಪನಿಕ ಸಂವಾದ. ಅದು ಪಟ್ಟಾಭಿಷೇಕದ ಪೂರ್ವದಲ್ಲಿ ಹಾಗೂ ಅನಂತರ ಕಾಣಿಸಿಕೊಂಡ ಅಘಟಿತಗಳನ್ನು –ಪ್ರತಾಪರಾವ್ ಗುಜರನ ಮರಣ, ಶಿವಾಜಿಯ ಪತ್ನಿಯಾದ ಕಾಶೀಬಾಯಿಯ ಮರಣ, ಗಗಾಭಟ್ಟನ ಮೂಗಿನ ಮೇಲೆ ತೊಲೆಯೊಂದು ಬಿದ್ದು ಗಾಯವಾದುದು – ಇತ್ಯಾದಿ ಅಪಶಕುನಗಳನ್ನು ನಿರೂಪಿಸುತ್ತದೆ. ಗಗಾಭಟ್ಟನು ಸಮಾರಂಭದಲ್ಲಿ ತನ್ನ ಅನುಯಾಯಿಗಳಾದ ಬ್ರಾಹ್ಮಣರನ್ನಷ್ಟೇ ತೆಗೆದುಕೊಂಡಿದ್ದ; ನಿಶ್ಚಲಪುರಿ ಶಿಫಾರಸು ಮಾಡಿದವರನ್ನು ತೆಗೆದುಕೊಂಡಿರಲಿಲ್ಲ ಎಂದು ಕವನ ಸ್ಪಷ್ಟವಾಗಿ ಉಲ್ಲೇಖಿಸುತ್ತದೆ. ಸಮಾರಂಭದಲ್ಲಾದ ಲೋಪದೋಷಗಳನ್ನೂ ಅದು ಉಲ್ಲೇಖಿಸುತ್ತದೆ: ಸಮಾರಂಭದ ನಂತರ ರಥದಲ್ಲಿ ಕುಳಿತುಕೊಳ್ಳುವಾಗ ಗಗಾಭಟ್ಟನೇ ಶಿವಾಜಿಗಿಂತ ಮೊದಲು ಕೂತುಕೊಂಡನಂತೆ. ಸಮಾರಂಭವನ್ನೆಲ್ಲಾ ನೋಡಿಯಾದನಂತರ ನಿಶ್ಚಲಪುರಿಯು ಕೋಟೆಯನ್ನು ಬಿಟ್ಟು ಹೊರಟ, ಆದರೆ ಹೋಗುವ ಮುಂಚೆ ೧೩ನೆಯ, ೨೨ನೆಯ ಹಾಗೂ ೫೫ನೆಯ ದಿನಗಳಂದು ಅನಿಷ್ಟಗಳು ಸಂಭವಿಸುತ್ತವೆಯೆಂದು ಶಿವಾಜಿಗೆ ಹೇಳಿದ. ಅದೇ ಪ್ರಕಾರ ೧೩ನೇ ದಿವಸ ಶಿವಾಜಿಯ ತಾಯಿ ತೀರಿಹೋದಳು. ಮುಂದೆ ಪ್ರತಾಪಗಡದಲ್ಲಿಯು ಒಂದು ಕುದುರೆಯ ಲಾಯ ಸುಟ್ಟು – ಅದರಲ್ಲಿದ್ದ ಹಲವಾರು ಉತ್ತಮ ಕುದುರೆಗಳು ಭಸ್ಮವಾದವು. ಸಿಂಹಗಡದಲ್ಲೊಂದು ಆನೆ ಸತ್ತಿತು. ಇವೆಲ್ಲ ಘಟನೆಗಳಿಂದಾಗಿ, ಶಿವಾಜಿ ನಿಶ್ಚಲಪುರಿಯನ್ನು ತಿರುಗಿ ಕರೆಸುವಂತಾಯಿತು. ಮತ್ತೆ ಅವನ ಹಾಗೂ ಅವನ ಬ್ರಾಹ್ಮಣ ಅನುಯಾಯಿಗಳ ಮುಖಾಂತರ, ವೈದಿಕ ರೀತಿಗೆ ಹೊರತಾಗಿ, ತಾಂತ್ರಿಕ ವಿಧಿಗಳ ಪ್ರಕಾರ, ಮಾಟಮಂತ್ರಗಳ ಪ್ರಕಾರ ಸಿಂಹಾಸನಾರೋಹಣ ಸಮಾರಂಭ ಮತ್ತೊಮ್ಮೆ ನೆರವೇರಿಸಲಾಯಿತು. ಈ ಸಮಾರಂಭವೂ ಸವಿವರವಾಗಿ ವರ್ಣಿಸಲ್ಪಟ್ಟಿದೆ. ಸಾಮವೇದದ ಕೆಲ ವೈದಿಕ ಮಂತ್ರಗಳು, ಅವುಗಳು ವಾಚಿಸಲ್ಪಟ್ಟಂತೆ, ಉಲ್ಲೇಖಿಸಲ್ಪಟ್ಟಿವೆಯಾದರೂ, ಸಮಾರಂಭ ವೈದಿಕ ಪರಂಪರೆಯಂತಾಗಿರಲಿಲ್ಲ. ಅದು, ಕವನದ ಕೊನೆಯಲ್ಲಿ ಹೇಳಿದಂತೆ, 'ಅಶ್ವಿನ್' ೫ರಂದು (ಲಲಿತ ಪಂಚಮಿ ದಿವಸ, ೧೫೯೬) ನೆರವೇರಿಸಲ್ಪಟ್ಟಿತು. ಈ ಸಮಾರಂಭ 'J' ಅವರಿಂದಲೂ ಉಲ್ಲೇಖಿಸಲ್ಪಟ್ಟಿದೆ. ಹಾಗೂ ನಿಶ್ಚಲಪುರಿಯೂ ಮಹಮ್ಮದೀಯ ದಾಖಲೆಯೊಂದರಲ್ಲಿ ಹೆಸರಿಸಲ್ಪಟ್ಟಿದ್ದಾನೆ – *ಮರಾಠಾ ಸ್ವರಾಜ್ಯದ ಸಂಸ್ಥಾಪಕ ಶಿವಾಜಿ*, ಪು.೨೫೨–೨೫೩

೧. ಬ್ರಾಹ್ಮಣರು ತಮ್ಮ ಸ್ಥಾನಮಾನಕ್ಕೆಸೆದ ಸವಾಲಿನೆದುರು ಕಾಯಸ್ಥರು ಒಂದು ಕಾಲದಲ್ಲಿ ತಮ್ಮ ಸಂಸ್ಕಾರಗಳನ್ನು, ಪುರೋಹಿತನು ಮಾಡುವಂತೆ ತಾವೇ ಮಾಡಿಕೊಳ್ಳಲು ನಿರ್ಧರಿಸಿದ್ದರು. ಆದರೆ ತಮ್ಮ ನಿರ್ಧಾರವನ್ನವರು ಕಾರ್ಯಗತಗೊಳಿಸಲಿಲ್ಲ. ಕಾರಣವು ಇದೇ ತೆರನಾಗಿದ್ದಿರಬೇಕು.

ಮೂರನೆಯದಾಗಿ ಅದು ಮಹತ್ವದ್ದು ಯಾಕೆಂದರೆ, ಒಬ್ಬ ಹಿಂದುವಿನ ಸ್ಥಾನ–ಮಾನ ನಿರ್ಧರಿಸುವುದು ಪೂರ್ತಿಯಾಗಿ ಬ್ರಾಹ್ಮಣರ ಸಂಕಲ್ಪವನ್ನವಲಂಬಿಸಿತ್ತು ಎಂಬುದು ಸಿದ್ಧವಾಗುತ್ತದೆ. ಶಿವಾಜಿಯ ಪರವಾಗಿ ತೀರ್ಪು ನೀಡಲ್ಪಡುವುದಕ್ಕೆ ಸಮರ್ಥನೆಯಾಗಿ, ಆತನ ಸ್ನೇಹಿತ ಬಾಳಾಜಿ ಅವಜಿಯು ಮೇವಾರದಿಂದ ಆತನ ವಂಶಾವಳಿಯನ್ನು ಬರೆಯಿಸಿ ತಂದುಕೊಟ್ಟ – ಇದರ ಪ್ರಕಾರ ಕ್ಷತ್ರಿಯರೆಂದು ಗಣಿಸಲ್ಪಟ್ಟ ಮೇವಾಡದ ಸಿಸೋಡಿಯಾ ಮನೆತನದವರಿಗೆ ಶಿವಾಜಿ ಸಂಬಂಧಪಟ್ಟಿದ್ದನೆಂದು ಸಿದ್ಧವಾಗುತ್ತಿತ್ತು. ಈ ವಂಶಾವಳಿ ಪ್ರಸ್ತುತ ಪ್ರಸಂಗಕ್ಕಾಗಿಯೇ ಬರೆಯಿಸಿದಂಥ ಖೊಟ್ಟಿ ದಾಖಲೆ ಎಂದೂ ಟೀಕಿಸಲಾಯ್ತು. ಅದು ಖೊಟ್ಟಿ ದಾಖಲೆ[೧] ಆಗಿರಲಿಲ್ಲವೆಂಬುದನ್ನೊಪ್ಪಿದರೂ, ಅದು ಶಿವಾಜಿಯು ತಾನೊಬ್ಬ ಕ್ಷತ್ರಿಯನೆಂದು ಹೇಳಿಕೊಳ್ಳುವುದನ್ನು ಯಾರೇ ಮನ್ನಿಸಿದರೂ ಅದರ ಸಮರ್ಥನೆ ಇದು ಹೇಗೆ ಆದೀತು? ಶಿವಾಜಿಯು ಒಬ್ಬ ಕ್ಷತ್ರಿಯ ಎಂದು ಸ್ಥಾಪಿಸುವುದೊತ್ತಟ್ಟಿಗಿರಲಿ, ಆ ವಂಶಾವಳಿಯ ದಾಖಲೆ ಇನ್ನೊಂದು ಪ್ರಶ್ನೆಯನ್ನೇ ಹುಟ್ಟುಹಾಕಿತು. ಅದೇನೆಂದರೆ, **'ಸಿಸೋಡಿಯಾಗಳು ಕ್ಷತ್ರಿಯರಾಗಿದ್ದರೇ?'** ಸಿಸೋಡಿಯಾಗಳು ರಜಪೂತರಾಗಿದ್ದರು. ರಜಪೂತರೇ ಪ್ರಾಚೀನ ಇಂಡೋ–ಆರ್ಯನ್ ಸಮಾಜದ ಎರಡನೆಯ ವರ್ಣವಾದ ಮೂಲ ಕ್ಷತ್ರಿಯರ ವಂಶಜರು ಅಹುದೇ ಅಲ್ಲವೇ ಎಂಬುದರ ಬಗೆಗೆ ಸಾಕಷ್ಟು ಸಂದೇಹ ಇದೆ. ಒಂದು ಅಭಿಪ್ರಾಯದ ಪ್ರಕಾರ, ಅವರು ವಿದೇಶಿಯರು; ಭಾರತದ ಮೇಲೆ ಆಕ್ರಮಣ ಮಾಡಿದ ಹೂಣರ ಪೈಕಿ ಇಲ್ಲಿ ಉಳಿದುಕೊಂಡವರು; ಅವರು ರಾಜಪುತಾನಾದಲ್ಲಿ ನೆಲೆಸಿದರು; ಹಾಗೂ ಬ್ರಾಹ್ಮಣರು ಮಧ್ಯ ಭಾರತದ ಬೌದ್ಧಧರ್ಮದ ಪ್ರಭಾವದ ಎದುರು ಇವರನ್ನು ಎತ್ತಿ ಕಟ್ಟುವುದಕ್ಕೋಸ್ಕರ, ಪವಿತ್ರಾಗ್ನಿಯ ಸಮ್ಮುಖದಲ್ಲಿ ಒಂದು ವಿಶೇಷ ಸಮಾರಂಭ ನೆರವೇರಿಸಿ ಇವರಿಗೆ ಕ್ಷತ್ರಿಯರೆಂದು ಸ್ಥಾನಮಾನ ಕೊಟ್ಟರು; ಅದರಿಂದಾಗಿ ಅವರು ಅಗ್ನಿಕುಲ ಕ್ಷತ್ರಿಯರೆಂದು ಹೆಸರಾದರು, ಎಂದು ಮುಂತಾದ ಅಭಿಪ್ರಾಯಗಳಿವೆ. ಈ ಅಭಿಪ್ರಾಯವು ಪ್ರಸ್ತುತ ವಿಷಯದ ಮೇಲೆ ಅಧಿಕೃತವಾಗಿ ಮಾತನಾಡಬಲ್ಲ ವಿದ್ವಾಂಸರಿಂದಲೂ ಪುಷ್ಟೀಕರಿಸಲ್ಪಟ್ಟಿದೆ. ವಿನ್ಸೆಂಟ್ ಸ್ಮಿಥ್‌ರು[೨] ಹೀಗೆ ಹೇಳುತ್ತಾರೆ :

> **"***ಈ ಸಂದರ್ಭದಲ್ಲಿ ನಾನೊಂದು ಸಂಗತಿಯೆಡೆಗೆ ಗಮನ ಸೆಳೆಯಬಯಸುತ್ತೇನೆ – ಇದು ಮೊದಮೊದಲು ಬರೇ ಊಹೆಯಾಗಿದ್ದು, ಈಗ ಅದಕ್ಕೆ ಸಾಕ್ಷ್ಯಾಧಾರ ಸಿಕ್ಕಿ ನಿಶ್ಚಿತವಾಗಿದೆ: ಅದೆಂದರೆ, ರಾಜಪುತಾನಕ್ಕೆ ಹಾಗೂ ಗಂಗಾನದಿಯ ಮೇಲ್ಭಾಗದ ಕೊಳ್ಳಪ್ರದೇಶಕ್ಕೆ ಬಂದ ವಿದೇಶೀ ವಲಸೆಗಾರರು ಅಲ್ಲಿನ ದೇಶೀರಾಜರುಗಳೊಡನೆ ಮಾಡಿದ ಯುದ್ಧಗಳಲ್ಲಿ ಸಂಪೂರ್ಣವಾಗಿ ನಾಶಹೊಂದಲಿಲ್ಲ ಎಂಬುದು. ಬಹಳಷ್ಟು ಜನ ಸಾವನ್ನಪ್ಪಿದರೇನೋ ನಿಜ, ಆದರೆ ಬಹಳಷ್ಟು ಜನ ಬದುಕಿ ಉಳಿದರು ಹಾಗೂ ಸ್ಥಳೀಯ ಜನತೆಯೊಂದಿಗೆ*

---

೧. ಮೇವಾಡದ ಸಿಸೋದಿಯಾ ಮನೆತನ ಎರಡು ಕಾರಣಗಳಿಗಾಗಿ ಮಹತ್ವದ್ದಾಗುತ್ತದೆ : (೧) ಅವರು ಉದಯಪುರದ ಸಿಸೋಡಿಯಾ ಮನೆತನದ ಒಂದು ಶಾಖೆಯಾಗಿದ್ದರು ಹಾಗೂ ರಾಮಾಯಣದ ಕಲಿಯಾದ, ರಾಮನ ಮಗ, ಲವನ ವಂಶದವರಾಗಿದ್ದರು; (೨) ಅವರು ಶುದ್ಧ ಕ್ಷತ್ರಿಯರೂ ಆಗಿದ್ದರು, ಯಾಕೆಂದರೆ ಅವರು ತಮ್ಮ ಹೆಣ್ಣು ಮಕ್ಕಳನ್ನು ಮೊಗಲ ಚಕ್ರವರ್ತಿಗಳಿಗೆ ಮದುವೆ ಮಾಡಿಕೊಡಲು ನಿರಾಕರಿಸಿದ್ದರಲ್ಲದೆ, ಇತರ ರಜಪೂತರೊಂದಿಗೂ – ಉದಾ : ಜಯಪುರ, ಜೋಧಪುರದರೊಂದಿಗೆ – ಹೆಣ್ಣು ಗಂಡಿನ ಸಂಬಂಧ ಮಾಡಲು ನಿರಾಕರಿಸಿದ್ದರು. ಇದೇ ಕಾರಣಕ್ಕಾಗಿರಬಹುದೇ, ಶಿವಾಜಿ ಮೇವಾಡದ ಸಿಸೋಡಿಯಾ ಮನೆತನಕ್ಕೆ ಸಂಬಂಧಪಟ್ಟವನಾಗಿದ್ದನೆಂಬುದನ್ನು ಸ್ಥಾಪಿಸಲು ಮಾಡಿದ ಈ ಪ್ರಯತ್ನ?

೨. Quoted by C.V. Vaidya in his *History of Medieval India,* Vol. II, p.೮

*ಬೆರೆತು, ಅವರ ವಂಶಜರಿಂದು ದೊಡ್ಡ ಪ್ರಮಾಣದಲ್ಲಿದ್ದಾರೆ. ಈ ವಿದೇಶೀಯರು, ಅವರಿಗಿಂತಲೂ, ಮುಂಚೆ ಇಲ್ಲಿಗೆ ಬಂದ ಶಕ ಮತ್ತು ಯೂ–ಚೀಯವರಂತೆ, ಹಿಂದೂತ್ವದ ಅಗಾಧ ಅರಗಿಸಿಕೊಳ್ಳುವ ಶಕ್ತಿಗೆ ಮನಸೋತು, ಸಾರ್ವತ್ರಿಕವಾಗಿ, 'ಹಿಂದು' ಆಗಿ ಪರಿವರ್ತಿಸಲ್ಪಟ್ಟರು. ಯಾವ ಯಾವ ಕುಲಗಳಿಗೆ, ಕುಟುಂಬಗಳಿಗೆ, ಮಾಂಡಲಿಕ ಅಥವಾ ಸಾಮಂತ ಪದವಿ ದೊರಕಿಸಲು ಸಾಧ್ಯವಾಗಿತ್ತೋ ಅಂಥವರು ಹಿಂದೂ ಸಮಾಜದ ಚೌಕಟ್ಟಿನಲ್ಲಿ ಕ್ಷತ್ರಿಯರು, ರಜಪೂತರು ಎಂಬ ಹೆಸರಿನಲ್ಲಿ ಪ್ರವೇಶ ನೀಡಲ್ಪಟ್ಟರು. ಹಾಗೂ, ಪರಿಹಾರರೆಂಬುವವರಾಗಲೀ ಅಥವಾ ಉತ್ತರ ಭಾರತದ ಪ್ರಸಿದ್ಧ ರಾಜಪೂತ ಕುಲಗಳಾಗಲೀ ಇದೇ ರೀತಿ ಐದು ಆರನೇ ಶತಮಾನಗಳಲ್ಲಿ, ಭಾರತಕ್ಕೆ ಬಂದಿಳಿದ ಬರ್ಬರ ತಂಡಗಳಿಂದ ರೂಪುಗೊಳ್ಳತೊಡಗಿದಂತವು. ಈ ಪರಕೀಯರಲ್ಲಿನ ಸಾಮಾನ್ಯ ಜನ ಸುಜರರೂ, ಸಾಮಾಜಿಕ ಸ್ತರದಲ್ಲಿ ರಾಜಪೂತರಿಗಿಂತ ಕೆಳಗಿನ ಜಾತಿಗಳೂ ಆದರು. ಗಂಗಾನದಿ ಹಾಗೂ ರಾಜಪುತಾನಾದ ದಕ್ಷಿಣದ ಕಡೆಗೆ ವಿವಿಧ ಸ್ಥಳೀಯ ಜನಾಂಗಗಳು ಹಾಗೂ ಮೂಲನಿವಾಸಿಗಳ ಬುಡಕಟ್ಟುಗಳು ಇದೇ ತರಹದ ಹಿಂದೂಕೃತ ಪದೋನ್ನತಿ ಹೊಂದಿದವು. ಇಂತಹ ಪದೋನ್ನತಿಯಿಂದಾಗಿ, ಗೊಂಡರು, ಭಾರರು, ಖಾರವರು ಮುಂತಾದ ಜನಾಂಗಗಳು. ಸೂರ್ಯಚಂದ್ರರೇ ತಮ್ಮ ವಂಶದ ಮೂಲ ಪುರುಷರೆಂದು ಹೇಳಿಕೊಳ್ಳುತ್ತ ಕುಲೀನತೆಯಿಂದ ಸುಸಜ್ಜಿತರಾಗಿ ಚಂಡೇಲರು, ರಾಥೋಡರು, ಗಹರವಾಡರು ಹಾಗೂ ಇತರೇ ಪ್ರತಿಷ್ಠಿತ ರಾಜಪೂತ ಕುಲಗಳಾದವು.*

ವಿಲಿಯಮ್ ಕ್ರೂಕ್‌ನು[೧] ಹೀಗೆ ಹೇಳುತ್ತಾನೆ :

*ಇತ್ತೀಚಿನ ಸಂಶೋಧನೆ ರಾಜಪೂತರ ಮೂಲದ ಬಗೆಗೆ ಬಹಳಷ್ಟು ಬೆಳಕನ್ನು ಚೆಲ್ಲುತ್ತದೆ. ವೇದಕಾಲದ ಕ್ಷತ್ರಿಯರ ಹಾಗೂ ಮಧ್ಯ ಕಾಲೀನ ರಾಜಪೂತರ ಮಧ್ಯೆ ದಾಟಲಾಗದ ದೊಡ್ಡ ಕಂದರವೇ ಏರ್ಪಟ್ಟಿದೆ. ಕ್ರಿ.ಶ. ೪೮೦ರ ಸುಮಾರಿಗೆ ಗುಪ್ತರ ಸಾಮ್ರಾಜ್ಯವನ್ನು ನಾಶಮಾಡಿದ ಬಿಳಿಯ ಹೂಣರ, ಅಥವಾ ಅವರಿಗಿಂತ ಭಿನ್ನರಾದ ಶಕರ ಅಥವಾ ಕುಶಾನರ ಆಕ್ರಮಣಕಾರೀ ದಾಳಿಗಳ ಕಾಲದಲ್ಲಿ ಸುಮಾರು ಅನೇಕ ಕುಲಗಳು ಹುಟ್ಟಿಕೊಂಡಿರಬಹುದಾಗಿದೆ. ಹೂಣರೊಂದಿಗೆ ಸಂಬಂಧಹೊಂದಿದ ಗುಜರ್ ಬುಡಕಟ್ಟು ಹಿಂದುತ್ವವನ್ನು ಸ್ವೀಕರಿಸಿತು. ಹಾಗೂ ಇವರ ಮುಂದಾಳುಗಳೇ ಅನೇಕ ಉಚ್ಚ ರಾಜಪೂತ ಮನೆತನಗಳಿಗೆ ಮೂಲವಂಶದವರಾದರು. ತಮಗೆ ರಾಜಮರ್ಯಾದೆ ಸಲ್ಲಬೇಕು ಎಂದು ಹೇಳಿಕೊಳ್ಳುವ ಹೊಸ ಕುಲಗಳು ಹಿಂದೂಧರ್ಮವನ್ನು ಸ್ವೀಕರಿಸಿ ಅದರ ಅಂಗಸಂಸ್ಥೆಯಾದ ಬ್ರಾಹ್ಮಣ್ಯವನ್ನೊಪ್ಪಿಕೊಂಡಾಗ, ರಾಮಾಯಣ ಹಾಗೂ ಮಹಾಭಾರತದ ಕಲಿಗಳೊಂದಿಗೆ ಅವರ ಸಂಬಂಧ ಕಲ್ಪಿಸಲ್ಪಡುವುದು ಸ್ವಾಭಾವಿಕ. ಹೀಗಾಗಿಯೇ ಈ ರಾಜಪೂತ ಮನೆತನಗಳ ಉಗಮವನ್ನು ಸೂರ್ಯ–ಚಂದ್ರರಿಗೆ ತಳಕುಹಾಕುವುದಕ್ಕೆ ದಂತಕತೆಗಳು ಸೃಷ್ಟಿಸಲ್ಪಟ್ಟುವು. ಕ್ಷತ್ರಿಯ ಅಥವಾ ರಾಜಪೂತ ಎಂಬ ಹೆಸರು ಗುಂಪಿನ ಕುಲೋತ್ಪತ್ತಿ ಸೂಚಕವಾಗಿರದೆ*

೧. Quoted by Vaidya, *ibid,* Vol. II, p. ೯

*ಸ್ಥಾನಮಾನ ಸೂಚಕವಾಗಿತ್ತು. ಜಾತಿವ್ಯವಸ್ಥೆ ಅರೆಬರೆ ಬೆಳವಣಿಗೆಯಾಗಿದ್ದ ಆ ಕಾಲದಲ್ಲಿ ಜಾತಿಯ ಬಗೆಗಿದ್ದ ಪೂರ್ವಗ್ರಹಗಳನ್ನು ಉಲ್ಲಂಘಿಸದೆ ಪರಕೀಯರನ್ನು ಈ ಬುಡಕಟ್ಟುಗಳಲ್ಲಿ ಸೇರಿಸುವುದು ಸಾಧ್ಯವಿತ್ತು. ಪರಕೀಯರನ್ನು ಸೇರಿಸಿಕೊಳ್ಳುವಾಗ ಅವರಿಗಾಗಿ ಒಂದು ದಂತಕಥೆ ಕಟ್ಟಿ ಹೇಳುವುದು ಅವಶ್ಯವಾಗಿತ್ತು. ಆ ನಿಮಿತ್ತವೇ ಇಂಥದೊಂದು ದಂತಕಥೆ ಹುಟ್ಟಿಕೊಂಡದ್ದು – ಪ್ರಾಚೀನ ವೇದಕಾಲದ ಋಷಿಗಳ ಸಮ್ಮುಖದಲ್ಲಿ, ಒಂದು ಶುದ್ಧೀಕರಣ ಅಥವಾ ದೀಕ್ಷಾ ವಿಧಿಯ ಮೂಲಕ ಅಗ್ನಿ ಕುಲೋತ್ಪನ್ನ ಬುಡಕಟ್ಟುಗಳು ಸೃಷ್ಟಿಸಲ್ಪಟ್ಟಿದ್ದು, ಬೌದ್ಧ ಮುಂತಾದ ಪಾಖಂಡಿತನಗಳನ್ನು ಹತ್ತಿಕ್ಕುವುದರಲ್ಲಿ ಬ್ರಾಹ್ಮಣರಿಗೆ ನೆರವಾಗಬೇಕೆಂಬ ಉದ್ದೇಶದಿಂದ ಹಾಗೆ ಮಾಡಲಾಯಿತು. ಈ ವಿಶೇಷ ಹಕ್ಕು 'ಅಗ್ನಿಕುಲ'ವೆಂಬ ಅನ್ವರ್ಥನಾಮವುಳ್ಳ ನಾಲ್ಕು – ಪಾರಮಾರ, ಪಡಿಹಾರ, ಚಾಲುಕ್ಯ ಹಾಗೂ ಚೌಹಾಣ – ಬುಡಕಟ್ಟುಗಳಿಗೆ ಮಾತ್ರ ಸೀಮಿತವಾಗಿದ್ದಿತು". ಡಾ. ಡಿ.ಆರ್. ಭಂಡಾರಕರ್[೧] ಅವರದೂ ಇದೇ ಅಭಿಪ್ರಾಯವಾಗಿದೆ. ಅವರ ಪ್ರಕಾರ, ರಾಜಪೂತರು ಗುಜರ್ ಅವರು ವಂಶಜರು; ಗುಜರ್ ಅವರು ಪರಕೀಯರಾಗಿದ್ದರು, ಆದ್ದರಿಂದ ರಾಜಪೂತರು ಪರಕೀಯರ ವಂಶಜರು.*

ಪಟ್ಟಾಭಿಷೇಕಕ್ಕಾಗಿ ನಿಯೋಜಿತರಾದ ಬ್ರಾಹ್ಮಣರು ರಾಜಪೂತರ ಮೂಲದ ಬಗೆಗಾಗಲೀ ಅಥವಾ ಅವರು ತಾವು ಕ್ಷತ್ರಿಯರೆಂದು ಹೇಳಿಕೊಳ್ಳುವುದರ ಸತ್ಯಾಸತ್ಯತೆಯ ಬಗೆಗಾಗಲಿ ಅಜ್ಞರೇನಾಗಿರಲಿಲ್ಲ. ಅವರು ಈ ಸಂಗತಿಯನ್ನು ಬಲ್ಲವರಾಗಿರಲಿಲ್ಲ ಎಂದೂ ಇಟ್ಟುಕೊಳ್ಳೋಣ. ಆದರೆ ಅವರಿಗೆ ಇಷ್ಟಾದರೂ ಗೊತ್ತಿತ್ತಲ್ಲವೇ? – ಕಲಿಯುಗದಲ್ಲಿ ಕ್ಷತ್ರಿಯರಾರೂ ಇಲ್ಲವೆಂದು. ಇದು ಬಹಳ ಹಳೆಯ ಪರಂಪರಾಗತ ನಿರ್ಣಯ. ಆ ಬ್ರಾಹ್ಮಣರಿಗೆ ಪ್ರಾಚೀನ ನಿರ್ಣಯದ ಬಗೆಗೆ ಏನಾದರೂ ಗೌರವ ಇದ್ದಿದ್ದರೆ, ಅವರು ಸಿಸೋಡಿಯಾರ ಹೇಳಿಕೆಯನ್ನಾಗಲೀ, ಶಿವಾಜಿಯದನ್ನಾಗಲೀ ಖಂಡಿತ ತಿರಸ್ಕರಿಸುತ್ತಿದ್ದರು. ಅವರು ಒಂದು ವೇಳೆ ಹಾಗೆ ಮಾಡಿದ್ದಿದ್ದರೆ, ಯಾರೂ ಅವರನ್ನು ದೂಷಿಸುತ್ತಿರಲಿಲ್ಲ. ಆದರೆ ಬ್ರಾಹ್ಮಣರು, ಪೂರ್ವ ದೃಷ್ಟಾಂತದ ಕಾನೂನನ್ನು ನಿರ್ಬಂಧಿತನೆಂದು ಒಪ್ಪಿರಲಿಲ್ಲ. ಅವರಲ್ಲಿ "ಪೂರ್ವನಿರ್ಣಯ," "ಗೌರವಿಸಲ್ಪಡಬೇಕಾದ್ದು" ಎನ್ನುವ ಮಾತೇ ಇರಲಿಲ್ಲ.

ನಾಲ್ಕನೆಯದಾಗಿ, ಕ್ರೈಸ್ತ ಪಾದ್ರಿಗಳ 'ಪಾಪವಿಮೋಚನಾ ಪತ್ರ'ಗಳು ಮಾರಾಟಕ್ಕೆ ತೆರೆದಿಡಲ್ಪಟ್ಟಿದ್ದಂತೆ, ಸ್ಥಾನಮಾನದ ಬಗೆಗಿನ ಬ್ರಾಹ್ಮಣರ ನಿರ್ಣಯಗಳೂ ಮಾರಾಟಕ್ಕೆ ತೆರೆದಿದ್ದವು. ಗಗಾಭಟ್ಟ ಹಾಗೂ ಇತರ ಬ್ರಾಹ್ಮಣರು ಪಟ್ಟಾಭಿಷೇಕವನ್ನು ವಿಧ್ಯುಕ್ತವಾಗಿ ನೆರವೇರಿಸಿಕೊಡುವ ಪುರೋಹಿತರಾಗಿ ಕಾರ್ಯ ಮಾಡಿದ್ದಕ್ಕೆ ಪಡೆದ ಸಂಭಾವನೆಯ ಮೊತ್ತವೇ, ಗಗಾಭಟ್ಟನ ನಿರ್ಣಯ ಪ್ರಾಮಾಣಿಕವಾದದ್ದಾಗಿರಲಿಲ್ಲ ಎಂದು ಸಾರಿ ಹೇಳುತ್ತದೆ. ಪಟ್ಟಾಭಿಷೇಕದ ಖರ್ಚು ಎಷ್ಟು ಬಂದಿತು ಹಾಗೂ ಅದರಲ್ಲಿ ಎಷ್ಟು ಪಾಲು ಗಗಾಭಟ್ಟ ಹಾಗೂ ಅವನ ಅನುಯಾಯಿ ಬ್ರಾಹ್ಮಣರಿಗೆ ಹೋಯಿತು ಎಂಬುದನ್ನು ವೈದ್ಯ ಅವರು ಸಂಗ್ರಹಿಸಿದ ವಿವರಗಳಿಂದ ನಾವು ಕಂಡುಕೊಳ್ಳಬಹುದಾಗಿದೆ.

*"ಈ ಅರ್ಚಕರಿಗೆ ತಲಾ ಒಂದು ಲಕ್ಷ ಹೊನ್ನು, ಒಂದು ಆನೆ, ಒಂದು ಕುದುರೆ, ವಸ್ತ್ರಾಲಂಕಾರ, ಒಡವೆ ಹೀಗೆ ನೀಡಲಾಯಿತು. ಗಗಾಭಟ್ಟನಿಗೆ ಸಮಾರಂಭ ಸಾಂಗವಾಗಿ ನೆರವೇರುವಂತೆ*

---

೧. ವೈದ್ಯ ಅವರಿಂದ ಉದ್ಧೃತವಾಗಿದೆ (ಅದೇ. ಪು.೧೦). ವೈದ್ಯ ಅವರು ಈ ಅಭಿಪ್ರಾಯವನ್ನು ವಿರೋಧಿಸುತ್ತಾರೆ, ಹಾಗೂ ರಾಜಪೂತರು ಪರಕೀಯರಲ್ಲ; ಅವರು ಮೂಲ ಆರ್ಯ–ಕ್ಷತ್ರಿಯರ ವಂಶಜರೇ ಎಂದು ಸಾಧಿಸುತ್ತಾರೆ. ಆದರೆ ವೈದ್ಯರು ಹೇಳುವ ಮಾತು ಒಪ್ಪುವುದು ಕಷ್ಟ.

*ನೋಡಿಕೊಂಡದ್ದಕ್ಕಾಗಿ ಒಂದು ಲಕ್ಷ ರೂಪಾಯಿ ಕೊಡಲಾಯಿತು. ಪಟ್ಟಾಭಿಷೇಕದ ವಿಧಿಗಳು ಹಲವು ಜರುಗಿದಾಗಲೂ ಪ್ರತಿಸಲ ಪ್ರಸಂಗಕ್ಕೆ ಯಥೋಚಿತವಾದ ದೊಡ್ಡ ಮೊತ್ತದ ದಕ್ಷಿಣೆಗಳನ್ನು ನೀಡಲಾಯಿತು. ಒಟ್ಟಾರೆ ಖರ್ಚು ಒಂದು ಕೋಟಿ ನಲವತ್ತೆರಡು ಲಕ್ಷ ಹೊನ್ನು ಅಥವಾ ೪೨೬ ಲಕ್ಷ ರೂಪಾಯಿಗೆ ಮುಟ್ಟಿತು" ಎಂದು ಸಭಾಸದ ವರದಿ ಮಾಡಿದ್ದಾನೆ.*

*ಶಿವಾಜಿಯ ಪಟ್ಟಾಭಿಷೇಕದ ಕಾಲಕ್ಕೆ ೫೦,೦೦೦ ವೈದಿಕ ಬ್ರಾಹ್ಮಣರು ಕೂಡಿದ್ದರು ಎಂದು ಸಭಾಸದನು ಹೇಳುತ್ತಾನೆ.[೧] ಇವರಲ್ಲದೆ, ಜೋಗಿಗಳು, ಸನ್ಯಾಸಿಗಳು ಸಹಸ್ರ-ಸಹಸ್ರ ಸಂಖ್ಯೆಯಲ್ಲಿ ಬಂದಿದ್ದರು. ಇವರಿಗೆ ಕೋಟೆಯ ಕೆಳಗಡೆ ಭೋಜನ ಮಾಡಿಸಲಾಯಿತು. ಇಲ್ಲವೆ ಧಾನ್ಯ ನೀಡಲಾಯಿತು. ಪಟ್ಟಾಭಿಷೇಕದ ಮುಂಚೆ ಶಿವಾಜಿಯ ಬಂಗಾರ ಹಾಗೂ ಇತರೇ ಶುಭವಸ್ತು, ಲೋಹಗಳೊಂದಿಗೆ ತುಲಾಭಾರ ಮಾಡಿಸಿಕೊಂಡನೆಂದು ಸಮಕಾಲೀನ ದಾಖಲೆಗಳಲ್ಲಿ ಹೇಳಲಾಗಿದೆ. ೩ನೇ ಅಕ್ಟೋಬರ್ ೧೬೮೪ರಲ್ಲಿ ಜರುಗಿದ ಸಮಾರಂಭವನ್ನು ಸವಿವರವಾಗಿ ವರ್ಣಿಸುವ ಡಚ್ ದಾಖಲೆಯೊಂದು ಹೇಳುವ ಪ್ರಕಾರ ಶಿವಾಜಿಯ ತೂಕ ೧೭,೦೦೦ ಹೊನ್ನುಗಳು ಅಥವಾ ೧೬೦ ಪೌಂಡುಗಳಷ್ಟಾಗಿತ್ತು. ಹಾಗೂ ಆತ ಬೆಳ್ಳಿ, ತಾಮ್ರ, ಕಬ್ಬಿಣ ಇತ್ಯಾದಿ ಹಾಗೂ ಕರ್ಪೂರ ಉಪ್ಪು, ಸಕ್ಕರೆ, ಬೆಣ್ಣೆ, ಅನೇಕ ಪ್ರಕಾರದ ಹಣ್ಣುಗಳು, ಅಡಕೆ ಮುಂತಾದವುಗಳೊಂದಿಗೆ ತುಲಾಭಾರ ಮಾಡಿಸಿ ಅದೆಲ್ಲವನ್ನೂ ಬ್ರಾಹ್ಮಣರಲ್ಲಿ ಹಂಚಿಸಿದ. ಪಟ್ಟಾಭಿಷೇಕದ ಮರುದಿನ, ಜೂನ್ ೭ರಂದು, ಎಲ್ಲರಿಗೂ ದಕ್ಷಿಣೆ ಹಂಚಿದಾಗ, ಒಬ್ಬೊಬ್ಬ ಬ್ರಾಹ್ಮಣನಿಗೆ ತಲಾ ೩ರಿಂದ ೫ ರೂಪಾಯಿ ಬಂದಿತು, ಹಾಗೂ ಇತರರಿಗೆ, ಹೆಣ್ಣುಮಕ್ಕಳಿಗೆ ಚಿಕ್ಕಮಕ್ಕಳಿಗೆ ತಲಾ ೨ ಹಾಗೂ ೧ ರೂಪಾಯಿ ಹಂಚಲಾಯಿತು. ಒಟ್ಟಾರೆ ದಕ್ಷಿಣೆಯ ಮೌಲ್ಯ ಒಂದೂವರೆ ಲಕ್ಷ ಹೊನ್ನುಗಳಷ್ಟಾಗಿತ್ತು.[೨]*

*Oxendenನೂ ತನ್ನ ಮೇ ೧೮ರಿಂದ ಜೂನ್ ೧೩ರವರೆಗಿನ ದಿನಚರಿಯಲ್ಲಿ ಹೀಗೆ ನಮೂದಿಸುತ್ತಾನೆ : ಶಿವಾಜಿಯೂ ಬಂಗಾರದಲ್ಲಿ ತುಲಾಭಾರ ಮಾಡಿಸಿಕೊಂಡು, ಆ ತೂಕದ ೧೬,೦೦ ಹೊನ್ನುಗಳಿಗೆ ಮತ್ತೆ ಒಂದು ಲಕ್ಷ ಹೊನ್ನುಗಳನ್ನು ಸೇರಿಸಿ ಬ್ರಾಹ್ಮಣರಿಗೆ ದಕ್ಷಿಣೆ ರೂಪದಲ್ಲಿ ವಿತರಿಸಿದ.*

*ಮೇಲ್ಕಾಣಿಸಿದ ಡಚ್ ದಾಖಲೆಯು ಮತ್ತೂ ಏನು ಹೇಳುತ್ತದೆಯೆಂದರೆ, ವ್ರಾತ್ಯಕರ್ಮಕ್ಕಾಗಿ ಗಗಾಭಟ್ಟನಿಗೆ ೭೦೦೦ ಹೊನ್ನುಗಳನ್ನು ಹಾಗೂ ಇತರ ಬ್ರಾಹ್ಮಣರಿಗೆ ೧೭,೦೦೦ ಹೊನ್ನುಗಳನ್ನು ಕೊಡಲಾಯಿತು. ೫ನೇ ಜೂನಿನಂದು ಶಿವಾಜಿ ಪವಿತ್ರ ಗಂಗಾಜಲ ಸ್ನಾನ ಮಾಡಿದಾಗ ಅಲ್ಲಿ ಹಾಜರಿದ್ದ ಪ್ರತಿಯೊಬ್ಬ ಬ್ರಾಹ್ಮಣನಿಗೆ ೧೦೦ ಹೊನ್ನಿನಂತೆ ಕೊಡಲಾಯಿತು".*

---

೧. ವೈದ್ಯ ಅವರು ಇದು ೫,೦೦೦ಕ್ಕೆ ಬದಲಾಗಿ ೫೦,೦೦೦ ಎಂದು ತಪ್ಪಾಗಿ ಬಿದ್ದಿರಬಹುದು ಎಂದು ಹೇಳುತ್ತಾರೆ. ಆದರೆ ಕಾರಣವನ್ನೇನೂ ಕೊಟ್ಟಿಲ್ಲ.

೨. ಒಂದು ಹೊನ್ನು ಮೂರು ರೂಪಾಯಿಗಳ ಮೌಲ್ಯಕ್ಕೆ ಸಮನಾಗಿತ್ತು.

ಗಗಾಭಟ್ಟನಿಗೆ ಕೊಡಲಾದ ಮೊಬಲಗನ್ನು ಬರೀ ಒಬ್ಬ ಪುರೋಹಿತನಿಗೆ ಕೊಡಬಹುದಾದ ಶುಲ್ಕ[೧] ಮತ್ತಿನ್ನೇನಲ್ಲ ಎಂದು ಬಗೆಯಲು ಸಾಧ್ಯವೇ? ಗಗಾಭಟ್ಟನಿಗೆ ಸಲ್ಲಬೇಕಾದಷ್ಟು ಸಲ್ಲಲಿಲ್ಲ ಎಂದು ಸೂಚಿಸುವ ಒಂದು ಸಂಗತಿ ಇದೆ. ಅದೆಂದರೆ, ಶಿವಾಜಿಯ ಮಂತ್ರಿಗಳು ಪಡೆದಷ್ಟು ಗಗಾಭಟ್ಟನಿಗೆ ದೊರೆಯಲಿಲ್ಲ ಅನ್ನುವುದು. ಈ ಸಂಗತಿಯ ಮೇಲಿಂದ ಒಂದು ತೀರ್ಮಾನಕ್ಕೆ ಬರುವ ಮೊದಲು ವ್ಯತಿರಿಕ್ತವಾದ ಎರಡು ಸಂಗತಿಗಳನ್ನು ನಾವು ಗಮನಿಸಬೇಕು. ಅವು ಈ ಇಡೀ ವಾದವನ್ನೇ ಬುಡಮೇಲು ಮಾಡುವಂಥವು : ಮೊದಲನೆಯದೆಂದರೆ ಮಂತ್ರಿಗಳೇ ಶಿವಾಜಿಗೆ ಪಟ್ಟಾಭಿಷೇಕದ ಸುಪ್ರಸಂಗದಲ್ಲಿ ತಮ್ಮ ಕಾಣಿಕೆ[೨] ನೀಡಿದ್ದರು ಎನ್ನುವುದು. ಮೋರೋಪಂತ ಪಿಂಗಳೆ ಎಂಬ ಶಿವಾಜಿಯ ಪೇಶ್ವೆ ಅಥವಾ ಪ್ರಧಾನಿ ೭೦೦೦ ಹೊನ್ನುಗಳನ್ನು ಹಾಗೂ ಇತರ ಇಬ್ಬರು ಮಂತ್ರಿಗಳು ತಲಾ ೫೦೦೦ ಹೊನ್ನುಗಳನ್ನು ಕಾಣಿಕೆಯಾಗಿ ಅರ್ಪಿಸಿದ್ದರು. ಶಿವಾಜಿಯು ಅವರಿಗೆ ಪ್ರತಿಯಾಗಿ ಕೊಟ್ಟ ಕಾಣಿಕೆಗಳಲ್ಲಿ ಈ ಮೊತ್ತಗಳನ್ನು ಕಳೆದರೆ, ಅವರಿಗೆ ಮುಟ್ಟಿದ್ದು ಅತ್ಯಲ್ಪ ಎಂದೇ ಭಾವಿಸಬೇಕಾಗುತ್ತದೆ.

ಎರಡನೇ ಸಂಗತಿಯೆಂದರೆ, ಶಿವಾಜಿಯ ಪಟ್ಟಾಭಿಷೇಕದ ವಿಚಾರಕ್ಕೆ ಇದೇ ಮಂತ್ರಿಗಳು ಕಟ್ಟಾ ವಿರೋಧಿಗಳಾಗಿದ್ದರು. ಆತನು ಶೂದ್ರನೆಂಬುದು ಅವರ ದೃಢ ನಿಲುಮೆಯಾಗಿತ್ತು. ಕ್ಷತ್ರಿಯರಾದವರಿಗೆ ಮಾತ್ರ ಇರುವ ಈ ಹಕ್ಕಿಗೆ ಆತ ಬಾಧ್ಯಸ್ಥನಾಗಿರಲಿಲ್ಲ ಎಂದು ಅವರ ಅಭಿಮತ. ಆ ಕಾರಣವೇ, ಅವರ ಬಾಯಿ ಮುಚ್ಚಿಸಲು ಹಾಗೂ ಅವರನ್ನು ತನ್ನ ಕಡೆಗೆ ಒಲಿಸಿಕೊಳ್ಳಲು ಶಿವಾಜಿಯು ಅವರಿಗೆ ದೊಡ್ಡಮೊತ್ತದ ಕಾಣಿಕೆಗಳನ್ನಿತ್ತಿದ್ದು. ಆದ್ದರಿಂದ, ಈ ಮೊತ್ತಗಳ ಮಾನದಿಂದ, ಗಗಾಭಟ್ಟನಿಗೆ ಪೌರೋಹಿತ್ಯ ಕಾರ್ಯಕ್ಕಾಗಿ ನೀಡಿದ ಮೊತ್ತ ನ್ಯಾಯವಾದ ಶುಲ್ಕವಾಗಿತ್ತೇ? ಅದಕ್ಕೆ ಮಿಕ್ಕೇನಲ್ಲವೇ? ಎಂಬ ಪ್ರಶ್ನೆಯನ್ನು ಬಗೆಹರಿಸಲಿಕ್ಕಾಗುವುದಿಲ್ಲ. ಗಗಾಭಟ್ಟನು ತಳೆದ ಚಂಚಲ ನಿಲುವುಗಳಿಂದ ಆತ ಸ್ವೀಕರಿಸಿದ್ದು ನ್ಯಾಯಯುತವಾದ ಶುಲ್ಕಕ್ಕಿಂತ ಹೆಚ್ಚಾಗಿತ್ತು, ಹಾಗೂ ಆತ ಪಡೆದದ್ದರಲ್ಲಿ ಶುಲ್ಕವಲ್ಲದೆ, ತನ್ನ ನಿಲುಮೆ ಬದಲಿಸದರಲು ನೀಡಿದ ಅಕ್ರಮ ಸಂಭಾವನೆಯೂ ಸೇರಿತ್ತು ಎಂದು ತೀರ್ಮಾನಿಸದೇ ಗತ್ಯಂತರವಿಲ್ಲ.

ಈ ಪಟ್ಟಾಭಿಷೇಕದ ವ್ಯವಹಾರದಲ್ಲಿ, ಅದನ್ನು ಸಾಧ್ಯವಾಗಿಸುವುದರಲ್ಲಿ ಮುಂಚೂಣಿಯ ಪಾತ್ರ ವಹಿಸಿದವನು ಮಹಾರಾಷ್ಟ್ರದ ಕಾಯಸ್ಥನೂ, ಶಿವಾಜಿಯ ಆಪ್ತಕಾರ್ಯದರ್ಶಿಯೂ ಆದ ಬಾಳಾಜಿ ಅವಜಿ. ಆತನು ಕೈಕೊಂಡ ಮೊದಲ ಕ್ರಮವೆಂದರೆ, ಮೂವರು ಬ್ರಾಹ್ಮಣರನ್ನು[೩] ಶಿವಾಜಿಯ ಅಂತಸ್ತು ಹಾಗೂ ಉದ್ದೇಶದ ಬಗೆಗೆ ಪೂರ್ಣ ಮಾಹಿತಿಯೊಂದಿಗೆ, ಸಂದೇಶವಾಹಕರೆಂದೂ ಕಾಶಿಗೆ ಗಗಾಭಟ್ಟನೆಡೆಗೆ ಕಳುಹಿಸಿದುದು. ಗಗಾಭಟ್ಟನು ಏನು ಮಾಡಿದ? ಆತ ಆ ಮೂವರು ದೂತರನ್ನು, ಆಹ್ವಾನವನ್ನು ನಿರಾಕರಿಸುವ ಪತ್ರದೊಂದಿಗೆ ತಿರುಗಿ ಕಳುಹಿಸಿದ. ಅವನು ನಿರಾಕರಿಸಿದ ಕಾರಣ? ಆತನ ದೃಷ್ಟಿಯಲ್ಲಿ ಶಿವಾಜಿಯು ಶೂದ್ರನಾಗಿದ್ದು ಪಟ್ಟಾಭಿಷೇಕಕ್ಕೆ ಅಪಾತ್ರನಾಗಿದ್ದ. ಬಾಳಾಜಿಯ ಮುಂದಿನ ಕ್ರಮವೆಂದರೆ, ಶಿವಾಜಿಯು ಕ್ಷತ್ರಿಯನೆಂದು ಹೇಳಿಕೊಳ್ಳುವುದಕ್ಕೆ ಆಧಾರವಾಗಬಹುದಾದ ಪುರಾವೆಯನ್ನು ಕಲೆಹಾಕುವುದು. 'ರಜಪೂತರೂ ಹಾಗೂ ಮೇವಾಡದ ಆಳರಸರೂ ಆದ ಸಿಸೋಡಿಯಾರವರ ವಂಶಜನಾದ ಕ್ಷತ್ರಿಯನೆ ಶಿವಾಜಿ' ಎನ್ನುವುದನ್ನು ಸಾಬೀತುಗೊಳಿಸಲು ವಂಶಾವಳಿಯನ್ನು ತರಿಸಿಕೊಳ್ಳುವುದರಲ್ಲಿ ಬಾಳಾಜಿಯು ಯಶಸ್ವಿಯಾದ. ಈ ಸಾಕ್ಷ್ಯವನ್ನು

೧. ಗಗಾಭಟ್ಟನು ಕೇವಲ ಒಂದು ಲಕ್ಷ ರೂಪಾಯಿ ಪಡೆದ ಎಂದು ಯಾರೂ ಭಾವಿಸಬಾರದು. ಅದರ ಜೊತೆಗೆ ೭೦೦೦ ಹೊನ್ನುಗಳನ್ನು (ಅಥವಾ ರೂ. ೨೧,೦೦೦) ವ್ರಾತ್ಯಸ್ತೋಮಕ್ಕಾಗಿ ಆತ ಪಡೆದ. ಇದಲ್ಲದೆ, ತುಲಾಭಾರದ ಬಂಗಾರ ಹಾಗೂ ಇತರೇ ವಸ್ತುಗಳ ಮೌಲ್ಯದಲ್ಲೂ ಆತ ಪಾಲು ಪಡೆದಿರಬೇಕು.

೨. ವೈದ್ಯ ಅವರ ಅದೇ ಪುಸ್ತಕ, ಪು. ೨೪೭

೩. ಅವರು (೧) ಕೇಶವ ಭಟ್ಟ (೨) ಬಾಲಚಂದ್ರ ಭಟ್ಟ, ಹಾಗೂ (೩) ಸೋಮನಾಥ ಭಟ್ಟ ಎಂಬುವವರು.

ಆತ ಇನ್ನೊಬ್ಬ[೧] ದೂತನೊಂದಿಗೆ ಗಗಾಭಟ್ಟನ ಕಡೆಗೆ ಕಳುಹಿಸಿಕೊಟ್ಟ. ಗಗಾಭಟ್ಟನು ಈ ಪುರಾವೆಯಿಂದ ಪ್ರಭಾವಿತನಾದಂತಿದೆ. ಯಾಕೆಂದರೆ, ಪಟ್ಟಾಭಿಷೇಕವನ್ನು ನೆರವೇರಿಸಿಕೊಡಲು ರಾಯಗಡಕ್ಕೆ ಬರಲು ಒಪ್ಪಿಕೊಂಡ. ಆದರೆ ಬಂದು ಮುಟ್ಟಿದ ಮೇಲೆ ಆತ ಏನು ಮಾಡಿದ? ಆತ ಸಾಕ್ಷ್ಯವನ್ನು ಪುನರ್ವಿಮರ್ಶಿಸಿ ನೋಡಿದ್ದಾಗಿಯೂ ಹಾಗೂ, ಶಿವಾಜಿಯೊಬ್ಬ ಶೂದ್ರ, ಆದ್ದರಿಂದ ಪಟ್ಟಾಭಿಷೇಕಕ್ಕೆ ಅನರ್ಹ ಎಂಬ ಅನುಮಾನಕ್ಕೆ ಬಂದುದಾಗಿಯೂ ತಿಳಿಸಿದ.

ಈ ವ್ಯವಹಾರದಲ್ಲಿ ಗಗಾಭಟ್ಟನು ಪ್ರದರ್ಶಿಸಿದ ತಿಪ್ಪರಲಾಗ ಇದೊಂದೇ ಅಲ್ಲ. ಆತ ತೆಗೆದುಕೊಂಡ ಇನ್ನೂ ಒಂದು ತೀರ ವಿಚಿತ್ರವಾದ 'ತಿರುವು–ಮುರುವು' ನಿಲುಮೆಯೆಂದರೆ, ತಾನೂ ಶೂದ್ರನಾದ ಶಿವಾಜಿಯ ಪಟ್ಟಾಭಿಷೇಕಕ್ಕೆ ಬದಲು ಕಾಯಸ್ಥನಾದ (ಆದ್ದರಿಂದ ಕ್ಷತ್ರಿಯನಾದ) ಬಾಳಾಜಿಯ ಪಟ್ಟಾಭಿಷೇಕವನ್ನು ನೆರವೇರಿಸಲು ತಯಾರಿದ್ದುದಾಗಿ ಹೇಳಿದುದು. ಗಗಾಭಟ್ಟ ಇಲ್ಲಿಗೇ ತನ್ನ ಆಟ ನಿಲ್ಲಿಸಲಿಲ್ಲ. ಆತ ಮತ್ತೆ 'ಪಲ್ಟಿ' ಹೊಡೆದು ಶಿವಾಜಿ ಕ್ಷತ್ರಿಯನೆಂದೂ, ಆತನ ಪಟ್ಟಾಭಿಷೇಕವನ್ನು ನೆರವೇರಿಸಿಕೊಡಲು ತಾನು ಸಿದ್ಧನಿರುವುದಾಗಿಯೂ ಹೇಳುವುದಲ್ಲದೆ, ಕಾಯಸ್ಥರು ವ್ಯಭಿಚಾರಕ್ಕೆ ಹುಟ್ಟಿದವರು ಎಂದು ಸಿದ್ಧಮಾಡುವ 'ಗಗಾಭಟ್ಟಿ'ಯೆಂಬ ಗ್ರಂಥವೊಂದನ್ನು ಬರೆಯುವುದಾಗಿಯೂ ಹೇಳಿಕೊಂಡ.

ಇವೆಲ್ಲ ತಿಪ್ಪರಲಾಗಗಳು ಏನನ್ನು ಸೂಚಿಸುತ್ತವೆ? ಆತ (ಗಗಾಭಟ್ಟ) ಒಲ್ಲದ ಮನಸ್ಸಿನವನಾಗಿದ್ದ, ಹಾಗೂ ಆತನ 'ಒಪ್ಪಿಗೆ'ಯನ್ನು ದುಡ್ಡು ಸುರುವಿ ಕೊಂಡುಕೊಳ್ಳ ಬೇಕಾಯಿತೆಂದಲ್ಲವೇ? ಈ ವಾದ ಗಟ್ಟಿ ಆಗಿದ್ದಾದರೆ, ಶಿವಾಜಿ ಕ್ಷತ್ರಿಯನೆಂಬ ತನ್ನ ನಿರ್ಣಯವನ್ನು ಗಗಾಭಟ್ಟ ಆಕ್ರಮ ಸಂಭಾವನೆಗಾಗಿ ಮಾರಿಕೊಂಡನೆಂಬುದು ನಿಸ್ಸಂಶಯ?[೨]

---

೧. ಈ ದೂತನ ಹೆಸರು ನೀಲೋ ಯೆಸಾಜಿ ಎಂದಾಗಿತ್ತು. ಆತನೊಬ್ಬ ಕಾಯಸ್ಥ. ಮೊದಲ ಸಲ ಗಗಾಭಟ್ಟನನ್ನು ಕರೆತರಲು ಹೋದ ಮೂವರು ಶಿವಾಜಿಯ ಹಿತಾಸಕ್ತಿಗಳಿಗೆ ಸ್ವಾಭಾವಿಕವಾಗಿ ವಿರೋಧಿಯಾಗಿರುವ ಬ್ರಾಹ್ಮಣರಾದ್ದರಿಂದ ಅವರು ಪಿತೂರಿ ಮಾಡಿರಬಹುದೆಂದು ಶಂಕಿಸಲಾಯಿತು. ಅವರು ತಿರುಗಿ ತಂದ ಪತ್ರವೂ ಖೊಟ್ಟಿಯಾದ್ದೆಂದು ಬಾಳಾಜಿಗೆ ಅನಿಸಿರಬೇಕು. ಆದ್ದರಿಂದಲೇ ಬಾಳಾಜಿಯು ಈ ಸಲ ತನ್ನ ಜಾತಿಯವನೇ ಆದ ಕಾಯಸ್ಥನೊಬ್ಬನನ್ನು ಕಳಿಸಿದ್ದ.

೨. ಗಗಾಭಟ್ಟನ ನಿಲುಮೆಯ ಬದಲಿಕೆಗಳ ಸಂಬಂಧದಲ್ಲಿ ಸಂಗತಿಗಳಿಗಾಗಿ ನಾನು ಕೆ.ಎಸ್. ಠಕಾರೆಯವರ ಮರಾಠಿ ಕಿರುಹೊತ್ತಿಗೆ ಗ್ರಾಮಾಣ್ಯಾ ಚಾ ಇತಿಹಾಸದ ನೆರವನ್ನು ಪಡೆದಿದ್ದೇನೆ. ಠಕಾರೆಯವರು ಬಖೈರು ಅಥವಾ ಘಟನಾವಳಿಗಳ ದಾಖಲಾತಿ (Chronicles)ಗಳಿಂದ ನೆರವು ಪಡೆದಿದ್ದಾರೆ. ಅವು ಎಷ್ಟರ ಮಟ್ಟಿಗೆ ನಂಬಲರ್ಹವೋ ಹೇಳುವುದು ಕಷ್ಟ. ಆದರೆ ಇಷ್ಟನ್ನು ಮಾತ್ರ ಒಪ್ಪಬಹುದು: ಏನೆಂದರೆ ಗಗಾಭಟ್ಟನ ತಿಪ್ಪರಲಾಗಗಳು ನಿಜವೆಂದು ತೋರುತ್ತದೆ. ಯಾಕೆಂದರೆ, ಅದಿಲ್ಲದೆ ಹೋದಲ್ಲಿ, ಮಾನಸಿಕ ಕ್ಷೋಭೆಯನ್ನುಂಟು ಮಾಡಬಹುದಾದ ಕೆಲ ಸಂಗತಿಗಳನ್ನು ವಿವರಿಸುವುದು ಕಷ್ಟ. ಉದಾಹರಣಾರ್ಥವಾಗಿ ಈ ಪ್ರಶ್ನೆಯನ್ನೇ ತೆಗೆದುಕೊಳ್ಳಿರಿ: ಗಗಾಭಟ್ಟನು ರಾಯಗಡಕ್ಕೆ ಬಂದ ನಂತರ ತನ್ನ ನಿಲುಮೆಯನ್ನು ಬದಲಿಸಿದನೇ? ಹಾಗೆ ಮಾಡಿದ್ದರೆ, ಏತಕ್ಕಾಗಿ? ಈ ಬದಲಾವಣೆಯ ಕಾರಣ ಗಗಾಭಟ್ಟರು ರಾಯಗಡಕ್ಕೆ ಬಂದನಂತರ ಕಂಡುಕೊಂಡ ಒಂದು ಸಂಗತಿಯಲ್ಲಿ ಸಿಕ್ಕಬಹುದು. ಅದೆಂದರೆ, ಇನ್ಯಾರೂ ಆಗಿರದೆ, ಶಿವಾಜಿಯ ಪ್ರಧಾನಿಯೇ ಆದ ಮೋರೋಪಂತ ಪಿಂಗಳೆಯೆಂಬ ಬ್ರಾಹ್ಮಣನು ಶಿವಾಜಿಯು ಕ್ಷತ್ರಿಯನೆಂದು ಹೇಳಿಕೊಳ್ಳುವುದಕ್ಕೆ ವಿರೋಧಿಯಾಗಿದ್ದನೆಂಬುದು. ಆ ಇಬ್ಬರೂ ಬ್ರಾಹ್ಮಣರು ಪರಸ್ಪರ ಸಂಧಿಸಿದಾಗ ಅವರಲ್ಲಿ ಒಂದು ತಿಳುವಳಿಕೆ ಮೂಡಿರಬೇಕು, ಹಾಗೂ ತತ್ಪರಿಣಾಮವಾಗಿ ಗಗಾಭಟ್ಟನ ನಿಲುಮೆಯಲ್ಲಿ ಬದಲಾವಣೆಯಾಗಿರಬೇಕು ಎಂಬುದು ಸಂಭವನೀಯ. ಮೊದಮೊದಲು ವಿರೋಧಿಸಿದ ಮೋರೋಪಂತ ಪಿಂಗಳೆಯು ಕಾಲಾನಂತರದಲ್ಲಿ ಶಿವಾಜಿಯ ಪಟ್ಟಾಭಿಷೇಕದ ಕಟ್ಟಾ ಬೆಂಬಲಿಗನಾದುದು ಏಕೆ? 'ಬಾಳಾಜಿಯೇ ಅರಸನೆಂದು ಘೋಷಿಸಲ್ಪಡಬೇಕು' ಎಂದು ಗಗಾಭಟ್ಟನು ಪ್ರಸ್ತಾಪಿಸಿದನೆಂಬುದು ನಿಜಸಂಗತಿಯಾಗಿದ್ದ ಪಕ್ಷದಲ್ಲಿ, ಅದು ಮೋರೋಪಂತನ ಪಕ್ಷಾಂತರಕ್ಕೆ ಪೂರ್ತಿಯಾದ ವಿವರಣೆ ನೀಡುತ್ತದೆ. ಬಾಳಾಜಿಯು ಕಾಯಸ್ಥನಾಗಿದ್ದು–ಕಾಯಸ್ಥರು ಬ್ರಾಹ್ಮಣರ ಕಡು ವೈರಿಗಳಾಗಿದ್ದುದರಿಂದ–ಮೋರೋಪಂತನು ಶಿವಾಜಿಯ ಪಟ್ಟಾಭಿಷೇಕಕ್ಕೆ (ಅದು ಎರಡು ಅನಿಷ್ಟಗಳಲ್ಲಿ ಕಡಿಮೆ ಕೆಡುಕು ಎಂದು) ಒಪ್ಪಿರಲು ಸಾಕು.

ಕೊನೆಯದಾಗಿ, ಶಿವಾಜಿಯ ಪ್ರಕರಣ ಮಹತ್ವದ್ದಾಗಿದ್ದಾಗಿದೆಯೇಕೆಂದರೆ ದರ್ಜೆ ಅಥವಾ ಅಂತಸ್ತಿನ ವಿಷಯದಲ್ಲಿ ಬ್ರಾಹ್ಮಣರು ಒಮ್ಮೆ ನೀಡಿದ ನಿರ್ಣಯ ಅಂತಿಮ ಎಂದೂ, ಆ ಪ್ರಶ್ನೆಯನ್ನು ಪುನಃ ಎತ್ತುವುದಕ್ಕೆ ಪೂರ್ವನಿರ್ಣಯ ನಿರ್ಬಂಧಕಾರಿಯೆಂದೂ, ಎಂದೂ ಬಗೆಯುತ್ತಿರಲಿಲ್ಲ. ಯಾವುದೇ ಪ್ರಶ್ನೆಯನ್ನು ಪುನಃ ನಿಷ್ಕರ್ಷೆಗೆ ಎತ್ತಿಕೊಳ್ಳಲು ತಾವು ಸರ್ವಸ್ವತಂತ್ರರೆಂದು ತಿಳಿದುಕೊಳ್ಳುತ್ತಾರೆ. ಯಾಕೆಂದರೆ, ಶಿವಾಜಿ ಕ್ಷತ್ರಿಯನೆಂಬ ತಮ್ಮ ನಿರ್ಣಯವನ್ನು ಅವರು ಎಷ್ಟು ದಿನ ಗೌರವಿಸಿದರೆನ್ನುತ್ತೀರಿ?

ಶಿವಾಜಿಯು ತನ್ನ ಪಟ್ಟಾಭಿಷೇಕದ ದಿನದಿಂದ ಅಂದರೆ ಜೂನ್ ೬, ೧೬೭೪ರಿಂದ – ಹೊಸ ಶಕವನ್ನು ಪ್ರಾರಂಭಿಸಿದ. ಅದನ್ನು ಆತ ರಾಜ್ಯಾಭಿಷೇಕ ಶಕೆಯೆಂದು ಕರೆದ. ಆದರೆ ಎಷ್ಟು ಕಾಲ ಅದು ಬಳಕೆಯಲ್ಲಿತ್ತು? – ಕೇವಲ ಶಿವಾಜಿ ಹಾಗೂ ಆತನ ವಂಶಜರು ಸಕ್ರಿಯವಾಗಿ ಆಳ್ವಿಕೆ ನಡೆಸುತ್ತಿರುವವರೆಗೆ, ವರ್ಚಸ್ವೀ ಸಾರ್ವಭೌಮತ್ವ ಬ್ರಾಹ್ಮಣ ಪೇಶ್ವೆಯವರ ಕೈಗೆ ಹೋಗುತ್ತಲೇ, ಅವರು ಆ ಶಕವನ್ನು ನಿಲ್ಲಿಸುವ ಆಜ್ಞೆಯೊಂದನ್ನು* ಹೊರಡಿಸಿದರು. ಅವರು ಆ ಶಕವನ್ನು ನಿಲ್ಲಿಸಿದರಷ್ಟೇ ಅಲ್ಲದೆ, ಅವರು ಮುಸ್ಲಿಂ ಚಕ್ರವರ್ತಿಗಳ ಪದ್ಧತಿಯನ್ನನುಸರಿಸತೊಡಗಿದರು, ಆದರೆ ಫಸಲಿ ವರ್ಷ ಎಂದು ಹೇಳತೊಡಗಿದರು. ಈ ಬ್ರಾಹ್ಮಣರೆಂಬುವವರು ಅಷ್ಟಕ್ಕೂ ನಿಲ್ಲಲಿಲ್ಲ. ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಶಿವಾಜಿಯ ಉತ್ತರಾಧಿಕಾರಿಗಳ ಕ್ಷತ್ರಿಯ ಅಂತಸ್ತನ್ನೇ** ಪ್ರಶ್ನಿಸತೊಡಗಿದರು. ಶಿವಾಜಿಯ ಇಬ್ಬರು ಮಕ್ಕಳಾದ ಸಂಭಾಜಿ ಹಾಗೂ ರಾಜಾರಾಮರಿಗೆ ಅವರು ಏನೂ ಮಾಡಲಿಕ್ಕಾಗಲಿಲ್ಲ. ಶಿವಾಜಿ ಸ್ವತಃ ತನ್ನ ಜೀವಿತಾವಧಿ ಕಾಲದಲ್ಲೇ ಅವರಿಬ್ಬರ ಉಪನಯನವನ್ನು, ವೇದೋಕ್ತ ವಿಧಿಗಳ ಪ್ರಕಾರ ಮಾಡಿಸಿದ್ದ. ಶಿವಾಜಿಯ ಮೊಮ್ಮಗನಾದ ಶಾಹುವಿಗೂ ಅವರು ಏನು ಮಾಡಲಿಕ್ಕಾಗಲಿಲ್ಲ. ಯಾಕೆಂದರೆ, ಬ್ರಾಹ್ಮಣರ ಕೈಯಲ್ಲಿ ಆಡಳಿತ ಸೂತ್ರ ಇರಲಿಲ್ಲ. ಆದರೆ, ಶಾಹುವು ತನ್ನ ಸಾರ್ವಭೌಮಾಧಿಕಾರವನ್ನು ತನ್ನ ಬ್ರಾಹ್ಮಣ ಪೇಶ್ವೆಗೆ ಹಸ್ತಾಂತರ ಮಾಡುವುದೇ ತಡ, ಅವರಿಗೆ ನಿರಾಕರಣ ಮಾರ್ಗ ಸುಸೂತ್ರವಾಯಿತು. ಶಾಹುವಿನ ದತ್ತು ಪುತ್ರ ಹಾಗೂ ವಾರಸುದಾರನಾದ ಅಪ್ರಬುದ್ಧ ರಾಮಜಿ ರಾಜೆಗೆ ಪೇಶ್ವೆಗಳೇ ಪಾಲಕರಾಗಿದ್ದರು. ಆದರೆ, ಆತನ ಉಪನಯನವಾಗಿತ್ತೇ ಅಥವಾ ಆಗಿರಲಿಲ್ಲವೇ ಎಂಬುದರ ಬಗೆಗೆ ಪುರಾವೆ ಲಭ್ಯವಿಲ್ಲ. ಆದರೆ ಆತನ ಉತ್ತರಾಧಿಕಾರಿಯಾದ ಎರಡನೆಯ ಶಾಹುವಿಗೆ – ಈತ ೧೭೭೭ರಲ್ಲಿ ದತ್ತು ಬಂದಿದ್ದ – ಪೌರಾಣಿಕ ವಿಧಿಯ ಪ್ರಕಾರ ಹಾಗೂ ಪೇಶ್ವೆಯರ ನಿರ್ದೇಶನದ ಮೇರೆಗೆ[೧] ಉಪನಯನವಾಗಿತ್ತು ಎಂಬುದರ ಬಗೆಗೆ ನಿಶ್ಚಿತ ಪುರಾವೆ ಇದೆ. ಪೌರಾಣಿಕ ವಿಧಿಯ ಪ್ರಕಾರ ಎರಡನೆಯ ಶಾಹುವಿನ ಉಪನಯನವಾಗಿದ್ದುದಕ್ಕೆ ಆತ ಪೇಶ್ವೆಯರ ದೃಷ್ಟಿಯಲ್ಲಿ ಶೂದ್ರನಾಗಿದ್ದನೆಂದೇ ಅರ್ಥ. ಯಾಕೆಂದರೆ, ಕೇವಲ ಶೂದ್ರನ ಸಂಬಂಧದಲ್ಲಿ ಉಪನಯನ ಸಮಾರಂಭಗಳನ್ನು ಪೌರಾಣಿಕ ವಿಧಿಯ ಪ್ರಕಾರ ಜರುಗಿಸಲಾಗುತ್ತದೆ. ಎರಡನೆಯ ಶಾಹುವಿನ ನಂತರ ೧೮೦೮ರಲ್ಲಿ ಪಟ್ಟಕ್ಕೆ ಬಂದ ಮಹಾರಾಜಾ ಪ್ರತಾಪಸಿಂಗನಿಗೆ ಏನಾಯಿತು–ಆತನಿಗೆ ಉಪನಯನವಾಗಿತ್ತೇ ಇಲ್ಲವೇ, ಹಾಗೂ ಆಗಿದ್ದರೆ, ಅದು ವೈದಿಕವಿಧಿಯ ಪ್ರಕಾರ ಆಗಿತ್ತೇ ಅಥವಾ ಪೌರಾಣಿಕವಿಧಿಯ ಪ್ರಕಾರ ಆಗಿತ್ತೇ – ಎಂಬುದರ ಬಗೆಗೆ ನಿಶ್ಚಿತವಾಗಿ ಏನನ್ನೂ ಹೇಳುವುದು ಸಾಧ್ಯವಿಲ್ಲ. ಒಂದು ಸಂಗತಿ ಮಾತ್ರ ನಿಶ್ಚಿತವಾಗಿ ಗೊತ್ತಿದೆ ; ಅದೇನೆಂದರೆ, ೧೮೨೭ರಲ್ಲಿ ಕರವೀರ (ಕೊಲ್ಹಾಪುರ)ದ

---

* Sardesai, *Marathi Riyasat,* II P. 363 and Vaidya, *Shivaji,* p. ೨೫೧

** ಮುಂದಿನ ವಿವರಣೆಯನ್ನು ಸಿದ್ಧಾಂತವಿಜಯ ಎಂಬ ರಾ.ಬ. ಡೋಂಗ್ರೆಯವರ ಗ್ರಂಥದಿಂದ ತೆಗೆದುಕೊಳ್ಳಲಾಗಿದೆ.

೧. Dongre, ibid, Introduction, p.೬

ಶಂಕರಾಚಾರ್ಯರು, ಸಾಂಗ್ಲಿಯ ಕಾಯಸ್ಥರ ದರ್ಜೆಯ ಬಗೆಗೆ ತೀರ್ಪು ನೀಡುತ್ತಾ ಹೀಗೆ ಹೇಳಿದ್ದಾರೆ :[೧] "ಕಲಿಯುಗದಲ್ಲಿ ಕ್ಷತ್ರಿಯರೆಂಬುವವರೇ ಇಲ್ಲ. ಹಾಗೂ ಶಿವಾಜಿಯಾಗಲಿ, ಸಂಭಾಜಿಯಾಗಲಿ, ಶಾಹುವೇ ಆಗಲಿ – ಇವರ್‍ಯಾರೂ ಕ್ಷತ್ರಿಯರಾಗಿದ್ದಿಲ್ಲ ಎಂದು ತೋರಿಸುವ ದಾಖಲೆಪತ್ರಗಳು ನಮ್ಮ ಕಛೇರಿಯಲ್ಲಿ ಇವೆ." ಈ ಹೇಳಿಕೆ ಮೂಲ ತೀರ್ಪಿನಲ್ಲಿ ಕಾಣಸಿಗುವುದಿಲ್ಲ; ಅದು ಬ್ರಾಹ್ಮಣನಾದ ಸಾಂಗ್ಲಿ ರಾಜನಿಂದ ನಡುವೆ ಸೇರಿಸಲಾಗಿದೆಯೆಂದೂ ಹೇಳಲಾಗುತ್ತದೆ. ಅದೇನೇ ಇರಲಿ, ಅದು ಶಿವಾಜಿಯ ವಂಶಜನಾದ ಪ್ರತಾಪಸಿಂಹನ ಅಂತಸ್ತಿಗೆ ಎಸೆದ ನೇರ ಸವಾಲು ಆಗಿತ್ತು. ಪ್ರತಾಪಸಿಂಹನು ವಾದಗ್ರಸ್ತ ವಿಷಯವನ್ನು ೧೮೩೦ರಲ್ಲಿ ಸತಾರಾದಲ್ಲಿ ಕರೆಯಲಾದ ಬ್ರಾಹ್ಮಣರ ಸಮ್ಮೇಳನದಂದು ಇಡಬೇಕಾಯಿತು. ಬಹುಸಂಖ್ಯಾತರು ಪ್ರತಾಪಸಿಂಹನಿಗೆ ಪರವಾದ ಅಭಿಪ್ರಾಯ ವ್ಯಕ್ತಮಾಡಿದ್ದರಿಂದ, ಅರಸನು ಶೂದ್ರನ ದರ್ಜೆಗೆ ಇಳಿಸಲ್ಪಡುವುದರಿಂದ ಉಳಿದನು.

ಶಿವಾಜಿಯ ಒಂದು ವಂಶಶಾಖೆಯನ್ನು ಶೂದ್ರರ ದರ್ಜೆಗೆ ಇಳಿಸುವ ತಮ್ಮ ಪ್ರಯತ್ನದಲ್ಲಿ ವಿಫಲರಾದ ಬ್ರಾಹ್ಮಣರು ಕೊಲ್ಹಾಪುರದಲ್ಲಿ ಬೀಡುಬಿಟ್ಟ ಇನ್ನೊಂದು ಶಾಖೆಯ ಮೇಲೆ ತಮ್ಮ ಪ್ರಹಾರ ಪ್ರಾರಂಭಿಸಿದರು. ಕೊಲ್ಹಾಪುರದ ಆಳರಸರಲ್ಲೊಬ್ಬರಾದ ಬಾಬಾಸಾಹೇಬ ಮಹಾರಾಜ ಎಂಬುವವರ ಆಳ್ವಿಕೆಯ ಕಾಲದಲ್ಲಿ, ಅರಮನೆಯ ಪುರೋಹಿತನಾದ ರಘುನಾಥ ಶಾಸ್ತ್ರಿ ಪರ್ವತೆಯು ಅರಮನೆಯ ಎಲ್ಲ ಸಮಾರಂಭಗಳನ್ನು ಪೌರಾಣಿಕ ವಿಧಿಯ ಪ್ರಕಾರ ಜರುಗಿಸಬೇಕೆನ್ನುವ ವಿಚಾರವನ್ನು ಹೇಗೋ ತಲೆಯಲ್ಲಿ ಹಾಕಿಕೊಂಡ. ಆತನು ಈ ಪದ್ಧತಿಯನ್ನು ಮುಂದುವರಿಸದಂತೆ ತಡೆಯಲ್ಪಟ್ಟನೆಂದು ಹೇಳಲಾಗುತ್ತದೆ. ಬಾಬಾಸಾಹೇಬನು ೧೮೮೬ರಲ್ಲಿ ನಿಧನ ಹೊಂದಿದ. ೧೮೮೬ರಿಂದ ೧೮೯೪ರವರೆಗೆ ಎಲ್ಲ ರಾಜರು ಅಪ್ರಬುದ್ಧರಾಗಿದ್ದುದರಿಂದ, ಆಡಳಿತ ಬ್ರಿಟಿಶರ ಕೈಯಲ್ಲಿತ್ತು. ಅರಮನೆಯ ಅರ್ಚಕ ಯಾವ ವಿಧಿವಿಧಾನದ ಪ್ರಕಾರ ಸಮಾರಂಭಗಳನ್ನು ನಡೆಸುತ್ತಿದ್ದನೆಂಬುದರ ಬಗೆಗೆ ನೇರ ಸಾಕ್ಷ್ಯ ಲಭ್ಯವಿಲ್ಲ. ೧೯೦೨ರಲ್ಲಿ ದಿವಂಗತ ಶಾಹೂ ಮಹಾರಾಜರು ಅರಮನೆಯ ಅರ್ಚಕನಿಗೆ ಎಲ್ಲ ಸಮಾರಂಭಗಳನ್ನು ವೈದಿಕವಿಧಿಯ ಮೇರೆಗೆ ನೆರವೇರಿಸಲು ಆಜ್ಞಾಪಿಸಿದ್ದರು. ಅರ್ಚಕನು ಹಾಗೆ ಮಾಡಲೊಪ್ಪದೆ, ಪೌರಾಣಿಕ ವಿಧಿಯ ಪ್ರಕಾರವೇ ನಡೆಸುವುದಾಗಿ ಹೇಳಿದ– ಅದರ ಇಂಗಿತ ಕೊಲ್ಹಾಪುರದ ಆಳರಸರು ಕ್ಷತ್ರಿಯರಲ್ಲ, ಶೂದ್ರರು ಎಂಬುದಾಗಿತ್ತು. ಈ ವ್ಯವಹಾರದಲ್ಲಿ ಕರವೀರಮಠದ ಶಂಕರಾಚಾರ್ಯರು ವಹಿಸಿದ ಪಾತ್ರ ಗಮನಿಸುವಂತಹದು. ಈ ವಿವಾದ ಎದ್ದ ಕಾಲದಲ್ಲಿ ಮಠದ ಮುಖ್ಯಸ್ಥ – ಗುರು ಎಂದು ಅವರು ಕರೆಯಲ್ಪಡುತ್ತಿದ್ದರು – ಬ್ರಹ್ಮನಾಳಕರ ಎಂಬ ಶಿಷ್ಯನನ್ನು ಸ್ವೀಕರಿಸಿ, ಆತನಿಗೇ ಅವರು ಮಠದ ಮುಖ್ಯಸ್ಥಿಕೆಯ ಎಲ್ಲ ಹಕ್ಕುಗಳನ್ನು ನೀಡಿದ್ದರು. ಮೊದಮೊದಲು ಗುರು ಹಾಗೂ ಶಿಷ್ಯ ಅರಮನೆಯ ಅರ್ಚಕನ ಕಡೆಗೇ ಇದ್ದರು. ಆದರೆ, ನಂತರದಲ್ಲಿ, ಶಿಷ್ಯ ಮಹಾರಾಜನ ಪಕ್ಷ ವಹಿಸಿದ, ಮತ್ತು ಆತನ ಕ್ಷತ್ರಿಯ ದರ್ಜೆಯನ್ನು ಒಪ್ಪಿಕೊಂಡ. ಅರಮನೆಯ ಅರ್ಚಕನ ಕಡೆಗಿದ್ದ ಗುರುವು ಶಿಷ್ಯನಿಗೆ ಬಹಿಷ್ಕಾರ ಹಾಕಿದ. ಮಹಾರಾಜನು ನಂತರದಲ್ಲಿ ತನ್ನವನೇ ಆದ ಒಬ್ಬ ಶಂಕರಾಚಾರ್ಯನನ್ನು[೨] ಸೃಷ್ಟಿಸಲು ಪ್ರಯತ್ನಿಸಿದ. ಆದರೆ, ಆ ಶಂಕರಾಚಾರ್ಯನೂ ಮಹಾರಾಜನಿಗೆ ಎರಡು ಬಗೆದ.

ಶಿವಾಜಿಯು ಕ್ಷತ್ರಿಯನೆಂದು ಮನ್ನಿಸಲ್ಪಟ್ಟಿದ್ದ. ಆ ದರ್ಜೆ ಆತನಿಗೆ ವೈಯಕ್ತಿಕವಾಗಿ ನೀಡಲಾದ ಗೌರವವೇನಾಗಿರಲಿಲ್ಲ. ಅದು ಆತನ ಕುಟುಂಬಕ್ಕೂ ವಂಶಜರಿಗೂ ನೀಡಿದ ದರ್ಜೆಯಾಗಿತ್ತು. ಅದನ್ನಾರೂ

---

೧. Dongre, *op.cit.* Introduction p. ೯

೨. ಈತ ಡಾ. ಕುರ್ತಕೋಟಿ ಎನ್ನುವವನಾಗಿದ್ದನು.

ಪ್ರಶ್ನಿಸುವಂತಿರಲಿಲ್ಲ. ಆತನ ವಂಶಜರಲ್ಲಿ ಯಾರೇ ಒಬ್ಬರು ಸಲ್ಲದ ಕೃತ್ಯವನ್ನೆಸಗಿದರೆ ಮಾತ್ರ ಆ ದರ್ಜೆಗೆ ಎರವಾಗಬೇಕಾಗುತ್ತಿತ್ತು. ಸಾಮಾನ್ಯವಾಗಿ ಅದನ್ನು ಕಳೆದುಕೊಳ್ಳುವ ಪ್ರಮೇಯ ಇರಲಿಲ್ಲ. ಕ್ಷಾತ್ರಧರ್ಮ ಅಥವಾ ಅಂತಸ್ತಿಗೆ ವ್ಯತಿರಿಕ್ತವಾದದ್ದೇನೂ ಶಿವಾಜಿಯ ವಂಶಜರಾರೂ ಮಾಡಿರಲಿಲ್ಲ. ಅಂತಹದೇನನ್ನೂ ಅವರಾರಿಗೂ ಆರೋಪಿಸುವಂತಿರಲಿಲ್ಲ. ಆದಾಗ್ಯೂ, ಬ್ರಾಹ್ಮಣರು ಅವರ ದರ್ಜೆಯ ಬಗೆಗಿನ ನಿರ್ಣಯವನ್ನು ಧಿಕ್ಕರಿಸುವುದಕ್ಕೆ ಮುಂದಾದರು.

ಇದು ಜರುಗಲು ಏಕೆ ಸಾಧ್ಯವಿತ್ತೆಂದರೆ ಬ್ರಾಹ್ಮಣರು ಯಾವುದೇ ಹಿಂದುವಿನ ಸ್ಥಾನಮಾನವನ್ನು, ದರ್ಜೆಯನ್ನು, ಯಾವುದೇ ಕಾಲದಲ್ಲಿ ರೂಪಿಸುವ ಅಥವಾ ಅಳಿಸಿ ಹಾಕುವ ಅಧಿಕಾರವು ತಮ್ಮದೇ ಎಂದು ಎದೆ ತಟ್ಟಿ ಹೇಳುತ್ತಿದ್ದುದರಿಂದ ಅವರು ಮನಸ್ಸು ಮಾಡಿದರೆ ಒಬ್ಬ ಶೂದ್ರನನ್ನು ಕ್ಷತ್ರಿಯನ ದರ್ಜೆಗೆ ಏರಿಸಬಲ್ಲರು; ಹಾಗೆಯೇ ಒಬ್ಬ ಕ್ಷತ್ರಿಯನನ್ನು ಶೂದ್ರನ ದರ್ಜೆಗೆ ಇಳಿಸಲೂ ಬಲ್ಲರು. ಈ ವಿಷಯದಲ್ಲಿನ ಅವರ ಸಾರ್ವಭೌಮತ್ವಕ್ಕೆ ನಿರ್ಬಂದವೂ ಇಲ್ಲ, ಅದನ್ನು ಪ್ರಶ್ನಿಸುವಂತೆಯೂ ಇಲ್ಲ ಎಂಬುದನ್ನು ಶಿವಾಜಿಯ ಪ್ರಕರಣ ಸಿದ್ಧಮಾಡಿ ತೋರಿಸುತ್ತದೆ.

ಈ ಉದಾಹರಣೆಗಳು[೧] ಮುಂಬಯಿ ಪ್ರಾಂತದಿಂದ ಮಾತ್ರ ತೆಗೆದುಕೊಳ್ಳಲ್ಪಟ್ಟಿದ್ದುದು ಸುಸ್ಪಷ್ಟ. ಆದರೆ, ಅವುಗಳಿಂದ ಆವಿರ್ಭವಿಸುವ ತತ್ವಗಳು ಸಾರ್ವತ್ರಿಕವಾಗಿ ಅನ್ವಯಿಸುವಂಥವಾಗಿದೆ. ಅವುಗಳು ಯಾವುವೆಂದರೆ :

(೧) ಉಪನಯನವನ್ನು ನೆರವೇರಿಸುವ ಹಕ್ಕು ಬ್ರಾಹ್ಮಣರಿಗೆ ವಿಶಿಷ್ಟವಾದುದು ಶಿವಾಜಿಯಾಗಲೀ ಪ್ರತಾಪಸಿಂಹನಾಗಲೀ ಅಥವಾ ಕಾಯಸ್ಥರಾಗಲೀ, ಪಂಚಾಲರಾಗಲೀ ಪಲಾಶರಾಗಲೀ ತಮ್ಮ ಉಪನಯನವು ಒಬ್ಬ ಬ್ರಾಹ್ಮಣೇತರನಿಂದ ನೆರವೇರಿಸಲ್ಪಡುವುದನ್ನು ಇಷ್ಟಪಡುತ್ತಿರಲಿಲ್ಲ. ಒಂದೇ ಒಂದು ಸಲ ಕಾಯಸ್ಥರು ಕಾಯಸ್ಥರಿಂದಲೇ ತಮ್ಮ ಸಮಾರಂಭಗಳನ್ನು ನೆರವೇರಿಸಿಕೊಳ್ಳಲು ನಿಶ್ಚಯಿಸಿದ್ದರು. ಆದರೆ ಅದು ಕಾಗದದ ಮೇಲೆಯೇ ಉಳಿಯಿತು.

(೨) ಬ್ರಾಹ್ಮಣನಿಗೆ ತಾನು ಯಾರ ಉಪನಯನ ಮಾಡಲೊಪ್ಪುವನೋ ಹಾಗೂ ಯಾರ ಉಪನಯನ ಮಾಡಲಿಚ್ಛಿಸುವುದಿಲ್ಲವೋ ಎಂಬುದನ್ನು ಹೇಳುವ ಹಕ್ಕು ಇದೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಯಾವುದೇ ಒಂದು ಸಮಾಜ ಅಥವಾ ಸಮುದಾಯ ಉಪನಯನದ ಹಕ್ಕು ಹೊಂದಿದೆಯೋ ಇಲ್ಲವೋ ಎಂಬ ತೀರ್ಪನ್ನು ನೀಡಬಲ್ಲನು ಬ್ರಾಹ್ಮಣನೇ.

(೩) ಉಪನಯನವಿಧಿ ನೆರವೇರಿಸುವುದಕ್ಕೆ ಬೇಕಾಗುವ ಬ್ರಾಹ್ಮಣರ ಬೆಂಬಲವು ಪ್ರಾಮಾಣಿಕ ಆಧಾರಗಳ ಮೇಲೆ ನಿಂತಿರಬೇಕೆಂದೇನಿಲ್ಲ. ಅದನ್ನು ಹಣಕ್ಕಾಗಿ ಖರೀದಿಸಬಹುದಾಗಿದೆ. ಶಿವಾಜಿಯು ದುಡ್ಡು ಕೊಟ್ಟೇ ಬ್ರಾಹ್ಮಣ ಗಗಾಭಟ್ಟನ ನೆರವನ್ನು ಪಡೆದದ್ದು.

(೪) ಉಪನಯನವನ್ನು ನೆರವೇರಿಸಿಕೊಡಲು ಬ್ರಾಹ್ಮಣರು ಒಪ್ಪದೇ ಹೋದಲ್ಲಿ ಅಂಥ ನಿರಾಕರಣೆ ಕಾನೂನು ಅಥವಾ ಧರ್ಮದ ಮೇಲೆ ಆಧಾರಿತವಾಗಿರಬೇಕೆಂದೇನಿಲ್ಲ. ಆ ನಿರಾಕರಣೆ ಕೇವಲ ಕಾರಣಗಳ ಮೇಲೆ ನಿಂತಿರಲೂಬಹುದಾಗಿದೆ. ಕಾಯಸ್ಥರಿಗೆ ಉಪನಯನ ಮಾಡಲು ಬ್ರಾಹ್ಮಣರು ನಿರಾಕರಿಸಿದ ಕಾರಣ ಕೇವಲ ಅವರ ಮಧ್ಯೆ ಇರುವ ರಾಜಕೀಯ ಈರ್ಷ್ಯೆ ಆಗಿದ್ದಿತು.

---

೧. ವಿವರಗಳಿಗೆ ಕೆ.ಎಸ್. ಠಕಾರೆಯವರ ಮರಾಠಿ ಪ್ರಕಟಣೆ ಗ್ರಾಮಾಣ್ಯಾ ಚಾ ಇತಿಹಾಸ (೧೯೧೯) ನೋಡಿ.

(೫) ಉಪನಯನವನ್ನು ಮಾಡಲು ಬ್ರಾಹ್ಮಣನೊಬ್ಬನು ನಿರಾಕರಿಸಿದಾಗ ಅದರ ವಿರುದ್ಧ ಮೇಲ್ಮನವಿ ಯಾರಿಗೆ ಮಾಡಿಕೊಳ್ಳುವುದೆಂದರೆ ಕೇವಲ ವಿದ್ವತ್-ಪರಿಷತ್ತಿಗೆ. ಆ ವಿದ್ವತ್-ಪರಿಷತ್ತೆಂದರೆ ಅದೊಂದು ಸಭೆ-ಬ್ರಾಹ್ಮಣನಿಗೆ ಮಾತ್ರ ಸದಸ್ಯನಾಗುವ ಅರ್ಹತೆ ಇರುವ ಸಭೆ.

ಈ ಮುಂದಿನ ಚರ್ಚೆಯಿಂದ ಒಂದು ಮಾತು ಎಲ್ಲರಿಗೂ ಸುಸ್ಪಷ್ಟವಾಗಿರಬೇಕು. ಅದೇನೆಂದರೆ, ಬ್ರಾಹ್ಮಣರು ಉಪನಯನವನ್ನು ನಿರಾಕರಿಸುವ ಅಧಿಕಾರವನ್ನು ಪಡೆದಿದ್ದರು. ಇಂಥ ಅಧಿಕಾರ ಹಾಗೂ ಅವರು ಹೊಂದಿದಂಥ ಉದ್ದೇಶ ಇವೆರಡೂ ಬೆರೆತಾಗ, ಅವರು ಆ ಅಸ್ತ್ರವನ್ನು ಶೂದ್ರರ ವಿರುದ್ಧ ಬಳಸಿದುದು ಆಶ್ಚರ್ಯದ ಮಾತೇನಲ್ಲ.

♦

# ಅಧ್ಯಾಯ ೧೧

# ಬ್ರಾಹ್ಮಣರು ಮತ್ತು ಶೂದ್ರರು ರಾಜಿಯಾದ ಕಥೆ

ನಾನು ಇದುವರೆಗೆ ಈ ಕೆಳಗಿನ ಪ್ರಸ್ತಾಪಗಳನ್ನು ಸ್ಥಾಪಿಸಲು ಯತ್ನಿಸಿದ್ದೇನೆ :

೧) ಹಿಂದೂ–ಆರ್ಯ ಸಮಾಜದಲ್ಲಿ ಶೂದ್ರರನ್ನು ಎರಡನೆಯ ವರ್ಣದಿಂದ ನಾಲ್ಕನೆಯ ವರ್ಣಕ್ಕೆ ಇಳಿಸಿದವರು ಬ್ರಾಹ್ಮಣರು.

೨) ಶೂದ್ರರಿಗೆ ಉಪನಯನವನ್ನು ನಿರಾಕರಿಸುವುದು ಶೂದ್ರರನ್ನು ಅವಹೇಳನಗೊಳಿಸಲು ಬ್ರಾಹ್ಮಣರು ಅನುಸರಿಸಿದ ಒಂದು ವಿಧಾನವಾಗಿತ್ತು.

೩) ಈ ಅವಹೇಳನವು ಶೂದ್ರ ಅರಸರ ದಬ್ಬಾಳಿಕೆಗೊಳಪಟ್ಟ ಬ್ರಾಹ್ಮಣರಲ್ಲಿ ಹುಟ್ಟಿದ ಪ್ರತೀಕಾರ ಮನೋಭಾವದ ಪರಿಣಾಮವಾಗಿದ್ದಿತು.

೪) ಇಷ್ಟೆಲ್ಲ ಸ್ಪಷ್ಟ ಇದ್ದರೂ ಕೂಡ ಕೆಲವು ಸಂದೇಹಿಗಳು ಇನ್ನೂ ಕೆಳಗಿನಂಥ ಕೆಲವು ಪ್ರಶ್ನೆಗಳನ್ನು ಕೇಳಬಹುದು.

   i) ಕೆಲವೇ ಅರಸರ ಜೊತೆಗಿದ್ದ ವ್ಯಾಜ್ಯವು ಬ್ರಾಹ್ಮಣರನ್ನು ಇಡೀ ಶೂದ್ರಕುಲದ ವೈರಿಗಳನ್ನಾಗಿ ಏಕೆ ಮಾಡಬೇಕು?

   ii) ಆ ಪ್ರಚೋದನೆ ಪ್ರತೀಕಾರ ಭಾವನೆಯನ್ನು ಕೆರಳಿಸುವಷ್ಟು ತೀವ್ರವಾಗಿತ್ತೆ?

   iii) ಎರಡೂ ವರ್ಣಗಳು ರಾಜಿಯಾಗಲಿಲ್ಲವೆ? ರಾಜಿಯಾಗಿದ್ದರೆ, ಬ್ರಾಹ್ಮಣರು ಶೂದ್ರರನ್ನು ಅವಮಾನಗೊಳಿಸುವ ಪ್ರಸಂಗ ಇರುತ್ತಿರಲಿಲ್ಲ.

   iv) ಈ ಅವಹೇಳನವನ್ನು ಶೂದ್ರರು ಹೇಗೆ ಸಹಿಸಿದರು?

ಈ ಪ್ರಶ್ನೆಗಳಲ್ಲಿ ಸಾಕಷ್ಟು ಬಲ ಮತ್ತು ತಥ್ಯ ಇರುವುದರಿಂದ ಇವನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆಂಬುದನ್ನು ಒಪ್ಪಿಕೊಳ್ಳುತ್ತೇನೆ.

(೧)


ಕೆಲವೇ ರಾಜರ ಜೊತೆಗಿದ್ದ ತಮ್ಮ ವ್ಯಾಜ್ಯದ ಕಾರಣ ಬ್ರಾಹ್ಮಣರು ಇಡೀ ಶೂದ್ರ ಕುಲದ ಅವಹೇಳನಕ್ಕೆ ಏಕೆ ತೊಡಗಬೇಕಿತ್ತು ಎಂಬ ಪ್ರಶ್ನೆ ಪ್ರಸ್ತುತವೂ ಸೂಕ್ತವೂ ಆಗಿರುತ್ತದೆ. ಎರಡು ಅಂಶಗಳನ್ನು ನೆನಪಿಟ್ಟರೆ, ಈ ಪ್ರಶ್ನೆಗಳಿಗೆ ಉತ್ತರ ಹುಡುಕುವುದು ಕಠಿಣವಾಗದು.

ಮೊದಲನೆಯದಾಗಿ, ಒಂಬತ್ತನೆಯ ಅಧ್ಯಾಯದಲ್ಲಿ ವರ್ಣಿಸಲಾದ ಬ್ರಾಹ್ಮಣರು ಮತ್ತು ಶೂದ್ರ ರಾಜರ ನಡುವಿನ ಘರ್ಷಣೆ ಮೇಲ್ನೋಟಕ್ಕೆ ಹಾಗೆ ಕಂಡರೂ, ಅದು ವೈಯಕ್ತಿಕ ಘರ್ಷಣೆ ಆಗಿರಲಿಲ್ಲ. ಬ್ರಾಹ್ಮಣರ ಪಕ್ಷದಲ್ಲಿ ನಿಸ್ಸಂಶಯವಾಗಿಯೂ ಇಡೀ ಬ್ರಾಹ್ಮಣ ವರ್ಗ ಸೇರಿದ್ದಿತು. ವಸಿಷ್ಠನಿಗೆ ಸಂಬಂಧಿಸಿದ ಪ್ರಸಂಗಗಳನ್ನು ಹೊರತುಪಡಿಸಿ ಉಳಿದೆಲ್ಲ ಪ್ರಸಂಗಗಳು ಸಾಮಾನ್ಯವಾಗಿ ಬ್ರಾಹ್ಮಣರಿಗೆ ಸಂಬಂಧಿಸಿದವು ಆಗಿದ್ದವು. ಅರಸರಿಗೆ ಸಂಬಂಧಿಸಿದಂತೆ, ಶೂದ್ರರು ಬ್ರಾಹ್ಮಣರೊಂದಿಗೆ ಘರ್ಷಣೆಗೆ ಇಳಿದ ಒಂದೊಂದು

ಪ್ರಸಂಗವೂ ಒಬ್ಬೊಬ್ಬ ವ್ಯಕ್ತಿಯನ್ನು ಉಲ್ಲೇಖಿಸುತ್ತದೆಂಬುದು ನಿಜ. ಆದರೆ ಅವರೆಲ್ಲ ಸುದಾಸನ ವಂಶದವರೆಂಬುದನ್ನು ಮರೆಯುವಂತಿಲ್ಲ.

ಸುದಾಸನ ಮಟ್ಟಿಗೆ ಹೇಳುವುದಾದರೆ, ಘರ್ಷಣೆ ಇದ್ದದ್ದು ಬ್ರಾಹ್ಮಣರು ಮತ್ತು ಕ್ಷತ್ರಿಯ ವರ್ಗದ ಶೂದ್ರರಾಜರ ನಡುವೆ. ಈ ಬಗ್ಗೆ ಸಂಶಯಪಡುವ ಕಾರಣವಿಲ್ಲ. ಇನ್ನುಳಿದ ಆಕ್ರಮಣಕಾರಿ ಅರಸರೂ ಕ್ಷತ್ರಿಯ ವರ್ಗದ ಶೂದ್ರರಾಗಿದ್ದರೆಂಬುದಕ್ಕೆ ನೇರ ಸಾಕ್ಷ್ಯಾಧಾರಗಳಿರುವುದಿಲ್ಲ. ಆದರೆ ಅವರು ಸುದಾಸನ ವಂಶದವರಾಗಿದ್ದರೆಂಬುದಕ್ಕೆ ಬಲವಾದ ಸಾಕ್ಷ್ಯಾಧಾರಗಳಿರುತ್ತವೆ.

ಮಹಾಭಾರತದ ಆದಿಪರ್ವದಿಂದ ಆಯ್ದುಕೊಂಡಂಥ ಈ ಕೆಳಗಿನ ವಂಶವೃಕ್ಷವನ್ನು ಅವಲೋಕಿಸಬೇಕು:




ಬ್ರಾಹ್ಮಣರೊಂದಿಗೆ ಘರ್ಷಣೆಗಿಳಿದ ಅರಸರ ಅಂತರ್ಜಾತೀಯ ಸಂಬಂಧ ಈ ವಿಷಯದ ಮೇಲೆ ಕುತೂಹಲಕಾರಿ ಬೆಳಕು ಚೆಲ್ಲುತ್ತದೆ, ಪೂರೂರವ[೨] ಇಳಾರಾಜನ ಮಗ ಮತ್ತು ವೈವಸ್ವತಮನು ಮೊಮ್ಮಗನಾಗಿರುತ್ತಾನೆ. ನಹುಶ[೩] ಪೂರೂರವನ ಮೊಮ್ಮಗನಾಗಿರುತ್ತಾನೆ. ನಿಮಿ[೪] ವೈವಸ್ವತ ಮನುವಿನ ಮಗನಾದ ಇಕ್ಷ್ವಾಕು ರಾಜನ ಮಕ್ಕಳಲ್ಲೊಬ್ಬನಾಗಿರುತ್ತಾನೆ. ತ್ರಿಶಂಕು[೫] ಇಕ್ಷ್ವಾಕು ವಂಶದವರಲ್ಲಿ ೨೮ನೆಯ ತಲೆಯವನಾಗಿರುತ್ತಾನೆ. ಸುದಾಸ[೬] ಇಕ್ಷ್ವಾಕು ವಂಶದವನಾಗಿದ್ದು, ಆ ವಂಶದಲ್ಲಿಯ ೫೦ನೆಯ ಅರಸನಾಗಿರುತ್ತಾನೆ. ವೇಣ[೭] ಮನು ವೈವಸ್ವತನ ಮಗನು. ಅವರೆಲ್ಲರೂ ತಾವು ಮನು ವಂಶದವರೆಂದು ಹೇಳಿಕೊಳ್ಳುತ್ತಾರೆ. ಕೆಲವರು ಮನುವಿನ ವಂಶದವರು, ಇನ್ನು ಕೆಲವರು ಇಕ್ಷ್ವಾಕು ವಂಶದವರು ಆಗಿರುವುದರಿಂದ, ಅವರೆಲ್ಲ ಸುದಾಸನ ರಕ್ತಸಂಬಂಧಿಗಳೆಂದು ವಾದಿಸಲು ಸಾಧ್ಯವಿರುತ್ತದೆ. ಸುದಾಸನು ಶೂದ್ರನಾಗಿದ್ದುದು ನಿಜವೆಂದು ಗ್ರಹಿಸಿದರೆ, ಈ ಎಲ್ಲ ಅರಸರು ಶೂದ್ರ ಗುಂಪಿಗೆ ಸೇರಿದವರೆಂಬುದು ತರ್ಕಬದ್ಧವಿರುತ್ತದೆ.

ಬ್ರಾಹ್ಮಣರೊಂದಿಗಿನ ಘರ್ಷಣೆಯಲ್ಲಿ ಬರೀ ಶೂದ್ರರಾಜರಷ್ಟೆ ಅಲ್ಲ, ಇಡೀ ಶೂದ್ರ ಜನಾಂಗ ಪಾಲ್ಗೊಂಡಿತ್ತು ಎಂದು ನಂಬಲು ನೇರ ಸಾಕ್ಷ್ಯಾಧಾರಗಳಿಲ್ಲದಿದ್ದರೂ ಹಾಗೆ ಭಾವಿಸಿದಲ್ಲಿ ಅದು ಅಸ್ವಾಭಾವಿಕವೆನಿಸಲಿಕ್ಕಿಲ್ಲ. ಈ ಘರ್ಷಣೆ, ಜೀವನವು ಪಂಗಡ–ರೂಪದ್ದಾಗಿದ್ದಂಥ ಮತ್ತು ಪಂಗಡದ ಒಬ್ಬ ವ್ಯಕ್ತಿ ಎಸಗಿದ ಕೃತ್ಯ ಇಡೀ ಪಂಗಡಕ್ಕೆ ಸಂಬಂಧಿಸಿದ ಕೃತ್ಯವೆಂದು ಭಾವಿಸುವ ರೂಢಿ ಇದ್ದಂಥ ಪ್ರಾಚೀನ ಕಾಲದ ಘಟನೆ. ಎಲ್ಲ ಪ್ರಾಚೀನ ಸಮಾಜಗಳಲ್ಲಿ ವ್ಯಕ್ತಿಯನ್ನು ಘಟಕವೆಂದು ತಿಳಿಯದೆ ಪಂಗಡ ಇಲ್ಲವೆ ಕೋಮು ಘಟಕವೆಂದು ತಿಳಿಯಲಾಗುತ್ತಿತ್ತು. ಅದರ ಪರಿಣಾಮವಾಗಿ ಒಬ್ಬ ವ್ಯಕ್ತಿಯ ಅಪರಾಧ ಇಡೀ

ಸಮಾಜದ ಅಪರಾಧವಾಗಿದ್ದಿತು ಮತ್ತು ಸಮಾಜದ ಅಪರಾಧವೂ ಪ್ರತಿಯೊಬ್ಬನ ಅಪರಾಧವೆಂದೇ ತಿಳಿಯಲ್ಪಡುತ್ತಿತ್ತು. ಈ ಸಂಗತಿಯನ್ನು ಜ್ಞಾಪಕದಲ್ಲಿಟ್ಟುಕೊಂಡ, ಬ್ರಾಹ್ಮಣರು ತಮ್ಮ ದ್ವೇಷವನ್ನು ಆಕ್ರಮಣಕಾರಿ ಅರಸರಿಗಷ್ಟೇ ಸೀಮಿತಗೊಳಿಸದೆ ಇಡೀ ಶೂದ್ರ ಸಮಾಜಕ್ಕೆ ವಿಸ್ತರಿಸಿದ್ದರೆಂದೂ ಮತ್ತು ಎಲ್ಲ ಶೂದ್ರರಿಗೆ ಉಪನಯನ ನಿಷಿದ್ಧಗೊಳಿಸಿದ್ದರೆಂದೂ ತಿಳಿಯುವುದು ಬಹಳ ನೈಜ ಎನಿಸುತ್ತದೆ.

೨

ಬ್ರಾಹ್ಮಣರು ಶೂದ್ರರಾಜರ ಜೊತೆಗೆ ಘರ್ಷಣೆಗಿಳಿಯಲು ಶೂದ್ರರಾಜರಿಂದ ಸಾಕಷ್ಟು ಪ್ರಚೋದನೆ ಇತ್ತೋ ಇಲ್ಲವೊ ಎಂದು ಬಹಿರಂಗವಾಗಿ ಪ್ರಶ್ನಿಸಲಾಗದು. ಎರಡೂ ಪಕ್ಷಗಳಲ್ಲಿ ತೀವ್ರ ಭಾವನೆಗಳು ಕೆರಳಿರಬಹುದು. ಸ್ಫೋಟಗೊಳ್ಳಲು ಬೇಕಾದ ದಹ್ಯ ವಸ್ತು ಎರಡೂ ಕಡೆಯಲ್ಲಿ ಸಾಕಷ್ಟಿದ್ದಿತು. ಬ್ರಾಹ್ಮಣರ ಕಡೆಗೆ, ಅವರ ಸಾಮಾಜಿಕ ಶ್ರೇಷ್ಠತೆ ಮತ್ತು ವಿಶೇಷ ಹಕ್ಕು ಮತ್ತು ಸವಲತ್ತುಗಳು ಅಸಹನೀಯ ಮತ್ತು ಮಿತಿಮೀರಿದವು ಆಗಿದ್ದವು. ಅವರು ಮಂಡಿಸಿದ ಹಕ್ಕುಗಳ ಸುದೀರ್ಘ ಪಟ್ಟಿ[೧] ಕೆಳಗಿರುತ್ತದೆ:

i) ಬ್ರಾಹ್ಮಣನನ್ನು ಅವನ ಹುಟ್ಟಿನ ಆಧಾರದ ಮೇಲೆ ಎಲ್ಲ ವರ್ಣದವರಿಗೆ ಗುರು ಎಂದು ಒಪ್ಪಿಕೊಳ್ಳಬೇಕು.
ii) ಉಳಿದ ವರ್ಣದವರ ಕರ್ತವ್ಯ, ನಡವಳಿಕೆ, ಉಪಜೀವನ ಮಾರ್ಗ ಯಾವುವಿರಬೇಕೆಂಬುದನ್ನು ನಿರ್ಧರಿಸುವುದು ಬ್ರಾಹ್ಮಣನ ಅನನ್ಯ ಅಧಿಕಾರವಾಗಿರುತ್ತದೆ ಮತ್ತು ಉಳಿದ ವರ್ಣಗಳ ಜನರು ಅವನ ನಿರ್ದೇಶನದಂತೆ ನಡೆಯಬೇಕು. ಅರಸನು ಕೂಡ ಬ್ರಾಹ್ಮಣನ ನಿರ್ದೇಶನದಂತೆ ರಾಜ್ಯವಾಳಬೇಕು.
iii) ಬ್ರಾಹ್ಮಣನು ಅರಸನ ಅಧಿಕಾರಕ್ಕೊಳಗಾಗಿರುವುದಿಲ್ಲ. ಬ್ರಾಹ್ಮಣನನ್ನು ಬಿಟ್ಟು ಉಳಿದೆಲ್ಲರ ಮೇಲೆ ಅರಸನು ತನ್ನ ಅಧಿಕಾರ ನಡೆಸುತ್ತಿದ್ದನು.
iv) ಅ) ಚಾಟಿಯಿಂದ ಹೊಡೆಯುವುದು, ಆ) ಬೇಡಿಗಳನ್ನು ತೊಡಿಸುವುದು, ಇ) ದಂಡ ವಿಧಿಸುವುದು, ಈ) ದೇಶಭ್ರಷ್ಟನನ್ನಾಗಿಸುವುದು, ಉ) ನಿಂದನೆ ಮಾಡುವುದು, ಮತ್ತು ಊ) ತ್ಯಜಿಸುವುದು – ಮುಂತಾದ ದಂಡನೆಗಳಿಂದ ಬ್ರಾಹ್ಮಣನು ವಿನಾಯಿತಿ ಪಡೆದಿರುತ್ತಾನೆ.
v) ಶ್ರೋತ್ರಿಯು (ವೇದ ಕಲಿತ ಬ್ರಾಹ್ಮಣ) ತೆರಿಗೆ ವಿನಾಯತಿ ಪಡೆದಿರುತ್ತಾನೆ.
vi) ಬ್ರಾಹ್ಮಣನಿಗೆ ನಿಧಿ ಸಿಕ್ಕರೆ ಅದು ಪೂರ್ಣ ಅವನಿಗೇ ಸಲ್ಲತಕ್ಕದ್ದು. ಅರಸನಿಗೆ ನಿಧಿ ಸಿಕ್ಕರೆ, ಅದರರ್ಧವನ್ನು ಬ್ರಾಹ್ಮಣನಿಗೆ ಕೊಡಬೇಕು.
vii) ವಾರಸುದಾರನಿಲ್ಲದ ಬ್ರಾಹ್ಮಣನು ಮೃತನಾದರೆ ಅವನ ಆಸ್ತಿ ಅರಸನಿಗೆ ಹೋಗತಕ್ಕುದಲ್ಲ. ಅದನ್ನು ಶ್ರೋತ್ರೀಯರಲ್ಲಿ ಇಲ್ಲವೆ ಉಳಿದ ಬ್ರಾಹ್ಮಣರಲ್ಲಿ ಹಂಚತಕ್ಕದ್ದು.
viii) ಬೀದಿಯಲ್ಲಿ ಅರಸನ ಎದುರಿಗೆ ಬ್ರಾಹ್ಮಣನು ಬಂದರೆ, ಬ್ರಾಹ್ಮಣನಿಗೆ ದಾರಿಯನ್ನು ಬಿಟ್ಟುಕೊಡಬೇಕು.
ix) ಅರಸನೇ ಮೊದಲು ಬ್ರಾಹ್ಮಣನಿಗೆ ವಂದಿಸಬೇಕು.
x) ಬ್ರಾಹ್ಮಣನ ಶರೀರ ಪವಿತ್ರವಾದದ್ದು, ಬ್ರಾಹ್ಮಣನು ಕೊಲೆಗೈದಿದ್ದರೂ ಅವನಿಗೆ ಮರಣದಂಡನೆಯನ್ನು ವಿಧಿಸಲಿಕ್ಕಾಗದು.
xi) ಬ್ರಾಹ್ಮಣನ ಮೇಲೆ ಹಲ್ಲೆನಡೆಸುವ ಬೆದರಿಕೆ ಹಾಕುವುದು, ಇಲ್ಲವೆ ಹೊಡೆಯುವುದು, ಇಲ್ಲವೆ ಅವನ ದೇಹದಿಂದ ರಕ್ತ ಹರಿಯುವಂತೆ ಮಾಡುವುದು ಅಪರಾಧವಾಗಿರುತ್ತದೆ.
xii) ಕೆಲವು ಅಪರಾಧಗಳಿಗೆ ಉಳಿದ ವರ್ಗದವರಿಗಿಂತ ಕಡಿಮೆ ದಂಡನೆ ಪಡೆಯಬೇಕು.

---

೧. ಈ ಸಾರಾಂಶ ಧರ್ಮಶಾಸ್ತ್ರ (Vol. II ೧, pp.೧೩೮–೧೫೩)ದಲ್ಲಿರುವ ಪಟ್ಟಿಯನ್ನು ಆಧರಿಸಿರುತ್ತದೆ.

xiii) ಯಾವುದೇ ವ್ಯಾಜ್ಯದಲ್ಲಿ ದಾವೆ ಹೂಡಿದವ ಬ್ರಾಹ್ಮಣನಲ್ಲದಿದ್ದಲ್ಲಿ, ಬ್ರಾಹ್ಮಣನನ್ನು ಸಾಕ್ಷಿ ಹೇಳಲು ಕರೆಸುವಂತಿಲ್ಲ.

xiv) ಒಬ್ಬ ಹೆಂಗಸು ಹತ್ತು ಜನರನ್ನು ಮದುವೆಯಾಗಿದ್ದರೂ, ಕೊನೆಗೆ ಬ್ರಾಹ್ಮಣನನ್ನು ಮದುವೆಯಾದರೆ ಅವನೇ ಅವಳ ನಿಜವಾದ ಗಂಡನಾಗುವನು. ಮೊದಲು ಕ್ಷತ್ರಿಯ ಇಲ್ಲವೆ ವೈಶ್ಯ ಯಾರನ್ನು ಮದುವೆಯಾಗಿದ್ದರೂ ಅವರು ಅವಳ ಪತಿಯಾಗಲಾರರು.

ಬ್ರಾಹ್ಮಣರು ಕೇಳಿದ ಈ ಹಕ್ಕು ಮತ್ತು ಸವಲತ್ತುಗಳನ್ನು ಚರ್ಚಿಸಿದ ಬಳಿಕ ಕಾಣೆ ಹೇಳುತ್ತಾರೆ:

"ಬ್ರಾಹ್ಮಣರಿಗೆ ಕೊಡಮಾಡಿದ್ದ ಇನ್ನೂ ಹೆಚ್ಚಿನ ಸವಲತ್ತುಗಳೆಂದರೆ – ಭಿಕ್ಷೆಗಾಗಿ ಹೆರರ ಮನೆಯೊಳಗೆ ಹೋಗಲು ಮುಕ್ತ ಪ್ರವೇಶವಿರುತ್ತದೆ. ಯಾರದೇ ಮನೆಯಿಂದ, ಕಟ್ಟಿಗೆ, ಹೂವು, ನೀರು ಮುಂತಾದ ಯಾವುದೇ ವಸ್ತುವನ್ನು ತೆಗೆದುಕೊಂಡುಹೋಗುವ ಅಧಿಕಾರವಿರುತ್ತದೆ ಮತ್ತು ಬ್ರಾಹ್ಮಣರು ಏನನ್ನು ಒಯ್ದರೂ ಅದು ಕಳ್ಳತನವಾಗಲಾರದು. ಪರಸ್ತ್ರೀಯರೊಂದಿಗೆ ಮುಕ್ತವಾಗಿ ಮಾತನಾಡುವುದು, ನಾವಿಕನಿಗೆ ಏನನ್ನೂ ಕೊಡದೆ ನಾವೆಯಲ್ಲಿ ಕೂಡುವುದು, ಮತ್ತು ಉಳಿದೆಲ್ಲರಿಗಿಂತ ಇವರನ್ನೇ ಮೊದಲು ದಡಕ್ಕೆ ತಲುಪಿಸುವುದು – ಇವು ಬ್ರಾಹ್ಮಣರ ಹಕ್ಕುಗಳು. ವ್ಯಾಪಾರದಲ್ಲಿ ತೊಡಗಿದ್ದ ಬ್ರಾಹ್ಮಣನು ನಾವೆಯನ್ನು ಗೊತ್ತುಮಾಡಿದ್ದ ಪಕ್ಷದಲ್ಲಿ, ನಾವಿಕನಿಗೆ ಯಾವುದೇ ಶುಲ್ಕ ಕೊಡಬೇಕಾಗಿಲ್ಲ. ಪ್ರವಾಸದಲ್ಲಿ ಬ್ರಾಹ್ಮಣನು ದಣಿದು ಹಸಿವು ದಾಹದಿಂದ ಬಳಲುತ್ತಿದ್ದಾಗ, ತನ್ನ ಬಳಿ ತಿನ್ನಲು ಕುಡಿಯಲು ಏನೂ ಇಲ್ಲದಿದ್ದರೆ, ಕಬ್ಬಿನ ಜಲ್ಲೆಗಳನ್ನು ಇಲ್ಲವೆ ಗೆಡ್ಡೆ ಗೆಣಸನ್ನು ಕಿತ್ತುಕೊಂಡರೆ ತಪ್ಪೇನಿಲ್ಲ".

ಈ ಸವಲತ್ತುಗಳು ಕಾಲಕ್ರಮದಲ್ಲಿ ಇನ್ನೂ ಹೆಚ್ಚಾಗಿರುವುದರಲ್ಲಿ ಸಂದೇಹವಿರುವುದಿಲ್ಲ. ಘರ್ಷಣೆ ಭುಗಿಲೆದ್ದಾಗ ಯಾವ ಹಕ್ಕು ಮತ್ತು ಸವಲತ್ತುಗಳು ವಿಶೇಷ ಆಸಕ್ತಿಯ ವಿಷಯಗಳಾಗಿದ್ದವೆಂದು ಹೇಳುವುದು ಕಷ್ಟ. ಆದರೆ ಉಳಿದವರ ಅತಿಹೆಚ್ಚು ಮನನೋಯಿಸುವ (i), (ii), (iii), (vii) ಮತ್ತು (xiv) ಇಂಥ ಸವಲತ್ತುಗಳು ಪ್ರಚಲಿತವಿದ್ದವು. ಯಾವುದೇ ಗೌರವಾರ್ಹ ಮತ್ತು ಸ್ವಾಭಿಮಾನಿ ಜನರನ್ನು ರೊಚ್ಚಿಗೇಳಿಸಲು ಇಷ್ಟು ಸಾಕು.

ಕ್ಷತ್ರಿಯ ಅರಸರ ಪಕ್ಷದಲ್ಲಿ, ಅರಸರು ಈ ಅವಹೇಳನವನ್ನು ಸೋತು ಸ್ವೀಕರಿಸುತ್ತಿದ್ದರೆಂದು ಊಹಿಸಲಾಗದು. ಅದು ಹೇಗೆ ಸಾಧ್ಯ? ಬ್ರಾಹ್ಮಣರೊಂದಿಗೆ ಘರ್ಷಣೆಗಿಳಿದ ಬಹುತೇಕ ಕ್ಷತ್ರಿಯ ಅರಸರೆಲ್ಲ ಸೂರ್ಯ ವಂಶದವರಾಗಿದ್ದರೆಂಬುದನ್ನು ಮರೆಯುವಂತಿಲ್ಲ.[೧] ಅವರು ವಿದ್ಯೆ, ಅಭಿಮಾನ ಮತ್ತು ಶೌರ್ಯಗಳಲ್ಲಿ

೧. ಈ ಕೆಳಗಿನ ವಂಶಾವಳಿಯ ಪ್ರಕಾರ ಪುರೂರವ ಮತ್ತು ನಹುಷರು ಮಾತ್ರ ಸೂರ್ಯವಂಶಿ ಕ್ಷತ್ರಿಯರಾಗಿದ್ದರು :

ಸೋಮ = ತಾರಾ

|

ಬುದ್ಧ = ಇಳಾ

ಪುರೂರವ = ಊರ್ವಶಿ

|

ಆಯು

|

ನಹುಶ

ಪುರೂರವನ ತಾಯಿ ಇಳಾ ಮನುವೈವಸ್ವತನ ಮಗಳೆಂಬುದನ್ನು ನೆನಪಿಟ್ಟರೆ ಬ್ರಾಹ್ಮಣರೊಂದಿಗೆ ಘರ್ಷಣೆಗಿಳಿದವರೆಲ್ಲ ಸೂರ್ಯವಂಶಿ ಕ್ಷತ್ರಿಯರ ಸಂಬಂಧಿಗಳಾಗಿದ್ದರೆಂದು ಕಂಡುಬರುತ್ತದೆ.

ಚಂದ್ರವಂಶಿ ಕ್ಷತ್ರಿಯರಿಗಿಂತ ಭಿನ್ನವಾಗಿದ್ದರು. ಸೂರ್ಯವಂಶಿ ಕ್ಷತ್ರಿಯರು ಪುರುಷಸಿಂಹಗಳಾಗಿದ್ದರೆ, ಚಂದ್ರವಂಶಿ ಕ್ಷತ್ರಿಯರು ನಿರಭಿಮಾನಿಗಳೂ, ನಿರ್ವೀರ್ಯರೂ ಆಗಿದ್ದರು. ಮೊದಲನೆಯವರು ಬ್ರಾಹ್ಮಣರನ್ನು ಎದುರು ಹಾಕಿಕೊಂಡರೆ ಎರಡನೆಯವರು ಬ್ರಾಹ್ಮಣರಿಗೆ ಅಡಿಯಾಳಾದರು. ಹೀಗಾಗುವುದು ಸಹಜವಿದ್ದಿತು. ಏಕೆಂದರೆ, ಚಂದ್ರವಂಶಿ ಕ್ಷತ್ರಿಯರು ವಿದ್ಯಾವಂತರಾಗಿರಲಿಲ್ಲ. ಸೂರ್ಯವಂಶಿ ಕ್ಷತ್ರಿಯರಾದರೊ ವಿದ್ಯೆಯಲ್ಲಿ ಬ್ರಾಹ್ಮಣರಿಗೆ ಸರಿಸಮಾನರಾಗಿದ್ದರು. ಅಷ್ಟೇ ಅಲ್ಲ, ಅವರಲ್ಲಿ ಕೆಲವರು ಬ್ರಾಹ್ಮಣರಿಗಿಂತ ಶ್ರೇಷ್ಠರಾಗಿದ್ದರು. ಅನೇಕರು ವೇದಮಂತ್ರಗಳನ್ನು ರಚಿಸಿದ್ದರು. ಅಂಥವರನ್ನು ರಾಜರ್ಷಿಗಳೆಂದು ಕರೆಯಲಾಯಿತು. ಈ ಉಪಾಧಿ ಬ್ರಾಹ್ಮಣರೊಂದಿಗೆ ಘರ್ಷಣೆಗಿಳಿದ ಕ್ಷತ್ರಿಯ ಅರಸರಿಗೆ ಅನ್ವಯಿಸುತ್ತಿತ್ತು.

ಋಗ್ವೇದದ ಅನುಕ್ರಮಣಿಕೆ ಮತ್ತು ಪರಂಪರೆಯ ಪ್ರಕಾರ ಕೆಳಗಿನ ಸ್ತೋತ್ರಗಳು ಕೆಳಗೆ ಉಲ್ಲೇಖಿಸಿದ ಅರಸರಿಂದ[೧] ಬರೆಯಲ್ಪಟ್ಟಿರುತ್ತದೆ.

*"vi. ೧೫ : ವೀತಹವ್ಯ (ಅಥವಾ ಭಾರದ್ವಾಜ) x.೯ ಅಂಬರೀಶನ ಮಗ ಸಿಂಧುವಿಪ (ಇಲ್ಲವೆ ತ್ವಷ್ಟ್ರಿಯ ಮಗ ತ್ರಿಶಿರ), x.೭೫ : ಪ್ರಿಯ ಮೇಧನ ಮಗ ಸಿಂಧೂಕ್ಷಿತ; x.೧೩೩, ಪಿಜವನನ ಮಗನಾದ ಸುದಾಸ, x.೧೩೪ ಯುವನಾಶ್ವನ ಮಗನಾದ ಮಾಂಧಾತ್ರಿ; x.೧೭೯, ಉಶೀನರ ಮಗನಾದ ಶಿಬಿ, ಕಾಶಿ ಅರಸ ದಿವೋದಾಸನ ಮಗ ಪ್ರತರ್ದನ ಮತ್ತು ರೋಹಿದಶ್ವನ ಮಗ ವಸುಮಾನಸ: ಮತ್ತು x.೧೪೮ದ ಕರ್ತೃ ಪೃಥ್ವೀವೈನ್ಯನೆಂದು ಸಾರಲಾಗಿರುತ್ತದೆ.*

ಮತ್ಸ್ಯಪುರಾಣ ಕೂಡ ಋಗ್ವೇದದ ಸ್ತೋತ್ರಗಳನ್ನು ಬರೆದವರ ಪಟ್ಟಿಯನ್ನು[೨] ಕೊಡುತ್ತದೆ. ಅದು ಕೆಳಗಿನಂತಿರುತ್ತದೆ :

*"ಭೃಗು, ಕಶ್ಯಪ, ಪ್ರಚೇತನ, ದಧೀಚ, ಆತ್ಮವತ್, ಔರ್ವ, ಜಮದಗ್ನಿ, ಕೃಪ, ಶರದ್ವತ, ಅರ್ಷ್ಟಿಶೇಣ, ಯಧಜಿತ್, ವಿತಹವ್ಯ, ಸುವರ್ಚಸ್, ವೈನ, ಪೃಥು, ದಿವೋದಾಸ, ಬ್ರಹ್ಮಸ್ವ, ಗೃತ್ಸ, ಶೌನಕ – ಈ ಹತ್ತೊಂಬತ್ತು ಭೃಗುಗಳು ಸ್ತೋತ್ರಗಳನ್ನು ಬರೆದರು. ಅಂಗೀರಸ, ವೇಧಸ, ಭಾರದ್ವಾಜ, ಭಲಂದನ, ಋತುಬಾಧ, ಗರ್ಗ, ಸಿತಿ, ಸಂಸ್ಕೃತಿ, ಗುರುಧೀರ, ಮಾಂಧಾತೃ, ಅಂಬರೀಶ, ಯುವನಾಶ್ವ, ಪುರುಕುತ್ಸ, ಪ್ರದ್ಯುಮ್ನ, ಶ್ರವಣಾಸ್ಯ, ಅಜಾಮಿಳ, ಹರ್ಯಶ್ವ, ತ್ಕಕ್ಷಪ, ಕವಿ, ಪೃಶದಶ್ವ, ವಿರೂಪ, ಕಣ್ವ, ಮುದ್ಗಲ, ಉತಥ್ಯ, ಶರದ್ವತ್, ವಾಜಶ್ರವಸ್, ಅಪಸ್ಯ, ಸುವಿತ್ತ, ವಾಮದೇವ, ಅಜಿತ, ಬೃಹದುಕ್ಥ, ದೀರ್ಘ ತಮಸ್, ಕಕ್ಷಿವತ್ – ಈ ಮೂವತ್ಮೂರು ಆಂಗೀರಸರೆಂದು ಉಲ್ಲೇಖಿಸಲಾಗಿದೆ. ಇವರೆಲ್ಲ ಸ್ತೋತ್ರ ಕರ್ತೃಗಳಾಗಿದ್ದರು. ಇನ್ನು ಕಶ್ಯಪರ ಬಗೆಗೆ ತಿಳಿದುಕೊಳ್ಳುವಾ.... ಗಾಧಿಯ ಮಗ ವಿಶ್ವಾಮಿತ್ರ, ದೇವರಾಜ, ಜಾಣ ಮಧುಚ್ಛಂದಸನಾದ ಬಲ, ಋಷಭ, ಅಘಮರ್ಶನ, ಅಷ್ಟಕ, ಲೋಹಿತ, ಭೃತಕೀಲ, ವೇದಶ್ರವಸ್, ದೇವರತ, ಪುರಾಣಸ್ವ, ಪ್ರಖ್ಯಾತ ಮಿಥಿಲರಸ ಧನಂಜಯ, ಸಾಲಂಕಾಯನ – ಈ ಹದಿಮೂರು ಜನರು ದೈವಭಕ್ತರು ಮತ್ತು ಪ್ರಸಿದ್ಧ ಕುಶಿಕರಾಗಿದ್ದರು. ಮನುವೈವಸ್ವತ, ಇಡ, ಪುರೂರವ ರಾಜ – ಈ ಮೂವರು ಕ್ಷತ್ರಿಯರಲ್ಲಿ ಪ್ರಸಿದ್ಧ ಮಂತ್ರೋಚ್ಚಾರಕರಾಗಿದ್ದರು. ಭಲಂದ, ವಂದ್ಯ ಮತ್ತು ಸಂಸ್ಕೃತಿ – ಈ ಮೂವರು ವೈಶ್ಯರಲ್ಲಿ ಪ್ರಸಿದ್ಧ ಸ್ತೋತ್ರ*

೧. Muir, Vol. I, p. ೨೬೮

೨. Muir, Vol. I, p. ೨೭೯

*ಸಂಯೋಜಕರಾಗಿದ್ದರು. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರನ್ನೊಳಗೊಂಡ ಒಟ್ಟು ತೊಂಬತ್ತೊಂದು ವಿದ್ವಾಂಸರನ್ನು ಪ್ರಸಿದ್ಧ ಸ್ತೋತ್ರಕಾರರೆಂದು ಸಾರಲಾಗಿದೆ.*

ವೇದ ಸ್ತೋತ್ರ ಕರ್ತೃಗಳ ಪಟ್ಟಿಯಲ್ಲಿ ಅನೇಕ ಕ್ಷತ್ರಿಯರಿರುವುದಷ್ಟೇ ಅಲ್ಲ ಬ್ರಾಹ್ಮಣರೊಂದಿಗೆ ಘರ್ಷಣೆಗಿಳಿದ ಅನೇಕ ಕ್ಷತ್ರಿಯರ ಹೆಸರುಗಳಿರುತ್ತವೆ. ವೇದಸ್ತೋತ್ರ ರಚಿಸುವುದರಲ್ಲಿ ಕ್ಷತ್ರಿಯರೇ ಮುಂದಾಳತ್ವ ವಹಿಸಿದ್ದರು. ಸುಪ್ರಸಿದ್ಧ ವೇದಸ್ತೋತ್ರವಾಗಿ ಗಾಯತ್ರಿ ಮಂತ್ರವನ್ನು ಕ್ಷತ್ರಿಯನಾದ ವಿಶ್ವಾಮಿತ್ರ ರಚಿಸಿದ್ದಾನೆ. ಬ್ರಾಹ್ಮಣರ ಸವಾಲನ್ನು ತೆಗೆದುಕೊಳ್ಳುವುದು ಇಂಥವನಿಗೆ ಅಸಾಧ್ಯವಾಗಿರಲಿಲ್ಲ.

ತಮ್ಮ ಶೌರ್ಯ ಮತ್ತು ವಿದ್ವತ್ತಿನಿಂದ ಹುಟ್ಟಿಕೊಂಡ ಅವರ ಅಭಿಮಾನ ಬ್ರಾಹ್ಮಣರ ಹೆಗ್ಗಳಿಕೆಯಿಂದ ಗಾಯಗೊಂಡಿದ್ದರಿಂದಲೇ ಆಹ್ವಾನವನ್ನು ಎದುರಿಸುವಲ್ಲಿ ಕ್ಷತ್ರಿಯರು ನಿರ್ದಾಕ್ಷಿಣ್ಯರಾದರು. ಅವರು ಬ್ರಾಹ್ಮಣರನ್ನು ಚಪ್ಪೆತೊಡೆಗೆ ಏಟು ಹಾಕಿ ಥಳಿಸಿದರು. ವೇಣ ಬೇರೆ ದೇವರನ್ನು ಬಿಟ್ಟು ತನ್ನನ್ನೇ ಪೂಜಿಸಲು ಅವರನ್ನು ಒತ್ತಾಯಿಸಿದನು. ಪುರೂರವ ಅವರ ಸಂಪತ್ತನನ್ನು ಲೂಟಿ ಮಾಡಿದನು. ನಹುಷ ಬ್ರಾಹ್ಮಣರನ್ನು ತನ್ನ ರಥಕ್ಕೆ ಹೂಡಿ ಪಟ್ಟಣದ ಬೀದಿಗಳಲ್ಲಿ ಎಳೆಯಿಸಿದನು. ನಿಮಿ ತನ್ನ ಕುಟುಂಬದಲ್ಲಿ ಆನುವಂಶಕತೆಯಿಂದ ಬಂದ ಧಾರ್ಮಿಕ ಕಾರ್ಯಗಳನ್ನು ನೆರವೇರಿಸುವ ಅರ್ಚಕರ ಹಕ್ಕುಗಳನ್ನು ಕಿತ್ತೊಗೆದನು ಮತ್ತು ಸುದಾಸ ತನ್ನ ಮನೆಯ ಅರ್ಚಕನಾದ ವಸಿಷ್ಠನ ಮಗನನ್ನು ಕೊಲ್ಲುವ ಮಟ್ಟಿಗೆ ಹೋದನು. ನಿಜಕ್ಕೂ, ಶೂದ್ರರ ಮೇಲೆ ತಮ್ಮ ಸೇಡು ತೀರಿಸಿಕೊಳ್ಳಲು ಇದಕ್ಕೂ ಹೆಚ್ಚಿನ ಪ್ರಚೋದನೆ ಬ್ರಾಹ್ಮಣರಿಗೆ ಇದ್ದಿರಲಾರದು.

**(೩)**

ಬ್ರಾಹ್ಮಣ ಮತ್ತು ಶೂದ್ರರ ನಡುವೆ ರಾಜಿಯ ಸಾಧ್ಯತೆಯ ಬಗೆಗೆ ನಂಬಲರ್ಹ ಸಾಕ್ಷಿ ಇರುತ್ತದೆಂಬುದಕ್ಕೆ ಸಂಶಯವಿರುವುದಿಲ್ಲ. ಈ ಸಾಕ್ಷಿಯ ಮಹತ್ವ ಕುರಿತು ನನ್ನ ವಿಚಾರಗಳನ್ನು ಹೇಳುವುದಕ್ಕಿಂತ ಮೊದಲು ಆ ಸಾಕ್ಷಿ ಏನೆಂಬುದರ ಕಡೆಗೆ ಲಕ್ಷ್ಯ ಹರಿಸುವುದೊಳಿತು. ಅದು ಮಹಾಭಾರತ ಮತ್ತು ಪುರಾಣಗಳಲ್ಲಿ ಅಲ್ಲಲ್ಲಿ ಬರುವ ಕಥೆಗಳನ್ನೊಳಗೊಂಡಿರುತ್ತದೆ. ಪ್ರಥಮ ರಾಜಿ ಕಥೆ ಎರಡು ಬುಡಕಟ್ಟುಗಳಿಗೆ ಸಂಬಂಧಿಸಿರುತ್ತದೆ. ಒಂದು ವಿಶ್ವಾಮಿತ್ರ ಸೇರಿದ ಭರತರ ಬುಡಕಟ್ಟು, ಇನ್ನೊಂದು ವಸಿಷ್ಠ ಸೇರಿದ ತ್ರಿತ್ಸುಗಳ ಬುಡಕಟ್ಟು. ಭರತರು ತ್ರಿತ್ಸುಗಳ ವೈರಿಗಳಾಗಿದ್ದರೆಂದು ಋಗ್ವೇದದಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ.[೧]

*೫೩.೫೪ – "ಎಲೈ ಇಂದ್ರ, ಭರತನ ಈ ಮಕ್ಕಳು ವಸಿಷ್ಠರ ಬಳಿಗೆ ಹೋಗುವುದನ್ನು ತಪ್ಪಿಸಬಯಸುತ್ತಾರೆ."*

ಅವರ ರಾಜಿಯ ಕಥೆ ಮಹಾಭಾರತದ ಆದಿಪರ್ವದಲ್ಲಿ[೨] ಬರುತ್ತಿದ್ದು, ಅದು ಹೀಗಿದೆ: *"ತಮ್ಮ ವೈರಿಗಳ ಆತಿಥೇಯರು ಕೂಡ ಭರತರನ್ನು ಥಳಿಸಿದರು. ಪಾಂಚಾಲ್ಯ ಒಡೆಯನು ತನ್ನ ಚದುರಂಗ ಬಲದಿಂದ ಭೂಮಿಯನ್ನು ನಡುಗಿಸಿದನು, ಮತ್ತು ಭೂಮಿಯನ್ನು ವಶಪಡಿಸಿಕೊಳ್ಳುವುದರ ಜೊತೆಗೆ ಅವನ ಮೇಲೆ ಏರಿಹೋದನು ಮತ್ತು ಹತ್ತು ಆತಿಥೇಯರ ಸಹಾಯದಿಂದ ಅವನನ್ನು ಹತ್ತಿಕ್ಕಿದನು. ಬಳಿಕ ಸಂವರ್ಣ ತನ್ನ ಹೆಂಡಿರು, ಮಂತ್ರಿಗಳು, ಮಕ್ಕಳು ಮತ್ತು ಸ್ನೇಹಿತರೊಂದಿಗೆ ಓಡಿಹೋಗಿ ಸಿಂಧು ನದಿಯ ತಪ್ಪಲು ಪ್ರದೇಶದಲ್ಲಿ*

---

೧. Muir, Vol. I, p. ೩೫೫

೨. Muir, Vol. I, p. ೩೬೧

*ವಾಸ ಮಾಡಿದನು. ಸಿಂಧು ನದಿಯ ಒಂದು ಬದಿಗೆ ಪ್ರವಾಹ ಇನ್ನೊಂದು ಬದಿಗೆ ಬೆಟ್ಟ ಇರುತ್ತದೆ. ಭರತರು ಅಲ್ಲಿ ಒಂದು ಕೋಟೆಯ ಆಶ್ರಯ ಪಡೆದು ಬಹುಕಾಲ ತಂಗಿದ್ದರು. ಸಾವಿರ ವರ್ಷ ವಾಸ ಮಾಡಿದ ಭರತರ ಬಳಿಗೆ ಒಮ್ಮೆ ಪೂಜ್ಯ ವಸಿಷ್ಠ ಋಷಿ ಬಂದನು. ಋಷಿಯನ್ನು ಬರಮಾಡಿಕೊಳ್ಳಲು ಎಲ್ಲ ಭರತರು ಕೋಟೆಯ ಹೊರಗೆ ಹೋಗಿ, ನಮಸ್ಕರಿಸಿ, ಅರ್ಘ್ಯ ಅರ್ಪಿಸಿ, ವೈಭವಯುತವಾಗಿ ಋಷಿಗೆ ಸಕಲ ಸನ್ಮಾನ ಮಾಡಿದರು. ಋಷಿ ಆಸೀನನಾದ ಬಳಿಕ, ಸ್ವತಃ ರಾಜನು ಹೀಗೆ ಬಿನ್ನವಿಸಿಕೊಂಡನು : "ತಾವು ನಮ್ಮ ಗುರುಗಳಾಗಬೇಕು, ಕಳೆದ ನನ್ನ ರಾಜ್ಯವನ್ನು ಮರಳಿ ಪಡೆಯಲು ನಾವೆಲ್ಲ ಪ್ರಯತ್ನಿಸೋಣ." ಆಗ ವಸಿಷ್ಠನು ಭರತರ ಬಣವನ್ನು ಸೇರಲು ಒಪ್ಪಿದನು ಮತ್ತು ಪುರುವಿನ ವಂಶಜನಿಗೆ ಇಡೀ ಕ್ಷತ್ರಿಯ ಕುಲದ ಸಾರ್ವಭೌಮತ್ವವನ್ನು ಕೊಟ್ಟು, ಅವನನ್ನು ಭೂಮಂಡಲಕ್ಕೆ ಒಡೆಯನನ್ನಾಗಿ ಮಾಡಿದನು. ಅವನು ಮೊದಲು ಭರತರು ವಾಸಿಸುತ್ತಿದ್ದ ವೈಭವದ ನಗರವನ್ನು ತೆಗೆದುಕೊಂಡನು ಮತ್ತು ಎಲ್ಲ ಅರಸರನ್ನು ತನ್ನ ಮಾಂಡಲೀಕರನ್ನಾಗಿ ಮಾಡಿಕೊಂಡನು.*

ಎರಡನೆಯ ಕಥೆಯು ಭೃಗುಗಳು ಮತ್ತು ಕ್ಷತ್ರಿಯ ಅರಸು ಕೃತವೀರ್ಯನ ನಡುವಿನ ಸಂಘರ್ಷ ಮತ್ತು ನಂತರದ ರಾಜಿಗೆ ಸಂಬಂಧಿಸಿರುತ್ತದೆ. ಅದು ಮಹಾಭಾರತದ ಆದಿಪರ್ವದಲ್ಲಿ ಬರುತ್ತದೆ.[೧]

*"ಕೃತವೀರ್ಯನೆಂಬ ಅರಸನಿದ್ದನು. ಅವನು ವೇದ ಪಾರಂಗತರಾದ ಗುರುಗಳಿಗೆ ಆಕಳು ಮತ್ತು ಧನದ ಉದಾರ ದಾನ ನೀಡಿದನು. ಅವನು ಸ್ವರ್ಗಕ್ಕೆ ಹೋದ ಬಳಿಕ, ಅವನ ವಂಶಜರು ಹಣದ ಕೊರತೆಯಾಗಿ, ಭೃಗುಗಳ ಬಳಿಗೆ ಹಣವಿದ್ದುದು ಮೊದಲೇ ತಿಳಿದಿದ್ದು, ಅವರನ್ನು ಹಣ ಕೇಳಲು ಬಂದರು. ಆಗ ಕೆಲವು ಭೃಗುಗಳು ತಮ್ಮ ಹಣವನ್ನು ಹೂತಿಟ್ಟರು, ಇನ್ನು ಕೆಲವರು ಕ್ಷತ್ರಿಯರಿಗೆ ಅಂಜಿ ಬ್ರಾಹ್ಮಣರಿಗೆ ದಾನ ಮಾಡಿದರು, ಮತ್ತೆ ಕೆಲವರು ಇವರಿಗೆ ಬೇಕಾದುದನ್ನು ಕೊಟ್ಟುಬಿಟ್ಟರು. ಅಂತೂ ಒಮ್ಮೆ ಒಬ್ಬ ಕ್ಷತ್ರಿಯ ನೆಲ ಅಗೆಯುವಾಗ ಒಬ್ಬ ಭೃಗುವಿನ ಮನೆಯಲ್ಲಿ ದ್ರವ್ಯವನ್ನು ಕಂಡನು. ಅದನ್ನು ಎಲ್ಲ ಕ್ಷತ್ರಿಯರು ನೋಡಿದರು ಮತ್ತು ಸಿಟ್ಟಿಗೆದ್ದು ಹೊಟ್ಟೆಯಲ್ಲಿಯ ಕೂಸುಗಳನ್ನು ಮೊದಲುಮಾಡಿ ಎಲ್ಲ ಭೃಗುಗಳನ್ನು ಸಂಹಾರ ಮಾಡಿದರು. ವಿಧವೆಯರು ಪರ್ವತಕ್ಕೆ ಓಡಿಹೋದರು. ಒಬ್ಬ ಬಸುರಿ ಹೆಂಗಸು ತನ್ನ ಹೊಟ್ಟೆಯಲ್ಲಿದ್ದ ಮಗುವನ್ನು ಹೇಗೊ ತೊಡೆ ಸಂದಿನಲ್ಲಿ ಮುಚ್ಚಿಕೊಂಡಿದ್ದಳು. ಈ ವಿಷಯ ಬ್ರಾಹ್ಮಣ ಗುಪ್ತಚಾರನಿಂದ ಕ್ಷತ್ರಿಯರಿಗೆ ತಿಳಿದು, ಅವರು ಅದನ್ನು ಕೊಲ್ಲಲು ಯತ್ನಿಸಿದರು. ಆದರೆ ಕಣ್ಣು ಕೋರೈಸುವ ಪ್ರಕಾಶಮಾನವಾದ ಶಿಶು ತನ್ನ ತಾಯಿಯ ತೊಡೆಯಿಂದ ಹೊರಬಂದು ಹಂತಕರನ್ನು ಕುರುಡುಗೊಳಿಸಿತು. ಕೆಲದಿನ ಗುಡ್ಡ ಬೆಟ್ಟ ಸುತ್ತಾಡಿ, ದಿಕ್ಕುಗಾಣದ ಹಂತರು, ದೇದೀಪ್ಯಮಾನವಾದ ಶಿಶುವಿನ ತಾಯಿಯ ಬಳಿಗೆ ಬಂದು ತಮಗೆ ದೃಷ್ಟಿಯನ್ನು ದಯಪಾಲಿಸೆಂದು ಬೇಡಿಕೊಂಡರು. ಆದರೆ, ಅವರ ಕಣ್ಣುಗಳನ್ನು ಕಳೆದ, ಇಡೀ ವೇದ (ಆರು ವೇದಾಂಗ ಸಹಿತ)ವನ್ನು ಒಳಗೊಂಡಿರುವ ತನ್ನ ಅದ್ಭುತ ಮಗು ಔರ್ವನನ್ನು ಕೇಳೆಂದು ಹೇಳಿದಳು. ಏಕೆಂದರೆ ಆ ಶಿಶು ತನ್ನ ಸಂಬಂಧಿಕರನ್ನು*

---

೧. Muir, Vol. I, pp. ೪೪೮–೪೪೯

*ಕೊಲೆಗೈದವರ ಮೇಲೆ ಸೇಡಿನ ಕ್ರಮವಾಗಿ ಕಣ್ಣು ಕಳೆದಿದ್ದನು. ಅಲ್ಲದೆ ಅವರಿಗೆ ದೃಷ್ಟಿಯನ್ನು ಮರಳಿಸುವುದು ಆ ಶಿಶುವಿಗೆ ಮಾತ್ರ ಸಾಧ್ಯವಿತ್ತು. ಹಾಗೆ ಅವರು ಆ ಶಿಶುವನ್ನು ಬೇಡಿಕೊಳ್ಳಲು ಅವರಿಗೆ ಕಳೆದ ದೃಷ್ಟಿ ಮರಳಿ ಬಂದಿತು. ಅಂತೂ ಔರ್ವ ಭೃಗುಗಳ ಕೊಲೆಯ ಸೇಡು ತೀರಿಸಿಕೊಳ್ಳಲು ಎಲ್ಲ ಜೀವಿಗಳ ಕೊಲೆಗೈಯಲು ಮಧ್ಯಸ್ಥಿಕೆ ವಹಿಸಿದನು ಮತ್ತು ಅದಕ್ಕಾಗಿ ಕಟ್ಟುನಿಟ್ಟಿನ ಕ್ರಮ ಕೈಕೊಂಡನು. ಅವನ ಸಿಡುಕಿನ ಕ್ರಮ ದೇವ, ದಾನವ ಮತ್ತು ಮಾನವರನ್ನು ತಲ್ಲಣಗೊಳಿಸಿತು. ಆದರೆ ಅವನ ಪೂರ್ವಜರು (ಪಿತೃಗಳು) ಸ್ವತಃ ಪ್ರತ್ಯಕ್ಷವಾಗಿ, ಕ್ಷತ್ರಿಯರ ಮೇಲೆ ಸೇಡು ತೀರಿಸಿಕೊಳ್ಳುವ ಉದ್ದೇಶ ತಮಗಿರಲಿಲ್ಲವೆಂದು ಹೇಳಿ ಔರ್ವನ ಮನಸ್ಸನ್ನು ಬದಲಿಸಲು ಯತ್ನಿಸಿದರು. ಧರ್ಮಿಷ್ಠ ಭೃಗುಗಳು ಕೊಲೆಪಾತಕಿಗಳಾದ ಕ್ಷತ್ರಿಯರು ಎಸಗಿದ ಅಮಾನುಷ ಹತ್ಯಾಕಾಂಡವನ್ನು ಗಮನಿಸದೇ ಇರುವುದಕ್ಕೆ ಅವರ ದುರ್ಬಲತೆ ಕಾರಣವಾಗಿರಲಿಲ್ಲ. "ವೃದ್ಧಾಪ್ಯದಿಂದ ದುಃಖಿತರಾದಾಗ ನಾವೇ ಅವರಿಂದ ಕೊಲ್ಲಿಸಿಕೊಳ್ಳಲು ಇಚ್ಛಿಸಿದೆವು. ಕ್ಷತ್ರಿಯರನ್ನು ಕೆಣಕುವ ಉದ್ದೇಶದಿಂದಲೇ ಭೃಗುವಿನ ಮನೆಯಲ್ಲಿ ದ್ರವ್ಯವನ್ನು ಹೂತಿಡಲಾಗಿತ್ತು. ಸ್ವರ್ಗವನ್ನು ಬಯಸಿದ ನಮಗೆ ದ್ರವ್ಯದಿಂದ ಏನಾಗಬೇಕಿತ್ತು?" ಆತ್ಮಹತ್ಯೆಯ ಪಾಪಕ್ಕೆ ತುತ್ತಾಗಬಾರದೆಂದು ಕೊಲ್ಲಿಸಿಕೊಳ್ಳುವ ಉಪಾಯ ಹುಡುಕಿದೆವೆಂದು ಹೇಳಿದರು. ಅಲ್ಲದೆ ಔರ್ವನಿಗೆ ತನ್ನ ಸಿಟ್ಟನ್ನು ನಿಗ್ರಹಿಸಬೇಕೆಂದೂ ಮತ್ತು ತಾನು ಎಸಗಲು ಮುಂದಾಗಿರುವ ಪಾಪಕೃತ್ಯದ ಮಧ್ಯಸ್ಥಿಕೆಯನ್ನು ವಹಿಸಬಾರದೆಂದೂ ಕೇಳಿಕೊಂಡರು : "ಎಲೈ ಮಗನೆ, ಕ್ಷತ್ರಿಯರನ್ನಾಗಲಿ, ಸಪ್ತಲೋಕಗಳನ್ನಾಗಲಿ ಧ್ವಂಸ ಮಾಡಬೇಡ. ಉಗ್ರ ತಪಸ್ಸಿನ ಶಕ್ತಿಯನ್ನು ನಿಷ್ಕ್ರಿಯಗೊಳಿಸುವ ನಿನ್ನ ಹೊತ್ತಿದ ಸಿಟ್ಟನ್ನು ನಿಗ್ರಹಿಸು." ಔರ್ವನು ತಾನೊಡ್ಡಿದ ಬೆದರಿಕೆಯನ್ನು ಹುಸಿಗೊಳಿಸಲಿಕ್ಕಾಗದೆಂದು ಉತ್ತರಿಸಿದನು. ಬೇರೊಂದು ವಸ್ತುವಿನ ಮೇಲೆ ಸೇಡು ತೆಗೆದುಕೊಳ್ಳದಿದ್ದರೆ, ಆ ಸಿಟ್ಟು ತನ್ನನ್ನೇ ಆಹುತಿ ತೆಗೆದುಕೊಳ್ಳುವುದೆಂದೂ, ತಾನು ಮಾಡುತ್ತಿರುವುದು ನ್ಯಾಯಸಮ್ಮತವೂ, ಅವಶ್ಯಕವೂ, ಅಲ್ಲದೆ ಕರ್ತವ್ಯವೂ ಆಗಿರುವುದೆಂದು ಹೇಳಿ ತನ್ನ ಪೂರ್ವಜರು ಶಿಫಾರಸು ಮಾಡಿರುವ ದಯಾನುಕಂಪದ ವಿರುದ್ಧ ವಾದಿಸಿದನು. ಕೊನೆಗೆ ಅವನ ಸಿಟ್ಟಿನ ಬೆಂಕಿಯನ್ನು ಸಮುದ್ರದಲ್ಲಿ ಚೆಲ್ಲುವಂತೆ ಪಿತೃಗಳು ಅವನ ಮನವೊಲಿಸಿದರು. ಏಕೆಂದರೆ ಆ ಬೆಂಕಿ ನೀರಿನೊಂದಿಗೆ ಹೋರಾಡಿ ತಣ್ಣಗಾಗುವುದು ಮತ್ತು ಅವನ ಬೆದರಿಕೆಯೂ ನೀಗುವುದು. ಅದು ಮುಂದಕ್ಕೆ ಬೆಂಕಿಯನ್ನು ಕಾರುವ ಮತ್ತು ನೀರನ್ನು ಕುಡಿಯುವ ಬೃಹತ್ ಹಯಶಿರಸ್ ಆಯಿತು. ವೇದದ ಪರಿಚಯ ಇದ್ದವರಿಗೆ ಇದು ಗೊತ್ತಿರುತ್ತದೆ."*

ಮೂರನೆಯ ಕತೆ ಹೈಹಯರ ಅರಸನಾದ ಕೃತವೀರ್ಯನ ಮಗ ಅರ್ಜುನ ಮತ್ತು ಪರಶುರಾಮರ ನಡುವಿನ ಸೆಣಸಾಟ ಮತ್ತು ಅನಂತರ ಆದ ರಾಜಿ ಕುರಿತು ಇರುತ್ತದೆ. ಅದು ಮಹಾಭಾರತದ ವನಪರ್ವದಲ್ಲಿ ಬರುತ್ತಿದ್ದು ಕೆಳಗಿನಂತಿರುತ್ತದೆ:[೧]

*"ಕೃತವೀರ್ಯನ ಮಗನಾದ ಮತ್ತು ಹೈಹಯರ ಅರಸನಾದ ಅರ್ಜುನನಿಗೆ ಸಾವಿರ ತೋಳುಗಳಿದ್ದವೆಂದು ಹೇಳಲಾಗುತ್ತಿದೆ. ಅವನು ದತ್ತಾತ್ರೇಯನಿಂದ ಬಂಗಾರದ*

---

೧. Muir, Vol. I, pp. ೪೪೯–೪೫೪

*ವಾಯುರಥವನ್ನು ಪಡೆದಿದ್ದನು. ಆ ರಥವನ್ನು ತಡೆದು ನಿಲ್ಲಿಸುವುದು ಯಾರಿಂದಲೂ ಸಾಧ್ಯವಿರಲಿಲ್ಲ. ಅವನು ದೇವತೆಗಳು, ಯಕ್ಷರು, ಋಷಿಗಳು ಮತ್ತು ಸಮಸ್ತ ಜೀವಿಗಳ ಮೇಲೆ ದಬ್ಬಾಳಿಕೆ ನಡೆಸಿದನು. ಮತ್ತು ವಿಷ್ಣು ಅರ್ಜುನನಿಂದ ಅವಮಾನಿತನಾದ ಇಂದ್ರನ ಜೊತೆಗೂಡಿ ಅರ್ಜುನನ್ನು ನಾಶಗೊಳಿಸುವ ತಂತ್ರವನ್ನು ಯೋಚಿಸಿದನು. ಅದೇ ಸಮಯಕ್ಕೆ ಕಾನ್ಯಾಕುಬ್ಜ ದೇಶವನ್ನು ಗಾಧಿ ಎಂಬ ರಾಜನು ಆಳುತ್ತಿದ್ದನು. ಅವನಿಗೆ ಸತ್ಯವತಿ ಎಂಬ ಮಗಳಿದ್ದಳು. ಸತ್ಯವತಿಯನ್ನು ಋಚಿಕ ಎಂಬ ಋಷಿಗೆ ಕೊಟ್ಟು ಮದುವೆ ಮಾಡಲಾಯಿತು. ಋಷಿ ಋಚಿಕನೊಂದಿಗೆ ಈ ರಾಜಕುಮಾರಿಯ ಮದುವೆ ಮತ್ತು ಜಮದಗ್ನಿಯ ಜನನದ ಬಗೆಗೆ ಹೆಚ್ಚಾಗಿ ಮೇಲೆ ಹೇಳಿದಂತೆ ಹೇಳಲಾಗುತ್ತಿದೆ. ಜಮದಗ್ನಿ ಮತ್ತು ರೇಣುಕೆಗೆ ಐವರು ಗಂಡುಮಕ್ಕಳು ಜನಿಸಿದರು. ಅವರಲ್ಲಿ ಎಲ್ಲರಿಗಿಂತ ಕಿರಿಯನು ಅಜೇಯ ಪರಶುರಾಮ. ತಂದೆಯ ಆಜ್ಞೆಯಂತೆ (ದೂಷಿತ ಬಯಕೆಯಿಂದ ಅಪವಿತ್ರಳಾದ) ತಾಯಿಯನ್ನು ಕೊಲ್ಲಲು ಅಣ್ಣಂದಿರು ನಿರಾಕರಿಸಿದಾಗ ಪರಶುರಾಮ ತನ್ನ ತಾಯಿಯನ್ನು ಕೊಲ್ಲುತ್ತಾನೆ. ತಂದೆಯ ಆಜ್ಞೆಯನ್ನು ಉಲ್ಲಂಘಿಸಿದ ಪರಿಣಾಮವಾಗಿ ಅಣ್ಣಂದಿರು ವಿವೇಕಶೂನ್ಯರಾಗುತ್ತಾರೆ. ಅನಂತರ ಪರಶುರಾಮನ ಇಚ್ಛೆಯಂತೆ ಜಮದಗ್ನಿ ಪತ್ನಿಗೆ ಜೀವ ಮರಳಿಸುತ್ತಾನಷ್ಟೇ ಅಲ್ಲ, ಪುತ್ರರಿಗೆ ವಿವೇಕವನ್ನೂ ಮರಳಿಸುತ್ತಾನೆ. ಅದೂ ಅಲ್ಲದೆ ಪರಶುರಾಮನನ್ನು ಮಾತೃಹತ್ಯೆಯ ಪಾಪದಿಂದ ಮುಕ್ತಗೊಳಿಸಿ ಅವನಿಗೆ ಅಜೇಯತೆಯ ಮತ್ತು ದೀರ್ಘ ಆಯುಷ್ಯದ ವರವನ್ನು ಕೊಡುತ್ತಾನೆ. ಈ ಹಂತದಲ್ಲಿ ಪರಶುರಾಮನ ಕಥೆ ಮತ್ತು ಅರ್ಜುನ ರಾಜನ ಕಥೆ ಕೂಡಿಕೊಳ್ಳುತ್ತದೆ. ಒಮ್ಮೆ ಜಮದಗ್ನಿಯ ಆಶ್ರಮಕ್ಕೆ ಅರ್ಜುನನು ಬಂದಾಗ ಜಮದಗ್ನಿಯ ಪತ್ನಿ ಅತಿಥಿಗೆ ಆದರಾತಿಥ್ಯ ತೋರಿಸಿದಳು. ಆದರೆ ಅದಕ್ಕೆ ಬದಲಾಗಿ ಅರ್ಜುನರಾಜ ಜಮದಗ್ನಿಯ ಯಜ್ಞದ ಪಶುವನ್ನು ಬಲಾತ್ಕಾರದಿಂದ ಕೊಂಡೊಯ್ದನು ಮತ್ತು ಹೋಗುವಾಗ ಆಶ್ರಮದ ಹೆಮ್ಮರಗಳನ್ನು ಕಿತ್ತುಹಾಕಿದನು. ಈ ಧ್ವಂಸದ ವಾರ್ತೆ ತಿಳಿದು ಪರಶುರಾಮ ಕುಪಿತನಾಗಿ ಸಹಸ್ರಬಾಹು ಅರ್ಜುನನ ಮೇಲೆ ಏರಿಹೋಗಿ ಅವನ ಸಹಸ್ರಬಾಹುಗಳನ್ನು ಕತ್ತರಿಸಿ, ಅವನನ್ನೂ ಕೊಂದನು. ಅದಕ್ಕೆ ಪ್ರತಿಯಾಗಿ ಅರ್ಜುನನ ಮಗನು ಪರಶುರಾಮನ ಅನುಪಸ್ಥಿತಿಯಲ್ಲಿ ಶಾಂತವಾಗಿದ್ದ ಋಷಿ ಜಮದಗ್ನಿಯನ್ನು ಕೊಂದನು. ತಂದೆಯ ಹತ್ಯೆಯಿಂದ ಕುಪಿತನಾದ ಪರಶುರಾಮ ಕ್ಷತ್ರಿಯಕುಲವನ್ನು ನಿರ್ನಾಮ ಮಾಡುವ ಪ್ರತಿಜ್ಞೆ ಮಾಡುತ್ತಾನೆ. ಮತ್ತು ತನ್ನ ಪರಶುವಿನಿಂದ ಅರ್ಜುನನ ಎಲ್ಲ ಮಕ್ಕಳು, ಮೊಮ್ಮಕ್ಕಳು ಮತ್ತು ಸಾವಿರಾರು ಹೈಹಯರನ್ನು ಚಂಡಾಡಿ ಭೂಮಿಯನ್ನು ರಕ್ತರಂಜಿತ ಮಾಡುತ್ತಾನೆ. ಹೀಗೆ ಕ್ಷತ್ರಿಯರನ್ನು ಸಂಹರಿಸಿದ ಬಳಿಕ ಪರಶುರಾಮನ ಹೃದಯದಲ್ಲಿ ಅನುಕಂಪದ ಅಲೆ ಎದ್ದು ಅವನು ಅರಣ್ಯಕ್ಕೆ ತೆರಳಿದನು. ಹಲವು ಸಹಸ್ರ ವರ್ಷಗಳು ಸಂದ ಬಳಿಕ, ರೈಭ್ಯನ ಮಗನೂ ಮತ್ತು ವಿಶ್ವಾಮಿತ್ರನ ಮೊಮ್ಮಗನೂ ಆದ ಪರವಸು ಸ್ವಭಾವತಃ ಮುಂಗೋಪಿಯಾದ ಪರಶುರಾಮನನ್ನು ಬಹಿರಂಗ ಸಭೆಯಲ್ಲಿ ಹೀಗೆ ಮೂದಲಿಸಿದನು :*

*"ಯಯಾತಿ ನಗರದಲ್ಲಿ ಯಜ್ಞಕ್ಕಾಗಿ ಸೇರಿದ ಪ್ರತರ್ದನ ಮೊದಲಾದ ಸದ್ಗುಣಿಗಳು ಕ್ಷತ್ರಿಯರಲ್ಲವೆ? ನೀನು ಒಡ್ಡಿದ ಬೆದರಿಕೆಯನ್ನು ಪೂರ್ಣಗೊಳಿಸದೆ, ಸಭೆಯಲ್ಲಿ, ಸುಮ್ಮನೆ ಜಂಬ ಕೊಚ್ಚಿಕೊಂಡೆ. ವೀರ ಕ್ಷತ್ರಿಯರಿಗೆ ಅಂಜಿ ಅಡವಿಯನ್ನು ಸೇರಿದೆ, ಭೂಮಿ ಮತ್ತೆ*

*ನೂರಾರು ಕ್ಷತ್ರಿಯರ ದಾಳಿಗೊಳಗಾಗಿದೆ". ಇದನ್ನು ಕೇಳಿ ಪರಶುರಾಮ ತನ್ನ ಆಯುಧಗಳನ್ನು ಎತ್ತಿಕೊಂಡ. ಈ ಮೊದಲು ಉಳಿಸಿದ ನೂರಾರು ಕ್ಷತ್ರಿಯರು ಅಷ್ಟೊತ್ತಿಗೆ ಬಲಶಾಲಿಗಳಾಗಿದ್ದರು. ಆದಾಗ್ಯೂ ಪರಶುರಾಮ ಅವರೆಲ್ಲರನ್ನು, ಅವರ ಮಕ್ಕಳುಮರಿಗಳನ್ನು, ತಾಯಿಯ ಗರ್ಭದಿಂದ ಅದೇ ಆಗ ಹೊರಬರುವ ಹಸುಳೆಗಳನ್ನೆಲ್ಲ ಕೊಂದನು. ಆದಾಗ್ಯೂ ಹಲವರು ತಮ್ಮ ತಾಯಂದಿರಿಂದ ರಕ್ಷಿಸಲ್ಪಟ್ಟರು. ಇಪ್ಪತ್ತೊಂದು ಸಲ ಕ್ಷತ್ರಿಯರ ಸಂಹಾರ ಮಾಡಿದ ಬಳಿಕ ಪರಶುರಾಮ ಅಶ್ವಮೇಧಯಾಗದ ಕೊನೆಗೆ ಯಜ್ಞಶುಲ್ಕ ಕೊಡುತ್ತಾನೆ."*

ಘರ್ಷಣೆಯ ಕಥೆ ಹೇಳಿದ ಬಳಿಕ ಮಹಾಭಾರತದ ಕರ್ತೃ ಅವರಿಬ್ಬರ ನಡುವೆ ಆದ ರಾಜಿಯ ಕಥೆಯನ್ನು ಹೇಳಲು ಮುಂದಾಗುತ್ತಾನೆ.[೧] ಅದು ಕೆಳಗಿನಂತಿರುತ್ತದೆ :

*"ಇಪ್ಪತ್ತೊಂದು ಸಲ ಭೂಮಿಯು ಮೇಲಿನ ಕ್ಷತ್ರಿಯರನ್ನು ಸಂಹಾರ ಮಾಡಿದ ಬಳಿಕ, ಜಮದಗ್ನಿಯ ಪುತ್ರನು ಮಹೇಂದ್ರ ಪರ್ವತದ ಮೇಲೆ ಉಗ್ರ ತಪಸ್ಸಿಗೆ ತೊಡಗಿದನು. ಕ್ಷತ್ರಿಯರನ್ನು ಭೂಮಿಯಿಂದ ಅಳಿಸಿದ ಬಳಿಕ, ಅವರ ವಿಧವೆಯರು ಬ್ರಾಹ್ಮಣರ ಬಳಿಗೆ ಬಂದು ಸಂತಾನವನ್ನು ಅನುಗ್ರಹಿಸೆಂದು ಪ್ರಾರ್ಥಿಸಿದರು. ಧರ್ಮಿಷ್ಠ ಬ್ರಾಹ್ಮಣರ ನಿಷ್ಕಾಮದಿಂದ ಕ್ಷತ್ರಿಯ ಸ್ತ್ರೀಯರು ಕ್ಷಾತ್ರ ಪುತ್ರ ಮತ್ತು ಪುತ್ರಿಯರನ್ನು ಹೆತ್ತರು. ಅದರಿಂದ ಕ್ಷತ್ರಿಯರ ವಂಶ ಮುಂದುವರಿಯಿತು. ಹೀಗೆ ಕ್ಷತ್ರಿಯ ಕುಲ ಸದಾಚಾರಿ ಬ್ರಾಹ್ಮಣರೂ ಹಾಗೂ ಕ್ಷತ್ರಿಯ ಸ್ತ್ರೀಯರಿಂದ ಹುಟ್ಟಿಕೊಂಡಿತು ಮತ್ತು ದ್ವಿಗುಣಗೊಂಡು ದೀರ್ಘಕಾಲ ಬಾಳಿತು. ಅಂದಿನಿಂದ ಬ್ರಾಹ್ಮಣರಿಗಿಂತ ಕೀಳಾದ ನಾಲ್ಕು ವರ್ಣಗಳು ಹುಟ್ಟಿದವು."*

ಬ್ರಾಹ್ಮಣರ ಮತ್ತು ಕ್ಷತ್ರಿಯರ ನಡುವೆ ಘರ್ಷಣೆ ಮತ್ತು ರಾಜಿ ಆದ ಮೇಲಿನ ಉದಾಹರಣೆಗಳು ಬ್ರಾಹ್ಮಣರ ಮೇಲೆ ಯುದ್ಧಸಾರಿದ ಕ್ಷತ್ರಿಯ ಅರಸರಿಗೆ ಸಂಬಂಧಿಸಿರುವುದಿಲ್ಲ. ಬ್ರಾಹ್ಮಣರೊಂದಿಗೆ ಹೋರಾಡಿ ರಾಜಿಯಾದ ಕ್ಷತ್ರಿಯ ಅರಸರ[೨] ಕಥೆಗಳಲ್ಲಿ ಕಲ್ಮಷಪಾದನ ಕಥೆ ಮೊದಲನೆಯದಾಗಿದ್ದು, ಅವನು ಸುದಾಸನ ಮಗನೆಂದು[೩] ಹೇಳಲಾಗುತ್ತದೆ. ಆ ಕಥೆ ಮಹಾಭಾರತದ ಆದಿಪರ್ವದಲ್ಲಿ[೪] ಬರುತ್ತದೆ. ಕಲ್ಮಷಪಾದ ಮತ್ತು ವಸಿಷ್ಠನ ನಡುವಿನ ದ್ವೇಷಕ್ಕೆ ಸಂಬಂಧಿಸಿದ ಕಥಾಭಾಗವನ್ನು ಈಗಾಗಲೇ ಹೇಳಲಾಗಿರುತ್ತದೆ.[೫] ಅವರ ರಾಜಿಯ ಕಥೆ ಕೆಳಗಿನಂತಿರುತ್ತದೆ :

*"ಅನೇಕ ಕಾಡು–ಮೇಡು ಸುತ್ತಾಡಿ ವಸಿಷ್ಠನು ಶಕ್ತಿಯ ವಿಧವೆಯಾದ[೬] ತನ್ನ ಸೊಸೆ ಅದೃಶ್ಯಂತಿಯೊಂದಿಗೆ ಮನೆಗೆ ಮರಳಿದನು. ಗರ್ಭವತಿಯಾದ ಅವಳ ಹೊಟ್ಟೆಯಿಂದ*

---

೧. *Muir,* Vol. I, pp. ೪೫೧–೪೫೨

೨. ಕೆಳಗೆ ಹೇಳಲಾಗುವ ಕಥೆಗಳಲ್ಲಿ ಬರುವ ಅರಸರ ಹೆಸರುಗಳು ಮತ್ತು ಒಂಬತ್ತನೆಯ ಅಧ್ಯಾಯದಲ್ಲಿ ಉಲ್ಲೇಖಿಸಲಾದ ಹೆಸರುಗಳು ಒಂದೇ ಎಂದು ನನಗೆ ಖಚಿತ ಗೊತ್ತಿರುವುದಿಲ್ಲ. ಅವರು ಇಕ್ಷ್ವಾಕು ಕುಟುಂಬಕ್ಕೆ ಸೇರಿದವರಾಗಿದ್ದರಿಂದ ಅವರನ್ನು ಇಲ್ಲಿ ಹೆಸರಿಸುತ್ತೇನೆ.

೩. ಅವನು ಯಾವ ಸುದಾಸ ನನಗೆ ತಿಳಿದಿರುವುದಿಲ್ಲ. ವಿವರಣೆಯಿಂದ ಅವನು ಪೈಜವನ ಸುದಾಸನಾಗಿರುವಂತೆ ತೋರುತ್ತದೆ.

೪. *Muir,* Vol. I, pp.೪೧೫–೪೧೮

೫. ಅಧ್ಯಾಯ ೯ ನೋಡಿ.

೬. ಬಹುಶಃ ಶಕ್ತಿ ತಪ್ಪಿ ಶಕ್ರಿ ಆಗಿರಬಹುದು.

*ವೇದಪಾಠದ ಧ್ವನಿ ಕೇಳಿಸಿತು, ಮತ್ತು ಹುಟ್ಟಿದ ಬಳಿಕ ಆ ಶಿಶುವಿಗೆ ಪರಾಶರನೆಂದು ಹೆಸರಿಡಲಾಯಿತು. ಅದೃಶ್ಯಂತಿಯಿಂದ ತನ್ನ ವಂಶ ವೃದ್ಧಿಯಾಗುವುದೆಂದು ತಿಳಿದು ವಸಿಷ್ಠ ಆತ್ಮಹತ್ಯೆಯ ವಿಚಾರ ಬಿಟ್ಟುಕೊಟ್ಟನು. ಅಡವಿಯಲ್ಲಿ ಎದುರಾದ ಕಲ್ಮಷಪಾದ ಅವರನ್ನು ನುಂಗುವಷ್ಟರಲ್ಲಿ ಒಂದು ಚಮತ್ಕಾರ ನಡೆಯಿತು. ವಸಿಷ್ಠ ಚೆಲ್ಲಿದ ಆಚಮನದ ಮತ್ತು ಮಂತ್ರ ಜಲವು ಕಲ್ಮಷಪಾದನ ಮೇಲೆ ಬೀಳಲು ಅವನು ಹನ್ನೆರಡು ವರ್ಷ ಅನುಭವಿಸುತ್ತಿದ್ದ ಶಾಪದಿಂದ ಮುಕ್ತನಾದನು. ಆಗ ಅವನು ವಸಿಷ್ಠನನ್ನು ಉದ್ದೇಶಿಸಿ ಹೀಗೆ ಹೇಳಿದನು : "ಋಷಿವರ್ಯನೆ, ನಾನು ಸೌದಾಸ, ನೀನು ನನ್ನ ಗುರು. ನಿನಗಾಗಿ ನಾನು ಏನು ಮಾಡಲಿ, ಏತರಿಂದ ನೀನು ತುಷ್ಟನಾಗುವಿ?" ವಸಿಷ್ಠ ಪ್ರತಿಯಾಗಿ ಉತ್ತರಿಸಿದನು – "ಈಗ ಸಂಭವಿಸಿರುವುದು ವಿಧಿಯ ಬಲದಿಂದ. ನೀನು ಹೋಗಿ ರಾಜ್ಯ ಆಳು, ಆದರೆ, ರಾಜನ್, ಬ್ರಾಹ್ಮಣರನೆಂದೂ ತೆಗಳಬೇಡ" ಅದಕ್ಕೆ ರಾಜನು ಹೀಗೆ ಉತ್ತರಿಸಿದನು : "ಬ್ರಾಹ್ಮಣ ಬ್ರಾಹ್ಮಣರನ್ನೆಂದೂ ತುಚ್ಛವಾಗಿ ಕಾಣುವುದಿಲ್ಲ. ನಿನ್ನ ಆಜ್ಞೆಯಂತೆ ಸಕಲ ಮರ್ಯಾದೆ ಮಾಡುತ್ತೇನೆ. ಇಕ್ಷ್ವಾಕು ವಂಶದವರ ಋಣವನ್ನು ಯಾವುದರಿಂದ ತೀರಿಸಲಿ ಎಂಬುದನ್ನು ತಿಳಿಸಬೇಕು. ನನಗೆ ಬೇಕಾದಂಥ ಪುತ್ರನನ್ನು ಕರುಣಿಸಬೇಕು." ವಸಿಷ್ಠ ಅವನ ಇಚ್ಛೆಯನ್ನು ಪೂರೈಸುವ ಭರವಸೆಯನ್ನು ಇತ್ತನು. ಬಳಿಕ ಅವರು ಅಯೋಧ್ಯೆಗೆ ಮರಳಿದರು. ಸಿಂಹಾಸನಕ್ಕೆ ವಾರಸುದಾರನನ್ನು ದಯಪಾಲಿಸಬೇಕೆಂದು ವಸಿಷ್ಠನನ್ನು ಬಿನ್ನವಿಸಿಕೊಳ್ಳಲು ಮಹಾರಾಣಿಗೆ[೧] ಗರ್ಭದಾನ ಮಾಡಿದನು, ಮತ್ತು ರಾಣಿ ಹನ್ನೆರಡು ವರ್ಷದ ಬಳಿಕ ಗಂಡು ಮಗುವನ್ನು ಹೆತ್ತಳು."*

ಎರಡನೆಯ ಪ್ರಸಂಗ ಮಹಾಭಾರತದ ಅನುಶಾಸನ ಪರ್ವ[೨]ದಲ್ಲಿ ಬರುತ್ತದೆ.

*"ಆ ಕಾಲಕ್ಕೆ ಇಕ್ಷ್ವಾಕು ಕುಲದಲ್ಲಿ ಜನಿಸಿದ, ನಿರರ್ಗಳವಾಗಿ ಮಾತನಾಡುವ ರಾಜ ಸೌದಾಸ ವಂದನೆಯಾದ ಬಳಿಕ ಶಾಶ್ವತ ಧರ್ಮಜ್ಞಾನದ ನಿಧಿಯಾದ, ಭೂಮಂಡಲದ ತುಂಬೆಲ್ಲ ಸಂಚರಿಸಿದ, ಋಷಿವರೇಣ್ಯನಾದ ತನ್ನ ಕುಲಗುರು ವಸಿಷ್ಠನಿಂದ ಒಂದು ವಿಷಯ ತಿಳಿಯಬಯಸಿದನು : "ಎಲೈ ಪಾಪರಹಿತ ಪೂಜ್ಯಪುರುಷನೇ, ಯಾವುದನ್ನು ಪುನಃ ಪುನಃ ಮಾಡುವುದರಿಂದ ಮೂರು ಲೋಕಗಳಲ್ಲಿ ಎಲ್ಲಕ್ಕಿಂತ ಹೆಚ್ಚಿನ ಪುಣ್ಯ ದೊರೆಯುತ್ತದೆ?" ಅದಕ್ಕೆ ಉತ್ತರ ರೂಪವಾಗಿ ವಸಿಷ್ಠ ಗೋವುಗಳನ್ನು ದಾನ ಮಾಡುವುದರಿಂದ ಬರುವ ಪುಣ್ಯದ ವಿಷಯಕ್ಕೆ ದೀರ್ಘ ವಿವರಣೆ ನೀಡಿದನು ಮತ್ತು ಇಂದಿನ ಮತ್ತು ಮುಂದಿನ ಎಲ್ಲ ಜೀವಿಗಳಿಗೆ ಆಧಾರವಾಗಿರಲು ಬೇಕಾದ ಈ ಪ್ರಾಣಿಗಳ ಅದ್ಭುತ ಗುಣಗಳನ್ನು ಮತ್ತು ವಿಶ್ವವ್ಯಾಪಿಯಾಗಿರುವ ಭೂತ ಭವಿಷ್ಯತ್ತುಗಳ ತಾಯಿಯ ವೈಶಿಷ್ಟ್ಯದ ವರ್ಣನೆ ಮಾಡಿದನು. ನಮ್ರ ರಾಜನು ವಸಿಷ್ಠನ ಈ ಮಾತನ್ನು ನಂಬಿ ಗೋವುಗಳ ರೂಪದಲ್ಲಿ ವಿಪುಲ ಸಂಪತ್ತನ್ನು ಬ್ರಾಹ್ಮಣರಿಗೆ ದಾನ ಮಾಡಿದನು. ಮತ್ತು ಪ್ರಪಂಚವನ್ನು ಗೆದ್ದನು, ಸೌದಾಸನ ಮಗನು ಸಂತನೆಂದು ಹೊಗಳಿರುವುದನ್ನು ಇಲ್ಲಿ ಕಾಣುತ್ತೇವೆ"*

---

೧. ಅವಳ ಹೆಸರು ಮದಯಂತಿ. ಅನುಶಾಸನ ಪರ್ವದಲ್ಲಿ ಅವಳನ್ನು ಮಿತ್ರಸಹನ ಪತ್ನಿ ಎಂದು ಹೇಳಲಾಗಿದೆ. ಮಿತ್ರಸಹನ ಇನ್ನೊಂದು ಹೆಸರು ಕಾಮಶಪಾದ. ಇದಕ್ಕಾಗಿ Muir, Vol. I, pp. ೪೧೮–೪೨೩ ನೋಡಿ.

೨. Muir, Vol. I, p. ೩೭೪

ಮೂರನೆಯ ಕಥೆಯ ಬ್ರಾಹ್ಮಣರು ಮತ್ತು ಸುದಾಸನ ವಂಶಜರ ನಡುವೆ ಆದ ರಾಜಿಪ್ರಸಂಗಕ್ಕೆ ಸಂಬಂಧಿಸಿರುತ್ತದೆ. ಅದು ಮಹಾಭಾರತದ ಶಾಂತಿಪರ್ವದಲ್ಲಿ[೧] ಬರುತ್ತದೆ :

"ಕಶ್ಯಪನು, ಭೂಮಿಯ ಅಧಿಪತ್ಯ ಪಡೆದ ಮೇಲೆ, ಭೂಮಂಡಲವನ್ನು ಬ್ರಾಹ್ಮಣರ ವಾಸಸ್ಥಳವನ್ನಾಗಿ ಮಾಡಿದನು, ಮತ್ತು ತಾನು ಅಡವಿಗೆ ತೆರಳಿದನು. ಆಗ ಶೂದ್ರರು ಮತ್ತು ವೈಶ್ಯರು ಬ್ರಾಹ್ಮಣ ಹೆಂಡಂದಿರ ಜೊತೆಗೆ ಅನೀತಿಯಿಂದ ವರ್ತಿಸಹತ್ತಿದರು. ಸರಕಾರವು ಇಲ್ಲದಿರುವುದರ ಪರಿಣಾಮವಾಗಿ ದುರ್ಬಲರು ಬಲಶಾಲಿಗಳ ದಬ್ಬಾಳಿಕೆಗೊಳಗಾದರು. ಯಾರೂ ಯಾವುದೇ ಆಸ್ತಿಗೆ ಒಡೆತನ ಹೊಂದಿರಲಿಲ್ಲ. ಅರಾಜಕತೆಯ ಪರಿಣಾಮವಾಗಿ, ನ್ಯಾಯರಕ್ಷಕರಾದ ಕ್ಷತ್ರಿಯರಿಂದ ನ್ಯಾಯನೀತಿಯಿಂದ ಆಳದಿರಲು, ದುಷ್ಟರಿಂದ ದುಃಖಕ್ಕೀಡಾದ ಪೃಥ್ವಿ ಪಾತಾಳ ಲೋಕಕ್ಕಿಳಿಯಿತು. ಭೀತಿಯಿಂದ ಸ್ಥಳದಿಂದ ಸ್ಥಳಕ್ಕೆ ಅಲೆದಾಡುತ್ತಿರುವುದನ್ನು ಕಂಡು ಕಶ್ಯಪ ಪೃಥ್ವಿಯನ್ನು ಎತ್ತಿ ತನ್ನ ತೊಡೆಯಲ್ಲಿಟ್ಟುಕೊಂಡನು. ಈ ಪ್ರಸಂಗವು ಅವಳಿಗೆ ಉರ್ವಿ ಎಂಬ ಹೆಸರನ್ನು ತಂದುಕೊಟ್ಟಿತು. ಆಗ ಇಳಾದೇವಿ ತನ್ನನ್ನು ರಕ್ಷಿಸಬೇಕೆಂದು ಕಶ್ಯಪನನ್ನು ಬೇಡಿಕೊಂಡಳು ಮತ್ತು ಅರಸನಿಗಾಗಿ ಹೈಹಯ ಕುಲದ ಕ್ಷತ್ರಿಯ ಸ್ತ್ರೀಯರಲ್ಲಿ ಜನಿಸಿದ ಕ್ಷತ್ರಿಯರನ್ನು ತಾನು ರಕ್ಷಿಸಿದ್ದಾಗಿ, ಅವರೇ ಅವಳ ರಕ್ಷಕರಾಗಬೇಕೆಂದು ಕೇಳಿಕೊಂಡಳು. ರಿಷಾವತ ಪರ್ವತನ ಮೇಲೆ ಕರಡಿಗಳಿಂದ ಬೆಳೆಸಲ್ಪಟ್ಟ ವಿದುರಥನ ಮಗನೂ, ಪೌರವರ ಉತ್ತರಾಧಿಕಾರಿಯೂ ತನ್ನನ್ನು ಕಾಯಲೆಂದು ಬೇಡಿಕೊಂಡಳು. ಹಾಗೇ ಸೌದಾಸನ ಉತ್ತರಾಧಿಕಾರಿಯು ಕೂಡ ಪ್ರಖ್ಯಾತ ಮೆಲ್ಲೆದೆಯ ಪರಾಶರ ಗುರುವಿನಿಂದ ರಕ್ಷಿಸಲ್ಪಟ್ಟಿರುತ್ತಾನೆ. ಪರಾಶರ ಬ್ರಾಹ್ಮಣನಾದರೂ ಶೂದ್ರನ ಹಾಗೆ ಅವನ ಸೇವೆ ಮಾಡುವುದರಿಂದ ಆ ರಾಜಕುಮಾರನಿಗೆ ಸರ್ವಕರ್ಮಣ ಎಂಬ ಹೆಸರು ಬಂದಿತು. ಬ್ರಾಹ್ಮಣರಿಂದ ರಕ್ಷಿಸಲ್ಪಟ್ಟ ಇನ್ನುಳಿದ ಅರಸರ ಪಟ್ಟಿ ಮಾಡಿಯಾದ ಮೇಲೆ ಪೃಥ್ವಿ ಹಾಗೆ ಮುಂದುವರಿಸುತ್ತಾಳೆ : 'ಈ ಎಲ್ಲ ಕ್ಷತ್ರಿಯ ವಂಶದವರು ಬೇರೆ ಬೇರೆ ಸ್ಥಳಗಳಲ್ಲಿ ಒಂದೇ ಸಮನೆ ದ್ಯೋಕರ (dyokaras) ಮತ್ತು ಸುವರ್ಣಕಾರ ವರ್ಗಗಳಲ್ಲಿ ಹುಟ್ಟಿ ಬದುಕಿರುತ್ತಾರೆ. ಅವರು ನನಗೆ ರಕ್ಷಣೆ ಒದಗಿಸಿದರೆ ನಾನು ಧೃತಿಗೆಡದೆ ಮುಂದುವರಿಯುವೆ. ನನಗೋಸುಗ ಅವರ ತಂದೆತಾಯಂದಿರು ವೀರ ಪರಶುರಾಮನಿಂದ ಕೊಲ್ಲಲ್ಪಟ್ಟರು. ಅದರ ಸೇಡನ್ನು ತೀರಿಸುವುದು ನನ್ನ ಹೊಣೆಯಾಗಿರುತ್ತದೆ. ಏಕೆಂದರೆ ಯಾವಾಗಲೂ ಕಶ್ಯಪನಂಥ ಅಸಾಧಾರಣ ಪುರುಷ ನನ್ನನ್ನು ರಕ್ಷಿಸಬೇಕೆಂದು ಬಯಸುವುದಿಲ್ಲ. ಸಾಮಾನ್ಯ ಅರಸನ ರಕ್ಷಣೆಯಿಂದ ನಾನು ತೃಪ್ತಳಾಗುವೆನು. ನನ್ನೀ ಇಚ್ಛೆ ಬೇಗ ಈಡೇರಲಿ' ಆಗ ಕಶ್ಯಪ ಪೃಥ್ವಿ ಹೇಳಿದ ಕ್ಷತ್ರಿಯರನ್ನು ಕರೆಕಳುಹಿಸಿ ಅವರಿಗೆ ಪಟ್ಟಗಟ್ಟಿದನು"

ಹೀಗಿರುತ್ತದೆ ಸಾಕ್ಷ್ಯಾಧಾರ. ಯಾರಾದರೂ ಇದನ್ನು ನಂಬಲು ಸಾಧ್ಯವೆ? ನನ್ನ ಪ್ರಕಾರ ಅದನ್ನು ನಂಬಲಾಗದು. ಇಂಥ ಸಾಕ್ಷ್ಯಾಧಾರಗಳ ಬಗೆಗೆ ಎಚ್ಚರ ವಹಿಸುವುದು ಅವಶ್ಯ.

ಮೊದಲನೆಯದಾಗಿ, ಈ ಎಲ್ಲ ರಾಜಿಯ ಕಥೆಗಳು ಕ್ಷತ್ರಿಯರಿಗೆ ಮರ್ಯಾದೆ ತರದೆ ಶಾಂತಿಯಲ್ಲಿ ಕೊನೆಗೊಳ್ಳುತ್ತವೆ. ಪ್ರತಿಯೊಂದು ಪ್ರಸಂಗದಲ್ಲಿ ಕ್ಷತ್ರಿಯರು ಅಪಮಾನಕರ ರೀತಿಯಲ್ಲಿ ಶರಣಾದಂತೆ

---

೧. ಅದೇ ಪುಸ್ತಕದಲ್ಲಿ, ಪುಟ ೪೫೫–೪೫೬

ತೋರುತ್ತದೆ. ಭರತರು ವಸಿಷ್ಠರ ವೈರಿಗಳು. ಭರತರ ನಾಡಿನಲ್ಲಿ ಒಮ್ಮಿಂದೊಮ್ಮೆಲೇ ಕ್ಷಾಮ ತಲೆದೋರುತ್ತದೆ. ಅವರು ದೇಶ ತೊರೆದು ರಾಜ್ಯ ಕಳೆದುಕೊಳ್ಳುತ್ತಾರೆ. ಅವರು ತಮ್ಮ ಪ್ರಾಚೀನ ವೈರಿ ವಸಿಷ್ಠನು ಗುರುವಾಗಬೇಕೆಂದೂ ಮತ್ತು ಆ ವಿಪತ್ತಿನಿಂದ ತಮ್ಮನ್ನು ಪಾರು ಮಾಡಬೇಕೆಂದೂ ಬೇಡಿಕೊಳ್ಳುತ್ತಾರೆ. ಭೃಗುಗಳ ಮತ್ತು ಕ್ಷತ್ರಿಯರ ಕಥೆಯಲ್ಲಿ ಯುದ್ಧ ಮಾಡಿದರೆ ಗೌರವಕ್ಕೆ ಧಕ್ಕೆ ಬರುವುದೆನ್ನುವ ಗರ್ವಿಷ್ಠ ಬ್ರಾಹ್ಮಣರಿಗೆ ಹೆಚ್ಚಿನ ಗೌರವ ಕೊಡಲಾಗಿದೆ. ಹೈಹಯ ಕ್ಷತ್ರಿಯರು ಮತ್ತು ಕಲ್ಮಶಪಾದನಂಥ ಸೌದಾಸರ ಕಥೆಗಳಲ್ಲಿ ಕ್ಷತ್ರಿಯರು ತಮ್ಮ ಹೆಣ್ಣುಮಕ್ಕಳನ್ನು ಜಯಶಾಲಿ ಬ್ರಾಹ್ಮಣರಿಗೆ ಕೊಟ್ಟು ಶರಣಾದುದು ಕಂಡುಬರುತ್ತದೆ. ಎಲ್ಲ ಕಥೆಗಳು ಬ್ರಾಹ್ಮಣರನ್ನು ಹೊಗಳುವ ಮತ್ತು ಕ್ಷತ್ರಿಯರನ್ನು ಅವಮಾನಗೊಳಿಸುವ ಉದ್ದೇಶದಿಂದ ಬರೆದುದಾಗಿರುತ್ತದೆ. ಇಂಥ ಹೊಲಸು, ಹೇಯ ಮತ್ತು ವ್ಯರ್ಥಪ್ರತಿಷ್ಠೆ ಮೆರೆಯುವ ಕಥೆಗಳನ್ನು ಐತಿಹಾಸಿಕ ಸತ್ಯಗಳೆಂದು ನಂಬಲು ಯಾರಿಗೆ ಸಾಧ್ಯ? ಬ್ರಾಹ್ಮಣರ ಬೆಂಬಲಿಗರಷ್ಟೇ ಹಾಗೆ ಮಾಡಲು ಸಾಧ್ಯ.

ಹೀಗಿರುತ್ತದೆ ರಾಜಿಯ ವಿಷಯಕ್ಕೆ ಸಂಬಂಧಿಸಿದ ಸಾಕ್ಷ್ಯಾಧಾರದ ಸಾಮಾನ್ಯ ಲಕ್ಷಣ. ಬ್ರಾಹ್ಮಣರು ಮತ್ತು ಸುದಾಸನ ವಂಶಜರಾದ ಶೂದ್ರರ ನಡುವಿನ ರಾಜಿಗೆ ಸಂಬಂಧಿಸಿದ ವಿಶಿಷ್ಟ ನಿದರ್ಶನವನ್ನು ಪರಿಶೀಲಿಸುವುದಾದರೆ, ಅಂಥ ಪ್ರಸಂಗ ಘಟಿಸಿಲ್ಲ ಎಂದು ಹೇಳುವುದಕ್ಕೆ ಸಾಕಷ್ಟು ಪುರಾವೆಗಳು ಸಿಗುತ್ತವೆ. ಮೊದಲನೆಯದಾಗಿ, ವಸಿಷ್ಠನ ಮಗ ಶಕ್ತಿ ಇಲ್ಲವೆ ಶಕ್ತಿಯ ಮಗ ಪರಾಶರ ತನ್ನ ತಂದೆ ಮಡಿದ ರೀತಿಯ ಬಗೆಗೆ–ಅಂದರೆ ಶೂದ್ರ ಅರಸ ಸುದಾಸನಿಂದ ಸುಡಲ್ಪಟ್ಟನೆಂಬುದನ್ನು ಕೇಳಿದ ಬಳಿಕ ಸಮಸ್ತ ಜೀವರಾಶಿಯನ್ನು ಕೊಂದುಹಾಕಲು ನಿಶ್ಚಯಿಸಿದನೆಂಬುದನ್ನು ಅಲ್ಲಗಳೆಯುವಂತಿಲ್ಲ. ಸಮಸ್ತ ಜೀವರಾಶಿಯ ಕೊಲೆ ಎಂಬುದು ಉತ್ಪ್ರೇಕ್ಷೆ ಅಷ್ಟೆ. ಅದರ ಅರ್ಥ ಏನೆಂದರೆ ವಸಿಷ್ಠ ಸಾಮಾನ್ಯವಾಗಿ ಸುದಾಸನ ಎಲ್ಲ ವಂಶಜರ ಅಂದರೆ ಎಲ್ಲ ಶೂದ್ರರ ಮೇಲೆ ಸೇಡು ತೀರಿಸಿಕೊಳ್ಳುವುದಾಗಿ ಪ್ರತಿಜ್ಞೆಮಾಡಿದನು. ಪರಾಶರನನ್ನು ವಸಿಷ್ಠ ನಿಯಂತ್ರಿಸಿದನೆಂದು ಮಹಾಭಾರತದಲ್ಲಿ ಖಚಿತವಾಗಿ ಹೇಳಲ್ಪಟ್ಟಿದೆ. ಭೃಗುಗಳು ಮತ್ತು ಕ್ಷತ್ರಿಯರು ಹೇಗೆ ಘರ್ಷಣೆಗಿಳಿದರು ಮತ್ತು ಹೇಗೆ ಭೃಗುಗಳು ಅಹಿಂಸಾಮಾರ್ಗ ಅನುಸರಿಸಿ ಕ್ಷತ್ರಿಯರನ್ನು ಸೋಲಿಸಿದರೆಂದೂ ಹೇಳಿ, ಸೇಡಿನ ಬೆದರಿಕೆಯನ್ನು ಕಾರ್ಯರೂಪಕ್ಕೆ ಇಳಿಸುವುದು ಬೇಡವೆಂದು ವಸಿಷ್ಠ ಪರಾಶರನ ಮನವೊಲಿಸಿದನೆಂದು ಹೇಳಲಾಗುತ್ತದೆ. ಆದರೆ ಈ ಕಥೆ ಸತ್ಯವಿರುವುದು ಅಸಾಧ್ಯ. ಏಕೆಂದರೆ, ಉಳಿದ ಕಥೆಗಳಂತೆ ಇದು ಕೂಡ ಬ್ರಾಹ್ಮಣರ ಖ್ಯಾತಿಯನ್ನು ಮೆರೆಯಿಸುವ ಉದ್ದೇಶದಿಂದ ಬರೆಯಲಾಗಿರುತ್ತದೆ.

ಎರಡನೆಯದಾಗಿ, ಬ್ರಾಹ್ಮಣ ಮತ್ತು ಶೂದ್ರರ ನಡುವೆ ರಾಜಿ ಆಗಲಿಲ್ಲ ಎಂಬುದಕ್ಕೆ ಅತ್ಯಂತ ಗಟ್ಟಿ ಸಾಕ್ಷ್ಯಾಧಾರ ಬ್ರಾಹ್ಮಣರು ಶೂದ್ರರ ವಿರುದ್ಧ ಮಾಡಿದ ಶಾಸನದಿಂದ ಸಿಗುತ್ತದೆ. ಶೂದ್ರವಿರೋಧಿ ಕಾಯಿದೆಗಳ ಉಲ್ಲೇಖ ಈ ಮೊದಲೇ ಮಾಡಲಾಗಿದೆ. ಅವುಗಳ ಬೆಳವಣಿಗೆ ಮತ್ತು ಅಸಾಮಾನ್ಯ ವೈಶಿಷ್ಟ್ಯಗಳನ್ನು ಎತ್ತಿ ತೋರಿಸಲಾಗಿದೆ. ಒಟ್ಟಿನಲ್ಲಿ ಹೇಳಬೇಕಾದುದು ಇಷ್ಟೆ – ಕರಾಳ ಕಾಯಿದೆಗಳ ಹಿನ್ನೆಲೆಯಲ್ಲಿ ರಾಜಿಯ ವಿಷಯಕ್ಕೆ ಮಾಡಿದ ಯಾವುದೇ ಸೂಚನೆ ಅಸಾಧ್ಯವೆಂದು ತೋರುತ್ತದೆ. ಬ್ರಾಹ್ಮಣರು ಶೂದ್ರರನ್ನು ಕ್ಷಮಿಸದಿದ್ದುದಷ್ಟೇ ಅಲ್ಲ, ಅವರು ಶೂದ್ರಸಂತಾನದ ಮೇಲೆ ಸೇಡಿನ ಕ್ರಮವನ್ನು ಮುಂದುವರಿಸಿದರು. ಅನೇಕರಿಗೆ ಇದರ ಕಲ್ಪನೆ ಇಲ್ಲದಿರುವುದರಿಂದ ಚಾಂಡಾಲರ ಮತ್ತು ನಿಶದರ ಬಗೆಗೆ ಕೆಲವು ಸಂಗತಿಗಳನ್ನು ಹೇಳುವುದು ಅಪೇಕ್ಷಣೀಯ ಎನಿಸುತ್ತದೆ.

ಚಾಂಡಾಲರು ಮತ್ತು ನಿಶದರು ಅಂತರ್ಜಾತೀಯ ಮದುವೆಗಳ ಸಂತಾನವಾಗಿರುತ್ತಾರೆ. ನಿಶದ ಅನುಲೋಮ ಆಗಿದ್ದರೆ, ಚಾಂಡಾಲ ಪ್ರತಿಲೋಮ ಆಗಿರುತ್ತಾನೆ. ಅನುಲೋಮರು[೧] ಉಪನಯನಕ್ಕೆ ಅರ್ಹರಿರುತ್ತಾರೆ. ಆದರೆ ಈ ನಿಯಮಕ್ಕೆ ಕುತೂಹಲಕಾರಿ ಅಪವಾದವೂ ಇದೆ. ಶೂದ್ರ ತಾಯಿ ಮತ್ತು ಬ್ರಾಹ್ಮಣ ತಂದೆಗೆ ಹುಟ್ಟಿದ ನಿಶದ ಅನುಲೋಮನಾಗಿದ್ದರೂ ಅವನನ್ನು ಉಪನಯನಕ್ಕೆ ಅನರ್ಹಗೊಳಿಸಲಾಗಿದೆ. ಈ ಅಪವಾದ ಹೇಗೆ ಹುಟ್ಟಿತೆಂಬುದು ರೋಚಕ ವಿಷಯವಾಗಿದೆ. ಈ ಏಕಪಕ್ಷೀಯ ನಿರ್ಣಯ ವೈರಿಯ ಮಕ್ಕಳ ಮೇಲೆ ಸೇಡಿನ ಕ್ರಮವಾಗಿರುತ್ತದೆಂದು ಹೇಳುವುದೊಂದೇ ಉತ್ತರವಾಗಿರುತ್ತದೆ.

ಪ್ರತಿಲೋಮರ[೨] ಬಗೆಗೆ ಹೇಳುವುದಾದರೆ, ನಿಃಸ್ಸಂಶಯವಾಗಿಯೂ ಮನು ಅವರೆಲ್ಲರನ್ನು ಅಂತ್ಯಜರೆಂದು ಕರೆಯುತ್ತಾನೆ. ಅದೇ ಸಮಯಕ್ಕೆ ಪ್ರತಿಲೋಮರಿಗೆ ಅಂಟಿರುವ ಕಳಂಕವನ್ನು ಅವರೆಲ್ಲರಲ್ಲಿ ಸಮವಾಗಿ ಹಂಚಲಾಗಿಲ್ಲ. ಹಕ್ಕು ಮತ್ತು ಸವಲತ್ತುಗಳ ವಿಷಯದಲ್ಲಿ ಆಯೋಗವರು ಮತ್ತು ಕ್ಷತ್ತರರು ನಂಬಲಸಾಧ್ಯ ಅನುಕಂಪ ಪಡೆದರೆ, ಚಾಂಡಾಲರು ಹೇಳಲಸಾಧ್ಯ ಅವಹೇಳನಕ್ಕೆ ಗುರಿಯಾಗಿದ್ದಾರೆ. ಈ ತಾರತಮ್ಯದ ನಿದರ್ಶನಕ್ಕೆ ಮನುಸ್ಮೃತಿಯಲ್ಲಿರುವ ಈ ಕೆಳಗಿನ ಕಾಯಿದೆಗಳನ್ನು ಉದಾಹರಿಸಬಹುದು.

ಆಯೋಗವರ ವಿಷಯಕ್ಕೆ ಮನುಸ್ಮೃತಿ ಇಷ್ಟನ್ನು ಮಾತ್ರ ಹೇಳುತ್ತದೆ :

*ಆಯೋಗವ ಬಡಿಗತನ ಮಾಡಬೇಕು – x ೪೮*

---

೧. ಕೆಳಗಿನ ಪಟ್ಟಿಯಲ್ಲಿ ತೋರಿಸಿದಂತೆ ಆರು ಅನುಲೋಮರಿರುತ್ತಾರೆ :

| **ತಂದೆ** | **ತಾಯಿ** | **ಸಂತಾನದ ಹೆಸರು** |
|---|---|---|
| ಬ್ರಾಹ್ಮಣ | ಕ್ಷತ್ರಿಯ | ಮುರ್ದವಸಿಕ್ತ |
| ಬ್ರಾಹ್ಮಣ | ವೈಶ್ಯ | ಅಂಬಷ್ಠ |
| ಬ್ರಾಹ್ಮಣ | ಶೂದ್ರ | ನಿಶಾದ |
| ಕ್ಷತ್ರಿಯ | ವೈಶ್ಯ | ಮಹಿಶ್ಯ |
| ಕ್ಷತ್ರಿಯ | ಶೂದ್ರ | ಉರ್ಗ |
| ವೈಶ್ಯ | ಶೂದ್ರ | ಕರಣ |

೨. *Gaut, Dh.S.,* IV, ೨೧ quoted by Kane, II, Part I, p. ೨೨೯

| **ತಂದೆ** | **ತಾಯಿ** | **ಸಂತಾನದ ಹೆಸರು** |
|---|---|---|
| ಶೂದ್ರ | ಬ್ರಾಹ್ಮಣ | ಚಾಂಡಾಲ |
| ಶೂದ್ರ | ಕ್ಷತ್ರಿಯ | ಕ್ಷತ್ತರ |
| ಶೂದ್ರ | ವೈಶ್ಯ | ಆಯೋಗವ |
| ವೈಶ್ಯ | ಬ್ರಾಹ್ಮಣ | ಸೂತ |
| ವೈಶ್ಯ | ಕ್ಷತ್ರಿಯ | ವೈದೇಹಕ |
| ಕ್ಷತ್ರಿಯ | ಬ್ರಾಹ್ಮಣ | ಮಗಧ |

ಕ್ಷತ್ತರ ಬಗೆಗೆ ಮನುಸ್ಮೃತಿ ಹೀಗೆ ಹೇಳುತ್ತದೆ :

*......ಬಿಲದಲ್ಲಿ ವಾಸಿಸುತ್ತಿದ್ದ ಪ್ರಾಣಿಗಳನ್ನು ಹಿಡಿದು ಕೊಲ್ಲುವುದು ಕ್ಷತ್ತರರ ಉದ್ಯೋಗ ಆಗಿರುತ್ತದೆ. – x.೪೯*

ಅವರಿಗೆ ಕೇವಲ ಕೀಳು ವೃತ್ತಿಗಳನ್ನು ಒಪ್ಪಿಸಿಕೊಡಲಾಗಿದೆ.

ಇದನ್ನು ಮನುಸ್ಮತಿ ಚಾಂಡಾಲರ ಬಗೆಗೆ ಹೇಳಿದುದಕ್ಕೆ ಹೋಲಿಸಿ ನೋಡೋಣ :

*"ಚಾಂಡಾಲ, ಕಾಡುಹಂದಿ, ಹುಂಜ ಮತ್ತು ನಾಯಿ, ರಜಸ್ವಲೆಯಾದ ಹೆಣ್ಣು ಮಗಳು ಮತ್ತು ನಪುಂಸಕನು ಬ್ರಾಹ್ಮಣನು ಊಟ ಮಾಡುವುದನ್ನು ನೋಡಬಾರದು"– iii, ೨೩೯.*

*"ಬಹಿಷ್ಕೃತ ವ್ಯಕ್ತಿಗಳು, ಚಾಂಡಾಲರು, ಪಕ್ಕಸರು, ಮೂಢರು, ಗರ್ವಿಷ್ಠರು, ಅಂತ್ಯಜರು ಮತ್ತು ಅಂತ್ಯವಾಸಯಿನರು – ಇವರೊಂದಿಗೆ ವಾಸಿಸಕೂಡದು" – iv.೭೯*

*"ಚಾಂಡಾಲ, ರಜಸ್ವಲೆ, ಬಹಿಷ್ಕೃತ, ಬಾಣಂತಿ ಇಲ್ಲವೆ ಶವ – ಇವರನ್ನು ಇಲ್ಲವೆ ಇವರನ್ನು ಮುಟ್ಟಿದವರನ್ನು ಮುಟ್ಟಿದರೆ, ಶುದ್ಧವಾಗಲು ಸ್ನಾನ ಮಾಡಬೇಕು" – v.೮೫*

*"ನಾಯಿಗಳಿಂದ ಕೊಲ್ಲಲ್ಪಟ್ಟ ಕಾಡುಪ್ರಾಣಿಯ ಮಾಂಸ ಶುದ್ಧವಿರುವುದೆಂದು ಮನು ಸಾರಿದನು, ಹಾಗೇ ಮಾಂಸಾಹಾರಿ ಪ್ರಾಣಿಗಳಿಂದ ಇಲ್ಲವೆ ಚಾಂಡಾಲ ಮತ್ತು ಉಳಿದ ದಸ್ಯುಗಳಿಂದ ಕೊಲ್ಲಪಟ್ಟ ಪ್ರಾಣಿಗಳ ಮಾಂಸ ಕೂಡ" – v.೧೩೧*

*"ಒಂದು ವರ್ಷದಲ್ಲಿ ಎರಡು ಸಲ ಶಿಕ್ಷೆಗೆ ಗುರಿಯಾದವನಿಗೆ ಎರಡುಪಟ್ಟು ದಂಡ ವಿಧಿಸಬೇಕು; ಅಲ್ಲದೆ ವೃತ್ಯ ಇಲ್ಲವೆ ಚಾಂಡಾಲ ಸ್ತ್ರೀಯೊಂದಿಗೆ ಸಂಭೋಗ ಮಾಡಿದವನಿಗೂ ಅಷ್ಟೇ ದಂಡ" – viii.೩೭೩*

*"ತನ್ನ ಜಾತಿಯ ಸ್ತ್ರೀ ಹತ್ತಿರ ಇರಲಾಗಿಯೂ, ಅನ್ಯಜಾತಿಯ ಸ್ತ್ರೀಯೊಂದಿಗೆ ಲೈಂಗಿಕ ಸಂಬಂಧ ಹೊಂದಿದವನನ್ನು ಚಾಂಡಾಲನೆಂದು ಹಿಂದಿನ ಕಾಲದಿಂದಲೂ ತಿಳಿಯಲಾಗಿತ್ತು" – ix.೮೭*

*"ಚಾಂಡಾಲ ಮತ್ತು ಶ್ವಪಚರ ವಾಸಸ್ಥಳಗಳು ಊರ ಹೊರಗಡೆ ಇರತಕ್ಕದ್ದು, ಅವರು (ಲೋಹದ) ತಟ್ಟೆಗಳನ್ನು ಹೊಂದಿರಬಾರದು, ನಾಯಿ ಮತ್ತು ಕತ್ತೆಗಳು ಅವರ ಆಸ್ತಿ"– x.೫೧*

*"ಅಲ್ಲದೆ, ಯಾವುದು ಸರಿ, ಯಾವುದು ತಪ್ಪು ಎಂದು ಚೆನ್ನಾಗಿ ತಿಳಿದಿದ್ದರೂ, ಹಸಿವೆಯಿಂದ ಕಂಗಾಲಾದ ವಿಶ್ವಾಮಿತ್ರ ನಾಯಿಯ ಮಾಂಸವನ್ನು, ಅದೂ ಚಾಂಡಾಲನ ಕೈಯಿಂದ, ತಿನ್ನಲು ಮುಂದಾದನು" – x.೧೦೮*

> *"ಯಜ್ಞಕ್ಕಾಗಿ ಬ್ರಾಹ್ಮಣನು ಎಂದೂ ಶೂದ್ರನಿಂದ ಆಸ್ತಿಯ ದಾನ ಕೇಳಕೂಡದು, ಏಕೆಂದರೆ ಶೂದ್ರನಿಂದ ಬೇಡಿಕೊಂಡುದನ್ನು ಯಜ್ಞಕ್ಕೆ ಆಹುತಿ ಕೊಟ್ಟರೆ, ಅವನು ಮುಂದಿನ ಜನ್ಮದಲ್ಲಿ ಚಾಂಡಾಲನಾಗುತ್ತಾನೆ" – vi.೨೪*
>
> *"ಚಾಂಡಾಲ ಸ್ತ್ರೀಯರೊಂದಿಗೆ ಲೈಂಗಿಕ ಸಂಬಂಧ ಹೊಂದುವುದರಿಂದ, ಅವರ ಆಹಾರ ತಿನ್ನುವುದರಿಂದ, ಇಲ್ಲವೆ ಅವರಿಂದ ಕಾಣಿಕೆಗಳನ್ನು ಪಡೆಯುವುದರಿಂದ, ಬ್ರಾಹ್ಮಣನು ಒಂದು ವೇಳೆ ತಿಳಿಯದೆ ಅಪರಾಧ ಎಸಗಿದ್ದರೆ, ಅಧೋಗತಿಗಿಳಿಯುತ್ತಾನೆ, ತಿಳಿದು ತಿಳಿದು ಅಪರಾಥ ಎಸಗಿದ್ದರೆ, ಅವನು ಚಾಂಡಾಲನಿಗೆ ಸಮನಾಗುತ್ತಾನೆ" – xi.೧೭೫*
>
> *"ಬ್ರಾಹ್ಮಣಹತ್ಯೆ ಮಾಡಿದವನು, ನಾಯಿ, ಕಾಡು ಹಂದಿ, ಕತ್ತೆ, ಒಂಟೆ ಆಕಳು, ಆಡು, ಕುರಿ, ವನ್ಯ ಪ್ರಾಣಿ ಪಕ್ಷಿ ಮತ್ತು ಚಾಂಡಾಲ ಮತ್ತು ಪುಕ್ಕಸಗಳ ಗರ್ಭ ಸೇರುತ್ತಾನೆ" – xi.೫೫*

ಬ್ರಾಹ್ಮಣರು, ಆಯೋಗವ ಮತ್ತು ಕ್ಷತ್ತರರನ್ನು ಕಾಣುವ ರೀತಿಯೊಂದಿಗೆ, ಚಾಂಡಾಲರನ್ನು ಕಾಣುವ ರೀತಿಯನ್ನು ಹೋಲಿಸಿದರೆ, ಅವರೆಲ್ಲರೂ ಪ್ರತಿಲೋಮರಾಗಿದ್ದರೂ ಅವರನ್ನು ಕಾಣುವ ರೀತಿಯಲ್ಲಿ ಎಷ್ಟೊಂದು ವ್ಯತ್ಯಾಸ? ಪ್ರತಿಲೋಮದರಲ್ಲಿ ಚಾಂಡಾಲರು ಅತ್ಯಂತ ಕೀಳೆಂದು ಏಕೆ ಅವರನ್ನು ಪ್ರತ್ಯೇಕಿಸಲಾಯಿತು? ಅವರು ಶೂದ್ರ ಸಂತಾನವಾದುದಕ್ಕಷ್ಟೆ? ಅದು ವೈರಿಯ ಮಕ್ಕಳ ಮೇಲಿನ ಸೇಡಿನ ಕ್ರಮವಾಗಿರುತ್ತದೆ.

ಇದೆಲ್ಲ ಬ್ರಾಹ್ಮಣರು ಮತ್ತು ಶೂದ್ರರ ನಡುವೆ ರಾಜಿ ಆಗಿಲ್ಲವೆಂಬುದನ್ನು ಅನುಮಾನವಿಲ್ಲದೆ ಖಚಿತಪಡಿಸುತ್ತದೆ.

**(೪)**

ಈಗ ಕೊನೆಯ ಆಕ್ಷೇಪಕ್ಕೆ ಬರೋಣ. ಕೊನೆಯ ಆಕ್ಷೇಪದ ಹಿಂದೆ ಶೂದ್ರರು ಇಂಡೊ–ಆರ್ಯ ಸಮಾಜದ ಬಹು ದೊಡ್ಡ ಭಾಗವಾಗಿದ್ದರೆಂಬ ಅನಿಸಿಕೆ ಇದ್ದಂತೆ ತೋರುತ್ತದೆ. ಶೂದ್ರರು ಅಷ್ಟೊಂದು ದೊಡ್ಡ ಪ್ರಮಾಣದಲ್ಲಿದ್ದಾಗ್ಯೂ ಅವರಿಗೆ ಉಪನಯನ ವಿಧಿಯನ್ನು ನಿರಾಕರಿಸುವಂಥ ಘೋರ ಅಪರಾಧವನ್ನು ಸುಮ್ಮನೆ ಸಹಿಸಿದುದು ಬಹಳ ಆಶ್ಚರ್ಯದ ಸಂಗತಿಯಾಗಿರುತ್ತದೆ. ಶೂದ್ರರು ಹಿಂದೂ ಸಮಾಜದ ಬಹುದೊಡ್ಡ ಭಾಗವಾಗಿರುವುದರಿಂದ, ಇಂಡೊ–ಆರ್ಯ ಸಮಾಜದಲ್ಲಿಯೂ ಅವರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಿರಬೇಕೆನಿಸುತ್ತದೆ. ಇಂಥ ಊಹೆಗೆ ಯಾವುದೇ ಆಧಾರವಿರುವುದಿಲ್ಲ. ಏಕೆಂದರೆ ಇಂಡೊ–ಆರ್ಯ ಸಮಾಜದ ಶೂದ್ರರು ಹಿಂದೂ ಸಮಾಜದ ಶೂದ್ರರಿಗಿಂತ ಭಿನ್ನ ಜನಾಂಗದವರಾಗಿದ್ದರು. ಹಿಂದೂ ಸಮಾಜದ ಶೂದ್ರರು ಇಂಡೊ–ಆರ್ಯ ಜನಾಂಗದ ಶೂದ್ರವಂಶದವರಾಗಿರುವುದಿಲ್ಲ.

ಈ ಗೊಂದಲ ಉದ್ಭವಿಸುವುದಕ್ಕೆ ಕಾರಣ ಇಂಡೊ–ಆರ್ಯ ಸಮಾಜದಲ್ಲಿ ಶೂದ್ರ ಶಬ್ದಕ್ಕಿದ್ದ ಅರ್ಥ, ಹಿಂದೂ ಸಮಾಜದಲ್ಲಿರುವ ಶೂದ್ರ ಶಬ್ದಕ್ಕಿಂತ ಭಿನ್ನವಿರುತ್ತದೆಂಬ ತಿಳುವಳಿಕೆ ಇಲ್ಲದಿರುವುದು, ಇಂಡೊ–ಆರ್ಯ ಸಮಾಜದಲ್ಲಿ ಶೂದ್ರ ಒಂದು ನಾಡಿನ ಮೂಲ ನಿವಾಸಿಗಳ ಹೆಸರಾಗಿತ್ತು. ಹಿಂದೂ ಸಮಾಜದಲ್ಲಿ ಶೂದ್ರ ಅಂಕಿತ ನಾಮವಾಗಿರುವುದಿಲ್ಲ. ಅದು ಕೀಳು, ಅಸಂಸ್ಕೃತ ವರ್ಗದ ಜನರಿಗೆ ಕೊಟ್ಟ ಹೆಸರಾಗಿರುತ್ತದೆ. ಅದು ಸಮ್ಮಿಶ್ರ ಮತ್ತು ವಿಭಿನ್ನ ಜನಾಂಗಗಳ ಗುಂಪಿಗೆ ಇಟ್ಟ ಹೆಸರಾಗಿರುತ್ತದೆ. ಈ

ವರ್ಗಗಳಲ್ಲಿ ಕೀಳುಮಟ್ಟದ ಸಂಸ್ಕೃತಿಯ ಹೊರತಾಗಿ ಮತ್ತೇನೂ ಸಾಧಾರಣವಾದುದು ಇರುವುದಿಲ್ಲ. ಆದ್ದರಿಂದ ಅವರನ್ನು ಶೂದ್ರ ಎಂದು ಕರೆಯುವುದು ತಪ್ಪಾಗುತ್ತದೆ. ಬ್ರಾಹ್ಮಣರನ್ನು ನೋಯಿಸಿದ ಆರ್ಯ ಸಮಾಜದ ಶೂದ್ರರಿಗೂ ಇವರಿಗೂ ಏನೂ ಸಂಬಂಧ ಇರುವುದಿಲ್ಲ. ನಂತರ ಆಗಿಹೋದ ಮುಗ್ಧ ಹಿಂದುಳಿದ ಜನರನ್ನು ಮೂಲ ಶೂದ್ರ ಜೊತೆಗೆ ಸೇರಿಸಿರುವುದು ಮತ್ತು ಅವರು ಮಾಡದಿದ್ದ ತಪ್ಪಿಗೆ ಅವರನ್ನು ಶಿಕ್ಷೆಗೆ ಗುರಿಮಾಡುವುದು ವಿಷಾದದ ಸಂಗತಿಯಾಗಿರುತ್ತದೆ.

ಇಂಡೊ–ಆರ್ಯ ಶೂದ್ರರು ಮತ್ತು ಹಿಂದೂ ಸಮಾಜದ ಶೂದ್ರರು ಬೇರೆ ಬೇರೆ ಎಂಬ ವಿಷಯ ಒಂದು ಕಾಲಕ್ಕೆ ಧರ್ಮಸೂತ್ರಕಾರರಿಗೆ ತಿಳಿದಿದ್ದಿತೆಂಬುದು ಸ್ಪಷ್ಟವಿರುತ್ತದೆ. ಸಚ್ ಶೂದ್ರ ಮತ್ತು ಅಸಚ್‌ಶೂದ್ರ ಅನಿರ್ವಾಸಿತ ಶೂದ್ರ ಮತ್ತು ನಿರ್ವಾಸಿತ ಶೂದ್ರ ಇವುಗಳಲ್ಲಿ ಮಾಡಿದ ಅರ್ಥ ವ್ಯತ್ಯಾಸದಿಂದ ಪೂರ್ಣ ಸ್ಪಷ್ಟವಾಗುತ್ತದೆ. ಸಚ್‌ಶೂದ್ರ ಎಂದರೆ ಸುಸಂಸ್ಕೃತ ಶೂದ್ರ, ಅಸಚ್‌ಶೂದ್ರ ಎಂದರೆ ಅಸಂಸ್ಕೃತ ಶೂದ್ರ. ನಿರ್ವಾಸಿತ ಶೂದ್ರ ಎಂದರೆ ಹಳ್ಳಿಯ ಸಮಾಜದಲ್ಲಿ ವಾಸಿಸುವ ಮತ್ತು ಅನಿರ್ವಾಸಿತ ಶೂದ್ರ ಎಂದರೆ ಹಳ್ಳಿ ಸಮಾಜದ ಹೊರಗೆ ವಾಸಿಸುವ ಎಂದು ಅರ್ಥವಾಗುತ್ತದೆ. ಕೆಲವರ ಪ್ರಕಾರ[೧] ಶೂದ್ರರ ಈ ವಿಭಜನೆ, ಕಾಯ್ದೆ ಮಾಡುವವರ ದೃಷ್ಟಿಯಲ್ಲಿ ಶೂದ್ರರ ಸ್ಥಿತಿ ಸುಧಾರಿಸುತ್ತಿದ್ದಿತೆಂಬುದನ್ನು ಸೂಚಿಸುತ್ತದೆ. ಅಂದರೆ ಕೆಲವರಿಗೆ ಇತ್ತೀಚೆಗೆ ಸಾಮಾಜಿಕ ಹಕ್ಕು ಬಳಕೆಗೆ ಅವಕಾಶ ನೀಡಲಾಗಿತ್ತು. ಆದರೆ ಪ್ರಾಚೀನ ಕಾಲದಲ್ಲಿ ಅದು ಇದ್ದಿರಲಿಲ್ಲ. ಸರಿಯಾದ ಅರ್ಥದಲ್ಲಿ, ಸಚ್‌ಶೂದ್ರ ಮತ್ತು ನಿರ್ವಾಸಿತ ಶೂದ್ರ ಪದಗಳು ಆರ್ಯ ಸಮಾಜಕ್ಕೆ ಅನ್ವಯಿಸುತ್ತವೆ ಮತ್ತು ಅಸಚ್‌ಶೂದ್ರ ಮತ್ತು ಅನಿರ್ವಾಸಿತ ಶೂದ್ರ ಪದಗಳು ಹಿಂದೂ ಶೂದ್ರರಿಗೆ, ಹಿಂದೂ ಸಮಾಜದ ಭಾಗವಾಗಹತ್ತಿದ ಶೂದ್ರರಿಗೆ ಅನ್ವಯಿಸುತ್ತದೆ. ನಾವೀಗ ಯೋಚಿಸುತ್ತಿರುವುದು ಆರ್ಯ ಸಮಾಜದ ಶೂದ್ರರನ್ನು ಕುರಿತು. ನಂತರ ಹುಟ್ಟಿಕೊಂಡ ಹಿಂದೂ ಸಮಾಜದ ಶೂದ್ರರ ಜೊತೆಗೆ ಅವರ ಸಂಬಂಧವಿರುವುದಿಲ್ಲ. ನಿಜಸಂಗತಿಯು ಹೀಗಿರಲು, ಹಿಂದೂ ಸಮಾಜದ ಶೂದ್ರರು ಬಹು ಸಂಖ್ಯೆಯಲ್ಲಿದ್ದುದರ ಆಧಾರದ ಮೇಲೆ ಆರ್ಯ ಸಮಾಜದ ಶೂದ್ರರು ಬಹುಸಂಖ್ಯೆಯಲ್ಲಿದ್ದರೆಂದು ಸಾಧಿಸಲಿಕ್ಕಾಗದು. ಶೂದ್ರರು ಒಂದು ಜನಾಂಗವೊ, ಒಂದು ಬುಡಕಟ್ಟೊ, ಬುಡಕಟ್ಟಿನ ಭಾಗವೊ, ಇಲ್ಲವೆ ಹಲವು ಕುಟುಂಬಗಳ ಗುಂಪೊ, ಯಾವುದೂ ನಮಗೆ ಖಚಿತವಾಗಿ ಗೊತ್ತಿಲ್ಲ. ಅವರು ಒಂದು ಜನಾಂಗವಾಗಿದ್ದರೂ ಕೂಡ ಅವರ ಸಂಖ್ಯೆ ಕೆಲವು ಸಾವಿರಕ್ಕೂ ಹೆಚ್ಚಿರಲಿಕ್ಕಿಲ್ಲ. ಭರತರು ಕಡಿಮೆ ಸಂಖ್ಯೆಯಲ್ಲಿದ್ದರೆಂದು ಋಗ್ವೇದ vii, ೩೩.೬ದಲ್ಲಿ ಹೇಳಲಾಗಿರುತ್ತದೆ. ಶತಪಥ ಬ್ರಾಹ್ಮಣ ಪಾಂಚಾಲ ಅರಸುಪುತ್ರ ಸತ್ರಸಹನು[೨] ಕೈಕೊಂಡ ಯಜ್ಞ ಕುರಿತು ಹೀಗೆ ಹೇಳುತ್ತದೆ:

"ಸತ್ರಸಹ ಅಶ್ವಮೇಧ ಯಜ್ಞ ಮಾಡಿದಾಗ ಆರು ಸಾವಿರ ಮೂವತ್ತಾರು ಯುದ್ಧಕವಚ ಧರಿಸಿದ ಸಶಸ್ತ್ರ ತೌರ್ವಸರು ಉದ್ಭವಿಸುತ್ತಾರೆ."

ಇದು ತೌರ್ವಸರು ಆರು ಸಾವಿರದಷ್ಟಿದ್ದರೆಂದು ಸೂಚಿಸುತ್ತಿದ್ದರೆ, ಶೂದ್ರರು ಅಧಿಕ ಸಂಖ್ಯೆಯಲ್ಲಿ ಇದ್ದಿರಲಿಕ್ಕಿಲ್ಲ.

ಸಂಖ್ಯೆಯ ಪ್ರಶ್ನೆಯನ್ನು ಬಿಟ್ಟರೆ, ವಿಪತ್ತನ್ನು ತಪ್ಪಿಸಲು ಶೂದ್ರರಿಗೆ ಏನು ಮಾಡಲು ಶಕ್ಯವಿತ್ತು?

---

೧. Kane, II, p. 123 ನೋಡಿ. ಈ ವಿಭಜನೆ ಶೂದ್ರರು ಕೆಳಮಟ್ಟದಿಂದ ಕ್ರಮೇಣ ಮೇಲೇಳುತ್ತಿರುವುದನ್ನು ಸೂಚಿಸುತ್ತದೆಂಬ ಕಾಣೆಯವರ ಅಭಿಪ್ರಾಯ ತಪ್ಪಿರುತ್ತದೆ.

೨. Oldenberg, *Life of Buddha*, p. ೪೦೪ರಲ್ಲಿ ಉದ್ಧೃತ.

ಅವರಿಂದ ಹಿಂಸಿಸಲ್ಪಟ್ಟ ಕೆಲವು ಬ್ರಾಹ್ಮಣರು ಅವರಿಗೆ ಉಪನಯನ ದೀಕ್ಷೆ ಕೊಡಲು ನಿರಾಕರಿಸಿದರೆ, ಉಳಿದ ಹಿಂಸಿಸಲಾರದ ಬ್ರಾಹ್ಮಣರ ಸೇವೆಯನ್ನು ಪಡೆಯಲು ಶಕ್ಯವಿರಲಿಲ್ಲವೆ? ಅಂಥ ಸಾಧ್ಯತೆ ಅನೇಕ ಸಂಗತಿಗಳನ್ನು ಅವಲಂಬಿಸಿರುತ್ತದೆ. ಮೊದಲನೆಯದಾಗಿ, ಎಲ್ಲ ಬ್ರಾಹ್ಮಣರು ಒಟ್ಟಾಗಿ ಯುದ್ಧಕ್ಕೆ ಸನ್ನದ್ಧರಾಗಿದ್ದರೂ ಮತ್ತು ಅವರ ಸೈನ್ಯವನ್ನು ಮುರಿಯಲು ಶೂದ್ರರಿಗೆ ಸಾಧ್ಯವಿತ್ತೊ ಇಲ್ಲವೊ ಯಾವುದೂ ನಮಗೆ ತಿಳಿದಿರುವುದಿಲ್ಲ. ಈ ಸಮಸ್ಯೆ ಉಲ್ಬಣಗೊಂಡಾಗ ಬ್ರಾಹ್ಮಣರು ಒಂದು ಜಾತಿಯಾಗಿ ಮಾರ್ಪಾಟಾಗಿದ್ದರೊ ಇಲ್ಲವೊ ಎಂಬುದೂ ನಮಗೆ ತಿಳಿದಿರುವುದಿಲ್ಲ. ಆದರೆ ಋಗ್ವೇದದ ಕಾಲದಲ್ಲಿ ಕೂಡ ಬ್ರಾಹ್ಮಣರು ತಮ್ಮಷ್ಟಕ್ಕೇ ಒಂದು ವರ್ಗವಾಗಿದ್ದರು. ವರ್ಗಪ್ರಜ್ಞೆ ಬೆಳೆಸಿಕೊಂಡಿದ್ದು, ತಮ್ಮ ವರ್ಗದ ಹಿತವನ್ನು ರಕ್ಷಿಸುವಲ್ಲಿ ಆಸಕ್ತರಾಗಿದ್ದರೆಂಬುದು ಸ್ಪಷ್ಟವಿರುತ್ತದೆ.[೧] ಹೀಗಿದ್ದಾಗ ಬ್ರಾಹ್ಮಣರ ಸಂಚುಗಾರಿಕೆಯನ್ನು ಭೇದಿಸುವುದು ಶೂದ್ರರಿಗೆ ಕಠಿಣವಾಗುತ್ತಿತ್ತು. ಎರಡನೆಯದಾಗಿ, ಉಪನಯನ ದೀಕ್ಷೆ ಕೊಡುವುದು ಮನೆಯ ಗುರುವಿನದೇ ಮೀಸಲು ಹಕ್ಕಾಗಿದ್ದಿತು. ನಿಮಿ ರಾಜನ ಕಥೆ[೨] ಯಜ್ಞ ಮಾಡುವ ಅಧಿಕಾರ ಸಂಪೂರ್ಣ ಕುಲಗುರುವಿನದೇ ಆಗಿದ್ದಿತೆಂಬುದನ್ನು ತೋರಿಸುತ್ತದೆ. ಈ ಸೂಚನೆಗಳಲ್ಲಿ ಸತ್ಯಾಂಶವೇನಾದರೂ ಇದ್ದರೆ, ತಮ್ಮ ವಿರುದ್ಧ ಬ್ರಾಹ್ಮಣರು ನಡೆಸಿದ ಸಾಮೂಹಿಕ ಯುದ್ಧವನ್ನು ತಪ್ಪಿಸುವುದು ಶೂದ್ರರಿಗೆ ಸಾಧ್ಯವಿರಲಿಲ್ಲವೆಂಬುದು ಸ್ಪಷ್ಟವಿರುತ್ತದೆ.

ಇನ್ನೊಂದು ಸಾಧ್ಯತೆ ಎಂದರೆ ಕ್ಷತ್ರಿಯರೆಲ್ಲ ಸೇರಿ ಸಾಮೂಹಿಕ ಸೈನ್ಯವನ್ನು ತಯಾರಿಸಿದಲ್ಲಿ ಬ್ರಾಹ್ಮಣರ ಪ್ರತಿರೋಧವನ್ನು ಕಡಿಮೆ ಮಾಡಬಹುದಾಗಿತ್ತು. ಅದು ಸಾಧ್ಯವಿತ್ತೊ ಇಲ್ಲವೊ ಎಂಬುದು ಊಹೆಗೇ ಬಿಟ್ಟದ್ದು. ಮೊದಲನೆಯದಾಗಿ, ಉಪನಯನ ಇಲ್ಲದಿರುವುದರ ಪರಿಣಾಮ ಭವಿಷ್ಯದ ಅವರ ಸ್ಥಾನಮಾನದ ಮೇಲೆ ಏನಾಗಬಹುದೆಂಬುದರ ತಿಳುವಳಿಕೆ ಶೂದ್ರರಿಗೆ ಇತ್ತೆ? ಇಲ್ಲ ಎಂಬುದು ಖಚಿತ. ಎರಡನೆಯದಾಗಿ, ಕ್ಷತ್ರಿಯರು ಸಂಘಟಿತರಾಗಿದ್ದರೆ? ಸಂಘಟಿತರಾಗಿದ್ದರೆಂಬುದು ಸಂಶಯಾಸ್ಪದ. ಮೂರನೆಯದಾಗಿ, ಉಳಿದ ಕ್ಷತ್ರಿಯ ಅರಸರಿಗೆ ಶೂದ್ರರ ಬಗೆಗೆ ಅನುಕಂಪ ಇತ್ತೆ? ಋಗ್ವೇದದಲ್ಲಿ ಹೇಳಿದ ಶೂದ್ರರಲ್ಲದ ಕ್ಷತ್ರಿಯರು ಹಾಗೂ ಶೂದ್ರರ ನಡುವೆ ಹೆಚ್ಚಿನ ಪ್ರೀತಿ ಇದ್ದಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಈ ಎಲ್ಲ ಸ್ಥಿತಿಗತಿಗಳನ್ನು ಗಮನಿಸಿದರೆ, ಬ್ರಾಹ್ಮಣರು ಶೂದ್ರರಿಗೆ ಉಪನಯನ ದೀಕ್ಷೆ ಕೊಡಲು ನಿರಾಕರಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲದಿರುವುದು ನಿಜವೆನಿಸುತ್ತದೆ.

◆

---

೧. Kane, Vol.II (೧) p. 29

೨. ಪೂರ್ವೋಕ್ತ, p. 175

# ಅಧ್ಯಾಯ ೧೨

# ಸಿದ್ಧಾಂತದ ಸತ್ವಪರೀಕ್ಷೆ

(೧)

ಈ ಪ್ರಬಂಧದ ಉದ್ದೇಶ ಶೂದ್ರರ ಮೂಲವನ್ನು ಗುರುತಿಸುವುದು ಮತ್ತು ಅವರ ಮಾನಹಾನಿಗೆ ಕಾರಣಗಳನ್ನು ಕಂಡುಹಿಡಿಯುವುದಾಗಿರುತ್ತದೆ. ಐತಿಹಾಸಿಕ ವಸ್ತು ಮತ್ತು ಅನೇಕ ಲೇಖಕರು ಸೂಚಿಸಿದ ಸಾಂಪ್ರದಾಯಿಕ ಮತ್ತು ಆಧುನಿಕ ಸಿದ್ಧಾಂತಗಳನ್ನು ಪರಿಶೀಲಿಸಿ, ನಾನೊಂದು ಹೊಸ ಸಿದ್ಧಾಂತವನ್ನು ಮಂಡಿಸಿದ್ದೇನೆ. ಹಿಂದಿನ ಅಧ್ಯಾಯಗಳಲ್ಲಿ ಈ ಸಿದ್ಧಾಂತವು ಬಿಡಿಬಿಡಿಯಾಗಿ ಕೊಡಲ್ಪಟ್ಟಿದೆ. ಪ್ರತಿಯೊಂದು ಭಾಗಕ್ಕೆ ಪ್ರತ್ಯೇಕವಾಗಿ ಭದ್ರ ನೆಲೆಯನ್ನು ಹಾಕುವ ಉದ್ದೇಶದಿಂದ ಹಾಗೆ ಮಾಡಲಾಗಿದೆ. ಆ ಸಿದ್ಧಾಂತವನ್ನು ಇಡಿಯಾಗಿ ತಿಳಿಯುವುದಕ್ಕಾಗಿ ಎಲ್ಲ ಬಿಡಿ ಭಾಗಗಳನ್ನು ಒಟ್ಟಿಗೆ ಸೇರಿಸುವುದು ಈಗ ಅವಶ್ಯವಿರುತ್ತದೆ. ಅದರ ಸಾರವನ್ನು ಕೆಳಗಿನಂತೆ ಸಂಗ್ರಹಿಸಬಹುದು :

೧) ಶೂದ್ರರು ಸೂರ್ಯವಂಶದ ಆರ್ಯ ಸಮುದಾಯಗಳಲ್ಲಿ ಒಂದು ಸಮುದಾಯವಾಗಿದ್ದರು.

೨) ಇಂಡೊ–ಆರ್ಯ ಸಮಾಜದಲ್ಲಿ ಶೂದ್ರರು ಕ್ಷತ್ರಿಯ ವರ್ಣಕ್ಕೆ ಸೇರಿದ್ದರು.

೩) ಆರ್ಯ ಸಮಾಜ ಮೂರೇ ವರ್ಣಗಳನ್ನು ಮನ್ನಿಸಿದ ಕಾಲವೊಂದಿತ್ತು. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ. ಶೂದ್ರರು ಪ್ರತ್ಯೇಕ ವರ್ಣವಾಗಿರದೆ, ಕ್ಷತ್ರಿಯ ವರ್ಣದ ಭಾಗವಾಗಿದ್ದರು.

೪) ಶೂದ್ರ ಅರಸರು ಮತ್ತು ಬ್ರಾಹ್ಮಣರ ನಡುವೆ ನಿರಂತರ ದ್ವೇಷವಿತ್ತು. ಅದರಲ್ಲಿ ಬ್ರಾಹ್ಮಣರನ್ನು ಅತಿಯಾದ ಹಿಂಸೆಗೆ ಮತ್ತು ಅಪಮಾನಕ್ಕೆ ಗುರಿಪಡಿಸಲಾಗಿತ್ತು.

೫) ಹಿಂಸೆ ಮತ್ತು ತುಳಿತದ ಪರಿಣಾಮವಾಗಿ ಶೂದ್ರರನ್ನು ದ್ವೇಷಿಸುತ್ತಿದ್ದ ಬ್ರಾಹ್ಮಣರು ಅವರಿಗೆ ಜನಿವಾರ ಕೊಡಲು ನಿರಾಕರಿಸಿದರು.

೬) ಜನಿವಾರ ದೀಕ್ಷೆಯಿಂದ ವಂಚಿತರಾದ ಶೂದ್ರರು ಸಾಮೂಹಿಕವಾಗಿ ಅವಹೇಳನಗೊಂಡು, ವೈಶ್ಯರಿಗಿಂತಲೂ ಕೆಳಗಿಳಿದು ನಾಲ್ಕನೇ ವರ್ಣ ನಿರ್ಮಾಣ ಮಾಡಿದರು.

ಈಗ ಈ ಸಿದ್ಧಾಂತವನ್ನು ಪರೀಕ್ಷಿಸುವುದು ಬಾಕಿ ಉಳಿದಿರುತ್ತದೆ. ಲೇಖಕರು ಈ ಪರೀಕ್ಷೆಯನ್ನು ಓದುಗರಿಗೆ ಬಿಡುವುದು ರೂಢಿ. ನಾನು ಹಾಗೆ ಮಾಡದೆ, ನನ್ನ ಸಿದ್ಧಾಂತವನ್ನು ಪರೀಕ್ಷಿಸುವ ಹೊಣೆಯನ್ನು ನಾನೇ ಹೊರುತ್ತೇನೆ. ಕಾರಣವೇನೆಂದರೆ, ಅದರಿಂದ ನನ್ನ ಸಿದ್ಧಾಂತವನ್ನು ಸಮರ್ಥಿಸಿಕೊಳ್ಳುವ ಅವಕಾಶ ಸಿಗುತ್ತದೆ.

(೨)

ಮಹಾಭಾರತದಿಂದ ಆಯ್ದುಕೊಂಡ ಪೈಜವನನ್ನು ಶೂದ್ರನೆಂದು ವರ್ಣಿಸುವ ಒಂದು ವಾಕ್ಯದ ಮೇಲೆ ನನ್ನ ಸಿದ್ಧಾಂತ ನಿಂತಿರುವುದೆಂದು, ಪೈಜವನನ್ನು ಸುದಾಸನೆಂದು ಗುರುತಿಸುವುದು ಸಂಶಯಾಸ್ಪದವೆಂದು, ಶೂದ್ರನೆಂದು ಪೈಜವನನ ವರ್ಣನೆ ಮಹಾಭಾರತದ ಒಂದೇ ಒಂದು ಭಾಗದಲ್ಲಿ ಬರುತ್ತದೆಂದು ನನ್ನ ಟೀಕಾಕಾರರು ಆರೋಪಿಸುವುದನ್ನು ನಾನು ಚೆನ್ನಾಗಿ ಊಹಿಸಬಹುದು. ಅಂಥ ಸಡಿಲಬುನಾದಿಯ

ಮೇಲೆ ನಿಂತ ಸಿದ್ಧಾಂತವನ್ನು ಮನ್ನಿಸುವುದಾದರೂ ಹೇಗೆ? ಒಂದು ಸರಪಳಿಯ ಬಲವು ಅದರ ಅಶಕ್ತ ಕೊಂಡಿಗಿಂತ ಹೆಚ್ಚಲ್ಲ ಎನ್ನುವ ಹಳೆಯ ವಾದವನ್ನು ತಪ್ಪದೇ ಅನುಸರಿಸುವವರು, ನನ್ನ ಸಿದ್ಧಾಂತವನ್ನು ಅಷ್ಟೊಂದು ಸುಲಭವಾಗಿ ಅಪಮಾನಗೊಳಿಸುವದಾಗಲೀ, ಮುರಿದುಹಾಕುವುದಾಗಲೀ ಸಾಧ್ಯವಿಲ್ಲ.

ಮೊದಲನೆಯದಾಗಿ, ಒಂದು ಸಿದ್ಧಾಂತವನ್ನು ಒಂದೇ ವಾಕ್ಯದ ಆಧಾರದ ಮೇಲೆ ನಿರ್ಮಿಸಲಿಕ್ಕಾಗದೆನ್ನುವುದನ್ನು ನಾನು ಒಪ್ಪುವುದಿಲ್ಲ. ಸಾಕ್ಷಿ ಕಾಯ್ದೆಯ ಪ್ರಸಿದ್ಧ ನಿಯಮದ ಪ್ರಕಾರ ಸಾಕ್ಷಿಯ ಮಹತ್ವವನ್ನು ತೂಗಿನೋಡಬೇಕು, ಎಣಿಸಿ ಅಲ್ಲ. ಸಾಕ್ಷಿಗಳ ಸಂಖ್ಯೆಯ ಮಹತ್ವ ವೈಯಕ್ತಿಕ ಸಾಕ್ಷಿಯ, ಇಲ್ಲವೆ ಎಲ್ಲ ಸಾಕ್ಷಿಗಳ ಒಟ್ಟು ಸತ್ಯಾಂಶಕ್ಕಿರುವ ಮಹತ್ವಕ್ಕಿಂತ ಹೆಚ್ಚಾಗಲಾರದು. ಪೈಜವನು ಶೂದ್ರನೆಂದು ಹೇಳುವ ಮಾತನ್ನು ನಂಬದಿರಲು ಕಾರಣವಿಲ್ಲ. ಮಹಾಭಾರತದ ಕರ್ತೃವಿಗೆ ಸುಳ್ಳು ಹೇಳಲು ಯಾವುದೇ ಕಾರಣವಿರುವುದಿಲ್ಲ. ಅಷ್ಟೊಂದು ಪ್ರಾಚೀನ ಸಂಗತಿಗಳನ್ನು ಕುರಿತು ಬರೆಯುವಾಗ ಯಾವುದೇ ದುರುದ್ದೇಶ ಇಲ್ಲವೆ ಪಕ್ಷಪಾತವನ್ನು ಆರೋಪಿಸಲಾಗದು. ಮಹಾಭಾರತದ ಕರ್ತೃ ಒಂದು ಸತ್ಯ ಸಂಪ್ರದಾಯವನ್ನು ಕುರಿತು ಬರೆಯುತ್ತಿದ್ದನೆಂಬ ಒಂದೇ ತೀರ್ಮಾನಕ್ಕೆ ಬರಲು ಸಾಧ್ಯವಿದೆ.

ಋಗ್ವೇದದಲ್ಲಿ ಪೈಜವನನ್ನು ಶೂದ್ರನೆಂದು ವರ್ಣಿಸದಿದ್ದ ಸಂಗತಿಯು ಮಹಾಭಾರತದಲ್ಲಿ ಬರುವ ಹೇಳಿಕೆಯ ಸತ್ಯಾಂಶವನ್ನು ವಿರೋಧಿಸುವುದಿಲ್ಲ. ಋಗ್ವೇದದಲ್ಲಿ ಶೂದ್ರ ಪದ ಬಳಸದಿದ್ದುದಕ್ಕೆ ಅನೇಕ ವಿವರಣೆಗಳನ್ನು ಕೊಡಬಹುದು. ಮೊದಲನೆಯದಾಗಿ, ಅಂಥ ವರ್ಣನೆಯನ್ನು ಋಗ್ವೇದದಲ್ಲಿ ನಿರೀಕ್ಷಿಸುವುದು ತಪ್ಪು. ಋಗ್ವೇದ ಒಂದು ಧಾರ್ಮಿಕ ಗ್ರಂಥ. ಧಾರ್ಮಿಕ ಗ್ರಂಥದಲ್ಲಿ ಶೂದ್ರದಂಥ ವರ್ಣನೆಯನ್ನು ನಿರೀಕ್ಷಿಸುವುದು ಸಮಂಜಸವಲ್ಲ. ಆದರೆ ಮಹಾಭಾರತದಂಥ ಐತಿಹಾಸಿಕ ಗ್ರಂಥದಲ್ಲಿ ಅಂತಹ ವರ್ಣನೆಯನ್ನು ನಿರೀಕ್ಷಿಸಬಹುದು ಮತ್ತು ಅದು ಅಲ್ಲಿ ಇದೆ ಕೂಡಾ.

ಸುದಾಸನಿಗೆ ಸಂಬಂಧಿಸಿ, ಶೂದ್ರಪದದ ಬಳಕೆ ಬಹಳ ವಿರಳವಿರುವುದಕ್ಕೆ ಮತ್ತೊಂದು ವಿವರಣೆ ಎಂದರೆ, ನನಗನಿಸುವಂತೆ ಅದು ಅನವಶ್ಯಕವಾಗಿತ್ತು. ಕುಲ, ಗೋತ್ರ, ಪಂಗಡ ಮುಂತಾದ ಅಂಶಗಳು ನಿಜಕ್ಕೂ ಗುರುತಿನ ಚಿಹ್ನೆಗಳಾಗಿರುತ್ತವೆ. ನಿಮ್ನ ವರ್ಗದವರಿಗೆ ಗುರುತಿನ ಚಿಹ್ನೆಗಳು ಬೇಕಾಗುತ್ತವೆ. ಪ್ರಸಿದ್ಧ ವ್ಯಕ್ತಿಗಳಿಗೆ ಅವು ಬೇಕಾಗುವುದಿಲ್ಲ. ಸುದಾಸ ಆಗಿನ ಕಾಲದ ಅತ್ಯಂತ ಪ್ರಸಿದ್ಧ ವ್ಯಕ್ತಿಯಾಗಿದ್ದನೆಂಬುದರಲ್ಲಿ ಸಂಶಯವಿರುವುದಿಲ್ಲ. ಜನರು ಗುರುತಿಸಲೋಸುಗ ಅವನನ್ನು ಶೂದ್ರನೆಂದು ವರ್ಣಿಸಬೇಕಾಗಿರಲಿಲ್ಲ. ಇದು ಕೇವಲ ಊಹೆಯ ವಿಷಯವಲ್ಲ. ಇದರ ಆಧಾರಕ್ಕೆ ಐತಿಹಾಸಿಕ ಪ್ರಸಂಗಗಳನ್ನು ಉಲ್ಲೇಖಿಸಬಹುದು. ಬುದ್ಧನ ಕಾಲದಲ್ಲಿ ಬದುಕಿದ್ದ ಈರ್ವರು ಅರಸರು – ಬಿಂಬಸಾರ ಮತ್ತು ಪಸೇನದಿ ಅವರ ಉದಾಹರಣೆಗಳನ್ನು ತೆಗೆದುಕೊಳ್ಳಿ. ಉಳಿದ ಅವರ ಸಮಕಾಲೀನ ಅರಸರೆಲ್ಲ ಆಗಿನ ಕಾಲದ ಸಾಹಿತ್ಯದಲ್ಲಿ ಗೋತ್ರದ ಹೆಸರಿನಿಂದ ಕರೆಯಲ್ಪಡುತ್ತಿದ್ದರು. ಆದರೆ ಈ ಇಬ್ಬರು ತಮ್ಮ ಅಂಕಿತನಾಮಗಳಿಂದಲೇ ಕರೆಯಲ್ಪಡುತ್ತಿದ್ದರು. ಇದನ್ನು ಗಮನಿಸಿದ ಪ್ರೊ. ಓಲ್ಡನ್‌ಬರ್ಗ್,[೧] ಆ ಅರಸರು ಪ್ರಸಿದ್ಧವಿದ್ದುದರಿಂದ ಅವರನ್ನು ಅವರ ಗೋತ್ರಗಳ ಹೆಸರುಗಳಿಂದ ಕರೆಯುವ ಅವಶ್ಯಕತೆ ಇದ್ದಿರಲಿಲ್ಲ ಎಂದು ವಿವರಿಸುತ್ತಾರೆ.

---

೧. *Life of Budda,* p. 414

**(೩)**

ಆದರೆ ನನ್ನ ಸಿದ್ಧಾಂತವು ಕೇವಲ ಮಹಾಭಾರತದಲ್ಲಿರುವ ಏಕೈಕ ಗದ್ಯಭಾಗ ಇಲ್ಲವೆ ಪೈಜವನನ್ನು ಸುದಾಸನೆಂದು ಗುರುತಿಸುವುದರ ಮೇಲೆ ನಿಂತಿರುವುದೆಂದು ತಿಳಿಯುವುದು ನಿಜವಾಗಿಯೂ ತಪ್ಪು. ಹಾಗೇನಿಲ್ಲ. ಈ ಸಿದ್ಧಾಂತಕ್ಕೆ ಒಂದೇ ಸರಪಳಿಯ ಆಧಾರವಿರುವುದಿಲ್ಲ. ಆದ್ದರಿಂದ ಸರಪಳಿಯ ಬಲವು ಅದರ ಅತಿ ದುರ್ಬಲ ಕೊಂಡಿಯ ಬಲಕ್ಕಿಂತ ಹೆಚ್ಚಿರಲಾರದೆನ್ನುವ ವಾದಸರಣಿ ಇಲ್ಲಿ ಅನ್ವಯಿಸುವುದಿಲ್ಲ. ಇದಕ್ಕೆ ಅನೇಕ ಸಮಾನಾಂತರ ವಾದಸರಣಿಗಳ ಬೆಂಬಲವಿದೆ. ಯಾವುದೇ ಒಂದು ವಾದದ ದುರ್ಬಲ ಕೊಂಡಿಯಿಂದ ನನ್ನ ಸಿದ್ಧಾಂತವು ದುರ್ಬಲವಾಗುವುದಿಲ್ಲ. ಒಂದು ವಾದಸರಣಿಯಲ್ಲಿರುವ ಒಂದು ದುರ್ಬಲಕೊಂಡಿಯ ದುರ್ಬಲತೆ ಎಲ್ಲ ಭಾರವನ್ನೂ ಉಳಿದೆಲ್ಲ ಸರಣಿಗಳ ಮೇಲೆ ಹಾಕುತ್ತದೆ. ಅದರ ಪರಿಣಾಮವಾಗಿ, ಸಿದ್ಧಾಂತವು ಮುರಿದುಬಿದ್ದಿದೆ ಎಂಬ ತೀರ್ಮಾನಕ್ಕೆ ಬರುವ ಮುನ್ನ ಉಳಿದ ಸರಣಿಗಳು ವಾದದ ಭಾರವನ್ನು ತಡೆಯಲು ಅಸಮರ್ಥವಾಗಿವೆ ಎಂಬುದನ್ನು ಸಿದ್ಧಮಾಡುವುದು ಅವಶ್ಯವಾಗುತ್ತದೆ.

ಪೈಜವನನ್ನು ಶೂದ್ರನೆಂದು ವರ್ಣಿಸುವ ಮತ್ತು ಋಗ್ವೇದದ ಸುದಾಸನೆಂದು ಗುರುತಿಸುವ ಒಂದೇ ವಾದಸರಣಿಯು ಸಿದ್ಧಾಂತವನ್ನು ಬೆಂಬಲಿಸುವುದಿಲ್ಲ. ಅದರ ಬೆಂಬಲಕ್ಕೆ ಬೇರೆ ವಾದಸರಣಿಗಳಿರುತ್ತವೆ. ವರ್ಣಗಳು ಕೇವಲ ಮೂರು ಮತ್ತು ಶೂದ್ರರು ಪ್ರತ್ಯೇಕ ವರ್ಣವಾಗಿರಲಿಲ್ಲ ಎಂದು ಶತಪಥ ಮತ್ತು ತೈತ್ತಿರೀಯ ಬ್ರಾಹ್ಮಣಗಳು ಒಪ್ಪಿಕೊಳ್ಳುವುದು ಅವುಗಳಲ್ಲಿ ಒಂದು. ಎರಡನೆಯದಾಗಿ, ರಾಜರೂ ಮತ್ತು ರಾಜ್ಯದ ಮಂತ್ರಿಗಳೂ ಆಗಿದ್ದಕ್ಕೆ ಸಾಕ್ಷ್ಯಗಳಿವೆ. ಮೂರನೆಯದು, ಒಂದಾನೊಂದು ಕಾಲದಲ್ಲಿ ಶೂದ್ರರು ಉಪನಯನ ದೀಕ್ಷೆಯ ಹಕ್ಕನ್ನು ಹೊಂದಿದ್ದರೆಂಬುದಕ್ಕಿದ್ದ ಸಾಕ್ಷ್ಯಾಧಾರವನ್ನು ಹೊಂದಿರುತ್ತದೆ. ಮೊದಲನೆಯ ವಾದಸರಣಿ ಮುರಿದುಬೀಳುವ ಸಾಧ್ಯತೆ ಇದ್ದರೂ, ಅದರಿಂದುಂಟಾದ ಹೆಚ್ಚಿನ ಭಾರವನ್ನು ಹೊತ್ತುಕೊಳ್ಳಲು ಈ ಎಲ್ಲ ಗಟ್ಟಿಸರಪಳಿಗಳಿಗೆ ಸಾಧ್ಯವಿರುತ್ತದೆ.

ಸಾಕ್ಷ್ಯಾಧಾರ ಕುರಿತು ಹೇಳುವುದಾದರೆ, ಖಚಿತ ನಿದರ್ಶನ ಸಿಕ್ಕುವುದು ವಿರಳ. ನನ್ನ ಸಿದ್ಧಾಂತ ಸಂಪೂರ್ಣ ಸಾಕ್ಷ್ಯಾಧಾರದ ಮೇಲ ನಿಂತಿದೆಯೆಂದು ನಾನು ಹೇಳುವುದಿಲ್ಲ. ಆದರೆ ಸಿದ್ಧಾಂತವನ್ನು ಬೆಂಬಲಿಸುವ ಸಾಕ್ಷಿ ನೇರವಾದುದೂ ಮತ್ತು ವಸ್ತುಸ್ಥಿತಿಗೆ ಸಂಬಂಧಿಸಿದುದೂ ಆಗಿರುತ್ತದೆ. ವಿರೋಧಾಭಾಸ ಎನಿಸಿದಲ್ಲಿ, ಸಬಲ ಊಹೆಗಳು ಅದರ ಪರವಾಗಿರುತ್ತವೆ ಎಂದು ಹೇಳಬಯಸುತ್ತೇನೆ.

ನಾನು ಪ್ರತಿಪಾದಿಸಿದ ಸಿದ್ಧಾಂತ ಎಷ್ಟು ಗಟ್ಟಿ ಇದೆ ಎಂದು ತೋರಿಸಿದ್ದಾಗಿದೆ. ಈಗ ಅದು ಎಷ್ಟು ಸಿಂಧುವಾದುದೆಂದು ತೋರಿಸುತ್ತೇನೆ. ಒಂದು ಸಿದ್ಧಾಂತದ ಸಿಂಧುತ್ವ ಕಂಡುಹಿಡಿಯಲು ಸಾಮಾನ್ಯವಾಗಿ ಎಲ್ಲ ತಜ್ಞರು ಒಪ್ಪಿಕೊಂಡಂಥ ಒಂದು ಪರೀಕ್ಷೆ ಇದೆ. ಯಾವುವೆಂದರೆ, ಮನ್ನಣೆಯನ್ನು ಬೇಡುವ ಸಿದ್ಧಾಂತ ಪರಿಹಾರವನ್ನಷ್ಟೇ ಸೂಚಿಸದೆ, ತಾನು ಬಿಡಿಸಿರುವುದಾಗಿ ಹೇಳುತ್ತಿರುವ ಒಡೆಯದ ಒಗಟುಗಳಾಗಿರುವ ಸಮಸ್ಯೆಯನ್ನು ವಿವರಿಸಬೇಕಾಗುತ್ತದೆ. ನನ್ನ ಸಿದ್ಧಾಂತಕ್ಕೆ ಇದೇ ಪರೀಕ್ಷೆಯನ್ನು ಅನ್ವಯಿಸಬಯಸುತ್ತೇನೆ.

ಶೂದ್ರರ ಜಟಿಲ ಸಮಸ್ಯೆಗಳನ್ನು ಒಂದೆಡೆ ಪಟ್ಟಿ ಮಾಡುತ್ತ ಈ ಕಾರ್ಯವನ್ನು ಪ್ರಾರಂಭಿಸುತ್ತೇನೆ.

೧) ಶೂದ್ರರು ಅನಾರ್ಯರೆಂದೂ, ಆರ್ಯರ ವೈರಿಗಳೆಂದೂ, ಆರ್ಯರು ಶೂದ್ರರನ್ನು ಜಯಿಸಿ ತಮ್ಮ ಗುಲಾಮರನ್ನಾಗಿ ಮಾಡಿದ್ದಾರೆಂದು ಆರೋಪಿಸಲಾಗಿದೆ. ಹಾಗಾದರೆ ಯಜುರ್ವೇದ ಮತ್ತು ಅಥರ್ವ ವೇದಗಳ ಋಷಿಗಳು ಶೂದ್ರರಿಗೆ ಕೀರ್ತಿಯನ್ನು ಏಕೆ ಹಾರೈಸಬೇಕಿತ್ತು ಮತ್ತು ತಾವು ಶೂದ್ರರ ಕೃಪೆಯಲ್ಲಿರಬೇಕೆಂಬ ಇಚ್ಛೆಯನ್ನು ಏಕೆ ವ್ಯಕ್ತಪಡಿಸಬೇಕಿತ್ತು?

೨) ಶೂದ್ರರಿಗೆ ಯಜ್ಞಯಾಗಾದಿಗಳನ್ನು ನೆರವೇರಿಸುವ ಅಧಿಕಾರ ಇಲ್ಲವೆಂದು ಹೇಳುತ್ತಾರೆ. ಹಾಗಾದರೆ, ಸುದಾಸ ಅಶ್ವಮೇಧ ಯಜ್ಞವನ್ನು ಹೇಗೆ ನೆರವೇರಿಸಿದ? ಶತಪಥ ಬ್ರಾಹ್ಮಣವು ಶೂದ್ರನನ್ನು ಯಜ್ಞಕರ್ತೃ ಎಂದು ಏಕೆ ಕರೆಯುತ್ತದೆ ಮತ್ತು ಅವನನ್ನು ಸಂಬೋಧಿಸುವ ಕ್ರಮವನ್ನು ಸೂಚಿಸಿದೆ?

೩) ಶೂದ್ರರಿಗೆ ವೇದಾಧ್ಯಯನದ ಅಧಿಕಾರವಿಲ್ಲವೆಂದು ಹೇಳಲಾಗಿದೆ. ಹಾಗಾದರೆ, ಶೂದ್ರನಾದ ಸುದಾಸ ಋಗ್ವೇದ ಮಂತ್ರಗಳ ಕರ್ತೃ ಹೇಗಾದ?

೪) ಶೂದ್ರರಿಗೆ ಉಪನಯನದ ಅಧಿಕಾರ ಇಲ್ಲವೆಂದು ಹೇಳುತ್ತಾರೆ. ಇದು ಮೊದಲಿನಿಂದಲೂ ಇದ್ದುದಾದರೆ ಅದರ ವಿಷಯಕ್ಕೆ ಭಿನ್ನಾಭಿಪ್ರಾಯ ಏಕಿರಬೇಕು? ಬದರಿ ಮತ್ತು ಸಂಸ್ಕಾರಗಣಪತಿ ಇವರು ಶೂದ್ರನಿಗೆ ಉಪನಯನದ ಹಕ್ಕು ಇರುತ್ತದೆಂದು ಏಕೆ ಹೇಳುತ್ತಾರೆ?

೫) ಶೂದ್ರರಿಗೆ ಆಸ್ತಿಯನ್ನು ಸಂಚಯಿಸಲು ಅನುಮತಿ ಕೊಡಲಿಲ್ಲ. ಹಾಗಾದರೆ, ಮೈತ್ರಾಯಣೀ ಮತ್ತು ಕಠಕ ಸಂಹಿತಗಳು ಶೂದ್ರರು ಶ್ರೀಮಂತರೂ ಮತ್ತು ಐಶ್ವರ್ಯವಂತರಾಗಿದ್ದರೆಂದು ಹೇಗೆ ಹೇಳುತ್ತವೆ?

೬) ಶೂದ್ರನು ರಾಜ್ಯದ ಅಧಿಕಾರಿಯಾಗಲು ಅನರ್ಹನೆಂದು ಹೇಳಲಾಗುತ್ತದೆ. ಹಾಗಾದರೆ, ಮಹಾಭಾರತವು ಶೂದ್ರರು ಅರಸರ ಮಂತ್ರಿಗಳಾಗಿದ್ದರೆಂದು ಹೇಗೆ ಹೇಳುತ್ತದೆ?

೭) ಶೂದ್ರರು ಮೂರು ವರ್ಣದವರ ಆಳಾಗಿ ಅವರ ಸೇವೆ ಮಾಡಬೇಕೆಂದು ಹೇಳಿರುತ್ತದೆ. ಹಾಗಾದರೆ, ಸುದಾಸನ ಉದಾಹರಣೆ ಮತ್ತು ಸಾಯಣನು ಉಲ್ಲೇಖಿಸಿದ ಇನ್ನುಳಿದ ಉದಾಹರಣೆಗಳಿಂದ ಸಿದ್ಧವಾಗುವಂತೆ ಶೂದ್ರರಲ್ಲಿ ಅರಸರು ಹೇಗೆ ಆಗಿಹೋದರು?

೮) ಶೂದ್ರನಿಗೆ ವೇದಾಭ್ಯಾಸ ಹಕ್ಕು ಇದ್ದಿರದಿದ್ದರೆ, ಉಪನಯನದ ಹಕ್ಕು ಇದ್ದಿರದಿದ್ದರೆ, ಯಜ್ಞ ಮಾಡುವ ಹಕ್ಕು ಇದ್ದಿರದಿದ್ದರೆ, ಅವನಿಗೆ ಆ ಹಕ್ಕುಗಳನ್ನು ಏಕೆ ಕೊಡಲಿಲ್ಲ?

೯) ಉಪನಯನ ದೀಕ್ಷೆ ಕೊಡುವುದು, ವೇದಗಳನ್ನು ಅಭ್ಯಾಸ ಮಾಡುವುದು ಶೂದ್ರರಿಗೆ ಮಹತ್ವದ ವಿಷಯಗಳಾಗಿದ್ದವೊ ಇಲ್ಲವೊ, ಆದರೆ ಅವು ಬ್ರಾಹ್ಮಣರಿಗೆ ಲಾಭದ ಸಂದರ್ಭಗಳನ್ನು ಒದಗಿಸುತ್ತಿದ್ದವು. ಏಕೆಂದರೆ ಉಪನಯನ ದೀಕ್ಷಾ ಸಮಾರಂಭವನ್ನು ನಡೆಸಿಕೊಡುವುದು ಮತ್ತು ವೇದಗಳನ್ನು ಕಲಿಸುವುದು ಬ್ರಾಹ್ಮಣರ ಗುತ್ತಿಗೆ ಆಗಿದೆ. ಶೂದ್ರರಿಗೆ ಉಪನಯನ, ಯಜ್ಞ ಮತ್ತು ವೇದಾಧ್ಯಯನಗಳ ಹಕ್ಕುಗಳನ್ನು ಕೊಡುವುದರಿಂದ ಬ್ರಾಹ್ಮಣರು ಸಾಕಷ್ಟು ದಕ್ಷಿಣೆ ಪಡೆಯುತ್ತಿದ್ದರು. ಶೂದ್ರರಿಗೆ ಈ ಸವಲತ್ತುಗಳನ್ನು ಕೊಡುವುದರಿಂದ ತಮಗೆ ಹಾನಿಗಿಂತ ಸಾಕಷ್ಟು ಲಾಭವಾಗುತ್ತಿದ್ದರೂ, ಅವರನ್ನು ಬ್ರಾಹ್ಮಣರು ಏಕೆ ನಿರಾಕರಿಸಿದರು?

೧೦) ಶೂದ್ರನಿಗೆ ಉಪನಯನ, ಯಜ್ಞ – ಯಾಗ ಮತ್ತು ವೇದಾಧ್ಯಯನದ ಅಧಿಕಾರ ಇಲ್ಲದಿದ್ದಾಗ್ಯೂ ಅವುಗಳನ್ನು ಕೊಡುವುದು, ಬಿಡುವುದು ಬ್ರಾಹ್ಮಣರಿಗೇ ಬಿಡಲಾಗಿತ್ತು. ಆದರೂ ನಿರ್ಣಯವನ್ನು ತೆಗೆದುಕೊಳ್ಳುವ ಸಂಪೂರ್ಣ ಸ್ವಾತಂತ್ರ್ಯವನ್ನು ಪ್ರತಿಯೊಬ್ಬ ಬ್ರಾಹ್ಮಣನಿಗೆ ಏಕೆ ಕೊಟ್ಟಿರಲಿಲ್ಲ. ನಿಷೇಧಿತ ಕೆಲಸಗಳನ್ನು ಮಾಡಿದವರಿಗೆ ದಂಡವನ್ನೇಕೆ ವಿಧಿಸಲಾಗುತ್ತಿತ್ತು?

ಈ ಜಟಿಲ ಸಮಸ್ಯೆಗಳನ್ನು ಬಿಡಿಸುವುದು ಹೇಗೆ? ಸಾಂಪ್ರದಾಯಿಕ ಹಿಂದೂ ಆಗಲಿ, ಆಧುನಿಕ ಪಂಡಿತನಾಗಲಿ, ಯಾರೂ ಅವನ್ನು ಬಿಡಿಸುವ ಇಲ್ಲವೆ ವಿವರಿಸುವ ಪ್ರಯತ್ನ ಮಾಡಿಲ್ಲ. ಇಂಥ ಸಮಸ್ಯೆಗಳು ನಿಜವಾಗಿಯೂ ಇವೆ ಎಂಬುದರ ಅರಿವು ಅವರಿಗಿದ್ದಂತಿಲ್ಲ. ಸಾಂಪ್ರದಾಯಿಕ ಹಿಂದೂಗಳಿಗೆ ಅವುಗಳಲ್ಲಿ ಆಸಕ್ತಿ ಇಲ್ಲ. ಶೂದ್ರನು ಪುರುಷ (ಪರಮಾತ್ಮನ) ಪಾದದಿಂದ ಹುಟ್ಟಿದ್ದಾನೆ ಎಂಬ ಪುರುಷಸೂಕ್ತದ ವಿವರಣೆಯಿಂದ ಅವನು ತೃಪ್ತನಾಗಿದ್ದಾನೆ. ಶೂದ್ರ ಮೂಲತಃ ಅನಾರ್ಯನಾಗಿರುವುದರಿಂದ ಆರ್ಯರು

ಅವನಿಗೆ ಪ್ರತ್ಯೇಕ ಕಾಯ್ದೆಗಳನ್ನು ಮಾಡಿರುವುದು ಸಹಜ ಎಂದು ಆಧುನಿಕ ಪಂಡಿತನು ಭಾವಿಸುತ್ತಾನೆ. ಇವರಾರೂ ಶೂದ್ರನನ್ನು ಆವರಿಸಿರುವ ಸಮಸ್ಯೆಗಳನ್ನು ತಿಳಿದುಕೊಳ್ಳುವ ಗೋಜಿಗೇ ಹೋಗದಿರುವುದು ವಿಷಾದನೀಯ. ಶೂದ್ರನ ಸಮಸ್ಯೆಯನ್ನು ಬಿಡಿಸಲು ಸಾಧ್ಯವಾಗುವಂಥ ಶೂದ್ರನ ಮೂಲ ಸ್ಥಿತಿಗತಿಯ ಮೇಲೆ ಬೆಳಕು ಚೆಲ್ಲುವ ಸಿದ್ಧಾಂತವನ್ನು ಸೂಚಿಸುವ ಬಗೆಗಂತೂ ಇನ್ನೂ ಕಡಿಮೆ ವಿಚಾರ ಮಾಡಲಾಗಿದೆ.

ಈ ಪ್ರತಿಯೊಂದು ಸಮಸ್ಯೆಗೆ ನನ್ನ ಸಿದ್ಧಾಂತ ಪರಿಹಾರ ಒದಗಿಸುತ್ತದೆಂಬುದನ್ನು ಕಾಣಬಹುದು. (೧) ಮತ್ತು (೪) ತಾರ್ಕಿಕ ಊಹೆಗಳು ಶೂದ್ರರು ಹೇಗೆ ಅರಸರಾಗಬಲ್ಲರೆಂಬುದನ್ನು ಮತ್ತು ಋಷಿಗಳು ಅವರನ್ನು ಏಕೆ ಹೊಗಳುತ್ತಾರೆಂಬುದನ್ನಷ್ಟೇ ಅಲ್ಲ, ಹೇಗೆ ಋಷಿಗಳು ಅವರ ಕೃಪೆಗೆ ಪಾತ್ರರಾಗಲು ಬಯಸುತ್ತಾರೆಂಬುದನ್ನು ವಿವರಿಸುತ್ತವೆ. (೫) ಮತ್ತು (೬) ಊಹೆಗಳು ಶೂದ್ರನ ಉಪನಯನದ ವಿಷಯಕ್ಕೆ ವಿವಾದ ಏಕೆ ಉಂಟಾಯಿತೆಂಬುದನ್ನು ಮತ್ತು ಕಾಯ್ದೆ ಈ ಸವಲತ್ತನ್ನು ಶೂದ್ರನಿಗೆ ಏಕೆ ನಿರಾಕರಿಸಿತೆಂಬುದನ್ನೂ ಮತ್ತು ಶೂದ್ರನಿಗೆ ಉಪನಯನ ದೀಕ್ಷೆ ಕೊಟ್ಟವನಿಗೆ ಏಕೆ ಶಿಕ್ಷೆ ವಿಧಿಸಿತೆಂಬುದನ್ನು ವಿವರಿಸುತ್ತವೆ. ನಿಜವಾಗಿಯೂ ಈ ಸಿದ್ಧಾಂತ ಬಿಡಿಸದ ಯಾವ ಸಮಸ್ಯೆಯೂ ಉಳಿದಿಲ್ಲ. ನನ್ನ ಮಾತಿನಲ್ಲಿ ಈ ಸಿದ್ಧಾಂತ ಎಲ್ಲವನ್ನು ಒಳಗೊಂಡುದೂ ಮತ್ತು ಸರಿಯಾಗಿ ಹೊಂದುವಂಥದೂ ಆಗಿದೆ. ಇದಕ್ಕಿಂತಲೂ ಉತ್ತಮವಾದ ಮಾನ್ಯತೆ ಹೊಂದಿದ ಸಿದ್ಧಾಂತ ಇನ್ನಾವುದೂ ಇಲ್ಲ.

◆◆

# ಅನುಬಂಧಗಳು

## ಅನುಬಂಧ – I

### ಋಗ್ವೇದದಲ್ಲಿ "ಆರ್ಯ" ಎಂಬ ಪದಕ್ಕೆ ಉಲ್ಲೇಖಗಳು

| I | | II | | III | | IV | | V | | VI | | VII | | VIII | | IX | | X | |
|---|---|---|---|---|---|---|---|---|---|---|---|---|---|---|---|---|---|---|---|
| ಹೆಚ್ | ಎಂ | ಹೆಚ್ | ಎಂ | ಹೆಚ್ | ಎಂ | ಹೆಚ್ | ಎಂ | ಹೆಚ್ | ಎಂ | ಹೆಚ್ | ಎಂ | ಹೆಚ್ | ಎಂ | ಹೆಚ್ | ಎಂ | ಹೆಚ್ | ಎಂ | ಹೆಚ್ | ಎಂ |
| ೩೩ | ೩ | ೨೩ | ೧೩ | ೪೩ | ೨ | ೧ | ೭ | ೨ | ೧೨ | ೧೪ | ೩ | ೮ | ೧ | ೧ | ೪ | ೨೩ | ೩ | ೨೦ | ೪ |
| ೭೦ | ೧ | ೨೩ | ೧೫ | | | ೨ | ೧೨ | ೩೩ | ೨ | ೧೫ | ೩ | ೨೧ | ೫ | ೧೯ | ೩೬ | ೬೧ | ೧೧ | ೨೭ | ೮ |
| ೭೧ | ೩ | ೩೫ | ೨ | | | ೨ | ೧೮ | ೩೩ | ೬ | ೧೬ | ೨೭ | ೨೧ | ೯ | ೨೧ | ೧೬ | ೭೯ | ೧ | ೨೭ | ೧೯ |
| ೭೩ | ೫ | | | | | ೪ | ೬ | ೩೩ | ೯ | ೨೦ | ೧ | ೩೧ | ೫ | ೨೪ | ೨೨೧ | | | ೩೪ | ೧೩ |
| ೮೧ | ೬ | | | | | ೧೬ | ೧೯ | ೩೪ | ೯ | ೨೪ | ೫ | ೩೪ | ೧೮ | ೩೪ | ೧೦ | | | ೪೨ | ೧ |
| ೮೧ | ೯ | | | | | ೨೦ | ೩ | ೫೪ | ೧೨ | ೨೫ | ೭ | ೪೮ | ೩ | ೩೯ | ೨ | | | ೫೯ | ೩ |
| ೧೧೬ | ೬ | | | | | ೨೪ | ೩ | | | ೩೬ | ೫ | ೫೬ | ೧೨ | ೪೮ | ೮ | | | ೭೬ | ೨ |
| ೧೧೮ | ೯ | | | | | ೨೯ | ೧ | | | ೪೫ | ೩೩ | ೬೦ | ೧೧ | ೪೯ | ೧೨ | | | ೮೬ | ೧ |
| ೧೨೧ | ೧೫ | | | | | ೩೮ | ೨ | | | ೪೭ | ೯ | ೬೪ | ೩ | ೫೨ | ೭ | | | ೮೬ | ೩ |
| ೧೨೨ | ೧೪ | | | | | ೪೮ | ೧ | | | ೪೮ | ೧೬ | ೬೮ | ೨ | ೫೪ | ೯ | | | ೮೯ | ೩ |
| ೧೬೯ | ೬ | | | | | ೫೦ | ೧೧ | | | ೫೧ | ೨ | ೮೩ | ೫ | ೫೫ | ೧೨ | | | ೧೩೩ | ೩ |
| ೧೮೪ | ೧ | | | | | | | | | ೫೯ | ೮ | ೮೬ | ೭ | | | | | ೧೪೮ | ೩ |
| ೧೮೫ | ೯ | | | | | | | | | | | ೯೨ | ೪ | | | | | ೧೯೧ | ೧ |
| | | | | | | | | | | | | ೧೦೦ | ೫ | | | | | | |

## ಅನುಬಂಧ – II

### ಋಗ್ವೇದದಲ್ಲಿ "ಆರ್ಯ" ಎಂಬ ಪದಕ್ಕೆ ಉಲ್ಲೇಖಗಳು

| I | II | III | IV | V | VI | VII | VIII | IX | X |
|---|---|---|---|---|---|---|---|---|---|
| ಹೆಚ್ ಎಂ | ಹೆಚ್ ಎಂ | ಹೆಚ್ ಎಂ | ಹೆಚ್ ಎಂ | ಹೆಚ್ ಎಂ | ಹೆಚ್ ಎಂ | ಹೆಚ್ ಎಂ | ಹೆಚ್ ಎಂ | ಹೆಚ್ ಎಂ | ಹೆಚ್ ಎಂ |
| ೫೧ ೮ | ೧೧ ೧೮ | ೩೪ ೯ | ೨೬ ೨ | ೩೪ ೬ | ೧೮ ೩ | ೫ ೬ | ೨೪ ೨೭ | ೬೩ ೬ | ೩೮ ೩ |
| ೫೯ ೨ | ೧೧ ೧೯ | | ೩೦ ೧೮ | | ೨೦ ೧೦ | ೧೮ ೭ | ೧೦೩ ೧ | ೬೩ ೧೪ | ೪೩ ೪ |
| ೧೧೭ ೨೧ | | | | | ೨೫ ೨ | ೮೩ ೧ | | | ೪೯ ೩ |
| ೧೩೦ ೮ | | | | | ೩೩ ೩ | | | | ೬೫ ೧೧ |
| ೧೫೬ ೫ | | | | | ೬೦ ೬ | | | | ೬೯ ೬ |
| | | | | | | | | | ೮೩ ೧ |
| | | | | | | | | | ೮೬ ೧೯ |
| | | | | | | | | | ೧೦೨ ೩ |
| | | | | | | | | | ೧೦೩ ೩ |
| | | | | | | | | | ೧೩೮ ೩ |
| | | | | | | | | | ೧೯೧ ೧ |

### ii ಯಜುರ್ವೇದದಲ್ಲಿ

| I | II | III | IV | V | VI |
|---|---|---|---|---|---|
| ಹೆಚ್ ಎಂ | ಹೆಚ್ ಎಂ | ಹೆಚ್ ಎಂ | ಹೆಚ್ ಎಂ | ಹೆಚ್ ಎಂ | ಹೆಚ್ ಎಂ |
| ೨೦ ೪ | ೧೧ ೩ | ೬೩ ೪ | ೧ ೨೧ | ೩೨ ೮ | ೧೮ ೫ |
| ೨೦ ೮ | | | | ೬೨ ೧ | ೮೫ ೪ |

### *iii* ಅಥರ್ವ ವೇದದಲ್ಲಿ

| VIII | IX | X |
|---|---|---|
| ಹೆಚ್ ಎಂ | ಹೆಚ್ ಎಂ | ಹೆಚ್ ಎಂ |
| ೩೨ ೧ | ೧೧ ೯ | ೬೩ ೪ |
| | ೧೭ ೪ | |
| | ೧೮ ೫ | |
| | ೩೬ ೧೦ | |
| | ೮೫ ೪ | |
| | ೮೯ ೧ | |
| | ೯೫ ೪ | |

# ಅನುಬಂಧ – III

## "ಆರ್ಯ" ಎಂಬ ಪದದ ವಿವಿಧ ಅರ್ಥಗಳು ಋಗ್ವೇದದಲ್ಲಿ ಕಂಡುಬಂದಂತೆ

| ಅರ್ಥ | I<br>ಹೆಚ್ ಎಂ | II<br>ಹೆಚ್ ಎಂ | III<br>ಹೆಚ್ ಎಂ | IV<br>ಹೆಚ್ ಎಂ | V<br>ಹೆಚ್ ಎಂ | VI<br>ಹೆಚ್ ಎಂ | VII<br>ಹೆಚ್ ಎಂ | VIII<br>ಹೆಚ್ ಎಂ | IX<br>ಹೆಚ್ ಎಂ | X<br>ಹೆಚ್ ಎಂ |
|---|---|---|---|---|---|---|---|---|---|---|
| ಶತ್ರು | ೭೦ ೧<br>೭೩ ೫<br>೧೧೮ ೯<br>೧೨೧ ೧೫<br>೧೬೯ ೬ | | | ೧೬ ೧೯ | ೩೩ ೨ | ೧೪ ೩<br>೧೫ ೩<br>೨೦ ೧<br>೩೬ ೫ | ೨೧ ೯<br>೩೪ ೧೮<br>೪೮ ೩<br>೫೬ ೨೨<br>೬೮ ೨<br>೯೨ ೪ | ೪೮ ೮<br>೪೯ ೧೨ | ೭೯ ೧ | ೪೨ ೧<br>೫೯ ೩<br>೭೬ ೨<br>೮೯ ೩ |
| ಮರ್ಯಾದಸ್ಥ ಗಣ್ಯ | ೩೩ ೩<br>೮೧ ೬<br>೮೧ ೯<br>೧೨೧ ೧೪<br>೧೮೪ ೧ | ೨೩ ೧೫<br>೩೫ ೨<br>೪೩ ೨ | ೪೩ ೨ | ೧ ೭<br>೨ ೧೨<br>೪ ೬<br>೨೦ ೩<br>೨೪ ೮<br>೨೯ ೧<br>೩೮ ೨<br>೪೮ ೧ | ೩೩ ೬<br>೩೩ ೯<br>೩೪ ೯ | ೨೪ ೫<br>೨೫ ೭<br>೪೭ ೯ | ೮ ೧<br>೨೧ ೫<br>೩೧ ೫<br>೮೬ ೭<br>೧೦೦ ೫ | ೧೯ ೩೬<br>೨೧ ೧೬<br>೨೪ ೨೨<br>೩೪ ೧೦<br>೫೫ ೧೨ | ೧೪೮ ೩ | ೨೦ ೪<br>೨೭ ೮<br>೨೭ ೧೯<br>೩೪ ೧೩<br>೮೬ ೧<br>೮೬ ೩<br>೧೧೬ ೬<br>೧೯೧ ೧ |
| ನಾಗರಿಕ | | | | ೨ ೧೮<br>೨೦ ೩ | | | | | | |

## ಅನುಬಂಧ – IV

## ಋಗ್ವೇದದಲ್ಲಿ "ದಾಸ" ಎಂಬ ಪದಕ್ಕೆ ಉಲ್ಲೇಖಗಳು

| I<br>ಹೆಚ್ ಎಂ | II<br>ಹೆಚ್ ಎಂ | III<br>ಹೆಚ್ ಎಂ | IV<br>ಹೆಚ್ ಎಂ | V<br>ಹೆಚ್ ಎಂ | VI<br>ಹೆಚ್ ಎಂ | VII<br>ಹೆಚ್ ಎಂ | VIII<br>ಹೆಚ್ ಎಂ | IX<br>ಹೆಚ್ ಎಂ | X<br>ಹೆಚ್ ಎಂ |
|---|---|---|---|---|---|---|---|---|---|
| ೯೨ ೮ | ೧೧ ೨ | ೩೪ ೧ | ೧೮ ೯ | ೩೦ ೭ | ೨೦ ೬ | ೧೯ ೨ | ೫ ೩೧ | | ೨೨ ೮ |
| ೧೦೩ ೩ | ೧೧ ೪ | | ೨೮ ೪ | ೩೦ ೮ | ೨೦ ೧೦ | ೮೩ ೧ | ೨೪ ೨೭ | | ೨೩ ೨ |
| ೧೦೪ ೨ | ೧೨ ೪ | | ೩೦ ೧೪ | ೩೦ ೯ | ೨೨ ೧೦ | ೮೬ ೭ | ೩೨ ೨ | | ೩೮ ೩ |
| ೧೫೮ ೫ | ೨೦ ೬ | | ೩೦ ೧೫ | ೩೩ ೪ | ೨೫ ೨ | ೯೯ ೪ | ೪೦ ೬ | | ೪೯ ೬ |
| ೧೭೪ ೭ | ೨೦ ೭ | | ೩೦ ೨೧ | ೩೪ ೬ | ೨೬ ೫ | | ೫೧ ೯ | | ೪೯ ೭ |
| | | | ೩೨ ೧೦ | | ೩೩ ೩ | | ೫೬ ೩ | | ೫೪ ೧ |
| | | | | | ೪೭ ೨೧ | | ೭೦ ೧೦ | | ೬೨ ೧೦ |
| | | | | | ೬೦ ೬ | | | | ೭೩ ೭ |
| | | | | | | | | | ೮೩ ೧ |
| | | | | | | | | | ೮೬ ೧೯ |
| | | | | | | | | | ೯೯ ೬ |
| | | | | | | | | | ೧೦೨ ೩ |
| | | | | | | | | | ೧೨೦ ೨ |
| | | | | | | | | | ೧೩೮ ೩ |

# ಅನುಬಂಧ – V

## ಋಗ್ವೇದದಲ್ಲಿ "ದಸ್ಯು" ಎಂಬ ಪದಕ್ಕೆ ಉಲ್ಲೇಖಗಳು

| I | | II | | III | | IV | | V | | VI | | VII | | VIII | | IX | | X | |
|---|---|---|---|---|---|---|---|---|---|---|---|---|---|---|---|---|---|---|---|
| ಹೆಚ್ | ಎಂ | ಹೆಚ್ | ಎಂ | ಹೆಚ್ | ಎಂ | ಹೆಚ್ | ಎಂ | ಹೆಚ್ | ಎಂ | ಹೆಚ್ | ಎಂ | ಹೆಚ್ | ಎಂ | ಹೆಚ್ | ಎಂ | ಹೆಚ್ | ಎಂ | ಹೆಚ್ | ಎಂ |
| ೩೩ | ೪ | ೧೧ | ೧೮ | ೨೯ | ೯ | ೧೬ | ೯ | ೪ | ೬ | ೧೪ | ೩ | ೫ | ೬ | ೬ | ೧೪ | ೪೧ | ೨ | ೨೨ | ೮ |
| ೩೩ | ೭ | ೧೧ | ೧೯ | ೩೪ | ೬ | ೧೬ | ೧೦ | ೭ | ೧೦ | ೧೬ | ೧೫ | ೬ | ೨ | ೧೪ | ೧೪ | ೪೭ | ೨ | ೪೭ | ೪ |
| ೩೩ | ೯ | ೧೨ | ೧೦ | ೩೪ | ೯ | ೧೬ | ೧೨ | ೧೪ | ೧೪ | ೧೮ | ೩ | ೧೯ | ೪ | ೩೯ | ೮ | ೮೮ | ೪ | ೪೮ | ೨ |
| ೩೬ | ೧೮ | ೧೩ | ೯ | ೪೯ | ೨ | ೨೮ | ೩ | ೨೯ | ೧೦ | ೨೩ | ೨ | | | ೫೦ | ೮ | ೯೨ | ೫ | ೪೯ | ೩ |
| ೫೧ | ೫ | ೧೫ | ೯ | | | ೨೮ | ೪ | ೩೦ | ೯ | ೨೪ | ೮ | | | ೫೧ | ೨ | | | ೫೫ | ೮ |
| ೫೧ | ೬ | ೨೦ | ೯ | | | ೩೮ | ೪ | ೩೧ | ೫ | ೨೯ | ೬ | | | ೫೬ | ೨ | | | ೭೩ | ೫ |
| ೫೧ | ೮ | | | | | | | ೩೧ | ೭ | ೩೧ | ೪ | | | ೭೦ | ೧೧ | | | ೮೩ | ೩ |
| ೫೩ | ೪ | | | | | | | ೭೦ | ೩ | ೪೫ | ೨೪ | | | ೯೮ | ೬ | | | ೮೩ | ೬ |
| ೫೯ | ೬ | | | | | | | | | | | | | | | | | ೯೫ | ೭ |
| ೭೮ | ೪ | | | | | | | | | | | | | | | | | ೯೯ | ೭ |
| ೧೦೦ | ೧೮ | | | | | | | | | | | | | | | | | ೧೦೫ | ೧೧ |
| ೧೦೧ | ೫ | | | | | | | | | | | | | | | | | | |
| ೧೦೩ | ೩ | | | | | | | | | | | | | | | | | ೧೨೦ | ೨ |
| ೧೦೩ | ೪ | | | | | | | | | | | | | | | | | | |
| ೧೦೮ | ೧೨ | | | | | | | | | | | | | | | | | | |
| ೧೧೭ | ೩ | | | | | | | | | | | | | | | | | | |
| ೧೧೭ | ೨೧ | | | | | | | | | | | | | | | | | | |

# ಅನುಬಂಧ – VI

## ಋಗ್ವೇದದಲ್ಲಿ "ವರ್ಣ" ಎಂಬ ಪದಕ್ಕೆ ಉಲ್ಲೇಖಗಳು

| I<br>ಹೆಚ್ ಎಂ | II<br>ಹೆಚ್ ಎಂ | III<br>ಹೆಚ್ ಎಂ | IV<br>ಹೆಚ್ ಎಂ | V<br>ಹೆಚ್ ಎಂ | VI<br>ಹೆಚ್ ಎಂ | VII<br>ಹೆಚ್ ಎಂ | VIII<br>ಹೆಚ್ ಎಂ | IX<br>ಹೆಚ್ ಎಂ | X<br>ಹೆಚ್ ಎಂ |
|---|---|---|---|---|---|---|---|---|---|
| ೭೩ ೭ | ೧ ೧೨ | ೩೪ ೫ | ೫ ೧೩ | | | | | ೬೫ ೮ | ೩ ೩ |
| ೯೨ ೧೦ | ೩ ೫ | | | | | | | ೭೧ ೨ | ೧೨೪ ೭ |
| ೯೬ ೫ | ೪ ೫ | | | | | | | ೭೧ ೮ | |
| ೧೦೪ ೨ | ೫ ೫ | | | | | | | ೯೭ ೧೫ | |
| ೧೧೩ ೨ | ೧೨ ೪ | | | | | | | ೧೦೪ ೪ | |
| ೧೭೯ ೬ | ೩೪ ೧೩ | | | | | | | ೧೦೫ ೪೦ | |

# ೨
# ಅಸ್ಪೃಶ್ಯರು

# ಅಸ್ಪೃಶ್ಯರು

## ಅವರು ಯಾರು ಮತ್ತು ಏಕೆ ಅಸ್ಪೃಶ್ಯರಾದರು?

ಡಾ. ಬಿ.ಆರ್. ಅಂಬೇಡ್ಕರ್

(೧೯೪೮ರ ಆವೃತ್ತಿಯ ಪುನರ್ ಮುದ್ರಣ)

**ಮೊದಲನೆಯ ಪ್ರಕಾಶನ**

ಅಕ್ಟೋಬರ್ ೧೯೪೮, ಅಮೃತ್ ಬುಕ್ ಕಂಪನಿ,
ನವದೆಹಲಿ

ಮಹಾರಾಷ್ಟ್ರ ಸರ್ಕಾರದ ಪ್ರಥಮ ಆವೃತ್ತಿ
ಜನವರಿ ೨೬, ೧೯೯೬

*ಅಸ್ಪೃಶ್ಯರಾಗಿ ಜನಿಸಿ ತಮ್ಮ ವೈಯಕ್ತಿಕ ಶ್ರದ್ಧಾ ಭಕ್ತಿ ಮತ್ತು ಸದ್ಗುಣಗಳಿಂದ ಸರ್ವರ ಗೌರವಕ್ಕೆ ಪಾತ್ರರಾದಂತಹ ಮೂವರು ಸುಪ್ರಸಿದ್ಧ ಸಂತರಾದ*

**ನಂದವೀರ್**

**ರವಿದಾಸ್**

**ಜೋಖಾಮೇಳಾ**

ಇವರ ಪುಣ್ಯಸ್ಮೃತಿಗೆ ಸಮರ್ಪಣೆ

# ಮುನ್ನುಡಿ

ಈ ಪುಸ್ತಕವು ೧೯೪೬ರಲ್ಲಿ ಪ್ರಕಟಿಸಲಾದ ನನ್ನ 'ಯಾರು ಶೂದ್ರರಾಗಿದ್ದರು? ಅವರು ಭಾರತೀಯ–ಆರ್ಯ ಸಮಾಜದ ನಾಲ್ಕನೇ ವರ್ಣದವರಾದರು', ಎಂಬ ಪ್ರಕರಣ ಗ್ರಂಥದ ಮುಂದಿನ ಭಾಗವಾಗಿದೆ. ಹಿಂದೂ ನಾಗರಿಕತೆ ಶೂದ್ರವರ್ಗವಲ್ಲದೆ ಇನ್ನೂ ಮೂರು ಸಾಮಾಜಿಕ ವರ್ಗಗಳನ್ನು ನಿರ್ಮಿಸಿದೆ. ಅವುಗಳ ಅಸ್ತಿತ್ವ ಅರ್ಹವಾದ ಗಮನ ಸೆಳೆದಿಲ್ಲ. ಆ ಉಳಿದ ಮೂರು ವರ್ಗಗಳು ಹೀಗಿವೆ :

(೧) ಅಪರಾಧಿ ಬುಡಕಟ್ಟು – ಸುಮಾರು ೨೦ ದಶಲಕ್ಷ ಜನಸಂಖ್ಯೆ

(೨) ಆದಿವಾಸಿ ಬುಡಕಟ್ಟು – ಸುಮಾರು ೧೫ ದಶಲಕ್ಷ ಜನಸಂಖ್ಯೆ

(೩) ಅಸ್ಪೃಶ್ಯರು – ಸುಮಾರು ೫೦ ದಶಲಕ್ಷ.

ಈ ವರ್ಗಗಳು ಅಸ್ತಿತ್ವದಲ್ಲಿರುವುದು ತುಂಬ ಜಿಗುಪ್ಸೆಯ ವಿಷಯ. ಈ ಸಾಮಾಜಿಕ ಅನಿಷ್ಟಗಳ ಬೆಳಕಿನಲ್ಲಿ ಹಿಂದೂ ನಾಗರಿಕತೆಯನ್ನು ಅಳೆದು ನೋಡಿದರೆ ಅದಕ್ಕೆ ನಾಗರಿಕತೆ ಎಂದು ಕರೆಯಲಿಕ್ಕಾಗದು. ಮಾನವಕುಲವನ್ನು ಹತ್ತಿಕ್ಕುವ ಮತ್ತು ದಾಸ್ಯದಲ್ಲಿರಿಸುವ ರಾಕ್ಷಸೀ ಹಂಚಿಕೆ ಇದಾಗಿದೆ. ಇದನ್ನು ಹೇಯ ಸಮಾಜ ಎಂದು ಕರೆಯುವುದು ಸೂಕ್ತ ಎನಿಸುತ್ತದೆ. ಅಪರಾಧವನ್ನು ಜೀವನೋಪಾಯದ ಮಾರ್ಗವೆಂದು ನಂಬಿದ ಒಂದು ಜನಸಮೂಹವನ್ನು, ನಾಗರಿಕತೆಯ ಮಧ್ಯದಲ್ಲೇ ಅನಾಗರಿಕರಾಗಿ ಬಾಳುತ್ತಿರುವಂಥ ಇನ್ನೊಂದು ಜನಸಮೂಹವನ್ನು ಮತ್ತು ಮಾನವೀಯ ಪ್ರಪಂಚದ ವ್ಯವಹಾರದ ಹೊರಗಿರುವ ಮತ್ತು ಸ್ಪರ್ಶಮಾತ್ರದಿಂದ ಉಳಿದವರನ್ನು ಅಪವಿತ್ರಗೊಳಿಸುವರೆಂದು ಭಾವಿಸಲಾದ ಮೂರನೆಯ ಜನಸಮೂಹವನ್ನು ನಿರ್ಮಿಸಿದಂಥ ನಾಗರಿಕತೆಗೆ ಮತ್ತೇನು ಅನ್ನಬೇಕು?

ಬೇರೆ ಯಾವುದೇ ದೇಶದಲ್ಲಿ ಈ ವರ್ಗಗಳು ಇದ್ದುದಾದರೆ, ಹೃದಯಾನ್ವೇಷಣೆ ಮತ್ತು ಆ ವರ್ಗಗಳ ಮೂಲದ ಅನ್ವೇಷಣೆ ನಡೆಯುತ್ತಿತ್ತು. ಆದರೆ ಹಿಂದೂಗಳ ತಲೆಗೆ ಇದಾವುದೂ ಹೊಳೆಯಲಿಲ್ಲ. ಅದಕ್ಕೆ ಕಾರಣ ಬಹಳ ಸರಳವಾಗಿದೆ ಏನೆಂದರೆ, ಈ ವರ್ಗಗಳ ಅಸ್ತಿತ್ವ ಕ್ಷಮೆಯ ಇಲ್ಲವೆ ನಾಚಿಕೆಯ ವಿಷಯವೆಂದು ಹಿಂದೂಗಳು ತಿಳಿದಿಲ್ಲ. ಅದಕ್ಕಾಗಿ ಪಶ್ಚಾತ್ತಾಪ ಪಡುವುದಾಗಲಿ ಇಲ್ಲವೆ ಅವುಗಳ ಹುಟ್ಟು ಮತ್ತು ಬೆಳವಣಿಗೆಯ ವಿಷಯಕ್ಕೆ ಶೋಧ ನಡೆಸುವುದಾಗಲಿ ತಮ್ಮ ಜವಾಬ್ದಾರಿ ಎಂದು ಅವರು ತಿಳಿದಿರುವುದಿಲ್ಲ. ತದ್ವಿರುದ್ಧ, ತನ್ನ ನಾಗರಿಕತೆ ಅತಿ ಪ್ರಾಚೀನವಾದುದಷ್ಟೇ ಅಲ್ಲ, ಅನೇಕ ವಿಷಯಗಳಲ್ಲಿ ಅದು ಅಪೂರ್ವವಾದುದೆಂದು ಪ್ರತಿಯೊಬ್ಬ ಹಿಂದೂವಿಗೆ ತಿಳುವಳಿಕೆ ಕೊಡಲಾಗಿರುತ್ತದೆ. ಈ ಹಕ್ಕುಗಳನ್ನು ಪುನರುಚ್ಚರಿಸಲು ಯಾವ ಹಿಂದೂವಿಗೂ ದಣಿವಾಗದು. ಹಿಂದೂ ನಾಗರಿಕತೆ ಅತ್ಯಂತ ಪ್ರಾಚೀನವಾದುದೆಂದು ಎಲ್ಲರಿಗೂ ತಿಳಿದ ವಿಷಯ. ಅದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಹಿಂದೂ ನಾಗರಿಕತೆ ಅಪೂರ್ವ ಎಂದು ಯಾವ ಆಧಾರದ ಮೇಲೆ ಹೇಳಿಕೊಳ್ಳುತ್ತಾರೆಂಬುದನ್ನು ತಿಳಿಯುವುದು ಕಷ್ಟದ ಕೆಲಸ. ಹಿಂದೂಗಳಿಗೆ ಇದು ಹಿಡಿಸಲಿಕ್ಕಿಲ್ಲ. ಆದರೆ, ಹಿಂದೂಗಳಲ್ಲದವರಿಗೆ ಹೊಳೆಯುವಂತೆ, ಈ ಹೇಳಿಕೆಗೆ ಒಂದೇ ಒಂದು ಆಧಾರ ಇದ್ದಿರಲು ಸಾಧ್ಯ. ಅದೆಂದರೆ – ಈ ವರ್ಗಗಳ ಅಸ್ತಿತ್ವಕ್ಕೆ ಹಿಂದೂ ನಾಗರಿಕತೆ ಜವಾಬ್ದಾರಿಯಾಗಿದೆ. ಈ ವರ್ಗಗಳಿರುವುದು ಅಪೂರ್ವ ಸಂಗತಿಯೇ. ಯಾವ ಹಿಂದೂವೂ ಅದನ್ನು ಪುನರುಚ್ಚರಿಸಬೇಕಿಲ್ಲ. ಯಾರೂ ಈ ಸತ್ಯಸಂಗತಿಯನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಅದು ಅಭಿಮಾನಪಡುವ ವಿಷಯವಾಗಿದೆ, ನಾಚಿಕೆಗೇಡಿನ ವಿಷಯವೆಂದು ಹಿಂದೂಗಳು ತಿಳಿಯಬೇಕೆಂದು ಆಶಿಸಬಹುದಷ್ಟೆ.

ಹಿಂದೂ ನಾಗರಿಕತೆಯ ವಿವೇಕ, ಶ್ರೇಷ್ಠತೆ ಮತ್ತು ಪಾವಿತ್ರ್ಯಗಳ ಬಗೆಗೆ ತಪ್ಪು ನಂಬಿಕೆಗಳು ಸೇರಿಕೊಳ್ಳುವುದಕ್ಕೆ

ಹಿಂದೂ ಪಂಡಿತರ ವಿಚಿತ್ರ ಸಾಮಾಜಿಕ ಮನೋಭಾವವೇ ಪೂರ್ಣ ಕಾರಣ.

ಇಂದು ಎಲ್ಲ ವಿದ್ವತ್ತು ಬ್ರಾಹ್ಮಣರಿಗೆ ಸೀಮಿತವಾಗಿದೆ. ಆದರೆ ದುರದೃಷ್ಟವಶಾತ್ ಕೆಥೋಲಿಕ್ ಚರ್ಚ್‌ನಲ್ಲಿ ಬೆಳೆದು ಅದರ ಸಿದ್ಧಾಂತಗಳನ್ನು ವಿರೋಧಿಸುವಂಥ ಪ್ರಾಮಾಣಿಕತೆಯನ್ನು ಹೊಂದಿದ ವೊಲ್ಟೇರನ ಪಾತ್ರ ನಿಭಾಯಿಸಲು ಯಾವ ಹಿಂದೂವೂ ಇದುವರೆಗೆ ಮುಂದೆಬಂದಿಲ್ಲ. ಮುಂದೂ ಕೂಡ ಬರುವ ಸಾಧ್ಯತೆ ಇಲ್ಲ. ವೊಲ್ಟೇರನಂಥ ಒಬ್ಬನನ್ನು ಹುಟ್ಟಿಸದಿರುವುದು ಬ್ರಾಹ್ಮಣರ ಕಳಪೆ ವಿದ್ವತ್ತನ್ನು ತೋರಿಸುತ್ತದೆ. ಬ್ರಾಹ್ಮಣ ಪಂಡಿತನು ಕೇವಲ ಓದು ಕಲಿತನು ಮಾತ್ರ. ಅವನು ಬುದ್ಧಿಜೀವಿಯಲ್ಲ. ಪುಸ್ತಕಜ್ಞಾನ ಪಡೆದವ ಮತ್ತು ಬುದ್ಧಿಜೀವಿಯ ನಡುವೆ ದೊಡ್ಡ ಅಂತರ ಇರುತ್ತದೆ. ಮೊದಲನೆಯವನಿಗೆ ವರ್ಗಪ್ರಜ್ಞೆ ಇರುತ್ತದೆ. ಅವನು ತನ್ನ ಹಿತಾಸಕ್ತಿಗಳ ವಿಷಯದಲ್ಲಿ ಜಾಗೃತವಾಗಿರುತ್ತಾನೆ. ಎರಡನೆಯವನು ಮುಕ್ತಜೀವಿ. ವರ್ಗ – ಹಿತಾಸಕ್ತಿಗಳು ಅವನನ್ನು ಅಲುಗಾಡಿಸುವುದಿಲ್ಲ. ಅವು ಅವನ ಮೇಲೆ ಯಾವುದೇ ಪ್ರಭಾವ ಬೀರುವುದಿಲ್ಲ. ಬ್ರಾಹ್ಮಣರು ಕೇವಲ ಪುಸ್ತಕಜ್ಞಾನ ಪಡೆದವರಾಗಿದ್ದರಿಂದ ವೊಲ್ಟೇರನನ್ನು ಹುಟ್ಟಿಸಲು ಅವರಿಂದ ಸಾಧ್ಯವಾಗಿಲ್ಲ.

ಬ್ರಾಹ್ಮಣರು ವೊಲ್ಟೇರನನ್ನು ಏಕೆ ಹುಟ್ಟಿಸಲಿಲ್ಲ ಎಂಬ ಪ್ರಶ್ನೆಯನ್ನು ಮತ್ತೊಂದು ಪ್ರಶ್ನೆಯಿಂದಲೇ ಉತ್ತರಿಸಲು ಸಾಧ್ಯ. ಟರ್ಕಿಯ ಸುಲ್ತಾನನು ಮಹ್ಮದೀಯ (ಜಗತ್ತಿನ) ಧರ್ಮವನ್ನೇಕೆ ತೊಡೆದುಹಾಕಲಿಲ್ಲ? ಯಾವ ಪೋಪನೂ ಕೆಥೋಲಿಕ್ ಧರ್ಮವನ್ನು ಏಕೆ ಅಲ್ಲಗಳೆದಿಲ್ಲ? ಎಲ್ಲ ನೀಲಿಕಣ್ಣಿನ ಕೂಸುಗಳನ್ನು ಕೊಲ್ಲಲು ಬ್ರಿಟಿಷ್ ಪಾರ್ಲಿಮೆಂಟು ಏಕೆ ಕಾಯ್ದೆಯನ್ನು ಮಾಡಿಲ್ಲ? ಯಾವ ಕಾರಣಕ್ಕಾಗಿ ಬ್ರಾಹ್ಮಣರು ವೊಲ್ಟೇರನನ್ನು ಹುಟ್ಟಿಸಲು ಶಕ್ತರಾಗಿರುವುದಿಲ್ಲವೋ ಅದೇ ಕಾರಣಕ್ಕಾಗಿ ಸುಲ್ತಾನ, ಪೋಪ್ ಇಲ್ಲವೆ ಬ್ರಿಟಿಷ್ ಪಾರ್ಲಿಮೆಂಟು ತಾನು ಮಾಡಬೇಕಾದುದನ್ನು ಮಾಡಿರುವುದಿಲ್ಲ. ಒಬ್ಬ ವ್ಯಕ್ತಿಯ ವೈಯಕ್ತಿಕ ಹಿತಾಸಕ್ತಿ ಇಲ್ಲವೆ ಸಂಬಂಧಿಸಿದ ವರ್ಗದ ಹಿತಾಸಕ್ತಿ ಯಾವಾಗಲೂ ಅವನ ಬುದ್ಧಿಶಕ್ತಿಯ ಮೇಲೆ ಪ್ರಭಾವ ಬೀರುವ ಆಂತರಿಕ ನಿಯಂತ್ರಣವಾಗಿ ಕೆಲಸಮಾಡುತ್ತದೆ.

ಒಟ್ಟಿನಲ್ಲಿ ಬ್ರಾಹ್ಮಣರು ಹೊಂದಿರುವ ಅಧಿಕಾರ ಮತ್ತು ಸ್ಥಾನಮಾನ ಹಿಂದೂ ನಾಗರಿಕತೆಯ ಕೊಡುಗೆ ಆಗಿವೆ. ಅದು ಬ್ರಾಹ್ಮಣರನ್ನು ಅತಿಮಾನವರನ್ನಾಗಿ ಕಾಣುತ್ತದೆ. ಮತ್ತು ಬ್ರಾಹ್ಮಣರ ಶ್ರೇಷ್ಠತೆಯನ್ನು ಪ್ರಶ್ನಿಸಲು, ಅವರ ಪಂಥಾಹ್ವಾನವನ್ನು ಎದುರಿಸುವಂತೆ ಎಂದೂ ಆಗಬಾರದೆಂದು ನಿಮ್ನ ವರ್ಗದವರನ್ನು ಎಲ್ಲ ಬಗೆ ನ್ಯೂನತೆಗಳಿಗೆ ಗುರಿಮಾಡಿದೆ. ಎಂಥವನೇ ಇರಲಿ ಸಾಂಪ್ರದಾಯಿಕ ಮನುಷ್ಯನಾಗಿರಲಿ, ಆಧುನಿಕವಾಗಿರಲಿ, ಧರ್ಮಗುರುವಾಗಿರಲಿ, ಗೃಹಸ್ಥನಾಗಿರಲಿ, ಪಂಡಿತನಾಗಿರಲಿ, ಇಲ್ಲವೆ ಪಾಮರನಾಗಿರಲಿ, ಪ್ರತಿಯೊಬ್ಬ ಬ್ರಾಹ್ಮಣ ಬ್ರಾಹ್ಮಣಿಕೆಯ ಶ್ರೇಷ್ಠತೆಯನ್ನು ಕಾಯುವಲ್ಲಿ ಆಸಕ್ತನಾಗಿರುತ್ತಾನೆ. ಅಂದಬಳಿಕ ಬ್ರಾಹ್ಮಣರು ವೊಲ್ಟೇರರು ಹೇಗಾಗಬಲ್ಲರು? ಬ್ರಾಹ್ಮಣರಲ್ಲಿ ಒಬ್ಬ ವೊಲ್ಟೇರ್ ಹುಟ್ಟಿಬಂದರೆ, ಬ್ರಾಹ್ಮಣಿಕೆಯ ಶ್ರೇಷ್ಠತೆಯನ್ನು ಮುಂದುವರೆಸುವ ಸಂಸ್ಕೃತಿಗೆ ಅವನು ಅಪಾಯಕಾರಿಯಾಗುತ್ತಾನೆ. ಬ್ರಾಹ್ಮಣ ಪಂಡಿತನ ಬುದ್ಧಿಶಕ್ತಿಯು ಅವರ ವರ್ಗದ ಹಿತಾಸಕ್ತಿಗಳನ್ನು ಕಾಪಾಡುವ ಕಾತರದ ಬಿಗಿನಿಯಂತ್ರಣಕ್ಕೊಳಪಟ್ಟಿರುತ್ತದೆ. ಅದರ ಪರಿಣಾಮವಾಗಿ ಅವನು ತನ್ನ ಬುದ್ಧಿಶಕ್ತಿಗೆ ಪೂರ್ಣ ಸ್ವಾತಂತ್ರ್ಯ ಕೊಡುವುದಿಲ್ಲ. ಪ್ರಾಮಾಣಿಕತೆ ಮತ್ತು ಪೂರ್ಣತ್ವ ಬೌದ್ಧಿಕ ಸ್ವಾತಂತ್ರ್ಯದ ಅವಶ್ಯಕ ಸ್ಥಿತಿಗಳು. ಏಕೆಂದರೆ, ತನ್ನ ವರ್ಗಹಿತಕ್ಕೆ ಧಕ್ಕೆ ಉಂಟಾದರೆ, ತನ್ನ ಹಿತಕ್ಕೂ ಧಕ್ಕೆ ಉಂಟಾಗುತ್ತದೆಂಬ ಭೀತಿ ಅವನಿಗೆ ಇರುತ್ತದೆ.

ಆದರೆ ಕಳವಳದ ವಿಷಯವೆಂದರೆ ಬ್ರಾಹ್ಮಣ ಸಾಹಿತ್ಯವನ್ನು ಬೆಳಕಿಗಿಡುವ ಯಾವುದೇ ಯತ್ನವನ್ನು ಬ್ರಾಹ್ಮಣ ಪಂಡಿತರು ಸಹಿಸದಿರುವುದು. ಅವನೆಂದೂ, ಅವಶ್ಯವಿದ್ದರೂ ಕೂಡ, ಮೂರ್ತಿಭಂಜಕನ ಪಾತ್ರವನ್ನು ವಹಿಸುವುದಿಲ್ಲ. ಮತ್ತು ಅಂಥ ಶಕ್ತಿ ಇರುವ ಬ್ರಾಹ್ಮಣೇತರರರನ್ನು ಹಾಗೆ ಮಾಡಲೂ ಬಿಡುವುದಿಲ್ಲ. ಬ್ರಾಹ್ಮಣರಲ್ಲದವರು ಯಾರಾದರೂ ಇಂಥ ಯತ್ನ ಮಾಡಿದ್ದಾದರೆ, ಬ್ರಾಹ್ಮಣ ಪಂಡಿತರು ಅಸಮ್ಮತಿಯ ಮೌನಪಿತೂರಿ ನಡೆಸುತ್ತಾರೆ, ನಿರ್ಲಕ್ಷ್ಯದ ನೋಟ ಬೀರುತ್ತಾರೆ, ಕ್ಷುಲ್ಲಕ ಕಾರಣಕ್ಕಾಗಿ ಒಟ್ಟಿಗೇ ಖಂಡಿಸುತ್ತಾರೆ,

ಇಲ್ಲವೆ ಅದೊಂದು ನಿಷ್ಪ್ರಯೋಜಕ ಕೆಲಸವೆಂದು ಜರಿಯುತ್ತಾರೆ. ಬ್ರಾಹ್ಮಣ ಸಾಹಿತ್ಯದ ದೋಷವನ್ನು ಎತ್ತಿ ತೋರಿಸುವ ಕಾರ್ಯದಲ್ಲಿ ತೊಡಗಿದ ನಾನು ಇಂಥ ಕೀಳು ಕುತಂತ್ರಗಳಿಗೆ ಬಲಿಯಾಗಿದ್ದೇನೆ.

ಬ್ರಾಹ್ಮಣ ಪಂಡಿತರು ಇಂಥ ಅಸಡ್ಡೆ ಧೋರಣೆ ತಳೆದಿದ್ದರೂ ನಾನು ಕೈಕೊಂಡ ಕಾರ್ಯವನ್ನು ಮುಂದುವರಿಸಿಕೊಂಡು ಹೋಗಬೇಕು. ಏಕೆಂದರೆ ಈ ವರ್ಣಗಳ ಹುಟ್ಟು ಸಂಶೋಧನೆಯ ವಿಷಯವಾಗಿ ಉಳಿದಿದೆ. ಈ ಪುಸ್ತಕವು ಒಂದು ದುರ್ದೈವಿ ಅಸ್ಪೃಶ್ಯ ವರ್ಗದ ಬಗೆಗೆ ಇರುತ್ತದೆ. ಮೂರೂ ವರ್ಗಗಳಲ್ಲಿ ಅಸ್ಪೃಶ್ಯ ವರ್ಗದವರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಅವರ ಅಸ್ತಿತ್ವ ಕೂಡ ಅತ್ಯಂತ ಅಸ್ವಾಭಾವಿಕ. ಆದಾಗ್ಯೂ ಇದುವರೆಗೂ ಅವರ ಮೂಲದ ಬಗೆಗೆ ತನಿಖೆ ನಡೆದಿಲ್ಲ. ಹಿಂದೂಗಳು ಇಂಥ ತನಿಖೆ ಏಕೆ ಕೈಕೊಳ್ಳಲಾರರೆಂಬುದು ನಮಗೆ ಅರ್ಥವಾಗುತ್ತದೆ. ಹಳೆಯ ಸಂಪ್ರದಾಯದ ಬ್ರಾಹ್ಮಣನಿಗೆ ಅಸ್ಪೃಶ್ಯತೆಯ ಆಚರಣೆಯಲ್ಲಿ ತಪ್ಪೇನೂ ತೋರುವುದಿಲ್ಲ. ಅವನ ದೃಷ್ಟಿಯಲ್ಲಿ ಅದು ಸ್ವಾಭಾವಿಕ ಮತ್ತು ನೈಜ ಆಗಿರುತ್ತದೆ. ಆದ್ದರಿಂದ ಅದರ ಬಗೆಗೆ ಅವನಲ್ಲಿ ಪಶ್ಚಾತ್ತಾಪವಾಗಲೀ, ವಿವರಣೆಯಾಗಲೀ ಅವಶ್ಯ ಎನಿಸಿರುವುದಿಲ್ಲ. ಆದರೆ ಆಧುನಿಕ ಹಿಂದೂವಿಗೆ ಅದು ತಪ್ಪೆಂದು ತೋರುತ್ತದೆ. ಆದರೆ ಅದನ್ನು ಸಾರ್ವಜನಿಕವಾಗಿ ಚರ್ಚಿಸಲು ಅವನಿಗೆ ನಾಚಿಕೆ, ಅಸ್ಪೃಶ್ಯತೆ ಸಾಕ್ಷಿಯಾಗಿರುವ ಕರಾಳ ಮತ್ತು ಅನಿಷ್ಟ ಸಾಮಾಜಿಕ ವ್ಯವಸ್ಥೆ ಹಿಂದೂ ನಾಗರಿಕತೆಯಲ್ಲಿರುವುದು ಪರಕೀಯರಿಗೆ ಗೊತ್ತಾಗುತ್ತದೆಂಬ ಭೀತಿ. ಆದರೆ ಆಶ್ಚರ್ಯದ ವಿಷಯವೆಂದರೆ, ಸಾಮಾಜಿಕ ಸಂಸ್ಥೆಗಳನ್ನು ಅಭ್ಯಸಿಸುವ ಪಾಶ್ಚಾತ್ಯ ವಿದ್ಯಾರ್ಥಿಯ ಲಕ್ಷ್ಯಕ್ಕೂ ಅಸ್ಪೃಶ್ಯತೆ ಬಾರದಿದ್ದುದು. ಇದು ಏಕೆಂದು ತಿಳಿಯುವುದು ಕಷ್ಟ. ಅಂತೂ ಅಸ್ಪೃಶ್ಯತೆಯ ಬಗೆಗೆ ಅಲಕ್ಷ್ಯವಿದ್ದುದು ಸತ್ಯಸಂಗತಿ.

ಆದ್ದರಿಂದ ಪ್ರತಿಯೊಬ್ಬರಿಂದ ಸಂಪೂರ್ಣ ನಿರ್ಲಕ್ಷಿಸಲ್ಪಟ್ಟ ಕ್ಷೇತ್ರದ ಅನ್ವೇಷಣೆಯಲ್ಲಿ ಪ್ರಥಮ ಯತ್ನ ಎಂದು ಈ ಪುಸ್ತಕವನ್ನು ತಿಳಿಯಬೇಕು. ಈ ಪುಸ್ತಕವು ತನಿಖೆಗೆ ಎತ್ತಿಕೊಂಡ ಪ್ರಮುಖ ವಿಷಯವಾದ ಅಸ್ಪೃಶ್ಯತೆಯ ಉಗಮದ ಕುರಿತು ಅಷ್ಟೇ ಅಲ್ಲ. ಅದಕ್ಕೆ ಸಂಬಂಧಿಸಿದ ಎಲ್ಲ ಸಮಸ್ಯೆಗಳನ್ನು ಅದು ಪರಿಶೀಲಿಸುತ್ತದೆ. ಕೆಲವು ಸಮಸ್ಯೆಗಳು ಎಂಥವೆಂದರೆ – ಅವು ಕೆಲವೇ ಜನರಿಗೆ ಗೊತ್ತಿರುತ್ತವೆ. ಗೊತ್ತಿದ್ದವರನ್ನೂ ಅವು ದಿಗ್ಭ್ರಮೆಗೊಳಿಸಿದ್ದು, ಅದಕ್ಕೆ ಹೇಗೆ ಉತ್ತರಿಸಬೇಕೆಂಬುದು ತಿಳಿಯದಾಗಿದೆ. ಕೆಲವನ್ನೇ ಇಲ್ಲಿ ಉಲ್ಲೇಖಿಸುವುದಾದರೆ, ಅವು ಹೀಗಿವೆ. ಅಸ್ಪೃಶ್ಯರು ಊರ ಹೊರಗೆ ಏಕೆ ವಾಸಿಸುತ್ತಾರೆ? ಗೋಮಾಂಸ ತಿನ್ನುವುದರಿಂದ ಅಸ್ಪೃಶ್ಯತೆ ಏಕೆ ಹುಟ್ಟಿಕೊಂಡಿತು? ಹಿಂದೂಗಳೆಂದೂ ಗೋಮಾಂಸ ತಿನ್ನಲಿಲ್ಲವೇ? ಬ್ರಾಹ್ಮಣರಲ್ಲದವರು ಗೋಮಾಂಸವನ್ನು ತಿನ್ನುವುದನ್ನು ಬಿಟ್ಟರೇಕೆ? ಬ್ರಾಹ್ಮಣರು ಶಾಖಾಹಾರಿಗಳಾಗಲು ಕಾರಣವೇನು? ಮುಂತಾದ ಪ್ರಶ್ನೆಗಳನ್ನು ಈ ಪುಸ್ತಕ ಪರಿಶೀಲಿಸುತ್ತದೆ. ಪ್ರತಿಯೊಂದು ಪ್ರಶ್ನೆಗೆ ಉತ್ತರ ಸೂಚಿಸುತ್ತದೆ. ಇಲ್ಲಿರುವ ಎಲ್ಲ ಉತ್ತರಗಳೂ ಎಲ್ಲ ಆಯಾಮಗಳನ್ನು ಒಳಗೊಂಡಿರಲಿಕ್ಕಿಲ್ಲ. ಆದಾಗ್ಯೂ ಹಳೆಯ ವಿಷಯಗಳನ್ನು ನೋಡಲು ಹೊಸ ದೃಷ್ಟಿಕೋನವನ್ನು ಸೂಚಿಸುತ್ತದೆ.

ಈ ಪುಸ್ತಕದಲ್ಲಿ ಮಂಡಿಸಿರುವ ಅಸ್ಪೃಶ್ಯತೆಯ ಹುಟ್ಟಿನ ಬಗೆಗಿನ ಸಿದ್ಧಾಂತವು ಸಂಪೂರ್ಣ ಹೊಸದು. ಅದು ಕೆಳಗಿನ ಪ್ರಸ್ತಾವಗಳನ್ನು ಒಳಗೊಂಡಿರುತ್ತದೆ :

(೧) ಹಿಂದೂ ಮತ್ತು ಅಸ್ಪೃಶ್ಯರ ನಡುವೆ ಜನಾಂಗೀಯ ಅಂತರ ಇರುವುದಿಲ್ಲ.

(೨) ಅಸ್ಪೃಶ್ಯತೆ ಹುಟ್ಟಿಕೊಳ್ಳುವುದಕ್ಕೆ ಮುಂಚೆ, ಹಿಂದೂಗಳು ಮತ್ತು ಅಸ್ಪೃಶ್ಯರ ನಡುವಿನ ಭಿನ್ನತೆ ಮೂಲದಲ್ಲಿ ಬುಡಕಟ್ಟಿನ ಜನರು ಮತ್ತು ಬುಡಕಟ್ಟುಗಳಿಂದ ಒಡೆದು ಬಂದ ಪರಕೀಯ ಬಿಡಿಜನರ ನಡುವಿನದಾಗಿತ್ತು. ಪರಕೀಯ ಪಂಗಡಗಳಿಂದ ಸಿಡಿದ ಬಿಡಿಜನರೇ ಮುಂದಕ್ಕೆ ಅಸ್ಪೃಶ್ಯರೆಂದು ಪರಿಗಣಿಸಲ್ಪಟ್ಟರು.

(೩) ಅಸ್ಪೃಶ್ಯತೆಗೆ ಹೇಗೆ ಜನಾಂಗೀಯ ಭಿನ್ನತೆ ಆಧಾರವಾಗಿರುವುದಿಲ್ಲವೋ ಹಾಗೆ ವೃತ್ತಿಯ ಭಿನ್ನತೆಯೂ ಆಧಾರವಾಗಿರುವುದಿಲ್ಲ.

(೪) ಅಸ್ಪೃಶ್ಯತೆ ಎರಡು ಮೂಲಗಳಿಂದ ಹುಟ್ಟಿರುತ್ತದೆ :

(ಅ) ಪರಕೀಯ ಪಂಗಡಗಳಿಂದ ಸಿಡಿದವರ ಬಗೆಗೆ –ಬೌದ್ಧರ ಬಗೆಗೆ ಬ್ರಾಹ್ಮಣರು ಹೊಂದಿರುವಂತಹ ತಿರಸ್ಕಾರ ಮತ್ತು ದ್ವೇಷ.

(ಆ) ಉಳಿದವರು ಗೋಮಾಂಸ ಭಕ್ಷಣವನ್ನು ತ್ಯಜಿಸಿದ ಮೇಲೂ ಈ ಬಿಡಿಜನರು ಗೋಮಾಂಸ ಭಕ್ಷಣವನ್ನು ಮುಂದುವರಿಸಿದುದು.

(೫) ಅಸ್ಪೃಶ್ಯತೆಯ ಮೂಲವನ್ನು ಅರಸುವಾಗ ಅಸ್ಪೃಶ್ಯರನ್ನು ಹೊಲೆಯರಿಂದ ಬೇರ್ಪಡಿಸುವ ಜಾಗರೂಕತೆ ವಹಿಸಬೇಕು. ಎಲ್ಲ ಸಂಪ್ರದಾಯಸ್ಥ ಹಿಂದೂ ಲೇಖಕರು ಹೊಲೆಯರನ್ನು ಅಸ್ಪೃಶ್ಯರೆಂದು ಗುರುತಿಸಿದರು. ಹಾಗೆ ಮಾಡುವುದು ತಪ್ಪು. ಅಸ್ಪೃಶ್ಯರು ಹೊಲೆಯರಿಗಿಂತ ಸ್ಪಷ್ಟವಾಗಿ ಭಿನ್ನವಿದ್ದಾರೆ.

(೬) ಹೊಲೆಯರು ಒಂದು ವರ್ಗದಾಗಿ ಧರ್ಮಸೂತ್ರಗಳ ಸಮಯಕ್ಕೆ ಅಸ್ತಿತ್ವದಲ್ಲಿ ಬಂದರೆ, ಅಸ್ಪೃಶ್ಯರು ಬಹಳ ತಡವಾಗಿ ಅಂದರೆ ಕ್ರಿ.ಶ. ೪೦೦ರ ನಂತರ ಅಸ್ತಿತ್ವಕ್ಕೆ ಬಂದಿದ್ದಾರೆ.

ಈ ತೀರ್ಮಾನಗಳು ನನಗೆ ಶಕ್ಯವಾದ ಐತಿಹಾಸಿಕ ಸಂಶೋಧನೆಯ ಪರಿಣಾಮ. ಇತಿಹಾಸಕಾರನ ಮುಂದೆ ಇರಬೇಕಾದ ಆದರ್ಶವನ್ನು ಗಯಟೆ ಚೆನ್ನಾಗಿ ವ್ಯಾಖ್ಯಾನಿಸಿದ್ದಾನೆ.[೧]

> *"ಸತ್ಯವನ್ನು ಅಸತ್ಯದಿಂದ, ನಿಶ್ಚಿತವಾದುದನ್ನು ಅನಿಶ್ಚಿತ ಸಂಗತಿಯಿಂದ, ಸಂಶಯಾಸ್ಪದ ಸಂಗತಿಯನ್ನು ಅಗ್ರಾಹ್ಯ ಅಸಮ್ಮತ ಸಂಗತಿಯಿಂದ ಬೇರ್ಪಡಿಸುವುದು ಇತಿಹಾಸಕಾರನ ಕರ್ತವ್ಯ ಆಗಿರುತ್ತದೆ..... ಸಂಶೋಧಕನು ತನ್ನನ್ನು ಎಲ್ಲ ಸಂಗತಿಗಳ ಸಮ್ಮುಖದಲ್ಲಿ ಒಬ್ಬ ನ್ಯಾಯಾಧೀಶನೆಂದು ತಿಳಿಯತಕ್ಕದ್ದು. ಅವನು ಮೊಕದ್ದಮೆಯ ನಿರೂಪಣೆ ಎಷ್ಟರಮಟ್ಟಿಗೆ ಪೂರ್ಣವಾಗಿದೆ ಮತ್ತು ಸಾಕ್ಷ್ಯಾಧಾರಗಳಿಂದ ಮಂಡಿಸಲ್ಪಟ್ಟಿರುತ್ತದೆಂಬುದನ್ನು ನೋಡಬೇಕು. ಬಳಿಕ ಅವನು ತನ್ನ ನಿರ್ಣಯ ಕೈಕೊಳ್ಳುತ್ತಾನೆ ಮತ್ತು ತನ್ನ ಮತವನ್ನು ನೀಡುತ್ತಾನೆ. ಅವನ ತೀರ್ಪು ಮುಖ್ಯ ನ್ಯಾಯಾಧೀಶನ ತೀರ್ಪಿಗೆ ಸರಿಹೋಗಲೂಬಹುದು, ಸರಿ ಹೋಗದೆಯೂ ಇರಬಹುದು."*

ಸಮರ್ಪಕ ಮತ್ತು ಅವಶ್ಯಕ ಸಂಗತಿಗಳು ಲಭ್ಯವಿರುವಾಗ ಗಯಟೆಯ ನಿರ್ದೇಶನದಂತೆ ನಡೆದುಕೊಳ್ಳುವುದರಲ್ಲಿ ಯಾವ ತೊಂದರೆಯೂ ಇಲ್ಲ. ಗಯಟೆಯ ಈ ಎಲ್ಲ ಉಪದೇಶ ಬಹಳ ಬೆಲೆಯುಳ್ಳದ್ದೂ ಮತ್ತು ಬಹಳ ಅವಶ್ಯಕವೂ ಆಗಿದೆ. ಆದರೆ ಮಹತ್ವದ ಘಟನೆಗಳ ನಡುವಿನ ಸಂಬಂಧ ಸೂಚಿಸುವಂಥ ನೇರ ಸಾಕ್ಷಿಗಳಿಲ್ಲದಾಗ, ಕೊಂಡಿಗಳು ಕಳಚಿದ ಪ್ರಸಂಗ ಎದುರಾದಾಗ ಇತಿಹಾಸಕಾರ ಏನು ಮಾಡಬೇಕೆಂಬುದರ ಬಗೆಗೆ ಗಯಟೆ ಏನನ್ನೂ ಹೇಳಿಲ್ಲ. ನಾನು ಇದನ್ನು ಏಕೆ ಹೇಳುತ್ತಿರುವೆನೆಂದರೆ, ಅಸ್ಪೃಶ್ಯತೆಯ ಹುಟ್ಟು ಮತ್ತು ಅದಕ್ಕೆ ಸಂಬಂಧಿಸಿದ ಸಂಗತಿಗಳನ್ನು ಶೋಧಿಸುವಾಗ ಕೊಂಡಿಗಳು ಕಳಚಿದ ಅನೇಕ ಪ್ರಸಂಗಗಳು ನನಗೆ ಎದುರಾಗಿವೆ. ಇಂಥ ಸಮಸ್ಯೆಗಳು ನನಗೊಬ್ಬನಿಗೇ ಎದುರಾಗಿರುವುದಿಲ್ಲ ಎಂಬುದು ನಿಜ. ಪ್ರಾಚೀನ ಭಾರತ ಇತಿಹಾಸದ ಎಲ್ಲ ವಿದ್ಯಾರ್ಥಿಗಳು ಇಂಥ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಏಕೆಂದರೆ, ಮೌಂಟ್‌ಸ್ಟುಆರ್ಟ್ ಎಲ್ಫಿನ್‌ಸ್ಟನ್ ಹೇಳುವಂತೆ, "ಭಾರತ ಇತಿಹಾಸದಲ್ಲಿ ಅಲೆಕ್ಸಾಂಡರನ ದಾಳಿಗಿಂತ ಮೊದಲು ಸಂಭವಿಸಿದ ಯಾವ ಸಾರ್ವತ್ರಿಕ ಘಟನೆಯ ದಿನಾಂಕವನ್ನೂ ಗೊತ್ತುಪಡಿಸಲಿಕ್ಕಾಗದು." ಮತ್ತು (ಗಜನಿ) ಮಹ್ಮದನ ದಾಳಿಯವರೆಗೆ ಯಾವುದೇ ಸಹಜ ವ್ಯಾಪಾರಗಳ ನಡುವೆ ಸಂಬಂಧ ಜೋಡಿಸಲಿಕ್ಕಾಗದು ಇದು ದುಃಖಕರ ಸಂಗತಿ. ಆದರೆ ಅದರಿಂದ ಏನೂ ಪ್ರಯೋಜನ ಆಗದು. ನಮ್ಮ ಎದುರಿಗಿರುವ ಪ್ರಶ್ನೆ ಇದು – "ಇತಿಹಾಸದ ವಿದ್ಯಾರ್ಥಿ ಏನು ಮಾಡಬೇಕು? ಸಂಶೋಧನೆ ಸಾಕೆಂದು, ಕಳಚಿದ ಕೊಂಡಿ ಸಿಗುವವರೆಗೆ ಸಂಶೋಧನೆಯನ್ನು ನಿಲ್ಲಿಸಬೇಕೆ? ನನಗೆ ಹಾಗೇನೂ ಅನ್ನಿಸುವುದಿಲ್ಲ, ಇಂಥ ಪ್ರಸಂಗಗಳಲ್ಲಿ ಕಲ್ಪನೆ ಮತ್ತು ಅಂತಃಪ್ರೇರಣೆಯನ್ನು

---

೧. *Maxims and Recollections of Goethe,* No. ೪೫೩, ೫೪೩

ಉಪಯೋಗಿಸಲು ಪರವಾನಗಿ ಇರುತ್ತದೆಂದು ನಾನು ನಂಬುತ್ತೇನೆ. ಅವುಗಳನ್ನು ಉಪಯೋಗಿಸಿ ಸಂಗತಿಗಳ ಸರಪಳಿಯಲ್ಲಿ ಕಳಚಿದ, ಆದರೆ ಇದುವರೆಗಿನ ಸಂಶೋಧನೆಯಿಂದ ತುಂಬಲಾಗುವ ಅಂತರವನ್ನು ಕಲ್ಪನೆಯ ಮತ್ತು ಅಂತಃಪ್ರೇರಣೆಯ ಸಹಾಯದಿಂದ ತುಂಬಲು ಮತ್ತು ಗೊತ್ತಿದ್ದ ಸಂಗತಿಗಳಿಂದ ಜೋಡಿಸಲಾಗದ ಸಂಬಂಧವನ್ನು ಊಹೆಯಿಂದ ಆಂತರಿಕವಾಗಿ ಹೇಗೆ ಜೋಡಿಸಲಾಗಿದೆ ಎಂಬುದನ್ನು ಸೂಚಿಸಲು ಅನುಮತಿ ಇದೆ. ಸಂಶೋಧನೆಯನ್ನು ನಿಲ್ಲಿಸುವುದಕ್ಕಿಂತ ನನಗೆ ಎದುರಾದ ಕಳಚಿದ ಕೊಂಡಿಗಳ ಸಮಸ್ಯೆಗಳನ್ನು ಬಿಡಿಸುವುದಕ್ಕೆ ನಾನು ಈ ಮಾರ್ಗವನ್ನು ಆಯ್ದುಕೊಂಡಿರುವುದನ್ನು ಒಪ್ಪಿಕೊಳ್ಳುತ್ತೇನೆ.

ಈ ನ್ಯೂನತೆಯನ್ನು ಉಪಯೋಗಿಸಿ ವಿಮರ್ಶಕರು ನನ್ನ ಈ ಸಿದ್ಧಾಂತವು ಐತಿಹಾಸಿಕ ಸಂಶೋಧನೆಯ ನಿಯಮಗಳನ್ನು ಉಲ್ಲಂಘಿಸಿರುವುದೆಂದು ಖಂಡಿಸಬಹುದು. ವಿಮರ್ಶಕರ ಮನೋಭಾವ ಇಂಥದಾದರೆ, ಐತಿಹಾಸಿಕ ಸಂಶೋಧನೆಯ ಪರಿಣಾಮ ಪರೀಕ್ಷೆಯನ್ನು ನಿರ್ಬಂಧಿಸುವ ಕಾಯಿದೆ ಇದ್ದುದಾದರೆ, ನೇರ ಸಾಕ್ಷಿಗಳ ಆಧಾರವಿರುವ ಸಿದ್ಧಾಂತವನ್ನು ಅದೇ ಕಾರಣಕ್ಕಾಗಿ ತಿರಸ್ಕರಿಸುವ ಕಾಯ್ದೆ ತಪ್ಪು ಕಾಯ್ದೆ ಎಂದು ವಿಮರ್ಶಕರಿಗೆ ನಾನು ಜ್ಞಾಪಿಸಬೇಕಾಗುತ್ತದೆ. ನೇರ ಸಾಕ್ಷಿಗಳ ವಿರುದ್ಧ ಕಲ್ಪಿತ ಸಾಕ್ಷಿಗಳನ್ನಿಡುವ, ಕಲ್ಪಿತ ಸಾಕ್ಷಿಗಳ ವಿರುದ್ಧ ನೇರ ಸಾಕ್ಷಿಗಳನ್ನಿಡುವುದರಲ್ಲಿ ತಮ್ಮ ಲಕ್ಷ್ಯವನ್ನು ಕೇಂದ್ರೀಕರಿಸುವುದು ಬಿಟ್ಟು ಅವರು ಏನು ಮಾಡಬೇಕೆಂದರೆ – (i) ಸಿದ್ಧಾಂತವು ಪೂರ್ಣ ಕಲ್ಪನೆಯನ್ನಾಧರಿಸುವುದೋ, ಇಲ್ಲವೋ, ಮತ್ತು (ii) ಸಿದ್ಧಾಂತವು ಸಾಧ್ಯವಿರುವುದೋ ಇಲ್ಲವೋ, ಮತ್ತು ಸಾಧ್ಯವಿದ್ದರೆ ನನ್ನ ಊಹೆಗಳಿಗಿಂತಲೂ ಚೆನ್ನಾಗಿ ಅದು ಐತಿಹಾಸಿಕ ಸಂಗತಿಗಳಿಗೆ ಹೊಂದಿಕೊಳ್ಳುವುದೋ ಇಲ್ಲವೋ ಎಂಬುದನ್ನು ಪರೀಕ್ಷಿಸಬೇಕು.

ಮೊದಲನೆಯ ವಿವಾದದ ಬಗೆಗೆ ನಾನಿಷ್ಟು ಹೇಳಬಲ್ಲೆ. ಅದೆಂದರೆ, ಸಿದ್ಧಾಂತದ ಕೆಲವು ಭಾಗಗಳು ಊಹೆಯ ಆಧಾರದ ಮೇಲೆ ನಿಂತಿವೆ ಎಂಬಷ್ಟೇ ಕಾರಣಕ್ಕಾಗಿ ಸಿದ್ಧಾಂತವು ಅಸಾಧುವಾಗಲಾರದು. ನಾವು ಪರಿಶೀಲಿಸುತ್ತಿರುವ ಸಂಸ್ಥೆಯ ಮೂಲವು ಪ್ರಾಚೀನತೆಯಲ್ಲಿ ಕಳೆದುಹೋಗಿದೆಯೆಂಬುದನ್ನು ನನ್ನನ್ನು ಟೀಕಿಸುವವರು ನೆನಪಿಡಬೇಕು. ಅಸ್ಪೃಶ್ಯತೆಯ ಮೂಲವನ್ನು ವಿವರಿಸುವ ಸದ್ಯದ ಪ್ರಯತ್ನವೂ ಮತ್ತು ನಿಶ್ಚಿತ ಅಂಶಗಳಿಂದ ಕೂಡಿರುವ ದಾಖಲೆಗಳ ಆಧಾರದ ಮೇಲೆ ಇತಿಹಾಸ ಬರೆಯುವುದೂ ಒಂದೇ ಅಲ್ಲ. ಇದು ದಾಖಲೆಗಳಿಲ್ಲದಲ್ಲಿ ಇತಿಹಾಸವನ್ನು ಸೃಷ್ಟಿಸುವ ನಿದರ್ಶನವಾಗಿರುತ್ತದೆ. ದಾಖಲೆಗಳಿದ್ದರೂ ಅವು ಸಮಸ್ಯೆಗೆ ನೇರವಾಗಿ ಸಂಬಂಧಿಸಿರುವುದಿಲ್ಲ. ಇಂಥ ಪ್ರಸಂಗಗಳಲ್ಲಿ ಮಾಡಬೇಕಾದುದು ಇಷ್ಟೇ–ದಾಖಲೆಗಳು ಮರೆಮಾಡುವ ಸಂಗತಿಗಳನ್ನು ಅಂತರ್ದೃಷ್ಟಿಯ ಸಹಾಯದಿಂದ ಕಂಡುಹಿಡಿಯುವುದು ಇಲ್ಲವೆ ಅನುಮಾನಿಸುತ್ತಲೇ ಸತ್ಯವನ್ನು ಸೂಚಿಸುವುದು. ಭೂತದ ಪಳೆಯುಳಿಕೆಗಳನ್ನು ಕೂಡಿಸಿ, ಅವುಗಳನ್ನು ಒಟ್ಟಿಗೇ ಸೇರಿಸಿ, ಅವು ತಮ್ಮ ಹುಟ್ಟಿನ ಕಥೆಯನ್ನು ಹೇಳುವಂತೆ ಮಾಡುವ ಕೆಲಸ ಇದಾಗಿರುತ್ತದೆ. ಒಡಕು ಕಲ್ಲುಗಳಿಂದ ಪಟ್ಟಣ ಕಟ್ಟುವ ಪ್ರಾಚ್ಯವಸ್ತು ಶಾಸ್ತ್ರಜ್ಞನ ಇಲ್ಲವೆ ಚದುರಿದ ಎಲುಬು ಮತ್ತು ಹಲ್ಲುಗಳಿಂದ ಅಳಿದುಹೋದ ಪ್ರಾಣಿಯನ್ನು ಪುನಃ ಕಲ್ಪಿಸುವ ಇಲ್ಲವೆ ಕ್ಷಿತಿಜದ ಮೇಲಿನ ಗೆರೆಗಳನ್ನು ಮತ್ತು ಇಳುಕಲ್ಲಿನ ಮೇಲಿನ ಸೂಕ್ಷ್ಮ ಅವಶೇಷಗಳನ್ನು ಗುರುತಿಸಿ ಚಿತ್ರ ಬರೆಯುವ ಚಿತ್ರಕಾರನ ಕೆಲಸಕ್ಕೆ ಇದನ್ನು ಹೋಲಿಸಬಹುದಾಗಿದೆ. ಈ ಅರ್ಥದಲ್ಲಿ ಇದನ್ನು ಇತಿಹಾಸ ಎನ್ನುವುದಕ್ಕಿಂತ ಕಲಾಕೃತಿ ಎನ್ನುವುದೇ ಒಳ್ಳೆಯದು. ಅಸ್ಪೃಶ್ಯತೆಯ ಮೂಲ ಯಾರಿಗೂ ಗೊತ್ತಿರದ ಭೂತಕಾಲದಲ್ಲಿ ಹೂತುಹೋಗಿದೆ. ಅದನ್ನು ಪುನಃ ಜೀವಂತಗೊಳಿಸುವ ಕೆಲಸವು ಅನೇಕ ಯುಗಗಳಿಂದ ಅಳಿದುಹೋದ ನಗರವನ್ನು ಮೂಲಸ್ಥಿತಿಗೆ ತಂದು ಅದರ ಚರಿತ್ರೆ ಬರೆಯುವ ಕೆಲಸವನ್ನು ಹೋಲುತ್ತದೆ. ಇಂಥ ಕೆಲಸದಲ್ಲಿ ಕಲ್ಪನೆ ಮತ್ತು ಊಹೆಗಳೇ ಹೆಚ್ಚು ಮಹತ್ವದ ಪಾತ್ರ ವಹಿಸುತ್ತವೆ. ಆದರೆ ಅದೇ ಕಾರಣಕ್ಕಾಗಿ ಸಿದ್ಧಾಂತವನ್ನು ಖಂಡಿಸಬಾರದು. ಏಕೆಂದರೆ ನುರಿತ ಕಲ್ಪನೆ ಇಲ್ಲದೆ ಯಾವ ವೈಜ್ಞಾನಿಕ ಸಂಶೋಧನೆಯೂ ಸಾರ್ಥಕವಾಗದು, ಮತ್ತು ಊಹೆಯು ವಿಜ್ಞಾನದ ಜೀವಾಳವಾಗಿರುತ್ತದೆ. ಮ್ಯಾಕ್ಸಿಂ ಗಾರ್ಕಿ ಹೇಳಿರುವಂತೆ:[೧]

೧. *Literature and Life,* A Selection from the writings of Maxim Gorky.

"ವಿಜ್ಞಾನ ಮತ್ತು ಸಾಹಿತ್ಯಗಳ ನಡುವೆ ಬಹಳಷ್ಟು ಸಾಮ್ಯವಿದೆ. ಎರಡರಲ್ಲಿಯೂ ನಿರೀಕ್ಷಣೆ, ತುಲನೆ ಮತ್ತು ಅಭ್ಯಾಸ ಮಹತ್ವದ ಮೂಲ ಅಂಶಗಳಾಗಿರುತ್ತವೆ. ವಿಜ್ಞಾನಿಯ ಹಾಗೆ ಕಲಾಕಾರನಿಗೂ ಕೂಡ ಕಲ್ಪನೆ ಮತ್ತು ಅಂತಃಪ್ರೇರಣೆ ಎರಡೂ ಬೇಕಾಗುತ್ತವೆ. ಕಲ್ಪನೆ ಮತ್ತು ಅಂತಃಪ್ರೇರಣೆಗಳು ಸಂಗತಿಯ ಸರಪಳಿಯಲ್ಲಿಯ ಖಾಲಿ ಸ್ಥಳಗಳನ್ನು ಇನ್ನೂ ಕಂಡುಹಿಡಿಯದ ಜೋಡಣೆಗಳಿಂದ ತುಂಬುತ್ತವೆ ಮತ್ತು ನೈಸರ್ಗಿಕ ವಸ್ತುಗಳ ಮತ್ತು ಘಟನೆಗಳ ಅಧ್ಯಯನದಲ್ಲಿ ತೊಡಗಿರುವ ಬುದ್ಧಿಯ ಸಂಶೋಧನೆಯನ್ನು ಹೆಚ್ಚು ಕಡಿಮೆ ಸರಿಯಾಗಿ ಮತ್ತು ಯಶಸ್ವಿಯಾಗಿ ನಿರ್ದೇಶಿಸುವ ಊಹೆ ಮತ್ತು ಸಿದ್ಧಾಂತಗಳನ್ನು ಸೃಷ್ಟಿಸಲು ವಿಜ್ಞಾನಿಗೆ ಅನುಮತಿ ನೀಡುತ್ತವೆ. ಅವು ಸಾಹಿತ್ಯ ಸೃಷ್ಟಿಗೆ ಸಂಬಂಧಿಸಿದ ಅಂಶಗಳಾಗಿರುತ್ತವೆ. ಪಾತ್ರಗಳನ್ನು ಮತ್ತು ಪ್ರಕಾರಗಳನ್ನು ಸೃಷ್ಟಿಸುವ ಕಲೆಯು ಕಲ್ಪನೆ ಮತ್ತು ಅಂತಃಪ್ರೇರಣೆ ಇಲ್ಲದುದನ್ನು ಆದರೆ ಕಲಾ ಸೃಷ್ಟಿಪೂರ್ತಿಗೆ ಬೇಕಾದುದನ್ನು ತನ್ನ ಮನಸ್ಸಿನಲ್ಲೇ ಹುಟ್ಟಿಸುವ ಶಕ್ತಿಯನ್ನು ಬೇಡುತ್ತದೆ."

ಆದ್ದರಿಂದ ಕಳಚಿದ ಕೊಂಡಿಗಳ ನಿರ್ಮಾಣದಲ್ಲಿ ತೊಡಗಿದುದಕ್ಕೆ ಕ್ಷಮೆ ಕೇಳುವುದು ಅನಾವಶ್ಯಕವಾಗಿದೆ. ಆ ಕಾರಣಕ್ಕಾಗಿ ನನ್ನ ಸಿದ್ಧಾಂತ ದೂಷಿತವಾಗಲಾರದು. ಏಕೆಂದರೆ ಕಳಚಿದ ಕೊಂಡಿಗಳ ಪುನರ್ಸೃಷ್ಟಿ ಎಲ್ಲಿಯೂ ಸಂಪೂರ್ಣ ಕಪೋಲಕಲ್ಪಿತವಾಗಿರುವುದಿಲ್ಲ. ಸಿದ್ಧಾಂತದ ಬಹುಭಾಗ ಸಂಗತಿಗಳ ಮೇಲೆ ಮತ್ತು ಸಂಗತಿಗಳಿಂದ ಊಹಿಸಿದ ಅಂಶಗಳ ಮೇಲೆ ನಿಂತಿರುತ್ತದೆ. ಎಲ್ಲ ಸಂಗತಿಗಳು ಇಲ್ಲವೆ ಸಂಗತಿಗಳನ್ನಾಧರಿಸಿದ ಊಹೆಗಳಿಲ್ಲವೋ ಅಲ್ಲಿ ಸಂಭಾವ್ಯ ಸಾಂದರ್ಭಿಕ ಸಾಕ್ಷಿಗಳನ್ನು ಬಳಸಲಾಗಿದೆ. ನನ್ನ ಸಿದ್ಧಾಂತದ ಸಹಾಯಕ್ಕಾಗಿ ಉಪಯೋಗಿಸಿದ ಯಾವ ಸಂಗತಿಯನ್ನೂ ಪ್ರಶ್ನಿಸದೆ ನಂಬಿರೆಂದು ಓದುಗರನ್ನು ಕೇಳಿಲ್ಲ. ನಾನು ಒತ್ತಿ ಹೇಳಿದುದರ ಪರವಾಗಿ ಕನಿಷ್ಠಪಕ್ಷ ಸಂಭಾವ್ಯತೆಯ ಬಲವಿದೆಯೆ ತೋರಿಸಿಕೊಟ್ಟಿದ್ದೇನೆ. ಸರಿಯಾದ ನಿರ್ಣಯವನ್ನು ತೆಗೆದುಕೊಳ್ಳಲು ಸಂಭಾವ್ಯತೆಯ ಶಕ್ತಿ ಸಾಕಾಗುವುದಿಲ್ಲವೆಂದರೆ ಅದು ಒಣಪಾಂಡಿತ್ಯವಲ್ಲದೆ ಇನ್ನೇನೂ ಆಗದು.

ನನ್ನ ಟೀಕಾಕಾರರು ಪರಿಶೀಲಿಸಬೇಕಾದ ಎರಡನೆಯ ಅಂಶದ ಬಗೆಗೆ ನಾನು ಹೇಳಬಯಸುವುದಿಷ್ಟೆ – ನನ್ನ ಸಿದ್ಧಾಂತವೇ ಅಂತಿಮ ತೀರ್ಮಾನವೆಂದು ಹೇಳಿಕೊಳ್ಳುವಷ್ಟು ಜಂಬ ನನಗಿಲ್ಲ. ಅದನ್ನು ಅಂತಿಮ ವ್ಯಾಖ್ಯೆ ಎಂದು ಸ್ವೀಕರಿಸಿ ಎಂದು ಅವರನ್ನು ಕೇಳುವುದಿಲ್ಲ. ಅವರ ನಿರ್ಣಯದ ಮೇಲೆ ಯಾವುದೇ ಪ್ರಭಾವ ಬೀರುವ ಇಚ್ಛೆಯೂ ನನಗಿಲ್ಲ. ತಮ್ಮ ಸ್ವಂತ ತೀರ್ಮಾನಕ್ಕೆ ಬರಲು ಅವರು ಸ್ವತಂತ್ರರಿದ್ದಾರೆ. ಒಟ್ಟಿನಲ್ಲಿ ನಾನು ಅವರಿಗೆ ಹೇಳುವುದು ಇಷ್ಟೇ – ಈ ಸಿದ್ಧಾಂತವು ಕೆಲಸಕ್ಕೆ ಬರುವುದೋ ಇಲ್ಲವೋ ಮತ್ತು ಸದ್ಯಕ್ಕೆ ಸಮಂಜಸವಾಗಿದೆಯೋ ಇಲ್ಲವೋ ಎಂಬುದನ್ನು ನೋಡಬೇಕು. ಸಮಂಜಸ ಊಹೆಯ ಪರೀಕ್ಷೆ ಅದು ಸುತ್ತಮುತ್ತಲಿನ ಆ ಸಂಗತಿಗಳಿಗೆ ಹೊಂದಿಕೊಳ್ಳುವುದರಲ್ಲಿ ಹಾಗೂ ಅವುಗಳನ್ನು ವಿವರಿಸಿ ಅವುಗಳಿಗೆ ಅರ್ಥ ಕಲ್ಪಿಸುವುದರಲ್ಲಿ ಇದ್ದುದಾದರೆ ನನ್ನೀ ಊಹೆ ಸಮಂಜಸವಿದೆ ಎಂದು ತಿಳಿಯಬೇಕು. ನ್ಯಾಯಸಮ್ಮತ ಮತ್ತು ಪೂರ್ವಗ್ರಹವಿಲ್ಲದ ವಿಮರ್ಶೆಯನ್ನಲ್ಲದೆ ಬೇರೇನನ್ನೂ ನಾನು ನನ್ನ ವಿಮರ್ಶಕರಿಂದ ಅಪೇಕ್ಷಿಸುವುದಿಲ್ಲ.

ಜನವರಿ ೧, ೧೯೪೮ **ಬಿ.ಆರ್. ಅಂಬೇಡ್ಕರ್**

೧, ಹಾರ್ಡಿಂಜ್ ಅವೆನ್ಯೂ

ನವದೆಹಲಿ

## ಭಾಗ – I

# ಒಂದು ತೌಲನಿಕ ಸಮೀಕ್ಷೆ

ಅಧ್ಯಾಯ ೧ : ಹಿಂದೂಗಳಲ್ಲದವರಲ್ಲಿ ಅಸ್ಪೃಶ್ಯತೆ

ಅಧ್ಯಾಯ ೨ : ಹಿಂದೂಗಳಲ್ಲಿ ಅಸ್ಪೃಶ್ಯತೆ

# ಅಧ್ಯಾಯ ೧

# ಹಿಂದೂಗಳಲ್ಲದವರಲ್ಲಿ ಅಸ್ಪೃಶ್ಯತೆ

ಅಸ್ಪೃಶ್ಯರು ಯಾರು ಮತ್ತು ಅಸ್ಪೃಶ್ಯತೆಯ ಮೂಲ ಯಾವುದು– ಈ ಪ್ರಮುಖ ಪ್ರಶ್ನೆಗಳ ಪರಿಶೀಲನೆ ಮತ್ತು ಅವುಗಳ ಉತ್ತರ ಮುಂದಿನ ಪುಟಗಳಲ್ಲಿರುತ್ತದೆ. ಅವುಗಳ ಪರಿಶೀಲನೆಗೆ ಮೊದಲು ಕೆಲವು ಪೂರ್ವಭಾವಿ ಪ್ರಶ್ನೆಗಳನ್ನು ಪರಿಶೀಲಿಸುವುದು ಅವಶ್ಯವಿದೆ. ಮೊಟ್ಟಮೊದಲನೆಯ ಪ್ರಶ್ನೆ ಎಂದರೆ ಈ ಪ್ರಪಂಚದಲ್ಲಿ ಕೇವಲ ಹಿಂದೂಗಳಷ್ಟೇ ಅಸ್ಪೃಶ್ಯತೆಯನ್ನು ಆಚರಿಸುತ್ತಾರೆಯೇ? ಎರಡನೆಯ ಪ್ರಶ್ನೆ ಎಂದರೆ – ಹಿಂದೂಗಳಲ್ಲದವರೂ ಅಸ್ಪೃಶ್ಯತೆಯನ್ನು ಆಚರಿಸುತ್ತಿದ್ದರೆ, ಅದು ಹಿಂದೂಗಳು ಆಚರಿಸುವ ಅಸ್ಪೃಶ್ಯತೆಯನ್ನು ಎಷ್ಟರಮಟ್ಟಿಗೆ ಹೋಲುತ್ತದೆ? ದುರ್ದೈವವಶಾತ್ ಇಂಥ ತೌಲನಿಕ ಅಭ್ಯಾಸವನ್ನು ಇದುವರೆಗೆ ಯಾರೂ ಮಾಡಿಲ್ಲ. ಅದರ ಪರಿಣಾಮವಾಗಿ ಅನೇಕರಿಗೆ ಹಿಂದೂಗಳಲ್ಲಿರುವ ಅಸ್ಪೃಶ್ಯತೆಯ ಬಗೆಗೆ ತಿಳುವಳಿಕೆ ಇದ್ದರೂ ಅದರ ವಿಲಕ್ಷಣ ಸ್ವರೂಪದ ಕಲ್ಪನೆ ಇರುವುದಿಲ್ಲ. ಕೇವಲ ಅಸ್ಪೃಶ್ಯರ ಸ್ಥಿತಿಗತಿಯ ಬಗೆಗೆ ಸರಿಯಾದ ತಿಳುವಳಿಕೆ ಹೊಂದುವುದಕ್ಕಷ್ಟೇ ಅಲ್ಲ, ಅದರ ಮೂಲವನ್ನು ಶೋಧಿಸುವುದರ ಅವಶ್ಯಕತೆಯನ್ನು ಒತ್ತಿ ಹೇಳುವುದಕ್ಕಾಗಿಯೂ ಕೂಡ, ಅಸ್ಪೃಶ್ಯತೆಯ ವಿಲಕ್ಷಣ ಸ್ವರೂಪದ ಖಚಿತ ತಿಳುವಳಿಕೆ ಹೊಂದುವುದು ಅವಶ್ಯವಾಗಿದೆ.

ಆದಿಕಾಲದ ಮತ್ತು ಪ್ರಾಚೀನ ಸಮಾಜಗಳಲ್ಲಿ ಅಸ್ಪೃಶ್ಯತೆ ಹೇಗಿತ್ತೆಂಬುದರ ಪರಿಶೀಲನೆಯಿಂದ ಅಸ್ಪೃಶ್ಯತೆಯ ಶೋಧವನ್ನು ಪ್ರಾರಂಭಿಸುವುದು ಸರಿ ಎನಿಸುತ್ತದೆ. ಅವರು ಅಸ್ಪೃಶ್ಯತೆಯನ್ನು ಗುರುತಿಸಿದ್ದರೆ? ಪ್ರಾರಂಭದಲ್ಲಿ, ಅಸ್ಪೃಶ್ಯತೆ ಎಂದರೆ ಏನೆಂಬುದರ ಸ್ಪಷ್ಟ ತಿಳುವಳಿಕೆ ಪಡೆಯುವುದು ಅವಶ್ಯಕವಾಗಿದೆ. ಈ ವಿಷಯದ ಬಗೆಗೆ ಭಿನ್ನಾಭಿಪ್ರಾಯ ಇರಲು ಸಾಧ್ಯವಿಲ್ಲ. ಮೈಲಿಗೆ, ಮಾಲಿನ್ಯ, ಕಲುಷಿತಗೊಳಿಸುವಿಕೆಯ ಬಗೆಗೆ ತಿಳುವಳಿಕೆ ಮತ್ತು ಆ ಮೈಲಿಗೆಯನ್ನು ಹೋಗಲಾಡಿಸುವ ವಿಧಾನಗಳನ್ನು ಅಸ್ಪೃಶ್ಯತೆಯ ಕಲ್ಪನೆ ಒಳಗೊಂಡಿರುತ್ತದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ.

ಆದಿಕಾಲದ ಸಮಾಜದಲ್ಲಿ ಮೇಲೆ ಹೇಳಿದ ಅರ್ಥದಲ್ಲಿ ಅಸ್ಪೃಶ್ಯತೆಯನ್ನು ಆಚರಿಸಲಾಗಿತ್ತೋ ಇಲ್ಲವೋ ಎಂಬುದನ್ನು ಕಂಡುಕೊಳ್ಳಲು ಅದರ ಸಾಮಾಜಿಕ ಜೀವನವನ್ನು ಪರಿಶೀಲಿಸುವುದು ಅವಶ್ಯಕವಾಗಿದೆ. ಆದಿಕಾಲದ ಸಮಾಜದಲ್ಲಿ ಅಪಾವಿತ್ರ್ಯದಲ್ಲಿ ನಂಬುಗೆ ಇದ್ದಿತಷ್ಟೇ ಅಲ್ಲ, ಆ ನಂಬುಗೆ ನಿಶ್ಚಿತ ಧಾರ್ಮಿಕ ವಿಧಿ ವಿಧಾನಗಳ ಹುಟ್ಟಿಗೆ ಕಾರಣವಾಯಿತೆಂದು ಆದಿಕಾಲದ ಸಾಮಾಜಿಕ ಜೀವನದ[೧] ಪರಿಶೀಲನೆಯಿಂದ ನಿಸ್ಸಂಶಯವಾಗಿ ತಿಳಿದುಬರುತ್ತದೆ.

---

೧. ಹಿಂದೂಗಳಲ್ಲದವರಲ್ಲಿದ್ದ ಮಾಲಿನ್ಯದ ವಿಷಯಕ್ಕೆ ಸಂಬಂಧಿಸಿದ ಸಂಗತಿಗಳನ್ನು Hasting's *Encyclopaedia of Religion and Ethics,* Vol.X, Article on Purification, pp.೪೫೫–೫೦೪ರಿಂದ ತೆಗೆದುಕೊಳ್ಳಲಾಗಿದೆ.

ಮೈಲಿಗೆಗೆ ಕೆಳಗಿನ ಸಂಗತಿಗಳು ಕಾರಣವೆಂದು ಆದಿಮಾನವ ನಂಬಿದ್ದನು :

(೧) ಕೆಲವು ಘಟನೆಗಳು ಸಂಭವಿಸುವುದರಿಂದ

(೨) ಕೆಲವು ವಸ್ತುಗಳ ಸಂಪರ್ಕದಿಂದ

(೩) ಕೆಲವು ವ್ಯಕ್ತಿಗಳ ಸಂಪರ್ಕದಿಂದ.

ವ್ಯಕ್ತಿಯಿಂದ ವ್ಯಕ್ತಿಗೆ ಕೆಡುಕು ಪ್ರಸಾರವಾಗುವುದೆಂದು ಆದಿಮಾನವ ನಂಬಿದ್ದನು. ಉಣ್ಣುವ, ತಿನ್ನುವ ಮುಂತಾದ ನೈಸರ್ಗಿಕ ಕ್ರಿಯೆಯಲ್ಲಿ ತೊಡಗಿದಾಗ ಕೆಡುಕಿನ ಪ್ರಸಾರದ ಪರಿಣಾಮ ಬಹಳ ತೀಕ್ಷ್ಣವಾಗುತ್ತದೆಂದು ಅವನ ತಿಳುವಳಿಕೆ. ಆದಿಮಾನವನ ಗ್ರಹಿಕೆಯ ಪ್ರಕಾರ ಅಪವಿತ್ರಗೊಳಿಸುವ ಘಟನೆಗಳಲ್ಲಿ ಇವು ಸೇರಿರುತ್ತವೆ:

(೧) ಹುಟ್ಟು

(೨) ದೀಕ್ಷೆ

(೩) ಮೈನೆರೆಯುವುದು

(೪) ಮದುವೆ

(೫) ಸಂಭೋಗ

(೬) ಸಾವು

ಗರ್ಭಿಣಿಯರು ಅಪವಿತ್ರವಾಗಿದ್ದು, ಉಳಿದವರನ್ನೂ ಅಪವಿತ್ರಗೊಳಿಸುವರೆಂದು ತಿಳಿಯಲಾಗಿತ್ತು. ತಾಯಿಯ ಅಪಾವಿತ್ರ್ಯ ಮಗುವಿಗೂ ಕೂಡ ಚಾಚಿತು.

ದೀಕ್ಷೆ ಮತ್ತು ಮೈನೆರೆಯುವುದು ಪುರುಷ ಮತ್ತು ಸ್ತ್ರೀ ಪೂರ್ಣ ಲೈಂಗಿಕ ಮತ್ತು ಸಾಮಾಜಿಕ ಜೀವನದಲ್ಲಿ ಕಾಲಿಡಲು ಅರ್ಹರೆಂದು ಸೂಚಿಸುತ್ತವೆ. ಅವರನ್ನು ಉಳಿದವರಿಂದ ಬೇರ್ಪಡಿಸಲಾಗುತ್ತಿತ್ತು. ಅವರು ವಿಶಿಷ್ಟ ಆಹಾರ ಸೇವಿಸಬೇಕಾಗುತ್ತಿತ್ತು. ಮೇಲಿಂದ ಮೇಲೆ ಸ್ನಾನ ಮಾಡಬೇಕಾಗುತ್ತಿತ್ತು. ಮೈತುಂಬ ಬಣ್ಣ ಹಚ್ಚಿಕೊಳ್ಳಬೇಕಾಗುತ್ತಿತ್ತು. 'ಮುಂಜಿ'ಯಂತಹ ದೈಹಿಕ ವಿರೂಪಗಳಿಗೆ ಗುರಿಯಾಗಬೇಕಾಗುತ್ತಿತ್ತು. ಅಮೆರಿಕೆಯ ಪಂಗಡಗಳಲ್ಲಿ ಲೈಂಗಿಕ ಜೀವನದಲ್ಲಿ ಕಾಲಿಡಲು ಸಂಸ್ಕಾರ ಪಡೆದವರು ವಿಶಿಷ್ಟ ಆಹಾರ ಸೇವಿಸಬೇಕಾಗುತ್ತಿತ್ತಷ್ಟೇ ಅಲ್ಲ, ನಿಯತ ಅವಧಿಗಳಲ್ಲಿ ಶಮನಕಾರಿ ಔಷಧವನ್ನೂ ಸೇವಿಸಬೇಕಾಗುತ್ತಿತ್ತು.

ವಿವಾಹಕ್ಕೆ ಸಂಬಂಧಿಸಿದ ಕರ್ಮಾಚರಣೆಗಳು ಆದಿಮಾನವ ವಿವಾಹವನ್ನು ಅಶುದ್ಧವೆಂದು ನಂಬಿದ್ದನೆಂಬುದನ್ನು ತೋರಿಸುತ್ತವೆ. ಕೆಲವು ಪ್ರಸಂಗಗಳಲ್ಲಿ ಆಸ್ಟ್ರೇಲಿಯದಲ್ಲಿದ್ದಂತೆ, ವಧು ತನ್ನ ಪಂಗಡದ ಬೇರೆ ಪುರುಷರೊಂದಿಗೆ, ಇಲ್ಲವೆ ಅಮೆರಿಕೆಯಲ್ಲಿದ್ದಂತೆ ಪಂಗಡದ ಮುಖ್ಯಸ್ಥನೊಂದಿಗೆ ಇಲ್ಲವೆ ವೈದ್ಯನೊಂದಿಗೆ, ಇಲ್ಲವೆ ಪೂರ್ವಆಫ್ರಿಕೆಯಲ್ಲಿದ್ದಂತೆ ವರನ ಗೆಳೆಯರೊಂದಿಗೆ ಸಂಭೋಗಕ್ಕೆ ಒಳಪಡಬೇಕಾಗುತ್ತಿತ್ತು. ಕೆಲವು ಪಂಗಡಗಳಲ್ಲಿ ವರನು ವಧುವಿಗೆ ಖಡ್ಗವನ್ನು ಮೆಲ್ಲಗೆ ಸೋಕಿಸುತ್ತಿದ್ದನು.

ಇನ್ನೂ ಕೆಲವು ಮುಂಡರಂಥ ಪಂಗಡಗಳಲ್ಲಿ, ವಧುವಿನ ಮದುವೆ ವರನ ಜೊತೆಗೆ ನೆರವೇರುವುದಕ್ಕಿಂತ ಮೊದಲು ಒಂದು ವೃಕ್ಷದ ಜೊತೆಗೆ ಆಗುತ್ತದೆ. ಮದುವೆಗೆ ಸಂಬಂಧಿಸಿದ ಈ ಎಲ್ಲ ಆಚರಣೆಗಳು ಮದುವೆಯ ದುಷ್ಪರಿಣಾಮವನ್ನು ಹೋಗಲಾಡಿಸುವ ಮತ್ತು ಮದುವೆಯ ದೋಷದಿಂದ ವ್ಯಕ್ತಿಯನ್ನು ರಕ್ಷಿಸುವ ಉದ್ದೇಶದಿಂದ ಮಾಡಿದವು ಆಗಿರುತ್ತವೆ.

ಆದಿಮಾನವನಿಗೆ ಸಾವು ಎಲ್ಲಕ್ಕಿಂತ ಹೆಚ್ಚು ಅಶುದ್ಧ ಪ್ರಕಾರವಾಗಿತ್ತು, ಶವ ಅಷ್ಟೇ ಅಲ್ಲ, ಶವಕ್ಕೆ ಸಂಬಂಧಿಸಿದ ವಸ್ತುಗಳೆಲ್ಲ ಕಲುಷಿತವೆಂದು ತಿಳಿಯಲ್ಪಡುತ್ತಿದ್ದವು. ಶವದೊಂದಿಗೆ ಅವರ ಸಲಕರಣೆ, ಆಯುಧ ಮುಂತಾದವುಗಳನ್ನು ಸಮಾಧಿಯಲ್ಲಿ ಇಡುವುದು, ಅವುಗಳನ್ನು ಬೇರೆಯವರು ಉಪಯೋಗಿಸುವುದು

ಅಪಾಯ ಮತ್ತು ದುರದೃಷ್ಟಕರವೆಂಬುದನ್ನು ಸೂಚಿಸುತ್ತದೆ.

ವಸ್ತುಗಳ ಸ್ಪರ್ಶದಿಂದ ಉಂಟಾಗುವ ದೂಷಣೆಯ ಕಡೆಗೆ ಲಕ್ಷ್ಯ ಹರಿಸಿದರೆ, ಆದಿಮಾನವ ಕೆಲವು ವಸ್ತುಗಳನ್ನು ಪವಿತ್ರವೆಂದೂ, ಕೆಲವು ವಸ್ತುಗಳನ್ನು ಅಪವಿತ್ರವೆಂದೂ ಗ್ರಹಿಸುವುದನ್ನು ಕಲಿತಿದ್ದನೆಂದು ತಿಳಿದುಬರುತ್ತದೆ. ವ್ಯಕ್ತಿಯು ಪವಿತ್ರ ವಸ್ತುವನ್ನು ಮುಟ್ಟುವುದರಿಂದ ಅದು ಕಲುಷಿತಗೊಂಡು ಅಪವಿತ್ರವಾಗುತ್ತಿತ್ತು. ಪವಿತ್ರ ಮತ್ತು ಅಪವಿತ್ರ ವಸ್ತುಗಳನ್ನು ಬೇರ್ಪಡಿಸುವ ಅತ್ಯುತ್ತಮ ಉದಾಹರಣೆ ತೋಡರಲ್ಲಿ ಸಿಗುತ್ತದೆ. ಅದರ ಸಾಮಾಜಿಕ ಸಂಘಟನೆಯ ಮೂಲಾಧಾರವು, ಗುಂಪುಗಳ ಪಾವಿತ್ರ್ಯ, ಹೈನದ ದನಗಳ ಪಾವಿತ್ರ್ಯ, ಪಾತ್ರೆಗಳ ಮತ್ತು ಹಾಲಿನ ಶುದ್ಧತೆ ಮತ್ತು ಅವುಗಳಿಗೆ ಸಂಬಂಧಿಸಿದ ವಿಧಿಕರ್ಮಗಳನ್ನು ನೆರವೇರಿಸುವವರ ಪಾವಿತ್ರ್ಯ ಕಾಯುವುದೇ ಆಗಿತ್ತು. ಹಾಲಿನ ಕೇಂದ್ರದಲ್ಲಿ, ಶುದ್ಧ ಪಾತ್ರೆಗಳನ್ನು ಯಾವಾಗಲೂ ಪ್ರತ್ಯೇಕ ಕೋಣೆಯಲ್ಲಿ ಇಡಲಾಗುತ್ತಿತ್ತು. ಅರ್ಚಕನಾಗಿದ್ದ ಗೌಳಿಯು, ಶುದ್ಧೀಕರಣದ ದೀರ್ಘ ವಿಧಿಕರ್ಮವನ್ನು ತೀರಿಸಿದ ಮೇಲೆಯೇ ಅವನಿಗೆ ಕಾರ್ಯಾಲಯದೊಳಗೆ ಪ್ರವೇಶ ಉಂಟು. ಆದಾದ ಬಳಿಕ ಅವನು ಸಾಮಾನ್ಯ ಮನುಷ್ಯನಾಗಿರದೆ (ಹಾಲಿನ ಶುದ್ಧೀಕರಣದಂಥ) ಪವಿತ್ರ ಕಾರ್ಯ ಮಾಡಲು ಅರ್ಹನಾಗುತ್ತಾನೆ. ಅವನ ನಡತೆ ಕೆಲವು ನಿರ್ದಿಷ್ಟ ನಿಯಮಗಳಿಗೊಳಪಡುತ್ತದೆ. ಉದಾ : ಹಾಲಿನ ಕೇಂದ್ರ ಬಿಟ್ಟು ಹಳ್ಳಿಯಲ್ಲಿ ಮಲಗಲು ನಿರ್ದಿಷ್ಟ ಸಮಯ ನಿಗದಿಪಡಿಸಲಾಗುತ್ತದೆ. ಶವಯಾತ್ರೆಯಲ್ಲಿ ಪಾಲ್ಗೊಂಡ ಗೌಳಿ ಅಂದಿನಿಂದ ಹಾಲು ಸರಬರಾಜು ಕೆಲಸವನ್ನು ಬಿಟ್ಟುಬಿಡಬೇಕಾಗುತ್ತದೆ. ಆದ್ದರಿಂದ, ಈ ಆಚರಣೆಯ ಉದ್ದೇಶ ಅಪಾವಿತ್ರ್ಯದ ಅಪಾಯಗಳನ್ನು ತಪ್ಪಿಸುವುದು ಮತ್ತು ಶುದ್ಧ ವಸ್ತುವನ್ನು ಅಶುದ್ಧ ಜನರು ಸೇವಿಸಲು ಸರಿಹೋಗುವಂತೆ ಮಾಡುವುದು ಆಗಿರಬಹುದೆಂದು ಊಹಿಸಲಾಗಿದೆ.

ಪಾವಿತ್ರ್ಯತೆಯ ಕಲ್ಪನೆ ವಸ್ತುಗಳಿಗಷ್ಟೇ ಸೀಮಿತವಾಗಿರಲಿಲ್ಲ. ಕೆಲವು ವರ್ಗದ ಜನರೂ ಪವಿತ್ರವಾಗಿದ್ದರು. ಅವರನ್ನು ಅನ್ಯರು ಮುಟ್ಟುವುದರಿಂದ ಅಪವಿತ್ರರಾಗುತ್ತಿದ್ದರು. ಪಾಲಿನೇಷಿಯ ಜನರಲ್ಲಿ ಪಂಗಡದ ಪ್ರಧಾನಿಯನ್ನು ಯಾರೂ ಮುಟ್ಟುವಂತಿಲ್ಲ. ಕೆಲಮಟ್ಟದ ವ್ಯಕ್ತಿ ಮುಖ್ಯಸ್ಥನನ್ನು ಮುಟ್ಟುವುದೆಂದರೆ ನಿಯಮಬಾಹಿರ ಕಾರ್ಯ ಮಾಡಿದಂತೆ. ಇದರಿಂದ ಅಪಾಯಕ್ಕೊಳಗಾಗುವವನು ಕೀಳು ದರ್ಜೆಯವನೇ. ತದ್ವಿರುದ್ಧವಾಗಿ, ಇಫೇಟ್ (Efate)ದಲ್ಲಿ ಅಶುದ್ಧ ಧಾರ್ಮಿಕ ವಿಧಿ ವಿಧಾನಗಳ (Nomin) ಸೋಂಕಿನಿಂದ ಪವಿತ್ರ ಮನುಷ್ಯ ತನ್ನ ಪಾವಿತ್ರ್ಯ ಕಳೆದುಕೊಳ್ಳುತ್ತಾನೆ. ಉಗಾಂಡದಲ್ಲಿ, ಗುಡಿಯನ್ನು ಕಟ್ಟುವ ಕಾರ್ಯದಲ್ಲಿ ತೊಡಗುವ ಮುಂಚೆ ಗುಡಿಗಾರರು ಶುದ್ಧವಾಗಲು ನಾಲ್ಕು ದಿನದ ಅವಧಿಯನ್ನು ಕೊಡಲಾಗುತ್ತಿತ್ತು. ಮುಖ್ಯಸ್ಥ ಮತ್ತು ಅವನಿಗೆ ಸೇರಿದ ಸಾಮಾನುಗಳು ಹೆಚ್ಚಾಗಿ ಪವಿತ್ರವಿದ್ದು, ಅವುಗಳನ್ನು ಮುಟ್ಟುವುದು ಕೆಳದರ್ಜೆಯವರಿಗೆ ಅಪಾಯವೆಂದು ತಿಳಿಯಲಾಗುತ್ತದೆ. ತೊಂಗ ನಡುಗಡ್ಡೆಯಲ್ಲಿ ಮುಖ್ಯಸ್ಥನನ್ನು ಮುಟ್ಟಿದವನನ್ನು ಯಾರೂ ಮುಟ್ಟಕೂಡದೆಂದು ನಿಷೇಧವಿರುತ್ತದೆ. ಅವನು ತನಗಿಂತ ಹೆಚ್ಚಿನ ವರ್ಗದ ಮುಖ್ಯಸ್ಥನ ಅಂಗಾಲನ್ನು ಮುಟ್ಟುವುದರಿಂದ ಆ ನಿಷೇಧ ಹೋಗಿಬಿಡುತ್ತದೆ. ಮಲಯ ದ್ವೀಪದ ಮುಖ್ಯಸ್ಥನ ಪಾವಿತ್ರ್ಯ ಕೂಡ ವಿಶೇಷ ಹಕ್ಕುಗಳನ್ನು ಸೂಚಿಸುವ ಬಿಲ್ಲೆಯಲ್ಲಿ (Royal Regatin) ಇರುತ್ತದೆ. ಅದನ್ನು ಮುಟ್ಟಿದ ಯಾರಿಗೇ ಆಗಲಿ ತೀವ್ರ ಕಾಯಿಲೆ ಇಲ್ಲವೆ ಸಾವು ಬರುವುದು ನಿಶ್ಚಿತ.

ಹೊರಗಿನ ಅಪರಿಚಿತ ಜನರ ಸೋಂಕು ಮಾಲಿನ್ಯದ ಮೂಲವೆಂದು ಆದಿಮಾನವ ತಿಳಿದಿದ್ದನು. ದಕ್ಷಿಣ ಆಫ್ರಿಕೆಯಲ್ಲಿಯ ಬಥೊಂಗಾ (Bathonga) ಪಂಗಡದಲ್ಲಿ, ತಮ್ಮ ಪ್ರದೇಶದ ಹೊರಗೆ ಪ್ರವಾಸ ಮಾಡುವವರಿಗೆ ಪರಸ್ಥಳದ ಪ್ರೇತಗಳಿಂದ, ಅದರಲ್ಲಿಯೂ ವಿಶೇಷವಾಗಿ ರಾಕ್ಷಸರಿಂದ ಅಪಾಯವಾಗುವುದೆಂಬ ನಂಬುಗೆ ಇದೆ. ತಮ್ಮ ಪ್ರದೇಶದಲ್ಲಿ ಪರಕೀಯರ ಪ್ರವೇಶಕ್ಕೆ ನಿಷೇಧವಿರುತ್ತದೆ. ಏಕೆಂದರೆ, ಪರದೈವಗಳನ್ನು

ಆರಾಧಿಸುವ ಅವರು ತಮ್ಮೊಂದಿಗೆ ವಿಲಕ್ಷಣ ಪ್ರಭಾವಗಳನ್ನು ತರುತ್ತಾರೆಂಬ ನಂಬುಗೆ ಇದೆ. ಆದ್ದರಿಂದ ಹೊಗೆಹಾಕುವುದು ಮತ್ತಿತರ ವಿಧಾನಗಳನ್ನನುಸರಿಸಿ ಶುದ್ಧೀಕರಿಸಲಾಗುವುದು. ಡಿಯೇರಿ (Dieri) ಪಂಗಡದಲ್ಲಿ ಮತ್ತು ನೆರೆಹೊರೆಯ ಪಂಗಡಗಳಲ್ಲಿ, ಪ್ರವಾಸ ಮಾಡಿ ಬಂದ ತಮ್ಮ ಪಂಗಡದ ಸದಸ್ಯನನ್ನು ಕೂಡ ಪರಕೀಯನಂತೆ ಕಾಣುತ್ತಿದ್ದರು, ಮತ್ತು ಅವನು ಕುಳಿತುಕೊಳ್ಳುವವರೆಗೆ ಅವನ ಕಡೆಗೆ ನೋಡುತ್ತಿರಲಿಲ್ಲ.

ಒಂದು ಹೊಸ ಪ್ರದೇಶ ಪ್ರವೇಶಿಸುವುದು, ಅಲ್ಲಿಂದ ತಮ್ಮ ದೇಶ ಪ್ರವೇಶಿಸುವಷ್ಟೇ ಅಪಾಯಕಾರಿ, ಹೇಗೆ ಸ್ಪಾರ್ಟನ್ ಅರಸರು ಯುದ್ಧ ಮಾಡುವಾಗ ತಮ್ಮೊಂದಿಗೆ ದೇವಸ್ಥಾನದ ಬೆಂಕಿಯನ್ನು ಒಯ್ಯುತ್ತಿದ್ದರೋ ಅದೇ ರೀತಿ ಆಸ್ಟ್ರೇಲಿಯಾದಲ್ಲಿ, ಒಂದು ಪಂಗಡದ ಜನರು ಇನ್ನೊಂದು ಪಂಗಡದ ಬಳಿಗೆ ಬರುವಾಗ ಗಾಳಿಯನ್ನು ಶುದ್ಧಗೊಳಿಸಲು ಉರಿಯುವ ಕಟ್ಟಿಗೆಗಳನ್ನು ಒಯ್ಯುತ್ತಿದ್ದರು.

ಅದೇ ರೀತಿ, ಹೊರಗಿನಿಂದ ಮನೆಯೊಳಗೆ ಬರುವವರು ಕೆಲವೊಂದು ಕರ್ಮಗಳನ್ನು ಆಚರಿಸಬೇಕಾಗುತ್ತಿತ್ತು. ಚಪ್ಪಲಿ, ಬೂಟುಗಳನ್ನು ಕಳಚುವುದೂ ಶುದ್ಧೀಕರಣದ ಒಂದು ವಿಧಾನವಾಗಿದೆ. ಆದ್ದರಿಂದ ಹೊರಗಿನಿಂದ ತಮ್ಮೊಂದಿಗೆ ತಂದಿರಬಹುದಾದ ಕೆಡುಕಿನಿಂದ ಒಳಗಿನವರನ್ನು ಸುರಕ್ಷಿತಗೊಳಿಸಲಾಗುವುದು. ಮನೆಯ ಸದಸ್ಯನೊಬ್ಬನು ಕಲುಷಿತನಾದಾಗ, ಹೊಸ್ತಿಲು, ಬಾಗಿಲ ಚೌಕಟ್ಟು ಮತ್ತು ಕಿಟಕಿ – ಹೊರ ಜಗತ್ತಿನೊಂದಿಗೆ ಸಂಪರ್ಕ ಹೊಂದಿರುವ ಮನೆಯ ಮಹತ್ವದ ಸ್ಥಳಗಳು ಮುಂತಾದವುಗಳಿಗೆ ರಕ್ತ ಲೇಪಿಸಲಾಗುವುದು ಇಲ್ಲವೆ ಶುದ್ಧೋದಕ ಸಿಂಪಡಿಸಲಾಗುವುದು, ಇಲ್ಲವೆ ಕೆಡುಕನ್ನು ಹೊರಗಿಡಲು ಮತ್ತು ಅದೃಷ್ಟವನ್ನು ಬರಮಾಡಿಕೊಳ್ಳಲು ಬಾಗಿಲಿಗೆ ಕುದುರೆಯ ಲಾಳವನ್ನು ಕಟ್ಟಲಾಗುವುದು.

ಹುಟ್ಟು, ಸಾವು, ಮದುವೆ ಮುಂತಾದವುಗಳಿಗೆ ಸಂಬಂಧಿಸಿದ ಕರ್ಮಾಚರಣೆಗಳು, ಅವು ನಿಶ್ಚಿತವಾಗಿ ಮಾಲಿನ್ಯದ ಮೂಲಗಳೆಂದು ಸೂಚಿಸುವುದಿಲ್ಲ ಹೌದು. ಆದರೆ ಈ ಪ್ರತಿಯೊಂದು ಸಂದರ್ಭದಲ್ಲಿ ಪ್ರತ್ಯೇಕಿಸುವಿಕೆ ಇರುವುದರಿಂದ ಅವುಗಳಿಗೆ ಸಂಬಂಧಿಸಿದ ಇನ್ನುಳಿದ ಅನೇಕ ಅಂಶಗಳಲ್ಲಿ ಅಪವಿತ್ರತೆಯೂ ಒಂದೆಂದು ಸೂಚಿಸಲಾಗಿದೆ. ಹುಟ್ಟು, ದೀಕ್ಷೆ, ಮದುವೆ, ಸಾವು ಮತ್ತು ಪವಿತ್ರ ಕಾರ್ಯಾಚರಣೆ ಮತ್ತು ಪರಕೀಯ ವಸ್ತು ಹಾಗೂ ವ್ಯಕ್ತಿಗಳೊಡನೆ ವ್ಯವಹರಿಸುವುದು – ಈ ಎಲ್ಲ ಸಂದರ್ಭಗಳಲ್ಲಿ ಪ್ರತ್ಯೇಕಿಸುವಿಕೆ ಮತ್ತು ಏಕಾಂಗಿಯಾಗಿಡುವಿಕೆ ಇರುತ್ತವೆ.

ಹುಟ್ಟಿನ ಸಂದರ್ಭದಲ್ಲಿ ತಾಯಿಯು ಪ್ರತ್ಯೇಕಿಸಲ್ಪಡುತ್ತಾಳೆ. ಮೈನೆರೆದ ಮತ್ತು ದೀಕ್ಷಾ ಸಂದರ್ಭಗಳಲ್ಲಿ ಕೆಲವೊಂದು ಕಾಲ ಪ್ರತ್ಯೇಕಿಸುವುದನ್ನು ಮತ್ತು ಏಕಾಕಿಯಾಗಿಡುವುದನ್ನು ಆಚರಿಸಲಾಗುವುದು. ಮದುವೆ ಸಂದರ್ಭದಲ್ಲಿ ವಿವಾಹ ನಿಶ್ಚಯ ಸಮಾರಂಭದಿಂದ ಹಿಡಿದು ಮುಹೂರ್ತ ಸಮಾರಂಭದ ವರೆಗೆ ವಧೂವರರು ಪರಸ್ಪರ ಭೆಟ್ಟಿಯಾಗುವಂತಿಲ್ಲ. ಮೈನೆರೆಯುವಾಗ ಸ್ತ್ರೀಯು ಪ್ರತ್ಯೇಕಿಸಲ್ಪಡುತ್ತಾಳೆ. ಸಾವಿನ ಸಂದರ್ಭದಲ್ಲಿ ಪ್ರತ್ಯೇಕಿಸುವುದು ಹೆಚ್ಚು ಎದ್ದು ಕಾಣುತ್ತದೆ. ಶವವನ್ನಷ್ಟೆ ಏಕಾಕಿಯಾಗಿರಿಸುವುದಾಗಿರದೆ, ಸಂಬಂಧಿಕರೆಲ್ಲರನ್ನೂ, ಸಮಾಜದ ಉಳಿದವರಿಂದ ಪ್ರತ್ಯೇಕಿಸಲಾಗುವುದು. ಮೃತರ ಸಂಬಂಧಿಕರು ತಲೆಗೂದಲು ಮತ್ತು ಬೆರಳುಗುರುಗಳನ್ನು ಬೆಳೆಯಲು ಬಿಡುವುದನ್ನು ಮತ್ತು ಹಳೆಕೊಳೆಯ ಬಟ್ಟೆ ಧರಿಸುವುದನ್ನು ನೋಡಿದರೆ, ಸಮಾಜದ ಬೇರೆ ಯಾರೂ ಕ್ಷೌರಿಕ, ಅಗಸ ಮೊದಲಾದವರು – ಅವರನ್ನು ಮುಟ್ಟದಿರುವುದು ಸ್ಪಷ್ಟವಾಗುತ್ತದೆ. ಪ್ರತ್ಯೇಕಿಸುವಿಕೆಯ ಅವಧಿ ಮತ್ತು ವಿಸ್ತಾರಗಳು ಸಾವಿನ ವಿಷಯದಲ್ಲಿ ಬೇರೆಯೇ ಇದ್ದರೂ ಪ್ರತ್ಯೇಕಿಸುವಿಕೆ ಇದೆಯೆಂಬುದು ನಿರ್ವಿವಾದ. ಕಲುಷಿತ ವ್ಯಕ್ತಿ ಇಲ್ಲವೆ ವಸ್ತುವಿನ ಸೋಂಕಿನಿಂದ ಪವಿತ್ರವಿದ್ದದ್ದು ಅಪವಿತ್ರವಾದ ಸಂದರ್ಭದಲ್ಲಿ, ಇಲ್ಲವೆ ಒಂದು ಕುಲದವರು ಬೇರೊಂದು ಕುಲದವರೊಂದಿಗೆ ವ್ಯವಹರಿಸಿ ದೂಷಿತಗೊಂಡ

ಸಂದರ್ಭದಲ್ಲಿ ಕೂಡ ಅವರನ್ನು ಪ್ರತ್ಯೇಕಿಸುವುದು ಇರುತ್ತದೆ. ಕಲುಷಿತ ವ್ಯಕ್ತಿಗಳು ಪವಿತ್ರವಿದ್ದವರಿಂದ ದೂರ ಇರತಕ್ಕದ್ದು. ಆದ್ದರಿಂದ ಒಂದು ಕುಲಬಾಂಧವರು ಇನ್ನೊಂದು ಕುಲಬಾಂಧವರಿಂದ ಬೇರೆ ಇರತಕ್ಕದ್ದು. ಹೀಗೆ, ಆದಿಕಾಲದ ಸಮಾಜದಲ್ಲಿ, ಅಪಾವಿತ್ರ್ಯಕ್ಕೆ ಕಾರಣವಾಗುವ ವಸ್ತು ಇಲ್ಲವೆ ವ್ಯಕ್ತಿಯನ್ನು ಪ್ರತ್ಯೇಕಿಸುವುದು ರೂಢಿಯಲ್ಲಿ ಬಂದಿತು. ಆದಿಕಾಲದ ಸಮಾಜದಲ್ಲಿ ದೋಷದ ಕಲ್ಪನೆಯೊಂದಿಗೆ, ದೋಷವನ್ನು ಹೋಗಲಾಡಿಸಲು ಅನುಸರಿಸಬೇಕಾದ ಶುದ್ಧೀಕರಣ ವಿಧಾನಗಳೂ ಹುಟ್ಟಿಕೊಂಡವು.

ಮಾಲಿನ್ಯವನ್ನು ತೊಡೆದುಹಾಕುವ ಸಾಧನಗಳಾಗಿ ನೀರು ಮತ್ತು ರಕ್ತವನ್ನು ಬಳಸಲಾಗುತ್ತದೆ. ದೂಷಿತ ವ್ಯಕ್ತಿಯನ್ನು ಶುದ್ಧಗೊಳಿಸಲು ಅವನ ಮೇಲೆ ನೀರನ್ನಾಗಲಿ, ರಕ್ತವನ್ನಾಗಲಿ ಸಿಂಪಡಿಸಿದರೆ ಸಾಕಾಗುತ್ತದೆ. ಶುದ್ಧೀಕರಣ ವಿಧಿಕರ್ಮಗಳಲ್ಲಿ ಬಟ್ಟೆ ಬದಲಿಸುವುದು, ಕೂದಲನ್ನು ಕತ್ತರಿಸುವುದು, ಉಗುರನ್ನು ತೆಗೆಯುವುದು ಮುಂತಾದುವಲ್ಲದೆ ಬೆವರು ಸ್ನಾನ, ಬೆಂಕಿ, ಹೊಗೆ ಹಾಕುವುದು, ಲೋಬಾನ ಇಲ್ಲವೆ ಊದಿನಕಡ್ಡಿ ಉರಿಸುವುದು ಮತ್ತು ಗಿಡದ ಕೊಲ್ಲೆಗಳಿಂದ ಗಾಳಿಹಾಕಿಕೊಳ್ಳುವುದೂ ಸೇರಿರುತ್ತದೆ.

ಇವು ಮಾಲಿನ್ಯ ತೊಡೆದುಹಾಕುವ ವಿಧಾನಗಳಾಗಿದ್ದವು. ಆದರೆ ಆದಿಕಾಲದ ಸಮಾಜದಲ್ಲಿ, ಮಾಲಿನ್ಯ ತೊಡೆದುಹಾಕುವ ಇನ್ನೂ ಒಂದು ವಿಧಾನವಿದ್ದಿತು. ಅದು ಮಾಲಿನ್ಯವನ್ನು ಒಬ್ಬನಿಂದ ಇನ್ನೊಬ್ಬನಿಗೆ ವರ್ಗಾಯಿಸುವುದಾಗಿತ್ತು. ಈ ಮೊದಲೇ ಅಪವಿತ್ರಗೊಂಡವನಿಗೆ ಅದನ್ನು ವರ್ಗಾಯಿಸುವುದಾಗಿತ್ತು.

ನ್ಯೂಝಿಲೆಂಡ್‌ನಲ್ಲಿ, ಯಾರಾದರೂ ಒಬ್ಬನ ತಲೆಯನ್ನು ತಟ್ಟಿದರೆ, ತಲೆಯು ಶರೀರದ ವಿಶೇಷ ಶುದ್ಧ ಭಾಗವಾಗಿರುವುದರಿಂದ, ಆ ವ್ಯಕ್ತಿ ಅಶುದ್ಧನಾಗಿಬಿಡುತ್ತಾನೆ. ಅವನು ಜರಿಗಿಡದ ಬೇರುಗಳಿಗೆ ತನ್ನ ಕೈತಿಕ್ಕುವುದರಿಂದ ಶುದ್ಧವಾಗುವನು. ಆ ಜರಿಗಿಡದ ಬೇರ (fern root)ನ್ನು ಹೆಣ್ಣು ಮಕ್ಕಳ ವಂಶದಲ್ಲಿ ಮನೆಯ ಯಜಮಾನ ತಿನ್ನುತ್ತಾನೆ. ತೊಂಗದೇಶದಲ್ಲಿ ಯಾರಾದರೂ ನಿಷೇಧಿತ ಆಹಾರ ತಿಂದರೆ, ಪಂಗಡದ ಮುಖ್ಯಸ್ಥನು ಅವನ ಹೊಟ್ಟೆಯ ಮೇಲೆ ತನ್ನ ಪಾದವನ್ನು ಇಡುವುದರಿಂದ ಶುದ್ಧನಾಗುವನು.

ಪಶು ಬಲಿಕೊಡುವ ಪದ್ಧತಿಯಲ್ಲಿ ಕೂಡ ಮಾಲಿನ್ಯದ ವರ್ಗಾವಣೆಯ ವಿಚಾರವಿದ್ದಂತೆ ತೋರುತ್ತದೆ. ಫಿಜಿ(Fiji)ಯಲ್ಲಿ ನಿಷೇಧಿತ ವ್ಯಕ್ತಿ ತನ್ನ ಕೈಯನ್ನು ಹಂದಿಗೆ ಒರೆಸುವುದರಿಂದ ಅದು ಪಂಗಡದ ಮುಖ್ಯಸ್ಥನ ದೃಷ್ಟಿಯಲ್ಲಿ ಪವಿತ್ರವಾಗುತ್ತಿತ್ತು. ಉಗಾಂಡದಲ್ಲಿ ಸತ್ತ ಅರಸನಿಗಾಗಿ ಆಚರಿಸಿದ ಶೋಕದ ಅವಧಿಯ ಕೊನೆಗೆ ಬಲಿಪಶುವಿನ ಜೊತೆಗೆ ಆಕಳು, ಆಡು, ನಾಯಿ, ಕೋಳಿ ಮತ್ತು ಅರಮನೆಯ ಧೂಳು ಮತ್ತು ಬೆಂಕಿಯನ್ನು ಬುನಿಯೋರೊ ಗಡಿಗೆ ಸಾಗಿಸಲಾಗುತ್ತಿತ್ತು. ಮತ್ತು ಅಲ್ಲಿ ಪ್ರಾಣಿಗಳ ಅವಯವಗಳನ್ನು ಕತ್ತರಿಸಿ ಅವನ್ನು ಸಾಯಲು ಬಿಡುತ್ತಿದ್ದರು. ಈ ಪದ್ಧತಿ ಅರಸ ಮತ್ತು ಅರಸಿಯರ ಮಾಲಿನ್ಯವನ್ನು ತೊಳೆಯುತ್ತದೆಂದು ನಂಬಲಾಗಿತ್ತು. ಆದಿಕಾಲದ ಸಮಾಜದಲ್ಲಿದ್ದ ಮಾಲಿನ್ಯದ ಕಲ್ಪನೆಗೆ ಸಂಬಂಧಿಸಿದ ಸಂಗತಿಗಳು ಹೀಗಿರುತ್ತವೆ.

## ೨

ಪ್ರಾಚೀನ ಸಮಾಜದಲ್ಲಿ ಪ್ರಚಲಿತವಿದ್ದ ಮಾಲಿನ್ಯದ ಕಲ್ಪನೆ ಆದಿಕಾಲದ ಸಮಾಜದಲ್ಲಿದ್ದುದಕ್ಕಿಂತ ವಸ್ತುತಃ ಭಿನ್ನವಾಗಿರಲಿಲ್ಲ. ಮಾಲಿನ್ಯದ ಮೂಲಗಳ ಬಗೆಗೆ ಭಿನ್ನತೆ ಇದ್ದಂತೆ ಶುದ್ಧೀಕರಣ ವಿಧಿವಿಧಾನಗಳ ಬಗೆಗೂ ಭಿನ್ನತೆ ಇರುತ್ತದೆ. ಆದರೆ ಈ ವ್ಯತ್ಯಾಸಗಳನ್ನು ಬಿಟ್ಟರೆ ಮಾಲಿನ್ಯದ ಮತ್ತು ಶುದ್ಧೀಕರಣದ ಮಾದರಿ ಆದಿ ಮತ್ತು ಪ್ರಾಚೀನ ಸಮಾಜಗಳಲ್ಲಿ ಒಂದೇ ಆಗಿರುತ್ತದೆ.

ಈಜಿಪ್ತದ ಮಾಲಿನ್ಯ ಪದ್ಧತಿಯನ್ನು ಆದಿಕಾಲದ ಮಾಲಿನ್ಯ ಪದ್ಧತಿಗೆ ಹೋಲಿಸಿದರೆ, ಈಜಿಪ್ತದಲ್ಲಿ ಅದನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಆಚರಿಸುತ್ತಿದ್ದುದನ್ನು ಬಿಟ್ಟರೆ, ಮತ್ತೇನೂ ವ್ಯತ್ಯಾಸ ಕಾಣುವುದಿಲ್ಲ.

ಗ್ರೀಕರಲ್ಲಿ ರಕ್ತಪಾತ, ಭೂತದ ಸಾನಿಧ್ಯ, ಸಾವು, ಲೈಂಗಿಕ ವ್ಯವಹಾರ, ಕೂಸಿನ ಜನನ, ಮೃತದೇಹವನ್ನು ಸಾಗಿಸುವುದು, ಅವರೆಕಾಯಿ ಸಾರು, ಗಿಣ್ಣು ಮತ್ತು ಬೆಳ್ಳುಳ್ಳಿಗಳಂಥ ಪದಾರ್ಥಗಳನ್ನು ಸೇವಿಸುವುದು, ಅನಧಿಕೃತ ವ್ಯಕ್ತಿಗಳು ಪವಿತ್ರ ಸ್ಥಳಗಳನ್ನು ಪ್ರವೇಶಿಸುವುದು, ಮತ್ತು ಕೆಲವು ಸಂದರ್ಭಗಳಲ್ಲಿ ಹೊಲಸು ಮಾತು ಬಳಸುವುದು ಮತ್ತು ಜಗಳವಾಡುವುದು ಮಾಲಿನ್ಯದ ಕಾರಣಗಳಾಗಿದ್ದವು. ಗ್ರೀಕರ ಶುದ್ಧೀಕರಣ (Kaopoia) ಸಾಧನಗಳಲ್ಲಿ ಶುದ್ಧೋದಕ, ಗಂಧಕ, ಉಳ್ಳಾಗಡ್ಡೆ, ಹೊಗೆ ಹಾಕುವಿಕೆ ಮತ್ತು ಬೆಂಕಿ, ಲೋಬಾನ, ಕೆಲವು ಮರದ ಕೊಲ್ಲೆಗಳು ಮತ್ತು ಸಣ್ಣ ಸಸ್ಯಗಳು, ಡಾಂಬರ, ಉಣ್ಣೆ, ಕೆಲವು ಹರಳುಗಳು ಮತ್ತು ತಾಯತಗಳು, ಬಿಸಿಲು ಮತ್ತು ಬಂಗಾರದಂಥ ಹೊಳೆಯುವ ವಸ್ತುಗಳು, ಯಜ್ಞಾಹುತಿಯ ಪಶುಗಳು, ವಿಶೇಷವಾಗಿ ಹಂದಿ, ಅದರಲ್ಲಿಯೂ ಅವುಗಳ ರಕ್ತ ಮತ್ತು ತೊಗಲು, ಕೊನೆಯದಾಗಿ ಕೆಲವು ಹಬ್ಬಗಳು ಮತ್ತು ಹಬ್ಬದ ಕರ್ಮಾಚರಣೆಗಳು, ಅದರಲ್ಲಿಯೂ ಶಪಿಸುವ ಮತ್ತು ಬಲಿ ಕೊಡುವ ಕರ್ಮಗಳು ಸೇರಿದ್ದವು. ದೂಷಿತ ವ್ಯಕ್ತಿಯ ಕೂದಲು ಕತ್ತರಿಸುವುದು ಇಲ್ಲವೆ ಯಜ್ಞಕ್ಕೆ ಬಲಿಯಾದ ಪಶುವಿನ ಮಾಂಸದಿಂದ ತಯಾರಿಸಿದ ಆಹಾರವನ್ನು ದೇವತೆಯ ಸಾನಿಧ್ಯದಲ್ಲಿ ಸಾಮೂಹಿಕವಾಗಿ ಸೇವಿಸುವುದು ಸಾಮಾನ್ಯ ಶುದ್ಧೀಕರಣ ವಿಧಾನವಾಗಿತ್ತು.

ರೋಮನ್‌ರ ಮಾಲಿನ್ಯ ಮತ್ತು ಶುದ್ಧೀಕರಣ ಕಲ್ಪನೆಯ ಎದ್ದುಕಾಣುವ ಅಂಶಗಳು ಅದರ ಪ್ರಾದೇಶಿಕ ಮತ್ತು ಸಾಮಾಜಿಕ ಮಾಲಿನ್ಯ ಮತ್ತು ಶುದ್ಧೀಕರಣಕ್ಕೆ ಸಂಬಂಧಿಸಿದ ನಂಬಿಕೆಯಲ್ಲಿ ಒಡೆದುಕಾಣುತ್ತವೆ. ಬೆಳಕಿನಿಂದ ಮಾಡುವ ಗೃಹಶುದ್ಧೀಕರಣ (ಲುಸ್ತ್ರಾತಿಯೋ – Lustratio) ವಿಧಾನವು ಗ್ರಾಮಾಂತರ ಜಿಲ್ಲೆ (Pagi)ಯನ್ನು ನಿಯತಕಾಲಿಕವಾಗಿ ಶುದ್ಧಗೊಳಿಸಲು ಅನುಸರಿಸಿದ ವಿಧಿಕರ್ಮವನ್ನು ಹೋಲುತ್ತದೆ. ಲುಸ್ತ್ರಾತಿಯೋ ಪಾಜಿ ಜಿಲ್ಲೆಯ ಗಡಿಗುಂಟ ನಡೆಸುವ ಧಾರ್ಮಿಕ ಮೆರವಣಿಗೆ ಮತ್ತು ಯಜ್ಞ ಕರ್ಮವನ್ನೊಳಗೊಂಡಿರುತ್ತದೆ. ಹಿಂದಿನ ಕಾಲದಲ್ಲಿ ಪಟ್ಟಣದ ಗೋಡೆಗಳ ಸುತ್ತ ಇಂಥದೇ ಅಂಬುರ್ಬಿಯಮ್ (amburbium) ಎಂಬ ಮೆರವಣಿಗೆಯನ್ನು ಹೊರಡಿಸಲಾಗುತ್ತಿತ್ತೆಂದು ತೋರುತ್ತದೆ. ಅದಕ್ಕೆ ಐತಿಹಾಸಿಕ ಕಾಲದಲ್ಲಿ ಆಪತ್ತು ಒದಗಿದಾಗ ನಗರದ ವಿಶೇಷ ಶುದ್ಧೀಕರಣವನ್ನು ಕೈಕೊಳ್ಳಲಾಗುತ್ತಿತ್ತು. ಉದಾಹರಣೆಗೆ ಎರಡನೇ ಪ್ಯೂನಿಕ್ ಯುದ್ಧದ ಪ್ರಾರಂಭದಲ್ಲಿ ಒದಗಿದ ಆಪತ್ತಿನ ಬಳಿಕ ಶುದ್ಧೀಕರಣ ಕ್ರಮ ಕೈಕೊಳ್ಳಲಾಗಿತ್ತು. ಇಂಥ ಪಶ್ಚಾತ್ತಾಪ ಮೂಲಕ ಶುದ್ಧ ಸಂಸ್ಕಾರಗಳ ಉದ್ದೇಶ ದೇವರುಗಳೊಂದಿಗೆ ರಾಜಿ ಮಾಡಿಕೊಳ್ಳುವುದಾಗಿರುತ್ತದೆ. ಶುದ್ಧೀಕರಣ ಸಮಾರಂಭದ ಜೊತೆಗೆ ವಸಾಹತು ಸ್ಥಾಪನೆ ನಡೆಯುತ್ತಿತ್ತು. ಗಡಿರಕ್ಷಣೆಗಾಗಿ ಹೊತ್ತಿಸಿದ ಬೆಂಕಿ (ಥರ್ಮಿನೆಲಿಯಾ – Therminalia) ಮತ್ತು ನಗರದ ಬೀದಿಗಳಲ್ಲಿ ಹಚ್ಚಿದ ದೀಪ (ಕೊಂಪಿತಾಲಿಯ – Compitalia) ಕೂಡ ಮೂಲದಲ್ಲಿ ಶುದ್ಧಿಸಂಸ್ಕಾರದ ವಿಧಾನಗಳಾಗಿರಬಹುದಾಗಿದೆ. ನಂತರದ ಅಂತ್ಯಾವಧಿಯವರೆಗೆ ಲುಪರ್ಕಿ (Luperci) ಎಂಬ ಅರ್ಚಕರು ಪ್ಯಾಲಟಿನೇಟ್‌ದ ವಸಾಹತು ಆಗಿದ್ದ ಅತಿ ಪೂರ್ವದ ರೋಮ ನಗರದ ಗಡಿಗುಂಟ ಪ್ರದಕ್ಷಿಣೆ ಹಾಕುತ್ತಿದ್ದರು. ಅದಕ್ಕೂ ಮೊದಲು ಆ ಆದಿಕಾಲದ ನಗರದ ಪ್ರಾಚೀನ ಪ್ರದೇಶದ ಗಡಿಗುಂಟ ವಿಧಿವತ್ತಾದ ಮೆರವಣಿಗೆ ಪ್ರತಿವರ್ಷ ಸುತ್ತುತ್ತಿತ್ತು. ಅದರ ಮುಂದಾಳತ್ವವನ್ನು ಆರ್ವಾಲ (Arval) ಸೋದರಸಂಬಂಧಿ ಅರ್ಚಕರು ವಹಿಸುತ್ತಿದ್ದರು. ಆ ಸಮಾರಂಭಕ್ಕೆ ಅಂಬ್ರವಾಲಿಯಾ (ambravalia) ಎಂದು ಕರೆಯಲಾಗಿದ್ದು, ಅದು

ಸ್ಪಷ್ಟವಾಗಿ ಪರಿಹಾರ ವಿಧಿಯಾಗಿತ್ತು. ರೋಮಿನ ಪ್ರದೇಶ ವಿಸ್ತಾರಗೊಂಡಾಗ, ಅದರ ಜೊತೆಗೆ ಈ ಶುದ್ಧೀಕರಣ ಸಮಾರಂಭವನ್ನು ಏರ್ಪಡಿಸಿದಂತೆ ತೋರುವುದಿಲ್ಲ. ಬೇರೆಡೆಯಲ್ಲಿ, ಪ್ರದೇಶದ ಸುತ್ತಲೂ ಕೈಕೊಳ್ಳಲಾಗುತ್ತಿದ್ದ ಪರಿಹಾರ ಸಮೀಕ್ಷೆಗಳು ಸಾಮಾನ್ಯವಾಗಿದ್ದವು. ಅವು ಇಟಲಿಯ ಒಳಗೆ ಮತ್ತು ಹೊರಗೆ ಮತ್ತು ವಿಶೇಷವಾಗಿ ಗ್ರೀಸಿನಲ್ಲಿ ನಡೆಯುತ್ತಿದ್ದವು. ವಿಧಿವತ್ತಾದ ಶಬ್ದಗಳು ಮತ್ತು ಸಾಂಪ್ರದಾಯಿಕ ಮಂತ್ರಗಳ ಅಸ್ಖಲಿತ ಘೋಷಣೆ ಒಂದು ತರಹದ ಮಾಂತ್ರಿಕ ಪರಿಣಾಮ ಉಂಟುಮಾಡುತ್ತಿದ್ದವು. ಮಂತ್ರೋಚ್ಚಾರಣೆ ತಪ್ಪಾದಲ್ಲಿ ದಂಡ ತೆರಬೇಕಾಗುತ್ತಿತ್ತು. ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾಗುತ್ತಿತ್ತು. ಅದೇ ರೀತಿ, ರೋಮದ ಪ್ರಪ್ರಥಮ ಕಾಯ್ದೆ ಪದ್ಧತಿಯಲ್ಲಿ, ಕಾಯ್ದೆ ಪದಗಳನ್ನು ತಪ್ಪಾಗಿ ಉಚ್ಚರಿಸಿದಲ್ಲಿ, ಆ ಮೊಕದ್ದಮೆ ರದ್ದಾಗುತ್ತಿತ್ತು.

ಉಳಿದ ಹಳೆ ಪದ್ಧತಿಯ ಪ್ರಾಚೀನ ಆಚರಣೆಗಳು ಶುದ್ಧೀಕರಣ ಕಲ್ಪನೆಗೆ ಸಂಬಂಧಿಸಿದ್ದವು. ಮಂಗಳನ ಪ್ರಾಚೀನ ಅರ್ಚಕರಾದ ಸಲಾಯಿ(Salai)ಗಳು ನಿಶ್ಚಿತ ಸಮಯಕ್ಕೆ ನಗರದ ನಿಲ್ದಾಣಗಳನ್ನು ಬಳಸಿ ನಗರದ ತುಂಬ ತಿರುಗಾಡುತ್ತಿದ್ದರು. ಅವರಲ್ಲಿ ಆಯುಧಗಳನ್ನು ತಿಕ್ಕಿ ಹಸನುಗೊಳಿಸುವುದು ಮತ್ತು ಕಹಳೆಯನ್ನು ತಿಕ್ಕಿ ಹಸನುಗೊಳಿಸುವುದು ರೂಢಿಯಲ್ಲಿತ್ತು. ಸೈನ್ಯದ ಆಯುಧಗಳ ಪರಿಣಾಮಕಾರಿ ಬಳಕೆಗೆ ಅವುಗಳನ್ನು ಉಜ್ಜಿ ಶುದ್ಧಗೊಳಿಸುವುದು ಅವಶ್ಯವಿದ್ದಿತೆಂದು ಇದರಿಂದ ಸಾಬೀತಾಗುತ್ತದೆ. ಜನಗಣತಿಯ ಮುಕ್ತಾಯ ಸಮಯಕ್ಕೆ ಆಚರಿಸಲಾಗುತ್ತಿದ್ದ ನಿರ್ಮಲೀಕರಣವು ನಿಜಕ್ಕೂ ಸೈನಿಕ ಕಾರ್ಯಾಚರಣೆ ಆಗಿದ್ದಿತು. ಏಕೆಂದರೆ ಅದು ನಾಗರಿಕ ಉಡುಪಿನಲ್ಲಿದ್ದ ಸೈನಿಕರಿಂದ ಕೂಡಿದ ಕೋಮಿತಿಯಾ ಸೆಂತೂರಿಯಾ(Comitia Centuria)ಕ್ಕೆ ಸಂಬಂಧಿಸಿದ್ದಾಗಿತ್ತು. ಸೈನಿಕರಲ್ಲಿ ಮೂಢಭಾವನೆಗಳನ್ನು ಹೋಗಲಾಡಿಸುವುದಕ್ಕಾಗಿ, ಸೈನ್ಯ ರಣರಂಗದಲ್ಲಿದ್ದಾಗ ಮೇಲಿಂದ ಮೇಲೆ ನಿರ್ಮಲೀಕರಣ (ಲುಸ್ತ್ರಾತಿಯೊ ಎಕ್ಸಿರ್ಸಿಟಸ್ – Lurtratio exercitus)ವನ್ನು ಕೈಗೊಳ್ಳಲಾಗುತ್ತಿತ್ತು. ಅದು ಕೇವಲ ಮುನ್ನೆಚ್ಚರಿಕೆಯ ಕ್ರಿಯೆಯಾಗಿತ್ತು. ಹಡಗುಗಳ ನಿರ್ಮಲೀಕರಣ ಕೂಡ ನಡೆಯುತ್ತಿತ್ತು.

ಎಲ್ಲ ಆದಿ ಮಾನವರಂತೆ ಹಿಬ್ರೂ ಜನರಲ್ಲಿ ಕೂಡ ಮೈಲಿಗೆಯ ಕಲ್ಪನೆ ಇದ್ದಿತು. ಹೊಲಸು ಪ್ರಾಣಿಗಳ ಮೃತದೇಹವನ್ನು ತಿನ್ನುವುದರಿಂದ, ಇಲ್ಲವೆ ಸರೀಸೃಪಗಳನ್ನು ಮುಟ್ಟುವುದರಿಂದ, ಇಲ್ಲವೆ ತಿನ್ನುವುದರಿಂದ ಮತ್ತು ಖಂಡಗೊರಸುಳ್ಳ, ಆ ಖಂಡ ಪಾದದ ಆಹಾರವನ್ನು ಜಗಿದು ತಿನ್ನದ, ಅಂಗೈ ಮೇಲೆ ನಡೆಯುವ ನಾಲ್ಕು ಕಾಲುಗಳ ಮೇಲೆ ನಡೆಯುವ ಯಾವುದೇ ಪ್ರಕಾರದ ಹೊಲಸು ಪ್ರಾಣಿಗಳ ಸಂಪರ್ಕದಿಂದ ಮೈಲಿಗೆ ಉಂಟಾಗುತ್ತದೆಂಬುದು ಅವರ ಮೈಲಿಗೆಯ ಕಲ್ಪನೆಯ ವಿಶಿಷ್ಟ ಸ್ವರೂಪವಾಗಿರುತ್ತದೆ. ಯಾವುದೇ ಹೊಲಸು ವ್ಯಕ್ತಿಯನ್ನು ಮುಟ್ಟುವುದರಿಂದ ಹಿಬ್ರ್ಯೂಗಳಿಗೆ ಮೈಲಿಗೆ ತಗಲುತ್ತಿತ್ತು. ಹಿಬ್ರ್ಯೂ ಕಲ್ಪನೆಯ ಪ್ರಕಾರ ಮೈಲಿಗೆಯ ಬೇರೆ ಎರಡು ಲಕ್ಷಣಗಳನ್ನು ಉಲ್ಲೇಖಿಸಬಹುದು. ಮೂರ್ತಿ ಪೂಜೆಯಿಂದ ವ್ಯಕ್ತಿಗಳು ಮತ್ತು ಲೈಂಗಿಕ ಅವ್ಯವಹಾರಗಳಿಂದ ಭೂಮಿ ಅಪವಿತ್ರವಾಗುತ್ತದೆಂದು ಹಿಬ್ರೂ ಜನರು ನಂಬಿದ್ದರು.

ಈ ಸಮೀಕ್ಷೆಯ ಆಧಾರದ ಮೇಲಿಂದ ಅಪವಿತ್ರತೆಯ ಕಲ್ಪನೆಯಿರದ ಯಾವುದೇ ಜನರು – ಆದಿ ಇಲ್ಲವೆ ಪ್ರಾಚೀನ ಇದ್ದಿರಲಿಲ್ಲ ಎಂದು ಧೈರ್ಯವಾಗಿ ತೀರ್ಮಾನಿಸಬಹುದಾಗಿದೆ.

♦

# ಅಧ್ಯಾಯ ೨

## ಹಿಂದೂಗಳಲ್ಲಿ ಅಸ್ಪೃಶ್ಯತೆ

ಮಾಲಿನ್ಯದ ವಿಷಯದಲ್ಲಿ ಆದಿ ಇಲ್ಲವೆ ಪ್ರಾಚೀನ ಜನರಿಗಿಂತ ಭಿನ್ನವಾದುದೇನೂ ಹಿಂದೂಗಳಲ್ಲಿ ಇಲ್ಲ. ಅವರು ಮಾಲಿನ್ಯವನ್ನು ಗುರುತಿಸಿದ್ದರೆನ್ನುವುದು ಮನುಸ್ಮೃತಿಯಿಂದ ಹೇರಳವಾಗಿ ಸ್ಪಷ್ಟವಾಗುತ್ತದೆ. ಭೌತಿಕ ಮತ್ತು ಭಾವನಾತ್ಮಕ ಎರಡೂ ಪ್ರಕಾರದ ಮಾಲಿನ್ಯವನ್ನು ಮನು ಗುರುತಿಸುತ್ತಾನೆ.

ಹುಟ್ಟು,[೧] ಸಾವು ಮತ್ತು ಮುಟ್ಟು[೨]ಗಳು ಮಾಲಿನ್ಯದ ಮೂಲಗಳೆಂದು ಮನು ತಿಳಿದಿದ್ದನು. ಸಾವಿಗೆ ಸಂಬಂಧಿಸಿದ ಮಾಲಿನ್ಯ ಬಹಳ ವ್ಯಾಪಕ ಸ್ವರೂಪದ್ದಾಗಿರುತ್ತದೆ. ಅದು ಸಗೋತ್ರ ನಿಯಮವನ್ನು ಅನುಸರಿಸುತ್ತದೆ. ಸಪಿಂಡಕರು ಮತ್ತು ಸಮನೋದಕರು[೩] (Sapindas and Samanodakas) ಎನ್ನಲಾದ ಮೃತನ ಕುಟುಂಬದ ಸದಸ್ಯರಿಗೆ ಮರಣ ಮೈಲಿಗೆ ತರುತ್ತದೆ. ಅವರಲ್ಲಿ ಸೋದರಮಾವ[೪] ಮೊದಲಾದ ಮಾತೃಸಂಬಂಧಿಗಳಷ್ಟೇ ಅಲ್ಲ ದೂರದ ಸಂಬಂಧಿಗಳು[೫] ಸೇರುತ್ತಾರೆ. ಆ ಮೈಲಿಗೆ ಸಂಬಂಧಿಗಳಲ್ಲದವರಿಗೆಲ್ಲ ಅಂದರೆ (೧) ಶಿಕ್ಷಕ[೬] (೨) ಶಿಕ್ಷಕನ ಮಗ,[೭] (೩) ಶಿಕ್ಷಕನ ಪತ್ನಿ,[೮] (೪) ವಿದ್ಯಾರ್ಥಿ,[೯] (೫) ಸಹಪಾಠಿ,[೧೦] (೬) ಶ್ರೋತ್ರಿ,[೧೧] (೭) ಅರಸು,[೧೨] (೮) ಸ್ನೇಹಿತ,[೧೩] (೯) ಮನೆಮಂದಿ,[೧೪] (೧೦) ಶವವನ್ನು ಹೊತ್ತವರು[೧೫] ಮತ್ತು ಶವವನ್ನು ಮುಟ್ಟಿದವರಿಗೆಲ್ಲ[೧೬] ಮೈಲಿಗೆ ತಟ್ಟುತ್ತದೆ.

ಮೈಲಿಗೆಯ ಈ ಮಿತಿಯಲ್ಲಿ ಬರುವವರು ಮೈಲಿಗೆಯಿಂದ ತಪ್ಪಿಸಿಕೊಳ್ಳಲಾರರು. ಕೆಲವೇ ಕೆಲವು ವ್ಯಕ್ತಿಗಳು ದೋಷಮುಕ್ತರಾಗಿರುತ್ತಾರೆ. ಈ ಕೆಳಗಿನ ಶ್ಲೋಕದಲ್ಲಿ ದೋಷಮುಕ್ತರು ಯಾರೆಂಬುದನ್ನು ಮತ್ತು ಯಾವ ಕಾರಣಕ್ಕಾಗಿ ಅವರು ದೋಷಮುಕ್ತರೆಂಬುದನ್ನು ಮನು ಸ್ಪಷ್ಟಪಡಿಸುತ್ತಾನೆ :–

> “*ಶ್ಲೋಕ ೯೩. ಅಶುದ್ಧತೆಯ ಸೋಂಕು ಅರಸರನ್ನು ಮತ್ತು ವ್ರತದ ಇಲ್ಲವೆ ಸತ್ರ (ಯಾಗ) ಆಚರಣೆಯಲ್ಲಿ ತೊಡಗಿದವರನ್ನು ತಟ್ಟುವುದಿಲ್ಲ. ಮೊದಲನೆಯವರು ಭಾರತದ ಸಿಂಹಾಸನದ ಮೇಲೆ ಆಸೀನರಾಗಿರುತ್ತಾರೆ ಮತ್ತು ಕೊನೆಯವರಿಬ್ಬರೂ ಬ್ರಾಹ್ಮಣನಂತೆ ಯಾವಾಗಲೂ ಶುದ್ಧವಿರುತ್ತಾರೆ.*

---

೧. Chapter V, 58,61-63, 71, 77, 79

೨. Chapter III, 45-46, IV 40-41, 57, 208, V.66, 85, 108

೩. Chapter V, 58, 60, 75-77, 85-94

೪. Chapter V, 81

೫. Chapter V, 78

೬. Chapter V, 6, 80, 82

೭. Chapter V, 80

೮. Chapter V, 80

೯. Chapter V, 81

೧೦. Chapter V, 71

೧೧. Chapter V, 81

೧೨. Chapter V, 82

೧೩. Chapter V, 82

೧೪. Chapter V, 81

೧೫. Chapter V, 64-65, 85

೧೬. Chapter V, 64, 85

*೯೪. ಔದಾರ್ಯದ ಸಿಂಹಾಸನವನ್ನು ಅಲಂಕರಿಸಿದ ಅರಸನಿಗೆ ಶುದ್ಧೀಕರಣವನ್ನು ತಕ್ಷಣ ನೆರವೇರಿಸಬೇಕಾಗುತ್ತದೆ, ಏಕೆಂದರೆ ಅವನು ಪ್ರಜಾಪಾಲನೆಗಾಗಿ ಸಿಂಹಾಸನವನ್ನೇರಿರುತ್ತಾನೆ.*

*೯೫. ದೊಂಬಿಯಲ್ಲಿ ಇಲ್ಲವೆ ಕಾಳಗದಲ್ಲಿ ಮಡಿದವರ ಸಂಬಂಧಿಕರಿಗೂ ಅದೇ ನಿಯಮ ಅನ್ವಯಿಸುತ್ತದೆ. ಸಿಡಿಲು ಬಡಿದು ಸತ್ತವರ, ಅರಸನಿಂದ ಕೊಲ್ಲಲ್ಪಟ್ಟವರ ಸಂಬಂಧಿಕರಿಗೆ, ಆಕಳುಗಳಿಗೆ, ಬ್ರಾಹ್ಮಣರಿಗೆ ಮತ್ತು ಅರಸ ಇಚ್ಛಿಸಿದ ಯಾರೇ ಆಗಲಿ (ಅವರು ಅಪವಿತ್ರರಿದ್ದಾಗ್ಯೂ) – ಎಲ್ಲರಿಗೂ ಅದೇ ನಿಯಮ ಅನ್ವಯಿಸುತ್ತದೆ.*

*೯೬. ಅರಸನು ಅಷ್ಟದಿಕ್ಪಾಲಕರಾದ – ಚಂದ್ರ, ಅಗ್ನಿ, ಸೂರ್ಯ, ವಾಯು, ಇಂದ್ರ, ಸಂಪತ್ತಿನ ಒಡೆಯ ಕುಬೇರ, ನೀರಿನ ಒಡೆಯ ವರುಣ ಮತ್ತು ಯಮ ಇವರ ಅವತಾರವಾಗಿರುತ್ತಾನೆ.*

*೯೭. ಮಾನವರಲ್ಲಿ ಪಾವಿತ್ರ್ಯ ನೆಲೆಸುವಂತೆ ಮಾಡುವ ಮತ್ತು ಅಪಾವಿತ್ರ್ಯವನ್ನು ಹೋಗಲಾಡಿಸುವ ದೇವತಾಂಶಗಳು ಅರಸನಲ್ಲಿ ತುಂಬಿರುವುದರಿಂದ ಅರಸನಿಗೆ ಅಪಾವಿತ್ರ್ಯ ಅಂಟುವುದಿಲ್ಲ.*

ಈ ವಿವರಣೆಯಿಂದ, ಮನು ವ್ಯಾಖ್ಯಾನಿಸಿದ ಉದಾತ್ತ ಕಾರಣಕ್ಕಾಗಿ ಸತ್ತವರ ಸಂಬಂಧಿಗಳು ಮತ್ತು ಯಾರನ್ನು ಅರಸನು ದೋಷಮುಕ್ತರನ್ನಾಗಿಸಲು ಬಯಸುವನೋ ಅವರೆಲ್ಲರಿಗೆ ಮೈಲಿಗೆಯ ಸಾಮಾನ್ಯ ನಿಯಮಗಳು ಅನ್ವಯಿಸುವುದಿಲ್ಲ. ಬ್ರಾಹ್ಮಣನು ಸದಾ ಪವಿತ್ರ ಎನ್ನುವ ಮನುವಿನ ಹೇಳಿಕೆಗೆ ಬ್ರಾಹ್ಮಣನು ಎಲ್ಲಕ್ಕಿಂತ ಶ್ರೇಷ್ಠನೆಂಬ ಸಾಮಾನ್ಯ ಅರ್ಥ ಹಚ್ಚಬೇಕು. ಆದರೆ ಬ್ರಾಹ್ಮಣನು ಸದಾ ದೋಷಮುಕ್ತನೆಂದು ತಿಳಿಯಬಾರದು, ಏಕೆಂದರೆ ಅವನು ದೋಷಮುಕ್ತನಲ್ಲ. ನಿಜಕ್ಕೂ, ಹುಟ್ಟು ಮತ್ತು ಸಾವಿನಿಂದುಂಟಾಗುವ ದೋಷವಷ್ಟೆ ಅಲ್ಲ, ಇನ್ನುಳಿದ ಬೇರೆ ಕಾರಣಗಳಿಂದ ಬ್ರಾಹ್ಮಣರಲ್ಲದವರಿಗೆ ತಟ್ಟಿದ ದೋಷಗಳು ಕೂಡ ಬ್ರಾಹ್ಮಣರಿಗೆ ತಟ್ಟುತ್ತವೆ. ಮನುಸ್ಮೃತಿಯ ತುಂಬೆಲ್ಲ ನಿಷಿದ್ಧ ವಿಷಯಗಳಿವೆ. ಅವು ಬ್ರಾಹ್ಮಣನಿಗಷ್ಟೇ ಅನ್ವಯಿಸುತ್ತವೆ. ಅವುಗಳನ್ನು ಅವನು ಆಚರಿಸಲೇಬೇಕು. ಇಲ್ಲದಿದ್ದರೆ ಅವನಿಗೆ ಮೈಲಿಗೆ ತಟ್ಟುತ್ತದೆ.

ಮನುವಿನಲ್ಲಿ ಬರುವ ಮೈಲಿಗೆಯ ವಿಚಾರ ಕೇವಲ ಕಾಲ್ಪನಿಕವಾಗಿರದೆ ವಾಸ್ತವಿಕವಾಗಿರುತ್ತದೆ. ಏಕೆಂದರೆ ಅವನು ಅಪವಿತ್ರ ವ್ಯಕ್ತಿ ಅರ್ಪಿಸುವ ಆಹಾರ ಸ್ವೀಕರಿಸಲಾಗದು ಎಂದು ಹೇಳುತ್ತಾನೆ.

ಮನು ಮೈಲಿಗೆಯ ಅವಧಿಯನ್ನು ಕೂಡ ನಿಗದಿಪಡಿಸುತ್ತಾನೆ. ಅದು ಒಂದೇ ಆಗಿರದೇ ಬದಲಾಗುತ್ತಿರುತ್ತದೆ. ಸಪಿಂಡದವನ ಸಾವಿಗೆ ಹತ್ತು ದಿವಸ ಆಗಿರುತ್ತದೆ, ಚಿಕ್ಕಮಕ್ಕಳ ಸಾವಿಗೆ ಮೂರು ದಿವಸ ಇರುತ್ತದೆ. ಸಹಪಾಠಿಗಳ ಸಾವಿಗೆ ಒಂದು ದಿವಸ. ನಿಗದಿತ ಅವಧಿ ಮುಗಿದೊಡನೆ ಮೈಲಿಗೆ ತಾನೇ ಹೋಗುವುದಿಲ್ಲ. ಮೈಲಿಗೆಯ ಅವಧಿಯ ಕೊನೆಗೆ ಸಂದರ್ಭಕ್ಕೆ ತಕ್ಕಂತೆ ಶುದ್ಧೀಕರಣ ಕರ್ಮವನ್ನು ವಿಧ್ಯುಕ್ತವಾಗಿ ಆಚರಿಸಬೇಕಾಗುತ್ತದೆ.

ಶುದ್ಧೀಕರಣದ ಉದ್ದೇಶಗಳಿಗಾಗಿ ಮೈಲಿಗೆಯ ವಿಷಯವನ್ನು ಮನು ಮೂರು ಪ್ರಕಾರವಾಗಿ

ಪರಿಶೀಲಿಸುತ್ತಾನೆ : (೧) ಭೌತಿಕ ಮೈಲಿಗೆ, (೨) ಭಾವನಾತ್ಮಕ ಇಲ್ಲವೆ ಮಾನಸಿಕ ಮೈಲಿಗೆ, ಮತ್ತು (೩) ನೈತಿಕ ಮೈಲಿಗೆ. ವ್ಯಕ್ತಿ ಕೆಡಕು ವಿಚಾರಗಳಿಗೆ ಅವಕಾಶ ಕೊಟ್ಟಾಗ ನೈತಿಕ ಮೈಲಿಗೆಯ ಪ್ರಸಂಗ ಉದ್ಭವಿಸುತ್ತದೆ. ಆಗ ಬುದ್ಧಿವಾದ ಮತ್ತು ಎಚ್ಚರಿಕೆ ಹೇಳಬೇಕೆಂದು ನೈತಿಕ ಶುದ್ಧೀಕರಣದ ನಿಯಮ[೧]ವಿರುತ್ತದೆ. ಆದರೆ ಭಾವನಾತ್ಮಕ ಮತ್ತು ಭೌತಿಕ ಮೈಲಿಗೆಯನ್ನು ತೊಡೆದುಹಾಕಲು ಅನುಸರಿಸಬೇಕಾದ ಕರ್ಮಗಳು ಒಂದೇ ಆಗಿರುತ್ತದೆ. ಅವು ನೀರು,[೨] ಮಣ್ಣು[೩] ಗೋಮೂತ್ರ,[೪] ಕುಶ[೫] ಎಂಬ ಹುಲ್ಲು ಮತ್ತು ಬೂದಿ[೬] – ಇವು ಶುದ್ಧೀಕರಣದಲ್ಲಿ ಉಪಯೋಗಿಸುವ ಸಾಮಗ್ರಿಗಳಾಗಿರುತ್ತವೆ. ನಿರ್ಜೀವ ವಸ್ತುಗಳನ್ನು ಮುಟ್ಟುವುದರಿಂದುಂಟಾದ ಮೈಲಿಗೆ ನಿವಾರಣೆಗೆ ಕುಶ ಮತ್ತು ಬೂದಿಯನ್ನು ಶುದ್ಧೀಕರಣದ ಸಾಧನಗಳೆಂದು ವಿಧಿಸಲ್ಪಟ್ಟಿರುತ್ತವೆ. ಭಾವನಾತ್ಮಕ ಮೈಲಿಗೆಯನ್ನು ನಿವಾರಿಸುವಲ್ಲಿ ನೀರು ಮುಖ್ಯ ಸಾಧನವಾಗಿರುತ್ತದೆ. ಶುದ್ಧೀಕರಣ ವಿಧಾನದಲ್ಲಿ ನೀರನ್ನು ಮೂರು ರೀತಿ ಬಳಸಲಾಗುತ್ತದೆ ; (೧) ಆಚಮನಕ್ಕಾಗಿ, (೨) ಸ್ನಾನಕ್ಕಾಗಿ, ಮತ್ತು (೩) ಕೈಕಾಲು ತೊಳೆಯುವುದಕ್ಕಾಗಿ.[೭] ಕಾಲಾನಂತರ ಭಾವನಾತ್ಮಕ ಮೈಲಿಗೆ ಕಳೆಯುವಲ್ಲಿ ಪಂಚಗವ್ಯ ಅತಿ ಮಹತ್ವದ ಸಾಧನವಾಯಿತು. ಅದರಲ್ಲಿ ಆಕಳಿನ ಐದು ವಸ್ತುಗಳು ಕೂಡಿರುತ್ತವೆ: ಅವು – ಹಾಲು, ಮೂತ್ರ, ಸೆಗಣಿ, ಮೊಸರು ಮತ್ತು ಬೆಣ್ಣೆ.

ಮನುಸ್ಮೃತಿಯಲ್ಲಿ ಬಲಿಪಶುವಿನ[೮] ಮುಖಾಂತರ ಮೈಲಿಗೆಯನ್ನು ವರ್ಗಾಯಿಸಲು ಅವಕಾಶವಿರುತ್ತದೆ. ಉದಾ : ಆಕಳನ್ನು ಮುಟ್ಟುವುದರಿಂದ ಇಲ್ಲವೆ ಆಚಮನ ಮಾಡಿದ ಬಳಿಕ ಸೂರ್ಯನನ್ನು ನೋಡುವುದರಿಂದ ಮೈಲಿಗೆ ಕಳೆಯುತ್ತದೆ.

ಹಿಂದೂಗಳು ವೈಯಕ್ತಿಕ ಮಾಲಿನ್ಯವನ್ನಷ್ಟೇ ನಂಬದೆ ಪ್ರಾದೇಶಿಕ ಮತ್ತು ಕೋಮುಗಳ ಮಾಲಿನ್ಯದಲ್ಲಿಯೂ ನಂಬುಗೆ ಇಟ್ಟಿರುತ್ತಾರೆ. ಪೂರ್ವಿ ರೋಮನ್‌ರಲ್ಲಿ ಪ್ರಚಲಿತವಿದ್ದಂಥ ಶುದ್ಧೀಕರಣ ವಿಧಾನದಲ್ಲಿ ಹಿಂದೂಗಳಿಗೆ ನಂಬುಗೆ ಇದೆ. ಪ್ರತಿಯೊಂದು ಹಳ್ಳಿ ವರ್ಷ ಜಾತ್ರೆಯನ್ನು ಆಚರಿಸುತ್ತದೆ. ಹಳ್ಳಿಯ ಪರವಾಗಿ ಸಾಮಾನ್ಯವಾಗಿ ಕೋಣವನ್ನು ಖರೀದಿಸಲಾಗುತ್ತದೆ. ಅದನ್ನು ಊರೆಲ್ಲ ಸುತ್ತಾಡಿಸಿ ನಂತರ ಬಲಿ ಕೊಡಲಾಗುತ್ತದೆ. ಮತ್ತು ಅದರ ರಕ್ತವನ್ನು ಹಳ್ಳಿಯ ಸುತ್ತ ಸಿಂಪಡಿಸಲಾಗುವುದು. ಕೊನೆಗೆ ಅದರ ಮಾಂಸವನ್ನು ಹಳ್ಳಿಯ ತುಂಬ ಹಂಚಲಾಗುವುದು. ಪ್ರತಿಯೊಬ್ಬ ಹಿಂದೂ, ಪ್ರತಿಯೊಬ್ಬ ಬ್ರಾಹ್ಮಣ, ಮಾಂಸ ಸೇವಿಸಲಿ, ಬಿಡಲಿ, ತನ್ನ ಪಾಲಿನ ಮಾಂಸವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದು ಯಾವ ಸ್ಮೃತಿಯಲ್ಲಿಯೂ ಬರೆದಿರುವುದಿಲ್ಲ. ಆದರೆ ರೂಢಿಯಲ್ಲಿದೆ. ರೂಢಿಯಲ್ಲಿದ್ದದ್ದು ಕಾಯ್ದೆಗಿಂತಲೂ ಹೆಚ್ಚು ಗಟ್ಟಿ ಇರುತ್ತದೆ.

## ೨

ಪರಿಶೀಲನೆಯನ್ನು ಇಲ್ಲಿಗೇ ನಿಲ್ಲಿಸಿದರೆ, ಹಿಂದೂಗಳ ಮೈಲಿಗೆಯ ವಿಚಾರ ಆದಿ ಮತ್ತು ಪ್ರಾಚೀನ ಸಮಾಜಗಳಿದ್ದುದಕ್ಕಿಂತ ಭಿನ್ನವಿದ್ದಿರಲಿಲ್ಲ ಎಂದು ಹೇಳಿದಂತಾಗಬಹುದು. ಆದರೆ ಇಲ್ಲಿಗೇ ನಿಲ್ಲಿಸಲಿಕ್ಕಾಗದು. ಏಕೆಂದರೆ, ಇದುವರೆಗೆ ಯಾರೂ ಆಚರಿಸದಿದ್ದಂಥ ಅಸ್ಪೃಶ್ಯತೆಯ ಮಾದರಿಯು ಹಿಂದೂಗಳಲ್ಲಿ ಸಿಗುತ್ತದೆ. ಅದು ಕೆಲವು ಕೋಮುಗಳಲ್ಲಿರುವ ಅನುವಂಶಿಕ ಅಸ್ಪೃಶ್ಯತೆ ಆಗಿರುತ್ತದೆ. ಅಂಥ ಕೋಮುಗಳ ಪಟ್ಟಿ

---

೧. Chapter V, ೧೦೫–೧೦೯, ೧೨೭–೧೨೮

೨. Chapter V, ೧೨೭

೩. Chapter V, ೧೩೪

೪. Chapter V, ೧೨೧, ೧೨೪

೫. Chapter V, ೧೧೫

೬. Chapter V, ೧೧೧

೭. Chapter V, ೧೪೩

೮. Chapter V, ೮೭

ದೊಡ್ಡದಿರುವುದರಿಂದ ಒಬ್ಬನಿಗೇ ಅವುಗಳ ಸಂಪೂರ್ಣ ಪಟ್ಟಿ ಕೊಡಲು ಸಾಧ್ಯವಾಗುವುದಿಲ್ಲ. ಸುದೈವದಿಂದ ೧೯೩೫ರಲ್ಲಿ ಭಾರತ ಸರಕಾರ ಒಂದು ಪಟ್ಟಿಯನ್ನು ತಯಾರಿಸಿರುತ್ತದೆ. ಅಲ್ಲದೆ ಭಾರತ ಸರಕಾರದ ೧೯೩೫ರ ಕಾಯ್ದೆಯ ಅಧೀನದಲ್ಲಿರುವ ಆರ್ಡರ್ಸ್–ಇನ್–ಕೌನ್ಸಿಲ್ (Orders-in-Council)ಗಳಿಗೆ ಒಂದು ಪರಿಶಿಷ್ಟವನ್ನು ಲಗತ್ತಿಸಿರುತ್ತದೆ. ಈ ಪರಿಶಿಷ್ಟದಲ್ಲಿ ಒಂಬತ್ತು ಭಾಗಗಳಿವೆ. ಒಂದೊಂದು ಭಾಗ ಒಂದೊಂದು ಪ್ರಾಂತ್ಯಕ್ಕೆ ಸಂಬಂಧಿಸಿದ್ದು, ಅದು ಅದರಲ್ಲಿ ಭಾಗಶಃ ಬರುವ ಇಲ್ಲವೆ ಪೂರ್ಣ ಪ್ರಾಂತ್ಯದಲ್ಲಿ ಬರುವ ಅಸ್ಪೃಶ್ಯ ಎಂದು ಪರಿಗಣಿಸಲ್ಪಟ್ಟ ಎಲ್ಲ ಜಾತಿ, ಜನಾಂಗ, ಪಂಗಡ, ಭಾಗಗಳ ಇಲ್ಲವೆ ಗುಂಪುಗಳ ಪಟ್ಟಿಯನ್ನು ಕೊಡುತ್ತದೆ. ಆ ಪಟ್ಟಿಯನ್ನು ಪೂರ್ಣ ಮತ್ತು ಅಧಿಕೃತ ಎಂದು ತಿಳಿಯಬಹುದಾಗಿದೆ.

ವಂಶಪಾರಂಪರಿಕವಾಗಿ ಅಸ್ಪೃಶ್ಯರೆಂದು, ಹಿಂದೂಗಳು ತಿಳಿದ ವರ್ಗಗಳು ಅದೆಷ್ಟು ಹೆಚ್ಚಿನ ಸಂಖ್ಯೆಯಲ್ಲಿವೆ ಎಂಬುದರ ಕಲ್ಪನೆ ಕೊಡುವ ಉದ್ದೇಶದಿಂದ ಆರ್ಡರ್ಸ್–ಇನ್–ಕೌನ್ಸಿಲ್‌ದಲ್ಲಿ ಕೊಟ್ಟ ಪಟ್ಟಿಯನ್ನು ಇಲ್ಲಿ ಕೊಟ್ಟಿರುತ್ತೇನೆ.

## ಪರಿಶಿಷ್ಟ

### ಭಾಗ – ೧ ಮದ್ರಾಸ್

(೧) ಪ್ರಾಂತಾದ್ಯಂತ ಇರುವ ಪರಿಶಿಷ್ಟ ಜಾತಿಗಳು

| | | |
|---|---|---|
| ಆದಿ–ಆಂಧ್ರ | ಗೋಸಂಗಿ | ಪೈಡಿ |
| ಆದಿ–ದ್ರಾವಿಡ | ಹದ್ದಿ | ಪೈಂಡ |
| ಆದಿ–ಕರ್ನಾಟಕ | ಹಸ್ಲ | ಪಾಕಿ |
| ಅಜಿಲ | ಹೊಲೆಯ | ಪಲ್ಲನ್ |
| ಆರುಂತುಟಿಯಾರ | ಜಗ್ಗಲಿ | ಪಂಬಡ |
| ಬೈರ | ಜಾಂಬುವುಲು | ಪಾಮಿಡಿ |
| ಬಕುಡ | ಕಲ್ಲಾಡಿ | ಪಂಚಮ |
| ಬಂಡಿ | ಕನಕ್ಕನ್ | ಪಣಿಯನ್ |
| ಬರಿಕಿ | ಕೊಡಲೊ | ಪನ್ನಿಯಂಡಿ |
| ಬಟ್ಟಡ | ಕೂಸಾ | ಪರೈಯನ್ |
| ಬವುರಿ | ಕೊರಗ | ಪರ್ವನ್ |
| ಬೆಲ್ಲರ | ಕುಡುಂಬನ್ | ಪುಲಯನ್ |
| ಬೈಗರಿ | ಕುರುವನ್ | ಪುಥಿರೈವನನ್ |
| ಚಚಟಿ | ಮಾದಾರಿ | ರಾಣಿಯಾರ್ |
| ಚಕ್ಕಲಿಯನ | ಮಾದಿಗ | ರೆಲ್ಲಿ |
| ಚಲವಾದಿ | ಮೈಲ | ಸಮಗಾರ |
| ಚಮ್ಮಾರ | ಮಾಳ | ಸಂಬನ್ |
| ಚಾಂಡಾಲ | ಮಾಳ ದಾಸು | ಸಪಾರಿ |
| ಚೆರುಮನ | ಮಾತಂಗಿ | ಸೆಮ್ಮನ್ |

| | | |
|---|---|---|
| ದಂಡಸಿ | ಮೊಗೇ | ಥೋಟಿ |
| ದೇವೇಂದ್ರ ಕುಲಥನ್ | ಮುಚಿ | ತಿರುವಳ್ಳುವರ್ |
| ಘಸಿ | ಮುಂಡಲ | ವಲ್ಲವನ್ |
| ಗೊಡಗಲಿ | ನಲಕೆಯವ | ವಾಲ್ಮೀಕಿ |
| ಗೊಡರಿ | ನಾಯದಿ | ವೆಟ್ಟುವನ್ |
| ಗೊಡ್ಡ | ಪಾಗದಾಯಿ | |

(೨) ಪ್ರಾಂತ್ಯದ ವಿಧಾನ ಸಭೆಗೆ ಹಿಂದುಳಿದ ಪ್ರದೇಶಗಳ ಮತ್ತು ಹಿಂದುಳಿದ ಪಂಗಡಗಳ ಪ್ರತಿನಿಧಿಯ ಚುನಾವಣೆ ಭಾರತ ಸರಕಾರದ ೧೯೩೫ ಕಾಯ್ದೆ ಪ್ರಕಾರ ನಿಯಮಿಸಲ್ಪಟ್ಟ ಯಾವುದೇ ವಿಶಿಷ್ಟ ಮತಕ್ಷೇತ್ರವನ್ನು ಹೊರತುಪಡಿಸಿ, ಎಲ್ಲ ಪ್ರಾಂತ್ಯಗಳಲ್ಲಿ ಬರುವ ಪರಿಶಿಷ್ಟ ಜಾತಿಗಳು :

| | | |
|---|---|---|
| ಅಮದನ್ | ಕಟ್ಟುನಾಯಕನ್ | ಕುರುಮನ್ |
| ಡೊಂಬೊ | ಕುಡಿಯ | ಮಲಸರ್ |
| ಕಡನ್ | ಕುಡುಬಿ | ಮವಿಲನ್ |
| ಕರಿಂಪಲನ್ | ಕುರಿಚ್ಚನ್ | ಪನೊ |

## ಭಾಗ – II ಮುಂಬೈ

**(೧) ಪ್ರಾಂತ್ಯದಾದ್ಯಂತ ಇರುವ ಪರಿಶಿಷ್ಟ ಜಾತಿಗಳು :**

| | | |
|---|---|---|
| ಅಸೋಡಿ | ಢೋಹರ | ಮಂಗ ಗಾರುಡಿ |
| ಬಾಕಡ | ಗರೋಡೆ | ಮಘವಲ್ ಇಲ್ಲವೆ ಮಂಘ್ವಾರ |
| ಭಂಬಿ | ಹಲ್ಲೀರ | |
| ಭಂಗಿ | ಹಲಸಾರ ಇಲ್ಲವೆ ಹಸ್ಲಾರ | ಮಿನಿಮಾದಿಗ |
| ಚಕ್ರವಡ್ಯ–ದಾಸರ | ಹುಲಸವರ | ಮುಕ್ರಿ |
| ಚಲವಾದಿ | ಹೊಲಯ | ನದಿಯ |
| ಚಂಬಾರ ಇಲ್ಲವೆ ಮೂಚಿಗಾರ ಇಲ್ಲವೆ ಸಮಗಾರ | ಖಲ್ಪ | ಶೆಣ್ವ |
| | ಕೊಲ್ಚ ಇಲ್ಲವೆ ಕೊಲ್ಘ | ಶಿಂಧವ |
| | ಕೋಳಿ–ಢೋರ | ಶಿಂಘದವ ಇಲ್ಲವೆ ಶಿಂಗದ್ಯ |
| ಚೆನ–ದಾಸರು | ಲಿಂಗಾಡೇರ | |
| ಚುಹರ ಇಲ್ಲವೆ ಚುಹ್ರಾ | ಮಾದಿಗ, ಇಲ್ಲವೆ ಮಾಂಗ | ಸೂಚಿ |

| | | |
|---|---|---|
| ದಕಲೇ | ಮಹರ | ತಿಮಲಿ |
| ಧೇಡ | | ತುರಿ |
| ಧೇಗು–ಮೇಗು | | ವಂಕಾರ್ |
| | | ವಿಠೊಲಿಯ |

(೨) ಅಹಮದಾಬಾದ, ಕೈರಾ, ಬ್ರೋಚ್ ಮತ್ತು ಪಂಚಮಹಲ್, ಸೂರತ್ ಜಿಲ್ಲೆಗಳನ್ನು ಬಿಟ್ಟು ಪ್ರಾಂತ್ಯದ ತುಂಬ

– ಮೋಚಿ

(೩) ಕೆನರಾ ಜಿಲ್ಲೆಯಲ್ಲಿ

– ಕೋಟೆಗಾರ

## ಭಾಗ – III ಬಂಗಾಳ

**ಪ್ರಾಂತ್ಯದಾದ್ಯಂತ ಇರುವ ಪರಿಶಿಷ್ಟ ಜಾತಿಗಳು :**

| | | |
|---|---|---|
| ಅಗರಿಯ | ಭೂಮಿಜಿ | ಗೊಪ್ರಿ |
| ಬಾಗ್ದಿ | ಬಿಂದ್ | ಹದಿ |
| ಬಹೇಲಿಯ | ಬಿಂಝಿಯ | ಹಾಜಂಗ |
| ಬೈತಿ | ಚಮರ | ಹಲಾಲಖೋರ |
| ಬೌರಿ | ಧೇನುವರ | ಹರಿ |
| ಬೆಡಿಯ | ಧೋಬಾ | ಹೊಜಲಿಯ ಕೈಬರ್ಟ |
| ಬೆಲ್ದಾರ | ದೋಯಿ | ಝೂಲೊ ಮಾಲೊ ಇಲ್ಲವೆ ಮಾಲೊ |
| ಬೆರುವ | ದೋಮ | ಕದಿರ |
| ಭಟಿಯ | ದೊಸದ | ಕಲ್ಪಹರಿಯ |
| ಭೂಮಲಿ | ಗರೊ | ಕನ, ಕಂಥ |
| ಭೂಯಿಯ | ಘಾಸಿ | ಕಂಡ್ರ |
| ಕಂಧ್ | ಕಂದ್ರ | |
| ಕವೋರಾ | ಲೋಧ | ಓರಾಂವೊ |
| ಕಪೂರಿಯ | ಲಹೋರ | ಪಲಿಯ |
| ಕರೆಂಗ | ಮಹ್ಲಿ | ಪಣ |
| ಕಸ್ಥ | ಮಲ | ಪಸಿ |
| ಕೌರ | ಮಹರ್ | ಪತ್ನಿ |
| ಖೈರ | ಮಲ್ಲಹ | ಪೊಡ |
| ಖತಿಕ | ಮೆಚ್ | ರಭ |
| ಕೋಚ | ಮೆಹ್ತೋರ್ | ರಾಜವಂಶಿ |
| ಕೊಸಾಯಿ | ಮುಚಿ | ರಾಜವರ |

| | | |
|---|---|---|
| ಕೊನವರ | ಮುಂಡ | ಸಂತಾಲ |
| ಕೋರ | ಮುಸಹರ | ಸುನ್ರಿ |
| ಕೋತಲ | ನಾಗೇಸಿಯ | ತಿಯಾರ |
| ಲಾಲಬೇಗಿ | ನಾಮಸೂದ್ರ | ತುರಿ |
| | ನತ್ | |
| | ನುನಿಯ | |

## ಭಾಗ – IV
## ಸಂಯುಕ್ತ ಪ್ರಾಂತ್ಯಗಳು

**(೧) ಪ್ರಾಂತ್ಯದಾದ್ಯಂತ ಇರುವ ಪರಿಶಿಷ್ಟ ಜಾತಿಗಳು :**

| | | |
|---|---|---|
| ಅಗ್ರಿವ | ಚಮಾರ | ಖರ್ವಾರ (ಬೆನಬನ್ಸಿ ಒಟ್ಟು) |
| ಅಹೇರಿಯ | ಚೇರೊ | ಖತಿಕ |
| ಬದಿ | ದಬಗಾರ | ಕೋಲ |
| ಬಧಿಕ | ಧಂಗರ | ಕೊರ್ವ |
| ಬಹೇಲಿಯ | ಧನುಕ (ಭಂಗಿ) | ಲಾಲಬೇಗಿ |
| ಬಜನಿಯ | ಧರ್ಕಾರ | ಮಝುವರ |
| ಬಜಗಿ | ಧೋಬಿ | ನಟ |
| ಬಲಹರ | ಧೋಮ | ಪಂಖ |
| ಬಾಲ್ಮೀಕಿ | ಡೊಮರ | ಪರಹಿಯ |
| ಬನ್ಮನುಸ | ಘರಮಿ | ಪಸಿ |
| ಬಂಸ್ಪೋರ | ಘಸಿಯ | ಪಾತರಿ |
| ಬರವರ | ಗುವಲ | ರಾವತ |
| ಬಸೋರ | ಹಬುರ | ಸಹರ್ಯ |
| ಬಾವರಿಯ | ಹರಿ | ಸನೌರ್ಯ |
| ಬೆಲ್ದರ | ಹೆಲ | ಸಂಸಿಯ |
| ಬೆಂಗಾಲಿ | ಕೈರಹ | ಶಿಲ್ಪಕರ |
| ಬೇರ್ಯ | ಕಲಬಝು | ಧಾರು |
| ಭಂತು | ಕಂಜಿರ | ತುರೈಹ |
| ಭೂಯಿಯ | ಕಪರಿಯ | |
| ಭೂಯಿಯಾರ | ಕರ್ವಾಲ | |
| ಬೋರಿಯ | ಖರೋಟ | |

**೨) ಆಗ್ರಾ, ಮೀರತ್ ಮತ್ತು ರೋಹಿಲಖಂಡ ಭಾಗಗಳನ್ನು ಬಿಟ್ಟು ಪ್ರಾಂತ್ಯದ ಉಳಿದ ಭಾಗದಲ್ಲಿ ಇರುವುದು** – ಖೋರಿ

## ಭಾಗ – V

## ಪಂಜಾಬ್

**ಪ್ರಾಂತ್ಯದಾದ್ಯಂತ ಇರುವ ಪರಿಶಿಷ್ಟ ಜಾತಿಗಳು :**

| | | |
|---|---|---|
| ಅದಧರ್ಮಿಸ | ಮರಿಜ ಇಲ್ಲವೆ ಮರೇಚ | ಖತಿಕ |
| ಬಾವರಿಯ | ಬೆಂಗಾಲಿ | ಕೋರಿ |
| ಚಮಾರ | ಬರಾರ | ನಟ |
| ಚುಹ್ರಾ ಇಲ್ಲವೆ ಬಾಲ್ಮೀಕಿ | ಬಝಿಗರ | ಪಸಿ |
| ಡಾಗಿ ಮತ್ತು ಕೋಳಿ | ಬಾಂಜ್ರಾ | ಪೆರ್ನ |
| ದುಮ್ನ | ಛನಲ | ಸೆಪೆಲ |
| ಓಡ | ಧನಕ್ | ಸಿರ್ಕಿಬಂದ |
| ಸಂಸಿ | ಗಾಗ್ರಾ | ಮೇಘ |
| ಸರೇರ | ಗಂಢಿಲ | ರಾಮದಾಸಿ |

## ಭಾಗ – VI

## ಬಿಹಾರ

**ಪರಿಶಿಷ್ಟ ಜಾತಿಗಳು :**

(೧) ಪ್ರಾಂತ್ಯದ ಎಲ್ಲ ಕಡೆ

| | | |
|---|---|---|
| ಚಮಾರ | ಹಲಾಲಖೋರ | ಮೋಚಿ |
| ಚೌಪಾಲ | ಹರಿ | ಮುಸಹರ |
| ಧೋಬಿ | ಕಂಜರ | ನಟ |
| ದುಸಧ | ಕುರರಿಯಾದ | ಪಸಿ |
| ಡೊಮ | ಲಾಲಬೇಗಿ | |

(೨) ಪಾಟ್ನಾ ಮತ್ತು ತಿರ್‌ಹಟ್ ವಿಭಾಗಗಳಲ್ಲಿ ಮತ್ತು ಬಾಗಲ್ಪುರ, ಮೋಂಘೀರ, ಪಳಮಾವು ಮತ್ತು ಪೂರ್ನಿಯ ಜಿಲ್ಲೆಗಳಲ್ಲಿ :

| | | |
|---|---|---|
| ಬಾವರಿ | ಭೂಮಿಜ | ರಾಜವರ |
| ಭೋಗ್ತ | ಘಾಸಿ | ತುರಿ |
| ಭೌಯ | ಪನ್ | |

(೩) ಮನುಭೂಮ ಜಿಲ್ಲೆಯ ಧನಬಾದ ಉಪವಿಭಾಗದಲ್ಲಿ ಮತ್ತು ಮಧ್ಯ ಮನಭೂಮ ಸಾಮಾನ್ಯ ಗ್ರಾಮೀಣ ಮತಕ್ಷೇತ್ರದಲ್ಲಿ ಪುರುಲಿಯ ಮತ್ತು ರಘುನಾಥಪುರ ಮುನ್ಸಿಪಾಲಿಟಿಗಳಲ್ಲಿ:

| | | |
|---|---|---|
| ಬಾವುರಿ | ಘಾಸಿ | ರಾಜವರ |
| ಭೋಗ್ತ | ಪಣ | ತುರಿ |
| ಭ್ಯೂಯ | | |

## ಭಾಗ – VII
## ಕೇಂದ್ರೀಯ ಪ್ರಾಂತ್ಯಗಳು ಮತ್ತು ಬೇರಾರ

| **ಪರಿಶಿಷ್ಟ ಜಾತಿಗಳು** | **ಸ್ಥಾನಗಳು** |
|---|---|
| ಬಸೋರ ಇಲ್ಲವೆ ಬರುಡ | |
| ಚಮಾರ | ಪ್ರಾಂತ್ಯಗಳ ಎಲ್ಲೆಡೆ |
| ಡೊಮ | |
| ಗಂಡ | |
| ಮಾಂಗ್ | |
| ಮೆಹ್ತಾರ ಇಲ್ಲವೆ ಭಂಗಿ | ಪ್ರಾಂತ್ಯದ ಎಲ್ಲೆಡೆ |
| ಮೋಚಿ | |
| ಸತ್ನಾಮಿ | |
| ಔಧೇಲಿಯ | : ಬಿಲಾಸಪುರ ಜಿಲ್ಲೆಯಲ್ಲಿ |
| ಬಹ್ನಾ | : ಅಮರಾವತಿ ಜಿಲ್ಲೆಯಲ್ಲಿ |
| ಬಲಾಯಿ ಅಥವಾ ಬಲಾಯಿ | : ಬೆರಾರ ವಿಭಾಗ ಮತ್ತು ಬಾಲಘಾಟ, ಬಾಂದರ, ಬೇತುಲ, ಚಾಂದ, ಛಿಂದವಾರಾ, ಹೊಶಾಂಗಬಾದ, ಜಬಲಪೂರ, ಮಂಡ್ಲಾ, ನಾಗಪುರ, ನಿಮರ, ಸೌಗೋರ ಮತ್ತು ವಾರ್ಧಾ ಜಿಲ್ಲೆಗಳಲ್ಲಿ. |
| ಬೇಡರ | : ಅಕೋಲ, ಅಮರಾವತಿ, ಬುಲ್ಡಾನ್ ಜಿಲ್ಲೆಗಳಲ್ಲಿ |
| ಚಡರ | : ಭಂಡಾರ ಮತ್ತು ಸೌಗಾರ ಜಿಲ್ಲೆಗಳಲ್ಲಿ |
| ಚೌಹಾನ | : ದುರ್ಗಾ ಜಿಲ್ಲೆಯಲ್ಲಿ |
| ದಹಾಯತ | : ಸೌಗಾರ ಜಿಲ್ಲೆಯ ದಾಮೋಹ ಉಪವಿಭಾಗದಲ್ಲಿ |
| ದೇವರ | : ಬಿಲಾಸಪುರ, ದುರ್ಗ ಮತ್ತು ರಾಯಪುರ ಜಿಲ್ಲೆಗಳಲ್ಲಿ |
| ಧನುಕ | : ದಾಮೋಹ ಉಪವಿಭಾಗ ಬಿಟ್ಟು ಸೌಗಾರ ಜಿಲ್ಲೆಯಲ್ಲಿ. |
| ಧಿಮರ | : ಭಂಡಾರ ಜಿಲ್ಲೆಯಲ್ಲಿ |
| ಧೋಬಿ | : ಭಂಡಾರ ಬಿಲಾಸಪುರ, ರಾಯ್‌ಪುರ ಮತ್ತು ಸೌಗಾರ ಜಿಲ್ಲೆಗಳಲ್ಲಿ ಮತ್ತು ಹೋಶಂಗಾಬಾದ ಮತ್ತು ಹೋಶಾಂಗಬಾದ ಜಿಲ್ಲೆಯ ಸೆಯಾನಿ– ಮಾಳ್ವಾ ತಾಲೂಕುಗಳಲ್ಲಿ. |
| ಡೋಹರ | : ಬೆರಾರ ವಿಭಾಗ ಮುತ್ತು ಬಾಲಘಾಟ, ಭಂಡಾರಾ, ಚಂದಾ, ನಾಗಪುರ ಮತ್ತು ವರ್ಧಾ ಜಿಲ್ಲೆಗಳಲ್ಲಿ. |
| ಘಾಸಿಯ | : ಬೇರಾರ ವಿಭಾಗ ಮತ್ತು ಬಾಲ್‌ಘಾಟ್, ಭಂಡಾರಾ, ಬಿಲಾಸಪುರ, ಚಂದಾ ದುರ್ಗಾ, ನಾಗಪುರ, ರಾಯಪುರ ಮತ್ತು ವಾರ್ಧಾ ಜಿಲ್ಲೆಗಳಲ್ಲಿ. |
| ಹೊಲಿಯ | : ಬಾಲಘಾಟ ಮತ್ತು ಭಾಂಡಾರ ಜಿಲ್ಲೆಗಳಲ್ಲಿ |
| ಜಂಗಮ | : ಭಂಡರಾ ಜಿಲ್ಲೆಯಲ್ಲಿ |

| | | |
|---|---|---|
| ಕೈಕಾಡಿ | : | ಬೇರಾರ ವಿಭಾಗ ಮತ್ತು ಭಂಡಾರಾ, ಚಂದಾ, ನಾಗಪುರ ಮತ್ತು ವರ್ಧಾ ಜಿಲ್ಲೆಗಳಲ್ಲಿ. |
| ಕಾಟಿಯಾ | : | ಬೇರಾರ ವಿಭಾಗ, ಬಾಲಘಾಟ, ಬೇತುಲ, ಭಂಡರಾ, ಬಿಲಾಸಪುರ, ಚಂದಾ, ದುರ್ಗ್, ನಾಗಪುರ, ನಿಮಾರ, ರಾಯಪುರ ಮತ್ತು ವರ್ಧಾ ಜಿಲ್ಲೆಗಳಲ್ಲಿ ಹೋಶಂಗಾಬಾದ ಮತ್ತು ಹೋಶಂಗಾಬಾದ ಜಿಲ್ಲೆಯ ಸಿಯಾನಿ ಮಾಳ್ವ ತಹಸೀಲ್‌ಗಳಲ್ಲಿ, ಸಿಯಾನಿ ಉಪವಿಭಾಗವನ್ನುಳಿದು ಛಿಂದವಾರ ಜಿಲ್ಲೆಗಳಲ್ಲಿ ಮತ್ತು ದಾಮೋಹ ಉಪವಿಭಾಗವನ್ನುಳಿದು ಸೌಗೋರ ಜಿಲ್ಲೆಯಲ್ಲಿ. |
| ಖಂಗರ್ | : | ಭಂಡಾರಾ, ಬುಲ್ಡಾನ ಮತ್ತು ಸೌಗೋರ ಜಿಲ್ಲೆಗಳಲ್ಲಿ, ಹೊಶಂಗಾಬಾದ ಜಿಲ್ಲೆ ಮತ್ತು ಹೊಶಂಗಾಬಾದ ಜಿಲ್ಲೆಯ ಸಿಯಾನಿ –ಮಾಳ್ವ ತಹಸೀಲಗಳಲ್ಲಿ. |
| ಖಟಿಕ | : | ಬೆರಾರ ವಿಭಾಗದಲ್ಲಿ, ಬಾಲಘಾಟ, ಭಂಡಾರಾ, ಚಂದಾ, ನಾಗಪುರ, ವರ್ಧಾ ಜಿಲ್ಲೆಗಳಲ್ಲಿ, ಹೊಶಂಗಾಬಾದ ಜಿಲ್ಲೆಯ ಹೊಶಂಗಾಬಾದ ತಹಸೀಲು, ಸಿಯಾನಿ ಉಪವಿಭಾಗ ಹೊರತುಪಡಿಸಿ, ಛಿಂದವಾರ ಜಿಲ್ಲೆ ಮತ್ತು ದಾಮೋಹ ಉಪವಿಭಾಗ ಹೊರತುಪಡಿಸಿ ಸೌಗಾರ ಜಿಲ್ಲೆಯಲ್ಲಿ. |
| ಕೋಲಿ | : | ಭಂಡಾರ ಮತ್ತು ಚಂದಾ ಜಿಲ್ಲೆಗಳಲ್ಲಿ |
| ಕೋರಿ | : | ಅಮರೋಹಿ, ಬಾಲಘಾಟ, ಬೇತುಲ, ಭಂಡಾರ, ಬುಲ್ಡಾನ, ಛಿಂದವಾರ, ಜಬ್ಬಲ್ಪುರ, ಮಂಡ್ಲಾ, ನಿಮಾರ, ರಾಯಪುರ ಸೌಗೋರ ಜಿಲ್ಲೆಗಳಲ್ಲಿ ಮತ್ತು ಹರ್ಡಾ ಮತ್ತು ಸೋಹಾಗಪುರ ತಹಸೀಲಗಳನ್ನು ಬಿಟ್ಟು ಹೊಶಂಗಾಬಾದ ಜಿಲ್ಲೆಯಲ್ಲಿ. |
| ಕುಮ್ಹಾರ | : | ಭಂಡಾರ ಮತ್ತು ಸೌಗೋರ ಜಿಲ್ಲೆಗಳಲ್ಲಿ ಮತ್ತು ಹೋಶಂಗಾಬಾದ ಜಿಲ್ಲೆಯ ಹೊಶಂಗಾಬಾದ ಮತ್ತು ಸಿಯಾನಿ – ಮಾಳ್ವ ತಹಶೀಲುಗಳಲ್ಲಿ |
| ಮಾಡ್ಗಿ | : | ಬೆರಾರ ವಿಭಾಗದಲ್ಲಿ ಮತ್ತು ಬಾಲಘಾಟ, ಭಂಡಾರ, ಚಂದಾ, ನಾಗಪುರ ಮತ್ತು ವರ್ಧಾ ಜಿಲ್ಲೆಗಳಲ್ಲಿ. |
| ಮಾಳ | : | ಬಾಲಘಾಟ, ಬೇತುಲ, ಛಿಂದವಾರ, ಹೋಶಂಗಾಬಾದ, ಜಬಲ್ಪುರ, ಮಂಡಳ, ನಿಮರ, ಸೌಗೋರ ಜಿಲ್ಲೆಗಳಲ್ಲಿ ಮೋಹರ ಇಲ್ಲವೆ ಹೊಶಂಗಾಬಾದ ಜಿಲ್ಲೆಯ ಹರ್ದ ಮತ್ತು ಸೋಹಾಗಪುರ |
| ಮಾಹರ | : | ತಹಸೀಲುಗಳನ್ನು ಹೊರತುಪಡಿಸಿ ಪ್ರಾಂತ್ಯದ ತುಂಬ |
| ನಗರ್ಚಿ | : | ಬಾಲಘಾಟ, ಭಂಡಾರ, ಛಿಂದವಾರ, ಮಂಡಲ, ನಾಗಪುರ ಮತ್ತು ರಾಯಪುರ ಜಿಲ್ಲೆಗಳಲ್ಲಿ. |
| ಓಝಾ | : | ಬಾಲಘಾಟ, ಭಂಡಾರ ಮತ್ತು ಮಂಡಲ ಜಿಲ್ಲೆಗಳಲ್ಲಿ ಹೊಶಂಗಾಬಾದ ಜಿಲ್ಲೆಯ ಹೊಶಂಗಾಬಾದ ತಹಶೀಲಿನಲ್ಲಿ |
| ಪಂಕಾ | : | ಬೆರಾರ ವಿಭಾಗ, ಬಾಲಘಾಟ, ಬಿಲಾಸಪುರ, ಚಂದಾ, ದುರ್ಗ, ನಾಗಪುರ, ರಾಯಪುರ, ಸೌಗೋರ ಮತ್ತು ವರ್ಧಾ ಜಿಲ್ಲೆಗಳಲ್ಲಿ ಮತ್ತು ಸಿಯಾನಿ ಉಪವಿಭಾಗ ಹೊರತುಪಡಿಸಿ ಛಿಂದವಾರ ಜಿಲ್ಲೆಯಲ್ಲಿ. |

ಪರ್ಧಿ : ಹೋಶಂಗಾಬಾದ ಜಿಲ್ಲೆಯ ನರಸಿಂಗಪುರ ಉಪವಿಭಾಗದಲ್ಲಿ.
ಪ್ರಧಾನ : ಬೆರಾರ ವಿಭಾಗದಲ್ಲಿ ಭಂಡಾರ, ಚಂದಾ, ನಾಗಪುರ, ನಿಮಾರ, ರಾಯಪುರ ಮತ್ತು ವರ್ಧಾ ಜಿಲ್ಲೆಗಳಲ್ಲಿ ಮತ್ತು ಸಿಯಾನಿ ಉಪವಿಭಾಗ ಹೊರತುಪಡಿಸಿ ಛಿಂದವಾರ ಜಿಲ್ಲೆಯಲ್ಲಿ
ರಝ್ಘರ್ : ಹೋಶಂಗಾಬಾದ ಜಿಲ್ಲೆಯ ಸೊಹಾಗಪುರ ತಹಸೀಲದಲ್ಲಿ

## ಭಾಗ – VIII : ಅಸ್ಸಾಮ್

**ಪರಿಶಿಷ್ಟ ಜಾತಿಗಳು :**

**(೧) ಅಸ್ಸಾಮ ಕಣಿವೆಯಲ್ಲಿ**

| | | |
|---|---|---|
| ನಾಮಸೂದ್ರ | ಹಿರಾ | ಮೆಹತರ ಇಲ್ಲವೆ ಭಂಗಿ |
| ಕೈಬರ್ತಾ | ಲಾಲಬೇಗಿ | ಬನಸ್ಫೋರ |
| ಬನಿಯಾ ಇಲ್ಲವೆ | | |
| ಬೃತ್ತಿಯಾಲಬನಿಯಾ | | |

**(೨) ಸುರ್ಮಾ ಕಂದರದಲ್ಲಿ**

| | | |
|---|---|---|
| ಮಾಲಿ ಇಲ್ಲವೆ ಭೂಮಾರಿ | ಸೂತ್ರಧಾರ | ಕೈಬರ್ತಾ ಇಲ್ಲವೆ ಜಾಲಿಯಾ |
| ಧುಪಿ ಇಲ್ಲವೆ ಧೋಬಿ | ಮುಚಿ | ಲಾಲಬೇಗಿ |
| ಡುಗ್ಲಾ ಇಲ್ಲವೆ ಧೋಲಿ | ಪಟ್ನಿ | ಮೆಹ್ತರ ಇಲ್ಲವೆ ಭಂಗಿ |
| ಝೂಲೊ ಮತ್ತು ಮಾಲೊ | ನಾಮಸೂದ್ರಾ | ಬನಸ್ಪೋರ |
| ಮಹಾರ | | |

## ಭಾಗ – IX : ಒಡಿಸ್ಸಾ

**ಪರಿಶಿಷ್ಟ ಜಾತಿಗಳು :**

(೧) ಪ್ರಾಂತದ ತುಂಬ

| | | |
|---|---|---|
| ಆಧಿ – ಆಂಧ್ರ | ಚಮಾರ | ಘುಸುರಿಯಾ |
| ಔಧೇಲಿಯಾ | ಚಾಂಡಾಲ | ಗೊಡಗಲಿ |
| ಬಾರಿಕಿ | ದಂಡಸಿ | ಗೊಡರಿ |
| ಬನ್ಸೋರ ಇಲ್ಲವೆ | ದೇವರ | ಗೋದ್ರ |
| ಬುರುಡ | | |
| ಬಾವುರಿ | ದೋಭಾ ಅಥವಾ ಧೋಬಿ ಗೋಖ | |
| ಚಚಟಿ | ಗಂಡಾ | ಹಡ್ಡಿ ಇಲ್ಲವೆ ಹರಿ |
| ಇರಿಕ | ಮಾಳ | ಪಂಚಮ |
| ಜಗ್ಗಲಿ | ಮಂಗ್ | ಪಂಕಾ |
| ಕಾಂಡ್ರಾ | ಮಂಗನ್ | ರೆಲ್ಲಿ |

| | | |
|---|---|---|
| ಕಾಟಿಯಾ | ಮೆಹ್ತ್ರಾ ಅಥವಾ ಮಹಾರ್ | ಸಪಾರಿ |
| ಕೇಳಾ | ಮೆಹ್ತರ ಅಥವಾ ಭಂಗಿ | ಸತ್ನಾಮಿ |
| ಕೊಡಲೊ | ಮೋಚಿ ಅಥವಾ ಮುಲಚಿ | ಸಿಯಾಲ |
| ಮದಾರಿ | ಪೈದಿ | ವಾಲ್ಮೀಕಿ |
| ಮಾದಿಗ | ಪೈಂಡ | |
| ಮಹುರಿಯ | ಪಮಿದಿ | |

೨) ಖೊಂಡಮಾ ಜಿಲ್ಲೆಯ, ಸಂಬಲ ಜಿಲ್ಲೆ ಮತ್ತು ೧೯೩೬ರ ಭಾರತ ಸರಕಾರದ ಆಜ್ಞೆ (ಒಡಿಸ್ಸಾ ರಾಜ್ಯ ಘಟನೆ)ಯ ಪ್ರಕಾರ ವಿಶಾಖಪಟ್ಟಣ ಮತ್ತು ಮದ್ರಾಸ್ ಪ್ರೆಸಿಡೆನ್ಸಿಯಲ್ಲಿರುವ ಗಂಜಾಮ್ ಏಜನ್ಸಿಗಳಿಂದ ಒಡಿಸ್ಸಾಕ್ಕೆ ವರ್ಗಾಯಿಸಲ್ಪಟ್ಟ ಪ್ರದೇಶಗಳನ್ನು ಹೊರತುಪಡಿಸಿ ಪ್ರಾಂತದ ತುಂಬೆಲ್ಲ:

ಪಣ ಇಲ್ಲವೆ ಪಣೊ

೩) ಕಂದಮಲ ಜಿಲ್ಲೆ ಮತ್ತು ಮೇಲೆ ಹೇಳಿದ ಏಜನ್ಸಿಗಳಿಂದ ಒಡಿಸಾಕ್ಕೆ ವರ್ಗಾಯಿಸಲಾದ ಪ್ರದೇಶಗಳನ್ನು ಒಟ್ಟು ಪ್ರಾಂತದ ತುಂಬ :

ಡೋಮ ಮತ್ತು ಡಂಬೊ

೪) ಸಂಬಲಪುರ ಜಿಲ್ಲೆಯನ್ನು ಹೊರತುಪಡಿಸಿ ಪ್ರಾಂತದ ತುಂಬ :

| | | |
|---|---|---|
| ಬಾವುರೊ | ಭೂಮಿಜಿ | ತುರಿ |
| ಭೂಯಿಯಾ | ಘಾಸಿ ಇಲ್ಲವೆ ಘಾಸಿಯ | |

೫) ಸಂಬಲಪುರ ಜಿಲ್ಲೆಯ ನವಪಾರ ಉಪವಿಭಾಗದಲ್ಲಿ

| | | |
|---|---|---|
| ಕೋರಿ | ನಾಗರ್ಚಿ | ಪ್ರಧಾನ |

ಇದೊಂದು ಭಯಾನಕ ಪಟ್ಟಿಯಾಗಿದ್ದು ಇದರಲ್ಲಿ ೪೨೯ ಕೋಮುಗಳು ಕೂಡಿರುತ್ತವೆ. ಅಂಕಿ ಸಂಖ್ಯೆಯಲ್ಲಿ ಹೇಳುವುದಾದರೆ, ೫೦–೬೦ ಮಿಲಿಯ ಜನರು ಅಸ್ಪೃಶ್ಯರಾಗಿದ್ದು ಅವರ ಸ್ಪರ್ಶದಿಂದ ಹಿಂದೂಗಳಿಗೆ ಮೈಲಿಗೆ ತಟ್ಟುತ್ತದೆ. ನಿಜಕ್ಕೂ ಭಾರತದಲ್ಲಿ ಸಿಗುವ ಕೋಟ್ಯಾನುಕೋಟಿ ಜನರ ವಂಶಪಾರಿಕ ಅಸ್ಪೃಶ್ಯತೆಯ ಮುಂದೆ ಆದಿ ಮತ್ತು ಪ್ರಾಚೀನ ಸಮಾಜಗಳಲ್ಲಿದ್ದ ಅಸ್ಪೃಶ್ಯತೆ ಗೌಣವಾಗಿ ತೋರುತ್ತದೆ. ಹಿಂದೂಗಳಲ್ಲಿ ತೋರುವ ಅಸ್ಪೃಶ್ಯತೆ ವಿಶಿಷ್ಟ ಪ್ರಕಾರದ್ದಿರುತ್ತದೆ. ಜಗತ್ತಿನ ಇತಿಹಾಸದಲ್ಲಿ ಇದಕ್ಕೆ ಸಮನಾದ ಅಸ್ಪೃಶ್ಯತೆ ಇರುವುದಿಲ್ಲ. ಕೇವಲ– ಇದು ಏಶಿಯಾ ಮತ್ತು ಯುರೋಪು ಖಂಡಗಳಲ್ಲಿಯ ಜನಸಂಖ್ಯೆಗಿಂತ ದೊಡ್ಡದಿರುತ್ತದೆ ಎಂಬ ಸಂಖ್ಯೆಯ ಕಾರಣಕ್ಕಾಗಿ ಅಷ್ಟೇ ಅಲ್ಲ, ಇನ್ನೂ ಬೇರೆ ಕಾರಣಗಳಿಗಾಗಿ ಅದು ವಿಶಿಷ್ಟವಾಗಿರುತ್ತದೆ.

೪೨೯ ಅಸ್ಪೃಶ್ಯ ವರ್ಗಗಳನ್ನು ಬಾಧಿಸುವ ಹಿಂದೂ ಅಸ್ಪೃಶ್ಯತಾ ಪದ್ಧತಿಯು ಕೆಲವು ವಿಶಿಷ್ಟ ಲಕ್ಷಣಗಳನ್ನು ಹೊಂದಿರುತ್ತದೆ. ಅವು ಹಿಂದೂಗಳಲ್ಲದ, ಆದಿ ಇಲ್ಲವೆ ಪ್ರಾಚೀನ ಕಾಲದ ಯಾವುದೇ ವರ್ಗದವರು ಆಚರಿಸಿದ ರೂಢಿಗಳಲ್ಲಿ ಕಾಣಸಿಗುವುದಿಲ್ಲ.

ಹಿಂದೂಗಳಲ್ಲದ ಸಮಾಜಗಳು ಮೈಲಿಗೆಯಿಂದ ರಕ್ಷಿಸಿಕೊಳ್ಳುವ ಉದ್ದೇಶದಿಂದ ವಿಧಿಸಿದ ಪ್ರತ್ಯೇಕತೆ ತಾರ್ಕಿಕವಲ್ಲದಿದ್ದರೂ ಕನಿಷ್ಠ ಪಕ್ಷ ವಿವೇಕಕ್ಕೆ ವಿದಿತವಾಗುವಂತಹದಿರುತ್ತದೆ. ಅದು ಹುಟ್ಟು, ಮದುವೆ, ಸಾವು ಮುಂತಾದವುಗಳಿಗೆ ಸಂಬಂಧಿಸಿದ್ದು, ಅದಕ್ಕೆ ವಿಶಿಷ್ಟ ಕಾರಣ ಉಂಟು. ಆದರೆ ಹಿಂದೂ ಸಮಾಜ ವಿಧಿಸಿದ ಪ್ರತ್ಯೇಕತೆಗೆ ಯಾವುದೇ ಕಾರಣ ಇರುವುದಿಲ್ಲ.

ಆದಿಕಾಲದಲ್ಲಿ ಆಚರಿಸಿದ ಮೈಲಿಗೆ ತಾತ್ಪೂರ್ತಿಕ ಅವಧಿಯದಾಗಿತ್ತು. ಉಣ್ಣುವ, ಕುಡಿಯುವ ಸಹಜ ಸ್ವಾಭಾವಿಕ ಕ್ರಿಯೆಯಲ್ಲಿ ತೊಡಗಿದ ಸಮಯದಲ್ಲಿ ಆಪತ್ತು ಒದಗಿದಾಗ, ಇಲ್ಲವೆ ವ್ಯಕ್ತಿಯ ಜೀವನದಲ್ಲಿ ಹುಟ್ಟು, ಸಾವು ಮತ್ತು ರಜಸ್ವಲೆಯಾಗುವಂಥ ನೈಸರ್ಗಿಕ ಪ್ರಸಂಗಗಳು ಒದಗಿದಾಗ ಮೈಲಿಗೆಯನ್ನು ಆಚರಿಸಲಾಗುತ್ತಿತ್ತು. ಮೈಲಿಗೆಯ ಅವಧಿ ತೀರಿದ ಬಳಿಕ ಮತ್ತು ಶುದ್ಧೀಕರಣ ವಿಧಿಗಳು ಮುಗಿದ ಬಳಿಕ ಮೈಲಿಗೆ ಹೋಗಿಬಿಡುತ್ತಿತ್ತು ಮತ್ತು ವ್ಯಕ್ತಿ ಎಂದಿನಂತೆ ಶುದ್ಧ ಮತ್ತು ಸಮಾಜದಲ್ಲಿ ಬೆರೆಯಲು ಯೋಗ್ಯವಾಗುತ್ತಿದ್ದನು. ಆದರೆ ೫೦-೬೦ ಮಿಲಿಯ ಭಾರತೀಯರ ಅಸ್ಪೃಶ್ಯತೆಯು ಹುಟ್ಟು ಸಾವು ಮುಂತಾದ ಪ್ರಸಂಗಗಳಲ್ಲಿ ಬರುವ ತಾತ್ಪೂರ್ತಿಕ ಅಸ್ಪೃಶ್ಯತೆ ಆಗಿರದೆ, ಅದು ಶಾಶ್ವತ ಸ್ವರೂಪದ್ದಾಗಿರುತ್ತದೆ. ಅವರನ್ನು ಮುಟ್ಟಿ ಮೈಲಿಗೆಯನ್ನಾಗಿ ಹಿಂದೂಗಳು ಶುದ್ಧೀಕರಣ ವಿಧಿಕರ್ಮಗಳನ್ನು ಆಚರಿಸಿದ ಬಳಿಕ ಪುನಃ ಶುದ್ಧ ಆಗಬಹುದು. ಆದರೆ ಅಸ್ಪೃಶ್ಯರನ್ನು ಶುದ್ಧಗೊಳಿಸುವಂಥದು ಯಾವುದೂ ಇರುವುದಿಲ್ಲ. ಅವರು ಹುಟ್ಟುವುದು ಅಸ್ಪೃಶ್ಯರಾಗಿ, ಬದುಕುವುದು ಅಸ್ಪೃಶ್ಯರಾಗಿ, ಸಾಯುವುದು ಅಸ್ಪೃಶ್ಯರಾಗಿ ಮತ್ತು ಹಡೆಯುವುದು ಅಸ್ಪೃಶ್ಯತೆಯ ಕಳಂಕ ಅಂಟಿದ ಮಕ್ಕಳನ್ನು, ಅದು ಶಾಶ್ವತ, ಆನುವಂಶಿಕ ಕಳಂಕ ಆಗಿರುವುದರಿಂದ ಅದನ್ನು ತೊಳೆಯುವುದು ಯಾವುದರಿಂದಲೂ ಆಗದು.

ಮೂರನೆಯದಾಗಿ, ಮೈಲಿಗೆಯಲ್ಲಿ ನಂಬುಗೆಯಿದ್ದ ಹಿಂದೂಗಳಲ್ಲದ ಸಮಾಜಗಳು ಮಲಿನಗೊಂಡ ವ್ಯಕ್ತಿಗಳನ್ನು ಇಲ್ಲವೆ ಅತಿ ಹೆಚ್ಚೆಂದರೆ ಅವರ ಹತ್ತಿರದ ಸಂಬಂಧಿಕರನ್ನು ಪ್ರತ್ಯೇಕಿಸುತ್ತಿದ್ದರು. ಆದರೆ ಹಿಂದೂಗಳಲ್ಲಿ ಅಸ್ಪೃಶ್ಯತೆ ಕಾರಣದಿಂದ ಪ್ರತ್ಯೇಕಿಸಲ್ಪಟ್ಟವರು ವ್ಯಕ್ತಿಗಳಾಗಿರದೆ, ಇಡೀ ವರ್ಗವೇ ಆಗಿದ್ದು, ಇಂದು ಅವರ ಸಂಖ್ಯೆ ೫೦-೬೦ ಮಿಲಿಯ ಮುಟ್ಟಿದೆ.

ನಾಲ್ಕನೆಯದಾಗಿ, ಹಿಂದೂಗಳಲ್ಲದ ಸಮಾಜಗಳು ಮಲಿನಗೊಂಡ ವ್ಯಕ್ತಿಗಳನ್ನಷ್ಟೇ ಪ್ರತ್ಯೇಕಿಸುತ್ತಿದ್ದವು. ಅವರನ್ನು ಪ್ರತ್ಯೇಕ ಮನೆಗಳಲ್ಲಿ ಇಡುತ್ತಿರಲಿಲ್ಲ. ಆದರೆ ಹಿಂದೂ ಸಮಾಜ ಅಸ್ಪೃಶ್ಯರನ್ನು ಪ್ರತ್ಯೇಕ ಮನೆಗಳಲ್ಲಿಡಲು ಒತ್ತಾಯಿಸುತ್ತದೆ. ಹಿಂದೂಗಳು ಅಸ್ಪೃಶ್ಯರ ಮನೆಗಳಲ್ಲಿ ಇರುವುದಿಲ್ಲ ಮತ್ತು ಅಸ್ಪೃಶ್ಯರನ್ನು ತಮ್ಮ ಮನೆಗಳಲ್ಲಿ ಇರಗೊಡುವುದಿಲ್ಲ. ಇದು ಹಿಂದೂಗಳು ಆಚರಿಸುವ ಮುಖ್ಯ ಲಕ್ಷಣವಾಗಿರುತ್ತದೆ. ಇದು ತಾತ್ಪೂರ್ತಿಕ ಸಾಮಾಜಿಕ ಪ್ರತ್ಯೇಕತೆಯ ಪ್ರಕರಣ ಆಗಿರದೆ, ಪ್ರಾದೇಶಿಕ ಪ್ರತ್ಯೇಕತೆಯ, ಅಂದರೆ ಮೈಲಿಗೆಯಾದವರನ್ನು ಮುಳ್ಳುಬೇಲಿಯ ಸೋಂಕು ರಕ್ಷಾವರಣ (Cordon Sanitaire)ದಲ್ಲಿಡುವ ಪ್ರಕರಣವಾಗಿರುತ್ತದೆ. ಪ್ರತಿಯೊಂದು ಹಿಂದೂ ಹಳ್ಳಿಗೆ ಒಂದು ಕೇರಿ ಇರುತ್ತದೆ. ಹಿಂದೂಗಳು ಊರಲ್ಲಿ ಮತ್ತು ಅಸ್ಪೃಶ್ಯರು ಕೇರಿಯಲ್ಲಿ ವಾಸಿಸುತ್ತಾರೆ.

ಹೀಗಿದೆ ಹಿಂದೂ ಅಸ್ಪೃಶ್ಯತಾ ಪದ್ಧತಿ. ಹಿಂದೂಗಳಲ್ಲದ ಸಮಾಜಗಳಲ್ಲಿ ಇರುವ ಅಸ್ಪೃಶ್ಯತಾ ಪದ್ಧತಿ ಮತ್ತು ಹಿಂದೂ ಸಮಾಜದಲ್ಲಿ ಇರುವ ಅಸ್ಪೃಶ್ಯತಾ ಪದ್ಧತಿ ಎರಡೂ ಒಂದೇ ಎಂದರೆ ಯಾರು ಒಪ್ಪುತ್ತಾರೆ? ಹಿಂದೂಗಳಲ್ಲಿರುವ ಅಸ್ಪೃಶ್ಯತೆ ವಿಶಿಷ್ಟವಾದುದೆಂಬುದು ಪ್ರಶ್ನಾತೀತ. ಹಿಂದೂಗಳಲ್ಲದ ವರ್ಗಗಳು ಅಸ್ಪೃಶ್ಯತೆಯನ್ನು ವ್ಯಕ್ತಿನಿಷ್ಠವೆಂದು ತಿಳಿದಿದ್ದರೇ ಹೊರತು ವರ್ಗನಿಷ್ಠವೆಂದಲ್ಲ. ಅದೂ ಅಲ್ಲದೆ, ಅವರ ಅಸ್ಪೃಶ್ಯತೆ ತಾತ್ಕಾಲಿಕ ಸ್ವರೂಪದ್ದಾಗಿದ್ದು, ಶುದ್ಧೀಕರಣ ವಿಧಿಗಳ ಮುಖಾಂತರ ತೊಡೆದುಹಾಕಬಹುದಾಗಿತ್ತು. "ಒಮ್ಮೆ ಅಪವಿತ್ರವಾದರೆ ಎಂದೆಂದಿಗೂ ಅಪವಿತ್ರ" ಎನ್ನುವ ತತ್ವದ ಮೇಲೆ ನಿಂತಿರುವ ಶಾಶ್ವತ ಸ್ವರೂಪದ ಅಸ್ಪೃಶ್ಯತೆ ಎಂದೂ ಇರಲಿಲ್ಲ. ಹಿಂದೂಗಳಲ್ಲದವರು ವ್ಯಕ್ತಿಗಳನ್ನು ಅಪವಿತ್ರರೆಂದು ತಿಳಿಯುತ್ತಿದ್ದರು. ಮತ್ತು ಅವರನ್ನು ಸಾಮಾಜಿಕ ವ್ಯವಹಾರದಿಂದ ಹೊರಗಿಡುತ್ತಿದ್ದರು. ಆದರೆ ವ್ಯಕ್ತಿಗಳನ್ನು ಶಾಶ್ವತವಾಗಿ ಪ್ರತ್ಯೇಕ ವಾಸಸ್ಥಳಗಳಲ್ಲಿರಿಸಿದ ಪ್ರಸಂಗಗಳು ಎಂದೂ ಇರುವುದಿಲ್ಲ. ಹಿಂದೂಗಳಲ್ಲದವರು ಒಂದೊಂದು ಪೂರ್ಣ ಗುಂಪನ್ನು ಅಸ್ಪೃಶ್ಯರೆಂದು

ತಿಳಿಯುತ್ತಿದ್ದರು. ಆದರೆ ಅಂಥ ಜನರು ಹೊರಗಿನವರಾಗಿದ್ದು ಸ್ವಜಾತೀಯರಾಗಿರಲಿಲ್ಲ. ತಮ್ಮವರೇ ಕೆಲವರನ್ನು ಆನುವಂಶಿಕತೆಯ ಆಧಾರದ ಮೇಲೆ ಶಾಶ್ವತವಾಗಿ ಅಪವಿತ್ರರೆಂದು ಪರಿಗಣಿಸಿದ ಪ್ರಸಂಗ ಹಿಂದೆಂದೂ ಇರಲಿಲ್ಲ.

ಹೀಗೆ ಹಿಂದೂಗಳ ಅಸ್ಪೃಶ್ಯತೆ ವಿಲಕ್ಷಣ ಸ್ವರೂಪದ್ದಾಗಿದೆ. ಜಗತ್ತಿನ ಬೇರೆ ಭಾಗಗಳಲ್ಲಿ ಅಂಥದು ಇದೆಯೆಂಬುದೇ ಗೊತ್ತಿಲ್ಲ. ಅಂಥ ಅಸ್ಪೃಶ್ಯತೆ ಆದಿ, ಪ್ರಾಚೀನ ಇಲ್ಲವೆ ಆಧುನಿಕ – ಯಾವ ಸಮಾಜದಲ್ಲಿಯೂ ಕಾಣಸಿಗುವುದಿಲ್ಲ. ಅಸ್ಪೃಶ್ಯತೆಯ ಅಭ್ಯಾಸದಿಂದ ಉದ್ಭವಿಸುವ ಮತ್ತು ಆಳವಾಗಿ ಪರಿಶೀಲಿಸಬೇಕಾದ ಅನೇಕ ಸಮಸ್ಯೆಗಳನ್ನು ಎರಡು ವಿಧವಾಗಿ ವರ್ಗೀಕರಿಸಬಹುದಾಗಿದೆ.

(೧) ಅಸ್ಪೃಶ್ಯರು ಊರ ಹೊರಗೆ ಏಕೆ ವಾಸಿಸುತ್ತಾರೆ?

(೨) ಅವರ ಮೈಲಿಗೆಯನ್ನು ಶಾಶ್ವತವಾಗಿರುವಂತೆ ಮತ್ತು ಅದನ್ನು ಯಾವುದರಿಂದಲೂ ತೊಡೆದು ಹಾಕದಂತೆ ಮಾಡಿದ್ದು ಯಾವುದು?

ಮುಂದಿನ ಪುಟಗಳು ಈ ಪ್ರಶ್ನೆಗಳಿಗೆ ಉತ್ತರ ಹುಡುಕುವುದಕ್ಕೆ ಮೀಸಲಾಗಿರುತ್ತವೆ.

♦

## ಭಾಗ – II
# ವಸತಿಯ ಸಮಸ್ಯೆ


ಅಧ್ಯಾಯ ೩ : ಅಸ್ಪೃಶ್ಯರು ಊರ ಹೊರಗೆ ಏಕೆ ವಾಸಿಸುತ್ತಾರೆ?

ಅಧ್ಯಾಯ ೪ : ಅಸ್ಪೃಶ್ಯರು ಬಿಡಿ ಜನಾಂಗವೆ?

ಅಧ್ಯಾಯ ೫ : ಅಂಥ ಉದಾಹರಣೆಗಳು ಬೇರೆಡೆ ಉಂಟೆ?

ಅಧ್ಯಾಯ ೬ : ಬೇರೆಡೆಯಲ್ಲಿ ಬಿಡಿ ಜನರಿಗಾಗಿ ನಿರ್ಮಿಸಿದ ಪ್ರತ್ಯೇಕ ವಸಾಹತುಗಳು ಹೇಗೆ ಮಾಯವಾದವು?

# ಅಧ್ಯಾಯ ೩

# ಅಸ್ಪೃಶ್ಯರು ಊರ ಹೊರಗೆ ಏಕೆ ವಾಸಿಸುತ್ತಾರೆ?

ಅಸ್ಪೃಶ್ಯರು ಹೊರಗೆ ವಾಸಿಸುವುದು ಕುಪ್ರಸಿದ್ಧ ಸಂಗತಿಯಾಗಿರುವುದರಿಂದ, ಅಸ್ಪೃಶ್ಯರ ಬಗೆಗೆ ಆಳವಾಗಿ ಅರಿಯದವರಿಗೂ ಈ ವಿಷಯ ಗೊತ್ತಿರುತ್ತದೆಂದು ತಿಳಿಯಬೇಕಾಗುತ್ತದೆ. ಆದಾಗ್ಯೂ, ಇದನ್ನು ಸಮರ್ಪಕವಾಗಿ ಉತ್ತರಿಸಬೇಕಾದ ಗಂಭೀರ ಪ್ರಶ್ನೆ ಎಂದು ಯಾರೂ ತಿಳಿದಂತಿಲ್ಲ. ಅಸ್ಪೃಶ್ಯರು ಹೇಗೆ ಊರ ಹೊರಗೆ ವಾಸಿಸಹತ್ತಿದರು? ಅವರನ್ನು ಮೊದಲು ಅಸ್ಪೃಶ್ಯರೆಂದು ಕರೆಯಲಾಗಿ, ಅನಂತರ ಊರ ಹೊರಗೆ ಸಾಗಿಸಲ್ಪಟ್ಟು ಅಲ್ಲಿ ವಾಸಿಸುವಂತಾಯಿತೆ? ಇಲ್ಲವೆ ಪ್ರಾರಂಭದಿಂದಲೇ ಊರ ಹೊರಗೇ ವಾಸಿಸುತ್ತಿದ್ದು, ಅನಂತರ ಅವರನ್ನು ಅಸ್ಪೃಶ್ಯರೆಂದು ಕರೆಯಲಾಯಿತೆ? ಅವರು ಪ್ರಾರಂಭದಿಂದಲೂ ಊರ ಹೊರಗೇ ವಾಸಿಸುತ್ತಿದ್ದರೆ, ಮತ್ತೊಂದು ಪ್ರಶ್ನೆ ಉದ್ಭವಿಸುತ್ತದೆ. ಅದೆಂದರೆ – ಅದಕ್ಕೆ ಏನು ಕಾರಣ ಇದ್ದಿರಬಹುದು?

ಅಸ್ಪೃಶ್ಯರ ಪ್ರತ್ಯೇಕ ವಸಾಹತಿನ ಪ್ರಶ್ನೆ ಮೊದಲು ಉದ್ಭವಿಸದಿರುವುದರಿಂದ, ಅವರು ಹೇಗೆ ಊರ ಹೊರಗೆ ವಾಸಿಸಹತ್ತಿದರೆಂಬುದರ ಬಗೆಗೆ ಸಿದ್ಧಾಂತ ಇಲ್ಲದಿರುವುದು ಸಹಜ. ಅದರ ಬಗೆಗೆ ಹಿಂದೂ ಶಾಸ್ತ್ರಗಳ ವಿಚಾರ ಉಂಟು. ಬೇಕಾದರೆ ಅದನ್ನೇ ಸಿದ್ಧಾಂತ ಎಂದು ಗೌರವಿಸಬಹುದು. ಅಂತ್ಯಜರು ಊರ ಹೊರಗೇ ವಾಸಿಸಬೇಕು ಮತ್ತು ಅವರ ಮನೆಗಳು ಊರ ಹೊರಗೇ ಇರತಕ್ಕದ್ದೆಂಬುದು ಶಾಸ್ತ್ರೋಕ್ತ. ಉದಾಹರಣೆಗೆ, ಮನು ಹೀಗೆ ಹೇಳುತ್ತಾನೆ:

"X.೫೧. ಆದರೆ ಚಾಂಡಾಲರ ಮತ್ತು ಶ್ವಪಚರ ಮನೆಗಳು ಊರ ಹೊರಗೇ ಇರತಕ್ಕದ್ದು, ಅವರನ್ನು ಅಪಪಾತ್ರರನ್ನಾಗಿ ಮಾಡಬೇಕು, ಮತ್ತು ನಾಯಿ ಮತ್ತು ಕತ್ತೆ ಅವರ ಸಂಪತ್ತು ಆಗಬೇಕು.

X.೫೨. ಅವರು ಶವಕ್ಕೆ ತೊಡಿಸಿದ ಬಟ್ಟೆಯನ್ನು ತೊಡಬೇಕು. ಒಡಕು ತಟ್ಟೆಯಲ್ಲಿ ಊಟ ಮಾಡಬೇಕು, ಅವರ ಆಭರಣಗಳು ಕಬ್ಬಿಣದಿಂದ ಮಾಡಿದವು ಆಗಿರಬೇಕು ಮತ್ತು ಅವರು ಯಾವಾಗಲೂ ಸ್ಥಳದಿಂದ ಸ್ಥಳಕ್ಕೆ ಅಲೆದಾಡುತ್ತಿರಬೇಕು.

X.೫೩. ಧಾರ್ಮಿಕ ವಿಧಿಗಳನ್ನು ಪೂರೈಸಿದವರು ಅವರೊಂದಿಗೆ ಸಂಬಂಧ ಇರಿಸಿಕೊಳ್ಳಬಾರದು, ಅವರ ವ್ಯವಹಾರ ತಮ್ಮವರಲ್ಲಿಯೇ ನಡೆಯಬೇಕು ಮತ್ತು ಅವರ ಮದುವೆಗಳು ತಮ್ಮ ಸಮಾನರೊಂದಿಗೆ ನೆರವೇರಬೇಕು.

X.೫೪. ಅವರಿಗೆ ಊಟವನ್ನು ಒಡಕು ತಟ್ಟೆಯಲ್ಲಿ ಬೇರೆಯವರು (ಅನಾರ್ಯರು) ಕೊಡಬೇಕು. ರಾತ್ರಿ ಹೊತ್ತು ಅವರು ಹಳ್ಳಿ ಇಲ್ಲವೆ ಪಟ್ಟಣದಲ್ಲಿ ತಿರುಗಾಡಬಾರದು.

X.೫೫. ಹಗಲಿನಲ್ಲಿ ಅರಸನ ಆಜ್ಞೆಯ ಗುರುತನ್ನು ಧರಿಸಿ ತಮ್ಮ ಕೆಲಸಕ್ಕಾಗಿ ತಿರುಗಾಡಬಹುದು. ಸಂಬಂಧಿಕರಿಲ್ಲದವರ ಶವವನ್ನು ಹೊರಬೇಕು. ಅದು ಕಡ್ಡಾಯ ನಿಯಮ.

X.೫೬. ಯಾವಾಗಲೂ ಅಪರಾಧಿಗಳನ್ನು ಅರಸನ ಆಜ್ಞೆಯಂತೆ, ಕಾಯ್ದೆಗನುಗುಣವಾಗಿ ಕೊಲ್ಲತಕ್ಕದ್ದು. ಮತ್ತು ಆ ಅಪರಾಧಿಗಳ ಬಟ್ಟೆ, ಹಾಸಿಗೆ ಮತ್ತು ಆಭರಣಗಳನ್ನು ತಾವೇ ತೆಗೆದುಕೊಳ್ಳತಕ್ಕದ್ದು."

ಆದರೆ ಶಾಸ್ತ್ರ ಈ ಹೇಳಿಕೆಗಳಿಂದ ಯಾವ ತೀರ್ಮಾನಕ್ಕೆ ಬರಲು ಸಾಧ್ಯ? ಅವುಗಳನ್ನು ಎರಡು

ತರಹ ವಿವರಿಸಬಹುದು. ಅಸ್ಪೃಶ್ಯರು ಊರ ಹೊರಗೆ ವಾಸಿಸಬೇಕೆಂದು ಹೇಳುವುದರ ಅರ್ಥ ಅವರು ಎಲ್ಲಿ ವಾಸಿಸುತ್ತ ಬಂದಿರುವರೋ ಅಲ್ಲಿಯೇ, ಅಂದರೆ ಊರ ಹೊರಗೇ ವಾಸಿಸಬೇಕು– ಇದು ಒಂದು ವಿವರಣೆ. ಎರಡನೆಯ ವಿವರಣೆಯ ಪ್ರಕಾರ ಅಸ್ಪೃಶ್ಯರೆಂದು ಕರೆಯಲ್ಪಟ್ಟವರಿಗೆ ಊರ ಒಳಗೆ ವಾಸಿಸಲು ಅನುಮತಿ ಕೊಡಬಾರದು. ಅವರು ಊರ ಹೊರಗೆ ಹೋಗಿ ಅಲ್ಲಿಯೇ ವಾಸಿಸಬೇಕು. ಹೀಗೆ ಒಂದು ಬಿಟ್ಟು ಒಂದು ವಿವರಣೆ ಕೊಡುವುದರಿಂದ ಎರಡು ಬೇರೆ ಬೇರೆ ಗಮನ ಸೆಳೆಯುವ ಸಾಧ್ಯತೆಗಳು ಗೋಚರಿಸುತ್ತವೆ. ಒಂದು – ಊರ ಹೊರಗೆ ವಾಸಿಸುವ ಅಸ್ಪೃಶ್ಯರಿಗೂ ಅಸ್ಪೃಶ್ಯತೆಗೂ ಏನೂ ಸಂಬಂಧ ಇರುವುದಿಲ್ಲ. ಮೊದಲಿನಿಂದಲೂ ಅವರು ಊರ ಹೊರಗೇ ವಾಸಿಸುತ್ತಿದ್ದಾಗ, ಅಸ್ಪೃಶ್ಯತೆಯ ಕಪ್ಪು ಕಲೆ ಅವರಿಗೆ ಅಂಟಿದ ಬಳಿಕ ಅವರು ಊರ ಒಳಗಡೆ ವಾಸಿಸುವುದನ್ನು ಪ್ರತಿಬಂಧಿಸಲಾಯಿತು. ಎರಡನೆಯದು – ಅವರು ಊರ ಹೊರಗೆ ವಾಸಿಸಲು ಅಸ್ಪೃಶ್ಯತೆಯೇ ಕಾರಣ. ಅಂದರೆ ಅವರು ಮೊದಲು ಊರ ಒಳಗೆ ವಾಸಿಸುತ್ತಿದ್ದು, ಅಸ್ಪೃಶ್ಯತೆಯ ಕಳಂಕ ಅಂಟಿದ ಬಳಿಕ ಅವರನ್ನು ಊರ ಹೊರಗೆ ಹಾಕಲಾಯಿತು.

ಈ ಎರಡರಲ್ಲಿ ಯಾವುದು ಹೆಚ್ಚು ಗ್ರಾಹ್ಯವಾದುದು?

ಎರಡನೆಯದು ಮೇಲುನೋಟಕ್ಕೇನೆ ಅಸಂಬದ್ಧ ಮತ್ತು ಧರ್ಮಾಂಧ ಎಂದು ತೋರುತ್ತದೆ. ಅದರ ಅಸಂಬದ್ಧತೆಯನ್ನು ಬಯಲಿಗೆಳೆಯಲು ಒಂದು ವಾದ ಸಾಕಾಗುತ್ತದೆ. ನಾವು ವಿವೇಚಿಸುತ್ತಿರುವ ಅಸಾಧಾರಣ ಸಂಗತಿ ಒಂದು ಊರು ಇಲ್ಲವೆ ಒಂದು ಪ್ರದೇಶಕ್ಕೆ ಸೀಮಿತವಾಗಿರುವುದಲ್ಲ. ಅದು ಭಾರತದ ತುಂಬ ಇದೆ. ಅಸ್ಪೃಶ್ಯರನ್ನು ಊರೊಳಗಿಂದ ಕಿತ್ತುಹಾಕಿ ಊರ ಹೊರಗೆ ನೆಲೆಸುವಂತೆ ಮಾಡುವುದು ಬಹಳ ದೊಡ್ಡ ಕೆಲಸ. ಇಂಥ ಬೃಹತ್ ಕೆಲಸವನ್ನು ಹೇಗೆ ಮತ್ತು ಯಾರು ನಿರ್ವಹಿಸಿರಬಹುದು? ಸಂಪೂರ್ಣ ಭಾರತದ ಅಧಿಪತ್ಯ ಉಳ್ಳ ಸಾಮ್ರಾಟನ ಆಜ್ಞೆಯಿಂದಲ್ಲದೆ ಇನ್ನಾರಿಗೂ ಸಾಧ್ಯವಾಗದು. ಸಾಮ್ರಾಟನಿಗೂ ಕೂಡ ಇಂಥ ಸ್ಥಳಾಂತರಿಸುವ ಕೆಲಸ ಅಸಾಧ್ಯ. ಅದೇನೇ ಇರಲಿ, ಸಾಧ್ಯ ಇಲ್ಲವೆ ಅಸಾಧ್ಯ – ಅದು ಕೇವಲ ಸಾಮ್ರಾಟನ ಕೆಲಸ ಆಗಿರಲು ಸಾಧ್ಯ. ಅದರ ಕೀರ್ತಿಯಾಗಲೀ, ಅಪಕೀರ್ತಿಯಾಗಲೀ, ಯಾವ ಸಾಮ್ರಾಟನಿಗೆ ಸಲ್ಲತಕ್ಕದ್ದು? ಈ ಕೆಲಸವನ್ನು ನಿರ್ವಹಿಸಲು ಭಾರತದಲ್ಲಿ ಸಾಮ್ರಾಟನು ಇದ್ದಿರಲಿಲ್ಲ ಎಂಬುದು ಸ್ಪಷ್ಟವಾಗಿದೆ. ಸ್ಥಳಾಂತರಿಸುವ ಕೆಲಸವನ್ನು ನಿರ್ವಹಿಸಲು ಸಾಮ್ರಾಟನು ಇದ್ದಿರಲಿಲ್ಲ ಎಂದರೆ ಎರಡನೆಯ ಸಂಭಾವ್ಯವನ್ನು ಕೈಬಿಡಬೇಕಾಗುತ್ತದೆ.

ಅಸ್ಪೃಶ್ಯರೆನ್ನುವವರು ಅಸ್ಪೃಶ್ಯರಾಗುವುದಕ್ಕಿಂತ ಮೊದಲೇ, ಪ್ರಾರಂಭದಿಂದಲೂ ಊರ ಹೊರಗೆ ವಾಸಿಸುತ್ತಿದ್ದರು. ಮತ್ತು ಅವರ ಮೇಲೆ ಅಸ್ಪೃಶ್ಯತೆಯನ್ನು ಅನಂತರ ಹೇರಿದುದಕ್ಕಾಗಿ ಅವರು ಊರ ಹೊರಗೆ ವಾಸಿಸುವುದನ್ನು ಮುಂದುವರಿಸಿದರೆಂಬುದೊಂದೇ ಸಾಧ್ಯ ಎಂದು ತಿಳಿಯಬೇಕಾಗುತ್ತದೆ. ಆದರೆ ಇದರಿಂದ ಬಹಳ ಕಠಿಣ ಪ್ರಶ್ನೆಯೊಂದು ಉದ್ಭವಿಸುತ್ತದೆ. ಅದೆಂದರೆ – ಅವರು ಊರಹೊರಗೆ ಏಕೆ ವಾಸಿಸುತ್ತಿದ್ದರು? ಹಾಗೆ ಮಾಡಲು ಏನು ಕಾರಣ? ಸಮಾಜಶಾಸ್ತ್ರದ ವಿದ್ಯಾರ್ಥಿಗಳಿಗೆ ತಿಳಿದಿರುವ, ಆದಿಕಾಲದ ಸಮಾಜವು ಪ್ರಪಂಚದೆಲ್ಲೆಡೆ ಆಧುನಿಕ ಸಮಾಜವಾಗಲು ಕಾರಣವಾದ ಪ್ರಭಾವೀ ಅಂಶಗಳನ್ನು ಗಮನಿಸಿದರೆ, ಅಸ್ಪೃಶ್ಯರು ಆದಿಕಾಲದಿಂದಲೂ ಊರ ಹೊರಗೇ ವಾಸಿಸಿರಬೇಕೆಂದು ತಿಳಿಯುವುದು ಸಹಜವೆನಿಸುತ್ತದೆ.

ಆದಿಕಾಲದ ಸಮಾಜವನ್ನು ಆಧುನಿಕ ಸಮಾಜವನ್ನಾಗಿ ಮಾರ್ಪಡಿಸಿದ ಸಂಗತಿಗಳನ್ನು ವಿವರಿಸಿದ ಹೊರತು ಅದು ಹೇಗೆ ಸಹಜ ಎಂಬುದು ಬಹು ಜನರಿಗೆ ತಿಳಿಯುವುದಿಲ್ಲ. ಆಧುನಿಕ ಸಮಾಜ ಆದಿಕಾಲದ ಸಮಾಜದಿಂದ ಎರಡು ವಿಧದಲ್ಲಿ ಭಿನ್ನವಾಗಿತ್ತು. ಆದಿಕಾಲದ ಸಮಾಜ ಅಲೆಮಾರಿ ಜನಾಂಗಗಳಿಂದ

ಕೂಡಿದ್ದರೆ, ಆಧುನಿಕ ಸಮಾಜ ನೆಲೆನಿಂತ ಜನಾಂಗಗಳಿಂದ ಕೂಡಿದೆ. ಎರಡನೆಯದಾಗಿ, ಆದಿಕಾಲದ ಸಮಾಜ ರಕ್ತಸಂಬಂಧ ಆಧಾರವಾಗಿರುವ ಬುಡಕಟ್ಟು ವರ್ಗಗಳಿಂದ ಕೂಡಿತ್ತು. ಆಧುನಿಕ ಸಮಾಜವು ಪ್ರಾಂತೀಯ ಸಂಯೋಜನೆಯುಳ್ಳ ಸ್ಥಾನಿಕ ಸಮುದಾಯಗಳಿಂದ ಕೂಡಿದೆ. ಆದಿಕಾಲದ ಸಮಾಜ ಆಧುನಿಕ ಸಮಾಜವಾಗಿ ಪರಿವರ್ತನೆಯಾಗುವುದಕ್ಕಿಂತ ಮೊದಲು ಅದು ಎರಡು ದಿಶೆಯಲ್ಲಿ ಬೆಳೆಯಿತು. ಒಂದು ದಿಶೆಯ ಬೆಳವಣಿಗೆಯ ಪ್ರಕಾರ ರಕ್ತಸಂಬಂಧಿ ಬುಡಕಟ್ಟು ಪಂಗಡಗಳಿಂದ ಕೂಡಿದ ಸಮಾಜ ಹೋಗಿ ಪ್ರಾದೇಶಿಕ ವರ್ಗಗಳಿಂದ ಕೂಡಿದ ಸಮಾಜವಾಯಿತು. ಇಂಥ ಬದಲಾವಣೆ ಆಗಿದೆಯೆಂಬುದರಲ್ಲಿ ಸಂಶಯವಿಲ್ಲ. ಅರಸರ ಆಡಳಿತ ಶೈಲಿಯ ಬದಲಾವಣೆಯಲ್ಲಿ ಸ್ಪಷ್ಟ ಗುರುತುಗಳನ್ನು ಕಾಣಬಹುದು. ಇದಕ್ಕಾಗಿ ಇಂಗ್ಲೀಷ್ ಅರಸರ ಶೈಲಿಯನ್ನು ಉದಹರಿಸಬಹುದು. ತನ್ನನ್ನು ಇಂಗ್ಲೆಂಡ್ ಅರಸನೆಂದು ಕರೆದುಕೊಂಡವರಲ್ಲಿ ಕಿಂಗ್ ಜಾನ್ ಮೊದಲಿಗ. ಅವನಿಗಿಂತಲೂ ಮೊದಲು ಆಳಿದವರು ತಮ್ಮನ್ನು ಇಂಗ್ಲೀಷ್ ದೊರೆಗಳೆಂದು ಕರೆದುಕೊಂಡಿದ್ದರು. ಇಂಗ್ಲೆಂಡ್ ಅರಸನೆನ್ನುವುದು ಪ್ರಾದೇಶಿಕ ವರ್ಗವನ್ನು ಪ್ರತಿನಿಧಿಸುತ್ತಿದ್ದರೆ, ಇಂಗ್ಲಿಷ್ ದೊರೆ ಎನ್ನುವುದು ಪಂಗಡವನ್ನು ಸೂಚಿಸುತ್ತದೆ. ಇಂಗ್ಲೆಂಡ್ ಒಂದು ಕಾಲಕ್ಕೆ ಇಂಗ್ಲಿಷರು ವಾಸಿಸುವ ದೇಶವಾಗಿತ್ತು. ಈಗ ಇಂಗ್ಲೆಂಡಿನಲ್ಲಿರುವವರೆಲ್ಲ ಇಂಗ್ಲಿಷರೆಂದು ಕರೆಯಲ್ಪಡುತ್ತಾರೆ. ಫ್ರೆಂಚ್ ಅರಸರು ಮೊದಲು ಫ್ರಾಂಕ್ ಜನರಾಗಿದ್ದು ಅನಂತರ ಫ್ರಾನ್ಸ್‌ನ ಅರಸರಲ್ಲಿ ಅದೇ ತರಹದ ಬದಲಾವಣೆಯು ಕಂಡುಬರುತ್ತದೆ. ವಿಕಾಸದ ಎರಡನೆಯ ಮಾರ್ಗ ಅನುಸರಿಸುವುದರಿಂದ ಆದಿಕಾಲದ ಅಲೆಮಾರಿ ಸಮಾಜ ಸ್ಥಾವರ ವರ್ಗವಾಯಿತು. ಇಲ್ಲಿ ಪುನಃ ಬದಲಾವಣೆ ಖಚಿತ ಮತ್ತು ಸ್ಪಷ್ಟ ಇರುವುದರಿಂದ ಅದರ ವಾಸ್ತವಾಂಶವನ್ನು ಮನವರಿಕೆ ಮಾಡಿಕೊಡಲು ಯಾವುದೇ ಉದಾಹರಣೆಯ ಅವಶ್ಯಕತೆ ಇರುವುದಿಲ್ಲ.

ನಮ್ಮ ಸದ್ಯದ ಉದ್ದೇಶಪೂರ್ತಿಗಾಗಿ ನಮ್ಮ ವಿವೇಚನೆಯನ್ನು ವಿಕಾಸದ ಎರಡನೆಯ ಮಾರ್ಗಕ್ಕೆ ಸೀಮಿತಗೊಳಿಸೋಣ. ಆದಿಕಾಲದ ಅಲೆಮಾರಿ ಸಮಾಜ ಸ್ಥಾವರ ಸಮಾಜ ಹೇಗಾಯಿತು? ಸುದೀರ್ಘ ಪ್ರಕರಣವಾಗಿರುವ ಆ ಕಥೆಯನ್ನು ಈ ಒಂದು ಸಣ್ಣ ಭಾಗದಲ್ಲಿ ವಿವರಿಸಲಿಕ್ಕಾಗದು. ಇಲ್ಲಿ ಎರಡು ಅಂಶಗಳನ್ನು ಗಮನಿಸಿದರೆ ಸಾಕು. ಒಂದು–ಆದಿಕಾಲದ ಸಮಾಜ ತನ್ನ ಅಲೆಮಾರಿ ಜೀವನವನ್ನು ಬಿಡುವಂತೆ ಮಾಡಿದುದು ಏನು? ಎರಡು–ಅಲೆಮಾರಿಯಿಂದ ಸ್ಥಾವರವಾಗಿ ಪರಿವರ್ತನೆಗೊಳ್ಳುವ ಸಂಧಿಕಾಲದಲ್ಲಿ ಏನೇನು ಸಂಭವಿಸಿತು?

ಆದಿಕಾಲದ ಸಮಾಜ ನಿಸ್ಸಂಶಯವಾಗಿಯೂ ಅಲೆಮಾರಿ ಸಮಾಜವಾಗಿತ್ತು. ಆದರೆ ಯಾವುದೇ ವಲಸೆ ಪ್ರವೃತ್ತಿಯ ಕಾರಣದಿಂದ ಅದು ಅಲೆಮಾರಿಯಾಗಿರಲಿಲ್ಲ. ವಿಶಿಷ್ಟ ಮಾನಸಿಕ ಗುಣವೂ ಅದಕ್ಕೆ ಕಾರಣವಾಗಿರಲಿಲ್ಲ. ಆದಿಕಾಲದ ಸಮಾಜದ ಸಂಪತ್ತು ದನಕರುಗಳಾಗಿದ್ದುದರ ಪರಿಣಾಮ ಇದಾಗಿದೆ. ಆದಿಕಾಲದ ಸಮಾಜದ ಸಂಪತ್ತು ವಲಸೆ ಪ್ರವೃತ್ತಿಯದಾಗಿದ್ದುದರಿಂದ ಅದು ಹೀಗಾಯಿತು. ದನಗಳು ಯಾವಾಗಲೂ ಹೊಸ ಹುಲ್ಲುಗಾವಲುಗಳನ್ನು ಹುಡುಕಿಕೊಂಡು ಹೋಗುತ್ತಿದ್ದವು. ಆದಿಕಾಲದ ಸಮಾಜ ದನಕರುಗಳನ್ನು ಪ್ರೀತಿಸುತ್ತಿದ್ದುದರಿಂದ, ಅವು ಹೋದಲ್ಲೆಲ್ಲ ಅವುಗಳ ಬೆನ್ನು ಹತ್ತಿತು. ಸಂಪತ್ತಿನ ಹೊಸ ಪ್ರಕಾರವನ್ನು ಶೋಧಿಸಿದಾಗ ಅದು ಸ್ಥಾವರವಾಯಿತು. ಒಂದೆಡೆ ನೆಲೆಸುವಂತಾಯಿತು. ಸಂಪತ್ತಿನ ಹೊಸ ಪ್ರಕಾರ ಭೂಮಿ ಆಯಿತು. ಆದಿಮಾನವ ಸಮಾಜ ಭೂಮಿಯನ್ನು ಉತ್ತುವುದನ್ನು ಮತ್ತು ಬಿತ್ತುವುದನ್ನು, ಅಂದರೆ ಕೃಷಿಕಲೆಯನ್ನು ಕಲಿತಾಗ ಒಂದೆಡೆ ನೆಲೆಸುವುದು ಸಾಧ್ಯವಾಯಿತು. ಸಂಪತ್ತು ದನಕರುಗಳಿಂದ ಭೂಮಿಯಾಗಿ ಮಾರ್ಪಟ್ಟಾಗ ಅದು ಒಂದೆಡೆ ನೆಲೆಸುವಂತಾಯಿತು. ಈ ಬದಲಾವಣೆಯ ಕಾರಣದಿಂದ

ಆದಿಮಾನವ ಸಮಾಜ ಒಂದೆಡೆ ನೆಲಸಿತು.

ಆದಿಮಾನವ ಸಮಾಜ ಏಕೆ ಒಂದು ಕಾಲಕ್ಕೆ ಅಲೆಮಾರಿಯಾಗಿತ್ತು ಮತ್ತು ಅದು ಒಂದೆಡೆ ನೆಲಸಲು ಏನು ಕಾರಣವಾಯಿತೆಂಬುದನ್ನು ಇದುವರೆಗಿನ ವಿವರಣೆ ಸ್ಪಷ್ಟಪಡಿಸುತ್ತದೆ.

ಇನ್ನು ಆದಿಮಾನವ ಸಮಾಜ ಸ್ಥಾವರ ಸಮಾಜವಾಗುವ ಮಾರ್ಗ ಹಿಡಿದು ಮುನ್ನಡೆದಾಗ ಮಾರ್ಗಮಧ್ಯ ಏನೇನು ಸಂಭವಿಸಿತೆಂಬುದನ್ನು ನೋಡುವ. ಆದಿಮಾನವ ಸಮಾಜ ಅಲೆಮಾರಿ ಜೀವನ ತೊರೆದು ಸ್ಥಾವರ ಜೀವನಕ್ಕೆ ತಿರುಗುವ ಸಂಕ್ರಮಣ ಸಮಯದಲ್ಲಿ ಅದು ಮುಖ್ಯವಾಗಿ ಎರಡು ಸಮಸ್ಯೆಗಳನ್ನು ಎದುರಿಸಬೇಕಾಯಿತು. ಒಂದು ನೆಲೆವಾಸಿ ಸಮಾಜಕ್ಕೆ ಎದುರಾದ ಸಮಸ್ಯೆ, ಮತ್ತೊಂದು ಬಿಡಿ ಜನರಿಗೆ ಎದುರಾದ ಸಮಸ್ಯೆ. ನೆಲೆವಾಸಿ ಸಮಾಜ ಎದುರಿಸಬೇಕಾದ ಸಮಸ್ಯೆ ಎಂದರೆ ಅಲೆಮಾರಿ ಪಂಗಡಗಳಿಂದ ತನ್ನನ್ನು ರಕ್ಷಿಸಿಕೊಳ್ಳುವುದಾಗಿತ್ತು. ಬಿಡಿಜನರು ಎದುರಿಸಬೇಕಾದ ಸಮಸ್ಯೆ ಎಂದರೆ ಅವರ ರಕ್ಷಣೆ ಮತ್ತು ವಸತಿಗೆ ಸಂಬಂಧಿಸಿದುದಾಗಿತ್ತು. ಈ ಸಮಸ್ಯೆಗಳು ಏಕೆ ಮತ್ತು ಹೇಗೆ ಹುಟ್ಟಿದವೆಂಬುದನ್ನು ವಿವರಿಸುವುದು ಅಪೇಕ್ಷಣೀಯ ಎನಿಸಬಹುದು.

ನೆಲೆವಾಸಿ ಪಂಗಡಗಳಿಗೆ ಎದುರಾದ ಸಮಸ್ಯೆಯನ್ನು ತಿಳಿದುಕೊಳ್ಳಲು ಈ ಕೆಳಗಿನ ಸಂಗತಿಗಳನ್ನು ನೆನಪಿನಲ್ಲಿಡುವುದು ಅವಶ್ಯ. ಎಲ್ಲ ಪಂಗಡಗಳು ಒಂದೇ ಕಾಲಕ್ಕೆ ಸ್ಥಿರ ಜೀವನ ನಡೆಸಲು ತೊಡಗಲಿಲ್ಲ. ಕೆಲವು ಪಂಗಡಗಳು ನೆಲೆಯಾಗಿ ನಿಂತವು ಮತ್ತು ಕೆಲವು ಪಂಗಡಗಳು ಅಲೆಮಾರಿಯಾಗಿ ಉಳಿದವು. ನೆನಪಿನಲ್ಲಿಡಬೇಕಾದ ಎರಡನೆಯ ಸಂಗತಿ ಎಂದರೆ – ಪಂಗಡಗಳಲ್ಲಿ ಶಾಂತಿ ಸೌಹಾರ್ದತೆ ಎಂದೂ ಇದ್ದಿರಲಿಲ್ಲ. ಅವು ಯಾವಾಗಲೂ ಒಂದಕ್ಕೊಂದು ಕಾದಾಡುತ್ತಿದ್ದವು. ಎಲ್ಲ ಪಂಗಡಗಳು ಅಲೆಮಾರಿಯಾಗಿದ್ದಾಗ ಅಂತರ್ಪಂಗಡ ಯುದ್ಧಕ್ಕೆ (೧) ದನಗಳ್ಳತನ (೨) ಸ್ತ್ರೀ ಅಪಹರಣ, ಮತ್ತು (೩) ಒಂದು ಪಂಗಡದವರು ಬೇರೆ ಪಂಗಡದವರಿಗೆ ಸಂಬಂಧಿಸಿದ ಹುಲ್ಲುಗಾವಲಿನಲ್ಲಿ ಕದ್ದು ದನ ಮೇಯಿಸುವುದು – ಇವು ಮುಖ್ಯ ಕಾರಣಗಳಾಗಿದ್ದವು. ಕೆಲವು ಪಂಗಡಗಳು ಒಂದೆಡೆ ನೆಲೆಸಿದಾಗ, ಬಡಿದಾಟವನ್ನು ಅವುಗಳ ಜೊತೆಗೇ ಕೇಂದ್ರೀಕರಿಸುವುದು ಹೆಚ್ಚು ಅನುಕೂಲವೆಂದು ಅಲಮಾರಿ ಪಂಗಡಗಳಿಗೆ ಕಂಡುಬಂತು. ಉಳಿದ ಅಲೆಮಾರಿ ಪಂಗಡಗಳೊಂದಿಗೆ ಯುದ್ಧ ಮಾಡುವುದಕ್ಕಿಂತಲೂ ಒಂದೆಡೆ ನೆಲೆಸಿದವುಗಳ ಜೊತೆಗೆ ಯುದ್ಧ ಮಾಡುವುದು ಹೆಚ್ಚು ಲಾಭದಾಯಕವಾಗಿತ್ತು. ನೆಲೆವಾಸಿ ಪಂಗಡಗಳು ಅಲೆಮಾರಿ ಪಂಗಡಗಳಿಗಿಂತ ಎರಡು ಪಟ್ಟು ಶ್ರೀಮಂತವಾಗಿದ್ದವೆಂದು ಅಲೆಮಾರಿ ಪಂಗಡಗಳಿಗೆ ತಿಳಿದುಬಂತು. ಅಲೆಮಾರಿಗಳ ಬಳಿ ಇರುವಂತೆ ಇವರ ಬಳಿಯೂ ದನಕರುಗಳಿದ್ದವು, ಆದರೆ ದನಕರುಗಳಲ್ಲದೆ, ಅವರ ಬಳಿ ಧಾನ್ಯವೂ ಇತ್ತು. ಧಾನ್ಯ ಅಲೆಮಾರಿಗಳ ಬಳಿ ಇದ್ದಿರಲಿಲ್ಲ. ಆದ್ದರಿಂದ ಅವರು ಧಾನ್ಯವನ್ನು ಹೆಚ್ಚಾಗಿ ಬಯಸುತ್ತಿದ್ದರು. ನೆಲೆಯಾದ ಪಂಗಡಗಳಿಗೆ ಬಳಿ ಇರುವ ಸಂಪತ್ತನ್ನು ಕದಿಯುವ ಉದ್ದೇಶದಿಂದ ಅಲೆಮಾರಿ ಪಂಗಡಗಳು ವ್ಯವಸ್ಥಿತ ದಾಳಿ ನಡೆಸಿದವು. ಮೂರನೆಯ ಸಂಗತಿ ಎಂದರೆ – ನೆಲೆಸಿರುವ ಪಂಗಡಗಳಿಗೆ ಈ ದಾಳಿಕೋರರಿಂದ ತಮ್ಮನ್ನು ರಕ್ಷಿಸಿಕೊಳ್ಳುವಲ್ಲಿ ಬಹಳಷ್ಟು ಆತಂಕವಿದ್ದಿತು. ಅವರು ಹೆಚ್ಚು ಲಾಭದಾಯಕ ವೃತ್ತಿಯಲ್ಲಿ ತೊಡಗಿದ್ದರಿಂದ ತಮ್ಮ ನೇಗಿಲುಗಳನ್ನು ಯಾವಾಗಲೂ ಆಯುಧಗಳನ್ನಾಗಿ ಪರಿವರ್ತಿಸಲು ಸಾಧ್ಯವಾಗುತ್ತಿರಲಿಲ್ಲ. ಅಲ್ಲದೆ ತಮ್ಮ ಮನೆಗಳನ್ನು ಬಿಟ್ಟು ದಾಳಿಕೋರರನ್ನು ಬೆನ್ನಟ್ಟುವುದೂ ಸಾಧ್ಯವಾಗುತ್ತಿರಲಿಲ್ಲ. ಇದರಲ್ಲಿ ಆಶ್ಚರ್ಯ ಪಡುವ ಸಂಗತಿ ಏನೂ ಇಲ್ಲ. ಸಂರಕ್ಷಣಾ ಸಾಧನಗಳಿರುವ ನಾಗರಿಕ ಜನರು ಅನಾಗರಿಕರ ದಾಳಿಗಳನ್ನು ತಡೆದುಕೊಳ್ಳಲು ಅಶಕ್ತರಾಗಿದ್ದರೆಂದು ಇತಿಹಾಸದಿಂದ ತಿಳಿದುಬರುತ್ತದೆ. ಒಂದೆಡೆ ನೆಲೆಸಿದ ಪಂಗಡಗಳು ಸಂಧಿಕಾಲದಲ್ಲಿ ಹೇಗೆ ಮತ್ತು ಏಕೆ ರಕ್ಷಣೆಯ ಸಮಸ್ಯೆಯನ್ನು ಎದುರಿಸಿದರೆಂದು ಇದು ವಿವರಿಸುತ್ತದೆ.

ಬಿಡಿಜನರ ಸಮಸ್ಯೆ ಹೇಗೆ ಉದ್ಭವಿಸಿತೆಂಬುದನ್ನು ತಿಳಿದುಕೊಳ್ಳುವುದು ಕಠಿಣವಲ್ಲ. ಆದಿಕಾಲದಲ್ಲಿ ಸದಾ ಪರಸ್ಪರ ಬಡಿದಾಡುವುದು ಬುಡಕಟ್ಟುಗಳ ಸಹಜ ಸ್ಥಿತಿಯಾಗಿದ್ದಿತು. ಪಂಗಡಗಳ ನಡುವಿನ ಯುದ್ಧದಲ್ಲಿ ಯಾವುದೇ ಪಂಗಡವನ್ನು ಸಂಪೂರ್ಣ ನಾಶಪಡಿಸದೆ ಅದನ್ನು ಸೋಲಿಸಿ ಲೂಟಿ ಮಾಡಲಾಗುತ್ತಿತ್ತು. ಎಷ್ಟೋ ಸಲ ಸೋತ ಪಂಗಡವು ಒಡೆದು ಸಣ್ಣ ಸಣ್ಣ ತುಕಡಿಗಳಾಗುತ್ತಿದ್ದವು. ಇದರ ಪರಿಣಾಮವಾಗಿ ಆದಿಕಾಲದಲ್ಲಿ ಇಂಥ ತುಕಡಿಗಳಿಂದ ಕೂಡಿದ ಅಲೆಮಾರಿ ಗುಂಪುಗಳು ಯಾವಾಗಲೂ ಇರುತ್ತಿದ್ದವು. ಅವು ಎಲ್ಲ ಕಡೆಗೂ ಅಲೆದಾಡುತ್ತಿದ್ದವು. ಬಿಡಿಜನರ ಸಮಸ್ಯೆಯ ಹುಟ್ಟಿನ ಕಾರಣವನ್ನು ತಿಳಿಯಲು ಆದಿಕಾಲದ ಸಮಾಜವು ಸಂಘಟನೆಯಲ್ಲಿ ಮೂಲತಃ ಪಂಗಡ ಸ್ವರೂಪದ್ದಾಗಿತ್ತೆಂಬುದನ್ನು ಮನಗಾಣುವುದು ಅವಶ್ಯವಿರುತ್ತದೆ. ಆದಿಕಾಲದ ಸಮಾಜ ಮೂಲತಃ ಪಂಗಡ ಸ್ವರೂಪದ್ದಾಗಿತ್ತೆಂದರೆ ಅದಕ್ಕೆ ಎರಡು ಅರ್ಥ ಬರುತ್ತದೆ. ಮೊದಲನೆಯದಾಗಿ, ಆದಿಕಾಲದ ಸಮಾಜದಲ್ಲಿ ಪ್ರತಿಯೊಬ್ಬ ಒಂದೊಂದು ಪಂಗಡಕ್ಕೆ ಸೇರಿರುತ್ತಿದ್ದ. ಅದೂ ಅಲ್ಲದೆ, ಒಬ್ಬ ಒಂದೇ ಪಂಗಡಕ್ಕೆ ಸೇರಿರುತ್ತಿದ್ದ. ಪಂಗಡ ಬಿಟ್ಟರೆ ಅವನಿಗೆ ಯಾವುದೇ ಅಸ್ತಿತ್ವ ಇರುತ್ತಿರಲಿಲ್ಲ. ಎರಡನೆಯದಾಗಿ, ಪಂಗಡ ಸಂಘಟನೆ ರಕ್ತಸಂಬಂಧವನ್ನಾಧರಿಸಿರುವುದರಿಂದ ಒಂದು ಪಂಗಡದಲ್ಲಿ ಹುಟ್ಟಿದವನು ಇನ್ನೊಂದು ಪಂಗಡದಲ್ಲಿ ಸೇರಲು ಮತ್ತು ಅದರ ಸದಸ್ಯನಾಗಲು ಸಾಧ್ಯವಿರಲಿಲ್ಲ. ಆದ್ದರಿಂದ ಒಂದು ಪಂಗಡದಿಂದ ಹೊರಗೆ ಬಂದವರು ಬಿಡಿ ವ್ಯಕ್ತಿಯ ಹಾಗೆ ಬಿಡಿ ಬಿಡಿಯಾಗಿ ಇರಬೇಕಾಗುತ್ತಿತ್ತು. ಒಂದು ಪಂಗಡ ಇನ್ನೊಂದು ಪಂಗಡದ ಜೊತೆಗೆ ಬಡಿದಾಡುತ್ತಿದ್ದ ಆದಿಕಾಲದ ಸಮಾಜದಲ್ಲಿ ಬಿಡಿಜನರಿಗೆ ಪಂಗಡಗಳಿಂದ ದಾಳಿಯ ಅಪಾಯ ಯಾವಾಗಲೂ ಇದ್ದಿತು. ರಕ್ಷಣೆಗೆ ಎಲ್ಲಿ ಹೋಗಬೇಕೆಂಬುದು ಅವರಿಗೆ ಗೊತ್ತಿರಲಿಲ್ಲ. ಯಾರು ತಮ್ಮ ಮೇಲೆ ದಾಳಿ ಮಾಡುವರು ಮತ್ತು ಯಾರಲ್ಲಿ ಆಶ್ರಯ ಪಡೆಯಬೇಕೆಂಬುದು ಅವರಿಗೆ ಗೊತ್ತಿರಲಿಲ್ಲ. ಆದ್ದರಿಂದ ಬೀಡಾಡಿ ಜನರಿಗೆ ಆಶ್ರಯ ಮತ್ತು ರಕ್ಷಣೆ ಮುಖ್ಯ ಸಮಸ್ಯೆಯಾಗಿದ್ದವು.

ಒಂದು ಕಾಲಕ್ಕೆ ಆದಿಸಮಾಜದ ಜೀವನದಲ್ಲಿ ಎರಡು ಗುಂಪುಗಳಿದ್ದು – ಒಂದು ಗುಂಪು ಒಂದೆಡೆ ನೆಲೆಸಿದ್ದು ಅದು ತಮ್ಮಲ್ಲಿ ಅಲೆಮಾರಿ ದಾಳಿಕೋರರ ವಿರುದ್ಧ ಕಾವಲುಗಾರರ ಕೆಲಸ ಮಾಡುವಂಥ ಜನರನ್ನು ಹುಡುಕಾಡುತ್ತಿತ್ತು ಮತ್ತು ಸೋತ ಪಂಗಡಗಳ ಬಿಡಿಜನರಿಂದ ಕೂಡಿದ ಇನ್ನೊಂದು ಗುಂಪು ತಮಗೆ ಅನ್ನವಸತಿಗಳನ್ನು ಕೊಡುವಂಥ ಒಡೆಯರನ್ನು ಹುಡುಕುತ್ತಿತ್ತು ಎನ್ನುವ ಸಂಗತಿಯನ್ನು ಈ ಮೇಲಿನ ಸಾರಾಂಶ ತೋರಿಸುತ್ತದೆ.

ಈ ಎರಡೂ ಗುಂಪುಗಳು ತಮ್ಮ ಸಮಸ್ಯೆಗಳನ್ನು ಹೇಗೆ ಬಗೆಹರಿಸಿಕೊಂಡವೆಂಬುದು ಮುಂದಿನ ಪ್ರಶ್ನೆ ಆಗಿರುತ್ತದೆ. ಈ ಸಮಸ್ಯೆಗೆ ಸಂಬಂಧಿಸಿದ ಪ್ರಾಚ್ಯ ಲಿಖಿತ ದಾಖಲೆಗಳು ದೊರೆಯದಿದ್ದರೂ ಎರಡೂ ಗುಂಪುಗಳ ನಡುವೆ ಒಂದು ತರಹದ ಒಡಂಬಡಿಕೆ ಆಗಿತ್ತೆಂದು ಹೇಳಬಹುದು. ಆ ಒಡಂಬಡಿಕೆಯ ಪ್ರಕಾರ ಬಿಡಿಜನರು ನೆಲೆವಾಸಿಗಳಿಗಾಗಿ ಕಾವಲುಗಾರರ ಕೆಲಸ ಮಾಡಲು ಒಪ್ಪಿದರು. ಮತ್ತು ನೆಲೆವಾಸಿಗಳು ಬಿಡಿಜನರಿಗೆ ಅನ್ನ ಮತ್ತು ವಸತಿ ಕೊಡಲು ಒಪ್ಪಿದರು. ನಿಜಕ್ಕೂ, ಒಬ್ಬರ ಸುಖಾಸಕ್ತಿಗೆ ಇನ್ನೊಬ್ಬರ ವಿಶೇಷ ಸಹಕಾರ ಅವಶ್ಯವಿದ್ದಾಗ, ಅವರಿಬ್ಬರ ನಡುವೆ ಈ ರೀತಿ ಒಡಂಬಡಿಕೆ ಆಗದೆ ಹೋಗಿದ್ದರೆ ಅದು ಅಸಹಜ ಎನಿಸುತ್ತಿತ್ತು.

ಒಡಂಬಡಿಕೆ ಪೂರ್ತಿಯಾಗಿ ಕಾರ್ಯರೂಪಕ್ಕಿಳಿಯುವಲ್ಲಿ ಒಂದು ತೊಂದರೆ ಉದ್ಭವಿಸಿರಲೇಬೇಕು. ಅದು ವಸತಿಗೆ ಸಂಬಂಧಿಸಿದ್ದು. ಬಿಡಿ ಜನರು ಎಲ್ಲಿ ವಾಸಿಸಬೇಕು? ನೆಲೆವಾಸಿಗಳ ಮಧ್ಯವೋ ಅಥವಾ ನೆಲೆವಾಸಿ ವರ್ಗಗಳ ಹೊರಗೋ? ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವಲ್ಲಿ ಎರಡು ವಿಷಯಗಳು

ನಿರ್ಣಾಯಕ ಪಾತ್ರ ವಹಿಸಿರಬೇಕು. ಒಂದು ರಕ್ತ ಸಂಬಂಧ, ಇನ್ನೊಂದು ರಕ್ಷಣಾ ತಂತ್ರ. ಆದಿಕಾಲದ ಜನರ ನಡವಳಿಕೆಗಳ ಪ್ರಕಾರ ಒಂದು ಪಂಗಡದವರು, ಅಂದರೆ ಒಂದೇ ರಕ್ತ ಸಂಬಂಧಿಗಳು ಮಾತ್ರ ಕೂಡಿ ಬಾಳಲು ಸಾಧ್ಯ. ಒಂದು ಪಂಗಡಕ್ಕೆ ಸೇರಿದ ಮನೆಗಳಿದ್ದ ಸ್ಥಳದೊಳಗೆ ಪರಕೀಯನಿಗೆ ಪ್ರವೇಶ ಇರಲಿಲ್ಲ. ಒಂದು ಪಂಗಡ ಒಡೆದು ಕಡೆಗೆ ಸಿಡಿದ ಬಿಡಿಜನರು ಪರಕೀಯರಾಗಿದ್ದರು. ಅವರದು ಸಿಡಿದು ಕಡೆದಾಗ ಬೇರೊಂದು ಪಂಗಡವಾಗಿರುತ್ತಿತ್ತು. ಹಾಗಿದ್ದಾಗ, ನೆಲೆವಾಸಿಗಳ ಮಧ್ಯೆ ವಾಸಿಸಲು ಅವರಿಗೆ ಅನುಮತಿ ನೀಡುವುದು ಶಕ್ಯವಿರಲಿಲ್ಲ. ರಕ್ಷಣಾ ತಂತ್ರದ ದೃಷ್ಟಿಯಿಂದಲೂ ಕೂಡ ಈ ಬಿಡಿಜನರು ಊರ ಹೊರಗಡೆ ವಾಸಿಸುವುದು ಅಪೇಕ್ಷಣೀಯವಾಗಿತ್ತು. ಅವರ ವಸತಿಗಳನ್ನು ಊರ ಹೊರಗೆ ಗೊತ್ತು ಮಾಡುವಲ್ಲಿ ಈ ಎರಡೂ ಸಂಗತಿಗಳು ನಿರ್ಣಾಯಕ ಪಾತ್ರವಹಿಸಿದವು.

ಈಗ ನಾವು ಮುಖ್ಯ ಪ್ರಶ್ನೆಗೆ ಬರೋಣ. ಅದೆಂದರೆ – ಅಸ್ಪೃಶ್ಯರು ಊರ ಹೊರಗೆ ಏಕೆ ವಾಸಿಸುತ್ತಾರೆ? ಮೇಲೆ ಸೂಚಿಸಿದ ವಿಚಾರಧಾರೆಯಗುಂಟ ಉತ್ತರವನ್ನು ಹುಡುಕಲು ಸಾಧ್ಯ. ಭಾರತದಲ್ಲಿ ಕೂಡ ಹಿಂದೂ ಸಮಾಜ ಅಲೆಮಾರಿ ಜೀವನ ತೊರೆದು ನೆಲೆವಾಸಿ ಜೀವನ ಸ್ವೀಕರಿಸುವಾಗ ಅಂಥವೇ ಕ್ರಿಯೆಗಳು ನಡೆದಿರಬಹುದು. ಮೂಲದಲ್ಲಿ ನೆಲೆವಾಸಿ ಪಂಗಡಗಳು ಮತ್ತು ಬಿಡಿಜನರಿಂದ ಕೂಡಿದ ಆದಿ ಹಿಂದೂ ಸಮಾಜ ಇದ್ದಿರಬೇಕು. ನೆಲೆವಾಸಿ ಜೀವನ ಸ್ವೀಕರಿಸುವಾಗ ಅಂಥವೇ ಕ್ರಿಯೆಗಳು ನಡೆದಿರಬಹುದು. ಮೂಲದಲ್ಲಿ ನೆಲೆವಾಸಿ ಪಂಗಡಗಳು ಊರನ್ನು ನಿರ್ಮಿಸಿ ಸಮಾಜ ಜೀವನವನ್ನು ಪ್ರಾರಂಭಿಸಿದವು ಮತ್ತು ಬಿಡಿಜನರು ಬೇರೆ ಪಂಗಡದವರಾಗಿದ್ದು ಬೇರೆ ರಕ್ತಸಂಬಂಧ ಹೊಂದಿದವರಾಗಿದ್ದ ಕಾರಣ ಅವರು ಹೊರಗಡೆ ಪ್ರತ್ಯೇಕ ನಿವಾಸಗಳಲ್ಲಿ ವಾಸವಾದರು. ಖಚಿತವಾಗಿ ಹೇಳುವುದಾದರೆ, ಅಸ್ಪೃಶ್ಯರು ಮೂಲತಃ ಬಿಡಿಜನರಾಗಿದ್ದರು. ಅವರು ಪಂಗಡ ಇಲ್ಲದವರಾಗಿದ್ದರಿಂದ (ತಮ್ಮ ಪಂಗಡ ಬಿಟ್ಟು ಕಡೆಗಾಗಿದ್ದರಿಂದ) ಅವರು ಊರ ಹೊರಗೆ ವಾಸವಾಗಿದ್ದರು.

ಅಸ್ಪೃಶ್ಯರು ಪ್ರಾರಂಭದಿಂದಲೂ ಹೊರಗಡೆ ವಾಸಿಸುತ್ತಿದ್ದರೆಂದೂ, ಅಸ್ಪೃಶ್ಯತೆಗೂ ಹಾಗೂ ಅವರು ಹೊರಗಡೆ ವಾಸಿಸುವುದಕ್ಕೂ ಯಾವುದೇ ಸಂಬಂಧ ಇದ್ದಿರಲಿಲ್ಲವೆಂದು ತಿಳಿಯುವುದು ಸಹಜವೆಂದು ಇದರಿಂದ ಗೊತ್ತಾಗುತ್ತದೆ.

ಈ ಸಿದ್ಧಾಂತ ಹೊಸದಾಗಿರುವುದರಿಂದ ವಿಮರ್ಶಕರಿಗೆ ಮುಂದಿನ ಪ್ರಶ್ನೆ ಕೇಳದೆ ತೃಪ್ತಿಯಾಗಲಿಕ್ಕಿಲ್ಲ:

(೧) ಅಸ್ಪೃಶ್ಯರು ಬಿಡಿಜನರೆನ್ನಲು ಏನಾದರೂ ಸಾಕ್ಷ್ಯಾಧಾರ ಇದೆಯೆ?

(೨) ಮೇಲೆ ಸೂಚಿಸಿದ ವಸಾಹತು ಕಾರ್ಯವಿಧಾನ ಯಾವುದೇ ದೇಶದಲ್ಲಿ ನಿಜವಾಗಿ ನಡೆದಿದೆ ಎಂಬುದಕ್ಕೆ ಏನಾದರೂ ಸಾಕ್ಷಿ ಇದೆಯೆ?

(೩) ಬಿಡಿಜನರು ಊರ ಹೊರಗೆ ವಾಸಿಸುವುದು ಎಲ್ಲ ಸಮಾಜಗಳ ಸಾರ್ವತ್ರಿಕ ಸಾಮಾನ್ಯ ಲಕ್ಷಣವಾಗಿದ್ದರೆ, ಬಿಡಿಜನರ ಪ್ರತ್ಯೇಕ ವಸತಿಗಳು ಬೇರೆ ದೇಶಗಳಲ್ಲಿ ಹೇಗೆ ಮಾಯವಾದವು? ಅವು ಭಾರತದಲ್ಲಿ ಏಕೆ ಮಾಯವಾಗಲಿಲ್ಲ?

♦

## ಅಧ್ಯಾಯ ೪

# ಅಸ್ಪೃಶ್ಯರು ಬಿಡಿ ಜನಾಂಗವೆ?

ಅಸ್ಪೃಶ್ಯರು ಮೂಲತಃ ಬಿಡಿಜನರೆ ಎಂಬ ಪ್ರಶ್ನೆಗೆ ನನ್ನ ಉತ್ತರ “ಹೌದು” ಎಂದಿದೆ. ಉತ್ತರದ ಹಿಂದೆಯೇ ಸಾಕ್ಷಿಗಾಗಿ ಕೂಗು ಕೇಳಬರುತ್ತದೆ. ಹಿಂದೂ ಹಳ್ಳಿಗಳಲ್ಲಿಯ ಸ್ಪೃಶ್ಯರ ಮತ್ತು ಅಸ್ಪೃಶ್ಯರ ಕುಲದೇವತೆಗಳನ್ನು ಅಭ್ಯಾಸಮಾಡಿದರೆ, ಈ ವಿಷಯಕ್ಕೆ ಸಂಬಂಧಿಸಿದ ನೇರ ಸಾಕ್ಷಿ ದೊರಕಬಹುದು. ದುರ್ದೈವವಶಾತ್, ಮಾನವಶಾಸ್ತ್ರದ ವಿದ್ಯಾರ್ಥಿಗಳಿಂದ ಹಿಂದೂಗಳ ಮತ್ತು ಅಸ್ಪೃಶ್ಯರ ಕುಲದೇವತೆಗಳ ಅಭ್ಯಾಸ ಇನ್ನೂ ಪ್ರಾರಂಭವಾಗಿಲ್ಲ. ಈ ವಿಷಯಕ್ಕೆ ಸಂಬಂಧಿಸಿದ ಅಂಕಿಸಂಖ್ಯೆಗಳು ಸಂಗ್ರಹವಾದಾಗ ಈ ಅಧ್ಯಾಯದಲ್ಲಿ ಎತ್ತಿದ ಪ್ರಶ್ನೆಗೆ ಖಚಿತ ಉತ್ತರ ಕೊಡಲು ಶಕ್ಯವಾಗುತ್ತದೆ. ಸದ್ಯಕ್ಕೆ, ನಾನು ಮಾಡಿದ ತನಿಖೆಯಿಂದ ನನಗೆ ಸಮಾಧಾನ ಆಗಿದೆ. ನಾನು ಮಾಡಿದ ತನಿಖೆಯಿಂದ ತಿಳಿದಿರುವ ಸಂಗತಿ ಇಷ್ಟು – ಒಂದು ಊರಿನಲ್ಲಿರುವ ಅಸ್ಪೃಶ್ಯರ ಕುಲದೇವತೆಗಳು ಅದೇ ಹಳ್ಳಿಯ ಹಿಂದೂಗಳ ಕುಲದೇವತೆಗಳು ಬೇರೆ ಬೇರೆಯಾಗಿದೆ.

ಹಿಂದೂಗಳ ಮತ್ತು ಅಸ್ಪೃಶ್ಯರ ಕುಲದೇವತೆಗಳಲ್ಲಿರುವ ಭಿನ್ನತೆ, ಅಸ್ಪೃಶ್ಯರು ಹಳ್ಳಿಯಲ್ಲಿರುವ ಹಿಂದೂ ಜನರ ಸಮಾಜಕ್ಕಿಂತ ಭಿನ್ನ ಪಂಗಡಕ್ಕೆ ಸೇರಿದವರು ಎಂಬ ಸಿದ್ಧಾಂತವನ್ನು ಪುಷ್ಟೀಕರಿಸುತ್ತದೆ. ಅಂತೂ, ಈ ಪ್ರಶ್ನೆಗೆ ನೇರ ಸಂಬಂಧವಿರುವ ಸಾಕ್ಷಿಯನ್ನು ಇನ್ನೂ ಸಂಗ್ರಹಿಸಬೇಕಾಗಿದೆ ಎಂಬುದನ್ನು ಒಪ್ಪತಕ್ಕದ್ದು. ಆದರೆ ದಿಕ್‌ಸೂಚಿಗಳಾಗಿ ಕೆಲಸ ಮಾಡುವ ಕೆಲವು ಸಂಗತಿಗಳು ಅಳಿಯದೇ ಉಳಿದಿರುತ್ತವೆ. ಅವುಗಳ ಆಧಾರದ ಮೇಲಿಂದ ಅಸ್ಪೃಶ್ಯರು ಬಿಡಿಜನರೆಂದು ಹೇಳಬಹುದು. ಅಂಥ ಸಾಕ್ಷಿ ಸಂಗತಿಗಳು ಎರಡು ಗುಂಪುಗಳಲ್ಲಿ ಲಭ್ಯವಿರುತ್ತದೆ.

ಒಂದು ಗುಂಪಿನ ಸಂಗತಿಗಳಲ್ಲಿ ಹಿಂದೂ ಶಾಸ್ತ್ರಗಳು, ಕೆಲವು ವರ್ಗಗಳಿಗೆ ಕೊಟ್ಟಿರುವಂಥ ಅಂತ್ಯ, ಅಂತ್ಯಜ ಮತ್ತು ಅಂತ್ಯವಾಸಿನ್ ಹೆಸರುಗಳು ಸಿಗುತ್ತವೆ. ಅವು ಬಹಳ ಪ್ರಾಚೀನ ಕಾಲದಿಂದ ಬಂದವುಗಳಾಗಿವೆ. ಕೆಲವು ನಿರ್ದಿಷ್ಟ ವರ್ಗಗಳನ್ನಷ್ಟೇ ಸೂಚಿಸಲು ಈ ಹೆಸರುಗಳನ್ನು ಏಕೆ ಬಳಸಲಾಯಿತು? ಈ ಪದಗಳಲ್ಲಿ ವಿಶೇಷ ಅರ್ಥ ಅಡಗಿರುವಂತೆ ತೋರುತ್ತದೆ. ಈ ಪದಗಳನ್ನು ನಿಃಸ್ಸಂಶಯವಾಗಿ ಬೇರೆ ಮೂಲದಿಂದ ತೆಗೆದುಕೊಳ್ಳಲಾಗಿದೆ. ಈ ಪದಗಳು 'ಅಂತ' ಶಬ್ದದಿಂದ ಹುಟ್ಟಿರುತ್ತವೆ. 'ಅಂತ' ಪದದ ಅರ್ಥವೇನು? ಹಿಂದೂ ಶಾಸ್ತ್ರ ಪಂಡಿತರು “ಅಂತ” ಎಂದರೆ 'ಕೊನೆಗೆ ಹುಟ್ಟಿದವನು' ಎಂದು ವಾದಿಸುತ್ತಾರೆ. ಹಿಂದೂ ದೇವಸೃಷ್ಟಿಯ ಕ್ರಮದ ಪ್ರಕಾರ ಅಸ್ಪೃಶ್ಯ ಕೊನೆಗೆ ಹುಟ್ಟಿದವನೆಂಬ ಗ್ರಹಿಕೆ ಇದೆ. ಆದರೆ ಅಂತ್ಯ ಪದದ ಅರ್ಥ ಅಸ್ಪೃಶ್ಯ ಎಂದಿರುತ್ತದೆ. ಈ ವಾದ ಅಸಂಬದ್ಧ. ಹಿಂದೂ ಸೃಷ್ಟಿ ಕ್ರಮಕ್ಕೆ ಇದು ಸರಿಹೋಗುವುದಿಲ್ಲ. ಅದರ ಪ್ರಕಾರ ಶೂದ್ರನು ಕೊನೆಗೆ ಹುಟ್ಟಿದವನು. ಅಸ್ಪೃಶ್ಯನು ಸೃಷ್ಟಿಯ ಯೋಜನೆಯ ಹೊರಗಿರುತ್ತಾನೆ. ಅಂದರೆ ಅವನು ವರ್ಣವ್ಯವಸ್ಥೆಯ ಹೊರಗಿರುತ್ತಾನೆ. ಜನನದ ಆಧಾರದ ಮೇಲಿರುವ ಹಿಂದೂಗಳ ಆದ್ಯತೆ ಸಿದ್ಧಾಂತ ಅಸ್ಪೃಶ್ಯರಿಗೆ ಅನ್ವಯಿಸುವುದಿಲ್ಲ. ಅನ್ವಯಿಸಲು ಸಾಧ್ಯವಿಲ್ಲ, ನನ್ನ ದೃಷ್ಟಿಯಲ್ಲಿ ಅಂತ್ಯ ಎಂದರೆ ಸೃಷ್ಟಿಯ ಸರಣಿಯಲ್ಲಿ ಕೊನೆಯವನಲ್ಲ, ಊರ ವಸತಿಯ ವ್ಯವಸ್ಥೆಯಲ್ಲಿ ಕೊನೆಯವನು. ಊರ ಹೊರವಲಯದಲ್ಲಿ ವಾಸಿಸುವವರಿಗೆ ಈ ಹೆಸರನ್ನು ಕೊಡಲಾಗಿದೆ. ಅಂತ್ಯಜ ಪದಕ್ಕೆ ಅಳಿಯದುಳಿದಿರುವ

ಬೆಲೆ ಇದೆ. ಒಂದು ಕಾಲಕ್ಕೆ ಕೆಲವರು ಊರ ಒಳಗಡೆ ವಾಸಿಸುತ್ತಿದ್ದರು, ಮತ್ತೆ ಕೆಲವರು ಊರ ಹೊರಗಡೆ ವಾಸಿಸುತ್ತಿದ್ದರು. ಊರ ಹೊರಗಡೆ, ಅಂದರೆ ಊರ ಅಂಚಿನಲ್ಲಿ ವಾಸಿಸುವವರಿಗೆ ಅಂತ್ಯಜ ಎಂದು ಕರೆಯಲಾಯಿತು.

ಕೆಲವರು ಊರ ಅಂಚಿನಲ್ಲಿ ಏಕೆ ವಾಸವಾಗಿದ್ದರು? ಅವರು ಬಿಡಿಜನರೂ, ಪರಕೀಯರೂ ಮತ್ತು ಊರ ಒಳಗಡೆ ವಾಸಿಸುವ ಪಂಗಡಗಳಿಗಿಂತ ಭಿನ್ನವಾದ ಬೇರೆ ಪಂಗಡಗಳಿಗೆ ಸೇರಿದವರಾಗಿದ್ದರೆಂಬ ಕಾರಣ ಅಲ್ಲದೆ ಬೇರಿನ್ನಾವ ಕಾರಣ ಇರಲು ಸಾಧ್ಯ? ನನಗೆ ಬೇರೆ ಯಾವ ಕಾರಣವೂ ತೋರುವುದಿಲ್ಲ. ಅವರನ್ನು ಹೆಸರಿಸಲು ಮಾಡಿದ ವಿಶಿಷ್ಟ ಪದಗಳ ಬಳಕೆಯನ್ನು ನೋಡಿದರೆ, ಇದುವೇ ನಿಜವಾದ ಕಾರಣ ಇರಬಹುದೆಂದು ಅನ್ನಿಸುತ್ತದೆ. ಆದ್ದರಿಂದ ಅಂತ್ಯ, ಅಂತ್ಯಜ ಮತ್ತು ಅಂತ್ಯವಾಸಿನ್ ಪದಗಳ ಬಳಕೆಗೆ ಎರಡು ಬಗೆಯ ಮಹತ್ವ ಉಂಟು. ಮೊದಲನೆಯದಾಗಿ, ಪ್ರತ್ಯೇಕ ಮನೆಗಳಲ್ಲಿ ವಾಸಿಸುವುದು ವಿಚಿತ್ರ ಸಂಗತಿಯಾಗಿರುವುದರಿಂದ ಅದನ್ನು ವರ್ಣಿಸಲು ಹೊಸ ಪದಗಳನ್ನು ಶೋಧಿಸಬೇಕಾಯಿತೆಂದು ಕಂಡುಬರುತ್ತದೆ. ಎರಡನೆಯದಾಗಿ, ಅವರನ್ನು ವರ್ಣಿಸಲು ಆಯ್ದ ಪದಗಳು ಅವರ ಸ್ಥಿತಿಯನ್ನು ನಿಖರವಾಗಿ ವ್ಯಕ್ತಪಡಿಸುತ್ತವೆ, ಅಂದರೆ ಅವರು ಪರಕೀಯರಾಗಿದ್ದರೆಂಬುದನ್ನು ಸೂಚಿಸುತ್ತವೆ.

ಅಸ್ಪೃಶ್ಯರು ಬಿಡಿಜನರಾಗಿದ್ದರೆಂದು ತೋರಿಸುವ ಎರಡನೆಯ ಪ್ರಕಾರದ ಸಾಕ್ಷಿಗಳು ಮಹಾರ್ ಎಂಬ ಒಂದು ವರ್ಗದ ಜನರ ಸ್ಥಿತಿಗೆ ಸಂಬಂಧಿಸಿರುತ್ತವೆ. ಮಹಾರಾಷ್ಟ್ರದಲ್ಲಿ ಮಹಾರ್ ಸಮಾಜ ಮುಖ್ಯ ಅಸ್ಪೃಶ್ಯ ಸಮಾಜವಾಗಿದೆ. ಮಹಾರ್ ಮತ್ತು ಸ್ಪೃಶ್ಯ ಹಿಂದೂಗಳ ನಡುವಿನ ಸಂಬಂಧ ತೋರಿಸುವ ಕೆಳಗಿನ ಸಂಗತಿಗಳು ಗಮನಾರ್ಹವಾಗಿದೆ. (೧) ಮಹಾರರು ಪ್ರತಿಯೊಂದು ಊರಲ್ಲಿ ಸಿಗುತ್ತಾರೆ, (೨) ಮಹಾರಾಷ್ಟ್ರದಲ್ಲಿ ಪ್ರತಿಯೊಂದು ಊರ ಸುತ್ತ ದೊಡ್ಡಗೋಡೆ ಇರುತ್ತಿದ್ದ, ಅದರ ಹೊರಗೆ ಮಹಾರರು ವಾಸವಾಗಿರುತ್ತಾರೆ. (೩) ಊರ ಪರವಾಗಿ ಮಹಾರರು ಪಾಳಿಯ ಪ್ರಕಾರ ಕಾವಲು ಕೆಲಸ ಮಾಡುತ್ತಾರೆ, (೪) ಹಿಂದೂಗಳ ವಿರುದ್ಧ ಮಹಾರರು ೫೨ ಹಕ್ಕುಗಳನ್ನು ಸಾಧಿಸುತ್ತಾರೆ. ಅವುಗಳಲ್ಲಿ ಮುಖ್ಯವಾದವು ಕೆಳಗಿರುತ್ತವೆ :

ಅ) ಊರವರಿಂದ ಆಹಾರ ಸಂಗ್ರಹಿಸುವ ಹಕ್ಕು

ಆ) ಸುಗ್ಗಿಯ ಸಮಯ ಪ್ರತಿಯೊಬ್ಬ ನಾಗರಿಕನಿಂದ ಧಾನ್ಯ ಸಂಗ್ರಹಿಸುವ ಹಕ್ಕು

ಇ) ಊರವರ ದನ ಸತ್ತರೆ ಅದನ್ನು ವಶಪಡಿಸಿಕೊಳ್ಳುವ ಹಕ್ಕು.

ಮಹಾರರ ಸ್ಥಿತಿಗತಿಯಿಂದ ದೊರೆಯುವ ಸಾಕ್ಷಿ ಮಹಾರಾಷ್ಟ್ರಕ್ಕೆ ಸೀಮಿತವಾಗಿರುವುದು ನಿಜ. ಭಾರತದ ಬೇರೆ ರಾಜ್ಯಗಳಲ್ಲಿಯೂ ಇಂಥ ಉದಾಹರಣೆಗಳು ಸಿಗುತ್ತವೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸಬೇಕಾಗಿದೆ. ಆದರೆ ಮಹಾರರ ಉದಾಹರಣೆಯನ್ನು ಭಾರತದ ತುಂಬ ಇರುವ ಅಸ್ಪೃಶ್ಯರ ಮಾದರಿ ಎಂದು ತೆಗೆದುಕೊಳ್ಳುವುದಾದರೆ, ಭಾರತ ಇತಿಹಾಸದಲ್ಲಿ ಬೇರೆ ಪಂಗಡಗಳಿಗೆ ಸೇರಿದ ಬಿಡಿಜನರು ನೆಲೆವಾಸಿ ಪಂಗಡದ ಬಳಿಗೆ ಬಂದು ಕೊಡುಕೊಳ್ಳುವ ವ್ಯವಹಾರ ಮಾಡಿದ ಒಂದು ಘಟ್ಟ ಇತ್ತೆಂದು ತಿಳಿಯಬೇಕಾಗುತ್ತದೆ. ಆ ವ್ಯವಹಾರದ ಪ್ರಕಾರ, ಬಿಡಿಜನರು ಊರ ದಂಡೆಗುಂಟ ವಾಸಿಸಲು ಅನುಮತಿ ಪಡೆದಿದ್ದರು. ಕೆಲವು ಕರ್ತವ್ಯ ನಿರ್ವಹಿಸಬೇಕಾಗಿತ್ತು ಮತ್ತು ಆ ಸೇವೆಗಳಿಗೆ ಪ್ರತಿಯಾಗಿ ಕೆಲವು ಹಕ್ಕುಗಳನ್ನು ಪಡೆದರು. ಮಹಾರಾಷ್ಟ್ರದಲ್ಲಿ ಮಹಾರರು ಕೇಳಿದ ೫೨ ಹಕ್ಕುಗಳನ್ನು ಬೇಡಾರ ಸಂಸ್ಥಾನದ ಮುಸಲ್ಮಾನ ಅರಸರು ಕೊಟ್ಟಂಥ ಪದ್ಧತಿ ಇರುತ್ತದೆ. ಇದರರ್ಥ ಇಷ್ಟೆ, ಈ ಹಕ್ಕುಗಳು ಬಹಳ ಪ್ರಾಚೀನ ಕಾಲದವು ಆಗಿದ್ದು, ಅದನ್ನು ಮುಸಲ್ಮಾನ ಅರಸರು ದೃಢೀಕರಿಸಿದರು.

ಈ ಅಂಶಗಳು ತೀರ ಕ್ಷುಲ್ಲಕ ಎನಿಸಿದರೂ ಅಸ್ಪೃಶ್ಯರು ಪ್ರಾರಂಭದಿಂದಲೂ ಊರ ಹೊರಗೆ

ವಾಸಿಸುತ್ತಿದ್ದರೆನ್ನುವ ಸಿದ್ಧಾಂತವನ್ನು ಪುಷ್ಟೀಕರಿಸುವ ಸಾಕ್ಷಿಗಳನ್ನು ಒದಗಿಸುತ್ತವೆ. ಅವರನ್ನು ಮೊದಲು ಅಸ್ಪೃಶ್ಯರೆಂದು ಸಾರಿ, ಆ ಕಾರಣದಿಂದ ಅವರನ್ನು ಊರ ಹೊರಗೆ ಹಾಕಿರುವುದಲ್ಲ. ಅವರು ಪ್ರಾರಂಭದಿಂದಲೂ ಊರ ಹೊರಗೇ ವಾಸಿಸುತ್ತಿದ್ದರು, ಏಕೆಂದರೆ ಅವರು ಊರೊಳಗೆ ನೆಲೆಸಿರುವ ಪಂಗಡಕ್ಕಿಂತ ಭಿನ್ನವಾದ ಬೇರೆ ಪಂಗಡಕ್ಕೆ ಸೇರಿದ ಬಿಡಿಜನರಾಗಿದ್ದರು.

ಈ ವಿವರಣೆಯನ್ನು ಒಪ್ಪುವಲ್ಲಿ ಒಂದು ಮುಖ್ಯ ತೊಂದರೆ ಎಂದರೆ ಅಸ್ಪೃಶ್ಯರು ಯಾವಾಗಲೂ ಅಸ್ಪೃಶ್ಯರಾಗಿದ್ದರೆಂಬ ತಿಳುವಳಿಕೆ. ಒಂದು ಕಾಲಕ್ಕೆ ಸದ್ಯದ ಅಸ್ಪೃಶ್ಯರ ಪೂರ್ವಜರು ಅಸ್ಪೃಶ್ಯರಾಗಿರದೆ ಕೇವಲ ಬಿಡಿಜನರಾಗಿದ್ದರು, ಮತ್ತೇನೂ ಅಲ್ಲ. ಅವರ ಮತ್ತು ಊರವರ ನಡುವಣ ವ್ಯತ್ಯಾಸಕ್ಕೆ ಕಾರಣ ಅವರು ಬೇರೆ ಬೇರೆ ಪಂಗಡಗಳಿಗೆ ಸೇರಿದವರಾಗಿದ್ದರೆಂಬ ಅಂಶವನ್ನು ನೆನಪಿನಲ್ಲಿಟ್ಟರೆ, ಈ ತೊಂದರೆಯ ನಿವಾರಣೆ ಆಗುವುದು.

♦

## ಅಧ್ಯಾಯ ೫

# ಅಂಥ ಸಾದೃಶ ಉದಾಹರಣೆಗಳು ಬೇರೆಡೆ ಉಂಟೆ?

ಬಿಡಿಜನರ ಇತಿಹಾಸದಲ್ಲಿ ಬಿಡಿಜನರು ಬೇರೆಡೆ ಊರ ಹೊರಗೆ ವಾಸಿಸುತ್ತಿದ್ದ ಉದಾಹರಣೆಗಳು ದೊರೆಯುತ್ತಿವೆಯೆ? ಈ ಪ್ರಶ್ನೆಗೆ "ಹೌದು" ಎಂದು ಉತ್ತರ ಕೊಡಲು ಸಾಧ್ಯವಿದೆ. ಸುದೈವದಿಂದ ಭಾರತದಲ್ಲಿ ಸಂಭವಿಸಿದ ಪ್ರಕರಣ ಹೋಲುವ ಎರಡು ಪ್ರಕರಣಗಳು ಬೇರೆಡೆಯಲ್ಲಿ ಸಂಭವಿಸಿವೆ. ನಿಜಕ್ಕೂ ಇಂಥ ಬೆಳವಣಿಗೆ ಐರ್ಲೆಂಡ್ ಮತ್ತು ವೇಲ್ಸ್ ದೇಶಗಳಲ್ಲಿ ಆಗಿದೆ ಎಂದು ವರದಿಯಾಗಿದೆ. ಐರ್ಲೆಂಡಿನ ಬ್ರೆಹಾನ್ ಕಾಯ್ದೆಗಳಿಂದ ಪ್ರಾಚೀನ ಐರ್ಲೆಂಡ್ ಹಳ್ಳಿಯ ಘಟನೆ ಹೇಗಿತ್ತೆಂಬುದನ್ನು ತಿಳಿದುಕೊಳ್ಳಬಹುದು. ಹೆನ್ರಿ ಮೇನ್ (Henry Maine) ಕೊಡುವ ಈ ಕೆಳಗಿನ ಸಾರಾಂಶದಿಂದ ಐರ್ಲೆಂಡಿನ ಕಾಯ್ದೆಗಳ ಕಿರುಪರಿಚಯ ನಮಗಾಗುತ್ತದೆ.[೧]

> ಬ್ರೆಹಾನ್ ಕಾಯ್ದೆ ಆದಿವಾಸಿಗಳ ಪಂಗಡ ಬಹುದಿನಗಳಿಂದ ಪಂಗಡಕ್ಕೆ ಸೇರಿದ ಪ್ರದೇಶದಲ್ಲಿ ನೆಲೆಸಿರಬಹುದಾದ ಒಂದು ಹಂತವನ್ನು ತೋರಿಸುತ್ತದೆ. ಅದು ಸಾಕಷ್ಟು ದೊಡ್ಡದೂ, ಮಹತ್ವದ್ದೂ ಇದ್ದು, ಅದೊಂದು ರಾಜಕೀಯ ಘಟಕ ಆಗಿರಬಹುದಾಗಿದೆ. ಅದರ ಮುಖ್ಯಸ್ಥ ಬಹುಶಃ ಐರ್ಲೆಂಡ್ ದಾಖಲೆಗಳ ಪ್ರಕಾರ ಒಬ್ಬ ಅರಸ, ಒಂದು ಪ್ರದೇಶ ಸಂಪೂರ್ಣ ಒಂದು ಪಂಗಡಕ್ಕೆ ಸೇರಿರುತ್ತದೆಂದು ಪ್ರಾಥಮಿಕ ಗ್ರಹಿಕೆ. ಆದರೆ ಒಂದು ಭೂಪ್ರದೇಶದ ಬಹಳಷ್ಟು ಭಾಗಗಳು ಶಾಶ್ವತವಾಗಿ ಚಿಕ್ಕ ಚಿಕ್ಕ ಪಂಗಡಗಳಿಗೆ ಸೇರಿದ್ದವು. ಅದರ ಒಂದು ಭಾಗವನ್ನು ಕಾರ್ಯಾಲಯಕ್ಕಾಗಿ ಒಡೆಯನಿಗೆ ಕೊಡಲಾಗಿತ್ತು. ವಾರಸು ನಿಯಮದ ಪ್ರಕಾರ, ಒಬ್ಬರಿಂದೊಬ್ಬರಿಗೆ ಅದರ ಒಡೆತನ ಬದಲಾಗುತ್ತದೆ. ಉಳಿದ ಭಾಗವನ್ನು ಪಂಗಡದ ತುಕಡಿಗಳು ಆಕ್ರಮಿಸಿರುತ್ತವೆ. ಅವುಗಳಲ್ಲಿ ಕೆಲವು ಚಿಕ್ಕ ಒಡೆಯರ ಅಧೀರವಾಗಿರುತ್ತವೆ ಮತ್ತು ಕೆಲವು ನಿಜಕ್ಕೂ ಒಡೆಯನ ಆಡಳಿತಕ್ಕೊಳಪಡದಿದ್ದರೂ, ಗೌರವಸ್ಥ ವರ್ಗದವನೊಬ್ಬ ಅವರ ಪ್ರತಿನಿಧಿಯಾಗಿ ಆಡಳಿತ ಕಾರ್ಯ ನಿರ್ವಹಿಸುತ್ತಾನೆ. ಉಳಿದೆಲ್ಲ ಪಂಗಡ ಪ್ರದೇಶ ಇಡೀ ಪಂಗಡಕ್ಕೆ ಸೇರಿದುದಾಗಿರುತ್ತದೆ. ಸೈದ್ಧಾಂತಿಕವಾಗಿ, ಪಂಗಡಕ್ಕೆ ಸೇರಿದ ಖಾಲಿ ಭೂಮಿಯನ್ನು ತಾತ್ಪೂರ್ತಿಕವಾಗಿ ಮಾತ್ರ ಯಾರಾದರೂ ಸ್ವಾಧೀನಪಡಿಸಿಕೊಳ್ಳಬಹುದು. ಇಂಥ ಭೂಸ್ವಾಧೀನ ಪ್ರಕರಣಗಳು ಮೇಲಿಂದ ಮೇಲೆ ಜರುಗುತ್ತವೆ. ಪಂಗಡಕ್ಕೆ ಸೇರಿದ ಭೂಮಿಯ ಹಿಡುವಳಿಗಾರರಲ್ಲಿ ಪಂಗಡಿಗರೆಂದು ಕರೆದುಕೊಳ್ಳುವ ಜನರ ಗುಂಪುಗಳಿರುತ್ತವೆ. ಆದರೆ ವಾಸ್ತವಿಕವಾಗಿ ಅವು ದನಕರುಗಳನ್ನು ಮೇಯಿಸಲೋಸುಗ ಮಾಡಿಕೊಂಡ ಕರಾರುಗಳಿಂದ ನಿರ್ಮಿಸಿದ ಸಂಘಗಳಾಗಿರುತ್ತವೆ. ಸಾಮೂಹಿಕ ಒಡೆತನದಲ್ಲಿರುವ ಬಹಳಷ್ಟು ಪಂಗಡದ ಭೂಮಿ ಖಾಲಿ ಇರುತ್ತದೆ. ಆದರೆ ಇಂಗ್ಲೀಷ್ ಶಬ್ದದಲ್ಲಿ ಹೇಳುವುದಾದರೆ ಅದು ಪಂಗಡದ ನಿರುಪಯುಕ್ತ ಭೂಮಿ

---

೧. *Early History of Institutions,* Lecture III, p. ೯೨–೯೩

(ಗಾಂವಠಾಣ). ಆದಾಗ್ಯೂ ಪಂಗಡದ ಜನರ ವಸಾಹತುಗಳ ಪರಿಣಾಮವಾಗಿ ನಿರುಪಯುಕ್ತ ಭೂಮಿ ಕೃಷಿ ಭೂಮಿಯಾಗಿ ಇಲ್ಲವೆ ಶಾಶ್ವತ ಗೋಮಾಳವಾಗಿ ಯಾವತ್ತೂ ಉಪಯೋಗಿಸಲ್ಪಡುತ್ತದೆ ಮತ್ತು ಅದರ ಮೇಲೆ, ಅದರಲ್ಲಿಯೂ ನಿರ್ದಿಷ್ಟ, ಅಂಚು ಪ್ರದೇಶದಲ್ಲಿ ಕೂತು ವಿಶ್ರಮಿಸಲು ಭೂಸಾಗುವಳಿಗಾರರಿಗೆ ಮತ್ತು ಅಧೀನ ಸಂಸ್ಥೆಗಳಿಗೆ ಪರವಾನಗಿ ಇರುತ್ತದೆ. ಯಾವ ಭೂಪ್ರದೇಶದ ಮೇಲೆ ಮುಖ್ಯಸ್ಥನ ಅಧಿಕಾರ ನಿಧಾನವಾಗಿ ಬೆಳೆಯುತ್ತ ಹೋಗುತ್ತದೆಯೋ, ಅದು ಪಂಗಡ ಪ್ರದೇಶಕ್ಕೆ ಸೇರಿಕೊಳ್ಳುತ್ತದೆ. ಅಲ್ಲಿಯೇ ಮುಖ್ಯಸ್ಥರು ತನ್ನ "ಫ್ಯೂಧಿರ್" (fuidhir) ಅಂದರೆ ಪರಕೀಯ ಗೇಣಿದಾರನನ್ನು ಇರಿಸುತ್ತಾನೆ. "ಫ್ಯೂಧಿರ್" ಒಂದು ಮಹತ್ವದ ವರ್ಗವಾಗಿದ್ದು, ಅದು ಸಮಾಜಬಾಹಿರ ಜನರಿಂದ ಮತ್ತು ಬೇರೆ ಪಂಗಡಗಳಿಂದ ಬಂದ ಬಿಡಿ ಜನರಿಂದ ಕೂಡಿರುತ್ತದೆ. ಅವರು ಮುಖ್ಯಸ್ಥನ ಕಡೆಗೆ ರಕ್ಷಣೆಗಾಗಿ ಬಂದಿದ್ದು, ಅವನ ಮೇಲಿನ ಅವರ ಅವಲಂಬನವು ಹೊಸ ಪಂಗಡದ ಜೊತೆಗೆ ಅವರು ಹೊಂದಿದ ಸಂಬಂಧವಾಗಿರುತ್ತದೆ. ಈ ಸಂಬಂಧ ಮುಖ್ಯಸ್ಥನ ಮೇಲೆ ಅವರ ರಕ್ಷಣೆಯ ಜವಾಬ್ದಾರಿಯನ್ನು ಹೇರುತ್ತದೆ.

ಫ್ಯೂಧಿರರು ಯಾರು? ಸರ್ ಹೆನ್ರಿ ಮೇನ್‌ನ ಪ್ರಕಾರ ಫ್ಯೂಧಿರರು ;

"ಪರಕೀಯರು ಇಲ್ಲವೆ ಬೇರೆ ಪ್ರದೇಶಗಳಿಂದ ಕದ್ದು ಓಡಿಬಂದವರು. ಅವರು ಪಂಗಡ ಸಮಾಜದಲ್ಲಿ ಸ್ಥಾನಮಾನ ಕಲ್ಪಿಸಿಕೊಂಡಿದ್ದು, ಹೊಸ ಪಂಗಡದ ಜೊತೆಗೆ ಸಂಬಂಧ ಬೆಳೆಸಿಕೊಂಡು ಹೊಸಸ್ಥಾನ ಗಳಿಸಬೇಕಾಗಿರುತ್ತದೆ. ಆಗಿನ ಸಮಾಜ ಭಯಂಕರ ಅಸ್ತವ್ಯಸ್ತವಾಗಿತ್ತು. ಅದರ ಪರಿಣಾಮ ದೇಶದ ತುಂಬ ಬಿಡಿಜನರು ಹೆಚ್ಚಾದರು. ಅಂಥವರು ಫ್ಯೂಧಿರ ಗೇಣಿದಾರರಾಗುವುದರಿಂದ ಮಾತ್ರ ಪುನಃ ವಸತಿ ಮತ್ತು ರಕ್ಷಣೆಯನ್ನು ಪಡೆಯಬಹುದಾಗಿತ್ತು. 'ಫ್ಯೂಧಿರ' ಪಂಗಡಿಗನಾಗಿರದೆ, ಪರಕೀಯನಾಗಿದ್ದ. ರಕ್ತ ಸಂಬಂಧದಿಂದ ಗಟ್ಟಿಗೊಂಡ ಎಲ್ಲ ಸಮಾಜಗಳಲ್ಲಿ ಅಂಥ ಸಂಬಂಧ ಕಳೆದುಕೊಂಡವರ ಸ್ಥಿತಿ ಯಾವಾಗಲೂ ಚಿಂತಾಜನಕವಾಗಿರುತ್ತದೆ. ಅವನು ತಮ್ಮವರಲ್ಲಿ ತನ್ನ ಸ್ವಾಭಾವಿಕ ಸ್ಥಾನವನ್ನು ಕಳೆದುಕೊಂಡಿರುತ್ತಾನಷ್ಟೇ ಅಲ್ಲ, ಬೇರೆಲ್ಲಿಯೂ ಅವನಿಗೆ ಸ್ಥಾನ ಇರುವುದಿಲ್ಲ."

## II

ಈಗ ವೇಲ್ಸ್ ಬಗೆಗೆ ತಿಳಿದುಕೊಳ್ಳೋಣ. ವೇಲ್ಸದಲ್ಲಿಯ ಆದಿಕಾಲದ ಹಳ್ಳಿಯ ಸಂಘಟನೆಯನ್ನು ಸೀಭಾಮ್ (Mr. Seebhom) ಎಂಬುವನು ವರ್ಣಿಸಿರುತ್ತಾನೆ.[೧] ಸೀಭಾಮನ ಪ್ರಕಾರ ವೇಲ್ಸ್‌ದಲ್ಲಿಯ ಹಳ್ಳಿ ಎಂದರೆ ಮನೆಗಳ ಗುಂಪು. ಮನೆಗಳು ಎರಡು ಗುಂಪುಗಳಾಗಿದ್ದವು – ಒಂದು ಗುಂಪು ಸ್ವತಂತ್ರ ಗೇಣಿದಾರರ ಮನೆಗಳಿಂದ ಕೂಡಿದ್ದು. ವಾಸಸ್ಥಳದ ಪ್ರತ್ಯೇಕತೆ ಆದಿಕಾಲದ ವೇಲ್ ಹಳ್ಳಿಯ ಸಾಮಾನ್ಯ ಲಕ್ಷಣವಾಗಿತ್ತೆಂದು ಸೀಭಾಮ್ ಹೇಳುತ್ತಾನೆ. ಪರತಂತ್ರ ಗೇಣಿದಾರರು ಸ್ವತಂತ್ರ ಗೇಣಿದಾರರ ಮನೆಗಳಿರುವ ಸ್ಥಳಕ್ಕೆ ತಾಗದೆ ಇರುವ ಪ್ರತ್ಯೇಕ ಸ್ಥಳದಲ್ಲಿ ಏಕೆ ಇರುವಂತಾಯಿತು? ಅದಕ್ಕೆ ಸೀಭಾಮ್ ಕೊಡುವ ಕಾರಣ ಮುಂದಿನಂತಿರುತ್ತದೆ.[೨]

"ವೇಲ್ಸ್ ಕಾಯ್ದೆಗಳಲ್ಲಿ ಉಲ್ಲೇಖಿಸಿರುವ ಜನರ ವರ್ಗದಲ್ಲಿ ಪ್ರಥಮ ನೋಟಕ್ಕೆ ಗೊಂದಲ ಕಾಣುತ್ತದೆ.

---

೧. *The Tribal System in Wales,* p. ೯

೨. ಅದೇ ಪುಸ್ತಕದಲ್ಲಿ ಪುಟಗಳು – ೫೪–೫೫

ಪಂಗಡಿಗರಲ್ಲಿ ಉಚಲೋರೆ ಬ್ರಿರೆ (Uchelore bryre) ಮತ್ತು ಇನೇಟ್ ಬೊನೆಡಿಂಗ್ಸ (innate bonedings) ಎಂದು ಮತ್ತು ಪಂಗಡಿಗರಲ್ಲದವರಲ್ಲಿ ಟಾಲೋಗೋ ಐಲ್ಟೆ (talogo Ailte), ಆಲ್ಟೂದೆ (Alltude) ಮುಂತಾದ ವರ್ಗಗಳಿದ್ದವು. ಪಂಗಡ ಸಮಾಜದ ಘಟನೆಯಲ್ಲಿ ಅಡಕವಾಗಿರುವ ಸತ್ವವನ್ನು ತಿಳಿದುಕೊಂಡಾಗ ಮಾತ್ರ ಆ ಗೊಂದಲ ಮಾಯವಾಗುತ್ತದೆ. ಪರಕೀಯರ ಗೆಲುವಿನ ಗೊಂದಲದಿಂದ ಮತ್ತು ಭೂಮಿಯ ಶಾಶ್ವತ ವಸಾಹತು ಕಾಯ್ದೆಯನ್ನು ಪರಕೀಯ ಕಾಯ್ದೆ, ರೂಢಿ ಮತ್ತು ಹೆಸರುಗಳಿಂದ ಬಿಡಿಸಲು ಸಾಧ್ಯವಾದರೆ ಈ ತತ್ವ ಸರಳ ಕಾಣುತ್ತದೆ. ಸ್ವತಂತ್ರ ಪಂಗಡಿಗರಲ್ಲಿಯ ರಕ್ತಸಂಬಂಧವೇ ಪಂಗಡ ಸಮಾಜ ರಚನೆಯಲ್ಲಿ ಅಡಕವಾಗಿರುವ ಮುಖ್ಯ ತತ್ವ ಎಂಬುದರಲ್ಲಿ ಸಂಶಯವಿಲ್ಲ. ರಕ್ತ ಸಂಬಂಧಿಕನಲ್ಲದ ಯಾವನೂ ಪಂಗಡದ ಸದಸ್ಯನಾಗಲಾರ. ವಾಸ್ತವಿಕವಾಗಿ ವೇಲ್ಸ್‌ದ ಪಂಗಡ ವೇಲ್ಸ್‌ದ ರಕ್ತಸಂಬಂಧಿಗಳ ಗುಂಪಾಗಿದ್ದಿತು. ವೇಲ್ಸ್‌ದ ಪಂಗಡ ಪದ್ಧತಿಯಲ್ಲಿ, ಸಿಮ್ರಿಕ್ ರಕ್ತದವರು ಮತ್ತು ಸಿಮ್ರಿಕ್ ರಕ್ತಕ್ಕೆ ಸೇರದವರು ಎಂಬ ಎರಡು ವರ್ಗಗಳಿದ್ದವು. ಭೂಮಿಯ ಮತ್ತು ಗೆಲುವಿನ ಪ್ರಶ್ನೆಯಲ್ಲದೆ, ಅವೆರಡೂ ವರ್ಗಗಳ ನಡುವೆ ಆಳವಾದ ಕಂದಕವಿದ್ದಿತು. ಅದು ರಕ್ತದ ವಿಭಜನೆ. ವರ್ಗ ವೈಶಿಷ್ಟ್ಯವನ್ನು ಬಹು ಪ್ರಯಾಸದಿಂದ ಕಾಯ್ದುಕೊಳ್ಳುವುದು ಪಂಗಡ ವ್ಯವಸ್ಥೆಯ ಎದ್ದುಕಾಣುವ ಗುರುತುಗಳಲ್ಲೊಂದೆಂದು ಬೇಗ ಸ್ಪಷ್ಟವಾಗುತ್ತದೆ. ಅದು ಪಂಗಡ ವ್ಯವಸ್ಥೆಯ ಶಕ್ತಿಯ ರಹಸ್ಯಗಳಲ್ಲೊಂದಾಗಿರುತ್ತದೆ.

## III

ಪ್ರಾಚೀನ ಕಾಲದ ಐರಿಶ್ ಮತ್ತು ವೇಲ್ಸ್ ಹಳ್ಳಿಗಳ ಸಂಘಟನೆಯ ವರ್ಣನೆಯಿಂದ ನಿಸ್ಸಂಶಯವಾಗಿ ತಿಳಿಯುವುದೇನೆಂದರೆ – ಅಸ್ಪೃಶ್ಯರು ಊರ ಹೊರಗಡೆ ವಾಸಿಸುವುದು ಕೇವಲ ಭಾರತದಲ್ಲಷ್ಟೇ ಅಲ್ಲ. ಅದು ಪ್ರಪಂಚದ ಎಲ್ಲ ಕಡೆಗೂ ಕಂಡುಬರುವ ಸಂಗತಿ ಎಂದು ಈ ವಿವರಣೆ ಖಚಿತಪಡಿಸುತ್ತದೆ. ಅದು ಕೆಳಗಿನ ಲಕ್ಷಣಗಳಿಂದ ಗುರುತಿಸಲ್ಪಡುತ್ತಿದೆ :

(೧) ಆದಿಕಾಲದಲ್ಲಿ ಊರ ವಸಾಹತಿನಲ್ಲಿ ಎರಡು ಭಾಗಳಿದ್ದವು. ಒಂದು ಭಾಗದಲ್ಲಿ ಒಂದು ಪಂಗಡದವರು ವಾಸಿಸುತ್ತಿದ್ದರು. ಇನ್ನೊಂದು ಭಾಗದಲ್ಲಿ ಬೇರೆ ಬೇರೆ ಪಂಗಡಗಳಿಗೆ ಸೇರಿದ ಬಿಡಿಜನರು ವಾಸಿಸುತ್ತಿದ್ದರು.

(೨) ಪಂಗಡ ಸಮಾಜ ವಾಸಿಸುತ್ತಿದ್ದ ಭಾಗವನ್ನು ನಿಜವಾದ ಊರು ಎಂದು ತಿಳಿಯಲಾಯಿತು. ಬಿಡಿಜನರು ಊರ ಅಂಚಿನಲ್ಲಿ ವಾಸಿಸುತ್ತಿದ್ದರು.

(೩) ಬಿಡಿಜನರು ಊರಹೊರಗೆ ವಾಸಿಸುತ್ತಿದ್ದುದಕ್ಕೆ ಅವರು ಪರಕೀಯರಾಗಿದ್ದು ಯಾವುದೇ ಪಂಗಡಕ್ಕೆ ಸೇರದಿದ್ದುದು ಕಾರಣವಾಗಿತ್ತು.

ಭಾರತೀಯ ಅಸ್ಪೃಶ್ಯರು ಮತ್ತು ಐರ್ಲೆಂಡಿನ ಫ್ಯೂದಿರರು ಮತ್ತು ವೇಲ್ಸ್‌ನ ಆಲ್ಟೂದರ ನಡುವೆ ಹೋಲಿಕೆ ಸಂಪೂರ್ಣವಾಗಿರುತ್ತದೆ. ಫ್ಯೂದಿರರು ಮತ್ತು ಆಲ್ಟೂದರು ಯಾವ ಕಾರಣಕ್ಕಾಗಿ ಊರ ಹೊರಗೆ ವಾಸಿಸಬೇಕಾಯಿತೋ ಅದೇ ಕಾರಣಕ್ಕಾಗಿ ಭಾರತೀಯ ಅಸ್ಪೃಶ್ಯರು ಊರ ಹೊರಗೆ ವಾಸಿಸಬೇಕಾಯಿತು. ಆದ್ದರಿಂದ ಭಾರತದಲ್ಲಿ ಅಸ್ಪೃಶ್ಯರು ಊರ ಹೊರಗೆ ವಾಸಿಸುತ್ತಿರುವ ವಿಷಯದ ಬಗೆಗೆ ಹೇಳಿದುದು ಉಪಮಾತೀತ ಅಲ್ಲವೆಂದು ಸ್ಪಷ್ಟವಾಗುತ್ತದೆ.

## ಅಧ್ಯಾಯ ೬

# ಬೇರೆಡೆಯಲ್ಲಿ ಬಿಡಿಜನರಿಗಾಗಿ ಇದ್ದ ಪ್ರತ್ಯೇಕ ವಸತಿಗಳು ಹೇಗೆ ಮಾಯವಾದವು?

ಐರ್ಲಂಡಿನ ಫ್ಯೂದಿರರು ಮತ್ತು ವೇಲ್ಸ್‌ದ ಆಲ್ಲೂದರು ಬಿಡಿಜನರಾಗಿದ್ದರೆಂಬುದು ನಿಜ. ಅವರು ಪ್ರತ್ಯೇಕ ಮನೆಗಳಲ್ಲಿ ವಾಸಿಸುತ್ತಿದ್ದುದು ಕೂಡ ನಿಜ. ಆದರೆ ಬಿಡಿಜನರ ಪ್ರತ್ಯೇಕ ಮನೆಗಳು ಮಾಯವಾದದ್ದೂ ಮತ್ತು ಅವರು ನೆಲೆವಾಸಿ ಪಂಗಡದೊಂದಿಗೆ ಕೂಡಿ ಅದರೊಂದಿಗೆ ಒಂದಾದರೆಂಬುದು ಕೂಡ ನಿಜ. ಇದು ಮಾತ್ರ ಸ್ವಲ್ಪ ವಿಚಿತ್ರ ಅನಿಸುತ್ತದೆ. ಬಿಡಿಜನರು ಬೇರೆ ಪಂಗಡಕ್ಕೆ, ಆದ್ದರಿಂದ ಬೇರೆ ರಕ್ತಸಂಬಂಧಿ ವರ್ಗಕ್ಕೆ ಸೇರಿದವರಾಗಿದ್ದರೆಂಬ ಕಾರಣಕ್ಕಾಗಿ ಅವರಿಗೆ ಊರ ಹೊರಗೆ ಮನೆಗಳನ್ನು ಕೊಟ್ಟರೆಂಬುದು ಈ ಮೊದಲು ಗಮನಿಸಿದ ಸಿದ್ಧಾಂತದ ಪ್ರಕಾರ ತಿಳಿದುಬರುತ್ತದೆ. ಅಂದ ಬಳಿಕ ನೆಲೆವಾಸಿ ಪಂಗಡದವರು ಅವರನ್ನು ಹೇಗೆ ತಮ್ಮ ಪಂಗಡದಲ್ಲಿ ಸೇರಿಸಿಕೊಂಡರು? ಭಾರತದಲ್ಲಿ ಹಾಗೇಕೆ ಆಗಲಿಲ್ಲ? ಈ ಪ್ರಶ್ನೆಗಳು ಸಹಜವಾಗಿದ್ದು ಅವುಗಳಿಗೆ ಉತ್ತರ ಕೊಡಬೇಕಾಗುತ್ತದೆ.

ಈ ಪ್ರಶ್ನೆ ಆದಿಕಾಲದ ಸಮಾಜ ಆಧುನಿಕ ಸಮಾಜವಾಗಿ ಮಾರ್ಪಡುವ ವಿಕಾಸ ಕ್ರಮದೊಂದಿಗೆ ಸೇರಿಕೊಂಡಿದೆ. ಈ ಮೊದಲು ಅವಲೋಕಿಸಿದಂತೆ ಈ ವಿಕಾಸ ಕ್ರಮವು ಎರಡು ಭಿನ್ನ ಮಾರ್ಗಗಳನ್ನು ಅನುಸರಿಸಿರುತ್ತದೆ. ಒಂದು ಮಾರ್ಗ ಅನುಸರಿಸಿ ಅಲೆಮಾರಿ ಆದಿವಾಸಿ ಸಮಾಜ ನೆಲೆವಾಸಿ ಸಮಾಜವಾಯಿತು. ಇನ್ನೊಂದು ಮಾರ್ಗ ಅನುಸರಿಸುವುದರಿಂದ ಪಂಗಡ ಸಮಾಜ ಹೋಗಿ ಪ್ರಾದೇಶಿಕ ಸಮಾಜವಾಯಿತು. ಈಗ ನಾವು ವಿಚಾರಿಸಬೇಕಾದ ಪ್ರಶ್ನೆ ಎರಡನೆಯ ವಿಕಾಸ ಮಾರ್ಗಕ್ಕೆ ಸಂಬಂಧಿಸಿರುತ್ತದೆ. ಏಕೆಂದರೆ ಜನರ ಐಕ್ಯ ಬಂಧನವಾಗಿ ಒಂದೇ ರಕ್ತಕ್ಕೆ ಬದಲಾಗಿ ಒಂದೇ ಪ್ರದೇಶವನ್ನು ತೆಗೆದುಕೊಳ್ಳುವುದರಿಂದ ಬಿಡಿಜನರ ಪ್ರತ್ಯೇಕ ಮನೆಗಳು ಮಾಯವಾದವು. ಬಂಧನ ಜೋಡಣೆಯಾಗಿ ಆದಿವಾಸಿಗಳ ಸಮಾಜ ಒಂದೇ ರಕ್ತಕ್ಕೆ ಬದಲಾಗಿ ಒಂದೇ ಪ್ರದೇಶವನ್ನು ಏಕೆ ಉಪಯೋಗಿಸಿತು? ಈ ಪ್ರಶ್ನೆಗೆ ಸಮಾಧಾನಕರ ವಿವರಣೆ ಸಿಗುವುದಿಲ್ಲ. ಬದಲಾವಣೆಯ ಮೂಲ ಮಸುಕಾಗಿದೆ. ಅಂತೂ ಆ ಬದಲಾವಣೆ ಹೇಗೆ ಆಯಿತೆಂಬುದು ಸ್ಪಷ್ಟವಾಗಿದೆ.

ಆದಿವಾಸಿ ಸಮಾಜದಲ್ಲಿ ಒಂದು ಹಂತದಲ್ಲಿ ಒಂದು ನಿಯಮ ಹುಟ್ಟಿ, ಅದರಿಂದ ಪಂಗಡರಹಿತನು ಪಂಗಡ ಸದಸ್ಯನಾಗಿ ಅದರಲ್ಲಿ ಸೇರಲು ಸಾಧ್ಯವಾಯಿತು. ಅದು ಉದಾತ್ತೀಕರಣ ನಿಯಮವೆಂದು ಪ್ರಚಾರದಲ್ಲಿತ್ತು. ಈ ನಿಯಮ ಯಾವುವೆಂದರೆ – ಒಬ್ಬ ಪಂಗಡರಹಿತನು ಪಂಗಡ ಹತ್ತಿರ ವಾಸಿಸುತ್ತಿದ್ದರೆ ಇಲ್ಲವೆ ಪಂಗಡದಲ್ಲಿರುವವರೊಂದಿಗೆ ಮದುವೆಯಾಗಿ ನಿರ್ದಿಷ್ಟ ತಲೆಮಾರು ಆ ರಕ್ತಸಂಬಂಧವನ್ನು ಮುಂದುವರಿಸಿಕೊಂಡು ಹೋದದ್ದಾದರೆ ಅವನು ಅವರ ಸಂಬಂಧಿಕನಾಗುವನು.[೧] ಸೀಭಾಮನು ಒಬ್ಬ ಪಂಗಡರಹಿತನು ಪಂಗಡಿಗನಾಗಲು ವೇಲ್ಸ್‌ನ ಗ್ರಾಮ ಸಂಘಟನಾ ಪದ್ಧತಿಯ ನಿಯಮಗಳನ್ನು ಕೆಳಗಿನಂತೆ

೧. W.E. Heam, *The Aryan Household,* Chapter VIII.

ವಿವರಿಸುತ್ತಾನೆ.

೧) ದಕ್ಷಿಣ ವೇಲ್ಸ್‌ನ ಸಂಪ್ರದಾಯದ ಪ್ರಕಾರ ಪರಕೀಯನು ಸಿಮ್ರು (ವೇಲ್ಸ್)ದಲ್ಲಿ ವಾಸಿಸುವುದರಿಂದ ಕೊನೆಗೆ ಸಿಮ್ರು ಆಗುತ್ತಿದ್ದನು. ಆದರೆ ಅವನು ಒಂಬತ್ತು ತಲೆಮಾರು ಅಲ್ಲೇ ವಾಸಿಸಿದ ಮೇಲೆ ಮಾತ್ರ.

೨) ಸಿಮ್ರುಗಳೊಂದಿಗೆ ಮದುವೆಯಾಗುವುದರಿಂದ ಒಬ್ಬ ಪರಕೀಯನು ನಾಲ್ಕನೆಯ ತಲೆಮಾರಿನಲ್ಲಿ ಸಜಾತಿಯ ಸಿಮ್ರು ಆಗುತ್ತಿದ್ದನು. ಬೇರೆ ಮಾತಿನಲ್ಲಿ ಹೇಳುವುದಾದರೆ, ಮೂಲ ಪರಕೀಯನ ಮರಿಮೊಮ್ಮಗನು, ಯಾವನ ರಕ್ತದ ೭೧೮ನೆಯ ಭಾಗ ಸಿಮ್ರಿಕ್ ರಕ್ತವಾಗಿರುತ್ತದೆಯೋ, ಅವನು ಪಂಗಡಿಗನ ಸವಲತ್ತುಗಳನ್ನು ಅನುಭವಿಸುವ ಹಕ್ಕು ಪಡೆಯುತ್ತಾನೆ.

ಅಂಥದು ಭಾರತದಲ್ಲಿ ಸಂಭವಿಸಬಾರದಿತ್ತೆ? ಸಂಭವಿಸಲು ಶಕ್ಯವಿತ್ತು. ಸಂಭವಿಸಬೇಕಾಗಿತ್ತು. ಏಕೆಂದರೆ ಐರ್ಲೆಂಡ್ ಮತ್ತು ವೇಲ್ಸ್‌ಗಳಲ್ಲಿದ್ದಂಥ ನಿಯಮ ಭಾರತದಲ್ಲಿಯೂ ಇತ್ತು. ಮನು ಅದರ ಉಲ್ಲೇಖ ಮಾಡಿದ್ದಾನೆ. ಹತ್ತನೇ ಅಧ್ಯಾಯದ ೬೪–೬೭ ಶ್ಲೋಕಗಳಲ್ಲಿ ಶೂದ್ರನು ಬ್ರಾಹ್ಮಣನಾಗಬಹುದೆಂದು ಹೇಳುತ್ತಾನೆ. ಅದಕ್ಕಾಗಿ ಅವನು ಏಳು ತಲೆಮಾರು ಬ್ರಾಹ್ಮಣ ಸಮಾಜದಲ್ಲಿ ಮದುವೆಯಾಗಬೇಕಾಗುತ್ತದೆ. ಚಾತುರ್ವರ್ಣ್ಯದ ಸಾಮಾನ್ಯ ನಿಯಮದ ಪ್ರಕಾರ ಶೂದ್ರನೆಂದೂ ಬ್ರಾಹ್ಮಣನಾಗಲಾರ. ಶೂದ್ರನು ಹುಟ್ಟಿನಿಂದ ಶೂದ್ರನಾಗಿದ್ದು, ಅವನೆಂದೂ ಬ್ರಾಹ್ಮಣನಾಗಲಾರ. ಆದರೆ ಈ ಪ್ರಾಚೀನ ನಿಯಮ ಬಹಳ ಪ್ರಬಲವಾಗಿದ್ದರಿಂದ ಮನು ಶೂದ್ರನಿಗೆ ಅಸ್ಪೃಶ್ಯತೆಯ ನಿಯಮವನ್ನು ಹಚ್ಚಬೇಕಾಯಿತು. ಈ ನಿಯಮ ಕಾರ್ಯರೂಪಕ್ಕಿಳಿದದ್ದು ಭಾರತದಲ್ಲಿ ಮುಂದುವರಿದಿದ್ದರೆ ಭಾರತದ ಬಿಡಿಜನರು ಗ್ರಾಮಸಮಾಜದಲ್ಲಿ ಸೇರಿಬಿಡುತ್ತಿದ್ದರು ಮತ್ತು ಅವರ ಪ್ರತ್ಯೇಕ ಮನೆಗಳು ಇಲ್ಲವಾಗುತ್ತಿದ್ದವು.

ಹಾಗೇಕೆ ಆಗಲಿಲ್ಲ? ಅದಕ್ಕೆ ಉತ್ತರ ಎಂದರೆ ಅಸ್ಪೃಶ್ಯತೆಯ ಕಲ್ಪನೆ ಎಲ್ಲಕ್ಕೂ ಅಡ್ಡ ಬಂದಿತು ಮತ್ತು ಸಜಾತೀಯರು ಮತ್ತು ವಿಜಾತಿಯರ ನಡುವಿನ ಭಿನ್ನತೆ, ಪಂಗಡಿಗರ ಮತ್ತು ಪಂಗಡರಹಿತರ ನಡುವಿನ ಬೇರೆ ರೂಪದ ಭಿನ್ನತೆ, ಸ್ಪೃಶ್ಯರು ಮತ್ತು ಅಸ್ಪೃಶ್ಯರ ನಡುವಿನ ಅಂತರವನ್ನು ಶಾಶ್ವತಗೊಳಿಸಿತು. ಈ ಹೊಸ ಸಂಗತಿಯೇ, ಐರ್ಲೆಂಡ್ ಮತ್ತು ವೇಲ್ಸ್‌ಗಳಲ್ಲಿ ಆದಂಥ ಸಮ್ಮಿಲನ ಭಾರತದಲ್ಲಿ ಆಗಲು ಅಡ್ಡಿಯಾಯಿತು. ಅದರ ಪರಿಣಾಮವಾಗಿ ಪ್ರತ್ಯೇಕ ವಾಸಸ್ಥಳದ ಪದ್ಧತಿ ಭಾರತೀಯ ಗ್ರಾಮ ವ್ಯವಸ್ಥೆಯ ಶಾಶ್ವತ ಲಕ್ಷಣವಾಗಿ ಉಳಿಯಿತು.

♦

## ಭಾಗ – III

# ಅಸ್ಪೃಶ್ಯತೆಯ ಉಗಮದ ಹಳೆಯ ಸಿದ್ಧಾಂತಗಳು

ಅಧ್ಯಾಯ ೭ : ಅಸ್ಪೃಶ್ಯತೆಯ ಉಗಮಕ್ಕೆ ಆಧಾರವಾಗಿ ಜನಾಂಗೀಯ ಭಿನ್ನತೆ

ಅಧ್ಯಾಯ ೮ : ಅಸ್ಪೃಶ್ಯತೆಯ ಉಗಮಕ್ಕೆ ಕಸುಬಿನ ಆಧಾರ

# ಅಧ್ಯಾಯ ೭

# ಅಸ್ಪೃಶ್ಯತೆಯ ಉಗಮಕ್ಕೆ ಆಧಾರವಾಗಿ ಜನಾಂಗೀಯ ಭಿನ್ನತೆ

ಅಸ್ಪೃಶ್ಯತೆಯ ಉಗಮ ಹೇಗಾಯಿತು? ಈಗಾಗಲೆ ಹೇಳಲಾಗಿರುವಂತೆ ಈ ಪ್ರಶ್ನೆಯನ್ನು ಕುರಿತಂತೆ ಸಂಶೋಧನೆ ನಡೆದಿಲ್ಲ. ಸಮಾಜಶಾಸ್ತ್ರದ ಅಧ್ಯಯನ ಮಾಡಿರುವವರಾರೂ ಇದಕ್ಕೆ ವಿಶೇಷ ಗಮನ ನೀಡಿಲ್ಲ. ಸಮಾಜಶಾಸ್ತ್ರಜ್ಞರಲ್ಲದ ಬೇರೆ ಲೇಖಕರು ಭಾರತದ ಮತ್ತು ಅದರ ಜನರ ಬಗ್ಗೆ ಬರೆಯುವಾಗ ಅಸ್ಪೃಶ್ಯತೆಯು ರೂಢಿಯಲ್ಲಿತ್ತೆಂಬುದನ್ನಷ್ಟೇ ಉಲ್ಲೇಖಿಸಿ ತೃಪ್ತರಾಗುತ್ತಾರೆ. ಹಾಗೆ ಮಾಡುವಾಗ ಅದನ್ನು ಹೆಚ್ಚುಕಡಿಮೆ ತೀವ್ರತೆಯಿಂದ ಲಕ್ಷಿಸಿ ಅಸಮ್ಮತಿ ವ್ಯಕ್ತಪಡಿಸುತ್ತಾರೆ ಮತ್ತು ವಿಷಯದ ಪ್ರಸ್ತಾಪವನ್ನು ಅಷ್ಟಕ್ಕೇ ನಿಲ್ಲಿಸುತ್ತಾರೆ. ನನ್ನ ಸಂಶೋಧನೆಗಳಲ್ಲಿ ಕಂಡುಕೊಂಡಂತೆ ಅಸ್ಪೃಶ್ಯತೆಯ ಉಗಮ ಹೇಗುಂಟಾಯಿತೆಂಬುದನ್ನು ವಿವರಿಸುವ ಪ್ರಯತ್ನ ಮಾಡಿರುವ ಒಬ್ಬನೇ ಒಬ್ಬ ಲೇಖಕನಿದ್ದಾನೆ. ಆತ ಸ್ಟಾನ್ಲಿ ರೈಸ್. ಆತನ ವಿವರಣೆಯಂತೆ –

> ಜಾತಿಬಾಹಿರರು ನಿಗ್ರಹಿಸಲ್ಪಟ್ಟ ಜನರ ಪೈಕಿ ಅಳಿದುಳಿದವರು ಎಂಬುದಕ್ಕೆ ಬಲವಾದ ಸಾಧ್ಯತೆ ಇದೆ. ಜಾತಿಗಳು ಕಸುಬುಗಳೊಡನೆ ತಾಳೆ ಬೀಳುತ್ತಿದ್ದಂತೆ ಅವರು ತಮಟೆ ಹೊಡೆಯುವ, ಚರ್ಮ ಹದಮಾಡುವ, ಮತ್ತು ಕೃಷಿ ಕಾರ್ಮಿಕರಾಗಿ ದುಡಿಯುವ ವರ್ಗಗಳಾಗಿ ಪರಿಣಮಿಸಿದರು; ಜೀತದ ಆಳುಗಳಾಗಿ ಅದಕ್ಕೂ ಹಿಂದಿನಿಂದಲೇ ಅವರು ಈ ಕೆಲಸಗಳಿಗೆ ನೂಕಲ್ಪಟ್ಟಿದ್ದರು. ಅವರು ಆರ್ಯರಿಂದ ನಿಗ್ರಹಿಸಲ್ಪಟ್ಟಿದ್ದ ಜನಾಂಗಗಳಲ್ಲ; ದ್ರಾವಿಡರಿಂದ ನಿಗ್ರಹಿಸಲ್ಪಟ್ಟಿದ್ದ ಮೂಲನಿವಾಸಿಗಳ ಗುಂಪಿಗೆ ಸೇರುವವರು ಪರಯ್ಯಾಗಳು ಅವರದೇ ಬೇರೆ ಜನಾಂಗವಾಗಿದ್ದುದರಿಂದ ಅವರನ್ನು ಕುಲಚಿಹ್ನೆ ಇರುವಂತಹ ಸಂಬಂಧಿತ ಕುಲಗಳೊಳಕ್ಕೆ ಸೇರಿಸಿಕೊಳ್ಳಲಿಲ್ಲ. ಕುಲಗಳ ನಡುವೆ ವಿವಾಹ ಸಂಬಂಧಗಳು ಯಾವಾಗಲೂ ನಿಕಟವಾಗಿರುತ್ತವೆ. ಪರಯ್ಯಾಗಳನ್ನು ಕುಲದೊಳಗೆ ಸೇರಿಸಿಕೊಂಡಿದ್ದರೆ ಪರಸ್ಪರ ಹೊಕ್ಕುಬಳಕೆಗಳು ವಿಪುಲವಾಗಿ ನಡೆದು ಕ್ರಮೇಣ ಜನಾಂಗದ ಅವನತಿ ಉಂಟಾಗುತ್ತಿತ್ತು. ಆದರೆ ಈ ರೀತಿಯ ನಿಷೇಧವು ಸಂಪೂರ್ಣವಾಗಿದ್ದಿತೆಂದು ಹೇಳಲಾಗದು; ಅದಕ್ಕೆ ಯಾವಾಗಲೂ ಅಪವಾದಗಳಿದ್ದೇ ಇರುತ್ತದೆ. ಸುಮಾರು ನಲವತ್ತು, ಅಥವಾ ಅದಕ್ಕೂ ಹೆಚ್ಚಿನ, ಶತಮಾನಗಳು ಉರುಳುವ ಸನ್ನಿವೇಶದಲ್ಲಿ ಜಾತಿಸಂಕರವು ಅನಿವಾರ್ಯವಾಗಿ ತೋರಿಬಂದು ಮೂಲನಿವಾಸಿ ಮತ್ತು ಆದಿಕಾಲದ ದ್ರಾವಿಡರ ನಡುವಣ ಜನಾಂಗೀಯ ಭಿನ್ನತೆಗಳನ್ನು ತೊಡೆದುಹಾಕಿರಲು ಸಾಕು. ಹಿಂದೂ ವ್ಯವಸ್ಥೆಯಲ್ಲಿ ಒಂದು ರೀತಿಯ ಕನಿಷ್ಠ ಪಾತ್ರಕ್ಕೆ ಈ ಜನರನ್ನು ಗುರಿಮಾಡಲಾಗಿದೆ ಮತ್ತು ಅಂತಹ ವಾತಾವರಣದಲ್ಲೇ ಅವರು ಇಷ್ಟು ದೀರ್ಘಕಾಲ ಬಾಳಿದ್ದಾರೆ. ಹಾಗೆ ನೋಡಿದರೆ, ಮತಗಳ ಪೈಕಿ ಹಿಂದೂಧರ್ಮವು ಏಕಕಾಲದಲ್ಲಿ ಅತಿ ಸಹಿಷ್ಣುವಾದದ್ದು ಮತ್ತು ಅಷ್ಟೇ ಅಸಹಿಷ್ಣುವಾದದ್ದು. ಅದು ಮತಾಂತರಗೊಳಿಸುವ ಪದ್ಧತಿಯನ್ನಿಟ್ಟುಕೊಂಡಿಲ್ಲ. ಒಬ್ಬ ವ್ಯಕ್ತಿಯು ಮುಸಲ್ಮಾನನಾಗಬಹುದಾದಂತೆ ಹಿಂದುವಾಗುವಂತಿಲ್ಲ; ಅಂತೆಯೇ, ಆ ಮತದ

ವ್ಯಾಪ್ತಿಯಲ್ಲಿರುವವರ ಮೇಲೆ ಸಹ ಅತಿ ಕಠಿಣವಾದ ನಿರ್ಬಂಧಗಳನ್ನು ಹೇರಲಾಗುತ್ತದೆ. ಆದಾಗ್ಯೂ ತನ್ನ ನಿಯಮಗಳಿಗೆ ತಲೆಬಾಗಲು ಸಿದ್ಧರಿರುವಂತಹ ಮೂಲನಿವಾಸಿ ಬುಡಕಟ್ಟುಗಳವರನ್ನು ಸೇರಿಸಿಕೊಳ್ಳಲು ಈ ಮತ ಯಾವಾಗಲೂ ಸಿದ್ಧವಿತ್ತು. ಅವರಿಗೆ ಕೆಳದರ್ಜೆಯ ಸ್ಥಾನವನ್ನು ನೀಡಲಾಗುತ್ತಿತ್ತು, ಯಾವಾಗಲೂ ಅವರನ್ನು ಸಾಕಷ್ಟು ದೂರವಿರಿಸಿದ್ದರು, ಮತ್ತು ದೇವಸ್ಥಾನಗಳಲ್ಲಿ ಅವರಿಗೆ ಪ್ರವೇಶವಿರಲಿಲ್ಲವೆಂಬುದು ಬೇರೆ ಮಾತು. ಈ ಕಾರಣಗಳಿಂದಾಗಿ ಅವರಲ್ಲಿ ಪ್ರಾಕೃತ ಜನಾಂಗೀಯ ಲಕ್ಷಣಗಳು ಬಹುತೇಕವಾಗಿ ಬದಲಾಗಿರಬೇಕು ಹಾಗೂ ಅವರ ಮನೋಭಾವದಲ್ಲಿ ವ್ಯತ್ಯಾಸಗಳುಂಟಾಗಿರಬೇಕು. ಹೀಗಾಗಿ ಮಾನವಶಾಸ್ತ್ರದ ವಾದಗಳು ಈ ಪ್ರಶ್ನೆಯನ್ನು ಬಗೆಹರಿಸುವಲ್ಲಿ ನಿರ್ಣಾಯಕವಾಗಲಾರವೆಂದು ತೋರುತ್ತದೆ. ಇದರಿಂದ ತಿಳಿಯಬರುವುದೇನೆಂದರೆ ಆರ್ಯರು ತಾವು ಜಯಿಸಿದ ನಿವಾಸಿಗಳ ಮೇಲೆ ಯಾವ ರೀತಿಯ ಪರೀಕ್ಷೆಯನ್ನು ವಿಧಿಸುತ್ತಿದ್ದರೋ ಅಂಥದೇ ಪರೀಕ್ಷೆಯನ್ನು ದ್ರಾವಿಡರು ಪರಯ್ಯಾಗಳಿಗೆ ವಿಧಿಸಿದರು. ಅವರನ್ನು ದ್ರಾವಿಡರು ಜೀತದಾಳುಗಳ ಮಟ್ಟಕ್ಕಿಳಿಸಿದರು ಮತ್ತು ತಮ್ಮ ಘನತೆಯ ಕಾರಣದಿಂದಾಗಿ ಯಾವ ಕೆಲಸಗಳನ್ನು ನಿರ್ವಹಿಸಲು ಹೇಸುತ್ತಿದ್ದರೋ ಆ ಜವಾಬ್ದಾರಿಗಳನ್ನೆಲ್ಲಾ ಇವರ ಮೇಲೆ ಹೇರಿದರು. ಇದಕ್ಕೆ ವಿವಾಹ ಸಂಬಂಧವೊಂದೇ ಕಾರಣವಾಗಿತ್ತೆಂದಲ್ಲ. ಪರಯ್ಯಾಗಳ ದೌರ್ಬಲ್ಯಗಳಿಗೆ ಇನ್ನೊಂದು ಕಾರಣವಿತ್ತು ಮತ್ತು ಅದು ಇನ್ನೂ ಹೆಚ್ಚು ಪ್ರಬಲವಾದ ಕಾರಣವೂ ಆಗಿದ್ದಿತು: ಅದೇಂದರೆ, ಬಹಿಷ್ಕೃತವಾಗಿದ್ದುದರಲ್ಲಿ ಅಂತರ್ಗತವೆನಿಸಿದ್ದ ಗಾಢರಹಸ್ಯದ ಗುಣಗಳು. ಅಂತಹ ಬಹಿಷ್ಕೃತ ಪರಯ್ಯಾನನ್ನು ಕುಲಚಿಹ್ನೆಯನ್ನುಳ್ಳ ಕುಟುಂಬದೊಳಕ್ಕೆ ಸ್ವೀಕರಿಸುವುದು ಸಾಮಾಜಿಕ ಪದ್ಧತಿಗೆ ವಿರೋಧವಾಗಿದ್ದುದು ಮಾತ್ರವೇ ಅಲ್ಲ; ಅದು ಆ ಕುಲದ ವಿಶಿಷ್ಟ ದೇವತೆಯು ಇಡೀ ಕುಲದ ಮೇಲೆ ಕೋಪ ಕಾರುವಂತೆ ಮಾಡುವುದಕ್ಕೂ ಕಾರಣವಾಗುತ್ತದೆಂಬ ನಂಬಿಕೆ ಬಲವಾಗಿತ್ತು. ಇನ್ನು ಅಂತಹವನನ್ನು ದೇವಸ್ಥಾನದ ಪವಿತ್ರ ಪ್ರದೇಶದೊಳಕ್ಕೆ ಬಿಟ್ಟುಕೊಂಡು ಅಲ್ಲಿ ಅವನು ದೇವರಿಗೆ ಪೂಜೆ ಮಾಡಲು ಅವಕಾಶ ಕೊಡುವುದೆಂದರೆ ಸ್ವರ್ಗದ ಉಜ್ವಲ ಬೆಂಕಿಯನ್ನೇ ಧರೆಗೆ ಕರೆಸಿಕೊಂಡಂತೆ! ಅದು ಅವರನ್ನು ಸುಟ್ಟು ಬೂದಿ ಮಾಡೀತು. ಪರಯ್ಯಾಗಳನ್ನು ದೇವಸ್ಥಾನದೊಳಕ್ಕೆ ಬಿಡುವುದೆಂದರೆ ಕೋರಾ, ದಾತಾನ್ ಮತ್ತು ಅಭಿರಾಮ್ ಎಂಬುವರು ಪ್ರತಿಷ್ಠಾಪನೆ ಮಾಡಿಲ್ಲದ ಅಥವಾ ಅಸಾಂಪ್ರದಾಯಿಕವಾದ ಅಗ್ನಿಯಲ್ಲಿ ಆಹುತಿ ನೀಡುವುದಕ್ಕೆ ಸಮಾನವಾದ ಅಪವಿತ್ರವಾದ ಆಚರಣೆ. ಪೂಜಾವಿಧಿಗಳಲ್ಲಿ ಸಕ್ರಿಯ ಪಾತ್ರವಹಿಸುವುದರಿಂದ ನಿಷೇಧಿಸಲ್ಪಟ್ಟಿದ್ದರೂ ಆ ವಿಧಿಗಳಿಗೆ ಸಂಬಂಧಿಸಿದ ಚಾಕರಿಗಳನ್ನು ಪರಯ್ಯಾಗಳು ಮಾಡಬಹುದು; ಆದರೆ ಅದು ಪವಿತ್ರವಾದ ಕಟ್ಟಡವನ್ನು ಕಲುಷಿತಗೊಳಿಸಬಾರದು, ಅಷ್ಟೆ. ಕ್ರೈಸ್ತಮತದ ಪರಿಭಾಷೆಯಲ್ಲಿ ಹೇಳುವುದಾದರೆ ಪರಯ್ಯಾಗಳು ಪೂಜಾವೇದಿಯ ಬಳಿ ಪುರೋಹಿತರಾಗುವಂತಿಲ್ಲ, ದೈವೋಪದೇಶ ನೀಡುವಂತಿಲ್ಲ, ಪೂಜಾರ್ಥಿಗಳ ಗುಂಪಿನಲ್ಲಿ ಸೇರುವಂತೆಯೂ ಇಲ್ಲ. – ಆದರೆ ಒಂದು ನಿಬಂಧನೆಗೆ ಒಳಪಟ್ಟು ಅವನು ಗಂಟೆಯನ್ನು ಬಾರಿಸಲು ಅಡ್ಡಿಯಿಲ್ಲ. ಅದೇಂದರೆ ಅವನು ಧರ್ಮಶ್ರದ್ಧೆಯ ಸಮೂಹಕ್ಕೆ ಸೇರಿದವನೆಂದು ಪರಿಗಣಿಸಿಕೊಳ್ಳುವಂತಿಲ್ಲ. ನಿಜವಾಗಿ ಅವನು ಅದರಿಂದ ಬಹಿಷ್ಕೃತನಾದವನು. ಆದ್ದರಿಂದ ಅವನು ಪೂಜಾಕ್ರಿಯೆಯಲ್ಲಿ ಅಶುದ್ಧನಾದವನು. ಈ

ಬಹಿಷ್ಕಾರವು ಜಾರಿಯಲ್ಲಿರುವಾಗ ಅವನಿಗೆ ಅಂಟಿಕೊಂಡಿರುವ ಕಲೆಯು ಎಷ್ಟೇ ನೀರಿನಿಂದ ತೊಳೆಯಲಿ, ಶುದ್ಧೀಕರಣ ಕ್ರಿಯೆ ನಡೆಯಲಿ, ಅದು ಅಳಿಸಿಹೋಗದಂತೆ ನೆಟ್ಟಿರುತ್ತದೆ. ಅವನನ್ನು ಮುಟ್ಟುವುದು, ಒಂದು ಮಾರುದ್ದ ದೂರ ನಿಲ್ಲಿಸದೆ ಅವನೊಡನೆ ಯಾವುದೇ ವ್ಯವಹಾರ ನಡೆಸುವುದು, ಇವೆಲ್ಲಾ ಎಂಥದೋ ಅಂಟುಜಾಡ್ಯದಂತಹ ಮಂತ್ರದ ಪ್ರಕಾರ ಒಂದು ಮೈಲಿಗೆ. ನಿಮ್ಮ ಹೊಲವನ್ನು ಉಳಲು ಅವನನ್ನು ತೊಡಗಿಸಿಕೊಳ್ಳಬಹುದು, ಏಕೆಂದರೆ ಅದರಿಂದ ಅವನೊಡನೆ ಯಾವುದೇ ಸಂಪರ್ಕವೇರ್ಪಡುವುದಿಲ್ಲ; ಅವನಿಗೆ ಆಜ್ಞೆ ನೀಡುವುದನ್ನು ಬಿಟ್ಟು ಅವನೊಡನೆ ಬೇರಾವ ಸಂಬಂಧವನ್ನು ಅಲ್ಲಿ ಬೆಳೆಸಬೇಕಾಗಿ ಬರುವುದಿಲ್ಲ. ಅವನ ಹಣೆಯ ಮೇಲೆ ಮಾಲಿನ್ಯದ ಮುದ್ರೆ ಒತ್ತಲಾಯಿತು; ಅವನ ರಕ್ತನಾಳಗಳಲ್ಲಿ ರಕ್ತ ಸಂಚರಿಸುವಷ್ಟೇ ಸತ್ಯವಾಗಿ ಈ ಮಾಲಿನ್ಯ ಅವನಲ್ಲಿ ಹುಟ್ಟಿಬಂದಿದೆ ಎನ್ನಲಾಯಿತು. ಭಾರತೀಯರ ಅಭಿಪ್ರಾಯವು ಅವನನ್ನು ನಿಕೃಷ್ಟ ಮತ್ತು ನೀಚ ಅಂತಸ್ತಿನವನನ್ನಾಗಿಸಿತ್ತು; ಅವನಿಗೆ ಲಭ್ಯವಾದ ಕಸುಬುಗಳ ಮಾದರಿಯು ಅವನನ್ನು ಇನ್ನೂ ನಿಕೃಷ್ಟನನ್ನಾಗಿ, ಇನ್ನೂ ನೀಚ ಅಂತಸ್ತಿನವನನ್ನಾಗಿ ಮಾಡಿತು.

ರೈಸ್‌ನ ಸಿದ್ಧಾಂತವನ್ನು ಎರಡು ಭಾಗಗಳನ್ನಾಗಿ ನೋಡಬಹುದು. ಏಕೆಂದರೆ, ಅವನ ಪ್ರಕಾರ, ಅಸ್ಪೃಶ್ಯತೆಯ ಉಗಮವು ಎರಡು ಸನ್ನಿವೇಶಗಳಲ್ಲಿ ಸಾಧ್ಯವಾಗುತ್ತದೆ: ಜನಾಂಗ ಮತ್ತು ಕಸುಬು. ಸಹಜವಾಗಿಯೆ ಅವನ್ನು ಪ್ರತ್ಯೇಕವಾಗಿ ಚರ್ಚಿಸಬೇಕಾಗುತ್ತದೆ. ಪ್ರಸ್ತುತ ಅಧ್ಯಾಯವು ಅಸ್ಪೃಶ್ಯತೆಯ ಉಗಮಕ್ಕೆ ಕಾರಣವಾದ ಜನಾಂಗೀಯ ಭೇದ ಎಂಬ ಆತನ ಸಿದ್ಧಾಂತವನ್ನು ಕುರಿತಾದದ್ದಾಗಿರುತ್ತದೆ.

ರೈಸ್‌ನ ಜನಾಂಗೀಯ ಸಿದ್ಧಾಂತದಲ್ಲಿ ಎರಡು ಅಂಶಗಳಿವೆ :

(೧) ಅಸ್ಪೃಶ್ಯರು ಆರ್ಯ ಮತ್ತು ದ್ರಾವಿಡರಿಂದ ಭಿನ್ನವಾಗಿದ್ದ ಮೂಲನಿವಾಸಿಗಳು ಎಂಬುದು ಒಂದು;

(೨) ದ್ರಾವಿಡರಿಂದ ಅವರು ಸೋಲಿಸಲ್ಪಟ್ಟರು, ಮತ್ತು ಪರಾಧೀನ ಮಾಡಲ್ಪಟ್ಟರು ಎಂಬುದು ಇನ್ನೊಂದು.

ಪರಕೀಯ ಆಕ್ರಮಣಕಾರರು ಭಾರತದ ಮೇಲೆ ಎರಗಿಬಂದುದು, ಅವರು ಗಳಿಸಿದ ಜಯಗಳು, ಮತ್ತು ಅದರಿಂದುಂಟಾಗಿರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳ ಬಗೆಗಿನ ಆಮೂಲಾಗ್ರ ಪ್ರಶ್ನೆಯನ್ನು ಈ ಸಿದ್ಧಾಂತವು ಎತ್ತುತ್ತದೆ. ರೈಸ್‌ನ ಪ್ರಕಾರ ಭಾರತದ ಮೇಲೆ ಎರಡು ಆಕ್ರಮಣಗಳು ಜರುಗಿವೆ. ಮೊದಲನೆಯದು, ಭಾರತದ ಮೇಲೆ ದ್ರಾವಿಡರ ಆಕ್ರಮಣ. ಅಸ್ಪೃಶ್ಯರ ಪೂರ್ವಜರಾದ ದ್ರಾವಿಡೇತರ ಮೂಲ ನಿವಾಸಿಗಳನ್ನು ಅವರು ಜಯಿಸಿದರು ಹಾಗೂ ಅವರನ್ನು ಅಸ್ಪೃಶ್ಯರನ್ನಾಗಿ ಮಾಡಿದರು. ಎರಡನೆಯ ಆಕ್ರಮಣವೆಂದರೆ ಭಾರತದ ಮೇಲೆ ಆರ್ಯರ ಆಕ್ರಮಣ: ಆರ್ಯರು ದ್ರಾವಿಡರ ಮೇಲೆ ವಿಜಯ ಸಾಧಿಸಿದರು. ಹೀಗೆ ಸೋಲಿಸಲ್ಪಟ್ಟ ದ್ರಾವಿಡರನ್ನು ವಿಜಯಿಗಳಾದ ಆರ್ಯರು ಹೇಗೆ ನಡೆಸಿಕೊಂಡರೆಂಬುದನ್ನು ಆತ (ಅಂದರೆ, ರೈಸ್) ಹೇಳಿಲ್ಲ. ಉತ್ತರಕ್ಕಾಗಿ ಒತ್ತಾಯಿಸಿದರೆ ಅವರನ್ನು ಶೂದ್ರರನ್ನಾಗಿ ಮಾಡಿದರೆಂದು ಬಹುಶಃ ಆತ ಹೇಳಿಯಾನು. ಇದರ ಪರಿಣಾಮವಾಗಿ ನಮಗೆ ಲಭಿಸುವುದು ಒಂದು ಸರಮಾಲೆ. ದ್ರಾವಿಡರು ಭಾರತದ ಮೇಲೆರಗಿ ಬಂದು ಮೂಲನಿವಾಸಿಗಳನ್ನು ಸೋಲಿಸಿ ಅವರನ್ನು ಅಸ್ಪೃಶ್ಯರನ್ನಾಗಿ ಮಾಡಿದರು. ದ್ರಾವಿಡರ

> ನಂತರ ಆರ್ಯರು ಬಂದರು. ಅವರು ದ್ರಾವಿಡರ ಮೇಲೆ ವಿಜಯ ಸಾಧಿಸಿ ಅವರನ್ನು ಶೂದ್ರರನ್ನಾಗಿ ಮಾಡಿದರು. ಈ ಸಿದ್ಧಾಂತವು ತೀರಾ ಯಾಂತ್ರಿಕವಾಗಿ ತೋರುತ್ತದೆ; ಅದೊಂದು ಕೇವಲ ಊಹಾತ್ಮಕವಾದದ್ದು ಮತ್ತು ಶೂದ್ರರ ಹಾಗೂ ಅಸ್ಪೃಶ್ಯರ ಉಗಮಕ್ಕೆ ಸಂಬಂಧಿಸಿದ ಸಂಕೀರ್ಣಾತ್ಮಕವಾದ ವಿಷಯಗಳನ್ನು ಅತಿ ಸರಳೀಕರಿಸಿ ವಿವರಿಸುವಂತಹದ್ದು.[೧]

ಪ್ರಾಚೀನ ಭಾರತದ ಇತಿಹಾಸದ ಅಧ್ಯಯನ ಮಾಡುವವರು ಪುರಾತನ ಕಾಲದ ಒಳಹೊಕ್ಕು ಗಮನಿಸಿದಾಗ ಖಂಡಿತವಾಗಿಯೂ ನಾಲ್ಕು ಹೆಸರುಗಳು ಅವರಿಗೆ ಎದುರಾಗುತ್ತವೆ; ಆರ್ಯರು, ದ್ರಾವಿಡರು, ದಾಸರು, ಮತ್ತು ನಾಗರು. ಈ ಹೆಸರುಗಳು ಏನನ್ನು ಸೂಚಿಸುತ್ತವೆ? ಈ ಪ್ರಶ್ನೆಯನ್ನು ಈವರೆಗೆ ಯಾರೂ ಎತ್ತಿಯೇ ಇಲ್ಲ. ಈ ಆರ್ಯ, ದ್ರಾವಿಡ, ದಾಸ, ಮತ್ತು ನಾಗ ಎಂಬ ಹೆಸರುಗಳು ಬೇರೆ ಬೇರೆ ಜನಾಂಗದವರನ್ನು ಹೆಸರಿಸುತ್ತವೆಯೆ ಅಥವಾ ಅವು ಒಂದೇ ಜನಾಂಗದ ಜನರಿಗೆ ಇರುವ ಬೇರೆ ಬೇರೆ ಹೆಸರುಗಳೆ? ಸಾಮಾನ್ಯವಾಗಿ ಭಾವಿಸಲಾಗುವಂತೆ ಅವೆಲ್ಲಾ ವಿವಿಧ ಜನಾಂಗಗಳು. ಈ ತರದ ಭಾವನೆಯ ಆಧಾರದ ಮೇಲೆಯೇ ಶ್ರೀಯುತ ರೈಸ್‌ರ ಸಿದ್ಧಾಂತ ಮತ್ತು ಅದಕ್ಕೆ ಸಮೀಪವಾಗುವಂತಹ ಇತರ ಸಿದ್ಧಾಂತಗಳು ರಚಿಸಲ್ಪಟ್ಟಿವೆ, ಹಿಂದೂ ಸಮಾಜದ ಸಾಮಾಜಿಕ ರಚನೆಯನ್ನು ವಿವರಿಸಲು ಅವು ಯತ್ನಿಸುತ್ತವೆ. ಅಂತಹ ಸಿದ್ಧಾಂತವೊಂದನ್ನು ಅಂಗೀಕರಿಸುವುದಕ್ಕೆ ಮೊದಲು ಅದರ ಬುನಾದಿಗಳನ್ನು ಪರೀಕ್ಷಿಸಬೇಕಾದ್ದು ಅವಶ್ಯಕ.

ಆರ್ಯರನ್ನು ಮೊದಲುಗೊಂಡು ಅವರೆಲ್ಲಾ ಒಂದೇ ತೆರನಾದ ಬಿಡಿ ಜನರಾಗಿರಲಿಲ್ಲವೆಂಬುದು ನಿರ್ವಿವಾದವಾದ ವಿಷಯ. ಅವರು ಎರಡು ಭಾಗಗಳಾಗಿ ವಿಭಜಿಸಲ್ಪಟ್ಟಿದ್ದರೆಂಬುದೂ ಅಷ್ಟೇ ವಾದಮುಕ್ತವಾದದ್ದು. ಆ ಎರಡು ಭಾಗಗಳು ಬೇರೆ ಬೇರೆ ಬಗೆಯ ಸಂಸ್ಕೃತಿಯನ್ನು ಹೊಂದಿದ್ದುವೆಂಬುದು ಸಹ ಅಷ್ಟೇ ನಿಜ. ಅವುಗಳಲ್ಲಿ ಒಂದು ಭಾಗದವರನ್ನು ಋಗ್ವೇದೀಯ ಆರ್ಯರು ಎಂದು ಕರೆಯಬಹುದಾದರೆ ಇನ್ನೊಂದು ಭಾಗದವರು ಅಥರ್ವವೇದೀಯ ಆರ್ಯರು. ಅವರ ನಡುವಣ ಸಾಂಸ್ಕೃತಿಕ ಪ್ರಭೇದವು ಪೂರ್ಣತರವಾದುದೆಂದು ತೋರುತ್ತದೆ. ಋಗ್ವೇದೀಯ ಆರ್ಯರು ಯಜ್ಞದಲ್ಲಿ ನಂಬಿಕೆಯುಳ್ಳವರು. ಅಥರ್ವವೇದೀಯ ಆರ್ಯರು ಮಾಂತ್ರಿಕ ಆಚರಣೆಯಲ್ಲಿ ನಂಬಿಕೆಯುಳ್ಳವರು. ಅವರಿಬ್ಬರ ಪುರಾಣಕಲ್ಪನೆಯಲ್ಲೂ ಭಿನ್ನತೆಯಿತ್ತು. ಋಗ್ವೇದೀಯ ಆರ್ಯರಿಗೆ ಜಲಪ್ರಳಯದಲ್ಲಿ ನಂಬಿಕೆಯಿದ್ದಿತು ಹಾಗೂ ತಮ್ಮ ಜನಾಂಗವು ಮನುವಿನಿಂದ ಸೃಷ್ಟಿಯಾಗಿದ್ದಿತೆಂದು ಅವರು ನಂಬಿದ್ದರು. ಅಥರ್ವವೇದೀಯ ಆರ್ಯರಿಗೆ ಜಲಪ್ರಳಯದಲ್ಲಿ ನಂಬಿಕೆಯಿರಲಿಲ್ಲ ಮತ್ತು ತಮ್ಮ ಜನಾಂಗವು ಬ್ರಹ್ಮ ಅಥವಾ ಪ್ರಜಾಪತಿಯಿಂದ ಸೃಷ್ಟಿಯಾಗಿದ್ದಿತೆಂದು ಅವರು ನಂಬಿದ್ದರು. ಅವರಿಬ್ಬರ ಸಾಹಿತ್ಯಕ ಬೆಳವಣಿಗೆಯ ಮಾರ್ಗಗಳು ಕೂಡ ಬೇರೆ ಬೇರೆಯವೇ ಆಗಿದ್ದವು. ಋಗ್ವೇದ ಕಾಲದ ಆರ್ಯರು ಬ್ರಾಹ್ಮಣಗಳು, ಸೂತ್ರಗಳು ಹಾಗೂ ಆರಣ್ಯಕಗಳನ್ನು ರಚಿಸಿದರು. ಅಥರ್ವವೇದೀಯ ಆರ್ಯರು ಉಪನಿಷತ್ತುಗಳನ್ನು ರಚಿಸಿದರು. ಅವರಿಬ್ಬರ ನಡುವಿನ ಸಾಂಸ್ಕೃತಿಕ ತಿಕ್ಕಾಟವು ಎಷ್ಟು ಗಾಢವಾಗಿತ್ತೆಂದರೆ ಋಗ್ವೇದೀಯ ಆರ್ಯರು ಬಹುಕಾಲದವರೆಗೆ ಅಥರ್ವವೇದದ ಹಾಗೂ ಉಪನಿಷತ್ತುಗಳ ಗೌರವಾರ್ಹತೆಯನ್ನು ಮಾನ್ಯ ಮಾಡಿರಲಿಲ್ಲ; ಹಾಗೆ ಮಾನ್ಯ ಮಾಡಿದಾಗ ಸಹ ಅದನ್ನು ವೇದಾಂತವೆಂದು ಕರೆದರು. ಈಗಿನ ಅದರ ಅರ್ಥವು ವೇದಗಳಸಾರ

---

೧. ಈ ವಿಷಯದ ಆಮೂಲಾಗ್ರ ಪ್ರಸ್ತುತ ಲೇಖಕನ "ಶೂದ್ರರು ಯಾರು?" ಎಂಬ ಗ್ರಂಥವನ್ನು ನೋಡಿ.

ಎಂದಿದ್ದರೂ ಮೊದಲಿಗೆ ಅದಕ್ಕೆ ತದ್ವಿರುದ್ಧವಾದ ಅರ್ಥವಿದ್ದು ವೇದಗಳ ಎಲ್ಲೆಗೆ ಹೊರತಾದದ್ದು ಎಂಬುದನ್ನು ಸೂಚಿಸುತ್ತಿತ್ತು. ಆದ್ದರಿಂದ ಅವು ವೇದಗಳಷ್ಟು ಪವಿತ್ರವಲ್ಲ ಮತ್ತು ಅವುಗಳ ಅಧ್ಯಯನವನ್ನು ಅನುಲೋಮವೆಂದು ಪರಿಗಣಿಸಲಾಗಿತ್ತು. ಆರ್ಯರ ಈ ಎರಡು ವಿಭಾಗದವರು ಎರಡು ವಿಭಿನ್ನ ಜನಾಂಗದವರಾಗಿದ್ದರೆ ಅಥವಾ ಇಲ್ಲವೆ ಎಂಬುದು ನಮಗೆ ತಿಳಿದಿಲ್ಲ. 'ಆರ್ಯ' ಎಂಬ ಪದವು ಜನಾಂಗವನ್ನು ಸೂಚಿಸುವಂತಹ ಶಬ್ದವೇ? ಇದಕ್ಕೆ ಕೂಡ ನಮಗೆ ಉತ್ತರ ತಿಳಿಯದು. ಆದ್ದರಿಂದ ಆರ್ಯರು ಒಂದು ಪ್ರತ್ಯೇಕ ಜನಾಂಗದವರು ಎಂದು ಭಾವಿಸಿ ಮುಂದುವರೆಯುವಲ್ಲಿ ಇತಿಹಾಸಕಾರರು ಒಂದು ತಪ್ಪನ್ನೆಸಗಿದ್ದಾರೆ ಎನ್ನಬಹುದು.

ದಾಸರನ್ನು ನಾಗರಿಂದ ಪ್ರತ್ಯೇಕಿಸಿ ನೋಡುವುದರಲ್ಲಿ ಇದಕ್ಕಿಂತಲೂ ದೊಡ್ಡ ತಪ್ಪು ನಡೆದಿದೆ. ದಾಸರು ಮತ್ತು ನಾಗರು ಒಬ್ಬರೇ. ದಾಸರು ಎಂಬುದು ನಾಗರಿಗೆ ಕೇವಲ ಇನ್ನೊಂದು ಹೆಸರು, ಅಷ್ಟೆ. ವೈದಿಕ ಸಾಹಿತ್ಯದಲ್ಲಿ ನಾಗರಿಗೆ ದಾಸರು ಎಂಬ ಹೆಸರು ಹೇಗೆ ಬಂದಿತೆಂಬುದನ್ನು ತಿಳಿಯುವುದು ಕಷ್ಟವೇನಲ್ಲ. ಇಂಡೋ–ಇರಾನಿಯನ್‌ನಲ್ಲಿನ ದಾಹಕ ಎಂಬ ಪದದ ಸಂಸ್ಕೃತೀಕೃತ ಹೆಸರು ದಾಸ ಎಂಬುದು. ನಾಗರ ದೊರೆಯ ಹೆಸರು ದಾಹಕ ಎಂದ[೧] ಪರಿಣಾಮವಾಗಿ ಆರ್ಯರು ನಾಗರನ್ನು ಅವರ ದೊರೆಯ ಹೆಸರಿನಿಂದ ಕರೆದರು. ಅದು ಅದರ ಸಂಸ್ಕೃತರೂಪದಲ್ಲಿ ದಾಸ ಎಂದಾಯಿತು ಮತ್ತು ಅದನ್ನೇ ಸಾಮಾನ್ಯಾರ್ಥದಲ್ಲಿ ಎಲ್ಲ ನಾಗರಿಗೂ ಅನ್ವಯಿಸಲಾಯಿತು.

ನಾಗರು ಯಾರು? ಅವರು ಖಂಡಿತವಾಗಿಯೂ ಆರ್ಯೇತರರಾಗಿದ್ದರು. ವೈದಿಕ ಸಾಹಿತ್ಯ[೨]ವನ್ನು ಎಚ್ಚರದಿಂದ ಅಭ್ಯಾಸ ಮಾಡಿದರೆ ಅದರಲ್ಲಿ ಒಂದು ಸಂಘರ್ಷದ ಕೆಚ್ಚು, ಒಂದು ದ್ವಿರೂಪತೆ, ಕಾಣಸಿಗುತ್ತದೆ. ಎರಡು ಪ್ರತ್ಯೇಕ ವಿಧಗಳ ಸಂಸ್ಕೃತಿ ಮತ್ತು ಚಿಂತನೆಯ ನಡುವೆ ಮೇಲುಗೈ ಸಾಧನೆಗಾಗಿ ಅದೊಂದು ಪೈಪೋಟಿ. ಋಗ್ವೇದದಲ್ಲಿ ನಾಗದೇವತೆಯನ್ನು ಅಹಿ ವಿತ್ರ ಎಂಬ ಸ್ವರೂಪದಲ್ಲಿ ಮೊದಲಿಗೆ ನಮಗೆ ಪರಿಚಯಿಸಲಾಗಿದೆ; ಅವನು ಆರ್ಯ ದೇವತೆಯಾದ ಇಂದ್ರನ ವೈರಿ. ಮುಂದಿನ ದಿನಗಳಲ್ಲಿ ನಾಗ ಎಂಬ ಹೆಸರಿನಿಂದ ಬಹುಪ್ರಾಮುಖ್ಯತೆಗೆ ಬರಲಿದ್ದ ನಾಗದೇವತೆಯು ವೈದಿಕ ಸಾಹಿತ್ಯದ ಆದಿಭಾಗದಲ್ಲಿ ಕಂಡುಬರುವುದಿಲ್ಲ. ಅದು ಮೊಟ್ಟಮೊದಲ ಬಾರಿಗೆ ಕಂಡುಬರುವುದು ಶತಪಥ ಬ್ರಾಹ್ಮಣದಲ್ಲಿ (೧೧.೨, ೬, ೧೨); ಆದರೆ ಅದು ಇಂದು ದೊಡ್ಡ ಹಾವನ್ನು ಸೂಚಿಸುತ್ತದೋ ಅಥವಾ ಒಂದು ದೊಡ್ಡ ಆನೆಯನ್ನು ಸೂಚಿಸುತ್ತದೋ ಎಂಬುದು ಸ್ಪಷ್ಟವಾಗುವುದಿಲ್ಲ. ಆದಾಗ್ಯೂ ಅಹಿವಿತ್ರನ ರೂಪವನ್ನೇನೂ ಅದು ಮರೆಮಾಚುವುದಿಲ್ಲ; ಏಕೆಂದರೆ ಋಗ್ವೇದದಲ್ಲಿ ಯಾವಾಗಲೂ ಅವನನ್ನು ವಿವರಿಸಲಾಗುವುದು ಒಂದು ಹಾವೆಂದು. ಅವನು ನೀರಿಲ್ಲಿ ಅಡಗಿಕೊಂಡಿದ್ದ ಇಲ್ಲವೇ ನೀರನ್ನು ಸುತ್ತುವರಿದಿದ್ದ, ಮತ್ತು ಭೂಮಿ – ಆಕಾಶಗಳ (ದ್ಯಾವಾಪೃಥಿವೀ) ನೀರಿನ ಮೇಲೆ ತನ್ನ ಸಂಪೂರ್ಣ ಹಿಡಿತವನ್ನು ಸಾಧಿಸಿಕೊಂಡಿದ್ದ.

ಅಹಿ ವಿತ್ರನಿಗೆ ಸಂಬಂಧಿಸಿದ ಸೂಕ್ತಗಳಿಂದ ನಿಗದಿತವಾಗುವ ಇನ್ನೊಂದು ಅಂಶವೆಂದರೆ ಅವನಿಗೆ ಆರ್ಯರ ಬುಡಕಟ್ಟುಗಳವರಿಂದ ಯಾವ ಪೂಜೆಯೂ ಸಲ್ಲಲಿಲ್ಲ ಎಂಬುದು. ಗಣನೀಯ ಪ್ರಮಾಣದಲ್ಲಿ ಶಕ್ತಿಯನ್ನು ಹೊಂದಿದ್ದ ದುಷ್ಟ ಸತ್ವ ಅವನದೆಂದೂ ಅವನನ್ನು ಹೊಡೆದು ಸೋಲಿಸಬೇಕೆಂದೂ ಅಲ್ಲೆಲ್ಲಾ ಪರಿಗಣಿಸಲಾಗಿದೆ.

---

೧. ಈ ವಿಷಯದ ಬಗ್ಗೆ ಪ್ರಸ್ತುತ ಲೇಖಕನ "ಶೂದ್ರರು ಯಾರು?" ಎಂಬ ಗ್ರಂಥ ನೋಡಿ.

೨. ಮುಂದಿನ ಕೆಲವು ಪುಟಗಳಲ್ಲಿ ಉಲ್ಲೇಖವಾಗಿರುವ ಅಂಶಗಳಿಗಾಗಿ 'ಪ್ರಾಚೀನ ಭಾರತೀಯ ಇತಿಹಾಸದಲ್ಲಿ ನಾಗರು ಮತ್ತು ನಾಗ ಪದ್ಧತಿ' ಎಂಬ ಲೇಖನ ನೋಡಿ. ಲೇಖಕಿ : ಕುಮಾರಿ ಕರುಣಾಕರ ಗುಪ್ತ, ೧೯೩೯ರ ಭಾರತೀಯ ಇತಿಹಾಸ ಸಮಾವೇಶದ ನಡವಳಿಗಳು, ೨೧೪ ಮತ್ತು ಅದರ ಮುಂದಿನ ಪುಟಗಳು.

ಋಗ್ವೇದದಲ್ಲಿ ನಾಗರ ಪ್ರಸ್ತಾಪ ಬಂದಿರುವುದು ಅವರೊಂದು ಪ್ರಾಚೀನ ಜನ ಸಮುದಾಯವಾಗಿದ್ದರೆಂಬುದನ್ನು ತೋರಿಸುತ್ತದೆ. ಅವರು ಯಾವ ರೀತಿಯಲ್ಲೂ ಮೂಲವಾಸಿಗಳಾಗಲಿ ಅನಾಗರಿಕರಾಗಲಿ ಆಗಿರಲಿಲ್ಲವೆಂಬುದನ್ನು ಸಹ ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ನಾಗ ಜನಗಳ ಮತ್ತು ಭಾರತದ ರಾಜಕುಟುಂಬಗಳ ನಡುವೆ ಪರಸ್ಪರ ವಿವಾಹ ಸಂಬಂಧಗಳಿಂದಾಗಿ ಅವರಿಬ್ಬರೂ ಬಹಳ ಹತ್ತಿರದವರಾಗಿದ್ದರೆಂಬುದನ್ನು ಇತಿಹಾಸದಲ್ಲಿ ಕಾಣುತ್ತೇವೆ. ಕದಂಬ ವಂಶದ ರಾಜನಾದ ಕೃಷ್ಣವರ್ಮನ ದೇವಗಿರಿಯ ದಾಖಲೆಯು[೧] ಕದಂಬ ಕುಲದ ಪ್ರಾರಂಭವನ್ನು ನಾಗರ ಜೊತೆ ಗಂಟುಹಾಕಿದೆ. ಕ್ರಿ.ಶ. ೯ನೇ ಶತಮಾನದ ರಾಯಕೋಟ ದಾನಶಾಸನವು[೨] ಅಶ್ವತ್ಥಾಮನ ವಿವಾಹವು ಒಬ್ಬ ನಾಗಕನ್ಯೆಯೊಡನೆ ನಡೆಯಿತೆಂದೂ ಮತ್ತು ಈ ವಿವಾಹಸಂಬಂಧದಿಂದ ಜನಿಸಿದ ಸ್ಕಂದಶಿಷ್ಯನಿಂದ ಪಲ್ಲವ ವಂಶದ ರಾಜಸಂತತಿ ಆರಂಭವಾಯಿತೆಂದೂ ತಿಳಿಸುತ್ತದೆ. ಅದೇ ಶತಮಾನದ ಇನ್ನೊಂದು ಪಲ್ಲವ ಶಾಸನವು ವೀರಕೂರ್ಚ ಎಂಬುವನನ್ನು ಈ ವಂಶದ ಒಬ್ಬ ರಾಜನೆಂದು ಹೆಸರಿಸುತ್ತದೆ ಮತ್ತು ಅದೇ ಶಾಸನದಲ್ಲಿ ಇವನು ಒಬ್ಬ ನಾಗಕನ್ಯೆಯನ್ನು ಮದುವೆಯಾಗಿ ರಾಜಪರಂಪರೆಯ ಚಿಹ್ನೆಯನ್ನು ಪಡೆದುಕೊಂಡುದಾಗಿ ತಿಳಿಸಲಾಗಿದೆ.[೩] ವಾಕಾಟಕ ದೊರೆ ಪ್ರವರಸೇನನ ಮಗನಾದ ಗೌತಮೀಪುತ್ರನು ಭರಶಿವ ಭವನಾಗನೆಂಬ ವಂಶದ ರಾಜನ ಮಗಳನ್ನು ಮದುವೆಯಾಗಿದ್ದುದು ಒಂದು ಐತಿಹಾಸಿಕ ಸತ್ಯ.[೪] ಹಾಗೆಯೇ ಇಮ್ಮಡಿ ಚಂದ್ರ ಗುಪ್ತನು ನಾಗಕುಲದ 'ಕುವೇರನಾಗ' ರಾಜಕುಮಾರಿಯನ್ನು ಮದುವೆಯಾಗುತ್ತಾನೆ. ಒಬ್ಬ ತಮಿಳು ಕವಿಯು ಹೇಳಿರುವಂತೆ ಚೋಳವಂಶದ ಮೊದಲ ರಾಜರಲ್ಲಿ ಒಬ್ಬನಾಗಿದ್ದ ಕೊಕ್ಕಿಳ್ಳಿ ಎಂಬುವನು ಒಬ್ಬ ನಾಗ ರಾಜಕುಮಾರಿಯನ್ನು ಮದುವೆಯಾಗಿದ್ದ.[೫] "ನಾಗ ಜನಾಂಗದ ಶ್ರೇಷ್ಠ ಕುವರಿಯೊಬ್ಬಳನ್ನು ತನ್ನ ಉಜ್ವಲ ಸೌಂದರ್ಯದಿಂದ"[೬] ಗೆದ್ದುಕೊಂಡನೆಂಬ ಪ್ರಶಸ್ತಿಯನ್ನು ರಾಜೇಂದ್ರ ಚೋಳನಿಗೆ ನೀಡಲಾಗಿದೆ. ನವಸಾಹಸಾಂಕ ಚರಿತೆಯು ಪಾರಮಾರ ದೊರೆ ಸಿಂಧುರಾಜ ಮತ್ತು ನಾಗ ರಾಜಕುಮಾರಿ ಶಶಿಪ್ರಭಾ ಇವರ ವಿವಾಹವನ್ನು ವರ್ಣಿಸಿದೆ. ಈತ ಕ್ರಿ.ಶ. ೧೧ನೇ ಶತಮಾನದ ಆದಿಭಾಗದಲ್ಲಿ ರಾಜ್ಯಭಾರ ಮಾಡುತ್ತಿದ್ದನೆಂದು ತೋರುತ್ತದೆ. ಈ ವಿವಾಹದ ವರ್ಣನೆಯು ಎಷ್ಟು ವಿಸ್ತಾರವಾಗಿ ಅಂಶಗಳನ್ನು ವಸ್ತುಸ್ಥಿತಿಯ ರೂಪದಲ್ಲಿ ಕ್ರೋಡೀಕರಿಸಿಕೊಂಡಿದೆಯೆಂದರೆ ಈ ವಿವಾಹದ ಮಾತಿಗೆ ಏನಾದರೊಂದು ಚಾರಿತ್ರಿಕ ಆಧಾರ ಖಚಿತವಾಗಿಯೇ ಇದ್ದಿರಬೇಕೆಂದು ನಮಗೆ ಅನಿಸುತ್ತದೆ. ವಿಕ್ರಮ ಶಕೆ ೧೦೩೦, ಅಂದರೆ ಕ್ರಿ.ಶ. ೯೭೩ರ ಹರ್ಷನ ಶಾಸನವೊಂದರಿಂದ ನಮಗೆ ತಿಳಿದುಬರುವುದೇನೆಂದರೆ ಮೊದಲನೆ ಗುವಕನು "ನಾಗರ ಮತ್ತು ಇತರ ರಾಜಕುಮಾರರ ಸಭೆಗಳಲ್ಲಿ ಧೀರೋದಾತ್ತನೆಂದು ಪ್ರಖ್ಯಾತನಾದವನು"[೮] ಎಂದು. ಈತನು ವಿಗ್ರಹರಾಜ ಚಾಹಮಾನನ ಸಂತತಿಯಲ್ಲಿ ಅವನಿಗಿಂತಲೂ ಹಿರಿಯರಲ್ಲಿ ಆರನೆಯ ರಾಜನಾಗಿದ್ದನಾದ್ದರಿಂದ ಒಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ ಆಳುತ್ತಿದ್ದನೆಂದು ಭಾವಿಸಬಹುದಾಗಿದೆ. ಬಹುಶಃ ಕ್ರಿ.ಶ. ೯೨೧ರ ವೇಳೆಯಲ್ಲಿ ಅಸ್ತಿತ್ವದಲ್ಲಿದ್ದ ಒರಿಸ್ಸಾದ ಭೌಮ ಸಂತತಿಯ ರಾಜರಲ್ಲಿ ಸನತಿಕಾರ ಎಂಬುವನ ಹೆಸರನ್ನು ಆತನ ಮಗನ ಒಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಆತನು ನಾಗ ಕುಟುಂಬಕ್ಕೆ ಸೇರಿದ್ದ ತ್ರಿಭುವನ ಮಹಾದೇವಿ ಎಂಬುವಳನ್ನು ಮದುವೆಯಾಗಿದ್ದನೆಂದು ಅಲ್ಲಿ ಹೇಳಲಾಗಿದೆ.[೯]

೧. I.A. (Indian Antiquary) VII, ಪು.೩೪.
೨. E.I. (Epigraphica Indica) XV, ಪು. ೨೪೬
೩. S.I. (South Indian Inscriptions I, II, ಪು. ೫೦೮
೪. E.I. (Epigraphica Indica XV, ಪು. ೪೧
೫. I.A. (Indian Antiquary) XV, ಪು.೨೪೯
೬. I.A. XXII. ೨೨, ಪು. ೧೪೪–೧೪೯
೭. E.I.I. ಪು. ೨೨೯
೮. E.I.II. ಪು. ೧೧೭
೯. J.B.II. R.S.XVI, ಪು. ೭೭೧

ನಾಗ ಕುಲೀನರು ಉಚ್ಚಮಟ್ಟದ ಸಾಂಸ್ಕೃತಿಕ ನೆಲೆಯಲ್ಲಿ ಜೀವಿಸುತ್ತಿದ್ದರು ಮಾತ್ರವಲ್ಲ, ಇತಿಹಾಸದ ಪುಟಗಳು ತೋರಿಸುವಂತೆ ಅವರು ಭಾರತದ ಬಹುಪ್ರಮಾಣದ ಭಾಗದಲ್ಲಿ ಆಳ್ವಿಕೆ ನಡೆಸುತ್ತಿದ್ದರು ಕೂಡ. ಮಹಾರಾಷ್ಟ್ರವು ನಾಗರ ಮೂಲ ಆವಾಸಸ್ಥಾನವಾಗಿದ್ದಿತೆಂದು ಬೇರೆ ಹೇಳಬೇಕಾಗಿಲ್ಲ. ಮಹಾರಾಷ್ಟ್ರ ಪ್ರದೇಶದ ಜನ ಮತ್ತು ರಾಜರು ನಾಗರೇ ಆಗಿದ್ದರು.[೧]

ಕ್ರಿಸ್ತಶಕೆಯ ಮೊದಲ ಶತಮಾನಗಳಲ್ಲಿ ಆಂಧ್ರದೇಶ ಮತ್ತದರ ನಿಕಟವರ್ತಿ ಪ್ರದೇಶಗಳು ನಾಗರ ಆಳ್ವಿಕೆಗೆ ಒಳಪಟ್ಟಿದ್ದವು. ಇದಕ್ಕೆ ಹಲವಾರು ಆಧಾರಗಳಿಂದ ಸೂಚನೆ ಸಿಗುತ್ತದೆ. ಶಾತವಾಹನರು ಮತ್ತು ಅವರನಂತರ ಬಂದ ಚಟುಕುಲ ಶಾತಕರ್ಣಿಗಳು ಹೆಚ್ಚುಕಡಿಮೆ ನಾಗಕುಲದಿಂದ ಮೂಡಿಬಂದ ರಕ್ತಸಂಬಂಧಿಗಳು. ಡಾ॥ ಎಚ್.ಸಿ. ರಾಯ್ ಚೌಧುರಿ ಗುರುತಿಸಿರುವಂತೆ ದ್ವಾತ್ರಿಮ ಸುತ್ತುಕಲಿತ್ತನು ಶಾಲಿವಾಹನನನ್ನು ಪ್ರತಿನಿಧಿಸುತ್ತಾನೆ. ಈ ಶಾಲಿವಾಹನನು ಶಾತವಾಹನ ಸಂತತಿಯ ಪೌರಾಣಿಕ ಪ್ರತಿನಿಧಿ ಎನ್ನಬಹುದು ಮತ್ತು ಅವನು ಬ್ರಾಹ್ಮಣ ಮತ್ತು ನಾಗರ ಬೆರಿಕೆಯ ಸಂತಾನದವನು.[೨] ಆ ಸಂತತಿಯಲ್ಲಿ ಆಳಿದವರ ಹೆಸರುಗಳ ಪಟ್ಟಿಯಲ್ಲಿ ನಾಗರಿಗೆ ವಿಶಿಷ್ಟವಾದ ಹೆಸರುಗಳಿರುವುದರಿಂದ ಇದಕ್ಕೆ ಸಾಕಷ್ಟು ಪುಷ್ಟಿ ದೊರೆಯುತ್ತದೆ. ಶಾತವಾಹನರ ಆಳ್ವಿಕೆಯ ಕಡೆಯ ಘಟ್ಟದ ವೇಳೆಗೆ ನಾಗರು ಬಹಳ ಪ್ರಬಲರಾಗಿ ವರ್ಧಿಸಿದ್ದರೆಂಬುದು ಅನೇಕ ಸಂಗತಿಗಳಿಂದ ಖಚಿತಗೊಳ್ಳುತ್ತದೆ. ಶಾತವಾಹನರ ಪ್ರಮುಖ ಸಂತತಿಯವರಲ್ಲಿ ಕಡೆಯ ರಾಜನಾದ ಪುಲುಮಾವಿ ಎಂಬುವನ ಆಳ್ವಿಕೆಯ ಕಾಲದಲ್ಲಿ ಸ್ಕಂದನಾಗ ಎಂಬ ನಾಯಕನೊಬ್ಬನು ಬಳ್ಳಾರಿ ಜಿಲ್ಲೆಯ ಅಧಿಪತಿಯಾಗಿದ್ದುದು ಕಂಡುಬರುತ್ತದೆ. ಎರಡನೆಯದಾಗಿ, ಚುಟು ರಾಜನೊಬ್ಬನ ಮಗಳಾದ ನಾಗ ಮುಲಾನಿಕಾ ಎಂಬುವಳು ದಾನವೊಂದನ್ನು ಕೊಟ್ಟಂತೆ ಉಲ್ಲೇಖವಾಗಿದೆ. ಅವಳು ಕೊಟ್ಟ ದಾನವು ಒಂದು ನಾಗ ಹಾಗೂ ಶಿವಕಂದ–ನಾಗ–ಶ್ರೀ ಎಂಬ ಹೆಸರಿನ ಅವಳ ಮಗ. ಈ ಸಂತತಿಯ ಎಲ್ಲ ಉಲ್ಲೇಖಿತ ರಾಜರಿಗೂ ಒಂದೇ ಹೆಸರಿರುವುದು ಇನ್ನೊಂದು ವಿಶೇಷ; ಅಂದು ಸಹ ನಾಗರ ಜೊತೆ ಈ ಸಂತತಿಯವರಿಗೆ ಹತ್ತಿರ ಸಂಪರ್ಕವಿದ್ದಿತೆಂಬುದನ್ನು ಸ್ಪಷ್ಟಪಡಿಸುತ್ತದೆ. ಮೂರನೆಯದಾಗಿ, ಸೋರಿಂಗೋಯ್‌ನ ರಾಜಧಾನಿಯಾದ ಉರಗಪುರ ಎಂಬ ಹೆಸರು ಯಾರೋ ಒಬ್ಬ ನಾಗರ ದೊರೆಯ ಒಂಟಿಯಾದ ಆಳ್ವಿಕೆಯನ್ನು ಸೂಚಿಸುವುದಿಲ್ಲ, ಬದಲಾಗಿ ಸಾಕಷ್ಟು ದೀರ್ಘಾವಧಿಯವರೆಗೆ ಸ್ಥಾಪನೆಗೊಂಡಿದ್ದ ಒಂದು ನಾಗರ ಪಾಳೆಯವನ್ನದು ಸೂಚಿಸುತ್ತದೆ.

ಸಿಲೋನ್ ಮತ್ತು ಸಯಾಂಗಳ ಬೌದ್ಧ ಪರಂಪರೆಯಿಂದ ನಮಗೆ ತಿಳಿದುಬಂದಿರುವ ಇನ್ನೊಂದು ಅಂಶವೆಂದರೆ ವಜ್ರದ ಮರಳು ಎಂದು ಹೆಸರಾದ ಕರಾಚಿಯ ಬಳಿ ಮಜೇರಿಕಾ ಎಂಬ ಹೆಸರಿನ ನಾಗ ಸಂಸ್ಥಾನವೊಂದು ಇದ್ದಿತು ಎಂಬುದು.[೩]

ಮತ್ತೆ ಮುಂದುವರಿದು ನೋಡಿದರೆ ಕ್ರಿ.ಶ. ಮೂರನೆಯ ಶತಮಾನದಲ್ಲಿ ಹಾಗೂ ನಾಲ್ಕನೆಯ ಶತಮಾನದ ಆದಿಭಾಗದಲ್ಲಿ ಉತ್ತರ ಭಾರತವು ಅನೇಕ ನಾಗ ದೊರೆಗಳ ಆಳ್ವಿಕೆಗೆ ಒಳಪಟ್ಟಿದ್ದುದು ಕಂಡುಬರುತ್ತದೆ. ಇದಕ್ಕೆ ಪುರಾಣಗಳ, ನಾಣ್ಯಗಳ ಹಾಗೂ ಶಾಸನಗಳ ಪ್ರಮಾಣದಿಂದ ಆಧಾರಗಳು ಸಿಗುತ್ತವೆ. ವಿದಿಶಾ, ಚಂಪಾವತಿ ಅಥವಾ ಪದ್ಮಾವತಿ, ಮತ್ತು ಮಥುರಾ ಎಂಬ ಮೂರು ಸ್ವತಂತ್ರವಾದ

---

೧. ರಾಜವಾಡೆ.

೨. I.P.H.A.I, ಪು.೨೮೦

೩. ಕನ್ನಿಂಗ್‌ಹ್ಯಾಮ್, A Geography of India ಪು. ೬೧೧–೧೨

ಬಣಗಳನ್ನು ಸ್ಫುಟವಾಗಿ ಉಲ್ಲೇಖಿಸಿರುವ ರೀತಿಯನ್ನು ನೋಡಿದರೆ ಅವುಗಳ ಪ್ರಾಮುಖ್ಯತೆಯ ಬಗ್ಗೆ ಯಾವುದೇ ಸಂಶಯ ಉಂಟಾಗಲಾರದು. ಭರಶಿವ ಸಂತತಿಗೆ ಸೇರಿದ ಒಬ್ಬನೇ ರಾಜನ ಉಲ್ಲೇಖ ದೊರೆತಿದೆ, ಅವನ ಹೆಸರು ಭವ ನಾಗ. ಅವನ ಹೆಸರೇ ಸೂಚಿಸುವಂತೆ ಅವನಿಗೆ ನಾಗರ ಜೊತೆ ಸಂಬಂಧವಿದ್ದಿರಬೇಕು. ಎರಡನೆಯ ಗುಂಪಿನದಾದ ನಾಣ್ಯಗಳ ಚರ್ಚೆಗೆ ತೊಡಗಲು ಇಲ್ಲಿ ಸಾಧ್ಯವಾಗಲಾರದು; ಅಲಹಾಬಾದಿನ ಸ್ತಂಭಶಾಸನದಲ್ಲಿ ಹೇಳಿರುವ ಅಚ್ಯುತ ಗಣಪತಿ ನಾಗ ಅಥವಾ ನಾಗಸೇನನು ಪುರಾಣಗಳಲ್ಲಿ ಬರುವ ನಾಗ ದೊರೆಗಳೊಡನೆ ಸಮೀಕರಿಸಲ್ಪಡಬೇಕೆ ಎಂಬ ಪ್ರಶ್ನೆಯ ಚರ್ಚೆಗೂ ಇಲ್ಲಿ ಅವಕಾಶವಿಲ್ಲ.[೧] ಪ್ರಾಚೀನ ಭಾರತೀಯ ಇತಿಹಾಸದಲ್ಲಿ ಪ್ರಸ್ತಾಪಿಸಲಾಗಿರುವ ಎಲ್ಲ ನಾಗರ ನಡುವೆ ಕ್ರಿ.ಶ. ೪ನೇ ಶತಮಾನಕ್ಕೆ ಸೇರಿದ ಉತ್ತರ ಭಾರತದ ನಾಗ ಕುಟುಂಬಗಳು[೨] ಅತಿ ಪ್ರಮುಖವಾಗಿ ಹಾಗೂ ಚಾರಿತ್ರಿಕವಾಗಿ ಪ್ರಬಲವಾದ ಹಿಡಿತಕ್ಕೆ ಸಿಗುವಂತಹ ಕುಟುಂಬಗಳಾಗಿವೆ. ಲಾಹೋರಿನ ತಾಮ್ರ ಮುದ್ರಿಕೆಯಲ್ಲಿ[೩] ಹೇಳಲಾಗಿರುವ ನಾಗಭಟ್ಟ ಮತ್ತು ಅವನ ಮಗ ಮಹಾರಾಜ ಮೋಹೇಶ್ವರ ನಾಗ, ಇವರಿಬ್ಬರೂ ಮೇಲೆ ನಮೂದಿಸಲಾದ ಮೂರು ಗುಂಪುಗಳಲ್ಲಿ ಯಾವುದಕ್ಕಾದರೂ ಸೇರಿದ್ದರೋ, ಇಲ್ಲವೆ ತಮ್ಮದೇ ಆದ ಬೇರೊಂದು ನಾಗ ಕುಟುಂಬಕ್ಕೆ ಸೇರಿದವರಾಗಿದ್ದರೋ ಎಂಬುದು ತಿಳಿದುಬರುವುದಿಲ್ಲ. ಅದೇನೇ ಇರಲಿ, ಇದೆಲ್ಲಾ ಡಾ॥ ಸಿ.ಸಿ. ರಾಯ್ ಚೌಧರಿಯವರ ಒಂದು ತೀರ್ಮಾನಕ್ಕೆ ಸಾಕಷ್ಟು ಪುಷ್ಟಿ ಕೊಡುತ್ತದೆ. ಆ ತೀರ್ಮಾನವೆಂದರೆ ಕ್ರಿ.ಶ. ೪ನೇ ಶತಮಾನದಲ್ಲಿ ನಾಗರಿಂದ ಜಯಿಸಲ್ಪಟ್ಟ ಪರಿಣಾಮವಾಗಿ ಉತ್ತರ ಭಾರತದ ಕುಶಾನ ಆಧಿಪತ್ಯವು ಕಮರಿಹೋಯಿತು. ಸಮುದ್ರಗುಪ್ತನ ವಿಜಯಸೇನೆಯು ಸ್ವತಃ ಅವರನ್ನೇ ಕೊಚ್ಚಿಕೊಂಡು ಹೋಗುವಂತೆ ಮಾಡುವವರೆಗೆ ಈ ನಾಗರು ಉತ್ತರಾಪಥದ ಬೇರೆ ಬೇರೆ ಭಾಗಗಳಲ್ಲಿ ಆಳ್ವಿಕೆ ನಡೆಸುತ್ತಿದ್ದಿರಬೇಕು.

ಸ್ಕಂದಗುಪ್ತನಷ್ಟು ನಂತರದ ಕಾಲದಲ್ಲಿ ಅಂತರ್ವೇದಿಯ ರಾಜ್ಯಪಾಲನಾಗಿ ಸರ್ವನಾಗನೆಂಬೊಬ್ಬನಿದ್ದನೆಂದು ನಾವು ಕಾಣುತ್ತೇವೆ.[೪] ವಿಶೇಷವಾಗಿ ಸೌರಾಷ್ಟ್ರ ಮತ್ತು ಭರುಕಚ್ಛಗಳ ಸನಿಹದಲ್ಲಿ ನಾಗರು ಕ್ರಿ.ಶ.೬ನೇ ಶತಮಾನದವರೆಗೆ ಪ್ರಧಾನವಾದ ಸ್ಥಾನವನ್ನು ಹೊಂದಿದ್ದರೆಂದು ತೋರುತ್ತದೆ. ಜುನಾಗಢದ ಶಾಸನವು ಸೂಚಿಸುವಂತೆ ಸ್ಕಂದಗುಪ್ತನು ನಾಗರ ಒಂದು ದಂಗೆಯನ್ನು ನಿಷ್ಠುರವಾಗಿ ಹತ್ತಿಕ್ಕಿದ್ದನೆಂದು ಕಂಡುಬರುತ್ತದೆ.[೫] ಕ್ರಿ.ಶ. ೫೭೦ರಲ್ಲಿ ಗೂರ್ಜರರ ಮೊದಲನೆಯ ದದ್ದ ಎಂಬುವನು ನಾಗರನ್ನು ಬುಡಮೇಲುಮಾಡಿದ್ದನು.[೬] ಈ ನಾಗರನ್ನು ಬ್ರೋಚ್‌ನ ಬೃಹಲ್ ಲಾಕನು ಆಳುತ್ತಿದ್ದ ಅರಣ್ಯ ಬುಡಕಟ್ಟಿನವರೆಂದು ಗುರುತಿಸಲಾಗಿದೆ.[೭] ಪ್ರಮಾತ್ರಿ ಶ್ರೀನಾಗ ಎಂಬುವನನ್ನು ದೂತಕನೆಂದು ಗುಪ್ತಶಕೆ ೩೩೪ (ಕ್ರಿ.ಶ. ೬೪೫)ರ ಎರಡನೆ ಧ್ರುವಸೇನನ ಸನ್ನದು ಹೆಸರಿಸುತ್ತದೆ.[೮]

ಇದಕ್ಕೆ ಮುಂದೆ ನಾಗರು ಮತ್ತೆ ಪ್ರಮುಖವಾಗಿ ಪುನಶ್ಚೇತನಗೊಂಡಿದ್ದು ಸುಮಾರು ಕ್ರಿ.ಶ. ೯ನೇ ಶತಮಾನದ ವೇಳೆಗೆ ಎಂದು ತೋರುತ್ತದೆ; ಅದೂ ವಿಶೇಷತಃ ಮಧ್ಯ ಭಾರತದಲ್ಲಿ ಕ್ರಿ.ಶ. ೮೦೦ರಲ್ಲಿ ಕೋಸಲದಲ್ಲಿರುವ ಶ್ರೀಪುರದ ಮಹಾರಾಜ ತೀವರದೇವ ಎಂಬುವನು ನಾಗ ಬುಡಕಟ್ಟೊಂದನ್ನು ಬಹುಶಃ ಸೋಲಿಸಿದನೆಂದು ಕಂಡುಬರುತ್ತದೆ.[೯] ಈ ಕಾಲದ ಸ್ವಲ್ಪ ನಂತರದಲ್ಲಿ ಬಂಗಾಳದ ಒಂದು ಶಾಸನದಲ್ಲಿ

೧. G.M.I., ಪುಟಗಳು, ೨೩–೨೪
೨. P.H.A.I, ಪುಟ ೩೬೪
೩. G.I., ಪುಟ ೨೮೪
೪. G.I., ಪುಟ ೬೮
೫. G.I., ಪುಟ. ೫೯
೬. I.A., ೧೩, ಪು.೮೨
೭. Bombay Gazettier, ೧.೧.೧೧೫
೮. E.I.I., ಪು. ೯೨
೯. G.I., ಪು. ೨೯೮

ನಾಗರನ್ನು ಕುರಿತಂತೆ ಎರಡು ಉಲ್ಲೇಖಗಳಿರುವುದನ್ನು ಗಮನಿಸಬಹುದು. ಮಹಾ ಮಾಂಡಲಿಕ ಈಶ್ವರ ಘೋಷನ ರಾಮಗಂಜ್ ದಾಖಲೆಯು ಢೇಕ್ಕರಿಯ ಒಂದು ಘೋಷ ನಾಗ ಕುಟುಂಬವನ್ನು ಪ್ರಸ್ತಾಪಿಸುತ್ತದೆ; ಇದರ ಕಾಲ ಕ್ರಿ.ಶ. ೧೧ನೆಯ ಶತಮಾನ[೧] ಕ್ರಿ.ಶ. ೧೨ನೇ ಶತಮಾನದಲ್ಲಿ ಹರಿವರ್ಮದೇವನ ಮಂತ್ರಿ ಭಟ್ಟ ಭವದೇವನು ತನ್ನ ಭುವನೇಶ್ವರ ಪ್ರಶಸ್ತಿಯಲ್ಲಿ ತನ್ನಿಂದ ನಾಗ ದೊರೆಗಳು ಧ್ವಂಸಮಾಡಲ್ಪಟ್ಟರೆಂದು ನಮೂದಿಸಿದ್ದಾನೆ.[೨] ಭವ–ಭೂಷಣ–ಸಂತತಿಯ ದೊರೆತನಕ್ಕೊಳಪಟ್ಟಿದ್ದ ಉತ್ಕಲವನ್ನು ರಾಮಪಾಲನು ಜಯಿಸಿದುದಾಗಿ ರಾಮಚರಿತ ತಿಳಿಸುತ್ತದೆ; ಆದರೆ ಈ ವಿಜಯವು ನಾಗರ ಮೇಲಿನದೋ ಅಥವಾ ಚಂದ್ರರ ಮೇಲಿನದೋ ಎಂಬುದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಅದು ನಾಗರ ಮೇಲಿನ ವಿಜಯವೇ ಆಗಿದ್ದಿರಬೇಕೆಂಬುದಕ್ಕೆ ಹೆಚ್ಚಿನ ಸಾಧ್ಯತೆ ತೋರಿಬರುತ್ತದೆ; ಏಕೆಂದರೆ ಆಗ್ಗೆ ಹೆಚ್ಚು ಸುವಿಖ್ಯಾತರಾಗಿದ್ದವರು ನಾಗರೇ ಆಗಿದ್ದರು.

ಸೇಂದ್ರಕ, ಸಿಂದ ಅಥವಾ ಚಿಂದಕ ಕುಟುಂಬದ ವಿವಿಧ ಶಾಖೆಗಳು ಮಧ್ಯ ಭಾರತದ ಬೇರೆ ಬೇರೆ ಭಾಗಗಳಿಗೆ ಕ್ರಮೇಣ ಹರಡಿಕೊಂಡಿದ್ದು ಕ್ರಿ.ಶ. ೧೦–೧೨ನೇ ಶತಮಾನಗಳಲ್ಲಿ. ಇದು ವಿಶೇಷವಾಗಿ ಬಸ್ತರ್ ಪ್ರದೇಶಕ್ಕೆ ಅನ್ವಯಿಸುತ್ತದೆ. ಇವರು ತಮ್ಮನ್ನು ತಾವು ಬೋಗವತಿ ಮತ್ತು ನಾಗವಂಶಿ ಪ್ರಭುಗಳೆಂದು ಕರೆದುಕೊಳ್ಳುತ್ತಿದ್ದರು. ಬೇಗೂರಿನ ನಾಗಾತ್ತರರು ಸಹ ಕ್ರಿ.ಶ. ೧೦ನೇ ಶತಮಾನದ ಒಂದು ಶಾಸನದಲ್ಲಿ ಕಾಣಿಸಿಕೊಳ್ಳುತ್ತಾರೆ.[೩] ಪಶ್ಚಿಮದ ಗಂಗ ದೊರೆ ಎರೆಯಪ್ಪನ ಕಡೆ ನಿಂತು ವೀರ ಮಹೇಂದ್ರ ಎಂಬ ರಾಜನ ವಿರುದ್ಧದ ಯುದ್ಧದಲ್ಲಿ ಕಾದಾಡಿದ್ದು ಆ ಯುದ್ಧದಲ್ಲಿ ಅಪ್ರತಿಮ ಸಾಹಸಕ್ಕೆ ಹೆಸರು ಗಳಿಸಿಕೊಂಡರೆಂದು ಆ ಶಾಸನದಲ್ಲಿ ಹೇಳಲಾಗಿದೆ. ನವಸಾಹಸಾಂಕ ಚರಿತದ ಪುರಾವೆಯನ್ನು ಮಾನ್ಯ ಮಾಡುವುದಾದರೆ, ಸಿಂಧುರಾಜ ಪಾರಮಾರನು ಮದುವೆಯಾದ ಶಶಿಪ್ರಭ ಎಂಬುವಳ ತಂದೆ ಒಬ್ಬ ನಾಗರ ದೊರೆ; ಅವನು ಈ ಸರಿಸುಮಾರಿನಲ್ಲಿ ನರ್ಮದಾ ತೀರದ ರತ್ನವತಿ ಎಂಬಲ್ಲಿ ಆಳ್ವಿಕೆ ನಡೆಸುತ್ತಿದ್ದಿರಬೇಕು.

ದ್ರಾವಿಡರು ಯಾರು? ಅವರು ನಾಗರಿಂದ ಭಿನ್ನರಾದವರೆ? ಅಥವಾ, ಒಂದೇ ಜನಾಂಗದವರಿಗೆ ಅವೆರಡೂ ಬೇರೆ ಬೇರೆ ಹೆಸರುಗಳೆ? ಜನಪ್ರಿಯವಾದ ಒಂದು ಅಭಿಪ್ರಾಯದಂತೆ ಎರಡು ವಿಭಿನ್ನ ಜನಾಂಗದವರ ಹೆಸರುಗಳು ದ್ರಾವಿಡರು ಮತ್ತು ನಾಗರು ಎಂಬುವು. ಈ ಹೇಳಿಕೆಯು ಅನೇಕರ ಎದೆ ಹಾರಿಸುವುದು ಖಚಿತ. ಆದಾಗ್ಯೂ, ದ್ರಾವಿಡರು ಮತ್ತು ನಾಗರು ಎಂಬ ಎರಡು ಬೇರೆ ಬೇರೆ ಹೆಸರುಗಳು ಒಂದೇ ಜನಾಂಗದವರನ್ನು ಕುರಿತಾದುವು ಎಂಬುದಂತೂ ನಿಜ ಸ್ಥಿತಿ.

ದ್ರಾವಿಡರು ಮತ್ತು ನಾಗರು ಎಂಬುವು ಒಂದೇ ಜನಾಂಗದವರ ಕೇವಲ ಎರಡು ಬೇರೆ ಬೇರೆ ಹೆಸರುಗಳು ಎಂಬುದನ್ನೊಪ್ಪಲು ಕೆಲವೇ ಮಂದಿ ಮಾತ್ರ ಸಿದ್ಧರಿರಬಹುದೆಂಬುದನ್ನು ನಿರಾಕರಿಸಲಾಗದು; ಅದಕ್ಕೂ ಕಡಿಮೆ ಮಂದಿ ನಾಗರು ಎಂಬ ಹೆಸರಿನ ದ್ರಾವಿಡರು ದಕ್ಷಿಣ ಭಾರತವನ್ನು ಮಾತ್ರವಲ್ಲದೆ ದಕ್ಷಿಣ ಮತ್ತು ಉತ್ತರ ಎರಡನ್ನೂ ಒಳಗೊಂಡಂತೆ ಇಡೀ ಭಾರತವನ್ನು ಆಕ್ರಮಿಸಿಕೊಂಡಿದ್ದರೆಂಬುದನ್ನು ಬಹುಶಃ ಒಪ್ಪಲು ತಯಾರಿರಬಹುದು. ಆದಾಗ್ಯೂ, ಇವು ಚಾರಿತ್ರಿಕ ಸತ್ಯಗಳೇ ಆಗಿವೆ.

ಈ ವಿಷಯವನ್ನು ಕುರಿತಂತೆ ಅಧಿಕಾರವಾಣಿಯನ್ನುಳ್ಳ ವಿದ್ವಾಂಸರು ಏನು ಹೇಳುತ್ತಾರೆಂಬುದನ್ನು ನೋಡೋಣ. ದಕ್ಷಿಣ ಭಾರತದ ಖ್ಯಾತವಿದ್ವಾಂಸರಾದ ಶ್ರೀ ದೀಕ್ಷಿತರ್ ಅವರು ತಮ್ಮ ಸಂಶೋಧನಾ

೧. ಭಂಡಾರ್ಕರ್ ಅವರ ಪಟ್ಟಿ, ಕ್ರಮಸಂಖ್ಯೆ ೨,೧೦೦

೨. *Inscriptions of Bengal,* III, ಪುಟಗಳು ೩೦ ಮತ್ತು ಮುಂದಿನವು.

೩. *E.I.* VI, ಪುಟ. ೪೫

ಲೇಖನಗಳಲ್ಲೊಂದಾದ "ರಾಮಾಯಣದಲ್ಲಿ ದಕ್ಷಿಣ ಭಾರತ" ಎಂಬುದರಲ್ಲಿ ಈ ವಿಷಯವನ್ನು ಕುರಿತು ಹೇಳಿರುವುದಿದು.[೧]

"ಅರೆ–ದೈವ ಸ್ವರೂಪವನ್ನುಳ್ಳ ಇನ್ನೊಂದು ಬುಡಕಟ್ಟಿನವರಾದ ನಾಗರ ಲಾಂಛನ ಹಾವು. ಅವರು ವಾಯವ್ಯದ ತಕ್ಷಶಿಲೆಯಿಂದ ಹಿಡಿದು ಈಶಾನ್ಯದ ಅಸ್ಸಾಮಿನವರೆಗೆ ಭಾರತದಲ್ಲೆಲ್ಲಾ ಹರಡಿಕೊಳ್ಳುವುದಲ್ಲದೆ ದಕ್ಷಿಣದಲ್ಲಿ ದಕ್ಷಿಣ ಭಾರತ ಮತ್ತು ಸಿಲೋನ್‌ಗಳಲ್ಲಿ ಪಸರಿಸಿಕೊಂಡಿದ್ದರು. ಒಂದು ಕಾಲದಲ್ಲಿ ಅವರು ಪ್ರಬಲರಾಗಿದ್ದರಬೇಕು. ಯಾಕ್ಷರ ಸಮಕಾಲೀನರಾಗಿ, ಇಲ್ಲವೇ ಬಹುಶಃ ರಾಜಕೀಯ ಶಕ್ತಿಯಾಗಿ ಅವರು ಪತನಗೊಂಡ ನಂತರದಲ್ಲಿ, ದಕ್ಷಿಣ ಭಾರತದಲ್ಲಿ ನಾಗರು ಪ್ರಾಮುಖ್ಯತೆಯ ಪಟ್ಟಕ್ಕೇರಿದರು. ಸಿಲೋನಿನ ಕೆಲಭಾಗಗಳು ಮಾತ್ರವಲ್ಲದೆ ಪ್ರಾಚೀನ ಮಲಬಾರ್ ಸಹ ಈ ಪ್ರಾಚೀನ ನಾಗರು ವಶಪಡಿಸಿಕೊಂಡ ಪ್ರದೇಶಗಳಿದ್ದುವು.

......ಕ್ರಿಸ್ತಶಕದ ಮೊದಲ ಶತಮಾನಗಳ ನಂತರದ ತಮಿಳು ಶ್ರೇಷ್ಠ ಸಾಹಿತ್ಯ ಕೃತಿಗಳಲ್ಲಿ ನಾಗನಾಡನ್ನು ಕುರಿತಂತೆ ಪದೇ ಪದೇ ಉಲ್ಲೇಖಗಳನ್ನು ನಾವು ನೋಡುತ್ತೇವೆ..... ನಾಗ ಪೂಜಾಪದ್ಧತಿಯ ಉಳಿಕೆಗಳು ಮಲಬಾರಿನಲ್ಲಿ ಇಂದಿಗೂ ಅಲ್ಲಲ್ಲಿ ಉಳಿದಿವೆ ಮತ್ತು ದಕ್ಷಿಣ ತಿರುವಾಂಕೂರಿನ ನಾಗರಕೋಯಿಲ್‌ನಲ್ಲಿರುವ ದೇವಸ್ಥಾನವು ನಾಗಪೂಜೆಗೆ ಇಂದೂ ಮೀಸಲಾಗಿದೆ. ನಾಗರ ಬಗೆಗೆ ಹೇಳಬಹುದಾದುದಿಷ್ಟೆ : ಅವರು ಸಮುದ್ರಯಾನದಲ್ಲಿ ತೊಡಗುತ್ತಿದ್ದ ಒಂದು ಬುಡಕಟ್ಟಿನವರು, ಅವರಲ್ಲಿನ ಮಹಿಳೆಯರು ತಮ್ಮ ಸೌಂದರ್ಯಕ್ಕೆ ಹೆಸರುವಾಸಿಯಾಗಿದ್ದವರು. ಕ್ರಿಸ್ತಶಕೆಯ ಆರಂಭದ ಕಾಲದಲ್ಲಿ ಆಳ್ವಿಕೆಗೆ ಬಂದು ಪ್ರಾಮುಖ್ಯತೆಯನ್ನು ಗಳಿಸಿದ ಚೇರರೊಂದಿಗೆ ಬಹುಶಃ ನಾಗರು ಐಕ್ಯವಾಗಿ ಹೋದರೆಂದು ತೋರುತ್ತದೆ."

ಈ ವಿಷಯವನ್ನು ಕುರಿತು ಆಳವಾದ ಅಧ್ಯಯನ ನಡೆಸಿರುವ ಸಿ.ಎಫ್. ಓಲ್ಡ್‌ಹ್ಯಾಮ್ ವಿಷಯದ ಮೇಲೆ ಇನ್ನೂ ಹೆಚ್ಚಿನ ಬೆಳಕನ್ನು ಚೆಲ್ಲಿದ್ದಾರೆ. ಅವರು ಹೇಳುವಂತೆ :[೨]

"ಪ್ರಾಚೀನ ಕಾಲದಿಂದ ದ್ರಾವಿಡ ಜನರನ್ನು ಚೇರರು, ಚೋಳರು ಮತ್ತು ಪಾಂಡ್ಯರೆಂದು ವಿಂಗಡಿಸಲಾಗಿದೆ. ಚೇರ ಅಥವಾ ಸೇರ (ಪ್ರಾಚೀನ ತಮಿಳಿನಲ್ಲಿ ಸರ್ಪೈ) ಎಂಬುದು ನಾಗ ಎಂಬುದಕ್ಕೆ ದ್ರಾವಿಡ ಸಮಾನಾರ್ಥಕ ಪದ. ಚೇರಮಂಡಲ, ನಾಗದ್ವೀಪ, ಅಥವಾ ನಾಗ ದೇಶ ಎಂಬುದು ಇದರಿಂದಾಗಿಯೇ ಬಂದಿರುವುದು. ದಕ್ಷಿಣದ ದ್ರಾವಿಡರು ನಿಶ್ಚಯವಾಗಿ ಅಸುರ ಮೂಲದವರು ಎಂಬುದನ್ನಿದು ಸೂಚಿಸುತ್ತದೆ. ಇದರ ಜೊತೆಗೆ ಗಂಗಾನದಿಯ ಕಣಿವೆಯಲ್ಲಿ ಇಂದಿಗೂ ವ್ಯಾಪಕವಾಗಿ ಹರಡಿಕೊಂಡಿರುವ ಒಂದು ಜನಸಮುದಾಯವಿದೆ : ಅವರು ನಾಗದೇವತೆಗಳ ಸಂತಾನದವರು ತಾವೆಂದು ಹೇಳಿಕೊಳ್ಳುತ್ತಾರೆ ಮತ್ತು ತಮ್ಮನ್ನು ತಾವು ಚೇರುಗಳು ಅಥವಾ ಸೆಯೋರಿಗಳೆಂದು ಕರೆದುಕೊಳ್ಳುತ್ತಾರೆ.[೩] ಚೇರುಗಳು ಬಹಳ ಪ್ರಾಚೀನ ಜನಾಂಗದವರು. ಗಂಗಾನದಿಯ ಕಣಿವೆಯ ದೊಡ್ಡ ಭಾಗವು ಒಂದು ಕಾಲದಲ್ಲಿ ಇವರ ಅಧೀನದಲ್ಲಿತ್ತೆಂದು ನಂಬಲಾಗಿದೆ. ಈಗಾಗಲೆ ತಿಳಿಸಿರುವಂತೆ ಈ ಭಾಗವು ಅತಿಪ್ರಾಚೀನ ಕಾಲದಲ್ಲಿ ನಾಗ ಬುಡಕಟ್ಟುಗಳಿಂದ ತುಂಬಿದ್ದಿತು. ತಮ್ಮ ಪ್ರದೇಶದಿಂದ ಕ್ರಮೇಣ ಚೇರುಗಳು ಉಚ್ಚಾಟನೆಗೊಂಡರೆಂದು ತೋರುತ್ತದೆ. ಇದು ಜರುಗಿದ್ದು ಮುಸಲ್ಮಾನರ ಆಕ್ರಮಣಗಳ ಪ್ರಕ್ಷುಬ್ಧ ಕಾಲಗಳಲ್ಲಿ ಮತ್ತು ಚೇರುಗಳು

---

೧. ಏಳನೆಯ ಅಖಿಲ ಭಾರತ ಪ್ರಾಚ್ಯ ವಿದ್ಯಾ ಸಮ್ಮೇಳನದ ನಡವಳಿಗಳು, ಪುಟಗಳು ೨೪೮–೨೪೯

೨. ಸೂರ್ಯ ಮತ್ತು ಸರ್ಪ (ಎಂಬ ಗ್ರಂಥ), ಪುಟಗಳು ೧೫೭–೧೬೧.

೩. ಎಲ್ಲಿಯಟ್ : ಸಪ್ಲಿಮೆಂಟರಿ ಗ್ಲಾಸರಿ, ಎನ್.ಡಬ್ಲ್ಯು.ಎಫ್., ಪುಟಗಳು ೧೩೫, ೧೩೬

ಇಂದು ಬಹುಮಟ್ಟಿಗೆ ಭೂಹೀನರಾಗಿದ್ದು ಬಡತನದಲ್ಲಿದ್ದಾರೆ. ದ್ರಾವಿಡರ ಚೇರರಿಗೆ ಈ ಜನ ಸಂಬಂಧಿಗಳೆಂಬುದರಲ್ಲಿ ಸಂಶಯವೇನೂ ಇರಲಾರದು.

"ಚೇರುಗಳಿಗೆ ಹಲವಾರು ವಿಶಿಷ್ಟ ಆಚರಣೆಗಳಿವೆ. ಅವುಗಳಲ್ಲಿ ಒಂದು ಅವರನ್ನು ನೇಪಾಳದ ಲಿಚ್ಛವಿಗಳು ಹಾಗೂ ನೇವಾರರೊಂದಿಗೆ ಸಂಬಂಧವುಳ್ಳವರನ್ನಾಗಿ ತೋರಿಸುತ್ತದೆ. ಅಂತಹ ಆಚರಣೆ ಯಾವುದೆಂದರೆ ಪ್ರತಿ ಐದು ಅಥವಾ ಆರು ಮನೆಗಳಿಗೆ ಒಬ್ಬ ರಾಜನನ್ನು ಆಯ್ಕೆ ಮಾಡುವುದು, ಮತ್ತು ಸಂಪ್ರದಾಯ ರೀತ್ಯಾ ಅವನಿಗೆ ರಾಜಮರ್ಯಾದೆಯಂತೆ ಹಣೆಗೆ ತಿಲಕವನ್ನಿಟ್ಟು ಅಭಿಷೇಕ ಮಾಡುವುದು.[೧] ಲಿಚ್ಛವಿ ಮತ್ತು ನೇವಾರರಿಬ್ಬರಲ್ಲೂ ದಕ್ಷಿಣದ ದ್ರಾವಿಡರಲ್ಲಿರುವ ಅನೇಕ ಆಚರಣೆಗಳು ಸಮಾನವಾಗಿ ಕಂಡುಬರುತ್ತವೆ. ಎರಡು ಸಂಪ್ರದಾಯಗಳಲ್ಲೂ ಹಾವಿಗೆ ಪೂಜೆ ಇದೆ. – ಕಾಶ್ಮೀರದಲ್ಲಿ ನೀಲ ನಾಗಕ್ಕೆ ಏನು ಸ್ಥಾನವಿದೆಯೋ ಅದೇ ಸ್ಥಾನ ನೇಪಾಳದಲ್ಲಿ ಕಾರ್ಕೋಟಕ ನಾಗಕ್ಕಿದೆ. ಲಿಚ್ಛವಿಗಳ ರಾಜಧಾನಿಯಾದ ವೈಶಾಲಿಯು ಒಬ್ಬ ನಾಗದೇವತೆಯ ಅಧೀನಕ್ಕೊಳಪಟ್ಟಿದ್ದು ಸಹ ಆಗಿದೆ. ನೇವಾರರ ಮತ್ತು ಲಿಚ್ಛವಿಗಳ ನಡುವಣ ವೈವಾಹಿಕ ಸಂಬಂಧಗಳು ತಮಿಳು ಜನರಲ್ಲಿನ ಸಂಬಂಧಗಳನ್ನು ಬಹುವಾಗಿ ಹೋಲುತ್ತವೆ. ಇವರಿಗೆ ಸಮಾನ ಮೂಲವಿದೆಯೆಂಬುದಕ್ಕೆ ಇದೊಂದು ನಿಷ್ಕೃಷ್ಟವಾದ ಆಧಾರ.

"ನೇವಾರರಲ್ಲಿ ಆಸ್ತಿಯು ಮಾತೃಸಂತತಿಯಲ್ಲಿ ಪಾರಂಪರಿಕವಾಗಿ ಹಸ್ತಾಂತರವಾಗುತ್ತಿತ್ತು. ಒಂದು ಕಾಲದಲ್ಲಿ ಇದೇ ಸಂಪ್ರದಾಯವು ಪಂಜಾಬಿನ ಆರಟ್ಟ, ಬಾಹೀಕ, ಅಥವಾ ತಾಖಾಗಳಲ್ಲೂ ಇತ್ತು. ಅವರಲ್ಲಿ ತಮ್ಮ ಮಕ್ಕಳ ಬದಲಾಗಿ ಅವರ ಸೋದರಿಯರ ಮಕ್ಕಳು ಹಕ್ಕುದಾರರಾಗುತ್ತಿದ್ದರು.[೨] ಇದು ಇಂದಿಗೂ ದ್ರಾವಿಡರಲ್ಲಿರುವ ಒಂದು ಆಚರಣೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಶ್ರೀ ಬಾಲಕೃಷ್ಣ ನಾಯರ್ ಎಂಬ ಈಚಿಗಿನ ಒಬ್ಬ ದ್ರಾವಿಡ ಲೇಖಕರು ತಿಳಿಸುವಂತೆ ಅವರ ಜನ ಸಾಧಾರಣವಾಗಿ ಪ್ರತಿಯೊಂದು ವಿವರದಲ್ಲೂ ನೇವಾರರ ಸಂಬಂಧಿಗಳಾಗಿಯೇ ತೋರುತ್ತಾರೆ."[೩]

"ಅಲ್ಲದೆ, ಇದೆಲ್ಲದರೊಟ್ಟಿಗೆ ದಕ್ಷಿಣ ಮತ್ತು ಉತ್ತರ ಭಾರತದ ನಾಗರ ನಡುವೆ ಸಂಬಂಧವನ್ನು ಕಲ್ಪಿಸುವ ಬೇರೆ ಕೆಲವು ಅಂಶಗಳೂ ಇವೆ. ಚಂಬಲ್ ನದಿಯ ಬಳಿಯಿರುವ ಕನ್ಸ್ವಾ ಎಂಬಲ್ಲಿ ಕರ್ನಲ್ ಟಾಡ್ ಎಂಬುವರು ಕಂಡುಹಿಡಿದ ಶಾಸನವೊಂದರಲ್ಲಿ ಹೇಳಿರುವಂತೆ 'ಪ್ರಬಲ ಬುಡಕಟ್ಟುಗಳ ಪೈಕಿ ಖ್ಯಾತ ಬುಡಕಟ್ಟಾದ ಸರ್ಯಾ ಜನಾಂಗದ' ಸಲೀಂದ್ರ ಎಂಬ ರಾಜನು ತೌಖ್ಯದ ಅಧಿಪತಿಯಾಗಿದ್ದನು.[೪]

"ಸುವಿದಿತವಾಗುವಂತೆ ಇದು ಪಂಜಾಬಿನ ತಾಖ್ಯ ಅಥವಾ ತಾಖಾ ಎಂಬ ರಾಜ್ಯವಾಗಿತ್ತು. ಹ್ಯು–ಎನ್–ತ್ಸಾಂಗ್ ಇಲ್ಲಿಗೆ ಭೇಟಿ ನೀಡಿದ್ದನೆಂಬುದನ್ನು ಈಗಾಗಲೆ ಪ್ರಸ್ತಾಪಿಸಿದ್ದಾಗಿದೆ.[೫] ತಾಖ್ಯಾದ ನಾಗ ಜನರಿಗೆ ಸರ್ಯಾ ಎಂಬ ಇನ್ನೊಂದು ಹೆಸರೂ ಇದ್ದಿತೆಂಬುದು ಇದರಿಂದ ತೋರುತ್ತದೆ."

"ಇನ್ನೊಂದಂಶವೆಂದರೆ, ಸಟ್ಲೆಜ್ ಮತ್ತು ಬೀಯಾಸ್ ಕಣಿವೆಗಳ ನಡುವೆ ಹಿಮಾಲಯದ ಬಾಹ್ಯ ಪ್ರದೇಶದಲ್ಲಿ ಒಂದು ಬಯಲು ಪ್ರಾಂತವಿದೆ. ಅದರ ಹೆಸರು ಸರಾ ಅಥವಾ ಸೇವರಾಜ್. ಈ ಜಿಲ್ಲೆಯಲ್ಲಿ ಪೂಜೆಗೊಳ್ಳುವ ಮುಖ್ಯ ದೇವತೆಗಳೆಂದರೆ ನಾಗರ ಅರೆದೇವತೆಗಳು.

---

೧. ವಾಯವ್ಯದ ಪ್ರಾಂತ್ಯಗಳ ಶೆರ್ರಿಂಗ್ ಜನಾಂಗಗಳು, ಪುಟಗಳು ೩೭೬, ೩೭೭

೨. ಮಹಾಭಾರತ, ಕರ್ಣಪರ್ವ, ಪುಟ ೧೪

೩. *Calcutta Review* ಜುಲೈ ೧೮೯೬

೪. *Annals of Rajasthan* I, ೭೯೫

೫. *Hiouen Tsiang;* Beal I, ೧೬೫

"ಚೀನಾಬ್‌ನ ಎತ್ತರದ ಕಣಿವೆಯಲ್ಲಿ ಇನ್ನೊಂದು ಸೇವರಾಜ್ ಎಂಬ ಪ್ರಾಂತ್ಯ ಇದೆ. ಇಲ್ಲಿ ನೆಲೆಸಿರುವವರೂ ನಾಗಪೂಜೆ ಮಾಡುವ ಜನರೇ.

"ಸರಾಜ್ ಅಥವಾ ಸೇವರಾಜ್ ಎಂಬ ಹೆಸರು ಕರ್ನಲ್ ಟಾಡ್‌ರ ಶಾಸನದ ಸರ್ಯಾದಿಂದ ಭಿನ್ನವಾದುದಲ್ಲವೆಂದು ತೋರುತ್ತದೆ; ಇವರೇ ಸೀವೋರಿಗಳು. ನದಿ ಕಣಿವೆಯ ಚೆರುಗಳು ಎಂಬುದು ಇವರಿಗೆ ಇನ್ನೊಂದು ಪರ್ಯಾಯ ಹೆಸರೆಂದು ಸಹ ತೋರುತ್ತದೆ. ಇದು ಸರ್‍ಯೈ ಎಂಬುವವರ ಹೆಸರಿಗೆ ಸಮಾನವಾದುದೆಂದು ತೋರುತ್ತದೆ. ನಾವೀಗಾಗಲೆ ಗಮನಿಸಿರುವಂತೆ ಇದು ಚೇರ ಅಥವಾ ನಾಗರಿಗಿದ್ದ ಪ್ರಾಚೀನ ತಮಿಳು ಹೆಸರು. ಆದ್ದರಿಂದ ಸಟ್ಲೆಜ್ ಕಣಿವೆಯ ಸರಾಜ್ ಜನರೆನಿಸಿದ ಸರ್ಯರು ಅಥವಾ ತಾಖ್ಯರು, ಗಂಗಾ ಕಣಿವೆಯ ಸೇವೋರಿಗಳು ಅಥವಾ ಚೆರುಗಳು, ಹಾಗೂ ದಕ್ಷಿಣ ಭಾರತದ ಚೇರರು, ಸೇರರು ಅಥವಾ ಕೇರಳೀಯರು, ಎಲ್ಲಾ ಒಂದೇ ಎಂದು ಇದು ಸೂಚಿಸುತ್ತದೆಂದು ಕಾಣುತ್ತದೆ. ಇವರೆಲ್ಲಾ ನಾಗಪೂಜೆಯಲ್ಲಿ ತೊಡಗುವ ಜನರ ಬೇರೆ ಬೇರೆ ಪಂಗಡಗಳು ಅಷ್ಟೆ.

"ಇಲ್ಲಿ ಇನ್ನೊಂದು ಸಂಗತಿಯನ್ನು ಗಮನಿಸಬೇಕು. ಹಿಮಾಲಯದ ಕೆಲವು ಪ್ರಾಂತಭಾಷೆಗಳಲ್ಲಿ ಕೀರಾ ಅಥವಾ ಕಿರಿ ಎಂದರೆ ಹಾವು ಎಂಬರ್ಥವಿದೆ. ಕಿರಾಟೆ ಎಂಬುದು ಈ ಹೆಸರಿನಿಂದ ಉದ್ಭವಿಸಿರಬೇಕು. ಮತ್ತು ಹಿಮಾಲಯದ ಜನರನ್ನು ಸೂಚಿಸಲು ಆ ಪದವನ್ನು ಆಗಾಗ್ಗೆ ಬಳಸುವುದುಂಟು. ಅದು ರಾಜತರಂಗಿಣಿಯಲ್ಲಿದ್ದು ಕಾಶ್ಮೀರದಲ್ಲಿ ಅಥವಾ ಅದರ ಬಳಿ ಇರುವ ಜನರಿಗೆ ಅದನ್ನು ಅನ್ವಯಗೊಳಿಸಲಾಗಿದೆ. ವರಾಹಮಿಹಿರನು ಕೀರರನ್ನು ಉಲ್ಲೇಖಿಸಿದ್ದಾನೆ ಹಾಗೂ ಪ್ರಾಧ್ಯಾಪಕ ಕೀಲ್‌ಹಾರ್ನ್ ಅವರು ಪ್ರಕಟಿಸಿರುವ ಒಂದು ತಾಮ್ರಫಲಕದಲ್ಲಿ ಅದು ಲಭ್ಯವಿದೆ.[೧]

"ಕಾಂಗ್ರಾ ಕಣಿವೆಯಲ್ಲಿನ ಬೈಜ್‌ನಾಥ್ ದೇವಾಲಯದ ಒಂದು ಶಾಸನದಲ್ಲಿ ಆಗ್ಗೆ ಆ ಸ್ಥಳದ ಹೆಸರು ಕೀರಗ್ರಾಮವೆಂದಿದ್ದುದಾಗಿ ತಿಳಿಸುತ್ತದೆ.[೨] ಸ್ಥಳೀಯ ಉಪಭಾಷೆಯಲ್ಲಿ ಅದಕ್ಕೆ 'ಹಾವುಗಳ ಊರು' ಎಂಬರ್ಥವಾಗುತ್ತದೆ. ಬೈಜ್‌ನಾಥ್‌ನಲ್ಲಿ ಈಗಲೂ 'ನಾಗ' ಎಂಬುದು ಜನಪ್ರಿಯವಾದ ದೇವತೆ; ಅಂತೆಯೇ ಆ ಸುತ್ತಮುತ್ತಣ ಎಲ್ಲ ಪ್ರದೇಶಗಳಲ್ಲೂ ಕೂಡ. ಆದ್ದಿರಂದ 'ಕೀರ' ಎಂಬ ಪದವು 'ನಾಗ' ಎಂಬ ಶಬ್ದಕ್ಕೆ ಸಮಾನಾರ್ಥಕವಾದುದು. ನಾಗಾರಾಧನೆ ಮಾಡುವ ಹಿಮಾಲಯದ ಕೀರರು ದಕ್ಷಿಣದ ಕೇರರು, ಚೇರರು ಹಾಗೂ ಕೇರಳರು ಎಂದು ಕರೆಯಲ್ಪಡುವ ದ್ರಾವಿಡರೊಂದಿಗೆ ಹತ್ತಿರದ ಸಂಬಂಧವುಳ್ಳವರೆನ್ನುವ ಮಾತನ್ನು ಶಂಕಿಸುವುದೇ ಇದರಿಂದ ಅಸಾಧ್ಯವಾಗುತ್ತದೆ.

"ಹೆಸರುಗಳಲ್ಲಿ ಕಾಣಬರುವ ಸಾಮ್ಯವನ್ನು ಯಾವಾಗಲೂ ಪ್ರಮಾಣವೆಂದು ಸ್ವೀಕರಿಸಲು ಸಾಧ್ಯವಿಲ್ಲ. ಆದರೆ ಇಲ್ಲಿ ಅದಕ್ಕೂ ಹೆಚ್ಚಿನ ಬೇರೆ ಅಂಶವೂ ಇದೆ. ಇವರೆಲ್ಲರಿಗೂ ಇರುವ ಹೆಸರಿನಲ್ಲಿ ಸಾಮ್ಯವಿದೆಯಲ್ಲದೆ, ಈ ಜನಗಳೆಲ್ಲ ಸೂರ್ಯವಂಶಕ್ಕೆ ಸೇರಿದ ಜನಾಂಗದವರು. ಅವರೆಲ್ಲಾ ಹೆಡೆಯಿರುವ ಸರ್ಪವನ್ನು ಆರಾಧಿಸುತ್ತಾರೆ. ಮತ್ತು ನಾಗ ಅರೆ–ದೇವತೆಗಳನ್ನು ಪೂರ್ವಜರೆಂದು ಅವರೆಲ್ಲಾ ಆರಾಧಿಸುತ್ತಾರೆ.

"ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ದಕ್ಷಿಣ ಭಾರತದ ದ್ರಾವಿಡರು ಉತ್ತರದ ನಾಗರು ಅಥವಾ ಅಸುರರು ಸೇರಿದ್ದ ಸಂಕುಲಕ್ಕೆ ಸೇರಿದ್ದವರೇ ಆಗಿದ್ದರೆಂಬುದು ಸಾಕಷ್ಟು ಸಮರ್ಥನೀಯವೆಂದು ತೋರುತ್ತದೆ."

ನಾಗರು ಮತ್ತು ದ್ರಾವಿಡರು ಒಂದೇ ಜನರೆಂಬುದು ಇದರಿಂದ ಸ್ಪಷ್ಟವಾಗಿದೆ. ಇಷ್ಟೊಂದು ಪುರಾವೆಗಳಿದ್ದರೂ ಈ ತೀರ್ಮಾನವನ್ನು ಸ್ವೀಕರಿಸಲು ಅನೇಕರು ಸಿದ್ಧರಿಲ್ಲದಿರಬಹುದು. ಹೀಗೆ ಸ್ವೀಕರಿಸಲು

೧. *Rajatarangini;* Stein, VIII, ೨೭, ೬೭; ರ್‍ಯಾಪ್ಸನ್; J.R.A.S., ಜುಲೈ ೧೯೧೦, ೫೩೩

೨. J.R.A.S., ಜನವರಿ ೧೯೦೩, ಪುಟ ೩೭.

ಅವರಿಗಿರುವ ದೊಡ್ಡ ತೊಡಕೆಂದರೆ ದಕ್ಷಿಣ ಭಾರತದ ಜನರನ್ನು 'ದ್ರಾವಿಡರು' ಎಂದು ಕರೆದಿರುವುದು. ಅವರು ನಾಗರೇ ಆಗಿದ್ದಲ್ಲಿ ದಕ್ಷಿಣ ಭಾರತದವರಿಗೆ ಮಾತ್ರ ಏಕೆ 'ದ್ರಾವಿಡರು' ಎಂಬ ಪದವನ್ನು ಅನ್ವಯಗೊಳಿಸಬೇಕಾಗಿತ್ತು? ಈ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ. ವಿಮರ್ಶಕರು ಇನ್ನೊಂದು ಪ್ರಶ್ನೆಯನ್ನೂ ಹಾಕಿಯಾರು : ದ್ರಾವಿಡರು ಮತ್ತು ನಾಗರು ಒಬ್ಬರೇ ಆದರೆ, ದಕ್ಷಿಣ ಭಾರತದ ಜನರನ್ನು ಹೆಸರಿಸುವಾಗಲೂ 'ನಾಗರು' ಎಂಬ ಪದ ಏಕೆ ಪ್ರಚಲಿತವಾಗಲಿಲ್ಲ? ಇದೊಂದು ಕಠಿಣವಾದ ಸಮಸ್ಯೆಯೇ ಹೌದು. ಆದರೆ ಸಮಸ್ಯೆಯು ಪರಿಹಾರಕ್ಕೆ ಹೊರತಾದುದೇನಲ್ಲ. ಕೆಲವು ಅಂಶಗಳನ್ನು ಮನಸ್ಸಿನಲ್ಲಿಟ್ಟರೆ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಬಹುದು.

ಹೀಗೆ ಮನಸ್ಸಿನಲ್ಲಿಡಬೇಕಾದ ಅಂಶಗಳಲ್ಲಿ ಮೊದಲನೆಯದು ಭಾಷೆಯ ಪರಿಸ್ಥಿತಿಗೆ ಸಂಬಂಧಿಸಿದ್ದು. ದಕ್ಷಿಣ ಭಾರತದ ಭಾಷೆಯು ಇಂದು ಉತ್ತರ ಭಾರತದ ಜನರ ಭಾಷೆಗಿಂತ ಭಿನ್ನವಾಗಿದೆ. ಆದರೆ ಇದು ಯಾವಾಗಲೂ ಹೀಗೆಯೇ ಇದ್ದಿತೆ? ಈ ಪ್ರಶ್ನೆಯನ್ನು ಕುರಿತಂತೆ ಶ್ರೀ ಓಲ್ಡ್‌ಹಾಮ್[೧] ಅವರ ವಿಚಾರಗಳು ಗಮನಾರ್ಹವಾಗಿವೆ:

"ದ್ರಾವಿಡ ದೇಶಗಳ ಭಾಷೆಯನ್ನು ಉತ್ತರ ಭಾರತದ ಲೋಕಭಾಷೆಗಳೊಡನೆ ಸಂಬಂಧವಿದ್ದ ಭಾಷೆಯೆಂದು ಪ್ರಾಚೀನ ಸಂಸ್ಕೃತ ವೈಯಾಕರಣಿಗಳು ನಂಬಿದ್ದರೆಂಬವುದಕ್ಕೆ ಆಧಾರವಿದೆ. ಅವರ ಅಭಿಪ್ರಾಯದಲ್ಲಿ. ವಿಶೇಷತಃ ಇದು ಅಸುರ ಬುಡಕಟ್ಟಿನವರಿಂದ ಬೆಳೆದುಬಂದ ಜನರ ಭಾಷೆಯೊಡನೆ ಸಂಬಂಧವಿರುವಂತಹುದ್ದು. ಇದನ್ನು ನಾವೀಗಾಗಲೆ ನೋಡಿಯಾಗಿದೆ. ಉದಾಹರಣೆಗೆ, ತನ್ನ 'ಸಾಹಸ ಚಂದ್ರಿಕ' ಎಂಬ ಗ್ರಂಥದಲ್ಲಿ ಲಕ್ಷ್ಮೀಧರನು ಪೈಶಾಚಿ ಭಾಷೆಯನ್ನು ಮಾತನಾಡುವ ಭಾಗಗಳೆಂದು ಗುರುತಿಸಿರುವುದು ಈ ಕೆಳಗಿನ ಪೈಶಾಚಿ ದೇಶಗಳನ್ನು : ಪಾಂಡ್ಯ, ಕೇಕಯ, ಬಾಹ್ಲೀಕ, ಸಹ್ಯ, ನೇಪಾಲ, ಕುಂತಲ, ಸುದೇಶ, ಭೋಟ, ಗಾಂಧಾರ, ಹೈವ ಮತ್ತು ಕಾನ್ಯಕುಬ್ಜ. ಇವೇ ಪೈಶಾಚಿ ದೇಶಗಳು.[೨] ಲೋಕಭಾಷೆಗಳಲ್ಲೆಲ್ಲಾ ಅತ್ಯಂತ ಕಡಿಮೆ ಸಂಸ್ಕೃತ ತುಂಬಿಕೊಂಡಿರುವುದು ಪೈಶಾಚಿ ಭಾಷೆಯಲ್ಲಿ ಎಂದು ಹೇಳಲಾಗಿದೆ.[೩]

"ಆರ್ಯರು ವ್ಯವಹರಿಸುತ್ತಿದ್ದ ಭಾಷೆಗಿಂತ ಬೇರೆಯಾಗಿದ್ದ ಒಂದು ಭಾಷೆಯಲ್ಲಿ ಅಸುರರು ಮೊದಲಿಗೆ ಮಾತನಾಡುತ್ತಿದ್ದರೆಂಬುದು ಪ್ರಮಾಣೀಕರಿಸಲ್ಪಟ್ಟಿದೆ. ಪ್ರೊಫೆಸರ್ ಮೂಯಿರ್ ಋಗ್ವೇದದಿಂದ ಹಲವಾರು ಭಾಗಗಳನ್ನು ಉದ್ಧರಿಸಿ ಅಸುರರ ಭಾಷೆಗೆ 'ಮೃಡವಾಕ್' ಎಂಬ ವಿಶೇಷ ಕೊಡಲಾಗುತ್ತಿತ್ತೆಂಬುದನ್ನು ತೋರಿಸಿದ್ದಾರೆ. (ಋ. ೬.೭೪.೨; ೫.೬.೩;೫.೭.೬) ಇವುಗಳನ್ನು ಕುರಿತಂತೆ ಪ್ರೊಫೆಸರ್ ಮೂಯಿರ್ ಹೇಳುವುದಿದು : 'ಮೃಡವಾಕ್' ಎಂಬ ಪದವನ್ನು ನಾನು ನೋಯುವಂತೆ ಮಾತನಾಡುವುದು ಎಂದು ಅನುವಾದ ಮಾಡಿದ್ದೇನೆ. ಸಾಯಣರು ಅದನ್ನು ವಿವರಿಸುವುದು ಹೀಗೆ: ಯಾರ ವಾಗಿಂದ್ರಿಯಗಳು ಹಾಳುಗೆಡವಲ್ಪಟ್ಟಿವೆಯೋ ಅವನು[೪] ಆರ್ಯರಿಗೆ ಅಸುರರ ಭಾಷೆಯು ಹೆಚ್ಚು ಕಡಿಮೆ ಸಂಪೂರ್ಣವಾಗಿ ಅರ್ಥವಾಗದಿದ್ದ ಭಾಷೆಯಾಗಿತ್ತೆಂಬುದು ನಿಸ್ಸಂಶಯವಾಗಿ ತೋರುತ್ತದೆ. ಇದೇ ವಿವರಣೆಯು ಋಗ್ವೇದದ ಇನ್ನೊಂದು ವಾಕ್ಯಕ್ಕೂ ಅನ್ವಯವಾಗುತ್ತದೆ. ಅಲ್ಲಿ ಹೇಳಲಾಗಿರುವುದು ಹೀಗೆ: (ಇಂದ್ರನನ್ನು ತೃಪ್ತಿಗೊಳಿಸುವುದರಿಂದ) ಕೆಟ್ಟದ್ದನ್ನಾಡುವವನನ್ನು ಜಯಿಸುವ ಸಾಮರ್ಥ್ಯ ನಮಗೆ ಬರಲಿ.[೫]

"ಶತಪಥ ಬ್ರಾಹ್ಮಣದಲ್ಲಿ ನಮಗೆ ಕಂಡುಬರುವುದಿದು : ಅಸುರರು ಮಾತನಾಡುವುದರಿಂದ ವಂಚಿತರಾಗಿದ್ದರಾದ್ದರಿಂದ ಅಸಹಾಯಕರಾಗಿ 'ಹೇ ಲವ, ಹೇ ಲವ' ಎಂದು ಪ್ರಲಾಪಿಸುತ್ತಿದ್ದರು. ಅವರು

೧. The Sun and the Serpent ಎಂಬ ಗ್ರಂಥದಲ್ಲಿ

೨ ಮತ್ತು ೩. Muir, : ಓ.ಎಸ್.ಟಿ. ೨, ೪೯

೪. Muir, : ಓ.ಎಸ್.ಟಿ., ೨.೪೯

೫. *Rigveda*: wilson, VII, XVIII-13

ಹೊರಡಿಸುತ್ತಿದ್ದ ಸ್ವರ ಅರ್ಥರಹಿತವಾಗಿತ್ತು. ಹಾಗೆ ಮಾತನಾಡುವವನು ಮ್ಲೇಚ್ಛ. ಆದ್ದರಿಂದ ಬ್ರಾಹ್ಮಣನು ಮೃಗೀಯ ಭಾಷೆಯನ್ನಾಡದಿರಲಿ, ಏಕೆಂದರೆ ಅಸುರರ ಭಾಷೆಯು ಆ ರೀತಿಯದು.[೧]

"ಮನುವಿನಿಂದ ನಮಗೆ ತಿಳಿಯಬರುವುದು ಇದು : ಬ್ರಹ್ಮನ ಮುಖ, ತೋಳು, ತೊಡೆ ಮತ್ತು ಪಾದಗಳಿಂದ ಹುಟ್ಟುವ ವರ್ಗಗಳಿಗೆ ಹೊರತಾದ ಬುಡಕಟ್ಟಿನ ಜನ, ಅವರು ಮ್ಲೇಚ್ಛರ ಭಾಷೆಯನ್ನು ಮಾತನಾಡಲಿ ಇಲ್ಲವೇ ಆರ್ಯರ ಭಾಷೆಯನ್ನು ಮಾತನಾಡಲಿ, ಹೇಗೂ ಅವರು ದಸ್ಯುಗಳೇ.[೨] ಇದರಿಂದ ಸ್ಪಷ್ಟವಾಗುವುದೇನೆಂದರೆ ಮನುವಿನ ಕಾಲದಲ್ಲಿ ಆರ್ಯರ ಭಾಷೆ ಮತ್ತು ಮ್ಲೇಚ್ಛರ ಅಥವಾ ಅಸುರರ ಭಾಷೆ – ಹೀಗೆ ಎರಡೂ ಬಳಕೆಯಲ್ಲಿದ್ದುವು. ಆದರೆ ಮಹಾಭಾರತವು ವರ್ಣಿಸುವ ಕಾಲದ ವೇಳೆಗೆ ಆರ್ಯರ ಪ್ರಭಾವಕ್ಕೊಳಗಾಗಿದ್ದ ಬುಡಕಟ್ಟುಗಳಲ್ಲಿ ಅಸುರ ಭಾಷೆಯು ಆಗಲೇ ನಶಿಸಿಹೋಗಿದ್ದಿರಬೇಕು; ಯುಧಿಷ್ಠಿರನನ್ನುಳಿದು ಇತರರಿಗೆ ಅರ್ಥವಾಗದಿರಲೆಂದು ವಿದುರನು ಯುಧಿಷ್ಠಿರನೊಡನೆ ಮ್ಲೇಚ್ಛ ಭಾಷೆಯಲ್ಲಿ ಮಾತನಾಡಿದ.[೩]

"ಇದಕ್ಕಿಂತಲೂ ನಂತರದ ಕಾಲದಲ್ಲಿ ರಾಮ ತರ್ಕವಾಗೀಶನೆಂಬ ವೈಯಾಕರಣಿಯು 'ನಾಗರಂತೆ ಮಾತನಾಡುವವರು'[೪] ಎಂದು ಒಂದು ಕುಲವನ್ನು ಪ್ರಸ್ತಾಪಿಸಿದ್ದಾನೆ. ಇದರಿಂದ ತಿಳಿಯುವುದೇನೆಂದರೆ ಯಥಾವತ್ತಾಗಿ ಉಳಿದಿದ್ದ ಅಸುರರು ತಮ್ಮ ಭಾಷೆ ಹಾಗೂ ಮತ ಮತ್ತು ಕಂದಾಚಾರಗಳನ್ನು ಅಂತೆಯೇ ಉಳಿಸಿಕೊಂಡಿದ್ದರು. ಪೂರ್ವಿಕರ ಈ ಸ್ವತ್ತುಗಳನ್ನು ಬದಲಾವಣೆ ಹೊಂದಿ ಹೋದ ಅವರ ಸೋದರ ಸಂಬಂಧಿಗಳು ಬಿಟ್ಟುಕೊಟ್ಟ ಎಷ್ಟೋ ಕಾಲದ ನಂತರವೂ ಇವರು ಮಾತ್ರ ಹಾಗೇ ಉಳಿಸಿಕೊಂಡಿದ್ದರು. ಪೈಶಾಚಿ ಆಡುಭಾಷೆಗಳು ಈ ಯಥಾವತ್ತಾಗಿ ಉಳಿದಿದ್ದ ಬುಡಕಟ್ಟುಗಳ ನಡುವಿನಲ್ಲೇ ಬಳಕೆಯಲ್ಲಿದ್ದುವೆಂಬುದು ಸ್ಪಷ್ಟವಾಗಿದೆ ಮತ್ತು ನಾವೀಗ ತಾನೆ ಗುರುತಿಸಿದಂತೆ ದ್ರಾವಿಡರ ಪೈಕಿಯ ಪಾಂಡ್ಯರು ಈ ಬುಡಕಟ್ಟುಗಳಿಗೆ ಸೇರಿದ್ದವರು.[೫]

"ತಮಿಳು ಮತ್ತು ತತ್ಸಂಬಂಧಿತ ಭಾಷೆಗಳು ಪ್ರಾಚೀನವಾದ ಅಸುರ ಭಾಷೆಯ ಆಯಕಟ್ಟಿನ ಮೇಲೆ ನಿಂತಿವೆಯೆಂಬ ಈ ದೃಷ್ಟಿಕೋನಕ್ಕೆ ಇನ್ನೊಂದಂಶವು ಪುಷ್ಟಿ ನೀಡುತ್ತದೆ. ಅದೇನೆಂದರೆ ಸಿಂಧ್‌ನ ಗಡಿಪ್ರದೇಶದ ಬಳಿಯ ಒಂದು ಬುಡಕಟ್ಟಾದ ಬ್ರಾಹುಈಗಳ ಭಾಷೆಯು (ತಮಿಳು ಮತ್ತು ತತ್ಸಂಬಂಧಿತ) ಭಾಷೆಗಳನ್ನು ಬಹುವಾಗಿ ಹೋಲುತ್ತದೆ. ಇದೆಷ್ಟರಮಟ್ಟಿನ ಹೋಲಿಕೆಯೆಂದರೆ ಡಾ. ಕಾಲ್ಡ್‌ವೆಲ್ ಹೇಳುವಂತೆ 'ಬ್ರಾಹುಈ (ಭಾಷೆಯು) ದ್ರಾವಿಡ ಜನಾಂಗವನ್ನು ಸಿಂಧೂ ನದಿಯಿಂದಾಚೆಗೆ, ಅಂದರೆ ಮಧ್ಯ ಏಷ್ಯಾದ ದಕ್ಷಿಣ ಭಾಗಗಳವರೆಗೆ, ಗುರುತಿಸಲು ಸಾಧ್ಯ ಮಾಡಿಕೊಡುತ್ತದೆ.'[೬] ನಾನು ಮೊದಲೇ ನಮೂದಿಸಿರುವಂತೆ ಈ ಪ್ರದೇಶವು ಅಸುರರ ಅಥವಾ ನಾಗರ ಆವಾಸಸ್ಥಾನವಾಗಿತ್ತು. ದ್ರಾವಿಡ ಅಧಿಪತ್ಯಗಳ ಪ್ರತಿಷ್ಠಾಪಕರು ಈ (ಅಸುರ ಅಥವಾ ನಾಗ) ಜನಾಂಗಕ್ಕೆ ಸೇರಿದವರಾಗಿದ್ದಿರಬೇಕು."

---

೧. ಶತಪಥ ಬ್ರಾಹ್ಮಣ : ೩–೨, ೧–೨೩

೨. Muir: Hutton, ೧೦–೪೫

೩. ಮಹಾಭಾರತ, ಆದಿಪರ್ವ, ಜತುಗೃಹ, ಪುಟಗಳು cx/vii.

೪. ಮೂಯಿರ್, ಓ.ಎಸ್.ಟಿ. ii, ೫೨.

೫. ಅದೇ ಪುಸ್ತಕ, ಪುಟ. ೪೯

೬. A Grammar of Drav. Lang., ಪ್ರಸ್ತಾವನೆ, ಪುಟ. ೪೪.

"ಹೀಗೆ ಕ್ರೋಡೀಕರಿಸಲ್ಪಟ್ಟಿರುವ ಎಲ್ಲ ಪುರಾವೆಗಳನ್ನೂ ಗಣನೆಗೆ ತೆಗೆದುಕೊಂಡರೆ ನಮಗೆ ತೋರುವ ಒಂದೇ ಸಾಧ್ಯತೆಯೆಂದರೆ ಭಾರತದ ದಕ್ಷಿಣಕ್ಕೆ ಸೇರಿದ ದ್ರಾವಿಡರು ಉತ್ತರದ ಅಸುರರ ಅಥವಾ ನಾಗರ ಸಂತತಿಗೆ ಸೇರಿದವರೇ ಆಗಿದ್ದಾರೆ."

ನಾವು ಮನಸ್ಸಿನಲ್ಲಿರಿಸಬೇಕಾದ ಎರಡನೆಯ ವಿಷಯ ಇದು : 'ದ್ರಾವಿಡ' ಎಂಬ ಪದವು ಮೂಲಪದವಾದುದಲ್ಲ; ಅದು 'ತಮಿಳು' ಎಂಬ ಪದಕ್ಕೆ ಸಂಸ್ಕೃತ ಛಾಯೆಯನ್ನು ಕೊಟ್ಟಾಗ ಬರುವ ರೂಪ. 'ತಮಿಳು' ಎಂಬ ಮೂಲ ಪದವನ್ನು ಸಂಸ್ಕೃತಕ್ಕೆ ಆಮದು ಮಾಡಿಕೊಂಡಾಗ ಅದು 'ದಮಿತ' ಎಂದಾದದ್ದು[೧] ಆಮೇಲೆ 'ದ್ರಾವಿಡ' ಆಯಿತು. ದ್ರಾವಿಡ ಎಂಬ ಪದವು ಒಂದು ಜನಸಮೂಹದ ಭಾಷೆಯ ಹೆಸರು; ಅದು ಆ ಜನಸಮೂಹದ ಜನಾಂಗೀಯತೆಯನ್ನು ಸೂಚಿಸುವುದಿಲ್ಲ. ಇನ್ನು ಮೂರನೆಯ ಅಂಶ ನಾವು ನೆನಪಿನಲ್ಲಿಡಬೇಕಾದದ್ದು ಇದು : ತಮಿಳು ಅಥವಾ ದ್ರಾವಿಡವು ದಕ್ಷಿಣ ಭಾರತದ ಭಾಷೆ ಮಾತ್ರವಾಗಿರಲಿಲ್ಲ; ಆರ್ಯರು ಬರುವ ಮೊದಲು ಅದು ಇಡೀ ಭಾರತದ ಭಾಷೆಯಾಗಿತ್ತು.[೨] ಅದನ್ನು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಬಳಸಲಾಗುತ್ತಿತ್ತು. ವಸ್ತುತಃ ಅದು ಭಾರತದ ಎಲ್ಲೆಡೆಯಲ್ಲೂ ನಾಗರ ಭಾಷೆಯಾಗಿದ್ದಿತು. ಇದರ ನಂತರ ನಾವು ಗಮನಿಸಬೇಕಾದ ಅಂಶವೆಂದರೆ ಆರ್ಯರ ಮತ್ತು ನಾಗರ ನಡುವೆ ಬೆಳೆದ ಸಂಪರ್ಕ ಮತ್ತು ಅದರ ಪರಿಣಾಮವಾಗಿ ನಾಗರು ಮತ್ತು ಅವರ ಭಾಷೆಯ ಮೇಲೆ ಉಂಟಾದ ಪರಿಣಾಮ. ಆಶ್ಚರ್ಯವೆನಿಸಬಹುದಾದರೂ ಈ ಸಂಪರ್ಕದ ಪರಿಣಾಮವು ನಾಗರ ಮೇಲೆ ಉತ್ತರ ಭಾರತದಲ್ಲಿ ಆಗಿದ್ದಕ್ಕಿಂತ ದಕ್ಷಿಣ ಭಾರತದಲ್ಲಿ ಆದದ್ದು ಭಿನ್ನವೇ ಆಗಿದೆ. ಉತ್ತರ ಭಾರತದಲ್ಲಿ ನಾಗರು ತಮ್ಮ ಮಾತೃಭಾಷೆಯಾಗಿದ್ದ ತಮಿಳನ್ನು ಬಿಟ್ಟುಕೊಟ್ಟು ಅದರ ಜಾಗದಲ್ಲಿ ಸಂಸ್ಕೃತವನ್ನು ಅಳವಡಿಸಿಕೊಂಡರು. ದಕ್ಷಿಣ ಭಾರತದಲ್ಲಿ ನಾಗರು ತಮ್ಮ ಮಾತೃಭಾಷೆಯಾದ ತಮಿಳನ್ನು ಉಳಿಸಿಕೊಂಡರು. ಆರ್ಯರ ಭಾರತದಲ್ಲಿ ನಾಗರು ತಮ್ಮ ಮಾತೃಭಾಷೆಯಾದ ತಮಿಳನ್ನು ಉಳಿಸಿಕೊಂಡರು. ಆರ್ಯರ ಭಾಷೆಯಾದ ಸಂಸ್ಕೃತವನ್ನು ಅಳವಡಿಸಿಕೊಳ್ಳಲಿಲ್ಲ. ಈ ವ್ಯತ್ಯಾಸವನ್ನು ನಾವು ಮನಗಂಡರೆ ದ್ರಾವಿಡ ಎಂಬ ಪದವನ್ನು ದಕ್ಷಿಣ ಭಾರತದ ಜನರಿಗೆ ಮಾತ್ರವೇ ಏಕೆ ಅನ್ವಯಿಸಲಾಯಿತೆಂಬುದನ್ನು ವಿವರಿಸಲು ಸಹಾಯಕವಾಗುತ್ತದೆ. ಉತ್ತರ ಭಾರತದ ನಾಗರು ದ್ರಾವಿಡ ಭಾಷೆಯನ್ನು ಮಾತನಾಡಲು ಕೈಬಿಟ್ಟಿದ್ದುದರಿಂದ ಅವರಿಗೆ ದ್ರಾವಿಡ ಎಂಬ ಪದವನ್ನು ಅನ್ವಯಿಸುವ ಆವಶ್ಯಕತೆ ಇರಲಿಲ್ಲ. ಆದರೆ ದಕ್ಷಿಣ ಭಾರತದ ನಾಗರಿಗೆ ಸಂಬಂಧಿಸಿದಂತೆ ಅವರನ್ನು ದ್ರಾವಿಡರೆಂದು ಕರೆಯುವ ಔಚಿತ್ಯವು ಹಾಗೆಯೇ ಇತ್ತು. ಏಕೆಂದರೆ ಅವರು ದ್ರಾವಿಡ ಭಾಷೆಗೆ ಮುಂಚಿನಂತೆಯೇ ಅಂಟಿಕೊಂಡಿದ್ದರು. ಅಷ್ಟೇ ಅಲ್ಲದೆ ಉತ್ತರದವರು ಆ ಭಾಷೆಯ ಬಳಕೆಯನ್ನು ಕೈಬಿಟ್ಟ ಮೇಲೆ ದ್ರಾವಿಡ ಭಾಷೆಯನ್ನು ಮಾತನಾಡುವ ಜನ ಅವರು ಮಾತ್ರವೇ ಆಗಿ ಉಳಿದಾಗ ಅವರನ್ನು ದ್ರಾವಿಡರೆಂದು ಕರೆಯಬೇಕಾದ ಆವಶ್ಯಕತೆಯು ಬಹಳ ತುರ್ತಿನದಾಗಿತ್ತು. ದಕ್ಷಿಣ ಭಾರತದವರನ್ನು ದ್ರಾವಿಡರೆಂದು ಕರೆಯಲು ಉಪಕ್ರಮಿಸಿದ್ದುದರ ನಿಜವಾದ ಕಾರಣ ಇದು.

ದಕ್ಷಿಣ ಭಾರತದ ಜನರಿಗೆ 'ದ್ರಾವಿಡ' ಎಂಬ ಹೆಸರನ್ನು ವಿಶೇಷವಾಗಿ ಬಳಸಿದರೂ ನಾಗರು ಮತ್ತು ದ್ರಾವಿಡರು ಒಂದೇ ಜನರೆಂಬುದನ್ನು ಮರೆಯಬಾರದು. ಒಂದೇ ಜನರಿಗೆ ಇವು ಎರಡು ಬೇರೆ ಬೇರೆ ಹೆಸರುಗಳು. ನಾಗರು ಎಂಬುದು ಅವರ ಜನಾಂಗೀಯ ಅಥವಾ ಸಾಂಸ್ಕೃತಿಕವಾದ ಹೆಸರಾದರೆ ದ್ರಾವಿಡರು ಎಂಬುದು ಅವರ ಭಾಷೆಯಿಂದ ಬಂದ ಹೆಸರು.

---

೧. ಬಿ.ಆರ್. ಭಂಡಾರ್ಕರ್ : *ಪ್ರಾಚೀನ ಭಾರತದ ಇತಿಹಾಸವನ್ನು ಕುರಿತ ಭಾಷಣಗಳು* (೧೯೧೯), ಪುಟ.೮೦
೨. ಅದೇ ಪುಸ್ತಕ, ಪುಟಗಳು ೨೫–೨೮.

ಆದ್ದರಿಂದ 'ದಾಸರು' ಎಂಬುವರು ನಾಗರು, ಮತ್ತು ನಾಗರು ಎಂಬುವರು ದ್ರಾವಿಡರು. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಭಾರತದ ಕಣದಲ್ಲಿ ಯಾವಾಗಲೂ ಇದ್ದ ಜನಾಂಗಗಳು ಬಹಳವೆಂದರೆ ಎರಡು: ಆರ್ಯರು ಮತ್ತು ನಾಗರು. ಇದರಿಂದಾಗಿ ಶ್ರೀ ರೈಸ್ ಅವರ ಸಿದ್ಧಾಂತವು ಸಹಜವಾಗಿಯೇ ಬಿದ್ದುಹೋಗುತ್ತದೆ. ಏಕೆಂದರೆ, ಆ ಸಿದ್ಧಾಂತವು ಮೂರು ಜನಾಂಗಗಳನ್ನು ಕಲ್ಪಿಸಿಕೊಳ್ಳುತ್ತದೆ; ಆದರೆ, ನಿಜ ಸ್ಥಿತಿ ಇರುವುದೇ ಬೇರೆ. ಇಲ್ಲಿರುವುದು ಎರಡೇ ಜನಾಂಗಗಳು.

## II

ದ್ರಾವಿಡರು ಬರುವುದಕ್ಕೆ ಮುಂಚೆ ಭಾರತದಲ್ಲಿ ಮೂರನೆಯ ಒಂದು ಮೂಲ ಜನಾಂಗದವರು ವಾಸಿಸುತ್ತಿದ್ದರೆಂದು ಭಾವಿಸಿದರೂ ಈ ದ್ರಾವಿಡಪೂರ್ವ ಮೂಲನಿವಾಸಿಗಳು ವರ್ತಮಾನ ಕಾಲದ ಭಾರತದ ಅಸ್ಪೃಶ್ಯರ ಪೂರ್ವಿಕರು ಎಂದು ಹೇಳಲಾದೀತೆ? ಇದರ ಬಗೆಗಿನ ಸತ್ಯಾಂಶವನ್ನು ತಿಳಿದುಕೊಳ್ಳಲು ಎರಡು ಪ್ರಮಾಣಗಳನ್ನು ನಾವು ಅನ್ವಯಿಸಬಹುದು. ಒಂದು, ಮಾನವದೇಹ ರಚನಾಶಾಸ್ತ್ರದ್ದು ಹಾಗೂ ಇನ್ನೊಂದು, ಮಾನವಕುಲ ಶಾಸ್ತ್ರಕ್ಕೆ ಸೇರಿದುದು.

ಭಾರತದ ಜನರ ಪರಿಮಾಣವನ್ನು ದೇಹಮಾಪನ ಪ್ರಕ್ರಿಯೆಗೆ ಗುರಿಮಾಡಿ ಪ್ರಾಧ್ಯಾಪಕ ಘುರ್ಯೆ ಅವರು ಬಹಳ ಗಮನಾರ್ಹವಾದ ಅಂಶವನ್ನು ಗುರುತಿಸಿದ್ದಾರೆ. ಅವರ 'ಭಾರತದಲ್ಲಿ ಜಾತಿ ಮತ್ತು ಜನಾಂಗ' ಎಂಬ ಗ್ರಂಥದಲ್ಲಿ ಬರುವ ಮಾತಿನ ಒಂದು ಉಲ್ಲೇಖ ಇದು:

"ಸಂಯುಕ್ತ ಪ್ರಾಂತ್ಯಗಳ ಬ್ರಾಹ್ಮಣನೊಬ್ಬನನ್ನು ಪ್ರಾಚೀನ ಆರ್ಯರ ಪ್ರತಿರೂಪದ ಪ್ರತಿನಿಧಿಯೆಂದು ತೆಗೆದುಕೊಂಡು ಅವನೊಂದಿಗೆ ಹೋಲಿಕೆಗಳನ್ನು ಮಾಡುವುದರಿಂದ ನಾವು ಪ್ರಾರಂಭಿಸಬಹುದು. ಭೇದಸೂಚಕಗಳ ಪಟ್ಟಿಯನ್ನು ಗಮನಿಸಿದರೆ ನಮಗೆ ಗೊತ್ತಾಗುವುದೇನೆಂದರೆ ಪಂಜಾಬಿನ ಚೂಹ್ರಾ ಮತ್ತು ಖತ್ರಿಗಳೊಂದಿಗೆ ಹೋಲಿಸಿದರೆ ಅವನಲ್ಲಿ ಅತಿ ಕಡಿಮೆ ಪ್ರಮಾಣದ ಭೇದಸೂಚಕಗಳಿರುತ್ತವೆ; ಅದೇ ಸಂಯುಕ್ತ ಪ್ರಾಂತ್ಯಗಳ ಛತ್ರಿ ಪಂಗಡದವರನ್ನುಳಿದು ಇತರರೊಡನೆ ಹೋಲಿಸಿದರೆ ಭೇದಸೂಚಕಗಳು ಇಷ್ಟು ಕಡಿಮೆ ಪ್ರಮಾಣದಲ್ಲಿರುವುದಿಲ್ಲ. ಖತ್ರಿ ಮತ್ತು ಚೂಹ್ರಾ[೧]ಗಳ ನಡುವಣ ಭೇದಸೂಚಕವು ಸಂಯುಕ್ತ ಪ್ರಾಂತ್ಯಗಳ ಬ್ರಾಹ್ಮಣ ಮತ್ತು ಪಂಜಾಬಿನ ಚೂಹ್ರಾಗಳ ನಡುವೆ ಇರುವ ಭೇದಸೂಚಕಕ್ಕಿಂತ ಸ್ವಲ್ಪವೇ ಕಡಿಮೆ ಪ್ರಮಾಣದ್ದು. ಇದರ ಅರ್ಥವೇನೆಂದರೆ ಸಂಯುಕ್ತ ಪ್ರಾಂತ್ಯಗಳ ಬ್ರಾಹ್ಮಣನು ಪಂಜಾಬಿನ ಚೂಹ್ರಾ ಮತ್ತು ಖತ್ರಿಗಳೊಡನೆ ದೈಹಿಕ ಪ್ರಮಾಣದಲ್ಲಿ ಹೋಲಿಕೆಯುಳ್ಳವನಾಗಿದ್ದಾನೆ; ಈ ಹೋಲಿಕೆಯು ಎಷ್ಟು ನಿಕಟವಾದುದೆಂದರೆ ತನ್ನ ಪ್ರಾಂತ್ಯದಲ್ಲಿ ಅತ್ಯುನ್ನತ ಜಾತಿಯಾದ ಖತ್ರಿಯವರನ್ನುಳಿದು ಇತರ ಯಾವುದೇ ಜಾತಿಗಳವರೊಡನೆಯೂ ಇಷ್ಟು ಪ್ರಮಾಣದ ಹೊಂದಿಕೆಯನ್ನು ತಾಳಿಲ್ಲ..... ಸಂಯುಕ್ತ ಪ್ರಾಂತ್ಯಗಳ ಬ್ರಾಹ್ಮಣ ಮತ್ತು ಪಂಜಾಬಿನ ಛೂಹ್ರಾಗಳ ನಡುವಣ ನಿಕಟ ಹೋಲಿಕೆಯ ಸತ್ಯಾಸತ್ಯತೆಯನ್ನು ಇನ್ನೂ ಗಹನವಾಗಿ ಗ್ರಹಿಸಬೇಕಾದರೆ ಸಂಯುಕ್ತ ಪ್ರಾಂತ್ಯಗಳ ಬ್ರಾಹ್ಮಣ ಮತ್ತು ಇತರ ಪ್ರದೇಶಗಳ ಬ್ರಾಹ್ಮಣರ ನಡುವಣ ಭೇದಸೂಚಕಗಳ ಪಟ್ಟಿಯನ್ನು ಗಮನಿಸಬೇಕು. ಆರ್ಯ ಸಂಸ್ಕೃತಿಯು ಹರಡಿದ ವಿಧಾನದ ಚರಿತ್ರೆಯನ್ನನುಸರಿಸಿ ಹೇಳಬೇಕಾದರೆ ಬಿಹಾರದ ಬ್ರಾಹ್ಮಣರು ಸಂಯುಕ್ತ ಪ್ರಾಂತ್ಯಗಳ ಬ್ರಾಹ್ಮಣರೊಡನೆ ಅತಿ ನಿಕಟವಾದ ಹೋಲಿಕೆಯನ್ನುಳ್ಳವರಾಗಿರಬೇಕು; ಆದಾಗ್ಯೂ ಅವರಿಬ್ಬರ ನಡುವಣ ಭೇದಸೂಚಕಗಳು ಸಂಯುಕ್ತ ಪ್ರಾಂತ್ಯಗಳ ಬ್ರಾಹ್ಮಣ ಮತ್ತು ಪಂಜಾಬಿನ ಚೂಹ್ರಾಗಳ ನಡುವೆ ಇರುವಷ್ಟೇ ಪ್ರಮಾಣದ್ದು..... ಚಾರಿತ್ರಿಕ

---

೧. ಛೂಹ್ರಾಗಳು ಪಂಜಾಬಿನಲ್ಲಿರುವ ಅಸ್ಪೃಶ್ಯರು

ಆಧಾರದ ಮೇಲೆ ನಾವು ನಿರೀಕ್ಷಿಸುವುದು ಬಿಹಾರ ಮತ್ತು ಸಂಯುಕ್ತ ಪ್ರಾಂತ್ಯಗಳ ಬ್ರಾಹ್ಮಣರ ನಡುವಣ ನಿಕಟ ಹೋಲಿಕೆಯನ್ನು; ಆದರೆ ಭೇದಸೂಚಕ ಪಟ್ಟಿಯಲ್ಲಿ ಗಮನಿಸಿದರೆ ನಮಗೆ ಕಾಣುವುದು ಕುರ್ಮಿಯೊಬ್ಬನು ಬ್ರಾಹ್ಮಣನ ಹತ್ತಿರ ಬರುವುದನ್ನು. ಅದೇ ಚಮಾರ್ ಮತ್ತು ದೋಮ್‌ಗಳು[೧] ಅವನಿಂದ ಪ್ರತ್ಯೇಕಿಸಿ ನಿಲ್ಲುತ್ತಾರೆ. ಆದರೆ ಈ ವಿಷಯದಲ್ಲಿ ಚಮಾರನು ಬ್ರಾಹ್ಮಣನಿಂದ ಅಷ್ಟೊಂದು ಪ್ರತ್ಯೇಕವೆನಿಸುವುದಿಲ್ಲ. ಸಂಯುಕ್ತ ಪ್ರಾಂತ್ಯಗಳ ಚಮಾರ ಮತ್ತು ಅದೇ ಪ್ರಾಂತ್ಯದ ಬ್ರಾಹ್ಮಣನ ನಡುವೆ ಇರುವ ಪ್ರತ್ಯೇಕತೆಗಿಂತಲೂ ಇದು ಕಡಿಮೆ ಪ್ರಮಾಣದ್ದು. ಬಂಗಾಳದ ಭೇದಸೂಚಕ ಪಟ್ಟಿಯನ್ನು ನೋಡಿದರೆ ಚಂಡಾಲನು[೨] ಸಾಮಾಜಿಕ ಸ್ತರಗಳ ನಿಟ್ಟಿನಲ್ಲಿ ಆರನೆಯ ಸ್ಥಾನದಲ್ಲಿರುವುದು ಗೊತ್ತಾಗುತ್ತದೆ. ಅವನನ್ನು ಮುಟ್ಟಿದರೆ ಇತರರು ಕಲುಷಿತರಾಗುತ್ತಾರೆ ಎನ್ನಲಾಗುತ್ತದೆ. ಆದರೆ ಅವನಿಗೂ ಅಲ್ಲಿನ ಬ್ರಾಹ್ಮಣನಿಗೂ ಹೇಳಿಕೊಳ್ಳಬಹುದಾದಷ್ಟು ಪ್ರತ್ಯೇಕತೆ ಇಲ್ಲ. ಎರಡನೆ ಸ್ಥಾನದಲ್ಲಿರುವ ಕಾಯಸ್ಥ ಮತ್ತು ಬ್ರಾಹ್ಮಣನ ನಡುವಿನ ಪ್ರತ್ಯೇಕತೆಗಿಂತಲೂ ಇದು ಹೆಚ್ಚಿನ ಪ್ರಮಾಣದ್ದೇನೂ ಅಲ್ಲ. ಮುಂಬೈ ಪ್ರಾಂತ್ಯದಲ್ಲಿ ದೇಶಸ್ಥ ಬ್ರಾಹ್ಮಣನೊಬ್ಬನು ಬೆಸ್ತರ ಜಾತಿಯ ಸೋನ್–ಕೋಲಿಯವನೊಬ್ಬನೊಡನೆ ಹೊಂದಿರುವ ನಿಕಟ ಹೋಲಿಕೆಯು ಅವನ ಸಮಾನಸ್ಕಂಧನಾದ ಚಿತ್ಪಾವನ ಬ್ರಾಹ್ಮಣನೊಡನೆ ಹೊಂದಿರುವ ಹೋಲಿಕೆಗೆ ಸಮನಾದ್ದು. ಮರಾಠಾ ಪ್ರಾಂತ್ಯದ ಅಸ್ಪೃಶ್ಯನಾದ ಮಹಾರ್‌ರವರು ಕೃಷಿಕ ಜಾತಿಯ ಕುಣಬಿಯವನೊಡನೆ ಮುಂದಿನ ಹಂತಕ್ಕೆ ಸೇರಿದವನಾಗುತ್ತಾನೆ. ಆಮೇಲೆ ಕ್ರಮವಾಗಿ ಶೆನ್ವಿ ಬ್ರಾಹ್ಮಣ, ನಗರ್ ಬ್ರಾಹ್ಮಣ ಮತ್ತು ಉಚ್ಚ ಜಾತಿಯ ಮರಾಠರು ಬರುತ್ತಾರೆ. ಈ ತೀರ್ಮಾನಗಳೆಲ್ಲಾ ಸಾಕಷ್ಟು ಹಳೆಯವು. ಸಾಧಾರಣೀಕರಿಸಿ ಹೇಳುವುದಾದರೆ ಇದರ ಅರ್ಥವಿಷ್ಟೆ : ಮುಂಬೈ ಪ್ರಾಂತ್ಯದಲ್ಲಿ ಸಾಮಾಜಿಕ ವರ್ಗೀಕರಣ ಮತ್ತು ದೈಹಿಕ ತಾರತಮ್ಯಗಳ ನಡುವೆ ತಾಳೆ ಇಲ್ಲ.

"ಕೊನೆಗೆ ನಾವು ಮದ್ರಾಸ್ ಪ್ರಾಂತ್ಯಕ್ಕೆ ಬರೋಣ. ಇಲ್ಲಿ ಬೇರೆ ಬೇರೆ ಭಾಷಿಕ ಪ್ರದೇಶಗಳನ್ನು ಪ್ರತ್ಯೇಕಿಸಿ ನೋಡಬೇಕು; ಏಕೆಂದರೆ, ಇಲ್ಲಿಯ ಬೇರೆ ಬೇರೆ ಪ್ರದೇಶಗಳಲ್ಲಿ ಸಾಮಾಜಿಕ ವಗೀಕರಣದ ಸೂತ್ರಗಳು ಬೇರೆ ಬೇರೆಯಾಗಿವೆ. ರೀಸ್ಲೆ ಮತ್ತು ಇ. ಥರ್ಸ್ಟನ್ ನೀಡಿರುವ ಸರಾಸರಿಯಂತೆ ವಿವಿಧ ಜಾತಿಗಳವರ ಕ್ರಮ ಹೀಗಿದೆ : ಕಾಪು, ಸಾಲೆ, ಮಲ್ಲ, ಗೊಲ್ಲ, ಮಾದಿಗ, ಘೊಗಾಟ ಮತ್ತು ಕೋಮಟಿ.

"ಅವರ ಸಾಮಾಜಿಕ ಸ್ಥಾನಮಾನಗಳ ಆಧಾರದ ಮೇಲೆ ಅವರನ್ನು ಕೆಳಕಂಡಂತೆ ಶ್ರೇಣೀಕರಿಸಲಾಗಿದೆ:

"ಬ್ರಾಹ್ಮಣ, ಕೋಮಟಿ, ಗೊಲ್ಲ, ಕಾಪು ಮತ್ತು ಇತರರು, ಸಾಲೆ, ಘೊಗಾಟ ಮತ್ತು ಇತರರು. ತೆಲುಗು ದೇಶದಲ್ಲಿ ಮೂಲ–ಮಾದಿಗರು ಅತ್ಯಂತ ಕಡಿಮೆ ದರ್ಜೆಗೆ ಸೇರಿದವರಾಗಿ ಅಲ್ಲಿ ಅವರು ಪರಯ್ಯಾಗಳಾಗಿದ್ದಾರೆ.

"ಕರ್ನಾಟಕದಲ್ಲಿ ನಾಸಿಕಸೂಚೀ ಪಟ್ಟಿಯು ಕೆಳಗಿನ ಕ್ರಮದಲ್ಲಿದೆ : ಕರ್ನಾಟಕದ ಸ್ಮಾರ್ತರು, ಬ್ರಾಹ್ಮಣರು, ಬಂಟ, ಬಿಲ್ಲವ, ಮಂಡ್ಯದ ಬ್ರಾಹ್ಮಣ, ಒಕ್ಕಲಿಗ, ಗಾಣಿಗ, ಲಿಂಗಬಣಜಿಗ, ಪಾಂಚಾಲ, ಕುರ್ಹ, ಹೊಲೆಯ, ದೇಶಸ್ಥ ಬ್ರಾಹ್ಮಣ ತೊರೆಯ, ಬೇಡ.

"ಸಾಮಾಜಿಕ ಆದ್ಯತೆಯ ದೃಷ್ಟಿಯಿಂದ ವಿವಿಧ ಜಾತಿಗಳವರು ಈ ಕ್ರಮದಲ್ಲಿದ್ದಾರೆ :

"ಬ್ರಾಹ್ಮಣ, ಬಂಟ ಮತ್ತು ಒಕ್ಕಲಿಗ, ತೊರೆಯ ಇತ್ಯಾದಿಗಳು, ಕುರುಬ ಮತ್ತು ಗಾಣಿಗ, ಬಡಗ ಮತ್ತು ಕುಂಬ ಮತ್ತು ಸೋಲಿಗ, ಭಿಲ್ಲವ, ಬೇಡ, ಹೊಲೆಯ.

---

೧. ದೋಮ್‌ಗಳು ಬಿಹಾರದ ಅಸ್ಪೃಶ್ಯರು.

೨. ಚಂಡಾಲನು ಬಂಗಾಳದ ಅಸ್ಪೃಶ್ಯ.

ಈ ತುಲನೆಯ ಮಹತ್ವವು ಇನ್ನೂ ಹೆಚ್ಚಿನದೆಂದು ತಿಳಿಯಲು ಒಂದಂಶವನ್ನು ಜ್ಞಾಪಕದಲ್ಲಿಡಬೇಕು: ಕರ್ನಾಟಕ ಪ್ರದೇಶದ ಅಸ್ಪೃಶ್ಯರಾದ ಹೊಲೆಯರ ನಾಸಿಕ ಸೂಚಕವು ೭೫.೧ ಆದರೆ ಅತ್ಯುಚ್ಚ ಶ್ರೇಣಿಗೆ ಸೇರಿದ ಬ್ರಾಹ್ಮಣನದು ೭೧.೫ ಆಗಿದೆ. ಕಾಡು ಪ್ರದೇಶಕ್ಕೆ ಸೇರಿದ ಕ್ರುಂಬ ಮತ್ತು ಸೋಲಿಗರು ಹಿಂದುಗಳಾಗಿ ಪರಿವರ್ತಿತರಾಗಿ ಅವರವರ ಸ್ಥಾನದಲ್ಲಿ ಪಟ್ಟಿಗೆ ದಾಖಲಾದ ಅವರ ನಾಸಿಕ ಸೂಚಕವು ಕ್ರಮವಾಗಿ ೮೬.೧ ಮತ್ತು ೮೫.೧ ಆಗಿರುತ್ತದೆ.

"ನಾಸಿಕ ಸೂಚಿಯ ಆಧಾರದ ಮೇಲೆ ತಮಿಳು ಪ್ರದೇಶದ ಜಾತಿಗಳವರನ್ನು ಕೆಳಕಂಡಂತೆ ಶ್ರೇಣೀಕರಿಸಬಹುದು :

"ಅಂಬಟ್ಟನ್, ವೆಲ್ಲೈ, ಎಡಿಯಾಯನ್, ಅಗಮುದಯ್ಯನ್, ತಮಿಳು ಬ್ರಾಹ್ಮಣ, ಪಲ್ಲೈ, ಮಲೈಯಾಲಿ, ಶಾನನ್ ಮತ್ತು ಪರಯ್ಯನ್, ಮಲಯಾಳದ ಪ್ರತಿನಿಧಿರೂಪದ ನಾಲ್ಕು ಜಾತಿಗಳವರ ನಾಸಿಕ ಸೂಚಿಯು ಕೆಳಕಂಡಂತಿದೆ : ತಿಯ್ಯನ್ ೭೫; ನಂಬೂದಿರಿ ೭೫.೫; ನಾಯರ್ ೭೬.೭; ಚಾರುಮಾನ್ ೭೭.೨. ಇವುಗಳಲ್ಲಿ ಸಾಮಾಜಿಕ ಆದ್ಯತೆಯ ಕ್ರಮವು ಹೀಗಿದೆ : ನಂಬೂದಿರಿ, ನಾಯರ್ ತಿಯ್ಯನ್ ಮತ್ತು ಚಾರುಮಾನ್. ತಿರುವಾಂಕೂರಿನ ಕಾಡುಪ್ರದೇಶದ ಕಣಿಕರ್ ಬುಡಕಟ್ಟಿನವರ ನಾಸಿಕ ಸೂಚಿಯು ೮೪.೬ ಆಗಿದೆ. ಇದರಿಂದಾಗಿ ಹತ್ತಿರ ಬರಲಾಗದ ಚಾರುಮಾನರು ಬ್ರಾಹ್ಮಣರು ಸೇರುವ ಜನಾಂಗದವರಾಗುತ್ತಾರೆಯೇ ವಿನಾ ಕಣಿಕರ್ ಬುಡಕಟ್ಟಿನವರ ಜನಾಂಗಕ್ಕೆ ಸಮೀಪವಾಗುವುದಿಲ್ಲ."

ಮೇಲಿನ ಉಲ್ಲೇಖನದಲ್ಲಿ ಇತರ ಪಂಗಡಗಳಿಗೆ ಸೇರಿದವರ ಬಗ್ಗೆ ಹೇಳಿರುವ ಅಂಶಗಳನ್ನು ಕೈಬಿಡಲಾಗಿದೆ. ಅವುಗಳ ಪೈಕಿ ಕೇವಲ ಅಸ್ಪೃಶ್ಯರ ಬಗೆಗಿನ ಅಂಶಗಳತ್ತ ಗಮನ ಹರಿಸುವುದಾದರೆ ಒಂದು ವಿಷಯ ಸ್ಪಷ್ಟವಿದೆ : ಪಂಜಾಬಿನ ಅಸ್ಪೃಶ್ಯರಾದ ಚೂಹ್ರಾಗಳ ನಾಸಿಕ ಸೂಚಿಯು ಸಂಯುಕ್ತ ಪ್ರಾಂತ್ಯಗಳ ಬ್ರಾಹ್ಮಣರ ನಾಸಿಕ ಸೂಚಿಗೆ ಸಮನಾಗಿದೆ ; ಬಿಹಾರದ ಅಸ್ಪೃಶ್ಯರಾದ ಚಮಾರರ ನಾಸಿಕ ಸೂಚಿಯು ಅಲ್ಲಿನ ಬ್ರಾಹ್ಮಣರ ನಾಸಿಕ ಸೂಚಿಗಿಂತ ಬಹಳ ಭಿನ್ನವೇನಲ್ಲ. ಕರ್ನಾಟಕದ ಅಸ್ಪೃಶ್ಯರಾದ ಹೊಲೆಯರ ನಾಸಿಕ ಸೂಚಿಯು ಅದೇ ಪ್ರದೇಶದ ಬ್ರಾಹ್ಮಣನ ನಾಸಿಕ ಸೂಚಿಗಿಂತ ಎಷ್ಟೋಪಟ್ಟು ಹೆಚ್ಚಿನದಾಗಿದೆ. ಪರಯ್ಯಾಗಳಿಗಿಂತ ಕೆಳಗಿನವರೆಂದು ಹೇಳಲಾದ ಮತ್ತು ಹತ್ತಿರವೂ ಸುಳಿಯಲಾಗದ ತಮಿಳುಪ್ರದೇಶದ ಚಾರುಮಾನರು ಅದೇ ಪ್ರದೇಶದ ಬ್ರಾಹ್ಮಣರು ಸೇರುವ ಜನಾಂಗಕ್ಕೆ ಸೇರಿದವರೇ ಆಗಿದ್ದಾರೆ. ಮನುಷ್ಯ ದೇಹ ರಚನಾ ಶಾಸ್ತ್ರವು ಒಂದು ವಿಜ್ಞಾನ ಶಾಖೆಯಾಗಿ ಒಂದು ಸಮುದಾಯದ ಜನರ ಜನಾಂಗವನ್ನು ನಿರ್ಧರಿಸುವಲ್ಲಿ ನಂಬಲರ್ಹವಾದ ಶಾಸ್ತ್ರವಾದರೆ ಅದನ್ನು ಹಿಂದು ಸಮಾಜದ ಬೇರೆ ಬೇರೆ ಸ್ತರಗಳವರಿಗೆ ಅನ್ವಯಿಸಿ ನೋಡಿದಾಗ ಲಭಿಸುವ ಫಲಿತಾಂಶವು ಒಂದಂಶವನ್ನು ಸಿದ್ಧಗೊಳಿಸುತ್ತದೆ. ಅಸ್ಪೃಶ್ಯರು ಆರ್ಯರು ಮತ್ತು ದ್ರಾವಿಡರು ಸೇರುವ ಜನಾಂಗಕ್ಕೆ ಭಿನ್ನವಾದ ಜನಾಂಗದವರಲ್ಲ. ಈ ವಿಜ್ಞಾನ ಶಾಖೆಯಲ್ಲಿನ ಮಾಪನಗಳು ಬ್ರಾಹ್ಮಣ ಮತ್ತು ಅಸ್ಪೃಶ್ಯರಿಬ್ಬರೂ ಒಂದೇ ಜನಾಂಗಕ್ಕೆ ಸೇರಿದವರೆಂಬುದನ್ನು ಸ್ಥಾಪಿಸಿ ತೋರಿಸುತ್ತವೆ.

ಇದರಿಂದ ಹೊಮ್ಮುವ ಇನ್ನೊಂದು ತೀರ್ಮಾನ ಹೀಗಿದೆ : ಬ್ರಾಹ್ಮಣರು ಆರ್ಯರಾದರೆ ಅಸ್ಪೃಶ್ಯರೂ ಆರ್ಯರೇ. ಬ್ರಾಹ್ಮಣರು ದ್ರಾವಿಡರಾದರೆ ಅಸ್ಪೃಶ್ಯರೂ ದ್ರಾವಿಡರೇ. ಬ್ರಾಹ್ಮಣರು ನಾಗರಾದರೆ ಅಸ್ಪೃಶ್ಯರೂ ನಾಗರೇ. ವಸ್ತುಸ್ಥಿತಿ ಹೀಗಿರುವಾಗ ಶ್ರೀಯುತ ರೈಸ್ ಅವರು ಪ್ರತಿಪಾದಿಸಿರುವ ಸಿದ್ಧಾಂತವು ತಪ್ಪು ತಳಹದಿಯ ಆಧಾರದ ಮೇಲೆ ನಿಂತಿದೆ ಎಂದು ಹೇಳಲೇಬೇಕಾಗಿದೆ.

## III

ಅಸ್ಪೃಶ್ಯತೆಯ ಬಗೆಗಿನ ಜನಾಂಗೀಯ ಸಿದ್ಧಾಂತವು ಮನುಷ್ಯ ದೇಹ ರಚನಾ ಶಾಸ್ತ್ರದ ಫಲಿತಾಂಶಗಳಿಗೆ ವಿರೋಧವಾಗಿ ನಿಲ್ಲುವುದಲ್ಲದೆ ಮಾನವಕುಲಶಾಸ್ತ್ರದಿಂದ ಭಾರತದ ಸಮಾಜದ ಬಗ್ಗೆ ತಿಳಿದುಬಂದಿರುವ ಅಂಶಗಳಿಂದಲೂ ಪುಷ್ಟಿಯನ್ನು ಹೊಂದುವುದಿಲ್ಲ. ಭಾರತದ ಜನರು ಹಿಂದೊಮ್ಮೆ ಬುಡಕಟ್ಟು ಪಂಗಡಗಳಾಗಿ ಸಂಘಟಿತರಾಗಿದ್ದರೆಂಬುದು ಸಾಕಷ್ಟು ಪ್ರಚಲಿತವಾಗಿರುವ ವಿಷಯ. ಬುಡಕಟ್ಟುಗಳು ಜಾತಿಗಳಾಗಿ ಪರಿವರ್ತನೆ ಹೊಂದಿದ್ದರೂ ಬುಡಕಟ್ಟು ವಿಂಗಡಣೆಯ ರೀತಿಯ ಸಂಘಟನೆಯು ಮಾತ್ರ ನಶಿಸದೆ ನಿಂತಿದೆ. ಪ್ರತಿಯೊಂದು ಬುಡಕಟ್ಟೂ ಅನೇಕ ಕುಲಗಳಾಗಿ ವಿಭಜಿಸಲ್ಪಟ್ಟಿರುತ್ತದೆ ಮತ್ತು ಕುಲಗಳು ಕುಟುಂಬಗಳ ಗುಂಪುಗಳನ್ನೊಳಗೊಂಡಿರುತ್ತವೆ. ಪ್ರತಿ ಕುಟುಂಬ ಸಂಘಾತಕ್ಕೂ ಒಂದು ಲಾಂಛನವಿರುತ್ತಿತ್ತು. ಅದು ಸಜೀವ ಅಥವಾ ನಿರ್ಜೀವವಾದ ಯಾವುದಾದರೊಂದು ವಸ್ತುವಾಗಿರುತ್ತಿತ್ತು. ಯಾವ ಕುಟುಂಬಗಳ ಗುಂಪಿಗೆ ಸಾಮಾನ್ಯವಾದ ಲಾಂಛನವಾಗಿರುತ್ತಿತ್ತೋ ಅವರೆಲ್ಲಾ ಅನ್ಯಗೋತ್ರಗಳೊಡನೆ ಮದುವೆಯಾಗಬೇಕೆಂಬ ನಿಯಮವನ್ನುಳ್ಳ ಗೋತ್ರದವರಾಗಿ ಅಥವಾ ಕುಲಗಳಾಗಿ ತಮ್ಮನ್ನು ತಾವು ರೂಪಿಸಿಕೊಳ್ಳುತ್ತಿದ್ದರು. ಒಂದೇ ಗೋತ್ರದ ಕುಟುಂಬಗಳ ಪೈಕಿ ಆಂತರಿಕ ವಿವಾಹ ಸಂಬಂಧಗಳ ನಿಷೇಧಿಸಲ್ಪಟ್ಟಿದ್ದುವು; ಏಕೆಂದರೆ, ಅವರೆಲ್ಲಾ ಒಂದೇ ಪೂರ್ವಜರ ಸಂತತಿಯವರಾಗಿ ರಕ್ತಸಂಬಂಧಿಗಳೆಂದು ಗುರುತಿಸಲ್ಪಡುತ್ತಿದ್ದರು. ಈ ವಿಷಯವನ್ನು ಗಮನದಲ್ಲಿರಿಸಿ ಬೇರೆ ಬೇರೆ ಜಾತಿಗಳು ಹಾಗೂ ಪಂಗಡಗಳಿಗೆ ಸೇರಿದವರಲ್ಲಿ ಲಾಂಛನಗಳ ವಿತರಣೆಯನ್ನು ಪರೀಕ್ಷಿಸುವುದು ಜನಾಂಗವನ್ನು ನಿರ್ಧರಿಸುವುದಕ್ಕೆ ಮನುಷ್ಯ ದೇಹರಚನಾಶಾಸ್ತ್ರದಷ್ಟೇ ಪರಿಣಾಮಕಾರಿ ಪ್ರಯೋಗವಾಗಬಲ್ಲದು.

ಆದರೆ ದುರದೃಷ್ಟದ ಸಂಗತಿಯೆಂದರೆ ಸಮಾಜವಿಜ್ಞಾನದ ವಿದ್ಯಾರ್ಥಿಗಳು ಲಾಂಛನಗಳು ಹಾಗೂ ಬೇರೆ ಬೇರೆ ಪಂಗಡಗಳಲ್ಲಿ ಅವುಗಳ ವಿತರಣೆಯ ಇಡೀ ಅಧ್ಯಯನವನ್ನು ಸಂಪೂರ್ಣವಾಗಿ ಕಡೆಗಣಿಸಿಬಿಟ್ಟಿದ್ದಾರೆ. ಹೀಗೆ ಕಡೆಗಣಿಸುವುದಕ್ಕೆ ಮುಖ್ಯ ಕಾರಣ ಜನಗಣತಿಯ ಆಯುಕ್ತರು ಬಿತ್ತರಿಸಿರುವ ಪ್ರಚಲಿತ ಭಾವನೆ. ಅದೆಂದರೆ ಹಿಂದು ಸಮಾಜದ ವ್ಯವಸ್ಥೆಯ ಮೂಲ ಘಟಕ ಸ್ವಗೋತ್ರ ವಿವಾಹದ ಆಚರಣೆಯನ್ನಿರಿಸಿಕೊಂಡಿರುವ ಉಪಜಾತಿಗಳು ಎಂಬುದು. ಇದಕ್ಕಿಂತಲೂ ಹೆಚ್ಚು ತಪ್ಪಾದ ಕಲ್ಪನೆ ಇರಲಾರದು. ಹಿಂದು ಸಮಾಜದಲ್ಲಿ ಉಪಜಾತಿಯು ನಿಜವಾದ ಮೂಲಘಟಕವಲ್ಲ; ಬದಲಾಗಿ, ಅನ್ಯಗೋತ್ರಗಳಲ್ಲಿ ಮದುವೆಯ ಸಂಬಂಧ ಏರ್ಪಡಿಸಬೇಕೆಂಬ ನಿಯಮವನ್ನುಳ್ಳ ಕುಟುಂಬವು ಅಂತಹ ಮೂಲಘಟಕವಾಗಿದೆ. ಈ ಅರ್ಥದಲ್ಲಿ ಹಿಂದು ಕುಟುಂಬವೊಂದು ಮೂಲಭೂತವಾಗಿ ಬುಡಕಟ್ಟು ಪದ್ಧತಿಯ ಸಂಘಟನೆಗೆ ಸೇರಿದ್ದೇ ವಿನಾ ಉಪಜಾತಿಯಂತೆ ಸಾಮಾಜಿಕ ಸಂಘಟನೆಯ ಪದ್ಧತಿಗೆ ಸೇರಿದ್ದಲ್ಲ. ಮದುವೆಗೆ ಸಂಬಂಧಿಸಿದಂತೆ ಹಿಂದು ಕುಟುಂಬವೊಂದು ಮೂಲತಃ ಅನುಸರಿಸುವುದು ಕುಲ ಅಥವಾ ಗೋತ್ರ ವಿಮರ್ಶೆಯನ್ನೇ ವಿನಾ ಜಾತಿ–ಉಪಜಾತಿಗಳ ವಿಂಗಡಣೆಯನ್ನಲ್ಲ. ಜಾತಿ–ಉಪಜಾತಿಗಳ ಆಧಾರವು ಅಪ್ರಧಾನವಾದದ್ದು. ಪ್ರಾಚೀನ ಬುಡಕಟ್ಟು ಸಮಾಜದಲ್ಲಿ ಲಾಂಛನಗಳ ಆಧಾರದ ಮೇಲೆ ರಚಿತವಾಗಿದ್ದ ವಿಭಜನೆಗೆ ಸಮಾನವಾದದ್ದು ಹಿಂದು ಸಮಾಜದ ಕುಲ ಮತ್ತು ಗೋತ್ರಗಳ ವಿಂಗಡಣೆ. ಇದರಿಂದ ತಿಳಿಯುವುದೇನೆಂದರೆ ಹಿಂದು ಸಮಾಜವು ಇಂದಿಗೂ ಬುಡಕಟ್ಟುಗಳ ಮಾದರಿಯಲ್ಲೇ ಸಂಘಟಿತವಾಗಿದೆ; ಅದರ ಆಧಾರ ಕುಟುಂಬ ಮತ್ತು ಈ ಕುಟುಂಬವು ಕುಲ ಮತ್ತು ಗೋತ್ರಗಳನ್ನಾಧರಿಸಿ ಅನ್ಯಗೋತ್ರಗಳವರೊಡನೆ ಮದುವೆ ಸಂಬಂಧವೇರ್ಪಡಬೇಕೆಂಬ ನಿಯಮವನ್ನು ಪಾಲಿಸುತ್ತದೆ. ಜಾತಿಗಳು ಹಾಗೂ ಉಪಜಾತಿಗಳು ಸಾಮಾಜಿಕ ಸಂಘಟನೆಗೆ ಸಂಬಂಧಿಸಿದ ಕಲ್ಪನೆಗಳು. ಬುಡಕಟ್ಟು ಮಾದರಿಯ ಸಂಘಟನೆಯ ಮೇಲೆ ಅವನ್ನು ಹೇರಲಾಗಿದೆ.

ಈ ಸಾಮಾಜಿಕ ಸಂಘಟನೆಯು ನಿರೂಪಿಸುವ ಸ್ವಪಂಗಡದೊಳಗಿನ ಮದುವೆಯ ಸಂಬಂಧದ ನಿಯಮವು ಕುಲ ಮತ್ತು ಗೋತ್ರಗಳ ಆಧಾರದ ಮೇಲೆ ನಿಲ್ಲುವ ಬುಡಕಟ್ಟು ಮಾದರಿಯ ಸಂಘಟನೆಯು ವಿಧಿಸುವ ಅನ್ಯಗೋತ್ರ ವಿವಾಹ ಸಂಬಂಧದ ನಿಯಮವನ್ನು ಮೀರಿ ನಿಲ್ಲುವುದಿಲ್ಲ.

ಕುಟುಂಬವು ಮೂಲಭೂತವಾದುದೇ ವಿನಾ ಉಪಜಾತಿಯಲ್ಲವೆಂಬ ಅಂಶವನ್ನು ಗುರುತಿಸುವುದರ ಪ್ರಾಮುಖ್ಯತೆ ಸ್ಪಷ್ಟವಿದೆ. ಇದರಿಂದ ಹಿಂದು ಕುಟುಂಬಗಳಲ್ಲಿ ಪ್ರಚಲಿತವಾಗಿರುವ ಕುಲ ಮತ್ತು ಗೋತ್ರಗಳ ಹೆಸರುಗಳ ಅಧ್ಯಯನಕ್ಕೆ ದಾರಿಯಾಗುತ್ತದೆ. ಭಾರತದ ಜನರ ಜನಾಂಗೀಯ ಸಂರಚನೆಯನ್ನು ನಿರ್ಧರಿಸುವುದಕ್ಕೆ ಇಂತಹ ಅಧ್ಯಯನವು ಅಪಾರವಾದ ಸಹಾಯ ಮಾಡುತ್ತದೆ. ಬೇರೆ ಬೇರೆ ಜಾತಿ ಮತ್ತು ಪಂಗಡಗಳಲ್ಲಿ ಒಂದೇ ಕುಲ ಮತ್ತು ಗೋತ್ರವು ಕಂಡುಬಂದಲ್ಲಿ ಒಂದು ತೀರ್ಮಾನಕ್ಕೆ ಬರಬಹುದು : ಜಾತಿಗಳು ಸಾಮಾಜಿಕವಾಗಿ ಭಿನ್ನವಾಗಿದ್ದರೂ ಜನಾಂಗೀಯವಾಗಿ ಒಂದೇ ಆಗಿವೆ. ಇಂತಹ ಎರಡು ಅಧ್ಯಯನಗಳು ಈಗಾಗಲೇ ನಡೆದಿವೆ : ಒಂದು, ಮಹಾರಾಷ್ಟ್ರದಲ್ಲಿ ರಿಸ್ಲೆಯದು,[೧] ಮತ್ತು ಇನ್ನೊಂದು ಪಂಜಾಬಿನಲ್ಲಿ ರೋಸ್ ಎಂಬುವನದು;[೨] ಈ ಎರಡೂ ಅಧ್ಯಯನಗಳು ಒಂದಂಶವನ್ನು ಸಂಪೂರ್ಣವಾಗಿ ನಿರಾಕರಿಸುತ್ತವೆ. ಅದೇನೆಂದರೆ ಅಸ್ಪೃಶ್ಯರು ಆರ್ಯ ಮತ್ತು ದ್ರಾವಿಡರಿಗಿಂತ ಜನಾಂಗೀಯವಾಗಿ ಬೇರೆಯವರು ಎಂಬ ಸಿದ್ಧಾಂತ. ಮಹಾರಾಷ್ಟ್ರದ ಜನಸಂಖ್ಯೆಯ ಪ್ರಮುಖ ಭಾಗವು ಮರಾಠರದ್ದು. ಮಹಾರರು ಮಹಾರಾಷ್ಟ್ರದ ಅಸ್ಪೃಶ್ಯರು. ಮಾನವಶಾಸ್ತ್ರದ ಅಧ್ಯಯನದಿಂದ ತಿಳಿದುಬಂದಿರುವುದೇನೆಂದರೆ ಇವರಿಬ್ಬರಿಗೂ ಇರುವ **'ಕುಲ'** ಒಂದೇ. ಇವರಿಬ್ಬರ ನಡುವಣ ಸಾಮ್ಯವು ಎಷ್ಟು ಹೆಚ್ಚಿನದೆಂದರೆ ಮಹಾರರಲ್ಲಿ ಇರದ ಯಾವುದಾದರೂ ಕುಲವು ಮರಾಠರಲ್ಲಿ ಕಂಡುಬರುವುದೇ ಅತಿವಿರಳ ಮತ್ತು ಮರಾಠರಲ್ಲಿ ಕಾಣಬರದ ಯಾವುದೇ ಕುಲವೂ ಮಹಾರರಲ್ಲಿ ಕಂಡುಬರುವುದಿಲ್ಲ. ಅಂತೆಯೇ, ಪಂಜಾಬಿನ ಜನಸಂಖ್ಯೆಯ ಒಂದು ಪ್ರಮುಖ ಭಾಗ ಜಾಠರದು. ಅಲ್ಲಿ ಮಜಬಿ ಸಿಕ್ಖರು ಅಸ್ಪೃಶ್ಯರು. ಜಾತಿಯಲ್ಲಿ ಅವರಲ್ಲಿ ಬಹುಮಂದಿ ಚಮಾರರು, ಆದರೆ ಮಾನವಶಾಸ್ತ್ರೀಯ ಅಧ್ಯಯನದಿಂದ ತಿಳಿದು ಬಂದಿರುವುದೇನೆಂದರೆ ಅವರಿಬ್ಬರೂ (ಅಂದರೆ, ಜಾಠರು ಮತ್ತು ಚಮಾರರು) ಒಂದೇ ಗೋತ್ರವನ್ನುಳ್ಳವರು. ವಸ್ತುಸ್ಥಿತಿ ಹೀಗಿರುವಾಗ ಅಸ್ಪೃಶ್ಯರು ಬೇರೊಂದು ಜನಾಂಗಕ್ಕೆ ಸೇರಿದವರೆಂದು ವಾದ ಹೂಡಲು ಹೇಗೆ ತಾನೆ ಸಾಧ್ಯ? ಈಗಾಗಲೆ ನಾನು ತಿಳಿಸಿರುವಂತೆ ಲಾಂಛನ, ಕುಲ ಮತ್ತು ಗೋತ್ರಗಳಿಗೆ ಏನಾದರೂ ಸೂಚಿತಾರ್ಥವಿದ್ದರೆ ಅದು ಹೀಗಿದೆ; ಯಾರಿಗೆ ಒಂದೇ ಲಾಂಛನವಿದೆಯೋ ಅವರು ಕುಲಸಂಬಂಧಿಗಳಾಗಿದ್ದಿರಬೇಕು; ಮತ್ತು ಕುಲಸಂಬಂಧಿಗಳಾಗಿದ್ದವರು ಬೇರೆ ಬೇರೆ ಜನಾಂಗಗಳಿಗೆ ಸೇರಿರಲು ಸಾಧ್ಯವಿಲ್ಲ.

ಅಸ್ಪೃಶ್ಯತೆಯ ಉಗಮದ ಬಗೆಗಿನ ಜನಾಂಗೀಯ ಸಿದ್ಧಾಂತವನ್ನು ಈ ಕಾರಣಗಳಿಂದ ಕೈಬಿಡಬೇಕಾಗಿದೆ.

♦

---

೧. *Census of India,* 1901; Ethnographical Appendices.

೨. *Glossary of Tribes and Castes in the Punjab*: Rose, Vol. III, p 76.

# ಅಧ್ಯಾಯ ೮

# ಅಸ್ಪೃಶ್ಯತೆಯ ಉಗಮಕ್ಕೆ ಕಸುಬಿನ ಆಧಾರ

ಅಸ್ಪೃಶ್ಯತೆಯ ಉಗಮಕ್ಕೆ ಕಸುಬೇ ಆಧಾರವಾಗಿದೆಯೆಂಬ ಸಿದ್ಧಾಂತದತ್ತ ನಾವೀಗ ಗಮನ ಹರಿಸಬಹುದು. ಶ್ರೀಯುತ ರೈಸ್ ಅವರ ಪ್ರಕಾರ ಅಸ್ಪೃಶ್ಯತೆಯ ಉಗಮವನ್ನು ಅಸ್ಪೃಶ್ಯರ ಕಸುಬುಗಳ ಕೊಳಕು ಹಾಗೂ ಕಶ್ಮಲತೆಗೆ ಸಂಬಂಧಿಸಿದಂತೆ ಹುಡುಕಬೇಕು. ಈ ಸಿದ್ಧಾಂತವು ಸಾಧಾರಯುತವಾದದ್ದೆಂದು ತೋರಬಹುದು. ಆದರೆ ಅಸ್ಪೃಶ್ಯತೆಯ ಉಗಮಕ್ಕೆ ಇದು ಸರಿಯಾದ ವಿವರಣೆಯೆಂದು ಅಂಗೀಕರಿಸಲು ಕೆಲವು ತೊಡಕುಗಳಿವೆ. ಅಸ್ಪೃಶ್ಯರು ಅನುಸರಿಸುವ ಕೊಳಕು ಮತ್ತು ಕಶ್ಮಲ ಕಸುಬುಗಳು ಪ್ರತಿಯೊಂದು ಮಾನವ ಸಮಾಜದಲ್ಲೂ ಇವೆ. ಪ್ರತಿಯೊಂದು ಮಾನವ ಸಮಾಜದಲ್ಲೂ ಈ ಕಸುಬುಗಳನ್ನು ಮಾಡುವವರು ಇರುತ್ತಾರೆ. ಹಾಗಿದ್ದಾಗ ಪ್ರಪಂಚದ ಬೇರೆಡೆಗಳಲ್ಲಿ ಅಂತಹ ಜನರನ್ನು ಅಸ್ಪೃಶ್ಯರನ್ನಾಗಿ ಏಕೆ ಕಾಣಲಿಲ್ಲ? ಎರಡನೆಯ ಪ್ರಶ್ನೆ ಇದು : ಇಂತಹ ಕಸುಬುಗಳ ಬಗ್ಗೆ ಹಾಗೂ ಅವನ್ನು ಮಾಡುತ್ತಿದ್ದವರ ಬಗ್ಗೆ ದ್ರಾವಿಡರಿಗೇನಾದರೂ ಅಸಹ್ಯವೆನಿಸುತ್ತಿತ್ತೆ? ಇದರ ಬಗ್ಗೆ ನಮಗೆ ಯಾವ ಪುರಾವೆಯೂ ದೊರೆತಿಲ್ಲ. ಆದರೆ ಆರ್ಯರನ್ನು ಕುರಿತಂತೆ ಈ ವಿಷಯದಲ್ಲಿ ಪುರಾವೆ ಇದೆ. ಅದು ಏನನ್ನು ತೋರಿಸುತ್ತದೆಂದರೆ ಆರ್ಯರು ಬೇರಾವುದೇ ಜನರಂತೆಯೇ ಇದ್ದರು ಮತ್ತು ಬೇರೆ ಪ್ರಾಚೀನ ಜನರು ಯಾವ ಶುದ್ಧಾಶುದ್ಧ ಕಲ್ಪನೆಗಳನ್ನಿರಿಸಿಕೊಂಡಿದ್ದರೋ ಅದರಿಂದ ಮೂಲಭೂತವಾಗಿ ಭಿನ್ನವಲ್ಲದ ಕಲ್ಪನೆಗಳನ್ನೇ ಅವರೂ ಹೊಂದಿದ್ದರು. ಆರ್ಯರು ಕಶ್ಮಲಯುತವಾದ ಕಸುಬುಗಳಲ್ಲಿ ತೊಡಗಲು ಹಿಂಜರಿಯುತ್ತಿರಲಿಲ್ಲವೆಂಬುದನ್ನು ಗ್ರಹಿಸಲು ನಾರದ ಸ್ಮೃತಿಯ ಈ ಕೆಳಗಿನ ಭಾಗಗಳನ್ನು ಪರಾಮರ್ಶಿಸಿದರೆ ಸಾಕು. ಅಲ್ಲಿಯ ಐದನೆಯ ಅಧ್ಯಾಯದಲ್ಲಿ ನಾರದನು ಸೇವೆಯ ಕರಾರನ್ನು ಮುರಿಯುವುದನ್ನು ಕುರಿತ ವಿಷಯ ಚರ್ಚಿಸಿದ್ದಾನೆ. ಈ ಅಧ್ಯಾಯದಲ್ಲಿ ಬರುವ ಕೆಲವು ಶ್ಲೋಕಗಳ ಅರ್ಥ ಹೀಗಿದೆ :

೧. ಸೇವೆ ಮಾಡುವವರನ್ನು ಧರ್ಮಶಾಸ್ತ್ರರೀತ್ಯಾ ಐದು ಬಗೆಯಾಗಿ ಋಷಿಗಳು ವಿಭಜಿಸಿದ್ದಾರೆ. ಇವುಗಳಲ್ಲಿ ನಾಲ್ಕು ಬಗೆಯ ಶ್ರಮಿಕರಿದ್ದಾರೆ ; ದಾಸರು ಐದನೆಯ ಪಂಗಡಕ್ಕೆ ಸೇರುತ್ತಾರೆ. ಅವರಲ್ಲಿ ಹದಿನೈದು ತರದ ವಿಂಗಡಣೆ ಇರುತ್ತದೆ.

೨. ವಿದ್ಯಾರ್ಥಿ, ಕಸುಬು ಕಲಿಯುವವನು, ಕೂಲಿಗಾಗಿ ಕೆಲಸ ಮಾಡುವವನು ಮತ್ತು ಅಧಿಕಾರಿ– ಇವರು ನಾಲ್ಕು ತೆರವಾದ ಶ್ರಮಿಕರು.

೩. ಋಷಿಗಳ ಪ್ರತಿಪಾದನೆಯಂತೆ ಈ ನಾಲ್ಕೂ ವಿಭಾಗಗಳವರ ಅವಲಂಬನೆಯು ಸಮಾನವಾದದ್ದು; ಆದರೆ ಅವರೆಲ್ಲರ ಪ್ರತ್ಯೇಕ ಸ್ಥಾನ ಮತ್ತು ಆದಾಯವು ಅವರವರ ಜಾತಿ ಮತ್ತು ಕಸುಬುಗಳಿಂದ ನಿರ್ಧಾರಿತವಾಗುತ್ತದೆ.

೪. ಕಸುಬುಗಳು ಎರಡ ವಿಧವಾಗಿರುತ್ತವೆಂದು ತಿಳಿಯಬೇಕು : ಶುದ್ಧವಾದ ಕೆಲಸ ಮತ್ತು ಅಶುದ್ಧವಾದ ಕೆಲಸ. *ಅಶುದ್ಧವಾದ ಕೆಲಸಗಳು ಯಾವುವೆಂದರೆ ದಾಸರು ಮಾಡುವ ಕೆಲಸಗಳು. ಇತರ ಶ್ರಮಿಕರು ಮಾಡುವ ಕೆಲಸವು ಶುದ್ಧವಾದ ಕೆಲಸ.*

೫. *ಊರ ಬಾಗಿಲನ್ನು ಗುಡಿಸುವುದು, ಪಾಯಿಖಾನೆಯನ್ನು ಸ್ವಚ್ಛ ಮಾಡುವುದು, ರಸ್ತೆಯನ್ನು ಹಾಗೂ ಕಸ ತುಂಬಿರುವ ಜಾಗವನ್ನು ಶುದ್ಧಿಗೊಳಿಸುವುದು, ಶರೀರದ ಗುಪ್ತಾಂಗಗಳನ್ನು ಉಜ್ಜಿ ತೊಳೆಯುವುದು; ಎಂಜಲು, ಮಲ ಮತ್ತು ಮೂತ್ರಗಳನ್ನು ತೆಗೆಯುವುದು ;*

೬. *ಮತ್ತು ಕಡೆಯದಾಗಿ, ಯಜಮಾನನಿಗೆ ಬೇಕೆನಿಸಿದಾಗ ಅವನ ಅಂಗಾಂಗಗಳನ್ನು ತಿಕ್ಕುವುದು; ಇವನ್ನು ಅಶುದ್ಧ ಕೆಲಸಗಳೆಂದು ಪರಿಗಣಿಸಬೇಕು. ಇವುಗಳನ್ನುಳಿದು ಬೇರೆಯ ಕೆಲಸಗಳನ್ನು ಶುದ್ಧವೆಂದು ಪರಿಗಣಿಸಬೇಕು.* ಶುದ್ಧ ಕೆಲಸಗಳನ್ನು ಮಾಡುವ ಸೇವಕರ ನಾಲ್ಕು ಬಗೆಗಳನ್ನು ಮೇಲೆ ಹೇಳಿದಂತೆ ತಿಳಿಸಲಾಗಿದೆ. ಅಶುದ್ಧ ಕೆಲಸಗಳನ್ನು ಮಾಡುವ ಇತರರೆಲ್ಲಾ ದಾಸರು. ಅವರು ಹದಿನೈದು ವಿಧದವರಾಗಿರುತ್ತಾರೆ.[೧]

ಅಶುದ್ಧ ಕೆಲಸಗಳನ್ನು ದಾಸರು ಮಾಡುತ್ತಿದ್ದರೆಂದು ಇದರಿಂದ ಸ್ಪಷ್ಟವಿದೆ ಮತ್ತು ಜಾಡಮಾಲಿಯ ಕೆಲಸವೂ ಇದರಲ್ಲಿ ಸೇರಿತ್ತು. ಈಗ ಉದ್ಭವಿಸುವ ಪ್ರಶ್ನೆ ಇದು : ಈ ದಾಸರು ಯಾರು? ಅವರು ಆರ್ಯ ಜನಾಂಗದವರೆ ಅಥವಾ ಅನಾರ್ಯರೆ? ಆರ್ಯರಲ್ಲಿ ದಾಸ್ಯ ಪದ್ಧತಿ ಜಾರಿಯಲ್ಲಿತ್ತು ಎಂಬುದರಲ್ಲಿ ಸಂದೇಹವಿಲ್ಲ. ಒಬ್ಬ ಆರ್ಯನು ಇನ್ನೊಬ್ಬ ಆರ್ಯನಿಗೆ ದಾಸನಾಗಿರಬಹುದಿತ್ತು. ಆರ್ಯನೊಬ್ಬನು ಯಾವ ವರ್ಣಕ್ಕೆ ಸೇರಿದವನಾಗಿದ್ದರೂ ಅವನು ದಾಸನಾಗಿರಬಹುದಿತ್ತು. ಕ್ಷತ್ರಿಯನೊಬ್ಬ ಕೂಡ ದಾಸನಾಗಿರಬಹುದಿತ್ತು. ಅಂತೆಯೇ ವೈಶ್ಯನು ಕೂಡ. ದಾಸ್ಯದ ಕಾನೂನಿನಿಂದ ಬ್ರಾಹ್ಮಣನು ಕೂಡ ಹೊರಗುಳಿಯುವಂತಿರಲಿಲ್ಲ. ಚಾತುರ್ವರ್ಣ್ಯ ಪದ್ಧತಿಯು ಸಾರ್ವತ್ರಿಕವಾಗಿ ನಾಡಿನ ಕಾನೂನು ವ್ಯವಸ್ಥೆಯಾಗಿ ಸ್ವೀಕರಿಸಲ್ಪಟ್ಟ ನಂತರವೇ ದಾಸ್ಯ ಪದ್ಧತಿಯಲ್ಲಿ ಮಾರ್ಪಾಟು ಮಾಡಲ್ಪಟ್ಟಿದ್ದು. ನಾರದಸ್ಮೃತಿಯ ಈ ಕೆಳಗಿನ ಉಲ್ಲೇಖದಿಂದ ಇಂತಹ ಮಾರ್ಪಾಟು ಏನಾಗಿತ್ತೆಂದು ತಿಳಿದುಬರುತ್ತದೆ :

"೩೯, ತನ್ನ ವರ್ಣಕ್ಕೆ ವಿಶಿಷ್ಟವಾದ ಕರ್ತವ್ಯಗಳನ್ನು ಉಲ್ಲಂಘಿಸಿದವನನ್ನು ಹೊರತುಪಡಿಸಿ ನಾಲ್ಕು ವರ್ಣದವರನ್ನೂ ವರ್ಣಕ್ರಮವನ್ನು ತಲೆಕೆಳಗು ಮಾಡಿ ದಾಸ್ಯಕ್ಕೆ ಗುರಿಮಾಡುವುದು ಧರ್ಮಸಮ್ಮತವಲ್ಲ ; (ಹಾಗೆ ಉಲ್ಲಂಘನೆ ಮಾಡಿ) ದಾಸ್ಯಕ್ಕೊಳಗಾದವನ ಸ್ಥಿತಿಯು ಒಬ್ಬ ಹೆಂಡತಿಯ ಸ್ಥಿತಿಗೆ ಸಮಾನವಾಗಿರುತ್ತದೆ".

ಯಾಜ್ಞವಲ್ಕ್ಯನು ಸಹ ಹೇಳುವುದಿದು :

*"೧೮೩(೨) ವರ್ಣಗಳ ಅವರೋಹಣ ಕ್ರಮದಲ್ಲಿ ದಾಸ್ಯವು ವಿಧಿಸಲ್ಪಟ್ಟಿದೆಯೇ ವಿನಾ ಆರೋಹಣ ಕ್ರಮದಲ್ಲಿ ಅಲ್ಲ."*

---

೧. ಹದಿನೈದು ವಿಧದ ದಾಸರನ್ನು ನಾರದಸ್ಮೃತಿಯು ಕೆಳಗಿನ ಶ್ಲೋಕಗಳಲ್ಲಿ ನಮೂದಿಸಿದೆ.

*೫.೨೬* : ಯಜಮಾನನ ಮನೆಯಲ್ಲಿ ಹುಟ್ಟಿದವನು, ಕೊಳ್ಳಲ್ಪಟ್ಟವನು, ದಾನವಾಗಿ ಪಡೆಯಲ್ಪಟ್ಟವನು, ಪಿತ್ರಾರ್ಜಿತವಾಗಿ ಪಡೆಯಲ್ಪಟ್ಟವನು, ವ್ಯಾಪಕವಾದ ಕ್ಷಾಮ ಕಾಲದಲ್ಲಿ ಸಲಹಲ್ಪಟ್ಟವನು, ನಿಜವಾದ ಮಾಲೀಕನಿಂದ ಒತ್ತೆ ಇಡಲ್ಪಟ್ಟವನು;

*೫.೨೭* : ಭಾರಿ ಸಾಲದಿಂದ ಮುಕ್ತನಾದವನು, ಯುದ್ಧದಲ್ಲಿ ಸೆರೆಯಾದವನು, ಪಣದಲ್ಲಿ ಗೆಲ್ಲಲ್ಪಟ್ಟವನು, 'ನಾನು ನಿನ್ನವನು' ಎಂದು ಹೇಳಿ ಸ್ವಯಂ ಮುಂದೆ ಬಂದವನು, ಸನ್ಯಾಸವನ್ನು ತೊರೆದು ಬಂದವನು, ನಿಗದಿತ ಕಾಲಕ್ಕಾಗಿ ದಾಸ್ಯಕ್ಕೊಳಗಾದವನು;

*೫.೨೮* : ತನ್ನ ಹೊಟ್ಟೆಹೊರೆಯುವುದಕ್ಕಾಗಿ ದಾಸನಾಗಿರುವವನು, ಒಬ್ಬ ದಾಸಿಯೊಡನೆ ಸಂಬಂಧ ಹೊಂದಿರುವುದರಿಂದ ತಾನೂ ದಾಸನಾಗಿರುವವನು, ಮತ್ತು ತನ್ನನ್ನೇ ಮಾರಿಕೊಂಡಿರುವವನು – ಧರ್ಮಶಾಸ್ತ್ರ ರೀತ್ಯಾ ದಾಸರಲ್ಲಿ ಹದಿನೈದು ಬಗೆಗಳವರು ಇವರು.

ಯಾಜ್ಞವಲ್ಕ್ಯ ಸ್ಮೃತಿಯ ಭಾಷ್ಯವಾದ ತನ್ನ 'ಮಿತಾಕ್ಷರ'ದಲ್ಲಿ ವಿಜ್ಞಾನೇಶ್ವರನು ಇದನ್ನು ಕೆಳಗಿನ ಮಾತುಗಳಲ್ಲಿ ಹೀಗೆ ವಿವರಿಸಿದ್ದಾನೆ :

> *"ಬ್ರಾಹ್ಮಣ ಮತ್ತಿತರ ವರ್ಣಗಳಿಗೆ ಸೇರಿದವರಲ್ಲಿ ದಾಸನ ಸ್ಥಿತಿಯು ಅನುಲೋಮ ಪ್ರಕಾರದಲ್ಲಿ ಅಸ್ತಿತ್ವದಲ್ಲಿರಬಹುದು. ಆದ್ದರಿಂದ ಬ್ರಾಹ್ಮಣನೊಬ್ಬನಿಗೆ ಕ್ಷತ್ರಿಯ ಮತ್ತು ಇತರರು ದಾಸರಾಗಬಹುದು; ಕ್ಷತ್ರಿಯನೊಬ್ಬನಿಗೆ ವೈಶ್ಯ ಮತ್ತು ಶೂದ್ರರು ದಾಸರಾಗಬಹುದು. ವೈಶ್ಯನೊಬ್ಬನಿಗೆ ಶೂದ್ರನು ದಾಸನಾಗಬಹುದು. ಅಂದರೆ, ದಾಸ್ಯವು ಅವರೋಹಣ ಕ್ರಮದಲ್ಲಿ ಜಾರಿಗೆ ಬರಬಹುದು."*

ಈ ಬದಲಾವಣೆಯು ದಾಸ್ಯವನ್ನು ಕೇವಲ ಪುನಸ್ಸಂಘಟನೆಗೊಳಿಸಿತು, ಅಷ್ಟೆ; ಚಾತುರ್ವರ್ಣ್ಯದ ತಿರುಳಾದ ಶ್ರೇಣೀಕೃತ ಅಸಮಾನತೆಗೆ ತತ್ವಗಳ ಆಧಾರವೊಂದನ್ನು ಈ ರೀತಿ ನೀಡಲಾಯಿತು. ಇನ್ನೂ ಸ್ಪಷ್ಟವಾಗಿ ನಮೂದಿಸುವುದಾದರೆ ಒಬ್ಬ ಬ್ರಾಹ್ಮಣನು ಹೊಸ ನಿಯಮಾವಳಿಯ ಪ್ರಕಾರ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರಲ್ಲಿ ಯಾರನ್ನಾದರೂ ದಾಸರನ್ನಾಗಿ ಹೊಂದಬಹುದಿತ್ತು. ಕ್ಷತ್ರಿಯನು ಕ್ಷತ್ರಿಯ, ವೈಶ್ಯ ಮತ್ತು ಶೂದ್ರರನ್ನು ದಾಸರನ್ನಾಗಿ ಹೊಂದಬಹುದಿತ್ತು. ವೈಶ್ಯನು ವೈಶ್ಯ ಮತ್ತು ಶೂದ್ರರನ್ನು ದಾಸರನ್ನಾಗಿ ಹೊಂದಬಹುದಿತ್ತು. ಶೂದ್ರನಿಗೆ ಶೂದ್ರ ಮಾತ್ರವೇ ದಾಸನಾಗಿರಬಹುದಿತ್ತು. ಇಷ್ಟೆಲ್ಲ ವಿಧಿಗಳೊಂದಿಗೆ ದಾಸ್ಯದ ನಿಯಮಾವಳಿಯು ಉಳಿದುಬಂತು ಮತ್ತು ಆರ್ಯರ ಪೈಕಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಅಥವಾ ಶೂದ್ರರು ಯಾರೇ ಆಗಿರಲಿ ದಾಸರಾದರೆ ಅವರು ಈ ನಿಯಮಗಳಿಗೆ ಬದ್ಧರಾಗಿರಬೇಕಾಯಿತು.

ದಾಸರಿಗೆ ವಿಧಿಸಲಾಗಿರುವ ಕರ್ತವ್ಯಗಳ ದೃಷ್ಟಿಯಿಂದ ನಿಯಮಗಳಲ್ಲಿನ ಈ ಬದಲಾವಣೆಯು ಏನನ್ನೂ ವ್ಯತ್ಯಾಸ ಮಾಡಲಿಲ್ಲ. ಬದಲಾವಣೆಯ ನಂತರವೂ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರು ದಾಸರಾಗಿದ್ದ ಪಕ್ಷದಲ್ಲಿ ಜಾಡಮಾಲಿಯ ಕೆಲಸ ಮಾಡಬೇಕಾಗಿರುತ್ತಿತ್ತು. ಆದರೆ ಬ್ರಾಹ್ಮಣ ದಾಸನು ಕ್ಷತ್ರಿಯ, ವೈಶ್ಯ ಅಥವಾ ಶೂದ್ರರ ಮನೆಗಳಲ್ಲಿ ಜಾಡಮಾಲಿಯಾಗಿರುತ್ತಿರಲಿಲ್ಲ. ಅವನು ಬ್ರಾಹ್ಮಣನೊಬ್ಬನ ಮನೆಯಲ್ಲಿ ಮಾತ್ರವೇ ಆ ಕೆಲಸ ಮಾಡುತ್ತಿದ್ದನು. ಅಂತೆಯೇ ಕ್ಷತ್ರಿಯ ದಾಸನೊಬ್ಬನು ಬ್ರಾಹ್ಮಣ ಅಥವಾ ಕ್ಷತ್ರಿಯರ ಮನೆಗಳಲ್ಲಿ ಜಾಡಮಾಲಿಯಾಗಿರುತ್ತಿದ್ದ. ಅವನು ವೈಶ್ಯ ಮತ್ತು ಶೂದ್ರರ ಮನೆಗಳಲ್ಲಿ ಆ ಕೆಲಸಕ್ಕೆ ತೊಡಗುತ್ತಿರಲಿಲ್ಲ, ಅಷ್ಟೆ. ವೈಶ್ಯ ದಾಸನೊಬ್ಬನು ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರ ಮನೆಗಳಲ್ಲಿ ಜಾಡಮಾಲಿಯಾಗಿ ನಿಯುಕ್ತನಾಗಬಹುದಿತ್ತು. ಶೂದ್ರ ಮನೆಯಲ್ಲಿ ಮಾತ್ರವೇ ಅವನು ಈ ಕೆಲಸಕ್ಕೆ ತೊಡಗದೆ ಇರುತ್ತಿದ್ದುದು. ಇದರಿಂದ ಸುಲಭ ಸ್ಪಷ್ಟವಾಗುವುದಿದು; ಅವರು ಆರ್ಯರ ಪಂಗಡಕ್ಕೆ ಸೇರಿದ್ದಾಗ್ಯೂ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರು ಅಶುದ್ಧದಲ್ಲಿ ಅತಿ ಅಶುದ್ಧ ಕಸುಬಾದ ಜಾಡಮಾಲಿಯ ಕೆಲಸದಲ್ಲಿ ತೊಡಗುತ್ತಿದ್ದರು. ಆರ್ಯನೊಬ್ಬನಿಗೆ ಈ ಕೆಲಸವು ಹೇಸಿಗೆಯಲ್ಲದಿದ್ದಲ್ಲಿ ಅಶುದ್ಧ ಕೆಲಸಗಳಲ್ಲಿ ತೊಡಗುತ್ತಿದ್ದುದು ಅಸ್ಪೃಶ್ಯತೆಗೆ ಕಾರಣವಾಯಿತೆಂದು ಹೇಗೆ ತಾನೆ ಹೇಳಲು ಸಾಧ್ಯ? ಆದ್ದರಿಂದ ಅಸ್ಪೃಶ್ಯತೆಗೆ ಅಶುದ್ಧ ಕಸುಬು ಕಾರಣವೆಂಬ ಸಿದ್ಧಾಂತದಲ್ಲಿ ಹುರುಳಿಲ್ಲ.

♦

## ಭಾಗ – IV

# ಅಸ್ಪೃಶ್ಯತೆಯ ಉಗಮದ ಹೊಸ ಸಿದ್ಧಾಂತಗಳು

ಅಧ್ಯಾಯ ೯ : ಅಸ್ಪೃಶ್ಯತೆಗೆ ಮೂಲ ಕಾರಣರೆಂದು ಬೌದ್ಧರ ಬಗ್ಗೆ ಅನಾದರ

ಅಧ್ಯಾಯ ೧೦ : ಅಸ್ಪೃಶ್ಯತೆಗೆ ಮೂಲ ಕಾರಣವಾಗಿ ಗೋಮಾಂಸ ಭಕ್ಷಣೆ

# ಅಧ್ಯಾಯ ೯

# ಅಸ್ಪೃಶ್ಯತೆಗೆ ಮೂಲಕಾರಣರೆಂದು ಬೌದ್ಧರ ಬಗ್ಗೆ ಅನಾದರ

## I

೧೮೭೦ರಿಂದ ಈಚೆಗೆ ಪ್ರತಿ ಹತ್ತು ವರ್ಷಗಳಿಗೊಮ್ಮೆ ಜನಗಣತಿಯ ಆಯುಕ್ತರು ಹೊರತಂದಿರುವ ಜನಗಣತಿಯ ವರದಿಗಳು ಭಾರತದ ಜನರ ಸಾಮಾಜಿಕ ಮತ್ತು ಧಾರ್ಮಿಕ ಜೀವನದ ಬಗ್ಗೆ ಬೇರೆಲ್ಲೂ ಲಭ್ಯವಾಗಿಲ್ಲದಂತಹ ಅನೇಕ ಮಾಹಿತಿಗಳಿಂದ ಸಂಪದ್ಭರಿತವಾಗಿದೆ. ೧೯೧೦ಕ್ಕೆ ಮುಂಚಿನ ಜನಗಣತಿಗಳಲ್ಲಿ ಜನಗಣತಿಯ ಆಯುಕ್ತರು ತಮ್ಮ ವರದಿಗಳಲ್ಲಿ ಒಂದು ಕಾಲಂ ಅನ್ನು ಅಳವಡಿಸಿಕೊಳ್ಳುತ್ತಿದ್ದರು. ಅದು "ಧಾರ್ಮಿಕ ಪಂಗಡಗಳಾಗಿ ಜನಸಂಖ್ಯೆ" ಎಂಬುದು. ಇದರಡಿಯಲ್ಲಿ (೧) ಮುಸಲ್ಮಾನರು, (೨) ಹಿಂದುಗಳು, (೩) ಕ್ರಿಶ್ಚಿಯನ್ನರು, ಇತ್ಯಾದಿಯಾಗಿ ಜನಸಂಖ್ಯೆಯನ್ನು ತೋರಿಸಲಾಗುತ್ತಿತ್ತು. ಮೊಟ್ಟ ಮೊದಲ ಬಾರಿಗೆ ಅದು ಹಿಂದುಗಳನ್ನು ಮೂರು ಪ್ರತ್ಯೇಕವಾದ ಗುಂಪುಗಳಾಗಿ ವಿಂಗಡಿಸಿ ತೋರಿಸಿತ್ತು. (೧) ಹಿಂದುಗಳು, (೨) ಸರ್ವಚೇತನವಾದಿಗಳು ಮತ್ತು ಬುಡಕಟ್ಟು ಜನಾಂಗಗಳವರು, ಹಾಗೂ (೩) ಹಿಂದುಳಿದ ವರ್ಗಗಳವರು ಅಥವಾ ಅಸ್ಪೃಶ್ಯರು. ಈ ಹೊಸ ವಿಂಗಡಣೆಯನ್ನು ಆಗಿನಿಂದಲೂ ಮುಂದುವರೆಸುತ್ತಾ ಬರಲಾಗಿದೆ.

## II

ಆ ಹಿಂದಿನ ಜನಗಣತಿ ಆಯುಕ್ತರು ಹಳೆಯ ಪದ್ಧತಿಯನ್ನು ಕೈಬಿಟ್ಟದ್ದರಿಂದ ಮೂರು ಪ್ರಶ್ನೆಗಳು ಉದ್ಭವಿಸುತ್ತವೆ. ಮೊದಲನೆಯದಾಗಿ ೧೯೧೦ರ ಜನಗಣತಿಯ ಆಯುಕ್ತರು ಈ ಹೊಸ ವಿಂಗಡಣೆಯನ್ನು ಏಕೆ ಜಾರಿಗೆ ತಂದರೆಂಬ ಪ್ರಶ್ನೆ ಏಳುತ್ತದೆ. ಈ ರೀತಿಯ ವಿಂಗಡಣೆಗೆ ಅನುಸರಿಸಲಾದ ಮಾನದಂಡಗಳಾವುವು ಎಂಬುದು ಎರಡನೆಯ ಪ್ರಶ್ನೆ. ಮೂರನೆಯ ಪ್ರಶ್ನೆ ಇದು : ಹಿಂದುಗಳನ್ನು ಮೇಲೆ ಹೇಳಿದ ಮೂರು ಪ್ರತ್ಯೇಕ ವಿಧದವರನ್ನಾಗಿ ವಿಂಗಡಿಸಲು ಆಧಾರವಾದ ಕೆಲವು ಆಚರಣೆಗಳು ಬೆಳೆದು ಬರಲು ಕಾರಣಗಳೇನು?

ಮೊದಲನೆಯ ಪ್ರಶ್ನೆಗೆ ಉತ್ತರವು ೧೯೦೯ರಲ್ಲಿ ಆಗಾಖಾನ್ ಮಹಾರಾಜರ ನೇತೃತ್ವದಲ್ಲಿ ಅಂದಿನ ವೈಸ್‌ರಾಯ್ ಲಾರ್ಡ್ ಮಿಂಟೋಗೆ ಮುಸಲ್ಮಾನರು ನೀಡಿದ್ದ ಬಿನ್ನವತ್ತಳೆಯಲ್ಲಿ ಸಿಗುತ್ತದೆ. ಶಾಸನಸಭೆ, ಕಾರ್ಯಾಂಗ ಮತ್ತು ಸಾರ್ವಜನಿಕ ಸೇವೆಗಳಲ್ಲಿ ಪ್ರತ್ಯೇಕವಾದ ಹಾಗೂ ಸೂಕ್ತವಾದ ಪ್ರಾತಿನಿಧ್ಯವನ್ನು ಮುಸಲ್ಮಾನರಿಗೆ ನೀಡಬೇಕೆಂದು ಆ ಬಿನ್ನವತ್ತಳೆಯಲ್ಲಿ ಕೇಳಲಾಗಿತ್ತು. ಅಲ್ಲಿ ಬರುವ ಒಂದು ಪ್ರಸ್ತಾಪ ಭಾಗಶಃ ಹೀಗಿದೆ:[೧]

"೧೯೦೧ರ ಜನಗಣತಿಯ ಪ್ರಕಾರ ಭಾರತದಲ್ಲಿ ಅರುವತ್ತೆರಡು ದಶಲಕ್ಷಗಳಿಗಿಂತಲೂ ಹೆಚ್ಚಿನ ಮುಸಲ್ಮಾನರಿದ್ದಾರೆ. ಅಂದರೆ, ಬ್ರಿಟಿಷ್ ಚಕ್ರವರ್ತಿಯ ಆಳ್ವಿಕೆಗೆ ಒಳಗಾದ ಭಾರತದ ಪ್ರದೇಶಗಳಲ್ಲಿ ವಾಸವಾಗಿರುವ ಒಟ್ಟು ಜನಸಂಖ್ಯೆಯ ಐದನೆಯ ಒಂದರಿಂದ ನಾಲ್ಕನೆಯ ಒಂದು ಭಾಗದಷ್ಟು ಜನ ಮುಸಲ್ಮಾನರು. *ಜನಸಂಖ್ಯೆಯ ಅನಾಗರಿಕ ಪಂಗಡವೆಂದು ಬೇರೆಯಾಗಿ ಗಣತಿ ಮಾಡಲಾಗಿರುವ ಸರ್ವಚೇತನವಾದಿಗಳು ಹಾಗೂ ಇನ್ನಿತರ ಅಲ್ಪಸಂಖ್ಯಾತ ಧರ್ಮದವರನ್ನು ಮತ್ತು ಸಾಮಾನ್ಯವಾಗಿ*

೧. ಬಿನ್ನವತ್ತಳೆಯ ಪೂರ್ಣಪಾಠಕ್ಕೆ ನನ್ನ ಇನ್ನೊಂದು ಗ್ರಂಥವಾದ 'ಪಾಕಿಸ್ತಾನ' ಎಂಬಲ್ಲಿ ಪುಟ ೪೩೧ ನೋಡಿ.

*ಹಿಂದುಗಳೆಂದು ವಿಂಗಡಿಸಲಾಗಿದೆ. ಆದರೆ ನಿಜವಾಗಿ ನೋಡಿದರೆ ಹಿಂದುಗಳೇ ಅಲ್ಲದ ಬೇರೆ ವರ್ಗಗಳವರನ್ನು ಹಿಂದು ಜನಸಂಖ್ಯೆಯಿಂದ ಕಳೆದರೆ ಬಹುಸಂಖ್ಯಾತ ಹಿಂದುಗಳಿಗೆ ಹೋಲಿಸಿದಾಗ ಮುಸಲ್ಮಾನರ ಪ್ರಮಾಣವು ಇನ್ನೂ ಹೆಚ್ಚಾಗಿರುತ್ತದೆ.*[೧] ಆದ್ದರಿಂದ ನಮ್ಮ ಅಹವಾಲು ಇದು : ಯಾವುದೇ ರೀತಿಯ ಪ್ರಾತಿನಿಧ್ಯ ಪದ್ಧತಿಯನ್ನು ಜಾರಿಗೊಳಿಸಿದಾಗ ಅಥವಾ ವಿಸ್ತರಿಸಿದಾಗ ಪ್ರಭುತ್ವದ ಒಂದು ಪ್ರಮುಖ ಅಂಶವಾಗಿ ಸೂಕ್ತವಾದ ಮನ್ನಣೆಗೆ ಮುಸಲ್ಮಾನರು ನ್ಯಾಯಯುತವಾಗಿಯೇ ಪಾತ್ರರಾಗಬೇಕು. ಅವರ ಒಟ್ಟು ಸಂಖ್ಯೆ ರಷ್ಯವನ್ನು ಬಿಟ್ಟು ಬೇರೆ ಯಾವುದೇ ಉನ್ನತ ಮಟ್ಟದ ಯೂರೋಪ್ ದೇಶವೊಂದರ ಇಡೀ ಜನಸಂಖ್ಯೆಗೆ ಸಮಾನವಾಗಿದೆ.

"ಖಾವಂದರ ಅನುಮತಿ ಬೇಡಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗುವ ಧೈರ್ಯ ತಾಳುತ್ತೇವೆ. ನಮ್ಮ ಒತ್ತಾಯದ ಬೇಡಿಕೆ ಇದು : ನೇರವಾದ ಅಥವಾ ನೇರವಾಗಿಯಲ್ಲದ ಯಾವುದೇ ಪ್ರಾತಿನಿಧಿಕ ಸ್ಥಾನವನ್ನು ಮುಸಲ್ಮಾನ ಪಂಗಡದವರಿಗೆ ನೀಡುವಾಗ ಮತ್ತು ಅವರ ಸ್ಥಾನಮಾನ ಹಾಗೂ ಪ್ರಭಾವಗಳ ಮೇಲೆ ಪರಿಣಾಮ ಬೀರುವಂತಹ ಯಾವುದೇ ಬೇರೆ ಕ್ರಮ ಕೈಗೊಳ್ಳುವಾಗ ಅವರ ಜನಸಂಖ್ಯಾ ಬಾಹುಳ್ಯಕ್ಕೆ ಅನುಗುಣವಾಗಿ ಮಾತ್ರವಲ್ಲ. ಅದು ಅವರ ರಾಜಕೀಯ ಪ್ರಾಮುಖ್ಯತೆಗೂ ಅನುಗುಣವಾಗಿರುವಂತೆ ನೋಡಿಕೊಳ್ಳಬೇಕು. ಚಕ್ರಾಧಿಪತ್ಯದ ರಕ್ಷಣೆಗೆ ಅವರು ನೀಡುತ್ತಿರುವ ಕಾಣಿಕೆಯ ಮೌಲ್ಯಕ್ಕೆ ಕೂಡ ಇದು ಅನುಗುಣವಾಗಿರಬೇಕು. ಈ ಸಂಬಂಧದಲ್ಲಿ ಖಾವಂದರು ದಯಮಾಡಿ ಇನ್ನೊಂದು ವಿಷಯವನ್ನು ಮನಸ್ಸಿನಲ್ಲಿಡುತ್ತಾರೆಂದು ನಾವು ಆಶಿಸುತ್ತೇವೆ. ಈಗ್ಗೆ ನೂರಕ್ಕೆ ಸ್ವಲ್ಪವೇ ಹೆಚ್ಚು ವರ್ಷಗಳ ಹಿಂದೆ ಭಾರತದಲ್ಲಿ ಅವರು ಯಾವ ಸ್ಥಾನದಲ್ಲಿದ್ದರು ಎಂಬುದೇ ಆ ಗಣನೀಯವಾದ ಅಂಶ. ಆ ಸ್ಥಾನದ ಪರಂಪರೆಯ ಅರಿವು ಅವರ ಮನಸ್ಸಿನಿಂದ ಸಹಜವಾಗಿಯೇ ಇನ್ನೂ ಮಾಸದೆ ಉಳಿದಿದೆ."

ಮೇಲಿನ ಉದ್ಧರಣೆಯಲ್ಲಿ ಒತ್ತುಕೊಟ್ಟು ಹೇಳಿರುವ ಭಾಗಕ್ಕೆ ವಿಶೇಷ ಪ್ರಾಮುಖ್ಯತೆ ಇದೆ. ಬಿನ್ನವತ್ತಳೆಯಲ್ಲಿ ಅದನ್ನು ಸೇರಿಸಿದ್ದು ಒಂದು ಸೂಚನೆ ನೀಡುವ ಸಲುವಾಗಿ, ಅದೇನೆಂದರೆ ಮುಸಲ್ಮಾನರ ಜನಸಂಖ್ಯೆಯನ್ನು ಹಿಂದುಗಳ ಜನಸಂಖ್ಯೆಯೊಡನೆ ತುಲನೆ ಮಾಡುವಾಗ ಸರ್ವಚೇತನವಾದಿಗಳನ್ನು, ಬುಡಕಟ್ಟು ಜನಾಂಗದವರನ್ನು ಮತ್ತು ಅಸ್ಪೃಶ್ಯರನ್ನು ಗಣನೆಗೆ ತೆಗೆದುಕೊಳ್ಳಬಾರದು ಎಂಬುದು. ಜನಗಣತಿಯ ಆಯುಕ್ತರು ೧೯೧೧ರಲ್ಲಿ 'ಹಿಂದುಗಳು' ಎಂಬುವರನ್ನು ಈ ಹೊಸ ವಿಧಾನದಲ್ಲಿ ವಿಂಗಡಿಸಲು ಅನುಸರಿಸಿದ ಕ್ರಮಕ್ಕೆ ಕಾರಣ ಮುಸಲ್ಮಾನ ಪಂಗಡದವರು ಹೆಚ್ಚಿನ ಪ್ರಮಾಣದಲ್ಲಿ ತಮಗೆ ಪ್ರತ್ಯೇಕವಾದ ಪ್ರಾತಿನಿಧ್ಯ ನೀಡಬೇಕೆಂದು ಒತ್ತಾಯಿಸಿದ್ದರಲ್ಲಿ ಕಾಣಬರುತ್ತದೆ. ಅದೇನೇ ಇರಲಿ ಈ ಒತ್ತಾಯವನ್ನು ಹಿಂದುಗಳು ಅರ್ಥಮಾಡಿಕೊಂಡಿದ್ದಂತೂ ಈ ರೀತಿಯಲ್ಲಿಯೇ.[೨]

---

೧. ಮೂಲದಲ್ಲಿ ಇದನ್ನು ಒತ್ತುಕೊಟ್ಟು ಹೇಳಿಲ್ಲ.

೨. ಮುಸಲ್ಮಾನ ಪಂಗಡಕ್ಕೆ ಪ್ರತ್ಯೇಕವಾದ ಮತ್ತು ಸೂಕ್ತವಾದ ಪ್ರಾತಿನಿಧ್ಯ ನೀಡಬೇಕೆಂಬ ಕೇಳಿಕೆಯು ೧೯೦೯ರಲ್ಲಿ ಲಾರ್ಡ್ ಮಿಂಟೋಗೆ ಮುಸಲ್ಮಾನ ಪಂಗಡದವರು ನೀಡಿದ ಬಿನ್ನವತ್ತಳೆಯ ನಂತರ ಕೂಡಲೆ ಜಾರಿಗೆ ಬಂತು. ಇದರಲ್ಲಿ ಏನೋ ಅನಿಷ್ಟವಾದ ಕುತಂತ್ರವಿದೆಯೆಂದು ಹಿಂದುಗಳ ಅರಿವಿಗೆ ಬಂದಿತು. ಜನಗಣತಿಯ ಆಯುಕ್ತರು ಹೇಳಿದಂತೆ, "ಪ್ರಾಸಂಗಿಕವಾಗಿ ನೋಡಿದರೆ ಈ ತನಿಖೆಯು ಸ್ವಲ್ಪಮಟ್ಟಿಗೆ ಬಿಸಿಬಿಸಿ ಚರ್ಚೆಗೆ ದಾರಿಮಾಡಿಕೊಟ್ಟಿತು. ಏಕೆಂದರೆ, ದುರದೃಷ್ಟವಶಾತ್ ಇದು ಘಟಿಸಿದ್ದು ಶಾಸನ ಸಭೆಗಳಲ್ಲಿ ಹಿಂದು ಮತ್ತು ಮುಸಲ್ಮಾನರ ಪ್ರಾತಿನಿಧ್ಯದ ಪ್ರಮಾಣದ ಬಗ್ಗೆ ಪರಸ್ಪರ ವಿರೋಧಿ ಕೇಳಿಕೆಗಳ ಚರ್ಚೆ ನಡೆಯುತ್ತಿದ್ದಾಗ. ಹಿಂದುಗಳ ಪಂಗಡದಿಂದ ಕೆಲವು ವರ್ಗಗಳವರನ್ನು ಕೈಬಿಡಲಾಗಬಹುದೆಂದೂ ಮತ್ತು ಅದರಿಂದಾಗಿ ಅವರ ರಾಜಕೀಯ ಪ್ರಾಮುಖ್ಯತೆಗೆ ಪ್ರತಿಕೂಲ ಉಂಟಾಗಬಹುದೆಂದೂ ಹಿಂದುಗಳ ಪೈಕಿ ಕೆಲವರಿಗೆ ಆತಂಕವಿತ್ತು." ಭಾಗ ೧, ಪುಟ ೧೧೬.

ಇದು ಸ್ವಾರಸ್ಯಕರವಾದ ಸಂಗತಿಯೇನೋ ಹೌದು. ಆದರೆ ಇಲ್ಲಿ ವಿಂಗಡಣೆಯ ಪದ್ಧತಿಯಲ್ಲಿ ಜನಗಣತಿಯ ಆಯುಕ್ತರು ಬದಲಾವಣೆಯನ್ನು ಮಾಡಿದ್ದೇಕೆ ಎಂಬ ಮೊದಲನೆಯ ಪ್ರಶ್ನೆಯು ಎರಡನೆಯ ಪ್ರಶ್ನೆಗಿಂತಲೂ ಕಡಿಮೆ ಪ್ರಾಮುಖ್ಯತೆಯನ್ನುಳ್ಳದ್ದು. ಮುಖ್ಯವಾಗಿ ನಾವು ತಿಳಿದುಕೊಳ್ಳಬೇಕಾದದ್ದು ಜನಗಣತಿಯ ಆಯುಕ್ತರು ಯಾವ ಆಧಾರದ ಮೇಲೆ ಹಿಂದುಗಳನ್ನು (೧) ನೂರಕ್ಕೆ ನೂರರಷ್ಟು ಹಿಂದೂಗಳಾಗಿರುವವರು, ಮತ್ತು (೨) ಹಾಗಿಲ್ಲದವರು, ಎಂಬ ಪ್ರತ್ಯೇಕ ವರ್ಗಗಳನ್ನಾಗಿ ವಿಂಗಡಿಸಿದರು ಎಂಬುದು.

ಈ ಬಗೆಯ ವಿಂಗಡಣೆಗೆ ಜನಗಣತಿಯ ಆಯುಕ್ತರು ಇರಿಸಿಕೊಂಡಿದ್ದ ಆಧಾರವು ಅವರು ಹೊರಡಿಸಿದ್ದ ಸುತ್ತೋಲೆಯಲ್ಲಿ ನಮಗೆ ಕಾಣಸಿಗುತ್ತದೆ. ಈ ಎರಡು ವಿಧಗಳಲ್ಲಿ ಹಿಂದುಗಳನ್ನು ವಿಂಗಡಿಸುವ ಸಲುವಾಗಿ ಆ ಸುತ್ತೋಲೆಯ ಕೆಲವು ಪ್ರಾಯೋಗಿಕ ಕಟ್ಟಳೆಗಳನ್ನು ನಮೂದಿಸಿತ್ತು.[೧] ನೂರಕ್ಕೆ ನೂರರಷ್ಟು ಹಿಂದುಗಳಲ್ಲದವರು ಎಂಬ ವಿಭಾಗದಲ್ಲಿ ಸೇರ್ಪಡೆ ಹೊಂದಿದ್ದ ಜಾತಿಗಳು ಮತ್ತು ಬುಡಕಟ್ಟಿನವರು ಯಾರೆಂದರೆ :

(೧) ಬ್ರಾಹ್ಮಣರ ಪರಮಾಧಿಕ್ಯವನ್ನು ನಿರಾಕರಿಸುವವರು,
(೨) ಬ್ರಾಹ್ಮಣ ಅಥವಾ ಬೇರಾವುದೋ ಅಂಗೀಕೃತ ಹಿಂದು ಗುರುವಿನಿಂದ ಮಂತ್ರೋಪದೇಶ ಪಡೆಯದವರು,
(೩) ವೇದಗಳ ಪರಮಾಧಿಕಾರವನ್ನು ನಿರಾಕರಿಸುವವರು,
(೪) ಹಿಂದು ದೇವತೆಗಳನ್ನು ಪೂಜಿಸದವರು,
(೫) ಸದ್ಬ್ರಾಹ್ಮಣರೆನ್ನಲಾದವರನ್ನು ಕುಟುಂಬದ ಪುರೋಹಿತರನ್ನಾಗಿ ಹೊಂದಲಾದವರು,
(೬) ಬ್ರಾಹ್ಮಣ ಪುರೋಹಿತರೇ ಇಲ್ಲದಂತಹವರು,
(೭) ಹಿಂದು ದೇವಸ್ಥಾನಗಳ ಒಳವಿಭಾಗಕ್ಕೆ ಪ್ರವೇಶವನ್ನು ನಿರಾಕರಿಸಲ್ಪಟ್ಟವರು,
(೮) (ಅ) ನೇರ ಸ್ಪರ್ಶದಿಂದ, ಅಥವಾ (ಆ) ಸೂಚಿತವಾದಷ್ಟು ಸನಿಹಕ್ಕೆ ಬರುವುದರಿಂದ ಮೈಲಿಗೆಯುಂಟುಮಾಡುವವರು.
(೯) ತಮ್ಮಲ್ಲಿ ಮರಣ ಹೊಂದಿದವರನ್ನು ಹೂಳುವವರು; ಮತ್ತು
(೧೦) ಗೋಮಾಂಸ ತಿನ್ನುವವರು ಹಾಗೂ ಗೋವನ್ನು ಪೂಜಿಸದವರು.

ಈ ಹತ್ತು ಪ್ರಯೋಗ ವಿಧಾನಗಳಲ್ಲಿ ಕೆಲವು ಹಿಂದುಗಳನ್ನು ಸರ್ವಚೇತನವಾದಿಗಳಿಂದ ಮತ್ತು ಬುಡಕಟ್ಟು ಜನರಿಂದ ಪ್ರತ್ಯೇಕಿಸುತ್ತವೆ. ಇನ್ನು ಮಿಕ್ಕವು ಹಿಂದುಗಳನ್ನು ಅಸ್ಪೃಶ್ಯರಿಂದ ಪ್ರತ್ಯೇಕಿಸುತ್ತವೆ. ಅಸ್ಪೃಶ್ಯರನ್ನು ಹಿಂದುಗಳಿಂದ ಪ್ರತ್ಯೇಕಿಸುವ ಅಂಶಗಳೆಂದರೆ (ಮೇಲೆ ನಮೂದಿಸಲ್ಪಟ್ಟ ಅಂಶಗಳ ಪೈಕಿ) ೨, ೫, ೬, ೭ ಮತ್ತು ೧೦ನೆಯವು. ನಮಗೆ ಪ್ರಮುಖವಾಗಿ ಪ್ರಸ್ತುತವಾಗಿರುವುವು ಅವೇ.

ಸ್ಪಷ್ಟತೆಗಾಗಿ ಈ ಹತ್ತು ಪ್ರಯೋಗ ವಿಧಾನಗಳನ್ನು ವಿಭಾಗಗಳಾಗಿ ವಿಂಗಡಿಸಿ ಪ್ರತ್ಯೇಕವಾಗಿ ಅವನ್ನು ಪರಾಮರ್ಶಿಸುವುದು ಉತ್ತಮವೆಂದು ತೋರುತ್ತದೆ. ಈ ಅಧ್ಯಾಯದಲ್ಲಿ ೨, ೫ ಮತ್ತು ೬ನೇ ಅಂಶಗಳನ್ನು ಮಾತ್ರ ಪರಾಮರ್ಶೆ ಮಾಡೋಣ.

೨, ೫ ಮತ್ತು ೬ನೇ ಅಂಶಗಳಲ್ಲಿ ಅಡಕವಾಗಿರುವ ಪ್ರಯೋಗ ವಿಧಾನಗಳನ್ನು ಕುರಿತ ಪ್ರಶ್ನೆಗಳಿಗೆ ಜನಗಣತಿಯ ಆಯುಕ್ತರು ಪಡೆದ ಉತ್ತರಗಳಿಂದ ತೋರಿಬರುವ ವಿಚಾರಗಳಿವು : (೧) ಅಸ್ಪೃಶ್ಯರು

---

೧. ನೋಡಿ: *Census of India (1911),* ಭಾಗ ೧, ಪುಟ. ೧೧೭

ಬ್ರಾಹ್ಮಣರಿಂದ ಯಾವ ಮಂತ್ರೋಪದೇಶವನ್ನೂ ಪಡೆಯುವುದಿಲ್ಲ, (೨) ಸದ್ಬ್ರಾಹ್ಮಣರೆನ್ನಲಾದ ಯಾರನ್ನೂ ಅಸ್ಪೃಶ್ಯರು ಪುರೋಹಿತರನ್ನಾಗಿ ಹೊಂದಿಲ್ಲ ; ಮತ್ತು (೩) ತಮ್ಮೊಳಗೇ ಬೆಳೆದುಬಂದ ಕೆಲವರನ್ನು ತಮ್ಮ ಪುರೋಹಿತರನ್ನಾಗಿ ಅಸ್ಪೃಶ್ಯರು ಪಡೆದಿದ್ದಾರೆ. ಈ ವಿಷಯಗಳನ್ನು ಕುರಿತಂತೆ ಎಲ್ಲ ಪ್ರಾಂತ್ಯಗಳ ಜನಗಣತಿಯ ಆಯುಕ್ತರೂ ಸರ್ವಾನುಮತವನ್ನು ಪ್ರಕಟಿಸಿದ್ದಾರೆ.[೧]

ಮೇಲಿನ ನಮ್ಮ ಮೂರು ಪ್ರಶ್ನೆಗಳಲ್ಲಿ ಮೂರನೆಯದು ಅತಿಮುಖ್ಯವಾದದ್ದು. ದುರದೃಷ್ಟವಶಾತ್ ಜನಗಣತಿಯ ಆಯುಕ್ತರು ಇದನ್ನು ಚೆನ್ನಾಗಿ ಗ್ರಹಿಸಲಿಲ್ಲ. ಏಕೆಂದರೆ, ತನಿಖೆ ಮಾಡುವಾಗ ಕೆಳಗಿನ ಪ್ರಶ್ನೆಗಳಿಗೆ ಉತ್ತರ ತಿಳಿಯಲು ಅವರು ಮೂಲವಿಷಯಕ್ಕೆ ಹೋಗಲಿಲ್ಲ ; ಅಸ್ಪೃಶ್ಯರು ಬ್ರಾಹ್ಮಣರಿಂದ ಮಂತ್ರೋಪದೇಶವನ್ನು ಏಕೆ ಪಡೆಯುತ್ತಿರಲಿಲ್ಲ? ಅಸ್ಪೃಶ್ಯರಿಗೆ ಕುಟುಂಬದ ಪುರೋಹಿತನಾಗಿ ಬ್ರಾಹ್ಮಣರು ಏಕೆ ಸೇವೆ ಸಲ್ಲಿಸಲಿಲ್ಲ? ಅಸ್ಪೃಶ್ಯರು ತಮ್ಮವರೇ ಆದ ಪುರೋಹಿತರನ್ನೇಕೆ ಆಯ್ಕೆ ಮಾಡಿಕೊಂಡರು? ಇವಕ್ಕೆ ಸಂಬಂಧಿಸಿದ 'ಏಕೆ' ಎಂಬುವೇ ವಿಚಾರಯೋಗ್ಯವಾದುವು. ಏಕೆಂದರೆ, ಅಸ್ಪೃಶ್ಯತೆಯ ಉಗಮಕ್ಕೆ ಸುಳಿವು ಅದರ ಹಿಂದೆ ಅಡಗಿದೆ.

ಇದನ್ನು ವಿಚಾರ ಮಾಡಲು ಪ್ರವೇಶಿಸುವ ಮುನ್ನ ಒಂದಂಶವನ್ನು ಎತ್ತಿ ತೋರಿಸಬೇಕು. ಅದೇನೆಂದರೆ ಒಂದರ್ಥದಲ್ಲಿ ಜನಗಣತಿಯ ಆಯುಕ್ತರು ನಡೆಸಿದ ತನಿಖೆಯು ಏಕಪಕ್ಷೀಯವಾಗಿತ್ತು. ಆ ತನಿಖೆಯು ಬ್ರಾಹ್ಮಣರು ಅಸ್ಪೃಶ್ಯರನ್ನು ದೂರವಿಟ್ಟರೆಂಬುದನ್ನು ತೋರ್ಪಡಿಸುತ್ತದೆ; ಅಸ್ಪೃಶ್ಯರು ಕೂಡ ಬ್ರಾಹ್ಮಣರನ್ನು ದೂರವಿಟ್ಟರೆಂಬುದನ್ನು ಅದು ಬೆಳಕಿಗೆ ತರಲಿಲ್ಲ. ಆದಾಗ್ಯೂ ಅದೊಂದು ವಾಸ್ತವಾಂಶವೇ ಆಗಿದೆ. ಜನರಲ್ಲಿ ಸಾಮಾನ್ಯವಾಗಿ ಪ್ರಚಲಿತವಾಗಿರುವ ಭಾವನೆಯೇನೆಂದರೆ ಬ್ರಾಹ್ಮಣರು ಅಸ್ಪೃಶ್ಯರಿಗಿಂತ ಮೇಲಾದವರು ಮತ್ತು ಅಸ್ಪೃಶ್ಯರು ತನ್ನನ್ನು ತಾನು ಕೀಳೆಂದು ಒಪ್ಪಿಕೊಂಡಿದ್ದಾರೆ ಎಂಬುದು. ಆದ್ದರಿಂದ ಅಸ್ಪೃಶ್ಯರು ಬ್ರಾಹ್ಮಣನನ್ನು ಅಶುದ್ಧವಾದ ವ್ಯಕ್ತಿಯೆಂದು ಬಗೆಯುತ್ತಾರೆಂಬ ಈ ಹೇಳಿಕೆಯು ಖಂಡಿತವಾಗಿಯೂ ಅತ್ಯಾಶ್ಚರ್ಯಕರವಾದ ಮಾತಾಗಿ ಅವರಿಗೆ ತೋರಿಬರುತ್ತದೆ. ಆದರೆ ಈ ವಿಷಯವನ್ನು ಅನೇಕ ಲೇಖಕರು ಗಮನಿಸಿ ದಾಖಲಿಸಿದ್ದಾರೆ. ಹಾಗೆ ಮಾಡುವಾಗ ಅವರು ಅಸ್ಪೃಶ್ಯರ ಸಾಮಾಜಿಕ ಆಚಾರಗಳನ್ನು ಅವಲೋಕನ ಮಾಡಿ ಪರೀಕ್ಷಿಸಿದ್ದಾರೆ. ಈ ಬಗ್ಗೆ ಯಾವುದೇ ಸಂಶಯವನ್ನೂ ಪರಿಹರಿಸಿಕೊಳ್ಳಲು ಅಂತಹ ಲೇಖಕರ ಬರವಣಿಗೆಗಳ ಉದ್ಧೃತ ಭಾಗಗಳತ್ತ ಗಮನ ಹರಿಸಬೇಕಾಗಿದೆ. ಅವುಗಳನ್ನಿಲ್ಲಿ ಕೊಡಲಾಗಿದೆ.

ಅಬ್ಬೆ ದುಬ್ವಾ ಎಂಬುವರು ಇದನ್ನು ಗಮನಿಸಿ ಹೀಗೆ ಉಲ್ಲೇಖಿಸಿದ್ದಾರೆ :[೨]

> "ಇಂದಿಗೂ ಸಹ ಒಂದು ಹಳ್ಳಿಯ ಬ್ರಾಹ್ಮಣರ ಬೀದಿಯಲ್ಲಿ ಒಬ್ಬ ಪರಯ್ಯಾ ಎನಿಸಿಕೊಂಡವನು ಸುಳಿಯುವಂತಿಲ್ಲ; ಅದೇ ಪಟ್ಟಣವೊಂದರಲ್ಲಿ ಅವನು ಬ್ರಾಹ್ಮಣನೊಬ್ಬನ ಮನೆಯತ್ತಲಾಗಲಿ ಅದರ ಪಕ್ಕದಲ್ಲಿಯಾಗಲಿ ಹೋಗುವುದನ್ನು ಯಾರಿಂದಲೂ ತಡೆಯಲಾಗುವುದಿಲ್ಲ, ತಡೆಯುವುದೂ ಇಲ್ಲ. ಪರಯ್ಯಾಗಳೂ ಕೂಡ ಸ್ವತಃ ತಮ್ಮ ಹಟ್ಟಿಗಳಲ್ಲಿ ಬ್ರಾಹ್ಮಣನೊಬ್ಬನನ್ನು ಯಾವ ಸಂದರ್ಭದಲ್ಲೇ ಆಗಲಿ ಒಳಕ್ಕೆ ಬಿಟ್ಟುಕೊಳ್ಳುವುದಿಲ್ಲ. ಅದು

೧. ೧೯೧೧ರ ಜನಗಣತಿಯನ್ನು ನೋಡಿ : ಅಸ್ಸಾಮಿಗೆ ಪುಟ ೪೦; ಬಂಗಾಳ, ಬಿಹಾರ ಮತ್ತು ಒರಿಸ್ಸಾಗೆ ಪು. ೨೮೨, ಮಧ್ಯ ಪ್ರಾಂತ್ಯಗಳಿಗೆ ಪು. ೭೩; ಮದ್ರಾಸಿಗೆ ಪು. ೫೧; ಪಂಜಾಬಿಗೆ ಪು. ೧೧೯; ಉತ್ತರದ ಪ್ರಾಂತ್ಯಗಳಿಗೆ ಪು. ೧೨೧; ಬರೋಡಕ್ಕೆ ಪುಟ ೫೫; ಮೈಸೂರಿಗೆ ಪು. ೫೩; ರಾಜಪುಟಾಣಕ್ಕೆ ಪುಟಗಳು ೯೪–೧೦೫; ತಿರುವಾಂಕೂರಿಗೆ ಪು. ೧೯೮.

೨. *Hindu Mannens and Customs* (ಮೂರನೆಯ ಆವೃತ್ತಿ), ಪುಟ. ೬೧ರಲ್ಲಿನ ಅಡಿಟಿಪ್ಪಣಿ.

ತಮ್ಮ ನಾಶಕ್ಕೆ ಕಾರಣವಾಗುತ್ತದೆಂದು ಅವರ ನಿಚ್ಚಳವಾದ ನಂಬಿಕೆ."

ತಂಜಾವೂರು ಜಿಲ್ಲೆಯ ದೇಶವಿಚಾರ ಕೋಶದ ಸಂಪಾದಕರಾದ ಮಾನ್ಯ ಹೆಮಿಂಗ್ಸ್‌ವೇ ಹೀಗೆನ್ನುತ್ತಾರೆ:

"ಜಾತಿಗಳವರು (ಅಂದರೆ, ತಂಜಾವೂರು ಜಿಲ್ಲೆಯ ಪರಯ್ಯನ್ ಮತ್ತು ಪಲ್ಲನ್ ಅಥವಾ ಚಕ್ಕಳಿಯನ್ ಜಾತಿಗಳವರು) ತಮ್ಮ ವಸತಿಗಳಿಗೆ ಬ್ರಾಹ್ಮಣರು ಪ್ರವೇಶ ಮಾಡುವುದನ್ನು ತೀವ್ರವಾಗಿ ಆಕ್ಷೇಪಿಸುತ್ತಾರೆ; ಅದರಿಂದ ತಮಗೆ ಹಾನಿಯು ಸಂಭವಿಸುತ್ತದೆಂದು ಅವರ ನಂಬಿಕೆ.[೧]

ಮೈಸೂರು ಪ್ರಾಂತ್ಯದ ಹಾಸನ ಜಿಲ್ಲೆಯ ಹೊಲೆಯರನ್ನು ಕುರಿತಂತೆ ಹೇಳುತ್ತಾ ಕ್ಯಾಪ್ಟನ್ ಜೆ.ಎಸ್.ಎಫ್. ಮೆಕೆಂಜೀ ಹೀಗೆನ್ನುತ್ತಾರೆ :

"ಹೊಲೆಯರು ವಾಸಿಸುವ ಹೊಲೆಗೇರಿ ಎಂಬ ಭಾಗವು ಪ್ರತಿಯೊಂದು ಹಳ್ಳಿಯಲ್ಲೂ ಇದೆ. ಅವರು ಮೊದಲಿಗೆ ಹಳ್ಳಿಗಾಡಿನಲ್ಲಿ ಜೀತದಾಳುಗಳಾಗಿದ್ದವರು. ಅವರ ವಸತಿಯು ಹಳ್ಳಿಯ ಎಲ್ಲೆಯಾಚೆ ಇರುವಂತಹುದು. ಅವರ ಸ್ಪರ್ಶದಿಂದ ಮೈಲಿಗೆಯಾಗುವಂತಹ ಅಶುದ್ಧ ಜನಾಂಗದವರು ಅವರೆಂದು ಎಣಿಸಲಾಗುತ್ತದಾದ್ದರಿಂದ ಹೀಗಿದೆಯೆಂದು ಮೊದಲಿಗೆ ನಾವು ಅಂದುಕೊಂಡಿದ್ದೆವು."[೨]

ಹೊಲೆಯರ ಕೈಯಿಂದ ನೇರವಾಗಿ ಏನನ್ನೂ ಸ್ವೀಕರಿಸಲು ನಿರಾಕರಿಸುವ ಬ್ರಾಹ್ಮಣರು ಸಾಮಾನ್ಯವಾಗಿ ಕೊಡುವ ಕಾರಣ ಇದು; ಆದಾಗ್ಯೂ ಯಾವ ಹೊಡೆತವನ್ನೂ ತಿನ್ನದೆ ಹೊಲಗೇರಿಯ ಮುಖಾಂತರ ಹಾದುಹೋಗಲು ಸಾಧ್ಯವಾಗುವುದಾದರೆ ಅದರಿಂದ ತಮಗೆ ಭಾರಿ ಅದೃಷ್ಟ ಪ್ರಾಪ್ತಿಯಾಗುತ್ತದೆಂದು ಬ್ರಾಹ್ಮಣರು ಭಾವಿಸುತ್ತಾರೆ. ಆದರೆ ಇದಕ್ಕೆ ಹೊಲೆಯರ ತೀವ್ರ ಆಕ್ಷೇಪವಿದೆ. ಬ್ರಾಹ್ಮಣನೇನಾದರೂ ಅವರ ವಸತಿಸ್ಥಾನಕ್ಕೆ ಪ್ರವೇಶಿಸಲು ಯತ್ನಿಸಿದರೆ ಹೊಲೆಯರೆಲ್ಲಾ ಇಡಿಯಾಗಿ ಹೊರಬಂದು ಅವನನ್ನು ಚಚ್ಚಿಹಾಕುತ್ತಾರೆ. ಹಿಂದಿನ ಕಾಲದಲ್ಲಿ ಅಂತಹವರನ್ನು ಹೊಡೆದು ಸಾಯಿಸುತ್ತಿದ್ದರೆಂದೂ ಹೇಳಲಾಗುತ್ತದೆ. ಬೇರೆ ಜಾತಿಗಳವರು ಹೊಲೆಯರ ಗುಡಿಸಲು ಬಾಗಿಲವರೆಗೂ ಬರಬಹುದು; ಆದರೆ ಗುಡಿಸಲೊಳಕ್ಕೆ ಪ್ರವೇಶಿಸುವಂತಿಲ್ಲ. ಏಕೆಂದರೆ ಅದರಿಂದ ಹೊಲೆಯರವನಿಗೆ ಹೀನ ಅದೃಷ್ಟ ಪ್ರಾಪ್ತಿಯಾಗುತ್ತದಂತೆ. ಹಾಗೇನಾದರೂ ಅಕಸ್ಮಾತ್ತಾಗಿ ಯಾರಾದರೂ ಒಳಗೆ ಪ್ರವೇಶಿಸಿದರೆ ಗುಡಿಸಲು ಯಜಮಾನನು ಆ ಆಗಂತುಕನ ಬಟ್ಟೆ ಹರಿದು ಅದರ ಒಂದು ಮೂಲೆಯಲ್ಲಿ ಸ್ವಲ್ಪ ಉಪ್ಪನ್ನು ಕಟ್ಟಿ ಅವನನ್ನು ಹೊರದೂಡಲು ಮರೆಯುವುದಿಲ್ಲ. ಹೀಗೆ ಅತಿಕ್ರಮವಾಗಿ ಪ್ರವೇಶಿಸಿದವನಿಗೆ ಉಂಟಾಗಬಹುದಾಗಿದ್ದ ಒಳ್ಳೆಯ ಅದೃಷ್ಟವನ್ನು ಇಲ್ಲವಾಗಿಸುವುದು ಮತ್ತು ಗುಡಿಸಲಿನ ಯಜಮಾನನಿಗೆ ತಗುಲಬೇಕಾಗಿದ್ದ ಕೆಡುಕನ್ನು ನಿವಾರಿಸಿಕೊಳ್ಳುವುದು ಇದರ ಉದ್ದೇಶವಾಗಿದ್ದಿತೆನ್ನಲಾಗಿದೆ.

ಇಂತಹ ವಿಚಿತ್ರವಾದ ಸಂಗತಿಯನ್ನು ವಿವರಿಸುವುದಾದರೂ ಹೇಗೆ? ಆ ವಿವರಣೆಯ ಪ್ರಾರಂಭಿಕ ದೆಸೆಯ – ಅಂದರೆ ಅಸ್ಪೃಶ್ಯರು ನಿಜಕ್ಕೂ ಅಸ್ಪೃಶ್ಯರಾಗಿರದೆ ಕೇವಲ ಬಿಡಿ ವ್ಯಕ್ತಿಗಳಾಗಿದ್ದಾಗಿನ – ಪರಿಸ್ಥಿತಿಯೊಂದಿಗೆ ಮಾತ್ರ ಸಮಂಜಸವಾಗಿ ಹೊಂದಿಕೊಳ್ಳುವಂತಹದ್ದಾಗಿರಬೇಕು. ನಾವು ಕೇಳಬೇಕಾದ ಪ್ರಶ್ನೆ ಇದು : ಬಿಡಿ ಜನರ ಧಾರ್ಮಿಕ ಕ್ರಿಯಾವಿಧಿಗಳಲ್ಲಿ ಪೌರೋಹಿತ್ಯ ವಹಿಸಲು ಬ್ರಾಹ್ಮಣರೇಕೆ ನಿರಾಕರಿಸಿದರು? ನಿಜಕ್ಕೂ

---

೧. *Gazetteer of Tanjore District* (೧೯೦೬), ಪುಟ, ೮೦

೨. *Indian Antiquary* ೧೮೭೩, II ೬೫

ಬ್ರಾಹ್ಮಣರು ಹೀಗೆ ಪೌರೋಹಿತ್ಯ ವಹಿಸಲು ನಿರಾಕರಿಸಿದ್ದರೆ? ಅಥವಾ, ಈ ಬಿಡಿ ಜನ ಬ್ರಾಹ್ಮಣರನ್ನು ಪೌರೋಹಿತ್ಯಕ್ಕಾಗಿ ಆಹ್ವಾನಿಸಲು ನಿರಾಕರಿಸಿದರೋ ಏನು? ಬಿಡಿ ಜನರನ್ನು ಅಶುದ್ಧರೆಂದೇಕೆ ಬ್ರಾಹ್ಮಣರು ಪರಿಗಣಿಸಿದರು? ಜೊತೆಗೆ, ಬ್ರಾಹ್ಮಣರನ್ನೇಕೆ ಈ ಬಿಡಿ ಜನ ಅಶುದ್ಧರೆಂದು ಬಗೆದರು? ಈ ಪರಸ್ಪರ ವೈಷಮ್ಯಕ್ಕೆ ಆಧಾರವಾದರೂ ಏನು?

ಈ ವೈಷಮ್ಯವನ್ನು ಒಂದು ಊಹೆಯ ಆಧಾರದ ಮೇಲೆ ವಿವರಿಸಲು ಸಾಧ್ಯ. ಅದೇನೆಂದರೆ ಈ ನುಚ್ಚುನೂರಾಗಿದ್ದ ಜನ ಬೌದ್ಧ ಮತಾವಲಂಬಿಗಳು ಎಂಬುದು. ಅದರಿಂದಲೇ ಅವರು ಬ್ರಾಹ್ಮಣರನ್ನು ಪೂಜ್ಯರೆಂದು ಆರಾಧಿಸಲಿಲ್ಲ, ಅವರನ್ನು ಪೌರೋಹಿತ್ಯ ವಹಿಸಲು ತಮ್ಮಲ್ಲಿ ನೇಮಕ ಮಾಡಿಕೊಳ್ಳಲಿಲ್ಲ ಮತ್ತು ಅವರನ್ನು ಅಶುದ್ಧರೆಂದು ಪರಿಗಣಿಸಿದರು. ಇನ್ನೊಂದೆಡೆ ಬ್ರಾಹ್ಮಣರು ಈ ಬಿಡಿಜನರನ್ನು ಅವರು ಬೌದ್ಧರೆಂಬ ಕಾರಣದಿಂದ ಇಷ್ಟಪಡಲಿಲ್ಲ ಮತ್ತು ಅವರ ವಿರುದ್ಧವಾಗಿ ತಿರಸ್ಕಾರ ಹಾಗೂ ದ್ವೇಷದ ಭಾವನೆಗಳನ್ನು ಬಿತ್ತಿದರು. ಹೀಗಾಗಿ ಈ ಬಿಡಿಜನರು ಅಸ್ಪಶ್ಯರೆಂದು ಪರಿಗಣಿಸಲ್ಪಡುವಂತಾಯಿತು.

ಈ ನತದೃಷ್ಟರು ಬೌದ್ಧರಾಗಿದ್ದರೆಂಬುದಕ್ಕೆ ನಮಗೆ ನೇರವಾದ ಪುರಾವೆಗಳೇನೂ ಇಲ್ಲ. ಹಾಗೆ ನೋಡಿದರೆ ಅಂತಹ ಪುರಾವೆಯ ಅಗತ್ಯವೂ ಇಲ್ಲ; ಏಕೆಂದರೆ, ಹಿಂದುಗಳಲ್ಲಿ ಬಹುಸಂಖ್ಯಾತರು ಬೌದ್ಧರೇ ಆಗಿದ್ದರು. ಅವರು (ಅಂದರೆ, ಆ ನತದೃಷ್ಟರು) ಬೌದ್ಧರೇ ಆಗಿದ್ದರೆಂದು ಸುಮ್ಮನೆಯೇ ನಾವು ಅಂಗೀಕರಿಸಬಹುದು.

ಹಿಂದುಗಳ ಮನಸ್ಸಿನಲ್ಲಿ ಬೌದ್ಧರ ವಿರುದ್ಧ ದ್ವೇಷ ಮತ್ತು ಹೇಸಿಗೆಯ ಭಾವನೆಗಳಿದ್ದುವು ಮತ್ತು ಈ ಭಾವನೆಯನ್ನು ಪ್ರಚೋದಿಸಿದ್ದು ಬ್ರಾಹ್ಮಣರು ಎಂಬುದಕ್ಕೆ ಆಧಾರವಿಲ್ಲದಿಲ್ಲ.

ತನ್ನ 'ಪ್ರಾಯಶ್ಚಿತ್ತ ಮಯೂಖ' ಎಂಬ ಗ್ರಂಥದಲ್ಲಿ ನೀಲಕಂಠನು ಮನುವಿನಿಂದ ಒಂದು ಶ್ಲೋಕವನ್ನು ಉದ್ಧರಿಸಿದ್ದಾನೆ.[೧]

> "ಯಾರಾದರೂ ಬೌದ್ಧನನ್ನು, ಪಾಶುಪತ ಕುಸುಮವನ್ನು, ಲೋಕಾಯತನನ್ನು, ನಾಸ್ತಿಕನನ್ನು ಅಥವಾ ಮಹಾಪಾತಕಿಯನ್ನು ಮುಟ್ಟಿದರೆ ಅಂತಹವರು ತಮ್ಮನ್ನು ಶುದ್ಧೀಕರಿಸಿಕೊಳ್ಳಲು ಸ್ನಾನ ಮಾಡಬೇಕು."

ಇದೇ ನಿಯಮವನ್ನು ಅಪರಾರ್ಕನು ತನ್ನ ಸ್ಮೃತಿಯಲ್ಲಿ[೨] ಬೋಧಿಸಿದ್ದಾನೆ. ವೃದ್ಧ ಹಾರೀತನು ಇನ್ನೂ ಮುಂದುವರಿದು ಘೋಷಿಸುತ್ತಾನೆ. ಬೌದ್ಧ ದೇವಾಲಯದೊಳಗೆ ಪ್ರವೇಶಿಸುವುದು ಒಂದು ಪಾಪ ಮತ್ತು ಅದರಿಂದುಂಟಾಗುವ ಅಶುದ್ಧಿಯನ್ನು ಪರಿಹರಿಸಿಕೊಳ್ಳಲು ಪರಿಶುದ್ಧಿಯ ಸ್ನಾನ ಮಾಡಬೇಕು.

ಬುದ್ಧನ ಅನುಯಾಯಿಗಳ ವಿರುದ್ಧ ದ್ವೇಷ ಮತ್ತು ತಿರಸ್ಕಾರದ ಭಾವನೆ ಎಷ್ಟು ವ್ಯಾಪಕವಾಗಿ ಬೆಳೆದಿದ್ದಿತೆಂಬುದನ್ನು ಸಂಸ್ಕೃತ ನಾಟಕಗಳಲ್ಲಿ ಚಿತ್ರಿಸಲಾಗಿರುವ ಅನೇಕ ಘಟನೆಗಳಲ್ಲಿ ನೋಡಬಹುದು. ಬೌದ್ಧರ ಬಗೆಗಿನ ಈ ಪ್ರವೃತ್ತಿಯ ಅತ್ಯಂತ ಗಮನಾರ್ಹವಾದ ಉದಾಹರಣೆಯು 'ಮೃಚ್ಛಕಟಿಕ' ನಾಟಕದಲ್ಲಿ ದೊರೆಯುತ್ತದೆ. ಆ ನಾಟಕದ ಏಳನೆಯ ಅಂಕದಲ್ಲಿ ನಾಯಕನಾದ ಚಾರುದತ್ತ ಮತ್ತು ಅವನ ಮಿತ್ರ ಮೈತ್ರೇಯರು ವಸಂತಸೇನೆಗಾಗಿ ನಗರದ ಹೊರವಲಯದ ಉದ್ಯಾನವೊಂದರಲ್ಲಿ ಕಾಯುತ್ತಿರುವುದನ್ನು ಚಿತ್ರಿಸಲಾಗಿದೆ. ನಿರೀಕ್ಷಿಸಿದಂತೆ ಅವಳು ಬರುವುದಿಲ್ಲವಾದ್ದರಿಂದ ಚಾರುದತ್ತನು ಅಲ್ಲಿಂದ ಹೊರಡಲು

---

೧. ಘರ್ಪುರೆ ಅವರಿಂದ ಸಂಪಾದಿತವಾದದ್ದು, ಪುಟ. ೯೫.

೨. ಸ್ಮೃತಿ ಸಮುಚ್ಚಯ, I, ಪುಟ. ೧೧೯

ತೀರ್ಮಾನಿಸುತ್ತಾನೆ. ಹಾಗೆ ಹೊರಡಲು ಉಪಕ್ರಮಿಸುತ್ತಿದ್ದಾಗ ಅವರು ಸಂವಾಹಕನೆಂಬ ಬೌದ್ಧ ಭಿಕ್ಕುವನ್ನು ಕಾಣುತ್ತಾರೆ. ಆತನನ್ನು ಕಂಡು ಚಾರುದತ್ತು ಹೇಳುತ್ತಾನೆ :

"ಅಯ್ಯಾ, ಸ್ನೇಹಿತ, ಮೈತ್ರೇಯ, ನಾನು ವಸಂತಸೇನೆಯನ್ನು ಕಾಣಲು ತವಕಿಸುತ್ತಿದ್ದೇನೆ... ಬಾ, ಹೋಗೋಣ, (ಸ್ವಲ್ಪ ದೂರ ನಡೆದವನಂತೆ ನಟಿಸಿ) ಓ, ಇದೇನು ಅಪಶಕುನ! ಒಬ್ಬ ಬೌದ್ಧ ಭಿಕ್ಕು ನಮ್ಮತ್ತ ಬರುತ್ತಿರುವನಲ್ಲ! (ಸ್ವಲ್ಪ ಯೋಚಿಸಿದವನಂತೆ ಮಾಡಿ) ಆಗಲಿ, ಅವನು ಈ ಕಡೆ ಬರಲಿ; ನಾವು ಬೇರೆ ಹಾದಿಯನ್ನು ಹಿಡಿಯೋಣ (ನಿಷ್ಕ್ರಮಿಸುವರು)."

ಎಂಟನೆಯ ಅಂಕದಲ್ಲಿ ಅದೇ ಭಿಕ್ಕುವು ರಾಜನ ಭಾವಮೈದುನನಾದ ಶಕಾರನ ಉದ್ಯಾನದ ಕೊಳವೊಂದರಲ್ಲಿ ತನ್ನ ಬಟ್ಟೆ ಒಗೆದುಕೊಳ್ಳುತ್ತಿದ್ದಾನೆ. ಅಲ್ಲಿಗೆ ಶಕಾರನು ವಿಟನೊಡನೆ ಬರುತ್ತಾನೆ ಮತ್ತು ಭಿಕ್ಕುವನ್ನು ಕೊಲ್ಲುವುದಾಗಿ ಬೆದರಿಸುತ್ತಾನೆ. ಆಗ ಅವರ ನಡುವೆ ಜರುಗುವ ಈ ಸಂಭಾಷಣೆಯು ಯಾವ ಭಾವನೆಯನ್ನು ಬಹಿರಂಗಗೊಳಿಸುತ್ತದೆ, ನೋಡಿ :

"ಶಕಾರ : ಏ ದುಷ್ಟ ಸಂನ್ಯಾಸಿಯೇ, ನಿಲ್ಲು.

ಭಿಕ್ಕು : ಓ, ರಾಜನ ಭಾವಮೈದುನ ಬರುತ್ತಿದ್ದಾನೆ! ಯಾವ ಸಂನ್ಯಾಸಿಯೋ ಅವನನ್ನು ರೇಗಿಸಿದ್ದಾನೆ; ಆದ್ದರಿಂದ ಇವನು ಯಾರಾದರೂ ಸಂನ್ಯಾಸಿಯನ್ನು ಕಂಡರೆ ಸಾಕು, ಹೊಡೆಯಲು ಬರುತ್ತಾನೆ.

ಶಕಾರ : ನಿಲ್ಲು, ಮದ್ಯದಂಗಡಿಯಲ್ಲಿ ಮೂಲಂಗಿಯನ್ನು ಕೊಚ್ಚುವಂತೆ ನಿನ್ನ ತಲೆಯನ್ನು ಒಡೆಯುತ್ತೇನೆ. (ಅವನನ್ನು ಹೊಡೆಯುತ್ತಾನೆ)

ವಿಟ : ಅಯ್ಯಾ, ಸ್ನೇಹಿತ, ಪ್ರಪಂಚದಿಂದ ಜುಗುಪ್ಸೆಗೊಂಡು ಕಾಷಾಯವಸ್ತ್ರವನ್ನು ಧರಿಸಿರುವ ಸಂನ್ಯಾಸಿಯನ್ನು ಹೊಡೆಯುವುದು ಯುಕ್ತವಲ್ಲ.

ಭಿಕ್ಕು : (ಸ್ವಾಗತಿಸುತ್ತಾ) ಉಪಾಸಕ ಬಂಧುವೆ, ಸಮಾಧಾನ ತಾಳು.

ಶಕಾರ : ನೋಡಯ್ಯಾ ಮಿತ್ರ, ಅವನು ನನ್ನನ್ನು ಬಯ್ಯುತ್ತಿದ್ದಾನೆ.

ವಿಟ : ಅವನು ಏನನ್ನುತ್ತಿದ್ದಾನೆ?

ಶಕಾರ : ನನ್ನನ್ನು ಉಪಾಸಕನೆಂದು ಕರೆಯುತ್ತಾನೆ. ನಾನೇನು ಹಜಾಮನೆ?

ವಿಟ : ಓಹೋ! ಅವನು ನಿಜಕ್ಕೂ ನಿನ್ನನ್ನು ಬುದ್ಧನ ಭಕ್ತನೆಂದು ಹೊಗಳುತ್ತಿದ್ದಾನೆ.

ಶಕಾರ : ಅವನೇಕೆ ಇಲ್ಲಿ ಬಂದಿದ್ದಾನೆ?

ವಿಟ : ಆ ಬಟ್ಟೆಗಳನ್ನು ಒಗೆದುಕೊಳ್ಳಲು.

ಶಕಾರ : ಆಹಾ! ದುಷ್ಟ ಸಂನ್ಯಾಸಿ. ಈ ಕೊಳದಲ್ಲಿ ನಾನು ಕೂಡ ಸ್ನಾನ ಮಾಡುವುದಿಲ್ಲ. ತಾಳು, ನಿನ್ನನ್ನು ಒಂದೇ ಏಟಿಗೆ ಕೊಚ್ಚಿ ಹಾಕುತ್ತೇನೆ."

ಭಿಕ್ಕುವನ್ನು ಚೆನ್ನಾಗಿ ಥಳಿಸಿದ ಮೇಲೆ ಅವನನ್ನು ಅಲ್ಲಿಂದ ಹೋಗಲು ಬಿಡಲಾಗುತ್ತದೆ. ಹಿಂದುಗಳ ಸಂದಣಿಯ ನಡುವೆ ಒಬ್ಬ ಬೌದ್ಧ ಭಿಕ್ಕುವು ಸಿಲುಕಿಕೊಂಡಿರುವ ದೃಶ್ಯ ಇದು. ಅವನನ್ನು ಹೀಯಾಳಿಸಲಾಗಿದೆ ಹಾಗೂ ಅವನಿಂದ ದೂರವಾಗುವ ಪ್ರಸಂಗ ಇಲ್ಲಿದೆ. ಅವನ ಬಗ್ಗೆ ತಿರಸ್ಕಾರದ ಭಾವನೆ ಎಷ್ಟಿದೆಯೆಂದರೆ ಜನ ಅವನು ಹಾಯುವ ಹಾದಿಯನ್ನು ಕೂಡ ತೊರೆಯುತ್ತಾರೆ. ಅವನನ್ನು ಕಂಡರೆ ಅಸಹ್ಯ ಎಷ್ಟು ಅಗಾಧವಾಗಿದೆಯೆಂದರೆ ಬೌದ್ಧರವನು ಪ್ರವೇಶಿಸಿದ್ದೇ ಸಾಕು, ಹಿಂದುವು ಅಲ್ಲಿಂದ ನಿರ್ಗಮಿಸುತ್ತಾನೆ. ಬೌದ್ಧ ಭಿಕ್ಕುವು ಬ್ರಾಹ್ಮಣನಿಗೆ ಸಮಾನಸ್ಕಂಧ. ಆದರೆ ಮರಣದಂಡನೆಯ ಸೋಂಕು ಬ್ರಾಹ್ಮಣನಿಗೆ ಅಂಟುವಂತಿಲ್ಲ.

ಅವನು ದೈಹಿಕ ಶಿಕ್ಷೆಯಿಂದ ಸಹ ಮುಕ್ತನಾದವನು. ಬೌದ್ಧ ಭಿಕ್ಕುವಾದರೋ ಹೊಡೆಯಲ್ಪಡಬಹುದು ಮತ್ತು ಹಲ್ಲೆಗೆ ಗುರಿಯಾಗಬಹುದು. ಹಾಗೆ ಮಾಡಿದಾಗ ಅದರಲ್ಲಿ ತಪ್ಪೇನು ಇಲ್ಲವೆಂಬಷ್ಟು ಮಟ್ಟಿಗೆ ಪಶ್ಚಾತ್ತಾಪ ಮತ್ತು ಅನುಕಂಪಗಳ ಅಭಾವವಿದೆ.

ಈ ಬಿಡಿಜನರು ಬೌದ್ಧಮತಾವಲಂಬಿಗಳಾಗಿದ್ದರು ಎಂಬುದನ್ನು ಮತ್ತು ಬ್ರಾಹ್ಮಣ ಮತವು ಬೌದ್ಧಮತವನ್ನು ಪರಾಜಯಗೊಳಿಸಿದ ಮೇಲೂ ಇತರ ಕೆಲವು ಪಂಗಡಗಳವರು ಬ್ರಾಹ್ಮಣ ಮತಕ್ಕೆ ಹಿಂದಿರುಗಿದ ರೀತಿಯಲ್ಲಿ ಹಿಂದಿರುಗಲು ಅವರು ಮುಂದಾಗಲಿಲ್ಲವೆಂಬುದನ್ನು ಒಪ್ಪುವುದಾದರೆ ನಮ್ಮ ಎರಡೂ ಪ್ರಶ್ನೆಗಳಿಗೆ ವಿವರಣೆ ದೊರಕುತ್ತದೆ, ಅಸ್ಪೃಶ್ಯರು ಬ್ರಾಹ್ಮಣರನ್ನು ಏಕೆ ಅಮಂಗಳವೆಂದು ಬಗೆಯುತ್ತಾರೆ, ಏಕೆ ಅವರನ್ನು ತಮ್ಮ ಪುರೋಹಿತರನ್ನಾಗಿ ನೇಮಕ ಮಾಡಿಕೊಳ್ಳುವುದಿಲ್ಲ ಮತ್ತು ತಮ್ಮ ವಸತಿಸ್ಥಾನಕ್ಕೆ ಏಕೆ ಅವರನ್ನು ಬಿಟ್ಟುಕೊಳ್ಳುವುದಿಲ್ಲ ಎಂಬುದನ್ನು ಕೂಡ ಇದು ವಿವರಿಸುತ್ತದೆ. ಬಿಡಿಜನರನ್ನು ಏಕೆ ಅಸ್ಪೃಶ್ಯರೆಂದು ಪರಿಗಣಿಸಲಾಯಿತೆಂಬುದಕ್ಕೂ ಅದು ವ್ಯಾಖ್ಯಾನ ನೀಡುತ್ತದೆ. ಬಿಡಿಜನರು ಬ್ರಾಹ್ಮಣರನ್ನು ಏಕೆ ದ್ವೇಷಿಸಿದರೆಂದರೆ ಬ್ರಾಹ್ಮಣರು ಬೌದ್ಧಮತದ ಶತ್ರುಗಳಾಗಿದ್ದುದರಿಂದ; ಬ್ರಾಹ್ಮಣರು ಈ ಬಿಡಿಜನರ ಮೇಲೆ ಅಸ್ಪೃಶ್ಯತೆಯನ್ನು ಏಕೆ ಹೇರಿದರೆಂದರೆ ಅವರು ಬೌದ್ಧಮತವನ್ನು ಬಿಡಲು ತಯಾರಿಲ್ಲದಿದ್ದುದರಿಂದ. ಈ ತರ್ಕವನ್ನಾಧರಿಸಿ ನಾವು ಒಂದು ತೀರ್ಮಾನಕ್ಕೆ ಬರಬಹುದು : ಅಸ್ಪೃಶ್ಯತೆಯ ಮೂಲಗಳಲ್ಲಿ ಒಂದು ಇಲ್ಲಿದೆ. ಬೌದ್ಧರಾಗಿದ್ದವರ ವಿರುದ್ಧ ಬ್ರಾಹ್ಮಣರು ದ್ವೇಷ ಮತ್ತು ತಿರಸ್ಕಾರದ ಭಾವನೆಗಳನ್ನು ಬಿತ್ತಿದರು.

ಬೌದ್ಧಮತ ಮತ್ತು ಬ್ರಾಹ್ಮಣ ಮತಗಳ ನಡುವಣ ದ್ವೇಷವು ಬಿಡಿಜನರು ಅಸ್ಪೃಶ್ಯರಾಗಲು ಇರುವ ಒಂದೇ ಕಾರಣವೆಂದು ಸ್ವೀಕರಿಸಬಹುದೆ? ಸಹಜವಾಗಿಯೇ ಅದು ಸಾಧ್ಯವಿಲ್ಲ. ಬ್ರಾಹ್ಮಣರು ಬೋಧಿಸಿದ ದ್ವೇಷ ಮತ್ತು ತಿರಸ್ಕಾರಗಳು ಸಾಮಾನ್ಯತಃ ಬೌದ್ಧರ ವಿರುದ್ಧ ಗುರಿಮಾಡಲಾಗಿದ್ದಿತೇ ವಿನಾ ವಿಶೇಷವಾಗಿ ನತದೃಷ್ಟರ ವಿರುದ್ಧವಾಗಿಯಲ್ಲ. ಆದರೆ ಅಸ್ಪೃಶ್ಯತೆಯು ಅಂಟಿಕೊಂಡಿದ್ದು ನತದೃಷ್ಟರಿಗೆ ಮಾತ್ರ. ಆದ್ದರಿಂದ ಈ ನತದೃಷ್ಟರ ಮೇಲೆ ಅಸ್ಪೃಶ್ಯತೆಯ ಸೋಂಕನ್ನು ಬಿಗಿಗೊಳಿಸಲು ಬೇರೇನಾದರೂ ಸನ್ನಿವೇಶವು ತನ್ನ ಪಾತ್ರ ವಹಿಸಿರಬೇಕೆಂಬುದು ಸ್ಪಷ್ಟವಾಗಿದೆ. ಅಂತಹ ಸನ್ನಿವೇಶವಾದರೂ ಏನಿದ್ದಿರಬಹುದು? ಅದನ್ನು ತಿಳಿಯಹೊರಡುವುದು ನಮ್ಮ ಮುಂದಿನ ಪ್ರಯತ್ನವಾಗಬೇಕು.

♦

# ಅಧ್ಯಾಯ ೧೦

# ಅಸ್ಪೃಶ್ಯತೆಯ ಮೂಲಕಾರಣವಾಗಿ ಗೋಮಾಂಸ ಭಕ್ಷಣೆ

ಜನಗಣತಿಯ ಆಯುಕ್ತರು ಹೊರಡಿಸಿದ್ದ ಸುತ್ತೋಲೆಯಲ್ಲಿನ ೧೦ನೇ ಪ್ರಯೋಗ ವಿಧಾನವನ್ನು ನಾವೀಗ ಪರಿಶೀಲಿಸೋಣ. ಹಿಂದಿನ ಅಧ್ಯಾಯದಲ್ಲಿ ಆಗಲೇ ಅದನ್ನು ಉಲ್ಲೇಖಿಸಿದ್ದಾಗಿದೆ. ಈ ವಿಧಾನವು ಗೋಮಾಂಸವನ್ನು ತಿನ್ನುವುದಕ್ಕೆ ಸಂಬಂಧಿಸಿದ್ದು.

ಸಾಮಾನ್ಯವಾಗಿ ಅಸ್ಪೃಶ್ಯ ಪಂಗಡದವರೆಂದು ವಿಂಗಡಿಸಲಾಗುವವರಲ್ಲಿ ಪ್ರಧಾನವಾಗಿ ಕಾಣಬರುವ ಆಹಾರಾಂಶವು ಸತ್ತ ಗೋವುಗಳ ಮಾಂಸವೆಂದು ಜನಗಣತಿಯ ದಾಖಲೆಗಳು ತೋರಿಸುತ್ತವೆ. ಎಷ್ಟೇ ಕನಿಷ್ಠ ಮಟ್ಟಕ್ಕೆ ಸೇರಿದವರಾಗಿರಲಿ ಹಿಂದೂ ಪಂಗಡದಲ್ಲಿ ಯಾರೂ ಗೋವಿನ ಮಾಂಸನ್ನು ಮುಟ್ಟುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಯಾವ ಪಂಗಡವೇ ಇರಲಿ, ಅದು ನಿಜಕ್ಕೂ ಅಸ್ಪೃಶ್ಯರ ಪಂಗಡವಾಗಿದ್ದಲ್ಲಿ ಅವರಲ್ಲಿ ಸತ್ತ ಗೋವಿನೊಡನೆ ಎಂತಹದ್ದಾದರೂ ಒಂದು ಸಂಬಂಧವಿಲ್ಲದವರು ಯಾರೂ ಇಲ್ಲ. ಅವರಲ್ಲಿ ಕೆಲವರು ಅದರ ಬಾಡನ್ನು ತಿನ್ನುತ್ತಾರೆ, ಕೆಲವರು ಅದರ ಚರ್ಮವನ್ನು ಸುಲಿಯುತ್ತಾರೆ, ಮತ್ತೆ ಕೆಲವರು ಅದರ ಚರ್ಮ ಮತ್ತು ಮೂಳೆಗಳಿಂದ ಏನಾದರೊಂದು ಪದಾರ್ಥವನ್ನು ತಯಾರಿಸುತ್ತಾರೆ.

ಅಸ್ಪೃಶ್ಯರು ಗೋವಿನ ಮಾಂಸವನ್ನು ತಿನ್ನುತ್ತಾರೆಂಬುದು ಜನಗಣತಿಯ ಆಯುಕ್ತರ ಸಮೀಕ್ಷೆಯಿಂದ ಚೆನ್ನಾಗಿ ಸ್ಥಿರೀಕರಿಸಲ್ಪಟ್ಟಿದೆ. ಆದರೆ ಇಲ್ಲಿ ಏಳುವ ಪ್ರಶ್ನೆ ಇದು : ಅಸ್ಪೃಶ್ಯತೆಯ ಉಗಮಕ್ಕೆ ಗೋವಿನ ಮಾಂಸವನ್ನು ತಿನ್ನುವುದು ಯಾವ ರೀತಿಯಲ್ಲಾದರೂ ಸಂಬಂಧಿಸಿದೆಯೆ? ಅಥವಾ, ಅಸ್ಪೃಶ್ಯರ ಆರ್ಥಿಕ ಜೀವನದಲ್ಲಿ ಇದೊಂದು ಸಾಮಾನ್ಯ ಪ್ರಸಂಗವೊ? ಗೋವಿನ ಮಾಂಸವನ್ನು ತಿನ್ನುತ್ತಿದ್ದುದರಿಂದ ಬಿಡಿಜನರನ್ನು ಅಸ್ಪೃಶ್ಯರನ್ನಾಗಿ ನಡೆಸಿಕೊಳ್ಳಲಾಯಿತೆಂದು ನಾವು ಹೇಳಬಹುದೊ? ಈ ಪ್ರಶ್ನೆಗೆ ಹೌದೆಂಬ ಉತ್ತರವನ್ನು ಯಾವ ಅಂಜಿಕೆಯೂ ಇಲ್ಲದೆ ನಾವು ನೀಡಬಹುದಾಗಿದೆ. ನಮಗೆ ತಿಳಿದಿರುವ ಅಂಶಗಳಿಗೆ ಸರಿಹೋದುವಂತೆ ಬೇರಾವ ಉತ್ತರವನ್ನೂ ನಾವು ನೀಡಲಾಗುವುದಿಲ್ಲ.

ಮೊದಲನೆಯದಾಗಿ, ನಮ್ಮ ಮುಂದಿರುವ ಸತ್ಯಾಂಶ ಇದು : ಅಸ್ಪೃಶ್ಯರು ಅಥವಾ ಅವರನ್ನೊಳಗೊಂಡಂತಿರುವ ಮುಖ್ಯವಾದ ಪಂಗಡಗಳವರು ಸತ್ತ ಗೋವನ್ನು ತಿನ್ನುತ್ತಾರೆ ; ಮತ್ತು ಯಾರು ಸತ್ತ ಗೋವನ್ನು ತಿನ್ನುತ್ತಾರೋ ಅವರಿಗೆ ಅಸ್ಪೃಶ್ಯತೆಯು ಅಂಟಿಕೊಳ್ಳುತ್ತದೆಯೆ ಹೊರತು ಬೇರೆಯವರಿಗಲ್ಲ. ಅಸ್ಪೃಶ್ಯತೆ ಮತ್ತು ಸತ್ತ ಹಸುವಿನ ಉಪಯೋಗಗಳ ನಡುವೆ ಎಷ್ಟು ಪರಸ್ಪರ ಹಾಗೂ ನಿಕಟ ಸಂಬಂಧವಿದೆಯೆಂದರೆ ಅದೇ ಅಸ್ಪೃಶ್ಯತೆಯ ಉಗಮಸ್ಥಾನದಲ್ಲಿದೆಯೆಂಬ ಸಿದ್ಧಾಂತವನ್ನು ನಿರಾಕರಿಸುವಂತೆಯೇ ಇಲ್ಲವೆನ್ನಬಹುದು. ಎರಡನೆಯದಾಗಿ, ಅಸ್ಪೃಶ್ಯರನ್ನು ಹಿಂದುಗಳಿಂದ ಪ್ರತ್ಯೇಕಿಸುವಂತಹದ್ದೇನಾದರೂ ಇದ್ದರೆ ಅದು ಗೋವಿನ ಮಾಂಸವನ್ನು ತಿನ್ನುವುದೇ ಆಗಿದೆ. ಹಿಂದುಗಳಿಗೆ ವರ್ಜ್ಯವಾದ ಆಹಾರಗಳ ಪಟ್ಟಿಯನ್ನು ಮೇಲುಮೇಲೆ ಗಮನಿಸಿದರೂ ಸಹ ನಮಗೆ ತೋರುವುದೇನೆಂದರೆ ಪ್ರತ್ಯೇಕೀಕರಣಕ್ಕೆ ಎರಡು ವಿಧದ ಆಹಾರಸಾಮಗ್ರಿಗಳ ಮೇಲೆ ನಿಷೇಧ ವಿಧಿಸಲಾಗಿದೆ. ಒಂದು ನಿಷೇಧವು ಮಾಂಸವನ್ನು ತಿನ್ನುವುದರ ಬಗೆಗೆ. ಅದು ಹಿಂದುಗಳನ್ನು ಗೋಮಾಂಸ ಭಕ್ಷಕರು ಮತ್ತು ಅದನ್ನು

ಭಕ್ಷಿಸದವರು ಎಂಬುದಾಗಿ ವಿಭಜಿಸುತ್ತದೆ. ಅಸ್ಪೃಶ್ಯತೆಯನ್ನು ದೃಷ್ಟಿಯಲ್ಲಿರಿಸಿಕೊಂಡಾಗ ಮೊದಲನೆಯ ವಿಭಜನಾ ಸೂತ್ರಕ್ಕೆ ಯಾವ ಪ್ರಾಮುಖ್ಯತೆಯೂ ಇಲ್ಲ. ಆದರೆ ಎರಡನೆಯದು ಪ್ರಾಮುಖ್ಯತೆಯನ್ನು ಹೊಂದಿದೆ. ಏಕೆಂದರೆ, ಅದು ಸ್ಪೃಶ್ಯರನ್ನು ಅಸ್ಪೃಶ್ಯರಿಂದ ಸಂಪೂರ್ಣವಾಗಿ ಬೇರ್ಪಡಿಸುತ್ತದೆ. ಸ್ಪೃಶ್ಯರು ಸಸ್ಯಾಹಾರಿಗಳಾಗಿರಲಿ ಅಥವಾ ಮಾಂಸಾಹಾರಿಗಳಾಗಿರಲಿ ಗೋವಿನ ಮಾಂಸವನ್ನು ತಿನ್ನುವುದನ್ನು ಆಕ್ಷೇಪಿಸುವುದರಲ್ಲಿ ಒಗ್ಗಟ್ಟಿನಿಂದಿರುತ್ತಾರೆ. ಅವರಿಬ್ಬರಿಗೂ ವಿರೋಧವಾಗಿ ನಿಲ್ಲುವವರು ಅಸ್ಪೃಶ್ಯರು; ಅವರು ಗೋವಿನ ಮಾಂಸವನ್ನು ಯಾವ ಅಳುಕೂ ಇಲ್ಲದಂತೆ ಸರ್ವೇಸಾಮಾನ್ಯವಾಗಿ ಹಾಗೂ ವಾಡಿಕೆಯಾಗಿ ತಿನ್ನುತ್ತಾರೆ.[೧]

ಈ ಸಂದರ್ಭದಲ್ಲಿ ಅಷ್ಟೇನೂ ಪ್ರಯಾಸಕರವಲ್ಲದ ಒಂದು ಸೂಚನೆಯನ್ನು ನೀಡಬಹುದು. ಅದೇನೆಂದರೆ ಗೋವಿನ ಮಾಂಸವನ್ನು ತಿನ್ನುವುದರ ಬಗ್ಗೆ ಅಸಹ್ಯಪಟ್ಟುಕೊಳ್ಳುವವರು ಹಾಗೆ ತಿನ್ನುವವರನ್ನು ಅಸ್ಪೃಶ್ಯರನ್ನಾಗಿ ನಡೆಸಿಕೊಳ್ಳುವುದು ಅಸಾಧ್ಯವೇನಲ್ಲ.

ಅಸ್ಪೃಶ್ಯತೆಯ ಉಗಮಕ್ಕೆ ಗೋವಿನ ಮಾಂಸವನ್ನು ತಿನ್ನುವುದು ಪ್ರಧಾನ ಕಾರಣವಾಗಿದ್ದಿತೇ ಇಲ್ಲವೆ ಎಂಬುದರ ಬಗ್ಗೆ ಊಹಾಪೋಹದಲ್ಲಿ ತೊಡಗುವುದು ನಿಜಕ್ಕೂ ಅವಶ್ಯಕವಲ್ಲ. ಈ ಹೊಸ ಸಿದ್ಧಾಂತಕ್ಕೆ ಹಿಂದುಗಳ ಶಾಸ್ತ್ರಗ್ರಂಥಗಳಲ್ಲಿಯೇ ಸಾಕಷ್ಟು ಆಧಾರಗಳು ದೊರೆಯುತ್ತವೆ. ಅಂತ್ಯಜರ ಗುಂಪಿನಲ್ಲಿ ಯಾವ ಯಾವ ಪಂಗಡಗಳವರು ಸೇರಿದ್ದಾರೆ ಮತ್ತು ಅವರನ್ನೇಕೆ ಹಾಗೆ ವಿಂಗಡಿಸಲಾಗಿದೆ ಎಂಬುದನ್ನು ನಿರ್ದೇಶಿಸುವ ಒಂದು ಶ್ಲೋಕವು ವೇದವ್ಯಾಸ ಸ್ಮೃತಿಯಲ್ಲಿದೆ. ಅದು ಹೀಗಿದೆ :[೨]

> I ೧೨-೧೩ : *"ಚರ್ಮಕಾರ (ಮೋಚಿ), ಭಟ (ಸೈನಿಕ), ಭಿಲ್ಲ, ರಜಕ (ಅಗಸ), ಪುಷ್ಕರ, ನಟ, ವ್ರಾತ, ಮೇದ, ಚಂಡಾಲ, ದಾಸ, ಶ್ವಪಚ, ಮ್ತು ಕೋಲಿಕ, - ಇವರನ್ನು ಹಾಗೂ ಗೋವಿನ ಮಾಂಸವನ್ನು ತಿನ್ನುವವರನ್ನು ಅಂತ್ಯಜರೆಂದು ಕರೆಯಲಾಗಿದೆ."*

ಸಾಮಾನ್ಯವಾಗಿ ಹೇಳುವುದಾದರೆ ಸ್ಮೃತಿಕಾರರು ತಾವು ಉದ್ಧರಿಸಿರುವ ತತ್ವಗಳು ಏಕೆ ಮತ್ತು ಹೇಗೆ ರೂಪಿತವಾದುವೆಂದು ವಿವರಿಸುವ ಗೋಜಿಗೆ ಹೋಗುವುದಿಲ್ಲ. ಆದರೆ ಪ್ರಸ್ತುತ ವಿಷಯವು ಅದಕ್ಕೊಂದು ಅಪವಾದ. ಏಕೆಂದರೆ ಈ ವಿಷಯವನ್ನು ಕುರಿತಂತೆ ಅಸ್ಪೃಶ್ಯತೆಗೆ ಕಾರಣವನ್ನು ವೇದವ್ಯಾಸರು ನೀಡಹೊರಟಿದ್ದಾರೆ. ಮೇಲಿನ ಶ್ಲೋಕದಲ್ಲಿ "ಹಾಗೂ ಗೋವಿನ ಮಾಂಸವನ್ನು ತಿನ್ನುವವರು" ಎಂಬ ಭಾಗವು ಬಹಳ ಮುಖ್ಯವಾದುದು. ಅಸ್ಪೃಶ್ಯತೆಯ ಉಗಮವು ಗೋವಿನ ಮಾಂಸವನ್ನು ತಿನ್ನುವುದರಲ್ಲಿದೆಯೆಂಬುದನ್ನು ಸ್ಮೃತಿಕಾರರು ಅರಿತಿದ್ದರೆಂಬುದನ್ನದು ತೋರಿಸುತ್ತದೆ. ವೇದವ್ಯಾಸರ ಆದೇಶವು ವಾದ-ಪ್ರತಿವಾದಕ್ಕೆ ಮುಕ್ತಾಯವನ್ನು ಸೂಚಿಸುತ್ತದೆ. ಅದು ಸ್ವತಃ ಮುನಿಗಳಿಂದಲೇ ಅಧಿಕಾರವಾಣಿಯಾಗಿ ಹೊಮ್ಮಿದೆಯೆನ್ನಬಹುದು, ಅಲ್ಲದೆ ಇನ್ನೂ ಮುಖ್ಯವಾಗಿ ಅದು ವೈಚಾರಿಕವಾಗಿ ಸೂಕ್ತವಾಗಿದೆ. ಏಕೆಂದರೆ, ನಮಗೆ ತಿಳಿದಿರುವ ವಾಸ್ತವಾಂಶಗಳೊಂದಿಗೆ ಅದು ಸರಿಹೊಂದುತ್ತದೆ.

---

೧. ಗೋವಿನ ಮಾಂಸವನ್ನು ತಿನ್ನುವುದರಿಂದ ಹಿಂದುಗಳು ಅಸ್ಪೃಶ್ಯರ ಮೇಲೆ ಹೊರಿಸುವ ಆಪಾದನೆಯ ತೀವ್ರತೆಯನ್ನು ಅವರು ಅನುಭವಿಸಿದ್ದಾರೆ. ಈ ರೂಢಿಯನ್ನು ಬಿಟ್ಟುಕೊಡುವ ಬದಲು ಸತ್ತ ಗೋವಿನ ಮಾಂಸವನ್ನು ತಿನ್ನುವುದನ್ನು ಸಮರ್ಥಿಸುವಂತಹ ಒಂದು ತಾತ್ವಿಕ ಸಿದ್ಧಾಂತವನ್ನು ಅಸ್ಪೃಶ್ಯರು ಕಂಡುಹಿಡಿದಿದ್ದಾರೆ. ಈ ಸಿದ್ಧಾಂತದ ಸಾರವಿದು; *ಗೋವಿನ ಹೆಣವನ್ನು ಎಲ್ಲೋ ಬಿಸಾಡುವುದಕ್ಕಿಂತಲೂ ಅದರ ಮಾಂಸವನ್ನು ತಿನ್ನುವುದು ಗೋವಿಗೆ ಹೆಚ್ಚಿನ ಗೌರವ ತೋರಿಸುವ ಕ್ರಮ.*

೨. ಇದನ್ನು ಕಾಣೆಯವರ 'ಧರ್ಮಶಾಸ್ತ್ರದ ಇತಿಹಾಸ', ಸಂಪುಟ II, ಭಾಗ ೧, ಪು.೭೧ರಲ್ಲಿ ಉದ್ಧರಿಸಲಾಗಿದೆ.

ಅಸ್ಪೃಸ್ಯತೆಯ ಉಗಮವನ್ನು ಅರಸುವ ಹೊಸ ದೃಷ್ಟಿಯು ಅದರ ಉಗಮದ ಎರಡು ಆಕರಗಳನ್ನು ಹೊರತಂದಿದೆ. ಒಂದು, ಬ್ರಾಹ್ಮಣರು ಬೌದ್ಧರಾಗಿದ್ದವರ ವಿರುದ್ಧವಾಗಿ ಅವಹೇಳನ ಮತ್ತು ತಿರಸ್ಕಾರದ ವಾತಾವರಣವನ್ನು ವ್ಯಾಪಕವಾಗಿ ಹರಡಿದ್ದು; ಇನ್ನೊಂದು, ಬಿಡಿಜನರು ಹಸುವಿನ ಮಾಂಸವನ್ನು ತಿನ್ನುವ ವಾಡಿಕೆಯನ್ನು ಮುಂದುವರಿಸಿಕೊಂಡು ಬಂದಿದ್ದು. ಈಗಾಗಲೇ ಹೇಳಿರುವಂತೆ ಮೊದಲನೆಯ ಸನ್ನಿವೇಶವೊಂದೇ ಈ ಬಿಡಿಜನರಿಗೆ ಅಸ್ಪೃಶ್ಯತೆಯ ಕಳಂಕವು ಅಂಟಿಕೊಳ್ಳುವಂತೆ ಮಾಡಲು ಸಾಕಷ್ಟು ಪ್ರಬಲವಾದ ಕಾರಣವಾಗಿರಲು ಸಾಧ್ಯವಿರಲಿಲ್ಲ. ಏಕೆಂದರೆ ಬ್ರಾಹ್ಮಣರು ಬೌದ್ಧರ ವಿರುದ್ಧವಾಗಿ ಹರಡಿದ ಅವಹೇಳನ ಮತ್ತು ತಿರಸ್ಕಾರಗಳು ಅತಿಸಾಮಾನ್ಯವಾಗಿದ್ದಂತಹವು; ಅದು ಎಲ್ಲ ಬೌದ್ಧರ ಮೇಲೂ ಪ್ರಭಾವವನ್ನು ಬೀರಿತೇ ಹೊರತು ಕೇವಲ ಬಿಡಿಜನರ ಮೇಲೆ ಅಲ್ಲ. ಆದರೆ ಅಸ್ಪೃಶ್ಯರಾಗಿ ಬದಲಾವಣೆ ಹೊಂದಿದವರು ಬಿಡಿಜನರು ಮಾತ್ರವೇ. ಇದಕ್ಕೆ ಕಾರಣವೇನೆಂದರೆ ಅವರು ಬೌದ್ಧಮತಾವಲಂಬಿಗಳಾಗುವುದರ ಜೊತೆಗೆ ಹಸುವಿನ ಮಾಂಸವನ್ನು ತಿನ್ನುವ ವಾಡಿಕೆಯನ್ನು ಉಳಿಸಿಕೊಂಡರು.

ಇದು ಬ್ರಾಹ್ಮಣರ ಈರ್ಷ್ಯೆಯು ಅಧಿಕಗೊಳ್ಳಲು ಸಂದರ್ಭವನ್ನೇರ್ಪಡಿಸಿತು ಹಾಗೂ ಅವರು ಗೋವಿನ ಬಗ್ಗೆ ಹೊಸದಾಗಿ ಕಂಡಿಕೊಂಡಿದ್ದ ಪ್ರೇಮಾದರಗಳನ್ನು ತಾರ್ಕಿಕವಾಗಿ ಅಂತಿಮಘಟ್ಟಕ್ಕೊಯ್ಯಲು ದಾರಿಮಾಡಿಕೊಟ್ಟಿತು. ಆದ್ದರಿಂದ ನಾವು ತೀರ್ಮಾನಿಸಬಹುದಾದದ್ದು ಇದು : ಬಿಡಿಜನರು ಬೌದ್ಧ ಮತಾವಲಂಬಿಗಳಾಗಿದ್ದುದರಿಂದ ಅವರ ಮೇಲೆ ಅವಹೇಳನ ಮತ್ತು ತಿರಸ್ಕಾರಗಳನ್ನು ಹರಿಯಬಿಡಲಾಯಿತು; ಆದರೆ ಅವರು ಅಸ್ಪೃಶ್ಯರಾಗಲು ಪ್ರಧಾನ ಕಾರಣ ಅವರು ಹಸುವಿನ ಮಾಂಸವನ್ನು ತಿನ್ನುತ್ತಿದ್ದರೆಂಬುದೇ ಆಗಿದೆ.

ಅಸ್ಪೃಶ್ಯತೆಗೆ ಗೋಮಾಂಸಭಕ್ಷಣೆಯು ಕಾರಣವಾಗಿದ್ದಿತೆನ್ನುವ ಸಿದ್ಧಾಂತವು ಅನೇಕ ಪ್ರಶ್ನೆಗಳಿಗೆ ಎಡೆಮಾಡಿಕೊಡುತ್ತದೆ. ಇದನ್ನು ಟೀಕಿಸುವವರು ಖಂಡಿತವಾಗಿಯೂ ಕೇಳುವ ಪ್ರಶ್ನೆಗಳಿವು : ಗೋವಿನ ಮಾಂಸ ತಿನ್ನುವುದರ ಬಗ್ಗೆ ಹಿಂದುಗಳಿಗಿರುವ ಅಸಹ್ಯತೆಗೆ ಕಾರಣವೇನು? ಹಿಂದುಗಳು ಯಾವಾಗಲೂ ಗೋಮಾಂಸ ಭಕ್ಷಣೆಯನ್ನು ವಿರೋಧಿಸುತ್ತಿದ್ದರೆ? ಇಲ್ಲವಾದಲ್ಲಿ, ಅವರೇಕೆ ಅದರ ವಿರುದ್ಧ ಅಷ್ಟು ಅಸಹ್ಯ ಭಾವನೆಯನ್ನು ಬೆಳೆಸಿಕೊಂಡರು? ಅಸ್ಪೃಶ್ಯರು ಮೊದಲಿನಿಂದಲೂ ಹಸುವಿನ ಮಾಂಸವನ್ನು ತಿನ್ನುವವರೇ ಆಗಿದ್ದರೆ? ಹಿಂದುಗಳು ಅದನ್ನು ತಿನ್ನುವುದನ್ನು ಕೈಬಿಟ್ಟಾಗ ಅವರೇಕೆ ಅದನ್ನು ತೊರೆಯಲಿಲ್ಲ? ಅಸ್ಪೃಶ್ಯರು ಯಾವಾಗಲೂ ಅಸ್ಪೃಶ್ಯರಾಗಿಯೇ ಇದ್ದರೆ? ಯಾವುದೋ ಒಂದು ಕಾಲದಲ್ಲಿ ಅಸ್ಪೃಶ್ಯರು ಹಸುವಿನ ಮಾಂಸವನ್ನು ತಿಂದಾಗ್ಯೂ ಅಸ್ಪೃಶ್ಯರಾಗಿರಲಿಲ್ಲವಾದರೆ ನಂತರದ ಕಾಲದಲ್ಲಿ ಅದನ್ನು ತಿನ್ನುವುದರಿಂದ ಅವರೇಕೆ ಅಸ್ಪೃಶ್ಯರಾದರು? ಹಿಂದುಗಳು ಮೊದಲಿಗೆ ಹಸುವಿನ ಮಾಂಸವನ್ನು ತಿನ್ನುತ್ತಿದ್ದರೆಂದಾದರೆ ಅವರು ಅದನ್ನು ಕೈಬಿಟ್ಟದ್ದು ಯಾವಾಗ? ಹಸುವಿನ ಮಾಂಸವನ್ನು ತಿನ್ನುವುದರ ವಿರುದ್ಧ ಅಸಹ್ಯತೆಯ ಪರಿಣಾಮ ಅಸ್ಪೃಶ್ಯತೆ ಎನ್ನುವುದಾದರೆ ಹಿಂದೂಗಳು ಅದನ್ನು ತಿನ್ನುವುದನ್ನು ಕೈಬಿಟ್ಟ ಎಷ್ಟುಕಾಲದ ನಂತರ ಅಸ್ಪೃಶ್ಯತೆಯು ಅಸ್ತಿತ್ವಕ್ಕೆ ಬಂದಿತು? ಈ ಪ್ರಶ್ನೆಗಳಿಗೆ ಉತ್ತರ ನೀಡಬೇಕಾದ್ದು ಅವಶ್ಯ. ಅವುಗಳಿಗೆ ಉತ್ತರಿಸದಿದ್ದರೆ ಈ ಸಿದ್ಧಾಂತವು ಅನುಮಾನದಲ್ಲೇ ಉಳಿಯಬೇಕಾಗುತ್ತದೆ. ಅದು ಸಾಧ್ಯತೆಯಿರುವ ಸಿದ್ಧಾಂತವೆಂದು ತಿಳಿಯಲಾಗುತ್ತದೆಯೇ ವಿನಾ ಇತ್ಯರ್ಥವಾಗಿ ಒಪ್ಪಿಗೆ ಪಡೆದ ಸಿದ್ಧಾಂತವಾಗುವುದಿಲ್ಲ. ಸಿದ್ಧಾಂತವನ್ನು ಮುಂದಿಟ್ಟಿರುವುದರಿಂದ ಈ ಪ್ರಶ್ನೆಗಳಿಗೆ ಉತ್ತರಿಸಲು ಬಾಧ್ಯನಾಗಿದ್ದೇನೆ. ಆದ್ದರಿಂದ ಈ ಕೆಳಗಿನ ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳಬೇಕೆಂದು ಉದ್ದೇಶಿಸಿದ್ದೇನೆ :

(೧) ಹಿಂದುಗಳು ಎಂದು ಗೋಮಾಂಸವನ್ನು ತಿನ್ನುತ್ತಿರಲಿಲ್ಲವೆ?
(೨) ಹಿಂದುಗಳು ಗೋಮಾಂಸಭಕ್ಷಣೆಯನ್ನು ವರ್ಜಿಸಲು ಕಾರಣವೇನು?
(೩) ಬ್ರಾಹ್ಮಣರು ಸಸ್ಯಾಹಾರಿಗಳಾದದ್ದು ಏಕೆ?
(೪) ಗೋವಿನ ಮಾಂಸವನ್ನು ತಿನ್ನುವುದೇಕೆ ಅಸ್ಪೃಶ್ಯತೆಗೆ ಎಡೆಮಾಡಿಕೊಟ್ಟಿತು?, ಮತ್ತು
(೫) ಅಸ್ಪೃಶ್ಯತೆಯು ಹುಟ್ಟಿದ್ದು ಯಾವಾಗ?

♦

## ಭಾಗ – V

# ಹೊಸ ಸಿದ್ಧಾಂತಗಳು ಹಾಗೂ ಕೆಲವು ಪ್ರಶ್ನೆಗಳು

ಅಧ್ಯಾಯ ೧೧ : ಹಿಂದೂಗಳು ಗೋಮಾಂಸವನ್ನು ಎಂದೂ ತಿನ್ನುತ್ತಿರಲಿಲ್ಲವೆ?

ಅಧ್ಯಾಯ ೧೨ : ಬ್ರಾಹ್ಮಣೇತರರು ಗೋಮಾಂಸ ಭಕ್ಷಣೆಯನ್ನು ವರ್ಜಿಸಿದ್ದೇಕೆ?

ಅಧ್ಯಾಯ ೧೩ : ಬ್ರಾಹ್ಮಣರು ಸಸ್ಯಾಹಾರಿಗಳಾದದ್ದು ಏಕೆ?

ಅಧ್ಯಾಯ ೧೪ : ಗೋವಿನ ಮಾಂಸವನ್ನು ತಿನ್ನುವುದು ನತದೃಷ್ಟರನ್ನೇಕೆ ಅಸ್ಪೃಶ್ಯರನ್ನಾಗಿಸಿತು?

# ಅಧ್ಯಾಯ ೧೧

## ಹಿಂದೂಗಳು ಗೋಮಾಂಸವನ್ನು ಎಂದೂ ತಿನ್ನುತ್ತಿರಲಿಲ್ಲವೆ?

ಹಿಂದೂಗಳು ಎಂದಾದರೂ ಹಸುವಿನ ಮಾಂಸ ತಿನ್ನುತ್ತಿದ್ದರೇ ಎಂಬ ಪ್ರಶ್ನೆಗೆ ಪ್ರತಿಯೊಬ್ಬ ಸ್ಪೃಶ್ಯ ಹಿಂದುವೂ – ಅವನು ಬ್ರಾಹ್ಮಣನಾಗಿರಲಿ ಅಥವಾ ಬ್ರಾಹ್ಮಣೇತರನಾಗಿರಲಿ ಕೊಡುವ ಉತ್ತರ, 'ಇಲ್ಲ, ಎಂದೆಂದಿಗೂ ಇಲ್ಲ' ಎಂದೇ. ಒಂದರ್ಥದಲ್ಲಿ ಅವನ ಈ ಉತ್ತರ ಸರಿ. ಈಗ ಸುಮಾರು ಕಾಲದಿಂದ ಯಾವ ಹಿಂದುವೂ ಹಸುವಿನ ಮಾಂಸ ತಿಂದಿಲ್ಲ. ಅವನ ಉತ್ತರದಿಂದ ಸ್ಪೃಶ್ಯ ಹಿಂದುವು ಇದಿಷ್ಟನ್ನೇ ತಿಳಿಸುತ್ತಾನಾದರೆ ಅದರ ಬಗ್ಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ – ಆದರೆ ಹಿಂದುಗಳು ಎಂದೆಂದೂ ಗೋಮಾಂಸ ಭಕ್ಷಿಸುತ್ತಿರಲಿಲ್ಲ ಮಾತ್ರವಲ್ಲ, ಅವರು ಯಾವಾಗಲೂ ಗೋವನ್ನು ಪವಿತ್ರವೆಂದು ಬಗೆದಿದ್ದಾರೆ ಮತ್ತು ಯಾವಾಗಲೂ ಅದನ್ನು ಕೊಲ್ಲುವುದರ ವಿರುದ್ಧವೇ ಇದ್ದರು ಎಂದು ವಿದ್ವದ್ಬ್ರಾಹ್ಮಣರು ವಾದ ಹೂಡಿದರೆ ಆ ಅಭಿಪ್ರಾಯವನ್ನು ಅಂಗೀಕರಿಸುವುದು ಅಸಾಧ್ಯ.

ಹಿಂದುಗಳು ಎಂದೂ ಗೋಮಾಂಸವನ್ನು ಭಕ್ಷಿಸುತ್ತಿರಲಿಲ್ಲ ಮತ್ತು ಗೋಹತ್ಯೆಯನ್ನು ಅವರು ಯಾವಾಗಲೂ ವಿರೋಧಿಸುತ್ತಲೇ ಇದ್ದರು ಎಂಬ ಅಭಿಪ್ರಾಯದ ಪರವಾಗಿರುವ ಪುರಾವೆ ಏನು?

ಋಗ್ವೇದದಲ್ಲಿರುವ ಎರಡು ದಾಖಲೆಗಳ ಸರಣಿಗಳನ್ನು ಇದರ ಪರವಾಗಿರುವುದಾಗಿ ನಂಬಲಾಗಿದೆ. ಅವುಗಳ ಪೈಕಿ ಒಂದರಲ್ಲಿ ಹಸುವನ್ನು "ಅಘ್ನ್ಯಾ" ಎಂದು ಕರೆಯಲಾಗಿದೆ. ಅದು ಋಗ್ವೇದದ ೧.೧೬೪–೨೭, ೪.೧–೬ ೫.೮೨–೮, ೭–೬೯–೭೧ ಮತ್ತು ೧೦–೮೭, – ಇಲ್ಲಿ ಕಾಣಸಿಗುತ್ತದೆ. "ಅಘ್ನ್ಯಾ" ಎಂದರೆ 'ಕೊಲ್ಲಲು ಅರ್ಹವಲ್ಲದ್ದು' (ಕೊಲ್ಲಬಾರದ ಪ್ರಾಣಿ) ಎಂದರ್ಥ. ಹಸುವನ್ನು ಕೊಲ್ಲುವುದರ ವಿರುದ್ಧ ಇದೊಂದು ನಿಷೇಧಾಜ್ಞೆಯೆಂದು ಇದನ್ನನುಸರಿಸಿ, ವಾದ ಮಾಡಲಾಗಿದೆ. ಧರ್ಮವಿಷಯದಲ್ಲಿ ವೇದಗಳೇ ಅಂತಿಮ ಪ್ರಾಮಾಣ್ಯವಾದ್ದರಿಂದ ಆರ್ಯರು ಗೋವುಗಳನ್ನು ಕೊಂದಿರಲಾರರೆಂದು ಸಹ ತೀರ್ಮಾನಿಸಲಾಗಿದೆ. ಕೊಲ್ಲುವುದೇ ನಿಷೇಧವಾಗಿದ್ದಾಗ ಇನ್ನು ತಿನ್ನುವ ಪ್ರಶ್ನೆ ಏಳುವುದೇ ಇಲ್ಲವಲ್ಲ. ಇನ್ನೊಂದು ದಾಖಲೆಗಳ ಸರಣಿಯಲ್ಲಿ ಗೋವನ್ನು ಪವಿತ್ರವೆಂದು ಬಣ್ಣಿಸಲಾಗಿದೆ. ಅದು ಋಗ್ವೇದ ೬–೨೮–೧ ಮತ್ತು ೮, ಹಾಗೂ ೮–೧೦೧–೧೫ರಲ್ಲಿ ಲಭ್ಯವಿದೆ. ಈ ಮಂತ್ರಗಳಲ್ಲಿ ಗೋವನ್ನು ರುದ್ರರ ತಾಯಿ, ವಸುಗಳ ಮಗಳು, ಆದಿತ್ಯರ ಸೋದರಿ, ಮತ್ತು ಅಮೃತದ ಕೇಂದ್ರಸ್ಥಾನ ಎಂದು ಸಂಬೋಧಿಸಲಾಗಿದೆ. ಈ ವಿಷಯವನ್ನು ಕುರಿತಂತೆ ಇನ್ನೊಂದು ದಾಖಲೆಯು ಋಗ್ವೇದದ ೮–೧೦೧–೧೬ ಎಂಬಲ್ಲಿರುವ ಮಂತ್ರ. ಇಲ್ಲಿ ಗೋವನ್ನು ದೇವಿ (ದೇವತೆ)ಯೆಂದು ಕರೆಯಲಾಗಿದೆ.

ಬ್ರಾಹ್ಮಣ ಮತ್ತು ಸೂತ್ರ ಗ್ರಂಥಗಳಲ್ಲಿರುವ ಕೆಲವು ಭಾಗಗಳನ್ನೂ ಆಧಾರವಾಗಿ ತೆಗೆದುಕೊಳ್ಳಲಾಗಿದೆ.

ಪಶುಯಜ್ಞ ಮತ್ತು ಗೋಮಾಂಸ ಭಕ್ಷಣೆಗೆ ಸಂಬಂಧಿಸಿದ ಎರಡು ವಾಕ್ಯಭಾಗಗಳು ಶತಪಥ ಬ್ರಾಹ್ಮಣದಲ್ಲಿವೆ. ಅವುಗಳ ಪೈಕಿ ಒಂದು ೩–೧–೨–೨೧ರಲ್ಲಿದೆ. ಅದು ಕೆಳಕಂಡಂತಿದೆ :

"ನಂತರ ಅಧ್ವರ್ಯುವು ಅವನನ್ನು (ಯಜ್ಞ) ಶಾಲೆಯೊಳಕ್ಕೆ ಹೋಗುವಂತೆ ಮಾಡುತ್ತಾನೆ. ಹಸು ಮತ್ತು ಎತ್ತಿನ ಮಾಂಸವನ್ನಾತ ತಿನ್ನದಿರಲಿ; ಏಕೆಂದರೆ ಈ ಪೃಥ್ವಿಯಲ್ಲಿರುವ ಎಲ್ಲವನ್ನೂ ನಿಸ್ಸಂಶಯವಾಗಿ

ಹಸು ಮತ್ತು ಎತ್ತು ಪೋಷಿಸುತ್ತವೆ. ದೇವತೆಗಳು ನುಡಿದರು, 'ನಿಜಕ್ಕೂ ಇಲ್ಲಿರುವುದನ್ನೆಲ್ಲಾ ಹಸು ಮತ್ತು ಎತ್ತು ಪೋಷಿಸುತ್ತವೆ ; ಆದ್ದರಿಂದ ಇತರ ಎಲ್ಲ ಬಗೆಯ ಪ್ರಾಣಿಗಳಿಗೂ ಸೇರಿದ ಕಸುವನ್ನು ಹಸು ಮತ್ತು ಎತ್ತುಗಳಿಗೆ ಅನುಗ್ರಹಿಸೋಣ ಬನ್ನಿ.' ಆದ್ದರಿಂದಲೇ ಹಸು ಮತ್ತು ಎತ್ತು ಅಧಿಕವಾಗಿ ತಿನ್ನುತ್ತವೆ. ಆದ್ದರಿಂದ ಎತ್ತು ಅಥವಾ ಹಸುವಿನ ಮಾಂಸವನ್ನು ಯಾರಾದರೂ ತಿಂದರೆ ಒಂದು ವಿಧದಲ್ಲಿ ಸಮಸ್ತವನ್ನೂ ತಿಂದುಹಾಕಿದಂತೆ ಆಗುತ್ತದೆ ; ಅಥವಾ, ಒಂದು ರೀತಿಯಲ್ಲಿ ಕೊನೆಯನ್ನು (ಇಲ್ಲವೆ ನಾಶವನ್ನು) ಮುಟ್ಟಿದಂತಾಗುತ್ತದೆ... ಆದ್ದರಿಂದ ಅವನು ಹಸು ಮತ್ತು ಎತ್ತಿನ ಮಾಂಸವನ್ನು ತಿನ್ನದಿರಲಿ."

ಇನ್ನೊಂದು ವಾಕ್ಯಭಾಗವು ೧–೨–೩–೬ರಲ್ಲಿದೆ. ಅದು ಪ್ರಾಣಿಗಳನ್ನು ಆಹುತಿ ಕೊಡುವುದರ ವಿರುದ್ಧ ಹೇಳುತ್ತದೆ; ಅದೂ ನೈತಿಕ ಆಧಾರಗಳ ಮೇಲೆ.

ಇದಕ್ಕೆ ಸಂವಾದಿಯಾದಂತಹ ಹೇಳಿಕೆಯು ೧–೫–೧೭–೨೯ರಲ್ಲಿ ಆಪಸ್ತಂಭ ಧರ್ಮಸೂತ್ರದಲ್ಲಿದೆ. ಹಸುವಿನ ಮಾಂಸ ತಿನ್ನುವುದರ ವಿರುದ್ಧವಾಗಿ ಒಂದು ವ್ಯಾಪಕ ನಿಷೇಧವನ್ನು ಆಪಸ್ತಂಭ ವಿಧಿಸುತ್ತಾನೆ.

ಹಿಂದುಗಳು ಎಂದೂ ಹಸುವಿನ ಮಾಂಸವನ್ನು ತಿನ್ನುತ್ತಿರಲಿಲ್ಲವೆಂಬ ಅಭಿಪ್ರಾಯದ ಪರವಾಗಿರುವ ಪುರಾವೆಗಳಿವು. ಈ ಪುರಾವೆಯಿಂದ ನಾವು ಕೈಗೊಳ್ಳಬಹುದಾದ ತೀರ್ಮಾನವೇನು?

ಋಗ್ವೇದದಿಂದ ಉದ್ಧರಿಸಲಾಗಿರುವ ಪುರಾವೆಯ ಬಗ್ಗೆ ಹೇಳುವುದಾದರೆ ಆ ಗ್ರಂಥಭಾಗಗಳನ್ನು ತಪ್ಪಾಗಿ ಓದಿಕೊಂಡು ಅಪಾರ್ಥ ಕಲ್ಪಿಸಿ ತೀರ್ಮಾನಕ್ಕೆ ಬರಲಾಗಿದೆಯೆಂದು ಹೇಳಬೇಕಾಗಿದೆ. "ಅಘ್ನ್ಯಾ" ಎಂಬ ಗುಣವಾಚಕವು ಋಗ್ವೇದದಲ್ಲಿ ಹಸುವಿಗೆ ಕೊಡಲ್ಪಟ್ಟಾಗ ಹಾಲನ್ನೀಯುವ ಹಸು ಎಂದಷ್ಟೇ ಅದರರ್ಥ; ಈ ಕಾರಣದಿಂದ ಅದು ಕೊಲ್ಲಲ್ಪಡಬಾರದು ಎಂಬ ಸೂಚನೆ ಇದೆ. ಋಗ್ವೇದದಲ್ಲಿ ಹಸುವನ್ನು ಆರಾಧಿಸಲಾಗಿದೆಯೆಂಬುದೇನೋ ನಿಜ. ಆದರೆ ಹಸುವಿನ ಬಗೆಗಿನ ಈ ಆದರ ಮತ್ತು ಆರಾಧನೆಯು ಕೃಷಿಕ ಪಂಗಡವಾಗಿದ್ದ ಇಂಡೋ–ಆರ್ಯನರಂತಹವರಲ್ಲಿ ನಿರೀಕ್ಷಿಸಬಹುದಾದ ಭಾವನೆಯೇ ಆಗಿದೆ. ಹಸುವಿನ ಪ್ರಯೋಜನದ ಬಗೆಗಿನ ಈ ಅನ್ವಯವು ಆಹಾರದನಿಮಿತ್ತವಾಗಿ ಹಸುವನ್ನು ಕೊಲ್ಲುವುದರಿಂದ ಆರ್ಯರನ್ನು ನಿರ್ಬಂಧಿಸಲಿಲ್ಲ. ಹಾಗೆ ನೋಡಿದರೆ ಹಸುವನ್ನು ಪವಿತ್ರವೆಂದು ಪರಿಗಣಿಸದ್ದರಿಂದಲೇ ಅದನ್ನು ಕೊಲ್ಲಲಾಗುತ್ತಿತ್ತು. ಮಾನ್ಯ ಕಾಣೆಯವರು ಗಮನಿಸಿರುವಂತೆ,

> "ವೈದಿಕ ಕಾಲದಲ್ಲಿ ಹಸುವು ಪವಿತ್ರವೆಂದೆಣಿಸಲಾಗಿರಲಿಲ್ಲವೆಂದಲ್ಲ; ಅದರ ಪವಿತ್ರತೆಯಿಂದಾಗಿಯೇ ಹಸುವಿನ ಮಾಂಸವನ್ನು ತಿನ್ನಬೇಕೆಂದು ವಾಜಸನೇಯಿ ಸಂಹಿತೆಯಲ್ಲಿ ವಿಧಿಸಲಾಗಿರುವುದು."[೧]

ಋಗ್ವೇದದ ಕಾಲದ ಆರ್ಯರು ಆಹಾರನಿಮಿತ್ತವಾಗಿ ಹಸುಗಳನ್ನು ಕೊಲ್ಲುತ್ತಿದ್ದರೆಂಬುದು ಹಾಗೂ ಹಸುವಿನ ಮಾಂಸವನ್ನು ತಿನ್ನುತ್ತಿದ್ದರೆಂಬುದು ಋಗ್ವೇದದಿಂದಲೇ ಯಥೇಚ್ಛವಾಗಿ ಸಾಬೀತಾಗುತ್ತದೆ. ಋಗ್ವೇದದಲ್ಲಿ (೧೦.೮೬–೧೪) ಇಂದ್ರ ಹೇಳುತ್ತಾನೆ. "ನನ್ನೊಬ್ಬನಿಗಾಗಿ ಅವರು ಹದಿನೈದು ಇಪ್ಪತ್ತು ಎತ್ತುಗಳನ್ನು ಬೇಯಿಸುತ್ತಾರೆ." ಇನ್ನೊಂದೆಡೆ (೧೦.೯೧–೪) ಅಗ್ನಿಗಾಗಿ ಕುದುರೆಗಳು, ಹೋರಿಗಳು, ಎತ್ತುಗಳು, ಬರಡು ಹಸುಗಳು ಮತ್ತು ಟಗರುಗಳನ್ನು ಆಹುತಿ ನೀಡಲಾಯಿತೆಂದು ಹೇಳಲಾಗಿದೆ. ಋಗ್ವೇದ ೧೦.೭೨–೬ರಿಂದ ಹಸುವನ್ನು ಕತ್ತಿ ಅಥವಾ ಕೊಡಲಿಯಿಂದ ಕೊಲ್ಲಲಾಗುತ್ತಿತ್ತೆಂದು ತಿಳಿಯಬರುತ್ತದೆ.

ಇನ್ನು ಶತಪಥ ಬ್ರಾಹ್ಮಣದ ಪ್ರಮಾಣವನ್ನು ನೋಡುವುದಾದರೆ ಅದೊಂದು ನಿರ್ಣಾಯಕವಾದ ವಾಕ್ಯವೆಂದು ಹೇಳಬರುತ್ತದೆಯೆ? ಸಹಜವಾಗಿಯೇ ಇಲ್ಲ. ಏಕೆಂದರೆ ಬೇರೊಂದು ಅಭಿಪ್ರಾಯವನ್ನು ಸೂಚಿಸುವ ವಾಕ್ಯ ಭಾಗಗಳು ಇತರ ಬ್ರಾಹ್ಮಣ ಗ್ರಂಥಗಳಲ್ಲಿ ಲಭ್ಯವಿದೆ.

೧. ಧರ್ಮಶಾಸ್ತ್ರ ವಿಚಾರ (ಮರಾಠಿಯಲ್ಲಿ), ಪುಟ ೧೮೦.

ಒಂದು ಉದಾಹರಣೆಯನ್ನು ನೋಡೋಣ. ತೈತ್ತಿರೀಯ ಬ್ರಾಹ್ಮಣದಲ್ಲಿ ನಿಗದಿತವಾಗಿರುವ ಕಾಮ್ಯೇಷ್ಟಿ ಯಾಗಗಳಲ್ಲಿ ಎತ್ತು ಮತ್ತು ಹಸುಗಳನ್ನು ಆಹುತಿ ಕೊಡಬೇಕಾಗಿ ವಿಧಿಸಲಾಗಿದೆ; ಮಾತ್ರವಲ್ಲ, ಯಾವ ಯಾವ ದೇವತೆಗಳಿಗೆ ಯಾವ ಯಾವ ಬಗೆಯ ಎತ್ತು ಮತ್ತು ಹಸುಗಳನ್ನು ಆಹುತಿ ಕೊಡಬೇಕೆಂದು ವಿವರಿಸಲಾಗಿದೆ ಕೂಡ. ಅದರಂತೆ ವಿಷ್ಣುವಿಗೆ ಆಹುತಿ ನೀಡಲು ಕುಬ್ಜವಾದ ಎತ್ತೊಂದನ್ನು ಆಯ್ಕೆ ಮಾಡಿಕೊಳ್ಳಬೇಕು; ವೃತ್ರನನ್ನು ವಧಿಸಿರುವ ಇಂದ್ರನಿಗೆ ಆಹುತಿಗಾಗಿ ಹಣೆಯ ಮೇಲೆ ಹೊಳಪಿನ ಚುಕ್ಕೆಯಿದ್ದು ಕೆಳಕ್ಕೆ ಜೋಲುತ್ತಿರುವ ಕೊಂಬುಗಳನ್ನುಳ್ಳ ಎತ್ತನ್ನು ಆಯ್ದುಕೊಳ್ಳಬೇಕು. ಪೂಷನ್ ದೇವತೆಗೆ ಕರಿಯ ಹಸುವನ್ನು ಕೊಡಬೇಕು. ರುದ್ರನಿಗೆ ಕೆಂಪು ಹಸು ಇತ್ಯಾದಿ. ತೈತ್ತಿರೀಯ ಬ್ರಾಹ್ಮಣದಲ್ಲಿ ಪಂಚಶಾರದೀಯ ಸೇವಾ ಎಂಬ ಇನ್ನೊಂದು ಯಾಗದ ಬಗ್ಗೆ ಉಲ್ಲೇಖವಿದೆ. ಈ ಯಾಗದಲ್ಲಿ ಅತಿಮುಖ್ಯವಾದ ಒಂದು ವಿಧಿಯ ಪ್ರಕಾರ ಐದು ವರ್ಷ ವಯಸ್ಸಿನ ಹದಿನೇಳು ಡುಬ್ಬವಿಲ್ಲದ ಗಿಡ್ಡ ಎತ್ತುಗಳನ್ನು ಹಾಗೂ ಅಷ್ಟೇ ಸಂಖ್ಯೆಯ ಮೂರು ವರ್ಷಕ್ಕೂ ಕಡಿಮೆ ವಯಸ್ಸಿನ ಗಿಡ್ಡ ಕಡಸುಗಳನ್ನು ಬಲಿ ಕೊಡಬೇಕು.

ಮೇಲೆ ಉಲ್ಲೇಖಿಸಿದ ಆಪಸ್ತಂಭ ಧರ್ಮಸೂತ್ರದ ಹೇಳಿಕೆಗೆ ಸಂಬಂಧಿಸಿದಂತೆ ಕೆಳಗಿನ ಅಂಶಗಳನ್ನು ಗಮನಿಸಬಹುದು.

ಅದೇ ಧರ್ಮಸೂತ್ರ ಗ್ರಂಥದಲ್ಲಿ ಬೇರೊಂದೆಡೆ ಅದಕ್ಕೆ ತದ್ವಿರುದ್ಧವಾದ ಮಾತನ್ನು ಹೇಳಲಾಗಿದೆಯೆಂಬುದು ಇಂತಹ ಮೊದಲ ಅಂಶ ೧೫.೧೪–೨೯ ಎಂಬಲ್ಲಿರುವ ಸೂತ್ರ ಹೀಗೆನ್ನುತ್ತದೆ:

"ಹಸು ಮತ್ತು ಎತ್ತು ಪವಿತ್ರವಾದವು ; ಆದ್ದರಿಂದ ಅವನ್ನು ತಿನ್ನಬೇಕು."

ಎರಡನೆಯ ಅಂಶವು ಗೃಹ್ಯಸೂತ್ರಗಳಲ್ಲಿ ಮಧುಪರ್ಕವನ್ನು ವಿಧಿಸುವುದನ್ನು ಕುರಿತದ್ದಾಗಿದೆ. ಮುಖ್ಯವಾದ ಅತಿಥಿಗಳನ್ನು ಬರಮಾಡಿಕೊಳ್ಳುವುದು ಆರ್ಯರಲ್ಲಿ ಒಂದು ಸಂಪ್ರದಾಯಬದ್ಧವಾದ ಆಚರಣೆಯಾಗಿ ನೆಲೆಗೊಂಡಿದ್ದಿತು ಮತ್ತು ಅದಕ್ಕೊಂದು ವಿಧ್ಯುಕ್ತವಾದ ಕ್ರಮವಿತ್ತು. ಅವುಗಳಲ್ಲಿ ಮಧುಪರ್ಕವನ್ನು ನೀಡುವುದು ಬಹಳ ಮುಖ್ಯವಾದ ಅಂಗವಾಗಿತ್ತು. ಬೇರೆ ಬೇರೆ ಗೃಹ್ಯಸೂತ್ರಗಳಲ್ಲಿ ಇದನ್ನು ಕುರಿತಂತೆ ವಿವರವಾದ ನಿರೂಪಣೆಗಳಿವೆ. ಬಹಳಷ್ಟು ಗೃಹ್ಯಸೂತ್ರಗಳಲ್ಲಿ ಉಲ್ಲೇಖವಾಗಿರುವಂತೆ ಮಧುಪರ್ಕವನ್ನು ಸ್ವೀಕರಿಸಲು ಅರ್ಹರಾದವರು ಆರು ಬಗೆಯವರಿದ್ದಾರೆ : (೧) ಯಜ್ಞವನ್ನು ನೆರವೇರಿಸಿಕೊಡಲು ಆಹ್ವಾನಿಸಲಾದ ಋತ್ವಿಜ, (೨) ಉಪಾಧ್ಯಾಯನಾದ ಆಚಾರ್ಯ, (೩) ಮದುವೆಯ ಗಂಡು, (೪) ರಾಜ, (೫) ಗುರುಕುಲದಲ್ಲಿ ಅಧ್ಯಯನವನ್ನು ಆಗತಾನೆ ಮುಗಿಸಿಬಂದಿರುವ ವಿದ್ಯಾರ್ಥಿ ಅಥವಾ ಸ್ನಾತಕ, ಮತ್ತು (೬) ಆತಿಥೇಯನಿಗೆ ಪ್ರಿಯನಾದ ಯಾವುದೇ ವ್ಯಕ್ತಿ. ಈ ಪಟ್ಟಿಗೆ ಕೆಲವರು ಅತಿಥಿಯನ್ನೂ ಸೇರಿಸುತ್ತಾರೆ, ಋತ್ವಿಜ, ರಾಜ ಮತ್ತು ಆಚಾರ್ಯರನ್ನುಳಿದು ಇತರರಿಗೆ ವರ್ಷಕ್ಕೊಮ್ಮೆ ಮಧುಪರ್ಕವನ್ನು ನೀಡಬೇಕು. ಋತ್ವಿಜ, ರಾಜ ಮತ್ತು ಆಚಾರ್ಯರಿಗಾದರೋ ಅವರು ಬಂದಾಗಲೆಲ್ಲಾ ಅದನ್ನು ನೀಡಿ ಸತ್ಕರಿಸಬೇಕು.

ಈ ಮಧುಪರ್ಕವನ್ನು ಮಾಡುವುದಾದರೂ ಯಾವ ಸಾಮಗ್ರಿಯಿಂದ? ಅದನ್ನು ನೀಡುವುದಕ್ಕೆ ಬಳಕೆಯಾಗುವ ಪದಾರ್ಥಗಳ ಬಗ್ಗೆ ವಿವಿಧವಾದ ವಿವರಣೆಗಳಿವೆ. ಆಶ್ವಲಾಯನ ಮತ್ತು ಆಪಸ್ತಂಬ (೧೩.೧೦) ಗೃಹ್ಯಸೂತ್ರಗಳು ವಿಧಿಸುವ ಪ್ರಕಾರ ಅದು ಜೇನುತುಪ್ಪ ಹಾಗೂ ಮೊಸರಿನ ಮಿಶ್ರಣ, ಇಲ್ಲವೇ ಕಾದ ಬೆಣ್ಣೆ (ತುಪ್ಪ) ಹಾಗೂ ಮೊಸರಿನ ಮಿಶ್ರಣ. ಪರಾಶರ ಗೃಹ್ಯಸೂತ್ರದಂತಹ ಬೇರೆ ಧರ್ಮಶಾಸ್ತ್ರ ಗ್ರಂಥಗಳ ಪ್ರಕಾರ ಅದರಲ್ಲಿ ಮೂರು ಪದಾರ್ಥಗಳ ಮಿಶ್ರಣವಿದೆ : ಮೊಸರು, ಜೇನುತುಪ್ಪ ಮತ್ತು ಬೆಣ್ಣೆ. ಆಪಸ್ತಂಬ ಗೃಹ್ಯಸೂತ್ರವು (೧೩.೧೧–೧೨) ಹೇಳುವಂತೆ ಕೆಲವರ ಅಭಿಪ್ರಾಯದಲ್ಲಿ ಅದು ಈ ಮೂರು ಪದಾರ್ಥಗಳ ಮಿಶ್ರಣ, ಇಲ್ಲವೇ ಹುರಿಯಲಾದ ಯವ ಮತ್ತು ಬಾರ್ಲಿ ಸೇರಿದಂತೆ ಐದು ಪದಾರ್ಥಗಳ

ಮಿಶ್ರಣ. ಹಿರಣ್ಯಕೇಶಿ ಗೃಹ್ಯಸೂತ್ರವು (೧.೧೨.೧೦-೧೨) ಮೊಸರು, ಜೇನುತುಪ್ಪ, ತುಪ್ಪ, ನೀರು ಮತ್ತು ಭೂಮಿಯಲ್ಲಿ ಬೆಳೆದ ಕಾಳುಗಳೆಂಬ ಐದು ಪದಾರ್ಥಗಳ ಪೈಕಿ ಮೂರರ ಮಿಶ್ರಣವನ್ನು ಸೂಚಿಸುತ್ತದೆ. ಕೌಶಿಕ ಸೂತ್ರವು (೯೨) ಒಂಬತ್ತು ವಿಧದ ಮಿಶ್ರಣಗಳನ್ನು ಕುರಿತು ಹೇಳುತ್ತದೆ : ಬ್ರಹ್ಮ (ಜೇನುತುಪ್ಪ ಮತ್ತು ಮೊಸರು), ಐಂದ್ರ (ಪಾಯಸಯುಕ್ತವಾದ್ದು), ಸೌಮ್ಯ (ಮೊಸರು ಮತ್ತು ತುಪ್ಪ), ಪೌಷ್ಣ (ತುಪ್ಪ ಮತ್ತು ಮಂಥ), ಸಾರಸ್ವತ (ಹಾಲು ಮತ್ತು ತುಪ್ಪ), ಮೌಸಲ (ಮದ್ಯ ಮತ್ತು ತುಪ್ಪ); ಇದು ಸೌತ್ರಮಣಿ ಮತ್ತು ರಾಜಸೂಯ ಯಾಗಗಳಲ್ಲಿ ಮಾತ್ರ ಬಳಕೆಗೆ ಬರುತ್ತದೆ), ಹಾಗೂ ಪರಿವ್ರಾಜಕ (ಎಳ್ಳೆಣ್ಣೆ ಮತ್ತು ಎಣ್ಣೆಯಲ್ಲಿ ಮಾಡಿದ ಕಜ್ಜಾಯ). ಮಾಧವ ಗೃಹ್ಯಸೂತ್ರವು ಹೇಳುವಂತೆ ವೇದವು ವಿಧಿಸಿದ ಪ್ರಕಾರ ಮಧುಪರ್ಕವು ಮಾಂಸರಹಿತವಾಗಿರಕೂಡದು; ಆದ್ದರಿಂದ ಹಸುವನ್ನು ಬಿಟ್ಟುಬಿಟ್ಟಿದ್ದರೆ ಆಡಿನ ಮಾಂಸ ಅಥವಾ ಪಾಯಸವನ್ನು ನೀಡಬಹುದೆಂದು ಅದು ಶಿಫಾರಸ್ಸು ಮಾಡುತ್ತದೆ. ಹಿರಣ್ಯಕೇಶಿ ಗೃಹ್ಯಸೂತ್ರವು (೧.೧೩-೧೪) ಹೇಳುವಂತೆ ಬೇರಾವುದಾದರೂ ಮಾಂಸವನ್ನು ನೀಡಬೇಕು. ಬೌಧಾಯನ ಗೃಹ್ಯಸೂತ್ರದ ಪ್ರಕಾರ ಹಸುವನ್ನು ಬಿಟ್ಟುಬಿಟ್ಟಿದ್ದರೆ ಆಡಿನ ಅಥವಾ ಟಗರಿನ ಮಾಂಸ ಇಲ್ಲವೇ ಯಾವುದಾದರೂ ವನ್ಯಮೃಗದ (ಜಿಂಕೆ, ಇತ್ಯಾದಿ) ಮಾಂಸವನ್ನು ನೀಡಬಹುದು. ಮಾಂಸವಿಲ್ಲದೆ ಮಧುಪರ್ಕವಿರಲು ಸಾಧ್ಯವಿಲ್ಲವಾದ್ದರಿಂದ ಹೀಗೆ ಮಾಡಬೇಕಾಗುತ್ತದೆ. ಮಾಂಸವನ್ನು ನೀಡಲು ಅಶಕ್ತನಾದವನು ಭೂಮಿಯಲ್ಲಿ ಬೆಳೆದ ಯಾವುದಾದರೂ ಕಾಳನ್ನು ಬೇಯಿಸಿ ಕೊಡಬಹುದು.

ಆದ್ದರಿಂದ ಮಧುಪರ್ಕದ ಅತಿಮುಖ್ಯ ಅಂಶವು ಮಾಂಸ, ವಿಶೇಷತಃ ಹಸುವಿನ ಮಾಂಸ, ಎಂದಂತಾಯಿತು.

ಅತಿಥಿಯ ಗೌರವಾರ್ಥವಾಗಿ ಹಸುವನ್ನು ಕೊಲ್ಲುವುದು ಎಷ್ಟು ವ್ಯಾಪಕವಾಗಿ ಬೆಳೆದಿದ್ದಿತೆಂದರೆ ಅತಿಥಿಯನ್ನು 'ಗೋಘ್ನ', ಅಂದರೆ ಹಸುವನ್ನು ಕೊಲ್ಲುವವನು, ಎಂದೇ ಕರೆಯಲಾಗುತ್ತಿತ್ತು. ಹೀಗೆ ಹಸುಗಳನ್ನು ಕೊಲ್ಲುವುದನ್ನು ನಿವಾರಿಸಲು ಆಶ್ವಲಾಯನ ಗೃಹ್ಯಸೂತ್ರವು (೧.೨೪.೨೫) ಒಂದು ಉಪಾಯವನ್ನು ಸೂಚಿಸುತ್ತದೆ. ಸಂಪ್ರದಾಯ ವಿಧಿಯಿಂದ ಪಾರಾಗಲು ಅತಿಥಿಯು ಬಂದಾಗ ಹಸುವನ್ನು ಅಟ್ಟಿಬಿಡಬೇಕು.

ಮೂರನೆಯ ಅಂಶವನ್ನೀಗ ನೋಡೋಣ. ಆಪಸ್ತಂಭ ಧರ್ಮಸೂತ್ರದ ಪ್ರಮಾಣಕ್ಕೆ ಪ್ರತಿಯಾಗಿ ಸತ್ತವರನ್ನು ಮಣ್ಣುಮಾಡುವ ಕ್ರಿಯೆಗೆ ಸಂಬಂಧಿಸಿದ ಸಂಪ್ರದಾಯ ವಿಧಿಗಳನ್ನು ನಾವಿಲ್ಲಿ ಉಲ್ಲೇಖಿಸಬಹುದಾಗಿದೆ. ಸೂತ್ರವು ಹೇಳುವುದಿದು :[೧]

೧. ನಂತರ (ಸತ್ತ ಶರೀರದ ಮೇಲೆ) ಕೆಳಗಿನ (ಯಾಜ್ಞಿಕ) ಉಪಕರಣಗಳನ್ನು ಇರಿಸಬೇಕು.

೨. ಬಲಗೈಗೆ ಗುಹು (ಎಂಬ ಚಮಚ).

೩. ಎಡಗೈಗೆ ಉಪಭೃತ (ಎಂಬ ಇನ್ನೊಂದು ಚಮಚ).

೪. ಅವನ ಬಲಗಡೆಯಲ್ಲಿ ಸ್ಫ್ಯ ಎಂಬ ಯಜ್ಞದ ಕತ್ತಿ, ಮರದಿಂದ ಮಾಡಿದ್ದು ; ಅವನ ಎಡಗಡೆಯಲ್ಲಿ ಅಗ್ನಿಹೋತ್ರಾಹವನಿ (ಅಂದರೆ, ಅಗ್ನಿಹೋತ್ರದಲ್ಲಿ ಹವಿಸ್ಸನ್ನು ಆಹುತಿ ಮಾಡಲು ಉಪಯೋಗಿಸುವ ಸೌಟು, ಮರದಿಂದ ಮಾಡಿದ್ದು).

೫. ಅವನ ಎದೆಯ ಮೇಲೆ ಧ್ರುವ (ಎಂಬ ದೊಡ್ಡ ಸೌಟು, ಮರದಿಂದ ಮಾಡಿದ್ದು). ಅವನ

---

೧. ಕಾಣೆಯವರ ಗ್ರಂಥ, ಸಂಪುಟ ೨, ಭಾಗ ೨, ಪುಟ. ೫೪೫

ತಲೆಯ ಮೇಲೆ (ಯಜ್ಞದ) ಪಾತ್ರೆಗಳು, ಹಲ್ಲುಗಳ ಮೇಲೆ (ರಸವನ್ನು) ಹಿಂಡುವ ಕಲ್ಲುಗಳು.

೬. ಅವನ ಮೂಗಿನ ಎರಡು ಕಡೆಗಳಲ್ಲಿ ಸ್ರುವಸ್ ಎಂಬ ಎರಡು ಚಿಕ್ಕ ಚಿಕ್ಕ ಯಜ್ಞದ ಸೌಟುಗಳು, ಮರದಿಂದ ಮಾಡಿದ್ದು.

೭. ಅಥವಾ, ಒಂದೇ ಒಂದು ಸ್ರುವವಿದ್ದರೆ ಅದನ್ನು ಎರಡನ್ನಾಗಿ ಮುರಿದು ಇಡತಕ್ಕದ್ದು.

೮. ಅವನ ಎರಡು ಕಿವಿಗಳ ಮೇಲೆ ಎರಡು ಪ್ರಸಿತ್ರಾಹರಣಗಳು (ಅಂದರೆ, ಬ್ರಾಹ್ಮಣನಿಗೆ ಸೇರಿದ ಯಾಜ್ಞಿಕ ಅನ್ನದ ಭಾಗವನ್ನು ಹಾಕಿಡಲು ಉಪಯೋಗಿಸುವ ಪಾತ್ರೆಗಳು).

೯. ಅಥವಾ, ಒಂದೇ ಪ್ರಸಿತ್ರಾಹರಣವಿದ್ದರೆ ಅದನ್ನು ಎರಡನ್ನಾಗಿ ಒಡೆದು ಇಡತಕ್ಕದ್ದು.

೧೦. ಅವನ ಹೊಟ್ಟೆಯ ಮೇಲೆ ಪಾತ್ರೀಯ (ಎಂಬ ಯಜ್ಞಪಾತ್ರೆ).

೧೧. ಮತ್ತು (ಯಾಜ್ಞಿಕ ಅನ್ನದಲ್ಲಿ) ಭಾಗ ಮಾಡಿದ್ದನ್ನು ಇಡುವ ಬಟ್ಟಲು.

೧೨. ಅವನ ಗುಪ್ತಾಂಗಗಳ ಮೇಲೆ ಶಮೀ (ಎಂಬ ದಂಡ)

೧೩. ಅವನ ತೊಡೆಗಳ ಮೇಲೆ (ಯಜ್ಞದಲ್ಲಿ ಬೆಂಕಿಯನ್ನು ಹೊತ್ತಿಸಲು ಬಳಸುವ) ಎರಡು ಅರಣಿಗಳು.

೧೪. ಅವನ ಕಾಲುಗಳ ಮೇಲೆ ಒರಳು ಮತ್ತು ಒನಕೆ.

೧೫. ಅವನ ಎರಡು ಪಾದಗಳ ಮೇಲೆ ಎರಡು ಕುಕ್ಕೆಗಳು.

೧೬. ಅಥವಾ, ಒಂದೇ ಕುಕ್ಕೆ ಇದ್ದರೆ ಅದನ್ನು ಎರಡನ್ನಾಗಿ ಸೀಳಿ ಇಡತಕ್ಕದ್ದು.

೧೭. (ದ್ರವಗಳನ್ನು ಸುರಿಸಲು ಸಾಧ್ಯವಾಗುವಂತೆ) ಕುಳಿಯಿರುವ ಸಲಕರಣೆಗಳನ್ನು ಸಿಂಪಡಿಸಿದ ಬೆಣ್ಣೆಯಿಂದ ತುಂಬಲಾಗುತ್ತದೆ.

೧೮. (ಸತ್ತವನ) ಮಗನು ಬೀಸುವಕಲ್ಲಿನ ಮೇಲಿನ ಮತ್ತು ಕೆಳಗಿನ ಭಾಗಗಳನ್ನು ತನಗೇ ತೆಗೆದುಕೊಳ್ಳಬೇಕು.

೧೯. ಅಂತೆಯೇ ತಾಮ್ರ ಮತ್ತು ಕಬ್ಬಿಣದಿಂದ ಮಾಡಿದ ಸಲಕರಣೆಗಳು ಹಾಗೂ ಮಣ್ಣಿನ ಪಾತ್ರೆಗಳನ್ನು ಸಹ.

೨೦. ಹೆಣ್ಣು ಪ್ರಾಣಿಯ ಹೊಟ್ಟೆಯ ಸುತ್ತಣ ಚರ್ಮದ ಮಡಿಕೆಯನ್ನು ಹೊರತೆಗೆದು ಅದರಿಂದ (ಸತ್ತವನ) ತಲೆ ಮತ್ತು ಬಾಯಿಗಳನ್ನು ಋಗ್ವೇದ ೧೦.೧೬.೭ರಲ್ಲಿರುವ 'ಅಗ್ನೇರ್ವರ್ಮ ಪರಿಗೋಭಿರ್ವ್ಯಯಸ್ವ' (ಹಸುಗಳಿಂದ ಬರುವ ಕವಚಗಳು ಅಗ್ನಿಯಿಂದ ನಿನ್ನನ್ನು ರಕ್ಷಿಸುತ್ತವೆ) ಎಂಬ ಮಂತ್ರದಿಂದ ಮುಚ್ಚಬೇಕು.

೨೧. ಅದೇ ಪ್ರಾಣಿಯ ಮೂತ್ರಪಿಂಡಗಳನ್ನು ಹೊರತೆಗೆದು ಅವನ್ನು (ಸತ್ತವನ ಶರೀರದ) ಕೈಗಳಲ್ಲಿ ಇಡಬೇಕು, ಬಲಗಡೆಯ ಮೂತ್ರಪಿಂಡವನ್ನು ಬಲಗೈಯೊಳಗೆ ಮತ್ತು ಎಡಗಡೆಯ ಮೂತ್ರಪಿಂಡವನ್ನು ಎಡಗೈಯೊಳಗೆ. ಹಾಗೆ ಮಾಡುವಾಗ ಹೇಳಬೇಕಾದ ಮಂತ್ರ (ಋಗ್ವೇದ ೧೦.೧೪-೧೦) 'ಅತಿ ದ್ರವ ಸಾರಮೇಯೌ ಶ್ವಾನೌ ಚತುರಕ್ಷೌ ಸಬಲೌ ಸಾಧುನಾ ಪಥಾ' (ಸರಮಾ ಎಂಬ ದೇವಲೋಕದ ನಾಯಿಯ ಇಬ್ಬರು ಮಕ್ಕಳನ್ನು ದಾಟಿ ತಪ್ಪಿಸಿಕೊ).

೨೨. ಪ್ರಾಣಿಯ ಹೃದಯವನ್ನು ಸತ್ತವನ ಹೃದಯದ ಮೇಲಿಡುತ್ತಾನೆ.

೨೩. ಕೆಲವು ಧರ್ಮಶಾಸ್ತ್ರಕಾರರ ಪ್ರಕಾರ ಇದರ ಜೊತೆಗೆ ಹಿಟ್ಟು ಅಥವಾ ಅಕ್ಕಿಯ ಎರಡು ಉಂಡೆಗಳನ್ನೂ ಇಡತಕ್ಕದ್ದು.

೨೪. ಕೆಲವು ಧರ್ಮಶಾಸ್ತ್ರಕಾರರ ಪ್ರಕಾರ ಇದು ಮೂತ್ರಪಿಂಡಗಳು ಇಲ್ಲದಾಗ ಮಾತ್ರವೇ ಮಾಡಬೇಕಾದ್ದು.

೨೫. ಇಡೀ ಪ್ರಾಣಿಯ ವಿವಿಧ ಅಂಗಾಂಗಗಳನ್ನು (ಸತ್ತವನ ಆಯಾ ಅಂಗಾಂಗಗಳ ಮೇಲಿರಿಸುವ ಮೂಲಕ) ಹೀಗೆ ವಿತರಣೆ ಮಾಡಿದ ನಂತರ ಅದನ್ನು (ಅಂದರೆ, ಸತ್ತವನ ಶರೀರವನ್ನು) ಅದರ (ಅಂದರೆ, ಪ್ರಾಣಿಯ) ಚರ್ಮದಿಂದ ಹೊದಿಸಿ ಆಮೇಲೆ ಪ್ರಣೀತಾ ಎಂಬ ನೀರನ್ನು ಮುಂದಕ್ಕೆ ಕೊಂಡೊಯ್ಯುವಾಗ 'ಇಮಮಗ್ನೇ ಚಮಸಂ ಮಾ ವಿ ಜಿಹ್ವರಃ ಪ್ರಿಯೋ ದೇವಾನುಮುತ ಸೋಮ್ಯಾನಾಮ್' (ಎಲೈ ಅಗ್ನಿಯೇ, ಈ ಬಟ್ಟಲನ್ನು ಉರುಳಿಸಬೇಡ) ಎಂದು ಮಂತ್ರವನ್ನು (ಋಗ್ವೇದ ೧೦.೧೬–೮) ಪಠಿಸುತ್ತಾನೆ.

೨೬. ತನ್ನ ಎಡಮಂಡಿಯನ್ನೂರಿ ದಕ್ಷಿಣಾಗ್ನಿಯೊಳಕ್ಕೆ ಯುಗ್ಯ ಎಂಬ ಆಹುತಿಯನ್ನು ಅರ್ಪಿಸಬೇಕು; ಹಾಗೆ ಮಾಡುವಾಗ ಹೇಳಬೇಕಾದ್ದು, 'ಅಗ್ನಿಗೆ ಅರ್ಪಿತವಾಗಲಿ, ಕಾಮಕ್ಕೆ ಅರ್ಪಿತವಾಗಲಿ, ವಿಶ್ವಕ್ಕೆ ಅರ್ಪಿತವಾಗಲಿ, ಅನುಮತಿಗೆ ಅರ್ಪಿತವಾಗಲಿ.'

೨೭. ಐದನೆಯ ಆಹುತಿಯನ್ನು ಸತ್ತವನ ಎದೆಯ ಮೇಲೆ ಅರ್ಪಿಸಬೇಕು; ಹಾಗೆ ಮಾಡುವಾಗ ಹೇಳಬೇಕಾದ್ದು, 'ನಿಜಕ್ಕೂ ನೀನು ಹುಟ್ಟಿರುವುದು ಇದರಿಂದಲೇ. ಈಗ ಅವನು ನಿನ್ನಿಂದ ಹುಟ್ಟಿ ಬರಲಿ. ಸ್ವರ್ಗಲೋಕಗಳಿಗೆ ಅರ್ಪಿತವಾಗಲಿ.'

ಆಶ್ವಲಾಯನ ಗೃಹ್ಯಸೂತ್ರದಿಂದ ಉದ್ಧರಿಸಲಾಗಿರುವ ಮೇಲಿನ ವಾಕ್ಯಭಾಗಗಳಿಂದ ಒಂದು ವಿಷಯವು ಸ್ಪಷ್ಟವಾಗುತ್ತದೆ : ಪ್ರಾಚೀನ ಇಂಡೋ–ಆರ್ಯನರಲ್ಲಿ ಯಾವುದಾದರೂ ಒಬ್ಬ ವ್ಯಕ್ತಿಯು ಮರಣ ಹೊಂದಿದಾಗ ಒಂದು ಪ್ರಾಣಿಯನ್ನು ಕೊಲ್ಲಬೇಕಾಗಿಬರುತ್ತಿತ್ತು ; ಹಾಗೆ ಕೊಲ್ಲಲ್ಪಟ್ಟ ಪ್ರಾಣಿಯ ಬೇರೆ ಬೇರೆ ಅಂಗಾಂಗಗಳು ಸತ್ತವನ ದೇಹದ ಆಯಾಯಾ ಸೂಕ್ತಭಾಗಗಳ ಮೇಲೆ ಇಡಲಾಗುತ್ತಿತ್ತು ; ನಂತರವೇ ಆ ಸತ್ತವನ ದೇಹವನ್ನು ಸುಡಲಾಗುತ್ತಿತ್ತು.

ಹಸುವನ್ನು ಕೊಲ್ಲುವುದು ಮತ್ತು ಅದರ ಮಾಂಸವನ್ನು ತಿನ್ನುವುದರ ಬಗೆಗಿರುವ ಪ್ರಮಾಣವು ಈ ರೀತಿಯದು. ಈ ಪ್ರಮಾಣಗಳಲ್ಲಿ ಯಾವ ಭಾಗವನ್ನು ಸತ್ಯವೆಂದು ಅಂಗೀಕರಿಸಬೇಕು? ಅದರಲ್ಲಿ ಸರಿಯಾದ ದೃಷ್ಟಿ ಹೀಗಿದೆ : ಶತಪಥ ಬ್ರಾಹ್ಮಣ ಮತ್ತು ಆಪಸ್ತಂಬ ಧರ್ಮಸೂತ್ರಗಳ ಸಾಕ್ಷ್ಯವು ಹಿಂದುಗಳು ಗೋಹತ್ಯೆ ಮತ್ತು ಗೋಮಾಂಸ ಭಕ್ಷಣೆಯ ವಿರುದ್ಧವಾಗಿದ್ದರು ಎಂಬುದನ್ನು ಬೆಂಬಲಿಸುತ್ತದಾದರೂ ಗೋಹತ್ಯೆಯನ್ನು ನಿಷೇಧಿಸುತ್ತದೆನ್ನಲಾಗದು; ಏನಿದ್ದರೂ ಗೋಹತ್ಯೆಯನ್ನು ವಿಪರೀತದ ಮಟ್ಟಕ್ಕೆ ಒಯ್ಯಬಾರದೆಂದು ಅದು ಎಚ್ಚರಿಸುತ್ತದೆ ಎನ್ನಬಹುದು, ಅಷ್ಟೆ. ಗೋಹತ್ಯೆ ಮತ್ತು ಗೋಮಾಂಸ ಭಕ್ಷಣೆಯು ಸಾಮಾನ್ಯ ವಾಡಿಕೆಯಾಗಿತ್ತೆಂಬುದನ್ನು ಈ ಎಚ್ಚರಿಕೆಯ ಮಾತೇ ಪ್ರಮಾಣೀಕರಿಸುತ್ತದೆ. ಇಂತಹ ಎಚ್ಚರಿಕೆಯ ಮಾತುಗಳಿದ್ದಾಗ್ಯೂ ಗೋಹತ್ಯೆ, ಗೋಮಾಂಸ ಭಕ್ಷಣೆಯು ಮುಂದುವರಿಯಿತು. ಆರ್ಯರ ಮಹಾನ್ ಋಷಿಯಾದ ಯಾಜ್ಞವಲ್ಕ್ಯನ ವರ್ತನೆಯಿಂದ ಇಂತಹ ಎಚ್ಚರಿಕೆಯ ಮಾತುಗಳು ಬಹುಮಟ್ಟಿಗೆ ಕಿವುಡರ ಕಿವಿಯ ಮೇಲೆ ಬಿದ್ದು ನಿರರ್ಥಕವಾದಂತಾಯಿತೆಂಬುದು ದೃಢವಾಗುತ್ತದೆ. ಮೇಲೆ ಉದ್ಧರಿಸಲಾದ ಮಾತುಗಳಲ್ಲಿ ಮೊದಲನೆಯದಾದ ಶತಪಥ ಬ್ರಾಹ್ಮಣದ ವಾಕ್ಯವು ಯಾಜ್ಞವಲ್ಕ್ಯನಿಗೆ ಎಚ್ಚರಿಕೆಯ ಮಾತಾಗಿ ಹೇಳಲಾಗಿದ್ದುದು. ಇದಕ್ಕೆ ಯಾಜ್ಞವಲ್ಕ್ಯ ಪ್ರತಿಕ್ರಿಯಿಸಿದ್ದು ಹೇಗೆ? ಎಚ್ಚರಿಕೆಯ ಮಾತನ್ನಾಲಿಸಿ ಯಾಜ್ಞವಲ್ಕ್ಯನು ಹೇಳಿದ್ದಿದು :

"ನಾನು ಮಾತ್ರ ಅದನ್ನು ತಿಂದೇ ತೀರುತ್ತೇನೆ ; ಆದರೆ ಅದು ಕೋಮಲವಾಗಿದ್ದರೆ ಮಾತ್ರ".

ಒಂದು ಕಾಲದಲ್ಲಿ ಹಿಂದೂಗಳು ಹಸುಗಳನ್ನು ಕೊಲ್ಲುತ್ತಲೇ ಇದ್ದರು ಹಾಗೂ ಅದರ ಮಾಂಸವನ್ನು

ತಿನ್ನುತ್ತಲೇ ಇದ್ದರೆಂಬುದು ವೇದಗಳು ಮತ್ತು ಬ್ರಾಹ್ಮಣಗಳ ಕಾಲಕ್ಕಿಂತಲೂ ಸಾಕಷ್ಟು ನಂತರದ ಕಾಲಕ್ಕೆ ಸಂಬಂಧಿಸಿದ ಬೌದ್ಧ ಸೂತ್ರಗಳಲ್ಲಿ ಯಜ್ಞಗಳ ಬಗ್ಗೆ ನೀಡಲಾಗಿರುವ ವಿವರಣೆಯಿಂದ ಹೇರಳವಾಗಿ ಸಾಬೀತಾಗುತ್ತದೆ. ಹಸುಗಳು ಮತ್ತಿತರ ಪ್ರಾಣಿಗಳ ವಧೆಯು ಬೃಹತ್ಪ್ರಮಾಣದಲ್ಲಿ ನಡೆಯುತ್ತಿತ್ತು. ಧರ್ಮದ ಹೆಸರಿನಲ್ಲಿ ಬ್ರಾಹ್ಮಣರು ಹಲವಾರು ಕಟ್ಟಳೆಗಳಡಿಯಲ್ಲಿ ಇಂತಹ ಎಷ್ಟು ವಧೆಗಳನ್ನು ಮಾಡಿರಬಹುದೆಂದು ಸಂಪೂರ್ಣವಾಗಿ ಹೇಳಬರುವುದಿಲ್ಲ. ಬೌದ್ಧ ಸಾಹಿತ್ಯದಲ್ಲಿ ದೊರಕುವ ಆಕರಗಳಿಂದ ಈ ವಧೆಯು ಎಷ್ಟು ಅಗಾಧ ಪ್ರಮಾಣದ್ದಾಗಿತ್ತೆಂಬುದನ್ನೂ ಸ್ವಲ್ಪಮಟ್ಟಿಗೆ ತಿಳಿಯಲು ಶಕ್ಯವಿದೆ.... ಒಂದು ನಿದರ್ಶನವಾಗಿ ಕೂಟದಂತ ಸುತ್ತವನ್ನು ಉದಾಹರಿಸಬಹುದು; ಕೂಟದಂತನೆಂಬ ಬ್ರಾಹ್ಮಣನಿಗೆ ಪಶುಗಳನ್ನು ಆಹುತಿ ನೀಡುವುದರ ವಿರುದ್ಧವಾಗಿ ಬುದ್ಧನು ಉಪದೇಶಿಸಿದನೆಂದು ಇದರಿಂದ ತಿಳಿಯಬರುತ್ತದೆ. ಬುದ್ಧನ ಮಾತುಗಳಲ್ಲಿ ವಿಕಟವಾದ ಒಂದು ವ್ಯಂಗ್ಯವಿದೆಯಾದರೂ ವೈದಿಕ ಯಜ್ಞಗಳಲ್ಲಿನ ಆಚಾರ ಮತ್ತು ಕ್ರಿಯಾವಿಧಿಗಳ ಬಗ್ಗೆ ಅವನ ಮಾತುಗಳು ನಮಗೆ ಸ್ಪಷ್ಟವಾದೊಂದು ಕಲ್ಪನೆ ನೀಡುತ್ತವೆ. ಅವನು ಹೇಳಿದ್ದಿದು:

> "ಅದೂ ಅಲ್ಲದೆ, ಎಲೈ ಬ್ರಾಹ್ಮಣನೆ, ಆ ಯಜ್ಞದಲ್ಲಿ ಎತ್ತುಗಳನ್ನು ಕೊಲ್ಲಲಿಲ್ಲ, ಆಡುಗಳನ್ನು ಕೊಲ್ಲಲಿಲ್ಲ. ಕೋಳಿಗಳು, ಕೊಬ್ಬಿದ ಹಂದಿಗಳು, ಅಥವಾ ಬೇರಾವುದೇ ಬಗೆಯ ಜೀವಂತ ಪ್ರಾಣಿಗಳನ್ನು ಸಾವಿಗೀಡುಮಾಡಲಿಲ್ಲ. ಯೂಪಗಳಾಗಿ ಉಪಯೋಗಿಸಲು ಯಾವುದೇ ಮರವನ್ನು ಕಡಿಯಲಿಲ್ಲ, ಯಜ್ಞವೇದಿಕೆಯ ಸುತ್ತ ಹರಡಲು ದರ್ಭೆಯ ಹುಲ್ಲನ್ನು ತರಿದುಹಾಕಲಿಲ್ಲ. ಅಲ್ಲಿ ಕೆಲಸಕ್ಕೆ ನಿಯೋಜಿಸಲ್ಪಟ್ಟಿದ್ದು ದಾಸರು, ಸಂದೇಶವಾಹಕರು ಮತ್ತು ಇದರ ಕೆಲಸಗಾರರನ್ನು ದೊಣ್ಣೆಯಿಂದ ಅಥವಾ ಭಯದಿಂದ ಓಡಿಸಲಿಲ್ಲ; ಅಥವಾ ಕಣ್ಣೀರು ಸುರಿಸುತ್ತ ಅವರು ತಮ್ಮ ತಮ್ಮ ಕೆಲಸಗಳನ್ನು ಮಾಡುತ್ತಿರಲಿಲ್ಲ."

ತನ್ನಲ್ಲಿ ಪರಿವರ್ತನೆ ಉಂಟುಮಾಡಿದ್ದಕ್ಕಾಗಿ ಬುದ್ಧನನ್ನು ವಂದಿಸುತ್ತಾ ಕೂಟದಂತನು ಹೇಳುವ ಮಾತುಗಳಿವು : ಅಂತಹ ಯಜ್ಞಗಳಲ್ಲಿ ಪ್ರಾಣಿವಧೆಯು ಯಾವ ಮಟ್ಟದಲ್ಲಿ ಜರುಗುತ್ತಿತ್ತೆಂಬುದರ ಬಗ್ಗೆ ಇದೊಂದು ಕಲ್ಪನೆ ನೀಡುತ್ತದೆ.

"ನಾನು, ನಾನು ಕೂಡ, ಪೂಜಾರ್ಹನಾದ ಗೋತಮನನ್ನು ನನ್ನ ಮಾರ್ಗದರ್ಶಕನನ್ನಾಗಿ ಸ್ವೀಕರಿಸುತ್ತೇನೆ. ಆತನ ತತ್ವ ಮತ್ತು ಸಂಘಗಳಿಗೆ ನಾನು ಶರಣಾಗುತ್ತೇನೆ. ಜೀವನಪರ್ಯಂತ ಇಂದಿನಿಂದ ನಾನು ಆತನನ್ನು ಗುರುವಾಗಿ ಸ್ವೀಕರಿಸಿದ್ದೇನೆ. ಪೂಜಾರ್ಹನಾದ ಆತನು ನನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಿ ಅನುಗ್ರಹಿಸಲಿ. ಎಲೈ ಗೋತಮನೆ, ನಾನೇ ಸ್ವತಃ ಏಳುನೂರು ಎತ್ತುಗಳು, ಏಳುನೂರು ಹೋರಿಗಳು, ಏಳುನೂರು ಕಡಸುಗಳು, ಏಳುನೂರು ಆಡುಗಳು, ಹಾಗೂ ಏಳುನೂರು ಟಗರುಗಳನ್ನು ಬಂಧನದಿಂದ ಬಿಡಿಸುತ್ತೇನೆ. ಅವಕ್ಕೆ ನಾನು ಜೀವದಾನ ಮಾಡುತ್ತೇನೆ. ಅವು ಹುಲ್ಲನ್ನು ತಿನ್ನಲಿ, ಸಿಹಿನೀರನ್ನು ಕುಡಿಯಲಿ, ಮತ್ತು ತಂಪಾದ ಗಾಳಿಯು ಅವುಗಳ ಮೇಲೆ ಬೀಸಲಿ,"

ಕೋಸಲದ ರಾಜನಾದ ಪಸೇನದಿಯು ಮಾಡಿದ ಯಜ್ಞವೊಂದರ ಇನ್ನೊಂದು ವಿವರಣೆ ಸಂಯುಕ್ತ ನಿಕಾಯ (೩.೧-೯)ದಲ್ಲಿ ನಮಗೆ ದೊರೆಯುತ್ತದೆ. ಬಲಿ ಕೊಡುವುದಕ್ಕೋಸ್ಕರ ಯಜ್ಞಸ್ತೂಪಕ್ಕೆ ಐನೂರು ಎತ್ತುಗಳು, ಐನೂರು ಕರುಗಳು, ಮತ್ತು ಹಲವಾರು ಕಡಸುಗಳು, ಆಡುಗಳು ಹಾಗೂ ಟಗರುಗಳನ್ನು ಕರೆದೊಯ್ಯಲಾಯಿತೆಂದು ಅಲ್ಲಿ ಹೇಳಿದೆ.

ಈ ಎಲ್ಲ ಸಾಕ್ಷ್ಯಾಧಾರಗಳಿರುವಾಗ ಹಿಂದುಗಳು – ಇದರಲ್ಲಿ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರಿಬ್ಬರೂ ಸೇರಿದ್ದಾರೆ – ಮಾಂಸವನ್ನು ಮಾತ್ರವಲ್ಲ, ಗೋಮಾಂಸವನ್ನು ಸಹ ತಿನ್ನುತ್ತಿದ್ದ ಕಾಲವೊಂದು ಹಿಂದೆ ಇದ್ದಿತೆಂಬುದನ್ನು ಯಾರೂ ಅಲ್ಲಗಳೆಯಲಾಗದು.

# ಅಧ್ಯಾಯ ೧೨

# ಬ್ರಾಹ್ಮಣೇತರರು ಗೋಮಾಂಸ ಭಕ್ಷಣೆಯನ್ನು ವರ್ಜಿಸಿದ್ದೇಕೆ?

ಹಿಂದುಗಳ ಪೈಕಿ ಬೇರೆಬೇರೆ ವರ್ಗಗಳ ಆಹಾರ ಸೇವನೆಯ ಪದ್ಧತಿಗಳು ಅವರ ಪೂಜಾ ಪದ್ಧತಿಗಳಷ್ಟೇ ಸ್ಥಿರವಾಗಿ ಮತ್ತು ಸ್ತರಗಳಲ್ಲಿ ವಿಂಗಡಿಸಲ್ಪಟ್ಟುದಾಗಿ ಇದೆ. ಹಿಂದುಗಳನ್ನು ಅವರ ಪೂಜಾಪದ್ಧತಿಗಳ ಆಧಾರದ ಮೇಲೆ ಸ್ತರಗಳಾಗಿ ವಿಂಗಡಿಸಲು ಹೇಗೆ ಸಾಧ್ಯವೋ ಹಾಗೆಯೇ ಅವರ ಆಹಾರ ಪದ್ಧತಿಯ ಆಧಾರದ ಮೇಲೂ ವಿಂಗಡಿಸಲು ಸಾಧ್ಯವಿದೆ. ಅವರ ಪೂಜಾ ಪದ್ಧತಿಗಳ ಆಧಾರದಲ್ಲಿ ಹಿಂದುಗಳು ಶೈವರು (ಶಿವನ ಆರಾಧಕರು), ಅಥವಾ ವೈಷ್ಣವರು (ವಿಷ್ಣುವಿನ ಆರಾಧಕರು) ಆಗಿರುತ್ತಾರೆ. ಅಂತೆಯೇ ಹಿಂದುಗಳು ಮಾಂಸಾಹಾರಿಗಳಾಗಿರುತ್ತಾರೆ, ಇಲ್ಲವೇ ಶಾಕಾಹಾರಿಗಳಾಗಿರುತ್ತಾರೆ.

ಸಾಮಾನ್ಯವಾಗಿ ವಿಂಗಡಿಸುವಾಗ ಹಿಂದುಗಳನ್ನು ಮಾಂಸಾಹಾರಿಗಳು ಮತ್ತು ಶಾಕಾಹಾರಿಗಳೆಂದು ಎರಡು ವರ್ಗಗಳನ್ನಾಗಿ ಎಣಿಸುವುದು ಸಾಕು. ಆದರೆ ಅದು ಸಮಗ್ರವಾದದ್ದಲ್ಲವೆಂದು ಒಪ್ಪಬೇಕು; ಅದರಲ್ಲಿ ಹಿಂದು ಸಮಾಜದಲ್ಲಿರುವ ಎಲ್ಲ ವರ್ಗಗಳನ್ನೂ ಲೆಕ್ಕಕ್ಕೆ ತೆಗೆದುಕೊಂಡಂತಾಗಿರುವುದಿಲ್ಲ. ಸಮಗ್ರವಾದ ವಿಭಜನೆಗೆ ಹಿಂದುಗಳಲ್ಲಿ ಮಾಂಸಾಹಾರಿಗಳೆಂಬ ವರ್ಗದವರನ್ನು ಇನ್ನೆರಡು ಉಪವರ್ಗಗಳಾಗಿ ವಿಂಗಡಿಸಬೇಕಾಗುತ್ತದೆ : (೧) ಮಾಂಸವನ್ನು ತಿನ್ನುವವರು, ಆದರೆ ಹಸುವಿನ ಮಾಂಸವನ್ನು ತಿನ್ನದವರು; ಮತ್ತು (೨) ಹಸುವಿನ ಮಾಂಸವೂ ಸೇರಿದಂತೆ ಮಾಂಸವನ್ನು ತಿನ್ನುವವರು. ಬೇರೆ ರೀತಿಯಲ್ಲಿ ಹೇಳುವುದಾದರೆ ಆಹಾರದಲ್ಲಿ ಏನೇನು ಮುಟ್ಟಬಾರದ್ದು ಎಂಬ ದೃಷ್ಟಿಯಿಂದ ಹಿಂದು ಸಮಾಜವು ಮೂರು ವರ್ಗಗಳಾಗಿ ವಿಭಜಿಸಲ್ಪಡಬಹುದು : (೧) ಶಾಕಾಹಾರಿಗಳಾದವರು, (೨) ಹಸುವಿನ ಮಾಂಸವನ್ನುಳಿದು ಇತರೆ ಮಾಂಸಗಳನ್ನು ತಿನ್ನುವವರು, ಮತ್ತು (೩) ಹಸುವಿನ ಮಾಂಸವೂ ಸೇರಿದಂತೆ ಮಾಂಸಾಹಾರಿಗಳಾಗಿರುವವರು. ಈ ವಿಂಗಡಣೆಗೆ ಅನುರೂಪವಾಗಿ ಹಿಂದು ಸಮಾಜದಲ್ಲಿ ಮೂರು ವರ್ಗಗಳಿವೆ : (೧) ಬ್ರಾಹ್ಮಣರು, (೨) ಬ್ರಾಹ್ಮಣೇತರರು, ಮತ್ತು (೩) ಅಸ್ಪೃಶ್ಯರು. ನಾಲ್ಕು ವಿಧಗಳಾಗಿ ಸಮಾಜವನ್ನು ವಿಂಗಡಿಸುವ ಚಾತುರ್ವರ್ಣ್ಯಕ್ಕೆ ಇದು ಹೊಂದಿಕೊಳ್ಳದಿದ್ದರೂ ವಸ್ತುಸ್ಥಿತಿಗೆ ಸರಿಯಾಗಂತೂ ಹೊಂದಿಕೊಳ್ಳುತ್ತದೆ. ಏಕೆಂದರೆ ಬ್ರಾಹ್ಮಣರೆಂಬುವರು[೧] ಶಾಕಾಹಾರಿಗಳಾಗಿ ಒಂದು ವರ್ಗವಾಗುತ್ತಾರೆ; ಹಸುವಿನ ಮಾಂಸವನ್ನುಳಿದು ಬೇರೆ ಮಾಂಸಗಳನ್ನು ತಿನ್ನುವ ಬ್ರಾಹ್ಮಣೇತರರು ಒಂದು ವರ್ಗವಾಗುತ್ತಾರೆ; ಹಸುವಿನ ಮಾಂಸವೂ ಸೇರಿದಂತೆ ಮಾಂಸಹಾರಿಗಳಾದವರು ಅಸ್ಪೃಶ್ಯರಾಗಿ ಇನ್ನೊಂದು ವರ್ಗದವರಾಗುತ್ತಾರೆ.

ಈ ರೀತಿ ಮೂರು ವರ್ಗಗಳನ್ನಾಗಿ ವಿಂಗಡಿಸುವುದು ಸಾರಭೂತವಾಗಿದೆ ಹಾಗೂ ಅದು ವಸ್ತುಸ್ಥಿತಿಗೆ ಅನುಗುಣವಾಗಿದೆ. ಈ ಬಗೆಯ ವಿಂಗಡಣೆಯನ್ನು ತನ್ನ ಮನಸ್ಸಿನಲ್ಲೇ ಗುಣಗುಣಿಸುವವನು ಯಾರಾದರೂ ಬ್ರಾಹ್ಮಣೇತರರ ಸ್ಥಾನಕ್ಕೆ ಸಂಬಂಧಿಸಿದಂತೆ ಸೆಳೆಯಲ್ಪಡುವುದು ಖಂಡಿತ. ಶಾಕಾಹಾರ ಪದ್ಧತಿಯನ್ನು ಅರ್ಥಮಾಡಿಕೊಳ್ಳುವುದು ಸುಲಭ. ಆದರೆ ಮಾಂಸಾಹಾರಿಯಾದವನೊಬ್ಬ ಒಂದು ಬಗೆಯ ಮಾಂಸದ,

---

೧. ಭಾರತದ ಬ್ರಾಹ್ಮಣರನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. (೧) ಪಂಚ ದ್ರಾವಿಡರು ಮತ್ತು ಪಂಚ ಗಾವುಂಡರು. ಮೊದಲಿನವರು ಶಾಕಾಹಾರಿಗಳು, ಎರಡನೆಯವರು ಶಾಕಾಹಾರಿಗಳಲ್ಲ.

ಅರ್ಥಮಾಡಿಕೊಳ್ಳುವುದು ಸುಲಭ. ಆದರೆ ಮಾಂಸಾಹಾರಿಯಾದವನೊಬ್ಬ ಒಂದು ಬಗೆಯ ಮಾಂಸದ, ಅಂದರೆ ಹಸುವಿನ ಮಾಂಸದ, ಬಗ್ಗೆ ಆಕ್ಷೇಪವೆತ್ತುವುದನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಇಂತಹ ಅಸಂಗತಿಗೆ ಏನಾದರೊಂದು ವಿವರಣೆ ಅಗತ್ಯವೆನಿಸುತ್ತದೆ. ಬ್ರಾಹ್ಮಣೇತರರು ಗೋಮಾಂಸವನ್ನು ವರ್ಜಿಸಿದ್ದೇಕೆ? ಇದಕ್ಕೆ ಉತ್ತರ ನೀಡಬೇಕಾದರೆ ಈ ವಿಷಯಕ್ಕೆ ಸಂಬಂಧಿಸಿದ ನಿಯಮಗಳತ್ತ ಕಣ್ಣು ಹಾಯಿಸಬೇಕಾಗುತ್ತದೆ. ಇದಕ್ಕೆ ಪ್ರಸ್ತುತವಾದ ಶಾಸನವನ್ನು ಅಶೋಕನ ನಿಯಮಗಳಲ್ಲಿ ಕಾಣಬೇಕು, ಇಲ್ಲವೇ ಮನುವಿನ ನಿಯಮಗಳಲ್ಲಿ ಕಾಣಬೇಕು.

## II

ನಾವೀಗ ಅಶೋಕನಿಂದ ಆರಂಭಿಸೋಣ. ಅಶೋಕನ ಶಾಸನಗಳಲ್ಲಿ ಈ ವಿಷಯಕ್ಕೆ ಸಂಬಂಧಿಸಿದವು ಶಿಲಾಶಾಸನ ೧ ಮತ್ತು ಸ್ತಂಭಶಾಸನಗಳು ೨ ಮತ್ತು ೫. ಶಿಲಾಶಾಸನ ೧ ಹೀಗೆನ್ನುತ್ತದೆ :

> "ಈ ಧರ್ಮ ಶಾಸನವನ್ನು ಪೂಜ್ಯ ಹಾಗೂ ಗೌರವಾನ್ವಿತ ಪ್ರಭುಗಳಾದ ಮಹಾರಾಜರ ಆಜ್ಞಾನುಸಾರ ಬರೆಯಲಾಗಿದೆ. ಇಲ್ಲಿ (ಅಂದರೆ, ರಾಜಧಾನಿಯಲ್ಲಿ) ಯಜ್ಞಕ್ರಿಯೆಗಾಗಿ ಯಾವ ಪ್ರಾಣಿಯನ್ನೂ ವಧಿಸಕೂಡದು; ಅಂತೆಯೇ ಬಿಡುವಿನ ಸಂತೋಷ ಸಮಾರಂಭವನ್ನು ಏರ್ಪಡಿಸಕೂಡದು. ಏಕೆಂದರೆ, ಪೂಜ್ಯ ಹಾಗೂ ಗೌರವಾನ್ವಿತ ಪ್ರಭುಗಳಾದ ಮಹಾರಾಜರ ದೃಷ್ಟಿಯಲ್ಲಿ ಕೆಲವು ಸ್ಥಳಗಳಲ್ಲಿ ಜರುಗುವ ಬಿಡುವಿನ ಸಂತೋಷ ಸಮಾರಂಭಗಳು ಉತ್ಕೃಷ್ಟವಾಗಿದ್ದರೂ ಸಾಮಾನ್ಯವಾಗಿ ಇಂತಹ ಬಿಡುವಿನ ಸಂತೋಷ ಸಮಾರಂಭಗಳಲ್ಲಿ ಪೂಜ್ಯ ಹಾಗೂ ಗೌರವಾನ್ವಿತ ಪ್ರಭುಗಳಾದ ಮಹಾರಾಜರು ಕೆಡುಕನ್ನೇ ಕಾಣುತ್ತಾರೆ.
>
> "ಮೊದಲಿಗೆ ಪೂಜ್ಯ ಹಾಗೂ ಗೌರವಾನ್ವಿತ ಪ್ರಭುಗಳಾದ ಮಹಾರಾಜರ ಪಾಕಶಾಲೆಯಲ್ಲಿ ಪ್ರತಿದಿನವೂ ಅನೇಕ ಲಕ್ಷಗಟ್ಟಲೆ ಜೀವಂತ ಪ್ರಾಣಿಗಳನ್ನು ಭೋಜ್ಯಗಳನ್ನು ತಯಾರಿಸಲು ಕೊಲ್ಲಲಾಗುತ್ತಿತ್ತು. ಆದರೆ ಈ ಧರ್ಮಶಾಸನವು ಬರೆಯಲಾಗುತ್ತಿರುವ ಈ ದಿನಗಳಲ್ಲಿ ಭೋಜ್ಯಗಳ ತಯಾರಿಕೆಗೆ ಪ್ರತಿದಿನ ಮೂರು ಪ್ರಾಣಿಗಳನ್ನು ಮಾತ್ರ ಕೊಲ್ಲಲಾಗುತ್ತಿದೆ; ಉದಾಹರಿಸಬೇಕೆಂದರೆ, ಎರಡು ನವಿಲುಗಳು ಮತ್ತು ಒಂದು ಚಿಗರೆಯನ್ನು ಮಾತ್ರ ಎನ್ನಬಹುದು. ಚಿಗರೆಯನ್ನು ತಪ್ಪದೆ ಕೊಲ್ಲಲಾಗುತ್ತದೆಂದೇನೂ ಹೇಳಲಾಗದು. ಇನ್ನು ಮುಂದೆ ಹಾಗೆ ಮೂರು ಜೀವಂತ ಪ್ರಾಣಿಗಳನ್ನು ಸಹ ಕೊಲ್ಲಲಾಗುವುದಿಲ್ಲ."

ಸ್ತಂಭ ಶಾಸನ ೨ ಈ ವಾಕ್ಯಗಳಲ್ಲಿ ಬರೆಯಲಾಗಿತ್ತು :

> "ಪೂಜ್ಯ ಹಾಗೂ ವಿನಯಶೀಲ ಪ್ರಭುಗಳಾದ ಮಹಾರಾಜರು ಹೀಗೆ ನುಡಿದಿದ್ದಾರೆ :–
>
> "ಧರ್ಮಶ್ರದ್ಧೆಯ ನಿಯಮವು ಶ್ರೇಷ್ಠವಾದದ್ದು. ಆದರೆ ಧರ್ಮಶ್ರದ್ಧೆಯ ನಿಯಮವು ಯಾವುದು? ಅದು ಕಡಿಮೆ ಧರ್ಮಶ್ರದ್ಧೆ ಅನೇಕ ಒಳ್ಳೆಯ ಕಾರ್ಯಗಳು ; ಕರುಣೆ, ದಾನಬುದ್ಧಿ, ಸತ್ಯ, ಮತ್ತು ಶುದ್ಧತೆ ಇದರಲ್ಲಿದೆ ಎನ್ನಬಹುದು.
>
> "ಆಧ್ಯಾತ್ಮಿಕ ಅಂತರ್ದೃಷ್ಟಿಯ ಕೊಡುಗೆಯನ್ನು ನಾನು ಅನೇಕ ರೀತಿಗಳಲ್ಲಿ ನೀಡಿದ್ದೇನೆ. ದ್ವಿಪಾದಿ ಮತ್ತು ಚತುಷ್ಪಾದಿ ಪ್ರಾಣಿಗಳಿಗೆ, ಪಕ್ಷಿಗಳಿಗೆ ಹಾಗೂ ಜಲಚರಗಳಿಗೆ ನಾನು ಅನೇಕ ರೀತಿಯ ಕೃಪೆ ತೋರಿದ್ದೇನೆ ; ಅವುಗಳಿಗೆ ಪ್ರಾಣಿಭಿಕ್ಷೆ ನೀಡುವುದು ಸಹ ಇದರಲ್ಲಿ ಸೇರಿದೆ. ಹಾಗೆಯೇ ಬೇರೆ ಅನೇಕ ಒಳ್ಳೆಯ ಕೆಲಸಗಳನ್ನು ನಾನು ಮಾಡಿದ್ದೇನೆ.

"ಈ ಧರ್ಮಶಾಸನವನ್ನು ನಾನು ಬರೆಸುತ್ತಿರುವುದರ ಉದ್ದೇಶ ಇದು : ಅಲ್ಲಿರುವ ಉಪದೇಶಕ್ಕನುಸಾರವಾಗಿ ಜನ ನಡೆಯಲಿ ; ಅದು ಬಹುಕಾಲ ಬಾಳಲಿ; ಮತ್ತು ಅದರ ಉಪದೇಶವನ್ನು ಅನುಸರಿಸುವವನು ಹಸನಾಗಿ ಬಾಳುತ್ತಾನೆ."

ಸ್ತೂಪಶಾಸನ ೫ ಹೀಗಿದೆ :

"ಪೂಜ್ಯ ಹಾಗೂ ಗೌರವಾನ್ವಿತ ಪ್ರಭುಗಳಾದ ಮಹಾರಾಜರು ಹೀಗೆ ನುಡಿದಿದ್ದಾರೆ :

"ನಾನು ರಾಜ್ಯಾಭಿಷಿಕ್ತವಾದ ಇಪ್ಪತ್ತಾರನೆಯ ವರ್ಷವು ಉರುಳಿದ್ದಾಗ ಕೆಳಕಂಡ ಜೀವಿಗಳು ವಧೆಗೊಳಗಾಗಕೂಡದೆಂದು ಘೋಷಿಸಲಾಯಿತು : ಗಿಣಿಗಳು, ಮೈನಾಗಳು, ಕೊಕ್ಕರೆಗಳು, ಉತ್ತಮ ಬಾತುಕೋಳಿಗಳು, ಕುದುರೆಗಳು, ಪಂಡೀಮುಖಗಳು, ಗೇಲಾಟ, ಬಾವಲಿಗಳು, ರಾಣಿ ಇರುವೆ, ಹೆಣ್ಣು ಆಮೆ, ಮೂಳೆಯಿಲ್ಲದ ಮೀನು, ವೇದ ವೇಯಕಗಳು, ಗಂಗಾಪುಪೂಟಕಗಳು, ಉದ್ದನೆ ಬಾಲದ ಮೀನು, ನದಿಯ ಆಮೆ, ಮುಳ್ಳುಹಂದಿಗಳು, ಮರದ ಅಳಿಲುಗಳು, ಬಾರಾಸಿಂಗಾ ಜಿಂಕೆ, ಉತ್ತಮ ಎತ್ತುಗಳು, ಕೋತಿಗಳು, ಘೇಂಡಾಮೃಗಗಳು, ಬೂದುಬಣ್ಣದ ಕಪೋತ, ಪಾರಿವಾಳಗಳು ಮತ್ತು ಉಪಯೋಗಕ್ಕೆ ಮೀಸಲಾಗದ ಹಾಗೂ ತಿನ್ನಲಾಗದ ಎಲ್ಲ ಚತುಷ್ಪಾದಿ ಪ್ರಾಣಿಗಳು.

"ಮೇಕೆ, ಕುರಿಮರಿ, ಹಸುಗಳು – ಅಂದರೆ, ಕರುಗಳಿರುವಂತಹವು ಹಾಗೂ ಹಾಲು ಕೊಡುವಂತಹವು ವಧೆಗೊಳಗಾಗುವಂತಿಲ್ಲ. ಆರು ತಿಂಗಳವರೆಗಿನ ಇವುಗಳ ಮರಿಗಳನ್ನೂ ಕೊಲ್ಲುವಂತಿಲ್ಲ.

"ಹುಂಜಗಳನ್ನಿಟ್ಟು ಬೀಜ ತೆಗೆದುಹಾಕುವುದನ್ನು ಮಾಡಬಾರದು."

"ಹೊಟ್ಟಿನೊಂದಿಗೆ ಯಾವುದಾದರೂ ಜೀವಂತ ವಸ್ತು ಸುಡುವಂತಿಲ್ಲ."

"ಕುಚೇಷ್ಟೆಗಾಗಲಿ ಜೀವಂತ ಪ್ರಾಣಿಗಳನ್ನು ನಾಶಪಡಿಸಲಾಗಲಿ ಅರಣ್ಯಗಳನ್ನು ಸುಡಬಾರದು."

"ಜೀವಂತ ಪ್ರಾಣಿಗಳಿಗೆ ಇತರ ಜೀವಂತ ಪ್ರಾಣಿಗಳು ಆಹಾರವಾಗಕೂಡದು. ಮೂರು ಋತುಮಾಸಗಳ ಹುಣ್ಣಿಮೆ ಮತ್ತು ತಿಷ್ಯ ಮಾಸದ (ಡಿಸೆಂಬರ್ – ಜನವರಿ) ಹುಣ್ಣಿಮೆಗಳೆಂದು ಮೂರು ದಿನಗಳಂತೆ, ಅಂದರೆ ಮೊದಲ ಪಕ್ಷದ ಹದಿನಾಲಕ್ಕು ಮತ್ತು ಹದಿನೈದನೆಯ ದಿನ ಹಾಗೂ ಎರಡನೆಯ ಪಕ್ಷದ ಮೊದಲ ದಿನ, ಹಾಗೂ ಇಡೀ ವರ್ಷದಲ್ಲಿ ಪ್ರತಿ ತಿಂಗಳ ಮೊದಲ ದಿನ ಮೀನನ್ನು ಕೊಲ್ಲಕೂಡದು ಮತ್ತು ಅದನ್ನು ಮಾರಾಟ ಮಾಡಕೂಡದು.

"ಅದೇ ದಿನಗಳಂದು ಆನೆಗಳನ್ನು ಸಲಹುವ ಅಭಯಾರಣ್ಯಗಳಲ್ಲಿ ಅಥವಾ ಮೀನುಗಳನ್ನು ಬೆಳೆಸುವ ಕಟ್ಟೆಗಳಲ್ಲಿ ಬೇರಾವ ವರ್ಗದ ಪ್ರಾಣಿಗಳನ್ನೂ ನಾಶಗೊಳಿಸಕೂಡದು."

"ಪ್ರತಿಯೊಂದು ಪಕ್ಷದ ಎಂಟನೆಯ, ಹದಿನಾಲ್ಕನೆಯ ಮತ್ತು ಹದಿನೈದನೆಯ ದಿನಗಳಂದು ಹಾಗೂ ತಿಷ್ಯ ಮತ್ತು ಪುನರ್ವಸು ದಿನಗಳಂದು, ಮತ್ತು ಹಬ್ಬಹರಿದಿನಗಳಂದು ಹೋರಿಗಳಿಗೆ ಬೀಜ ಒಡೆಯುವುದನ್ನು ಮಾಡಕೂಡದು; ಅಂತೆಯೇ ಬೀಜ ತೆಗೆಯಲು ಉದ್ದೇಶಿಸಲಾಗಿರುವ ಹೋತ, ಟಗರು, ಹಂದಿ, ಮತ್ತಿತರ ಪ್ರಾಣಿಗಳಿಗೆ ಬೀಜ ಒಡೆಯಬಾರದು.

"ತಿಷ್ಯಾ ಮತ್ತು ಪುನರ್ವಸು ದಿನಗಳಂದು, ಋತುಮಾಸಗಳ ಹುಣ್ಣಿಮೆಯ ದಿನಗಳಂದು ಮತ್ತು ಋತುಮಾಸಗಳ ಶುಕ್ಲಪಕ್ಷಗಳಲ್ಲಿ ಕುದುರೆ ಮತ್ತು ಎತ್ತುಗಳಿಗೆ ಗುರುತಿನ ಬರೆ ಹಾಕಕೂಡದು.

"ನನ್ನ ರಾಜ್ಯಾಭಿಷೇಕದ ಇಪ್ಪತ್ತಾರನೆಯ ವಾರ್ಷಿಕೋತ್ಸವದವರೆಗೆ ಕಾರಾಗೃಹಗಳಲ್ಲಿ ಇಪ್ಪತ್ತೈದು ಪ್ರಸವಗಳನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ."

– ಇದಿಷ್ಟು ಅಶೋಕನ ಶಾಸನವಿಧಿಗಳಿಗೆ ಸಂಬಂಧಿಸಿದ್ದು.

## III

ಈಗ ಮನುವಿನತ್ತ ಹೊರಳೋಣ. ಮಾಂಸವನ್ನು ತಿನ್ನುವುದರ ಬಗ್ಗೆ ಅವನ ಸ್ಮೃತಿಯಲ್ಲಿರುವ ನಿಯಮಾಂಶಗಳು ಹೀಗಿವೆ :

"೫.೧೧. ಮಾಂಸಾಹಾರಿ ಪಕ್ಷಿಗಳನ್ನು ತಿನ್ನುವುದನ್ನು ತಪ್ಪಿಸಬೇಕು; ಅಂತೆಯೇ ಗ್ರಾಮಗಳಲ್ಲಿ ನಿವಾಸಮಾಡುವ ಪಕ್ಷಿಗಳನ್ನೂ ತಿನ್ನಕೂಡದು. ಒಂದೇ ಗೊರಸಿನ ಪ್ರಾಣಿಗಳನ್ನು – ಅವನ್ನು ತಿನ್ನಲು ವಿಶೇಷವಾದ ಅನುಮತಿ ಇಲ್ಲದಿದ್ದಲ್ಲಿ – ಹಾಗೂ ಟಿಟ್ಟಿಭ ಮತ್ತು ಜ್ಯಾಕನಾಹಕ್ಕಿಗಳನ್ನು ತಿನ್ನಬಾರದು.

೫.೧೨ ಗುಬ್ಬಚ್ಚಿ, ಪ್ಲವ, ಹಂಸ, ಒಳ್ಳೆಯ ಬಾತುಕೋಳಿ, ಗ್ರಾಮದ ಹುಂಜ, ಸಾರಸ ಕೊಕ್ಕರೆ, ಮರಕುಟುಕ, ಗಿಣಿ ಮತ್ತು ಮೈನಾ ಹಕ್ಕಿಗಳನ್ನೂ ತಿನ್ನಕೂಡದು.

೫.೧೩ ಕೊಕ್ಕುಗಳಿಂದ ಹೊಡೆದು ತಿನ್ನುವ ಹಕ್ಕಿಗಳು, ಜಾಲಪಾದಗಳಿರುವ ಪಕ್ಷಿಗಳು, ಕೋಯಷ್ಟಿ (ಟಿಟ್ಟಿಭ ಜಾತಿಗೆ ಸೇರಿದ್ದು), ಕಾಲ್ಬೆರಳುಗಳಿಂದ ಹೆಕ್ಕಿ ತಿನ್ನುವ ಪಕ್ಷಿಗಳು, ಮುಳುಕು ಹಾಕಿ ಮೀನನ್ನು ಹಿಡಿದು ತಿನ್ನುವ ಪಕ್ಷಿಗಳು, ವಧಾಗೃಹದಿಂದ ತಂದ ಮಾಂಸ ಮತ್ತು ಒಣಗಿನ ಮಾಂಸ ಸಹ ತಿನ್ನಲು ವರ್ಜ್ಯವಾಗಿವೆ.

೫.೧೪. ಬಕ ಮತ್ತು ಬಲಾಕಾ ಕೊಕ್ಕರೆ, ಡೊಂಬ ಕಾಗೆ, ಮೀನನ್ನು ತಿಂದು ಜೀವಿಸುವ ಖಂಗರ್ತಕ ಪ್ರಾಣಿಗಳು, ಗ್ರಾಮದ ಹಂದಿಗಳು, ಮತ್ತು ಎಲ್ಲ ಬಗೆಯ ಮೀನುಗಳು ಕೂಡ ವರ್ಜ್ಯವಾಗಿವೆ.

೫.೧೫ ಯಾವುದೇ ಪ್ರಾಣಿಯ ಮಾಂಸವನ್ನು ತಿನ್ನುವವನು ಅಂತಹ ವಿಶಿಷ್ಟ ಪ್ರಾಣಿಯ ಮಾಂಸವನ್ನು ತಿನ್ನುವವನು ಎನಿಸಿಕೊಳ್ಳುತ್ತಾನೆ; ಆದರೆ ಮೀನನ್ನು ತಿನ್ನುವವನು ಎಲ್ಲ ಬಗೆಯ ಮಾಂಸವನ್ನು ತಿನ್ನುವವನು ಎನಿಸಿಕೊಳ್ಳುತ್ತಾನೆ. ಆದ್ದರಿಂದ ಮೀನನ್ನು ತಿನ್ನಬಾರದು.

೫.೧೬ ಆದರೆ ದೇವತೆಗಳಿಗೆ ಮತ್ತು ಪಿತೃಗಳಿಗೆ ಅರ್ಪಿಸಲ್ಪಟ್ಟ ಪಾಠಿನೆ ಮತ್ತು ರೋಹಿತ ಜಾತಿಗಳ ಮೀನನ್ನು ತಿನ್ನಬಹುದು; ಅಂತೆಯೇ ರಾಜೀವ, ಸಿಂಹತುಂದ ಮತ್ತು ಸಸಾಲ್ಕ ಮೀನುಗಳನ್ನು ಎಲ್ಲ ಸಮಯಗಳಲ್ಲೂ ತಿನ್ನಬಹುದು.

೫.೧೭ ತಿನ್ನಬಹುದಾದ ಪಂಗಡಗಳಿಗೆ ಸೇರಿದ್ದಾಗ್ಯೂ ಏಕಾಂತದಲ್ಲಿ ಜೀವಿಸುವ ಮತ್ತು ಅಜ್ಞಾತವಾದ ಕಾಡುಪ್ರಾಣಿಗಳು ಹಾಗೂ ಹಕ್ಕಿಗಳನ್ನು ತಿನ್ನಬಾರದು; ಅಂತೆಯೇ ಐದು ಕಲ್ಬೆರಳುಗಳನ್ನುಳ್ಳ ಪ್ರಾಣಿಗಳನ್ನೂ ತಿನ್ನಬಾರದು.

೫.೧೮ ಮುಳ್ಳುಹಂದಿ, ಮೊಲವನ್ನು ತಿಂದು ಜೀವಿಸುವ ಇನ್ನೊಂದು ಬಗೆಯ ಮುಳ್ಳುಹಂದಿ, ಉಡ, ಘೇಂಡಾಮೃಗ, ಆಮೆ ಮತ್ತು ಮೊಲಗಳನ್ನು ತಿನ್ನಲು ಯೋಗ್ಯವಾದವೆಂದು ಘೋಷಿಸಲಾಗಿದೆ; ಅಂತೆಯೇ ಒಂಟೆಗಳನ್ನುಳಿದು ಇತರೆ ಸಾಕುಪ್ರಾಣಿಗಳು ಒಂದು ದವಡೆಯಲ್ಲಿ ಮಾತ್ರ ಹಲ್ಲುಗಳಿದ್ದರೆ ಅವನ್ನು ತಿನ್ನಬಹುದು."

## IV

ಪ್ರಾಣಿವಧೆಗೆ ಸಂಬಂಧಿಸಿದಂತೆ ಅಶೋಕ ಮತ್ತು ಮನುಗಳಿಬ್ಬರ ಶಾಸನಗಳಲ್ಲಿ ದೊರಕುವ ಅಂಶಗಳ ಪರಿಶೀಲನೆ ಮಾಡಿದ್ದಾಗಿದೆ. ಆದರೆ ನಮ್ಮ ಮುಖ್ಯವಾದ ಆಸಕ್ತಿ ಇರುವುದು ಹಸುವಿನ ಬಗೆಗೆ. ಅವನು ಹಸುವಿನ ಹತ್ಯೆಯನ್ನು ನಿಷೇಧಿಸಿದ್ದನೆ? ಇದನ್ನು ಕುರಿತಂತೆ ಅಭಿಪ್ರಾಯಭೇದಗಳಿರುವ ಹಾಗೆ ತೋರುತ್ತದೆ. ಪ್ರೊಫೆಸರ್ ವಿನ್ಸೆಂಟ್ ಸ್ಮಿತ್ ಹೇಳುತ್ತಾರೆ.[೧]

---

೧. Smith : *Ashoka,* P.58

"ಅಶೋಕನ ನಿಯಮಗಳಲ್ಲಿ ಹಸುವನ್ನು ಕೊಲ್ಲುವುದನ್ನು ನಿಷೇಧಿಸಿಲ್ಲವೆಂದು ಗಮನಾರ್ಹವಾಗಿದೆ; ಅಂದರೆ ಗೋಹತ್ಯೆಯು ಕಾನೂನುಬದ್ಧವಾಗಿ ಮುಂದುವರಿಯಿತೆಂದು ಹೇಳಬಹುದು."

ಪ್ರಾಧ್ಯಾಪಕ ಸ್ಮಿತ್ ಹೇಳಿರುವುದನ್ನು ಟೀಕಿಸುತ್ತಾ ಪ್ರಾಧ್ಯಾಪಕ ರಾಧಾಕುಮುದ್ ಮುಖರ್ಜಿಯವರು ಅಶೋಕನು ಗೋಹತ್ಯೆಯನ್ನು ನಿಷೇಧಿಸಿಯೇ ಇದ್ದನೆಂದು ಹೇಳುತ್ತಾರೆ.[೧] ಸ್ತೂಪಶಾಸನ ಐದರಲ್ಲಿ ಬರುವ ಒಂದು ಆಕರದ ಆಧಾರದ ಮೇಲೆ ಅವರು ಹೀಗೆಂದಿದ್ದಾರೆ: ಚತುಷ್ಪಾದಿ ಪ್ರಾಣಿಗಳ ಹತ್ಯೆಯನ್ನು ಹೊರತುಪಡಿಸುವ ನಿಯಮ ಅಲ್ಲಿದೆ. ಈ ನಿಯಮದಡಿ ಹಸುವೂ ಆ ಪಟ್ಟಿಗೆ ಸೇರಿ ವಧೆಗೆ ಅರ್ಹವಲ್ಲವೆನಿಸಿಕೊಳ್ಳುತ್ತದೆಂದು ಅವರ ಅಭಿಪ್ರಾಯ. ಶಾಸನದ ಹೇಳಿಕೆಯ ಸರಿಯಾದ ಅನ್ವಯಾರ್ಥ ಇದಲ್ಲ. ಅಲ್ಲಿರುವುದು ಒಂದು ವಿಶೇಷಣಸಹಿತವಾದ ಹೇಳಿಕೆ. ಅದು ಎಲ್ಲ ಚತುಷ್ಪಾದಿ ಪ್ರಾಣಿಗಳನ್ನು ಒಟ್ಟಾಗಿ ಹೆಸರಿಸುವುದಿಲ್ಲ ; *"ಉಪಯೋಗಕ್ಕೆ ಮೀಸಲಾದ ಹಾಗೂ ತಿನ್ನಲಾಗದ'* ಚತುಷ್ಪಾದಿ ಪ್ರಾಣಿಗಳಿಗೆ ಮಾತ್ರ ಅದು ಅನ್ವಯಿಸುತ್ತದೆ. ಹಸುವನ್ನು ಉಪಯೋಗಕ್ಕೆ ಬಾರದ ಅಥವಾ ತಿನ್ನಲಾಗದ ಚತುಷ್ಪಾದಿ ಪ್ರಾಣಿಯೆಂದು ಹೇಳಬರುವುದಿಲ್ಲ. ಗೋಹತ್ಯೆಯನ್ನು ಅಶೋಕನು ನಿಷೇಧಿಸಲಿಲ್ಲವೆನ್ನುವ ಸ್ಮಿತ್ ಸರಿಯಾಗಿಯೇ ಹೇಳಿದ್ದಾರೆಂದು ತೋರುತ್ತದೆ. ಈ ಹೇಳಿಕೆಯು ಒಡ್ಡುವ ಸಮಸ್ಯೆಯಿಂದ ನುಸುಳಿಕೊಳ್ಳಲು ಮುಖರ್ಜಿಯವರು ಅಶೋಕನ ಕಾಲದಲ್ಲಿ ಹಸುವನ್ನು ತಿನ್ನುತ್ತಿರಲಿಲ್ಲವಾದ್ದರಿಂದ ಹೊರತುಪಡಿಸಲಾದ ಪ್ರಾಣಿಗಳ ಸಾಲಿಗೆ ಅದು ಸೇರಿಕೊಳ್ಳುತ್ತದೆಂದು ಹೇಳುತ್ತಾರೆ. ಅವರ ಈ ಹೇಳಿಕೆಯು ತೀರಾ ಅಸಂಬದ್ಧವಾಗಿದೆ ; ಏಕೆಂದರೆ, ಎಲ್ಲ ವರ್ಗಗಳೂ ಹೇರಳವಾಗಿ ತಿನ್ನುತ್ತಿದ್ದ ಪ್ರಾಣಿ ಹಸುವಾಗಿತ್ತು.

ಶಾಸನವನ್ನು ತಿರುಚಿ ಅದಕ್ಕೊಂದು ಅಪಾರ್ಥ ಕಲ್ಪಿಸುವ ಮುಖರ್ಜಿಯವರ ಪ್ರಯತ್ನ ಕೇವಲ ಅನವಶ್ಯಕ. ಗೋಹತ್ಯೆಯನ್ನು ನಿಷೇಧಿಸುವುದು ಅಶೋಕನ ಕರ್ತವ್ಯವಾಗಿದ್ದಿತೇನೋ ಎಂಬಂತೆ ಶಾಸನವನ್ನು ಅರ್ಥೈಸಬೇಕಾಗಿಲ್ಲ. ಹಸುವಿನಲ್ಲಿ ಅಶೋಕನಿಗೆ ವಿಶೇಷವಾದ ಆಸಕ್ತಿಯೇನೂ ಇರಲಿಲ್ಲ ; ಹತ್ಯೆಯಿಂದ ಅದನ್ನು ರಕ್ಷಿಸಲು ಅವನಿಗೆ ವಿಶಿಷ್ಟವಾದ ಕರ್ತವ್ಯವೂ ಇರಲಿಲ್ಲ. ಅಶೋಕನಿಗೆ ಆಸಕ್ತಿಯಿದ್ದುದು ಎಲ್ಲ ಮನುಷ್ಯರ ಹಾಗೂ ಪ್ರಾಣಿಗಳ ಜೀವನದ ಪಾವಿತ್ರ್ಯದ ಬಗ್ಗೆ. ಎಲ್ಲಿ ಜೀವಹರಣವು ಅವಶ್ಯವಾಗಿಲ್ಲವೋ ಅಲ್ಲಿ ಜೀವಹರಣ ಮಾಡುವುದನ್ನು ತಡೆಗಟ್ಟುವುದು ತನ್ನ ಕರ್ತವ್ಯವೆಂದು ಅವನು ಬಗೆದಿದ್ದನು. ಆದುದರಿಂದಲೇ ಯಜ್ಞಕ್ರಿಯೆಗಾಗಿ ಪ್ರಾಣಿಗಳನ್ನು ಕೊಲ್ಲುವುದನ್ನು ಅವನು ನಿಷೇಧಿಸಿದ್ದು;[೨] ಅದು ಅನವಶ್ಯಕವೆಂದು ಆತ ಪರಿಗಣಿಸಿದ್ದ. ಉಪಯೋಗಕ್ಕೆ ಬಾರದ ಇಲ್ಲವೇ ತಿನ್ನಲಾಗದ ಪ್ರಾಣಿಗಳನ್ನು ಕೊಲ್ಲುವುದು ಸಹ ಅಕ್ರಮ ಹಾಗೂ ಅನವಶ್ಯಕವಾದದ್ದು. ಗೋಹತ್ಯೆಯನ್ನು ಅವನು ನಿರ್ದಿಷ್ಟವಾಗಿ ನಿಷೇಧಿಸಲಿಲ್ಲವೆಂಬುದನ್ನು ವಾಸ್ತವವೆಂದು ನಾವು ತೆಗೆದುಕೊಳ್ಳಬೇಕು.

ಈ ವಿಷಯದಲ್ಲಿ ಬೌದ್ಧ ಮನೋಭಾವ ಏನಾಗಿದ್ದಿತೆಂದು ಪರಿಗಣಿಸಿ, ಅಶೋಕನ ಮೇಲೆ ದೋಷಾರೋಪಣೆ ಮಾಡಲು ಅದನ್ನು ಉಪಯೋಗಿಸಲು ಆಸ್ಪದವಿಲ್ಲ.

ಇನ್ನು ಮನುವಿಗೆ ಬರುವುದಾದರೆ ಗೋಹತ್ಯೆಯನ್ನವನು ನಿಷೇಧಿಸಲಿಲ್ಲ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಪ್ರತಿಯಾಗಿ, ಕೆಲವು ಸಂದರ್ಭಗಳಲ್ಲಿ ಹಸುವಿನ ಮಾಂಸವನ್ನು ತಿನ್ನುವುದು ಬಾಧ್ಯತೆಯೆಂಬ ಸೂಚನೆ ನೀಡಿದ್ದಾನೆ.

---

೧. Mookerji; Ashoka Pp. 21, 181, 184

೨. ನೋಡಿ, ಶಿಲಾಶಾಸನ ೧

ಹಾಗಿದ್ದರೆ ಬ್ರಾಹ್ಮಣೇತರರು ಹಸುವಿನ ಮಾಂಸವನ್ನು ತಿನ್ನುವುದನ್ನು ಕೈಬಿಟ್ಟದ್ದೇಕೆ? ಅವರು ಹಾಗೆ ಮಾಡಿದ್ದಕ್ಕೆ ಗೋಚರವಾಗುವ ಕಾರಣವೇನೂ ಇದ್ದಂತೆ ಕಾಣುವುದಿಲ್ಲ. ಆದರೆ ಅದಕ್ಕೆ ಕಾರಣವೊಂದು ಇದ್ದಿರಬೇಕು. ಇದಕ್ಕೆ ನಾನು ಸೂಚಿಸುವ ಕಾರಣ ಇದು : ಬ್ರಾಹ್ಮಣರನ್ನು ಅನುಕರಿಸುವ ಅವರ ಇಚ್ಛೆಯಿಂದಾಗಿ ಬ್ರಾಹ್ಮಣೇತರರು ಗೋಮಾಂಸ ಭಕ್ಷಣೆಯನ್ನು ಕೈಬಿಟ್ಟರು. ಇದೊಂದು ನವೀನವಾದ ಸಿದ್ಧಾಂತವಿರಬಹುದು; ಆದರೆ ಅದು ಅಸಾಧ್ಯವೆನಿಸುವ ಸಿದ್ಧಾಂತವಲ್ಲ. ಗಾಬ್ರಿಯೆಲ್ ತಾರ್ದೆ ಎಂಬ ಫ್ರೆಂಚ್ ಲೇಖಕ ವಿವರಿಸಿರುವಂತೆ ಸಮಾಜವೊಂದರಲ್ಲಿ ಸಂಸ್ಕೃತಿಯು ಹರಡುವುದು ಉಚ್ಚವರ್ಗಗಳ ರೀತಿನೀತಿ ಮತ್ತು ನಡವಳಿಕೆಗಳನ್ನು ಕೆಳಗಿನ ವರ್ಗಗಳವರು ಅನುಕರಣೆ ಮಾಡುವ ಮೂಲಕ. ಈ ಅನುಕರಣೆಯು ಎಷ್ಟು ನಿಯತವಾಗಿ ಆವರ್ತವಾಗುತ್ತದೆಂದರೆ ನೈಸರ್ಗಿಕ ನಿಯಮದಷ್ಟೇ ಯಾಂತ್ರಿಕವಾಗಿರುತ್ತದೆ. ಗಾಬ್ರಿಯೆಲ್ ತಾರ್ದೆಯು ಅನುಕರಣೆಯ ನಿಯಮಗಳನ್ನು ಪ್ರಸ್ತಾಪಿಸಿದ್ದಾನೆ. ಅಂತಹ ಒಂದು ನಿಯಮವೇನೆಂದರೆ ಉಚ್ಚವರ್ಗಗಳನ್ನು ಕೆಳಗಿನ ವರ್ಗಗಳವರು ಅನುಕರಿಸುತ್ತಾರೆಂಬುದು. ಇದೆಷ್ಟು ಸಾಮಾನ್ಯ ಜ್ಞಾನದ ಅಂಶವಾಗಿ ಹೋಗಿದೆಯೆಂದರೆ ಅದರ ಸತ್ಯತೆಯನ್ನು ಪ್ರಶ್ನಿಸುವವರನ್ನು ಕಾಣುವುದೇ ವಿರಳ.

ಬ್ರಾಹ್ಮಣರು ಬ್ರಾಹ್ಮಣೇತರರಿಗಿಂತಲೂ ನಿಸ್ಸಂಶಯವಾಗಿ ಉನ್ನತ ಸ್ಥಾನದಲ್ಲಿದ್ದರು ; ಬ್ರಾಹ್ಮಣೇತರರಲ್ಲಿ ಹಸುವಿನ ಪೂಜೆಯ ವ್ಯಾಪಕ ಹರಡುವಿಕೆ ಮತ್ತು ಹಸುವಿನ ಮಾಂಸ ತಿನ್ನುವುದು ಅಂತ್ಯ – ಇವೆರಡೂ ಅವರು ಬ್ರಾಹ್ಮಣರನ್ನು ಅನುಕರಿಸುವುದರಿಂದ ಬೆಳೆಯಿತೆಂಬುದು ವಿವಾದಾಸ್ಪದವಾಗಿಲ್ಲ. ಹಸುವಿನ ಪೂಜೆಯ ಪರವಾಗಿ ಬ್ರಾಹ್ಮಣರು ಬೇಕಾದಷ್ಟು ಪ್ರಚಾರ ನಡೆಸಿದ್ದರೆಂಬುದು ನಿಜ. ಗಾಯತ್ರೀ ಪುರಾಣ ಇಂತಹ ಒಂದು ಪ್ರಚಾರದ ಭಾಗ. ಆದರೆ ಪ್ರಾರಂಭದ ದೆಸೆಯಲ್ಲಿ ಹಸುವಿನ ಪೂಜೆಯು ಅನುಕರಣೆಯೆಂಬ ಪ್ರಾಕೃತಿಕ ನಿಯಮದ ಫಲ. ಇದರಿಂದ ಇನ್ನೊಂದು ಪ್ರಶ್ನೆ ಉದ್ಭವಿಸುತ್ತದೆ–ಬ್ರಾಹ್ಮಣರೇಕೆ ಗೋಮಾಂಸ ಭಕ್ಷಣೆಯನ್ನು ಕೈಬಿಟ್ಟರು?

♦

# ಅಧ್ಯಾಯ ೧೩

## ಬ್ರಾಹ್ಮಣರು ಸಸ್ಯಾಹಾರಿಗಳಾಗಲು ಏನು ಕಾರಣ?

ಬ್ರಾಹ್ಮಣೇತರರು ಸ್ಪಷ್ಟವಾಗಿಯೇ ಕ್ರಾಂತಿಯೊಂದನ್ನು ಹಾದು ಬಂದಿದ್ದಾರೆ. ಹಸುವಿನ ಮಾಂಸ ತಿನ್ನುತ್ತಿದ್ದವರು, ಅದನ್ನು ಬಿಟ್ಟುಕೊಟ್ಟದ್ದು ಒಂದು ದೊಡ್ಡ ಕ್ರಾಂತಿಯೇ. ಆದರೆ ಬ್ರಾಹ್ಮಣೇತರರು ಒಂದು ಕ್ರಾಂತಿ ಎದುರಿಸಿದ್ದರೆ, ಬ್ರಾಹ್ಮಣರು ಎರಡು ಕ್ರಾಂತಿಗಳನ್ನು ಎದುರಿಸಿದರು. ಹಸುವಿನ ಮಾಂಸ ತಿನ್ನುವುದನ್ನು ಬಿಟ್ಟದ್ದು ಮೊದಲ ಕ್ರಾಂತಿ ; ಸಂಪೂರ್ಣವಾಗಿ ಮಾಂಸಾಹಾರ ತ್ಯಜಿಸಿ, ಸಸ್ಯಾಹಾರಿಗಳಾದದ್ದು ಎರಡನೇ ಕ್ರಾಂತಿ.

ಇದು ಒಂದು ಕ್ರಾಂತಿ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಯಾಕೆಂದರೆ ಹಿಂದಿನ ಅಧ್ಯಾಯಗಳಲ್ಲಿ ತೋರಿಸಿದ ಹಾಗೆ, ಬ್ರಾಹ್ಮಣರು ಬೃಹತ್ ಪ್ರಮಾಣದಲ್ಲಿ ಗೋ ಮಾಂಸಾಹಾರಿಗಳಾಗಿದ್ದರು. ಬ್ರಾಹ್ಮಣೇತರರು ಹಸುವಿನ ಮಾಂಸವನ್ನು ಆಗೊಮ್ಮೆ ಈಗೊಮ್ಮೆ ತಿನ್ನುತ್ತಿರಬಹುದಾದರೂ, ಪ್ರತಿದಿನ ಅವರು ತಿನ್ನುವಂತಿರಲಿಲ್ಲ. ಹಸು ಬಹಳ ತುಟ್ಟಿ ಪ್ರಾಣಿಯಾಗಿದ್ದರಿಂದ, ಅವರು ಕೇವಲ ಆಹಾರಕ್ಕಾಗಿ ಕೊಲ್ಲುವ ಸ್ಥಿತಿಯಲ್ಲಿರಲಿಲ್ಲ. ಆತ ವಿಶೇಷ ಸಂದರ್ಭಗಳಲ್ಲಿ, ಧಾರ್ಮಿಕ ಕರ್ತವ್ಯ ಅಥವಾ ಯಾವುದಾದರೂ ದೇವತೆಯನ್ನು ಒಲಿಸಿಕೊಳ್ಳುವಂತಹ ಸಂದರ್ಭಗಳಲ್ಲಿ ಮಾತ್ರವೇ ಅದಕ್ಕೆ ಕೈ ಹಾಕುತ್ತಿದ್ದ. ಬ್ರಾಹ್ಮಣರ ವಿಷಯದಲ್ಲಿ ಅದು ಹಾಗಿರಲಿಲ್ಲ. ಆತ ಪುರೋಹಿತ, ಆಚರಣೆಗಳೇ ಮುಖ್ಯವಾಗಿದ್ದ ಅಂದಿನ ದಿನಗಳಲ್ಲಿ, ಬ್ರಾಹ್ಮಣೇತರರು ಆಗೀಗ ಆಚರಿಸುತ್ತಿದ್ದ ಹಸುವಿನ ವಧೆಯ ಆಚರಣೆಯಲ್ಲಿ ಬ್ರಾಹ್ಮಣರಿಗೆ ಆಹ್ವಾನವಿದ್ದೇ ಇರುತ್ತಿತ್ತು. ಇದರಿಂದ ಪ್ರತಿನಿತ್ಯ ಒಂದಲ್ಲ ಒಂದು ಕಡೆ ಗೋಮಾಂಸ ಲಭ್ಯವಾಗುತ್ತಿತ್ತು. ಬ್ರಾಹ್ಮಣರು ಮಹಾನ್ ಗೋಮಾಂಸ ಭಕ್ಷಕರಾಗಿದ್ದರು. ಯಜ್ಞಗಳೆಂದರೆ ಏನು? ಬ್ರಾಹ್ಮಣರು ಗೋಮಾಂಸದ ಆಸೆಯಿಂದ, ಆದರೆ ಅದನ್ನು ಧರ್ಮದ ಸೋಗಿನಲ್ಲಿ ವೈಭವೋಪೇತವನ್ನಾಗಿ ಮಾಡಿ ಮುಗ್ಧ ಪ್ರಾಣಿಗಳನ್ನು ಕೊಲ್ಲುವುದೇ ಆಗಿತ್ತು. ಯಜ್ಞದಲ್ಲಿ ಪ್ರಾಣಿಗಳನ್ನು ವಧಿಸುವಾಗ, ನಡೆಯುತ್ತಿದ್ದ ರಹಸ್ಯ ಮತ್ತು ವೈಭವಗಳನ್ನು ಆತ್ರೇಯ ಬ್ರಾಹ್ಮಣದಲ್ಲಿ ಕೊಡಲಾಗಿರುವ ಸೂಚನೆಗಳಿಂದ ತಿಳಿದುಕೊಳ್ಳಬಹುದು.

ಇಲ್ಲಿ ವಿವರಿಸಲು ಬಹಳ ದೀರ್ಘ ಎನಿಸುವ ತುಂಬ ದೀರ್ಘವಾದ ಮಂತ್ರಗಳ ಉಚ್ಚಾರಣೆಯೊಂದಿಗೆ ಕೆಲವು ಆರಂಭಿಕ ವ್ರತಾಚರಣೆಗಳ ನಂತರ ಪ್ರಾಣಿವಧೆ ಮಾಡಲಾಗುತ್ತಿತ್ತು. ಇಲ್ಲಿ ಪ್ರಾಣಿಬಲಿಯ ಕೆಲವು ಮುಖ್ಯಾಂಶಗಳನ್ನು ಮಾತ್ರವೇ ಕೊಡುವುದು ಸರಿ. ಬಲಿ ಕೊಡುವ ಪ್ರಾಣಿಯನ್ನು 'ಯೂಪ'ವೆಂಬ ಕಂಬವೊಂದಕ್ಕೆ ಕಟ್ಟುತ್ತಾರೆ. ಈ ಕಂಬವನ್ನು ನಿಲ್ಲಿಸುವುದರೊಂದಿಗೆ. ಪ್ರಾಣಿವಧೆಯ ಕಟ್ಟಳೆ ಪ್ರಾರಂಭವಗುತ್ತದೆ. ಈ ಯೂಪ ಏನು ಎಂಬ ಬಗ್ಗೆ ಆತ್ರೇಯ ಬ್ರಾಹ್ಮಣ ಈ ರೀತಿ ಹೇಳುತ್ತದೆ:[೧]

"ಈ ಯೂಪ ಒಂದು ಆಯುಧ. ಆದರ ತುದಿ ಅಷ್ಟ ಮೂಲೆಗಳಿಂದ ಕೂಡಿರಬೇಕು. ಯಾಕೆಂದರೆ ಯಾವುದೊಂದು ಆಯುಧಕ್ಕೆ (ಕಬ್ಬಿಣದ ಗದೆಗೆ) ಎಂಟು ಮೂಲೆಗಳಿರುತ್ತವೆ. ಇದರಿಂದ ಹೊಡೆಯಲ್ಪಟ್ಟ

---

೧. ಆತ್ರೇಯ ಬ್ರಾಹ್ಮಣ, II ಪು. ೭೨– ೭೪

ಶತ್ರು ಸಾಯುತ್ತಾನೆ. ಯಜ್ಞದಲ್ಲಿ ಯಾರನ್ನು ಕೊಲ್ಲಬೇಕಾಗಿದೆಯೋ, ಆತನನ್ನು ಇದು ನಾಶಮಾಡುತ್ತದೆ. ಈ ಯೂಪವನ್ನು ಶತ್ರುವನ್ನು ಸಾಯಿಸಲಿಕ್ಕೆ ನೆಡುತ್ತಾರೆ. ಆದ್ದರಿಂದ, ಈ ಯೂಪವನ್ನು ನೋಡಿದ ಮಾತ್ರಕ್ಕೆ ಶತ್ರು ಸಂಪೂರ್ಣ ನಾಶ ಹೊಂದುತ್ತಾನೆ.

ಈ ಯೂಪವನ್ನು ಯಾವ ಮರದಿಂದ ಮಾಡಿದ್ದು ಎಂಬ ಅಂಶ, ಯಜಮಾನ (ಯಜ್ಞದ ಕರ್ತೃ) ಯಾವ ಉದ್ದೇಶವನ್ನಿಟ್ಟುಕೊಂಡು ಮಾಡುತ್ತಾನೆ, ಎನ್ನುವುದನ್ನು ಅವಲಂಬಿಸುತ್ತದೆ. ಆತ್ರೇಯ ಬ್ರಾಹ್ಮಣ ಹೀಗೆ ಹೇಳುತ್ತದೆ:

"ಸ್ವರ್ಗವನ್ನು ಅಪೇಕ್ಷಿಸುವವನು ಖದಿರ ಜಾತಿಯ ಮರವನ್ನು ಬಳಸಬೇಕು. ಖದಿರ ಮರದಿಂದ ಮಾಡಿದ ಯೂಪವನ್ನು ಬಳಸಿಯೇ ದೇವತೆಗಳು ಸ್ವರ್ಗವನ್ನು ಪಡೆದುಕೊಂಡರು. ಇದೇ ರೀತಿ, ಖದಿರ ಮರದಿಂದ ಯೂಪವನ್ನು ನಿರ್ಮಾಣ ಮಾಡಿದವನು ದೇವಲೋಕವನ್ನು ಗೆದ್ದುಕೊಳ್ಳುತ್ತಾನೆ."

"ಆಹಾರವನ್ನು ಅಪೇಕ್ಷಿಸಿ, ದಪ್ಪನಾಗಿ ಬೆಳೆಯಬೇಕೆಂಬುವವನು, ಬಿಲ್ವದ ಯೂಪವನ್ನು ಸ್ಥಾಪಿಸಬೇಕು. ಯಾಕೆಂದರೆ ಬಿಲ್ವ ಪ್ರತೀವರ್ಷ ಹಣ್ಣು ಬಿಡುತ್ತದೆ. ಅದು ಫಲವತ್ತತೆಯ ಸೂಚಕ. ಯಾಕೆಂದರೆ ಅದು ಪ್ರತೀವರ್ಷ ಬೇರಿನಿಂದ ಕೊಂಬೆಯವರೆಗೆ ಬೆಳೆಯುತ್ತದೆ. ಆದ್ದರಿಂದ ಅದು ದಪ್ಪದ ಪ್ರತೀಕ. ಈ ಅಂಶವನ್ನು ಅರಿತು ಬಿಲ್ವದ ಯೂಪವನ್ನು ಮಾಡುವವನು, ತನ್ನ ಮಕ್ಕಳು ಮತ್ತು ದನಕರುಗಳನ್ನು ದಷ್ಟಪುಷ್ಟರನ್ನಾಗಿ ಮಾಡುತ್ತಾನೆ.

"ಬಿಲ್ವಮರದ ಯೂಪದ ಬಗ್ಗೆ ಮತ್ತೂ ಹೇಳಬೇಕೆಂದರೆ, ಅದನ್ನು ಬೆಳಕಿನ ಬಿಲ್ವ ಎನ್ನುತ್ತಾರೆ. ಈ ವಿಷಯವನ್ನು ಅರಿತವನು, ತನ್ನ ಜನಗಳ ಮಧ್ಯೆ ಬೆಳಕು ಎನಿಸಿಕೊಳ್ಳುತ್ತಾನೆ. ತನ್ನ ಜನಗಳಲ್ಲೇ ಅತ್ಯಂತ ಪ್ರತಿಷ್ಠಿತನಾಗುತ್ತಾನೆ.

"ಯಾರು ಸೌಂದರ್ಯ ಮತ್ತು ಪವಿತ್ರಜ್ಞಾನಗಳನ್ನು ಪಡೆಯಲು ಇಚ್ಛಿಸುತ್ತಾನೋ, ಅಂಥವನು ಮುತ್ತುಗ ಮರವನ್ನು ಉಪಯೋಗಿಸಿ ಯೂಪವನ್ನು ತಯಾರಿಸಬೇಕು. ಯಾಕೆಂದರೆ ಮುತ್ತುಗ ಮರವು ಸೌಂದರ್ಯ ಮತ್ತು ಪವಿತ್ರ ಜ್ಞಾನದ ಮರಗಳಲ್ಲಿ ಒಂದಾಗಿದೆ.

"ಪಲಾಶ ಅಥವಾ ಮುತ್ತುಗ ಮರದಿಂದ ಮಾಡಿದ ಯೂಪದ ಬಗ್ಗೆ ಮತ್ತೂ ಹೇಳಬೇಕೆಂದರೆ, ಅದು ಎಲ್ಲ ಮರಗಳ ತಾಯಿ. ಆದ್ದರಿಂದಲೇ ಎಲ್ಲ ಮರಗಳ ಎಲೆಗಳಿಗೂ ಪಲಾಶಂ ಎಂದೇ ಕರೆಯುತ್ತಾರೆ. ಇಂತಹ ಜ್ಞಾನವನ್ನು ಯಾರು ಪಡೆದಿರುತ್ತಾರೋ, ಯಾವುದೇ ಮರದ ಮೂಲಕವಾಗಲೀ, ಯಾವುದೇ ಕಾಮನೆಯನ್ನು ಪೂರೈಸಿಕೊಳ್ಳಬಹುದು. ಇದರ ನಂತರ ಯೂಪವನ್ನು ತುಪ್ಪದಿಂದ ಲೇಪಿಸುವ ಆಚರಣೆ ನಡೆಯುತ್ತದೆ.[೧]

"ಹೋತಾರನಿಗೆ ಅಧ್ವರ್ಯು ಹೇಳುತ್ತಾನೆ – ನಾವು ಪವಿತ್ರ ಸ್ತಂಭಕ್ಕೆ ಲೇಪಿಸುತ್ತೇವೆ. ಇದಕ್ಕೆ ಆವಶ್ಯಕವಾದ ಮಂತ್ರವನ್ನು ಪುನರುಚ್ಚರಿಸು. ಹೋತಾರ ಈಗ ಮಂತ್ರವನ್ನು ಪಠಿಸುತ್ತಾನೆ – "ಅಂಜಂತಿ ತ್ವಮ್ ಅಧ್ವರೇ" (೩, ೮, ೧) ಅಂದರೆ ಪುರೋಹಿತರು, ಮರವೇ, ನಿನ್ನನ್ನು ದೇವಲೋಕದ ಜೇನು ತುಪ್ಪದಿಂದ (ಬೆಣ್ಣೆಯಿಂದ) ಸವರುತ್ತಾರೆ. ನೀನು ಇಲ್ಲಿ ನೇರವಾಗಿ ನಿಂತೇ ಇರು, ಇಲ್ಲವೆ ನಿನ್ನ ಪವಿತ್ರ (ಭೂ) ತಾಯಿಯ ಮೇಲೆ ಮಲಗಿರು, ನಮಗೆ ಸಂಪತ್ತನ್ನು ಕರುಣಿಸು. "ದೇವಲೋಕದ ಜೇನುತುಪ್ಪ"ವೆಂದರೆ,

---

೧. ಆತ್ರೇಯ ಬ್ರಾಹ್ಮಣ (ಮಾರ್ಟಿನ್ ಹಾಗ್) II ಪುಟ ೭೪–೭೮

ಕಾಸಿದ ತುಪ್ಪ. ಈ ಪದ್ಯದ ಉತ್ತರಾರ್ಧದಲ್ಲಿ, ನೀನು ನಿಂತಿರಲಿ, ಮಲಗಿರಲಿ, ನಮಗೆ ಸಂಪತ್ತನ್ನು ಕೊಡು ಎನ್ನುವುದೇ ಆಗಿದೆ".

"ಹೋತಾರ ಮುಂದೆ ಪಠಿಸುತ್ತಾನೆ 'ಜಾತೊ ಜಾಯತೇ ಸುದಿನತ್ವೇ' ಇತ್ಯಾದಿ (೩, ೮.೫) ತನ್ನ ಜನನದ ಬಳಿಕ ಯೂಪವು, ತನ್ನ ಜೀವಿತದ ಪರಮೋಚ್ಚ ಸ್ಥಿತಿಯಲ್ಲಿ, ಮರ್ತ್ಯಮಾನವರ ಯಜ್ಞದಲ್ಲಿ ಸೇವೆ ಮಾಡಲು ಬೆಳೆಯುತ್ತಾನೆ. ಬುದ್ಧಿವಂತರಾದವರು, ಯೂಪವನ್ನು ಅಲಂಕರಿಸುವುದರಲ್ಲಿ ತೊಡಗುತ್ತಾರೆ. ಮಾತಿನಲ್ಲಿ ಜಿಪುಣನಲ್ಲದ, ದೇವತೆಗಳ ಸುದ್ದಿವಾಹಕನಾದ ಆತ (ಯೂಪ) ತನ್ನ ದನಿಯನ್ನು (ದೇವತೆಗಳು ಕೇಳಿಕೊಳ್ಳುವಂತೆ) ಮೇಲಕ್ಕೆತ್ತುತ್ತಾನೆ. ಯೂಪವನ್ನು ಜಾತ ಎಂದು ಕರೆಯುತ್ತಾರೆ. ಯಾಕೆಂದರೆ ಈ ಶ್ಲೋಕದ ಆರಂಭದ ಕಾಲುಭಾಗದ ಉಚ್ಚಾರಣೆಯಿಂದ ಅವನು ಜನಿಸುತ್ತಾನೆ. ವರ್ಧಮಾನ ಎಂಬ ಪದವನ್ನು ಉಚ್ಚರಿಸುವುದರ ಮೂಲಕ, ಅವನು (ಯೂಪ) ಬೆಳೆಯುವಂತೆ ಅವರು ಮಾಡುತ್ತಾರೆ. ಸ್ವಚ್ಛ ಮತ್ತು ಅಲಂಕರಿಸು ಎಂಬ ಅರ್ಥ ಕೊಡುವ ಪುನಂತಿ ಎಂಬ ಪದದ ಮೂಲಕ ಅವರು ಆತನನ್ನು (ಯೂಪನನ್ನು) ಸ್ವಚ್ಛಗೊಳಿಸುತ್ತಾರೆ. ಅವನೊಬ್ಬ ಮಹಾನ್ ಮಾತುಗಾರ ಸುದ್ದಿವಾಹಕ ಎಂದು ಉಚ್ಚರಿಸುವುದರ ಮೂಲಕ ಯೂಪದ ಅಸ್ತಿತ್ವವನ್ನು, ಪುರೋಹಿತನು ದೇವತೆಗಳಿಗೆ ಉದ್ಘೋಷಿಸುತ್ತಾನೆ."

"ಯುವಾ ಸುವಾಸಃ ಪರಿವೀತಃ" (೩, ೮, ೪) ಅಂದರೆ, "ಆಲಂಕಾರಿಕ ಪಟ್ಟಿಗಳಿಂದ ಅಲಂಕೃತ ತರುಣ ಬಂದಿದ್ದಾನೆ; ಬೆಳೆದು ನಿಂತಿರುವ ಬೇರೆಲ್ಲ ಮರಗಳಿಗಿಂತ ಆತ ಸುಂದರನಾಗಿದ್ದಾನೆ; ತಮ್ಮ ಪರಿಪೂರ್ಣವಾದ ಮನಸ್ಸಿನ ಆಲೋಚನೆಗಳ ಉಚ್ಚಾರಣೆಗಳಿಂದ ಪುರೋಹಿತರು ಅವನನ್ನು ಎತ್ತಿ ನಿಲ್ಲಿಸಿದ್ದಾರೆ" ಎಂದು ಅರ್ಥ ಬರುವಂತೆ ಶ್ಲೋಕದೊಂದಿಗೆ ಯಜ್ಞಸ್ತಂಭವನ್ನು ಲೇಪಿಸುವ ಕ್ರಿಯೆಯನ್ನು ಹೋತಾರನು ಪೂರ್ಣಗೊಳಿಸುತ್ತಾನೆ. ಆಲಂಕಾರಿಕ ಪಟ್ಟಿಗಳಿಂದ ಅಲಂಕೃತವಾದ ಯುವಕನೆಂದರೆ ಪ್ರಾಣವಾಯು (ಆತ್ಮ); ಅದು ದೇಹದ (ಮಾತುಗಳ) ಅಂಗಾಂಗಗಳಿಂದ ಆವೃತವಾಗಿದೆ. "ಆತ ಆಕರ್ಷಕ" ಎಂದು ಹೇಳುವುದರ ಅರ್ಥವೆಂದರೆ, ಯೂಪವು ಈ ಮೂಲಕ ಹೆಚ್ಚು ಆಕರ್ಷಕನಾಗುತ್ತನೆ."

ಮುಂದಿನ ಆಚರಣೆಯೆಂದರೆ, ಬಲಿಪಶುವಿನ ಸುತ್ತ ಬೆಂಕಿಯನ್ನು ಒಯ್ಯುವುದು. ಆತ್ರೇಯ ಬ್ರಾಹ್ಮಣ ಈ ವಿಷಯವಾಗಿ, ಕೆಳಕಂಡ ಸೂಚನೆಗಳನ್ನು ಕೊಡುತ್ತದೆ.[೧]

"(ಪ್ರಾಣಿಯ) ಸುತ್ತಲೂ ಬೆಂಕಿಯನ್ನು ಒಯ್ದಾಗ, ಅಧ್ವರ್ಯು, ಹೋತಾರನಿಗೆ ಹೇಳುತ್ತಾನೆ – 'ಮಂತ್ರಗಳನ್ನು ಉಚ್ಚರಿಸು'. ನಂತರ ಹೋತಾರನು, ಗಾಯತ್ರಿ ಛಂದಸ್ಸಿನಲ್ಲಿ ರಚಿತವಾಗಿ, ಅಗ್ನಿಗೆ ಸಂಬೋಧಿಸಲ್ಪಟ್ಟ ಮೂರು ಶ್ಲೋಕಗಳನ್ನು ಹೇಳುತ್ತಾನೆ : "ಅಗ್ನಿರ್ ಹೋತಾ ನೋ ಅಧ್ವರೇ" (೪.೧೫, ೧–೩) ಅಂದರೆ (೧) ದೇವರುಗಳ ಮಧ್ಯದಲ್ಲಿರುವ, ಯಜ್ಞದೇವತೆಯಾದ, ನಮ್ಮ ಪುರೋಹಿತ ಅಗ್ನಿಯನ್ನು ಕುದುರೆಯ ರೀತಿಯಲ್ಲಿ ಸುತ್ತಲೂ ಕರೆದೊಯ್ಯಲಾಗಿದೆ. (೨) ಸಾರಥಿಯ ರೀತಿಯಲ್ಲಿ ಅಗ್ನಿ ಯಜ್ಞದ ಸುತ್ತ ಮೂರು ಸುತ್ತು ಬರುತ್ತಾನೆ; ಆತ ದೇವತೆಗಳಿಗೆ ಹವಿಸ್ಸನ್ನು ತೆಗೆದುಕೊಂಡು ಹೋಗುತ್ತಾನೆ. (೩) ಬಲಿಪಶುವಿನ ಸುತ್ತ. ಆಹಾರದ ಅಧಿದೇವತೆಯಾದ ದಾರ್ಶನಿಕ ಅಗ್ನಿ ಸುತ್ತು ಬಂದನು; ಆತ ಯಜ್ಞಕರ್ತೃವಿಗೆ ಸಂಪತ್ತನ್ನು ನೀಡುತ್ತಾನೆ.

"ಬಲಿಪಶುವಿನ ಸುತ್ತ ಬೆಂಕಿಯನ್ನು ಕೊಂಡೊಯ್ದಾಗ, ಅಗ್ನಿ ತನ್ನದೇ ಅಧಿದೇವತೆಯ ಮತ್ತು ಛಂದಸ್ಸಿನ ಮೂಲಕ ಅವನನ್ನು ಸಂಪದ್‌ಭರಿತನನ್ನಾಗಿ ಮಾಡುತ್ತಾನೆ. ಕುದುರೆಯಂತೆ ಅವನನ್ನು

---

೧. ಆತ್ರೇಯ ಬ್ರಾಹ್ಮಣ (ಮಾರ್ಟಿನ್ ಹಾಗ್) ಪುಟ ೮೪–೮೬

ಕರೆದೊಯ್ಯಲಾಗುವುದು" ಎನ್ನುವುದರ ಅರ್ಥ ಅವನು ಕುದುರೆಯೋ ಎನ್ನುವಂತೆ ಸುತ್ತು ಒಯ್ಯಲಾಗುವುದು. ಸಾರಥಿಯಂತೆ ಮೂರು ಸಾರಿ ಯಜ್ಞದ ಸುತ್ತ ಅಗ್ನಿ ಬರುತ್ತಾನೆ ಎಂದರೆ, ಆತ ಸಾರಥಿಯಂತೆ (ವೇಗವಾಗಿ) ಸುತ್ತುತ್ತಾನೆ. ಅವನನ್ನು ವಾಜಪತಿ (ಆಹಾರದ ಅಧಿದೇವತೆ) ಎಂದು ಕರೆಯುವುದರ ಉದ್ದೇಶ ಆತ ವಿವಿಧ ಬಗೆಯ ಆಹಾರಗಳ ಅಧಿದೇವತೆ ಎನ್ನುವುದೇ ಆಗಿದೆ.

ಅಧ್ವರ್ಯು ಹೇಳುತ್ತಾನೆ. ಹೋತಾರನೇ, ದೇವತೆಗಳಿಗೆ ಹವಿಸ್ಸನ್ನು ಕಳಿಸಲು ವಿಶೇಷ ಆಜ್ಞೆ ನೀಡು.

ಆಗ ಹೋತಾರ ಹೇಳುತ್ತಾನೆ : (ವಧೆಯನ್ನು ಮಾಡುವವರಿಗೆ) : "ದೈವೀ ಬಲಿಗಾರರೇ, ನಿಮ್ಮ ಕೆಲಸ ಪ್ರಾರಂಭಿಸಿ. ಮಾನವ ಬಲಿಗಾರರೇ, ನೀವೂ ಕೆಲಸ ಪ್ರಾರಂಭಿಸಿ. ಅಂದರೆ ದೇವತೆಗಳಲ್ಲಿ ಮತ್ತು ಮಾನವರಲ್ಲಿರುವ ಎಲ್ಲ ಬಲಿಗಾರರನ್ನೂ ಆತ ಆಜ್ಞಾಪಿಸುತ್ತಾನೆ.

ಈ ವಧೆಯನ್ನು ಯಾರು ಕೈಗೊಂಡಿದ್ದಾರೆಯೋ ಅಂತಹವರು, ಈ ಯಜ್ಞದ ಎರಡೂ ಬಗೆಯ ಯಜಮಾನರ ಪರವಾಗಿ, ವಧಿಸಲು ಬೇಕಾದ ಆಯುಧಗಳನ್ನು ತನ್ನಿ.

"ಬಲಿಪಶುವೇ ಅರ್ಪಿತವಾದ ಪ್ರಾಣಿ. ಬಲಿ ಕೊಡುವವನೇ ಯಜ್ಞದ ಯಜಮಾನ. ಹೀಗೆ ಯಜಮಾನನು ತನ್ನದೇ ಆದ ಪ್ರಾಣಿಯನ್ನು ಬಲಿ ಕೊಡುವುದ ಮೂಲಕ ಶ್ರೀಮಂತನಾಗುವಂತೆ ಹೋತಾರ ಮಾಡುತ್ತಾನೆ. ಆದ್ದರಿಂದಲೇ ಅವರು ಸತ್ಯವಾಗಿ ಹೇಳುತ್ತಾರೆ." ಯಾವ ದೇವತೆಯ ಹೆಸರಿನಲ್ಲೇ ಬಲಿ ಕೊಡಲಿ, ಆ ದೇವತೆಯೇ ಯಜ್ಞದ ಅಧಿಷ್ಠಾತೃ. ಬಲಿಯನ್ನು ಯಾವುದೊಂದೇ ದೇವತೆಗೆ ಬಲಿ ಕೊಡಬೇಕಾಗಿದ್ದಲ್ಲಿ, ಪುರೋಹಿತ ಹೀಗೆ ಹೇಳಬೇಕು – "ಮೇಧಾಪತಯೇ (ಒಬ್ಬನೇ ಯಜ್ಞದೇವತೆ ಯಾಗಿದ್ದಲ್ಲಿ); ಇಬ್ಬರು ಯಜ್ಞ ದೇವತೆಗಳಾಗಿದ್ದಲ್ಲಿ, ಇಬ್ಬರೂ ದೇವತೆಗಳೇ ಎಂದೂ ಅನೇಕ ದೇವತೆಗಳಾಗಿದ್ದಲ್ಲಿ, ಯಜ್ಞ ದೇವತೆಗಳಿಗೆ ನೈವೇದ್ಯ" ಎಂದು ಹೇಳುವುದು ಪಾರಂಪರಿಕವಾಗಿ ನಡೆದು ಬಂದ ಪದ್ಧತಿ.

ಅವನಿಗಾಗಿ ಬೆಂಕಿಯನ್ನು ತನ್ನಿರಿ. ಯಾಕೆಂದರೆ, ಪಶುವನ್ನು ಬಲಿಗಾಗಿ ಕರೆದೊಯ್ದಾಗ, ಅದು ಸಾವನ್ನು ನೋಡಿತು. ದೇವತೆಗಳ ಕಡೆಗೆ ಹೋಗಲು ಇಷ್ಟವಿರದಿದ್ದರೂ, ದೇವತೆಗಳು ಅದಕ್ಕೆ ಹೀಗೆ ಹೇಳಿದರು – ಬಾ, ನಾವು ನಿನ್ನನ್ನು ಸ್ವರ್ಗಕ್ಕೇ ಕರೆದೊಯ್ಯುತ್ತೇವೆ. ಆ ಪ್ರಾಣಿಯು ಸಮ್ಮತಿಸಿ, ಹೇಳಿತು : ನಿಮ್ಮಲ್ಲಿ ಒಬ್ಬರು ನನ್ನ ಮುಂದೆ ನಡೆಯಬೇಕು. ಅವರು ಒಪ್ಪಿದರು. ಅಗ್ನಿ ಅದರ ಮುಂದೆ ನಡೆದನು. ಅದು ಅಗ್ನಿಯನ್ನು ಅನುಸರಿಸಿತು. ಅದರಿಂದಾಗಿ, ಪ್ರತಿಯೊಂದು ಪ್ರಾಣಿಯೂ ಅಗ್ನಿಗೆ ಸೇರಿದ್ದೆಂದು ಅವರು ಹೇಳುತ್ತಾರೆ, ಯಾಕೆಂದರೆ ಅದು ಅಗ್ನಿಯನ್ನೇ ಹಿಂಬಾಲಿಸಿತು. ಆದ್ದರಿಂದ ಪ್ರತಿಯೊಂದು ಪ್ರಾಣಿಯ ಮುಂದೆಯೂ ಅಗ್ನಿಯನ್ನು ತೆಗೆದುಕೊಂಡು ಹೋಗುತ್ತಾರೆ.

ಪವಿತ್ರವಾದ ದರ್ಭೆಯನ್ನು ಹರಡಿ : ಪ್ರಾಣಿಗಳು ಗಿಡಮೂಲಿಕೆಯನ್ನು ತಿಂದು ಬದುಕುತ್ತವೆ. ಹೋತಾರನು ಅವುಗಳ ಪರಿಪೂರ್ಣ ಆತ್ಮವನ್ನು ಪ್ರಾಣಿಗೆ ಒದಗಿಸುತ್ತಾನೆ. (ಗಿಡಮೂಲಿಕೆಗಳು ಅವುಗಳ ಒಂದು ಭಾಗವೇ ಆಗಿದೆ).

ಪ್ರಾಣಿಯ ಸುತ್ತ ಅಗ್ನಿಯನ್ನು ಹಿಡಿದು ತಂದ ಮೇಲೆ, ಬಲಿಗಾಗಿ ಪ್ರಾಣಿಯನ್ನು ಪುರೋಹಿತರಿಗೆ ಒಪ್ಪಿಸುವ ಕ್ರಿಯೆ ಬರುತ್ತದೆ. ಪ್ರಾಣಿಯನ್ನು ಬಲಿಗೆ ಒಪ್ಪಿಸುವವರು ಯಾರು? ಈ ಅಂಶದ ಬಗ್ಗೆ ಆತ್ರೇಯ ಬ್ರಾಹ್ಮಣ ಈ ಕೆಳಗಿನ ಸೂಚನೆ ಕೊಡುತ್ತದೆ.[೧]

"ಈ ಪ್ರಾಣಿಯನ್ನು ತಾಯಿ; ತಂದೆ, ಸೋದರ, ಸೋದರಿ, ಸ್ನೇಹಿತ ಮತ್ತು ಸಂಗಾತಿಗಳು ವಧೆಗಾಗಿ

---

೧. ಆತ್ರೇಯ ಬ್ರಾಹ್ಮಣ (ಮಾರ್ಟಿನ್ ಹಾಗ್) ಪುಟ ೮೬

ನೀಡಬೇಕು. ಈ ಮಾತುಗಳನ್ನು ಉಚ್ಚರಿಸಿದಾಗ, ತನ್ನ ತಂದೆ ತಾಯಿಗಳಿಂದ, ಬಂಧುಗಳಿಂದ ವ್ಯಕ್ತವಾಗಿದೆ ಎಂದು ಭಾವಿಸುತ್ತ ಆ ಪ್ರಾಣಿಯನ್ನು ಅವರು ಹಿಡಿದುಕೊಳ್ಳುತ್ತಾರೆ.

ಈ ನಿರ್ದೇಶನವನ್ನು ನೋಡಿದಾಗ, ಬಲಿಗಾಗಿ ಪಶುವನ್ನು ಕೊಡುವಲ್ಲಿ, ಯಾಕೆ ಪ್ರತಿಯೊಬ್ಬರೂ ಇರಬೇಕು, ಎನಿಸುತ್ತದೆ. ಯಜ್ಞ ಮಾಡುವುದರಲ್ಲಿ ಹದಿನೇಳು ಜನ ಬ್ರಾಹ್ಮಣ ಪುರೋಹಿತರು ಮಾತ್ರವೇ ಅಧಿಕಾರ ಹೊಂದಿದ್ದರು. ಸಹಜವಾಗಿಯೇ ಇವರು ಪ್ರಾಣಿಯ ಇಡೀ ಮೃತ ದೇಹವು ತಮಗೇ ಬೇಕೆಂದು ಕೇಳುವ ಹಕ್ಕುದಾರರಾಗಿದ್ದರು.[೧] ಇಡೀ ಮೃತದೇಹ ಅವರ ವಶಕ್ಕೆ ಸಿಕ್ಕದಿದ್ದಲ್ಲಿ, ಹದಿನೇಳು ಜನರಲ್ಲಿ ಪ್ರತಿಯೊಬ್ಬ ಪುರೋಹಿತನಿಗೂ ಸಾಕಷ್ಟು ಕೊಡಲು ಸಾಧ್ಯವಾಗುತ್ತಿರಲಿಲ್ಲ. ಕಾನೂನುಬದ್ಧವಾಗಿ, ಬ್ರಾಹ್ಮಣರು ಇಡೀ ಮೃತದೇಹವನ್ನು ಪಡೆದುಕೊಳ್ಳುವ ಹಕ್ಕು ಪಡೆದಿರಲಿಲ್ಲ. ಇದು ಊರ್ಜಿತವಾಗಬೇಕಾದರೆ, ಯಾರ್ಯಾರಿಗೆ ಮೃತದೇಹದ ಮೇಲೆ ಹಕ್ಕು ಚಲಾಯಿಸಲು ಅವಕಾಶವಿತ್ತೋ, ಅವರುಗಳಿಗೆ ಅದನ್ನು ಕೊಡಮಾಡದಂತೆ ಇರಬೇಕಾಗಿತ್ತು. ಆದ್ದರಿಂದಲೇ ಯಜ್ಞಕರ್ತೃವಿನ ಸಂಗಾತಿಯನ್ನು ಕೂಡ ಈ ಬಲಿದಾನದಲ್ಲಿ ಭಾಗವಹಿಸಲು ಕರೆ ನೀಡಲಾಗುತ್ತಿತ್ತು.

ನಂತರ, ಪ್ರಾಣಿಯನ್ನು ಬಲಿಕೊಡುವ ಕ್ರಿಯೆ ನಿರೂಪಿಸಲಾಗಿದೆ. ಆತ್ರೇಯ ಬ್ರಾಹ್ಮಣದಲ್ಲಿ ಪ್ರಾಣಿವಧೆಯ ರೀತಿ ಮತ್ತು ಕ್ರಮವನ್ನು ಚಿತ್ರಿಸುತ್ತದೆ. ಅದು ನಿರ್ದೇಶಿಸುವ ಅಂಶಗಳು ಹೀಗಿವೆ.[೨]

"ಅದರ ಕಾಲುಗಳನ್ನು ಉತ್ತರಕ್ಕೆ ತಿರುಗಿಸಿ, ಅದರ ಕಣ್ಣುಗಳನ್ನು ಸೂರ್ಯನತ್ತ ತಿರುಗಿಸಿ, ಉಸಿರು ವಾಯುವಿನಲ್ಲಿ ಸೇರಲಿ. ಅದರ ಪ್ರಾಣ ಗಾಳಿಯಲ್ಲಿ, ಅದರ ಶ್ರವಣ ಶಕ್ತಿ ದಿಕ್ಕುಗಳಲ್ಲಿ, ದೇಹ ಭೂಮಿಯಲ್ಲಿ ಸೇರಲಿ. ಈ ರೀತಿ ಹೋತಾರ ಅದನ್ನು ಈ ಲೋಕಗಳಿಗೆ ಬೆಸೆಯುತ್ತಾನೆ (ಅಂಟಿಸುತ್ತಾನೆ).

ಕತ್ತರಿಸಿದ ಹಾಗೆ, ಇಡೀ ಚರ್ಮವನ್ನು ತೆಗೆದುಬಿಡಿ. ಹೊಕ್ಕಳನ್ನು ಕತ್ತರಿಸುವ ಮೊದಲು, ಕರುಳು ಮಡಿಕೆ (ಹುಟ್ಟಿನೊಂದಿಗೆ ಇತರ ಅಂಗಾಂಗಗಳಿಗೆ ಸಂಬಂಧ ಕಲ್ಪಿಸುವ ಮಡಿಕೆ)ಯನ್ನು ಕಿತ್ತುಹಾಕಿ. ಅದು ಒಳಗೇ ಉಸಿರಾಡುವುದನ್ನು (ಬಾಯಿ ಮುಚ್ಚಿ) ನಿಲ್ಲಿಸಿ. ಹೀಗೆ ಹೋತಾರ ಅದರ ಉಸಿರನ್ನು ಪ್ರಾಣಿಗಳಲ್ಲಿಡುತ್ತಾನೆ.

ಅದರ ಎದೆಯನ್ನು ಹದ್ದಿನಾಕಾರದಲ್ಲಿ ಮಾಡಿ, ಅದರ ಮುಂಗಾಲುಗಳನ್ನು ಎರಡು ಕೈ ಕೊಡಲಿ ಆಕಾರದಲ್ಲಿ ಮಾಡಿ. ಅದರ ಕಾಲುಗಳ ಮುಂಭಾಗವನ್ನು ಎರಡು ಈಟಿಯಂತೆ ಮಾಡಿ. ಅದರ ಹೆಗಲುಗಳನ್ನು ಎರಡು ಕಶ್ಯಪಗಳಂತೆ ಮಾಡಿ. ಅದರ ಸೊಂಟ ಮುರಿಯಬಾರದು, ಅದರ ಎರಡು ತೊಡೆಗಳನ್ನು ಈಟಿಗಳನ್ನಾಗಿ ಮಾಡಿ. ಎರಡು ಮಂಡಿ ಚಿಪ್ಪುಗಳನ್ನು ಕಣಿಗಲ ಎಲೆಯಂತೆ ಮಾಡಿ. ಅದರ ಇಪ್ಪತ್ತಾರು ಎಲುಬುಗಳನ್ನು ಅವುಗಳ ಕ್ರಮದಲ್ಲಿ ತೆಗೆದುಬಿಡಿ. ಅದರ ಪ್ರತಿಯೊಂದು ಅಂಗವನ್ನೂ ಸಂಪೂರ್ಣವಾಗಿ, ಮುಕ್ಕುಮಾಡದೆ, ಹಾಗೆ ಹಾಗೆ ಇಡಿ. ಹೀಗೆ ಮಾಡುವುದರಿಂದ ಅದರ ಅಂಗಾಂಗಗಳಿಗೆ ಲಾಭವಾಗುತ್ತದೆ.

ಈ ಬಲಿದಾನ ಪೂರ್ಣಗೊಳ್ಳಲು ಇನ್ನೂ ಎರಡು ಆಚಾರಗಳು ಉಂಟು. ಕಟುಕರ ಪಾತ್ರವನ್ನು ಕೈಗೊಂಡ ಬ್ರಾಹ್ಮಣರನ್ನು ಮುಕ್ತಗೊಳಿಸುವುದು, ಒಂದು ತಾತ್ವಿಕವಾಗಿ ಅವರು ಕೊಲೆಯ ಅಪರಾಧಕ್ಕೆ

---

೧. ನಿಜವಾಗಿ ಬ್ರಾಹ್ಮಣರು ಇಡೀ ಮೃತದೇಹ ತೆಗೆದುಕೊಳ್ಳುತ್ತಿದ್ದರು. ಪ್ರತಿಯೊಬ್ಬ ಯಜ್ಞಕರ್ತೃ ಮತ್ತು ಅವನ ಹೆಂಡತಿಗೆ ಒಂದೊಂದು ಕಾಲನ್ನು ಮಾತ್ರ ನೀಡಲಾಗುತ್ತಿತ್ತು.

೨. ಆತ್ರೇಯ ಬ್ರಾಹ್ಮಣ (ಮಾರ್ಟಿನ್ ಹಾಗ್) II ಪುಟ, ೮೬–೮೭

೩. ಅದೇ, ಪುಟ, ೮೬–೯೦

ಒಳಗಾದವರು. ಯಾಕೆಂದರೆ ಕೊಲೆಯಾದ ಪ್ರಾಣಿ, ಯಜ್ಞಕರ್ತೃವಿನ ಪ್ರತೀಕ ಅಷ್ಟೇ. ಕೊಲೆಯ ಪರಿಣಾಮದಿಂದ ಅವರನ್ನು ಮುಕ್ತಗೊಳಿಸಲು, ಆತ್ರೇಯ ಬ್ರಾಹ್ಮಣ, ಹೋತಾರನಿಗೆ ಈ ಕೆಳಕಂಡ ಸೂಚನೆಗಳನ್ನು ವಿಧಿಸುತ್ತದೆ.[೩]

"ಮಡಿಕೆಯನ್ನು ತೆಗೆಯುವಾಗ, ಗೂಬೆಯ ಹಾಗೆ ಕಂಡುಬರುವ ಕರುಳನ್ನು ಕತ್ತರಿಸಬೇಡ. ನಿನ್ನ ಮಕ್ಕಳಲ್ಲಿಯೂ ಅಂತಹ ಕೆಲಸ ಮಾಡುವವರು ಹುಟ್ಟುವುದು ಬೇಡ, ಕಟುಕರೇ!" ಹೀಗೆ ನುಡಿಯುತ್ತ, ದೇವತೆಗಳು ಮತ್ತು ಮನುಷ್ಯರಲ್ಲಿನ ಕಟುಕರಿಗೆ ಆತ ಕರುಳನ್ನು ನೀಡುತ್ತಾನೆ.

ಅನಂತರ ಹೋತಾರನು ಮೂರು ಸಲ ಹೇಳಬೇಕು – ಓ ಅಧ್ರಿಗು ಮತ್ತು ಇತರೇ, ಪ್ರಾಣಿಯನ್ನು ವಧಿಸಿ; ಚೆನ್ನಾಗಿ ಕೊಲ್ಲಿರಿ ಅಧಿಗ್ರು.

ಪ್ರಾಣಿಯನ್ನು ಕೊಂದನಂತರ ಆತ ಮೂರು ಸಾರಿ ಹೇಳಬೇಕು – ಈ ವಧೆಯ ಪರಿಣಾಮ ನಮ್ಮಿಂದ ದೂರವಾಗಲಿ. ಅಧಿಗ್ರು ಅಂದರೆ, ಪ್ರಾಣಿಯನ್ನು ಸುಮ್ಮನಾಗಿಸುವವನು; ಅಪಾಪ ಎಂದರೆ ಅದನ್ನು ಬಗ್ಗಿಸುವವನು. ಈ ಮಾತನ್ನು ಹೇಳುತ್ತ, ಬಾಯಿಮುಚ್ಚಿ ಅದನ್ನು ಸುಮ್ಮನಾಗಿಸುವ ಮತ್ತು ಅದನ್ನು ಕೊಲ್ಲುವವರಿಗೆ ಅವನು ಆ ಪ್ರಾಣಿಯನ್ನು ಒಪ್ಪಿಸುತ್ತಾನೆ.

ಆನಂತರ ಹೋತಾರ ಜಪ ಮಾಡುತ್ತಾನೆ : "ಎಲೈ ಹಂತಕರೇ, ನಿಮ್ಮಿಂದ ಆಗುವ ಎಲ್ಲ ಒಳಿತು ನಮ್ಮದಾಗಲಿ. ನೀವು ಮಾಡುವ ಕೇಡು ಬೇರೆ ಕಡೆಗೆ ಹೋಗಲಿ." ಈ ಮಾತನ್ನು ಹೇಳುವುದರ ಮೂಲಕ ಹೋತಾರ, ಪ್ರಾಣಿಯ ವಧೆಯ ಆಜ್ಞೆ ನೀಡುತ್ತಾನೆ. ಯಾಕೆಂದರೆ ಅಗ್ನಿ, ಹೋತಾರನಾಗಿದ್ದಾಗ, ದೇವತೆಗಳಿಗೆ ಇದೇ ಮಾತುಗಳನ್ನು ಹೇಳಿ ಪ್ರಾಣಿ ವಧೆಗೆ ಆಜ್ಞೆ ನೀಡಿದ್ದ.

ಮೇಲೆ ಹೇಳಿದ ಜಪದಿಂದ, ಹೋತಾರನು ಎಲ್ಲ ಬಗೆಯ ಕೆಡುಕನ್ನು ನಿವಾರಣೆ ಮಾಡುತ್ತಾನೆ. ಅಲ್ಲದೆ ಪ್ರಾಣಿಗೆ ಉಸಿರು ಕಟ್ಟುವ ಹಾಗೆ ಮಾಡುವುದರಿಂದಲೂ, ಅದಕ್ಕೆ ಬೆಣ್ಣೆ ಹಚ್ಚಿ, ಕಾನೂನನ್ನು ಅತಿಕ್ರಮಿಸಬೇಕೆಂಬುದರಿಂದಲೂ ತಪ್ಪಿಸುತ್ತಾನೆ. ಅಂದರೆ ಕೆಲವರು ಕೆಲತುಂಡುಗಳನ್ನು ತರಾತುರಿಯಲ್ಲಿಯೂ ಕೆಲವನ್ನು ನಿಧಾನವಾಗಿಯೂ, ಕೆಲವನ್ನು ದೊಡ್ಡದಾಗಿಯೂ ಮತ್ತೆ ಕೆಲವನ್ನೂ ಸಣ್ಣದಾಗಿಯೂ ಕತ್ತರಿಸುವುದನ್ನು ತಪ್ಪಿಸುತ್ತಾನೆ. ಈ ವಿಶೇಷ ಸೌಲಭ್ಯ ಪಡೆಯುವ ಹೋತಾರನು ಎಲ್ಲ ಅಪರಾಧಗಳಿಂದಲೂ ಮುಕ್ತನಾಗುತ್ತಾನೆ. ಅಲ್ಲದೆ ಅವನು ಪೂರ್ಣಾಯುಸ್ಸನ್ನು ಪಡೆಯುತ್ತಾನೆ. (ಇದು ಯಜ್ಞಕರ್ತೃವಿನ ಪಾಲಿಗೆ ಬರುತ್ತದೆ.) ಇಂತಹ ಜ್ಞಾನ ಪಡೆದವನು ಪೂರ್ಣಾಯುಸ್ಸು ಪಡೆಯುತ್ತಾನೆ.

ಆತ್ರೇಯ ಬ್ರಾಹ್ಮಣ ಮುಂದೆ ಮೃತಪ್ರಾಣಿಯ ಅಂಗಾಂಗಗಳನ್ನು ಹೇಗೆ ಹಂಚಬೇಕು ಎನ್ನುವುದು ತಿಳಿಸುತ್ತದೆ.[೧]

"ಅದರ ಮಲವನ್ನು ಇಟ್ಟು ಮುಚ್ಚಲಿಕ್ಕೆ ಭೂಮಿಯಲ್ಲಿ ಒಂದು ಗುಳಿಯನ್ನು ತೋಡಿ. ಮಲದಲ್ಲಿ ಸಸ್ಯಾಹಾರವಿರುತ್ತದೆ. ಭೂಮಿಯೇ ಗಿಡಗಂಟೆಗಳಿಗೆ ತಕ್ಕ ಸ್ಥಾನ. ಹೀಗೆ ಹೋತಾರ ಅದರ ಮಲವನ್ನು ಅಂತಿಮವಾಗಿ ತಕ್ಕ ಸ್ಥಾನದಲ್ಲಿ ಇಡುತ್ತಾನೆ. ಕೆಡುಕಿನ ಅಧಿದೇವತೆಗಳಿಗೆ ಅದರ ರಕ್ತವನ್ನು ನೀಡಿ. ಇದಕ್ಕೆ ಕಾರಣವೇನೆಂದರೆ, ಹವಿರ್ ಯಜ್ಞ ಹುಣ್ಣಿಮೆ ಮತ್ತೆ ಅಮಾವಾಸ್ಯೆಗಳಲ್ಲಿ ನಡೆಯುವ ಈ ಕ್ಷುದ್ರ ದೇವತೆಗಳಿಗೆ ಅವರ ಪಾಲನ್ನು ನೀಡದೆ, ಹೊಟ್ಟು ಮತ್ತು ಸಣ್ಣ ಕಾಳುಗಳನ್ನು ನೀಡಿದ್ದನು. ಅಲ್ಲದೆ, ಸೋಮ ಯಜ್ಞದಂತಹ ಮಹಾನ್ ಯಜ್ಞದಲ್ಲಿ ರಕ್ತವನ್ನು ಅವರಿಗೆ ನೀಡಿದ್ದನು, ಆದ್ದರಿಂದ ಹೋತಾರನು ಈ ಮಾತುಗಳನ್ನು ಹೇಳುತ್ತಾನೆ : ಅವರಿಗೆ ರಕ್ತವನ್ನು ನೀಡಿ. ಈ ಪಾಲನ್ನು ಅವರಿಗೆ ನೀಡುವುದರ ಮೂಲಕ, ಅವರಿಗೆ

೧. ಆತ್ರೇಯ ಬ್ರಾಹ್ಮಣ (ಮಾರ್ಟಿನ್ ಹಾಗ್) II ಪುಟ ೮೭

ಯಜ್ಞದಲ್ಲಿ ಬೇರೆ ಯಾವ ಪಾಲೂ ನಿರಾಕರಿಸಲ್ಪಡುವುದು. ಯಜ್ಞದಲ್ಲಿ ಕ್ಷುದ್ರ ದೇವತೆಗಳನ್ನು, ರಾಕ್ಷಸರು, ಅಸುರರು ಇತ್ಯಾದಿಗಳನ್ನು ಕುರಿತು ಏನನ್ನೂ ಹೇಳಬಾರದು ಎಂದು ಹೇಳುತ್ತಾರೆ. ಯಾಕೆಂದರೆ ಯಜ್ಞದ ಸಮಯದಲ್ಲಿ ಇಂತಹ ದೇವತೆಗಳಿಂದ ಯಾವ ತೊಂದರೆಯಾಗಬಾರದು. ಆದರೆ ಇನ್ನು ಕೆಲವರು ಹೇಳುತ್ತಾರೆ – ಅವರುಗಳನ್ನು ಕುರಿತು ಹೇಳಬೇಕೆಂದು. ಯಾಕೆಂದರೆ ಹಕ್ಕುದಾರರಿಗೆ ಅವರ ಪಾಲನ್ನು ತಪ್ಪಿಸಿದರೆ ಯಜ್ಞಕರ್ತೃವು, ಅಂಥವರಿಂದ ಯಜ್ಞಕರ್ತೃವು ಶಿಕ್ಷಿಸಲ್ಪಡಬಹುದು. ಒಂದು ವೇಳೆ ಯಜ್ಞಕರ್ತೃವಿಗೇ ಶಿಕ್ಷೆಯಾಗದಿದ್ದಲ್ಲಿ, ಅವನ ಮಗ, ಮೊಮ್ಮಗ ಶಿಕ್ಷಿಸಲ್ಪಡುತ್ತಾರೆ. ಅಂದರೆ, ನಿನಗೆ ಏನು ಶಿಕ್ಷೆ ಕೊಡಬೇಕೆಂದುಕೊಂಡಿದ್ದನೋ ಅದನ್ನು ನಿನ್ನ ಮಗ ಇಲ್ಲವೆ ಮೊಮ್ಮಗನಿಗೆ ನೀಡುತ್ತಾನೆ.

ಒಂದು ವೇಳೆ ಹೋತಾರ ಕ್ಷುದ್ರದೇವತೆಗಳನ್ನು ಕುರಿತು ಹೇಳುವುದಿದ್ದರೆ, ಅದನ್ನು ಸಣ್ಣ ದನಿಯಲ್ಲಿ ಹೇಳಬೇಕು. ಯಾಕೆಂದರೆ ಕ್ಷುದ್ರದೇವತೆಗಳು ಮತ್ತೆ ಸಣ್ಣದನಿ ಎರಡೂ ಹುದುಗಿದಂತಿರುತ್ತಿವೆ. ಅವನು ದೊಡ್ಡ ದನಿಯಲ್ಲಿ ಮಾತಾಡಿದರೆ, ಅದು ರಾಕ್ಷಸ ದನಿಯಾಗಿ (ಕರ್ಕಶ ಶಬ್ದವಾಗಿ) ಬಿಡುವ ಸಂಭವವಿದೆ. ಹಮ್ಮಿನಿಂದ ಕೂಡಿದ ಮತ್ತು ಕುಡಿದ ಮನುಷ್ಯ ಆಡುವ ಮಾತು, ರಾಕ್ಷಸರ ಮಾತೇ ಆಗಿರುತ್ತದೆ. ಆದರೆ ಜ್ಞಾನವನ್ನು ಪಡೆದವನು, ಅಂಥ ಹಮ್ಮಿನಿಂದ ಕೂಡಿರುವುದಿಲ್ಲ. ಅಂತಹವರು ಅವನ ಮಕ್ಕಳಲ್ಲೂ ಕಂಡುಬರುವುದಿಲ್ಲ."

ನಂತರ ಕೊನೆಯ ಆಚರಣೆ ಇರುತ್ತದೆ. ಅದೆಂದರೆ, ಪ್ರಾಣಿಯ ವಿವಿಧ ಅಂಗಗಳನ್ನು ದೇವರುಗಳಿಗೆ ಅರ್ಪಿಸುವುದು. ಇದನ್ನು ಮನೋತಾ[೧] ಎನ್ನುತ್ತಾರೆ. ಆತ್ರೇಯ ಬ್ರಾಹ್ಮಣ ಹೀಗೆ ಹೇಳುತ್ತದೆ.[೨]

ಹೋತಾರನು ಅಧ್ವರ್ಯುವಿಗೆ ಹೇಳುತ್ತಾನೆ. ಮನೋತಾಗಳಿಗೆ ನಿಯಮಿತವಾದ ಬಲಿಪಶುವಿನ ಅಂಗಾಂಗಗಳನ್ನು ನೀಡಲಿಕ್ಕೆ ಬೇಕಾದ ತಕ್ಕ ಶ್ಲೋಕಗಳನ್ನು ಉಚ್ಚರಿಸು. ಆಗ ಆತ ಉಚ್ಚರಿಸುತ್ತಾನೆ – ಅಗ್ನಿಯೇ ನೀನೇ ಮೊದಲನೆಯ ಮನೋತಾ. (೬.೧)

ಮೃತಪ್ರಾಣಿಯ ಶರೀರದ ಮಾಂಸವನ್ನು ಹಂಚಿಕೊಳ್ಳುವ ಪ್ರಶ್ನೆ ಮಾತ್ರ ಉಳಿಯುತ್ತದೆ. ಈ ವಿಷಯದಲ್ಲಿ ಆತ್ರೇಯ ಬ್ರಾಹ್ಮಣ ಸಮಸ್ಯೆಯನ್ನು ಹೀಗೆ ಬಗೆಹರಿಸುತ್ತದೆ:[೩]

"ಈಗ ಪುರೋಹಿತರ ಮಧ್ಯೆ ಬಲಿಪಶುವಿನ ವಿವಿಧ ಭಾಗಗಳ ಹಂಚಿಕೆಯ ವಿಷಯ ಬರುತ್ತದೆ. ನಾವು ಅದನ್ನು ವಿವರಿಸುತ್ತೇವೆ. ಪ್ರಸ್ತೋತರನಿಗೆ ಎರಡೂ ದವಡೆ ಮೂಳೆಗಳನ್ನು, ನಾಲಗೆಯನ್ನೂ ಕೊಡಬೇಕು. ಉದ್ಗಾತರನಿಗೆ ಹದ್ದಿನಾಕಾರದಲ್ಲಿ ಕತ್ತರಿಸಿ ಎದೆಯನ್ನು ನೀಡಬೇಕು. ಪ್ರತಿಹರ್ತನಿಗೆ ರಸನೇಂದ್ರಿಯದ ಜೊತೆಯಲ್ಲಿ ಗಂಟಲು ಕೊಡಬೇಕು. ಸೊಂಟದ ಬಲ ಕೆಳಭಾಗವನ್ನು ಹೋತಾರನಿಗೂ, ಎಡ ಕೆಳಭಾಗವನ್ನು ಬ್ರಹ್ಮನಿಗೂ ಕೊಡಬೇಕು. ಮೈತ್ರಾವರುಣನಿಗೆ ಬಲತೊಡೆಯನ್ನು, ಬ್ರಾಹ್ಮಣಚ್ಛಾಂಸಿಗೆ ಎಡತೊಡೆಯನ್ನೂ ನೀಡಬೇಕು. ಅಧ್ವರ್ಯುವಿಗೆ ಬಲ ಹೆಗಲನ್ನೂ, ಮಂತ್ರ ಹೇಳುವುದರಲ್ಲಿ ಭಾಗಿಗಳಾದವರಿಗೆ ಎಡಭಾಗವನ್ನೂ ನೀಡಬೇಕು. ಎಡ ಹೆಗಲನ್ನು ಪ್ರತಿಪಶತರಿಗೆ ಕೊಡಬೇಕು. ನೇಶ್ತರನಿಗೆ ಬಲತೋಳಿನ ಕೆಳಭಾಗವನ್ನೂ, ಪೋತಾರನಿಗೆ ಎಡತೋಳಿನ ಕೆಳ ಭಾಗವನ್ನೂ ಕೊಡಬೇಕು. ಬಲತೊಡೆಯ ಮೇಲುಭಾಗವನ್ನು ಅಚ್ಛವಕನಿಗೂ, ಅಗ್ನಿಧರನಿಗೆ ಎಡಭಾಗವನ್ನೂ ಕೊಡಬೇಕು. ಬಲತೋಳಿನ ಮೇಲುಭಾಗವನ್ನು ಆತ್ರೇಯನಿಗೂ,

೧. ಮನೋತಾ ಎಂದರೆ, ಯಾರಿಗೆ ಅರ್ಪಣೆ ಮಾಡಲಾಗುತ್ತದೆಯೋ ಆ ದೇವತೆಗಳು.

೨. ಆತ್ರೇಯ ಬ್ರಾಹ್ಮಣ (ಮಾರ್ಟಿನ್ ಹಾಗ್) II ಪುಟ ೯೩

೩. ಆತ್ರೇಯ ಬ್ರಾಹ್ಮಣ, ಪು ೪೪೧ – ೪೨

ಎಡಭಾಗವನ್ನು ಸದಸ್ಯನಿಗೂ ನೀಡಬೇಕು. ಬೆನ್ನೆಲುಬು ಮತ್ತು ಮೂತ್ರಕೋಶವನ್ನು ಗೃಹಪತಿ ಅಂದರೆ ಯಜ್ಞಕರ್ತೃವಿಗೆ ನೀಡಬೇಕು. ಭೋಜನವನ್ನು ಹಾಕಿಸುವ ಗೃಹಪತಿಗೆ ಬಲಪಾದವನ್ನು; ಇದೇ ರೀತಿ ಭೋಜನ ಹಾಕಿಸುವ ಗೃಹಪತಿಯ ಹೆಂಡತಿಗೆ ಎಡಪಾದವನ್ನೂ ನೀಡಬೇಕು. ಮೇಲುತುಟಿ, ಗೃಹಪತಿ ಮತ್ತು ಆತನ ಹೆಂಡತಿ ಇಬ್ಬರಿಗೂ ಸೇರುತ್ತದೆ. ಇದನ್ನು ಗೃಹಪತಿ ತಮ್ಮಿಬ್ಬರಲ್ಲೇ ಹಂಚಿಕೊಳ್ಳಬೇಕು. ಗೃಹಪತಿಯ ಹೆಂಡಂದಿರಿಗೆ ಬಾಲವನ್ನು ಕೊಡಬೇಕು. ಈ ಬಾಲವನ್ನು ಅವರು ಬ್ರಾಹ್ಮಣರಿಗೆ ದಾನ ಮಾಡಬೇಕು. ಗ್ರವಸ್ತುತನಿಗೆ ಕತ್ತಿನ ಮೇಲಿನ ಮಾಂಸ ಮತ್ತು ಮೃದ್ವಸ್ಥಿಗಳನ್ನು ಕೊಡಬೇಕು. ಬೆನ್ನಿನ ಮಾಂಸದ ಅರ್ಧ ಭಾಗ ಮತ್ತು ಉಳಿದ ಮೂರು ಮೃದ್ವಸ್ಥಿಗಳನ್ನು ಉನ್ನೇತರನಿಗೆ ಕೊಡಬೇಕು. ಕತ್ತಿನ ಮಾಂಸಲವಾದ ಇನ್ನರ್ಧ ಭಾಗ ಮತ್ತು ಎಡಕಿವಿಯನ್ನು ಬಲಿಗಾರನಿಗೆ ಕೊಡಬೇಕು. ಬಲಿಗಾರ ಬ್ರಾಹ್ಮಣನಾಗದಿದ್ದಲ್ಲಿ ಅದನ್ನು ಆತ ಬ್ರಾಹ್ಮಣನೊಬ್ಬನಿಗೆ ಕೊಡಬೇಕು, ತಲೆಯನ್ನು ಸುಬ್ರಹ್ಮಣ್ಯನಿಗೆ ಕೊಡಬೇಕು. ಚರ್ಮ ಸುಬ್ರಹ್ಮಣ್ಯನಿಗೆ ಸೇರುತ್ತದೆ. ಆತ, ನಾಳೆಯ ಸೋಮಯಜ್ಞದ ಕುರಿತು ಮಾತನಾಡಿದ್ದನು. ಸೋಮ ಯಜ್ಞದಲ್ಲಿ ಬಲಿ ಕೊಡಲಾದ ಯಾವ ಪಶುವಿನ ಭಾಗ ಇಳಾಗೆ ಸೇರುತ್ತದೆಯೋ, ಅದು ಎಲ್ಲ ಪುರೋಹಿತರಿಗೂ ಸಾಮಾನ್ಯವಾಗಿ ಸೇರಬೇಕಾದ್ದು. ಹೋತಾರನೊಬ್ಬ ಮಾತ್ರ ಅದನ್ನು ಪಡೆಯಬಹುದು; ಪಡೆಯದೇ ಇರಬಹುದು.

ಬಲಿಪಶುವಿನ ಈ ಅಂಗಾಂಗಗಳ ಮೊತ್ತ ಮೂವತ್ತಾರು. ಇದರಲ್ಲಿ ಪ್ರತಿಯೊಂದೂ, ಈ ಯಜ್ಞದಲ್ಲಿ ಬಳಸಲಾಗುವ ಶ್ಲೋಕಗಳ ಒಂದೊಂದು ಪಾದಕ್ಕೆ ಪ್ರತಿನಿಧಿ ಎನಿಸುತ್ತದೆ. ಬೃಹತ್ ಛಂದಸ್ಸಿನಲ್ಲಿ ಮೂವತ್ತಾರು ಉಚ್ಚಾರಾಂಶಗಳಿವೆ. ಸ್ವರ್ಗ ಕೂಡ ಬೃಹತೀ ಲಕ್ಷಣವನ್ನೇ ಹೊಂದಿದೆ. ಹೀಗೆ ಬಲಿಪಶುವನ್ನು ಮೂವತ್ತಾರು ಭಾಗಗಳನ್ನಾಗಿ ಮಾಡುವುದರೊಂದಿಗೆ, ಇಹದಲ್ಲಿಯೂ, ಸ್ವರ್ಗದಲ್ಲಿಯೂ ಅವರು ಸ್ಥಾನವನ್ನು ಪಡೆಯುತ್ತಾರೆ. ಹೀಗೆ ಎರಡೂ ಲೋಕಗಳಲ್ಲಿ ಸ್ಥಾನ ಗಳಿಸಿಕೊಂಡು, ಅವರು ಮುಂದುವರಿಯುತ್ತಾರೆ.

ಹೀಗೆ ಬಲಿಪಶುವನ್ನು ಯಾರು ಭಾಗವನ್ನಾಗಿ ಮಾಡುತ್ತಾರೋ ಅದೇ ಅವರಿಗೆ ಸ್ವರ್ಗಕ್ಕೆ ದಾರಿ ಎನಿಸುತ್ತದೆ. ಇದಲ್ಲದೆ, ಯಾರು ಬೇರೆ ರೀತಿ ವಿಭಜನೆ ಮಾಡುತ್ತಾರೋ ಅಂತಹವರು ಕೇವಲ ಮಾಂಸದ ಲೋಭಕ್ಕೆ ಪ್ರಾಣಿಯನ್ನು ಕೊಲ್ಲುವ ದುರುಳರು, ದುರಾಚಾರಿಗಳು ಎನಿಸಿಕೊಳ್ಳುತ್ತಾರೆ. ಈ ಬಲಿಪಶುವನ್ನು ವಿಭಜಿಸುವ ಕ್ರಮವನ್ನು ಕಂಡುಹಿಡಿದವನು, ಶ್ರುತನ ಮಗನಾದ ದೇವಭಾಗ ಋಷಿ. ಆತ ತನ್ನ ಪ್ರಾಣವನ್ನು ತ್ಯಜಿಸುವಾಗ, ಈ ಗುಟ್ಟನ್ನು ಯಾರಿಗೂ ಹೇಳಲಿಲ್ಲ. ಆದರೆ ಬಭ್ರುವಿನ ಮಗನಾದ ಗಿರಿಜನಿಗೆ ಇದನ್ನು ಅಸಾಧಾರಣ ಶಕ್ತಿಯೊಂದು ತಿಳಿಸಿತು. ಅಂದಿನಿಂದ ಜನ ಇದನ್ನು ಅಭ್ಯಸಿಸುತ್ತಾರೆ."

ಆತ್ರೇಯ ಬ್ರಾಹ್ಮಣ ಹೇಳುವುದನ್ನು ಗಮನಿಸಿದರೆ, ಎರಡು ಅಂಶಗಳು ನಿರ್ವಿವಾದ ಎನಿಸುತ್ತವೆ. ಒಂದನೆಯದಾಗಿ, ಬಲಿಪಶುವಿನ ಸಮಸ್ತ ಮಾಂಸವೂ ಬ್ರಾಹ್ಮಣರ ಏಕಸ್ವಾಮ್ಯ ಎನಿಸಿತ್ತು. ಯಜ್ಞಕರ್ತೃವಿಗೆ ಚೂರುಪಾರನ್ನು ಮಾತ್ರವೇ ಕೊಡುತ್ತಿದ್ದರೇ ಹೊರತು, ಅವರಿಗೂ ಈ ಮಾಂಸದ ಮೇಲೆ ಹಕ್ಕಿರಲಿಲ್ಲ. ಎರಡನೆಯದಾಗಿ, ಬ್ರಾಹ್ಮಣರೇ ಪಶುವನ್ನು ಬಲಿಕೊಡುವುದರಲ್ಲಿ ಕಟುಕರ ಪಾತ್ರ ವಹಿಸುತ್ತಿದ್ದರು. ತಾತ್ವಿಕವಾಗಿ, ಬಲಿ ಕೊಟ್ಟ ಪಶುವಿನ ಮಾಂಸ ತಿನ್ನಬಾರದು, ತತ್ವಶಃ ಮನುಷ್ಯನೇ ದೇವತೆಗಳಿಗೆ ಬಲಿಯಾಗಬೇಕು. ಆದರೆ ಈ ಋಣದಿಂದ ತಪ್ಪಿಸಿಕೊಳ್ಳಲು ಆತ ಪಶುವನ್ನು ಬಲಿಕೊಡುತ್ತಾನೆ. ಆದ್ದರಿಂದ, ಇದರಲ್ಲಿ ಪ್ರಾಣಿ, ಮನುಷ್ಯನನ್ನು ಪ್ರತಿನಿಧಿಸುವುದರಿಂದ, ಆ ಪ್ರಾಣಿಯ ಮಾಂಸ ತಿನ್ನುವುದೆಂದರೆ, ಮನುಷ್ಯನ ಮಾಂಸವನ್ನೇ

೧. ಆತ್ರೇಯ ಬ್ರಾಹ್ಮಣ (ಮಾರ್ಟಿನ್ ಹಾಗ್) II ಪುಟ ೮೦

ತಿಂದ ಹಾಗೆ ಆಗುತ್ತದೆ. ಈ ಸಿದ್ಧಾಂತ ಬ್ರಾಹ್ಮಣರ ಆಸಕ್ತಿಗೆ ವಿರುದ್ಧವೇ ಆಗಿತ್ತು, ಯಾಕೆಂದರೆ ಇಡೀ ಬಲಿಪಶುವಿನ ಮೇಲಿನ ಸ್ವಾಮ್ಯ ಅವರಿಗೆ ಮಾತ್ರವೇ ಸೇರಿತ್ತು. ಆತ್ರೇಯ ಬ್ರಾಹ್ಮಣ ಈ ಸಿದ್ಧಾಂತವನ್ನು ಬಳಿದು ಹಾಕಲಿಕ್ಕೆ, ಕೇವಲ ಒಂದೇ ಒಂದು ನಿಷೇಧದ ಮೂಲಕ, ಬ್ರಾಹ್ಮಣರನ್ನು ಈ ಅಪಾಯದಿಂದ ಪಾರುಮಾಡಲು ಹೆಣಗಾಡುತ್ತದೆ.[೧]

"ಯಾವೊಬ್ಬ ಮನುಷ್ಯ, ಯಜ್ಞದ ರಹಸ್ಯ ವಿಷಯಗಳಲ್ಲಿ ದೀಕ್ಷಿತನಾಗಿರುತ್ತಾನೋ; ಆತ ಎಲ್ಲ ದೇವತೆಗಳಿಗೂ ಕೊಟ್ಟುಕೊಳ್ಳುತ್ತಾನೆ. ಆತ ಬಲಿಪಶುವನ್ನು ಅಗ್ನಿ – ಸೋಮನಿಗೆ ಅರ್ಪಿಸಿದಾಗ, ಆತ ಪಶುವನ್ನು ಬಲಿಕೊಡುವುದರ ಮೂಲಕ, ತನ್ನನ್ನೇ ಎಲ್ಲ ದೇವತೆಗಳಿಗೆ ಬಲಿ ಕೊಡುವುದರಿಂದ ಬಿಡುಗಡೆ ಪಡೆಯುತ್ತಾನೆ.

ಅಗ್ನಿ ಸೋಮನಿಗೆ ಬಲಿಕೊಡಲಾದ ಪ್ರಾಣಿಯನ್ನು ತಿನ್ನಬೇಡವೆಂದು ಹೇಳುತ್ತಾರೆ. ಯಾರು ಆ ಪ್ರಾಣಿಯನ್ನು ತಿನ್ನುತ್ತಾರೋ ಅವರು ಮನುಷ್ಯ ಮಾಂಸವನ್ನೇ ತಿಂದಂತೆ, ಯಾಕೆಂದರೆ ತನ್ನ ಸ್ಥಾನದಲ್ಲಿ ಆತ ಆ ಪ್ರಾಣಿಯ ಬಲಿಯನ್ನು ಕೊಟ್ಟಿರುತ್ತಾನೆ. ಆದರೆ ಈ ಸೂತ್ರಕ್ಕೆ ಗಮನ ಕೊಡಬೇಕಾಗಿಲ್ಲ.

ಈ ಎಲ್ಲ ಸಾಕ್ಷ್ಯಾಧಾರಗಳನ್ನು ನೋಡಿದರೆ, ಬ್ರಾಹ್ಮಣರು ಗೋಮಾಂಸ ಭಕ್ಷಕರಷ್ಟೇ ಅಲ್ಲ, ಕಟುಕರು ಆಗಿದ್ದರು, ಇನ್ನೂ ಹೆಚ್ಚಿನ ಮಾಹಿತಿ ಬೇಕಾಗಿಲ್ಲ.

ಬ್ರಾಹ್ಮಣರು, ಹಾಗಿದ್ದರೆ, ದಿಕ್ಕು ಬದಲಾಯಿಸಿದ್ದು ಯಾಕೆ? ಈ ವಿಷಯವನ್ನು ಎರಡು ಘಟ್ಟಗಳಲ್ಲಿ ನೋಡಬಹುದು. ಮೊದಲಿಗೆ, ಅವರು ಗೋಮಾಂಸ ಭಕ್ಷಣೆಯನ್ನು ಯಾಕೆ ಬಿಟ್ಟುಕೊಟ್ಟರು?

## II

ಈ ಮೊದಲೇ ವಿವರಿಸಿದಂತೆ, ಅಶೋಕ ದನಗಳನ್ನು ಕೊಲ್ಲುವುದನ್ನು ತಡೆಯಲಿಲ್ಲ. ಅದನ್ನು ಒಂದು ವೇಳೆ ನಿಷೇಧಿಸಿದ್ದರೂ, ಬೌದ್ಧ ಚಕ್ರವರ್ತಿಯೊಬ್ಬನು ಹಾಕಿದ ಆಜ್ಞೆಯನ್ನು ಬ್ರಾಹ್ಮಣರು ಒಪ್ಪಿಕೊಳ್ಳುತ್ತಿರಲಿಲ್ಲ.

ಮನು ಗೋಮಾಂಸ ಭಕ್ಷಣೆ ನಿಷೇಧಿಸಿದನೆ? ಹಾಗೆ ಮನು ನಿಷೇಧಿಸಿದ್ದರೆ, ಬ್ರಾಹ್ಮಣರು ಅದನ್ನು ಅನುಸರಿಸಲೇಬೇಕಾಗುತ್ತಿತ್ತು. ಅದರಿಂದ ಅವರು ದಿಕ್ಕು ಬದಲಿಸಲಿಕ್ಕೆ ಸಮರ್ಪಕವಾದ ವಿವರಣೆ ಸಿಕ್ಕುತ್ತಿತ್ತು. ಮನುಸ್ಮೃತಿಯಲ್ಲಿ ಈ ಕೆಳಕಂಡ ಶ್ಲೋಕಗಳನ್ನು ನೋಡಬಹುದು :

"*V ೪೬. ಜೀವಂತ ಪ್ರಾಣಿಗಳ ಬಾಂದವ್ಯ ಹರಿಯುವುದಾಗಲೀ, ಕೊಲ್ಲುವುದಾಗಲೀ ಯಾರು ಮಾಡುವುದಿಲ್ಲವೋ ಯಾರು ಎಲ್ಲ ಪ್ರಾಣಿಗಳ ಒಳಿತನ್ನು ನಿರ್ವಹಿಸುತ್ತಾನೋ ಅಂತಹವನು ಅವಿರತ ಆನಂದವನ್ನು ಪಡೆಯುತ್ತಾನೆ.*

"*V ೪೭. ಯಾರು ಯಾವುದೇ ಜೀವಂತ ಪ್ರಾಣಿಯನ್ನು ಹಿಂಸಿಸುವುದಿಲ್ಲವೋ ಅಂತಹವನು ಯಾವುದೇ ತೊಂದರೆಯಿಲ್ಲದೆ, ತಾನೇನು ಇಚ್ಛಿಸುತ್ತಾನೊ, ತಾನೇನು ಕೈಗೊಳ್ಳುತ್ತಾನೊ, ತನ್ನ ಮನಸ್ಸನ್ನು ಯಾವುದರಲ್ಲಿ ನೆಡುತ್ತಾನೊ, ಅವುಗಳನ್ನು ಪಡೆಯುತ್ತಾನೆ.*

"*V ೪೮. ಜೀವಂತ ಪ್ರಾಣಿಗಳನ್ನು ಹಿಂಸಿಸದೆ ಮಾಂಸವನ್ನೆಂದೂ ಪಡೆಯಲು ಸಾಧ್ಯವಿಲ್ಲ. ಸಹವೇದನೆಯುಳ್ಳ ಪ್ರಾಣಿಗಳನ್ನು ಹಿಂಸಿಸುವುದು ಸ್ವರ್ಗದ ಆನಂದ ಪಡೆಯಬೇಕೆನ್ನುವುದಕ್ಕೆ ಮಾರಕ. ಆದ್ದರಿಂದ ಮಾಂಸ ಭಕ್ಷ್ಯಣವನ್ನು ವರ್ಜಿಸಲಿ.*

"*V ೪೯. ಮಾಂಸ ಹೇಗೆ ದೊರೆಯುತ್ತದೆ ಎಂಬ ಬಗ್ಗೆ ಅದರ ಅಸಹ್ಯ ಮೂಲವನ್ನು ಕುರಿತು*

*ಚೆನ್ನಾಗಿ ಯೋಚಿಸಿದ ಮೇಲೆ, ಪ್ರಾಣಿಗಳನ್ನು ಬಂಧಿಸಿಡುವ ಮತ್ತು ಕೊಲ್ಲುವ ಕುರಿತು ಚೆನ್ನಾಗಿ ಯೋಚಿಸಿದ ಮೇಲೆ, ಸಂಪೂರ್ಣವಾಗಿ ಮಾಂಸ ಭಕ್ಷಣವನ್ನು ವರ್ಜಿಸಬೇಕು."*

ಈ ಶ್ಲೋಕಗಳನ್ನು ಇತ್ಯಾತ್ಮಕ ಆಜ್ಞೆಗಳೆಂದು ಪರಿಗಣಿಸಬಹುದಾದರೆ, ಬ್ರಾಹ್ಮಣರು ಮಾಂಸ ಭಕ್ಷಣೆಯನ್ನು ತ್ಯಜಿಸಿ, ಯಾಕೆ ಶಾಖಾಹಾರಿಗಳಾದರು ಎಂಬ ಅಂಶವನ್ನು ವಿವರಿಸಲು ಸಾಕಾಗಬಹುದು. ಆದರೆ ಇವುಗಳನ್ನೂ ಕಾನೂನಿನ ಬಲವುಳ್ಳ ಇತ್ಯಾತ್ಮಕ ಆಜ್ಞೆಗಳೆಂದು ಹೇಳಲು ಸಾಧ್ಯವಿಲ್ಲ. ಇವುಗಳು, ಬ್ರಾಹ್ಮಣರು ಶಾಖಾಹಾರಿಗಳಾದ ಮೇಲೆ ಸೇರಿಸಲಾದ ಭಾಗಗಳು ಅಥವಾ ಶಾಖಾಹಾರವನ್ನು ಸಮರ್ಥಿಸುವ ಮಾತುಗಳು. ಮನುಸ್ಮೃತಿಯ ಅದೇ ಅಧ್ಯಾಯದಲ್ಲಿ ಕಂಡುಬರುವ ಕೆಳಗಿನ ಶ್ಲೋಕಗಳನ್ನು ನೋಡಿದರೆ, ಮೇಲಿನ ಮಾತನ್ನು ಸಮರ್ಥಿಸಬಹುದು.

*"V ೨೮ ಜೀವಂತ ಚೇತನದ ಸಾಕುವಿಕೆಗೆ ಪ್ರಜಾಪತಿ ಈ ಇಡೀ ಪ್ರಪಂಚವನ್ನು ನಿರ್ಮಿಸಿದ; ಸಮಸ್ತ ಚರಾಚರವೂ ಈ ಜೀವಂತ ಚೇತನದ ಆಹಾರವೆನಿಸಿದೆ.*

*"V ೨೯ ಚಲನೆಯಿಲ್ಲದವು ಚಲಿಸುವುದಕ್ಕೆ ಆಹಾರ; ಹಲ್ಲುಗಳಿಲ್ಲದ ಪ್ರಾಣಿಗಳು, ಹಲ್ಲಿರುವ ಪ್ರಾಣಿಗಳಿಗೆ ಆಹಾರ; ಕೈಯಿಲ್ಲದವು ಕೈಯಿರುವ ಪ್ರಾಣಿಗಳಿಗೆ ಆಹಾರ; ಭೀತಿಯುಳ್ಳ ಪ್ರಾಣಿಗಳು ಧೈರ್ಯವಂತ ಪ್ರಾಣಿಗಳಿಗೆ ಆಹಾರ.*

*"V ೩೦ ಯಾವುದು ತನ್ನ ಆಹಾರವೋ ಅದನ್ನು ತಿನ್ನುವವನು ಯಾವ ಪಾಪವನ್ನೂ ಮಾಡುವುದಿಲ್ಲ; ಯಾಕೆಂದರೆ ಸೃಷ್ಟಿಕರ್ತನು ತಿನ್ನುವವನನ್ನೂ, ತಿನ್ನುವ ಆಹಾರವನ್ನೂ ನಿರ್ಮಿಸಿದ.*

*"V ೩೬ ಮಾಂಸ ತಿನ್ನುವುದು ಪಾಪವಲ್ಲ, ಮದ್ಯ ಸೇವನೆ ಪಾಪವಲ್ಲ. ಸಂಭೋಗ ಪಾಪವಲ್ಲ. ಯಾಕೆಂದರೆ ಇವೆಲ್ಲವೂ ಸಹಜಕ್ರಿಯೆಗಳು. ಆದರೆ ಇವುಗಳನ್ನು ಮಾಡದೇ ಇರುವುದರಿಂದ ಹೆಚ್ಚಿನ ಪ್ರತಿಫಲ ದೊರೆಯುತ್ತದೆ.*

*"V ೨೭ ಮಂತ್ರೋಚ್ಚಾರಣೆ ಮಾಡಿ, ನೀರನ್ನು ಚಿಮುಕಿಸಿದ ಮಾಂಸವನ್ನು ತಿನ್ನಬಹುದು – ಬ್ರಾಹ್ಮಣರು ಇಷ್ಟಪಟ್ಟಾಗ ಕಾನೂನಿನ ಅನ್ವಯ ಆಚರಣೆಯೊಂದನ್ನು ನಡೆಸುತ್ತಿದ್ದಾಗ ಮತ್ತು ಜೀವ ಅಪಾಯದಲ್ಲಿದ್ದಾಗ ತಿನ್ನಬಹುದು.*

*"V ೩೧ "ಯಜ್ಞಗಳಲ್ಲಿ ಮಾಂಸ ತಿನ್ನುವುದು ಸರಿಯಾದದ್ದೆ" – ಅದನ್ನು ದೇವತೆಗಳೇ ಮಾಡಿದ ಕಾನೂನೆಂದು ಹೇಳುತ್ತಾರೆ. ಆದರೆ ಬೇರೆ ಸಮಯಗಳಲ್ಲೂ ಅದನ್ನು ತಿನ್ನುವುದು ರಾಕ್ಷಸೀತನ ಎನಿಸುತ್ತದೆ.*

*"V ೩೨ ಯಾರು ಮಾಂಸವನ್ನು ಕೊಂಡು ತಂದು, ಇಲ್ಲವೆ ತಾನೇ ಪ್ರಾಣಿಯನ್ನು ಕೊಂದು, ಇಲ್ಲವೆ ಅದನ್ನು ಬೇರೆಯವರಿಂದ ಬಹುಮಾನವಾಗಿ ಪಡೆದಿರುತ್ತಾರೋ ಆತ ಮಾಂಸವನ್ನು – ದೇವತೆಗಳ ಅಥವಾ ಪಿತೃಗಳ ಪ್ರೀತ್ಯರ್ಥ ತಿಂದರೆ, ಅಂತಹವನು ಯಾವ ಪಾಪವನ್ನೂ ಮಾಡುವುದಿಲ್ಲ.*

*"V ೪೨ ವೇದದ ನಿಜವಾದ ಅರ್ಥವನ್ನು ಗ್ರಹಿಸಿದ ದ್ವಿಜನೊಬ್ಬ, ಇಂತಹ ಕಾರಣಗಳಿಗಾಗಿ ಪ್ರಾಣಿಯನ್ನು ಕೊಂದರೆ ಅಂತಹವನು ತಾನೂ ಮತ್ತು ಆ ಪ್ರಾಣಿಯೂ ಆನಂದಭರಿತವಾದ ಸ್ವರ್ಗವನ್ನು ತಲುಪುವಂತೆ ಮಾಡುತ್ತಾನೆ.*

*"V ೩೯ ಸ್ವಯಂಭುವೇ ಯಜ್ಞದಲ್ಲಿ ಬಲಿ ಕೊಡಲಿಕ್ಕಾಗಿ ಪ್ರಾಣಿಗಳನ್ನು ನಿರ್ಮಿಸಿದ. ಯಜ್ಞದ ಉದ್ದೇಶ ಇಡೀ ಪ್ರಪಂಚದ ಒಳಿತು. ಆದ್ದರಿಂದ ಯಜ್ಞಕ್ಕಾಗಿ ಪ್ರಾಣಿಗಳನ್ನು ಕೊಲ್ಲುವುದು,*

*ಸಾಮಾನ್ಯ ರೀತಿಯಲ್ಲಿ ಕೊಲ್ಲುವುದಕ್ಕಿಂತ ಭಿನ್ನ.*

*"V ೪೦ ಯಜ್ಞಕ್ಕಾಗಿ ನಾಶಗೊಳಿಸಿದ ಗಿಡಮರಗಳು, ಹಯನು, ಹಕ್ಕಿಗಳು, ಮರುಜನ್ಮದಲ್ಲಿ ಉತ್ತಮ ಸ್ಥಾನ ಪಡೆಯುತ್ತವೆ."*

ಮನು ಮುಂದುವರಿದು, ಮಾಂಸಭಕ್ಷಣೆಯನ್ನು ಅನೈಚ್ಛಿಕವನ್ನಾಗಿ ಮಾಡುತ್ತಾನೆ. ಈ ಕೆಳಗಿನ ಶ್ಲೋಕವನ್ನು ನೋಡಿ –

*"V ೩೫ ಪವಿತ್ರ ಆಚರಣೆಯೊಂದರಲ್ಲಿ ಯಾರು ವಿಧಿಪೂರ್ವಕವಾಗಿ ಭಾಗವಹಿಸಲು ಅಥವಾ ಭೋಜನ ಸ್ವೀಕರಿಸಲು ಆಹ್ವಾನಿತನಾಗಿರುವಾಗ, ಆತ ಮಾಂಸ ತಿನ್ನುವುದು ನಿರಾಕರಿಸಿದರೆ, ಮುಂದಿನ ಇಪ್ಪತ್ತೊಂದು ಜನ್ಮದಲ್ಲಿ ಪ್ರಾಣಿಯಾಗುತ್ತಾನೆ."*

ಮನು ಮಾಂಸಭಕ್ಷಣೆಯನ್ನು ತಡೆಯಲಿಲ್ಲ ಎನ್ನುವುದು ವಿದಿತ. ಮನುಸ್ಮೃತಿ ಗೋವಧೆಯನ್ನು ನಿಷೇಧಿಸಲಿಲ್ಲ ಎನ್ನುವುದನ್ನೂ ಆ ಕೃತಿಯಿಂದಲೇ ಸಾಧಿಸಬಹುದು. ಮೊದಲನೆಯದಾಗಿ, ಮನುಸ್ಮೃತಿಯಲ್ಲಿ ಹಸುವಿನ ಪ್ರಸ್ತಾಪ ಬರುವುದು, ಸ್ನಾತಕನಿಗೆ ಮನು ವಿಧಿಸುವ ನೀತಿಸಹಿತೆಯಲ್ಲಿ ಕಂಡುಬರುತ್ತದೆ. ಅವು ಹೀಗಿವೆ :–

೧. ಹಸು ಮೂಸಿರುವ ಆಹಾರವನ್ನು ಸ್ನಾತಕನು ತಿನ್ನಬಾರದು.[೧]
೨. ಕರುವಿಗೆ ಕಟ್ಟಿರುವ ಹಗ್ಗವನ್ನು ಸ್ನಾತಕನು ದಾಟಬಾರದು.[೨]
೩. ಕೊಟ್ಟಿಗೆಯಲ್ಲಿ ಸ್ನಾತಕನು ಮೂತ್ರ ಮಾಡಬಾರದು.[೩]
೪. ಹಸುವಿನ ಕಡೆ ಮುಖ ಮಾಡಿ, ಸ್ನಾತಕನು ಮಲವಿಸರ್ಜನೆ ಮಾಡಬಾರದು.[೪]
೫. ಕೊಟ್ಟಿಗೆಯಲ್ಲಿ ಕಾಲಿಡುವಾಗ, ಸ್ನಾತಕನು ತನ್ನ ಬಲತೋಳನ್ನು ಮುಚ್ಚಿಕೊಳ್ಳದೆ ಇರಬಾರದು.[೫]
೬. ಕರುವಿಗೆ ಹಾಲು ಕೊಡುತ್ತಿರುವ ಹಸುವನ್ನು ಸ್ನಾತಕ ತೊಂದರೆಪಡಿಸಬಾರದು. ಆ ಬಗ್ಗೆ ಯಾರಿಗೂ ಹೇಳಬಾರದು.[೬]
೭. ಸ್ನಾತಕನು ಹಸುವಿನ ಬೆನ್ನ ಮೇಲೆ ಸವಾರಿ ಮಾಡಬಾರದು.[೭]
೮. ಸ್ನಾತಕನು ಹಸುವಿಗೆ ತೊಂದರೆ ಕೊಡಬಾರದು.[೮]
೯. ಅಶುದ್ಧನಾಗಿರುವ ಸ್ನಾತಕನು ತನ್ನ ಕೈಯಿಂದ ಹಸುವನ್ನು ಮುಟ್ಟಬಾರದು.[೯]

ಈ ಮಾತುಗಳಿಂದ ಮನು ಹಸುವನ್ನು ಪವಿತ್ರ ಎಂದು ಪರಿಗಣಿಸಲಿಲ್ಲ ಎನ್ನುವುದು ತಿಳಿಯುತ್ತದೆ. ಬದಲಾಗಿ, ಅದನ್ನು ಮುಟ್ಟಿದರೆ, ಮೈಲಿಗೆಯಾಗುತ್ತದೆಂದು ಅವನು ಭಾವಿಸಿದನು.

ಮನು ಗೋಮಾಂಸ ಭಕ್ಷಣೆಯನ್ನು ನಿಷೇಧಿಸಲಿಲ್ಲ ಎನ್ನುವುದಕ್ಕೆ ಮನುಸ್ಮೃತಿಯಲ್ಲಿಯೇ ಕೆಲವು ಶ್ಲೋಕಗಳಿವೆ. ಈ ಸಂಬಂಧವಾಗಿ ಅಧ್ಯಾಯ III, ೩ ಅನ್ನು ನೋಡಬಹುದು. ಅದು ಹೀಗೆ ಹೇಳುತ್ತದೆ–

*"ಯಾವ ಸ್ನಾತಕನು ತನ್ನ ಕರ್ತವ್ಯಗಳ ನಿಷ್ಠಾವಂತ ಆಚರಣೆಗೆ ಹೆಸರು ಮಾಡಿರುತ್ತಾನೋ,*

---

೧. ಮನು ೨೦೯
೨. ಅದೇ ೩೫೪
೩. ಅದೇ ೨೦೯
೪. ಅದೇ ೩೮
೫. ಅದೇ ೫೬
೬. ಅದೇ ೫೯
೭. ಅದೇ ೭೦
೮. ಅದೇ ೧೬೨
೯. ಅದೇ ೧೪೨

*ಯಾರು ತನ್ನ ತಂದೆಯಿಂದ ವೈದಿಕ ಪರಂಪರೆಯನ್ನು ಪಡೆದುಕೊಂಡಿರುತ್ತಾನೋ, ಆತ ಮೆದುವಾದ ಆಸನದ ಮೇಲೆ ಹಾರ ಧರಿಸಿ ಕುಳಿತು, ಮಧುಪರ್ಕದೊಂದಿಗೆ ಹಸುವನ್ನು ಪಡೆಯುವ ಗೌರವಕ್ಕೆ ಪಾತ್ರನಾಗಲಿ."*

ಇಲ್ಲಿ ಏಳುವ ಪ್ರಶ್ನೆಯೆಂದರೆ, ಸ್ನಾತಕನೊಬ್ಬನಿಗೆ ಹಸುವಿನ ಉಡುಗೊರೆಯನ್ನು ಮನು ಯಾಕೆ ಶಿಫಾರಸ್ಸು ಮಾಡುತ್ತಾನೆ ಎನ್ನುವುದು. ಅದರ ಉದ್ದೇಶ ಆತನಿಗೆ ಮಧುಪರ್ಕ ಮಾಡುವ ಸಾಮರ್ಥ್ಯ ಬರಲಿ ಎಂದು. ಇದು ನಿಜವಾದರೆ, ಮನುವಿಗೆ ಬ್ರಾಹ್ಮಣರು ಗೋಮಾಂಸ ತಿನ್ನುತ್ತಿದ್ದರೆಂದೂ, ಆ ಬಗ್ಗೆ ಅವನಿಗೆ ಯಾವ ಭಿಡೆಯೂ ಇರಲಿಲ್ಲವೆಂದೂ ತಿಳಿಯುತ್ತದೆ.

ಇನ್ನೊಂದು ಪರಿಶೀಲನಾರ್ಹ ಅಂಶವೆಂದರೆ, ಯಾವ ಪ್ರಾಣಿಗಳ ಮಾಂಸ ತಿನ್ನಲು ಯೋಗ್ಯ, ಯಾವುದಲ್ಲ ಎಂಬ ಬಗ್ಗೆ ಮನು ಚರ್ಚೆ ನಡೆಸುವಾಗ, ಅಧ್ಯಾಯ V ೧೮ರಲ್ಲಿ ಅವನು ಹೇಳುತ್ತಾನೆ.

"ಮುಳ್ಳು ಹಂದಿ, ಉಡ, ಖಡ್ಗಮೃಗ, ಆಮೆ ಮತ್ತು ಮೊಲಗಳು ತಿನ್ನಬಹುದಾದವು. ಹಾಗೆಯೇ ಒಂದೆ ದವಡೆಯಲ್ಲಿ ಹಲ್ಲಿರುವ ಸಾಕುಪ್ರಾಣಿಗಳು ಒಂಟೆಯೊಂದನ್ನು ಬಿಟ್ಟು."

ಈ ಶ್ಲೋಕದಲ್ಲಿ, ಒಂದೇ ದವಡೆಯಲ್ಲಿ ಹಲ್ಲಿರುವ ಎಲ್ಲ ಸಾಕುಪ್ರಾಣಿಗಳನ್ನು ತಿನ್ನಲಿಕ್ಕೆ ಮನು ಸಾಮಾನ್ಯವಾದ ಪರವಾನಗಿ ಕೊಡುತ್ತಾನೆ. ಈ ನೀತಿಗೆ ಮನು ಒಂದು ವಿನಾಯಿತಿ ಹೇಳುತ್ತಾನೆ – ಅದೆಂದರೆ ಒಂಟೆ. ಈ ಜಾತಿಗೆ ಒಂಟೆಯೊಂದೇ ಅಲ್ಲ, ಹಸುವೂ ಸೇರುತ್ತದೆ. ಹಸುವಿನ ವಿಷಯದಲ್ಲಿ ಆತ ವಿನಾಯಿತಿ ಕೊಡುವುದಿಲ್ಲ ಎನ್ನುವುದು ಗಮನಾರ್ಹ. ಇದರ ಅರ್ಥ, ಹಸುವಿನ ಮಾಂಸ ತಿನ್ನುವುದಕ್ಕೆ ಮನುವಿನ ಆಕ್ಷೇಪವಿರಲಿಲ್ಲ.

ಹಸು ಕೊಲ್ಲುವುದನ್ನು ಮನು ಅಪರಾಧ ಎನ್ನುವುದಿಲ್ಲ. ಪಾಪವನ್ನು ಮನು ಎರಡು ಗುಂಪುಗಳನ್ನಾಗಿ ಮಾಡುತ್ತಾನೆ – (i) ಘಾತುಕ ಪಾಪ, ಮತ್ತು (ii) ಸಣ್ಣ ಪುಟ್ಟ ಪಾಪ. ಘಾತುಕ ಪಾಪಗಳಲ್ಲಿ ಮನು ಈ ಕೆಳಗಿನವುಗಳನ್ನು ಸೇರಿಸುತ್ತಾನೆ –

*"XI ೫೫ ಬ್ರಾಹ್ಮಣನನ್ನು ಕೊಲ್ಲುವುದು, ಸುರೆ ಎಂಬ ಮದ್ಯವನ್ನು ಕುಡಿಯುವುದು, ಬ್ರಾಹ್ಮಣನ ಚಿನ್ನ ಕದಿಯುವುದು, ಗುರುಪತ್ನಿ ಗಮನ ಮತ್ತು ಅಂತಹ ಕೃತ್ಯ ಮಾಡುವ ಅಪರಾಧಿಗಳ ಜತೆ ಸೇರುವುದು.*

*"XI ೬೦ ಸಣ್ಣ ಪಾಪಗಳೆಂದು ಮನು ಇವುಗಳನ್ನು ಹೆಸರಿಸುತ್ತಾನೆ: ಹಸುವನ್ನು ಕೊಲ್ಲುವುದು, ಯೋಗ್ಯವಲ್ಲದವರಿಗೆ ಬಲಿ ಕೊಡುವುದು, ವ್ಯಭಿಚಾರ, ತನ್ನನ್ನು ತಾನೇ ಹೊಗಳಿಕೊಳ್ಳುವುದು, ತನ್ನ ಗುರು, ತಂದೆ, ತಾಯಿ ಅಥವಾ ಮಗನನ್ನು ತ್ಯಜಿಸುವುದು. ನಿತ್ಯ ವೇದಾಧ್ಯಯನ ಮಾಡದಿರುವುದು, ಮತ್ತು ಮನೆಯಲ್ಲಿ ಅಗ್ನಿಪೂಜೆ ಮಾಡದಿರುವುದು."*

ಇದರಿಂದ ವ್ಯಕ್ತವಾಗುವ ಅಂಶವೆಂದರೆ, ಮನುವಿನ ಪ್ರಕಾರ, ಹಸುವನ್ನು ಕೊಲ್ಲುವುದು ಸಣ್ಣ ಸರಿಯಾದ ಮತ್ತು ಸಾಕಷ್ಟು ಕಾರಣವಿಲ್ಲದೆ ಹಸುವನ್ನು ಕೊಲ್ಲುವುದು ಮಾತ್ರ ಅಸಹನೀಯವಾಗಿತ್ತು. ಹಾಗಲ್ಲದಿದ್ದರೂ ಅದು ಅತಿ ಘೋರವಾದ ಅಥವಾ ವಿವರಿಸಲಾಗದಂಥಹ ಕಾರ್ಯವಾಗಿರಲಿಲ್ಲ. ಯಾಜ್ಞವಲ್ಕ್ಯನದೂ ಇದೇ ಮತ.[೧]

---

೧. ಯಾಜ್ಞವಲ್ಕ್ಯ, III ೨೨೭ ಮತ್ತು III ೨೩೪

ಬ್ರಾಹ್ಮಣರು ಹಲವಾರು ತಲೆಮಾರು ಗೋಮಾಂಸ ಭಕ್ಷಣೆ ಮಾಡುತ್ತಿದ್ದರು ಎನ್ನುವುದನ್ನು ಮೇಲಿನ ವಿಷಯಗಳು ಎತ್ತಿ ತೋರಿಸುತ್ತವೆ. ಅವರು ಗೋಮಾಂಸ ಭಕ್ಷಣೆ ಯಾಕೆ ನಿಲ್ಲಿಸಿದರು? ಅತ್ಯಂತ ನಿರ್ಣಾಯಕ ಸ್ಥಿತಿಯಲ್ಲಿ ಮಾಂಸಭಕ್ಷಣೆಯನ್ನೇ ಸಂಪೂರ್ಣವಾಗಿ ನಿಲ್ಲಿಸಿ ಯಾಕೆ ಶಾಖಾಹಾರಿಗಳಾದರು? ಇದು ಎರಡು ಕ್ರಾಂತಿಗಳನ್ನು ಒಂದರಲ್ಲೇ ಸೇವಿಸಿದಂತೆ. ಬ್ರಾಹ್ಮಣರ ದೈವೀಕಾನೂನು ಕರ್ತೃವಾದ ಮನುವಿನ ಪ್ರಚಾರದಿಂದ ಇದನ್ನು ಅವರು ಮಾಡಲಿಲ್ಲವೆಂದು ಈಗಾಗಲೇ ತೋರಿಸಲಾಗಿದೆ. ಈ ಕ್ರಾಂತಿ ನಡೆದದ್ದು ಮನುವಿನ ನಿರ್ದೇಶನದ ವಿರುದ್ಧ ಮತ್ತು ಅವನನ್ನು ವಿರೋಧಿಸಿಯೇ. ಈ ನಿರ್ಣಯ ತೆಗೆದುಕೊಳ್ಳಲು ಏನು ಕಾರಣ? ತತ್ತ್ವಶಾಸ್ತ್ರ ಇದಕ್ಕೆ ಕಾರಣವೆ? ಅಥವಾ ಅದನ್ನು ಒಂದು ಉಪಾಯ ಎಂಬ ಕಾರಣಕ್ಕಾಗಿ ಮಾಡಲಾಯಿತೆ?

ಎರಡು ವಿವರಣೆ ನೀಡಬಹುದು; ಒಂದು ವಿವರಣೆಯೆಂದರೆ ಅದ್ವೈತ ತತ್ತ್ವದ ಪ್ರಾದುರ್ಭಾವದಿಂದ ಹಸುವನ್ನು ದೇವತೆಯನ್ನಾಗಿ ಮಾಡಿದ್ದು. ಇದರ ಪ್ರಕಾರ ಒಂದು ಉನ್ನತ ವಸ್ತು ಪ್ರಪಂಚವನ್ನೆಲ್ಲ ಆವರಿಸಿತ್ತು ಮತ್ತು ಆ ಕಾರಣದಿಂದ ಮಾನವ ಮತ್ತು ಪ್ರಾಣಿಗಳಿಂದ ಕೂಡಿದ ಸಮಸ್ತ ಜೀವವೂ ಪವಿತ್ರ ಎನ್ನುವುದು. ಇದು ಅಸಮರ್ಪಕ ವಿವರಣೆ. ಮೊದಲನೆಯದಾಗಿ ಇದು ವಸ್ತುಸಂಗತಿಗೆ ಹೊಂದುವುದಿಲ್ಲ, ಜೀವನ ಐಕ್ಯತೆಯನ್ನು ಹೇಳುವ ವೇದ ಸೂತ್ರ, II ೧.೨೮ ರಿಂದ ವ್ಯಕ್ತವಾಗುವಂತೆ ಯಜ್ಞಕ್ಕಾಗಿ ಪ್ರಾಣಿಗಳ ಬಲಿ ಕೊಡುವುದನ್ನು ನಿಷೇಧಿಸುವುದಿಲ್ಲ. ಎರಡನೆಯದಾಗಿ, ಅದ್ವೈತದ ಆದರ್ಶವನ್ನು ಸಾಕ್ಷಾತ್ಕಾರಿಸಿಕೊಳ್ಳುವುದೇ ಈ ಬದಲಾವಣೆಗೆ ಕಾರಣ ಆಗಿದ್ದಲ್ಲಿ, ಅದು ಹಸುವನ್ನು ಕೊಲ್ಲಬಾರದೆಂದು ಮಾತ್ರವೇ ಏಕಾಗಬೇಕಾಗಿತ್ತು? ಅದು ಬೇರೆ ಪ್ರಾಣಿಗಳನ್ನೂ ಒಳಗೊಳ್ಳಬೇಕಾಗುತ್ತಿತ್ತು.

ಇದಕ್ಕಿಂತಲೂ ಹೆಚ್ಚು ಜಾಣತನದ ವಿವರಣೆ ಎಂದರೆ, ಆತ್ಮನ ದೇಹಾಂತರದ ವಿಷಯಿಕ ತತ್ತ್ವದಿಂದಾಗಿ, ಬ್ರಾಹ್ಮಣರಲ್ಲಿ ಈ ಬದಲಾವಣೆಯುಂಟಾಯಿತು ಎನ್ನುವುದು. ಈ ವಿವರಣೆ ಕೂಡ ವಸ್ತು ಸಂಗತಿಯೊಂದಿಗೆ ಹೊಂದಾಣಿಕೆಯಾಗುವುದಿಲ್ಲ. ಆತ್ಮನ ದೇಹಾಂತರದ ವಿಷಯವನ್ನು ಬೃಹದಾರಣ್ಯಕ ಉಪನಿಷತ್ (vi. ೨) ಎತ್ತಿ ಹಿಡಿಯುತ್ತದೆ. ಆದರೂ ಯಾವುದೇ ವ್ಯಕ್ತಿ ತನಗೆ ಒಬ್ಬ ಜ್ಞಾನಿಯಾದ ಮಗ ಹುಟ್ಟಬೇಕು ಎಂದು ಆಸೆಪಟ್ಟರೆ, ಅಂತಹ ವ್ಯಕ್ತಿ ಹೋರಿಯ ಅಥವಾ ಎತ್ತಿನ ಅಥವಾ ಬೇರಾವುದೇ ಪ್ರಾಣಿಯ ಮಾಂಸದ ಮುದ್ದೆಯನ್ನು ಅನ್ನ ಮತ್ತು ತುಪ್ಪದೊಂದಿಗೆ ತಯಾರಿಸಬೇಕೆಂದು ಹೇಳುತ್ತದೆ. ಉಪನಿಷತ್ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ಈ ತತ್ತ್ವ, ನಾನೂರು ವರ್ಷಗಳ ಕಾಲದವರೆಗೆ ಅಂದರೆ ಮನುಸ್ಮೃತಿಯ ಕಾಲದವರೆಗೆ, ಬ್ರಾಹ್ಮಣರ ಮೇಲೆ ಯಾಕೆ ಯಾವುದೇ ಪರಿಣಾಮವನ್ನು ಉಂಟು ಮಾಡಲಿಲ್ಲ ಎನ್ನುವುದು ಆಶ್ಚರ್ಯಕರ. ನಿಜವಾಗಿ ಈ ವಿವರಣೆ ವಿವರಣೆಯೇ ಅಲ್ಲ. ಮೂರನೆಯದಾಗಿ, ಆತ್ಮನ ದೇಹಾಂತರ ತತ್ತ್ವ ಬ್ರಾಹ್ಮಣರನ್ನು ಸಸ್ಯಾಹಾರಿಗಳನ್ನಾಗಿ ಮಾಡಿದರೆ, ಬ್ರಾಹ್ಮಣೇತರರು ಯಾಕೆ ಸಸ್ಯಾಹಾರಿಗಳಾಗಲಿಲ್ಲ?

ನನಗೆ ತೋರುವ ಪ್ರಕಾರ, ಬ್ರಾಹ್ಮಣರು ಗೋಮಾಂಸ ತಿನ್ನುವುದನ್ನು ಬಿಟ್ಟು, ಗೋಪೂಜೆಗೆ ತೊಡಗಿದ್ದಕ್ಕೆ ಅವರ ಚಾಣಾಕ್ಷತನವೇ ಕಾರಣ. ಬೌದ್ಧಮತ ಮತ್ತು ಬ್ರಾಹ್ಮಣ ಮತ ಇವುಗಳ ನಡುವಿನ ಹೋರಾಟದಲ್ಲಿಯೇ ನಮಗೆ ಗೋಪೂಜೆಯ ಬಗ್ಗೆ ಸೂಚನೆ ಸಿಗುತ್ತದೆ, ಇದು ಬೌದ್ಧರಿಗಿಂತ ತಾವು ಉತ್ತಮರು ಎನ್ನುವುದನ್ನು ಸಾಧಿಸಲಿಕ್ಕೆ ಮಾರ್ಗವೂ ಆಯಿತು. ಭಾರತದ ಚರಿತ್ರೆಯಲ್ಲಿ ಬೌದ್ಧರು ಮತ್ತು ಬ್ರಾಹ್ಮಣರ ನಡುವಿನ ಹೋರಾಟ ಒಂದು ನಿರ್ಣಾಯಕ ಅಂಶ. ಈ ವಸ್ತುಸಂಗತಿಯನ್ನು ಗಮನಕ್ಕೆ ತೆಗೆದುಕೊಳ್ಳದೆಯೆ, ಹಿಂದೂಮತದ ಕೆಲವು ಲಕ್ಷಣಗಳನ್ನು ವಿವರಿಸುವುದು ಅಸಾಧ್ಯ. ಭಾರತದ ಇತಿಹಾಸದ ವಿದ್ಯಾರ್ಥಿಗಳು ಇದನ್ನು ಸಂಪೂರ್ಣವಾಗಿ

ತಪ್ಪಿಸಿಕೊಂಡಿದ್ದಾರೆ ಎನ್ನುವುದು ದುರದೃಷ್ಟಕರ. ಬ್ರಾಹ್ಮಣ ಮತ ಇತ್ತೆನ್ನುವುದು ಅವರಿಗೆ ಗೊತ್ತಿತ್ತು. ಆದರೆ ಈ ಎರಡು ಮತಗಳ ನಡುವೆ, ಪ್ರಥಮ ಸ್ಥಾನಕ್ಕಾಗಿ ನಡೆದ ಹೋರಾಟವನ್ನು ಅವರು ಸಂಪೂರ್ಣವಾಗಿ ಗಮನಿಸಲೇ ಇಲ್ಲ ಎನ್ನುವುದೂ ಮತ್ತು ನಾನೂರು ವರ್ಷಗಳ ಕಾಲ ನಡೆದ ಈ ಹೋರಾಟ, ಭಾರತದ ಮತಧರ್ಮ, ಸಮಾಜ ಮತ್ತು ರಾಜಕಾರಣದ ಮೇಲೆ ಅಳಿಸಲಾಗದ ಪ್ರಭಾವ ಬೀರಿತೆನ್ನುವುದನ್ನೂ ಅವರು ಗಮನಿಸಲೇ ಇಲ್ಲ.

ಆ ಹೋರಾಟದ ಪೂರ್ಣ ವಿವರಗಳನ್ನು ನೀಡುವುದಕ್ಕೆ ಇದು ತಕ್ಕ ಜಾಗವಲ್ಲ. ಇಲ್ಲಿ ಮಾಡಬಹುದಾದ ಅಂಶವೆಂದರೆ, ಕೆಲವು ಪ್ರಮುಖ ಅಂಶಗಳನ್ನಷ್ಟೇ ನೀಡುವುದು. ಒಂದು ಕಾಲದಲ್ಲಿ ಭಾರತದ ಬಹುಸಂಖ್ಯಾತರ ಮತ ಬೌದ್ಧಮತವೇ ಆಗಿತ್ತು. ನೂರಾರು ವರ್ಷಗಳ ಕಾಲ, ಅದು ಜನಸಮುದಯದ ಮತವಾಗಿಯೇ ಮುಂದುವರಿಯಿತು. ಬೇರೆ ಯಾವ ಮತವೂ ಹಿಂದೆ ಮಾಡದಿದ್ದ ರೀತಿಯಲ್ಲಿ ಅದು ಬ್ರಾಹ್ಮಣ ಮತದ ಮೇಲೆ ದಾಳಿ ಮಾಡಿತು. ಬ್ರಾಹ್ಮಣ ಮತ ಮುಳುಗುವ ಸ್ಥಿತಿಯಲ್ಲಿತ್ತು. ಹಾಗಲ್ಲದಿದ್ದರೂ, ಅದು ತನ್ನ ರಕ್ಷಣೆಯನ್ನು ಮಾಡಿಕೊಳ್ಳಬೇಕಾದ ಸ್ಥಿತಿಯಲ್ಲಿತ್ತು. ಬೌದ್ಧ ಮತದ ಪ್ರಸಾರದಿಂದಾಗಿ, ರಾಜಾಸ್ಥಾನದಲ್ಲಿ ಮತ್ತು ಜನಗಳ ಮಧ್ಯೆ ಬ್ರಾಹ್ಮಣ ಮತ ತನ್ನ ಶಕ್ತಿ ಹಾಗೂ ಪ್ರತಿಷ್ಠೆಯನ್ನು ಕಳೆದುಕೊಂಡಿತ್ತು. ಬೌದ್ಧ ಮತದ ಕೈಯಲ್ಲಿ ಅನುಭವಿಸಿದ ಸೋಲಿನಲ್ಲಿ ಅವರು ಒದ್ದಾಡುತ್ತಿದ್ದರು. ಅಲ್ಲದೆ, ತಮ್ಮ ಶಕ್ತಿ ಮತ್ತು ಪ್ರತಿಷ್ಠೆಯನ್ನು ವಾಪಸ್ಸು ಪಡೆಯಲು ಏನೆಲ್ಲ ಸಾಧ್ಯವೋ ಎಲ್ಲವನ್ನೂ ಮಾಡುತ್ತಿದ್ದರು. ಬೌದ್ಧ ಮತ ಜನಸಮುದಾಯದ ಮೇಲೆ ಎಷ್ಟು ಆಳವಾದ ಪ್ರಭಾವ ಬೀರಿತ್ತೆಂದರೆ, ಬ್ರಾಹ್ಮಣರು ಬುದ್ಧನ ತತ್ತ್ವದ ಸಂಪೂರ್ಣ ಆಚರಣೆ ಮತ್ತು ಬೌದ್ಧಮತದ ಆಚಾರ ವಿಚಾರಗಳನ್ನು ಒಪ್ಪಿಕೊಳ್ಳದೆಯೆ, ಬೌದ್ಧ ಮತದ ವಿರುದ್ಧ ಹೋರಾಟ ಮಾಡುವುದು ಸಾಧ್ಯವೇ ಇರಲಿಲ್ಲ. ಬುದ್ಧನ ನಿರ್ವಾಣದ ಅನಂತರದ, ಅವನ ಅನುಯಾಯಿಗಳು ಬುದ್ಧನ ಮೂರ್ತಿಯನ್ನು ಮತ್ತು ಸ್ತೂಪಗಳನ್ನು ಸ್ಥಾಪಿಸತೊಡಗಿದರು. ಬ್ರಾಹ್ಮಣರೂ ಇದನ್ನೇ ಅನುಕರಿಸತೊಡಗಿದರು. ಅವರು ಗುಡಿಗಳನ್ನು ಕಟ್ಟಿ, ಶಿವ, ವಿಷ್ಣು, ರಾಮ, ಕೃಷ್ಣ ಮತ್ತಿತರ ದೇವತೆಗಳ ಮೂರ್ತಿಗಳನ್ನು ಪ್ರತಿಷ್ಠಾಪಿಸತೊಡಗಿದರು. ಇದರ ಉದ್ದೇಶ ಬುದ್ಧನ ಮೂರ್ತಿ ಪೂಜೆಯಿಂದ ಆಕರ್ಷಿತರಾದ ಜನಗಳನ್ನು ಸೆಳೆದುಕೊಳ್ಳುವುದೇ ಆಗಿತ್ತು. ಬ್ರಾಹ್ಮಣ ಮತದಲ್ಲಿ ಗುಡಿಗಳು ಮತ್ತು ಮೂರ್ತಿಗಳಿಗೆ ಅವಕಾಶವಿರಲಿಲ್ಲ. ಆದರೆ ಹಿಂದೂ ಮತದಲ್ಲಿ ಗುಡಿಗಳು ಮತ್ತು ಮೂರ್ತಿಗಳು ಮೇಲೆ ಸೂಚಿಸಿದಂತೆ ಕಾಣಿಸಿಕೊಂಡವು. ಯಜ್ಞ ಮತ್ತು ಪಶುಬಲಿ – ಮುಖ್ಯವಾಗಿ ಗೋವಿನ ಬಲಿಯನ್ನು ಹೊಂದಿದ್ದ ಬ್ರಾಹ್ಮಣ ಮತವನ್ನು ಬೌದ್ಧ ಮತೀಯರು ತಿರಸ್ಕರಿಸಿದರು. ಗೋವಿನ ಬಲಿಗೆ, ಬೌದ್ಧರು ಎತ್ತಿದ ಆಕ್ಷೇಪಣೆ, ವ್ಯವಸಾಯವನ್ನೇ ಅವಲಂಬಿಸಿದ್ದ ಹೆಚ್ಚಿನ ಜನಸಮುದಾಯದ ಮನಸ್ಸಿಗೆ ಆಳವಾಗಿ ನಾಟಿತು. ಯಾಕೆಂದರೆ ಹಸು ಅವರಿಗೆ ಬಹಳ ಉಪಯೋಗಕರವಾಗಿತ್ತು. ಬಹುಶಃ ಬ್ರಾಹ್ಮಣನನ್ನು, ಗೋಹಂತಕರೆಂದು ದ್ವೇಷಿಸುವುದಕ್ಕೆ ಪ್ರಾರಂಭವಾಯಿತು. ಹೇಗೆಂದರೆ, ಗೃಹಸ್ಥನೊಬ್ಬ ಅತಿಥಿಯನ್ನು, ಗೋಘ್ನ, ಗೋಹಂತಕ ಎಂದು ದ್ವೇಷಿಸುತ್ತಿದ್ದ ಹಾಗೆ. ಯಾಕೆಂದರೆ ಅತಿಥಿಗಳು ಬಂದಾಗಲೆಲ್ಲ ಅವರ ಗೌರವಾರ್ಥ ಗೋವನ್ನು ಕೊಲ್ಲಲೇಬೇಕಾಗಿತ್ತು. ಆದ್ದರಿಂದ ಯಜ್ಞವನ್ನು ಒಂದು ಪೂಜಾ ವಿಧಾನವೆಂದೂ ಮತ್ತು ಗೋಹತ್ಯೆಯನ್ನು ಕೈಬಿಡದೆ, ಬ್ರಾಹ್ಮಣರಿಗೆ, ಬೌದ್ಧರ ಎದುರು ತಮ್ಮ ಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳುವ ಬೇರೆ ಅವಕಾಶವೇ ಇರಲಿಲ್ಲ.

ಬೌದ್ಧ ಭಿಕ್ಷುಗಳು ಅನುಭವಿಸುತ್ತಿದ್ದ ಪ್ರತಿಷ್ಠೆಯನ್ನು ಅವರಿಂದ ಕಿತ್ತುಕೊಳ್ಳುವ ಉದ್ದೇಶ ಹೊಂದಿದ್ದ ಬ್ರಾಹ್ಮಣರಿಗೆ, ಗೋಮಾಂಸ ತ್ಯಾಜ್ಯ ಮಾಡುವುದು ಮತ್ತು ಸಸ್ಯಾಹಾರಕ್ಕೆ ಒಗ್ಗಿಕೊಳ್ಳುವುದು ಬಿಟ್ಟು ಬೇರೆ

ಮಾರ್ಗವಿರಲಿಲ್ಲ. ಆದರೆ ಬ್ರಾಹ್ಮಣರು ಯಾಕೆ ಸಸ್ಯಾಹಾರಿಗಳಾದರು? ಇದಕ್ಕೆ ಉತ್ತರ ಏನೆಂದರೆ, ಸಸ್ಯಾಹಾರಿಗಳಾಗದೆಯೆ, ಬ್ರಾಹ್ಮಣರು, ಬೌದ್ಧರಿಗೆ ತಾವು ಬಿಟ್ಟುಕೊಟ್ಟಿದ್ದ ಸ್ಥಾನವನ್ನು ಮರಳಿ ಪಡೆಯುವುದು ಸಾಧ್ಯವಿರಲಿಲ್ಲ. ಈ ಸಂಬಂಧ ಬೌದ್ಧರಿಗೆ ಹೋಲಿಸಿದರೆ, ಬ್ರಾಹ್ಮಣರಿಗೆ ಜನ ಸಮುದಾಯದ ದೃಷ್ಟಿಯಿಂದ ಒಂದು ಕೊರೆಯಿತ್ತು. ಅದೆಂದರೆ ಪಶುಬಲಿ, ಇದು ಬ್ರಾಹ್ಮಣ ಮತದ ತಿರುಳೇ ಆಗಿತ್ತು. ಆದರೆ ಬೌದ್ಧ ಮತ ಇದಕ್ಕೆ ಸಂಪೂರ್ಣವಾಗಿ ವಿರೋಧವಾಗಿತ್ತು. ಹಸು ಮತ್ತು ಎತ್ತುಗಳೂ ಸೇರಿ ಪಶುಬಲಿಯನ್ನು ಒಳಗೊಂಡಿದ್ದ ಬ್ರಾಹ್ಮಣ ಮತಕ್ಕೆ ಕೃಷಿಕರೇ ಇದ್ದ ಸಮಾಜದಲ್ಲಿ ವಿರೋಧ ಮತ್ತು ಬೌದ್ಧ ಮತದ ಬಗ್ಗೆ ಗೌರವ ಇತ್ತೆನ್ನುವುದು ಸಹಜ. ತಾವು ಕಳೆದುಕೊಂಡಿದ್ದ ಸ್ಥಾನವನ್ನು ವಾಪಸ್ಸು ಪಡೆಯಲು ಬ್ರಾಹ್ಮಣರು ಏನು ಮಾಡಬಹುದಿತ್ತು? ಬೌದ್ಧ ಭಿಕ್ಷುಗಳಿಗಿಂತ ಇನ್ನೂ ಒಂದು ಹೆಜ್ಜೆ ಮುಂದೆ ಹೋಗುವುದು – ಅಂದರೆ ಮಾಂಸ ತಿನ್ನುವುದನ್ನು ಬಿಡುವುದಷ್ಟೇ ಅಲ್ಲ, ಶಾಖಾಹಾರಿಗಳಾಗುವುದು. ಅವರು ಮಾಡಿದ್ದೂ ಅದನ್ನೇ. ಶಾಖಾಹಾರಿಗಳಾಗುವುದರಲ್ಲಿ ಬ್ರಾಹ್ಮಣರಿಗೆ ಇದೇ ಉದ್ದೇಶವಿತ್ತು ಎನ್ನುವುದನ್ನು ಹಲವು ರೀತಿಯಲ್ಲಿ ಸಮರ್ಥಿಸಬಹುದು.

ಪ್ರಾಣಿ ಬಲಿ ಕೊಡುವುದು ಕೆಟ್ಟದ್ದು ಎಂದು ಬ್ರಾಹ್ಮಣರಿಗೆ ಮನವರಿಕೆ ಆಗಿದ್ದಿದ್ದರೆ ಅವರು ಪ್ರಾಣಿಗಳನ್ನು ಕೊಲ್ಲುವುದನ್ನು ನಿಲ್ಲಿಸಬಹುದಾಗಿತ್ತು. ಅವರಿಗೆ ಶಾಖಾಹಾರಿಗಳಾಗಬೇಕಾದ ಆವಶ್ಯಕತೆ ಇರುತ್ತಿರಲಿಲ್ಲ. ಅವರು ಶಾಖಾಹಾರಿಗಳಾದರು, ಎನ್ನುವುದರಿಂದ ಅವರ ಉದ್ದೇಶ ದೂರಗಾಮಿಯಾಗಿತ್ತು ಎನ್ನುವುದು ಸ್ಪಷ್ಟ. ಎರಡನೆಯದಾಗಿ ಅವರು ಶಾಖಾಹಾರಿಗಳಾಗಬೇಕಾಗಿರಲಿಲ್ಲ. ಯಾಕೆಂದರೆ ಬೌದ್ಧ ಭಿಕ್ಷುಗಳು ಸಸ್ಯಾಹಾರಿಗಳಾಗಿರಲಿಲ್ಲ. ಅಹಿಂಸೆ ಮತ್ತು ಬೌದ್ಧ ಮತ ಎರಡರ ಸಂಬಂಧ ನಿಕಟ ಮತ್ತು ಅತ್ಯವಶ್ಯಕ ಸಂಬಂಧವಾಗಿತ್ತು ಎಂದು ಭಾವಿಸಿರುವವರಿಗೆ ಈ ಹೇಳಿಕೆ ಆಶ್ಚರ್ಯ ಉಂಟುಮಾಡಬಹುದು. ಬೌದ್ಧ ಭಿಕ್ಷುಗಳು ಮಾಂಸಾಹಾರವನ್ನು ಮುಟ್ಟುತ್ತಿರಲಿಲ್ಲವೆಂದು ಸಾಮಾನ್ಯವಾಗಿ ನಂಬಲಾಗಿದೆ. ಇದೊಂದು ತಪ್ಪು. ಬೌದ್ಧ ಭಿಕ್ಷುಗಳಿಗೆ, ಶುದ್ಧವೆಂದು ಪರಿಗಣಿಸಲಾದ ಮೂರು ಬಗೆಯ ಮಾಂಸಭಕ್ಷಣೆಗೆ ಅವಕಾಶವಿತ್ತು. ಆನಂತರ ಅದನ್ನು ಐದು ಬಗೆಯ ಮಾಂಸಕ್ಕೆ ವಿಸ್ತರಿಸಲಾಯಿತು. ಚೀನಾ ಪ್ರವಾಸಿ ಹ್ಯೂ-ಯೆನ್-ಸತ್ಸಾಂಗ್‌ಗೆ ಇದು ತಿಳಿದಿತ್ತು. ಅವನು ಶುದ್ಧ ಮಾಂಸವನ್ನು ಸಾನ್‌ಚಿಂಗ್ ಎಂದು ಕರೆದನು. ಮಿ. ಥಾಮಸ್ ವಾಲ್ಟರ್ಸ್ ಭಿಕ್ಷುಗಳಲ್ಲಿ ಈ ಸಂಪ್ರದಾಯ ಬೆಳೆದು ಬಂದದ್ದನ್ನು ವಿವರಿಸುತ್ತಾನೆ. ಅವನು ಹೇಳುವ ಕತೆ ಇದು.[೧]

"ಬುದ್ಧನ ಕಾಲದಲ್ಲಿ ವೈಶಾಲಿಯಲ್ಲಿ, ಬೌದ್ಧ ಮತಕ್ಕೆ ಸೇರಿದ್ದ ಸಿಹ ಎಂಬ ಒಬ್ಬ ಶ್ರೀಮಂತ ಸರದಾರನಿದ್ದನು. ಆತ ಸಂಘದ ಸದಸ್ಯರುಗಳ ಉದಾರ ಬೆಂಬಲಿಗನಾಗಿ, ಅವರಿಗೆ ಸದಾ ಮಾಂಸವನ್ನು ಒದಗಿಸುತ್ತಿದ್ದನು. ಈ ರೀತಿ ತಮಗೆ ವಿಶೇಷವಾಗಿ ನೀಡಲಾದ ಇಂತಹ ಆಹಾರವನ್ನು ಭಿಕ್ಷುಗಳು ಸೇವಿಸುತ್ತಿದ್ದಾರೆ ಎಂಬ ಅಂಶ ಬಯಲಾದಾಗ, ತೀರ್ಥಂಕರರು, ಈ ವಿಷಯದ ಬಗ್ಗೆ ಕೋಪಗೊಂಡರು. ಆಗ ಮಿತಾಹಾರಿಗಳಾದ (ಸಂಘದ) ಬುದ್ಧನನ್ನು ಕಂಡು, ತಾವು ಸಂನ್ಯಾಸಿಗಳು ಮಾಂಸಾಹಾರ ತಿನ್ನುತ್ತಿರುವುದರ ಸಂದರ್ಭ ವಿವರಿಸಿದರು. ಆ ಸಮಯದಲ್ಲಿ ಬುದ್ಧನು ಎಲ್ಲ ಸದಸ್ಯರನ್ನೂ ಕೂಡಿಸಿದನು. ಅವರೆಲ್ಲ ಸಭೆ ಸೇರಿದಾಗ, ಬುದ್ಧನು, ಅವರಿಗೆ ಈ ನಿಯಮಗಳನ್ನು ತಿಳಿಸಿದ. ಸದಸ್ಯರುಗಳ ಆಹಾರಕ್ಕಾಗಿಯೇ ಯಾರಾದರೂ ಪ್ರಾಣಿಯನ್ನು ಕೊಂದು, ಅದರಿಂದ ಆಹಾರ ತಯಾರಿಸಿದ್ದಲ್ಲಿ ಅಥವಾ ತಮ್ಮ ಆಹಾರಕ್ಕಾಗಿ ಪ್ರಾಣಿಯನ್ನು

೧. ಹ್ಯೂ-ಯೆನ್-ತ್ಸಾಂಗ್, ಸಂಪುಟ I, ಪುಟ ೫೫

ವಧಿಸಲಾಯಿತು ಎಂದು ಯಾವುದೇ ರೀತಿಯಲ್ಲಿ ತಿಳಿದುಬಂದರೆ, ಅಂತಹ ಮಾಂಸವನ್ನು ತಿನ್ನಬಾರದು. ಆದರೆ ಯಾವಾಗ, ಅವರಿಗಾಗಿ ಪ್ರಾಣಿಗಳ ವಧೆಯಾಗಿಲ್ಲವೋ, ಅಥವಾ ಆ ಬಗ್ಗೆ ಹಾಗೆಂದು ತಿಳಿದುಬಂದಿಲ್ಲವೋ, ಅಥವಾ ಆ ಬಗ್ಗೆ ಯಾವುದೇ ತರಹದ ಅನುಮಾನವಿಲ್ಲವೋ ಅಂತಹ ಶುದ್ಧ ಮಾಂಸವನ್ನು ತಿನ್ನಬಹುದೆಂದು ಹೇಳಿದನು. ಪಾಲಿ ಮತ್ತು ಸೂಫೆನ್ ವಿನಯದ ಪ್ರಕಾರ ಬುದ್ಧನಿಗೆ ಮತ್ತೆ ಕೆಲವು ಸದಸ್ಯರಿಗೆ ಸಹ ಒಂದು ದಿನ ಬೆಳಗಿನ ಉಪಾಹಾರ ನೀಡಿದ ನಂತರ ಈ ಉಪದೇಶ ಕೊಡಲಾಯಿತು. ಈ ಉಪಾಹಾರಕ್ಕಾಗಿ ಒಂದು ಬೃಹದಾಕಾರದ ಎತ್ತಿನ ಮಾಂಸವನ್ನು ತರಲಾಗಿತ್ತು. ಆಗ ನಿರ್ಗ್ರಂಥರು ಭಿಕ್ಷುಗಳನ್ನು ಅವಹೇಳನ ಮಾಡಿದ ಸಂದರ್ಭದಲ್ಲಿ, ಬುದ್ಧ ಮೇಲೆ ಹೇಳಿದಂತೆ ಸೂತ್ರೀಕರಿಸಿದ. ಇದರ ಪ್ರಕಾರ ಮೀನು, ಮಾಂಸ, ಮೂರು ಸಂದರ್ಭಗಳಲ್ಲಿ ಶುದ್ಧವೆಂದು ಸಾರಿದನು. ಹೀಗೆ ಭಿಕ್ಷುಗಳಿಗೆ ನೀಡುತ್ತಿದ್ದ ಮಾಂಸವನ್ನು "ಮೂರು ಶುದ್ಧ (ಬಗೆಯವು)" ಅಥವಾ "ಮೂರು ಶುದ್ಧ ಬಗೆಯ ಮಾಂಸ" ಎಂದು ಕರೆಯಲಾಗುತ್ತಿತ್ತು. ಇಲ್ಲಿ ಮೂರು, "ಕಾಣದ, ಕೇಳದ, ಅನುಮಾನಕ್ಕೆಡೆಯಿಲ್ಲದ" ಎಂಬುದಕ್ಕೆ ಸೂಚ್ಯವಾಗಿ ನಿಲ್ಲುತ್ತದೆ. ಕೆಲವೊಮ್ಮೆ ಚೀನೀ ಅನುವಾದಗಳಲ್ಲಿ ಹೇಳಿರುವಂತೆ, "ನನಗಾಗಿ, ನನ್ನಿಂದ ನೋಡಿಲ್ಲದ, ಕೇಳಿಲ್ಲದ, ಅನುಮಾನಕ್ಕಾಸ್ಪದವಿಲ್ಲದ" ಎಂದೂ ಅರ್ಥವಾಗುತ್ತದೆ. ಇದಲ್ಲದೆ ಇನ್ನೂ ಎರಡು ಬಗೆಯ ಮಾಂಸವನ್ನು ಸದಸ್ಯರುಗಳು ಸೇವಿಸುವುದು ವಿಧಿಬದ್ಧ ಎಂದು ಹೇಳಲಾಯಿತು. ಅಂದರೆ, ಯಾವ ಪ್ರಾಣಿಗಳು ಸಹಜವಾಗಿ ಸತ್ತಿರುತ್ತವೋ ಅವುಗಳ ಮಾಂಸ ಮತ್ತು ಬೇಟೆಗಾರ ಅಥವಾ ಕಾಡುಪ್ರಾಣಿಗಳಿಂದ ಕೊಲ್ಲಲ್ಪಟ್ಟ ಪ್ರಾಣಿಯ ಮಾಂಸ. ಇದರ ಪರಿಣಾಮವಾಗಿ, ಬೌದ್ಧ ಧರ್ಮಕ್ಕೆ ಸೇರಿದವನು ತಿನ್ನಬಹುದಾದ ಐದು ಬಗೆಯ ಅಥವಾ ಐದು ಜಾತಿಯ ಪ್ರಾಣಿ ಮಾಂಸಗಳಿದ್ದುವು. ಇದರಿಂದ ಮೂರು ಬಗೆಯ 'ಕಾಣದ, ಕೇಳದ, ಅನುಮಾನಕ್ಕೆಡೆಯಿಲ್ಲದ' ಗುಂಪು ಒಂದಾಯಿತು. ಈ ಮೂರು ಅಂಶಗಳನ್ನು ಸೇರಿಸಿಕೊಂಡು, "ಸಹಜ ಸಾವು" ಮತ್ತು "ಬೇಟೆಯಲ್ಲಿ ಕೊಂದದ್ದು" ಇನ್ನೊಂದು ಗುಂಪಾಗಿ, ಸಾನ್‌ಚಿಂಗ್ ಎಂಬ ಹೆಸರು ಪಡೆಯಿತು".

ಬೌದ್ಧ ಭಿಕ್ಷುಗಳು ಮಾಂಸಾಹಾರ ತಿನ್ನುತ್ತಿದ್ದುದರಿಂದ, ಬ್ರಾಹ್ಮಣರು ಬಿಡಬೇಕಾದ ಕಾರಣವಿರಲಿಲ್ಲ. ಹಾಗಿದ್ದರೆ, ಬ್ರಾಹ್ಮಣರು ಮಾಂಸಾಹಾರ ತ್ಯಜಿಸಿ, ಸಸ್ಯಾಹಾರಿಗಳಾದದ್ದು ಏಕೆ? ಇದಕ್ಕೆ ಕಾರಣ, ಸಾರ್ವಜನಿಕರ ಎದುರು, ಬ್ರಾಹ್ಮಣರು, ಬೌದ್ಧ ಭಿಕ್ಷುಗಳ ಸಮಾನಸ್ಕಂಧರು ಎನಿಸಿಕೊಳ್ಳಲು ಸಿದ್ಧರಿರಲಿಲ್ಲ.

ಯಜ್ಞವನ್ನು ಕೈಬಿಟ್ಟು, ಗೋಹತ್ಯೆಯನ್ನು ನಿಲ್ಲಿಸಿಬಿಡುವುದು, ಸೀಮಿತವಾದ ಪರಿಣಾಮ ಉಂಟುಮಾಡುತ್ತಿತ್ತು. ಇದರಿಂದ ಬ್ರಾಹ್ಮಣನು ಕೂಡ, ಭಿಕ್ಷುಗಳ ಮಟ್ಟವನ್ನಷ್ಟೇ ತಲುಬಹುದಾಗಿತ್ತು. ಮಾಂಸಾಹಾರ ಭಕ್ಷಣೆ ಬೌದ್ಧ ಭಿಕ್ಷುಗಳ ಸೂತ್ರವನ್ನೇ ಅನುಸರಿಸಿದ್ದರೂ ಅಷ್ಟೇ ಆಗುತ್ತಿತ್ತು. ಇದರಿಂದ ಬ್ರಾಹ್ಮಣರು, ತಾವು ಬೌದ್ಧ ಭಿಕ್ಷುಗಳನ್ನು ಮೀರಿಸಬೇಕೆಂದು ಇಟ್ಟುಕೊಂಡಿದ್ದ ಮಹತ್ವಾಕಾಂಕ್ಷೆಯನ್ನು ತಲುಪಲು ಸಾಧ್ಯವಾಗುತ್ತಿರಲಿಲ್ಲ. ಬೌದ್ಧಮತಾವಲಂಬಿಗಳನ್ನು, ಅವರು ಗೌರವ ಮತ್ತು ಪೂಜ್ಯ ಸ್ಥಾನದಿಂದ ಪದಚ್ಯುತಿಗೊಳಿಸಬೇಕೆಂದು ಮಾಡಿದ್ದರು. ಜನಸಾಮಾನ್ಯರಲ್ಲಿ ಬೌದ್ಧರು ಈ ಮಹೋನ್ನತ ಸ್ಥಾನವನ್ನು, ಯಜ್ಞಕ್ಕಾಗಿ ಗೋಹತ್ಯೆ ಮಾಡುವುದನ್ನು ವಿರೋಧಿಸುವುದರ ಮೂಲಕ ಪಡೆದುಕೊಂಡಿದ್ದರು. ಆದರೆ ಬ್ರಾಹ್ಮಣರು ತಮ್ಮ ಉದ್ದೇಶವನ್ನು ಈಡೇರಿಸಿಕೊಳ್ಳಲು ವಿನಾಶಕಾರೀ ದಾಳಿಕಾರನ ತಂತ್ರವನ್ನು ಹೂಡಬೇಕಾಗಿತ್ತು. ಈ ತಂತ್ರ ಅತಿಯನ್ನು ಅತಿಯಿಂದಲೆ ನಿರೋಧಿಸುವುದಾಗಿತ್ತು. ಎಡಪಂಥೀಯರನ್ನು ತುಳಿದು ಎಲ್ಲ ಬಲಪಂಥೀಯರೂ ಇದೇ ತಂತ್ರ ಬಳಸುತ್ತಾರೆ. ಬೌದ್ಧರನ್ನು ಹಿಮ್ಮೆಟ್ಟಿಸುವುದೆಂದರೆ, ಅವರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ, ಸಸ್ಯಾಹಾರಿಗಳಾಗುವುದೇ ಆಗಿತ್ತು.

ಬ್ರಾಹ್ಮಣರು ಗೋಪೂಜೆ ಮಾಡಲು ಪ್ರಾರಂಭಿಸಿ ಸಸ್ಯಾಹಾರಿಗಳಾಗಿ, ಗೋಮಾಂಸ ತ್ಯಜಿಸಿದ್ದು, ಬೌದ್ಧರನ್ನು ಸೋಲಿಸಲಿಕ್ಕೆ. ಇನ್ನೊಂದು ನಂಬಲರ್ಹವಾದ ಕಾರಣವಿದೆ. ಅದು ಗೋವಧೆ ಒಂದು ಮಹತ್ಪಾಪವೆಂದು ಗಣಿಸಲಾದ ದಿನ. ಗೋಹತ್ಯೆಯನ್ನು ಅಪರಾಧವೆಂದು ಅಶೋಕ ವಿಧಿಸಲಿಲ್ಲ. ಅನೇಕ ಜನ, ಆತ ಗೋಹತ್ಯೆ ನಿಷೇಧಿಸುತ್ತಾನೆ ಎಂಬ ನಿರೀಕ್ಷೆ ಇಟ್ಟುಕೊಂಡಿದ್ದರು. ಪ್ರೊ. ವಿನ್ಸೆಂಟ್ ಸ್ಮಿತ್ ಇದನ್ನು ಆಶ್ಚರ್ಯಕರ ಎಂದು ಭಾವಿಸುತ್ತಾನೆ. ಆದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ.

ಬೌದ್ಧಮತ ಪ್ರಾಣಿಬಲಿ ಕೊಡುವುದನ್ನು ಸಾಮಾನ್ಯವಾಗಿ ವಿರೋಧಿಸಿತು. ಆ ಮತಕ್ಕೆ ಹಸುವಿನ ಬಗ್ಗೆ ಮಮತೆ ಇರಲಿಲ್ಲ. ಆದ್ದರಿಂದ ಅಶೋಕ, ಹಸುವಿನ ರಕ್ಷಣೆಗಾಗಿಯೇ ಕಾನೂನೊಂದನ್ನು ಮಾಡುವ ವಿಶೇಷ ಕಾರಣವೇನಿರಲಿಲ್ಲ. ಇನ್ನೂ ಹೆಚ್ಚಿನ ಆಶ್ಚರ್ಯಕರ ಸಂಗತಿ ಎಂದರೆ, ಗೋಹತ್ಯೆಯನ್ನು ಮಹಾಪಾತಕವೆಂದು ಮಾಡಿದವರು, ಹಿಂದೂಮತದ ವೀರಾಗ್ರಣಿಗಳಾದ ಗುಪ್ತರು (ಹಿಂದೂ ಮತ ಮತ್ತು ಗೋ–ಹತ್ಯೆಯನ್ನು ಯಜ್ಞಗಳಿಗಾಗಿ ಮಾಡಬಹುದಾಗಿ ಅನುಮತಿಯನ್ನು ನೀಡಿತ್ತು). ಮಿ. ಡಿ. ಆರ್. ಭಂಡಾರ್‌ಕರ್ ಎತ್ತಿತೋರಿಸಿದಂತೆ;[೧]

"ಕ್ರಿ.ಶ. ೫ನೇ ಶತಮಾನದ ಪ್ರಾರಂಭದಲ್ಲಿ ಗೋಹತ್ಯೆಯನ್ನು ಅತ್ಯಂತ ನೀಚ ಅಪರಾಧ, ಬ್ರಾಹ್ಮಣ ಹತ್ಯೆಯಷ್ಟೇ ನೀಚ ಅಪರಾಧವೆಂದು ಪರಿಗಣಿಸಲಾಗುತ್ತಿತ್ತೆನ್ನುವುದಕ್ಕೆ ಶಾಸನಗಳ ನಿರ್ವಿವಾದ ಸಾಕ್ಷಿಗಳಿವೆ. ಗುಪ್ತ ಸಾಮ್ರಾಜ್ಯಕ್ಕೆ ಸೇರಿದ ಸ್ಕಂದಗುಪ್ತನ ಆಡಳಿತಕ್ಕೆ ಸಂಬಂಧ ಹೇಳಿಕೊಳ್ಳುವ ಕ್ರಿ.ಶ. ೪೬೫ರ ತಾಮ್ರ ಶಾಸನವೊಂದಿದೆ. ಅದು ದಾನ ಕುರಿತ ಶಾಸನ. ಅದರ ಕೊನೆಯಲ್ಲಿ ಹೀಗೆ ಹೇಳಿದೆ – 'ಯಾರು ಈ ದಾನದ ವಿರುದ್ಧ ಹೋಗುತ್ತಾರೆಯೋ, ಆತ ಗೋಹತ್ಯೆ ಮಾಡಿದ, ಆಧ್ಯಾತ್ಮಿಕ ಗುರುವನ್ನು ಕೊಂದ ಅಥವಾ ಬ್ರಾಹ್ಮಣನನ್ನು ಕೊಂದ ಅಪರಾಧಕ್ಕೆ ಪಕ್ಕಾಗುತ್ತಾನೆ' ಈಗ ತಾನೆ ಹೇಳಲಾದ ಸ್ಕಂದಗುಪ್ತನ ತಾತನಾದ ಎರಡನೇ ಚಂದ್ರಗುಪ್ತನು ಹಾಕಿದ ಇದಕ್ಕಿಂತ ಹಳೆಯ ಶಾಸನದಲ್ಲಿ ಗೋಹತ್ಯೆ, ಬ್ರಾಹ್ಮಣ ಹತ್ಯೆ – ಎರಡನ್ನೂ ಸಮೀಕರಿಸಲಾಗಿದೆ. ಅದರಲ್ಲಿ ಗುಪ್ತರ ಕಾಲದ ೯೩ನೇ ವರ್ಷವನ್ನು ಸೂಚಿಸಲಾಗಿದೆ. ಅದು ಕ್ರಿ.ಶ. ೪೧೨ಕ್ಕೆ ಸಮ. ಮಧ್ಯಭಾರತದ ಬೌದ್ಧರ ಸಾಂಚಿಸ್ತೂಪದ ಸುತ್ತಲೂ ಇರುವ ಕಂಬಿಗಳ ಮೇಲೆ ಇದನ್ನು ಕೆತ್ತಲಾಗಿದೆ. ಚಂದ್ರಗುಪ್ತನ ಅಧಿಕಾರಿಯೊಬ್ಬನು ಮಾಡಿದ ದಾನವನ್ನು ಹೇಳುವ ಈ ಶಾಸನ ಹೀಗೆ ಮುಕ್ತಾಯಗೊಳ್ಳುತ್ತದೆ – ".....ಈ ವ್ಯವಸ್ಥೆಯ ವಿರುದ್ಧ ಯಾರೇ ಕೈ ಹಾಕಲೀ ಆತ ಗೋಹತ್ಯೆ ಮಾಡಿದ, ಅಥವಾ ಬ್ರಾಹ್ಮಣ ಹತ್ಯೆ ಮಾಡಿದ ಅಪರಾಧಕ್ಕೆ ಮತ್ತು ಐದು ಬಗೆಯ ಅನಾಂತರ್ಯಗಳ ಅಪರಾಧಕ್ಕೆ ಪಕ್ಕಾಗುತ್ತಾನೆ." ದಾನ ಮಾಡಿದ ವ್ಯಕ್ತಿ, ಆತ ಬ್ರಾಹ್ಮಣವಾದಿಯೇ ಆಗಲೀ, ಬೌದ್ಧವಾದಿಯೇ ಆಗಲೀ, ತಾನು ಮಾಡಿದ ದಾನವನ್ನು ಹಿಂತೆಗೆದುಕೊಳ್ಳದಿರಲು ಈ ಬಗೆಯಲ್ಲಿ ಎಚ್ಚರಿಸುವುದೇ ಇದರ ಉದ್ದೇಶ ಎನಿಸುತ್ತದೆ, ಬೌದ್ಧ ಮತದ ತತ್ವದ ಪ್ರಕಾರವಾಗಿ, ಐದು ಅನಾಂತರ್ಯಗಳು ಐದು ಮಹಾಪಾತಕಗಳೇ ಆಗಿವೆ. ಅವುಗಳೆಂದರೆ, ಮಾತೃಹತ್ಯೆ, ಪಿತೃ ಹತ್ಯೆ, ಅರ್ಹತನ ಹತ್ಯೆ, ಬುದ್ಧನೊಬ್ಬನ ರಕ್ತಪಾತ ಮಾಡಿಸುವುದು ಮತ್ತು ಅರ್ಚಕವರ್ಗವನ್ನು ಒಡೆಯುವುದು. ಆದರೆ ಬ್ರಾಹ್ಮಣರಲ್ಲಿ ಮಹಾಪಾತಕಗಳು ಎರಡೇ ಎರಡು; ಗೋಹತ್ಯೆ ಮತ್ತು ಬ್ರಾಹ್ಮಣ ಹತ್ಯೆ. ಇದರಲ್ಲಿ ಎರಡನೆಯದು ಮಹಾಪಾತಕವೇ, ಯಾಕೆಂದರೆ, ಎಲ್ಲ ಸ್ಮೃತಿಗಳಲ್ಲಿ ಅದನ್ನು ಹಾಗೇ ಹೇಳಿದೆ. ಆದರೆ ಮೊದಲನೆಯದನ್ನು ಆಪಸ್ತಂಬ, ಮನು, ಯಾಜ್ಞವಲ್ಕ್ಯ ಮತ್ತು ಇತರರು ಉಪಪಾತಕವೆಂದಷ್ಟೇ ಕರೆದಿದ್ದಾರೆ. ಆದರೆ ಇಲ್ಲಿ ಅದನ್ನು ಬ್ರಹ್ಮಹತ್ಯೆಯ ಜತೆ ಸೇರಿಸಿ,

---

೧. *Some Aspects of Indian Culture,* (1940) ಪು. 78–79

ಬೌದ್ಧರ ಅನಂತರ್ಯಗಳ ಸಮ ಎಂದು ಮಾಡಿರುವುದನ್ನು ನೋಡಿದರೆ, ಐದನೇ ಶತಮಾನದಲ್ಲಿ ಅದನ್ನು ಮಹಾಪಾತಕಗಳ ಮಟ್ಟಕ್ಕೆ ಎತ್ತಿದರು ಎಂಬ ಅಂಶ ತಿಳಿಯುತ್ತದೆ. ಇದರಿಂದ ಗೋಹತ್ಯೆಯನ್ನು ಒಂದು ಶತಮಾನ ಕಾಲ, ಅಂದರೆ ಕ್ರಿ.ಶ. ೪ನೇ ಶತಮಾನದ ಪ್ರಾರಂಭದಲ್ಲಿ ಮಹಾಪಾತಕ ಎಂದು ಕಂಡುಬರುತ್ತದೆ."

ಇಲ್ಲಿ ಮುಖ್ಯ ಪ್ರಶ್ನೆ : ಮನುವಿನ ಸೂತ್ರಗಳಿಗೆ ವಿರೋಧವಾಗಿ, ಒಬ್ಬ ಹಿಂದೂ ರಾಜ ಯಾಕೆ ಗೋಹತ್ಯೆಯನ್ನು ವಿರುದ್ಧ ಕಾನೂನು ಹೊರಡಿಸಿದ ಎನ್ನುವುದು. ಉತ್ತರ ಎಂದರೆ, ಬ್ರಾಹ್ಮಣರು ಬೌದ್ಧ ಭಿಕ್ಷುಗಳ ಉನ್ನತ ಸ್ಥಾನವನ್ನು ಪಡೆಯಲಿಕ್ಕೆ, ವೇದ ಮತದಲ್ಲಿ ಯಾವುದು ಒಂದು ಅವಶ್ಯಕ ಅಂಶವೆನಿಸಿತ್ತೊ ಅದನ್ನು ಅಮಾನತ್ತಿನಲ್ಲಿಡಬೇಕಾಯಿತು, ಇಲ್ಲವೆ ತೆಗೆದುಹಾಕಬೇಕಾಯಿತು. ಈ ವಿಶ್ಲೇಷಣೆ ಸರಿ ಎನಿಸಿದರೆ, ಅದರ ಅರ್ಥ, ಬ್ರಾಹ್ಮಣ ಮತ ಮತ್ತು ಬೌದ್ಧ ಮತದ ನಡುವಣ ಹೋರಾಟದಲ್ಲಿ ಗೋಪೂಜೆಯು ಬಳಕೆಗೆ ಬಂತು. ಅದು ಬ್ರಾಹ್ಮಣರು ತಾವು ಕಳೆದುಕೊಂಡ ಸ್ಥಾನವನ್ನು ಮರಳಿ ಪಡೆಯಲು ಒಂದು ಸಾಧನವಾಗಿತ್ತು.

♦

## ಅಧ್ಯಾಯ ೧೪

# ಗೋಮಾಂಸ ಭಕ್ಷಣೆ, ಜಾತಿಭ್ರಷ್ಟರನ್ನು ಅಸ್ಪೃಶ್ಯರನ್ನಾಗಿ ಯಾಕೆ ಮಾಡಬೇಕು?

ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಗೋಮಾಂಸ ಭಕ್ಷಣೆ ನಿಲ್ಲಿಸಿದ್ದು ಮತ್ತು ಜಾತಿಭ್ರಷ್ಟರು ಅದರ ತಿನ್ನುವಿಕೆಯನ್ನು ಮುಂದುವರಿಸಿದ್ದು, ಹೊಸದೊಂದು ಸನ್ನಿವೇಶ ನಿರ್ಮಾಣ ಮಾಡಿತು – ಇಲ್ಲಿ ವ್ಯತ್ಯಾಸ ಕಂಡುಬರುವುದು, ಒಂದು ಗುಂಪು ಗೋಮಾಂಸ ಭಕ್ಷಣೆ ನಿಲ್ಲಿಸಿದ್ದರೆ, ಇನ್ನೊಂದು ಅದನ್ನು ಮುಂದುವರಿಸಿದುದು. ಇದು ಕಣ್ಣಿಗೆ ಹೊಡೆಯುವ ವ್ಯತ್ಯಾಸ. ಇದು ಎಲ್ಲರಿಗೂ ಕಂಡುಬರುವಂತದ್ದು. ಹಿಂದೆಂದೂ ಇಲ್ಲದಂತೆ, ಇದು ಸಮಾಜವನ್ನು ಒಡೆಯಿತು. ಇಷ್ಟಾದರೂ, ಇಂತಹ ವ್ಯತ್ಯಾಸದಿಂದ ಅಸ್ಪೃಶ್ಯತೆಯಂತಹ ತೀವ್ರ ವಿಘಟನೆ ಸಮಾಜದಲ್ಲಿ ಆಗಬೇಕಾಗಿರಲಿಲ್ಲ. ಅದು ಕೇವಲ ಸಾಮಾಜಿಕ ವ್ಯತ್ಯಾಸವಾಗಬಹುದಿತ್ತು. ಸಮಾಜದ ಬೇರೆ ಬೇರೆ ಭಾಗಗಳು, ವಿಭಿನ್ನ ಆಹಾರ ಪದ್ಧತಿಯನ್ನು ಅನುಸರಿಸುವ ಅನೇಕ ಸಂದರ್ಭಗಳುಂಟು. ಒಬ್ಬರು ಇಷ್ಟಪಟ್ಟದ್ದನ್ನು ಇನ್ನೊಬ್ಬರು ಇಷ್ಟಪಡದೇ ಇರಬಹುದು. ಆದರೆ ಅದು ಅವರಿಬ್ಬರ ಮಧ್ಯೆ ನಿಷೇಧ ಉಂಟುಮಾಡುವುದಿಲ್ಲ.

ಭಾರತದಲ್ಲಿ ಸ್ಥಾನಿಕ ಸಮುದಾಯಕ್ಕೂ ಜಾತಿಭ್ರಷ್ಟರಿಗೂ ಗೋಮಾಂಸ ಭಕ್ಷಣೆ ವಿಷಯದಲ್ಲಿ ನಿಷೇಧ ಏಕೆ ಉಂಟಾಯಿತು ಎಂಬುದಕ್ಕೆ ವಿಶೇಷ ಕಾರಣವಿರಬೇಕು. ಅದೇನು? ಇದಕ್ಕೆ ಉತ್ತರವೆಂದರೆ, ಗೋಮಾಂಸ ಭಕ್ಷಣೆ ಜಾತ್ಯತೀತ (ಸೆಕ್ಯೂಲರ್) ವಿಷಯವಾಗಿ ಉಳಿದಿದ್ದಿದ್ದರೆ, ವೈಯಕ್ತಿಕ ಅಭಿರುಚಿಯನ್ನು ಅವಲಂಬಿಸಿದ್ದಿದ್ದರೆ, ಈ ಎರಡೂ ಬಣಗಳ ಮಧ್ಯೆ ಯುದ್ಧ ಉಂಟಾಗುತ್ತಿರಲಿಲ್ಲ. ದುರದೃಷ್ಟವೆಂದರೆ, ಗೋಮಾಂಸ ಭಕ್ಷಣೆ ಲೌಕಿಕ ವಿಷಯವಾಗಿ ಉಳಿಯುವುದರ ಬದಲು, ಧಾರ್ಮಿಕ ವಿಷಯವಾಗಿ ಮಾರ್ಪಟ್ಟಿತು. ಇದಕ್ಕೆ ಕಾರಣ ಬ್ರಾಹ್ಮಣರು ಹಸುವನ್ನು ಪವಿತ್ರ ಪ್ರಾಣಿಯನ್ನಾಗಿ ಮಾಡಿದುದು. ಜಾತಿಭ್ರಷ್ಟರು ಧರ್ಮ ವಿರೋಧಿ ಕೆಲಸದಲ್ಲಿ ತೊಡಗಿದುದರಿಂದ, ಅವರನ್ನು ಸಮಾಜದ ಎಲ್ಲೆಯ ಹೊರಗೆ ಇಡಲಾಯಿತು.

ಸಮಾಜದಲ್ಲಿ ಧರ್ಮದ ವ್ಯಾಪ್ತಿ ಎಷ್ಟು ಎಂದು ತಿಳಿಯದವರಿಗೆ ಈ ಉತ್ತರ ಸ್ಪಷ್ಟವೆನಿಸದೆ ಇರಬಹುದು. ಅವರು ಕೇಳಬಹುದು : ಧರ್ಮದಿಂದ ಇಂತಹ ವ್ಯತ್ಯಾಸ ಯಾಕೆ ಉಂಟಾಗಬೇಕು? ಧರ್ಮದ ವ್ಯಾಪ್ತಿ ಮತ್ತು ಕ್ರಿಯಾಶೀಲತೆಯ ಬಗ್ಗೆ ಈ ಕೆಳಗಿನ ಅಂಶಗಳನ್ನು ಅರ್ಥಮಾಡಿಕೊಂಡರೆ, ಆಗ ಅದು ಸ್ಪಷ್ಟವಾಗುತ್ತದೆ.

ಧರ್ಮವೆಂದರೇನೆಂದು ನೋಡೋಣ. ಎಲ್ಲ ಧರ್ಮಗಳಿಗೂ ಸಮಾನವಾದ ಒಂದು ಅಂಶವಿದೆ.[೧] ಈ ಅಂಶವೆಂದರೆ, ಧರ್ಮವೆಂದರೆ ಏಕೀಕೃತವಾದ, ನಂಬಿಕೆಗಳ ಮತ್ತು ನಡವಳಿಕೆಗಳ ಪದ್ಧತಿ. ಇವುಗಳು

---

೧. ಇದು ಪ್ರೊ. ಎನ್.ಎಲ್. ಡರ್ಕ್‌ಹೀಮ್‌ರವರ ಸೂತ್ರ. *The Elementary Forms of the Religious Life, P.* ೪೭, ಇದರ ಮುಂದಿನ ಚರ್ಚೆಯೂ ಈ ಪುಸ್ತಕವನ್ನೇ ಆಧರಿಸಿದೆ.

(೧) ಪವಿತ್ರ ವಿಷಯಗಳಿಗೆ ಸಂಬಂಧಿಸಿದ್ದು, ಯಾರು ಯಾರು ಇವುಗಳನ್ನು ಆಚರಣೆಯಲ್ಲಿ ಇಟ್ಟುಕೊಂಡಿರುತ್ತಾರೆಯೋ, ಅಂಥವರನ್ನು ಒಂದು ಸಮುದಾಯವಾಗಿ ಬೆಸೆಯುತ್ತದೆ. ಇದನ್ನೇ ಸ್ವಲ್ಪ ಭಿನ್ನವಾಗಿ ಹೇಳಬೇಕೆಂದರೆ, ಪ್ರತಿಯೊಂದು ಧರ್ಮದಲ್ಲೂ ಎರಡು ಅಂಶಗಳಿರುತ್ತವೆ. ಮೊದಲನೆಯದಾಗಿ, ಧರ್ಮ ಎನ್ನುವುದು ಪವಿತ್ರ ವಿಷಯಗಳಿಂದ ಪ್ರತ್ಯೇಕಿಸಲು ಸಾಧ್ಯವಾಗುವುದಿಲ್ಲ. ಎರಡನೆಯದಾಗಿ, ಧರ್ಮವೆನ್ನುವುದು ಸಮಾಜದಿಂದ ಪ್ರತ್ಯೇಕಗೊಳಿಸಲಾಗದ ಸಮಷ್ಟಿ ವಿಷಯ.

ಸತ್ಯವಾದ ಮತ್ತು ಆದರ್ಶವಾದ – ಅಂದರೆ ಮನುಷ್ಯನ ಆಲೋಚನೆಗಳಿಗೆ ವಸ್ತುವಾದ ಎಲ್ಲ ವಸ್ತುಗಳ ವರ್ಗೀಕರಣವನ್ನು ಧರ್ಮ ಮೊದಲಿಗೇ ಒಪ್ಪಿಕೊಳ್ಳುತ್ತದೆ. ಪವಿತ್ರ ಮತ್ತು ಅಪವಿತ್ರ ಅಂದರೆ ಜನಗಳ ಮಧ್ಯೆ ಲೌಕಿಕ (ಸೆಕ್ಯೂಲರ್) ಎಂದು ಎರಡು ರೀತಿಯಲ್ಲಿ ವಿಭಾಗಗೊಂಡು ಈ ವರ್ಗೀಕರಣ ಕಂಡುಬರುತ್ತದೆ.

ಇದು ಧರ್ಮದ ವ್ಯಾಪ್ತಿಯನ್ನು ಸೂಚಿಸುತ್ತದೆ. ಧರ್ಮದ ಕಾರ್ಯರೀತಿಯನ್ನು ಅರ್ಥಮಾಡಿಕೊಳ್ಳಲು, ಪಾವಿತ್ರ್ಯಕ್ಕೆ ಸಂಬಂಧಿಸಿದ ಕೆಳಗಣ ಕೆಲವು ಅಂಶವನ್ನು ನೋಡಬೇಕು –

ಯಾವುದು ಪವಿತ್ರವೋ ಅವು ಕೇವಲ ಉನ್ನತಮಟ್ಟದವೂ ಅಥವಾ ಅಪವಿತ್ರವಾದದಕ್ಕಿಂತ ಉತ್ಕೃಷ್ಟವೂ, ಸಮಾಜದ ಸ್ಥಾನಮಾನ ಪಡೆದವೂ ಅಷ್ಟೇ ಅಲ್ಲ, ಅವು ಸಂಪೂರ್ಣವಾಗಿ ವಿಭಿನ್ನ. ಎರಡಕ್ಕೂ ಪೂರ್ತಿ ಒಡಕಿದೆ. ಪ್ರೊ. ಡರ್ಕ್‌ಹೀಮ್ ಹೇಳುತ್ತಾನೆ.[೧]

"ಸಾಂಪ್ರದಾಯಿಕವಾಗಿ, ಒಳಿತು ಕೆಡುಕಿನ ಮಧ್ಯೆ ಕಂಡುಬರುವ ವಿರೋಧ ಇದರ ಮುಂದೆ ಏನೂ ಇಲ್ಲ ; ರೋಗ ಮತ್ತು ಆರೋಗ್ಯ ಜೀವನದ ಎರಡು ಮುಖಗಳಾಗಿರುವಂತೆ, ಒಳಿತು ಮತ್ತು ಕೆಡುಕು ಎನ್ನುವುದು ಒಂದೇ ವರ್ಗಕ್ಕೆ ಸೇರಿದ ಎರಡು ಪರಸ್ಪರ ವಿರೋಧೀ ತಳಿಗಳು. ಆದರೆ ಪವಿತ್ರ ಮತ್ತು ಅಪವಿತ್ರ ಎನ್ನುವುದು, ಯಾವಾಗಲೂ, ಎಲ್ಲ ಕಡೆಯಲ್ಲೂ ಎರಡೂ ವಿಶಿಷ್ಟ ವರ್ಗಕ್ಕೆ ಸೇರಿದವು ಮತ್ತು ಅವುಗಳಲ್ಲಿ ಯಾವುದೇ ಸಾಮಾನ್ಯ ಅಂಶವಿಲ್ಲ ಎಂದು ಮಾನವ ಬುದ್ಧಿ ತಿಳಿದುಕೊಂಡಿದೆ.

ಪ್ರಪಂಚದಲ್ಲಿ ಯಾವುದರಿಂದಾಗಿ ಒಳಿತು, ಕೆಡುಕುಗಳಲ್ಲಿ ಈ ಒಡಕು ಬೆಳೆಯಲು ಕಾರಣವಾಯಿತು ಎಂದು ತಿಳಿಯಲು ಕೆಲವರು ಉತ್ಸುಕವಾಗಿರಬಹುದು. ಆದರೆ ಅದನ್ನು ನಾವಿಲ್ಲಿ ಚರ್ಚಿಸಬೇಕಾಗಿಲ್ಲ. ಯಾಕೆಂದರೆ ಅದು ಇಲ್ಲಿ ನಮ್ಮ ಉದ್ದೇಶಕ್ಕೆ ಅವಶ್ಯಕವಾಗಿಲ್ಲ.[೨]

ಈ ಸಮಸ್ಯೆಗಷ್ಟೇ ನಮ್ಮನ್ನು ಸೀಮಿತಗೊಳಿಸಿಕೊಳ್ಳೋಣ. ಮುಂದಿನ ಅಂಶವೆಂದರೆ, ಪವಿತ್ರ ವಸ್ತುಗಳ ವೃತ್ತ ಅದರ ಗೊತ್ತಾದ ಚೌಕಟ್ಟಿಗೆ ಸೇರಿದ್ದಲ್ಲ. ವ್ಯಾಪ್ತಿ ಧರ್ಮದಿಂದ ಧರ್ಮಕ್ಕೆ ಬದಲಾಗುತ್ತ ಹೋಗುತ್ತದೆ. ದೇವತೆಗಳು ಮತ್ತು ದೇವಾಂಶರುಗಳು ಮಾತ್ರವೇ ಪವಿತ್ರ ಅಲ್ಲ. ಒಂದು ಬಂಡೆ, ಒಂದು ಮರ, ಒಂದು ಪ್ರಾಣಿ, ಒಂದು ಒರತೆ, ಒಂದು ಹರಳು ಕಲ್ಲು, ಒಂದು ಮರದ ತುಂಡು, ಒಂದು ಮನೆ – ಹೀಗೆ ಒಂದೇ ಮಾತಿನಲ್ಲಿ ಹೇಳುವುದಾದರೆ, ಯಾವುದು ಬೇಕಾದರೂ ಪವಿತ್ರ ಆಗಬಹುದು.[೩]

---

೧. ಪ್ರೊ. ಡರ್ಕ್‌ಹೀಮ್‌ರ *The Elementary Forms of the Religious Life,* P. ೩೮.

೨. ಆಸಕ್ತರು ಮೇಲೆ ಹೇಳಿದ ಪುಸ್ತಕದ ಪು. ೩೧೭ಅನ್ನು ನೋಡಬಹುದು.

೩. ಅದೇ ಪು.೪೧. ಈ ಬಹಿಷ್ಕಾರಗಳು ಮಾಟ ಮಂತ್ರದಿಂದ ಬಂದವು ಎನ್ನುವುದನ್ನು ಪ್ರತ್ಯೇಕಿಸಿ ಹೇಳಬೇಕು. ಇದರ ಚರ್ಚೆಗೆ ಅದೇ ಪುಸ್ತಕ ನೋಡಿ ಪು. ೩೦೦.

"ಪವಿತ್ರ ವಸ್ತುಗಳೆಂದರೆ ಬಹಿಷ್ಕಾರಗಳ ಮೂಲಕ ಕಾಪಾಡಿಕೊಳ್ಳುವಂತಹವು ಮತ್ತು ಬೇರ್ಪಡಿಸಲ್ಪಟ್ಟವು. ಅಪವಿತ್ರವಾದವು ಈ ಬಹಿಷ್ಕಾರಗಳಿಗೆ ಒಳಪಡಿಸುವಂತಹವು ಮತ್ತು ಮೊದಲಿನಿಂದಲೂ ದೂರ ಇಡಲ್ಪಟ್ಟವುಗಳು".

ಧಾರ್ಮಿಕ ಬಹಿಷ್ಕಾರ ಹಲವು ರೂಪಗಳನ್ನು ತೆಗೆದುಕೊಳ್ಳುತ್ತವೆ. ಸ್ಪರ್ಶದ ವಿರುದ್ಧದ ಬಹಿಷ್ಕಾರ, ಅಪವಿತ್ರರಾದವರು ಪವಿತ್ರರಾದವರನ್ನು ಮುಟ್ಟಲೇಬಾರದೆಂಬ ನಿಯಮವನ್ನು ಅವಲಂಬಿಸುತ್ತದೆ. ಮುಟ್ಟುವುದಲ್ಲದೆ ಬೇರೆ ಅನೇಕ ರೀತಿಯಲ್ಲಿ ಸ್ಪರ್ಶವನ್ನು ತಂದುಕೊಳ್ಳಬಹುದು. ನೋಟದ ಮೂಲಕ ಸ್ಪರ್ಶವಾಗುತ್ತದೆ. ಆದ್ದರಿಂದಲೇ ಕೆಲವು ಕಡೆ, ಪವಿತ್ರ ವಸ್ತುಗಳನ್ನು ಅಪವಿತ್ರರಾದವರು ನೋಡುವುದಕ್ಕೆ ಅವಕಾಶವಿಲ್ಲ. ಉದಾಹರಣೆಗೆ ಪವಿತ್ರವಾದುದನ್ನು ಮಹಿಳೆಯರು ನೋಡಲು ಬಿಡುವುದಿಲ್ಲ. ಮಾತು (ಅಂದರೆ ವ್ಯಕ್ತಿಯ ಅಂಶವೇ ಆಗಿದ್ದು, ಅವನ ಹೊರಗೂ ಅದು ಹರಡುತ್ತದೆ.) ಕೂಡ ಸ್ಪರ್ಶದ ಸಾಧನ. ಆದ್ದರಿಂದ ಪವಿತ್ರ ವಸ್ತುಗಳಿಗೆ ಸಂಬೋಧಿಸುವುದನ್ನಾಗಲಿ, ಮಾತಾಡುವುದನ್ನಾಗಲಿ, ಅಪವಿತ್ರರು ಮಾಡುವಂತಿಲ್ಲ. ಉದಾಹರಣೆಗೆ ವೇದಪಠಣ ಬ್ರಾಹ್ಮಣನೇ ಮಾಡಬೇಕೆ ಹೊರತು ಶೂದ್ರನಲ್ಲ. ಎಲ್ಲಕ್ಕಿಂತ ಮಿಗಿಲಾಗಿ ತೀರ ಹತ್ತಿರದ ಸಂಪರ್ಕ ಉಂಟಾಗುವುದು ಆಹಾರ ಸೇವನೆಯಿಂದ, ಆದ್ದರಿಂದಲೇ ಸಸ್ಯಾಹಾರ ಅಥವಾ ಪವಿತ್ರ ಪ್ರಾಣಿಗಳ (ಮಾಂಸ)ವನ್ನು ತಿನ್ನುವುದರ ವಿರುದ್ಧ ಬಹಿಷ್ಕಾರ ಹಾಕಲಾಗುತ್ತದೆ.

ಪವಿತ್ರ ವಸ್ತುಗಳಿಗೆ ಸಂಬಂಧಿಸಿದ ಬಹಿಷ್ಕಾರ, ಚರ್ಚೆಗೆ ಒಳಪಟ್ಟಿದ್ದಲ್ಲ. ಅವು ಚರ್ಚಾತೀತವಾಗಿದ್ದು, ಅವುಗಳನ್ನು ಚರ್ಚೆಯಿಲ್ಲದೆ ಒಪ್ಪಿಕೊಳ್ಳಬೇಕು. ಪವಿತ್ರವಾದದ್ದು 'ಅಸ್ಪೃಶ್ಯ' ಎಂದರೆ, ಅದು ಚರ್ಚೆಗೆ ಹೊರತಾದದ್ದು ಎನ್ನುವ ಅರ್ಥದಲ್ಲಿ. ಅದರ ಬಗ್ಗೆ ಗೌರವ ತೋರಿಸಬೇಕು, ವಿಧೇಯತೆಯಿಂದ ನಡೆದುಕೊಳ್ಳಬೇಕು.

ಕೊನೆಯದಾಗಿ, ಈ ಬಹಿಷ್ಕಾರಗಳಿಗೆ ಎಲ್ಲರೂ ಬದ್ಧರಾಗಿರಬೇಕು. ಅವುಗಳು ಸೂತ್ರಗಳಲ್ಲ. ಅವು ಅಧಿಕಾರಯುಕ್ತವಾದವು. ಅವುಗಳಿಗೆ ಬದ್ಧರಾಗಿರಬೇಕು. ಇಲ್ಲಿ 'ಬದ್ಧ' ಎನ್ನುವುದು ಸಾಮಾನ್ಯ ಅರ್ಥದಲ್ಲಿ ಅಲ್ಲ. ಅದು ನಿರುಪಾಧಿಕ ಆಜ್ಞೆಯ ಗುಣ ಹೊಂದಿರುತ್ತದೆ. ಅದನ್ನು ಪಾಲಿಸದೇ ಇರುವುದು ಅಪರಾಧಕ್ಕಿಂತ ಮಿಗಿಲಾದದ್ದು. ಅದೊಂದು ಧರ್ಮದ್ರೋಹ.

ಧರ್ಮದ ವ್ಯಾಪ್ತಿ ಮತ್ತು ಕಾರ್ಯಕ್ಷಮತೆ ಬಗ್ಗೆ ತಿಳಿದುಕೊಳ್ಳಲು ಈ ಮೇಲಿನ ಮಾತುಗಳು ಸಾಕು. ಈ ವಿಷಯದ ಬಗ್ಗೆ ಇನ್ನೂ ಹೆಚ್ಚಿನ ವಿವರಗಳು ಬೇಕಾಗಿಲ್ಲ. ಧರ್ಮದ ತಿರುಳು ಎನಿಸಿದ ಪಾವಿತ್ರ್ಯಕ್ಕೆ ಸಂಬಂಧಿಸಿದ ಹಾಗೆ, ಕಾನೂನುಗಳ ವಿಶ್ಲೇಷಣೆ ನಡೆಸಿದ ನಂತರ, ಜಾತಿಭ್ರಷ್ಟನನ್ನು ಗೋಮಾಂಸ ಭಕ್ಷಣೆಗಾಗಿ ಅಸ್ಪೃಶ್ಯನನ್ನಾಗಿ ಏಕೆ ಮಾಡಲಾಯಿತು ಎಂಬುದಕ್ಕೆ ನನ್ನ ಉತ್ತರ ತಕ್ಕದ್ದಾಗಿದೆ, ಎನ್ನುವುದು ಗೊತ್ತಾಗುತ್ತದೆ. ಹಸುವನ್ನು ಪವಿತ್ರ ವಸ್ತು ಎಂದು ನೋಡುವುದರ ಮೂಲಕ ಈ ಇಡೀ ವಿಶ್ಲೇಷಣೆಯನ್ನು ನೋಡಿದರಷ್ಟೇ ಸಾಕು. ಪವಿತ್ರ ಪ್ರಾಣಿ ಎನಿಸಿದ ಗೋವಿನ ಮಾಂಸ ಭಕ್ಷಣೆಯ ವಿರುದ್ಧದ ನಿಷೇಧವನ್ನು ಮುರಿಯುವುದರ ಮೂಲಕ ಅಸ್ಪೃಶ್ಯತೆ ಉಂಟಾಗುತ್ತದೆ.

ಬ್ರಾಹ್ಮಣರು ಹಸುವನ್ನು ಪವಿತ್ರ ಪ್ರಾಣಿಯನ್ನಾಗಿ ಮಾಡಿದರು. ಅವರು ಜೀವಂತ ಮತ್ತು ಸತ್ತ ಹಸುವಿನ ಮಧ್ಯೆ ವ್ಯತ್ಯಾಸವನ್ನು ಮಾಡಲಿಲ್ಲ. ಬದುಕಿರಲಿ, ಸತ್ತಿರಲಿ, ಹಸು ಪವಿತ್ರವೆನಿಸಿತು. ಗೋಮಾಂಸ ಭಕ್ಷಣೆ ಕೇವಲ ಅಪರಾಧ ಎನಿಸಲಿಲ್ಲ. ಅದಕ್ಕೆ, ಶಿಕ್ಷೆ ಕೊಡುವುದು ಸಾಧ್ಯವಾಗಿದ್ದರೆ, ಅದು ಅಪರಾಧ ಎನಿಸುತ್ತಿತ್ತು. ಬದಲಾಗಿ ಅದನ್ನು ಧರ್ಮದ್ರೋಹವೆಂದು ಸಾರಲಾಯಿತು. ಹಸುವನ್ನು ಅಪವಿತ್ರ ಎಂದು ಪರಿಗಣಿಸಿದವನು, ಆತ ಪಾಪ ಮಾಡಿದವನು ಎನಿಸಿ, ಅವನು ಬೇರೆಯವರ ಜತೆ ಸೇರಲು ಅಶಕ್ತವೆಂದು ಮಾಡಲಾಯಿತು. ಹಸುಮಾಂಸ ತಿನ್ನುವುದನ್ನು ಮುಂದುವರಿಸಿದ ಜಾತಿಭ್ರಷ್ಟರು, ಧರ್ಮದ್ರೋಹ ಮಾಡಿದ

ಅಪರಾಧಕ್ಕೆ ಒಳಗಾದರು.

ಹಸು ಪವಿತ್ರ ಪ್ರಾಣಿ ಎನಿಸಿ, ಜಾತಿಭ್ರಷ್ಟ ಅದನ್ನು ತಿನ್ನಲು ಮುಂದುವರಿಸಿದ ಮೇಲೆ, ಜಾತಿಭ್ರಷ್ಟನಿಗೆ ಅಸ್ಪೃಶ್ಯನಾಗಿ ನಡೆಸಿಕೊಳ್ಳಬೇಕಾಗಿ ಬಂತಲ್ಲದೆ, ಬೇರೆ ವಿಧಿಯಿರಲಿಲ್ಲ. ಅಂದರೆ ಆತ ಬೇರೆಯವರ ಜತೆ ಸಂಪರ್ಕಕ್ಕೆ ಅನರ್ಹ.

ಈ ವಿಷಯವನ್ನು ಮುಗಿಸುವ ಮೊದಲು, ಈ ವಾದದ ಬಗ್ಗೆ ಇರುವ ಸಾಧ್ಯವಾಗಬಹುದಾದ ಆಕ್ಷೇಪಣೆಗಳನ್ನು ತೀರ್ಮಾನ ಮಾಡಬೇಕು. ಅವುಗಳಲ್ಲಿ ಎರಡು ಆಕ್ಷೇಪಣೆಗಳಂತೂ ಸ್ವಯಂಸ್ಪಷ್ಟ. ಮೊದಲನೆಯದೆಂದರೆ, ಜಾತಿಭ್ರಷ್ಟರು ಸತ್ತ ಹಸುವಿನ ಮಾಂಸ ತಿನ್ನುತ್ತಿದ್ದರು ಎನ್ನುವುದಕ್ಕೆ ಯಾವ ಪುರಾವೆ ಇದೆ? ಎರಡನೆಯದಾಗಿ, ಬ್ರಾಹ್ಮಣರು, ಬ್ರಾಹ್ಮಣೇತರರು ಗೋಮಾಂಸ ಭಕ್ಷಣೆ ನಿಲ್ಲಿಸಿದಾಗ, ಇವರೂ ಏಕೆ ಅದನ್ನು ಕೈಬಿಡಲಿಲ್ಲ? ಈ ಪುಸ್ತಕದಲ್ಲಿ ಮಂಡಿಸಲಾದ, ಅಸ್ಪೃಶ್ಯತೆಯ ಹುಟ್ಟಿಗೆ ಸಂಬಂಧಿಸಿದ ವಾದಕ್ಕೆ ಈ ಪ್ರಶ್ನೆಗಳು ನೇರವಾಗಿ ಸಂಬಂಧಿಸಿವೆ.

ಮೊದಲನೆಯ ಪ್ರಶ್ನೆ ಸಂಗತ ಹಾಗೂ ನಿರ್ಣಾಯಕ. ಜಾತಿಭ್ರಷ್ಟನಾದವನು, ಮೊದಲಿನಿಂದ ಗೋಮಾಂಸ ಭಕ್ಷಕ. ಹಾಗಾಗಿ ಮೇಲಿನ ವಾದ ನಿಲ್ಲುವುದಿಲ್ಲ. ಮೊದಲಿನಿಂದ ಅವರು ಗೋಮಾಂಸ ಭಕ್ಷಕರಾಗಿದ್ದರೂ, ಅವರನ್ನು ಅಸ್ಪೃಶ್ಯರೆಂದು ಗಣಿಸದಿದ್ದು, ಗೋಮಾಂಸ ಭಕ್ಷಣೆಯಿಂದ ಅವರು ಅಸ್ಪೃಶ್ಯರೆಂದು ಪರಿಗಣಿಸಲಾಯಿತು ಎಂದು ಹೇಳುವುದು ಬುದ್ಧಿಹೀನವಲ್ಲದಿದ್ದರೂ ಅತಾರ್ಕಿಕ. ಎರಡನೆಯ ಪ್ರಶ್ನೆ ಸಂಗತವಾದದ್ದು, ನಿರ್ಣಾಯಕವಲ್ಲದಿದ್ದರೂ ಬ್ರಾಹ್ಮಣರು ಗೋಮಾಂಸ ಭಕ್ಷಣೆ ನಿಲ್ಲಿಸಿದ್ದರೆ, ಬ್ರಾಹ್ಮಣೇತರರು ಅವರನ್ನು ಅನುಕರಿಸಿದ್ದರೆ, ಜಾತಿಭ್ರಷ್ಟರೂ ಕೂಡ, ಅದನ್ನೇ ಏಕೆ ಮಾಡಲಿಲ್ಲ? ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರಿಗೆ ಹಸು ಪವಿತ್ರ ಪ್ರಾಣಿಯಾಯಿತು ಎನ್ನುವುದಕ್ಕೆ, ಗೋಹತ್ಯೆಯನ್ನು ಮಹಾಪಾತಕವೆಂದು ಕಾನೂನು ಜಾರಿಗೆ ಬಂದರೂ ಕೂಡ, ಜಾತಿಭ್ರಷ್ಟರು, ಗೋಮಾಂಸ ತಿನ್ನುವುದನ್ನು ಯಾಕೆ ಬಿಡಲಿಲ್ಲ? ಅವರು ಗೋಂಮಾಂಸ ಭಕ್ಷಣೆ ಮಾಡುವುದನ್ನು ತಡೆದಿದ್ದರೆ, ಆಗ ಅಸ್ಪೃಶ್ಯತೆಯೇ ಇರುತ್ತಿರಲಿಲ್ಲ.

ಮೊದಲ ಪ್ರಶ್ನೆಗೆ ಉತ್ತರ ಹೀಗಿದೆ: ಗೋಮಾಂಸ ಭಕ್ಷಣೆ, ಸ್ಥಾಪಿತ ಬುಡಕಟ್ಟು ಜನರಿಗೂ, ಜಾತಿಭ್ರಷ್ಟರಿಗೂ ಸಾಮಾನ್ಯವಾಗಿದ್ದ ಕಾಲದಲ್ಲಿ ಕೂಡ, ಸ್ಥಾಪಿತ ಸಮುದಾಯದವರು ತಾಜಾ ಗೋಮಾಂಸವನ್ನೂ, ಜಾತಿಭ್ರಷ್ಟರು ಸತ್ತ ದನದ ಮಾಂಸವನ್ನೂ ತಿನ್ನುವ ಪರಿಪಾಠ ಬೆಳೆದುಬಂದಿತ್ತು. ಸ್ಥಾಪಿತ ಸಮುದಾಯದವರು ಸತ್ತ ದನದ ಮಾಂಸವನ್ನು ತಿನ್ನುತ್ತಲೇ ಇರಲಿಲ್ಲವೆಂದು ಹೇಳುವುದಕ್ಕೆ ಯಾವುದೇ ಇತ್ಯಾತ್ಮಕ ಪುರಾವೆ ಇಲ್ಲ. ಆದರೆ. ಸತ್ತದನ, ಜಾತಿಭ್ರಷ್ಟರ ವಿಶೇಷ ಹಕ್ಕುಳ್ಳ ಮತ್ತು ಸಾಂಪ್ರದಾಯಿಕ ಹಕ್ಕುಳ್ಳ ಪದಾರ್ಥವಾಗಿತ್ತು ಎಂದು ತೋರಿಸುವುದಕ್ಕೆ ನೇತ್ಯಾತ್ಮಕ ಪುರಾವೆಗಳಿವೆ. ಈ ಪುರಾವೆ, ಈಗಾಗಲೇ ಗಮನಕ್ಕೆ ತರಲಾಗಿರುವ ಮಹಾರಾಷ್ಟ್ರದ ಮಹಾರ್‌ಗಳಿಗೆ ಸಂಬಂದಿಸಿದ ಕೆಲವು ವಸ್ತುಸಂಗತಿಗಳಿಗೆ ಸಂಬಂಧಿಸಿದೆ. ಈಗಾಗಲೇ ಸೂಚಿಸಿರುವಂತೆ, ಮಹಾರಾಷ್ಟ್ರದ ಮಹಾರರು, ಸತ್ತ ದನವನ್ನು ವಹಿಸಿಕೊಳ್ಳುವ ಹಕ್ಕನ್ನು ಪಡೆದಿರುವುದಾಗಿ ಹೇಳುತ್ತಾರೆ. ಹಳ್ಳಿಯ ಪ್ರತಿಯೊಬ್ಬ ಹಿಂದುವಿನ ಮೇಲೂ ಅವರು ಈ ಹಕ್ಕನ್ನು ಸ್ಥಾಪಿಸುತ್ತಾರೆ. ಇದರ ಅರ್ಥವೇನೆಂದರೆ ಯಾವೊಬ್ಬ ಹಿಂದುವೂ ತನಗೇ ಸೇರಿದ ಪ್ರಾಣಿ ಸತ್ತಲ್ಲಿ ಅದರ ಮಾಂಸವನ್ನು ತಿನ್ನುವಂತಿಲ್ಲ. ಆತ ಅದನ್ನು ಮಹಾರ್‌ಗೆ ಒಪ್ಪಿಸಬೇಕು. ಇದರ ಅಭಿಪ್ರಾಯವೇನೆಂದರೆ, ಗೋಮಾಂಸ ತಿನ್ನುವ ಪದ್ಧತಿ ಎಲ್ಲರಲ್ಲೂ ಸಾಮಾನ್ಯವಾಗಿ ಇದ್ದಾಗ, ಮಹಾರರು ಸತ್ತ ದನದ ಮಾಂಸವನ್ನೂ, ಹಿಂದುಗಳು ತಾಜಾ ಮಾಂಸವನ್ನೂ ತಿನ್ನುತ್ತಿದ್ದರು ಎನ್ನುವುದೇ ಆಗಿದೆ. ಇಲ್ಲಿ ಏಳುವ ಪ್ರಶ್ನೆಗಳೆಂದರೆ, ಇಂದು ಸತ್ಯವೆನಿಸಿದ್ದು, ಅಂದಿಗೂ ಸತ್ಯವಾಗಿತ್ತೆ? ಮಹಾರಾಷ್ಟ್ರದಲ್ಲಿ ಕಂಡುಬಂದ, ಈ ಅಂಶ, ಭಾರತಾದ್ಯಂತವೂ ಪ್ರಚಾರದಲ್ಲಿದ್ದ ಸ್ಥಾಪಿತ

ಬುಡಕಟ್ಟು ಜನರು ಮತ್ತು ಜಾತಿಭ್ರಷ್ಟರ ನಡುವೆ ಇದ್ದ ಸ್ಥಿತಿಯ ದ್ಯೋತಕವಾಗಿತ್ತೆ?

ಈ ಸಂಬಂಧವಾಗಿ ಮಹಾರ್‌ರಲ್ಲಿ ಚಾಲ್ತಿಯಲ್ಲಿರುವ ಸಂಪ್ರದಾಯದತ್ತ ನೋಡಬಹುದು. ಅದರ ಪ್ರಕಾರ, ಬೀದರದ ಮುಸ್ಲಿಂ ದೊರೆ, ಹಿಂದೂ ಹಳ್ಳಿ ಜನಗಳ ಎದುರು, ಮಹಾರರಿಗೆ ೫೨ ಹಕ್ಕುಗಳನ್ನು ನೀಡಿದನು. ಅದನ್ನು ಬೀದರದ ರಾಜನೇ ಕೊಟ್ಟನೆಂದು ಭಾವಿಸಿದರೂ, ಆತ ಈ ಹಕ್ಕುಗಳನ್ನು ತಾನೇ ಹುಟ್ಟುಹಾಕಲಿಲ್ಲ. ಅವು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದಿರಬೇಕು. ಅಂದರೆ ಜಾತಿಭ್ರಷ್ಟರು ಸತ್ತ ದನದ ಮಾಂಸ ತಿನ್ನುವ ಮತ್ತು ಸ್ಥಾಪಿತ ಬುಡಕಟ್ಟಿನವರು ತಾಜಾ ಗೋಮಾಂಸ ತಿನ್ನುವ ಪದ್ಧತಿ ಹಿಂದಿನಿಂದ ನಡೆದುಕೊಂಡು ಬಂದಿರಬೇಕು. ಇಂತಹ ಒಂದು ಪದ್ಧತಿ ಬೆಳೆದು ಬಂದದ್ದರಲ್ಲಿ ಅಸಹಜವೇನೂ ಇಲ್ಲ. ಸ್ಥಾಪಿತ ಸಮುದಾಯ, ಕೃಷಿ ಮತ್ತು ಹಸುಗಳನ್ನು ಜೀವನಾಧಾರವಾಗಿ ಪಡೆದಿದ್ದ ಶ್ರೀಮಂತ ಸಮುದಾಯ, ಜಾತಿಭ್ರಷ್ಟರು, ದಿವಾಳಿ ಎದ್ದ, ಜೀವನಾಧಾರಕ್ಕೆ ಏನನ್ನೂ ಹೊಂದಿರದಿದ್ದ, ಸ್ಥಾಪಿತ ಸಮುದಾಯವನ್ನೇ ಅವಲಂಬಿಸಿದ್ದ ಸಮುದಾಯವಾಗಿತ್ತು. ಎರಡೂ ಸಮುದಾಯಗಳ ಮುಖ್ಯ ಆಹಾರ ಗೋಮಾಂಸವೇ ಆಗಿತ್ತು. ಸ್ಥಾಪಿತ ಸಮುದಾಯಗಳ ಮುಖ್ಯ ಆಹಾರ ಗೋಮಾಂಸವೇ ಆಗಿತ್ತು. ಸಮುದಾಯ ಪ್ರಾಣಿಗಳನ್ನು ಹೊಂದಿದ್ದರಿಂದ, ಅವುಗಳನ್ನು ಕೊಲ್ಲುವುದು ಅವರಿಗೆ ಸಾಧ್ಯವಾಗಿತ್ತು. ಜಾತಿಭ್ರಷ್ಟರಿಗೆ ಇದು ಸಾಧ್ಯವಿರಲಿಲ್ಲ. ಏಕೆಂದರೆ ಅವರ ಬಳಿ ಪಶುಗಳಿರಲಿಲ್ಲ. ಇಂತಹ ಸನ್ನಿವೇಶದಲ್ಲಿ ಸ್ಥಾಪಿತ ಸಮುದಾಯ ತಾವು ಜಾತಿಭ್ರಷ್ಟರಿಂದ ಪಡೆದುಕೊಂಡ ಕಾವಲು ಕಾಯುವುದು ಇತ್ಯಾದಿ ಸೇವೆಗೆ, ಅವರಿಗೆ ತಮ್ಮ ಸತ್ತ ಪಶುಗಳನ್ನು ಕೂಲಿಯ ಒಂದು ಭಾಗವನ್ನು ಕೊಡಲಿಕ್ಕೆ ಒಪ್ಪಿಕೊಂಡಿದ್ದರಲ್ಲಿ ಅಸಹಜವಾದದ್ದಾದರೂ ಏನು? ಖಂಡಿತವಾಗಿ ಇಲ್ಲ. ಆದ್ದರಿಂದ ಬಹಳ ಹಿಂದಿನ ಕಾಲದಲ್ಲಿ ಸ್ಥಾಪಿತ ಸಮುದಾಯದವರು ತಾಜಾ ಗೋಮಾಂಸವನ್ನೂ, ಜಾತಿಭ್ರಷ್ಟರು ಸತ್ತ ದನದ ಮಾಂಸವನ್ನೂ ತಿನ್ನುತ್ತಿದ್ದರೆಂದು ನಿರ್ವಿವಾದವಾಗಿ ಒಪ್ಪಿಕೊಳ್ಳಬಹುದು; ಅಲ್ಲದೆ ಇದು ಭಾರತಾದ್ಯಂತ ಜಾರಿಯಲ್ಲಿದ್ದಿತೆಂದೂ, ಕೇವಲ ಮಹಾರಾಷ್ಟ್ರಕ್ಕೆ ಸೀಮಿತವಾಗಿರಲಿಲ್ಲವೆಂದೂ ನಿರ್ವಿವಾದವಾಗಿ ನಂಬಬಹುದು.

ಇದು ಮೊದಲನೆಯ ಆಕ್ಷೇಪಣೆಯನ್ನು ತೆಗೆದುಹಾಕುತ್ತದೆ. ಎರಡನೆಯ ಆಕ್ಷೇಪಣೆಯತ್ತ ನೋಡೋಣ. ಗುಪ್ತ ಚಕ್ರವರ್ತಿಗಳು ಮಾಡಿದ ಕಾನೂನು ಗೋಹತ್ಯೆ ನಿಲ್ಲಿಸುವುದಾಗಿತ್ತು. ಅದು ಜಾತಿಭ್ರಷ್ಟರಿಗೆ ಸಂಬಂಧಿಸಿರಲಿಲ್ಲ. ಯಾಕೆಂದರೆ, ಅವರು ಗೋಹತ್ಯೆ ಮಾಡುತ್ತಿರಲಿಲ್ಲ. ಅವರು ಸತ್ತ ದನವನ್ನಷ್ಟೇ ತಿನ್ನುತ್ತಿದ್ದರು. ಅವರ ನಡವಳಿಕೆ ಗೋವಧೆ ನಿಷೇಧದ ಕಾನೂನಿನ ವಿರುದ್ಧ ಹೋಗುತ್ತಿರಲಿಲ್ಲ. ಆದ್ದರಿಂದ ಸತ್ತ ದನದ ಮಾಂಸ ತಿನ್ನುವ ಪದ್ಧತಿ ಮುಂದಿವರಿಯಿತು. ಅಹಿಂಸಾ ತತ್ವದ ಪರಿಣಾಮವಾಗಿ, ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಗೋಮಾಂಸ ತಿನ್ನುವುದನ್ನು ನಿಲ್ಲಿಸಿದರು ಎಂದು ಭಾವಿಸಿದರೂ, ಜಾತಿಭ್ರಷ್ಟರು ಗೋಮಾಂಸ ತಿನ್ನುವುದು ಅಹಿಂಸಾ ತತ್ವಕ್ಕೂ ವಿರೋಧವಾಗಿರಲಿಲ್ಲ. ಹಸುವನ್ನು ಕೊಲ್ಲುವುದು ಹಿಂಸೆ, ಸತ್ತ ದನವನ್ನು ತಿನ್ನುವುದು ಹಿಂಸೆಯಲ್ಲ. ಆದ್ದರಿಂದ ಜಾತಿಭ್ರಷ್ಟರು ಹಸುವಿನ ಮಾಂಸ ತಿನ್ನುವಾಗ, ಅವರ ಅಂತರಾತ್ಮಕ್ಕೆ ಚುಚ್ಚುವಂತದ್ದು ಏನೂ ಇರಲಿಲ್ಲ. ಕಾನೂನಾಗಲೀ, ಹಿಂಸಾತತ್ವವಾಗಲೀ ಅವರು ಗೋಮಾಂಸ ತಿನ್ನುವುದನ್ನು ಬಹಿಷ್ಕರಿಸುವಂತಿರಲಿಲ್ಲ, ಯಾಕೆಂದರೆ ಎರಡೂ ದೃಷ್ಟಿಯಿಂದಲೂ ಅವರು ಅವುಗಳ ವಿರುದ್ಧ ನಡೆಯುತ್ತಿರಲಿಲ್ಲ.

ಅವರು ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರನ್ನು ಯಾಕೆ ಅನುಕರಿಸಲಿಲ್ಲ ಎನ್ನುವುದಕ್ಕೆ ಎರಡು ಕಾರಣಗಳಿವೆ. ಮೊದಲಿಗೆ, ಅನುಕರಣೆ ಬಹಳ ದುಬಾರಿ ಯಾಗುತ್ತಿತ್ತು. ಅದು ಅವರಿಗೆ ಸಾಧ್ಯವಿರಲಿಲ್ಲ. ಸತ್ತ ದನದ ಮಾಂಸ ಅವರ ಮುಖ್ಯ ಆಹಾರವಾಗಿತ್ತು. ಅದಿಲ್ಲದೆ ಅವರು ಹಸಿದು ಕಂಗಾಲಾಗಬೇಕಿತ್ತು. ಎರಡನೆಯದಾಗಿ, ಸತ್ತ ದನವನ್ನು ಸಾಗಿಸುವುದು ಅವರಿಗೆ ಒಂದು ಒಪ್ಪಂದ ಎನಿಸಿತ್ತು. ಮೊದಮೊದಲಿಗೆ

ಇದು ವಿಶೇಷ ಹಕ್ಕು ಎನಿಸಿದ್ದರೂ ಕೂಡ, ಅವರು ಸತ್ತ ದನವನ್ನು ಸಾಗಿಸುತ್ತಿದ್ದುದರಿಂದ, ಅದರ ಮಾಂಸವನ್ನು ಹಿಂದಿನಂತೆಯೇ ಬಳಸುವುದಕ್ಕೆ ಅವರಿಗೆ ಯಾವ ತಪ್ಪೂ ಕಂಡುಬರಲಿಲ್ಲ.

ಆದ್ದರಿಂದ ಮೇಲೆ ಹೇಳಿದ ಆಕ್ಷೇಪಣೆಗಳು, ನಾನು ಮುಂದಿಟ್ಟಿರುವ ಸಿದ್ಧಾಂತವನ್ನು ಊರ್ಜಿತವಲ್ಲ ಎಂದು ಸಾಧಿಸುವುದಿಲ್ಲ.

◆

---

೧. ಮಹಾರರದಲ್ಲಿ ಸುಧಾರಣಾ ಚಳವಳಿಗಳಿಂದಾಗಿ, ಇಂದು ಸ್ಥಿತಿ ತಿರುಗುಮುರುಗಾಗಿದೆ. ಮಹಾರರು ಸತ್ತ ಪ್ರಾಣಿಯನ್ನು ತೆಗೆದುಕೊಳ್ಳಲು ನಿರಾಕರಿಸುತ್ತಾರೆ. ಆದರೆ ಹಿಂದೂ ಹಳ್ಳಿಗರು ಅದನ್ನು ಅದರ ಮೇಲೆ ಒತ್ತಾಯಪೂರ್ವಕವಾಗಿ ಹೇರುತ್ತಾರೆ.

## ಭಾಗ – VI

# ಅಸ್ಪೃಶ್ಯತೆ ಮತ್ತು ಅದರ ಜನ್ಮ ದಿನಾಂಕ

ಅಧ್ಯಾಯ ೧೫ : ಅಪವಿತ್ರರು ಮತ್ತು ಅಸ್ಪೃಶ್ಯರು
ಅಧ್ಯಾಯ ೧೬ : ಹತಾಶರಾದ ಜನರು ಅಸ್ಪೃಶ್ಯರಾದದ್ದು ಯಾವಾಗ?

## ಅಧ್ಯಾಯ ೧೫

# ಅಪವಿತ್ರರು ಮತ್ತು ಅಸ್ಪೃಶ್ಯರು

## I

ಅಸ್ಪೃಶ್ಯತೆ ಅಸ್ತಿತ್ವಕ್ಕೆ ಬಂದದ್ದು ಯಾವಾಗ? ಸಂಪ್ರದಾಯವಾದೀ ಹಿಂದೂಗಳು ಅದರ ಮೂಲ ಬಹಳ ಹಳೆಯದೆಂದು ಹೇಳುತ್ತಾರೆ. ಅವರು ತಮ್ಮ ವಾದವನ್ನು ಬೆಂಬಲಿಸಲು, ಅಸ್ಪೃಶ್ಯತೆ ಸ್ಮೃತಿಗಳಿಂದಷ್ಟೇ ಅಲ್ಲ, ಧರ್ಮಶಾಸ್ತ್ರಸೂತ್ರಗಳಿಂದಲೂ ಆಜ್ಞಾಪಿಸಲ್ಪಟ್ಟಿದೆ ಎಂದು ಹೇಳುತ್ತಾರೆ. ಈ ಧರ್ಮಸೂತ್ರಗಳು ಸ್ಮೃತಿಗಳಿಗಿಂತ ಹಿಂದಿನವಾಗಿದ್ದು, ಕ್ರಿ.ಪೂ. ಕ್ಕೂ ಹಲವು ಶತಮಾನ ಹಿಂದಕ್ಕೆ ಹೋಗುತ್ತವೆ.

ಅಸ್ಪೃಶ್ಯತೆಯ ಮೂಲವನ್ನು ಸಂಶೋಧಿಸುವ ಅಧ್ಯಯನದಲ್ಲಿ ಆರಂಭಿಸಬೇಕಾದ ಪ್ರಶ್ನೆ ಇದು : ಅಸ್ಪೃಶ್ಯತೆ, ಅವರು ಹೇಳುವಷ್ಟು ಹಳೆಯದೆ?

ಈ ಪ್ರಶ್ನೆಗೆ ಉತ್ತರಿಸಲು, ಧರ್ಮಶಾಸ್ತ್ರದಲ್ಲಿ ಅಸ್ಪೃಶ್ಯತೆ ಮತ್ತು ಅಸ್ಪೃಶ್ಯ ಎಂದರೆ, ಅರ್ಥವೇನು ಎನ್ನುವುದನ್ನು ತಿಳಿಯಲು, ಅದರ ಅಧ್ಯಯನ ಮಾಡಬೇಕು. ಅದರಲ್ಲಿ ಅಸ್ಪೃಶ್ಯತೆ ಎನ್ನುವುದಕ್ಕೆ ನಾವು ಇವೊತ್ತು ಉದ್ದೇಶಿಸುವ ಅರ್ಥವೇ ಇದ್ದಿತೆ? ಅವರು ಉದ್ದೇಶಿಸುವ ವರ್ಗ, ನಾವು ಇಂದು ಬಳಸುವ ಅಸ್ಪೃಶ್ಯರು ಎನ್ನುವುದಕ್ಕೆ ಸಮಾನವಾಗಿತ್ತೆ?

ಮೊದಲ ಪ್ರಶ್ನೆ ಎತ್ತಿಕೊಳ್ಳೋಣ. ಧರ್ಮಶಾಸ್ತ್ರವನ್ನು ಪರಿಶೀಲಿಸಿದರೆ, ಅವರು ಅಸ್ಪೃಶ್ಯರು ಎಂದು ಕರೆಯುವ ವರ್ಗವೊಂದಿದೆ. ಇಲ್ಲಿ ಅಸ್ಪೃಶ್ಯ ಎಂಬ ಮಾತಿಗೆ ಮುಟ್ಟಿಸಿಕೊಳ್ಳಬಾರದವರು ಎಂಬ ಅರ್ಥವೂ ಇದೆ. ಇಲ್ಲಿ ಉಳಿಯುವ ಪ್ರಶ್ನೆ : ಧರ್ಮಶಾಸ್ತ್ರದಲ್ಲಿ ಹೇಳಿದ ಅಸ್ಪೃಶ್ಯರೂ, ಇಂದಿನ ಭಾರತದ ಅಸ್ಪೃಶ್ಯರೂ ಒಂದೇ ಆಗಿದ್ದಾರೆಯೆ? ಈ ಪ್ರಶ್ನೆ ಯಾಕೆ ಮುಖ್ಯವಾಗುತ್ತದೆ ಎಂದರೆ, ಧರ್ಮಶಾಸ್ತ್ರ ಅಂತ್ಯ, ಅಂತ್ಯಜ, ಅಂತ್ಯವಾಸಿನ್ ಮತ್ತು ಬಾಹ್ಯ ಎಂಬ ಪದಗಳನ್ನು ಬಳಸುತ್ತದೆ, ಆಮೇಲೆ ಬಂದ ಸ್ಮೃತಿಗಳೂ ಈ ಎಲ್ಲ ಪದಗಳನ್ನೂ ಬಳಸುತ್ತವೆ, ಬೇರೆ ಬೇರೆ ಸೂತ್ರಗಳೂ, ಸ್ಮೃತಿಗಳೂ ಈ ಪದಗಳನ್ನು ಹೇಗೆ ಬಳಸುತ್ತವೆ ಎಂಬ ಬಗ್ಗೆ ತಿಳಿದುಕೊಳ್ಳುವುದು ಸೂಕ್ತ. ಈ ಕೆಳಗಿನ ಕೋಷ್ಟಕವನ್ನು ಇದೇ ಉದ್ದೇಶದಿಂದ ತಯಾರಿಸಲಾಗಿದೆ–

**೧. ಅಸ್ಪೃಶ್ಯ**

| ಧರ್ಮಸೂತ್ರ | ಸ್ಮೃತಿ |
|---|---|
| ೧. ವಿಷ್ಣು V, ೧೦೪ | ೧. ಕಾತ್ಯಾಯನ ಶ್ಲೋಕಗಳು ೪೩೩, ೭೮೩ |

**೨. ಅಂತ್ಯ**

| ಧರ್ಮಸೂತ್ರ | ಸ್ಮೃತಿ |
|---|---|
| ೧. ವಸಿಷ್ಠ (೧೬–೩೦) | ೧. ಮನು IV, ೭೯, VIII ೬೮ |
| ೨. ಆಪಸ್ತಂಭ (III, I) | ೨. ಯಾಜ್ಞವಲ್ಕ್ಯ I, ೧೪೮, ೧೯೭ |

| ಧರ್ಮಸೂತ್ರ | ಸ್ಮೃತಿ |
|---|---|
| | ೩. ಅತ್ರಿ ೨೫<br>೪. ಲಿಖಿತ ೫೨ |
| **೩. ಬಾಹ್ಯ** | |
| **ಧರ್ಮಸೂತ್ರ** | **ಸ್ಮೃತಿ** |
| ೧. ಆಪಸ್ತಂಭ ೧, ೨, ೩೯, ೧೮<br>೨. ವಿಷ್ಣು ೧೬, ೧೪ | ೧. ಮನು ೨೮<br>೨. ನಾರದ ೧. ೧೫೫ |
| **೪. ಅಂತ್ಯವಾಸಿನ್** | |
| **ಧರ್ಮಸೂತ್ರ** | **ಸ್ಮೃತಿ** |
| ೧. ಗೌತಮ XXXI; XXIII, ೩೨<br>೨. ವಸಿಷ್ಠ XVIII ೩ | ೧. ಮನು IV, ೭೯; X ೩೯<br>೨. ಶಾಂತಿಪರ್ವ, ಮಹಾಭಾರತ ೧೪೧; ೨೯–೩೨<br>೩. ಮಧ್ಯಮಾಂಗೀರಸ (ಯಜ್ಞದ ಬಗ್ಗೆ ಮಿತಾಕ್ಷರನಿಂದ ಉದ್ಧೃತ) ೩.೨೮೦ |
| **೫. ಅಂತ್ಯಜ** | |
| **ಧರ್ಮಸೂತ್ರ** | **ಸ್ಮೃತಿ** |
| ೧. ವಿಷ್ಣು ೩೬.೭ | ೧. ಮನು IV.೬೧, VIII. ೨೭೯<br>೨. ಯಾಜ್ಞವಲ್ಕ್ಯ ೧೨.೭೩<br>೩. ಬೃಹದ್ಯಮ ಸ್ಮೃತಿ (ಯಾಜ್ಞವಲ್ಕ್ಯನ ಬಗ್ಗೆ ಮಿತಾಕ್ಷರನಿಂದ ಉದ್ಧೃತ III, ೨೬೦)<br>೪. ಅತ್ರಿ, ೧೯೯<br>೫. ವೇದವ್ಯಾಸ ೧, ೧೨, ೧೩ |

## II

ಮುಂದಿನ ಪ್ರಶ್ನೆಯೆಂದರೆ, ಅಂತ್ಯ, ಅಂತ್ಯಜ, ಅಂತ್ಯವಾಸಿನ್ ಮತ್ತು ಬಾಹ್ಯ ಎಂಬ ಪದಗಳಿಂದ ನಿರ್ದೇಶಿತರಾದ ವರ್ಗಗಳು, ಅಸ್ಪೃಶ್ಯ ಎಂಬ ಮಾತಿನಿಂದ ನಿರ್ದೇಶಿತವಾದವರೇ ಆಗಿದ್ದಾರೆಯೆ? ಯಾಕೆಂದರೆ, ಪದಶಃ ಈ ಎಲ್ಲ ಮಾತುಗಳಿಗೂ ಅಸ್ಪೃಶ್ಯ ಎಂಬ ಅರ್ಥವೇ ಇದೆ. ಬೇರೆ ರೀತಿ ಹೇಳಬೇಕೆಂದರೆ, ಈ ಎಲ್ಲ ಮಾತುಗಳೂ ಒಂದೇ ವರ್ಗದ ಜನರನ್ನು ಕುರಿತದ್ದಾಗಿದೆಯೆ?

ಧರ್ಮಸೂತ್ರಗಳು ಈ ಪ್ರಶ್ನೆಗೆ ಉತ್ತರಿಸಲು ಸಹಕಾರಿಯಾಗಿಲ್ಲ ಎನ್ನುವುದು ದುರದೃಷ್ಟದ ಸಂಗತಿ. ಅಸ್ಪೃಶ್ಯ ಎಂಬ ಮಾತು (ಒಂದು ಸಲ ಒಂದು ಸೂತ್ರದಲ್ಲಿ) ಮತ್ತು ಸ್ಮೃತಿಯಲ್ಲಿ (ಒಂದು ಬಾರಿ) ಎರಡು

ಸಲ ಕಾಣಿಸಿಕೊಳ್ಳುತ್ತದೆ. ಆದರೆ ಇದರಲ್ಲಿ ಸೇರ್ಪಡೆಯಾದ ವರ್ಗಗಳ ಪಟ್ಟಿಯನ್ನು ಕೊಡುವುದಿಲ್ಲ. ಅಂತ್ಯ ಎನ್ನುವ ಪದವೂ ಅಷ್ಟೇ. ಅಂತ್ಯ ಎನ್ನುವ ಪದ ಆರು ಸಲ ಉಪಯೋಗಿಸಲ್ಪಟ್ಟಿದ್ದರೂ, ಅವರು ಯಾರು ಎನ್ನುವುದು ನಿರೂಪಿತವಾಗಿಲ್ಲ. (ಎರಡು ಸಲ ಸೂತ್ರಗಳಲ್ಲಿ ಮತ್ತು ನಾಲ್ಕು ಬಾರಿ ಸ್ಮೃತಿಗಳಲ್ಲಿ). ಬಾಹ್ಯ ಎಂಬ ಶಬ್ದ ನಾಲ್ಕು ಕಡೆ (ಎರಡು ಬಾರಿ ಸೂತ್ರ, ಎರಡು ಬಾರಿ ಸ್ಮೃತಿಗಳಲ್ಲಿ.) ಬಳಕೆಯಾಗಿದ್ದರೂ ಅದರಲ್ಲಿ ಸೇರ್ಪಡೆಯಾದ ಸಮುದಾಯಗಳು ಯಾವುವು ಎನ್ನುವುದು ಸೂಚಿತವಾಗಿಲ್ಲ. ಅಂತ್ಯವಾಸಿನ್ ಮತ್ತು ಅಂತ್ಯಜ ಎಂಬ ಪದಗಳ ವಿಷಯದಲ್ಲಿ ಹೀಗಾಗಿಲ್ಲ. ಯಾವುದೇ ಧರ್ಮಸೂತ್ರ ಅವುಗಳನ್ನು ಪಟ್ಟಿಮಾಡಿಲ್ಲ. ಮಧ್ಯಮಾಂಗಿರಸ ಎಂದು ಹೆಸರಾದ ಸ್ಮೃತಿಯಲ್ಲಿ ಅಂತ್ಯವಾಸಿನ್‌ನ ಪಟ್ಟಿ ಕಂಡುಬರುತ್ತದೆ. ಅತ್ರಿಸ್ಮೃತಿ ಮತ್ತು ವೇದವ್ಯಾಸ ಸ್ಮೃತಿಗಳಲ್ಲಿ ಅಂತ್ಯಜರ ಪಟ್ಟಿ ಇದೆ. ಈ ಕೋಷ್ಠಕದಲ್ಲಿ ಅದನ್ನು ನೋಡಬಹುದು:

| **ಅಂತ್ಯವಾಸಿನ್** | | **ಅಂತ್ಯಜ** |
|---|---|---|
| **ಮಧ್ಯಮಾಂಗಿರಸ** | **ಅತ್ರಿ** | **ವೇದವ್ಯಾಸ** |
| ೧. ಚಂಡಾಲ | ೧. ನಾಟ | ೧. ಚಂಡಾಲ |
| ೨. ಶ್ವಪಚ | ೨. ಮೇದ | ೨. ಶ್ವಪಚ |
| ೩. ಕ್ಷತ್ತ | ೩. ಭಿಲ್ಲ | ೩. ನಟ |
| ೪. ಸೂತ | ೪. ರಜಕ | ೪. ಮೇದ |
| ೫. ವೈದೇಹಿಕ | ೫. ಚರ್ಮಕಾರ | ೫. ಭಿಲ್ಲ |
| ೬. ಮಗಧ | ೬. ಬುರುಡ | ೬. ರಜಕ |
| ೭. ಅಯೋಗವ | ೭. ಕಾಯಾವರ್ತ | ೭. ಚರ್ಮಕಾರ |
| | | ೮. ವಿರಾಟ್ |
| | | ೯. ದಾಸ |
| | | ೧೦. ಭಟ್ಟ |
| | | ೧೧. ಕೊಳಿಕ |
| | | ೧೨. ಪುಷ್ಕರ |

ಈ ಕೋಷ್ಠಕದಿಂದ, ಅಂತ್ಯವಾಸಿನ್ ಮತ್ತು ಅಂತ್ಯಜ ಎಂಬ ಪದಗಳ ಬಳಕೆಯಲ್ಲಿ ಕರಾರುವಾಕ್ಕಾದ ಅಥವಾ ಪರಸ್ಪರ ಒಪ್ಪಿತವಾದ ಅಂಶಗಳಿಲ್ಲ. ಉದಾಹರಣೆಗೆ, ಚಂಡಾಲ ಮತ್ತು ಶ್ವಪಚ, ಅಂತ್ಯವಾಸಿನ್ ಮತ್ತು ಅಂತ್ಯಜ ಎಂಬ ಪ್ರಭೇದಗಳಲ್ಲಿ ಕಂಡುಬರುತ್ತಾರೆ, ಮಧ್ಯಮಾಂಗಿರಸ್ ಮತ್ತು ವೇದವ್ಯಾಸರ ಪ್ರಕಾರ. ಆದರೆ ಮಧ್ಯಮಾಂಗಿರಸ್ ಜತೆ ಅತ್ರಿಯನ್ನು ಹೋಲಿಸಿದರೆ ಅವರಿಬ್ಬರು ಬೇರೆ ಬೇರೆ ಪ್ರಭೇದಗಳಲ್ಲಿ ಕಂಡುಬರುತ್ತಾರೆ. ಅಂತ್ಯಜ ಪದದ ವಿಷಯದಲ್ಲೂ ಇದೇ ಕಂಡುಬರುತ್ತದೆ. ಉದಾಹರಣೆಗೆ (೧) ಚಂಡಾಲ ಮತ್ತು (೨) ಶ್ವಪಾಕರು, ವೇದವ್ಯಾಸನ ಪ್ರಕಾರ ಅಂತ್ಯಜರು, ಆದರೆ ಅತ್ರಿ ಪ್ರಕಾರ ಅಲ್ಲ. ಅತ್ರಿ ಪ್ರಕಾರ (೧) ಬುರುಡ, ಮತ್ತು (೨) ಕಾಯಾವರ್ತರು ಅಂತ್ಯಜರು. ಆದರೆ ವೇದವ್ಯಾಸನ ಪ್ರಕಾರ ಅಲ್ಲ. ಅಲ್ಲದೆ (೧) ವಿರಾಟ್, (೨) ದಾಸ್, (೩) ಭಟ್ಟ, (೪) ಕೋಲಿಕ ಮತ್ತು (೫) ಪುಷ್ಕರ – ಇವರೆಲ್ಲ ವೇದವ್ಯಾಸನ ಪ್ರಕಾರ ಅಂತ್ಯಜರು; ಅತ್ರಿ ಪ್ರಕಾರ ಅಲ್ಲ.

ಇದುವರೆಗಿನ ಅಭಿಪ್ರಾಯ, ಮೊತ್ತದಲ್ಲಿ; ಅಸ್ಪೃಶ್ಯ ಎಂಬ ಪ್ರಕಾರದಲ್ಲಿ ಯಾರು ಯಾರು ಸೇರ್ಪಡೆಯಾಗಿದ್ದರು ಎನ್ನುವ ಬಗ್ಗೆ ಧರ್ಮಶಾಸ್ತ್ರಗಳಾಗಲೀ, ಸ್ಮೃತಿಗಳಾಗಲೀ ಸಹಾಯಕವಾಗಿಲ್ಲ. ಅಂತ್ಯವಾಸಿನ್, ಅಂತ್ಯಜ ಮತ್ತು ಬಾಹ್ಯ ಎನ್ನುವ ವರ್ಗಕ್ಕೆ ಸೇರಿದವರು ಅಸ್ಪೃಶ್ಯರು ಸರಿಸಮಾನರಾಗಿದ್ದರೆ ಎಂದು ಗೊತ್ತು ಮಾಡುವಲ್ಲಿ ಕೂಡ ಧರ್ಮಸೂತ್ರಗಳು ಮತ್ತು ಸ್ಮೃತಿಗಳು ನಿರುಪಯೋಗಿಗಳಾಗಿವೆ. ಇವರಲ್ಲಿ ಯಾರಾದರೂ ಅಸ್ಪೃಶ್ಯರ ಪ್ರಭೇದಕ್ಕೆ ಸೇರಿದವರೆ ಎಂದು ಕಂಡುಕೊಳ್ಳಲು ಬೇರೆ ಯಾವುದಾದರೂ ಮಾರ್ಗಗಳು ಇವೆಯೆ? ಈ ಪ್ರತಿಯೊಂದು ವರ್ಗದ ಬಗೆಗೂ ಗೊತ್ತಿದ್ದಷ್ಟು ಮಾಹಿತಿಯನ್ನು ಕೂಡಿಹಾಕುವುದು ಒಳ್ಳೆಯದು.

ಬಾಹ್ಯದ ಬಗ್ಗೆ ಏನು ತಿಳಿದಿದೆ? ಅವರು ಯಾರು? ಅವರ ಕೆಲಸ ಏನು? ಅವರು ಅಸ್ಪೃಶ್ಯರೆ? ಮನು ಅವರ ಬಗ್ಗೆ ಉಲ್ಲೇಖಿಸುತ್ತಾನೆ. ಅವರ ಸ್ಥಾನವನ್ನು ಅರ್ಥಮಾಡಿಕೊಳ್ಳಬೇಕಾದರೆ, ಮನು ಕೈಗೊಂಡ ಸಾಮಾಜಿಕ ವರ್ಗೀಕರಣವನ್ನು ಅರ್ಥಮಾಡಿಕೊಳ್ಳಬೇಕು ಮನು ಜನಗಳನ್ನು ವಿವಿಧ ಪ್ರಭೇದಗಳಾಗಿ ವಿಂಗಡಿಸುತ್ತಾನೆ. ಮೊದಲಿಗೆ[೧] ಆತ (೧) ವೈದಿಕರು, ಮತ್ತು (೨) ದಸ್ಯುಗಳು ಎಂಬ ಎರಡೇ ವಿಶಾಲವಾದ ವಿಂಗಡಣೆ ಮಾಡುತ್ತಾನೆ. ಆನಂತರ ವೈದಿಕರನ್ನು ನಾಲ್ಕು ಉಪವಿಭಾಗಗಳಾಗಿ ವಿಂಗಡಿಸುತ್ತಾನೆ : (೧) ಚಾತುರ್ವರ್ಣ್ಯದೊಳಗೆ ಬರುವವರು (೨) ಚಾತುರ್ವರ್ಣ್ಯದ ಹೊರಗಿನವರು (೩) ವ್ರಾತ್ಯರು, ಮತ್ತು (೪) ಪತಿತರು ಅಥವಾ ಜಾತಿಭ್ರಷ್ಟರು.

ಒಬ್ಬ ವ್ಯಕ್ತಿ ಚಾತುವರ್ಣ್ಯದೊಳಗೆ ಬರುತ್ತಾನೆ ಅಥವಾ ಬರುವುದಿಲ್ಲ ಎನ್ನುವುದು ತಂದೆತಾಯಿಗಳ ವರ್ಣವನ್ನು ಅವಲಂಬಿಸುತ್ತದೆ. ಅವನು ಒಂದೇ ವರ್ಣದ ತಂದೆ ತಾಯಿಗಳಿಗೆ ಹುಟ್ಟಿದ್ದರೆ, ಆತ ಚಾತುವರ್ಣ್ಯದೊಳಗೆ ಇರುತ್ತಾನೆ. ಬದಲಾಗಿ, ಆತ ಬೇರೆ ಬೇರೆ ವರ್ಣದ ತಂದೆ ತಾಯಿಗಳಿಗೆ ಹುಟ್ಟಿದ್ದರೆ, ಅಂದರೆ ವಿಭಿನ್ನ ಜಾತಿಯ ತಂದೆ ತಾಯಿಗಳಿಗೆ, ಇಲ್ಲವೆ ಮನು ಕರೆಯುವ ಹಾಗೆ ವರ್ಣಸಂಕರದಿಂದ ಹುಟ್ಟಿದ್ದರೆ, ಆತ ಚಾತುವರ್ಣ್ಯದ ಹೊರಗೆ ಇರುತ್ತಾನೆ. ಚಾತುರ್ವರ್ಣದ ಹೊರಗಿನವರನ್ನು ಮನು ಮತ್ತೆ ಎರಡು ಉಪವಿಭಾಗಗಳಾಗಿ ಮಾಡುತ್ತಾನೆ – (೧) ಅನುಲೋಮ, ಮತ್ತು (೨) ಪ್ರತಿಲೋಮ. ಅನುಲೋಮ[೨] ಅಂದರೆ; ತಂದೆ ಉತ್ತಮವರ್ಣದವನಾಗಿದ್ದು, ತಾಯಿ ಹೀನವರ್ಣದವಳಾಗಿರುತ್ತಾಳೆ. ಪ್ರತಿಲೋಮವೆಂದರೆ ತಂದೆ ಹೀನವರ್ಣದವನಾಗಿದ್ದು, ತಾಯಿ ಉತ್ತಮವರ್ಣದವಳಾಗಿರುತ್ತಾಳೆ. ಇವೆರಡೂ ಗುಂಪಿನವರು ಚಾತುರ್ವರ್ಣ್ಯದಿಂದ ಹೊರಗಿನವರಾದ್ದರಿಂದ, ಒಂದೇ ಆದರೂ ಕೂಡ, ಮನು ಅವರಿಬ್ಬರಲ್ಲಿ ಒಂದು ಭೇದವನ್ನು ಮೂಡುತ್ತಾನೆ. ಅನುಲೋಮದಲ್ಲಿ ಬರುವವರನ್ನು ಅವನು ವರ್ಣಬಾಹ್ಯರು ಅಥವಾ ಬಾಹ್ಯರೆಂದು ಕರೆದರೆ, ಪ್ರತಿಲೋಮದಲ್ಲಿ ಬರುವವರನ್ನು ಹೀನರು ಎಂದು ಕರೆಯುತ್ತಾರೆ. ಹೀನರು, ಬಾಹ್ಯರಿಗಿಂತ ಕೆಳಗಿನವರು, ಆದರೆ ಬಾಹ್ಯರನ್ನಾಗಲೀ, ಹೀನರನ್ನಾಗಲೀ ಆತ ಅಸ್ಪೃಶ್ಯರು ಎಂದು ಕರೆಯುವುದಿಲ್ಲ.

'ಅಂತ್ಯ'ವನ್ನು ಒಂದು ವರ್ಗವನ್ನಾಗಿ ಮನುಸ್ಮೃತಿಯ iv.೭೯ರಲ್ಲಿ ಹೇಳಲಾಗಿದೆ, ಆದರೂ ಮನು ಅವರನ್ನು ಪಟ್ಟಿಯಲ್ಲಿ ಸೇರಿಸುವುದಿಲ್ಲ. ಮೇಧಾತಿಥಿ ತನ್ನ ವ್ಯಾಖ್ಯಾನದಲ್ಲಿ ಅಂತ್ಯ ಎಂದರೆ ಮೇಧ ಮ್ಲೇಚ್ಛ ಇತ್ಯಾದಿ ಎನ್ನುತ್ತಾನೆ. ಬೂಲರ್ ಅಂತ್ಯ ಎಂದರೆ ಕೆಳಗಿನ ಜಾತಿಯವನೆಂದು ಅನುವಾದಿಸುತ್ತಾನೆ.

ಇದರಿಂದ, 'ಅಂತ್ಯ'ರು ಅಸ್ಪೃಶ್ಯರು ಎಂದು ಹೇಳಲಿಕ್ಕೆ ಯಾವ ಆಧಾರವೂ ಇಲ್ಲ. ಬಹುಶಃ ಹಳ್ಳಿಯ ತುದಿ ಅಥವಾ ಅಂತ್ಯ ಬಾಗದಲ್ಲಿ ಜೀವಿಸುತ್ತಿದ್ದವರಿಗೆ ಈ ಹೆಸರು ಬಂದಿರಬೇಕು. ಶ್ರೀಮಾನ್ ಕಾಣೆ[೩]ಯವರು

---

೧. ನೋಡಿರಿ ಮನು ೧.೪೫

೨. ಅದೇ

೩. ಕಾಣೆ : *History of Dharma Shastra,* Vol II, ಭಾಗ I, ಪು. ೧೬೭

ಬೃಹದಾರಣ್ಯಕ ಉಪನಿಷತ್ತಿನಲ್ಲಿ (೧.೩) ಕಂಡುಬರುವ ಕಥೆಯೊಂದಕ್ಕೆ ಗಮನ ಸೆಳೆಯುತ್ತಾರೆ. 'ಅಂತ್ಯ'ರನ್ನು ಕೆಳಗಿನವರು ಎಂದು ಯಾಕೆ ಕರೆದರು, ಎನ್ನುವುದು ಇದರಲ್ಲಿ ಕಂಡುಬರುತ್ತದೆ. ಆ ಕಥೆ ಹೀಗಿದೆ :

"ದೇವತೆಗಳು ಮತ್ತು ಅಸುರರ ಮಧ್ಯೆ ಘರ್ಷಣೆಯಾಯಿತು. ಉದ್ಗೀತನದ ಮೂಲಕ ದೇವತೆಗಳು ತಾವು ಅಸುರರಿಗಿಂತ ಮೇಲೇರಬಹುದೆಂದು ತಿಳಿದರು. ಇದರಲ್ಲಿ ಈ ಶ್ಲೋಕ ಕಂಡುಬರುತ್ತದೆ. "ಈ ದೇವತೆಗಳಿಗೆ (ವಾಕ್ ಇತ್ಯಾದಿ) ಮೃತ್ಯುವಾದ ಪಾಪವನ್ನು ಪಕ್ಕಕ್ಕೆ ದೂಡಿ, ಈ ದೇವತೆ (ಪ್ರಾಣ), ಅಲ್ಲಿನ ದೇವತೆಗಳನ್ನು ತುದಿಗೆ ತಳ್ಳಿದರು; ಆದ್ದರಿಂದ ಆರ್ಯರ ಪ್ರಾಂತ್ಯ ಅಥವಾ 'ದಿಶಮ್ ಅಂತ' (ಬೀಡಿನ ತುದಿಗೆ)ಕ್ಕೆ ಯಾರೊಬ್ಬನೂ ಹೋಗಬಾರದು. ಇಲ್ಲದೆ ಹೋದರೆ ನಾನು ಪಾಪ್ಮಾಸಿಣಿ ಅಂದರೆ ಸಾವಿಗೆ ಒಳಗಾಗುತ್ತೇನೆ ಎಂದು ಭಾವಿಸಬೇಕು."

ಈ ಮೇಲೆ ಹೇಳಿದ ಉದ್ಧೃತಿಯಲ್ಲಿ ಬರುವ 'ದಿಶಮ್ ಅಂತ' ಎಂಬ ಪದದ ಅರ್ಥದ ಮೇಲೆ, ಅಂತ್ಯ ಎನ್ನುವುದರ ಅರ್ಥ ನಿರ್ಧಾರವಾಗುತ್ತದೆ. 'ಬೀಡಿನ ತುದಿ' ಎಂಬ ಪದಗುಚ್ಛವನ್ನು 'ಹಳ್ಳಿಯ ಅಂಚಿನ ತುದಿ' ಎಂದು ಅನುವಾದಿಸಬಹುದಾದರೆ, ಇದು ದೂರಾನ್ವಯ ಎಂದು ಭಾವಿಸಿದ್ದೇನೆ, ಆಗ ನಮಗೆ 'ಅಂತ್ಯ' ಎನ್ನುವುದರ ಮೂಲಾರ್ಥಕ್ಕೆ ವಿವರಣೆ ಸಿಗುತ್ತದೆ. ಇದರಿಂದ 'ಅಂತ್ಯ'ರು ಎಂದರೆ ಅಸ್ಪೃಶ್ಯರಲ್ಲವೆನ್ನುವುದು ಸೂಚಿತವಾಗುತ್ತದೆ. ಇದರ ಅರ್ಥ, ಹಳ್ಳಿಯ ಹೊರಭಾಗದಲ್ಲಿ ವಾಸಿಸುತ್ತಿದ್ದವರು ಎಂದಾಗುತ್ತದೆ.

ಅಂತ್ಯಜರ ಬಗ್ಗೆ ನಮಗೆ ತಿಳಿದಿರುವ ಸಾಕಷ್ಟು ಮಾಹಿತಿಯಿಂದ, ಅವರು ಅಸ್ಪೃಶ್ಯರಲ್ಲ ಎನ್ನುವುದು ತಿಳಿಯುತ್ತದೆ. ಈ ಕೆಳಗಿನ ವಸ್ತು ಸಂಗತಿಗಳ ಬಗ್ಗೆ, ಗಮನ ಸೆಳೆಯಬಹುದು.[೧]

ಮಹಾಭಾರತದ ಶಾಂತಿಪರ್ವ (೧೦೯.೯)ದಲ್ಲಿ ಅಂತ್ಯಜರ ಬಗ್ಗೆ ಒಂದು ಉಲ್ಲೇಖವಿದೆ. ಅದರಲ್ಲಿ ಅವರನ್ನು ಸೈನಿಕರೆಂದು ಕರೆಯಲಾಗಿದೆ.

ಸರಸ್ವತಿವಿಲಾಸದ ಪ್ರಕಾರ, ಪ್ರಕೃತಿಯೆಂದು ಭಾವಿಸಲಾದ ಅಂತ್ಯಜ ಪದದಡಿ ರಜಕರ ಏಳು ಪ್ರಕರಣಗಳನ್ನು ಪಿತಾಮಹ ಹೇಳುತ್ತಾನೆ. ಪ್ರಕೃತಿ ಎಂದರೆ ಮಡಿವಾಳರು ಇತ್ಯಾದಿ ಕಸಬುದಾರರ ಸಂಘ. ಇದು ಶಕ ೯೨೨ರ ಎರಡನೇ ಭಿಲ್ಲಮನ ಸಂಗಮನೇರ್ ಫಲಕದಿಂದ ಸ್ಪಷ್ಟವಾಗುತ್ತದೆ. ಇದರಲ್ಲಿ ಹದಿನೆಂಟು ಪ್ರಕೃತಿಗಳಿಗೆ ಒಂದು ಹಳ್ಳಿಯನ್ನು ದಾನಮಾಡಿದ ವಿಷಯ ಹೇಳಲಾಗಿದೆ. ರಜಕ ಇತ್ಯಾದಿ ಹದಿನೆಂಟು ಜಾತಿಗಳನ್ನು ಶ್ರೇಣಿಯೆಂದು ವಿರಮಿತ್ರೋದಯ ಹೇಳುತ್ತಾನೆ. ಈ ಹದಿನೆಂಟು ಜಾತಿಗಳನ್ನು ಒಟ್ಟಾಗಿ ಅಂತ್ಯಜರೆಂದು ಕರೆಯುತ್ತಿದ್ದರು. ಈ ಎಲ್ಲವನ್ನೂ ನೋಡಿದಾಗ, ಅಂತ್ಯಜರನ್ನು ಅಸ್ಪೃಶ್ಯರೆಂದು ನಡೆಸಿಕೊಳ್ಳುತ್ತಿದ್ದರೆಂದು ಭಾವಿಸುವುದಾದರೂ ಹೇಗೆ?

ಅಂತ್ಯವಾಸಿನ್‌ಗಳ ವಿಷಯಕ್ಕೆ ಬಂದರೆ, ಅವರು ಯಾರು? ಅವರು ಅಸ್ಪೃಶ್ಯರೆ? ಅಂತ್ಯವಾಸಿನ್ ಎಂಭುದನ್ನು ಎರಡು ಅರ್ಥದಲ್ಲಿ ಬಳಸಲಾಗಿದೆ. ತನ್ನ ವಿದ್ಯಾರ್ಥಿ ದೆಶೆಯಲ್ಲಿ, ಗುರುವಿನ ಮನೆಯಲ್ಲಿ ವಾಸಿಸುತ್ತಿದ್ದ ಬ್ರಹ್ಮಚಾರಿಯನ್ನು ಒಂದರ್ಥದಲ್ಲಿ ಹೀಗೇ[೨] ಕರೆಯುತ್ತಿದ್ದರು. ಇದರ ಅರ್ಥ ಬಹುಶಃ ಕೊನೆಗೆ ಸೇವೆ ಪಡೆಯುತ್ತಿದ್ದವನು ಎಂದಿರಬಹುದು. ಯಾವುದೇ ಕಾರಣಕ್ಕಾಗಿ ಬ್ರಹ್ಮಚಾರಿಯನ್ನು ಅಂತ್ಯವಾಸಿನ್ ಎಂದು ಕರೆದಿದ್ದರೂ ಸಹ, ಆ ಸಂಬಂಧ ಅದು ಅಸ್ಪೃಶ್ಯತೆಯನ್ನು ಸೂಚಿಸುವುದಿಲ್ಲ, ಎನ್ನುವುದು ನಿರ್ವಿವಾದ.

---

೧. ಕಾಣೆ : *History of Dharma Shastra,* ಸಂಪುಟ II ಭಾಗ I. ಪು. ೭೦

೨. ಅಮರಕೋಶ II ಕಾಂಡ ಬ್ರಹ್ಮವರ್ಗ ಶ್ಲೋಕ II

ಕೇವಲ ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರು ಮಾತ್ರವೇ ಬ್ರಹ್ಮಚಾರಿಗಳಾಗಲು ಅವಕಾಶವಿದ್ದಾಗ, ಅದು ಹಾಗೆ ಆಗಲಿಕ್ಕಾದರೂ ಹೇಗೆ ಸಾಧ್ಯ? ಇನ್ನೊಂದು ಅರ್ಥದಲ್ಲಿ ಅಂತ್ಯವಾಸಿನ್ ಎಂಬುದು ಒಂದು ಜನಸಮೂಹ ಎನ್ನಲಾಗುತ್ತದೆ. ಈ ಅರ್ಥದಲ್ಲಿ ಕೂಡ, ಹಾಗೆಂದರೆ ಅಸ್ಪೃಶ್ಯರು ಎಂಬ ಅರ್ಥ ಹೊರಡುತ್ತಿತ್ತೆ ಎನ್ನುವುದು ಅನುಮಾನಾಸ್ಪದ.

ವಸಿಷ್ಠ ಧರ್ಮಸೂತ್ರ (೧೮.೩)ದ ಪ್ರಕಾರ, ತಂದೆ ಶೂದ್ರ, ತಾಯಿ ವೈಶ್ಯರಾದವರು ಅಂತ್ಯ ವಾಸಿನ್‌ಗಳು, ಆದರೆ ಮನು (V.೩೯) ಪ್ರಕಾರ, ಅವರು ಚಂಡಾಲ ತಂದೆ, ನಿಷಾದ ತಾಯಿಗೆ ಹುಟ್ಟಿದವರು. ಅವರು ಯಾವ ವರ್ಗಕ್ಕೆ ಸೇರಿದವರು ಎಂಬ ಬಗ್ಗೆ, ಮಿತಾಕ್ಷರನ ಪ್ರಕಾರ ಅವರು ಅಂತ್ಯಜರ ಒಂದು ಉಪ ಪಂಗಡ. ಅಂದರೆ, ಅಂತ್ಯವಾಸಿನ್‌ರು, ಅಂತ್ಯಜರಿಗಿಂತ ಬೇರೆಯಲ್ಲ. ಆದ್ದರಿಂದ ಅಂತ್ಯಜರ ವಿಷಯದಲ್ಲಿ ಯಾವುದು ನಿಜವೋ, ಅಂತ್ಯವಾಸಿನ್ ವಿಷಯದಲ್ಲೂ ಅದು ನಿಜ.

## III

ಅಂತ್ಯವಾಸಿನ್ ಅಂತ್ಯ ಮತ್ತು ಅಂತ್ಯಜ ಎಂಬ ಜನಗಳ ಸಾಮಾಜಿಕ ಸ್ಥಿತಿಗೆ ಸಂಬಂಧಿಸಿದಂತೆ, ಪ್ರಾಚೀನ ಸಾಹಿತ್ಯದಿಂದ ದೊರೆಯುವ ಮಾಹಿತಿಯನ್ನು ಆಧರಿಸಿ, ಇವರುಗಳು ಆಧುನಿಕ ಪರಿಭಾಷೆಯಲ್ಲಿ ಅಸ್ಪೃಶ್ಯರಲ್ಲ ಎನ್ನುವುದು ಸಾಬೀತಾಗುತ್ತದೆ. ಇಷ್ಟಾದರೂ ಸಮಾಧಾನವಿಲ್ಲದವರಿಗಾಗಿ, ಇಡೀ ವಿಷಯವನ್ನು ಇನ್ನೊಂದು ದೃಷ್ಟಿಕೋನದಿಂದಲೂ ನೋಡಬಹುದು. ಅವರನ್ನು ಅಸ್ಪೃಶ್ಯರೆಂದೇ ಕರೆಯುವುದಾದಲ್ಲಿ, ಆ ಕಾಲದಲ್ಲಿ ಅಂದರೆ ಧರ್ಮಸೂತ್ರಗಳ ಕಾಲದಲ್ಲಿ ಅಸ್ಪೃಶ್ಯ ಎಂಬ ಮಾತಿಗೆ ಏನು ಅರ್ಥವಿತ್ತು ಎನ್ನುವುದರತ್ತ ಗಮನ ಹರಿಸಬಹುದು.

ಈ ಉದ್ದೇಶದ ಈಡೇರಿಕೆಗೆ, ಶಾಸ್ತ್ರಗಳು ವಿಧಿಸಿದ ಪ್ರಾಯಶ್ಚಿತ್ತದ ಕಟ್ಟಳೆಗಳೇನು ಎಂಬ ಅಂಶವನ್ನು ನೋಡಬೇಕು. ಇವುಗಳ ಅಭ್ಯಾಸದಿಂದ, ಅಸ್ಪೃಶ್ಯ ಎಂಬ ಪದಕ್ಕೆ ಆ ಕಾಲದಲ್ಲಿಯೂ ಈಗಿನ ಅರ್ಥವೇ ಇದ್ದಿತೆ ಎಂಬ ಅಂಶವನ್ನು ಗಮನಿಸಬಹುದು.

ಅಸ್ಪೃಶ್ಯ ಎಂಬ ವರ್ಗಕ್ಕೆ ಸೇರಿದ ಚಂಡಾಲರ ಉದಾಹರಣೆಯನ್ನು ನೋಡೋಣ. ಮೊದಲಿಗೆ ಚಂಡಾಲ ಎಂಬ ಪದ ಒಂದು ತನ್ನದೇ ಆದ ಗುಂಪಿಗೆ ಅನ್ವಯಿಸುವುದಿಲ್ಲ, ಎಂಬುದನ್ನು ನೆನಪಿಡಬೇಕು. ಅದು ಅನೇಕ ವರ್ಗಗಳಿಗೆ – ಒಂದಕ್ಕಿಂತ ಒಂದು ಭಿನ್ನವಾದ – ವರ್ಗಗಳಿಗೆ ಸೇರಿದ್ದು. ಶಾಸ್ತ್ರಗಳೇ ಹೇಳಿರುವ ಪ್ರಕಾರ ಐದು ಬೇರೆ ಬೇರೆ ವರ್ಗದ ಚಂಡಾಲರಿದ್ದಾರೆ. ಅವರು – (i) ಶೂದ್ರತಂದೆ, ಬ್ರಾಹ್ಮಣ ತಾಯಿ[೧]ಯ ಸಂತತಿ, (ii) ಮದುವೆಯಿಲ್ಲದ ಹೆಂಗಸಿಗೆ ಹುಟ್ಟಿದ ಸಂತತಿ,[೨] (iii) ಸಗೋತ್ರ ಹೆಂಗಸಿನೊಂದಿಗೆ ಉಂಟಾದ ಸಂಪರ್ಕದಿಂದ ಉಂಟಾದ ಸಂತತಿ,[೩] (iv) ಸಂನ್ಯಾಸಿಯಾದವನು ಮತ್ತೆ ಸಂಸಾರಿಯಾದವನಿಗೆ ಉಂಟಾದ ಸಂತತಿ,[೪] ಮತ್ತು (v) ಕ್ಷೌರಿಕ ತಂದೆ ಮತ್ತು ಬ್ರಾಹ್ಮಣ ತಾಯಿಗೆ ಉಂಟಾದ ಸಂತತಿ?[೫]

---

೧. ಮನುಸ್ಮೃತಿಯೂ ಸೇರಿದಂತೆ ಸ್ಮೃತಿಗಳು ಮತ್ತು ಎಲ್ಲ ಧರ್ಮ ಶಾಸ್ತ್ರಗಳ ಪ್ರಕಾರ.

೨ ಮತ್ತು ೩ ವೇದವ್ಯಾಸ ಸ್ಮೃತಿಯ (೧, ೯೧೦) ಪ್ರಕಾರ.

೪. ಪರಸುರ ಮಾಧವ್ಯದಲ್ಲಿ ಉಲ್ಲೇಖಿತವಾದ ಯಮನ ಹೇಳಿಕೆ ಪ್ರಕಾರ

೫. ಅನುಶಾಸನಪರ್ವ (೨೯–೧೭) ಆತನನ್ನು ಮಾತಂಗ ಎಂದೂ ಕರೆಯುತ್ತಾರೆ.

ಇವರಲ್ಲಿ ಯಾವ ಚಂಡಾಲ ಶುದ್ಧಿಗೆ ಒಳಪಡುತ್ತಾನೋ ಹೇಳುವುದು ಕಷ್ಟ. ಇವರೆಲ್ಲರೂ ಶುದ್ಧಿಗೆ ಅರ್ಹರು ಎಂದು ತಿಳಿಯೋಣ. ಹಾಗಿದ್ದರೆ, ಶಾಸ್ತ್ರಗಳಲ್ಲಿ ಶುದ್ಧಿಗಾಗಿ ಇರುವ ನಿಯಮಗಳಾವುವು?

ಗೌತಮ ತನ್ನ ಧರ್ಮಸೂತ್ರದಲ್ಲಿ (ಅಧ್ಯಾಯ XIV ಶ್ಲೋಕ ೩೦) ಈ ಕೆಳಗಿನ ಮಾತುಗಳ ಮೂಲಕ ಅದನ್ನು ಕುರಿತು ಹೇಳುತ್ತಾನೆ –

"ಒಬ್ಬ ಜಾತಿಭ್ರಷ್ಟ, ಚಂಡಾಲ, ಬಾಣಂತಿಯಾದವಳು, ರಜಸ್ವಲೆಯಾದವಳು, ಒಂದು ಹೆಣ–ಇವುಗಳನ್ನು ಮುಟ್ಟುವುದು ಮತ್ತು ಇವುಗಳನ್ನು ಮುಟ್ಟಿಸಿಕೊಂಡವನನ್ನು ಮುಟ್ಟುವುದು – ಇವೆರಡೂ ಸಂದರ್ಭದಲ್ಲಿ ಉಟ್ಟ ಬಟ್ಟೆಯಲ್ಲೇ ಸ್ನಾನಮಾಡಿ ಪರಿಶುದ್ಧನಾಗಬೇಕು.

ವಸಿಷ್ಠ ಧರ್ಮಸೂತ್ರ (ಅಧ್ಯಾಯ IV ಶ್ಲೋಕ ೩೭) ಈ ಕೆಳಕಂಡ ರೀತಿ ಹೇಳುತ್ತದೆ –

"ಒಬ್ಬನು ಯಜ್ಞಸ್ತಂಭ, ಚಿತೆ, ಶ್ಮಶಾನ, ರಜಸ್ವಲೆಯಾದ ಇಲ್ಲವೆ ಬಾಣಂತಿಯಾದ ಹೆಂಗಸು, ಅಶೌಚದಲ್ಲಿರುವ ಜನ ಅಥವಾ ಚಂಡಾಲ ಮುಂತಾದವರನ್ನು ಮುಟ್ಟಿದಾಗ, ಆತ ತಲೆಗೆ ಸ್ನಾನ ಮಾಡಬೇಕು."

ಬೌಧಾಯನನೂ ವಸಿಷ್ಠನ ಅಭಿಪ್ರಾಯವನ್ನೇ ಒಪ್ಪುತ್ತಾನೆ. ಯಾಕೆಂದರೆ, ಅವನ ಧರ್ಮಸೂತ್ರ (ಪ್ರಶ್ನೆ೧, ಅಧ್ಯಾಯ ೫, ಖಂಡ ೬, ಶ್ಲೋಕ ೫)ದಲ್ಲಿ ಹೀಗೆ ಹೇಳುತ್ತಾನೆ –

"ಒಬ್ಬ ಬ್ರಾಹ್ಮಣನು, ಪವಿತ್ರ ಸ್ಥಳದಲ್ಲಿರುವ ಒಂದು ಮರ, ಒಂದು ಚಿತೆ, ಒಂದು ಯಜ್ಞಸ್ತಂಭ, ಒಬ್ಬ ಚಂಡಾಲ ಅಥವಾ ವೇದವನ್ನು ಮಾರಿಕೊಳ್ಳುವವನು – ಇವರುಗಳನ್ನು ಮುಟ್ಟಿದಾಗ, ತಾನು ಉಟ್ಟಬಟ್ಟೆಯಲ್ಲೇ ಸ್ನಾನಮಾಡಬೇಕು."

ಮನುವಿನಲ್ಲಿ ಈ ಕೆಳಕಂಡ ನಿಬಂಧನೆಗಳು ಕಂಡುಬರುತ್ತವೆ:

*V ೮೫* *ಒಬ್ಬ ಬ್ರಾಹ್ಮಣನು, ಒಬ್ಬ ಚಂಡಾಲ, ರಜಸ್ವಲೆಯಾದ ಹೆಂಗಸು, ಒಬ್ಬ ಜಾತಿಭ್ರಷ್ಟ, ಬಾಣಂತಿ, ಒಂದು ಹೆಣ ಅಥವಾ ಹೆಣವನ್ನು ಮುಟ್ಟಿದವನನ್ನು ತಗುಲಿಸಿಕೊಂಡರೆ, ಅವನು ಸ್ನಾನ ಮಾಡುವುದರ ಮೂಲಕ ಪರಿಶುದ್ಧನಾಗುತ್ತಾನೆ.*

*V ೧೩೧* *ನಾಯಿಗಳಿಂದ ಕೊಲ್ಲಲ್ಪಟ್ಟ ಪ್ರಾಣಿಯ ಮಾಂಸ ಶುದ್ಧವಾದದ್ದೆಂದು ಮನು ಹೇಳುತ್ತಾನೆ. ಅದೇ ರೀತಿ ಮಾಂಸಾಹಾರಿ ಪ್ರಾಣಿಯಿಂದ ಕೊಲ್ಲಲ್ಪಟ್ಟ ಪ್ರಾಣಿಯ ಮಾಂಸ, ಅಥವಾ (ದಾಸ್ಯ) ಅಥವಾ ಚಂಡಾಲನಂತಹ ಕೆಳವರ್ಗದ ಮನುಷ್ಯನಿಂದ ಕೊಲ್ಲಲ್ಪಟ್ಟ ಪ್ರಾಣಿಯ ಮಾಂಸ ಶುದ್ಧವಾಗಿರುತ್ತದೆ.*

*V ೧೪೩* *ಯಾವನೊಬ್ಬ ಏನನ್ನಾದರೂ ಹೊತ್ತು ಸಾಗಿಸುತ್ತಿರುವಾಗ ಅಶುದ್ಧ (ವ್ಯಕ್ತಿ ಅಥವಾ ವಸ್ತುವಿನ) ಸಂಪರ್ಕದೊಂದಿಗೆ ಬಂದರೆ, ಆ ವಸ್ತುವನ್ನು ಮುಳುಗಿಸದೆ ತಾನು ಸ್ನಾನಮಾಡಿದರೆ ಪರಿಶುದ್ಧನಾಗುತ್ತಾನೆ.*

ಧರ್ಮಸೂತ್ರಗಳು ಮತ್ತು ಮನುವಿನಿಂದ ಎತ್ತಿಕೊಳ್ಳಲಾದ ಈ ಉದ್ಧೃತಗಳಿಂದ, ಕೆಳಕಂಡ ಅಂಶಗಳು ಸ್ಪಷ್ಟವಾಗುತ್ತವೆ –

(೧) ಚಂಡಾಲನಿಂದ ಮುಟ್ಟಿಸಿಕೊಂಡಾಗ ಮೈಲಿಗೆ ಎನ್ನುವುದು ಬ್ರಾಹ್ಮಣರಲ್ಲಿ ಮಾತ್ರ ಇತ್ತು.

(೨) ಇಂತಹ ಮೈಲಿಗೆಯನ್ನು ಬಹುಶಃ ವಿಶೇಷ ಸಂದರ್ಭಗಳಲ್ಲಿ ಮಾತ್ರ ಆಚರಿಸುತ್ತಿದ್ದರು.

## IV

ಈ ಮೇಲಿನ ತೀರ್ಮಾನಗಳು ಸರಿಯಾಗಿದ್ದರೆ, ಅದು ಅಸ್ಪೃಶ್ಯತೆಯಿಂದ ಭಿನ್ನವಾದ ಅಶೌಚ. ಅಶೌಚ ಮತ್ತು ಅಸ್ಪೃಶ್ಯತೆ ಎರಡರ ನಡುವಿನ ವ್ಯತ್ಯಾಸ ಅತ್ಯಂತ ಸ್ಪಷ್ಟ, ಅಸ್ಪೃಶ್ಯ ಎಲ್ಲರನ್ನೂ ಮೈಲಿಗೆ ಮಾಡುತ್ತಾನೆ. ಅಶೌಚನಾದರೋ ಬ್ರಾಹ್ಮಣರನ್ನು ಮಾತ್ರ ಮೈಲಿಗೆ ಮಾಡುತ್ತಾನೆ. ಅಶೌಚರು ವಿಶೇಷ ಸಂದರ್ಭಗಳಲ್ಲಿ ಮಾತ್ರ ಮೈಲಿಗೆಗೆ ಕಾರಣರಾಗುತ್ತಾರೆ. ಅಸ್ಪೃಶ್ಯರು ಯಾವಾಗ ಮುಟ್ಟಿದರೂ ಮೈಲಿಗೆ ಉಂಟುಮಾಡುತ್ತಾರೆ.

ಧರ್ಮಸೂತ್ರದಲ್ಲಿ ಹೆಸರಿಸಿದ ಎಲ್ಲ ಸಮುದಾಯಗಳೂ ಅಸ್ಪೃಶ್ಯರು ಎಂಬ ಸಿದ್ಧಾಂತವನ್ನು ಸಂಪೂರ್ಣವಾಗಿ ತಳ್ಳಿಹಾಕುವ ಇನ್ನೊಂದು ವಾದವಿದೆ; ಅದರ ಬಗೆಗೆ ಇದುವರೆಗೂ ಗಮನ ಹರಿದಿಲ್ಲ. ಈ ವಾದ, ಸಾರ್ವಭೌಮ ಅನುಮತಿ ಪಡೆದ (ಇದನ್ನು ಎರಡನೇ ಅಧ್ಯಾಯದಲ್ಲಿ ಕೊಡಲಾಗಿದೆ) ಸಮುದಾಯಗಳ ಶ್ರೇಣಿಗೂ, ಸ್ಮೃತಿಗಳಿಂದ, ಈ ಅಧ್ಯಾಯದಲ್ಲಿ ತೆಗೆದುಕೊಡಲಾದ ಪಟ್ಟಿಗೂ ಹೋಲಿಸುವುದರಿಂದ ಉದ್ಭವಿಸುತ್ತದೆ. ಈ ಹೋಲಿಕೆ ಏನನ್ನು ತೋರಿಸುತ್ತದೆ? ಯಾರು ಬೇಕಾದರೂ ನೋಡುವಂತೆ ಅದು ಈ ಕೆಳಗಿನ ಅಂಶಗಳನ್ನು ತೋರಿಸುತ್ತದೆ.

ಮೊದಲನೆಯದಾಗಿ, ಸ್ಮೃತಿಗಳಲ್ಲಿ ಪಟ್ಟಿಮಾಡಲಾದ ಸಮುದಾಯಗಳ ಸಂಖ್ಯೆ ಕೇವಲ ೧೨, ಸಾರ್ವಭೌಮ ಅನುಮತಿ ಪಡೆದ ಶ್ರೇಣಿಯಲ್ಲಾದರೊ, ಇವುಗಳ ಸಂಖ್ಯೆ ೪೨೯.

ಎರಡನೆಯದಾಗಿ, ಸಾರ್ವಭೌಮ ಅನುಮತಿ ಪಡೆದ ಶ್ರೇಣಿಯಲ್ಲಿ ಅವಕಾಶ ಪಡೆದ ಸಮುದಾಯಗಳು, ಸ್ಮೃತಿಯಲ್ಲಿ ಜಾಗವನ್ನೇ ಪಡೆದಿಲ್ಲ. ಒಟ್ಟು ೪೨೯ರಲ್ಲಿ,[೧] ಸ್ಮೃತಿಗಳಲ್ಲಿ ೪೨೭ ಉಲ್ಲೇಖಿತವಾಗಿಲ್ಲ.

ಮೂರನೆಯದಾಗಿ, ಸ್ಮೃತಿಯಲ್ಲಿ ಹೆಸರಿಸಲಾದ ಸಮುದಾಯಗಳು ಕೆಲವು ಸಾರ್ವಭೌಮ ಅನುಮತಿ ಪಡೆದ ಶ್ರೇಣಿಯಲ್ಲಿ ಇಲ್ಲ.

ನಾಲ್ಕನೆಯದಾಗಿ, ಎರಡೂ ಕಡೆ ಜಾಗ ಪಡೆದಿರುವ ಒಂದೇ ಒಂದು ಸಮುದಾಯವೆಂದರೆ ಚರ್ಮಕಾರ ಸಮುದಾಯ.[೨]

ಯಾರು ಅಶೌಚದವರನ್ನು ಅಸ್ಪೃಶ್ಯರಿಗಿಂತ ಬೇರೆ ಎಂದು ಒಪ್ಪುವುದಿಲ್ಲವೋ, ಅವರಿಗೆ ಈ ಸತ್ಯಸಂಗತಿಗಳು ಗೊತ್ತಿದ್ದಂತಿಲ್ಲ. ಆದರೆ ಅವರು ಇವುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲೇಬೇಕಾಗುತ್ತದೆ. ಈ ಸತ್ಯಸಂಗತಿಗಳು ಎಷ್ಟು ಪ್ರಬಲ ಮತ್ತು ಪರಿಣಾಮಕಾರಿ ಎಂದರೆ, ಅವುಗಳಿಂದ ಉಂಟಾದ ಪರಿಣಾಮವೆಂದರೆ, ಅವೆರಡೂ ಬೇರೆ ಬೇರೆ ಎನ್ನುವ ತೀರ್ಮಾನ.

ಮೊದಲ ಸತ್ಯಸಂಗತಿಯನ್ನೇ ತೆಗೆದುಕೊಳ್ಳಿ. ಅದು ಬಹಳ ಮುಖ್ಯ ಪ್ರಶ್ನೆಯೊಂದನ್ನು ಎತ್ತುತ್ತದೆ.

ಎರಡೂ ಪಟ್ಟಿಗಳು ಒಂದೇ ವರ್ಗದ ಜನಗಳನ್ನು ಉದ್ದೇಶಿಸಿದ್ದಲ್ಲಿ ಅವು ಯಾಕೆ ಅಷ್ಟೊಂದು ಭಿನ್ನವಾಗಿವೆ? ಸಾರ್ವಭೌಮ ಅನುಮತಿ ಪಡೆದ ಪಟ್ಟಿಯಲ್ಲಿ, ಶಾಸ್ತ್ರಗಳು ಹೇಳುವ ಪಟ್ಟಿಯಲ್ಲಿನ ಸಮುದಾಯಗಳು ಏಕೆ ನಮೂದಿತವಾಗಿಲ್ಲ? ಇದಕ್ಕೆ ವಿರುದ್ಧವಾಗಿ ಸಾರ್ವಭೌಮ ಅನುಮತಿ ಪಡೆದ

---

೧. ಸಾರ್ವಭೌಮ ಅನುಮತಿ ಪಡೆದ ಶ್ರೇಣಿಯ ೪೨೪ ಸಮುದಾಯಗಳೆಲ್ಲಿ ಮೂರು ಮಾತ್ರವೇ ಸ್ಮೃತಿಗಳಲ್ಲಿ ಹೇಳಲ್ಪಟ್ಟಿವೆ.

೨. ಎರಡೂ ಪಟ್ಟಿಗಳಲ್ಲಿ ಸೇರಿರುವ ಇನ್ನೆರಡು ಸಮುದಾಯಗಳಿವೆ (೧) ನಟ, ಮತ್ತು (೨) ರಜಕ. ಆದರೆ ಸಾರ್ವಭೌಮ ಅನುಮತಿ ಪಡೆದ ಶ್ರೇಣಿಯ ಪ್ರಕಾರ ಅವರು ದೇಶದ ಕೆಲವು ಭಾಗಗಳಲ್ಲಿ ಅಸ್ಪೃಶ್ಯರು. ಚಮ್ಮಾರ ಭಾರತಾದ್ಯಂತ ಅಸ್ಪೃಶ್ಯ.

ಪಟ್ಟಿಯಲ್ಲಿ ನಮೂದಾದ ಸಮುದಾಯಗಳು ಶಾಸ್ತ್ರಗಳಲ್ಲಿ ಏಕೆ ಜಾಗ ಪಡೆದಿಲ್ಲ? ನಾವು ಎದುರಿಸಬೇಕಾದ ಮೊದಲ ಸಮಸ್ಯೆ ಇದೇನೇ.

ಅವೆರಡೂ ಒಂದೇ ವರ್ಗದ ಜನಗಳನ್ನು ಉದ್ದೇಶಿಸಿವೆ ಎಂದು ಭಾವಿಸಿದರೆ, ಆಗ ಪ್ರಶ್ನೆ ಗಂಭೀರವಾಗುತ್ತದೆ. ಅವೆರಡೂ ಒಂದೇ ವರ್ಗದ ಜನರಿಗೆ ಸಂಬಂಧಿಸಿದ್ದರೆ, ಮೊದಲಿಗೆ ಕೇವಲ ೧೨ ಸಮುದಾಯಗಳಿಗೆ ಸೀಮಿತವಾಗಿದ್ದ ಅಸ್ಪೃಶ್ಯತೆಗೆ, ಅನಂತರ ೪೨೯ ಸಮುದಾಯಗಳಿಗೆ ವಿಸ್ತೃತಗೊಂಡಂತೆ ಆಗುತ್ತದೆ. ಅಸ್ಪೃಶ್ಯತೆಯ ಈ ಮಹಾಸಾಮ್ರಾಜ್ಯದ ವಿಸ್ತರಣೆಗೆ ದಾರಿ ಮಾಡಿಕೊಟ್ಟದ್ದಾದರೂ ಏನು? ಈ ೪೨೯ ಸಮುದಾಯಗಳು, ಶಾಸ್ತ್ರಗಳು ಹೇಳುವ ೧೨ ವರ್ಗಕ್ಕೆ ಸೇರಿದ್ದರೆ, ಅವು ಇವುಗಳನ್ನು ಯಾಕೆ ಹೆಸರಿಸುವುದಿಲ್ಲ? ಶಾಸ್ತ್ರಗಳು ರಚಿತವಾದ ಕಾಲಕ್ಕೆ ಈ ೪೨೯ರಲ್ಲಿ ಒಂದು ಸಮುದಾಯವೂ ಅಸ್ತಿತ್ವದಲ್ಲಿರಲಿಲ್ಲ ಎನ್ನಲು ಸಾಧ್ಯವಿಲ್ಲ. ಅವೆಲ್ಲವೂ ಅಲ್ಲದಿದ್ದರೂ, ಕೆಲವಾದರೂ ಇದ್ದಿರಬೇಕು. ಹಾಗಿದ್ದರೆ, ಅಸ್ತಿತ್ವದಲ್ಲಿದ್ದ ಸಮುದಾಯಗಳು ಯಾಕೆ, ಶಾಸ್ತ್ರಗಳಲ್ಲಿ ಸ್ಥಾನ ಪಡೆದಿಲ್ಲ?

ಎರಡೂ ಪಟ್ಟಿಗಳು, ಒಂದೇ ವರ್ಗದ ಜನರಿಗೆ ಸಂಬಂಧಿಸಿದೆ ಎಂದು ಒಪ್ಪಿದರೆ, ಈ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಕೊಡುವುದು ಕಷ್ಟ. ಅದಕ್ಕೆ ಬದಲಾಗಿ, ಇವೆರಡೂ ಬೇರೆ ಬೇರೆ ವರ್ಗದ ಜನರಿಗೆ ಸಂಬಂಧಿಸಿದ್ದರೆ, ಈ ಪ್ರಶ್ನೆಗಳೆಲ್ಲ ಮಾಯವಾಗಿಬಿಡುತ್ತದೆ. ಇವೆರಡೂ ಬೇರೆ ಬೇರೆ. ಯಾಕೆಂದರೆ, ಶಾಸ್ತ್ರಗಳಲ್ಲಿರುವುದು ಅಶೌಚದವರು; ಸಾರ್ವಭೌಮ ಅನುಮತಿ ಪಡೆದ ಪಟ್ಟಿಯಲ್ಲಿರುವುದು ಅಸ್ಪೃಶ್ಯರದು. ಈ ಕಾರಣಕ್ಕಾಗಿಯೇ ಇವೆರಡರಲ್ಲೂ ಅಷ್ಟೊಂದು ವ್ಯತ್ಯಾಸ, ಬೇರೆ ಕಾರಣಕ್ಕಾಗಿ ಇದುವರೆಗೂ ಒತ್ತಾಯಪೂರ್ವಕವಾಗಿ ಹೇಳಲಾದ ಅಂಶವನ್ನೇ, ಅಂದರೆ, ಶಾಸ್ತ್ರಗಳಲ್ಲಿನ ಪಟ್ಟಿ ಅಶೌಚದವರದ್ದೆಂದೂ, ಅವುಗಳನ್ನೂ ಇಂದಿನ ಕಾಲದ ಅಸ್ಪೃಶ್ಯರ ಜತೆ ಸೇರಿಸುವುದು ತಪ್ಪೆಂದೂ ಸಿದ್ಧಾಂತವಾಗುತ್ತದೆ.

ಈಗ ಎರಡನೆ ಅಂಶದ ಕಡೆ ನೋಡೋಣ. ಅಶೌಚದವರೂ ಅಸ್ಪೃಶ್ಯರೇ ಆಗಿದ್ದಲ್ಲಿ, ಸ್ಮೃತಿಗಳಿಗೆ ಅವುಗಳ ೪೨೯ರಲ್ಲಿ ೪೨೭ ಗೊತ್ತಿಲ್ಲವೆಂದರೆ, ಹೇಗೆ? ಸ್ಮೃತಿಗಳ ಕಾಲದಲ್ಲಿ ಅವು ಸಮುದಾಯಗಳಾಗಿ ಅಸ್ತಿತ್ವದಲ್ಲಿರಬೇಕು. ಅವರು ಈಗ ಅಸ್ಪೃಶ್ಯರಾಗಿದ್ದರೆ, ಆಗಲೂ ಅಸ್ಪೃಶ್ಯರಾಗಿದ್ದಿರಬೇಕು. ಹಾಗಿದ್ದರೆ ಸ್ಮೃತಿಗಳು ಅವುಗಳನ್ನು ಯಾಕೆ ಹೆಸರಿಸಲಿಲ್ಲ?

ಮೂರನೆಯದು ಹೇಗೆ? ಅಶೌಚದವರು ಮತ್ತು ಅಸ್ಪೃಶ್ಯರು ಒಂದೇ ಆಗಿದ್ದರೆ, ಸ್ಮೃತಿಯಲ್ಲಿ ಜಾಗಪಡೆದ ಸಮುದಾಯಗಳು, ಸಾರ್ವಭೌಮ ಅನುಮತಿ ಪಡೆದ ಪಟ್ಟಿಯಲ್ಲಿ ಏಕೆ ಜಾಗ ಪಡೆಯಲಿಲ್ಲ? ಇದಕ್ಕೆ ಕೇವಲ ಎರಡು ಉತ್ತರಗಳು ಸಾಧ್ಯ. ಅದೆಂದರೆ, ಒಂದು ಕಾಲಕ್ಕೆ ಅವರು ಅಸ್ಪೃಶ್ಯರಾಗಿದ್ದರೂ, ನಂತರ ಅವರು ಅಸ್ಪೃಶ್ಯರಾಗಿ ಉಳಿಯಲಿಲ್ಲ. ಎರಡನೆಯ ಉತ್ತರವೆಂದರೆ, ಎರಡೂ ಪಟ್ಟಿಗಳಲ್ಲಿ ಸೇರ್ಪಡೆಯಾದವರು ಬೇರೆ ಬೇರೆ ಪ್ರಭೇದಗಳಿಗೆ ಸೇರಿದವರು. ಮೊದಲ ಉತ್ತರ ಹೊಂದುವಂತದ್ದಲ್ಲ. ಯಾಕೆಂದರೆ ಅಸ್ಪೃಶ್ಯತೆ ಬದಲಾಗುವಂತದ್ದಲ್ಲ. ಕಾಲ ಅದನ್ನು ತೊಳೆಯಲಾರದು ಇಲ್ಲವೆ ತೊಡೆದುಹಾಕಲಾರದು. ಆದ್ದರಿಂದ ಸಮರ್ಪಕವಾದ ಉತ್ತರ ಎಂದರೆ ಎರಡನೆಯದು.

ನಾಲ್ಕನೆಯದನ್ನು ತೆಗೆದುಕೊಳ್ಳಿ. ಚಮ್ಮಾರ ಮಾತ್ರವೇ ಯಾಕೆ ಎರಡೂ ಪಟ್ಟಿಯಲ್ಲಿರಬೇಕು. ಎರಡೂ ಪಟ್ಟಿಯಲ್ಲಿ ಒಂದೇ ವರ್ಗದ ಜನರನ್ನು ಸೇರಿಸಲಾಗಿದೆ ಎನ್ನುವುದು ಉತ್ತರವಲ್ಲ. ಇದು ಸರಿಯಾದ ಉತ್ತರವಾಗಿದ್ದಿದ್ದರೆ, ಆಗ ಚಮ್ಮಾರ ನೊಬ್ಬನೇ ಅಲ್ಲ, ಸ್ಮೃತಿಯಲ್ಲಿ ಸೇರಿಸಲಾದ ಉಳಿದೆಲ್ಲರೂ, ಎರಡೂ ಪಟ್ಟಿಗಳಲ್ಲಿರಬೇಕಾಗಿತ್ತು. ಆದರೆ ಅವು ಕಂಡುಬರುವುದಿಲ್ಲ. ಸರಿಯಾದ ಉತ್ತರವೆಂದರೆ, ಎರಡೂ ಪಟ್ಟಿಗಳು, ಎರಡು ಬೇರೆ ಬೇರೆ ವರ್ಗದ ಜನರನ್ನು ಒಳಗೊಂಡಿವೆ. ಅಶೌಚದ ಪಟ್ಟಿಯಲ್ಲಿದ್ದವರು, ಅಸ್ಪೃಶ್ಯರ ಪಟ್ಟಿಗೆ

ಬಂದರು, ಎಂದರೆ ಅಶೌಚದವರು ಒಂದು ಕಾಲಘಟ್ಟದಲ್ಲಿ ಅಸ್ಪೃಶ್ಯರಾದರು ಎನ್ನುವುದು. ಚಮ್ಮಾರ ಎರಡೂ ಪಟ್ಟಿಗಳಲ್ಲಿ ಇದ್ದಾನೆಂಬ ಕಾರಣಕ್ಕೆ, ಅಶೌಚ ಮತ್ತು ಅಸ್ಪೃಶ್ಯ ಇಬ್ಬರೂ ಒಂದೇ ಎಂದು ಹೇಳುವುದು ಸತ್ಯದೂರ. ಒಂದು ಕಾಲಕ್ಕೆ ಅಶೌಚನಾಗಿದ್ದ ಚಮ್ಮಾರ, ಕಾಲಕ್ರಮೇಣ ಅಸ್ಪೃಶ್ಯನಾದ, ಆದ್ದರಿಂದ ಆತ ಎರಡೂ ಪಟ್ಟಿಯಲ್ಲಿದ್ದನೆಂದು ಹೇಳುವುದು ಸಾಧುವಾಗುತ್ತದೆ. ಸ್ಮೃತಿಗಳಲ್ಲಿ ಹೇಳಲಾದ ಹನ್ನೆರಡು ಸಮುದಾಯದಲ್ಲಿ, ಚಮ್ಮಾರನೊಬ್ಬನೇ ಅಧಃಪತನಕ್ಕೆ ಯಾಕೆ ಒಳಗಾದನೆಂದು ವಿವರಿಸುವುದು ಕಷ್ಟವಲ್ಲ. ಚಮ್ಮಾರ ಮತ್ತು ಉಳಿದ ಅಶೌಚ ಸಮುದಾಯಗಳಿಗೆ ವ್ಯತ್ಯಾಸ ಉಂಟುಮಾಡಿದ್ದು, ಗೋಮಾಂಸ ಭಕ್ಷಣೆ. ಅಶೌಚರಲ್ಲಿ ಯಾರು ಗೋಮಾಂಸ ತಿನ್ನುತ್ತಿದ್ದರೋ ಅವರು ಅಸ್ಪೃಶ್ಯರಾದರು. ಇದಕ್ಕೆ ಕಾರಣ ಹಸು ಪವಿತ್ರ ಪ್ರಾಣಿಯೆಂದು ಪರಿಗಣಿಸಲ್ಪಟ್ಟು, ಗೋಮಾಂಸ ಭಕ್ಷಣೆ ಪಾಪವೆಂದು ಘೋಷಿಸಲಾಯಿತು. ಚಮ್ಮಾರರದ್ದೊಂದೇ ಗೋಮಾಂಸ ಭಕ್ಷಕ ಸಮುದಾಯ, ಆದ್ದರಿಂದಲೇ ಅದೊಂದು ಮಾತ್ರವೇ ಎರಡೂ ಪಟ್ಟಿಯಲ್ಲಿದೆ. ಚಮ್ಮಾರರಿಗೆ ಸಂಬಂಧಪಟ್ಟ ಪ್ರಶ್ನೆಗೆ, ಉತ್ತರ ಎರಡು ಅಂಶಗಳಲ್ಲಿ ನಿರ್ಣಾಯಕ, ಇದು ಅಶೌಚದವರು ಅಸ್ಪೃಶ್ಯರಿಗಿಂತ ಭಿನ್ನವಾದರು ಎಂಬ ಬಗ್ಗೆ ತೀರ್ಮಾನವಾಗಿದೆ. ಗೋಮಾಂಸ ಭಕ್ಷಣೆಯೇ ಅಸ್ಪೃಶ್ಯತೆಯ ಮೂಲ ಮತ್ತು ಅದೇ ಅಶೌಚ ಅಸ್ಪೃಶ್ಯರನ್ನು ಬೇರೆ ಬೇರೆ ಮಾಡುತ್ತದೆ ಎಂಬ ವಿಷಯದಲ್ಲೂ ಇದು ಅಂತಿಮ ತೀರ್ಮಾನವಾಗಿದೆ.

ಅಸ್ಪೃಶ್ಯತೆಯ ಜನ್ಮ ದಿನಾಂಕ ನಿರ್ಧರಿಸುವುದರಲ್ಲಿ ಅಸ್ಪೃಶ್ಯತೆ, ಅಶೌಚಕ್ಕಿಂತ ಭಿನ್ನ ಎಂಬ ತೀರ್ಮಾನ ಮಹತ್ತರ ಪಾತ್ರ ವಹಿಸುತ್ತದೆ. ಈ ಅಂಶವನ್ನು ಗಮನಕ್ಕೆ ತೆಗೆದುಕೊಳ್ಳದೆ ಹೋದರೆ, ಈ ಬಗ್ಗೆ ನಿರ್ಧರಿಸುವುದು ಅಸಾಧ್ಯವಾಗುತ್ತದೆ.

♦

# ಅಧ್ಯಾಯ ೧೬

## ಹತಾಶರಾದ ಜನರು ಅಸ್ಪೃಶ್ಯರಾದದ್ದು ಯಾವಾಗ?

ಇಲ್ಲಿಯವರೆಗಿನ ಚರ್ಚೆ ಮತ್ತು ಸಂಶೋಧನೆಯಿಂದ ಮೂಡಿಬರುವ ವಿಷಯ ಎಂದರೆ, ಒಂದು ಕಾಲದಲ್ಲಿ ಭಾರತದ ಹಳ್ಳಿಗಳಲ್ಲಿ ಸ್ಥಾಪಿತ ಸಮುದಾಯ ಮತ್ತು ಜಾತಿಭ್ರಷ್ಟರು ಎಂಬ ಎರಡು ಭಾಗಗಳಿದ್ದು, ಮೊದಲಿನವರು ಹಳ್ಳಿಯ ಒಳಗೂ ಎರಡನೆಯವರು ಹಳ್ಳಿಯ ಹೊರಗೂ ಜೀವಿಸುತ್ತಿದ್ದರು. ಆದರೆ ಸ್ಥಾಪಿತ ಸಮುದಾಯಕ್ಕೂ ಜಾತಿಭ್ರಷ್ಟರಿಗೂ ಮಧ್ಯೆ ಒಡನಾಟಕ್ಕೆ ಯಾವ ನಿಷೇಧವೂ ಇರಲಿಲ್ಲ. ಹಸು ಪವಿತ್ರ ಪ್ರಾಣಿಯಾದಾಗ, ಸ್ಥಾಪಿತ ಸಮುದಾಯ ಮುಟ್ಟಿಸಿಕೊಳ್ಳುವ ಸಮುದಾಯವಾಗಿ, ಜಾತಿಭ್ರಷ್ಟರು ಅಸ್ಪೃಶ್ಯರಾದರು. ಜಾತಿಭ್ರಷ್ಟರನ್ನು ಅಸ್ಪೃಶ್ಯರೆಂದು ಗಣಿಸಿದ್ದು ಯಾವಾಗ? ನಾವು ಚರ್ಚಿಸಬೇಕಾದ ಕೊನೆಯ ಪ್ರಶ್ನೆ ಇದೇನೇ. ಅಸ್ಪೃಶ್ಯತೆಯ ಹುಟ್ಟಿಗೆ ಒಂದು ಗೊತ್ತಾದ ದಿನಾಂಕವನ್ನು ಗೊತ್ತು ಮಾಡುವುದಕ್ಕೆ ಕೆಲವು ಸ್ಪಷ್ಟ ತೊಂದರೆಗಳಿವೆ, ಅಸ್ಪೃಶ್ಯತೆ ಸಾಮಾಜಿಕ ಮನೋಧರ್ಮದ ಒಂದು ಮುಖ. ಅದೊಂದು ಸಾಮಾಜಿಕ ಗುಂಪು ಮನೋಧರ್ಮದ ಒಂದು ಮುಖ. ಅದೊಂದು ಸಾಮಾಜಿಕ ಗುಂಪು ಇನ್ನೊಂದು ಸಾಮಾಜಿಕ ಗುಂಪಿನ ಬಗೆಗೆ ಹೊಂದಿದ್ದ ವಾಕರಿಕೆಯ ಮನೋಭಾವ. ಸಾಮಾಜಿಕ ಮನೋಧರ್ಮದ ಬೆಳವಣಿಗೆಯಾದ ಅಸ್ಪೃಶ್ಯತೆ, ಒಂದು ಆಕೃತಿ ಮತ್ತು ರೂಪ ತಳೆಯಲು ಸಾಕಷ್ಟು ಕಾಲ ಹಿಡಿದಿರಬೇಕು. ಬಹುಶಃ ಒಂದು ಅಂಗೈ ಅಗಲದ ಮೋಡದಷ್ಟು ಗಾತ್ರದಲ್ಲಿ ಪ್ರಾರಂಭವಾದ ಇದು, ಕಾಲಕ್ರಮೇಣ ಇಂದು ಕಂಡುಬರುವ ಸರ್ವವ್ಯಾಪಿ ಆಕೃತಿಯನ್ನು ಪಡೆದಿರಬೇಕು. ಅಸ್ಪೃಶ್ಯತೆಯ ಬೀಜವನ್ನು ಬಿತ್ತಿದ್ದು ಯಾವಾಗ? ನಿರ್ದಿಷ್ಟ ದಿನಾಂಕವನ್ನು ಗೊತ್ತು ಮಾಡುವುದಕ್ಕೆ ಅಸಾಧ್ಯವಾದರೂ, ಒಂದು ಸರಿಸುಮಾರು ದಿನಾಂಕ ಗೊತ್ತು ಮಾಡುವುದು ಸಾಧ್ಯವೆ?

ನಿರ್ದಿಷ್ಟ ದಿನಾಂಕ ಸಾಧ್ಯವಿಲ್ಲ. ಆದರೆ ಒಂದು ಸರಿಸುಮಾರು ದಿನಾಂಕ ಕೊಡುವುದು ಸಾಧ್ಯ. ಇದಕ್ಕಾಗಿ ಅಸ್ಪೃಶ್ಯತೆ ಜಾರಿಯಲ್ಲಿರದಿದ್ದ ಕಾಲದ ಮೇಲುಮಿತಿ ಮತ್ತು ಜಾರಿಗೆ ಬಂದ ಕಾಲದ ಕೆಳಮಿತಿಯನ್ನು ಗೊತ್ತುಪಡಿಸುವುದು ಮೊದಲಿಗೆ ಅವಶ್ಯವಾಗಿದೆ.

ಮೇಲ್ತುದಿಯನ್ನು ಗೊತ್ತುಮಾಡುವ ಪ್ರಶ್ನೆಯನ್ನು ತೆಗೆದುಕೊಳ್ಳೋಣ. ಅಂತ್ಯಜರು ಎಂದು ಕರೆಯಲ್ಪಡುವವರು ವೇದಗಳಲ್ಲೇ ಕಂಡುಬರುತ್ತಾರೆ. ಅವರನ್ನು ಅಸ್ಪೃಶ್ಯರೆಂದು ಕರೆಯುವುದಿರಲಿ, ಅಶೌಚರೆಂದು ಕೂಡ ಗಣಿಸಿರಲಿಲ್ಲ. ಈ ತೀರ್ಮಾನದ ಬೆಂಬಲವಾಗಿ, ಕಾಣೆಯವರ ಈ ಉಲ್ಲೇಖವನ್ನು ತೆಗೆದುಕೊಳ್ಳಬಹುದು. ಕಾಣೆ ಹೇಳುತ್ತಾರೆ[೧] –

"ಸ್ಮೃತಿಗಳಲ್ಲಿ ಅಂತ್ಯಜರು ಎಂದು ಕರೆಯಲಾದ ಕೆಲವು ಜಾತಿಯ ಹೆಸರು, ಮೊದಮೊದಲ ವೈದಿಕ ಸಾಹಿತ್ಯದಲ್ಲಿವೆ. ಋಗ್ವೇದದಲ್ಲಿ (VIII ೮, ೩೮) ಚರ್ಮ್ಮರ (ಚರ್ಮ ಹದ ಮಾಡುವವನು), ವಾಜಸನೇಯ ಸ್ಮೃತಿಯಲ್ಲಿ ಚಂಡಾಲ ಮತ್ತು ಪೌಲ್ಕಸ, ಋಗ್ವೇದದಲ್ಲಿಯೇ ವೇಪ ಅಥವಾ ವಪ್ತ (ಕ್ಷೌರಿಕ), ವಾಜಸನೇಯ

---

೧. ಧರ್ಮಸೂತ್ರ, ಸಂಪುಟ II ಭಾಗ I, ಪು. ೧೬೫

ಸ್ಮೃತಿಯಲ್ಲಿ ಮತ್ತು ತೈ.ಬ್ರಾ.ದಲ್ಲಿ ವಿಡಲಕರ ಅಥವಾ ಬಿಡಲಕರ (ಸ್ಮೃತಿಗಳಲ್ಲಿ ಹೇಳುವ ಬುರುಡಕ್ಕೆ ಸಮ), ವಾಜಸನೇಯ ಸ್ಮೃತಿಯಲ್ಲಿಯೇ, ಸ್ಮೃತಿಗಳೇ ಹೇಳುವ ರಜಕನಿಗೆ ಸಮವಾದ ವಾಸಹಪಲ್ ಪುಲಿ (ಅಗಸಗಿತ್ತಿ)ಗಳು ಕಂಡುಬರುತ್ತವೆ. ಆದರೆ ಈ ಉಲ್ಲೇಖಗಳಲ್ಲಿ, ಅವರುಗಳು ಜಾತಿಗಳನ್ನು ಪ್ರತಿನಿಧಿಸಿದರೂ, ಅಸ್ಪೃಶ್ಯರಾಗಿದ್ದರೇ, ಎಂಬ ಬಗ್ಗೆ ಯಾವ ಸೂಚನೆಯೂ ಇಲ್ಲ."

ಹೀಗೆ, ವೇದಗಳ ಕಾಲದಲ್ಲಿ ಅಸ್ಪೃಶ್ಯತೆ ಇರಲಿಲ್ಲ, ಧರ್ಮಸೂತ್ರಗಳ ಕಾಲದಲ್ಲಿ ಅಶೌಚವಿದ್ದಿತೇ ಹೊರತು, ಅಸ್ಪೃಶ್ಯತೆ ಇರಲಿಲ್ಲವೆಂಬುದನ್ನು ಈಗಾಗಲೇ ಗಮನಿಸಲಾಗಿದೆ.

ಮನುವಿನ ಕಾಲದಲ್ಲಿ ಅಸ್ಪೃಶ್ಯತೆ ಇತ್ತೆ? ಬೇಜವಾಬ್ದಾರಿಯಿಂದ ಉತ್ತರಿಸಲು ಸಾಧ್ಯವಿಲ್ಲ. ಮನುವಿನಲ್ಲಿ ಕಂಡುಬರುವ ಒಂದು ಹೇಳಿಕೆ[೧]ಯಲ್ಲಿ ಕೇವಲ ನಾಲ್ಕು ವರ್ಣಗಳಿವೆಯೆಂದೂ, ಐದನೆಯ ವರ್ಣವಿಲ್ಲವೆಂದೂ ಹೇಳುತ್ತಾನೆ. ಈ ಮಾತು ರಹಸ್ಯದಿಂದ ಕೂಡಿದೆ. ಇದರ ಅಭಿಪ್ರಾಯವೇನೆಂದು ಹೇಳುವುದು ಕಷ್ಟ. ಮನು ಹೀಗೆ ಹೇಳುವುದಕ್ಕೆ ಕಾರಣ, ಆ ಕಾಲದಲ್ಲಿ ನಡೆಯುತ್ತಿದ್ದ ವಿವಾದವೊಂದಕ್ಕೆ ವಿರಾಮ ಹಾಕುವುದೇ ಉದ್ದೇಶವಾಗಿರಬೇಕು. ಈ ವಿವಾದ ಯಾವುದೋ ಒಂದು ವರ್ಗದ ಸ್ಥಾನವನ್ನು ಚಾತುರ್ವರ್ಣ್ಯಕ್ಕೆ ಸಂಬಂಧಿಸಿದಂತೆ ನಿರ್ಧರಿಸುವುದೇ ಆಗಿತ್ತು. ಈ ವಿವಾದದ ಕೇಂದ್ರ ಏನೆನ್ನುವುದು ಸ್ಪಷ್ಟವಾಗಿದೆ. ಸಂಕ್ಷೇಪವಾಗಿ ಹೇಳುವುದಾದರೆ, ಆ ಜಾತಿಯನ್ನು ಚಾತುರ್ವರ್ಣ್ಯದಲ್ಲಿ ಸೇರಿಸುವುದಕ್ಕೆ ತಕ್ಕನಾದ್ದು ಎಂದು ಭಾವಿಸುವುದೇ ಇಲ್ಲ. ಮೂಲದ ಚಾತುರ್ವರ್ಣಗಳಿಂದ ಭಿನ್ನವಾಗಿ ಅದನ್ನೇ ಬೇರೆಯ ಐದನೆಯ ವರ್ಣವೆಂದು ಭಾವಿಸುವುದೇ ಎಂಬುದೇ ಆಗಿತ್ತು. ಇದೆಲ್ಲವೂ ಸ್ಪಷ್ಟ. ಇಲ್ಲಿ ಅಸ್ಪಷ್ಟವಾಗಿರುವುದೆಂದರೆ, ಚರ್ಚಿತವಾದ ಈ ಜಾತಿ ಯಾವುದು ಎನ್ನುವುದು, ಯಾಕೆಂದರೆ ಮನು ಈ ವಿವಾದದಲ್ಲಿ ಸಿಕ್ಕಿಹಾಕಿಕೊಂಡ ಜಾತಿಯನ್ನು ಹೆಸರಿಸುವುದಿಲ್ಲ.

ಈ ಶ್ಲೋಕ ಇನ್ನೊಂದು ಕಾರಣಕ್ಕೂ ಒಗಟಿನಂತಿದೆ. ಯಾಕೆಂದರೆ, ಮನು ಕೊಡುವ ತೀರ್ಮಾನ ದ್ವಂದ್ವಾರ್ಥಕವಾಗಿದೆ. ಮನುವಿನ ನಿರ್ಣಯದ ಪ್ರಕಾರ ಐದನೆಯ ವರ್ಣ ಇಲ್ಲ. ಒಂದು ಸಾಮಾನ್ಯ ಸೂಚನೆಯಾಗಿ ಎಲ್ಲರೂ ಇದನ್ನು ಅರ್ಥಮಾಡಿಕೊಳ್ಳಬಲ್ಲರು. ಆದರೆ ವಿವಾದಕ್ಕೆ ಒಳಗಾದ ವರ್ಗಕ್ಕೆ ಇದನ್ನು ನಿಖರವಾಗಿ ಬಳಸುವುದಾದರೂ ಹೇಗೆ? ಇದಕ್ಕೆ ಎರಡು ವಿವರಣೆಗಳು ಸಾಧ್ಯ ಎನ್ನುವುದು ನಿರ್ವಿವಾದ, ಚಾತುರ್ವರ್ಣ್ಯದ ಪ್ರಕಾರ ಐದನೆಯ ವರ್ಣವಿಲ್ಲದೆ ಇರುವುದರಿಂದ, ಈಗ ಚರ್ಚಿತವಾದ ವರ್ಗ, ನಾಲ್ಕು ವರ್ಣಗಳಲ್ಲಿ ಒಂದಕ್ಕೆ ಸೇರಿದೆ ಎನ್ನುವುದನ್ನು ಒಪ್ಪಬೇಕು. ಅಲ್ಲದೆ, ವರ್ಣಗಳ ಪ್ರಕಾರ, ಐದನೆಯ ವರ್ಗಕ್ಕೆ ಅವಕಾಶವಿಲ್ಲದೆ ಇರುವುದರಿಂದ, ಇಲ್ಲಿ ಚರ್ಚಿತವಾದ ವರ್ಗ ವರ್ಣ ಪದ್ಧತಿಯ ಹೊರಗೆ ಇದೆ ಎಂದು ತಿಳಿಯಬೇಕು.

ಆಚಾರವಂತ ಹಿಂದೂಗಳು ಎತ್ತಿಹಿಡಿಯುವ ಸಾಂಪ್ರದಾಯಿಕ ಅರ್ಥಾನುಸಾರ, ಮನುವಿನ ಹೇಳಿಕೆ ಅಸ್ಪೃಶ್ಯರಿಗೆ ಸಂಬಂಧಿಸಿದ್ದೆಂದೂ, ಅಸ್ಪೃಶ್ಯರ ಸ್ಥಾನಮಾನ ವಿವಾದಕ್ಕೊಳಪಟ್ಟಿತ್ತೆಂದೂ, ಮನುವಿನ ನಿರ್ಣಯ ಅದಕ್ಕೆ ಸೇರಿದ್ದೆಂದೂ ಆಗುತ್ತದೆ. ಈ ವಿವರಣೆ ಎಷ್ಟರಮಟ್ಟಿ ಬೇರುಬಿಟ್ಟಿದೆ ಎಂದರೆ, ಅದು ಹಿಂದೂಗಳನ್ನು ಸವರ್ಣೀಯರು (ಚಾತುರ್ ವರ್ಣದಲ್ಲಿ ಸೇರಿದವರು) ಮತ್ತು ಅವರ್ಣೀಯರು ಅಥವಾ ಅಸ್ಪೃಶ್ಯರು (ಚಾತುರ್ವರ್ಣ್ಯದಿಂದ ಹೊರಗಿನವರು) ಎಂದು ಎರಡು ಭಾಗವಾಗಿ ವಿಂಗಡಿಸಿದೆ. ಇಲ್ಲಿನ ಪ್ರಶ್ನೆಯೆಂದರೆ ಈ ಅಭಿಪ್ರಾಯ ಸರಿಯೆ? ಈ ವಿವರಣೆ ಯಾರು ಯಾರಿಗೆ ಸಂಬಂಧಿಸಿದೆ? ಅದು ಅಸ್ಪೃಶ್ಯರಿಗೆ ತಟ್ಟುತ್ತದೆಯೆ? ಈ ಕುರಿತ ಚರ್ಚೆ, ಇಲ್ಲಿಗೆ ಸಂಬಂಧವಿಲ್ಲದ್ದು ಮತ್ತು ನಾವು ಯಾವ ಪ್ರಶ್ನೆಯನ್ನು ಚರ್ಚಿಸುತ್ತಿದ್ದೇವೆಯೋ

---

೧. ಮನು X ೪

ಅದರಿಂದ ದೂರವಾದದ್ದು ಎನಿಸಬಹುದು. ಆದರೆ ಅದು ಹಾಗಿಲ್ಲ. ಈ ಹೇಳಿಕೆ ಅಸ್ಪೃಶ್ಯರಿಗೆ ಸಂಬಂಧಿಸಿದ್ದು ಎಂದಾದರೆ, ಮನುವಿನ ಕಾಲದಲ್ಲಿ ಅಸ್ಪೃಶ್ಯತೆ ಇದ್ದಿತು ಎಂದು ಅರ್ಥ ಹೊರಡುತ್ತದೆ. ಇದು ನಮ್ಮ ಪ್ರಸ್ತುತ ಪ್ರಶ್ನೆಯ ಹೃದಯಕ್ಕೇ ತಟ್ಟುತ್ತದೆ. ಆದ್ದರಿಂದ ಈ ವಿಷಯವನ್ನು ವಿವರವಾಗಿ ಚರ್ಚಿಸಬೇಕು.

ಈ ವಿವರಣೆ ತಪ್ಪು ಎಂದು ನನ್ನ ಅಭಿಪ್ರಾಯ. ಇದು ಅಸ್ಪೃಶ್ಯರಿಗೆ ಸಂಬಂಧಿಸಿಲ್ಲ ಎಂದೇ ನನ್ನ ವಾದ. ವಿವಾದಕ್ಕೆ ಕಾರಣರಾದ ಐದನೆಯ ವರ್ಗದ ಜನ ಯಾರು ಎಂದು ಮನು ಹೇಳುವುದಿಲ್ಲ. ತಾನು ಯಾರ ಬಗ್ಗೆ ನಿರ್ಣಯ ಮಂಡಿಸಿದ್ದೇನೆಂದು ಹೇಳುವುದಿಲ್ಲ. ಅದು ಅಸ್ಪೃಶ್ಯ ವರ್ಗವೆ? ಬೇರೆ ಯಾವುದಾದರೂ ವರ್ಗದ ಜನವೆ? ಇದು ಅಸ್ಪೃಶ್ಯರಿಗೆ ಸಂಬಂಧಿಸಿದ್ದಲ್ಲ ಎಂಬ ನನ್ನ ವಾದಕ್ಕೆ ಬೆಂಬಲಸೂಚಕವಾಗಿ ಎರಡು ಸನ್ನಿವೇಶಗಳನ್ನು ನಾನು ಅವಲಂಬಿಸುತ್ತೇನೆ. ಮೊದಲನೆಯದಾಗಿ, ಮನುವಿನ ಕಾಲದಲ್ಲಿ ಅಸ್ಪೃಶ್ಯತೆ ಇರಲಿಲ್ಲ. ಆಗ ಇದ್ದುದು ಅಶೌಚ. ಮನುವಿಗೆ ತಿರಸ್ಕಾರವಲ್ಲದೆ ಬೇರೆ ಏನೂ ಇರದಿದ್ದ ಚಂಡಾಲ ಕೂಡ ಅಶೌಚ ಎನಿಸಿದ್ದ. ವಾಸ್ತವಾಂಶ ಹೀಗಿದ್ದುದರಿಂದ, ಈ ಹೇಳಿಕೆ ಅಸ್ಪೃಶ್ಯರಿಗೆ ಬಹುಶಃ ಸಂಬಂಧಿಸಿಲ್ಲ, ಎರಡನೆಯದಾಗಿ, ಈ ಹೇಳಿಕೆ ಗುಲಾಮರಿಗೆ ಸಂಬಂಧಿಸಿದ್ದೇ ಹೊರತು ಅಸ್ಪೃಶ್ಯರಿಗಲ್ಲ ಎನ್ನುವುದಕ್ಕೆ ಸಾಕಷ್ಟು ಪುರಾವೆ ಇದೆ. ಅಸ್ಪೃಶ್ಯತೆಯ ಔದ್ಯೋಗಿಕ ಸಿದ್ಧಾಂತವೆಂಬ ನಾರದ ಸ್ಮೃತಿಯ ಅಧ್ಯಾಯದಿಂದ ಉದ್ಧರಿಸಲಾದ ಹೇಳಿಕೆಯನ್ನು ಅದು ಅವಲಂಬಿಸಿದೆ. ನಾರದಸ್ಮೃತಿಯಲ್ಲಿ ಗುಲಾಮರನ್ನು ಐದನೆಯ ವರ್ಗದವರೆಂದು ಕರೆಯಲಾಗಿದೆ. ನಾರದಸ್ಮೃತಿಯಲ್ಲಿ ಐದನೆಯ ವರ್ಗ ಎನ್ನುವ ಮಾತು ಗುಲಾಮರಿಗೆ ಸಂಬಂಧಿಸಿದ್ದರೆ, ಮನುಸ್ಮೃತಿ ಕೂಡ ಗುಲಾಮರನ್ನು ಕುರಿತು ಹೇಳಿರಲಾರದು, ಎಂದು ನನಗೆ ತೋರುತ್ತದೆ. ಈ ವಾದ ಸರಿಯಾದರೆ, ಮನುವಿನ ಕಾಲದಲ್ಲಿ ಅಸ್ಪೃಶ್ಯತೆ ಇತ್ತು ಮತ್ತು ಮನು ಅವರನ್ನು ವರ್ಣ ವ್ಯವಸ್ಥೆಯಲ್ಲಿ ಸೇರಿಸಲು ಸಿದ್ಧನಿರಲಿಲ್ಲ ಎಂಬ ವಾದಾಂಶದ ಬೇರೇ ಕತ್ತರಿಸಿ ಹೋಗುತ್ತದೆ. ಈ ಕಾರಣಗಳಿಂದಾಗಿ, ಆ ಹೇಳಿಕೆ ಅಸ್ಪೃಶ್ಯತೆಗೆ ಅನ್ವಯಿಸುವುದಿಲ್ಲ. ಆದ್ದರಿಂದ ಮನುವಿನ ಕಾಲದಲ್ಲಿ ಅಸ್ಪೃಶ್ಯತೆ ಇತ್ತು ಎಂದು ನಿರ್ಣಯಿಸಬೇಕಾಗಿಲ್ಲ.

ಹೀಗೆ ಅಸ್ಪೃಶ್ಯತೆಯ ಹುಟ್ಟಿನ ಕಾಲದ ಮೇಲುತುದಿಯನ್ನು ನಾವು ನಿಸ್ಸಂದೇಹವಾಗಿ ಗುರುತಿಸಬಹುದು. ಮನುಸ್ಮೃತಿ ಅಸ್ಪೃಶ್ಯತೆಯನ್ನು ವಿಧಿಸಲಿಲ್ಲ. ಇಷ್ಟಾದರೂ ಒಂದು ಮುಖ್ಯ ಪ್ರಶ್ನೆ ಉಳಿದಿದೆ. ಮನುಸ್ಮೃತಿಯ ಅಸ್ಪೃಶ್ಯತೆಯ ಕಾಲ ಯಾವುದು? ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳದೆ, ಅಸ್ಪೃಶ್ಯತೆಯ ಇರವು ಅಥವಾ ಇಲ್ಲದೆ ಇರುವ ಸಂದರ್ಭದ ಕಾಲವನ್ನು ನಿರ್ಣಯಿಸುವುದು ಅಸಾಧ್ಯ. ಮನುಸ್ಮೃತಿಯ ಕಾಲದ ಬಗ್ಗೆ ಪಂಡಿತರಲ್ಲಿ ಒಟ್ಟಾಭಿಪ್ರಾಯವಿಲ್ಲ. ಕೆಲವರು ಅದನ್ನು ತುಂಬ ಹಳೆಯದೆಂದು, ಕೆಲವರು ತುಂಬ ಈಚಿನದೆಂದು ಭಾವಿಸುತ್ತಾರೆ. ಎಲ್ಲ ವಿಷಯಗಳನ್ನೂ ಗಮನಕ್ಕೆ ತೆಗೆದುಕೊಂಡು, ಪ್ರೊ. ಬೂಲರ್ ಪ್ರಕಾರ ಈಗಿರುವಂತೆ ಮನುಸ್ಮೃತಿ ಕ್ರಿ.ಶ. ಎರಡನೆ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂತು.[೧] ಇಂತಹ ಇತ್ತೀಚಿನ ಕಾಲವನ್ನು ಕೊಡುವುದರಲ್ಲಿ ಬೂಲರ್ ಏಕಾಂಗಿಯಾಗಿಲ್ಲ. ಮಿ.ದಫ್ತರಿ ಕೂಡ ಇದೇ ತೀರ್ಮಾನಕ್ಕೆ ಬಂದಿದ್ದಾನೆ. ಆತನ ಪ್ರಕಾರ ಮನುಸ್ಮೃತಿ ಕ್ರಿ.ಪೂ. ೧೮೫ರ ನಂತರ ಅಸ್ತಿತ್ವಕ್ಕೆ ಬಂತೇ ವಿನಾ, ಅದಕ್ಕೆ ಮೊದಲಿಗಲ್ಲ. ಇದಕ್ಕೆ ಕಾರಣ, ಮಿ. ದಫ್ತರಿ ಪ್ರಕಾರ, ಮೌರ್ಯ ವಂಶದ ಬೌದ್ಧ ಚಕ್ರವರ್ತಿ ಬೃಹದ್ರಥನನ್ನು ಆತನ ಬ್ರಾಹ್ಮಣ ದಂಡಾಧಿಕಾರಿ ಪುಷ್ಯಮಿತ್ರ ಸುಂಗ ಕೊಲೆ ಮಾಡಿದುದಕ್ಕೂ ಮನುಸ್ಮೃತಿಗೂ ಸಂಬಂಧವಿದೆ. ಆ ಕೊಲೆ ಕ್ರಿ.ಪೂ. ೧೮೫ರಲ್ಲಿ ನಡೆದದ್ದರಿಂದ, ಆತ ಮನುಸ್ಮೃತಿ ಕ್ರಿ.ಪೂ. ೧೮೫ರ ನಂತರ ರಚಿತವಾಗಿರಬೇಕೆಂದು ತೀರ್ಮಾನಿಸುತ್ತಾನೆ. ಇಂತಹ ಒಂದು

೧. Buhler : *Laws of Manu* (SBE) ಸಂ XXV Int CXN

ಮುಖ್ಯವಾದ ತೀರ್ಮಾನಕ್ಕೆ ಬೆಂಬಲ ನೀಡಬೇಕಾದರೆ, ಪುಷ್ಯಮಿತ್ರನಿಂದ ಆದ ಬೃಹದ್ರಥನ ಕೊಲೆಗೂ, ಮತ್ತು ಮನುಸ್ಮೃತಿ ರಚನೆಗೂ ಒಂದು ಗಟ್ಟಿಯಾದ ಮತ್ತು ಒಪ್ಪಿಗೆಯಾಗುವಂತಹ ದಾಖಲೆಯ ಮೂಲ ಸಂಬಂಧವನ್ನು ಕಲ್ಪಿಸುವುದು ಅತ್ಯವಶ್ಯವಾಗಿದೆ. ಆದರೆ ಮಿ. ದಫ್ತರಿ ಈ ಕೆಲಸವನ್ನು ದುರದೃಷ್ಟವಶಾತ್ ಮಾಡಿಲ್ಲ. ಆದ್ದರಿಂದ ಆತನ ತೀರ್ಮಾನ ಗಾಳಿಯಲ್ಲಿ ತೇಲಾಡುವಂತೆ ಕಾಣುತ್ತದೆ. ಇಂತಹ ಸಂಬಂಧ ಕಲ್ಪಿಸುವುದು ಅನಿವಾರ್ಯ, ಈ ಉದ್ದೇಶಕ್ಕೆ ಬೇಕಾದ ದಾಖಲೆ, ಅದೃಷ್ಟವಶಾತ್ ಇಲ್ಲವೇ ಇಲ್ಲ.

ಪುಷ್ಯಮಿತ್ರನಿಂದ ಬೃಹದ್ರಥ ಮೌರ್ಯನ ಕೊಲೆ, ದುರದೃಷ್ಟವಶಾತ್ ಸೆಳೆಯಬೇಕಾದಷ್ಟು ಗಮನ ಸೆಳೆದಿಲ್ಲ. ಒಟ್ಟಾರೆಯಾಗಿ ಅದಕ್ಕೆ ಕೊಡಬೇಕಾದಷ್ಟು ಗಮನ ನೀಡಲಾಗಿಲ್ಲ. ಚರಿತ್ರಕಾರರು ಅದೊಂದು ವೈಯಕ್ತಿಕ ವಿಷಯ, ಇಬ್ಬರು ವ್ಯಕ್ತಿಗಳ ನಡುವಣ ಸಂಬಂಧಕ್ಕೆ ಸೇರಿದ್ದು ಎಂಬಂತೆ ನಡೆದುಕೊಂಡಿದ್ದಾರೆ. ಅದರಿಂದ ಆದ ಪರಿಣಾಮಗಳತ್ತ ದೃಷ್ಟಿಯನ್ನು ಹಾಯಿಸಿದರೆ, ಅದೊಂದು ಚರಿತ್ರಾರ್ಹ ಘಟನೆ. ಅದರ ಪ್ರಾಮುಖ್ಯವನ್ನು ಕೇವಲ ವಂಶ ಬದಲಾವಣೆ – ಮೌರ್ಯರಿಂದ ಸುಂಗರಿಗೆ ಆದ ಬದಲಾವಣೆ – ಎಂದು ಅಳೆಯಲಿಕ್ಕೆ ಬರುವುದಿಲ್ಲ. ಅದು ಫ್ರೆಂಚ್ ಕ್ರಾಂತಿಯಷ್ಟೇ ಮುಖ್ಯವಾದ ಕ್ರಾಂತಿ; ಅದಕ್ಕಿಂತ ದೊಡ್ಡದಲ್ಲದಿದ್ದರೆ, ಬೌದ್ಧರಾಜರುಗಳನ್ನು ಸ್ಥಾನಭ್ರಷ್ಟರನ್ನಾಗಿ ಮಾಡಲು, ಬ್ರಾಹ್ಮಣರು ಚಿತಾವಣೆಯಿಂದ ನಡೆಸಿದ ಒಂದು ಕ್ರಾಂತಿ, ರಕ್ತ ಕ್ರಾಂತಿ. ಪುಷ್ಯಮಿತ್ರನಿಂದ ಬೃಹದ್ರಥನ ಕೊಲೆಗೆ ಇದೇ ಅರ್ಥ.

ಈ ವಿಜಯೀ ಬ್ರಾಹ್ಮಣತ್ವಕ್ಕೆ ಅನೇಕ ಅವಶ್ಯಕತೆಗಳಿದ್ದವು. ಅದು ಚಾತುರ್ವರ್ಣ್ಯವನ್ನು ದೇಶದ ಕಾನೂನನ್ನಾಗಿ ಮಾಡಬೇಕಿತ್ತು. ಯಾಕೆಂದರೆ ಬೌದ್ಧರು ಅದನ್ನು ಅಪಮೌಲ್ಯಗೊಳಿಸಿದ್ದರು. ಬೌದ್ಧರು ಬಹಿಷ್ಕಾರ ಹಾಕಿದ್ದ ಗೋವಧೆಯನ್ನು ಅದು ಕಾನೂನುಬದ್ಧವಾಗಿ ಮಾಡಬೇಕಿತ್ತು. ಅಲ್ಲದೆ ಅದಕ್ಕೆ ಇದಕ್ಕಿಂತ ಹೆಚ್ಚಿನದು ಬೇಕಾಗಿತ್ತು. ಬೌದ್ಧರಾಜರ ವಿರುದ್ಧ ಈ ಕ್ರಾಂತಿ ಮಾಡುವುದರಲ್ಲಿ ಬ್ರಾಹ್ಮಣ ಮತ, ಈ ದೇಶದ ಅತ್ಯಂತ ಪವಿತ್ರ ಮತ್ತು ಉಲ್ಲಂಘಿಸಲಾಗದ ಎರಡು ಕಾನೂನನ್ನು ಅತಿಕ್ರಮಿಸಿತು. ಮೊದಲ ಕಾನೂನಿನ ಪ್ರಕಾರ ಬ್ರಾಹ್ಮಣ ಶಸ್ತ್ರ ಹಿಡಿಯುವುದು ಪಾಪ. ಎರಡನೆಯದರ ಪ್ರಕಾರ ರಾಜನ ವ್ಯಕ್ತಿತ್ವ (ದೈಹಿಕ) ಪವಿತ್ರ ಮತ್ತು ರಾಜಹತ್ಯೆ ಒಂದು ಪಾಪ. ತಾವು ಮಾಡಿದ ಅತಿಕ್ರಮಣವನ್ನು ಸಮರ್ಥಿಸಿಕೊಳ್ಳಲು, ವಿಜಯಿ ಬ್ರಾಹ್ಮಣತ್ವಕ್ಕೆ ತನ್ನ ಯಜಮಾನಿಕೆಯನ್ನೊಪ್ಪುವ ಒಂದು ಪವಿತ್ರ ಗ್ರಂಥ ಬೇಕಾಗಿತ್ತು. ಮನುಸ್ಮೃತಿಯ ಒಂದು ಅತ್ಯಂತ ಬೆಚ್ಚಿ ಬೀಳಿಸುವ ಗುಣವೆಂದರೆ, ಅದು ಚಾತುರ್ವರ್ಣ್ಯವನ್ನು ಈ ದೇಶದ ಕಾನೂನನ್ನಾಗಿಯೂ, ಪ್ರಾಣಿಬಲಿಯನ್ನು ಕಾನೂನುಬದ್ಧವಾಗಿಯೂ ಮಾಡುವುದಷ್ಟೇ ಅಲ್ಲ, ಅದು ಒಬ್ಬ ಬ್ರಾಹ್ಮಣ ಯಾವ ಸಂದರ್ಭದಲ್ಲಿ ನ್ಯಾಯಯುತವಾಗಿ ಶಸ್ತ್ರ ಹಿಡಿಯಬಹುದು ಮತ್ತು ಅವನು ನ್ಯಾಯಬದ್ಧವಾಗಿ ರಾಜಹತ್ಯೆಯನ್ನು ಮಾಡಬಹುದು ಎನ್ನುವುದನ್ನು ಹೇಳುತ್ತದೆ. ಈ ವಿಷಯವಾಗಿ ಮನುಸ್ಮೃತಿ ಹಿಂದೆ ಯಾವುದೇ ಸ್ಮೃತಿಯೂ ಮಾಡದೇ ಇದ್ದಿದ್ದನ್ನು ಮಾಡಿದೆ. ಇದು ಮೊದಲಿನ ದಾರಿಗಿಂತ ತೀರ ಭಿನ್ನ. ಇದೊಂದು ಹೊಸ ಸಿದ್ಧಾಂತ. ಮನುಸ್ಮೃತಿ ಇದನ್ನು ಯಾಕೆ ಮಾಡಬೇಕು? ಇದಕ್ಕೆ ಉತ್ತರ ಇಷ್ಟೇ, ಪುಷ್ಯಮಿತ್ರ ಮಾಡಿದ ಕ್ರಾಂತಿಕಾರೀ ಘಟನೆಗಳಿಗೆ ಅದು ಒಂದು ಸೈದ್ಧಾಂತಿಕ ಸಮರ್ಥನೆ ನೀಡಬೇಕಾಗಿತ್ತು. ಪುಷ್ಯಮಿತ್ರ ಮತ್ತು ಮನು ನೀಡಿದ ಹೊಸ ಸಿದ್ಧಾಂತ – ಇವೆರಡರ ನಡುವಿನ ಒಳಸಂಬಂಧ, ಮನುಸ್ಮೃತಿ ಕ್ರಿ.ಪೂ. ೧೮೫ರ ನಂತರ ಅಸ್ತಿತ್ವಕ್ಕೆ ಬಂತು ಎನ್ನುವುದನ್ನು ಸಾಧಿಸುತ್ತದೆ. ಈ ಕಾಲ, ಪ್ರೊ. ಬೂಲರ್ ನೀಡಿದ ಕಾಲಕ್ಕಿಂತ ಬಹಳ ದೂರವಾದದ್ದೇನೂ ಅಲ್ಲ, ಹೀಗೆ ಮನುಸ್ಮೃತಿಯ ಕಾಲವನ್ನು ನಿರ್ಣಯಿಸಿದ ಮೇಲೆ ಕ್ರಿ.ಶ. ಎರಡನೆಯ ಶತಮಾನದಲ್ಲಿ ಅಸ್ಪೃಶ್ಯತೆ ಇರಲಿಲ್ಲವೆಂದು ಹೇಳಬಹುದು.

ಈಗ ಅಸ್ಪೃಶ್ಯತೆಯ ಹುಟ್ಟಿನ ಕಾಲದ ಕೆಳತುದಿಯನ್ನು ಗೊತ್ತುಮಾಡುವ ಸಾಧ್ಯತೆಯತ್ತ ತಿರುಗೋಣ. ಇದಕ್ಕೆ ನಾವು ಭಾರತವನ್ನು ಸಂದರ್ಶಿಸಿದ ಇಲ್ಲಿನ ಜನಗಳ ರೀತಿನೀತಿಗಳನ್ನು ದಾಖಲಿಸಿದ ಚೀನಿ ಪ್ರವಾಸಿಗರತ್ತ ತಿರುಗಬೇಕು. ಇವರುಗಳಲ್ಲಿ ಫಾಹಿಯಾನ್ ಕೆಲವು ಕುತೂಹಲಕರದ ಸಂಗತಿಗಳನ್ನು ಹೇಳುತ್ತಾನೆ. ಆತ ಕ್ರಿ.ಶ. ೪೦೦ರಲ್ಲಿ ಭಾರತಕ್ಕೆ ಬಂದ. ಆತ ಚಿತ್ರಿಸಿದ ಇಲ್ಲಿನ ಜನಗಳ ರೀತಿ ನೀತಿಯಲ್ಲಿ ಈ ಕೆಳಗಿನ ಮಾತುಗಳು[೧] ಬರುತ್ತವೆ –

"ಈ ಮಥುರೆಯ ದಕ್ಷಿಣಕ್ಕೆ ಮಧ್ಯ ದೇಶವೆಂದು ಕರೆಸಿಕೊಳ್ಳುವ ನಾಡಿದೆ. ಈ ದೇಶದ ಹವಾಮಾನ, ಸುಖೋಷ್ಣ ಮತ್ತು ಸಮಧಾತುವಾಗಿದೆ. ಇಲ್ಲಿ ಹಿಮವಾಗಲೀ ಮಂಜಾಗಲೀ ಇಲ್ಲ. ಜನಗಳು ಸುಸ್ಥಿತಿಯಲ್ಲಿದ್ದಾರೆ. ಅವರು ತಲೆಗಂದಾಯ ಕೂಡ ಕೊಡಬೇಕಾಗಿಲ್ಲ. ಅವರ ಮೇಲೆ ಅಧಿಕೃತ ನಿರ್ಬಂಧಗಳಿಲ್ಲ. ರಾಜನಿಗೆ ಸೇರಿದ ಜಮೀನನ್ನು ಉಳುವವರು ಮಾತ್ರ, ತಮ್ಮ ಆದಾಯದ ಲಾಭದ ಒಂದಂಶವನ್ನು ರಾಜನಿಗೆ ಕೊಡುತ್ತಾರೆ. ಅವರು ಇಷ್ಟಪಟ್ಟರೆ ಹೋಗಬಹುದು, ಇಲ್ಲವೆ ಉಳಿಯಬಹುದು. ರಾಜರು ದೈಹಿಕಶಿಕ್ಷೆ ವಿಧಿಸದೆ ರಾಜ್ಯವಾಳುತ್ತಾರೆ. ಅಪರಾಧಿಗಳಿಗೆ ಸಂದರ್ಭಾನುಸಾರ ಕಡಿಮೆ ಇಲ್ಲವೆ ಹೆಚ್ಚಿನ ಶಿಕ್ಷೆ ನೀಡಲಾಗುತ್ತದೆ. ಮತ್ತೆ ಮತ್ತೆ ದಂಗೆಯೇಳುವಂತಹ ಸಂದರ್ಭದಲ್ಲಿ ಬಲಗೈಯನ್ನು ಮಾತ್ರ ಕತ್ತರಿಸಲಾಗುತ್ತದೆ. ರಾಜನ ಎಡ ಮತ್ತು ಬಲ ಪಕ್ಕಗಳಲ್ಲಿರುವ ಅಂಗರಕ್ಷಕನಿಗೆ ನಿರ್ದಿಷ್ಟ ಸಂಬಳ ನೀಡಲಾಗುತ್ತೆ. ದೇಶಾದ್ಯಂತ ಯಾವುದೇ ಪ್ರಾಣಿಯನ್ನು ಕೊಲ್ಲಲಾಗುವುದಿಲ್ಲ. ಮದ್ಯ ಸೇವಿಸುವುದಿಲ್ಲ. ಬೆಳ್ಳುಳ್ಳಿ ಈರುಳ್ಳಿಗಳನ್ನು ಚಂಡಾಲರು ಬಿಟ್ಟು ಬೇರೆಯವರು ತಿನ್ನುವುದಿಲ್ಲ. ಚಂಡಾಲರನ್ನು 'ಕೇಡಿಗರು' ಎಂದು ಕರೆಯುತ್ತಾರೆ, ಅವರು ಬೇರೆಯವರಿಂದ ಪ್ರತ್ಯೇಕವಾಗಿ ಜೀವಿಸುತ್ತಾರೆ. ಅವರು ಊರು ಅಥವಾ ಪೇಟೆಯನ್ನು ಪ್ರವೇಶಿಸುವಾಗ, ಒಂದು ಮರದ ತುಂಡಿನಿಂದ ಶಬ್ದ ಮಾಡುತ್ತಾರೆ. ಇದರ ಉದ್ದೇಶ ತಮ್ಮನ್ನು ಬೇರೆಯವರಿಂದ ದೂರ ಇರಿಸಿಕೊಳ್ಳುವುದೇ ಆಗಿದೆ. ಅವರ ಪ್ರವೇಶವನ್ನು ಕಂಡ ಯಾರೂ ಅವರೊಂದಿಗೆ ಬೆರೆಯುವುದಿಲ್ಲ. ಈ ದೇಶದ ಜನ ಹಂದಿಗಳನ್ನು, ಪಕ್ಷಿಗಳನ್ನು ಸಾಕುವುದಿಲ್ಲ. ಅವರು ಹಸುಗಳ ವ್ಯವಹಾರ ಮಾಡುವುದಿಲ್ಲ. ಅವರ ಪೇಟೆಗಳಲ್ಲಿ ಕಟುಕರಂಗಡಿಯಾಗಲೀ ಪಡಖಾನೆಗಳಾಗಲಿ ಇಲ್ಲ. ಅವರು ವ್ಯಾಪಾರಕ್ಕೆ ಕವಡೆ ಬಳಸುತ್ತಾರೆ. ಚಂಡಾಲರು ಬೇಟೆಯಾಡಿ, ಮಾಂಸ ಮಾರುತ್ತಾರೆ"

ಈ ಉಲ್ಲೇಖವನ್ನು, ಫಾಹಿಯಾನನ ಕಾಲದಲ್ಲಿ ಅಸ್ಪೃಶ್ಯತೆ ಆಚರಣೆಯಲ್ಲಿತ್ತು ಎಂಬುದಕ್ಕೆ ಪುರಾವೆಯಾಗಿ ತೆಗೆದುಕೊಳ್ಳಬಹುದೆ? ಚಂಡಾಲರನ್ನು ನಡೆಸಿಕೊಳ್ಳುತ್ತಿದ್ದ ರೀತಿಯ ಬಗೆಗಿನ ಕೆಲವು ಭಾಗಗಳು, ಅಸ್ಪೃಶ್ಯತೆ ಇತ್ತು ಎನ್ನುವುದಕ್ಕೆ ಬೆಂಬಲ ಸೂಚಿಸುವಂತಿವೆ.

ಆದರೆ ಈ ತೀರ್ಮಾನವನ್ನು ಒಪ್ಪಿಕೊಳ್ಳಲಿಕ್ಕೆ ಒಂದು ತೊಂದರೆ ಇದೆ. ತೊಂದರೆ ಯಾಕೆ ಅಂದರೆ, ಇಲ್ಲಿನ ವಾಸ್ತವಾಂಶಗಳು ಚಂಡಾಲರಿಗೆ ಸೇರಿದುದಾಗಿದೆ. ಅಸ್ಪೃಶ್ಯತೆ ಇದ್ದಿತೊ, ಇಲ್ಲವೊ ಎಂದು ನಿರ್ಧರಿಸಲಿಕ್ಕೆ ಚಂಡಾಲನದ್ದು ಒಳ್ಳೆಯ ಉದಾಹರಣೆಯಲ್ಲ. ಬ್ರಾಹ್ಮಣರು ಚಂಡಾಲರನ್ನು ತಮ್ಮ ವಂಶಪಾರಂಪರ್ಯ ಶತ್ರುಗಳು ಎನ್ನುವಂತೆ ನಡೆಸಿಕೊಂಡಿದ್ದರಿಂದ, ಅವರಿಗೆ ಭಯಂಕರವಾದ ನಡವಳಿಕೆಯನ್ನು ಆರೋಪಿಸುವ ದೌರ್ಬಲ್ಯವುಳ್ಳವರಾಗಿದ್ದಾರೆ. ಅವರತ್ತ ಕೀಳು ವಿಶೇಷಣಗಳನ್ನು ಹೊರಿಸಿ, ತೀರ ಕೃತಕವಾದ ನಡಾವಳಿಯನ್ನು ಸೃಷ್ಟಿಸಿ, ತಮ್ಮ ವಿಷವನ್ನು ಕಾರಲು ತಕ್ಕಂತೆ ಬಳಸಿದ್ದಾರೆ. ಆದ್ದರಿಂದ ಚಂಡಾಲರ ವಿಷಯವಾಗಿ ಹೇಳಿದ್ದನ್ನು, ತಕ್ಕಷ್ಟು ಎಚ್ಚರಿಕೆಯಿಂದ ತೆಗೆದುಕೊಳ್ಳಬೇಕು.

---

೧. Beal : *Buddhist Records in Western India,* (Intro.) P. XXXVIII

ಇದು ಕೇವಲ ಊಹೆಯನ್ನಾಧರಿಸಿದ ವಾದವಲ್ಲ. ಚಂಡಾಲರು ಬೇರೆ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದರೆನ್ನುವುದಕ್ಕೆ ಬಾಣ ಕಾದಂಬರಿಯ ಈ ಕೆಳಗಿನ ಮಾತುಗಳನ್ನು ಗಮನಿಸುವುದರ ಮೂಲಕ ಯಾರು ಈ ಅನುಮಾನ ಇಟ್ಟಿಕೊಂಡಿದ್ದಾರೆಯೋ ಅದರ ಯಥಾರ್ಥತೆಯನ್ನು ಪರಿಶೀಲಿಸಬಹುದು.

ಕಾದಂಬರಿಯ ಕತೆ ಬಹಳ ಸಂಕೀರ್ಣವಾಗಿದ್ದು, ಅದು ಇಲ್ಲಿ ನಮಗೆ ಸಂಬಂಧಿಸಿಲ್ಲ. ಒಬ್ಬ ಚಂಡಾಲ ತರುಣಿಯ ಮುದ್ದಿನ ಗಿಳಿಯಾದ ವೈಶಂಪಾಯನನು, ಈ ಕತೆಯನ್ನು ಶೂದ್ರಕ ರಾಜನಿಗೆ ಹೇಳುತ್ತದೆ ಎಂದು ತಿಳಿದುಕೊಂಡರೆ, ನಮ್ಮ ಉದ್ದೇಶಕ್ಕೆ ಸಾಕು, ಬಾಣನು ಮಾಡುವ ಚಂಡಾಲರ ಬೀಡಿನ ವರ್ಣನೆಯಿಂದ ಪ್ರಾರಂಭಿಸುವುದು ಒಳ್ಳೆಯದು. ಅದು ಹೀಗಿದೆ.[೧]

"ನಾನೊಂದು ಕೇಡಿನ ಬೀಡನ್ನೆ, ದುಷ್ಟ ಕಾರ್ಯಗಳ ಪೇಟೆಯನ್ನೇ ನೋಡಿದೆ. ಅಲ್ಲಿ ಎಲ್ಲ ಕಡೆಯೂ ತಮ್ಮ ಬೇಟೆ ಸಾಮಾನುಗಳನ್ನು ಬಿಟ್ಟುಕೊಂಡು ಬೇಟೆಯಾಡುತ್ತಿದ್ದವರನ್ನು ಕಂಡೆ, ಕೆಲವರು ಪಕ್ಷಿಗಳಿಗೆ ಪಾಠ ಹೇಳಿಕೊಡುತ್ತಿದ್ದರು, ಕೆಲವರು ಬಲೆಗಳನ್ನು ಸರಿಮಾಡುತ್ತಿದ್ದರು. ಆಯುಧಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಮೀನು ಹಿಡಿಯುತ್ತಿದ್ದರು, ಅವರ ಉಡುಪುಗಳು ವಿಕರಾವಾಗಿದ್ದವು, ರಾಕ್ಷಸರ ಉಡುಪಿನಂತೆ. ಅವರ ಮನೆಗಳು ಬಿದಿರು ಮೆಳೆಗಳ ಹಿಂದೆ ಅಡಗಿದ್ದು, ಗಂಧಕದ ಹೊಗೆಯಿಂದ ಅವುಗಳ ಬಾಗಿಲನ್ನು ಗುರುತಿಸಬೇಕಾಗಿತ್ತು. ಎಲ್ಲ ಕಡೆಗಳಲ್ಲೂ ತಲೆಬುರುಡೆಗಳಿಂದ ಆವರಣಗಳನ್ನು ನಿರ್ಮಿಸಿದ್ದರು. (೬೨೭) ಬೀದಿಯಲ್ಲಿನ ಧೂಳಿನ ರಾಶಿಗಳಲ್ಲಿ ಮೂಳೆಗಳಿದ್ದವು. ಮನೆ ಮುಂದಿನ ಅಂಗಳ ರಕ್ತದಿಂದ ಮಾಂಸದಿಂದ, ಕೊಬ್ಬಿನಿಂದ ತುಂಬಿಕೊಂಡು ಕೊಚ್ಚೆಯಾಗಿತ್ತು. ಅಲ್ಲಿನ ಜೀವನ ಬೇಟೆಯಿಂದ ಕೂಡಿದ್ದು, ಆಹಾರ ಮಾಂಸಾಹಾರವಾಗಿದ್ದು, ಅವರು ಬಳಸುತ್ತಿದ್ದ ಮುಲಾಮು ಕೊಬ್ಬಿನದಾಗಿತ್ತು. ಬಟ್ಟೆ ಒರಟು ರೇಷ್ಮೆಯಾಗಿತ್ತು. ಒಣಗಿದ ಚರ್ಮವೇ ಆಸನಗಳಾಗಿದ್ದವು. ಮನೆಯಲ್ಲಿ ನಾಯಿಗಳೇ ಪರಿಚಾರಿಕರಾಗಿದ್ದವು. ಹಸುಗಳೇ ಅವರ ಸವಾರಿ ಪ್ರಾಣಿಗಳಾಗಿದ್ದವು. ಗಂಡಸರ ಉದ್ಯೋಗ ಮದ್ಯ ಮಾನಿನಿಯರ ಉಪಭೋಗವಾಗಿತ್ತು. ದೇವರುಗಳಿಗೆ ಅಭಿಷೇಕ ರಕ್ತದ್ದಾಗಿದ್ದು, ಪಶುಗಳೇ ಬಲಿಪ್ರಾಣಿಗಳಾಗಿದ್ದವು. ಆ ಸ್ಥಳ ಎಲ್ಲ ಬಗೆಯ ನರಕದ ಪ್ರತಿರೂಪವಾಗಿತ್ತು"

ಇಂತಹ ನೆಲೆಯಿಂದ, ಚಂಡಾಲ ಕನ್ಯೆ ತನ್ನ ಗಿಳಿಯೊಂದಿಗೆ ಹೊರಟು, ಶೂದ್ರಕ ರಾಜನ ಅರಮನೆಗೆ ಹೊರಡುತ್ತಾಳೆ. ಶೂದ್ರಕ ರಾಜ ತನ್ನ ಆಸ್ತಾನದಲ್ಲಿ, ತನ್ನ ಸೇನಾನಾಯಕರೊಂದಿಗೆ ಕುಳಿತಿದ್ದ. ಬಾಗಿಲು ಕಾಯುವವಳೊಬ್ಬಳು, ಆಸ್ಥಾನ ಪ್ರವೇಶಿಸಿ, ಈ ಕೆಳಗಿನಂತೆ ಘೋಷಿಸುತ್ತಾಳೆ.[೨]

"ಮಹಾಸ್ವಾಮಿ, ದಕ್ಷಿಣದಿಂದ ಬಂದ ಒಬ್ಬ ಚಂಡಾಲ ಕನ್ಯೆ ಬಾಗಿಲಲ್ಲಿ ನಿಂತಿದ್ದಾಳೆ. ಸ್ವರ್ಗಕ್ಕೆ ಏರಿ, ಕೋಪಗೊಂಡ ಇಂದ್ರನ ಶಾಪದಿಂದ ಪತನಗೊಂಡ ತ್ರಿಶಂಕು ಮಹಾರಾಜನ ಕುಲಕ್ಕೆ ಸೇರಿದ ರಾಜರತ್ನ ಅವಳು. ಅವಳು ಪಂಜರವೊಂದರಲ್ಲಿ ಗಿಳಿಯೊಂದನ್ನು ತಂದಿದ್ದಾಳೆ. ಅವಳು ಆಳುವ ಮಹಾಸ್ವಾಮಿಯವರಾದ ತಮ್ಮ ಮುಂದೆ ವೈಭವವನ್ನು ಘೋಷಿಸುವಂತೆ ಕೇಳಿಕೊಂಡಿದ್ದಾಳೆ – 'ಮಹಾಸ್ವಾಮಿ, ಸಮುದ್ರದಂತಿರುವ ತಾವೊಬ್ಬರೇ, ಇಡೀ ಪ್ರಪಂಚದ ಅಮೂಲ್ಯ ವಸ್ತುಗಳನ್ನು ಪಡೆದುಕೊಳ್ಳಲು ತಕ್ಕವರು. ಪ್ರಪಂಚದಲ್ಲೇ ಅದ್ಭುತವಾದದ್ದು ಮತ್ತು ಅಮೂಲ್ಯವಾದದ್ದು ಎಂಬ ಕಾರಣಕ್ಕೆ ಈ ಹಕ್ಕಿಯನ್ನು ತಮ್ಮ ಪಾದಗಳಿಗೆ ಸಲ್ಲಿಸಬೇಕೆಂಬ ಕಾರಣಕ್ಕಾಗಿ, ತಮ್ಮನ್ನು ನೋಡುವ ಕಾರಣದಿಂದ ನಾನಿಲ್ಲಿ ಬಂದಿದ್ದೇನೆ.' ಮಹಾರಾಜರೇ,

---

೧. ಕಾದಂಬರಿ (ರಿಡ್ಡಿಂಗ್ ಅನುವಾದ) ಪು. ೨೦೪

೨. ಅದೇ. ಪು. ೪

ತಾವು ಆಕೆಯ ಮೊರೆಯನ್ನು ಕೇಳಿದ್ದೀರಿ. ಇನ್ನು ನಿರ್ಧಾರವನ್ನು ತೆಗೆದುಕೊಳ್ಳುವುದು, ತಮಗೆ ಬಿಟ್ಟಿದ್ದು". ಹೀಗೆ ಹೇಳುತ್ತ ಆಕೆ ತನ್ನ ಮಾತುಗಳನ್ನು ಮುಗಿಸಿದಳು. ಈ ಮಾತುಗಳಿಂದ ಉತ್ಸುಕನಾಗಿ ರಾಜ, ತನ್ನ ಸುತ್ತಲೂ ಕುಳಿತಿದ್ದ ದಂಡಾಧಿಕಾರಿಗಳನ್ನು ನೋಡಿ, "ಯಾಕಾಗಬಾರದು? ಅವಳಿಗೆ ಬರಲು ಹೇಳು" ಎಂದು ತನ್ನ ಒಪ್ಪಿಗೆಯನ್ನು ನೀಡಿದನು.

ಆಗ ಪರಿಚಾರಿಕೆಯು, ಕೂಡಲೇ, ರಾಜಾಜ್ಞೆಗನುಸಾರವಾಗಿ, ಚಂಡಾಲ ಕನ್ಯೆಯನ್ನು ಒಳಗೆ ಬಿಟ್ಟಳು. ಅವಳು ಒಳಗೆ ಬಂದಳು.

ಮೊದಲಿಗೆ ರಾಜ ಮತ್ತು ಮಾಂಡಲಿಕರು ಅವಳನ್ನು ಗಮನಿಸಲಿಲ್ಲ. ರಾಜನ ಗಮನ ಸೆಳೆಯಲು, ಆಕೆ ಚಪ್ಪಡಿ ಕಲ್ಲು ಹಾಸಿದ ನೆಲದ ಮೇಲೆ ಒಂದು ಬೊಂಬಿನ ತುಂಡಿನಿಂದ ಬಡಿದಳು. ಆನಂತರ ಬಾಣ ಅವಳು ಹೇಗೆ ಕಂಡಳು ಎನ್ನುವುದನ್ನು ವರ್ಣಿಸಲು ಹೊರಡುತ್ತಾನೆ.[೧]

"ಅಲ್ಲಿ ನೋಡಿ – ಎಂದು ತನ್ನ ಮಾಂಡಲಿಕರಿಗೆ, ರಾಜ ಚಂಡಾಲ ಕನ್ಯೆಯನ್ನು ತೋರಿಸಿ ಗಮನವಿಟ್ಟು ನೋಡಿದ. ಪರಿಚಾರಿಕೆ ಅವಳನ್ನು ಕೈಮಾಡಿ ತೋರಿಸಿದಂತೆ, ಅವಳ ಮುಂದೆ ಒಬ್ಬ ಮನುಷ್ಯ ಬರುತ್ತಿದ್ದ. ಆತನ ಕೂಡಲು, ವಯಸ್ಸಾದದ್ದರಿಂದ ನರೆತಿತ್ತು. ಆತನ ಕಣ್ಣುಗಳು ಕೆಂದಾವರೆಯಂತೆ ಕೆಂಪಗಿದ್ದವು. ನಿರಂತರವಾಗಿ ಕಷ್ಟಪಟ್ಟು ದುಡಿದದ್ದರಿಂದ, ಅವನ ಮೊಣಕಾಲು ಗಂಟು, ವಯಸ್ಸಾಗಿದ್ದರೂ ಗಟ್ಟಿಮುಟ್ಟಾಗಿದ್ದವು. ಆತನ ದೇಹಾಕೃತಿ ಮಾತಂಗನದ್ದಾದರೂ ಕೂಡ, ನಿರ್ಲಕ್ಷ್ಯಕ್ಕೆ ಒಳಪಡಿಸುವಂತಿರಲಿಲ್ಲ. ಆತ ರಾಜನ ಆಸ್ಥಾನಕ್ಕೆ ತಕ್ಕುದಾದ ಬಿಳಿವಸ್ತ್ರವನ್ನು ಧರಿಸಿದ್ದನು. ಆಕೆಯ ಹಿಂದೆ ಒಬ್ಬ ಚಂಡಾಲ ಹುಡುಗ ಬರುತ್ತಿದ್ದ. ಆತನ ಕೂದಲು ಎರಡೂ ಹೆಗಲಿನ ಮೇಲೆ ಬಿದ್ದಿತ್ತು. ಆತ ಒಂದು ಪಂಜರ ಹಿಡಿದುಕೊಂಡಿದ್ದ. ಆ ಪಂಜರದ ಕಂಬಿಗಳು ಬಂಗಾರದಿಂದ ಮಾಡಲ್ಪಟ್ಟಿದ್ದರೂ, ಗಿಳಿಯ ಹಸುರು ಪುಚ್ಚದ ನೆರಳಿನಿಂದಾಗಿ ಪಚ್ಚೆ ಬಣ್ಣಕ್ಕೆ ತಿರುಗಿದ್ದವು. ಆ ಕನ್ಯೆ, ತನ್ನ ಕಪ್ಪು ಬಣ್ಣದಿಂದಾಗಿ ರಾಕ್ಷಸರು ಹಾರಿಸಿಕೊಂಡು ಹೋದ ಅಮೃತವನ್ನು ಅಪಹರಿಸಲಿಕ್ಕಾಗಿ ಕೃಷ್ಣ ಮೋಹಿನಿ ರೂಪ ಧರಿಸಿದಾಗ ಹೊಂದಿದ್ದ ರೂಪವನ್ನು ಅನುಕರಿಸುತ್ತಿರುವಂತೆ ಕಂಡುಬಂದಳು. ಅವಳು ಒಂಟಿಯಾಗಿ ನೀಲಮಣಿಯ ಪುತ್ಥಳಿಯಂತೆ ನಡೆದುಬರುತ್ತಿದ್ದಳು. ಅವಳ ನೀಲಿ ಉಡುಗೆ ಮೊಣಕಾಲಿನವರೆಗೂ ಬರುತ್ತಿತ್ತು. ಅದರ ಮೇಲೆ ಧರಿಸಿದ ಕೆಂಪು ಮೇಲುದ, ನೀಲಿ ತಾವರೆಯ ಮೇಲೆ ಬಿದ್ದ ಸಂಜೆ ಬೆಳಕಿನಂತೆ ಕಾಣುತ್ತಿತ್ತು. ಅದೇ ತಾನೇ ಉದಿಸುತ್ತಿರುವ ಚಂದ್ರನ ಬೆಳಕಿನಿಂದ ರಾತ್ರಿಯ ಮುಖ ಬೆಳಗುವಂತೆ, ಅವಳ ಒಂದು ಕಿವಿಯಲ್ಲಿ ಧರಿಸಿದ್ದ ಓಲೆಯ ಬೆಳಕಿನಿಂದ ಅವಳ ಮುಖದ ವೃತ್ತ ಬೆಳ್ಳಗಾಗಿತ್ತು. ಆಕೆ ತನ್ನ ಹಣೆಯ ಮೇಲೆ ಗೋರೋಚನದಿಂದ ಮಾಡಿದ ಕಂದು ಬಣ್ಣದ ತಿಲಕ ಧರಿಸಿದ್ದಳು. ಅದು ಅವಳ ಮೂರನೆಯ ಕಣ್ಣಿನಂತೆ ಕಾಣುತ್ತಿತ್ತು. ಶಿವನ ಉಡುಪನ್ನು, ಅನುಸರಿಸಿ ಪಾರ್ವತಿ, ಬೆಟ್ಟಗಾಡಿನ ಜನ ಧರಿಸುವ ಬಟ್ಟೆ ಧರಿಸಿದಂತೆ, ಆಕೆ ಕಾಣುತ್ತಿದ್ದಳು.

ನಾರಾಯಣನ ನೀಲಿಬೆಳಕಿನಲ್ಲಿ ಎದೆಯ ಮೇಲೆ ಬೆಳಗಿನ ಶ್ರೀಯಂತೆ ಅವಳು ಕಾಣುತ್ತಿದ್ದಳು, ಅಥವಾ ಕ್ರೋಧಗೊಂಡ ಶಿವನ ಬೆಂಕಿಯಲ್ಲಿ ಉರಿದುಹೋದ ಕಾಮನಿಂದ ಹೊರಬಂದ ಹೊಗೆಯಿಂದ ಕಪ್ಪಾದ ರತಿಯಂತೆ ಕಾಣುತ್ತಿದ್ದಳು. ಅಥವಾ ಆಢ್ಯ ಬಲರಾಮನು ತನ್ನ ನೇಗಿಲಿನಿಂದ ಎಳೆದು ಬಿಡಬಹುದೇನೋ ಎಂಬ ಹೆದರಿಕೆಯಿಂದ ಓಡಿಹೋಗುತ್ತಿರುವ ಯಮುನೆಯಂತೆ ಕಾಣುತ್ತಿದ್ದಳು. ಅಥವಾ ತನ್ನ ತಾವರೆಯ ಪಾದಗಳು ಅರಗಿನಿಂದ ಮೊಗ್ಗೆಗಳಾದಂತೆ ಕಾಣುತ್ತಿದ್ದಳು. ಅಥವಾ ತನ್ನ ಪಾದಗಳಿಂದ

---

೧. ಕಾದಂಬರಿ (ರಿಡ್ಡಿಂಗ್ ಅನುವಾದ) ಪು. ೮–೧೦

ಮಹಿಷಾಸುರನನ್ನು ತುಳಿದುಹಾಕಿದ್ದರಿಂದ, ಅವನ ರಕ್ತದಿಂದ ಕೆಂಪಾದ ಪಾದವುಳ್ಳ ದುರ್ಗೆಯಂತೆ ಕಾಣುತ್ತಿದ್ದಳು.

ಅವಳು ಬೆರಳುಗಳಿಂದ ಚಿಮ್ಮುತ್ತಿದ್ದ ಪಾಟಲ ವರ್ಣದಿಂದಾಗಿ ಅವಳ ಉಗುರುಗಳು ಕೆಂಪಗಿದ್ದವು; ಚಪ್ಪಡಿ ಕಲ್ಲಿನಿಂದ ಮಾಡಿದ ನೆಲ, ಅವಳ ಪಾದಸ್ಪರ್ಶಕ್ಕೆ ಬಹಳ ಒರಟು ಎನಿಸುತ್ತಿತ್ತು. ಎಳೆಯ ರೆಂಬೆಗಳನ್ನು ನೆಲದ ಮೇಲೆ ಊರಿದ ಹಾಗೆ ಪಾದ ಊರಿಕೊಂಡು, ಅವಳು ನಡೆದು ಬಂದಳು.

ಅವಳ ಕಾಲಂದುಗೆಯ ಕಿರಣಗಳು, ಬೆಂಕಿ ಬಣ್ಣ ತಳೆದು, ಅವಳನ್ನು ಅಗ್ನಿಯ ಕೈಗಳಿಂದ ಆವರಿಸುವಂತೆ ಕಾಣುತ್ತಿದ್ದವು. ಅವಳ ಸೌಂದರ್ಯವನ್ನು ಆತ ಎಷ್ಟೊಂದು ಪ್ರೀತಿಸಿದನೆಂದರೆ, ಅವಳ ಹುಟ್ಟಿನ ದೋಷವನ್ನು ಸುಟ್ಟುಹಾಕಿ, ಅವಳನ್ನು, ಸೃಷ್ಟಿಕರ್ತನ ಕೆಲಸ ನಿಷ್ಫಲವಾಗುವ ರೀತಿಯಲ್ಲಿ, ಶುದ್ಧಿಗೊಳಿಸುವಂತೆ ಕಾಣುತ್ತಿತ್ತು.

ಅವಳ ಒಡ್ಯಾಣ, ಪ್ರೇಮ ಐರಾವತದ ಹುಟ್ಟಿನ ಮೇಲಿನ ನಕ್ಷತ್ರಮಾಲಿಕೆಯಂತಿತ್ತು. ಅವಳ ಕಂಠಾಭರಣವು ಯಮುನೆಯಿಂದ ಒಡಗೂಡಿದ ಗಂಗೆಯಂತೆ, ಪ್ರಜ್ವಲಿಸುವ ಮುತ್ತಿನಹಾರವಾಗಿತ್ತು.

ಶರತ್ ಕಾಲದಂತೆ ಅವಳು ತನ್ನ ತಾವರೆಗಣ್ಣುಗಳನ್ನು ತೆರೆದಳು. ಮಳೆಗಾಲದಂತೆ ಅವಳ ಕೂದಲು ದಟ್ಟವಾಗಿತ್ತು. ಮಲಯ ಪರ್ವತದ ವೃತ್ತದಂತೆ ಅವಳು ಶ್ರೀಗಂಧವನ್ನು ತೊಟ್ಟಿದ್ದಳು. ದ್ವಾದಶಿ ರಾಶಿಯಂತೆ, ಅವಳು ನಕ್ಷತ್ರದಂತಹ ವಜ್ರಗಳಿಂದ ಅಲಂಕೃತಳಾಗಿದ್ದಳು. ಶ್ರೀಯಂತೆ ಅವಳು ತನ್ನ ಕೈಯಲ್ಲಿ ಮನೋಹರವಾದ ತಾವರೆ ಹಿಡಿದಿದ್ದಳು. ಬವಳಿ ಬಂದಂತೆ ಅವಳು ಹೃದಯವನ್ನು ಮೋಹಗೊಳಿಸುತ್ತಿದ್ದಳು. ವನದೇವತೆಯಂತೆ ಅವಳ ಸೌಂದರ್ಯ ಜೀವಂತವಾಗಿದ್ದಿತು. ದೇವತೆಗಳ ಮಗುವಿನ ಹಾಗೆ, ಯಾವ ಬುಡಕಟ್ಟಿನವರು ಅವಳನ್ನು ತಮ್ಮವಳೆಂದು ಹೇಳಿಕೊಳ್ಳುತ್ತಿರಲಿಲ್ಲ. ನಿದ್ದೆಯಂತೆ ಅವಳು ಕಣ್ಣಿಗೆ ಮಾಯೆ ಬೀರುತ್ತಿದ್ದಳು. ಕಾಡಿನ ಮಧ್ಯದ ತಾವರೆ ಕೊಳದ ನೀರು ಆನೆಗಳಿಂದ ಕಲಕಾಡಿದ ಹಾಗೆ, ಮಾತಂಗ ಜಾತಿಯಲ್ಲಿ ಹುಟ್ಟಿದ್ದರಿಂದ ಅವಳ ಸೌಂದರ್ಯ ಕುಂದಿತ್ತು. ಅವಳು ಆತ್ಮನ ಹಾಗೆ ಸೋಂಕಿಗೆ ಒಳಗಾಗುವವಳಲ್ಲ. ಅಕ್ಷರದಂತೆ, ಅವಳು ಕಣ್ಣಿಗೆ ಮಾತ್ರ ಹರ್ಷ ಉಂಟುಮಾಡುತ್ತಿದ್ದಳು. ವಸಂತ ಕಾಲದ ಹೂವುಗಳಂತೆ ಅವಳು ಜಾತಿ ಹೂಗಳಿಂದ ವಂಚಿತಳಾಗಿದ್ದಳು, ಕಾಮನ ಬಿಲ್ಲಿನ ಹೆಡೆಯ ಹಾಗೆ ಅವಳ ತೆಳುವಾದ ಕಟಿಯನ್ನು ಕೈಗಳಿಂದ ಬಳಸಬಹುದಾಗಿತ್ತು. ಅಲಕೆಯ ಯಕ್ಷರಾಜನ ಲಕ್ಷ್ಮಿಯ ಹಾಗೆ, ಗುಂಗುರು ಕೂದಲಿನಿಂದ ಕೂಡಿ, ಅವಳಿದ್ದಳು. ಅದೇ ತಾನೇ ಯೌವ್ವನದಲ್ಲಿ ಅರಳುತ್ತಿದ್ದ ಅವಳು ಅಪಾರ ಸೌಂದರ್ಯವತಿಯಾಗಿದ್ದಳು. ರಾಜ ಅವಳ ಸೌಂದರ್ಯದಿಂದ ಚಕಿತಗೊಂಡನು. ಅವನ ಮನಸ್ಸಿನಲ್ಲಿ ಹೀಗೆ ಹೊಳೆಯಿತು – "ಇಂತಹ ಸೌಂದರ್ಯವನ್ನು ಸೃಜಿಸುವಲ್ಲಿ ಸೃಷ್ಟಿಕರ್ತನ ಶ್ರಮ ವಿಫಲವಾಯಿತು! ಯಾಕೆಂದರೆ ಅವಳು ತನ್ನ ಚಂಡಾಲ ಆಕೃತಿಯನ್ನು ಹೀಗಳೆಯಲಿಕ್ಕಾಗಿ ಸೃಷ್ಟಿಸಲ್ಪಟ್ಟಿದ್ದರೆ, ಅಂದರೆ ಅವಳು ತನ್ನ ಸೌಂದರ್ಯದ ಮೂಲಕ ಪ್ರಪಂಚದ ಇಡೀ ಸೌಂದರ್ಯವನ್ನು ಹೀಗಳೆಯುವಂತಿದ್ದರೆ, ಯಾಕೆ ಜೊತೆಗಾರನೊಬ್ಬನು ಅವಳನ್ನು ಪಡೆಯದಿರುವ ಈ ಸ್ಥಿತಿಯಲ್ಲಿ ಸೃಷ್ಟಿಸಲ್ಪಟ್ಟಳು? ಪ್ರಜಾಪತಿ ಕೇವಲ ತನ್ನ ಆಲೋಚನೆ ಮೂಲಕ ಇವಳನ್ನು ಸೃಷ್ಟಿಸಿರಬೇಕು. ತಾನೆಲ್ಲಿ ಮಾತಂಗಿಯರನ್ನು ಮುಟ್ಟಿಸಿಕೊಳ್ಳಬೇಕಾಗುತ್ತದೋ, ಅದಕ್ಕಾಗಿ ದಂಡ ತೆರಬೇಕಾಗುತ್ತದೋ ಎಂಬ ಹೆದರಿಕೆಯಿಂದ ಈಕೆಯನ್ನು ಹಾಗೆ ಸೃಷ್ಟಿಸಿರಬೇಕು, ಇಲ್ಲದಿದ್ದರೆ ಇವಳ ಸೌಂದರ್ಯ ಮುಟ್ಟುವುದರ ಮೂಲಕ ಹಾಳಾಗುತ್ತದೆ ಎಂಬ ಸ್ಥಿತಿಯಲ್ಲಿ ಇರಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ತನ್ನ ಕೀಳುಜಾತಿಯಲ್ಲಿನ ಹುಟ್ಟಿನಿಂದಾಗಿ, ದೇವತೆಗಳನ್ನು ಸದಾ ತರಾಟೆಗೆ ತೆಗೆದುಕೊಳ್ಳುವಂತಿರುವ ಈ ಕೆಳಜಾತಿಯ ಲಕ್ಷ್ಮಿ, ಬ್ರಹ್ಮನಲ್ಲಿ ಹೆದರಿಕೆಯನ್ನು ಉಂಟು ಮಾಡುತ್ತಿದ್ದಾಳೆ." ರಾಜ ಹೀಗೆ ಯೋಚಿಸುತ್ತಿದ್ದಾಗ, ಕಿವಿಯ ಮೇಲೆ ಬೀಳುತ್ತಿದ್ದ ಹೂ ಹಾರಗಳಿಂದ ಅವಳು ತನ್ನ ವಯಸ್ಸಿಗೆ ಮೀರಿದ ವಿಶ್ವಾಸದಿಂದ ರಾಜನ ಮುಂದೆ ಎರಗಿದಳು. ಅವಳು ತನ್ನ ಗೌರವವನ್ನು ತೋರಿಸಿ, ನೆಲಗಟ್ಟಿನ

ಮೇಲೆ ಕಾಲಿಟ್ಟಾಗ, ಅವಳ ಸಂಗಾತಿ, ಒಂದೆರಡು ಹೆಜ್ಜೆ ಮುಂದೆ ಹೋಗಿ, ಪಂಜರದ ಗಿಣಿಯನ್ನು ರಾಜನಿಗೆ ತೋರಿಸಿ, ಹೀಗೆ ಹೇಳಿದ – "ಒಡೆಯರೇ, ವೈಶಂಪಾಯನ ಎಂಬ ಈ ಗಿಳಿ ಎಲ್ಲ ಶಾಸ್ತ್ರಗಳನ್ನೂ ಬಲ್ಲದು; ರಾಜನೀತಿ ಅನುಸರಿಸುವುದರಲ್ಲಿ ನಿಪುಣ; ಕತೆ, ಚರಿತ್ರೆ, ಪುರಾಣಗಳಲ್ಲಿ ನಿಪುಣ; ಹಾಡುಗಳು ಮತ್ತು ಸಂಗೀತವನ್ನು ಚೆನ್ನಾಗಿ ಬಲ್ಲದು. ಸಾಟಿಯಿಲ್ಲದ, ಆಧುನಿಕವಾದ ಪ್ರೇಮಕತೆ, ನಾಟಕ, ಕಾವ್ಯ, ಇತ್ಯಾದಿಗಳನ್ನು ತಾನೇ ರಚಿಸಬಲ್ಲದು. ಚಾಟೂಕ್ತಿಗಳಲ್ಲಿ ಪರಿಣತ ಮತ್ತು ವೀಣೆ, ಕೊಳಲು ಮತ್ತು ಮೃದಂಗಗಳನ್ನು ಅಪ್ರತಿಮ ರೀತಿಯಲ್ಲಿ ನುಡಿಸಬಲ್ಲ, ನರ್ತನದ ವಿವಿಧ ನಡೆಗಳಲ್ಲಿ ಪರಿಣತ; ಚಿತ್ರಕತೆಯಲ್ಲಿ ಕುಶಲಿ; ನಾಟಕಗಳಲ್ಲಿ ಗಟ್ಟಿಗ; ಪ್ರೇಮಕಲಹದಲ್ಲಿ ಕೋಪಗೊಂಡವಳನ್ನು ಹೇಗೆ ಶಾಂತಪಡಿಸಬೇಕೆಂದು ತಿಳಿದವನು. ಆನೆಗಳ, ಕುದುರೆಗಳ, ಪುರುಷರ ಸ್ತ್ರೀಯರ ಲಕ್ಷಣಗಳಲ್ಲಿ ಪರಿಚಿತನು. ಇಡೀ ಪ್ರಪಂಚದಲ್ಲಿ ಅಮೂಲ್ಯ ರತ್ನ. ಎಲ್ಲ ಮುತ್ತುಗಳೂ ಸಮುದ್ರಕ್ಕೆ ಸೇರಲು ತಕ್ಕವು ಎಂಬಂತೆ, ಈ ರತ್ನವೂ ಎಲ್ಲ ರತ್ನಗಳೂ ಸೇರಬೇಕಾದ ತಮಗೆ ಸೇರಬೇಕು. ನನ್ನ ಒಡೆಯನ ಮಗಳಾದ ಈ ಚಂಡಾಲ ಕನ್ಯೆ ಈ ಗಿಳಿಯನ್ನು ತಮ್ಮ ಪಾದಕ್ಕೆ ಒಪ್ಪಿಸುತ್ತಿದ್ದಾಳೆ. ಈ ಗಿಳಿಯ ತಮ್ಮಿಂದ ಸ್ವೀಕರಿಸೋಣವಾಗಲಿ."

ಚಂಡಾಲ ಕನ್ಯೆಯ ಈ ವರ್ಣನೆಯನ್ನು ಓದಿದ ಮೇಲೆ ಹಲವು ಪ್ರಶ್ನೆಗಳು ಹುಟ್ಟುತ್ತವೆ. ಮೊದಲಿಗೆ ಫಾಹಿಯಾನ್ ಕೊಟ್ಟ ವರ್ಣನೆಗಿಂತ ಇದು ಎಷ್ಟು ಭಿನ್ನವಾಗಿದೆ? ಎರಡನೆಯದಾಗಿ ಬಾಣ, ವಾತ್ಸ್ಯಾಯನ ಬ್ರಾಹ್ಮಣ. ಚಂಡಾಲರ ಬೀಡಿನ ವರ್ಣನೆ ಮಾಡಿದ ಮೇಲೆ, ಈ ವಾತ್ಸ್ಯಾಯನ ಬ್ರಾಹ್ಮಣ, ಈ ಚಂಡಾಲ ಕನ್ಯೆಯ ವರ್ಣನೆಯನ್ನು ಇಷ್ಟು ನಿರರ್ಗಳವಾಗಿ ವೈಭವಯುತ ಭಾಷೆಯಲ್ಲಿ ಮಾಡಲಿಕ್ಕೆ ಹಿಂದೆಗೆಯುವುದಿಲ್ಲ. ಅಸ್ಪೃಶ್ಯತೆ ಬಗ್ಗೆ ಇರುವ ಅತ್ಯಂತ ಹೆಚ್ಚಿನ ತಿರಸ್ಕಾರ ಮತ್ತು ಧಿಕ್ಕಾರ ಈ ವಿವರಣೆಯಲ್ಲಿನ ಭಾವನೆಗಳೊಡನೆ ಹೊಂದುತ್ತವೆಯೆ? ಚಂಡಾಲರು ಅಸ್ಪೃಶ್ಯರಾಗಿದ್ದರೆ, ಅಸ್ಪೃಶ್ಯ ಹುಡುಗಿಯೊಬ್ಬಳು ರಾಜಭವನವನ್ನು ಪ್ರವೇಶಿಸಲಿಕ್ಕಾದರೂ ಹೇಗೆ ಸಾಧ್ಯ? ಬಾಣ ಬಳಸಿದಂತಹ ಅತ್ಯುತ್ಕೃಷ್ಟ ಪದಗಳ ಮೂಲಕ ಅಸ್ಪೃಶ್ಯನೊಬ್ಬನನ್ನು ವಿವರಿಸುವುದಾದರೂ ಹೇಗೆ ಸಾಧ್ಯ? ಸಾಮಾಜಿಕವಾಗಿ, ಅವನತಿ ಹೊಂದುವುದಿರಲಿ, ಬಾಣನ ಕಾಲದ ಚಂಡಾಲರಲ್ಲಿ ರಾಜ್ಯವಾಳುವ ವಂಶಗಳೂ ಇದ್ದವು. ಯಾಕೆಂದರೆ, ಚಂಡಾಲ ಕನ್ಯೆಯನ್ನು ಬಾಣ, ಚಂಡಾಲ ರಾಜಕನ್ಯೆ[೧] ಎಂದು ಹೇಳುತ್ತಾನೆ. ಬಾಣ ತನ್ನ ಗ್ರಂಥ ರಚಿಸಿದುದು ಸುಮಾರು ಕ್ರಿ.ಶ. ೬೦೦ರಲ್ಲಿ. ಕ್ರಿ.ಶ. ೬೦೦ರ ವೇಳೆಗೆ ಚಂಡಾಲರನ್ನು ಅಸ್ಪೃಶ್ಯರಾಗಿ ನಡೆಸಿಕೊಳ್ಳುತ್ತಿರಲಿಲ್ಲ. ಆದ್ದರಿಂದ ಫಾಹಿಯಾನ್ ಹೇಳುವ ಮಾತುಗಳು ಅಸ್ಪೃಶ್ಯತೆಗೆ ಹತ್ತಿರ ಹತ್ತಿರ ಬಂದರು, ಅವನ್ನು ಅಸ್ಪೃಶ್ಯತೆಯೆಂದೇ ಭಾವಿಸಬೇಕಾಗಿಲ್ಲ. ಅದು ಬ್ರಾಹ್ಮಣರು ಆಚರಿಸುತ್ತಿದ್ದ ಅಶೌಚದ ಒಂದು ಅತಿ ಎಂದು ಭಾವಿಸಬಹುದು. ಅವರು ಹೀಗೆ ಅತಿ ಮಾಡುವುದನ್ನು ತಮ್ಮ ಪೌರೋಹಿತ್ಯದ ಒಂದು ಭಾಗವಾಗಿ ಮಾಡಿದರು. ಫಾಹಿಯಾನ್ ಭಾರತಕ್ಕೆ ಬಂದಾಗ, ಇಲ್ಲಿ ಗುಪ್ತರ ಆಡಳಿತ ನಡೆದಿತ್ತು ಎಂಬ ಅಂಶ ಸ್ಮರಿಸಿಕೊಂಡಾಗ ಇದು ಇನ್ನೂ ಹೆಚ್ಚಿನ ಸಾಧ್ಯತೆ ಪಡೆಯುತ್ತದೆ. ಗುಪ್ತ ದೊರೆಗಳು ಬ್ರಾಹ್ಮಣರ ಪೋಷಕರಾಗಿದ್ದರು. ಅದು ಬ್ರಾಹ್ಮಣರ ವಿಜಯದ ಮತ್ತು ಪುನರುಜ್ಜೀವನದ ಕಾಲವಾಗಿತ್ತು. ಫಾಹಿಯಾನ್ ವಿವರಿಸಿದ್ದು ಅಸ್ಪೃಶ್ಯತೆ ಇರಲಿಕ್ಕಿಲ್ಲ. ಆದರೆ ಬ್ರಾಹ್ಮಣರು ತಮ್ಮ ಮೈಲಿಗೆಯ ಸಿದ್ಧಾಂತವನ್ನು ಎಷ್ಟರಮಟ್ಟಿಗೆ ತೆಗೆದುಕೊಂಡು ಹೋಗಬಹುದು ಎನ್ನುವುದಕ್ಕೆ ಅದೊಂದು ನಿದರ್ಶನ. ಇದು ಕೆಲವು ಸಮುದಾಯಕ್ಕೆ, ಮುಖ್ಯವಾಗಿ ಚಂಡಾಲರಿಗೆ ಸೇರಿತ್ತು.

---

೧. ಕಾದಂಬರಿ (ರಿಡ್ಡಿಂಗ್ ಅನುವಾದ) ಪು. ೨೦೪

ಭಾರತಕ್ಕೆ ನಂತರ ಬಂದ ಚೀನೀ ಪ್ರವಾಸಿ, ಯುವಾನ್ ಚ್ವಾಂಗ್. ಆತ ಕ್ರಿ.ಶ. ೬೨೯ರಲ್ಲಿ ಭಾರತಕ್ಕೆ ಬಂದ. ಆತ ೧೬ ವರ್ಷ ಭಾರತದಲ್ಲೇ ಇದ್ದು ಈ ದೇಶದಲ್ಲೆಲ್ಲ ಓಡಾಡಿ ಜನಗಳ ನಡವಳಿಕೆ ಬಗ್ಗೆ ನಿಶ್ಚಿತ ದಾಖಲೆಯನ್ನು ನೀಡಿದ್ದಾನೆ. ಭಾರತದ ನಗರಗಳು, ಕಟ್ಟಡಗಳ ಸಾಮಾನ್ಯ ನಿರೂಪಣೆಯಲ್ಲಿ ಆತ ಹೀಗೆ ಹೇಳುತ್ತಾನೆ[೧] :

"ಅವರು ವಾಸಿಸುವ ನಗರಗಳು, ಪಟ್ಟಣಗಳು, ಅವುಗಳ ಸುತ್ತ ಚೌಕಾಕಾರದ (ಒಂದು ಗ್ರಂಥದ ಪ್ರಕಾರ ಬೇರೆ ಬೇರೆ ಪ್ರದೇಶಗಳೂ ಸಹ) ವಿಶಾಲ ಹಾಗೂ ಎತ್ತರದ ಗೋಡೆಗಳಿದ್ದವು. ರಸ್ತೆಗಳು ಕಿರಿದಾಗಿದ್ದು ಓಡಾಡುವುದೇ ಕಷ್ಟವಾಗಿತ್ತು. ಅಂಗಡಿಗಳು ಮುಖ್ಯಮಾರ್ಗಗಳಲ್ಲಿದ್ದು, ಊಟದ ಮನೆಗಳು ರಸ್ತೆ ಪಕ್ಕದಲ್ಲಿ ಉದ್ದಕ್ಕೂ ಕಂಡು ಬರುತ್ತವೆ. ಕಟುಕರು, ಮೀನುಗಾರರು, ಆಟ ಕಟ್ಟುವವರು, ನ್ಯಾಯ ತೀರಿಸುವವರು, ಜಲಗಾರರು ತಮ್ಮ ತಮ್ಮದೇ ಕಟ್ಟಡಗಳನ್ನು ಹೊಂದಿದ್ದು, ಒಂದೊಂದು ವೃತ್ತಿಗೂ ಬೇರೆ ಬೇರೆ ಚಿಹ್ನೆಗಳನ್ನು ಹೊಂದಿರುತ್ತಾರೆ. ಅವರು ನಗರದ ಹೊರಗೆ ಜೀವಿಸಬೇಕಾಗಿದ್ದು, ಹಳ್ಳಿಗಳನ್ನು ಪ್ರವೇಶಿಸುವಾಗ ಅವರು ಎಡಬದಿಯಿಂದ ಕಳ್ಳತನದಿಂದ ನುಗ್ಗುತ್ತಾರೆ."

ಈ ಉಲ್ಲೇಖ ಬಹಳ ಚಿಕ್ಕದಾಗಿತ್ತು, ಇದನ್ನೆ ಆಧರಿಸಿ ಯಾವುದೇ ನಿರ್ಣಯಕ್ಕೆ ಬರಲಾಗುವುದಿಲ್ಲ. ಆದರೂ ಇದರಲ್ಲಿರುವ ಒಂದು ಅಂಶ ಗಮನಾರ್ಹ. ಫಾಹಿಯಾನ್‌ನ ವಿವರಣೆ ಚಂಡಾಲರಿಗೆ ಮಾತ್ರ ಸಂಬಂಧಿಸಿದ್ದರೆ, ಹೂ ಯೆನ್ ತ್ಸಾಂಗ್‌ನ ವಿವರಣೆ ಚಂಡಾಲರನ್ನು ಬಿಟ್ಟು ಉಳಿದವರೆಲ್ಲರನ್ನೂ ಒಳಗೊಳ್ಳುತ್ತದೆ. ಇದು ಬಹಳ ಮುಖ್ಯವಾದ ಅಂಶ. ಈ ವಿವರಣೆಯ ವಿರುದ್ಧ ಯಾವ ವಾದವನ್ನು ಮಂಡಿಸುವಂತಿಲ್ಲ. ಯಾಕೆಂದರೆ, ಅದು ಚಂಡಾಲರನ್ನು ಬಿಟ್ಟು ಉಳಿದವರನ್ನೆಲ್ಲ ಒಳಗೊಂಡಿದೆ. ಇದರಿಂದ ವ್ಯಕ್ತವಾಗುವ ಅಂಶವೆಂದರೆ, ಹೂಯನ್ ತ್ಸಾಂಗ್ ಭಾರತಕ್ಕೆ ಬಂದಾಗ, ಅಸ್ಪೃಶ್ಯತೆ ಇರಲಿಲ್ಲವಾದರೂ, ಅದು ಕ್ರಿ.ಶ. ೬೦೦ರ ವೇಳೆಗೆ ತಲೆಯೆತ್ತಿತ್ತು.

ಅಸ್ಪೃಶ್ಯತೆ ತಲೆಯೆತ್ತಿದ ದಿನಾಂಕ ಗೊತ್ತು ಮಾಡುವುದಕ್ಕೆ ಎರಡು ತುದಿಗಳಿವೆ – ಮೇಲುತುದಿ ಮತ್ತು ಕೆಳತುದಿ. ಅಸ್ಪೃಶ್ಯತೆಯ ಆಗಮನಕ್ಕೆ ನಾವೊಂದು ಸರಿಸುಮಾರಾದ ದಿನಾಂಕ ಗೊತ್ತು ಮಾಡಬಹುದೆ? ಗೋಮಾಂಸ ಭಕ್ಷಣೆಯನ್ನೇ ಆರಂಭಿಕ ಅಂಶವನ್ನಾಗಿ ತೆಗೆದುಕೊಂಡರೆ ಗೊತ್ತು ಮಾಡಬಹುದು. ಯಾಕೆಂದರೆ ಅಸ್ಪೃಶ್ಯತೆಗೆ ಅದೇ ಮೂಲ. ಗೋಹತ್ಯೆ ನಿಷೇಧ ಮತ್ತು ಗೋಮಾಂಸ ಭಕ್ಷಣೆಯ ನಿಷೇಧಗಳು ಅಸ್ಪೃಶ್ಯತೆ ಆಚರಣೆಯೊಂದಿಗೆ ನಿಕಟ ಸಂಪರ್ಕ ಹೊಂದಿರುವುದರಿಂದ, ಗೋಮಾಂಸ ಭಕ್ಷಣೆಯ ಮೇಲಿನ ನಿಷೇಧವನ್ನು ಸುಳಿವು ಕೊಡುವ ಅಂಶವಾಗಿ ನೋಡಬಹುದಾಗಿದೆ. ಗೋಹತ್ಯೆ ಯಾವಾಗ ನಿಷೇಧಿಸಲ್ಪಟ್ಟಿತು ಮತ್ತು ಗೋಮಾಂಸ ಭಕ್ಷಣೆಯನ್ನು ಯಾವಾಗ ಪಾಪಕಾರ್ಯ ಎಂಬ ಅಂಶವನ್ನು ಪತ್ತೆ ಹಚ್ಚುವುದಾದರೆ, ನಾವು ಅಸ್ಪೃಶ್ಯತೆಯ ಹುಟ್ಟಿನ ಬಗ್ಗೆ ಒಂದು ಸರಿಸುಮಾರು ದಿನಾಂಕವನ್ನು ಗೊತ್ತುಮಾಡಿದ ಹಾಗಾಯಿತು.

ಗೋಹತ್ಯೆ ಯಾವಾಗ ಅಪರಾಧವಾಯಿತು?

ಮನು, ಗೋಮಾಂಸ ಭಕ್ಷಣೆ ಮಾಡಬಾರದೆಂದು ಅಥವಾ ಗೋವಧೆಯನ್ನು ಅಪರಾಧವೆಂದು ಮಾಡಲಿಲ್ಲ. ಹಾಗಿದ್ದರೆ ಇವು ಅಪರಾಧವಾದದ್ದು ಯಾವಾಗ? ಡಾ. ಬಿ.ಆರ್.ಭಂಡಾರ್ಕರ್ ತೋರಿಸಿರುವಂತೆ, ಗೋವಧೆಯನ್ನು ಅಪರಾಧವೆಂದು ಮಾಡಿದ್ದು ಗುಪ್ತರಾಜರು, ಅಂದರೆ ಕ್ರಿ.ಶ. ನಾಲ್ಕನೆಯ ಶತಮಾನದಲ್ಲಿ.

---

೧. *Walters : Yuvan Chwang,* Vol. I, P. 147.

ಆದ್ದರಿಂದ ಸ್ವಲ್ಪಮಟ್ಟಿನ ವಿಶ್ವಾಸದಿಂದ, ಅಸ್ಪೃಶ್ಯತೆ, ಕ್ರಿ.ಶ. ೪೦೦ರಲ್ಲಿ ಹುಟ್ಟಿದೆ ಎಂದು ಹೇಳಬಹುದು. ಬೌದ್ಧರು ಮತ್ತು ಬ್ರಾಹ್ಮಣರ ನಡುವೆ ಪಾರಮ್ಯಕ್ಕಾಗಿ ನಡೆದ ಹೋರಾಟದ ಮಧ್ಯೆ ಇದರ ಜನನವಾಯಿತು. ಈ ಹೋರಾಟ ಭಾರತ ಚರಿತ್ರೆಗೆ ಒಂದು ರೂಪವನ್ನು ಕೊಡುವುದರಲ್ಲಿ ಮಹತ್ವದ ಪಾತ್ರ ವಹಿಸಿದೆ. ಆದರೂ ಭಾರತದ ಚರಿತ್ರೆಯ ವಿದ್ಯಾರ್ಥಿಗಳು ಅದನ್ನು ದಯನೀಯವಾಗಿ ನಿರ್ಲಕ್ಷಿಸಿದ್ದಾರೆ.

♦

## ಭಾಗ – VII

# ಪಾಕಿಸ್ತಾನದ ಪರವಾಗಿ ಮುಸಲ್ಮಾನರ ವಾದ

ಪಾಕಿಸ್ತಾನದ ಪರವಾಗಿ ಮುಸಲ್ಮಾನರ ವಾದವನ್ನು ಈ ಕೆಳಗಿನ ಆಧಾರಗಳ ಮೇಲೆ ಸಮರ್ಥಿಸಬೇಕೆಂಬ ಅಪೇಕ್ಷೆಯಿದೆ:

i) ಮುಸ್ಲಿಮರು ಅಪೇಕ್ಷಿಸುತ್ತಿರುವುದು ಜನಾಂಗೀಯವಾಗಿ ಹೆಚ್ಚು ಏಕರೂಪತೆಯುಳ್ಳ ಆಡಳಿತ ಕ್ಷೇತ್ರಗಳ ಸ್ಥಾಪನೆ;

ii) ಮುಸಲ್ಮಾನ ಬಾಹುಳ್ಯದ ಈ ಏಕರೂಪೀ ಆಡಳಿತ ಕ್ಷೇತ್ರಗಳನ್ನು ಪ್ರತ್ಯೇಕ ರಾಜ್ಯಗಳನ್ನಾಗಿ ರಚಿಸಬೇಕೆಂಬುದು ಮುಸಲ್ಮಾನರ ಅಪೇಕ್ಷೆ:

ಅ) ಏಕೆಂದರೆ ಮುಸಲ್ಮಾನರು ತಾವೇ ಒಂದು ಪ್ರತ್ಯೇಕ ರಾಷ್ಟ್ರವಾಗಿದ್ದಾರೆ ಹಾಗೂ ತಮ್ಮದೇ ಆದ ರಾಷ್ಟ್ರೀಯ ಆಶ್ರಯವನ್ನು ಇಚ್ಛಿಸುತ್ತಾರೆ;

ಬಿ) ಏಕೆಂದರೆ ಹಿಂದೂಗಳು ತಮ್ಮ ಬಹುಸಂಖ್ಯಾತತೆಯನ್ನು ಬಳಸಿಕೊಂಡು ಮುಸ್ಲಿಮರು ಪರದೇಶದಲ್ಲಿ ಎರಡನೇ ದರ್ಜೆಯ ಪ್ರಜೆಗಳೆಂಬಂತೆ ಅವರನ್ನು ನಡೆಸಿಕೊಳ್ಳುತ್ತಾರೆಂದು ಅನುಭವವು ತೋರಿಸಿಕೊಟ್ಟಿದೆ.

ಈ ಅಂಶಗಳನ್ನು ವಿವರಿಸಲು ಈ ಭಾಗ ಮೀಸಲಾಗಿದೆ.

# ಅಧ್ಯಾಯ ೧೭

# ಲೀಗ್ ಕೇಳುತ್ತಿರುವುದೇನು?

## I

೧೯೪೦ನೇ ಮಾರ್ಚ್ ೨೬ರಂದು ಭಾರತದ ಹಿಂದೂಗಳು ತಾವು ಹಿಂದೆಂದೂ ಬೆದರದಷ್ಟು ಕಳವಳಿಸಿ ಎಚ್ಚೆತ್ತರು. ಅಂದು ಲಾಹೋರಿನ ಸಭೆಯಲ್ಲಿ ಮುಸ್ಲಿಂ ಲೀಗ್ ಈ ಕೆಳಗಿನ ನಿರ್ಣಯವನ್ನು ತೆಗೆದುಕೊಂಡಿತು:

೧. ೧೯೩೯ನೇ ಆಗಸ್ಟ್ ೨೭, ಸೆಪ್ಟೆಂಬರ್ ೧೭, ೧೮ ಮತ್ತು ಅಕ್ಟೋಬರ್ ೨೨ ಹಾಗೂ ೧೯೪೦ನೇ ಫೆಬ್ರುವರಿ ೩ರಂದು ಸಂವಿಧಾನಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಮಾಡಿದ ನಿರ್ಣಯಗಳಲ್ಲಿನ ಸೂಚನೆಗಳಂತೆ ಅಖಿಲ ಭಾರತ ಮುಸ್ಲಿಂ ಲೀಗಿನ ಸಭೆ ಮತ್ತು ಕಾರ್ಯಕಾರಿ ಸಮಿತಿಗಳು ತೆಗೆದುಕೊಂಡ ಕ್ರಮವನ್ನು ಅನುಮೋದಿಸುತ್ತಾ, ೧೯೩೫ರ ಭಾರತ ಸರ್ಕಾರದ ಕಾಯಿದೆಯಲ್ಲಿ ಅಂತರ್ಗತವಾಗಿರುವ ಒಕ್ಕೂಟದ ಯೋಜನೆಯು, ಈ ದೇಶದ ವಿಚಿತ್ರ ಸ್ಥಿತಿಗತಿಗಳ ಕಾರಣದಿಂದಾಗಿ, ಸಂಪೂರ್ಣವಾಗಿ ಅಸಮಂಜಸವಾದುದು ಮತ್ತು ಕಾರ್ಯಾನುಷ್ಠಾನಕ್ಕೆ ತರಲಾಗದ್ದು ಮತ್ತು ಭಾರತೀಯ ಮುಸಲ್ಮಾನರಿಗೆ ಸ್ವೀಕಾರಾರ್ಹವಲ್ಲದ್ದು ಎಂದು ಅಖಿಲ ಭಾರತ ಮುಸ್ಲಿಂ ಲೀಗಿನ ಈ ಅಧಿವೇಶನವು ಖಡಾಖಂಡಿತವಾಗಿ ಪುನಃ ಪ್ರತಿಪಾದಿಸುತ್ತದೆ.

೨. ಭಾರತ ಸರ್ಕಾರದ ಕಾಯಿದೆ, ೧೯೩೫ರ ನೀತಿ ಮತ್ತು ತಂತ್ರಗಳನ್ನು ಭಾರತದ ವಿವಿಧ ಪಕ್ಷಗಳು, ಹಿತಾಸಕ್ತಿಗಳು ಹಾಗೂ ಸಮುದಾಯಗಳೊಡನೆ ಸಮಾಲೋಚಿಸಿ ಮರುಪರಿಶೀಲನೆ ಮಾಡಲಾಗುತ್ತದೆ ಎಂದು ೧೯೩೯ನೇ ಅಕ್ಟೋಬರ್ ೧೮ರಂದು ಭಾರತ ಸರ್ಕಾರದ ಪರವಾಗಿ ವೈಸರಾಯ್ ಮಾಡಿದ ಘೋಷಣೆಯು ಪುನಃ ಭರವಸೆ ನೀಡುವಂತಿದ್ದರೂ, ಇಡೀ ಸಂವಿಧಾನಾತ್ಮಕ ಯೋಜನೆಯನ್ನು ಹೊಸದಾಗಿ ಮರುಪರಿಶೀಲನೆ ಮಾಡದಿದ್ದಲ್ಲಿ, ಭಾರತೀಯ ಮುಸ್ಲಿಮರಿಗೆ ತೃಪ್ತಿಯಾಗದು. ಅಲ್ಲದೆ ಮುಸ್ಲಿಮರ ಒಪ್ಪಿಗೆ ಮತ್ತು ಸಮ್ಮತಿಗಳಿಂದ ಅದು ರೂಪುಗೊಳ್ಳದಿದ್ದರೆ, ಯಾವುದೇ ಸುಧಾರಿತ ಯೋಜನೆಯು ಅವರಿಗೆ ಒಪ್ಪಿಗೆಯಾಗಲಾರದು.

೩. ಈ ಕೆಳಗಿನ ಮೂಲ ನಿಯಮದ ಆಧಾರದ ಮೇಲೆ ರೂಪಿತವಾಗದಿದ್ದರೆ, ಈ ದೇಶದಲ್ಲಿ ಯಾವುದೇ ಸಂವಿಧಾನಾತ್ಮಕ ಯೋಜನೆಯೂ ಕಾರ್ಯಗತವಾಗಲಾರದು ಅಥವಾ ಮುಸಲ್ಮಾನರಿಗೆ ಒಪ್ಪಿಗೆಯಾಗಲಾರದು ಎಂದು ಅಖಿಲ ಭಾರತ ಮುಸ್ಲಿಂ ಲೀಗಿನ ಈ ಅಧಿವೇಶನ ಪರಿಗಣಿತ ಅಭಿಪ್ರಾಯವೆಂದು ನಿರ್ಣಯಿಸಲಾಗಿದೆ.

ಆ ಮೂಲ ನಿಯಮವೆಂದರೆ: ಭೌಗೋಳಿಕವಾಗಿ ಪರಸ್ಪರ ಸಮೀಪವಿರುವ ಭಾಗಗಳನ್ನು ಗುರುತಿಸಿ ಪ್ರತ್ಯೇಕ ಪ್ರದೇಶಗಳನ್ನಾಗಿ ಮಾಡಬೇಕು. ಹಾಗೆ ಮಾಡಬೇಕಾದರೆ, ಆ ಪ್ರದೇಶಗಳ

ನಡುವೆ ಅಗತ್ಯವೆನಿಸುವಂತಹ ಪುನರ್ ಹೊಂದಾಣಿಕೆಗಳಾಗಬೇಕು. ಭಾರತದ ವಾಯುವ್ಯ ಮತ್ತು ಪೂರ್ವ ವಿಭಾಗಗಳಲ್ಲಿರುವಂತೆ ಮುಸಲ್ಮಾನರು ಬಹುಸಂಖ್ಯೆಯಲ್ಲಿರುವ ಭಾಗಗಳನ್ನು ಒಟ್ಟುಗೂಡಿಸಿ, ಅಲ್ಲಿ ಸೇರಿರುವ ಭಾಗಗಳನ್ನು ಸ್ವಾಯತ್ತ ಹಾಗೂ ಸಾರ್ವಭೌಮಾಧಿಕಾರಗಳಿಂದ ಕೂಡಿರುವಂತಹ 'ಸ್ವತಂತ್ರರಾಜ್ಯ'ಗಳನ್ನಾಗಿ ರೂಪಿಸಬೇಕು.

೪. ಈ ರಾಜ್ಯಗಳ ಮತ್ತು ವಲಯಗಳ ಅಲ್ಪಸಂಖ್ಯಾತರಿಗೆ ಸಾಕಷ್ಟು ಪರಿಣಾಮಕಾರಿ ಹಾಗೂ ಆಜ್ಞಾಪಾಲಕ ಸಂರಕ್ಷಣೆಗಳನ್ನು, ವಿಶೇಷವಾಗಿ ಅವರ ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ, ಆಡಳಿತಾತ್ಮಕ ಹಾಗೂ ಇತರ ಹಕ್ಕು ಬಾಧ್ಯತೆಗಳನ್ನು ಹಾಗೂ ಅಪೇಕ್ಷೆಗಳನ್ನು ಸಂರಕ್ಷಿಸಲು, ಅವರೊಡನೆ ಸಮಾಲೋಚಿಸಿ ಸಂವಿಧಾನದಲ್ಲಿ ಅಳವಡಿಸಬೇಕು; ಮತ್ತು ಮುಸಲ್ಮಾನರು ಅಲ್ಪಸಂಖ್ಯಾತರಾಗಿರುವ ಭಾರತದ ಇತರ ಪ್ರದೇಶಗಳಲ್ಲಿ ಅವರವರ ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ, ಆಡಳಿತಾತ್ಮಕ ಮತ್ತು ಇತರ ಹಕ್ಕುಗಳು ಹಾಗೂ ಅಪೇಕ್ಷೆಗಳ ರಕ್ಷಣೆಗಾಗಿ, ಸಾಕಷ್ಟು ಪರಿಣಾಮಕಾರಿ ಹಾಗೂ ಆದೇಶಪೂರ್ವಕ ಸಂರಕ್ಷಣೆಗಳನ್ನು, ಅವರೊಡನೆ ಸಮಾಲೋಚಿಸಿ, ಸಂವಿಧಾನದಲ್ಲಿ ಅಳವಡಿಸಬೇಕು.

೫. ಅಧಿಕಾರದ ಕ್ಷೇತ್ರಗಳಾದ ರಕ್ಷಣೆ, ವಿದೇಶ ವ್ಯವಹಾರ, ಸಂವಹನ–ಸಂಪರ್ಕ, ಸುಂಕ ಮತ್ತು ಅಗತ್ಯವೆನಿಸುವ ಇತರ ವಿಷಯಗಳಿಗೆ ಸಂಬಂಧಿಸಿದಂತೆ ಆಯಾಯ ಕ್ಷೇತ್ರಗಳ ಆಶಯಗಳಿಗೆ ಅವಕಾಶ ಕೊಡುವಂತಹ ಒಂದು ಸಂವಿಧಾನ ಯೋಜನೆಯನ್ನು, ಮೂಲ ನಿಯಮಗಳಿಗೆ ಅನುಗುಣವಾಗಿ ರೂಪಿಸಲು ಕಾರ್ಯಕಾರಿ ಸಮಿತಿಗೆ ಈ ಅಧಿವೇಶನವು ಹೆಚ್ಚಿನ ಅಧಿಕಾರ ಕೊಡುತ್ತದೆ.

ಈ ನಿರ್ಣಯದ ಆಂತರ್ಯವೇನು? ಮುಸಲ್ಮಾನರೇ ಪ್ರಧಾನವಾಗಿ ಬಹುಸಂಖ್ಯಾತರಾಗಿರುವ ಕ್ಷೇತ್ರಗಳನ್ನು ಸ್ವತಂತ್ರ್ಯ ರಾಜ್ಯಗಳನ್ನಾಗಿ ಪರಿವರ್ತಿಸಬೇಕೆಂಬುದು ಈ ನಿರ್ಣಯದ ಆಶಯ ಎಂಬುದನ್ನು ನಿರ್ಣಯದ ೩ನೇ ವಾಕ್ಯವೃಂದ ಸೂಚಿಸುತ್ತದೆ. ಸ್ಪಷ್ಟವಾಗಿ ಹೇಳುವುದಾದರೆ ಭಾರತದ ವಾಯುವ್ಯದಲ್ಲಿರುವ, ಪಂಜಾಬು, ವಾಯುವ್ಯ, ಸರಹದ್ದಿನ ಪ್ರಾಂತ, ಬೆಲೂಚಿಸ್ಥಾನ ಮತ್ತು ಸಿಂದ್ ಭಾಗಗಳು, ಮತ್ತು ಪೂರ್ವದಲ್ಲಿರುವ ಬಂಗಾಳ, ಇವುಗಳನ್ನು ಬ್ರಿಟಿಷ್ ಇಂಡಿಯಾದ ಹೊರಗೆ ಸ್ವತಂತ್ರ ರಾಜ್ಯಗಳನ್ನಾಗಿ ರೂಪಿಸಬೇಕೆಂಬುದು ಇದರರ್ಥ. ಇದು ಮುಸ್ಲಿಂ ಲೀಗ್ ಮಾಡಿದ ನಿರ್ಣಯದ ಒಟ್ಟು ಮೊತ್ತ ಮತ್ತು ಸಾರಾಂಶ.

ರಾಜ್ಯಗಳಾಗಿ ಸ್ಥಾಪಿತವಾದ ಮೇಲೆ, ಈ ಮುಸಲ್ಮಾನ ಪ್ರಾಂತಗಳು, ಒಂದೊಂದೂ ಒಂದು ಸ್ವತಂತ್ರ, ಪರಮಾಧಿಕಾರ ರಾಜ್ಯವಾಗಿ ಉಳಿಯುತ್ತದೆಯೋ ಅಥವಾ ಅವುಗಳೆಲ್ಲವನ್ನೂ ಒಂದೇ ಸಂವಿಧಾನದಡಿಯಲ್ಲಿ ಒಕ್ಕೂಟ ಅಥವಾ ಏಕೈಕ ರಾಷ್ಟ್ರದ ಸದಸ್ಯರುಗಳನ್ನಾಗಿ ಸೇರಿಸಲಾಗುತ್ತದೆಯೋ ಎಂಬುದರ ಬಗ್ಗೆ ಈ ನಿರ್ಣಯವು ಯೋಚಿಸಿದೆಯೇ? ಈ ಅಂಶದ ಬಗ್ಗೆ ನಿರ್ಣಯವು ಪೂರ್ವಾಪರ ವಿರೋಧವೆನಿಸಿದ್ದರೂ ದ್ವಂದ್ವಾರ್ಥದಿಂದ ಕೂಡಿರುವಂತಿದೆ.

**ಸಂರಚನಾ ವಿಭಾಗಗಳು:** ಸ್ವಾಯತ್ತ ಮತ್ತು ಪರಮಾಧಿಕಾರಗಳನ್ನು ಹೊಂದಿರುವಂತಹ ಸ್ವತಂತ್ರ ರಾಜ್ಯಗಳನ್ನಾಗಿ ವಲಯಗಳನ್ನು ವಿಂಗಡಿಸಬೇಕೆಂದು ನಿರ್ಣಯವು ಹೇಳುತ್ತದೆ. ಸಂರಚನಾ ವಿಭಾಗಗಳು, ಎಂಬ ಪದದ ಬಳಕೆ ಇಲ್ಲಿ ಯೋಚಿಸಲ್ಪಟ್ಟಿರುವುದು ಒಂದು ಒಕ್ಕೂಟವೆಂಬುದನ್ನು ಸೂಚಿಸುತ್ತದೆ. ಅದು ಹಾಗಿದ್ದರೆ, ವಿಭಾಗಗಳ ಲಕ್ಷಣವಾಗಿ 'ಪರಮಾಧಿಕಾರ' ಎಂಬ ಪದದ ಬಳಕೆ ಇದಕ್ಕೆ ಸರಿಹೊಂದುವುದಿಲ್ಲ. ವಿಭಾಗಗಳ ಒಕ್ಕೂಟ ಮತ್ತು ವಿಭಾಗಗಳ ಪರಮಾಧಿಕಾರ ಎಂಬವು ಪರಸ್ಪರ ವಿರೋಧ ವಿಚಾರಗಳು

ಇಲ್ಲಿ ಏನು ಯೋಚಿಸಲಾಗಿದೆಯೋ ಇದು ಸಂಯುಕ್ತ ಒಕ್ಕೂಟ (Confederation) ಎಂದಿರಬಹುದು. ಅದು ಹೇಗಿದ್ದರೂ, ಅಂದರೆ ಈ ಸ್ವತಂತ್ರ ರಾಜ್ಯಗಳು ಒಂದು ಒಕ್ಕೂಟವಾಗಿ ಅಥವಾ ಸಂಯುಕ್ತ ಒಕ್ಕೂಟವಾಗಿ ರೂಪುಗೊಳ್ಳುತ್ತವೋ, ಇಲ್ಲವೋ ಎಂಬುದು ಈಗ ಬಹಳ ಮುಖ್ಯವಲ್ಲ. ಇಲ್ಲಿ ಮುಖ್ಯವಾಗಿರುವುದೆಂದರೆ, ಮೂಲಭೂತ ಕೇಳಿಕೆ. ಅಂದರೆ ಈ ಪ್ರದೇಶಗಳನ್ನು ಭಾರತದಿಂದ ಪ್ರತ್ಯೇಕಿಸಿ ಸ್ವತಂತ್ರ ರಾಜ್ಯಗಳನ್ನಾಗಿ ರೂಪಿಸುವುದು.

ಮುಸುಕುಗೊಳಿಸಲಾಗಿರುವ ಈ ಯೋಜನೆಯು, ಒಂದು ಹೊಸರೀತಿಯದು ಎಂಬಂತೆ ತೋರಿಸುವ ನಿರ್ಣಯವನ್ನು ಬರೆಯಲಾಗಿದೆ. ಆದರೆ, ೧೯೩೦ನೇ ಡಿಸೆಂಬರ್‌ನಲ್ಲಿ, ಲಕ್ನೋದಲ್ಲಿ ನಡೆದ ಮುಸ್ಲಿಂ ಲೀಗಿನ ವಾರ್ಷಿಕ ಅಧಿವೇಶನದಲ್ಲಿ ಸರ್ ಮಹಮದ್ ಇಕ್ಬಾಲ್ ಮಾಡಿದ ಅಧ್ಯಕ್ಷೀಯ ಭಾಷಣದಲ್ಲಿ ಮುಂದಿಡಲಾದ ಒಂದು ಯೋಜನೆಯನ್ನೇ ಈ ನಿರ್ಣಯವು ಪುನಃ ಪ್ರಸ್ತಾಪ ಮಾಡುತ್ತದೆ ಎಂಬುದರಲ್ಲಿ ಅನುಮಾನವಿರಲು ಸಾಧ್ಯವಿಲ್ಲ. ಅಂದು ಆ ಯೋಜನೆಯನ್ನು ಲೀಗ್ ಒಪ್ಪಿಕೊಳ್ಳಲಿಲ್ಲ. ಆದರೂ ಅದನ್ನು ಮಿಸ್ಟರ್ ರೆಹಮತ್ ಅಲಿ ಎಂಬವರು ಕೈಗೆತ್ತಿಕೊಂಡು, ಅದಕ್ಕೆ ಪಾಕಿಸ್ತಾನವೆಂಬ ಹೆಸರಿಟ್ಟು, ಮುಂದೆ ಅದೇ ಹೆಸರಿನಿಂದ ಅದು ಕರೆಯಲ್ಪಟ್ಟಿತ್ತು. ಪಾಕಿಸ್ತಾನದ ಆಂದೋಳನವನ್ನು ೧೯೩೩ರಲ್ಲಿ ಮಿಸ್ಟರ್ ರೆಹಮತ್ ಅಲಿ, ಎಂ.ಎ., ಎಲ್.ಎಲ್.ಬಿ. ಪ್ರಾರಂಭಿಸಿದರು. ಅವರು ಭಾರತವನ್ನು ಪಾಕಿಸ್ತಾನ ಮತ್ತು ಹಿಂದೂಸ್ತಾನವೆಂಬುದಾಗಿ ವಿಭಜಿಸಿದರು. ಅವರು ಕಲ್ಪಿಸಿದ ಪಾಕಿಸ್ತಾನದಲ್ಲಿ, ಪಂಜಾಬ್, ವಾಯವ್ಯ, ಸರಹದ್ದು ಪ್ರಾಂತ, ಕಾಶ್ಮೀರ, ಸಿಂದ್ ಮತ್ತು ಬೆಲೂಚಿ ಸ್ಥಾನಗಳು ಸೇರಿದ್ದವು. ಅವರ ಪ್ರಕಾರ ಉಳಿದ ಪ್ರಾಂತಗಳು ಹಿಂದೂಸ್ತಾನ. ಉತ್ತರದ ಐದು ಮುಸಲ್ಮಾನ ಪ್ರಾಂತಗಳಿಂದ ಕೂಡಿದ ಒಂದು ಸ್ವತಂತ್ರ ಮತ್ತು ಪ್ರತ್ಯೇಕ ಪಾಕಿಸ್ತಾನವನ್ನು ಒಂದು ಸ್ವತಂತ್ರ ದೇಶವನ್ನಾಗಿ ಪಡೆಯುವುದು ಅವರ ವಿಚಾರವಾಗಿತ್ತು. ಚಕ್ರಗೋಷ್ಠಿಯ ಸದಸ್ಯರಿಗೆ ಈ ಸಲಹೆಯನ್ನು ಲಿಖಿತವಾಗಿ ಹಂಚಲಾಯಿತಾದರೂ, ಅಧಿಕೃತವಾಗಿ ಅದನ್ನು ಗೋಷ್ಠಿಯ ಮುಂದಿಡಲಿಲ್ಲ. ಅದಕ್ಕಾಗಿ ಬ್ರಿಟಿಷ್ ಸರ್ಕಾರದ ಒಪ್ಪಿಗೆಯನ್ನು ಪಡೆಯಲೂ, ರಹಸ್ಯವಾಗಿ ಒಂದು ಪ್ರಯತ್ನ ನಡೆಯಿತೆಂದೂ ತೋರುತ್ತದೆ. ಆದರೆ ಅದು ಹಳೆಯ ಮುಸಲ್ಮಾನ ಸಾಮ್ರಾಜ್ಯದ ಪುನರುಜ್ಜೀವನದ ಹಂಚಿಕೆಯೆಂದು ಬ್ರಿಟಿಷ್ ಸರ್ಕಾರ ಭಾವಿಸಿದ್ದರಿಂದ, ಆ ಸಲಹೆಯನ್ನು ಪರಿಗಣಿಸಲು ನಿರಾಕರಿಸಿದರು.*

ಪಾಕಿಸ್ತಾನದ ಮೂಲ ಯೋಜನೆಯನ್ನು ಲೀಗ್ ವಿಸ್ತರಿಸಿತು. ಅಷ್ಟೆ. ಬಂಗಾಳ ಮತ್ತು ಅಸ್ಸಾಂಗಳಲ್ಲಿನ ಮುಸಲ್ಮಾನರನ್ನು ಸೇರಿಸಲು ಅದು ಪೂರ್ವವಿಭಾಗದಲ್ಲಿ ಮತ್ತೊಂದು ಮುಸ್ಲಿಂ ರಾಜ್ಯವನ್ನು ಸೃಷ್ಟಿಸಲು ಹವಣಿಸಿತು. ಇದನ್ನು ಬಿಟ್ಟರೆ, ಸರ್ ಮಹಮದ್ ಇಕ್ಬಾಲ್ ರೂಪಿಸಿದ ಮತ್ತು ರೆಹಮದ್ ಅಲಿಯವರು ಪ್ರಚಾರ ಮಾಡಿದ ವಿಚಾರತಂತ್ರದ ರೂಪರೇಷೆ ಮತ್ತು ಸಾರಾಂಶಗಳನ್ನೇ ಅದು ವ್ಯಕ್ತಪಡಿಸುತ್ತದೆ. ಪೂರ್ವದಲ್ಲಿನ ಈ ಹೊಸ ಮುಸ್ಲಿಂ ರಾಷ್ಟ್ರಕ್ಕೆ ಯಾವುದೇ ಹೆಸರನ್ನು ಕೊಟ್ಟಿರಲಿಲ್ಲ. ಆದರೂ ರೆಹಮತ್ ಅಲಿಯವರ ಧ್ಯೇಯ ಧೋರಣೆಯಲ್ಲಿ ಅಡಕವಾಗಿದ್ದ ಸಿದ್ಧಾಂತ ಹಾಗೂ ವಿಷಯಗಳಲ್ಲಿ ಇದರಿಂದ ಏನೂ ವ್ಯತ್ಯಾಸವಾಗಲಿಲ್ಲ. ಇಲ್ಲಿ ಯಾರಿಗಾದರೂ ಅನಿಸಬಹುದಾದ ಒಂದೇ ಕಷ್ಟವೆಂದರೆ, ಅಂಗಾಂಶಗಳನ್ನು ವಿಸ್ತರಿಸುವಾಗ ಲೀಗ್, ನಿರೀಕ್ಷೆಗನುಗುಣವಾಗಿ, ಎರಡು ಮುಸಲ್ಮಾನ ರಾಜ್ಯಗಳಿಗೆ, ಸಂಕ್ಷಿಪ್ತ ಹಾಗೂ ಪ್ರಿಯವಾದ ಹೆಸರುಗಳನ್ನು ಇಡಲಾರದ್ದು. ಅದು ಹಾಗೆ ಮಾಡಿದ್ದರಿಂದ, ಪಶ್ಚಿಮದ ಮುಸಲ್ಮಾನ ರಾಜ್ಯ, ಪೂರ್ವದ ಮುಸಲ್ಮಾನ ರಾಜ್ಯ

---

*ಹಲಿದೆ ಎಡಿಬ್–ಇನ್‌ಸೈಡ್ ಇಂಡಿಯಾ, ಪು.೩೫೫

ಎಂಬ ದವಡೆಯೊಡೆಯುವಂತಹ ಎರಡು ದೊಡ್ಡ ಹೆಸರುಗಳನ್ನು ಬಳಸಿಕೊಂಡು ನಮ್ಮ ಚರ್ಚೆಯನ್ನು ಮುಂದುವರಿಸಲು ಬಿಡಲಾಯಿತು. ದ್ವಿರಾಷ್ಟ್ರ ಸಿದ್ಧಾಂತ ಮತ್ತು ಅದರ ಪರಿಣಾಮ ಅಂದರೆ ವಿಭಜನೆ, ಇವುಗಳಲ್ಲಿ ಅಂತರ್ಗತವಾಗಿರುವ ಆದರ್ಶಭಾವವನ್ನು ವ್ಯಕ್ತಪಡಿಸಲು ಪಾಕಿಸ್ತಾನ ಎಂಬ ಹೆಸರನ್ನು ಉಳಿಸಿಕೊಂಡು ಈ ಕಷ್ಟವನ್ನು ಪರಿಹಾರ ಮಾಡಬೇಕೆಂಬುದು ನನ್ನ ಸಲಹೆ. ಇದರಂತೆ, ವಾಯುವ್ಯ ಮತ್ತು ಈಶಾನ್ಯದ ಎರಡು ಮುಸಲ್ಮಾನ ರಾಜ್ಯವನ್ನು ಕ್ರಮವಾಗಿ ಪಶ್ಚಿಮ ಪಾಕಿಸ್ತಾನ ಮತ್ತು ಪೂರ್ವ ಪಾಕಿಸ್ತಾನ ಎಂದು ಕರೆಯಬಹುದು.

ಈ ಯೋಜನೆಯು ಹಿಂದೂ ಇಂಡಿಯಾವನ್ನು ಎಚ್ಚರಿಸಿದ್ದು ಮಾತ್ರವಲ್ಲದೆ, ಹಿಂದೂ ಇಂಡಿಯಾಕ್ಕೆ ಆಘಾತ ನೀಡಿತು. ಈ ಯೋಜನೆಯಲ್ಲಿ ನಡುಕ ಹುಟ್ಟಿಸುವಂತಹ ಹೊಸ ವಿಷಯ ಏನಿದೆ? ಎಂದು ಈಗ ಸಹಜವಾಗಿ ಕೇಳಬಹುದು.

## II

ಭಾರತದ ವಾಯುವ್ಯದ ಪ್ರಾಂತಗಳನ್ನು ಒಟ್ಟಿಗೆ ಸೇರಿಸುವ ವಿಚಾರವು ಆಘಾತಕಾರಿಯೇ? ಹಾಗಿದ್ದಲ್ಲಿ, ಈ ಪ್ರಾಂತಗಳನ್ನು ಸೇರಿಸುವ ವಿಚಾರವು ಈ ಹಿಂದಿನ ವೈಸ್‌ರಾಯ್‌ಗಳು, ಆಡಳಿತಗಾರರು ಹಾಗೂ ದಂಡನಾಯಕರು ಮುಂದಿಟ್ಟ ಹಳೆಯ ಯೋಜನೆಯೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ವಾಯುವ್ಯದ ಪ್ರದೇಶಗಳಲ್ಲಿ, ಪಂಜಾಬ್ ಮತ್ತು ವಾಯುವ್ಯ ಸರಹದ್ದಿನ ಪ್ರಾಂತ ಇವುಗಳು ೧೮೪೯ರಲ್ಲಿ ಬ್ರಿಟಿಷರು ಪಂಜಾಬನ್ನು ಜಯಿಸಿದಂದಿನಿಂದ ಒಂದು ಏಕ ಪ್ರಾಂತವಾಗಿ ರೂಪುಗೊಂಡಿವೆ. ಅವೆರಡೂ ೧೯೦೧ರವರೆಗೂ ಒಂದಾಗಿ ಮುಂದುವರೆದವು. ಲಾರ್ಡ್ ಕರ್ಜನ್ ಅವುಗಳ ಏಕತೆಯನ್ನು ಒಡೆದು ೧೯೦೧ರಲ್ಲಿ ಈಗಿನ ಎರಡು ಪ್ರಾಂತಗಳನ್ನಾಗಿ ರೂಪಿಸಿದ. ಸಿಂಧ್‌ನೊಂದಿಗೆ ಪಂಜಾಬನ್ನು ಜೋಡಿಸುವ ಸಂಬಂಧ ಹೇಳುವುದಾದರೆ, ಸಿಂಧ್‌ನ್ನು ಜಯಿಸಿದ ನಂತರ ಪಂಜಾಬನ್ನು ಜಯಿಸಿದ್ದರೆ, ಸಿಂಧನ್ನು ಪಂಜಾಬಿನೊಂದಿಗೆ ವಿಲೀನಗೊಳಿಸಬಹುದಿತ್ತು ಎಂಬುದರಲ್ಲಿ ಅನುಮಾನವಿಲ್ಲ. ಏಕೆಂದರೆ, ಇವೆರಡು ಪರಸ್ಪರ ಒಟ್ಟಾಗಿರುವುದು ಮಾತ್ರವಲ್ಲ, ಇವುಗಳ ನಡುವಣ ಸಹಜ ಸಂಬಂಧವಾದ ಒಂದು ನದಿಯಿಂದ ಜೋಡಿಸಲ್ಪಟ್ಟಿವೆ. ಸಿಂಧ್‌ನ ಆಡಳಿತ ನಡೆಸಲು ಪಂಜಾಬನ್ನು ಬಿಟ್ಟರೆ, ಬ್ರಿಟಿಷರಿಗೆ ಸಾಧ್ಯವಿರುವ ಏಕೈಕ ನೆಲೆ ಬೊಂಬಾಯಿ. ಆದ್ದರಿಂದ ಅದನ್ನು ಬೊಂಬಾಯಿಗೆ ಸೇರಿಸಲಾಯಿತು. ಆದರೆ ಬೊಂಬಾಯಿಯಿಂದ ಸಿಂಧನ್ನು ಪ್ರತ್ಯೇಕಿಸಿ ಅದನ್ನು ಪಂಜಾಬಿಗೆ ಸೇರಿಸುವ ವಿಚಾರವನ್ನೂ ಕೈಬಿಡಲಾಗಿರಲಿಲ್ಲ. ಅದಕ್ಕಾಗಿ ಕಾಲಕಾಲಕ್ಕೆ ಯೋಜನೆಗಳನ್ನು ಮುಂದಿಡಲಾಗಿತ್ತು. ಲಾರ್ಡ್ ಡಾಲ್‌ಹೌಸಿ ಗೌರ್‍ನರ್ ಜನರಲ್ ಆಗಿದ್ದಾಗಲೇ ಆ ವಿಚಾರವನ್ನು ಮೊಟ್ಟಮೊದಲಿಗೆ ಪ್ರಸ್ತಾಪಿಸಲಾಗಿತ್ತು. ಆದರೆ ಹಣಕಾಸಿನ ಕಾರಣಗಳಿಂದಾಗಿ, ಅದಕ್ಕೆ ಕೋರ್ಟ್ ಆಫ್ ಡೈರೆಕ್ಟರ್ಸ್‌ನ ಅನುಮತಿ ಸಿಕ್ಕಿರಲಿಲ್ಲ. ಆ ಸಮಸ್ಯೆಯನ್ನು ಸಿಪಾಯಿ ದಂಗೆಯ ನಂತರ ಪುನಃ ಪರಿಶೀಲಿಸಲಾಯಿತು. ಆದರೆ ಸಿಂಧೂ ನದಿಯಾದ್ಯಂತ ಸಂವಹನ–ಸಂಪರ್ಕ ಸೌಲಭ್ಯಗಳು ಅಷ್ಟಾಗಿ ಇರಲಿಲ್ಲವಾದ್ದರಿಂದ ಅದಕ್ಕೆ ಅನುಮತಿ ನೀಡಲು ಲಾರ್ಡ್ ಕ್ಯಾನಿಂಗ್ ನಿರಾಕರಿಸಿದನು. ಸಿಂಧನ್ನು ಪಂಜಾಬಿನೊಡನೆ ಸೇರಿಸಬೇಕೆಂಬ ಅಭಿಪ್ರಾಯ ೧೮೭೬ರಲ್ಲಿ ಲಾಡ್ ನಾರ್ಥ್ ಬ್ರೂಕನದಾಗಿತ್ತು. ಅನಂತರ ಬಂದ ಲಿಟ್ಟನ್, ಪಂಜಾಬಿನ ಆರು ಗಡಿ ಜಿಲ್ಲೆಗಳು ಮತ್ತು ಸಿಂಧೂ ನದಿಯಾದ್ಯಂತವಿದ್ದ ಸಿಂಧ್ ಜಿಲ್ಲೆ ಇವುಗಳನ್ನು ಸೇರಿಸಿ ಅಕ್ಕಪಕ್ಕದ ಸಿಂಧೂ ಪ್ರಾಂತವನ್ನು ರಚಿಸಲು ಆಶಿಸಿದ. ಇದರಲ್ಲಿ ಪಂಜಾಬಿನ ಆರು ಸರಹದ್ದು ಜಿಲ್ಲೆಗಳಾದ, ಪೆಷಾವರ್, ಕೋಹತ್, ಬನ್ನು (ಈ ಪಕ್ಷದ ಸಿಂಧೂ ಬಯಲು ಬಿಟ್ಟು), ದೇರಾ ಇಸ್ಮಾಯಿಲ್ ಖಾನ್ (ಅದೇ ರೀತಿ

ಬಿಟ್ಟು) ದೇರಾ ಘಾಸಿಖಾನ್ ಮತ್ತು ಕರಾಚಿಯನ್ನು ಬಿಟ್ಟು ಸಿಂಧೂ ನದಿಯ ಅಕ್ಕಪಕ್ಕದ ಸಿಂಧ್ ಜಿಲ್ಲೆಗಳು ಸೇರಬಹುದಾಗಿತ್ತು. ಇದರಿಂದಾಗುವ ನಷ್ಟವನ್ನು ಭರ್ತಿ ಮಾಡಲು ಬೊಂಬಾಯಿಗೆ ಮಧ್ಯಪ್ರಾಂತಗಳನ್ನು ಪೂರ್ಣವಾಗಿ ಅಥವಾ ಭಾಗಶಃ ಸೇರಿಸಬೇಕೆಂದೂ ಲಿಟ್ಟನ್ ಸಲಹೆ ಕೊಟ್ಟ. ಬ್ರಿಟೀಷ್ ಗೃಹಸಚಿವರಿಗೆ ಈ ಸಲಹೆಗಳು ಸಮ್ಮತವಾಗಲಿಲ್ಲ. ಲಾರ್ಡ್ ಲ್ಯಾನ್ಸ್ ಡೌನ್ ವೈಸ್‌ರಾಯ್ ಆಗಿದ್ದ ಅವಧಿ(೧೮೮೮–೯೪)ಯಲ್ಲಿ ಅದೇ ಯೋಜನೆಯನ್ನು ಅಂದರೆ ಸಿಂಧ್‌ನ್ನು ಪಂಜಾಬಿಗೆ ವರ್ಗಾಯಿಸುವುದನ್ನು ಅದರ ಮೂಲ ರೂಪದಲ್ಲೇ ಮತ್ತೆ ಮುಂದಿಡಲಾಯಿತು. ಆದರೆ ಬೆಲೂಚಿಸ್ಥಾನ ಏಜೆನ್ಸಿಯನ್ನು ಸ್ಥಾಪಿಸಿದ ಕಾರಣ, ಸಿಂಧ್ ಗಡಿನಾಡು ಪ್ರಾಂತವಾಗಿ ಉಳಿಯಲಿಲ್ಲ. ಹೀಗಾಗಿ ಪಂಜಾಬಿಗೆ ಸಿಂಧನ್ನು ಸೇರಿಸುವ ಮೂಲ ಉದ್ದೇಶ ರಕ್ಷಣೆಗೆ ಸಂಬಂಧಿಸಿದ್ದು, ಆ ಉದ್ದೇಶ ಈಗ ಅರ್ಥಹೀನವಾದ್ದರಿಂದ ಪಂಜಾಬಿನೊಡನೆ ಸೇರದೆ ಸಿಂಧ್ ಹಾಗೇ ಉಳಿಯಿತು. ಬಲೂಚಿ ಸ್ಥಾನವನ್ನು ಬ್ರಿಟಿಷರು ಸೇರಿಸಿಕೊಳ್ಳದಿದ್ದರೆ ಹಾಗೂ ಪಂಜಾಬಿನಿಂದ ಪ್ರತ್ಯೇಕಿಸಿ ವಾಯುವ್ಯ ಸರಹದ್ದು ಪ್ರಾಂತವನ್ನು ಸ್ಥಾಪಿಸುವುದನ್ನು ಲಾರ್ಡ್ ಕರ್ಜನ್ ಯೋಚಿಸದಿದ್ದರೆ, ಪಾಕಿಸ್ತಾನದ ಒಂದು ಆಡಳಿತ ವಿಭಾಗವಾಗಿ ಬಹಳ ಹಿಂದೆಯೇ ಸ್ಥಾಪನೆಯಾಗುತ್ತಿದ್ದುದನ್ನು ನಾವು ಕಾಣುತ್ತಿದ್ದೆವು.

ಬಂಗಾಳದಲ್ಲಿ ರಾಷ್ಟ್ರೀಯ ಮುಸ್ಲಿಮ್ ರಾಷ್ಟ್ರವನ್ನು ನಿರ್ಮಿಸುವ ಕೇಳಿಕೆಗೆ ಸಂಬಂಧಿಸಿದಂತೆಯೂ ಹೊಸದೇನಿಲ್ಲ. ೧೯೦೫ರಲ್ಲಿ ಅಂದು ವೈಸ್‌ರಾಯ್ ಆಗಿದ್ದ ಲಾರ್ಡ್ ಕರ್ಜನ್, ಬಂಗಾಳ ಮತ್ತು ಅಸ್ಸಾಂಗಳನ್ನು ಎರಡು ಪ್ರಾಂತಗಳನ್ನಾಗಿ ವಿಭಜಿಸಿದನೆಂಬುದನ್ನು ಹಲವರು ನೆನೆಸಿಕೊಳ್ಳಬಹುದು. ಆ ಪ್ರಾಂತಗಳೆಂದರೆ, (೧) ಡಾಕಾ ರಾಜಧಾನಿಯಾಗಿರುವ ಪೂರ್ವ ಬಂಗಾಳ ಮತ್ತು ಅಸ್ಸಾಂ, ಮತ್ತು (೨) ಕಲ್ಕತ್ತಾ ರಾಜಧಾನಿಯಾಗಿರುವ ಪಶ್ಚಿಮಬಂಗಾಳ ಹೊಸದಾಗಿ ಸ್ಥಾಪಿತವಾದ ಪೂರ್ವಬಂಗಾಳ ಮತ್ತು ಅಸ್ಸಾಂ ಪ್ರಾಂತದಲ್ಲಿ, ಹಳೆಯ ಬಂಗಾಳ ಮತ್ತು ಅಸ್ಸಾಂ ಪ್ರಾಂತದ ಈ ಕೆಳಗಿನ ಜಿಲ್ಲೆಗಳು ಸೇರಿದ್ದವು: (೧) ಡಾಕಾ, (೨) ಮೈಮೆನ್ ಸಿಂಗ್, (೩) ಫರಿದಪುರ (೪) ಬೇಕರಗಂಜ್ (೫) ಪಿಪ್ಪೆರಾ (೬) ನೋವಖಲಿ (೭) ಚಿಟ್ಟಗಾಂಗ್ (೮) ಚಿಟ್ಟಗಾಂಗ್ ಬೆಟ್ಟದ ಮಾರ್ಗ (೯) ರಾಜಶಾಹಿ (೧೦) ದಿನಾಜಪುರ (೧೧) ಜಲಪೈಗುರಿ (೧೨) ರಂಗಪುರ (೧೩) ಬೋಗ್ರಾ (೧೪) ಪಾಬ್ನಾ ಮತ್ತು (೧೫) ಮಾಲ್ಡಾ ಹಳೆಯ ಬಂಗಾಳ ಮತ್ತು ಅಸ್ಸಾಂನ ಉಳಿದ ಜಿಲ್ಲೆಗಳು ಮತ್ತು ಮಧ್ಯಪ್ರಾಂತದಿಂದ ವರ್ಗಾಯಿಸಲಾದ ಸಂಬಲಪುರ ಜಿಲ್ಲೆ ಇವುಗಳು ಪಶ್ಚಿಮ ಬಂಗಾಳದಲ್ಲಿ ಸೇರಿದ್ದವು.

ಭಾರತದ ವಿಭಜನೆಯಲ್ಲಿ, ಬಂಗಾಳ ವಿಭಜನೆ ಎಂದು ಕರೆಯಲಾಗಿರುವ ಈ ಎರಡು ಪ್ರಾಂತಗಳ ನಿರ್ಮಾಣವು ಪೂರ್ವ ಬಂಗಾಳದಲ್ಲಿ ಒಂದು ಮುಸ್ಲಿಮ್ ರಾಷ್ಟ್ರವನ್ನು ಸ್ಥಾಪಿಸುವ ಪ್ರಯತ್ನ. ಏಕೆಂದರೆ, ಅಸ್ಸಾಂನ ಕೆಲವು ಭಾಗಗಳನ್ನು ಬಿಟ್ಟರೆ, ಪೂರ್ವಬಂಗಾಳ ಮತ್ತು ಅಸ್ಸಾಂಗಳು ಸೇರಿದ ಹೊಸ ಪ್ರಾಂತವು ಪ್ರಧಾನವಾಗಿ ಮುಸಲ್ಮಾನ ಕ್ಷೇತ್ರ. ಆದರೆ ಬ್ರಿಟಿಷರು ಹಿಂದೂಗಳಿಗೆ ಮಣಿದು ೧೯೧೧ರಲ್ಲಿ ಈ ವಿಭಜನೆಯನ್ನು ರದ್ದು ಮಾಡಿದರು. ಅಗ ತಮ್ಮ ತನವನ್ನು ತೋರಿಸಿಕೊಳ್ಳಲಾರದಷ್ಟು ಮುಸಲ್ಮಾನರು ದುರ್ಬಲರಾಗಿದ್ದರಿಂದ, ಅವರ ಆಶಯಗಳನ್ನು ಕಡೆಗಣಿಸಿ, ಆ ವಿಭಜನೆಯನ್ನು ಹಿಂದೂಗಳು ವಿರೋಧಿಸಿದರು. ಬಂಗಾಳ ವಿಭಜನೆ ರದ್ದಾಗದಿದ್ದ ಪಕ್ಷದಲ್ಲಿ, ಪೂರ್ವಬಂಗಾಳದ ಮುಸಲ್ಮಾನ ರಾಜ್ಯವು ಹೊಸ ಯೋಜನೆಯಾಗಿರುವುದರ ಬದಲು ಇಷ್ಟು ಹೊತ್ತಿಗೆ ೩೯ ವರ್ಷ ಹಳೆಯದಾಗಿರುತ್ತಿತ್ತು.*

---

* ಇಂಡಿಯಾ ಸರ್ಕಾರದ ಗೆಜೆಟ್ ನೋಟಿಫಿಕೇಷನ್ ನಂ.೨೮೩೨, ದಿನಾಂಕ ೧, ಸೆಪ್ಟೆಂಬರ್ ೧೯೦೫ನೇ ಅಕ್ಟೋಬರ್ ೧೬ರಿಂದ ಈ ಎರಡು ಪ್ರಾಂತಗಳು ಪ್ರತ್ಯೇಕ ಆಡಳಿತ ಭಾಗಗಳಾದವು.

## III

ಹಿಂದೂಸ್ಥಾನದಿಂದ ಪಾಕಿಸ್ತಾನವನ್ನು ಪ್ರತ್ಯೇಕಿಸುವ ವಿಚಾರ ನಡುಕ ಆಘಾತಕಾರಿಯೇ? ಹಾಗಿದ್ದಲ್ಲಿ, ಕಾಂಗ್ರೆಸ್ ನೀತಿಯ ಮೂಲ ನಿಯಮಗಳನ್ನು ರೂಪಿಸಿದಂತಹ ಹಾಗೂ ಈ ವಿಷಯಕ್ಕೆ ಸೂಕ್ತವೆನಿಸುವಂತಹ ಕೆಲವು ಸತ್ಯಾಂಶಗಳನ್ನು ನೆನಪಿಸಿಕೊಳ್ಳಲು ನನಗೆ ಅವಕಾಶ ಕೊಡಿ. ಶ್ರೀ ಗಾಂಧಿಯವರು ಕಾಂಗ್ರೆಸ್ಸನ್ನು ತಮ್ಮ ಕೈಗೆ ತೆಗೆದುಕೊಂಡ ತಕ್ಷಣ, ಅದನ್ನು ಜನಪ್ರಿಯಗೊಳಿಸಲು ಎರಡು ಕಾರ್ಯಗಳನ್ನು ಅನುಷ್ಠಾನಕ್ಕೆ ತಂದರು ಎಂಬುದನ್ನು ನೆನಪಿಸಿಕೊಳ್ಳಲು ಸಾಧ್ಯ. ಅವರು ಮಾಡಿದ ಮೊಟ್ಟಮೊದಲ ಕಾರ್ಯವೆಂದರೆ ಅಸಹಕಾರ ಚಳುವಳಿಯನ್ನು ಪ್ರಾರಂಭಿಸಿದ್ದು.

ಭಾರತದ ರಾಜಕೀಯಕ್ಕೆ ಶ್ರೀ ಗಾಂಧಿಯವರು ಪ್ರವೇಶಿಸುವುದಕ್ಕೆ ಮೊದಲು, ಅಧಿಕಾರಕ್ಕಾಗಿ ಸ್ಪರ್ಧಿಸುತ್ತಿದ್ದ ಪಕ್ಷಗಳೆಂದರೆ, ಕಾಂಗ್ರೆಸ್ ಉದಾರವಾದಿಗಳು ಮತ್ತು ಬಂಗಾಳದ ತೀವ್ರವಾದಿಗಳು. ಕಾಂಗ್ರೆಸ್ ಮತ್ತು ಉದಾರವಾದಿಗಳು ವಾಸ್ತವವಾಗಿ ಒಂದು ಪಕ್ಷ. ಏಕೆಂದರೆ ಅವರನ್ನು ಪ್ರತ್ಯೇಕಿಸುವಂತಹ ಯಾವುದೇ ಭಿನ್ನತೆಯು ಅವರ ನಡುವೆ ಇರಲಿಲ್ಲ. ಆದ್ದರಿಂದ ಭಾರತದಲ್ಲಿ ಎರಡೇ ಪಕ್ಷಗಳಿದ್ದವೆಂದು ನಾವು ನಿಸ್ಸಂದೇಹವಾಗಿ ಹೇಳಬಹುದು. ಆ ಪಕ್ಷಗಳೆಂದರೆ ಉದಾರವಾದಿಗಳು ಮತ್ತು ತೀವ್ರವಾದಿಗಳು. ಈ ಪಕ್ಷಗಳಿಗೆ ಸೇರಲು ಅತ್ಯಂತ ಕಷ್ಟಕರ ಕಟ್ಟುನಿಟ್ಟುಗಳಿದ್ದವು. ಉದಾರವಾದಿ ಪಕ್ಷದಲ್ಲಿದ್ದ ಕಟ್ಟುನಿಟ್ಟೆಂದರೆ, ಕೇವಲ ಶಿಕ್ಷಣ ಮಾತ್ರವಲ್ಲ, ಮೇಲ್ಮಟ್ಟದ ಪಾಂಡಿತ್ಯ. ಪಾಂಡಿತ್ಯದಲ್ಲಿ ತನ್ನ ಹೆಗ್ಗಳಿಕೆಯನ್ನು ಸ್ಥಾಪಿಸುವುದಕ್ಕೆ ಮುಂಚೆ ಉದಾರವಾದಿ ಪಕ್ಷಕ್ಕೆ ಸೇರುವ ಭರವಸೆ ಯಾರಿಗೂ ಇರಲಿಲ್ಲ. ಈ ಕಟ್ಟುನಿಟ್ಟು, ರಾಜಕೀಯ ಅಧಿಕಾರದಿಂದ ಅಶಿಕ್ಷಿತರನ್ನು ಪರಿಣಾಮಕಾರಿಯಾಗಿ ದೂರವಿಟ್ಟಿತು. ಆ ಕಡೆ, ತೀವ್ರವಾದಿಗಳು, ನಾವು ಕಲ್ಪಿಸಿಕೊಳ್ಳಲು ಸಾಧ್ಯವಿರುವುದರಲ್ಲಿಯೇ ಅತ್ಯಂತ ಕಷ್ಟಕರ ಪರೀಕ್ಷೆಯನ್ನು ಒಡ್ಡಿದರು. ಅವರಂತೆ ತಾವು ಕೈಗೊಂಡ ಉದ್ದೇಶಕ್ಕಾಗಿ ತಮ್ಮ ಪ್ರಾಣವನ್ನೇ ಬಲಿಕೊಡಲು ಸಿದ್ಧವಿದ್ದವರು ಅಂದರೆ ಪ್ರಾಣಗಳನ್ನು ಕೇವಲ ಮೀಸಲಿಡುವ ಅರ್ಥದಲ್ಲಿ ಮಾತ್ರವಲ್ಲ, ವಾಸ್ತವವಾಗಿ ಆ ಉದ್ದೇಶಕ್ಕಾಗಿ ಸಾಯುವ ಅರ್ಥದಲ್ಲಿ ಮಾತ್ರ ತೀವ್ರವಾದಿಗಳು ಸಂಘಟನೆಯಲ್ಲಿ ಸದಸ್ಯರಾಗಲು ಅವಕಾಶವಿತ್ತು. ಆದ್ದರಿಂದ ತೀವ್ರವಾದಿ ಸಂಘಟನೆಯಲ್ಲಿ ಯಾರೇ ಅಧೈರ್ಯಶಾಲಿ ಪ್ರವೇಶಿಸಲು ಸಾಧ್ಯವಿರಲಿಲ್ಲ. ನಾಗರೀಕ ಅಸಹಕಾರಕ್ಕೆ ಯಾವುದೇ ಕಲಿಕೆಯ ಅಗತ್ಯವಿರಲಿಲ್ಲ. ಅಲ್ಲದೆ, ಪ್ರಾಣವನ್ನೇ ತ್ಯಾಗ ಮಾಡಲು ಅದು ಕೇಳುವುದಿಲ್ಲ. ಯಾವುದೇ ಕಲಿಕೆಯ ಅಗತ್ಯವಿಲ್ಲದ ಹಾಗೂ ವಿಪರೀತ ಹಾನಿಗೆ ಒಳಗಾಗಲು ಇಷ್ಟವಿಲ್ಲದ ಮತ್ತು ಅದೇ ಸಮಯದಲ್ಲಿ, ದೇಶಭಕ್ತರು ಎಂಬ ಸುಲಭ ಕುಪ್ರಸಿದ್ಧಿಯನ್ನು ಪಡೆಯಲು ಸಾಧ್ಯವಿದ್ದ ಬಹಳ ಮಂದಿ ಬಹುಸಂಖ್ಯಾತರಿಗೆ, ಇದು ಸುಲಭವಾದ ಒಂದು ಮಧ್ಯಮ ಮಾರ್ಗವಾಯಿತು. ಉದಾರವಾದಿ ಪಕ್ಷ ಅಥವಾ ತೀವ್ರವಾದಿ ಪಕ್ಷಗಳಿಗಿಂತ ಕಾಂಗ್ರೆಸ್ಸನ್ನು ಹೆಚ್ಚು ಜನಪ್ರಿಯಗೊಳಿಸಿದ್ದು ಈ ಮಧ್ಯಮ ಮಾರ್ಗ.

ಗಾಂಧಿಯವರು ಮಾಡಿದ ಎರಡನೇ ಕಾರ್ಯವೆಂದರೆ, ಭಾಷಾವಾರು ಪ್ರಾಂತ ತತ್ತ್ವವನ್ನು ಪ್ರತಿಪಾದಿಸಿದ್ದು, ಗಾಂಧಿಯವರ ಪ್ರೇರಣೆ ಮತ್ತು ಮಾರ್ಗದರ್ಶನ ಪ್ರಕಾರ ಕಾಂಗ್ರೆಸ್ ರೂಪಿಸಿದ ಸಂವಿಧಾನದಲ್ಲಿ ಭಾರತವನ್ನು ಆಯಾಯ ಭಾಷೆ ಮತ್ತು ಆಡಳಿತ ಕೇಂದ್ರಗಳಿಂದ ಕೂಡಿದಂತೆ ಈ ಕೆಳಕಂಡ ಪ್ರಾಂತಗಳನ್ನಾಗಿ ವಿಭಜಿಸಬೇಕೆಂದು ಸೂಚಿಸಲಾಗಿತ್ತು.

| ಪ್ರಾಂತ | ಭಾಷೆ | ಆಡಳಿತ ಕೇಂದ್ರ |
|---|---|---|
| ಅಜ್ಮೀರ–ಮೇವಾರ | ಹಿಂದೂಸ್ತಾನಿ | ಅಜ್ಮೀರ |
| ಆಂಧ್ರ | ತೆಲುಗು | ಮದ್ರಾಸು |
| ಅಸ್ಸಾಂ | ಅಸ್ಸಾಮೀಸ್ | ಗುವಾಹಟಿ |
| ಬಿಹಾರ | ಹಿಂದೂಸ್ತಾನಿ | ಪಾಟ್ನ |
| ಬಂಗಾಳ | ಬೆಂಗಾಲಿ | ಕಲ್ಕತ್ತ |
| ಬೊಂಬಾಯಿ(ನಗರ) | ಮರಾಠಿ–ಗುಜರಾತಿ | ಬೊಂಬಾಯಿ |
| ದೆಹಲಿ | ಹಿಂದೂಸ್ತಾನಿ | ದೆಹಲಿ |
| ಗುಜರಾತ್ | ಗುಜರಾತಿ | ಅಹಮದಾಬಾದ್ |
| ಕರ್ನಾಟಕ | ಕನ್ನಡ | ಧಾರವಾಡ |
| ಕೇರಳ | ಮಲೆಯಾಳಂ | ಕಲ್ಲಿಕೋಟೆ |
| ಮಹಾಕೋಶಲ | ಹಿಂದೂಸ್ತಾನಿ | ಜಬ್ಬಲ್ಪುರ |
| ಮಹಾರಾಷ್ಟ್ರ | ಮರಾಠಿ | ಪುಣೆ |
| ನಾಗಪುರ | ಮರಾಠಿ | ನಾಗಪುರ |
| ವಾಯುವ್ಯ ಸರಹದ್ದು ಪ್ರಾಂತಗಳು | ಪುಷ್ಟು | ಪೆಷಾವರ್ |
| ಪಂಜಾಬ್ | ಪಂಜಾಬಿ | ಲಾಹೋರ್ |
| ಸಿಂಧ್ | ಸಿಂಧಿ | ಕರಾಚಿ |
| ತಮಿಳುನಾಡು | ತಮಿಳು | ಮದ್ರಾಸು |
| ಸಂಯುಕ್ತ ಪ್ರಾಂತಗಳು | ಹಿಂದೂಸ್ತಾನಿ | ಲಕ್ನೋ |
| ಉತ್ಕಲ್ | ಒರಿಯಾ | ಕಟಕ್ |
| ವಿದರ್ಭಾ(ಬೇರಾರ್) | ಮರಾಠಿ | ಅಕೋಲ |

ಈ ವಿತರಣೆಯಲ್ಲಿ ವಿಸ್ತೀರ್ಣ ಜನಸಂಖ್ಯೆ ಅಥವಾ ಆದಾಯಗಳನ್ನು ಯಾವುದೇ ರೀತಿಯಲ್ಲಿಯೂ ಗಮನಿಸಿಲ್ಲ. ಕನಿಷ್ಠ ಮಟ್ಟದ ನಾಗರೀಕ ಜೀವನವನ್ನು ಮಾಡುವಂತಹ ಸಾಮರ್ಥ್ಯವನ್ನು ಪ್ರತಿಯೊಂದು ಆಡಳಿತ ವಿಭಾಗವೂ ಹೊಂದಿರಬೇಕು. ಅಂತಹ ಆಡಳಿತ ವಿಭಾಗವು ಸಾಕಷ್ಟು ವಿಸ್ತೀರ್ಣ ಹಾಗೂ ಸಾಕಷ್ಟು ಜನಸಂಖ್ಯೆಯನ್ನು ಹೊಂದಿರುವುದರ ಜೊತೆಗೆ ಸಾಕಷ್ಟು ಕಂದಾಯವನ್ನು ಪಡೆಯುವಂತಿರಬೇಕು ಎಂಬ ನಿಯಮಕ್ಕೆ, ಮೇಲ್ಕಂಡ ವಿತರಣಾ ಯೋಜನೆಯಲ್ಲಿ ಪ್ರಾದೇಶಿಕ ಕಾರಣಗಳಿಂದಾಗಿ, ಯಾವುದೇ ಸ್ಥಾನವಿಲ್ಲ. ಇಲ್ಲಿ ನಿರ್ಧಾರಕ ಕಾರಣವೆಂದರೆ ಭಾಷೆ, ಈಗಾಗಲೇ, ಜಾಳು ಜಾಳು ಸಂರಚನೆಯಿಂದ ಕೂಡಿರುವ ಭಾರತೀಯ ಸಾಮಾಜಿಕ ಜೀವನದಲ್ಲಿ ಈ ಭಾಷೆಯು ಭೇದಕ ಶಕ್ತಿಯಗುವ ಸಾಧ್ಯತೆಯಿದೆ ಎಂಬ ಅಂಶಕ್ಕೆ ಯಾವುದೇ ಗಮನ ಕೊಟ್ಟಿಲ್ಲ. ಜನರ ಸ್ಥಾನಿಕ ದೇಶಭಕ್ತಿಯನ್ನು ಪ್ರೇರೇಪಿಸಿ, ಕಾಂಗ್ರೆಸಿನ ಕಡೆ ಅವರ ಒಲವನ್ನು ಸಂಪಾದಿಸುವ ಏಕೈಕ ಉದ್ದೇಶದಿಂದ ಈ ವಿಚಾರತಂತ್ರವನ್ನು ಮುಂದಿಡಲಾಯಿತು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಭಾಷಾವಾರು ಪ್ರಾಂತಗಳ ವಿಚಾರ ಉಳಿದುಬಂದಿತು. ಅದನ್ನು ಕಾರ್ಯರೂಪಕ್ಕೆ

ತರಬೇಕೆಂಬ ಸತತ ಒತ್ತಾಯ ಎಷ್ಟು ತೀವ್ರವಾಗಿತ್ತೆಂದರೆ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ, ಒತ್ತಾಯಕ್ಕೆ ಮಣಿದು ಭಾಷಾವಾರು ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕಾಯಿತು. ಈಗಾಗಲೇ ಬಿಹಾರಿನಿಂದ ಒರಿಸ್ಸಾ ಪ್ರತ್ಯೇಕವಾಗಿದೆ.[೧] ಮದ್ರಾಸಿನಿಂದ ಪ್ರತ್ಯೇಕವಾಗಲು ಆಂಧ್ರ ಒತ್ತಡ ತರುತ್ತಿದೆ. ಮಹಾರಾಷ್ಟ್ರದಿಂದ ಪ್ರತ್ಯೇಕವಾಗಬೇಕೆಂದು ಕರ್ನಾಟಕ ಕೇಳುತ್ತಿದೆ.[೨] ಮಹಾರಾಷ್ಟ್ರದಿಂದ ಪ್ರತ್ಯೇಕತೆಯನ್ನು ಬಯಸದಿರುವ ಏಕೈಕ ಭಾಷೆವಾರು ಪ್ರಾಂತ್ಯವೆಂದರೆ ಗುಜರಾತ್ ಅಥವಾ ಪ್ರತ್ಯೇಕಗೊಳ್ಳುವ ವಿಚಾರವನ್ನು ತಾತ್ಕಾಲಿಕವಾಗಿ ಅದು ಕೈಬಿಟ್ಟಿದೆ. ಏಕೆಂದರೆ, ರಾಜಕೀಯವಾಗಿ ಹಾಗೂ ವಾಣಿಜ್ಯ ವ್ಯವಹಾರಗಳ ದೃಷ್ಟಿಯಿಂದ, ಮಹಾರಾಷ್ಟ್ರದೊಂದಿಗೆ ಸೇರಿರುವುದೇ ತನ್ನ ಉತ್ತಮ ಬಂಡವಾಳ ಹೂಡಿಕೆ ಎಂದು ಗುಜರಾತ್ ಮನಗಂಡಿರುವುದೇ ಬಹುಶಃ ಇದಕ್ಕೆ ಕಾರಣ.

ಅದು ಹೇಗೇ ಇದ್ದರೂ ಭಾಷೆಯ ಆಧಾರದ ಮೇಲೆ ಪ್ರತ್ಯೇಕಿಸುವುದು ಇಂದು ಕಾಂಗ್ರೆಸ್ಸಿನಲ್ಲಿ ಒಂದು ಸ್ವೀಕೃತ ತತ್ತ್ವ ಎಂಬುದಂತೂ ಸತ್ಯ. ಕರ್ನಾಟಕ ಮತ್ತು ಆಂಧ್ರಗಳನ್ನು ಪ್ರತ್ಯೇಕಿಸುವುದು, ಭಾಷಾವಾರು ವ್ಯತ್ಯಾಸದ ಆಧಾರದ ಮೇಲೆಂದೂ, ಆದರೆ ಪಾಕಿಸ್ತಾನವನ್ನು ಪ್ರತ್ಯೇಕಿಸಬೇಕೆಂಬ ಕೇಳಿಕೆ ಸಾಂಸ್ಕೃತಿಕ ವ್ಯತ್ಯಾಸದ ಆಧಾರದ ಮೇಲೆಂದೂ ಹೇಳುವುದರಲ್ಲಿ ಅರ್ಥವಿಲ್ಲ. ಇದು ಭಿನ್ನವಿಲ್ಲದ ಭೇದ ಅಷ್ಟೆ. ಭಾಷಾ ಭಿನ್ನತೆಯ ಸಾಂಸ್ಕೃತಿಕ ಭಿನ್ನತೆಗೆ ಕೇವಲ ಮತ್ತೊಂದು ಹೆಸರು ಅಷ್ಟೆ.

ಕರ್ನಾಟಕ ಮತ್ತು ಆಂಧ್ರಗಳನ್ನು ಪ್ರತ್ಯೇಕಿಸುವಲ್ಲಿ ಯಾವುದೇ ಆಘಾತವುಂಟಾಗದಿದ್ದಲ್ಲಿ ಪಾಕಿಸ್ತಾನವನ್ನು ಪ್ರತ್ಯೇಕಿಸಬೇಕೆಂಬ ಕೇಳಿಕೆಯಲ್ಲಿ ಆಘಾತ ಹುಟ್ಟಿಸುವ ಅಂಶವಾವುದು? ಅದು ತನ್ನ ಪರಿಣಾಮದಲ್ಲಿ ಹಾನಿಕರವಾಗಿದ್ದರೆ, ಹಿಂದೂ ಪ್ರಾಂತಗಳಾದ ಕರ್ನಾಟಕವನ್ನು ಮಹಾರಾಷ್ಟ್ರದಿಂದಲೂ, ಆಂಧ್ರವನ್ನು ಮದ್ರಾಸಿನಿಂದಲೂ ಪ್ರತ್ಯೇಕಿಸುವುದರಿಂದ ಆಗಬಹುದಾದ ಹಾನಿಗಿಂತ ಹೆಚ್ಚಿನದಲ್ಲ. ತನ್ನದೇ ಆದ ವಿಶಿಷ್ಟ ರೀತಿಯ ಬೆಳವಣಿಗೆಗಾಗಿ ಸ್ವಾತಂತ್ರ್ಯ ಕೇಳುತ್ತಿರುವ ಒಂದು ಸಂಸ್ಕೃತಿಯ ಮತ್ತೊಂದು ಪ್ರದರ್ಶನ ಪಾಕಿಸ್ತಾನ ಅಷ್ಟೆ.

♦

---

೧. ೧೯೩೫ರ ಇಂಡಿಯಾ ಸರ್ಕಾರದ ಕಾಯ್ದೆಪ್ರಕಾರ ಇದನ್ನು ಮಾಡಲಾಯಿತು.

೨. ಮದ್ರಾಸು ಪ್ರದೇಶದಿಂದಲೂ ಕೆಲವು ಭಾಗಗಳನ್ನು ಕರ್ನಾಟಕ ಅಪೇಕ್ಷಿಸುತ್ತದೆ.

## ಅಧ್ಯಾಯ ೧೮

# ಆಶ್ರಯ ಕೇಳುತ್ತಿರುವ ಒಂದು ರಾಷ್ಟ್ರ

ಪ್ರತ್ಯೇಕತೆಗಾಗಿ ಬಂದಿರುವ ಇಂತಹ ಕೇಳಿಕೆಗಳ ಹಿನ್ನೆಲೆಯಲ್ಲಿ ಅವಕ್ಕೆ ಅನುಕೂಲವಾಗುವಂತಹ ಆಡಳಿತಾತ್ಮಕ, ಭಾಷಾತ್ಮಕ ಹಾಗೂ ಸಾಂಸ್ಕೃತಿಕ ಕಾರಣಗಳಿವೆ ಎಂಬುದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ ಮತ್ತು ಅರಿತುಕೊಂಡಿದ್ದಾರೆ. ಈ ಕೇಳಿಕೆಗಳ ಬಗ್ಗೆ ಯಾರದ್ದೂ ಅಸಮಾಧಾನವಿಲ್ಲ. ಅಲ್ಲದೆ ಅವುಗಳನ್ನು ಒಪ್ಪಿಕೊಳ್ಳಲೂ ಅನೇಕರು ಸಿದ್ಧರಿದ್ದಾರೆ. ಆದರೆ ಮುಸಲ್ಮಾನರು ಪ್ರತ್ಯೇಕತಾ ವಿಚಾರದ ಬಗ್ಗೆ ಮಿತಿಮೀರಿ ವ್ಯವಹರಿಸುತ್ತಿದ್ದಾರೆ ಎಂದು ಹಿಂದೂಗಳು ಹೇಳುತ್ತಾರೆ. ಆ ಮಾರ್ಗವನ್ನು ಅವರು ಅನುಸರಿಸಲು ಕಾರಣವೇನು? ಅವರು ವಿಭಜನೆಯನ್ನು ಏಕೆ ಕೇಳುತ್ತಿದ್ದಾರೆ? ಪಾಕಿಸ್ತಾನ ಮತ್ತು ಹಿಂದೂಸ್ತಾನಗಳ ನಡುವೆ ನ್ಯಾಯಬದ್ಧ ವಿಚ್ಛೇದನೆಯಿಂದ ಸಾಮಾನ್ಯ ಸಂಬಂಧವನ್ನು ಇಲ್ಲವಾಗಿಸಲು ಅವರು ಏಕೆ ಒತ್ತಾಯಿಸುತ್ತಿದ್ದಾರೆ? ಎಂಬ ಪ್ರಶ್ನೆಗಳನ್ನು ಹಿಂದೂಗಳು ಎತ್ತುತ್ತಾರೆ.

ಭಾರತದ ಮುಸಲ್ಮಾನರು ಒಂದು ಪ್ರತ್ಯೇಕ ರಾಷ್ಟ್ರವೆಂಬುದಾಗಿ ಮುಸ್ಲಿಂ ಲೀಗ್ ತನ್ನ ನಿರ್ಣಯದಲ್ಲಿ ಮಾಡಿರುವ ಘೋಷಣೆಯಲ್ಲಿ ಇವಕ್ಕೆ ಉತ್ತರ ಸಿಗುತ್ತದೆ. ಮುಸ್ಲಿಂ ಲೀಗಿನ ಈ ಘೋಷಣೆಯನ್ನೇ ಹಿಂದೂಗಳು ವಿರೋಧಿಸುತ್ತಾರೆ ಮತ್ತು ಹೀಗಳೆಯುತ್ತಾರೆ.

ಹಿಂದೂಗಳ ಅಸಮಾಧಾನ ನಿಜವಾಗಿಯೂ ಸ್ವಾಭಾವಿಕ. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಪ್ರಾರಂಭವಾದಂದಿನಿಂದಲೂ, ಭಾರತವು ಒಂದು ರಾಷ್ಟ್ರವೋ ಅಲ್ಲವೋ ಎಂಬ ಪ್ರಶ್ನೆ ಆಂಗ್ಲೋ–ಇಂಡಿಯನ್ನರು ಮತ್ತು ಹಿಂದೂ ರಾಜಕಾರಣಿಗಳ ನಡುವಣ ಭಿನ್ನಾಭಿಪ್ರಾಯದ ವಿಷಯವಾಗಿದೆ. ಭಾರತ ಒಂದು ರಾಷ್ಟ್ರವಲ್ಲ ಎಂದು ಹೇಳುವಲ್ಲಿ ಆಂಗ್ಲೋ–ಇಂಡಿಯನ್ನರು ಎಂದೂ ಹಿಂಜರಿದಿಲ್ಲ. 'ಭಾರತೀಯರು' ಎಂಬುದು ಭಾರತದಲ್ಲಿರುವ ಜನರಿಗಿರುವ ಮತ್ತೊಂದು ಹೆಸರು ಅಷ್ಟೆ. ಒಬ್ಬ ಆಂಗ್ಲೋ–ಇಂಡಿಯನ್ನನ ಮಾತುಗಳಲ್ಲಿ ಹೇಳುವುದಾದರೆ, "ಇಂಡಿಯಾವನ್ನು ತಿಳಿಯಬೇಕಾದರೆ, ಇಂಡಿಯಾ ಎಂಬ ವಸ್ತುವಿದೆ ಎಂಬುದನ್ನು ಮರೆಯುವುದು." ತದ್ವಿರುದ್ಧವಾಗಿ, ಹಿಂದೂ ರಾಜಕಾರಣಿಗಳು ಹಾಗೂ ದೇಶಭಕ್ತರು ಭಾರತ ಒಂದು ರಾಷ್ಟ್ರ ಎಂದು ಸಾಧಿಸುವಲ್ಲಿ ಅಷ್ಟೇ ಜಿಗುಟುತನ ತೋರಿಸುತ್ತಿದ್ದಾರೆ. ತಮ್ಮ ಪ್ರತಿಪಾದನೆಯಲ್ಲಿ ಆಂಗ್ಲೋ–ಇಂಡಿಯನ್ನರು ಸರಿ ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಬಂಗಾಳದ ರಾಷ್ಟ್ರೀಯ ಕವಿ ಡಾ.ಟಾಗೋರ್ ಕೂಡಾ ಇದನ್ನು ಒಪ್ಪುತ್ತಾರೆ. ಆದರೆ ಹಿಂದೂಗಳು ಈ ವಿಚಾರದಲ್ಲಿ ಡಾ. ಟಾಗೋರ್ ಅವರಿಗೂ ಮಣಿದಿಲ್ಲ.

ಈ ಭಿನ್ನಾಭಿಪ್ರಾಯಕ್ಕೆ ಎರಡು ಕಾರಣಗಳಿವೆ. ಮೊದಲನೆಯದಾಗಿ ಭಾರತ ಒಂದು ರಾಷ್ಟ್ರವಲ್ಲ ಎಂದು ಒಪ್ಪಿಕೊಳ್ಳುವುದು ನಾಚಿಕೆಗೇಡು ಎಂದು ಹಿಂದೂಗಳು ಭಾವಿಸುತ್ತಾರೆ. ಒಂದು ಜನತೆಯಲ್ಲಿ ರಾಷ್ಟ್ರೀಯತೆ ಮತ್ತು ರಾಷ್ಟ್ರೀಯತಾ ಭಾವನೆಗಳು ವಿಶೇಷ ಮೌಲ್ಯಗಳು ಎಂದು ಭಾವಿಸುವ ಪ್ರಪಂಚದಲ್ಲಿ, ಹಿಂದೂಗಳು ಆ ರೀತಿ ಭಾವಿಸುವುದು ಸ್ವಾಭಾವಿಕವೇ ಸರಿ. ಶ್ರೀ ಎಚ್.ಜಿ.ವೆಲ್ಸ್ ಅವರ ಭಾಷೆಯಲ್ಲಿ ಹೇಳಬೇಕಾದರೆ, ತುಂಬಿದ ಸಭೆಯೊಂದರಲ್ಲಿ ವಿವಸ್ತ್ರತೆಯು ಹೇಗೋ ಹಾಗೆ ಭಾರತಕ್ಕೆ ರಾಷ್ಟ್ರೀಯತೆಯೇ

ಇಲ್ಲವೆಂಬುದೂ ಅಷ್ಟೇ ಅಸಮಂಜಸವಾದುದು. ಎರಡನೆಯದಾಗಿ, ಜವಾಬ್ದಾರಿ ಸರ್ಕಾರದ ಕೇಳಿಕೆಯೊಂದಿಗೆ ರಾಷ್ಟ್ರೀಯತೆಯ ನಿಕಟ ಸಂಬಂಧವಿದೆ ಎಂಬುದನ್ನೂ ಆತ ಮನಗಂಡಿದ್ದಾನೆ. ಒಂದು ರಾಷ್ಟ್ರೀಯತೆಯ ನಿಕಟ ಸಂಬಂಧವಿದೆ ಎಂಬುದನ್ನೂ ಆತ ಮನಗಂಡಿದ್ದಾನೆ. ಒಂದು ರಾಷ್ಟ್ರದಲ್ಲಿರುವ ಜನತೆ ಅದೇ ಆಧಾರದ ಮೇಲೆ, ಸ್ವಯಂ ಆಡಳಿತಕ್ಕೆ ಅರ್ಹರಾಗಿರುತ್ತಾರೆ ಎಂಬುದು ೧೯ನೇ ಶತಮಾನದ ಕೊನೆಯ ವೇಳೆಗೆ ಒಂದು ಸ್ವೀಕೃತ ತತ್ತ್ವವಾಗಿತ್ತು ಎಂಬುದೂ ಆತನಿಗೆ ತಿಳಿದಿದೆ. ತನ್ನ ಜನತೆಗಾಗಿ ಸ್ವಯಂ ಅಧಿಕಾರವನ್ನು ಕೇಳುವ ಯಾವುದೇ ದೇಶಭಕ್ತನು ಅವರು ಒಂದು ರಾಷ್ಟ್ರವೆಂಬುದನ್ನು ಸಮರ್ಥಿಸಬೇಕಾಗುತ್ತದೆ. ಈ ಕಾರಣದಿಂದಾಗಿ, ಭಾರತವು ವಾಸ್ತವವಾಗಿ ಒಂದು ರಾಷ್ಟ್ರವೋ ಅಲ್ಲವೋ ಎಂಬುದನ್ನು ಪರಿಶೀಲಿಸುವ ಕಾರ್ಯಕ್ಕೆ ಹಿಂದೂ ಸಿದ್ಧನಾಗಲಿಲ್ಲ. ರಾಷ್ಟ್ರೀಯತೆಯೆಂಬುದು, ಜನತೆಯೊಂದನ್ನು ಕೇವಲ ಮಾತಿಗಾಗಿ ರಾಷ್ಟ್ರವೆಂದು ಕರೆಯುವ ಪ್ರಶ್ನೆಯೋ ಅಥವಾ ಜನತೆಯೇ ರಾಷ್ಟ್ರವಾಗಿದ್ದಾರೆ ಎಂಬ ಪ್ರಶ್ನೆಯೋ ಎಂಬುದರ ಬಗ್ಗೆ ಆಲೋಚಿಸಲು ಆತ ಎಂದೂ ಪ್ರಯತ್ನಿಸಲಿಲ್ಲ. ಆದರೂ ಆತನಿಗೆ ಒಂದು ವಿಷಯದ ಅರಿವಿತ್ತು. ಭಾರತಕ್ಕೆ ಸ್ವಯಂ ಅಧಿಕಾರ ಕೊಡಬೇಕೆಂಬ ತನ್ನ ಕೇಳಿಕೆಯಲ್ಲಿ ಜಯಶಾಲಿಯಾಗಬೇಕಾದರೆ, ತಾನು ಸಮರ್ಥಿಸಿಕೊಳ್ಳಲಾಗದಿದ್ದರೂ ಕೂಡ ಭಾರತವು ಒಂದು ರಾಷ್ಟ್ರವೆಂಬ ತನ್ನ ನಿಲುವನ್ನು ಉಳಿಸಿಕೊಂಡು ಬರುವುದೇ ಆ ವಿಷಯ. ಆತನ ಈ ಸಮರ್ಥನೆಯನ್ನು ಯಾವ ಭಾರತೀಯನೂ ವಿರೋಧಿಸಲಿಲ್ಲ. ಈ ಸಿದ್ಧಾಂತವು ಎಷ್ಟು ಪ್ರಿಯವಾಗಿದ್ದಿತೆಂದರೆ, ಭಾರತ ಇತಿಹಾಸದ ಘನ ವಿದ್ಯಾರ್ಥಿಗಳೂ ಕೂಡ, ಇದಕ್ಕೆ ಸಮರ್ಥನೆ ನೀಡಲು ಪ್ರಚಾರ ಸಾಹಿತ್ಯವನ್ನೂ ರಚಿಸಲು ಮುಂದೆ ಬಂದರು. ಇದು ದೇಶಭಕ್ತಿ ಪ್ರೇರಣೆಗಳಿಂದ ಆದದ್ದು ಎಂಬುದರಲ್ಲಿ ಸಂಶಯವಿಲ್ಲ. ಇದು ಒಂದು ಅಪಾಯಕಾರಿ ಭ್ರಮೆಯೆಂದು ತಿಳಿದಿದ್ದ, ಹಿಂದೂ ಸಮಾಜ ಸುಧಾರಕರೂ ಕೂಡ, ಈ ಸಿದ್ಧಾಂತವನ್ನೂ ಸಾರ್ವಜನಿಕವಾಗಿ ವಿರೋಧಿಸದಾದರು. ಏಕೆಂದರೆ ಹಾಗೆ ವಿರೋಧಿಸಿದ ಯಾರನ್ನದರೂ, ಕೂಡಲೇ ಬ್ರಿಟಿಷ್ ಅಧಿಕಾರಶಾಹಿಯ ಕೈಗೊಂಬೆ ಮತ್ತು ದೇಶದ್ರೋಹಿ ಎಂದು ಕರೆಯಲಾಗುತ್ತಿತ್ತು. ತನ್ನ ಅಭಿಪ್ರಾಯವನ್ನು ದೀರ್ಘಕಾಲದವರೆಗೆ ಪ್ರಚಾರ ಮಾಡುವುದರಲ್ಲಿ ಹಿಂದೂ ರಾಜಕಾರಣಿ ಶಕ್ತನಾದ. ಆತನ ವಿರೋಧಿಯಾದ ಆಂಗ್ಲೋ–ಇಂಡಿಯನ್ ಅವನಿಗೆ ಉತ್ತರ ಕೊಡುವುದನ್ನು ನಿಲ್ಲಿಸಿದ. ಹಿಂದೂ ರಾಜಕಾರಣಿಯ ಪ್ರಚಾರ ಬಹುಮಟ್ಟಿಗೆ ಯಶಸ್ವಿಯಾಯಿತು. ಅದು ಪೂರ್ಣ ಯಶಸ್ವಿಯಾಗುವ ಮುಂಚೆಯೇ ಮುಸ್ಲಿಂ ಲೀಗಿನ ನಿರ್ಣಯ ಹೊರಬಂದು ಒಡಕು ಮೂಡಿತು. ಅದು ಆಂಗ್ಲೋ ಇಂಡಿಯನ್ನರಿಂದ ಬರದಿದ್ದರಿಂದಲೇ ಹೆಚ್ಚು ಮಾರಣಾಂತಿಕ ಹೊಡೆತವಾಯಿತು. ಅನೇಕ ವರ್ಷಗಳವರೆಗೆ ಹಿಂದೂ ರಾಜಕಾರಣಿಗಳು ಮಾಡಿದ ಕೆಲಸ ಕೆಟ್ಟಿತು. ಭಾರತದಲ್ಲಿನ ಮುಸಲ್ಮಾನರು ಒಂದು ಪ್ರತ್ಯೇಕ ರಾಷ್ಟ್ರವಾಗಿರುವುದಾದರೆ, ಭಾರತ ಒಂದು ರಾಷ್ಟ್ರವಲ್ಲವೆಂಬುದು ಸ್ವಾಭಾವಿಕ. ಹಿಂದೂ ರಾಜಕಾರಣಿಗಳು ನಿಂತ ನೆಲೆಯನ್ನೇ ಈ ಪ್ರತಿಪಾದನೆ ಹಾಳು ಮಾಡುತ್ತದೆ. ಆದ್ದರಿಂದ ಅವರು ಅಸಮಾಧಾನಗೊಂಡದ್ದೂ ಮತ್ತು ಅದು ಬೆನ್ನಲ್ಲಿ ಚೂರಿ ಎಂದದ್ದೂ ಸ್ವಾಭಾವಿಕ.

ಆದರೆ ತಿವಿಯಲಿ, ತಿವಿಯದಿರಲಿ, ಇಲ್ಲಿ ಗಮನಿಸಬೇಕಾದ ಪ್ರಶ್ನೆಯೆಂದರೆ ಮುಸಲ್ಮಾನರು ಒಂದು ರಾಷ್ಟ್ರವಾಗುತ್ತಾರೆಂದು ಹೇಳಬಹುದೇ? ಎಂಬುದು ಉಳಿದೆಲ್ಲಾ ಈ ಪ್ರಶ್ನೆಗೆ ಹೊರತಾದುದು. ಒಂದು ರಾಷ್ಟ್ರವೆಂದರೇನು? ಎಂಬ ಪ್ರಶ್ನೆಗೆ ಇದು ಎಡೆಮಾಡಿಕೊಡುತ್ತದೆ. ಈ ವಿಷಯವಾಗಿ ಭಾರೀ ಸಂಪುಟಗಳನ್ನೇ ಬರೆಯಲಾಗಿದೆ. ಆಸಕ್ತಿಯಿದ್ದವರು ಅವುಗಳನ್ನು ಓದಬಹುದು. ಅಲ್ಲದೆ, ವಿವಿಧ ಮೂಲ ತತ್ವಗಳನ್ನೂ ಹಾಗೂ ಅವುಗಳ ವಿವಿಧ ಅಂಶಗಳನ್ನೂ ಓದಬಹುದು. ಹೇಗಿದ್ದರೂ ವಿಷಯದ ಆಂತರ್ಯವನ್ನು ತಿಳಿದುಕೊಂಡರೆ ಸಾಕು. ಅದನ್ನು ಕೆಲವು ಪದಗಳಲ್ಲಿ ಪ್ರಸ್ತಾಪಿಸಬಹುದು. ರಾಷ್ಟ್ರೀಯತೆಯು ಒಂದು

ಸಾಮಾಜಿಕ ಭಾವನೆ. ಅದು ಸಾಮುದಾಯಿಕ ಏಕತಾ ಭಾವನೆ. ಅಂತಹ ಭಾವನೆಯ ಪ್ರಭಾವಕ್ಕೆ ಒಳಗಾದ ಜನರು ತಾವೆಲ್ಲಾ ಕುಲಬಾಂಧವರು ಎಂದು ಭಾವಿಸುತ್ತಾರೆ. ರಾಷ್ಟ್ರೀಯ ಭಾವನೆಯು ಎರಡಂಚಿನ ಭಾವನೆ. ಏಕಕಾಲದಲ್ಲಿ ಅದು ತಮ್ಮ ಕುಲ ಬಾಂಧವರ ಬಗ್ಗೆ ಸ್ನೇಹ ಭಾವನೆಯನ್ನೂ ಮತ್ತು ತಮ್ಮ ಕುಲಬಾಂಧವರಲ್ಲದವರ ಬಗ್ಗೆ ಅಸಹನಾ ಭಾವನೆಯನ್ನೂ ಬೆಳೆಸುತ್ತದೆ. ಅದು ಒಂದು ರೀತಿಯ 'ಕುಲಪ್ರಜ್ಞೆ'. ಅದು ಆ ಭಾವನೆಯಿರುವವರನ್ನು ಒಟ್ಟಾಗಿ ಬಂಧಿಸುತ್ತದೆ. ಆ ಬಂಧನ ಎಷ್ಟು ಫಲವತ್ತರವಾಗಿರುತ್ತದೆ ಎಂದರೆ, ಒಂದು ಕಡೆ, ಆರ್ಥಿಕ ಘರ್ಷಣೆಗಳು ಅಥವಾ ಸಾಮಾಜಿಕ ಅಂತಸ್ತುಗಳಿಂದ ಉಂಟಾಗುವಂತಹ ಎಲ್ಲಾ ಭೇದಭಾವಗಳನ್ನೂ ಮೀರಿ ನಿಂತರೆ ಮತ್ತೊಂದು ಕಡೆ, ತಮ್ಮ ಕುಲಬಾಂಧವರಲ್ಲದವರಿಂದ ತಮ್ಮ ಸಂಬಂಧವನ್ನು ಕಡಿದುಕೊಳ್ಳುವಂತೆ ಮಾಡುತ್ತದೆ. ಮತ್ತಾವುದೇ ಸಮೂಹಕ್ಕೆ ಸೇರಕೂಡದೆಂಬ ಆಕಾಂಕ್ಷೆ ಅದು. ರಾಷ್ಟ್ರೀಯತೆ ಅಥವಾ ರಾಷ್ಟ್ರೀಯ ಭಾವನೆ ಎಂದು ಯಾವುದಕ್ಕೆ ಹೇಳುತ್ತೇವೆಯೋ ಅದರ ಸಾರವಿದು.

ಈ ಪರೀಕ್ಷೆಯನ್ನು ಈಗ ಮುಸಲ್ಮಾನರ ಕೇಳಿಕೆಗೆ ಅನ್ವಯಿಸಿ, ಭಾರತದ ಮುಸಲ್ಮಾನರು ಒಂದು ಪ್ರತ್ಯೇಕ ಸಮೂಹವೆಂಬುದು ಸತ್ಯವೋ ಅಲ್ಲವೋ? ಅವರಲ್ಲಿ ಕುಲಪ್ರಜ್ಞೆ ಇದೆ ಎಂಬುದು ನಿಜವೋ ಅಲ್ಲವೋ? ತನ್ನ ಸಮೂಹಕ್ಕೇ ಸೇರಿರುವ ಹಾಗೂ ಮುಸಲ್ಮಾನರಲ್ಲದವರ ಸಮೂಹಕ್ಕೆ ಸೇರದಿರುವ ಆಕಾಂಕ್ಷೆ ಪ್ರತಿಯೊಬ್ಬ ಮುಸಲ್ಮಾನನಲ್ಲಿರುವುದು ನಿಜವೋ ಅಲ್ಲವೋ?

ಈ ಪ್ರಶ್ನೆಗಳಿಗೆ ಉತ್ತರವು 'ಹೌದು' ಎಂದಿದ್ದರೆ, ಆಗ ಭಿನ್ನಾಭಿಪ್ರಯವು ನಿಲ್ಲಬೇಕು ಮತ್ತು ತಾವು ಒಂದು ರಾಷ್ಟ್ರವೆಂಬ ಮುಸಲ್ಮಾನರ ಅಭಿಮತವನ್ನು ಕುತರ್ಕವಿಲ್ಲದೆ ಒಪ್ಪಿಕೊಳ್ಳಬೇಕು.

ಹಿಂದೂ ಮತ್ತು ಮುಸಲ್ಮಾನರಲ್ಲಿ ಕೆಲವು ವ್ಯತ್ಯಾಸಗಳಿದ್ದಾಗ್ಯೂ ಅವರಿಬ್ಬರೂ ಒಟ್ಟಿಗೆ ಸೇರಿ ಒಂದು ರಾಷ್ಟ್ರವಾಗಬಲ್ಲರೆಂಬುದಕ್ಕೆ ಅವರ ನಡುವೆ ಸಾಕಷ್ಟು ಪ್ರೀತಿ ವಿಶ್ವಾಸಗಳಿವೆ ಎಂಬುದನ್ನು ಹಿಂದೂಗಳು ತೋರಿಸಬೇಕಾಗಿದೆ ಅಥವಾ ಹಿಂದೂ ಮುಸಲ್ಮಾನರಿಬ್ಬರೂ ಒಂದಾಗಿ ಬಾಳಲು ಆಕಾಂಕ್ಷೆಪಡಲು ನೆರವಾಗುವಂತಹ ಸರಳ ಭಾಷೆಯನ್ನು ಬಳಸಬೇಕಾಗಿದೆ.

ಮುಸಲ್ಮಾನರಾದ ತಾವೇ ಒಂದು ಪ್ರತ್ಯೇಕ ರಾಷ್ಟ್ರವೆಂಬ ಮುಸಲ್ಮಾನರ ದೃಷ್ಟಿಯನ್ನು ಒಪ್ಪದಿರುವ ಹಿಂದೂಗಳು ಹಿಂದೂ ಮತ್ತು ಮುಸಲ್ಮಾನ ಸಮಾಜಗಳ ನಡುವೆ ಬಾಂಧವ್ಯವನ್ನು ಬೆಳೆಸುವಂತೆ ತೋರುವ ಭಾರತೀಯ ಸಾಮಾಜಿಕ ಜೀವನದ ಕೆಲವು ಲಕ್ಷಣಗಳನ್ನು ನಂಬಿಕೊಂಡಿದ್ದಾರೆ.

ಮೊದಲನೆಯದಾಗಿ, ಹಿಂದೂ ಮತ್ತು ಮುಸಲ್ಮಾನರ ನಡುವೆ ಯಾವುದೇ ರೀತಿಯ ಜನಾಂಗ ಭೇದವಿಲ್ಲ ಎಂದು ಹೇಳಲಾಗುತ್ತಿದೆ. ಪಂಜಾಬ ಮುಸಲ್ಮಾನ ಮತ್ತು ಪಂಜಾಬಿ ಹಿಂದೂ, ಉತ್ತರ ಪ್ರದೇಶದ ಮುಸಲ್ಮಾನ ಮತ್ತು ಉತ್ತರಪ್ರದೇಶದ ಹಿಂದೂ, ಬಿಹಾರದ ಮುಸಲ್ಮಾನ ಮತ್ತು ಬಿಹಾರದ ಹಿಂದೂ, ಬಂಗಾಳದ ಮುಸಲ್ಮಾನ ಮತ್ತು ಬಂಗಾಳದ ಹಿಂದೂ, ಮದ್ರಾಸಿನ ಮುಸಲ್ಮಾನ ಮತ್ತು ಮದ್ರಾಸಿನ ಹಿಂದೂ ಮತ್ತು ಮುಂಬಯಿಯ ಮುಸಲ್ಮಾನ ಮತ್ತು ಮುಂಬಯಿಯ ಹಿಂದೂ, ಇವರೆಲ್ಲಾ ಜನಾಂಗೀಯವಾಗಿ ಒಂದೇ ಬುಡಕಟ್ಟಿಗೆ ಸೇರಿದವರು. ವಾಸ್ತವವಾಗಿ ಮದ್ರಾಸಿ ಮುಸಲ್ಮಾನ ಮತ್ತು ಮದ್ರಾಸಿ ಬ್ರಾಹ್ಮಣರ ನಡುವಣ ನಂಟು ಮದ್ರಾಸಿ ಬ್ರಾಹ್ಮಣ ಮತ್ತು ಪಂಜಾಬಿ ಬ್ರಾಹ್ಮಣನ ನಡುವಣ ನಂಟಿಗಿಂತ ಹೆಚ್ಚಾಗಿದೆ. ಎರಡನೆಯದಾಗಿ, ಹಿಂದೂಗಳು ಮತ್ತು ಮುಸಲ್ಮಾನರ ಭಾಷಾ ಏಕತೆಯ ಮೇಲೆ ಹೆಚ್ಚು ಭರವಸೆ ಇಡಲಾಗಿದೆ. ಮುಸಲ್ಮಾನರೇ ಒಂದು ಪ್ರತ್ಯೇಕ ಭಾಷಾಸಮೂಹವೆಂದು ಅವರನ್ನು ಹಿಂದೂಗಳಿಂದ ಪ್ರತ್ಯೇಕಿಸಿ ತೋರಿಸುವಂತಹ ಒಂದು ಸಾಮಾನ್ಯ ಭಾಷೆಯು ಮುಸಲ್ಮಾನರಿಗಿಲ್ಲ. ತದ್ವಿರುದ್ಧವಾಗಿ ಇಬ್ಬರ

ನಡುವೆ ಸಂಪೂರ್ಣ ಭಾಷಾ ಏಕತೆಯಿದೆ. ಪಂಜಾಬಿನಲ್ಲಿ ಹಿಂದೂ ಮುಸಲ್ಮಾನರಿಬ್ಬರೂ ಪಂಜಾಬಿ ಮಾತನಾಡುತ್ತಾರೆ. ಬಂಗಾಳದಲ್ಲಿ ಇಬ್ಬರೂ ಬಂಗಾಳಿ ಮಾತನಾಡುತ್ತಾರೆ. ಗುಜರಾತಿನಲ್ಲಿ ಇಬ್ಬರೂ ಗುಜರಾತಿ ಮಾತನಾಡುತ್ತಾರೆ. ಮಹಾರಾಷ್ಟ್ರದಲ್ಲಿ ಇಬ್ಬರೂ ಮರಾಠಿ ಮಾತನಾಡುತ್ತಾರೆ. ಇದೇ ರೀತಿ ಪ್ರತಿಯೊಂದು ಪ್ರಾಂತದಲ್ಲಿಯೂ ಇದೆ. ಪಟ್ಟಣಗಳಲ್ಲಿ ಮಾತ್ರ ಮುಸಲ್ಮಾನರು ಉರ್ದು ಮಾತನಾಡುತ್ತಾರೆ ಮತ್ತು ಹಿಂದೂಗಳು ಪ್ರಾದೇಶಿಕ ಭಾಷೆಯನ್ನು ಬಳಸುತ್ತಾರೆ. ಆದರೆ ಹಳ್ಳಿಗಾಡಿನಲ್ಲಿ ಹಿಂದೂಗಳು ಪ್ರಾದೇಶಿಕ ಭಾಷೆಯನ್ನು ಬಳಸುತ್ತಾರೆ. ಆದರೆ ಹಳ್ಳಿಗಾಡಿನಲ್ಲಿ ಹಿಂದೂಗಳು ಮತ್ತು ಮುಸಲ್ಮಾನರಲ್ಲಿ ಪೂರ್ಣ ಏಕತೆಯಿದೆ. ಮೂರನೆಯದಾಗಿ, ಹಿಂದೂ ಮತ್ತು ಮುಸಲ್ಮಾನರು ಶತಮಾನಗಳ ಕಾಲ ಜೊತೆಗೇ ಜೀವಿಸಿರುವ ದೇಶ ಭಾರತ ಎಂಬುದನ್ನೂ ಪ್ರಸ್ತಾಪಿಸಲಾಗಿದೆ. ಅದು ಪೂರ್ಣವಾಗಿ ಹಿಂದೂಗಳ ಭೂಮಿಯಲ್ಲ ಅಥವಾ ಪೂರ್ತಿ ಮುಸಲ್ಮಾನರ ನಾಡಲ್ಲ.

ಎರಡು ಸಮುದಾಯಗಳ ಜನಾಂಗೀಯ ಏಕತೆಯನ್ನು ಮಾತ್ರವಲ್ಲದೆ, ಅವುಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿಯೂ ಕಂಡುಬರುವ ಕೆಲವು ಸಾಮಾನ್ಯ ಲಕ್ಷಣಗಳನ್ನು ಆಧರಿಸಲಾಗಿದೆ. ಅನೇಕ ಮುಸಲ್ಮಾನ ಸಮೂಹಗಳ ಸಾಮಾಜಿಕ ಜೀವನವು ಹಿಂದೂಗಳ ಆಚರಣೆಗಳೊಂದಿಗೆ ಜೇನುಹುಟ್ಟಿನಂತೆ ಒಂದಾಗಿದೆ ಎಂದು ತೋರಿಸಲಾಗಿದೆ. ಉದಾಹರಣೆಗೆ, ಪಂಜಾಬಿನ ಅವನ್ಸ್: ಅವರಲ್ಲಿ ಬಹುಮಂದಿ ಮುಸಲ್ಮಾನರಿದ್ದರೂ ಕೂಡ, ಹಿಂದೂ ಹೆಸರುಗಳನ್ನು ಉಳಿಸಿಕೊಂಡಿರುವು ದಲ್ಲದೆ, ತಮ್ಮ ಗೋತ್ರಗಳನ್ನು ಬ್ರಾಹ್ಮಣ ಸಂಪ್ರದಾಯದಂತೆ ಉಳಿಸಿಕೊಂಡಿದ್ದಾರೆ. ಮುಸಲ್ಮಾನರಲ್ಲಿ ಹಿಂದೂ ಅಡ್ಡಹೆಸರುಗಳನ್ನು ಕಾಣಬಹುದು. ಉದಾಹರಣೆಗೆ, ಚೌಧರಿ ಎಂಬುದು ಹಿಂದೂ ಅಡ್ಡಹೆಸರು. ಆದರೆ ಅದು ಉತ್ತರಪ್ರದೇಶದ ಹಾಗೂ ಉತ್ತರ ಭಾರತದ ಮುಸಲ್ಮಾನರಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಮದುವೆಯ ವಿಷಯದಲ್ಲಿ ಕೆಲವು ಮುಸಲ್ಮಾನ ಸಮೂಹಗಳು ಹೆಸರಿಗೆ ಮಾತ್ರ ಮುಸಲ್ಮಾನರು. ಅವರು ಕೇವಲ ಹಿಂದೂ ರೀತಿಯ ಸಮಾರಂಭ ಮಾಡುತ್ತಾರೆ ಅಥವಾ ಸಮಾರಂಭವನ್ನು ಮೊದಲು ಹಿಂದೂ ಪದ್ಧತಿಯಲ್ಲಿ ನಡೆಸಿ ಅನಂತರ ತಮ್ಮ ಕಾಜಿಯನ್ನು ಕರೆಸಿ ಮುಸಲ್ಮಾನ ರೀತಿಯಲ್ಲಿಯೂ ನಡೆಸುತ್ತಾರೆ. ಕೆಲವು ಮುಸಲ್ಮಾನ ಗುಂಪುಗಳಲ್ಲಿ, ಮದುವೆ ಪೋಷಕತ್ವ ಮತ್ತು ಅನುವಂಶೀಯತೆಗಳಿಗೆ ಸಂಬಂಧಿಸಿದಂತೆ ಹಿಂದೂ ಕಾಯ್ದೆಯನ್ನೇ ಅನುಸರಿಸಲಾಗುತ್ತಿದೆ. ಶರಿಯತ್ ಕಾಯ್ದೆ ಬರುವ ಮೊದಲು ಇದು ಪಂಜಾಬು ಮತ್ತು ವಾಯುವ್ಯ ಸರಹದ್ದು ಪ್ರಾಂತಗಳಲ್ಲಿಯೂ ಜಾರಿಯಲ್ಲಿದ್ದುದು ನಿಜ. ಸಾಮಾಜಿಕ ಕ್ಷೇತ್ರದಲ್ಲಿ, ಹಿಂದೂ ಸಮಾಜದಲ್ಲಿರುವಂತೆಯೇ, ಮುಸಲ್ಮಾನ ಸಮಾಜದಲ್ಲಿಯೂ ಜಾತಿಪದ್ಧತಿ ಇರುವುದನ್ನು ಆರೋಪಿಸಲಾಗಿದೆ. ಧಾರ್ಮಿಕ ಕ್ಷೇತ್ರದಲ್ಲಿ, ಅನೇಕ ಮುಸಲ್ಮಾನ ಪೀರರುಗಳಿಗೆ ಹಿಂದೂ ಭಕ್ತರಿದ್ದರೆಂದೂ ಹೇಳಲಾಗಿದೆ. ಹಾಗೆಯೇ ಹಿಂದೂ ಯೋಗಿಗಳಿಗೆ ಮುಸಲ್ಮಾನ ಅನುಯಾಯಿಗಳು ಇದ್ದರೆಂದೂ ಹೇಳಲಾಗಿದೆ. ವಿರುದ್ಧ ಮತಗಳ ಸಂನ್ಯಾಸಿಗಳ ನಡುವೆ ಸ್ನೇಹವಿದ್ದ ದೃಷ್ಟಾಂತಗಳಲ್ಲಿ ನಂಬಿಕೆಯಿಡಲಾಗಿದೆ. ಪಂಜಾಬಿನಲ್ಲಿರುವ ಗೀರೋತ್‌ನಲ್ಲಿ, ಹತ್ತೊಂಬತ್ತನೇ ಶತಮಾನದ ಆದಿಭಾಗದಲ್ಲಿ ಬಹಳ ಆತ್ಮೀಯರಾಗಿ ಜೀವಿಸಿದ ಇಬ್ಬರು ಸಂತರಾದ ಜಮಾಲಿ ಸುಲ್ತಾನ ಮತ್ತು ದಿಯಾಲ್ ಭಾವನ್ ಅವರ ಸಮಾಧಿಗಳು ಅಕ್ಕಪಕ್ಕದಲ್ಲಿಯೇ ಇವೆ. ಆ ಇಬ್ಬರನ್ನೂ, ಹಿಂದುಗಳೂ ಮುಸಲ್ಮಾನರೂ ಒಂದೇ ರೀತಿ ಭಕ್ತಿಯಿಂದ ಕಾಣುತ್ತಾರೆ. ಬಾವಾ ಪಥು ಒಬ್ಬ ಮುಸಲ್ಮಾನ ಸಂತ. ಆತ ಕ್ರಿ.ಶ.೧೭೦೦ರಲ್ಲಿ ಜೀವಿಸಿದ್ದ. ಕಾಂಗ್ರಾ ಜಿಲ್ಲೆಯ ರಾನಿತಾಲ್‌ನಲ್ಲಿ ಆತನ ಸಮಾಧಿಯಿದೆ. ಹಿಂದೂ ಸಂನ್ಯಾಸಿಯಾದ ಸೋಧಿ ಗುರು ಗುಲಾತ್ ಸಿಂಗ್‌ನ ಆಶೀರ್ವಾದದಿಂದ ಆತನಿಗೆ ಪ್ರವಾದಿಯೆಂಬ ಬಿರುದು ದೊರಕಿತ್ತು. ಮತ್ತೊಂದು ಕಡೆ ಜಾಂಗ್ ಜಿಲ್ಲೆಯಲ್ಲಿ, ಬಾಬಾ ಶಹಾನ

ಎಂಬ ಹಿಂದೂ ಸನ್ಯಾಸಿಯ ಉಪಾಸನೆ ಆಚರಣೆಯಲ್ಲಿದೆ. ಆತನು ಮುಸಲ್ಮಾನ ಪೀರನೊಬ್ಬನ ಅನುಯಾಯಿ ಆಗಿದ್ದನೆಂದು ಹೇಳಲಾಗುತ್ತಿದೆ. ಆ ಮುಸಲ್ಮಾನ ಪೀರನು ತನ್ನ ಹಿಂದೂ ಅನುಯಾಯಿಯ ಮೂಲ ಹೆಸರಾದ ಮಿಹ್ರವನ್ನು ಶಾಹ್ ಎಂದು ಬದಲಾಯಿಸಿದ.

ಇದೆಲ್ಲಾ ನಿಜವೆಂಬುದರಲ್ಲಿ ಸಂಶಯವಿಲ್ಲ. ಹಿಂದೂಗಳು ಸೇರಿರುವ ಜನಾಂಗಕ್ಕೇ ಮುಸಲ್ಮಾನರಲ್ಲಿ ಬಹುಮಂದಿ ಸೇರಿದ್ದಾರೆಂಬುದು ಪ್ರಶ್ನಾತೀತ. ಮುಸಲ್ಮಾನರೆಲ್ಲರೂ ಒಂದೇ ಸಾಮಾನ್ಯ ಭಾಷೆಯನ್ನು ಆಡುವುದಿಲ್ಲವೆಂಬುದನ್ನೂ ಮತ್ತ ಅವರಲ್ಲಿ ಅನೇಕರು ಹಿಂದೂಗಳು ಆಡುವ ಭಾಷೆಯನ್ನೇ ಮಾತನಾಡುತ್ತಾರೆಂಬುದನ್ನೂ ಅಲ್ಲಗಳೆಯಲಾಗದು. ಇಬ್ಬರಿಗೂ ಸಾಮಾನ್ಯವಾಗಿರುವ ಕೆಲವು ಸಾಮಾಜಿಕ ಪದ್ಧತಿಗಳು ಇವೆ ಎಂಬುದನ್ನೂ ಅಲ್ಲಗಳೆಯಲಾಗದು. ಕೆಲವು ಮತಾಚರಣೆಗಳು ಮತ್ತು ಇತರ ಪದ್ಧತಿಗಳು ಇಬ್ಬರಿಗೂ ಸಮಾನವಾಗಿವೆ ಎಂಬುದೂ ಸತ್ಯ ಸಂಗತಿ. ಈ ಕಾರಣಗಳಿಂದ ಹಿಂದೂ ಮತ್ತು ಮುಸಲ್ಮಾನರು ಒಂದು ರಾಷ್ಟ್ರವಾಗುತ್ತಾರೆ ಅಥವಾ ತಾವು ಪರಸ್ಪರ ಸೇರಿ ಬಾಳಬೇಕು ಎಂಬ ಆಕಾಂಕ್ಷೆಯನ್ನು ಅವರಲ್ಲಿ ಈ ಕಾರಣಗಳು ಪೋಷಿಸುತ್ತವೆ ಎಂಬ ನಿರ್ಣಯವನ್ನು ಮೇಲಿನ ವಿಷಯಗಳು ಸಮರ್ಥಿಸಬಲ್ಲವೇ ಎಂಬುದು ಇಲ್ಲಿನ ಮುಖ್ಯ ಪ್ರಶ್ನೆ.

ಹಿಂದೂಗಳ ವಾದದಲ್ಲಿ ಅನೇಕ ದೋಷಗಳಿವೆ. ಮೊದಲನೆಯದಾಗಿ, ಸಾಮಾನ್ಯ ಲಕ್ಷಣಗಳೆಂದು ಹೇಳಲಾಗಿರುವ ಸಂಗತಿಗಳೆಲ್ಲಾ, ಪರಸ್ಪರ ಹೊಂದಿಕೊಳ್ಳಲು ಹಾಗೂ ಸಾಮಾಜಿಕ ಐಕ್ಯಮತವನ್ನುಂಟು ಮಾಡಲು ಪರಸ್ಪರರ ರೀತಿನೀತಿಗಳಿಗೆ ಅಳವಡಿಸಿಕೊಳ್ಳಲು ಬೇಕಾದ ಪ್ರಜ್ಞಾಪೂರ್ವಕ ಪ್ರಯತ್ನದ ಪರಿಣಾಮಗಳಲ್ಲ. ತದ್ವಿರುದ್ಧವಾಗಿ, ನಮಗೆ ಕಾಣುವ ಸಮಾನತೆಯು ಕೇವಲ ಹಾಗೂ ಸ್ಪಷ್ಟ ಯಾಂತ್ರಿಕ ಕಾರಣಗಳ ಪರಿಣಾಮ ಅಷ್ಟೆ. ಈ ಸಮಾನತೆಗಳು ಭಾಗಶಃ ಅಪೂರ್ಣ ಮತಾಂತರಗಳಿಂದ ಉಂಟಾದವುಗಳು. ಭಾರತದಂತಹ ದೇಶದ ಮುಸಲ್ಮಾನರಲ್ಲಿ ಬಹುಸಂಖ್ಯಾತರು ಜಾತೀಯ ಹಾಗೂ ಜಾತಿಭ್ರಷ್ಟ ಹಿಂದೂಗಳಿಂದ ಬಂದವರು. ಹಾಗೆ ಮತಾಂತರ ಹೊಂದಿದವರ ಮುಸ್ಲಿಮ್‌ಕರಣ ಪೂರ್ಣವಾಗಲೂ ಇಲ್ಲ, ಪರಿಣಾಮಕಾರಿಯೂ ಆಗಲಿಲ್ಲ. ಅದು ಹಾಗಾಗಲು, ದಂಗೆಯ ಹೆದರಿಕೆ ಅಥವಾ ಮನವೊಲಿಸುವ ರೀತಿಯಲ್ಲಿನ ದೋಷ ಅಥವಾ ಉಪದೇಶದ ನ್ಯೂನತೆ ಅಥವಾ ಸಾಕಷ್ಟು ಮೌಲ್ವಿಗಳ ಅಭಾವ ಇವುಗಳು ಕಾರಣವಿರಬೇಕು. ಆದ್ದರಿಂದ, ಮುಸಲ್ಮಾನ ಸಮುದಾಯದ ದೊಡ್ಡ ದೊಡ್ಡ ಗುಂಪುಗಳು, ಅಲ್ಲಲ್ಲಿ ತಮ್ಮ ಧಾರ್ಮಿಕ ಮತ್ತು ಸಾಮಾಜಿಕ ಜೀವನದಲ್ಲಿ ತಮ್ಮ ಹಿಂದೂ ಮೂಲವನ್ನು ಪ್ರಕಟಿಸಿದರೆ ಆಶ್ಚರ್ಯವಿಲ್ಲ. ಹಿಂದೂಗಳು ಮತ್ತು ಮುಸಲ್ಮಾನರು ಶತಮಾನಗಳ ಕಾಲ ಒಂದೇ ರೀತಿಯ ವಾತಾವರಣದಲ್ಲಿ ಜೀವಿಸಿದ್ದರ ಪರಿಣಾಮವೂ ಇದಕ್ಕೆ ಬಹುಶಃ ಕಾರಣವಿರಬೇಕು ಎಂದು ಹೇಳಬಹುದು. ಒಂದು ಸಾಮಾನ್ಯ ಪರಿಸರವು ಸಾಮಾನ್ಯ ಪ್ರತಿಕ್ರಿಯೆಗಳನ್ನು ಉಂಟುಮಾಡಿಯೇ ಮಾಡುತ್ತದೆ. ಪರಿಸರವೊಂದಕ್ಕೆ ಒಂದೇ ರೀತಿಯ ಪ್ರತಿಕ್ರಿಯೆ ತೋರಿಸುತ್ತಿದ್ದರೆ, ಸಾಮಾನ್ಯ ರೂಪಗಳುಂಟಾಗುವುದು ಅನಿವಾರ್ಯ. ಭಾಗಶಃ ಈ ಸಾಮಾನ್ಯ ಲಕ್ಷಣಗಳನ್ನು ಅಕ್ಬರ್ ಚಕ್ರವರ್ತಿಯು ಆರಂಭಿಸಿದ ಹಿಂದೂ–ಮುಸ್ಲಿಮ್ ಧಾರ್ಮಿಕ ಐಕ್ಯತೆಯ ಕಾಲದ ಪಳೆಯುಳಿಕೆಗಳೆಂದು, ವರ್ತಮಾನವೂ ಭವಿಷ್ಯವೂ ಇಲ್ಲದ ನಿರ್ಜೀವ ಗತದ ಫಲಿತಾಂಶವೆಂದು ವಿವರಿಸಬಹುದು.

ಜನಾಂಗೀಯ ಏಕತೆ, ಭಾಷಾ ಏಕತೆ ಮತ್ತು ಒಂದೇ ದೇಶದಲ್ಲಿ ವಾಸ ಇವುಗಳನ್ನಾಧರಿಸಿದ ವಾದಕ್ಕೆ ಸಂಬಂಧಿಸಿದ ವಿಚಾರವು ಬೇರೊಂದು ನೆಲೆಯಲ್ಲಿ ನಿಂತಿದೆ. ರಾಷ್ಟ್ರವೊಂದನ್ನು ರೂಪಿಸುವಲ್ಲಿ ಅಥವಾ ಅಳಿಸುವಲ್ಲಿ ಈ ಪರಿಗಣನೆಗಳು ನಿರ್ಣಾಯಕವಾಗಿದ್ದ ಪಕ್ಷದಲ್ಲಿ, ಜನಾಂಗದ, ಭಾಷೆಯ ಮತ್ತು ವಾಸದ

ಕಾರಣಗಳಿಂದಾಗಿ, ಹಿಂದೂಗಳು ಮತ್ತು ಮುಸಲ್ಮಾನರು ಒಂದೇ ರಾಷ್ಟ್ರಕ್ಕೆ ಸೇರಿದವರು ಎಂದು ಹಿಂದೂಗಳು ಹೇಳುವುದು ಸರಿಯೆನಿಸುತ್ತದೆ. ಐತಿಹಾಸಿಕ ಅನುಭವದ ಮೇಲೆ ಹೇಳುವುದಾದರೆ, ಜನಾಂಗವಾಗಲೀ, ಭಾಷೆಯಾಗಲೀ ಅಥವಾ ದೇಶವಾಗಲೀ ಜನತೆಯೊಂದನ್ನು ಒಂದು ರಾಷ್ಟ್ರವಾಗಿ ರೂಪಿಸುವಲ್ಲಿ ಸಾಕಾಗುವುದಿಲ್ಲ. ಈ ವಾದವನ್ನು ರೇನಾನ್ ಎಷ್ಟು ಚೆನ್ನಾಗಿ ಮಂಡಿಸಿದ್ದಾನೆಂದರೆ, ಅವನ ಭಾಷೆಯನ್ನು ಇನ್ನೂ ಉತ್ತಮಪಡಿಸುವುದು ಅಸಾಧ್ಯ. ರಾಷ್ಟ್ರೀಯತೆಯ ಮೇಲಿನ ತನ್ನ ಸುಪ್ರಸಿದ್ಧ ಪ್ರಬಂಧದಲ್ಲಿ ಬಹಳ ಹಿಂದೆಯೇ ರೇನಾನ್ ಈ ರೀತಿ ಅಭಿಪ್ರಾಯಪಟ್ಟಿದ್ದಾನೆ:

> **"ಜನಾಂಗವನ್ನು ರಾಷ್ಟ್ರದೊಂದಿಗೆ ಬೆರಸಕೂಡದು. ಏಕೆಂದರೆ ಎಲ್ಲಿಯೂ ಶುದ್ಧ ಜನಾಂಗವಿಲ್ಲವೆಂಬುದು ಸತ್ಯ. ಅಲ್ಲದೆ, ರಾಜಕಾರಣವು ಜನಾಂಗ ವಿಶ್ಲೇಷಣೆಯನ್ನು ಅವಲಂಬಿಸುವಂತೆ ಮಾಡುವುದು, ಕಿಮರಾ ಮೃಗದ ಮೇಲಿನ ಸವಾರಿಗೆ ಅವಕಾಶವನ್ನು ಮಾಡಿಕೊಟ್ಟಂತಾಗುತ್ತದೆ. ಜನಾಂಗೀಯ ಸಂಗತಿಗಳು ಮೊದಮೊದಲು ಪ್ರಮುಖವೆನಿಸಿದರೂ ಕೂಡ, ತಮ್ಮ ಪ್ರಾಮುಖ್ಯತೆಯನ್ನು ಸತತವಾಗಿ ಕಳೆದುಕೊಳ್ಳುವ ಪ್ರವೃತ್ತಿ ಹೊಂದಿರುತ್ತವೆ. ಮಾನವಚರಿತ್ರೆಯು ಮೂಲತಃ ಪ್ರಾಣಿಶಾಸ್ತ್ರಕ್ಕಿಂತ ಭಿನ್ನವಾಗಿದೆ. ದಂಶಕಗಳ ಮತ್ತು ................ ಚರಿತ್ರೆಯು ಅರ್ಥದಲ್ಲಿ ಜನಾಂಗವೇ ಸರ್ವಸ್ವವಲ್ಲ."**

ಭಾಷೆಯ ಬಗ್ಗೆ ಮಾತನಾಡುತ್ತಾ ರೇನನ್ ಹೀಗೆ ಗುರುತಿಸುತ್ತಾನೆ:

> **"ಭಾಷೆಯು ಐಕ್ಯತೆಯನ್ನು ಆಹ್ವಾನಿಸುತ್ತದೆ. ಅದನ್ನು ಒತ್ತಾಯಿಸುವುದಿಲ್ಲ. ಅಮೇರಿಕೆಯ ಸಂಯುಕ್ತ ಸಂಸ್ಥಾನ ಮತ್ತು ಇಂಗ್ಲೆಂಡ್, ಸ್ಪಾನಿಷ್ ಅಮೇರಿಕಾ ಮತ್ತು ಸ್ಪೇನ್‌ಗಳು ಒಂದೇ ಭಾಷೆಯನ್ನು ಮಾತನಾಡುತ್ತಿದ್ದರೂ ಏಕರಾಷ್ಟ್ರಗಳಾಗಿ ರೂಪುಗೊಳ್ಳುವುದಿಲ್ಲ. ಇದಕ್ಕೆ ಭಿನ್ನವಾಗಿ, ತನ್ನ ಅನೇಕ ಭಾಗಗಳ ಸಮ್ಮತಿಯಿಂದ ಅಸ್ತಿತ್ವಕ್ಕೆ ಬಂದದ್ದರಿಂದ ಸ್ಥಿರತೆಯನ್ನು ಪಡೆದಿರುವ ಸ್ವಿಡ್ಜರ್‌ಲೆಂಡಿನಲ್ಲಿ ಮೂರು ಅಥವಾ ನಾಲ್ಕು ಭಾಷೆಗಳಿವೆ. ಭಾಷೆಗಿಂತ ಶ್ರೇಷ್ಠವಾದ ಮತ್ತಾವುದೇ ಅಂಶ ಮನುಷ್ಯನಲ್ಲಿದೆ. ಅದು ಇಚ್ಛೆ. ತನ್ನ ಭಾಷೆಗಳ ವೈವಿಧ್ಯತೆಯ ಹೊರತಾಗಿಯೂ ಒಂದಾಗಿರಬೇಕೆಂಬ ಸ್ವಿಜರ್‌ಲೆಂಡಿನ ಇಚ್ಛೆ, ಅನೇಕ ವೇಳೆ ಪೀಡನೆಯಿಂದ ಪಡೆದ ಭಾಷಾ ಸಾಮ್ಯಕ್ಕಿಂತ ಹೆಚ್ಚು ಪ್ರಧಾನವಾದ ಸಂಗತಿ."**

ಒಂದೇ ದೇಶವೆಂಬುದರ ಬಗ್ಗೆ ಪ್ರಸ್ತಾಪಿಸುತ್ತಾ ರೇನನ್ ಈ ವಾದ ಮುಂದಿಡುತ್ತಾನೆ:

> **"ರಾಷ್ಟ್ರವನ್ನು ರೂಪಿಸುವಲ್ಲಿ ಜನಾಂಗಕ್ಕಿಂತ ಹೆಚ್ಚನ್ನು ದೇಶ ಮಾಡದು. ಯುದ್ಧ ಹಾಗೂ ದುಡಿಮೆಯ ತಳಹದಿಯನ್ನೊದಗಿಸುತ್ತದೆ. ಮನುಷ್ಯ ಅದಕ್ಕೆ ಆತ್ಮವನ್ನು ಒದಗಿಸುತ್ತಾನೆ. ಜನತೆಯೆಂದು ಕರೆಯಲ್ಪಡುವ ಆ ಪವಿತ್ರ ವಸ್ತುವಿನ ನಿರ್ಮಾಣದಲ್ಲಿ ಮನುಷ್ಯನೇ ಸಮಸ್ತ. ಭೌತಿಕ ಪ್ರಕೃತಿಯ ಯಾವುದೂ ಅದಕ್ಕೆ ಸಾಲದು."**

ರಾಷ್ಟ್ರವೊಂದನ್ನು ನಿರ್ಮಿಸುವಲ್ಲಿ ಜನಾಂಗ, ಭಾಷೆ ಮತ್ತು ದೇಶಗಳು ಸಾಕಾಗುವುದಿಲ್ಲವೆಂಬುದನ್ನು ತೋರಿಸಿದ ನಂತರ, ಒಂದು ರಾಷ್ಟ್ರದ ರಚನೆಗೆ ಅಗತ್ಯವಾದುದು ಮತ್ತೇನು? ಎಂಬ ತೀಕ್ಷ್ಣ ಪ್ರಶ್ನೆಯನ್ನು ರೇನನ್ ಎತ್ತುತ್ತಾನೆ. ಅದಕ್ಕೆ ಅವನೇ ಕೊಟ್ಟಿರುವ ಉತ್ತರವನ್ನು ಅವನ ಮಾತುಗಳಲ್ಲೇ ಹೇಳಬಹುದು:

> "ಒಂದು ರಾಷ್ಟ್ರ ಒಂದು ಜೀವಂತ ಆತ್ಮ, ಅದು ಆಧ್ಯಾತ್ಮತತ್ತ್ವ. ವಾಸ್ತವವಾಗಿ ಒಂದೇ ಆಗಿರುವ ಎರಡು ವಿಷಯಗಳು ಆತ್ಮ ಹಾಗೂ ಆಧ್ಯಾತ್ಮತತ್ತ್ವವನ್ನು ರೂಪಿಸಿದೆ. ಒಂದು ಗತಕಾಲದ್ದು, ಮತ್ತೊಂದು ಇಂದಿನದ್ದು. ಒಂದು ಎಲ್ಲರ ಆಸ್ತಿಯಾಗಿರುವ ನೆನಪುಗಳ ಒಂದು ಸಮೃದ್ಧ ಪರಂಪರೆ; ಮತ್ತೊಂದು ವಾಸ್ತವವಾದ ಸಮ್ಮತಿ, ಒಟ್ಟಿಗೆ ಬಾಳುವ ಇಚ್ಛೆ, ತಲೆಮಾರುಗಳ ಕೊಡುಗೆಯಾದ ಅವಿಭಕ್ತ ಪರಂಪರೆಯನ್ನು ಯೋಗ್ಯ ರೀತಿಯಲ್ಲಿ ಸಂರಕ್ಷಿಸುವ ಇಚ್ಛೆ. ಮನುಷ್ಯ ತಕ್ಷಣದಲ್ಲಿ ಸೃಷ್ಟಿಸಲಾರ. ರಾಷ್ಟ್ರವೂ ಕೂಡ ಮನುಷ್ಯನಂತೆಯೇ, ದೀರ್ಘಕಾಲೀನ ಪರಿಶ್ರಮಗಳು, ತ್ಯಾಗಗಳು ಮತ್ತು ಭಕ್ತಿಭಾವಗಳ ಪರಿಣಾಮಗಳಿಂದ ಆದುದು. ಈ ಕಾರಣದಿಂದಲೇ, ಪೂರ್ವಿಕರ ಆರಾಧನೆಯು ಹೆಚ್ಚು ನ್ಯಾಯಬದ್ಧವೆನಿಸುತ್ತದೆ. ಏಕೆಂದರೆ ನಾವು ಈಗ ಹೇಗಿದ್ದೇವೋ ಹಾಗೆ ನಮ್ಮನ್ನು ರೂಪಿಸಿದವರು ನಮ್ಮ ಹಿರಿಯರೇ. ಸಾಹಸಪೂರ್ಣ ಗತಕಾಲ, ಮಹಾವ್ಯಕ್ತಿಗಳು, ವೈಭವ– ಅಂದರೆ ಯಥಾರ್ಥ ವೈಭವ, ಇದು ರಾಷ್ಟ್ರೀಯ ವಿಚಾರವೊಂದನ್ನು ಸ್ಥಾಪಿಸಬಹುದಾದಂತಹ ಒಂದು ಸಾಮಾಜಿಕ ಬಂಡವಾಳವನ್ನು ರೂಪಿಸುತ್ತವೆ. ಗತಕಾಲದ ಸಾಮಾನ್ಯ ಕೀರ್ತಿಗಳನ್ನು ಪಡೆದಿರುವುದು, ಸಾಮಾನ್ಯ ಇಚ್ಛೆಯಿಂದ ಕೂಡಿರುವುದು, ಒಟ್ಟುಗೂಡಿ ಮಹತ್ವಪೂರ್ನ ಸಾಧನೆಗಳನ್ನು ಮಾಡಿರುವುದು, ಅಂತಹ ಸಾಧನೆಗಳನ್ನೇ ಪುನಃ ಮಾಡಬೇಕೆಂಬ ಇಚ್ಛೆ ಹೊಂದಿರುವುದು– ಇವುಗಳೇ ಜನತೆಯೊಂದನ್ನು ರೂಪಿಸಲು ಬೇಕಾದ ಸ್ಥಿತಿಗತಿಗಳು, ನಾವು ಮಾಡುತ್ತೇವೆಂದು ಒಪ್ಪಿಕೊಂಡ ತ್ಯಾಗಗಳು, ನಾವು ಸಹಿಸಿದ ಕಷ್ಟನಷ್ಟಗಳು ಇವುಗಳ ಪ್ರಮಾಣಕ್ಕೆ ತಕ್ಕಂತೆ ನಾವು ಪ್ರೀತಿಸುತ್ತೇವೆ. ನಾವು ಕಟ್ಟಿದ ಮನೆಯನ್ನು ನಾವು ಪ್ರೀತಿಸುತ್ತೇವೆ ಮತ್ತು ಅದನ್ನು ನಮ್ಮ ಮುಂದಿನ ಪೀಳಿಗೆಗೆ ವರ್ಗಾಯಿಸುತ್ತೇವೆ. ಸಪಾರ್ಟನ್ ಪ್ರಾರ್ಥನೆ ಹೀಗಿದೆ:
>
> 'ನೀವು ಏನಾಗಿದ್ದಿರೋ ನಾವು ಅದಾಗಿದ್ದೇವೆ' ನಾವು ನೀವೇನಾಗಿದ್ದೀರೋ ಅದಾಗುತ್ತೇವೆ' ಇದು ತನ್ನ ಸರಳ ರೂಪದಲ್ಲಿ ಪ್ರತಿಯೊಂದು ದೇಶದ ರಾಷ್ಟ್ರಗೀತೆಯೂ ಹೌದು.
>
> "ಹಂಚಿಕೊಳ್ಳಬೇಕಾದಂತಹ ಗತಕಾಲದ ವೈಭವಗಳು ಮತ್ತು ಸಂತಾಪಗಳು, ಭವಿಷ್ಯದಲ್ಲಿ ಸಾಧಿಸಬೇಕಾದಂತಹ ಅಂತಹ ಆದರ್ಶ, ಸಂಕಟಪಟ್ಟದ್ದು, ಸಂತೋಷಗೊಂಡದ್ದು ಮತ್ತು ಒಟ್ಟಾಗಿ ಹಾರೈಸಿದ್ದು ಇವೆಲ್ಲಾ ಎಲ್ಲರಿಗೂ ಸೇರಿರುವ ಆಚರಣಾಮಂದಿರಗಲು ಮತ್ತು ಲೆಕ್ಕಾಚಾರ ಪೂರ್ವಕ ವಿಚಾರಗಳಿಗೆ ಅನುಗುಣವಾಗಿರುವ ಗಡಿರೇಖೆಗಳಿಗಿಂತ ಹೆಚ್ಚು ಅಮೂಲ್ಯವಾದವುಗಳು. ಜನಾಂಗ ಮತ್ತು ಭಾಷಾ ಭೇದಗಳಿದ್ದಾಗ್ಯೂ ಇವುಗಳನ್ನೆಲ್ಲಾ ಅರ್ಥಮಾಡಿಕೊಳ್ಳಲು ಸಾಧ್ಯ. 'ನಾನು ಜೊತೆಗೂಡಿ ದುಃಖವನ್ನು ಅನುಭವಿಸಿದೆ' ಎಂದು ಈಗ ತಾನೆ ನಾನು ಹೇಳಿದೆ. ಏಕೆಂದರೆ, ಸಾಮೂಹಿಕವಾಗಿ ದುಃಖವನ್ನು ಅನುಭವಿಸುವುದು ಸಂತೋಷಪಡುವುದಕ್ಕಿಂತ ಹೆಚ್ಚಿನ ನಂಟುಳ್ಳದ್ದು. ರಾಷ್ಟ್ರೀಯ ನೆನಪುಗಳಲ್ಲಿ ವಿಜಯೋತ್ಸವಗಳಿಗಿಂತ ಸಂತಾಪಸೂಚನೆಗಳು ಹೆಚ್ಚು ಅಮೂಲ್ಯವಾದವುಗಳು. ಏಕೆಂದರೆ ಅವು ಕರ್ತವ್ಯವನ್ನು ವಿಧಿಸುತ್ತವೆ ಮತ್ತು ಸಾಮೂಹಿಕ ಪರಿಶ್ರಮವನ್ನು ಅಪೇಕ್ಷಿಸುತ್ತವೆ."

ತಮ್ಮ ಅಭಿಮಾನದ ಮತ್ತು ದುಃಖದ ಸಂಗತಿಗಳೆಂದು ಹಿಂದೂ ಮುಸಲ್ಮಾನರಿಬ್ಬರೂ ಹಂಚಿಕೊಳ್ಳುತ್ತಾರೆ ಎಂದು ಹೇಳಬಹುದಾದ ಯಾವುದಾದರೂ ಸಾಮಾನ್ಯ ಐತಿಹಾಸಿಕ ಪೂರ್ವ ನಡೆವಳಿಗಳು ಇವೆಯೇ? ಇದು ನಮ್ಮ ಮುಂದಿರುವ ಪ್ರಶ್ನೆಯ ಸಾರ. ಹಿಂದೂ ಮುಸಲ್ಮಾನರು ಒಟ್ಟಿಗೆ ಸೇರಿ ಒಂದು ರಾಷ್ಟ್ರವಾಗಿದ್ದಾರೆ ಎಂದು ಸಾಧಿಸುವ ಇಚ್ಛೆಯಿದ್ದರೆ, ಆ ಪ್ರಶ್ನೆಗೆ ಹಿಂದೂಗಳು ಉತ್ತರಿಸಲೇಬೇಕು. ಅವರ ನಡುವಣ ಸಂಬಂಧದಲ್ಲಿ ಈ ಅಂಶದ ಬಗ್ಗೆ ಹೇಳಬೇಕೆಂದರೆ, ಅವರಿಬ್ಬರೂ ಪರಸ್ಪರ ಯುದ್ಧ ಮಾಡುತ್ತಿದ್ದ ಎರಡು

ಶಸ್ತ್ರಸಜ್ಜಿತ ಸೈನಿಕ ಸಮೂಹಗಳಾಗಿದ್ದದ್ದು. ಸಾಮಾನ್ಯ ಸಾಧನೆಗೆ ಸಹಭಾಗಿಗಳಾಗಿರುವ ಚಕ್ರಕ್ರಿಯೆ ಅಲ್ಲಿಲ್ಲ. ರಾಜಕೀಯ ಮತ್ತು ಧಾರ್ಮಿಕ ಕ್ಷೇತ್ರಗಳೆರಡರಲ್ಲೂ ಅವರ ಗತಕಾಲ ಪರಸ್ಪರ ವಿಧ್ವಂಸಕವಾಗಿದೆ. ಅಲ್ಲದೆ, ಅದು ಪರಸ್ಪರ ಬದ್ಧವೈರದ ಗತಕಾಲ. "ಹಿಂದೂ ರಾಷ್ಟ್ರೀಯ ಆಂದೋಳನ" ಎಂಬ ತಮ್ಮ ಕೈಹೊತ್ತಿಗೆಯಲ್ಲಿ ಭಾಯಿ ಪರಮಾನಂದ್ ಹೀಗೆ ಸೂಚಿಸುತ್ತಾರೆ. "ಈ ದೇಶದ ಗೌರವ ಮತ್ತು ಸ್ವಾತಂತ್ರ್ಯಗಳಿಗಾಗಿ ಮುಸ್ಲಿಮರ ವಿರುದ್ಧ ಹೋರಾಡಿದ ಪೃಥ್ವಿರಾಜ, ಪ್ರತಾಪ್, ಶಿವಾಜಿ ಮತ್ತು ಬೇರಾಗಿ ಬೀರ್ ಅವರುಗಳನ್ನು ಹಿಂದೂಗಳು ಪೂಜ್ಯಭಾವದಿಂದ ಕಾಣುತ್ತಾರೆ. ಆದರೆ ಭಾರತದ ಆಕ್ರಮಣಕಾರಿಗಳಾದ ಮಹಮದ್ ಬಿನ್ ಕಾಸಿಂ ಮತ್ತು ರಾಜರುಗಳಾದ ಔರಂಗಜೇಬ್ ಅಂಥವರನ್ನು ಮುಸಲ್ಮಾನರು ತಮ್ಮ ರಾಷ್ಟ್ರೀಯ ನಾಯಕರೆಂದು ಗೌರವಿಸುತ್ತಾರೆ." ಧಾರ್ಮಿಕ ಕ್ಷೇತ್ರದಲ್ಲಿ, ರಾಮಾಯಣ, ಮಹಾಭಾರತ ಮತ್ತು ಗೀತೆಗಳಿಂದ ಹಿಂದೂಗಳು ತಮ್ಮ ಪ್ರಬೋದನೆ ಪಡೆಯುತ್ತಾರೆ. ಆ ಕಡೆ, ಕುರಾನ್ ಮತ್ತು ಹದಿಸ್‌ಗಳಿಂದ ಮುಸಲ್ಮಾನರು ತಮ್ಮ ಸ್ಫೂರ್ತಿಯನ್ನು ಪಡೆಯುತ್ತಾರೆ. ಹೀಗೆ ಅವರಿಬ್ಬರನ್ನೂ ಒಟ್ಟುಗೂಡಿಸುವ ಸಂಗತಿಗಳಿಗಿಂತ, ಬೇರ್ಪಡಿಸುವ ಸಂಗತಿಗಳೇ ಹೆಚ್ಚು ಶಕ್ತಿಶಾಲಿಯಾಗಿವೆ. ಹಿಂದೂ ಮತ್ತು ಮುಸಲ್ಮಾನರ ಸಾಮಾಜಿಕ ಜೀವನದಲ್ಲಿ ಕಂಡುಬರುವ ಕೆಲವು ಸಾಮಾನ್ಯ ಲಕ್ಷಣಗಳನ್ನು ಅವಲಂಬಿಸುವಲ್ಲಿ, ಅವರ ನಡುವಣ ಸಾಮಾನ್ಯ ಭಾಷೆ, ಜನಾಂಗ ಮತ್ತು ದೇಶಗಳ ಮೇಲೆ ನಂಬಿಕೆಯಿಡುವಲ್ಲಿ ಯಾವುದು ಮೂಲಭೂತ ಮತ್ತು ಅತ್ಯವಶ್ಯಕವೆಂಬುದರ ಬಗ್ಗೆ ತೋರಿಕೆಯ ಅಂಶಗಳನ್ನೇ ಹಿಂದೂಗಳು ತಪ್ಪಾಗಿ ಗ್ರಹಿಸುತ್ತಿದ್ದಾರೆ. ಹಿಂದೂಗಳು ಮತ್ತು ಮುಸಲ್ಮಾನರನ್ನು ಒಟ್ಟುಗೂಡಿಸಲು ಶಕ್ತಿಯಿರುವ ಸಾಮಾನ್ಯ ವಿಷಯಗಳಿಗಿಂತ ರಾಜಕೀಯ ಹಾಗೂ ಧಾರ್ಮಿಕ ಪ್ರತಿರೋಧಗಳು ಅವರನ್ನು ಹೆಚ್ಚು ಆಳವಾಗಿ ಪ್ರತ್ಯೇಕಿಸುತ್ತವೆ. ತಮ್ಮ ಗತಕಾಲವನ್ನು ಈ ಎರಡು ಸಮುದಾಯಗಳೂ ಮರೆಯಲು ಸಾಧ್ಯವಾದರೆ ಬಹುಶಃ ಅವರ ಒಟ್ಟುಗೂಡುವಿಕೆಯ ಸಾಧ್ಯತೆ ಬೇರೆಯಾಗಬಹುದು. ಒಂದು ರಾಷ್ಟ್ರವನ್ನು ಕಟ್ಟುವಲ್ಲಿ ಮರೆವು ಒಂದು ಮಹತ್ವಪೂರ್ಣ ಅಂಶವೆಂಬುದನ್ನು ರೇನಾನ್ ಹೀಗೆ ಸ್ಪಷ್ಟಪಡಿಸಿದ್ದಾನೆ:

> **"ಮರೆವು, ಅಂತೆಯೇ ಅದು ಐತಿಹಾಸಿಕ ದೋಷವೂ ಕೂಡ, ರಾಷ್ಟ್ರ ನಿರ್ಮಾಣದಲ್ಲಿ ಅತ್ಯಗತ್ಯ ಕಾರಣವಾಗಿರುತ್ತದೆ. ಹೀಗಿರುವುದರಿಂದ, ಐತಿಹಾಸಿಕ ಅಧ್ಯಯನಗಳಲ್ಲಾಗುವ ಪ್ರಗತಿಯ ರಾಷ್ಟ್ರೀಯತೆಗೆ ಅನೇಕ ವೇಳೆ ಅಪಾಯಕಾರಿಯಾಗಬಹುದೆಂದೂ ನಾನು ಹೇಳಬಲ್ಲೆ. ಎಲ್ಲಾ ರೀತಿಯ ರಾಜಕೀಯ ನಿರ್ಮಾಣಗಳ ಪ್ರಾರಂಭ ಕಾಲದಲ್ಲಿ ಆದ ಹಿಂಸಾತ್ಮಕ ಕೃತ್ಯಗಳನ್ನು ಮಾತ್ರವಲ್ಲದೆ ಯಾವ ಘಟನೆಗಳು ಅತ್ಯಂತ ಅನುಕೂಲಕರವಾಗಿದ್ದವೋ ಅಂತಹ ಘಟನೆಗಳನ್ನೂ ಐತಿಹಾಸಿಕ ಸಂಶೋಧನೆ ವಾಸ್ತವವಾಗಿ ಬೆಳಕಿಗೆ ತರುತ್ತದೆ. ಯಾವಾಗಲೂ ಕಾರ್ಯದಿಂದ ಐಕ್ಯತೆಯನ್ನು ಸಂಪಾದಿಸಲಾಗಿದೆ. ಉತ್ತರ ಮತ್ತು ದಕ್ಷಿಣ ಫ್ರಾನ್ಸ್‌ಗಳ ಮಿಲನವು ನಿರ್ಮೂಲನ ಕೃತ್ಯದ ಮತ್ತು ಸುಮಾರು ನೂರು ವರ್ಷಗಳ ಕಾಲ ನಡೆದ ಭಯಗ್ರಸ್ಥ ಆಡಳಿತದ ಪರಿಣಾಮ. ಫ್ರಾನ್ಸಿನ ಚಕ್ರವರ್ತಿಯು ಆದರ್ಶರೀತಿಯ ಧರ್ಮನಿರಪೇಕ್ಷ ರಾಷ್ಟ್ರಕ್ಕೆ ಸ್ಪಷ್ಟ ರೂಪ ಕೊಟ್ಟನೆಂತಲೂ ಮತ್ತು ಉಳಿದು ಬರಬಹುದಾದ ರಾಷ್ಟ್ರೀಯ ಐಕ್ಯತೆಯನ್ನು ನೆಲೆಗೊಳಿಸಿದನೆಂತಲೂ ಹೇಳಬಹುದಾದರೂ ಅತ್ಯಂತ ಸಮೀಪದಿಂದ ನೋಡಿದಾಗ ತನ್ನ ಘನತೆಯನ್ನು ಕಳೆದುಕೊಳ್ಳುತ್ತಾನೆ ಎಂದು ನಾನು ಹೇಳುತ್ತೇನೆ. ಆತನೇ ನಿರ್ಮಿಸಿದ ರಾಷ್ಟ್ರ ಅವನನ್ನು ಶಪಿಸಿತು. ಆತನು ಎಷ್ಟು ಸತ್ವಶಾಲಿಯಾಗಿದ್ದ ಮತ್ತು ಏನು ಮಾಡಿದ ಎಂಬ ಜ್ಞಾನವು ಈಗ ಸುಸಂಸ್ಕೃತರ ಸ್ವತ್ತಾಗಿ ಮಾತ್ರ ಉಳಿದಿದೆ."**

**"ಪಶ್ಚಿಮ ಯೂರೋಪಿನ ಇತಿಹಾಸದ ಈ ಮಹಾಕಾಯಿದೆಗಳು ತಮ್ಮ ವೈದೃಶ್ಯದಿಂದ ಹೆಚ್ಚು ವ್ಯಕ್ತವಾಗುತ್ತವೆ. ಫ್ರಾನ್ಸಿನ ರಾಜನು, ಆಂಶಿಕವಾಗಿ ತನ್ನ ನಿಷ್ಠುರತೆಯಿಂದ, ಅಷ್ಟು ಶ್ಲಾಘನೀಯವಾಗಿ ಸಾಧಿಸಿದ ಕಾರ್ಯದಿಂದ ಅನೇಕ ದೇಶಗಳು ಹಾಳಾದವು. ಸೇಂಟ್ ಸ್ಟೀಫನನ ಆಡಳಿತದಡಿಯಲ್ಲಿ, ಮ್ಯಾಗ್ಯಾರ್ಸ್ ಮತ್ತು ಸ್ಲಾವ್‌ಗಳು, ತಾವು ಎಂಟುನೂರು ವರ್ಷಗಳ ಹಿಂದೆ ಹೇಗಿದ್ದರೋ ಹಾಗೆಯೇ ಉಳಿದರು. ತನ್ನ ಆಧಿಪತ್ಯದಲ್ಲಿದ್ದ ರಾಜ್ಯಗಳ ವಿವಿಧ ಭಾಗಗಳನ್ನು ಒಂದುಗೂಡಿಸುವುದಕ್ಕೆ ಬದಲಾಗಿ, ಅವುಗಳನ್ನು ಹಾಪ್ಸ್‌ಬರ್ಗ್ ಮನೆತನವು ಪ್ರತ್ಯೇಕವಾಗಿ ಉಳಿಸಿತು. ಅಂತಹ ಭಾಗಗಳು ಅನೇಕ ವೇಳೆ ಪರಸ್ಪರ ವಿರೋಧಿಗಳಾಗಿದ್ದವು. ಬೊಹೆಮಿಯಾದಲ್ಲಿ, ಜೆಕ್ ಮತ್ತು ಜರ್ಮನ್ ಅಂಶಗಳನ್ನು ಎಣ್ಣೆ ಮತ್ತು ನೀರಿನಂತೆ ಒಂದರಲ್ಲೊಂದು ಬೆರಸಲಾಗಿತ್ತು. ಧಾರ್ಮಿಕ ಆಧಾರಗಳ ಮೇಲೆ ರಾಷ್ಟ್ರೀಯತೆಗಳನ್ನು ಪ್ರತ್ಯೇಕಿಸುವ ತುರ್ಕಿಗಳ ನೀತಿ ಅತ್ಯಂತ ಭೀಕರ ಪರಿಣಾಮಗಳಿಗೆ ಕಾರಣವಾಯಿತು. ಅದು ಪೂರ್ವದೇಶದ ನಾಶವನ್ನೇ ಉಂಟುಮಾಡಿತು. ಸ್ಮೈರ್ನ ಅಥವಾ ಸಲೋನಿಕದಂತಹ ಪಟ್ಟಣವನ್ನೇ ತೆಗೆದುಕೊಳ್ಳಿ. ಅಲ್ಲಿ ತನ್ನದೇ ಆದ ನೆನಪುಗಳುಳ್ಳ ಮತ್ತು ಅಪರೂಪವಾಗಿಯಾದರೂ ಪರಸ್ಪರ ಸಾಮಾನ್ಯವಾದುದೇನನ್ನು ಹೊಂದಿರದ ಐದು ಅಥವಾ ಆರು ಸಮುದಾಯಗಳನ್ನು ನೀವು ಕಾಣುವಿರಿ. ಒಂದು ರಾಷ್ಟ್ರದಲ್ಲಿರುವ ಪ್ರತಿಯೊಬ್ಬ ಪ್ರಜೆಯೂ ಕೂಡ ಎಲ್ಲರಿಗೂ ಸಾಮಾನ್ಯವಾದ ಅಂಶಗಳನ್ನು ಹೊಂದಿರಲೇಬೇಕು. ಅಲ್ಲದೆ, ಅವರೆಲ್ಲರೂ ಹಲವು ಸಂಗತಿಗಳನ್ನು ಮರೆತಿರಲೇಬೇಕು ಎಂಬುದೇ ಒಂದು ರಾಷ್ಟ್ರದ ಸಾರ. ತಾನು ಒಬ್ಬ ಬರ್ಗಂಡಿಯನ್ನೋ, ಆಲನೋ ಅಥವಾ ವಿಸಿಗೋತೋ ಎಂಬುದನ್ನು ಯಾವ ಫ್ರೆಂಚ್ ನಾಗರೀಕನೂ ತಿಳಿದಿಲ್ಲ, ಸೇಂಟ್ ಬಾರ್ಥ ಲೋಮೆವ್ ಮತ್ತು ಹದಿಮೂರನೇ ಶತಮಾನದಲ್ಲಿ ದಕ್ಷಿಣದಲ್ಲಾದ ಸಾಮೂಹಿಕ ಕಗ್ಗೊಲೆಗಳನ್ನು ಪ್ರತಿಯೊಬ್ಬ ಫ್ರೆಂಚ್ ನಾಗರೀಕನೂ ಮರೆತಿರಬೇಕಿದ್ದಿತು. ಫ್ರೆಂಚ್ ಮೂಲದ ಪುರಾವೆಯನ್ನು ಕೊಡಬಲ್ಲ ಹತ್ತು ಕುಟುಂಬಗಳು ಫ್ರಾನ್ಸಿನಲ್ಲಿ ಇಲ್ಲ. ಹೀಗಿದ್ದರೂ, ಅಂತಹ ಪುರಾವೆಯನ್ನು ಕೊಟ್ಟಾಗಲೂ ಕೂಡ, ಅದು ಮೂಲತಃ ದೋಷಯುಕ್ತವಾಗಿರುತ್ತದೆ. ಎಲ್ಲಾ ವಂಶಾವಳಿ ವ್ಯವಸ್ಥೆಗಳನ್ನು ವಿಕೃತಗೊಳಿಸಬಲ್ಲಂತಹ ಸಾವಿರ ಅಜ್ಞಾತ ತೊಡಕುಗಳ ಪರಿಣಾಮದಿಂದ ಅದು ಕೂಡಿರುತ್ತದೆ."**

ಇದೆಲ್ಲದರ ದುಃಖದ ಸಂಗತಿಯೆಂದರೆ, ಭಾರತದಲ್ಲಿರುವ ಎರಡು ಸಮುದಾಯಗಳು ತಮ್ಮ ಗತಕಾಲವನ್ನು ಎಂದೆಂದೂ ಮರೆಯವು ಅಥವಾ ನಾಶಮಾಡಲಾರವು. ಅವರ ಗತಕಾಲವು ಅವರ ಧರ್ಮಗಳಲ್ಲಿ ನೆಲೆನಿಂತಿದೆ ಮತ್ತು ಪ್ರತಿಯೊಂದು ಸಮುದಾಯಕ್ಕೂ ತನ್ನ ಗತಕಾಲವನ್ನು ಮರೆಯುವುದೆಂದರೆ, ತನ್ನ ಧರ್ಮವನ್ನೇ ಕೈಬಿಟ್ಟಂತೆ. ಹಾಗಾಗುವ ಭರವಸೆ ಹೊಂದುವುದು ನಿರರ್ಥಕ.

ಸಾಮಾನ್ಯ ಐತಿಹಾಸಿಕ ಹಿನ್ನೆಲೆಗಳು ಇಲ್ಲದಿರುವಾಗ, ಹಿಂದೂ ಮುಸಲ್ಮಾನರು ಒಂದು ರಾಷ್ಟ್ರಕ್ಕೆ ಸೇರಿದವರು ಎಂಬ ಹಿಂದೂಗಳ ದೃಷ್ಟಿಯು ನೆಲಕಚ್ಚುತ್ತದೆ ಅಷ್ಟೆ. ಆ ದೃಷ್ಟಿಯನ್ನು ಉಳಿಸಿಕೊಂಡು ಬರುವುದೆಂದರೆ ಭ್ರಾಂತಿಯೊಂದನ್ನು ಉಳಿಸಿಕೊಂಡು ಬಂದಂತೆ. ಭಾರತದ ಮುಸಲ್ಮಾನರ ನಡುವಿರುವಂತಹ, ಒಂದಾಗಿ ಬದುಕಬೇಕೆಂಬ ಬಯಕೆ ಹಿಂದೂಗಳು ಮತ್ತು ಮುಸಲ್ಮಾನರ ನಡುವೆ ಇಲ್ಲ.

ಮುಸಲ್ಮಾನರು ಒಂದು ರಾಷ್ಟ್ರ ಎಂಬುದು ಅವರ ಮುಖಂಡರ ಅನುಬೋಧೆ ಎಂದು ಹೇಳುವುದರಲ್ಲಿ ಯಾವ ಉಪಯೋಗವೂ ಇಲ್ಲ. ದೋಷಾರೋಪಣೆಯ ದೃಷ್ಟಿಯಿಂದ ಅದು ನಿಜ. ತಾವು ಒಂದು ಸಮುದಾಯವೆಂದು ಕರೆದುಕೊಳ್ಳುವುದರಲ್ಲೇ ಮುಸಲ್ಮಾನರು ಇದುವರೆಗೆ ತೃಪ್ತರಾಗಿದ್ದರು. ಆದರೆ ಅವರು ತಮ್ಮನ್ನು ತಾವೇ ಒಂದು ರಾಷ್ಟ್ರವೆಂದು ಕರೆದುಕೊಳ್ಳುವ ಶೈಲಿಯಲ್ಲಿ ಇತ್ತೀಚೆಗೆ ವರ್ತಿಸುತ್ತಿದ್ದಾರೆ. ಆದರೆ

ಒಬ್ಬ ವ್ಯಕ್ತಿಯ ಅಭಿಪ್ರೇರಣೆಗಳತ್ತ ಬೆರಳು ತೋರಿಸುವಂತಹ ಆಪಾದನೆಗಳು ಆತನು ಪ್ರತಿಪಾದಿಸುವಂತಹ ವಿಷಯವನ್ನು ಅಲ್ಲಗಳೆಯುವಷ್ಟು ಶಕ್ತವಾಗುವುದಿಲ್ಲ. ಮುಸಲ್ಮಾನರು ಒಂದು ಕಾಲದಲ್ಲಿ ತಮ್ಮನ್ನು ಒಂದು ಸಮುದಾಯವೆಂದು ಕರೆದುಕೊಳ್ಳುತ್ತಿದ್ದರಾದ್ದರಿಂದ, ಈಗ ಅವರು ತಮ್ಮನ್ನು ತಾವು ರಾಷ್ಟ್ರವೆಂದು ಕರೆದುಕೊಳ್ಳಕೂಡದು ಎಂದು ಹೇಳುವುದು ರಾಷ್ಟ್ರೀಯತಾ ಭಾವನೆಯ ಮಾನಸಿಕ ಸ್ತರದ ರಹಸ್ಯ ಕ್ರಿಯೆಯನ್ನು ತಪ್ಪು ತಿಳಿದಂತಾಗುತ್ತದೆ. ಅಂತಹ ವಾದವು, ಒಂದು ರಾಷ್ಟ್ರವನ್ನು ರೂಪಿಸುವಂತಹ ಅಂಶಗಳನ್ನು ಹೊಂದಿರುವ ಒಂದು ಜನತೆಯಿದ್ದ ಕಡೆ, ಅವರ ಸ್ವಾಭಾವಿಕ ಪರಿಣಾಮವಾಗಿರುವ, ರಾಷ್ಟ್ರೀಯತಾ ರಸಭಾವವನ್ನು ಪ್ರಕಟಪಡಿಸಲೇಬೇಕು ಮತ್ತು ಅವರು ಆ ರಸಭಾವವನ್ನು ಕೆಲವು ಕಾಲ ಪ್ರಕಟಪಡಿಸಲು ವಿಫಲರಾದರೆ, ಅಂತಹ ವಿಫಲತೆಯನ್ನು ಅನಂತರ ಮಾಡಲಾರರು. ತಾವೊಂದು ರಾಷ್ಟ್ರವೆಂಬ ಕೇಳಿಕೆಯ ಅಸತ್ಯವನ್ನು ಎತ್ತಿ ಹಿಡಿಯುವ ಪುರಾವೆಯಂತೆ ಬಳಸಬೇಕೆಂಬ ಊಹೆಗೆ ಆಸ್ಪದ ಕೊಡುತ್ತದೆ. ಅಂತಹ ವಾದವಿವಾದಕ್ಕೆ ಯಾವುದೇ ಐತಿಹಾಸಿಕ ಸಾಕ್ಷ್ಯಾಧಾರವಿಲ್ಲ. ಪ್ರೊ. ಟಾಯನ್ ಬೀ ಗುರುತಿಸಿದಂತೆ:

> **"ಇಂತಹ ಒಂದು ಅಥವಾ ಹಲವು ಕಾರಣಗಳ ಇರುವಿಕೆಯನ್ನೇ ಆಧರಿಸಿ ಒಂದು ರಾಷ್ಟ್ರೀಯತೆಯ ಅಸ್ತಿತ್ವದ ಬಗ್ಗೆ ಪೂರ್ವಾನುಮಾನದಿಂದ ವಾದಿಸುವುದು ಅಸಾಧ್ಯ. ಅಂತಹ ಕಾರಣಗಳು ಶತಮಾನಗಳವರೆಗೆ ಇರಬಹುದಾದರೂ ಯಾವುದೇ ಪ್ರಕ್ರಿಯೆಯನ್ನು ಹುಟ್ಟಿಸಿಲ್ಲದಿರಬಹುದು. ಅಲ್ಲದೆ, ಒಂದು ಪ್ರಸಂಗದಿಂದ ಮತ್ತೊಂದರ ಬಗ್ಗೆ ವಾದಿಸುವುದು ಅಸಾಧ್ಯ. ಖಚಿತವಾಗಿ ಒಂದೇ ಗುಂಪಿಗೆ ಸೇರಿದ ಕಾರಣಗಳು ಒಂದು ಕಡೆ ರಾಷ್ಟ್ರೀಯತೆಯನ್ನು ರೂಪಿಸಬಹುದಾದರೆ, ಅವೇ ಕಾರಣಗಳು ಮತ್ತೊಂದು ಕಡೆ ಯಾವ ಪರಿಣಾಮವನ್ನೂ ಬೀರದಿರಬಹುದು."**

ಪ್ರೊ. ಬಾರ್ಕರ್ ಸೂಚಿಸಿದಂತೆ, ರಾಷ್ಟ್ರವೊಂದರ ಹಲವು ಸದಸ್ಯರ ಅರಿವಿಗೆ ಬಾರದ ಒಂದು ರಾಷ್ಟ್ರೀಯ ಜೀವನ ಚೈತನ್ಯದ ಸಾರವು ಅಸ್ತಿತ್ವದಲ್ಲಿದ್ದರೂ ಕೂಡ, ರಾಷ್ಟ್ರಗಳು ಚಿಂತನರಹಿತ ಮೌನದಲ್ಲಿ ಅಸ್ತಿತ್ವದಲ್ಲಿರಲು ಸಾಧ್ಯ. ಹಾಗೆ ಅವು ಶತಮಾನಗಳವರೆಗೂ ಇರಲು ಸಾಧ್ಯ ಎಂಬ ವಾಸ್ತವಾಂಶವು ಬಹುಶಃ ಇದಕ್ಕೆ ಕಾರಣವಿರಬಹುದು. ಇಂತಹ ಒಂದು ಸಂಗತಿಯು ಮುಸಲ್ಮಾನರ ವಿಚಾರದಲ್ಲಿ ಉಂಟಾಗಿರುವುದರಲ್ಲಿ ಅನುಮಾನವಿಲ್ಲ. ರಾಷ್ಟ್ರೀಯ ಜೀವನ ಚೈತನ್ಯದ ಸಾರವೊಂದು ತಮ್ಮಲ್ಲಿ ಅಸ್ತಿತ್ವದಲ್ಲಿದೆ ಎಂಬ ಪ್ರಜ್ಞೆ ಅವರಿಗಿರಲಿಲ್ಲ. ಪ್ರತ್ಯೇಕ ರಾಷ್ಟ್ರೀಯತೆಗೆ ಒತ್ತಾಯಿಸಲು ಅವರು ವಿಳಂಬ ಮಾಡಿದುದನ್ನು ಇದು ವಿವರಿಸುತ್ತದೆ. ಅಷ್ಟೇ ಆದರೆ, ಒಂದು ರಾಷ್ಟ್ರೀಯ ಜೀವನ ಚೈತನ್ಯದ ಸಾರಕ್ಕೆ ಅಸ್ತಿತ್ವವೇ ಇರಲಿಲ್ಲವೆಂದು ಇದರ ಅರ್ಥವಲ್ಲ.

ರಾಷ್ಟ್ರೀಯತಾ ಭಾವ ಅಸ್ತಿತ್ವದಲ್ಲಿದ್ದರೂ ಕೂಡ ಪ್ರತ್ಯೇಕ ರಾಷ್ಟ್ರೀಯ ಅಸ್ತಿತ್ವಕ್ಕೆ ಬಯಸದ ಸಂಗತಿಗಳೂ ಇವೆ ಎಂದು ಪ್ರತಿಪಾದಿಸುವುದರಲ್ಲಿ ಅರ್ಥವಿಲ್ಲ. ಕೆನಡಾದಲ್ಲಿರುವ ಫ್ರೆಂಚರನ್ನು ಮತ್ತು ದಕ್ಷಿಣ ಆಫ್ರಿಕಾದಲ್ಲಿರುವ ಬ್ರಿಟಿಷರನ್ನು ಸಮರ್ಥನೆಗಾಗಿ ಇಲ್ಲಿ ಉಲ್ಲೇಖಿಸಬಹುದು. ತಮ್ಮ ರಾಷ್ಟ್ರೀಯತೆಯ ಅರಿವುಳ್ಳ ಜನರಿಂದ ಕೂಡಿರುವ ಸಮೂಹಗಳೂ ಇವೆ ಎಂಬುದನ್ನು ಒಪ್ಪಿಕೊಂಡರೂ, ರಾಷ್ಟ್ರೀಯತಾ ವಾದವೆಂದು ಕರೆಯಲಾಗುವ ಭಾವೋದ್ರೇಕವನ್ನು ಅಂತಹ ಅರಿವು ಉಂಟುಮಾಡದು. ಬೇರೆ ಮಾತುಗಳಲ್ಲಿ ಹೇಳುವುದಾದರೆ, ತಾವು ರಾಷ್ಟ್ರಗಳು ಎಂಬ ಅರಿವನ್ನು ಪಡೆದಿದ್ದರೂ, ರಾಷ್ಟ್ರೀಯತಾ ಭಾವುಕತೆಯಿಂದ ಪ್ರೇರಿತವಾಗದ ರಾಷ್ಟ್ರಗಳೂ ಇರಬಹುದು. ಈ ತರ್ಕದ ಆಧಾರದ ಮೇಲೆ, ಮುಸಲ್ಮಾನರು ತಾವೊಂದು ರಾಷ್ಟ್ರವೆಂಬ ಅಭಿಪ್ರಾಯವನ್ನು

ಹೊಂದಿರಬಹುದು. ಆದರೆ ಅದರ ಕಾರಣದಿಂದ, ಒಂದು ಪ್ರತ್ಯೇಕ ರಾಷ್ಟ್ರೀಯ ಅಸ್ತಿತ್ವವನ್ನು ಕೇಳುವ ಅಗತ್ಯವಿಲ್ಲ. ಅಂತೆಯೇ ಕೆನಡಾದಲ್ಲಿ ಫ್ರೆಂಚರು ಪಡೆದಿರುವಂತಹ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಬ್ರಿಟಿಷರು ಪಡೆದಿರುವಂಥ ಸ್ಥಾನಮಾನದಿಂದ ಅವರು ಏಕೆ ತೃಪ್ತರಾಗಬಾರದು ಎಂದೂ ವಾದಿಸಬಹುದು. ಅಂತಹ ಸ್ಥಾನಮಾನ ಸಾಕಷ್ಟು ಒಳ್ಳೆಯ ಸ್ಥಾನಮಾನ. ಹಾಗಿದ್ದಾಗ್ಯೂ, ವಿಭಜನೆಗೆ ಒತ್ತಾಯ ಮಾಡಬಾರದೆಂದು ಮುಸಲ್ಮಾನರನ್ನು ಅನುರೋಧಿಸುವ ಮೂಲಕ ಮಾತ್ರ ಅಂತಹ ಧೋರಣೆ ತಾಳಲು ಸಾಧ್ಯವೆಂಬುದನ್ನು ನೆನಪಿಡಲೇಬೇಕು. ಅವರು ವಿಭಜನೆ ಬೇಕೇಬೇಕೆಂದರೆ, ಅವರ ಹಕ್ಕು ಕೇಳಿಕೆಗೆ ವಿರುದ್ಧವಾಗಿ ಅದು ಸರಿಯಾದ ವಾದವೆನಿಸಿದು.

ಅನುರೋಧವನ್ನು ಖಂಡನೆಯೆಂದೇ ತಪ್ಪಾಗಿ ತಿಳಿಯಬಾರದೆಂಬ ಉದ್ದೇಶದಿಂದ ಎರಡು ವಿಷಯಗಳತ್ತ ಗಮನ ಸೆಳೆಯುವುದು ಅತ್ಯಗತ್ಯ. ಮೊದಲನೆಯದಾಗಿ, ರಾಷ್ಟ್ರೀಯತೆ ಮತ್ತು ರಾಷ್ಟ್ರೀಯತಾ ವಾದಗಳ ನಡುವೆ ವ್ಯತ್ಯಾಸವಿದೆ. ಅವು ಮಾನವ ಮನಸ್ಸಿನ ಎರಡು ವಿಭಿನ್ನ ಮನಸ್ಥಿತಿಗಳು. ರಾಷ್ಟ್ರೀಯತೆ ಎಂದರೆ "ತಮ್ಮ ಕುಲದ ಪ್ರಜ್ಞೆ, ರಕ್ತ ಸಂಬಂಧದ ಅಂಟಿನ ಅಸ್ತಿತ್ವದ ಅರಿವು". ರಾಷ್ಟ್ರೀಯತಾ ವಾದವೆಂದರೆ, "ಯಾರು ಈ ರೀತಿಯ ಕುಲ ಸಂಬಂಧದಿಂದ ಬಂಧಿತರಾಗಿರುತ್ತಾರೋ ಅಂಥವರು ತಮಗೆ ಪ್ರತ್ಯೇಕ ರಾಷ್ಟ್ರೀಯತೆ ಇರಬೇಕೆಂದು ಇಚ್ಛಿಸುವುದು". ಎರಡನೆಯದಾಗಿ ರಾಷ್ಟ್ರೀಯತಾ ಭಾವನೆಯು ಅಸ್ತಿತ್ವದಲ್ಲಿಲ್ಲದಿದ್ದರೆ, ರಾಷ್ಟ್ರೀಯತಾ ವಾದವಿರಲು ಸಾಧ್ಯವಿಲ್ಲ. ಆದರೆ ತದ್ವಿರುದ್ಧವಾದುದು ಎಲ್ಲಾ ಕಾಲದಲ್ಲೂ ನಿಜವಾಗಿರದು ಎಂಬುದನ್ನು ಗಮನದಲ್ಲಿಡುವುದು ಬಹುಮುಖ್ಯ. ರಾಷ್ಟ್ರೀಯತಾ ಭಾವನೆಯು ಇರಬಹುದು. ಆದರೆ, ರಾಷ್ಟ್ರೀಯತಾವಾದದ ಭಾವನೆ ಇಲ್ಲದೇ ಇರಬಹುದು. ಹಾಗೆಂದರೆ, ರಾಷ್ಟ್ರೀಯತೆಯು ಎಲ್ಲಾ ಸಂಗತಿಗಳಲ್ಲಿಯೂ ರಾಷ್ಟ್ರೀಯತಾವಾದಕ್ಕೆ ಎಡೆ ಮಾಡುವುದಿಲ್ಲ. ರಾಷ್ಟ್ರೀಯತೆಯು ರಾಷ್ಟ್ರೀಯತಾವಾದವಾಗಿ ಭುಗಿಲೇಳಬೇಕಾದರೆ ಎರಡು ಸ್ಥಿತಿಗಳು ಇರಲೇಬೇಕು. ಮೊದಲನೆಯದಾಗಿ, ಒಂದು ರಾಷ್ಟ್ರವಾಗಿ ಬದುಕುವ ಇಚ್ಛೆ ಹುಟ್ಟಬೇಕು. ರಾಷ್ಟ್ರೀಯತಾ ವಾದವು ಅಂತಹ ಇಚ್ಛೆಯ ಒಂದು ಪ್ರವರ್ತಕ ಅಭಿವ್ಯಕ್ತಿ. ಎರಡನೆಯದಾಗಿ, ರಾಷ್ಟ್ರೀಯತಾವಾದದಿಂದ ಆಕ್ರಮಿಸಿಕೊಳ್ಳಬಹುದಾದ ಮತ್ತು ಒಂದು ರಾಷ್ಟ್ರವನ್ನಾಗಿ ರೂಪಿಸಬಹುದಾದ ಪ್ರದೇಶವೊಂದಿರಬೇಕು. ಹಾಗೆಯೇ ಆ ಪ್ರದೇಶವು ರಾಷ್ಟ್ರದ ಸಾಂಸ್ಕೃತಿಕ ಆಶಯವೂ ಆಗುವಂತಿರಬೇಕು. ಲಾರ್ಡ್ ಅಕ್ಟನ್ನನ ಉಕ್ತಿಯನ್ನು ಬಳಸಬಹುದಾದರೆ, ಅಂತಹ ಪ್ರದೇಶ ಹೊಂದಿರದ ರಾಷ್ಟ್ರೀಯತಾ ವಾದವು, "ತನ್ನ ಜೀವಿತವನ್ನು ಪುನಃ ಪ್ರಾರಂಭಿಸಲು ಬೇಕಾದ ದೇಹವೊಂದನ್ನು ಹುಡುಕುತ್ತಾ ಅಲೆಯುತ್ತಿರುವ, ಆದರೆ ಯಾವ ದೇಹವನ್ನೂ ಕಾಣದೆ ಸಾಯುವ ಆತ್ಮವಿದ್ದಂತೆ." "ಒಂದು ರಾಷ್ಟ್ರವಾಗಿ ಬಾಳುವ ಇಚ್ಛೆ"ಯನ್ನು ಮುಸಲ್ಮಾನರು ಬೆಳೆಸಿಕೊಂಡಿದ್ದಾರೆ. ಅವರು ಆಕ್ರಮಿಸಿಕೊಳ್ಳಲು ಸಾಧ್ಯವಿರುವ, ಅದನ್ನು ಒಂದು ರಾಷ್ಟ್ರವನ್ನಾಗಿ ರೂಪಿಸಲು ಸಾಧ್ಯವಿರುವ ಮತ್ತು ಹಾಗೆ ಹೊಸದಾಗಿ ಹುಟ್ಟಿದ ಮುಸಲ್ಮಾನ ರಾಷ್ಟ್ರಕ್ಕೆ ಒಂದು ಸಾಂಸ್ಕೃತಿಕ ಆಶ್ರಯವನ್ನು ಒದಗಿಸಬಲ್ಲ ಪ್ರದೇಶವೊಂದನ್ನು ಪ್ರಕೃತಿ ಅವರಿಗೆ ಒದಗಿಸಿದೆ. ಇಂತಹ ಅನುಕೂಲಕರ ಸ್ಥಿತಿಗತಿಗಳು ಇದ್ದಾಗ್ಯೂ, ಕೆನಡಾದಲ್ಲಿ ಫ್ರೆಂಚರು ಸ್ವೀಕರಿಸಿರುವ ಹಾಗೂ ದಕ್ಷಿಣ ಆಫ್ರಿಕಾದಲ್ಲಿ ಬ್ರಿಟಿಷರು ಒಪ್ಪಿಕೊಂಡಿರುವಂತಹ ಸ್ಥಾನಮಾನವನ್ನು ಒಪ್ಪಿಕೊಂಡು ತೃಪ್ತರಾಗಲು ತಮಗೆ ಸಾಧ್ಯವಿಲ್ಲವೆಂದು ಮುಸಲ್ಮಾನರು ಹೇಳುತ್ತಾರೆ ಮತ್ತು ತಮ್ಮದೇ ಎಂದು ಹೇಳಬಹುದಾದ ಒಂದು ರಾಷ್ಟ್ರೀಯ ಆಶ್ರಯವನ್ನು ಅವರು ಪಡೆದೇ ಪಡೆಯುತ್ತಾರೆ ಎಂಬುದು ಆಶ್ಚರ್ಯವಾಗಿ ಕಾಣಿಸುವುದಿಲ್ಲ.

◆

# ಅಧ್ಯಾಯ ೧೯

# ಪತನದಿಂದ ಪಾರಾಗುವುದು

ಭಾರತವನ್ನು ವಿಭಜಿಸಿ ಪ್ರತ್ಯೇಕ ಮುಸಲ್ಮಾನ ರಾಜ್ಯಗಳನ್ನು ಸ್ಥಾಪಿಸಲು ಮುಸಲ್ಮಾನರು ಒತ್ತಾಯಿಸುವುದಕ್ಕೆ ಯಾವ ನ್ಯಾಯಸಮ್ಮತಿ ಇದೆ? ಈ ಬಹಿರಂಗ ಪ್ರತಿಭಟನೆ ಯಾಕೆ? ಅವರಿಗಿರುವ ಅಹವಾಲುಗಳು ಯಾವುವು? ಎಂದು ಹಿಂದೂಗಳು ನ್ಯಾಯಬದ್ಧ ರೋಷಚಿತ್ತರಾಗಿ ಕೇಳುತ್ತಾರೆ.

ಒಂದು ರಾಷ್ಟ್ರೀಯ ಆಡಳಿತ ವ್ಯವಸ್ಥೆಯನ್ನು ನಿರ್ಮಿಸಲು ರಾಷ್ಟ್ರೀಯತಾವಾದವು ಸಾಕಷ್ಟು ನ್ಯಾಯಸಮ್ಮತ ಕಾರಣವೆಂಬುದು ಇಂದು ನೆಲೆ ನಿಂತ ತತ್ತ್ವದ ಇತಿಹಾಸ ತಿಳಿದವರು ಇದನ್ನು ತಿಳಿಯಲು ಕಷ್ಟವಾಗದು. ಪ್ರಸಿದ್ಧ ಇತಿಹಾಸಕಾರ ಲಾರ್ಡ್ ಅಕ್ಟನ್ ಹೀಗೆ ತಿಳಿಸಿದ್ದಾನೆ:

**"ಹಿಂದಿನ ಐರೋಪ್ಯ ದೇಶಗಳಲ್ಲಿ, ರಾಷ್ಟ್ರೀಯತೆಗಳ ಹಕ್ಕುಗಳು ಸರ್ಕಾರಗಳಿಂದ ಮಾನ್ಯತೆ ಪಡೆದಿರಲಿಲ್ಲ ಮತ್ತು ಅವು ಜನರಿಂದ ಪ್ರತಿಪಾದಿತವಾಗಿರಲಿಲ್ಲ. ರಾಷ್ಟ್ರಗಳ ಆಸಕ್ತಿಗಳಲ್ಲ, ರಾಜವಂಶಗಳ ಆಸಕ್ತಿಗಳು ಗಡಿರೇಖೆಗಳನ್ನು ಕ್ರಮಪಡಿಸುತ್ತಿದ್ದವು. ಅಲ್ಲದೆ, ಜನತೆಯ ಇಚ್ಛೆಗಳಿಗೆ ಗಮನಕೊಡದೆ, ಸಾಮಾನ್ಯ ಆಡಳಿತವನ್ನು ನಡೆಸಲಾಗುತ್ತಿತ್ತು. ಸ್ವಾತಂತ್ರ್ಯವನ್ನು ಎಲ್ಲೆಲ್ಲಿ ದಮನ ಮಾಡಲಾಗುತ್ತಿತ್ತೋ, ಅಲ್ಲೆಲ್ಲಾ, ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಬರುತ್ತಿದ್ದ ಬೇಡಿಕೆಗಳನ್ನೆಲ್ಲಾ ಕಡೆಗಣಿಸಲಾಗುತ್ತಿತ್ತು. ಫೆನಲಾನನ ಮಾತುಗಳಲ್ಲಿ ಹೇಳುವುದಾದರೆ, ರಾಜಕುಮಾರಿಯು ತನ್ನ ಮದುವೆ ಬಳುವಳಿ ಭಾಗವಾಗಿ ರಾಜಪ್ರಭುತ್ವದ ಒಂದು ಭಾಗವನ್ನೇ ತನ್ನೊಡನೆ ಒಯ್ಯುತ್ತಿದ್ದಳು."**

ಮೊದಲು ರಾಷ್ಟ್ರೀಯತೆಗಳು ನಿರಾಸಕ್ತವಾಗಿದ್ದವು. ಅವುಗಳಲ್ಲಿ ಪ್ರಜ್ಞೆ ಮೂಡಿದಾಗ:

**"ತಮ್ಮ ನ್ಯಾಯಬದ್ಧ ರಾಜರುಗಳ ಪರವಾಗಿ ಮೊದಲು ಅವು ಆಕ್ರಮಣಕಾರರ ವಿರುದ್ಧ ದಂಗೆಯೆದ್ದವು. ಬಲಾತ್ಕಾರದಿಂದ ಸ್ವಾಧೀನಪಡಿಸಿಕೊಂಡವರಿಂದ ಆಳಿಸಿಕೊಳ್ಳಲು ಅವು ನಿರಾಕರಿಸಿದವು. ಮುಂದೆ ತಮ್ಮ ರಾಜರುಗಳೇ ತಮ್ಮ ಮೇಲೆ ಹಿಂಸಾಚಾರ ನಡೆಸಿದಾಗ ಅವರ ವಿರುದ್ಧವೇ ಅವು ದಂಗೆಯೆದ್ದ ಕಾಲ ಬಂದಿತು. ನ್ಯಾಯಬದ್ಧರಾದ ನಿಖರ ಅಹವಾಲುಗಳಿಂದ ಪ್ರೇರಿತವಾದ ಪರಿಮಿತ ಬಂಡಾಯಗಳುಂಟಾದವು. ಅನಂತರ ಬಂದಿತು ಸಂಪೂರ್ಣ ಬದಲಾವಣೆ ತಂದ ಫ್ರೆಂಚ್ ಕ್ರಾಂತಿ. ತಮ್ಮ ಆಶಯಗಳು ಮತ್ತು ಅಪೇಕ್ಷೆಗಳನ್ನು ಗೌರವಿಸಿಕೊಳ್ಳುವುದನ್ನು ಜನತೆಗೆ ಅದು ಕಲಿಸಿತು. ಅಂತಹ ಗೌರವ ಭಾವವೇ, ತಮ್ಮ ಬಗ್ಗೆ ತಾವು ಏನು ಇಷ್ಟಪಡುತ್ತಾರೋ ಅದನ್ನು ಮಾಡುವ ಹಕ್ಕಿನ ಅತ್ಯಂತ ಶ್ರೇಷ್ಠ ಒರೆಗಲ್ಲಾಯಿತು. ಅವರಿಗೆ ಗತಕಾಲದಿಂದ ನಿಯಂತ್ರಿತವಾಗದ ಮತ್ತು ಇಂದಿನ ಸ್ಥಿತಿಗತಿಯಿಂದ ನಿಯಂತ್ರಿತವಾಗದ ಜನತಾ ಸರ್ವಾಧಿಕಾರದ ವಿಚಾರವನ್ನು ಅದು ಘೋಷಿಸಿತು. ಫ್ರೆಂಚ್ ಕ್ರಾಂತಿ ಕಲಿಸಿದ ಈ ಪಾಠವು ಎಲ್ಲಾ ಉದಾರ ಚಿಂತಕರ ಸ್ವೀಕೃತ ಮತವಾಯಿತು. ಅದಕ್ಕೆ ಮಿಲ್ ತನ್ನ ಒತ್ತಾಸೆ ನೀಡಿದ. ಆತನ ಹೇಳಿಕೆ**

**ಹೀಗಿದೆ: "ಮಾನವರ ವಿವಿಧ ಸಂಘಟನೆಗಳಲ್ಲಿ ಯಾವುದರ ಜೊತೆ ಸಂಬಂಧವಿಟ್ಟುಕೊಳ್ಳಬೇಕೆಂದು ನಿರ್ಧಾರ ತೆಗೆದುಕೊಳ್ಳುವುದಕ್ಕಲ್ಲದಿದ್ದರೂ, ಯಾವುದೇ ಮಾನವ ಸಮೂಹವು ಏನು ಮಾಡಲು ಸ್ವತಂತ್ರವಾಗಿರಬೇಕೆಂಬುದನ್ನು ಯಾರಿಗಾದರೂ ತಿಳಿದಿರುವುದು ಅಪರೂಪ."**

ಆತನು ಮುಂದುವರಿದು ಈ ಕೆಳಗಿನ ಅಭಿಪ್ರಾಯವನ್ನು ಕೊಡುತ್ತಾನೆ:

**"ಸರ್ಕಾರಗಳ ಗಡಿಗಳು ರಾಷ್ಟ್ರೀಯತೆಗಳ ಗಡಿಗಳೊಂದಿಗೆ ಪ್ರಮುಖ ಅಂಶಗಳಲ್ಲಿ ಸರಿ ಹೊಂದಲೇಬೇಕೆಂಬುದು ಸ್ವತಂತ್ರ ಸಂಸ್ಥೆಗಳ ಒಂದು ಅತ್ಯಗತ್ಯ ಸಾಮಾನ್ಯ ಸ್ಥಿತಿ."**

ಈ ರೀತಿ, ಒಂದು ಜನತೆಯ ಇಚ್ಛಾಶಕ್ತಿಯ ಸಾರ್ವಭೌಮತ್ವವನ್ನು ಪ್ರತಿಪಾದಿಸುವ ಜನತಂತ್ರ ಸಿದ್ಧಾಂತದಲ್ಲಿ, ರಾಷ್ಟ್ರೀಯತಾ ಸಿದ್ಧಾಂತವು ಅಂತರ್ಗತವಾಗಿದೆ ಎಂಬುದನ್ನು ಇತಿಹಾಸವು ತೋರಿಸುತ್ತದೆ. ಹಾಗೆಂದರೆ, ಒಂದು ರಾಷ್ಟ್ರೀಯ ಆಡಳಿತ ವ್ಯವಸ್ಥೆಗಾಗಿ ಒಂದು ರಾಷ್ಟ್ರೀಯತೆಯು ಮುಂದಿಡುವ ಬೇಡಿಕೆಗೆ ಯಾವುದೇ ಅಹವಾಲುಗಳ ಪಟ್ಟಿಯ ಒತ್ತಾಸೆ ಅಗತ್ಯವಿರುವುದಿಲ್ಲ. ಅದನ್ನು ಸಮರ್ಥಿಸಲು ಜನತೆಯ ಇಚ್ಛಾಶಕ್ತಿ ಸಾಕು.

ಆದರೆ ತಮ್ಮ ಹಕ್ಕು ಸಾಧನೆಗೆ ಒತ್ತಾಸೆಯಾಗಿ ಅಹವಾಲುಗಳನ್ನು ಮುಂದಿಡಬೇಕೆಂದರೆ ಅಂತಹ ಅಹವಾಲುಗಳು ತಮ್ಮಲ್ಲಿ ಸಾಕಷ್ಟು ಸಂಖ್ಯೆಯಲ್ಲಿವೆ ಎಂದು ಹೇಳುತ್ತಾರೆ ಮುಸಲ್ಮಾನರು. ಹಿಂದೂ ಬಹುಸಂಖ್ಯಾತರ ದಬ್ಬಾಳಿಕೆಯಿಂದ ಮುಸಲ್ಮಾನರನ್ನು ಉಳಿಸಲೆಂದಿರುವ ಸಂವಿಧಾನಾತ್ಮಕ ಸಂರಕ್ಷಣೆಗಳು ನಿರರ್ಥಕವಾಗಿವೆ ಎಂಬ ಒಂದೇ ಒಂದು ವಾಕ್ಯದಲ್ಲಿ ಆ ಅಹವಾಲುಗಳನ್ನು ಸಂಕ್ಷೇಪಿಸಬಹುದು.

ಸುಪ್ರಸಿದ್ಧ ಹದಿನಾಲ್ಕು ಅಂಶಗಳಲ್ಲಿ ಅಡಕವಾಗಿದ್ದ ಸಂರಕ್ಷಣೆಗಳ ಪಟ್ಟಿಯೊಂದನ್ನು ಮುಸಲ್ಮಾನರು ದುಂಡುಮೇಜು ಪರಿಷತ್ತಿನಲ್ಲಿ ಮಂಡಿಸಿದ್ದರು. ಆ ಗೋಷ್ಠಿಯಲ್ಲಿ ಭಾಗವಹಿಸಿದ್ದ ಹಿಂದೂ ಪ್ರತಿನಿಧಿಗಳು ಅದಕ್ಕೆ ಸಮ್ಮತಿಸಲಿಲ್ಲ. ಅಲ್ಲಿ ಒಂದು ಬಿಕ್ಕಟ್ಟು ಉಂಟಾಯಿತು. ಆಗ ಬ್ರಿಟಿಷ್ ಸರ್ಕಾರವು ಮಧ್ಯೆ ಪ್ರವೇಶಿಸಿ 'ಮತೀಯ ನಿರ್ಧಾರ' ಎಂದು ಹೇಳಲಾದ ಅಂಶಗಳೂ ದೊರೆತವು. ಈ ಮತೀಯ ಕೊಡುಗೆಗೆ ವಿರುದ್ಧವಾಗಿ ಹಿಂದೂಗಳಲ್ಲಿ ಸಾಕಷ್ಟು ಕಹಿಭಾವನೆ ಮೂಡಿತು. ಆದರೆ ಅದಕ್ಕೆ ಹಿಂದೂಗಳು ಸಾಮಾನ್ಯವಾಗಿ ತೋರಿಸಿದ ವಿರೋಧ ಕ್ರಿಯೆಯಲ್ಲಿ ಕಾಂಗ್ರೆಸ್ ಭಾಗಿಯಾಗಲಿಲ್ಲವಾದರೂ, ಆ ಮತೀಯ ಕೊಡುಗೆ ರಾಷ್ಟ್ರವಿರೋಧಿಯೆಂದು ವಿವರಿಸುವ ಹಾಗೂ ಮುಸಲ್ಮಾನರ ಸಹಮತದಿಂದ ಅದನ್ನು ಬದಲಾಯಿಸುವ ಹಕ್ಕನ್ನು ಅದು ಉಳಿಸಿಕೊಂಡಿತು. ಮುಸಲ್ಮಾನರ ಭಾವನೆಗಳಿಗೆ ನೋವುಂಟುಮಾಡದಂತೆ ಕಾಂಗ್ರೆಸ್ ಎಷ್ಟು ಎಚ್ಚರಿಕೆ ವಹಿಸಿತೆಂದರೆ, ಆ ಮತೀಯ ಕೊಡುಗೆಯನ್ನು ಖಂಡಿಸಿ ಕೇಂದ್ರ ಶಾಸನ ಸಭೆಯಲ್ಲಿ ನಿರ್ಣಯವನ್ನು ಮಂಡಿಸಿದಾಗ, ಅದಕ್ಕೆ ತನ್ನ ಸಮ್ಮತಿ ಕೊಡದಿದ್ದರೂ, ತಟಸ್ಥವಾಗಿ ಉಳಿಯಿತು. ಆ ನಿರ್ಣಯವನ್ನು ವಿರೋಧಿಸಲೂ ಇಲ್ಲ, ಬೆಂಬಲಿಸಲೂ ಇಲ್ಲ. ಕಾಂಗ್ರೆಸ್ಸಿನ ಈ ಮನೋವೃತ್ತಿಯನ್ನು ಒಂದು ಸ್ನೇಹಪರ ವರ್ತನೆಯೆಂದು ಮುಸ್ಲಿಮರು ಪರಿಗಣಿಸಿದ್ದು ಸಮರ್ಥನೀಯ.

ಹಿಂದೂಗಳೇ ಬಹುಸಂಖ್ಯೆಯಲ್ಲಿರುವ ಪ್ರಾಂತಗಳಲ್ಲಿ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ ಜಯಶಾಲಿಯಾದಾಗ ಮುಸಲ್ಮಾನರ ನೆಮ್ಮದಿ ಕಲಕಲಿಲ್ಲ. ಕಾಂಗ್ರೆಸ್ಸಿನಿಂದ ಭೀತರಾಗುವುದಕ್ಕೆ ಯಾವ ಕಾರಣವೂ ಇಲ್ಲ ಎಂದು ಅವರು ಭಾವಿಸಿದರು. ಇದರಿಂದಾಗಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಎರಡೂ

ಕೂಡಿ ಸಂವಿಧಾನ ರಚಿಸುವ ಸಾಧ್ಯತೆ ಹೆಚ್ಚಾಯಿತು. ಆದರೆ ಹಿಂದೂ ಪ್ರಾಂತಗಳಲ್ಲಿ ಎರಡು ವರ್ಷ ಮೂರು ತಿಂಗಳುಗಳ ಅವಧಿಯಲ್ಲಿ ನಡೆದ ಹಿಂದೂ ಆಡಳಿತವು, ಮುಸಲ್ಮಾನರಿಗೆ ಸಂಪೂರ್ಣ ಭ್ರಮನಿರಸನ ಮಾಡಿತಲ್ಲದೆ, ಅವರು ಕಾಂಗ್ರೆಸ್ಸಿನ ಅತ್ಯಂತ ಕಡುವಿರೋಧಿಗಳಾಗುವಂತೆ ಮಾಡಿತು. ೧೯೩೯ನೇ ಡಿಸೆಂಬರ್ ೨೨ರಂದು ಆಚರಿಸಲಾದ ವಿಮೋಚನಾ ದಿನ ಅವರ ಅಸಮಾಧಾನದ ತೀವ್ರತೆಯನ್ನು ತೋರಿಸುತ್ತದೆ. ಇನ್ನು ಹೆಚ್ಚು ಕೆಟ್ಟದ್ದೆಂದರೆ, ಅವರ ಕಹಿಭಾವ ಕೇವಲ ಕಾಂಗ್ರೆಸ್ಸಿಗೇ ಸೀಮಿತವಾಗಲಿಲ್ಲವೆಂಬುದು. ಯಾರು ಸ್ವರಾಜ್ಯ ಕೇಳಿಕೆಗಾಗಿ ದುಂಡು ಮೇಜಿನ ಪರಿಷತ್ತಿನಲ್ಲಿ ಜೊತೆಗೂಡಿದ್ದರೋ ಅಂತಹ ಮುಸಲ್ಮಾನರೇ ಸ್ವರಾಜ್ಯದ ಕಡುವಿರೋಧಿಗಳಾದರು.

ಮುಸಲ್ಮಾನರಿಗೆ ಅಷ್ಟು ಜಿಗುಪ್ಸೆಯಾಗುವಂತೆ ಕಾಂಗ್ರೆಸ್ ಮಾಡಿದ ಕಾರ್ಯವಾವುದು? ಕಾಂಗ್ರೆಸ್ ಆಡಳಿತದಲ್ಲಿ ವಾಸ್ತವವಾಗಿ ಮುಸಲ್ಮಾನರ ಮೇಲೆ ದಬ್ಬಾಳಿಕೆ ನಡೆಯಿತೆಂದೂ ಮತ್ತು ಅವರ ದಮನಕಾರ್ಯ ನಡೆಯಿತೆಂದೂ ಮುಸ್ಲಿಂ ಲೀಗ್ ಆರೋಪಿಸಿತು. ಆ ವಿಷಯಕ್ಕೆ ಸಂಬಂಧಿಸಿದಂತೆ ಮುಸ್ಲಿಂ ಲೀಗ್ ನೇಮಿಸಿದ ಎರಡು ಸಮಿತಿಗಳು ಅನ್ವೇಷಣೆ ನಡೆಸಿ, ವರದಿ ಸಲ್ಲಿಸಿದವು ಎಂದು ಹೇಳಲಾಗಿದೆ. ಆದರೆ ಪಕ್ಷಪಾತರಹಿತ ನ್ಯಾಯಮಂಡಳಿಗಳಿಂದ ಪರಿಶೀಲಿಸಬೇಕಾದ ಅಂತಹ ವರದಿಗಳಿಗೆ ಮಹತ್ವ ಕೊಡುವ ಅಗತ್ಯವಿಲ್ಲದಿದ್ದರೂ ಇಲ್ಲಿ ಗಮನಿಸಬೇಕಾದ ಮಹತ್ವಪೂರ್ಣ ಅಂಶವೆಂದರೆ, ಘರ್ಷಣೆಗೆ ಕಾರಣವಾದ ಇನ್ನೂ ಎರಡು ವಿಷಯಗಳಿರುವುದು ನಿಸ್ಸಂಶಯ ಎಂಬುದು. ಅವು (೧) ಮುಸ್ಲಿಂ ಲೀಗ್ ಮುಸಲ್ಮಾನರ ಏಕೈಕ ಪ್ರಾತಿನಿಧಿಕ ಪಕ್ಷವೆಂಬುದನ್ನು ಮಾನ್ಯ ಮಾಡಲು ಕಾಂಗ್ರೆಸ್ ನಿರಾಕರಿಸಿದ್ದು, ಮತ್ತು (೨) ಕಾಂಗ್ರೆಸ್ ಪ್ರಾಂತಗಳಲ್ಲಿ ಸಂಮಿಶ್ರ ಮಂತ್ರಿಮಂಡಲಗಳನ್ನು ರಚಿಸಲು ಕಾಂಗ್ರೆಸ್ ನಿರಾಕರಿಸಿದ್ದು.

ಮೊದಲನೆಯ ಪ್ರಶ್ನೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಎರಡೂ ಕಠಿಣ ಧೋರಣೆ ತಾಳಿದ್ದವು. ಅಹರಾರ್ಸ್, ರಾಷ್ಟ್ರೀಯ ಮುಸ್ಲಿಮ್ಸ್ ಮತ್ತು ಜಾಮಿಯತ್ ಉಲ್ ಉಲೇಮಾಗಳಂತಹ ಹಲವು ಇತರ ಮುಸಲ್ಮಾನ ರಾಜಕೀಯ ಸಂಘಟನೆಗಳಲ್ಲಿ ಮುಸ್ಲಿಂ ಲೀಗೂ ಒಂದು ಎಂದು ಒಪ್ಪಿಕೊಳ್ಳಲು ಕಾಂಗ್ರೆಸ್ ಸಿದ್ಧವಿದ್ದಿತು. ಆದರೆ ಮುಸ್ಲಿಂ ಲೀಗ್ ಒಂದೇ ಇಡೀ ಮುಸಲ್ಮಾನ ಸಮುದಾಯದ ಪ್ರತಿನಿಧಿಯೆಂದು ಕಾಂಗ್ರೆಸ್ ಒಪ್ಪಿಕೊಳ್ಳುವುದಿಲ್ಲ. ಇದಕ್ಕೆ ತದ್ವಿರುದ್ಧವಾಗಿ, ಭಾರತದ ಮುಸಲ್ಮಾನರ ಏಕೈಕ ಪ್ರತಿನಿಧಿಯೆಂದು ತನ್ನನ್ನು ಕಾಂಗ್ರೆಸ್ ಒಪ್ಪಿಕೊಳ್ಳುವವರೆಗೂ ಯಾವುದೇ ಮಾತುಕತೆಯಲ್ಲಿ ತಾನು ಭಾಗವಹಿಸಲು ಮುಸ್ಲಿಂ ಲೀಗ್ ಸಿದ್ಧವಿರಲಿಲ್ಲ. ಲೀಗಿನ ಹಕ್ಕು ಸಾಧನೆಯನ್ನು ವಿಪರೀತವೆಂದು ಹಿಂದೂಗಳು ಕಳಂಕ ಹಚ್ಚಿದ್ದು ಮಾತ್ರವಲ್ಲದೆ, ಅದನ್ನು ಅವಹೇಳನ ಮಾಡಲು ಯತ್ನಿಸಿದರು. ರಾಷ್ಟ್ರಗಳ ನಡುವೆ ಹೇಗೆ ಒಪ್ಪಂದಗಳು ಏರ್ಪಡುತ್ತವೆ ಎಂಬುದನ್ನು ತಾಳ್ಮೆಯಿಂದ ಯೋಚಿಸಿದಾಗ ಮಾತ್ರ ಹಿಂದೂಗಳಿಗೆ ತಮ್ಮ ದಡ್ಡತನದ ಅರಿವಾಗುತ್ತದೆ ಎಂದು ಮುಸಲ್ಮಾನರು ಹೇಳಬಹುದು. ಒಂದು ರಾಷ್ಟ್ರವು ಮತ್ತೊಂದು ರಾಷ್ಟ್ರದೊಂದಿಗೆ ಒಪ್ಪಂದ ಮಾಡಿಕೊಳ್ಳಲು ಮುಂದಾದಾಗ, ಎರಡನೇ ರಾಷ್ಟ್ರದ ಸರ್ಕಾರವು ಆ ರಾಷ್ಟ್ರವನ್ನು ಸಂಪೂರ್ಣವಾಗಿ ಪ್ರತಿನಿಧಿಸುತ್ತದೆ ಎಂದು ಮಾನ್ಯ ಮಾಡುತ್ತದೆ ಎಂದೂ ವಾದಿಸಬಹುದು. ಯಾವುದೇ ದೇಶದಲ್ಲಿ ತತ್ಕಾಲೀನ ಸರಕಾರವು ಇಡೀ ಜನಸಮುದಾಯವನ್ನು ಪ್ರತಿನಿಧಿಸುವುದಿಲ್ಲ. ಎಲ್ಲಾ ದೇಶಗಳಲ್ಲೂ ಅದು ಬಹುಸಂಖ್ಯೆಯನ್ನು ಪ್ರತಿನಿಧಿಸುತ್ತದೆ. ಒಂದು ಜನತೆಯನ್ನು ಪ್ರತಿನಿಧಿಸುತ್ತಿರುವ ಸರಕಾರಗಳು, ಅವರೆಲ್ಲರನ್ನೂ ಪ್ರತಿನಿಧಿಸದಿದ್ದ ಮಾತ್ರಕ್ಕೆ, ತಮ್ಮ ವಿವಾದಗಳನ್ನು ಪರಿಹಾರ ಮಾಡಿಕೊಳ್ಳಲು ಸಂಬಂಧಪಟ್ಟ ರಾಷ್ಟ್ರಗಳು ನಿರಾಕರಿಸುವುದಿಲ್ಲ. ಪ್ರತಿಯೊಂದು ಸರಕಾರವೂ ತನ್ನ ಜನತೆಯಲ್ಲಿ ಬಹುಸಂಖ್ಯೆಯನ್ನು ಪ್ರತಿನಿಧಿಸಿದರೆ ಸಾಕು. ಈ ಸಮಸ್ಯೆಗೆ ಸಂಬಂಧಿಸಿದಂತೆ ಕಾಂಗ್ರೆಸ್, ಲೀಗ್‌ಗಳ ವಿವಾದಕ್ಕೂ ಈ ಹೋಲಿಕೆ ಅನ್ವಯಿಸಬೇಕೆಂದು ಮುಸಲ್ಮಾನರು

ವಾದಿಸಬಹುದು. ಇಡೀ ಮುಸಲ್ಮಾನ ಸಮುದಾಯವನ್ನು ಮುಸ್ಲಿಂ ಲೀಗ್ ಪ್ರತಿನಿಧಿಸದಿದ್ದರೂ, ಅದು ಅವರ ಬಹುಸಂಖ್ಯೆಯನ್ನು ಪ್ರತಿನಿಧಿಸುತ್ತದೆ. ಆದ್ದರಿಂದ ಹಿಂದೂ-ಮುಸಲ್ಮಾನ ಸಮಸ್ಯೆಯ ಪರಿಹಾರವನ್ನು ಕಂಡುಕೊಳ್ಳುವಲ್ಲಿ, ಅದರೊಡನೆ ವ್ಯವಹರಿಸಲು ಕಾಂಗ್ರೆಸ್ಸಿಗೆ ಯಾವುದೇ ಹಿಂಜರಿಕೆ ಇರಕೂಡದು. ಯಾವ ದೇಶದಲ್ಲಿ, ತಾನೇ ಸರ್ಕಾರವೆಂದು ಹೇಳುವಂತಹ ಒಂದಕ್ಕಿಂತ ಹೆಚ್ಚು ವ್ಯವಸ್ಥೆಗಳಿವೆಯೋ ಅಂತಹ ದೇಶದ ಸರ್ಕಾರವನ್ನು ಮಾನ್ಯ ಮಾಡುವುದು ಬಿಡುವುದು ಮತ್ತೊಂದು ದೇಶದ ಸರ್ಕಾರಕ್ಕೆ ಬಿಟ್ಟ ವಿಷಯ ಸರಿ. ಇದೇ ರೀತಿಯಲ್ಲಿ ಕಾಂಗ್ರೆಸ್, ಲೀಗನ್ನು ಮಾನ್ಯ ಮಾಡದಿರಬಹುದು. ಹಾಗಿದ್ದರೂ, ನ್ಯಾಷನಲ್ ಮುಸ್ಲಿಮರನ್ನಾಗಲೀ ಅಥವಾ ಅಹ್‌ರಾರ್‌ಗಳನ್ನಾಗಲೀ ಅಥವಾ ಜಾಮಿಯತ್ ಉಲ್ ಉಲೇಮಾಗಳನ್ನಾಗಲೀ ಮಾನ್ಯ ಮಾಡಿ, ಎರಡು ಸಮುದಾಯಗಳ ವಿವಾದ ಪರಿಹಾರದ ನಿಯಮಗಳನ್ನು ನಿಗದಿಮಾಡಬೇಕು. ಲೀಗ್‌ನೊಂದಿಗೋ ಅಥವಾ ಇತರ ಮುಸಲ್ಮಾನ ಪಕ್ಷಗಳೊಂದಿಗೋ ಇವುಗಳಲ್ಲಿ ಯಾವುದರೊಂದಿಗೆ ಒಪ್ಪಂದ ಮಾಡಿಕೊಂಡರೆ, ಆ ಒಪ್ಪಂದವನ್ನು ಮುಸಲ್ಮಾನರು ನಿರಾಕರಿಸುವ ಸಾಧ್ಯತೆ ಎಲ್ಲಿ ಹೆಚ್ಚಿದೆ ಎಂಬ ಪೂರ್ಣ ಅರಿವಿನಿಂದ ಕಾಂಗ್ರೆಸ್ ಕಾರ್ಯನಿರತವಾಗಬೇಕು. ಒಂದು ಅಥವಾ ಮತ್ತೊಂದು ಪಕ್ಷದೊಂದಿಗೆ ಕಾಂಗ್ರೆಸ್ ವ್ಯವಹರಿಸಲೇಬೇಕು. ಯಾವುದರೊಂದಿಗೂ ವ್ಯವಹರಿಸದಿರುವುದು ಅವಿವೇಕತನ ಮಾತ್ರವಲ್ಲ, ಅದು ಕಿಡಿಗೇಡಿತನವೂ ಹೌದು. ಕಾಂಗ್ರೆಸ್ಸಿನ ಈ ಮನೋಭಾವವು ಮುಸಲ್ಮಾನರಲ್ಲಿ ಜಿಗುಪ್ಸೆಯುಂಟುಮಾಡುವುದು ಮಾತ್ರವಲ್ಲದೆ, ಅವರನ್ನು ಕೆರಳಿಸುತ್ತದೆ. ಕಾಂಗ್ರೆಸ್ಸಿನ ಈ ಧೋರಣೆಯು, ತಮ್ಮಲ್ಲಿ ಗುಂಪುಗಳನ್ನು ಬೆಳೆಸುವ ಹವಣಿಕೆ ಹಾಗೂ ತಮ್ಮ ಶ್ರೇಣಿಗಳಲ್ಲಿ ಗೊಂದಲವುಂಟುಮಾಡಿ, ತಮ್ಮ ಹೋರಾಟವನ್ನು ದುರ್ಬಲಗೊಳಿಸುವ ಹಂಚಿಕೆ ಎಂದು ಮುಸಲ್ಮಾನರು ಸರಿಯಾಗಿ ಅರ್ಥೈಸುತ್ತಾರೆ.

ಎರಡನೆಯ ವಿವಾದಾಂಶಕ್ಕೆ ಸಂಬಂಧಿಸಿದಂತೆ, ಶಾಸನಸಭೆಯಲ್ಲಿರುವ ಮುಸಲ್ಮಾನರ ವಿಶ್ವಾಸಕ್ಕೆ ಪಾತ್ರರಾದವರನ್ನು ಮುಸಲ್ಮಾನ ಮಂತ್ರಿಗಳಾಗಿ, ಮಂತ್ರಿಮಂಡಲದಲ್ಲಿ ಸೇರಿಸಿಕೊಳ್ಳಬೇಕೆಂಬುದು ಮುಸಲ್ಮಾನರ ಕೇಳಿಕೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ತಮ್ಮ ಈ ಕೇಳಿಕೆ ಪೂರ್ಣಗೊಳ್ಳುತ್ತದೆ ಎಂದು ಅವರು ನಿರೀಕ್ಷಿಸಿದ್ದರು. ಆದರೆ ಅವರು ತೀವ್ರವಾಗಿ ಹತಾಶರಾದರು. ಈ ಕೇಳಿಕೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಕಾನೂನಿನ ಮನೋವೃತ್ತಿ ತಳೆಯಿತು. ಮುಸಲ್ಮಾನ ಸದಸ್ಯರು ತಮ್ಮ ಪಕ್ಷಗಳಿಗೆ ರಾಜೀನಾಮೆ ಕೊಟ್ಟು, ಕಾಂಗ್ರೆಸ್ ಸೇರಿ ಕಾಂಗ್ರೆಸ್ ಕರಾರಿಗೆ ಸಹಿ ಮಾಡಿದರೆ, ಅವರನ್ನು ತನ್ನ ಮಂತ್ರಿಮಂಡಲಗಳಲ್ಲಿ ಸೇರಿಸಿಕೊಳ್ಳಲು ಕಾಂಗ್ರೆಸ್ ಒಪ್ಪಿಕೊಂಡಿತು. ಆದರೆ ಮುಸಲ್ಮಾನರು ಮೂರು ಕಾರಣಗಳಿಂದ ಇದಕ್ಕೆ ತಮ್ಮ ತೀವ್ರ ಅಸಮಾಧಾನ ತೋರಿಸಿದರು. ಮೊದಲನೆಯದಾಗಿ ಅದನ್ನು ನಂಬಿಕೆ ದ್ರೋಹವೆಂಬುದಾಗಿ ಅವರು ಪರಿಗಣಿಸಿದರು. ತಮ್ಮ ಈ ಬೇಡಿಕೆ ಸಂವಿಧಾನದ ಆಶಯಕ್ಕೆ ಅನುಗುಣವಾಗಿದೆ ಎಂಬುದು ಮುಸಲ್ಮಾನರ ನಿಲುವು. ಮಂತ್ರಿಮಂಡಲಗಳಲ್ಲಿ ಅಲ್ಪಸಂಖ್ಯಾತ ಕೋಮಿನವರನನ್ನೂ ಪ್ರತಿನಿಧಿಗಳನ್ನೂ ಸೇರಿಸಿಕೊಳ್ಳಬೇಕೆಂದು ದುಂಡುಮೇಜು ಪರಿಷತ್ತಿನಲ್ಲಿ ಒಪ್ಪಿಕೊಳ್ಳಲಾಗಿತ್ತು. ಅದನ್ನು ಅನುಷ್ಠಾನಕ್ಕೆ ತರಲು ಕಾನೂನಿನಲ್ಲಿಯೇ ಅವಕಾಶ ಮಾಡಿಕೊಡಬೇಕೆಂದು ಅಲ್ಪಸಂಖ್ಯಾತರ ಒತ್ತಾಯವಾಗಿತ್ತು. ಆ ಕಡೆ ಹಿಂದೂಗಳು, ಸಂಪ್ರದಾಯಕ್ಕನುಗುಣವಾಗಿ ಈ ವಿಷಯವನ್ನು ಕ್ರಮಪಡಿಸಲು ಬಿಡಬೇಕು ಎಂದು ಇಚ್ಛೆ ಪಟ್ಟರು. ಮಧ್ಯಮ ಮಾರ್ಗವೊಂದನ್ನು ಕಂಡುಕೊಳ್ಳಲಾಯಿತು. ಅದೆಂದರೆ ಪ್ರಾಂತೀಯ ಗವರ್ನರುಗಳು ಮಂತ್ರಿ ಮಂಡಲಗಳನ್ನು ರಚಿಸುವಾಗ ನಡವಳಿಕೆಗಳನ್ನು ಜಾರಿಗೆ ತರಬೇಕೆಂಬ ಷರತ್ತನ್ನು ಸೇರಿಸಬೇಕೆಂಬುದು. ಈ ಷರತ್ತನ್ನು ಕಾನೂನಿನ ಅಂಗವಾಗಿ ಸೇರಿಸಬೇಕೆಂದು ಮುಸಲ್ಮಾನರು ಒತ್ತಾಯಿಸಲಿಲ್ಲ. ಏಕೆಂದರೆ,

ಅವರು ಹಿಂದೂಗಳ ವಿಶ್ವಾಸವನ್ನು ಅವಲಂಬಿಸಿದ್ದರು. ತಮ್ಮ ಬಗ್ಗೆ ಅವರ ಮನೋಭಾವವು ಕೇವಲ ಒಳ್ಳೆಯದಾಗಿರುವುದು ಮಾತ್ರವಲ್ಲದೆ, ಸಹಾನುಭೂತಿಪರವೂ ಆಗಿರುತ್ತದೆಂದು ಯಾವ ಪಕ್ಷದ ಮೇಲೆ ಮುಸಲ್ಮಾನರು ನಂಬಿಕೆಯಿಟ್ಟಿದ್ದರೋ ಅಂತಹ ಪಕ್ಷವೇ ಒಪ್ಪಂದವನ್ನು ಮುರಿಯಿತು.

ಎರಡನೆಯದಾಗಿ, ನಡವಳಿಕೆಯ ವ್ಯಾಪ್ತಿಯ ಬಗ್ಗೆ ಕಾಂಗ್ರೆಸ್ಸಿನ ಅಭಿಪ್ರಾಯವು ಒಂದು ವಿಕೃತಿ ಎಂದು ಮುಸಲ್ಮಾನರು ಭಾವಿಸಿದರು. ಅವರು ಸೂಚನಾಪತ್ರದಲ್ಲಿನ ಕಂಡಿಕೆಯ ಪಠ್ಯವನ್ನು ಅವಲಂಬಿಸುತ್ತಾರೆ.* ಅದರಲ್ಲಿರುವ 'ಅಲ್ಪಸಂಖ್ಯಾತ ಕೋಮಿನ ಸದಸ್ಯ' ಎಂಬ ಪದಗಳಿಗೆ ಒಂದೇ ಒಂದು ಅರ್ಥವಿರಲು ಸಾಧ್ಯ ಅದೆಂದರೆ, ಆ ಕೋಮಿನ ವಿಶ್ವಾಸ ಪಡೆದ ವ್ಯಕ್ತಿ ಎಂಬುದು ಎಂದು ಮುಸಲ್ಮಾನರು ವಾದಿಸುತ್ತಾರೆ. ಕಾಂಗ್ರೆಸ್ ತೆಗೆದುಕೊಂಡ ನಿಲವು ಈ ಕಲಂನ ಅರ್ಥದ ತದ್ವಿರುದ್ಧವಾಗಿದೆಯಲ್ಲದೆ, ದೇಶದ ಇತರ ಎಲ್ಲಾ ರಾಜಕೀಯ ಪಕ್ಷಗಳನ್ನು ಒಡೆಯುವ ಮತ್ತು ಕಾಂಗ್ರೆಸ್ಸನ್ನು ದೇಶದಲ್ಲಿ ಏಕೈಕ ರಾಜಕೀಯ ಪಕ್ಷವನ್ನಾಗಿ ಮಾಡುವ ಸಂಚು. ಕಾಂಗ್ರೆಸ್ಸಿನ ಕರಾರಿಗೆ ಸಹಿ ಮಾಡಬೇಕೆಂಬ ಕೇಳಿಕೆಗೆ ಮತ್ತಾವ ಆಶಯವೂ ಇರಲಾರದು. ಈ ರೀತಿಯ ಒಂದು ಏಕಸ್ವಾಮ್ಯ ರಾಜ್ಯವನ್ನು ಸ್ಥಾಪಿಸುವ ಪ್ರಯತ್ನವನ್ನು ಹಿಂದೂಗಳು ಸ್ವಾಗತಿಸಬಹುದು. ಆದರೆ ಮುಸಲ್ಮಾನರು ಒಂದು ಸ್ವತಂತ್ರ ಜನತೆಯೆಂಬುದಕ್ಕೆ ರಾಜಕೀಯ ಮರಣವೆಂಬುದೇ ಇದರ ಅರ್ಥ.

ನಡವಳಿಕೆಯನ್ನು ಅನುಷ್ಠಾನಕ್ಕೆ ತರಬೇಕಾದುದು ರಾಜ್ಯಪಾಲರ ಅವಶ್ಯಕ ಕರ್ತವ್ಯವೆಂಬ ಒತ್ತಾಯಕ್ಕೆ ಮಣಿಯದೆ, ಆ ವಿಷಯದಲ್ಲಿ ಕಾರ್ಯೋನ್ಮುಖರಾಗಲು ಅವರು ನಿರಾಕರಿಸಿದಾಗ ಮುಸಲ್ಮಾನರ ಅಸಂತುಷ್ಟಿ ಸಾಕಷ್ಟು ವಿಕೋಪಕ್ಕೆ ಹೋಯಿತು. ಸ್ಥಿರ ಸರ್ಕಾರವನ್ನು ಸ್ಥಾಪಿಸಲು ಸಾಧ್ಯವಿರುವ ಏಕೈಕ ಪಕ್ಷವೆಂದರೆ ಕಾಂಗ್ರೆಸ್ ಎಂಬ ವಿಚಾರಕ್ಕೆ ಕಟ್ಟುಬಿದ್ದು, ತಮ್ಮ ಅಸಹಾಯಕತನದಿಂದ ನಡೆವಳಿಕೆಯನ್ನು ಅನುಷ್ಠಾನಕ್ಕೆ ತರಲು ರಾಜ್ಯಪಾಲರುಗಳು ನಿರಾಕರಿಸಿದರು. ಸಂವಿಧಾನಕ್ಕೆ ಅನುಗುಣವಾಗಿ ಸಾಧ್ಯವಿರುವ ಸರ್ಕಾರವೆಂದರೆ ಕಾಂಗ್ರೆಸ್ ಸರ್ಕಾರವೊಂದೆ ಮತ್ತು ಸಂವಿಧಾನವನ್ನು ಅಮಾನತುಗೊಳಿಸದ ಹೊರತು ಆ ಸರ್ಕಾರಕ್ಕೆ ಮತ್ತೊಂದು ಪರ್ಯಾಯವಿಲ್ಲ ಎಂಬ ವಿಚಾರದಿಂದ ಕೆಲವು ರಾಜ್ಯಪಾಲರುಗಳು ಮುಸಲ್ಮಾನರಿಗೆ ಸಂಪುಟದಲ್ಲಿ ಪ್ರಾತಿನಿಧ್ಯ ಕೊಡಲು ನಿರಾಕರಿಸಿದರೆ, ಉಳಿದವರು ಕಾಂಗ್ರೆಸ್ಸಿನ ಕ್ರಿಯಾಶೀಲ ಬೆಂಬಲಿಗರಾದ್ದರಿಂದ ನಿರಾಕರಿಸಿದರಲ್ಲದೆ ಕಾಂಗ್ರೆಸ್ಸನ್ನು ಹೊಗಳುವುದರ ಮೂಲಕ ಹಾಗೂ ಕಾಂಗ್ರೆಸ್ ಪಕ್ಷದ ಅಧಿಕೃತ ಉಡುಪಾದ ಖಾದಿಯನ್ನು ಧರಿಸುವುದರ ಮೂಲಕ ತಮ್ಮ ಪಕ್ಷಪಾತವನ್ನೂ ತೋರಿಸಿದರು. ಕಾರಣಗಳು ಯಾವುದೇ ಇರಲಿ, ತಮ್ಮ ಉಳಿವಿಗಾಗಿದ್ದ ಒಂದು ಪ್ರಮುಖ ಸಂರಕ್ಷಣೆಯು ತಮ್ಮನ್ನು ಉಳಿಸಲು ವಿಫಲವಾಯಿತೆಂಬುದನ್ನು ಮುಸಲ್ಮಾನರು ಮನಗಂಡರು.

ಮುಸಲ್ಮಾನರ ಮೇಲ್ಕಂಡ ಆಪಾದನೆಗಳಿಗೆ ಕಾಂಗ್ರೆಸ್ ಕೊಟ್ಟ ಉತ್ತರ ಇಬ್ಬಗೆಯದಾಗಿತ್ತು. ಮಂತ್ರಿಮಂಡಲವೊಂದರ ಸಾಮೂಹಿಕ ಜವಾಬ್ದಾರಿಗೆ ಸಮಿಶ್ರ ಸರ್ಕಾರಗಳು ಸಮರ್ಪಕವಲ್ಲ ಎಂಬುದು

* "ತನ್ನ ಮಂತ್ರಿಮಂಡಲಕ್ಕೆ ನೇಮಿಸಿಕೊಳ್ಳುವಾಗ ರಾಜ್ಯಪಾಲನು, ಈ ಕೆಳಗಿನ ರೀತಿಯಲ್ಲಿ ತನ್ನ ಮಂತ್ರಿಗಳನ್ನು ಆರಿಸಿಕೊಳ್ಳಲು ತನ್ನ ಅತ್ಯುತ್ತಮ ಪ್ರಯತ್ನಗಳನ್ನು ನಡೆಸಬೇಕು. ಹಾಗೆಂದರೆ, ತನ್ನ ನಿರ್ಣಯದಲ್ಲಿ ಯಾವ ವ್ಯಕ್ತಿಯು, ಸಂಸತ್ತಿನಲ್ಲಿ ಒಂದು ಸ್ಥಿರ ಬಹುಮತವನ್ನು ಆದೇಶಿಸಬಲ್ಲನೋ ಅಂತಹ ವ್ಯಕ್ತಿಯೊಡನೆ ಸಮಾಲೋಚಿಸಿ ನೇಮಕ ಮಾಡಬೇಕು. ಅಂತಹ ವ್ಯಕ್ತಿಗಳೆಂದರೆ ಎಷ್ಟು ವ್ಯಾವಹಾರಿಕವಾಗಿ ಎಷ್ಟು ಸಾಧ್ಯವೋ ಅಷ್ಟು ಪ್ರಮುಖ ಅಲ್ಪಸಂಖ್ಯಾತ ಸಮುದಾಯಗಳ ಸದಸ್ಯರನ್ನು ಯಾರು ಸಂಸತ್ತಿನ ವಿಶ್ವಾಸವನ್ನು ಸಾಮೂಹಿಕವಾಗಿ ಗಳಿಸಿಕೊಳ್ಳಬಲ್ಲಂತಹ ಉತ್ತಮ ಸ್ಥಾನಮಾನದಲ್ಲಿರುತ್ತಾರೋ ಅವರು ಹಾಗೆ ಮಾಡುವಾಗ ಮಂತ್ರಿಗಳ ನಡುವೆ ಒಂದು ಸಾಮೂಹಿಕ ಹೊಣೆಗಾರಿಕೆಯನ್ನು ಬೆಳೆಸುವ ಅಗತ್ಯವನ್ನು ಆತ ಸದಾ ನೆನಪಿನಲ್ಲಿಟ್ಟಿರ ಬೇಕಾಗುತ್ತದೆ."

ಮೊದಲನೆಯ ಉತ್ತರ. ಇದನ್ನು ಒಂದು ಪ್ರಾಮಾಣಿಕವಾದವೆಂದು ಸ್ವೀಕರಿಸಲು ಮುಸಲ್ಮಾನರು ನಿರಾಕರಿಸುತ್ತಾರೆ. ಸಂಮಿಶ್ರ ಸರ್ಕಾರವಿರಬಾರದೆಂಬುದನ್ನು ತಮ್ಮ ಸರ್ಕಾರಿ ವ್ಯವಸ್ಥೆಯಲ್ಲಿ ಒಂದು ನಿಯಮವನ್ನಾಗಿ ಮಾಡಿದವರಲ್ಲಿ ಬ್ರಿಟಿಷರೇ ಮೊದಲಿಗರು ಮತ್ತು ಏಕೈಕ ಜನತೆ. ಆದರೆ ಇತ್ತೀಚೆಗೆ ಅಲ್ಲಿಯೂ ಅದನ್ನು ಕೈಬಿಡಲಾಗಿದೆ. ಈ ವಿಷಯದ ಬಗ್ಗೆ ಚರ್ಚಿಸಿ,* ಬ್ರಿಟಿಷ್ ಸಂಸತ್ತು, ಒಂದು ಕಾಲದಲ್ಲಿ ತಿಳಿದಿದ್ದಂತೆ ಆ ನಿಯಮ ಅಷ್ಟೊಂದು ಪವಿತ್ರವಾದುದೇನೂ ಅಲ್ಲ ಮತ್ತು ಆ ನಿಯಮದಿಂದ ವಿಚಲಿತವಾಗುವುದರಿಂದ ಸರ್ಕಾರಿ ಯಂತ್ರದ ಕಾರ್ಯದಕ್ಷತೆ ಮತ್ತು ಸರಾಗ ಕಾರ್ಯನಿರ್ವಹಣೆಗಳಿಗೆ ಅಗತ್ಯವಾಗಿ ಧಕ್ಕೆಯಾಗುವ ಅವಶ್ಯಕತೆ ಇಲ್ಲ ಎಂದು ನಿರ್ಣಯಕ್ಕೆ ಬಂದಿತು. ಎರಡನೆಯದಾಗಿ, ಕಾಂಗ್ರೆಸ್ ಸರ್ಕಾರದಲ್ಲಿ ಸಾಮೂಹಿಕ ಜವಾಬ್ದಾರಿಯಿರಲಿಲ್ಲ ಎಂಬುದು ವಾಸ್ತವಸಂಗತಿ. ಅದು ಆಡಳಿತ ವಿಭಾಗಗಳ ಒಂದು ಸರ್ಕಾರ. ಪ್ರತಿಯೊಬ್ಬ ಮಂತ್ರಿಯೂ ಮತ್ತೊಬ್ಬನಿಂದ ಸ್ವತಂತ್ರ ಅಲ್ಲದೆ, ಪ್ರಧಾನಿ ಕೇವಲ ಮಂತ್ರಿಯಿದ್ದಂತೆ. ಸಾಮೂಹಿಕ ಹೊಣೆಗಾರಿಕೆಯ ಮೇಲೆ ಕಾಂಗ್ರೆಸ್ ಮಾತನಾಡುವುದೆಂದರೆ ವಾಸ್ತವವಾಗಿ ಉದ್ಧಟತನ. ಅದರ ಮೇಲ್ಕಂಡ ವಾದವು ಇನ್ನೂ ಅಪ್ರಮಾಣಿಕವಾದುದು. ಏಕೆಂದರೆ, ಕಾಂಗ್ರೆಸ್ ಅಲ್ಪಸಂಖ್ಯಾತವಿರುವ ಪ್ರಾಂತಗಳಲ್ಲಿ, ಸಮಿಶ್ರ ಸರ್ಕಾರಗಳನ್ನು ರಚಿಸಿದ್ದರೆ, ಇತರ ಪಕ್ಷಗಳಿಂದ ಬಂದ ಸದಸ್ಯರನ್ನು ಮಂತ್ರಿಮಂಡಲಗಳಿಗೆ ಸೇರಿಸಿಕೊಳ್ಳುವಾಗ ಕಾಂಗ್ರೆಸ್ಸಿನ ಕರಾರಿಗೆ ಸಹಿ ಹಾಕುವಂತೆ ಅವರನ್ನು ಕೇಳಿಲ್ಲ. "ಸಮ್ಮಿಶ್ರ ಸರ್ಕಾರವು ದೋಷಯುಕ್ತವಾದದ್ದಾದರೆ, ಅದು ಒಂದು ಸ್ಥಳದಲ್ಲಿ ಹೇಗೆ ಒಳ್ಳೆಯದೆನಿಸುತ್ತದೆ, ಮತ್ತೊಂದು ಸ್ಥಳದಲ್ಲಿ ಹೇಗೆ ದೋಷಯುಕ್ತವೆನಿಸುತ್ತದೆ" ಎಂದು ಕೇಳುವ ಅಧಿಕಾರ ಮುಸಲ್ಮಾನರಿಗಿದೆ.

ಬಹುಸಂಖ್ಯಾತ ಮುಸಲ್ಮಾನರ ನಂಬಿಕೆಗೆ ಪಾತ್ರರಾಗದಿರುವ ಮುಸಲ್ಮಾನ ಮಂತ್ರಿಗಳನ್ನು ತಮ್ಮ ಮಂತ್ರಿಮಂಡಲದಲ್ಲಿ ತೆಗೆದುಕೊಂಡಿದ್ದರೂ ಕೂಡ, ಮುಸಲ್ಮಾನರ ಹಿತಾಸಕ್ತಿಗಳನ್ನು ರಕ್ಷಿಸುವಲ್ಲಿ ಅವರು ವಿಫಲರಾಗಿಲ್ಲ ಎಂಬುದು ಕಾಂಗ್ರೆಸ್ಸಿನ ಎರಡನೇ ಉತ್ತರ. ವಾಸ್ತವವಾಗಿ, ಮುಸಲ್ಮಾನರ ಹಿತಾಸಕ್ತಿಗಳ ಈಡೇರಿಕೆಗೆ ಬೇಕಾದ ಎಲ್ಲವನ್ನೂ ಅವರು ಮಾಡಿದ್ದಾರೆ. ಸರ್ಕಾರದ ಬಗ್ಗೆ ಪೋಪ್ ಹೊಂದಿದ್ದ ಅಭಿಪ್ರಾಯವನ್ನು ಇದು ನಿಸ್ಸಂದೇಹವಾಗಿ ಅವಲಂಬಿಸಿದೆ. ಆತನ ಹೇಳಿಕೆ ಹೀಗಿದೆ:

> **"ವಿವಿಧ ರೀತಿಯ ಸರ್ಕಾರಗಳಿಗೆ ತಿಳಿಗೇಡಿಗಳು ವಾದಿಸಲಿ, ಯಾವುದು ಅತ್ಯಂತ ಉತ್ತಮವಾಗಿ ಆಳುತ್ತದೆಯೋ ಅದೇ ಅತ್ಯುತ್ತಮವಾದದ್ದು."**

ಈ ರೀತಿ ಉತ್ತರ ಕೊಡುವಲ್ಲಿ ಮುಸಲ್ಮಾನರು ಮತ್ತು ಇತರೆ ಅಲ್ಪಸಂಖ್ಯಾತರ ಮುಖ್ಯ ಉದ್ದೇಶ ಏನೆಂಬುದನ್ನು ಕಾಂಗ್ರೆಸ್ ವರಿಷ್ಠರು ತಪ್ಪಾಗಿ ಗ್ರಹಿಸಿದಂತೆ ಕಾಣುತ್ತದೆ. ಮುಸಲ್ಮಾನರು ಮತ್ತು ಇತರ ಅಲ್ಪಸಂಖ್ಯಾತ ಕೋಮಿನವರಿಗೆ ಕಾಂಗ್ರೆಸ್ ಏನು ಮಾಡಿದೆ ಅಥವಾ ಏನು ಮಾಡಿಲ್ಲ ಎಂಬ ವಿಷಯವಾಗಿ ಅವರು ಜಗಳ ಮಾಡುತ್ತಿಲ್ಲ. ಇದಕ್ಕಿಂತ ಸಂಪೂರ್ಣವಾಗಿ ವಿಭಿನ್ನವಾದ ವಿಷಯದ ಬಗ್ಗೆ ಅವರ ತಕರಾರು. ಸ್ವರಾಜ್ಯದಡಿಯಲ್ಲಿ ಹಿಂದೂಗಳೇ ಆಡಳಿತ ಜನಾಂಗವಾಗಿ ಮುಸಲ್ಮಾನರು ಮತ್ತು ಇತರ ಅಲಸ್ಪಸಂಖ್ಯಾತರು

---

* ಪ್ರಶ್ನೆಗೆ ಸಂಬಂಧಿಸಿದಂತೇ ಭಿನ್ನಾಭಿಪ್ರಾಯವಿರುವುದನ್ನು ಒಪ್ಪಿಕೊಳ್ಳುವ ಮಂತ್ರಿಮಂಡಲದ ನಿರ್ಧಾರದ ಬಗ್ಗೆ ಮತ್ತು ಆ ಪ್ರಶ್ನೆಯ ಮೇಲೆ ಪಾರ್ಲಿಮೆಂಟಿನಲ್ಲಿ ಆದ ಚರ್ಚೆಗೆ ಸಂಬಂಧಿಸಿದಂತೆ ಬ್ರಿಟಿಷ್ ಪ್ರಧಾನಿ ೧೯೩೨ನೇ ಜನವರಿ ೨೨ರಂದು ಮಾಡಿದ ಪ್ರಕಟಣೆಯನ್ನು ನೋಡಿ.

ಅವರಿಂದ ಆಳಿಸಿಕೊಳ್ಳಬೇಕೆ? ಸಮ್ಮಿಶ್ರ ಸರ್ಕಾರಗಳನ್ನು ಕೇಳುವುದರಲ್ಲಿ ಅಂತರ್ಗತವಾಗಿರುವ ಸಮಸ್ಯೆ ಇದು. ಇದರ ಬಗ್ಗೆ ಮುಸಲ್ಮಾನರು ಮತ್ತು ಇತರ ಅಲ್ಪಸಂಖ್ಯಾತರು ಸ್ಪಷ್ಟ ನಿಲುವನ್ನು ಹೊಂದಿದ್ದಾರೆ. ಆಳಿಸಿಕೊಳ್ಳುವ ಜನಾಂಗದ ಸ್ಥಾನವನ್ನು ಸ್ವೀಕರಿಸಲು ಅವರು ಸಿದ್ಧರಿಲ್ಲ.

ಆಳುವ ಸಮುದಾಯವು ಆಳಿಸಿಕೊಳ್ಳುವವರಿಗೆ ಒಳ್ಳೆಯದು ಮಾಡಿದೆ ಎಂಬುದು ಇಲ್ಲಿ ಅಪ್ರಸ್ತುತ ವಿಷಯ. ಅಲ್ಲದೆ, ತಮ್ಮನ್ನು ಆಳ್ವಿಕೆಗೆ ಒಳಪಟ್ಟ ಜನತೆಯೆಂದು ಪರಿಗಣಿಸುವುದನ್ನು ಅಲ್ಪಸಂಖ್ಯಾತ ಕೋಮುಗಳು ತಿರಸ್ಕರಿಸುತ್ತದೆ ಎಂಬುದಕ್ಕೆ ಇದು ಉತ್ತರವಲ್ಲ. ಭಾರತದಲ್ಲಿ ಭಾರತೀಯರಿಗೆ ಬ್ರಿಟೀಷರು ಅನೇಕ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಅವರ ರಸ್ತೆಗಳನ್ನು ಉತ್ತಮಪಡಿಸಿದ್ದಾರೆ. ರೈಲು ಮಾರ್ಗಗಳಿಂದ ಅವರ ಸಂಚಾರ ಹಾಗೂ ಸರಕು ರವಾನೆಗಳನ್ನು ಉತ್ತಮಪಡಿಸಿದ್ದಾರೆ. ಪೆನ್ನಿ ಬೆಲೆಯಲ್ಲಿ ಅವರ ಪತ್ರಗಳನ್ನು ಕೊಂಡೊಯ್ದಿದ್ದಾರೆ, ಮಿಂಚಿನಂತೆ ಅವರ ಸಂದೇಶಗಳನ್ನು ಬೀರಿದ್ದಾರೆ. ಅವರ ಹಣ ಚಲಾವಣೆಯನ್ನು ಉತ್ತಮಪಡಿಸಿದ್ದಾರೆ. ಅವರ ಅಳತೆ ಮತ್ತು ತೂಕಗಳನ್ನು ಸುಧಾರಿಸಿದ್ದಾರೆ. ಭೂಗೋಳ, ಖಗೋಳ ಮತ್ತು ವೈದ್ಯಶಾಸ್ತ್ರಗಳ ಬಗ್ಗೆ ಅವರಿಗಿದ್ದ ಕಲ್ಪನೆಗಳನ್ನು ತಿದ್ದಿದ್ದಾರೆ. ಅವರ ಆಂತರಿಕ ಕಲಹಗಳನ್ನು ನಿಲ್ಲಿಸಿದ್ದಾರೆ ಮತ್ತು ಅವರ ಭೌತಿಕ ಸ್ಥಿತಿಗತಿಗಳಲ್ಲಿ ಪ್ರಗತಿ ತೋರಿಸಿದ್ದಾರೆ. ಒಂದು ಒಳ್ಳೆಯ ಸರ್ಕಾರದ ಈ ಕಾರ್ಯಗಳಿಗಾಗಿ, ಬ್ರಿಟಿಷರಿಗೆ ಕೃತಜ್ಞರಾಗಿ ಉಳಿದು ಸ್ವರಾಜ್ಯಕ್ಕಾಗಿ ಭಾರತೀಯರು ನಡೆಸುತ್ತಿರುವ ಆಂದೋಳನವನ್ನು ನಿಲ್ಲಿಸಬೇಕೆಂದು ಯಾರಾದರೂ ಅವರನ್ನು ಕೇಳಿದರೆ? ಅಥವಾ ತಮ್ಮನ್ನು ಆಳ್ವಿಕೆಗೆ ಒಳಗಾದ ಜನಾಂಗವನ್ನಾಗಿ ಬ್ರಿಟಿಷರು ನಡೆಸಿಕೊಳ್ಳುವುದರ ವಿರುದ್ಧ ಮಾಡುತ್ತಿರುವ ಪ್ರತಿಭಟನೆಯನ್ನು ಅವರು ಬಿಟ್ಟುಕೊಟ್ಟರೇ? ಇಂತಹ ಯಾವುದನ್ನೂ ಭಾರತೀಯರು ಮಾಡಲಿಲ್ಲ. ಈ ಒಳ್ಳೆಯ ಕಾರ್ಯಗಳಿಂದ ಸಂತೃಪ್ತರಾಗಿ ಉಳಿಯುವುದನ್ನು ಅವರು ನಿರಾಕರಿಸಿದ್ದು ಮಾತ್ರವಲ್ಲ, ತಮ್ಮನ್ನು ತಾವು ಆಳಿಕೊಳ್ಳುವ ಹಕ್ಕಿಗಾಗಿ ತಮ್ಮ ಆಂದೋಳನವನ್ನು ಮುಂದುವರಿಸಿದರು. ಇದು ಸರಿಯಾದ ಮಾರ್ಗ. ಯಾಕೆಂದರೆ ಐರಿಷ್ ದೇಶಭಕ್ತ ಕ್ಯೂರನ್ ಹೇಳಿರುವಂತೆ ತನ್ನ ಆತ್ಮಗೌರವ ಹಾನಿಮಾಡಿಕೊಂಡು ಯಾವ ವ್ಯಕ್ತಿಯೂ ಕೃತಜ್ಞನಾಗಿರಲಾರ, ತನ್ನ ಶೀಲಹರಣ ಮಾಡಿಕೊಂಡು ಯಾವ ಹೆಂಗಸೂ ಕೃತಜ್ಞಳಾಗಿರಲಾರಳು, ಮತ್ತು ತನ್ನ ಪ್ರತಿಷ್ಠೆಗೆ ಹಾನಿ ಮಾಡಿಕೊಂಡು ಯಾವ ದೇಶವೂ ಕೃತಜ್ಞವಾಗಿರಲಾರದು. ಯಾರೇ ಆಗಲಿ ಇದಕ್ಕೆ ವಿರುದ್ಧವಾಗಿ ಆಚರಿಸುವುದೆಂದರೆ, ತನ್ನ ಜೀವನ ದರ್ಶನವನ್ನು ಕಾರ್ಲೈಲ್ ಹೇಳುವಂತೆ ಮೂರ್ಖ ತತ್ತ್ವದರ್ಶನ(Pig Philosophy)ಕ್ಕೆ ಸರಿಯಾಗಿಸಿದಂತಾಗುತ್ತದೆ. ತಮ್ಮ ಆತ್ಮ ಗೌರವವನ್ನು ಕಾಂಗ್ರೆಸ್ ಮಾನ್ಯ ಮಾಡಬೇಕೆಂಬುದಕ್ಕೆ ಮುಸಲ್ಮಾನರು ಮತ್ತು ಇತರ ಅಲ್ಪಸಂಖ್ಯಾತರು ಹೆಚ್ಚು ಆದ್ಯತೆ ಕೊಡುತ್ತಾರೆಂಬುದನ್ನು ಕಾಂಗ್ರೆಸ್ ವರಿಷ್ಠರು ಮನಗಾಣುತ್ತಿರುವಂತೆ ಕಾಣುತ್ತಿಲ್ಲ, ತಮ್ಮ ಅಸ್ತಿತ್ವದ ಬಗ್ಗೆ ಪ್ರಜ್ಞೆಯುಳ್ಳ ಜನ ಕೇವಲ ತಮ್ಮ ಹೊಟ್ಟೆ ತುಂಬುವಂತಹ ಆಹಾರಕ್ಕೆ ಆದ್ಯತೆ ಕೊಡುವ ಹಂದಿಗಳಲ್ಲ. ಬಂಗಾರಕ್ಕೂ ಬಗ್ಗದಂತಹ ಅಭಿಮಾನ ಅವರಿಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ "ಜೀವನವು ಮಾಂಸವಷ್ಟೇ ಅಲ್ಲ."

ಕಾಂಗ್ರೆಸ್ ಒಂದು ಹಿಂದೂ ಸಂಘಟನೆಯಲ್ಲ ಎಂದು ಹೇಳುವುದರಲ್ಲಿ ಹುರುಳಿಲ್ಲ. ತನ್ನ ಸಂರಚನೆಯಲ್ಲಿ ಹಿಂದುತ್ವವುಳ್ಳ ಸಮೂಹವು ಹಿಂದೂ ಮನವನ್ನೇ ಪ್ರತಿಫಲಿಸುವುದು ಮತ್ತು ಹಿಂದೂ ಆಶಯಗಳನ್ನೇ ಬೆಂಬಲಿಸುವುದು ಅನಿವಾರ್ಯ. ಕಾಂಗ್ರೆಸ್ ಮತ್ತು ಹಿಂದೂ ಮಹಾಸಭೆಗಳ ನಡುವೆ ಇರುವ ಏಕೈಕ ವ್ಯತ್ಯಾಸವೆಂದರೆ, ಎರಡನೆಯದು ತನ್ನ ಹೇಳಿಕೆಗಳಲ್ಲಿ ಹೆಚ್ಚು ಒರಟಾಗಿದೆ ಮತ್ತು ತನ್ನ ಕ್ರಿಯೆಗಳಲ್ಲಿ ಪಶುಪ್ರಾಯವಾಗಿದೆ. ಆದರೆ ಕಾಂಗ್ರೆಸ್ ಮುತ್ಸದ್ಧಿಯಾಗಿದೆ ಮತ್ತು ನಯಭಾವದಿಂದ ಕೂಡಿದೆ. ಈ ವಾಸ್ತವ

ವ್ಯತ್ಯಾಸವನ್ನು ಬಿಟ್ಟರೆ, ಕಾಂಗ್ರೆಸ್ ಮತ್ತು ಹಿಂದೂ ಮಹಾಸಭೆಗಳ ನಡುವೆ ಮತ್ತಾವ ವ್ಯತ್ಯಾಸವೂ ಇಲ್ಲ.

ಇದೇ ರೀತಿಯಲ್ಲಿ, ಆಳುವವರು ಮತ್ತು ಆಳಿಸಿಕೊಳ್ಳುವವರ ನಡುವಣ ಯಾವುದೇ ವ್ಯತ್ಯಾಸವನ್ನು ಕಾಂಗ್ರೆಸ್ ಮಾನ್ಯ ಮಾಡುವುದಿಲ್ಲ ಎಂದು ಹೇಳುವುದೂ ನಿರರ್ಥಕ. ಹೀಗಿದ್ದ ಮೇಲೆ ಇತರ ಸಮುದಾಯಗಳೂ ಸ್ವತಂತ್ರರು ಮತ್ತು ಸಹಭಾಗಿಗಳು ಎಂದು ಮಾನ್ಯ ಮಾಡುವುದರ ಮೂಲಕ ಕಾಂಗ್ರೆಸ್ ತನ್ನ ಪ್ರಾಮಾಣಿಕತೆಯನ್ನು ಸಾಬೀತುಪಡಿಸಬೇಕಾಗುತ್ತದೆ. ಅಂತಹ ಮಾನ್ಯತೆಯ ಒರೆಗಲ್ಲು ಯಾವುದು? ಅಲ್ಲಿ ಒಂದೇ ಒಂದು ಒರೆಗಲ್ಲು ಇರಲು ಸಾಧ್ಯವೆಂಬುದು ನನ್ನ ಅನಿಸಿಕೆ. ಅದೆಂದರೆ, ಅಲ್ಪಸಂಖ್ಯಾತ ಕೋಮುಗಳ ಪ್ರಭಾವೀ ಸದಸ್ಯರೊಂದಿಗೆ ಅಧಿಕಾರ ಹಂಚಿಕೊಳ್ಳಲು ಒಪ್ಪುವುದು. ಇದಕ್ಕೆ ಕಾಂಗ್ರೆಸ್ ಸಿದ್ಧವಿದೆಯೇ? ಇದಕ್ಕೆ ಉತ್ತರವೇನೆಂಬುದು ಪ್ರತಿಯೊಬ್ಬರಿಗೂ ತಿಳಿದಿದೆ. ಕಾಂಗ್ರೆಸ್ ತತ್ತ್ವಕ್ಕೆ ಬದ್ಧವಾಗಿರದ ಯಾವುದೇ ಕೋಮಿನ ಸದಸ್ಯರೊಂದಿಗೆ ಅಧಿಕಾರ ಹಂಚಿಕೆಗಾಗಿರುವ ಪೂರ್ವಷರತ್ತು. ಯಾವುದೇ ಕೋಮು ಕಾಂಗ್ರೆಸ್ ತತ್ತ್ವಕ್ಕೆ ಬದ್ಧವಾಗಿರದಿದ್ದಲ್ಲಿ, ಅಂತಹ ಕೋಮನ್ನು ರಾಜಕೀಯ ಅಧಿಕಾರದಿಂದ ಕೈಬಿಡುವುದು ಕಾಂಗ್ರೆಸ್ಸಿನಲ್ಲಿ ಒಂದು ನಿಯಮವಿದ್ದಂತೆ ತೋರುತ್ತದೆ.

ರಾಜಕೀಯ ಅಧಿಕಾರದಿಂದ ಹೊರಗಿಡುವುದು ಆಳುವ ಜನಾಂಗ ಮತ್ತು ಆಳಿಸಿಕೊಳ್ಳುವ ಜನಾಂಗಗಳ ನಡುವಣ ಭೇದದ ಸಾರ. ತಾನು ಆರೂಢವಾಗಿದ್ದುದರಿಂದ, ಈ ತತ್ತ್ವವನ್ನು, ಕಾಂಗ್ರೆಸ್ ಎಷ್ಟರಮಟ್ಟಿಗೆ ಉಳಿಸಿಕೊಂಡು ಬಂದಿತೋ ಅಷ್ಟರಮಟ್ಟಿಗೆ, ಕಾರ್ಯರೂಪಕ್ಕೆ ತಂದಿತು ಎಂದೇ ಹೇಳಬೇಕು. ತಾವು ಈಗಾಗಲೇ ಸಾಕಷ್ಟು ನೊಂದಿದ್ದೇವೆಯಲ್ಲದೆ, ಆಳಿಸಿಕೊಳ್ಳುವ ಜನಾಂಗದ ಸ್ಥಾನಮಾನಕ್ಕೆ ಇಳಿಸುವ ಈ ಪ್ರಯತ್ನ ಕೊನೆಯ ಹುಲ್ಲುಕಡ್ಡಿ ಎಂಬ ನಾಣ್ಣುಡಿಯಂತಾಗುತ್ತದೆ ಎಂದು ಮುಸಲ್ಮಾನರು ದೂರು ಹೇಳಬಹುದು. ಬ್ರಿಟಿಷರು ಜಾರಿಗೆ ತಂದ ಪ್ರತಿಯೊಂದು ಕಾರ್ಯನಿರ್ವಾಹಕ, ಆಡಳಿತಾತ್ಮಕ ಅಥವಾ ನ್ಯಾಯಾಂಗೀಯ ಬದಲಾವಣೆ ಮುಸಲ್ಮಾನ ಕೋಮಿನ ಮೇಲೆ ಒಂದಾದ ಮೇಲೊಂದರಂತೆ ಪೆಟ್ಟು ಕೊಟ್ಟಿತು. ನಾಗರಿಕ ವಿಷಯಗಳಿಗೆ ಸಂಬಂಧಿಸಿದಂತೆ ತಮ್ಮ ನ್ಯಾಯಪದ್ಧತಿಯನ್ನು ಉಳಿಸಿಕೊಳ್ಳಲು ಮುಸಲ್ಮಾನ ಆಳರಸರು ಹಿಂದೂಗಳಿಗೆ ಮಾಡಿದ್ದಲ್ಲದೆ ಮುಸಲ್ಮಾನರ ಅಪರಾಧ ಸಂಹಿತೆಯನ್ನು ಹಿಂದೂ–ಮುಸಲ್ಮಾನರಿಬ್ಬರಿಗೂ ಅನ್ವಯಿಸುವಂತೆ ರಾಜ್ಯದ ನ್ಯಾಯಪದ್ಧತಿಯನ್ನಾಗಿ ಮಾಡಿದ್ದರು. ಆದರೆ ಮುಸಲ್ಮಾನ ಅಪರಾಧ ಸಂಹಿತೆಯ ಸ್ಥಾನದಲ್ಲಿ, ತಾವೇ ರೂಪಿಸಿದ ಅಪರಾಧ ಸಂಹಿತೆಯೊಂದನ್ನು ಕ್ರಮೇಣ ಜಾರಿಗೆ ತಂದದ್ದು ಬ್ರಿಟೀಷರು ಮಾಡಿದ ಮೊದಲನೆಯ ಕೆಲಸ. ಮೆಕಾಲೆಯ ದಂಡ ಸಂಹಿತೆ ಜಾರಿಗೆ ಬಂದಾಗ, ಬ್ರಿಟಿಷರ ಕಾರ್ಯ ಪೂರ್ಣಗೊಂಡಿತು. ಭಾರತದಲ್ಲಿ ಮುಸಲ್ಮಾನ ಕೋಮಿನ ಘನತೆ ಮತ್ತು ಸ್ಥಾನಮಾನಗಳ ಮೇಲೆ ಬಿದ್ದ ಮೊದಲ ಪೆಟ್ಟು ಇದು. ಇದಾದ ನಂತರ, ಶರಿಯತ್ ಅಥವಾ ಮುಸಲ್ಮಾನ ನಾಗರಿಕ ಸಂಹಿತೆಯ ಅನ್ವಯದ ವ್ಯಾಪ್ತಿಯನ್ನು ಸೀಮಿತಗೊಳಿಸಲಾಯಿತು. ಮದುವೆ ಮತ್ತು ಅನುವಂಶೀಯತೆಗಳಂತಹ ವೈಯಕ್ತಿಕ ಸಂಬಂಧಗಳಿಗೆ ಅದನ್ನು ಸೀಮಿತಗೊಳಿಸಲಾಯಿತು. ಅಲ್ಲದೆ, ಅದನ್ನೂ ಕೂಡ ಬ್ರಿಟಿಷರ ಅನುಮತಿಯ ಮಿತಿಯಲ್ಲಿಡಲಾಯಿತು. ಜೊತೆ ಜೊತೆಗೇ ೧೮೩೭ರಲ್ಲಿ ಪರ್ಶಿಯನ್ ಭಾಷೆ ನ್ಯಾಯಾಲಯದ ಅಧಿಕೃತ ಭಾಷೆಯೆಂಬುದನ್ನು ನಿಷೇಧಿಸಲಾಯಿತಲ್ಲದೆ, ಆ ಭಾಷೆಯ ಸ್ಥಾನದಲ್ಲಿ ಇಂಗ್ಲಿಷ್ ಮತ್ತು ಪ್ರಾದೇಶಿಕ ಭಾಷೆಗಳನ್ನು ಬಳಸಲಾಯಿತು. ಅನಂತರ ಮುಸಲ್ಮಾನ ಆಳ್ವಿಕೆಯಲ್ಲಿ ಶರಿಯತ್ ಅನ್ನು ಜಾರಿಗೆ ತರುತ್ತಿದ್ದ ಕಾಸಿಗಳನ್ನು ವಜಾ ಮಾಡಲಾಯಿತು. ಅವರ ಸ್ಥಾನಗಳಲ್ಲಿ, ಮುಸಲ್ಮಾನ ನ್ಯಾಯವನ್ನು ಅರ್ಥೈಸಲು ಹಕ್ಕು ಪಡೆದಂತಹ ಮತ್ತು ಯಾರ ನಿರ್ಣಯವು ಮುಸಲ್ಮಾನರ ಮೇಲೆ ಬಂಧಕವಾಗಿತ್ತೋ ಅಂತಹ ನ್ಯಾಯಾಧಿಕಾರಿಗಳು ಹಾಗೂ ನ್ಯಾಯಾಧೀಶರುಗಳನ್ನು ನೇಮಿಸಲಾಯಿತು. ಅವರು ಯಾವ ಜಾತಿಯವರೂ

ಆಗಿರಬಹುದಿತ್ತು. ಈ ಬದಲಾವಣೆಗಳೆಲ್ಲಾ ಮುಸಲ್ಮಾನರ ಮೇಲೆ ಬಿದ್ದ ತೀವ್ರತರ ಪ್ರಹಾರಗಳು, ತತ್ಪರಿಣಾಮವಾಗಿ, ತಮ್ಮ ಘನತೆ ಮತ್ತು ಗೌರವಗಳಿಗೆ ಧಕ್ಕೆಯಾದುದನ್ನೂ ಮತ್ತು ತಮ್ಮ ಕಾಯಿದೆಗಳಿಗೆ ಬದಲಾಗಿ ಬೇರೆ ಕಾಯಿದೆಗಳು ಜಾರಿಗೆ ಬಂದಿದ್ದನ್ನೂ, ತಮ್ಮ ಭಾಷೆ ಮೂಲೆಗುಂಪಾದುದನ್ನೂ ಮತ್ತು ತಮ್ಮ ಶಿಕ್ಷಣ ಪದ್ಧತಿಯು ಅಪಮೌಲ್ಯವಾದುದನ್ನೂ ಮುಸಲ್ಮಾನರು ಕಂಡರು. ಇವುಗಳ ಜೊತೆಯಲ್ಲೇ, ಸಿಂಧ್ ಮತ್ತು ಔದ್‌ಗಳ ಸ್ವಾಧೀನ ಮತ್ತು ಸಿಪಾಯಿದಂಗೆ ಇವುಗಳ ರೂಪದಲ್ಲಿ ಹೆಚ್ಚು ತಟ್ಟುವ ಪೆಟ್ಟುಗಳು ಬಿದ್ದವು. ವಿಶೇಷವಾಗಿ ಕೊನೆಯದು, ಮೇಲ್ವರ್ಗದ ಮುಸಲ್ಮಾನರಿಗೆ ಆಘಾತಕರವಾಗಿ ಪರಿಣಮಿಸಿತು. ಅವರು ಸಿಪಾಯಿ ದಂಗೆಯಲ್ಲಿ ಭಾಗವಹಿಸಿದರೆಂಬ ಕಾರಣಕ್ಕಾಗಿ ಅದಕ್ಕೆ ದಂಡನೆಯ ರೂಪದಲ್ಲಿ ವ್ಯಾಪಕವಾಗಿ ಸ್ಥಿರಚರಾಸ್ತಿಗಳನ್ನು ಬ್ರಿಟಿಷರು ಸ್ವಾಧೀನಪಡಿಸಿಕೊಂಡಾಗ ಅವರಿಗೆ ತೀವ್ರತರ ಘಾಸಿಯಾಯಿತು. ಸಿಪಾಯಿದಂಗೆಯ ಕೊನೆಯ ವೇಳೆಗೆ, ಮೇಲುಕೀಳೆನ್ನದೆ ಮುಸಲ್ಮಾನರನ್ನೆಲ್ಲಾ ಈ ಘಟನಾವಳಿಯು ಒಡೆದ ಅಭಿಮಾನ, ಗಾಢ ಹತಾಶೆ ಮತ್ತು ಸಾಮಾನ್ಯ ಕಡುಬಡತನಗಳ ತಳಾತಳಕ್ಕೆ ಇರಿಸಿತು. ಘನತೆಯಿಲ್ಲದೆ, ಶಿಕ್ಷಣವಿಲ್ಲದೆ ಮತ್ತು ಸಂಪನ್ಮೂಲಗಳಿಲ್ಲದೆ ಹಿಂದೂಗಳನ್ನು ಎದುರಿಸುವಂತಹ ಸಂಕಷ್ಟಸ್ಥಿತಿಯಲ್ಲಿ ಮುಸಲ್ಮಾನರನ್ನು ಬಿಡಲಾಯಿತು. ಬ್ರಿಟೀಷರು ಮಧ್ಯಸ್ಥವ್ರತವನ್ನು ಹಿಡಿದರು ಮತ್ತು ಎರಡು ಸಮುದಾಯಗಳ ನಡುವಣ ಹೋರಾಟದ ಪರಿಣಾಮಗಳಿಗೆ ಉದಾಸೀನರಾಗಿದ್ದರು. ಈ ಹೋರಾಟದ ಪರಿಣಾಮವೆಂದರೆ ಮುಸಲ್ಮಾನರ ಸ್ಥಿತಿ ಹೆಚ್ಚು ಹೀನಾಯವಾದದ್ದು. ಎರಡು ಸಮುದಾಯಗಳ ಸಾಪೇಕ್ಷಸ್ಥಾನಮಾನಗಳಲ್ಲಿ ಒಂದು ಸಂಪೂರ್ಣ ರಾಜಕೀಯ ಕ್ರಾಂತಿಯು ಬ್ರಿಟಿಷರ ಭಾರತ ವಿಜಯದಿಂದ ಉಂಟಾಯಿತು. ಆರುನೂರು ವರ್ಷಗಳವರೆಗೆ ಮುಸಲ್ಮಾನರು ಹಿಂದೂಗಳ ಒಡೆಯರಾಗಿದ್ದರು. ಬ್ರಿಟೀಷರ ಆಕ್ರಮಣವು, ಮುಸಲ್ಮಾನರನ್ನು ಹಿಂದೂಗಳ ಮಟ್ಟಕ್ಕೆ ಇಳಿಸಿತು. ಒಡೆಯರಿಂದ ಸಮಾನರ ಸ್ಥಾನಕ್ಕೆ ಬರುವುದು ಸಾಕಷ್ಟು ಅಪಮೌಲ್ಯನ. ಆದರೆ, ಸಮಾನ ಪ್ರಜೆಗಳ ಸ್ಥಾನದಿಂದ, ಹಿಂದೂಗಳ ಪ್ರಜೆಗಳಾಗುವ ಸ್ಥಿತಿಗೆ ತರುವ ಬದಲಾವಣೆಯು ವಾಸ್ತವವಾಗಿ ಅಪಮಾನಕಾರಿಯಾದದ್ದು. ಪ್ರತ್ಯೇಕ ರಾಷ್ಟ್ರೀಯ ಆಡಳಿತ ವ್ಯವಸ್ಥೆಗಳನ್ನು ರಚಿಸುವುದರ ಮೂಲಕ, ಅಂತಹ ಅಸಹನೀಯ ಸ್ಥಿತಿಯಿಂದ ತಪ್ಪಿಸಿಕೊಳ್ಳಲು ತಾವು ಯತ್ನಿಸುವುದು ಅಸ್ವಾಭಾವಿಕವೇ? ಎಂದು ಮುಸಲ್ಮಾನರು ಕೇಳುತ್ತಾರೆ. ಅಂತಹ ಆಡಳಿತ ವ್ಯವಸ್ಥೆಗಳಲ್ಲಿ ಸುಶಾಂತ ಆಶ್ರಯಗಳನ್ನು ತಾವು ಕಂಡುಕೊಳ್ಳಬಹುದು ಮತ್ತು ತಮ್ಮ ಜೀವನಗಳನ್ನು ಗಂಡಾಂತರಕ್ಕೆ ಸಿಕ್ಕಿಸುವಂತಹ ಆಳುವ ಜನಾಂಗ ಮತ್ತು ಆಳಿಸಿಕೊಳ್ಳುವ ಜನಾಂಗಗಳ ನಡುವಣ ಘರ್ಷಣೆಗಳಿಗೆ ಅಲ್ಲಿ ಸ್ಥಾನವಿರದು ಎಂದು ಮುಸಲ್ಮಾನರು ಭಾವಿಸುತ್ತಾರೆ.

♦

## ಭಾಗ – VIII

# ಪಾಕಿಸ್ತಾನದ ವಿರುದ್ಧ ಹಿಂದೂ ಅಹವಾಲು

ಪಾಕಿಸ್ತಾನದ ಪರವಾಗಿ ಮುಸಲ್ಮಾನರ ವಾದವನ್ನು ಈ ಕೆಳಗಿನ ಆಧಾರಗಳ ಮೇಲೆ ಸಮರ್ಥಿಸಬೇಕೆಂಬ ಅಪೇಕ್ಷೆಯಿದೆ:

i) ಜನಾಂಗೀಯವಾಗಿ ಹೆಚ್ಚು ಏಕರೂಪತೆಯುಳ್ಳ ಆಡಳಿತ ಕ್ಷೇತ್ರಗಳನ್ನು ಸ್ಥಾಪಿಸಬೇಕೆಂದು ಮುಸಲ್ಮಾನರು ಕೇಳುತ್ತಿದ್ದಾರೆ;

ii) ಮುಸಲ್ಮಾನರೇ ಪ್ರಧಾನವಾಗಿರುವ ಈ ಏಕರೂಪೀ ಆಡಳಿತ ಕ್ಷೇತ್ರಗಳನ್ನು ಪ್ರತ್ಯೇಕ ರಾಜ್ಯಗಳನ್ನಾಗಿ ರಚಿಸಬೇಕೆಂಬುದು ಮುಸಲ್ಮಾನರ ಅಪೇಕ್ಷೆ:

ಅ) ಏಕೆಂದರೆ ಮುಸಲ್ಮಾನರು ತಾವೇ ಒಂದು ಪ್ರತ್ಯೇಕ ರಾಷ್ಟ್ರವಾಗಿದ್ದಾರೆ ಹಾಗೂ ತಮ್ಮದೇ ಆದ ರಾಷ್ಟ್ರೀಯ ಆಶ್ರಯವನ್ನು ಇಚ್ಛಿಸುತ್ತಾರೆ; ಅಲ್ಲದೆ

ಬಿ) ಒಂದು ಪರಕೀಯ ರಾಜ್ಯದಲ್ಲಿ ದ್ವಿತೀಯ ವರ್ಗದ ಪ್ರಜೆಗಳೆಂಬಂತೆ ಮುಸಲ್ಮಾನರನ್ನು ನಡೆಸಿಕೊಳ್ಳುವ ಹಿಂದೂಗಳು ತಮ್ಮ ಬಹುಸಂಖ್ಯಾತ ಶಕ್ತಿಯನ್ನು ಬಳಸಿಕೊಳ್ಳಲು ಹವಣಿಸುತ್ತಿದ್ದಾರೆ ಎಂಬುದನ್ನು ಅನುಭವವು ತೋರಿಸುತ್ತದೆ.

ಈ ಆಧಾರವನ್ನು ವಿವರಿಸಲು ಈ ಭಾಗ ಮೀಸಲಾಗಿದೆ.

# ಅಧ್ಯಾಯ ೨೦

# ಏಕತೆಯ ಭಂಗ

ಭಾರತದ ಏಕತೆಯು ಹಾಳಾಗುತ್ತಿದೆ ಎಂದು ಹಿಂದೂಗಳು ಆರೋಪಿಸುವುದಕ್ಕೆ ಮೊದಲು, ಅವರು ಸಾರಿ ಹೇಳುತ್ತಿರುವಂತಹ ಏಕತೆಯು ಇದೆಯೇ ಎಂಬುದನ್ನು ಅವರೇ ಸ್ಪಷ್ಟಪಡಿಸಿಕೊಳ್ಳಬೇಕು. ಪಾಕಿಸ್ತಾನ ಮತ್ತು ಹಿಂದೂಸ್ತಾನಗಳ ನಡುವೆ ಏನು ಏಕತೆಯಿದೆ?

ಏಕತೆಯಿದೆ ಎಂದು ಸಮರ್ಥಿಸುವ ಹಿಂದೂಗಳು ಬಹುಮುಖ್ಯವಾಗಿ ಮುಂದಿಡುವ ಕಾರಣವೆಂದರೆ, ಭಾರತದಿಂದ ಪ್ರತ್ಯೇಕ ಮಾಡಬೇಕೆಂದು ಮುಸಲ್ಮಾನರು ಕೇಳುತ್ತಿರುವ ಪ್ರದೇಶಗಳು ಯಾವಾಗಲೂ ಭಾರತದ ಭಾಗವಾಗಿದ್ದವು ಎಂಬುದು. ಐತಿಹಾಸಿಕವಾಗಿ ಇದು ಸತ್ಯವೆಂಬುದರಲ್ಲಿ ಸಂಶಯವಿಲ್ಲ. ಚಂದ್ರಗುಪ್ತನ ಆಡಳಿತ ಕಾಲದಲ್ಲಿ ಈ ಭಾಗವು ಭಾರತದ ಭಾಗವಾಗಿತ್ತು. ಚೀನಾದ ಯಾತ್ರಿ ಹೂಯೆನ್‌ತ್ಸಾಂಗನು ಭಾರತಕ್ಕೆ ಬಂದಾಗಲೂ ಅದು ಭಾರತದ ಭಾಗವಾಗಿತ್ತು. ಭಾರತವು ಐದು ವಿಭಾಗಗಳಿಂದ ಕೂಡಿತ್ತು ಎಂದು ಹೂಯೆನ್‌ತ್ಸಾಂಗನು ತನ್ನ ದಿನಚರಿಯಲ್ಲಿ ಬರೆದಿದ್ದಾನೆ. ಅವನೇ ಹೇಳುವಂತೆ: "ಅಲ್ಲಿ ಐದು ಭಾರತಗಳಿದ್ದವು"* (೧) ಉತ್ತರ ಭಾರತ (೨) ಪಶ್ಚಿಮ ಭಾರತ (೩) ಮಧ್ಯಭಾರತ (೪) ಪೂರ್ವ ಭಾರತ ಮತ್ತು (೫) ದಕ್ಷಿಣ ಭಾರತ ಮತ್ತು ಈ ಐದು ವಿಭಾಗಗಳಲ್ಲಿ ೮೦ ರಾಜ್ಯಗಳಿದ್ದವು. ಹೂಯೆನ್‌ತ್ಸಾಂಗನ ಪ್ರಕಾರ ಉತ್ತರಭಾರತದಲ್ಲಿ ಮುಖ್ಯವಾಗಿ ಪಂಜಾಬ್, ಕಾಶ್ಮೀರ ಮತ್ತು ಅದಕ್ಕೆ ಸೇರಿಕೊಂಡಂತಿರುವ ಬೆಟ್ಟಗುಡ್ಡಗಳ ರಾಜ್ಯಗಳು, ಸಿಂಧೂ ನದಿಯಿಂದ ಆಚೆಗಿರುವ ಸಮಗ್ರ ಪೂರ್ವ ಆಫ್ಘಾನಿಸ್ತಾನ, ಸರಸ್ವತಿ ನದಿಯ ಪಶ್ಚಿಮಕ್ಕಿರುವ ಈಗಿನ ಸಿಸ್–ಸಟ್ಲಜ್ ರಾಜ್ಯಗಳು ಇದ್ದವು. ಹೀಗೆ ಉತ್ತರ ಭಾರತದಲ್ಲಿದ್ದ ಪ್ರದೇಶಗಳೆಂದರೆ, ಕಾಬೂಲ್, ಜಲಾಲಾಬಾದ್, ಪೆಷಾವರ್, ಘಸಿ ಮತ್ತು ಬನ್ನು. ಇವೆಲ್ಲಾ ಕಾಪಿಸದ ದೊರೆಯ ಆಳ್ವಿಕೆಯಲ್ಲಿದ್ದವು. ಆತನು ಒಬ್ಬ ಹಿಂದೂ ಕ್ಷತ್ರಿಯ, ಆತನ ರಾಜಧಾನಿಯು ಬಹುಮಟ್ಟಿಗೆ ಕಾಬೂಲಿಗೆ ೨೭ ಮೈಲಿ ದೂರದಲ್ಲಿರುವ ಚರಿಕಾರ್‌ನಲ್ಲಿತ್ತು. ಪಂಜಾಬಿನಲ್ಲಿದ್ದ ಬೆಟ್ಟಗುಡ್ಡಗಳ ಜಿಲ್ಲೆಗಳಾದ ತಕ್ಷಿಲಾ, ಸಿಂಧುಪುರ, ಉರಸ, ಪೂಂಜ್ ಮತ್ತು ರಾಜೋರಿ ಇವು ಕಾಶ್ಮೀರದ ರಾಜನ ಆಳ್ವಿಕೆಗೆ ಒಳಪಟ್ಟಿದ್ದವು. ಮುಲ್ತಾನ್ ಮತ್ತು ಶೋರಕೋಟಿಗಳೂ ಸೇರಿದಂತಿದ್ದ ಮೈದಾನ ಪ್ರದೇಶಗಳೆಲ್ಲಾ, ಲಾಹೋರಿನ ಸಮೀಪದ ತಾಕಿ ಅಥವಾ ಸಂಗಲಾ ರಾಜನ ಅಧೀನದಲ್ಲಿದ್ದವು. ಹೂಯೆನ್‌ತ್ಸಾಂಗ್ ಯಾತ್ರಿಕನಾಗಿ ಬಂದಾಗ ಭಾರತದ ಉತ್ತರದ ಗಡಿಯ ವಿಸ್ತಾರ ಈ ರೀತಿ ಇದ್ದಿತು.

ಆದರೆ ಪ್ರೊ. ಟಾಯನ್ಬೀ ಸ್ಪಷ್ಟಪಡಿಸುವಂತೆ:

**"ನಾವು ಐತಿಹಾಸಿಕ ಭಾವುಕತೆಯ ವಿರುದ್ಧ ಎಚ್ಚರ ವಹಿಸಲೇಬೇಕು. ಅದೆಂದರೆ ಯಾವಾಗಲೋ ಒಮ್ಮೆ ಅಸ್ತಿತ್ವದಲ್ಲಿದ್ದ ಸ್ಥಿತಿಗತಿಗಳು ಅಥವಾ ಅಂತಹ ಸ್ಥಿತಿಗತಿಗಳು ವಾಸ್ತವವಾಗಿ ಇಂದು ಉಳಿದಿಲ್ಲವಾದರೂ,**

---

* ಕನ್ನಿಂಗ್ ಏನ್ಸಿಯೆಂಟ್ ಜಿಯೋಗ್ರಫಿ ಆಫ್ ಇಂಡಿಯಾ (ಸಂ.ಮಜಮ್‌ದಾರ್) ಪು.೧೩–೧೪ ಪುರಾಣಗಳನ್ನು ಬರೆದವರು ಭಾರತವನ್ನು ಐದು ವಿಭಾಗಗಳಾಗಿ ವಿಂಗಡಿಸುತ್ತಾರೆ.

**ಅವು ಅಸ್ತಿತ್ವದಲ್ಲಿದ್ದವೆಂಬ ಊಹೆಗಳನ್ನು ಆಧರಿಸಿದ ವಾದಗಳ ವಿರುದ್ಧ ನಾವು ಎಚ್ಚರ ವಹಿಸಬೇಕಾಗುತ್ತದೆ. ವಿಪರೀತವೆನಿಸುವಂತಹ ಉದಾಹರಣೆಗಳ ಮೂಲಕ ಅವುಗಳನ್ನು ಸುಲಭವಾಗಿ ಸಮರ್ಥಿಸಲಾಗುತ್ತದೆ. ಟ್ರಿಪೋಲಿಯನ್ನು ಸ್ವಾಧೀನಪಡಿಸಿಕೊಂಡಾಗ ಒಂದು ಕಾಲದಲ್ಲಿ ಅದು ರೋಮ್ ಚಕ್ರಾಧಿಪತ್ಯದ ಪ್ರಾಂತವಾಗಿದ್ದರಿಂದ ಪಿತೃದೇಶದ ನೆಲವನ್ನು ಮತ್ತೆ ವಶಪಡಿಸಲಾಯಿತು ಎಂದು ಇಟಲಿಯ ವೃತ್ತಪತ್ರಿಕೆಗಳು ವರ್ಣಿಸಿದವು. ಮತ್ತೊಂದು ಕಡೆ ಗ್ರೀಕ್ ದೇಶಾಂಧರು ಮೆಸಿಡೋನಿಯಾದ ಮೇಲೆ ಹಕ್ಕು ಸಾಧಿಸುತ್ತಾರೆ. ಏಕೆಂದರೆ, ಕ್ರಿ.ಪೂ. ನಾಲ್ಕನೇ ಶತಮಾನದಲ್ಲಿ ಅಲೆಗ್ಸಾಂಡರ್ ಮಹಾಶಯನ ತೂಗುತೊಟ್ಟಿಲಂತಿದ್ದ ಪೆಲ್ಲಾ ಪ್ರದೇಶವನ್ನು ಮೆಸಿಡೋನಿಯಾ ಒಳಗೊಂಡಿತ್ತು. ಮತ್ತೊಂದು ಕಡೆ ಬಲ್ಗೇರಿಯನ್ನರೂ ಮೆಸಿಡೋನಿಯಾದ ಮೇಲೆ ತಮ್ಮ ಹಕ್ಕು ಸಾಧಿಸುತ್ತಾರೆ. ಏಕೆಂದರೆ, ಆಧುನಿಕ ಗ್ರೀಸ್ ರಾಷ್ಟ್ರೀಯ ವಾದಿಗಳು ಯಾವುದನ್ನು ಬಲವತ್ತರವಾಗಿ ಸಮರ್ಥಿಸುತ್ತಿರುವರೋ ಅಂತಹ 'ಇಮಥಿಯನ್ ಆಕ್ರಮಣಕಾರಿ'ಯ ಸಾಧನೆಗಳನ್ನೆಲ್ಲಾ ಹುದುಗಿಸಿದ್ದಷ್ಟು ಆಳದಲ್ಲೇ, ಬಲ್ಗೇರಿಯನ್ ಸಾರ್‌ಡಮ್ ಅನ್ನು ಹುದುಗಿಸಿದ್ದಾಗ್ಯೂ, ತದ್ವಿರುದ್ಧ ಮೂಲೆಯಲ್ಲಿರುವ ಅಚ್ರಿಡಾ, ಕ್ರಿ.ಶ. ಹತ್ತನೇ ಶತಮಾನದಲ್ಲಿ ಬಲ್ಗೇರಿಯನ್ ಸಾರ್‌ಡಮ್‌ನ ರಾಜಧಾನಿಯಾಗಿತ್ತು."**

ಮೇಲ್ಕಂಡ ತರ್ಕವೇ ಇಲ್ಲಿಗೂ ಅನ್ವಯಿಸುತ್ತದೆ. ಇಲ್ಲಿಯೂ ಕೂಡ ಒಂದಾನೊಂದು ಕಾಲದಲ್ಲಿದ್ದ. ಆದರೆ ಈಗ ವಾಸ್ತವವಲ್ಲದ ಸ್ಥಿತಿಗತಿಗಳನ್ನೇ ಅವಲಂಬಿಸಿ, ವಾದ ಮಾಡಲಾಗುತ್ತಿದೆ. ಹೂಯೆನ್‌ತ್ಸಾಂಗ್ ವಾಪಸ್ಸು ಹೋದಮೇಲೆ ಮುಂದೆ ವಾಸ್ತವವಾಗಿ ಒಂದು ಸಾವಿರ ವರ್ಷಗಳ ಅವಧಿಯಲ್ಲಿ ಆದ ಆಗುಹೋಗುಗಳನ್ನು ಇತಿಹಾಸವು ದಾಖಲು ಮಾಡಬೇಕಾದುದನ್ನು ಈ ವಾದಗಳು ಕಡೆಗಣಿಸುತ್ತವೆ.

ಹೂಯೆನ್‌ತ್ಸಾಂಗ್ ಬಂದಾಗ ಪಂಜಾಬ್ ಮಾತ್ರವಲ್ಲದೆ, ಈಗ ಆಫ್ಘಾನಿಸ್ಥಾನವೆಂದು ಕರೆಯಲಾಗುತ್ತಿರುವ ಪ್ರದೇಶವೂ ಕೂಡ ಭಾರತದ ಭಾಗವಾಗಿದ್ದಿತು ಎಂಬುದು ಸತ್ಯಸಂಗತಿ. ಅಲ್ಲದೆ, ಅದಕ್ಕೂ ಹೆಚ್ಚಾಗಿ, ಪಂಜಾಬ್ ಮತ್ತು ಆಫ್ಘಾನಿಸ್ಥಾನಗಳ ಜನರು ತಮ್ಮ ಧರ್ಮದಿಂದ ವೈದಿಕರಾಗಿದ್ದರು ಅಥವಾ ಬೌದ್ಧರಾಗಿದ್ದರು. ಆದರೆ ಹೂಯೆನ್‌ತ್ಸಾಂಗ್ ಭಾರತವನ್ನು ಬಿಟ್ಟುಹೋದ ಮೇಲೆ ಏನಾಯಿತು?

ಈಶಾನ್ಯದಿಂದ, ಮುಸಲ್ಮಾನರ ತಂಡೋಪತಂಡಗಳು ಭಾರತದ ಮೇಲೆ ಧಾಳಿ ಮಾಡಿದ್ದು, ಈ ಅವಧಿಯಲ್ಲಿ ಆದ ಅತ್ಯಂತ ಪ್ರಮುಖ ಘಟನೆ ಭಾರತದ ಮೇಲೆ ಆದ ಮೊಟ್ಟಮೊದಲ ಧಾಳಿಯೆಂದರೆ, ಮಹಮದ್ ಬಿನ್ ಖಾಸಿಮನ ನೇತೃತ್ವದಲ್ಲಿ ಆದ ಅರಬ್ಬರ ಧಾಳಿ. ಅದು ಕ್ರಿ.ಶ. ೭೧೧ರಲ್ಲಿ ಆಯಿತು. ಅದರ ಪರಿಣಾಮವೆಂದರೆ ಸಿಂಧ್‌ನ ಆಕ್ರಮಣ. ಭಾರತವನ್ನು ಖಾಯಂ ಆಗಿ ಸ್ವಾಧೀನಪಡಿಸಿಕೊಳ್ಳುವುದರಲ್ಲಿ ಈ ಮೊದಲ ಧಾಳಿ ಪರ್ಯವಸಾನವಾಗಲಿಲ್ಲ. ಏಕೆಂದರೆ, ಬಾಗ್‌ದಾದಿನ ಕಲಿಫನ ಆದೇಶ ಮತ್ತು ಆಜ್ಞೆಯಿಂದ ಈ ಆಕ್ರಮಣವಾಯಿತು. ಆದರೆ ದೂರದ ಸಿಂಧ್ ಪ್ರಾಂತದ ಮೇಲಿನ ತನ್ನ ನೇರ ನಿಯಂತ್ರಣವನ್ನು ಆತನು ೯ನೇ ಶತಮಾನದ ಮಧ್ಯಭಾಗದಲ್ಲಿ ಕೈಬಿಟ್ಟನು.* ಹೀಗೆ ವಾಪಸ್ಸಾದ ಸ್ವಲ್ಪ ಸಮಯದಲ್ಲಿಯೇ ಅಂದರೆ ಕ್ರಿ.ಶ.೧೦೦೧ರಲ್ಲಿ ಘಸ್ನಿಮಹಮ್ಮದನ ಭಯಾನಕ ದಂಡಯಾತ್ರೆಗಳ ಸರಣಿಯೇ ಪ್ರಾರಂಭವಾಯಿತು. ಮಹಮ್ಮದನು ಕ್ರಿ.ಶ.೧೦೩೦ರಲ್ಲಿ ಸತ್ತ. ಆದರೆ, ಕೇವಲ ೩೦ ವರ್ಷಗಳ ಅಲ್ಪ

---

* ಮಹಮದ್ ಘೋರಿಯು ಸಿಂಧನ್ನು ಪುನಃ ಆಕ್ರಮಿಸಿಕೊಂಡ.

ಅವಧಿಯಲ್ಲಿಯೇ ಆತನು ಭಾರತದ ಮೇಲೆ ೧೭ ಸಲ ದಂಡಯಾತ್ರೆ ನಡೆಸಿದ. ಮಹಮ್ಮದ್ ಘೋರಿ ಅವನನ್ನು ಹಿಂಬಾಲಿಸಿ ಬಂದ. ಆತನು ಧಾಳಿಕಾರನಾಗಿ ತನ್ನ ಕಾರ್ಯವನ್ನು ಪ್ರಾರಂಭಿಸಿದ್ದು ಕ್ರಿ.ಶ.೧೧೭೩. ಕ್ರಿ.ಶ.೧೨೦೬ರಲ್ಲಿ ಆತನನ್ನು ಕೊಲ್ಲಲಾಯಿತು. ಘಸ್ನಿಮಹಮ್ಮದನು ೩೦ ವರ್ಷಗಳ ಕಾಲ ಭಾರತವನ್ನು ಧೂಳಿಪಟ ಮಾಡಿದರೆ, ಘೋರಿ ಮಹಮ್ಮದನೂ ಈ ದೇಶವನ್ನು ಅದೇ ರೀತಿ ದಾಂಧಲೆಗೆ ಒಳಪಡಿಸಿದ. ಅದನ್ನು ಹಿಂಬಾಲಿಸಿಯೇ, ಚೆಂಗೇಸ್‌ಖಾನ್‌ನ ಮೊಗಲ ಲೂಟಿಕೋರರ ಧಾಳಿಗಳೂ ನಡೆದವು. ಮೊದಲು ಅವರು ೧೨೨೧ರಲ್ಲಿ ಬಂದರು. ಆಗ ಅವರು ಭಾರತದ ಗಡಿಯಲ್ಲಿ ತಂಗಿದರೇ ಹೊರತು ಒಳಗೆ ಬರಲಿಲ್ಲ. ಇಪ್ಪತ್ತು ವರ್ಷಗಳ ಅನಂತರ ಅವರು ಲಾಹೋರಿನ ಮೇಲೆ ಧಾಳಿ ನಡೆಸಿ ಅದನ್ನು ಕಬಳಿಸಿದರು. ಅವರು ಮಾಡಿದ ಧಾಳಿಗಳಲ್ಲಿ ಅತ್ಯಂತ ಭೀಕರವಾದುದೆಂದರೆ ೧೩೯೮ರಲ್ಲಿ ತೈಮೂರನ ನೇತೃತ್ವದಲ್ಲಿ ನಡೆದದ್ದು. ಅನಂತರ ಬಾಬರ್‌ನೆಂಬ ಹೊಸ ಆಕ್ರಮಣಕಾರ ೧೫೨೬ರಲ್ಲಿ ಭಾರತದ ಮೇಲೆ ಧಾಳಿ ಮಾಡಿದ. ಭಾರತದ ಮೇಲೆ ಆದ ಧಾಳಿಗಳು ಬಾಬರನಿಗೇ ಕೊನೆಯಾಗಲಿಲ್ಲ. ಅನಂತರವೂ ಮತ್ತೆರಡು ಧಾಳಿಗಳು ನಡೆದವು. ಧಾಳಿಕಾರ ಅತಿಥಿಯೆನಿಸಿದ ನಾದಿರ್‌ಷಹ ೧೭೩೮ರಲ್ಲಿ ಸಾಗರದ ರಭಸದಂತೆ ಇಡೀ ಪಂಜಾಬನ್ನೆ ಕೊಚ್ಚಿದ. ಅವನಾದ ಮೇಲೆ ೧೭೬೧ರಲ್ಲಿ ಬಂದ ಅಹಮದ್ ಶಹ ಅಬ್ದಾಲಿ ಪಾಣಿಪಟ್ಟಿನಲ್ಲಿ ಮರಾಠಾ ಸೈನ್ಯಶಕ್ತಿಯನ್ನು ಧ್ವಂಸ ಮಾಡಿದ. ಮುಸಲ್ಮಾನ ಆಕ್ರಮಣಕಾರರು ವಶಪಡಿಸಿಕೊಂಡಿದ್ದ ತಮ್ಮ ಪ್ರದೇಶಗಳ ಮೇಲೆ ಹಿಡಿತವನ್ನು ಪುನಃ ಸಂಪಾದಿಸಿಕೊಳ್ಳುವ ಹಿಂದೂಗಳ ಪ್ರಯತ್ನ ಅಂದು ಶಾಶ್ವತವಾಗಿ ಧ್ವಂಸವಾಯಿತು.

ಕೇವಲ ಕೊಳ್ಳೆಹೊಡೆಯುವ ಅಥವಾ ಜಯ ಗಳಿಸುವ ಲೋಭದಿಂದಲೇ ಈ ಮುಸಲ್ಮಾನ ಧಾಳಿಗಳು ನಡೆಯಲಿಲ್ಲ. ಈ ಧಾಳಿಗಳ ಹಿಂದೆ ಮತ್ತೊಂದು ಉದ್ದೇಶವಿತ್ತು. ಸಿಂಧ್‌ನ ವಿರುದ್ಧ ಮಹಮದ್ ಬಿನ್ ಖಾಸಿಂ ನಡೆಸಿದ ಧಾಳಿ ಪ್ರತೀಕಾರ ಸ್ವರೂಪದ್ದು. ಸಿಂಧ್‌ನ ಸಮುದ್ರ ರೇವು ಪಟ್ಟಣಗಳಲ್ಲಿ ಒಂದಾದ ದೇಬುಲ್‌ನಲ್ಲಿ ಒಂದು ಅರಬ್ಬೀ ಹಡಗನ್ನು ಸ್ವಾಧೀನಪಡಿಸಿಕೊಂಡದ್ದಕ್ಕಾಗಿ ಅಲ್ಲಿನ ರಾಜಾ ದಹೀರನು ನಷ್ಟಭರ್ತಿ ಮಾಡಿಕೊಳ್ಳಲು ನಿರಾಕರಿಸಿದ್ದಕ್ಕಾಗಿ ಆತನನ್ನು ಶಿಕ್ಷಿಸಲೆಂದು ಈ ಧಾಳಿ ನಡೆಯಿತು. ಆದರೆ ಹಿಂದೂಗಳ ವಿಗ್ರಹಾರಾಧನೆ ಮತ್ತು ಬಹುದೇವತಾರಾಧನೆಗಳ ಮೇಲೆ ಪ್ರಹಾರ ಮಾಡಿ, ಭಾರತದಲ್ಲಿ ಇಸ್ಲಾಂ ಅನ್ನು ಸ್ಥಾಪಿಸುವುದು ಕೂಡಾ ಈ ದಂಡಯಾತ್ರೆಯ ಉದ್ದೇಶಗಳಲ್ಲೊಂದಾಗಿತ್ತು ಎಂಬುದರಲ್ಲಿ ಸಂದೇಹವಿಲ್ಲ. ಹಜ್ಜಾಜ್‌ಗೆ ತಾನು ಕಳುಹಿಸಿದ್ದ ಪತ್ರಗಳೊಂದರಲ್ಲಿ ಮಹಮದ್ ಬಿನ್ ಖಾಸಿಂ ಬರೆದಿದ್ದನೆಂಬ ಮಾತನ್ನು ಇಲ್ಲಿ ಉಲ್ಲೇಖಿಸಲಾಗಿದೆ.

> **"ರಾಜಾ ದಹೀರನ ಸೋದರಳಿಯ, ಆತನ ಯೋಧರು ಮತ್ತು ಪ್ರಮುಖ ಅಧಿಕಾರಿಗಳನ್ನು ರವಾನಿಸಲಾಯಿತು. ಕುಧರ್ಮಿಗಳನ್ನು ಇಸ್ಲಾಂಗೆ ಮತಾಂತರಿಸಲಾಯಿತು. ಕುಧರ್ಮಿಗಳನ್ನು ಇಸ್ಲಾಂಗೆ ಮತಾಂತರಿಸಲಾಯಿತು ಇಲ್ಲವೇ ಕೊಲ್ಲಲಾಯಿತು. ವಿಗ್ರಹವಿರುವ ದೇವಾಲಯಗಳ ಸ್ಥಾನಗಳಲ್ಲಿ ಮಸೀದಿಗಳು ಮತ್ತು ಇತರ ಪೂಜಾಸ್ಥಾನಗಳನ್ನು ನಿರ್ಮಿಸಲಾಯಿತು. ಕುತ್‌ಬಾ ಓದಲಾಯಿತು. ಪ್ರಾರ್ಥನೆಗಳನ್ನು ಮೊಳಗಿಸಲಾಯಿತು. ನಿರ್ದಿಷ್ಟ ಸಮಯಗಳಲ್ಲಿ ಭಕ್ತಿಪೂರ್ವಕ ಕ್ರಿಯೆಗಳನ್ನು ಸಮರ್ಪಿಸಲಾಯಿತು. ಸರ್ವಶಕ್ತನಾದ ದೇವರಿಗೆ ತಕಬೀರ್ ಮತ್ತು ಹೊಗಳಿಕೆಗಳನ್ನು ಪ್ರತಿ ಬೆಳಿಗ್ಗೆ ಅರ್ಪಿಸಲಾಯಿತು."**[೧]

---

೧. ಇಂಡಿಯನ್ ಇಸ್ಲಾಂ, ಡಾ. ಟೈಟಸ್, ಪು.೧೦

ರಾಜನ ತಲೆಯ ಸಮೇತ ಕಳುಹಿಸಲಾದ ಮೇಲ್ಕಂಡ ಸರಕನ್ನು ಪಡೆದ ನಂತರ, ತನ್ನ ಸೇನಾಪತಿಗೆ ಹಜ್ಜಾಜ್ ಈ ಕೆಳಕಂಡ ಉತ್ತರವನ್ನು ಕಳುಹಿಸಿದ.

**"ದೊಡ್ಡವರು ಮತ್ತು ಚಿಕ್ಕವರು ಎಲ್ಲರಿಗೂ ಒಂದೇ ರೀತಿಯಾಗಿ ಸಂರಕ್ಷಣೆ ಒದಗಿಸುವುದನ್ನು ಬಿಟ್ಟರೆ, ಶತ್ರು ಮತ್ತು ಮಿತ್ರರ ನಡುವೆ ಯಾವುದೇ ಭೇದಭಾವ ಮಾಡಬೇಡ. ಕುಧರ್ಮಿಗಳಿಗೆ ಯಾವುದೇ ಆಶ್ರಯ ಕೊಡಬೇಡ. ಆದರೆ ಅವರ ಕತ್ತುಗಳನ್ನು ಕತ್ತರಿಸು ಎಂದು ದೇವರು ಹೇಳುತ್ತಾನೆ. ಇದು ದೇವರ ಮಹಾ ಆಜ್ಞೆಯೆಂದು ತಿಳಿ. ಸಂರಕ್ಷಣೆ ಕೊಡಲು ನೀನು ಸಿದ್ಧನಿರಕೂಡದು. ಯಾಕೆಂದರೆ ಅದರಿಂದ ನಿನ್ನ ಕಾರ್ಯವು ದೀರ್ಘವಾಗುತ್ತದೆ. ಅಲ್ಲದೆ, ಯಾರೇ ಶತ್ರುಗಳಿಗೆ ಅವರು ನಮ್ಮ ಸರಿಸಮಾನರಲ್ಲದಿದ್ದರೆ ಆಶ್ರಯ ಕೊಡಬೇಕು."**[೧]

ಭಾರತದ ತನ್ನ ಅಸಂಖ್ಯಾತ ಧಾಳಿಗಳ ಉದ್ದೇಶ ಪವಿತ್ರ ಯುದ್ಧವೆಂದು ಘಸ್ನಿ ಮಹಮ್ಮದನೂ ಭಾವಿಸಿದ್ದ. ಮಹಮ್ಮದನ ಇತಿಹಾಸಕಾರ ಅಲ್ ಉತ್ ಬಿ, ಆತನ ಧಾಳಿಗಳನ್ನು ವರ್ಣಿಸುತ್ತಾ ಈ ರೀತಿ ಬರೆಯುತ್ತಾನೆ:

**"ವಿಗ್ರಹಗಳಿದ್ದ ದೇವಾಲಯಗಳನ್ನು ಕೆಡವಿ ಇಸ್ಲಾಂ ಸ್ಥಾಪಿಸಿದ. ಆತನು... ನಗರಗಳನ್ನು ಆಕ್ರಮಿಸಿಕೊಂಡ. ಅಪವಿತ್ರರಾಗಿದ್ದ ಪಾಪಿಗಳನ್ನು ಕೊಂದ. ವಿಗ್ರಹಾರಾಧಕರನ್ನು ನಾಶ ಮಾಡುವುದರ ಮೂಲಕ ಮುಸಲ್ಮಾನರನ್ನು ಸಂತೃಪ್ತಿಗೊಳಿಸಿದ. ಅನಂತರ ಆತನು ತನ್ನ ದೇಶಕ್ಕೆ ಹಿಂದಿರುಗಿ, ಇಸ್ಲಾಂಗಾಗಿ ಗಳಿಸಿದ ವಿಜಯಗಳ ಲೆಕ್ಕವನ್ನು ಘೋಷಿಸಿದ. ಅಲ್ಲದೆ, ಪ್ರತಿವರ್ಷವೂ ಹಿಂದೂಗಳ ವಿರುದ್ಧ ಪವಿತ್ರ ಯುದ್ಧ ಮಾಡುತ್ತೇನೆ ಎಂದು ಶಪಥ ಮಾಡಿದ."**[೨]

ಭಾರತದ ಮೇಲಿನ ತನ್ನ ಧಾಳಿಗಳಲ್ಲಿ ಮಹಮ್ಮದ್ ಘೋರಿಯೂ ಕೂಡ ಅದೇ ರೀತಿಯ ಪವಿತ್ರ ಉನ್ಮಾದಗಳಿಂದ ಪ್ರೇರಿತನಾಗಿದ್ದ. ಇತಿಹಾಸಕಾರನಾದ ಹಸನ್ ನಿಸಾಮಿ, ಘೋರಿಯ ಕೃತ್ಯವನ್ನು ಈ ಕೆಳಗಿನ ಮಾತುಗಳಲ್ಲಿ ವರ್ಣಿಸುತ್ತಾನೆ:

**"ಕುಧರ್ಮ ಮತ್ತು ಪಾಪಪೂರಿತ ಹಿಂದೂಗಳ ದೇಶದ ಕೊಳಚೆಯನ್ನು ಆತನು ತನ್ನ ಕತ್ತಿಯ ಸಹಾಯದಿಂದ ತೊಳೆದ. ಅಲ್ಲದೆ, ಬಹುದೇವತಾರಾಧನೆಯ ಮುಳ್ಳು ಮತ್ತು ವಿಗ್ರಹಾರಾಧನೆಯ ಅಪವಿತ್ರತೆಯಿಂದ ಆ ದೇಶವನ್ನು ಮುಕ್ತಗೊಳಿಸಿದ. ತನ್ನ ರಾಜಶಕ್ತಿ ಮತ್ತು ಧೈರ್ಯಗಳಿಂದ ಯಾವುದೇ ಒಂದು ದೇವಾಲಯವೂ ಉಳಿಯಲು ಆತನು ಬಿಡಲಿಲ್ಲ."**[೩]

ತಾನು ಭಾರತದ ಮೇಲೆ ಧಾಳಿ ಮಾಡಲು ಕಾರಣವೇನು ಎಂಬುದನ್ನು ತೈಮೂರನು ಆತ್ಮಕಥೆಯಲ್ಲಿ ವಿವರಿಸಿದ್ದಾನೆ. ಅವನು ಹೀಗೆ ಹೇಳುತ್ತಾನೆ:

---

೧. ಅದೇ ಪು.೧೦, ಟೈಟಸ್‌ನಿಂದ ಉಲ್ಲೇಖಿತ ೬ನೇ, ಪು.೧೧

೨. ಅದೇ, ಪು.೧೧

೩. ಅದೇ ಪು.೧೧

**"ಕುಧರ್ಮಿಗಳ ವಿರುದ್ಧ ಕದನಪರಂಪರೆಯ ನೇತೃತ್ವ ವಹಿಸುವುದೇ ಹಿಂದೂಸ್ಥಾನದ ಮೇಲಿನ ನನ್ನ ದಂಡಯಾತ್ರೆಗಳ ಉದ್ದೇಶ, ಮಹಮ್ಮದ ಮತ್ತು ಆತನ ಕುಟುಂಬ ವರ್ಗದವರ ಮೇಲೆ ದೇವರ ಆಶೀರ್ವಾದವಿರಲಿ, ಮಹಮ್ಮದನ ಆಜ್ಞಾನುಸಾರವಾಗಿ ಕುಧರ್ಮಿಗಳನ್ನು ನಿಜವಾದ ನಂಬಿಕೆಗೆ ಮತಾಂತರಿಸುವುದು. ಅವರಲ್ಲಿನ ಅಪನಂಬಿಕೆಯನ್ನು ಕಳೆಯುವುದನ್ನು ಮತ್ತು ಬಹುದೇವತಾರಾಧನೆಗಳಿಂದ ಆ ಭೂಮಿಯನ್ನು ಮುಕ್ತಗೊಳಿಸಿ, ಪವಿತ್ರಗೊಳಿಸುವುದು, ದೇವಸ್ಥಾನಗಳು ಮತ್ತು ವಿಗ್ರಹಗಳನ್ನು ಧ್ವಂಸ ಮಾಡುವುದು ಮುಂತಾದ ಕಾರ್ಯಗಳನ್ನೆಸಗಿದಾಗ ಘಾಸಿಗಳು ಮತ್ತು ಮುಜಾಹಿದ್‌ಗಳಾದ ನಾವು ದೇವರ ದೃಷ್ಟಿಯಲ್ಲಿ ಧರ್ಮದ ಮಿತ್ರರೂ ಸೈನಿಕರೂ ಆಗುತ್ತೇವೆ."**[೧]

ಭಾರತದ ಮೇಲೆ ಮುಸಲ್ಮಾನರು ಮಾಡಿದ ಈ ಆಕ್ರಮಣಗಳು, ಮುಸಲ್ಮಾನರು ಮುಸಲ್ಮಾನರ ನಡುವೆಯೇ ಆದಂತಹ ಯುದ್ಧಗಳಂತೆಯೇ ಭಾರತದ ಮೇಲೆ ಆಕ್ರಮಣಗಳೂ ಕೂಡ. ಈ ಸತ್ಯಸಂಗತಿ ರಹಸ್ಯವಾಗಿತ್ತು. ಯಾವ ಭೇದಭಾವವನ್ನೂ ಮಾಡದೆ, ಭಾರತದ ಮೇಲಿನ ಆಕ್ರಮಣಕಾರರನ್ನೆಲ್ಲಾ ಮುಸಲ್ಮಾನರೆಂದು ಒಟ್ಟಿಗೆ ಸೇರಿಸಲಾಗಿತ್ತು. ಆದರೆ ವಾಸ್ತವ ಸಂಗತಿಯೆಂದರೆ ಅವರೆಲ್ಲಾ ಟಾರ್ಟರ್ಸ್, ಆಫ್ಘನರು ಮತ್ತು ಮೊಗಲರು. ಘಸ್ನಿ ಮುಹಮ್ಮದ್ ಒಬ್ಬ ಟಾರ್ಟರ್, ಘೋರಿ ಮಹಮ್ಮದ ಒಬ್ಬ ಆಫ್ಘನ್ ಮತ್ತು ತೈಮೂರ್ ಒಬ್ಬ ಮೊಗಲ್. ಬಾಬರ್ ಒಬ್ಬ ಟಾರ್ಟರ್, ನಾದಿರ್ ಶಹ ಮತ್ತು ಅಹಮದ್ ಶಹ ಅಬ್ದಲಿಗಳು ಆಫ್ಘನರು. ಭಾರತದ ಮೇಲೆ ಆಫ್ಘನ್ನರು ಧಾಳಿ ಮಾಡಿದ ಉದ್ದೇಶ ಟಾರ್ಟರರನ್ನು ನಾಶ ಮಾಡುವುದಾಗಿತ್ತು. ಟಾರ್ಟರ್ ಮತ್ತು ಆಫ್ಘನ್ನರಿಬ್ಬರನ್ನೂ ನಾಶ ಮಾಡುವ ಇಚ್ಛೆ ಮೊಗಲರಿಗಿತ್ತು. ಅವರೆಲ್ಲಾ ಅಸ್ಲಾಮಿನ ಸೋದರ ಭಾವದಿಂದ ಬೆಸುಗೆಗೊಂಡ ಒಂದು ಅನುರಾಗಪೂರ್ಣ ಸಮೂಹವಾಗಿರಲಿಲ್ಲ. ಅವರು ಪರಸ್ಪರ ಕಡುವಿರೋಧಿಗಳಾಗಿದ್ದರು. ಅಲ್ಲದೆ, ಅವರು ಮಾಡಿದ ಯುದ್ಧಗಳು ಪರಸ್ಪರ ವಿನಾಶಕಾರಿಯಾಗಿದ್ದವು. ಹಾಗಿದ್ದರೂ, ನಾವು ಮನಸ್ಸಿನಲ್ಲಿಡಬೇಕಾದ ಅಂಶವೆಂದರೆ, ತಮ್ಮ ಎಲ್ಲಾ ಪರಸ್ಪರ ವಿಧ್ವಂಸಕ ಘರ್ಷಣೆಗಳಿದ್ದಾಗ್ಯೂ, ಅವರೆಲ್ಲಾ ಒಂದು ಸಾಮಾನ್ಯ ಉದ್ದೇಶದಿಂದ ಒಂಗಾಗಿದ್ದರು ಎಂಬುದು. ಅದೆಂದರೆ, ಹಿಂದೂಧರ್ಮವನ್ನು ನಾಶ ಮಾಡುವುದು ಮುಂದಿನ ಭಾರತದ ಇತಿಹಾದ ದೃಷ್ಟಿಯಿಂದ ನೋಡಿದಾಗ, ಆಕ್ರಮಣಕಾರರು ಬಳಸಿದ ವಿಧಾನಗಳು, ಪ್ರಾಮುಖ್ಯತೆಯಲ್ಲಿ, ಅವರ ಉದ್ದೇಶಗಳಿಗಿಂತ ಕಡಿಮೆಯಿರಲಿಲ್ಲ.

ಮಹಮ್ಮದ್ ಬಿನ್ ಕಾಸಿಮನ ಧಾರ್ಮಿಕ ಉದ್ರೇಕದ ಮೊದಲ ಕೃತ್ಯವೆಂದರೆ ಆಕ್ರಮಿತ ನಗರವಾದ ದೆಬುಲ್‌ನ ಬ್ರಾಹ್ಮಣರನ್ನು ಬಲಾತ್ಕಾರವಾಗಿ ಮತಾಂತರಗೊಳಿಸುವುದಕ್ಕಾಗಿತ್ತು. ಆದರೆ, ಅವರು ಆ ರೀತಿಯ ಮತಾಂತರಕ್ಕೆ ವಿರೋಧಿಸಿದರೆಂದು ತಿಳಿದಾಗ, ಅವರಲ್ಲಿ ೧೭ ವರ್ಷದ ಮೇಲಿನ ವಯಸ್ಕರನ್ನೆಲ್ಲಾ ಕೊಲ್ಲಲು ಪ್ರಾರಂಭಿಸಿದ. ಅಲ್ಲದೆ, ಉಳಿದವರನ್ನೆಲ್ಲಾ, ಹೆಂಗಸರು ಮಕ್ಕಳಾದಿಯಾಗಿ ಎಲ್ಲರನ್ನೂ ಗುಲಾಮಗಿರಿಗೆ ತಳ್ಳಬೇಕೆಂದು ಆಜ್ಞೆಯಿತ್ತ. ಹಿಂದೂಗಳ ದೇವಾಲಯಗಳನ್ನು ಲೂಟಿ ಮಾಡಲಾಯಿತು ಮತ್ತು ಕೊಳ್ಳೆಹೊಡೆದ ವಿಪುಲ ಸಂಪತ್ತನ್ನು, ಸರ್ಕಾರಕ್ಕೆ ಸಲ್ಲಬೇಕಾದ ಐದರಲ್ಲಿ ಒಂದು ಭಾಗವನ್ನು ತೆಗೆದಿಟ್ಟ ಮೇಲೆ ಎಲ್ಲಾ ಸೈನಿಕರಿಗೆ ಸಮನಾಗಿ ಹಂಚಲಾಯಿತು.

---

೧. ಲೇನ್ ಪೂಲ್ ತನ್ನ ಮೆಡಿಯವಲ್ ಇಂಡಿಯಾದಲ್ಲಿ, ಪು.೧೫೫

ಹಿಂದೂಗಳ ಎದೆಯಲ್ಲಿ ನಡುಕ ಹುಟ್ಟಿಸುವಂತಹ ತಂತ್ರಗಳನ್ನೇ ಘಸ್ನಿ ಮಹಮ್ಮದನು ಮೊದಲಿನಿಂದಲೂ ಅಳವಡಿಸಿಕೊಂಡಿದ್ದ. ಕ್ರಿ.ಶ.೧೦೦೧ರಲ್ಲಿ, ರಾಜಾ ಜಯಪಾಲನ ಪರಾಜಯದ ನಂತರ, ಆತನನ್ನು ಬೀದಿಗಳಲ್ಲಿ ಎಳೆದೊಯ್ಯಬೇಕೆಂಬ ಆಜ್ಞೆಯಿತ್ತ. ಯಾಕೆಂದರೆ ಜಯಪಾಲನ ಅಪಮಾನ, ಆತನ ಬಂಧನ ಮತ್ತು ಮಾನಭಂಗಗಳನ್ನು ಆತನ ಮಕ್ಕಳು ಮತ್ತು ಸಾಮಂತರು ನೋಡಬೇಕೆಂದೂ ಮತ್ತು ಕುಧರ್ಮಿಗಳ ದೇಶದ ಮೂಲಕ ಇಸ್ಲಾಂನ ಭೀತಿಯು ಹೊರದೇಶಗಳಿಗೂ ತಲುಪಿಸಬೇಕೆಂಬುದು ಅವರ ಉದ್ದೇಶ."

**"ಕುಧರ್ಮಿಗಳನ್ನು ಬಲಿ ಕೊಡುವುದು ಮಹಮ್ಮದನಿಗೆ ವಿಶೇಷ ಸಂತುಷ್ಟಿಯನ್ನು ಕೊಟ್ಟ ಏಕೈಕ ಸಂಗತಿಯೆಂದು ತೋರುತ್ತದೆ. ಕ್ರಿ.ಶ. ೧೦೧೯ರಲ್ಲಿ ಚಾಂದ್‌ರಾಯ್ ಮೇಲೆ ಮಾಡಲಾದ ಒಂದು ಧಾಳಿಯಲ್ಲಿ ಅನೇಕ ಕುಧರ್ಮಿಗಳನ್ನು ಕೊಲ್ಲಲಾಯಿತು ಅಥವಾ ಸೆರೆಯಾಳುಗಳಾಗಿ ಒಯ್ಯಲಾಯಿತು. ಕುಧರ್ಮಿಗಳನ್ನು ಬಲಿಕೊಟ್ಟು ಮತ್ತು ಸೂರ್ಯ ಮತ್ತು ಅಗ್ನಿಪೂಜಕರನ್ನು ಕೊಂದು ತಮ್ಮನ್ನು ತಾವೇ ತೃಪ್ತಿಪಡಿಸಿಕೊಳ್ಳುವ ಕೃತ್ಯ ಮುಸಲ್ಮಾನರಿಗೆ ಅವರು ಕೊಳ್ಳೆ ಹೊಡೆದ ಸಂಪತ್ತಿಗಿಂತ ಹೆಚ್ಚು ಮಾನ್ಯವಾಗಿತ್ತು. ಮೂರ್ತಿಗಳನ್ನು ಕೈಬಿಟ್ಟು, ಇಸ್ಲಾಂ ಧರ್ಮದ ಸೇವೆಗೆ ಒಲಿದ ಹಿಂದೂ ಸೈನ್ಯದ ಆನೆಗಳು ಇಷ್ಟಪಟ್ಟು ಮಹಮ್ಮದನತ್ತ ಬಂದವು ಎಂದು ಇತಿಹಾಸಕಾರನು ಉದ್ಗಾರ ಎಳೆದಿದ್ದಾನೆ."***

ಮಹಮ್ಮದ್ ಭಕ್ತರ್ ಖಿಲ್ಜಿಯು ಬಿಹಾರನ್ನು ಆಕ್ರಮಿಸಿಕೊಂಡಾಗ ಅದರಂತೆಯೇ, ಹಿಂದೂಗಳ ಕಗ್ಗೊಲೆಯು ಅವರ ಸ್ವಂತ ಸಂಸ್ಕೃತಿಗೆ ಹಿನ್ನಡೆಯುಂಟುಮಾಡಿದುದು ಅಪರೂಪವೇನಲ್ಲ. ಆತನು ನುಡ್ಡಿಯಾ (ಬಿಹಾರ)ವನ್ನು ವಶಪಡಿಸಿಕೊಂಡಾಗ ಏನಾಯಿತೆಂಬುದನ್ನು ತಬಖತ್–ಇ–ನಸಿರಿ ನಮಗೆ ಹೀಗೆ ತಿಳಿಸುತ್ತಾನೆ:

**"ಜಯಶಾಲಿಗಳ ಕೈಗೆ ಕೊಳ್ಳೆ ಹೊಡೆದ ಅಪಾರ ಸಂಪತ್ತು ಸಿಕ್ಕಿತು. ಅಲ್ಲಿನ ನಿವಾಸಿಗಳಲ್ಲಿ ಬಹುಮಂದಿ ತಲೆ ಬೋಳಿಸಿಕೊಂಡಿದ್ದ ಬ್ರಾಹ್ಮಣರು. ಅವರನ್ನು ಕೊಲ್ಲಲಾಯಿತು. ಇಡೀ ಕೋಟೆ ಮತ್ತು ನಗರ ಅಧ್ಯಯನ ಕೇಂದ್ರವಾಗಿದ್ದುದರಿಂದ, ಅಪಾರ ಸಂಖ್ಯೆಯಲ್ಲಿ ಪುಸ್ತಕಗಳು ಸಿಕ್ಕಿದವು. ಆದರೆ ಅಲ್ಲಿನ ಎಲ್ಲಾ ಜನರನ್ನು ಕೊಂದದ್ದರಿಂದ, ಆ ಪುಸ್ತಕಗಳಲ್ಲಿ ಏನಿದ್ದಿತೆಂಬುದನ್ನು ಯಾರು ವಿವರಿಸಲಾರರು."**

ಈ ವಿಷಯಕ್ಕೆ ಸಂಬಂಧಿಸಿದ ಪುರಾವೆಯನ್ನು ಸಂಕ್ಷೇಪಿಸುತ್ತಾ ಡಾ. ಟೈಟಸ್ ಹೀಗೆ ನಿರ್ಣಯಿಸುತ್ತಾನೆ:

**"ಈ ದೇವಾಲಯಗಳನ್ನು ನಾಶ ಮಾಡಿದ ಮತ್ತು ವಿಗ್ರಹಗಳನ್ನು ಹೊಲೆಗೆಡಿಸಿದ ಕೃತ್ಯಗಳಿಗೆ ಸಂಬಂಧಿಸಿದಂತೆ ನಮಗೆ ವಿಪುಲವಾದ ಆಧಾರಗಳಿವೆ. ಮಹಮ್ಮದ್ ಬಿನ್ ಕಾಸಿಂ ಸಿಂದ್‌ನಲ್ಲಿ ತನ್ನ ವಿನಾಶಕಾರೀ ಯೋಜನೆಯನ್ನು ವ್ಯವಸ್ಥಿತವಾಗಿ ಕಾರ್ಯರೂಪಕ್ಕೆ ತಂದನೆಂಬುದನ್ನು ನಾವು ನೋಡಿದ್ದೇವೆ. ಆದರೆ ವರಮಾನದ ಕಾರಣಕ್ಕಾಗಿ ಆತನು ಮುಲ್ತಾನಿನ ದೇವಾಲಯವೊಂದಕ್ಕೆ ರಿಯಾಯಿತಿ ತೋರಿಸಿದ್ದು ಗಮನಾರ್ಹ. ಅಲ್ಲಿನ ವಿಗ್ರಹಕ್ಕೆ ಅಪಾರ ಕಾಣಿಕೆಗಳನ್ನು ಕೊಡುತ್ತಿದ್ದ ಯಾತ್ರಿಕರ ತಂಗುದಾಣವಾಗಿತ್ತು ಆ ದೇವಾಲಯ. ಆ ದೇವಾಲಯವನ್ನು ಹಾಗೇ ಇರಲು ಬಿಟ್ಟು, ಆತ ತನ್ನ ಧನಪಿಶಾಚಿಯನ್ನು**

---

* ಡಾ. ಟೈಟಸ್ ಇಂಡಿಯನ್ ಇಸ್ಲಾಂ, ಪು.೨೨

**ತಣಿಸಿಕೊಂಡರೂ ಕೂಡ, ಆ ವಿಗ್ರಹದ ಕತ್ತಿನ ಸುತ್ತ ಹಸುವಿನ ಮಾಂಸವನ್ನು ಕಟ್ಟಿಸುವುದರ ಮೂಲಕ ಆತನು ತನ್ನ ದ್ವೇಷವನ್ನು ಪ್ರಕಟಿಸಿದ.**

**"ಸಾವಿರದಷ್ಟು ಸಂಖ್ಯೆಯಲ್ಲಿ ದೇವಾಲಯಗಳನ್ನು ನಾಶ ಮಾಡಿದವನೆಂದು ಮಹಮ್ಮದನ ಹೆಸರು ಎಲ್ಲಾ" ಕಡೆಯೂ ಹರಡಿತು ಎಂದು ಮಿನ್ ಹಜ್-ಅಸ್-ಸಿರಾಜ್ ತಿಳಿಸುತ್ತಾನೆ. ಸೋಮನಾಥ ದೇವಾಲಯವನ್ನು ನಾಶ ಮಾಡಿ ಅಲ್ಲಿನ ವಿಗ್ರಹವನ್ನು ತನ್ನ ನಾಡಿಗೆ ಸಾಗಿಸುವಲ್ಲಿ ಆತನು ಮಹಾಸಾಹಸವನ್ನು ತೋರಿಸಿದನೆಂದೂ ಹೇಳಲಾಗಿದೆ. ವಿಗ್ರಹವನ್ನು ನಾಲ್ಕು ಭಾಗಗಳಾಗಿ ಮಾಡಲಾಯಿತು ಎಂದು ಆತ ತನ್ನನ್ನು ತಾನೇ ಸಮರ್ಥಿಸಿಕೊಳ್ಳುತ್ತಾನೆ. ಒಂದು ಭಾಗವನ್ನು ಘಸ್ನಿಯ ಜಾಮಿ ಮಸೀದಿಯಲ್ಲಿ ಮುಡುಪಿಟ್ಟು, ಮತ್ತೊಂದು ಭಾಗವನ್ನು ಅರಮನೆಯ ದ್ವಾರದಲ್ಲಿಟ್ಟ, ಮೂರನೆಯ ಭಾಗವನ್ನು ಮೆಕ್ಕಾಕ್ಕೂ ಮತ್ತು ನಾಲ್ಕನೆಯ ಭಾಗವನ್ನು ಮದೀನಕ್ಕೂ ಕಳುಹಿಸಿದ."***

"ಹಿಂದೂಸ್ಥಾನದ ಕುಧರ್ಮಿಗಳ ವಿರುದ್ಧ ಪ್ರತಿವರ್ಷವೂ ಧರ್ಮಯುದ್ಧವನ್ನು ಮಾಡುತ್ತೇನೆ" ಎಂದು ಪ್ರತಿಜ್ಞೆ ಮಾಡಿದ್ದ ಘಸ್ನಿ ಮಹಮ್ಮದನು ಸೋಮನಾಥ ದೇವಾಲಯವು ಅಲಂಘ್ಯವಾಗಿ ಉಳಿದಿರುವವರೆಗೂ ತನ್ನ ವಿಗ್ರಹ ಭಂಜನ ಧಾಳಿಗಳಿಂದ ವಿಶ್ರಾಂತನಾಗಲಿಲ್ಲ ಎಂದು ಲೇನ್ ಪೂಲೆ ಹೇಳುತ್ತಾನೆ. ಆ ವಿಶೇಷ ಉದ್ದೇಶ ಸಾಧನೆಗಾಗಿಯೇ ಆತನು ತನ್ನ ಜೀವಿತದ ಕೊನೆಗಾಲದಲ್ಲಿಯೂ ಸಮುದ್ರತೀರದಲ್ಲಿ ಮುಲ್ತಾನಿನಿಂದ ಅನ್ಹಾಲ್ವಾರದವರೆಗಿನ ಮರಳುಭೂಮಿಯಲ್ಲಿಯೇ ಅತಿಪ್ರಯಾಸಕರ ದಂಡಯಾತ್ರೆ ಕೈಗೊಂಡ ದಾರಿಯುದ್ದಕ್ಕೂ, ದಾಳಿ ಮಾಡಿಕೊಂಡು ಬಂದು ಸೋಮನಾಥ ದೇವಾಲಯವನ್ನು ಕಂಡ:

**"ಅಲ್ಲಿ ಒಂದು ನೂರು ಸಾವಿರ ಯಾತ್ರಿಕರು ಕಿಕ್ಕಿರಿದು ನೆರೆದಿದ್ದರು. ಸಾವಿರ ಬ್ರಾಹ್ಮಣರು ದೇವಾಲಯದ ಸೇವೆಯಲ್ಲಿ ನಿರತರಾಗಿದ್ದರು ಮತ್ತು ಅದರ ಸಂಪತ್ತನ್ನು ಸಂರಕ್ಷಿಸುತ್ತಿದ್ದರು. ನೂರಾರು ನರ್ತಕಿಯರು ಮತ್ತು ಹಾಡುಗಾರರು ದೇವಲಯದ ಪ್ರವೇಶದ್ವಾರದಲ್ಲಿ ಕುಣಿಯುತ್ತಿದ್ದರು ಮತ್ತು ಹಾಡುತ್ತಿದ್ದರು. ದೇವಾಲಯದ ಗರ್ಭಗುಡಿಯಲ್ಲಿ ಸುಪ್ರಸಿದ್ಧ ಲಿಂಗವು ನಿಂತಿತ್ತು. ಅದು ಒಂದು ಒರಟುಕಲ್ಲಿನ ಕಂಬ ರತ್ನಾಭರಣಗಳಿಂದ ಅಲಂಕರಿಸಲ್ಪಟ್ಟಿತ್ತು. ಜೋತುಬಿದ್ದ ಕವಲು ದೀಪಸ್ತಂಭಗಳ ಬೆಳಕಿನಿಂದ ಪ್ರತಿಫಲಿಸಿತ್ತು. ನಕ್ಷತ್ರಗಳಂತೆ ಹೊಳೆಯುತ್ತಿದ್ದ ಅತ್ಯಮೂಲ್ಯ ರತ್ನಗಳು ಗರ್ಭಗುಡಿಯಲ್ಲಿ ಕಲಾತ್ಮಕವಾಗಿ ಹದಿಯಲ್ಪಟ್ಟಿದ್ದವು. ಅದರ ರಕ್ಷಣಾಂಗಣದಲ್ಲಿ ನಂಬಲಾಗದಷ್ಟು ಸಂಖ್ಯೆಯಲ್ಲಿ ಬ್ರಾಹ್ಮಣರು ಸಂದಣಿಸಿದ್ದರು. ಪರದೇಶೀ ಕುಧರ್ಮಿಗಳ ನಿರರ್ಥಕ ಅಹಂಕಾರವನ್ನು ಅವರು ಅಣಕಿಸುತ್ತಿದ್ದರು. ಆ ಕುಧರ್ಮಿಗಳನ್ನು ಸೋಮನಾಥದೇವನು ನಿಶ್ಚಯವಾಗಿಯೂ ಕಬಳಿಸುತ್ತಾನೆಂದು ನಂಬಿದ್ದರು. ಆದರೆ ಪರದೇಶಿಗಳು ಯಾವುದಕ್ಕೂ ಬೆದರದೆ ಗೋಡೆಗಳನ್ನು ಹತ್ತಿದರು. ತನ್ನ ಸೇವಕರ ತ್ವರಿತ ಆರ್ತನಾದಕ್ಕೆ ದೇವರು ಮೂಕನಾಗಿ ಉಳಿದ. ತಮ್ಮ ನಂಬಿಕೆಯಿಂದಾಗಿ ಐವತ್ತು ಸಾವಿರ ಹಿಂದೂಗಳು ಯಾತನೆಯನ್ನು ಅನುಭವಿಸಬೇಕಾಯಿತು. ಅಲ್ಲದೆ ನಿಜವಾದ ಭಕ್ತರ ಸಂತೋಷಕ್ಕಾಗಿ ಆ ಪವಿತ್ರ ಗರ್ಭಗುಡಿಯನ್ನು ಧ್ವಂಸ ಮಾಡಲಾಯಿತು. ಆ ಬೃಹತ್ ಕಲ್ಲನ್ನು ಒಡೆದು ಕೆಡವಲಾಯಿತಲ್ಲದೆ ಅದರ ಚೂರುಗಳನ್ನು ವಿಜಯಿಗಳ ಅರಮನೆಯ ಶೃಂಗಾರಕ್ಕಾಗಿ ಕೊಂಡೊಯ್ಯಲಾಯಿತು. ದೇವಾಲಯದ ದ್ವಾರಗಳನ್ನು**

---

* ಅದೇ, ಪುಟಗಳು ೨೨-೨೩

**ಘಸ್ನಿಯಲ್ಲಿ ಅಳವಡಿಸಲಾಯಿತಲ್ಲದೆ, ಆ ವಿಗ್ರಹ ಭಂಜಕನಿಗೆ ದಶಲಕ್ಷ ಪೌಂಡು ಬೆಲೆಯ ಸಂಪತ್ತಿನ ಬಹುಮಾನ ದೊರೆತಂತಾಯಿತು."[೧]**

ಘಸ್ನಿ ಮಹಮ್ಮದನು ಪ್ರಾರಂಭಿಸಿದ ಕಾರ್ಯವು ಒಂದು ಪವಿತ್ರ ಸಂಪ್ರದಾಯವಾದಂತಾಯಿತು. ಅವನ ನಂತರ ಬಂದ ಧಾಳಿಕೋರರು ಚಾಚೂ ತಪ್ಪದೆ ಅವನನ್ನು ಅನುಸರಿಸಿದರು.

ಇದಕ್ಕೆ ಸಂಬಂಧಿಸಿದಂತೆ ಡಾ.ಟೈಟಸ್ ಹೇಳಿರುವ ಮಾತುಗಳು ಹೀಗಿವೆ:[೨]

**"ಘಸ್ನಿ ಮಹಮ್ಮದನ ನಂತರ ಬಂದ ಉತ್ಸಾಹಶಾಲಿ ಧಾಳಿಕೋರರಲ್ಲಿ ಒಬ್ಬನಾದ ಘೋರಿ ಮಹಮ್ಮದನು ತನ್ನ ಅಜ್ಮೀರ್ ಆಕ್ರಮಣದಲ್ಲಿ ವಿಗ್ರಹವಿರುವ ದೇವಾಲಯಗಳ ಕಂಬಗಳು ಮತ್ತು ಅಡಿಗಲ್ಲುಗಳನ್ನು ನಾಶ ಮಾಡಿದರು. ಅಲ್ಲದೆ, ಅವುಗಳ ಸ್ಥಳದಲ್ಲಿ ಮಸೀದಿಗಳು ಮತ್ತು ವಿದ್ಯಾಶಾಲೆಗಳನ್ನು ಕಟ್ಟಿಸಿದನು. ಇಸ್ಲಾಂ ಮೂಲ ತತ್ತ್ವಗಳನ್ನೂ ಮತ್ತು ನ್ಯಾಯಾಚರಣೆಗಳನ್ನು ಪ್ರಚಾರಪಡಿಸಿ ಸ್ಥಾಪಿಸಿದನು. ದೆಹಲಿಯಲ್ಲಿ ನಗರ ಮತ್ತು ಸುತ್ತಮುತ್ತಲ ಪ್ರದೇಶಗಳನ್ನು ವಿಗ್ರಹಗಳು ಮತ್ತು ವಿಗ್ರಹಾರಾಧನೆಗಳಿಂದ ಮುಕ್ತಗೊಳಿಸಲಾಯಿತಲ್ಲದೆ ದೇವರ ವಿಗ್ರಹಗಳಿದ್ದ ಪೂಜಾ ಸ್ಥಳಗಳಲ್ಲಿ ಏಕದೇವ ಆರಾಧಕರು ಮಸೀದಿಗಳನ್ನು ನಿರ್ಮಿಸಿದರು."**

**"ಕುತುಬ್-ಉದ್ ದಿನ್ ಐಬಕನೂ ಕೂಡ, ಸುಮಾರು ಒಂದು ಸಾವಿರ ದೇವಲಯಗಳನ್ನು ನಾಶಪಡಿಸಿ, ಅವುಗಳ ಸ್ಥಾನದಲ್ಲಿ ಮಸೀದಿಗಳನ್ನು ಕಟ್ಟಿಸಿದನೆಂದು ಹೇಳಲಾಗುತ್ತದೆ. ಆತನು ದೆಹಲಿಯ ಜಾಮಾ ಮಸೀದಿಗಳನ್ನು ಕಟ್ಟಿಸಿದನಲ್ಲದೆ, ಆನೆಗಳಿಂದ ಕೆಡವಿಸಲಾದ ದೇವಾಲಯಗಳಿಂದ ಪಡೆದ ಕಲ್ಲುಗಳು ಮತ್ತು ಚಿನ್ನದಿಂದ ಆ ಮಸೀದಿಯನ್ನು ಅಲಂಕರಿಸಿದನೆಂದು ಅದೇ ಲೇಖಕ ತಿಳಿಸುತ್ತಾನೆ. ಆ ಕಲ್ಲುಗಳ ತುಂಬಾ ಕುರಾನಿನಲ್ಲಿದ್ದ ದೇವರ ಆಜ್ಞೆಗಳನ್ನು ಕೊರೆಸಿದನು. ಈ ಭಯಾನಕ ಪ್ರಕ್ರಿಯೆಯನ್ನು ವ್ಯವಸ್ಥಿತವಾಗಿ ಕಾರ್ಯರೂಪಕ್ಕೆ ತರಲಾಯಿತು ಎಂಬುದಕ್ಕೆ ನಮಗೆ ದೆಹಲಿಯಲ್ಲಿರುವ ಇದೇ ಮಸೀದಿಯ ಪೂರ್ವದ್ವಾರದ ಮೇಲೆ ಈಗಲೂ ಇರುವ ಶಾಸನದಿಂದ ಇನ್ನೂ ಹೆಚ್ಚಿನ ಪುರಾವೆ ದೊರೆತಿದೆ. ಈ ಶಾಸನದ ಪ್ರಕಾರ, ಮಸೀದಿಯನ್ನು ಕಟ್ಟಲು ವಿಗ್ರಹಗಳಿದ್ದ ೨೭ ದೇವಾಲಯಗಳಿಂದ ತಂದ ಸಾಮಗ್ರಿಗಳನ್ನು ಬಳಸಲಾಗಿದೆ. "ಕುತುಬ್-ಉದ್-ದಿನ್ ಕಟ್ಟಿಸಿದ ಮಿನಾರ್‌ಗೆ ಪ್ರತಿಸ್ಪರ್ಧಿಯಾಗಿ ನಿಲ್ಲುವಂತಹ ಎರಡನೇ ಮಿನಾರ್ ಅನ್ನು ಜಾಮಾ ಮಸೀದಿ ಕಟ್ಟಿಸುವ ತನ್ನ ಉತ್ಸುಕತೆಯಲ್ಲಿ, ಅಲ್ಲಾ-ಉದ್ ದಿನ್, ಬೆಟ್ಟಗಳಿಂದ ಕಲ್ಲುಗಳನ್ನು ಕೀಳಿಸಿದ್ದು ಮಾತ್ರವಲ್ಲದೆ, ಹೆಚ್ಚಿನ ಸರಬರಾಜಿಗಾಗಿ, ಕುಧರ್ಮಿಗಳ ದೇವಾಲಯಗಳನ್ನು ನೆಲಸಮ ಮಾಡಿಸಿದ ಎಂದು ಅಮೀರ್ ಖುಸ್ರು ಹೇಳಿದ್ದಾನೆ. ತನ್ನ ಪೂರ್ವೀಕರು ಉತ್ತರ ಭಾರತದಲ್ಲಿ ಮಾಡಿದಂತೆಯೇ, ದಕ್ಷಿಣದ ತನ್ನ ದಂಡಯಾತ್ರೆಗಳಲ್ಲಿ ಅಲ್ಲಾ-ಉದ್-ದೀನನು ದೇವಾಲಯಗಳನ್ನು ನಾಶಪಡಿಸಿದನು.**

**"ಹೊಸ ದೇವಾಲಯಗಳನ್ನು ಕಟ್ಟಿಸಲು ಧೈರ್ಯ ಮಾಡಿದ ಹಿಂದೂಗಳನ್ನು ತಾನು ಹೇಗೆ ಶಿಕ್ಷಿಸಿದೆನೆಂಬುದನ್ನು**

---

೧. ಲೇನ್ ಪುಲ್: ಮೆಡಿಯವಲ್ ಇಂಡಿಯಾ, ಪು.೨೬

೨. ಡಾ. ಟೈಟಸ್: ಇಂಡಿಯನ್ ಇಸ್ಲಾಂ, ಪು.೨೩-೨೪.

**ಸುಲ್ತಾನ್ ಫಿರೋಜ್‌ಶಹ ತನ್ನ ಫೂತುಹತ್‌ನಲ್ಲಿ ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾನೆ. ನಗರ (ದೆಹಲಿ) ಮತ್ತು ಅದರ ಸುತ್ತಮುತ್ತ ದೇವಾಲಯಗಳನ್ನು ಕಟ್ಟುವ ಪ್ರಯತ್ನಗಳನ್ನು ಸಹಿಸಕೂಡದು ಎಂದು ಪ್ರವಾದಿಯ ಕಟ್ಟಳೆಯನ್ನು ಘೋಷಿಸಲಾಗಿತ್ತು. ಆ ಕಟ್ಟಳೆಗೆ ವಿರುದ್ಧವಾಗಿ ಅವರು ದೇವಾಲಯಗಳನ್ನು ಕಟ್ಟಲು ಯತ್ನಿಸಿದಾಗ ನಾವು ಅವುಗಳ ತಳಹದಿಗಳನ್ನೇ ಧ್ವಂಸ ಮಾಡಿದೆವು. ಆ ಕುಧರ್ಮಿಗಳ ನಾಯಕರನ್ನು ನಾನು ಕೊಲ್ಲಿಸಿದೆ ಮತ್ತು ಇತರರನ್ನು ಬಾರೇಟುಗಳಿಂದ ಶಿಕ್ಷಿಸಿದೆ. ದುರುಪಯೋಗವು ಪೂರ್ಣವಾಗಿ ನಿಲ್ಲುವವರೆಗೂ ಆ ಶಿಕ್ಷೆ ಮುಂದುವರಿಯಿತು. ಕುಧರ್ಮಿಗಳು ಮತ್ತು ವಿಗ್ರಹಾರಾಧಕರ ಪೂಜಾಸ್ಥಳಗಳಲ್ಲಿ ಇಂದು ದೇವರ ದಯೆಯಿಂದ ಮುಸಲ್ಮಾನರು ನಿಜವಾದ ದೇವರಿಗೆ ಭಕ್ತಿಯನ್ನು ಸಮರ್ಪಿಸುತ್ತಿದ್ದಾರೆ."**

ಷಹಜಹಾನನ ಆಳ್ವಿಕೆಯಲ್ಲಿಯೂ ಕೂಡ, ಹಿಂದೂಗಳು ಪುನಃ ದೇವಾಲಯಗಳನ್ನು ಕಟ್ಟಲು ತೊಡಗಿದಾಗ ಅವುಗಳನ್ನು ನಾಶ ಮಾಡಿದ ಬಗ್ಗೆ ನಾವು ಓದಿದ್ದೇವೆ. ಹಿಂದುಗಳ ಧರ್ಮ ಶ್ರದ್ಧೆಯ ಮೇಲೆ ನಡೆದ ಈ ನೇರ ಆಕ್ರಮಣದ ವರದಿಯೊಂದು ಬಾದ್ ಷಹಾನಾಮಹ್‌ನಲ್ಲಿ ಕ್ರಮಬದ್ಧವಾಗಿ ದಾಖಲಾಗಿದೆ:

**"ಕಳೆದ (ಅಕ್ಬರನ) ಆಳ್ವಿಕೆಯ ಕೊನೆಯ ದಿನಗಳಲ್ಲಿ ಅನೇಕ ವಿಗ್ರಹ ದೇವಾಲಯಗಳು ಪ್ರಾರಂಭವಾಗಿ ಕುಧರ್ಮದ ಅತ್ಯಂತ ಪ್ರಬಲ ಸ್ಥಳವಾದ ಕಾಶಿಯಲ್ಲಿ ಅರ್ಧಕ್ಕೇ ನಿಂತಿವೆ. ಈಗ ಅವುಗಳನ್ನು ಪೂರ್ಣಗೊಳಿಸುವ ಇಚ್ಛೆಯಿಂದ ಕುಧರ್ಮಿಗಳು ಪ್ರಯತ್ನಶೀಲರಾಗಿದ್ದಾರೆ ಎಂಬ ಸಮಾಚಾರವನ್ನು ಮಹಾಪ್ರಭುವಿನ ಗಮನಕ್ಕೆ ತರಲಾಯಿತು ಎಂದು ಇತಿಹಾಸಕಾರನು ಬರೆಯುತ್ತಾನೆ, ಧರ್ಮ ಸಂರಕ್ಷಕನಾದ ಮಹಾಪ್ರಭುವು ಕಾಶಿಯಲ್ಲಿ ಮತ್ತು ತನ್ನ ಸಮಸ್ತ ಸಾಮ್ರಾಜ್ಯದಾದ್ಯಂತ ಕಟ್ಟಲು ಪ್ರಾರಂಭಿಸಲಾಗಿರುವ ದೇವಾಲಯಗಳನ್ನೆಲ್ಲಾ ನೆಲಸಮ ಮಾಡಬೇಕೆಂದು ಆಜ್ಞೆ ಹೊರಡಿಸಿದನು. ಕಾಶಿ ಜಿಲ್ಲೆಯಲ್ಲಿ[೧], ೭೬ ದೇವಾಲಯಗಳನ್ನು ನಾಶಪಡಿಸಲಾಯಿತೆಂದು ಅಲಹಾಬಾದ್ ಪ್ರಾಂತದಿಂದ ವರದಿ ಮಾಡಲಾಯಿತು.**

ವಿಗ್ರಹಾರಾಧನೆಯನ್ನು ನಾಶ ಮಾಡಲು ಅಂತಿಮ ಪ್ರಯತ್ನ ನಡೆಸುವ ಹೊಣೆಗಾರಿಕೆ ಔರಂಗಜೇಬನದು. 'ಮ' ಅಥಿರ್–ಇ–ಅಲಂಗಿರಿಯ ಲೇಖಕ ಔರಂಗಜೇಬನು ಹಿಂದೂ ಬೋಧನೆಯನ್ನು ತುಚ್ಛೀಕರಿಸಿದ್ದನ್ನೂ ಮತ್ತು ಹಿಂದೂ ದೇವಾಲಯಗಳನ್ನು ನಾಶಪಡಿಸಿದ್ದನ್ನೂ ಈ ಕೆಳಗಿನ ಮಾತುಗಳಲ್ಲಿ ಉತ್ಪ್ರೇಕ್ಷೆ ಮಾಡಿ ಹೇಳುತ್ತಾನೆ:

**"ಕ್ರಿ.ಶ. ೧೬೬೯ರನೇ ಏಪ್ರಿಲ್‌ನಲ್ಲಿ ಥತ್ತಾ, ಮುಲ್ತಾನ್ ಮತ್ತು ಕಾಶಿ ಪ್ರಾಂತಗಳಲ್ಲಿ, ಅದರಲ್ಲಿಯೂ ಹೆಚ್ಚಾಗಿ ಕೊನೆಯದರಲ್ಲಿ ಅವಿವೇಕಿ ಬ್ರಾಹ್ಮಣರು ತಮ್ಮ ಶಾಲೆಗಳಲ್ಲಿ ತಿರುಳಿಲ್ಲದ ಪುಸ್ತಕಗಳನ್ನು ವ್ಯಾಖ್ಯಾನಿಸುವ ಅಭ್ಯಾಸದಲ್ಲಿ ತೊಡಗಿದ್ದಾರೆ. ವಿದ್ಯಾರ್ಥಿಗಳು, ಮುಸಲ್ಮಾನರು ಹಾಗೂ ಹಿಂದೂಗಳು ಬಹಳ ದೂರದ ಸ್ಥಳಗಳಿಂದ ಅಲ್ಲಿಗೆ ಹೋಗಿದ್ದಾರೆ ಎಂದು ಔರಂಗಜೇಬನಿಗೆ ತಿಳಿಯಿತು. ತತ್ಪರಿಣಾಮವಾಗಿ, ಆ ಧರ್ಮ ನಿರ್ದೇಶಕನು, ಕುಧರ್ಮಿಗಳ ಶಾಲೆಗಳು ಪ್ರಾಂತಗಳ ಗವರ್ನರುಗಳಿಗೆ ಆಜ್ಞೆಯನ್ನು ಹೊರಡಿಸಿದ.**

---

೧. ಡಾ. ಟೈಟಸ್: ಇಂಡಿಯನ್ ಇಸ್ಲಾಂ, ಪು.೨೪

೨. ಅದೇ, ಪು.೨೨

ಅಲ್ಲದೆ, ವಿಗ್ರಹಾರಾಧನೆಯ ಅನುಷ್ಠಾನ ಅವರಿಗೆ ಆಜ್ಞೆಯತ್ತ... ಕಾಶಿಯ ವಿಶ್ವನಾಥ ದೇವಾಲಯ[೨]ವನ್ನು ಸರ್ಕಾರಿ ಅಧಿಕಾರಿಗಳು ನಾಶ ಮಾಡಿದರು ಎಂದು ಅನಂತರ ಧಾರ್ಮಿಕ ಮಹಾಪ್ರಭುವಿಗೆ ವರದಿ ಮಾಡಲಾಯಿತು."

ಡಾ.ಟೈಟಸ್ ಹೀಗೆ ಕಂಡಿದ್ದಾನೆ:

"ಮುಹಮ್ಮದ್ ಮತ್ತು ತೈಮೂರನಂತಹ ಅಕ್ರಮಕಾರರು, ವಿಗ್ರಹ ಭಂಜನೆ ಮತ್ತು ಕೊಳ್ಳೆ ಹೊಡೆಯುವುದರ ಜೊತೆಗೆ, ಕುಧರ್ಮಿಗಳನ್ನು ಬಲಾತ್ಕಾರವಾಗಿ ಮತಾಂತರಗೊಳಿಸುವುದಕ್ಕೆ ಹೆಚ್ಚಾಗಿ, ಸೆರೆಸಿಕ್ಕವರನ್ನು ಗುಲಾಮರನ್ನಾಗಿಸಿಕೊಳ್ಳುವುದು ಮತ್ತು ಉಳಿದವರನ್ನು ರಕ್ತಸಿಂಚಿತ ಕತ್ತಿಗಳಿಂದ ನರಕಕ್ಕೆ ಕಳುಹಿಸುವುದರಲ್ಲಿ ಹೆಚ್ಚು ಆಸಕ್ತರಾಗಿದ್ದರಂತೆ ಕಾಣುತ್ತದೆ. ಆದರೆ ಆಡಳಿತಗಾರರು ಶಾಶ್ವತವಾಗಿ ನೆಲಸಿದ ನಂತರ, ಮತಾಂತರಗೊಂಡವರನ್ನು ಒಲಿಸಿಕೊಳ್ಳುವ ವಿಷಯ ಅತ್ಯಂತ ತುರ್ತಾದಂತೆ ಕಾಣುತ್ತದೆ. ಇಸ್ಲಾಂ ಅನ್ನು ಇಡೀ ದೇಶದ ಧರ್ಮವನ್ನಾಗಿ ಸ್ಥಾಪಿಸುವುದು ರಾಜ್ಯದ ಧೋರಣೆಯ ಅಂಶವಾಗಿತ್ತು."

"ದೇವಾಲಯಗಳನ್ನು ನಾಶಪಡಿಸುವಲ್ಲಿ, ಹೆಚ್ಚುಕಡಿಮೆ ಮುಹಮ್ಮದನಷ್ಟೇ ಹೆಚ್ಚು ಪ್ರಸಿದ್ಧಿ ಪಡೆದಿದ್ದ ಕುತುಬ್–ಉದ್–ದಿನ್ ಹನ್ನೆರಡನೇ ಶತಮಾನದ ಕೊನೆಯ ಭಾಗದಲ್ಲಿ ಮತ್ತು ಹದಿಮೂರನೇ ಶತಮಾನದ ಮೊದಲ ವರ್ಷಗಳಲ್ಲಿ ಮತಾಂತರಕ್ಕೆ ಆಸೆ, ಆಮಿಷಗಳನ್ನು ತೋರಿಸುವುದರ ಜೊತೆಗೆ ಆಗಾಗ್ಗೆ, ಬಲಾತ್ಕಾರಕ್ಕೆ ತೊಡಗಿರಲೇಬೇಕು. ಒಂದು ಘಟನೆಯನ್ನು ಇಲ್ಲಿ ಗಮನಿಸಬಹುದು. ಕ್ರಿ.ಶ.೧೧೯೪ರಲ್ಲಿ ಅವರು ಕೋಯಿಲ್ (ಅಲಿಗರ್) ಅನ್ನು ಸಮೀಪಿಸಿದಾಗ ಆ ಕೋಟೆಯಲ್ಲಿ ವಿವೇಕ ಹಾಗೂ ಚುರುಕುತನವಿದ್ದವರನ್ನು ಇಸ್ಲಾಂಗೆ ಮತಾಂತರಿಸಲಾಯಿತಲ್ಲದೆ ಉಳಿದವರನ್ನು ಕತ್ತಿಯಿಂದ ಕತ್ತರಿಸಲಾಯಿತು."

"ಧಾರ್ಮಿಕ ನಂಬಿಕೆಯಲ್ಲಿ ಬದಲಾವಣೆಯನ್ನು ತರಲು ತೆಗೆದುಕೊಂಡ ತೀವ್ರತರ ಕಾರ್ಯವಿಧಾನಗಳ ಇತರ ಉದಾಹರಣೆಗಳು ಬಹು ಅಸಂಖ್ಯಾತವಾಗಿವೆ. ಫಿರೋಜ್‌ಷಾನ ಆಳ್ವಿಕೆಯ ಅವಧಿಯಲ್ಲಿ (ಕ್ರಿ.ಶ.೧೩೫೧–೧೩೮೮) ಆದ ಒಂದು ಧಾರುಣ ಸಂಗತಿಯನ್ನು ತಿಳಿಸಲಾಗಿದೆ. ತನ್ನ ಮನೆಯಲ್ಲಿ ವಿಗ್ರಹಗಳ ಆರಾಧನೆ ಮಾಡುತ್ತಿದ್ದಾನೆಂದೂ ಹಾಗೂ ಮುಸಲ್ಮಾನ ಹೆಂಗಸರೂ ಕೂಡ ಕುಧರ್ಮಿಗಳಾಗಲು ಕಾರಣನಾಗಿದ್ದನೆಂದೂ ಒಬ್ಬ ವೃದ್ಧ ಬ್ರಾಹ್ಮಣನ ಮೇಲೆ ಆರೋಪಿಸಲಾಯಿತು. ಅವನನ್ನು ಕರೆತರಲಾಯಿತು. ಮೊಕದ್ದಮೆಯನ್ನು ನ್ಯಾಯಾಧೀಶರು, ವೈದ್ಯರುಗಳು ಹಿರಿಯರು ಮತ್ತು ನ್ಯಾಯವಾದಿಗಳ ಮುಂದಿಡಲಾಯಿತು. ನ್ಯಾಯವ್ಯವಸ್ಥೆಯಲ್ಲಿ ಯಾವ ಷರತ್ತು ಇದೆ ಎಂಬುದನ್ನು ಅವರೆಲ್ಲಾ ತಿಳಿಸಿದರು. ಅದರ ಪ್ರಕಾರ ಆ ಬ್ರಾಹ್ಮಣನು ಮುಸಲ್ಮಾನನಾಗಬೇಕು ಅಥವಾ ಅವನನ್ನು ಸುಟ್ಟುಹಾಕಬೇಕು ಎಂದು ತೀರ್ಮಾನಿಸಲಾಯಿತು. ನಿಜವಾದ ಧಾರ್ಮಿಕ ನಂಬಿಕೆಯೇನೆಂಬುದನ್ನು ಆತನಿಗೆ ಸ್ಪಷ್ಟಪಡಿಸಲಾಯಿತು. ಆದರೆ, ಆ ಬ್ರಾಹ್ಮಣ ಮುಸಲ್ಮಾನನಾಗಲು ನಿರಾಕರಿಸಿದ. ತತ್ಪರಿಣಾಮವಾಗಿ, ಸುಲ್ತಾನನ ಆಜ್ಞೆಯಂತೆ ಅವನನ್ನು ಜೀವಂತ ಸುಡಲಾಯಿತು. ವ್ಯಾಖ್ಯಾನಕಾರ ಹೀಗೆ ಹೇಳುತ್ತಾನೆ– ಸುಲ್ತಾನನು ನ್ಯಾಯ ಮತ್ತು ಧರ್ಮಗಳಿಗೆ ಅದೆಷ್ಟು ನಿಷ್ಠನಾಗಿದ್ದಾನೆ ಎಂಬುದನ್ನು ನೋಡಿ. ಅವುಗಳ ವಿಧಿಗಳನ್ನು ಸ್ವಲ್ಪವೂ ಮುರಿಯಲಾರ."

ಮುಹಮ್ಮದನು ದೇವಾಲಯಗಳನ್ನು ನಾಶಮಾಡಿದ್ದು ಮಾತ್ರವಲ್ಲದೆ, ತಾನು ಜಯಿಸಿದ ಹಿಂದೂಗಳನ್ನು

ಗುಲಾಮರನ್ನಾಗಿ ಮಾಡಿಕೊಳ್ಳುವುದನ್ನು ಕಾರ್ಯನೀತಿಯನ್ನಾಗಿ ಮಾಡಿದ.

ಡಾ. ಟೈಟಸ್ ಹೀಗೆ ಹೇಳಿದ್ದಾನೆ:

**"ಭಾರತದೊಂದಿಗೆ ಇಸ್ಲಾಂಗೆ ಆದ ಮೊದಮೊದಲ ಸಂಪರ್ಕಗಳಲ್ಲಿ ಕುಧರ್ಮಿಗಳ ಕಗ್ಗೊಲೆ ಮತ್ತು ಅವರ ದೇವಾಲಯಗಳ ನಾಶ ಈ ಕಾರ್ಯಗಳು ಮಾತ್ರವಲ್ಲದೆ, ನಾವು ಈಗಾಗಲೇ ತಿಳಿದಿರುವಂತೆ, ಪರಾಜಿತರಾದವರಲ್ಲಿ ಅನೇಕರನ್ನು ಗುಲಾಮರನ್ನಾಗಿ ಮಾಡುವ ಕಾರ್ಯಗಳೂ ನಡೆದವು. ಈ ದಂಡಯಾತ್ರೆಗಳಲ್ಲಿ ಕೊಳ್ಳೆ ಹೊಡೆದ ಸಂಪತ್ತನ್ನು ಹಂಚಿಕೊಳ್ಳುವುದು, ನಾಯಕರಿಗೆ ಮಾತ್ರವಲ್ಲ, ಸಾಮಾನ್ಯ ಸೈನಿಕರಿಗೂ ವಿಶೇಷವಾದ ಆಕರ್ಷಣೆಗಳಲ್ಲಿ ಒಂದಾಯಿತು. ಕುಧರ್ಮಿಗಳ ಕಗ್ಗೊಲೆ ಮಾಡುವುದು, ಅವರ ದೇವಾಲಯಗಳನ್ನು ಧ್ವಂಸ ಮಾಡುವುದು, ಗುಲಾಮರನ್ನಾಗಿ ಮಾಡಿಕೊಳ್ಳುವುದು, ಜನರ, ಅದರಲ್ಲಿಯೂ ದೇವಾಲಯಗಳ ಮತ್ತು ಪೂಜಾರಿಗಳ ಸಂಪತ್ತನ್ನು ಸೂರೆಗೊಳ್ಳುವುದು ಮುಂತಾದವನ್ನು ಮಹಮ್ಮದ್ ತನ್ನ ದಾಳಿಗಳಲ್ಲಿ ಪ್ರಮುಖ ಕಾರ್ಯಗಳನ್ನಾಗಿ ಮಾಡಿಕೊಂಡಿದ್ದಂತೆ ಕಾಣುತ್ತದೆ. ತನ್ನ ಮೊದಲ ದಂಡಯಾತ್ರೆಯ ಸಮಯದಲ್ಲಿ ಆತನು ವಿಪುಲ ಸೂರೆಯ ಜೊತೆಗೆ, ಅರ್ಧ ದಶಲಕ್ಷಕ್ಕೂ ಹೆಚ್ಚು ಹಿಂದೂ ಸುಂದರ ಹೆಣ್ಣು-ಗಂಡುಗಳನ್ನು ಗುಲಾಮರನ್ನಾಗಿ ತೆಗೆದುಕೊಂಡು ಹೋದನೆಂದು ಹೇಳಲಾಗಿದೆ. ಅವರನ್ನೆಲ್ಲಾ ಗುಲಾಮರನ್ನಾಗಿ ಮಾಡಿಕೊಂಡು ಘಸ್ನಿಗೆ ಸಾಗಿಸಿದ."**[೧]

ಮುಂದೆ ಕ್ರಿ.ಶ. ೧೦೧೭ರಲ್ಲಿ ಕನೌಜನ್ನು ವಶಪಡಿಸಿಕೊಂಡಾಗ, ಮಹಮ್ಮದನು, ಅವುಗಳನ್ನು ಎಣಿಸಿದವರ ಬೆರಳುಗಳು ನೋವಾಗುವಷ್ಟು ವಿಪುಲ ಸೂರೆ ಮತ್ತು ಸೆರೆಯಾಳುಗಳನ್ನು ತೆಗೆದುಕೊಂಡು ಹೋದ. ಕ್ರಿ.ಶ.೧೦೧೯ರ ದಂಡಯಾತ್ರೆಯ ಅನಂತರ, ಘಸ್ನಿ ಮತ್ತು ಮಧ್ಯ ಏಷ್ಯಾದಲ್ಲಿ ಭಾರತದ ಗುಲಾಮರು ಎಷ್ಟು ಸರ್ವೇ ಸಾಮಾನ್ಯವಾಗಿ ಕಾಣುತ್ತಿದ್ದರು ಎಂಬುದನ್ನು ವರ್ಣಿಸುತ್ತಾ, ಆ ಕಾಲದ ಇತಿಹಾಸಕಾರನೊಬ್ಬ ಹೀಗೆ ಹೇಳುತ್ತಾನೆ.[೨]

**"ಪ್ರತಿಯೊಬ್ಬ ಗುಲಾಮನನ್ನೂ ಎರಡರಿಂದ ಹತ್ತು ಡರ್‌ಹಾಮ್‌ಗಳಿಗೆ ಮಾರಲಾಗುತ್ತಿತ್ತು ಎಂಬ ಸತ್ಯಂಶದ ಆಧಾರದ ಮೇಲೆ, ಸೆರೆಯಾಳುಗಳು ಎಷ್ಟಿದ್ದರೆಂಬುದನ್ನು ಕಲ್ಪಿಸಿಕೊಳ್ಳಬಹುದು. ಅನಂತರ ಅವರನ್ನು ಘಸ್ನಿಗೆ ಸಾಗಿಸಲಾಯಿತು. ಅವರನ್ನು ಕೊಳ್ಳಲು ಅತ್ಯಂತ ದೂರದ ನಗರಗಳಿಂದ ವ್ಯಾಪಾರಿಗಳು ಬರುತ್ತಿದ್ದರು. ಸುಂದರ ಮತ್ತು ಕಪ್ಪು, ಸಿರಿವಂತ ಮತ್ತು ಬಡವ ಇವರೆಲ್ಲರನ್ನೂ ಒಂದು ಸಾಮಾನ್ಯ ಗುಲಾಮಗಿರಿಯಲ್ಲಿ ಒಟ್ಟಿಗೆ ಸೇರಿಸಲಾಗಿತ್ತು."**

ಕ್ರಿ.ಶ.೧೨೦೨ರಲ್ಲಿ ಕುತುಬ್-ಉದ್-ದಿನ್ ಕಾಲಿಂಜರ್ ಅನ್ನು ಆಕ್ರಮಿಸಿಕೊಂಡು, ಅಲ್ಲಿ ದೇವಾಲಯಗಳನ್ನು ಮಸೀದಿಗಳನ್ನಾಗಿ ಪರಿವರ್ತಿಸಿದ ಮತ್ತು ವಿಗ್ರಹಾರಾಧನೆ ಎಂಬ ಹೆಸರನ್ನೇ ಅಳಿಸಿಹಾಕಿದ. ಅನಂತರ, ಐವತ್ತು ಸಾವಿರ ಮಂದಿ ಗುಲಾಮಗಿರಿಯ ಪಟ್ಟಿಯನ್ನು ಧರಿಸಬೇಕಾಯಿತು. ಹೀಗಾಗಿ ಹಿಂದೂಗಳಿಂದ ತುಂಬಿಹೋದ ಆ ಪ್ರದೇಶವು ಕರಿಯರ ಪಾಳೆಯವಾಯಿತು.

ಪವಿತ್ರ ಯುದ್ಧದಲ್ಲಿ ಸೆರೆಹಿಡಿಯಲ್ಪಟ್ಟ ಹಿಂದೂಗಳ ಪಾಡು ಗುಲಾಮಗಿರಿಯಾಯಿತು. ಆದರೆ

---

೧. ಡಾ.ಟೈಟಸ್ ತನ್ನ ಇಂಡಿಯನ್ ಇಸ್ಲಾಂ ಗ್ರಂಥದ ಪು.೨೪ರಲ್ಲಿ ಉಲ್ಲೇಖಿಸಿದ್ದಾನೆ.

೨. ಅದೇ, ಪು.೨೬

ಯುದ್ಧಗಳು ಇಲ್ಲದಿದ್ದಾಗಲೂ ಹಿಂದೂಗಳನ್ನು ವ್ಯವಸ್ಥಿತವಾಗಿ ಹೀನಾಯಸ್ಥಿತಿಗೆ ಇಳಿಸುವಲ್ಲಿ ಮುಸಲ್ಮಾನ ಆಕ್ರಮಣಕಾರರು ಬಳಸದ ವಿಧಾನಗಳಿರಲಿಲ್ಲ. ಹದಿನಾಲ್ಕನೇ ಶತಮಾನದ ಪ್ರಾರಂಭ ಕಾಲದಲ್ಲಿ ಅಲ್ಲಾವುದ್ದೀನನಿಗೆ ಕೆಲವು ಪ್ರದೇಶಗಳ ಹಿಂದೂಗಳು ಬಹಳ ತೊಂದರೆ ಕೊಡುತ್ತಿದ್ದರು. ಆದ್ದರಿಂದ ಅವರು ದಂಗೆಯೇಳುವುದನ್ನು ತಪ್ಪಿಸಲು ಸಾಮರ್ಥ್ಯವಿದ್ದ ತೆರಿಗೆಗಳನ್ನು ಅವರ ಮೇಲೆ ಹೇರಲು ಆತ ನಿರ್ಧರಿಸಿದ...

> **"ಸವಾರಿ ಮಾಡಲು ಬೇಕಾದ ಕುದುರೆಗಳನ್ನು ಸಾಕಲು, ಆಯುಧಗಳನ್ನು ಕೊಂಡೊಯ್ಯಲು, ಒಳ್ಳೆಯ ಬಟ್ಟೆಗಳನ್ನು ಧರಿಸಲು ಅಥವಾ ಜೀವನದ ಯಾವುದೇ ರೀತಿಯ ವೈಭವಗಳನ್ನು ಅನುಭವಿಸಲು ಸಾಧ್ಯವಾಗದಂತಹ ಸ್ಥಿತಿಯಲ್ಲಿ ಹಿಂದೂಗಳನ್ನು ಉಳಿಸಲಾಯಿತು."[೧]**

ಜೆಸಿಯಾವನ್ನು ಹೇರುವುದಕ್ಕೆ ಸಂಬಂಧಿಸಿದಂತೆ ಟೈಟಸ್ ಹೀಗೆ ಹೇಳುತ್ತಾನೆ:[೨]

> **"ಭಾರತದ ವಿವಿಧ ಭಾಗಗಳಲ್ಲಿದ್ದ ಸುಲ್ತಾನರ, ಚಕ್ರವರ್ತಿಗಳ ಮತ್ತು ರಾಜರ ಆಳ್ವಿಕೆಯ ಪ್ರದೇಶಗಳಾದ್ಯಂತ ಹಿಂದೂಗಳು ಜೆಸಿಯಾ ತೆರುವುದು ಹೆಚ್ಚು ಕಡಿಮೆ ಕ್ರಮಬದ್ಧವಾಗಿ ಮುಂದುವರಿಯಿತು. ಇದಕ್ಕೆ ಸಂಬಂದಿಸಿದ ಕಟ್ಟಳೆಯು ಕೇವಲ ಸೈದ್ಧಾಂತಿಕವಾಗಿಯೂ ಉಳಿದದ್ದುಂಟು. ಏಕೆಂದರೆ, ಆ ಕಟ್ಟಳೆಯ ನಿಬಂಧನೆಗಳನ್ನು ಜಾರಿಗೆ ತರುವುದು ಪ್ರಭುಶಕ್ತಿಯನ್ನು ಪೂರ್ಣವಾಗಿ ಅವಲಂಬಿಸಿತ್ತು. ಆದರೆ ಪ್ರಜ್ಞಾವಂತ ಅಕ್ಬರನ ಆಳ್ವಿಕೆಯ ೯ನೆಯ ವರ್ಷದಲ್ಲಿ (ಕಿರ.ಶ.೧೬೦೫) ಅದನ್ನು ಮೊಗಲ್ ಶತಮಾನಗಳಿಗೂ ಹೆಚ್ಚಿನ ಅವಧಿಯಲ್ಲಿ, ಅದನ್ನು ಮುಸಲ್ಮಾನ ಆಳ್ವಿಕೆಯ ಮೂಲಭೂತ ಧೋರಣೆಯಾಗಿ ಸ್ವೀಕರಿಸಲಾಯಿತು."**

ಲೇನ್ ಪೂಲೆ ಹೀಗೆ ಹೇಳುತ್ತಾನೆ:

> **"ಹಿಂದೂ ಆದವನು ತನ್ನ ಜಮೀನಿನ ವರಮಾನದಲ್ಲಿ ಅರ್ಧದಷ್ಟರಮಟ್ಟಿಗೆ ಕಂದಾಯವನ್ನು ಕೊಡಬೇಕಾಗಿತ್ತು. ಅಲ್ಲದೆ, ಆತನು ತನ್ನ ಎಲ್ಲಾ ಎಮ್ಮೆಗಳು, ಆಡುಗಳು ಮತ್ತು ಇತರ ಕರೆಯುವ ಹಸುಗಳ ಮೇಲೆ ಸುಂಕವನ್ನು ಕೊಡಬೇಕಾಗಿತ್ತು. ಎಕರೆಗೆ ಇಷ್ಟು, ಪ್ರಾಣಿಗೆ ಇಷ್ಟು ಎಂಬ ರೀತಿಯಲ್ಲಿ, ಬಡವಬಲ್ಲಿದನೆನ್ನದೆ ಎಲ್ಲರ ಮೇಲೂ ತೆರಿಗೆ ಹೇರಲಾಗಿತ್ತು. ಲಂಚ ತೆಗೆದುಕೊಳ್ಳುತ್ತಿದ್ದ ಕಲೆಕ್ಟರ್ ಅಥವಾ ಅಧಿಕಾರಿಗಳನ್ನು ಅವರು ಯಾರೇ ಆಗಿರಲಿ ವಜಾ ಮಾಡಲಾಗುತ್ತಿತ್ತಲ್ಲದೆ, ಅವರನ್ನು ದೊಣ್ಣೆಗಳಿಂದ ಹೊಡೆಯುವುದು, ಸೂಜಿಗಳಿಂದ ಚುಚ್ಚುವುದು, ಚಿತ್ರಹಿಂಸೆ ಕೊಡುವುದು, ಸೆರೆಮನೆಗೆ ಹಾಕುವುದು, ಸರಪಣಿಗಳಿಂದ ಬಂಧಿಸುವುದು ಮುಂತಾದವುಗಳಿಂದ ಕ್ರೂರವಾಗಿ ಶಿಕ್ಷಿಸಲಾಗುತ್ತಿತ್ತು. ಕಂದಾಯಾಧಿಕಾರಿಯೊಬ್ಬ ೨೦ ಮಂದಿ ಹಿಂದೂ ಗಣ್ಯರನ್ನು ತಂತಿಯಲ್ಲಿ ಕಟ್ಟಿಹಾಕಿ ಹೊಡೆಯುವುದರ ಮೂಲಕ ತೆರಿಗೆ ವಸೂಲಿ ಮಾಡಲು ಅನುಕೂಲವಾಗುವಂತಹ ಹೊಸ ನಿಯಮಗಳನ್ನು ತಪ್ಪದೆ ಪಾಲಿಸಲಾಗುತ್ತಿತ್ತು. ಯಾವುದೇ ರೀತಿಯ ಚಿನ್ನ ಅಥವಾ ಬೆಳ್ಳಿ ಅಥವಾ ಆಹ್ಲಾದಕಾರಿ ಅಡಿಕೆಯಂತಹ ವಸ್ತುವನ್ನು ಹಿಂದೂಗಳ ಮನೆಯಲ್ಲಿ ಕಾಣಬಾರದಾಗಿತ್ತು. ಬಡವರಾದ ಸ್ಥಳೀಯ ಅಧಿಕಾರಿಗಳ ಹೆಂಡತಿಯರು ಮುಸಲ್ಮಾನರ ಮನೆಗಳಲ್ಲಿ ಸೇವೆ ಮಾಡುವಂತಹ ಹೀನಸ್ಥಿತಿಗೆ ಇಳಿಸಲಾಗಿತ್ತು. ಕಂದಾಯದ ಅಧಿಕಾರಿಗಳನ್ನು ಪ್ಲೇಗಿಗಿಂತ**

---

೧. ಡಾ. ಟೈಟಸ್: ಇಂಡಿಯನ್ ಇಸ್ಲಾಂ ಪು.೨೯

೨. ಅದೆ, ಪು.೩೦

**ಭೀಕರವೆಂಬಂತೆ ಕಾಣಲಾಗುತ್ತಿತ್ತು. ಅಲ್ಲದೆ, ಒಬ್ಬ ಸರಕಾರಿ ಗುಮಾಸ್ತನಾಗಿರುವುದು ಸಾಯುವುದಕ್ಕಿಂತ ಹೀನಾಯವಾಗಿತ್ತು. ಏಕೆಂದರೆ, ಯಾವನೇ ಹಿಂದೂ ಆತನಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡುತ್ತಿರಲಿಲ್ಲ."***

ಆ ಕಾಲದ ಇತಿಹಾಸಕಾರನೊಬ್ಬ ಹೀಗೆ ಹೇಳುತ್ತಾನೆ:

**"ಈ ಕಟ್ಟಳೆಗಳನ್ನು ಎಷ್ಟು ನಿಖರವಾಗಿ ಜಾರಿಗೆ ತರಲಾಗುತ್ತಿದ್ದಿತೆಂದರೆ, ಚೌಕೀದಾರರು, ಕರಣಿಕರು ಮತ್ತು ಮುಗದಂಗಳು, ಕುದುರೆ ಸವಾರಿ ಮಾಡಲು, ಆಯುಧಗಳನ್ನು ಹಿಡಿಯಲು, ಒಳ್ಳೆಯ ಬಟ್ಟೆಗಳನ್ನು ಹಾಕಿಕೊಳ್ಳಲು ಅಥವಾ ತಾಂಬೂಲ ಸವಿಯಲು ಸಾಧ್ಯವಿರಲಿಲ್ಲ. ಯಾವ ಹಿಂದೂವಾದರೂ ತನ್ನ ತಲೆಯನ್ನು ಮೇಲೆತ್ತಬಾರದಾಗಿತ್ತು. ತೆರಿಗೆ ವಸೂಲಿಗಾಗಿ, ಹೊಡೆಯುವುದು ಕುದುರೆ ಲಾಯಗಳಲ್ಲಿ ಕೂಡಿಹಾಕುವುದು, ಸೆರೆವಾಸ ಮತ್ತು ಸರಪಣಿಗಳಿಂದ ಬಿಗಿಯುವುದು ಮುಂತಾದ ಎಲ್ಲಾ ಶಿಕ್ಷೆಗಳನ್ನು ವಿಧಿಸಲಾಗುತ್ತಿತ್ತು.**

ಇದೆಲ್ಲಾ ಕೇವಲ ಮನಬಂದ ಚರ್ಯೆ ಅಥವಾ ನೈತಿಕ ವಿಕೃತಿಗಳಿಂದ ಆದ ಪರಿಣಾಮವಲ್ಲ. ಅದಕ್ಕೆ ಬದಲಾಗಿ, ಒಂದು ವಿಶಾಲಾರ್ಥದಲ್ಲಿ, ಇಸ್ಲಾಮಿನ ಮುಖಂಡರ ಆದೇಶಗಳಿಗೆ ಅನುಗುಣವಾಗಿ ಇದನ್ನೆಲ್ಲಾ ಮಾಡಲಾಗುತ್ತಿತ್ತು. ಮುಸಲ್ಮಾನ ನ್ಯಾಯ ಪದ್ಧತಿಯಂತೆ ಹಿಂದೂಗಳ ಸ್ಥಾನಮಾನವೇನು ಎಂಬುದನ್ನು ತಿಳಿಯಲು ಸುಲ್ತಾನ್ ಅಲ್ಲಾವುದ್ದೀನನು ಕೇಳಿದ ಪ್ರಶ್ನೆಯೊಂದಕ್ಕೆ ಕಾಸಿ ಕೊಟ್ಟ ಉತ್ತರದಲ್ಲಿ ಎಲ್ಲಾ ವಿಚಾರಗಳೂ ಚೆನ್ನಾಗಿ ವ್ಯಕ್ತವಾಗಿವೆ.

ಕಾಸಿ ಹೀಗೆ ಹೇಳುತ್ತಾನೆ:

**"ಕಾಣಿಕೆ ಕೊಡುವವರು ಎಂದು ಅವರನ್ನು ಕರೆಯಲಾಗುತ್ತದೆ; ಕಂದಾಯದ ಅಧಿಕಾರಿಯು ಬೆಳ್ಳಿಯನ್ನು ಕೇಳಿದರೆ, ಮರುಪ್ರಶ್ನೆ ಮಾಡದೆ, ಎಲ್ಲಾ ರೀತಿಯ ವಿನಯಶೀಲತೆ ಮತ್ತು ಗೌರವಾದರಗಳಿಂದ ಅವರು ಚಿನ್ನವನ್ನು ಸಲ್ಲಿಸಬೇಕು. ಅಧಿಕಾರಿಯು ಅವರು ಬಾಯಲ್ಲಿ ಹೇಸಿಗೆಯನ್ನು ಹಾಕಿದರೆ, ಯಾವುದೇ ವಿರೋಧವಲ್ಲದೆ ಅದನ್ನು ಸ್ವೀಕರಿಸಲು ತಮ್ಮ ಬಾಯನ್ನು ಅಗಲವಾಗಿ ತೆರೆಯಬೇಕು... ಈ ರೀತಿಯ ವಿನೀತ ಕೊಡುಗೆಯಲ್ಲಿ ಮತ್ತು ಅವರ ಬಾಯಿಗಳಲ್ಲಿ ಹೇಸಿಗೆಯನ್ನು ತುರುಕುವುದರಲ್ಲಿ ಧಿಮ್ಮಿಯ (Dhimmi) ಅವಶ್ಯ ಶರಣಾಗತಿ ಪ್ರಕಟವಾಗುತ್ತದೆ. ಇಸ್ಲಾಮನ್ನು ವೈಭವೀಕರಿಸುವುದು ಆದ್ಯಕರ್ತವ್ಯ ಮತ್ತು ಧರ್ಮದ ಬಗ್ಗೆ ಇರುವ ತಾತ್ಸಾರ ನಿರರ್ಥಕವಾದುದು." ದೇವರು ಅವರನ್ನು ಅಧೀನದಲ್ಲಿಟ್ಟುಕೋ ಎಂದು ಹೇಳುವುದರಿಂದ, ಅವನಿಗೆ ಅವರ ಬಗ್ಗೆ ತಾತ್ಸಾರವಿದೆ. ಹಿಂದೂಗಳನ್ನು ಹೀನಾಯ ಸ್ಥಿತಿಯಲ್ಲಿಡುವುದು ಒಂದು ವಿಶೇಷ ಧಾರ್ಮಿಕ ಕರ್ತವ್ಯ. ಏಕೆಂದರೆ ಅವರು ಪ್ರವಾದಿಯ ಅತ್ಯಂತ ವಿಕೃತ ಶತ್ರುಗಳು, ಅವರನ್ನು ಕತ್ತರಿಸುವಂತೆ, ನೆರೆಯಾಳುಗಳನ್ನಾಗಿ ಮಾಡಿಕೊಳ್ಳುವಂತೆ ಆತನು ನಮಗೆ ಆಜ್ಞೆ ಮಾಡಿದ್ದಾನೆ. ಅವನು ಹೀಗೆ ಹೇಳಿದ್ದಾನೆ. ಅವರನ್ನು ಇಸ್ಲಾಂಗೆ ಧರ್ಮಾಂತರಿಸು ಅಥವಾ ಕೊಲ್ಲು ಮತ್ತು ಅವರನ್ನು ಗುಲಾಮರನ್ನಾಗಿ ಮಾಡಿಕೋ ಮತ್ತು ಅವರ ಸಂಪತ್ತು ಮತ್ತು ಆಸ್ತಿಪಾಸ್ತಿಗಳನ್ನು ನಾಶಪಡಿಸು' ನಾವು**

---

* ಅದೇ, ಪು.೩೦

**ಯಾರ ಪಂಥಕ್ಕೆ ಸೇರಿದ್ದೇವೆಯೋ ಅಂಥ ಶ್ರೇಷ್ಠಜ್ಞಾನಿ ಹಾಮಿಫಾ (Hamifa) ಅಲ್ಲದೆ ಮತ್ತಾವ ಜ್ಞಾನಿಯು ಹಿಂದೂಗಳ ಮೇಲೆ ಜೆಸಿಯಾ ತೆರಿಗೆಯನ್ನು ಹೇರಲು ಸಮ್ಮತಿಸುತ್ತಾನೆ; ಇತರ ಪಂಥಗಳಿಗೆ ಸೇರಿದ ಜ್ಞಾನಿಗಳು ಮರಣ ಅಥವಾ ಇಸ್ಲಾಂ ಇವೆರಡನ್ನು ಬಿಟ್ಟು ಮತ್ತಾವುದೇ ಪರ್ಯಾಯಕ್ಕೆ ಅವಕಾಶ ಕೊಟ್ಟಿಲ್ಲ.**"*

ಘಸ್ನಿ ಮಹಮ್ಮದನು ಬಂದಂದಿನಿಂದ ಅಹಮದ್ ಅಬ್ದಾಲಿ ಬರುವವರೆಗಿನ ೭೬೨ ವರ್ಷಗಳ ಅವಧಿಯ ಕಥೆಯಿದು.

ಉತ್ತರ ಭಾರತವು ಆರ್ಯಾವರ್ತದ ಭಾಗವೆಂದು ಹೇಳಿಕೊಳ್ಳಲು ಹಿಂದೂಗಳಿಗೆ ಎಷ್ಟು ಅವಕಾಶವಿದೆ? ಒಂದು ಕಾಲದಲ್ಲಿ ಅವರಿಗೆ ಸೇರಿದ್ದಿತು, ಆದ್ದರಿಂದ ಅದು ಭಾರತದ ಅವಿಭಾಜ್ಯ ಅಂಗವಾಗಿ ಉಳಿಯಬೇಕು ಎಂದು ಕೇಳಲು ಹಿಂದೂಗಳಿಗೆ ಎಷ್ಟು ಅವಕಾಶವಿದೆ? ಆಫ್ಘಾನಿಸ್ಥಾನವೂ ಸೇರಿದಂತೆ ಉತ್ತರ ಭಾರತವೆಲ್ಲಾ ಭಾರತದ ಒಂದು ಭಾಗವಾಗಿತ್ತು ಮತ್ತು ಆ ಪ್ರದೇಶದ ಜನರು ಹಿಂದೂಗಳಾಗಿದ್ದರು ಅಥವಾ ಬೌದ್ಧರಾಗಿದ್ದರು ಎಂಬ ಒಂದು ಪ್ರಾಚೀನ ಸತ್ಯಾಂಶದಿಂದ ಹುಟ್ಟಿರುವ ಐತಿಹಾಸಿಕ ಭಾವುಕತೆಯ ಆಧಾರದ ಮೇಲೆ ದೇಶ ವಿಭಜನೆಯನ್ನು ವಿರೋಧಿಸುವವರನ್ನು ಈ ೭೬೨ ವರ್ಷಗಳ ಅವಧಿಯಲ್ಲಿ ಸತತ ನಡೆದ ಮುಸಲ್ಮಾನ ಧಾಳಿಗಳು, ಅವುಗಳನ್ನು ಮಾಡಿದ್ದ ಉದ್ದೇಶ, ತಮ್ಮ ಉದ್ದೇಶವನ್ನು ಸಾಧಿಸಲು ಆ ಆಕ್ರಮಣಕಾರರು ಪ್ರಯೋಗಿಸಿದ ವಿಧಾನಗಳು, ಇವೆಲ್ಲಾ ಮಾನ್ಯತೆಗೆ ಯೋಗ್ಯವಲ್ಲದ ವಿಷಯಗಳು ಎಂದು ಪರಿಗಣಿಸಬೇಕೇ ಎಂದು ಕೇಳಬೇಕು.

ಆ ಆಕ್ರಮಣಗಳಿಂದ ನಿರಂತರವಾಗಿ ಉಂಟಾದ ಇತರ ಪರಿಣಾಮಗಳಲ್ಲದೆ, ನನ್ನ ಅಭಿಪ್ರಾಯದಲ್ಲಿ ಈಗ ಪಾಕಿಸ್ತಾನದಲ್ಲಿ ಸೇರಿಸಬೇಕೆಂದು ಸೂಚಿಸಲಾಗಿರುವ ಉತ್ತರ ಪ್ರದೇಶಗಳ ಸಾಂಸ್ಕೃತಿಕ ಲಕ್ಷಣಗಳನ್ನು ಆ ಪ್ರದೇಶ ಮತ್ತು ಭಾರತದ ಇತರ ಪ್ರದೇಶಗಳ ನಡುವೆ ಏಕತೆ ಇಲ್ಲದಿರುವಷ್ಟು ತೀವ್ರತರವಾಗಿ ಆ ಆಕ್ರಮಣಗಳು ಬದಲಾಯಿಸಿದವು. ವಾಸ್ತವವಾಗಿ ಈ ಎರಡು ಪ್ರದೇಶಗಳ ನಡುವೆ ಪರಸ್ಪರ ವಿರೋಧ ಭಾವವಿದೆ.

ಆ ಆಕ್ರಮಣಗಳ ಮೊದಲ ಪರಿಣಾಮವೆಂದರೆ, ಭಾರತದ ಇತರ ಭಾಗಗಳಿಂದ ಉತ್ತರದ ಕ್ಷೇತ್ರಗಳ ಏಕತೆಯನ್ನು ಕಡಿದುಹಾಕಿದ್ದು, ಉತ್ತರ ಭಾರತವನ್ನು ಜಯಿಸಿದ ಮೇಲೆ, ಘಸ್ನಿ ಮಹಮ್ಮದನು ಅದನ್ನು ಭಾರತದ ಇತರ ಭಾಗಗಳಿಂದ ಪ್ರತ್ಯೇಕಿಸಿ, ಘಸ್ನಿಯಿಂದಲೇ ಆಡಳಿತ ನಡೆಸಿದ, ಘೋರಿ ಮಹಮ್ಮದನು ಆಕ್ರಮಣಕಾರಿಯಾಗಿ ರಂಗವನ್ನು ಪ್ರವೇಶಿಸಿದಾಗ, ಅದನ್ನು ಆತ ಪುನಃ ಭಾರತಕ್ಕೆ ಸೇರಿಸಿದ್ದಲ್ಲದೆ ಮೊದಲು ಲಾಹೋರಿನಿಂದಲೂ ಅನಂತರ ದೆಹಲಿಯಿಂದಲೂ ಆಳಿದ, ಅಕ್ಬರನ ಸೋದರನಾದ ಹಕೀಮ್, ಕಾಬೂಲು ಮತ್ತು ಕಾಂದಾಹಾರಗಳನ್ನು ಉತ್ತರ ಭಾರತದಿಂದ ಪ್ರತ್ಯೇಕಿಸಿದ, ಅಕ್ಬರನು ಪುನಃ ಅವನ್ನು ಭಾರತಕ್ಕೆ ಸೇರಿಸಿದ. ೧೭೩೮ರಲ್ಲಿ ಅವುಗಳನ್ನು ನಾದಿರಷಹ ಪುನಃ ಪ್ರತ್ಯೇಕಿಸಿದ; ಸಿಖ್ಖರ ಉದಯದಿಂದ ಉಂಟಾದ ನಿಯಂತ್ರಣವಿಲ್ಲದಿದ್ದರೆ ಬಹುಶಃ ಇಡೀ ಉತ್ತರ ಭಾರತವನ್ನು ಭಾರತದಿಂದ ಕಡಿದುಹಾಕಲಾಗುತ್ತಿತ್ತು. ಆದ್ದರಿಂದ ಉತ್ತರ ಭಾರತವು ರೈಲಿನ ಒಂದು ವ್ಯಾಗನ್ನಿನಂತಿದೆ. ಆಯಾಯ ಕಾಲಕ್ಕೆ ತಕ್ಕಂತೆ ಅದನ್ನು ಪ್ರತ್ಯೇಕಿಸಬಹುದು ಮತ್ತು ಬೇರೆಡೆ ಸೇರಿಸಬಹುದು. ಇದಕ್ಕೆ ಸರಿಹೋಲಿಕೆ

* ಡಾ. ಟೈಟಸ್ ತನ್ನ ಇಂಡಿಯನ್ ಇಸ್ಲಾಂ, ಪು.೨೯ರಲ್ಲಿ

ಏನಾದರೂ ಬೇಕಾದರೆ ಅಲ್ ಸಾಸ್–ಲೊರೈನ್ ಪ್ರಸಂಗವನ್ನು ಉದಾಹರಿಸಬಹುದು. ಸ್ವಿಡ್ಜರ್‌ಲೆಂಡಿನ ಇತರ ಭಾಗಗಳು ಮತ್ತು ತಗ್ಗು ದೇಶಗಳಂತೆಯೇ ಅಲ್‌ಸಾಸ್ ಲೊರೈನ್ ಕೂಡ ಮೂಲತಃ ಜರ್ಮನಿಯ ಭಾಗವಾಗಿತ್ತು. ಅದು ೧೬೮೦ರವರೆಗೆ ಹಾಗೆಯೇ ಉಳಿದಿತ್ತು. ಅನಂತರ ಫ್ರೆಂಚರು ಅದನ್ನು ಆಕ್ರಮಿಸಿಕೊಂಡು ಫ್ರಾನ್ಸಿನ ಭಾಗವನ್ನಾಗಿ ಮಾಡಿದರು. ೧೮೭೧ರವರೆಗೆ ಅದು ಫ್ರಾನ್ಸಿಗೆ ಸೇರಿತ್ತು. ಅನಂತರ ಜರ್ಮನಿಯು ಅದನ್ನು ವಶಪಡಿಸಿಕೊಂಡು ತನ್ನ ದೇಶಕ್ಕೆ ಸೇರಿಸಿಕೊಂಡಿತ್ತು. ೧೯೧೮ರಲ್ಲಿ ಅದನ್ನು ಪುನಃ ಜರ್ಮನಿಯಿಂದ ಪ್ರತ್ಯೇಕಿಸಿ ಫ್ರಾನ್ಸಿನ ಭಾಗವನ್ನಾಗಿ ಮಾಡಲಾಯಿತು. ೧೯೪೦ರಲ್ಲಿ ಅದನ್ನು ಫ್ರಾನ್ಸಿನಿಂದ ಪ್ರತ್ಯೇಕಿಸಿ ಜರ್ಮನಿಯ ಭಾಗವನ್ನಾಗಿ ಮಾಡಲಾಯಿತು.

ಆಕ್ರಮಣಕಾರರು ಪ್ರಯೋಗಿಸಿದ ವಿಧಾನಗಳು ತಮ್ಮ ಹಿಂದೆಯೇ ಧಾಳಿಯ ದುಷ್ಪರಿಣಾಮದ ಪ್ರಭಾವವನ್ನು ಬಿಟ್ಟುಹೋದವು. ಹಿಂದೂ–ಮುಸಲ್ಮಾನರ ನಡುವೆ ಅವರು ಉಂಟುಮಾಡಿದ ಕಹಿಭಾವ ಅಂತಹ ಒಂದು ದುಷ್ಪರಿಣಾಮ. ಇಬ್ಬರ ನಡುವೆ ಇರುವ ಆ ಕಹಿಭಾವ ಎಷ್ಟು ಆಳವಾಗಿ ನಿಂತಿದೆ ಎಂದರೆ, ಅದನ್ನು ಶಮನಗೊಳಿಸುವುದರಲ್ಲಾಗಲೀ ಅಥವಾ ಜನರು ಅದನ್ನು ಮರೆಯುವಂತೆ ಮಾಡುವುದರಲ್ಲಾಗಲೀ ಒಂದು ಶತಮಾನದ ರಾಜಕೀಯ ಜೀವನವು ಸಮರ್ಥವಾಗಲಿಲ್ಲ. ಆಕ್ರಮಣಗಳ ಜೊತೆ ಜೊತೆಗೇ ದೇವಾಲಯಗಳ ನಾಶ ಮತ್ತು ಬಲಾತ್ಕಾರ ಮತಾಂತರಗಳು ನಡೆದದ್ದರಿಂದ ಹಾಗೂ ಅವುಗಳ ಜೊತೆಗೆ ಆಸ್ತಿಪಾಸ್ತಿಗಳ ಅಪಹರಣ, ಕಗ್ಗೊಲೆ, ಗುಲಾಮಗಿರಿ ಮತ್ತು ಹೆಂಗಸರು–ಗಂಡಸರು ಮತ್ತು ಮಕ್ಕಳ ಹೀನಸ್ಥಿತಿ ಇವುಗಳನ್ನು ಗಮನಿಸಿದಾಗ, ಮುಸಲ್ಮಾನರ ಅಭಿಮಾನದ ಸಂಪನ್ಮೂಲವಾಗಿಯೂ, ಹಿಂದೂಗಳ ಅಪಮಾನದ ಮೂಲವಾಗಿಯೂ ಇರುವ ಆ ನೆನಪುಗಳು ಯಾವಾಗಲೂ ಹಸಿರಾಗಿ ಮನಸ್ಸಿನಲ್ಲಿ ನೆಲೆನಿಂತಿದ್ದರೆ ಆಶ್ಚರ್ಯವೇನು? ಆದರೆ, ಈ ಸಂಗತಿಗಳನ್ನು ಬಿಟ್ಟರೆ, ಭಾರತದ ವಾಯುವ್ಯ ಮೂಲೆಯು ಭೀಕರ ನಾಟಕವನ್ನಾಡಿದ ರಂಗವಾಗಿತ್ತು. ಮುಸಲ್ಮಾನ ಧಾಳಿಕೋರ ತಂಡಗಳು ಅಲೆ ಅಲೆಯಾಗಿ ಈ ಕ್ಷೇತ್ರದ ಮೇಲೆ ನುಗ್ಗಿಬಂದರು. ಅನಂತರ ಅವರು ಭಾರತದ ಉಳಿದ ಭಾಗದಲ್ಲೆಲ್ಲಾ ತಾವೇ ಹರಡಿಕೊಂಡರು. ಭಾರತದ ಇತರ ಪ್ರದೇಶಗಳನ್ನು ಅವರು ತೆಳು ಪ್ರವಾಹಗಳಲ್ಲಿ ತಲುಪಿದರು. ಕಾಲಕ್ರಮದಲ್ಲಿ, ಅವರು ತಮ್ಮ ಅತ್ಯಂತ ಕ್ರೂರತನದಿಂದ ಕೆಳಗಿಳಿದರು, ಅವರು ಇಲ್ಲಿ ಉಳಿದು ಬಂದಂತೆಲ್ಲಾ ಭಾರತದ ಈ ಈಶಾನ್ಯ ಮೂಲೆಯಲ್ಲಿ, ಮೂಲ ಆರ್ಯ ಸಂಸ್ಕೃತಿಯ ಮೇಲೆ ಅವರು ತಮ್ಮ ಇಸ್ಲಾಂ ಸಂಸ್ಕೃತಿಯ ನಿಕ್ಷೇಪಗಳನ್ನು ಆಳವಾಗಿ ಇಳಿಸಿದರು. ಇದರಿಂದಾಗಿ ಧಾರ್ಮಿಕ ಹಾಗೂ ರಾಜಕೀಯ ನೋಟಗಳೆರಡರಲ್ಲೂ, ಆ ಪ್ರದೇಶಕ್ಕೆ ಪೂರ್ಣವಾಗಿ ಒಂದು ಹೊಸ ಬಣ್ಣವೇ ಬಂದಂತಾಯಿತು. ಹಿಂದೂಗಳ ವಿರುದ್ಧ ದ್ವೇಷಪೂರ್ಣ ಹಾಡುಗಳನ್ನು ಹಾಡುತ್ತಾ ಮುಸಲ್ಮಾನರು ಭಾರತಕ್ಕೆ ನುಗ್ಗಿಬಂದರು ಎಂಬುದರಲ್ಲಿ ಸಂಶಯವಿಲ್ಲ. ಆದರೆ ಅವರು ತಮ್ಮ ದ್ವೇಷದ ಹಾಡನ್ನಷ್ಟೇ ಹಾಡಿ, ಮಾರ್ಗದಲ್ಲಿ ದೇವಾಲಯಗಳನ್ನು ಸುಟ್ಟು ವಾಪಸಾಗಲಿಲ್ಲ. ಆ ರೀತಿ ಮಾಡಿದ್ದರೆ ಅದು ಒಂದು ಆಶೀರ್ವಾದವೇ ಆಗಬಹುದಿತ್ತು. ಆದರೆ ಅಂತಹ ನಿರುಪಯುಕ್ತ ಪರಿಣಾಮ ಅವರ ಮನಸ್ಸಿಗೆ ಬರಲಿಲ್ಲ, ಇಸ್ಲಾಮಿನ ಒಂದು ಬೀಜ ಬಿತ್ತುವುದರ ಮೂಲಕ ಅವರು ತಮ್ಮ ದೃಷ್ಟಿಯಲ್ಲಿ ಉಪಯುಕ್ತವೆನಿಸುವ ಕಾರ್ಯ ಮಾಡಿದರು. ಆ ಗಿಡದ ಬೆಳವಣಿಗೆ ಆಶ್ಚರ್ಯಕರವಾದುದು. ಅದು ಒಂದು ಬೇಸಿಗೆಯ ಒಣಸಸಿಯಲ್ಲಿ. ಓಕ್ ಮರದಷ್ಟೇ ಬೃಹತ್ತಾದುದು; ಹಾಗೂ ಅದರಷ್ಟೇ ಗಟ್ಟಿಯಾದುದು. ಅದರ ಬೆಳವಣಿಗೆ ಉತ್ತರ ಭಾರತದಲ್ಲಿ ಅತ್ಯಂತ ದಟ್ಟವಾಯಿತು. ಒಂದಾದ ಮೇಲೊಂದರಂತೆ ಆದ ಅಕ್ರಮಣಗಳು. ಇವೆಲ್ಲಕ್ಕಿಂತಲೂ ಹೆಚ್ಚಾಗಿ ಅಲ್ಲಿಯೇ ತಮ್ಮ ಮೆಕ್ಕಲನ್ನು ತುಂಬಿದವಲ್ಲದೆ ನಿಷ್ಠಾವಂತ ತೋಟಗಾರರ ನೀರುಹರಿಸುವ ಕಾರ್ಯಗಳಂತೆ ಸೇವೆ ಸಲ್ಲಿಸಿದವು. ಉತ್ತರ ಭಾರತದಲ್ಲಿ ಇಸ್ಲಾಮಿನ

ಬೆಳವಣಿಗೆ ಎಷ್ಟು ದಟ್ಟವಾಗಿದೆ ಎಂದರೆ, ಅದರ ಮುಂದೆ, ಹಿಂದೂ ಮತ್ತು ಬೌದ್ಧ ಸಂಸ್ಕೃತಿಗಳ ಉಳಿಕೆ ಕೇವಲ ಕುರುಚಲು ಗಿಡಗಳಂತಿದೆ. ಸಿಖ್ ಕೊಡಲಿಯೂ ಕೂಡ ಆ ಓಕ್ ಮರವನ್ನು ಕೆಡವಲು ಅಸಮರ್ಥವಾಯಿತು. ಸಿಖ್ಖರು ಉತ್ತರ ಭಾರತದ ರಾಜಕೀಯ ಪ್ರಭುಗಳಾದರೆಂಬುದರಲ್ಲಿ ಸಂಶಯವಿಲ್ಲ. ಆದರೆ ಹೂಯನ್‌ತ್ಸಾಂಗ್ ಬರುವುದಕ್ಕೆ ಮುಂಚೆ ಇದ್ದ ಭಾರತದ ಇತರ ಭಾಗದೊಂದಿಗೆ ಉತ್ತರ ಭಾರತಕ್ಕಿದ್ದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿ ಏಕತೆಯನ್ನು ಪುನಃ ಸ್ಥಾಪಿಸುವಷ್ಟರ ಮಟ್ಟಿಗೆ ಉತ್ತರ ಭಾರತವನ್ನು ಅವರು ಗೆದ್ದುಕೊಳ್ಳದಾದರು. ಸಿಖ್ಖರು ಅದನ್ನು ಭಾರತದ ಜೊತೆಗೆ ಪುನಃ ಸೇರಿಸಿದರು ಅಷ್ಟೆ. ಹೀಗಿದ್ದರೂ ಅಲ್ ಸಾಸ್ ಲೊರೇನ್ ಅಂತೆ ಅದು ಭಾರತದ ಇತರ ಭಾಗದಿಂದ ರಾಜಕೀಯವಾಗಿ ಪ್ರತ್ಯೇಕಿಸಲು ಸಾಧ್ಯವೂ, ಆಧ್ಯಾತ್ಮಿಕವಾಗಿ ಪರಕೀಯವೂ ಆಗಿದೆ. ಹೀಗಿದ್ದರೂ, ಈ ಸತ್ಯಾಂಶಗಳನ್ನು ಗಮನಿಸಲು ವಿಫಲನಾದವನು ಅಥವಾ ಅವುಗಳ ಎದುರಿನಲ್ಲಿ, ಪಾಕಿಸ್ತಾನವೆಂದರೆ ಯಾವುದು ಮೊದಲು ಒಂದು ಸಮಗ್ರವಾಗಿತ್ತೊ, ಅದನ್ನು ಎರಡಾಗಿ ಒಡೆಯುವ ಹಂಚಿಕೆ ಎಂದು ವಾದಿಸುವವನು ಕೇವಲ ಕಲಾಹೀನನೆಂದೇ ಅರ್ಥ.

ಪಾಕಿಸ್ತಾನ ಮತ್ತು ಹಿಂದೂಸ್ತಾನಗಳ ನಡುವೆ ಹಿಂದೂ ಕಾಣುವ ಏಕತೆ ಯಾವುದು? ಭೌಗೋಳಿಕವಾಗಿ ಏಕತೆಯಿದ್ದರೆ ಅದು ಏಕತೆಯಲ್ಲ. ಭೌಗೋಳಿಕ ಏಕತೆಯೆಂದರೆ ಪ್ರಕೃತಿಯ ಆಶಯಕ್ಕನುಗುಣವಾದ ಏಕತೆ. ಭೌಗೋಳಿಕ ಏಕತೆಯನ್ನು ಆಧರಿಸಿ ರಾಷ್ಟ್ರೀಯ ಏಕತೆಯನ್ನು ಕಟ್ಟುವುದು. ಪ್ರಕೃತಿಯು ಕಟ್ಟುತ್ತದೆ, ಮಾನವ ಕೆಡವುತ್ತಾನೆ ಎಂಬಂತೆ ಎನ್ನುವುದನ್ನು ನೆನಪಿನಲ್ಲಿಡಬೇಕು. ಜೀವನದ ರೀತಿ ಮತ್ತು ಅಭ್ಯಾಸಗಳಂತಹ ಬಾಹ್ಯ ವಿಷಯಗಳಿಗೆ ಸಂಬಂಧಿಸಿದಂತೆ ಏಕತೆಯಾದದ್ದು, ಏಕತೆಯೇ ಅಲ್ಲ. ಅಂತಹ ಏಕತೆಯು ಸಾಮಾನ್ಯ ಸನ್ನಿವೇಶವೊಂದರಲ್ಲಿ ಜೀವಿಸಬೇಕಾಗಿ ಬಂದಾಗ ಉಂಟಾಗುವ ಏಕತೆ ಅಷ್ಟೆ. ಆಡಳಿತಾತ್ಮಕ ಏಕತೆಯೂ ಕೂಡ ಏಕತೆಯಲ್ಲ. ಬರ್ಮಾದ ಉದಾಹರಣೆ ಇಲ್ಲಿ ಗಮಿಸಬೇಕಾದ ಅಮಶ, ಯೆನ್ಡಬು ಒಪ್ಪಂದದ ಪ್ರಕಾರ, ೧೮೨೮ರಲ್ಲಿ ಅರಕನ್ ಮತ್ತು ತೆನಸ್ಸೆರಿಮ್‌ಗಳನ್ನು ಸ್ವಾಧೀನಪಡಿಸಿಕೊಳ್ಳಲಾಯಿತು. ೧೮೮೬ರಲ್ಲಿ ಮೇಲ್ಭಾಗದ ಬರ್ಮಾವನ್ನು ಸ್ವಾಧೀನಪಡಿಸಿಕೊಳ್ಳಲಾಯಿತು. ಭಾರತ ಮತ್ತು ಬರ್ಮಾಗಳ ಆಡಳಿತಾತ್ಮಕ ಏಕತೆಯನ್ನು ೧೮೨೬ರಲ್ಲಿ ಸೃಷ್ಟಿಸಲಾಯಿತು. ಈ ಆಡಳಿತಾತ್ಮಕ ಏಕತೆಯು ೧೧೦ ವರ್ಷಗಳವರೆಗೆ ಮುಂದುವರಿಯಿತು. ಅವೆರಡನ್ನು ಒಟ್ಟಿಗೆ ಸೇರಿಸಿದ್ದ ಗಂಟನ್ನು ಕತ್ತರಿಸಿದಾಗ ಅವು ಬೇರೆಯಾದುದಕ್ಕಾಗಿ ಯಾರೂ ಕಣ್ಣೀರು ಸುರಿಸಲಿಲ್ಲ. ಭಾರತ ಮತ್ತು ಬರ್ಮಾದ ಏಕತೆಯು ಮೂಲಭೂತವಾಗಿ ಕಡಿಮೆಯಾದದ್ದೇನಲ್ಲ. ಏಕತೆಯು ಒಂದು ಅನುಬಂಧನ ಲಕ್ಷಣವುಳ್ಳದ್ದಾಗಿರಬೇಕಾದರೆ, ಅದನ್ನು ಒಂದು ಬಂಧು ಸಂವೇದನೆಯ ಮೇಲೆ ಕಟ್ಟಬೇಕು. ಅದರಲ್ಲಿ, ನಾವು ಬಂಧುಗಳು ಎಂಬ ಭಾವನೆ ತುಂಬಿರಬೇಕು. ಸಂಕ್ಷಿಪ್ತವಾಗಿ ಹೇಳುವುದಾದರೆ ಅದು ಆಧ್ಯಾತ್ಮಿಕವಾದುದಾಗಿರಬೇಕು. ಈ ಪರಿಗಣನೆಗಳ ಬೆಳಕಿನಲ್ಲಿ ಪರಿಶೀಲಿಸಿದಾಗ, ಪಾಕಿಸ್ತಾನ ಮತ್ತು ಹಿಂದೂಸ್ತಾನಗಳ ಏಕತೆ ಒಂದು ಮಿಥ್ಯೆ. ವಾಸ್ತವವಾಗಿ ಹಿಂದೂಸ್ತಾನ ಮತ್ತು ಪಾಕಿಸ್ತಾನಗಳ ನಡುವಣ ಏಕತೆಗಿಂತ ಹಿಂದೂಸ್ತಾನ ಮತ್ತು ಬರ್ಮಾಗಳ ನಡುವಣ ಏಕತೆ ಹೆಚ್ಚು. ಅಲ್ಲದೆ, ಬರ್ಮಾವನ್ನು ಭಾರತದಿಂದ ಪ್ರತ್ಯೇಕಿಸುವುದನ್ನು ಹಿಂದೂಗಳು ವಿರೋಧಿಸದಿದ್ದ ಮೇಲೆ, ಮತ್ತೊಮ್ಮೆ ಹೇಳಬೇಕಾದರೆ, ಭಾರತದ ಇತರ ಭಾಗದಿಂದ ರಾಜಕೀಯವಾಗಿ ಬೇರ್ಪಡಿಸಲು ಸಾಧ್ಯವಿರುವ, ಸಾಮಾಜಿಕವಾಗಿ ವಿರೋಧಭಾವವುಳ್ಳ ಮತ್ತು ಆಧ್ಯಾತ್ಮಿಕವಾಗಿ ಪರಕೀಯವಾಗಿರುವ ಪಾಕಿಸ್ತಾನದಂತಹ ಒಂದು ಕ್ಷೇತ್ರವನ್ನು ಭಾರತದಿಂದ ಪ್ರತ್ಯೇಕಿಸುವುದನ್ನು ಏಕೆ ವಿರೋಧಿಸುತ್ತಾರೆಂಬುದನ್ನು ಅರ್ಥಮಾಡಿಕೊಳ್ಳುವುದು ಕಷ್ಟ.

# ಅಧ್ಯಾಯ ೨೧

# ಕ್ಷೀಣಿಸುವ ರಕ್ಷಣೆ

ಪಾಕಿಸ್ತಾನದ ಹುಟ್ಟು, ರಕ್ಷಣಾದೃಷ್ಟಿಯಿಂದ ಭಾರತದ ಮೇಲೆ ಹೇಗೆ ಪರಿಣಾಮ ಮಾಡಬಹುದು? ಈ ಪ್ರಶ್ನೆ ತೀರಾ ತುರ್ತಿನದೇನಲ್ಲ. ಏಕೆಂದರೆ, ಪಾಕಿಸ್ತಾನ ತಾನು ಹುಟ್ಟುತ್ತಲೇ ಭಾರತದ ವಿರುದ್ಧ ಯುದ್ಧಕ್ಕೆ ಇಳಿಯುತ್ತದೆಂದು ತಿಳಿಯಲು ಯಾವುದೇ ಕಾರಣವಿಲ್ಲ. ಆದರೂ ಈ ಪ್ರಶ್ನೆ ಏಳುವುದು ಖಚಿತವಾದ್ದರಿಮದ, ಆ ಬಗ್ಗೆ ಚರ್ಚಿಸುವುದು ಒಳ್ಳೆಯದು.

ಈ ಪ್ರಶ್ನೆಯನ್ನು ಮೂರು ಭಾಗಗಳಾಗಿ ವಿಂಗಡಿಸಿ ಚರ್ಚಿಸಬಹುದು.

೧. ಗಡಿಗಳ ಪ್ರಶ್ನೆ, ೨. ಸಂಪನ್ಮೂಲಗಳ ಪ್ರಶ್ನೆ, ೩. ಸಶಸ್ತ್ರ ಪಡೆಗಳ ಪ್ರಶ್ನೆ.

## I
## ಗಡಿಗಳ ಪ್ರಶ್ನೆ

ಪಾಕಿಸ್ತಾನದ ಹುಟ್ಟು, ಹಿಂದೂಸ್ತಾನಕ್ಕೆ ವೈಜ್ಞಾನಿಕ ಗಡಿಗಳಿಲ್ಲದಂತೆ ಮಾಡುತ್ತದೆ ಎಂದು ಹಿಂದೂಗಳು ಖಂಡಿತವಾಗಿಯೂ ಹೇಳಬಹುದು. ಇದಕ್ಕೆ ಹಿಂದೂಗಳ ಗಡಿಗಳಿಗೆ ತೊಂದರೆಯಾಗುತ್ತದೆಂದು, ಮುಸ್ಲಿಮರು ತಮ್ಮ ಪಾಕಿಸ್ತಾನದ ಹಕ್ಕನ್ನು ಬಿಟ್ಟುಕೊಡಬೇಕೆಂದು ಕೇಳಲು ಸಾಧ್ಯವಿಲ್ಲವೆಂದು ಉತ್ತರ ಸಿಗುತ್ತದೆ. ಈ ಕುಚೋದ್ಯವನ್ನು ಒತ್ತಟ್ಟಿಗಿಟ್ಟು, ಎರಡು ಅಂಶಗಳನ್ನು ಗಣನೆಗೆ ತೆಗೆದುಕೊಂಡರೆ ಹಿಂದೂಗಳ ಭಯ ಅನಗತ್ಯವಾದುದೆಂದು ಸ್ಪಷ್ಟವಾಗುತ್ತದೆ.

ಮೊದಲನೆಯದಾಗಿ, ಯಾವುದೇ ದೇಶವಾಗಲಿ, ವೈಜ್ಞಾನಿಕ ಗಡಿ ಎನ್ನುವುದೊಂದನ್ನು ಹೊಂದಿರಲು ಸಾಧ್ಯವೇ? 'ನಾರ್ತ್ ವೆಸ್ಟ್ ಫ್ರಾಂಟಿಯರ್' ಕೃತಿಯ ಲೇಖಕ ಶ್ರೀ ಡೇವಿಸ್ ಹೇಳುವ ಹಾಗೆ:–

> **"ನಮ್ಮ ಭಾರತ ಸಾಮ್ರಾಜ್ಯದ ವಾಯುವ್ಯದಲ್ಲಿ, ಜನಾಂಗೀಯ ರಾಜಕೀಯ ಮತ್ತು ಮಿಲಿಟರಿ ಅಗತ್ಯತೆಗಳನ್ನು ಪೂರೈಸುವ ಒಂದು ಗಡಿಯನ್ನು ನಿರ್ಧರಿಸಲು ಸಾಧ್ಯವೇ ಇಲ್ಲ. ಸುಲಭವಾಗಿ ಗುರ್ತಿಸಬಹುದಾದ ಭೌಗೋಳಿಕ ಲಕ್ಷಣಗಳುಳ್ಳ, ನಿಕಟ ಸಂಬಂಧವುಳ್ಳ ಜನರ ಪ್ರಾಂತ್ಯಗಳನ್ನು ಒಡೆಯದ, ಹಾಗೆಯೇ ರಾಜಕೀಯ ಗಡಿಯೂ ಆಗಿರುವ ಪ್ರದೇಶವೊಂದನ್ನು ಕಾಲ್ಪನಿಕವಾಗಿ ಮಾತ್ರ ಬಯಸಬಹುದು."**

ಚಾರಿತ್ರಿಕವಾಗಿಯೂ ಭಾರತಕ್ಕೆ ವೈಜ್ಞಾನಿಕವೆನ್ನಬಹುದಾದ ಗಡಿಯಿರಲಿಲ್ಲ ಮತ್ತು ಹಲವಾರು ಜನ ಬೇರೆ ಬೇರೆ ಗಡಿಗಳಿರಬೇಕೆಂದು ಪ್ರತಿಪಾದಿಸುತ್ತಾರೆ. ಈ ಗಡಿಗಳ ಪ್ರಶ್ನೆ ಎರಡು ವಿಧದ ನೀತಿಗಳ ಬೆಳವಣಿಗೆಗೆ ಕಾರಣವಾಗಿದೆ. ಒಂದು "ಮುನ್ನಡೆ" (Forward) ನೀತಿಯಾದರೆ, ಇನ್ನೊಂದು "ಸಿಂಧೂಗೆ ಹಿಂದಿರುಗಿ" (go back to the Indus) ನೀತಿಯಾಗಿದೆ. ಸರ್ ಜಾರ್ಜ್ ಮ್ಯಾಕ್‌ಮನ್ನರ ಭಾಷೆಯಲ್ಲಿ

ಹೇಳುವುದಾದರೆ, 'ಮನ್ನಡೆ' ನೀತಿಗೆ, ಮಹತ್ವಾಕಾಂಕ್ಷೆ ಮತ್ತು ಮಿತಾಕಾಂಕ್ಷೆಗಳಿದ್ದವು. ಮುನ್ನಡೆ ನೀತಿ, ತನ್ನ 'ಮಹತ್ವಾಕಾಂಕ್ಷೆ'ಯ ಭಾಗವಾಗಿ, ಆಫ್ಘಾನಿಸ್ತಾನದ ಆಗುಹೋಗುಗಳ ಮೇಲೆ ತನ್ನ ಸಕ್ರಿಯ ಹಿಡಿತ ಹೊಂದಿ, ಆಕ್ಸಸ್‌ವರೆಗೆ ತನ್ನ ಪ್ರಭಾವವನ್ನು ವಿಸ್ತರಿಸುವ ಆಶಯವನ್ನೊಳಗೊಂಡಿತ್ತು. 'ಸಿಂಧೂಗೆ ಹಿಂದಿರುಗಿ' ನೀತಿ ಗುಡ್ಡಗಾಡು ಜನರುಳ್ಳ ವಾಯುವ್ಯ ಪ್ರಾಂತ್ಯ ಮತ್ತು ಡ್ಯುರಂಡ್ ರೇಖೆ ನಿಗದಿಪಡಿಸುವ ಆಫ್ಘಾನಿಸ್ತಾನದ ನಡುವಿನ ಪ್ರದೇಶವನ್ನು ಸೇರಿಸಿಕೊಂಡು, ಅಲ್ಲಿಯವರೆಗೆ ಬ್ರಿಟಿಷ್ ಆಳ್ವಿಕೆಯನ್ನು ವಿಸ್ತರಿಸುವ ಆಶಯದ್ದಾಗಿತ್ತು. ಮಹತ್ವಾಕಾಂಕ್ಷೆಯ ಮುನ್ನಡೆ ನೀತಿ ಪ್ರತಿಪಾದಿಸುವ ಭಾರತದ ಸುರಕ್ಷಿತ ಗಡಿಯ ವಿಚಾರವನ್ನು ಕೈಬಿಟ್ಟು ಬಹಳ ಕಾಲವಾಯಿತು. ಹೀಗಾಗಿ, ಆಯ್ಕೆ ಮಾಡಿಕೊಳ್ಳಬಹುದಾದ ಮೂರು ವಿಧದ ಗಡಿರೇಖೆಗಳು ಉಳಿದಿವೆ. (೧) ಸಿಂಧೂನದಿ (೨) ಉತ್ತರ ವಾಯುವ್ಯ ಪ್ರಾಂತ್ಯದ ಇಂದಿನ ಆಡಳಿತ ಗಡಿ (೩) ಡ್ಯುರಂಡ್ ರೇಖೆ, ಪಾಕಸ್ತಾನ, ಹಿಂದೂಸ್ತಾನದ ಗಡಿಯನ್ನು, ಸಿಂಧೂನದಿಯವರಗೆ ಏಕೆ, ಅದನ್ನೂ ದಾಟಿ ಸಟ್ಲೆಜ್‌ವರೆಗೂ ಹಿಂದೆ ನೂಕುತ್ತದೆ. ಆದರೆ ಈ "ಸಿಂಧೂಗೆ ಹಿಂದಿರುಗಿ" ನೀತಿಯ ಪ್ರತಿಪಾದಕರು ಇಲ್ಲದಿಲ್ಲ. ಇದರ ಬಹುದೊಡ್ಡ ಬೆಂಬಲಿಗನೆಂದರೆ ಲಾರ್ಡ್ ಲಾರೆನ್ಸ್. ಈತ ಸಿಂಧೂ ಕಣಿವೆಯನ್ನು ದಾಟಿ ಮುನ್ನುಗ್ಗುವ ನೀತಿಯ ಕಡುವಿರೋಧಿ. ದಾಳಿಕೋರರನ್ನು ಸಿಂಧೂ ಕಣಿವೆಯಲ್ಲೇ ಎದುರಿಸಬೇಕೆಂದು ಈತ ಹೇಳುತ್ತಿದ್ದು, ಸಿಂಧು ಕೊಳ್ಳವನ್ನು ಬಿಟ್ಟು ದೂರದ ಜಾಗದಿಂದ ಶತ್ರುವಿನೊಡನೆ ಹೋರಾಡುವುದು ತಪ್ಪು ಮತ್ತು ಬಲಹೀನತೆಯಾಗುತ್ತದೆ. ಗಡಿಯಿಂದ ದೂರವಿದ್ದಷ್ಟೂ, ಧಾಳಿ ಮಾಡುವ ಸೈನ್ಯ ಆಫ್ಘಾನಿಸ್ತಾನ ಮತ್ತು ಗುಡ್ಡಗಾಡು ಪ್ರದೇಶಗಳನ್ನು ಹಾಯ್ದು ಬರುವಾಗ ಕಿರುಕುಳ-ತೊಂದರೆಗಳಿಗೆ ತುತ್ತಾಗುತ್ತದೆ. ನದಿಯೊಂದು ಬಲಹೀನ ರಕ್ಷಣಾರೇಖೆಯಾಗುತ್ತದೆಂದು ಇತರರು ಅಭಿಪ್ರಾಯಪಟ್ಟಿದ್ದಾರೆ ನಿಜ. ಆದರೆ ಸಿಂಧೂನದಿ ಗಡಿಗೇ ಸೀಮಿತವಾಗದಿರಲು ಮುಖ್ಯಕಾರಣ ಬೇರೆ ಅನ್ನಿಸುತ್ತದೆ. ಆ ಕಾರಣವನ್ನು ಶ್ರೀ ಡೇವಿಸ್ ಅವರು ಕೆಳಕಂಡಂತೆ ವಿವರಿಸುತ್ತಾರೆ.

> "**ಉತ್ತರ ವಾಯುವ್ಯ ಪ್ರಾಂತದ ದೃಷ್ಟಿಯಿಂದ ನೋಡಿದಾಗ, 'ಸಿಂಧೂಗೆ ಹಿಂದಿರುಗಿ' ಕೂಗು ಅಸಂಗತವಾಗುತ್ತದೆ. ಅಲ್ಲಿಂದ ಹಿಂದೆಗೆಯುವುದು ಘನತೆಗೆ ಕುಂದುಂಟುಮಾಡುವುದೇ ಅಲ್ಲದೆ, ಯಾರಿಗೆ ನಾವು ನಮ್ಮ ಸುಖೀ ಆಡಳಿತವನ್ನು ವಿಸ್ತರಿಸಿದ್ದೇವೆಯೋ ಆ ಜನತೆಗೆ ಭಾರೀ ದ್ರೋಹವೆಸಗಿದಂತಾಗುತ್ತದೆ.**"

ಭೌಗೋಳಿಕ ಪರಿಸ್ಥಿತಿಯೇ ನಿರ್ಣಾಯಕವಾಗದ ಇಂದಿನ ಸ್ಥಿತಿಯಲ್ಲಿ ಒಂದು ನಿರ್ದಿಷ್ಟಗಡಿಯೇ ಸುರಕ್ಷಿತವೆಂದು ಪಟ್ಟುಹಿಡಿಯುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಮಿಗಿಲಾಗಿ, ಆಧುನಿಕ ತಂತ್ರಜ್ಞಾನ, ಪ್ರಕೃತಿದತ್ತಗಡಿಗಳ- ಅದು ಮೇರುಪರ್ವತಗಳಿರಲಿ, ಮಹಾನದಿಗಳಿರಲಿ ಅಥವಾ ವಿಶಾಲಸಮುದ್ರ, ಮರುಭೂಮಿಗಳಿರಲಿ, ಪ್ರಾಮುಖ್ಯತೆಯನ್ನು ಕಸಿದುಕೊಂಡುಬಿಟ್ಟಿದೆ.

ಎರಡನೆಯದಾಗಿ, ಸ್ವಾಭಾವಿಕ ಗಡಿಗಳಿಲ್ಲದ ರಾಷ್ಟ್ರಗಳಿಗೆ ಈ ಲೋಪವನ್ನು ನಿವಾರಿಸಿಕೊಳ್ಳಲು ಸಧ್ಯವಿದೆ. ಸ್ವಾಭಾವಿಕ ಗಡಿಗಳಿಲ್ಲದ ರಾಷ್ಟ್ರಗಳು ಕೊರತೆಯನ್ನು ಅನುಬವಿಸಿಲ್ಲ. ಅಲ್ಲದೆ, ಇವು ಕೃತಕ ಕೋಟೆಗಳನ್ನು ಗಡಿಗಳಾಗಿ ನಿರ್ಮಿಸಿ, ಸ್ವಾಭಾವಿಕ ಲೋಪಗಳನ್ನು ನಿವಾರಿಸಿಕೊಂಡಿದ್ದು, ಅವು ಸ್ವಾಭಾವಿಕ ಗಡಿಗಳಿಗಿಂತ ಹೆಚ್ಚು ಫಲಪ್ರದವಾಗಿವೆ. ಇದೇ ಪರಿಸ್ಥಿತಿಯಲ್ಲಿರುವ ಇತರ ದೇಶಗಳು ಸಾಧಿಸಿದ್ದನ್ನು ಹಿಂದೂಗಳು ಸಾಧಿಸಲಾರರು ಎಂದು ನಂಬುವುದಕ್ಕೆ ಕಾರಣಗಳಿಲ್ಲ. ಲಭ್ಯ ಸಂಪನ್ಮೂಲಗಳನ್ನು ಗಮನಿಸಿದರೆ ಹಿಂದುಗಳು ಸ್ವಾಭಾವಿಕ ಸುರಕ್ಷಿತ ಗಡಿಗಳಿಲ್ಲವೆಂದು ಭಯ ಪಡುವ

ಅಗತ್ಯವಿಲ್ಲ. ವೈಜ್ಞಾನಿಕ ಗಡಿಗಳ ಪ್ರಶ್ನೆಗಿಂತಲೂ ಮುಖ್ಯವಾದ್ದೆಂದರೆ ಸಂಪನ್ಮೂಲಗಳ ಪ್ರಶ್ನೆ. ಅಗತ್ಯ ಸಾಧನೆಗಳಿಗೆ ಬೇಕಾದ ಸಂಪನ್ಮೂಲಗಳಿದ್ದಾಗ, ಅವೈಜ್ಞಾನಿಕ ಅಥವಾ ಬಲಹೀನ ಗಡಿಗಳು ಸೃಷ್ಟಿಸುವ ಕಷ್ಟಗಳನ್ನು ಪರಿಹರಿಸಿಕೊಳ್ಳಲು ಸಾಧ್ಯ. ಆದ್ದರಿಂದ ನಾವು ಪಾಕಿಸ್ಥಾನ ಮತ್ತು ಹಿಂದೂಸ್ಥಾನಗಳ ತೌಲನಿಕ ಸಂಪನ್ಮೂಲಗಳನ್ನು ಗಮನಿಸಬೇಕು. ಈ ಕೆಳಗಿನ ಅಂಕಿಅಂಶಗಳು ಅವುಗಳ ತೌಲನಿಕ ಸಂಪನ್ಮೂಲಗಳ ಕಲ್ಪನೆಯನ್ನು ನೀಡುವ ಉದ್ದೇಶವನ್ನು ಹೊಂದಿವೆ:

## II
## ಸಂಪನ್ಮೂಲಗಳ ಪ್ರಶ್ನೆ

ವೈಜ್ಞಾನಿಕ ಗಡಿಗಳ ಪ್ರಶ್ನೆಗಿಂತಲೂ ಮುಖ್ಯವಾದ ಪ್ರಶ್ನೆಯೆಂದರೆ ಸಂಪನ್ಮೂಲಗಳ ಪ್ರಶ್ನೆ. ನಮ್ಮ ಅಗತ್ಯಗಳನ್ನು ಪೂರೈಸುವಷ್ಟು ಸಂಪನ್ಮೂಲಗಳಿದ್ದಾಗ, ಬಲಹೀನ ಅಥವಾ ಅವೈಜ್ಞಾನಿಕ ಗಡಿಗಳಿಂದ ಆಗಬಹುದಾದ ಸಮಸ್ಯೆಯನ್ನು ನಿವಾರಿಸಿಕೊಳ್ಳುವುದು ಸುಲಭ. ಆದ್ದರಿಂದ ಪಾಕಿಸ್ತಾನ ಮತ್ತು ಹಿಂದೂಸ್ತಾನಗಳ ತುಲನಾತ್ಮಕ ಅಧ್ಯಯನವೊಂದನ್ನು ಮಾಡಬೇಕು. ಕೆಳಗಿನ ಅಂಕಿ ಅಂಶಗಳು, ಆದೇಶಗಳ ಸಂಪನ್ಮೂಲಗಳ ತುಲನಾತ್ಮಕ ನೋಟವೊಂದನ್ನು ಒದಗಿಸುತ್ತವೆ.

### ಪಾಕಿಸ್ತಾನದ ಸಂಪನ್ಮೂಲಗಳು

| ಪ್ರಾಂತಗಳು | ವಿಸ್ತೀರ್ಣ | ಜನಸಂಖ್ಯೆ | ಆದಾಯ* |
|---|---|---|---|
| ಉತ್ತರವಾಯುವ್ಯಗಡಿ ಪ್ರಾಂತ್ಯ | ೧೩,೫೧೮ | ೨,೪೨೫,೦೦೩ | ೧,೯೦,೧೧,೮೪೨ |
| ಪಂಜಾಬ್ | ೯೧,೯೧೯ | ೨೩,೫೫೧,೨೧೦೦ | ೧೨,೫೩,೮೭,೭೩೦ |
| ಸಿಂಧ್ | ೪೬,೩೭೮ | ೩,೮೮೭,೦೭೦ | ೯,೫೬,೭೬,೨೬೯ |
| ಬಲೂಚಿಸ್ತಾನ | ೫೪,೨೨೮ | ೪೨೦,೬೪೮ | — — |
| ಬಂಗಾಳ | ೮೨,೯೫೫ | ೫೦,೦೦೦,೦೦೦ | ೩೬,೫೬,೩೮,೩೨೬ |
| **ಒಟ್ಟು** | **೨೮೮,೯೯೮** | **೮೦,೨೮೩,೯೩೧** | **೬೦,೫೬,೩೮,೩೨೬** |

*ಈ ಆದಾಯದಲ್ಲಿ ಪ್ರಾಂತ್ಯ ಸರ್ಕಾರ, ಪ್ರಾಂತ್ಯಗಳಲ್ಲಿ ವಸೂಲಿ ಮಾಡುವ ಮತ್ತು ಕೇಂದ್ರಸರ್ಕಾರ ಕೇಂದ್ರದ ಆದಾಯವಾಗಿ ವಸೂಲಿ ಮಾಡುವ ಆದಾಯಗಳೆರಡೂ ಸೇರಿವೆ.

### ಹಿಂದೂಸ್ತಾನದ ಸಂಪನ್ಮೂಲಗಳು

| ಪ್ರಾಂತಗಳು | ವಿಸ್ತೀರ್ಣ | ಜನಸಂಖ್ಯೆ | ಆದಾಯ* |
|---|---|---|---|
| ಅಜ್ಮೀರ–ಮೇವಾಡ | ೨,೭೧೧ | ೫೬೦,೨೯೨ | ೨೧,೦೦,೦೦೦ |
| ಅಸ್ಸಾಮ್ | ೫೫,೦೧೪ | ೮,೬೨೨,೨೫೧ | ೪,೪೬,೦೪,೪೪೧ |
| ಬಿಹಾರ | ೬೯,೩೪೮ | ೩೨,೩೭೧,೪೩೪ | ೬,೭೮,೨೧,೫೮೮ |
| ಬಾಂಬೆ | ೭೭,೨೭೧ | ೧೮,೦೦೦,೦೦೦ | ೩೪,೯೮,೦೩,೮೦೦ |
| ಮದ್ಯಪ್ರಾಂತ್ಯ ಮತ್ತು ಬೇರರ್ | ೯೯,೯೫೭ | ೧೫,೫೦೭,೭೨೩ | ೪,೫೮,೮೩,೯೬೨ |

| | | | |
|---|---|---|---|
| ಕೂರ್ಗ್ (ಕೊಡಗು) | ೧,೫೯೩ | ೧೬೩,೨೯೩ | ೧೧,೦೦,೦೦೦ |
| ದೆಹಲಿ | ೫೭೩ | ೬೩೬,೨೪೬ | ೭೦,೦೦,೦೦೦ |
| ಮದರಾಸು | ೧,೪೨,೨೭೭ | ೪೬,೦೦೦,೦೦೦ | ೨೫,೬೬,೭೧,೨೬೫ |
| ಒರಿಸ್ಸಾ | ೩೨,೬೯೫ | ೮,೦೮೩,೬೮೧ | ೮೭,೬೭,೨೬೯ |
| ಸಂಯುಕ್ತ ಪ್ರಾಂತಗಳು | ೨,೦೬,೨೪೮ | ೪೮,೪೦೮,೭೬೩ | ೧೬,೮೫,೫೨,೮೮೧ |
| **ಒಟ್ಟು** | **೬೦೭,೬೫೭** | **೧೭೮,೫೧೩,೯೧೯** | **೯೪,೨೪,೦೫,೨೦೬** |

*ಈ ಆದಾಯದಲ್ಲಿ ಪ್ರಾಂತ್ಯ ಸರ್ಕಾರಗಳು, ಪ್ರಾಂತ್ಯಗಳಲ್ಲಿ ಮತ್ತು ಕೇಂದ್ರಸರ್ಕಾರ ಕೇಂದ್ರದ ಆದಾಯವಾಗಿ ವಸೂಲಿ ಮಾಡುವ ಆದಾಯಗಳೆರಡೂ ಸೇರಿವೆ.

**ಇವು ಒಟ್ಟು ಅಂಕಿ–ಅಂಶಗಳು :**ಈ ಮೊತ್ತಗಳು ಹೆಚ್ಚು–ಕಡಿಮೆಯಾಗಲು ಸಾಧ್ಯವಿದೆ. ಕೇಂದ್ರ ಸರ್ಕಾರವು ರೈಲ್ವೆ, ನೋಟು (ಕರೆನ್ಸಿ) ಹಾಗೂ ಅಂಚೆ ಮತ್ತು ತಂತಿ ಇಲಾಖೆಗಳಿಂದ ಪಡೆಯುವ ಆದಾಯವನ್ನು ಈ ಮೊತ್ತಕ್ಕೆ ಸೇರಿಸಿಲ್ಲ. ಏಕೆಂದರೆ, ಪ್ರತೀ ಪ್ರಾಂತ್ಯದಿಂದ ಈ ಬಾಬ್ತುಗಳಿಂದ ಎಷ್ಟು ಆದಾಯ ಪಡೆಯಲಾಗುತ್ತಿದೆ ಎಂದು ಖಚಿತಪಡಿಸಲು ಸಾಧ್ಯವಿಲ್ಲ. ಅದು ಸಾಧ್ಯವಾದಾಗ ಈ ಆದಾಯಕ್ಕೆ ಅದನ್ನು ಸೇರಿಸಬಹುದು. ಈ ಬಾಬ್ತಿನಿಂದ ಪಾಕಿಸ್ತಾನಕ್ಕೆ ಸಿಕ್ಕುವ ಆದಾಯಕ್ಕಿಂತ, ಹಿಂದೂಸ್ತಾನದ ಆದಾಯ ಖಂಡಿತವಾಗಿಯೂ ಹೆಚ್ಚಾಗಿರುತ್ತದೆ. ಈ ಅಂಕಿ–ಅಂಶಗಳಿಗೆ ಸೇರ್ಪಡೆ ಮಾಡುವ ರೀತಿಯಲ್ಲಿಯೇ ಕಳೆಯಬೇಕಾದ್ದೂ ಇದೆ. ಕಳೆಯಬೇಕಾದುದರಲ್ಲಿ ಪಾಕಿಸ್ತಾನದ ಪಾಲು ಹೆಚ್ಚು. ಮುಂದೆ ತೋರಿಸಿರುವಂತೆ ಪಂಜಾಬಿನ ಕೆಲವು ಪ್ರದೇಶಗಳನ್ನು ಪಶ್ಚಿಮ ಪಾಕಿಸ್ತಾನದಿಂದ ಹೊರಗಿಡಬೇಕಾಗುತ್ತದೆ. ಹಾಗೆಯೇ ಬಂಗಾಳ ಪ್ರಾಂತ್ಯದಲ್ಲಿ ಪ್ರಸ್ತಾವಿತ ಪೂರ್ವಪಾಕಿಸ್ತಾನದಿಂದ ಕೆಲವು ಪ್ರದೇಶಗಳನ್ನು ಹೊರಗಿಟ್ಟು, ಅಸ್ಸಾಮಿನ ಒಂದು ಜಿಲ್ಲೆಯನ್ನು ಸೇರಿಸಬೇಕಾಗುತ್ತದೆ. ನನ್ನ ಪ್ರಕಾರ ಬಂಗಾಳದಿಂದ ೧೫ ಜಿಲ್ಲೆಗಳನ್ನು ಪಂಜಾಬಿನಿಂದ ೧೩ ಜಿಲ್ಲೆಗಳನ್ನೂ ಹೊರಗಿಡಬೇಕಾಗುತ್ತದೆ. ಈ ಪ್ರದೇಶದಿಂದ ಎಷ್ಟು ವಿಸ್ತೀರ್ಣದ ಭೂಮಿ, ಜನಸಂಖ್ಯೆ ಮತ್ತು ಆದಾಯ ಕಡಿಮೆಯಾಗಬಹುದೆಂದು ನಿಖರವಾದ ಅಂಕಿ–ಅಂಶಗಳು ಲಭ್ಯವಿಲ್ಲ. ಆದರೂ ಪಂಜಾಬ್ ಮತ್ತು ಬಂಗಾಳದ ಆದಾಯಗಳಲ್ಲಿ ಅರ್ಧದಷ್ಟು ಕಡಿಮೆಯಾಗುತ್ತದೆಂದು ಊಹಿಸಲು ಸಾಧ್ಯ. ಪಾಕಿಸ್ತಾನ ಕಳೆದುಕೊಳ್ಳುವುದೆಲ್ಲಾ ಹಿಂದೂಸ್ತಾನಕ್ಕೆ ಗಳಿಕೆಯಾಗುತ್ತದೆ. ನಿಖರವಾಗಿ ಹೇಳುವುದಾದರೆ ಪೂರ್ವ–ಪಶ್ಚಿಮ ಪಾಕಿಸ್ತಾನದ ಆದಾಯ ರೂ.೬೦ ಕೋಟಿಯಲ್ಲಿ ೨೪ ಕೋಟಿ ಕಡಿತವಾಗಿ ೨೬ ಕೋಟಿಯಾದರೆ, ಹಿಂದೂಸ್ತಾನದ ಆದಾಯ ರೂ.೯೬ ಕೋಟಿಗೆ, ೨೪ ಕೋಟಿ ಸೇರಿ, ೧೨೦ ಕೋಟಿಯಾಗುತ್ತದೆ.

ನಾನು ಮಾಡಿದ ಅವಲೋಕನದ ಬೆಳಕಿನಲ್ಲಿ ಈ ಅಂಕಿ–ಅಂಶಗಳ ಅಧ್ಯಯನವು ತೋರಿಸುವುದೇನೆಂದರೆ ವಿಸ್ತೀರ್ಣ, ಜನಸಂಖ್ಯೆ ಅಥವಾ ಆದಾಯದ ಪ್ರಶ್ನೆಯನ್ನು ಪರಿಗಣಿಸಿದರೂ ಹಿಂದೂಸ್ಥಾನದ ಸಂಪನ್ಮೂಲಗಳು ಪಾಕಿಸ್ಥಾನದ ಸಂಪನ್ಮೂಲಗಳಿಗಿಂತ ಭಾರೀ ದೊಡ್ಡ ಪ್ರಮಾಣದ್ದಾಗಿವೆ.

# III
# ಸಶಸ್ತ್ರ ಪಡೆಗಳ ಪ್ರಶ್ನೆ

ಒಂದು ದೇಶದ ರಕ್ಷಣೆ ತನ್ನ ಸಂಪನ್ಮೂಲಗಳ ಮೇಲೆ ಅವಲಂಬಿತವಾಗುವಷ್ಟು ತನ್ನ ವೈಜ್ಞಾನಿಕ ಗಡಿಗಳ ಮೇಲೆ ಅವಲಂಬಿತವಾಗುವುದಿಲ್ಲ. ಆದರೆ ಸಂಪನ್ಮೂಲಗಳಿಗೂ ಹೆಚ್ಚಾಗಿ ಅದು ತನ್ನ ಸೈನ್ಯದ ಶಕ್ತಿಯನ್ನು ಅವಲಂಬಿಸಿರುತ್ತದೆ. ಹೋರಾಡುವ ಪಾಕಿಸ್ತಾನ ಮತ್ತು ಹಿಂದೂಸ್ತಾನಗಳಿಗಿರುವ ಸೈನಿಕಶಕ್ತಿ ಎಂತಹುದು? ಸೈಮನ್ ಆಯೋಗ ಭಾರತದ ರಕ್ಷಣಾ ಸಮಸ್ಯೆಯ ವಿಶಿಷ್ಟ ವಿಚಾರದ ಬಗ್ಗೆ ಪ್ರಸ್ತಾಪಿಸಿ, ಕೆಲವು ಪ್ರದೇಶಗಳು ಮಾತ್ರ ಹೆಚ್ಚು ಮಂದಿಯನ್ನು ಕೊಟ್ಟರೆ, ಇತರ ಪ್ರದೇಶಗಳು ಇಲ್ಲವೇ ಇಲ್ಲವೆನ್ನುವಷ್ಟು ಕನಿಷ್ಠ ಪ್ರಮಾಣದಲ್ಲಿ ಸೈನ್ಯಕ್ಕೆ ಸೇರುತ್ತಾರೆಂದು ಹೇಳಿದೆ. ಸೈಮನ್ ಆಯೋಗದ ವರದಿಯಿಂದ ಆಯ್ದುಕೊಳ್ಳಲಾದ ಈ ಕೆಳಗಿನ ಅಂಕಿ–ಅಂಶಗಳು, ಭಾರತದ ರಕ್ಷಣೆಯ ಬಗ್ಗೆ ಕಾಳಜಿಯಿರುವ ಎಲ್ಲರಿಗೂ ಅಸಮಾಧಾನವಾಗುವಂಥ ಆಶ್ಚರ್ಯವನ್ನುಂಟುಮಾಡುತ್ತದೆ.

| **ಸೈನ್ಯಕ್ಕೆ ಭರ್ತಿ ಮಾಡಿಕೊಂಡ ಪ್ರದೇಶಗಳು** | **ಭರ್ತಿ ಮಾಡಿಕೊಂಡ ಸಂಖ್ಯೆ** |
|---|---|
| ೧. ಉತ್ತರ ವಾಯುವ್ಯ ಗಡಿ ಪ್ರಾಂತ್ಯ | ೫,೬೦೦ |
| ೨. ಕಾಶ್ಮೀರ | ೬,೫೦೦ |
| ೩. ಪಂಜಾಬ್ | ೮೬,೦೦೦ |
| ೪. ಬಲೂಚಿಸ್ತಾನ | ೩೦೦ |
| ೫. ನೇಪಾಳ | ೧೯,೦೦೦ |
| ೬. ಸಂಯುಕ್ತ ಪ್ರಾಂತ್ಯಗಳು | ೧೬,೫೦೦ |
| ೭. ರಾಜ್‌ಪುತಾನಾ | ೭,೦೦೦ |
| ೮. ಮಧ್ಯ ಭಾರತ | ೨೦೦ |
| ೯. ಬಾಂಬೆ | ೭,೦೦೦ |
| ೧೦. ಕೇಂದ್ರ ಪ್ರಾಂತ್ಯಗಳು | ೧೦೦ |
| ೧೧. ಬಿಹಾರ ಮತ್ತು ಒರಿಸ್ಸಾ | ೩೦೦ |
| ೧೨. ಬಂಗಾಳ | ಇಲ್ಲ |
| ೧೩. ಅಸ್ಸಾಮ್ | ಇಲ್ಲ |
| ೧೪. ಬರ್ಮಾ | ೩,೦೦೦ |
| ೧೫. ಹೈದರಾಬಾದ್ | ೭೦೦ |
| ೧೬. ಮೈಸೂರು | ೧೦೦ |
| ೧೭. ಮದರಾಸು | ೪,೦೦೦ |
| ೧೮. ಇತರೆ | ೧,೯೦೦ |
| **ಒಟ್ಟು** | **೧,೫೮,೨೦೦** |

ಭಾರತದಲ್ಲಿ ಈ ನೇಮಕಾತಿಗಳು ಅಸಹಜವೆಂದು ಸೈಮನ್ ಆಯೋಗ ಅಭಿಪ್ರಾಯಪಟ್ಟಿದೆ. ಇದಕ್ಕೆ ಸಮರ್ಥನೆಯಾಗಿ, ಬೇರೆ ಬೇರೆ ಪ್ರಾಂತ್ಯಗಳಲ್ಲಿ ಮೊದಲನೇ ಮಹಾಯುದ್ಧದ ಸಮಯದಲ್ಲಿ ಸೈನ್ಯಕ್ಕೆ ಭರ್ತಿಯಾದ ಬಗ್ಗೆ ಈ ಕೆಳಕಂಡ ಅಂಕಿ–ಅಂಶಗಳನ್ನು ಕೊಟ್ಟು, "ಯಾವ ಪ್ರಾಂತ್ಯದ ಜನರನ್ನೂ ಸೈನ್ಯಕ್ಕೆ ಸೇರುವುದರಿಂದ ವಿಮುಖಗೊಳಿಸಲಾಗಿದೆ ಎಂದು ಹೇಳಲು ಸಾಧ್ಯವಿಲ್ಲ"ವೆಂದೇ ಅಭಿಪ್ರಾಯಪಟ್ಟಿದೆ.

| ಪ್ರಾಂತ್ಯ | ಹೋರಾಡುವ ತುಕಡಿಗಳಿಗೆ ಭರ್ತಿಯಾದವರ ಸಂಖ್ಯೆ | ಇತರ ತುಕಡಿಗಳಿಗೆ ಭರ್ತಿಯಾದವರ ಸಂಖ್ಯೆ | ಮೊತ್ತ |
|---|---|---|---|
| ೧ | ೨ | ೩ | ೪ |
| ಮದ್ರಾಸು | ೫೧,೨೨೩ | ೪೧,೧೧೭ | ೯೨,೩೪೦ |
| ಬಾಂಬೆ | ೪೧,೨೭೨ | ೩೦,೨೧೧ | ೭೧,೪೮೩ |
| ಬಂಗಾಳ | ೭,೧೧೭ | ೫೧,೯೩೫ | ೫೯,೦೫೨ |
| ಸಂಯುಕ್ತ ಪ್ರಾಂತಗಳು | ೧೬೩,೫೭೮ | ೧೧೭,೫೬೫ | ೨೮೧,೧೪೩ |
| ಪಂಜಾಬ್ | ೩೪೯,೬೮೮ | ೯೭,೨೮೮ | ೪೪೬,೯೭೬ |
| ಉತ್ತರವಾಯುವ್ಯ ಪ್ರಾಂತ್ಯ | ೩೨,೧೮೧ | ೧೩,೦೫೦ | ೪೫,೨೨೧ |
| ಬಲೂಚಿಸ್ತಾನ | ೧,೭೬೧ | ೩೨೭ | ೨,೦೮೮ |
| ಬರ್ಮಾ | ೧೪,೦೯೪ | ೪,೫೭೯ | ೧೮,೬೭೩ |
| ಬಿಹಾರ ಮತ್ತು ಒರಿಸ್ಸಾ | ೮,೫೭೬ | ೩೨,೯೭೬ | ೪೧,೫೫೨ |
| ಮಧ್ಯಪ್ರಾಂತಗಳು | ೫,೩೭೬ | ೯,೬೩೧ | ೧೫,೦೦೭ |
| ಅಸ್ಸಾಮ್ | ೯೪೨ | ೧೪,೧೮೨ | ೧೫,೧೨೪ |
| ಅಜ್ಮೀರ ಮತ್ತು ಮೇವಾಡ | ೭,೩೪೧ | ೧,೬೩೨ | ೮,೯೭೩ |
| ನೇಪಾಳ | ೫೮,೯೦೪ | — — | ೫೮,೯೦೪ |
| **ಒಟ್ಟು** | **೭,೪೨,೦೫೩** | **೪೧೪,೪೯೩** | **೧,೧೫೬,೫೪೬** |

ಇದರಿಂದಾಗಿ, ಪಾಕಿಸ್ಥಾನದ ಹೊರತಾಗಿ ಹಿಂದೂಸ್ಥಾನವು ತನ್ನನ್ನು ರಕ್ಷಿಸಿಕೊಳ್ಳಲಾರದೆಂದು ವಾದಿಸುವ ಸಾಧ್ಯತೆಯಿದೆ. ಸೈಮನ್ ಆಯೋಗವು ಹೊರತಂದ ಅಂಶಗಳು ಪ್ರಶ್ನಾತೀತವಾಗಿವೆಯೆನ್ನಬಹುದು. ಆದರೆ ಪಾಕಿಸ್ಥಾನ ಮಾತ್ರ ಸೈನಿಕರನ್ನು ಉತ್ಪಾದಿಸುತ್ತಿದೆ ಮತ್ತು ಹಿಂದೂಸ್ಥಾನಕ್ಕೆ ಅದು ಸಾಧ್ಯವಾಗುವುದಿಲ್ಲ ಎಂದು ಸೂಚಿಸಿದ ಸೈಮನ್ ಆಯೋಗದ ತೀರ್ಮಾನಕ್ಕೆ ಇವನ್ನು ಆಧಾರವಾಗಿಸಲು ಸಾಧ್ಯವಿಲ್ಲ. ಈ ಕೆಳಗಿನ ವಿವರಣೆಯ ಹಿನ್ನೆಲೆಯಲ್ಲಿ ಸೈಮನ್ ಆಯೋಗದ ತೀರ್ಮಾನ ಸರಿಯಲ್ಲವೆಂದು ಹೇಳಬಹುದು.

ಮೊದಲನೆಯದಾಗಿ, ಸೈಮನ್ ಆಯೋಗವು ಇಂಡಿಯಾಕ್ಕೆ ವಿಶಿಷ್ಟವೆಂದು ಗುರುತಿಸಿದ ಈ ಸ್ಥಿತಿ ಅಷ್ಟು ವಿಶಿಷ್ಟವೇನಲ್ಲ. ವಿಶಿಷ್ಟವಾಗಿ ಕಾಣುವ ಈ ಪ್ರವೃತ್ತಿ ಜನರ ಮೂಲದೋಷವೂ ಅಲ್ಲ. ಈ ವಿಚಿತ್ರಕ್ಕೆ ಬ್ರಿಟಿಷ್ ಸರ್ಕಾರ ಹಿಂದಿನಿಂದಲೂ ಅನುಸರಿಸಿರುವ ಸೈನ್ಯ ಭರ್ತಿ ನೀತಿಯೇ ಕಾರಣ. ಉತ್ತರ ವಾಯುವ್ಯ

ಪ್ರಾಂತ್ಯದ ಜನರೇ ಭಾರತ ಸೈನ್ಯದಲ್ಲಿ ಹೆಚ್ಚಾಗಿರಲು ಕಾರಣ ಆ ಜನ ಹೋರಾಟದ ವರ್ಗಕ್ಕೆ ಸೇರಿರುವುದೇ ಆಗಿದೆ ಎಂದು ಅಧಿಕೃತವಾಗಿ ಹೇಳಲಾಗಿದೆ. ಆದರೆ ಇದು ಸತ್ಯದೂರವೆಂದು, ಅಂಕಿ–ಅಂಶಗಳ ನೆರವಿನಿಂದಲೇ ಶ್ರೀ ಚೌಧರಿಯವರು ತೋರಿಸುತ್ತಾರೆ.[೧] ಹೋರಾಡುವ ವರ್ಗ ಮತ್ತು ಹೋರಾಡದ ವರ್ಗವೆಂಬ ಪರಿಕಲ್ಪನೆಗಳು ಹುಟ್ಟುವುದಕ್ಕೆ ೨೦ ವರ್ಷಗಳ ಮುಂಚೆಯೇ ಅಂದರೆ ೧೮೫೭ರ ಹೊತ್ತಿಗಾಗಲೇ ಸೈನ್ಯದಲ್ಲಿ ಉತ್ತರ ವಾಯುವ್ಯ ಪ್ರಾಂತ್ಯದ ಜನರ ಪ್ರಾಬಲ್ಯವಿತ್ತು. ಆ ಪರಿಕಲ್ಪನೆ, ೧೮೭೯ರಲ್ಲಿ ನೇಮಿಸಲಾದ ವಿಶೇಷ ಸೈನ್ಯಸಮಿತಿ[೨] (ಸ್ಪೆಷಲ್ ಆರ್ಮಿಕಮಿಟಿ)ಯಿಂದ ಪ್ರತಿಪಾದಿತವಾಯಿತು. ಶ್ರೀ ಚೌಧರಿಯವರು ಮುಂದುವರಿದು, ಈ ಪ್ರಾಬಲ್ಯಕ್ಕೂ, ಕ್ಷಾತ್ರಗುಣಕ್ಕೂ ಏನೂ ಸಂಬಂಧವಿಲ್ಲ. ನಿಜವೆಂದರೆ, ಆ ಪ್ರಾಂತ್ಯದ ಜನರು ಬಂಗಾಳಿಗಳೇ ಹೆಚ್ಚು ಪಾಲ್ಗೊಂಡಿದ್ದ ೧೮೫೭ರ ದಂಗೆಯನ್ನು ಹತ್ತಿಕ್ಕಲು ಬ್ರಿಟಿಷರಿಗೆ ನೆರವಾದ್ದರಿಂದ, ಬ್ರಿಟಿಷರು ಸೈನ್ಯಕ್ಕೆ ಭರ್ತಿ ಮಾಡಿಕೊಂಡರು ಎಂದೂ ಹೇಳುತ್ತಾರೆ. ಶ್ರೀ ಚೌಧರಿಯವರ ಮಾತುಗಳಲ್ಲೇ ಹೇಳುವುದಾದರೆ:

> **ದಂಗೆಯ ಮುಂಚಿನ ಬಂಗಾಳದ ಸೈನ್ಯದಲ್ಲಿ, ಗಂಗಾನದಿ ಬಯಲಿನ ಬ್ರಾಹ್ಮಣ ಮತ್ತು ಕ್ಷತ್ರಿಯ ಜಾತಿಯ ಜನರೇ ತುಂಬಿದ್ದರು. ನಾವು ಈ ಲೇಖನದ ಮೊದಲ ಭಾಗದಲ್ಲಿ ಹೇಳಿರುವಂತೆ, ಅಂದಿನ ಸೈನ್ಯವನ್ನು ರಾಷ್ಟ್ರೀಯ ಸೈನ್ಯಗಳೆಂದು ಹೇಳಲಾಗದಿದ್ದರೂ, ಎಲ್ಲ ಮೂರು ಪ್ರಾಂತ್ಯಗಳ ಸೈನ್ಯಗಳಲ್ಲೂ ಆಯಾ ಪ್ರಾಂತ್ಯಗಳ ಸೈನ್ಯಶಕ್ತಿಯನ್ನು ಅವಲಂಬಿಸಿಯೇ ಪ್ರಾತಿನಿಧ್ಯವಿತ್ತು. ಯಾಕೆಂದರೆ ಹಿಂದಿನಿಂದಲೂ ಶೌರ್ಯಕ್ಕೆ ಹೆಸರಾದ ಜನವರ್ಗದಿಂದಲೇ ಸೈನಿಕರನ್ನು ತೆಗೆದುಕೊಳ್ಳಲಾಗುತ್ತಿತ್ತು. ಆದರೆ ಸೈನ್ಯಕ್ಕೆ ಸೇರಿಸಿಕೊಂಡ ಜನರನ್ನೆಲ್ಲಾ ಮಾಮೂಲಿಯಾಗಿ ತೆಗೆದುಕೊಳ್ಳುತ್ತಿದ್ದದ್ದು ಸಂಬಂಧಪಟ್ಟ ಪ್ರದೇಶಗಳಿಂದಲೇ. ತೆಲುಗು, ತಮಿಳು ಪ್ರದೇಶಗಳಿಂದ ಮದ್ರಾಸಿನ ಸೈನ್ಯ, ಪಶ್ಚಿಮ ಭಾರತದಿಂದ ಬಾಂಬೆ ಸೈನ್ಯ, ಬಿಹಾರ, ಸಂಯುಕ್ತ ಪ್ರಾಂತ್ಯ ಮತ್ತು ಅಲ್ಪಸ್ವಲ್ಪ ಬಂಗಾಳದಿಂದ ಬಂಗಾಳ ಸೈನ್ಯಗಳನ್ನು ಭರ್ತಿಮಾಡಿಕೊಳ್ಳಲಾಗುತ್ತಿತ್ತು. ಯಾವ ಜಾತಿಯ ಪ್ರದೇಶದ ಜನರೇ ಆಗಿರಲಿ ಅವರು ಅರ್ಹರಾಗಿದ್ದರೆ ಸೈನ್ಯಕ್ಕೆ ಸೇರಿಸಲಾಗುತ್ತಿತ್ತು. ಇದಕ್ಕೆ ಒಂದೇ ಅಪವಾದವೆಂದರೆ ಉತ್ತರ ಭಾರತದ ಸೈನ್ಯದಲ್ಲಿ ಪಂಜಾಬಿಗಳಿಗೆ ಮತ್ತು ಸಿಖ್ಖರಿಗೆ ಸರಿಯಾದ ಪ್ರಾತಿನಿಧ್ಯ ಸಿಕ್ಕಿರಲಿಲ್ಲ. ಸಕಾರ ಒಂದು ಆಜ್ಞೆ ಹೊರಡಿಸಿ, ಈ ಜನಾಂಗಗಳ ನೇಮಕಾತಿಯನ್ನು ತೀವ್ರವಾಗಿ ನಿಯಂತ್ರಿಸಿತು. ಈ ಆಜ್ಞೆಯ ಪ್ರಕಾರ ಒಂದು ರೆಜಿಮೆಂಟಿನಲ್ಲಿ ಪಂಜಾಬಿಗಳ ಸಂಖ್ಯೆ ೨೦೦ಕ್ಕಿಂತ ಹೆಚ್ಚಿರಬಾರದು ಮತ್ತು ಈ ೨೦೦ರಲ್ಲಿ ಸಿಖ್ಖರ ಸಂಖ್ಯೆ ೧೦ನ್ನು ಮೀರಬಾರದು. ಬಂಗಾಳಿ ಸೈನ್ಯದ ಹಿಂದೂ ರೆಜಿಮೆಂಟುಗಳು ದಂಗೆ ಎದ್ದ ಕಾರಣ ಪಂಜಾಬಿಗಳು ಬ್ರಿಟಿಷರ ಕಣ್ಮಣಿಗಳಾದರು. ಅಲ್ಲಿಯತನಕ ಪಂಜಾಬಿಗಳನ್ನು ಬ್ರಿಟಿಷರು ಸಂದೇಹದಿಂದಲೇ ಕಂಡು ಅವರನ್ನು ಸೈನ್ಯಕ್ಕೇ ಸೇರಿಸಿಕೊಳ್ಳಲು ಹಿಂಜರಿಯುತ್ತಿದ್ದರು. ಆಗ ಬಂಗಾಳ ಸೈನ್ಯವನ್ನಂತೂ ಔದ್, ದಕ್ಷಿಣ ಮತ್ತು ಉತ್ತರ ಬಿಹಾರ ವಿಶೇಷವಾಗಿ ಶಹಬಾದ್, ಭೋಜ್‌ಪುರ, ಗಂಗಾ ಯುಮುನಾ ನದಿ ಪ್ರದೇಶದ ದೋಆಬ್, ರೋಹಿಲಖಂಡಗಳಿಂದಲೇ**

---

೧. ಶ್ರೀ ಚೌಧರಿಯವರ ಈ ಲೇಖನ ಮಾಲೆಯನ್ನು ನೋಡಿ. 'The Martial Races ಆಫ್ ಇಂಡಿಯಾ' ಮಾಡರ್ನ್ ರಿವ್ಯೂ ಜುಲೈ ೧೯೩೦, ಸೆಪ್ಟೆಂಬರ್ ೧೯೩೦ ಜನವರಿ ೧೯೨೧ ಮತ್ತು ಫೆಬ್ರವರಿ ೧೯೩೧.

೨. ಈ ಸಮಿತಿ ಕಳಿಸಿದ ಪ್ರಶ್ನಾವಳಿಯಲ್ಲಿ ಈ ಕೆಳಗಿನ ಪ್ರಶ್ನೆಯೂ ಇದೆ. ಸಾಮ್ರಾಜ್ಯದ ರಕ್ಷಣೆಗೆ ದಕ್ಷವಾದ ಭಾರತೀಯ ಸೈನ್ಯವೊಂದು ಅವಶ್ಯಕವೆಂದಾದರೆ ಭಾರತದ ಬಲಹೀನ ಮತ್ತು ಇತರ ಜನಾಂಗಗಳಿಂದ ಅಲ್ಲದೆ, ನಮಗೆ ಈಗಾಗಲೇ ಅತ್ಯುತ್ತಮ ಸೈನಿಕರನ್ನೂ ಒದಗಿಸಿರುವ ಪ್ರಾಂತ್ಯಗಳಿಂದ ಅದನ್ನು ಭರ್ತಿ ಮಾಡಿಕೊಳ್ಳುವುದು ಸರಿಯಲ್ಲವೇ?

ಆಯ್ದುಕೊಳ್ಳುತ್ತಿದ್ದರು. ಈ ಪ್ರದೇಶಗಳಿಂದ ಸೈನ್ಯಕ್ಕೆ ಭರ್ತಿಯಾದವರೆಲ್ಲಾ, ವಿವಿಧ ಮೇಲ್ಜಾತಿಗಳ ಬ್ರಾಹ್ಮಣ, ಕ್ಷತ್ರಿಯ, ರಜಪೂತ ಮತ್ತು ಅಹಿರ್ ಕೋಮುಗಳಿಗೆ ಸೇರಿದವರಾಗಿದ್ದರು. ಒಂದು ತುಕಡಿ(ರೆಜಿಮೆಂಟ್)ಗೆ ಭರ್ತಿ ಮಾಡಿಕೊಳ್ಳಲಾದ ಈ ಜಾತಿಗಳ ಸರಾಸರಿಯೆಂದರೆ (೧) ಬ್ರಾಹ್ಮಣರು ೭/೨೪, (೨) ರಜಪೂತರು ೧/೪, (೩) ಕೆಳಜಾತಿ ಹಿಂದೂಗಳು ೧/೬ (೪) ಮುಸಲ್ಮಾನರು ೧/೬, (೫) ಪಂಜಾಬಿಗಳು ೧/೮. ಈ ಸೈನ್ಯಕ್ಕೆ ಈಗ ಅತಿ ಹೆಚ್ಚು ಸೈನಿಕರನ್ನು ಒದಗಿಸುತ್ತಿರುವ ಪಂಜಾಬ್, ನೇಪಾಲ, ಉತ್ತರ ವಾಯುವ್ಯ ಪ್ರಾಂತ್ಯ, ಕುಮೌನ್, ಗದ್ವಾಲ್, ರಾಜ್‌ಪುಟಾಣದ ಗುಡ್ಡಗಾಡು ಪ್ರದೇಶಗಳು, ಹಿಂದೆ ತೀರಾ ಕಡಿಮೆ ಸಂಖ್ಯೆಯ ಜನರನ್ನು ಸೈನ್ಯಕ್ಕೆ ಒದಗಿಸುತ್ತಿದ್ದವು ಅಥವಾ ಇಲ್ಲವೇ ಇಲ್ಲ. ಇದರಿಂದ ಹೋರಾಡಲು ಹೆಸರಾದ ಭಾರತೀಯ ಜಾತಿಗಳ ಸಿಖ್ಖರು, ಗೂರ್ಖಾಗಳು, ಪಂಜಾಬಿ ಮುಸಲ್ಮಾನರು, ಡೋಗ್ರಾಗಳು, ಔಟರು, ಪಠಾಣರು, ಗದ್ವಾಲಿಗಳು, ರಾಜಪುಟಾಣದ ರಜಪೂತರು, ಕುಮೌನಿಗಳು, ಗೂಜರುಗಳು, ಎಲ್ಲ ಗುಡ್ಡಗಾಡು ಜನಾಂಗಗಳು ಮತ್ತು ಇಂದು ಭಾರತೀಯ ಸೈನ್ಯದ ಬೆನ್ನೆಲುಬು ಅನ್ನಿಸಿಕೊಂಡಿರುವ ಎಲ್ಲ ಜಾತಿಯ ಜನರನ್ನು ಹೊರಗಿಡಲಾಗಿತ್ತು. ಒಂದು ವರ್ಷಕಾಲ ನಡೆದ ಒಂದೇ ದಂಗೆ ಎಲ್ಲವನ್ನು ಬದಲಾಯಿಸಿ ಬಿಟ್ಟಿತು. ೧೮೫೭ರಲ್ಲಿ ಎದ್ದ ದಂಗೆ ಹಳೆಯ ಬಂಗಾಳಿ ಸೈನ್ಯವನ್ನು ಛಿದ್ರಗೊಳಿಸಿ ಇಂದಿನ ಸೈನ್ಯವನ್ನು ಹೋಲುವ ಪಂಜಾಬೀಕರಣಗೊಂಡ ಅನಾಗರಿಕ ಸೈನ್ಯವನ್ನು ಅಸ್ತಿತ್ವಕ್ಕೆ ತಂದುಬಿಟ್ಟಿತು.

ಹಿಂದೂಸ್ತಾನಿ ರೆಜಿಮೆಂಟುಗಳ (ಬಂಗಾಳಿ ಸೈನ್ಯದ) ದಂಗೆಯಿಂದ ಸೃಷ್ಟಿಯಾದ ಕಂದರವನ್ನು, ಹಿಂದೂಸ್ತಾನದ ಪಟ್ಟಣಗಳನ್ನೂ ಲೂಟಿ ಮಾಡಿ, ಹಗೆ ತೀರಿಸಿಕೊಳ್ಳಲು ಉತ್ಸುಕರಾಗಿದ್ದ ಸಿಖ್ಖರು, ಪಂಜಾಬಿಗಳು ಮತ್ತು ಗುಡ್ಡಗಾಡಿನ ಜನರು ತುಂಬಿದರು. ಹಿಂದೆ, ಈ ಜನಾಂಗಗಳನ್ನು ಹತ್ತಿಕ್ಕಲು, ಬ್ರಿಟಿಷರು ಹಿಂದೂಸ್ತಾನಿ ಸೈನ್ಯವನ್ನು ಬಳಸಿಕೊಂಡಿದ್ದರು. ಈ ಜನಾಂಗ, ತಮ್ಮ ಮೌಢ್ಯದಿಂದಾಗಿ, ತಮ್ಮ ನಿಜವಾದ ಶತ್ರುಗಳು ಬ್ರಿಟಿಷರಲ್ಲ, ಹಿಂದೂಸ್ತಾನಿಗಳೆಂದು ತಿಳಿದಿದ್ದರು. ಬ್ರಿಟಿಷ್ ಸರ್ಕಾರ ಈ ದ್ವೇಷವನ್ನು ೧೮೫೭ರ ದಂಗೆಯನ್ನಡಗಿಸಲು ಚೆನ್ನಾಗಿಯೇ ಬಳಸಿಕೊಂಡಿತು. ಇಂಗ್ಲೆಂಡಿನಲ್ಲಿದ್ದ ಲಾರ್ಡ್ ಡಾಲ್‌ಹೌಸಿಗೆ, ಗೂರ್ಖಾಗಳನ್ನು ಸೈನ್ಯಕ್ಕೆ ಸೇರಿಸಿಕೊಳ್ಳಲಾಗಿದೆಯೆಂಬ ಸುದ್ದಿ ತಿಳಿದಾಗ, ಆತ ಅತ್ಯಂತ ಸಂತೋಷಗೊಂಡು ತನ್ನ ಸ್ನೇಹಿತನೊಬ್ಬನಿಗೆ ಹೀಗೆ ಬರೆಯುತ್ತಾನೆ: "ಔದ್ ಪ್ರಾಂತ್ಯದ ಸೈನಿಕರೊಂದಿಗೆ, ಅವರು (ಗೂರ್ಖಾಗಳು) ಖಂಡಿತವಾಗಿಯೂ ದೈತ್ಯರಂತೆ ಕಾದಾಡಬಲ್ಲರು" ದಂಗೆಯ ನಂತರ, ಭಾರತೀಯ ಸೇನಾಪಡೆಯ ಮುಖ್ಯಸ್ಥ ಜನರಲ್ ಮ್ಯಾನ್ಸ್ ಫೀಲ್ಡ್, ಬ್ರಿಟಿಷರ ಪರವಾಗಿ ದಂಗೆಯಲ್ಲಿ ಸಿಖ್ಖರು ತೋರಿಸಿದ ಶೌರ್ಯಸಾಹಸಗಳ ಬಗ್ಗೆ ಪ್ರಸ್ತಾಪಿಸಿ "ಅದು ನಮ್ಮ ಮೇಲಿನ ಪ್ರೀತಿಯಿಂದಲ್ಲ, ಹಿಂದೂಸ್ತಾನದ ಮೇಲಿನ ದ್ವೇಷದಿಂದಾಗಿ, ಬಂಗಾಳಿ ಸೈನ್ಯದ ಮೇಲಿನ ದ್ವೇಷದಿಂದಾಗಿ, ಸಿಖ್ಖರು ಆ ಸಂದರ್ಭವನ್ನು ತಾವು ಸ್ವಾತಂತ್ರ್ಯ ಪಡೆಯಲು ಉಪಯೋಗಿಸಿಕೊಳ್ಳದೆ ನಮ್ಮ ಪರ ಹೋರಾಡಿದರು. ಹಿಂದೂಸ್ತಾನಿಗಳ ಮೇಲೆ ಹಗೆತೀರಿಸಿಕೊಂಡು ಅವರ ಪಟ್ಟಣಗಳನ್ನು ದರೋಡೆ ಮಾಡಿ ಆ ಸಂಪತ್ತನ್ನು ನಮ್ಮದಾಗಿಸಿಕೊಳ್ಳಲು ಬಯಸಿದ್ದರು. ನಾವು ಕೊಡುತ್ತಿದ್ದ ದಿನಗೂಲಿ ಅವರನ್ನು ಆಕರ್ಷಿಸಲಿಲ್ಲ. ತಮ್ಮ ಶತ್ರುಗಳು ವಾಸಿಸುತ್ತಿದ್ದ ನಗರಗಳನ್ನು ಇಡಿಯಾಗಿ ಲೂಟಿ ಮಾಡಬಹುದಾದ ಸಾಧ್ಯತೆ ಮತ್ತು ಶತ್ರುಗಳ ತಲೆ ಒಡೆಯುವ ಅವಕಾಶ ಅವರನ್ನೂ ಸರ್ಕಾರಿ ಸೈನ್ಯಕ್ಕೆ ಸೆಳೆಯಿತು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ರಣಜಿತ್‌ಸಿಂಗ್‌ರ ಹಳೆಯ ಖಲ್ಸಾ ಸೈನ್ಯದ ಆಕ್ರೋಶವನ್ನು ಆ ಸಮಯದಲ್ಲಿ, ಅವರ ಶತ್ರುಗಳ ವಿರುದ್ಧ ನಾವು ಬಳಸಿಕೊಂಡೆವು ಮತ್ತು ಈ ಆಕ್ರೋಶ ಅವರಲ್ಲಿ ಎಲ್ಲಿಯವರೆಗೆ ಇರಬಹುದೋ ಅಲ್ಲಿಯತನಕ ಅವರು ನಮ್ಮೊಂದಿಗಿರುತ್ತಾರೆ"

**ಎಂದು ಬರೆಯುತ್ತಾರೆ.**

**ಹೀಗೆ ಏರ್ಪಟ್ಟ ಆ ಸಂಬಂಧ ಬಹಳ ಕಾಲ ಮುಂದುವರಿಯಿತು. ದಂಗೆಯ ಸಮಯದಲ್ಲಿ ಸಿಖ್ಖರು, ಗೂರ್ಖಾಗಳು ಸರ್ಕಾರಕ್ಕೆ ಸಲ್ಲಿಸಿದ ಸೇವೆಯನ್ನು ಮರೆಯದೆ, ಭಾರತೀಯ ಸೈನ್ಯದಲ್ಲಿ ಪಂಜಾಬ್ ಮತ್ತು ನೇಪಾಳಗಳಿಗೆ ಹೆಮ್ಮೆಯ ಸ್ಥಾನ ಕಲ್ಪಿಸಿಕೊಡಲಾಯಿತು.**

ಆದ್ದರಿಂದ ಭಾರತೀಯ ಸೈನ್ಯದಲ್ಲಿ ಉತ್ತರ ವಾಯುವ್ಯ ಪ್ರಾಂತದ ಪ್ರಾಬಲ್ಯಕ್ಕೆ ೧೮೫೭ರ ದಂಗೆಯೇ ನಿಜವಾದ ಕಾರಣವೆಂದು ಹೇಳುವ ಶ್ರೀ ಚೌಧರಿಯವರ ಹೇಳಿಕೆ ನಿಸ್ಸಂದೇಹವಾಗಿಯೂ ಸತ್ಯ ಮತ್ತು ಅವರು ಒದಗಿಸುವ ಅಂಕಿ–ಅಂಶಗಳು, ಸೈನ್ಯದಲ್ಲಿನ ಅವರ ಪ್ರಾಬಲ್ಯ ಆ ಜನರ ಹೋರಾಟದ ಪ್ರವೃತ್ತಿಯಿಂದಲ್ಲವೆಂದು ಸಾಬೀತು ಮಾಡುತ್ತದೆ. ಈ ಕೆಳಗಿನ ಅಂಕಿ–ಅಂಶಗಳು ದಂಗೆಯ ಮುಂಚಿನ ಮತ್ತು ನಂತರದ ಭಾರತೀಯ ಸೈನ್ಯದ ಸ್ವರೂಪ–ರಚನೆಗಳನ್ನು ಸ್ಪಷ್ಟಪಡಿಸುತ್ತವೆ.

## ಭಾರತೀಯ ಕಾಲ್ದಳ(ಇನ್‌ಫೆಂಟ್ರಿ)ದ ಸ್ವರೂಪದಲ್ಲಿನ ಬದಲಾವಣೆ ವಿವಿಧ ಭಾಗಗಳ ಜನ(ಸೈನಿಕ)ರ ಶೇಕಡಾವರು

| ಇಸವಿ | ವಾಯುವ್ಯ ಭಾರತ | | ಈಶಾನ್ಯಭಾರತ ಯು.ಪಿ.ಬಿಹಾರ | ದಕ್ಷಿಣ ಭಾರತ | ಬರ್ಮಾ |
|---|---|---|---|---|---|
| | ಪಂಜಾಬ್, ನೇಪಾಳ, ವಾಯುವ್ಯ ಗದ್ವಾಲ ಪ್ರಾಂತ್ಯ ಕುಮೌನ್ ಕಾಶ್ಮೀರ | | | | |
| ೧೮೫೬ | ಹತ್ತುಕ್ಕೂ ಕಡಿಮೆ | ಲೆಕ್ಕಕ್ಕೇ ಇಲ್ಲ | ೯೦ಕ್ಕೂ ಇಲ್ಲದಂತೇ | ಕಡಿಮೆ … | ಇಲ್ಲ |
| ೧೮೫೯ | ೪೭ | ೬ | ೪೭ | … | ಇಲ್ಲ |
| ೧೮೮೩ | ೪೮ | ೧೭ | ೩೫ | … | ಇಲ್ಲ |
| ೧೮೯೩ | ೫೩ | ೨೪ | ೨೩ | … | ಇಲ್ಲ |
| ೧೯೦೫ | ೪೭ | ೧೫ | ೨೨ | ೧೬ | ಇಲ್ಲ |
| ೧೯೧೯ | ೪೬ | ೧೪.೮ | ೨೫.೫ | ೧೨ | ೧.೭ |
| ೧೯೩೦ | ೫೮.೫ | ೨೨ | ೧೧.೦ | ೫.೫ | ೩ |

ದಂಗೆಯ ಮುನ್ನಾ ಅಂದರೆ ೧೮೫೬ರಲ್ಲಿ ಭಾರತೀಯ ಸೈನ್ಯದಲ್ಲಿದ್ದ ವಾಯುವ್ಯ ಪ್ರಾಂತ್ಯದ ಜನರ ಸಂಖ್ಯೆ ತೀರಾ ಕಡಿಮೆಯಾಗಿತ್ತು ಎಂದು ಈ ಅಂಕಿಗಳು ತೋರಿಸುತ್ತವೆ. ಆದರೆ ೧೮೫೮ರಲ್ಲಿ ಅಂದರೆ ದಂಗೆಯ ನಂತರದ ಒಂದೇ ವರ್ಷದಲ್ಲಿ ಅವರು ಪ್ರಾಬಲ್ಯ ಗಳಿಸಿಕೊಂಡರು ಮತ್ತು ಇಂದಿನವರೆಗೂ ಆ ಪ್ರಾಬಲ್ಯ ಮುಂದುವರೆದಿದೆ.

ಕ್ಷಾತ್ರ ಪ್ರವೃತ್ತಿಯವರು ಮತ್ತು ಇತರರು ಎಂದು ೧೮೭೯ರಲ್ಲಿ ಮಂಡಿಸಲಾದ ವಾದಸರಣಿ ನಂತರ ಲಾರ್ಡ್ ರಾಬರ್ಟ್‌ರಿಂದ ಸಮರ್ಥನೆ ಪಡೆದು, ಲಾರ್ಡ್ ಕಿಚನರ್‌ರಿಂದ ಸ್ವೀಕೃತವಾಯಿತು. ಇದೇ ನೀತಿ ಭಾರತೀಯ ಸೈನ್ಯದ ನೇಮಕಾತಿಗೆ ಆಧಾರವೂ ಆಗಿಬಿಟ್ಟಿತು. ಆದರೆ ಮೇಲಿನ ಅಂಕಿ–ಅಂಶಗಳು ಈ ವಾದದಲ್ಲಿ ಹುರುಳಿಲ್ಲವೆಂದು ಸಾಬೀತುಮಾಡುತ್ತವೆ. ವಾಯುವ್ಯ ಪ್ರಾಂತ್ಯದವರನ್ನು ಕ್ಷಾತ್ರ ಪ್ರವೃತ್ತಿಯವರು, ಭಾರತದ ಇತರ ಪ್ರಾಂತ್ಯಗಳವರಂತಲ್ಲವೆಂಬ ಸರ್ಕಾರಿ ಘೋಷಣೆ ಆಯಾ ಪ್ರದೇಶಗಳ ಜನರ ಮೇಲೆ ತೀವ್ರ ಪರಿಣಾಮ ಬೀರಿತು. ಅದು ವಾಯುವ್ಯ ಪ್ರಾಂತ್ಯದವರ ಅದೃಷ್ಟದ ಬಾಗಿಲು ತೆರೆದರೆ, ಇತರರಿಗೆ ಅನ್ಯಾಯ ಮಾಡಿತು. ಸೈನ್ಯಕ್ಕೆ ತಪ್ಪದೆ ಸೇರಿಕೊಳ್ಳುತ್ತಿದ್ದ ವಾಯುವ್ಯ ಪ್ರದೇಶಗಳ ಜನ, ಸೈನಿಕ ಸೇವೆಯನ್ನು ಜೀವನಾಧಾರವಾದ ಖಾಯಂವೃತ್ತಿಯೆಂದೂ, ಇತರ ಪ್ರದೇಶಗಳ ಜನರಿಗೆ ಅದು ಲಭ್ಯವಿಲ್ಲವೆಂಬ ಭಾವನೆ ಬೆಳೆಯಿತು. ಆದ್ದರಿಂದ ಭಾರತೀಯ ಸೈನ್ಯದಲ್ಲಿ ವಾಯುವ್ಯ ಪ್ರಾಂತ್ಯದ ಜನರೇ ತುಂಬಿಕೊಂಡರು. ಇದು ಸೂಚಿಸುವುದೇನೆಂದರೆ– ಬ್ರಿಟೀಷರ ನೀತಿಯಿಂದ ಆ ಜನ ಸೈನಿಕ ವೃತ್ತಿಯನ್ನು ಒಂದು ಖಾಯಂ ವೃತ್ತಿಯೆಂದು ತಿಳಿದಿದ್ದು ಮತ್ತು ಇತರ ಪ್ರದೇಶದ ಜನ ಹಾಗೆ ಮಾಡದಿದ್ದುದಕ್ಕೆ ಕಾರಣ, ಸರ್ಕಾರ ಅವರನ್ನು ನೇಮಿಸಿಕೊಳ್ಳದೆ ಹೋದದ್ದು. ಜನ ತಮಗೆ ಇಷ್ಟವಿರಲಿ, ಇಲ್ಲದಿರಲಿ ತಮ್ಮ ಪೂರ್ವಿಕರ ವೃತ್ತಿಯನ್ನೇ ಅನುಸರಿಸುತ್ತಾರೆ. ಅವರು ಹೊಸವೃತ್ತಿಯನ್ನು ಆಯ್ದುಕೊಳ್ಳಲಿಲ್ಲವೆಂದ ಮಾತ್ರಕ್ಕೆ ಅವರು ಆ ವೃತ್ತಿಗೆ ಅನರ್ಹರೆಂದೇನೂ ಅಲ್ಲ. ಅದು ಅವರ ಪೂರ್ವಿಕರ ವೃತ್ತಿಯಲ್ಲ.

ಈ ಕ್ಷಾತ್ರವರ್ಗ ಮತ್ತು ಇತರ ವರ್ಗ ಎನ್ನುವ ವಿಭಜನೆ, ನಿಷ್ಪ್ರಮಾಣವಾದದ್ದು. ಅದು ಹುಟ್ಟೇ ಮುಖ್ಯ, ವ್ಯಕ್ತಿಯ ಯೋಗ್ಯತೆ ಅಲ್ಲವೆಂಬ ಹಿಂದೂಜಾತಿ ತತ್ವದಷ್ಟೇ ಮೂರ್ಖತನದ್ದು. ಒಂದು ಕಾಲಕ್ಕೆ ಸರ್ಕಾರ, ಈ ವರ್ಗೀಕರಣ ನಿಜವಾದದ್ದು ಮತ್ತು ಹೋರಾಡುವ ಸಾಮರ್ಥ್ಯದ ದೃಷ್ಟಿಯಿಂದ ಅಮೂಲ್ಯವಾದದ್ದು ಎಂದೇ ಹೇಳಿತು. ವಾಯುವ್ಯ ಪ್ರಾಂತ್ಯದ ಜನರ ನೇಮಕಾತಿಯನ್ನು ಈ ಆಧಾರದ ಮೇಲೆ ಸರ್ಕಾರ ಸಮರ್ಥಿಸಿಕೊಂಡಿತು. ಆದರೆ ಹೋರಾಟ ಪ್ರವೃತ್ತಿಯಲ್ಲಿನ ವ್ಯತ್ಯಾಸಗಳಿಗೂ, ನೇಮಕಾತಿಗೂ ಏನೂ ಸಂಬಂಧವಿಲ್ಲವೆಂದು ಈಗ ಒಪ್ಪಿಕೊಳ್ಳಲಾಗಿದೆ. ನಿವೃತ್ತ ಸೇನಾ ಮಹಾದಂಡನಾಯಕ ಸರ್. ಫಿಲಿಪ್ ಚೆಟ್ ವೂಡ್* ಲಂಡನ್ನಿನ ಆಕಾಶವಾಣಿಯಲ್ಲಿ, ಭಾರತೀಯ ಸೇನಾ ಸ್ವರೂಪದ ಬಗ್ಗೆ ಭಾಷಣ ಮಾಡುತ್ತಾ, ಪಂಜಾಬಿನ ಜನರನ್ನು ಹೆಚ್ಚಿನ ಸಂಖ್ಯೆಯಲ್ಲಿ ನೇಮಕ ಮಾಡಿಕೊಂಡಿರುವುದರಿಂದ ಉಪಖಂಡದ ಇತರ ಜನರಲ್ಲಿ ಕ್ಷಾತ್ರಗುಣವಿಲ್ಲವೆಂದೇನೂ ಅಲ್ಲ, ಅದು ದಕ್ಷಿಣದವರು, ಉರಿಬಿಸಲು, ಚಳಿಗಳನ್ನು ತಾಳಲಾರರು, ವಾಯುವ್ಯ ಪ್ರಾಂತ್ಯದವರಾದರೆ ಅಂಥದಕ್ಕೆ ಒಗ್ಗಿಹೋಗಿರುತ್ತಾರೆ. ಇದು ಹವಾಮಾನದ ಕಾರಣಕ್ಕಾಗಿಯೇ ಹೊರತು ಬೇರೇನೂ ಅಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಕ್ಷಾತ್ರ ಪ್ರವೃತ್ತಿ ಹುಟ್ಟಿಗೆ ಸಂಬಂಧಿಸಿದ್ದಲ್ಲ, ಅದು ತರಬೇತಿಗೆ ಸಂಬಂಧಿಸಿದೆ, ಯಾರಿಗಾದರೂ ಆ ತರಬೇತಿ ಕೊಡಬಹುದು.

ವಿಶೇಷ ತರಬೇತಿ ಕೊಟ್ಟು ಸೈನ್ಯ ಬೆಳೆಸುವುದಕ್ಕೆ, ಹಿಂದೂಸ್ತಾನದಲ್ಲಿ ಸಾಕಷ್ಟು ಹೋರಾಟದ ಸಾಮರ್ಥ್ಯವುಳ್ಳ ಜನರಿದ್ದಾರೆ. ಹೋರಾಟಕ್ಕೆ ಪ್ರಸಿದ್ಧವಾದ ಸಿಖ್ಖರಿದ್ದಾರೆ. ಈಗಲೂ ಕ್ಷಾತ್ರಗುಣದವರೆಂದೇ ಹೇಳಲಾಗುವ ರಜಪೂತರಿದ್ದಾರೆ. ಕಳೆದ ಐರೋಪ್ಯ ಯುದ್ಧದ ಸಮಯದಲ್ಲಿ ಧೀರೋದಾತ್ತವಾಗಿ ಹೋರಾಡಿದ ಕೆಚ್ಚೆದೆಯ ಮರಾಠರಿದ್ದಾರೆ. ಸೈನಿಕ ಅವಶ್ಯಕತೆಗಳಿಗಾಗಿ ಮದ್ರಾಸಿನ ಜನರನ್ನು ಅವಲಂಬಿಸಬಹುದು. ಮದ್ರಾಸಿಗಳ ಮಿಲಿಟರಿ ಸಾಮರ್ಥ್ಯದ ಬಗ್ಗೆ ಮಾತನಾಡುತ್ತಾ ಹಿಂದೆ ಭಾರತದಲ್ಲಿ ಮಹಾದಂಡನಾಯಕರಾಗಿದ್ದ ಸರ್

---

* ಇಂಡಿಯನ್ ಸೋಶಿಯಲ್ ರಿಫಾರ್ಮರ್, ೨೭ ಜನವರಿ ೧೯೪೦

ಫ್ರೆಡರಿಕ್ ಪಿ.ಹೆಯ್ಸ್ ಹೇಳುತ್ತಾರೆ:

> **"ಬಂಗಾಳದ ಸೈನ್ಯಕ್ಕೆ ಹೋಲಿಸಿದರೆ ಮದ್ರಾಸಿನ ಸೈನ್ಯ ದೈಹಿಕವಾಗಿ ಬಲಹೀನ ಜನರನ್ನು ಒಳಗೊಂಡಿದೆಯೆಂದು ಹೇಳಿಕೊಂಡು ಬರಲಾಗಿದೆ. ದೇಹದಾರ್ಢ್ಯವೊಂದನ್ನೇ ಪರಿಗಣಿಸಿದರೆ ಇದು ನಿಜ. ಪರಿಸ್ಥಿತಿಯ ಒತ್ತಡದಿಂದಾಗಿ, ಅವರಲ್ಲಿ ಸೈನಿಕರಿಗೆ ಇರಬಾಕಾದ ಕೆಚ್ಚೆದೆಯ ಗುಣಗಳಿಲ್ಲವೆಂದೂ ಹೇಳಲಾಗುತ್ತದೆ. ಈ ಅಭಿಪ್ರಾಯಗಳನ್ನೂ ಮತ್ತು ಮದ್ರಾಸ್ ಸೈನ್ಯದ ಮೇಲೆ ಹೊರಿಸಲಾಗುವ ಅದಕ್ಷತೆಯ ಆರೋಪಗಳನ್ನು ನಾನು ಖಂಡತುಂಡವಾಗಿ ತಳ್ಳಿಹಾಕುತ್ತೇನೆ. ಇತ್ತೀಚೆಗೆ ಅವರು ಅಂಥಾ ಚಟುವಟಿಕೆಯಲ್ಲಿ ತೊಡಗಿಲ್ಲ ನಿಜ. ಸ್ಯಾಪರ್ಸ್ ಕೆಲಸ ಬಿಟ್ಟರೆ ಅವರನ್ನು ಬೇರೆ ರಂಗಗಳಿಂದ ಹೊರಗಿಡಲಾಗಿದೆ. ಮದ್ರಾಸಿಗನೊಬ್ಬ ಕೆಳಮಟ್ಟದ ಸೈನಿಕನೆಂದು ಹೇಳಲು ಸಾಧ್ಯವಾಗುವ ಯಾವ ಘಟನೆಯೂ ಸಂಭವಿಸಿಲ್ಲ. ಚರಿತ್ರೆ ನಮಗೆ ಇದಕ್ಕೆ ತದ್ವಿರುದ್ಧವಾದದ್ದನ್ನೇ ಹೇಳುತ್ತದೆ. ವ್ಯಾಯಾಮ ಶಿಸ್ತುಗಳಲ್ಲಿ ಮದ್ರಾಸ್ ಸೈನಿಕ ಯಾರಿಗೂ ಹಿಂದಿಲ್ಲ. ಆರೋಗ್ಯದ ದೃಷ್ಟಿಯಿಂದ, ತನ್ನ ನೆರೆಯವನಂತೆಯೇ ಸದೃಢನಾಗಿರುತ್ತಾನೆಂದು ಅನುಭವದಿಂದ ಸಿದ್ಧವಾಗಿದೆ. ಇದು ಸ್ಯಾಪರ್ಸ್ ಮತ್ತು ಬೈಬರ್‌ನಲ್ಲಿ ದೃಢಪಟ್ಟಿದೆ. ಸ್ಯಾಪರ್ಸ್‌ಗಳೂ ಸಿಪಾಯಿಗಳಂತೆ ಅದೇ ಜನಾಂಗದವರು."**

ಆದ್ದರಿಂದ, ಹಿಂದೂಸ್ತಾನ ಸಾಕಷ್ಟು ಸಂಖ್ಯೆಯ ಸೈನ್ಯವನ್ನು ತನ್ನ ಪ್ರಜೆಗಳಿಂದಲೇ ಸಿದ್ಧಗೊಳಿಸ ಲಾರದೆಂಬ ಅನುಮಾನ ಬೇಕಾಗಿಲ್ಲ. ಈ ವಿಷಯದಲ್ಲಿ ಪಾಕಿಸ್ಥಾನದ ವಿಭಜನೆ ಅವರನ್ನು ಬಲಹೀನಗೊಳಿಸುವುದಿಲ್ಲ.

ಸೈಮನ್ ಆಯೋಗ ಭಾರತೀಯ ಸೈನ್ಯಕ್ಕೇ ವಿಶಿಷ್ಟ ಮತ್ತು ವಿಚಿತ್ರವಾದ ಮೂರು ಲಕ್ಷಣಗಳತ್ತ ನಮ್ಮ ಗಮನ ಸೆಳೆಯುತ್ತದೆ. ಭಾರತೀಯ ಸೈನ್ಯಕ್ಕೆ ಎರಡು ರೀತಿಯ ಕರ್ತವ್ಯವಿದೆಯೆಂದು ಅದು ಹೇಳುತ್ತದೆ. ಒಂದು, ಆಫ್ಘಾನಿಸ್ತಾನದ ಸರಿಹದ್ದಿನ ಗುಡ್ಡಗಾಡು ಜನ ಭಾರತೀಯ ಬಯಲು ಸೀಮೆಗಳ ಜನರಿಗೆ ಕಿರುಕುಳ ಕೊಡದಂತೆ ನಿಗ್ರಹಿಸುವುದು. ಎರಡು, ಈ ಅಸಂಘಟಿತ ಪ್ರದೇಶಗಳ ಮೇಲೆ ದೇಶಗಳು ಮಾಡಬಹುದಾದ ಆಕ್ರಮಣಗಳನ್ನು ತಡೆಯುವುದು. ಈ ಗುಡ್ಡಗಾಡು ಜನಾಂಗಗಳ ವಿರುದ್ಧ ೧೮೫೦ ಮತ್ತು ೧೯೨೨ರ ನಡುವೆ ೭೨ ದಂಡಯಾತ್ರೆಗಳನ್ನು– ಸರಾಸರಿ ವರ್ಷಕ್ಕೊಂದರಂತೆ– ಕೈಗೊಳ್ಳಲಾಗಿದೆಯೆಂಬುದನ್ನು ಮತ್ತು ಈ ಅಸಂಘಟಿತ ಸರಹದ್ದಿನ ಆಚೆಯ ದೇಶಗಳಿಂದಲೇ ಭಾರತದ ಮೇಲೆ ಹಿಂದಿನಿಂದಲೂ ಆಕ್ರಮಣ ನಡೆದಿರುವುದನ್ನು ಆಯೋಗ ಗಮನಿಸಿದೆ. ಈ ಪ್ರದೇಶ ಸೈಮನ್ ಆಯೋಗದ ಪ್ರಕಾರ ಲೀಗ್ ಆಫ್ ನೇಷನ್ಸ್ ಸದಸ್ಯತ್ವ ಪಡೆಯದ ರಾಷ್ಟ್ರಗಳಿಗೆ ಸೇರಿದೆ. ಆದ್ದರಿಂದ, ಭಾರತದ ರಕ್ಷಣೆಯ ದೃಷ್ಟಿಯಿಂದ ಹಿಂದೆಂದಿಗಿಂತಲೂ ಅವು ಹೆಚ್ಚು ಅಪಾಯಕಾರಿ. ಈ ಸಂಗತಿಗಳು ಭಾರತದ ರಕ್ಷಣಾ ಸಮಸ್ಯೆಗೆ ಸಂಬಂಧಿಸಿದಂತೆ ಒಂದು ವೈಚಿತ್ರ್ಯವನ್ನೂ, ತುರ್ತನ್ನೂ ಒಳಗೊಂಡಿವೆಯೆಂದು ಹೇಳುವ ವರದಿ, ಈ ರೀತಿಯ ಸಮಸ್ಯೆ ಸಾಮ್ರಾಜ್ಯದ ಬೇರೆ ಯಾವ ಭಾಗದಲ್ಲೂ ಇಲ್ಲ ಮತ್ತು ಭಾರತದಲ್ಲಿ ಸ್ವರಾಜ್ಯ ಸ್ಥಾಪಿಸುವ ದಿಸೆಯಲ್ಲಿ, ಬೇರಾವ ಸ್ವಯಮಾಡಳಿತವುಳ್ಳ ರಾಷ್ಟ್ರಗಳು ಎದುರಿಸದ ತೀವ್ರತರ ಕಷ್ಟಗಳನ್ನು ಒಡ್ಡುತ್ತದೆ" ಎಂದೂ ಒತ್ತಿ ಹೇಳುತ್ತದೆ. ಆಯೋಗದ ಪ್ರಕಾರ ಭಾರತೀಯ ಸೈನ್ಯದ ಎರಡನೆಯ ಅಪೂರ್ವ ಲಕ್ಷಣವೆಂದರೆ;

**"ಭಾರತೀಯ ಸೈನ್ಯಕ್ಕೆ ಕೇವಲ ಹೊರಗಿನ ಧಾಳಿಯಿಂದ ದೇಶವನ್ನು ರಕ್ಷಿಸುವ ಜವಾಬ್ದಾರಿಯೊಂದೇ ಅಲ್ಲ, ಕದಡಬಹುದಾದ ಆಂತರಿಕ ಗಲಭೆಗಳನ್ನು ಹತ್ತಿಕ್ಕಿ, ಶಾಂತಿಯನ್ನು ನೆಲೆಗೊಳಿಸುವ ಜವಾಬ್ದಾರಿಯೂ ಇದೆ. ಸಾಮಾನ್ಯವಾಗಿ ಎಲ್ಲ ದೇಶಗಳಲ್ಲೂ ಸೈನ್ಯವನ್ನೂ ಹೀಗೆ ಬಳಸುವುದಿಲ್ಲ. ಸೈನ್ಯವನ್ನೂ ಸಂಘಟಿಸುವುದು ಖಂಡಿತವಾಗಿ ಅದಕ್ಕಲ್ಲ. ಆದರೆ ಭಾರತದ ಪರಿಸ್ಥಿತಿ ತೀರಾ ಭಿನ್ನವಾದದ್ದು. ವರ್ಷದಲ್ಲಿ ಅನೇಕ ಬಾರಿ, ಆಂತರಿಕ ಗಲಭೆಗಳನ್ನು ನಿವಾರಿಸಲು, ಅಗತ್ಯಬಿದ್ದರೆ, ಹತ್ತಿಕ್ಕಲು ಸೈನ್ಯವನ್ನು ಬಳಸಲಾಗುತ್ತದೆ. ಸುಸಂಘಟಿತವಾಗಿರುವ, ಪೋಲೀಸು ಪಡೆ ಇದ್ದಕ್ಕಿದ್ದಂತೆ, ಮತೀಯ ಗಲಭೆಗಳಿಂದ ಹರಡುವ ಹಿಂಸೆಯ ಜ್ವಾಲೆಯನ್ನು ಶಮನಗೊಳಿಸುವ ಶಕ್ತಿ ಹೊಂದಿಲ್ಲ. ಪೊಲೀಸರು, ಸೈನ್ಯ ಮತ್ತು ಅದಕ್ಕೂ ಹೆಚ್ಚಾಗಿ ಸಾರ್ವಜನಿಕರಿಗೂ ಸೈನ್ಯದ ಸಹಾಯ ಅನಿವಾರ್ಯವೆಂದು ಮನದಟ್ಟಾಗಿದೆ. ಶಾಂತಿಯನ್ನು ಕಾಪಾಡುವ ಅಥವಾ ನೆಲೆಗೊಳಿಸುವ ಸೈನ್ಯದ ಜವಾಬ್ದಾರಿ ಕಡಿಮೆಯಾಗುವುದರ ಬದಲು ಹೆಚ್ಚುತ್ತಿದೆ. ಇಂಥ ಸಮಯದಲ್ಲಿ ಬ್ರಿಟಿಷ್ ಸೈನ್ಯಕ್ಕೆ ಬೇಡಿಕೆಯೂ ಹೆಚ್ಚು. ಬ್ರಿಟಿಷ್ ಸೈನ್ಯವಾದರೆ ಯಾರ (ಹಿಂದೂ ಅಥವಾ ಮುಸ್ಲಿಮರ) ಪರವೂ ಇರದೆ, ತಟಸ್ಥನೀತಿಯನ್ನನುಸರಿಸಿ, ಮತೀಯ ಅಥವಾ ಧಾರ್ಮಿಕ ಗಲಭೆಗಳಾದಾಗ, ಅನುಮಾನಕ್ಕೆ ಆಸ್ಪದ ಕೊಡದಂತೆ ಕೆಲಸ ಮಾಡುತ್ತದೆ. ಇದನ್ನು ಭಾರತೀಯ ಸೈನ್ಯದ, ಬೇರೆ ಬೇರೆ ಕೆಲಸ ಮಾಡುವ ತುಕಡಿಗಳ ಬ್ರಿಟಿಷ್ ಮತ್ತು ದೇಶೀಯ ಸೈನಿಕರ ಸಂಖ್ಯೆಯಲ್ಲೂ ಕಾಣಬಹುದು. ಒಟ್ಟಾರೆಯಾಗಿ, ಭಾರತೀಯ ಸೈನ್ಯದಲ್ಲಿ ಬ್ರಿಟಿಷ್ ಸೈನಿಕರ ಶೇಕಡ ೧ರಿಂದ ೨ ೧/೨ಯಿದ್ದರೆ, ಆಂತರಿಕ ರಕ್ಷಣಾ ಕೆಲಸ ನಿರ್ವಹಿಸುವ ಸೈನ್ಯದಲ್ಲಿ ಪ್ರತಿ ೭ ಜನ ಭಾರತೀಯರಿಗೆ ೮ ಜನ ಬ್ರಿಟಿಷರಿದ್ದಾರೆ."**

ಭಾರತೀಯ ಸೈನ್ಯದ ಈ ಲಕ್ಷಣದ ಬಗ್ಗೆ ವ್ಯಾಖ್ಯಾನಿಸುತ್ತಾ ಆಯೋಗ ಹೇಳುತ್ತದೆ:

**"ಇನ್ನು ಮುಂದೆ ಇಂದಿನ ಸೈನ್ಯದ ಜಾಗದಲ್ಲಿ ಭಾರತಕ್ಕೆ ರಕ್ಷಣೆಯನ್ನು ಒದಗಿಸುವ ಪೂರ್ಣ ಭಾರತೀಯರೇ ಆದ ಸೈನ್ಯವೊಂದನ್ನು ಕಲ್ಪಿಸಿಕೊಂಡಾಗ– ಅದು ಕೆನಡಾ ಪೂರ್ತಿಕೆನಡಿಯನ್ನರೇ ಆದ, ಐರ್ಲೆಂಡ್ ಪೂರ್ತಿ ಐರಿಷ್‌ರದೇ ಆದ ಸೈನ್ಯಗಳ ಮೇಲೆ ಅವಲಂಬಿತವಾಗುವಂತೆ– ಭಾರತದ ಆಂತರಿಕ ಗಲಭೆ ಮತ್ತು ಭಾರತೀಯ ಸಮಸ್ಯೆಯನ್ನು ಮರೆಯಲಾಗದು. ಹಾಗೆಯೇ ಈಗ ಬ್ರಿಟಿಷ್ ಸೈನಿಕ ನಿರ್ವಹಿಸುತ್ತಿರುವ (ಭಾರತದಲ್ಲಿ ಎಲ್ಲರಿಗೂ ಒಪ್ಪಿಗೆಯಾಗುವಂತೆ) ಕೆಲಸ ಮತ್ತು ಸರ್ಕಾರ ಶಾಂತಿಯನ್ನು ಕಾಪಾಡಲು ಕೊಡುತ್ತಿರುವ ಬೆಂಬಲಗಳನ್ನೂ ಕಡೆಗಣಿಸಲು ಸಾಧ್ಯವಿಲ್ಲ."**

ಆಯೋಗ ಎತ್ತಿ ತೋರಿಸಿರುವ, ಭಾರತೀಯ ಸೈನ್ಯದ ಮೂರನೇ ಅನನ್ಯ ಲಕ್ಷಣವೆಂದರೆ ಅದರಲ್ಲಿ ವಾಯುವ್ಯ ಪ್ರಾಂತದ ಜನರಿಗಿರುವ ಪ್ರಾಬಲ್ಯ. ಈ ಪ್ರಾಬಲ್ಯದ ಹುಟ್ಟು ಮತ್ತು ಸರ್ಕಾರ ಅದನ್ನು ಹೇಗೆ ಸಮರ್ಥಿಸಿಕೊಳ್ಳುತ್ತಾ ಬಂದಿದೆ ಎನ್ನುವ ವಿವರಗಳನ್ನು ಈಗಾಗಲೇ ಪರಿಶೀಲಿಸಲಾಗಿದೆ.

ಆದರೆ ಭಾರತೀಯ ಸೈನ್ಯಕ್ಕೆ ಆಯೋಗವು ಉಲ್ಲೇಖಿಸದೇ ಇದ್ದ ಇನ್ನೂ ಒಂದು ವಿಶೇಷ ಲಕ್ಷಣವೂ ಇದೆ. ಆಯೋಗವು ಇದನ್ನು ಅಲಕ್ಷಿಸಿತು ಇಲ್ಲವೇ ಅರಿತಿರಲೇ ಇಲ್ಲ. ಅದು ತನ್ನ ಪ್ರಾಮುಖ್ಯತೆಯಲ್ಲಿ ಮತ್ತು ಸಾಮಾಜಿಕ ಹಾಗೂ ರಾಜಕೀಯ ಪರಿಣಾಮಗಳಲ್ಲಿ ಆಯೋಗವು ಉಲ್ಲೇಖಿಸಿದ ಮೂರೂ ಲಕ್ಷಣಗಳನ್ನು ಗೌಣವಾಗಿಸುತ್ತದೆ.

ಈ ಲಕ್ಷಣವು ಎಲ್ಲರಿಗೂ ಗೊತ್ತಾದರೆ ಬಹಳಷ್ಟು ಜನರನ್ನು ಸಿಟ್ಟಿನ ಯೋಚನೆಗೆ ಹಚ್ಚಬಲ್ಲುದು. ಖಂಡಿತವಾಗಿಯೂ ಅದು ಭಾರತದ ರಾಜಕೀಯ ಪ್ರಗತಿಗೇ ಅಡ್ಡಿಯಾಗುವಂಥ ಮತ್ತು ಬಗೆಹರಿಸಲಾಗದ

ಸಮಸ್ಯೆಗಳಿಗೆ ಕಾರಣವಾಗುತ್ತದೆ. ಈ ಸಮಸ್ಯೆ ಸೈನ್ಯವನ್ನು ಭಾರತೀಕರಣಗೊಳಿಸುವುದಕ್ಕಿಂತ ಮುಖ್ಯ ಮತ್ತು ಜಟಿಲವಾದ ಸಮಸ್ಯೆಯಾಗುತ್ತದೆ.

ಕಡೆಗಣಿಸಲಾದ ಈ ಸಮಸ್ಯೆ ಭಾರತೀಯ ಸೈನ್ಯದ ಮತೀಯ ಸ್ವರೂಪಕ್ಕೆ ಸಂಬಂಧಪಟ್ಟಿದೆ. ಈ ಕೆಳಗಿನ ಪಟ್ಟಿ ಭಾರತೀಯ ಕಾಲ್ದಳದಲ್ಲಿರುವ ಜನರ ಪ್ರಾಂತ್ಯಗಳು ಮತ್ತು ಕೋಮುಗಳ ಶೇಕಡಾವಾರು ಮತ್ತು ಪ್ರಮಾಣಗಳನ್ನು ಒಳಗೊಂಡಿದೆ.

**ಭಾರತೀಯ ಸೈನ್ಯದ ಕೋಮುವಾರು ರಚನೆಯಲ್ಲಿನ ಬದಲಾವಣೆಗಳು**

| ಪ್ರದೇಶ ಮತ್ತು ಕೋಮುಗಳು | ಶೇಕಡಾವಾರು ೧೯೧೪ರಲ್ಲಿ | ಶೇಕಡಾವಾರು ೧೯೧೮ರಲ್ಲಿ | ಶೇಕಡಾವಾರು ೧೯೧೯ರಲ್ಲಿ | ಶೇಕಡಾವಾರು ೧೯೩೦ರಲ್ಲಿ |
|---|---|---|---|---|
| I ಪಂಜಾಬ್, ಉತ್ತರ ವಾಯುವ್ಯ ಪ್ರಾಂತ್ಯ ಮತ್ತು ಕಾಶ್ಮೀರ | ೪೭ | ೪೬.೫ | ೪೬ | ೫೮.೫ |
| ೧. ಸಿಖ್ಖರು | ೧೯.೨ | ೧೭.೪ | ೧೫.೪ | ೧೩.೫೮ |
| ೨. ಪಂಜಾಬಿ ಮುಸ್ಲಿಮರು | ೧೧.೧ | ೧೧.೩ | ೧೨.೪ | ೨೨.೬ |
| ೩. ಪಠಾಣರು | ೬.೨ | ೫.೪೨ | ೪.೫೪ | ೬.೩೫ |
| II ನೇಪಾಳ, ಕುಮೌನ್ ಮತ್ತು ಗದ್ವಾಲ್ | ೧೫ | ೧೮.೯ | ೧೪.೯ | ೨೨.೦೦ |
| III ಉತ್ತರ (Uppere) ಭಾರತ | ೨೨ | ೨೨.೭ | ೨೫.೫ | ೧೧.೦ |
| ೧. ಯು.ಪಿ.ರಜಪೂತರು | ೬.೪ | ೬.೮ | ೭.೭ | ೨.೫೫ |
| ೨. ಹಿಂದೂಸ್ತಾಇ ಮುಸ್ಲಿಮರು | ೪.೧ | ೩.೪೨ | ೪.೪೫ | ಇಲ್ಲ |
| ೩. ಬ್ರಾಹ್ಮಣರು | ೧.೮ | ೧.೮೬ | ೨.೫ | ಇಲ್ಲ |
| IV ದಕ್ಷಿಣ ಭಾರತ | ೧೬ | ೧೧.೯ | ೧೨ | ೫.೫ |
| ೧. ಮರಾಠರು | ೪.೯ | ೩.೮೫ | ೩.೭ | ೫.೩೩ |
| ೨. ಮದ್ರಾಸಿ ಮುಸಲ್ಮಾನರು | ೩.೫ | ೨.೭೧ | ೨.೧೩ | ಇಲ್ಲ |
| ೩. ತಮಿಳರು | ೨.೫ | ೨.೦ | ೧.೬೭ | ಇಲ್ಲ |
| V ಬರ್ಮಾ | | | | |
| ೧. ಬರ್ಮೀಯರು | ಇಲ್ಲ | ಗಣನೀಯವಲ್ಲ | ೧.೭ | ೩.೦ |

೧೯೧೯ರ ನಂತರ ಭಾರತೀಯ ಸೈನ್ಯದ ಕೋಮು ರಚನೆಯಲ್ಲಿ ಆಗುತ್ತಿರುವ ಅಗಾಧವಾದ ಬದಲಾವಣೆಯನ್ನು ಈ ಅಂಕಿ–ಅಂಶ ಸ್ಪಷ್ಟಪಡಿಸುತ್ತದೆ. ಅವುಗಳ ಪರಿಣಾಮ ಹೀಗಿದೆ:

(೧) ಪಂಜಾಬಿ ಮುಸಲ್ಮಾನ ಮತ್ತು ಪಠಾಣರ ಸಂಖ್ಯೆಯ ಅತೀವ ಹೆಚ್ಚಳ, (೨), ಮೊದಲನೆಯ ಸ್ಥಾನದಲ್ಲಿದ್ದ ಸಿಖ್ಖರ ಸಂಖ್ಯೆ ಮೂರಕ್ಕೆ ಇಳಿಮುಖ, (೩) ರಜಪೂತರು ನಾಲ್ಕನೆಯ ಸ್ಥಾನಕ್ಕೆ ತಳ್ಳಲ್ಪಟ್ಟಿರುವುದು.

(೪) ಉತ್ತರ ಪ್ರದೇಶದ ಬ್ರಾಹ್ಮಣರು, ಮದ್ರಾಸಿ ಮುಸಲ್ಮಾನರು, ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ತಮಿಳರಿಗೆ ಪ್ರಾತಿನಿಧ್ಯವೇ ಇಲ್ಲದಂತೆ ಮಾಡಿರುವುದು.

ಶ್ರೀ ಚೌಧರಿಯವರು, ೧೯೩೦ರ ಅಂಕಿ–ಅಂಶಗಳನ್ನು ಬಳಸಿಕೊಂಡು ಭಾರತೀಯ ಸೈನ್ಯದ ಕೋಮುವಾರು ರಚನೆಯನ್ನು ಕೆಳಕಂಡಂತೆ ವಿಶ್ಲೇಷಿಸುತ್ತಾರೆ.*

| ವರ್ಗ | ಪ್ರದೇಶಗಳು | ಕಾಲ್ದಳದಲ್ಲಿ ಶೇಕಡಾವಾರು | | ಅಶ್ವದಳದಲ್ಲಿ ಶೇಖಡಾ ವಾರು |
|---|---|---|---|---|
| | | ಗೂರ್ಖಾಗಳನ್ನು ಬಿಟ್ಟು | ಗೂರ್ಖಾಗಳು ಸೇರಿ | |
| ೧ | ೨ | ೩ | ೪ | ೫ |
| ೧. ಪಂಜಾಬಿ ಮುಸಲ್ಮಾನರು | ಪಂಜಾಬ್ | ೨೭ | ೨೨.೬ | ೧೪.೨೮ |
| ೨. ಗೂರ್ಖಾಗಳು | ನೇಪಾಳ | ... | ೧೬.೪ | ... |
| ೩. ಸಿಖ್ಖರು | ಪಂಜಾಬ್ | ೧೬.೨೪ | ೧೩.೫೮ | ೨೩.೮೧ |
| ೪. ಡೋಗ್ರಾಗಳು | ಉತ್ತರ ಪಂಜಾಬ್ ಮತ್ತು ಕಾಶ್ಮೀರ | ೧೧.೪ | ೯.೫೪ | ೯.೫೩ |
| ೫. ಜಾಟರು | ರಾಜ್‌ಪುಟಾಣ, ಯುಪಿ ಮತ್ತು ಪಂಜಾಬ್ | ೯.೫ | ೭.೯೪ | ೧೯.೦೬ |
| ೬. ಪಠಾಣರು | ಉತ್ತರ ವಾಯುವ್ಯ ಪ್ರಾಂತ್ಯ | ೭.೫೭ | ೬.೩೫ | ೪.೭೬ |
| ೭. ಮರಾಠರು | ಕೊಂಕಣ | ೬.೩೪ | ೫.೩೩ | ... |
| ೮. ಗದ್ದಾಲಿಗಳು | ಗದ್ದಾಲಿಗಳು | ೪.೫೩ | ೩.೬೩ | ... |
| ೯. ಯು.ಪಿ.ರಜಪೂತರು | ಯುಪಿ. | ೩.೦೪ | ೨.೫೪ | ... |
| ೧೦. ರಜಪುಟಾಣದ ರಜಪೂತರು | ರಾಜಪುಟಾಣ | ೨.೮ | ೨.೩೫ | ... |
| ೧೧. ಕುಮೌನಿಗಳು | ಕುಮೌನ್ | ೨.೪೪ | ೨.೦೫ | ... |

* ವಿವಿಧ ಪ್ರಮಾಣದ ಪಂಜಾಬಿ ಮುಸಲ್ಮಾನರು, ಸಿಖ್ಖರು, ಪಠಾಣರು, ಹಿಂದೂಸ್ತಾನಿ ಹಿಂದೂಗಳು ಮತ್ತು ಮುಸಲ್ಮಾನರು, ಎಲ್ಲಾ ವರ್ಗಗಳ ಮದ್ರಾಸಿಗಳು ಮತ್ತು ಹಜ್ರಾ ಆಫ್ಘನರನ್ನು ಒಳಗೊಂಡ ಈ ಪಟ್ಟಿ ಕಾಲ್ದಳದಲ್ಲಿ ಪ್ರತಿ ಅರ್ಹವರ್ಗದ ಶೇಕಡಾವಾರನ್ನು (೮೨ ಸಕ್ರಿಯವಾದ ಮತ್ತು ೧೮ ತರಬೇತಿ ತುಕಡಿಗಳು) ಭಾರತೀಯ ಅಶ್ವದಳ (೨೧ ರೆಜಿಮೆಂಟುಗಳು) ಮತ್ತು ಗೂರ್ಖಾ ಕಾಲ್ದಳದ ೨೦ ತುಕಡಿಗಳನ್ನು ತೋರಿಸುತ್ತದೆ. ಈ ಪಟ್ಟಿ (ಎ) ೧೯ ಭಾರತೀಯ ಮೌಂಟನ್ ಆರ್ಟಿಲ್ಲರಿ ಬ್ಯಾಟರಿಗಳನ್ನು ಮತ್ತು (ಬಿ) ೩ ಸ್ಯಾಪರ್ಸ್ ಮತ್ತು ಮೈನರ್ಸ್ ರೆಜಿಮೆಂಟುಗಳನ್ನು (ಸಿ) ಭಾರತೀಯ ಸಿಗ್ನಲ್ ಕಾರ್ಪ್ಸ್ ಮತ್ತು (ಡಿ) ಭಾರತೀಯ ಪಯೋನೀರ್ ಕಾರ್ಪ್ಸ್‌ನ್ನು ತೋರಿಸುತ್ತದೆ. ಈ ಸೇವೆಯ ಕೆಲವು ಯೂನಿಟ್ಟುಗಳಲ್ಲಿ ಇತ್ತೀಚೆಗೆ ಕೆಲವು ಮದ್ರಾಸಿಗಳನ್ನು ಮತ್ತು ಹಜ್ರಾಗಳನ್ನು ಭರ್ತಿ ಮಾಡಿಕೊಂಡಿರುವುದುಂಟು. ಆದರೂ ಈ ಪಟ್ಟಿಯಲ್ಲಿ ನಮೂದಿಸಿರುವ ವರ್ಗ ರಚನೆ, ವರ್ಗಗಳ ಶೇಕಡಾವಾರು ಪ್ರಮಾಣದಲ್ಲಿ ಯಾವ ವ್ಯತ್ಯಾಸವನ್ನೂ ಮಾಡುವುದಿಲ್ಲ. ಈ ಪಟ್ಟಿ ಬ್ರಿಟಿಷ್ ಕಾಲ್ದಳ ಮತ್ತು ಫಿರಂಗಿ ದಳಗಳಲ್ಲಿರುವ ಭಾರತೀಯರನ್ನು ಒಳಗೊಂಡಿಲ್ಲ.

| ೧ | ೨ | ೩ | ೪ | ೫ |
|---|---|---|---|---|
| ೧೨. ಗೂಜರ್‌ಗಳು | ಉತ್ತರ ವಾಯುವ್ಯ ರಾಜಪುಟಾಣ | ೧.೫೨ | ೧.೨೮ | ... |
| ೧೩. ಪಂಜಾಬಿ ಹಿಂದೂಗಳು | ಪಂಜಾಬ್ | ೧.೫೨ | ೧.೨೮ | ... |
| ೧೪. ಆಹಿರರು | ಅದೇ | ೧.೨೨ | ೧.೦೨೪ | ೭.೧೪ |
| ೧೫. ಮುಸ್ಲಿಮರು, ರಜಪೂತರು ರಣಗರರು | ದೆಹಲಿಯ ಆಜುಬಾಜಿನವರು | ೧.೨೨ | ೧.೦೨೪ | ... |
| ೧೬. ಕಯಿಂಖಿನಿಗಳು | ರಾಜ್‌ಪುಟಾಣ | ... | ... | ೪.೭೬ |
| ೧೭. ಕಚಿನ್‌ಗಳು | ಬರ್ಮ | ೧.೨೨ | ೧.೦೨೪ | ... |
| ೧೮. ಚಿನ್‌ಗಳು | ಅದೇ | ೧.೨೨ | ೧.೦೨೪ | ... |
| ೧೯. ಕರೆನ್‌ಗಳು | ಅದೇ | ೧.೨೨ | ೧.೦೨೪ | ... |
| ೨೦. ದಖ್ಖನಿ ಮುಸ್ಲಿಮರು | ದಖ್ಖನ್ | ... | ... | ೪.೭೬ |
| ೨೧. ಹಿಂದೂಸ್ತಾನಿ ಮುಸ್ಲಿಮರು | ಯು.ಪಿ. | ... | ... | ೨.೩೮ |

ಈ ಅಂಕಿ ಅಂಶಗಳನ್ನು ಕೋಮುವಾರು ರೀತ್ಯಾ ಪರಿವರ್ತಿಸಿದರೆ ೧೯೩೦ರಲ್ಲಿ ಇದ್ದಂತೆ ಈ ಕೆಳಕಂಡ ಶೇಕಡಾವಾರು ಲಭ್ಯವಾಗುತ್ತದೆ.

| ಕೋಮುಗಳು | ಕಾಲ್ದಳದಲ್ಲಿ ಶೇಕಡಾವಾರು | | ಅಶ್ವದಳದಲ್ಲಿ ಶೇಖಡಾವಾರು |
|---|---|---|---|
| | ಗೂರ್ಖಾಗಳೂ ಸೇರಿ | ಗೂರ್ಖಾಗಳನ್ನು ಬಿಟ್ಟು | |
| ೧. ಹಿಂದೂಗಳು ಮತ್ತು ಸಿಖ್ಖರು | ೬೦.೫೫ | ೫೦.೫೫೪ | ೬೧.೬೨ |
| ೨. ಗೂರ್ಖಾಗಳು | ... | ೧೬.೪ | ... |
| ೩. ಮುಸ್ಲಿಮರು | ೩೫.೭೯ | ೨೯.೭೪ | ೩೦.೦೮ |
| ೪. ಬರ್ಮೀಯರು | ೩.೬೬ | ೩.೦೭೨ | ... |

ಈ ಅಂಕಿ–ಅಂಶಗಳು ಭಾರತೀಯ ಸೈನ್ಯದ ಕೋಮುವಾರು ರಚನೆಯನ್ನು ತೋರಿಸುತ್ತದೆ. ಶ್ರೀ ಚೌಧರಿಯವರ ಪ್ರಕಾರ ಮುಸ್ಲಿಮರು ಭಾರತೀಯ ಕಾಲ್ದಳದಲ್ಲಿ ಶೇಕಡಾ ೩೬ ಮತ್ತು ಅಶ್ವದಳದಲ್ಲಿ ಶೇಕಡಾ ೩೦ರಷ್ಟು ಸಂಖ್ಯೆಯಲ್ಲಿದ್ದಾರೆ.

ಈ ಅಂಕಿ–ಅಂಶಗಳು ೧೯೩೦ಕ್ಕೆ ಸಂಬಂಧಿಸಿವೆ. ಈ ಪ್ರಮಾಣದಲ್ಲಿ ನಂತರ ಎಷ್ಟು ಬದಲಾವಣೆಯಾಗಿದೆ ಎಂದು ನಾವು ಈಗ ತಿಳಿಯಬೇಕಾಗಿದೆ. ೧೯೩೦ರ ನಂತರ ಈ ವಿಷಯವಾಗಿ ಯಾವ ಮಾಹಿತಿಯೂ ಸಿಕ್ಕದಿರುವುದು, ಭಾರತೀಯ ಮಿಲಿಟರಿ ಚರಿತ್ರೆಯಲ್ಲಿ ಒಂದು ಒಳಸಂಚಿನಂತೆ ಕಾಣುತ್ತದೆ. ಭಾರತೀಯ ಸೈನ್ಯದಲ್ಲಿ ಈಗ ಮುಸ್ಲಿಮರ ಸಂಖ್ಯೆ ಎಷ್ಟಿದೆ ಎಂದು ತಿಳಿಯುವುದೇ ಅಸಾಧ್ಯವಾಗಿದೆ. ಯಾವ ಸರ್ಕಾರಿ ಪ್ರಕಟಣೆಯಿಂದಲೂ ಈ ವಿಷಯ ಸ್ಪಷ್ಟವಾಗುವುದಿಲ್ಲ. ೧೯೩೦ರ ತನಕ ಈ ವಿವರಗಳನ್ನುಳ್ಳ ಹಲವಾರು ಪ್ರಕಟಣೆಗಳಿದ್ದವು. ಈಗ ಅವೆಲ್ಲಾ ಕಾಣೆಯಾಗಿರುವುದು ಅಥವಾ ಲಭ್ಯವಿರುವುದರಲ್ಲಿ ಆ ವಿವರಗಳು ಇಲ್ಲದೆ ಇರುವುದು ಆಶ್ಚರ್ಯಕರ. ಈ ವಿವರಗಳನ್ನು ಒಳಗೊಂಡ ಸರ್ಕಾರಿ ಪ್ರಕಟಣೆಗಳು ಇಲ್ಲದಿರುವುದೇ ಅಲ್ಲ, ಕೇಂದ್ರ ಶಾಸನಸಭೆಯಲ್ಲಿ ಸದಸ್ಯರು ವಿವರ ಕೇಳಿ ಪ್ರಶ್ನೆ ಹಾಕಿದಾಗ ಅದಕ್ಕೆ ಉತ್ತರಗಳನ್ನು ನಿರಾಕರಿಸಲಾಗಿದೆ. ಕೇಂದ್ರ ಶಾಸನಸಭೆಯ ನಡಾವಳಿಯಿಂದ ಎತ್ತಿಕೊಳ್ಳಲಾದ ಈ ಕೆಳಗಿನ ಪ್ರಶ್ನೋತ್ತರಗಳು, ಸರ್ಕಾರ ಹೇಗೆ ಈ ವಿಷಯದ ಬಗ್ಗೆ ಮುಚ್ಚಿಡಲು ಹೆಣಗುತ್ತಿದೆ ಎನ್ನುವುದಕ್ಕೆ ನಿದರ್ಶನವಾಗಿದೆ.

೧೫. ಸೆಪ್ಟೆಂಬರ್, ೧೯೩೮ರಂದು ಸಭೆಯಲ್ಲಿ ಕೇಳಲಾದ ಪ್ರಶ್ನೆ–ಉಪಪ್ರಶ್ನೆಗೆ ಸರ್ಕಾರ ಕೊಟ್ಟ ಉತ್ತರಗಳು ಹೀಗಿವೆ:

## ಭಾರತದ ರಕ್ಷಣೆಗಾಗಿ ಸಿದ್ಧತೆಗಳು*

ಪ್ರಶ್ನೆ ಸಂಖ್ಯೆ ೧೩೬೦ ಶ್ರೀ ಬದರಿದತ್ತ ಪಾಂಡೆ (ಶ್ರೀ ಅಮರೇಂದ್ರನಾಥ ಚಟ್ಟೋಪಾಧ್ಯಾಯ ಅವರ ಪರವಾಗಿ)

a) x x x x

b) x x x x

c) x x x x

d) ಕಾಲ್ದಳದಲ್ಲಿ ಮತ್ತು ಅಶ್ವದಳಗಳಿಗೆ ೧೯೩೭–೩೮ರಲ್ಲಿ ಎಷ್ಟು ಜನ ಸೈನಿಕರನ್ನು, ೧೯೩೭ ಮತ್ತು ೧೯೩೮ರಲ್ಲಿ ಎಷ್ಟು ಜನ ಅಧಿಕಾರಿಗಳನ್ನು ಕ್ರಮವಾಗಿ ನೇಮಿಸಿಕೊಳ್ಳಲಾಗಿದೆ?

ನೇಮಕವಾದ ಸೈನಿಕರು ಮತ್ತು ಅಧಿಕಾರಿಗಳಲ್ಲಿ ಎಷ್ಟೆಷ್ಟು ಜನ ಪಂಜಾಬಿ ಸಿಖ್ಖರು, ಪಠಾಣರು, ಗದ್ವಾಲಿಗಳು, ಮರಾಠರು, ಮದ್ರಾಸಿಗಳು, ಬಿಹಾರಿಗಳು, ಬಂಗಾಳಿಗಳು ಮತ್ತು ಯು.ಪಿ.ಯ ಹಿಂದೂಸ್ತಾನಿಗಳು ಮತ್ತು ಗೂರ್ಖಾಗಳು?

e) ಪಂಜಾಬಿ ಸಿಖ್ಖರು, ಪಠಾಣರು ಮತ್ತು ಗದ್ವಾಲಿಗಳನ್ನು ಮಾತ್ರ ನೇಮಿಸಿಕೊಂಡಿದ್ದರೆ, ಮಾನ್ಯ ಮಂತ್ರಿಗಳು, ಬೇರೆ ಎಲ್ಲಾ ಪ್ರಾಂತ್ಯದ ಜನರನ್ನು ನೇಮಿಸಿಕೊಂಡು ಸೂಕ್ತ ತರಬೇತಿ ಕೊಡುವ ಯೋಜನೆಯಲ್ಲಿರುವರೇ?

f) ಪ್ರಾಂತ್ಯ ಸರ್ಕಾರಗಳು, ಭಾರತದ ರಕ್ಷಣೆಗಾಗಿ ಪ್ರಾಂತ್ಯ ರೆಜಿಮೆಂಟುಗಳನ್ನು ನೇಮಕ ಮಾಡಿ, ಅವಕ್ಕೆ ತರಬೇತಿ ಕೊಡುವಂತೆ, ರಕ್ಷಣಾ ಕಾರ್ಯದರ್ಶಿ ನಿರ್ದೇಶನವನ್ನೇನಾದರೂ ಕೊಡುವರೋ? ಇಲ್ಲದಿದ್ದರೆ ಭಾರತದ ರಕ್ಷಣೆಗಾಗಿ ಒಂದು ಸೈನ್ಯ ಕಟ್ಟುವಲ್ಲಿ ಅವರ ಯೋಜನೆಯೇನು?

---

* ಶಾಸನಸಭೆಯ ನಡಾವಳಿ ೧೯೩೮, ಸಂಪುಟ ೪, ಪುಟ ೨೪೬೨

**ಶ್ರೀ ಸಿ.ಎಂ.ಜಿ. ಓಗಿಲ್ ವೀ,**

a) ಸಾರ್ವಜನಿಕ ಹಿತದೃಷ್ಟಿಯಿಂದ ಈ ವಿವರಗಳನ್ನು ಬಹಿರಂಗಪಡಿಸುವುದು ಸೂಕ್ತವಲ್ಲವೆನ್ನುವುದನ್ನು ಮಾನ್ಯ ಸದಸ್ಯರು ಒಪ್ಪಿಕೊಳ್ಳುತ್ತಾರೆಂದು ಭಾವಿಸುವೆ.

d) ೧೯೩೭–೩೮ರಲ್ಲಿ ಭಾರತೀಯ ವಾಯುಪಡೆಗೆ ೫ ಕೆಡೆಟ್‌ಗಳನ್ನು ೩೩ ಭಾರತೀಯ ಅಪ್ರೆಂಟಿಸ್‌ಗಳನ್ನು ನೇಮಕ ಮಾಡಿಕೊಳ್ಳಲಾಗಿದೆ.

c) ೧೯೩೭–೩೮ರಲ್ಲಿ ಭಾರತೀಯ ಇಂಡಿಯನ್ ಸೇವೆಗಾಗಿ ೫ ಜನ ಭಾರತೀಯರನ್ನು ನೇಮಿಸಿಕೊಳ್ಳಲಾಗಿದೆ. ಅಕ್ಟೋಬರ್‌ನಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ ೪ ಜನರನ್ನು ನೇಮಕ ಮಾಡಿಕೊಳ್ಳಲಾಗುತ್ತದೆ. ಡಫರೀನ್ ಕೆಡೆಟ್‌ಗಳ ಪರೀಕ್ಷೆ ಮಾಡಿ ಮತ್ತೆ ಮೂರು ಜನರನ್ನು ನೇಮಕ ಮಾಡಿಕೊಳ್ಳಬೇಕು. ಇದೇ ಅವಧಿಯಲ್ಲಿ, ರಾಯಲ್ ಇಂಡಿಯನ್ ನೇವಿಯ ವಿವಿಧ ಕೆಳದರ್ಜೆ ಜಾಗಗಳಿಗೆ ೩೧೪ ಜನ ಭಾರತೀಯರನ್ನು ನೇಮಿಸಿಕೊಳ್ಳಲಾಗಿದೆ.

d) ೩೧ ಮಾರ್ಚ್ ೧೯೩೮ರಂದು ಮುಗಿದ ವರ್ಷಾವಧಿಯಲ್ಲಿ ೫೪ ಜನ ಭಾರತೀಯರನ್ನು ಇಂಡಿಯನ್ ಕಮಿಷನ್ಡ್ ಅಧಿಕಾರಿಗಳನ್ನಾಗಿ ತೆಗೆದುಕೊಳ್ಳಲಾಗಿದೆ. ಈಗ ಅವನ್ನೆಲ್ಲಾ ತರಬೇತಿಗಾಗಿ ಬ್ರಿಟಿಷ್ ಯೂನಿಟ್‌ಗಳ ಜೊತೆ ಇಡಲಾಗಿದೆ. ಅವರಲ್ಲಿ ಎಷ್ಟು ಜನರನ್ನು ಕಾಲ್ದಳಕ್ಕೆ ಮತ್ತು ಎಷ್ಟು ಜನರನ್ನು ಅಶ್ವದಳಕ್ಕೆ ಸೇರ್ಪಡೆ ಮಾಡಿಕೊಳ್ಳಲಾಗುವುದೆಂದು ಈಗಲೇ ಹೇಳಲು ಸಾಧ್ಯವಿಲ್ಲ. ಇದೇ ಅವಧಿಯಲ್ಲಿ ೯೧೬ ಜನ ಭಾರತೀಯರನ್ನು ಅಶ್ವದಳಕ್ಕೂ, ೭,೭೦ ಜನರನ್ನು ಕಾಲ್ದಳಕ್ಕೂ ನೇಮಕ ಮಾಡಿಕೊಳ್ಳಲಾಗಿದೆ. ಅವರೆಲ್ಲಾ ಯಾವ ಯಾವ ವರ್ಗಗಳಿಗೆ ಸೇರಿದವರೆಂಬ ವಿವರ ಸೈನ್ಯದ ಮುಖ್ಯ ಕಛೇರಿಯಲ್ಲಿ ಸಿಗುವುದಿಲ್ಲ. ನೇಮಕಾತಿ ಮಾಡುವ ಅಧಿಕಾರಿಗಳಿಂದ ಆ ವಿವರಗಳನ್ನು ಕೇಳಿ ಪಡೆಯಲು ತಗಲುವ ವೆಚ್ಚ, ಸಮಯ ಮತ್ತು ಶ್ರಮ ಸಮರ್ಥನೀಯವಲ್ಲ.

e) ಇಲ್ಲ.

f) ಪ್ರಶ್ನೆಯ ಮೊದಲ ಅರ್ಧಭಾಗಕ್ಕೆ ಉತ್ತರ ನಕಾರಾತ್ಮಕವಾಗಿದೆ. ಇನ್ನು ಪ್ರಶ್ನೆಯ ಉಳಿದ ಭಾಗಕ್ಕೆ ಉತ್ತರ ಭಾರತ ಈಗಾಗಲೇ ದಕ್ಷ ಸೈನ್ಯವನ್ನು ಹೊಂದಿದೆಯಾದ್ದರಿಂದ, ಹಣಕಾಸು ಪರಿಸ್ಥಿತಿಯನ್ನು ನೋಡಿಕೊಂಡು ಅದನ್ನು ನವೀಕರಿಸುವ ಪ್ರಯತ್ನ ಮಾಡಲಾಗುವುದು.

ಶ್ರೀ ಎಸ್. ಸತ್ಯಮೂರ್ತಿ: ಪ್ರಶ್ನೆಯ d) ಮತ್ತು c) ಭಾಗಗಳಿಗೆ ಕೊಟ್ಟ ಉತ್ತರಗಳನ್ನು ಸೇರಿಸಿ, ಆ ಹಿನ್ನೆಲೆಯಲ್ಲಿ ಕೇಳುತ್ತಿದ್ದೇವೆ. ನೇಮಕಾತಿಯಾಗಿರುವ ಬಹುಪಾಲು ಸೈನಿಕರು, ಒಂದೇ ಕೋಮಿಗೆ ಸೇರಿದ ಪಂಜಾಬಿಗಳೆಂಬ ಸಾರ್ವಜನಿಕರ ಅಭಿಪ್ರಾಯ–ಹೇಳಿಕೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದನ್ನು ಗಮನದಲ್ಲಿಟ್ಟು ಎಲ್ಲ ಪ್ರಾಂತ್ಯಗಳ, ಎಲ್ಲ ಕೋಮುಗಳವರಿಗೂ ಪ್ರಾತಿನಿಧ್ಯ ಕೊಟ್ಟು ಸೈನ್ಯ ನಿಜವಾಗಿಯೂ ರಾಷ್ಟ್ರೀಯ ಸೈನ್ಯವಾಗಿ, ಕೆಲವು ದೇಶಗಳಲ್ಲಿ ಆದಂತೆ ಮಿಲಿಟರಿ ಸರ್ವಾಧಿಕಾರ ಇಲ್ಲೂ ಬರದಂತೆ ತಡೆಯುವ ಯೋಚನೆ ಸರ್ಕಾರಕ್ಕಿದೆಯೇ?

ಶ್ರೀ ಸಿ.ಎಂ.ಜಿ. ಓಗಿಲ್ ವೀ: ಈ ಪ್ರಶ್ನೆಯಿಂದ, ನೀವು ಎತ್ತಿರುವ ಸಮಸ್ಯೆ ಹೇಗೆ ಉದ್ಭವವಾಗುತ್ತದೆಂದು ನನಗೆ ತಿಳಿಯದು. ಆದರೆ, ಪ್ರಾಂತೀಯ ಸರಹದ್ದುಗಳು ಸರ್ಕಾರದ ಗಮನದಲ್ಲಿಲ್ಲವೆಂದು ಹೇಳಬಲ್ಲೆ. ದಕ್ಷ ಸೈನ್ಯವನ್ನು ರೂಪಿಸಲು ದಕ್ಷರಾದವರನ್ನು ನಾವು ನೇಮಕ ಮಾಡಿಕೊಳ್ಳುತ್ತೇವೆ. ಪ್ರಾಂತೀಯ ಆಧಾರದ ಮೇಲಲ್ಲ. ಈ ವಿಷಯದಲ್ಲಿ ಪ್ರಾಂತೀಯ ಆಸಕ್ತಿಗಿಂತ ರಾಷ್ಟ್ರೀಯ ಹಿತವೇ ಮುಖ್ಯವಾಗಬೇಕು. ಅತ್ಯುತ್ತಮ

ಆಸಕ್ತಿಗಿಂತ ರಾಷ್ಟ್ರೀಯ ಹಿತವೇ ಮುಖ್ಯವಾಗಬೇಕು. ಅತ್ಯುತ್ತಮ ಸರಕು ಎಲ್ಲಿ ಸಿಕ್ಕುತ್ತದೋ ಅಲ್ಲಿಂದ ನಾವು ಅದನ್ನು ಪಡೆಯುತ್ತೇವೆ, ಬೇರೆ ಕಡೆಯಿಂದಲ್ಲ.

**ಶ್ರೀ ಎಸ್.ಸತ್ಯಮೂರ್ತಿ:** ಸೈನ್ಯದಲ್ಲಿ ಬಹುತೇಕ ಮಂದಿ ಪಂಜಾಬಿಗಳೇ? ಸರ್ಕಾರ ನನ್ನ ಪ್ರಾಂತ್ಯದ ಸೈನ್ಯ ಮೊನ್ನೆ ಮೊನ್ನೆ ತಾನೆ ತೋರಿದ ಶೌರ್ಯ ಸಾಹಸಗಳನ್ನು ಮರೆತು ಮದ್ರಾಸಿಗಳನ್ನು ಮತ್ತು ಇತರ ಪ್ರಾಂತ್ಯದವರನ್ನು ಪೂರ್ಣವಾಗಿ ಹೊರಗಿಟ್ಟಿದೆಯೇ?

**ಶ್ರೀ ಸಿ.ಎಂ.ಜಿ. ಓಗಿಲ್ ವೀ:** ಮದ್ರಾಸನ್ನು ಪೂರ್ತಿಯಾಗಿ ಹೊರಗೇನೂ ಇಟ್ಟಿಲ್ಲ. ಮದ್ರಾಸಿಗರ ಮಿಲಿಟರಿ ಸಾಮರ್ಥ್ಯವನ್ನು ಸಂತೊಷದಿಂದಲೇ ನೆನಪಿನಲ್ಲಿಟ್ಟಿದೆ. ಅನುಭವದಿಂದ ಉತ್ತಮವೆಂದು ಪರಿಗಣಿಸಲಾದ ತುಕಡಿಗಳಿಗೆ ಈಗ ಅವರ ನೇಮಕಾತಿ ಆಗಿದೆ. ಮೈನರ್ಸ್ ಮತ್ತು ಕಾಲ್ದಳಗಳಲ್ಲಿ, ೪೫೦೦ ಜನ ಈಗ ಸೇವೆಯಲ್ಲಿದ್ದಾರೆ.

**ಶ್ರೀ ಎಸ್.ಸತ್ಯಮೂರ್ತಿ:** ಅದು ೧,೨೦,೦೦೦ ಮೊತ್ತದಲ್ಲಿ?

**ಶ್ರೀ ಸಿ.ಎಂ.ಜಿ. ಓಗಿಲ್ ವೀ:** ಸುಮಾರು ಅಷ್ಟು.

**ಶ್ರೀ ಎಸ್.ಸತ್ಯಮೂರ್ತಿ:** ಮದ್ರಾಸಿನ ಜನಸಂಖ್ಯೆ, ಅದು ಕೇಂದ್ರ ಬೊಕ್ಕಸಕ್ಕೆ ಕೊಡುವ ತೆರಿಗೆ ಮತ್ತು ರಾಷ್ಟ್ರೀಯ ಸೈನ್ಯದ ಅವಶ್ಯಕತೆಯನ್ನು ಪರಿಗಣಿಸಿ, ಅವರ ಸಂಖ್ಯೆ ಸರಿಯಾದ ಪ್ರಮಾಣದಲ್ಲಿದೆಯೆಂದು ನಾನು ತಿಳಿಯಲೇ?

**ಶ್ರೀ ಸಿ.ಎಂ.ಜಿ. ಓಗಿಲ್ ವೀ:** ಸರ್ಕಾರದ ಗಮನದಲ್ಲಿರುವುದು ದಕ್ಷಸೈನ್ಯ ಮಾತ್ರ.

**ಶ್ರೀ ಎಸ್.ಸತ್ಯಮೂರ್ತಿ:** ಯಾವ ಮಾನದಂಡದಿಂದ ಪಂಜಾಬನ್ನು ಬಿಟ್ಟು ಬೇರೆ ಪ್ರಾಂತ್ಯದವರು ಭಾರತೀಯ ಸೈನ್ಯಕ್ಕೆ ಉತ್ತಮ ಸೈನಿಕರನ್ನು ಕೊಡಲಾರವೆಂಬ ತೀರ್ಮಾನಕ್ಕೆ ಬಂದಿದ್ದೀರಿ?

**ಶ್ರೀ ಸಿ.ಎಂ.ಜಿ. ಓಗಿಲ್ ವೀ:** ಅನುಭವದಿಂದ.

**ಶ್ರೀ ಸರ್ ಜಿಯಾಉದ್ದಿನ್ ಅಹ್ಮದ್:** ಲೆಕ್ಕ ಪತ್ರ ವಿಭಾಗ ಪೂರ್ತಿಯಾಗಿ ಮದ್ರಾಸಿಗರಿಂದ ತುಂಬಿರುವುದು ನಿಜವೇ? ಮತ್ತು ಸರ್ಕಾರ ಭಾರತದಲ್ಲಿರುವ ಮದ್ರಾಸಿನ ಜನಸಂಖ್ಯೆಗೆ ಅನುಸಾರವಾಗಿ ಅವರ ಸಂಖ್ಯೆಯನ್ನು ಕಡಿಮೆಗೊಳಿಸುವುದೇ?

**ಶ್ರೀ ಸಿ.ಎಂ.ಜಿ. ಓಗಿಲ್ ವೀ:** ಮೂಲ ಪ್ರಶ್ನೆಯ ಸಂಬಂಧವಾಗಿ, ಇದು ಹೇಗೆ ಸಮಂಜಸವೆಂದೂ ನನಗೆ ತಿಳಿಯದು. ಆದರೆ ಪ್ರಾಂತೀಯ ಕಾರಣ ಮುಂದುಮಾಡಿಕೊಂಡು ಸರ್ಕಾರ ದಕ್ಷತೆಯನ್ನು ಬಲಿಕೊಡಲು ತಯಾರಿಲ್ಲ.

ವಿವಿಧ ಜಾತಿಗಳ ಭಾರತೀಯರನ್ನು ಒಳಗೊಂಡ ಭಾರತೀಯರೆಜಿಮೆಂಟ್* ಪ್ರಶ್ನೆ. ೧೦೭೮ **ಶ್ರೀ ಎಂ. ಅನಂತಶಯನಂ ಅಯ್ಯಂಗಾರ್:** (ಶ್ರೀ ಮನು ಸುಬೇದರರ ಪರವಾಗಿ)

a) ವಿವಿಧ ಭಾರತೀಯ ಕೋಮುಗಳು, ಪ್ರಾಂತ್ಯಗಳಿಗೆ ಸೇರಿದ ಸಿಖ್ಖರು, ಮರಾಠರು, ರಜಪೂತರು, ಬ್ರಾಹ್ಮಣರು ಮತ್ತು ಮುಸ್ಲಿಮರೆಲ್ಲರನ್ನೂ ಒಳಗೊಂಡ ಒಂದು ಭಾರತೀಯ ರೆಜಿಮೆಂಟನ್ನು ಸೃಷ್ಟಿಸುವ ಪ್ರಯೋಗವನ್ನು ಎಂದಾದರೂ ಬ್ರಿಟಿಷ್ ಸರ್ಕಾರದ ಆಳ್ವಿಕೆಯಲ್ಲಿ ಮಾಡಲಾಗಿದೆಯೇ? ಆ ಬಗ್ಗೆ ರಕ್ಷಣಾ ಕಾರ್ಯದರ್ಶಿಗಳು ತಿಳಿಸುವರೇ?

b) 'ಎ' ಭಾಗದ ಪ್ರಶ್ನೆಗೆ ಉತ್ತರ ನಕಾರಾತ್ಮಕವಾಗಿದ್ದರೆ, ಈ ಬಗ್ಗೆ ಸರ್ಕಾರಿ ನೀತಿಯನ್ನು ಕುರಿತು ಒಂದು ಹೇಳಿಕೆಯಿತ್ತು, ಅದು ಯಾಕೆ ಸರಿಯೆನಿಸಲಿಲ್ಲವೆಂದು ಕಾರಣಗಳನ್ನು ಕೊಡುವರೇ?

* ಶಾಸನಸಭೆಯ ನಡಾವಳಿಗಳು ೧೯೩೮, ಸಂಪುಟ ೪, ಪುಟ.೨೪೭೮.

c) ಹಿಸ್. ಎಕ್ಸಲೆನ್ಸಿ ಮಹಾದಂಡನಾಯಕರು, ಈ ವಿಷಯವನ್ನು ಬ್ರಿಟಿಷ್ ಸಾರ್ವಭೌಮ ಸರ್ಕಾರದೊಂದಿಗೆ ಪ್ರಸ್ತಾಪಿಸಲು ತಯಾರಿರುವರೇ?

d) ವಿಶ್ವವಿದ್ಯಾಲಯ ಕಾರ್ಪ್ಸ್, ಬಾಂಬೆ ಸ್ಕೌಟ್ ಮುವ್‌ಮೆಂಟ್ ಮತ್ತು ಪೊಲೀಸ್ ಪಡೆಗಳಲ್ಲಿ, ಜಾತಿ ಮತ್ತು ಕೋಮು ಆಧಾರಿತ ಪ್ರತ್ಯೇಕತೆಯಿಲ್ಲವೆಂದು ಸರ್ಕಾರಕ್ಕೆ ತಿಳಿದಿದೆಯೇ?

**ಶ್ರೀ ಸಿ.ಎಂ.ಜಿ. ಓಗಿಲ್ ವೀ:**

a) ಇಲ್ಲ

b) ಮಿಲಿಟರಿ ಉಪಘಟಕಗಳಾದ ಸ್ಕ್ವಾಡ್ರನ್ಸ್, ಕಂಪನಿಗಳು ಏಕರೂಪಿ ಆಗಿರಬೇಕೆಂಬುದು ಸಂಘಟನೆಯ ಮೂಲಭೂತ ತತ್ವ.

c) ಈಗತಾನೆ ಕೊಟ್ಟಿರುವ ಕಾರಣಗಳಿಂದ ಅದು ಸಾಧ್ಯವಿಲ್ಲ.

**ಶ್ರೀ ಎಸ್. ಸತ್ಯಮೂರ್ತಿ:** 'ಏಕರೂಪ' (ಸಮರೂಪ) ಪದಕ್ಕೆ ಸರ್ಕಾರ ಏನು ಅರ್ಥ ಕೊಡುತ್ತದೆ? ಹಾಗೆಂದರೆ ಒಂದೇ ಪ್ರಾಂತ್ಯದಿಂದ ಅಥವಾ ಒಂದೇ ಕೋಮಿನಿಂದ ಎಂದೇ?

**ಶ್ರೀ ಸಿ.ಎಂ.ಜಿ. ಓಗಿಲ್ ವೀ:** ಹಾಗೆಂದರೆ ಒಂದೇ ವರ್ಗಕ್ಕೆ ಸೇರಿದ ಜನರೆಂದು ಅರ್ಥ.

**ಶ್ರೀ ಸತ್ಯಮೂರ್ತಿ:** ಈ ವಿಷಯದ ಬಗ್ಗೆ ಸ್ವಲ್ಪ ವಿವರಗಳನ್ನು ಕೇಳಬಹುದೇ, ಒಂದು ವರ್ಗಕ್ಕೂ, ಇನ್ನೊಂದು ವರ್ಗಕ್ಕೂ ನಡುವೆ ವ್ಯತ್ಯಾಸ ಅಥವಾ ಭೇದವನ್ನೇನಾದರೂ ಮಾಡಲಾಗುತ್ತಿದೆಯೇ?

**ಶ್ರೀ ಸಿ.ಎಂ.ಜಿ. ಓಗಿಲ್ ವೀ:** ಖಂಡಿತವಾಗಿ

**ಶ್ರೀ ಎಸ್. ಸತ್ಯಮೂರ್ತಿ:** ಯಾವ ಆಧಾರದ ಮೇಲೆ? ಧಾರ್ಮಿಕ ವರ್ಗದ ಆಧಾರದ ಮೇಲೋ ಪ್ರಾಂತ್ಯಾಧಾರದ ಮೇಲೋ? ಅಥವಾ ಜನಾಂಗೀಯ ವರ್ಗದ ಆಧಾರದ ಮೇಲೋ?

**ಶ್ರೀ ಸಿ.ಎಂ.ಜಿ. ಓಗಿಲ್ ವೀ:** ಇವಾವೂ ಅಲ್ಲ, ಅದು ಬಹುತೇಕ ಜನಾಂಗೀಯ ವರ್ಗ.

**ಶ್ರೀ ಎಸ್.ಸತ್ಯಮೂರ್ತಿ:** ಯಾವ ಜನಾಂಗೀಯ ವರ್ಗಗಳಿಗೆ ಆದ್ಯತೆ ಕೊಡಲಾಗುತ್ತಿದೆ, ಯಾರಿಗೆ ಇಲ್ಲ?

**ಶ್ರೀ ಸಿ.ಎಂ.ಜಿ. ಓಗಿಲ್ ವೀ:** ಮಾನ್ಯ ಸದಸ್ಯರು ಸೈನ್ಯದ ಪಟ್ಟಿಯನ್ನು ಗಮನಿಸುವಂತೆ ಕೋರುತ್ತೇನೆ.

## ಸೈನ್ಯಕ್ಕೆ ನೇಮಕಾತಿ (ಭರ್ತಿ)*

**ಪ್ರಶ್ನೆ. ೧೧೬೨ ಶ್ರೀ ಭೋಜೇಂದ್ರ ನಾರಾಯಣ ಚೌಧರಿ ರಕ್ಷಣಾ ಕಾರ್ಯದರ್ಶಿಯವರು ದಯವಿಟ್ಟು ತಿಳಿಸುವರೇ?**

a) ಈ ಪಂಜಾಬಿನ ಪ್ರಧಾನಿ ಶ್ರೀಯುತ ಸರ್ ಸಿಕಂದರ್‌ಹಯಾತ್ ಖಾನರು, ಸಹೋದರ ಸೈನಿಕರನ್ನು ಉದ್ದೇಶಿಸಿ ಆಡಿದ ಈ ಮಾತುಗಳು ಸರ್ಕಾರದ ಗಮನಕ್ಕೆ ಬಂದಿದೆಯೇ: "ಸೈನ್ಯದಲ್ಲಿ ಪಂಜಾಬಿಗೆ ಇರುವ ಪ್ರಾಬಲ್ಯ ಕಡಿಮೆಯಾಗಲೆಂದು ಯಾವ ದೇಶಭಕ್ತ ಪಂಜಾಬಿಯೂ ಆಶಿಸಲಾರ." ಈ ಹೇಳಿಕೆಯನ್ನೂ ಅಸೋಸಿಯೇಟೆಡ್ ಪ್ರೆಸ್‌ನಿಂದ ತೆಗೆದುಕೊಂಡು ಹಿಂದೂಸ್ತಾನ್ ಟೈಮ್ಸ್ ಪತ್ರಿಕೆ ೫, ಸೆಪ್ಟೆಂಬರ್ ೧೯೩೮ರಂದು ವರದಿ ಮಾಡಿದ ಮತ್ತು

---

* ಶಾಸನಸಭೆಯ ನಡಾವಳಿಗಳು ೧೯೩೮, ಸಂಪುಟ ೪, ಪುಟ.೨೭೫೪.

b) ಪಂಜಾಬಿನಿಂದಲೇ ಹೆಚ್ಚು ಜನರನ್ನು ನೇಮಿಸಿಕೊಂಡು ಸೈನ್ಯದಲ್ಲಿ ಪಂಜಾಬಿಗಳು ಪ್ರಾಬಲ್ಯವನ್ನು ಮುಂದುವರಿಸಿಕೊಂಡು ಹೋಗುವುದು ಸರ್ಕಾರಿ ನೀತಿಯೇ? ಅಥವಾ ಜನಾಂಗೀಯ, ಪ್ರಾಂತೀಯ ಆದ್ಯತೆಯನ್ನು ಬದಿಗಿರಿಸಿ ಎಲ್ಲ ಪ್ರಾಂತ್ಯದವರನ್ನೂ ಸೈನ್ಯಕ್ಕೆ ನೇಮಕ ಮಾಡಿಕೊಳ್ಳುವರೋ?

**ಶ್ರೀ ಸಿ.ಎಂ.ಜಿ. ಓಗಿಲ್ ವೀ:**

ಎ) ಹೌದು

ಬಿ) ನಾನು ಅಮರೇಂದ್ರನಾಥ ಚಟ್ಟೋಪಾಧ್ಯಾಯರ ಪ್ರಶ್ನೆ ನಂ.೧೦೬೦ರ ಉಪಪ್ರಶ್ನೆಗಳಿಗೆ ೧೫ ಸೆಪ್ಟೆಂಬರ್ ೧೯೩೮ರಂದು ಕೊಟ್ಟ ಉತ್ತರಗಳತ್ತ ಮಾನ್ಯ ಸದಸ್ಯರ ಗಮನ ಸೆಳೆಯುತ್ತೇನೆ.

**ಶ್ರಿ ಎಸ್.ಸತ್ಯಮೂರ್ತಿ:** ಪ್ರಶ್ನೆಯ 'ಎ' ಭಾಗದ ಉತ್ತರಕ್ಕಾಗಿ ನನ್ನ ಮಾನ್ಯ ಸ್ನೇಹಿತರು ಹಿಂದೆ ಕೊಟ್ಟ ಉತ್ತರಗಳತ್ತ ಗಮನ ಸೆಳೆದರು. ಆದರೆ ನನಗೆ ನೆನಪಿರುವಂತೆ ಆ ಉತ್ತರಗಳನ್ನು ಸದನದ ಮುಂದೆ ಈ ಹೇಳಿಕೆ ಬಂದ ನಂತರ ಕೊಟ್ಟಿದ್ದಲ್ಲ. "ಸೈನ್ಯದಲ್ಲಿ ಪಂಜಾಬಿಗಳಿಗಿರುವ ಪ್ರಾಬಲ್ಯ ಕಡಿಮೆಯಾಗಲೆಂದು ಯಾವ ದೇಶ ಭಕ್ತ ಪಂಜಾಬಿಯೂ ಆಶಿಸಲಾರ" ಎಂಬ ಪಂಜಾಬ್ ಪ್ರಧಾನಿಯವರ ಹೇಳಿಕೆಯನ್ನು ಸರ್ಕಾರ ಪರೀಕ್ಷಿಸಿದೆಯೇ, ಇಲ್ಲವೇ ಎಂದು ನಾನು ತಿಳಿಯಬಹುದೇ? ಸರ್ಕಾರ ಈ ಹೇಳಿಕೆಯ ಅಪಾಯಗಳನ್ನು ಮನಗಂಡಿದೆಯೇ ಮತ್ತು ಜವಾಬ್ದಾರಿಯುಳ್ಳ ಮಂತ್ರಿಯೊಬ್ಬ ಎಲ್ಲ ಕಾಲಕ್ಕೂ ಭಾರತೀಯವೇ ಆಗಿರಬೇಕಾದ ಸೈನ್ಯದಲ್ಲಿ ಪ್ರಾಂತೀಯ ಅಥವಾ ಕೋಮುವಾರು ಪ್ರಾಬಲ್ಯವಿರಲೆಂದು ಹೇಳಬಹುದೇ? ಈ ರೀತಿ ಹೇಳುವುದನ್ನು ಸರ್ಕಾರ ನಿರ್ಬಂಧಿಸುವುದೇ?

**ಶ್ರೀ ಸಿ.ಎಂ.ಜಿ. ಓಗಿಲ್ ವೀ:** ಕಳೆದ ಸೆಪ್ಟೆಂಬರ್ ೧೫ರಂದು ನಾನು ಇದೇ ರೀತಿಯ ಪ್ರಶ್ನೆಗೆ ಕೊಟ್ಟ ಉತ್ತರವನ್ನೇ ಈಗಲೂ ನಾನು ಪುನರ್ ಉಚ್ಚರಿಸುತ್ತೇನೆ. ಸರ್ಕಾರದ ನೇಮಕಾತಿ ನೀತಿಯನ್ನು ಪದೇಪದೇ ಸ್ಪಷ್ಟಪಡಿಸಲಾಗಿದೆ.

**ಶ್ರೀ ಎಸ್.ಸತ್ಯಮೂರ್ತಿ:** ಆ ನೀತಿ ಉತ್ತಮ ಸರಕನ್ನು ಪಡೆಯುವುದಾಗಿದೆ. ಆದರೆ ನನ್ನ ಸ್ನೇಹಿತರಿಗೆ ಒಂದು ನಿರ್ದಿಷ್ಟ ಪ್ರಶ್ನೆ ಕೇಳುತ್ತಿದ್ದೇನೆ. ಪಂಜಾಬ್ ಪ್ರಧಾನಿಯವರ ಹೇಳಿಕೆಯ ಮಥಿತಾರ್ಥವನ್ನು ಅವರು ಅರ್ಥಮಾಡಿಕೊಳ್ಳುತ್ತಾರೆಂದು ತಿಳಿದಿದ್ದೇನೆ. ಪ್ರಧಾನಿಯೊಬ್ಬ ಭಾರತೀಯ ಸೈನ್ಯದಲ್ಲಿ ಪ್ರಾಂತೀಯ ಪ್ರಾಬಲ್ಯ ಕೋರುವಂಥ ಹೇಳಿಕೆಯ ಪರಿಣಾಮಗಳನ್ನು ಸರ್ಕಾರ ಗಮನಿಸಿದೆಯೇ ಮತ್ತು ಇದರಿಂದ ಉಂಟಾಗಿರುವ ತಪ್ಪು ತಿಳುವಳಿಕೆಗಳನ್ನು ಸರಿಪಡಿಸುವ ಸಲುವಾಗಿ ಏನಾದರೂ ಕ್ರಮ ಕೈಗೊಳ್ಳುವ ಸಾಧ್ಯತೆಯಿದೆಯೇ?

**ಶ್ರೀ ಸಿ.ಎಂ.ಜಿ. ಓಗಿಲ್ ವೀ:** ಆ ಹೇಳಿಕೆಯಿಂದ ಅಪಾಯಕಾರಿ ಪರಿನಾಮಗಳಾಗಬಹುದೆಂದು ಸಕಾರ ಪರಿಗಣಿಸಿಲ್ಲ. ಬದಲಾಗಿ ಒಳ್ಳೆಯದೇ ಆಗುತ್ತದೆ.

**ಶ್ರೀ ಸತ್ಯಮೂರ್ತಿ:** ಜವಾಬ್ದಾರಿಯುತ ನಾಯಕರು ಹೇಳಿರುವುದು ನಿಜವಿರಬಹುದಾದರೂ, ಸೈನ್ಯದಲ್ಲಿ ಯಾವುದೇ ಒಂದು ಪ್ರಾಂತ್ಯ ಅಥವಾ ಕೋಮಿನ ಪ್ರಾಬಲ್ಯವಿರುವುದು ಸರಿಯೆಂದು ಸರ್ಕಾರದ ನಿಲುವೇ? ಈ ಪ್ರಾಬಲ್ಯ ಸೈನ್ಯದೊಳಗೆ ಪ್ರಾಂತ್ಯಾಧಾರಿತ ಮತ್ತು ಕೋಮು ಆಧಾರಿತ ದ್ವೇಷ–ಅಸೂಯೆಗಳಿಗೆ ಕಾರಣವಾಗಿ, ದೇಶದಲ್ಲಿ ಮಿಲಿಟರಿ ಸರ್ವಾಧಿಕಾರ ಬರಬಹುದಾದ ಅಪಾಯವನ್ನು ಒಳಗೊಂಡಿಲ್ಲವೇ?

**ಶ್ರೀ ಸಿ.ಎಂ.ಜಿ. ಓಗಿಲ್ ವೀ:** ಈ ಎಲ್ಲ ಭಯ–ಅನುಮಾನಗಳಿಗೆ ಯಾವುದೇ ಸಮರ್ಥನೆಯಿಲ್ಲವೆಂದು ಸರ್ಕಾರದ ಅಭಿಪ್ರಾಯ.

**ಶ್ರೀ ಎಂ.ಎಸ್. ಆಣೆ:** ಸೈನ್ಯದಲ್ಲಿ ಪಂಜಾಬಿನದೇ ಪ್ರಾಬಲ್ಯವಿರಬೇಕೆಂಬುದು ನೀತಿಯೇ?

**ಶ್ರೀ ಎಸ್.ಎಂ.ಜಿ. ಓಗಿಲ್ ವೀ:** ಅತ್ಯುತ್ತಮ ಸರಕು (ಸೈನಿಕರು) ಇರಬೇಕೆಂಬುದು ಸರ್ಕಾರದ ನೀತಿ.

**ಶ್ರೀ ಎಂ.ಎಸ್. ಆಣೆ:** ನಾನು ಮತ್ತೆ ಆ ಪ್ರಶ್ನೆ ಕೇಳುತ್ತಿದ್ದೇನೆ. ಸೈನ್ಯದಲ್ಲಿ ಪಂಜಾಬಿನದೇ ಪ್ರಾಬಲ್ಯವಿರಬೇಕೆಂಬುದು ನೀತಿಯೇ?

**ಶ್ರೀ ಎಸ್.ಎಂ.ಜಿ. ಓಗಿಲ್ ವೀ:** ನಾನು ಮತ್ತೆ ಆ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ. ಸೈನ್ಯದಲ್ಲಿ ಎಲ್ಲಾ ಪ್ರಾಂತ್ಯಗಳಿಗೆ ಸೇರಿದ ಅತ್ಯುತ್ತಮ ಸೈನಿಕರಿರಬೇಕು ಎನ್ನುವುದೇ ನೀತಿ ಮತ್ತು ಈಗಿರುವ ಅತ್ಯುತ್ತಮ ಸೈನ್ಯದ ಬಗ್ಗೆ ಸರ್ಕಾರಕ್ಕೆ ತೃಪ್ತಿ ಇದೆ.

**ಶ್ರೀ ಎಂ.ಎಸ್. ಆಣೆ:** ಆದ್ದರಿಂದ ಸರ್. ಸಿಕಂದರ್ ಹಯಾತ್ ಖಾನರ ಹೇಳಿಕೆಯನ್ನು ಮಾರ್ಪಡಿಸಿ ಸಕಾರ ಹೇಳಿಕೆ ಕೊಡಬೇಕಾದ ಅವಶ್ಯಕತೆಯಿಲ್ಲವೇ?

**ಶ್ರೀ ಎಸ್.ಎಂ.ಜಿ. ಓಗಿಲ್ ವೀ:** ತನ್ನ ನೀತಿಯಲ್ಲಿ ಯಾವ ಬದಲಾವಣೆಯನ್ನೂ ತರುವ ಇರಾದೆ ಸರ್ಕಾರಕ್ಕಿಲ್ಲ.

೨೩ ನವೆಂಬರ್, ೧೯೩೮ರಂದು, ಈ ಕೆಳಗಿನ ವಿವರಗಳನ್ನೊಳಗೊಂಡ ಒಂದು ಪ್ರಕ್ಷೇಪ ಸಭೆಯಲ್ಲಿ ಚರ್ಚಿತವಾಯಿತು.

## ಮಧ್ಯಪ್ರಾಂತಗಳು ಮತ್ತು ಬೇರಾರ್‌ಗಳಿಂದ ಭಾರತೀಯ ಸೈನ್ಯಕ್ಕೆ ನೇಮಕಾತಿ*

ಪ್ರಶ್ನೆ ನಂ.೧೪೦೨ ಶ್ರೀ ಗೋವಿಂದ ವಿ ದೇಶಮುಖ್: ರಕ್ಷಣಾ ಕಾರ್ಯರ್ಶಿ ದಯವಿಟ್ಟು ತಿಳಿಸುವರೇ?

(ಎ) ಭಾರತೀಯ ಸೈನ್ಯಕ್ಕೆ ಮಧ್ಯಪ್ರಾಂತಗಳು ಮತ್ತು ಬೇರರ್‌ಗಳ ಯಾವ ಕೇಂದ್ರಗಳಿಂದ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ.

(ಬಿ) ಯಾವ ವರ್ಗಗಳ ಜನರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ.

(ಸಿ) ಸೈನ್ಯದ ಒಟ್ಟು ಸಂಖ್ಯೆಯಲ್ಲಿ, ಕೇಂದ್ರ ಪ್ರಾಂತ್ಯ ಮತ್ತು ಬೇರರ್‌ಗಳ ಪ್ರಮಾಣವೆಷ್ಟು ಮತ್ತು ಈ ಪ್ರಾಂತ್ಯಗಳಲ್ಲಿರುವ ಜನಸಂಖ್ಯೆಯಲ್ಲಿ, ನೇಮಕಾತಿಯಾದವರ ಪ್ರಮಾಣವೆಷ್ಟು? ಮತ್ತು

(ಡಿ) ಈಗಿನ ಸರ್ಕಾರದ ನೇಮಕಾತಿ ನೀತಿಯನ್ನು ಪುನರ್ ವಿಮರ್ಶಿಸಲಾಗುವುದೇ, ಇಲ್ಲವಾದರೆ ಯಾಕಿಲ್ಲ?

**ಶ್ರೀ ಸಿ.ಎಂ.ಜಿ. ಓಗಿಲ್‌ವೀ:** ಮಧ್ಯ ಪ್ರಾಂತ್ಯ ಮತ್ತು ಬೇರರ್‌ಗಳಲ್ಲಿ ನೇಮಕಾತಿ ಕೇಂದ್ರಗಳೇ ಇಲ್ಲ. ಮಧ್ಯ ಪ್ರಾಂತದ ನಿವಾಸಿಗಳು ದೆಹಲಿ ನೇಮಕಾತಿ ಅಧಿಕಾರಿಯ ವಲಯಕ್ಕೆ ಸೇರಿದರೆ, ಬೇರರ್ ನಿವಾಸಿಗಳು ಪೂನಾ ನೇಮಕಾತಿ ಅಧಿಕಾರಿಯ ವ್ಯಾಪ್ತಿಗೆ ಬರುತ್ತಾರೆ.

(ಬಿ) ಬೇರರ್‌ನ ಮರಾಠರನ್ನು ಪ್ರತ್ಯೇಕ ವರ್ಗವಾಗಿಯೇ ನೇಮಕ ಮಾಡಿಕೊಳ್ಳಲಾಗುತ್ತಿದೆ. ಬೇರರ್‌ನಿಂದ ನೇಮಕವಾಗುವ ಹಿಂದೂ-ಮುಸ್ಲಿಮರನ್ನು "ಹಿಂದೂಗಳು ಮತ್ತು ಮುಸ್ಲಿಮರು" ಎಂದೇ ವರ್ಗೀಕರಿಸಲಾಗುತ್ತಿದೆ. ಬೇರೆ ವರ್ಗಗಳಡಿ ಅವರನ್ನು ನೋಂದಾಯಿಸುತ್ತಿಲ್ಲ.

(ಸಿ) ಸೈನ್ಯದ ಒಟ್ಟು ಸಂಖ್ಯೆಯಲ್ಲಿ ಆ ಪ್ರಮಾಣ ಶೇಕಡಾ ೦.೦೩. ಆ ಪ್ರಾಂತ್ಯಗಳ ಪುರುಷ ಜನಸಂಖ್ಯೆಯ ಶೇಕಡಾ ೦.೦೦೦೪ರಷ್ಟು ಜನ ಸೈನ್ಯದಲ್ಲಿದ್ದಾರೆ.

---

* ಶಾಸನಸಭೆಯ ನಡಾವಳಿಗಳು ೧೯೩೮, ಸಂಪುಟ ೭, ಪುಟ.೩೩೧೩.

ಡಿ) ೧೫, ಸೆಪ್ಟೆಂಬರ್, ೧೯೩೮ರಂದು, ಶ್ರೀ ಎಸ್.ಸತ್ಯಮೂರ್ತಿಯವರು ಕೇಳಿದ ಪ್ರಶ್ನೆ ನಂಬರು ೧೧೬೦ಕ್ಕೆ ಮತ್ತು ಶ್ರೀ ಮಿಯಾನ್ ಗುಲಾಮ್ ಹೈದರ್ ಖಾನರು ಅದೇ ದಿನ ಕೇಳಿದ ಪ್ರಶ್ನೆ ನಂಬರು ೧೧೮೬ (ಎ) ಭಾಗಕ್ಕೆ, ಶ್ರೀ ಸುಶೀಲ್ ಕುಮಾರ್ ರಾಯ್ ಚೌಧರಿಯವರು ಭಾರತೀಯ ಸೈನಿಕ ತರಬೇತಿ ಬಗ್ಗೆ ೨೧ ಫೆಬ್ರವರಿ ೧೯೩೮ರಂದು ಕೇಳಿದ ಪ್ರಶ್ನೆಗೆ ಮತ್ತು ಮಾನ್ಯ ಶ್ರೀ ಪಿ.ಎನ್.ಸಪ್ರು ಅವರು ೧೯೩೫, ಏಪ್ರಿಲ್‌ನಲ್ಲಿ ಸೈನ್ಯದಲ್ಲಿ ಎಲ್ಲ ವರ್ಗಗಳ ಜನರ ನೇಮಕಾತಿಯಾಗಬೇಕೆಂದು ಕಳಿಸಿದ ಠರಾವುಗಳಿಗೆ ಮಾನ್ಯ ಮಹಾದಂಡನಾಯಕರು ಕೊಟ್ಟ ಕಾರಣ ಉತ್ತರಗಳಿಂದ, ಸರ್ಕಾರ ಸದ್ಯಕ್ಕೆ ತನ್ನ ನೀತಿಯನ್ನು ಬದಲಾಯಿಸಬಯಸಿಲ್ಲ.

## ೬ ಫೆಬ್ರವರಿ ೧೯೩೯ರಂದು ಈ ಕೆಳಗಿನ ಪ್ರಶ್ನೆಯನ್ನು ಕೇಳಲಾಯಿತು.

## ಭಾರತೀಯ ಸೈನ್ಯಕ್ಕೆ ನೇಮಕಾತಿ*

**ಪ್ರಶ್ನೆ ನಂ.೧೨೯ ಶ್ರೀ ಎಸ್.ಸತ್ಯಮೂರ್ತಿ: ರಕ್ಷಣಾಕಾರ್ಯದರ್ಶಿಗಳು ದಯವಿಟ್ಟು ತಿಳಿಸುವರೇ?**

(ಎ) ಭಾರತೀಯ ಸೈನ್ಯಕ್ಕೆ ನೇಮಕಾತಿ ಕುರಿತಂತೆ ಸರ್ಕಾರ ಹಿಂದಿನ ಪ್ರಶ್ನೆಗೆ ಉತ್ತರಿಸಿದ ನಂತರ ಏನಾದರೂ ಬೇರೆ ಬೇರೆ ಪ್ರಾಂತ್ಯ ಮತ್ತು ಜಾತಿಗಳಿಂದ ನೇಮಕ ಮಾಡಿಕೊಳ್ಳುವ ಬಗ್ಗೆ ಪುನರ್ ಪರಿಶೀಲನೆ ನಡೆಸಿದೆಯೇ?

(ಬಿ) ಆ ಬಗ್ಗೆ ಏನಾದರೂ ತೀರ್ಮಾನಕ್ಕೆ ಬರಲಾಗಿದೆಯೇ?

(ಸಿ) ಬೇರೆ ಪ್ರಾಂತ್ಯ ಮತ್ತು ಕೋಮುಗಳ ಜನರು ಸೈನ್ಯ ಸೇರಲು ಅವಕಾಶ ಕೊಡುತ್ತಿಲ್ಲವೇಕೆಂದು ಸರ್ಕಾರ ಸ್ಪಷ್ಟ ಉತ್ತರವನ್ನು ಕೊಡಲು ಸಾಧ್ಯವೇ, ಮತ್ತು

(ಡಿ) ಈಗ ನೇಮಕಾತಿ ಮಾಡಿಕೊಳ್ಳುವ ಪ್ರಾಂತ್ಯಗಳನ್ನು ಹೊರತುಪಡಿಸಿ, ಇತರ ಪ್ರಾಂತ್ಯಗಳು ಮತ್ತು ಆ ಪ್ರಾಂತ್ಯದ ಜನರು ಸೈನ್ಯ ಸೇರಲು ನಿರೀಕ್ಷಿತ ದಕ್ಷತೆ ಹೊಂದಿಲ್ಲ, ಅವರೆಲ್ಲಾ ಅನರ್ಹರೆಂದು ತೀರ್ಮಾನಕ್ಕೆ ಬರಲು ಯಾವ ಮಾನದಂಡವನ್ನು ಬಳಸಲಾಗಿದೆ?

**ಶ್ರೀ ಸಿ.ಎಂ.ಜಿ. ಓಗಿಲ್ ವೀ:**

(ಎ) ಇಲ್ಲ

(ಬಿ) ಪ್ರಶ್ನೆಯೇ ಏಳುವುದಿಲ್ಲ

(ಸಿ) ಮತ್ತು ಡಿ) ಈ ಪ್ರಶ್ನೆಗಳಿಗೆ ೧೫ ಸೆಪ್ಟೆಂಬರ್ ೧೯೩೮ರಂದು ಕೇಳಲಾದ ಪ್ಟೌರ್ಡ್ ಪ್ರಶ್ನೆ ನಂ.೧೧೬೦ ಮತ್ತು ಪ್ರಶ್ನೆ. ನಂ.೧೧೮೬, ಮತ್ತು ೨೦ ಸೆಪ್ಟೆಂಬರ್ ೧೯೩೮ರ ಪ್ರಶ್ನೆ ನಂ.೧೧೬೨, ಮತ್ತು ೨೩ ನವಂಬರ್ ೧೯೨೮ರ ಪ್ರಶ್ನೆ ನಂ.೧೪೦೨ಗಳಿಗೆ ನಾನು ಕೊಟ್ಟ ಉತ್ತರಗಳಲ್ಲಿ ಮತ್ತು ರಾಜ್ಯ ಪರಿಷತ್ತಿನಲ್ಲಿ ಮಹಾದಂಡನಾಯಕರು ಮಾನ್ಯ ಶ್ರೀ ಸಪ್ರು ಅವರು ಭಾರತೀಯ ಸೈನ್ಯಕ್ಕೆ ಎಲ್ಲ ವರ್ಗಗಳ ಜನರ ನೇಮಕಾತಿ ಕುರಿತಂತೆ ಕಳಿಸಿದ ಠರಾವಿಗೆ ಮತ್ತು ಕ್ರಮವಾಗಿ, ೧೩ ಮಾರ್ಚ್ ೧೯೩೫ ಮತ್ತು ೨೧ ಫೆಬ್ರವರಿ ೧೯೨೮ರಂದು ಶ್ರೀ ಸುಶೀಲ್ ಕುಮಾರ್

---

* ಶಾಸನಸಭೆಯ ನಡಾವಳಿಗಳು ೧೯೩೯, ಸಂಪುಟ ೭, ಪುಟ.೨೫೩.

ರಾಯ್ ಚೌಧರಿಯವರು ಭಾರತೀಯರಿಗೆ ಸೈನ್ಯ ತರಬೇತಿ ಕುರಿತಂತೆ ಕಳಿಸಿದ ಠರಾವಿಗೆ ಕೊಟ್ಟ ಉತ್ತರದಲ್ಲಿ ಇದಕ್ಕೆ ಕಾರಣಗಳನ್ನು ಸ್ಪಷ್ಟಪಡಿಸಲಾಗಿದೆ.

ಸರ್ಕಾರದ ಈ ಮೌನದ ಸಂಚನ್ನು ಸೆಕ್ರೆಟರಿ ಆಫ್ ಸ್ಟೇಟ್ ಅವರು ಇತ್ತೀಚೆಗೆ ಹೌಸ್ ಆಫ್ ಕಾಮನ್ಸ್‌ನಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಪೂರ್ಣ ವಿವರಗಳನ್ನು ಕೊಟ್ಟು, ಈ ಮುಖ್ಯ ವಿಷಯದ ಮೇಲೆ ಬೆಳಕು ಚೆಲ್ಲಿದರು. ೮ ಜುಲೈ ೧೯೪೩ರಂದು ಅವರು ಕೊಟ್ಟ ಉತ್ತರದಲ್ಲಿ ಭಾರತೀಯ ಸೈನ್ಯದಲ್ಲಿರುವ ಪ್ರಾಂತವಾರು ಮತ್ತು ಕೋಮುವಾರು ಪ್ರಮಾಣ ಈ ಕೆಳಕಂಡಂತಿದೆ.

**I. ಭಾರತೀಯ ಸೈನ್ಯದಲ್ಲಿ ಪ್ರಾಂತ್ಯವಾರು ಪ್ರಾತಿನಿಧ್ಯ**

| ಪ್ರಾಂತ್ಯ | ಶೇಕಡಾವಾರು | ಪ್ರಾಂತ್ಯ | ಶೇಕಡಾವಾರು |
|---|---|---|---|
| ೧. ಪಂಜಾಬ್ | ೫೦ | ೭. ಬಂಗಾಳ | ೨ |
| ೨. ಯು.ಪಿ | ೧೫ | ೮.ಸಿ.ಪಿ. ಮತ್ತು ಬೀರರ್ | ೫ |
| ೩. ಮದ್ರಾಸು ಪ್ರಾಂತ್ಯ | ೧೦ | ೯. ಅಸ್ಸಾಮ್ | ೫ |
| ೪. ಬಾಂಬೆ ಪ್ರಾಂತ್ಯ | ೧೦ | ೧೦. ಬಿಹಾರ | ೫ |
| ೫. ಉತ್ತರವಾಯುವ್ಯ | ೫ | ೧೧. ಒರಿಸ್ಸಾ | ೫ |
| ೬. ಅಜ್ಮೀರ ಮತ್ತು ಮೇವಾಡ | ೩ | ೧೨. ನೇಪಾಳ | ೮ |

**II. ಭಾರತೀಯ ಸೈನ್ಯದಲ್ಲಿ ವಿವಿಧ ಕೋಮುಗಳಿಗಿರುವ ಪ್ರಾತಿನಿಧ್ಯ**

| | |
|---|---|
| ೧. ಮುಸ್ಲಿಮರು | ಶೇಕಡಾ ೩೪ |
| ೨. ಹಿಂದೂಗಳು ಮತ್ತು ಗೂರ್ಖಾಗಳು | ಶೇಕಡಾ ೫೦ |
| ೩. ಸಿಖ್ಖರು | ಶೇಕಡಾ ೧೦ |
| ೪. ಕ್ರೈಸ್ತರು ಮತ್ತಿತರರು | ಶೇಕಡಾ ೬ |

ಗೃಹಕಾರ್ಯದರ್ಶಿಯವರು ಕೊಟ್ಟ ಮಾಹಿತಿ ತುಂಬಾ ಸ್ವಾಗತಾರ್ಹವಾದದ್ದು. ಆದರೆ ಇದು ಯುದ್ಧ ಸಮಯದ ಭಾರತೀಯ ಸೈನ್ಯದ ಸ್ವರೂಪ. ಶಾಂತಿ ಸಮಯದ ಭಾರತೀಯ ಸೈನ್ಯದ ಸ್ವರೂಪ ತೀರಾ ಬೇರೆಯಾಗಿರುತ್ತದೆ. ಅದು ಕ್ಷಾತ್ರಗುಣಕ್ಕೆ ಹೆಸರಾದ ಜನಾಂಗ ಮತ್ತು ಇತರ ಜನಾಂಗ ತತ್ವವನ್ನು ಅವಲಂಬಿಸಿರುತ್ತದೆ. ಈ ವ್ಯತ್ಯಾಸವನ್ನು ಯುದ್ಧ ಕಾಲದಲ್ಲಿ ತೆಗೆದು ಹಾಕಲಾಯಿತು. ಆದರೆ ಇದೀಗ ಶಾಂತಿ ನೆಲೆಗೊಂಡಿರುವುದರಿಂದ ಅದನ್ನು ಮತ್ತೆ ಪುನರಾರರಂಭಿಸುವುದಿಲ್ಲವೆಂದು ಹೇಳಲು ಸಾಧ್ಯವಿಲ್ಲ. ನಮಗೆ ಬೇಕಾಗಿರುವುದು ಶಾಂತಿ ಸಮಯದ ಭಾರತೀಯ ಸೈನ್ಯದ ಕೋಮುವಾರು ಸ್ವರೂಪ. ಅದು ಇನ್ನೂ ತಿಳಿಯದ, ಊಹಾಪೋಹದಲ್ಲೇ ಇದೆ.

ಯುದ್ಧಪೂರ್ವ ಸೈನ್ಯದಲ್ಲಿ ಮುಸ್ಲಿಮರ ಪ್ರಮಾಣ ಶೇಕಡಾವಾರು ೬೦ರಿಂದ ೭೦ ಎಂದು ಕೆಲವರು ಹೇಳುತ್ತಾರೆ. ಇನ್ನೂ ಕೆಲವರು ಅದನ್ನು ಸುಮಾರು ೫೦ ಎನ್ನುತ್ತಾರೆ. ಆ ಬಗ್ಗೆ ವಿಚಾರಿಸಿದಾಗ, ಅದಕ್ಕೆ ಸಮರ್ಥನೆ ಕೊಡುವವರಿದ್ದು, ಆದರೆ ನಿರ್ದಿಷ್ಟ ಮಾಹಿತಿ ದೊರೆಯದಿದ್ದಾಗ, ಶೇಕಡಾ ೫೦ರ ಸಂಖ್ಯೆ ಸತ್ಯಕ್ಕೆ ಹತ್ತಿರವಾದುದೆಂದು ತಿಳಿಯಬಹುದು. ಆ ಸಂಖ್ಯೆ ಶೇಕಡಾ, ೫೦ ಇದ್ದರೂ, ಅದು ಹಿಂದೂಗಳಲ್ಲಿ

ಭೀತಿ ಹುಟ್ಟಿಸುವಷ್ಟು ದೊಡ್ಡದೇ. ಇದು ನಿಜವಾಗಿದ್ದಲ್ಲಿ, ಅದು ೧೮೫೭ರ ನಂತರ ಬ್ರಿಟಿಷ್ ಸರ್ಕಾರ ಅನುಸರಿಸಿದ ನೀತಿಯ ಉಲ್ಲಂಘನೆಯೇ.

ದಂಗೆಯ ನಂತರ ಬ್ರಿಟಿಷ್ ಸರ್ಕಾರ ಭಾರತೀಯ ಸೈನ್ಯ ಸಂಘಟನೆಯ ಬಗ್ಗೆ ವರದಿ ಮಾಡಲು ಎರಡು ವಿಚಾರಣಾ ಆಯೋಗಗಳನ್ನು ನೇಮಿಸಿತು. ಮೊದಲನೆಯ ವಿಚಾರಣೆಯನ್ನು ೧೮೫೯ರಲ್ಲಿ ಪೀಲ್ ಆಯೋಗ ನಡೆಸಿತು. ೧೮೭೯ರಲ್ಲಿ ಈಗಾಗಲೇ ಪ್ರಸ್ತಾಪಿಸಿದ ವಿಶೇಷ ಸೇನಾ ಸಮಿತಿಯನ್ನು ನೇಮಕ ಮಾಡಲಾಯಿತು.

ಪೀಲ್ ಆಯೋಗ ಮುಖ್ಯವಾಗಿ, ೧೮೫೭ರ ದಂಗೆಗೆ ಕಾರಣವಾದ ಬಂಗಾಳ ಸೈನ್ಯದ ಬಲಹೀನತೆಗಳ ಬಗ್ಗೆ ಗಮನ ಕೊಟ್ಟಿತು. ದಂಗೆಯೆದ್ದ ಬಂಗಾಳಿ ಸೈನ್ಯದ ಮುಖ್ಯ ಬಲಹೀನತೆಗಳ ಬಗ್ಗೆ ಒಬ್ಬರಾದ ಮೇಲೊಬ್ಬರು ಸಾಕ್ಷ್ಯ ನುಡಿದದ್ದು ಹೀಗೆ:

> **"ಸೈನಿಕರು ಮೇಲೆ ಬಿಟ್ಟರೆ ಅವಕಾಶ ಕೈತಪ್ಪಿ ಹೋಗುವುದೇನೋ ಎಂಬಂತೆ ಎಲ್ಲ ಭೇದಗಳನ್ನು ಟೊಂಕ ಕಟ್ಟಿದ್ದರು. ಅಲ್ಲಿ ವರ್ಗ, ಜನಾಂಗಗಳಿಗೆ ಅನುಸಾರವಾದ ಪ್ರತ್ಯೇಕತೆಯೇನೂ ಇರಲಿಲ್ಲ. ಸೈನಿಕ ಪಾಳೆಯದಲ್ಲಿ, ಹಿಂದೂಗಳು ಮತ್ತು ಮುಸ್ಲಿಮರು, ಸಿಖ್ಖರು ಮತ್ತು ಪೂರ್‌ಬಿಯಾಗಳೆಲ್ಲಾ ತಮ್ಮ ಜನಾಂಗೀಯ ಪೂರ್ವಗ್ರಹಗಳನ್ನು ಮರೆತು ಒಂದೇ ಭಾವಾತಿರೇಕಕ್ಕೆ ಒಳಗಾಗಿ ಸ್ಫೂರ್ತಿ ಪಡೆದಿದ್ದರು.[೧]"**

ಆದ್ದರಿಂದ ಭಾರತೀಯ ಸೈನ್ಯ ಸಂಘಟನೆಯ ಬಗ್ಗೆ ಹೇಳುತ್ತಾ ಸರ್ ಜಾನ್ ಲಾರೆನ್ಸ್ ಸರ್ಕಾರ ಈ ರೀತಿ ಎಚ್ಚರ ವಹಿಸಬೇಕೆಂದು ಸಲಹೆ ಮಾಡುತ್ತಾರೆ. "ಒಂದು ಪ್ರದೇಶದ ಮುಸ್ಲಿಂ, ಇನ್ನೊಂದು ಪ್ರದೇಶದ ಮುಸ್ಲಿಮನನ್ನು ದ್ವೇಷಿಸುವ, ಭಯದಿಂದ ನೋಡುವ ಸಾಧ್ಯತೆಯಿರುವವರೆಗೆ, ಪ್ರಾಂತೀಯ ಆಧಾರದ ಮೇಲೆ, ಪ್ರತ್ಯೇಕವಾದ ನೇಮಕಾತಿ ನೀತಿಯನ್ನು ಉಳಿಸಿಕೊಳ್ಳುವುದು ಅತಿಮುಖ್ಯ. ಸೈನ್ಯದ ಕೋರ್‌ಗಳ ನೇಮಕಾತಿ ಇನ್ನು ಮುಂದೆ ಪ್ರಾಂತೀಯ ಆಧಾರದ ಮೇಲೆ ಆಗಬೇಕು. ಪರಸ್ಪರ ದ್ವೇಷ-ಅಸೂಯೆಗಳಿರುವ ಭೌಗೋಳಿಕ ಪ್ರದೇಶಗಳಿಗೇ ಈ ನೇಮಕಾತಿಗಳನ್ನು ಮಿತಿಗೊಳಿಸಬೇಕು. ಹಿಂದೂ ಆಗಿರಲಿ, ಮುಸ್ಲಿಂ ಆಗಿರಲಿ, ಒಂದೇ ಪ್ರಾಂತ್ಯದ ವಿವಿಧ ಜನಾಂಗದವರನ್ನು ಒಂದು ರೆಜಿಮೆಂಟಿಗೆ ನೇಮಕ ಮಾಡಿಕೊಂಡು, ಈ ರೀತಿ ವಿವಿಧ ಪ್ರಾಂತೀಯ ರೆಜಿಮೆಂಟುಗಳನ್ನು ಸೃಷ್ಟಿಸಿದ ಮೇಲೆ ಅವನ್ನು ಹಾಗೆಯೇ ಉಳಿಸಿಕೊಳ್ಳೋಣ... ಹೀಗೆ ಮಾಡಿದರೆ ಎರಡು ಅಪಾಯಗಳನ್ನು ನಿವಾರಿಸಬಹುದು. ಒಂದು, ದೇಶೀ ಸೈನ್ಯದಲ್ಲಿ ಒಗ್ಗಟ್ಟು ಮೂಡುವುದನ್ನು ನಿವಾರಿಸಬಹುದು. ಎರಡು ಎಲ್ಲರೂ ಒಟ್ಟಾಗಿರುವುದರಿಂದ ಮತ್ತು ಇತರ ಪ್ರದೇಶಗಳಲ್ಲಿ ಸಂಚರಿಸುವುದರಿಂದ ಹುಟ್ಟಿ ಬೆಳೆಯಬಹುದಾದ ರಾಜಕೀಯ ಚಟುವಟಿಕೆ ಮತ್ತು ಸಂಚುಗಳನ್ನು ತಡೆಗಟ್ಟಬಹುದು."[೨]

---

೧. ಮ್ಯಾಕ್ ಮೂನ್ ಮತ್ತು ಲೋವೆಟ್ 'ದಿ ಆರ್ಮೀಸ್ ಆಫ್ ಇಂಡಿಯಾ' ಪುಟಗಳು ೮೫.೮೫ ಉದ್ಧೃತ ಚೌಧರಿಯವರ ಕೃತಿಯಲ್ಲಿ.

೨. ಚೌಧರಿಯವರು ತಮ್ಮ ಕೃತಿಯಲ್ಲಿ ಉದ್ಧೃತ ಮಾಡುವಂತೆ.

ಈ ಪ್ರಸ್ತಾವನೆಯನ್ನು ಪೀಲ್ ಆಯೋಗದ ಮುಂದೆ ಅನೇಕ ಸೇನಾಧಿಕಾರಿಗಳು ಬೆಂಬಲಿಸಿದರು ಮತ್ತು ಇದನ್ನು ಭಾರತೀಯ ಸೇನಾ ನೀತಿಯೆಂದು ಆಯೊಗವು ಶಿಫಾರಸು ಮಾಡಿತು. ಈ ತತ್ವವನ್ನು ವರ್ಗ ರಚನೆಯ ತತ್ವವೆಂದು ಪ್ರಸಿದ್ಧಿಪಡಿಸಲಾಯಿತು.

೧೮೭೯ರ ವಿಶೇಷ ಸೇನಾ ಸಮಿತಿಯು ಸ್ವಲ್ಪ ಭಿನ್ನವಾದ ಸಮಸ್ಯೆಯನ್ನು ಗಮನಿಸಿತು. ಸಮಸ್ಯೆಯೇನೆಂಬುದು ಸಮಿತಿಯು ಪ್ರಕಟಿಸಿದ ಪ್ರಶ್ನಾವಳಿಯಿಂದ ಸ್ಪಷ್ಟವಾಗುತ್ತದೆ. ಪ್ರಶ್ನಾವಳಿಯು ಈ ಕೆಳಕಂಡ ಪ್ರಶ್ನೆಯನ್ನು ಒಳಗೊಂಡಿದೆ:–

"ಭಾರತೀಯ ಸೇನೆಯು ದಕ್ಷ ಹಾಗೂ ಲಭ್ಯ ಮೀಸಲು ಸಾಮ್ರಾಜ್ಯದ ರಕ್ಷಣೆಗೆ ಅಗತ್ಯವೆಂದು ಪರಿಗಣಿಸಿದಲ್ಲಿ, ಅದು ಭಾರತದ ಅತೀ ಬಲಹೀನ ಹಾಗೂ ಕನಿಷ್ಠ ಹೋರಾಟದ ಜನಾಂಗಗಳಿಗಿಂತ ಹೆಚ್ಚಾಗಿ ಅತ್ಯುತ್ತಮ ಸೈನಿಕರನ್ನು ನೀಡುವ ದೇಶದ ಭಾಗಗಳಿಂದ ನೇಮಿಸಿ ಬಳಸಿಕೊಳ್ಳಬೇಡವೇ, ಅಲ್ಲದೆ ಯಾವುದೇ ಜನಾಂಗ ಅಥವಾ ಧಾರ್ಮಿಕ ಗುಂಪಿಗೆ ಅತೀ ಹೆಚ್ಚು ಪ್ರಾಬಲ್ಯ ಹಾಗೂ ಪ್ರಾಮುಖ್ಯತೆಯನ್ನು ನೀಡುವ ಅಗತ್ಯ ಬೀಳದೆ ಸಾಮ್ರಾಜ್ಯದ ಹಿತರಕ್ಷಣೆಯನ್ನಷ್ಟೇ ಗಮನಿಸಬೇಕೆ?"

ಈ ಪ್ರಶ್ನೆಯ ಮುಖ್ಯ ಭಾಗವು ಸಹಜವಾಗಿಯೇ "ಯಾವುದೇ ಪ್ರತ್ಯೇಕ ಜನಾಂಗ ಅಥವಾ ಧಾರ್ಮಿಕ ಗುಂಪಿಗೆ ಅತೀ ಹೆಚ್ಚಿನ ಪ್ರಾಬಲ್ಯ ಅಥವಾ ಪ್ರಾಮುಖ್ಯತೆಯನ್ನು ನೀಡದಿರುವುದು." ಈ ಪ್ರಶ್ನೆಯ ಬಗ್ಗೆ ಸಮಿತಿಯ ಮುಂದೆ ವ್ಯಕ್ತಪಡಿಸಲಾದ ಅಧಿಕೃತ ಅಭಿಪ್ರಾಯವು ಪ್ರತಿರೋಧವಾಗಿತ್ತು.

ಬಾಂಬೆ ಸೈನ್ಯದ ಮಹಾದಂಡನಾಯಕ, ಲೆಫ್ಟಿನೆಂಟ್ ಜನರಲ್, ಹೆಚ್.ಜೆ.ವಾರೆಸ್ ಹೀಗೆ ಹೇಳಿದರು:

> **"ಯಾವ ಪ್ರಾಂತ್ಯದ ಜನಾಂಗಕ್ಕೇ ಆಗಲಿ, ಧರ್ಮೀಯರಿಗೆ ಆಗಲಿ ನ್ಯಾಯ ಸಮ್ಮತವಲ್ಲದ ಪ್ರಾಬಲ್ಯ ಮತ್ತು ಅವಕಾಶ ಕೊಡದಂತೆ, ಉತ್ತಮ ಸೈನಿಕರನ್ನು ಕೊಡಬಲ್ಲವೆಂದು ಹೇಳಲಾದ ಪ್ರಾಂತ್ಯಗಳಿಂದ ಮಾತ್ರ ಭಾರತೀಯ ಸೈನ್ಯವನ್ನು ನೇಮಿಸಿಕೊಳ್ಳಲು ಸಾಧ್ಯವಿಲ್ಲ."**

ಮಹಾದಂಡನಾಯಕ ಸರ್ ಫ್ರೆಡರಿಕ್ ಪಿ.ಹೇನ್ಸ್‌ರ ಹೇಳಿಕೆ:–

> **"ಅಸಂಖ್ಯಾತ ಬಂಗಾಳದ ಸೈನ್ಯಕ್ಕಿಂತ, ಜನಾಂಗ, ಭಾಷೆ ಮತ್ತು ಆಸಕ್ತಿಗಳಲ್ಲಿ ಭಿನ್ನವಾಗಿರುವ ಈ ಸೈನ್ಯ (ಮದ್ರಾಸ್ ಮತ್ತು ಬಾಂಬೆ ಪ್ರಾಂತ್ಯಗಳ ಸೈನ್ಯಗಳನ್ನು), ಅದಕ್ಕೆ ಸಂವಾದಿಯಾಗಿಟ್ಟುಕೊಳ್ಳುವುದು ಬುದ್ಧಿವಂತಿಕೆ ಮತ್ತು ಅವಶ್ಯಕ ಕೂಡಾ. 'ದಕ್ಷ ಹೋರಾಟಗಾರರಿಂದ ಕೂಡಿದ ಸೈನ್ಯ ಸ್ಥಾಪನೆ' ಎಂದು ಹೇಳಲಾಗುವ ಕಾರಣಕ್ಕಾಗಿ ಆ ಪ್ರಾಂತ್ಯಗಳ (ಮದ್ರಾಸು ಮತ್ತು ಬಾಂಬೆ) ಸೈನ್ಯದ ಸಂಖ್ಯೆಯನ್ನು ಕಡಿಮೆ ಮಾಡುವುದನ್ನು ನಾನು ಒಪ್ಪುವುದಿಲ್ಲ. ಹಾಗೆ ಮಾಡಿ, ಈಗಿರುವ ವರ್ಗಗಳಿಂದಲೇ ನೇಮಕಾತಿ ಮಾಡಿಕೊಂಡು ಅವರಿಗೆ ಬಂಗಾಳಿ ಸೈನ್ಯದಿಂದಲೇ ತರಬೇತಿ ಕೊಡಿಸುವುದು, ನನ್ನ ದೃಷ್ಟಿಯಲ್ಲಿ ಯೋಚಿಸಲೂ ಆಗದಂತಹ ಮಹಾಬುದ್ಧಿಗೇಡಿ ಕೆಲಸ."**

ಪಂಜಾಬಿನ ಲೆಫ್ಟಿನೆಂಟ್ ಗವರ್ನರರೂ ಇದೇ ಅಭಿಪ್ರಾಯ ವ್ಯಕ್ತಪಡಿಸಿದರು. "ಇಡೀ ಸೈನ್ಯವನ್ನೂ ಒಂದೇ ಪ್ರದೇಶದಿಂದ ಆಯ್ಕೆ ಮಾಡಿಕೊಳ್ಳುವುದಕ್ಕೆ ನನ್ನ ವಿರೋಧವಿದೆ" ಎಂದೇ ಆತ ಘೋಷಿಸಿದರು. ಮುಂದುವರಿದು "ಒಂದೇ ರಾಷ್ಟ್ರೀಯತೆಯ ಪ್ರಾಬಲ್ಯ ಬೆಳೆಯದಂತೆ ತಡೆಯುವುದು ರಾಜಕೀಯ ಕಾರಣಗಳಿಗಾಗಿ ಅತ್ಯವಶ್ಯಕ" ಎಂದೂ ಅವರು ಹೇಳಿದರು.

ವಿಶೇಷ ಸಮಿತಿ ಈ ಅಭಿಪ್ರಾಯವನ್ನು ಅನುಮೋದಿಸಿ, ಭಾರತೀಯ ಸೈನ್ಯದಲ್ಲಿ ಯಾವ ಪ್ರದೇಶವಾಗಲಿ ಅಥವಾ ಕೋಮು ಆಗಲಿ ಹೆಚ್ಚು ಪ್ರಾಬಲ್ಯ ಪಡೆಯದ ಹಾಗೆ ಎಚ್ಚರ ವಹಿಸಬೇಕೆಂದು ಶಿಫಾರಸು ಮಾಡಿತು.

ಇದೇ ಭಾರತೀಯ ಸೈನ್ಯ ನೀತಿಯ ಎರಡು ಮುಖ್ಯ ತತ್ವಗಳಾಗಿ ಉಳಿದವು. ೧೮೭೯ರ ವಿಶೇಷ ಸೈನ್ಯ ಸಮಿತಿಯ ಶಿಫಾರಸಿನಂತೆ ಸೈನ್ಯದಲ್ಲಿ ತರಲಾದ ಬದಲಾವಣೆಗಳು, ಕ್ರಾಂತಿಕಾರಿ ಸ್ವರೂಪದವು. ಈ ಕ್ರಾಂತಿಯಾದದ್ದು ಹೇಗೆ ಎನ್ನುವ ವಿವರ ಮಾತ್ರ ತಿಳಿಯಲು ಸಾಧ್ಯವಿಲ್ಲ. ಈ ಕ್ರಾಂತಿ ಆ ವೇಳೆಗಾಗಲೇ ರೂಢಿಯಲ್ಲಿದ್ದ ನೀತಿಯ ವಿರುದ್ಧವಾಗಿತ್ತು. ಭಾರತೀಯ ಸೈನ್ಯದಲ್ಲಿ ವಾಯುವ್ಯ ಪ್ರಾಂತ್ಯದ ಪ್ರಾಬಲ್ಯ ಬೆಳೆಯುತ್ತಿರುವುದನ್ನು ಕಂಡು ಹೆದರಿ ಅದನ್ನು ತಡೆಯಲೆಂದು ಈ ನೀತಿಯನ್ನು ಸೂಚಿಸಲಾಯಿತು. ಈ ನೀತಿಯನ್ನು ಮಾರ್ಗದರ್ಶಕವೆಂದು ಸಲಹೆ ಮಾಡಿದ್ದೇ ಅಲ್ಲ, ಅದನ್ನೇ ಕಟ್ಟುನಿಟ್ಟಾಗಿ ಜಾರಿ ಮಾಡಲಾಯಿತು. ತನಗೆ ಪ್ರಿಯರಾಗಿದ್ದ ಉತ್ತರ ವಾಯುವ್ಯ ಪ್ರಾಂತ್ಯದ ಜನರ ನೇಮಕಾತಿಯ ಮೇಲೆ ನಿರ್ಬಂಧ ವಿಧಿಸಿದ್ದ ಈ ಸಲಹೆಗೆ ಅಂದಿನ ಸೇನಾ ಮಹಾದಂಡ ನಾಯಕ ರಾಬರ್ಟ್ಸ್‌ರ ವಿರೋಧವಿದ್ದರೂ ಅವರು ಅದನ್ನು ಒಪ್ಪಬೇಕಾಯಿತು. ಮದ್ರಾಸಿಗಳು ಇದ್ದ ಹದಿನೈದು ರೆಜಿಮೆಂಟುಗಳನ್ನು ಪಂಜಾಬಿ ರೆಜಿಮೆಂಟುಗಳನ್ನಾಗಿ ಪರಿವರ್ತಿಸಬೇಕಾಗಿ ಬಂದ ಲಾರ್ಡ್ ಕಿಚನರ್, ೧೯೦೩ರಲ್ಲಿ ಈ ಸಿಖ್ಖರ ಮತ್ತು ಪಂಜಾಬಿ ಮುಸ್ಲಿಮರ ಪ್ರಾಬಲ್ಯವನ್ನು ಸರಿಪಡಿಸಲೆಂದೇ ಅವುಗಳಲ್ಲಿ ಗೂರ್ಖಾಗಳು ಮತ್ತು ಪಠಾಣರ ಸಂಖ್ಯೆಯನ್ನು ಹೆಚ್ಚಿಸಿದರು. ಕಿಚನರ್ ಅವರ ಜೀವನಚರಿತ್ರೆಯನ್ನು ಬರೆದ ಸರ್ ಜಾರ್ಜ್ ಆರ್ಥರ್ ಹೇಳುತ್ತಾರೆ:–

> **"ದಂಗೆಯಿಂದ ಪಾಠ ಕಲಿತಿದ್ದ ಸರ್ಕಾರಕ್ಕೆ, ಭಾರತೀಯ ಸೈನ್ಯದಲ್ಲಿ ಯಾವುದೇ ಒಂದು ಪ್ರಾಂತ್ಯ ಅಥವಾ ಕೋಮಿನ ಅನಗತ್ಯ ಪ್ರಭಾವದಿಂದಾಗುವ ಅಪಾಯದ ಅರಿವಿತ್ತು. ಗಡಿನಾಡು ಪಡೆಗಳಲ್ಲಿ ಪಂಜಾಬಿ ಕಾಲ್ದಳದ ಪ್ರಭಾವ ಹೆಚ್ಚಾದಾಗ ಅದರ ಪ್ರಭಾವವನ್ನು ತಡೆಗಟ್ಟಲು, ಗೂರ್ಖಾಗಳ ಮತ್ತು ಗಡಿ ಪ್ರದೇಶದವರೇ ಆದ ಪಠಾಣರ ಸಂಖ್ಯೆಯನ್ನು ಹೆಚ್ಚಿಸಲಾಗುತ್ತಿತ್ತು."**

ಅಷ್ಟೊಂದು ಅವಿರೋಧವಾಗಿ ಒಪ್ಪಿತವಾಗಿ ಜಾರಿಗೆ ತಂದ ಈ ನೀತಿಯನ್ನು ಮಹಾಯುದ್ಧದ ನಂತರ ಹೇಳದೆ, ಕೇಳದೆ ಗುಪ್ತವಾಗಿ ಗಾಳಿಗೆ ತೂರಿದ್ದು ಯಾಕೆಂದು ನಿಜವಾಗಿಯೂ ಅರ್ಥವಾಗುತ್ತಿಲ್ಲ. ಭಾರತೀಯ ಸೈನ್ಯದಲ್ಲಿ ಮುಸ್ಲಿಮರ ಪ್ರಾಬಲ್ಯ ವಿಪರೀತ ಹೆಚ್ಚಲು ಬ್ರಿಟಿಷ್ ಸರ್ಕಾರ ಅವಕಾಶ ನೀಡಿದ್ದಾದರೂ ಯಾಕೆ? ಇದಕ್ಕೆ ಎರಡು ವಿವರಣೆಗಳು ಸಾಧ್ಯ. ಒಂದು ಮಹಾಯುದ್ಧದಲ್ಲಿ, ಹಿಂದೂಗಳಿಗಿಂತ ಕೆಚ್ಚಿನಿಂದ ಹೋರಾಡಿ ತಾವು ಶ್ರೇಷ್ಠರೆಂದು ಸಾಬೀತುಪಡಿಸಿರಬೇಕು. ಎರಡು, ಹಿಂದೂಗಳು ಬ್ರಿಟಿಷರಿಂದ ರಾಜಕೀಯ ಅಧಿಕಾರದ ಹಸ್ತಾಂತರ ಬಯಸಿ ಚಳವಳಿ ಮಾಡುತ್ತಿರುವುದರಿಂದ ಅದನ್ನು ದಮನ ಮಾಡಲು ಈ ಹಳೆ ನೀತಿಯನ್ನು ಕೈಬಿಟ್ಟು ಸೈನ್ಯದಲ್ಲಿ ಮುಸ್ಲಿಮರ ಪ್ರಾಬಲ್ಯ ಹೆಚ್ಚಿಸಿರಬೇಕು.

ಈ ವಿವರಣೆ ಏನಾದರೂ ಇರಲಿ, ಮೇಲಿನ ಚರ್ಚೆಯಿಂದ ಎರಡು ವಿಷಯಗಳು ಎದ್ದು ಕಾಣುತ್ತವೆ. ಒಂದು, ಈಗ ಭಾರತೀಯ ಸೈನ್ಯ ತನ್ನಲ್ಲಿ ಹೆಚ್ಚಾಗಿ ಮುಸ್ಲಿಮರನ್ನು ಒಳಗೊಂಡಿದೆ. ಇನ್ನೊಂದು ಈ ಮುಸ್ಲಿಮರನ್ನು ಬಹುತೇಕ ಪಂಜಾಬ್ ಮತ್ತು ಉತ್ತರ ವಾಯುವ್ಯ ಪ್ರಾಂತ್ಯಗಳಿಂದ ನೇಮಕ ಮಾಡಿಕೊಳ್ಳಲಾಗಿದೆ. ಇದರ ಅರ್ಥವೇನೆಂದರೆ, ಭಾರತ ಪರಕೀಯ ಧಾಳಿಗೆ ತುತ್ತಾದಾಗ ಅದರ ರಕ್ಷಣೆಯ ಹೊಣೆಯನ್ನು ಹೊರಬೇಕಾದವರು ಮುಸ್ಲಿಮರು. ಬ್ರಿಟಿಷ್ ಸರ್ಕಾರ, ತನ್ನದೇ ಕಾರಣಗಳಿಗಾಗಿ ಕೊಟ್ಟಿರುವ ಈ ಸ್ಥಾನದ ಬಗ್ಗೆ ಪಂಜಾಬ್ ಮತ್ತು ಉತ್ತರ ವಾಯುವ್ಯ ಪ್ರಾಂತ್ಯದ ಮುಸ್ಲಿಮರಿಗೆ ಹೆಮ್ಮೆಯಿದೆ ಮತ್ತು ಈ ಬಗ್ಗೆ

ಅವರಿಗೆ ಸ್ಪಷ್ಟ ತಿಳಿವಳಿಕೆಯೂ ಇದೆ. ಏಕೆಂದರೆ ಈ ಜನ ತಾವೇ ಭಾರತದ 'ರಕ್ಷಕರು' (ದ್ವಾರಪಾಲಕರು) ಎಂದು ಆಗಾಗ ಬೀಗುವುದನ್ನು ಕೇಳಬಹುದು. ಹಿಂದೂಗಳು ಭಾರತದ ರಕ್ಷಣೆಯನ್ನು ಈ ಮುಖ್ಯ ಅಂಶದ ಹಿನ್ನೆಲೆಯಲ್ಲೇ ಪರಿಗಣಿಸಬೇಕು. ಭಾರತದ ರಕ್ಷಣೆ ಮತ್ತು ಸ್ವಾತಂತ್ರ್ಯಗಳ ವಿಷಯದಲ್ಲಿ ಹಿಂದೂಗಳು ಎಷ್ಟರಮಟ್ಟಿಗೆ ಈ 'ದ್ವಾರಪಾಲಕ'ರನ್ನು ಅವಲಂಬಿಸಬಹುದು? ಈ ದ್ವಾರಗಳನ್ನು ಒಡೆಯಲು ಬರುವವರ ಮೇಲೆ ಈ ಪ್ರಶ್ನೆಯ ಉತ್ತರವೂ ಅವಲಂಬಿತವಾಗಿದೆ. ಉತ್ತರ ವಾಯುವ್ಯ ದಿಕ್ಕಿನಲ್ಲಿ ಭಾರತದ ಗಡಿಗೆ ಹೊಂದಿಕೊಂಡಿರುವ ರಷ್ಯಾ ಅಥವಾ ಆಫ್ಘಾನಿಸ್ತಾನಗಳು ಈ ಬಾಗಿಲನ್ನು ಒಡೆಯಲು ಬರುವ ವಿದೇಶೀ ಶಕ್ತಿಗಳೆಂದು ಸುಲಭವಾಗಿ ಹೇಳಬಹುದು. ಇದರಲ್ಲಿ ಯಾವ ದೇಶ, ಯಾವಾಗ ಭಾರತದ ಮೇಲೆ ಆಕ್ರಮಣವನ್ನು ಮಾಡಬಹುದೆಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ರಷ್ಯಾದಿಂದಲೇ ಆಕ್ರಮಣ ನಡೆದರೆ, ಈ ದ್ವಾರಪಾಲಕರು, ಖಂಡಿತವಾಗಿಯೂ ಕಿಚ್ಚು ಮತ್ತು ನಿಷ್ಠೆಯಿಂದ ಹೋರಾಡಿ, ಆಕ್ರಮಣಕಾರರನ್ನು ತಡೆಯಬಲ್ಲರೆಂದು ಆಶಿಸಬಹುದು. ಆದರೆ ಆಫ್ಘನರು ಒಂಟಿಯಾಗಿ, ಅಥವಾ ಇತರ ಮುಸ್ಲಿಂ ದೇಶಗಳ ಜೊತೆಗೂಡಿ ಭಾರತದ ಮೇಲೆ ಆಕ್ರಮಣ ನಡೆಸಿದರೆ, ಈ ರಕ್ಷಕರು ಅವರನ್ನು ತಡೆಯಬಲ್ಲರೇ ಅಥವಾ ಭಾರತದ ಬಾಗಿಲನ್ನು ತೆರೆದು ಅವರು ಒಳಗೆ ಬಿಡುವರೇ? ಈ ಪ್ರಶ್ನೆಯನ್ನು ಯಾವ ಹಿಂದುವೂ ಕಡೆಗಣಿಸಲು ಸಾಧ್ಯವಿಲ್ಲ. ಇದು ಎಂಥಾ ಪ್ರಮುಖ ಪ್ರಶ್ನೆಯೆಂದರೆ, ಹಿಂದೂ ಆದ ಪ್ರತಿಯೊಬ್ಬನಿಗೂ ಅದರ ಬಗ್ಗೆ ಪೂರ್ಣ ವಿಶ್ವಾಸವಿರಬೇಕು.

ಆಫ್ಘಾನಿಸ್ತಾನ ಎಂದೂ ಭಾರತದ ಮೇಲೆ ಆಕ್ರಮಣ ಮಾಡಲಾರದೆಂದು ಹೇಳಬಹುದು. ಆದರೆ, ಒಂದು ತತ್ವದ ಪರೀಕ್ಷೆಯಾಗುವುದು ಅದು ತುಂಬಾ ಸಮಸ್ಯೆ(ಜ್ವಲಂತ)ಯೊಂದನ್ನು ಹೇಗೆ ನಿಭಾಯಿಸುತ್ತದೆ ಎನ್ನುವುದರ ಮೇಲೆ. ಆಫ್ಘನರು ಭಾರತದ ಮೇಲೆ ಆಕ್ರಮಣ ಮಾಡಿದಾಗ, ಈ ಪಂಜಾಬಿ ಮತ್ತು ಉತ್ತರ ವಾಯುವ್ಯ ಪ್ರಾಂತ್ಯದ ಮುಸ್ಲಿಮರಿಂದ ತುಂಬಿದ ಸೈನ್ಯ ಹೇಗೆ ನಡೆದುಕೊಳ್ಳುತ್ತದೆ ಎನ್ನುವುದರ ಮೇಲೆ, ಆ ಸೈನ್ಯದ ವಿಧೇಯತೆಯನ್ನು ಪರೀಕ್ಷಿಸಬಹುದು. ಒಟ್ಟಾರೆ ರಕ್ಷಣೆಯ ಪ್ರಶ್ನೆ ಬಂದಾಗ ಈ ಸೈನ್ಯ ತನ್ನ ಜನ್ಮಭೂಮಿಯ ಕರೆಗೆ ಓಗೊಡುತ್ತದೋ ಅಥವಾ ತನ್ನ ಧರ್ಮದ ಕರೆಗೆ ಓಗೊಡುತ್ತದೋ ಎನ್ನುವುದು ಬಹಳ ಮುಖ್ಯ. ಭಾರತ ಬ್ರಿಟಿಷರ ಶ್ರೀರಕ್ಷೆಯಲ್ಲಿರುವವರೆಗೂ ವಿದೇಶೀ ಆಕ್ರಮಣದ ಬಗ್ಗೆ ಮತ್ತು ಈ ಇರುಸು ಮುರುಸು ಉಂಟುಮಾಡಬಲ್ಲ ಪ್ರಶ್ನೆಗಳ ಬಗ್ಗೆ ತಲೆಕೆಡಿಸಿಕೊಳ್ಳುವುದು ಬೇಡವೆಂದು ಸುಮ್ಮನಿರುವುದು ಸರಿಯಲ್ಲ. ಹಾಗೆ ಮಾಡುವುದು ಅಕ್ಷಮ್ಯ. ಕಳೆದ ಮಹಾಯುದ್ಧದಲ್ಲಿ ಬ್ರಿಟನ್ ಕೂಡಾ ಕೆಲವು ಸಂದರ್ಭಗಳಲ್ಲಿ ಭಾರತವನ್ನು ರಕ್ಷಿಸಲು ಸಾಧ್ಯವಿಲ್ಲವೆಂದು ತೋರಿಸಿಕೊಟ್ಟಿದೆ. ಅದೂ ಇಂಥ ಸಂದರ್ಭಗಳಲ್ಲೇ ಭಾರತಕ್ಕೆ ಹೆಚ್ಚು ರಕ್ಷಣೆ ಬೇಕಾಗಿರುತ್ತದೆ. ಎರಡನೆಯದಾಗಿ, ಯಾವುದೇ ಒಂದು ಸಂಸ್ಥೆಯ ದಕ್ಷತೆಯನ್ನು ಒರೆಗೆ ಹಚ್ಚುವುದು ಸಹಜ ಸ್ಥಿತಿಯಲ್ಲೇ, ಅಸಹಜ ಸ್ಥಿತಿಯಲ್ಲಲ್ಲ. ಬ್ರಿಟಿಷ್ ಆಳ್ವಿಕೆಯಲ್ಲಿರುವ ಭಾರತೀಯ ಸೈನಿಕನ ನಡತೆ ಕೃತ್ರಿಮವಾದದ್ದು. ಆತ ಭಾರತದ ಆಳ್ವಿಕೆಯಲ್ಲಿದ್ದಾಗಿನ ನಡತೆಯೇ ಸಹಜವಾದದ್ದು. ಅವನ ಸಹಜ ನಡವಳಿಕೆಗೆ ಮತ್ತು ಸಹಾನುಭೂತಿಗೆ ಬ್ರಿಟಿಷ್ ಆಡಳಿತದಲ್ಲಿ ಅವಕಾಶವಿಲ್ಲ. ಆದ್ದರಿಂದಲೇ ಭಾರತೀಯ ಸೈನಿಕರು ಶಿಸ್ತಿನಿಂದಿರುತ್ತಾರೆ. ಆದರೆ ಅದು ಸಹಜ ನಡವಳಿಕೆಯಾಗಿರದೆ ಕೃತ್ರಿಮವಾಗಿದೆ. ಬ್ರಿಟಿಷ್ ಆಳ್ವಿಕೆಯಲ್ಲಿ, ಸೈನ್ಯ ಶಿಸ್ತಿನಿಂದಿದೆ ಎಂದ ಮಾತ್ರಕ್ಕೆ ಭಾರತದ ಆಳ್ವಿಕೆಯಲ್ಲೂ ಅದು ಹಾಗೇ ಇರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಬ್ರಿಟಿಷ್ ಆಳ್ವಿಕೆ ಕೊನೆಗೊಂಡ ನಂತರವೂ, ಆ ಸೈನ್ಯ ಶಿಸ್ತಿನಿಂದಲೇ ಇರುತ್ತದೆ ಎಂದು ಹಿಂದೂ ಒಬ್ಬನಿಗೆ ತೃಪ್ತಿಯಿರಬೇಕು. ಪಂಜಾಬಿ ಮತ್ತು ಉತ್ತರ ವಾಯುವ್ಯ ಪ್ರಾಂತ್ಯದ ಮುಸ್ಲಿಮರಿಂದ ಕೂಡಿದ ಈ ಸೈನ್ಯ, ಆಫ್ಘಾನಿಸ್ತಾನ ಭಾರತದ ಮೇಲೆ ಆಕ್ರಮಣ ನಡೆಸಿದಾಗ ಹೇಗೆ

ನಡೆದುಕೊಳ್ಳುತ್ತದೆ ಎನ್ನುವ ಪ್ರಶ್ನೆ, ಅದು ಎಷ್ಟೇ ಅಪ್ರಿಯವಾಗಿರಲಿ, ಅದು ಬಹಳ ಮುಖ್ಯ ಮತ್ತು ಎದುರಿಸಲೇ ಬೇಕಾದದ್ದು.

ಕೆಲವರು– ಸೈನ್ಯದಲ್ಲಿನ ಮುಸ್ಲಿಮರ ಪ್ರಾಬಲ್ಯ ಗಮನಾರ್ಹವಾಗಿದೆ. ಅದನ್ನು ಬದಲಾಯಿಸಲು ಸಾಧ್ಯವಿಲ್ಲವೆಂದು ಯಾಕೆ ತಿಳಿಯಬೇಕು? ಎಂದು ಕೇಳಬಹುದು. ಅದನ್ನು ಬದಲಾಯಿಸಲು ಸಾಧ್ಯವಿದೆ ಎನ್ನುವವರು ಹಾಗೆ ಮಾಡಲು ಸ್ವಾಗತವಿದೆ. ಆದರೆ, ಅದು ಸಾಧ್ಯವಿಲ್ಲವೆನಿಸುತ್ತದೆ. ಬದಲಾಗಿ, ಮುಸ್ಲಿಂ ಅಲ್ಪಸಂಖ್ಯಾತರ ರಕ್ಷಣೆಗಾಗಿ ಎಂದು, ಸಂವಿಧಾನಕ್ಕೆ ತಿದ್ದುಪಡಿ ತಂದಾಗ, ಸೈನ್ಯದಲ್ಲಿನ ಮುಸ್ಲಿಮರ ಪ್ರಾಬಲ್ಯವನ್ನು ಅದರ (ಸಂವಿಧಾನದ) ಒಂದು ಭಾಗವನ್ನಾಗಿ ಮಾಡಿದರೆ ನನಗೆ ಆಶ್ಚರ್ಯವಾಗಲಾರದು. ಮುಸ್ಲಿಮರು ಈ ಬೇಡಿಕೆಯನ್ನು ಮಂಡಿಸಿಯೇ ತೀರುತ್ತಾರೆ ಮತ್ತು ಎಂದಿನಂತೆ ಹಿಂದೂಗಳ ವಿರುದ್ಧ ಅವರು ಹೇಗೋ ಸಫಲರಾಗುತ್ತಾರೆ. ಆದ್ದರಿಂದ ಭಾರತೀಯ ಸೈನ್ಯದ ಸ್ವರೂಪ ಹಾಗೆಯೇ ಉಳಿಯುತ್ತದೆ ಎನ್ನುವ ಗ್ರಹಿಕೆಯೊಡನೆ ನಾವು ಮುಂದುವರಿಯಬೇಕು. ಹೀಗೆ ಮುಂದುವರಿದಾಗ, ಹಾಗೆಯೇ ಉಳಿಯುವ ಪ್ರಶ್ನೆ ಎಂದರೆ: ಆಫ್ಘಾನಿಸ್ತಾನದ ಆಕ್ರಮಣದ ಎದುರಿಗೆ, ಭಾರತದ ರಕ್ಷಣೆಗಾಗಿ ಹಿಂದೂಗಳು ಈ ಸೈನ್ಯವನ್ನು ನೆಚ್ಚಿ ಕೂರಬಹುದೇ? ಭಾರತೀಯ ರಾಷ್ಟ್ರೀಯವಾದಿಗಳೆನಿಸಿಕೊಳ್ಳುವವರು ಮಾತ್ರ ಈ ಪ್ರಶ್ನೆಗೆ 'ಹೌದು' ಎಂದು ಉತ್ತರಿಸಬಹುದು. ವಾಸ್ತವವಾದಿಗಳಾದ ಧೈರ್ಯಸ್ಥರು, ಈ ಪ್ರಶ್ನೆಗೆ ಉತ್ತರ ಕೊಡುವ ಮುನ್ನ ನಿಂತು ಯೋಚಿಸಲೇಬೇಕು. ಮುಸ್ಲಿಮರು, ಹಿಂದೂಗಳನ್ನು ರಕ್ಷಿಸಬೇಕಾದ ಅಗತ್ಯವಿಲ್ಲದ, ಆದರೆ ನಿರ್ನಾಮ ಮಾಡಬೇಕಾದ 'ಕಾಫಿರ'ರೆಂದು ಭಾವಿಸುತ್ತಾರೆ. ಈ ಸಂಗತಿಯನ್ನು ವಾಸ್ತವವಾದಿಗಳು ಅರಿತಿರಬೇಕು. ಆತ್ತ ಮತ್ತೊಂದನ್ನೂ ನೆನಪಿಡಬೇಕು. ಮುಸ್ಲಿಮರು ಯೂರೋಪಿನವರನ್ನು ಉತ್ತಮರೆಂದು ಪರಿಗಣಿಸಿದರೆ ಹಿಂದೂಗಳನ್ನು ಕೀಳೆಂದು ಭಾವಿಸುತ್ತಾರೆ. ಮುಸ್ಲಿಂ ಸೈನಿಕರು, ಹಿಂದೂ ಅಧಿಕಾರಿಗಳ ಅಧಿಕಾರವನ್ನು ಒಪ್ಪಿಕೊಳ್ಳುವುದೇ ಸಂಶಯಾತ್ಮಕ. ವಾಸ್ತವವಾದಿಯೊಬ್ಬ ಇನ್ನೊಂದು ವಿಷಯವನ್ನು ಗಮನಿಸಬೇಕು. ಮುಸಲ್ಮಾನರಲ್ಲೆಲ್ಲಾ ಉತ್ತರ ವಾಯುವ್ಯ ಪ್ರಾಂತ್ಯದ ಮುಸ್ಲಿಮನು ಮಹಾ ಹಿಂದೂ ವಿರೋಧಿ ಮತ್ತು ಇಸ್ಲಾಂ ಧರ್ಮದ ಪರವಾದ ಪ್ರಚಾರಕ್ಕೆ ಸುಲಭವಾಗಿ ಮರುಳಾಗುವವನು. ಇವೆಲ್ಲಾ ವಿವರಗಳ ಹಿನ್ನೆಲೆಯಲ್ಲಿ, ಭಾರತೀಯ ಸೈನ್ಯದಲ್ಲಿರುವ ಮುಸ್ಲಿಮರು, ಮುಸ್ಲಿಂ ರಾಷ್ಟ್ರವೊಂದು, ಭಾರತದ ಮೇಲೆ ದಂಡೆತ್ತಿ ಬಂದಾಗ ಎದುರಾಳಿಯ ಜೊತೆ ಸೇರದೆ, ಭಾರತಕ್ಕೆ ವಿಧೇಯರಾಗಿಯೇ ಉಳಿಯುತ್ತಾರೆ ಎಂದು ಹೇಳುವ ಹಿಂದೂ ಮಹಾಧೈರ್ಯಶಾಲಿಯೇ ಸರಿ. ೧೮೯೯ರಲ್ಲಿ ಈ ಬಗ್ಗೆ ಬರೆಯುತ್ತಾ ಥಿಯೋಡರ್ ಮಾರಿಸನ್ನ*ರು ಹೇಳುತ್ತಾರೆ:

> **"ಸ್ವತಂತ್ರ ಭಾರತ ಸರ್ಕಾರದ ಸ್ಥಾಪನೆ ತಡೆಯಲು, ಮುಸ್ಲಿಮರು (ಭಾರತೀಯರಲ್ಲೆಲ್ಲಾ ಮಹಾ ಉದ್ದೀಪಕ ಮತ್ತು ಕೋಪೋದ್ರಿಕ) ತಳೆದ ಅಭಿಪ್ರಾಯ ಒಂದೇ ಸಾಕು. ಸ್ವಾಯತ್ತ ಭಾರತದ ಮೇಲೆ, ಆಫ್ಘನರೇನಾದರೂ ಆಕ್ರಮಣ ನಡೆಸಿದರೆ, ಮುಸ್ಲಿಮರು, ಸಿಖ್ಖರ ಮತ್ತು ಹಿಂದೂಗಳ ಜೊತೆಸೇರಿ, ಈ ಆಕ್ರಮಣವನ್ನು ಎದುರಿಸುವುದರ ಬದಲು, ತಮ್ಮ ಧರ್ಮ ಮತ್ತು ರಕ್ತ ಸಂಬಂಧಗಳ ಸೆಳೆತಕ್ಕೆ ಸಿಕ್ಕಿ ಆಫ್ಘನರನ್ನೇ ಸೇರುತ್ತಾರೆ."**

೧೯೧೯ರಲ್ಲಿ, ಖಿಲಾಫತ್ ಚಳವಳಿ ನಡೆಸುತ್ತಿದ್ದ ಭಾರತೀಯ ಮುಸಲ್ಮಾನರು, ಭಾರತವನ್ನು ಆಕ್ರಮಿಸುವಂತೆ ಆಫ್ಘನಿಸ್ತಾನದ ಅಮೀರನನ್ನು ಆಹ್ವಾನಿಸುವ ಮಟ್ಟಕ್ಕೆ ಹೋಗಿದ್ದರೆನ್ನುವುದನ್ನು ನೆನಪು

---

* ಇಂಪೀರಿಯಲ್ ರೂಲ್ ಇನ್ ಇಂಡಿಯಾ, ಪು.೫

ಮಾಡಿಕೊಂಡಾಗ, ಥಿಯೇಡರ್ ಮಾರಿಸನ್ನನ ಅಭಿಪ್ರಾಯ ಕೇವಲ ಊಹಾಪೋಹವಾಗಿ ಉಳಿಯದೆ, ಹೆಚ್ಚು ಪ್ರಬಲವಾಗುತ್ತದೆ.

ಹಿಂದೂಗಳು ಕೇಳಬೇಕಾಗಿರುವುದು ಪಂಜಾಬ್ ಮತ್ತು ಉತ್ತರ ವಾಯುವ್ಯ ಪ್ರಾಂತ್ಯಗಳಿಂದ ಕೂಡಿದ ಈ ಸೈನ್ಯ ಆಫ್ಘನಿಸ್ತಾನ ಭಾರತದ ಮೇಲೆ ಆಕ್ರಮಣ ನಡೆಸಿದಾಗ ಹೇಗೆ ನಡೆದುಕೊಳ್ಳುತ್ತದೆ ಎನ್ನುವ ಪ್ರಶ್ನೆಯೊಂದನ್ನೇ ಅಲ್ಲ. ಅವರು ಯೋಚಿಸಬೇಕಾದ ಇನ್ನೊಂದು ಮುಖ್ಯ ಪ್ರಶ್ನೆಯೂ ಇದೆ. ಆ ಸೈನ್ಯದ ವಿಧೇಯತೆ ಎಂಥದೇ ಇರಲಿ, ಆಫ್ಘಾನರು ಭಾರತದ ಮೇಲೆ ಆಕ್ರಮಣವೆಸಗಿದಾಗ, ಭಾರತೀಯ ಸರ್ಕಾರ, ಅದನ್ನು ಮುಕ್ತವಾಗಿ ಬಳಸಿಕೊಳ್ಳಲು ಸಾಧ್ಯವೇ? ಇದೇ ಆ ಪ್ರಶ್ನೆ, ಈ ವಿಷಯದಲ್ಲಿ ಮುಸ್ಲಿಂ ಲೀಗ್ ತಳೆದ ನಿಲುವಿನತ್ತ ಗಮನ ಹರಿಸಬೇಕು. ಭಾರತೀಯ ಸೈನ್ಯವನ್ನು ಮುಸ್ಲಿಂ ದೇಶಗಳ ವಿರುದ್ಧ ಬಳಸಿಕೊಳ್ಳಬಾರದೆನ್ನುವುದೇ ಆ ನಿಲುವು. ಇದರಲ್ಲಿ ಹೊಸತೇನೂ ಇಲ್ಲ. ಮುಸ್ಲಿಂ ಲೀಗ್‌ಗಿಂತ ಬಹಳ ಮುಂಚೆಯೇ ಖಿಲಾಫತ್ ಸಮಿತಿ ಈ ತತ್ವವನ್ನು ಮುಂದುಮಾಡಿತ್ತು. ಇದು ಹಾಗಿರಲಿ, ಭಾರತೀಯ ಮುಸ್ಲಿಮರು ಎಲ್ಲಿಯವರೆಗೆ ಈ ತತ್ವಕ್ಕೆ ಬದ್ಧರಾಗಿರುತ್ತಾರೆ. ಈ ವಿಷಯದಲ್ಲಿ ಬ್ರಿಟಿಷ್ ಸರ್ಕಾರದ ವಿರುದ್ಧ ಮುಸ್ಲಿಂ ಲೀಗ್ ಸಫಲವಾಗಿಲ್ಲವಾದ್ದರಿಂದ, ಭಾರತೀಯ ಸರ್ಕಾರದ ವಿರುದ್ಧವೂ ಅದು ಸಫಲವಾಗದೆಂದೇನೂ ಅರ್ಥವಲ್ಲ. ಅದು ಸಫಲವಾಗುವ ಸಾಧ್ಯತೆಯಿದೆ. ಏಕೆಂದರೆ, ಹಿಂದೂಗಳ ದೃಷ್ಟಿಯಿಂದ, ಅದು ಎಷ್ಟೇ ದೇಶದ್ರೋಹಿ ತತ್ವವಾಗಿರಲಿ, ಅದು ಮುಸ್ಲಿಂ ಭಾವನೆಗಳಿಗೆ ಒಪ್ಪಿಗೆಯಾಗುತ್ತದೆ. ಇದರಿಂದ ಆ ತತ್ವವನ್ನು ಪ್ರತಿಪಾದಿಸಲು ಭಾರತೀಯ ಮುಸ್ಲಿಮರ ಬೆಂಬಲವನ್ನು ಮುಸ್ಲಿಂ ಲೀಗ್ ಪಡೆದಂತೆ ಆಗುತ್ತದೆ. ಸೈನ್ಯವನ್ನು ಬಳಸಿಕೊಳ್ಳುವ ಭಾರತದ ಹಕ್ಕಿನ ಮೇಲೆ, ಈ ಮಿತಿಯನ್ನು ಹೇರುವುದರಲ್ಲಿ ಮುಸ್ಲಿಂ ಲೀಗ್ ಸಫಲವಾದರೆ, ಹಿಂದೂಗಳ ಸ್ಥಿತಿ ಏನಾಗಬಹುದು? ಇದು ಹಿಂದೂಗಳು ಪರಿಗಣಿಸಬೇಕಾದ ಮತ್ತೊಂದು ಪ್ರಶ್ನೆ.

ಭಾರತ, ರಾಜಕೀಯವಾಗಿ ಒಂದೇ ರಾಷ್ಟ್ರವಾಗಿ ಉಳಿದು, ಪಾಕಿಸ್ತಾನವೆಂದು ಸೃಷ್ಟಿಸಲಾದ ಎರಡು ರಾಷ್ಟ್ರಗಳ ತತ್ವ(ದ್ವಿರಾಷ್ಟ್ರ ಸಿದ್ಧಾಂತ)ದ ಪ್ರತಿಪಾದನೆ ಮುಂದುವರಿದರೆ, ಭಾರತದ ರಕ್ಷಣಾ ದೃಷ್ಟಿಯಿಂದ ಹಿಂದೂಗಳು 'ಅತ್ತದರಿ, ಇತ್ತಪುಲಿ' ಎನ್ನುವಂಥ ಸ್ಥಿತಿಯಲ್ಲಿರಬೇಕಾಗುತ್ತದೆ. ಸೈನ್ಯವಿದ್ದೂ ಅವರು ಅದನ್ನು ಮುಕ್ತವಾಗಿ ಬಳಸಲಾಗುವುದಿಲ್ಲ. ಏಕೆಂದರೆ ಮುಸ್ಲಿಂ ಲೀಗ್ ತಕರಾರು ಮಾಡುತ್ತದೆ. ಅದನ್ನು ಬಳಸಿಕೊಂಡರೂ ಅದರ ಮೇಲೆ ಪೂರ್ಣ ಭರವಸೆಯಿಡಲಾಗುವುದಿಲ್ಲ. ಕಾರಣ, ಆ ಸೈನ್ಯದ ವಿಧೇಯತೆಯ ಬಗ್ಗೆ ಇರುವ ಅನುಮಾನ. ಇದು ನಿಜವಾಗಿಯೂ ಕರುಣಾಜನಕ ಸ್ಥಿತಿ. ಪಂಜಾಬ್ ಮತ್ತು ಉತ್ತರವಾಯುವ್ಯ ಗಡಿ ಪ್ರಾಂತ್ಯದ ಮುಸ್ಲಿಮರೇ ಅಧಿಕವಾಗಿ ಉಳ್ಳ ಈ ಸೈನ್ಯಕ್ಕೆ ಸಂಬಳ ತೆತ್ತೂ ಹಿಂದೂಗಳು ಆ ಸೈನ್ಯ ವಿಧೇಯವಾಗಿರುವುದರ ಬಗ್ಗೆ ಅನುಮಾನವುಳ್ಳವರಾದ್ದರಿಂದ ಅದನ್ನು ಅತ್ತ ಬಳಸಿಕೊಳ್ಳಲೂ ಆಗದಂತೆ ಆಗುತ್ತದೆ. ಹಿಂದೂಗಳು ಅದನ್ನು ಮುಸ್ಲಿಂ ದೇಶವೊಂದರ ಆಕ್ರಮಣದ ವಿರುದ್ಧ ಮುಕ್ತವಾಗಿ ಬಳಸಿಕೊಂಡರೂ, ಭರವಸೆಯಿಂದ ಕೂರಲಾಗುವುದಿಲ್ಲ. ಒಂದು ವೇಳೆ ಮುಸ್ಲಿಂ ಲೀಗ್‌ನ ಅಭಿಪ್ರಾಯವನ್ನು ಒಪ್ಪಿ ಆ ಸೈನ್ಯವನ್ನು ಹೀಗೆ ಬಿಚ್ಚು ಮನಸ್ಸಿನಿಂದ ಬಳಸಿಕೊಳ್ಳಲು ಆಗದಿದ್ದರೆ, ಮುಸ್ಲಿಮರ ಪ್ರಾಬಲ್ಯ ಕಡಿಮೆಯಾದರೂ, ಈ ಮಿಲಿಟರಿಗೆ ಮಿತಿಗಳಿರುತ್ತವೆ. ಈ ಮಿತಿಗಳು, ಈಗ ದೇಶೀಸಂಸ್ಥಾನಗಳು ಹೇಗೆ ತಮ್ಮ ರಕ್ಷಣೆಗಾಗಿ ಬ್ರಿಟಿಷ್ ಚಕ್ರಾಧಿಪತ್ಯದ ಮೇಲೆ ಅವಲಂಬಿತವಾಗಿವೆಯೋ ಹಾಗೆ, ಭಾರತವೂ ತನ್ನ ಗಡಿ ಪ್ರಾಂತ್ಯಗಳ ರಕ್ಷಣೆಗೆ ಮುಸ್ಲಿಂ ದೇಶಗಳ ಮೇಲೆ ಅವಲಂಬಿತವಾಗುವಂಥ ಪರಿಸ್ಥಿತಿ ತಂದೊಡ್ಡುತ್ತವೆ.

ಹಿಂದೂಗಳಂತೂ ಈಗ ತೀರಾ ಕ್ಲಿಷ್ಟ ಆಯ್ಕೆ ಮಾಡಿಕೊಳ್ಳಬೇಕಾಗಿದೆ. ಸುರಕ್ಷಿತ ಸೈನ್ಯ ಹೊಂದಿರುವುದೋ ಅಥವಾ ಸುರಕ್ಷಿತಗಡಿಯನ್ನೋ. ಈ ಸಂದಿಗ್ಧ ಸ್ಥಿತಿಯಲ್ಲಿ ಹಿಂದೂಗಳ ಆಯ್ಕೆ ಯಾವುದಾಗಬೇಕು?

ಮುಸ್ಲಿಂ ಭಾರತವನ್ನು ಭಾರತದ ಭಾಗವಾಗಿಯೇ ಉಳಿಸಿಕೊಂಡು, ತನ್ನ ಗಡಿಗಳನ್ನು ಸುರಕ್ಷಿತವಾಗಿಟ್ಟುಕೊಳ್ಳುವುದು ಲೇಸೋ ಅಥವಾ ಅದನ್ನು ಬಿಟ್ಟುಕೊಡುವ ಮೂಲಕ ಸುರಕ್ಷಿತ ಸೈನ್ಯವನ್ನು ಹೊಂದುವುದು ಲೇಸೋ? ಅವರ ಹಿತದೃಷ್ಟಿಯಿಂದ ಒಳ್ಳೆಯದೇನು? ಈ ಭಾಗದ ಮುಸ್ಲಿಮರಿಗೆ ಹಿಂದೂಗಳನ್ನು ಕಂಡರೆ ಆಗುವುದಿಲ್ಲ. ಈ ಬಗ್ಗೆ ಅನುಮಾನವೇ ಬೇಡ. ಹಾಗಾದರೆ ಹಿಂದೂಗಳ ಆಯ್ಕೆ ಏನಾಗಬೇಕು? ಈ ಮುಸ್ಲಿಮರು ಹೊರಗಿದ್ದು ವಿರೋಧಿಗಳಾಗಿರಬೇಕೋ? ಅಥವಾ ಒಳಗಿದ್ದು ವಿರೋಧಿಗಳಾಗಿರಬೇಕೋ? ಈ ಪ್ರಶ್ನೆಗೆ ಒಬ್ಬ ಅತಿ ವಿವೇಕಯುತ ವ್ಯಕ್ತಿಯ ಉತ್ತರ ಒಂದೇ; ಮುಸ್ಲಿಮರು ಹಿಂದೂಗಳ ವಿರೋಧಿಗಳಾಗಿದ್ದರೆ, ಅವರು ಒಳಗಿದ್ದು, ವಿರೋಧಿಗಳಾಗಿರುವುದಕ್ಕಿಂತ ಹೊರಗಿದ್ದು ವಿರೋಧಿಗಳಾಗಿರುವುದೇ ಲೇಸು. ಇದೇ ಆ ಉತ್ತರ. ಮುಸ್ಲಿಮರು ಹೊರಗಿರಬೇಕೆಂದು ಬಯಸುವುದೇ ಕ್ಷೇಮ. ಇದು ಭಾರತೀಯ ಸೈನ್ಯದಲ್ಲಿರುವ ಮುಸ್ಲಿಮರ ಪ್ರಾಬಲ್ಯದಿಂದ ಬಿಡುಗಡೆ ಹೊಂದಲು ಇರುವ ಏಕೈಕ ದಾರಿ.

ಇದನ್ನು ಸಾಧ್ಯವಾಗಿಸುವುದು ಹೇಗೆ? ಪಾಕಿಸ್ತಾನದ ಯೋಜನೆಯನ್ನು ಬೆಂಬಲಿಸುವುದೊಂದೇ ಇಲ್ಲಿಯೂ ಇರುವ ದಾರಿ. ಒಮ್ಮೆ ಪಾಕಿಸ್ತಾನದ ರಚನೆಯಾದರೆ, ಹಿಂದೂಸ್ತಾನ ಹೇರಳವಾಗಿರುವ ತನ್ನ ಜನತೆ, ಸಂಪನ್ಮೂಲಗಳನ್ನು ಬಳಸಿ ತನ್ನದೇ ಆದ ಒಂದು ಸೈನ್ಯವನ್ನು ಕಟ್ಟಿಕೊಂಡು, ಯಾರ ಮುಲಾಜೂ ಇಲ್ಲದೆ, ತಾನೂ ಯಾರ ವಿರುದ್ಧ ಬೇಕಾದರೂ ಅದನ್ನು ಉಪಯೋಗಿಸಿಕೊಳ್ಳುವ ಸ್ವಾತಂತ್ರ್ಯ ಪಡೆಯಬಹುದು. ಪಾಕಿಸ್ತಾನದ ರಚನೆಯಿಂದ, ಹಿಂದೂಸ್ತಾನದ ರಕ್ಷಣಾಪಡೆ ಬಲಗೊಳ್ಳುತ್ತದೆಯೇ ವಿನಃ ಕ್ಷೀಣಿಸುವುದಿಲ್ಲ.

ಸೈನ್ಯದಿಂದ ತಮ್ಮನ್ನು ಹೊರಗಿಟ್ಟಿರುವುದರಿಂದ, ರಕ್ಷಣಾದೃಷ್ಟಿಯಿಂದ ಹಿಂದೂಗಳಿಗೆ ಆಗುತ್ತಿರುವ ಅನಾನುಕೂಲಗಳ ಬಗ್ಗೆ ಅವರಿಗೆ ಮನವರಿಕೆಯಾದಂತಿಲ್ಲ. ವಿಚಿತ್ರವೆನ್ನಿಸಿದರೂ, ಅಪಾರ ಬೆಲೆ ತೆತ್ತು ತಾವು ಈ ಅನಾನುಕೂಲಗಳನ್ನು ಖರೀದಿಸುತ್ತಿರುವುದಾಗಿಯೂ ಅವರಿಗೆ ಗೊತ್ತಿಲ್ಲ.

ಪ್ರಸಕ್ತ ಭಾರತೀಯ ಸೈನ್ಯಕ್ಕೆ ಅಪಾರ ಜನರನ್ನು ಒದಗಿಸುತ್ತಿರುವ ಪಾಕಿಸ್ತಾನದ ಈ ಪ್ರಾಂತ್ಯಗಳು ಕೇಂದ್ರ ಸರ್ಕಾರದ ಬೊಕ್ಕಸಕ್ಕೆ ಕೊಡುತ್ತಿರುವ ತೆರಿಗೆ ಅತ್ಯಲ್ಪ. ಈ ಕೆಳಗಿನ ಅಂಕಿ–ಅಂಶಗಳು ಈ ವಿಷಯವನ್ನು ಸ್ಪಷ್ಟಪಡಿಸುತ್ತವೆ:–

**ಕೇಂದ್ರ ಸರ್ಕರದ ಬೊಕ್ಕಸಕ್ಕೆ (ಈ ಪ್ರಾಂತ್ಯಗಳು) ಕೊಡುತ್ತಿರುವ ತೆರಿಗೆ**

| | ರೂ. |
|---|---|
| ಪಂಜಾಬ್ | ೧.೧೮,೦೧,೨೮೫ |
| ಉತ್ತರ ವಾಯುವ್ಯ ಪ್ರಾಂತ್ಯ | ೯,೨೮,೨೯೪ |
| ಸಿಂಧ್ | ೫,೮೬,೪೬,೯೧೫ |
| ಬಲೂಚಿಸ್ತಾನ | ಇಲ್ಲ |
| **ಒಟ್ಟು** | **೭,೧೩,೭೬,೫೯೪** |

ಇದಕ್ಕೆ ವಿರುದ್ಧವಾಗಿ ಹಿಂದೂಸ್ತಾನದ ಪ್ರಾಂತ್ಯಗಳು ಕೊಡುತ್ತಿರುವ ತೆರಿಗೆ ಈ ಕೆಳ ಕಂಡಂತಿದೆ:–

| | |
|---|---|
| ಮದ್ರಾಸು | ೯,೫೩,೨೬,೭೪೫ |
| ಬಾಂಬೆ | ೨೨,೫೩,೪೪,೨೪೭ |

| | |
|---|---|
| ಬಂಗಾಳ* | ೧೨,೦೦,೦೦,೦೦೦ |
| ಯು.ಪಿ. | ೪,೦೫,೫೩,೦೦೦ |
| ಬಿಹಾರ | ೧,೫೪,೩೭,೭೪೨ |
| ಕೇಂದ್ರ ಪ್ರಾಂತ್ಯ ಮತ್ತು ಬೇರರ್ | ೩೧,೪೨,೬೮೨ |
| ಅಸ್ಸಾಮ್ | ೧,೮೭,೫೫,,೯೬೭ |
| ಒರಿಸ್ಸಾ | ೫,೬೭,೩೪೬ |
| **ಒಟ್ಟು ರೂ.** | **೫೧,೯೧,೨೭,೭೨೯** |

ಪಾಕಿಸ್ತಾನಿ ಪ್ರಾಂತ್ಯಗಳು ಅತ್ಯಲ್ಪ ತೆರಿಗೆ ಕೊಡುತ್ತಿರುವುದನ್ನು ನಾವಿಲ್ಲಿ ಕಾಣಬಹುದು. ಹಿಂದೂಸ್ತಾನದ ಪ್ರಾಂತ್ಯಗಳಿಂದಲೇ ಅತಿ ಹೆಚ್ಚಿನ ತೆರಿಗೆ ಬರುತ್ತಿದೆ. ಹಿಂದೂಸ್ತಾನದ ಪ್ರಾಂತ್ಯಗಳಿಂದ ಬಂದ ತೆರಿಗೆ ಹಣವನ್ನೇ ಪಾಕಿಸ್ತಾನದ ಭಾಗಗಳ ಎಲ್ಲ ಕೆಲಸ ಕಾರ್ಯಗಳಿಗಾಗಿ ಭಾರತ ಸರ್ಕಾರ ಖರ್ಚು ಮಾಡುತ್ತಿದೆ. ಪಾಕಿಸ್ತಾನಿ ಪ್ರಾಂತ್ಯಗಳು, ಹಿಂದೂಸ್ತಾನಿ ಪ್ರಾಂತ್ಯಗಳ ಶೋಷಣೆಗೆ ಕಾರಣವಾಗಿವೆ. ಪಾಕಿಸ್ತಾನಿ ಪ್ರಾಂತ್ಯಗಳು, ಕೇಂದ್ರ ಬೊಕ್ಕಸಕ್ಕೆ ಅಲ್ಪತೆರಿಗೆ ಸಲ್ಲಿಸುವುದೊಂದೇ ಅಲ್ಲ, ಕೇಂದ್ರ ಸರ್ಕಾರದಿಂದ ಅಪಾರವಾದ ಧನಸಹಾಯ ಪಡೆಯುತ್ತಿವೆ. ಕೇಂದ್ರಸರ್ಕಾರದ ಆದಾಯ ಸುಮಾರು ೧೨೧ ಕೋಟಿ ರೂಪಾಯಿಗಳು. ಇದರಲ್ಲಿ ಸುಮಾರು ೫೨ ಕೋಟಿ ರೂಪಾಯಿಗಳನ್ನು ಸೈನ್ಯಕ್ಕಾಗಿ ಖರ್ಚು ಮಾಡಲಾಗುತ್ತಿದೆ. ಈ ಹಣವನ್ನು ಯಾವ ಪ್ರದೇಶದ ಮೇಲೆ ಖರ್ಚು ಮಾಡಲಾಗುತ್ತಿದೆ? ಈ ೫೨ ಕೋಟಿ ರೂಪಾಯಿಗಳಲ್ಲಿ ಹೆಚ್ಚಿನ ಮೊತ್ತ ಯಾರಿಂದ ಬರುತ್ತಿದೆ? ಪಾಕಿಸ್ತಾನಿ ಭಾಗಗಳ ಮುಸ್ಲಿಮರೇ ತುಂಬಿರುವ ಸೈನ್ಯದ ಮೇಲೆ ಈ ೫೨ ಕೋಟಿ ಹಣದ ಬಹುಭಾಗ ಖರ್ಚಾಗುತ್ತಿದೆ. ಅಂದರೆ ಈ ೫೨ ಕೋಟಿ ಹಣದಲ್ಲಿ ಬಹುಭಾಗವನ್ನು ಹಿಂದೂ ಪ್ರಾಂತ್ಯಗಳಿಂದ ಪಡೆದು, ಪಾಕಿಸ್ತಾನಿ ಪ್ರಾಂತ್ಯದ ಹಿಂದೂಯೇತರರೇ ತುಂಬಿರುವ ಸೈನ್ಯಕ್ಕಾಗಿ ಖರ್ಚು ಮಾಡಲಾಗುತ್ತಿದೆ. ಎಷ್ಟು ಜನ ಹಿಂದೂಗಳಿಗೆ ಈ ದುರಂತದ ಬಗ್ಗೆ ತಿಳಿದಿದೆ? ಯಾರ ಖರ್ಚಿನಲ್ಲಿ ಈ ದುರಂತ ನಡೆದಿದೆ ಎಂದು ಎಷ್ಟು ಜನಕ್ಕೆ ಗೊತ್ತು? ಹಿಂದೂಗಳು ಇದಕ್ಕೆ ಜವಾಬ್ದಾರರಲ್ಲ. ಏಕೆಂದರೆ ಅವರು ಅದನ್ನು ತಡೆಯಲು ಸಾಧ್ಯವಿಲ್ಲ. ಆದರೆ ಪ್ರಶ್ನೆಯಿದು. ಈ ದುರಂತ ಮುಂದುವರಿಯಲು ಅವರು ಅವಕಾಶ ಕೊಡುತ್ತಾರೋ? ಇದನ್ನು ನಿಲ್ಲಿಸಬೇಕೆಂದು ಅವರಿಗೆ ಅನ್ನಿಸಿದರೆ, ಪಾಕಿಸ್ತಾನದ ರಚನೆಯನ್ನು ಬೆಂಬಲಿಸಬೇಕು. ಇಲ್ಲ ವಿರೋಧಿಸಿದರೆ, ಅವರು ಖಂಡಿತವಾಗಿಯೂ ತಮ್ಮ ಸರ್ವನಾಶಕ್ಕೆ ಕಾರಣವಾಗುವ ಒಂದು ಅಸ್ತ್ರವನ್ನೇ ಖರೀದಿಸಿದಂತೆ. ಸುರಕ್ಷಿತ ಗಡಿಗಿಂತ ಸುರಕ್ಷಿತ ಸೈನ್ಯವೇ ಲೇಸು.

♦

---

* ಇಲ್ಲಿ ಹಿಂದೂ ಜನಸಂಖ್ಯೆ ಅರ್ಧದಷ್ಟು ಮಾತ್ರ ಇರುವುದರಿಂದ ಅರ್ಧದಷ್ಟು ಆದಾಯವನ್ನು ಮಾತ್ರ ತೋರಿಸಲಾಗಿದೆ.

## ಅಧ್ಯಾಯ ೨೨

# ಪಾಕಿಸ್ತಾನ ಮತ್ತು ಕೋಮುಶಾಂತಿ

ಪಾಕಿಸ್ತಾನವು ಕೋಮು ಸಮಸ್ಯೆಯನ್ನು ಬಗೆಹರಿಸಬಹುದೇ? ಎಂಬುದು ಪ್ರತೀ ಹಿಂದೂ ಖಂಡಿತವಾಗಿ ಕೇಳುವ ಪ್ರಶ್ನೆ. ಇಡೀ ಸಮಸ್ಯೆಯ ಆಳವಾದ ವಿಶ್ಲೇಷಣೆ ಮಾತ್ರ ಈ ಪ್ರಶ್ನೆಗೆ ಸರಿಯಾದ ಉತ್ತರ ಒದಗಿಸಬಲ್ಲದು. ಹಿಂದೂಗಳು ಮತ್ತು ಮುಸ್ಲಿಮರು ಕೋಮುವಾದದ ಪ್ರಶ್ನೆಯ ಬಗ್ಗೆ ಮಾತನಾಡುವಾಗ, ಅವರು ಅದಕ್ಕೆ ಕೊಡುವ ಅರ್ಥವೇ ಅನ್ನುವ ಬಗ್ಗೆ ಸ್ಪಷ್ಟ ಕಲ್ಪನೆಯಿರಬೇಕು. ಈ ಕಲ್ಪನೆಯಿಲ್ಲದೆ, ಪಾಕಿಸ್ತಾನ, ಕೋಮು ಸಮಸ್ಯೆಗೆ ಪರಿಹಾರವೋ, ಇಲ್ಲವೋ ಎಂದು ಹೇಳಲು ಸಾಧ್ಯವಿಲ್ಲ.

ಗಡಿ ಪ್ರಶ್ನೆಯಲ್ಲಿ "ಮುನ್ನುಗ್ಗುವ ನೀತಿ", "ಮಹತ್ವಾಕಾಂಕ್ಷೆ" ಮತ್ತು "ಮಿತಾಕಾಂಕ್ಷೆ" ನೆಲೆಗಳು ಇರುವಂತೆಯೇ, ಕೋಮು ಪ್ರಶ್ನೆಯಲ್ಲಿ ಮಿತಾಕಾಂಕ್ಷೆ ಎಂದರೆ ಒಂದು ಅರ್ಥ, ಮಹತ್ವಾಕಾಂಕ್ಷೆ ಎಂದರೆ ಬೇರೊಂದು ಅರ್ಥ ಇದೆ.

ಮೊದಲಿಗೆ ಕೋಮು ಸಮಸ್ಯೆಯ "ಮಿತಾಕಾಂಕ್ಷೆ" ಏನೆಂದು ವಿಚಾರಿಸೋಣ. ಹಿಂದೂ, ಮುಸ್ಲಿಂ ಕೋಮು ಸಮಸ್ಯೆ, ತನ್ನ ಮಿತಾಕಾಂಕ್ಷೆಯಲ್ಲಿ, ಶಾಸನಸಭೆಗಳ ಪ್ರಾತಿನಿಧ್ಯಕ್ಕೆ ಸಂಬಂಧಿಸಿದೆ. ಈ ಅರ್ಥದಲ್ಲಿ ಬಳಸಿದಾಗ, ಅದು ಎರಡು ವಿಶಿಷ್ಟ ಸಮಸ್ಯೆಗಳ ಪರಿಹಾರಗಳನ್ನು ಒಳಗೊಂಡಿದೆ:–

(೧) ವಿವಿಧ ಶಾಸನಸಭೆಗಳಲ್ಲಿ ಹಿಂದೂ ಮತ್ತು ಮುಸ್ಲಿಮರಿಗೆ ಎಷ್ಟು ಸಂಖ್ಯೆಯ ಸ್ಥಾನಗಳನ್ನು ಕೊಡಬೇಕು? ಮತ್ತು

(೨) ಯಾವ ಸ್ವರೂಪದ ಮತದಾರರ ಮೂಲಕ ಈ ಸ್ಥಾನಗಳನ್ನು ಭರ್ತಿ ಮಾಡಬೇಕು?

**ಮುಸ್ಲಿಮರು ದುಂಡುಮೇಜಿನ ಸಮ್ಮೇಳನದಲ್ಲಿ ಕೇಳಿದ್ದು:**

೧. ಎಲ್ಲ ಪ್ರಾಂತೀಯ ಮತ್ತು ಕೇಂದ್ರಶಾಸನ ಸಭೆಗಳಲ್ಲಿ ತಮ್ಮ ಪ್ರತಿನಿಧಿಗಳನ್ನು ಪ್ರತ್ಯೇಕ ಮತದಾರರ ಮೂಲಕ ಆಯ್ಕೆ ಮಾಡಬೇಕು;

೨. ಮುಸ್ಲಿಮರು ಅಲ್ಪಸಂಖ್ಯಾತರಾಗಿರುವ ಪ್ರಾಂತ್ಯಗಳಲ್ಲಿ, ಅಲ್ಪಸಂಖ್ಯಾತರಿಗಿರುವ ಎಲ್ಲ ವಿಶೇಷ ಸವಲತ್ತು (ಅಧಿಕ್ಯ)ಗಳನ್ನು ಹಾಗೆಯೇ ಉಳಿಸಬೇಕು. ಮತ್ತು ಮುಸ್ಲಿಮರು ಬಹುಸಂಖ್ಯಾತರಾಗಿರುವ, ಪಂಜಾಬ್, ಸಿಂಧ್, ಉತ್ತರವಾಯುವ್ಯ ಪ್ರಾಂತ್ಯ ಮತ್ತು ಬಂಗಾಳಗಳಲ್ಲಿ ತಮಗೆ ಶಾಸನಬದ್ಧ ಬಹುಮತ ಸ್ಥಾನಗಳಿಬೇಕು.

ಈ ಎರಡೂ ಬೇಡಿಕೆಗಳನ್ನು ಹಿಂದೂಗಳು ಮೊದಲಿನಿಂದಲೂ ವಿರೋಧಿಸಿದ್ದರು. ಆದರೂ ಜಂಟಿ ಚುನಾಯಕ ಮತಕ್ಷೇತ್ರಗಳನ್ನೇ ಒತ್ತಾಯಿಸುತ್ತಾ ಅಲ್ಪಸಂಖ್ಯಾತರು ಹಿಂದೂಗಳಿರಲಿ, ಮುಸ್ಲಿಮರಿರಲಿ, ಅವರು ಎಲ್ಲೇ ಇರಲಿ, ಪ್ರಾತಿನಿಧ್ಯ ಜನಸಂಖ್ಯೆಯ ಆಧಾರದ ಮೇಲೆ ನಿರ್ಧಾರವಾಗಬೇಕೆಂದು ಅವರು ಕೇಳಿದ್ದಾರೆ. ಶಾಸನಬದ್ಧ ಕೋಮು ಬಹುಮತದ ಪ್ರಾತಿನಿಧ್ಯಕ್ಕೆ ಹಿಂದೂಗಳು ತೀವ್ರ ವಿರೋಧಿಗಳಾಗಿದ್ದಾರೆ.

ಬ್ರಿಟಿಷ್ ಸರ್ಕಾರ, ಹಿಂದೂಗಳ ವಿರೋಧವನ್ನು ಲೆಕ್ಕಿಸದೆ, ಈ ವಿವಾದವನ್ನು ಸರಳವಾಗಿ, ಅಂದಾಜಿನ

ಮೇಲೆ ಮತ್ತು ಎಂದಿನಂತೆ ಮುಸ್ಲಿಮರು ಕೇಳಿದ್ದನ್ನೆಲ್ಲಾ ಕೊಟ್ಟು, ಬಗೆಹರಿಸಿದೆ. ಈ ತೀರ್ಮಾನ (ಐತೀರ್ಪು) ಮುಸ್ಲಿಮರ ವಿಶೇಷ ಸವಲತ್ತಾದ ಪ್ರತ್ಯೇಕ ಮತಗಟ್ಟೆಗಳನ್ನು ಉಳಿಸಿದ್ದೇ ಅಲ್ಲದೆ, ಅವರು ಬಹುಸಂಖ್ಯಾತರಾಗಿರುವ ಪ್ರಾಂತ್ಯಗಳಲ್ಲಿ ಅವರಿಗೆ ಶಾಸನಬದ್ಧ ಬಹುಮತದ ಸ್ಥಾನಗಳನ್ನು ಬಿಟ್ಟುಕೊಟ್ಟಿತು. ಈ ಐತೀರ್ಪಿನಲ್ಲಿ ಸಮಸ್ಯಾತ್ಮಕವಾಗುವ ಅಂಶವಾದರೂ ಏನು? ಬ್ರಿಟಿಷ್ ಸಾರ್ವಭೌಮ ಸರ್ಕಾರದ ಕೋಮುತೀರ್ಪಿನ ವಿರುದ್ಧದ ಹಿಂದೂಗಳ ತಕರಾರುಗಳಲ್ಲಿ ಸತ್ವವೇನಾದರೂ ಉಂಟೇ? ಹಿಂದೂಗಳ ತಕರಾರುಗಳಲ್ಲಿನ ಸತ್ವವನ್ನು ನಿರ್ಧರಿಸಲು ಈ ಪ್ರಶ್ನೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕು.

ಮೊದಲಿಗೆ, ಪ್ರಾತಿನಿಧ್ಯದ ವಿಷಯದಲ್ಲಿ ಮುಸ್ಲಿಂ ಅಲ್ಪಸಂಖ್ಯಾತರಿಗೆ ಕೊಟ್ಟಿರುವ ವಿಶೇಷ ಸವಲತ್ತು. ಅಲ್ಪಸಂಖ್ಯಾತರಿಗೆ ಪ್ರಾತಿನಿಧ್ಯ ನಿಗದಿ ಮಾಡುವ ಮಾನದಂಡಗಳೇನೇ ಇರಲಿ, ಹಿಂದೂಗಳಿಗೂ ಅವರು ಅಲ್ಪಸಂಖ್ಯಾತರಾಗಿರುವ ಪ್ರಾಂತ್ಯಗಳಲ್ಲಿ ವಿಶೇಷ ಸವಲತ್ತುಗಳನ್ನು ಕೊಟ್ಟಿರುವುದರಿಂದ, ಈ ಬಗ್ಗೆ ಅವರು ತಕರಾರು ಮಾಡಲು ಸಾಧ್ಯವಿಲ್ಲ. ಸಿಂಧ್ ಮತ್ತು ವಾಯುವ್ಯ ಪ್ರಾಂತ್ಯಗಳಲ್ಲಿ ಹಿಂದೂಗಳನ್ನು ನಡೆಸಿಕೊಳ್ಳುವ ರೀತಿ ಮತ್ತು ಅವರಿಗೆ ಕೊಡಲಾಗಿರುವ ಸ್ಥಾನಮಾನ ಇದಕ್ಕೆ ಒಂದು ನಿದರ್ಶನ.

ಎರಡನೆಯದಾಗಿ, ಶಾಸನಬದ್ಧ ಬಹುಮತದ ವಿರುದ್ಧದ ಅವರ ತಕರಾರು. ಇದು ಕೂಡಾ ಅಷ್ಟಾಗಿ ಸಮರ್ಥನೀಯವೆನಿಸುವುದಿಲ್ಲ. ಗ್ಯಾರಂಟಿಯಾಗಿಕೊಡುವ ಪ್ರಾತಿನಿಧ್ಯದ ವ್ಯವಸ್ಥೆಯೊಂದು ತಾತ್ವಿಕವಾಗಿ ಕೆಟ್ಟದ್ದು, ಸಮರ್ಥನೀಯವಲ್ಲದ್ದೂ ಆಗಿರಬಹುದು. ಅದರೆ ಭಾರತೀಯ ಸಂದರ್ಭಗಳನ್ನು ಗಣನೆಗೆ ತೆಗೆದುಕೊಂಡಾಗ, ಶಾಸನಬದ್ಧ ಬಹುಮತದ ವ್ಯವಸ್ಥೆ ಅನಿವಾರ್ಯವಾಗಿ ಬಿಡುತ್ತದೆ. ಅಲ್ಪಸಂಖ್ಯಾತರಿಗೆ ಕೊಟ್ಟಿರುವ ಪ್ರಾತಿನಿಧ್ಯ, ಬಹುಸಂಖ್ಯಾತರನ್ನು ಅಲ್ಪಸಂಖ್ಯಾತರನ್ನಾಗಿಸುವಂತಿಲ್ಲವೆಂಬ ಷರತ್ತು ವಿಧಿಸಿದಾಗ, ಈ ಷರತ್ತೇ, ಒಂದು ಪ್ರಾಂತ್ಯದ ಬಹುಸಂಖ್ಯಾತರ ಬಹುಮತವನ್ನು ಶಾಸನಬದ್ಧ ಬಹುಮತವನ್ನಾಗಿಸುತ್ತದೆ. ಏಕೆಂದರೆ ಅಲ್ಪಸಂಖ್ಯಾತರ ಸ್ಥಾನಗಳನ್ನು ನಿಗದಿಪಡಿಸುವುದೆಂದರೆ, ಬಹುಸಂಖ್ಯಾತರ ಸ್ಥಾನಗಳನ್ನು ನಿಗದಿಗೊಳಿಸುವುದೂ ಆಗಿದೆ. ಅಲ್ಪಸಂಖ್ಯಾತರಾದವರಿಗೆ, ಬಹುಸಂಖ್ಯಾತರನ್ನು, ಅಲ್ಪಸಂಖ್ಯಾತರಾಗಿ ಪರಿವರ್ತಿಸುವಂಥ ಪ್ರಾತಿನಿಧ್ಯ ಗಳಿಸುವ ಹಕ್ಕಿಲ್ಲವೆಂದು ಒಪ್ಪಿಕೊಂಡ ತಕ್ಷಣ, ಶಾಸನಬದ್ಧ ಬಹುಮತ ವ್ಯವಸ್ಥೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ, ಪಂಜಾಬ್, ಉತ್ತರ ವಾಯುವ್ಯ ಪ್ರಾಂತ್ಯ, ಸಿಂಧ್ ಮತ್ತು ಬಂಗಾಳಗಳಲ್ಲಿ ಮುಸ್ಲಿಮರ ಶಾಸನಬದ್ಧ ಬಹುಮತ ಬೇಡಿಕೆಯ ವಿರುದ್ಧದ ಹಿಂದೂಗಳ ತಕರಾರಿಗೆ ಮಹಾಸಮರ್ಥನೆಯಿಲ್ಲ. ಏಕೆಂದರೆ, ಹಿಂದೂಗಳು ಬಹುಸಂಖ್ಯಾತರಾಗಿದ್ದು, ಮುಸ್ಲಿಮರು ಅಲ್ಪಸಂಖ್ಯಾತರಾಗಿರುವ ಪ್ರಾಂತ್ಯಗಳಲ್ಲಿ, ಹಿಂದೂಗಳಿಗೆ ಶಾಸನಬದ್ಧ ಬಹುಮತ ದಕ್ಕಿದೆ. ಹೇಗಾದರಾಗಲಿ, ಒಂದು ಸಮಾನ ಸ್ಥಾನವಂತೂ ದಕ್ಕಿದೆ. ಅಲ್ಲಿಯವರೆಗೆ ತಕರಾರು ಎತ್ತಬಹುದಾದ ನೆಲೆಯೇ ಇಲ್ಲ. ಹಿಂದೂಗಳು ಎತ್ತುವ ತಕರಾರು ತಿರುಳಿಲ್ಲವೆಂದ ಮಾತ್ರಕ್ಕೆ, ಕೋಮುವಾದಿ ತೀರ್ಪನ್ನು ವಿರೋಧಿಸಲು ನಿಜವಾದ ನೆಲೆಯೇ ಇಲ್ಲವೆಂದಲ್ಲ. ಈ ತೀರ್ಪನ್ನು ವಿರೋಧಿಸಲು ಸಾಕಷ್ಟು ಸಮರ್ಥನೆಯಿದೆ. ಆದರೆ ಹಿಂದೂಗಳು ಆ ನೆಲೆಯ ಮೇಲೆ ಕೋಮುವಾದಿ ತೀರ್ಪನ್ನು ವಿರೋಧಿಸುತ್ತಿಲ್ಲವಷ್ಟೆ.

ಈ ತಕರಾರನ್ನು ಕೆಳಕಂಡ ರೀತಿಯಲ್ಲಿ ಸಂಯೋಜಿಸಿ, ನಿರ್ದಿಷ್ಟಗೊಳಿಸಬಹುದು. ಹಿಂದೂ ಪ್ರಾಂತ್ಯಗಳ ಮುಸ್ಲಿಮರು ಪ್ರತ್ಯೇಕ ಮತಕ್ಷೇತ್ರಗಳಿಗಾಗಿ ಪಟ್ಟುಹಿಡಿದರು. ಕೋಮು ತೀರ್ಪು ಮುಸ್ಲಿಮರಿಗೆ ಈ ವಿಷಯವನ್ನು ತೀರ್ಮಾನಿಸುವ ಅಧಿಕಾರ ಕೊಡುತ್ತದೆ. ನಾವು, ಮುಸ್ಲಿಮರು ಸಾಮಾನ್ಯವಾಗಿ ತಳೆಯುವ ನಿಲುವನ್ನು ಪರಿಗಣಿಸಿದಾಗ, ಮುಸ್ಲಿಮರ ಸಮ್ಮತಿಯಿಲ್ಲದೆ, ಮುಸ್ಲಿಂ ಅಲ್ಪಸಂಖ್ಯಾತರಿಗಿರುವ ಪ್ರತ್ಯೇಕ ಮತಕ್ಷೇತ್ರಗಳ ಹಕ್ಕನ್ನು ಹಿಂದೆಗೆದುಕೊಳ್ಳುವಂತಿಲ್ಲ ಮತ್ತು ಬಹುಸಂಖ್ಯಾತ ಹಿಂದೂಗಳು, ಈ ವಿಷಯದಲ್ಲಿ ಮುಸ್ಲಿಮರ

ಇಚ್ಛೆಯಂತೆ ನಡೆಯಲೇಬೇಕು ಎಂದಾಗುತ್ತದೆ. ಮುಸ್ಲಿಂ ಪ್ರಾಂತ್ಯಗಳ ಹಿಂದೂ ಅಲ್ಪಸಂಖ್ಯಾತರು ಜಂಟಿ ಮತಕ್ಷೇತ್ರಗಳೇ ಬೇಕೆಂದು ಪಟ್ಟುಹಿಡಿದರು. ಅವರ ಬೇಡಿಕೆ ಈಡೇರಿಸುವುದನ್ನು ಬಿಟ್ಟು, ಸರ್ಕಾರ ಅವರ ಮೇಲೆ ಪ್ರತ್ಯೇಕ ಮತಕ್ಷೇತ್ರಗಳನ್ನು ಹೇರಿತು. ಈ ಹೇರಿಕೆಯನ್ನು ಅಲ್ಲಿನ ಹಿಂದೂಗಳೂ ಪ್ರತಿಭಟಿಸಿದರು. ಮತಕ್ಷೇತ್ರಗಳ ವಿಷಯದಲ್ಲಿ ಹಿಂದೂ ಪ್ರಾಂತ್ಯಗಳ ಮುಸ್ಲಿಂ ಅಲ್ಪಸಂಖ್ಯಾತರ ಸ್ವಯಂ ನಿರ್ಣಯದ ಹಕ್ಕನ್ನು ಕೊಡಮಾಡಿದರೆ ಈ ಪ್ರಶ್ನೆ ಏಳುತ್ತದೆ. ಮುಸ್ಲಿಂ ಪ್ರಾಂತ್ಯಗಳ ಹಿಂದೂ ಅಲ್ಪಸಂಖ್ಯಾತರಿಗೆ ಮತಕ್ಷೇತ್ರಗಳ ವಿಷಯದಲ್ಲಿ ಸ್ವಯಂ ನಿರ್ಣಯದ ಹಕ್ಕನ್ನು ಏಕೆ ಕೊಟ್ಟಿಲ್ಲ? ಪ್ರಶ್ನೆಗೆ ಉತ್ತರವೇನು? ಇದಕ್ಕೆ ಉತ್ತರವಿಲ್ಲವಾದರೆ, ಬ್ರಿಟಿಷ್ ಸರ್ಕಾರದ ಕೋಮು ತೀರ್ಪು ನಿಸ್ಸಂದೇಹವಾಗಿ, ಗಂಭೀರವಾದ ಅಸಮತೆಯಿಂದ ಕೂಡಿದೆ ಮತ್ತು ಈ ಅಸಮತೆಗೆ ಪರಿಹಾರ ಬೇಕೆಂದೂ ಆಗುತ್ತದೆ.

ಮುಸ್ಲಿಮರು ಅಲ್ಪಸಂಖ್ಯಾತರಾಗಿರುವ ಪ್ರಾಂತ್ಯಗಳಲ್ಲಿ ಹಿಂದೂಗಳಿಗೆ, ಪ್ರತ್ಯೇಕ ಮತ ಸಮುದಾಯಗಳನ್ನು ಆಧರಿಸಿದ* ಶಾಸನಬದ್ಧ ಬಹುಮತವಿದೆ ಎಂಬ ಉತ್ತರ ಉತ್ತರವೇ ಅಲ್ಲ. ಸ್ವಲ್ಪ ಎಚ್ಚರಿಕೆ ವಹಿಸಿ ಪರೀಕ್ಷಿಸಿದರೆ, ಇಬ್ಬರ ವಿಷಯದಲ್ಲಿ ಸಮಾನತೆಯೇ ಇಲ್ಲವೆಂದು ತಿಳಿಯುತ್ತದೆ. ಹಿಂದೂ ಪ್ರಾಂತ್ಯಗಳಲ್ಲಿ ಹಿಂದೂ ಬಹುಸಂಖ್ಯಾತರಿಗಿರುವ ಪ್ರತ್ಯೇಕ ಮತಕ್ಷೇತ್ರಗಳು ಅವರು ಕೇಳಿಕೊಂಡದ್ದಲ್ಲ. ಮುಸ್ಲಿಂ ಅಲ್ಪಸಂಖ್ಯಾತರು ತಮಗೆ ಪ್ರತ್ಯೇಕ ಮತ ಕ್ಷೇತ್ರಗಳು ಬೇಕೆಂದು ಪಟ್ಟುಹಿಡಿದು ಅದನ್ನು ಪಡೆದುಕೊಂಡಿದ್ದರ ಫಲವದು. ಅಲ್ಪಸಂಖ್ಯಾತ ಕೋಮೊಂದು, ಒಂದು ಸಂದರ್ಭದಲ್ಲಿ ಪ್ರತ್ಯೇಕ ಮತಕ್ಷೇತ್ರ ಪದ್ಧತಿ ಸುರಕ್ಷಿತವೆಂದು ಮತ್ತು ತನ್ನ ಈ ಬೇಡಿಕೆಯಿಂದ, ತಾನು ಯಾರಿಗೆ ಹೆದರಿ ಈ ರಕ್ಷಣೆ ಪಡೆದುಕೊಂಡಿದೆಯೋ, ಆ ಬಹುಸಂಖ್ಯಾತ ಕೋಮಿಗೂ ಪ್ರತ್ಯೇಕ ಮತಕ್ಷೇತ್ರಗಳು ದಕ್ಕುವಂತೆ ನೋಡಿಕೊಂಡು ಅದಕ್ಕೆ ಶಾಸನಬದ್ಧ ಬಹುಮತ ದೊರೆಯುವಂತೆ ಆಗುತ್ತದೆಂಬ ಭಯವಿರುವುದಿಲ್ಲ. ಬೇರೊಂದು ಅಲ್ಪಸಂಖ್ಯಾತ ಕೋಮು ಅಥವಾ ಅದೇ ಕೋಮು ಬೇರೆ ಸಂದರ್ಭದಲ್ಲಿ ತಾನು ಪಟ್ಟು ಹಿಡಿಯುವುದರಿಂದ ಬಹುಸಂಖ್ಯಾತ ಕೋಮಿಗೆ ಪ್ರತ್ಯೇಕ ಮತಕ್ಷೇತ್ರಗಳನ್ನಾಧರಿಸಿದ, ಶಾಸನಬದ್ಧ ಬಹುಮತ ಕೊಡಿಸಿಕೊಟ್ಟಂತೆ ಆಗುತ್ತದೆಂದು ಪ್ರತ್ಯೇಕ ಮತಕ್ಷೇತ್ರಗಳನ್ನೇ ಇಷ್ಟಪಡದೆ ಜಂಟಿ ಮತ ಕ್ಷೇತ್ರಗಳೇ ಹೆಚ್ಚು ಕ್ಷೇಮಕರವೆಂದು ಅದನ್ನೇ ಆಯ್ಕೆ ಮಾಡಿಕೊಳ್ಳಬಹುದು. ಆದ್ದರಿಂದ ಅಲ್ಪಸಂಖ್ಯಾತರ ತೀಮಾನದ ಮೇಲೆ ಪ್ರಭಾವ ಬೀರುವ ತತ್ವವೆಂದರೆ: ಬಹುಸಂಖ್ಯಾತರು ತಮ್ಮ ಬಹುಮತವನ್ನು ಕೋಮುವಾದಿ ದೃಷ್ಟಿಯಿಂದ, ಕೋಮುಹಿತದ ಕಾರ್ಯಗಳಿಗಾಗಿ ಬಳಸಿಕೊಳ್ಳುವ ಸಾಧ್ಯತೆಯಿದೆಯೇ? ಬಹುಸಂಖ್ಯಾತಕೋಮು ತನ್ನ ಕೋಮು ಬಹುಮತವನ್ನು, ಕೋಮು ಹಿತಕ್ಕಾಗಿ ಉಳಿಸಿಕೊಳ್ಳುವುದು ಖಂಡಿತವೆಂದಾದರೆ, ಆಗ ಅಲ್ಪಸಂಖ್ಯಾತ ಕೋಮು ಜಂಟಿ ಮತ ಕ್ಷೇತ್ರಗಳನ್ನು ಆಯ್ದುಕೊಳ್ಳಬಹುದು. ಏಕೆಂದರೆ ಬಹುಸಂಖ್ಯಾತ ಕೋಮಿಗೆ ಸೇರಿದ ಶಾಸನಸಭಾಸ್ಪರ್ಧಿಗಳ ಚುನಾವಣೆ ಮೇಲೆ ಪ್ರಭಾವಬೀರಿ ಅಲ್ಲಿರಬಹುದಾದ ಕೋಮುವಾದಿ ಅಂಶವನ್ನು ತೆಗೆದುಹಾಕಬಹುದು. ಇದಕ್ಕೆ ಬದಲಾಗಿ, ಬಹುಸಂಖ್ಯಾತ ಕೋಮೊಂದು, ಕೋಮುವಾದಿ ಹಿತಾಸಕ್ತಿಯನ್ನು ಮಾತ್ರ ರಕ್ಷಿಸುವ ಕೋಮುವಾದಿ ಅಂಶವನ್ನು ಒಳಗೊಳ್ಳದೆ ಇದ್ದು, ಅದಕ್ಕೆ ದೊರೆಯುವ ಶಾಸನಬದ್ಧ ಬಹುಮತ ಪ್ರತ್ಯೇಕ ಮತ ಕ್ಷೇತ್ರಗಳಿಂದ ಯಾವ ಭಯವೂ ಇರದೆ, ತಾನೂ ಪ್ರತ್ಯೇಕ ಮತ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಇದನ್ನು ಸ್ಪಷ್ಟಪಡಿಸುವುದಾದರೆ, ಮುಸ್ಲಿಂ ಅಲ್ಪಸಂಖ್ಯಾತರು, ಪ್ರತ್ಯೇಕ ಮತಕ್ಷೇತ್ರಗಳನ್ನು ಆಯ್ಕೆ ಮಾಡಿಕೊಳ್ಳಲು

---

* ಹಿಂದೂ ಮತ ಸಮುದಾಯ ಎಂಬ ಮಾತೇ ಬಹುಶಃ ಸರಿಯಲ್ಲ. ಸಾಮಾನ್ಯ ಮತಗಟ್ಟೆಗಳಿಗೆ ಬರುವ ಮತದಾರರೆಲ್ಲಾ ಹಿಂದೂಗಳೇ ಆದ್ದರಿಂದ ಅವರನ್ನು ಹಿಂದೂ ಮತದಾರರೆಂದು ಕರೆಯಲಾಗಿದೆ.

ಭಯ ಪಡುವುದಿಲ್ಲ. ಏಕೆಂದರೆ ಹಿಂದೂಗಳಲ್ಲಿ ಜಾತಿ ಮತ್ತು ಜನಾಂಗಗಳನ್ನು ಆಧರಿಸಿದ ತೀವ್ರ ಭಿನ್ನಾಭಿಪ್ರಾಯಗಳಿರುವುದರಿಂದ ಅವರಿಗೆ ದೊರೆಯುವ ಪ್ರತ್ಯೇಕ ಮತಕ್ಷೇತ್ರಗಳ ಸವಲತ್ತು ಮತ್ತು ಶಾಸನಬದ್ಧ ಬಹುಮತವನ್ನು ಮುಸ್ಲಿಮರ ವಿರುದ್ಧ ಬಳಸಲು ಸಾಧ್ಯವಾಗುವುದಿಲ್ಲವೆಂದು ಅವರಿಗೆ ಖಾತ್ರಿಯಿದೆ. ಇದಕ್ಕೆ ವಿರುದ್ಧವಾಗಿ, ಮುಸ್ಲಿಂ ಪ್ರಾಂತ್ಯಗಳ ಮುಸ್ಲಿಮರಲ್ಲಿ ಸಾಮಾಜಿಕ ಒಗ್ಗಟ್ಟು ಇರುವುದರಿಂದ, ಅವರು ಲಾರ್ಡ್ ಸ್ಯಾಲಿಸ್ ಬರಿಯವರು ಐರ್ಲೆಂಡಿಗೆಂದು ಸಲಹೆ ಮಾಡಿದಂಥ "ಮುಸ್ಲಿಮರ ಸ್ಥಿರ ಸರ್ಕಾರ"ಗಳನ್ನು ರಚಿಸಿಬಿಡಬಹುದೆಂಬ ಭಯ ಅಲ್ಲಿನ ಹಿಂದೂ ಅಲ್ಪಸಂಖ್ಯಾತರಲ್ಲಿದೆ. ಆದರೆ ಸ್ಯಾಲಿಸ್ ಬರಿಯವರು ಪ್ರಸ್ತಾಪಿಸಿರುವ ಸರ್ಕಾರಕ್ಕೂ ಮುಸ್ಲಿಂ ಸರ್ಕಾರಕ್ಕೂ ಒಂದು ವ್ಯತ್ಯಾಸವಿರುತ್ತದೆ. ಸ್ಯಾಲಿಸ್ ಬರಿಯವರ ಕಲ್ಪನೆಯ ಸ್ಥಿರಸರ್ಕಾರ ಕೇವಲ ಇಪ್ಪತ್ತು ವರ್ಷಗಳ ಕಾಲಾವಧಿಯದಾದರೆ, ಮುಸ್ಲಿಂ ಸರ್ಕಾರ, ಪ್ರತ್ಯೇಕ ಮತ ಕ್ಷೇತ್ರಗಳಿರುವವರೆಗೂ ಇರುವಂಥದ್ದು. ಆದ್ದರಿಂದ ಎರಡೂ ಸಂದರ್ಭಗಳು ಒಂದೇ ರೀತಿಯವಲ್ಲ. ಪ್ರತ್ಯೇಕ ಮತಕ್ಷೇತ್ರಗಳನ್ನಾಧರಿಸಿದ ಹಿಂದೂಗಳ ಶಾಸನಬದ್ಧ ಬಹುಮತ ಮುಸ್ಲಿಮರ ಆಯ್ಕೆಯ ಫಲ. ಒಂದು ವಿಷಯದಲ್ಲಿ ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ಆಳ್ವಿಕೆ ನಡೆಸುವ ಹಿಂದೂ ಕೋಮುವಾದಿ ಬಹುಸಂಖ್ಯಾತರ ಸರ್ಕಾರ ಮುಸ್ಲಿಂ ಅಲ್ಪಸಂಖ್ಯಾತರ ಒಪ್ಪಿಗೆಯ ಫಲಿತಾಂಶವೇ. ಇನ್ನೊಂದು ವಿಷಯದಲ್ಲಿ ಹಿಂದೂ ಅಲ್ಪಸಂಖ್ಯಾತರ ಮೇಲೆ ಆಳ್ವಿಕೆ ನಡೆಸುವ ಮುಸ್ಲಿಂ ಬಹುಸಂಖ್ಯಾತರ ಸರ್ಕಾರ ಹಿಂದೂ ಅಲ್ಪಸಂಖ್ಯಾತರ ಅನುಮತಿಯಿಂದ ರಚಿತವಾಗುವ ಸರ್ಕಾರವಾಗದೆ, ಬ್ರಿಟಿಷ್ ಸರ್ಕಾರ ತನ್ನ ಅಧಿಕಾರ ಬಲದಿಂದ ಹೇರುವ ಸರ್ಕಾರವಾಗುತ್ತದೆ.

ಕೋಮು ತೀರ್ಪಿನ ಚರ್ಚೆಯನ್ನು ಈ ರೀತಿ ಮುಗಿಸಬಹುದು. ಕೋಮು ಸಮಸ್ಯೆಯ ಪರಿಹಾರದ ತನ್ನ "ಮಿತಾಕಾಂಕ್ಷೆ"ಯಲ್ಲಿ, ಹಿಂದೂ ಪ್ರಾಂತ್ಯಗಳ ಮುಸ್ಲಿಂ ಅಲ್ಪಸಂಖ್ಯಾತರಿಗೆ, ಈ ತೀರ್ಪು ವಿಶೇಷ ಸವಲತ್ತು ಕೊಟ್ಟು ಅಸಮತೆಯನ್ನೇನೂ ಉಂಟುಮಾಡುವುದಿಲ್ಲ. ಏಕೆಂದರೆ ಮುಸ್ಲಿಂ ಪ್ರಾಂತ್ಯಗಳಲ್ಲಿ ಅದು ಹಿಂದೂಗಳಿಗೆ ವಿಶೇಷ ಸವಲತ್ತನ್ನು ಕಲ್ಪಿಸಿಕೊಡುತ್ತದೆ. ಹಾಗೆಯೇ ಮುಸ್ಲಿಮರು ಬಹುಸಂಖ್ಯಾತರಾಗಿರುವ ಮುಸ್ಲಿಂ ಪ್ರಾಂತ್ಯಗಳಲ್ಲಿ ಅವರಿಗೆ ಶಾಸನಬದ್ಧ ಬಹುಮತವನ್ನು ಕೊಡುವ ಮೂಲಕವೂ, ಈ ನಿರ್ಣಯ ಅಸಮತೆಗೆ ಕಾರಣವಾಗುವುದಿಲ್ಲ. ಹಾಗೇನಾದರೂ ಇದ್ದರೆ ಮುಸ್ಲಿಂ ಸದಸ್ಯರ ಸಂಖ್ಯೆಯ ಮೇಲೆ ವಿಧಿಸಿರುವ ಶಾಸನಬದ್ಧ ಮಿತಿ, ಹಿಂದೂ ಪ್ರಾಂತ್ಯಗಳಲ್ಲಿ ಹಿಂದೂಗಳಿಗೆ ಶಾಸನಬದ್ಧ ಬಹುಮತವನ್ನು ಕೊಡುತ್ತದೆ. ಆದರೆ ಮತಗಟ್ಟೆಗಳ ವಿಷಯದಲ್ಲಿ ಇದೇ ಮಾತನ್ನು ಹೇಳಲಾಗುವುದಿಲ್ಲ. ಮತಗಟ್ಟೆಗಳ ವಿಷಯದಲ್ಲಿ ಈ ನಿರ್ಣಯ ಹಿಂದೂ ಮತ್ತು ಮುಸ್ಲಿಂ ಅಲ್ಪಸಂಖ್ಯಾತರಿಗೆ ಸರಿಸಮಾನವಾದ ಅವಕಾಶ, ಪ್ರಾತಿನಿಧ್ಯಗಳನ್ನು ಕೊಡುವುದಿಲ್ಲ. ಅದು ಹಿಂದೂ ಪ್ರಾಂತ್ಯಗಳಲ್ಲಿ, ಮುಸ್ಲಿಂ ಅಲ್ಪಸಂಖ್ಯಾತರಿಗೆ, ಮತಕ್ಷೇತ್ರಗಳ ವಿಷಯದಲ್ಲಿ ಸ್ವಯಂ ನಿರ್ಣಯದ ಹಕ್ಕನ್ನು ಕೊಟ್ಟರೆ, ಮುಸ್ಲಿಂ ಪ್ರಾಂತ್ಯಗಳಲ್ಲಿ ಹಿಂದೂ ಅಲ್ಪಸಂಖ್ಯಾತರಿಗೆ ಅದೇ ಹಕ್ಕನ್ನು ಕೊಡುವುದಿಲ್ಲ. ಹಿಂದೂ ಪ್ರಾಂತ್ಯಗಳಲ್ಲಿ ಮತ ಕ್ಷೇತ್ರ ವ್ಯವಸ್ಥೆ ಹೇಗಿರಬೇಕೆಂಬ ತೀರ್ಮಾನವನ್ನು ಮುಸ್ಲಿಂ ಅಲ್ಪಸಂಖ್ಯಾತರಿಗೇ ಬಿಟ್ಟಿದ್ದರೆ, ಹಿಂದೂಗಳಿಗೆ ಈ ಅವಕಾಶವನ್ನು ನಿರಾಕರಿಸಲಾಗಿದೆ. ಆದರೆ ಮುಸ್ಲಿಂ ಪ್ರಾಂತ್ಯಗಳಲ್ಲಿ, ಮತಕ್ಷೇತ್ರಗಳನ್ನು ನಿರ್ಧರಿಸುವ ಹಕ್ಕು ಮುಸ್ಲಿಂ ಅಲ್ಪಸಂಖ್ಯಾತರಿಗಿದ್ದರೆ, ಹಿಂದೂ ಅಲ್ಪಸಂಖ್ಯಾತರಿಗೆ ಈ ವಿಷಯದಲ್ಲಿ ಮಾತನಾಡುವ ಅವಕಾಶವೇ ಇಲ್ಲ. ಹೀಗಾಗಿ, ಮುಸ್ಲಿಂ ಪ್ರಾಂತ್ಯಗಳಲ್ಲಿ ಮುಸ್ಲಿಂ ಬಹುಸಂಖ್ಯಾತರಿಗೆ, ಶಾಸನಬದ್ಧ ಬಹುಮತ ಮತ್ತು ಪ್ರತ್ಯೇಕ ಮತಕ್ಷೇತ್ರಗಳ ಹಕ್ಕುಗಳೆರಡನ್ನು ಕೊಟ್ಟು ಕೋಮುವಾದಿ ತೀರ್ಪಿನ, ಹಿಂದೂ ಅಲ್ಪಸಂಖ್ಯಾತರ ಮೇಲೆ ತಮ್ಮ ಪ್ರಭಾವಕ್ಕೆ ಒಳಗಾಗದ ಮತ್ತು ಬದಲಿಸಲೂ ಆಗದ ಮುಸ್ಲಿಮರ ಆಳ್ವಿಕೆಯನ್ನು ಹೇರಿದೆಯೆಂದು ಹೇಳಬಹುದು.

ಕೋಮುವಾದಿ ತೀರ್ಪಿನಲ್ಲಿರುವ ಮೂಲಭೂತ ದೋಷವೆಂದರೆ ಇದೇ. ಇದು ಗಂಭೀರವಾದ ದೋಷವೆಂದು ಒಪ್ಪಿಕೊಳ್ಳಬೇಕಾಗಿದೆ. ಏಕೆಂದರೆ, ಅದು ಈಗಾಗಲೇ ಸ್ವತಸ್ಸಿದ್ಧವಾದ ಕೆಲವು ರಾಜಕೀಯ ಸೂತ್ರಗಳಿಗೆ ಅಪಚಾರವೆಸಗಿದೆ. ಮೊದಲನೆಯದೆಂದರೆ ಅಪರಿಮಿತ ರಾಜಕೀಯ ಅಧಿಕಾರವಿರುವ ಯಾರನ್ನೂ ನಂಬಲೇ ಬಾರದೆನ್ನುವುದು. ಈ ಬಗ್ಗೆ ಕೆಳಗಿನ ಸಾಲುಗಳು ಚೆನ್ನಾಗಿ ವಿವರಿಸುತ್ತವೆ:

**"ಯಾವುದೇ ದೇಶದಲ್ಲಿ, ಅಪರಿಮಿತ ಅಧಿಕಾರ ಹೊಂದಿರುವ, ಆಳುವ ಜನರಿದ್ದರೆ, ಅವರ ಆಳ್ವಿಕೆಗೆ ಒಳಪಟ್ಟ ಜನ ಸ್ವತಂತ್ರರಾಗಿರಲು ಸಾಧ್ಯವಿಲ್ಲ. ಏಕೆಂದರೆ, ಅಂಥ ಆಳ್ವಿಕೆ ಹೊಂದಿರುವ ಜನಕ್ಕೆ ಅನಿಯಂತ್ರಿತ ಅಧಿಕಾರವೆನ್ನುವುದು ವಿಷವಿದ್ದಂತೆ. ಚಾರಿತ್ರಿಕ ಸಂಶೋಧನೆ ಇದನ್ನು ಅನುಮಾನಕ್ಕೆ ಆಸ್ಪದವಿಲ್ಲದಂತೆ ಇದನ್ನು ದೃಢಪಡಿಸಿದೆ. ಈ ಅಧಿಕಾರಸ್ಥರು, ತಮಗೆ ಒಳಿತೆನಿಸಿದ್ದನ್ನೇ ಎಲ್ಲರ ಮೇಲೆ ಹೇರುವ ಪರಿಪಾಠದವರಾಗಿರುತ್ತಾರೆ. ಕೊನೆಯದಾಗಿ, ತಮ್ಮ ಅಧಿಕಾರ ಮುಂದುವರಿಕೆಯಲ್ಲೇ ಜನಹಿತ ಅಡಗಿದೆಯೆಂದೂ ಅವರು ತಿಳಿಯುತ್ತಾರೆ. ಸ್ವಾತಂತ್ರ್ಯವು ಯಾವಾಗಲೂ ರಾಜಕೀಯ ಅಧಿಕಾರದ ಮಿತಿಯನ್ನೂ ಬಯಸುತ್ತದೆ."**

ಎರಡನೆಯ ತತ್ವವೆಂದರೆ, ರಾಜನಿಗೆ ಹೇಗೆ ಆಳುವ ದೈವದತ್ತ ಹಕ್ಕು ಇಲ್ಲವೋ ಬಹುಮತ ಪಡೆದವರಿಗೂ ದೈವದತ್ತ ಹಕ್ಕಿರುವುದಿಲ್ಲ. ಬಹುಸಂಖ್ಯಾತರ ಆಳ್ವಿಕೆಯನ್ನು ಸಹಿಸುವುದೇಕೆಂದರೆ, ಅದು ಪರಿಮಿತ ಅವಧಿಯ ಆಳ್ವಿಕೆ ಮಾತ್ರ ಮತ್ತು ಆ ಆಳ್ವಿಕೆಯನ್ನು ಬದಲಾಯಿಸಬಹುದಾದ್ದರಿಂದ, ಮತ್ತು ಎರಡನೆಯದಾಗಿ ಅದು ಹಾಗೆಯೇ ಅಲ್ಪಸಂಖ್ಯಾತರ ಮತಗಳನ್ನು ಪಡೆದು, ಕೋಮು ಬಹುಮತವಾಗಿರುವುದಿಲ್ಲವಾದ್ದರಿಂದ ಅದು ರಾಜಕೀಯ ಬಹುಮತದ ಆಳ್ವಿಕೆಯಾಗಿರುತ್ತದೆ. ರಾಜಕೀಯ ಅಲ್ಪಸಂಖ್ಯಾತ ಗುಂಪಿನ ಮೇಲಿರುವ ರಾಜಕೀಯ ಬಹುಸಂಖ್ಯಾತರ ಹಿಡಿತ, ಹೀಗೆ ಪರಿಮಿತವಾದ್ದದಾರೆ, ಒಂದು ಕೋಮಿನ ಅಲ್ಪಸಂಖ್ಯಾತರನ್ನು ಇನ್ನೊಂದು ಕೋಮಿನ ಅಲ್ಪಸಂಖ್ಯಾತರ ನಿರಂತರ ಹಿಡಿತಕ್ಕೆ ಒಳಗಾಗಿಸುವುದು ಹೇಗೆ? ಒಂದು ಬಹುಸಂಖ್ಯಾತ ಕೋಮು, ಇನ್ನೊಂದು ಅಲ್ಪಸಂಖ್ಯಾತ ಕೋಮು ತನ್ನ ಮತಗಳನ್ನು ಪಡೆದು ಆಳ್ವಿಕೆ ನಡೆಸಬೇಕೆಂಬ ಬೇಡಿಕೆ ಮುಂದಿಟ್ಟಾಗಲೂ, ಅದನ್ನು ಲೆಕ್ಕಿಸದೆ ಅಧಿಕಾರ ನಡೆಸುವುದು, ಜನತಾಂತ್ರಿಕ ತತ್ವವನ್ನೇ ವಿಕೃತಗೊಳಿಸಿ ಹಿಂದೂ ಅಲ್ಪಸಂಖ್ಯಾತರ ರಕ್ಷಣೆಯನ್ನು ಕಡೆಗಣಿಸಿದಂತಾಗುತ್ತದೆ.

## II

ಇನ್ನು ಕೋಮು ತೀರ್ಪಿನ "ಮಹತ್ವಾಕಾಂಕ್ಷೆ"ಯ ಅಂಶದ ಕಡೆಗೆ ಗಮನ ಹರಿಸೋಣ. ಹಿಂದೂಗಳು ಸಮಸ್ಯೆಯೆಂದು ಪರಿಗಣಿಸುವುದು ಏನನ್ನು? ತನ್ನ "ಮಹತ್ವಾಕಾಂಕ್ಷೆ"ಯ ಅಂಶದಲ್ಲಿ, ಕೋಮು ತೀರ್ಪು ಮುಸ್ಲಿಂ ಪ್ರಾಂತ್ಯಗಳನ್ನು ಬೇಕೆಂದೇ ರಚಿಸುವುದಕ್ಕೆ ಸಂಬಂಧಪಟ್ಟಿದೆ. ಲಕ್ನೋ ಒಪ್ಪಂದದ ಸಂದರ್ಭದಲ್ಲಿ ಮುಸ್ಲಿಂ ಲೀಗ್ ಕೋಮುವಾದಿ ಪ್ರಶ್ನೆಯನ್ನು ಎತ್ತಿದ್ದು ಪರಿಮಿತ ಆಕಾಂಕ್ಷೆಯಿಂದ. ಮುಸ್ಲಿಂ ಲೀಗ್ ಮೊದಲನೆಯದಾಗಿ ತನ್ನ ಕೋಮುವಾದಿ ಯೋಜನೆಯ ಮಹತ್ವಾಕಾಂಕ್ಷೆಯ ಬಗ್ಗೆ ಮಾತನಾಡಿದ್ದು ದುಂಡುಮೇಜಿನ ಸಮ್ಮೇಳನದಲ್ಲಿ. ೧೯೩೫ರ ಕಾಯಿದೆಗೆ ಮುಂಚೆ ಹಿಂದೂಗಳೇ ಬಹುಸಂಖ್ಯಾತರಾಗಿರುವ, ಮುಸ್ಲಿಮರು ಅಲ್ಪಸಂಖ್ಯಾತರಾಗಿರುವ ಪ್ರಾಂತಗಳು ಹೆಚ್ಚಾಗಿದ್ದವು. ಮುಸ್ಲಿಮರು ಬಹುಸಂಖ್ಯಾತರಾಗಿದ್ದು, ಹಿಂದೂಗಳು ಅಲ್ಪಸಂಖ್ಯಾತರಾಗಿದ್ದ ಪ್ರಾಂತ್ಯಗಳಿದ್ದುದ್ದು ಕೇವಲ ಮೂರು, ಪಂಜಾಬ್, ಬಂಗಾಳ ಮತ್ತು

ಉತ್ತರ ವಾಯುವ್ಯ ಪ್ರಾಂತ್ಯ. ಮಾಂಟೆಗೂಚೆಮ್ಸ್ ಫರ್ಡ್ ಕಾಯಿದೆಯನ್ನು, ಉತ್ತರ ವಾಯುವ್ಯ ಪ್ರಾಂತ್ಯಕ್ಕೆ ವಿಸ್ತರಿಸಿರಲಿಲ್ಲವಾದ್ದರಿಂದ, ಅಲ್ಲಿ ಜವಾಬ್ದಾರಿ ಸರಕಾರವೂ ಇರಲಿಲ್ಲ ಮತ್ತು ಮುಸ್ಲಿಂ ಬಹುಮತವೂ ಪ್ರಾಮುಖ್ಯತೆ ಪಡೆದಿರಲಿಲ್ಲ. ಆದ್ದರಿಂದ ಪಂಜಾಬ್ ಮತ್ತು ಬಂಗಾಳ ಎರಡು ಪ್ರಾಂತ್ಯಗಳಲ್ಲಿ ಮಾತ್ರ ಮುಸ್ಲಿಂ ಬಹುಮತವಿದ್ದು ಹಿಂದೂಗಳು ಅಲ್ಪಸಂಖ್ಯಾತರಾಗಿದ್ದರು. ಮುಸ್ಲಿಮರು ಬಹುಸಂಖ್ಯಾತರಿರುವ ಪ್ರಾಂತ್ಯಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಅವರು ಬಯಸಿದ್ದರು. ಈ ಹಿನ್ನೆಲೆಯಲ್ಲೇ ಅವರು ಸಿಂಧನ್ನು ಬೊಂಬಾಯಿ ಪ್ರಾಂತ್ಯದಿಂದ ಬೇರ್ಪಡಿಸಿ, ಅದನ್ನು ಸ್ವಯಂ ಆಡಳಿತವುಳ್ಳ ಪ್ರಾಂತ್ಯವನ್ನಾಗಿಸಬೇಕೆಂದು, ಆ ವೇಳೆಗಾಗಲೇ ಪ್ರತ್ಯೇಕವಾಗಿದ್ದ ಉತ್ತರ ವಾಯುವ್ಯ ಪ್ರಾಂತ್ಯವನ್ನು ಸ್ವಯಂಮಾಡಳಿತವಿರುವ ಪ್ರಾಂತ್ಯದ ಮಟ್ಟಕ್ಕೆ ಏರಿಸಬೇಕೆಂದೂ ಬೇಡಿಕೆ ಇಟ್ಟರು. ಬೇರೆ ಲೆಕ್ಕಾಚಾರಗಳೇನೇ ಇರಲಿ, ಅವುಗಳ ಹಣಕಾಸು ಸ್ಥಿತಿಯ ದೃಷ್ಟಿಯಿಂದ, ಈ ಬೇಡಿಕೆಯನ್ನು ಈಡೇರಿಸುವುದು ಸಾಧ್ಯವಿರಲಿಲ್ಲ. ಸಿಂಧ್ ಆಗಲಿ, ಉತ್ತರ ವಾಯುವ್ಯ ಪ್ರಾಂತ್ಯವಾಗಲಿ, ಅವುಗಳ ಹಣಕಾಸಿನ ದೃಷ್ಟಿಯಿಂದ ತಮ್ಮ ಕಾಲಿನ ಮೇಲೆ ತಾವು ನಿಲ್ಲುವಂತಿರಲಿಲ್ಲ. ಆದರೆ ಮುಸ್ಲಿಮರನ್ನು ಸಂತೈಸುವ ಸಲುವಾಗಿ ಬ್ರಿಟಿಷ್ ಸರ್ಕಾರ ಸಿಂಧ್ ಮತ್ತು ಉತ್ತರ ವಾಯುವ್ಯ ಪ್ರಾಂತ್ಯ*ಗಳಿಗೆ ವಾರ್ಷಿಕ ಪರಿಹಾರ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಮಟ್ಟಕ್ಕೆ ಹೋಯಿತು. ಈ ಪರಿಹಾರ ಆ ಪ್ರಾಂತ್ಯಗಳು, ಆಯವ್ಯಯಗಳನ್ನು ಸರಿದೂಗಿಸಿಕೊಂಡು, ತಮ್ಮ ಕಾಲುಗಳ ಮೇಲೆ ತಾವು ನಿಲ್ಲಲು ಸಹಾಯಕವಾಗಿವೆ.

ಮುಸ್ಲಿಮರು ಬಹುಸಂಖ್ಯಾತರೂ, ಹಿಂದೂಗಳು, ಅಲ್ಪಸಂಖ್ಯಾತರೂ ಆಗಿದ್ದು ಸ್ವಾಯತ್ತವಾಗಿ ಸ್ವಯಮಾಡಳಿತ ಹೊಂದಿರುವ ಈ ನಾಲ್ಕು ಪ್ರಾಂತ್ಯಗಳು ಖಂಡಿತವಾಗಿಯೂ ಆಡಳಿತದ ಅನುಕೂಲಕ್ಕೆ ಆಗಲಿ ಅಥವಾ ಅವುಗಳ ಭೌಗೋಳಿಕ ಹೊಂದಾಣಿಕೆಯಿದೆಯೆಂದಾಗಲಿ ರೂಪುಗೊಂಡದ್ದಲ್ಲ, ಹಿಂದೂ ಪ್ರಾಂತ್ಯಗಳ ವಿರುದ್ಧವಾಗಿ ರಚಿತವಾದವು. ಹಿಂದೂ ಬಹುಸಂಖ್ಯಾತರ ಆಧಿಪತ್ಯದಲ್ಲಿ ಮುಸ್ಲಿಂ ಅಲ್ಪಸಂಖ್ಯಾತರು ಇರಲೇಬಾರದೆ ಮುಸ್ಲಿಮರ ಅಹಮಿಕೆಯನ್ನು ತಣಿಸುವ ದೃಷ್ಟಿಯಿಂದಲೂ ಮುಸ್ಲಿಂ ಪ್ರಾಂತ್ಯಗಳನ್ನು ಸೃಷ್ಟಿ ಮಾಡಿದ್ದಲ್ಲ. ಹಾಗಾದರೆ ಮುಸ್ಲಿಂ ಪ್ರಾಂತ್ಯಗಳನ್ನು ರಚಿಸಿದ ಉದ್ದೇಶವಾದರೂ ಏನು? ಹಿಂದೂಗಳ ಪ್ರಕಾರ, ಮುಸ್ಲಿಮರು ಪ್ರತ್ಯೇಕ ಮತಕ್ಷೇತ್ರಗಳು ಮತ್ತು ಶಾಸನಬದ್ಧ ಬಹುಮತದ ಸವಲತ್ತುಗಳನ್ನು ಪಟ್ಟುಹಿಡಿದು, ಪಡೆಯಲು ಕಾರಣವೆಂದರೆ, ಮುಸ್ಲಿಂ ಪ್ರಾಂತ್ಯಗಳಲ್ಲಿ ಮುಸ್ಲಿಮರ ಅಧಿಕಾರವನ್ನು ಪೂರ್ಣ ಸಂಯೋಜಿಸಿ, ವಿಶೇಷವಾಗಿ ಸಂಘಟಿಸಲು ಸಾಧ್ಯವಾಗುತ್ತದೆ ಎನ್ನುವುದೇ. ಈ ಪ್ರಕಾರ ಮುಸ್ಲಿಮರನ್ನು ಸಂಘಟಿಸುವ ಉದ್ದೇಶವೇನಿರಬಹುದೆಂದು, ಹಿಂದೂಗಳನ್ನು ಕೇಳಿದರೆ, ಹಿಂದೂ ಪ್ರಾಂತ್ಯಗಳು ಮುಸ್ಲಿಂ ಅಲ್ಪಸಂಖ್ಯಾತರಿಗೇನಾದರೂ ಕಿರುಕುಳ ಕೊಟ್ಟರೆ, ಮುಸ್ಲಿಂ ಪ್ರಾಂತ್ಯಗಳಲ್ಲಿ ಹಿಂದೂ ಅಲ್ಪಸಂಖ್ಯಾತರಿಗೆ ಕಿರುಕುಳ ಕೊಟ್ಟು ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುವುದು ಮುಸ್ಲಿಮರ ಯೋಜನೆಯಾಗಿದೆಯೆಂದು ಹೇಳುತ್ತಾರೆ. ಹೀಗೆ ಈ ಯೋಜನೆ ಒಂದು ರೀತಿಯ ರಕ್ಷಣಾವ್ಯವಸ್ಥೆಯಾಗಿದೆ. ಕಿರುಕುಳವನ್ನು ಕಿರುಕುಳದಿಂದ, ಭಯೋತ್ಪಾದನೆಯನ್ನು ಭಯೋತ್ಪಾದನೆಯಿಂದ ಸರಿದೂಗಿಸುವ ಯೋಜನೆ ಅದಾಗಿದೆ. ಹಿಂದೂ ಪ್ರಾಂತ್ಯಗಳಲ್ಲಿ, ಮುಸ್ಲಿಂ ಅಮಾಯಕರನ್ನು ಇತರ ಪ್ರಾಂತ್ಯಗಳಲ್ಲಿರುವ ಅವರ ಕೋಮಿನವರ ತಪ್ಪುಗಳಿಗೆ, ದಂಡಿಸಲು ನೆರವಾಗುವ ಈ ಯೋಜನೆ ಭಯಂಕರವಾದುದಾಗಿದೆ. ಇಲ್ಲಿ ಕಾನೂನು ಮತ್ತು ಶಾಂತಿಗಳನ್ನು ಎದಿರೇಟು

---

* ಸಿಂಧ್ ಪ್ರಾಂತ್ಯ ವಾರ್ಷಿಕ ೧,೦೫,೦೦,೦೦೦ ಪರಿಹಾರ ಪಡೆದರೆ, ಉತ್ತರ ವಾಯುವ್ಯ ಪ್ರಾಂತ್ಯ ರೂ. ೧,೦೦,೦೦,೦೦೦ ವಾರ್ಷಿಕ ಪರಿಹಾರ ಪಡೆಯುತ್ತಿದೆ.

ಹಾಕುವ ಮೂಲಕ ನಿಯಂತ್ರಿಸುವ ಪರಿಪಾಠವಿರುತ್ತದೆ. ಕೋಮುವಾದಿ ಒತ್ತೆಯಾಳುಗಳ ವ್ಯವಸ್ಥೆಯ ಮೂಲಕ ಕೋಮುಶಾಂತಿಯನ್ನು ಕಾಪಾಡುವ ಯೋಜನೆ ಇದು.

ಮತೀಯ ಪ್ರಾಂತ ವ್ಯವಸ್ಥೆಯನ್ನು ಈ ರೀತಿ ದುಡಿಸಿಕೊಳ್ಳಬಹುದೆಂದು ಮುಸ್ಲಿಮರು ಆರಂಭದಿಂದಲೂ ಅರಿತಿದ್ದರೆಂಬುದನ್ನು ೧೯೨೭ರಲ್ಲಿ ಕಲ್ಕತ್ತದಲ್ಲಿ ನಡೆದ ಮುಸ್ಲಿಮ್ ಲೀಗ್ ಅಧಿವೇಶನದ ಅಧ್ಯಕ್ಷರಾಗಿ ಮೌಲಾನಾ ಅಬುಲ್ ಕಲಂ ಆಜಾದ್ ಅವರ ಭಾಷಣದಿಂದ ಸ್ಪಷ್ಟವಾಗುತ್ತದೆ. ಆ ಭಾಷಣದಲ್ಲಿ ಮೌಲಾನಾ ಹೀಗೆ ಘೋಷಿಸಿದರು:

> **"ಲಕ್ನೋ ಒಪ್ಪಂದದಿಂದ ಅವರು ತಮ್ಮ ಹಿತಾಸಕ್ತಿಗಳನ್ನು ಮಾರಿಕೊಂಡಿದ್ದಾರೆ. ಕಳೆದ ಮಾರ್ಚ್ ತಿಂಗಳಿನ ದೆಹಲಿ ಪ್ರಸ್ತಾಪಗಳಲ್ಲಿ ಮೊದಲಬಾರಿಗೆ ಭಾರತದಲ್ಲಿ ಮುಸ್ಲಿಮರ ನಿಜವಾದ ಹಕ್ಕುಗಳನ್ನು ಮಾನ್ಯಮಾಡುವ ಪ್ರಥಮ ಹೆಜ್ಜೆಗಳಿದೆಯೆನ್ನಬಹುದು. ೧೯೧೬ರ ಒಪ್ಪಂದದಲ್ಲಿ ಪ್ರತ್ಯೇಕ ಮತ ಕ್ಷೇತ್ರಗಳನ್ನು ಕೊಡಲಾಯಿತಾದರೂ ಮುಸ್ಲಿಮರ ಸಂಖ್ಯಾಬಾಹುಳ್ಯವನ್ನು ಮಾನ್ಯ ಮಾಡುವುದು ಅತಿಮುಖ್ಯವಾಗಿತ್ತು. ಆದರೆ ಭಾರತದಲ್ಲಿ ಮುಂದೆ ಮುಸ್ಲಿಮರಿಗೆ ಸರಿಯಾದ ಹಕ್ಕುಗಳನ್ನು ಖಾತರಿಪಡಿಸುವ ಪ್ರಯತ್ನ ದೆಹಲಿಯಲ್ಲಾಗಿದೆ. ಪಂಜಾಬ್ ಮತ್ತು ಬಂಗಾಳಗಳಲ್ಲಿ ಮುಸ್ಲಿಮರಿಗಿರುವ ಬಹುಮತ ತೀರಾ ಕ್ಷುಲ್ಲಕವಾದದ್ದು ಮತ್ತು ಜನಗಣತಿ ಮಾತ್ರ ತೋರಿಸುವಂಥದ್ದು. ದೆಹಲಿಯ ಸೂಚನೆಗಳು ಅವರಿಗೆ ಐದು ಪ್ರಾಂತ್ಯಗಳನ್ನು ಕೊಡುವಂತಿದೆ. ಅದರಲ್ಲಿ ಕನಿಷ್ಠ ಮೂರು ಪ್ರಾಂತ್ಯಗಳಲ್ಲಿ (ಸಿಂಧ್, ವಾಯುವ್ಯ ಪ್ರಾಂತ್ಯ ಮತ್ತು ಬಲೂಚಿಸ್ತಾನ) ಮುಸ್ಲಿಮರಿಗೆ ಹೆಚ್ಚಿನ ಬಹುಮತವಿರುತ್ತದೆ. ಮುಸ್ಲಿಮರು ಈ ಮಹಾಬೆಳವಣಿಗೆಯನ್ನು ಮನಗಾಣದಿದ್ದರೆ, ಅವರು ಜೀವಿಸಲು ಅನರ್ಹರು. ಈಗ ಒಂಬತ್ತು ಹಿಂದೂ ಪ್ರಾಂತ್ಯಗಳಿಗೆ ಸಂವಾದಿಯಾಗಿ ಐದು ಮುಸ್ಲಿಂ ಪ್ರಾಂತ್ಯಗಳಿರುತ್ತವೆ. ಹಿಂದೂ ಪ್ರಾಂತ್ಯಗಳಲ್ಲಿ ಮುಸ್ಲಿಮರನ್ನು ನಡೆಸಿಕೊಳ್ಳುವ ರೀತಿಯಲ್ಲಿಯೇ ಮುಸ್ಲಿಂ ಪ್ರಾಂತ್ಯಗಳಲ್ಲಿ ಹಿಂದೂಗಳನ್ನು ನಡೆಸಿಕೊಳ್ಳಲಾಗುತ್ತದೆ. ಇದು ದೊಡ್ಡ ಲಾಭವಲ್ಲವೇ? ಇದು ಮುಸ್ಲಿಮರು ತಮ್ಮ ಹಕ್ಕುಗಳನ್ನು ಚಲಾಯಿಸಲು ಗಳಿಸಿಕೊಂಡ ಅಸ್ತ್ರವಲ್ಲವೇ?"**

ಮುಸ್ಲಿಂ ಪ್ರಾಂತಗಳ ಅಧಿಕಾರ ವಹಿಸಿಕೊಳ್ಳುವವರಿಗೆ ಈ ಯೋಜನೆಯ ಪ್ರಯೋಜನ ಗೊತ್ತಿರುತ್ತದೆ ಮತ್ತು ಅದನ್ನು ಹಿಂಜರಿಯದೆ ಉಪಯೋಗಿಸಿಕೊಳ್ಳುತ್ತಾರೆ ಎನ್ನುವ ವಿಷಯ ಇತ್ತೀಚೆಗೆ ಬಂಗಾಳದ ಪ್ರಧಾನಿಯಾಗಿದ್ದ ಶ್ರೀ ಫಜ್ಲುಲ್ ಹಕ್‌ರ ಭಾಷಣದಿಂದ ತಿಳಿಯುತ್ತದೆ.

ಕೋಮು ಸಮಸ್ಯೆಯ ಮಹತ್ವಾಕಾಂಕ್ಷೆಯ ಕಕ್ಷೆಗೆ ಬರುವ ಕೋಮು ಆಧಾರಿತ ಪ್ರಾಂತ್ಯಗಳ ಯೋಜನೆಯನ್ನು ಕೋಮು ಕ್ರೌರ್ಯವೆಸಗುವ ಯಂತ್ರವನ್ನಾಗಿ ಬಳಸಿಕೊಳ್ಳುವ ಬಗ್ಗೆ ಅನುಮಾನವೇ ಇಲ್ಲ. ಕೋಮುಪ್ರಾಂತ್ಯಗಳ ಸಾರವೇ ಒತ್ತೆಯಾಳುಗಳು. ಪ್ರತ್ಯೇಕ ಮತಕ್ಷೇತ್ರಗಳಿಂದ ಬೆಂಬಲಿತವಾದ ಈ ವ್ಯವಸ್ಥೆ ಸರ್ವಥಾ ಸಮರ್ಥನೀಯವಲ್ಲ. ಮುಸ್ಲಿಂ ಪ್ರಾಂತ್ಯಗಳ ಸ್ಥಾಪನೆಯ ಬೇಡಿಕೆಯ ಹಿಂದಿನ ಉದ್ದೇಶ ಇದೇ. ಆದರೆ, ಅದರಿಂದ ರೂಪುಗೊಳ್ಳುವುದು ದುಷ್ಟವ್ಯವಸ್ಥೆ. ಇದರಲ್ಲಿ ಅನುಮಾನಕ್ಕೆ ಆಸ್ಪದವೇ ಇಲ್ಲ. ಪ್ರತ್ಯೇಕ ಮತಕ್ಷೇತ್ರ ಮತ್ತು ಕೋಮು ಪ್ರಾಂತ್ಯಗಳನ್ನು ಆಧರಿಸಿದ ಶಾಸನಬದ್ಧ ಕೋಮು ಬಹುಮತ, ಶಾಸನಬದ್ಧ ಬಹುಸಂಖ್ಯಾತರು ವಿಶೇಷವಾಗಿ ಅಲ್ಪಸಂಖ್ಯಾತರಿಗೆ ಕಿರುಕುಳ ಕೊಡುವ ವ್ಯವಸ್ಥೆಯಾಗಿದೆ. ಈ ಎರಡೂ ಕೋಮು ಸಮಸ್ಯೆಯನ್ನು ಒಳಗೊಂಡಿರುವ ಕೇಡಿನ ಅಂಶಗಳೇ.

ಈ ಸಮಸ್ಯೆಯ ಇರವಿಗೆ ಹಿಂದೂಗಳು ಮುಸ್ಲಿಮರನ್ನು, ಮುಸ್ಲಿಮರು ಹಿಂದೂಗಳನ್ನು

ಹೊಣೆಗಾರರೆಂದು ದೂರಿಕೊಳ್ಳುತ್ತಾರೆ. ಹಿಂದೂಗಳು, ಮುಸ್ಲಿಮರನ್ನು ಹಠಮಾರಿಗಳೆಂದು ಜರಿದರೆ, ಮುಸ್ಲಿಮರು ಹಿಂದೂಗಳ ಮೇಲೆ ಸಣ್ಣತನದ ಆಪಾದನೆ ಹೊರಿಸುತ್ತಾರೆ. ಆದರೆ, ಮುಸ್ಲಿಮರ ದುರಾಗ್ರಹಪೂರಿತ ಬೇಡಿಕೆಗಳಾಗಲಿ, ಹಿಂದೂಗಳ ರಿಯಾಯಿತಿ ತೋರಿಸುವಾಗಿನ ಅಸೂಯೆ ಮತ್ತು ಸಣ್ಣತನವಾಗಲಿ, ಕೋಮು ಸಮಸ್ಯೆಯ ಇರವಿಗೆ ಕಾರಣವಲ್ಲವೆಂಬ ಸತ್ಯವನ್ನು ಇಬ್ಬರೂ ಮರೆಯುತ್ತಾರೆ. ಪರಸ್ಪರ ದ್ವೇಷದಿಂದ ಕುದಿಯುವ ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತರನ್ನು ಮುಖಾಮುಖಿಯಾಗಿಸುವವರೆಗೂ ಸಮಸ್ಯೆ ಇದ್ದೇ ಇರುತ್ತದೆ. ಪ್ರತ್ಯೇಕ ಮತಕ್ಷೇತ್ರಗಳ ವಿರುದ್ಧವಾಗಿ, ಜಂಟಿ ಮತ ಕ್ಷೇತ್ರಗಳು ಮತ್ತು ಜನಸಂಖ್ಯಾ ಪ್ರಮಾಣದ ವಿರುದ್ಧ ವಿಶೇಷ ಸವಲತ್ತುಗಳ ವಾಗ್ವಾದಗಳು ಅಲ್ಪಸಂಖ್ಯಾತರನ್ನು ಬಹುಸಂಖ್ಯಾತರ ವಿರುದ್ಧ ಎತ್ತಿಕಟ್ಟುವ ಸ್ಥಿತಿಯಲ್ಲಿಯೇ ಅಂತರ್ಗತವಾಗಿರುತ್ತದೆ. ಒಂದು ಬಹುಸಂಖ್ಯಾತ ಮತ್ತೊಂದು ಅಲ್ಪಸಂಖ್ಯಾತ ಕೋಮುಗಳು ಪರಸ್ಪರ ಮುಖಾಮುಖಿಯಾಗಿ ಸರ್ಕಾರದ ಕಬ್ಬಿಣದ ಪಂಜರದಲ್ಲಿರಲು ಬಿಡದಿರುವುದೇ ಕೋಮುಸಮಸ್ಯೆಗೆ ಉತ್ತಮ ಪರಿಹಾರ.

ಪಾಕಿಸ್ತಾನ ಕೋಮು ಸಮಸ್ಯೆಗೆ ಎಷ್ಟು ಮಾತ್ರ ಪರಿಹಾರ ಒದಗಿಸಬಲ್ಲುದು?

ಈ ಪ್ರಶ್ನೆಗೆ ಉತ್ತರ ಸ್ಪಷ್ಟವಾಗಿಯೇ ಇದೆ. ಈಗ ಬಂಗಾಳ ಮತ್ತು ಉತ್ತರ ವಾಯುವ್ಯ ಪ್ರಾಂತ್ಯಗಳ ಗಡಿಗಳನ್ನೇ ಅನುಸರಿಸಿ ಪಾಕಿಸ್ತಾನದ ರಚನೆಯಾದರೆ, ಅದು ಕೋಮು ಸಮಸ್ಯೆಯ ಹೃದಯ ಸ್ಥಾನದಲ್ಲಿರುವ ಸಮಸ್ಯೆಯನ್ನು ಪರಿಹರಿಸಲಾರದು. ಅದು ಆ ಸಮಸ್ಯೆಯನ್ನು ಹುಟ್ಟುಹಾಕಿರುವ, ಅಂದರೆ ಅಲ್ಪಸಂಖ್ಯಾತರನ್ನು ಬಹುಸಂಖ್ಯಾತರ ವಿರುದ್ಧ ಎತ್ತಿಕಟ್ಟುವ, ಅಂಶಗಳನ್ನು ಜೀವಂತವಿರಿಸಿಬಿಡುತ್ತದೆ. ಹಿಂದೂ ಅಲ್ಪಸಂಖ್ಯಾತರನ್ನು ಆಳುವ, ಮುಸ್ಲಿಂ ಬಹುಸಂಖ್ಯಾತರ ಸರ್ಕಾರ, ಎರಡೂ ಇಂದಿನ ಪರಿಸ್ಥಿತಿಯಲ್ಲಿ ಕೆಟ್ಟವೇ. ಈಗ ಕೇಳಿರುವ ಗಡಿಗಳೊಂದಿಗೇ ಆ ಪ್ರಾಂತ್ಯಗಳನ್ನು ಸೇರಿಸಿ ಪಾಕಿಸ್ತಾನದ ರಚನೆಯಾದರೆ ಅವೇ ಕೇಡುಗಳ ತೊಂದರೆ ಉದ್ಭವಿಸುತ್ತವೆ. ಇದರ ಜೊತೆಗೆ, ಕೋಮು ಸಮಸ್ಯೆಯ ಮಹತ್ವಾಕಾಂಕ್ಷೆಗೆ ದಾರಿ ಮಾಡಿಕೊಟ್ಟಿರುವ ದುಷ್ಟತನವೂ ಉಲ್ಬಣಗೊಳ್ಳುತ್ತದೆ. ಸದ್ಯಕ್ಕೆ, ಅಲ್ಪಸಂಖ್ಯಾತರಿಗೆ, ಕೋಮು ಪ್ರಾಂತ್ಯಗಳಲ್ಲಿ ಆಗಬಹುದಾದ ಕಿರುಕುಳವನ್ನು ನಿಯಂತ್ರಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕಿದೆ. ಒತ್ತೆಯಾಳುಗಳಂತಿರುವವರ ರಕ್ಷಣೆಯ ಅಧಿಕಾರ ಬಹುತೇಕ ಹಿಂದೂಗಳ ಪ್ರಭಾವವೇ ಇರುವ ಇಂದಿನ ಕೇಂದ್ರ ಸರ್ಕಾರಕ್ಕಿದೆ. ಈ ಸರ್ಕಾರಕ್ಕೆ ಹಿಂದೂಗಳ ಪ್ರಾಂತ್ಯಾಡಳಿತದಲ್ಲಿ ಹಸ್ತಕ್ಷೇಪ ಮಾಡುವ ಅಧಿಕಾರವೂ ಇದೆ. ಆದರೆ ಪಾಕಿಸ್ತಾನ ಒಂದು ಮುಸ್ಲಿಂ ರಾಷ್ಟ್ರವಾಗಿ, ಆಂತರಿಕ ಮತ್ತು ಅಂತರ್‌ರಾಷ್ಟ್ರೀಯ ಪರಮಾಧಿಕಾರ ಗಳಿಸಿಕೊಂಡರೆ, ಕೇಂದ್ರ ಸರ್ಕಾರದ ಹತೋಟಿಯಿಂದ ಪೂರ್ಣವಾಗಿ ಮುಕ್ತವಾಗುತ್ತದೆ. ಆಗ ಹಿಂದೂ ಅಲ್ಪಸಂಖ್ಯಾತರು ತಮ್ಮ ದೂರುಗಳನ್ನು ಯಾವ ಹೊರಗಿನ ಶಕ್ತಿಯೊಂದಿಗೂ ಹೇಳಿಕೊಳ್ಳುವ ಹಾಗಿಲ್ಲ. ಯಾವ ಹೊರಗಿನ ಶಕ್ತಿಗೂ ಅವರ ಪರವಾಗಿ ಹಸ್ತಕ್ಷೇಪ ಮಾಡಿ, ಕಿರುಕುಳವನ್ನು ತಪ್ಪಿಸುವ ಅಧಿಕಾರವಿರುವುದಿಲ್ಲ. ಆದ್ದರಿಂದ ಪಾಕಿಸ್ತಾನದಲ್ಲಿರುವ ಹಿಂದೂಗಳ ಸ್ಥಿತಿ, ಟರ್ಕಿಯವರ ಅಧೀನದಲ್ಲಿರುವ ಆರ್ಮೇನಿಯನ್ನರಂತೆ ಅಥವಾ ಜಾರ್ ದೊರೆಗಳ ರಷ್ಯಾದ, ಅಥವಾ ನಾಜಿ ಜರ್ಮನಿಯ ಅಧೀನದಲ್ಲಿದ್ದ ಯಹೂದಿಗಳಂತೆ ಆಗಿಬಿಡುತ್ತದೆ. ಈ ರೀತಿಯ ಯೋಜನೆ ಒಪ್ಪಿಗೆಯಾಗದೆ ಹಿಂದೂಗಳು ತಮ್ಮ ಅಸಹಾಯಕ ಧರ್ಮೀಯರನ್ನು ಮತಾಂಧ ಮುಸ್ಲಿಂ ರಾಷ್ಟ್ರವೊಂದರಲ್ಲಿ ಬಿಡಲು ಒಪ್ಪದೆ ಪಾಕಿಸ್ತಾನದ ರಚನೆಯನ್ನೇ ತಿರಸ್ಕರಿಸಬಹುದು.

## III

ಇದು ಪಾಕಿಸ್ತಾನ ಯೋಜನೆಯ ಅನುಷ್ಠಾನದಿಂದ ಆಗುವ ಪರಿಣಾಮಗಳ ಬಗ್ಗೆ ಒಂದು ಮುಕ್ತ ಹೇಳಿಕೆಯಷ್ಟೆ. ಆದರೆ ಈ ಪರಿಣಾಮಗಳ ಮೂಲವನ್ನು ಅರಿಯಲು ಎಚ್ಚರ ವಹಿಸಬೇಕು. ಅವುಗಳ ಉಗಮ ಪಾಕಿಸ್ತಾನ ಯೋಜನೆಯಲ್ಲೇ ಇದೆಯೇ ಅಥವಾ ಅದಕ್ಕೆ ನಿಗದಿಯಾಗಬಹುದಾದ ನಿರ್ದಿಷ್ಟ ಗಡಿಗಳಲ್ಲಿ ಇದೆಯೇ? ಈ ಅನಿಷ್ಟಗಳು ಯೋಜನೆಯಲ್ಲೇ ಅಂತರ್ಗತವಾಗಿದ್ದರೆ, ಹಿಂದೂಗಳು ಆ ಬಗ್ಗೆ ತಲೆಕೆಡಿಸಿಕೊಂಡು ಸಮಯ ಹಾಳುಮಾಡಿಕೊಳ್ಳುವುದು ಅನವಶ್ಯಕ. ಆ ಯೋಜನೆಯನ್ನು ಪೂರ್ಣವಾಗಿ ತಿರಸ್ಕರಿಸಿ ಬಿಡಲು ಸಮರ್ಥನೆಯಿದೆ. ಬದಲಾಗಿ, ಈ ಅನಿಷ್ಟಗಳೆಲ್ಲಾ, ಗಡಿಗಳ ಪರಿಣಾಮವಾದರೆ, ಪಾಕಿಸ್ತಾನದ ಪ್ರಶ್ನೆ ಕೇವಲ ಗಡಿಗಳನ್ನು ಮಾತ್ರ ಬದಲಾಯಿಸುವ ಪ್ರಶ್ನೆಯಾಗುತ್ತದೆ.

ಪಾಕಿಸ್ತಾನ ಸಮಸ್ಯೆಯ ಆಳವಾದ ಅಧ್ಯಯನ, ಅದಕ್ಕೆ ಸಂಬಂಧಿಸಿದ ಅನಿಷ್ಟಗಳು, ಪಾಕಿಸ್ತಾನ ಯೋಜನೆಯಲ್ಲೇ ಅಂತರ್ಗತವಾಗಿಲ್ಲವೆಂದು ತೋರಿಸಿಕೊಡುತ್ತದೆ. ಅದರ ಫಲಿತಾಂಶವಾಗಿ ಏನಾದರೂ ಕೇಡುಗಳು ಕಂಡುಬಂದರೆ, ಅವು ಅದರ ಗಡಿಗೆ ಸಂಬಂಧಪಟ್ಟಿರುತ್ತದೆ. ಆ ಪ್ರಾಂತ್ಯಗಳ ಜನಸಂಖ್ಯಾ ವಿವರಗಳನ್ನು ಅಭ್ಯಾಸ ಮಾಡಿದರೆ ಈ ವಿಷಯ ನಿಚ್ಚಳವಾಗುತ್ತದೆ. ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನಗಳಲ್ಲಿ ಈ ಕೇಡುಗಳು ಮರುಕಳಿಸಿದರೆ ಅದಕ್ಕೆ ಅವು ಜನಾಂಗೀಯ ರಾಜ್ಯಗಳಾಗಿಲ್ಲದಿರುವುದೇ ಕಾರಣ. ಆ ರಾಜ್ಯಗಳು ಹಿಂದಿನಂತೆಯೇ ಹಿಂದೂ ಅಲ್ಪಸಂಖ್ಯಾತರು ಮತ್ತು ಮುಸ್ಲಿಂ ಬಹುಸಂಖ್ಯಾತರನ್ನೊಳಗೊಂಡ ಮಿಶ್ರ ರಾಜ್ಯಗಳಾಗಿರುತ್ತವೆ. ಈ ಕೇಡುಗಳು, ಮಿಶ್ರ ರಾಜ್ಯಗಳು ನಿವಾರಿಸಿಕೊಳ್ಳಲಾಗದ ಕೇಡುಗಳು. ಪಾಕಿಸ್ತಾನ ಒಂದೇ ಜನಾಂಗೀಯ ರಾಷ್ಟ್ರವಾಗುವುದಾದರೆ, ಈ ಕೇಡುಗಳು ತಂತಾನೇ ಮಾಯವಾಗುತ್ತವೆ. ಪಾಕಿಸ್ತಾನದೊಳಗೆ, ಪ್ರತ್ಯೇಕ ಮತಕ್ಷೇತ್ರಗಳ ಸಮಸ್ಯೆಯೇ ಏಳುವುದಿಲ್ಲ. ಯಾಕೆಂದರೆ ಸಜಾತೀಯ ಪಾಕಿಸ್ತಾನದಲ್ಲಿ ಆಳುವ ಬಹುಸಂಖ್ಯಾತರಾಗಲಿ, ರಕ್ಷಣೆಯ ಅವಶ್ಯಕತೆ ಇರುವ ಅಲ್ಪಸಂಖ್ಯಾತರಾಗಲೀ ಇರುವುದಿಲ್ಲ. ಹಾಗೆಯೇ ವಿರೋಧಿ ಅಲ್ಪಸಂಖ್ಯಾತ ಕೋಮೊಂದನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಬೇಕಾದ ಅವಶ್ಯಕತೆಯೂ ಬಹುಸಂಖ್ಯಾತ ಕೋಮಿಗೆ ಇರುವುದಿಲ್ಲ.

ಆದ್ದರಿಂದ, ಇಡೀ ಪ್ರಶ್ನೆ ಗಡಿಗಳನ್ನು ನಿಗದಿಗೊಳಿಸುವ ಪ್ರಶ್ನೆಯಾಗಿ ಉಳಿಯುತ್ತದೆ. ತನ್ನೆಲ್ಲಾ ಕೇಡುಗಳ ಸಹಿತ, ಅಲ್ಪಸಂಖ್ಯಾತರು, ಬಹುಸಂಖ್ಯಾತರನ್ನೊಳಗೊಂಡ ಮಿಶ್ರ ರಾಷ್ಟ್ರವಾಗಿರುವ ಗಡಿಗಳೊಂದಿಗೆ ಪಾಕಿಸ್ತಾನವನ್ನು ಗಡಿಗಳೊಂದಿಗೆ ಪಾಕಿಸ್ತಾನವನ್ನು ರಚಿಸುವುದರ ಬದಲಿಗೆ, ಈ ಎಲ್ಲ ಕೇಡುಗಳಿಂದ ಮುಕ್ತವಾದ ಒಂದೇ ಜನಾಂಗೀಯ ಅಂದರೆ ಮುಸ್ಲಿಂ ಜನಾಂಗವನ್ನೇ ಒಳಗೊಳ್ಳುವ ಗಡಿಗಳುಳ್ಳ ಪಾಕಿಸ್ತಾನವನ್ನು ರಚಿಸಲು ಸಾಧ್ಯವೇ? ಮುಸ್ಲಿಂ ಲೀಗ್‌ನ ಯೋಜನೆಯಡಿ ಬರುವ ಬಹುತೇಕ ಪ್ರದೇಶಗಳನ್ನು ಗಡಿಗಳ ಅಲ್ಪಸ್ವಲ್ಪ ಹೊಂದಾಣಿಕೆಗಳೊಂದಿಗೆ ಒಂದೇ ಜನಾಂಗದ ರಾಷ್ಟ್ರ ರಚಿಸಲು ಸಾಧ್ಯ, ಉಳಿದ ಪ್ರದೇಶಗಳಲ್ಲಿ ಅಲ್ಲಿಯ ಜನ(ಅಲ್ಪಸಂಖ್ಯಾತ)ರನ್ನು ಮಾತ್ರ ಸ್ಥಳಾಂತರಿಸುವ ಮೂಲಕ ಜನಾಂಗೀಯ ರಾಷ್ಟ್ರ ರಚನೆಯನ್ನು ಪೂರ್ಣಗೊಳಿಸಬಹುದು.

ಪಾಕಿಸ್ತಾನ ಯೋಜನೆಯಡಿ ಬರುವ ಪ್ರದೇಶಗಳಲ್ಲಿ ಹರಡಿರುವ ವಿವಿಧ ಕೋಮುಗಳ ಜನಸಂಖ್ಯೆಯನ್ನು ಪರಿಶಿಷ್ಟ V, X, XIರಲ್ಲಿ ಕೊಡಲಾಗಿದೆ. ಈ ಅಂಕಿ–ಅಂಶಗಳನ್ನು ಓದುಗರು ಸೂಕ್ಷ್ಮವಾಗಿ ಗಮನಿಸಬೇಕು, ಮತ್ತು ಒಂದೇ ಜನಾಂಗೀಯ ರಾಷ್ಟ್ರವನ್ನೂ ರಚಿಸಲು ಗಡಿಗಳನ್ನು ಹೇಗೆ ಬದಲಾಯಿಸಬಹುದೆಂದು ಒಂದು ಭೂಪಟವನ್ನು ಕೊಡಲಾಗಿದೆ. ಪಂಜಾಬನ್ನು ಗಮನಕ್ಕೆ ತೆಗೆದುಕೊಂಡರೆ ಎರಡು ವಿಷಯಗಳು ತಿಳಿಯುತ್ತವೆ.

೧. ಕೆಲವು ಜಿಲ್ಲೆಗಳಲ್ಲಿ ಮುಸ್ಲಿಮರ ಪ್ರಾಬಲ್ಯವಿದೆ. ಇನ್ನು ಕೆಲವು ಜಿಲ್ಲೆಗಳಲ್ಲಿ ಹಿಂದೂಗಳು ಪ್ರಬಲರಾಗಿದ್ದಾರೆ. ಇಬ್ಬರೂ ಹೆಚ್ಚುಕಡಿಮೆ ಸರಿಸಮಾನವಾಗಿರುವ ಜಿಲ್ಲೆಗಳು ತೀರಾ ವಿರಳ ಮತ್ತು,

೨. ಹಿಂದೂಗಳ ಪ್ರಾಬಲ್ಯವಿರುವ ಮತ್ತು ಮುಸ್ಲಿಮರ ಪ್ರಾಬಲ್ಯವಿರುವ ಜಿಲ್ಲೆಗಳು ಸಂಮಿಶ್ರಗೊಂಡಿಲ್ಲ. ಈ ಎರಡು ರೀತಿಯ ಜಿಲ್ಲೆಗಳು ಪ್ರತ್ಯೇಕ ಪ್ರದೇಶಗಳಾಗಿವೆ. ಪಶ್ಚಿಮ ಪಾಕಿಸ್ತಾನದ ರಚನೆಗೆ ಬಂಗಾಳ ಮತ್ತು ಅಸ್ಸಾಂಗಳಲ್ಲಿ ಜನಸಂಖ್ಯಾ ಹರಡುವಿಕೆಯನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ಜನಸಂಖ್ಯಾ ಪರಿಶೀಲನೆಯಿಂದ ಕೆಳಕಂಡ ವಿವರಗಳು ದೊರೆಯುತ್ತವೆ.

(೧) ಬಂಗಾಳದ ಕೆಲವು ಜಿಲ್ಲೆಗಳಲ್ಲಿ ಮುಸ್ಲಿಮರ ಪ್ರಾಬಲ್ಯವಿದ್ದರೆ, ಇತರ ಜಿಲ್ಲೆಗಳಲ್ಲಿ ಹಿಂದೂಗಳ ಪ್ರಾಬಲ್ಯವಿದೆ.

(೨) ಅಸ್ಸಾಮಿನಲ್ಲೂ ಕೆಲವು ಜಿಲ್ಲೆಗಳಲ್ಲಿ ಮುಸ್ಲಿಮರ ಪ್ರಾಬಲ್ಯವಿದ್ದರೆ, ಇತರ ಜಿಲ್ಲೆಗಳಲ್ಲಿ ಹಿಂದೂಗಳ ಪ್ರಾಬಲ್ಯವಿದೆ.

(೩) ಹಿಂದೂ ಪ್ರಾಬಲ್ಯವಿರುವ ಜಿಲ್ಲೆಗಳು ಮತ್ತು ಮುಸ್ಲಿಮರು ಪ್ರಾಬಲ್ಯವಿರುವ ಜಿಲ್ಲೆಗಳು ಸಂಮಿಶ್ರಣಗೊಂಡಿಲ್ಲ. ಅವು ಪ್ರತ್ಯೇಕ ಪ್ರದೇಶಗಳೇ ಆಗಿವೆ.

(೪) ಬಂಗಾಳ ಮತ್ತು ಅಸ್ಸಾಮಿನ ಮುಸ್ಲಿಂ ಪ್ರಾಬಲ್ಯವಿರುವ ಜಿಲ್ಲೆಗಳೂ ಭೌಗೋಳಿಕವಾಗಿ ಹೊಂದಿಕೊಂಡೇ ಇವೆ.

ಈ ವಿವರಗಳ ಹಿನ್ನೆಲೆಯಲ್ಲಿ, ಪಂಜಾಬ್, ಬಂಗಾಳ ಮತ್ತು ಅಸ್ಸಾಮಿನ ಗಡಿಗಳಿಂದ ಕೂಡಿದ, ಒಂದೇ ಜನಾಂಗದ ಮುಸ್ಲಿಂ ರಾಜ್ಯವನ್ನು ನಿರ್ಮಿಸಲು ಖಂಡಿತವಾಗಿಯೂ ಸಾಧ್ಯ. ಅದೂ ಹಿಂದೂ ಪ್ರಾಬಲ್ಯವಿರುವ ಪ್ರದೇಶಗಳನ್ನು ಹೊರತುಪಡಿಸಿಯೇ ಈ ರಾಜ್ಯದ ರಚನೆ ಮಾಡಬಹುದು. ಪರಿಶಿಷ್ಟದಲ್ಲಿ ಕೊಟ್ಟಿರುವ ಭೂಪಟಗಳು ಇದು ಸಾಧ್ಯವೆಂದು ತೋರಿಸಿಕೊಡುತ್ತವೆ.

ಉತ್ತರ ವಾಯುವ್ಯ ಪ್ರಾಂತ್ಯ ಮತ್ತು ಸಿಂಧ್‌ಗಳಲ್ಲಿ ಪರಿಸ್ಥಿತಿ ಕಷ್ಟಕರವಾಗಿದೆ. ಈ ಪ್ರದೇಶಗಳಲ್ಲಿ ಪರಿಸ್ಥಿತಿ ಹೇಗಿದೆಯೆನ್ನುವುದನ್ನು VIರಿಂದ IXರವರೆಗಿನ ಪರಿಶಿಷ್ಟಗಳಲ್ಲಿರುವ ಅಂಕಿ–ಅಂಶ ಪರೀಕ್ಷಿಸಿ ತಿಳಿಯಬಹುದು. ಈ ಪರಿಶಿಷ್ಟಗಳಲ್ಲಿ ಕಂಡುಬರುವಂತೆ ಸಿಂಧ್ ಮತ್ತು ಉತ್ತರ ವಾಯುವ್ಯ ಪ್ರಾಂತ್ಯಗಳ ಯಾವ ಜಿಲ್ಲೆಯಲ್ಲಿಯೂ ಹೆಚ್ಚು ಜನ ಹಿಂದೂಗಳಿಲ್ಲ. ಎಲ್ಲಾ ಜಿಲ್ಲೆಗಳಲ್ಲಿಯೂ ಹಿಂದೂಗಳು ಹರಿದು ಹಂಚಿಹೋಗಿರುವುದಲ್ಲದೆ, ಅವರ ಸಂಖ್ಯೆಯೂ ಗಣನೀಯವಾಗಿಲ್ಲ. ಹಿಂದೂಗಳು ಕೇವಲ ಈ ಜಿಲ್ಲೆಗಳ ಪಟ್ಟಣ ಪ್ರದೇಶಗಳಲ್ಲಿ ಮಾತ್ರ ಕೇಂದ್ರೀಕೃತರಾಗಿರುವುದನ್ನು ಈ ಪರಿಶಿಷ್ಟಗಳಿಂದಲೇ ತಿಳಿಯಬಹುದು. ಸಿಂಧ್‌ನ ಬಹುತೇಕ ಎಲ್ಲ ಪಟ್ಟಣಗಳಲ್ಲಿಯೂ ಹಿಂದೂಗಳು ಮುಸ್ಲಿಮರಿಗಿಂತ ಹೆಚ್ಚಾಗಿದ್ದಾರೆ. ಹಳ್ಳಿಗಳಲ್ಲಿ ಮುಸ್ಲಿಮರು, ಹಿಂದೂಗಳಿಗಿಂತ ಹೆಚ್ಚಾಗಿದ್ದಾರೆ. ಉತ್ತರದ ವಾಯುವ್ಯ ಪ್ರಾಂತ್ಯದಲ್ಲಿ ಮುಸ್ಲಿಮರು, ಪಟ್ಟಣ, ಹಳ್ಳಿಯನ್ನದೆ, ಹಿಂದೂಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಆದ್ದರಿಂದ ಪಂಜಾಬ್, ಬಂಗಾಳಗಳಿಗೆ ಹೋಲಿಸಿದರೆ ಉತ್ತರ ವಾಯುವ್ಯ ಪ್ರಾಂತ್ಯ ಮತ್ತು ಸಿಂಧ್‌ಗಳಲ್ಲಿ ಪರಿಸ್ಥಿತಿ ತೀರಾ ಭಿನ್ನವಾಗಿದೆ. ಪಂಜಾಬ್ ಮತ್ತು ಬಂಗಾಳಗಳಲ್ಲಿ, ಹಿಂದೂ–ಮುಸ್ಲಿಮರು ಸಹಜವಾಗಿಯೇ ಬೇರೆ ಬೇರೆ ಪ್ರದೇಶಗಳಲ್ಲಿ ಕೇಂದ್ರೀಕೃತವಾಗಿರುವುದರಿಂದ, ಗಡಿಗಳ ಅಲ್ಪಸ್ವಲ್ಪ ಬದಲಾವಣೆಯಿಂದ ಮತ್ತು

ಸ್ವಲ್ಪ ಜನರನ್ನು ಸ್ಥಳಾಂತರಿಸುವ ಮೂಲಕ ಒಂದೇ ಜನಾಂಗದ ರಾಜ್ಯವನ್ನು ರಚಿಸುವುದು ಸಾಧ್ಯ. ಆದರೆ, ಸಿಂಧ್ ಮತ್ತು ಉತ್ತರ ವಾಯುವ್ಯ ಪ್ರಾಂತ್ಯದಲ್ಲಿ, ಹಿಂದೂಗಳು ಚದುರಿ ಹೋಗಿರುವುದರಿಂದ, ಗಡಿ ಬದಲಾವಣೆಯೊಂದೇ ಸಜಾತೀಯ ರಾಜ್ಯವೊಂದರ ನಿರ್ಮಾಣಕ್ಕೆ ಸಾಲದು. ಅಲ್ಲಿ ಜನರನ್ನು ಸ್ಥಳಾಂತರಿಸುವುದೊಂದೇ ಪರಿಹಾರವಾಗಬಲ್ಲದು.

ಜನರನ್ನು ಸ್ಥಳಾಂತರಿಸುವ, ಬದಲಾಯಿಸುವ ವಿಚಾರವನ್ನು ಕೆಲವರು ಅಪಹಾಸ್ಯ ಮಾಡುತ್ತಾರೆ. ಆದರೆ ಅಂಥವರಿಗೆ ಅಲ್ಪಸಂಖ್ಯಾತರ ಸಮಸ್ಯೆಯ ಕ್ಲಿಷ್ಟತೆ ಮತ್ತು ಅವರ ರಕ್ಷಣೆಗಾಗಿ ಮಾಡುವ ಪ್ರಯತ್ನಗಳ ವಿಫಲತೆಯ ಅರಿವು ಇರುವುದಿಲ್ಲ. ಮಹಾಯುದ್ಧದ ನಂತರ ಅಲ್ಪಸಂಖ್ಯಾತರ ಮತ್ತು ಅಲ್ಪಸಂಖ್ಯಾತರ ಸಮಸ್ಯೆಗಳಿದ್ದ ಹಲವಾರು ಹೊಸ ಮತ್ತು ಹಳೆಯ ಐರೋಪ್ಯದೇಶಗಳು, ಅವರನ್ನು ರಕ್ಷಿಸುವ, ಸಂವಿಧಾನಾತ್ಮಕ ರಕ್ಷಣೆ, ಸವಲತ್ತುಗಳು ಸಾಕೆಂದು ಯೋಚಿಸಿ ತಮ್ಮ ಸಂವಿಧಾನಗಳಲ್ಲಿ, ಮೂಲಭೂತ ಹಕ್ಕುಗಳು, ರಕ್ಷಣೆಗಳು, ಸವಲತ್ತುಗಳನ್ನು ಒಳಗೊಂಡ ಉದ್ದನೆಯ ಪಟ್ಟಿಯನ್ನೇ ಅಡಕಗೊಳಿಸಿದರು. ಬಹುಸಂಖ್ಯಾತರು ಈ ವಿಧಾನಗಳನ್ನು ಧಿಕ್ಕರಿಸುವುದಿಲ್ಲವೆಂದು ನಂಬಿದರು. ಆದರೆ, ಅನುಭವದಿಂದ ಗೊತ್ತಾಗಿರುವುದೇನು? ರಕ್ಷಣೆ, ಸವಲತ್ತುಗಳು, ಅಲ್ಪಸಂಖ್ಯಾತರನ್ನು ರಕ್ಷಿಸಲು ವಿಫಲವಾಗಿದೆಯೆಂದು ಸಾಬೀತಾಗಿದೆ. ಅಲ್ಪಸಂಖ್ಯಾತರ ವಿರುದ್ಧದ ಹೃದಯಹೀನ ಯುದ್ಧ ಕೂಡಾ ಅಲ್ಪಸಂಖ್ಯಾತರ ಸಮಸ್ಯೆಗೆ ಪರಿಹಾರವಲ್ಲವೆಂದೂ ಅನುಭವವೇ ತೋರಿಸಿಕೊಟ್ಟಿದೆ. ಇದಕ್ಕೆ ಪರಿಹಾರವಾಗಿ, ತನ್ನ ಗಡಿಯೊಳಗಿರುವ ಅಲ್ಪಸಂಖ್ಯಾತರನ್ನು, ಗಡಿಯಾಚೆ ಪರರಾಜ್ಯಗಳಲ್ಲಿರುವ ತನ್ನ ಜನಾಂಗದ ಅಲ್ಪಸಂಖ್ಯಾತರೊಂದಿಗೆ ಅದಲುಬದಲು ಮಾಡಿಕೊಳ್ಳುವ ಮೂಲಕ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದೆಂದು, ಸಜಾತೀಯ ರಾಷ್ಟ್ರಗಳೂ ಆಗ ಒಪ್ಪಿದವು. ಗ್ರೀಸ್, ಟರ್ಕಿ, ಬಲ್ಗೇರಿಯಾಗಳಲ್ಲಿ ಆದದ್ದು ಇದೇ. ಜನಸಂಖ್ಯೆಯನ್ನು ಬದಲಾಯಿಸಿಕೊಳ್ಳುವ ವಿಚಾರವನ್ನು ಗೇಲಿ ಮಾಡುವವರು, ಟರ್ಕಿ, ಗ್ರೀಸ್, ಬಲ್ಗೇರಿಯಾಗಳ ಅಲ್ಪಸಂಖ್ಯಾತರ ಸಮಸ್ಯೆಯ ಚರಿತ್ರೆಯನ್ನು ಓದುವುದು ಒಳ್ಳೆಯದು. ಆ ದೇಶಗಳ ಚರಿತ್ರೆ ಓದಿದವರಿಗೆ ಅವು ಜನರನ್ನು ಬದಲಾಯಿಸಿಕೊಳ್ಳುವ ಮೂಲಕವೇ ತಮ್ಮಲ್ಲಿದ್ದ ಅಲ್ಪಸಂಖ್ಯಾತರ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಸಾಧ್ಯವೆಂದು ತಿಳಿಯುತ್ತದೆ. ಈ ಮೂರು ದೇಶಗಳು ಕೈಗೊಂಡ ಕಾರ್ಯ ಯಾವ ರೀತಿಯಲ್ಲೂ ಕ್ಷುಲ್ಲಕವಾದದ್ದಲ್ಲ. ಸುಮಾರು ೨೦ ಮಿಲಿಯನ್ ಜನ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸ್ಥಳಾಂತರವಾಗುವ ಕೆಲಸವದು. ಆದರೆ ಕೋಮು ಸೌಹಾರ್ದ ಎಲ್ಲದಕ್ಕಿಂತಲೂ ಮುಖ್ಯವೆಂದು ತಿಳಿದ ಈ ರಾಷ್ಟ್ರಗಳು ಎದೆಗುಂದದೆ ಯಶಸ್ವಿಯಾಗಿ ಈ ಕೆಲಸ ಮಾಡಿದರು.

ಅಲ್ಪಸಂಖ್ಯಾತರ ವರ್ಗಾವಣೆಯೇ ಕೋಮು ಸೌಹಾರ್ದಕ್ಕೆ ಖಾಯಂ ಪರಿಹಾರವೆನ್ನುವುದು ಸಂಶಯಾತೀತ. ಹಾಗಿದ್ದ ಪಕ್ಷದಲ್ಲಿ ಹಿಂದೂಗಳು ಮತ್ತು ಮುಸ್ಲಿಮರು, ಈಗಾಗಲೇ ಸುರಕ್ಷಿತವಲ್ಲವೆಂದು ಸಾಬೀತಾಗಿರುವ ರಕ್ಷಣೆ ಮತ್ತು ಸವಲತ್ತುಗಳ ವ್ಯಾಪಾರದಲ್ಲೇ ಕಾಲಹರಣ ಮಾಡಬೇಕಾದ ಅವಶ್ಯಕತೆಯಿಲ್ಲ. ಪರಿಮಿತ ಸಂಪನ್ಮೂಲಗಳಿರುವ ಗ್ರೀಸ್, ಟರ್ಕಿ, ಬಲ್ಗೇರಿಯಾಗಳಂತ ದೇಶಗಳೇ ಯಶಸ್ವಿಯಾಗಿ ಇಂಥ ಕೆಲಸಗಳನ್ನು ಮಾಡಿದ ಮೇಲೆ, ಭಾರತೀಯರಿಗೆ ಅದು ಅಸಾಧ್ಯವೆಂದು ತಿಳಿಯಲು ಏನೂ ಕಾರಣಗಳಿಲ್ಲ. ಇಷ್ಟಕ್ಕೂ ವರ್ಗಾವಣೆಯಾಗಬೇಕಾಗಿರುವ ಜನಸಂಖ್ಯೆ ಜಾಸ್ತಿಯೇನಿಲ್ಲ. ಕೆಲವು ತೊಂದರೆಗಳನ್ನು ನಿವಾರಿಸಿಕೊಳ್ಳಬೇಕಾದ ಅವಶ್ಯಕತೆಯಿದೆಯೆಂದ ಮಾತ್ರಕ್ಕೆ ಗ್ಯಾರಂಟಿಯಾಗಿ ಕೋಮು ಸೌಹಾರ್ದವನ್ನು ಸ್ಥಾಪಿಸಬಲ್ಲ ಹಾದಿಯನ್ನು ಬಿಟ್ಟುಕೊಡುವುದು ಅಪರಾಧವಾಗುತ್ತದೆ.

ಈವರೆಗೆ ಉಲ್ಲೇಖಿಸದೆ ಇರುವ ಟೀಕೆಯ ಅಂಶವೊಂದಿದೆ. ಅದರ ಬಗ್ಗೆ ಹೆಚ್ಚು ಒತ್ತು ಬೀಳುವ

ಸಾಧ್ಯತೆಯಿರುವುದರಿಂದ ಅದನ್ನು ಇಲ್ಲಿ ಎತ್ತಿಕೊಂಡು ಚರ್ಚಿಸುತ್ತೇನೆ. ಪಾಕಿಸ್ತಾನದ ರಚನೆ ಭಾರತದಲ್ಲೇ ಉಳಿಯುವ ಮುಸ್ಲಿಮರ ಮೇಲೆ ಏನು ಪರಿಣಾಮ ಬೀರಬಹುದು ಎನ್ನುವ ಪ್ರಶ್ನೆ ಖಂಡಿತವಾಗಿ ಏಳುತ್ತದೆ. ಈ ಪ್ರಶ್ನೆ ಏಳುವುದು ಸಹಜ ಕೂಡಾ. ಏಕೆಂದರೆ ಪಾಕಿಸ್ತಾನ ಯೋಜನೆ, ರಕ್ಷಣೆ ಬೇಕಿಲ್ಲದ ಮುಸ್ಲಿಂ ಬಹುಸಂಖ್ಯಾತರ ಬಗ್ಗೆ ಮಾತ್ರ ಸಂಬಂಧಪಟ್ಟಿದ್ದು, ರಕ್ಷಣೆಯ ಅವಶ್ಯಕತೆಯಿರುವ ಮುಸ್ಲಿಂ ಅಲ್ಪಸಂಖ್ಯಾತರ ಸಮಸ್ಯೆಯ ಬಗ್ಗೆ ಚಕಾರವನ್ನು ಎತ್ತಿಲ್ಲ. ಆದರೆ ಈ ಪ್ರಶ್ನೆಯನ್ನು ಎತ್ತಬಲ್ಲವರು ಯಾರು ಎನ್ನುವುದೇ ಸಮಸ್ಯೆ. ಹಿಂದೂಗಳು ಖಂಡಿತವಾಗಿಯೂ ಆ ಪ್ರಶ್ನೆಯನ್ನು ಎತ್ತಿಕೊಳ್ಳುವುದಿಲ್ಲ. ಪಾಕಿಸ್ತಾನದ ಮುಸ್ಲಿಮರೋ, ಅಥವಾ ಹಿಂದೂಸ್ತಾನದ ಮುಸ್ಲಿಮರೋ ಆ ಪ್ರಶ್ನೆಯನ್ನು ಎತ್ತಬಲ್ಲರು, ಪಾಕಿಸ್ತಾನದ ಪ್ರತಿಪಾದಕರಾದ ಶ್ರೀ ರಹಮತ್ ಅಲಿಯವರಿಗೆ ಈ ಪ್ರಶ್ನೆಯನ್ನು ಹಾಕಲಾಯಿತು. ಮತ್ತು ಅವರು ಕೊಟ್ಟ ಉತ್ತರವಿದು:

> **"ಅದು ಹಿಂದೂಸ್ತಾನದಲ್ಲಿ ಉಳಿಯುವ ೪೫ ಮಿಲಿಯನ್ ಮುಸ್ಲಿಮರ ಮೇಲೆ ಅದು (ಪಾಕಿಸ್ತಾನ) ಬೀರುವ ಪರಿಣಾಮವೇನು?**
>
> **ಸತ್ಯವಾಗಿಯೂ, ಈ ಹೋರಾಟದಲ್ಲಿ ಅವರ ನೆನಪೇ ನನಗೆ ತೀವ್ರ ಯಾತನೆಯದು. ಅವರು ನಮ್ಮ ದೇಹದೊಳಗಿನ ದೇಹ, ಆತ್ಮದೊಳಗಿನ ಆತ್ಮ. ನಾವು ಪರಸ್ಪರ ಮರೆಯುವುದು ಸಾಧ್ಯವೇ ಇಲ್ಲ. ಅವರ ಇಂದಿನ ಸ್ಥಿತಿ ಮತ್ತು ಮುಂದಿನ ರಕ್ಷಣೆ, ಇಂದಿಗೂ, ಎಂದಿಗೂ ನಮಗೆ ಬಹಳ ಮುಖ್ಯವಾದದ್ದು. ಹೀಗಿರುವಾಗ ಪಾಕಿಸ್ತಾನ, ಹಿಂದೂಸ್ತಾನದಲ್ಲಿರುವ ಮುಸ್ಲಿಮರ ಮೇಲೆ ಪ್ರತಿಕೂಲ ಪರಿಣಾಮವನ್ನೇನೂ ಬೀರುವುದಿಲ್ಲ. ಜನಸಂಖ್ಯೆಯ ಆಧಾರದ ಮೇಲೆ (ಪ್ರತಿ ನಾಲ್ವರು ಹಿಂದೂಗಳಿಗೆ ಒಬ್ಬ ಮುಸ್ಲಿಮನಂತೆ) ಅವರಿಗೆ ಶಾಸನಸಭೆ ಮತ್ತು ಆಡಳಿತ ಕ್ಷೇತ್ರಗಳಲ್ಲಿ ಈಗಿರುವಂತೆಯೇ ಪ್ರಾತಿನಿಧ್ಯ ಸಿಕ್ಕಬೇಕು. ಭವಿಷ್ಯದ ಬಗ್ಗೆ ನಾವು ಕೊಡುವ ಭರವಸೆಯೆಂದರೆ, ಪರಸ್ಪರ ಸಹಕಾರ. ಆದ್ದರಿಂದ ಹಿಂದೂಸ್ತಾನದಲ್ಲಿ ಮುಸ್ಲಿಂ ಅಲ್ಪಸಂಖ್ಯಾತರಿಗೆ ಕೊಡಲಾಗುವ ಎಲ್ಲ ರಕ್ಷಣೆ, ಸವಲತ್ತುಗಳನ್ನು, ಪಾಕಿಸ್ತಾನದಲ್ಲಿ ಮುಸ್ಲಿಮೇತರರಿಗೆ ನಾವು ಕೊಡುತ್ತೇವೆಂದು ಪ್ರಮಾಣ ಪೂರ್ವಕವಾಗಿ ಹೇಳುತ್ತೇವೆ.**
>
> **ಆದರೆ ಅವರಿಗೂ (ಹಿಂದೂಸ್ತಾನದಲ್ಲಿ ಉಳಿಯುವ ಮುಸ್ಲಿಮರಿಗೆ) ತಿಳಿದಿರುವಂತೆ ನಮಗೆ ಬೆಂಬಲವಾಗಿರುವ ಮಿಲ್ಲತ್‌ನ ದೃಷ್ಟಿಯಿಂದ ನಾವು ಪಾಕಿಸ್ತಾನದ ಘೋಷಣೆ ಮಾಡುತ್ತಿದ್ದೇವೆ. ಅದು ಹೇಗೆ ನಮ್ಮದೋ ಹಾಗೆಯೇ ಅವರದು ಕೂಡಾ. ಅದು ನಮಗೆ ರಾಷ್ಟ್ರೀಯ ಕೋಟೆಯಾದರೆ, ಅವರಿಗೆ ಎಲ್ಲ ಕಾಲಕ್ಕೂ ಇರುವ ನೈತಿಕ ಭರವಸೆ. ಎಲ್ಲಿಯವರೆಗೆ ಈ ನೈತಿಕ ಭರವಸೆ ಇರುವುದೋ ಅಲ್ಲಿಯವರೆಗೆ, ಎಲ್ಲವೂ ಅಥವಾ ಎಲ್ಲವನ್ನೂ ಸುರಕ್ಷಿತವಾಗಿರಿಸಬಹುದು. ಆದರೆ ಒಮ್ಮೆ ಅದು ಹಿಸಿದುಕೊಂಡರೆ ಎಲ್ಲವೂ ನಿನಿರ್ನಾಮವಾಗುತ್ತದೆ."**

ಹಿಂದೂಸ್ತಾನದ ಮುಸ್ಲಿಮರು ಕೊಟ್ಟಿರುವ ಉತ್ತರವೂ ಅಷ್ಟೇ ಸ್ಪಷ್ಟವಾಗಿದೆ. ಅವರು ಹೇಳುತ್ತಾರೆ: "ಮುಸ್ಲಿಮರು ಹಿಂದೂಸ್ತಾನ ಮತ್ತು ಪಾಕಿಸ್ತಾನಗಳಲ್ಲಿ ಹಂಚಿ ಹೋಗುವುದರಿಂದ ನಾವೇನು ಬಲಹೀನರಾಗುವುದಿಲ್ಲ. ಹಿಂದೂಸ್ತಾನದಲ್ಲಿ ಆ ಪ್ರಾಂತ್ಯಗಳು ಹಾಗೇ ಇದ್ದರೆ ಸಿಕ್ಕುವ ರಕ್ಷಣೆಗಿಂತ, ಹಿಂದೂಸ್ತಾನದ ಪೂರ್ವ, ಪಶ್ಚಿಮ ಗಡಿಗಳಲ್ಲಿ ಮುಸ್ಲಿಮ್ ರಾಷ್ಟ್ರಗಳಿದ್ದರೆ ಸಿಕ್ಕುವ ರಕ್ಷಣೆ ಉತ್ತಮವಾಗಿರುತ್ತದೆ." ಅವರು ತಪ್ಪೆಂದು ಹೇಳಲು ಯಾರಿಗೆ ಸಾಧ್ಯ? ಜಕೋಸ್ಲೋವೇಕಿಯಾದಲ್ಲೇ ಇದ್ದ ಸುಡೆಂಟ್‌ನ ಜರ್ಮನರು ತಮ್ಮನ್ನು ತಾವು ರಕ್ಷಿಸಿಕೊಳ್ಳುವುದಕ್ಕಿಂತ, ಹೊರಗಿನ ರಾಷ್ಟ್ರವಾದ ಜರ್ಮನಿ, ಜಕೋಸ್ಲೋವೇಕಿಯಾದಲ್ಲಿದ್ದ

ಜರ್ಮನರನ್ನು ರಕ್ಷಿಸಿ, ತೋರಿಸಿಕೊಟ್ಟಿಲ್ಲವೇ?*

ಈಗಿದ್ದರೂ ಈ ಪ್ರಶ್ನೆ ಹಿಂದೂಗಳಿಗೆ ಸಂಬಂಧಿಸಿಲ್ಲ. ಹಿಂದೂಗಳಿಗೆ ಸಂಬಂಧಪಟ್ಟ ಪ್ರಶ್ನೆಯೆಂದರೆ: ಪಾಕಿಸ್ತಾನದ ನಿರ್ಮಾಣ ಕೋಮು ಸಮಸ್ಯೆಯನ್ನು ಎಷ್ಟು ಮಾತ್ರ ನಿವಾರಿಸಬಲ್ಲದು? ಇದು ನ್ಯಾಯಸಮ್ಮತವಾದ, ಪರಿಗಣಿಸಲೇಬೇಕಾದ ಪ್ರಶ್ನೆ. ಪಾಕಿಸ್ತಾನದ ಹುಟ್ಟಿನಿಂದ, ಹಿಂದೂಸ್ತಾನ ಕೋಮು ಸಮಸ್ಯೆಯಿಂದ ಮುಕ್ತವಾಗುವುದಿಲ್ಲವೆಂದು ಒಪ್ಪಲೇಬೇಕು. ಗಡಿಗಳನ್ನು ಬದಲಾಯಿಸಿ ಸಜಾತೀಯ ಪಾಕಿಸ್ತಾನ ರಚನೆ ಸಾಧ್ಯವಾದರೂ ಹಿಂದೂಸ್ತಾನ ಮಾತ್ರ ಸಂಯೋಜಿತ ರಾಷ್ಟ್ರವಾಗಿಯೇ ಉಳಿಯಬೇಕು. ಬಹುತೇಕ ಮುಸಲ್ಮಾನರು ಪಟ್ಟಣಗಳಲ್ಲೇ ಇದ್ದರೂ, ಅವರು ಹಿಂದೂಸ್ತಾನದಲ್ಲೆಲ್ಲಾ ಹರಿದು ಹಂಚಿಹೋಗಿರುವುದರಿಂದ ಮತ್ತು ಗಡಿಗಳನ್ನು ಬದಲಾಯಿಸಿದರೂ ಅವರು ವಾಸಿಸುವ ಸ್ಥಳಗಳನ್ನು ಸಜಾತೀಯ ಪ್ರದೇಶಗಳನ್ನಾಗಿ ಮಾರ್ಪಡಿಸಲು ಸಾಧ್ಯವಿಲ್ಲ. ಜನಸಂಖ್ಯೆಯ ವರ್ಗಾವಣೆಯಿಂದ ಮಾತ್ರ ಹಿಂದೂಸ್ತಾನವನ್ನು ಏಕರೂಪಿ ಅಥವ ಸಮರೂಪಿ ರಾಷ್ಟ್ರವನ್ನಾಗಿಸಲು ಸಾಧ್ಯ. ಇದು ಆಗುವವರೆಗೂ, ಪಾಕಿಸ್ತಾನದ ರಚನೆಯಾದರೂ, ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತರು ಎಂಬ ಸಮಸ್ಯೆ ಮುಂಚಿನಂತೆಯೇ ಉಳಿದು, ಹಿಂದೂಸ್ತಾನದ ರಾಜಕೀಯದಲ್ಲಿ ಘರ್ಷಣೆಯನ್ನುಂಟುಮಾಡುತ್ತದೆ. ಈ ಮಾತನ್ನು ಒಪ್ಪಲೇಬೇಕು.

ಪಾಕಿಸ್ತಾನಕ್ಕೆ, ಹಿಂದೂಸ್ತಾನದೊಳಗೆ ಕೋಮು ಸಮಸ್ಯೆಯನ್ನು ನಿವಾರಿಸುವ ಸಾಮರ್ಥ್ಯವಿಲ್ಲವೆಂದು ಒಪ್ಪಿಕೊಂಡರೂ, ಆ ಆಧಾರದ ಮೇಲೆ ಪಾಕಿಸ್ತಾನದ ರಚನೆಯನ್ನು ತಿರಸ್ಕರಿಸಲು ಅವಕಾಶ ಕೊಡಬಹುದೇ? ಹಿಂದೂಗಳು ಈ ರೀತಿಯ ಆತುರದ ತೀರ್ಮಾನಕ್ಕೆ ಬರುವ ಮೊದಲು, ಪಾಕಿಸ್ತಾನದ ರಚನೆಯಿಂದಾಗಬಹುದಾದ ಪರಿಣಾಮಗಳನ್ನು ಅವಲೋಕಿಸುವುದು ಅಗತ್ಯ.

ಮೊದಲನೆಯದಾಗಿ, ಪಾಕಿಸ್ತಾನ ಕೋಮು ಸಮಸ್ಯೆಯ ಮೇಲೆ ಬೀರುವ ಪರಿಣಾಮಗಳನ್ನು ಪರಿಶೀಲಿಸೋಣ. ಪಾಕಿಸ್ತಾನ ಮತ್ತು ಹಿಂದೂಸ್ತಾನದೊಳಗೆ ಸೇರುವ ಮುಸ್ಲಿಮ್ ಜನಸಂಖ್ಯೆಯನ್ನು ಗಮನಿಸಿದರೆ ಅದರ ಗಂಭೀರತೆ ಸ್ಪಷ್ಟವಾಗುತ್ತದೆ.

**ಪಾಕಿಸ್ತಾನದಲ್ಲಿರುವ ಮುಸ್ಲಿಂ ಜನಸಂಖ್ಯೆ**

| | |
|---|---|
| ೧. ಪಂಜಾಬ್ | ೧೩,೩೩೨,೪೬೦ |
| ೨. ಉತ್ತರ ವಾಯುವ್ಯ ಪ್ರಾಂತ್ಯ | ೨,೨೨೭,೩೦೩ |
| ೩. ಸಿಂಧ್ | ೨,೮೩೦,೮೦೦ |
| ೪. ಬಲೂಚಿಸ್ತಾನ | ೪೦೫,೩೦೯ |
| ೫. ಪೂರ್ವ ಬಂಗಾಳ ಮುಸ್ಲಿಂ ರಾಜ್ಯಗಳು:– | |
| i) ಪೂರ್ವಬಂಗಾಳ | ೨೭,೪೯೭,೬೨೪ |
| ii) ಸಿಲ್‌ಹಟ್ | ೧,೬೦೩,೮೦೫ |
| **ಒಟ್ಟು** | **೮೭,೮೯೭,೩೦೧** |

* ಮುಸ್ಲಿಂ ಲೀಗ್ ನಾಯಕರು, ಹಿಟ್ಲರನು ಜಕೊಸ್ಲೊವೇಕಿಯಾದ ಸುಡೆಂಟನ್ ಜರ್ಮನರನ್ನು ರಕ್ಷಿಸಲು ಉಪಯೋಗಿಸಿದ ಬಲಾತ್ಕಾರ, ಹುನ್ನಾರುಗಳ ಬಗ್ಗೆ ಆಳವಾಗಿ ಅಧ್ಯಯನ ಮಾಡಿದಂತಿದೆ. ೧೯೩೭ರ ಮುಸ್ಲಿಂ ಲೀಗ್‌ನ ಕರಾಚಿ ಅಧಿವೇಶನದಲ್ಲಿ ಅವರು ಮಾಡಿದ ಹೆದರಿಕೆ ಹುಟ್ಟಿಸುವಂಥ ಭಾಷಣಗಳನ್ನು ನೋಡಿ.

**ಹಿಂದೂಸ್ತಾನದಲ್ಲಿರುವ ಮುಸ್ಲಿಂ ಜನಸಂಖ್ಯೆ**

| | |
|---|---|
| ೧. ಬ್ರಿಟಿಷ್ ಇಂಡಿಯಾದಲ್ಲಿರುವ ಮುಸ್ಲಿಮರ ಒಟ್ಟು ಸಂಖ್ಯೆ (ಬರ್ಮಾ, ಏಡೆನ್ ಬಿಟ್ಟು) | ೬೬,೪೪೨,೭೬೬ |
| ೨. ಪಾಕಿಸ್ತಾನ ಮತ್ತು ಪೂರ್ವ ಬಂಗಾಳದಲ್ಲಿ ಸೇರಿರುವ ಮುಸ್ಲಿಂ ಜನಸಂಖ್ಯೆ | ೪೭,೯೭೭,೩೦೧ |
| ೩. ಬ್ರಿಟಿಷ್ ಹಿಂದೂಸ್ತಾನದಲ್ಲಿ ಉಳಿಯುವ ಮುಸ್ಲಿಮರು | ೧೮,೫೪೫,೪೨೫ |

ಈ ಅಂಕಿಅಂಶಗಳು ಏನನ್ನು ಸೂಚಿಸುತ್ತವೆ? ಬ್ರಿಟಿಷ್ ಹಿಂದೂಸ್ತಾನದಲ್ಲಿ ಉಳಿಯುವ ಮುಸ್ಲಿಮರ ಸಂಖ್ಯೆ ೧೮,೫೪೫,೪೬೫ ಮಾತ್ರ. ಉಳಿದ ೪೭,೯೭೭,೩೦೧ರಷ್ಟು ಬಹುತೇಕ ಮುಸ್ಲಿಂ ಜನಸಂಖ್ಯೆ ಅದರ ಹೊರಗಿದ್ದು, ಪಾಕಿಸ್ತಾನಿ ರಾಜ್ಯಗಳ ಭಾಗವಾಗಿರುತ್ತದೆ. ಕೋಮು ಸಮಸ್ಯೆಯ ಸಂಬಂಧದಲ್ಲಿ ಮುಸ್ಲಿಂ ಜನಸಂಖ್ಯೆಯ ಈ ಹರಡುವಿಕೆಯೆಂದರೆ, ಪಾಕಿಸ್ತಾನವನ್ನು ಒಳಗೊಂಡ ಭಾರತದ ಕೋಮು ಸಮಸ್ಯೆ ೬ ೧/೨ ಕೋಟಿ ಮುಸ್ಲಿಮರನ್ನು ಒಳಗೊಂಡರೆ, ಪಾಕಿಸ್ತಾನದ ಸ್ಥಾಪನೆ ಆ ಸಂಖ್ಯೆಯನ್ನು ೨ ಕೋಟಿಗೆ ಇಳಿಸುತ್ತದೆ. ಕೋಮು ಸೌಹಾರ್ದವನ್ನು ಬಯಸುವ ಹಿಂದೂಗಳಿಗೆ ಇದು ಲೆಕ್ಕಕ್ಕೆ ಇಲ್ಲವೇ? ನನ್ನ ಮಟ್ಟಿಗೆ, ಪಾಕಿಸ್ತಾನದ ರಚನೆ, ಹಿಂದೂಸ್ತಾನದ ಆಂತರಿಕ ಕೋಮು ಸಮಸ್ಯೆಯನ್ನು ಪೂರ್ಣವಾಗಿ ನಿವಾರಿಸುವುದಿಲ್ಲವಾದರೂ, ಅದರ ಪ್ರಮಾಣವನ್ನು ಗಣನೀಯವಾಗಿ ಕಡಿಮೆಯಾಗಿಸಿ, ಅದನ್ನು ಪೂರ್ಣ ನಿವಾರಿಸಲು ಸಹಾಯಕವಾಗುತ್ತದೆ.

ಎರಡನೆಯದಾಗಿ, ಹಿಂದೂಗಳು ಕೇಂದ್ರ ಶಾಸನಸಭೆಯ ಕೋಮು ಪ್ರಾತಿನಿಧ್ಯದ ಸ್ವರೂಪದ ಮೇಲಾಗುವ ಪರಿಣಾಮಗಳನ್ನು ಗಮನಿಸಲಿ, ೧೯೩೫ರ ಭಾರತೀಯ ಕಾಯ್ದೆ ಕೇಂದ್ರ ಶಾಸನ ಸಭೆಯ ಸ್ಥಾನಗಳನ್ನು ಹಂಚಿರುವ ಕ್ರಮವನ್ನು, ಪಾಕಿಸ್ತಾನ ರಚನೆಯಾದರೆ, ಅದರ ಮೇಲಾಗುವ ಪರಿಣಾಮಗಳನ್ನು ಈ ಕೆಳಗಿನ ಅಂಕಿ-ಅಂಶಗಳು ಸ್ಪಷ್ಟಪಡಿಸುತ್ತವೆ.

| ಸಭೆಯ ಹೆಸರು | ಸ್ಥಾನಗಳ ವಿಂಗಡಣೆ | | | ಸ್ಥಾನಗಳ ವಿಂಗಡನೆ | | |
|---|---|---|---|---|---|---|
| | I ಹಾಲಿ ಇರುವಂತೆ | | | II ಪಾಕಿಸ್ತಾನದ ಸ್ಥಾಪನೆಯ ನಂತರ | | |
| | ಒಟ್ಟು ಸ್ಥಾನಗಳು | ಮುಸ್ಲಿಮೇತರ (ಹಿಂದೂ) ಪ್ರಾದೇಶಿಕ ಸ್ಥಾನಗಳು | ಮುಸ್ಲಿಮ್ ಸ್ಥಾನಗಳು ಪ್ರಾಂತ್ಯಗಳಿಂದ | ಒಟ್ಟು ಸ್ಥಾನಗಳು | ಮುಸ್ಲಿಂ ಸ್ಥಾನಗಳು | ಮುಸ್ಲಿಮೇತರ ಸ್ಥಾನಗಳು ಪ್ರಾಂತ್ಯಗಳಿಂದ |
| ಕೌನ್ಸಿಲ್ ಆಫ್ ಸ್ಟೇಟ್ | ೧೫೦ | ೭೫ | ೪೯ | ೧೨೬ | ೭೫ | ೨೫ |
| ಫೆಡರಲ್ ಅಸೆಂಬ್ಲಿ | ೨೫೦ | ೧೦೫ | ೮೨ | ೨೧೧ | ೧೦೫ | ೪೩ |

ಪಾಕಿಸ್ತಾನ ಸ್ಥಾಪನೆಯ ನಂತರ ಸ್ಥಾನಗಳ ಕೋಮುವಾರು ಹಂಚಿಕೆಯಲ್ಲಿ ಆಗುವ ಬದಲಾವಣೆಯನ್ನು ಸ್ಪಷ್ಟಪಡಿಸಿಕೊಳ್ಳಲು ಈ ಕೆಳಗಿನಂತೆ ಶೇಕಡಾವಾರಾಗಿ ಪರಿವರ್ತಿಸಲಾಗಿದೆ.

| ಸಭೆಯ ಹೆಸರು | ಸ್ಥಾನಗಳ ಹಂಚಿಕೆ | | ಸ್ಥಾನಗಳ ಹಂಚಿಕೆ | |
|---|---|---|---|---|
| | I ಹಾಲಿ ಇರುವಂತೆ | | II ಪಾಕಿಸ್ತಾನ ಸ್ಥಾಪನೆಯಾದ ನಂತರ | |
| | ಹಿಂದೂಗಳ ಸ್ಥಾನಗಳಲ್ಲಿ ಮುಸ್ಲಿಂ ಶೇಕಡಾವಾರು | ಒಟ್ಟು ಸ್ಥಾನಗಳಲ್ಲಿ ಮುಸ್ಲಿಂ ಶೇಕಡಾವಾರು | ಹಿಂದೂಗಳ ಸ್ಥಾನಗಳಲ್ಲಿ ಮುಸ್ಲಿಂ ಶೇಕಡಾವಾರು | ಒಟ್ಟು ಸ್ಥಾನಗಳಲ್ಲಿ ಮುಸ್ಲಿಂ ಶೇಕಡಾವಾರು |
| ಕೌನ್ಸಿಲ್ ಆಫ್ ಸ್ಟೇಟ್ | ೩೩ | ೬೬ | ೨೫ | ೩೩ ೧/೩ |
| ಫೆಡರಲ್ ಅಸೆಂಬ್ಲಿ | ೩೩ | ೮೦ | ೨೧ | ೪೦ |

ಪಾಕಿಸ್ತಾನದ ಸ್ಥಾಪನೆಯಿಂದ ಆಗುವ ತೀವ್ರತರ ಬದಲಾವಣೆಗಳನ್ನು ಈ ಅಂಕಿ–ಅಂಶಗಳು ಸ್ಪಷ್ಟಪಡಿಸುತ್ತವೆ. ಭಾರತ ಸರ್ಕಾರ ಕಾಯಿದೆ (೧೯೩೫)ರ ರೀತ್ಯಾ ಎರಡು ಸಭೆಗಳಲ್ಲಿ ಮುಸ್ಲಿಮರ ಶೇಕಡಾವಾರು ೩೩. ಆದರೆ ಹಿಂದೂಗಳ ಸ್ಥಾನಗಳಲ್ಲಿ ಈ ಪ್ರಮಾಣ ಕ್ರಮವಾಗಿ ಕೌನ್ಸಿಲ್ ಆಫ್ ಸ್ಟೇಟ್‌ನಲ್ಲಿ ೬೬% ಮತ್ತು ಅಸೆಂಬ್ಲಿಯಲ್ಲಿ ೮೦%, ಅಂದರೆ ಹೆಚ್ಚು ಕಡಿಮೆ ಹಿಂದೂಗಳಷ್ಟೇ ಪಾಕಿಸ್ತಾನದ ಸ್ಥಾಪನೆಯ ನಂತರ ಮುಸ್ಲಿಮರ ಶೆಕಡಾವಾರ ೩೩ ೧/೩%ರಿಂದ ೨೫%ಕ್ಕೆ ಇಳಿದರೆ, ಅಸೆಂಬ್ಲಿಯಲ್ಲಿ ೨೧%ಕ್ಕೆ ಇಳಿಯುತ್ತದೆ. ಹಿಂದೂಗಳ ಸ್ಥಾನಗಳಿಗೆ ಹೋಲಿಸಿದಾಗ ಕೌನ್ಸಿಲ್‌ನಲ್ಲಿ ಆ ಪ್ರಮಣ ೬೬%ರಿಂದ ೩೩ ೧/೨ಕ್ಕೆ ಇಳಿದರೆ, ಅಸೆಂಬ್ಲಿಯಲ್ಲಿ ೮೦%ರಿಂದ ೪೦%ಕ್ಕೆ ಇಳಿಯುತ್ತದೆ. ಪಾಕಿಸ್ತಾನ, ಹಿಂದೂಸ್ತಾನದಿಂದ ಬೇರ್ಪಟ್ಟ ಮೇಲೂ ಮುಸ್ಲಿಮರಿಗಿರುವ ಸವಲತ್ತು (ಆಧಿಕ್ಯ) ಮತ್ತು ರಕ್ಷಣೆ ಹಾಗೆಯೇ ಉಳಿಯುತ್ತದೆಂದು ಪರಿಗಣಿಸಿ ಈ ಅಂಕಿ–ಅಂಶಗಳನ್ನು ತೆಗೆದುಕೊಂಡು ಲೆಕ್ಕ ಹಾಕಲಾಗಿದೆ. ಮುಸ್ಲಿಮರಿಗೆ ಈಗಿರುವ ಸವಲತ್ತುಗಳನ್ನು ತೆಗೆದು ಹಾಕಿದರೆ ಅಥವಾ ಕಡಿಮೆ ಮಾಡಿದರೆ, ಹಿಂದೂಗಳ ಪ್ರಾತಿನಿಧ್ಯ ಮತ್ತಷ್ಟು ಹೆಚ್ಚುತ್ತದೆ. ಇದೇನೂ ಆಗುವುದಿಲ್ಲವೆಂದರೂ, ಕೇಂದ್ರ ಶಾಸನ ಸಭೆಗಳಲ್ಲಿ ಹಿಂದೂಗಳಿಗೆ ಸಿಗುವ ಪ್ರಾಬಲ್ಯ ಕಡಿಮೆಯೇ? ನನ್ನ ಮಟ್ಟಿಗೆ, ಇದು ಕೇಂದ್ರದಲ್ಲಿ ಹಿಂದೂಗಳ ಸ್ಥಾನವನ್ನು ಬಲಗೊಳಿಸುತ್ತದೆ ಮತ್ತು ಪಾಕಿಸ್ತಾನ ಸ್ಥಾಪನೆಯನ್ನು ಅವರು ವಿರೋಧಿಸಿದರೆ, ಈ ಸ್ಥಾನ ಅವರಿಗೆ ಎಂದೂ ದಕ್ಕುವುದಿಲ್ಲ.

ಪಾಕಿಸ್ತಾನಕ್ಕೆ ಆಗುವ ಲೌಕಿಕ ಪ್ರಯೋಜನಗಳಿವು. ಇದಲ್ಲದೆ ಮಾನಸಿಕ ಪ್ರಯೋಜನವೂ ಒಂದಿದೆ. ದಕ್ಷಿಣ ಮತ್ತು ಕೇಂದ್ರ ಭಾರತದ ಮುಸ್ಲಿಮರು ಉತ್ತರ ಮತ್ತು ಪೂರ್ವದ ಮುಸ್ಲಿಮರಿಂದ ಸ್ಫೂರ್ತಿ ಪಡೆಯುತ್ತಾರೆ. ಪಾಕಿಸ್ತಾನದ ಸ್ಥಾಪನೆಯಿಂದ ಉತ್ತರ ಮತ್ತು ಪೂರ್ವಗಳಲ್ಲಿ ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತರೆಂಬ ಪರಿಕಲ್ಪನೆಗಳು ಇಲ್ಲವಾಗಿ, ಕೋಮು ಸೌಹಾರ್ದವೂ ನೆಲೆಯಾಗಿ ಹಿಂದೂ ಸ್ಥಾನದಲ್ಲೆಲ್ಲಾ ಕೋಮುಶಾಂತಿ ಇರಬಹುದೆಂದು ಹಿಂದೂಗಳು ನಿರೀಕ್ಷಿಸಬಹುದು. ಉತ್ತರ ಮತ್ತು ಪೂರ್ವಗಳಲ್ಲಿರುವ ಮುಸ್ಲಿಮರು ಹಿಂದೂಸ್ಥಾನದ ಮುಸ್ಲಿಮರಿಂದ ಬೇರ್ಪಡುವುದು, ಹಿಂದೂಸ್ತಾನದ ಹಿಂದೂಗಳಿಗಾಗುವ ಇನ್ನೊಂದು ಲಾಭ.

ಪಾಕಿಸ್ತಾನದ ನಿರ್ಮಾಣದಿಂದ ಆಗುವ ಈ ಎಲ್ಲಾ ಪರಿಣಾಮಗಳನ್ನು ಗಣನೆಗೆ ತೆಗೆದುಕೊಂಡರೆ, ಅದು ಹಿಂದೂಸ್ತಾನದಲ್ಲಿ ಪೂರ್ಣವಾಗಿ ಕೋಮು ಸಮಸ್ಯೆಯನ್ನು ನಿವಾರಿಸದಿದ್ದರೂ, ಮುಸ್ಲಿಮರ ಪ್ರಬಲ ವಿರೋಧದಿಂದ ಹಿಂದೂಗಳನ್ನು ಮುಕ್ತಗೊಳಿಸುತ್ತದೆ. ಅದು ಪೂರ್ಣ ಪರಿಹಾರವನ್ನು ಒಳಗೊಳ್ಳುವುದಿಲ್ಲವೆಂಬ ಒಂದೇ ಕಾರಣದಿಂದ ಹಿಂದೂಗಳು ಈ ಯೋಜನೆಯನ್ನು ತಿರಸ್ಕರಿಸಿ ಬಿಡುತ್ತಾರೋ ಹೇಗೆ ಎಂದು ಅವರೇ ಹೇಳಬೇಕು. ತೀವ್ರ ತೊಂದರೆಗೆ ಒಳಗಾಗುವುದಕ್ಕಿಂದ ಅಲ್ಪ ಲಾಭ ಪಡೆಯುವುದೇ ಒಳ್ಳೆಯದು.

## IV

ಕೊನೆಯ ಒಂದು ಪ್ರಶ್ನೆಯಿದೆ ಮತ್ತು ಅದರೊಂದಿಗೆ ಕೋಮುಶಾಂತಿಗೆ ಸಂಬಂಧಿಸಿದ ಪಾಕಿಸ್ಥಾನದ ಕುರಿತ ಚರ್ಚೆಯನ್ನು ಮುಗಿಸಬಹುದು. ಪಾಕಿಸ್ತಾನ ಯೋಜನೆಯನ್ನು ಎಷ್ಟು ದೋಷಮುಕ್ತವಾಗಿ ಕಾರ್ಯಗತ ಮಾಡಲು ಸಾಧ್ಯವೋ ಅಷ್ಟನ್ನೂ ಪೂರೈಸಲು ಮಾಡಬೇಕಾಗಿರುವ ಗಡಿಗಳ ಬದಲಾವಣೆಗೆ ಪಂಜಾಬ್ ಮತ್ತು ಬಂಗಾಳದ ಮುಸ್ಲಿಮರು ಮತ್ತು ಹಿಂದೂಗಳು ಒಪ್ಪಬಹುದೇ?

ಮುಸ್ಲಿಮರು ಗಡಿಗಳ ಬದಲಾವಣೆಗೆ, ಅಡ್ಡಿ ಮಾಡಲು ಕಾರಣಗಳಿಲ್ಲ. ಅಕಸ್ಮಾತ್ ಅವರು ಪ್ರತಿರೋಧ ಒಡ್ಡಿದರೆ, ಅವರಿಗೆ ತಮ್ಮ ಬೇಡಿಕೆಯ ಸ್ವರೂಪವೇ ತಿಳಿದಿಲ್ಲವೆಂದಾಗುತ್ತದೆ. ಇದು ಸಾಧ್ಯ. ಏಕೆಂದರೆ ಪಾಕಿಸ್ಥಾನದ ಪರ ಮುಸ್ಲಿಮರು ಆಡುತ್ತಿರುವ ಮಾತು ಬಹಳ ಸಡಿಲವಾಗಿದೆ. ಕೆಲವರು ಪಾಕಿಸ್ತಾನವನ್ನು ಮುಸ್ಲಿಂ ಸಾರ್ವಭೌಮ ರಾಷ್ಟ್ರವೆಂದರೆ ಇನ್ನೂ ಕೆಲವರು ಅದನ್ನು ಮುಸ್ಲಿಮರ ಸಂರಕ್ಷಿತ ರಾಷ್ಟ್ರೀಯ ಪ್ರದೇಶ ಎನ್ನುತ್ತಾರೆ. ಮುಸ್ಲಿಂ ಸಾರ್ವಭೌಮ ರಾಷ್ಟ್ರ ಮತ್ತು ಮುಸ್ಲಿಂ ಸಂರಕ್ಷಿತ ರಾಷ್ಟ್ರೀಯ ಪ್ರದೇಶಗಳ ನಡುವಿನ ಅಂತರ ವ್ಯತ್ಯಾಸಗಳನ್ನು ತಿಳಿದುಕೊಳ್ಳಲು ಯಾರೂ ಉತ್ಸುಕರಾಗಿಲ್ಲ. ಆದರೆ ಇವೆರಡರ ಮಧ್ಯೆ ಮುಖ್ಯವಾದ ವ್ಯತ್ಯಾಸವಿದೆ. ಈ ವ್ಯತ್ಯಾಸವೇನು ಎಂಬ ಬಗ್ಗೆ ಪ್ಯಾಲಸ್ಟೈನ್‌ನಲ್ಲಿ ಯಹೂದ್ಯರ ಸಂರಕ್ಷಿತ ರಾಷ್ಟ್ರೀಯ ಪ್ರದೇಶವೊಂದನ್ನು ರಚಿಸುವ ಸಂದರ್ಭದಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಮುಸ್ಲಿಮರಿಂದ ಗಡಿಗಳ ಮರುಹೊಂದಾಣಿಕೆಗೆ ಬರಬಹುದಾದ ಅಡೆತಡೆಗಳನ್ನು ನಿವಾರಿಸಿಕೊಳ್ಳಬೇಕೆಂದರೆ ಈ ಎರಡರ ನಡುವಿನ ವ್ಯತ್ಯಾಸದ ಬಗ್ಗೆ ಸ್ಪಷ್ಟ ಕಲ್ಪನೆಯಿರುವುದು ಅವಶ್ಯಕ.

**ಒಬ್ಬ ದೊಡ್ಡ ಪರಿಣತರ ಪ್ರಕಾರ:**

> **"ಒಂದು ಸಂರಕ್ಷಿತ ರಾಷ್ಟ್ರೀಯ ಪ್ರದೇಶವೆಂದರೆ, ಅದರಲ್ಲಿ ಒಂದು ಜನಾಂಗ, ರಾಜಕೀಯ ಸಾರ್ವಭೌಮಾಧಿಕಾರ ಒಳಗೊಳ್ಳುವ ಹಕ್ಕುಗಳನ್ನು ಪಡೆಯದೆ, ಕಾನೂನಿನನ್ವಯ ತನ್ನ ನೈತಿಕ, ಸಾಮಾಜಿಕ ಬೌದ್ಧಿಕ ಆದರ್ಶಗಳನ್ನು ಬೆಳೆಸಿಕೊಳ್ಳಲು, ಮಾನ್ಯತೆ ಪಡೆಯುವುದೇ ಆಗಿದೆ."**

೧೯೨೨ರಲ್ಲಿ ಬ್ರಿಟಿಷ್ ಸರ್ಕಾರ ಪ್ಯಾಲೆಸ್ಟೈನ್ ನೀತಿಯ ಬಗ್ಗೆ ಹೇಳಿಕೊಟ್ಟ ತನ್ನ ಕಲ್ಪನೆಯ ಸಂರಕ್ಷಿತ ರಾಷ್ಟ್ರೀಯ ಪ್ರದೇಶದ ಬಗ್ಗೆ ಈ ಕೆಳಕಂಡಂತೆ ವ್ಯಾಖ್ಯಾನಿಸಿದೆ.

> **"ಪ್ಯಾಲೆಸ್ಟೈನ್‌ನಲ್ಲಿ ಯಹೂದಿಗಳ ಸಂರಕ್ಷಿತ ರಾಷ್ಟ್ರೀಯ ಪ್ರದೇಶವೆಂದರೆ ಏನೆಂದು ಕೇಳಿದರೆ, ಅದು ಪ್ಯಾಲೆಸ್ಟೈನಿನ ಇಡೀ ಸಮುದಾಯದ ಮೇಲೆ ಯಹೂದಿ ರಾಷ್ಟ್ರೀಯತೆಯನ್ನು ಹೇರುವುದಲ್ಲ, ಪ್ರಪಂಚದ ಇತರ ಭಾಗಗಳಲ್ಲಿರುವ, ಇತರ ಯಹೂದ್ಯರ ನೆರವಿನಿಂದ, ಈಗಿರುವ ಯಹೂದಿ ಕೋಮಿನ ಪ್ರಗತಿ ಸಾಧಿಸುವುದು ಮತ್ತು ಆ ಸ್ಥಳ ಯಹೂದಿಗಳೆಲ್ಲಾ ತಮ್ಮ ಧರ್ಮ, ಜನಾಂಗಗಳ ಬಗ್ಗೆ ಹೆಮ್ಮೆ ಪಟ್ಟುಕೊಳ್ಳುವಂಥ,**

> **ಆಸಕ್ತಿ ತಳೆಯುವ ಒಂದು ಕೇಂದ್ರವಾಗಲು ಸಾಧ್ಯವಾಗಿಸುವುದು ಎಂದು ಹೇಳಬಹುದು. ಆದರೆ ಈ ಜನಾಂಗದ ಸಾಮರ್ಥ್ಯಗಳ ಸಂಪೂರ್ಣ ಮುಕ್ತ ಬೆಳವಣಿಗೆಗೆ ಅತ್ಯುನ್ನತ ಅವಕಾಶವಿರಬೇಕು. ಆದ್ದರಿಂದ ಎಲ್ಲರೂ ಒಂದು ವಿಷಯವನ್ನು ಅವಶ್ಯ ತಿಳಿದಿರಬೇಕು. ಆದರೂ ಅಲ್ಲಿರುವುದು ಹಕ್ಕಿನಿಂದ, ಮೌನ ಸಮ್ಮತಿಯಿಂದಲ್ಲ. ಆದ್ದರಿಂದಲೇ, ಪ್ಯಾಲೆಸ್ಟೈನ್ ಯಹೂದಿ ಸಂರಕ್ಷಿತ ರಾಷ್ಟ್ರೀಯ ಪ್ರದೇಶದ ಅಸ್ತಿತ್ವ, ಅಂತರ್‌ರಾಷ್ಟ್ರೀಯ ಗ್ಯಾರಂಟಿ ಪಡೆದಿರಬೇಕು ಮತ್ತು ಅದು ಔಪಚಾರಿಕ ಮಾನ್ಯತೆ ಪಡೆದು ಪ್ರಾಚೀನ ಐತಿಹಾಸಿಕ ಸಂಬಂಧದ ನೆಲೆಯದಾಗಿರಬೇಕು."**

ಸಂರಕ್ಷಿತ ರಾಷ್ಟ್ರೀಯ ಪ್ರದೇಶ ಮತ್ತು ಸಾರ್ವಭೌಮ ರಾಷ್ಟ್ರಗಳ ನಡುವಿನ ವ್ಯತ್ಯಾಸ ಇದರಿಂದ ಸ್ಪಷ್ಟವಾಗುತ್ತವೆ. ಆ ವ್ಯತ್ಯಾಸ ಹೀಗಿದೆ:

ಸಂರಕ್ಷಿತ ರಾಷ್ಟ್ರೀಯ ಪ್ರದೇಶದ ವಿಷಯದಲ್ಲಿ, ಆ ಪ್ರದೇಶಕ್ಕೆ ಸೇರಿದ ಜನ, ಆ ರಾಷ್ಟ್ರದ ಮೇಲೆ ರಾಜಕೀಯ ಸಾರ್ವಭೌಮಾಧಿಕಾರ ಪಡೆದಿರುವುದಿಲ್ಲ ಮತ್ತು ಅಲ್ಲಿಯ ಇತರ ಜನರ ಮೇಲೆ ತಮ್ಮ ರಾಷ್ಟ್ರೀಯತೆಯನ್ನು ಹೇರುವ ಹಕ್ಕುಗಳನ್ನೂ ಪಡೆದಿರುವುದಿಲ್ಲ. ಅವರಿಗೆ ಮಾನ್ಯತೆ ಪಡೆದ ಕಾನೂನು ಬದ್ಧಸ್ಥಾನವಿರುತ್ತದೆ. ತಮ್ಮ ಸಂಸ್ಕೃತಿಯನ್ನು ರಕ್ಷಿಸಿಕೊಂಡು ಪೌರರಾಗಿ ಬಾಳುವ ಅಧಿಕಾರವಿರುತ್ತದೆ. ಇಷ್ಟನ್ನು ಮಾತ್ರ ಸಂರಕ್ಷಿತ ರಾಷ್ಟ್ರೀಯ ಪ್ರದೇಶ ಮಾನ್ಯ ಮಾಡುತ್ತದೆ. ಅದು ಸಾರ್ವಭೌಮ ರಾಷ್ಟ್ರವಾದರೆ ಅದರಲ್ಲಿರುವ ಜನತೆ ರಾಜಕೀಯ ಸಾರ್ವಭೌಮಾಧಿಕಾರದ ಹಕ್ಕುಗಳನ್ನು ಪಡೆದಿರುತ್ತಾರೆ ಮತ್ತು ತಮ್ಮ ರಾಷ್ಟ್ರೀಯತೆಯನ್ನು ಇತರರ ಮೇಲೆ ಪ್ರಭಾವ ಬೀರಿ ಹೇರುವ ಹಕ್ಕೂ ಅವರಿಗಿರುತ್ತದೆ.

ಈ ವ್ಯತ್ಯಾಸ ಬಹಳ ಮುಖ್ಯ ಮತ್ತು ಮೇಲಿನ ವಿವರಣೆಯ ಆಧಾರದ ಮೇಲೆ ಪಾಕಿಸ್ತಾನ ಬೇಡಿಕೆಯನ್ನು ಪರಿಶೀಲಿಸಬೇಕು. ಮುಸ್ಲಿಮನಿಗೆ ಪಾಕಿಸ್ತಾನ ಯಾಕೆ ಬೇಕು? ಅದು ಮುಸ್ಲಿಮರ ಒಂದು ಸಂರಕ್ಷಿತ ರಾಷ್ಟ್ರೀಯ ಪ್ರದೇಶಕ್ಕಾಗಿ ಆದರೆ, ಪಾಕಿಸ್ತಾನದ ಅವಶ್ಯಕತೆಯೇ ಇಲ್ಲ. ಪಾಕಿಸ್ತಾನ ಪ್ರಾಂತ್ಯಗಳಲ್ಲಿ, ಕಾನೂನುಬದ್ಧ ಹಕ್ಕುಗಳೊಂದಿಗೆ ಜೀವಿಸಲು ಮತ್ತು ತಮ್ಮ ಸಂಸ್ಕೃತಿಯನ್ನು ಅಭಿವೃದ್ಧಿಗೊಳಿಸಲು ಅವರಿಗೆ ಈಗಾಗಲೇ ಸಂರಕ್ಷಿತ ರಾಷ್ಟ್ರೀಯ ಪ್ರದೇಶವಿದೆ. ಅವರಿಗೆ ಪಾಕಿಸ್ತಾನ ಬೇಕಾಗಿರುವುದು, ಒಂದು ಸಾರ್ವಭೌಮ ರಾಷ್ಟ್ರವಾಗಿಯಾದರೆ, ಅದಕ್ಕೇ ಸೇರುವ ಪ್ರಾಂತ್ಯಗಳ ಮೇಲೆ ಅವರು ರಾಜಕೀಯ ಸಾರ್ವಭೌಮಾಧಿಕಾರದ ಹಕ್ಕನ್ನು ಕೇಳುತ್ತಿದ್ದಾರೆ. ಇದನ್ನು ಪಡೆಯಲು ಅವರಿಗೆ ಹಕ್ಕಿದೆ. ಆದರೆ, ಈ ಮುಸ್ಲಿಂ ರಾಜ್ಯಗಳ ಗಡಿಗಳೊಳಗೆ, ತಮ್ಮ ಪ್ರಜೆಗಳಾಗಿ ಮುಸ್ಲಿಮೇತರರನ್ನು ಇಟ್ಟುಕೊಂಡು, ಅವರ ಮೇಲೆ ತಮ್ಮ ರಾಷ್ಟ್ರೀಯತೆಯನ್ನು ಹೇರುವ ಹಕ್ಕನ್ನು ಹೊಂದುವ ಅವಕಾಶವಿರಬೇಕೇ? ಎನ್ನುವುದೇ ಪ್ರಶ್ನೆ. ಇಂಥ ಹಕ್ಕು ರಾಜಕೀಯ ಸಾರ್ವಭೌಮಾಧಿಕಾರದೊಂದಿಗೆ ಇರುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ ಆಧುನಿಕ ಕಾಲದ ಎಲ್ಲ ಮಿಶ್ರ ರಾಷ್ಟ್ರಗಳಲ್ಲಿ ಈ ಹಕ್ಕು ಕೇಡು ಬಗೆಯುವ ಒಂದು ಸಾಧನವಾಗಿದೆ. ಪಾಕಿಸ್ತಾನದ ಸ್ಥಾಪನೆಯಿಂದ ಆಗಬಹುದಾದ ಈ ಕೇಡನ್ನು ಮನಗಾಣದಿದ್ದರೆ, ಅದು ಇತ್ತೀಚಿನ ಚರಿತ್ರೆಯ ಪುಟಗಳಲ್ಲಿ ದಾಖಲಾಗಿರುವ, ಗ್ರೀಕರು, ತುರ್ಕಿಗಳೂ, ಬಲ್ಗೇರಿಯನ್ನರು ಮತ್ತು ಜೆಕ್‌ಗಳು ತಮ್ಮ ದೇಶಗಳಲ್ಲಿದ್ದ ಅಲ್ಪಸಂಖ್ಯಾತರ ವಿರುದ್ಧ ನಡೆಸಿದ ಕ್ರೌರ್ಯ, ಕೊಲೆ, ಸುಲಿಗೆಗಳ ಪುಟಗಳನ್ನೇ ಓದದೆ ಬಿಟ್ಟಂತಾಗುತ್ತದೆ. ಒಂದು ರಾಷ್ಟ್ರ ತನ್ನ ಪ್ರಜೆಗಳ ಮೇಲೆ ತನ್ನ ರಾಷ್ಟ್ರೀಯತೆಯನ್ನು ಹೇರುವ ಹಕ್ಕನ್ನು ಇಲ್ಲವಾಗಿಸಬಹುದು. ಏಕೆಂದರೆ, ಈ ಹಕ್ಕು ಅದರ ರಾಜಕೀಯ ಸಾರ್ವಭೌಮಾಧಿಕಾರದ ಜೊತೆಗೆ ಇರುತ್ತದಷ್ಟೇ. ಆದರೆ, ಆ ಹಕ್ಕಿನ ಚಲಾವಣೆಯ ಅವಕಾಶವನ್ನೇ ಕೊಡದಿರುವುದು ಮುಸ್ಲಿಮರಿಗೆ, ಸಜಾತೀಯ ಮತ್ತು ಜನಾಂಗೀಯ ಸರ್ವಭೌಮ ರಾಷ್ಟ್ರಗಳ

ಸ್ಥಾಪನೆಗೆ ಅವಕಾಶ ಕೊಟ್ಟು, ಹೇಗೆ ಮಾಡಲು ಸಾಧ್ಯ? ಆದರೆ, ಎಂಥಾ ಪರಿಸ್ಥಿತಿಯಲ್ಲೂ ಪರಸ್ಪರ ವಿರೋಧಿಗಳಾದ ಮುಸ್ಲಿಂ ಬಹುಸಂಖ್ಯಾತರು ಮತ್ತು ಹಿಂದೂ ಅಲ್ಪಸಂಖ್ಯಾತರು ಇರುವ ಮಿಶ್ರ ರಾಜ್ಯಗಳ ಸ್ಥಾಪನೆಗಂತೂ ಅವರಿಗೆ ಅವಕಾಶ ಕೊಡಬಾರದು.

ಪಾಕಿಸ್ತಾನ ಯೋಜನೆಯ ಮುಸ್ಲಿಂ ಕರ್ತೃಗಳು ಬಹುಶಃ ಇದನ್ನು ನಿರೀಕ್ಷಿಸಲಾರರು. ಪಾಕಿಸ್ತಾನ ಯೋಜನೆಯ ಉಗಮಕ್ಕೆ ಕಾರಣರಾದ ಸರ್.ಎಂ.ಇಕ್ಬಾಲರಂತೂ ಖಂಡಿತವಾಗಿ ನಿರೀಕ್ಷಿಸಲಾರರು. ೧೯೩೦ರ ಮುಸ್ಲಿಂ ಲೀಗ್ ಅಧಿವೇಶನದ ಅಧ್ಯಕ್ಷ ಭಾಷಣ ಮಾಡುತ್ತಾ ಇಕ್ಬಾಲರು "ಮುಸ್ಲಿಮೇತರರ ಪ್ರಾಬಲ್ಯವಿರುವ ಅಂಬಾಲ ವಿಭಾಗ ಮತ್ತು ಇತರ ಕೆಲವು ಜಿಲ್ಲೆಗಳನ್ನು, ಹೆಚ್ಚು ಮುಸ್ಲಿಮರನ್ನು ಉಳ್ಳ ಮತ್ತು ಕಡಿಮೆ ವಿಸ್ತೀರ್ಣದ ಪ್ರಾಂತ್ಯಗಳನ್ನು ಹೊಂದಬಹುದೆಂಬ" ಕಾರಣದಿಂದ ಬಿಟ್ಟುಕೊಡುವ ಇಂಗಿತವನ್ನು ವ್ಯಕ್ತಪಡಿಸಿದ್ದರು. ಇದಕ್ಕೆ ವಿರುದ್ಧವಾಗಿ ಪಾಕಿಸ್ತಾನ ಯೋಜನೆಯ ಪ್ರತಿಪಾದಕರು, ಪಂಜಾಬ್ ಮತ್ತು ಬಂಗಾಳಗಳು, ಹಾಲಿ ಇರುವ ಗಡಿಗಳ ಬಗ್ಗೆ ಪಟ್ಟುಹಿಡಿದರೆ ಆ ಬಗ್ಗೆ ಮುಕ್ತ ಮನಸ್ಸಿನಿಂದಿರುವ ಹಿಂದೂಗಳನ್ನು ಎದುರು ಹಾಕಿಕೊಳ್ಳಬೇಕಾಗುತ್ತದೆಂದು ಅವರು ಸ್ಪಷ್ಟವಾಗಿಯೇ ತಿಳಿದಿರಬೇಕು. ಮುಸ್ಲಿಂ ನಂಬಿಕೆ ಮತ್ತು ಮುಸ್ಲಿಂ ಸಂಸ್ಕೃತಿಯ ಉಳಿವಿಗೆ ಮತ್ತು ಪ್ರಚಾರಕ್ಕೆಂದೇ ರಚಿತವಾಗುವ ಮುಸ್ಲಿಂ ರಾಷ್ಟ್ರದಲ್ಲಿ ಹಿಂದೂಗಳಿರುವುದಕ್ಕೆ, ಹಿಂದೂಗಳ ಸಮ್ಮತಿಯಿರುತ್ತದೆಂದು ಎಂದಿಗೂ ನಿರೀಕ್ಷಿಸಲಾಗದು. ಹಿಂದೂಗಳಂತೂ ಇದನ್ನು ಖಂಡಿತವಾಗಿ ವಿರೋಧಿಸುತ್ತಾರೆ. ತಮ್ಮನ್ನು ಅರ್ಥ ಮಾಡಿಕೊಳ್ಳಲು, ಹಿಂದೂಗಳಿಗೆ ಬಹಳ ಸಮಯ ಬೇಕಾಗುತ್ತದೆಂದು ಮುಸ್ಲಿಮರು ತಿಳಿಯಕೂಡದು. ಹಾಲಿ ಇರುವ ಗಡಿಗಳ ಬಗ್ಗೆ ಮುಸ್ಲಿಮರು ಪಟ್ಟು ಹಿಡಿದರೆ, ಅವರ ಪಾಕಿಸ್ತಾನ ಯೋಜನೆಯ ಹಿಂದೆ ಏನೋ ದುಷ್ಟ ಸಂಚಿದೆ ಎಂಬ ಆಪಾದನೆಯನ್ನು ಅವರು ಹೊರಬೇಕಾಗುತ್ತದೆ. ಅದು ಕೇವಲ ಸಾರ್ವಭೌಮ ರಾಷ್ಟ್ರವನ್ನಾಗಲಿ, ಸಂರಕ್ಷಿತ ರಾಷ್ಟ್ರೀಯ ಪ್ರದೇಶವನ್ನಾಗಲಿ ಸ್ಥಾಪಿಸುವ ಬೇಡಿಕೆ ಅಲ್ಲವೆಂದೂ, ಹಿಂದೂಗಳು ತಿಳಿಯುತ್ತಾರೆ. ಮುಸ್ಲಿಮರ ಕೈಕೆಳಗೆ ಹಿಂದೂ ಅಲ್ಪಸಂಖ್ಯಾತರನ್ನು ಒತ್ತೆಯಾಳುಗಳನ್ನಾಗಿ ಇಟ್ಟುಕೊಳ್ಳುವ ತಮ್ಮ ಯೋಜನೆಯನ್ನು, ಮುಸ್ಲಿಂ ಪ್ರದೇಶಗಳ ಹಿಂದೂ ಅಲ್ಪಸಂಖ್ಯಾತರ ವಿರುದ್ಧ ಮುಸ್ಲಿಂ ಬಹುಸಂಖ್ಯಾತರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ಮೂಲಕ ಪೂರ್ಣಗೊಳಿಸಲು ಹವಣಿಸಿದ್ದಾರೆ ಎನ್ನುವ ಆಪಾದನೆಗೂ ಅವರು ಒಳಗಾಗುತ್ತಾರೆ. ಪಾಕಿಸ್ತಾನ ಸ್ಥಾಪನೆಗಾಗಿ, ಪ್ರಾಂತೀಯ ಗಡಿಗಳ ಬದಲಾವಣೆಯ ಸಂಬಂಧದಲ್ಲಿ ಮೇಲ್ಕಂಡ ವಿಚಾರಗಳನ್ನು ಮುಸ್ಲಿಮರು ಗಂಭೀರವಾಗಿ ಪರಿಗಣಿಸಬೇಕು.

ಪಂಜಾಬ್ ಮತ್ತು ಬಂಗಾಳದ ಹಿಂದೂಗಳು ಪರಿಗಣಿಸಬೇಕಾದ ವಿಚಾರಗಳ ಬಗ್ಗೆ ಈಗ ವಿಚಾರ ಮಾಡಬಹುದು. ಈ ಸಮಸ್ಯೆಗೆ ಸಂಬಂಧಿಸಿದ ಎರಡು ಪಕ್ಷದವರಲ್ಲಿ ಹಿಂದೂಗಳು ಹೆಚ್ಚು ಅನಮ್ಯರು. ಈ ಸಂಬಂಧವಾಗಿ, ಮೇಲ್ಜಾತಿ ಹಿಂದೂಗಳ ಪ್ರತಿಕ್ರಿಯೆಯನ್ನು ಗಮನಿಸಿದರೆ ಸಾಕು. ಏಕೆಂದರೆ, ಹಿಂದೂಗಳಲ್ಲಿ ಸಾರ್ವಜನಿಕ ಅಭಿಪ್ರಾಯ ರೂಪಿಸುವವರು ಮತ್ತು ಹಿಂದೂ ಜನಸಮುದಾಯಕ್ಕೆ ನಾಯಕತ್ವ ಕೊಡುವವರು ಅವರೇ. ಅವರಲ್ಲಿ ಹಿಂದೂಗಳನ್ನು ಮತ್ತೆ ಮತ್ತೆ ದುರಂತಕ್ಕೀಡುಮಾಡುವ ಒಂದು ಗುಣವಿದೆ. ಆ ಗುಣ ಅವರ ಬಾಚಿಕೊಳ್ಳುವ ಮತ್ತು ಇತರರೊಂದಿಗೆ ಜೀವನದ ಒಳ್ಳೆಯ ವಸ್ತುಗಳನ್ನು ಹಂಚಿಕೊಳ್ಳಲು ನಿರಾಕರಿಸುವ ಸ್ವಭಾವದಿಂದ ರೂಪುಗೊಂಡಿದೆ. ವಿದ್ಯೆ ಮತ್ತು ಸಂಪತ್ತುಗಳ ಮೇಲೆ ಅವರಿಗೆ ಏಕಸ್ವಾಮ್ಯವಿದೆ. ಮತ್ತು ಈ ಸಂಪತ್ತು ಮತ್ತು ವಿದ್ಯೆಯಿಂದ ಅವರು ರಾಜ್ಯಾಧಿಕಾರವನ್ನು ಹಿಡಿದಿದ್ದಾರೆ. ಈ ಏಕಸ್ವಾಮ್ಯವನ್ನು ತಮ್ಮಲ್ಲೇ ಇರಿಸಿಕೊಳ್ಳಬೇಕೆಂಬುದೇ ಅವರ ಜೀವನದ ಆಸೆ ಮತ್ತು ಗುರಿ. ತಮ್ಮ ವರ್ಗದ ಪ್ರಾಬಲ್ಯವನ್ನೇ ಇಟ್ಟುಕೊಳ್ಳಬೇಕೆಂಬ ಸ್ವಾರ್ಥದಿಂದಲೇ ಅವರು ಕೆಳವರ್ಗದ ಹಿಂದೂಗಳನ್ನು, ಸಂಪತ್ತು ವಿದ್ಯೆ ಮತ್ತು

ಅಧಿಕಾರಗಳಿಂದ ದೂರವಿಡುತ್ತಾರೆ. ಇದನ್ನು ಸಾಧಿಸುವ ಖಾತರಿ ಮಾರ್ಗವಾಗಿ, ಕೆಳಜಾತಿಗಳವರಿಗೆ, ಶಾಸ್ತ್ರಗಳನ್ನು ತೋರಿಸಿ, ಶಾಸ್ತ್ರಗಳ ಪ್ರಕಾರ, ಮೇಲ್ವರ್ಗಗಳ ಸೇವೆ ಮಾಡುವುದೇ ಅವರ (ಕೆಳಜಾತಿಗಳ) ಕರ್ತವ್ಯವೆಂದು ನಂಬಿಸುತ್ತಾರೆ. ಕೆಳವರ್ಗಗಳನ್ನು ಹೊರಗಿಟ್ಟು, ತಮ್ಮ ಕೈಯಲ್ಲೇ ಏಕಸ್ವಾಮ್ಯ ಉಳಿಸಿಕೊಳ್ಳುವುದರಲ್ಲಿ ಅವರು ಬಹಳ ಕಾಲದಿಂದ ಯಶಸ್ವಿಯಾಗಿದ್ದಾರೆ. ಇತ್ತೀಚೆಗಷ್ಟೇ ಬ್ರಾಹ್ಮಣೇತರರು, ಮದ್ರಾಸು, ಬಾಂಬೆ ಮತ್ತು ಕೇಂದ್ರ ಪ್ರಾಂತ್ಯಗಳಲ್ಲಿ, ಪಕ್ಷಗಳನ್ನು ಕಟ್ಟಿ ಅವರ ಏಕಸ್ವಾಮ್ಯದ ವಿರುದ್ಧ ದಂಗೆ ಎದ್ದಿದ್ದಾರೆ. ಆದರೂ ಮೇಲ್ಜಾತಿ ಹಿಂದೂಗಳು ತಮ್ಮ ಅಧಿಪತ್ಯವನ್ನು ಯಶಸ್ವಿಯಾಗಿ ಹಾಗೆಯೇ ಉಳಿಸಿಕೊಂಡಿದ್ದಾರೆ. ಕೆಳವರ್ಗಗಳ ಜೊತೆಗಿನ ತಮ್ಮ ಸಂಬಂಧದಲ್ಲಿ, ವಿದ್ಯೆ ಸಂಪತ್ತು ಮತ್ತು ಅಧಿಕಾರವನ್ನು ಅವರ ಜೊತೆಗೆ ಹಂಚಿಕೊಳ್ಳಲು ನಿರಾಕರಿಸಿ, ಹೇಗೆ ಅವನ್ನೆಲ್ಲಾ ತಮ್ಮ ಆಸ್ತಿಯೆಂಬಂತೆ ತಿಳಿದಿರುವರೋ, ಹಾಗೆಯೇ, ಅದನ್ನು ಮುಸ್ಲಿಮರೊಂದಿಗಿನ ತಮ್ಮ ಸಂಬಂಧಕ್ಕೂ ವಿಸ್ತರಿಸಬಯಸಿದ್ದಾರೆ. ಕೆಳವರ್ಗಗಳ ಹಿಂದೂಗಳನ್ನು ಸ್ಥಾನ ಮತ್ತು ಅಧಿಕಾರಗಳಿಂದ ಹೊರಗಿಟ್ಟಂತೆಯೇ, ಅವರು ಮುಸ್ಲಿಮರನ್ನೂ ಹೊರಗಿಡಲು ಬಯಸಿದ್ದಾರೆ. ಸವರ್ಣೀಯರ ಈ ಸ್ವಭಾವವೇ ಅದರ ರಾಜಕೀಯವನ್ನು ಅರ್ಥ ಮಾಡಿಕೊಳ್ಳಲು ಇರುವ ಕೀಲಿಕೈ. ಎರಡು ನಿದರ್ಶನಗಳು ಅದರ ಸ್ವಭಾವವನ್ನು ಬಹಿರಂಗಗೊಳಿಸುತ್ತವೆ. ೧೯೨೮ರ ಸೈಮನ್ ಆಯೋಗದ ಮುಂದೆ ಹಿಂದೂಗಳು, ಸಿಂಧನ್ನು, ಬಾಂಬೆ ಪ್ರಾಂತ್ಯದಿಂದ ಬೇರ್ಪಡಿಸಕೂಡದೆಂದು ಉಗ್ರವಾಗಿ ಪ್ರತಿಕ್ರಿಯಿಸಿದರು. ಆದರೆ, ೧೯೧೫ರಲ್ಲಿ ಸಿಂಧ್ ಪ್ರದೇಶದ ಹಿಂದೂಗಳು ಇದಕ್ಕೆ ವಿರುದ್ಧವಾದ ಬೇಡಿಕೆಯನ್ನಿಟ್ಟು ಸಿಂಧನ್ನು ಬಾಂಬೆ ಪ್ರಾಂತ್ಯದಿಂದ ಬೇರ್ಪಡಿಸಬೇಕೆಂದು ಕೇಳಿದರು. ಎರಡಕ್ಕೂ ಕಾರಣ ಒಂದೇ ೧೯೧೫ರಲ್ಲಿ ಸಿಂಧ್ ಭಾಗದಲ್ಲಿ ಪ್ರಾತಿನಿಧಿಕ ಸರ್ಕಾರವಿರಲಿಲ್ಲ. ಇದ್ದಿದ್ದರೆ, ಅಲ್ಲಿ ಖಂಡಿತವಾಗಿ ಮುಸ್ಲಿಮರ ಸರ್ಕಾರವೇ ಇರುತ್ತಿತ್ತು. ಹಿಂದೂಗಳು ಸಿಂಧ್‌ನ ಬೇರ್ಪಡಿಸುವಿಕೆಯನ್ನು ಕೇಳಿದ್ದು ಏಕೆಂದರೆ, ಮುಸ್ಲಿಂ ಸರ್ಕಾರವಿಲ್ಲದಿದ್ದರಿಂದ, ಸರ್ಕಾರಿ ನೌಕರಿಗಳೆಲ್ಲಾ ತಮಗೇ ಸಿಗುತ್ತವೆಂಬ ಆಸೆಯಿಂದ. ೧೯೨೯ರಲ್ಲಿ ಅವರು ಬೇರ್ಪಡಿಕೆಗೆ ತಕರಾರು ತೆಗೆದದ್ದು ಏಕೆಂದರೆ, ಹೀಗೆ ಬೇರ್ಪಟ್ಟ ಸಿಂಧ್ ಸರ್ಕಾರ ಮುಸ್ಲಿಮರ ಅಧೀನದಲ್ಲಿರುತ್ತದೆಂಬ ಕಾರಣದಿಂದ ಮತ್ತು ಮುಸ್ಲಿಮರಿಗೆ ಕೆಲಸ–ಸ್ಥಾನಗಳನ್ನು ತೆರವು ಮಾಡಿಸಲು ಇವರ ಏಕಸ್ವಾಮ್ಯವನ್ನು ಕೊನೆಗೊಳಿಸುತ್ತದೆ ಎನ್ನುವುದೂ ಈ ವಿರೋಧಕ್ಕೆ ಕಾರಣ. ಬಂಗಾಳ ವಿಭಜನೆಯನ್ನು, ಬಂಗಾಳಿ ಹಿಂದೂಗಳು ವಿರೋಧಿಸುತ್ತಿರುವುದು ಮೇಲ್ಜಾತಿ ಹಿಂದೂಗಳ ಈ ಸ್ವಭಾವಕ್ಕೆ ಮತ್ತೊಂದು ನಿದರ್ಶನ. ಇಡೀ ಬಂಗಾಳ, ಒರಿಸ್ಸಾ, ಅಸ್ಸಾಂ ಮತ್ತು ಸಂಯುಕ್ತ ಪ್ರಾಂತ್ಯಗಳು ಕೂಡಾ ಬಂಗಾಳಿ ಹಿಂದೂಗಳ ಮೇವಿನ ತಾಣವಾಗಿತ್ತು. ಈ ಎಲ್ಲ ಪ್ರಾಂತ್ಯಗಳ ಸರ್ಕಾರಿ ನೌಕರಿಗಳನ್ನೆಲ್ಲಾ ಇವರೇ ಹಿಡಿದಿದ್ದರು. ಬಂಗಾಳ ವಿಭಜನೆಯೆಂದರೆ, ಈ ಮೇವಿನ ತಾಣದ ವಿಸ್ತೀರ್ಣ ಕುಗ್ಗುತ್ತಿತ್ತು. ಮತ್ತೆ ವಿಭಜನೆಯಾದ ಮೇಲೆ, ಅಲ್ಲಿಯವರೆಗೆ ಅಧಿಕಾರದಿಂದ ಹೊರಗಿಡಲ್ಪಟ್ಟ ಬಂಗಾಳಿ ಮುಸ್ಲಿಮರಿಗೆ ಜಾಗ ಮಾಡಿಕೊಡಲು, ಪೂರ್ವ ಬಂಗಾಳದಿಂದ ಹಿಂದೂಗಳು ಸ್ಥಾನ ತೆರವು ಮಾಡಬೇಕಾಗುತ್ತಿತ್ತು. ಬಂಗಾಳಿ ಹಿಂದೂಗಳು, ವಿಭಜನೆಯನ್ನು ವಿರೋಧಿಸಲು ಮುಖ್ಯ ಕಾರಣವೆಂದರೆ, ಬಂಗಾಳಿ ಮುಸ್ಲಿಮರು, ಪೂರ್ವ ಬಂಗಾಳದಲ್ಲಿ ತಮಗೆ ದೊರೆಯಬೇಕಾಗಿದ್ದ ಸ್ಥಾನಗಳನ್ನು ದಕ್ಕಿಸಿಕೊಳ್ಳಬಾರದೆಂಬುದೇ ಆಗಿತ್ತು. ಆದರೆ ಏಕಕಾಲಕ್ಕೆ ಬಂಗಾಳದ ವಿಭಜನೆಯನ್ನು ವಿರೋಧಿಸುತ್ತಾ ಮತ್ತು ಸ್ವರಾಜ್ಯ ಚಳವಳಿ ನಡೆಸುತ್ತಾ, ಅಂತಿಮವಾಗಿ ಪೂರ್ವ ಮತ್ತು ಪಶ್ಚಿಮ ಬಂಗಾಳಗಳ ಮೇಲೆ ಮುಸ್ಲಿಮರ ಆಳ್ವಿಕೆಗೆ ಅವಕಾಶ ಮಾಡಿಕೊಡುತ್ತಿದ್ದವೆಂದು ಆಗ ಹಿಂದೂಗಳಿಗೆ ಸ್ವಲ್ಪವೂ ಗೊತ್ತಿರಲಾರದು.

ಯಾರಿಗೇ ಆಗಲಿ, ಈ ವಿಷಯ ಹೊಳೆಯಲು ಕಾರಣ, ಮೇಲ್ಜಾತಿ ಹಿಂದೂಗಳು, ತಮ್ಮ

ಪಾರಂಪರಿಕ ಸ್ವಾರ್ಥ ಸ್ವಭಾವದಿಂದ ಕುರುಡಾಗಿ, ಪಾಕಿಸ್ತಾನ ಯೋಜನೆ ತಮ್ಮ ಅಧಿಕಾರ ವ್ಯಾಪ್ತಿಯಿರುವ ಭೂಭಾಗವನ್ನು ಕಿರಿದಾಗಿಸುತ್ತವೆ ಎನ್ನುವ ಒಂದೇ ಕಾರಣದಿಂದ, ಇಡೀ ಯೋಜನೆಯನ್ನೇ ವಿರೋಧಿಸುವ ಸಾಧ್ಯತೆಯಿರುವುದು. ಪಾಕಿಸ್ತಾನ ಸ್ಥಾಪನೆಯ ವಿರುದ್ಧ ಕೊಡಬಹುದಾದ ಹಲವಾರು ಕಾರಣಗಳಲ್ಲಿ, ಮೇಲ್ಜಾತಿ ಹಿಂದೂಗಳ ಸ್ವಾರ್ಥವೂ ಒಂದು ಕಾರಣವಾದರೆ, ಯಾರೂ ಅಚ್ಚರಿ ಪಡಬೇಕಾಗಿಲ್ಲ. ಪಂಜಾಬ್ ಮತ್ತು ಬಂಗಾಳದ ಹಿಂದೂಗಳಿಗೆ ಎರಡು ಪರ್ಯಾಯಗಳಿವೆ. ಮತ್ತು ಅವನ್ನು ನ್ಯಾಯವಾಗಿ ಮತ್ತು ನೇರವಾಗಿ ಎದುರಿಸುವಂತೆ ಅವರಿಗೆ ಹೇಳಬಹುದು. ಪಂಜಾಬಿನ ಮುಸ್ಲಿಮರ ಸಂಖ್ಯೆ ೧೩.೩೩೨,೪೬೦, ಹಿಂದೂಗಳು, ಸಿಖ್ಖರು ಮತ್ತು ಇತರರ ಸಂಖ್ಯೆ ೧೧,೩೯೨,೭೩೨. ವ್ಯತ್ಯಾಸ ಕೇವಲ, ೧,೯೩೯,೭೨೮. ಅಂದರೆ ಪಂಜಾಬಿನ ಮುಸ್ಲಿಮರ ಬಹುಮತ ಕೇವಲ ೮% ಈ ಅಂಕಿ–ಅಂಶಗಳ ಹಿನ್ನೆಲೆಯಲ್ಲಿ ಯಾವುದು ಉತ್ತಮ: ಪಂಜಾಬಿನ ಏಕತೆಯನ್ನು ಉಳಿಸಿಕೊಂಡು ೫೪% ಇರುವ ಮುಸ್ಲಿಂ ಬಹುಸಂಖ್ಯಾತರನ್ನು, ೪೬% ಇರುವ ಹಿಂದೂ ಅಲ್ಪಸಂಖ್ಯಾತರ ಮೇಲೆ ಆಳ್ವಿಕೆ ನಡೆಸಲು ಬಿಡುವುದೋ, ಅಥವಾ ಗಡಿಗಳನ್ನು ಬದಲಾಯಿಸಿ ಹಿಂದೂ ಮತ್ತು ಮುಸ್ಲಿಮರಿಗೆ ಬೇರೆ ಬೇರೆ ಸಾರ್ವಭೌಮ ರಾಷ್ಟ್ರಗಳಲ್ಲಿರುವ ಅವಕಾಶ ಮಾಡಿಕೊಟ್ಟು, ಹಿಂದೂಗಳನ್ನು, ಮುಸ್ಲಿಮರ ಭಯೋತ್ಪಾದಕತೆಯಿಂದ ರಕ್ಷಿಸುವುದೋ?

ಬಂಗಾಲದಲ್ಲಿ ಮುಸ್ಲಿಮರ ಸಂಖ್ಯೆ ೨೭,೪೯೭,೬೨೪ ಇದ್ದರೆ, ಹಿಂದೂಗಳ ಸಂಖ್ಯೆ ೨೧,೫೭೦,೪೦೭. ವ್ಯತ್ಯಾಸ ೫,೯೨೭,೨೧೭ ಮಾತ್ರ. ಅಂದರೆ ಬಂಗಾಳದಲ್ಲಿರುವ ಮುಸ್ಲಿಮರ ಬಹುಮತ ೧೨% ಮಾತ್ರ. ಈ ಅಂಕಿ–ಅಂಶಗಳ ಹಿನ್ನೆಲೆಯಲ್ಲಿ ಯಾವುದು ಉತ್ತಮ. ಗಡಿಗಳ ಹೊಂದಾಣಿಕೆ ಮಾಡಿಕೊಂಡು, ಪೂರ್ವ ಬಂಗಾಳ ಮತ್ತು ಸಿಟ್‌ಹಟ್ ಕೂಡಿದ ಒಂದು ಮುಸ್ಲಿಂ ಸಾರ್ವಭೌಮ ರಾಷ್ಟ್ರದ ಸ್ಥಾಪನೆಯನ್ನು ವಿರೋಧಿಸಿ, ೧೨% ಬಹುಮಟ್ಟವಿರುವ ಮುಸ್ಲಿಂ ಬಹುಸಂಖ್ಯಾತರನ್ನು ೪೪%ರಷ್ಟಿರುವ, ಹಿಂದೂ ಅಲ್ಪಸಂಖ್ಯಾತರನ್ನು ಆಳುವ ಅವಕಾಶ ಮಾಡಿಕೊಡುವುದೋ ಅಥವಾ ಗಡಿಗಳನ್ನು ಬದಲಾಯಿಸಲು ಒಪ್ಪಿ, ಮುಸ್ಲಿಮರು ಮತ್ತು ಹಿಂದೂಗಳಿಗೆ ಬೇರೆ ಬೇರೆ ಸಾರ್ವಭೌಮ ರಾಷ್ಟ್ರಗಳಲ್ಲಿರುವ ಅವಕಾಶ ಮಾಡಕೊಟ್ಟು, ೪೪%ರಷ್ಟಿರುವ ಹಿಂದೂಗಳನ್ನು ಮುಸ್ಲಿಮರ ಭಯಾನಕ ಆಳ್ವಿಕೆಯಿಂದ ಮುಕ್ತಗೊಳಿಸುವುದೋ?

ಬಂಗಾಳ ಮತ್ತು ಪಂಜಾಬಿನಲ್ಲಿರುವ ಹಿಂದೂಗಳು ಇದರಲ್ಲಿ ಯಾವುದು ಬೇಕೆಂದು ಆರಿಸಿಕೊಳ್ಳಲಿ. ನನಗನ್ನಿಸುತ್ತದೆ, ಪಂಜಾಬ್ ಮತ್ತು ಬಂಗಾಳದ ಮೇಲ್ಜಾತಿ ಹಿಂದೂಗಳು, ತಮಗೆ ಲಾಭದಾಯಕ ಕೆಲಸ ಸಿಕ್ಕುವ ಪ್ರದೇಶಗಳಲ್ಲಿ ಕಡಿತವಾಗುತ್ತೆಂಬ ಕಾರಣದಿಂದ, ಪಾಕಿಸ್ತಾನ ರಚನೆಯನ್ನೇನಾದರೂ ವಿರೋಧಿಸ ಬಯಸಿದರೆ, ಅವರು ಗಂಭೀರ ತಪ್ಪು ಮಾಡುತ್ತಾರೆ. ತಮ್ಮ ಸ್ವಂತ ಜಾಗದಲ್ಲೇ ಅವರು ಯಶಸ್ವಿಯಾಗಿ ಏಕಸ್ವಾಮ್ಯ ಹೊಂದುವ ಕಾಲವೂ ಈಗ ಇಲ್ಲ. ರಾಷ್ಟ್ರೀಯತೆಯ ಹೆಸರಿನಲ್ಲಿ ಅವರು ಕೆಳವರ್ಗದ ಹಿಂದೂಗಳನ್ನು ವಂಚಿಸಬಹುದು. ಆದರೆ ಮುಸ್ಲಿಂ ಪ್ರಾಂತ್ಯಗಳ, ಮುಸ್ಲಿಂ ಬಹುಸಂಖ್ಯಾತರನ್ನು ವಂಚಿಸಿ ಅಧಿಕಾರ ಸ್ಥಾನಗಳ ಮೇಲಿನ ತಮ್ಮ ಏಕಸ್ವಾಮ್ಯವನ್ನು ಮುಂದುವರಿಸಿಕೊಂಡು ಹೋಗಲು ಸಾಧ್ಯವಿಲ್ಲ. ಹಿಂದೂಗಳ ತೀರ್ಮಾನ– ಅವರು ಪಾಕಿಸ್ತಾನವನ್ನು ವಿರೋಧಿಸುವ ರೀತಿಯನ್ನು ಹಾಗೆ ತಿಳಿಯುವುದಾದರೆ ಮುಸ್ಲಿಂ ಬಹುಸಂಖ್ಯಾತರ ಕೈಕೆಳಗೇ ಇರುತ್ತಾ, ಸ್ವಯಂ ನಿರ್ಣಯವನ್ನು ವಿರೋಧಿಸುವುದು ತುಂಬಾ ಧೈರ್ಯದ ತೀರ್ಮಾನವೇ ಇರಬಹುದು. ಆದರೆ ಮುಸ್ಲಿಮರನ್ನು ಮೂರ್ಖರನ್ನಾಗಿಸಿ, ತಮ್ಮ ಏಕಸ್ವಾಮ್ಯವನ್ನು ಉಳಿಸಿಕೊಳ್ಳಬಹುದೆಂದು ಅವರು ನಂಬಿದ್ದರೆ, ಅದು ನಿಜವಾಗಿಯೂ ಜಾಣತನವಲ್ಲ.

ಲಿಂಕನ್ನರು ಹೇಳಿದ ಹಾಗೆ, ಎಲ್ಲರನ್ನೂ, ಎಲ್ಲ ಕಾಲಕ್ಕೂ ವಂಚಿಸುವುದು ಸಾಧ್ಯವಿಲ್ಲ. ಹಿಂದೂಗಳು ಮುಸ್ಲಿಂ ಬಹುಸಂಖ್ಯಾತರಡಿಯಲ್ಲೇ ಇರಲು ಬಯಸಿದರೆ, ಅವರು ಎಲ್ಲವನ್ನು ಕಳೆದುಕೊಳ್ಳುವ ಸಾಧ್ಯತೆಯಿದೆ. ಬದಲಾಗಿ, ಬಂಗಾಳ ಮತ್ತು ಪಂಜಾಬಿನ ಹಿಂದೂಗಳು, ಮುಸ್ಲಿಮರಿಂದ ಬೇರೆಯಾಗಲು ಒಪ್ಪಿದರೆ, ಅವರು ಹೆಚ್ಚು ಪಡೆಯಲಾಗದಿದ್ದರೂ, ಖಂಡಿತವಾಗಿ ಎಲ್ಲವನ್ನೂ ಕಳೆದು ಕೊಳ್ಳುವುದಿಲ್ಲ.

♦

# ಭಾಗ – IX

# ಪಾಕಿಸ್ತಾನವಲ್ಲದಿದ್ದರೆ ಮತ್ತೇನು?

ಪಾಕಿಸ್ತಾನ ಪರವಾದ ಮುಸ್ಲಿಂ ವಾದ ಮತ್ತು ಅದಕ್ಕೆ ವಿರೊಧಿಯಾದ ಹಿಂದೂವಾದವನ್ನು ಪೂರ್ತಿಯಾಗಿ ವಿವರಿಸಿದ ಬಳಿಕ, ಬೇರೆ ಯಾವ ಪರ್ಯಾಯಗಳಾದರೂ ಪಾಕಿಸ್ತಾನದ ವಿಷಯದಲ್ಲಿ ಉಳಿದುಕೊಂಡಿದ್ದರೆ ಅವುಗಳತ್ತ ಈಗ ಗಮನ ಹರಿಸುವುದು ಅಗತ್ಯ. ಪಾಕಿಸ್ತಾನವನ್ನು ಕುರಿತು ಯಾವುದೇ ತೀರ್ಮಾನವನ್ನು ರೂಪಿಸಿಕೊಳ್ಳುವಲ್ಲಿ ವಿವಿಧ ಸಾಧ್ಯತೆಗಳನ್ನು ಪರಿಗಣಿಸಬೇಕು. ಪಾಕಿಸ್ತಾನ ಬಿಟ್ಟರೆ ಬೇರೆ ಪರ್ಯಾಯವಿಲ್ಲ ಅಥವಾ ಇದ್ದರೆ, ಅದು ಪಾಕಿಸ್ತಾನದ ರಚನೆಗಿಂತ ದುರದೃಷ್ಟಕರ. ಒಂದು ವೇಳೆ ಪಾಕಿಸ್ತಾನ ಅಥವಾ ಯಾವುದೇ ಸಂಬಂಧಿತ ಪರ್ಯಾಯ ಎಲ್ಲ ಪಕ್ಷಗಳಿಗೆ ಸಮ್ಮತವಾಗದೆ ಹೋದಲ್ಲಿ ಯಾವ ಪರಿಣಾಮಗಳು ಉಂಟಾಗಬಹುದು ಎಂಬುದನ್ನು ಕುರಿತೂ ಆಲೋಚಿಸಬೇಕಾಗುತ್ತದೆ. ಪ್ರಸ್ತುತ ಭಾಗದಲ್ಲಿ ಈ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಈ ಕೆಳಕಂಡ ವರ್ಗಗಳಲ್ಲಿ ನಿರೂಪಿಸಲಾಗಿದೆ.

೧. ಪಾಕಿಸ್ತಾನಕ್ಕೆ ಹಿಂದು ಪರ್ಯಾಯ

೨. ಪಾಕಿಸ್ತಾನಕ್ಕೆ ಮುಸ್ಲಿಂ ಪರ್ಯಾಯ

೩. ವಿದೇಶಗಳಿಂದ ಕಲಿಯಬೇಕಾದ ಪಾಠ

## ಅಧ್ಯಾಯ ೨೩

# ಪಾಕಿಸ್ತಾನಕ್ಕೆ ಹಿಂದು ಪರ್ಯಾಯ

## I

ಪಾಕಿಸ್ತಾನಕ್ಕೆ ಹಿಂದು ಪರ್ಯಾಯವನ್ನು ಕುರಿತು ಯೋಚಿಸುವಾಗ ೧೯೨೫ರಲ್ಲಿ ದಿವಂಗತ ಲಾಲ ಹರ್‌ದಯಾಳ್ ಮಂಡಿಸಿದ ಯೋಜನೆ ಥಟ್ಟನೆ ನೆನಪಾಗುತ್ತದೆ. ಅದು ಲಾಹೋರಿನಿಂದ ಪ್ರಕಟಗೊಳ್ಳುತ್ತಿದ್ದ 'ಪ್ರತಾಪ'ದಲ್ಲಿ ನಿರ್ದಿಷ್ಟ ಹೇಳಿಕೆಯ ರೂಪದಲ್ಲಿ ಬೆಳಕನ್ನು ಕಂಡಿತ್ತು. ಈ ತನ್ನ ಹೇಳಿಕೆಯನ್ನು ತನ್ನ 'ರಾಜಕೀಯ ಶಾಸನ' ಎಂದು ಆತ ಕರೆದಿದ್ದ. ಅದರಲ್ಲಿ ಲಾಲ ಹರ್‌ದಯಾಳ್ ಹೀಗೆ ನಿರೂಪಿಸಿದ್ದಾರೆ:

> **"ಹಿಂದೂ ಜನಾಂಗದ, ಹಿಂದೂಸ್ತಾನದ ಹಾಗೂ ಪಂಜಾಬಿನ ಭವಿಷ್ಯತ್ತು ಕೆಳಗಿನ ಈ ನಾಲ್ಕು ಕಂಬಗಳ ಮೇಲೆ ನಿಂತಿದೆ ಎಂದು ನಾನು ಸಾರಿ ಹೇಳುತ್ತೇನೆ: (೧) ಹಿಂದು ಸಂಘಟನೆ (೨) ಹಿಂದು ರಾಜ್ಯ (೩) ಮುಸ್ಲಿಂ ಶುದ್ಧಿ ಮತ್ತು (೪) ಆಫ್ಘಾನಿಸ್ತಾನ ಹಾಗೂ ಗಡಿನಾಡುಗಳ ವಿಜಯ ಮತ್ತು ಶುದ್ಧಿ. ಎಂದಿನವರೆಗೆ ಹಿಂದು ರಾಷ್ಟ್ರ ಈ ನಾಲ್ಕು ವಿಷಯಗಳನ್ನು ನೆರವೇರಿಸಿಕೊಳ್ಳುವುದಿಲ್ಲವೋ ಅಲ್ಲಿಯತನಕ ನಮ್ಮ ಮಕ್ಕಳ ಹಾಗೂ ಮರಿಮೊಮ್ಮಕ್ಕಳ ಸಂರಕ್ಷಣೆ ಸದಾ ಅಪಾಯದಲ್ಲಿರುತ್ತದೆ; ಹಿಂದು ಜನಾಂಗದ ರಕ್ಷಣೆ ಅಸಾಧ್ಯವಾಗಿ ಉಳಿಯುತ್ತದೆ. ಹಿಂದು ಜನಾಂಗಕ್ಕೆ ಅಖಂಡ ಚರಿತ್ರೆಯಿದೆ, ಅದರ ಸಂಸ್ಥೆಗಳಿಗೆ ವಂಶಸ್ವಾಮ್ಯವಿದೆ. ಆದರೆ ಮುಸಲ್ಮಾನ ಮತ್ತು ಕ್ರೈಸ್ತ ಧರ್ಮಗಳು ಹೊರಗಿನವುಗಳಾಗಿರುವುದರಿಂದ ಹಾಗೂ ಆ ಧರ್ಮದವರು ಪರ್ಶಿಯನ್, ಅರಬ್ಬಿ ಮತ್ತು ಯುರೋಪಿಯನ್ ಸಂಸ್ಥೆಗಳತ್ತ ತಮ್ಮ ಒಲವು ಗೌರವಗಳನ್ನು ತೋರಿಸುತ್ತಿರುವುದರಿಂದ ಅವರು ಹಿಂದೂಸ್ತಾನದಲ್ಲಿದ್ದು ಪರಕೀಯರಾಗಿದ್ದಾರೆ. ಹೀಗಿರುವುದಿರಂದ, ಕಣ್ಣಲ್ಲಿ ಬಿದ್ದ ಕಸವನ್ನು ತೆಗೆಯುವಂತೆ, ಈ ಎರಡು ಧರ್ಮಗಳ ಶುದ್ಧಿ ನಡೆಯಬೇಕು. ಅಫ್ಘಾನಿಸ್ತಾನ ಮತ್ತು ಗಡಿನಾಡಿನ ಗುಡ್ಡಗಾಡು ಪ್ರದೇಶಗಳು ಹಿಂದೆ ಇಂಡಿಯಾದ ಅವಿಭಾಜ್ಯ ಅಂಗವಾಗಿದ್ದವು. ಆದರೆ, ಈಗ ಅವು ಇಸ್ಲಾಮಿನ ಪ್ರಾಬಲ್ಯಕ್ಕೊಳಗಾಗಿವೆ... ನೇಪಾಳದಲ್ಲಿ ಹಿಂದು ಧರ್ಮವಿದ್ದಂತೆ, ಆಫ್ಘಾನಿಸ್ತಾನ ಮತ್ತು ಗಡಿನಾಡುಗಳಲ್ಲಿ ಹಿಂದು ಸಂಸ್ಥೆಗಳಿರಬೇಕು. ಇಲ್ಲದೆ ಹೋದಲ್ಲಿ ಸ್ವರಾಜ್ಯ ಪಡೆದು ಏನೂ ಉಪಯೋಗವಿಲ್ಲ. ಏಕೆಂದರೆ, ಗಿರಿಜನರು ಯಾವಾಗಲೂ ಯುದ್ಧ ಪ್ರಿಯರು ಹಾಗೂ ಹಸಿವಿನಿಂದ ಕಂಗೆಟ್ಟವರು. ಒಂದು ವೇಳೆ ಅವರು ನಮ್ಮ ವೈರಿಗಳಾದರೆ ಖಂಡಿತವಾಗಿಯೂ ನಾದಿರ್ ಷಹಾ ಮತ್ತು ಸಮನ್ ಷಹಾ ಇವರ ಕಾಲ ಒಂದೇ ಬರುತ್ತದೆ. ಸಧ್ಯದಲ್ಲಿ ಆಂಗ್ಲ ಅಧಿಕಾರಿಗಳು ಗಡಿನಾಡುಗಳನ್ನು ರಕ್ಷಿಸುತ್ತಿದ್ದಾರೆ; ಆದರೆ ಇದೇ ಪರಿಸ್ಥಿತಿ ಸದಾ ಇರಲಾರದು... ಹಿಂದೂಗಳು ತಮ್ಮ ರಕ್ಷಣೆಯನ್ನು ತಾವೇ ಮಾಡಬೇಕಾದಲ್ಲಿ ಅವರು ಆಫ್ಘಾನಿಸ್ತಾನ ಮತ್ತು ಗಡಿನಾಡುಗಳನ್ನು ಜಯಿಸಿಕೊಂಡು ಅಲ್ಲಿಯ ಎಲ್ಲ ಗಿರಿಜನರನ್ನು ಮತಾಂತರಗೊಳಿಸಬೇಕು."***

---

* ೨೫.೭.೧೯೨೫ರ 'ಟೈಮ್ಸ್ ಆಫ್ ಇಂಡಿಯಾ' ನೋಡಿ. 'ಥ್ರೂ ಇಂಡಿಯನ್ ಐಸ್"

ಪಾಕಿಸ್ತಾನದ ಬದಲಾಗಿ ಲಾಲ ಹರ್‌ದಯಾಳ್ ಸೂಚಿಸಿದ ಈ ಪರ್ಯಾಯ ಯೋಜನೆಗೆ ಎಷ್ಟು ಹಿಂದುಗಳು ತಮ್ಮ ಬೆಂಬಲ ನೀಡಲು ಮುಂದೆ ಬರುತ್ತಾರೆಯೋ ನಾನರಿಯೆ.

ಮೊತ್ತಮೊದಲನೆಯದಾಗಿ, ಹಿಂದೂ ಧರ್ಮ ಮತಾಂತರಿಸುವ ಧರ್ಮವಲ್ಲ. ಮೌಲಾನ ಮಹಮದ್ ಆಲಿ ತನ್ನ ಕಾಂಗ್ರೆಸ್ ಅಧ್ಯಕ್ಷೀಯ ಭಾಷಣದಲ್ಲಿ ಹೇಳಿದ ಮಾತು ಸರಿಯೆಂದೇ ಹೇಳಬೇಕಾಗುತ್ತದೆ:

**"ಹಿಂದೂ ಧರ್ಮದ ಬಗೆಗೆ ಇದು ನನ್ನ ದೀರ್ಘಕಾಲದ ಆಪಾದನೆಯಾಗಿದೆ ಮತ್ತು ಒಮ್ಮೆ ಅಲಹಾಬಾದಿನಲ್ಲಿ ೧೯೦೭ರಲ್ಲಿ ಮಾಡಿದ ಭಾಷಣದಲ್ಲಿ ನಾನು ಪ್ರಸ್ತಾಪಿಸಿದಂತೆ ಮುಸಲ್ಮಾನ ಮತ್ತು ಹಿಂದೂಗಳ ನಡುವೆ ಮೂಲಭೂತ ವ್ಯತ್ಯಾಸವಿದೆ. ಓರ್ವ ಮುಸಲ್ಮಾನನ ಬಗೆಗೆ ಬಹಳ ಕೆಟ್ಟದನ್ನು ಆಡುವುದಾದರೆ ಅದನ್ನು ಹೀಗೆ ಹೇಳಬಹುದು: ಆತನ ಹತ್ತಿರ ಸಪ್ಪೆಯಾದ ಅಂಬಲಿ ಇತ್ತು, ಅದನ್ನು ಆತ ರಾಜಯೋಗ್ಯ ಅಡುಗೆ ಎಂದು ಕರೆಯುತ್ತಿದ್ದ. ಇವರೆಲ್ಲರೂ ಅದನ್ನು ಆತನೊಡನೆ ಸೇವಿಸಬೇಕೆಂಬುದು ಆತನ ಆಸೆಯಾಗಿತ್ತು. ಅಷ್ಟೇ ಅಲ್ಲದೆ, ಆತ ಅದನ್ನು ಸೇವಿಸಲಾರದವರ ಮತ್ತು ಅದನ್ನು ಇಷ್ಟಪಡಲಾರದವರ ಗಂಟಲಲ್ಲಿ ಬಲವಂತವಾಗಿ ತುರುಕಿಸುತ್ತಿದ್ದ. ಆದರೆ, ತನ್ನ ಪಾಕಶಾಸ್ತ್ರದ ಬಗೆಗೆ ಸ್ವಾಭಿಮಾನ ಇಟ್ಟುಕೊಂಡ ಆತನ ಹಿಂದೂ ಸೋದರ ತನ್ನ ಅಡುಗೆಮನೆಯ ಏಕಾಂತತೆಯನ್ನು ಪ್ರವೇಶಿಸಿ ತನ್ನ ಊಟದ ಮೇಲೆ ತನ್ನ ಸೋದರನ ನೆರಳೂ ಬೀಳದಂತೆ ಅಥವಾ ಯಾರಿಗೂ ಏನೂ ಬಿಡದಂತೆ, ತಾನು ಅಡುಗೆ ಮಾಡಿದುದೆಲ್ಲವನ್ನೂ ಗಬಗಬನೆ ಮುಕ್ಕುತ್ತಿದ್ದ. ಈ ವೃತ್ತಾಂತ ಸಂಪೂರ್ಣವಾಗಿ ತಮಾಷೆಗಾಗಿ ಹೇಳಿದ್ದಲ್ಲ. ನಿಜವಾಗಿ ಹೇಳಬೇಕಾದರೆ, ಅವರ ಧರ್ಮದ ಈ ಲಕ್ಷಣವನ್ನು ನನಗೆ ವಿವರಿಸಲು ಮಹಾತ್ಮಾ ಗಾಂಧಿಯವರನ್ನು ನಾನೊಮ್ಮೆ ಕೇಳಿದ್ದೆ."**

ತನ್ನ ಪ್ರಶ್ನೆಗೆ ಮಹಾತ್ಮ ಏನು ಉತ್ತರ ಕೊಟ್ಟರೆಂದು ಶ್ರೀ ಮಹಮದ್ ಅಲಿ ಬಹಿರಂಗಪಡಿಸಲಿಲ್ಲ. ಹಿಂದೂಗಳು ಎಷ್ಟು ಬಯಸಿದರೂ, ಹಿಂದೂ ಧರ್ಮ, ಇಸ್ಲಾಂ ಅಥವಾ ಅಥವಾ ಕ್ರೈಸ್ತ ಧರ್ಮದಂತೆ ಮಿಷನರಿ ಧರ್ಮವಾಗುವುದು ಅಸಾಧ್ಯ. ಅಂದರೆ ಹಿಂದೂ ಧರ್ಮ ಹಿಂದೊಮ್ಮೆ ಮಿಷನರಿ ಧರ್ಮವಾಗಿತ್ತು, ಹಾಗೂ ಮಿಷನರಿ ಧರ್ಮವಾಗದೆ ಇದ್ದಿದ್ದರೆ ಇಂಡಿಯಾ ಖಂಡವನ್ನೆಲ್ಲ ಅದು ಹೇಗೆ ಹಬ್ಬಿಕೊಂಡಿತೆಂದು ವಿವರಿಸುವುದು ಅಸಾಧ್ಯದ ಮಾತು.* ಹಿಂದೂ ಸಮಾಜದಲ್ಲಿ ಜಾತಿಪದ್ಧತಿ ಬೆಳೆದಂತೆ, ಮಿಷನರಿ ಧರ್ಮವಾಗಿದ್ದ ಹಿಂದೂ ಧರ್ಮ ಗತ್ಯಂತರವಿಲ್ಲದೆ, ತನ್ನ ಮಿಷನರಿ ಗುಣವನ್ನು ಕಳೆದುಕೊಂಡಿತು. ಮತಾಂತರದೊಂದಿಗೆ ಜಾತಿಪದ್ಧತಿ ಅಸಮಂಜಸವಾಗಿರುವುದೇ ಇದಕ್ಕೆ ಕಾರಣ. ಬೇರೆಯವರನ್ನು ಒಂದು ಧರ್ಮಕ್ಕೆ ಮತಾಂತರಿಸುವಾಗ ಕೇವಲ ಆ ಧರ್ಮದ ನಂಬಿಕೆಗಳನ್ನು ಅವರಿಗೆ ನೀಡಿದರೆ ಸಾಲದು. ಮತಾಂತರ ಹೊಂದಿದವರನ್ನು ತಮ್ಮ ಸಮಾಜದಲ್ಲಿ ಸೇರಿಸಿಕೊಂಡು ತಮ್ಮ ಜನಗಳೊಂದಿಗೆ ಅವರನ್ನು ಸಮೀಕರಿಸಿಕೊಳ್ಳುವ ಸಾಮರ್ಥ್ಯ ಆ ಸಮಾಜಕ್ಕಿರಬೇಕು. ಪರಿಣಾಮಕಾರಿ ಮತಾಂತರಕ್ಕೆ ಬೇಕಾಗಿರುವ ಈ ಅಪೇಕ್ಷಿತ ಗುಣ ಹಿಂದೂ ಸಮಾಜದಲ್ಲಿರುವುದು ಅಸಾಧ್ಯ. ಮಿಷನರಿ ಶ್ರದ್ಧೆಯಿಂದ ಅನ್ಯರನ್ನು ಹಿಂದೂಮತಕ್ಕೆ ಮತಾಂತರಿಸುವ ಕಾರ್ಯದಿಂದ ಯಾವನಾದರೂ ಹಿಂದೂವನ್ನು ತಡೆಹಿಡಿಯುವ ಯಾವುದೇ ವ್ಯವಸ್ಥೆ ಇಲ್ಲ. ಅಷ್ಟೇ ಅಲ್ಲ,

* ಹಿಂದೂ ಧರ್ಮ ಮಿಷನರಿ ಧರ್ಮವಾಗಿತ್ತೇ, ಹೌದಾದರೆ ಈಗ ಯಾಕೆ ಬದಲಾಯಿತು ಎಂಬುದಕ್ಕೆ ನನ್ನ ಲೇಖನ ನೋಡಿ "ಕ್ಯಾಸ್ಟ್ ಅಂಡ್ ಕನ್‌ವರ್ಷನ್" ತೆಲುಗು ಸಮಾಚಾರ (ವಾರ್ಷಿಕ ಸಂಚಿಕೆ) ೧೯೨೬ ನೋಡಿ.

ಹೆರವರನ್ನು ಮತಾಂತರಗೊಳಿಸುವ ಪೂರ್ವದಲ್ಲಿ, ಮತಾಂತರಗೊಂಡವನ ಜಾತಿ ಯಾವುದು?– ಎಂಬ ಪ್ರಶ್ನೆ ಆತ ಎದುರಿಸಬೇಕಾಗುತ್ತದೆ. ಹಿಂದೂಗಳ ಪ್ರಕಾರ, ಒಬ್ಬ ಒಂದು ಜಾತಿಯವನಾಗಬೇಕಾದರೆ ಆತ ಆ ಜಾತಿಯಲ್ಲಿ ಹುಟ್ಟಬೇಕು. ಮತಾಂತರವಾದವನು ಒಂದು ಜಾತಿಯಲ್ಲಿ ಹುಟ್ಟಿರುವುದಿಲ್ಲ. ಆದುದರಿಂದ ಆತ ಯಾವ ಜಾತಿಗೂ ಸೇರಿದವನಾಗುವುದಿಲ್ಲ. ಇದು ಕೂಡಾ ಒಂದು ಮಹತ್ವದ ಪ್ರಶ್ನೆ. ಮನುಷ್ಯ, ರಾಜಕೀಯ ಅಥವಾ ಧಾರ್ಮಿಕಕ್ಕಿಂತ ಹೆಚ್ಚಾಗಿ ಸಾಮಾಜಿಕ ಪ್ರಾಣಿ. ಆತನಿಗೆ ಧರ್ಮ ಇರಲಿಕ್ಕಿಲ್ಲ, ಅವಶ್ಯಕತೆಯೂ ಇಲ್ಲ; ಆದರೆ ಆತನಿಗೆ ಸಮಾಜವಿರಲೇಬೇಕು. ಸಮಾಜವಿಲ್ಲದೆ ಆತ ಏನನ್ನೂ ಮಾಡಲಾರ. ಹಿಂದೂ ವ್ಯಕ್ತಿಗೆ ಜಾತಿರಹಿತನಾಗುವುದೆಂದರೆ, ಸಮಾಜರಹಿತನಾಗುವುದು. ಮತಾಂತರ ಹೊಂದಿವನಿಗೆ ಸಮಾಜವಿಲ್ಲದಿದ್ದರೆ, ಆತ ಮತಾಂತರಗೊಳ್ಳುವುದಾದರೂ ಹೇಗೆ? ಸಮಾಜ ಸ್ವತಂತ್ರ ಹಾಗೂ ವಿಭಿನ್ನ ಜಾತಿಗಳಿಂದ ಹೋಳಾಗಿ ಉಳಿಯುವ ತನಕ, ಹಿಂದೂ ಧರ್ಮ ಮಿಷನರಿ ಧರ್ಮವಾಗಲಾರದು. ಆದುದರಿಂದಲೇ, ಆಫ್ಘನ್ನರನ್ನು ಮತ್ತು ಗಡಿನಾಡ ಬುಡಕಟ್ಟುಗಳನ್ನು ಹಿಂದೂ ಧರ್ಮಕ್ಕೆ ಮತಾಂತರಿಸುವುದು ಒಂದು ವ್ಯರ್ಥ ಕನಸು.

ಎರಡನೆಯದಾಗಿ, ಲಾಲ ಹರ್‌ದಯಾಲರ ಯೋಜನೆಗೆ ಅಪಾರ ಆರ್ಥಿಕ ಸಂಪನ್ಮೂಲ ಬೇಕಾಗುತ್ತದೆ. ಅದರ ಲೆಕ್ಕಾಚಾರ ಎಣಿಸಲಸಾಧ್ಯ. ಆಫ್ಘನ್ನರನ್ನು ಮತ್ತು ಗಡಿನಾಡು ಬುಡಕಟ್ಟು ಜನರನ್ನು ಹಿಂದೂ ಧರ್ಮಕ್ಕೆ ಮತಾಂತರಗೊಳಿಸಲು ಅವಶ್ಯಕವಾದ ಬಂಡವಾಳವನ್ನು ಒದಗಿಸುವುದು ಯಾರಿಂದ ಸಾಧ್ಯ? ಬಹುಕಾಲದಿಂದ ಅನ್ಯರನ್ನು ತನ್ನ ಧರ್ಮಕ್ಕೆ ಮತಾಂತರಿಸುವುದನ್ನೇ ಹಿಂದೂಗಳು ನಿಲ್ಲಿಸಿದುದರಿಂದ ಮತಾಂತರದ ಬಗೆಗೆ ಅವರು ಉತ್ಸಾಹವನ್ನೇ ಕಳೆದುಕೊಂಡಿದ್ದಾರೆ. ಈ ಉತ್ಸಾಹದ ಕೊರತೆ ಆರ್ಥಿಕ ತೊಡಕಿಗೂ ಕಾರಣವಾಗುತ್ತದೆ. ಅಷ್ಟೇ ಅಲ್ಲದೆ, ಹಿಂದೂ ಸಮಾಜ ಚಾತುರ್ವರ್ಣದ ಅಚ್ಚಿನಲ್ಲಿ ರೂಪುಗೊಂಡುದುದರಿಂದ ಅಲ್ಲಿ ಬಹು ಪ್ರಾಚೀನ ಕಾಲದಿಂದಲೇ ಸಂಪತ್ತೆಲ್ಲ ಬಹು ಅಸಮಾನವಾದ ರೀತಿಯಲ್ಲಿ ಹಂಚಿಹೋಗಿದೆ. ಹಿಂದೂಗಳಲ್ಲಿ ಬನಿಯಾಗಳು ಮಾತ್ರ ಆಸ್ತಿ ಐಶ್ವರ್ಯ ಉಳ್ಳವರು. ವಿದೇಶೀ ಆಕ್ರಮಣಕಾರರ ಅಥವಾ ದೇಶೀ ದಂಗೆಕೋರರ ಕೃಪೆಯಿಂದ ಅಸ್ತಿತ್ವಕ್ಕೆ ಬಂದ ಜಮೀನ್ದಾರರೂ ಇದ್ದಾರೆಂಬುದು ಸತ್ಯ; ಆದರೆ, ಬನಿಯಾಗಳಷ್ಟು ಅಧಿಕ ಸಂಖ್ಯೆಯಲ್ಲಿ ಅವರಿಲ್ಲ. ಬನಿಯಾ ಎಂದರೆ ಧನಿಕ. ಸ್ವಂತ ಲಾಭಕ್ಕಾಗಿ ಮಾತ್ರ ದುಡಿಯುವುದೇ ಅವನ ಉದ್ಯೋಗ. ಹಣ ಸಂಗ್ರಹಿಸುವುದು ಮತ್ತು ಅದನ್ನು ಅವನ ಮುಂದಿನ ಪೀಳಿಗೆಗೆ ಹಸ್ತಾಂತರಿಸುವುದನ್ನು ಬಿಟ್ಟರೆ ಹಣದ ಬೇರೊಂದು ಉಪಯೋಗ ಅವನಿಗೆ ಗೊತ್ತಿಲ್ಲ. ಧರ್ಮ ಸಂಸ್ಕೃತಿಗಳ ಪ್ರಚಾರ ಹಾಗೂ ಪ್ರಸಾರವೇ ಮೊದಲಾದ ಯವುದೇ ವಿಷಯದಲ್ಲಿ ಅವನಿಗೆ ಆಸಕ್ತಿ ಇಲ್ಲ. ಅವನ ಆಯವ್ಯಯದಲ್ಲಿ ಸೊಗಸಾದ ಜೀವನಕ್ಕೆ ಅವಕಾಶವಿಲ್ಲ. ಇದು ಅವನ ತಲೆಮಾರಿನಿಂದ ಬಂದಂತಹ ಸಂಪ್ರದಾಯ. ಹಣ ಬರುವುದಿದ್ದರೆ ಅವನು ತನ್ನ ಜೀವನ ದೃಷ್ಟಿ ಹಾಗೂ ಜೀವನಶೈಲಿಯ ಮಟ್ಟಿಗೆ ಪಶುವಿಗಿಂತ ಮಿಗಿಲಾದವನಲ್ಲ. ಅವನ ಆಯವ್ಯಯದಲ್ಲಿ ಒಂದೇ ಒಂದು ಖರ್ಚಿನ ಹೊಸ ಖಾತೆ ಎಂದರೆ, ರಾಜಕೀಯ. ಇದೂ ಶ್ರೀ ಗಾಂಧಿ ರಾಜಕೀಯ ಮುಖಂಡನಾಗಿ ಬಂದಂದಿನಿಂದ. ಗಾಂಧೀ ರಾಜಕೀಯಕ್ಕೆ ಈ ಹೊಸ ಖಾತೆ ಆಸರೆಯಾಯಿತು. ಇದಕ್ಕೆ ಬನಿಯಾನ ರಾಜಕೀಯ ಒಲವು ಕಾರಣವಲ್ಲ, ಸಾರ್ವಜನಿಕ ವ್ಯವಹಾರಗಳಿಂದ ವೈಯಕ್ತಿಕ ಲಾಭಗಳನ್ನು ಗಿಟ್ಟಿಸಿಕೊಳ್ಳುವುದೇ ಅವನ ಇಲ್ಲಿಯ ಉದ್ದೇಶ. ಇಂತಹ ಜನ, ಆಫ್ಘಾನಾದಲ್ಲಿ ಮತ್ತು ಗಡಿನಾಡ ಬುಡಕಟ್ಟುಗಳಲ್ಲಿ ಹಿಂದೂಧರ್ಮ ಪ್ರಸಾರ ಮಾಡುವಂತಹ ನಿಷ್ಪ್ರಯೋಜಕ ಕಾರ್ಯಕ್ಕೋಸ್ಕರ ಹಣ ಖರ್ಚು ಮಾಡುತ್ತಾರೆಂಬುದನ್ನು ನಂಬುವುದಾದರೂ ಹೇಗೆ?

ಮೂರನೆಯದಾಗಿ, ಮತಾಂತರಕ್ಕೆ ಅಫಘಾನಿಸ್ತಾನರಲ್ಲಿರದ ಸೌಲಭ್ಯಗಳ ಪ್ರಶ್ನೆಯಿದೆ. ಲಾಲಾ ಹರ್‌ದಯಾಳರು ಟರ್ಕಿಯಲ್ಲಿ ಹೇಳುವಷ್ಟೇ ಸವಾಲಾಗಿ ಅಫಘಾನಿಸ್ತಾನದಲ್ಲೂ ಕೊರಾನ್ ತಪ್ಪು ಇಲ್ಲವೇ ಕಾಲೋಚಿತವಲ್ಲದ್ದೆಂದು ಹೇಳಲು ಸಾಧ್ಯವೆಂದು ಅಭಿಪ್ರಾಯ ಪಟ್ಟಿದ್ದಾರೆ. ಆದರೆ, ಲಾಲ ಹರ್‌ದಯಾಳ್‌ನು ತನ್ನ ರಾಜಕೀಯ ಶ್ವೇತಪತ್ರವನ್ನು ಪ್ರಕಟಿಸಿದ ಒಂದೇ ಒಂದು ವರ್ಷದ ಪೂರ್ವದಲ್ಲಿ, ಅಂದರೆ ೧೯೨೪ರಲ್ಲಿ ಖಾದಿಯಾನದ ಮಿರ್ಜಾ ಗುಲಾಮ್ ಅಹ್ಮದ್ ಇವನ ಶಿಷ್ಯನಾದ ನಿಯಾಮತುಲ್ಲಾ ಎಂಬಾತನನ್ನು ಆಫ್ಘಾನಿಸ್ತಾನದ ಉಚ್ಚ ಧಾರ್ಮಿಕ ನ್ಯಾಯಪೀಠದ ಆಜ್ಞೆಯ ಮೇರೆಗೆ ಕಾಬೂಲನಲ್ಲಿ ಕಲ್ಲೆಸೆತದಿಂದ ಸಾಯಿಸಿದರು. ತಾನು ಮೆಸಯ್ಯಾ, ಮಹದಿ ಮತ್ತು ಪ್ರವಾದಿ ಎಂದು ಹೇಳಿಕೊಂಡದ್ದೇ ಆತನ ಈ ಸಾವಿಗೆ ಕಾರಣ. ಖಿಲಾಫತ್ ಪತ್ರಿಕೆಯ ವರದಿಯ ಪ್ರಕಾರ ಇಸ್ಲಾಂ ಮತ್ತು ಷರಿಯತ ಇವುಗಳಿಗೆ ವಿರುದ್ಧವಾದ ಅಭಿಪ್ರಾಯ ಹಾಗೂ ನಂಬಿಕೆಗಳ ಮೇಲಿರುವ ತನ್ನ ನಿಷ್ಠೆಯನ್ನು ಬಹಿರಂಗವಾಗಿ ಘೋಷಿಸುತ್ತಿದ್ದುದೇ ಈ ವ್ಯಕ್ತಿಯ ಅಪರಾಧ. ಈ ಕಾರಣಕ್ಕಾಗಿ ಅದೇ ಪತ್ರಿಕೆಯ ವರದಿ ಪ್ರಕಾರ, ಪ್ರಥಮ ಷರಿಯತ್ (ಧಾರ್ಮಿಕ) ನ್ಯಾಯಾಲಯ, ಕೇಂದ್ರೀಯ ಅಭಿಧಾನ ನ್ಯಾಯಾಲಯ ಹಾಗೂ ನ್ಯಾಯಖಾತೆಯ ಅಂತಿಮ ಅಭಿದಾನ ಸಮಿತಿಯ ಧರ್ಮ ಶಾಸ್ತ್ರಜ್ಞರ ಮತ್ತು ದೇವಶಾಸ್ತ್ರಜ್ಞರ ಸರ್ವಸಮ್ಮತ ತೀರ್ಪಿನಂತೆ ಕಲ್ಲೆಸೆದು ಆತನನ್ನು ಸಾಯಿಸಿದರು.* ಈ ಸಮಸ್ಯೆಗಳ ಬೆಳಕಿನ ಹಿನ್ನೆಲೆಯಲ್ಲಿ, ಪ್ರಸ್ತುತ ಯೋಜನೆ ಕಲ್ಪನಾತೀತ ಎಂದು ಹೇಳಬೇಕಾಗುತ್ತದೆಯಲ್ಲದೆ, ಅದನ್ನು ಕಾರ್ಯಗತಗೊಳಿಸಿದರೆ ಅದು ಖಂಡಿತವಾಗಿಯೂ ವಿನಾಶಕಾರಿಯಾಗುವುದರಲ್ಲಿ ಅನುಮಾನವಿಲ್ಲ. ಅದು ಸ್ವಭಾವತಃ ಸಾಹಸ ಹಾಗೂ ಲಕ್ಷಣಗಳಿಂದ ಕೂಡಿದ್ದುದರಿಂದ, ಧರ್ಮಾಂಧರಾದ ಪಂಜಾಬಿನ ಆರ್ಯ ಸಮಾಜಗಳನ್ನು ಬಿಟ್ಟರೆ, ವಿವೇಕವುಳ್ಳ ಯಾವನೂ ಅದನ್ನು ಒಪ್ಪಲಾರ.

## II

ಹಿಂದೂ ಮಹಾಸಭೆಯ ಅಧ್ಯಕ್ಷ ಶ್ರೀ ವಿ.ಡಿ. ಸಾವರ್ಕರ್, ಸಭೆಯ ವಾರ್ಷಿಕ ಅಧಿವೇಶನ ಕಾಲದ ಸಂದರ್ಭದಲ್ಲಿ ಮಾಡಿದ ಅಧ್ಯಕ್ಷೀಯ ಭಾಷಣದಲ್ಲಿ ಹಿಂದೂ ಮಹಾಸಭೆಯ ನಿಲುವನ್ನು ಸ್ಪಷ್ಟೀಕರಿಸಿದ್ದಾರೆ. ಅವರ ಹೇಳಿಕೆಯ ಪ್ರಕಾರ, ಹಿಂದೂ ಮಹಾಸಭೆ ಪಾಕಿಸ್ತಾನ ವಿರೋಧಿಯಾಗಿದ್ದು, ಅದನ್ನು ಎಲ್ಲ ರೀತಿಯಿಂದಲೂ ಹತ್ತಿಕ್ಕಲು ಯೋಚಿಸುತ್ತದೆ. ಈ ರೀತಿಗಳು ಯಾವುದು ಎಂಬುದು ನಮಗೆ ತಿಳಿದಿಲ್ಲ. ಅವು ಒಂದುವೇಳೆ ಬಲತ್ಕಾರ, ದಬ್ಬಾಳಿಕೆ, ಪ್ರತಿಭಟನೆಗಳಾದರೆ ಅವು ಕೇವಲ ನಕಾರಾತ್ಮಕ ಪರ್ಯಾಯಗಳು. ಇವು ಎಷ್ಟರ ಮಟ್ಟಿಗೆ ಯಶಸ್ವಿಯಾಗಬಲ್ಲವು ಎಂಬುದು ಶ್ರೀ ಸಾವರ್ಕರ್ ಮತ್ತು ಹಿಂದೂ ಮಹಾಸಭೆ ಮಾತ್ರ ಹೇಳಬಲ್ಲವು.

ಇಂಡಿಯಾದ ಮುಸ್ಲಿಮರು ಮುಂದುಮಾಡಿದ ವಾದದ ಬಗೆಗೆ ಶ್ರೀ ಸಾವರ್ಕರ್‌ರವರು ಕೇವಲ ವಿರೋಧಾತ್ಮಕ ಧೋರಣೆಯನ್ನು ತೋರಿಸಿದ್ದಾರೆಂದು ಹೇಳಿದರೆ ಅವರಿಗೆ ಅನ್ಯಾಯ ಮಾಡಿದಂತಾದೀತು. ಇವರು ಅವರಿಗೆ ಉತ್ತರೋಪಾದಿಯಲ್ಲಿ ತಮ್ಮ ಸಕಾರಾತ್ಮಕ ಅಭಿಪ್ರಾಯಗಳನ್ನು ಪ್ರಸ್ತಾಪಿಸಿದ್ದಾರೆ.

ಈ ಸಕಾರಾತ್ಮಕ ಪ್ರಸ್ತಾಪಗಳನ್ನು ಅರ್ಥೈಸಿಕೊಳ್ಳಲು, ಅವರ ಮೂಲಭೂತ ವಿಚಾರಗಳನ್ನು ತಿಳಿದುಕೊಳ್ಳುವುದು ಅವಶ್ಯಕ. "ಹಿಂದೂಇಸಮ್", ಹಿಂದುತ್ವ ಮತ್ತು "ಹಿಂದೂಡಮ್" ಎಂಬೀ

---

* ನೋಡಿ: ಟೈಮ್ಸ್ ಆಫ್ ಇಂಡಿಯಾ ೨೭.೧೧.೨೪, 'ಥ್ರೂ ಇಂಡಿಯನ್ ಅಯ್ಸ್'

ಪದಗಳ ಸರಿಯಾದ ತಿಳುವಳಿಕೆ ಆಗಬೇಕೆಂದು ಶ್ರೀ ಸಾವರ್ಕರ್‌ರವರು ಒತ್ತಿ ಹೇಳುತ್ತಾರೆ. ಅವರು ಹೇಳುವಂತೆ*–

> **"ಹಿಂದೂಗಳು ಚಳುವಳಿಯ ಭಾವನಾಪ್ರಪಂಚವನ್ನು ವಿವರಿಸುವಲ್ಲಿ, ಈ ಮೂರು ಪದಗಳಿಗಿರುವ ಅರ್ಥವನ್ನು ಸರಿಯಾಗಿ ಗ್ರಹಿಸಿಕೊಳ್ಳುವುದು ಅತ್ಯಗತ್ಯ. ಇಂಗ್ಲಿಷಿನ 'ಹಿಂದೂಇಸಮ್' ಎಂಬ 'ಹಿಂದೂ' ಎಂಬ ಪದದಿಂದ ಸೃಷ್ಟಿಸಲಗಿದೆ. ಹಿಂದುಗಳು ಅನುಸರಿಸುವ ಧಾರ್ಮಿಕ ಪಂಥಗಳು ಅಥವಾ ಮತಗಳೆಂದೇ ಅದರ ಅರ್ಥ. "ಹಿಂದುತ್ವ" ಎಂಬ ಎರಡನೆಯ ಪದಕ್ಕೆ ಹೆಚ್ಚಿನ ಅರ್ಥವ್ಯಾಪ್ತಿ ಉಂಟು. ಅದು ಹಿಂದೂ ಇಸಮ್ ಎಂಬ ಪದದಂತೆ, ಹಿಂದೂ ಜನರ ಧಾರ್ಮಿಕ ಸಂಬಂಧಗಳನ್ನು ಮಾತ್ರವಲ್ಲದೆ, ಅವರ ಸಾಂಸ್ಕೃತಿಕ, ಭಾಷಿಕ, ಸಾಮಾಜಿಕ ಹಾಗೂ ರಾಜಕೀಯ ಸಂಬಂಧಗಳನ್ನೂ ಒಳಗೊಂಡು ಹೆಚ್ಚಿನ ವ್ಯಾಪ್ತಿಯನ್ನು ಪಡೆದುಕೊಂಡಿದೆ. ಅದು ಹೆಚ್ಚುಕಡಿಮೆ "ಹಿಂದೂ ರಾಷ್ಟ್ರ" ಎಂಬ ಕಲ್ಪನೆಗೆ ಸಮೀಪವಾಗಿರುತ್ತದೆ. "ಹಿಂದೂನೆಸ್" ಎಂಬುದು ಅದಕ್ಕೆ ಸಮೀಪದ ಸಂವಾದಿ. ಮೂರನೆಯ ಪದವಾದ "ಹಿಂದೂಡಮ್" ಅಂದರೆ ಹಿಂದೂ ಜನಸಮುದಾಯ. ಇಸ್ಲಾಂ ಎಂಬ ಪದ ಮುಸಲ್ಮಾನ ಜಗತ್ತನ್ನು ಸೂಚಿಸುವಂತೆ ಹಿಂದೂಡಮ್ ಎಂಬ ಪದ ಹಿಂದೂ ಜಗತ್ತನ್ನು ಸೂಚಿಸುತ್ತದೆ."**

ಹಿಂದೂ ಮಹಾಸಭೆಯನ್ನು ಒಂದು ಧಾರ್ಮಿಕ ಸಂಸ್ಥೆ ಎಂದು ಪರಿಗಣಿಸುವುದು ತೀರಾ ತಪ್ಪೆಂದು ಶ್ರೀ ಸಾವರ್ಕರ್‌ರವರು ಅಭಿಪ್ರಾಯಪಡುತ್ತಾರೆ. ಈ ತಪ್ಪು ತಿಳುವಳಿಕೆಯನ್ನು ವಿರೋಧಿಸಿ ಶ್ರೀ ಸಾವರ್ಕರ್‌ರವರು ಹೀಗೆ ಹೇಳುತ್ತಾರೆ.**

> **"ಹಿಂದೂ ಮಹಾಸಭೆ, ಕ್ರೈಸ್ತ ಧರ್ಮ ಪ್ರಚಾರಕ ಸಂಸ್ಥೆಯಂತೆ, ಒಂದು ಪ್ರತ್ಯೇಕ ಧಾರ್ಮಿಕ ಸಂಸ್ಥೆ ಎಂಬ ತಪ್ಪು ಗ್ರಹಿಕೆಯಿಂದಾಗಿ... ಆಂಗ್ಲ ವಿದ್ಯಾಭ್ಯಾಸ ಪಡೆದ ಅನೇಕ ಹಿಂದುಗಳು ಹಿಂದೂ ಮಹಾಸಭೆಯನ್ನು ಸೇರುವುದಕ್ಕೆ ಹಿಂಜರಿಯುತ್ತಾರೆ ಎಂಬುದು ನನ್ನ ಗಮನಕ್ಕೆ ಬಂದಿದೆ. ಸತ್ಯಕ್ಕೆ ದೂರವಾದ ಮಾತು. ಇದಕ್ಕಿಂತ ಬೇರೊಂದಿಲ್ಲ. ಹಿಂದೂ ಮಹಾಸಭೆ ಒಂದು ಹಿಂದೂಧರ್ಮ ಪ್ರಚಾರಕ ಸಂಸ್ಥೆಯಲ್ಲ. ಈಶ್ವರವಾದ, ಏಕಮೇವವಾದ, ಅನೇಕ ದೇವವಾದ ಅಥವಾ ನಿರೀಶ್ವರವಾದ ಎಂಬೀ ಧಾರ್ಮಿಕ ಸಮಸ್ಯೆಗಳ ಚರ್ಚೆ ಹಾಗೂ ನಿರ್ಣಯಗಳನ್ನು ಅದು ಬೇರೆ ಬೇರೆ ಹಿಂದೂ ಧಾರ್ಮಿಕ ಮತಪಂಥಗಳಿಗೆ ಬಿಟ್ಟುಕೊಡುತ್ತದೆ. ಅದೊಂದು ಹಿಂದೂ ಧರ್ಮ ಮಹಾಸಭೆಯಲ್ಲಿ; ಅದು ಹಿಂದೂ ರಾಷ್ಟ್ರೀಯ ಮಹಾಸಭೆ ಮಾತ್ರ. ಆದುದರಿಂದ ಅದರ ಘಟನಾವಳಿಯ ಪ್ರಕಾರವೇ ಅದು ಯಾವುದೇ ಒಂದು ನಿರ್ದಿಷ್ಟ ಧಾರ್ಮಿಕ ಮತಪಂಥಕ್ಕೆ, ಹಿಂದೂ ಮತಪಂಥಕ್ಕೂ ಅನ್ವಯಿಸಿ, ಪಕ್ಷವರ್ತಿಯಾಗಿ ಭಾಗಿಯಾಗುವುದನ್ನು ನಿಷೇಧಿಸಲಾಗಿದೆ. ಅದೊಂದು ರಾಷ್ಟ್ರೀಯ ಹಿಂದೂ ಸಂಸ್ಥೆಯಾಗಿ ಸಹಜವಾಗಿಯೇ ರಾಷ್ಟ್ರೀಯ ಹಿಂದೂ ಸಭೆಯನ್ನು, ಅರ್ಥಾತ್ ಹಿಂದೂಸ್ತಾನಿ ಮೂಲದ ಎಲ್ಲ ಧರ್ಮಗಳನ್ನೂ, ಆ ಹಿಂದೂ ಆಕ್ರಮಣಗಳಿಂದ ರಕ್ಷಿಸುತ್ತದೆಯಲ್ಲದೆ ಅವುಗಳ ಪ್ರಚಾರವನ್ನೂ ಮಾಡುತ್ತದೆ. ಆದರೆ ಅದರ ಕಾರ್ಯಕ್ಷೇತ್ರ,**

---

* ಹಿಂದೂ ಮಹಾಸಭೆಯ ಕಲ್ಕತ್ತೆಯ ಅಧಿವೇಶನದಲ್ಲಿ ಮಾಡಿದ ಭಾಷಣ, (ಡಿಸೆಂಬರ್ ೧೯೩೯, ಪು.೧೪)

** ಅದೇ, ಪುಟ.೨೫

**ಒಂದು ಪ್ರತ್ಯೇಕ ಧಾರ್ಮಿಕ ಸಂಸ್ಥೆಗಿಂತ, ಬಹು ವಿಸ್ತಾರವಾದದ್ದು. ಹಿಂದೂ ಮಹಾಸಭೆ ಹಿಂದೂ ಜನಸಮುದಾಯದ ರಾಷ್ಟ್ರೀಯ ಜೀವನದ ಅನೇಕ ಮುಖಗಳನ್ನೊಳಗೊಂಡಂತೆ, ಅದರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಎಲ್ಲವನ್ನು ಮೀರಿ, ಎಲ್ಲ ರಾಜಕೀಯ ಸಂಬಂಧಗಳ ಕೂಡೆ ಸಮೀಕರಿಸಿಕೊಡುತ್ತದೆ. ಅಲ್ಲದೆ, ಅದು ಹಿಂದೂ ರಾಷ್ಟ್ರದ ಸ್ವಾತಂತ್ರ್ಯಕ್ಕೆ, ಸಾಮರ್ಥ್ಯಕ್ಕೆ ಹಾಗೂ ಅದರ ವೈಭವಕ್ಕೆ ನೆರವಾಗುವುದೆಲ್ಲವನ್ನು ರಕ್ಷಿಸಲು ಮತ್ತು ಉತ್ತೇಜಿಸಲು ಪಣತೊಟ್ಟು ನಿಂತಿದೆ. ಅಂತೆಯೇ, ಅದು ಪೂರ್ಣ ಸ್ವರಾಜ್ಯ ಪಡೆದುಕೊಳ್ಳಲು ಎಲ್ಲ ನ್ಯಾಯಸಮ್ಮತವಾದ ಹಾಗೂ ರುಜುಮಾರ್ಗಗಳ ಮೂಲಕ ಸಂಪೂರ್ಣ ರಾಜಕೀಯ ಸ್ವಾತಂತ್ರ್ಯವನ್ನು ಹಿಂದೂಸ್ತಾನಕ್ಕೆ ಒದಗಿಸಿಕೊಡಲು ಪ್ರತಿಜ್ಞೆ ಮಾಡಿದೆ."**

ಹಿಂದೂ ಮಹಾಸಭೆ ಮುಸ್ಲಿಂ ಲೀಗನ್ನು ಪ್ರತಿಭಟಿಸಲು ಮಾತ್ರ ಆರಂಭಗೊಂಡಿದೆ ಎಂಬುದನ್ನಾಗಲಿ, ಹಿಂದೂ ಮತ್ತು ಮುಸಲ್ಮಾನರಿಗೆ ತೃಪ್ತಿಯಾಗುವ ರೀತಿಯಲ್ಲಿ ಕೋಮುವಾರು ನ್ಯಾಯ ದೊರಕಿದ ಕೂಡಲೇ ಹಿಂದೂ ಮಹಾಸಭೆ ಕಣ್ಮರೆಯಾಗುತ್ತದೆ ಎಂಬುದನ್ನಾಗಲೀ ಶ್ರೀ ಸಾವರ್ಕರ್‌ರವರು, ಒಪ್ಪಿಕೊಳ್ಳುವುದಿಲ್ಲ. ಇಂಡಿಯಾಕ್ಕೆ ರಾಜಕೀಯ ಸ್ವಾತಂತ್ರ್ಯ ದೊರಕಿದ ಮೇಲೂ ಹಿಂದೂ ಮಹಾಸಭೆ ಕ್ರಿಯಾಶೀಲವಾಗಿರಬೇಕೆಂಬುದನ್ನು ಶ್ರೀ ಸಾವರ್ಕರ್‌ರವರು ಒತ್ತಿ ಹೇಳುತ್ತಾರೆ. ಅವರು ಹೇಳುವಂತೆ–*

**"...ಮಹಾಸಭೆ ಸಮತ್ವ ಕಾಪಾಡಿಕೊಳ್ಳಲು ರಚಿಸಿದ ಒಂದು ಸಂಸ್ಥೆ. ಅದು ಮುಸ್ಲಿಂ ಲೀಗಿನ ಅಥವಾ ಇಂದಿನ ಕಾಂಗ್ರೆಸ್ ನಾಯಕರ ಒಂದು ವಿರೋಧಿ ನೀತಿಗೆ ಪ್ರತಿವಿರೋಧಿಯಾಗಿರುವ ಸಂಸ್ಥೆ. ಈ ಹುಸಿನೆಪ ಅಳಿದ ಕೂಡಲೇ ಅದು ತನ್ನಿಂದ ತಾನೆ ನಿಂತುಹೋಗುತ್ತದೆ ಅಥವಾ ಸತ್ತುಹೋಗುತ್ತದೆ ಎಂಬುದು ಹಲವಾರು ಖೋಟಾ ವಿಮರ್ಶಕರ ಭ್ರಾಂತಿ. ಆದರೆ, ಮಹಾಸಭೆಯ ಗುರಿ ಉದ್ದೇಶಗಳ ಅರ್ಥವನ್ನೇನಾದರೂ ತಿಳಿದುಕೊಂಡರೆ ಅದು ಯಾವುದೇ ಒಂದು ಪೊಳ್ಳು ವಿಚಾರವಾಹಿನಿಯ ಫಲವಲ್ಲ ಅಥವಾ ಸಣ್ಣಪುಟ್ಟ ತೊಂದರೆ ಕೀಟಲೆಗಳನ್ನು ನಿವಾರಿಸಿಕೊಳ್ಳಲು ಅಥವಾ ಆಗಾಗ್ಗೆ ಕಾಣಿಸಿಕೊಳ್ಳುವ ಪಕ್ಷ ಪಂಗಡಗಳನ್ನು ನಿಗ್ರಹಿಸಲು ಸೃಷ್ಟಿಸಿಕೊಂಡ ಗೊಂದಲಮಯ ಚಳುವಳಿಯು ಅಲ್ಲ ಎಂಬುದು ಸ್ಪಷ್ಟವಾಗುತ್ತದೆ. ನಿಜಸಂಗತಿ ಏನೆಂದರೆ, ಯಾವುದೇ ಜೀವಿ, ಅದೊಂದು ವ್ಯಕ್ತಿಯೇ ಇರಲಿ, ಸಮಾಜವೇ ಇರಲಿ, ಅದು ಜೀವಂತವಾಗಿದ್ದರೆ ಅಥವಾ ಉಳಿದುಕೊಳ್ಳಲು ಯೋಗ್ಯವಾಗಿದ್ದಲ್ಲಿ ತನಗೆ ವಿರೋಧಿಯಾದ ಪರಿಸರ ಅದರ ಸಂಪೂರ್ಣಕ್ಕೆ ಬಂದ ಕೂಡಲೇ ತನ್ನ ಆಕ್ರಮಣಾತ್ಮಕ ಹಾಗೂ ರಕ್ಷಣಾತ್ಮಕ ಅವಯವಗಳನ್ನು ಹೊರಕ್ಕೆಸೆಯುತ್ತದೆ. ಅಂತೆಯೇ ಹಿಂದೂರಾಷ್ಟ್ರ ಕೂಡಾ ತಾನು ಕಾಂಗ್ರೆಸ್ ಮಾದರಿಯ ಖೋಟಾ ರಾಷ್ಟ್ರೀಯ ಭಾವನೆಯ ಕಪಿಮುಷ್ಠಿಯಿಂದ ಪಾರಾಗಿ ಸ್ತಿಮಿತಕ್ಕೆ ಬಂದಾಗ, ಆಧುನಿಕ ಕಾಲದ ಬದಲಾದ ಪರಿಸ್ಥಿತಿಯಲ್ಲಿ, ತನ್ನ ಇರುವಿಕೆಯ ಹೋರಾಟಕ್ಕೋಸ್ಕರ ಅದು ಹೊಸ ಅಂಗವೊಂದನ್ನು ರೂಪಿಸಿಕೊಂಡಿತು. ಅದೇ ಹಿಂದೂ ಮಹಾಸಭೆ. ಅದು ರಾಷ್ಟ್ರೀಯ ಜೀವನದ ಒಂದು ಮೂಲಭೂತ ಅವಶ್ಯಕತೆಯಾಗಿ ಬೆಳೆಯಿತೇ ಹೊರತು ಕೇವಲ ಆಕಸ್ಮಿಕವಾಗಿ ಅಲ್ಲ. ಅದರ ಧ್ಯೇಯ, ರಾಷ್ಟ್ರೀಯ ಜೀವನದಷ್ಟೇ ಶಾಶ್ವತವೆಂಬುದು ಅದರ ರಚನಾತ್ಮಕ ಗುರಿ ಉದ್ದೇಶಗಳಿಂದ ಸುಸ್ಪಷ್ಟವಾಗುತ್ತದೆ. ಅದೇನೇ ಇದ್ದರೂ,**

---

* ಅದೇ ಪು.೨೪೨೭

ಹಿಂದೂ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ಹಾಗೂ ಅವುಗಳನ್ನು ಗಂಡಾಂತರಗಳಿಂದ ಪಾರು ಮಾಡಲು, ಯಾವುದೇ ನೈತಿಕ ಅಥವಾ ಬೌದ್ಧಿಕ ದಾಸ್ಯತನಕ್ಕೆ ಅಥವಾ ಯಾವುದೇ ಆ ಒಂದು ಅಥವಾ ಸಂಯುಕ್ತ ಪ್ರಾತಿನಿಧಿಕ ಸಂಸ್ಥೆಯ ಅಧೀನತೆಗೆ ಒಳಗಾಗದೆ ಸಂಪೂರ್ಣವಾಗಿ ಸ್ವತಂತ್ರವಾಗಿರುವಂತಹ ಹಿಂದು ಸಂಘಟನೆಯೊಂದು ಹಿಂದೂ ಸಮುದಾಯಕ್ಕೆ, ಸದಾ ಬದಲಾಗುತ್ತಿರುವ ರಾಜಕೀಯ ಪ್ರವೃತ್ತಿಗಳ ಹಿನ್ನೆಲೆಯಲ್ಲಿ ತನ್ನ ದಿನನಿತ್ಯದ ಅಗತ್ಯತೆಗಳಿಗನುಗುಣವಾಗಿ ತನ್ನ ಕಾರ್ಯನೀತಿಯನ್ನು ರೂಪಿಸಿಕೊಂಡು ಹೊಗಲು, ತೀರಾ ಅತ್ಯಗತ್ಯ. ಇದು ಹಿಂದೂಸ್ತಾನದ ಪ್ರಸ್ತುತ ರಾಜಕೀಯ ಅಧೀನತೆಯ ಸಂದರ್ಭಕ್ಕೆ ಮಾತ್ರ ಸೀಮಿತವಾಗಿಲ್ಲ. ಹಿಂದೂ ಮಹಾಸಭೆಯಂತಹ ಪ್ರತ್ಯೇಕ ಹಿಂದೂ ಸಂಘಟನೆಯೊಂದು, ಹಿಂದೂ ಸಮಾಜ ಎಂಬ ದುರ್ಗದ ಕಾವಲುಗೋಪುರವಾಗಿ ಮುಂದಿನ ಒಂದೆರಡು ಶತಮಾನಗಳ ತನಕ ಯಾವುದಾದರೊಂದು ರೂಪದಲ್ಲಿಯಾದರೂ ಇರಬೇಕಾದುದು ಅನಿವಾರ್ಯ. ಹಿಂದೂಸ್ತಾನಕ್ಕೆ ಅಂಶಿಕವಾಗಿ ಅಥವಾ ಸಂಪೂರ್ಣವಾಗಿ ಸ್ವಾತಂತ್ರ್ಯ ದೊರಕಿ ರಾಷ್ಟ್ರೀಯ ಸಂಪತ್ತು ಅದರ ರಾಜಕೀಯ ನಿಯತಿಯನ್ನು ನಿಯಂತ್ರಿಸಿದಾಗಲು ಇಂತಹ ಸಂಘಟನೆ ಬೇಕೇಬೇಕು.

ವ್ಯಾವಹಾರಿಕ ರಾಜಕೀಯ ದೃಷ್ಟಿಯಿಂದ ಹೇಳುವುದಾದರೆ ಮುಂಬರುವ ದಿನಗಳಲ್ಲಿ ಪ್ರಪಂಚದಲ್ಲಿ ಯಾವುದೇ ಗುರುತರವಾದ ರಾಜಕೀಯ ವಿಪ್ಲವ ಉಂಟಾಗುವುದು ಅಸಂಭವನೀಯ. ಈ ಪರಿಸ್ಥಿತಿಯಲ್ಲಿ ಇಂಡಿಯಾ ವೆಸ್ಟ್‌ಮಿನಿಸ್ಟರ ಶಾಸನ ಉದ್ದೇಶಿಸಿದ ಸ್ಥಾನಮಾನವುಳ್ಳ ಒಂದು ಸ್ವತಂತ್ರ ಆಡಳಿತಾತ್ಮಕ ಘಟಕ ಎಂದು ಇಂಗ್ಲೆಂಡ್ ಪರಿಗಣಿಸುವಂತೆ ಮಾಡುವ ಕಾರ್ಯದಲ್ಲಿ ಹಿಂದೂಗಳಾದ ನಾವು ಕೆಲವೇ ಕೆಲವು ದಿನಗಳಲ್ಲಿ ಜಯಶಾಲಿಗಳಾಗುತ್ತೇವೆ ಎಂಬುದನ್ನು ನಾವು ನಿರೀಕ್ಷಿಸುವುದು ಅಸಮಂಜಸವೇನೂ ಆಗಲಾರದು.

"ಈಗ ಇಂತಹ ಸ್ವಯಂ ಆಡಳಿತ ಇಂಡಿಯಾದಲ್ಲಿ, ರಾಷ್ಟ್ರೀಯ ಸಂಸತ್ತು ನಾಯಕ ಸಮುದಾಯವನ್ನು ಮತ್ತೆ ಪ್ರತಿಬಿಂಬಿಸಬಹುದು. ವಾಸ್ತವಿಕವಾಗಿ, ನಮಗೆ ತಿಳಿದಂತೆ, ಹಿಂದೂ ಮತ್ತು ಮುಸಲ್ಮಾನರ ಸಂಬಂಧ ಸ್ವಲ್ಪ ಮಟ್ಟಿಗೆ ಸುಧಾರಿತಗೊಂಡಿದೆ ಅಥವಾ ಇನ್ನೂ ಕೆಟ್ಟಿದೆ. ಇಂಡಿಯಾವನ್ನು ಮುಸ್ಲಿಂ ರಾಜ್ಯವನ್ನಾಗಿ ರೂಪಾಂತರಿಸಬೇಕೆಂಬ ಗೌಪ್ಯ ಪ್ರೇರಣೆಯೊಂದು ಮುಸ್ಲಿಮರನ್ನು ಪ್ರಚೋದಿಸುತ್ತಿರುವ ಸಂಗತಿ. ಅಂತೆಯೇ ಅವರ ರಾಷ್ಟ್ರಬಾಹ್ಯ ಉದ್ದೇಶ ಇವೆರಡೂ ಎಂದಾದರೂ ಒಮ್ಮೆ, ಒಳಯುದ್ಧದ ಮೂಲಕವಾಗಲಿ ಅಥವಾ ಹೊರ ಆಕ್ರಮಣಕಾರರನ್ನು ವಿಶ್ವಾಸಘಾತಕವಾಗಿ ಸಂಧಾನಕ್ಕೊಳಪಡಿಸಿ, ಹಿಂದೂಸ್ತಾನಿ ಸ್ವರಾಜ್ಯವನ್ನು ಎದುರಿಸುವ ಸಾಧ್ಯತೆಯ ಬಗೆಗೆ ಯಾವುದೇ ವಸ್ತುಪರಿಜ್ಞಾನವುಳ್ಳ ವ್ಯಕ್ತಿ ಕುರುಡನಾಗಿರುವುದು ಅಸಾಧ್ಯ. ಅಷ್ಟೇ ಅಲ್ಲದೆ, ಕನಿಷ್ಠ ಮುಂದಿನ ಶತಮಾನದ ತನಕವಾದರೂ ಧರ್ಮಾಂಧತೆಯ ಕೋಲಾಹಲಗಳು, ಉದ್ಯೋಗಗಳಿಗಾಗಿ, ಶಾಸನಸಭೆಯ ಸದಸ್ಯತ್ವಕ್ಕಾಗಿ ತಮ್ಮ ಜನಸಂಖ್ಯಾಬಲಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಅವಕಾಶಗಳು ಸಿಗಬೇಕೆಂಬ ಹೋರಾಟಗಳು ಮುಸ್ಲಿಂ ಅಲ್ಪಸಂಖ್ಯಾತರಿಂದ ಸದಾ ನಡೆಯುವ ಸಾಧ್ಯತೆ ಇದೆ. ತತ್ಫಲವಾದ ಆಂತರಿಕ ಶಾಂತಿಗೆ ಭಂಗ ಬರುವ ಅಪಾಯ ಸದಾ ಇದ್ದೇ ಇರುತ್ತದೆ. ನಾವು ಬುದ್ಧಿವಂತರಾದರೆ, ಹಿಂದೂಸ್ತಾನ ಸ್ವರಾಜ್ಯವಾದ ಬಳಿಕ ಕೂಡಾ ಈ ಸಾಧ್ಯತೆಯನ್ನು ತಡೆಹಿಡಿಯಲು, ಹಿಂದೂ ಮಹಾಸಭೆಯಂತಹ ಶಕ್ತಿಯುತ ಹಾಗೂ ಹಿಂದೂ ಸಮುದಾಯಕ್ಕೆ ವಿಫಲವಾದ ಸಂಘಟನೆಯೊಂದು ಇರುವುದರಿಂದ ಹಿಂದೂಗಳಿಗೆ ಒಂದು

**ಖಚಿತ ಹಾಗೂ ಪ್ರಾಮಾಣಿಕ ಆಶ್ರಯವಾಗಿರುವಂತಹ ಶಕ್ತಿ–ಕೇಂದ್ರ ದೊರಕಿದಂತಾಗುತ್ತದೆ. ಅದು ತಮ್ಮ ನೋವುಗಳನ್ನು ತೋಡಿಕೊಳ್ಳಲು, ಮುಂಬರುವ ಗಂಡಾಂತರಗಳನ್ನು ಗ್ರಹಿಸಿಕೊಳ್ಳಲು, ಅವುಗಳ ಬಗೆಗೆ ಹಿಂದೂಗಳನ್ನು ಸಕಾಲದಲ್ಲಿ ಎಚ್ಚರಿಸಲು, ಒಕ್ಕೂಟ ರಾಜ್ಯ ತನಗೆ ಅರಿವಿಲ್ಲದೆಯೇ ಯಾವುದೇ ವಿಶ್ವಾಸಘಾತುಕ ಸಂಚಿಗೆ ಗುರಿಯಾಗುವ ಪ್ರಸಂಗದಲ್ಲಿ ಅಗತ್ಯ ಕಂಡಲ್ಲಿ, ಅದನ್ನು ವಿರೋಧಿಸಲು ಹಿಂದೂಗಳಿಗೆ ಅದು ಜಂಟಿ ಹೆಚ್ಚು ಪರಿಣಾಮಕಾರಿಯಾಗುತ್ತದೆ.**

**"ಕೆನಡಾ, ಪ್ಯಾಲೆಸ್ತೇನ್, ತರುಣ ತುರ್ಕರ ಚಳುವಳಿಯ ಚರಿತ್ರೆಗಳು ತೋರಿಸುವಂತೆ ಭಾರತದಲ್ಲಿಯೂ ಯಾವ್ಯಾವ ರಾಜ್ಯದಲ್ಲಿ ಹಿಂದೂ–ಮುಸ್ಲಿಮರಂತೆ ಎರಡು ಅಥವಾ ಹೆಚ್ಚಿನ ಘರ್ಷಣಾತ್ಮಕ ಘಟಕಗಳು ರಚನಾಂಗಗಳಾಗಿವೆಯೋ ಅಲ್ಲಿ, ಹೆಚ್ಚು ವಿವೇಕವುಳ್ಳ ಘಟಕ ವಿರೋಧಪಕ್ಷದ ಪ್ರತೀಕವಾಗಿ ಆ ಪಕ್ಷಕ್ಕೆ ಗಡಿನಾಡ ಹೊರಗಿನ ರಾಜ್ಯಗಳೊಂದಿಗೆ ಧಾರ್ಮಿಕ ಅಥವಾ ಯಾವುದೇ ಸಾಂಸ್ಕೃತಿಕ ಒಲವುಗಳಿದ್ದರೇ ಅಥವಾ ರಾಷ್ಟ್ರೀಯ ರಾಜ್ಯವನ್ನು ಸ್ವಾಧೀನಪಡಿಸಿಕೊಳ್ಳುವ ಒಲವುಗಳಿದ್ದರೆ, ಸದೆಬಡಿಯಲು ತನ್ನ ಪ್ರತ್ಯೇಕ ಪ್ರಯತ್ನ ಮಾಡಲು ಸಂಘಟನೆಯನ್ನು ಅಖಂಡವಾಗಿ, ಶಕ್ತಿಯುತವಾಗಿ ಮತ್ತು ಎಚ್ಚರಿಕೆಯಿಂದ ಕಾಯ್ದುಕೊಂಡು ಬರಬೇಕು."**

ಶ್ರೀ ಸಾವರ್ಕರ್‌ರವರು ಹಿಂದೂಸ್ತಾನ ಮತ್ತು ಹಿಂದೂ ಮಹಾಸಭೆಗಳೆಂದರೇನು ಎಂಬುದನ್ನು ವ್ಯಕ್ತಪಡಿಸಿ ಸ್ವರಾಜ್ಯದ ಬಗೆಗಿರುವ ತನ್ನ ಕಲ್ಪನೆಯನ್ನು ವ್ಯಾಖ್ಯಾನಿಸಲು ಹೊರಡುತ್ತಾರೆ. ಶ್ರೀ ಸಾವರ್ಕರವರ ಪ್ರಕಾರ:*

**"ಕೆಲವು ಆಂಗ್ಲರು ಭಾರತದಲ್ಲಿ ಹುಟ್ಟಿ ಇಲ್ಲಿಯ ನಿವಾಸಿಗಳಾಗಿರಲು ಇಚ್ಛಿಸಬಹುದು. ಇಂಥವರನ್ನು ಒಳಗೊಂಡಂತೆ ಭಾರತೀಯ ಅಥವಾ ಭಾರತೀಯರಲ್ಲದ ಯಾವುದೇ ಅ–ಹಿಂದೂ ಜನಾಂಗದ ಸ್ವಾಮಿತ್ವಕ್ಕೆ ಒಳಗಾಗದೆ ತಮ್ಮ 'ಸ್ವರಾಜ್ಯ'ವನ್ನು ತಮ್ಮ 'ಹಿಂದೂತ್ವ'ವನ್ನು, ಪ್ರತಿಷ್ಠಾಪಿಸಲು ಸಾಧ್ಯವಾಗುವ ರಾಜ್ಯ ಮಾತ್ರ ಹಿಂದೂಗಳಿಗೆ ಸ್ವರಾಜ್ಯವೆನಿಸುವುದು. ಅದು ಸಾಧ್ಯವೇ? ಔರಂಗಜೇಬ್ ಅಥವಾ ಟೀಪು ಪರಂಪರಾಗತವಾಗಿ ಇಂಡಿಯನರು, ಅದಕ್ಕಿಂತ ಹೆಚ್ಚಾಗಿ ಅವರು ಮತಾಂತರಗೊಂಡ ಹಿಂದು ತಾಯಂದಿರ ಮಕ್ಕಳು. ಹೀಗಿದ್ದರೂ ಔರಂಗಜೇಬ್ ಅಥವಾ ಟೀಪು ಇವರ ರಾಜ್ಯಭಾರ ಹಿಂದೂಗಳಿಗೆ 'ಸ್ವರಾಜ್ಯ'ವಾಗಿತ್ತೇ? ಇಲ್ಲ; ಅವರು ಪ್ರಾದೇಶಿಕವಾಗಿ ಭಾರತೀಯರಾಗಿದ್ದರೂ, ಅವರು ಹಿಂದೂ ಸಮುದಾಯದ ಕಡುವೈರಿಗಳಾಗಿ ಕಂಡುಬಂದರು. ಆದುದರಿಂದಲೆ, ಒಬ್ಬ ಶಿವಾಜೀ, ಒಬ್ಬ ಗೋಬಿಂದ್ ಸಿಂಗ್, ಒಬ್ಬ ಪ್ರತಾಪ್ ಅಥವಾ ಪೇಶ್ವೆಗಳು ಮುಸ್ಲಿಂ ಪ್ರಾಬಲ್ಯದ ವಿರೋಧ ಹೋರಾಡಿ ನಿಜವಾದ ಹಿಂದೂ ಸ್ವರಾಜ್ಯವನ್ನು ಸ್ಥಾಪಿಸಬೇಕಾಯಿತು."**

ತನ್ನ ಸ್ವರಾಜ್ಯದ ಭಾಗವಾಗಿ ಶ್ರೀ ಸಾವರ್ಕರವರು ಎರಡು ವಿಷಯಗಳನ್ನು ಒತ್ತಿ ಹೇಳುತ್ತಾರೆ. ಮೊದಲನೆಯದಾಗಿ, ಇಂಡಿಯಾಕ್ಕೆ ಹಿಂದೂಸ್ತಾನ ಎಂಬ ಅಂಕಿತನಾಮವನ್ನೇ ಉಳಿಸಿಕೊಳ್ಳಬೇಕು.**

---

* ಭಾಷಣ, ೧೯೩೯, ಅದೇ ಪು.೧೮

** ಅದೇ ಪು.೧೯೨೦

"ನಮ್ಮ ದೇಶಕ್ಕೆ 'ಹಿಂದೂಸ್ತಾನ' ಎಂಬ ಹೆಸರೇ ಮುಂದುವರಿಯಬೇಕು. ಹಿಂದೂ ಜನಾಂಗದ ನೆಲೆಯಾಗಿರುವ ರಾಷ್ಟ್ರಕ್ಕೆ ಹಿಂದೂಗಳ ದೇಶ ಎಂಬ ಅರ್ಥ ಸೂಚಿತವಾಗುವಂತೆ ಸಿಂಧು ಎಂಬ ಮೂಲ ಪದದಿಂದ ಸಾಧಿತಗೊಂಡ ಇಂಡಿಯಾ ಹಿಂದ್ ಮುಂತಾದ ನಾಮಾಂಕಿತಗಳನ್ನು ಬಳಸಬಹುದು. ಆರ್ಯಾವರ್ತ, ಭರತಭೂಮಿ ಮುಂತಾದವುಗಳು ನಿಜವಾಗಿಯೂ ನಮ್ಮ ದೇಶದ ಪ್ರಾಚೀನ ಹಾಗೂ ಬಹುನೆಚ್ಚಿನ ಉಪಾಧಿಗಳು. ಅವು ನಮ್ಮ ಸುಸಂಸ್ಕೃತ ಗಣ್ಯ ವ್ಯಕ್ತಿಗಳಿಗೆ ಹಿತವಾಗಿ ಇನ್ನು ಉಳಿಯುತ್ತವೆ. ಅದೇನೇ ಇದ್ದರೂ, ನಮ್ಮ ತಾಯಿನಾಡನ್ನು 'ಹಿಂದೂಸ್ತಾನ' ಎಂದೇ ಕರೆಯಬೇಕು ಎಂಬ ಹಿಂದೂಗಳ ಹಠದಿಂದಾಗಿ ನಮ್ಮ ಹಿಂದೂಯೇತರ ಬಾಂಧವರ ಮೇಲೆ ಯಾವುದೇ ಆಕ್ರಮಣವಾಗಲಿ, ಅಪಮಾನವಾಗಲಿ ಧ್ವನಿತವಾಗಲಾರದು. ನಮ್ಮ ಪಾರ್ಸಿ ಮತ್ತು ಕ್ರೈಸ್ತ ಬಾಂಧವರು ಈಗಾಗಲೇ ಸಾಂಸ್ಕೃತಿಕವಾಗಿ ನಮಗೆ ಬಹು ಹತ್ತಿರದಲ್ಲಿದ್ದಾರೆ. ಮಾತ್ರವಲ್ಲದೆ, ದೇಶಾಭಿಮಾನಿಗಳೂ ಆಗಿದ್ದಾರೆಯಾದರೂ ಇವರು ಮತ್ತು ಆಂಗ್ಲೋ–ಇಂಡಿಯನ್ನರು ಇಷ್ಟೊಂದು ನ್ಯಾಯಸಮ್ಮತವಾದ ಈ ವಿಷಯದಲ್ಲಿ ಹಿಂದೂಗಳಾದ ನಮ್ಮ ಅಭಿಪ್ರಾಯ ಒಪ್ಪಿಕೊಳ್ಳಲು ನಿರಾಕರಿಸುತ್ತಾರೆ. ನಮ್ಮ ಮುಸ್ಲಿಂ ಬಾಂಧವರ ಬಗೆಗೆ ಹೇಳುವುದಾದರೆ, ಹಿಂದೂ–ಮುಸ್ಲಿಂ ಐಕ್ಯತೆಯಲ್ಲಿ ಈ ಸಣ್ಣ ವಿಷಯವನ್ನೇ ಒಂದು ದೊಡ್ಡ ಬೆಟ್ಟವನ್ನಾಗಿ ಮಾಡುವ ಅವರ ಪ್ರವೃತ್ತಿಯನ್ನು ನಾವು ಮುಚ್ಚಿಡಬೇಕಾಗಿಲ್ಲ. ಆದರೆ, ಮುಸ್ಲಿಮರು ಇಂಡಿಯಾದೊಳಗೆ ಮಾತ್ರ ನೆಲಸಿರುವುದಿಲ್ಲ ಅಥವಾ ಇಂಡಿಯಾದ ಮುಸ್ಲಿಮರು ಮಾತ್ರ ಇಸ್ಲಾಮಿನ ಅಳಿದುಳಿದ ಕಡು ಶ್ರದ್ಧಾಳುಗಳು ಅಲ್ಲ ಎಂಬುದನ್ನು ಅವರು ನೆನಪಿನಲ್ಲಿಟ್ಟುಕೊಳ್ಳಬೇಕು. ಚೀನಾದೊಳಗೆ ಕೋಟಿಗಟ್ಟಲೆ ಮುಸ್ಲಿಮರಿದ್ದಾರೆ. ಗ್ರೀಸ್, ಪ್ಯಾಲೆಸ್ತೇನ್, ಹಂಗೇರಿ ಮತ್ತು ಪೋಲೆಂಡ್‌ಗಳಲ್ಲಿ ಕೂಡಾ ಅವರ ಜನತೆಯ ಮಧ್ಯದಲ್ಲಿ ಸಾವಿರಾರು ಮುಸ್ಲಿಮರಿದ್ದಾರೆ. ಆದರೆ ಅಲ್ಲಿ ಅಲ್ಪಸಂಖ್ಯಾತರಾಗಿದ್ದುದರಿಂದ ಕೇವಲ ಒಂದು ಜನಸಮುದಾಯವಾದುದರಿಂದ, ಆ ದೇಶಗಳ ಬಹುಸಂಖ್ಯಾತ ಜನರ ನೆಲೆಗಳನ್ನು ಸೂಚಿಸುವ ಪ್ರಾಚೀನ ಹೆಸರುಗಳನ್ನು ಬದಲಾಯಿಸಲು ತಮ್ಮ ಅಸ್ತಿತ್ವವನ್ನು ಒಂದು ಕಾರಣವನ್ನಾಗಿ ಅವರ ಮುಂದಿಟ್ಟಿಲ್ಲ. ಪೋಲೆಂಡ್ ಜನರ ನಾಡು ಪೋಲೆಂಡಾಗಿಯೂ, ಗ್ರೀಕರ ನಾಡು ಗ್ರೀಸಾಗಿಯೂ ಮುಂದುವರಿದಿದೆ. ಮುಸ್ಲಿಮರು ಅವುಗಳನ್ನು ವಿರೂಪಗೊಳಿಸಲಿಲ್ಲ ಅಥವ ಆ ಹುಚ್ಚು ಸಾಹಸಕ್ಕಿಳಿಯಲಿಲ್ಲ. ಅವರು ತಮ್ಮನ್ನು ಪೋಲೆಂಡಿನ ಮುಸ್ಲಿಮರು ಅಥವಾ ಗ್ರೀಕ್ ಮುಸ್ಲಿಮರು ಅಥವಾ ಚೀನಿ ಮುಸ್ಲಿಮರೆಂದು ಗುರುತಿಸಿಕೊಳ್ಳುವುದರಲ್ಲಿ ತೃಪ್ತಿ ಹೊಂದಿದ್ದಾರೆ. ಅಂತೆಯೇ ನಮ್ಮ ಮುಸ್ಲಿಂ ಬಾಂಧವರು ತಮ್ಮನ್ನು ರಾಷ್ಟ್ರೀಯವಾಗಿ ಅಥವಾ ಪ್ರಾದೇಶಿಕವಾಗಿ "ಹಿಂದುಸ್ತಾನಿ ಮುಸ್ಲಿಮರು" ಎಂದು ಗುರುತಿಸಿಕೊಂಡು ತಮ್ಮ ಧಾರ್ಮಿಕ ಅಥವಾ ಸಾಂಸ್ಕೃತಿಕ ಅಸ್ತಿತ್ವವನ್ನು ಕಾಪಾಡಿಕೊಳ್ಳಬಹುದು. ಅಷ್ಟೇ ಅಲ್ಲ, ಇಂಡಿಯಾಕ್ಕೆ ಅವರ ಆಗಮನ ಆದ ಕಾಲದಿಂದ ಮುಸ್ಲಿಮರು ತಮ್ಮನ್ನು "ಹಿಂದೂಸ್ತಾನಿ"ಗಳೆಂದು ತಾವಾಗಿಯೇ ಕರೆದುಕೊಳ್ಳುತ್ತಿದ್ದರು.

ವಸ್ತುಸ್ಥಿತಿ ಹೀಗಿದ್ದರೂ ಕೂಡಾ ನಮ್ಮ ದೇಶ ಬಾಂಧವರ ಪೈಕಿ ಕೆಲವೊಂದು ಸಿಡುಕು ಸ್ವಭಾವದ ಮುಸ್ಲಿಂ ಗುಂಪುಗಳು ನಮ್ಮ ದೇಶದ ಹೆಸರನ್ನು ಆಕ್ಷೇಪಿಸುತ್ತಾರೆ. ಇದರಿಂದಾಗಿ ನಮ್ಮ ಆತ್ಮಸಾಕ್ಷಿಗೆ ವಿರೋಧರಾಗಿ ಹೇಡಿಗಳಾಗಿ ನಾವು ಇರಬೇಕಾಗಿಲ್ಲ. ನಮ್ಮ ತಾಯಿನಾಡಿನ ಸಮ್ಮತವಾದ ಹೆಸರು "ಹಿಂದೂಸ್ತಾನ".

**ಋಗ್ವೇದ ಕಾಲದಿಂದ ನಮ್ಮ ಕಾಲದ ಹಿಂದೂಗಳಲ್ಲಿಯೂ ಸಮ್ಮತವಾದ ಸಿಂಧೂಗಳು ಎಂಬುದರಿಂದ ಬಂದಂತಹ ನಮ್ಮ ತಾಯಿನಾಡಿನ "ಹಿಂದೂಸ್ತಾನ" ಎಂಬ ಹೆಸರಿನಲ್ಲಿ ಸೂಚಿತವಾಗುವ ನಮ್ಮ ರಾಷ್ಟ್ರದ ಪರಂಪರೆಗೆ ದ್ರೋಹವನ್ನಾಗಲಿ ಅಥವಾ ಭಂಗ ತರುವುದನ್ನಾಗಲಿ ನಾವು ಹಿಂದೂಗಳು ಮಾಡಕೂಡದು. ಜರ್ಮನರ ದೇಶ ಜರ್ಮನಿಯಾಗುವಂತೆ, ಇಂಗ್ಲಿಷರ ನಾಡು ಇಂಗ್ಲೆಂಡು ಆಗುವಂತೆ, ತುರ್ಕರ ರಾಷ್ಟ್ರ ತುರ್ಕಿಸ್ತಾನ, ಆಫ್ಘನರದ್ದು ಆಫ್ಘಾನಿಸ್ತಾನ ಆಗುವಂತೆ- "ಹಿಂದೂ"ಗಳ ರಾಷ್ಟ್ರ ಎಲ್ಲ ಕಾಲಕ್ಕೂ "ಹಿಂದೂಸ್ತಾನ"ವಾಗುವಂತೆ ಭೂನಕಾಶೆಯ ಮೇಲೆ ಅಳಿದುಹೋಗದ ಹಾಗೆ ನಾವು ನಮೂದಿಸಬೇಕು.**

ಎರಡನೆಯದು, ಸಂಸ್ಕೃತವನ್ನು ಧಾರ್ಮಿಕ ಭಾಷೆಯನ್ನಾಗಿ, ಹಿಂದಿಯನ್ನು ರಾಷ್ಟ್ರೀಯ ಭಾಷೆಯನ್ನಾಗಿ ಮತ್ತು ನಾಗರಿಯನ್ನು ಹಿಂದೂ ಸಮುದಾಯದ ಲಿಪಿಯನ್ನಾಗಿ ಉಳಿಸಿಕೊಳ್ಳಬೇಕು.

**ಸಂಸ್ಕೃತ ನಮ್ಮ ದೇವಭಾಷೆ, ಧಾರ್ಮಿಕ ಭಾಷೆ. ಸಂಸ್ಕೃತ ಮೂಲದ (ಸಂಸ್ಕೃತನಿಷ್ಠ) ಸಂಸ್ಕೃತದಿಂದ ಪುಷ್ಟಿ ಪಡೆಯುವ ಹಿಂದಿ ನಮ್ಮ ಪ್ರಚಲಿತ ರಾಷ್ಟ್ರಭಾಷೆ. ಹಿಂದೂಗಳಾದ ನಮಗೆ ಸಂಸ್ಕೃತ ಕೇವಲ ಅತ್ಯಂತ ಸಂಪದ್ಭರಿತ, ಜಗತ್ತಿನ ಅತಿ ಪ್ರಾಚೀನ ಭಾಷೆಗಳಲ್ಲಿ ಅತ್ಯಂತ ಸಂಸ್ಕಾರಗೊಂಡ ಭಾಷೆ ಮಾತ್ರವಲ್ಲದೆ ಎಲ್ಲ ಭಾಷೆಗಳಿಗಿಂತಲೂ ಹೆಚ್ಚು ಪವಿತ್ರವಾದ ಭಾಷೆಯಾಗಿದೆ. ನಮ್ಮ ಧಾರ್ಮಿಕ ಗ್ರಂಥಗಳು ಇತಿಹಾಸ, ತತ್ತ್ವಶಾಸ್ತ್ರ ಹಾಗೂ ಸಂಸ್ಕೃತಿ ಇವುಗಳ ಬೇರುಗಳೆಲ್ಲವೂ ಸಂಸ್ಕೃತ ಸಾಹಿತ್ಯದಲ್ಲಿ ಆಳವಾಗಿ, ಭದ್ರವಾಗಿ ಹಿಡಿದುಕೊಂಡಿವೆ. ಈ ಕಾರಣದಿಂದಾಗಿ ವಾಸ್ತವವಾಗಿ ಅದು ನಮ್ಮ ಜನಾಂಗದ ಜ್ಞಾನಕೇಂದ್ರ. ನಮ್ಮ ಹಲವಾರು ಮಾತೃಭಾಷೆಗಳ ಜನನಿಯಾಗಿದ್ದು, ಉಳಿದವುಗಳಿಗೆ ತನ್ನ ಮೊಲೆಹಾಲನ್ನುಣಿಸಿ ಪೋಷಿಸಿದ್ದಾಳೆ. ಇಂದು ಪ್ರಚಲಿತವಾಗಿರುವ ಹಿಂದೂ ಭಾಷೆಗಳು, ಅವುಗಳ ಮೂಲ ಸಂಸ್ಕೃತವಿರಲಿ ಅಥವಾ ಅವು ಸಂಸ್ಕೃತವನ್ನು ಅವಲಂಬಿಸಿರಲಿ ಅವುಗಳ ಜೀವ ಹಾಗೂ ಬೆಳವಣಿಗೆ ಸಂಸ್ಕೃತದಿಂದಲೇ. ಆದುದರಿಂದ ಹಿಂದೂ ಯುವಕರಿಗೆ ಉನ್ನತ ಶಿಕ್ಷಣದಲ್ಲಿ ಸಂಸ್ಕೃತ ಬೇಕೇ ಬೇಕು.**

**"ಹಿಂದಿಯನ್ನು ಹಿಂದೂ ಸಮುದಾಯದ ರಾಷ್ಟ್ರೀಯ ಭಾಷೆಯನ್ನಾಗಿ ಸ್ವೀಕಾರ ಮಾಡುವುದರಿಂದ ಉಳಿದ ರಾಜ್ಯಭಾಷೆಗಳಿಗೆ ಅಪಮಾನ ಮಾಡುವ ಅಥವಾ ಅನ್ಯಾಯದಿಂದ ಪ್ರತ್ಯೇಕಿಸುವ ಅಭಿಪ್ರಾಯ ಧ್ವನಿತಗೊಳ್ಳುವುದಿಲ್ಲ. ನಾವೆಲ್ಲರೂ ಹಿಂದಿಯನ್ನು ಪ್ರೀತಿಸುವಂತೆ ನಮ್ಮ ಪ್ರಾದೇಶಿಕ ಭಾಷೆಗಳನ್ನು ಪ್ರೀತಿಸುತ್ತೇವೆ. ಅವು ಅವುಗಳ ಪರಿಸ್ಥಿತಿ, ಸನ್ನಿವೇಶಗಳಿಗೆ ತಕ್ಕಂತೆ ಬೆಳೆಯುತ್ತವೆ, ಅಭಿವೃದ್ಧಿಗೊಳ್ಳುತ್ತವೆ. ನಿಜವಾಗಿಯೂ ಅವುಗಳಲ್ಲಿ ಕೆಲವು ಇಂದಿನ ದಿನಮಾನಗಳಲ್ಲಿ ಸಾಹಿತ್ಯಕವಾಗಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿವೆ, ಸಮೃದ್ಧಿಯನ್ನು ಪಡೆದಿವೆ. ಆದರೂ ಸರ್ವ-ಹಿಂದೂ ರಾಷ್ಟ್ರೀಯ ಭಾಷೆಯಾಗಿ ಹಿಂದಿ ಮಾತ್ರ ಅತ್ಯುತ್ತಮವಾಗಿದೆ. ಆದರೆ ಹಿಂದಿಯನ್ನು ರಾಷ್ಟ್ರ ಭಾಷೆಯನ್ನಾಗಿ ಮಾಡುವುದು ಆಜ್ಞೆ ಹೊರಡಿಸಲಿಕ್ಕಲ್ಲ ಎಂಬುದನ್ನು ಮರೆಯಕೂಡದು. ಆಂಗ್ಲರು ಅಥವಾ ಮುಸ್ಲಿಮರು ಇಂಡಿಯಾದೊಳಗೆ ಕಾಲಿಡುವ ಬಹು ಪೂರ್ವದಲ್ಲಿಯೇ ಹಿಂದೂಸ್ತಾನದಲ್ಲೆಲ್ಲ ಹಿಂದಿ ರಾಷ್ಟ್ರಭಾಷೆಯ ಸ್ಥಾನವನ್ನು ಪಡೆದುಕೊಂಡಿತ್ತು. ಹಿಂದೂ ಯಾತ್ರಿಕ, ವರ್ತಕ, ಪ್ರವಾಸಿ, ಯೋಧ, ಪಂಡಿತ ಇವರೆಲ್ಲರೂ ಬಂಗಾಲದಿಂದ ಸಿಂಧು, ಕಾಶ್ಮೀರದಿಂದ- ರಾಮೇಶ್ವರತನಕ ಪ್ರಯಾಣ ಮಾಡುತ್ತಿರುವಾಗ ಪ್ರತಿ ಪ್ರದೇಶದಲ್ಲಿ ಹಿಂದಿಯನ್ನೇ ಸಂಪೂರ್ಣ ಮಾಧ್ಯಮವನ್ನಾಗಿ ಬಳಸುತ್ತಿದ್ದರು. ಹಿಂದೂ ಪಂಡಿತ ವರ್ಗದಲ್ಲಿ ಸಂಸ್ಕೃತ ರಾಷ್ಟ್ರೀಯ ಭಾಷೆಯಾಗಿದ್ದಂತೆ ಸುಮಾರು ಒಂದು ಸಾವಿರ ವರ್ಷ ಕಾಲದಿಂದಲೂ ಹಿಂದೂ ಸಮಾಜದಲ್ಲಿ ಹಿಂದಿ ರಾಷ್ಟ್ರೀಯ ಭಾಷೆಯಾಗಿತ್ತು.**

**ನಮ್ಮ ಪ್ರಕಾರ ನಿಜವಾಗಿಯೂ ಹಿಂದಿಯೆಂದರೆ ಮಹರ್ಷಿ ದಯಾನಂದ ಸರಸ್ವತಿಯವರು ಬರೆದ "ಸತ್ಯಾರ್ಥ ಪ್ರಕಾಶ"ದಲ್ಲಿ ಕಂಡು ಬರುವ ಅಪ್ಪಟ "ಸಂಸ್ಕೃತ ನಿಷ್ಠ" ಹಿಂದಿ. ಅದು ಎಷ್ಟೊಂದು ಸರಳ ಹಾಗೂ ಅನಗತ್ಯವಾಗಿ ಒಂದೇ ಒಂದು ಅನ್ಯದೇಶೀಯ ಶಬ್ದದ ಕಳಂಕವಿಲ್ಲದ ಹಿಂದಿ, ಆದರೂ ಕೂಡ ಎಷ್ಟು ಅರ್ಥಗರ್ಭಿತವಾದದ್ದು? ಪ್ರಾಸಂಗಿಕವಾಗಿ ಹೇಳುವುದಾದರೆ ಹಿಂದಿ, ಇಂಡಿಯಾದ ಸಮಸ್ತ ಹಿಂದೂ ರಾಷ್ಟ್ರೀಯ ಭಾಷೆ ಎಂಬ ಅಭಿಪ್ರಾಯಕ್ಕೆ ಖಚಿತ ಹಾಗೂ ಪ್ರಜ್ಞಾಪೂರ್ವಕ ರೂಪ ಕೊಟ್ಟ ಪ್ರಥಮ ಹಿಂದೂ ನಾಯಕನೆಂದರೆ ಸ್ವಾಮಿ ದಯಾನಂದಜೀಯವರು. ಈ "ಸಂಸ್ಕೃತ ನಿಷ್ಠ" ಹಿಂದಿಗೂ ವಾರ್ಧಯೋಜನೆ ಗುಪ್ತವಾಗಿ ಯೋಜಿಸಿದ ಹಿಂದೂಸ್ತಾನಿ ಎಂಬ ಮಿಶ್ರಭಾಷೆಗೂ ಯಾವುದೇ ಸಂಬಂಧ ಇಲ್ಲ. ಈ ಯೋಜನೆ ಭಾಷಾವೈಜ್ಞಾನಿಕವಾಗಿ ಆದ ಅತ್ಯಂತ ದೊಡ್ಡ ಪ್ರಮಾದ. ಅದನ್ನು ನಿರ್ದಯವಾಗಿ ದಮನಗೊಳಿಸಬೇಕು. ಅಷ್ಟೇ ಅಲ್ಲದೆ, ಯಾವುದೇ ಪ್ರಾದೇಶಿಕ ಅಥವಾ ಉಪಭಾಷಿಕ ಹಿಂದೂ ಭಾಷೆಯಿಂದ ಎಲ್ಲ ಅರೇಬಿಯನ್ ಅಥವಾ ಇಂಗ್ಲಿಷ್ ಮೊದಲಾದ ಅನಾವಶ್ಯಕ ಅನ್ಯಪದಗಳನ್ನು ದಯಾದಾಕ್ಷಿಣ್ಯವಿಲ್ಲದೆ ಕಿತ್ತೊಗೆಯುವುದು ನಮ್ಮೆಲ್ಲರ ಅವಶ್ಯ ಕರ್ತವ್ಯ.**

**...ಜಗತ್ತು ಇಲ್ಲಿಯತನಕ ರೂಪಿಸಿದ ಲಿಪಿಗಳಲ್ಲಿ ನಮ್ಮ ಸಂಸ್ಕೃತ ವರ್ಣಮಾಲೆ ಧನಾತ್ಮಕವಾಗಿ ಅತ್ಯಂತ ಪರಿಪೂರ್ಣ. ಅಲ್ಲದೆ, ಎಲ್ಲ ಆಧುನಿಕ ಭಾರತೀಯ ಲಿಪಿಗಳು ಅದನ್ನೇ ಅನುಸರಿಸುತ್ತವೆ. ನಾಗರಿ ಲಿಪಿ ಕೂಡಾ ಇದೇ ಅನುಕ್ರಮವನ್ನು ಅನುಸರಿಸುತ್ತದೆ. ಹಿಂದಿ ಭಾಷೆಯಂತೆ ನಾಗರಿ ಲಿಪಿ ಕೂಡಾ ಸುಮಾರು ಎರಡು ಸಾವಿರ ವರ್ಷಗಳ ಹಿಂದಿನಿಂದ ಭಾರತದಲ್ಲೆಲ್ಲ ಹಿಂದು ಸಾಹಿತ್ಯಿಕ ವರ್ತುಲಗಳಲ್ಲಿ ಪ್ರಚಲಿತವಾಗಿದೆ. ಇದರಿಂದಾಗಿ ಅದನ್ನು ಜನಪ್ರಿಯವಾಗಿ ರೂಢಿಯಲ್ಲಿ, "ಶಾಸ್ತ್ರಿ ಲಿಪಿ" ಅರ್ಥಾತ್ ನಮ್ಮ ಹಿಂದೂ ಧಾರ್ಮಿಕ ಗ್ರಂಥಗಳ ಲಿಪಿ ಎಂದು ಕರೆಯುವ ವಾಡಿಕೆ ಇದೆ... ಎಲ್ಲರಿಗೂ ಗೊತ್ತಿರುವ ಹಾಗೆ ಬಂಗಾಲಿ ಅಥವಾ ಗುಜರಾತಗಳನ್ನು ನಾಗರಿಯಲ್ಲಿ ಮುದ್ರಿಸಿದರೆ ಹಲವಾರು ರಾಜ್ಯದ ಓದುಗರಿಗೆ ಅದು ಹೆಚ್ಚು ಕಡಿಮೆ ಅರ್ಥವಾಗಬಲ್ಲುದು. ಒಮ್ಮೆಲೇ ಹಿಂದೂಸ್ತಾನದಾದ್ಯಂತ ಒಂದೇ ಸಾರ್ವಜನಿಕ ಭಾಷೆಯನ್ನು ಇಟ್ಟುಕೊಳ್ಳುವುದು ಆಗದ, ಹೋಗದ ಹಾಗೂ ಅವಿವೇಕದ ಕೆಲಸ. ಆದರೆ ಹಿಂದೂ ದೇಶದಾದ್ಯಂತ ನಾಗರಿ ಲಿಪಿಯನ್ನು ಏಕೈಕ ಸಾರ್ವಜನಿಕ ಲಿಪಿ ಎಂದಿಟ್ಟುಕೊಳ್ಳುವುದು ಹೆಚ್ಚು ಸುಲಭಸಾಧ್ಯ. ಆದರೂ ನಮ್ಮ ಬೇರೆ ಬೇರೆ ರಾಜ್ಯಗಳಲ್ಲಿಯೂ ವಿಭಿನ್ನ ಹಿಂದು ಲಿಪಿಗಳಿಗೆ ಸ್ವಂತ ಭವಿಷ್ಯತ್ತಿದೆ. ಅಲ್ಲದೆ ನಾಗರಿಯೊಂದಿಗೆ ಅವು ಕೂಡಾ ಜೊತೆಜೊತೆಯಾಗಿ ಅಭಿವೃದ್ಧಿ ಹೊಂದಬಲ್ಲವು. ಹಿಂದೂ ದೇಶದ ಸಮಗ್ರ ಹಿತದೃಷ್ಟಿಯಿಂದ ವಿದ್ಯಾರ್ಥಿಗಳಿಗೆ ಪ್ರತಿಯೊಂದು ಶಾಲೆಯಲ್ಲಿಯೂ ಹಿಂದಿ ಭಾಷೆಯೊಂದಿಗೆ ನಾಗರಲಿಪಿಯನ್ನು ಕಡ್ಡಾಯ ವಿಷಯವನ್ನಾಗಿಡಬೇಕಾದುದು ಈ ಕ್ಷಣದಲ್ಲಿ ಅನಿವಾರ್ಯ."**

ಶ್ರೀ ಸಾವರ್ಕರವರು ಉದ್ದೇಶಿಸಿದ ಸ್ವರಾಜ್ಯದಲ್ಲಿ ಅ– ಹಿಂದು ಅಲ್ಪಸಂಖ್ಯಾತರ ಸ್ಥಾನಮಾನವೇನು? ಈ ವಿಷಯವನ್ನು ಕುರಿತು ಶ್ರೀ ಸಾವರ್ಕರವರು ಈ ಕೆಳಗಿನಂತೆ ಅಭಿಪ್ರಾಯಪಡುತ್ತಾರೆ.*

**"ಒಮ್ಮೆ ಹಿಂದೂ ಮಹಾಸಭೆ" ಒಬ್ಬ ವ್ಯಕ್ತಿಗೆ ಒಂದು ಮತ" ಎಂಬ ತತ್ವವನ್ನು ಅಂತೆಯೇ ಸಾರ್ವಜನಿಕ**

---

* ಅದೇ ಪು.೪

ಸೇವೆಗಳನ್ನು ಅರ್ಹತೆಯ ಮೇರೆಗೆ ಸಿಗುವಂಥಾದ್ದು ಮೂಲಭೂತ ಹಕ್ಕುಗಳಿಗೆ ಮತ್ತು ಕರ್ತವ್ಯಗಳಿಗೆ ಸೇರಿಸಿ, ಅವುಗಳನ್ನು ಯಾವುದೇ ಜನಾಂಗ, ಧರ್ಮಗಳಿಗೆ ಸೀಮಿತಗೊಳಿಸದೆ ಎಲ್ಲ ಪ್ರಜೆಗಳಿಗೂ ಯಾವುದೇ ಭೇದವಿಲ್ಲದೆ ಸಮಾನವಾಗಿ ದೊರಕಿಸಬೇಕೆಂಬುದನ್ನು ಒಪ್ಪಿಕೊಂಡಾಗ... ಅಲ್ಪಸಂಖ್ಯಾತರ ಹಕ್ಕುಗಳನ್ನು ಪರಿಗಣಿಸುವ ಪ್ರಮೇಯವೇ ಉಂಟಾಗುವುದಿಲ್ಲ. ಅಲ್ಲದೆ, ಅದು ಪುನಃ ಕೋಮುವಾರಿನ ಆಧಾರದ ಮೇಲೆ ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತರು ಎಂಬ ಪ್ರಜ್ಞೆಯನ್ನು ಪ್ರಾರಂಭಿಸುತ್ತದೆಯಾದುದರಿಂದ ಸೋಕ್ತಿ– ವಿರುದ್ಧವೂ ಆಗುತ್ತದೆ. ಆದರೆ ಬಹುಮಟ್ಟಿಗೆ ರಾಜಕೀಯದಲ್ಲಿ ಅನಿವಾರ್ಯವಾಗುವ ಪರಿಸ್ಥಿತಿ ಮತ್ತು ನಮ್ಮ ಆ ಹಿಂದೂ ಬಾಂಧವರನ್ನು ಯಾವುದೇ ಸಂಶಯದ ಊಹೆಯಿಂದ ಕೂಡಾ ಮುಕ್ತಗೊಳಿಸಬೇಕೆಂಬ ಹಿಂದು ಸಂಘಟನಾಕಾರರ ಅಪೇಕ್ಷೆ ಮೇರೆಗೆ ಅಲ್ಪಸಂಖ್ಯಾತರ ಧರ್ಮ, ಸಂಸ್ಕೃತಿ ಮತ್ತು ಭಾಷೆಗಳಿಗೆ ಸಂಬಂಧಿಸಿದ ಯುಕ್ತವಾದ ಹಕ್ಕುಗಳ ರಕ್ಷಣೆಯ ಭರವಸೆಯನ್ನು ಅವರಿಗೆ ನಿರ್ದಿಷ್ಟವಾದ ರೀತಿಯಲ್ಲಿ ಕೊಡಬೇಕು. ಆದರೆ, ಬಹುಸಂಖ್ಯಾತರ ಸಮಾನ ಹಕ್ಕುಗಳನ್ನು ಆಕ್ರಮಿಸುವುದನ್ನಾಗಲಿ ಅಥವಾ ರದ್ದು ಮಾಡುವುದನ್ನಾಗಲಿ ನಿಷೇಧಿಸುವ ಷರತ್ತೊಂದನ್ನು ಪರಿಪಾಲಿಸಬೇಕು. ಅಲ್ಪಸಂಖ್ಯಾತರಿಗೆ ಅವರವರ ಭಾಷೆಯಲ್ಲಿ ಇವರ ಮಕ್ಕಳನ್ನು ತರಬೇತಿಗೊಳಿಸಲು ಪ್ರತ್ಯೇಕ ಶಾಲೆಗಳಿರಬಹುದು. ಅವರ ಧಾರ್ಮಿಕ ಅಥವಾ ಸಾಂಸ್ಕೃತಿಕ ಸಂಸ್ಥೆಗಳನ್ನು ಸ್ಥಾಪಿಸಿ ಅವುಗಳಿಗೆ ಸರಕಾರದ ಸಹಾಯ ಪಡೆದುಕೊಳ್ಳಬಹುದು– ಆದರೆ ಅದು ಯಾವಾಗಲೂ ಮುಖ್ಯ ಖಜಾನೆಗೆ ಅವರು ನೀಡುವ ತೆರಿಗೆಗೆ ಅನುಗುಣವಾಗಿರಬೇಕು. ಅದೇ ತತ್ವ ಬಹುಸಂಖ್ಯಾತರಿಗೂ ಅನ್ವಯವಾಗಬೇಕು.

ಅಷ್ಟೆ ಅಲ್ಲದೇ, ರಾಜ್ಯ ವ್ಯವಸ್ಥೆ ಸಂಯುಕ್ತ ಚುನಾಯಕ ಸಮುದಾಯದ ಆಧಾರದ ಮೇಲೆ ಹಾಗೂ ಒಬ್ಬ ವ್ಯಕ್ತಿಗೆ ಒಂದು ಮತ ಎಂಬ ಶುದ್ಧ ರಾಷ್ಟ್ರೀಯ ತತ್ತ್ವದ ಆಧಾರದ ಮೇಲೆ ಇರುವ ಬದಲಿಗೆ ಕೋಮುವಾರು ತಳಹದಿಯ ಮೇಲೆ ನಿಂತರೆ ಆಗ ಪ್ರತ್ಯೇಕ ಚುನಾಯಕ ಸಮುದಾಯವನ್ನು ಅಥವಾ ಸ್ಥಾನ ಮೀಸಲಾತಿಯನ್ನು ಬಯಸುವ ಅಲ್ಪಸಂಖ್ಯಾತರಿಗೆ ಅದಕ್ಕೆ ಅವಕಾಶ ಮಾಡಿಕೊಡಬಹುದು. ಆದರೆ, ಇದರಿಂದಾಗಿ ಬಹುಸಂಖ್ಯಾತರು ಅವರ ಜನಸಂಖ್ಯೆಗೆ ಅನುಗುಣವಾಗಿ ಸಮಾನ ಹಕ್ಕುಗಳ ವಿಷಯದಲ್ಲಿ ವಂಚಿತವಾಗಬಾರದು."

ಈ ರೀತಿಯ ಸ್ಥಾನಮಾನವನ್ನು ಅಲ್ಪಸಂಖ್ಯಾತರಿಗೆ ಗೊತ್ತುಮಾಡಿ ಸ್ವರಾಜ್ಯದ ತನ್ನ ಯೋಜನೆಯಡಿಯಲ್ಲಿ ಶ್ರೀ ಸಾವರ್ಕರವರು ಈ ರೀತಿಯಾಗಿ (ತಮ್ಮ ಭಾಷಣವನ್ನು) ಮುಕ್ತಾಯಗೊಳಿಸುತ್ತಾರೆ.

"ಇಂಡಿಯಾದೊಳಗೆ ಅಲ್ಪಸಂಖ್ಯಾತರಾದ ಮುಸ್ಲಿಮರಿಗೆ ಸಮಾನ ಪೌರತ್ವ, ಸಮಾನ ಸಂರಕ್ಷಣೆ ಹಾಗೂ ಅವರ ಜನಸಂಖ್ಯೆಗನುಗುಣವಾಗಿ ಪೌರ ಹಕ್ಕುಗಳು ದೊರಕಿಸಿಕೊಳ್ಳುವ ಹಕ್ಕಿದೆ. ಹಿಂದೂಗಳಲ್ಲದ ಯಾವುದೇ ಅಲ್ಪಸಂಖ್ಯಾತರ ನ್ಯಾಯಸಮ್ಮತವಾದ ಹಕ್ಕುಗಳನ್ನು ಬಹುಸಂಖ್ಯಾತರಾದ ಹಿಂದೂಗಳು ಅತಿಕ್ರಮಿಸಲಾರರು. ಆದರೆ ಯಾವುದೇ ಪರಿಸ್ಥಿತಿಯಲ್ಲಿ, ಒಂದು ಪ್ರಜಾಪ್ರಭುತ್ವದ ಹಾಗೂ ನ್ಯಾಯ ಸಮ್ಮತವಾದ ಸಂವಿಧಾನದ ಅಡಿಯಲ್ಲಿ ತಾವು ಚಲಾಯಿಸಬಹುದಾದ ಹಕ್ಕುಗಳನ್ನು ಬಹುಸಂಖ್ಯಾತರಾದ ಹಿಂದೂಗಳು ತ್ಯಜಿಸುವುದು ಅಸಾಧ್ಯದ ಮಾತು. ಪ್ರತ್ಯೇಕವಾಗಿ ಮುಸ್ಲಿಂ ಅಲ್ಪಸಂಖ್ಯಾತರು, ಅಲ್ಪಸಂಖ್ಯಾತರಾಗಿ ಉಳಿದುಕೊಂಡು ಹಿಂದೂಗಳಿಗೆ ಉಪಕಾರ ಮಾಡಿಲ್ಲ. ಆದುದರಿಂದ ಅವರು

ತಮಗಿರುವ ಸ್ಥಾನಮಾನದ ಬಗೆಗೆ ಹಾಗೂ ನಿರ್ದಿಷ್ಟ ಪ್ರಮಾಣಾನುಸಾರವಾಗಿ ತಮಗೆ ಸಲ್ಲಬೇಕಾದ ಪೌರ ಮತ್ತು ರಾಜಕೀಯ ಹಕ್ಕುಗಳ ಬಗೆಗೆ ತೃಪ್ತಿಯಿಂದಿರಬೇಕು. ಬಹುಸಂಖ್ಯಾತರ ನ್ಯಾಯಬದ್ಧ ಹಕ್ಕನ್ನು ಮುಸ್ಲಿಂ ಅಲ್ಪಸಂಖ್ಯಾತರಿಗೆ ಕೊಟ್ಟು (ಭಾರತವನ್ನು) "ಸ್ವರಾಜ್ಯ"ವೆಂದು ಕರೆದರೆ, ಅದು ಸಂಪೂರ್ಣ ಅವಿವೇಕವೇ ಸರಿ. ಹಿಂದೂಗಳಿಗೆ ಯಜಮಾನರ ಬದಲಾವಣೆ ಬೇಕಾಗಿಲ್ಲ. ಎಡ್ವರ್ಡನ ಸ್ಥಾನದಲ್ಲಿ ಕೇವಲ ಭಾರತದ ಸೀಮೆಯೊಳಗಿನವನೆಂಬ ಕಾರಣಕ್ಕೋಸ್ಕರ ಔರಂಗಜೇಬನನ್ನು ಕೂಡಿಸಲು ಹೋರಾಡಿ, ಯುದ್ಧಮಾಡಿ, ಸಾಯಲು ಅವರು ಸಿದ್ಧರಿಲ್ಲ, ಇನ್ನು ಮುಂದೆ ಸ್ವಂತ ಮನೆಯಲ್ಲಿ, ತಮ್ಮ ಸ್ವಂತ ನಾಡಿನಲ್ಲಿ, ತಾವೇ ಯಜಮಾನರಾಗಿರಲು ಅವರು ಬಯಸುತ್ತಾರೆ."

ತನ್ನ ಸ್ವರಾಜ್ಯವನ್ನು ಹಿಂದು ರಾಜ್ಯ ಎಂದು ಗುರುತಿಸುವುದಕ್ಕೋಸ್ಕರವೇ ಶ್ರೀ ಸಾವರ್ಕರವರು ಇಂಡಿಯಾವನ್ನು ಹಿಂದೂಸ್ತಾನವೆಂದು ಕರೆಯಲು ಅಪೇಕ್ಷಿಸುತ್ತಾರೆ.

ಮೂಲಭೂತವೆಂದು ತಾನು ಪರಿಗಣಿಸುವ ಎರಡು ಹೇಳಿಕೆಗಳ ಮೇಲೆ ಶ್ರೀ ಸಾವರ್ಕರವರು ಈ ರಚನೆಯನ್ನು ನಿಲ್ಲಿಸಿದ್ದಾರೆ.

ಮೊದಲನೆಯದಾಗಿ, ಹಿಂದುಗಳು ತಾವೇ ಒಂದು ರಾಷ್ಟ್ರ. ಅವರು ಈ ಪ್ರಮೇಯವನ್ನು ಸುದೀರ್ಘವಾಗಿ ಹಾಗೂ ಆವೇಶಪೂರಿತವಾಗಿ ಸಾರುತ್ತಾರೆ. ಶ್ರೀ ಸಾವರ್ಕರವರು ಹೀಗೆ ಹೇಳುತ್ತಾರೆ:

"ನಾಗಪುರದಲ್ಲಿ ಮಾಡಿದ ನನ್ನ ಅಧ್ಯಕ್ಷೀಯ ಭಾಷಣದಲ್ಲಿ ಇತ್ತೀಚೆಗಿನ ರಾಜಕೀಯ ಇತಿಹಾಸದಲ್ಲಿಯೇ ಪ್ರಪ್ರಥಮವಾಗಿ ಬಹು ಸ್ಪಷ್ಟವಾಗಿ ನಾನು ತೋರಿಸಿಕೊಟ್ಟಂತೆ, ಕೇವಲ ಪ್ರಾದೇಶಿಕ ಅಖಂಡತೆ, ಒಂದು ಸರ್ವಸಾಮಾನ್ಯ ನೆಲೆ ಮಾತ್ರ ಒಂದು ರಾಷ್ಟ್ರವನ್ನು ನಿರ್ಮಿಸುತ್ತದೆ, ನಿರ್ಮಿಸಬೇಕು ಎಂಬ ಬುದ್ಧಿಪೂರ್ವಕವಲ್ಲದ ಭಾವನೆಯಿಂದಾಗಿ, ಪ್ರಾರಂಭದಿಂದಲೇ ಕಾಂಗ್ರೆಸಿನ ಸಮಗ್ರ ಧೋರಣೆ ಕಲುಷಿತಗೊಂಡಿದೆ. ಯುರೋಪಿನಿಂದ ಇದ್ದಕ್ಕಿದ್ದ ಹಾಗೆ ಇಂಡಿಯಾಕ್ಕೆ ಆಮದು ಮಾಡಿಕೊಂಡು ಈ ಪ್ರಾದೇಶಿಕ ರಾಷ್ಟ್ರೀಯತೆಗೆ ಎಂದೋ ಎಲ್ಲಿಯೇ ತೀವ್ರ ಆಘಾತ ಉಂಟಾಗಿದೆ. ಅಲ್ಲದೆ, ಪ್ರಸ್ತುತ ಯುದ್ಧ ಈ ದಂತಕತೆಯನ್ನು ಸಂಪೂರ್ಣವಾಗಿ ನಾಶಮಾಡಿ ನನ್ನ ಪ್ರತಿಪಾದನೆಯನ್ನು ಸಮರ್ಥಿಸಿದೆ. ಯಾವುದೇ ಸಾಮಾನ್ಯ ತಳಹದಿಯನ್ನು ಲೆಕ್ಕಿಸದೆ, ಕೇವಲ ಪ್ರಾದೇಶಿಕತೆಯೊಂದರ ಆಧಾರದ ಮೇಲೆ ರೂಪಿಸಲಾದ ಎಲ್ಲ ರಾಷ್ಟ್ರಗಳೂ ಪಟಪಟನೆ ಬಿದ್ದು ನಾಶವಾಗಿವೆ. ವಿಭಿನ್ನ ಜನಾಂಗಗಳನ್ನು ಯಾವುದೇ ಸಾಂಸ್ಕೃತಿಕ, ಜನಾಂಗಿಕ ಅಥವಾ ಚಾರಿತ್ರಿಕ ಸಂಬಂಧಗಳಿಲ್ಲದೆ ಹಾಗೂ ಆ ಕಾರಣದಿಂದಾಗಿ ತಮ್ಮನ್ನು ಒಂದು ರಾಷ್ಟ್ರವಾಗಿ ಬಾಳುವ ಇಚ್ಛೆ ಇಲ್ಲದೆ ಹೋದ ಪಕ್ಷದಲ್ಲಿ, ಕೇವಲ ಪ್ರಾದೇಶಿಕ ರಾಷ್ಟ್ರೀಯತೆಯೊಂದರ ಅಭದ್ರ ತಳಹದಿಯ ಮೇಲೆ ಮಿಶ್ರಿತ ರಾಷ್ಟ್ರವನ್ನು ರೂಪಿಸಲು ಮಾಡುವ ಪ್ರಯತ್ನಗಳೆಲ್ಲವೂ ನಿರರ್ಥಕ ಎಂಬುದಕ್ಕೆ ಪೋಲಂಡ್ ಮತ್ತು ಝೆಕೊಸ್ಲೋವಾಕಿಯಾಗಳು ನಿಷ್ಠುರವಾಗಿ ಎಚ್ಚರ ನೀಡುತ್ತವೆ. ಅವುಗಳಿಗೆ ದೊರಕಿದ ಮೊದಲ ಅನುಕೂಲ ಸಂದರ್ಭದಲ್ಲಿಯೇ ಈ ಒಪ್ಪಂದಕ್ಕೊಳಗಾದ ರಾಷ್ಟ್ರಗಳು ಚೆದುರಿಹೋದವು. ಅವುಗಳ ಜರ್ಮನ್ ಭಾಗ ಜರ್ಮನಿಗೂ, ರಷ್ಯನ್ ಭಾಗ ರಷ್ಯಕ್ಕೂ, ಝೆಕ್ ಭಾಗ ಝೆಕ್ಕರಿಗೂ, ಪೋಲೆಂಡ್ ಭಾಗ ಪೋಲೆಂಡರಿಗೂ ಸೇರಿಹೋಯಿತು. ಪ್ರಾದೇಶಿಕ ಬಾಂಧವ್ಯಕ್ಕಿಂತ ಸಾಂಸ್ಕೃತಿಕ, ಭಾಷಿಕ, ಐತಿಹಾಸಿಕ ಮತ್ತಿತರ ಸಂಬಂಧಗಳು ಹೆಚ್ಚು ಪ್ರಬಲವೆಂಬುದು ಇದರಿಂದ ಸಿದ್ಧವಾಯಿತು. ಪ್ರಾದೇಶಿಕ ಅಖಂಡತೆಯೊಂದಿಗೆ ಅಥವಾ ಕೆಲವೊಮ್ಮೆ ಅದನ್ನು ಲೆಕ್ಕಿಸದೆ ಹಾಗೂ ತತ್ಪರಿಣಾಮವಾಗಿ

ಜನಾಂಗಿಕ, ಭಾಷಿಕ, ಸಾಂಸ್ಕೃತಿಕ ಮತ್ತಿತರ ಸಂಬಂಧಗಳಿಗೆ ಅನುಗುಣವಾಗಿ ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಇಟೆಲಿ, ಪೋರ್ಚುಗಲ್ ಮುಂತಾದವುಗಳು ಸಮಾನ ಸ್ಥಾನವುಳ್ಳ ರಾಷ್ಟ್ರಗಳಾಗಲು ನಿರ್ಧರಿಸಿದವು.

"ಸಮಾನ ಸ್ಥಾನವುಳ್ಳ ಮತ್ತು ಸುಸಂಘಟಿತ ರಾಷ್ಟ್ರವನ್ನು ರೂಪಿಸುವಲ್ಲಿ ಮೇಲಿನ ಅಥವಾ ಯಾವುದೇ ಪ್ರಯೋಗವನ್ನು ಪ್ರತ್ಯೇಕವಾಗಿ ಹಾಗೂ ಒಟ್ಟಾಗಿ ಗಮನಿಸಿದಾಗ, ಇಂಡಿಯಾದಲ್ಲಿ ನಾವು ಹಿಂದೂಗಳು ಒಂದು ಪ್ರತ್ಯೇಕ ಹಾಗೂ ಸ್ಥಿರವಾದ ರಾಷ್ಟ್ರವೆಂದು ಪರಿಗಣಿಸಬೇಕಾಗುತ್ತದೆ. ನಮಗೆ ನಮ್ಮದೇ ಆದ ಪ್ರಾದೇಶಿಕ ಐಕ್ಯತೆ, ಸಾಮಾನ್ಯವಾದ ಜನ್ಮಭೂಮಿ ಇರುವುದರ ಜೊತೆಗೆ ಜಗತ್ತಿನಾದ್ಯಂತ ಬಹಳ ಅಪರೂಪವಾಗಿ ಕಾಣಸಿಗುವಂತಹ, ನಮ್ಮ ಸ್ವದೇಶದೊಂದಿಗೆ ಸಮೀಕರಿಸಿರುವಂತಹ ಪುಣ್ಯಭೂಮಿ ನಮಗಿದೆ. ಈ ಭರತಭೂಮಿ, ಈ ಹಿಂದೂಸ್ತಾನ ಅರ್ಥಾತ್ ಇಂಡಿಯಾ ನಮ್ಮ ಪಿತೃಭೂಮಿ ಹಾಗೂ ಪುಣ್ಯಭೂಮಿ. ಈ ಕಾರಣದಿಂದಾಗಿ ನಮ್ಮ ದೇಶಭಕ್ತಿ ಎರಡುಪಟ್ಟು ಅಚಲ. ಅಷ್ಟೇ ಅಲ್ಲದೆ, ನಮಗೆ ಸಮಾನವಾದ ಸಾಂಸ್ಕೃತಿಕ, ಧಾರ್ಮಿಕ, ಚಾರಿತ್ರಿಕ, ಭಾಷಿಕ ಹಾಗೂ ಜನಾಂಗಿಕ ಸಂಬಂಧಗಳಿವೆ. ಇವು ಅಸಂಖ್ಯಾತ ಶತಮಾನಗಳ ಸಹಬಾಳ್ವೆಯಿಂದಾಗಿ, ಸಮೀಕರಣದಿಂದಾಗಿ ನಮ್ಮನ್ನು ಏಕರೂಪದ, ಸುಸಂಘಟಿತ ರಾಷ್ಟ್ರವನ್ನಾಗಿ ರೂಪಿಸಿವೆ. ಅದಕ್ಕಿಂತಲೂ ಹೆಚ್ಚಾಗಿ ಸಾಂಸ್ಥಿಕವಾಗಿ ಒಂದು ಸಮಾನ ರಾಷ್ಟ್ರೀಯ ಜೀವನವನ್ನು ನಡೆಸಲು ಅವು ಪ್ರಚೋದನೆ ನೀಡಿವೆ. ಹಿಂದೂಗಳು ಒಂದು ಸುಸಂಘಟಿತ ರಾಷ್ಟ್ರವೇ ಹೊರತು ಒಪ್ಪಂದ ಆಧಾರಿತ ರಾಷ್ಟ್ರವಲ್ಲ.

"ಪ್ರತ್ಯೇಕವಾಗಿ ನಮ್ಮ ಕಾಂಗ್ರೆಸ್ ಹಿಂದೂ ಬಾಂಧವರನ್ನು ಬಹಳಷ್ಟು ತಪ್ಪುದಾರಿಗೆ ಎಳೆಯುವ ಇನ್ನೊಂದು ಸಂಬಂಧಿತ ವಿಷಯವನ್ನು ಪ್ರಸ್ತುತದಲ್ಲಿ ಪರಿಚಯಿಸಬೇಕು. ವ್ಯಕ್ತಿಗಳನ್ನು ಒಂದು ರಾಷ್ಟ್ರೀಯ ಸತ್ವವನ್ನಾಗಿ ನಿಯಂತ್ರಿಸುವಲ್ಲಿ ಧರ್ಮಗಳ, ಜನಾಂಗಿಕ ಅಥವಾ ಮತಪಂಥಗಳ ಮತ್ತು ಪಂಗಡಗಳ ಯಾವುದೇ ರೀತಿಯ ಪರಸ್ಪರ ಹಾಗೂ ಆಂತರಿಕ ವ್ಯತ್ಯಾಸಗಳು ಇಲ್ಲದಿರುವುದೇ ಐಕ್ಯತೆಯ ಲಕ್ಷಣವಲ್ಲ. ಇದರ ಅರ್ಥ ಇಷ್ಟೇ: ಹಿಂದೂಗಳು ಒಂದು ರಾಷ್ಟ್ರೀಯ ಘಟಕವಾಗಿ ತಂತಮ್ಮೊಳಗಿನ ವ್ಯತ್ಯಾಸಗಳಿಗಿಂತ ಹೆಚ್ಚಾಗಿ ಬೇರೆ ಜನಗಳೊಡನೆ ಹೋಲಿಸಿದಾಗ ಭಿನ್ನವಾಗಿ ಕಾಣುತ್ತಾರೆ. ಇಂದಿನ ಕಾಲದಲ್ಲಿ, ಬಹಳಷ್ಟು ಏಕೀಕೃತಗೊಂಡ ರಾಷ್ಟ್ರಗಳು ಕೂಡಾ ಉದಾಹರಣಾರ್ಥವಾಗಿ ಬ್ರಿಟಿಷ್ ಅಥವಾ ಫ್ರಾನ್ಸ್– ಯಾವುದೇ ಧಾರ್ಮಿಕ, ಭಾಷಿಕ, ಸಾಂಸ್ಕೃತಿಕ ಜನಾಂಗಿಕ ಅಥವಾ ಬೇರೆ ಭಿನ್ನತೆಗಳು ಅಥವಾ ಮತಪಂಥಗಳು ಅಥವಾ ಅವರೊಳಗಿರುವ ವೈರತ್ವವೇ ಮೊದಲಾದವುಗಳಿಂದ ಮುಕ್ತವಾಗಿರುವುದು ಸಾಧ್ಯವಿಲ್ಲ. ಅನ್ಯ ಜನಗಳೊಡನೆ ಸರ್ವೇಸಾಮಾನ್ಯವಾಗಿ ಎಷ್ಟರಮಟ್ಟಿಗೆ ಒಂದು ಜನಾಂಗ ಭಿನ್ನತೆಯನ್ನು ತೋರಿಸುತ್ತದೆಯೋ ಅಷ್ಟರಮಟ್ಟಿಗೆ ಅದರ ರಾಷ್ಟ್ರೀಯ ಸ್ವರೂಪ ಸಾಮ್ಯತೆ ಎದ್ದುಕಾಣುತ್ತದೆ.

"ಇಂಗ್ಲಿಷ್ ಅಥವಾ ಜಪಾನಿ, ಭಾರತೀಯ ಮುಸ್ಲಿಂ ಜನ ಹೀಗೆ ಯಾವುದೇ ಅಹಿಂದೂ ಜನಾಂಗದೊಡನೆ ನಮ್ಮನ್ನು ಹೋಲಿಸಿದಾಗ ಕೂಡ ಹಿಂದೂಗಳಾದ ನಾವು ನಮ್ಮೊಳಗೆಯೇ ಹಲವಾರು ಭೇದಗಳಿದ್ದರೂ, ನಮ್ಮ ಧಾರ್ಮಿಕ, ಸಾಂಸ್ಕೃತಿಕ, ಚಾರಿತ್ರಿಕ, ಜನಾಂಗಿಕ, ಭಾಷಿಕ ಹಾಗೂ ಇನ್ನಿತರ ಸಂಬಂಧಗಳಿಂದಾಗಿ ನಿಜವಾಗಿಯೂ ಒಂದು ವಿಶಿಷ್ಟ ಏಕಸ್ವರೂಪದ ಜನಾಂಗವಾಗಿ ಎದ್ದುಕಾಣುತ್ತೇವೆ. ಈ ಕಾರಣದಿಂದಾಗಿ

**ಕಾಶ್ಮೀರದಿಂದ ಮದ್ರಾಸಿನ ತನಕ ಮತ್ತು ಸಿಂಧಿನಿಂದ ಅಸ್ಸಾಮಿನ ತನಕ ವ್ಯಾಪಿಸಿರುವ ಹಿಂದುಗಳಾದ ನಾವು ಈ ಕಾಲದಲ್ಲಿ ಒಂದು ರಾಷ್ಟ್ರವಾಗಿ ಬಾಳಬೇಕು."**

ಸಾವರ್ಕರವರು ತನ್ನ ಯೋಜನೆಯನ್ನು ರೂಪಿಸುವಲ್ಲಿಯ ಎರಡನೆಯ ಹೇಳಿಕೆ, 'ಹಿಂದು' ಪದದ ವ್ಯಾಖ್ಯೆಗೆ ಸಂಬಂಧಿಸಿದುದು. ಶ್ರೀ ಸಾವರ್ಕರವರ ಪ್ರಕಾರ:

**ಸಿಂಧು ನದಿಯಿಂದ ಸಮುದ್ರಗಳ ತನಕ ಚಾಚಿಕೊಂಡಿರುವ ಈ ಭೂಮಿಯನ್ನು, ಭರತ ಭೂಮಿಯನ್ನು, ಯಾರು ತನ್ನ ಪಿತೃಭೂಮಿಯಾಗಿ ಅಂತೆಯೇ ಪವಿತ್ರ ಭೂಮಿಯಾಗಿ ಅರ್ಥಾತ್, ಆತನ ಧರ್ಮದ ತವರುಮನೆಯಾಗಿ, ತೊಟ್ಟಿಲಾಗಿ ಬಗೆದು ಸ್ವೀಕರಿಸಿಕೊಳ್ಳುತ್ತಾನೆಯೊ ಆ ವ್ಯಕ್ತಿಯೇ ಹಿಂದು.**

**ಈ ಕಾರಣದಿಂದಾಗಿ, ವೈದಿಕ, ಸನಾತನ, ಜೈನ, ಬೌದ್ಧ, ಲಿಂಗಾಯತ, ಸಿಖ್, ಆರ್ಯಸಮಾಜ, ಬ್ರಹ್ಮಸಮಾಜ, ದೇವಸಮಾಜ, ಪ್ರಾರ್ಥನಾಸಮಾಜ ಮತ್ತಿತರ ಭಾರತೀಯ ಧರ್ಮಾವಲಂಬಿಗಳೆಲ್ಲರೂ ಒಟ್ಟಿನಲ್ಲಿ ಹಿಂದುಗಳೆ, ಹಿಂದು ರಾಜ್ಯಕ್ಕೆ ಸೇರಿದವರೇ ಅರ್ಥಾತ್ ಹಿಂದು ಜನಗಳೇ.**

**ತತ್ಪರಿಣಾಮವಾಗಿ ಮೂಲ ನಿವಾಸಿಗಳೆನ್ನುವವರು ಅಥವಾ ಗಿರಿನಿವಾಸಿಗಳು ಕೂಡಾ ಹಿಂದೂಗಳೇ. ಏಕೆಂದರೆ, ಅವರು ಯಾವುದೇ ರೂಪದ ಧರ್ಮವನ್ನು ಅವಲಂಬಿಸಿದರೂ ಅಥವಾ ಉಪಾಸನೆ ಮಾಡಿದರೂ ಅವರಿಗೆಲ್ಲ ಇಂಡಿಯಾವೇ ಪಿತೃಭೂಮಿ ಹಾಗೂ ಪವಿತ್ರಭೂಮಿ, ಸಂಸ್ಕೃತದಲ್ಲಿ ಕೊಟ್ಟ ವ್ಯಾಖ್ಯೆ ಇಂತಿದೆ:**

**॥ ಅಸಿಂಧು ಸಿಂಧ್ ಪರ್ಯಂತ ಯಸ್ಮ ಭಾರತ ಭೂಮಿಕಾ॥**
**॥ಪಿತೃಭೂಃ ಪುಣ್ಯ ಭೂಶ್ಚೈವ ಸ ವೈ ಹಿಂದುರಿತಿಸ್ಮೃತಃ ॥**

**ಆದುದರಿಂದ ಈ ವ್ಯಾಖ್ಯೆಯನ್ನು ಸರ್ಕಾರ ಒಪ್ಪಿಕೊಂಡು ಮುಂಬರುವ ಸರ್ಕಾರಿ ಜನಗಣತಿಯಲ್ಲಿ ಹಿಂದು ಜನಸಂಖ್ಯೆಯನ್ನು ನಮೂದಿಸುವಲ್ಲಿ "ಹಿಂದುತ್ವ"ವನ್ನು ಗುರುತಿಸಲು ಬಳಸಿಕೊಳ್ಳಬೇಕು.**

ಹಿಂದು ಎಂಬ ಶಬ್ದದ ಈ ವ್ಯಾಖ್ಯೆಯನ್ನು ಬಹು ಶ್ರದ್ಧೆಯಿಂದ ಮತ್ತು ಜಾಗರೂಕತೆಯಿಂದ ರೂಪಿಸಿದ್ದಾರೆ. ಶ್ರೀ ಸಾವರ್ಕರವರಿಗೆ ತಿಳಿದಿರುವಂತೆ ಎರಡು ಉದ್ದೇಶಗಳಿಗಾಗಿ ಅದನ್ನು ರೂಪಿಸಿಕೊಂಡಿದ್ದಾರೆ. ಮೊದಲನೆಯದಾಗಿ, ಹಿಂದು ಎಂದು ಪರಿಗಣಿಸಲು ಇಂಡಿಯಾವನ್ನು ಪವಿತ್ರಭೂಮಿಯನ್ನಾಗಿ ಸ್ವೀಕರಿಸುವುದನ್ನು ಕಡ್ಡಾಯ ಮಾಡಿ ಮುಸ್ಲಿಮರನ್ನು, ಕ್ರೈಸ್ತರನ್ನು, ಪಾರ್ಸಿಗಳನ್ನು ಮತ್ತು ಯೆಹೂದಿಗಳನ್ನು ಹಿಂದುತ್ವದಿಂದ ಪ್ರತ್ಯೇಕಿಸುವುದು. ಎರಡನೆಯದಾಗಿ, ವೇದದ ಅಪೌರುಷೇಯತ್ವವನ್ನು ಕಡ್ಡಾಯಗೊಳಿಸದೆ ಬೌದ್ಧರು, ಜೈನರು, ಸಿಖ್‌ರು ಮೊದಲಾದವರನ್ನು ಹಿಂದುತ್ವದಲ್ಲಿ ಸೇರಿಸುವುದು.

ಇದು ಶ್ರೀ ಸಾವರ್ಕರ್ ಮತ್ತು ಹಿಂದು ಮಹಾಸಭೆಯ ಯೋಜನೆ. ಬಹುಶಃ ನಿಮ್ಮ ಗಮನಕ್ಕೆ ಬಂದಿರುವ ಹಾಗೆ ಈ ಯೋಜನೆಯಲ್ಲಿ ಕ್ಷೋಭೆಗೊಳಿಸುವ ಕೆಲವೊಂದು ಲಕ್ಷಣಗಳಿವೆ. ಹಿಂದುಗಳು

ಅವರಷ್ಟಕ್ಕೆಯೇ ಒಂದು ರಾಷ್ಟ್ರ ಎಂಬ ಮೂಲಭೂತ ಹೇಳಿಕೆ ಆ ಲಕ್ಷಣಗಳಲ್ಲಿ ಒಂದು. ಹೀಗೆಂದಾಗ ಮುಸ್ಲಿಮರೆಲ್ಲರೂ ಕೂಡಿ ಇನ್ನೊಂದು ಪ್ರತ್ಯೇಕ ರಾಷ್ಟ್ರ ಎಂದರ್ಥವಾಗುತ್ತದೆ. ಆದರೆ ಶ್ರೀ ಸಾವರ್ಕರವರು ಈ ತಮ್ಮ ದೃಷ್ಟಿಕೋನವನ್ನು ಊಹೆಗೆ ಬಿಟ್ಟುಕೊಡುವುದಿಲ್ಲ. ಆತ ಸುಸ್ಪಷ್ಟವಾದ ರೀತಿಯಲ್ಲಿ ಮತ್ತು ತನ್ನಿಂದ ಸಾಧ್ಯವಾದಷ್ಟು ಪ್ರಭಾವ ಬೀರಿ ಅದನ್ನೇ ಸಮರ್ಥಿಸಿಕೊಂಡಿದ್ದಾರೆ. ೧೯೩೭ರಲ್ಲಿ ಅಹಮದಾಬಾದಿನಲ್ಲಿ ನಡೆದ ಹಿಂದೂ ಮಹಾಸಭೆಯ ಅಧಿವೇಶನದಲ್ಲಿ ಶ್ರೀ ಸಾವರ್ಕರ್ ಅವರು ಹೀಗೆ ಪ್ರಸ್ತಾಪಿಸಿದರು–

> **"ಇಂಡಿಯಾ ಈಗಾಗಲೇ ಭಾವೈಕ್ಯತೆಯನ್ನು ಸಾಧಿಸಿದ ರಾಷ್ಟ್ರ ಅಥವಾ ಕೇವಲ ಸದಿಚ್ಛೆಯಿಂದ ಅದನ್ನು ಸಾಧಿಸಿಕೊಳ್ಳಬಹುದೆಂಬ ಪ್ರಬಲವಾದ ಭ್ರಮೆ ಹಲವಾರು ಎಳೆಯ ರಾಜಕೀಯ ವ್ಯಕ್ತಿಗಳಲ್ಲಿದೆ. ನಮ್ಮ ಈ ಸದುದ್ದೇಶವುಳ್ಳ ಆದರೆ ಅವಿಚಾರವಂತ ಮಿತ್ರರ ತಮ್ಮ ಕನಸುಗಳನ್ನೆಲ್ಲ ನನಸನ್ನಾಗಿ ಗ್ರಹಿಸಿಕೊಳ್ಳುತ್ತಾರೆ. ಈ ಕಾರಣದಿಂದಾಗಿ ಅವರು ಕೋಮುಗದ್ದಲಗಳ ಬಗ್ಗೆ ತಮ್ಮ ಅಸಹನೆಯನ್ನು ವ್ಯಕ್ತಪಡಿಸುತ್ತಾರಲ್ಲದೆ ಅವುಗಳಿಗೆಲ್ಲ ಕೋಮುವಾರು ಸಂಘಟನೆಗಳೇ ಕಾರಣವೆಂದು ಆರೋಪಿಸುತ್ತಾರೆ. ಆದರೆ ವಾಸ್ತವವಾಗಿ ಕೋಮುವಾರು ಸಮಸ್ಯೆಗಳೆಲ್ಲವೂ ಶತಮಾನಗಳಿಂದ ಬಂದಂತಹ ಹಿಂದು ಮತ್ತು ಮುಸ್ಲಿಮರೊಳಗಿನ ಸಾಂಸ್ಕೃತಿಕ, ಧಾರ್ಮಿಕ ಮತ್ತು ರಾಷ್ಟ್ರೀಯ ವೈರತ್ವದ ಫಲ. ಸೂಕ್ತ ಸಮಯ ಬಂದೊದಗಿದಾಗ ಅವುಗಳನ್ನು ಬಗೆಹರಿಸಬಹುದು; ಆದರೆ ಬರಿಯ ನಿರ್ಲಕ್ಷ್ಯತನದಿಂದ ಅವುಗಳನ್ನು ನಿಗ್ರಹಿಸುವುದು ಅಸಾಧ್ಯ. ಬೇರೂರಿದ ವ್ಯಾಧಿಗಳನ್ನು ಅಲಕ್ಷಿಸುವುದಕ್ಕಿಂತ ಲಕ್ಷಣಗಳನ್ನರಿತು ಅವುಗಳನ್ನು ಚಿಕಿತ್ಸೆಗೊಳಪಡಿಸುವುದೇ ಲೇಸು. ಅಹಿತವಾದ ವಾಸ್ತವಿಕಗಳನ್ನು ಇದ್ದಕ್ಕಿದ್ದ ಹಾಗೆ ಎದುರಿಸುವುದೇ ಸೂಕ್ತ. ಪ್ರಸ್ತುತದಲ್ಲಿ ಇಂಡಿಯಾ ಏಕೀಕೃತ ಮತ್ತು ಸಮರೂಪದ ರಾಷ್ಟ್ರವಾಗುವುದು ಸಾಧ್ಯವಿಲ್ಲ. ಏಕೆಂದರೆ, ಇಂಡಿಯಾದೊಳಗೆ ಹಿಂದು ಮತ್ತು ಮುಸ್ಲಿಮರು ಎಂಬ ಪ್ರಮುಖವಾದ ಎರಡು ಜನಾಂಗಗಳಿರುವುದು ಸತ್ಯದ ಮಾತು."**

ಬಹಳ ವಿಚಿತ್ರವಾಗಿ ಕಂಡರೂ ಕೂಡಾ, ಶ್ರೀ ಸಾವರ್ಕರವರು ಮತ್ತು ಶ್ರೀ ಜಿನ್ನಾ ಇವರು ಏಕ ಅಥವಾ ವಿಭಿನ್ನ ಜನಾಂಗಗಳ ವಿಷಯದಲ್ಲಿ ಪರಸ್ಪರ ಭಿನ್ನಾಭಿಪ್ರಾಯ ಹೊಂದುವ ಬದಲಾಗಿ ಸಂಪೂರ್ಣವಾಗಿ ಏಕಾಭಿಪ್ರಾಯ ಉಳ್ಳವರಾಗಿದ್ದಾರೆ. ಇಬ್ಬರೂ ಏಕಾಭಿಪ್ರಾಯ ತಾಳುತ್ತಾರಷ್ಟೇ ಅಲ್ಲ, ಇಂಡಿಯಾದೊಳಗೆ ಒಂದು ಮುಸಲ್ಮಾನ ಜನಾಂಗ ಮತ್ತಿನ್ನೊಂದು ಹಿಂದು ಜನಾಂಗ ಹೀಗೆ ಎರಡು ಜನಾಂಗಗಳಿವೆ ಎಂದು ಅವರು ಪಟ್ಟು ಹಿಡಿಯುತ್ತಾರೆ. ಈ ಎರಡು ಜನಾಂಗಗಳ ಜೀವನವಿಧಾನದ ಕರಾರು ನಿಯಮಗಳನ್ನು ಕುರಿತಾಗಿ ಮಾತ್ರ ಅವರಲ್ಲಿ ಏಕಾಭಿಪ್ರಾಯವಿಲ್ಲ. ಶ್ರೀ ಜಿನ್ನಾ ಹೇಳುವಂತೆ ಇಂಡಿಯಾವನ್ನು ಪಾಕಿಸ್ತಾನ ಮತ್ತು ಹಿಂದೂಸ್ತಾನವೆಂದು ಎರಡು ಭಾಗಗಳನ್ನಾಗಿ ಒಡೆಯಬೇಕು, ಮುಸ್ಲಿಂ ಜನಾಂಗ ಪಾಕಿಸ್ತಾನಕ್ಕೆ ಹೋಗಬೇಕು, ಹಿಂದೂಗಳು ಹಿಂದೂಸ್ತಾನದಲ್ಲಿ ಉಳಿಯಬೇಕು. ತದ್ವಿರುದ್ಧವಾಗಿ ಶ್ರೀ ಸಾವರ್ಕರರು ಒತ್ತಾಯಿಸುವಂತೆ ಇಂಡಿಯಾದೊಳಗೆ ಎರಡು ಜನಾಂಗಗಳಿದ್ದರೂ ಮುಸ್ಲಿಮರಿಗೆ ಮತ್ತು ಹಿಂದೂಗಳಿಗೆಂದು ಇಂಡಿಯಾವನ್ನು ಇಬ್ಭಾಗ ಮಾಡಬಾರದು. ಈ ಎರಡು ಜನಾಂಗಗಳೂ ಒಂದೇ ದೇಶದೊಳಗೆ ನೆಲೆಸಿರಬೇಕು. ಒಂದೇ ಸಂವಿಧಾನದಡಿಯಲ್ಲಿ ಇರಬೇಕು. ಆ ಸಂವಿಧಾನದಲ್ಲಿ ಹಿಂದೂ ಜನಾಂಗದವರಿಗೆ ಸಿಗಬೇಕಾದ ಪ್ರಧಾನ ಸ್ಥಾನಮಾನಗಳಿರಬೇಕು ಮತ್ತು ಮುಸ್ಲಿಂ ಜನಾಂಗದವರು ಹಿಂದೂ ಜನಾಂಗದ ಅಧೀನದಲ್ಲಿದ್ದುಕೊಂಡು ಸಹಕಾರದಿಂದ ಬಾಳುವಂತಾಗಬೇಕು. ಈ ಎರಡು ಜನಾಂಗಗಳ ರಾಜಕೀಯ ಶಕ್ತಿಯ ಹೋರಾಟದಲ್ಲಿ,

ಶ್ರೀ ಸಾವರ್ಕರವರು ವಿಧಿಸುವಂತೆ, ಒಬ್ಬ ವ್ಯಕ್ತಿಗೆ ಆತ ಹಿಂದೂವಾಗಲಿ, ಮುಸಲ್ಮಾನನಾಗಲಿ, ಒಂದೆ ಮತ. ಆತನ ಯೋಜನೆಯಲ್ಲಿ ಹಿಂದೂವಿಗೆ ಇಲ್ಲದ ಯಾವುದೇ ಅನುಕೂಲತೆ ಮುಸಲ್ಮಾನನಿಗೆ ಇರಬಾರದು. ಅಲ್ಪಸಂಖ್ಯಾತತೆ ಯಾವುದೇ ವಿಶೇಷ ಸೌಲಭ್ಯಕ್ಕೆ ಸಮರ್ಥನೆಯಲ್ಲ. ಅಂತೆಯೇ ಬಹುಸಂಖ್ಯಾತತೆ ಯಾವುದೇ ಶಿಕ್ಷೆಗೆ ಕಾರಣವಲ್ಲ. ಮುಸ್ಲಿಂ ಧರ್ಮ ಮತ್ತು ಮುಸ್ಲಿಂ ಸಂಸ್ಕೃತಿಗಳ ರಕ್ಷಣೆಗೆ ಬೇಕಾದ ರಾಜಕೀಯ ಶಕ್ತಿಯನ್ನು ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಮುಸ್ಲಿಮರಿಗೆ ಒದಗಿಸುವ ಹೊಣೆ ರಾಷ್ಟ್ರದ್ದು. ಆದರೆ ಶಾಸನ ಸಭೆಯನ್ನಾಗಲಿ ಅಥವಾ ಆಡಳಿತದ್ದಾಗಲಿ ರಾಷ್ಟ್ರ ಅವರಿಗೆ ಯಾವುದೇ ಸ್ಥಾನ ಭದ್ರತೆ ಕೊಡಬಾರದು, ಮುಸಲ್ಮಾನರು ಅಂತಹ ಭದ್ರತೆಯನ್ನು ಒತ್ತಾಯಿಸಿದರೆ ಮುಸ್ಲಿಮರಿಗೆ ಪ್ರತ್ಯೇಕ ಮತ ಕ್ಷೇತ್ರವನ್ನು ಶ್ರೀ ಸಾವರ್ಕರ್ ಅವರು ವಿರೋಧಿಸುತ್ತಿಲ್ಲವೆಂಬುದನ್ನು ಗಮನಿಸಬೇಕು. ಮುಸ್ಲಿಮರು ಬಹುಸಂಖ್ಯಾತರಾಗಿರುವಲ್ಲೂ ಅವರಿಗೆ ಪ್ರತ್ಯೇಕ ಮತಕ್ಷೇತ್ರವನ್ನು ಒದಗಿಸಲು ಅವರು ಸಿದ್ಧರೇ ಎಂಬುದು ಸ್ಪಷ್ಟವಾಗಿಲ್ಲ. ಅದು ಸಾಮಾನ್ಯ ಜನಸಂಖ್ಯೆಯಲ್ಲಿ ಅವರಿಗಿರುವ ಪ್ರಮಾಣಕ್ಕಿಂತ ಮೀರಿರಬಾರದು. ಈ ರೀತಿಯಾಗಿ ಶ್ರೀ ಸಾವರ್ಕರವರು ಇಲ್ಲಿಯವರೆಗೆ ಮುಸ್ಲಿಂ ಜನಾಂಗಕ್ಕಿದ್ದ ರಾಜಕೀಯ ಸವಲತ್ತುಗಳನ್ನು ಕಿತ್ತುಹಾಕುತ್ತಾರೆ.

ಶ್ರೀ ಸಾವರ್ಕರವರು ಪಾಕಿಸ್ತಾನದ ಬದಲು ಸೂಚಿಸಿದ ಈ ಪರ್ಯಾಯ ವ್ಯವಸ್ಥೆಯಲ್ಲಿ ಸ್ಪಷ್ಟತೆ, ಖಾತಿ ಮತ್ತು ಖಚಿತತೆ ಇದ್ದು ಅವುಗಳಲ್ಲಿರುವ ಕಾಂಗ್ರೆಸ್ ಪ್ರಕಟಣೆ ಅಲ್ಪಸಂಖ್ಯಾತರ ಹಕ್ಕುಗಳ ಬಗೆಗಿನ ಅನಿಯತತೆ, ಅಸ್ಪಷ್ಟತೆ ಮತ್ತು ಅನಿರ್ಧಿಷ್ಟತೆಗಳನ್ನು ಗುರುತಿಸುತ್ತವೆ. ಮುಸ್ಲಿಮರು 'ಇಲ್ಲಿಯತನಕ ಹೋಗಬಹುದು, ಆದರೆ ಇದಕ್ಕಿಂತ ಮುಂದೆಯಲ್ಲ' ಎಂದು ಅವರಿಗೆ ತಿಳಿಸುವ ಯೋಗ್ಯತೆ ಶ್ರೀ ಸಾವರ್ಕರವರ ಯೋಜನೆಗಿದೆ. ಹಿಂದೂ ಮಹಾಸಭೆಯೊಂದಿಗೆ ತಮ್ಮ ಸ್ಥಾನಮಾನವೇನೆಂಬುದನ್ನು ಮುಸ್ಲಿಮರು ಅರಿತುಕೊಂಡಿದ್ದರೆ. ತದ್ವಿರುದ್ಧವಾಗಿ, ಕಾಂಗ್ರೆಸ್ಸು ಮುಸಲ್ಮಾನರೊಡನೆ ನಡೆದುಕೊಳ್ಳುವ ರೀತಿ ಹಾಗೂ ಅಲ್ಪಸಂಖ್ಯಾತ ಪ್ರಶ್ನೆಯನ್ನು ಮೋಸಗಾರಿಕೆಯ ರೀತಿಯಲ್ಲಿ ಅಲ್ಲದಿದ್ದರೂ ತನ್ನ ವ್ಯವಹಾರ ಚಾತುರ್ಯದ ಒಂದು ಆಟವನ್ನಾಗಿ ಮಾಡಿದುದರಿಂದ ಕಾಂಗ್ರೆಸಿನೊಂದಿಗೆ ತಮ್ಮ ಸಂಬಂಧವೇನೆಂಬುದು ಮುಸಲ್ಮಾನರಿಗೆಯೇ ಸ್ಪಷ್ಟವಾಗಿ ತಿಳಿಯದು.

ಇದೇ ಸಮಯದಲ್ಲಿ ಹೇಳಬೇಕಾದ ವಿಷಯವೇನೆಂದರೆ ಶ್ರೀ ಸಾವರ್ಕರವರ ದೃಷ್ಟಿಕೋನವು ವಿತಂಡವಾದವಲ್ಲದಿದ್ದರೂ ಕುತರ್ಕದ್ದು. ಮುಸ್ಲಿಮರು ಒಂದು ಪ್ರತ್ಯೇಕ ರಾಷ್ಟ್ರವೆಂಬುದಾಗಿ ಶ್ರೀ ಸಾವರ್ಕರವರು ಒಪ್ಪಿಕೊಳ್ಳುತ್ತಾರೆ. ಸಾಂಸ್ಕೃತಿಕ ಸ್ವಾಯತ್ತತೆ ಅವರಿಗಿದೆ ಎಂಬುದನ್ನು ಅವರು ಒಪ್ಪುತ್ತಾರೆ. ಅವರದ್ದೇ ಆದ ರಾಷ್ಟ್ರಧ್ವಜಕ್ಕೆ ಅವರು ಸಮ್ಮತಿಸುತ್ತಾರೆ. ಆದರೂ ಮುಸ್ಲಿಂ ಜನಾಂಗ ಹಕ್ಕಿನಿಂದ ಕೇಳುವ ಪ್ರತ್ಯೇಕ ರಾಷ್ಟ್ರೀಯ ನೆಲೆಯನ್ನು ಅವರು ವಿರೋಧಿಸುತ್ತಾರೆ. ಅವರು ಹಿಂದು ಜನಾಂಗಕ್ಕೆ ಒಂದು ರಾಷ್ಟ್ರೀಯ ನೆಲೆಯನ್ನು ಹಕ್ಕಿನಿಂದ ಕೇಳಿದರೆ, ಮುಸ್ಲಿಂ ರಾಷ್ಟ್ರದ ಪ್ರತ್ಯೇಕ ರಾಷ್ಟ್ರೀಯ ನೆಲೆಯ ಬೇಡಿಕೆಯನ್ನು ಅವರು ಹೇಗೆ ತಿರಸ್ಕರಿಸಬಲ್ಲರು?

ಅಸಂಬದ್ಧತೆಯೊಂದೇ ಶ್ರೀ ಸಾವರ್ಕರರವರ ಪ್ರಮಾದವಾಗಿದ್ದರೆ ಅದು ಅಷ್ಟೊಂದು ಪ್ರಮುಖ ವಿಷಯವಾಗುತ್ತಿದ್ದಿಲ್ಲ. ಶ್ರೀ ಸಾವರ್ಕರವರು ತಮ್ಮ ಯೋಜನೆಯನ್ನು ಸಮರ್ಥಿಸುವುದರಿಂದ ಇಂಡಿಯಾದ ಭದ್ರತೆಗೆ ಹಾಗೂ ರಕ್ಷಣೆಗೆ ಬಹುದೊಡ್ಡ ಆಪತ್ತನ್ನು ತಂದೊಡ್ಡುತ್ತಾರೆ. ಒಂದೇ ದೇಶದ ಪ್ರಜೆಗಳಾಗಿದ್ದು, ಒಂದೇ ಸಂವಿಧಾನಕ್ಕೆ ಅಧೀನರಾಗಿದ್ದಾಗ ಅಲ್ಪಸಂಖ್ಯಾತ ಜನಾಂಗದೊಂದಿಗೆ ಬಹುಸಂಖ್ಯಾತ ಜನಾಂಗ ವ್ಯವಹರಿಸುವಲ್ಲಿ ಇರುವ ಎರಡು ರೀತಿಗಳನ್ನು ಚರಿತ್ರೆ ನಿರೂಪಿಸುತ್ತದೆ. ಅಲ್ಪಸಂಖ್ಯಾತ ಜನಾಂಗವನ್ನು

ನಾಶ ಮಾಡಿ ಆ ಜನರನ್ನು ಬಹುಸಂಖ್ಯಾತ ಜನರೊಂದಿಗೆ ಸಮೀಕರಿಸಿ, ಲೀನಗೊಳಿಸಿ ಒಂದು ರಾಷ್ಟ್ರವನ್ನಾಗಿ ಮಾಡುವುದು ಒಂದು ರೀತಿ. ಹೀಗೆ ಮಾಡುವಲ್ಲಿ ಅಲ್ಪಸಂಖ್ಯಾತರಿಗೆ ತಮ್ಮ ಭಾಷಿಕ, ಧಾರ್ಮಿಕ ಅಥವಾ ಸಾಂಸ್ಕೃತಿಕ ಹಕ್ಕುಗಳನ್ನು ನಿರಾಕರಿಸಿ, ಅವರ ಮೇಲೆ ಬಹುಸಂಖ್ಯಾತರ ಭಾಷೆ, ಧರ್ಮ ಮತ್ತು ಸಂಸ್ಕೃತಿಗಳನ್ನು ಹೇರುವ ಪ್ರಯತ್ನವಿರುತ್ತದೆ. ಎರಡನೆಯ ರೀತಿಯೆಂದರೆ, ದೇಶವನ್ನು ವಿಭಜಿಸಿ ಅಲ್ಪಸಂಖ್ಯಾತರಿಗೆ ಒಂದು ಪ್ರತ್ಯೇಕ, ಸ್ವತಂತ್ರ ಹಾಗೂ ಸಾರ್ವಭೌಮ ಅಸ್ತಿತ್ವವನ್ನು ಕಲ್ಪಿಸಿ ಸ್ವತಂತ್ರ ರಾಷ್ಟ್ರವನ್ನು ನಿರ್ಮಿಸುವುದು. ಮೊದಲ ರೀತಿ ವಿಫಲಗೊಂಡಾಗ ಎರಡನೆಯ ಮಾರ್ಗವನ್ನು ಹೀಗೆ ಎರಡೂ ರೀತಿಗಳನ್ನು ಆಸ್ಟ್ರಿಯ ಮತ್ತು ಟರ್ಕಿಯಲ್ಲಿ ಪ್ರಯೋಗ ಮಾಡಿದ್ದಾರೆ.

ಶ್ರೀ ಸಾವರ್ಕರವರು ಈ ಎರಡು ರೀತಿಗಳಲ್ಲಿ ಯಾವುದೊಂದನ್ನು ಸ್ವೀಕರಿಸುತ್ತಿಲ್ಲ. ಮುಸ್ಲಿಂ ಜನರನ್ನು ನಿಗ್ರಹಿಸಲು ಆತ ಸೂಚಿಸುತ್ತಿಲ್ಲ. ತದ್ವಿರುದ್ಧವಾಗಿ ಆ ರಾಷ್ಟ್ರದ ಸತ್ವವನ್ನು ಕಾಪಾಡುವಂತಹ ಅವರ ಧರ್ಮ, ಭಾಷೆ ಮತ್ತು ಸಂಸ್ಕೃತಿಗಳನ್ನು ಇರಲು ಬಿಟ್ಟು, ಆ ಜನಾಂಗವನ್ನು ಅವರು ಘೋಷಿಸಿ ಬೆಳೆಸುತ್ತಾರೆ. ಅದೇ ಸಮಯದಲ್ಲಿ ದೇಶವನ್ನು ಒಂದೇ ಪ್ರದೇಶದಲ್ಲಿ ಎರಡು ಪ್ರತ್ಯೇಕ ಸಾರ್ವಭೌಮ ರಾಷ್ಟ್ರಗಳನ್ನಾಗಿ ವಿಭಜಿಸಲು ಅವರು ಒಪ್ಪುತ್ತಿಲ್ಲ. ಹಿಂದೂಗಳು ಮತ್ತು ಮುಸ್ಲಿಮರು ತಂತಮ್ಮ ಧರ್ಮ, ಭಾಷೆ ಮತ್ತು ಸಂಸ್ಕೃತಿಗಳನ್ನು ಸಂರಕ್ಷಿಸಿಕೊಂಡು ಒಂದೇ ದೇಶದೊಳಗೆ ಎರಡು ಪ್ರತ್ಯೇಕ ರಾಷ್ಟ್ರಗಳಾಗಿ ಬಾಳಬೇಕೆಂಬುದು ಅವರ ಅಪೇಕ್ಷೆ. ಒಂದು ರಾಷ್ಟ್ರವನ್ನು ಸ್ಥಾಪಿಸಬೇಕೆಂಬ ಉದ್ದೇಶದಿಂದ ಪ್ರಧಾನ ಜನಾಂಗ ಅಪ್ರಧಾನ ಜನಾಂಗಗಳನ್ನು ಕಬಳಿಸಿ ನಾಶಮಾಡಬೇಕೆಂಬ ಪ್ರಮೇಯದ ಹಿಂದಿರುವ ಬುದ್ಧಿವಂತಿಕೆಯನ್ನು ಅರ್ಥೈಸಿಕೊಳ್ಳಬಹುದು, ಮೆಚ್ಚಬಹುದು. ಎರಡು ಪ್ರತ್ಯೇಕ ರಾಷ್ಟ್ರಗಳಿರಬೇಕು. ಆದರೆ ಅವರೊಳಗಿನ ಸಂಬಂಧ ಕಳಚಿಹೋಗಬಾರದು ಎಂಬ ವಿಚಾರದ ಪ್ರಯೋಜನ ಮಾತ್ರ ಗ್ರಹಿಸಿಕೊಳ್ಳುವುದು ಅಸಾಧ್ಯವೇ ಸರಿ. ಎರಡು ರಾಷ್ಟ್ರಗಳು ಪರಸ್ಪರ ಪ್ರೀತಿಯಿಂದ ಗೌರವದಿಂದ, ಹೊಂದಾಣಿಕೆಯಿಂದ ಸಹಭಾಗಿಗಳಾಗಿ ಬಾಳಿದರೆ ಮಾತ್ರ ಈ ಮನೋಭಾವರನ್ನು ಸಮರ್ಥಿಸಿಕೊಳ್ಳಬಹುದು. ಆದರೆ, ಅದು ಅಸಾಧ್ಯ. ಏಕೆಂದರೆ, ಸಾವರ್ಕರವರು ಮುಸ್ಲಿಂ ರಾಷ್ಟ್ರವನ್ನು ಹಿಂದು ರಾಷ್ಟ್ರದೊಂದಿಗೆ ಅಧಿಕಾರದಲ್ಲಿ ಸಮನಾಗಿರಲು ಬಿಡಲಾರರು. ಹಿಂದು ರಾಷ್ಟ್ರ ಪ್ರಧಾನ ರಾಷ್ಟ್ರವಾಗಿದ್ದು, ಮುಸ್ಲಿಂ ರಾಷ್ಟ್ರ ಅದಕ್ಕೆ ಅಧೀನವಾಗಿರಬೇಕೆಂಬುದೇ ಅವರ ಇಚ್ಛೆ. ಹಿಂದೂ ರಾಷ್ಟ್ರ ಮತ್ತು ಮುಸ್ಲಿಂ ರಾಷ್ಟ್ರಗಳೊಳಗೆ ವೈರತ್ವದ ಬೀಜವನ್ನು ಬಿತ್ತಿ, ಅವರು ಒಂದೇ ಸಂವಿಧಾನದಡಿಯಲ್ಲಿ ಬಾಳಬೇಕು, ಒಂದೇ ದೇಶದಲ್ಲಿರಬೇಕು ಎಂಬುದನ್ನು ಸಾವರ್ಕರವರು ಯಾಕೆ ಅಪೇಕ್ಷಿಸುತ್ತಾರೆಂಬುದು ವಿವರಿಸುವುದು ಕಠಿಣ.

ಈ ಹೊಸ ಸೂತ್ರವನ್ನು ಕಂಡುಹಿಡಿದುದಕ್ಕೆ ಸಾವರ್ಕರವರು ಯಾವುದೇ ಪ್ರಶಂಸೆಗೆ ಪಾತ್ರರಾಗಲಾರರು. ತನ್ನ ಸೂತ್ರವೇ ಸರಿಯಾದ ಸೂತ್ರವೆಂದು ಅವರು ನಂಬಿಕೊಂಡಿರುವುದೇ ಅರ್ಥೈಸುವುದು ಕಠಿಣವಾಗಿದೆ. ಸ್ವರಾಜ್ಯದ ತನ್ನ ಯೋಜನೆಗೆ ಸಾವರ್ಕರವರು ಪ್ರಾಚೀನ ಆಸ್ಟ್ರೀಯ ಮತ್ತು ಪ್ರಾಚೀನ ಟರ್ಕಿಯನ್ನು ತನ್ನ ಮಾದರಿ ಮತ್ತು ಆದರ್ಶವನ್ನಾಗಿಟ್ಟುಕೊಂಡಿದ್ದಾರೆ. ಆಸ್ಟ್ರೀಯ ಮತ್ತು ಟರ್ಕಿಗಳಲ್ಲಿ ಅಲ್ಪಸಂಖ್ಯಾತರ ದಬ್ಬಾಳಿಕೆಯನ್ನು ನಡೆಸಿ ಅವರೊಂದಿಗೆ ಬಹುಸಂಖ್ಯಾತರು ಒಂದೇ ಸಂವಿಧಾನದಡಿಯಲ್ಲಿ ವಾಸಿಸುತ್ತಿದ್ದರೆಂಬುದು ಅವರ ಅಭಿಪ್ರಾಯ. ಇದು ಆಸ್ಟ್ರಿಯ ಮತ್ತು ಟರ್ಕಿಗಳಲ್ಲಿ ಸಾಧ್ಯವಾಗಿದ್ದರೆ ಇಂಡಿಯಾದೊಳಗೆ ಅದು ಹಿಂದೂಗಳಿಗೆ ಯಾಕೆ ಸಾಧ್ಯವಾಗಬಾರದು ಎಂಬುದು ಅವರ ವಾದ. ಸಾವರ್ಕರವರು ಹಳೆಯ ಆಸ್ಟ್ರಿಯ ಮತ್ತು ಹಳೆಯ ಟರ್ಕಿಯನ್ನು ಮಾದರಿಯನ್ನಾಗಿಟ್ಟುಕೊಂಡದ್ದು ನಿಜವಾಗಿಯೂ ಸೋಜಿಗದ ವಿಷಯ. ಪುರಾತನ ಆಸ್ಟ್ರಿಯ ಮತ್ತು ಪುರಾತನ ಟರ್ಕಿಗಳು ಈಗಿಲ್ಲ ಎಂಬ ವಿಷಯ

ಸಾವರ್ಕರವರಿಗೆ ತಿಳಿದಿಲ್ಲವೆಂದು ಅನಿಸುತ್ತದೆ. ಹಿಂದಿನ ಆಸ್ಟ್ರೀಯ ಮತ್ತು ಹಿಂದಿನ ಟರ್ಕಿಗಳನ್ನು ಧ್ವಂಸಗೊಳಿಸಿದ ಶಕ್ತಿಗಳ ಬಗೆಗೂ ಅವರಿಗೆ ಜ್ಞಾನವಿದ್ದಂತಿಲ್ಲ. ತನಗೆ ಹೆಚ್ಚು ಪ್ರಿಯವಾದ ಗತಕಾಲದ ಅಧ್ಯಯನದ ಬದಲು ಸಾವರ್ಕರವರು ವರ್ತಮಾನಕಾಲಕ್ಕೆ ಹೆಚ್ಚಿನ ಗಮನ ನೀಡಿದ್ದರೆ ಪ್ರಾಚೀನ ಆಸ್ಟ್ರಿಯ ಮತ್ತು ಪ್ರಾಚೀನ ಟರ್ಕಿಗಳ ಅಳಿವಿಗೆ, ಸಾವರ್ಕರವರು ಪ್ರತಿಪಾದಿಸುವ 'ಹಿಂದೂತ್ವ' ಅರ್ಥಾತ್ ಒಂದೇ ಸಂವಿಧಾನದಡಿಯಲ್ಲಿದ್ದುಕೊಂಡು ಅಲ್ಪಸಂಖ್ಯಾತರನ್ನು ಅಧೀನದಲ್ಲಿಟ್ಟುಕೊಂಡು ಬಹುಸಂಖ್ಯಾತರು ಅಧಿಕಾರ ಚಲಾಯಿಸುವ ದ್ವಿರಾಷ್ಟ್ರ ಸ್ವರಾಜ್ಯವನ್ನು ಸ್ಥಾಪಿಸುವಂತಹ ರೀತಿಯ ಯೋಜನೆಗೆ ಒತ್ತಾಯ ಮಾಡಿದ್ದೇ ಕಾರಣವೆಂಬುದು ಅವರ ಗಮನಕ್ಕೆ ಬರುತ್ತಿತ್ತು.

ಆಸ್ಟ್ರಿಯ, ಝೆಕೊಸ್ಲೊವಾಕಿಯಾ ಮತ್ತು ಟರ್ಕಿಗಳ ವಿಭಜನೆಯ ಚರಿತ್ರೆ ಇಂಡಿಯಾಕ್ಕೆ ಅತ್ಯಂತ ಮಹತ್ವದ್ದಾಗಿದೆ. ಅಲ್ಲದೆ, ಹಿಂದೂ ಮಹಾಸಭೆಯ ಸದಸ್ಯರು ಅದನ್ನು ಸೂಕ್ಷ್ಮವಾಗಿ ಗಮನಿಸುವುದು ಒಳ್ಳೆಯದು. ನಾನು ಬೇರೊಂದು ಅಧ್ಯಾಯದಲ್ಲಿ ಈ ರಾಷ್ಟ್ರಗಳ ನಾಗರಿಕರ ಚರಿತ್ರೆಯ ಪಾಠಗಳನ್ನು ಕುರಿತು ಪ್ರಸ್ತಾಪಿಸಿರುವುದರಿಂದ ಅವುಗಳನ್ನು ಕುರಿತು ಪ್ರಸ್ತುತದಲ್ಲಿ ಹೆಚ್ಚೇನೂ ಹೇಳಬೇಕಾಗಿಲ್ಲ. ಸಾವರ್ಕರವರು ರೂಪಿಸಿದ ಯೋಜನೆಯಿಂದಾಗಿ ಮುಸ್ಲಿಮರ ಮೇಲಿನ ಸರ್ವಾಧಿಕಾರ ಹಿಂದೂಗಳಿಗೆ ದೊರಕುವುದರಿಂದ ಅವರ ಪ್ರತಿಷ್ಠೆಯನ್ನು ಹಾಗೂ ಆಳುವಿಕೆಯ ಅಹಂಕಾರವನ್ನು ತುಷ್ಟಪಡಿಸಿದಂತಾಗುತ್ತದೆಂಬುದನ್ನು ಮಾತ್ರ ಇಲ್ಲಿ ಹೇಳಬೇಕಾಗುತ್ತದೆ. ಆದರೆ ಮುಸ್ಲಿಮರು ಇಂತಹ ಘೋರ ಪರ್ಯಾಯ ವ್ಯವಸ್ಥೆಗೆ ಎಂದೆಂದಿಗೂ ಒಪ್ಪಲಾರರು ಎಂಬ ಒಂದೇ ಸರಳ ಕಾರಣದಿಂದಾಗಿ ಮುಂದಿನ ದಿನಮಾನಗಳಲ್ಲಿ ಹಿಂದೂಗಳಿಗೆ ಒಂದು ಭದ್ರ ಹಾಗೂ ಶಾಂತಿಯುತವಾದ ಭವಿಷ್ಯತ್ತು ನಿಶ್ಚಿತವಲ್ಲವೆಂಬುದು ಮಾತ್ರ ನಿಜ.

## III

ಸಾವರ್ಕರವರು ತಮ್ಮ ಯೋಜನೆಗೆ ಮುಸ್ಲಿಮರ ಪ್ರತಿಕ್ರಿಯೆಯ ಬಗೆಗೆ ಏನೂ ಚಿಂತೆ ಮಾಡಿದವರಲ್ಲ. ಅವರು ತಮ್ಮ ಯೋಜನೆಯನ್ನು ರೂಪಿಸಿ 'ಸ್ವೀಕರಿಸಿ, ಇಲ್ಲವೆ ತ್ಯಜಿಸಿ' ಎಂಬ ಸೂಚನೆಯೊಂದಿಗೆ ಅದನ್ನು ಮುಸ್ಲಿಮರ ಮುಖಕ್ಕೇ ಎಸೆದುಬಿಡುತ್ತಾರೆ. ಮುಸ್ಲಿಮರು ಸ್ವರಾಜ್ಯದ ಹೋರಾಟದಲ್ಲಿ ಪಾಲ್ಗೊಳ್ಳಲು ನಿರಾಕರಿಸಬಹುದೆಂಬುದರ ಬಗೆಗೆ ಅವರು ಗಲಿಬಿಲಿಗೊಳ್ಳುವುದಿಲ್ಲ. ಅವರು ಹಿಂದೂಗಳ ಮತ್ತು ಹಿಂದೂ ಮಹಾಸಭೆಯ ತಾಕತ್ತನ್ನು ಚೆನ್ನಾಗಿ ಬಲ್ಲರು, ಹಿಂದೂಗಳು ಏಕಾಕಿಯಾಗಿ, ಯಾರ ಸಹಾಯವೂ ಇಲ್ಲದೆ ಬ್ರಿಟಿಷರಿಂದ ಸ್ವರಾಜ್ಯವನ್ನು ಕಿತ್ತುಕೊಳ್ಳಬಲ್ಲರು ಎಂಬ ದಿಟ್ಟ ಭರವಸೆಯಿಂದ ಹೋರಾಟವನ್ನು ಮುಂದುವರಿಯುವಂತೆ ಅವರು ಸಲಹೆ ಕೊಡುತ್ತಾರೆ. ಮುಸ್ಲಿಮರಿಗೆ ಈ ಕೆಳಗಿನಂತೆ ಹೇಳಲು ಸಾವರ್ಕರವರು ಸಿದ್ಧರಿದ್ದಾರೆ.

> **"ನೀವು ಬಂದರೆ, ನಿಮ್ಮೊಡನೆ; ನೀವು ಬಾರದಿದ್ದರೆ, ನಿಮ್ಮನ್ನು ಬಿಟ್ಟು; ನೀವು ವಿರೋಧಿಸಿದರೆ, ನಿಮ್ಮನ್ನು ಮೀರಿ– ತಮ್ಮ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಶಕ್ತಿಮೀರಿ ಹೋರಾಡಲು ಹಿಂದೂಗಳು ಸದಾ ಸಿದ್ಧರಿದ್ದಾರೆ."**

ಗಾಂಧಿ ಈ ಪ್ರಕಾರ ಅಲ್ಲ. ಗಾಂಧಿ ತಮ್ಮ ರಾಜಕೀಯ ನಾಯಕತ್ವದ ಆರಂಭದಲ್ಲಿಯೇ ಆರು ತಿಂಗಳ ಅವಧಿಯಲ್ಲಿಯೇ ಸ್ವರಾಜ್ಯವನ್ನು ಗೆಲ್ಲುತ್ತೇನೆಂಬ ವಚನವನ್ನಿತ್ತು ಇಂಡಿಯಾದ ಜನರನ್ನೆಲ್ಲ ಆಶ್ಚರ್ಯಗೊಳಿಸಿದ್ದರು.

ಕೆಲವೊಂದು ಷರತ್ತುಗಳನ್ನು ಈಡೇರಿಸಿದರೆ ಮಾತ್ರ ತಾನು ಈ ಅದ್ಭುತವನ್ನು ಸಾಧಿಸಬಲ್ಲೆನೆಂದು ಗಾಂಧಿ ಹೇಳಿದ್ದರು. ಈ ಕರಾರುಗಳಲ್ಲಿ ಹಿಂದು-ಮುಸ್ಲಿಂ ಐಕ್ಯತೆ ಒಂದು. ಹಿಂದು-ಮುಸ್ಲಿಂ ಐಕ್ಯತೆಯನ್ನು ಬಿಟ್ಟು ಸ್ವರಾಜ್ಯವಿಲ್ಲವೆಂಬುದನ್ನು ಪದೇ ಪದೇ ಹೇಳುವಲ್ಲಿ ಗಾಂಧಿ ಬೇಸರಪಡುವುದಿಲ್ಲ. ಗಾಂಧಿ ಈ ಘೋಷಣೆಯನ್ನು ಇಂಡಿಯಾದ ರಾಜಕೀಯದ ಕೇವಲ ಒಂದು ಚಲಾವಣೆಯಾಗಿ ಮಾಡಿಕೊಂಡಿಲ್ಲ. ಬದಲಾಗಿ ಅದು ಕ್ರಿಯಾತ್ಮಕಗೊಳ್ಳುವಂತೆ ಅವರು ಸತತ ಶ್ರಮ ವಹಿಸಿದ್ದಾರೆ. ೧೯೧೯ರ ಮಾರ್ಚ್ ೨ರಂದು ರೌಲಟ್ ಶಾಸನದ ವಿರುದ್ಧ ಸತ್ಯಾಗ್ರಹವನ್ನು ಹೂಡುವ ತಮ್ಮ ಉದ್ದೇಶವನ್ನು ಪ್ರಕಟಿಸುತ್ತಾ ತನ್ನ ಇಂಡಿಯಾದ ರಾಜಕೀಯ ನಾಯಕತ್ವವನ್ನು ಈ ಘೋಷಣೆಯ ಮೂಲಕ ಆರಂಭಿಸಿದರೆಂದು ಹೇಳಬಹುದು. ಇದೇ ಸಂದರ್ಭದಲ್ಲಿ ತಮ್ಮೊಡನೆ ಸೇರಲು ಆಸಕ್ತಿಯುಳ್ಳವರು ಸತ್ಯಾಗ್ರಹ ವಾಗ್ದಾನಕ್ಕೆ ಸಹಿ ಹಾಕಲು ಕೇಳಿಕೊಂಡರು. ಆ ಸತ್ಯಾಗ್ರಹ ಚಳವಳಿ ಅಲ್ಪಕಾಲದ್ದು, ೧೯೧೯ರ ಏಪ್ರಿಲ್ ೧೮ರಂದು ಗಾಂಧಿ ಅದನ್ನು ತಡೆದಿಟ್ಟರು. ತನ್ನ ಕಾರ್ಯಕ್ರಮದ ಅಂಗವಾಗಿ ಗಾಂಧಿ ೧೯೧೯ರ ಮಾರ್ಚ್ ೬ ದಿನಾಂಕವನ್ನು ಇಂಡಿಯಾದಾದ್ಯಂತ ರೌಲಟ್ಟ್ ಶಾಸನದ ವಿರುದ್ಧ ಪ್ರತಿಭಟನಾ ದಿನವಾಗಿ ಆಚರಿಸಲು ನಿಗದಿಪಡಿಸಿದ್ದರು.* ಆ ದಿನ ಸಾಮೂಹಿಕ ಸಭೆಗಳನ್ನು ನಡೆಸಬೇಕಾಗಿತ್ತು. ಆ ಸಭೆಗಳಿಗೆ ಹಾಜರಾದ ಸದಸ್ಯರು ಈ ಕೆಳಗಿನಂತೆ ಪ್ರತಿಜ್ಞೆ ತೆಗೆದುಕೊಳ್ಳಬೇಕೆಂದು ಗಾಂಧಿ ನಿಯಮಿಸಿದ್ದರು.

> **"ದೇವರ ಸಾಕ್ಷಿಯಾಗಿ, ನಾವು ಹಿಂದುಗಳು ಹಾಗೂ ಮಹಮ್ಮದೀಯರು ಪರಸ್ಪರ ಒಂದೇ ತಾಯ್ತಂದೆಯರ ಮಕ್ಕಳಂತೆ ನಡೆದುಕೊಳ್ಳುತ್ತೇವೆಂದೂ, ನಮ್ಮಲ್ಲಿ ಯಾವುದೇ ತಾರತಮ್ಯ ಇಟ್ಟುಕೊಳ್ಳುವುದಿಲ್ಲವೆಂದೂ, ಪ್ರತಿಯೊಬ್ಬರ ದುಃಖದಲ್ಲಿ ಭಾಗಿಗಳಾಗುತ್ತೇವೆಂದೂ, ಅವುಗಳ ನಿವಾರಣೆಯಲ್ಲಿ ಪರಸ್ಪರ ಸಹಕಾರ ನೀಡುತ್ತೇವೆಂದೂ ಘೋಷಿಸುತ್ತೇವೆ. ಪರಸ್ಪರ ಧರ್ಮಗಳನ್ನು ಧಾರ್ಮಿಕ ಭಾವನೆಗಳನ್ನು ಗೌರವಿಸುತ್ತೇವೆಂದೂ, ಆಯಾಯ ಧಾರ್ಮಿಕ ಆಚರಣೆಗಳಿಗೆ ವ್ಯತಿರಿಕ್ತವಾಗಿ ನಡೆಯುವುದಿಲ್ಲವೆಂದು ಭರವಸೆ ನೀಡುತ್ತೇವೆ. ಧರ್ಮದ ಹೆಸರಿನಲ್ಲಿ ಯಾವುದೇ ಹಿಂಸೆ ಎಂದೆಂದೂ ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡುತ್ತೇವೆ."**

ಹಿಂದು ಮುಸ್ಲಿಮರೊಳಗೆ ಘರ್ಷಣೆ ಆಗುವಂತಹ ಯಾವುದೇ ವಿಷಯ ರೌಲಟ್ಟ್ ಶಾಸನದ ವಿರುದ್ಧದ ಈ ಸತ್ಯಾಗ್ರಹ ಚಳವಳಿಯಲ್ಲಿ ಇದ್ದಿಲ್ಲ. ಆದರೂ ಈ ಪ್ರತಿಜ್ಞೆ ಮಾಡಬೇಕೆಂದು ಗಾಂಧಿ ತನ್ನ ಅನುಯಾಯಿಗಳನ್ನು ಕೇಳಿಕೊಂಡರು. ಹಿಂದು-ಮುಸ್ಲಿಂ ಬಾಂಧವ್ಯದ ಬಗೆಗೆ ಗಾಂಧಿ ಆರಂಭದಿಂದಲೂ ಎಷ್ಟೊಂದು ಮಹತ್ವ ಕೊಟ್ಟಿದ್ದರೆಂಬುದು ಇದರಿಂದ ಸ್ಪಷ್ಟಗೊಳ್ಳುತ್ತದೆ.

೧೯೧೯ರಲ್ಲಿ ಮಹಮ್ಮದೀಯರು ಖಿಲಾಫತ್ ಚಳುವಳಿಯನ್ನು ಪ್ರಾರಂಭಿಸಿದರು. ಈ ಚಳುವಳಿಯ ಉದ್ದೇಶಗಳು ಎರಡು: ಖಿಲಾಫತನ್ನು ಉಳಿಸುವುದು ಒಂದಾದರೆ, ತುರ್ಕಿ ಸಾಮ್ರಾಜ್ಯದ ಸಮಗ್ರತೆಯನ್ನು ಕಾಪಾಡಿಕೊಳ್ಳುವುದು ಇನ್ನೊಂದು. ಈ ಎರಡೂ ಗುರಿಗಳೂ ಬೆಂಬಲಕ್ಕೆ ಆಯೋಗ್ಯವಾದವುಗಳು. ಯಾವ ತುರ್ಕರಿಗೆ ಬೆಂಬಲಾರ್ಥವಾಗಿ ಈ ಚಳವಳಿ ನಡೆಯಿತೋ ಅವರಿಗೆಯೇ ಸುಲ್ತಾನನು ಬೇಡವಾಗಿದ್ದ. ಈ ಕಾರಣದಿಂದಾಗಿ ಖಿಲಾಫತನ್ನು ಉಳಿಸಿಕೊಳ್ಳಲು ಸಾಧ್ಯವಾಗಿಲ್ಲ. ಅವರಿಗೆ ಪ್ರಜಾಧಿಪತ್ಯ ಬೇಕಾಗಿತ್ತು.

---

* ಅವರ ದಿನಾಂಕ ೨೩ ಮಾರ್ಚ ೧೯೧೯ರ ಘೋಷಣೆಯನ್ನು ನೋಡಿ.

ಟರ್ಕಿಯನ್ನು ಪ್ರಜಾಧಿಪತ್ಯವನ್ನಾಗಿ ಬದಲಾಯಿಸಿಕೊಳ್ಳುವ ಮನಸ್ಸಿದ್ದಾಗ, ಅದನ್ನು ಒಂದು ರಾಜಪ್ರಭುತ್ವವನ್ನಾಗಿಟ್ಟುಕೊಳ್ಳಲು ತುರ್ಕರನ್ನು ಒತ್ತಾಯಿಸುವುದು ಎಂದೆಂದೂ ನ್ಯಾಯಸಮ್ಮತವಲ್ಲ. ತುರ್ಕಿ ಸಾಮ್ರಾಜ್ಯದ ಸಮಗ್ರತೆಯನ್ನು ಒತ್ತಾಯಿಸುವುದು ಅಷ್ಟೊಂದು ಸರಳವಿದ್ದಿಲ್ಲ. ಏಕೆಂದರೆ, ಇದರಿಂದಾಗಿ ಬೇರೆ ಬೇರೆ ಜನಾಂಗಗಳನ್ನು ಪ್ರತ್ಯೇಕವಾಗಿ ಅರಬರನ್ನು, ಅದರಲ್ಲೂ ವಿಶೇಷವಾಗಿ ಆತ್ಮನಿರ್ಣಯದ ಹಕ್ಕನ್ನೇ ಎಲ್ಲ ಶಾಂತಿದಾಯಕ ನಿರ್ಧಾರಗಳಿಗೆ ಆಧಾರವನ್ನಾಗಿಟ್ಟುಕೊಳ್ಳಬೇಕೆಂಬ ತತ್ತ್ವವನ್ನು ಎಲ್ಲರೂ ಒಪ್ಪಿಕೊಂಡಾಗ, ನಿರಂತರವಾಗಿ ಸ್ವಾಧೀನದೊಳಗೆ ಇಟ್ಟಂತಾಗುತ್ತದೆ.

ಈ ಚಳವಳಿಯನ್ನು ಪ್ರಾರಂಭಿಸಿದವರು ಮಹಮ್ಮದೀಯರು. ಆದರೆ ಗಾಂಧಿ ಇದನ್ನು ಭದ್ರವಾಗಿ ಹಾಗೂ ಶ್ರದ್ಧೆಯಿಂದ ಮುಂದುವರಿಸಿದ ರೀತಿಯನ್ನು ಗಮನಿಸಿದಾಗ ಹಲವಾರು ಮಹಮ್ಮದೀಯರೇ ಬೆರಗುಗೊಂಡಿರಬೇಕು. ಹಲವಾರು ಜನರಿಗೆ ಈ ಖಿಲಾಫತ್ ಚಳುವಳಿಯ ನೈತಿಕ ತಳಹದಿಯನ್ನು ಕುರಿತಾಗಿ ಸಂಶಯವಿತ್ತು. ಸಂಶಯಾತ್ಮಕ ತಳಹದಿಯ ಮೇಲೆ ನಿಂತಿರುವ ಈ ಚಳುವಳಿಯಲ್ಲಿ ಯಾವುದೇ ಪಾತ್ರವನ್ನು ವಹಿಸಿಕೊಳ್ಳಬಾರದೆಂದು ಅವರು ಗಾಂಧಿಯವರ ಮೇಲೆ ಒತ್ತಾಯ ತರಲು ಪ್ರಯತ್ನಿಸಿದ್ದರು. ಆದರೆ, ಗಾಂಧಿಯವರಿಗೆ ಖಿಲಾಫತ್ ಚಳವಳಿಯ ನ್ಯಾಯಬದ್ಧತೆ ಕುರಿತು ಸಂಪೂರ್ಣ ನಂಬಿಕೆ ಇದ್ದುದರಿಂದ ಇತರರ ಸಲಹೆಗೆ ಸಮ್ಮತಿ ಸೂಚಿಸಲು ಅವರು ನಿರಾಕರಿಸಿದರು. ಈ ಚಳವಳಿ ನ್ಯಾಯಬದ್ಧವಾದುದು ಮತ್ತು ಅದರಲ್ಲಿ ಭಾಗವಹಿಸುವುದು ತನ್ನ ಕರ್ತವ್ಯ ಎಂದು ಅವರು ಪದೇ ಪದೇ ವಾದಿಸುತ್ತಿದ್ದರು. ಅವರ ನಿಲುಮೆಯನ್ನು ಅವರ ಮಾತುಗಳಲ್ಲಿಯೇ ಈ ರೀತಿ ಸಂಗ್ರಹಿಸಬಹುದು.*

**"(೧) ಟರ್ಕಿ ತನ್ನದನ್ನು ಉಳಿಸಿಕೊಳ್ಳಲು ಬಯಸುವುದರಿಂದ, ನನ್ನ ಅಭಿಪ್ರಾಯದ ಮೇರೆಗೆ, ತುರ್ಕಿಯರ ನಿಲುವು ನೀತಿ ವಿರುದ್ಧವೂ ಅಲ್ಲ, ನ್ಯಾಯದ ವಿರುದ್ಧವೂ ಅಲ್ಲ, ಅದು ಬಹು ನಿಷ್ಪಕ್ಷಪಾತವಾದದ್ದು. ಮುಸ್ಲಿಮೇತರ ಮತ್ತು ತುರ್ಕಿಯೇತರ ಜನಾಂಗಗಳ ಸಂರಕ್ಷಣೆಗೋಸ್ಕರ ಅಗತ್ಯವಿದ್ದ ಎಲ್ಲ ಜವಾಬ್ದಾರಿಯನ್ನು ವಹಿಸುವಂತೆ ತುರ್ಕಿ ಅಧಿಪತ್ಯದಲ್ಲಿ ಕ್ರೈಸ್ತರಿಗೆ ಮತ್ತು ಅರಬರಿಗೆ ತಮ್ಮ ಸರಕಾರ ನಡೆಸುವ ಹೊಣೆಯನ್ನು ಮಹಮ್ಮದೀಯ ಸಾರ್ವಜನಿಕ ಪ್ರಕಟಣೆ ಘೋಷಿಸಿದೆ.**

**(೨) ತುರ್ಕರು ಅಶಕ್ತರು, ಅಸಮರ್ಥರು ಅಥವಾ ಕ್ರೂರಿಗಳೆಂಬುದನ್ನು ನಾನು ನಂಬುವುದಿಲ್ಲ. ನಿಜವಾಗಿಯೂ ಅವರು ಅಸಂಘಟಿತರು. ಅಲ್ಲದೆ, ಬಹುಶಃ ಉತ್ತಮ ನಾಯಕತ್ವದಿಂದ ವಂಚಿತರಾದವರು. ಯಾರ ಕಡೆಯಿಂದ ಅಧಿಕಾರವನ್ನು ಕಸಿದುಕೊಳ್ಳಲು ಹವಣಿಸುತ್ತಿದ್ದಾರೆಯೋ ಅಂಥವರ ಬಗೆಗೆ ಇತರರು ಅಶಕ್ತತೆ, ಅಸಾಮರ್ಥ್ಯತೆ ಹಾಗೂ ಕ್ರೂರತನವನ್ನು ಆರೋಪಿಸುವುದು ಕೇಳಿದ್ದೇವೆ. ಆಪಾದಿಸಿದ ಸಾಮೂಹಿಕ ಕಗ್ಗೊಲೆಗಳ ಬಗೆಗೆ ಒಂದು ಯೋಗ್ಯ ನಿಯೋಗವನ್ನು ರಚಿಸಬೇಕೆಂದು ಕೇಳಿಕೊಳ್ಳಲಾಗಿದೆ. ಆದರೆ, ಅದು ಎಂದೂ ಮಾನ್ಯವಾಗಿಲ್ಲ. ಅದೇನೇ ಇದ್ದರೂ, ದಬ್ಬಾಳಿಕೆಯ ವಿರುದ್ಧ ರಕ್ಷಣೆಯನ್ನು ಪಡೆದುಕೊಳ್ಳಬಹುದು.**

**(೩) ನಾನು ಈಗಾಗಲೇ ಹೇಳಿರುವಂತೆ, ನನಗೆ ಭಾರತೀಯ ಮಹಮ್ಮದೀಯರ ಬಗೆಗೆ ಆಸಕ್ತಿ ಇಲ್ಲದೆ**

---

* ಯಂಗ್ ಇಂಡಿಯಾ, ಜೂನ್ ೨, ೧೯೩೦

**ಹೋಗಿದ್ದರೆ, ನಾನು ಹೇಗೆ ಆಸ್ಟ್ರೀಯ ಮತ್ತು ಪೋಲಂಡ್ ದೇಶದವರ ಬಗೆಗೆ ವಿಶೇಷ ಆಸಕ್ತಿ ಇಲ್ಲದವನಾಗಿದ್ದೇನೆಯೋ ಅದೇ ರೀತಿಯಲ್ಲಿ ತುರ್ಕರ ಅಭ್ಯುದಯದಲ್ಲಿ ನಿರಾಸಕ್ತನಾಗುತ್ತಿದ್ದೆ. ಆದರೆ ಒಬ್ಬ ಭಾರತೀಯನಾಗಿ ಸಹ–ಭಾರತೀಯರ ದುಃಖ ಹಾಗೂ ಸಂಕಷ್ಟಗಳಲ್ಲಿ ಭಾಗಿಯಾಗುವುದಕ್ಕೆ ನಾನು ಬದ್ಧನಾಗಿದ್ದೇನೆ. ಮಹಮ್ಮದೀಯರು ನನ್ನ ಸಹೋದರರೆಂದು ನಾನು ಪರಿಗಣಿಸಿದಾಗ, ಅವರ ನ್ಯಾಯಬದ್ಧ ವಿಷಯಗಳಿಗೆ ಸಂಬಂಧಿಸಿದ ಆಪತ್ತುಗಳಲ್ಲಿ ನನಗೆ ಸಾಧ್ಯವಾದಷ್ಟು ಮಟ್ಟಿಗೆ ಅವರಿಗೆ ನೆರವು ನೀಡುವುದು ನನ್ನ ಕರ್ತವ್ಯ.**

**(೪) ನಾಲ್ಕನೆಯದಾಗಿ, ಹಿಂದುಗಳು ಮಹಮ್ಮದೀಯರೊಡನೆ ಒಂದಾಗಿರಬೇಕು. ಈ ವಿಷಯ ಅವರವರ ಭಾವನೆಗಳಿಗೆ ಹಾಗೂ ಅಭಿಪ್ರಾಯಗಳಿಗೆ ಸಂಬಂಧಪಟ್ಟಿದ್ದು. ನ್ಯಾಯಬದ್ಧ ಸಂದರ್ಭಗಳಲ್ಲಿ ನನ್ನ ಮಹಮ್ಮದೀಯ ಸೋದರರಿಗಾಗಿ ಸಾಕಷ್ಟು ಕಷ್ಟನೋವುಗಳನ್ನು ಅನುಭವಿಸುವುದು ಯುಕ್ತವಾದುದು. ಆದುದರಿಂದ, ಅವರ ಗುರಿ ಹಾಗೂ ಮಾರ್ಗಗಳೆರಡೂ ಗೌರವಾರ್ಹವಾಗಿದ್ದ ಪಕ್ಷದಲ್ಲಿ, ಕೊನೆಯ ತನಕ ಅವರೊಡನೆ ತಾನು ಇರಬೇಕಾದುದು ಯೋಗ್ಯ. ಮಹಮ್ಮದೀಯರ ಭಾವನೆಗಳನ್ನು ನಿಯಂತ್ರಿಸುವುದು ನನ್ನ ಕೆಲಸವಲ್ಲ. ಅವರಿಗೆ ಖಿಲಾಫತ್ ಒಂದು ಧಾರ್ಮಿಕ ಸಮಸ್ಯೆ. ಆದುದರಿಂದ ಗುರಿ ಸಾಧಿಸುವಲ್ಲಿ ತಮ್ಮ ಜೀವವನ್ನೇ ಮುಡುಪಾಗಿಡಲು ಅವರು ಸಿದ್ಧ ಎಂಬ ಅವರ ಭಾವನೆಯನ್ನು ನಾನು ಒಪ್ಪಿಕೊಳ್ಳಬೇಕು."**

ಖಿಲಾಫತ್ ಪ್ರಶ್ನೆಯಲ್ಲಿ ಗಾಂಧಿಯವರು ಮುಸ್ಲಿಮರೊಡನೆ ಏಕಾಭಿಪ್ರಾಯ ಪಡೆದಿದ್ದರು. ಮಾತ್ರವಲ್ಲದೆ, ಅವರ ಮಾರ್ಗದರ್ಶಕರಾಗಿ, ಮಿತ್ರರಾಗಿ ಪಾತ್ರ ವಹಿಸಿದರು. ಖಿಲಾಫತ್ ಚಳವಳಿಯಲ್ಲಿ ಗಾಂಧಿ ವಹಿಸಿದ ಪಾತ್ರ ಹಾಗೂ ಖಿಲಾಫತ್ ಚಳವಳಿ ಮತ್ತು ಅಸಹಕಾರ ಚಳವಳಿಗಳೊಳಗಿನ ಸಂಬಂಧ ಅಸ್ಪಷ್ಟವಾಗಿದೆ. ಅಸಹಕಾರ ಚಳವಳಿಯನ್ನು ಸ್ವರಾಜ್ಯ ಗಳಿಸಲು ಕಾಂಗ್ರೆಸ್ ಆರಂಭಿಸಿತ್ತು ಎಂಬ ಜನಾಭಿಪ್ರಾಯವೇ ಇದಕ್ಕೆ ಕಾರಣ. ಬಹು ಜನರು ಅಸಹಕಾರ ಚಳವಳಿ ಹಾಗೂ ಕಲ್ಕತ್ತೆಯಲ್ಲಿ ೧೯೨೦ರ ಸೆಪ್ಟೆಂಬರ್ ೭ ಮತ್ತು ೮ರಲ್ಲಿ ಜರುಗಿದ ವಿಶೇಷ ಕಾಂಗ್ರೆಸ್ ಅಧಿವೇಶನ ಇವುಗಳೊಂದಿಗೆ ಸಂಬಂಧ ಕಲ್ಪಿಸುವುದರಲ್ಲಿ ತೃಪ್ತಿ ಹೊಂದುವುದರಿಂದ ಇಂತಹ ವಿಚಾರಕ್ಕೆ ಪ್ರಾಧಾನ್ಯತೆ ಸಿಗುವುದು ಅರ್ಥವಾಗುವ ವಿಷಯವೇ ಸರಿ. ಆದರೆ ಯಾರಾದರೂ ಸೆಪ್ಟೆಂಬರ್ ೧೯೨೦ಕ್ಕಿಂತ ಹಿಂದಕ್ಕೆ ಹೋಗಿ ಅಂದಿನ ಪರಿಸ್ಥಿತಿಯನ್ನು ಪರೀಕ್ಷಿಸಿದರೆ, ಇದು ಸರಿಯಾದುದಲ್ಲವೆಂಬುದು ಗಮನಕ್ಕೆ ಬರುತ್ತದೆ. ಅಸಹಕಾರ ಚಳವಳಿಯ ಹುಟ್ಟು ಖಿಲಾಫತ್ ಚಳವಳಿಯಲ್ಲಿ ಇದೆಯೇ ವಿನಃ ಸ್ವರಾಜ್ಯಕ್ಕಾಗಿ ಆರಂಭಗೊಂಡ ಕಾಂಗ್ರೆಸ್ ಚಳವಳಿಯಲ್ಲಿ ಅಲ್ಲವೆಂಬುದು ಸತ್ಯದ ಮಾತು; ಟರ್ಕಿಗೆ ಸಹಾಯ ಮಾಡಲು ಕಾಂಗ್ರೆಸ್ ಅದನ್ನು ಬಳಸಿಕೊಂಡಿತು. ಸ್ವರಾಜ್ಯ ಅದರ ಪ್ರಮುಖ ಗುರಿಯಾಗಿರಲಿಲ್ಲ. ಖಿಲಾಫತ್ ಅದರ ಪ್ರಮುಖ ಉದ್ದೇಶವಾಗಿತ್ತು. ಈ ಚಳವಳಿಯಲ್ಲಿ ಭಾಗವಹಿಸಲು ಹಿಂದೂಗಳನ್ನು ಪ್ರೇರೇಪಿಸುವುದಕ್ಕೋಸ್ಕರ ಸ್ವರಾಜ್ಯವನ್ನು ಎರಡನೆಯ ಗುರಿಯಾಗಿ ಸೇರಿಸಿದ್ದು ಈ ಕೆಳಗಿನ ವಿಷಯಗಳಿಂದ ಸುಸ್ಪಷ್ಟವಾಗುತ್ತದೆ.

ಇಂಡಿಯಾದಾದ್ಯಂತ ೧೯೧೯ರ ಅಕ್ಟೋಬರ್ ೨೭ರಂದು ಖಿಲಾಫತ್ ದಿನಾಚರಣೆ ಮಾಡಿದ ಸಂದರ್ಭದಲ್ಲಿ ಖಿಲಾಫತ್ ಚಳವಳಿ ಆರಂಭಗೊಂಡಿತೆಂದು ಹೇಳಬಹುದು. ೧೯೧೯ರ ನವೆಂಬರ್ ೨೩ರಂದು ದಿಲ್ಲಿಯಲ್ಲಿ ಪ್ರಥಮ ಖಿಲಾಫತ್ ಸಮ್ಮೇಳನ ಜರುಗಿತು. ಬ್ರಿಟಿಷ್ ಸರಕಾರ ಮಾಡಿದ ಖಿಲಾಫತ್ ಅನ್ಯಾಯವನ್ನು ಸರಿಪಡಿಸುವುದಕ್ಕೋಸ್ಕರ ಅದನ್ನು ಒತ್ತಾಯಿಸಲು ಅಸಹಕಾರ ಚಳವಳಿಯ ಸಾಧ್ಯತೆಗಳನ್ನು ಈ ಅಧಿವೇಶನದಲ್ಲಿ ಮುಸ್ಲಿಮರು ಪರ್ಯಾಲೋಚಿಸಿದ್ದರು. ೧೯೨೦ರ ಮಾರ್ಚ್ ೧೦ರಂದು ಕಲ್ಕತ್ತೆಯಲ್ಲಿ

ಖಿಲಾಫತ್ ಸಮ್ಮೇಳನ ಸೇರಿ ತಮ್ಮ ಆಂದೋಲನವನ್ನು ಮುಂದುವರಿಸಲು ಅಸಹಕಾರವೇ ಅತ್ಯುತ್ತಮ ಸಾಧನವೆಂದು ನಿರ್ಣಯಿಸಿತು.

೧೯೨೦ರ ಜೂನ್ ೯ರಂದು ಅಲಹಾಬಾದಿನಲ್ಲಿ ಖಿಲಾಫತ್ ಸಮ್ಮೇಳನ ಸೇರಿ ಅಸಹಕಾರ ಚಳವಳಿಯನ್ನೇ ಅವಲಂಬಿಸುವ ಅವರ ನಿರ್ಧಾರವನ್ನು ಸರ್ವಾನುಮತದಿಂದ ಪುನಃ ದೃಢೀಕರಿಸಿದರಲ್ಲದೆ ವಿವರವಾದ ಕಾರ್ಯಕ್ರಮವನ್ನು ರೂಪಿಸಿ ಅದನ್ನು ಕಾರ್ಯಗತಗೊಳಿಸಲು ಒಂದು ಕಾರ್ಯನಿರ್ವಾಹಕ ಸಮಿತಿಯನ್ನೂ ನಿಯಮಿಸಿದರು. ತುರ್ಕಿಯ ಅಸಮಾಧಾನದ ಕಾರಣಗಳನ್ನು ೧೯೨೦ರ ಆಗಸ್ಟ್ ೧ರ ಒಳಗೆ ಸರಿಪಡಿಸದಿದ್ದರೆ ತಾವು ಅಸಹಕಾರ ಚಳವಳಿಯನ್ನು ಆರಂಭಿಸುತ್ತೇವೆಂದು ವೈಸ್‌ರಾಯ್ ಅವರಿಗೆ ೧೯೨೦ರ ಜೂನ್ ೨೨ರಂದು ಮುಸ್ಲಿಮರು ಸಂದೇಶವನ್ನು ಕಳುಹಿಸಿದರು. ೧೯೨೦ರ ಜೂನ್ ೩೦ರಂದು ಅಲಹಾಬಾದಿನಲ್ಲಿ ಸೇರಿದ ಖಿಲಾಫತ್ ಸಮಿತಿಯ ಸಭೆ ವೈಸ್‌ರಾಯ್‌ಗೆ ಒಂದು ತಿಂಗಳ ಎಚ್ಚರಿಕೆಯನ್ನು ಕೊಟ್ಟ ಬಳಿಕ ಅಸಹಕಾರವನ್ನು ಆರಂಭಿಸಲು ನಿರ್ಣಯಿಸಿತು. ೧೯೨೦ರ ಜುಲೈ ೧ರಂದು ಎಚ್ಚರಿಕೆ ಕೊಡಲಾಯಿತು. ಹಾಗೂ ೧೯೨೦ ಆಗಸ್ಟ್ ೧ರಂದು ಅಸಹಕಾರ ಚಳವಳಿ ಆರಂಭಗೊಂಡಿತು. ಅಸಹಕಾರ ಚಳವಳಿ ಆರಂಭಗೊಂಡದ್ದು ಖಿಲಾಫತ್ ಸಮಿತಿಯಿಂದಾಗಿ, ಕಲ್ಕತ್ತೆಯ ವಿಶೇಷ ಕಾಂಗ್ರೆಸ್ ಅಧಿವೇಶನ, ಈಗಾಗಲೇ ಖಿಲಾಫತ್ ಸಮ್ಮೇಳನ ಆರಂಭಿಸಿದ ಚಳವಳಿಯನ್ನು ಒಪ್ಪಿಕೊಂಡು ಅದನ್ನು ಅಂಗೀಕರಿಸಿತು. ಇದು ಕೂಡಾ ಸ್ವರಾಜ್ಯದ ಹಿತಾಸಕ್ತಿಯಿಂದಲ್ಲ, ಅದು ಖಿಲಾಫತ್ತಿನ ಉದ್ದೇಶವನ್ನು ಮುಂದುವರಿಸಲು ಮುಸಲ್ಮಾನರಿಗೆ ಸಹಾಯ ಮಾಡುವ ಉದ್ದೇಶಕ್ಕಾಗಿ ಮಾತ್ರ ಎಂಬುದನ್ನು ಈ ಸಂಕ್ಷಿಪ್ತ ಸಾರಾಂಶ ತೋರಿಸುತ್ತದೆ. ಇದು ಕಲ್ಕತ್ತೆಯಲ್ಲಿ ನಡೆದ ವಿಶೇಷ ಅಧಿವೇಶನದಲ್ಲಿ ಮಂಜೂರು ಮಾಡಿದ ಸಮ್ಮೇಳನದ ನಿರ್ಣಯವನ್ನು* ಗಮನಿಸುವುದರಿಂದ ಸುಸ್ಪಷ್ಟವಾಗುತ್ತದೆ.

ಈ ಮೊದಲೇ ಹೇಳಿದ ಎರಡು ಪ್ರಮಾದಗಳನ್ನು ಸರಿಪಡಿಸದೆ ಹೋದಲ್ಲಿ ಇಂಡಿಯಾದೊಳಗೆ ಶಾಂತಿ ನೆಲೆಸುವುದು ಅಸಾಧ್ಯ. ನಮ್ಮ ರಾಷ್ಟ್ರದ ಗೌರವವನ್ನು ಎತ್ತಿ ಹಿಡಿಯುವಲ್ಲಿ ಅದೊಂದೇ ಪರಿಣಾಮಕಾರಿಯಾದ ಸಾಧನ; ಅಲ್ಲದೆ, ಇಂತಹ ಪ್ರಮಾದಗಳು ಭವಿಷ್ಯತ್ಕಾಲದಲ್ಲಿ, ಪುನರಾವರ್ತನೆ ಆಗದಂತೆ ಸ್ವರಾಜ್ಯವನ್ನು ಸ್ಥಾಪಿಸಬೇಕೆಂದು ಈ ಸಮ್ಮೇಳನದ ಒಟ್ಟಾಭಿಪ್ರಾಯ.

---

* ಖಿಲಾಫತ್ ಸಮಸ್ಯೆಯ ಬಗೆಗೆ ಭಾರತೀಯ ಹಾಗೂ ಬ್ರಿಟಿಷ್ ಸಾಮ್ರಾಜ್ಯದ ಸರಕಾರಗಳೆರಡೂ ಭಾರತೀಯ ಮುಸಲ್ಮಾನರೊಡನೆ ತಮಗಿರುವ ಜವಾಬ್ದಾರಿಗಳ ವಿಷಯದಲ್ಲಿ ಗಮನಾರ್ಹವಾಗಿ ಸೋತಿರುತ್ತವೆ. ಪ್ರಧಾನಮಂತ್ರಿಗಳು ಅವರಿಗೆ ಕೊಟ್ಟ ವಾಗ್ದಾನವನ್ನು ಮುರಿದಿದ್ದಾರೆ. ಪ್ರತಿಯೊಬ್ಬ ಮುಸಲ್ಮಾನೇತರ ಭಾರತೀಯನು ಮುಸಲ್ಮಾನ ಸೋದರನಿಗೆ ಬಂದೊದಗಿದ ಧಾಮಿಕ ವಿಪತ್ತಿನಿಂದ ಪಾರುಮಾಡಲು ಸಕ್ರಮ ರೀತಿಯಲ್ಲಿ ಸಹಾಯ ನೀಡುವುದು ಅವನ ಕರ್ತವ್ಯ.

೧೯೧೯ರ ಏಪ್ರಿಲ್‌ನಲ್ಲಿ ನಡೆದ ಘಟನೆಯ ಹಿನ್ನೆಲೆಯಲ್ಲಿ ಈಗಾಗಲೇ ಪ್ರಸ್ತಾಪಿಸಲಾದ ಸರಕಾರಗಳು ಪಂಜಾಬಿನ ಮುಗ್ಧ ಜನರನ್ನು ರಕ್ಷಿಸುವಲ್ಲಿ ಹಾಗೂ ಸೈನಿಕನಿಗೆ ಅಗೌರವ ತರುವ ರೀತಿಯಲ್ಲಿ ಹಾಗೂ ಅತ್ಯಂತ ಅನಾಗರೀಕ ರೀತಿಯಲ್ಲಿ ಅವರೊಡನೆ ವರ್ತಿಸಿದ ಅಧಿಕಾರಿಯನ್ನು ಶಿಕ್ಷಿಸುವಲ್ಲಿ ಅತಿಯಾದ ನಿರ್ಲಕ್ಷತೆಯನ್ನು ತೋರಿದ್ದಾರೆ ಅಥವಾ ವಿಫಲರಾಗಿದ್ದಾರೆ. ಬಹಳಷ್ಟು ಅಧಿಕೃತ ಅಪರಾಧಿಗಳಿಗೆ ನೇರವಾಗಿ ಜವಾಬ್ದಾರರೆಂದು ಪರಿಗಣಿಸಲಾದ ಹಾಗೂ ಆತನ ಆಡಳಿತದೊಳಗಿದ್ದ ಜನರ ಕಷ್ಟನೋವುಗಳ ಬಗೆಗೆ ನಿರ್ದಯೆ ತೋರಿಸಿದ ಸರ್ ಮೈಕಲ್ ಓಡ್ವಾಯರ್ ಇವರನ್ನು ದೋಷಮುಕ್ತರನ್ನಾಗಿ ಮಾಡಿದ್ದಾರೆ. ಶ್ರೀಮಂತ ಸಭೆ(ಹೌಸ್ ಆಫ್ ಲಾರ್ಡ್ಸ್)ಯಲ್ಲಿ ನಡೆದ ಚರ್ಚೆಯಲ್ಲಿ ಭಾರತೀಯರ ಬಗೆಗೆ ಯವುದೇ ರೀತಿಯ ಕಳಕಳಿ ಇಲ್ಲದೆ ಹೋದದ್ದು ತಿಳಿದುಬಂದಿದೆ. ಪಂಜಾಬಿನಲ್ಲಿ ಸುವ್ಯವಸ್ಥಿತ ಭಯೋತ್ಪಾದನೆ ಹಾಗೂ ಕರಾಳ ಪರಿಸ್ಥಿತಿಯನ್ನು ನಿರ್ಮಿಸಿದ್ದಾರೆ. ಅಲ್ಲದೆ, ಇತ್ತೀಚೆಗೆ ಪ್ರಕಟಪಡಿಸಿದ ರಾಜಪ್ರತಿನಿಧಿಯ ಘೋಷಣೆಯನ್ನು ಗಮನಿಸಿದರೆ ಖಿಲಾಫತ್ ಹಾಗೂ ಪಂಜಾಬಿನ ವಿಷಯದಲ್ಲಿ ಎಳ್ಳಷ್ಟೂ ಪಶ್ಚಾತ್ತಾಪವಿಲ್ಲದಿರುವುದು ಖಾತ್ರಿಯಾಗುತ್ತದೆ.

**"ಮೇಲೆ ಪ್ರಸ್ತಾಪಿಸಲಾದ ಪ್ರಮಾದಗಳನ್ನು ಸರಿಪಡಿಸುವ ಹಾಗೂ ಸ್ವರಾಜ್ಯವನ್ನು ಸ್ಥಾಪಿಸುವ ತನಕ ಮಹಾತ್ಮಗಾಂಧಿ ಪ್ರಾರಂಭಿಸಿದ ಪ್ರಗತಿಪರ ಅಹಿಂಸಾತ್ಮಕ ಅಸಹಕಾರ ಚಳವಳಿಯನ್ನು ಒಪ್ಪಿ ಅದನ್ನು ಅಂಗೀಕಾರ ಮಾಡುವ ದಾರಿಯನ್ನು ಬಿಟ್ಟರೆ ಭಾರತೀಯರಿಗೆ ಬೇರೊಂದು ದಾರಿಯೇ ಇಲ್ಲವೆಂಬುದು ಸಮ್ಮೇಳನದ ಇನ್ನೊಂದು ಅಭಿಪ್ರಾಯ."**

**"೧೯೨೦ರ ಮಾರ್ಚಿನಲ್ಲಿ ಈ ಗಾಂಧಿಯವರು ಖಿಲಾಫತ್ ಪರವಾಗಿರುವ ಅಸಹಕಾರವನ್ನು ಇತರ ಸಮಸ್ಯೆಗಳೊಂದಿಗೆ ಕಲೆಹಾಕಬಾರದೆಂದು ಹೇಳಿದುದನ್ನು ಜ್ಞಾಪಿಸಿಕೊಳ್ಳಬೇಕು. ಆದರೆ ಖಿಲಾಫತ್ ಹಿಂದೂಗಳಿಗೆ ಸಾಕಷ್ಟು ಆಕರ್ಷಕವಾಗಿಲ್ಲವೆಂಬುದು ತಿಳಿದುಬಂದು, ಆದುದರಿಂದ ಮೇ ೩೦–೩೧ರಂದು ಬನಾರಸಿನಲ್ಲಿ ಸೇರಿದ ಅಖಿಲಭಾರತ ಕಾಂಗ್ರೆಸ್ ಸಮಿತಿಯಲ್ಲಿ ಪಂಜಾಬಿನ ಘೋರಕೃತ್ಯಗಳು ಮತ್ತು ಸುಧಾರಣಾ ಮಸೂದೆಯ ನ್ಯೂನತೆಗಳನ್ನು ಉದ್ರೇಕಕಾರಿ ಕಾರಣಗಳ ಪಟ್ಟಿಯಲ್ಲಿ ಸೇರಿಸಿದರು" ಎಂದು ಶ್ರೀಮತಿ ಆ್ಯನಿಬೆಸೆಂಟ್ ಹೇಳುತ್ತಾರೆ. (ದಿ ಫ್ಯೂಚರ್ ಅಫ್ ಇಂಡಿಯನ್ ಪಾಲಿಟಿಕ್ಸ್, ಪು.೨೫೦).**

ಅಸಹಕಾರ ಚಳವಳಿ ಖಿಲಾಫತ್ ಸಮಿತಿಯಿಂದ ಪ್ರಾರಂಭವಾಗಿದ್ದು, ಪ್ರಮುಖವಾಗಿ ಖಿಲಾಫತ್ ನಿಮಿತ್ತ ಕಾಂಗ್ರೆಸ್ ಅದನ್ನು ಸ್ವೀಕಾರ ಮಾಡಿದರೂ ಕೂಡಾ, ಖಿಲಾಫತ್ ಸಮಿತಿಗೆ ಅದನ್ನು ಸೂಚಿಸಿದ ಮತ್ತು ಆ ಸಮಿತಿಯೊಂದಿಗೆ ಅನನ್ಯ ಸಂಬಂಧವಿಟ್ಟುಕೊಂಡ ಹಾಗೂ ಅದನ್ನು ಕ್ರಿಯಾಶೀಲಗೊಳಿಸುವ ಜವಾಬ್ದಾರಿಯನ್ನು ಹೊತ್ತ ಅಂತೆಯೇ ಕಾಂಗ್ರೆಸ್ ಅದನ್ನು ಸ್ವೀಕರಿಸುವಂತೆ ಮಾಡಿದ ವ್ಯಕ್ತಿ ಎಂದರೆ ಶ್ರೀಯುತ ಗಾಂಧಿ.

೧೯೧೯ರ ನವೆಂಬರ್ ೨೩ರಂದು ದಿಲ್ಲಿಯಲ್ಲಿ ನಡೆದ ಪ್ರಪ್ರಥಮ ಖಿಲಾಫತ್ ಸಮ್ಮೇಳನದಲ್ಲಿ ಗಾಂಧಿಯವರು ಹಾಜರಾಗಿದ್ದರು. ಗಾಂಧಿಯವರು ಹಾಜರಾಗಿದ್ದರು ಮಾತ್ರವಲ್ಲದೆ, ಖಿಲಾಫತಿನ ಬಗೆಗೆ ಅವರ ಹಕ್ಕುಗಳನ್ನು ಒಪ್ಪಿಕೊಳ್ಳುವಂತೆ ಬ್ರಿಟಿಷರನ್ನು ಒತ್ತಾಯಿಸಲು ಅಸಹಕಾರ ಚಳವಳಿಯನ್ನು ಒಂದು ಅಸ್ತ್ರವನ್ನಾಗಿ ಬಳಸಲು ಮುಸ್ಲಿಮರಿಗೆ ಸಲಹೆ ನೀಡಿದರು. ಗಾಂಧಿಯವರು ಖಿಲಾಫತ್ ಆಂದೋಲನದಲ್ಲಿ ಸೇರಿದುದು ಬಹು ಅರ್ಥವತ್ತಾದದ್ದು. ಖಿಲಾಫತ್ ಸಮರ್ಥನೆಗಾಗಿ ಹಿಂದೂಗಳ ಬೆಂಬಲವನ್ನು ಪಡೆದುಕೊಳ್ಳಲು ಮುಸ್ಲಿಮರು ಆತುರರಾಗಿದ್ದರು. ೧೯೧೯ರ ನವೆಂಬರ್ ೨೩ರಂದು ನಡೆದ ಸಮ್ಮೇಳನದಲ್ಲಿ ಪಾಲುಗೊಳ್ಳಲು ಹಿಂದೂಗಳಿಗೆ ಮುಸ್ಲಿಮರು ಕರೆನೀಡಿದ್ದರು. ಪುನಃ ೧೯೨೦ರ ಜೂನ್ ೩ರಂದು ಹಿಂದೂ ಮತ್ತು ಖಿಲಾಫತೀಯ ಮುಸ್ಲಿಮರ ಸಂಯುಕ್ತ ಸಭೆ ಅಲಹಾಬಾದಿನಲ್ಲಿ ನಡೆದಿತ್ತು. ಈ ಸಭೆಯಲ್ಲಿ ಇತರರೊಂದಿಗೆ ಸಪ್ರೂ, ಮೋತಿಲಾಲ್ ನೆಹರೂ ಮತ್ತು ಆ್ಯನಿಬೆಸೆಂಟರು ಹಾಜರಿದ್ದರು. ಆದರೆ ಮುಸ್ಲಿಮರೊಂದಿಗೆ ಸೇರಲು ಹಿಂದುಗಳು ಹಿಂಜರಿಯುತ್ತಿದ್ದರು. ಮುಸ್ಲಿಮರೊಂದಿಗೆ ಸೇರಿದವರಲ್ಲಿ ಗಾಂಧಿಯವರೊಬ್ಬರೇ ಹಿಂದು. ಅವರೊಂದಿಗೆ ಸೇರುವಲ್ಲಿ ಅವರು ಧೈರ್ಯವನ್ನು ತೋರಿಸಿದರು ಮಾತ್ರವಲ್ಲದೆ ಅವರೊಂದಿಗೆ ಅನನ್ಯಭಾವದಿಂದಿದ್ದು ಅವರ ನೇತಾರರಾದರು. ೧೯೨೦ರ ಜೂನ್ ೯ರಂದು ಖಿಲಾಫತ್ ಸಮ್ಮೇಳನ ಅಲಹಾಬಾದಿನಲ್ಲಿ ಸೇರಿತಲ್ಲದೆ, ಅಸಹಕಾರದ ಒಂದು ವಿವರವಾದ ಕಾರ್ಯಕ್ರಮವನ್ನು ರೂಪಿಸಿ ಅದನ್ನು ಕಾರ್ಯಗತಗೊಳಿಸಲು ಕಾರ್ಯಕಾರಿ ಸಮಿತಿಯನ್ನು ರಚಿಸಿತು. ಆ ಕಾರ್ಯಕಾರಿ ಸಮಿತಿಯಲ್ಲಿ ಗಾಂಧಿಯೊಬ್ಬರೇ ಹಿಂದು. ೧೯೨೦ರ ಜೂನ್ ೨೨ರಂದು ವೈಸ್‌ರಾಯರಿಗೆ ಮುಸ್ಲಿಮರು ಒಂದು ಹೇಳಿಕೆ ನೀಡಿ ೧೯೨೦ರ ಆಗಸ್ಟ್ ೧ರ ಪೂರ್ವದಲ್ಲಿ ತುರ್ಕಿ ಅನ್ಯಾಯಗಳನ್ನು ಸರಿಪಡಿಸದಿದ್ದಲ್ಲಿ ತಾವು ಅಸಹಕಾರ ಚಳವಳಿಯನ್ನು ಆರಂಭಿಸುತ್ತೇವೆಂದು ತಿಳಿಸಿದರು. ಅದೇ ದಿನ ಗಾಂಧಿಯವರು ಕೂಡ

ವೈಸ್‌ರಾಯರಿಗೆ ಒಂದು ಪತ್ರವನ್ನು ಕಳುಹಿಸಿ ತಾನು ಈ ಸಮಸ್ಯೆಯನ್ನು ಎತ್ತಿಕೊಳ್ಳುವ ಕಾರಣಗಳನ್ನು ತಿಳಿಸಿ ಖಿಲಾಫತೀಯರನ್ನು ತೃಪ್ತಿಗೊಳಿಸುವ ಅಗತ್ಯವನ್ನು ವಿವರಿಸಿದರು. ಉದಾಹರಣಾರ್ಥವಾಗಿ, ೧೯೨೦ರ ಜುಲೈ ೧ರಂದು ವೈಸ್‌ರಾಯರಿಗೆ ಅಸಹಕಾರ ಚಳವಳಿ ಆಗಸ್ಟ್ ೧ರಂದು ಆರಂಭವಾಗುತ್ತದೆಂದು ಪತ್ರ ಬರೆದವರು ಗಾಂಧಿಯವರೇ ಹೊರತು ಖಿಲಾಫತೀಯರಲ್ಲ. ಪುನಃ ೧೯೨೦ರ ಆಗಸ್ಟ್ ೩೧ರಂದು ಖಿಲಾಫತೀಯರು ಅಸಹಕಾರ ಚಳವಳಿಯನ್ನು ಆರಂಭಗೊಳಿಸಿದಾಗ ತಮ್ಮ ಪದಕವನ್ನು ವಾಪಸು ಕೊಟ್ಟು ಅದಕ್ಕೆ ಮೂರ್ತಸ್ವರೂಪ ಕೊಟ್ಟವರು ಗಾಂಧಿಯವರೇ. ಖಿಲಾಫತ್ ಸಮಿತಿಯ ಕ್ರಿಯಾಶೀಲ ಸದಸ್ಯರಾಗಿ ಅಸಹಕಾರ ಚಳವಳಿಯನ್ನು ಆರಂಭಿಸಿ ಗಾಂಧಿಯವರು ತಮ್ಮ ಶಕ್ತಿಯನ್ನೆಲ್ಲ ಕಾಂಗ್ರೆಸ್ ಅಸಹಕಾರ ಚಳವಳಿಯನ್ನು ಒಪ್ಪಿಕೊಂಡು ಖಿಲಾಫತ್ ಆಂದೋಲನವನ್ನು ಸಹಕರಿಸುವಂತೆ ಒತ್ತಡವನ್ನು ತರುವಲ್ಲಿ ವಿನಿಯೋಗಿಸಿದರು.

ಈ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಶ್ರೀಯುತ ಗಾಂಧಿಯವರು ಖಿಲಾಫತ್ ಚಳವಳಿಯ ಜನಕರಾದ ಆಲಿ ಸಹೋದರರೊಂದಿಗೆ ಅಸಹಕಾರದ ಅವಶ್ಯಕತೆಯನ್ನು ಜನತೆಯಲ್ಲಿ ಬಿಂಬಿಸಲು ೧೯೨೦ರ ಆಗಸ್ಟ್ ಮತ್ತು ಸೆಪ್ಟೆಂಬರ್ ಒಂದರ ಅವಧಿಯಲ್ಲಿ ದೇಶಾದ್ಯಂತ ಸಂಚರಿಸಿದರು. ಶ್ರೀಯುತ ಗಾಂಧಿ ಮತ್ತು ಆಲಿ ಸಹೋದರರ ಮಾತುಗಳ ಧಾಟಿಯಲ್ಲಿದ್ದ ಅಸಾಮರಸ್ಯವನ್ನು ಜನತೆ ಗುರುತಿಸಿತು. ಮಾಡರ್ನ್ ರಿವ್ಯೂ ಪಾಕ್ಷಿಕೆ ಹೇಳಿದಂತೆ, "ಇವರುಗಳ ಭಾಷಣಗಳ ಗೂಢಾರ್ಥವನ್ನು ಗಮನಿಸಿದಾಗ ಅವರಲ್ಲೊಬ್ಬರಿಗೆ ದೂರದ ತುರ್ಕಿಯಲ್ಲಿಯ ಖಿಲಾಫತ್‌ದ ದುರ್ದೆಶೆ ಮುಖ್ಯ ವಿಷವಾಗಿದ್ದರೆ, ಇನ್ನೊಬ್ಬರಿಗೆ ಇಲ್ಲಿ ಭಾರತದಲ್ಲಿ ಸ್ವರಾಜ್ಯವನ್ನು ಗಳಿಸುವುದು ಪ್ರಮುಖ ಅಂಶವಾಗಿತ್ತೆಂಬುದನ್ನು ಕಂಡುಕೊಳ್ಳುವುದು ಕಷ್ಟದ ಕೆಲಸವೇನಲ್ಲ." ಹಿತಾಸಕ್ತಿಗಳ ನಡುವಣ ಈ ದ್ವಂದ್ವ[೧] ಅಂತಿಮ ಗುರಿಯ ಯಶಸ್ಸಿಗೆ ಆತಂಕಕಾರಿ ಎನಿಸುತ್ತದೆ. ಆದಾಗ್ಯೂ ಶ್ರೀಯುತ ಗಾಂಧಿಯವರು ಖಿಲಾಫತ್ ವಿಷಯದಲ್ಲಿ ಕಾಂಗ್ರೆಸ್ ಪಕ್ಷದಿಂದ ಸಮರ್ಥನೆ ಪಡೆಯುವಲ್ಲಿ ಯಶಸ್ವಿಯಾದರು.[೨]

ಮುಸಲ್ಮಾನರನ್ನು ತಮ್ಮ ಕಡೆಗೆ ಒಲಿಸಿಕೊಳ್ಳುವುದರಲ್ಲಿಯೇ ಹಿಂದೂಗಳು ಬಹಳ ಕಾಲ ನಿರತರಾಗಿದ್ದರು. ಕಾಂಗ್ರೆಸ್ಸು ತನ್ನ ಮತ್ತು ಮುಸ್ಲಿಂ ಲೀಗ್‌ನ ನಡುವಣ ಭಿನ್ನಾಭಿಪ್ರಾಯವನ್ನು ನಿವಾರಿಸಿಕೊಳ್ಳಲು ಕಾತರವಾಗಿತ್ತು. ಇದನ್ನು ಸಾಧಿಸಲು ೧೯೧೬ರಲ್ಲಿ ಬಳಸಲಾದ ಸಾಧನದ ಫಲಶೃತಿಯೇ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ಗಳ ನಡುವೆ ಸಹಿ ಹಾಕಲಾದ ಲಕ್ನೋ ಒಪ್ಪಂದ. ಈ ಘಟನೆ ಕುರಿತು ಆ ವರ್ಷ ಲಕ್ನೋದಲ್ಲಿ ಸಮಾವೇಶಗೊಂಡಿದ್ದ ಕಾಂಗ್ರೆಸ್ ಅಧಿವೇಶನದ ಬಗ್ಗೆ ತಮ್ಮ ಅನಿಸಿಕೆಗಳನ್ನು ಸ್ವಾಮಿ ಶ್ರದ್ಧಾನಂದರು ಸ್ವಾಮಿ ಹೀಗೆ ಹೇಳುತ್ತಾರೆ:[೩]

---

[೧] ಶ್ರೀಯುತ ಗಾಂಧಿ 'ಮಾಡರ್ನ್ ರಿವ್ಯೂ'ದ ಸೂಚನೆಯನ್ನು ಅತ್ಯಂತ ನಿರ್ದಯ ಟೀಕೆ ಎಂದು ನಿರಾಕರಿಸಿದರು. 'ಮಾಡರ್ನ್ ರಿವ್ಯೂ'ದ ಟೀಕೆಯನ್ನು ಪರಿಶೀಲಿಸುತ್ತಾ ಅವರು ಅಕ್ಟೋಬರ್ ೨೦, ೧೯೨೧ರ ತಮ್ಮ 'ಯಂಗ್ ಇಂಡಿಯಾ'ದ ಒಂದು ಲೇಖನದಲ್ಲಿ ಹೀಗೆ ಹೇಳಿದ್ದಾರೆ. "ನಮ್ಮಿಬ್ಬರಿಗೂ ಖಿಲಾಫತ್ ಪ್ರಮುಖ ಅಂತವಾಗಿದೆ. ಮೌಲಾನಾ ಮಹಮದ್ ಆಲಿಯವರಿಗೆ ಅದು ಅವರ ಧರ್ಮವಾಗಿರುವುರಿಂದ ಮತ್ತು ನಾನು ಖಿಲಾಫತ್‌ರವರ ಪರವಾಗಿ ನನ್ನ ಜೀವ ತ್ಯಾಗ ಮಾಡುವುದರಿಂದ ಗೋವಿಗೆ ಸುರಕ್ಷತೆ ಒದಗಿಸುವೆ, ಅದೇ ನನ್ನ ಧರ್ಮ."

[೨] ಅಸಹಕಾರ ನಿರ್ಣಯವು ೧೮೮೬ ಪರ ಮತ್ತು ೮೮೪ ವಿರೋಧ ಮತಗಳಿಂದ ಅಂಗೀಕೃತವಾಯಿತು. ತಾಯರ್‌ಸೆ ನನಗೆ ಒಮ್ಮೆ ಹೇಳಿದಂತೆ ಬಹುತೇಕ ಪ್ರತಿನಿಧಿಗಳು ಈ ನಿರ್ಣಯದ ಪರವಾಗಿ ಮತ ನೀಡಲು ಹಣ ಕೊಟ್ಟು ಕರೆತರಲಾಗಿದ್ದ ಕಲ್ಕತ್ತದ ಟ್ಯಾಕ್ಸಿ ಚಾಲಕರೇ ಆಗಿದ್ದರು.

[೩] ಅಬರೇಟರ್, ಏಪ್ರಿಲ್ ೨೨, ೧೯೨೬.

"ಈ ವೇದಿಕೆಯ ಮೇಲೆ (ಲಕ್ನೋ ಕಾಂಗ್ರೆಸ್ ವೇದಿಕೆ) ಕುಳಿತುಕೊಂಡಾಗ ನನ್ನ ಗಮನಕ್ಕೆ ಬಂದ ಮೊಟ್ಟ ಮೊದಲನೆಯ ಸಂಗತಿ ಎಂದರೆ ಮುಸಲ್ಮಾನ ಪ್ರತಿನಿಧಿಗಳ ಸಂಖ್ಯೆ ಅದು ೧೮೮೫ರ ಲಾಹೋರ್ ಅಧಿವೇಶನದ ಸಂಖ್ಯೆಗಿಂತ ನಾಲ್ಕು ಪಟ್ಟು ಹೆಚ್ಚಾಗಿತ್ತು. ಬಹುಸಂಖ್ಯೆಯ ಮುಸಲ್ಮಾನ ಪ್ರತಿನಿಧಿಗಳು ಬಂಗಾರ, ಬೆಳ್ಳಿ ಮತ್ತು ರೇಷ್ಮೆಯಿಂದ ಕಸೂತಿ ಮಾಡಲ್ಪಟ್ಟ 'ಛೋಗಾ' ನಿಲುವಂಗಿಗಳನ್ನು ತಮ್ಮ ಸಾದಾ ಒರಟು ಬಟ್ಟೆಯ ಉಡುಪುಗಳ ಮೇಲೆ ಧರಿಸಿದ್ದರು. ಈ 'ಛೋಗಾ'ಗಳ ಖರೀದಿಗೆ ಹಿಂದೂ ಶ್ರೀಮಂತರು 'ಕಾಂಗ್ರೆಸ್ ಮೇಳ'ಕ್ಕಾಗಿ ಹಣ ಸುರಿದಿದ್ದರೆಂಬ ವದಂತಿ ಹಬ್ಬಿತ್ತು. ಒಟ್ಟು ೪೩೩ ಮುಸಲ್ಮಾನ ಪ್ರತಿನಿಧಿಗಳಲ್ಲಿ ೩೦ ಜನರು ಮಾತ್ರ ಹೊರಗಿನಿಂದ ಬಂದವರಾಗಿದ್ದು ಉಳಿದವರೆಲ್ಲರೂ ಲಕ್ನೋ ನಗರದವರೇ ಆಗಿದ್ದರು. ಇವರಲ್ಲಿ ಬಹುತೇಕ ಪ್ರತಿನಿಧಿಗಳಿಗೆ ಉಚಿತ ಪ್ರವೇಶ, ಊಟ ಮತ್ತು ವಸತಿ ವ್ಯವಸ್ಥೆ ಮಾಡಲಾಗಿತ್ತು. ಕಾಂಗ್ರೆಸ್ ವಿರೋಧಿ ಲೀಗ್‌ನ ಸರ್ ಸೈಯದ್ ಅಹಮದ್‌ರವರು ಏರ್ಪಡಿಸಿದ್ದ ಒಂದು ಸಾರ್ವಜನಿಕ ಸಭೆಯಲ್ಲಿ ಮುಸಲ್ಮಾನ ಕಾಂಗ್ರೆಸ್‌ಗೆ ಪ್ರತಿನಿಧಿಗಳಾಗಿ ಸೇರುವುದನ್ನು ತಡೆಯುವ ಪ್ರಯತ್ನ ಮಾಡಿದರು. ಇದರ ವಿರುದ್ಧವಾಗಿ ಕಾಂಗ್ರೆಸಿಗರು ಇಡೀ ಕಾಂಗ್ರೆಸ್ ಶಿಬಿರವನ್ನು ಅಧಿವೇಶನ ಆರಂಭವಾಗುವ ನಾಲ್ಕು ದಿನಗಳ ಮುಂಚೆಯಿಂದಲೇ ರಾತ್ರಿ ಪುಕ್ಕಟೆ ಸೇರುತ್ತಿರುವುದೆಂದು ತಿಳಿಸಲು ಇಡೀ ರಾತ್ರಿ ದೀಪೋತ್ಸವ ಮಾಡಲಾಯಿತು. ತತ್ಪರಿಣಾಮವಾಗಿ ಲಕ್ನೋದ ಎಲ್ಲಾ 'ಚಾಂದೋಲ್ ಖಾನಾಗಳು' ಬರಿದಾದವು; ಮತ್ತು ಸುಮಾರು ಮೂವತ್ತು ಸಾವಿರ ಹಿಂದೂಗಳು ಮತ್ತು ಮುಸಲ್ಮಾನರ ವಿಶಾಲ ಸಮೂಹವನ್ನು ಆರು ವಿವಿಧ ವೇದಿಕೆಗಳಿಂದ ಸಂಬೋಧಿಸಲಾಯಿತು. ಆಗಲೇ ಮುಸಲ್ಮಾನ ಪ್ರತಿನಿಧಿಗಳನ್ನು ಚುನಾಯಿಸಿದ್ದು ಅಥವ ಆರಿಸಿದ್ದು. ಈ ಎಲ್ಲ ಸಂಗತಿಗಳನ್ನು ಲಕ್ನೋ ಕಾಂಗ್ರೆಸ್ ವ್ಯವಸ್ಥಾಪಕರು ಖಾಸಗಿಯಾಗಿ ನನಗೆ ತಿಳಿಸಿದರು.

"ಇದು ಮುಸಲ್ಮಾನ ಪ್ರತಿನಿಧಿಗಳ ಒಂದು ಪ್ರದರ್ಶನವಾಗಿತ್ತು. ಮುಸಲ್ಮಾನ ಪ್ರತಿನಿಧಿಯು ಎದ್ದು ನಿಂತು ಒಂದು ನಿರ್ಣಯವನ್ನು ಉರ್ದು ಭಾಷೆಯಲ್ಲಿ ಅನುಮೋದಿಸುತ್ತಿದ್ದನು. ಅವನು "ಹಝುರತ್ (ಮಾನ್ಯರೆ) ನಾನು ಮುಸಲ್ಮಾನ ಪ್ರತಿನಿಧಿ" ಎಂದೇ ತನ್ನ ಮಾತನ್ನು ಆರಂಭಿಸುತ್ತಿದ್ದನು. ಕೆಲವು ಹಿಂದೂ ಪ್ರತಿನಿಧಿಗಳು ಎದ್ದುನಿಂತು ಮುಸಲ್ಮಾನ ಪ್ರತಿನಿಧಿಯನ್ನು ಅಭಿನಂದಿಸಲು ಚಪ್ಪಾಳೆ ತಟ್ಟಲು ಕೇಳಿಕೊಳ್ಳುತ್ತಾರೆ ಮತ್ತು ಇದಕ್ಕೆ ದೊರೆತ ಪ್ರತಿಕ್ರಿಯೆ ಅದ್ಭುತ ಹಾಗೂ ವರ್ಣನಾತೀತವಾಗಿತ್ತು."

ಖಿಲಾಫತ್‌ದ ಪರ ವಹಿಸುವುದರ ಮೂಲಕ ಶ್ರೀಯುತ ಗಾಂಧಿ ಎರಡು ಉದ್ದೇಶಗಳನ್ನು ಸಾಧಿಸಿದರು. ಅವರು ಮುಸಲ್ಮಾನರನ್ನು ತನ್ನೆಡೆಗೆ ಸೆಳೆದುಕೊಳ್ಳುವ ಕಾಂಗ್ರೆಸ್ ಯೋಜನೆಯನ್ನು ಪರಾಕಾಷ್ಟಕ್ಕೆ ಒಯ್ದರು. ಎರಡನೆಯದಾಗಿ, ಅವರು ಯಾವ ಕಾಂಗ್ರೆಸು ಮುಸಲ್ಮಾನರ ಸಹಕಾರವಿಲ್ಲದೇ ದೇಶದಲ್ಲಿ ಅತ್ಯಂತ ಶಕ್ತಿಶಾಲಿಯಾಗುವುದು ಸಾಧ್ಯವಿರಲಿಲ್ಲವೋ ಅಂತಹ ಕಾಂಗ್ರೆಸನ್ನು ಅತ್ಯಂತ ಶಕ್ತಿಶಾಲಿಯನ್ನಾಗಿ ಮಾಡಿದರು. ಮುಸಲ್ಮಾನರಿಗೆ ರಾಜಕೀಯ ಸಂರಕ್ಷಣೆಗಳಿಗಿಂತಲೂ ಖಿಲಾಫತ್ ಹೆಚ್ಚು ಆಕರ್ಷಕವಾಗಿತ್ತು. ಇದರ ಫಲವಾಗಿ ಹೊರಗುಳಿದಿದ್ದ ಮುಸಲ್ಮಾನರು ಕಾಂಗ್ರೆಸ್‌ನೊಳಗೆ ನುಗ್ಗಿದರು. ಹಿಂದೂಗಳು ಅವರನ್ನು ಸ್ವಾಗತಿಸಿದರು. ಏಕೆಂದರೆ ಇದು ಅವರ ಮುಖ್ಯ ಗುರಿಯಾಗಿದ್ದ ಬ್ರಿಟಿಷರ ವಿರುದ್ಧ ಒಂದು ಶಕ್ತಿಶಾಲಿ ವೇದಿಕೆಯನ್ನು ರಚಿಸುವಲ್ಲಿ ಸಹಾಯಕವಾಗಿತ್ತು. ಇದರ ಕೀರ್ತಿ ಸಹಜವಾಗಿ ಶ್ರೀಯುತ ಗಾಂಧಿಯವರಿಗೆ ಸಲ್ಲಲೇಬೇಕು. ಏಕೆಂದರೆ ಇದು ಅತ್ಯಂತ ಸಾಹಸಕರ ಉಪಕ್ರಮವೆಂಬುದು ನಿಸ್ಸಂಶಯ.

೧೯೧೯ರಲ್ಲಿ ಮುಸಲ್ಮಾನರು ತುರ್ಕಿ ಮತ್ತು ಖಿಲಾಫತ್‌ಗೆ ಸಹಾಯ ಮಾಡಲು ಅವರು ಆರಂಭಿಸಲಿದ್ದ ಅಸಹಕಾರ ಚಳವಳಿಯಲ್ಲಿ ಭಾಗವಹಿಸುವಂತೆ ಹಿಂದೂಗಳನ್ನು ಕೇಳಿಕೊಂಡಾಗ ಹಿಂದೂಗಳು ಮೂರು ಪಂಗಡಗಳಲ್ಲಿ ವಿಭಜಿತರಾಗಿದ್ದರು. ತಾತ್ವಿಕವಾಗಿ ಅಸಹಕಾರಕ್ಕೆ ವಿರೋಧಿಗಳಾಗಿದ್ದವರದು ಒಂದು ಗುಂಪು. ಇನ್ನೊಂದು ಗುಂಪಿನಲ್ಲಿ ಮುಸಲ್ಮಾನರು ಗೋಹತ್ಯೆಯನ್ನು ಕೈಬಿಡುವಾದಾದರೆ ಅವರ ಅಸಹಕಾರ ಚಳವಳಿಯಲ್ಲಿ ಭಾಗವಹಿಸಲು ಸಿದ್ಧರಿರುವ ಹಿಂದೂಗಳಿದ್ದರು. ಮುಸಲ್ಮಾನರು ಅಫ್ಘಾನಿಸ್ತಾನವು ಭಾರತದ ಮೇಲೆ ಧಾಳಿ ಮಾಡುವಂತೆ ಆಹ್ವಾನಿಸುವುದಕ್ಕಾಗಿ ಅಸಹಕಾರ ಚಳವಳಿಯನ್ನು ವಿಸ್ತರಿಸಬಹುದೆಂಬ ಭಯವನ್ನು ಹೊಂದಿದ ಹಿಂದೂಗಳು ಮೂರನೆಯ ಗುಂಪಿನಲ್ಲಿದ್ದರು. ಇದರಿಂದ ಭಾರತ ಸ್ವರಾಜ್ಯ ಸಾಧಿಸುವ ಬದಲು ಮುಸ್ಲಿಂ ರಾಜ್ಯ ಸ್ಥಾಪನೆಯಲ್ಲಿ ಪರ್ಯವಸಾನಗೊಳ್ಳುವ ಭಯ ಅವರಿಗಿತ್ತು.

ಅಸಹಕಾರ ಚಳುವಳಿಯಲ್ಲಿ ಮುಸ್ಲಿಮರೊಂದಿಗೆ ಸೇರುವುದನ್ನು ವಿರೋಧಿಸುವ ಹಿಂದೂಗಳನ್ನು ಗಾಂಧಿ ಲೆಕ್ಕಿಸಲಿಲ್ಲ. ಆದರೆ ಇತರರ ಕುರಿತು ಅವರ ಮನೋಭಾವನೆ ದುರದೃಷ್ಟಕರವೆಂದು ಗಾಂಧಿಯವರು ಹೇಳಿದರು. ಮುಸಲ್ಮಾನರು ಗೋಹತ್ಯೆಯನ್ನು ಮಾಡಕೂಡದೆಂಬ ಕರಾರಿನ ಮೇಲೆ ಮುಸಲ್ಮಾನರಿಗೆ ಬೆಂಬಲ ನೀಡುವುದಾಗಿ ಹೇಳಿದ ಹಿಂದೂಗಳಿಗೆ ಶ್ರೀ ಗಾಂಧಿಯವರು ಹೇಳಿದ್ದೇನೆಂದರೆ:–[೧]

> **"ಹಿಂದೂಗಳು ಈ ಸಂದರ್ಭದಲ್ಲಿ ಗೋರಕ್ಷಣೆಯ ಪ್ರಶ್ನೆಯನ್ನು ಎತ್ತಬಾರದೆಂದು ನನ್ನ ವಿನಂತಿ. ಆಪತ್ಕಾಲದಲ್ಲಿ ಸಹಕಾರ, ಅದರಲ್ಲಿಯೂ ಬೇಷರತ್ ಸಹಕಾರ, ನೀಡುವುದೇ ನಿಜವಾದ ಮೈತ್ರಿಯ ಒರೆಗಲ್ಲು. ಕರಾರುಸಹಿತ ಸಹಕಾರ ಕಲಬೆರಕೆಯ ಸಿಮೆಂಟ್ ಇದ್ದಂತೆ; ಅದು ಬಿಗಿದುಕೊಳ್ಳುವುದಿಲ್ಲ. ಮೊಹಮದೀಯರ ಚಳವಳಿಯು ನ್ಯಾಯಯುತವಾಗಿದೆ ಎಂದು ಹಿಂದೂಗಳು ಭಾವಿಸುವುದಾದರೆ ತಮ್ಮ ಸಹಕಾರವನ್ನು ನೀಡುವುದು ಅವರ ಕರ್ತವ್ಯವಾಗಿದೆ. ಮೊಹಮದೀಯರು ಹಿಂದೂಗಳ ಭಾವನೆಗಳನ್ನು ಗೌರವಿಸುವುದಾದರೆ, ಹಿಂದೂಗಳು ತಮಗೆ ಸಹಕಾರ ನೀಡಲಿ, ನೀಡದಿರಲಿ, ಗೋಹತ್ಯೆಯನ್ನು ಕೈಬಿಡಬೇಕು. ಆದಾಗ್ಯೂ ನಾನು ಗೋವಿನ ಪೂಜೆಯಲ್ಲಿ ಯಾವ ಹಿಂದೂವಿಗೂ ಶರಣಾಗತನಾಗಲಾರೆ. ಗೋಹತ್ಯೆಯ ನಿಷೇಧವನ್ನು ಸಹಕಾರಕ್ಕೆ ಪೂರ್ವಭಾವಿಕರನ್ನಾಗಿ ಮಾಡಲು ನಾನು ಒಪ್ಪುವುದಿಲ್ಲ. ಕರಾರುರಹಿತ ಸಹಕಾರವೆಂದರೆ ಗೋ ಸಂರಕ್ಷಣೆ ಎಂದೇ ಅರ್ಥ."**

ಮುಸ್ಲಿಮರು ಅಫಘಾನರನ್ನು ಭಾರತದ ಮೇಲೆ ಧಾಳಿ ಮಾಡಲು ಆಮಂತ್ರಿಸಬಹುದೆಂಬ ಕಾರಣದಿಂದ ಅಸಹಕಾರ ಚಳುವಳಿಯನ್ನು ಸೇರಲು ಹಿಂಜರಿದ ಹಿಂದೂಗಳಿಗೆ ಗಾಂಧಿ ಹೀಗೆ ಹೇಳಿದರು"[೨]

> **"ಹಿಂದೂಗಳ ಮುನ್ನೆಚ್ಚರಿಕೆಯನ್ನು ತಿಳಿದುಕೊಳ್ಳುವುದು ಮತ್ತು ಅದನ್ನು ಸಮರ್ಥಿಸುವುದು ಸುಲಭ. ಮೊಹಮದೀಯರ ನಿಲುವನ್ನು ವಿರೋಧಿಸುವುದು ಕಷ್ಟ. ನನ್ನ ಅಭಿಪ್ರಾಯದಲ್ಲಿ, ಭಾರತವನ್ನು ಇಸ್ಲಾಂ ಮತ್ತು ಆಂಗ್ಲ ಶಕ್ತಿಗಳ ನಡುವೆ ಸಮರ ಭೂಮಿಯಾಗುವುದನ್ನು ತಪ್ಪಿಸುವ ಶ್ರೇಷ್ಠ ಮಾರ್ಗವೆಂದರೆ ಹಿಂದೂಗಳು ಅಸಹಕಾರ ಚಳವಳಿಯನ್ನು ಸಂಪೂರ್ಣ ಮತ್ತು ಶೀಘ್ರವಾಗಿ ಯಶಸ್ವಿಗೊಳಿಸುವುದೇ**

---

[೧] ಯಂಗ್ ಇಂಡಿಯಾ, ಡಿಸೆಂಬರ್ ೧೦, ೧೯೧೯

[೨] ಯಂಗ್ ಇಂಡಿಯಾ, ಡಿಸೆಂಬರ್ ೯, ೧೯೨೦

ಆಗಿದೆ. ಮೊಹಮದೀಯರು ತಮ್ಮ ಘೋಷಿತ ಉದ್ದೇಶಗಳಿಗೆ ನಿಸ್ಪೃಹರಾಗಿ ಅಂಟಿಕೊಂಡಿದ್ದೇ ಆದರೆ ಮತ್ತು ತಮ್ಮ ಮೇಲೆ ಸ್ವಯಂ ನಿಯಂತ್ರಣವಿಟ್ಟುಕೊಂಡು ತ್ಯಾಗ ಮಾಡಲು ಸಿದ್ಧರಾದರೆ, ಹಿಂದೂಗಳು ತಮ್ಮ ಪಾತ್ರವನ್ನು ಸರಿಯಾಗಿ ನಿರ್ವಹಿಸಿ ಅಸಹಕಾರ ಚಳವಳಿಯಲ್ಲಿ ಸೇರಿ ಅದರ ಯಶಸ್ವಿಗೆ ಸಹಾಯಕರಾಗುವರೆಂಬ ಬಗ್ಗೆ ನನಗೆ ಎಳ್ಳಷ್ಟೂ ಸಂಶಯವಿಲ್ಲ. ಅಂತೆಯೇ ಹಿಂದೂಗಳು ಬ್ರಿಟಿಷ್ ಸರಕಾರ ಮತ್ತು ಅದರ ಮಿತ್ರ ರಾಷ್ಟ್ರಗಳು ಮತ್ತು ಆಫ್ಘಾನಿಸ್ತಾನಗಳ ನಡುವೆ ಸಶಸ್ತ್ರ ಸಂಘರ್ಷವನ್ನು ಪ್ರೋತ್ಸಾಹಿಸುವುದರಲ್ಲಿ ಮೊಹಮದೀಯರಿಗೆ ಯಾವುದೇ ಸಹಾಯ ನೀಡುವುದಿಲ್ಲವೆಂಬ ಅಷ್ಟೇ ಭರವಸೆ ನನಗಿದೆ. ಬ್ರಿಟಿಷ್ ಸೈನ್ಯದಳ ಭಾರತದ ಗಡಿಗಳ ಮೇಲೆ ಯಶಸ್ವಿ ದಾಳಿ ಮಾಡುವುದಾಗಿ ಒಪ್ಪಿಕೊಳ್ಳುವಷ್ಟು ಅಶಿಸ್ತಿನಿಂದ ಕೂಡಿಲ್ಲ. ಆದ್ದರಿಂದ ಮೊಹಮದೀಯರಿಗೆ ಇಸ್ಲಾಂ ಧರ್ಮದ ಗೌರವವನ್ನು ಉಳಿಸುವ ಏಕೈಕ ಮಾರ್ಗವೆಂದರೆ ಅಸಹಕಾರದ ಕಾರ್ಯಾಚರಣೆಯನ್ನು ನಿಷ್ಠೆಯಿಂದ ಕೈಗೊಳ್ಳುವುದೇ ಆಗಿದೆ. ಜನತೆ ಅದನ್ನು ವಿಸ್ತೃತವಾಗಿ ಕೈಗೆತ್ತಿಕೊಳ್ಳುವುದರಿಂದ ಅದು ಸಂಪೂರ್ಣವಾಗಿ ಯಶಸ್ವಿಯಾಗುವುದಲ್ಲದೆ, ಅದು ವೈಯಕ್ತಿಕ ಆತ್ಮಸಾಕ್ಷಿಗೆ ಸಂಪೂರ್ಣ ಅವಕಾಶ ನೀಡುತ್ತದೆ. ಒಬ್ಬ ವ್ಯಕ್ತಿ ಅಥವಾ ಒಂದು ಸಂಸ್ಥೆ ಎಸಗಿದ ಅನ್ಯಾಯವನ್ನು ಸಹಿಸಿಕೊಳ್ಳಲು ಅಸಮರ್ಥನಾದರೆ ಮತ್ತು ನಾನು ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಆ ವ್ಯಕ್ತಿ ಅಥವ ಸಂಸ್ಥೆಯ ನಿಲುವನ್ನು ಎತ್ತಿ ಹಿಡಿಯುವಲ್ಲಿ ಸಹಾಯಕನಾದರೆ, ನಾನು ನೈತಿಕ ಸಂಹಿತೆಗನುಗುಣವಾಗಿ ತಪ್ಪು ಮಾಡಿದವರಿಗೂ ಸಹ ಹಾನಿಯುಂಟುಮಾಡದಿರಲು ಮನುಷ್ಯ ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನು ಮಾಡಿದಾಗ್ಯೂ ಮತ್ತು ಮೇಲೆ ಹೇಳಿದ ಅನ್ಯಾಯವನ್ನು ಖಂಡಿಸದಿದ್ದರೆ ನಾನು ಭಗವಂತನೆದುರು ಉತ್ತರ ನೀಡಬೇಕಾಗುತ್ತದೆ. ಆದ್ದರಿಂದ ಅಂತಹ ಶಕ್ತಿಶಾಲಿ ಸಾಧನವನ್ನು ಪ್ರಯೋಗಿಸುವಾಗ ಆತುರ ಮತ್ತು ಆಕ್ರೋಶವಿರಬಾರದು. ಅಸಹಕಾರ ಸಂಪೂರ್ಣವಾಗಿ ಸ್ವಯಂಪ್ರೇರಿತವಾಗಿರಬೇಕು. ಇದು ಸಂಪೂರ್ಣವಾಗಿ ಮೊಹಮದೀಯರನ್ನೇ ಅವಲಂಬಿಸಿದೆ. ಅವರು ಸ್ವಯಂ ಸಹಾಯ ಮಾಡಿಕೊಂಡರೆ ಹಿಂದೂಗಳ ಸಹಾಯ ದೊರೆಕೇ ದೊರೆಯುತ್ತದೆ ಮತ್ತು ಸರ್ಕಾರ ಎಷ್ಟೇ ದೊಡ್ಡದು ಮತ್ತು ಶಕ್ತಿಶಾಲಿಯಾಗಿದ್ದರೂ ಇಡೀ ದೇಶದ ರಕ್ತರಹಿತ ವಿರೋಧಕ್ಕೆ ಅಚಲ ಮಣಿಯಲೇ ಬೇಕಾಗುತ್ತದೆ."

ದುರದೃಷ್ಟವಶಾತ್ ಯಾವ ಸರ್ಕಾರವೂ ಇಡೀ ರಾಷ್ಟ್ರದ ರಕ್ತರಹಿತ ವಿರೋಧಕ್ಕೆ ಮಣಿಯದೇ ಇರಲಾರದೆಂಬ ಶ್ರೀಯುತ ಗಾಂಧಿಯವರ ಭರವಸೆ ಹುಸಿಯಾಯಿತು. ಅಸಹಕಾರ ಚಳವಳಿಯನ್ನು ಆರಂಭಿಸಿದ ಒಂದು ವರ್ಷದೊಳಗೇ ಮುಸಲ್ಮಾನರು ತಾಳ್ಮೆಗೆಟ್ಟಿದ್ದಾರೆಂಬ ಅಂಶವನ್ನು ಗಾಂಧಿಯವರು ಒಪ್ಪಿಕೊಳ್ಳಬೇಕಾಯಿತು ಮತ್ತು ಅವರೇ ಹೇಳಿದಂತೆ:–

"ತಮ್ಮ ತಾಳ್ಮೆಗೆಟ್ಟ ಕೋಪದಲ್ಲಿ, ಮುಸಲ್ಮಾನರು ಕಾಂಗ್ರೆಸ್ ಮತ್ತು ಖಿಲಾಫತ್ ಸಂಸ್ಥೆಗಳಿಂದ ಹೆಚ್ಚು ಕ್ರಿಯಾತ್ಮಕ ಮತ್ತು ಶೀಘ್ರ ಕ್ರಿಯೆಗಾಗಿ ಒತ್ತಾಯಿಸುತ್ತಿದ್ದಾರೆ. ಮುಸಲ್ಮಾನರಿಗೆ ಸ್ವರಾಜ್ಯವೆಂದರೆ ಹಿಂದೂಸ್ತಾನವು ಖಿಲಾಫತ್ ಪ್ರಶ್ನೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಶಕ್ತಿ ಮತ್ತು ಅದು ಹಾಗಿರಬೇಕೆಂದೇ ಅವರು ಅರ್ಥೈಸುತ್ತಾರೆ. ಆದ್ದರಿಂದ ಮುಸಲ್ಮಾನರು ಸ್ವರಾಜ್ಯ ಸ್ಥಾಪನೆಯಲ್ಲಿ ವಿಳಂಬವು ಹಿಂದುಸ್ತಾನದ ಮುಸಲ್ಮಾನರು ಐರೋಪ್ಯ ಭಾಗದಲ್ಲಿ ತುರ್ಕಿಯ ವಿನಾಶಕ್ಕೆ ನಿರ್ವೀರ್ಯ ಸಾಕ್ಷಿಗಳಾಗಿರಬೇಕೆಂಬ ಕಾರ್ಯಕ್ರಮವೆನಿಸಿದರೆ ಅವರು ಅದನ್ನು ಸಹಿಸಲು ನಿರಾಕರಿಸುತ್ತಾರೆ.

**ಈ ಭಾವನೆಗೆ ಸಹಾನುಭೂತಿ ತೋರಿಸದೆ ಇರುವುದು ಸಾಧ್ಯವಿಲ್ಲ. ಇದಕ್ಕಾಗಿ ಯಾವುದೇ ಪರಿಣಾಮಕಾರಿ ಮಾರ್ಗವಿದ್ದರೆ ನಾನು ಅದನ್ನು ಸಂತೋಷದಿಂದ ಶಿಫಾರಸ್ಸು ಮಾಡುತ್ತೇನೆ. ಆದ್ದರಿಂದ ಖಿಲಾಫತ್‌ನ ಉದ್ದೇಶವು ಈಡೇರುವುದಾದರೆ ನಾನು ಸ್ವರಾಜ್ಯದತ್ತ ಚಟುವಟಿಕೆಗಳನ್ನು ಸಂತೋಷದಿಂದ ಸ್ಥಗಿತಗೊಳಿಸುತ್ತೇನೆ. ಲಕ್ಷಾಂತರ ಮುಸಲ್ಮಾನರ ನೋವನ್ನು ಶಮನಗೊಳಿಸಲು ಅಸಹಕಾರವೂ ಅಲ್ಲದೆ, ಇನ್ನಾವುದೇ ಮಾರ್ಗ ನನಗೆ ತೋಚಿದರೂ ಅದನ್ನು ನಾನು ಸಂತೋಷವಾಗಿ ಕೈಗೊಳ್ಳುತ್ತೇನೆ.**

**ಆದರೆ, ನನ್ನ ನಮ್ರ ಅಭಿಪ್ರಾಯದಲ್ಲಿ, ಖಿಲಾಫತ್ ಅನ್ಯಾಯವನ್ನು ಸರಿಪಡಿಸುವಲ್ಲಿ ಸ್ವರಾಜ್ಯ ಪಡೆದುಕೊಳ್ಳುವುದೇ ಅತ್ಯಂತ ಶೀಘ್ರ ಮಾರ್ಗ. ಆದ್ದರಿಂದ ನನ್ನ ದೃಷ್ಟಿಯಲ್ಲಿ ಸ್ವರಾಜ್ಯ ಸಾಧನೆಯೇ ಖಿಲಾಫತ್ ಪ್ರಶ್ನೆಗೆ ಪರಿಹಾರವಾಗಿದೆ ಮತ್ತು ಇದರ ವಿಪರ್ಯಾಸ ಎಂದರೆ ಖಿಲಾಫತ್ ಪ್ರಶ್ನೆಯ ಇತ್ಯರ್ಥವೇ ಸ್ವರಾಜ್ಯ ಸ್ಥಾಪನೆಗೆ ಪರಿಹಾರವೆನಿಸುವುದು, ನಮ್ಮೊಂದಿಗೆ ಸಂಯೋಜಿತರಾಗಿರುವ ತುರ್ಕರಿಗೆ ಸಹಾಯ ಮಾಡುವ ಏಕೈಕ ಮಾರ್ಗವೆಂದರೆ ಹಿಂದೂಸ್ತಾನವು ತನ್ನ ಸಾಮರ್ಥ್ಯವನ್ನು ಪ್ರತಿಪಾದಿಸುವುದೇ ಆಗಿದೆ. ಸಕಾಲದಲ್ಲಿ ಅಂತಹ ಸಾಮರ್ಥ್ಯವನ್ನು ಬೆಳಗಿಸಿಕೊಳ್ಳದೇ ಹೋದರೆ ಹಿಂದೂಸ್ತಾನಕ್ಕೆ ಬೇರೆ ಮಾರ್ಗವೇ ಉಳಿಯಲಾರದು ಮತ್ತು ಅದು ಅನಿವಾರ್ಯಕ್ಕೆ ಹೊಂದಿಕೊಳ್ಳಬೇಕಾಗುತ್ತದೆ. ಪಾರ್ಶ್ವವಾಯುವಿನಿಂದ ಬಳಲುತ್ತಿರುವ ಒಬ್ಬ ವ್ಯಕ್ತಿ ತನ್ನ ನೆರೆಯವನಿಗೆ ಸಹಾಯಹಸ್ತ ನೀಡುವಂತಾಗಲು ಮೊದಲು ತನ್ನ ಪಾರ್ಶ್ವವಾಯುವನ್ನು ಗುಣಪಡಿಸಿಕೊಳ್ಳುವ ಪ್ರಯತ್ನ ಮಾಡಬೇಕಲ್ಲವೇ? ಕೇವಲ ಅಜ್ಞಾನ, ವಿಚಾರರಹಿತ ಮತ್ತು ಆಕ್ರೋಶದಿಂದ ಕೂಡಿದ ಹಿಂಸಾಚಾರ, ಹುದುಗಿದ ಕೋಪವನ್ನುವ ವ್ಯಕ್ತಪಡಿಸಿದಂತಾಗುವುದೇ ಅನಃ ಅದರಿಂದ ತುರ್ಕಿಗೆ ಯಾವ ಪರಿಹಾರವೂ ದೊರೆಯಲಾರದು."**

ಮುಸಲ್ಮಾನರಿಗೆ ಶ್ರೀಯುತ ಗಾಂಧಿಯವರ ಉಪದೇಶವನ್ನು ಕೇಳುವ ಮನಸ್ಸಿರಲಿಲ್ಲ. ಅವರು ಅಹಿಂಸೆಯ ತತ್ವವನ್ನು ಆರಾಧಿಸಲು ನಿರಾಕರಿಸಿದರು. ಅವರು ಸ್ವರಾಜ್ಯಕ್ಕಾಗಿ ಕಾಯುವುದಕ್ಕೆ ಸಿದ್ಧರಿರಲಿಲ್ಲ. ಅವರು ತುರ್ಕಿಗೆ ಸಹಾಯ ಮಾಡಲು ಮತ್ತು ಖಿಲಾಫತ್ತನ್ನು ಉಳಿಸಲು ಅತ್ಯಂತ ಶೀಘ್ರೋಪಾಯವನ್ನು ಕಂಡುಹಿಡಿಯಲು ಆತುರರಾಗಿದ್ದರು. ಮುಸಲ್ಮಾನರು ತಾಳ್ಮೆಗೆಟ್ಟು ಏನು ಮಾಡಬಹುದೆಂದು ಹಿಂದೂಗಳು ಭಯಪಟ್ಟಿದ್ದರೋ ಮುಸಲ್ಮಾನರು ಅದನ್ನೇ ಮಾಡಿದರು. ಅದೇನೆಂದರೆ ಆಫ್ಘನರನ್ನು ಭಾರತದ ಮೇಲೆ ದಾಳಿ ಮಾಡಬೇಕೆಂದು ಆಹ್ವಾನಿಸುವುದೇ ಆಗಿತ್ತು. ಖಿಲಾಫತಿಗಳು ಆಫ್ಘಾನಿಸ್ತಾನದ ಅಮೀರನೊಡನೆ ಜರುಗಿಸಿದ್ದ ತಮ್ಮ ಸಂಧಾನದಲ್ಲಿ ಎಷ್ಟು ದೂರ ಸಾಗಿದ್ದರೆಂಬುದನ್ನು ತಿಳಿದುಕೊಳ್ಳುವುದು ಸಾಧ್ಯವಿಲ್ಲ. ಆದರೆ ಅವರು ಅಂತಹ ಒಂದು ಯೋಜನೆಯನ್ನು ಹೊಂದಿದ್ದರೆಂಬುದು ಪ್ರಶ್ನಾತೀತವಾಗಿತ್ತು. ಭಾರತದ ಮೇಲೆ ದಾಳಿ ಮಾಡುವ ಯೋಜನೆ ಅತ್ಯಂತ ಅಪಾಯಕಾರಿ ಯೋಜನೆಯಾಗಿದ್ದು ಅಂತಹ ಹುಚ್ಚು ಯಾವುದೇ ಯೋಜನೆಯನ್ನು ಹಿಂದೂಸ್ತಾನದ ಪ್ರತಿಯೊಬ್ಬ ವಿವೇಕವಂತ ನಾಗರಿಕನು ವಿರೋಧಿಸುವನೆಂದು ಬೇರೆ ಹೇಳಬೇಕಾಗಿಲ್ಲ. ಈ ಯೋಜನೆಯಲ್ಲಿ ಗಾಂಧಿಯವರ ಪಾತ್ರವೇನು ಎಂಬುದನ್ನು ಕಂಡುಹಿಡಿಯಲು ಸಾಧ್ಯವಿಲ್ಲ. ಆದರೆ ಅವರು ಇದರೊಂದಿಗಿನ ತಮ್ಮ ಸಂಬಂಧವನ್ನು ನಿರಾಕರಿಸಲಿಲ್ಲವೆಂಬುದು ಸತ್ಯಾಂಶ. ತದ್ವಿರುದ್ಧವಾಗಿ ಸ್ವರಾಜ್ಯದ ಬಗ್ಗೆ ಅವರಿಗಿದ್ದ ನಿರಾಧಾರವಾದ ಉತ್ಸಾಹ ಮತ್ತು ಹಿಂದೂ–ಮುಸಲ್ಮಾನ ಏಕತೆ ಸ್ವರಾಜ್ಯಗಳಿಸುವ ಏಕೈಕ ಸಾಧನವೆಂದು ಅವರ ಭ್ರಾಂತಿಯಿಂದ ಅವರು ಈ ಯೋಜನೆಯನ್ನು

ಸಮರ್ಥಿಸಲು ಮುಂದಾದರು. ಅವರು ಆಫ್ಘಾನದ ಅಮೀರನಿಗೆ ಬ್ರಿಟಿಷ್– ಸರಕಾರದೊಂದಿಗೆ ಯಾವುದೇ ಒಪ್ಪಂದವನ್ನು ಮಾಡಿಕೊಳ್ಳಬಾರದೆಂದು ಸೂಚಿಸುವುದು ಅಲ್ಲದೇ* ಅವರು ಇನ್ನೂ ಹೇಳಿದ್ದೇನೆಂದರೆ:–

**"ಆಫ್ಘಾನಿಸ್ತಾನದ ಅಮೀರನು ಬ್ರಿಟಿಷ್ ಸರಕಾರದ ವಿರುದ್ಧ ಯುದ್ಧ ಸಾರಿದರೆ ನಾನು ಒಂದು ರೀತಿಯಲ್ಲಿ ಅಮೀರನಿಗೆ ನಿಜವಾಗಿಯೂ ಸಹಾಯ ಮಾಡುವೆ ಎಂದರೆ, ನಾನು ನನ್ನ ದೇಶಬಾಂಧವರಿಗೆ ಅಧಿಕಾರದಲ್ಲಿ ಉಳಿಯಲು ರಾಷ್ಟ್ರದ ವಿಶ್ವಾಸವನ್ನು ಕಳೆದುಕೊಂಡಿರುವ ಸರಕಾರಕ್ಕೆ ಸಹಾಯ ಮಾಡುವುದು ಒಂದು ಅಪರಾಧ ಎಂದು ಬಹಿರಂಗವಾಗಿ ಹೇಳುವೆ."**

ಕೇವಲ ಹಿಂದೂ–ಮುಸಲ್ಮಾನ ಏಕತೆಗಾಗಿ ಯಾವುದೇ ವಿವೇಕಯುತ ವ್ಯಕ್ತಿ ಇಷ್ಟು ದೂರ ಹೋಗಬಲ್ಲನೇ? ಆದರೆ ಹಿಂದೂ–ಮುಸಲ್ಮಾನ ಏಕತೆಗೆ ಅಷ್ಟೊಂದು ಅಂಟಿಕೊಂಡಿದ್ದ ಗಾಂಧಿಯವರು ತಮ್ಮ ಹುಚ್ಚು ಪ್ರಯತ್ನದಲ್ಲಿ ತಾವು ಏನು ಮಾಡುತ್ತಿದ್ದೇವೆಂಬುದನ್ನು ಯೋಚಿಸಲಿಲ್ಲ. ಹಿಂದೂ–ಮುಸಲ್ಮಾನ ಏಕತೆಗೆ ಭದ್ರ ತಳಹದಿಯನ್ನೊದಗಿಸಲು ಗಾಂಧಿಯವರು ಎಷ್ಟು ಕಾತರರಾಗಿದ್ದರೆಂದರೆ ಅವರು ರಾಷ್ಟ್ರಕ್ಕೊದಗಿದ್ದ ಗಂಡಾಂತರದ ಬಗ್ಗೆ ತಮ್ಮ ಅನುಯಾಯಿಗಳಿಗೆ ಉಪದೇಶಿಸುವುದನ್ನು ಮರೆಯಲಿಲ್ಲ. ಸೆಪ್ಟೆಂಬರ್ ೮, ೧೯೨೦ರ 'ಯಂಗ್ ಇಂಡಿಯಾ'ದ ಒಂದು ಲೇಖನದಲ್ಲಿ ಗಾಂಧಿಯವರು ಹೀಗೆ ಹೇಳಿದರು:–

**"ನನ್ನ ಮದ್ರಾಸು ಪ್ರವಾಸದಲ್ಲಿ ಬೆಝುವಾಡ(ವಿಜಯವಾಡ)ದಲ್ಲಿ ರಾಷ್ಟ್ರೀಯ ಗಂಡಾಂತರವನ್ನು ಪ್ರಸ್ತಾಪಿಸುವ ಅವಕಾಶ ದೊರಕಿತ್ತು. ಮನುಷ್ಯರ ಪರ ಘೋಷಣೆಗಳ ಬದಲು ಆದರ್ಶಗಳ ಪರ ಘೋಷಣೆಗಳನ್ನು ಮಾಡುವುದು ಒಳ್ಳೆಯದೆಂದು ನಾನು ಸೂಚಿಸಿದ್ದೆ. ಮಹಾತ್ಮಗಾಂಧಿ–ಕಿ–ಜೈ ಮತ್ತು ಮಹಮದ ಆಲಿ ಷೌಕತ್ ಆಲಿ–ಕಿಜೈ ಬದಲು ಹಿಂದೂ–ಮುಸಲ್ಮಾನ್–ಕಿ–ಜೈ ಘೋಷಣೆ ಮಾಡಬೇಕೆಂದು ನಾನು ಸಭಿಕರಲ್ಲಿ ಕೇಳಿಕೊಂಡೆ. ಇದನ್ನು ಸಾಕಾರವಾಗಿ ಅನುಸರಿಸಿದ ಬಂಧು ಷೌಕತ್ ಆಲಿ ಈ ಬಗ್ಗೆ ತಮ್ಮ ವಿಚಾರವನ್ನು ಕೂಡಲೇ ವ್ಯಕ್ತಪಡಿಸಿದ ಹಿಂದು–ಮುಸಲ್ಮಾನ್ ಏಕತೆ ಇದ್ದಲ್ಲಿಯೂ, ಹಿಂದೂಗಳು ವಂದೇ ಮಾತರಂ ಘೋಷಣೆ ಹಾಕಿದರೆ ಮುಸಲ್ಮಾನರು ಅಲ್ಲಾಹ್ ಹೋ ಅಕ್ಬರ್ ಎಂದು ಕೂಗುವರು. ಅದೇ ರೀತಿ ಮುಸಲ್ಮಾನರು ಅಲ್ಲಾಹ್ ಹೋ ಅಕ್ಬರ್ ಎಂದು ಕೂಗಿದರೆ ಹಿಂದೂಗಳು ವಂದೇ ಮಾತರಂ ಎನ್ನುವರೆಂದು ಅವರು ಹೇಳಿದರು. ಇದು ಕಿವಿಗೆ ಅಪ್ರಿಯವೆನಿಸಿತಾದರೂ ಇದಕ್ಕೆ ಜನರು ಏಕ ಮನಸ್ಕರಾಗಿ ಪ್ರತಿಕ್ರಿಯಿಸಲಿಲ್ಲ ಎಂದು ಅವರು ಸರಿಯಾಗಿಯೇ ಹೇಳಿದರು. ಆದ್ದರಿಂದ ಮಾನ್ಯತೆ ಪಡೆದ ಕೇವಲ ಮೂರು ಘೋಷಣೆಗಳು ಮಾತ್ರ ಇರಬೇಕು. ದೇವರು ಒಬ್ಬನೇ ಶ್ರೇಷ್ಠ, ಬೇರಾರೂ ಅಲ್ಲ ಎಂಬುದರ ದ್ಯೋತಕವಾಗಿ ಹಿಂದೂಗಳು ಮತ್ತು ಮುಸಲ್ಮಾನರು ಸಂತೋಷದಿಂದ ಅಲ್ಲಾಹ್ ಹೋ ಅಕ್ಬರ್ ಎಂದು ಹಾಡಬೇಕು. ಎರಡನೆಯದಾಗಿ ವಂದೇ ಮಾತರಂ (ತಾಯ್ನಾಡಿಗೆ ಜಯವಾಗಲಿ) ಅಥವಾ ಭಾರತ ಮಾತಾ–ಕಿ–ಜಯ್ ಎಂದಿರಬೇಕು. ಜಯವಿಲ್ಲ ಮತ್ತು ಭಗವಂತನ ಶ್ರೇಷ್ಠತೆಯ ಬಗ್ಗೆ ಇದಕ್ಕಿಂತ ಹೆಚ್ಚಿನ ಯಾವುದೇ ಪ್ರದರ್ಶನವಿರಲಾರದು. ವೃತ್ತಪತ್ರಿಕೆಗಳು, ಸಾರ್ವಜನಿಕರ ಮುಖಂಡರುಗಳು**

---

* ಯಂಗ್ ಇಂಡಿಯಾ, ದಿನಾಂಕ ೪, ಮೇ ೧೯೨೧

**ಮೌಲಾನಾರವರ ಸಲಹೆಯನ್ನು ಸ್ವೀಕರಿಸಿ ಈ ಮೂರು ಘೋಷಣೆಗಳನ್ನು ಮಾತ್ರ ಉಪಯೋಗಿಸುವಂತೆ ಜನತೆಗೆ ಮಾರ್ಗದರ್ಶನ ನೀಡಬೇಕೆಂದು ನಾನು ಬಯಸುತ್ತೇನೆ. ಅವು ಅತ್ಯಂತ ಅರ್ಥಪೂರ್ಣವಾಗಿವೆ. ಮೊದಲನೆಯ ಘೋಷಣೆ ಒಂದು ಪ್ರಾರ್ಥನೆಯಾಗಿದ್ದು, ಅದು ನಮ್ಮ ಸಣ್ಣತನವನ್ನು ಕುರಿತ ನಮ್ಮ ಪಾಪನಿವೇದನೆಯಾಗಿದೆಯಾದ್ದರಿಂದ ಅದು ನಮ್ರತೆಯ ಸಂಕೇತವಾಗಿದೆ. ಅದರಲ್ಲಿ ಎಲ್ಲಾ ಹಿಂದೂಗಳು ಮತ್ತು ಮುಸಲ್ಮಾನರು ಗೌರವಯುತವಾಗಿ ಮತ್ತು ಪ್ರಾರ್ಥನಾರ್ಥಿಗಳಾಗಿ ಸಂಮ್ಮಿಲಿತರಾಗಬೇಕು. ಹಿಂದೂಗಳು ಅರಬ್ಬಿ ಭಾಷೆಯ ಪದಗಳನ್ನು ಉಪಯೋಗಿಸಲು ಹಿಂಜರಿಯಬಾರದು, ಅದರಲ್ಲಿಯೂ ಅವುಗಳ ಅರ್ಥ ಅಸಹನೀಯವಾಗಿರದೇ ಉದಾತ್ತವಾಗಿರುವಾಗ ಯಾವ ರೀತಿಯ ಅಭ್ಯಂತರವನ್ನು ಅವರು ಹೊಂದಬಾರದು. ದೇವರು ಯಾವುದೇ ಒಂದು ಭಾಷೆಯ ಪರವಾಗಿರದೇ ಎಲ್ಲಾ ಭಾಷೆಗಳನ್ನು ಗೌರವಿಸುತ್ತಾನೆ. ವಂದೇ ಮಾತರಂ ಹೊಂದಿರುವ ಅದ್ಭುತ ಅರ್ಥವೂ ಅಲ್ಲದೇ ಅದು ಹಿಂದೂಸ್ತಾನವು ಗರಿಮೆಯ ಪರಾಕಾಷ್ಠತೆಯನ್ನು ತಲುಪಲೆಂಬ ರಾಷ್ಟ್ರೀಯ ಮಹದಾಸೆಯ ದ್ಯೋತಕವಾಗಿದೆ. ನಾನು ಭಾರತ್-ಮಾತಾ-ಕಿ-ಜೈ ಬದಲು ವಂದೇ ಮಾತರಂ ಅನ್ನು ಹೆಚ್ಚು ಮೆಚ್ಚಿಕೊಳ್ಳುತ್ತೇನೆ. ಏಕೆಂದರೆ ಅದರಿಂದ ಬಂಗಾಳದ ಬೌದ್ಧಿಕ ಮತ್ತು ಭಾವನಾತ್ಮಕ ಶ್ರೇಷ್ಠತೆಗಳಿಗೆ ಗೌರವಯುತ ಮಾನ್ಯತೆ ನೀಡಿದಂತಾಗುತ್ತದೆ. ಹಿಂದೂಗಳು ಮತ್ತು ಮುಸಲ್ಮಾನರ ಹೃದಯಗಳ ಸಂಗಮವಿಲ್ಲದ ಹಿಂದೂಸ್ತಾನವು ಅರ್ಥಹೀನವಾಗಿದ್ದರಿಂದ ಹಿಂದೂ-ಮುಸಲ್ಮಾನ್-ಕೀ-ಜೈ ನಾವು ಎಂದೂ ಮರೆಯಲಾಗದ ಘೋಷಣೆಯಾಗಿದೆ.**

**ಈ ಘೋಷಣೆಯಲ್ಲಿ, ಯಾವುದೇ ಅಪಸ್ವರವಿರಬಾರದು. ಯಾರಾದರೊಬ್ಬರು ಈ ಮೂರರಲ್ಲಿ ಯಾವುದೇ ಘೋಷಣೆ ಹಾಕಿದರೂ ಕೂಡಲೇ ಇತರರು ಅದನ್ನು ಅನುಸರಿಸಬೇಕು. ತಮಗೆ ಪ್ರೀತಿಯಾಗಿರುವ ಇತರ ಯಾವುದನ್ನೂ ಕೂಗುವ ಪ್ರಯತ್ನ ಮಾಡಬಾರದು. ಆ ಘೋಷಣೆಯಲ್ಲಿ ಸೇರಲು ಇಷ್ಟವಿಲ್ಲದವರು ಮೌನವಾಗಿರಬೇಕು. ಆದರೆ, ಒಂದು ಘೋಷಣೆ ಹಾಕಿದಾಗ ಮಧ್ಯಪ್ರವೇಶಿಸಿ ಇನ್ನೊಂದನ್ನು ಕೂಗುವುದು ಶಿಷ್ಟಾಚಾರವನ್ನು ಉಲ್ಲಂಘಿಸಿದಂತಾಗುತ್ತದೆ. ಮೇಲೆ ಹೇಳಿದ ಕ್ರಮದಲ್ಲಿ ಮೂರು ಘೋಷಣೆಗಳನ್ನು ಒಂದರ ನಂತರ ಇನ್ನೊಂದನ್ನು ಹೇಳುವುದೇ ಸೂಕ್ತ."**

ಹಿಂದೂ-ಮುಸಲ್ಮಾನ ಏಕತೆಯ್ನು ಸಾಧಿಸಲು ಗಾಂಧೀಜಿಯವರು ಮಾಡಿದ ಕೆಲಸಗಳು ಇವಷ್ಟೇ ಅಲ್ಲ. ಮುಸಲ್ಮಾನರು ಹಿಂದೂಗಳ ವಿರುದ್ಧವೆಸಗುತ್ತಿದ್ದ ಮಿತಿಮೀರಿದ ಅಪರಾಧಗಳಿಗಾಗಿ ಅವರು ಮುಸಲ್ಮಾನರನ್ನೂ ಎಂದೂ ದೂಷಿಸಲಿಲ್ಲ.

ಮುಸಲ್ಮಾನರ ಧಾರ್ಮಿಕ ಸೂಕ್ಷ್ಮ ಸಂವೇದನಾ ಗಳಿಗೆಯಲ್ಲಿ ಅವರು ವಹಿಸಿದ ಪಾತ್ರದಿಂದ ಅವರ ಭಾವನೆಗಳಿಗೆ ಘಾತವನ್ನುಂಟು ಮಾಡಿದ ಪ್ರಮುಖ ಹಿಂದೂಗಳು ಕೆಲವು ಧರ್ಮಾಂಧ ಮುಸಲ್ಮಾನರಿಂದ ಕೊಲೆಗೀಡಾಗಿರುವುದು ಕುಪ್ರಸಿದ್ಧ ಸಂಗತಿ. ಇಂತಹ ಕೃತ್ಯಕ್ಕೆ ಮೊದಲು ಬಲಿಯಾದವರೆಂದರೆ ಸ್ವಾಮಿ ಶ್ರದ್ಧಾನಂದರು. ಅವರು ಖಾಯಿಲೆಯಿಂದ ಹಾಸಿಗೆ ಹಿಡಿದಾಗ ೧೯೨೬ರ ಡಿಸೆಂಬರ್ ೨೩ರಂದು ಅಬ್ದುಲ್ ರಷೀದ್ ಎಂಬುವನು ಗುಂಡಿಕ್ಕಿ ಅವರನ್ನು ಕೊಂದನು. ಇದರ ತರುವಾಯ ದೆಹಲಿಯ ಆರ್ಯ ಸಮಾಜದ ಪ್ರಮುಖರಾಗಿದ್ದ ಲಾಲ್ ನಾನಕ್ ಚಂದ್ ಅವರ ಕೊಲೆ ಮಾಡಲಾಯಿತು. ೬ನೆಯ ಏಪ್ರಿಲ್ ೧೯೨೯ರಂದು ರಂಗೀಲಾ ರಸೂಲ್‌ದ ಗ್ರಂಥಕರ್ತರಾದ ರಾಜ್ ಪಾಲ್ ಎಂಬುವರನ್ನು ಅವರು

ತಮ್ಮ ಅಂಗಡಿಯಲ್ಲಿ ಕುಳಿತಿದ್ದಾಗಲೇ ಇಲಾಮ್ ದಿನ್ ಎಂಬುವನು ಅವರನ್ನು ಇರಿದು ಕೊಂದನು. ಸೆಪ್ಟೆಂಬರ್ ೧೯೩೪ರಲ್ಲಿ ಅಬ್ದುಲ್ ಖಯ್ಯಾಮ್ ಎಂಬುವನು ನೀಥೂರಾಮಲ್ ಶರ್ಮ ಎಂಬುವರ ಕೊಲೆಗೈದನು. ಇದು ಅತ್ಯಂತ ನಿರ್ಭೀತ ಕೃತ್ಯವಾಗಿತ್ತು. ಏಕೆಂದರೆ ಶರ್ಮಾರವರು ಸಿಂಧದ ನ್ಯಾಯಾಂಗ ಆಯುಕ್ತರ ನ್ಯಾಯಾಲಯದಲ್ಲಿ ತಾವು ಇಸ್ಲಾಂನ ಇತಿಹಾಸದ ಮೇಲೆ ಪ್ರಕಟಿಸಿದ ಕಿರುಹೊತ್ತಿಗೆಯ ಪ್ರಕರಣದಲ್ಲಿ ಐ.ಪಿ.ಸಿ. ೧೯೫ನೆಯ ವಿಧಿಯ ಪ್ರಕಾರ ನೀಡಲಾಗಿದ್ದ ಶಿಕ್ಷೆಯ ವಿರುದ್ಧ ಮೇಲ್ಮನವಿಯ ವಿಚಾರಣೆಗಾಗಿ ಕಾದು ಕುಳಿತಾಗಲೇ ಅವರನ್ನು ಮರಣಾಂತಿಕವಾಗಿ ಇರಿದು ಕೊಲ್ಲಲಾಗಿತ್ತು. ಅಹಮದಾಬಾದಲ್ಲಿ ೧೯೩೮ರಲ್ಲಿ ಸಮಾವೇಶಗೊಂಡಿದ್ದ ಹಿಂದೂ ಮಹಾಸಭಾದ ಅಧಿವೇಶನದಲ್ಲಿ ಹಿಂದೂ ಸಭಾದ ಕಾರ್ಯದರ್ಶಿ ಖನ್ನಾ ಅವರ ಮೇಲೆ ಮಾಡಲಾದ ಹಲ್ಲೆಯಲ್ಲಿ ಅವರು ಮರಣದಿಂದ ಸ್ವಲ್ಪದಲ್ಲಿಯೇ ಪಾರಾದರು.

ಇದು ಅತ್ಯಂತ ಸಣ್ಣ ಪಟ್ಟಿಯಾಗಿದ್ದು ಇದನ್ನು ವಿಸ್ತರಿಸುವುದು ಸುಲಭ. ಆದರೆ ಧರ್ಮಾಂಧ ಮುಸಲ್ಮಾನರಿಂದ ಕೊಲೆಗೀಡಾದ ಪ್ರಮುಖ ಹಿಂದೂಗಳ ಸಂಖ್ಯೆ ದೊಡ್ಡದೋ ಅಥವಾ ಸಣ್ಣದೋ ಅದು ಮುಖ್ಯವಲ್ಲ. ಆದರೆ ಈ ಕೊಲೆಗಳ ಬಗ್ಗೆ ಗಣ್ಯರೆನಿಸಿಕೊಂಡವರ ಮನೋಭಾವನೆ ಮುಖ್ಯ. ಎಲ್ಲಿ ಕಾನೂನು ಜಾರಿಯಾಯಿತೋ ಅಲ್ಲಿ ಮಾತ್ರ ಕೊಲೆಗಾರರು ಶಿಕ್ಷೆಗೊಳಗಾದರು. ಆದರೆ ಮುಸಲ್ಮಾನರ ಮುಂದಾಳುಗಳು ಈ ಅಪರಾಧಿಗಳನ್ನು ಎಂದೂ ಖಂಡಿಸಲಿಲ್ಲ. ಅದಕ್ಕೆ ಬದಲು ಈ ಅಪರಾಧಿಗಳನ್ನು ಧಾರ್ಮಿಕ ಹುತಾತ್ಮರೆಂದು ಜಯಕಾರ ಮಾಡಲಾಯಿತಲ್ಲದೇ ಅವರಿಗೆ ದಯಾಭಿಕ್ಷೆ ನೀಡಬೇಕೆಂದು ಚಳವಳಿ ಮಾಡಲಾಯಿತು. ಇದಕ್ಕೆ ಒಂದು ನಿದರ್ಶನವಾಗಿ ಅಬ್ದುಲ್ ಖಯ್ಯಾಮನ ಮೇಲ್ಮನವಿಯಲ್ಲಿ ವಕಾಲತ್ತು ವಹಿಸಿ ವಾದಿಸಿದ ಲಾಹೋರದ ಬ್ಯಾರಿಸ್ಟರ್ ಬರ್ಖತ್ ಅಲಿಯವರ ಪ್ರಸಂಗವನ್ನು ಉಲ್ಲೇಖಿಸಬಹುದು. ಖಯ್ಯಾಮನು ನಾಥುರ್ ಮಲ್‌ರವರ ಕೊಲೆಯಲ್ಲಿ ತಪ್ಪಿತಸ್ಥನೆಂದು ಪರಿಗಣಿಸಲಾಗದು. ಏಕೆಂದರೆ ಅವನ ಕೃತ್ಯ ಕುರಾನಿನ ನಿಯಮದ ಪ್ರಕಾರ ಸಮರ್ಥನೀಯವಾಗಿದೆ ಎಂದು ಹೇಳುವ ಮಟ್ಟಿಗೆ ಹೋದನು. ಮುಸಲ್ಮಾನರ ಇಂತಹ ಮನೋಭಾವನೆಯನ್ನು ಅರ್ಥಮಾಡಿಕೊಳ್ಳಬಹುದು. ಆದರೆ ಗಾಂಧಿಯವರ ಮನೋಭಾವನೆ ಅರ್ಥವಾಗುವುದಿಲ್ಲ.

ಶ್ರೀ ಗಾಂಧಿಯವರು ಯಾವುದೇ ಹಿಂಸಾಕೃತ್ಯವನ್ನು ಖಂಡಿಸುವುದರಲ್ಲಿ ತಮ್ಮದೇ ಸೂತ್ರ, ನಿಯಮ ಹೊಂದಿರುತ್ತಾರೆ ಮತ್ತು ಕಾಂಗ್ರೆಸ್ಸನ್ನು, ಅದಕ್ಕೆ ಇಷ್ಟವಿಲ್ಲದಿದ್ದರೂ ಈ ಹಿಂಸಾಕೃತ್ಯಗಳನ್ನು ಖಂಡಿಸುವಂತೆ ಒತ್ತಾಯಿಸಿದ್ದಾರೆ. ಆದರೆ ಗಾಂಧಿಯವರು ಎಂದೂ ಇಂತಹ ಕೊಲೆಗಳನ್ನು ವಿರೋಧಿಸಿಲ್ಲ. ಮುಸಲ್ಮಾನರಂತೂ ಈ ಹೀನಕೃತ್ಯಗಳನ್ನು ಖಂಡಿಸಿಲ್ಲ*ವಲ್ಲದೇ ಶ್ರೀಯುತ ಗಾಂಧಿಯವರು ಮುಸಲ್ಮಾನ ಪ್ರಮುಖರನ್ನು ಈ ಕೃತ್ಯಗಳನ್ನು ಖಂಡಿಸಬೇಕೆಂದು ಎಂದೂ ಕರೆಕೊಟ್ಟಿಲ್ಲ. ಗಾಂಧಿಯವರು ಇವುಗಳ ಬಗ್ಗೆ ಮೌನವಾಗಿದ್ದಾರೆ. ಗಾಂಧಿಯವರ ಈ ಮನೋಭಾವನೆಯು ಅವರು ಹಿಂದೂ–ಮುಸಲ್ಮಾನ ಏಕತೆಯ ಬಗ್ಗೆ ಹೊಂದಿದ್ದ ಕಾತರತೆಯ ಕಾರಣದಿಂದಾಗಿತ್ತೆಂದು ಅರ್ಥೈಸಬಹುದಾಗಿದೆ ಮತ್ತು ಕೆಲವೇ ಹಿಂದೂಗಳ ಜೀವತ್ಯಾಗದಿಂದ ಅಂತಹ ಏಕತೆ ಸಾಧಿಸಬಹುದಾದರೆ ಅವರು ಕೆಲ ಹಿಂದೂಗಳ ಕೊಲೆಯ ಬಗ್ಗೆ ಆತಂಕಗೊಳ್ಳಲಿಲ್ಲ.

---

* ಸ್ವಾಮಿ ಶ್ರದ್ಧಾನಂದರನ್ನು ಕೊಲೆ ಮಾಡಿದ ಅಬ್ದುಲ್ ರಷೀದನ ಆತ್ಮಕ್ಕೆ ಪರಲೋಕದಲ್ಲಿ ಶಾಂತಿಯನ್ನು ದಯಪಾಲಿಸಲೆಂದು ದೇವ್‌ಬಂದದ ಪ್ರಸಿದ್ಧ ದೇವತಾ ಶಾಸ್ತ್ರ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ಆಚಾರ್ಯರು ಐದು ಬಾರಿ ಕುರಾನ್ ಪಠಣವನ್ನು ಮಾಡಿದ್ದರು ಮತ್ತು ಪ್ರತಿನಿತ್ಯ ಒಂದೂ ಕಾಲುಲಕ್ಷ ಕುರಾನಿನ ವಚನಗಳ ಪಠಣ ಮಾಡಿದರೆಂದು ವರದಿಯಾಗಿದೆ. ಸರ್ವಶಕ್ತ ಭಗವಂತನು ಈ ಹುತಾತ್ಮನಿಗೆ ಏಳನೆಯ ಸ್ವರ್ಗದಲ್ಲಿ ಅತ್ಯುನ್ನತ ಸ್ಥಾನವನ್ನು ನೀಡಲೆಂಬುದು ಅವರ ಪ್ರಾರ್ಥನೆಯಾಗಿತ್ತು. ಟೈಮ್ಸ್ ಆಫ್ ಇಂಡಿಯಾ ೩೦–೧೧–೨೭ 'ಥ್ರೂ ಇಂಡಿಯನ್ ಐಸ್', ಅಂಕಣ.

ಮುಸಲ್ಮಾನರೆಸಗುತ್ತಿದ್ದ ಅನ್ಯಾಯಗಳನ್ನು ಏಕತೆಗೆ ದಕ್ಕೆ ಬಂದೀತೆಂಬ ಭಯದಿಂದ ಅವರನ್ನು ಮನನಿಸುವ ಮನೋಭಾವ ಗಾಂಧಿಯವರು ಮೋಪ್ಲಾ ದಂಗೆಗಳ ಬಗ್ಗೆ ನೀಡಿದ ಹೇಳಿಕೆಯಲ್ಲಿ ಸ್ಪಷ್ಟವಾಗಿದೆ.

ಮಲಬಾರದಲ್ಲಿ ಮೋಪ್ಲಾಗಳು ಹಿಂದೂಗಳ ಮೇಲೆ ನಡೆಸಿದ ರಕ್ತಕುದಿಯುವಂತಹ ಘೋರಕೃತ್ಯಗಳು ವರ್ಣನಾತೀತವಾಗಿದ್ದವು. ದಕ್ಷಿಣ ಭಾರತದಾದ್ಯಂತ ಪ್ರತಿಯೊಂದು ವರ್ಗದ ಹಿಂದೂಗಳ ಮೇಲೆ ಭಯಾನಕ ಪರಿಣಾಮವಾಯಿತಲ್ಲದೇ, ಕೆಲವು ಖಿಲಾಫತ್ ಮುಖಂಡರು 'ತಮ್ಮ ಧರ್ಮದ ರಕ್ಷಣೆಗಾಗಿ ಮೋಪ್ಲಾಗಳು ನಡೆಸುತ್ತಿರುವ ಸಮರಕ್ಕಾಗಿ ಅವರನ್ನು ಅಭಿನಂದಿಸುವ' ನಿರ್ಣಯಗಳನ್ನು ಸ್ವೀಕರಿಸಿದಾಗ ಹಿಂದೂಗಳ ಭೀತಿ ಇನ್ನೂ ಗಾಢವಾಯಿತು. ಹಿಂದೂ–ಮುಸಲ್ಮಾನ ಐಕ್ಯತೆಗೆ ಕೊಡಬೇಕಾದ ಈ ಬೆಲೆ ಅತ್ಯಂತ ದುಬಾರಿಯದಾಗಿತ್ತೆಂದು ಯಾರಾದರೂ ಹೇಳಬಹುದಾಗಿತ್ತು. ಆದರೆ ಗಾಂಧಿಯವರು ಹಿಂದೂ–ಮುಸ್ಲಿಂ ಏಕತೆಯ ಬಗ್ಗೆ ಎಷ್ಟರಮಟ್ಟಿಗೆ ಭ್ರಾಂತರಾಗಿದ್ದರೆಂದರೆ ಅವರು ಮೋಪ್ಲಾರ ಮತ್ತು ಅವರನ್ನು ಅಭಿನಂದಿಸುತ್ತಿದ್ದ ಖಿಲಾಫತ್ ಮುಖಂಡರುಗಳ ಕೃತ್ಯಗಳನ್ನು ಕಡೆಗಣಿಸಲು ತಯಾರಾದರು. ಅವರು ಮೋಪ್ಲಾಗಳನ್ನು "ಯಾವುದನ್ನು ತಾವು ಧರ್ಮ ಎಂದು ತಿಳಿದಿರುವರೋ ಮತ್ತು ಯಾವುದನ್ನು ಧಾರ್ಮಿಕ ಎಂದು ಆಚರಿಸುತ್ತಿರುವರೋ ಅದರ ರಕ್ಷಣೆಗಾಗಿ ಹೋರಾಡುತ್ತಿರುವ ಶೂರದೇವಭಕ್ತರು" ಎಂದು ಕರೆದರು. ಮೋಪ್ಲಾ ಭೀಕರ ಕೃತ್ಯಗಳ ಬಗ್ಗೆ ಮೌನವಾಗಿದ್ದ ಮುಸಲ್ಮಾನರ ಬಗ್ಗೆ ಪ್ರಸ್ತಾಪಿಸುತ್ತಾ, ಗಾಂಧಿಯವರು ಹಿಂದೂಗಳಿಗೆ ಈ ಮಾತುಗಳನ್ನು ಹೇಳಿದರು:–

> **"ಇಂತಹ ಧರ್ಮಾಂಧ ಘಟನೆಗಳು ಸಂಭವಿಸಿದರೂ ಹಿಂದೂಗಳು ತಮ್ಮ ಧರ್ಮವನ್ನು ರಕ್ಷಿಸಿಕೊಳ್ಳುವವರೆಂಬ ಭಾವನೆಯನ್ನು ಹೊಂದುವ ಧೈರ್ಯ ಮತ್ತು ವಿಶ್ವಾಸ ತಳೆಯಬೇಕು. ಮೋಪ್ಲಾಗಳ ಹುಚ್ಚು ಕೃತ್ಯಗಳನ್ನು ಮುಸಲ್ಮಾನರು ಮೌಖಿಕವಾಗಿ ಖಂಡಿಸುವುದೇ ಮುಸಲ್ಮಾನರ ಸ್ನೇಹದ ಒರೆಗಲ್ಲಲ್ಲ. ಮೋಪ್ಲಾಗಳು ಬಲವಂತ ಮತಾಂತರ ಮಾಡಿಸುವುದು, ಲೂಟಿ ಮುಂತಾದ ಕೃತ್ಯಗಳೆಸಗುವುದಕ್ಕೆ ಮುಸಲ್ಮಾನರು ನಾಚಿಕೆಯಿಂದ ತಲೆತಗ್ಗಿಸಬೇಕು ಮತ್ತು ಮುಂದೆ ಅತ್ಯಂತ ಮತಾಂಧರಿಂದಲೂ ಇಂತಹ ಕೃತ್ಯಗಳು ಜರುಗದಂತೆ ಅವರು ನೋಡಿಕೊಳ್ಳಬೇಕು. ಹಿಂದೂ ಸಮಾಜದವರು ಮೋಪ್ಲಾ ಹುಚ್ಚುತನವನ್ನು ಸಮಚಿತ್ತ ಮತ್ತು ಸ್ಥೈರ್ಯದಿಂದ ಎದುರಿಸಿದ್ದಾರೆಂದೂ ಮತ್ತು ಸುಸಂಸ್ಕೃತ ಮುಸಲ್ಮಾನರು ಈ ಮೋಪ್ಲಾರು ಪ್ರವಾದಿ ಬೋಧನೆಗಳನ್ನು ವಿಕೃತಗೊಳಿಸಿರುವ ಬಗ್ಗೆ ಮನಃಪೂರ್ವಕವಾಗಿ ಪಶ್ಚಾತ್ತಾಪ ಪಡುತ್ತಿದ್ದಾರೆಂದು ನನ್ನ ನಂಬಿಕೆ."**

ಮೋಪ್ಲಾಗಳು ಎಸಗಿದ ಭೀಕರ ಕೃತ್ಯಗಳ ಬಗ್ಗೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸ್ವೀಕರಿಸಿದ ನಿರ್ಣಯ*ವು ಕಾಂಗ್ರೆಸ್ ಮುಸಲ್ಮಾನರ ಭಾವನೆಗಳಿಗೆ ನೋವನ್ನುಂಟುಮಾಡದಂತೆ ಎಷ್ಟು ಎಚ್ಚರ ವಹಿಸಿತ್ತೆಂಬುದು ವ್ಯಕ್ತವಾಗುತ್ತದೆ.

---

* ನಿರ್ಣಯದಲ್ಲಿ ಬಲವಂತ ಮತಾಂತರದ ಕೇವಲ ಮೂರು ಪ್ರಕರಣಗಳು ಮಾತ್ರ ಜರುಗಿದವೆಂದು ಹೇಳಲಾಗಿದೆ!! ಕೇಂದ್ರ ಶಾಸನಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರ ನೀಡುತ್ತಾ (ಜನವರಿ ೧೬, ೧೯೨೨ರಂದು ನಡೆದ ಚರ್ಚೆ) ಸರ್ ವಿಲಿಯಂ ವಿನ್ಸೆಂಟ್ ಹೀಗೆ ಹೇಳಿದರು: "ಮದ್ರಾಸು ಸರಕಾರದ ವರದಿಯ ಪ್ರಕಾರ ಬಲವಂತ ಮತಾಂತರಗಳ ಸಂಖ್ಯೆ ಪ್ರಾಯಶಃ ಸಾವಿರಾರು. ಆದರೆ, ಸ್ವತಸ್ಸಿದ್ಧ ಕಾರಣಗಳಿಗಾಗಿ ನಿಖರವಾದ ಅಂದಾಜು ಮಾಡುವುದು ಎಂದಿಗೂ ಸಾಧ್ಯವಾಗಲಿಕ್ಕಿಲ್ಲ."

"ಮಲಬಾರ್‌ದ ಕೆಲವು ಕ್ಷೇತ್ರಗಳಲ್ಲಿ ಮೋಪ್ಲಾಗಳು ನಡೆಸಿದ ಹಿಂಸಾ ಕೃತ್ಯಗಳ ಬಗ್ಗೆ ಕಾರ್ಯಕಾರಿಣಿಯು ತನ್ನ ಅತೀವ ವಿಷಾದವನ್ನು ವ್ಯಕ್ತಪಡಿಸುತ್ತದೆ. ಈ ಕೃತ್ಯಗಳು ಕಾಂಗ್ರೆಸ್ಸಿನ ಮತ್ತು ಖಿಲಾಫತ್ ಕೇಂದ್ರ ಸಮಿತಿಯ ಸಂದೇಶವನ್ನು ಅರಿಯದೇ ಇರುವ ಜನರು ಭಾರತದಲ್ಲಿ ಇನ್ನೂ ಇದ್ದಾರೆಂಬುದಕ್ಕೆ ಸಾಕ್ಷಿ. ಆದ್ದರಿಂದ ಈ ನಿರ್ಣಯವು ಪ್ರತಿಯೊಬ್ಬ ಕಾಂಗ್ರೆಸ್ ಮತ್ತು ಖಿಲಾಫತ್ ಕಾರ್ಯಕರ್ತರಿಗೆ ಹಿಂದೂಸ್ತಾನದಾದ್ಯಂತ ಅತ್ಯಂತ ಕಠಿಣ ಪ್ರಸಂಗದಲ್ಲಿಯೂ ಅಹಿಂಸೆಯ ಸಂದೇಶವನ್ನು ಪಾಲಿಸಬೇಕೆಂದು ಜನತೆಯಲ್ಲಿ ಪ್ರಚಾರ ಮಾಡುವಂತೆ ಕರೆ ಮಾಡುತ್ತದೆ.

ಮೋಪ್ಲಾಗಳು ಎಸಗಿದ ಹಿಂಸಾಚಾರವನ್ನು ಕಾರ್ಯಕಾರಿಣಿ ಖಂಡಿಸುತ್ತದೆಯಾದರೂ ಅದು ತನ್ನಲ್ಲಿದ್ದ ಪುರಾವೆಗಳಿಂದ ಮೋಪ್ಲಾಗಳ ಅಸಹನೀಯವಾದ ಪ್ರಚೋದನೆಯಿಂದಾಗಿ ಈ ಕೃತಿಗಳನ್ನೆಸಗಿದರೆಂದು ತಿಳಿದುಬರುತ್ತದೆ. ಸರಕಾರದಿಂದ ಮತ್ತು ಅದರ ಪರವಾಗಿ ಪ್ರಕಟಿಸಿದ ವರದಿಗಳು ಏಕಪಕ್ಷೀಯ ಮತ್ತು ಅತ್ಯಂತ ಉತ್ಪ್ರೇಕ್ಷಿಕವಾದವುಗಳಾಗಿವೆ ಮತ್ತು ಶಾಂತಿ ಸುವ್ಯವಸ್ಥೆಯ ಹೆಸರಿನಲ್ಲಿ ಸರಕಾರವೆಸಗಿದ ಜೀವವಿತ್ತಗಳ ಅನಾವಶ್ಯಕ ವಿನಾಶದ ಚಿತ್ರ ಅಸಂಪೂರ್ಣವಾಗಿತ್ತು.

ಮೋಪ್ಲಾಗಳಲ್ಲಿ ಕೆಲವು ಧಮಾಂಧರ ಕೈಯಲ್ಲಿ, ಕೆಲವು ಬಲಾತ್ಕಾರದ ಮತಾಂತರದ ಘಟನೆಗಳ ಬಗ್ಗೆ ಕಾರ್ಯಕಾರಿಣಿ ವಿಷಾದ ವ್ಯಕ್ತಪಡಿಸುತ್ತದೆಯಾದರೂ ಅದು ಸರಕಾರದಿಂದ ಪ್ರಚೋದಿತವಾದ ವರದಿಗಳನ್ನು ನಂಬಬಾರದೆಂದು ಸಾರ್ವಜನಿಕರಿಗೆ ಎಚ್ಚರ ನೀಡುತ್ತದೆ. ಸಮಿತಿಯ ಮುಂದಿರುವ ವರದಿಯ ಪ್ರಕಾರ:

ಬಲವಂತವಾಗಿ ಮೊಹಮದೀಯ ಧರ್ಮಕ್ಕೆ ಮತಾಂತರಗೊಳಿಸಿದವರು ಎಂದು ಹೇಳಲಾದ ಕುಟುಂಬಗಳು ಮಾಂಜೆರಿಯ ಆಸುಪಾಸು ಇವೆ. ಯಾವಾಗಲೂ ಖಿಲಾಫತ್ ಮತ್ತು ಅಸಹಕಾರ ಚಳವಳಿಯನ್ನು ವಿರೋಧಿಸುತ್ತಿದ್ದ ಕೆಲವು ಮತಾಂಧರ ಕೂಟ ಹಿಂದೂಗಳನ್ನು ಮತಾಂತರಕ್ಕೆ ಬಲವಂತ ಮಾಡಿತೆಂಬುದು ಸ್ಪಷ್ಟವಾಗುತ್ತದೆ ಮತ್ತು ನಮಗೆ ದೊರೆತಿರುವ ಮಾಹಿತಿ ಪ್ರಕಾರ ಇಂತಹ ಮೂರು ಪ್ರಕರಣಗಳು ಮಾತ್ರ ಜರುಗಿರುತ್ತವೆ."

ಮುಸಲ್ಮಾನರ ಹಟಮಾರಿ ಕೃತ್ಯಗಳ ಬಗ್ಗೆ ಗಾಂಧಿಯವರು ಮೌನ ತಳೆದ ಕೆಲವು ಪ್ರಕರಣಗಳನ್ನು ಸ್ವಾಮಿ ಶ್ರದ್ಧಾನಂದರು ತಮ್ಮ ವಾರಪತ್ರಿಕೆ ಲಿಬರೇಟರ್‌ನಲ್ಲಿ ಈ ರೀತಿ ದಾಖಲಿಸಿ ಸೆಪ್ಟೆಂಬರ್ ೩೦, ೧೯೨೬ರ ಸಂಚಿಕೆಯಲ್ಲಿ ಅವರು ಬರೆಯುತ್ತಾ ಹೀಗೆ ಹೇಳಿರುತ್ತಾರೆ:

"ಅಸ್ಪೃಶ್ಯತೆಯ ನಿವಾರಣೆ ಕುರಿತು ಅದು ಹಿಂದೂಗಳು ತಮ್ಮ ಹಿಂದಿನ ಪಾಪಗಳಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳುವುದು ಅವರ ಕರ್ತವ್ಯವಾಗಿದೆ ಮತ್ತು ಹಿಂದೂಯೇತರರಿಗೆ ಇದರೊಡನೆ ಯಾವುದೇ ಸಂಬಂಧವಿಲ್ಲವೆಂದು ಅನೇಕ ಬಾರಿ ಅಧಿಕೃತವಾಗಿ ಹೇಳಲಾಗಿದೆ. ಆದರೆ ಮೊಹಮದೀಯ ಮತ್ತು ಕ್ರಿಶ್ಚಿಯನ್ ಕಾಂಗ್ರೆಸ್ಸಿನ ಶ್ರೀಯುತ ಗಾಂಧಿ ವೈಕೋಮ್‌ನಲ್ಲಿ ಮತ್ತು ಇತರ ಕಡೆ ನೀಡಿದ ಆದೇಶದ ವಿರುದ್ಧ ಬಂಡೆದ್ದರು. ಯಾವ ಪಕ್ಷಪಾತಿಯೂ ಆಗಿರದ ಶ್ರೀಯುತ ಯಾಕೂಬ್ ಹಸನ್‌ರವರೂ ಸಹ ಮದ್ರಾಸಿನಲ್ಲಿ ನನಗೆ ಮಾನಪತ್ರ ಅರ್ಪಿಸಲು ಸೇರಿದ್ದ ಸಭೆಯ ಅಧ್ಯಕ್ಷಸ್ಥಾನದಿಂದ ಮಾತನಾಡುತ್ತಾ

**ಮುಸಲ್ಮಾನರು ಭಾರತದ ಎಲ್ಲಾ ಅಸ್ಪೃಶ್ಯರನ್ನು ಇಸ್ಲಾಂ ಧರ್ಮಕ್ಕೆ ಮತಾಂತರಗೊಳಿಸುವುದು ತಮ್ಮ ಕರ್ತವ್ಯವೆಂದು ತಿಳಿಯಬೇಕೆಂದು ಆಜ್ಞಾಪಿಸಿದರು."**

ಆದರೆ ಗಾಂಧಿಯವರು ಮುಸಲ್ಮಾನರಿಗಾಗಲೀ, ಕ್ರಿಶ್ಚಿಯನ್ನರಿಗಾಗಲೀ ಉಪದೇಶ ಪದವಾಗಿ ಏನನ್ನೂ ಹೇಳಲಿಲ್ಲ.

ತಮ್ಮ ಜುಲೈ ೧೯೨೬ರ ಸಂಚಿಕೆಯಲ್ಲಿ ಸ್ವಾಮಿಯವರು ಹೀಗೆ ಬರೆದಿರುತ್ತಾರೆ:

**"ನಾನು ಮಹಾತ್ಮಗಾಂಧಿಯವರ ಗಮನಕ್ಕೆ ತರಬೇಕಾದ ಇನ್ನೊಂದು ಪ್ರಮುಖ ಸಂಗತಿ ಇತ್ತು. ನಾವಿಬ್ಬರೂ ಒಂದು ರಾತ್ರಿ ಒಟ್ಟಿಗೇ ನಾಗಪುರದ ಖಿಲಾಫತ್ ಸಮ್ಮೇಳನಕ್ಕೆ ಹೋಗಿದ್ದೆವು. ಆ ಸಂದರ್ಭದಲ್ಲಿ ಮೌಲಾನಾರಿಂದ ಕುರಾನದ 'ಆಯಾತ' (ವಚನ)ಗಳ ಪಠಣವಾಯಿತು. ಅವುಗಳಲ್ಲಿ ಜೆಹಾದ್ ಮತ್ತು ಕಾಫಿರರನ್ನು ಕೊಲ್ಲುವ ಬಗ್ಗೆ ಪದೇ ಪದೇ ಉಲ್ಲೇಖಗಳಿದ್ದವು. ಆದರೆ ನಾನು ಖಿಲಾಫತ್ ಚಳವಳಿಯ ಈ ಹಂತದ ಬಗ್ಗೆ ಮಹಾತ್ಮರವರ ಗಮನ ಸೆಳೆದಾಗ ಅವರು ನಸುನಗುತ್ತಾ "ಅವು ಬ್ರಿಟಿಷ್ ನೌಕರ ಶಾಹಿಗೆ ಮಾಡಲಾದ ಪ್ರಸ್ತಾಪಗಳೆಂದು" ಹೇಳಿದರು. ಅದಕ್ಕೆ ಉತ್ತರವಾಗಿ ಇವು ಅಹಿಂಸಾ ತತ್ವವನ್ನು ಬುಡಮೇಲು ಮಾಡುತ್ತವೆ ಮತ್ತು ಭಾವನೆಗಳು ಮರುಕಳಿಸಿದಾಗ ಈ ವಚನಗಳನ್ನು ಹಿಂದೂಗಳ ವಿರುದ್ಧ ಉಪಯೋಗಿಸಲು ಮೊಹಮದೀಯ ಮೌಲಾನಗಳು ಹಿಂಜರಿಯಲಿಕ್ಕಿಲ್ಲವೆಂದು ನಾನು ಹೇಳಿದೆ."**

ಸ್ವಾಮಿಯವರು ವಿವರಿಸಿದ ಮೂರನೆಯ ಘಟನೆ ಮೋಪ್ಲಾ ದಂಗೆಗಳಿಗೆ ಸಂಬಂಧಿಸಿದ್ದಾಗಿತ್ತು. ೨೬ನೆಯ ಆಗಸ್ಟ್ ೧೯೨೬ರ ಲಿಬರೇಟರ್‌ನಲ್ಲಿ ಸ್ವಾಮಿಯವರು ಈ ರೀತಿ ಹೇಳಿದ್ದಾರೆ:–

**"ವಿಷಯ ನಿಯಾಮಕ ಸಮಿತಿಯಲ್ಲಿ ಮೋಪ್ಲಾಗಳು ಹಿಂದೂಗಳ ಮೇಲೆ ನಡೆಸಿದ ಅತ್ಯಾಚಾರಗಳನ್ನು ಖಂಡಿಸುವ ಪ್ರಶ್ನೆ ಬಂದಾಗ ಮೊದಲನೆಯ ಎಚ್ಚರಿಕೆ ನೀಡಿದಂತಾಯಿತು. ಮೇಲಿನ ನಿರ್ಣಯವು ಹಿಂದೂಗಳ ಕೊಲೆ ಮತ್ತು ಅವರ ಮನೆಗಳನ್ನು ಸುಟ್ಟಿದ್ದು ಮತ್ತು ಇಸ್ಲಾಂ ಧರ್ಮಕ್ಕೆ ಅವರನ್ನು ಬಲವಂತ ಮತಾಂತರಗೊಳಿಸಿದ್ದಕ್ಕಾಗಿ ಎಲ್ಲಾ ಮೊಪ್ಲಾಗಳನ್ನು ಸಾರಾಸಗಟಾಗಿ ಖಂಡಿಸಿತು. ಹಿಂದೂ ಸದಸ್ಯರೇ ಮೇಲೆ ಹೇಳಿದ ಅಪರಾಧಗಳನ್ನೆಸಗಿದ ಕೆಲವು ವ್ಯಕ್ತಿಗಳನ್ನು ಮಾತ್ರ ಖಂಡಿಸುವಂತೆ ಮೂಲ ನಿರ್ಣಯಕ್ಕೆ ತಿದ್ದುಪಡಿಗಳನ್ನು ಮಂಡಿಸಿದರು. ಆದರೆ ಕೆಲವು ಮುಸಲ್ಮಾನ ಸದಸ್ಯರು ಇದನ್ನೂ ಸಹ ಸಹಿಸಲಾರದಾದರು. ಮೌಲಾನಾ ಫಕೀರ್ ಮತ್ತು ಇತರ ಮೌಲಾನಾಗಳು ಈ ನಿರ್ಣಯವನ್ನು ವಿರೋಧಿಸಿದ್ದಕ್ಕೆ ಆಶ್ಚರ್ಯ ಪಡಬೇಕಾಗಿಲ್ಲ. ಆದರೆ ರಾಷ್ಟ್ರೀಯ ಮುಸಲ್ಮಾನರೆನಿಸಿಕೊಂಡಿದ್ದ ಮೌಲಾನಾ ಹಜರತ್ ಮೊಹಾನಿಯವರು ಈ ನಿರ್ಣಯವು ಮೋಪ್ಲಾ ಪ್ರದೇಶವು ದಾರ್–ಉಲ್–ಅಮನ್ ಆಗಿ ಉಳಿಯದೇ ದಾರ್–ಉಲ್–ಹರಬ್ ಆಗುವಂತೆ ಮಾಡುವುದು ಎಂದು ಅದನ್ನು ವಿರೋಧಿಸಿದಾಗ ಮತ್ತು ಹಿಂದೂಗಳು ಮೋಪ್ಲಾಗಳ ವೈರಿಯಾದ ಬ್ರಿಟಿಷರೊಡನೆ ಕೈಜೋಡಿಸಿದ್ದಾರೆಂದು ಸಂಶಯಪಟ್ಟಾಗ ನನಗೆ ಆಶ್ಚರ್ಯವಾಯಿತು. ಆದ್ದರಿಂದ ಮೋಪ್ಲಾಗಳು ಹಿಂದೂಗಳಿಗೆ ಕುರಾನ್ ಇಲ್ಲವೇ ಖಡ್ಗವನ್ನು ನೀಡುವುದರಲ್ಲಿ ಅವರು ಸರಿಯಾದುದನ್ನೇ ಮಾಡಿದ್ದಾರೆ. ತಮ್ಮನ್ನು ತಾವೇ ಸಾವಿನಿಂದ ರಕ್ಷಿಸಿಕೊಳ್ಳಲು ಹಿಂದೂಗಳು**

**ಮುಸಲ್ಮಾನರಾದರೆ ಇದು ಸ್ವಯಂಪ್ರೇರಿತ ಮತಾಂತರವೇ ಹೊರತು ಬಲವಂತ ಮತಾಂತರವಲ್ಲ. ಕೆಲವೇ ಮೋಪ್ಲಾಗಳ ಕೃತ್ಯವನ್ನು ಖಂಡಿಸುವ ಈ ನಿರ್ಣಯವೂ ಸಹ ಸರ್ವಾನುಮತದಿಂದ ಅಂಗೀಕೃತವಾಗದೇ ಬಹುಮತದಿಂದ ಮಾತ್ರ ಅಂಗೀಕೃತವಾಯಿತು. ಮುಸಲ್ಮಾನರ ದೃಷ್ಟಿಯಲ್ಲಿ ಕಾಂಗ್ರೆಸ್ ತಮ್ಮ ಸ್ಮರಣೆಯ ಬಲದಿಂದಲೇ ಅಸ್ತಿತ್ವದಲ್ಲಿದೆ ಎಂದೂ ಮತ್ತು ಅವರ ವೈಲಕ್ಷಣಗಳನ್ನು ಸ್ವಲ್ಪ ಮಟ್ಟಿಗಾದರೂ ಕಡೆಗಣಿಸುವ ಕಿಂಚಿತ್ ಪ್ರಯತ್ನ ಮಾಡಿದ್ದಾರೆ. ಈಗಿರುವ ತೋರಿಕೆಯ ಏಕತೆಯೂ ಕೂಡ ಅಳಿಸಿಹೋಗುವುದೆಂಬುದರ ಬಗ್ಗೆ ಸೂಚನೆಗಳೂ ಇದ್ದವು."**

ಕೊನೆಯ ಘಟನೆಯು ಶ್ರೀಯುತ ಗಾಂಧಿಯವರು ಆರಂಭಿಸಿದ ವಿದೇಶೀ ಬಟ್ಟೆಗಳನ್ನು ಸುಡುವ ಕಾರ್ಯಕ್ರಮದ್ದಾಗಿತ್ತು. ೩೧ನೆಯ ಆಗಸ್ಟ್ ೧೯೨೬ರ ಲಿಬರೇಟರ್‌ನಲ್ಲಿ ಬರೆಯುತ್ತಾ ಸ್ವಾಮೀಜಿ ಹೀಗೆ ಹೇಳಿದ್ದಾರೆ:

**"ವಿದೇಶಿ ಬಟ್ಟೆಗಳನ್ನು ಸುಡುವುದು ಭಾರತೀಯರ ಧಾರ್ಮಿಕ ಕರ್ತವ್ಯವೆಂದು ಜನತೆ ತೀರ್ಮಾನಿಸಿದಾಗ ಶ್ರೀಯುತರುಗಳಾದ ದಾಸ್, ನೆಹರೂ ಮತ್ತು ಇತರ ಉನ್ನತ ಮುಖಂಡರುಗಳು ಸಾವಿರಾರು ರೂಪಾಯಿ ಬೆಲೆಯ ಬಟ್ಟೆಗಳನ್ನು ಸುಟ್ಟರು. ಆದರೆ ಖಿಲಾಫತ್ ಮುಸಲ್ಮಾನರು ತಮ್ಮಲ್ಲಿದ್ದ ಎಲ್ಲಾ ವಿದೇಶಿ ಬಟ್ಟೆಗಳನ್ನು ತಮ್ಮ ತುರ್ಕಿಯ ಸಹೋದರರ ಉಪಯೋಗಕ್ಕಾಗಿ ಕಳುಹಿಸಿಕೊಡಲು ಮಹಾತ್ಮಾಜಿಯವರಿಂದ ಅನುಮತಿ ಪಡೆದರು. ಇದೂ ಸಹ ನನಗೆ ಅತ್ಯಂತ ಆಘಾತಕಾರವಾಗಿತ್ತು. ಯಾವಾಗಲಾದರೂ ತತ್ವದ ಪ್ರಶ್ನೆ ಉದ್ಭವಿಸಿದಾಗ ಮಹಾತ್ಮಾಜಿಯವರು ಅಚಲರಾಗಿದ್ದು, ಹಿಂದೂಗಳ ಭಾವನೆಗಳಿಗೆ ಕಿಂಚಿತ್ತಾದರೂ ಆದರ ತೋರುತ್ತಿರಲಿಲ್ಲ. ಅದೇ ಮುಸಲ್ಮಾನರಿಂದ ಕರ್ತವ್ಯ ಚ್ಯುತಿಯಾದಾಗ ಅವರು ಸಹಾನುಭೂತಿ ತೋರುತ್ತಿದ್ದರು."**

ಹಿಂದೂ–ಮುಸಲ್ಮಾನ್ ಏಕತೆಗಾಗಿ ಅವರು ಮಾಡಿದ ಪ್ರಯತ್ನಗಳು ಇತಿಹಾಸದಲ್ಲಿ ಎರಡು ಘಟನೆಗಳನ್ನು ಉಲ್ಲೇಖಿಸಬೇಕಾಗಿದೆ. ಶ್ರೀಯುತ ಗಾಂಧಿ ೧೯೨೪ರಲ್ಲಿ ಕೈಗೊಂಡ ಉಪವಾಸ ಮೊದಲನೆಯದಾಗಿದೆ. ಅದು ೨೧ ದಿನಗಳ ಉಪವಾಸವಾಗಿತ್ತು. ಈ ಉಪವಾಸವನ್ನು ಆರಂಭಿಸುವ ಮುಂಚೆ ಗಾಂಧಿಯವರು ಒಂದು ಹೇಳಿಕೆಯನ್ನಿತ್ತು ಅದರಲ್ಲಿ ತಮ್ಮ ಉಪವಾಸದ ಕಾರಣಗಳನ್ನು ವಿವರಿಸಿದರು. ಆ ಹೇಳಿಕೆಯಿಂದಲೇ ಈ ಕೆಳಗಿನ ಮಾತುಗಳನ್ನು ಆಯ್ದುಕೊಳ್ಳಲಾಗಿದೆ:–

**"ಈಗ ಎರಡು ವರ್ಷಗಳ ಹಿಂದಿನವರೆಗೂ ಸ್ನೇಹಿತರಂತೆ ಕೂಡಿ ಕೆಲಸ ಮಾಡುತ್ತಿದ್ದ ಹಿಂದೂಗಳು ಮತ್ತು ಮುಸಲ್ಮಾನರು ಕೆಲವು ಕಡೆ ಈಗ ನಾಯಿ ಬೆಕ್ಕುಗಳಂತೆ ಕಚ್ಚಾಡುತ್ತಿರುವುದನ್ನು ನೋಡಿದರೆ ಅವರು ಕೈಗೊಂಡ ಅಸಹಕಾರ ಚಳವಳಿ ಅಹಿಂಸಾ ಚಳವಳಿಯಾಗಿರಲಿಲ್ಲವೆಂಬ ಅಂಶ ಸ್ಪಷ್ಟವಾಗುತ್ತದೆ. ನಾನು ಮುಂಬಯಿ, ಚೌರಿಚಾರಾ ಮತ್ತು ಇತರ ಅನೇಕ ಪ್ರಸಂಗಗಳಲ್ಲಿ ಇದರ ಚಿಹ್ನೆಗಳನ್ನು ಗುರುತಿಸಿದೆ. ಆಗ ನಾನು ಪ್ರಾಯಶ್ಚಿತ್ತ ಮಾಡಿಕೊಂಡೆ. ಅದು ಪರಿಣಾಮ ಬೀರಿತು. ಆದರೆ ಈ ಹಿಂದೂ–ಮುಸಲ್ಮಾನರ ನಡುವಣ ಬಿಕ್ಕಟ್ಟು ಊಹಾತೀತವಾಗಿತ್ತು. ಕೋಹತ್ ದುರಂತದ ನಂತರ ಇದು ಅಸಹ್ಯವಾಯಿತು. ನಾನು ಸಾಬರ್‌ಮತಿಯಿಂದ ದೆಹಲಿಗೆ ಹೊರಡುವ ಮುನ್ನಾದಿನ, ಶಾಂತಿಯನ್ನು ಕುರಿತಾಗಿ ಮಾಡುವ**

ಭಾಷಣಗಳು ಮತ್ತು ಧರ್ಮೋಪದೇಶಗಳು ನಿರರ್ಥಕವೆಂದು ಸರೋಜಿನಿ ದೇವಿಯವರು ನನಗೆ ಬರೆದರು. ನಾನು ಇದಕ್ಕೆ ಒಂದು ಪರಿಣಾಮಕಾರಿ ಪರಿಹಾರವನ್ನು ಕಂಡು ಹಿಡಿಯಲೇಬೇಕೆಂದು ಅವರು ಈ ಗುರುತರ ಜವಾಬ್ದಾರಿಯನ್ನು ನನ್ನ ಮೇಲೆ ಹೊರಿಸಿದುದರಲ್ಲಿ ಅವರು ಸರಿಯಾದುದನ್ನೇ ಮಾಡಿದ್ದಾರೆ. ಜನತೆಯ ಅಗಾಧ ಶಕ್ತಿಯನ್ನು ಸಂಘಟಿಸುವುದಕ್ಕೆ ನಾನು ಜವಾಬ್ದಾರನಾಗಿರಲಿಲ್ಲವೇ? ಆ ಅಗಾಧ ಶಕ್ತಿ ಸ್ವಯಂ ವಿನಾಶಕಾರಿಯಾದಾಗ ನಾನು ಅದಕ್ಕೆ ಒಂದು ಪರಿಣಾಮಕಾರಿ ಪರಿಹಾರವನ್ನು ಕಂಡುಹಿಡಿಯಲೇ ಬೇಕಾಗಿದೆ.

ಅಮೇಠಿ, ಸಂಭಾಲ್ ಮತ್ತು ಗುಲ್ಬರ್ಗಾದ ಘಟನೆಗಳು ನನ್ನ ಸ್ಥೈರ್ಯವನ್ನು ಸಂಪೂರ್ಣವಾಗಿ ಕುಗ್ಗಿಸಿದವು. ಅಮೇಠಿ ಮತ್ತು ಸಂಭಾಲ್‌ಗಳ ಬಗ್ಗೆ ಹಿಂದೂ ಮತ್ತು ಮುಸಲ್ಮಾನ್ ಸ್ನೇಹಿತರು ಸಿದ್ಧಪಡಿಸಿದ ವರದಿಗಳನ್ನು ಓದಿದ್ದೆ. ಗುಲ್ಬರ್ಗಾಕ್ಕೆ ಹೋಗಿದ್ದ ನನ್ನ ಹಿಂದೂ ಮತ್ತು ಮುಸಲ್ಮಾನ್ ಸ್ನೇಹಿತರ ಜಂಟಿ ವರದಿಗಳ ಬಗ್ಗೆ ತಿಳಿದುಕೊಂಡಿದ್ದ. ನನಗೆ ಇದರಿಂದ ಅತೀವ ದುಃಖವಾಗಿತ್ತು. ಆದಾಗ್ಯೂ ನನ್ನಲ್ಲಿ ಇದಕ್ಕೆ ಯಾವ ಪರಿಹಾರವೂ ಇರಲಿಲ್ಲ. ಏನಾದರೂ ಮಾಡಲೇಬೇಕಾಗಿತ್ತು. ನಾನು ನೋವು ಮತ್ತು ತಳಮಳಗಳಿಂದ ಎರಡು ರಾತ್ರಿ ಕಳೆದೆ. ಬುಧವಾರ ನನಗೆ ಪರಿಹಾರ ಹೊಳೆಯಿತು. ನಾನು ಪ್ರಾಯಶ್ಚಿತ್ತ ಮಾಡಿಕೊಳ್ಳಲೇಬೇಕು.

ನನ್ನನ್ನು ಪ್ರೀತಿಸುವುದಾಗಿ ಹೇಳುತ್ತಿರುವ ನನ್ನ ಹಿಂದೂ ಮತ್ತು ಮುಸಲ್ಮಾನ ಸ್ನೇಹಿತರಿಗೆ ಇದು ಒಂದು ಎಚ್ಚರಿಕೆ. ಅವರು ನಿಜವಾಗಿಯೂ ನನ್ನನ್ನು ಪ್ರೀತಿಸುವುದಾದರೆ ಮತ್ತು ನಾನು ಅವರ ಪ್ರೀತಿಪಾತ್ರನಾಗಿದ್ದರೆ ಅವರು ತಮ್ಮ ಅಂತರಾಳದಲ್ಲಿ ದೇವರನ್ನು, ನಿರಾಕರಿಸಿರುವ ಘೋರ ಪಾಪಕ್ಕಾಗಿ ನನ್ನೊಡನೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು.

ಹಿಂದೂ ಮತ್ತು ಮುಸಲ್ಮಾನರ ಪ್ರಾಯಶ್ಚಿತ್ತ ಕೇವಲ ಉಪವಾಸ ಮಾಡುವುದಲ್ಲ. ಅದು ತಮ್ಮ ಕೃತ್ಯಗಳನ್ನು ಕೈಬಿಡುವುದೇ ಆಗಿದೆ. ಮುಸಲ್ಮಾನರು ತಮ್ಮ ಹಿಂದೂ ಸಹೋದರರ ಬಗ್ಗೆ ಯಾವುದೇ ದ್ವೇಷವನ್ನು ಹೊಂದಿರದಿರುವುದು ಮತ್ತು ಅದೇ ರೀತಿಯಲ್ಲಿ ಹಿಂದೂಗಳು ತಮ್ಮ ಮುಸಲ್ಮಾನ ಸಹೋದರರ ಬಗ್ಗೆ ಯಾವುದೇ ದ್ವೇಷ ಹೊಂದಿರದಿರುವುದೇ ನಿಜವಾದ ಪ್ರಾಯಶ್ಚಿತ್ತವೆನಿಸುವುದು.

ನಾನು ಯಾವ ಸ್ನೇಹಿತರೊಡನೆಯೂ ಆಲೋಚಿಸಲಿಲ್ಲ– ಬುಧವಾರದಂದು ಬಹಳ ಹೊತ್ತು ನನ್ನ ಹತ್ತಿರವೇ ಇದ್ದ ಮೌಲಾನಾ ಮೊಹಮ್ಮದ್ ಆಲಿಯವರೊಡನೆಯೂ ಸಹ ಆಲೊಚಿಸಲಿಲ್ಲ– ಇವರು ನಾನು ಯಾರ ಆತಿಥ್ಯದಲ್ಲಿದ್ದೇನೋ ಆ ಮೌಲಾನಾ ಮೊಹಮ್ಮದ್ ಆಲಿಯವರಲ್ಲ.

ಆದರೆ ಒಬ್ಬ ಮುಸಲ್ಮಾನರ ಮನೆಯಲ್ಲಿ ಉಪವಾಸ ಕೈಗೊಳ್ಳುವುದು ಸರಿಯೇ? (ಆಗ ಗಾಂಧಿಯವರು ದೆಹಲಿಯಲ್ಲಿ ಶ್ರೀಯುತ ಮೊಹಮದ್ ಆಲಿಯವರ ಅತಿಥಿಯಾಗಿದ್ದರು.) ಅದು ಸರಿಯಾಗಿತ್ತು. ಉಪವಾಸವು ಯಾವುದೇ ಒಬ್ಬರ ವಿರುದ್ಧ ದ್ವೇಷದಿಂದ ಕೂಡಿದುದಾಗಿರಲಿಲ್ಲ. ನಾನು ಒಬ್ಬ ಮುಸಲ್ಮಾನರ ಮನೆಯಲ್ಲಿದ್ದುದು ಇಂತಹ ಯಾವುದೇ ಅರ್ಥಕ್ಕೆ ಅವಕಾಶವಿಲ್ಲ. ಈ ಉಪವಾಸವನ್ನು ಒಬ್ಬ ಮುಸಲ್ಮಾನನ ಮನೆಯಲ್ಲಿ ಆರಂಭಿಸಿ ಅಲ್ಲಿಯೇ ಮುಗಿಸುವುದು ಅತ್ಯಂತ ಯುಕ್ತವಾದದ್ದು.

**ಮೊಹಮ್ಮದ್ ಆಲಿ ಯಾರು? ಉಪವಾಸಕ್ಕೆ ಎರಡು ದಿನ ಮುಂಚೆಯಷ್ಟೇ ನಾನು ಅವರೊಡನೆ ಒಂದು ಖಾಸಗಿ ವಿಷಯ ಚರ್ಚೆ ಮಾಡಿದಾಗ ನಾನು ಅವರಿಗೆ ನಿಮ್ಮ ಅಭಿಪ್ರಾಯ ನನ್ನದೇ ಮತ್ತು ನನ್ನ ಅಭಿಪ್ರಾಯ ನಿಮ್ಮದೇ ಆಗಿದೆ ಎಂದು ಹೇಳಿದ್ದೆ. ಮೊಹಮದ್ ಆಲಿಯವರ ಮನೆಯಲ್ಲಿ ನನಗೆ ದೊರೆತ ಆತ್ಮೀಯತೆಗಿಂತ ಹೆಚ್ಚಿನದನ್ನು ನಾನು ಇನ್ನೆಲ್ಲಿಯೂ ಪಡೆಯಲಾರೆ ಎಂದು ಕೃತಜ್ಞತಾಪೂರ್ವಕವಾಗಿ ಸಾರ್ವಜನಿಕರಿಗೆ ತಿಳಿಸಬಯಸುತ್ತೇನೆ. ನನಗೇನು ಬೇಕೆಂಬುದನ್ನು ಅವರು ಮುಂಚೆಯೇ ತಿಳಿಯುತ್ತಾರೆ. ಅವರ ಕುಟುಂಬದ ಪ್ರತಿಯೊಬ್ಬರ ವಿಚಾರದಲ್ಲಿ ನನ್ನ ಸುಖ ಮತ್ತು ಸಂತೋಷಗಳೇ ಇದ್ದವು. ಡಾ.ಅನ್ಸಾರಿ ಮತ್ತು ಡಾ.ಅಬ್ದುಲ್ ರೆಹಮಾನ್‌ರವರು ನನ್ನ ವೈದ್ಯಕೀಯ ಸಲಹೆಗಾರರಾಗಿರಲು ತಾವೇ ಮುಂದಾಗಿದ್ದಾರೆ. ಅವರು ಪ್ರತಿ ದಿನ ನನ್ನನ್ನು ಪರೀಕ್ಷಿಸುತ್ತಾರೆ. ನನ್ನ ಜೀವನದಲ್ಲಿ ಅನೇಕ ಸಂತೋಷಕರ ಸಂದರ್ಭಗಳಿವೆ. ಆದರೆ ಇಲ್ಲಿಯ ಸಂತೋಷ ಹಿಂದಿನ ಯಾವ ಸಂತೋಷಕ್ಕೂ ಕಡಿಮೆಯಾಗಿಲ್ಲ. ಆಹಾರವೇ ಸರ್ವಸ್ವವಲ್ಲ. ನಾನು ಇಲ್ಲಿ ಅತ್ಯಂತ ಗಾಢವಾದ ಪ್ರೀತಿಯನ್ನು ಆನಂದಿಸುತ್ತಿರುವೆ. ಇದು ನನಗೆ ಅನ್ನಕ್ಕಿಂತಲೂ ಹೆಚ್ಚು ಮಹತ್ವದ್ದಾಗಿದೆ.**

**ನಾನು ಮುಸಲ್ಮಾನ ಸ್ನೇಹಿತರೊಂದಿಗೆ ಇಷ್ಟು ನಿಕಟವಾಗಿರುವುದರಿಂದ ನನಗೆ ಹಿಂದೂಗಳ ಮನಸ್ಸನ್ನು ತಿಳಿದುಕೊಳ್ಳಲಾಗುವುದಿಲ್ಲ ಎಂಬ ವದಂತಿ ಇದೆ. ನಾನೇ ಹಿಂದೂ ಮನಸ್ಸಿನವನಾಗಿದ್ದೇನೆ. ನನ್ನ ದೇಹದ ಕಣಕಣವೂ ಹಿಂದೂ ಆಗಿರುವಾಗ ಹಿಂದೂ ಮನಸ್ಸನ್ನು ತಿಳಿದುಕೊಳ್ಳಲು ನಾನು ಹಿಂದೂಗಳ ಮಧ್ಯೆ ವಾಸಿಸಬೇಕಾಗಿಲ್ಲ. ಅತ್ಯಂತ ಪ್ರತಿಕೂಲ ಪ್ರಭಾವದ ಮಧ್ಯ ನನ್ನ ಹಿಂದೂತ್ವ ಹಸನಾಗಿರದೇ ಹೋದರೆ ಅದು ಬಹಳ ಅಶಕ್ತವಾಗಿರಬೇಕು. ಆದರೆ ಮುಸಲ್ಮಾನರ ಮನಸ್ಸನ್ನು ಅರಿತುಕೊಳ್ಳಲು ಶ್ರಮಿಸಲೇಬೇಕು. ಮುಸಲ್ಮಾನರಲ್ಲಿ ಅತ್ಯಂತ ಉತ್ತಮರ ಹೆಚ್ಚು ಹೆಚ್ಚು ಸಮೀಪಕ್ಕೆ ಬಂದಾಗಲೇ ಅವರನ್ನು ಮತ್ತು ಅವರ ಕಾರ್ಯಗಳನ್ನು ಅರಿತುಕೊಳ್ಳುವಲ್ಲಿ ಹೆಚ್ಚು ನ್ಯಾಯಯುತವಾಗಬಲ್ಲೆ. ಈ ಎರಡೂ ಸಮುದಾಯಗಳ ನಡುವೆ ಉತ್ಕೃಷ್ಟ ಸಿಮೆಂಟ್ ಆಗಲು ನಾನು ಪ್ರಯತ್ನಿಸುತ್ತಿದ್ದೇನೆ. ಅವಶ್ಯ ಬಿದ್ದಲ್ಲಿ ನನ್ನ ರಕ್ತ ಬಸಿದಾದರೂ ಇಬ್ಬರನ್ನೂ ಒಂದುಗೂಡಿಸುವ ಸಾಧನವಾಗುವುದೇ ನನ್ನ ಬಯಕೆ. ಆದರೆ ಇದನ್ನು ಮಾಡುವ ಮುಂಚೆ ನಾನು ಹಿಂದೂಗಳನ್ನು ಪ್ರೀತಿಸಿದಷ್ಟೇ ಮುಸಲ್ಮಾನರನ್ನು ಪ್ರೀತಿಸುತ್ತೇನೆಂಬುದನ್ನು ಮುಸಲ್ಮಾನರಿಗೆ ಸಿದ್ಧ ಮಾಡಿ ತೋರಿಸಬೇಕಾಗಿದೆ. ಎಲ್ಲರನ್ನೂ ಸಮನಾಗಿ ಪ್ರೀತಿಸಬೇಕೆಂದು ನನ್ನ ಧರ್ಮ ನನಗೆ ಬೋಧಿಸುತ್ತದೆ. ಇದರಲ್ಲಿ ನನಗೆ ನನ್ನ ಭಗವಂತ ಸಹಾಯ ಮಾಡಲಿ! ಇತರ ಅಂಶಗಳೂ ಅಲ್ಲದೇ ನನ್ನ ಉಪವಾಸವೂ ಸಮಾನ ಮತ್ತು ಸ್ವಾರ್ಥರಹಿತ ಪ್ರೀತಿಗಾಗಿ ನನ್ನನ್ನು ಅಣಿಗೊಳಿಸುವ ಉದ್ದೇಶವನ್ನು ಹೊಂದಿದೆ."**

ಈ ಉಪವಾಸವು ಏಕತಾ ಸಮ್ಮೇಳನಗಳನ್ನು ಹುಟ್ಟು ಹಾಕಿತು. ಆದರೆ ಈ ಏಕತಾ ಸಮ್ಮೇಳನಗಳು ಕೆಲವು ಭಾವನಾತ್ಮಕ ನಿರ್ಣಯಗಳನ್ನು ಸ್ವೀಕರಿಸುವುದಕ್ಕಿಂತ ಹೆಚ್ಚೇನೂ ಮಾಡಲಿಲ್ಲ ಮತ್ತು ಆ ನಿರ್ಣಯಗಳು ಘೋಷಣೆಯಾಗುತ್ತಿದ್ದಂತೆಯೇ ಉಲ್ಲಂಘಿಸಲ್ಪಟ್ಟವು.

ಹಿಂದೂ–ಮುಸ್ಲಿಂ ಏಕತೆಯನ್ನು ಸ್ಥಾಪಿಸುವಲ್ಲಿ ಶ್ರೀಯುತ ಗಾಂಧಿಯವರ ಪಾತ್ರದ ಈ ಕಿರು ಚರಿತ್ರೆಯನ್ನು ಕೋಮು ಒಪ್ಪಂದ ಸಂಬಂಧವಾಗಿ ನಡೆದ ಸಂಧಾನಗಳ ಬಗ್ಗೆ ಅವರ ಮನೋಭಾವನೆಯ ವಿವರಣೆಯೊಂದಿಗೆ ಮುಗಿಸಬಹುದು. ಅವರು ಮುಸಲ್ಮಾನರಿಗೆ ಸಂಪೂರ್ಣಾಧಿಕಾರದ ಖಾಲಿ ಚೆಕ್ ನೀಡಲು ಮುಂದಾದರು. ಈ ಖಾಲಿ ಚೆಕ್ಕು ಮುಸಲ್ಮಾನರನ್ನು ಕೆರಳಿಸಿತು. ಏಕೆಂದರೆ ಅವರು ಇದನ್ನು

ಜಾರಿಕೊಳ್ಳುವ ತಂತ್ರ ಎಂದು ಅರ್ಥ ಮಾಡಿದರು. ಅವರು ದುಂಡು ಮೇಜಿನ ಪರಿಷತ್ತಿನಲ್ಲಿ ಪ್ರತ್ಯೇಕ ಚುನಾಯಕ ಸಮುದಾಯ ಪದ್ಧತಿಯನ್ನು ವಿರೋಧಿಸಿದರು. ಕೋಮು ತೀರ್ಪಿನಲ್ಲಿ ಅದನ್ನು ಮುಸಲ್ಮಾನರಿಗೆ ಕೊಡಮಾಡಿದಾಗ ಶ್ರೀಯುತ ಗಾಂಧಿ ಮತ್ತು ಕಾಂಗ್ರೆಸ್ ಅದಕ್ಕೆ ಒಪ್ಪಲಿಲ್ಲ. ಅದರ ಮೇಲೆ ಮತದಾನ ಮಾಡುವ ಪರಿಸ್ಥಿತಿ ಉಂಟಾದಾಗ ಅದನ್ನು ಒಪ್ಪದ ಅಥವಾ ನಿರಾಕರಿಸದಂತಹ ವಿಚಿತ್ರ ನಿಲುವು ತಳೆದರು.

ಇದು ಹಿಂದು–ಮುಸ್ಲಿಂ ಏಕತೆಯ ದಿಶೆಯಲ್ಲಿ ಶ್ರೀಯುತ ಗಾಂಧಿಯವರ ಪ್ರಯತ್ನಗಳ ಇತಿಹಾಸ. ಈ ಪ್ರಯತ್ನಗಳು ನೀಡಿದ ಫಲ ಏನು? ಈ ಪ್ರಶ್ನೆಗೆ ಉತ್ತರ ನೀಡುವುದಕ್ಕಾಗಿ ಈ ಎರಡೂ ಕೋಮುಗಳ ನಡುವೆ ೧೯೨೦–೪೦ರ ಅವಧಿಯಲ್ಲಿದ್ದ ಸಂಬಂಧಗಳನ್ನು ಪರಿಶೀಲಿಸುವುದು ಅವಶ್ಯವಾಗಿದೆ. ಏಕೆಂದರೆ ಇದೇ ಅವಧಿಯಲ್ಲಿಯೇ ಶ್ರೀಯುತ ಗಾಂಧಿಯವರು ಈ ಏಕತೆಯನ್ನುಂಟುಮಾಡಲು ಅತ್ಯಂತ ಪರಿಶ್ರಮಿಸಿದರು. ಈ ಎರಡೂ ಕೋಮುಗಳ ನಡುವಣ ಸಂಬಂಧವನ್ನು ಹಳೆಯ ಇಂಡಿಯಾ ಸರ್ಕಾರ ಕಾಯ್ದೆಯ ಪ್ರಕಾರ ಇಂಡಿಯಾ ಸರ್ಕಾರ ಪ್ರತಿ ವರ್ಷ ಸಂಸತ್ತಿಗೆ ಇಂಡಿಯಾದ ವಿಷಯಗಳ ಬಗ್ಗೆ ಸಲ್ಲಿಸುತ್ತಿದ್ದ ವಾರ್ಷಿಕ ವರದಿಗಳನ್ನು ಚೆನ್ನಾಗಿ ವಿವರಿಸಲಾಗಿದೆ. ಈ ವರದಿಗಳಿಂದಲೇ* ನಾನು ಇನ್ನು ಮುಂದೆ ಹೇಳಲಾಗುವ ಸಂಗತಿಗಳನ್ನು ತೆಗೆದುಕೊಂಡಿದ್ದೇನೆ.

ಮಲಬಾರ್‌ನಲ್ಲಿ ಸಂಭವಿಸಿದ ಮೋಪ್ಲಾ ದಂಗೆ ಆರಂಭವಾದ ವರ್ಷ ೧೯೨೦ರಿಂದ ಆರಂಭಿಸೋಣ. ಈ ದಂಗೆ ಎರಡು ಮುಸಲ್ಮಾನ ಸಂಘಟನೆಗಳಾಗಿದ್ದ ಖುದ್ದಾಮ್–ಇ–ಕಾಬಾ (ಮೆಕ್ಕಾ ಕ್ಷೇತ್ರದ ಸೇವಕರು) ಮತ್ತು ಕೇಂದ್ರ ಖಿಲಾಫತ್ ಸಮಿತಿಗಳು ಕೈಗೊಂಡ ಚಳವಳಿಯ ಪರಿಣಾಮವಾಗಿತ್ತು. ಈ ಚಳವಳಿಗಾರರು ಬ್ರಿಟಿಷ್ ಸರ್ಕಾರದ ಅಧೀನದಲ್ಲಿರುವ ಇಂಡಿಯಾ ದೇಶವು ದಾರ್–ಉಲ್–ಹರಬ್ ಆಗಿದ್ದು ಮುಸಲ್ಮಾನರು ಅದರ ವಿರುದ್ಧ ಹೋರಾಡಬೇಕು. ಅವರಿಗೆ ಅದು ಅಸಾಧ್ಯವಾದರೆ ಅವರು ಅದಕ್ಕೆ ಪರ್ಯಾಯವಾಗಿ ಹಿಜರತ್ ತತ್ವವನ್ನು ಕಾರ್ಯಗತಗೊಳಿಸಬೇಕು ಎಂಬ ಸಿದ್ಧಾಂತವನ್ನು ಚಳುವಳಿಗಾರರು ಬೋಧಿಸಿದರು. ಈ ಚಳುವಳಿಯಿಂದ ಮೋಪ್ಲಾಗಳು ಕ್ಷಿಪ್ರಗತಿಯಲ್ಲಿ ಈ ಸಿದ್ಧಾಂತದಿಂದ ಉದ್ರೇಕಗೊಂಡರು. ಇದರಿಂದ ಆರಂಭವಾದ ದಂಗೆ ಬ್ರಿಟಿಷ್ ಸರ್ಕಾರದ ವಿರುದ್ಧವಾಗಿತ್ತು. ಬ್ರಿಟಿಷ್ ಸರ್ಕಾರವನ್ನು ಉರುಳಿಸಿ, ಅದರ ಸ್ಥಾನದಲ್ಲಿ ಇಸ್ಲಾಂ ರಾಜ್ಯವನ್ನು ಸ್ಥಾಪಿಸುವುದೇ ಅವರ ಗುರಿಯಾಗಿತ್ತು. ಚೂರಿ, ತಕ್ತಿ ಮತ್ತು ಭರ್ಚಿಗಳನ್ನು ಗುಟ್ಟಾಗಿ ತಯಾರು ಮಾಡಲಾಯಿತು ಮತ್ತು ಬ್ರಿಟಿಷ್ ಸತ್ತೆಯ ಮೇಲೆ ಧಾಳಿ ಮಾಡಲು ಹತಾಶ ವ್ಯಕ್ತಿಗಳ ಕೂಟಗಳು ಸಜ್ಜಾದವು. ಆಗಸ್ಟ್ ೨೦ರಂದು ಮೋಪ್ಲಾಗಳು ಮತ್ತು ಬ್ರಿಟಿಷ್ ಸೈನ್ಯಗಳ ನಡುವೆ ಪಿರುನಂಗ್ಡಿ ಎಂಬ ಸ್ಥಳದಲ್ಲಿ ಕದನವಾಯಿತು. ಅನೇಕ ಕಡೆ ರಸ್ತೆಗಳನ್ನು ಅಡ್ಡಗಟ್ಟಲಾಯಿತು. ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸಿ ಹಾಕಲಾಯಿತು ಮತ್ತು ರೈಲು ಮಾರ್ಗವನ್ನು ನಾಶ ಮಡಲಾಯಿತು. ಆಡಳಿತ ಕುಸಿದುಬಿದ್ದ ಕೂಡಲೇ ಮೋಪ್ಲಾಗಳು ಸ್ವರಾಜ್ಯ ಸ್ಥಾಪನೆಯನ್ನು ಘೋಷಿಸಿದರು. ಆಲಿ ಮುದಲಿಯಾರ್ ಎಂಬ ಒಬ್ಬ ವ್ಯಕ್ತಿಯನ್ನು ರಾಜನೆಂದು ಘೋಷಿಸಲಾಯಿತಲ್ಲದೆ ಖಿಲಾಫತ್ ಧ್ವಜಗಳನ್ನು ಹಾರಿಸಲಾಯಿತು ಮತ್ತು ಎರ್ನಾಡ್ ಮತ್ತು ವಲ್ಲುರಾಣಾಗಳನ್ನು ಖಿಲಾಫತ್ ರಾಜ್ಯ(ಆಧಿಪತ್ಯ)ಗಳೆಂದು ಸಾರಲಾಯಿತು. ಇದು ಬ್ರಿಟಿಷ್ ಸರ್ಕಾರದ ವಿರುದ್ಧ ನಡೆದ ದಂಗೆ ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು. ಆದರೆ ಮಲಬಾರದ ಹಿಂದೂಗಳ ಕುರಿತ ಮೋಪ್ಲಾಗಳ ವರ್ತನೆ ಮಾತ್ರ ಆಘಾತಕರವಾಗಿತ್ತು. ಮೋಪ್ಲಾಗಳ ಕೈಯಲ್ಲಿ ಹಿಂದೂಗಳ

* ಈ ವರದಿಗಳ ಮಾಲೆ ಇಂಡಿಯಾ ಇನ್ ೧೯೨೦ ಎಂದು ಕರೆಯಲಾಗಿದೆ.

ಪಾಡು ದಾರುಣವಾಗಿತ್ತು. ಸಂಕ್ಷಿಪ್ತವಾಗಿ ಹೇಳಬೇಕಾದರೆ ಕೊಲೆ, ಬಲಾತ್ಕಾರಯುತ ಮತಾಂತರ, ದೇವಾಲಯಗಳ ಪಾವಿತ್ರ್ಯನಾಶ, ಸ್ತ್ರೀಯರ ಮೇಲೆ ಅತ್ಯಾಚಾರ, ಗರ್ಭಿಣಿಯ ಗರ್ಭ ಸೀಳುವುದು ಮುಂತಾದ ಅತ್ಯಾಚಾರಗಳು, ಕೊಳ್ಳೆ, ಲೂಟಿ ಮುಂತಾದ ವಿನಾಶಕಾರಿ ಕೃತ್ಯಗಳೆನ್ನಸಲಾಯಿತು. ಇವೆಲ್ಲ ಕ್ರೂರ ಮತ್ತು ಅನಿಯಮಿತ ಅನಾಗರಿಕ ಕೃತ್ಯಗಳು ಮೊಪ್ಲಾಗಳಿಂದ ಹಿಂದೂಗಳ ಮೇಲೆ ವಿಸ್ತೃತ ಪ್ರದೇಶದಲ್ಲಿ ಕಠಿಣ ಮಾರ್ಗಗಳ ಮೂಲಕ ಶಾಂತಿ ಸ್ಥಾಪಿಸಲು ಸೈನ್ಯವನ್ನು ಕಳುಹಿಸುವವರೆಗೂ ಅವ್ಯಾಹತವಾಗಿ ನಡೆದೇ ಇದ್ದವು. ಇದು ಹಿಂದೂ–ಮುಸಲ್ಮಾನ ದಂಗೆಯಾಗಿರಲಿಲ್ಲ. ಇದು ಒಂದು ಬಾರ್ಥೆಲೋಮಿಯಾವೇ ಆಗಿದ್ದಿತು. ಹತರಾದವರ, ಗಾಯಗೊಂಡವರ ಮತ್ತು ಬಲವಂತ ಮತಾಂತರಕ್ಕೊಳಗಾದ ಹಿಂದೂಗಳ ಸಂಖ್ಯೆ ತಿಲಿದಿಲ್ಲ. ಆದರೆ ಆ ಸಂಖ್ಯೆ ಬೃಹತ್ತಾಗಿತ್ತೆಂದು ಮಾತ್ರ ಹೇಳಬಹುದು.

೧೯೨೧–೨೨ನೆಯ ಸಾಲಿನಲ್ಲಿ ಕೋಮು ವೈಷಮ್ಯಗಳು ಶಾಂತಗೊಳ್ಳಲಿಲ್ಲ. ಪಂಜಾಬ್ ಮತ್ತು ಬಂಗಾಳಗಳಲ್ಲಿ ಮೊಹರಮ್ ಆಚರಣೆಯ ಸಂದರ್ಭದಲ್ಲಿ ಗಂಭೀರ ಸ್ವರೂಪದ ದಂಗೆಗಳಾದವು. ಅದರಲ್ಲಿಯೂ ಪಂಜಾಬಿನಲ್ಲಿಯ ಮುಲ್ತಾನದಲ್ಲಿ ಕೋಮು ಪ್ರಕೋಪ ಅತ್ಯಂತ ಹೆಚ್ಚಾಗಿತ್ತು ಮತ್ತು ಮರಣಗಳ ಸಂಖ್ಯೆ ಕಡಿಮೆಯಾಗಿದ್ದಾಗ್ಯೂ ಕೂಡ ಆಸ್ತಿಪಾಸ್ತಿಗೆ ಹೆಚ್ಚು ನಷ್ಟವಾಗಿತ್ತು.

೧೯೨೨–೨೩ ಶಾಂತಿಯುತವಾಗಿದ್ದಾಗ್ಯೂ ೧೯೨೩–೨೪ರಲ್ಲಿ ಎರಡೂ ಕೋಮುಗಳ ನಡುವಣ ಸಂಬಂಧ ಪ್ರಕ್ಷುಬ್ಧವಾಗಿತ್ತು. ಆದರೆ ಕೋಹತ್ ನಗರದಲ್ಲಿ ಉಂಟಾದ ದಾರುಣ ಪರಿಸ್ಥಿತಿ ಬೇರೆ ಯಾವ ಸ್ಥಳಗಳಲ್ಲಿಯೂ ಉಂಟಾಗಲಿಲ್ಲ. ಈ ಪರಿಸ್ಥಿತಿಯುಂಟಾಗಲು ಒಂದು ಉಗ್ರ ಇಸ್ಲಾಂ ವಿರೋಧಿ ಕವನವನ್ನು ಪ್ರಕಟಿಸಿ– ಹಂಚಿದ ಕಿರುಹೊತ್ತಿಗೆಯೇ ಕಾರಣವಾಗಿತ್ತು. ೧೯೨೪ರ ಸೆಪ್ಟೆಂಬರ್ ೯ ಮತ್ತು ೧೦ರಂದು ಭೀಕರ ದಂಗೆಗಳು ಸಂಭವಿಸಿ ಒಟ್ಟು ೧೫೫ ಜನರು ಕೊಲ್ಲಲ್ಪಟ್ಟರು ಇಲ್ಲವೇ ಗಾಯಗೊಂಡರು. ಅಂದಾಜು ೯ ಲಕ್ಷ ಬೆಲೆಯ ಆಸ್ತಿಯನ್ನು ನಾಶ ಮಾಡಲಾಯಿತು ಮತ್ತು ದೊಡ್ಡ ಪ್ರಮಾಣದಲ್ಲಿ ಆಸ್ತಿಯನ್ನು ಲೂಟಿ ಮಾಡಲಾಯಿತು. ಈ ಹತ್ಯಾಕಾಂಡದ ಪರಿಣಾಮವಾಗಿ ಎಲ್ಲಾ ಹಿಂದೂಗಳು ಕೋಹತ್ ನಗರವನ್ನು ತ್ಯಜಿಸಿ ವಲಸೆ ಹೋದರು. ಸುದೀರ್ಘ ಸಂಧಾನದ ನಂತರ ಸರ್ಕಾರವು ಕೇವಲ ನಿರ್ಬಂಧಕ್ಕೊಳಗಾದಂತೆ ದಂಗೆಗಳಲ್ಲಿ ಭಾಗವಹಿಸಿದವರ ವಿರುದ್ಧ ಖಟ್ಲೆಗಳನ್ನು ಕೈಬಿಡುವುದಾಗಿ ನೀಡಲಾದ ಭರವಸೆಯ ಮೇಲೆ ಎರಡೂ ಕೋಮುಗಳು ರಾಜಿಯಾಗಿ ಒಂದು ಒಪ್ಪಂದ ಏರ್ಪಟ್ಟಿತು. ದಂಗೆಗಳಲ್ಲಿ ನೊಂದವರಿಗೆ ಅವರ ಉದ್ಯೋಗ–ವ್ಯವಹಾರಗಳನ್ನು ಪುನಃ ಆರಂಭಿಸಲು ಮತ್ತು ಮನೆಗಳನ್ನು ಕಟ್ಟಿಕೊಳ್ಳಲು ಸರ್ಕಾರವು ೫ ಲಕ್ಷ ರೂಪಾಯಿಗಳವರೆಗೆ ಬಡ್ಡಿರಹಿತ ಸಾಲಗಳನ್ನು ಮಂಜೂರು ಮಾಡಿತು. ಆದರೆ ಒಪ್ಪಂದವಾಗಿ ವಲಸೆ ಹೋದವರು ಕೋಹತ್‌ಗೆ ವಾಪಸಾದ ಮೇಲೂ ಸಹ ಶಾಂತಿ ಸ್ಥಾಪನೆಯಾಗಲಿಲ್ಲ ಮತ್ತು ೧೯೨೪–೨೫ರಾದ್ಯಾಂತ ಹಿಂದೂ ಮುಸಲ್ಮಾನ ಸಾಮಾನ್ಯ ಜನ ಸಮೂಹಗಳ ನಡುವೆ ದೇಶದ ವಿವಿಧ ಭಾಗಗಳಲ್ಲಿ ಗಲಭೆಗಳು ಶೋಚನೀಯ ಪ್ರಮಾಣದಲ್ಲಿ ಸಂಭವಿಸಿದವು. ಬೇಸಿಗೆಯ ತಿಂಗಳುಗಳಲ್ಲಿ ಅತ್ಯಂತ ವ್ಯಥೆಯುಂಟುಮಾಡುವಷ್ಟು ಸಂಖ್ಯೆಯಲ್ಲಿ ದಂಗೆಗಳು ಸಂಭವಿಸಿದವು. ಜುಲೈ ತಿಂಗಳಲ್ಲಿ ದೆಹಲಿಯಲ್ಲಿ ಹಿಂದೂ–ಮುಸಲ್ಮಾನರ ನಡುವೆ ಭೀಕರ ಹೊಡೆದಾಟಗಳು ಜರುಗಿದವು. ಇದರಲ್ಲಿ ಅನೇಕ ಸಾವುಗಳಾದವು. ಇದೇ ತಿಂಗಳಲ್ಲಿ ನಾಗಪುರದಲ್ಲಿಯೂ ಹೊಡೆದಾಟಗಳಾದವು. ಆಗಸ್ಟ್ ತಿಂಗಳಲ್ಲಿ ಪರಿಸ್ಥಿತಿ ಇನ್ನೂ ವಿಕೋಪಕ್ಕೆ ಹೋಯಿತು. ಬ್ರಿಟಿಷ್ ಇಂಡಿಯಾದ ಲಾಹೋರ, ಲಕ್ನೋ, ಮೊರಾದಾಬಾದ್, ಬಾಗಲ್ಪುರ ಮತ್ತು ನಾಗಪುರಗಳಲ್ಲಿ ದಂಗೆಗಳಾದರೆ, ನಿಜಾಮನ ಅಧಿಪತ್ಯದ ಗುಲ್ಬರ್ಗದಲ್ಲಿ ಭೀಕರ ದೊಂಬಿ ಸಂಭವಿಸಿತು. ಸೆಪ್ಟೆಂಬರ್–ಅಕ್ಟೋಬರ್ ಅವಧಿಯಲ್ಲಿ ಲಕ್ನೋ, ಷಹಜಹಾನ್‌ಪುರ, ಕಂಕಿನಾರ ಮತ್ತು ಅಲಹಾಬಾದನಲ್ಲಿ

ತೀವ್ರ ಹೊಡೆದಾಟ ನಡೆದವು. ಆದರೆ ಈ ಸಾಲಿನಲ್ಲಿ ಕೋಹಠ್‌ನಲ್ಲಿ ಕೊಲೆ ಲೂಟಿಗಳಿಂದ ಕೂಡಿದ ದಂಗೆ, ಅತ್ಯಾಚಾರ ಅತ್ಯಂತ ಭೀಕರವಾಗಿತ್ತು.

೧೯೨೫–೨೬ರ ಸಾಲಿನಲ್ಲಿ ಹಿಂದೂಗಳು ಮತ್ತು ಮುಸಲ್ಮಾನರ ನಡುವಣ ವೈಷಮ್ಯ ವ್ಯಾಪಕವಾಯಿತು. ಈ ವರ್ಷದಲ್ಲಿ ಸಂಭವಿಸಿದ ಹಿಂದೂ–ಮುಸಲ್ಮಾನ ದಂಗೆಯ ಒಂದು ಪ್ರಮುಖ ಅಂಶವೆಂದರೆ ಅದರ ವ್ಯಾಪಕತೆ ಮತ್ತು ಕೆಲವು ಪ್ರಕರಣಗಳಲ್ಲಿ ಅದು ಗ್ರಾಮಗಳಿಗೆ ಹಬ್ಬಿದ್ದು. ಕಲ್ಕತ್ತಾ, ಸಂಯುಕ್ತ ಪ್ರಾಂತ್ಯಗಳು, ಮಧ್ಯಪ್ರಾಂತಗಳು ಮತ್ತು ಮುಂಬಯಿ ಪ್ರೆಸಿಡೆನ್ಸಿಗಳಲ್ಲಿ ದಂಗೆಗಳು ಸಂಭವಿಸಿ ಶೋಚನೀಯವಾದ ಜೀವಹರಣಕ್ಕೆಡೆಮಾಡಿದವು. ಆಗಸ್ಟ್ ಕೊನೆಯ ಭಾಗದಲ್ಲಿ ಆಚರಿಸಲಾದ ಕೆಲವು ಸಣ್ಣಪುಟ್ಟ ಹಿಂದೂ ಹಬ್ಬಗಳ ಕಾರಣ ಕಲ್ಕತ್ತಾ, ಬಿಹಾರ್, ಮುಂಬಯಿ ಪ್ರೆಸಿಡೆನ್ಸಿಯ ಗುಜರಾತ್‌ನಲ್ಲಿ ಮತ್ತು ಸಂಯುಕ್ತ ಪ್ರಾಂತ್ಯಗಳಲ್ಲಿ ಕೋಮು ಗಲಭೆಗಳಾದವು. ಇವುಗಳ ಪೈಕಿ ಕೆಲವು ಸ್ಥಳಗಳಲ್ಲಿ ಎರಡೂ ಕೋಮುಗಳ ನಡುವೆ ಘರ್ಷಣೆಗಳು ಸಂಭವಿಸಿದವು. ಆದರೆ ಕಲ್ಕತ್ತಾದ ಅತ್ಯಂತ ಜನನಿಬಿಡ ಸೆಣಬು ಕಾರ್ಖಾನೆ ಕೇಂದ್ರವಾದ ಕನ್‌ಕಿರಾಹ್‌ದಲ್ಲಿ ಪೊಲೀಸರ ಕಾರ್ಯಾಚರಣೆಯ ಫಲವಾಗಿ ಗಂಭೀರ ಸ್ವರೂಪದ ಗಲಭೆಗಳನ್ನು ತಪ್ಪಿಸಲಾಯಿತು. ಗುಜರಾತದಲ್ಲಿ ಈ ದಿನಗಳಲ್ಲಿ ಹಿಂದೂ–ಮುಸಲ್ಮಾನ ಭಾವನೆಗಳು ಹೆಚ್ಚಾಗುತ್ತಿದ್ದು, ಕೊನೆಯ ಪಕ್ಷ ಒಂದು ದೇವಾಲಯವನ್ನು ಅಪವಿತ್ರಗೊಳಿಸಿದ ಪ್ರಕರಣ ಜರುಗಿತು. ಸೆಪ್ಟೆಂಬರ್ ಕೊನೆಯ ಭಾಗದಲ್ಲಿ ಹಿಂದೂಗಳ ಪ್ರಮುಖ ಹಬ್ಬವೆನಿಸಿದ ರಾಮಲೀಲಾದ ಕಾರಣ ಅನೇಕ ಸ್ಥಳಗಳಲ್ಲಿ ಕಳವಳಕ್ಕೆಡೆಮಾಡಿತು ಮತ್ತು ಸಂಯುಕ್ತ ಪ್ರಾಂತಗಳ ಪ್ರಮುಖ ಸ್ಥಳವೆನಿಸಿದ ಅಲಿಘಡದಲ್ಲಿ ಈ ಹಬ್ಬದ ಆಚರಣೆಯಿಂದ ಈ ವರ್ಷದ ಅತ್ಯಂತ ದಾರುಣವಾದ ದಂಗೆ ಸಂಭವಿಸಿತು. ಈ ದಂಗೆ ಎಷ್ಟು ಗಂಭೀರ ಸ್ವರೂಪ ತಾಳಿತೆಂದರೆ ಶಾಂತಿ ಸುವ್ಯವಸ್ಥೆಯನ್ನು ಸ್ಥಾಪಿಸುವುದಕ್ಕಾಗಿ ಪೊಲೀಸರು ಗೋಲಿಬಾರು ಮಾಡಬೇಕಾಯಿತು. ಇದರಲ್ಲಿ ದಂಗೆಯಿಂದ ಅಥವ ಗೋಲಿಬಾರಿನಿಂದ ಐದು ಜನರು ಪ್ರಾಣ ತೆತ್ತರು. ಲಕ್ನೋದಲ್ಲಿಯೂ ಇದೇ ಹಬ್ಬದ ಆಚರಣೆಯ ಸಂದರ್ಭದಲ್ಲಿ ಗಂಭೀರ ಪರಿಸ್ಥಿತಿಯುಂಟಾಯಿತು. ಆದರೆ ಸ್ಥಳೀಯ ಅಧಿಕಾರಿಗಳು ದಂಗೆಯಾಗುವುದನ್ನು ತಪ್ಪಿಸಿದರು. ಅಕ್ಟೋಬರ್ ತಿಂಗಳಲ್ಲಿ ಮುಂಬಯಿ ಪ್ರಾಂತ್ಯದ ಸೊಲ್ಲಾಪುರದಲ್ಲಿ ಇನ್ನೊಂದು ಗಂಭೀರ ಸ್ವರೂಪದ ದಂಗೆ ಸಂಭವಿಸಿತು. ಈ ನಗರ ಮಧ್ಯದಲ್ಲಿ ಹಿಂದೂಗಳು ರಥದಲ್ಲಿ ಕೆಲವು ಹಿಂದೂ ಮೂರ್ತಿಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಆ ರಥ ಒಂದು ಮಸೀದಿಯ ಹತ್ತಿರ ಬಂದಾಗ ಅವರ ಮತ್ತು ಮುಸಲ್ಮಾನರ ನಡುವೆ ವಿವಾದ ಆರಂಭವಾಗಿ ಅದು ದಂಗೆಯಲ್ಲಿ ಪರ್ಯವಸಾನವಾಯಿತು.

ಏಪ್ರಿಲ್ ತಿಂಗಳ ಆರಂಭದಲ್ಲಿ ಕಲ್ಕತ್ತಾದಲ್ಲಿ ಮುಸಲ್ಮಾನರು ಮತ್ತು ಆರ್ಯ ಸಮಾಜಿಗಳ ನಡುವೆ ಒಂದು ಮಸೀದಿಯ ಹೊರಗಡೆ ಒಂದು ಶೋಚನೀಯ ದೊಂಬಿ ಶುರುವಾಗಿ ಅದು ಏಪ್ರಿಲ್ ೫ರವರೆಗೂ ಮುಂದುವರಿಯಿತು. ಇದರಲ್ಲಿ ಪೊಲೀಸ್ ಇಲ್ಲವೆ ಸೈನ್ಯವು ಒಂದು ಸಂದರ್ಭದಲ್ಲಿ ಮಾತ್ರ ಎಂದರೆ ಏಪ್ರಿಲ್ ೫ರ ಸಂಜೆ ಜನಜಂಗುಳಿಯ ದೃಢ ವಿರೋಧವನ್ನು ಎದುರಿಸಬೇಕಾಗಿ ಗುಂಡು ಹಾರಿಸುವ ಪ್ರಸಂಗ ಉಂಟಾಯಿತು. ಮೊದಲನೆಯ ಮೂರು ದಿನಗಳಲ್ಲಿ ಬೆಂಕಿ ಹಚ್ಚುವ ಉದ್ರೇಕಕಾರಿ ಘಟನೆಗಳು ಸಂಭವಿಸಿ ಅಗ್ನಿಶಾಮಕ ದಳದವರು ಒಟ್ಟು ೧೧೦ ಬೆಂಕಿ ಪ್ರಕರಣಗಳಲ್ಲಿ ಬೆಂಕಿ ಆರಿಸುವ ಕೆಲಸ ಮಾಡಬೇಕಾಯಿತು. ಈ ದಂಗೆಗಳಲ್ಲಿ ಹಿಂದೆಂದೂ ಕಾಣದಂತಹ ಮುಸಲ್ಮಾನರು ಹಿಂದೂ ದೇವಾಲಯಗಳ ಮೇಲೆ ಮತ್ತು ಹಿಂದೂಗಳು ಮಸೀದಿಗಳ ಮೇಲೆ ಧಾಳಿ ಮಾಡುವ ಪ್ರಕರಣಗಳು ಸಂಭವಿಸಿ ವಿಷಮ ಪರಿಸ್ಥಿತಿಯುಂಟಾಗಿ ದ್ವೇಷಕ್ಕೆ ಕಾರಣವಾಯಿತು. ೪೪ ಜನ ಸತ್ತರಲ್ಲದೆ ೫೮೪ ಜನ ಗಾಯಗೊಂಡರು. ಕೆಲಮಟ್ಟಿಗೆ ಲೂಟಿ

ಪ್ರಕರಣಗಳೂ ಸಂಭವಿಸಿ ವ್ಯವಹಾರ ಸ್ಥಗಿತಗೊಂಡಿತು. ಇದರಿಂದ ಕಲ್ಕತ್ತಾಕ್ಕೆ ತೀವ್ರ ಆರ್ಥಿಕ ಹಾನಿಯುಂಟಾಯಿತು. ೫ನೇ ತಾರೀಖಿನ ನಂತರ ಅಂಗಡಿಗಳನ್ನು ತೆರೆಯಲಾರಂಭವಾಯಿತು. ಆದರೆ ಏಪ್ರಿಲ್ ೧೩ರಂದಿನ ಹಿಂದೂ ಹಬ್ಬ ಏಪ್ರಿಲ್ ೧೪ರ ಈದ್‌ನ ಕಾರಣ ದ್ವೇಷಮಯ ವಾತಾವರಣ ಮುಂದುವರಿಯಿತು. ೧೩ರಂದು ಸಿಖ್ಖರು ಒಂದು ಮೆರವಣಿಗೆ ಹೊರಡಿಸಬೇಕಾಗಿತ್ತು. ಆದರೆ ಸರ್ಕಾರ ಅದಕ್ಕೆ ಅವಶ್ಯವಾದ ಪರವಾನಿಗಿ ನೀಡಲಿಲ್ಲ. ಏಪ್ರಿಲ್ ೧೩ ಮತ್ತು ೧೪ರ ಭಯ ಅದೃಷ್ಟವಶಾತ್ ನಿವಾರಣೆಯಾಗಿ ಏಪ್ರಿಲ್ ೨೨ರವರೆಗೆ ಈ ತೋರಿಕೆಯ ಶಾಂತಿ ಮುಂದುವರಿದಿತ್ತಾದರೂ ಬೀದಿಯಲ್ಲಿ ಒಂದು ಪುಟ್ಟ ಜಗಳದಿಂದ ಗಲಭೆ ಪುನಃ ಆರಂಭವಾಯಿತು. ಎರಡೂ ಕೋಮುಗಳ ಗುಂಪುಗಳ ನಡುವೆ ಹೊಡೆದಾಟ, ಸಣ್ಣ ಪ್ರಮಾಣದಲ್ಲಿ ಆರಂಭವಾಗಿ, ಅಲ್ಲಲ್ಲಿ ಕೊಲೆಗಳು ಮತ್ತು ಧಾಳಿಗಳೂ ಸೇರಿದಂತೆ ಆರು ದಿನಗಳವರೆಗೆ ಮುಂದುವರಿದವು. ಈ ಅವಧಿಯಲ್ಲಿ ದೇವಾಲಯಗಳ ಮೇಲಾಗಲಿ, ಮಸೀದಿಗಳ ಮೇಲಾಗಲೀ ದಾಳಿಗಳಾಗಲಿಲ್ಲ ಮತ್ತು ಲೂಟಿಯ ಪ್ರಸಂಗಗಳೂ ವಿರಳವಾಗಿದ್ದವು. ಆದರೆ ಪೊಲೀಸರು ಬಂದಾಗಲೂ ಜನರ ಗುಂಪು ಚದುರದೇ ಇರುವ ಅನೇಕ ಪ್ರಸಂಗಗಳಿದ್ದುದರಿಂದ ೧೨ ಪ್ರಸಂಗಗಳಲ್ಲಿ ಗುಂಡು ಹಾರಿಸಬೇಕಯಿತು. ದೊಂಬಿಗಳ ಈ ಎರಡನೆಯ ಹಂತದಲ್ಲಿ ೬೬ ಸಾವುಗಳುಂಟಾಗಿ ೩೯೧ ಜನ ಗಾಯಗೊಂಡರು. ಮೊದಲಿನ ಗಲಭೆಗಳಲ್ಲಿ ವ್ಯವಹಾರವು ಹೆಚ್ಚು ಪ್ರಮಾಣದಲ್ಲಿ ಅಸ್ತವ್ಯಸ್ತಗೊಂಡು ಮಾರವಾಡಿಗಳ ಅಂಗಡಿಗಳನ್ನು ಮುಚ್ಚಲಾಯಿತು. ಐರೋಪ್ಯ ವ್ಯಾಪಾರಿ ಸಂಸ್ಥೆಗಳ ಮೇಲೆ ಇದರಿಂದ ದುಷ್ಪರಿಣಾಮವಾಗದೇ ಇರಲಿಲ್ಲ. ಭಯದಿಂದಾಗಿ ಅನೇಕ ಮಾರುಕಟ್ಟೆಗಳು ಸಂಪೂರ್ಣವಾಗಿ ಇಲ್ಲವೆ ಭಾಗಶಃ ಮುಚ್ಚಲಾಯಿತು ಮತ್ತು ಎರಡು ದಿವಸ ಮಾಂಸದ ಸರಬರಾಜು ಸಂಪೂರ್ಣವಾಗಿ ನಿಂತುಹೋಯಿತು. ಭಯದ ವಾತಾವರಣ ಎಷ್ಟರಮಟ್ಟಿಗೆ ಇತ್ತೆಂದರೆ ಗಲಭೆಗ್ರಸ್ತ ಪ್ರದೇಶಗಳಲ್ಲಿ ಕಸ ತೆಗೆಯುವುದೂ ನಿಂತುಹೋಗಿತ್ತು. ಆದಾಗ್ಯೂ ಸರಬರಾಜಿಗೆ ರಕ್ಷಣೆ ನೀಡಲಾಯಿತಲ್ಲದೇ ನಗರ ಸಭೆಯು ಪೌರಕಾರ್ಮಿಕರಿಗೆ ಪೊಲೀಸ್ ರಕ್ಷಣೆಯನ್ನು ಒದಗಿಸುವ ಮೂಲಕ ಸ್ವಚ್ಛತಾ ಕಾರ್ಯವನ್ನು ಕೈಗೊಳ್ಳಲಾಯಿತು. ಗಲಭೆ ಪ್ರದೇಶ ಸ್ವಲ್ಪಮಟ್ಟಿಗೆ ಪಸರಿಸಿತಾದರೂ ಕಲ್ಕತ್ತಾದ ಹೊರವಲಯದ ಕಾರ್ಖಾನೆಗಳ ಪ್ರದೇಶದಲ್ಲಿ ಯಾವುದೇ ಗಲಭೆಗಳು ಸಂಭವಿಸಲಿಲ್ಲ. ಗಲಭೆಪೀಡಿತ ಪ್ರದೇಶಗಳಲ್ಲಿ ವ್ಯವಸ್ಥಿತ ಪೊಲೀಸ್ ಧಾಳಿಗಳು, ಗೂಂಡಾಗಳ ದಸ್ತಗಿರಿ, ಶಸ್ತ್ರಾಸ್ತ್ರಗಳ ಮುಟ್ಟುಗೋಲು ಮತ್ತು ಪೊಲೀಸರ ಸಹಾಯಕ್ಕೆ ಬ್ರಿಟಿಷ್ ಸೈನಿಕರ ನಿಯುಕ್ತಿ ಮುಂತಾದ ಕಾರ್ಯಗಳಿಂದ ನಿರೀಕ್ಷಿತ ಪರಿಣಾಮ ಉಂಟಾಯಿತು. ಏಪ್ರಿಲ್ ತಿಂಗಳ ಕೊನೆಯ ಮೂರು ದಿನಗಳಲ್ಲಿ, ಅಲ್ಲಲ್ಲಿ ಕೆಲವು ಕೊಲೆ ಮತ್ತು ಧಾಳಿಗಳು ಸಂಭವಿಸಿದಾಗ್ಯೂ, ಪರಿಸ್ಥಿತಿಯಲ್ಲಿ ಸುಧಾರಣೆ ಕಂಡುಬಂದಿತು. ಅಲ್ಲಲ್ಲಿ ಸಂಭವಿಸಿದ ಕೊಲೆಗಳಿಗೆ ಕಾರಣ ಎರಡೂ ಕೋಮುಗಳ ಗೂಂಡಾಗಳ ಕೃತ್ಯಗಳೆಂದು ಹೇಳಲಾಯಿತಾದರೂ, ಅವುಗಳು ಸತತವಾಗಿ ಎರಡೂ ಹಂತದ ಗಲಭೆಗಳಲ್ಲಿ ಸಂಭವಿಸುತ್ತಿದ್ದುದರಿಂದ ಈ ಗೂಂಡಾಗಳು ಬಾಡಿಗೆ ಕೊಲೆಗಾರರಿರಬಹುದೆಂದು ಶಂಕಿಸಲಾಯಿತು. ಈ ದಂಗೆಗಳ ಅಷ್ಟೇ ಸತತವಾದ ಇನ್ನೊಂದು ಪರಿಣಾಮವೆಂದರೆ ಎರಡೂ ಕಡೆಯವರು ಹಂಚುತ್ತಿದ್ದ ಉದ್ರೇಕಕಾರಿ ಮುದ್ರಿತ ಕರಪತ್ರಗಳು ಮತ್ತು ಇದರೊಂದಿಗೆ ಬಾಡಿಗೆ ಗೂಂಡಾಗಳನ್ನು ಬಳಸುತ್ತಿರುವ ಸಂಶಯ ಈ ದಂಗೆಗಳನ್ನು ಮುಂದುವರಿಸಿಕೊಂಡು ಹೋಗುವುದಕ್ಕಾಗಿ ಹಣದ ಬಳಕೆಯಾಗುತ್ತಿದೆ ಎಂಬ ಬಲವಾದ ನಂಬುಗೆ ಉಂಟಾಯಿತು.

೧೯೨೬–೨೭ನೆಯ ಸಾಲಿನಲ್ಲಿ ಕೋಮು ಗಲಭೆಗಳು ಸತತವಾಗಿ ಸಂಭವಿಸಿದವು. ಏಪ್ರಿಲ್ ೧೯೨೬ರಿಂದ ಪ್ರತಿ ತಿಂಗಳಲ್ಲಿ ಎರಡೂ ಕೋಮುಗಳ ಪಕ್ಷದವರ ನಡುವೆ ಗಂಭೀರವಾದ ಘರ್ಷಣೆಗಳು ಜರುಗಿದವು.

ಕೇವಲ ಎರಡು ತಿಂಗಳುಗಳಲ್ಲಿ ಮಾತ್ರ ಕಾನೂನಿನ ದೃಷ್ಟಿಯಲ್ಲಿ ಯಾವುದೇ ಗಲಭೆಗಳಾಗಲಿಲ್ಲ ಎಂದು ಹೇಳಬಹುದು. ಈ ಅನೇಕ ಘಟನೆಗಳು ಸಂಭವಿಸಿದ ಸಂದರ್ಭಗಳನ್ನು ಪರಿಶೀಲಿಸಿದಾಗ ಇವು ಅತ್ಯಂತ ಸಣ್ಣ ಕಾರಣಗಳಿಂದ ಅಥವಾ ವಿವಾದಗಳಿಂದ ಸಂಭವಿಸಿದವೆಂಬುದು ಗೊತ್ತಾಗುತ್ತದೆ. ಉದಾಹರಣೆಗೆ, ಒಬ್ಬ ಹಿಂದೂ ಅಂಗಡಿಕಾರ ಮತ್ತು ಮಹಮ್ಮದೀಯ ಗಿರಾಕಿಯ ನಡುವೆ, ಇಲ್ಲವೇ ಯಾವುದಾದರೂ ಹಬ್ಬದ ಆಚರಣೆ ಅಥವ ಮಹಮ್ಮದೀಯರ ಪ್ರಾರ್ಥನಾ ಸ್ಥಳಗಳ ಹತ್ತಿರ ಹಿಂದೂಗಳ ಮೆರವಣಿಗೆಯಲ್ಲಿ ವಾದ್ಯಗಳನ್ನು ನುಡಿಸುವುದು ಮುಂತಾದವುಗಳು ಕಾರಣವಾಗಿದ್ದವು. ಇವುಗಳಲ್ಲಿ ಒಂದೆರಡು ಘಟನೆಗಳಂತೂ ಕೋಪೋದ್ರೇಕಗಳಿಂದ ಸಂಭವಿಸಿದವು. ಇಂತಹ ಘಟನೆಗಳ ಅತ್ಯಂತ ಗಂಭೀರ ನಿದರ್ಶನ ಒಂದು ದೆಹಲಿಯಲ್ಲಿ ೨೪ನೆಯ ಜೂನ್ ದಿನಾಂಕದಂದು ಸಂಭವಿಸಿತು. ಒಂದು ಜನನಿಬಿಡ ರಸ್ತೆಯಲ್ಲಿ ಒಂದು ಕುದುರೆ ಓಡಿ ಹೋಗಿದ್ದರಿಂದ ಗಲಭೆ ಸಂಭವಿಸಿದೆ ಎಂಬ ಭಾವನೆ ಉಂಟಾಗಿ ಎರಡೂ ಕಡೆಯವರು ಕೂಡಲೆ ಕಲ್ಲು ದೊಣ್ಣೆಗಳಿಂದ ಪರಸ್ಪರರ ಮೇಲೆ ಹಲ್ಲೆ ಮಾಡಿದರು.

೧೯೨೬ನೆಯ ಏಪ್ರಿಲ್–ಮೇ ತಿಂಗಳುಗಳಲ್ಲಿ ಕಲ್ಕತ್ತಾದಲ್ಲಿ ಜರುಗಿದ ಎರಡು ಗಲಭೆಗಳೂ ಸೇರಿದಂತೆ ಏಪ್ರಿಲ್ ೧, ೧೯೨೭ರವರೆಗಿನ ಹನ್ನೆರಡು ತಿಂಗಳುಗಳಲ್ಲಿ ಒಟ್ಟು ೪೦ ದಂಗೆಗಳು ಸಂಭವಿಸಿ, ಇವುಗಳಲ್ಲಿ ೧೯೭ ಜನ ಸತ್ತರಲ್ಲದೆ, ೧,೫೯೮ ಜನ ಬಹುಮಟ್ಟಿಗೆ ಗಂಭೀರ ಸ್ವರೂಪದಲ್ಲಿ ಗಾಯಗೊಂಡರು. ಈ ಗಲಭೆಗಳು ವ್ಯಾಪಕವಾಗಿದ್ದು ದೇಶದ ಬಂಗಾಳ, ಪಂಜಾಬ್ ಮತ್ತು ಸಂಯುಕ್ತ ಪ್ರಾಂತ್ಯಗಳಲ್ಲಿ ಗಂಭೀರ ಸ್ವರೂಪ ತಾಳಿದವು. ಈ ದಂಗೆಗಳಲ್ಲಿ ಬಂಗಾಳದಲ್ಲಿ ತೀವ್ರ ಪರಿಣಾಮಗಳುಂಟಾದವು. ಆದರೆ ಈ ಸಾಲಿನಲ್ಲಿ ಮುಂಬಯಿ ಪ್ರಾಂತ್ಯ ಮತ್ತು ಸಿಂಧ್‌ನಲ್ಲಿಯೂ ಸಹ ಹಿಂದೂ–ಮುಸಲ್ಮಾನರ ನಡುವಣ ದ್ವೇಷ ಉಗ್ರವಾಗಿತ್ತು. ಬೇಸಿಗೆಯ ಕಾಲದುದ್ದಕ್ಕೂ ಕಲ್ಕತ್ತಾದಲ್ಲಿ ಅಶಾಂತಿ ಮುಂದುವರಿಯಿತು. ಜೂನ್ ೧ರಂದು ಒಂದು ಪುಟ್ಟ ಜಗಳ ದಂಗೆಗೆ ಕಾರಣವಾಗಿ ನಲವತ್ತು ಜನ ಗಾಯಗೊಂಡರು. ಇದರ ನಂತರ ಜುಲೈ ೧೫ರವರೆಗೆ ಪ್ರತ್ಯಕ್ಷ ಹಿಂಸಾಚಾರವಿರಲಿಲ್ಲ. ಇದೇ ದಿನ ಒಂದು ಮುಖ್ಯವಾದ ಹಿಂದೂ ಹಬ್ಬವಿತ್ತು. ಈ ಹಬ್ಬದ ಆಚರಣೆಯ ಸಂದರ್ಭದಲ್ಲಿ, ವಾದ್ಯಗಳನ್ನು ನುಡಿಸುತ್ತಾ ಒಂದು ಮೆರವಣಿಗೆ ಕೆಲವು ಮಸೀದಿಗಳ ಹತ್ತಿರ ಸಾಗಿದಾಗ ಘರ್ಷಣೆ ಉಂಟಾಗಿ ೧೪ ಜನ ಅಸುನೀಗಿದರು ಮತ್ತು ೧೧೬ ಜನ ಗಾಯಗೊಂಡರು. ಮರುದಿವಸ ಮುಸಲ್ಮಾನರ ಪ್ರಮುಖ ಹಬ್ಬವಾದ ಮೊಹರಮ್‌ದ ಆರಂಭದ ದಿವಸವಾಗಿತ್ತು. ಆ ದಿವಸವೂ ಗಲಭೆಗಳು ಆರಂಭವಾಗಿ ನಡುವೆ ಸ್ವಲ್ಪ ಕಾಲ ಸ್ಥಗಿತಗೊಂಡು ೧೯, ೨೦, ೨೧ ಮತ್ತು ೨೨ನೆಯ ದಿನಾಂಕಗಳಿಂದ ಮರುಕಳಿಸಿದವು. ಅಲ್ಲಲ್ಲಿ ಹಲ್ಲೆ ಮತ್ತು ಇರಿತದ ಪ್ರಸಂಗಗಳು ೨೩, ೨೪ ಮತ್ತು ೨೫ರಂದು ಸಂಭವಿಸಿದವು. ಇವುಗಳಲ್ಲಿ ೨೮ ಮರಣ ಮತ್ತು ೨೨೬ ಜನ ಗಾಯಗೊಂಡ ಪ್ರಕರಣಗಳನ್ನು ಪತ್ತೆ ಹಚ್ಚಲಾಯಿತು. ಸೆಪ್ಟೆಂಬರ್ ೧೫ ಮತ್ತು ಅಕ್ಟೋಬರ್ ೧೬ರಂದು ಕಲ್ಕತ್ತಾದಲ್ಲಿ ಮತ್ತೆ ಗಲಭೆಗಳು ಸಂಭವಿಸಿದವಲ್ಲದೆ ಅಕ್ಟೋಬರ್ ೧೬ರಂದು ಪಕ್ಕದ ಹೌರಾ ನಗರದಲ್ಲಿ ಗಲಭೆಯುಂಟಾಗಿ ಒಬ್ಬಿಬ್ಬರು ಕೊಲ್ಲಲ್ಪಟ್ಟರಲ್ಲದೆ, ೩೦ ಜನ ಗಾಯಗೊಂಡರು. ಏಪ್ರಿಲ್–ಮೇ ತಿಂಗಳುಗಳ ಗಲಭೆಗಳು ಬಹುಮಟ್ಟಿಗೆ ಬೆಂಕಿ ಹಚ್ಚುವಂತಹ ಉದ್ರೇಕಕಾರಿ ಸ್ವರೂಪವಾಗಿದ್ದವು. ಸಂತೋಷಕರ ಸಂಗತಿ ಎಂದರೆ ಮುಂದಿನ ದಿನಗಳಲ್ಲಿ ಎಂದರೆ ಜುಲೈ ತಿಂಗಳ ಗಲಭೆಗಳಲ್ಲಿ ಈ ಉದ್ರೇಕಕಾರಿ ಕೃತ್ಯಗಳು ಕಂಡುಬರಲಿಲ್ಲ. ಉದಾಹರಣೆಗೆ, ಕೇವಲ ೪ ಬೆಂಕಿ ಹಚ್ಚಿದ ಪ್ರಕರಣಗಳಲ್ಲಿ ಅಗ್ನಿಶಾಮಕ ದಳವನ್ನು ಕರೆಸಲಾಗಿತ್ತು.

೧೯೨೭–೨೮ನೆಯ ಸಾಲಿಗೆ ಬಂದಾಗ ಈ ಕೆಳಗಣ ಸಂಗತಿಗಳು ನಮ್ಮೆದುರಿಗೆ ನಿಲ್ಲುತ್ತವೆ ೧೯೨೭ರ ಏಪ್ರಿಲ್ ಆರಂಭದಿಂದ ಸೆಪ್ಟೆಂಬರ್ ಕೊನೆಯವರೆಗೆ ಕನಿಷ್ಠ ೨೫ ಗಲಭೆಗಳು ವರದಿಯಾದವು.

ಇವುಗಳಲ್ಲಿ ೧೦ ಸಂಯುಕ್ತ ಪ್ರಾಂತ್ಯಗಳಲ್ಲಿ, ೬ ಮುಂಬೈ ಪ್ರಾಂತ್ಯದಲ್ಲಿ ಮತ್ತು ಪಂಜಾಬ್, ಮಧ್ಯ ಪ್ರಾಂತ್ಯಗಳು, ಬಂಗಾಳ, ಬಿಹಾರ್ ಮತ್ತು ಒಡಿಸ್ಸಾಗಳಲ್ಲಿ ತಲಾ ೨ ಮತ್ತು ದೆಹಲಿಯಲ್ಲಿ ೧ ಗಲಭೆಗಳುಂಟಾದವು. ಇವುಗಳಲ್ಲಿ ಬಹುತೇಕ ಘಟನೆಗಳು ಈ ಎರಡೂ ಕೋಮುಗಳಲ್ಲಿ ಒಂದಲ್ಲ ಒಂದು ಕೋಮಿನವರ ಧಾರ್ಮಿಕ ಹಬ್ಬಗಳ ಆಚರಣೆಯ ಕಾಲದಲ್ಲಿ ಸಂಭವಿಸಿದವು. ಕೆಲವು ಮಾತ್ರ ಹಿಂದೂಗಳು ಮಸೀದಿಗಳ ಹತ್ತಿರ ವಾದ್ಯಗಳನ್ನು ಬಾರಿಸುವುದರಿಂದ ಅಥವಾ ಮುಸಲ್ಮಾನರಿಂದ ಗೋಹತ್ಯೆಯ ಕಾರಣ ಉಂಟಾದವು. ಈ ಎಲ್ಲಾ ಗಲಭೆಗಳಲ್ಲಿ ಸುಮಾರು ೧೦೩ ಜನ ಸತ್ತರಲ್ಲದೆ ೧,೦೮೪ ಜನ ಗಾಯಗೊಂಡರು.

ಇಲ್ಲಿಯವರೆಗೆ ಜರುಗಿದ ಗಲಭೆಗಳಲ್ಲಿ ಅತ್ಯಂತ ಗಂಭೀರ ಸ್ವರೂಪದ ದಂಗೆ ಲಾಹೋರದಲ್ಲಿ ೧೯೨೭ರ ಮೇ ೪ ಮತ್ತು ೭ರಂದು ಸಂಭವಿಸಿತು. ಈ ದಂಗೆಗೆ ಮುಂಚೆ ಎರಡೂ ಕೋಮುಗಳ ನಡುವಣ ದ್ವೇಷ ತೀಕ್ಷ್ಣವಾಗಿತ್ತು ಮತ್ತು ಈ ಘರ್ಷಣೆ ಒಬ್ಬ ಮುಸಲ್ಮಾನ ಮತ್ತು ಇಬ್ಬರು ಸಿಖ್ಖರು ರಸ್ತೆಯಲ್ಲಿ ಅಕಸ್ಮಾತ್ ಡಿಕ್ಕಿ ಹೊಡೆದುದರಿಂದ ಆರಂಭವಾಯಿತು. ಇದು ಮಿಂಚಿನೋಪಾದಿಯಲ್ಲಿ ಹಬ್ಬಿ ೨೭ ಜನ ಸತ್ತು ೨೭೨ ಜನ ಗಾಯಗೊಂಡರು. ವ್ಯಕ್ತಿಗಳ ಮೇಲೆ ಅಸಂಘಟಿತ ಹಲ್ಲೆಯಿಂದಾಗಿ ಈ ಸಂಖ್ಯೆ ಹೆಚ್ಚಾಯಿತು. ಪೊಲೀಸರು ಮತ್ತು ಸೈನ್ಯವನ್ನು ಗಲಭೆ ಗ್ರಸ್ತ ಪ್ರದೇಶಗಳಿಗೆ ತಕ್ಷಣ ರವಾನಿಸಿದ್ದರಿಂದ ಎರಡೂ ವಿರೋಧಿ ಗುಂಪುಗಳ ನಡುವೆ ದೊಡ್ಡ ಪ್ರಮಾಣದಲ್ಲಿ ಗಲಭೆ ಹರಡುವುದನ್ನು ತಡೆಯಲಾಯಿತು. ಆಕಸ್ಮಿಕ ಕೊಲೆ ಮತ್ತು ಹಲ್ಲೆಗಳು ವರದಿಯಾದವಾದರೂ ಎರಡು ಮೂರು ದಿನಗಳಲ್ಲಿ ಲಾಹೋರ್‌ನ ಬೀದಿಗಳಲ್ಲಿ ಜನರು ಸುರಕ್ಷಿತವಾಗಿ ಓಡಾಡುವಂತಾಯಿತು.

ಮೇನಲ್ಲಿ ಜರುಗಿದ ಲಾಹೋರದ ದಂಗೆಯ ನಂತರ ಈ ಅಂತರ ಕೋಮು ಗಲಭೆಗಳು, ಜೂನ್ ತಿಂಗಳ ಮಧ್ಯ ಭಾಗದಲ್ಲಿನ ಘಟನೆಗಳನ್ನು ಹೊರತುಪಡಿಸಿ, ಎರಡು ತಿಂಗಳವರೆಗೆ ಸ್ಥಬ್ಧಗೊಂಡವು. ಆದರೆ ಜುಲೈನಲ್ಲಿ ಕಡಿಮೆ ಎಂದರೆ ಎಂಟು ದಂಗೆಗಳು ಸಂಭವಿಸಿದುವು. ಇವುಗಳಲ್ಲಿ ಪಂಜಾಬಿನ ಮುಲ್ತಾನದಲ್ಲಿ ಮೊಹರಮ್ ಆಚರಣೆಯ ಸಂದರ್ಭದಲ್ಲಿ ಅತ್ಯಂತ ಗಂಭೀರ ಘಟನೆ ಸಂಭವಿಸಿತು. ಈ ದಂಗೆಯಲ್ಲಿ ಹದಿಮೂರು ಜನ ಪ್ರಾಣ ಕಳೆದುಕೊಂಡರಲ್ಲದೇ ಇಪ್ಪತ್ತನಾಲ್ಕು ಜನ ಗಾಯಗೊಂಡರು. ಆದರೆ ಆಗಸ್ಟ್‌ನಲ್ಲಿ, ಇನ್ನೂ ತೀವ್ರ ಸ್ವರೂಪದ ಗಲಭೆಗಳಾಗಲಿದ್ದವು. ಆ ತಿಂಗಳಿನಲ್ಲಿ ಬಿಹಾರದ ಬೆಟ್ಟಿಯಾ ಎಂಬ ಊರಿನಲ್ಲಿ ಮತ್ತು ಒಡಿಸ್ಸಾದಲ್ಲಿ ಒಂದು ಧಾರ್ಮಿಕ ಮೆರವಣಿಗೆಯ ಬಗ್ಗೆ ಎದ್ದ ವ್ಯಾಜ್ಯದಲ್ಲಿ ಹನ್ನೊಂದು ಜನ ಕೊಲ್ಲಲ್ಪಟ್ಟು ನೂರಕ್ಕೂ ಹೆಚ್ಚು ಜನ ಗಾಯಗೊಂಡರು. ಅದೇರೀತಿ ಸಂಯುಕ್ತ ಪ್ರಾಂತ್ಯಗಳ ಬರೇಲಿಯಲ್ಲಿ ಒಂದು ಮಸೀದಿ ಎದುರು ಸಾಗಿದ ಮೆರವಣಿಗೆ ದಂಗೆಗೆ ಕಾರಣವಾಗಿ ಅದರಲ್ಲಿ ಹದಿನಾಲ್ಕು ಜನ ಸತ್ತರಲ್ಲದೆ ೧೬೫ ಜನ ಗಾಯಗೊಂಡರು. ಅದೃಷ್ಟವಶಾತ್, ಇದು ಈ ವರ್ಷದ ಅಂತರ–ಕೋಮು ಗಲಭೆಗಳಲ್ಲಿ ಒಂದು ಪರ್ವವಾಗಿದ್ದ ಸೆಪ್ಟೆಂಬರ್ ತಿಂಗಳಲ್ಲಿ ೪ ಗಲಭೆಗಳು ಮಾತ್ರ ಸಂಭವಿಸಿದವು. ಆದಾಗ್ಯೂ ಸೆಪ್ಟೆಂಬರ್ ೪ರಂದು ಮಧ್ಯ ಪ್ರಾಂತ್ಯದಲ್ಲಿ ನಾಗಪುರದ ಗಲಭೆಯು ಪ್ರಬಲತೆ ಮತ್ತು ಹಾನಿಯ ದೃಷ್ಟಿಯಿಂದ ಲಾಹೋರ್ ಗಲಭೆಗೆ ಹೋಲಿಸಿದಾಗ ಎರಡನೆಯ ಸ್ಥಾನದಲ್ಲಿತ್ತು. ಈ ದಳ್ಳುರಿಗೆ ಕಾರಣವಾದ ಕಿಡಿ ಒಂದು ಮುಸಲ್ಮಾನರ ಮೆರವಣಿಗೆಯಿಂದ ಉಂಟಾಗಿತ್ತಾದರೂ ಇದರ ಕಾರಣಗಳು ಕೆಲದಿನಗಳ ಮುಂಚಿನಿಂದಲೇ ಉಂಟಾಗಿದ್ದವು. ಈ ದಂಗೆಯಲ್ಲಿ ಹತ್ತೊಂಭತ್ತು ಜನ ಸತ್ತು ೧೨೩ ಜನ ಗಾಯಗೊಂಡು ಅವರನ್ನು ಆಸ್ಪತ್ರೆಗೆ ಸೇರಿಸಲಾಯಿತು. ಈ ಗಲಭೆಯ ಕಾಲದಲ್ಲಿ ಮುಸಲ್ಮಾನ ಸಮಾಜದ ಅನೇಕರು ನಾಗಪುರದ ತಮ್ಮ ಮನೆಗಳನ್ನು ಬಿಟ್ಟುಹೋದರು.

ಈ ವರ್ಷದಲ್ಲಿ ಹಿಂದೂ–ಮುಸಲ್ಮಾನರ ಸಂಬಂಧಗಳ ಪ್ರಮುಖ ಲಕ್ಷಣವೆಂದರೆ ಒಂದು ಸಮುದಾಯದ ಜನರು ಇನ್ನೊಂದು ಸಮುದಾಯದವರ ಮೇಲೆ ಮಾಡಿದ ಅತ್ಯಾಚಾರಗಳು ಗಲಭೆಗಳಿಗಿಂತ ಕಡಿಮೆ ಸ್ವರೂಪದವುಗಳಾಗಿರಲಿಲ್ಲ. ಈ ಅತ್ಯಾಚಾರಗಳಲ್ಲಿ ಕೆಲವು ರಂಗೀಲಾ ರಸೂಲ್ ಮತ್ತು ರಿಸಾಲಾ ವರ್ತಮಾನ್ ಪ್ರಕಟಣೆಗಳಲ್ಲಿ ಮಹಮದ್ ಪೈಗಂಬರ್‌ರವರ ಮೇಲೆ ಮಾಡಲಾದ ಗಂಭೀರ ಸ್ವರೂಪದ ಟೀಕೆಗಳ ಕಾರಣದಿಂದ ಉದ್ಭವಿಸಿ ಇವುಗಳಲ್ಲಿ ಅನೇಕ ಮುಗ್ಧ ಜನರು ಅತ್ಯಂತ ಅನಾಗರಿಕ ಕ್ರೌರ್ಯದಿಂದ ತಮ್ಮ ಜೀವ ಕಳೆದುಕೊಂಡರು. ೧೯೨೭ರ ಬೇಸಿಗೆಯಲ್ಲಿ ಲಾಹೋರ್‌ನಲ್ಲಿ ವ್ಯಕ್ತಿಗಳ ಮೇಲೆ ಎಸಗಲಾದ ಅತ್ಯಾಚಾರಗಳ ಸರಣಿಯಿಂದಾಗಿ ತೀಕ್ಷ್ಣವಾದ ಉದ್ದೇಶ ಮತ್ತು ಅಭದ್ರತೆಯ ಪರಿಸ್ಥಿತಿಯುಂಟಾಯಿತು.

ರಂಗೀಲಾ ರಸೂಲ್* ಪ್ರಕರಣವು ಅಷ್ಟೊತ್ತಿಗಾಗಲೇ ತನ್ನ ಉಗಮ ಸ್ಥಾನದಿಂದ ದೂರ ಪಸರಿಸಿ ಜುಲೈ ಹೊತ್ತಿಗೆ ವಾಯುವ್ಯ ಸರಹದ್ದಿನಾದ್ಯಂತ ತನ್ನ ಅಪ್ರಿಯ ಪರಿಣಾಮವನ್ನುಂಟುಮಾಡಿತ್ತು. ಈ ಪ್ರದೇಶದಲ್ಲಿ ಆತಂಕದ ಮೊದಲ ಚಿನ್ಹೆಗಳು ಜೂನ್ ಆರಂಭದಲ್ಲಿ ಕಾಣಿಸಿಕೊಂಡವು ಮತ್ತು ಜುಲೈ ಕೊನೆಯ ಹೊತ್ತಿಗೆ ಉದ್ವೇಗ ಪರಾಕಾಷ್ಠತೆ ಮುಟ್ಟಿತು. ಗಡಿಯ ಬ್ರಿಟಿಷ್ ಭಾಗದಲ್ಲಿ ಸ್ಥಳೀಯ ಅಧಿಕಾರಿಗಳು ಪರಿಸ್ಥಿತಿಯನ್ನು ದೃಢವಾಗಿ ಮತ್ತು ಚಾಕಚಕ್ಯತೆಯಿಂದ ಎದುರಿಸಿದ ಕಾರಣ ಗಂಭೀರ ಸ್ವರೂಪದ ಶಾಂತಿ ಭಂಗವಾಗಬಹುದಾಗಿದ್ದ ಪರಿಸ್ಥಿತಿ ತಪ್ಪಿತು. ಬ್ರಿಟಿಷ್ ಸರಹದ್ದಿನ ಜಿಲ್ಲೆಗಳಲ್ಲಿ, ಅದರಲ್ಲಿಯೂ ಪೇಷಾವರ್‌ನಲ್ಲಿ, ಹಿಂದೂಗಳ ಮೇಲೆ ಆರ್ಥಿಕ ಬಹಿಷ್ಕಾರ ಹಾಕುವಂತೆ ಬಹಿರಂಗವಾಗಿಯೇ ಪ್ರಚೋದಿಸಲಾಯಿತು. ಆದರೆ, ಈ ಚಳುವಳಿ ಅಷ್ಟಾಗಿ ಯಶಸ್ವಿಯಾಗಲಿಲ್ಲ. ಒಂದೆರಡು ಹಳ್ಳಿಗಳಲ್ಲಿ ಹಿಂದೂಗಳ ಮೇಲೆ ಕೈ ಮಾಡಲಾಯಿತಾದರೂ ಅಪರಾಧಿಗಳ ದಸ್ತಗಿರಿ ಮತ್ತು ದಂಡ ಸಂಹಿತೆಯಡಿಯಲ್ಲಿ ಸೂಕ್ತ ಕ್ರಮ ತೆಗೆದುಕೊಂಡಿದ್ದರಿಂದ ಶಾಂತಿ ಸುವ್ಯವಸ್ಥೆ ಉಂಟಾಯಿತು. ಗಡಿಯಾಚೆ ಪೈಗಂಬರರ ಮೇಲೆ ಮಾಡಲಾದ ಆರೋಪಗಳಿಂದುಂಟಾದ ಆತಂಕ ಹೆಚ್ಚು ಗಂಭೀರ ಸ್ವರೂಪದ ಪರೀಣಾಮಗಳುಂಟಾದವು. ಗಡಿನಾಡಿನ ಬುಡಕಟ್ಟು ಜನಾಂಗದವರ ಧಾರ್ಮಿಕ ಭಾವನೆಗಳು ಬಹು ಸುಲಭವಾಗಿ ಪ್ರಚೋದಿತವಾಗುತ್ತವೆ. ಖೈಬರ್ ಕಣಿವೆಯ ಆಸುಪಾಸಿನ ಅಫ್ರಿಡಿಸರು ಮತ್ತು ಷಿನ್‌ವಾರಿಗಳಲ್ಲಿ ಒಬ್ಬ ಪ್ರಸಿದ್ಧ ಮುಲ್ಲಾ ಹಿಂದೂಗಳ ವಿರುದ್ಧ ಪ್ರಚೋದನಕಾರಿ ಮಾತುಗಳನ್ನಾಡಿದಾಗ ಅವು ಪರಿಣಾಮ ಬೀರದೇ ಇರಲಿಲ್ಲ. ಈ ಮುಲ್ಲಾ ತಮ್ಮ ಮಧ್ಯದಲ್ಲಿ ವಾಸಿಸುತ್ತಿರುವ ಹಿಂದೂಗಳು ದೇಶದ ಒಳಭಾಗದಲ್ಲಿ ತಮ್ಮ ಧರ್ಮಬಾಂಧವರ ಕೃತ್ಯಗಳೊಡನೆ ಸಂಬಂಧ ಹೊಂದುವುದಿಲ್ಲವೆಂದು ಲಿಖಿತರೂಪದಲ್ಲಿ ಹೇಳಿಕೆ ಕೊಡಲು ನಿರಾಕರಿಸಿದರೆ ಅಂತಹ ಹಿಂದೂಗಳನ್ನು ತಮ್ಮ ಮಧ್ಯದಲ್ಲಿರದಂತೆ ಹೊರಹಾಕಲು ಅಫ್ರಿಡಿಸರು ಮತ್ತು ಷಿನ್‌ವಾರಿಗಳಿಗೆ ಕರೆಯಿತ್ತನು. ಈ ಕರೆಯನ್ವಯ ಖೈಬರ್ ಅಫ್ರಿಡಿಸ್‌ರ ಎರಡು ಕುಲಗಳಾದ 'ಕುಯಿಖೆಲ್' ಮತು 'ಝುಕ್ಕಕೆಲ್' ಕುಲಗಳವರು ಮೊಟ್ಟಮೊದಲು ತಮ್ಮ ಹಿಂದೂ ನೆರೆಹೊರೆಯವರನ್ನು ಜುಲೈ ೨೭ರಂದು ಹೊರಹಾಕಿದರು. ಇದರಿಂದುಂಟಾದ ಉದ್ರೇಕವು ಅವರ ನೆರೆಹೊರೆಯವರಾದ ಷಿನ್‌ವಾರಿ ಬುಡಕಟ್ಟಿನವರಲ್ಲಿ ಹಬ್ಬಿ ಅವರೂ ಕೂಡ ತಮ್ಮ ನೆರೆಯ ಹಿಂದೂಗಳಿಗೆ ಕೆಲವೇ ದಿನಗಳಲ್ಲಿ ಹೊರ ಹೋಗಬೇಕೆಂದು ಎಚ್ಚರಿಕೆ ನೀಡಿದರು. ಆದಾಗ್ಯೂ ಕೆಲ ಹಿಂದೂಗಳು ಅಲ್ಲಿಂದ ಹೊರಹೋದ ನಂತರ ಉಳಿದ ಹಿಂದೂಗಳು ಅಲ್ಲಿಯೇ

---

* ರಂಗೀಲಾ ರಸೂಲ್ ಒಬ್ಬ ಮುಸಲ್ಮಾನನು ಬರೆದ 'ಸೀತಾ ಕಾ ಛಿನಾಲಾ' ಎಂಬ ಕಿರುಹೊತ್ತಿಗೆಗೆ ಉತ್ತರವಾಗಿತ್ತು. ಇದರಲ್ಲಿ ರಾಮಾಯಣದ ನಾಯಕ ರಾಮನ ಪತ್ನಿ ಸೀತೆ ಒಬ್ಬ ವೇಶ್ಯೆ ಎಂದು ಬರೆಯಲಾಗಿತ್ತು.

ಉಳಿಯಲು ಷಿನ್‌ವಾರಿಗಳು ಸಮ್ಮತಿಸಿದರು. ಖೈಬರ್ ಕಣಿವೆಯಿಂದ ಹೊರಹೋದ ಕೆಲ ಹಿಂದೂಗಳನ್ನು ಒರಟಾಗಿ ನಡೆಸಿಕೊಳ್ಳಲಾಯಿತು. ಎರಡು ಪ್ರಕರಣಗಳಲ್ಲಿ ಕಲ್ಲುಗಳನ್ನು ಬೀರಲಾಯಿತಾದರೂ ಅಂತಹ ಹಾನಿಯುಂಟಾಗಲಿಲ್ಲ. ಮೂರನೆಯ ಪ್ರಕರಣವೊಂದರಲ್ಲಿ ಒಬ್ಬ ಹಿಂದೂ ಗಾಯಗೊಂಡನು ಮತ್ತು ದೊಡ್ಡ ಪ್ರಮಾಣದಲ್ಲಿ ಆಸ್ತಿಪಾಸ್ತಿಯನ್ನು ತೆಗೆದುಕೊಂಡು ಹೋಗಲಾಯಿತು. ಆದರೆ, ಅದನ್ನು 'ಅಫ್ರಿಡಿಸ್'ಗಳು ಮತ್ತು 'ಖಸ್ಸಾದಾರ'ರಿಂದ ಸಂಪೂರ್ಣವಾಗಿ ವಶಪಡಿಸಿಕೊಳ್ಳಲಾಯಿತು ಮತ್ತು ಅಪರಾಧಿಗಳಿಗೆ ದಂಡ ವಿಧಿಸಲಾಯಿತು. ಅನಂತರ ಬುಡಕಟ್ಟು ಪ್ರದೇಶ ತೊರೆದು ಹೊರಹೋಗುವ ಹಿಂದೂಗಳಿಗೆ ರಸ್ತೆಯಲ್ಲಿ ಕಾವಲು ಪಡೆ ಹಾಕಲಾಯಿತು. ರಾಜಕೀಯ ನಿಯೋಗಿ (ಪೊಲಿಟಿಕಲ್ ಏಜೆಂಟ್)ಯು ಒತ್ತಾಯದ ಕಾರಣ ಜುಲೈ ತಿಂಗಳಲ್ಲಿ ಕೊನೆಯ ಭಾಗದಲ್ಲಿ 'ರಿಸಾಲಾ ವರ್ತಮಾನ್' ಪ್ರಕರಣ ಇತ್ಯರ್ಥದಲ್ಲಿ ನಿರ್ಣಯವನ್ನು ನಿರೀಕ್ಷಿಸಿ ಅಲ್ಲಿಯವರೆಗೆ ಹಿಂದೂಗಳ ವಿರುದ್ಧ ಹೇರಲಾದ ಬಹಿಷ್ಕಾರವನ್ನು ಅಮಾನತ್ತಿನಲ್ಲಿಡಲು ಅರ್ಫಿಡಿ ಜಿರ್ಗಾ ನಿರ್ಣಯಿಸಿತು. ಅದರೆ, ಮುಂದಿನ ವಾರದಲ್ಲಿ ಖೈಬರ್ ಕಣಿವೆಯ ಮೇಲ್ಭಾಗಲದ್ಲಿ ಲಾಂಡಿ ಕೋಟಲ್‌ದಲ್ಲಿ ವಾಸಿಸುತ್ತಿದ್ದ ಅನೇಕ ಹಿಂದೂ ಕುಟುಂಬಗಳು ಬುಡಕಟ್ಟು ಪ್ರಧಾನರುಗಳ ಆಶ್ವಾಸನೆಗಳನ್ನು ತಿರಸ್ಕರಿಸಿ ಪೆಷಾವರ್‌ಗೆ ಹೊರಟರು. ಕಣಿವೆಯಲ್ಲಿ ತಮ್ಮ ಹಿತಾಸಕ್ತಿಗಳನ್ನು ನೋಡಿಕೊಳ್ಳಲು ಪ್ರತಿಯೊಂದು ಕುಟುಂಬದಿಂದ ಒಬ್ಬೊಬ್ಬನನ್ನು ಅಲ್ಲಿಯೇ ಬಿಟ್ಟುಹೋದರು. ಒಟ್ಟಿನಲ್ಲಿ ಆಗಸ್ಟ್ ಮಧ್ಯದ ಹೊತ್ತಿಗೆ ಆತಂಕ ಕಡಿಮೆಯಾಗುತ್ತಿದ್ದಾಗ್ಯೂ ಸುಮಾರು ನಾಲ್ಕು ನೂರ ಐವತ್ತು ಹಿಂದೂ ಪುರುಷರು, ಸ್ತ್ರೀಯರು ಮತ್ತು ಮಕ್ಕಳು ಪೆಷಾವರ್ ಪ್ರವೇಶಿಸಿದ್ದರು. ಕೆಲವು ಹಿಂದೂಗಳನ್ನು ಹೊರಹಾಕಲಾಗಿತ್ತು. ಕೆಲವರು ಭಯಗ್ರಸ್ತರಾಗಿ ಬಿಟ್ಟುಹೋದರು. ಕೆಲವರು ಬೆದರಿಕೆಯ ಕಾರಣ ತಮ್ಮ ಮನೆಗಳನ್ನು ಬಿಟ್ಟುಹೋಗಬೇಕಾಯಿತು. ಕೆಲವರು ತಮ್ಮ ನೆರೆಯವರ ಬಗ್ಗೆ ಸಹಾನುಭೂತಿಯಿಂದ ಹೋದರು. ಈ ರೀತಿಯಲ್ಲಿ ಬುಡಕಟ್ಟು ಪ್ರದೇಶದಿಂದ ಹೊರದೂಡುವ ಮತ್ತು ಸ್ವಯಂಪ್ರೇರಿತ ವಲಸೆಯ ನಿದರ್ಶನ ಇನ್ನೆಲ್ಲಿಯೂ ಕಾಣಬರುವುದಿಲ್ಲ. ಅಲ್ಲಿ ಹಿಂದೂಗಳು ಅನೇಕ ತಲೆಮಾರುಗಳಿಂದ ಬುಡಕಟ್ಟು ವ್ಯವಸ್ಥೆಯಲ್ಲಿ ಗೌರವಾನ್ವಿತ ಹಾಗೂ ಉಪಯುಕ್ತ ಸದಸ್ಯರುಗಳಾಗಿ ಜೀವಿಸಿದ್ದರು ಮತ್ತು ಅವರ ರಕ್ಷಣೆಗಾಗಿ ಬುಡಕಟ್ಟಿನವರು ಹೆಣಗುತ್ತಿದ್ದರಲ್ಲದೆ ಅವರ ಆಂತರಿಕ ವಿವಾದಗಳ ಪರಿಹಾರದಲ್ಲಿ ಆಸಕ್ತಿ ವಹಿಸುತ್ತಿದ್ದರು. ಈ ಉದ್ವೇಗ ಪರಿಸ್ಥಿತಿಯ ಅವಧಿಯಲ್ಲಿ ಒಟ್ಟು ಸುಮಾರು ೪೫೦ ಹಿಂದೂಗಳು ಖೈಬರ್ ಕಣಿವೆಯಿಂದ ಹೊರಹೋದರು. ಇವರಲ್ಲಿ ಸುಮಾರು ೩೩೦ ಜನರು ೧೯೨೭ನೆಯ ವರ್ಷದ ಕೊನೆಯ ಹೊತ್ತಿಗೆ ಬುಡಕಟ್ಟು ಪ್ರದೇಶದಲ್ಲಿನ ತಮ್ಮ ಮನೆಗಳಿಗೆ ಮರಳಿದ್ದರು. ಉಳಿದವರಲ್ಲನೇಕರು ಸಧ್ಯಕ್ಕಾದರೂ ಹೆಚ್ಚು ಸುರಕ್ಷಿತವೆನಿಸಿದ ಬ್ರಿಟಿಷ್ ಇಂಡಿಯಾದಲ್ಲಿಯೇ ನೆಲೆಸಲು ನಿರ್ಧರಿಸಿದರು.

೧೯೨೭–೨೮ಕ್ಕೆ ಹೋಲಿಸಿದರೆ ೧೯೨೮–೨೯ ಹೆಚ್ಚು ಶಾಂತವಾಗಿತ್ತು. ಹಿಂದೂ ಮುಸಲ್ಮಾನರ ನಡುವಣ ಸಂಬಂಧಗಳಲ್ಲಿ ಹೆಚ್ಚು ಸಂಘರ್ಷಣೆಗೆ ಕಾರಣವಾದ ಕೆಲವು ರಾಜಕೀಯ ಮಹತ್ವದ ಸಮಸ್ಯೆಗಳನ್ನು ನಿವಾರಿಸುವುದಕ್ಕಾಗಿ ಮತ್ತು ಇಬ್ಬರ ನಡುವೆ ಒಪ್ಪಂದ ಉಂಟುಮಾಡುವಂತಹ ಆಧಾರಗಳನ್ನು ಕಂಡುಹಿಡಿಯುವ ಪ್ರಯತ್ನಗಳಿಗೆ ಹೆಚ್ಚಿನ ಚಾಲನೆ ದೊರೆಯುವಲ್ಲಿ ಮಹಾಮಹಿಮ ಲಾರ್ಡ್ ಇರ್ವಿನ್‌ರವರು ಕೇಂದ್ರ ಶಾಸಕಾಂಗದಲ್ಲಿ ಮತ್ತು ಹೊರಗಡೆ ಮಾಡಿದ ಭಾಷಣಗಳು ಸಹಾಯಕವಾದವು. ಅದೃಷ್ಟವಶಾತ್ ೧೯೨೯ರಲ್ಲಿ ನೇಮಕಗೊಂಡಿದ್ದ ಸೈಮನ್ ಆಯೋಗದ ವಿಚಾರಣೆಯಿಂದ ಹೊರಬಿದ್ದ ವಿವಾದಾಂಶಗಳು ವಿವಿಧ ಕೋಮುಗಳ ಗಮನ ಮತ್ತು ಕಾಲವನ್ನು ಸೆಳೆದವು. ತತ್ಪರಿಣಾಮವಾಗಿ ಸಂಘರ್ಷಣೆಯ ಸ್ಥಳೀಯ ಕಾರಣಗಳಿಗೆ ಕಡಿಮೆ ಗಮನ ನೀಡಲಾಯಿತಲ್ಲದೇ ಸಂವಿಧಾನಾತ್ಮಕ ಧೋರಣೆಗೆ ಹೆಚ್ಚು ಮಹತ್ವ ನೀಡಲಾಯಿತು. ಏತನ್ಮಧ್ಯೆ ಅಂತರ್ಜಾತೀಯ

ವೈಷಮ್ಯಗಳನ್ನು ಪ್ರಚೋದಿಸುವ ಪತ್ರಿಕೆಗಳನ್ನು ದಂಡಿಸುವ ಕಾಯ್ದೆಯನ್ನು ಕೇಂದ್ರ ಶಾಸಕಾಂಗವು ೧೯೨೭ರ ಶರತ್ಕಾಲದ ಅಧಿವೇಶನದಲ್ಲಿ ಅಂಗೀಕರಿಸಿತು. ಅಂತರ್ಜಾತೀಯ ಗಲಭೆಗಳ ಪರಿಸ್ಥಿತಿಯಲ್ಲಿ ಸುಧಾರಣೆ ತರುವಲ್ಲಿ ಈ ಕಾಯ್ದೆ ಸ್ವಲ್ಪಮಟ್ಟಿಗೆ ಪರಿಣಾಮಕಾರಿಯಾಯಿತು. ೧೯೨೯ರ ಮಾರ್ಚ್ ೩೧ರಂದು ಕೊನೆಗೊಂಡ ಹನ್ನೆರಡು ತಿಂಗಳ ಅವಧಿಯಲ್ಲಿ ೨೨ ಗಲಭೆಗಳು ಸಂಭವಿಸಿದವು. ಗಲಭೆಗಳ ಸಂಖ್ಯೆ ತುಲನಾತ್ಮಕವಾಗಿ ಕಡಿಮೆಯಾಗಿತ್ತಾದರೂ ಮುಂಬಯಿ ಗಲಭೆಗಳ ಕಾರಣದಿಂದ ಸತ್ತವರ ಮತ್ತು ಗಾಯಗೊಂಡವರ ಸಂಖ್ಯೆ ಹೆಚ್ಚಾಗಿತ್ತು. ೨೦೦ಕ್ಕೆ ಕಡಿಮೆ ಇಲ್ಲದಷ್ಟು ಜನ ಕೊಲ್ಲಲ್ಪಟ್ಟರು ಮತ್ತು ಸುಮಾರು ಒಂದು ಸಾವಿರ ಜನ ಗಾಯಗೊಂಡರು. ಇವುಗಳಲ್ಲಿ ಮುಂಬಯಿಯಲ್ಲಿ ಜರುಗಿದ ಹದಿನೈದು ದಿನಗಳ ಗಲಭೆಯಲ್ಲಿಯೇ ೧೪೯ ಜನರು ಕೊಲ್ಲಲ್ಪಟ್ಟು ೭೩೯ ಜನ ಗಾಯಗೊಂಡಿದ್ದರು. ಈ ೨೨ ದಂಗೆಗಳಲ್ಲಿ ಏಳು, ಎಂದರೆ ಇವುಗಳ ಮೂರರಲ್ಲಿ ಒಂದು ಭಾಗ, ಮೇ ತಿಂಗಳ ಕೊನೆಯಲ್ಲಿ ಆಚರಿಸಲಾದ ಮುಸಲ್ಮಾನರ ವಾರ್ಷಿಕ ಹಬ್ಬವಾದ ಬಕ್ರೀದ್‌ದ ದಿವಸ ಸಂಭವಿಸಿದವು. ಈ ಹಬ್ಬದ ಆಚರಣೆ ಯಾವಾಗಲೂ ಹಿಂದೂ–ಮುಸ್ಲಿಂ ಸಂಬಂಧಗಳಲ್ಲಿ ಒಂದು ಅಪಾಯಕಾರಿ ಕಾಲ. ಮುಸಲ್ಮಾನರು ಈ ಹಬ್ಬದ ದಿನವನ್ನು ಪ್ರಾಣಿ ಬಲಿಯ ದಿನವೆಂದು ಭಾವಿಸುತ್ತಾರೆ. ಮತ್ತು ಬಲಿಪ್ರಾಣಿ ಸಾಮಾನ್ಯವಾಗಿ ಆಕಳೇ ಆಗಿರುವುದರಿಂದ ಅತ್ಯಂತ ಸಣ್ಣ ಆತಂಕ ಕೂಡ ಎರಡೂ ಸಮುದಾಯಗಳ ನಡುವೆ ಭುಗಿಲೇಳುವುದಕ್ಕೆ ಆಸ್ಪದ ನೀಡಿಯೇ ನೀಡುತ್ತದೆ. ಬಕ್ರೀದ್ ಆಚರಣೆಯ ಸಂಬಂಧದ ಗಲಭೆಗಳಲ್ಲಿ ಎರಡು ಮಾತ್ರ ಗಂಭೀರ ಸ್ವರೂಪದವುಗಳಾಗಿದ್ದು ಅವೆರಡೂ ಪಂಜಾಬಿನಲ್ಲಿ ಸಂಭವಿಸಿದವು. ಇವುಗಳಲ್ಲಿ ಮೊದಲನೆಯದು ಅಂಬಾಲಾ ಜಿಲ್ಲೆಯ ಒಂದು ಹಳ್ಳಿಯಲ್ಲಿ ಸಂಭವಿಸಿ ಹತ್ತು ಜನ ಕೊಲ್ಲಲ್ಪಟ್ಟು ಒಂಭತ್ತು ಜನ ಗಾಯಗೊಂಡರು. ಇನ್ನೊಂದು ಘಟನೆ ದಕ್ಷಿಣ ಪಂಜಾಬಿನಲ್ಲಿ ಗುರಗಾಂವ ಜಿಲ್ಲೆಯ ಸೊಫ್ತಾಗ್ರಾಮದಲ್ಲಿ ಸಂಭವಿಸಿ ಅದರ ಉದ್ರೇಕಕಾರಿ ಲಕ್ಷಣಗಳಿಂದಾಗಿ ಅದು ಸಾಕಷ್ಟು ಕುಪ್ರಸಿದ್ಧಿಯಾಯಿತು. ಈ ಗ್ರಾಮದ ಸುತ್ತ ಹಿಂದೂ ಹೈರತೇ ವಾಸಿಸುತ್ತಿದ್ದ ಗ್ರಾಮಗಳಿದ್ದವು. ಈ ಹಿಂದೂಗಳು ಸೋಪ್ತಾ ಗ್ರಾಮದ ಮುಸಲ್ಮಾನರು 'ಈದ್ ದಿವಸ' ಒಂದು ಆಕಳನ್ನು ಬಲಿಕೊಡುವ ಉದ್ದೇಶ ಹೊಂದಿರುವುದಾಗಿ ತಿಳಿದು ಬಂದುದರಿಂದ ಮುಸಲ್ಮಾನರು ಬಲಿ ಕೊಡಲು ಆಯ್ಕೆ ಮಾಡಿರುವ ಆಕಳು ಹಿಂದೂ ರೈತರ ಜಮೀನುಗಳಲ್ಲಿಯೇ ಮೇಯುತ್ತಿರುವ ಆಕಳಾಗಿರುವುದರಿಂದ ಅದಕ್ಕೆ ಆಕ್ಷೇಪವೆತ್ತಿದರು. ಈ ವಿವಾದವು ಭೀತಿಯುಂಟುಮಾಡುವ ಸಂಭವವಿದ್ದುದರಿಂದ ಜಿಲ್ಲೆಯ ಪೊಲೀಸ್ ಸೂಪರಿಂಟೆಂಡೆಂಟ್‌ರವರು ಸುಮಾರು ೨೫ ಜನರ ಪೊಲೀಸ್ ಪಡೆಯೊಂದಿಗೆ ಈ ಹಳ್ಳಿಗೆ ಬಂದರು. ಅವರು ಈ ವಿವಾದಾಸ್ಪದವಾದ ಆಕಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ಅದನ್ನು ಬಂಧಿಸಿಟ್ಟರು. ಆದರೆ ಇವರ ಉಪಸ್ಥಿತಿಯಿಂದ ಕೆಲವು ನೆರೆಹೊರೆಯ ಹಳ್ಳಿಗಳ ರೈತಾಪಿ ಹಿಂದೂಗಳು ಕವಲುಗೋಲುಗಳು, ಭರ್ಚಿಗಳು ಮತ್ತು ದೊಣ್ಣೆಗಳೊಂದಿಗೆ ಸಾವಿರಾರು ಜನ ಸೋಫಿಯಾ ಗ್ರಾಮಕ್ಕೆ ಬರುವುದನ್ನು ತಡೆಯಲಾಗಲಿಲ್ಲ. ಗ್ರಾಮದಲ್ಲಿಯೇ ಇದ್ದ ಪೊಲೀಸ್ ಸೂಪರಿಂಟೆಂಡೆಂಟ್ ಮತ್ತು ಒಬ್ಬ ಭಾರತೀಯ ಕಂದಾಯ ಅಧಿಕಾರಿ ಈ ವಿವಾದಾತ್ಮಕ ಆಕಳನ್ನು ಬಲಿ ಕೊಡಲಾಗುವುದಿಲ್ಲವೆಂಬ ಭರವಸೆ ನೀಡಿದಾಗ್ಯೂ ಇದರಿಂದ ಜನಜಂಗುಳಿ ತೃಪ್ತರಾಗದೆ ಯಾವುದೇ ಆಕಳನ್ನು ಬಲಿಕೊಟ್ಟಿದ್ದೇ ಆದರೆ, ಇಡೀ ಗ್ರಾಮವನ್ನೇ ಸುಟ್ಟುಬಿಡುವುದಾಗಿ ಬೆದರಿಕೆ ಹಾಕಿದರು ಮತ್ತು ಆ ಮಕ್ಕಳನ್ನು ತಮ್ಮ ವಶಕ್ಕೆ ಕೊಡಬೇಕೆಂದು ಆಗ್ರಹಪಡಿಸಿದರು. ಪೊಲೀಸ್ ಸೂಪರಿಂಟೆಂಡೆಂಟ್‌ರರು ಈ ಬೇಡಿಕೆಗೆ ಒಪ್ಪದಿದ್ದಾಗ ಜನಜಂಗುಳಿ ಹಿಂಸಾಕೃತ್ಯಕ್ಕಿಳಿದು ಪೊಲೀಸರ ಮೇಲೆ ಕಲ್ಲು ತೂರಲಾರಂಭಿಸಿತು. ಪೊಲೀಸ್ ಸೂಪರಿಂಟೆಂಡೆಂಟ್‌ರು ಜನರಿಗೆ ಚದುರುವಂತೆ ಎಚ್ಚರಿಕೆ ನೀಡಿದರಾದರೂ ಅದರಿಂದ ಯಾವ ಪರಿಣಾಮವೂ ಆಗಲಿಲ್ಲ. ಆದ್ದರಿಂದ ಅವರು ರಿವಾಲ್ವರಿನಿಂದ

ಗಾಳಿಯಲ್ಲಿ ಒಂದು ಎಚ್ಚರಿಕೆಯ ಗುಂಡು ಹಾರಿಸಿದರು. ಆದಾಗ್ಯೂ ಜನಜಂಗುಳಿ ಮುನ್ನುಗ್ಗುತ್ತಲೇ ಇತ್ತು. ಹೀಗಾಗಿ ಸೂಪರಿಂಟೆಂಡೆಂಟ್‌ರು ತಮ್ಮ ಪೊಲೀಸ್ ಪಡೆಗೆ ಗೋಲಿಬಾರ್ ಮಾಡುವಂತೆ ಆಜ್ಞಾಪಿಸಿದರು. ಮೊದಲು ಒಂದೇ ಒಂದು ಬಾರಿ ಗೋಲಿಬಾರ್ ಮಾಡಲಾಯಿತು. ಆದರೆ ಇದರಿಂದ ಯಾವ ಪರಿಣಾಮವೂ ಆಗದೆ ಜನತೆ ಹಿಂದೆ ಸರಿಯದಿದ್ದಾಗ ಪುನಃ ಪುನಃ ಗುಂಡು ಹಾರಿಸಬೇಕಾಯಿತು. ಆಗ ಜನಸಮೂಹ ನಿಧಾನವಾಗಿ ಚದುರತೊಡಗಿತು. ಚದುರುವಾಗ ಅವರು ಆ ಹಳ್ಳಿಗೆ ಸೇರಿದ ದನಕರುಗಳನ್ನು ಹೊಡೆದುಕೊಂಡು ಹೋದರು.

ಪೊಲೀಸರು ಈ ಕಾರ್ಯಾಚರಣೆಯಲ್ಲಿ ತೊಡಗಿದ್ದಾಗ ಕೆಲವು ಹಿಂದೂ ರೈತರು ಸೋಘ್ರಾದ ಇನ್ನೊಂದು ಕಡೆಯಿಂದ ಪ್ರವೇಶಿಸಿ ಆ ಗ್ರಾಮಕ್ಕೆ ಬೆಂಕಿ ಹಚ್ಚುವ ಪ್ರಯತ್ನ ಮಾಡಿದರು. ಅವರು ಮೂರು, ನಾಲ್ಕು ಜನರನ್ನು ಗಾಯಗೊಳಿಸಿದ ನಂತರ ಪೊಲೀಸರು ಅವರನ್ನು ಓಡಿಸಿದರು. ಒಟ್ಟಿನಲ್ಲಿ ೧೪ ಜನ ಕೊಲ್ಲಲ್ಪಟ್ಟು ೩೩ ಜನರು ಗಾಯಗೊಂಡರು. ಈ ಪ್ರಕರಣದ ವಿಚಾರಣೆ ನಡೆಸಲು ಪಂಜಾಬ್ ಸರ್ಕಾರ ಒಬ್ಬ ನ್ಯಾಯಾಂಗ ಅಧಿಕಾರಿಯನ್ನು ನಿಯೋಜಿಸಿತು. ಜುಲೈ ೬ರಂದು ಪ್ರಕಟವಾದ ಅವರ ವರದಿಯು ಪೊಲೀಸರ ಕಾರ್ಯಾಚರಣೆಯನ್ನು ಸಮರ್ಥಿಸಿತು ಮತ್ತು ಪೊಲೀಸರು ಗುಂಡು ಹಾರಿಸಿದುದು ಅವಶ್ಯಕತೆಗಿಂತ ಹೆಚ್ಚಾಗಿರಲಿಲ್ಲ ಅಥವಾ ಜನರು ತಮ್ಮ ಆಕ್ರಮಣವನ್ನು ನಿಲ್ಲಿಸಿದ ಮೇಲೂ ಗುಂಡು ಹಾರಿಸಿತೆಂಬ ಆಪಾದನೆಯಲ್ಲಿ ಹುರುಳಿಲ್ಲವೆಂದು ಅದು ಹೇಳಿತು. ಮುಂದುವರಿಯುತ್ತಾ ಈ ವರದಿ ಪೊಲೀಸರು ಗುಂಡು ಹಾರಿಸದೇ ಹೋಗಿದ್ದರೆ ಅಪಾಯಕ್ಕೊಳಗಾಗುವ ಸಂಭವವಿತ್ತು ಎಂದು ಹೇಳಿತು. ಕೊನೆಯಲ್ಲಿ ಈ ವರದಿಯನ್ನು ಬರೆದ ಅಧಿಕಾರಿಯ ಅಭಿಪ್ರಾಯದಲ್ಲಿ ಒಂದು ವೇಳೆ ಸೋಘ್ರಾ ಗ್ರಾಮವನ್ನೇನಾದರೂ ಹಾನಿಗೀಡು ಮಾಡಿದ್ದೇ ಆಗಿದ್ದರೆ ೨೪ ಗಂಟೆಗಳೊಳಗೆ ಸುತ್ತಮುತ್ತಲ ಗ್ರಾಮೀಣ ಪ್ರದೇಶದಲ್ಲಿ ಭಯಾನಕ ಕೋಮು ಸಂಘರ್ಷ ಉಂಟಾಗುವ ಸಾಧ್ಯತೆ ಇತ್ತು.

ಕಲ್ಕತ್ತಾ ನಗರದಿಂದ ಅನತಿ ದೂರದಲ್ಲಿದ್ದ ಪ್ರಮುಖ ರೈಲ್ವೆ ಕೇಂದ್ರವಾಗಿದ್ದ ಖರಗ್ ಪುರದಲ್ಲಿಯ ದಂಗೆಗಳ ಪರಿಣಾಮವಾಗಿ ಗಂಭೀರ ಸ್ವರೂಪದ ಪ್ರಾಣ ಹಾನಿಯಾಯಿತು. ಖರಗ್‌ಪುರದಲ್ಲಿ ಎರಡು ದಂಗೆಗಳು ಸಂಭವಿಸಿದವು. ಮೊದಲನೆಯದು ಜೂನ್ ಕೊನೆಯ ಭಾಗದಲ್ಲಿ ಮೊಹರಮ್ ಆಚರಣೆಯ ಸಂದರ್ಭದಲ್ಲಿ ಮತ್ತು ಎರಡನೆಯದು ೧೯೨೭ರ ಸೆಪ್ಟೆಂಬರ್ ೧ರಂದು ಒಂದು ಆಕಳನ್ನು ಕೊಂದ ಕಾರಣದಿಂದ ಸಂಭವಿಸಿದವು. ಮೊದಲನೆಯ ಗಲಭೆಯಲ್ಲಿ ೧೫ ಜನರು ಸತ್ತು ೨೧ ಜನ ಗಾಯಗೊಂಡರು. ಎರಡನೆಯದಲ್ಲಿ ೯ ಜನ ಸತ್ತು ೩೫ ಜನ ಗಾಯಗೊಂಡರು. ಆದರೆ ಇವಾವನ್ನು ಫೆಬ್ರವರಿ ಆರಂಭದಿಂದ ಮಧ್ಯಭಾಗದವರೆಗೆ ಮುಂಬಯಿಯಲ್ಲಿ ಸಂಭವಿಸಿದ ದಂಗೆಗಳಿಗೆ ಹೋಲಿಸುವಂತಿಲ್ಲ. ಈಗಾಗಲೇ ನೀವು ಗಮನಿಸಿರುವಂತೆ ಇವುಗಳಲ್ಲಿ ೧೪೯ ಜನ ಪ್ರಾಣ ಕಳೆದುಕೊಂಡು ೭೦೦ಕ್ಕಿಂತಲೂ ಹೆಚ್ಚು ಜನ ಗಾಯಗೊಂಡರು.

ಹಿಂದಿನ ವರ್ಷಗಳಲ್ಲಿ ಕೋಮು ಗಲಭೆಗಳು ಸಾರ್ವಜನಿಕ ಜೀವನದ ಅತ್ಯಂತ ಶೋಚನೀಯ ಮತ್ತು ಪ್ರಮುಖ ಅಂಶಗಳಾಗಿದ್ದವು. ಆದರೆ ೧೯–೨೯–೩೦ನೆಯ ವರ್ಷದಲ್ಲಿ ಅವುಗಳು ಅಷ್ಟಾಗಿ ಸಂಭವಿಸಲಿಲ್ಲ. ಕೇವಲ ೧೨ ಮಾತ್ರ ಇಂಡಿಯಾ ಸರ್ಕಾರಕ್ಕೆ ವರದಿ ಮಾಡುವಷ್ಟು ಪ್ರಮುಖವಾಗಿದ್ದವು. ಇವುಗಳಲ್ಲಿಯೂ ಕೂಡ ಮುಂಬಯಿ ನಗರದಲ್ಲಿ ಸಂಭವಿಸಿದ ಗಲಭೆಗಳು ವಾಸ್ತವವಾಗಿ ಗಂಭೀರ ಸ್ವರೂಪದವುಗಳಾಗಿದ್ದವು. ಇವು ಏಪ್ರಿಲ್ ೨೩ರಂದು ಪ್ರಾರಂಭವಾಗಿ ಮೇ ತಿಂಗಳ ಮಧ್ಯ ಭಾಗದವರೆಗೆ ವ್ಯಾಪಕವಾಗಿ ಹರಡಿ ೩೫ ಸಾವು ಮತ್ತು ಸುಮಾರು ೨೦೦ ಜನ ಗಾಯಗೊಂಡರು ಇಲ್ಲವೆ ಇತರ

ಆಘಾತಗಳಿಗೊಳಗಾದರು. ಏಪ್ರಿಲ್ ತಿಂಗಳಲ್ಲಿ ಗಣನೀಯ ಉದ್ರೇಗವನ್ನುಂಟುಮಾಡಿದ ಘಟನೆ ಎಂದರೆ ಲಾಹೋರಿನಲ್ಲಿ ರಾಜಪಾಲ್‌ನ ಹತ್ಯೆ. ಈತನು ಇಸ್ಲಾಂ ಧರ್ಮದ ಪ್ರವಾದಿ ಪೈಗಂಬರರ ಮೇಲೆ ತೀವ್ರವಾದ ಟೀಕೆಗಳನ್ನು ಮಾಡಲಾದ ರಂಗೀಲಾ ರಸೂಲ್ ಎಂಬ ಕಿರುಹೊತ್ತಿಗೆಯನ್ನು ಬರೆಸಿದ್ದನು. ಇದು ಹಿಂದಿನ ವರ್ಷಗಳಲ್ಲಿ ಸಂಭವಿಸಿದ ಬಹುತೇಕ ಕೋಮು ಉದ್ವೇಗಗಳಿಗೆ ಕಾರಣವಾಗಿತ್ತಲ್ಲದೆ ಅನೇಕ ಕಾನೂನಿನ ಮತ್ತು ರಾಜಕೀಯ ತೊಡಕುಗಳಿಗೆಡೆಮಾಡಿತ್ತು. ಅದೃಷ್ಟವಶಾತ್ ಈ ಹತ್ಯೆ ಸಂಭವಿಸಿದಾಗ ಎರಡೂ ಕೋಮಿನವರು ಕೊಲೆ ಅಪರಾಧಿಯ ಮರಣದಂಡನೆಯ ಕಾಲಕ್ಕೂ ಹಾಗೂ ಅವನ ಶವಸಂಸ್ಕಾರದ ಕಾಲದಲ್ಲಿಯೂ ತೋರಿದ ಸಂಯಮ ಪ್ರಶಂಸನೀಯವಾಗಿತ್ತು. ಅವರ ಭಾವನೆಗಳು ಕೆರಳಿದ್ದಾಗ್ಯೂ ಯಾವುದೇ ತರಹದ ಗಂಭೀರ ಪರಿಸ್ಥಿತಿ ಉಂಟಾಗಲಿಲ್ಲ.

೧೯೩೦–೩೧ರಲ್ಲಿ ಕಾನೂನು ಭಂಗ ಚಳುವಳಿ ಎದ್ದಿತು. ಇದು ದೇಶದಾದ್ಯಂತ ಗಲಭೆಗಳಿಗೆ ಕಾರಣವಾಯಿತು. ಇವು ಬಹುತೇಕ ರಾಜಕೀಯ ಸ್ವರೂಪದವುಗಳಾಗಿದ್ದು ಇವುಗಳಲ್ಲಿ ಕಾಂಗ್ರೆಸ್ ಸ್ವಯಂಸೇವಕರು ಮತ್ತು ಪೊಲೀಸರು ಭಾಗಿಗಳಾಗಿದ್ದರು. ಆದರೆ ಭಾರತದಲ್ಲಿ ಎಂದಿನಂತೆ ಈ ರಾಜಕೀಯ ಗಲಭೆಗಳು ಕೋಮುಸ್ವರೂಪ ತಾಳಿದವು. ಕಾಂಗ್ರೆಸ್ ಸ್ವಯಂ ಸೇವಕರು ಮುಸಲ್ಮಾನರನ್ನು ಈ ಚಳುವಳಿಯಲ್ಲಿ ಭಾಗವಹಿಸುವಂತೆ ಒತ್ತಾಯ ಮಾಡಿದಾಗ ಅವರು ನಿರಾಕರಿಸಿದ ಕಾರಣ ಈ ಗಲಭೆಗಳು ಕೋಮು ಸ್ವರೂಪ ತಾಳಿದವು. ಇದರ ಪರಿಣಾಮವಾಗಿ ಈ ವರ್ಷವು ರಾಜಕೀಯ ಗಲಭೆಗಳಿಂದ ಆರಂಭವಾದರೂ ಅದು ಸಾಕಷ್ಟು ಗಂಭೀರ ಸ್ವರೂಪದ ಅನೇಕ ಕೋಮು ಗಲಭೆಗಳೊಂದಿಗೆ ಕೊನೆಗೊಂಡಿತು. ಈ ಕೋಮುಗಲಭೆಗಳಲ್ಲಿಯೇ ಅತ್ಯಂತ ಕರಾಳ ಘಟನೆಗಳು ಆಗಸ್ಟ್ ತಿಂಗಳ ೪ ಮತ್ತು ೧೧ನೆಯ ದಿನಾಂಕಗಳ ನಡುವೆ ಸಿಂಧ್ ಪ್ರಾಂತ್ಯದ ಸುಕ್ಕೂರು ಗ್ರಾಮದ ಸುತ್ತಮುತ್ತ ಸಂಭವಿಸಿ ಸುಮಾರು ನೂರಕ್ಕೂ ಹೆಚ್ಚು ಗ್ರಾಮಗಳು ಇವುಗಳಿಂದ ಪ್ರಭಾವಿತವಾದವು. ಬಂಗಾಳದ ಮೈಮೆನ್ ಸಿಂಘ್ ಜಿಲ್ಲೆಯ ಕಿಶೋರ್ ಗಂಜ್ ಉಪವಿಭಾಗದಲ್ಲಿ ಜುಲೈ ೧೨–೧೫ರಂದು ದೊಡ್ಡ ಪ್ರಮಾಣದಲ್ಲಿ ಗಲಭೆಗಳು ಭುಗಿಲೆದ್ದವು. ಇವೂ ಅಲ್ಲದೆ, ಬಾಲಿಯಾ(ಸಂಯುಕ್ತ ಪ್ರಾಂತ್ಯಗಳ)ದಲ್ಲಿ ಆಗಸ್ಟ್ ೩ರಂದು, ಸೆಪ್ಟೆಂಬರ್ ೬ ನಾಗಪುರದಲ್ಲಿ ಮತ್ತು ಸೆಪ್ಟೆಂಬರ್ ೬/೭ರಂದು ಮುಂಬಯಿಯಲ್ಲಿ ಕೋಮು ಗಲಭೆಗಳುಂಟಾದವು ಮತ್ತು ಅಕ್ಟೋಬರ್ ೩೧ರಂದು ಮದ್ರಾಸು ಪ್ರಾಂತ್ಯದ ತಿರುಚಂದೂರಿನಲ್ಲಿ ಹಿಂದೂಗಳು ಮತ್ತು ಕ್ರಿಶ್ಚಿಯನ್ನರ ನಡುವೆ ಗಲಭೆ ಸಂಭವಿಸಿತು. ಫೆಬ್ರವರಿ ೧೨ರಂದು ಅಮೃತಸರದಲ್ಲಿ ಮುಷ್ಕರ ತಡೆಯುವ ಕಾವಲುಗಾರರನ್ನು ವಿರೋಧಿಸಿದ ಒಬ್ಬ ಹಿಂದೂ ಬಟ್ಟೆ ವರ್ತಕನನ್ನು ಕೊಲ್ಲುವ ಪ್ರಯತ್ನ ಮಾಡಲಾಯಿತು ಮತ್ತು ಇದೇ ತರಹದ ಅನಾಚಾರ ಎರಡು ದಿನಗಳ ಮುಂಚೆ ಬನಾರಸಿನಲ್ಲಿಯೂ ನಡೆಯಿತು. ಇದರ ಪರಿಣಾಮಗಳು ಗಂಭೀರ ಸ್ವರೂಪದವುಗಳಾಗಿದ್ದವು. ಈ ಪ್ರಕರಣದಲ್ಲಿ ಒಬ್ಬ ಮುಸಲ್ಮಾನ ವರ್ತಕನು ತುತ್ತಾಗಿದ್ದು ಅವನ ಮೇಲೆಸಗಿದ ಹಲ್ಲೆ ಮಾರಣಾಂತಿಕವಾಯಿತು. ಇದರ ಪರಿಣಾಮವಾಗಿ, ಆಗಲೇ ಉತ್ತರ ಹಿಂದೂಸ್ತಾನದಾದ್ಯಂತ ಗಂಭೀರ ಸ್ವರೂಪ ತಾಳಿದ್ದ ಹಿಂದೂ–ಮುಸಲ್ಮಾನರ ಸಂಬಂಧಗಳ ಕಾರಣ ಭೀಕರವಾದ ಕೋಮು ದಂಗೆಗಳು ಭುಗಿಲೆದ್ದು ಐದು ದಿನಗಳವರೆಗೆ ಮುಂದುವರಿದವು. ಈ ಗಲಭೆಗಳಲ್ಲಿ ಆಸ್ತಿಪಾಸ್ತಿಗೆ ದೊಡ್ಡ ಪ್ರಮಾಣದಲ್ಲಿ ಹಾನಿಯುಂಟಾಗಿ ಅನೇಕರು ಜೀವ ಕಳೆದುಕೊಂಡರು ಇಲ್ಲವೆ ಗಾಯಗೊಂಡರು. ಬಂಗಾಳದ ನಿಲ್ಫಾಮಾರಿಯಲ್ಲಿ ಜನವರಿ ೨೫ರಂದು ಮತ್ತು ೩೧ರಂದು ರಾವಲ್ಪಿಂಡಿಯಲ್ಲಿ ನಡೆದ ಗಲಭೆಗಳು ಈ ಅವಧಿಯಲ್ಲಿ ಜರುಗಿದ ಇತರ ಕೋಮು ಘರ್ಷಣೆಗಳಾಗಿದ್ದವು. ೧೯೫೧ರ ಮೊದಲನೆಯ ಎರಡು ತಿಂಗಳುಗಳಲ್ಲಿ ಉತ್ತರ ಹಿಂದೂಸ್ತಾನದಾದ್ಯಂತ ಕೋಮು ಸಂಬಂಧಗಳಲ್ಲಿ ಗಣನೀಯವಾದ

ಅವನತಿಯುಂಟಾಗಿದ್ದು ಫೆಬ್ರವರಿ ತಿಂಗಳಲ್ಲಿ ಬನಾರಸ್‌ನಲ್ಲಿ ಗಂಭೀರವಾದ ಕೋಮುಗಲಭೆ ಸಂಭವಿಸಿತು. ಇಂತಹ ಪರಿಸ್ಥಿತಿ ಬಹುಮಟ್ಟಿಗೆ ಕಾಂಗ್ರೆಸ್ ಚಟುವಟಿಕೆಗಳಿಂದ ನಿರ್ಮಾಣವಾದ ಅಶಾಂತಿ ಮತ್ತು ಗೊಂದಲ ಹಾಗೂ ವಾಣಿಜ್ಯ ಕ್ಷೇತ್ರದಲ್ಲುಂಟಾದ ಏರುಪೇರುಗಳಿಂದ ನಿರ್ಮಿತವಾದ ಸಾಮಾನ್ಯ ಪರಿಸ್ಥಿತಿಯಿಂದ ಮತ್ತು ಮುಸಲ್ಮಾನರಲ್ಲುಂಟಾದ ವ್ಯಾಕುಲತೆಗಳಿಂದ ಉದ್ಭವವಾಗಿತ್ತು. ಸರಕಾರದೊಂದಿಗೆ ಕಾಂಗ್ರೆಸ್ ನಡೆಸುತ್ತಿದ್ದ ಸಂಧಾನಗಳಿಗೆ ಹೆಚ್ಚಿನ ಮಹತ್ವ ದೊರೆಯುತ್ತಿದ್ದುದರಿಂದ ಮುಸಲ್ಮಾನರಲ್ಲಿ ತೀವ್ರ ಭಯ ಉಂಟುಮಾಡುವುದರ ಮೂಲಕ ಎರಡೂ ಕೋಮುಗಳ ನಡುವಣ ಬಿಕ್ಕಟ್ಟು ತೀವ್ರಗೊಂಡಿತು. ಮಾರ್ಚ್ ತಿಂಗಳಲ್ಲಿ ಸಂಯುಕ್ತ ಪ್ರಾಂತ್ಯಗಳಲ್ಲಿ ಈ ಬಿಕ್ಕಟ್ಟು ಬಹುವಾಗಿ ಹೆಚ್ಚಿತು. ೧೪ ಮತ್ತು ೧೬ನೆಯ ದಿನಾಂಕಗಳ ನಡುವೆ ಮಿರ್ಝಾಪುರ್ ಜಿಲ್ಲೆಯಲ್ಲಿ ಭೀಕರ ದಂಗೆ ಸಂಭವಿಸಿತು. ೧೭ರಂದು ಆಗ್ರಾದಲ್ಲಿ ಗಲಭೆ ಪ್ರಾರಂಭವಾಗಿ ೨೦ರವರೆಗೆ ಮುಂದುವರಿಯಿತು. ಬಂಗಾಳದ ಧನಬಾದ್‌ನಲ್ಲಿ ೨೮ರಂದು, ಅಮೃತ್‌ಸರ್ ಜಿಲ್ಲೆಯಲ್ಲಿ ೩೦ರಂದು ಕೋಮುಗಲಭೆ ಸಂಭವಿಸಿತು. ಮತ್ತು ದೇಶದ ಇತರ ಭಾಗಗಳಲ್ಲಿ ಎರಡು ಕೋಮುಗಳ ನಡುವಣ ಸಂಬಂಧಗಳ ವಿಷಮಗೊಂಡವು.

ಅಸ್ಸಾಂನ ಲಾಖಿಪುರಂ ಜಿಲ್ಲೆಯ ದಿಗ್‌ಬೋಯ್‌ನಲ್ಲಿ ಸಂಭವಿಸಿದ ಕೋಮು ಗಲಭೆಯಲ್ಲಿ ಒಬ್ಬ ಹಿಂದೂ ಮತ್ತು ಮೂವರು ಮುಸಲ್ಮಾನರು ಹತರಾದರು. ಬಂಗಾಳದ ಅಸನ್ಸೋಲ್ ವಿಭಾಗದಲ್ಲಿ ಮೊಹರಮ್ ಹಬ್ಬದ ಸಂದರ್ಭದಲ್ಲಿ ಒಂದು ಕೋಮು ಗಲಭೆ ಉಂಟಾಯಿತು. ಈ ವರ್ಷದಲ್ಲಿ ಬಿಹಾರ್ ಮತ್ತು ಒರಿಸ್ಸಾದಲ್ಲಿ, ಅದರಲ್ಲಿಯೂ ಸರನ್‌ದಲ್ಲಿ, ಕೋಮು ಉದ್ವೇಗ ಉಂಟಾಗಿತ್ತು. ಒಟ್ಟಾಗಿ ೧೬ ಕೋಮು ಗಲಭೆಯ ಪ್ರಕರಣಗಳು ಮತ್ತು ಕಾಯ್ದೆ ಬಾಹಿರ ಸಮೂಹಗಳು ಸೇರಿದ್ದವು. ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಷಹಾಬಾದ್ ಉಪವಿಭಾಗದ ಬಾಬು ಆದಲ್ಲಿ ಕೋಮು ಘರ್ಷಣೆಯಾಯಿತು. ಒಂದು ಆಕಳನ್ನು ಬಲಿಕೊಡಲಾಗಿದೆ ಎಂಬ ತಪ್ಪು ಕಲ್ಪನೆಯಿಂದ ಸುಮಾರು ೩೦೦ ಹಿಂದೂಗಳು ಜಮಾಯಿಸಿದರು. ಸ್ಥಳೀಯ ಅಧಿಕಾರಿಗಳು ಇವರನ್ನು ಸಮಾಧಾನಗೊಳಿಸುತ್ತಿದ್ದಂತೆಯೇ ಸುಮಾರು ೨೦೦ ಜನ ಮುಸಲ್ಮಾನರು ಲಾಠಿ, ಭರ್ಚಿ ಮತ್ತು ಕತ್ತಿಗಳಿಂದ ಹಿಂದೂಗಳ ಮೇಲೆ ಹಲ್ಲೆ ಮಾಡಿದರು. ಇದರಲ್ಲಿ ಒಬ್ಬ ಮೃತನಾದನು. ಸ್ಥಳೀಯ ಪೊಲೀಸರ ತುರ್ತು ಕ್ರಮ ಮತ್ತು ಶಾಂತಿ ಸಮಿತಿಯ ಸ್ಥಾಪನೆಯಿಂದ ಈ ಆತಂಕ ಹಬ್ಬಲು ಅವಕಾಶವಾಗಲಿಲ್ಲ. ಮೊಹರಮ್ ಹಬ್ಬದ ಆಚರಣೆಯ ಸಂದರ್ಭದಲ್ಲಿ ಮೊಂಘೀರದಲ್ಲಿ ಎರಡು ಚಿಕ್ಕಪುಟ್ಟ ಗಲಭೆಗಳುಂಟಾಗಿ ಇವುಗಳಲ್ಲಿ ಒಂದರಲ್ಲಿ ಹಿಂದೂಗಳು ಆಕ್ರಮಣ ಮಾಡಿದ್ದರೆ ಇನ್ನೊಂದರಲ್ಲಿ ಮುಸಲ್ಮಾನರು ಹಲ್ಲೆ ಮಾಡಿದರು. ಈ ವರ್ಷದಲ್ಲಿ ಮದ್ರಾಸು ಪ್ರಾಂತ್ಯದಲ್ಲಿ ಕೋಮು ಸ್ವರೂಪದ ಅನೇಕ ಗಲಭೆಗಳು ಸಂಭವಿಸಿದ ಕಾರಣ ಕೆಲವೆಡೆ ಎರಡೂ ಕೋಮುಗಳ ನಡುವಣ ಸಂಬಂಧಗಳು ತೀವ್ರ ವಿಷಮಗೊಂಡವು. ಈ ವರ್ಷದ ಅತ್ಯಂತ ಗಂಭೀರವಾದ ಗಲಭೆ ಜೂನ್ ೮ರಂದು ವೆಲ್ಲೂರಿನಲ್ಲಿ ಸಂಭವಿಸಿತು. ಇದು ಮುಸಲ್ಮಾನರು ಹಿಂದೂ ದೇವಾಲಯವೊಂದರ ಸಮೀಪದಲ್ಲಿ ತಾಝಿಯಾಗಳ ಮೆರವಣಿಗೆ ತೆಗೆದುಕೊಂಡು ಹೋದಾಗ ಸಂಭವಿಸಿತು. ಎರಡೂ ಕೋಮುಗಳ ನಡುವಣ ಘರ್ಷಣೆ ಎಷ್ಟು ಹಿಂಸಾತ್ಮಕವಾಗಿತ್ತೆಂದರೆ ಶಾಂತಿ ಸುವ್ಯವಸ್ಥೆ ಸ್ಥಾಪಿಸಲು ಪೊಲೀಸರು ಅನಿವಾರ್ಯವಾಗಿ ಗುಂಡು ಹಾರಿಸಬೇಕಾಯಿತು. ಈ ಊರಿನಲ್ಲಿ ಮುಂದಿನ ಎರಡು–ಮೂರು ದಿನಗಳವರೆಗೆ ವ್ಯಾಪಕವಾದ ಘರ್ಷಣೆ ಮುಂದುವರಿಯಿತು. ಸೇಲಂ ಪಟ್ಟಣದ ಷೇವಾಪೇಟ್‌ನಲ್ಲಿ ಹಿಂದೂ–ಮುಸಲ್ಮಾನರ ನಡುವೆ ಜರುಗಿದ ಕುಸ್ತಿ ಪಂದ್ಯದಲ್ಲಿ ಗೆದ್ದವರಾರು ಎಂಬುದನ್ನು ನಿರ್ಣಯಿಸುವುದಕ್ಕಾಗಿ ಜುಲೈ ೧೩ರಂದು ಎರಡೂ ಕೋಮುಗಳ ನಡುವೆ ಘರ್ಷಣೆಯುಂಯಿತು. ಇನ್ನೊಂದು ದಂಗೆ ಅಕ್ಟೋಬರ್‌ನಲ್ಲಿ ಸೇಲಂ ಪಟ್ಟಣದ ಹತ್ತಿರ ಕಿಚ್ಚಿಪಾಳ್ಯಂ

ಎಂಬಲ್ಲಿ ಸಂಭವಿಸಿತು. ಈ ಘಟನೆ ಕೆಲವು ಹಿರಿಯ ಹಿಂದೂಗಳು ಒಂದು ಬೀದಿನಾಟಕವನ್ನು ಆಡುವಾಗ ಕೆಲವು ಮುಸಲ್ಮಾನರು ಅದರಲ್ಲಿ ಗೊಂದಲ ಉಂಟುಮಾಡಿದ ಕಾರಣ ಸಂಭವಿಸಿತು. ಮಾರ್ಚ್ ೧೫ರಂದು ಕರ್ನೂಲ್ ಜಿಲ್ಲೆಯ ಪೋರಿಕಲ್ ಗ್ರಾಮದಲ್ಲಿ ಒಂದು ಹಿಂದೂ ಮೆರವಣಿಗೆಯ ಸಂಬಂಧದಲ್ಲಿ ಉಂಟಾದ ವಿವಾದದ ಪರಿಣಾಮವಾಗಿ ಹಿಂದೂ-ಮುಸಲ್ಮಾನ ಗಲಭೆಗಳು ಆರಂಭವಾದವು. ಆದರೆ ದಂಗೆಕೋರರನ್ನು ಪೊಲೀಸರು ಸುಲಭವಾಗಿ ಚದುರಿಸಿದರು. ಪಂಜಾಬ್‌ನಲ್ಲಿ ಈ ವರ್ಷದಲ್ಲಿ ೬೦೩ ಗಲಭೆಯ ಪ್ರಕರಣಗಳುಂಟಾದವು. ಆದರೆ ೧೯೨೯ರಲ್ಲಿ ೮೧೩ ಪ್ರಕರಣಗಳು ಮಾತ್ರ ದಾಖಲಾಗಿದ್ದವು. ಇವುಗಳಲ್ಲಿ ಅನೇಕ ಪ್ರಸಂಗಗಳು ಕೋಮು ಸ್ವರೂಪದವುಗಳಾಗಿದ್ದವು ಮತ್ತು ಎರಡೂ ಪ್ರಮುಖ ಕೋಮುಗಳ ನಡುವಣ ವೈಷಮ್ಯ ಈ ಪ್ರಾಂತ್ಯದ ಅನೇಕ ಭಾಗಗಳಲ್ಲಿ ತೀಕ್ಷ್ಣವಾಗಿತ್ತು. ಸಂಯುಕ್ತ ಪ್ರಾಂತ್ಯಗಳಲ್ಲಿ ೧೯೩೦ರ ಅವಧಿಯಲ್ಲಿ ೧೯೩೧ರ ಮೊದಲ ಮೂರು ತಿಂಗಳಲ್ಲಿ ಸಂಭವಿಸಿದ ಘಟನೆಗಳಿಗಿಂತ ಕಡಿಮೆಯಾಗಿದ್ದಾಗ್ಯೂ ಮತ್ತು ಸವಿನಯ ಕಾನೂನು ಭಂಗ ಚಳುವಳಿಯ ಪರಿಣಾಮವಾಗಿ ಸ್ವಲ್ಪ ಮಟ್ಟಿಗೆ ತೀಕ್ಷ್ಣತೆ ಕಡಿಮೆಯಾಗಿದ್ದಾಗ್ಯೂ ಎರಡೂ ಕೋಮುಗಳ ನಡುವೆ ಇದ್ದ ಅನೇಕ ಭಿನ್ನಾಭಿಪ್ರಾಯಗಳು ಎಂದಿನಂತೆ ನಿಗೂಢವಾಗಿಯೇ ಇದ್ದವು. ಡೆಹ್ರಾಡೂನ್ ಮತ್ತು ಬುಲಂದ್ ಶಹರ್‌ಗಳಲ್ಲಿ ಸಾಮಾನ್ಯ ಸ್ವರೂಪದ ಗಲಭೆಗಳಾದವು. ಬಾಲಿಯಾ ನಗರದಲ್ಲಿ ಒಂದು ಹಿಂದೂ ಮೆರವಣಿಗೆ ಸಾಗುವ ಮಾರ್ಗದ ಸಂಬಂಧದಲ್ಲಿ ಬಹು ಗಂಭೀರ ಸ್ವರೂಪದ ದಂಗೆ ಸಂಭವಿಸಿ ಪೊಲೀಸರು ಗುಂಡು ಹಾರಿಸುವುದು ಅನಿವಾರ್ಯವಾಯಿತು. ಮತ್ತ್ರಾ, ಆಮ್‌ಘರ್, ಮಣಿಪುರಿ ಮತ್ತು ಇತರ ಅನೇಕ ಸ್ಥಳಗಳಲ್ಲಿ ಗಲಭೆಗಳು ಸಂಭವಿಸಿದವು.

ಇನ್ನು ೧೯೩೧-೩೨ರ ಘಟನೆಗಳನ್ನು ಪರಿಶೀಲಿಸೋಣ. ದುಂಡು ಮೇಜಿನ ಪರಿಷತ್ತುಗಳ ಸಂವಿಧಾನಾತ್ಮಕ ಚರ್ಚೆಗಳು ಈ ಘಟನೆಗಳ ಮೇಲೆ ತಮ್ಮ ಪ್ರಭಾವ ಬೀರಿದವು. ಈ ಚರ್ಚೆಗಳು ಮುಸಲ್ಮಾನರು ಮತ್ತು ಇತರ ಅಲ್ಪಸಂಖ್ಯಾತ ಕೋಮುಗಳಲ್ಲಿ ಬಹುಮತ ತತ್ವದ ಆಧಾರದ ಮೇಲೆ ಕೆಲಸ ಮಾಡುವ ಸಂವಿಧಾನದಲ್ಲಿ ತಮ್ಮ ಸ್ಥಾನಮಾನದ ಬಗ್ಗೆ ಒಂದು ರೀತಿಯ ಅನಿಶ್ಚಿತತೆ ಮತ್ತು ಭಯವನ್ನುಂಟು ಮಾಡಿದವು. ಮೊದಲನೆಯ ದುಂಡುಮೇಜು ಪರಿಷತ್ತಿನಲ್ಲಿ ಭವಿಷ್ಯದ ಸಂವಿಧಾನದ ಬಗ್ಗೆ ಸ್ಪಷ್ಟ ಚಿತ್ರ ಮೊದಲ ಬಾರಿಗೆ ದೊರೆಯಿತು. ಅಲ್ಲಿಯವರೆಗೆ ಒಳಾಧಿಪತ್ಯ ಸ್ವಾಮ್ಯದ ಮಾದರಿಗಿಂತ ಸ್ವಲ್ಪ ಹೆಚ್ಚಿನ ಆದರೂ ಅಸ್ಪಷ್ಟ ಚಿತ್ರ ಅವರೆದುರಿಗಿತ್ತು. ಆದರೆ ಪರಿಷತ್ತಿನ ಆರಂಭದಲ್ಲಿ ದೇಶೀ ಅರಸರು ಮಾಡಿದ ಘೋಷಣೆಯನ್ವಯ ಕೇಂದ್ರಕ್ಕೆ ಜವಾಬ್ದಾರಿಯನ್ನು ನೀಡುವ ಒಂದು ವಿಧದ ಒಕ್ಕೂಟ ಮಾದರಿಯ ಸರಕಾರ ರಚಿಸುವ ಸೂಚನೆ ದೊರಕಿತು. ಅದರಿಂದಾಗಿ ಮುಸಲ್ಮಾನರು ತಮ್ಮ ಸ್ಥಾನಮಾನದ ಬಗ್ಗೆ ತೀವ್ರ ಪರಿಶೀಲನೆಯ ಅವಶ್ಯಕತೆಯನ್ನು ಕಂಡುಕೊಂಡರು. ಅವರ ಪರಿಸ್ಥಿತಿಯಲ್ಲುಂಟಾದ ಈ ಆತಂಕ ಅಥವಾ ಕಳವಳ ಗಾಂಧಿ-ಇರ್ವಿನ್ ಒಪ್ಪಂದದಿಂದ ಇನ್ನೂ ತೀಕ್ಷ್ಣವಾಯಿತು. ಈ ಒಪ್ಪಂದವು ಕಾಂಗ್ರೆಸ್ ವಿಶೇಷ ಸ್ಥಾನವನ್ನು ನೀಡಿದೆ ಎಂಬ ನಂಬುಗೆ ಮತ್ತು ಸರ್ಕಾರದ ಮೇಲೆ ಕಾಂಗ್ರೆಸ್ ವಿಜಯ ಸಾಧಿಸಿದೆ ಎಂಬ ಭಾವನೆಗೆ ಪುಷ್ಟಿ ನೀಡಿತು. ಇದರಿಂದ ಮುಸಲ್ಮಾನರ ಭಾವನೆಗಳು ಕೆರಳಿದವೇ ಹೊರತು ಕಡಿಮೆಯಾಗಲಿಲ್ಲ. ಈ "ಒಪ್ಪಂದ"ವಾದ ಮೂರು ವಾರಗಳೊಳಗೆಯೇ ಕಾನ್‌ಪುರದಲ್ಲಿ ಉಗ್ರವಾದ ಕೋಮುಗಲಭೆಗಳು ಸಂಭವಿಸಿದವು. ಮಾರ್ಚ್ ೨೩ರಂದು ಹಿಂದೂಗಳ ಅಂಗಡಿಗಳ ಲೂಟಿ ಆರಂಭವಾಯಿತು. ೨೫ನೆಯ ದಿನಾಂಕದಂದು ದಳ್ಳುರಿ ಕಾಣಿಸಿಕೊಂಡಿತು. ಅಂಗಡಿಗಳು ಮತ್ತು ದೇವಾಲಯಗಳನ್ನು ಸುಟ್ಟು ಬೂದಿ ಮಾಡಲಾಯಿತು. ಅರಾಜಕತೆ, ಬೆಂಕಿ ಹಚ್ಚುವುದು, ಕೊಲೆ ಮತ್ತು ಲೂಟಿ ಪ್ರಕರಣಗಳು ಕಾಡ್ಗಿಚ್ಚಿನಂತೆ

ಹಬ್ಬಿದವು. ಸುಮಾರು ಐದು ನೂರು ಕುಟುಂಬಗಳು ತಮ್ಮ ಮನೆ ಮಠಗಳನ್ನು ತೊರೆದು ಹಳ್ಳಿಗಳಲ್ಲಿ ಆಶ್ರಯ ಪಡೆದರು. ಡಾ.ರಾಮಚಂದ್ರ ಎನ್ನುವವರು ಇದರಲ್ಲಿ ಅತ್ಯಂತ ತೊಂದರೆಗೀಡಾದರು. ಅವರ ಕುಟುಂಬದ ಎಲ್ಲರೂ, ಅವರ ಹೆಂಡತಿ ಮತ್ತು ವೃದ್ಧ ತಂದೆ ತಾಯಿ ಸೇರಿದಂತೆ, ಎಲ್ಲರನ್ನೂ ಕೊಲೆ ಮಾಡಿ ಅವರ ದೇಹಗಳನ್ನು ಚರಂಡಿಯಲ್ಲಿ ಎಸೆಯಲಾಗಿತ್ತು. ಇದೇ ಕೊಲೆಯ ಅಂಗವಾಗಿ ಶ್ರೀ ಗಣೇಶ ಶಂಕರ ವಿದ್ಯಾರ್ಥಿ ತಮ್ಮ ಜೀವ ತೆತ್ತರು. ಕಾನ್‌ಪುರ್ ದಂಗೆಗಳ ವಿಚಾರಣಾ ಸಮಿತಿಯು ತನ್ನ ವರದಿಯಲ್ಲಿ ಈ ದಂಗೆಯು ಹಿಂದೆಂದೂ ಕಾಣದ ಹಿಂಸಾಚಾರ ಮತ್ತು ವಿಚಿತ್ರ ರೀತಿಯ ಅತ್ಯಾಚಾರದಿಂದ ಕೂಡಿದ್ದಾಗಿದ್ದು ಅದು ಇಡೀ ನಗರದಾದ್ಯಂತ ಮತ್ತು ನಗರದ ಹೊರವಲಯಕ್ಕೂ ಹಬ್ಬಿತ್ತೆಂದು ಹೇಳಿತು. ಸಂಪೂರ್ಣ ನಿಯಂತ್ರಣಕ್ಕೆ ತರುವ ಮುನ್ನ ಕೊಲೆ, ಬೆಂಕಿ ಮತ್ತು ಲೂಟಿ ಪ್ರಕರಣಗಳು ಮೂರು ದಿನಗಳವರೆಗೆ ಅವ್ಯಾಹತವಾಗಿ ಸಂಭವಿಸಿದವು. ನಂತರ ಅದು ನಿಧಾನವಾಗಿ ಶಾಂತವಾಯಿತು. ಜೀವ ಮತ್ತು ಆಸ್ತಿಪಾಸ್ತಿಗೆ ಅವರ ನಷ್ಟ ಉಂಟಾಯಿತು. ಸರಿಯಾಗಿ ಲೆಖ್ಖದೊರೆತ ಮರಣಗಳ ಸಂಖ್ಯೆ ೩೦೦ರಷ್ಟಾಗಿತ್ತು. ಆದರೆ ಮರಣ ಹೊಂದಿದವರ ಸಂಖ್ಯೆ ಇನ್ನೂ ಹೆಚ್ಚಾಗಿದ್ದು, ಅದು ನಾಲ್ಕುನೂರು ಮತ್ತು ಐದುನೂರರಷ್ಟಾಯಿತಲ್ಲದೇ ಹೆಚ್ಚಿನ ಸಂಖ್ಯೆಯ ಮನೆಗಳನ್ನು ಸುಡಲಾಯಿತು ಇಲ್ಲವೆ ಕೊಳ್ಳೆ ಹೊಡೆಯಲಾಯಿತು.

ಈ ಕೋಮು ಗಲಭೆ ಕಾಂಗ್ರೆಸ್ಸಿಗರ ಪ್ರಚೋದನಾತ್ಮಕ ನಡವಳಿಕೆ ಇಲ್ಲದೇ ಹೋಗಿದ್ದರೆ ಸಂಭವಿಸುತ್ತಲೇ ಇರಲಿಲ್ಲ. ಅನೇಕ ವರ್ಷಗಳಲ್ಲಿ ಇದು ಹಿಂದೂಸ್ತಾನದ ಅತ್ಯಂತ ದಾರುಣ ಘಟನೆಯಾಗಿತ್ತು. ಈ ಗಲಭೆ ಪಟ್ಟಣದಿಂದ ನೆರೆಹೊರೆಯ ಹಳ್ಳಿಗಳಿಗೂ ಹಬ್ಬಿತು. ಅಲ್ಲಿಯೂ ಅನೇಕ ದಿನಗಳವರೆಗೆ ಕೋಮು ಗಲಭೆಗಳು ಭುಗಿಲೆದ್ದವು.

೧೯೩೨–೩೩ನೆಯ ವರ್ಷ ಇದ್ದುದರಲ್ಲಿಯೇ ಕೋಮು ಗೊಂದಲಗಳು ಮತ್ತು ಕ್ಷೋಭೆಗಳಿಂದ ಮುಕ್ತವಾಗಿತ್ತು. ಈ ಸ್ವಾಗತಾರ್ಹ ಸುಧಾರಣೆ ನಿಸ್ಸಂಶಯವಾಗಿ ಅರಾಜಕತೆಯನ್ನು ಹತ್ತಿಕ್ಕಿದ್ದರಿಂದ ಮತ್ತು ಮುಸಲ್ಮಾನರು ಹೊಸ ಸಂವಿಧಾನದಲ್ಲಿ, ತಮ್ಮ ಸ್ಥಾನಮಾನದ ಬಗ್ಗೆ ಹೊಂದಿದ್ದ ಅನಿಶ್ಚಿತೆಯ ನಿವಾರಣೆಯ ಕಾರಣದಿಂದ ಉಂಟಾಯಿತು.

ಆದರೆ ೧೯೩೩–೩೪ರಲ್ಲಿ ದೇಶದಾದ್ಯಂತ ಕೋಮು ಕ್ಷೋಭೆ ಹೆಚ್ಚಾಗುತ್ತಿದ್ದು ಹೋಳಿ, ಈದ್ ಮತ್ತು ಮೊಹರಮ್ ಹಬ್ಬಗಳಲ್ಲಿ ಸಂಭವಿಸುತ್ತಿದ್ದ ಗಲಭೆಗಳಲ್ಲದೆ, ದಿನನಿತ್ಯದ ಜೀವನದಲ್ಲಿನ ಸಾಮಾನ್ಯ ಘಟನೆಗಳೂ ಈ ವರ್ಷದ ಆರಂಭದಿಂದಲೇ ಕಲುಷಿತಗೊಳ್ಳುತ್ತಿದ್ದ ಕೋಮು ಸಂಬಂಧಗಳ ಸಂಕೇತವಾಗಿದ್ದವು. ಸಂಯುಕ್ತ ಪ್ರಾಂತ್ಯಗಳ ಬನಾರಸ್ ಮತ್ತು ಕಾನ್ಪುರಗಳಲ್ಲಿ, ಪಂಜಾಬದ ಲಾಹೋರ್‌ನಲ್ಲಿ ಮತ್ತು ಪೆಷಾವರ್‌ನಲ್ಲಿ ಹೋಳಿ ಹಬ್ಬದ ಸಂದರ್ಭದಲ್ಲಿ ಕೋಮು ಗಲಭೆಗಳು ಸಂಭವಿಸಿದವು. ಬಕ್ರೀದ್ ಹಬ್ಬದ ಆಚರಣೆಯ ಕಾಲದಲ್ಲಿ ಸಂಯುಕ್ತ ಪ್ರಾಂತ್ಯಗಳ ಅಯೋಧ್ಯೆಯಲ್ಲಿ ಆಕಳನ್ನು ಬಲಿಕೊಟ್ಟ ಕಾರಣ ಮತ್ತು ಬಿಹಾರದ ಭಾಗಲ್ಪುರ ಹಾಗೂ ಒರಿಸ್ಸಾ ಮತ್ತು ಮದ್ರಾಸದ ಕಣ್ಣಾನೂರಿನಲ್ಲಿಯೂ ಸಹ ಗಂಭೀರ ಸ್ವರೂಪದ ಗಲಭೆಗಳಾದವು. ಸಂಯುಕ್ತ ಪ್ರಾಂತ್ಯಗಳ ಗಾಯಿಪುರ ಜಿಲ್ಲೆಯಲ್ಲಿ ಗಂಭೀರ ಸ್ವರೂಪದ ದಂಗೆಯಾಗಿ ಅದರಲ್ಲಿ ಅನೇಕ ಸಾವುಗಳುಂಟಾದವು. ಏಪ್ರಿಲ್–ಮೇ ತಿಂಗಳುಗಳಲ್ಲಿ ಬಿಹಾರ್ ಮತ್ತು ಒರಿಸ್ಸಾದ ಅನೇಕ ಕಡೆ ಬಂಗಾಳ, ಸಿಂಧ್ ಮತ್ತು ದೆಹಲಿಯಲ್ಲಿ ಹಿಂದೂ–ಮುಸಲ್ಮಾನ ದಂಗೆಗಳು ಸಂಭವಿಸಿದವು. ಇವುಗಳಲ್ಲಿ ಕೆಲವು ಕೇವಲ ಕ್ಷುಲ್ಲಕ ಕಾರಣಗಳಿಂದಾಗಿ ಸಂಭವಿಸಿದವು. ಉದಾಹರಣೆಗಾಗಿ, ದೆಹಲಿಯಲ್ಲಿ ಒಬ್ಬ ಹಿಂದೂ ಪಾದಚಾರಿಯ ಮೇಲೆ ಒಬ್ಬ ಮುಸಲ್ಮಾನ ಅಂಗಡಿಕಾರ ಅಕಲ್ಪಿತವಾಗಿ ಅಕಸ್ಮಾತ್ ಉಗುಳಿದ ಘಟನೆ, ಬ್ರಿಟಿಷ್–ಹಿಂದೂಸ್ತಾನದಲ್ಲಿ ಹೆಚ್ಚುತ್ತಿದ್ದ ಕೋಮು ವಿವಾದಗಳು ದೇಶೀಸಂಸ್ಥಾನಗಳಲ್ಲಿಯೂ

ಅಂತಹ ಘಟನೆಗಳಿಗೆ ಕಾರಣವಾದವು.

ಜೂನ್ ತಿಂಗಳಿಂದ ಅಕ್ಟೋಬರ್ ತಿಂಗಳವರೆಗೆ ಕಂಡುಬಂದ ಕೋಮು ಅಶಾಂತಿಯು ಎರಡೂ ಪ್ರಧಾನ ಕೋಮುಗಳ ನಡುವಣ ಆಳವಾದ ವೈಷಮ್ಯದ ದ್ಯೋತಕವಾಗಿತ್ತು. ಜೂನ್–ಜುಲೈ ತಿಂಗಳುಗಳಲ್ಲಿ ಪರಿಸ್ಥಿತಿ ಸಾಮಾನ್ಯವಾಗಿ ಶಾಂತಿಯುತವಾಗಿತ್ತು. ಆದಾಗ್ಯೂ ಬಿಹಾರದ ಕೆಲವು ಭಾಗಗಳಾಗಿದ್ದ ಪರಿಸ್ಥಿತಿಯಿಂದಾಗಿ ಅಲ್ಲಿ ಹೆಚ್ಚಿನ ಪೊಲೀಸ್ ಪಡೆಗಳನ್ನು ಹಾಕಬೇಕಾಯಿತು. ಆಗ್ರಾದಲ್ಲಿ ಸುದೀರ್ಘವಾದ ವಿವಾದ ಆರಂಭವಾಯಿತು. ಈ ನಗರದ ಮುಸಲ್ಮಾನರು ಕೆಲವು ಹಿಂದೂಗಳ ಮನೆಗಳಲ್ಲಿ ಜರುಗುತ್ತಿದ್ದ ಧಾರ್ಮಿಕ ಆಚರಣೆಗಳು ನೆರೆಯಲ್ಲಿದ್ದ ಮಸೀದಿಯಲ್ಲಿ ಜರುಗುತ್ತಿದ್ದ ಪ್ರಾರ್ಥನೆಗಳಿಗೆ ಅಡ್ಡಿಯಾಗುತ್ತಿವೆ ಎಂದು ಆಕ್ಷೇಪಿಸಿದರು. ಈ ವಿವಾದ ಬಗೆಹರಿಯುವವರೆಗೆ ಜುಲೈ ೨೦ರಂದು ಮತ್ತು ಸೆಪ್ಟೆಂಬರ್ ೨ರಂದು ದಂಗೆಗಳು ಸಂಭವಿಸಿ, ಅವುಗಳಲ್ಲಿ ೪ ಜನ ಮರಣ ಹೊಂದಿ ೮೦ ಜನ ಗಾಯಗೊಂಡರು. ಮದ್ರಾಸಿನಲ್ಲಿ ಪೈಗಂಬರರನ್ನು ತೆಗಳಿ ಹಿಂದೂಗಳು ಒಂದು ಪುಸ್ತಕವನ್ನು ಪ್ರಕಟಿಸಿದರೆಂಬ ಕಾರಣಕ್ಕಾಗಿ ಸೆಪ್ಟೆಂಬರ್ ೩ರಂದು ಗಲಭೆಯುಂಟಾಗಿ ಒಬ್ಬನು ಸತ್ತು ೧೩ ಜನ ಗಾಯಗೊಂಡರು. ಇದೇ ತಿಂಗಳಲ್ಲಿ ಪಂಜಾಬ್ ಮತ್ತು ಸಂಯುಕ್ತ ಪ್ರಾಂತ್ಯಗಳ ಅನೇಕ ಸ್ಥಳಗಳಲ್ಲಿ ಸಣ್ಣಪುಟ್ಟ ದಂಗೆಗಳು ಸಂಭವಿಸಿದವು.

೧೯೩೪–೩೫ರ ಜೂನ್ ೨೯ರಂದು ಲಾಹೋರ್‌ನಲ್ಲಿ ಗಂಭೀರವಾದ ಒಂದು ತಂಟೆಯುಂಟಾಯಿತು. ಈ ವಿವಾದವು ಮುಸಲ್ಮಾನರು ಮತ್ತು ಸಿಖ್ಖರ ನಡುವೆ ಸಿಖ್ಖರ ದೇವಲಯದ ಷಹೀದ್ ಗಂಜ್ ಗುರುದ್ವಾರದ ಪರಿಸರದಲ್ಲಿದ್ದ ಮಸೀದಿಯ ಬಗ್ಗೆ ಉಂಟಾಗಿತ್ತು. ಈ ತಂಟೆ ಬಹುಕಾಲದಿಂದ ಹೊಗೆಯಾಡುತ್ತಿತ್ತು. ಮುಸಲ್ಮಾನರು ವಿರೋಧಿಸಿದರೂ ಕೂಡ ಸಿಖ್ಖರು ಮಸೀದಿಯನ್ನು ಕೆಡವತೊಡಗಿದಾಗ ವೈಷಮ್ಯ ತೀವ್ರಗೊಂಡಿತು. ಈ ಕಟ್ಟಡ ಕುರಿತಾಗಿ ದೀರ್ಘ ಕಾಲದ ವ್ಯಾಜ್ಯದ ನಂತರ ಸಿಖ್ಖರ ಹಕ್ಕನ್ನು ಮನ್ನಿಸಲಾಯಿತು.

ಜೂನ್ ೨೯ರ ರಾತ್ರಿ ಮೂರು–ನಾಲ್ಕು ಮುಸಲ್ಮಾನರ ಗುಂಪು ಗುರುದ್ವಾರದ ಎದುರಿಗೆ ಜಮಾಯಿಸಿತು. ಈ ಗುಂಪು ಮತ್ತು ಸಿಖ್ಖರ ನಡುವೆ ಗುರುದ್ವಾರದ ಒಳಗೆ ಸಂಭವಿಸಬಹುದಾಗಿದ್ದ ಘರ್ಷಣೆಯು ಸ್ಥಳೀಯ ಅಧಿಕಾರಿಗಳ ತುರ್ತು ಕಾರ್ಯಾಚರಣೆಯಿಂದ ತಪ್ಪಿತು. ನಂತರ ಅಧಿಕಾರಿಗಳು ಮಸೀದಿಯನ್ನು ಕೆಡವುದನ್ನು ನಿಲ್ಲಿಸುವಂತೆ ಸಿಖ್ಖರಿಂದ ಕರಾರುಪತ್ರವನ್ನು ಪಡೆದುಕೊಂಡರು. ಆದರೆ ಮುಂದಿನ ವಾರದಲ್ಲಿ ಎರಡೂ ಕಡೆಯ ಮುಖಂಡರುಗಳನ್ನು ಒಂದು ಶಾಂತಿಯುತ ತೀರ್ಮಾನಕ್ಕೆ ಬರುವಂತೆ ಮಾಡುವ ಪ್ರಯತ್ನಗಳು ನಡೆದಿದ್ದಂತೆಯೇ ಉಗ್ರಗಾಮಿಗಳ ಒತ್ತಾಯಕ್ಕೊಳಗಾಗಿ ಸಿಖ್ಖರು ಮಸೀದಿಯನ್ನು ಕೆಡವುವ ಕಾರ್ಯವನ್ನು ಪುನಃ ಆರಂಭಿಸಿದರು. ಇದರಿಂದ ಸ್ಥಳೀಯ ಅಧಿಕಾರಿಗಳ ಸ್ಥಿತಿ ಗೊಂದಲಮಯವಾಯಿತು. ಸಿಖ್ಖರು ತಮ್ಮ ಕಾಯ್ದೆಯನ್ವಯ ಹಕ್ಕುಗಳ ಮಿತಿಯಲ್ಲಿದ್ದರು. ಅದೂ ಅಲ್ಲದೆ, ಮಸೀದಿಯನ್ನು ಕೆಡವದಂತೆ ಮಾಡುವ ಏಕೈಕ ಮಾರ್ಗವೆಂದರೆ ಗೋಲಿಬಾರು ಮಾಡುವುದೇ ಆಗಿತ್ತು. ಗುರುದ್ವಾರ ಕಟ್ಟಡದಲ್ಲಿ ಸಿಖ್ಖರೇ ತುಂಬಿದ್ದರಿಂದ ಮತ್ತು ಅದು ಸಿಖ್ಖರ ಪೂಜಾಸ್ಥಾನದ ಪರಿಸರದಲ್ಲಿಯೇ ಇದ್ದುದರಿಂದ ಗುಂಡು ಹಾರಿಸುವುದರಿಂದ ರಕ್ತಪಾತಕ್ಕೆ ಅವಕಾಶವಾಗುವುದೂ ಅಲ್ಲದೆ, ಧಾರ್ಮಿಕ ಕಾರಣಗಳಿಂದಾಗಿ ಅದು ಇಡೀ ಪ್ರಾಂತ್ಯದ ಸಿಖ್ಖ ಜನಾಂಗದಲ್ಲಿ ಗಂಭೀರವಾದ ಪ್ರತಿಕ್ರಿಯೆಗೆ ಕಾರಣವಾಗುತ್ತಿತ್ತು. ಇದೂ ಅಲ್ಲದೆ, ಸರ್ಕಾರದ ನಿಷ್ಕ್ರಿಯತೆಯಿಂದ ಧಾರ್ಮಿಕ ಕಾರಣಗಳಿಗಾಗಿಯೇ ಮುಸಲ್ಮಾನರಲ್ಲಿ ಕ್ರೋಧವನ್ನುಂಟುಮಾಡುತ್ತಿತ್ತು ಮತ್ತು ಇದರ ಪರಿಣಾಮವಾಗಿ ಸಿಖ್ಖರ ಮೇಲೆ ಹಾಗೂ ಸರ್ಕಾರದ ಪಡೆಗಳ ಮೇಲೆ ಹಲ್ಲೆಗಳು ಸಂಭವಿಸಬಹುದೆಂದು ನಿರೀಕ್ಷಿಸಲಾಗಿತ್ತು.

ಎರಡೂ ಕೋಮುಗಳ ಮುಖಂಡರುಗಳ ನಡುವೆ ನಡೆದ ಚರ್ಚೆಗಳ ಫಲವಾಗಿ ಸೌಹಾರ್ದಮಯ ವಾತಾವರಣವುಂಟಾಗಬಹುದೆಂದು ಆಶಿಸಲಾಗಿತ್ತು. ಆದರೆ ತೊಂದರೆಯನ್ನುಂಟುಮಾಡುವ ತುಂಟರು

ಸಹಧರ್ಮಿಗಳ ಮನಸ್ಸಿನಲ್ಲಿ ತ್ವೇಷವನ್ನೆಬ್ಬಿಸಿದರು. ಪ್ರಮುಖ ಅಪರಾಧಿಗಳ ದಸ್ತಗಿರಿ ಮಾಡಿದರೂ ಕೂಡ ಉದ್ವೇಗ ಹೆಚ್ಚುತ್ತಲೇಹೋಯಿತು. ಮುಸಲ್ಮಾನರಿಗೆ ಅವರು ಈ ಮೊದಲು ಖರೀದಿಸಿದ್ದ ಮಸೀದಿಯನ್ನು ಅವರಿಗೆ ಮರಳಿ ಕೊಡಿಸುವ ಭರವಸೆಯನ್ನು ಸರ್ಕಾರ ನೀಡಿದರೂ ಅದರಿಂದ ಯಾವ ಉಪಯೋಗವೂ ಆಗಲಿಲ್ಲ. ಜುಲೈ ೧೯ರಂದು ಪರಿಸ್ಥಿತಿ ಇನ್ನೂ ಹದಗೆಟ್ಟಿತ್ತಲ್ಲದೆ ಮುಂದಿನ ಎರಡು ದಿನಗಳಲ್ಲಿ ಅಪಾಯಕಾರಿ ಪರಿಸ್ಥಿತಿ ನಿರ್ಮಾಣವಾಯಿತು. ಕೇಂದ್ರ ಪೊಲೀಸ್ ಠಾಣೆಗೆ ಜನಸಮೂಹ ಮುತ್ತಿಗೆ ಹಾಕಿತು. ಗುಂಡು ಹಾರಿಸದೆ ಚದುರುವಂತೆ ಪದೇಪದೇ ಮಾಡಿದ ಮನವಿ ನಿಷ್ಪ್ರಯೋಜಕವಾದುದರಿಂದ ಜುಲೈ ೨೦ರಂದು ಎರಡು ಬಾರಿ ೨೧ರಂದು ಎಂಟು ಬಾರಿ ಗೋಲಿಬಾರು ಮಾಡಬೇಕಾಯಿತು. ಒಟ್ಟಿನಲ್ಲಿ ೨೩ ಸುತ್ತು ಗುಂಡು ಹಾರಿಸಲಾಗಿ ೧೨ ಜನ ಹತರಾದರು. ಇತರ ರೀತಿಯ ಗಾಯಗಳು ಅಷ್ಟು ತೀವ್ರವಾಗಿರದ ಇವರಲ್ಲಿ ಹೆಚ್ಚಾಗಿ ಸೈನ್ಯ ಮತ್ತು ಪೊಲೀಸ್ ಪಡೆಗಳಿಗೆ ಸೇರಿದವರಾಗಿದ್ದರು.

ಗೋಲಿಬಾರಿನ ಪರಿಣಾಮವಾಗಿ ಜನಜಂಗುಳಿ ಚದುರಿತಲ್ಲದೆ ಪುನಃ ಸೇರಲಿಲ್ಲ. ಇತರ ಪ್ರಾಂತ್ಯಗಳಿಂದ ಹೆಚ್ಚಿಗೆ ಪೊಲೀಸ್ ಪಡೆಗಳನ್ನು ಕರೆಸಿಕೊಳ್ಳಲಾಯಿತು ಮತ್ತು ಸೈನಿಕ ಠಾಣೆಗಳನ್ನು ಬಲಪಡಿಸಲಾಯಿತು. ಆಡಳಿತಾತ್ಮಕ ನಿಯಂತ್ರಣವನ್ನು ತೀವ್ರಗತಿಯಲ್ಲಿ ಪುನರ್ ಸ್ಥಾಪಿಸಲಾಯಿತಾದರೂ ಧಾರ್ಮಿಕ ಮುಖಂಡರುಗಳು ಅಶಾಂತಿಯ ಕಿಡಿಗಳನ್ನು ಹೊತ್ತಿಸುತ್ತಲೇ ಇದ್ದರು. ದಿವಾನಿ ಪ್ರಕರಣವನ್ನು ಪುನಃ ಆರಂಭಿಸಲಾಯಿತು ಮತ್ತು ಕೆಲವು ಮುಸಲ್ಮಾನ ಸಂಘ–ಸಂಸ್ಥೆಗಳು ಮಿತಿಮೀರಿದ ಬೇಡಿಕೆಗಳನ್ನು ಮುಂದಿಡತೊಡಗಿದವು.

ಲಾಹೋರದಲ್ಲಿನ ಪರಿಸ್ಥಿತಿ ವರ್ಷದ ಕೊನೆಯವರೆಗೂ ಕಳವಳವನ್ನುಂಟುಮಾಡುತ್ತಲೇ ಇತ್ತು. ನವೆಂಬರ್ ೬ರಂದು ಒಬ್ಬ ಮುಸಲ್ಮಾನನು ಒಬ್ಬ ಸಿಖ್ಖನನ್ನು ತೀವ್ರವಾಗಿ ಗಾಯಗೊಳಿಸಿದನು. ಮೂರು ದಿನಗಳ ನಂತರ ಸಿಖ್ಖ ಮತ್ತು ಹಿಂದೂಗಳಿಂದ ಕೂಡಿದ ಒಂದು ಬೃಹತ್ ಮೆರವಣಿಗೆಯನ್ನು ಹೊರಡಿಸಲಾಯಿತು. ಈ ಮೆರವಣಿಗೆಯ ಸಂಘಟಕರು ಘರ್ಷಣೆಯಾಗದಂತೆ ನೋಡಿಕೊಳ್ಳಲು ಕಾತುರರಾಗಿದ್ದರೂ ಒಂದು ಗಂಭೀರ ಸ್ವರೂಪದ ಘರ್ಷಣೆಯುಂಟಾಯಿತು. ಮರುದಿನವೂ ಗಲಭೆಗಳು ಸಂಭವಿಸಿದವು. ಈ ಘರ್ಷಣೆಗಳನ್ನು ನಿಯಂತ್ರಿಸಲು ಸೈನಿಕರು ಮತ್ತು ಪೊಲೀಸರು ಕೂಡಲೇ ಕ್ರಮ ತೆಗೆದುಕೊಳ್ಳದೇ ಹೋಗಿದ್ದರೆ ಹೆಚ್ಚು ಪ್ರಮಣದಲ್ಲಿ ಮರಣಗಳು ಸಂಭವಿಸಬಹುದಾಗಿತ್ತು.

೧೯೩೫ನೆಯ ಮಾರ್ಚ್ ೧೯ರಂದು ಪೈಗಂಬರರನ್ನು ಟೀಕಿಸಿ ಬರೆದ ಕಿರುಹೊತ್ತಿಗೆಯ ಕರ್ತೃ ಮತ್ತು ಹಿಂದೂ ಆಗಿದ್ದ ನಾಥೂರ್ ಮಲ್ ಅವರ ಕೊಲೆಯ ಅಪರಾಧಿ ಅಬ್ದುಲ್ ಖಯ್ಯಾಮನನ್ನು ಗಲ್ಲಿಗೇರಿಸಿದ ನಂತರ ಕರಾಚಿಯಲ್ಲಿ ಗಂಭೀರ ಘಟನೆ ಸಂಭವಿಸಿತು. ಜಿಲ್ಲಾ ನ್ಯಾಯಾಧೀಶರು ಪೊಲೀಸರ ರಕ್ಷಣೆಯಲ್ಲಿ, ಅಬ್ದುಲ್ ಖಯ್ಯಾಮನ ಶವವನ್ನು ನಗರದ ಹೊರವಲಯದಲ್ಲಿ ಅಂತ್ಯ ಸಂಸ್ಕಾರ ಮಾಡಲು ಅವನ ಸಂಬಂಧಿಕರಿಗೆ ಒಪ್ಪಿಸಲು ತೆಗೆದುಕೊಂಡು ಹೋದರು. ಅಂದಾಜು ೨೫,೦೦೦ ಜನರ ಬೃಹತ್ ಸಮೂಹ ಅಂತ್ಯಸಂಸ್ಕಾರ ಮಾಡುವ ಸ್ಥಳದಲ್ಲಿ ಸೇರಿತು. ಅಬ್ದುಲ್ ಖಯ್ಯಾಮನ ಸಂಬಂಧಿಕರು ಸ್ಮಶಾನದಲ್ಲಿ ಅವನ ಶವವನ್ನು ಹೂಳಬೇಕೆಂದಿದ್ದರು. ಆದರೆ ಗುಂಪಿನಲ್ಲಿದ್ದ ಅತ್ಯಂತ ಪ್ರಚೋದನಕಾರಿ ಜನರು ಶವವನ್ನು ನಗರದಾದ್ಯಂತ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಬೇಕೆಂದು ಹಠ ಹಿಡಿದರು. ಆದರೆ ಸ್ಥಾನಿಕ ಅಧಿಕಾರಿಗಳು ಕೋಮುಗಲಭೆಯುಂಟಾಗಬಹುದೆಂಬ ಭಯದಿಂದ ಈ ಗುಂಪಿನ ಪ್ರವೇಶವನ್ನು ತಡೆಗಟ್ಟಲು ನಿರ್ಧರಿಸಿದರು. ಮೆರವಣಿಗೆಯನ್ನು ತಡೆಯಲು ಪೊಲೀಸರು ಮಾಡಿದ ಎಲ್ಲಾ ಪ್ರಯತ್ನಗಳು ವಿಫಲವಾದವು. ಆದ್ದರಿಂದ ರಾಯಲ್ ಸಸೆಕ್ಸ್ ರಿಜಿಮೆಂಟಿನ ಒಂದು ಪ್ಲೆಟೂನನ್ನು ಶಾಂತಿಯನ್ನು ಸ್ಥಾಪಿಸುವುದಕ್ಕಾಗಿ

ಕರೆತರಲಾಯಿತು. ಉದ್ರೇಕಿತವಾದ ಜನಜಂಗುಳಿಯನ್ನು ಮುಂದುವರಿಯದಂತೆ ತಡೆಯಲು ಮತ್ತು ಸ್ವಯಂರಕ್ಷಣೆಯ ದೃಷ್ಟಿಯಿಂದ ಅದು ಸಮೀಪದಿಂದಲೇ ಗೋಲಿಬಾರ್ ಮಾಡಲೇಬೇಕಾಯಿತು. ಹೆಚ್ಚಿನ ಸೈನಿಕ ಪಡೆಗಳ ಆಗಮನದಿಂದ ಮುಂದುವರಿಯದಂತೆ ಗಲಭೆಕೋರರನ್ನು ತಡೆಯಲು ಸುತ್ತು ಗುಂಡು ಹಾರಿಸಲಾಗಿ ೪೭ ಜನ ಸತ್ತು ೧೩೪ ಜನ ಗಾಯಗೊಂಡರು. ಗಾಯಾಳುಗಳನ್ನು ಸಿವಿಲ್ ಆಸ್ಪತ್ರೆಗೆ ಸಾಗಿಸಲಾಯಿತು. ನಂತರ ಅಬ್ದುಲ್ ಖಯ್ಯಾಮನ ಶವವನ್ನು ಇನ್ನಾವ ಅಡ್ಡಿ–ಆತಂಕವಿಲ್ಲದೇ ಹೂಳಲಾಯಿತು.

೧೯೩೫ನೆಯ ಆಗಸ್ಟ್ ೨೫ರಂದು ಸಿಕಂದರಾಬಾದಿನಲ್ಲಿ ಒಂದು ಕೋಮು ಗಲಭೆಯುಂಟಾಯಿತು.

೧೯೩೬ರಲ್ಲಿ ನಾಲ್ಕು ಕೋಮು ಗಲಭೆಗಳು ಸಂಭವಿಸಿದವು. ಏಪ್ರಿಲ್ ೧೪ರಂದು ಆಗ್ರಾ ಜಿಲ್ಲೆಯ ಫಿರೋಜಾಬಾದದಲ್ಲಿ ಅತ್ಯಂತ ಭೀಕರವಾದ ದಂಗೆ ಎದ್ದಿತು. ಮುಖ್ಯ ಪೇಟೆಯಲ್ಲಿ ಒಂದು ಮುಸಲ್ಮಾನರ ಮೆರವಣಿಗೆ ಹೊರಟಿತ್ತು. ಅದರ ಮೇಲೆ ಕೆಲವು ಹಿಂದೂಗಳ ಮನೆಗಳ ಮೇಲಿನಿಂದ ಇಟ್ಟಿಗೆಗಳನ್ನು ಎಸೆಯಲಾಯಿತೆಂದು ಆಪಾದಿಸಲಾಯಿತು. ಇದರಿಂದ ಕುಪಿತರಾಗಿ ಮೆರವಣಿಗೆಯಲ್ಲಿದ್ದ ಮುಸಲ್ಮಾನರು ಡಾ.ಜೀವರಾಮ್ ಎಂಬ ಹಿಂದೂವಿನ ಮನೆಗೆ ಬೆಂಕಿ ಹಚ್ಚಿದರಲ್ಲದೇ ಪಕ್ಕದಲ್ಲಿದ್ದ ರಾಧಾಕೃಷ್ಣ ದೇವಾಲಯಕ್ಕೂ ಬೆಂಕಿ ಇಟ್ಟರು. ಡಾ.ಜೀವರಾಮ್‌ರವರ ಮನೆಯಲ್ಲಿದ್ದವರೂ ಅಲ್ಲದೇ ಮೂವರು ಚಿಕ್ಕಮಕ್ಕಳೂ ಸೇರಿದಂತೆ ೧೧ ಜನ ಇತರ ಹಿಂದೂಗಳು ಸಂಪೂರ್ಣವಾಗಿ ಬೆಂದುಹೋದರು. ೧೯೩೬ರ ಏಪ್ರಿಲ್ ೨೪ರಂದು ಮುಂಬೈ ಪ್ರೆಸಿಡೆನ್ಸಿಯ ಪೂನಾದಲ್ಲಿ ಎರಡನೆಯ ಹಿಂದೂ–ಮುಸಲ್ಮಾನ್ ದಂಗೆ ಸಂಭವಿಸಿತು. ಏಪ್ರಿಲ್ ೨೭ರಂದು ಮೋಂಘೀರ್ ಜಿಲ್ಲೆಯ ಕಮಾಲ್ ಪೂರದಲ್ಲಿ ಹಿಂದೂ–ಮುಸಲ್ಮಾನ ದಂಗೆ ಉಂಟಾಯಿತು. ೧೯೩೬ರ ಅಕ್ಟೋಬರ್ ೧೫ರಂದು ಮುಂಬಯಿಯಲ್ಲಿ ನಾಲ್ಕನೆಯ ಹಿಂದೂ–ಮುಸಲ್ಮಾನ ದಂಗೆ ಸಂಭವಿಸಿತು.

೧೯೩೭ನೆಯ ವರ್ಷ ಕೋಮು ಗಲಭೆಗಳಿಂದ ತುಂಬಿಹೋಗಿತ್ತು. ೧೯೩೭ರ ಮಾರ್ಚ್ ೨೭ರಂದು ಪಾಣಿಪತ್‌ನಲ್ಲಿ ಹೋಳಿ ಹಬ್ಬದ ಸಂದರ್ಭದಲ್ಲಿ ಹಿಂದೂ–ಮುಸಲ್ಮಾನ್ ದಂಗೆಯಾಗಿ ಅದರಲ್ಲಿ ೧೪ ಜನ ಹತರಾದರು ೧೯೩೭ನೆಯ ಮೇ ೧ರಂದು ಮದ್ರಾಸಿನಲ್ಲಿ ಕೋಮುಗಲಭೆಯುಂಟಾಗಿ ೫೦ ಜನ ಗಾಯಗೊಂಡರು ಇಡೀ ಮೇ ತಿಂಗಳು ಕೋಮು ಗಲಭೆಗಳಿಂದ ತುಂಬಿಹೋಗಿತ್ತು. ಈ ಗಲಭೆಗಳು ಬಹುತೇಕವಾಗಿ ಮಧ್ಯಪ್ರಾಂತ್ಯಗಳು ಮತ್ತು ಪಂಜಾಬಿನಲ್ಲಿ ಜರುಗಿದ್ದವು. ಸಿಂಧದ ಷಿಕಾರ್‌ಪುರದ ದಂಗೆ ಅತ್ಯಂತ ಭಯಾನಕವಾಗಿತ್ತು. ಜೂನ್ ೧೮ರಂದು ಅಮೃತಸರದಲ್ಲಿ ಸಿಖ್ಖ ಮುಸಲ್ಮಾನ ದಂಗೆ ಸಂಭವಿಸಿತು. ಅದು ಎಷ್ಟು ಗಂಭೀರ ಸ್ವರೂಪ ತಾಳಿತೆಂದರೆ ಶಾಂತಿ ಸುವ್ಯವಸ್ಥೆ ಕಾಯ್ದುಕೊಳ್ಳಲು ಬ್ರಿಟಿಷ್ ಸೈನ್ಯ ಪಡೆಗಳನ್ನು ಕರೆಸಬೇಕಾಯಿತು.

೧೯೩೮ರಲ್ಲಿ ಎರಡು ಕೋಮುಗಲಭೆಗಳು ಸಂಭವಿಸಿದವು. ಇವುಗಳಲ್ಲಿ ಒಂದು ಮಾರ್ಚ್ ೨೬ರಂದು ಅಲಹಾಬಾದಿನಲ್ಲಿ ಮತ್ತು ಇನ್ನೊಂದು ಮುಂಬಯಿಯಲ್ಲಿ ಏಪ್ರಿಲ್ ತಿಂಗಳಲ್ಲಿ ಸಂಭವಿಸಿದವು.

೧೯೩೯ರಲ್ಲಿ ಆರು ಹಿಂದೂ–ಮುಸ್ಲಿಂ ಗಲಭೆಗಳುಂಟಾದವು. ಜನವರಿ ೨೧ರಂದು ಅಸನ್ಸೋಲದಲ್ಲಿ ಗಲಭೆಯಾಗಿ ಅದರಲ್ಲಿ ಒಬ್ಬನು ಹತನಾಗಿ ೧೮ ಜನ ಗಾಯಗೊಂಡರು. ಇದರ ನಂತರ ಫೆಬ್ರವರಿ ೧೧ರಂದು ಕಾನ್ಪುರದಲ್ಲಿ ಒಂದು ದಂಗೆಯಾಗಿ ಇದರಲ್ಲಿ ೪೨ರಲ್ಲಿ ಹತರಾಗಿ ೨೦೦ ಜನ ಗಾಯಗೊಂಡರಲ್ಲದೆ ೮೦೦ ಜನರನ್ನು ದಸ್ತಗಿರಿ ಮಾಡಲಾಯಿತು. ಮಾರ್ಚ್ ೪ರಂದು ಬನಾರಸ್‌ದಲ್ಲಿ ಗಲಭೆಯಾಯಿತು. ಇದರ ಹಿಂದೆಯೇ ಮಾರ್ಚ್ ೫ರಂದು ಕಲ್ಕತ್ತಾದ ಹತ್ತಿರ ಕಾಶಿಪುರದಲ್ಲಿ ಇನ್ನೊಂದು

ಗಲಭೆಯಾಯಿತು. ಜೂನ್ ೧೯ರಂದು ಪುನಃ ಕಾನ್ಪುರದಲ್ಲಿ ರಥಯಾತ್ರೆಯ ವಿಷಯವಾಗಿ ಮತ್ತೊಂದು ದಂಗೆಯಾಯಿತು.

೧೯೩೯ರ ನವೆಂಬರ್ ೨೦ರಂದು ಸಿಂಧದ ಸುಕ್ಕೂರ್ ಎಂಬಲ್ಲಿ ಗಂಭೀರ ಸ್ವರೂಪದ ಗಲಭೆಯುಂಟಾಯಿತು. ಈ ದಂಗೆಯು ಸರ್ಕಾರದ ವಶದಲ್ಲಿದ್ದ ಮತ್ತು ಸರ್ಕಾರಕ್ಕೇ ಸೇರಿದ ಆಸ್ತಿಯಾಗಿದ್ದ ಮಂಝಿಲ್ ಗಾಹ್ ಎಂಬ ಕಟ್ಟಡವನ್ನು ಬಲಾತ್ಕಾರದಿಂದಲಾದರೂ ತಮ್ಮ ವಶಕ್ಕೆ ತೆಗೆದುಕೊಳ್ಳಬೇಕೆಂಬ ಮುಸಲ್ಮಾನರ ಪ್ರಯತ್ನದ ಪರಿಣಾಮವಾಗಿ ಸಂಭವಿಸಿತು. ಈ ಕಟ್ಟಡವನ್ನು ಮುಸಲ್ಮಾನರಿಗೆ ಹಸ್ತಾಂತರ ಮಾಡುವುದಕ್ಕೆ ಹಿಂದೂಗಳು ತೀವ್ರ ಆತಂಕ ಒಡ್ಡಿದ್ದರು. ಮುಂಬಯಿ ಉಚ್ಚನ್ಯಾಯಾಲಯದ ನ್ಯಾಯಾಧೀಶರಾಗಿದ್ದ ಶ್ರೀ ವೆಸ್ಟನ್‌ರವರನ್ನು ಈ ಗಲಭೆಗಳ ತನಿಖೆ ಮಾಡಲು ನೇಮಕ ಮಾಡಲಾಯಿತು. ಅವರು ತಮ್ಮ ವರದಿಯಲ್ಲಿ ಈ ಗಲಭೆಗಳಲ್ಲಿ ಮಡಿದವರ ಹಾಗೂ ಗಾಯಗೊಂಡವರ ಬಗ್ಗೆ ಈ ಕೆಳಗೆ ಕಾಣಿಸಿದ ಅಂಕಿ ಸಂಖ್ಯೆಗಳನ್ನು ನೀಡಿದ್ದಾರೆ:–*

| ತಾಲ್ಲೂಕು | ಎಸಗಲಾದ ಕೊಲೆಗಳು | | ಗಾಯಗೊಂಡವರು | | ತರುವಾಯ ಗಾಯಗಳಿಂದ ಮಡಿದವರು | |
|---|---|---|---|---|---|---|
| | ಹಿಂದೂ | ಮುಸ್ಲಿಂ | ಹಿಂದೂ | ಮುಸ್ಲಿಂ | ಹಿಂದೂ | ಮುಸ್ಲಿಂ |
| ಸುಕ್ಕೂರು ಪಟ್ಟಣ | ೨೦ | ೧೨ | ೧೧ | ೧ | ... | ... |
| ಸುಕ್ಕೂರು ತಾಲ್ಲೂಕು | ೨ | ೨ | ೨೩ | ... | ೫ | ... |
| ಷಿಕಾರ್ ಪುರ್ ತಾಲ್ಲೂಕು | ೫ | ... | ೧೧ | ... | ೨ | ... |
| ಗಾರ್ಹಿಯಾಸಿನ್ ತಾಲ್ಲೂಕು | ೨೪ | ... | ೪ | ... | ... | ... |
| ರೋಹರಿ ತಾಲ್ಲೂಕು | ೧೦ | ... | ೩ | ... | ... | ... |
| ಪಾನೋಆಕಿಲ್ ತಾಲ್ಲೂಕು | ೬ | ... | ೧ | ... | ... | ... |
| ಘೋರ್ಕಿ ತಾಲ್ಲೂಕು | ೧ | ... | ೧ | ... | ... | ... |
| ಮೀರ್ ಪುರ್ ಮಾಥೆರೋ ತಾಲ್ಲೂಕು | ... | ... | ೧ | ... | ... | ... |
| ಉಬಾವ್‌ರೋ ತಾಲ್ಲೂಕು | ೪ | ... | ೩ | ೧ | ೧ | ... |
| **ಒಟ್ಟು** | **೧೪೨** | **೧೪** | **೫೬** | **೧೨** | **೮** | ... |

* ಸಿಂಧ್ ಪಬ್ಲಿಕ್ ಎನ್‌ಕ್ವೈರೀಸ್ ಆ್ಯಕ್ಟ್‌ನ ಸೆಕ್ಷನ್ ೩ರನ್ವಯ ೧೯೩೯ರಲ್ಲಿ ಸಂಭವಿಸಿದ ಗಲಭೆಗಳ ವಿಚಾರಣೆ ಮಾಡಲು ನೇಮಕಗೊಂಡ ವಿಚಾರಣಾ ನ್ಯಾಯಾಲಯದ ವರದಿ, ಪು.೬೫, ಕೊಲೆಯಾದ ಹಿಂದೂಗಳ ಅಂಕಣದಲ್ಲಿ ನಮೂದಿಸಲಾದ ಒಟ್ಟು ಸಂಖ್ಯೆ ೧೪೨ ತಪ್ಪಾಗಿರುವಂತೆ ತೋರುತ್ತದೆ. ಅದು ೭೨ ಇರಬೇಕು.

ಅವರು ದಾಖಲೆ ಮಾಡಿರುವ ಅತ್ಯಂತ ಭಯಾನಕ ಘಟನೆಗಳಲ್ಲಿ ಈ ಕೆಳಕಾಣಿಸಿದ ಘಟನೆಯನ್ನು ಉಲ್ಲೇಖಿಸಬಹುದು:–

"ಈ ಎಲ್ಲಾ ಗಲಭೆಗಳಲ್ಲಿ ಅತ್ಯಂತ ಕರಾಳ ಘಟನೆ ೨೦ರ ರಾತ್ರಿ ಸುಕ್ಕೂರಿನಿಂದ ಎಂಟು ಮೈಲಿ ಮತ್ತು ಷಿಕಾರಿಪುರದಿಂದ ಹದಿನಾರು ಮೈಲಿ ದೂರದ ಗೋಸರ್ಜಿ ಎಂಬ ಗ್ರಾಮದಲ್ಲಿ ಸಂಭವಿಸಿತು. ಜಿಲ್ಲಾ ಮ್ಯಾಜಿಸ್ಟ್ರೇಟರು ಸರಕಾರಕ್ಕೆ ಕಳುಹಿಸಿದ ತಮ್ಮ ಅಪೂರ್ಣವೇ ಆದ ಹೇಳಿಕೆಯ ಪ್ರಕಾರ ಆ ರಾತ್ರಿ ೨೭ ಹಿಂದೂಗಳ ಕೊಲೆ ಮಾಡಲಾಯಿತು. ಪರಿಶೀಲಿಸಲಾದ ಪ್ರತ್ಯಕ್ಷದರ್ಶಿಗಳ ಪ್ರಕಾರ ಈ ಸಂಖ್ಯೆ ೩೭ ಆಗಿತ್ತು.

ಗೋಸರ್ಜಿಗ್ರಾಮದ ಗುತ್ತಿಗೆದಾರ ಪಮನಮಲ್‌ರವರ ಪ್ರಕಾರ ಸತ್ಯಾಗ್ರಹ ನಡೆದಾಗ ಗೋಸರ್ಜಿಯ ಹಿಂದೂ ಮುಂದಾಳುಗಳು ಆಗ ಸುಕ್ಕೂರಿನಲ್ಲಿದ್ದ ಆ ಕ್ಷೇತ್ರದ ಪ್ರಮುಖ ಜಮೀನ್ದಾರರಾಗಿದ್ದ ಖಾನ್ ಸಾಹೇಬ್ ಅಮೀರ್ ಬಕ್ಷ್‌ರವರ ಹತ್ತಿರ ಒಂದು ನಿಯೋಗದಲ್ಲಿ ಬಂದು ಅವರನ್ನು ಭೆಟ್ಟಿಯಾದರು. ಅಮೀರ್ ಬಕ್ಷ್‌ರವರು ನಿಯೋಗದವರಿಗೆ ಅವರ ಭದ್ರತೆ ಕುರಿತು ಆಶ್ವಾಸನೆ ನೀಡಿದರಲ್ಲದೆ ತಾವು ಅವರ ಭದ್ರತೆಗೆ ಜವಾಬ್ದಾರರಾಗಿರುವುದಾಗಿ ತಿಳಿಸಿದರು. ಅಮೀರ್ ಬಕ್ಷ್‌ರವರು ೨೦ನೆಯ ದಿನಾಂಕ ಗೋಸರ್ಜಿಯಲ್ಲಿದ್ದಾಗ ಅಂದೇ ಬೆಳಗ್ಗೆ ಅಲ್ಲಿ ಮುಖಿ ಮಹೂರ್ ಮಲ್‌ರವರ ಕೊಲೆಗೈಯಲಾಯಿತು. ರಕ್ಷಣೆಗಾಗಿ ಹಿಂದೂಗಳು ಖಾನ್ ಸಾಹೇಬ್ ಅಮೀರ್ ಬಕ್ಷ್‌ರವರ ಹತ್ತಿರ ಹೋದಾಗಲೂ ಅವರಿಗೆ ಭರವಸೆ ನೀಡಲಾಯಿತು. ಆದರೆ ಅದೇ ರಾತ್ರಿ ದೊಡ್ಡ ಪ್ರಮಾಣದಲ್ಲಿ ಕೊಲೆ ಮತ್ತು ಲೂಟಿ ಜರುಗಿತು. ಕೊಲೆ ಮಾಡಲಾದ ೩೭ ಜನರಲ್ಲಿ ಜನ ಮಹಿಳೆಯರಿದ್ದರು. ಪಮನ್ ಮಲ್‌ರವರು ಮರುದಿನ ಬೆಳಗ್ಗೆ ಗೋಸರ್ಜಿಯಿಂದ ಒಂದು ಮೈಲು ದೂರದಲ್ಲಿರುವ ಬಗರ್ಜಿಯ ಸಬ್ ಇನ್ಸ್‌ಪೆಕ್ಟರ್‌ರವರ ಕಡೆಗೆ ಹೋದುದಾಗಿ ಹೇಳಿದ್ದಾರೆ. ಆದರೆ ಅವರನ್ನು ಬೈದು ಠಾಣೆಯಿಂದ ಹೊರಹಾಕಲಾಯಿತು. ನಂತರ ಅವರು ಷಿಕಾರ್‌ಪುರಕ್ಕೆ ಹೋಗಿ ಅಲ್ಲಿಯ ಪಂಚಾಯಿತಿಗೆ ದೂರು ಸಲ್ಲಿಸಿದರು. ಆದರೆ ಅಲ್ಲಿ ಅವರು ಯಾವ ಅಧಿಕಾರಿಗೂ ದೂರು ಕೊಡಲಿಲ್ಲ. ನಂತರ ಬಗರ್ಜಿಯ ಸಬ್‌ಇನ್ಸ್‌ಪೆಕ್ಟರ್‌ರವರಿಗೆ ಇಂಡಿಯಾ ದಂಡಸಂಹಿತೆ(ಐ.ಪಿ.ಸಿ.)ಯ ೨೧೧ನೆಯ ಕಲಮಿನ ಪ್ರಕಾರ ಗೋಸರ್ಜಿಯ ಕೊಲೆಗಳ ಸಂಬಂಧ ದಸ್ತಗಿರಿ ಮಾಡುವಲ್ಲಿ ಕರ್ತವ್ಯ ಚ್ಯುತಿಗಾಗಿ ಶಿಕ್ಷೆ ವಿಧಿಸಲಾಯಿತೆಂಬ ಅಂಶವನ್ನು ಇಲ್ಲಿ ಉಲ್ಲೇಖಿಸ ಬಯಸುತ್ತೇನೆ.

ಬಗರ್ಜಿಯ ಹಿಂದೂಗಳಿಗೆ ಭದ್ರತೆಯ ಆಶ್ವಾಸನೆ ನೀಡಿದ್ದರೆಂದು ಹೇಳಲಾದ ಜಮೀನ್ದಾರ್ ಖಾನ್ ಸಾಹೇಬ್ ಅಮೀರ್ ಬಕ್ಷ್‌ರವರು ನ್ಯಾಯಾಲಯಕ್ಕೆ ಬಂದಿರುವುದಾಗಿ ಗೊತ್ತಾದಾಗ ಅವರಿಗೆ ನ್ಯಾಯಾಲಯದ ಸಾಕ್ಷಿಯಾಗಿ ವಿಚಾರಣೆ ಮಾಡಲಾಯಿತು. ಅವರು ಗೋಸರ್ಜಿ ಗ್ರಾಮದಿಂದ ಅರ್ಧ ಮೈಲು ದೂರದಲ್ಲಿ ವಾಸಿಸುತ್ತಿರುವುದಾಗಿ ಹೇಳಿದರು. ಬಗರ್ಜಿಯ ಸಬ್ ಇನ್ಸ್‌ಪೆಕ್ಟರ್ ಸ್ವೀಕೃತರವರು ೨೦ರಂದು ಮೆಹರೂಮಲ್‌ರವರ ಕೊಲೆಯ ನಂತರ ಗೋಸರ್ಜಿಗೆ ಬಂದುದಾಗಿಯೂ ಮತ್ತು ತಾವು ಮಹಜರ್ ಸಾಕ್ಷಿಯಾದುದಾಗಿಯೂ ಅವರು ತಿಳಿಸಿದರು. ಅವರ ಪ್ರಕಾರ ಹಿಂದೂಗಳು ಯಾವುದೇ ಸಹಾಯವನ್ನು ಕೇಳಲಿಲ್ಲ ಮತ್ತು ಯಾವುದೇ ತೊಂದರೆಯ ಭಯವೂ ಇರಲಿಲ್ಲ. ೨೦ರ ರಾತ್ರಿ ತಾವು

**ಅಸ್ವಸ್ಥರಾದುದಾಗಿಯೂ ಮತ್ತು ಕೊಲೆಗಳ ಬಗ್ಗೆ ತಮಗೆ ಏನೂ ಗೊತ್ತಾಗಲಿಲ್ಲವೆಂದು ಅವರು ಹೇಳಿದರು. ತಾವು ಮಂಯಿಲ್ ಗಾಹ್‌ದಿಂದ (ಜನರನ್ನು) ಹೊರಹೊರಡಿಸಲಾದ ಬಗ್ಗೆ ಕೇಳಿದ್ದಾಗಿ ಅವರು ಒಪ್ಪಿಕೊಂಡರು. ಕೊನೆಗೆ ತಮ್ಮ ಸಾಕ್ಷ್ಯದಲ್ಲಿ ಸುಕ್ಕೂರ್‌ನಲ್ಲಿ ದ್ವೇಷ ಪರಿಸ್ಥಿತಿ ಇರುವುದರಿಂದ ಎಚ್ಚರಿಕೆಯಿಂದಿರಬೇಕೆಂದು ಗೋಸರ್ಜಿಯ ಗ್ರಾಮಸ್ಥರಿಗೆ ತಿಳಿಸಿದುದಾಗಿ ಅವರು ಒಪ್ಪಿಕೊಂಡರು ಮತ್ತು ೧೯ರ ರಾತ್ರಿ ತಾವು ಪಂಚಾಯತಿ ಸಭೆ ಕರೆದುದಾಗಿಯೂ ಅವರು ಹೇಳಿರುತ್ತಾರೆ. ಅವರು ಕೊಲೆಗಳ ನಂತರ ೨೧ರಂದು ಸೂರ್ಯೋದಯವಾದ ಮೇಲೆ ಗೋಸರ್ಜಿಗೆ ಹೋದರು. ತಮ್ಮನ್ನು ಗೋಸರ್ಜಿಯ ರಕ್ಷಕರೆಂದು ಜನ ಭಾವಿಸಿರುವುದನ್ನು ಅವರು ಒಪ್ಪಿಕೊಂಡರು."**

ಶ್ರೀ ವೆಸ್ಟನ್‌ರವರು ಹೇಳುವ ಇನ್ನೂ ಕೆಲವು ಮಾತುಗಳು:–*

**"ಈ ಸಾಕ್ಷಿಯ ಸಾಕ್ಷ್ಯವನ್ನು ಒಪ್ಪಿಕೊಳ್ಳುವುದು ನನಗೆ ಅಸಾಧ್ಯವೆನಿಸಿದೆ. ೨೦ರ ರಾತ್ರಿ ಗೋಸರ್ಜಿಯಲ್ಲಿ ದ್ವೇಷವಿತ್ತೆಂಬುದರ ಬಗ್ಗೆ ಅವರಿಗೆ ಸಂಪೂರ್ಣ ಅರಿವಿತ್ತೆಂಬುದರಲ್ಲಿ ಸಂಶಯವೇ ಇಲ್ಲ. ಆದರೂ ಅವರು ತಮ್ಮ ಮನೆಯಲ್ಲಿಯೇ ಉಳಿಯಬಯಸಿದರು."**

ಗಲಭೆಗಳ ಈ ದಾಖಲೆಯು ಪರಿಣಾಮದಲ್ಲಿ ಕರಾಳ ಅಥವಾ ಭಯಾನಕವಾಗಿತ್ತು ಮತ್ತು ಧ್ವನಿಯಲ್ಲಿ ಖಿನ್ನತೆಯಿಂದ ಕೂಡಿತ್ತೆಂಬುದನ್ನು ಯಾರು ಅಲ್ಲಗಳೆಯಲು ಸಾಧ್ಯ? ಈ ದಾಖಲೆ ಘಟನಾಕಾಲದ ಕ್ರಮಾನುಸಾರದಲ್ಲಿರುವುದರಿಂದ ಈ ಗಲಭೆಗಳು ವಿವಿಧ ಪ್ರಾಂತ್ಯಗಳಲ್ಲಿನ ಸಾಮಾಜಿಕ ಮತ್ತು ಆರ್ಥಿಕ ಜೀವನದ ಮೇಲೆ ಅವುಗಳ ದುಷ್ಪರಿಣಾಮಗಳ ಅನಾಹುತದ ಬಗ್ಗೆ ಸರಿಯಾದ ಕಲ್ಪನೆಯಾಗಲಿಕ್ಕಿಲ್ಲ. ಯಾವುದೇ ಒಂದು ಪ್ರಾಂತ್ಯದಲ್ಲಿ ಪದೇ ಪದೇ ಸಂಭವಿಸಿದ ಈ ದಂಗೆಗಳ ದುಷ್ಪರಿಣಾಮಗಳನ್ನು ಬಿಂಬಿಸಲು ನಾನು ಮುಂಬಯಿ ಪ್ರಾಂತ್ಯದ ದಂಗೆಗಳ ದಾಖಲೆಯನ್ನು ಪುನರ್ ರೂಪಿಸಬಯಸುತ್ತೇನೆ. ಹಾಗೆ ಪುನರ್ ರೂಪಿಸಿದಾಗ ಅದರ ಸಾಮಾನ್ಯ ಸ್ವರೂಪ ಕೆಳ ಕಾಣಿಸಿದಂತೆ ಕಾಣಬಹುದು.

ಪ್ರಾಂತ್ಯವನ್ನು ಒತ್ತಟ್ಟಿಗಿಟ್ಟು ಕೇವಲ ಮುಂಬಯಿ ನಗರಕ್ಕೆ ಗಮನವನ್ನು ಸೀಮಿತಗೊಳಿಸಿದಾಗ ಈ ನಗರದ ದಾಖಲೆ ಅತ್ಯಂತ ಕರಾಳವಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ಮೊದಲನೆಯ ಹಿಂದೂ–ಮುಸಲ್ಮಾನ ದೊಂಬಿಯು ೧೮೯೩ರಲ್ಲಿ ಸಂಭವಿಸಿತು. ಇದರ ನಂತರ ೧೯೨೯ರವರೆಗೆ ಸುದೀರ್ಘ ಕಾಲ ಕೋಮು ಶಾಂತಿ ನೆಲೆಸಿತು. ಆದರೆ, ನಂತರದ ವರ್ಷಗಳ ಕಥೆ ದಾರುಣವಾಯಿತು. ೧೯೨೯ರ ಫೆಬ್ರವರಿಯಿಂದ ೧೯೩೮ನೆಯ ಏಪ್ರಿಲ್‌ವರೆಗಿನ ಅವಧಿಯಲ್ಲಿ ೧೦ಕ್ಕೆ ಕಡಿಮೆ ಇಲ್ಲದಷ್ಟು ಕೋಮು ಗಲಭೆಗಳು ಸಂಭವಿಸಿದವು. ೧೯೨೯ರಲ್ಲಿ ಎರಡು ಕೋಮು ಗಲಭೆಗಳಾದವು. ೩೬ ದಿನ ಜರುಗಿದ ಮೊದಲನೆಯ ಗಲಭೆಯಲ್ಲಿ ೧೪೯ ಜನ ಸತ್ತು ೭೩೯ ಜನ ಗಾಯಗೊಂಡರು. ೨೨ ದಿನ ಜರುಗಿದ ಎರಡನೆಯದರಲ್ಲಿ ೩೫ ಜನ ಕೊಲ್ಲಲ್ಪಟ್ಟು ೧೧೯ ಜನ ಗಾಯಗೊಂಡರು. ೧೯೩೦ರಲ್ಲಿ ಎರಡು ಗಲಭೆಗಳಾದವು. ಇದರಲ್ಲಿ ಆದ ಸಾವು ನೋವುಗಳ ವಿವರಗಳು ಲಭ್ಯವಿಲ್ಲ. ೧೯೩೨ರಲ್ಲಿ ಪುನಃ ಎರಡು ಗಲಭೆಗಳಾದವು. ಇವುಗಳಲ್ಲಿ ಮೊದಲನೆಯದು ಸಣ್ಣ ಪ್ರಮಾಣದ್ದಾಗಿತ್ತು. ಎರಡನೆಯದರಲ್ಲಿ ೨೧೭ ಜನ ಸತ್ತು ೨,೭೧೩ ಜನ ಗಾಯಗೊಂಡರು. ಈ ಗಲಭೆ ೪೯ ದಿನಗಳಾದ್ಯಂತ ಜರುಗಿತ್ತು. ೧೯೩೩ರಲ್ಲಿ ಒಂದು ಗಲಭೆ ಜರುಗಿತು.

---

* ಅದೇ; ಪುಟಗಳು ೬೬–೭೭

ಇದರ ವರದಿಗಳು ಲಭ್ಯವಿಲ್ಲ. ೧೯೩೬ರಲ್ಲಿ ಒಂದು ಗಲಭೆಯಾಗಿ ಇದರಲ್ಲಿ ೯೪ ಜನ ಕೊಲ್ಲಲ್ಪಟ್ಟು ೬೩೨ ಜನ ಗಾಯಗೊಂಡರು. ಇದು ೬೫ ದಿನಗಳಷ್ಟು ದೀರ್ಘಕಾಲ ನಡೆದೇ ಇತ್ತು. ೨೧ ದಿನ ನಡೆದ ೧೯೭೨ರ ದಂಗೆಯಲ್ಲಿ ೧೧ ಜನ ಸತ್ತು ೮೫ ಜನ ಗಾಯಗೊಂಡರು. ೧೯೩೮ರ ದಂಗೆ ಕೇವಲ ೨೧/೨ ಘಂಟೆಗಳ ಕಾಲ ನಡೆದು ೧೨ ಜನ ಸತ್ತು ೧೦೦ ಜನ ಗಾಯಗೊಂಡರು. ೧೯೨೯ರ ಫೆಬ್ರವರಿಯಿಂದ ೧೯೩೮ರ ಏಪ್ರಿಲ್‌ವರೆಗೆ ಮುಂಬಯಿ ನಗರದ ಹಿಂದೂ ಮುಸಲ್ಮಾನರು ೨೧೦ ದಿನಗಳ ಈ ರಕ್ತಪಾತದ ಘಟನೆಗಳಲ್ಲಿ ೫೫೦ ಕೊಲೆಗಳು ಮತ್ತು ೪,೫೦೦ ಜನ ಗಾಯಗೊಂಡಂತಹ ಪರಿಸ್ಥಿತಿಯನ್ನು ಅನುಭವಿಸಿದರು. ಈ ವಿವರಣೆಯಲ್ಲಿ ಆಗ ಸಂಭವಿಸಿದ ಲೂಟಿಯಿಂದುಂಟಾದ ಆಸ್ತಿಪಾಸ್ತಿಯ ನಷ್ಟ ಸೇರಿಲ್ಲ.

## V

ಹೀಗಿತ್ತು ೧೯೨೦ರಿಂದ ೧೯೪೦ರವರೆಗಿನ ಹಿಂದೂ–ಮುಸಲ್ಮಾನರ ಸಂಬಂಧಗಳ ದಾಖಲೆ. ಹಿಂದೂ–ಮುಸಲ್ಮಾನರ ನಡುವೆ ಏಕತೆಯನ್ನುಂಟುಮಾಡಲು ಗಾಂಧಿಯವರು ನಡೆಸಿದ ತೀವ್ರ ಪ್ರಯತ್ನಗಳೊಡನೆ ಇದನ್ನು ಹೋಲಿಸಿದಾಗ ಈ ದಾಖಲೆ ಹೃದಯ ವಿದ್ರಾವಕ ಓದೆನಿಸುವುದು. ಇದು ಹಿಂದೂಸ್ತಾನದಲ್ಲಿ ಹಿಂದೂಗಳು ಮತ್ತು ಮುಸಲ್ಮಾನರ ನಡುವೆ ನಡೆದ ಆಂತರಿಕ ಯುದ್ಧದ ಮತ್ತು ಉಂಟಾಗುತ್ತಿದ್ದ ಯುದ್ಧ ವಿರಾಮದ ಇಪ್ಪತ್ತು ವರ್ಷಗಳ ದಾಖಲೆಯಾಗಿದೆ ಎಂದು ಹೇಳಿದರೆ ಅದು ಉತ್ಪ್ರೇಕ್ಷೆ ಎನಿಸಲಾರದು.

ಈ ಆಂತರಿಕ ಯುದ್ಧದಲ್ಲಿ ಹೆಚ್ಚಾಗಿ ಪುರುಷರೇ ಬಲಿಯಾಗಿದ್ದರು. ಆದರೂ ಸ್ತ್ರೀಯರು ಅತ್ಯಾಚಾರದಿಂದ ಸಂಪೂರ್ಣವಾಗಿ ತಪ್ಪಿಸಿಕೊಳ್ಳಲಿಲ್ಲ. ಈ ಕೋಮು ವೈಷಮ್ಯದಲ್ಲಿ ಎಷ್ಟು ಸ್ತ್ರೀಯರು ತೊಂದರೆಗೀಡಾದರು ಎಂಬುದು ಸರಿಯಾಗಿ ಗೊತ್ತಾಗಿಲ್ಲ. ಇಡೀ ಹಿಂದೂಸ್ಥಾನಕ್ಕೆ ಸಂಬಂಧಿಸಿದಂತೆ ಅಂಕಿಸಂಖ್ಯೆಗಳು ಲಭ್ಯವಿಲ್ಲ. ಆದರೆ ಬಂಗಾಳಕ್ಕೆ ಸಂಬಂಧಿಸಿದಂತೆ ಕೆಲವು ಅಂಕಿಸಂಖ್ಯೆಗಳಿವೆ.

ಬಂಗಾಳದ ಹಳೆಯ ವಿಧಾನ ಪರಿಷತ್ತಿನಲ್ಲಿ ಬಂಗಾಳ ಪ್ರಾಂತ್ಯದಲ್ಲಿ ಆದ ಮಹಿಳೆಯರ ಅಪಹರಣದ ಬಗ್ಗೆ ೧೯೩೨ರ ಸೆಪ್ಟೆಂಬರ್ ೭ರಂದು ಪ್ರಶ್ನೆಗಳನ್ನು ಕೇಳಲಾಗಿತ್ತು. ಉತ್ತರ ರೂಪವಾಗಿ ಅಂದಿನ ಸರ್ಕಾರವು ೧೯೨೨ರಿಂದ ೧೯೨೭ರ ಅವಧಿಯಲ್ಲಿ ಅಪಹರಿಸಲಾದ ಒಟ್ಟು ಮಹಿಳೆಯರ ಸಂಖ್ಯೆ ೫೬೮ ಎಂದು ಹೇಳಿತ್ತು. ಇವರಲ್ಲಿ ೧೦೧ ಮಹಿಳೆಯರು ಅವಿವಾಹಿತರಾಗಿದ್ದು, ೪೬೭ ವಿವಾಹಿತರಾಗಿದ್ದ ಮಹಿಳೆಯರು, ಈ ಅಪಹೃತ ಮಹಿಳೆಯರ ಕೋಮು ವಿವರ ನೀಡಬೇಕೆಂದು ಕೇಳಲಾದಾಗ ೧೦೧ ಅವಿವಾಹಿತ ಮಹಿಳೆಯರಲ್ಲಿ ೬೪ ಹಿಂದೂಗಳು, ೨೯ ಮುಸಲ್ಮಾನರು, ೪ ಕ್ರಿಶ್ಚಿಯನ್ನರು ಮತ್ತು ಉಳಿದ ೪ ಜನರ ಬಗ್ಗೆ ಮಾಹಿತಿಯಿಲ್ಲವೆಂದು; ಮತ್ತು ೪೬೭ ವಿವಾಹಿತರಲ್ಲಿ ೩೩೧ ಹಿಂದೂಗಳು, ೧೨೨ ಮುಸಲ್ಮಾನರು, ಇಬ್ಬರು ಕ್ರಿಶ್ಚಿಯನ್ನರು ಮತ್ತು ಉಳಿದ ೧೨ ಮಹಿಳೆಯರ ಕೋಮಿನ ಬಗ್ಗೆ ಮಾಹಿತಿ ಇಲ್ಲವೆಂದು ತಿಳಿಸಲಾಗಿತ್ತು. ಈ ಅಂಕಿಸಂಖ್ಯೆಗಳು ವರದಿಯಾದ ಪ್ರಕರಣಗಳಿಗೆ ಅಥವಾ ವರದಿಯಾಗಿದ್ದರೂ ಪತ್ತೆ ಮಾಡಲಾರದ ಪ್ರಕರಣಗಳಿಗೆ ಸಂಬಂಧಿಸಿದವಾಗಿದ್ದವು. ಸಾಮಾನ್ಯವಾಗಿ ಶೇಕಡಾ ೧೦ರಷ್ಟು ಪ್ರಕರಣಗಳು ಮಾತ್ರ ವರದಿಯಾಗುತ್ತವೆ. ಇಲ್ಲವೇ ಪತ್ತೆಯಾಗುತ್ತವೆ. ಶೇಕಡಾ ೯೦ರಷ್ಟು ಪ್ರಕರಣಗಳು ಪತ್ತೆಯಾಗುವುದೇ ಇಲ್ಲ. ಈ ಪ್ರಮಾಣವನ್ನು ಬಂಗಾಳ ಸರಕಾರ ಬಹಿರಂಗಪಡಿಸಿದ ಸಂಖ್ಯೆಗಳಿಗೆ ಅನ್ವಯಿಸಿದಾಗ ಬಂಗಾಳದಲ್ಲಿ ೧೯೨೨–೨೭ರ ಐದು ವರ್ಷಗಳ ಅಲ್ಪಾವಧಿಯಲ್ಲಿ ೩೫,೦೦೦ ಮಹಿಳೆಯರನ್ನು ಅಪಹರಿಸಲಾಗಿತ್ತೆಂದು ಹೇಳಬಹುದು.

ಸ್ತ್ರೀಯರ ಬಗ್ಗೆ ಇರುವಂತಹ ಭಾವನೆಗಳು ಎರಡೂ ಕೋಮುಗಳ ನಡುವೆ ಇರಬಹುದಾದ ಸ್ನೇಹಪರ ಇಲ್ಲವೇ ವೈರತ್ವದ ಸಂಕೇತ ಎನಿಸುವುದು. ಹೀಗಿರುವಾಗ ೧೯೩೬ರ ಜೂನ್ ೨೭ರಂದು ಬಂಗಾಳದ ಗೋವಿಂದಪುರ ಗ್ರಾಮದಲ್ಲಿ ಜರುಗಿದ ಘಟನೆ ಕುತೂಹಲಕಾರಿಯಾಗಿದೆ. ಈ ಕೆಳಗಿನ ವಿವರಣೆಯನ್ನು ೧೧ನೆಯ ಆಗಸ್ಟ್ ೧೯೩೬ರಂದು ಆರಂಭವಾದ ೪೦ ಮುಸಲ್ಮಾನ ಆಪಾದಿತರ ವಿಚಾರಣೆಯ ಸಂಬಂಧ ಸರಕಾರಿ ವಕೀಲರು ಮಾಡಿದ ಆರಂಭಿಕ ಅಹವಾಲಿನಿಂದ* ಆಯ್ದುಕೊಳ್ಳಲಾಗಿದೆ:–

**"ಗೋವಿಂದಪುರದಲ್ಲಿ ರಾಧಾವಲ್ಲಭ ಎಂಬ ಹಿಂದೂ ವಾಸಿಸುತ್ತಿದ್ದನು. ಅದೇ ಗೋವಿಂದಪುರದಲ್ಲಿ ರಾಧಾವಲ್ಲಭ ಎಂಬ ಮುಸಲ್ಮಾನ ಮಹಿಳೆಯೂ ವಾಸಿಸುತ್ತಿದ್ದಳು. ಈ ಹಾಲು ಮಾರುವ ಮಹಿಳೆ ಮತ್ತು ಹರೇಂದ್ರ ಎಂಬುವನ ನಡುವೆ ಅನೈತಿಕ ಸಂಬಂಧವಿದೆ ಎಂದು ಗ್ರಾಮದ ಸ್ಥಳೀಯ ಮುಸಲ್ಮಾನರು ಶಂಕೆ ಹೊಂದಿದ್ದರು. ಒಬ್ಬ ಮುಸಲ್ಮಾನ ಸ್ತ್ರೀಯನ್ನು ಒಬ್ಬ ಹಿಂದೂ ಇಟ್ಟುಕೊಂಡಿರುವುದನ್ನು ಮುಸಲ್ಮಾನರು ಸಹಿಸಲಾರದೇ ಹೋದದ್ದರಿಂದ ಅವರು ರಾಧಾವಲ್ಲಭನ ಕುಟುಂಬದ ಮೇಲೆ ಈ ಅವಮಾನದ ಸೇಡು ತೀರಿಸಿಕೊಳ್ಳಲು ನಿರ್ಧರಿಸಿದರು. ಗೋವಿಂದಪುರದ ಮುಸಲ್ಮಾನರ ಸಭೆಯನ್ನು ಕರೆಯಲಾಯಿತು ಮತ್ತು ಆ ಸಭೆಗೆ ಹರೇಂದ್ರನನ್ನು ಕರೆತರಿಸಲಾಯಿತು. ಹರೇಂದ್ರನು ಸಭೆಗೆ ಹೋಗುತ್ತಿದ್ದಂತೆಯೇ ಅವನ ಚೀತ್ಕಾರ ಕೇಳಿಸಿತು. ಹರೇಂದ್ರನ ಮೇಲೆ ಹಲ್ಲೆ ಮಾಡಲಾಗಿದ್ದು ಅವನು ಸಭೆ ಜರುಗಿದ ಮೈದಾನದಲ್ಲಿ ಎಚ್ಚರ ತಪ್ಪಿ ಬಿದ್ದುದ್ದು ಕಂಡು ಬಂದಿತು. ಗೋವಿಂದಪುರದ ಮುಸಲ್ಮಾನರು ಈ ಹಲ್ಲೆಯಿಂದ ತೃಪ್ತರಾಗಲಿಲ್ಲ. ರಾಧಾವಲ್ಲಭ, ಅವನ ಹೆಂಡತಿ ಮಕ್ಕಳು ಇಸ್ಲಾಂ ಧರ್ಮವನ್ನು ಸ್ವೀಕರಿಸದೇ ಹೋದರೆ ಅವರ ಮಗ ಮಾಡಿದ ಅಪರಾಧವನ್ನು ತಾವು ಮನ್ನಿಸುವುದಿಲ್ಲವೆಂದು ಅವರು ರಾಧಾವಲ್ಲಭನಿಗೆ ತಿಳಿಸಿದರು. ರಾಧಾವಲ್ಲಭನು ತನ್ನ ಹೆಂಡತಿ ಮಕ್ಕಳನ್ನು ಬೇರೆ ಸ್ಥಳಕ್ಕೆ ಕಳುಹಿಸುವ ಯೋಜನೆಯಲ್ಲಿದ್ದನು. ಮುಸಲ್ಮಾನರಿಗೆ ಈ ಸುದ್ದಿ ತಿಳಿಯಿತು. ಮರುದಿನ ಬೆಳಿಗ್ಗೆ ರಾಧಾವಲ್ಲಭನ ಹೆಂಡತಿ ಕುಸುಮ್ ತನ್ನ ಮನೆಯ ಅಂಗಳವನ್ನು ಗುಡಿಸುತ್ತಿದ್ದಾಗ ಕೆಲವು ಮುಸಲ್ಮಾನರು ಬಂದು ರಾಧಾವಲ್ಲಭನನ್ನು ಹಿಡಿದುಕೊಂಡಾಗ ಇತರ ಮುಸಲ್ಮಾನರು ಅವನ ಹೆಂಡತಿ ಕುಸುಮಳನ್ನು ಎತ್ತಿಕೊಂಡು ಹೋದರು. ಅವಳನ್ನು ಸ್ವಲ್ಪ ದೂರ ಎತ್ತಿಕೊಂಡು ಹೋಗಿ ಲಾಕರ್ ಮತ್ತು ಮಹಝರ್ ಎಂಬ ಇಬ್ಬರು ಮುಸಲ್ಮಾನರು ಆಕೆಯ ಮೇಲೆ ಅತ್ಯಾಚಾರ ಮಾಡಿದರಲ್ಲದೆ, ಆಕೆಯ ಆಭರಣಗಳನ್ನು ಅಪಹರಿಸಿದರು. ಸ್ವಲ್ಪ ಹೊತ್ತಿನ ನಂತರ ಆಕೆಗೆ ಎಚ್ಚರ ಬಂದು ತನ್ನ ಮನೆಯ ಕಡೆಗೆ ಓಡಿದಳು. ಆಕೆಯ ಮೇಲೆ ಅತ್ಯಾಚಾರ ಮಾಡಿದವರೇ ಪುನಃ ಅವಳನ್ನು ಬೆನ್ನಟ್ಟಿದರು. ಆಕೆ ಹೇಗೋ ತನ್ನ ಮನೆಯನ್ನು ತಲುಪಿ ಬಾಗಿಲನ್ನು ಮುಚ್ಚಿದಳು. ಆಕೆಯ ಮೇಲೆ ಹಲ್ಲೆ ಮಾಡಿದ ಮುಸಲ್ಮಾನರು ಬಾಗಿಲನ್ನು ಮುರಿದು ಆಕೆಯನ್ನು ಪುನಃ ಎತ್ತಿಕೊಂಡು ಹೋದರು. ರಸ್ತೆಯ ಮೇಲೆಯೇ ಆಕೆಯ ಮೇಲೆ ಪುನಃ ಅತ್ಯಾಚಾರ ಮಾಡಬೇಕೆಂದು ಆ ಮುಸಲ್ಮಾನ ಆಕ್ರಮಣಕಾರರು ಬಯಸಿದಾಗ ಆಕೆ ಹೇಗೋ ರಜನಿ ಎಂಬ ಇನ್ನೊಬ್ಬ ಮಹಿಳೆಯ ಸಹಾಯದಿಂದ ಅವರಿಂದ ತಪ್ಪಿಸಿಕೊಂಡು ರಜನಿಯ ಮನೆಯಲ್ಲಿ ಆಶ್ರಯ ಪಡೆದಳು. ಆಕೆ ರಜನಿಯ ಮನೆಯಲ್ಲಿದ್ದಾಗ ಗೋವಿಂದಪುರದ ಮುಸಲ್ಮಾನರು ಆಕೆಯ ಗಂಡ ರಾಧಾವಲ್ಲಭನನ್ನು ಬೀದಿಗಳಲ್ಲಿ ಅಪಮಾನಕರ ರೀತಿಯಲ್ಲಿ ಎಳೆದೊಯ್ದರು. ಮರುದಿವಸ**

---

* ಇದು ನಾಗಪುರದ ಮರಾಠಿ ವಾರಪತ್ರಿಕೆ 'ಸಾವಧಾನ'ದ ಆಗಸ್ಟ್ ೨೫, ೧೯೩೬ರ ಸಂಚಿಕೆಯಲ್ಲಿ ಪ್ರಕಟವಾದ ವರದಿಯ ಇಂಗ್ಲಿಷ್ ಪಾಠಾಂತರವಾಗಿದೆ.

**ಮುಸಲ್ಮಾನರು ಗೋವಿಂದಪುರದ ಪೊಲೀಸ್ ಠಾಣೆಗೆ ಹೋಗಿ ಬರುವ ರಸ್ತೆಗಳ ಮೇಲೆ ರಾಧಾವಲ್ಲಭ ಮತ್ತು ಅವನ ಪತಿ ಕುಸುಮ ಪೊಲೀಸರಿಗೆ ತಮ್ಮ ಮೇಲೆ ಎಸಗಲಾದ ಅತ್ಯಾಚಾರದ ಬಗ್ಗೆ ದೂರು ನೀಡದಂತೆ ನೋಡಿಕೊಳ್ಳಲು ನಿಗಾ ಇಟ್ಟರು.''**

ಯಾವ ಪಶ್ಚಾತ್ತಾಪ, ನಾಚಿಕೆ ಮತ್ತು ಸಹಧರ್ಮೀಯರಿಂದ ಯಾವುದೇ ಖಂಡನೆಯ ಭಯವೂ ಇಲ್ಲದೇ ಸ್ತ್ರೀಯರ ಮೇಲೆ ಎಸಗಲಾದ ಬರ್ಬರ ಕೃತ್ಯಗಳು ಈ ಎರಡೂ ಕೋಮುಗಳ ನಡುವೆ ಇದ್ದ ತೀವ್ರ ವೈಷಮ್ಯದ ಅವುಗಳ ನಡುವೆ ಇದ್ದ ಭಿನ್ನತೆಯ ದ್ಯೋತಕವಾಗಿವೆ. ಎರಡೂ ಕಡೆಯವರಲ್ಲಿದ್ದ ತೀಕ್ಷ್ಣ ಭಾವನೆಗಳು ಎರಡು ಯುದ್ಧನಿರತ ರಾಷ್ಟ್ರಗಳ ನಡುವೆ ಇರುವಂತಹ ಉಗ್ರ ಭಾವನೆಗಳಂತಿದ್ದವು. ಅವರ ನಡುವೆ ಎಲ್ಲಾ ವಿಧದ ಕೊಲೆ, ಲೂಟಿ, ಅತ್ಯಾಚಾರ ಮತ್ತು ಅತಿಕ್ರಮಣಗಳು ಸಂಭವಿಸುತ್ತಿದ್ದು ಈ ಕೃತ್ಯಗಳನ್ನು ಹಿಂದೂಗಳು, ಮುಸಲ್ಮಾನರ ವಿರುದ್ಧ ಮತ್ತು ಮುಸಲ್ಮಾನರು ಹಿಂದೂಗಳ ವಿರುದ್ಧ– ಅದರಲ್ಲಿಯೂ ಹಿಂದೂಗಳಿಗಿಂತ ಮುಸಲ್ಮಾನರು ಹಿಂದೂಗಳ ವಿರುದ್ಧ ಹೆಚ್ಚಾಗಿ ಅವ್ಯಾಹತವಾಗಿ ಎಸಗಿದರು. ಬೆಂಕಿ ಇಡುವ ಪ್ರಕರಣಗಳೂ ಜರುಗಿ ಇವುಗಳಲ್ಲಿ ಮುಸಲ್ಮಾನರು ಹಿಂದೂಗಳ ಮನೆಗಳಿಗೆ ಬೆಂಕಿ ಇಟ್ಟಾಗ ಅವುಗಳಲ್ಲಿ ಸ್ತ್ರೀಯರು, ಪುರುಷರು ಮತ್ತು ಮಕ್ಕಳು ಸುಟ್ಟು ಬೂದಿಯಾದರು. ಈ ಘಟನೆಗಳನ್ನು ನೋಡುತ್ತಿದ್ದ ಮುಸಲ್ಮಾನರಿಗೆ ತೃಪ್ತಿಯುಂಟಾಯಿತು. ಆಶ್ಚರ್ಯದ ಸಂಗತಿ ಎಂದರೆ ಅತ್ಯಂತ ಕ್ರೂರವಾದ ಮತ್ತು ಬುದ್ಧಿಪೂರ್ವಕವಾಗಿ ನಡೆಸಲಾದ ಈ ಅತ್ಯಾಚಾರಗಳು ಖಂಡನಾರ್ಹವೆಂದು ಭಾವಿಸುವುದಂತಿರಲಿ, ಇವು ಯುದ್ಧನಿರತ ಎರಡು ಗುಂಪುಗಳ ನಡುವೆ ಆಗುವ ನ್ಯಾಯಸಮ್ಮತ ಕೃತ್ಯಗಳಾಗಿರುವುದರಿಂದ ಯಾವ ಕ್ಷಮೆಯಾಚನೆಯ ಅಗತ್ಯವೂ ಇಲ್ಲವೆಂಬ ಅಮಾನುಷ ಭಾವನೆ ಉಂಟಾಗಿತ್ತು. ಈ ವೈಷಮ್ಯಗಳಿಂದ ಕೆರಳಿದ ಕಾಂಗ್ರೆಸ್ ಪತ್ರಿಕೆ 'ಹಿಂದೂಸ್ತಾನ'ದ ಸಂಪಾದಕರು ೧೯೨೬ರಲ್ಲಿ ಬರೆಯುತ್ತಾ ಹಿಂದೂ–ಮುಸಲ್ಮಾನರ ನಡುವೆ ಏಕತೆಯ ತಮ್ಮ ಪ್ರಯತ್ನದಲ್ಲಿ ಶ್ರೀಯುತ ಗಾಂಧಿಯವರು ಎಷ್ಟರಮಟ್ಟಿಗೆ ವಿಫಲರಾಗಿದ್ದಾರೆಂಬ ಕಟು ಸತ್ಯವನ್ನು ಈ ಕೆಳಗಿನ ಮಾತುಗಳಲ್ಲಿ ಹೇಳಿದ್ದಾರೆ. ಅತ್ಯಂತ ಹತಾಶ ಮಾತುಗಳಲ್ಲಿ ಸಂಪಾದಕರು ಹೇಳಿರುವುದೇನೆಂದರೆ*

**''ಇಂದಿನ ಹಿಂದೂಸ್ತಾನ ಮತ್ತು ಒಂದು ರಾಷ್ಟ್ರವೆನಿಸಿದ ಹಿಂದೂಸ್ತಾನದ ಕೊಲೆ ಮತ್ತು ಬೆಂಕಿ ಇಡುವ ವಿಲಕ್ಷಣ ವಾಸ್ತವಿಕತೆ ಮತ್ತು ತಮ್ಮನ್ನು ತಾವೆ ಮೋಸಗೊಳಿಸಿಕೊಳ್ಳುತ್ತಿರುವ ದೇಶಪ್ರೇಮಿ ಆತ್ಮವಂಚಕ ವ್ಯಕ್ತಿಗಳ ಕಲ್ಪನೆಯ ಮೆಚ್ಚಿನ ಕಟ್ಟುಕಥೆಯ ನಡುವೆ ಅಪರಿಮಿತ ಅಂತರವಿದೆ. ಹಿಂದೂ–ಮುಸ್ಲಿಂ ಏಕತೆಯ ಬಗ್ಗೆ ಸಾವಿರ ವೇದಿಕೆಗಳಿಂದ ಮಾತನಾಡುವುದು ಅಥವಾ ಅದನ್ನು ಕುರಿತು ಉಜ್ವಲ ಶೀರ್ಷಿಕೆಗಳನ್ನು ಕೊಡುವುದು ಕಲ್ಲು ತೂರಾಟದಿಂದ ದೇವಾಲಯಗಳನ್ನು ಹಾಗೂ ಗೋರಿಗಳನ್ನು ಅಪವಿತ್ರಗೊಳಿಸುವ ಕಾರ್ಯಗಳಿಂದ ಕರಗಿಹೋಗುವಂತಹ ಭ್ರಮೆಯನ್ನು ನಿರ್ಮಿಸಿದಂತೆ ಶಾಂತಿ ಮತ್ತು ಸೌಹಾರ್ದವನ್ನು ಕುರಿತು ನಾಯ್ಡು ಮಾದರಿಯ ಕೆಲವು ಶ್ರದ್ಧಾಭಕ್ತಿಯ ಶ್ಲೋಕಗಳನ್ನು ಹಾಡುವುದರಿಂದ ದೇಶಕ್ಕೆ ಯಾವುದೇ ಉಪಯೋಗವಾಗುವುದಿಲ್ಲ. ಕಾಂಗ್ರೆಸ್ ಅಧ್ಯಕ್ಷೆ ತಮಗೆ ಬಹು ಪ್ರಿಯವೆನಿಸಿರುವ ಹಿಂದೂ–ಮುಸಲ್ಮಾನ ಏಕತೆಯ ವಿಷಯವನ್ನು ತಮ್ಮದೇ ಆದ ವಿವಿಧ ರೀತಿಯಲ್ಲಿ ಮಂಡಿಸುತ್ತಾರಾದರೂ ಅದರಲ್ಲಿರುವ**

---

* ೧೬.೮.೨೬ರ ಟೈಮ್ಸ್ ಆಫ್ ಇಂಡಿಯಾದ 'ಥ್ರೂ ದಿ ಇಂಡಿಯನ್ ಐಸ್'ನಲ್ಲಿ ಉಲ್ಲೇಖವಾಗಿದೆ.

**ಮುಖ್ಯ ಸಮಸ್ಯೆಯನ್ನು ಹಾಗೆಯೇ ಉಳಿಸಿರುತ್ತಾರೆ. ಏಕತೆಯ ಗೀತೆ ಕೇವಲ ಮುಖಂಡರುಗಳ ನಾಲಿಗೆಯ ಮೇಲೆ ಮಾತ್ರ ಉಳಿಯದೇ ಹಿಂದೂಸ್ತಾನದ ಮಿಲಿಯಗಟ್ಟಲೆ ಜನತೆ ತಮ್ಮ ಮಿಲಿಯಗಟ್ಟಲೆ ದೇಶಬಾಂಧವರ ಹೃದಯಗಳಲ್ಲಿ ಏಕತೆಯ ಗೀತೆ ಮಿಡಿದಾಗ ಮಾತ್ರ ಅದಕ್ಕೆ ಸ್ಪಂದಿಸಬಲ್ಲರು.''**

ಹಿಂದೂ–ಮುಸಲ್ಮಾನ ಏಕತೆಯ ನಿಷ್ಪ್ರಯೋಜಕತೆಯನ್ನು ಈ ಮಾತುಗಳಿಗಿಂತ ಹೆಚ್ಚಾಗಿ ನಾನು ಹೇಳಲಾರೆ. ಹಿಂದೂ–ಮುಸಲ್ಮಾನ ಏಕತೆ ಬಿಸಿಲುಗುದುರೆಯಾಗಿದ್ದರೂ ಇದುವರೆಗೆ ಅದು ದೃಷ್ಟಿ ಗೋಚರವಾಗಿತ್ತು. ಅದು ಇಂದು ಕಾಣದಾಗಿದ್ದು ಮನಸ್ಸಿನಲ್ಲಿಯೂ ಇಲ್ಲದಂತಾಗಿದೆ. ಶ್ರೀ ಗಾಂಧಿ ಕೂಡಾ, ಈಗ ಅರ್ಥಮಾಡಿಕೊಂಡು ಅದನ್ನು ಅಸಾಧ್ಯವೆಂದು ಕೈಬಿಟ್ಟಿದ್ದಾರೆ.

ಕಳೆದ ಇಪ್ಪತ್ತು ವರ್ಷಗಳ ಇತಿಹಾಸದ ಹೊರತಾಗಿಯೂ ಹಿಂದೂ–ಮುಸಲ್ಮಾನ ಏಕತೆಯನ್ನು ನಂಬುವ ಇತರರೂ ಇದ್ದಾರೆ. ಅವರ ಈ ನಂಬುಗೆಗೆ ಎರಡು ಆಧಾರಗಳಿದ್ದಂತಿವೆ. ಮೊದಲನೆಯದಾಗಿ, ಅವರು ವಿವಿಧ ಬಗೆಯ ಜನರನ್ನು ಒಂದುಗೂಡಿಸಿ ಒಂದು ರಾಷ್ಟ್ರವನ್ನು ನಿರ್ಮಿಸುವಲ್ಲಿ ಕೇಂದ್ರ ಸರಕಾರದ ಸಾಮರ್ಥ್ಯದ ಬಗ್ಗೆ ನಂಬುಗೆ ತಳೆದಿದ್ದಾರೆ. ಎರಡನೆಯದಾಗಿ, ಮುಸಲ್ಮಾನರ ಬೇಡಿಕೆಗಳನ್ನು ಈಡೇರಿಸುವುದು ಹಿಂದೂ–ಮುಸಲ್ಮಾನ ಏಕತೆಯ ಸಾಧನೆಯ ನಿಶ್ಚಿತ ಉಪಾಯವೆಂದು ಅವರು ಭಾವಿಸಿದ್ದಾರೆ.

ಸರ್ಕಾರ ಐಕ್ಯತೆಯನ್ನುಂಟುಮಾಡುವ ಶಕ್ತಿಯಾಗಿದೆ ಎನ್ನುವುದೇನೋ ನಿಜ ಮತ್ತು ಒಂದೇ ಸರ್ಕಾರದ ಅಧಿಕಾರಕ್ಕೊಳಪಟ್ಟಾಗ ವಿಭಿನ್ನ ಜನಾಂಗಗಳು ಒಂದಾದಂತಹ ಅನೇಕ ನಿದರ್ಶನಗಳಿವೆ. ಆದರೆ ಸರ್ಕಾರವು ಒಂದು ಒಗ್ಗೂರಿಸುವ ಶಕ್ತಿಯಾಗಿದೆ ಎಂದು ನಂಬಿರುವ ಹಿಂದೂಗಳು ಸರ್ಕಾರದ ಏಕತೆಯನ್ನುಂಟುಮಾಡುವ ಶಕ್ತಿಗೂ ಕೆಲ ಇತಿಮಿತಿಗಳಿವೆಯೆಂಬುದನ್ನು ಮರೆತಿರುವಂತೆ ತೋರುತ್ತದೆ. ಸರ್ಕಾರದ ಒಗ್ಗೂಡಿಸುವ ಶಕ್ತಿಗೆ ಜನತೆಯಲ್ಲಿ ಈ ಒಗ್ಗೂಡುವಿಕೆಯ ಸಾಧ್ಯತೆಯು ಒಂದು ಮಿತಿ ಎನಿಸುತ್ತದೆ. ಜನಾಂಗ, ಭಾಷೆ ಮತ್ತು ಧರ್ಮ ಒಗ್ಗೂಡಿಕೆಗೆ ಅಡ್ಡಿಯಾಗದಂತಹ ದೇಶದಲ್ಲಿ ಸರ್ಕಾರ ಒಂದು ಪ್ರಭಾವಿ ಒಗ್ಗೂಡುವಿಕೆಯ ಶಕ್ತಿಯಾಗಿ ಪರಿಣಮಿಸುವುದು. ಅದೇ ಜನಾಂಗ, ಭಾಷೆ ಮತ್ತು ಧರ್ಮ ಏಕತೆಗೆ ಅಡ್ಡಿಯನ್ನುಂಟುಮಾಡುವ ದೇಶದಲ್ಲಿ ಸಮಗ್ರ ಐಕ್ಯತೆಯ ಶಕ್ತಿಯಾಗಲಾರದು. ಫ್ರಾನ್ಸ್, ಇಂಗ್ಲೆಂಡ್, ಇಟಲಿ ಮತ್ತು ಜರ್ಮನಿಯಲ್ಲಿ ಸಾಮಾನ್ಯವಾದ ಒಂದು ಸರ್ಕಾರವಿದ್ದ ಕಾರಣ ವಿಭಿನ್ನ ಜನಾಂಗಗಳವರು ಒಂದಾಗುವುದಕ್ಕೆ ಧರ್ಮವಾಗಲೀ, ಭಾಷೆಯಾಗಲೀ, ಜನಾಂಗೀಯ ಭಾವನೆಯಾಗಲೀ ಸರ್ಕಾರದ ಒಗ್ಗೂಡುವಿಕೆಯ ಶಕ್ತಿಗೆ ಅಡ್ಡಿಯಾಗದಿದ್ದುದೇ ಕಾರಣವಾಗಿತ್ತು. ಅದೇ ಇನ್ನೊಂದು ಕಡೆ, ಆಸ್ಟ್ರಿಯಾ, ಹಂಗೇರಿ, ಝೆಕೊಸ್ಲೋವಾಕಿಯಾ ಮತ್ತು ಟರ್ಕಿಯಲ್ಲಿ ಜನತೆ ಒಂದೇ ಸರ್ಕಾರದಡಿಯಲ್ಲಿದ್ದಾಗ್ಯೂ ಜನಾಂಗೀಯ ಭಾವನೆ, ಭಾಷೆ ಮತ್ತು ಧರ್ಮ ಇವು ಸರ್ಕಾರದ ಶಕ್ತಿಗೆ ಬಲವಾದ ಅಡ್ಡಿಯನ್ನೊಡ್ಡಿದುದರಿಂದ ಈ ದೇಶಗಳ ಜನರು ಒಂದಾಗಲು ಸಾಧ್ಯವಾಗಲಿಲ್ಲ. ಹಿಂದೂಸ್ತಾನದಲ್ಲಿ ಜನತೆಯನ್ನು ಒಂದೇ ಸರ್ಕಾರದಡಿಯಲ್ಲಿ ಒಂದುಗೂಡಿಸಿ ಅದನ್ನು ಒಂದು ರಾಷ್ಟ್ರವನ್ನಾಗಿ ರೂಪಿಸಲು ಜನಾಂಗ, ಭಾಷೆ ಮತ್ತು ಧರ್ಮ ಅವಕಾಶ ನೀಡುವುದಿಲ್ಲವೆಂಬುದನ್ನು ಯಾರೂ ಅಲ್ಲಗಳೆಯಲಾರರು. ಹಿಂದೂಸ್ತಾನದ ಕೇಂದ್ರ ಸರ್ಕಾರವೂ ಆ ದೇಶದ ಜನರನ್ನು ಒಂದು ರಾಷ್ಟ್ರವನ್ನಾಗಿ ರೂಪಿಸಿದೆ ಎಂದು ಹೇಳುವುದು ಒಂದು ಭ್ರಮೆ. ವಾಸ್ತವಿಕವಾಗಿ ಕೇಂದ್ರ ಸರ್ಕಾರ ಏನು ಮಾಡಿದೆ ಎಂದರೆ ಅಂಕೆ ಇಲ್ಲದ ಪ್ರಾಣಿಗಳ ಮಾಲಿಕನು ಅವುಗಳನ್ನೆಲ್ಲಾ ಒಂದೇ ಹಗ್ಗದಿಂದ ಬಿಗಿದು ಒಂದೇ ಲಾಯದಲ್ಲಿ ಕೂಡಿ ಹಾಕುವಂತೆ ಈ ದೇಶದ ಜನರನ್ನು ಒಂದೇ ಕಾನೂನಿನಡಿಯಲ್ಲಿ ತಂದು ಅವರನ್ನು ಒಂದೇ ವಾಸಸ್ಥಾನದಲ್ಲಿಟ್ಟಿದೆ. ಹಿಂದೂಸ್ತಾನದ ಜನರಲ್ಲಿ ಒಂದು ರೀತಿಯ ಶಾಂತಿಯನ್ನೊದಗಿಸಿರುವುದಷ್ಟೇ ಕೇಂದ್ರ

ಸರ್ಕಾರ ಮಾಡಿರುವ ಒಂದೇ ಒಂದು ಕೆಲಸ. ಅದು ಅವರನ್ನು ಒಂದು ರಾಷ್ಟ್ರವನ್ನಾಗಿ ಒಗ್ಗೂಡಿಸಿಲ್ಲ.

ಇಂತಹ ಒಂದುಗೂಡುವಿಕೆಗೆ ದೊರೆತ ಕಾಲ ಅತ್ಯಲ್ಪ ಎಂದು ಹೇಳಲು ಬರುವುದಿಲ್ಲ. ಒಂದು ಕೇಂದ್ರ ಸರ್ಕಾರದಡಿಯಲ್ಲಿ ಒಂದು ನೂರ ಐವತ್ತು ವರ್ಷಗಳನ್ನು ದೀರ್ಘಕಾಲ ನಡೆಸಿದ ಅದಕ್ಕೆ ಏಕತೆಯನ್ನುಂಟುಮಾಡಲು ಸಾಧ್ಯವಿಲ್ಲವೆನ್ನುವುದಾದರೆ ಅನಂತ ಕಾಲಕ್ಕೂ ಅದು ಸಾಧ್ಯವಾಗದು. ಇಂತಹ ಮನೋದರ್ಮಕ್ಕೆ ಹಿಂದೂಸ್ತಾನದ ಜನರೇ ಜವಾಬ್ದಾರರು. ಹಿಂದೂಸ್ತಾನದ ಜನರಲ್ಲಿ ಏಕತೆಯ ದೋಷವಿಲ್ಲ ಮತ್ತು ಒಗ್ಗೂಡುವಿಕೆಯ ಬಯಕೆ ಇಲ್ಲ. ಒಂದೇ ವಿಧದ ಸಾಮಾನ್ಯ ಉಡುಪನ್ನು ಧರಿಸುವ ಇಚ್ಛೆಯೂ ಇಲ್ಲ. ಒಂದೇ ಭಾಷೆಯನ್ನಾಡುವ ಇಚ್ಛೆಯೂ ಇಲ್ಲ. ಎಲ್ಲರಿಗೂ ಸಾಮಾನ್ಯವಾದ ಮತ್ತು ರಾಷ್ಟ್ರೀಯವಾದವನ್ನು ಪಡೆಯುವುದಕ್ಕಾಗಿ ಸ್ಥಳೀಯವಾದ ಮತ್ತು ತಮಗೆ ವಿಶಿಷ್ಟವಾದುದನ್ನು ಬಿಟ್ಟುಕೊಡಲು ಅವರು ಸಿದ್ಧರಿಲ್ಲ. ಒಬ್ಬ ಗುಜರಾತಿ, ಗುಜರಾತಿಯಾಗಿರುವುದರಲ್ಲಿಯೇ ಅಭಿಮಾ ಪಡುತ್ತಾನೆ. ಒಬ್ಬ ಮಹಾರಾಷ್ಟ್ರದವನು ಮಹಾರಾಷ್ಟ್ರೀಯನಾಗಿ, ಒಬ್ಬ ಪಂಜಾಬಿ, ಪಂಜಾಬಿಯಾಗಿ; ಒಬ್ಬ ಮದ್ರಾಸಿ, ಮದ್ರಾಸಿಯಾಗಿ ಮತ್ತು ಒಬ್ಬ ಬಂಗಾಲಿ, ಬಂಗಾಲಿಯಾಗಿಯೇ ಉಳಿಯುವುದರಲ್ಲಿ ಹೆಮ್ಮೆ ಪಡುತ್ತಾನೆ. ಮುಸಲ್ಮಾನರಲ್ಲಿ ರಾಷ್ಟ್ರೀಯ ಭಾವನೆ ಇಲ್ಲ ಎಂದು ಆಪಾದಿಸುವ ಹಿಂದೂಗಳ ಮನೋಭಾವ ಇದಾಗಿದೆ. "ನಾನು ಮೊದಲು ಮುಸಲ್ಮಾನ, ನಂತರ ಹಿಂದೂಸ್ತಾನಿ" ಎಂಬ ಭಾವನೆ ಮುಸಲ್ಮಾನರಲ್ಲಿದೆ ಎಂದು ಹಿಂದೂಗಳು ಆಪಾದಿಸುತ್ತಾರೆ. ಹಿಂದೂಸ್ತಾನದಲ್ಲಿ ಎಲ್ಲಿಯೇ ಆಗಲಿ ಹಿಂದೂಗಳಲ್ಲಿಯೂ ಕೂಡ ನಾವೆಲ್ಲರೂ ಹಿಂದೂಸ್ತಾನದವರು ಎಂದು ಹೇಳಿಕೊಳ್ಳುವ ಅಭಿಮಾನ ಮತ್ತು ಸಹಜ ಪ್ರವೃತ್ತಿ ಕಂಡು ಬರುತ್ತದೆಯೇ; ಅಥವಾ ಯಾವುದು ಸರ್ವೇ ಸಾಮಾನ್ಯವಾದುದು ಮತ್ತು ಒಗ್ಗೂಡಿಸುವಂತಹ ವ್ಯವಸ್ಥೆಯ ಪರವಾಗಿ ಸ್ಥಳೀಯ ಮತ್ತು ಸ್ವಂತವಾದದ್ದನ್ನು ಬಿಟ್ಟುಕೊಡುವಂತಹ ತ್ಯಾಗ ಮಾಡಲು ಅವರು ಆತ್ಮಸಾಕ್ಷಿಯಾಗಿ ಒಪ್ಪಿಕೊಳ್ಳಲು ಸಿದ್ಧರಿದ್ದಾರೆಯೇ? ಅವರಲ್ಲಿ ಅಂತಹ ಯಾವುದೇ ಪ್ರಜ್ಞೆ ಮತ್ತು ಬಯಕೆ ಇಲ್ಲ. ಅಂತಹ ಸದ್ವಿವೇಚನೆ ಇಲ್ಲದೆ ಮತ್ತು ಅಂತಹ ಬಯಕೆ ಇರದೆ ಒಗ್ಗೂಡಿಸುವಿಕೆಗಾಗಿ ಕೇಂದ್ರ ಸರ್ಕಾರವನ್ನು ಅವಲಂಬಿಸುವುದು ತಮ್ಮನ್ನು ತಾವೇ ವಂಚಿಸಿಕೊಂಡಂತಾಗುತ್ತದೆ.

ಎರಡನೆಯ ಅಂಶವು ನಿಸ್ಸಂಶಯವಾಗಿ ಸೈಮನ್ ಆಯೋಗದ ಅಭಿಪ್ರಾಯವಾಗಿತ್ತು:

**"ಕೋಮು ಗಲಭೆಗಳು ಹಿಂದೂಸ್ತಾನದ ರಾಜಕೀಯ ಭವಿಷ್ಯದ ಸಾಧ್ಯತೆಯ ಬಗ್ಗೆ ಎರಡೂ ಕೋಮುಗಳಲ್ಲಿ ಉಂಟಾದ ಆಸೆ ಆಕಾಂಕ್ಷೆಗಳ ಅಭಿವ್ಯಕ್ತರೂಪದ ಘಟನೆಗಳಾಗಿದ್ದವು. ಎಲ್ಲಿಯತನಕ ಅಧಿಕಾರವು ಬ್ರಿಟಿಷರ ಕೈಯಲ್ಲಿ ಅಬಾಧಿತವಾಗಿತ್ತೋ ಮತ್ತು ಎಲ್ಲಿಯವರೆಗೆ ಸ್ವಯಂ ಆಡಳಿತದ ವಿಚಾರವಿರಲಿಲ್ಲವೋ ಅಲ್ಲಿಯವರೆಗೆ ಹಿಂದೂ–ಮುಸಲ್ಮಾನ ವೈಷಮ್ಯ ಪರಿಮಿತ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿತ್ತು. ಇದು ವೈಷಮ್ಯವನ್ನು ವಿರೋಧಿಸುವ ಒಂದು ತಟಸ್ಥ ಅಧಿಕಾರಶಾಹಿಯ ಉಪಸ್ಥಿತಿಯ ಕಾರಣದಿಂದ ಮಾತ್ರವಲ್ಲ. ಇದಕ್ಕೆ ಇದ್ದ ಇನ್ನೂ ಒಂದು ಕಾರಣವೆಂದರೆ ಒಂದು ಕೋಮಿನವರು ತಮ್ಮ ಮೇಲೆ ಇನ್ನೊಂದು ಕೋಮಿನವರ ಅಧಿಪತ್ಯದಿಂದ ಭಯ ಪಡುವಂತಹ ಪ್ರಸಂಗವೂ ಇರಲಿಲ್ಲ. ಅದೇ ರೀತಿ ದೇಶೀಯ ಸಂಸ್ಥಾನಗಳಲ್ಲಿ ಕಾಣಬರದ ಕೋಮು ವೈಷಮ್ಯವನ್ನು ವಿವರಿಸಬಹುದು. ಬ್ರಿಟಿಷ್ ಹಿಂದೂಸ್ತಾನದಲ್ಲಿ ಒಂದು ತಲೆಮಾರಿನ ಹಿಂದೆ ಇದ್ದ ಪರಿಸ್ಥಿತಿಯ ಪರಿಚಯವುಳ್ಳವರು ಅಂದಿನ ಪರಿಸ್ಥಿತಿಯು ಅತ್ಯಂತ ಸೌಹಾರ್ದಯುತವಾಗಿದ್ದು, ನಾಗರಿಕ ಶಾಂತಿಯನ್ನು ಕದಡುವ ಪ್ರಸಂಗಗಳು ಅತಿಕಡಿಮೆ**

**ಪ್ರಮಾಣದಲ್ಲಿದ್ದವೆಂಬ ಅಂಶವನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಸುಧಾರಣೆಗಳು (೧೯೧೯ರ ಮಾಂಟೆಗೊ–ವೆಲ್ಮ್ಸ್‌ಫೋರ್ಡ್ ಸುಧಾರಣೆಗಳು) ಜಾರಿಯಾದಾಗಿನಿಂದ ಮುಂದಿನ ಸಾಧ್ಯತೆಗಳಿಂದ ಹಿಂದೂ–ಮುಸಲ್ಮಾನ ಕೋಮುಗಳ ನಡುವೆ ಪೈಪೋಟಿ ಆರಂಭವಾಯಿತು. ಒಂದು ಕೋಮಿನವರು ತಮ್ಮ ಬಹುಸಂಖ್ಯಾತ ಸ್ಥಾನದ ಕಾರಣ ಮತ್ತು ತಾವು ಹೊಂದಿರುವ ಹೆಚ್ಚಿನ ಶಿಕ್ಷಣ ಮತ್ತು ಸಂಪತ್ತಿನ ಕಾರಣ ಸಹಜವಾಗಿಯೇ ತಮ್ಮ ಹಕ್ಕುಗಳನ್ನು ಮುಂದೊಡ್ಡಿದ್ದಾರೆ. ಇನ್ನೊಂದು ಕೋಮಿನವರು ಇಂತಹ ಪರಿಸ್ಥಿತಿಯ ವಿರುದ್ಧ ತನ್ನ ಸದಸ್ಯರಿಗೆ ಹೆಚ್ಚಿನ ರಕ್ಷಣೆ ಪಡೆಯಲು ದೃಢನಿಶ್ಚಯ ತಾಳಿದ್ದಾರೆ ಹಾಗೂ ತಾವು ಈ ಮೊದಲು ದೇಶವನ್ನು ಗೆದ್ದಿದ್ದವರನ್ನು ಪ್ರತಿನಿಧಿಸುತ್ತಿದ್ದೇವೆ ಎಂಬುದನ್ನು ಅವರು ಮರೆತಿಲ್ಲ. ಅದು ತನಗೆ ಸಾಕಷ್ಟು ಪ್ರಾತಿನಿಧ್ಯ ದೊರೆಯಬೇಕೆಂದು ಮತ್ತು ತನಗೆ ಅಧಿಕಾರ ಸ್ಥಾನಗಳಲ್ಲಿ ಪೂರ್ಣ ಭಾಗ ದೊರೆಯಬೇಕೆಂದು ಬಯಸುತ್ತದೆ.''**

ಈ ನಿರ್ಣಯವು ನಿಜವೆಂದು ಭಾವಿಸಿದರೂ ಮುಸಲ್ಮಾನರ ಬೇಡಿಕೆಗಳು ನ್ಯಾಯಯುತವೆಂದು ಭಾವಿಸಿದರೂ, ಹಿಂದೂಗಳು ಇವುಗಳನ್ನು ಪೂರೈಸಲು ಒಪ್ಪಿಕೊಳ್ಳುತ್ತಾರೆಂದು ಭಾವಿಸಿದರೂ ಮುಸಲ್ಮಾನರ ರಾಜಕೀಯ ಬೇಡಿಕೆಗಳನ್ನು ಈಡೇರಿಸುವ ಮೂಲಕ ಹಿಂದೂ ಮುಸಲ್ಮಾನ ಏಕತೆ ಸಾಧ್ಯವೇ ಎಂಬುದೇ ಮುಖ್ಯ ಪ್ರಶ್ನೆಯಾಗಿದೆ. ಹಿಂದೂ–ಮುಸಲ್ಮಾನರ ನಡುವೆ ರಾಜಕೀಯ ಏಕತೆ ಇದ್ದರೆ ಸಾಕೆಂದು ಕೆಲವರ ಅನಿಸಿಕೆಯಾದಂತಿದೆ. ಇದು ಅತ್ಯಂತ ದೊಡ್ಡ ಭ್ರಮೆ. ಈ ಅನಿಸಿಕೆಯನ್ನು ತಳೆದಿರುವವರು ಬ್ರಿಟಿಷರನ್ನು ಒಳಾಡಳಿತ ಅಧಿಪತ್ಯ ಅಥವ ಸ್ವಾತಂತ್ರ್ಯವನ್ನು ನೀಡುವಂತೆ ಒತ್ತಾಯಿಸುವುದರಲ್ಲಿ ಮುಸಲ್ಮಾನರು ಹಿಂದೂಗಳೊಡನೆ ಸೇರುವಂತೆ ಮಾಡುವ ಬಗೆ ಹೇಗೆ ಎಂಬುದರ ಬಗ್ಗೆ ಮಾತ್ರ ಯೋಚಿಸುತ್ತಿರುವಂತಿದೆ. ಇದು ಅತ್ಯಂತ ತತ್ಕಾಲೀನ ಧೋರಣೆ. ಬ್ರಿಟಿಷರನ್ನು ಒತ್ತಾಯಿಸುವುದರಲ್ಲಿ ಮುಸಲ್ಮಾನರನ್ನು ಹಿಂದೂಗಳೊಡನೆ ಹೇಗೆ ಸೇರಿಸಬೇಕೆಂಬುದು ಒಂದು ಸಣ್ಣ ಪ್ರಶ್ನೆ. ಅವರು ಸಂವಿಧಾನವನ್ನು ಯಾವ ಭಾವನೆಯಿಂದ ಕಾರ್ಯಗತಗೊಳಿಸುವರು? ಅವರು ಅದನ್ನು ಅನಪೇಕ್ಷಿತ ಬಂಧನಕ್ಕೊಳಗಾದ ಪರಕೀಯರಂತೆ ಕಾರ್ಯಗತಗೊಳಿಸುವರೇ ಅಥವ ಅದನ್ನು ರಕ್ತ ಸಂಬಂಧವುಳ್ಳ ಬಾಂಧವರಂತೆ ಕಾರ್ಯಗತಗೊಳಿಸುವರೇ ಎಂಬುದು ಬಹು ಮುಖ್ಯ ಪ್ರಶ್ನೆ. ನಿಜವಾದ ಬಾಂದವರೋಪಾದಿಯಲ್ಲಿ ಕೆಲಸ ಮಾಡಲು ಕೇವಲ ರಾಜಕೀಯ ಏಕತೆಯಲ್ಲ. ಆದರೆ, ಹೃದಯ ಮತ್ತು ಆತ್ಮಗಳ ನಿಜವಾದ ಏಕತೆ ಅಥವಾ ಸಾಮಾಜಿಕ ಏಕತೆ ಅವಶ್ಯ. ನಿಜವಾದ ಏಕತೆಯ ಪ್ರತೀಕವಾಗಿರದ ರಾಜಕೀಯ ಏಕತೆ ನಿಷ್ಪ್ರಯೋಜಕ. ಅದು ಸ್ನೇಹಿತರಾಗಿರದ ಇಬ್ಬರು ತಮ್ಮೊಳಗೆ ಸಂಬಂಧ ಬೆಳೆಸುವುದಕ್ಕಿಂತಲೂ ಹೆಚ್ಚು ಅಪಾಯಕಾರಿ ಎನಿಸುವುದು. ಅದು ಎಷ್ಟು ಅಪಾಯಕಾರಿಯಾಗಬಲ್ಲುದು ಎಂಬ ಅಂಶ ಜರ್ಮನಿ ಮತ್ತು ರಷ್ಯಗಳ ನಡುವಣ ಸಂಬಂಧ ಏನಾಗಿದೆ ಎಂಬುದರಿಂದ ವ್ಯಕ್ತವಾಗುತ್ತದೆ. ಕೇವಲ ಭೌತಿಕ ಹಿತಾಸಕ್ತಿಗಳನ್ನು ತೃಪ್ತಿಪಡಿಸುವ ಮೂಲಕ ಶಾಶ್ವತ ಏಕತೆಯನ್ನುಂಟುಮಾಡಲು ಸಾಧ್ಯವಿಲ್ಲವೆಂಬುದು ನನ್ನ ವೈಯಕ್ತಿಕ ವಿಚಾರ. ಒಪ್ಪಂದಗಳು ಒಗ್ಗಟ್ಟನ್ನುಂಟು ಮಾಡಬಹುದು. ಆದರೆ, ಅಂತಹ ಏಕತೆಯನ್ನಲ್ಲ. ಯಾವುದೇ ಒಪ್ಪಂದ ಏಕತೆಗೆ ಆಧಾರವಾದರೆ, ಅದು ನಿಷ್ಪ್ರಯೋಜಕ. ಅದರ ಸ್ವರೂಪವೇ ತೋರಿಸಿಕೊಡುವಂತೆ ಒಪ್ಪಂದವು ಪ್ರತ್ಯೇಕತೆಯ ಕುರುಹಾಗಿದೆ. ಒಂದು ಒಪ್ಪಂದವು ಹೊಂದಾಣಿಕೆಯ ಬಯಕೆಯನ್ನುಂಟುಮಾಡಲಾರದು. ಅದು ತ್ಯಾಗ ಮನೋಭಾವನೆಯನ್ನು ತುಂಬಲಾರದು ಮತ್ತು ಸಂಬಂಧಪಟ್ಟವರನ್ನು ಅದರ ಮೂಲ ಉದ್ದೇಶ್ಯಗಳೊಂದಿಗೆ ಬಂಧಿಸಲಾರದು. ಪರಸ್ಪರರಲ್ಲಿ ಹೊಂದಾಣಿಕೆಯನ್ನುಂಟುಮಾಡುವ ಬದಲು ಆ ಒಪ್ಪಂದದಿಂದ ಸಾಧ್ಯವಾದಷ್ಟು ಲಾಭ

ಪಡೆಯುವ ಪ್ರಯತ್ನ ಮಾಡಲಾಗುತ್ತದೆ. ಸಾಮಾನ್ಯ ಗುರಿಯ ಸಾಧನೆಗಾಗಿ ತ್ಯಾಗ ಮಾಡುವ ಬದಲು ಒಪ್ಪಂದಕ್ಕೊಳಗಾದವರು ಒಬ್ಬರು ಮಾಡಿದ ತ್ಯಾಗ ಇನ್ನೊಬ್ಬರಿಗೆ ಹಿತಕಾರಿಯಾಗದಂತೆ ಅಡ್ಡಿಯುಂಟುಮಾಡುವುದರಲ್ಲಿಯೇ ನಿರತರಾಗಿರುತ್ತಾರೆ. ಮೂಲ ಗುರಿ ಸಾಧನೆಗಾಗಿ ಪ್ರಯಾಸ ಪಡುವುದರ ಬದಲು ಒಪ್ಪಂದಕ್ಕೊಳಗಾದವರು ಗುರಿ ಸಾಧನೆಯ ಹೋರಾಟದಲ್ಲಿ ವಿವಿಧ ಪಕ್ಷಗಳ ನಡುವಣ ಶಕ್ತಿ ಸಮತೋಲನದಲ್ಲಿ ವ್ಯತ್ಯಾಸವಾಗದಂತೆ ಮಾಡುವಲ್ಲಿಯೇ ಸದಾ ನಿರತರಾಗಿರುತ್ತಾರೆ. ಈ ಕೆಳಗಿನ ಮಾತುಗಳನ್ನು ಹೇಳುವಾಗ ಶ್ರೀ ರೆನಾನ್ ಅತ್ಯಂತ ಗಹನವಾದ ಸತ್ಯವನ್ನೇ ನುಡಿದಿದ್ದಾರೆ:–

> **"ಸಮಾನ ಹಿತಾಸಕ್ತಿಗಳು ವ್ಯಕ್ತಿಗಳ ನಡುವೆ ಬಲವಾದ ಬಂಧನ ಶಕ್ತಿಯಾಗುವುದು ಶತಸ್ಸಿದ್ಧ. ಆದಾಗ್ಯೂ ಒಂದು ರಾಷ್ಟ್ರವನ್ನು ಕಟ್ಟುವಲ್ಲಿ ಕೇವಲ ಹಿತಾಸಕ್ತಿಗಳು ಸಾಕಾಗಬಲ್ಲವೇ? ನನಗೆ ಹಾಗೆ ಅನಿಸುವುದಿಲ್ಲ. ಸಮಾನ ಹಿತಾಸಕ್ತಿಗಳು ವಾಣಿಜ್ಯ ಒಪ್ಪಂದಗಳಿಗೆ ಸಹಕಾರಿಯಾಗಬಲ್ಲವು. ರಾಷ್ಟ್ರೀಯತೆಗೆ ಒಂದು ಭಾವನಾತ್ಮಕ ಸಂಗತಿಯೂ ಇರುತ್ತದೆ. ಅದು ಏಕಕಾಲದಲ್ಲಿ ಶರೀರ ಮತ್ತು ಆತ್ಮವೂ ಆಗಿರುತ್ತದೆ; ಒಂದು ಸುಂಕ ಸಂಯುಕ್ತ ರಾಷ್ಟ್ರ ಪಿತೃಭೂಮಿ ಎನಿಸಲಾರದು."**

ಇನ್ನೊಬ್ಬ ಸುಪ್ರಸಿದ್ಧ ಇತಿಹಾಸಕಾರರ ಜೇಮ್ಸ್ ಬ್ರೈಸ್‌ರವರ ಮಾತುಗಳು ಅಷ್ಟೇ ಗಮನಾರ್ಹವಾಗಿವೆ. ಬ್ರೈಸ್‌ರ ಪ್ರಕಾರ:

> **"ಒಂದು ಸಂಸ್ಥೆಯ ಶಾಶ್ವತತೆ ಅದರ ಆಧಾರಗಳಾಗಿರುವ ಭೌತಿಕ ಹಿತಾಸಕ್ತಿಗಳನ್ನೇ ಅವಲಂಬಿಸಿರುವುದಿಲ್ಲ. ಆದರೆ ಅದು ಯಾರಿಗಾಗಿದೆಯೋ ಆ ವ್ಯಕ್ತಿಗಳ ಆಳವಾದ ಭಾವನೆಗಳೊಂದಿಗೆ ಇರುವ ಹೊಂದಾಣಿಕೆಯನ್ನವಲಂಬಿಸಿರುತ್ತದೆ. ಅದು ಯಾವಾಗ ಭಾವನೆಯನ್ನು ಸ್ವೀಕರಿಸಿ ಆ ಭಾವನೆಗೆ ಸ್ಪಂದಿಸುವುದೋ ಆಗ ಆ ಭಾವುಕತೆಗೆ ಹೆಚ್ಚಿನ ಧ್ವನಿ ದೊರೆಯುವುದಲ್ಲದೇ ಅದು ವಾಸ್ತವವಾಗಿ ಹೆಚ್ಚು ಶಕ್ತಿಶಾಲಿಯಾಗುತ್ತದೆ ಮತ್ತು ತತ್ಪರಿಣಾಮವಾಗಿ ಅದು ಆ ಸಂಸ್ಥೆಗೆ ಹೆಚ್ಚಿನ ಚೈತನ್ಯವನ್ನು ನೀಡುತ್ತದೆ."**

ಬ್ರೈಸ್ ಈ ಮಾತುಗಳನ್ನು ಬಿಸ್ಮಾರ್ಕನು ಸ್ಥಾಪಿಸಿದ ಜರ್ಮನ್ ಚಕ್ರಾಧಿಪತ್ಯದ ವಿಷಯವಾಗಿ ಹೇಳಿದ್ದರು. ಬ್ರೈಸ್‌ರ ಪ್ರಕಾರ ಬಿಸ್ಮಾರ್ಕನು ಒಂದು ಬಹುಕಾಲ ಉಳಿಯಬಲ್ಲ ಚಕ್ರಾಧಿಪತ್ಯವನ್ನು ಕಟ್ಟುವಲ್ಲಿ ಯಶಸ್ವಿಯಾದನು. ಏಕೆಂದರೆ ಅದು ಭಾವುಕತೆಯ ಆಧಾರ ಹೊಂದಿತ್ತಲ್ಲದೆ;

> **'ನಾವು ಯಾವುದನ್ನು ರಾಷ್ಟ್ರೀಯತೆಯ ಸಹಜಪ್ರವೃತ್ತಿ ಎಂದು ಕರೆಯುತ್ತೇವೆ, ಅದು ಎಲ್ಲಕ್ಕಿಂತಲೂ ಹೆಚ್ಚಾಗಿ ಈಗಾಗಲೇ ಜನತೆ ಹೊಂದಿರುವ ನೈತಿಕ ಮತ್ತು ಸಾಮಾಜಿಕ ಏಕತೆಯ ಪ್ರಜ್ಞೆ, ಮತ್ತು ಅಂತಹ ಏಕತೆಯನ್ನು ಒಂದೇ ಸರ್ಕಾರದಡಿಯಲ್ಲಿ ಈಗಾಗಲೇ ಸಾಧಿಸಲಾಗಿದ್ದು ಅದಕ್ಕೆ ನಾಗರಿಕ ರಾಜ್ಯಗಳ ಸಮೂಹದಲ್ಲಿ ಒಂದು ಸ್ಥಾನ ಮತ್ತು ಹೆಸರು ದೊರಕಿರುತ್ತದೆಯೋ' ಅಂತಹ ಭಾವುಕತೆಯನ್ನು ಪೋಷಿಸಿಕೊಂಡು ಬರಲಾಯಿತು.**

ಶಾಶ್ವತತೆಯನ್ನು ನೀಡುವ ಅಂತಹ ನೈತಿಕ ಮತ್ತು ಸಾಮಾಜಿಕ ಏಕತೆಯನ್ನು ದೊರಕಿಸಿಕೊಡುವುದು

ಯಾವುದು ಮತ್ತು ಜನರಲ್ಲಿ ನಾಗರಿಕ ರಾಜ್ಯಗಳ ಸಮೂಹದಲ್ಲಿ ಅಂತಹ ಸ್ಥಾನ ಮತ್ತು ಹೆಸರನ್ನು ಒಂದೇ ಸರ್ಕಾರದಡಿಯಲ್ಲಿ ಗಳಿಸಿಕೊಳ್ಳುವಂತೆ ಪ್ರೇರಣೆ ನೀಡುವ ಶಕ್ತಿ ಯಾವುದು?

ಈ ಪ್ರಶ್ನೆಗೆ ಉತ್ತರ ನೀಡಲು ಜೇಮ್ಸ್ ಬ್ರೈಸರಿಗಿಂತ ಇನ್ನಾರೂ ಸಮರ್ಥರಲ್ಲ. ಪವಿತ್ರ ರೋಮನ್ ಸಾಮ್ರಾಜ್ಯದ ಸತ್ವ ಮತ್ತು ರೋಮನ್ ಸಾಮ್ರಾಜ್ಯಗಳಲ್ಲಿದ್ದ ವ್ಯತ್ಯಾಸಗಳ ಚರ್ಚೆ ಮಾಡುವಾಗ ಇಂತಹದೇ ಪ್ರಶ್ನೆಯನ್ನು ಅವರು ಪರಿಶೀಲಿಸಬೇಕಾಯಿತು. ವಿವಿಧ ಬಗೆಯ ಜನರ ನಡುವೆ ರಾಜಕೀಯ ಏಕತೆಯನ್ನುಂಟು ಮಾಡುವಲ್ಲಿ ಯಾವುದೇ ಚಕ್ರಾಧಿಪತ್ಯವಿದ್ದರೆ ಅದೇ ರೋಮನ್ ಚಕ್ರಾಧಿಪತ್ಯ. ಬ್ರೈಸರ ಮಾತುಗಳನ್ನು ಸಂಕ್ಷಿಪ್ತದಲ್ಲಿ ಹೇಳಬೇಕೆಂದರೆ: ರೋಮ್‌ನ ನಾಗರಿಕತ್ವವನ್ನು ಹಂತ ಹಂತವಾಗಿ ಸಂಸ್ಥಾಪಕ ವಸಾಹತುಗಳಿಗೆ ವಿಸ್ತರಿಸುವುದು, ಸಮಾನವಾದ ಮತ್ತು ಸಮಾನತೆಯನ್ನುಂಟುಮಾಡುವ ರೋಮನ್ ಕಾಯ್ದೆಯ ಜಾರಿ, ಎಲ್ಲಾ ಪ್ರಜೆಗಳ ಮೇಲೂ ಸರ್ಕಾರದ ಸಮಾನ ಒತ್ತಡ, ವಾಣಿಜ್ಯ ಮತ್ತು ಗುಲಾಮರ ವ್ಯಾಪಾರಗಳಿಂದುಂಟಾದ ಜನರ ಚಲನವಲನ ಇವೆಲ್ಲವೂ ವಿವಿಧ ಬಗೆಯ ಜನರನ್ನು ಸಮೀಕರಿಸುವಲ್ಲಿ ಸಹಕಾರಿಯಾದವು. ಹೆಚ್ಚಾಗಿ ಪ್ರಾಂತ್ಯಗಳ ವಾಸಿಗಳೇ ಆಗಿದ್ದ ಚಕ್ರವರ್ತಿಗಳು ಇಟಲಿ ಅಥವ ಆ್ಯಂಟೋನಿಯ ಕಾಲದ ನಂತರ ರೋಮ್‌ನೊಡನೆ ಹೊಂದಾಣಿಕೆ ಮಾಡಿಕೊಳ್ಳಲು ಆಸಕ್ತರಾಗಿರಲಿಲ್ಲ. ಪ್ರತಿಯೊಬ್ಬ ಪ್ರಜೆಗೂ ಜೀವನೋಪಾಯದ ದಾರಿಯನ್ನು ಮುಕ್ತಗೊಳಿಸುವುದೇ ಅವರ ನೀತಿಯಾಗಿತ್ತು. ಅಂತಹ ಮುಕ್ತ ಅವಕಾಶಗಳ ಮೂಲಕವೇ ಅವರೂ ಸಹ ದೊಡ್ಡ ಸ್ಥಾನಗಳನ್ನೇರಿದ್ದರು. ಸ್ವತಂತ್ರ ವ್ಯಕ್ತಿಗಳ ನಡುವೆ ಕಾನೂನಿನ ಅಂತಸ್ತುಗಳ ತಾರತಮ್ಯವನ್ನು ನಿವಾರಿಸುವ ಕಾರ್ಯವನ್ನು ಅವರು ಕೈಗೊಂಡರು. ಈ ಕಾರ್ಯವನ್ನು ವಾಣಿಜ್ಯ, ಸಾಹಿತ್ಯ ಮತ್ತು ಎಲ್ಲಾ ಧರ್ಮಗಳ ಬಗ್ಗೆ ಸಹನೆ ಈಗಾಗಲೇ ಮೂಡುತ್ತಿದ್ದವು. ಜನಾಂಗೀಯ ಅಥವ ಧಾರ್ಮಿಕ ಸಂಬಂಧದ ಯಾವುದೇ ಜನಗಳ ಈ ಶಾಂತಿಯನ್ನು ಕಲಕಲಿಲ್ಲ. ಏಕೆಂದರೆ ಎಲ್ಲಾ ರಾಷ್ಟ್ರೀಯ ಭಿನ್ನತೆಗಳು ಏಕ ಚಕ್ರಾಧಿಪತ್ಯದ ಭಾವನೆಯಲ್ಲಿ ಲೀನವಾದವು.

ರೋಮನ್ ಸಾಮ್ರಾಜ್ಯ ಉಂಟುಮಾಡಿದ ಏಕತೆ ಕೇವಲ ರಾಜಕೀಯ ಏಕತೆಯಾಗಿತ್ತು. ಈ ರಾಜಕೀಯ ಏಕತೆ ಎಲ್ಲಿಯವರೆಗೆ ಉಳಿಯಿತು? ಬ್ರೈಸ್‌ರ ಮಾತುಗಳಲ್ಲಿ:

> **"ಇಂತಹ ಮಂದಗತಿಯ ಪ್ರಭಾವಗಳು ಈ ರಾಜಕೀಯ ಏಕತೆಯನ್ನುಂಟುಮಾಡುತ್ತಿದ್ದಂತೆಯೇ ಇತರ ಪ್ರಭಾವಗಳು ಅದಕ್ಕೆ ಅಪಾಯವನ್ನುಂಟುಮಾಡತೊಡಗಿದವು. ಗಡಿಗಳ ಮೇಲೆ ಹೊಸ ಶತ್ರುಗಳು ಧಾಳಿ ಮಾಡತೊಡಗಿದರು. ಆಂತರಿಕವಾಗಿ ಪ್ರತಿಯೊಬ್ಬ ಚಕ್ರವರ್ತಿಯ ಮರಣದ ತರುವಾಯ ಅಧಿಕಾರಕ್ಕಾಗಿ ನಡೆದ ಆಂತರಿಕ ಹಗರಣದಿಂದ ಇಡೀ ವ್ಯವಸ್ಥೆಯೇ ಅಭದ್ರಗೊಂಡಿತು. ವೆಲೇರಿಯನ್ನನ ಪತನವಾದ ನಂತರ ಸಾಮ್ರಾಜ್ಯದ ಈ ಪ್ರತಿಯೊಂದು ಭಾಗದಲ್ಲಿ ಸೈನ್ಯಗಳು ನಿರ್ಮಿಸಿದ ಜನರೆಲ್ಲರು ಪ್ರತ್ಯೇಕ ರಾಜರುಗಳಂತೆ ದೊಡ್ಡ ದೊಡ್ಡ ಪ್ರಾಂತ್ಯಗಳಲ್ಲಿ ಆಳತೊಡಗಿದರು. ಅವರು ರಾಜಧಾನಿಯಲ್ಲಿ ಅಧಿಕಾರದಲ್ಲಿದ್ದವರಿಗೆ ಯಾವುದೇ ರೀತಿಯ ನಿಷ್ಠೆಯನ್ನು ಹೊಂದಿರಲಿಲ್ಲ. ಡಯೋಕ್ಲೇಷಿಯನ್‌ದಲ್ಲಿ ಈ ಒಡೆದುಹೋದ ಭಾಗಗಳು ತಮ್ಮ ಎಲ್ಲಾ ರೀತಿಯ ಸಂಬದ್ಧತೆಯನ್ನು ಕಳೆದುಕೊಳ್ಳುವ ಮುನ್ನವೇ ಬದಲಾದ ಪರಿಸ್ಥಿತಿ ಹೊಸ ಪರಿಹಾರಗಳನ್ನು ಕಂಡುಹಿಡಿದ ಚತುರ ಮತ್ತು ಕ್ರಿಯಾಶೀಲನಾದ ಒಬ್ಬ ರಾಜಕುಮಾರನ ಉದಯವಾಗದಿದ್ದರೆ ಸಾಮ್ರಾಜ್ಯದ ಪಶ್ಚಿಮಾರ್ಧ ಭಾಗ ಪ್ರತ್ಯೇಕ ರಾಜ್ಯಗಳಾಗಿ ಒಡೆದು ಹೋಗುವುದನ್ನು ಎರಡುನೂರು ವರ್ಷ ಮೊದಲೇ ನಿರೀಕ್ಷಿಸಬಹುದಾಗಿತ್ತು. ಅವರು ಅಧಿಕಾರವನ್ನು ವಿಭಜಿಸಿ ಅದನ್ನು ಪ್ರಾಂತ್ಯಗಳಿಗೆ ವಹಿಸಿ ಸ್ಥಾನಿಕಗೊಳಿಸುವ ಮೂಲಕ ದುರ್ಬಲ ಹೃದಯವು ದೇಹದ ಕಟ್ಟಕಡೆಯ ಭಾಗಗಳನ್ನು ಮಿಡಿಯಲಾರದು ಎಂಬ ಅಂಶವನ್ನು ಅವನು ಅನುಸರಿಸಿದ ನೀತಿಯು**

**ಮಾನ್ಯ ಮಾಡಿತು. ಅವನು ಸಾರ್ವಭೌಮ ಅಧಿಕಾರವನ್ನು ನಾಲ್ಕು ರಾಜರುಗಳು ಮತ್ತು ನಾಲ್ಕು ರಾಜಧಾನಿಗಳಲ್ಲಿ ಸಂಯುಕ್ತ ಚಕ್ರವರ್ತಿಗಳೋಪಾದಿಯಲ್ಲಿ ಆಳುವ ರೀತಿಯಲ್ಲಿ ಅವರ ಕೈಯಲ್ಲಿತ್ತು ಮತ್ತು ಅವುಗಳನ್ನು ತನ್ನ ಮೊದಲಿನವರು ಹೀಯಾಳಿಸುತ್ತಿದ್ದ ಪೌರ್ವಾತ್ಯ ವೈಭವದಿಂದ ಸುತ್ತುವರಿಯುವ ಮೂಲಕ ಅವುಗಳಿಗೆ ಒಂದು ರೀತಿಯ ಕಾಲ್ಪನಿಕ ಬಲವನ್ನೊದಗಿಸಿದ್ದನು... ನಿಕೋಮಿಡಿಯಾದ ವೈರತ್ವ ಮತ್ತು ಪ್ರಾಮುಖ್ಯತೆಯ ಅಂಚಿನಲ್ಲಿದ್ದ ಮಿಲಾನ್ ರೋಮ್ ಸಾಮ್ರಾಜ್ಯದ ಪ್ರಭುತ್ವದ ಮೂಲ ಹಕ್ಕಿಗೆ ಅಪಾಯಕಾರಿಯಾದವು.''**

ಆದ್ದರಿಂದ ರಾಜಕೀಯ ಏಕತೆಯು ರೋಮನ್ ಸಾಮ್ರಾಜ್ಯಕ್ಕೆ ಸುಭದ್ರತೆಯನ್ನು ನೀಡಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ ಮತ್ತು ಬ್ರೈಸ್ ಹೇಳುವಂತೆ ''ಗಡಿಭಾಗಗಳ ಬರ್ಬರ ಬುಡಕಟ್ಟು ಜನಾಂಗದವರು ಧೈರ್ಯಶಾಲಿಗಳಾಗಿದ್ದರೆ ಮತ್ತು ಡಯೋಕ್ಲೇಷಿಯನ್ ಎಂಬ ಚತುರ ಮತ್ತು ಕ್ರಿಯಾಶೀಲನಾದ ರಾಜಕುಮಾರನು ಉದಯಿಸಿ ಬದಲಾದ ಪರಿಸ್ಥಿತಿಯಲ್ಲಿ ಹೊಸ ಪರಿಹಾರೋಪಾಯಗಳ ಮೂಲಕ ಚೂರಾಗಿಹೋಗಿದ್ದ ಎಲ್ಲಾ ಭಾಗಗಳನ್ನು ಒಂದುಗೂಡಿಸದೇ ಹೋಗಿದ್ದರೆ ಪಶ್ಚಿಮಾರ್ಧ(ರೋಮನ್ ಸಾಮ್ರಾಜ್ಯ)ವು ಒಡೆದು ಹೋಗುವುದನ್ನು ಎರಡುಮೂರು ವರ್ಷ ಮುಂಚೆಯೇ ನಿರೀಕ್ಷಿಸಬಹುದುದಾಗಿತ್ತು.'' ಆದರೆ ರಾಜಕೀಯ ಏಕತೆಯಿಂದ ಸುಭದ್ರವಾಗಿ ಉಳಿಯಲಾರದೇ ಹೋದ ರೋಮನ್ ಸಾಮ್ರಾಜ್ಯವು ಅಲುಗಾಡುತ್ತಿದ್ದು ಮತ್ತು ಚೂರು ಚೂರಾಗಿ ಒಡೆದು ಹೋಗುತ್ತಿದ್ದಾಗ್ಯೂ ಅದು ಪವಿತ್ರ ರೋಮನ್ ಸಾಮ್ರಾಜ್ಯ (ಹೋಲಿ ರೋಮನ್ ಎಂಪೈರ್)ವಾಗಿ ಪರಿವರ್ತನೆಯಾದ ಕಾರಣ ಇನ್ನೂ ಅನೇಕ ಶತಮಾನಗಳವರೆಗೆ ಒಂದು ಸುಸಂಬದ್ಧ ಘಟಕವಾಗಿ ಅಸ್ತಿತ್ವದಲ್ಲಿ ಉಳಿಯಿತು. ಪ್ರೊಫೆಸರ್ ಮಾರ್ವಿನ್‌ರವರು ಹೇಳುವಂತೆ:–*

**''ರೋಮನ್ ಸಾಮ್ರಾಜ್ಯದ ಏಕತೆಯು ಕೇವಲ ರಾಜಕೀಯ ಮತ್ತು ಸೈನಿಕ ಏಕತೆಯಾಗಿತ್ತು. ಅದು ನಾಲ್ಕು ನೂರರಿಂದ ಐದುನೂರು ವರ್ಷಗಳವರೆಗೆ ಮಾತ್ರ ಉಳಿದಿತ್ತು. ಕ್ಯಾಥೋಲಿಕ್ ಚರ್ಚ್‌ನ ಮೂಲಕ ಸಂಭವಿಸಿದ ಏಕತೆಯು ಧಾರ್ಮಿಕ ಮತ್ತು ನೈತಿಕ ಏಕತೆಯಾಗಿದ್ದು ಅದು ಒಂದು ಸಾವಿರ ವರ್ಷ ಉಳಿಯಿತು.''**

ಪವಿತ್ರ ರೋಮನ್ ಸಾಮ್ರಾಜ್ಯವನ್ನು ರೋಮನ್ ಸಾಮ್ರಾಜ್ಯ ಬಯಸಿದ್ದಂತೆ ಹೆಚ್ಚು ಸುಭದ್ರವನ್ನಾಗಿ ಮಾಡಿದ ಕಾರಣಗಳಾವುವು? ಬ್ರೈಸ್‌ರ ಪ್ರಕಾರ ಕ್ರಿಶ್ಚಿಯನ್ ಧರ್ಮದ ರೂಪದಲ್ಲಿದ್ದ ಒಂದೇ ಧರ್ಮ ಮತ್ತು ಕ್ರೈಸ್ತ ಚರ್ಚ್ ಒದಗಿಸಿದ್ದ ಸಾಮಾನ್ಯ ಧಾರ್ಮಿಕ ವ್ಯವಸ್ಥೆಗಳು ರೋಮನ್ ಸಾಮ್ರಾಜ್ಯ ಹೊಂದಿರದಿದ್ದ ಬಂಧನಕಾರಿ ಅಂಶವನ್ನು ಪವಿತ್ರ ರೋಮನ್ ಸಾಮ್ರಾಜ್ಯ ಹೊಂದಿದ್ದೇ ಇದಕ್ಕೆ ಕಾರಣವಾಯಿತು. ಈ ಬಂಧನಕಾರಿ ಅಂಶ ಸಾಮ್ರಾಜ್ಯದ ಜನರಿಗೆ ನೈತಿಕ ಮತ್ತು ಸಾಮಾಜಿಕ ಏಕತೆಯನ್ನೊದಗಿಸಿತು ಮತ್ತು ಒಂದೇ ಸರ್ಕಾರದಡಿಯಲ್ಲಿ ಇಂತಹ ಏಕತೆಯನ್ನು ಸಾಧಿಸಿಕೊಳ್ಳುವಂತೆ ಮಾಡಿತು.

ಒಂದೇ ಸಾಮಾನ್ಯ ಧರ್ಮದೋಪಾದಿಯಲ್ಲಿ ಏಕತೆಯ ಸಾಧನೆಯಲ್ಲಿ ಕ್ರಿಶ್ಚಿಯನ್ ಧರ್ಮದ ಪಾತ್ರವನ್ನು ಕುರಿತು ಬ್ರೈಸ್‌ರವರು ಹೀಗೆ ಹೇಳಿರುತ್ತಾರೆ:

---

* ದಿ ಯೂನಿಟಿ ಆಫ್ ವೆಸ್ಟರ್ನ್ ಸಿವಿಲಿಝೇಷನ್ (ನಾಲ್ಕನೆ ಆವೃತ್ತಿ) ಪು.೨೭

**"ಧರ್ಮದ ಮೇಲೆಯೇ ಒಂದು ರಾಷ್ಟ್ರದ ಅತ್ಯಂತ ಆಂತರಿಕ ಮತ್ತು ಗಾಢವಾದ ಜೀವನ ನಿಂತಿರುತ್ತದೆ. ದೈವತ್ವ ವಿಭಜಿತವಾಗಿರುವುದರಿಂದ, ಮನುಕುಲವೂ ವಿಭಜಿತವಾಗಿದೆ. ಅದೇ ರೀತಿ ದೈವದ ಏಕತಾ ತತ್ವವು ಈಗ ತನ್ನದೇ ಸ್ವರೂಪದಲ್ಲಿ ಮೂರ್ತಗೊಂಡ ಮನುಷ್ಯರಲ್ಲಿ ಏಕತೆಯನ್ನುಂಟುಮಾಡಿದೆ. ಪ್ರೀತಿ ಕ್ರಿಶ್ಚಿಯನ್ ಧರ್ಮದ ಮೊದಲನೆಯ ಪಾಠ. ಯಾರನ್ನು ಸಂಶಯ ಹಾಗೂ ಪೂರ್ವಗ್ರಹಗಳು ಮತ್ತು ಜನಾಂಗೀಯ ಅಭಿಮಾನಗಳು ಪ್ರತ್ಯೇಕಗೊಳಸಿದ್ದವೋ ಅಂತಹವರನ್ನು ಒಂದುಗೂಡಿಸುವುದೇ ಈ ಪ್ರೇಮ. ಧರ್ಮಶ್ರದ್ಧೆ ಹೊಂದಿದ ಎಲ್ಲರನ್ನೂ ಹೊಸ ಧರ್ಮದ ಮೂಲಕ ತನ್ನ ಅಂತರಾಳದಲ್ಲಿ ಒಂದುಗೂಡಿಸುವಂತಹ ಪವಿತ್ರ ಸಾಮ್ರಾಜ್ಯದ ರಚನೆಯಾಯಿತು. ಇದರಿಂದ ಹಳೆಯ ಮತ್ತು ಅದಕ್ಕೂ ಮುಂಚೆಯಿದ್ದ ಅಸಂಖ್ಯಾತ ರಾಜ್ಯಗಳು ಮತ್ತು ನಗರ ಗಣರಾಜ್ಯಗಳ ಮೇಲೆ ಸೀಜರ್‌ನಂತಹವರು ಹೊಂದಿದ್ದ ಪ್ರಭಾವದಂತಿದ್ದ ಬಹುದೇವತಾರಾಧನೆಯ ವಿರುದ್ಧ ಒಂದು ಸತ್ವಶಾಲಿ ಸಂಸ್ಥೆಯನ್ನು ಕಟ್ಟಿದಂತಾಯಿತು...*"**

ರೋಮನ್ ಚಕ್ರಾಧಿಪತ್ಯದ ಅಭದ್ರತೆಯ ಬಗ್ಗೆ ಮತ್ತು ಅದರ ತರುವಾಯದ ಪವಿತ್ರ ರೋಮನ್ ಚಕ್ರಾಧಿಪತ್ಯದ ಸುಭದ್ರತೆಯ ಬಗ್ಗೆ ಬ್ರೈಸ್‌ರು ಹೇಳಿರುವ ಮಾತುಗಳಿಂದ ಹಿಂದೂಸ್ತಾನವೇನಾದರೂ ಪಾಠ ಕಲಿಯುವುದಾದರೆ ಮತ್ತು ರೋಮನ್ ಚಕ್ರಾಧಿಪತ್ಯಕ್ಕೆ ರಾಜಕೀಯ ಏಕತೆಯ ಹೊರತು ಇನ್ನಾವುದೇ ಆಧಾರವಿರದಿದ್ದುದರಿಂದ ಹಾಗೂ ಪವಿತ್ರ ರೋಮನ್ ಚಕ್ರಾಧಿಪತ್ಯವು ಒಂದೇ ಧರ್ಮದಿಂದುಂಟಾದ ನೈತಿಕ ಮತ್ತು ಸಾಮಾಜಿಕ ಏಕತೆಯ ಕಾರಣ ಹೆಚ್ಚು ಸುಭದ್ರವಾಗಿತ್ತೆಂಬ ಬ್ರೈಸರ ಮಾತು ತರ್ಕಬದ್ಧವಾಗಿದ್ದು ಅದು ಮಾನವರ ಅನುಭವವನ್ನು ಒಳಗೊಂಡಿದ್ದಾಗಿದ್ದರೆ ಹಿಂದೂಗಳು ಮತ್ತು ಮುಸಲ್ಮಾನರ ನಡುವೆ ಏಕತೆ ಅಸಾಧ್ಯ. ಒಂದೇ ಸಾಮಾನ್ಯ ಧರ್ಮದ ಆಧಾರದ ಮೇಲೆ ಒಗ್ಗೂಡುವಿಕೆಯ ಶಕ್ತಿ ಇಲ್ಲವಾಗಿದೆ. ಆಧ್ಯಾತ್ಮಿಕ ದೃಷ್ಟಿಯಿಂದ ಹಿಂದೂಗಳು ಮತ್ತು ಮುಸಲ್ಮಾನರು ಪ್ರೊಟೆಸ್ಟಂಟರು ಮತ್ತು ಕ್ಯಾಥೋಲಿಕರು ಅಥವಾ ಶೈವರು ಮತ್ತು ವೈಷ್ಣವರಂತೆ ಕೇವಲ ಎರಡು ವರ್ಗಗಳು ಅಥವಾ ಎರಡು ಪಂಥದವರಾಗಿಲ್ಲ. ಅವು ಎರಡು ವಿಶಿಷ್ಟ ಜಾತಿಗಳಾಗಿವೆ. ಈ ದೃಷ್ಟಿಯಿಂದ ಹಿಂದೂ ಆಗಲೀ, ಮುಸಲ್ಮಾನರಾಗಲೀ ತಮ್ಮಲ್ಲಿರುವ ಮಾನವ ಗುಣಗಳು ತಮ್ಮಲ್ಲಿರುವ ಸಾಮಾನ್ಯ ಅಂಶಗಳೆಂದೂ ಮತ್ತು ತಾವು ಅನೇಕರಲ್ಲಿ ಮತ್ತು ಒಂದೇ ಎಂದು ತಿಳಿದುಕೊಳ್ಳುವ ಹಾಗೂ ತಮ್ಮ ನಡುವೆ ಇರುವ ವ್ಯತ್ಯಾಸಗಳು ಕೇವಲ ಆಕಸ್ಮಿಕ ಎಂಬುದನ್ನು ಅರಿತುಕೊಳ್ಳಬಲ್ಲರೆಂದು ನಿರೀಕ್ಷಿಸಲಾಗದು. ಅವರ ಅಭಿಪ್ರಾಯದಲ್ಲಿ ದೈವತ್ವವು ವಿಭಜಿತವಾಗಿದೆ ಮತ್ತು ಆ ಕಾರಣ ಅವರ ಮಾನವತ್ವವೂ ವಿಭಜಿತವಾಗಿದೆ ಮತ್ತು ಆ ಕಾರಣ ಅವರು ಪ್ರತ್ಯೇಕವಾಗಿಯೇ ಉಳಿಯಬೇಕಾಗುತ್ತದೆ. ಅವರನ್ನು ಒಂದೇ ಮಡಿಲಲ್ಲಿ ತರುವಂತಹ ಯಾವ ಅಂಶವೂ ಇಲ್ಲ.

---

* ಪವಿತ್ರ ರೋಮನ್ ಸಾಮ್ರಾಜ್ಯದ ಏಕೀಕರಣದ ಪ್ರಕ್ರಿಯೆಯಲ್ಲಿ ಕ್ರಿಶ್ಚಿಯನ್ ಚರ್ಚಿನ ಪಾತ್ರ ನಿಷ್ಕ್ರಿಯತೆಯದ್ದಾಗಿರಲಿಲ್ಲ. ಅದನ್ನು ರಚಿಸುವಲ್ಲಿ ಅದು ಕ್ರಿಯಾತ್ಮಕ ಪಾತ್ರ ವಹಿಸಿತ್ತು. ಬ್ರೈಸ್‌ರವರು ಹೇಳುವಂತೆ: "ತನ್ನ ಸುತ್ತ ಸಂಸ್ಥೆಗಳು ಒಂದಾದನಂತರ ಒಂದರಂತೆ ಪತನಗೊಳ್ಳುತ್ತಿರುವುದನ್ನು ಕಂಡು, ದೇಶಗಳು ಮತ್ತು ನಗರಗಳು ಬುಡಕಟ್ಟುಗಳಿಂದ ತೊಂದರೆಗೊಳಗಾಗುತ್ತಿರುವುದನ್ನು ಕಂಡು ಮತ್ತು ಸಂಪರ್ಕ ಸೌಲಭ್ಯಗಳನ್ನು ಕಳೆದುಕೊಳ್ಳುತ್ತಿದ್ದ ಕ್ರಿಶ್ಚಿಯನ್ ಚರ್ಚ್ ಧಾರ್ಮಿಕ ವ್ಯವಸ್ಥೆಯನ್ನು ಸುಲಭಗೊಳಿಸುವ ಮೂಲಕ ಮತ್ತು ಎಲ್ಲಾ ಬಾಹ್ಯಬಂಧನಗಳನ್ನು ಬಿಗಿಗೊಳಿಸುವ ಮೂಲಕ ಧಾರ್ಮಿಕ ಬಾಂಧವ್ಯಗಳನ್ನು ಉಳಿಸುವ ಪ್ರಯತ್ನ ಮಾಡಿತು. ಧರ್ಮಶ್ರದ್ಧೆ ಇನ್ನೂ ಶಕ್ತಿಯುತವಾಗಿತ್ತು. ಸತ್ಯ ಏಕವಾಗಿರುವುದರಿಂದ ಅದರಲ್ಲಿ ನಂಬುಗೆ ಇವರೆಲ್ಲರನ್ನು ಒಂದು ಸಂಘಟನೆಯಲ್ಲಿ ತರುವುದರ ಮೂಲಕ ಅದನ್ನು ರಕ್ಷಿಸಬಹುದು. ಒಂದೇ ಭಕ್ತವೃಂದವಿದ್ದು ಅದಕ್ಕೆ ಒಬ್ಬನೇ ರಕ್ಷಕನಿದ್ದಾನೆ.

ಸಾಮಾಜಿಕ ಏಕತೆ ಇರದೆ ರಾಜಕೀಯ ಏಕತೆಯನ್ನು ಸಾಧಿಸುವುದು ಕಷ್ಟ. ಸಾಧಿಸಿದಾಗ್ಯೂ ಅದು ಬೇಸಿಗೆಯ ಸಸಿಯಂತೆ ಅಭದ್ರ. ಅದು ಬಿರುಗಾಳಿಯಿಂದ ಯಾವಾಗಲಾದರೂ ಬುಡ ಮೇಲಾಗಬಹುದು. ಕೇವಲ ರಾಜಕೀಯ ಏಕತೆಯನ್ನು ಹೊಂದಿದ ಹಿಂದೂಸ್ತಾನ ಒಂದು ದೇಶವಾಗಬಹುದು. ಆದರೆ ದೇಶವಾದ ಮಾತ್ರಕ್ಕೆ ಅದು ರಾಷ್ಟ್ರವಾಗಲಾರದು ಮತ್ತು ರಾಷ್ಟ್ರವಾಗದ ದೇಶ ಅಸ್ತಿತ್ವದ ಹೋರಾಟದಲ್ಲಿ ಯಶಸ್ವಿಯಾಗುವ ಸಾಧ್ಯತೆ ಕಡಿಮೆ. ಆಧುನಿಕ ಕಾಲದ ಅತ್ಯಂತ ಗತಿಶೀಲ ಶಕ್ತಿಯಾಗಿರುವ ರಾಷ್ಟ್ರೀಯತೆ ಮಿಶ್ರ ರಾಜ್ಯಗಳ ವಿನಾಶಕಾರಿ ಮತ್ತು ವಿಚ್ಛಿದ್ರಕಾರಿ ಶಕ್ತಿಗಳಿಂದ ಮುಕ್ತವಾಗುವ ಪ್ರಯತ್ನದಲ್ಲಿವೆಯೋ ಅಲ್ಲಿ ಇದು ಸತ್ಯ ಸಂಗತಿ. ಆದ್ದರಿಂದ ಮಿಶ್ರ ದೇಶಗಳಿಗೆ ಹೊರಗಡೆಯ ದಾಳಿಗಿಂತ ಹೆಚ್ಚಾಗಿ ಆಂತರಿಕವಾಗಿ ಅವರ ಇಚ್ಛೆಗೆ ವಿರೋಧವಾಗಿ ಚೂರುಚೂರಾದ, ನಿರ್ಬಂಧಕ್ಕೊಳಗಾದ ಮತ್ತು ತುಳಿಯಲ್ಪಟ್ಟ ರಾಷ್ಟ್ರೀಯತೆಗಳು ತಲೆ ಎತ್ತುವುದರಿಂದ ಹೆಚ್ಚು ಅಪಾಯ ಒದಗುತ್ತದೆ. ಪಾಕಿಸ್ತಾನವನ್ನು ವಿರೋಧಿಸುವವರು ಇಂತಹ ಅಪಾಯವನ್ನು ಗಮನಿಸಬೇಕಲ್ಲದೇ ತುಳಿತಕ್ಕೊಳಗಾದ ರಾಷ್ಟ್ರೀಯ ಭಾವನೆಗಳು ದಂಡನೆಗೊಳಗಾಗದೇ ಮಿಶ್ರದೇಶವನ್ನು ಒಡೆದು ತಮಗಾಗಿ ಪ್ರತ್ಯೇಕ ನಾಡನ್ನು ಸ್ಥಾಪಿಸಿಕೊಳ್ಳುವ ಪ್ರಯತ್ನವು ಖಂಡನೀಯವಾಗಿರದೆ ಸ್ವಯಂ ನಿರ್ಣಯಾಧಿಕಾರದ ತತ್ವದಿಂದ ನೈತಿಕ ಸಮರ್ಥನೆಯನ್ನು ಪಡೆದುಕೊಳ್ಳುತ್ತದೆ.

◆

## ಅಧ್ಯಾಯ ೨೪

# ಪಾಕಿಸ್ತಾನ : ಮುಸ್ಲಿಂ ಪರ್ಯಾಯ

ಪಾಕಿಸ್ತಾನಕ್ಕೆ ಪರ್ಯಾಯ ತಮ್ಮಲ್ಲಿ ಇರುವುದಾಗಿ ಹಿಂದೂಗಳು ಹೇಳುತ್ತಾರೆ. ಮುಸ್ಲಿಮರಿಗೂ ಪಾಕಿಸ್ತಾನಕ್ಕೆ ಪರ್ಯಾಯವಿದೆಯೆ? ಹಿಂದೂಗಳು ಹೌದೆಂದರೆ, ಮುಸ್ಲಿಮರು ಇಲ್ಲವೆನ್ನುತ್ತಾರೆ. ಪಾಕಿಸ್ತಾನಕ್ಕೆ ಪರ್ಯಾಯವೆಂಬ ಮುಸ್ಲಿಮರ ಪ್ರಸ್ತಾಪ, ಈಗಾಗಲೇ ಕೋಮುತೀರ್ಪಿನ ರೀತ್ಯ ಪಡೆದುಕೊಂಡಿರುವ ಕೋಮು ಲಾಭಗಳ ಜತೆಗೆ ಮತ್ತಷ್ಟನ್ನು ಗಿಟ್ಟಿಸಿಕೊಳ್ಳುವ ಹವಣಿಕೆಯಷ್ಟೆ ಎಂಬುದು ಹಿಂದೂಗಳ ಅನಿಸಿಕೆ. ಆದರೆ ಇದನ್ನು ಮುಸ್ಲಿಮರು ನಿರಾಕರಿಸುತ್ತಾರೆ. ಅವರಿಗೆ ಪಾಕಿಸ್ತಾನಕ್ಕೆ ಸರಿಸಾಟಿಯಾದುದು ಬೇರೊಂದಿಲ್ಲ. ಆದುದರಿಂದ ಅವರ ಅಪೇಕ್ಷೆ ಪಾಕಿಸ್ತಾನವೇ ಹೊರತು ಅದಕ್ಕೆ ಬದಲಾಗಿ ಬೇರೇನೂ ಅಲ್ಲ. ಹೀಗಾಗಿ ಮುಸಲ್ಮಾನರು ಪಾಕಿಸ್ತಾನವನ್ನೇ ಹಂಬಲಿಸುತ್ತಿದ್ದಾರೆ ಮತ್ತು ಅದನ್ನು ಪಡೆಯುವ ಅಚಲ ನಿರ್ಧಾರ ಅವರದು. ಹಿಂದೂಗಳು, ಪರ್ಯಾಯವೊಂದರ ಭರವಸೆಯನ್ನು ಕೇವಲ ನಿರೀಕ್ಷೆಯಲ್ಲಿ ತಲ್ಲೀನರಾಗಿ ಇಟ್ಟುಕೊಂಡಿದ್ದಾರೆ. ಮುಸ್ಲಿಮರ ಆಟ ಏನು ಎಂದು ಊಹಿಸುವಷ್ಟು ಚಾಣಾಕ್ಷತೆ ಹಿಂದೂಗಳಿಗಿದ್ದರೂ, ಪಾಕಿಸ್ತಾನಕ್ಕೆ ಮುಸ್ಲಿಮರ ಪರ್ಯಾಯವನ್ನು ಸ್ವಾಗತಿಸಲು ಇವರು ಸಿದ್ಧರಿದ್ದಾರೆಯೆ? ಈ ಪ್ರಶ್ನೆಗೆ ಉತ್ತರವು ಸಹಜವಾಗಿಯೇ ಮುಸ್ಲಿಂ ಪರ್ಯಾಯ ಯಾವುದು? ಎಂಬುದನ್ನು ಅವಲಂಬಿಸಿದೆ.

ಪಾಕಿಸ್ತಾನಕ್ಕೆ ಮುಸ್ಲಿಂ ಪರ್ಯಾಯ ಯಾವುದು? ಅದು ಯಾರಿಗೂ ಗೊತ್ತಿಲ್ಲ. ಪ್ರಾಯಶಃ ಮುಸ್ಲಿಮರ ಗಮನದಲ್ಲಿದ್ದಿರಬಹುದು. ಅವರು ಅದನ್ನು ಬಹಿರಂಗಪಡಿಸಿಲ್ಲ. ಹಿಂದೂಗಳು ಮತ್ತು ಮುಸ್ಲಿಮರು ಭವಿಷ್ಯದಲ್ಲಿ ಪರಸ್ಪರ ಸಹಕರಿಸುವ ಬಗೆಗೆ ಈ ಪ್ರತಿಸ್ಪರ್ಧಿ ಪಕ್ಷಗಳು ಕಲೆತು ವಿಚಾರಮಾಡಿ ಒಂದು ತೀರ್ಮಾನಕ್ಕೆ ಬರುವ ದಿನದವರೆಗೂ ಅವರು ಅದನ್ನು ಬಹಿರಂಗಪಡಿಸುವುದೂ ಇಲ್ಲ. ಪೂರ್ವಭಾವೀ ಎಚ್ಚರಿಕೆಯ ಸುಳಿವು, ಪೂರ್ವಭಾವೀ ಸಿದ್ಧತೆಗೆ ದಾರಿ, ಆದುದರಿಂದ, ಸಂಭವನೀಯ ಮುಸ್ಲಿಂ ಪರ್ಯಾಯದ ಆಘಾತವನ್ನು ತಾಳಿಕೊಳ್ಳಲು ಹಿಂದೂಗಳು ಏನಾದರೂ ವಿಚಾರ ಮಾಡುವ ಅಗತ್ಯವಿದೆ. ಏಕೆಂದರೆ ಪರ್ಯಾಯ ವ್ಯವಸ್ಥೆ ಕೋಮು ತೀರ್ಪಿಗಿಂತ ಉತ್ತಮವಾಗಿರಲು ಸಾಧ್ಯವಿಲ್ಲ; ಅದಕ್ಕಿಂತ ಖಂಡಿತವಾಗಿಯೂ ಬಹುಪಾಲು ಆತಂಕಕಾರಿಯಾದುದಾಗಿರುತ್ತದೆ.

ಸರಿಯಾದ ಯಾವುದೇ ಪರ್ಯಾಯ ಪ್ರಸ್ತಾಪವಿಲ್ಲದಿರುವಾಗ, ಯಾರಾದರೂ ಮಾಡಬಹುದಾದ್ದು ಬರೀ ಊಹೆ ಅಷ್ಟೆ. ಈಗ ಒಬ್ಬನ ಊಹೆ ಇನ್ನೊಬ್ಬನ ಊಹೆಯಷ್ಟೇ ಸರಿಯಾದುದಾಗಿರಬಹುದು. ಯಾವುದು ನಂಬಿಕೆಗೆ ಅರ್ಹ ಎಂಬುದನ್ನು ಆಯ್ಕೆಮಾಡುವ ಹೊಣೆಗಾರಿಕೆ ಸಂಬಂಧಿತ ಪಕ್ಷಕಾರನಿಗೆ ಬಿಟ್ಟದ್ದು. ಸಂಭವನೀಯ ಊಹೆಗಳಲ್ಲಿ, ಮುಸ್ಲಿಮರು ತಮ್ಮ ಪರ್ಯಾಯವೆಂದು ಪ್ರಸ್ತಾಪಿಸಬಹುದಾದುದರ ಬಗೆಗೆ ನನ್ನ ಊಹೆ ಹೀಗಿದೆ:

"ಭಾರತದ ಭವಿಷ್ಯಕ್ಕೆ ಸಂವಿಧಾನ ಒದಗಿಸಿ ಕೊಡಲೇಬೇಕಾದುದೇನೆಂದರೆ:

(i) ಕೇಂದ್ರ ಹಾಗೂ ಪ್ರಾಂತ ವಿಧಾನಮಂಡಲದಲ್ಲಿ ಪ್ರತ್ಯೇಕ ಮತದಾರರ ಸಮುದಾಯದ ಮೂಲಕ ಮುಸ್ಲಿಮರಿಗೆ ಶೇ.೫೦ ಪ್ರಾತಿನಿಧ್ಯವಿರಬೇಕು.

(ii) ಕೇಂದ್ರ ಮತ್ತು ಪ್ರಾಂತ ಕಾರ್ಯಕಾರಿಯಲ್ಲಿ ಶೇ.೫೦ ಮುಸ್ಲಿಮರಿರಬೇಕು.

(iii) ಸರ್ಕಾರೀ ಸೇವೆಯ ಶೇ.೫೦ ಹುದ್ದೆಗಳನ್ನು ಮುಸ್ಲಿಮರಿಗೆ ಕೊಡಬೇಕು.

(iv) ಸೇನಾಪಡೆಯ ಉನ್ನತ ಶ್ರೇಣಿ ಹಾಗೂ ಅಧಿಕಾರಿಗಳಲ್ಲಿ ಸಮಪಾಲು ಮುಸ್ಲಿಮರಿಗೆ ಇರಬೇಕು.

(v) ಸಾರ್ವಜನಿಕ ಉದ್ದೇಶಗಳಿಗಾಗಿ ರಚಿಸಲ್ಪಡುವ ಎಲ್ಲ ಪರಿಷತ್ತು ಮತ್ತು ಆಯೋಗಗಳಲ್ಲಿ ಮುಸ್ಲಿಮರಿಗೆ ಶೇ.೫೦ ಪ್ರಾತಿನಿಧ್ಯವಿರಬೇಕು.

(vi) ಭಾರತ ಭಾಗವಹಿಸುವ ಎಲ್ಲ ಅಂತರರಾಷ್ಟ್ರೀಯ ಸಂಸ್ಥೆಗಳಲ್ಲಿ ಮುಸ್ಲಿಮರಿಗೆ ಶೇ.೫೦ ಪ್ರಾತಿನಿಧ್ಯವಿರಬೇಕು.

(vii) ಪ್ರಧಾನಿ ಹಿಂದೂ ಆದರೆ, ಉಪಪ್ರಧಾನಿ ಮುಸ್ಲಿಂ ಆಗಬೇಕು.

(viii) ಮಹಾ ದಂಡನಾಯಕ ಹಿಂದೂ ಆದರೆ, ಉಪ ಮಹಾದಂಡನಾಯಕ ಮುಸ್ಲಿಂ ಆಗಬೇಕು.

(ix) ವಿಧಾನಮಂಡಲದ ಶೇ.೬೬ ಮುಸ್ಲಿಂ ಸದಸ್ಯರ ಸಮ್ಮತಿ ಇಲ್ಲದೆ ಪ್ರಾಂತಗಡಿಗಳಲ್ಲಿ ಯಾವುದೇ ಬದಲಾವಣೆ ಮಾಡಕೂಡದು.

(x) ವಿಧಾನ ಮಂಡಲದ ಶೇ.೬೬ ಮುಸ್ಲಿಂ ಸದಸ್ಯರ ಸಮ್ಮತಿ ಇಲ್ಲದೆ ಒಂದು ಮುಸ್ಲಿಂ ರಾಷ್ಟ್ರದ ವಿರುದ್ಧ ಜರುಗಿಸುವ ಯಾವುದೇ ಕ್ರಮ ಅಥವಾ ಒಪ್ಪಂದ ಊರ್ಜಿತಗೊಳ್ಳುವುದಿಲ್ಲ.

(xi) ವಿಧಾನ ಮಂಡಲದ ಶೇ.೬೬ ಮುಸ್ಲಿಂ ಸದಸ್ಯರ ಸಮ್ಮತಿ ಇಲ್ಲದೆ, ಮುಸ್ಲಿಮರ ಸಂಸ್ಕೃತಿ, ಧರ್ಮ ಅಥವಾ ಧಾರ್ಮಿಕ ಚಟುವಟಿಕೆಗಳಿಗೆ ಧಕ್ಕೆ ತರುವಂಥ ಯಾವುದೇ ಕಾನೂನನ್ನು ಜಾರಿಗೊಳಿಸಕೂಡದು.

(xii) ಉರ್ದು ಭಾರತದ ರಾಷ್ಟ್ರ ಭಾಷೆಯಾಗಬೇಕು.

(xiii) ವಿಧಾನಮಂಡಲದ ಶೇ.೬೬ ಮುಸ್ಲಿಂ ಸದಸ್ಯರು ಸಮ್ಮತಿಸಿ ಅನುಮತಿಸದ ಹೊರತು ಗೋಹತ್ಯೆ ಅಥವಾ ಇಸ್ಲಾಂ ಮತ ಪ್ರಚಾರ, ಮತಾಂತರವನ್ನು ನಿಷೇಧಿಸುವಂಥ ಅಥವಾ ನಿರ್ಬಂಧಿಸುವಂಥ ಯಾವುದೇ ಕಾನೂನನ್ನು ಜಾರಿಗೊಳಿಸಕೂಡದು.

(xiv) ಸಂವಿಧಾನ ಬದಲಾವಣೆಗೆ ಬೇಕಾದ ಬಹುಮತದಲ್ಲಿ ಶೇ.೬೬ ಮುಸ್ಲಿಂ ಸದಸ್ಯರ ಬಹುಮತವಿಲ್ಲದೆ ವಿಧಾನಮಂಡಲದಲ್ಲಿ ಯಾವುದೇ ಸಂವಿಧಾನ ತಿದ್ದುಪತಿ ಊರ್ಜಿತಗೊಳ್ಳುವುದಿಲ್ಲ.

ಈ ನನ್ನ ಊಹೆ, ಬರೀ ಕಲ್ಪನೆಯ ಕೂಸಲ್ಲ. ಇಷ್ಟವಿಲ್ಲದಿದ್ದರೂ ಪಾಕಿಸ್ತಾನವನ್ನು ಒಪ್ಪಿಕೊಳ್ಳುವಂಥ ಆತುರದ ಕ್ರಮಕ್ಕೆ ಹಿಂದೂಗಳನ್ನು ದೂಡಿ ಭೀತರನ್ನಾಗಿಸುವ ಯಾವ ಅಪೇಕ್ಷೆಯೂ ಇಲ್ಲಿಲ್ಲ. ನಿಜ ಹೇಳಬೇಕೆಂದರೆ, ಇದು ಮುಸ್ಲಿಮರ ಕಡೆಯಿಂದ ಲಭ್ಯವಿರುವ ಸಾಮಗ್ರಿಯನ್ನು ಆಧಾರವಾಗಿಟ್ಟುಕೊಂಡು ರೂಪಿಸಿದ ಒಂದು ಬುದ್ಧಿವಂತ ನಿರೀಕ್ಷೆಯಷ್ಟೆ.

ಮುಸ್ಲಿಂ ಪರ್ಯಾಯ ಏನು ಎಂಬುದರ ಒಂದು ಇಂಗಿತವನ್ನು ಘನತೆವೆತ್ತ ಹೈದರಾಬಾದ್ ನಿಜಾಮ ತನ್ನ ಅಧಿಪತ್ಯದಲ್ಲಿ ತಂದ ಸಂವಿಧಾನ ಪರಿಷ್ಕರಣ ಉದ್ದೇಶದಲ್ಲಿ ಕಂಡುಕೊಳ್ಳಬಹುದು.

ಹೈದರಾಬಾದ್‌ನ ಪರಿಷ್ಕರಣೆಗಳ ಕಾರ್ಯಯೋಜನೆ ಒಂದು ಬಗೆಯ ಹೊಸ ಆವಿಷ್ಕಾರ ವ್ಯವಸ್ಥೆ. ಇದು ಬ್ರಿಟಿಷ್ ಆಳ್ವಿಕೆಯ ಭಾರತದಲ್ಲಿ ರೂಢಿಯಲ್ಲಿದ್ದ ಜಾತಿ ಪ್ರಾತಿನಿಧ್ಯ ವ್ಯವಸ್ಥೆಯನ್ನು ತಿರಸ್ಕರಿಸಿತು. ಅದರ ಸ್ಥಾನದಲ್ಲಿ ವೃತ್ತಿ ಪ್ರಾತಿನಿಧ್ಯತೆಯನ್ನು ಪ್ರತಿಷ್ಠಾಪಿಸಿತು. ಅಂದರೆ ವರ್ಗಗಳು ಮತ್ತು ಕಸುಬುಗಳಿಗೆ ಪ್ರಾತಿನಿಧ್ಯವನ್ನು ಕೊಡಲಾಯಿತು. ೭೦ ಸದಸ್ಯರ ಒಂದು ವಿಧಾನ ಮಂಡಲದ ರಚನೆ ಹೀಗಿರಬೇಕು.

| **ಚುನಾಯಿತ ಸದಸ್ಯರು** | | | **ನಾಮಕರಣದಗೊಂಡ ಸದಸ್ಯರು** | | |
|---|---|---|---|---|---|
| ವ್ಯವಸಾಯ | | ೧೨ | ಇಲ್ಲಾಕರು | | ೮ |
| ಪಟ್ಟಿದಾರರು | ... ೮ | | ಸರ್ಫ್–ಇ–ಖಾಸ್ | ... ೨ | |
| ಗುತ್ತಿಗೆದಾರರು | ... ೪ | | ಪೈಗಾಸ್ | ... ೩ | |
| ಸ್ತ್ರೀಯರು | | ೧ | ಪೇಶ್ಕರಿ | ... ೧ | |
| ಪದವೀಧರರು | | ೧ | ಸಾಲಾರ್‌ಜಂಗ್ | ... ೧ | |
| ವಿಶ್ವವಿದ್ಯಾಲಯ | | ೧ | ಸಮಸ್ಥಾನ್ಸ್ | ... ೧ | |
| ಜಾಗೀರ್‌ದಾರರು | | ೨ | ಅಧಿಕಾರಿಗಳು | | ೧೮ |
| ಮಾಸ್‌ದಾರರು | | ೧ | ಗ್ರಾಮೀಣ ಕಲೆಗಳು ಮತ್ತು ಕಸುಬುಗಳು | | ೧ |
| ವೈದ್ಯಕೀಯ | | ೨ | ಹಿಂದುಳಿದ ವರ್ಗಗಳು | | ೧ |
| ಪಾಶ್ಚಾತ್ಯ | ... ೧ | | ಪ್ರಾತಿನಿಧ್ಯರಹಿತ ಸಣ್ಣವರ್ಗಗಳು | | ೩ |
| ಪ್ರಾಚ್ಯ | ... ೧ | | ಇತರೆ | | ೬ |
| ಬೋಧನೆ | | ೧ | | | |
| ವಾಣಿಯ | | ೧ | | | |
| ಉದ್ದಿಮೆಗಳು | | ೨ | | | |
| ಬ್ಯಾಂಕಿಂಗ್ | | ೨ | | | |
| ಸ್ಥಳೀಯ (ದೇಶೀಯ) | ... ೧ | | | | |
| ಸಹಕಾರ ಮತ್ತು ಕೂಡುಬಂಡವಾಳ | ... ೧ | | | | |
| ಸಂಘಟಿತ ದುಡಿಮೆ | | ೧ | | | |
| ಹರಿಜನ | | ೧ | | | |
| ಜಿಲ್ಲಾ ಪುರಸಭೆಗಳು | | ೧ | | | |
| ನಗರ ಪಾಲಿಕೆ | | ೧ | | | |
| ಗ್ರಾಮೀಣ ಮಂಡಳಿಗಳು | | ೧ | | | |
| **ಒಟ್ಟು** | | **೩೩** | **ಒಟ್ಟು** | | **೩೭** |

ಈ ವೃತ್ತಿ ಯೋಜನಾ ಪ್ರಾತಿನಿಧ್ಯ, ಜಾತಿಪ್ರಾತಿನಿಧ್ಯಕ್ಕಿಂತ ಮಿಗಿಲಾದ ಅನ್ಯೋನ್ಯತೆಯನ್ನು ಅನೇಕ ವರ್ಗಗಳ ಮತ್ತು ಇತರ ವಿಭಾಗಗಳ ನಡುವೆ ಉಂಟುಮಾಡುತ್ತದೆ ಎಂಬುದೂ ಸಂಶಯಾಸ್ಪದವೇ. ಜೊತೆಗೆ ಪ್ರಸಕ್ತ ಸಾಮಾಜಿಕ ಹಾಗೂ ಧಾರ್ಮಿಕ ವಿಭಾಗಗಳಲ್ಲಿ ನಿರಂತರಗೊಳಿಸಲು ಹೋಗಿ, ವರ್ಗೀಯಭಾವನೆಗೆ ಒತ್ತು ಕೊಡುವ ಮೂಲಕ ವರ್ಗಸಂಘರ್ಷಕ್ಕೆ ಸುಲಭವಾಗಿ ದಾರಿ ಮಾಡಿಕೊಡಬಹುದು. ಈ ಯೋಜನೆ ನಿರುಪದ್ರವಿ ಎಂದು ತೋರಿದರೂ ಅದರ ನಿಜವಾದ ಬಣ್ಣ ಬಯಲಾಗುವುದು. ಪ್ರತಿಯೊಂದು ವರ್ಗವೂ ತನ್ನ ಜನಸಂಖ್ಯೆಗನುಗುಣವಾದ ಪ್ರಾತಿನಿಧ್ಯಕ್ಕಾಗಿ ಒತ್ತಾಯಿಸಿದಾಗ, ಅದು ಹಾಗಿರಲಿ, ವೃತ್ತಿ

ಪ್ರಾತಿನಿಧ್ಯವೊಂದೇ ಹೈದರಾಬಾದ್ ಯೋಜನಾ ಪರಿಷ್ಕರಣಗಳ ಗಣನಾರ್ಹ ಅಂಶವಲ್ಲ. ಈ ಯೋಜನೆಯ ಬಹಳ ಮುಖ್ಯವಾದ ಅಂಶವೆಂದರೆ, ಹೈದರಾಬಾದ್‌ನ ಹೊಸ ವಿಧಾನಮಂಡಲದಲ್ಲಿ ಹಿಂದೂಗಳು ಮತ್ತು ಮುಸ್ಲಿಮರ ನಡುವೆ ಸ್ಥಾನಗಳನ್ನು ವಿವರಿಸುವ ಒಂದು ಪ್ರಸ್ತಾವನೆ. ಘನತೆವೆತ್ತ ನಿಜಾಮ್ ಸುಲ್ತಾನರು ಅನುಮೋದಿಸಿರುವ ಈ ಯೋಜನೆಯಲ್ಲಿ ಜಾತಿ ಪ್ರಾತಿನಿಧ್ಯವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿಲ್ಲ. ವೃತ್ತಿ ಪ್ರಾತಿನಿಧ್ಯದೊಟ್ಟಿಗೆ ಇದನ್ನು ಉಳಿಸಿಕೊಳ್ಳಲಾಗಿದೆ. ಜಂಟಿ ಮತದಾರರ ಸಮುದಾಯಗಳ ಮೂಲಕ ಇದನ್ನು ನಿರ್ವಹಿಸಬೇಕು. ಆದರೆ "ಎರಡು ಬಹುಸಂಖ್ಯಾತ ಕೋಮುಗಳಿಗೆ" ಸಮಾನ ಪ್ರಾತಿನಿಧ್ಯವಿರಬೇಕು. ವಿಧಾನ ಮಂಡಲವೂ ಸೇರಿದಂತೆ ಎಲ್ಲ ಚುನಾಯಿತ ಸಂಸ್ಥೆಗಳಿಗೆ[೧] ಯಾವುದೇ ಅಭ್ಯರ್ಥಿ ತನ್ನ ಸಮುದಾಯದ ಸದಸ್ಯರ ಶೇ.೪೦ರಷ್ಟು ಮತವನ್ನು ಗಳಿಸದೆ ಜಯಶಾಲಿಯಾಗುವಂತಿಲ್ಲ. ಸಮಾನ ಪ್ರಾತಿನಿಧ್ಯದ ಈ ತತ್ವ, ಅವರ ಜನಸಂಖ್ಯೆ[೨] ಏನೇ ಇರಲಿ, ಹಿಂದೂಗಳ ಮತ್ತು ಮುಸ್ಲಿಮರ ಚುನಾವಣಾಂಗಗಳಿಗೆ ಮಾತ್ರವಲ್ಲ, ಚುನಾಯಿತರಾಗುವ ಇಲ್ಲವೇ ನಾಮಕರಣಗೊಳ್ಳುವ ಎರಡೂ ಬಗೆಯ ಸದಸ್ಯರಿಗೂ ಅನ್ವಯವಾಗುವಂಥದು.

ಈ ಸಮಾನ ಪ್ರಾತಿನಿಧ್ಯ ಸಿದ್ಧಾಂತ ಸಮರ್ಥನೆಯ ಹಿನ್ನೆಲೆಯಲ್ಲಿ ಹೀಗೆ ಹೇಳಲಾಗಿದೆ:

> **"ರಾಜ್ಯದಲ್ಲಿ ಮುಸ್ಲಿಂ ಸಮುದಾಯಗಳ ಪ್ರಾಮುಖ್ಯತೆ, ಅದರ ಚಾರಿತ್ರಿಕ ಹಾಗೂ ರಾಜಕೀಯ ಸ್ಥಾನಮಾನಗಳಿಂದಾಗಿ ಯಾವುದೇ ಕಾರಣಕ್ಕೂ ವಿಧಾನಮಂಡಲದಲ್ಲಿ ಅದರ ಅಂತಸ್ತು ಅಲ್ಪಸಂಖ್ಯಾತ ಮಟ್ಟಕ್ಕೆ ಇಳಿಯದಂತೆ ನೋಡಿಕೊಳ್ಳುವುದು ಅನಿವಾರ್ಯ."**

ತನ್ನನ್ನು ತಾನೇ ರಾಷ್ಟ್ರೀಯ ಪಕ್ಷದ ನಾಯಕನೆಂದು ಕರೆದುಕೊಳ್ಳುವ ಮೀರ್ ಅಕ್ಬರ್ ಅಲಿಖಾನ್ ಅವರು ಬ್ರಿಟಿಷ್ ಇಂಡಿಯಾದ ಹಿಂದೂ ಮುಸ್ಲಿಂ ಸಮಸ್ಯೆಯ ಇತ್ಯರ್ಥಕ್ಕಾಗಿ ರೂಪಿಸಿದ ಪ್ರಸ್ತಾವನೆ ತೀರ ಇತ್ತೀಚೆಗೆ ಪತ್ರಿಕೆ*ಗಳಲ್ಲಿ ಕಾಣಿಸಿಕೊಂಡಿದೆ. ಅವು ಹೀಗಿವೆ:–

(೧) ಭಾರತದ ಭವಿಷ್ಯದ ಸಂವಿಧಾನ ದೇಶದ ರಕ್ಷಣಾ ಸೇನೆಯ ವಿಶಾಲ ಆಸ್ತಿಭಾರದ ಮೇಲೆ ನಿಲ್ಲುವಂತಾಗಬೇಕು ಮತ್ತು ಅದು ಪ್ರಜೆಗಳ ಸೇನಾ ಒಲವಿನ ಮೇಲೆ ಸಾಕಷ್ಟು ಅವಲಂಬಿತವಾಗಬೇಕು. ಸೇನೆಯ ಬಗೆಗೆ ಮುಸ್ಲಿಮರಿಗಿರುವಷ್ಟು ಕಾಳಜಿ ಹಿಂದೂಗಳಿಗೂ ಇರಬೇಕು.

---

೧. ಸಂವಿಧಾನ ಪರಿಷ್ಕರಣ ಯೋಜನೆಗೆ ವಿಧಾನಮಂಡಲವೇ ಅಲ್ಲದೆ, ಪಂಚಾಯಿತಿಗಳು, ಗ್ರಾಮೀಣ ಮಂಡಳಿಗಳು, ಪುರಸಭೆಗಳು, ನಗರಸಭೆಗಳು ಮತ್ತು ಇತರ ಜನಾನುರಾಗಿ ಸಂಸ್ಥೆಗಳು ಒಳಪಡುತ್ತವೆ.

೨. ೧೯೩೧ರ ಜನಗಣತಿಯ ಪ್ರಕಾರ (ಬೆರಾರ್ ಬಿಟ್ಟು) ಹೈದರಾಬಾದ್ ರಾಜ್ಯದ ಜನಸಂಖ್ಯೆಯ ವಿತರಣೆ ಈ ಕೆಳಕಂಡಂತಿದೆ:–

| | | | |
|---|---|---|---|
| ಹಿಂದೂಗಳು: | ೯೬,೯೯,೬೧೫ | ಕ್ರಿಶ್ಚಿಯನ್ನರು | ೧,೫೧,೩೮೨ |
| ಅಸ್ಪೃಶ್ಯರು: | ೨೪,೭೩,೨೩೦ | ಇತರೆ: | ೫,೭೭,೨೫೫ |
| ಮುಸಲ್ಮಾನರು | ೧೫,೩೪,೬೬೬ | ಒಟ್ಟು: | ೧,೪೪,೩೬,೧೪೮ |

* ೧೯೪೦ರ ಜೂನ್ ೨೨ರ ಬಾಂಬೆ ಸೆಂಟಿನೆಲ್ ವರದಿ ನೋಡಿ. ಮೀರ್ ಅಕ್ಬರ್ ಅಲಿಖಾನ್‌ರವರು ಶ್ರೀನಿವಾಸ ಅಯ್ಯಂಗಾರ್‌ರವರೊಡನೆ ತಮ್ಮ ಪ್ರಸ್ತಾಪಗಳನ್ನು ಚರ್ಚಿಸಿರುವುದಾಗಿ ಹೇಳಿದ್ದಾರೆ. ಅಯ್ಯಂಗಾರ್‌ರವರು ಮಾಜಿ ಕಾಂಗ್ರೆಸ್ ಅಧ್ಯಕ್ಷರು.

(೨) ಇಂಡಿಯಾದ ರಕ್ಷಣಾ ಪಡೆಯನ್ನು ತಮಗೆ ವಹಿಸುವಂತೆ ಕೇಳಲು ಎರಡು ಸಮುದಾಯಗಳಿಗೂ ಪ್ರಸ್ತುತ ಅಪೂರ್ವ ಅವಕಾಶವಿದೆ. ಭಾರತದ ಸೇನೆ ಹಿಂದೂಗಳು ಮತ್ತು ಮುಸ್ಲಿಮರನ್ನು ಸಮಾನ ಸಂಖ್ಯೆಯಲ್ಲಿ ಒಳಗೊಂಡಿರಬೇಕು. ಯಾವುದೇ ಸೇನಾ ತುಕಡಿ ಪ್ರಾದೇಶಿಕ ಆಧಾರದ ಮೇಲೆ ಯಾವುದೇ ಸಮುದಾಯದೊಡನೆ ಗುರುತಿಸಲ್ಪಡಬಾರದು.

(೩) ಪ್ರಾಂತೀಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರವು ಸೇನಾ ಪರಿಜ್ಞಾನವುಳ್ಳ ವ್ಯಕ್ತಿಗಳಿಂದ ಕೂಡಿದ ಪರಿಪೂರ್ಣ ರಾಷ್ಟ್ರೀಯ ಸರ್ಕಾರಗಳಾಗಬೇಕು. ಕೇಂದ್ರದ ಮತ್ತು ಪ್ರಾಂತ ಮಂತ್ರಿಮಂಡಲಗಳಲ್ಲಿ ಹಿಂದೂ ಮತ್ತು ಮುಸ್ಲಿಂ ಮಂತ್ರಿಗಳ ಸಂಖ್ಯೆ ಸಮನಾಗಿರಬೇಕು; ಉಳಿದ ಮುಖ್ಯ ಅಲ್ಪಸಂಖ್ಯಾತ ಸಮುದಾಯಗಳಿಗೆ ಅಗತ್ಯವಿದ್ದ ಕಡೆ ಸೂಕ್ತವಾದ ವಿಶೇಷ ಪ್ರಾತಿನಿಧ್ಯವಿರಬೇಕು. ಈ ಯೋಜನೆಯ ಜಂಟಿ ಮತಕ್ಷೇತ್ರಗಳೊಡನೆ ಅತ್ಯಂತ ತೃಪ್ತಿಕರವಾಗಿ ಕಾರ್ಯ ನಿರ್ವಹಿಸಬಲ್ಲದು, ಆದರೆ ದೇಶದ ಪ್ರಸಕ್ತ ಮನಃಸ್ಥಿತಿಯಲ್ಲಿ ಪ್ರತ್ಯೇಕ ಮತಕ್ಷೇತ್ರಗಳನ್ನೇ ಮುಂದುವರಿಸಬಹುದು. ವಿಧಾನಮಂಡಲದ ಹಿಂದೂ ಮಂತ್ರಿಗಳನ್ನು ಹಿಂದೂ ಸದಸ್ಯರು ಮತ್ತು ಮುಸ್ಲಿಂ ಮಂತ್ರಿಗಳನ್ನು ಮುಸ್ಲಿಂ ಸದಸ್ಯರೂ ಆಯ್ಕೆ ಮಾಡಬೇಕು.

(೪) ಅವಿಶ್ವಾಸ ಮತ ಚಲಾವಣೆಯ ಮೂಲಕ ಮಂತ್ರಿಮಂಡಲವನ್ನು ಉರುಳಿಸಬಹುದು. ಇದು, ಇಡೀ ಮಂತ್ರಿಮಂಡಲದ ವಿರುದ್ಧ ವಿಧಾನಮಂಡಲದ ಒಟ್ಟಾರೆ ೨/೩ರಷ್ಟು ಹಿಂದೂ ಮತ್ತು ಮುಸ್ಲಿಂ ಸದಸ್ಯರುಗಳು ಬೇರೆ ಬೇರೆಯಾಗಿ ಚಲಾಯಿಸುವ ಧ್ವನಿ ಮತದಿಂದ ಸಾಧ್ಯ.

(೫) ಪ್ರತಿಯೊಂದು ಸಮುದಾಯದ ಧರ್ಮ, ಭಾಷೆ, ಗ್ರಂಥ ಮತ್ತು ಮತೀಯ ಕಾನೂನು ರಕ್ಷಿಸಲ್ಪಡಬೇಕು. ಇವನ್ನು ಹಾನಿಗೊಳಿಸುವ ಯಾವುದೇ ಶಾಸನದ ಅಥವಾ ಶಕ್ತಿಯ ವಿರುದ್ಧ ವಿಧಾನ ಮಂಡಲದಲ್ಲಿ ನಿಷೇಧಾಧಿಕಾರದ ಪಾರಮ್ಯ, ಸಂವಿಧಾನ ತಡೆ ಆಯಾ ಸಮುದಾಯವನ್ನು ಪ್ರತಿನಿಧಿಸುವ ಸದಸ್ಯರ ಬಹುಮತಕ್ಕೆ ಇರಬೇಕು. ಯಾವುದೇ ಸಮುದಾಯದ ಆರ್ಥಿಕ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸುವಂಥ ತೀರ್ಮಾನಗಳ ಅಥವಾ ಎಣಿಕೆಗಳ ವಿರುದ್ಧವೂ ಇಂಥದೇ ನಿಷೇಧಾಧಿಕಾರ ಚಲಾಯಿಸುವ ಅಧಿಕಾರ ಇರಬೇಕು.

(೬) ಆಡಳಿತದಲ್ಲಿ ಮತ್ತು ಹುದ್ದೆಗಳ ವಿತರಣೆಯಲ್ಲಿ ಪ್ರಾಯೋಗಿಕವಾಗಿ ನ್ಯಾಯ ದೊರಕಿಸಿಕೊಡಲು, ಸೇವಾಧಿಕಾರಗಳಲ್ಲಿ ಸಾಕಷ್ಟು ಸಮುದಾಯ ಪ್ರಾತಿನಿಧ್ಯತೆಗೆ ಅವಕಾಶವಿರಬೇಕು.

ಬ್ರಿಟಿಷ್ ಇಂಡಿಯಾದಲ್ಲಿ ಮುಸ್ಲಿಮರ ಮನೋಭಾವ ಯಾವ ದಿಕ್ಕಿನಲ್ಲಿ ಪ್ರವಹಿಸುತ್ತಿದೆ ಎಂಬುದರ ಕುರುಹನ್ನು ಹೈದರಾಬಾದ್ ರಾಜ್ಯದ ರಾಷ್ಟ್ರೀಯ ಪಕ್ಷದ ಒಬ್ಬ ಮುಸ್ಲಿಂ ನಾಯಕನ ಈ ಪ್ರಸ್ತಾಪ ಸೂಚಿಸುವುದಾದರೆ, ಆಗ ಪಾಕಿಸ್ತಾನಕ್ಕೆ ಸಂಭವನೀಯ ಪರ್ಯಾಯ ಏನು? ಎಂದು ನಾನು ಮಾಡಿರುವ ಊಹೆಗೆ ಮತ್ತಷ್ಟು ಒತ್ತಾಸೆ ನಿಷ್ಪನ್ನಗೊಳ್ಳುತ್ತದೆ.

## II

ಮುಸ್ಲಿಮರ ಸಮ್ಮೇಳನವೊಂದು ದೆಹಲಿಯಲ್ಲಿ ೧೯೪೦ರ ಏಪ್ರಿಲ್ ತಿಂಗಳಿನಲ್ಲಿ 'ಆಜಾದ್ ಮುಸ್ಲಿಂ ಸಮ್ಮೇಳನ' ಎಂಬ ಮಹಿಮಾನ್ವಿತ ನಾಮಧೇಯದಡಿಯಲ್ಲಿ ನಡೆದದ್ದು ನಿಜ. ಆಜಾದ್ ಸಮ್ಮೇಳನದಲ್ಲಿ ಭಾಗಿಗಳಾದ ಮುಸ್ಲಿಮರು ಬೇರಾರೂ ಅಲ್ಲ, ಮುಸ್ಲಿಂ ಲೀಗ್‌ಗೆ ಮತ್ತು ರಾಷ್ಟ್ರೀಯ ಮುಸ್ಲಿಮರಿಗೆ

ವಿರುದ್ಧವಾಗಿ ನಿಂತವರೇ. ಮೊದಲನೆಯದಾಗಿ ಪಾಕಿಸ್ತಾನದ ಬಗೆಗಿನ ಹಗೆತನ ಮತ್ತು ಎರಡನೆಯದಾಗಿ ತಮ್ಮ ಹಕ್ಕುಗಳ ರಕ್ಷಣೆಗಾಗಿ ಬ್ರಿಟಿಷ್ ಸರ್ಕಾರವನ್ನು ಅವಲಂಬಿಸುವುದು ಇವರಿಗೆ ಬೇಕಿಲ್ಲವಾಗಿ ಇವರು ಮುಸ್ಲಿಂಲೀಗ್‌ನ್ನು ವಿರೋಧಿಸಿದರು.[೧] ರಾಷ್ಟ್ರೀಯ ಮುಸಲ್ಮಾನರನ್ನು (ಹೊರಹೊರಗೆ ಕಾಂಗ್ರೆಸ್ಸಿಗರಂತೆ ಕಾಣುವವರು) ಇವರು ವಿರೋಧಿಸಿದರು. ಏಕೆಂದರೆ, ಮುಸ್ಲಿಮರ ಸಾಂಸ್ಕೃತಿಕ ಹಾಗೂ ರಾಜಕೀಯ ಹಕ್ಕುಗಳ ಬಗೆಗೆ ಅನಾದರ ತಳೆದವರೆಂದು ಅವರನ್ನು ಆಪಾದನೆಗೆ ಗುರಿಮಾಡಲಾಗಿತ್ತು.[೨]

ಇದೆಲ್ಲದರೊಂದಿಗೆ, ಆಜಾದ್ ಮುಸ್ಲಿಂ ಸಮ್ಮೇಳನವನ್ನು ಹಿಂದೂಗಳು ಒಂದು ಸ್ನೇಹಿತರ ಸಮ್ಮೇಳನವೆಂದು ಕೊಂಡಾಡಿದರು. ಆದರೆ, ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳು ಅದರ ಮತ್ತು ಲೀಗಿನ ನಡುವೆ ಆಯ್ಕೆ ಮಾಡಲು ಏನನ್ನೂ ಉಳಿಸಿರಲಿಲ್ಲ.

ಆಜಾದ್ ಮುಸ್ಲಿಂ ಸಮ್ಮೇಳನದಲ್ಲಿ ತೆಗೆದುಕೊಂಡ ನಿರ್ಣಯಗಳಲ್ಲಿ ಈ ಕೆಳಕಂಡ ಮೂರು ನಿರ್ಣಯಗಳು ಪ್ರಶ್ನಿತ ವಿಷಯಕ್ಕೆ ನೇರವಾಗಿ ಸಂಬಂಧಿಸಿರುವಂಥವು.

ಇವುಗಳಲ್ಲಿ ಮೊದಲ ನಿರ್ಣಯ ಹೀಗಿದೆ:–

**"ರಾಷ್ಟ್ರದ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯಲು ಬಯಸುವ ಭಾರತೀಯ ಮುಸ್ಲಿಮರ ಪ್ರಾತಿನಿಧ್ಯದ ಈ ಸಮ್ಮೇಳನವು, ಪ್ರತಿನಿಧಿಗಳಿಂದ ಮತ್ತು ಎಲ್ಲ ಪ್ರಾಂತಗಳ ನಿಯೋಗಿಗಳಿಂದ ಕೂಡಿದ್ದು, ದೇಶದ ಐಕ್ಯತೆಯನ್ನು ಹಾಗೂ ಮುಸ್ಲಿಂ ಸಮುದಾಯದ ಅಭಿರುಚಿಯನ್ನು ಹತ್ತಿಕ್ಕುವ ಎಲ್ಲ ಪ್ರಮುಖ ಸಮಸ್ಯೆಗಳನ್ನು ಅತ್ಯಂತ ಎಚ್ಚರಿಕೆಯಿಂದ ಪರಿಭಾವಿಸಿ ಈ ಕೆಳಕಂಡಂತೆ ಘೋಷಿಸುತ್ತದೆ:**

**ಭಾರತವು ತನ್ನದೇ ಆದ ಭೌಗೋಳಿಕ ಮತ್ತು ರಾಜಕೀಯ ಮೇರೆಗಳನ್ನು ಹೊಂದಬೇಕು. ತನ್ನೆಲ್ಲ ಪ್ರಜೆಗಳ ಸಾಮಾನ್ಯ ಗೃಹಭೂಮಿಯಾಗಬೇಕು. ಪ್ರಜೆಗಳು ಯಾವುದೇ ಜನಾಂಗಕ್ಕೆ, ಧರ್ಮಕ್ಕೆ ಸೇರಿಸಲಿ, ಭಾರತದ ಸಂಪನ್ಮೂಲಗಳಿಗೆ ಇವರೆಲ್ಲ ಜಂಟಿ ಒಡೆಯರಾಗಬೇಕು. ದೇಶದ ಮೂಲೆ ಮೂಲೆಗಳಲ್ಲಿರುವ ಮುಸ್ಲಿಮರ ಧರ್ಮ ಮತ್ತು ಸಂಸ್ಕೃತಿಯ, ಐತಿಹಾಸಿಕ ಮಹತ್ವದ ನೆಲೆಗಳಿವೆ. ಇವುಗಳನ್ನು ಮುಸ್ಲಿಮರು ತಮ್ಮ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಾರೆ, ದೇಶದ ದೃಷ್ಟಿಯಲ್ಲಿ ಪ್ರತಿಯೊಬ್ಬ ಮುಸ್ಲಿಮನೂ ಭಾರತೀಯನೆ. ನಿತ್ಯ ಜೀವನದಲ್ಲಿ ಮತ್ತು ಮಾನವೀಯ ಚಟುವಟಿಕೆಗಳಲ್ಲಿ ದೇಶವಾಸಿಗಳೆಲ್ಲರಿಗೂ ಸಾಮಾನ್ಯ ಹಕ್ಕುಗಳು ಮತ್ತು ಜವಾಬ್ದಾರಿಗಳು ಸರ್ವಸಮಾನವಾಗಿರುವಂಥವು. ಈ ಜವಾಬ್ದಾರಿಗಳು ಮತ್ತು ಸಾಮಾನ್ಯ ಹಕ್ಕುಗಳಿಂದಾಗಿ ಭಾರತದಲ್ಲಿರುವ ಎಲ್ಲ ಮುಸ್ಲಿಮರೂ ಪ್ರಶ್ನಾತೀತವಾಗಿ ಭಾರತೀಯರೆ ಆದುದರಿಂದ ದೇಶದ ಯಾವುದೇ ಭಾಗದಲ್ಲಿಯೂ ಮುಸ್ಲಿಮರು ಇತರ ಭಾರತೀಯರಂತೆ ಸರ್ಕಾರೀಯ, ಆರ್ಥಿಕ**

---

೧. ಮುಫ್ತಿ ಕಿಫಾಯತ್ ಉಲ್ಲಾ ಎಂಬ ಒಬ್ಬ ಸಮ್ಮೇಳನದ ಪ್ರಮುಖ ಸದಸ್ಯ ತನ್ನ ಭಾಷಣದಲ್ಲಿ ಹೀಗೆ ಹೇಳಿದನೆಂದು ವರದಿಯಾಗಿದೆ. "ಸ್ವಾತಂತ್ರ್ಯ ಹೋರಾಟದಲ್ಲಿ ಬೇರಾವುದೇ ಸಮುದಾಯದ ಹಿಂದೆ ತಾವಿರಲಿಲ್ಲ ಎಂಬುದನ್ನು ಅವರು ತೋರ್ಪಡಿಸಿಕೊಳ್ಳಬೇಕಿದೆ. ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಅವರು ಬ್ರಿಟಿಷ್ ಸರ್ಕಾರವನ್ನು ಅವಲಂಬಿಸಿಲ್ಲ ಎಂಬುದನ್ನು ಸ್ಪಷ್ಟಪಡಿಸಬೇಕಿದೆ. ತಮ್ಮ ಧಾರ್ಮಿಕ ಹಕ್ಕುಗಳ ರಕ್ಷಣೆಗಾಗಿ ಅಗತ್ಯವಿರುವ ಎಲ್ಲ ಸುರಕ್ಷತಾ ಕ್ರಮಗಳನ್ನು ತಾವೇ ಹಮ್ಮಿಕೊಂಡು, ಈ ನಿಟ್ಟಿನಲ್ಲಿ ಯಾವುದೇ ಪಕ್ಷವನ್ನು ಅದು ಎಷ್ಟೇ ನಡೆಸುವುದು" (ಧೀರ್ಘಕರತಾಡನ) ಹಿಂದೂಸ್ಥಾನ್ ಟೈಂಸ್, ಏಪ್ರಿಲ್ ೩೦, ೧೯೪೦.

೨. ಮೌಲಾನ್ ಹಫೀಜುಲ್ ರೆಹಮಾನ್ ಮತ್ತು ಡಾ. ಕೆ.ಎಂ.ಅಶ್ರಾಫ್ ಅವರ ಭಾಷಣಗಳನ್ನು ಹಿಂದೂಸ್ಥಾನ್ ಟೈಂಸ್‌ನ ಅದೇ ಸಂಚಿಕೆಯಲ್ಲಿ ನೋಡಿ.

**ಹಾಗೂ ಸಾರ್ವಜನಿಕ ಸೇವಾ ವ್ಯಾಪ್ತಿಯ ರಾಷ್ಟ್ರೀಯ ಚಟುವಟಿಕೆಗಳಲ್ಲಿ ಭಾಗಸ್ಥರು. ಈ ಕಾರಣದಿಂದಾಗಿಯೇ ಮುಸ್ಲಿಮರು ಇತರ ಭಾರತೀಯರಂತೆ ರಾಷ್ಟ್ರದ ಸ್ವಾತಂತ್ರ್ಯದ ಸಾಧನೆಗಾಗಿ ಯಾವುದೇ ಸಂಕಷ್ಟವನ್ನು ಎದುರಿಸಲು ಅಥವಾ ತ್ಯಾಗವನ್ನು ಮಾಡಲು ಸಮಾನ ಜವಾಬ್ದಾರಿ ಹೊತ್ತವರಾಗಿದ್ದಾರೆ. ಇದು ಸ್ವಯಂ ನಿದರ್ಶಿತ ಪ್ರಮೇಯ. ಇದರ ತಥ್ಯತೆಯನ್ನು ಸರಿಯಾಗಿ ಆಲೋಚಿಸುವ ಯಾವ ಮುಸಲ್ಮಾನನೂ ಪ್ರಶ್ನಿಸಲಾರ. ಭಾರತೀಯ ಮುಸ್ಲಿಮರ ಪರಮಧ್ಯೇಯ, ದೇಶದ ಸಂಪೂರ್ಣ ಸ್ವಾತಂತ್ರ್ಯ ಪಡೆಯುವುದು ಮತ್ತು ಮುಸ್ಲಿಮರ ಧರ್ಮ ಹಾಗೂ ಹಕ್ಕುಗಳ ರಕ್ಷಣೆ ಎಂಬುದನ್ನು ಈ ಸಮ್ಮೇಳನವು ಆಜ್ಞಾಪನೆಯಾಗಿ, ಒತ್ತಾಯಪೂರ್ವಕವಾಗಿ ಘೋಷಿಸುವುದೇ ಅಲ್ಲದೆ, ಸಾಧ್ಯವಾದಷ್ಟೇ ಶೀಘ್ರವಾಗಿ ಮುಸ್ಲಿಮರು ಈ ಗುರಿಯನ್ನು ಮುಟ್ಟಲು ಕಾತರದಿಂದ ಇರುವುದಾಗಿ ತಿಳಿಸಿದೆ. ಈ ಧ್ಯೇಯದಿಂದ ಸ್ಫೂರ್ತಿ ಪಡೆದು, ಮುಸ್ಲಿಮರು ಈ ಹಿಂದೆ ಹಲವಾರು ತ್ಯಾಗಗಳನ್ನು ಮಾಡಿದ್ದಾರೆ ಮತ್ತು ಇವುಗಳಿಗಿಂತ ಮಿಗಿಲಾದ ತ್ಯಾಗಗಳನ್ನು ಮುಂದೆಯೂ ಮಾಡಲು ಯಾವಾಗಲೂ ಸಿದ್ಧರಿದ್ದಾರೆ.**

**''ಭಾರತ ಸ್ವಾತಂತ್ರ್ಯ ಪಥದ ಅಡ್ಡಗಲ್ಲುಗಳೆಂದು ಭಾರತೀಯ ಮುಸ್ಲಿಮರ ವಿರುದ್ಧ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಮಧ್ಯವರ್ತಿಗಳು ಮತ್ತು ಇತರರು ಮಾಡಿರುವ ಆಧಾರರಹಿತ ಆರೋಪಗಳನ್ನು ಈ ಸಮ್ಮೇಳನವು ಅತ್ಯಂತ ಪ್ರಬಲವಾಗಿ ಖಂಡಿಸುತ್ತದೆ, ಜೊತೆಗೆ ಘಂಟಾಘೋಷವಾಗಿ ಅದು ತಿಳಿಯಪಡಿಸುವುದೇನೆಂದರೆ; ಮುಸ್ಲಿಮರು ಸಂಪೂರ್ಣವಾಗಿ ತಮ್ಮ ಜವಾಬ್ದಾರಿಗಳಿಗೆ ಬದ್ಧರಾಗಿರುವಂಥವರು ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಇತರರಿಗಿಂತ ಹಿಂದೆ ಬೀಳುವುದು ತಮ್ಮ ಪರಂಪರಾಗತ ಗೌರವಕ್ಕೆ ಚ್ಯುತಿ ತರುವಂಥ ಹೀನಾಯ ವಿಷಯ ಎಂದು ಭಾವಿಸಿರುವಂಥವರು.''**

ಈ ನಿರ್ಣಯದ ಮೂಲಕ, ಪಾಕಿಸ್ತಾನ ಯೋಜನೆಯನ್ನು ಅವರು ತಳ್ಳಿಹಾಕಿದ್ದಾರೆ. ಅವರ ಎರಡನೆಯ ನಿರ್ಣಯ ಹೀಗಿದೆ:–

**''ಯುವ ಮತದಾನ ಹಕ್ಕಿನಿಂದ ಆಯ್ಕೆಗೊಂಡ ಭಾರತೀಯರು ತಾವೇ ರಚಿಸುವ ಸಂವಿಧಾನ ಮಾತ್ರ ಭಾರತೀಯ ಪ್ರಜೆಗಳಿಗೆ, ಭವಿಷ್ಯದ ಭಾರತ ಸರಕಾರದಲ್ಲಿ ಅನ್ವಯವಾಗಬೇಕೆಂಬುದು ಈ ಸಮ್ಮೇಳನದ ಒಮ್ಮತ ದೃಷ್ಟಿ. ರಚಿಸಲ್ಪಡುವ ವಿಧಾನಸಭೆಯ ಮುಸ್ಲಿಂ ಸದಸ್ಯರ ಶಿಫಾರಸುಗಳ ಮೇರೆಗೆ ಮುಸ್ಲಿಮರ ಎಲ್ಲ ನ್ಯಾಯಬದ್ಧ ಹಿತಾಸಕ್ತಿಗಳನ್ನು ಸಂವಿಧಾನ ಸಂರಕ್ಷಿಸಬೇಕು. ಬೇರೆ ಸಮುದಾಯಗಳ ಪ್ರತಿನಿಧಿಗಳಿಗೆ ಅಥವಾ ಬೇರಾವುದೇ ಪೂರಕಶಕ್ತಿಗೆ ಮುಸ್ಲಿಂ ಸಂರಕ್ಷಣೆಯ ತೀರ್ಮಾನಗಳಲ್ಲಿ ತಲೆಹಾಕುವ ಅಧಿಕಾರ ಇರಕೂಡದು.''**

ಮುಸ್ಲಿಮರ ಸಂರಕ್ಷಣೆಯ ತೀರ್ಮಾನಗಳನ್ನು ಮುಸ್ಲಿಮರೇ ನಿರ್ಧರಿಸಬೇಕೆಂಬುದನ್ನು ಸಮ್ಮೇಳನದ ಈ ನಿರ್ಣಯ ಒತ್ತಿ ಹೇಳಿದೆ.

ಮೂರನೆಯ ನಿರ್ಣಯ ಹೀಗಿದೆ:

**''ಪ್ರತಿಯೊಬ್ಬ ಪ್ರಜೆ ಮತ್ತು ಸಮುದಾಯ ತೃಪ್ತ ಭಾವನೆಯನ್ನು ಹೊಂದುವಂತೆ ಭಾರತದ ಭವಿಷ್ಯ ಸಂವಿಧಾನ, ದೃಢ ಸರ್ಕಾರ ಮತ್ತು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವುದಗತ್ಯ. ಈ ನಿಟ್ಟಿನಲ್ಲಿ ಮುಸ್ಲಿಮರ**

ಹಿತಾಸಕ್ತಿಯನ್ನು ಕಾಯುವಂಥ, ಈ ಕೆಲವು ವಿಷಯಗಳಿಗೆ ಸಂಬಂಧಿಸಿದ ಅಗತ್ಯ ಯೋಜನೆಗಳನ್ನು, ಮುಸ್ಲಿಮರು ತೃಪ್ತರಾಗುವಂತೆ ಹಮ್ಮಿಕೊಳ್ಳಬೇಕು.

"ಈ ಸಮ್ಮೇಳನವು ೨೭ ಜನರನ್ನೊಳಗೊಂಡ ಒಂದು ಮಂಡಳಿಯನ್ನು ನೇಮಿಸುತ್ತದೆ. ಈ ಮಂಡಳಿಯ ಸಮಗ್ರ ತನಿಖೆ, ಸಂದರ್ಶನ ಮತ್ತು ಪರಿಶೀಲನೆಯ ನಂತರ ತನ್ನ ಶಿಫಾರಸುಗಳನ್ನು ಸಮ್ಮೇಳನದ ಮುಂದಿನ ಅಧಿವೇಶನದಲ್ಲಿಡಲು ಒಪ್ಪಿಸಬೇಕು. ಈ ಶಿಫಾರಸುಗಳನ್ನು ಬಳಸಿಕೊಂಡು ಕೋಮು ಸಮಸ್ಯೆಗೆ ಒಂದು ಸ್ಥಿರವಾದ ರಾಷ್ಟ್ರೀಯ ಪರಿಹಾರವನ್ನು ಕಂಡುಕೊಳ್ಳಲು ಇದರಿಂದ ಸಮ್ಮೇಳನಕ್ಕೆ ಸಾಧ್ಯವಾಗುತ್ತದೆ. ಎರಡು ತಿಂಗಳ ಒಳಗಾಗಿ ಈ ಶಿಫಾರಸು ಸಲ್ಲಿಸಲ್ಪಡಬೇಕು. ಮಂಡಳಿಯ ಪರಿಗಣನೆಗೆ ಒಪ್ಪಿಸಲಾದ ವಿಷಯಗಳಿವು:

"೧. ಮುಸ್ಲಿಮರ ಸಾಂಸ್ಕೃತಿಕ, ಮತೀಯ ಕಾನೂನು ಧಾರ್ಮಿಕ ಹಕ್ಕುಗಳ ರಕ್ಷಣೆ.

೨. ಮುಸ್ಲಿಮರ ರಾಜಕೀಯ ಹಕ್ಕುಗಳು ಮತ್ತು ಅವುಗಳ ರಕ್ಷಣೆ.

೩. ಸಂಯುಕ್ತ ಸರ್ಕಾರಕ್ಕೆ ತಳ್ಳಿಹಾಕಲಾಗದಂಥ ಅಗತ್ಯ ಪರಮಾಧಿಕಾರವನ್ನೊದಗಿಸುವಂಥ ಏಕಾತ್ಮಕವಲ್ಲದ ಸಂಯುಕ್ತ ಸಂವಿಧಾನವಾಗಿ ಭಾರತದ ಭವಿಷ್ಯದ ಸಂವಿಧಾನದ ರಚನೆ.

"ಮುಸ್ಲಿಮರ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಕ್ಕುಗಳು ಮತ್ತು ಸರ್ಕಾರೀ ಸೇವಾ ಹುದ್ದೆಗಳಲ್ಲಿನ ಅವರ ಪಾಲನ್ನು ಸಂರಕ್ಷಿಸುವ ಅವಕಾಶ.

ಯಾವುದೇ ಖಾಲಿ ಹುದ್ದೆಯನ್ನು ಸೂಕ್ತವಾದ ರೀತಿಯಲ್ಲಿ ತುಂಬುವ ಅಧಿಕಾರ ಮಂಡಳಿಗೆ ಸೇರಿದ್ದು. ಇತರ ಸದಸ್ಯರ ಸಹಕಾರ ತುಂಬುವ ಅಧಿಕಾರ ಮಂಡಳಿಗೆ ಸೇರಿದ್ದು. ಇತರ ಸದಸ್ಯರ ಸಹಕಾರ ಪಡೆಯುವ ಹಕ್ಕನ್ನು ಮಂಡಳಿಯು ಹೊಂದಿರುತ್ತದೆ. ಅಗತ್ಯಬಿದ್ದಲ್ಲಿ ಇತರ ಮುಸ್ಲಿಂ ಅಂಗಸಂಸ್ಥೆಗಳ ಅಥವಾ ಯಾವುದೇ ಜವಾಬ್ದಾರಿಯುತ ರಾಷ್ಟ್ರೀಯ ಸಂಸ್ಥೆಯ ಸಲಹೆ ಪಡೆಯುವ ಅಧಿಕಾರವನ್ನು ಮಂಡಳಿ ಹೊಂದಿರುತ್ತದೆ. ಮಂಡಳಿಯ ೨೭ ಸದಸ್ಯರುಗಳನ್ನು ಅಧ್ಯಕ್ಷರು ನಾಮಕರಣ ಮಾಡುತ್ತಾರೆ.

"ಸಭೆಯನ್ನು ನಡೆಸಲು ಇರಬೇಕಾದ ಸದಸ್ಯರ ಕೋರಂ ಸಂಖ್ಯೆ ಒಂಬತ್ತು

"ಈ ಸಮ್ಮೇಳನವು ಅನುಮೋದಿಸಿರುವ ನಿರ್ಣಯದ ಪ್ರಕಾರ ಚುನಾಯಿಸಲ್ಪಡುವ ವಿಧಾನಸಭೆಯ ಬೇರೆ ಬೇರೆ ಸಮುದಾಯಗಳ ಕೋಮು ಹಕ್ಕುಗಳ ಸಂರಕ್ಷಣೆಯನ್ನು ನಿರ್ಧರಿಸಬೇಕಾಗಿರುವುದರಿಂದ, ಈ ಘಟಕದ ಮುಸ್ಲಿಂ ಸದಸ್ಯರನ್ನು ಮುಸ್ಲಿಮರೇ ಚುನಾಯಿಸಬೇಕಾದ್ದು ಅಗತ್ಯ ಎಂದು ಸ್ಪಷ್ಟಪಡಿಸಲು ಸಮ್ಮೇಳನವು ಆಗ್ರಹಪಡಿಸುತ್ತದೆ."

ಮುಸ್ಲಿಮರ ಕ್ಷೇಮ ಹಾಗೂ ರಕ್ಷಣೆಗೆ ಆಜಾದ್ ಮುಸ್ಲಿಂ ಸಮ್ಮೇಳನವು ಯಾವ ಸಂರಕ್ಷಣಾ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂಬುದನ್ನು ತಿಳಿಯಲು ಮಂಡಳಿಯ ವರದಿಗೆ ನಾವು ಕಾಯಬೇಕಿದೆ.*

---

* ಈ ವರದಿ ಈವರೆಗೂ ಹೊರಬಿದ್ದಿಲ್ಲ.

ಆದರೆ ನಾನು ಕಲ್ಪಿಸಿರುವ ಸಂಭವನೀಯ ಪಾಕಿಸ್ತಾನ ಪರ್ಯಾಯಕ್ಕೆ ಇವರು ಬೆಂಬಲಿಸುವುದಿಲ್ಲ ಎಂಬ ನಿಲುವಿಗೆ ಯಾವುದೇ ಕಾರಣಗಳಿರುವಂತೆ ತೋರುವುದಿಲ್ಲ. ಆಜಾದ್ ಮುಸ್ಲಿಂ ಸಮ್ಮೇಳನ ಮುಸ್ಲಿಮರ ಒಂದು ಅಂಗ, ಇವರು ಮುಸ್ಲಿಂಲೀಗ್‌ನ್ನು ಮಾತ್ರ ವಿರೋಧಿಸುತ್ತಿಲ್ಲ. ಅಷ್ಟೇ ಸರಿಸಮಾನವಾಗಿ ರಾಷ್ಟ್ರೀಯ ಮುಸ್ಲಿಮರನ್ನು ವಿರೋಧಿಸುತ್ತಿದ್ದಾರೆ ಎಂಬುದನ್ನು ಕಡೆಗಣಿಸುವಂತಿಲ್ಲ. ಏಕೆಂದರೆ ಇವರು ಹಿಂದೂಗಳ ಬಗೆಗೆ ಲೀಗ್‌ಗಿಂತ ಹೆಚ್ಚು ಅನುಕಂಪವುಳ್ಳವರು ಎಂದು ನಂಬಲು ಯಾವ ನೆಲೆಯೂ ಇಲ್ಲ.

ನನ್ನ ಊಹೆಯ ಗ್ರಹೀತ ನಿಜವಾದ ಪಕ್ಷದಲ್ಲಿ, ಇದಕ್ಕುತ್ತರವಾಗಿ ಹಿಂದೂಗಳು ಏನು ಹೇಳಬಹುದೆಂಬುದನ್ನು ತಿಳಿಯಲು ಕುತೂಹಲ ಕೆರಳುತ್ತದೆ. ಈ ಬಗೆಯ ಪಾಕಿಸ್ತಾನ ಪರ್ಯಾಯವನ್ನು ಅವರು ಮನ್ನಿಸಲು ಸಿದ್ಧರಿದ್ದಾರೆಯೆ? ಅಥವಾ ಇಂಥ ಪರ್ಯಾಯಕ್ಕೆ ಬದಲಾಗಿ ಪಾಕಿಸ್ತಾನವನ್ನೇ ಒಪ್ಪಿಕೊಳ್ಳುವರೆ? ಇಂಥ ಕೆಲವು ಪ್ರಶ್ನೆಗಳನ್ನು ಉತ್ತರ ಕೊಡಲು ಹಿಂದೂಗಳು ಮತ್ತು ಅವರ ಮುಂದಾಳುಗಳಿಗೆ ನಾನು ಬಿಡಲೇಬೇಕಿದೆ. ಈ ನಿಟ್ಟಿನಲ್ಲಿ ನಾನು ಹೇಳಬಯಸುವುದಿಷ್ಟೆ: ಈ ಪ್ರಶ್ನೆಗೆ ತಮ್ಮ ಅಭಿಪ್ರಾಯವೇನೆಂದು ಕಂಡುಕೊಳ್ಳುವ ಮೊದಲು ಹಿಂದೂಗಳು ಕೆಲವು ಮುಖ್ಯ ವಿಚಾರಗಳನ್ನು ಪರಿಗಣಿಸಲೇಬೇಕು. ಅದರಲ್ಲೂ 'ಮಚತ್ ಪಾಲಿಟಿಕ್'[೧] ಮತ್ತು 'ಗ್ರವಾಮಿನ್ ಪಾಲಿಟಿಕ್'[೨] ಇವುಗಳ ನಡುವಣ ಅಂತರವನ್ನು ಗಮನಿಸಲೇಬೇಕು; 'ಕಮ್ಯಾನಿಟಸ್ ಕಮ್ಯುನಿಟೇಟಮ್' ಮತ್ತು 'ನೇಷನ್ ಆಫ್ ನೇಷನ್ಸ್' ಇವುಗಳ ವ್ಯತ್ಯಾಸ ತಿಳಿದಿರಬೇಕು. ದುರ್ಬಲರ ಶಂಕೆಯನ್ನು, ಭಯವನ್ನು, ಆತಂಕಗಳನ್ನು ಉಪಶಮನ ಮಾಡುವ ಸಂರಕ್ಷಣೆಗಳಿಗೂ ಮತ್ತು ಸಬಲರ ಅಧಿಕಾರದಾಹವನ್ನು ತಣಿಸುವ ಸಂಚುಗಳಿಗೂ ಇರುವ ಅಂತರ ಗೊತ್ತಿರಲೇಬೇಕು; ಮತ್ತು ಸಂರಕ್ಷಣೆಯ ಸವಲತ್ತುಗಳನ್ನು ಒದಗಿಸಿಕೊಳ್ಳುವುದಕ್ಕೂ ದೇಶವನ್ನೇ ಹಸ್ತಾಂತರಿಸುವುದಕ್ಕೂ ಇರುವ ವ್ಯತ್ಯಾಸದ ಪರಿವೆ ಇರಬೇಕು. ಜೊತೆಗೆ 'ಗ್ರವಾಮಿನ್ ಪಾಲಿಟಿಕ್'ಗೆ ಸುರಕ್ಷಿತವಾಗಿ ಬಿಟ್ಟುಕೊಟ್ಟಿದ್ದನ್ನು 'ಮಚತ್ ಪಾಲಿಟಿಕ್'ಗೂ ಬಿಟ್ಟುಕೊಡಲು ಬರುವುದಿಲ್ಲ ಎಂಬುದನ್ನು ಅರಿತಿರಲೇಬೇಕು. ಒಂದು ಸಮುದಾಯಕ್ಕೆ ಸುರಕ್ಷಿತವಾಗಿ ಬಿಟ್ಟುಕೊಟ್ಟಿದ್ದು ಒಂದು ದೇಶಕ್ಕೆ ಬಿಟ್ಟುಕೊಟ್ಟಂತಲ್ಲ ಮತ್ತು ದುರ್ಬಲರಿಗೆ ರಕ್ಷಣಾತ್ಮಕವಾಗಿ ಒದಗಿಸಿಕೊಟ್ಟದ್ದು ಅವರಿಗೆ ತಮ್ಮ ಪ್ರತಿರೋಧದ ಆಯುಧವಾಗಿ ಬಳಕೆಯಾಗಬೇಕೇ ವಿನಃ ಇದು ಪ್ರಬಲರು ಆಕ್ರಮಣ ಮಾಡಲು ಬಳಸುವ ಅಸ್ತ್ರವಾಗಬಾರದು.

ಇವೆಲ್ಲ ಬಹುಮುಖ್ಯವಾಗಿ ಪರಿಗಣಿಸಬೇಕಾದ ಅಂಶಗಳು ಮತ್ತು ಇವುಗಳನ್ನು ಹಿಂದೂಗಳು ಕಡೆಗಣಿಸಿದರೆ ಗಂಡಾಂತರ ತಪ್ಪಿದ್ದಲ್ಲ. ಏಕೆಂದರೆ ಮುಸ್ಲಿಮ್ ಪರ್ಯಾಯ ನಿಜಕ್ಕೂ ಒಂದು ಆತಂಕಕಾರಿ ಹಾಗೂ ಅಪಾಯಕಾರೀ ಪರ್ಯಾಯ.

♦

---

೧. 'ಮಚತ್ ಪಾಲಿಟಿಕ್' ಎಂದರೆ ಅಧಿಕಾರ ರಾಜಕೀಯ

೨. 'ಗ್ರವಾಮಿನ್ ಪಾಲಿಟಿಕ್' ಎಂದರೆ ಅಸಮಾಧಾನವನ್ನು ಹುಟ್ಟುಹಾಕಿ ಅಧಿಕಾರ ಹಿಡಿಯುವಂಥ ತಂತ್ರ

# ಅಧ್ಯಾಯ ೨೫

# ವಿದೇಶಗಳಿಂದ ಕಲಿಯಬೇಕಾದ ಪಾಠಗಳು

ಭಾರತವನ್ನು ಪಾಕಿಸ್ತಾನ ಮತ್ತು ಹಿಂದೂಸ್ತಾನ ಎಂದು ವಿಭಜಿಸಬೇಕೆಂಬ ಮುಸ್ಲಿಮರ ಒತ್ತಾಯಕ್ಕೆ ಮಣಿಯದೆ, ಯಾವುದೇ ಬೆಲೆ ತೆತ್ತು ಭೌಗೋಳಿಕವಾಗಿ ಅದರ ಸಮಗ್ರತೆಯನ್ನು ಕಾಪಾಡಿಕೊಳ್ಳಬೇಕೆಂಬ ಹಂಬಲವುಳ್ಳ ಹಿಂದೂಗಳು, ಭಾರತದಂತೆ ಈ ಬಗೆಯ ಸಮಸ್ಯೆಗಳನ್ನು ಹೊಂದಿದ್ದು ಅನ್ಯೋನ್ಯತೆಯನ್ನು ಸಾಧಿಸಿದ ಇತರ ರಾಷ್ಟ್ರಗಳ ಹಣೆಬರಹವನ್ನು ಚೆನ್ನಾಗಿ ಅಧ್ಯಯನ ಮಾಡಬೇಕು.

ಅಂಥ ಎಲ್ಲ ದೇಶಗಳ ಇತಿಹಾಸವನ್ನು ಪುನರವಲೋಕನ ಮಾಡುವ ಅಗತ್ಯವಿಲ್ಲ. ಟರ್ಕಿ ಮತ್ತು ಜೆಕೊಸ್ಲೊವಾಕಿಯಾ ಈ ಎರಡು ದೇಶಗಳ ಕಥೆಯನ್ನು ಪರಿಗಣಿಸಿದರಷ್ಟೇ ಸಾಕು.

## I

ಮೊದಲು ಟರ್ಕಿಯಲ್ಲಾದ ಘಟನೆಗಳನ್ನು ಪರಿಶೀಲಿಸೋಣ. ಟರ್ಕಿಯರನ್ನು ಸೆಂಟ್ರಲ್ ಏಷಿಯಾದ ತಮ್ಮ ನೆಲೆಯಿಂದ ಕ್ರಿ.ಶ. ಸುಮಾರು ೧೨೩೦–೪೦ರಲ್ಲಿ ಮಂಗೋಲಿಯನ್ನರು ಹೊಡೆದೋಡಿಸಿದ್ದರಿಂದಾಗಿ ಅವರು ಪಶ್ಚಿಮೋತ್ತರ ಅನಾಟೋಲಿಯದಲ್ಲಿ ಬಂದು ನೆಲೆಸುವಂಥಾದದ್ದು ಐತಿಹಾಸಿಕ ಘಟನೆ. ೧೩೨೬ರಲ್ಲಿ ಬ್ರೂಸಾವನ್ನು ಗೆಲ್ಲುವುದರ ಮೂಲಕ ಟರ್ಕಿಷ್ ಸಾಮ್ರಾಜ್ಯವನ್ನು ಕಟ್ಟುವ ಇವರ ಕೈಂಕರ್ಯ ಪ್ರಾರಂಭಗೊಂಡಿತು. ೧೩೬೦–೬೧ರಲ್ಲಿ ಕಪ್ಪು ಸಮುದ್ರದ ಏಗಿಯನನ್ನು ಥ್ರೇಸ್‌ನಿಂದ ಪಡೆದರು; ೧೩೬೧–೬೨ರಲ್ಲಿ ಕಾನ್‌ಸ್ಟಂಟಿನೋಪಲ್‌ನ ಬೈಜಂಟೈನ್ ಸರ್ಕಾರ ಇವರ ಪಾರಮ್ಯವನ್ನು ಒಪ್ಪಿಕೊಂಡಿತು. ೧೩೬೯ರಲ್ಲಿ ಬಲ್ಗೇರಿಯಾ ಬೇಡಿಕೆಯನ್ನು ಮನ್ನಿಸಿತು.

೧೩೭೧–೭೨ರಲ್ಲಿ ಮ್ಯಾಸಿಡೋನಿಯಾ ವಶವಾಯಿತು. ೧೩೭೪ರಲ್ಲಿ ಒಟ್ಟೋಮನ್ ಸ್ವಾಮ್ಯವನ್ನು ಕಾನ್‌ಸ್ಟಂಟಿನೋಪಲ್ ಖಚಿತವಾಗಿ ಅಂಗೀಕರಿಸಿತು. ೧೩೮೯ರಲ್ಲಿ ಸರ್ಬಿಯಾವನ್ನು ಗೆದ್ದುಕೊಂಡು, ೧೪೩೦ರಲ್ಲಿ ಸಲೋನಿಕಾ, ೧೪೫೩ರಲ್ಲಿ ಕಾನ್‌ಸ್ಟಂಟಿನೋಪಲ್, ೧೪೬೧ರಲ್ಲಿ ಟೆಬ್ರಿಜೊಂಡ್, ೧೪೬೫ರಲ್ಲಿ ಕ್ಯುರಾಮನ್ ಮತ್ತು ೧೪೭೫ರಲ್ಲಿ ಕಫ್ಫಾ ಹಾಗೂ ತಾನಗಳನ್ನು ಆಕ್ರಮಿಸಿಕೊಳ್ಳಲಾಯಿತು. ಸ್ವಲ್ಪ ವಿರಾಮದ ನಂತರ ಅವರು ೧೫೧೪ರಲ್ಲಿ ಮೊಸೆಲ್ಲನ್ನು, ೧೫೧೬–೧೭ರಲ್ಲಿ ಸಿರಿಯಾ, ಈಜಿಪ್ಟ್, ಹಿಯಾಜ್ ಮತ್ತು ಯಮನ್ ಹಾಗೂ ೧೫೨೧ರಲ್ಲಿ ಬೆಲ್ಗ್ರೇಡನ್ನು ಅಧೀನಪಡಿಸಿಕೊಂಡರು. ಇದರ ಹಿಂದೆಯೇ ೧೫೨೬ರಲ್ಲಿ ಹಂಗೇರಿಯನ್ನರ ಮೇಲೆ ಮೊಹಚ್ಜ್‌ನಲ್ಲಿ ವಿಜಯ ಸಾಧಿಸಿದರು. ೧೫೫೪ರಲ್ಲಿ ಮೊದಲ ಸಲ ಹಾಗೂ ೧೬೩೮ರಲ್ಲಿ ಎರಡನೇ ಬಾರಿಗೆ ಬಾಗ್ದಾದ್‌ನ ಮೇಲೆ ಜಯ ಪಡೆಯಲಾಯಿತು. ತಮ್ಮ ಜಯದುಂದುಭಿ ಮೊಳಗಿಸಲು ವಿಯನ್ನದ ಮೇಲೆ ಎರಡು ಬಾರಿ, ೧೫೨೯ರಲ್ಲಿ ಮೊದಲು, ಮತ್ತು ೧೬೮೩ರಲ್ಲಿ ಎರಡನೆಯ ಬಾರಿಗೆ ಮುತ್ತಿಗೆ ಹಾಕಲಾಯಿತು. ಆದರೆ, ಈ ಎರಡು ಬಾರಿಯೂ ಇವರಿಗೆ ಮುಖಭಂಗವಾಯಿತು. ಇದರ ಪರಿಣಾಮವಾಗಿ ಯೂರೋಪಿನಲ್ಲಿ ಸಾಮ್ರಾಜ್ಯ ವಿಸ್ತರಿಸುವ ಇವರ ದಾಹ ಎಲ್ಲ ಕಾಲಕ್ಕೂ ಸಂಪೂರ್ಣವಾಗಿ ಇಂಗಿಹೋಯಿತು. ಹೀಗಿದ್ದೂ ಇವರು ೧೩೨೬ರಿಂದ ೧೬೮೩ರವರೆಗಿನ ಅವಧಿಯಲ್ಲಿ

ಗೆದ್ದ ದೇಶಗಳಿಂದಾಗಿ ಒಂದು ದೊಡ್ಡ ಸಾಮ್ರಾಜ್ಯ ರೂಪ ತಳೆಯಿತು. ಇವುಗಳಲ್ಲಿ ಕೆಲವು ಪ್ರದೇಶಗಳನ್ನು ಟರ್ಕರು ಕಾಲಾಂತರದಲ್ಲಿ ಶತ್ರುಗಳಿಗೆ ಸೋತರೂ, ೧೭೮೯ರಲ್ಲಿ ಫ್ರೆಂಚ್ ಕ್ರಾಂತಿಯ ಕಾಲಕ್ಕೆ ಟರ್ಕಿಷ್ ಸಾಮ್ರಾಜ್ಯವು (೧) ಡಾನುಬೆಯ ದಕ್ಷಿಣಕ್ಕೆ, ಬಾಲ್ಕನ್, (೨) ಲೆವೆಂಟ್ ಮತ್ತು ಅಕ್ಕಪಕ್ಕದ ದ್ವೀಪಗಳ (ಎಂದರೆ ಸೈಪ್ರಸ್) ಏಷಿಯಾ ಮೈನರ್, (೩) ಸಿರಿಯ ಮತ್ತು ಪ್ಯಾಲೆಸ್ಟೈನ್, (೪) ಈಜಿಪ್ಟ್ ಮತ್ತು (೫) ಈಜಿಪ್ಟ್‌ನಿಂದ ಮೊರಾಕ್ಕೊವರೆಗಿನ ಉತ್ತರ ಆಫ್ರಿಕಾ ಭಾಗಗಳನ್ನು ಒಳಗೊಂಡಿತ್ತು.

ಟರ್ಕಿಷ್ ಸಾಮ್ರಾಜ್ಯವು ಒಡೆದು ಚೂರಾದ ಕಥೆಯನ್ನು ಸುಲಭವಾಗಿ ಬಣ್ಣಿಸಲಾಗಿದೆ. ಕಾನೂನು ಬದ್ಧವಾಗಿಲ್ಲದಿದ್ದರೂ ಕಾರ್ಯತಃ ಮೊದಲು ಟರ್ಕಿಯಿಂದ ಬೇರ್ಪಟ್ಟದ್ದು ಈಜಿಪ್ಟ್. ೧೭೬೯ರಲ್ಲಿ ಆನಂತರ ಬಾಲ್ಕನ್ಸ್‌ನ ಕ್ರಿಶ್ಚಿಯನ್ನರು ೧೮೧೨ರಲ್ಲಿ ಟರ್ಕಿಯೊಡನೆ ಹೋರಾಡಿ ರಷ್ಯ ಬೆಸ್ಸರೇಬಿಯಾವನ್ನು ಕಿತ್ತುಕೊಂಡಿತು. ರಷ್ಯಾದ ಬೆಂಬಲದಿಂದ ೧೮೧೨ರಲ್ಲಿ ಸೆರ್ಬಿಯಾ ತಿರುಗಿಬಿದ್ದದ್ದರಿಂದ ಟರ್ಕೀಯರು ಸೆರ್ಬಿಯಾವನ್ನು ಬೇರೆ ಸರ್ಕಾರದಡಿಯಲ್ಲಿ ಇಡಲು ಒಪ್ಪಬೇಕಾಯಿತು. ೧೮೨೯ರಲ್ಲಿ ಇದೇ ಬಗೆಯ ವಿನಾಯಿತಿಯನ್ನು ಡನೂಬಿಯನ್ ಪ್ರಾಂತಗಳಾದ ಮೋಲ್‌ಡಾವಿಯಾ ಮತ್ತು ವಲ್ಲಾಬಿಯಾಗಳೆರಡಕ್ಕೂ ಕೊಡಲಾಯಿತು. ೧೮೨೨ರಿಂದ ೧೮೨೯ರವರೆಗೆ ಸತತವಾಗಿ ನಡೆದ ಗ್ರೀಕ್ ಸ್ವಾತಂತ್ರ್ಯ ಸಮರದ ಪರಿಣಾಮವಾಗಿ, ಟರ್ಕಿಷ್ ಅಧಿಪತ್ಯದಿಂದ ಗ್ರೀಸ್ ದೇಶವನ್ನು ಸಂಪೂರ್ಣವಾಗಿ ಮುಕ್ತಗೊಳಿಸಿ, ಅದರ ಸ್ವಾತಂತ್ರ್ಯವನ್ನು ಮನ್ನಿಸಲಾಯಿತು. ೧೮೭೫–೭೭ರ ನಡುವೆ ಬಾಲ್ಕನರಲ್ಲಿ ಸಂಕ್ಷೋಭೆಯುಂಟಾಯಿತು. ಬೋಸ್ನಿಯಾ ಮತ್ತು ಹರ್ಜಿಗೋವಿನಾಗಳಲ್ಲಿ ತೀವ್ರ ಪ್ರತಿಭಟನೆಯಾಗಿ ಬಲ್ಗೇರಿಯನ್ನರು ಟರ್ಕೀಯರ ಅಸಭ್ಯತೆಯ ವಿರುದ್ಧ ಸಿಡಿದೆದ್ದರು; ಅಷ್ಟೇ ಪ್ರತಿಗಾಮಿತನದಿಂದ ಟರ್ಕೀಯರು ಕೂಡ ಪ್ರತಿರೋಧಿಸಿದರು. ತತ್ಫಲವಾಗಿ, ಸರ್ಬೀಯಾ ಹಾಗೂ ಮಾನ್‌ಟೆನೆಗ್ರೊಗಳು ಟರ್ಕಿಯ ವಿರುದ್ದ ಸಮರ ಸಾರಿದವು. ರಷ್ಯ ಕೂಡ ಹಾಗೇ ಮಾಡಿತು. ಬರ್ಲಿನ್ ಒಪ್ಪಂದದ ಪ್ರಕಾರ ಬಲ್ಗೇರಿಯಾಕ್ಕೆ ಟರ್ಕಿ ಆಶ್ರಯದ ಸ್ವಂತ ಸರ್ಕಾರ ಕೊಡಲಾಯಿತು. ಅಲ್ಲದೆ, ಕ್ರಿಶ್ಚಿಯನ್ ರಾಜ್ಯಪಾಲರ ನೇತೃತ್ವದಲ್ಲಿ ಪೂರ್ವ ರುಮೇನಿಯಾವನ್ನು ಟರ್ಕೀಯರು ಆಳುವುದೆಂದು ತೀರ್ಮಾನಿಸಲಾಯಿತು. ಕಾರ್ಸ್ ಮತ್ತು ಬಟಾಮ್‌ಗಳನ್ನು ರಷ್ಯ ಪಡೆದುಕೊಂಡಿತು. ರುಮೇನಿಯಾಕ್ಕೆ ದೊಬ್ರುದ್ವಾವನ್ನು ನೀಡಲಾಯಿತು. ಬೊಸ್ನಿಯಾ ಮತ್ತು ಹರ್ಜೆಗೋವಿನಾಗಳನ್ನ ಆಸ್ಟ್ರಿಯಾ ಆಡಳಿತಕ್ಕೆ ಒಳಪಡಿಸಲಾಯಿತು. ಸೈಪ್ರಸ್ಸನ್ನು ಇಂಗ್ಲೆಂಡ್ ವಶಪಡಿಸಿಕೊಂಡಿತು. ೧೮೮೧ರಲ್ಲಿ ಥೆಸ್ಸಲಿಯನ್ನು ಗರೀಸ್ ಪಡೆದುಕೊಂಡರೆ ಫ್ರಾನ್ಸ್ ಟ್ಯೂನಿಸ್ಸನ್ನು ಆಕ್ರಮಿಸಿಕೊಂಡಿತು. ೧೮೮೫ರಲ್ಲಿ ಬಲ್ಗೇರಿಯಾ ಮತ್ತು ಪೂರ್ವ ರುಮೇನಿಯಾಗಳು ಒಂದೇ ರಾಜ್ಯವಾಗಿ ಒಟ್ಟುಗೂಡಿದವು.

೧೯೦೬ರವರೆಗಿನ ಟರ್ಕಿಷ್ ಸಾಮ್ರಾಜ್ಯದ ಏಳ್ಗೆ ಮತ್ತು ಅವನತಿಯ ಕಥೆಯ ರೇಖಾಚಿತ್ರವನ್ನು ಲೇನ್ ಪೂಲ್ ಅವರು ಹೀಗೆ ಬಣ್ಣಿಸಿದ್ದಾರೆ:*

**"ಟರ್ಕಿ ಆಡಳಿತ ಹಿಂದೆ ತುಂಬ ವ್ಯಾಪಕವಾದುದಾಗಿತ್ತು. ಈಗ ಯೂರೋಪಿನಲ್ಲಿ ಟರ್ಕಿ ಎಂದು ಕರೆಯಲ್ಪಡುವ ಒಂದು ಸಣ್ಣ ಪ್ರದೇಶಕ್ಕಷ್ಟೇ ಅದು ಸೀಮಿತವಾಗಿರಲಿಲ್ಲ. ಬದಲಾಗಿ ಗ್ರೀಸ್, ಬಲ್ಗೇರಿಯಾ, ಪೂರ್ವರುಮೇನಿಯಾ, ರುಮೇನಿಯಾ, ಸರ್ಬಿಯ, ಬೋಸ್ನಿಯ, ಹರ್ಜೆಗೋವಿನ, ಕ್ರಿಮಿಯಾ ಮತ್ತು ದಕ್ಷಿಣ ರಷ್ಯಾದ ಒಂದು ಭಾಗ, ಈಜಿಪ್ಟ್, ಸಿರಿಯಾ, ಟ್ರಿಪೂಲಿ, ಟ್ಯೂನಿಸ್, ಅಲ್ಗಿಯರ್ಸ್ ಮತ್ತು ಇತರ ಮೆಡಿಟರೇನಿಯನ್ ದ್ವೀಪಗಳು ಮತ್ತು ಅರೇಬಿಯಾದ ಪ್ರಮುಖ ಮರುಳುಗಾಡಿನ ಪ್ರದೇಶಗಳನ್ನು**

---

* ಟರ್ಕಿ, ಪುಟ ೩೬೩–೬೪

**ಒಳಗೊಂಡಿತ್ತು. ಇದರ ಒಟ್ಟು ಜನಸಂಖ್ಯೆ (ಪ್ರಸ್ತುತ) ಐವತ್ತು ದಶಲಕ್ಷಕ್ಕೂ ಹೆಚ್ಚು ಅಥವಾ ರಷ್ಯವನ್ನಾಳಿದ ಯುರೋಪ್‌ನ ಜನಸಂಖ್ಯೆಯ ಎರಡರಷ್ಟು. ಒಂದೊಂದಾಗಿ ಇದರ ಭಾಗಗಳು ಕ್ರಮೇಣ ಕಳಚಿಕೊಳ್ಳುತ್ತಾ ಬಂದವು. ಅಲ್ಜಿಯನ್ನರು ಮತ್ತು ಟ್ಯೂನಿಸಿಯನ್ನರು ಫ್ರಾನ್ಸಿನೊಡನೆ ಸೇರಿಕೊಂಡರು. ಇದರಿಂದಾಗಿ ೧೭೫,೦೦೦ ಚದರ ಮೈಲಿಗಳಷ್ಟು ಜಾಗ ಕೈತಪ್ಪಿಹೋದುದೇ ಅಲ್ಲದೆ, ಐದು ಲಕ್ಷ ಇಲ್ಲಿನ ನಿವಾಸಿಗಳು ತಮ್ಮ ನಿಷ್ಠೆಯನ್ನು ಬದಲಾಯಿಸಿಕೊಂಡರು. ಈಜಿಪ್ಟ್ ಕೂಡ ಕಾರ್ಯತಃ ಸ್ವತಂತ್ರವಾಯಿತು. ಅಂದರೆ ಮತ್ತೆ ೫೦೦,೦೦೦ ಮೈಲಿಗಳ ವಿಸ್ತೀರ್ಣ ಪ್ರದೇಶ ಮತ್ತು ಆರು ದಶಲಕ್ಷ ನಿವಾಸಿಗಳ ನಷ್ಟ. ತೌಲನಿಕವಾಗಿ ಕಡಿಮೆ ನಷ್ಟವನ್ನು ಹೊಂದಿದ್ದು ಏಷಿಯಾಟಿಕ್ ಟರ್ಕಿ ಮಾತ್ರ. ಇದು ಪ್ರಸ್ತುತ ಅದರ ಅಧಿಪತ್ಯದ ಬಹುಭಾಗವನ್ನು ರೂಪಿಸಿತು. ಅಲ್ಲದೆ ೬೮೦,೦೦೦ ಚದರ ಮೈಲಿಗಳ ವಿಸ್ತೀರ್ಣದ ಪ್ರದೇಶ ಮತ್ತು ಹದಿನಾರು ದಶಲಕ್ಷ ಜನಸಂಖ್ಯೆ ಇದಕ್ಕೆ ದಕ್ಕಿತು. ಯುರೋಪ್‌ನಲ್ಲಿ ಇದಕ್ಕಾದ ನಷ್ಟ ಟ್ರಿಪೊಲಿಯನ್ನು ಮಾತ್ರ ಉಳಿಸಿಕೊಂಡ ಆಫ್ರಿಕಾದ ನಷ್ಟವಷ್ಟೇ ತೀವ್ರತರವಾದುದು. ಸೆರ್ಬಿಯಾ ಮತ್ತು ಬೋಸ್ನಿಯಾಗಳು ಆಸ್ಟ್ರಿಯಾದ ಆಡಳಿತಕ್ಕೊಳಪಟ್ಟಿದ್ದರಿಂದ ೪೦,೦೦೦ ಮೈಲಿಗಳಷ್ಟು ವಿಸ್ತೀರ್ಣ ಪ್ರದೇಶ ಮತ್ತು ಮೂರೂವರೆ ದಶಲಕ್ಷದಷ್ಟು ಜನಸಂಖ್ಯೆ ಆಸ್ಟ್ರಿಯಾದ ಅಧೀನಕ್ಕೊಳಗಾಯಿತು. ವಲ್ಲಾಚಿಯ ಮತ್ತು ಮಾಲ್ಡೀವಿಯಾಗಳು ರುಮೇನಿಯಾ ಸ್ವತಂತ್ರ ರಾಜ್ಯಕ್ಕೆ ಸೇರಿಹೋದದ್ದರಿಂದ ಟರ್ಕಿಯ ೪೬,೦೦೦ ಮೈಲಿಗಳಷ್ಟು ಜಾಗ ಹಾಗೂ ಐದು ದಶಲಕ್ಷಕ್ಕೂ ಹೆಚ್ಚಿನ ಅದರ ಜನಸಂಖ್ಯೆ ಕೈತಪ್ಪಿಹೋಯಿತು. ಬಲ್ಗೇರಿಯಾ ಒಂದು ಆಶ್ರಿತ ರಾಜ್ಯ. ಇದರ ಮೇಲೆ ಕೋಟೆಗಳು ನಿಯಂತ್ರಣ ಹೊಂದಿಲ್ಲವಾಗಿ ತರುವಾಯ ಪೂರ್ವ ರುಮೇನಿಯಾ ಬಲ್ಗೇರಿಯಾದ ಭಾಗವಾಗಿ, ಇವೆರಡೂ ಹತ್ತಿರಹತ್ತಿರ ೪೦,೦೦೦ ಚದರ ಮೈಲಿಗಳ ವ್ಯಾಪ್ತಿಯನ್ನು, ಮೂರು ದಶಲಕ್ಷ ಜನಸಂಖ್ಯೆಯನ್ನು ಪಡೆದವು. ೨೫,೦೦೦ ಮೈಲಿಗಳ ವ್ಯಾಪ್ತಿಯ ಹಾಗೂ ಎರಡು ದಶಲಕ್ಷ ಜನಸಂಖ್ಯೆಯ ಗ್ರೀಸ್ ರಾಜ್ಯವು ಬಹಳ ಹಿಂದೆಯೇ ತನ್ನ ಪೋಷಕ ಸಂಸ್ಥಾನದಿಂದ ಬೇರ್ಪಟ್ಟಿತ್ತು. ಒಂದು ಕಾಲಕ್ಕೆ ಯೂರೋಪಿನಲ್ಲಿ ೨,೩೦,೦೦೦ ಮೈಲಿಗಳಷ್ಟು ವ್ಯಾಪಕ ಪ್ರದೇಶವನ್ನೂ, ೨೦ ದಶಲಕ್ಷಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿದ್ದ ಟರ್ಕಿಷ್ ಅಧಿಪತ್ಯ ಈಗ ಕೇವಲ ೬೬ ಸಾವಿರ ಮೈಲಿಗಳ ವ್ಯಾಪ್ತಿ ಮತ್ತು ನಾಲ್ಕೂವರೆ ದಶಲಕ್ಷ ಜನಸಂಖ್ಯೆಗೆ ಸೀಮಿತಗೊಂಡಿದೆ. ಇದು ತನ್ನ ಮುಕ್ಕಾಲುಭಾಗ ವಿಸ್ತೀರ್ಣವನ್ನು ಹಾಗೂ ಅಷ್ಟೇ ಪ್ರಮಾಣದ ಜನಸಂಖ್ಯೆಯನ್ನು ಕಳೆದುಕೊಂಡಿದೆ.''**

ಇದು ೧೯೦೭ರಲ್ಲಿದ್ದ ಟರ್ಕಿಯ ಪರಿಸ್ಥಿತಿ. ಅಲ್ಲಿಂದ ಮುಂದೆ ಇದಕ್ಕೆ ಏನಾಯಿತು? ಎಂಬುದು ಟರ್ಕಿಯ ಕತೆಯ ದುರದೃಷ್ಟಕರವಾದ ಹೀನಾಯ ಭಾಗ. ೧೯೦೮ರಲ್ಲಿ ಯುವ ಟರ್ಕರ ಕ್ರಾಂತಿಯ ಫಲವನ್ನು ಕೇಳುತ್ತ, ಆಸ್ಟ್ರಿಯಾ ತನ್ನ ಗಡಿಯನ್ನು ಬೋಸ್ನಿಯಾವರೆಗೆ ವಿಸ್ತರಿಸಿತು. ಅಲ್ಲದೆ, ಹರ್ಜೆಗೋವಿನ ಮತ್ತು ಬಲ್ಗೇರಿಯಾಗಳು ತಮ್ಮ ಸ್ವಾತಂತ್ರ್ಯವನ್ನು ಘೋಷಿಸಿದವು. ೧೯೧೧ರಲ್ಲಿ ಇಟಲಿ ಟ್ರಿಪೊಲಿಯನ್ನು ವಶಪಡಿಸಿಕೊಂಡಿತು ಮತ್ತು ೧೯೧೨ರಲ್ಲಿ ಫ್ರಾನ್ಸ್ ಮೊರೊಕ್ಕೊವನ್ನು ಆಕ್ರಮಿಸಿಕೊಂಡಿತು. ಇಟಲಿಯ ೧೯೧೨ರ ಮುತ್ತಿಗೆಯ ಗೆಲುವಿನಿಂದ ಪ್ರಚೋದನೆಗೊಂಡು ಬಲ್ಗೇರಿಯಾ, ಗ್ರೀಸ್, ಸರ್ಬಿಯಾ ಮತ್ತು ಮಾನ್‌ಟೆನೆಗ್ರೋಗಳು ಒಟ್ಟಾಗಿ ತಮ್ಮದೇ ಆದ ಒಂದು 'ಬಾಲ್ಕನ್ ಲೀಗ್'ನ್ನು ರಚಿಸಿಕೊಂಡು ಟರ್ಕಿಯಲ್ಲಿ ಟರ್ಕಿ ಸಂಪೂರ್ಣವಾಗಿ ನೆಲಕಚ್ಚಿತು. ಲಂಡನ್ ಕೌಲಿನ (೧೯೧೩) ಪ್ರಕಾರ ಯೂರೋಪ್‌ನಲ್ಲಿ ಟರ್ಕಿಷ್ ಪ್ರದೇಶ ಕಾನ್‌ಸ್ಟಂಟಿನೋಪಲ್ ಸುತ್ತಣ ಒಂದು ಕಿರುಪಟ್ಟಿಯಾಗಿ ಸಂಕುಚಿತಗೊಂಡಿತು. ಆದರೆ, ಈ ಕೌಲು

ಜಾರಿಗೆ ಬರಲೇ ಇಲ್ಲ. ಏಕೆಂದರೆ ವಿಜಯಿಗಳು ತಾವು ಯುದ್ಧದಲ್ಲಿ ಗೆದ್ದ ಭಾಗಗಳನ್ನು ವಿತರಿಸಲು ಒಪ್ಪಲಿಲ್ಲ. ೧೯೧೩ರಲ್ಲಿ ಬಲ್ಗೇರಿಯಾ 'ಬಾಲ್ಕನ್ ಲೀಗ್'ಗೆ ಸೇರದೆ ಉಳಿದ ರಾಷ್ಟ್ರಗಳ ಮೇಲೆ ಯುದ್ಧ ಸಾರಿತು. ತನ್ನ ಪ್ರದೇಶವನ್ನು ವೃದ್ಧಿಸುವ ಭರವಸೆಯಿಂದ ರುಮೇನಿಯಾ ಬಲ್ಗೇರಿಯಾದ ಮೇಲೆ ಸಮರ ಸನ್ನದ್ಧವಾಯಿತು. ಟರ್ಕಿ ಕೂಡ ಇದನ್ನೇ ಮಾಡಿತು. ಬುಖರೆಷ್ಟ್ ಕೌಲನಿಂದಾಗಿ (೧೯೧೩) ಎರಡನೇ ಬಾಲ್ಕನ್ ಯುದ್ಧ ಸಮಾಪ್ತಿಯಾದಾಗ ಟರ್ಕಿ, ಅಡ್ರಿಯನೋಪಲ್ಲನ್ನು ಪುನಃ ಸೇರ್ಪಡೆಗೊಳಿಸಿಕೊಂಡಿದ್ದೇ ಅಲ್ಲದೆ, ಬಲ್ಗೇರಿಯಾದಿಂದ ಥ್ರಾಸನ್ನೂ ಪಡೆದುಕೊಂಡಿತು. ಸರ್ಬಿಯಾ ಉತ್ತರ ಮಾಸಿಡೋನಿಯಾವನ್ನು ಮತ್ತು ಗ್ರೀಸ್ ದಕ್ಷಿಣ ಮಾಸಿಡೋನಿಯ(ಸಲೋನಿಕಾವನ್ನು ಒಳಗೊಂಡಂತೆ)ವನ್ನೂ ಗಳಿಸಿಕೊಂಡರೆ, ಟರ್ಕಿಯನ್ನು ಕಳೆದುಕೊಂಡೂ ಮಾನ್ ಟೆನೆಗ್ರೋ ತನ್ನ ಪ್ರದೇಶವನ್ನು ವಿಸ್ತಾರಗೊಳಿಸಿಕೊಂಡಿತು. ೧೯೧೪ರ ಯೂರೋಪಿಯನ್ ಮಹಾಯುದ್ಧದಲ್ಲಿ ಬಾಲ್ಕನರು ಟರ್ಕಿಯಿಂದ ಮುಕ್ತರಾದರು. ಆಗ ಟರ್ಕಿಷ್ ಸಾಮ್ರಾಜ್ಯದಲ್ಲುಳಿದ ಯೂರೋಪ್ ನೆಲೆ ತೀರಾ ಕಡಿಮೆಯಾಯಿತು. ಹೆಚ್ಚೂ ಕಡಿಮೆ ಕಾನ್‌ಸ್ಟೆಂಟಿನೋಪಲ್ ಮತ್ತದರ ಸುಪರ್ದಿನ ಏಷಿಯಾದ ಭಾಗಗಳಿಗೆ ಮಾತ್ರ ಸೀಮಿತಗೊಂಡಿತು. ಆಫ್ರಿಕನ್ ರಾಷ್ಟ್ರಕ್ಕೆ ಸಂಬಂಧಿಸಿದಂತೆ, ಈಜಿಪ್ಟ್ ಮತ್ತು ಉತ್ತರ ಆಫ್ರಿಕಾದ ಉಳಿದ ಭಾಗಗಳು ಹೆಸರಿಗಷ್ಟೇ ಸುಲ್ತಾನದ ಅಧಿಕಾರಕ್ಕೊಳಪಟ್ಟಿದ್ದವು. ಆದರೆ ಇವುಗಳ ನಿಜವಾದ ನಿಯಂತ್ರಣಾಧಿಕಾರ ಯೂರೋಪಿಯನ್ನರ ಕೈಯ್ಯಲ್ಲಿತ್ತು. ೧೯೧೪ರ ಮಹಾಯುದ್ಧದಲ್ಲಿ ಟರ್ಕಿಯನ್ನು ಸಂಪೂರ್ಣವಾಗಿ ಪದಚ್ಯುತಗೊಳಿಸಲಾಯಿತು. ಮೆಡಿಟರೇನಿಯನ್ನಿನಿಂದ ಪರ್ಸಿಯನ್ ಗಲ್ಫ್‌ವರೆಗಿನ ಎಲ್ಲ ಪ್ರದೇಶಗಳನ್ನು ಆಕ್ರಮಿಸಿಕೊಳ್ಳಲಾಯಿತು. ಬಾಗ್ದಾದ್, ಜರೂಸಲಿಮ್, ಡಮಾಸ್ಕಸ್ ಮತ್ತು ಅಲ್ಲೆಪ್ಪೊ ಮುಂತಾದ ಮಹಾನಗರಗಳನ್ನು ವಶಪಡಿಸಿಕೊಳ್ಳಲಾಯಿತು. ಯೂರೋಪ್‌ನಲ್ಲಿ ಮೈತ್ರಿ ಸೇನೆ ಕಾನ್‌ಸ್ಟೆಂಟಿನೋಪಲ್ಲನ್ನು ಸ್ವಾಧೀನಪಡಿಸಿಕೊಂಡಿತು. ಟರ್ಕ್ ಯುದ್ಧವನ್ನು ಅಂತ್ಯಗೊಳಿಸಿದ ಸೆವ್ರಸ್ ಕೌಲು, ಟರ್ಕಿಯನ್ನು ಅದರ ಅನೇಕ ಹೊರವಲಯ ಪ್ರದೇಶಗಳಿಂದ ಮತ್ತು ಏಷಿಯಾ ಮೈನರ್ ಪ್ರಾಂತದ ಫಲವತ್ತಾದ ಭಾಗಗಳಿಂದ ವಂಚಿಸಿತು. ಗ್ರೀಕರ ರಾಜ್ಯ ದಾಹವನ್ನು ಮ್ಯಾಸಿಡೋನಿಯಾದ ಟರ್ಕಿಯನ್ನು ಉದಾರವಾಗಿ ಬಿಟ್ಟುಕೊಟ್ಟು ತಣಿಸಲಾಯಿತು. ಅದಾಲಿಯ ಮತ್ತು ದಕ್ಷಿಣದ ಬಹು ದೊಡ್ಡ ಬಯಲನ್ನು ಥ್ರಾಸ್, ಏಷಿಯಾ ಮೈನರ್ ಮತ್ತು ಇಟಲಿ ಪಡೆದುಕೊಂಡವು. ಇರಾಕ್, ಸಿರಿಯ, ಪ್ಯಾಲಿಸ್ಟೈನ್, ಹೆಡ್ಜಜ್ ಮತ್ತು ನೆಜ್ದ್ ಮೊದಲಾದ ತನ್ನ ಎಲ್ಲ ಏಷಿಯಾದ ಅರಬ್ ಪ್ರಾಂತಗಳಿಂದ ಟರ್ಕಿ ವಂಚಿತವಾಗಬೇಕಾಯಿತು. ಟರ್ಕಿಯ ಪಾಲಿಗೆ ಉಳಿದದ್ದು ರಾಜಧಾನಿ ಕಾನ್‌ಸ್ಟಂಟಿನೋಪಲ್ ಮಾತ್ರ. ಈ ಕೌಲು ಸುಲ್ತಾನನಿಂದ ಅನುಮೋದಿಸಲ್ಪಟ್ಟಿದ್ದರೂ ರಾಷ್ಟ್ರೀಯ ಪಕ್ಷದ ಕೆಮಲ್ ಪಾಷರಿಂದ ಉಗ್ರವಾಗಿ ಪ್ರತಿರೋಧಿಸಲ್ಪಟ್ಟಿತು. ಗ್ರೀಕರು ತಮ್ಮ ಹೊಸ ಪ್ರಾಂತವನ್ನು ವಶಕ್ಕೆ ತೆಗೆದುಕೊಳ್ಳಲು ಮುನ್ನಡೆದಾಗ ಅವರನ್ನು ಮುತ್ತಿ ನಿರ್ಣಾಯಕವಾಗಿ ಸೋಲಿಸಲಾಯಿತು. ೧೯೨೦ರಿಂದ ೧೯೨೨ರವರೆವಿಗೆ ನಡೆದ ಗ್ರೀಕ್ ಯುದ್ಧದ ಕೊನೆಯಲ್ಲಿ ಟರ್ಕೀಯರು ಸ್ಮಿರ್ನಾವನ್ನಾ ಮರಳಿ ಪಡೆದರು. ಗ್ರೀಕರ ಸಹಾಯಕ್ಕೆ ಮೈತ್ರಿ ಕೂಟ ಸೇನೆಯನ್ನು ಕಳಿಸಲು ಸಿದ್ಧವಿರದ ಕಾರಣ, ಗ್ರೀಕರು ಬಲವಂತವಾಗಿ ರಾಷ್ಟ್ರೀಯ ಟರ್ಕಿರೊಡನೆ ಕರಾರು ಮಾಡಿಕೊಳ್ಳಬೇಕಾಯಿತು. ಮುದಿಯಾನಿಯಾದಲ್ಲಿ ನಡೆದ ಸಮ್ಮೇಳನದಲ್ಲಿ ಸೆವ್ರೆಸ್ ಕೌಲಿನ ಷರತ್ತುಗಳನ್ನು ಪುನರ್ ಪರಿಶೀಲಿಸಲು ಗ್ರೀಕರು ಒಪ್ಪಿಕೊಂಡರು. ೧೯೨೩ರ ಲಾಸನ್ನೆ ಒಡಂಬಡಿಕೆಯಲ್ಲಿ ಇದನ್ನು ಪರಿಗಣಿಸಿ ಪಶ್ಚಿಮ ಥ್ರಾಸ್ ಉಳಿದಂತೆ ಟರ್ಕೀಯರ ಬೇಡಿಕೆಗಳಿಗೆ ಮನ್ನಣೆ ಕೊಡಲಾಯಿತು. ಸೆವ್ರೆಸ್ ಕೌಲಿನ ಉಳಿದ ಷರತ್ತುಗಳನ್ನು ಟರ್ಕೀಯರು ಒಪ್ಪಿಕೊಳ್ಳಲಾಗಿ ಏಷಿಯಾದಲ್ಲಿ ಅವರ ಅರಬ್ ಪ್ರಾಂತಗಳು ಕೈಬಿಟ್ಟವು. ೧೯೧೪ರ ಯುದ್ಧಪೂರ್ವದಲ್ಲಿ ಯೂರೋಪಿನ ತನ್ನ ಎಲ್ಲ ಪ್ರಾಂತಗಳನ್ನು ಟರ್ಕಿ ಕಳೆದುಕೊಂಡಿತು.

ಯುದ್ಧಾನಂತರ, ಏಷಿಯಾದ ತನ್ನ ಪ್ರಾಂತಗಳನ್ನು ಕಳೆದುಕೊಂಡಿತು. ಹೀಗಾಗಿ ಹಳೆಯ ಸದಸ್ಯ ಪ್ರಾಂತಗಳಿಲ್ಲದೆ ಟರ್ಕಿಷ್ ಸಾಮ್ರಾಜ್ಯಕ್ಕೆ ಉಳಿದದ್ದು ಅದರ ಒಂದು ತುಣುಕಷ್ಟೆ. ಹಳೆಯ ಸಾಮ್ರಾಜ್ಯದ ಈ ಒಂದು ತುಣುಕನ್ನೆ ಇಂದು ಟರ್ಕ್ ಗಣರಾಜ್ಯ ಎಂದು ಕರೆಯಲಾಗಿದೆ.*

## II

ಚೆಕೊಸ್ಲೊವೊಕಿಯಾದ ವಿಷಯವನ್ನೇ ತೆಗೆದುಕೊಳ್ಳಿ. ೧೯೧೪ರ ಯೂರೋಪಿಯನ್ ಯುದ್ಧವನ್ನು ಅನುಸರಿಸಿದ ಟ್ರೆಯನಾನ್ ಸಂಧಿಯ ಸೃಷ್ಟಿ ಇದು. ಯಾವುದೇ ಶಾಂತಿಯ ಕೌಲು ಟ್ರಿಯನಾನ್ ಸಂಧಿಗಿಂತ ಷರತ್ತುಗಳಲ್ಲಿ ಉಗ್ರವಾಗಿರುವುದು ಸಾಧ್ಯವಿಲ್ಲ. ಪ್ರೊ. ಮೆಕಾರ್ಟಸೆ ಹೇಳುತ್ತಾರೆ: "ಸದಸ್ಯತ್ವದಿಂದ ತೆಗೆದುಹಾಕಲಾಗಿದ್ದರೂ ಹಂಗೇರಿ ಅಷ್ಟೇನೂ ವಿರೂಪಗೊಂಡಿಲ್ಲ. ಪವಿತ್ರ ಸಿಂಹಾಸನದ ಇತರ ನಾಡುಗಳೊಡನೆ ಸಂಯುಕ್ತ ಸಂಬಂಧಿಯಾಗಿ ನಿಂತ ಕ್ರೋಸಿಯ, ಸ್ಲವೋನಿಯಗಳನ್ನು ಹೊರತುಪಡಿಸಿದರೂ, ಎಂಟುನೂರು ವರ್ಷಗಳಿಂದ ನಿರಂತರವಾಗಿರುವುದರಲ್ಲಿ ಒಂದಾಗಿಯೂ ಮೂಲ ಹಂಗೇರಿ ಯುದ್ಧ ಪೂರ್ವದಲ್ಲಿದ್ದ ತನ್ನ ಪ್ರಾಂತದ ಮೂರನೇ ಒಂದು ಭಾಗಕ್ಕಿಂದ (೩.೨.೬%) ಹೆಚ್ಚಾಗಿ ಹಾಗೂ ತನ್ನ ಜನಸಂಖ್ಯೆಯ ಎರಡನೇ ಐದು ಭಾಗಕ್ಕಿಂತಲೂ (೪೧.೬%) ಸ್ವಲ್ಪ ಹೆಚ್ಚಾಗಿ ಮೊಟಕುಗೊಳಿಸಿಕೊಂಡಿದೆ. ಈ ಹಿಂದೆ ಹಂಗೇರಿಯನ್ನರದಾಗಿದ್ದ ಪ್ರಾಂತಗಳು ಹಾಗೂ ಜನರನ್ನು ಏಳಕ್ಕೂ ಹೆಚ್ಚು ರಾಜ್ಯಗಳ ನಡುವೆ ಹಂಚಲಾಗಿದೆ." ಇವುಗಳಲ್ಲಿ ಒಂದು ರಾಜ್ಯ ಈ ಹಿಂದೆ ಅಸ್ತಿತ್ವದಲ್ಲಿರಲಿಲ್ಲ. ಇದು ಹೊಸ ಸೃಷ್ಟಿ. ಈ ಹೊಸ ರಾಜ್ಯವೇ ಜಕೊಸ್ಲೊವಾಕಿಯಾ.

ಜಕೊಸ್ಲೊವಾಕಿಯಾ ಗಣರಾಜ್ಯದ ವಿಸ್ತೀರ್ಣ ೫೪,೨೪೪ ಚದರ ಮೈಲಿಗಳು ಮತ್ತು ಅವರ ಜನಸಂಖ್ಯೆ ಸುಮಾರು ೧೩,೬೧೩,೧೭೨. ಹಿಂದೆ ಬೊಹೆಮಿಯಾ, ಮೊರಾವಿಯಾ, ಸ್ಲೊವಾಕಿಯಾ ಮತ್ತು ರುತೇನಿಯಾ ಎಂದು ಹೆಸರಾಗಿದ್ದ ಈ ಎಲ್ಲ ಪ್ರಾಂತಗಳನ್ನು ಇದು ಒಳಗೊಂಡಿದೆ (i) ಬೊಹೆಮಿಯಾ ಮತ್ತು ಮೊರೆವಿಯಾದಲ್ಲಿ ನೆಲೆಸಿರುವ ಜಖ್ಖರು, (ii) ಸ್ಲೊವಾಕಿಯಾದ ನಿವಾಸಿಗಳಾದ ಸ್ಲೋವಾಕೀಯರು ಮತ್ತು (iii) ರುಥೇನಿಯಾದಲ್ಲಿ ವಾಸಿಸುವ ರುಥೇನಿಯನ್ನರು ಎಂಬ ಮೂರು ಪ್ರಧಾನ ರಾಷ್ಟ್ರೀಯ ಜನಾಂಗವನ್ನು ತನ್ನಲ್ಲಿ ಹುದುಗಿಸಿಕೊಂಡಿರುವ ಒಂದು ಸಂಘಟಿತ ರಾಜ್ಯ ಇದು.

ಜಕೊಸ್ಲೋವಾಕಿಯ ಬಹಳ ಕಡಿಮೆ ಅವಧಿಗೆ ಅಸ್ತಿತ್ವದಲ್ಲಿದ್ದ ರಾಜ್ಯ. ಇದರ ಅಸ್ತಿತ್ವದ ಅವಧಿ ಸರಿಯಾಗಿ ಎರಡು ದಶಕಗಳು ಮಾತ್ರ ೧೯೩೯ರ ಮಾರ್ಚ್ ಹದಿನೈದನೇ ತಾರೀಖು ಇದು ನಿರ್ಮಾಣವಾಯಿತು. ಇಲ್ಲವೇ ಸ್ವತಂತ್ರ ರಾಜ್ಯವೆಂಬ ಪಟ್ಟದಿಂದ ಪದಚ್ಯುತಗೊಂಡಿತು. ಅನಂತರ ಇದು ಜರ್ಮನಿಯ ರಕ್ಷಣೆಯ ಕೈಗೂಸಾಯಿತು. ಇದರ ವಿನಾಶಕ್ಕೆ ಕಾರಣವಾದ ಸಂದರ್ಭಗಳು ಬಹಳವಾಗಿ ದಿಗ್ಭ್ರಮೆ ಹಿಡಿಸುವಂಥವು. ಇದರ ಹುಟ್ಟಿಗೆ ಕಾರಣವಾದಂಥ ಶಕ್ತಿಗಳೇ ಇದರ ಅಳಿವಿಗೂ ಕಾರಣವಾದದ್ದು ದುರ್ದೈವದ ಸಂಗತಿ. ಗ್ರೇಟ್ ಬ್ರಿಟನ್, ಫ್ರಾನ್ಸ್ ಮತ್ತು ಇಟಲಿ ಮತ್ತು ಹಿಂದಿನ ಮಿತ್ರ ರಾಷ್ಟ್ರವಾಗಿದ್ದ ಜಕೊಸ್ಲೊವಾಕಿಯಾವನ್ನು ಗೆಲ್ಲಲು ತಮ್ಮ ಎಂದಿನ ಬದ್ಧವೈರಿ ರಾಷ್ಟ್ರವಾಗಿದ್ದ ಜರ್ಮನಿಗೆ ಸಹಾಯ ಮಾಡಿದವು. ತತ್ಫಲವಾಗಿ ೧೯೩೮ರ ಸೆಪ್ಟೆಂಬರ್ ೩೦ರಂದು ಮ್ಯೂನಿಚ್ ಒಪ್ಪಂದಕ್ಕೆ ಸಹಿ ಹಾಕುವುದರ

---

* ಟರ್ಕಿಯ ವಿಸ್ತೀರ್ಣ ೨೮೪, ೪೯೨ ಚದರ ಮೈಲಿಗಳು. ಅದರಲ್ಲಿ ೩,೭೦೮ ಚದರ ಮೈಲಿಯನ್ನು ಕೊಳಗಳು ಮತ್ತು ಜೌಗು ಆಕ್ರಮಿಸಿವೆ. ಯೂರೋಪಿನಲ್ಲಿ ಟರ್ಕಿಯ ನೆಲೆ ೯,೨೫೭ ಚದರ ಮೈಲಿಗಳು ಮಾತ್ರ.

ಮೂಲಕ ಜಕೊಸ್ಲೊವಾಕಿಯಾ ಜರ್ಮನರ ಅಧೀನವಾಗುವುದು ಅನಿವಾರ್ಯವಾಯಿತು. ಇದರಿಂದಾಗಿ ಕಳೆದ ಶತಮಾನದಲ್ಲಿ ಜಕ್ ಜನರು ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟಗಳು ವ್ಯರ್ಥವಾದವು. ಪುನಃ ಇವರು ತಮ್ಮ ಹಿಂದಿನ ಜರ್ಮನ್ ಯಾಜಮಾನ್ಯಕ್ಕೆ ಮಣೆ ಹಾಕುವುದು ಅನಿವಾರ್ಯವಾಯಿತು.

## III

ಟರ್ಕಿಯ ವಿನಾಶಕ್ಕೆ ಕಾರಣಗಳೇನು?

ಲಾರ್ಡ್ ಎವರ್ಸ್‌ಲಿ ತನ್ನ 'ಟರ್ಕಿಷ್ ಸಾಮ್ರಾಜ್ಯ'* ಎಂಬ ಕೃತಿಯಲ್ಲಿ ಟರ್ಕಿಯ ಅವನತಿಗೆ ಕಾರಣಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡಿದ್ದಾನೆ. ಇವುಗಳಲ್ಲಿ ಕೆಲವು ಆಂತರಿಕವಾಗಿದ್ದರೆ, ಮತ್ತೆ ಕೆಲವು ಬಾಹ್ಯ ಕಾರಣಗಳು. ಆಂತರಿಕ ಕಾರಣಗಳು ಎರಡು ಬಗೆಯವು. ಮೊದಲನೆಯ ಕಾರಣ ಒಟ್ಟೋಮನ್ ವಂಶದ ಭ್ರಷ್ಟತೆ. ರಾಷ್ಟ್ರದ ಪರಮಾಧಿಕಾರ ಸುಲ್ತಾನನ ವಜೀರರ ಕೈಯಲ್ಲಿ ಇಲ್ಲವೇ ಬಹುವಾಗಿ ಸುಲ್ತಾನನ ಜನಾನದ ಹೆಂಗಸರ ಕೈಯ್ಯಲ್ಲಿರುತ್ತಿತ್ತು. ಸುಲ್ತಾನನ ಮಾರ್ಗದರ್ಶನದಲ್ಲಿಯೇ ರಾಜ್ಯದ ಆಡಳಿತ ಸಾಗುತ್ತಿದೆ ಎಂಬಂಥ ತೋರಿಕೆಯ ತುರ್ಕಿಸರ್ಕಾರದ ಅಧಿಕೃತ ಆಡಳಿತದ ವಿರುದ್ಧ ಯಾವಾಗಲೂ ಜನಾನಕ್ಕೆ ಬದ್ಧವೈರ. ಉನ್ನತಾಧಿಕಾರಿಗಳಿಂದ ಹಿಡಿದು ಕೆಳದರ್ಜೆಯವರೆಗಿನ ಎಲ್ಲ ಅಧಿಕಾರಿಗಳಿಗೂ, ತಮ್ಮಲ್ಲಿ ಸಾರ್ವಜನಿಕ ಹಾಗೂ ಸೈನಿಕ ಅಧಿಕಾರವನ್ನು ಹೆಚ್ಚು ಬೆಲೆ ಕೊಡುವವರಿಗೆ ವಿಕ್ರಯಿಸಿಕೊಳ್ಳುವುದರಲ್ಲಿಯೇ ಆಸಕ್ತಿ. ತಮ್ಮ ಉದ್ದೇಶ ಸಾಧನೆಗಾಗಿ, ಜನಾನದವರಿಗೆ ಲಂಚದ ರುಚಿ ತೋರಿಸಿ ಆ ಮೂಲಕ ಸುಲ್ತಾನನ ಅಧಿಕಾರ ಮುದ್ರೆ ಪಡೆಯುವುದು ಇವರಿಗೆ ಅನುಕೂಲಕರವಾಗಿತ್ತು. ಹೀಗೆ ಜನಾನದಲ್ಲಿ ಬೇರುಬಿಟ್ಟ ಭ್ರಷ್ಟಾಚಾರ ಅನಂತರ ಟರ್ಕಿ ಸಾಮ್ರಾಜ್ಯವನ್ನಿಡೀ ವ್ಯಾಪಿಸಿಕೊಂಡದ್ದು, ಟರ್ಕಿಯ ಅವನತಿಗೆ ಪ್ರಮುಖ ಕಾರಣ. ಟರ್ಕಿಷ್ ಸಾಮ್ರಾಜ್ಯ ವಿನಾಶದ ಮತ್ತೊಂದು ಪ್ರಬಲ ಕಾರಣ ಅದರ ಸೈನ್ಯ ಶಿಥಿಲೀಕರಣ. ಸೈನ್ಯದ ಶಿಥಿಲೀಕರಣಕ್ಕೂ ಎರಡು ಕಾರಣಗಳುಂಟು. ಒಂದು, ಕಳೆದ ಮುನ್ನೂರು ವರ್ಷಗಳಲ್ಲಿ ತುರ್ಕೀಯ ಭೂಸೇನೆ ಪ್ರಾರಂಭದಲ್ಲಿ ತಾನು ಅನೇಕ ಬಾರಿ ಯುದ್ಧಗಳಲ್ಲಿ ಜಯಭೇರಿ ಬಾರಿಸಿದಾಗ ತೋರಿಸುತ್ತಿದ್ದ ಧೈರ್ಯ ಹಾಗೂ ಆಕ್ರಮಣ ಸಾಮರ್ಥ್ಯವನ್ನು ಪ್ರಸ್ತುತ ಕಳೆದುಕೊಂಡಿರುವಂಥದು. ಟರ್ಕಿ ಸೈನ್ಯದಲ್ಲಿ ಈ ಬಗೆಯ ಸಾಹಸ ಮತ್ತು ಧೈರ್ಯದ ಅಪಹರಣಕ್ಕೆ ಕಾರಣ ಅದರ ಅಂಗರಚನೆ ಮತ್ತು ಸೈನಿಕರ ಆಯ್ಕೆಯನ್ನು ಟರ್ಕೀಯರು ಮತ್ತು ಅರಬ್ಬರಿಗೆ ಮಾತ್ರ ಸೀಮಿತಗೊಳಿಸಿಕೊಂಡದ್ದು. ಇದರಿಂದಾಗಿ ಸೈನ್ಯಕ್ಕೆ ಆಯ್ಕೆಯಾಗುವ ಅವಕಾಶದಿಂದ ವಂಚಿತರಾಗಬೇಕಾಗಿ ಬಂದದದ್ದರ ಜೊತೆಗೆ, ಯಾವುದೇ ಹೊಸ ಆಕ್ರಮಣಕ್ಕೆ ಕೈಹಾಕದೆ, ದೇಶ ರಕ್ಷಣಾತ್ಮಕ ನಿಲುವನ್ನು ಹೊಂದಿ, ಈಗಾಗಲೇ ಗೆದ್ದಿರುವಂಥದನ್ನು ಉಳಿಸಿಕೊಂಡು ಹೋಗುವ ಮನೋಭಾವವನ್ನು ಹೊಂದಿರುವಂಥ ಸಮಯದಲ್ಲಿ, ಈ ಹಿಂದೆ ಸೈನಿಕರು ಪ್ರದರ್ಶಿಸಿದ ಶೌರ್ಯ, ಸಾಹಸಕ್ಕೆ ಪ್ರತಿಯಾಗಿ ಉತ್ತೇಜಕ ಬಳುವಳಿಯಾಗಿ ಅವರಿಗೆ ಹಂಚಲು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಯಾವ ಭರವಸೆಯೂ ಕಂಡುಬರದಿರುವಂಥದು ಎರಡನೆಯ ಕಾರಣ.

---

* ಷೇಕ್ ಅಬ್ದುಲ್ ರಶೀದ್ ಅವರ ಸಂಗ್ರಹ ನೋಡಿ

ಟರ್ಕಿಯನ್ನು ನಾಶಗೊಳಿಸಿದ ಬಾಹ್ಯ ಕಾರಣಗಳಲ್ಲಿ ಬಹುಮುಖ್ಯವಾದುದು ಯುರೋಪಿಯನ್ ರಾಷ್ಟ್ರಗಳ ದುರಾಶಾ ಪ್ರವೃತ್ತಿ. ಆದರೆ, ನೈಜ ಕಾರಣವನ್ನು ಒಪ್ಪಿಕೊಳ್ಳಲು ಈ ದೃಷ್ಟಿಕೋನ ನಿರಾಕರಿಸುತ್ತದೆ. ಟರ್ಕಿಯ ಪತನಕ್ಕೆ ನಿಜವಾದ ಕಾರಣ ಅದರ ಅಧೀನ ಪ್ರಜೆಗಳಲ್ಲಿ ಬೇರುಬಿಟ್ಟ ರಾಷ್ಟ್ರಪ್ರಜ್ಞೆ, ಗ್ರೀಕರು, ಸೆರ್ಬರು, ಬಲ್ಗೇರಿಯನ್ನರು ಮತ್ತು ಇತರ ಬಾಲ್ಕನರು ಟರ್ಕಿಯ ಅಧಿಕಾರದ ವಿರುದ್ಧ ತಿರುಗಿಬಿದ್ದದ್ದು ಸಂಶಯಾತೀತವಾಗಿ ಇಸ್ಲಾಂ ಮತ್ತು ಕ್ರೈಸ್ತ ಮತಸ್ಥರ ನಡುವೆ ಘರ್ಷಣೆಗೆ ನಾಂದಿಯಾಯಿತು. ಇದು ಮೇಲ್ಮೈ ಸ್ತರದಲ್ಲಿ ಗಮನಿಸಬಹುದಾದ ಇನ್ನೊಂದು ದೃಷ್ಟಿಕೋನ. ಈ ಪ್ರತಿಭಟನೆಗಳೆಲ್ಲ ರಾಷ್ಟ್ರೀಯ ಮನೋಭಾವದಿಂದುಂಟಾದ ಸಾರ್ವಜನಿಕ ಘೋಷಣೆಗಳು. ಟರ್ಕಿಷ್ ದುರಾಡಳಿತ, ಇಸ್ಲಾಮೀಯದ ಬಗೆಗಿನ ಕ್ರಿಶ್ಚಿಯನರ ರೂಢ ವೈರ ಹಾಗೂ ಯೂರೋಪಿಯನ್ ರಾಷ್ಟ್ರಗಳ ಯಂತ್ರೀಕರಣ ಇವೆಲ್ಲ ನಿಸ್ಸಂಶಯವಾಗಿ ದಂಗೆಯ ಹಿಂದಿರುವ ತಕ್ಷಣದ ಕಾರಣಗಳು. ದಂಗೆಕೋರನನ್ನು ಪ್ರಚೋದಿಸಿದ ನೈಜಶಕ್ತಿಯನ್ನು ಇವಾವೂ ಸರಿಯಾಗಿ ವಿಶ್ಲೇಷಿಸುವುದಿಲ್ಲ. ರಾಷ್ಟ್ರೀಯ ಪ್ರಜ್ಞೆಯೇ ಪ್ರತಿಭಟನೆಯ ಹಿಂದಿರುವ ಪ್ರೇರೇಪಣ ಶಕ್ತಿ; ಪ್ರತಿರೋಧಗಳೆಲ್ಲ ಇದರ ಆಂತರಿಕ ಪ್ರಚೋದನೆಯ ಫಲ. ಹೀಗೆ ಟರ್ಕಿಯ ಪತನಕ್ಕೆ ಈ ಬಗೆಯ ರಾಷ್ಟ್ರೀಯ ಮನೋಭಾವ ಕಾರಣ ಎಂಬುದು ಕಡೆಯ ಯುದ್ಧದಲ್ಲಿ ದಂಗೆ ಎದ್ದ ಅರಬ್ಬರು ಮತ್ತವರ ಸ್ವಾತಂತ್ರ್ಯಾಪೇಕ್ಷೆಯಿಂದ ಸಾಧಿತವಾಗುತ್ತದೆ. ಇಲ್ಲಿ ಇಸ್ಲಾಮೀಯರು ಮತ್ತು ಕ್ರಿಶ್ಚಿಯನ್ನರ ನಡುವೆ ಘರ್ಷಣೆ ಇರಲಿಲ್ಲ ಅಥವಾ ಇವರ ಸಂಬಂಧ ಪೀಡಿಸುವವರು ಮತ್ತು ಪೀಡನೆಗೊಳಗಾದವರ ಬಗೆಯದೂ ಆಗಿರಲಿಲ್ಲ. ಹೀಗಿದ್ದೂ ಅರಬ್ಬರು ಟರ್ಕಿಷ್ ಸಾಮ್ರಾಜ್ಯದಿಂದ ಸ್ವಾತಂತ್ರ್ಯ ಬಯಸಿದರಾದರೂ ಏಕೆ? ಏಕೆಂದರೆ, ಅರಬ್ಬರು ರಾಷ್ಟ್ರೀಯ ಪ್ರಜ್ಞೆಯಿಂದ ಪ್ರಭಾವಿತರಾಗಿದ್ದರು. ಟರ್ಕಿಷ್ ಅಧಿಕಾರದಲ್ಲಿ ಅಡಿಯಾಳಾಗಿರುವುದಕ್ಕಿಂತ ಅರಬ್ ರಾಷ್ಟ್ರೀಯರೆನಿಸಿಕೊಳ್ಳುವುದು ಅವರ ಇಚ್ಛೆಯಾಗಿತ್ತು.

ಜಕೊಸ್ಲೊವಾಕಿಯಾದ ವಿನಾಶಕ್ಕೆ ಕಾರಣವೇನು? ಜರ್ಮನರ ಆಕ್ರಮಣಕಾರೀ ಮನೋಭಾವವೇ ಇದಕ್ಕೆ ಕಾರಣ ಎಂಬುದು ಸಾಮಾನ್ಯ ತಿಳಿವಳಿಕೆ. ಸ್ವಲ್ಪಮಟ್ಟಿಗೆ ಇದು ನಿಜವೂ ಹೌದು. ಆದರೆ ಇದೇ ಸತ್ಯವಲ್ಲ, ಜಕೊಸ್ಲೊವಾಕಿಯಾದ ಶತ್ರು ಜರ್ಮನಿ ಒಂದೇ ಆಗಿದ್ದರೆ, ಅದು ಜರ್ಮನರ ಅತಿಕ್ರಮಣದಿಂದ ತನ್ನ ಕೆಲವು ಗಡಿಯಂಚಿನ ಭಾಗಗಳನ್ನು ಮಾತ್ರ ಕಳೆದುಕೊಳ್ಳುತ್ತಿತ್ತು. ಇದಕ್ಕಿಂತ ಹೆಚ್ಚೇನೂ ಜರ್ಮನ್ ಆಕ್ರಮಣದಿಂದ ಅದಕ್ಕೆ ನಷ್ಟವಾಗುತ್ತಿರಲಿಲ್ಲ. ಆದರೆ ವಾಸ್ತವವಾಗಿ ಜಕೊಸ್ಲೊವಾಕಿಯಾದ ನಾಶಕ್ಕೆ ಅದರ ಗಡಿಯೊಳಗಣ ಆಂತರಿಕ ಶತ್ರುಗಳೇ ಕಾರಣ. ಆ ಶತ್ರುಗಳು ಮತ್ತಾರೂ ಅಲ್ಲ, ರಾಷ್ಟ್ರೀಯತೆಯ ಹಠವಾದಿಗಳಾದ ಸ್ಲೊವಕರು, ಇವರು ಸ್ವತಂತ್ರ ಸ್ಲೊವಕಿಯಾವನ್ನು ಪಡೆಯುವುದಕ್ಕಾಗಿ ರಾಜ್ಯದ ಆಂತರಿಕ ಐಕ್ಯತೆಯನ್ನು ಒಡೆದು ಚೂರುಚೂರು ಮಾಡಿದರು.

ಜೆಕ್ ಜನರೊಡನೆ ಸ್ಲೊವಕರು ಸೇರಿ ಒಂದೇ ರಾಜ್ಯವನ್ನು ರೂಪಿಸಿಕೊಂಡ ಹಿನ್ನೆಲೆಯಲ್ಲಿ ಕೆಲವು ಊಹಾತ್ಮಕ ನಿಲವುಗಳಿದ್ದವು. ಅವುಗಳಲ್ಲಿ ಮೊದಲನೆಯದು, ಇಬ್ಬರಿಗೂ ತೀರಾ ಹತ್ತಿರದ ಸಂಬಂಧವಿದೆ; ನಾವಿಬ್ಬರೂ ಒಂದೇ; ಆದುದರಿಂದ ಸ್ಲೊವಕರು ಜೆಕೊಸ್ಲೊವಕರ ಒಂದು ಕವಲು ಮಾತ್ರ ಎಂಬ ನಂಬಿಕೆ. ಎರಡನೆಯದಾಗಿ ಇಬ್ಬರೂ ಮಾತನಾಡುವುದು 'ಜೆಕೊಸ್ಲೊವಾಕ್' ಎಂಬ ಒಂದೇ ಭಾಷೆಯನ್ನು ಮೂರನೆಯದಾಗಿ ಸ್ಲೊವಕರಿಗೆ ಬೇರೆಯದಾದ ರಾಷ್ಟ್ರ ಪ್ರಜ್ಞೆ ಇಲ್ಲ. ಯಾರೂ ಈ ತಿಳಿವಳಿಕೆಯಗಳನ್ನು ಐಕ್ಯತೆಯ ಸಂದರ್ಭದಲ್ಲಿ ಪರಿಶೀಲಿಸಲಿಲ್ಲ. ಏಕೆಂದರೆ ಈ ಐಕ್ಯತೆಯನ್ನು ಬಯಸಿದವರು ಸ್ಲೊವಕರೆ, ಸ್ಲೊವಕ್ ಜನಾಂಗದ ಪ್ರತಿನಿಧಿಗಳೇ ೧೯೧೮ರ ಶಾಂತಿ ಸಭೆಯಲ್ಲಿ ತಮ್ಮ ಈ ಅಭೀಪ್ಸೆಯನ್ನು ಅಭಿವ್ಯಕ್ತಿಸಿದ್ದಾರೆ.

ಇದೊಂದು ತೋರಿಕೆಯ ಹಾಗೂ ಅವಸರದ ಕ್ರಮ. ಪ್ರೊ. ಮೆಕಾರ್ಟನ್* ಅವರು ಗುರುತಿಸಿರುವ ಬಗೆ ಇದು.

> **"..... 'ಈ ಇತಿಹಾಸದ (ಜೆಕ್ ಮತ್ತು ಸ್ಲೊವಕ್ ಜನರ ನಡುವಣ ಸಂಬಂಧ) ಪರಿಗಣನೆಯಿಂದ ಹೊರಹೊಮ್ಮುವ ಪ್ರಮುಖ ರಾಜಕೀಯ ಅಂಶವೆಂದರೆ, ಪ್ರಸಕ್ತಕಾಲದ ಉದ್ದೇಶಕ್ಕನುಗುಣವಾಗಿ ಸ್ಲೊವಕರಲ್ಲಿ ರಾಷ್ಟ್ರೀಯ ಪ್ರಜ್ಞೆ ಜಾಗೃತಗೊಂಡು ಅಂತಿಮವಾಗಿ ಹರಳುಗಟ್ಟಿದ ಬಗೆ...' ಜಕೊಸ್ಲೊವಾಕಿಯಾ ಭಾಷೆ ಮತ್ತು ಜನ ಒಡೆಯದೆ ಒಂದಾಗಿ ಇರಬೇಕೆಂದು ನಂಬುವ ವಿಷಯದಲ್ಲಿ ರಾಜಿ ಮಾಡಿಕೊಳ್ಳದ ಅಪ್ಪಟ ಜನ, ಕನಿಷ್ಠ ಸ್ಲೊವಾಕಿಯನ್ನರಲ್ಲಿಯಾದರೂ ಯಾವಾಗಲೂ ಅಧಿಕವಾಗಿರಲಿಲ್ಲ. ಜೆಕ್ ಜನರು ಮತ್ತು ಸ್ಲೊವಕ್‌ರ ನಡುವೆ ಇರುವ ಅಂತರದ ನೈಜ ಅನುಭವದಿಂದಾಗಿ, ಅಂಥವರ ಸಂಖ್ಯೆ ಈಗ ಕೇವಲ ಬೆರಳೆಣಿಕೆಯಷ್ಟು, ಪ್ರಸ್ತುತ ಸ್ವತಃ ಜಕ್ ಜನರೇ ಸ್ಲೊವಕ್ ಭಾಷೆಯನ್ನು ಸ್ಲೊವಕಿಯಾದ ಅಧಿಕೃತ ಭಾಷೆಯೆಂದು ಪರಿಗಣಿಸಿದ್ದಾರೆ. ಈಗ 'ಜೆಕೊಸ್ಲೊವಕಿಯಾ' ಎಂಬ ಹೆಸರು ಆಡಳಿತದ ಕಡತಗಳಿಗೆ ಮತ್ತು ವಿದೇಶಿಯರ ಅವಗಾಹನೆಗಾಗಿ ಒದಗಿಸುವ ಸಾಹಿತ್ಯಕ್ಕಷ್ಟೇ ಶೋಭೆಯಾಗುಳಿದಿದೆ. ಹೀಗಾಗಿ ರಾಜಕೀಯ ಮತ್ತು ರಾಷ್ಟ್ರೀಯ ಪ್ರತಿರೋಧಕ ಶಕ್ತಿ, ಅಷ್ಟೇನೂ ಭದ್ರವಾಗಿ ಉಳಿದಿಲ್ಲ. ಈ ದೇಶದಲ್ಲಿನ ನನ್ನ ವಾಸ್ತವ್ಯದ ಒಂದೆರಡು ವಾರಗಳಲ್ಲಿ ನಾನು ನೆನಪಿಸಿಕೊಳ್ಳುವುದೇನೆಂದರೆ ಒಂದು ವ್ಯಕ್ತಿ 'ಹರ್‌ಸೆಲ್ಫ್' ಎಂಬ ಪದವನ್ನು ಬಳಸಿದುದನ್ನು ಆಲಿಸಿದ ಬಗೆ, ಆ ವ್ಯಕ್ತಿ ಅರ್ಧ ಜರ್ಮನ್, ಅರ್ಧ ಹಂಗೇರಿಯನ್ ಹುಡುಗಿ, ನಿಜವಾದ ರಾಜಕೀಯ ಪ್ರಜ್ಞೆಯಿಂದ ಆಕೆ ಆ ಪದವನ್ನು ಬಳಸಿದ್ದಳು. ಅರ್ಥಾತ್ ಅವಳ ಆಲೋಚನೆ ವ್ಯರ್ಥ ಏಕೀಕರಣ ವಾದವಾಗಿತ್ತು. ಜಕ್ ಜನರಿರಲಿ, ಸ್ಲೊವಕ್ ಜನರಿರಲಿ 'ಹಿಮ್‌ಸೆಲ್ಫ್' ಎಂದು ಭಾವಿಸುವುದಿಲ್ಲ ಮತ್ತು ಸಹಜವಾಗಿ ಮಾತನಾಡುವಾಗ ಹೇಳುವುದಿಲ್ಲ. ಬದಲಾಗಿ ಜೆಕ್ ಅಥವಾ ಸ್ಲೊವಕ್ ಎಂದೇ ಹೇಳಿಕೊಳ್ಳುತ್ತಾರೆ."**

ಸ್ಲೊವಕರಲ್ಲಿ ಸದಾ ಜಾಗೃತವಾಗಿದ್ದ ಈ ರಾಷ್ಟ್ರ ಪ್ರಜ್ಞೆ, ಜರ್ಮನ್ನರು ಜೆಕೊಸ್ಲೊವಾಕಿಯಾದ ಸ್ವಾಯತ್ತತೆಗೆ ಕೆಲವು ಬೇಡಿಕೆಗಳನ್ನು ಮುಂದಿಟ್ಟಾಗ ಲಾವಾರಸದಂತೆ ಹೊರಬಂತು. ಜರ್ಮನರು ತಮ್ಮ ಉದ್ದೇಶ ಸಾಧನೆಗಾಗಿ ಅಂತರರಾಷ್ಟ್ರೀಯ ರಾಜಕೀಯದಲ್ಲಿ ದರೋಡೆಕೋರ ನೀತಿಯನ್ನು ಮುಂದುಮಾಡಿ "ನಾವು ಕೇಳಿದ್ದನ್ನು ಕೊಡಿ, ಇಲ್ಲವಾದಲ್ಲಿ ನಿಮ್ಮ ಅಂಗಡಿ ಸ್ಫೋಟಿಸುತ್ತೇವೆ" ಎಂದು ಬೆದರಿಸಿದರು. ಸ್ಲೊವಕರು ತಮ್ಮ ಸ್ವಾಯತ್ತತೆಗಾಗಿ ಮನವಿ ಸಲ್ಲಿಸಿದರು. ಆದರೆ ಅವರ ವಿಧಾನ ಬೇರೆ ತೆರನಾಗಿತ್ತು. ಅವರು ದರೋಡೆಕೋರ ನೀತಿಯನ್ನು ಅನುಸರಿಸಲಿಲ್ಲ. ಬದಲಿಗೆ ಸ್ವಾಯತ್ತತೆಗಾಗಿ ಮನವಿ ಮಾಡಿಕೊಳ್ಳುವುದಷ್ಟಕ್ಕೆ ಸೀಮಿತಗೊಂಡರು. ಅದಕ್ಕಾಗಿ ಎಲ್ಲವನ್ನೂ ತ್ಯಾಗಮಾಡಿ ನಿಂತರು. ಸ್ಲೊವಕಿಯಾ ಸ್ವಾಯತ್ತತೆಯ ಚಳವಳಿಯ ನೇತಾರ ಡಾ. ಟಿಸೊ ಅಕ್ಟೋಬರ್ ೮ರಂದು ಹೊರಡಿಸಿದ ಘೋಷಣೆಯಲ್ಲಿ "ನಾವು ನಮ್ಮ ಗುರಿಯತ್ತ ದೇವರಿಗಾಗಿ, ರಾಷ್ಟ್ರಕ್ಕಾಗಿ ಕ್ರೈಸ್ತೀಯ ಮತ್ತು ರಾಷ್ಟ್ರೀಯ ಸ್ಫೂರ್ತಿಯಿಂದ ಮುಂದೆ ಸಾಗುತ್ತೇವೆ" ಎಂದಿದ್ದಾರೆ. ತಮ್ಮ ಪ್ರಾಮಾಣಿಕೆಯಲ್ಲಿ ನಂಬಿಕೆಯಿಟ್ಟು, ಕಿರಿಕಿರಿಯ ರಾಜಕೀಯಕ್ಕೆ ಅವಕಾಶ ಕೊಡಬಾರದೆಂಬ ಸದಿಚ್ಛೆಯಿಂದ, ೧೯೩೮ರ ನವೆಂಬರ್ ತಿಂಗಳಿನಲ್ಲಿ ಪ್ರಾಗ್‌ನ ರಾಷ್ಟ್ರೀಯ ಶಾಸನಸಭೆ, ಮ್ಯೂನಿಚ್ ಒಡಂಬಡಿಕೆಯ ಕಾನೂನನ್ನು ಜಾರಿಮಾಡಿತು. ಇದರಲ್ಲಿ ಒದಗಿಸಿದ್ದ ಅವಕಾಶಗಳು ಕೈಗೆಟುದಂಥವು. ಸ್ಲೊವಕಿಯಾಕ್ಕೆ ಬೇರೆ

---

* ಸಿ.ಎ. ಮೆಕಾರ್ಟನ್– ಹಂಗರಿ ಮತ್ತು ಅದರ ಉತ್ತರಾಧಿಕಾರಿಗಳು (ಆಕ್ಸ್‌ಫರ್ಡ್) ೧೯೩೭. ಪು.೧೩೬.

ಒಂದು ಶಾಸನ ಸಭೆ ಬೇಕಾಗುತ್ತದೆ. ಇದು ಸ್ಲೋವಕಿಯಾದ ಸಂವಿಧಾನವನ್ನು, ಜೆಕೊಸ್ಲೋವಕಿಯನ್ ಗಣರಾಜ್ಯದ ಕಾನೂನು ವ್ಯವಸ್ಥೆಯ ಚೌಕಟ್ಟಿನಲ್ಲಿ ತೀರ್ಮಾನಿಸುವಂತಿರಬೇಕು. ಸ್ಲೋವಕಿಯಾ ಪ್ರಾಂತದಲ್ಲಿನ ಏನೇ ಬದಲಾವಣೆ ಸ್ಲೋವಕಿಯ ಶಾಸನ ಸಭೆಯ ಮೂರನೇ ಎರಡು ಬಹುಮತದ ಅನುಮೋದನೆಯನ್ನು ಪಡೆದುಕೊಳ್ಳಬೇಕು. ಸ್ಲೋವಕಿಯಾಗೇ ವಿಶೇಷವಾಗಿ ಸಂಬಂಧಿಸಿದಂಥ ಅಂತರ ರಾಷ್ಟ್ರೀಯ ಒಪ್ಪಂದಗಳಿಗೆ ಸ್ಲೂವತ್ ಶಾಸನಸಭೆಯ ಒಪ್ಪಿಗೆ ಕಡ್ಡಾಯ. ಸ್ಲೋವಕಿಯಾದ ಕೇಂದ್ರ ರಾಜ್ಯದ ಆಡಳಿತ ನಡೆಸುವ ಅಧಿಕಾರಿಗಳೆಲ್ಲ ಪ್ರಥಮತಃ ಸ್ಲೋವಕಿಯನ್ನರೇ ಆಗಿರಬೇಕು. ಕೇಂದ್ರದ ಎಲ್ಲ ಸಂಸ್ಥೆಗಳಲ್ಲಿ, ಸಭೆಗಳಲ್ಲಿ, ನಿಯೋಗಗಳಲ್ಲಿ ಮತ್ತಿತರ ಸಂಘಗಳಲ್ಲಿ ಸೂಕ್ತ ಪ್ರಾತಿನಿಧ್ಯವನ್ನು ಸ್ಲೋವಕಿಯರಿಗೆ ಖಾತರಿಗೊಳಿಸಬೇಕು. ಹಾಗೆಯೇ ಚೆಕೊಸ್ಲೋವಕ್ ಗಣರಾಜ್ಯವು ಅಂತರರಾಷ್ಟ್ರೀಯ ಸಂಘಗಳಲ್ಲಿ ಪಾಲ್ಗೊಳ್ಳುವಂತೆ ಸ್ಲೋವಕಿಯಾಕ್ಕೆ ಕರೆಕೊಟ್ಟಾಗಲೆಲ್ಲ ಅದು ಎಲ್ಲ ಕಡೆಯೂ ಸೂಕ್ತ ಪ್ರಾತಿನಿಧ್ಯವನ್ನು ವಹಿಸಿಕೊಡಬೇಕು. ಸ್ಲೋವಕಿಯ ಸೈನಿಕರು ಯುದ್ಧ ವಿರಾಮ ವೇಳೆಯಲ್ಲೆಲ್ಲ ಸಾಧ್ಯವಾದಷ್ಟು ಸ್ಲೋವಕಿಯಾದಲ್ಲೇ ತಂಗಬೇಕು. ಶಾಸನಬದ್ಧ ಅಧಿಕಾರಕ್ಕೆ ಒಳಪಡುವಂಥ ಎಲ್ಲ ಸಾಮಾನ್ಯ ವಿಷಯಗಳು ಜೆಕೊಸ್ಲೋವಕಿಯಾ ಪಾರ್ಲಿಮೆಂಟಿನ ಅಧೀನಕ್ಕೊಳಪಡಬೇಕು. ಈ ಎಲ್ಲ ಹಕ್ಕುಗಳನ್ನು ಸ್ಲೋವಕರಿಗೆ ಖಾತರಿಪಡಿಸುತ್ತಾ, ರಾಷ್ಟ್ರೀಯ ಶಾಸನಸಭೆ ಏನಾದರೂ ಸಂವಿಧಾನಾತ್ಮಕ ಬದಲಾವಣೆಗಳನ್ನು ಮಾಡಲು ತೆಗೆದುಕೊಳ್ಳುವ ತೀರ್ಮಾನ ಊರ್ಜಿತವಾಗಬೇಕಾದರೆ ಸ್ಲೋವಕಿಯಾದ ರಾಷ್ಟ್ರೀಯ ಶಾಸನಸಭೆಗೆ ಆಯ್ಕೆಗೊಂಡ ಸದಸ್ಯರ ಬಹುಮತ ಸಂವಿಧಾನಾತ್ಮಕ ಅಗತ್ಯತೆಯನ್ನು ಪೂರೈಸಬೇಕು ಎಂದ ಸ್ಲೂವಕ್ ಸಂವಿಧಾನ ಕಾಯಿದೆ ಸ್ಪಷ್ಟಪಡಿಸಿದೆ. ಹಾಗೆಯೇ ಗಣರಾಜ್ಯದ ರಾಷ್ಟ್ರಪತಿಯನ್ನು ಆಯ್ಕೆ ಮಾಡುವಾಗ ಸಂವಿಧಾನಬದ್ಧವಾಗಿ ತೀರ್ಮಾನಿಸಲಾದ ಪಾರ್ಲಿಮೆಂಟಿನ ಸದಸ್ಯರ ಬಹುಮತದ ಒಪ್ಪಿಗೆ ಇದ್ದರಷ್ಟೇ ಸಾಲದು. ಜೊತೆಗೆ ಸ್ಲೋವಕ್ ಸದಸ್ಯರ ಸೂಕ್ತ ಬಹುಮತದ ಒಪ್ಪಿಗೆಯೂ ಇರಬೇಕು. ಇನ್ನೂ ಮುಂದುವರಿದು ಒತ್ತಿ ಹೇಳಲಾಗಿರುವ ಅಂಶವೆಂದರೆ, ಕೇಂದ್ರ ಸರ್ಕಾರ ಸ್ಲೋವಕರ ವಿಶ್ವಾಸ ಮತವನ್ನು ಹೊಂದಿರಬೇಕು. ಅಲ್ಲದೆ, ಮೂರನೇ ಒಂದು ಭಾಗ ಸ್ಲೋವಕ್ ಸದಸ್ಯರಿಗೆ ಪಾರ್ಲಿಮೆಂಟಿನಲ್ಲಿ ಅವಿಶ್ವಾಸ ನಿರ್ಣಯವನ್ನು ಮಂಡಿಸುವ ಹಕ್ಕನ್ನು ಸಂವಿಧಾನ ಒದಗಿಸಿಕೊಟ್ಟಿದೆ. ಜಕ್ ಜನರ ಇಚ್ಛೆಗೆ ವಿರುದ್ಧವಾಗಿ ಈ ಸಂವಿಧಾನಾತ್ಮಕ ಬದಲಾವಣೆಗಳನ್ನು ಅಳವಡಿಸಲಾಯಿತು. ಹೀಗಾಗಿ ಇದರಿಂದ ಹಿಂದೆ ಇರದಿದ್ದ ಅಡ್ಡಗೆರೆ ಜೆಕ್ ಮತ್ತು ಸ್ಲೋವಕ್ ಜನರ ನಡುವೆ ಪ್ರತ್ಯಕ್ಷವಾಯಿತು. ಇವರ ನಡುವಣ ಸಣ್ಣಪುಟ್ಟ ಜಗಳಗಳು ಕ್ರಮೇಣ ಕರಗಿಹೋಗಬಹುದೆಂಬ ಭರವಸೆಯಿಂದ ಸಂವಿಧಾನಾತ್ಮಕ ಬದಲಾವಣೆಗಳನ್ನು ಮಾಡಲಾಯಿತು. ಸ್ಲೋವಕರ ಮನೋಭಾವನೇ ಅವರನ್ನು ಜೆಕ್ ಜನರ ಸಾಮೀಪ್ಯ ಎಳೆದುತರಬಹುದೆಂದು ಗ್ರಹಿಸಲಾಗಿತ್ತು. ಸಂವಿಧಾನಾತ್ಮಕ ತಿದ್ದುಪಡಿಯಿಂದ ಸ್ಲೋವಕಿಯಾಕ್ಕೆ ಸ್ವಾಯತ್ತ ಸ್ಥಾನಮಾನವನ್ನು ಖಾತರಿಪಡಿಸಲಾಗಿ, ಹೀಗೆ ಖಾತರಿಪಡಿಸಿದ್ದನ್ನು ಸ್ಲೋವಕಿಯಾದ ಒಪ್ಪಿಗೆ ಪಡೆಯದೆ ಮತ್ತೆ ಬದಲಾಯಿಸುವುದು ಸಾಧ್ಯವಿಲ್ಲವಾಗಿ, ಸ್ಲೋವಾಕಿಯರು ತಮ್ಮ ರಾಷ್ಟ್ರೀಯ ಅನನ್ಯತೆಯನ್ನು ಜಕ್ ಜನರೊಡನೆ ವಿಲೀನವಾಗಿ ಕಳೆದುಕೊಳ್ಳುವ ಪ್ರಶ್ನೆಯೇ ಇರಲಿಲ್ಲ. ಅಡ್ಡಗೆರೆಯು ದೊರಕಿಸಿಕೊಟ್ಟ ಸ್ವಾಯತ್ತತೆ ಎರಡು ಸಂಸ್ಕೃತಿಯನ್ನು ಬೇರ್ಪಡಿಸಿದರೂ ತಮ್ಮತನವನ್ನು ಕಳೆದುಕೊಳ್ಳುವುದರಿಂದ ಸ್ಲೋವಕಿಯರನ್ನು ರಕ್ಷಿಸಿತು.

ಹೊಸ ಸಂವಿಧಾನದ ಪ್ರಕಾರ ಕಾರ್ಯ್ದೆಯಾದ ಮೊದಲ ಸ್ಲೋವಕ್ ಪಾರ್ಲಿಮೆಂಟು ೧೯೩೯ರ ಜನವರಿ ೧೮ರಂದು ಪ್ರಾರಂಭವಾಯಿತು. ಈ ಪಾರ್ಲಿಮೆಂಟಿನ ರಾಷ್ಟ್ರಪತಿ ಡಾ.ಮಾರ್ಟಿನ್ ಸೂಕೂಲ್ "ಸ್ಲೋವಕರು ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟದ ಕಾಲ ಮುಗಿಯಿತು. ಈಗ ರಾಷ್ಟ್ರೀಯ ಪುನರ್ಜನ್ಮದ ಕಾಲ ಪ್ರಾರಂಭವಾಗಿದೆ" ಎಂದು ಪ್ರಕಟಿಸಿದರು. ಈಗ ಸ್ಲೋವಕಿಯ ತನ್ನ ಸ್ವಾಯತ್ತತೆಯನ್ನು

ಪಡೆದುಕೊಂಡಿದೆ. ಸ್ಲೋವಕಿಯರು ಇನ್ನು ಮುಂದೆ ಜೆಕ್ ಜನರ ಬಗೆಗೆ ದ್ವೇಷ ಭಾವನೆ ತಳೆಯುವ ಅಗತ್ಯವಿಲ್ಲ ಮತ್ತು ಈ ಎರಡು ಜನಾಂಗವೂ ಇನ್ನು ಮುಂದೆ ನಿಷ್ಠೆಯಿಂದ ಜೆಕೊ–ಸ್ಲೋವಕಿಯಾ ರಾಷ್ಟ್ರವನ್ನು ಕಾಪಾಡಬೇಕು ಎಂದು ಈ ಸಂದರ್ಭದಲ್ಲಿ ಮಾಡಲಾದ ಇತರ ಭಾಷಣಗಳಲ್ಲಿ ಅಭಿಪ್ರಾಯಪಡಲಾಯಿತು.

ಸ್ಲೋವಕ್ ಪಾರ್ಲಿಮೆಂಟಿನ ಉದ್ಘಾಟನೆಯಾಗಿ ಒಂದು ತಿಂಗಳು ಕಳೆದಿತ್ತೊ ಇಲ್ಲವೊ ಅದಕ್ಕಿಂತ ಮೊದಲೇ ಸ್ಲೋವಕ್ ರಾಜಕಾರಣಿಗಳು ತಮ್ಮ ದೇಶದ ಹೆಸರಿನ ಕೂಡುಗೆರೆಯ ವಿರುದ್ಧ ಸಮರ ಸಾರಿ ಸಂಪೂರ್ಣ ವಿಭಜನೆಗೆ ಒತ್ತಾಯಿಸಿದರು. ಉದ್ರೇಕಕಾರಿ ಭಾಷಣಗಳ ಮೂಲಕ ಜೆಕ್ ಜನರನ್ನು ಹೀನಾಮಾನವಾಗಿ ಖಂಡಿಸುತ್ತ, ಸಂಪೂರ್ಣ ಸ್ವತಂತ್ರ ಸ್ಲೋವಕಿಯಾಕ್ಕಾಗಿ ತಗಾದೆ ಮಾಡಿದರು. ಮಾರ್ಚ್ ಪ್ರಾರಂಭದ ವೇಳೆಗೆ ಸ್ಲೋವಕಿಯ ಪ್ರತ್ಯೇಕತಾವಾದಿಗಳ ಹಲವಾರು ನಮೂನೆಗಳು ಜೆಕೊಸ್ಲೋವಕಿಯಾದ ಐಕ್ಯತಾಭಾವಕ್ಕೆ ತೀವ್ರವಾದ ಬೆದರಿಕೆಯನ್ನೊಡ್ಡಿದವು. ಸ್ಲೋವಕರ ಆದ್ಯ ಪ್ರವರ್ತಕ ಟಿಸೊ ಮಾರ್ಚ್ ೯ರಂದು ಸ್ಲೋವಕಿಯಾದ ಸ್ವಾತಂತ್ರ್ಯವನ್ನು ಪ್ರಕಟಿಸಲು ತೀರ್ಮಾನಿಸಿದರು. ಈ ಚಟುವಟಿಕೆಯನ್ನು ನಿರೀಕ್ಷಿಸಿ ೧೦ರಂದು ಸೈನ್ಯ ಸ್ಲೋವಕಿಯಾ ಪ್ರವೇಶಿಸಿತು. ಗಣರಾಜ್ಯದ ರಾಷ್ಟ್ರಪತಿ ಡಾ. ಹಛಾ, ಪ್ರಧಾನಮಂತ್ರಿಯನ್ನು ಸ್ಲೋವಕ್‌ನ ಇತರ ಮಂತ್ರಿಗಳೊಡನೆ ವಜಾ ಮಾಡಿದರು. ಮರುದಿನ ಟಿಸೊ, ಪೊಲೀಸ್ ಉಸ್ತುವಾರಿಯಲ್ಲಿ ಬರ್ಲಿನ್‌ಗೆ ದೂರವಾಣಿಯ ಮೂಲಕ ಸಹಾಯಕ್ಕಾಗಿ ಯಾಚಿಸಿದರು. ಸೋಮವಾರ ಟಿಸೊ ಮತ್ತು ಹಿಟ್ಲರ್ ಬರ್ಲಿನ್‌ನಲ್ಲಿ ಭೇಟಿಯಾಗಿ ಒಂದೂವರೆ ಘಂಟೆಗಳಷ್ಟು ದೀರ್ಘಕಾಲ ಸಮಾಲೋಚನೆ ನಡೆಸಿದರು. ಹಿಟ್ಲರನೊಡನೆ ಸಂಭಾಷಿಸಿದ ಮರುಕ್ಷಣವೇ ಟಿಸೊ ದೂರವಾಣಿಯ ಮೂಲಕ ಪ್ರಾಗ್ ಸಂಪರ್ಕಿಸಿ ಈ ಜರ್ಮನ್ ಆಜ್ಞೆಯನ್ನು ಹೊರಡಿಸಿದರು.

(i) ಸ್ಲೋವಕಿಯಾದಿಂದ ಜೆಕ್ ಸೈನ್ಯ ತನ್ನ ಎಲ್ಲ ತುಕಡಿಗಳನ್ನು ವಾಪಸ್ಸು ಪಡೆಯುವುದು.

(ii) ಜರ್ಮನ್ನರ ರಕ್ಷಣೆಯಲ್ಲಿ ಸ್ಲೊವೊಕಿಯಾ ಒಂದು ಸ್ವತಂತ್ರ ರಾಜ್ಯವಾಗುವುದು.

(iii) ಸ್ವಾತಂತ್ರ್ಯ ಘೋಷಣೆಯನ್ನು ಆಲಿಸಲು ಸ್ಲೋವಕ್ ಪಾರ್ಲಿಮೆಂಟನ್ನು ಸೇರುವಂತೆ ರಾಷ್ಟ್ರಪತಿ ಹಛಾ ಕರೆಕೊಡುವುದು.

ಪ್ರೆಸಿಡೆಂಟ್ ಹಛಾ ಮತ್ತು ಪ್ರಾಗ್ ಸರ್ಕಾರ 'ಸರಿ' ಎಂದು ಹೇಳುವುದನ್ನುಳಿದು ಬೇರೇನೂ ಮಾಡುವಂತಿರಲಿಲ್ಲ. ಏಕೆಂದರೆ, ರಕ್ಷಣೆ ರಹಿತ ಜೆಕೊಸ್ಲೋವಕಿಯಾ ಗಡಿಗಳಲ್ಲಿ ಜರ್ಮನ್ ಸೈನ್ಯದ ಡಜನ್‌ಗಟ್ಟಲೆ ತುಕಡಿಗಳು ಸುತ್ತುವರಿದು, ಸ್ಲೋವಕಿಯಾದ ಪರವಾಗಿ, ಅವರು ತಗಾದೆ ಮಾಡಿ ಕೇಳುತ್ತಿರುವುದಕ್ಕೆ ನಕಾರಾತ್ಮಕ ಉತ್ತರ ಬಂದರೆ ತಕ್ಷಣವೇ ಆಕ್ರಮಣಕ್ಕೆ ಸಜ್ಜಾಗಿ ನಿಂತಿವೆ ಎಂಬುದು ಅವರಿಗೆ ಗೊತ್ತಿತ್ತು. ಚೆಕೊಸ್ಲೋವಕಿಯಾ ಎಂಬ ಹೊಸ ರಾಜ್ಯ ಹೀಗೆ ಅಂತ್ಯಗೊಂಡಿತು.

## IV

ಈ ಎರಡು ರಾಷ್ಟ್ರಗಳ ಕಥೆಯಿಂದ ಕಲಿಯಬಹುದಾದ ಪಾಠವೇನು? ವಿಷಯವನ್ನು ಹೇಗೆ ಪ್ರಸ್ತಾಪಿಸಬೇಕು ಎನ್ನುವುದರಲ್ಲಿ ಸ್ವಲ್ಪ ಬಿನ್ನಾಭಿಪ್ರಾಯವಿದೆ. ಸಿಡ್ನಿ ಬ್ರೂಕ್ಸ್ ಅವರ ಅಭಿಪ್ರಾಯದ ಪ್ರಕಾರ ಈ ವಿನಾಶಕಾರಿ ಯುದ್ಧಗಳ ಮೂಲ ಕಾರಣ ರಾಷ್ಟ್ರೀಯತಾವಾದ. ಅವರು ಮನಗಂಡಂತೆ ಇದು ವಿಶ್ವಶಾಂತಿಯ ಶತ್ರು. ಆದರೆ ನಾರ್‌ಮನ್ ಅಸಂಗೆಲ್ ಅವರ ಪ್ರಕಾರ ವಿನಾಶಕ್ಕೆ ರಾಷ್ಟ್ರೀಯತಾವಾದ ಕಾರಣವಲ್ಲ, ರಾಷ್ಟ್ರೀಯತಾ ವಾದಕ್ಕೊಡ್ಡಲಾಗುವ ಬೆದರಿಕೆಯೇ ನಿಜವಾದ ಕಾರಣ. ರಾಬರ್ಟ್ ಸನ್ ಅವರಿಗಂತೂ

ರಾಷ್ಟ್ರೀಯತಾವಾದ ಎಂಬುದು ಶುದ್ಧ ಭ್ರಮೆಯಲ್ಲದಿದ್ದರೂ ಒಂದು ವಿಚಾರಹೀನ ಪ್ರವೃತ್ತಿ, ಇದರಿಂದ ಮಾನವ ಬೇಗ ಬಿಡುಗಡೆ ಹೊಂದುವುದರಿಂದ ಜನತೆಗೆ ಒಳಿತಾಗುತ್ತದೆ.

ವಿಷಯವನ್ನು ಹೇಗಾದರೂ ಪ್ರಸ್ತಾಪಿಸಲಿ ಮತ್ತು ರಾಷ್ಟ್ರೀಯತಾವಾದದ ವಿದಾಯಕ್ಕಾಗಿ ಯಾರು ಎಷ್ಟೇ ಹಂಬಲಿಸಲಿ, ಇದರಿಂದ ಕಲಿಯಬೇಕಾದ ಪಾಠವಂತೂ ಸ್ಪಷ್ಟವಿದೆ. ಅದೇನೆಂದರೆ ರಾಷ್ಟ್ರೀಯತಾವಾದ ಒಂದು ಕಟುಸತ್ಯ, ಅದರಿಂದ ನುಣುಚಿಕೊಳ್ಳುವುದು ಇಲ್ಲವೇ ಅದನ್ನು ತಿರಸ್ಕರಿಸುವುದು ಸಾಧ್ಯವಾಗದ ಮಾತು. ಅದನ್ನು ಶುದ್ಧ ಭ್ರಮೆ ಎನ್ನಿ, ವಿಚಾರಹೀನ ಪ್ರವೃತ್ತಿ ಎನ್ನಿ, ಅದಕ್ಕೆ ಚಕ್ರಾಧಿಪತ್ಯಗಳನ್ನು ಉರುಳಿಸುವ ಭೀಮಬಲವಿದೆ ಎಂಬುದು ಮಾತ್ರ ವಾಸ್ತವಾಂಶ. ರಾಷ್ಟ್ರೀಯತಾವಾದವೇ ಕಾರಣವೆನ್ನಿ, ಅಥವಾ ರಾಷ್ಟ್ರೀಯತಾವಾದಕ್ಕೊಡ್ಡುವ ಬೆದರಿಕೆ ಕಾರಣವೆನ್ನಿ, ಇವೆಲ್ಲ ಹೇಳುವ ರೀತಿಯಲ್ಲಿರುವ ವ್ಯತ್ಯಾಸಗಳಷ್ಟೆ. ಟೊಯನ್ ಬೀ ಅವರು ಹೇಳುವಂತೆ ವಸ್ತುಸ್ಥಿತಿಯನ್ನು ಗುರುತಿಸಬೇಕಿದೆ. ಅದೇನೆಂದರೆ "ನಮ್ಮನ್ನು ಮೀರಿ ಸಮರ ಸನ್ನದ್ಧವಾಗುವ ಶಕ್ತಿ ರಾಷ್ಟ್ರೀಯತಾವಾದಕ್ಕಿದೆ. ಇದು ಭರಿಸಲೇಬೇಕಾದ ಕಸುವಿನ ಆಳವೇ ಹೊರತು ಬರೀ ಮಾತಿನ ಬಡಿವಾರವಲ್ಲ ಎಂಬುದನ್ನು ತನ್ನಿಂದತಾನೇ ಶೃತಪಡಿಸಿದೆ" ಅವರೇ ಗುರುತಿಸಿರುವಂತೆ "ರಾಷ್ಟ್ರೀಯತಾವಾದವನ್ನು ಸರಿಯಾಗಿ ಗ್ರಹಿಸುವುದು ಅಳಿವು ಉಳಿವಿನ ಪ್ರಶ್ನೆಯಾಗಿದೆ. ಇದು ಕೇವಲ ಯೂರೋಪ್‌ಗೆ ಮಾತ್ರ ಅನ್ವಯಿಸುವಂಥದಲ್ಲ; ಟರ್ಕಿಗೂ ಹೌದು; ಹಾಗೇ ಜೆಕೊಸ್ಲೊವಕಿಯಾಕ್ಕೆ ಕೂಡ. ಯಾವುದು ಇವರಿಗೆಲ್ಲ ಅಳಿವು ಉಳಿವಿನ ಪ್ರಶ್ನೆಯಾಗಿತ್ತೊ ಅದು ಭಾರತಕ್ಕೂ ಸಾವು–ಬದುಕಿನ ಸಮಸ್ಯೆಯಾಗುವ ಸಾಧ್ಯತೆ ಇದೆ. ಐರೋಪ್ಯ ಶಾಂತಿ ಸ್ಥಾಪನೆಗಾಗಿ ರಾಷ್ಟ್ರೀಯತೆಯನ್ನು ಗುರುತಿಸುವುದು ಅಗತ್ಯ ಎಂದು ಪ್ರೊ. ಟೊಯನ್‌ಬೀ, ಅವರ ಕಣ್ಣೆದುರೇ ನಡೆದ ಗುಯ್ ಜಾಟ್ ಪ್ರಸಂಗವನ್ನು ಉದಾಹರಿಸಿ ವಾದ ಮಾಡಿದ್ದಾರೆ. ಭಾರತ ಈ ವಾದವನ್ನು ಕಡೆಗಣಿಸುವುದು ಸರಿಯೆ? ಹಾಗೆ ಕಡೆಗಣಿಸುವುದೇ ಆದಲ್ಲಿ ಅದು ಆಪತ್ತನ್ನು ಆಹ್ವಾನಿಸಿದಂತೆಯೇ ಸರಿ. ಈ ಎರಡು ದೇಶಗಳ ಇತಿಹಾಸದಿಂದ ತಿಳಿಯಬೇಕಾದದ್ದು ರಾಷ್ಟ್ರೀಯತಾವಾದಿ ವಿನಾಶಕಾರಿ ಪ್ರವೃತ್ತಿ ಎಂಬುದನ್ನಷ್ಟೇ ಅಲ್ಲ, ಅಷ್ಟೇನೂ ಪ್ರಾಮುಖ್ಯವೆನಿಸದಿದ್ದರೂ ಸಮಾನತೆಗಿಂತ ಹೆಚ್ಚೇನನ್ನೋ ಇವುಗಳ ಅನುಭವ ಮನದಟ್ಟು ಮಾಡಿಕೊಡುತ್ತದೆ. ಅದು ಏನು ಎಂಬುದು ಗೋಚರಿಸಬೇಕಾದರೆ ಕೆಲವು ಸತ್ಯಾಂಶಗಳು ಸ್ಮೃತಿ ಪಟಲದ ಮೇಲೆ ಬೆಳಕು ಚೆಲ್ಲಬೇಕು.

ತುರ್ಕೀಯರು, ಯಾವುದೇ ನಿಟ್ಟಿನಿಂದಲೂ ವರ್ಣಚಿತ್ರಗಳಲ್ಲಿ ಬಿಂಬಿತರಾಗಿರುವಷ್ಟು ಅಯೋಗ್ಯರಲ್ಲ. ತಮ್ಮ ಅಲ್ಪಸಂಖ್ಯಾತರಿಗೆ ಇವರು ಅಪಾರ ಸ್ವಾಯತ್ತತೆಯನ್ನು ಕೊಟ್ಟಿದ್ದಾರೆ. ಭೌಗೋಳಿಕವಾಗಿ ಸಮ್ಮಿಳಿತವಾದ, ವಿವಿಧ ಸಮುದಾಯದ, ಸಾಮಾಜಿಕ ಪಾರಂಪರ್ಯದ ಜನ ಹೇಗೆ ಒಟ್ಟಾಗಿ ಅನ್ಯೋನ್ಯತೆಯಿಂದ ಬಾಳಬೇಕು ಎಂದು ತೋರಿಸಿಕೊಟ್ಟು, ಅವರ ಅನೇಕ ಸಮಸ್ಯೆಗಳನ್ನು ಪರಿಹರಿಸುವ ಮಟ್ಟಕ್ಕೂ ತುರ್ಕರು ಮುಟ್ಟಿದ್ದಾರೆ. ಪಾಶ್ಚಾತ್ಯ ರಾಜಕೀಯ ಸಿದ್ಧಾಂತದಲ್ಲಿ ಕಂಡು ಕೇಳರಿಯದ ಪ್ರಾಂತೀಯ ಹಾಗೂ ಸಾಂಸ್ಕೃತಿಕ ಸ್ವಾಯತ್ತತೆಯನ್ನು ತುರ್ಕೀಯ ಸರ್ಕಾರ ಮುಸ್ಲಿಮೇತರ ಹಾಗೂ ತುರ್ಕೀಯೇತರ ಸಮುದಾಯಗಳಿಗೆ ತನ್ನ ಸರಹದ್ದಿನೊಳಗೆ ಅನುಗ್ರಹಿಸಿದೆ. ಕ್ರಿಶ್ಚಿಯನ್ ಅಲ್ಪಸಂಖ್ಯಾತರು ಇದರಿಂದ ತೃಪ್ತರಾಗಿರಬೇಡವೆ? ಎಂದು ಯಾರು ಏನೇ ಹೇಳಲಿ, ರಾಷ್ಟ್ರೀಯತಾವಾದಿಗಳಾದ ಕ್ರಿಶ್ಚಿಯನ್ ಅಲ್ಪಸಂಖ್ಯಾತರು ಈ ಸ್ಥಳೀಯ ಸ್ವಾಯತ್ತತೆಯಿಂದ ಸುಪ್ರೀತರಾಗಲಿಲ್ಲ. ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಇದರಿಂದಾಗಿ ಟರ್ಕಿ ಒಡೆದು ಛಿದ್ರವಾಯಿತು.

ಧಾರ್ಮಿಕ ಬಂಧದಿಂದಾಗಿ ಟರ್ಕರು ಅರಬ್ಬರಿಗೆ ನಿಷ್ಠರಾಗಿದ್ದರು. ಇಸ್ಲಾಂ ಧಾರ್ಮಿಕ ಬಂಧ ಮನುಕುಲ ಕಂಡಿರುವ ಅತ್ಯಂತ ಬಲಾಢ್ಯ ಶಕ್ತಿಗಳಲ್ಲೊಂದು. ಇಸ್ಲಾಮೀಯ ಭ್ರಾತೃತ್ವದ ಐಕ್ಯಮತಕ್ಕೆ ತಾನು ಸರಿಸಾಟಿ ಎಂದು ಹೇಳಿಕೊಳ್ಳಬಲ್ಲ ಶಕ್ತಿ ಯಾವೊಂದು ಸಾಮಾಜಿಕ ಒಕ್ಕೂಟಕ್ಕೂ ಇಲ್ಲ. ತಮ್ಮ ಆಳ್ವಿಕೆಗೆ

ಒಳಪಟ್ಟ ಕ್ರಿಶ್ಚಿಯನ್ನರನ್ನೇ ಕೀಳಾಗಿ ಕಂಡ ಟರ್ಕರು ಅದೇ ಅರಬ್ಬರನ್ನು ಹಾಗೆ ಕಾಣದೆ ಸಮಾನತೆಯಿಂದ ನಡೆಸಿಕೊಂಡರು ಎಂಬುದು ಇಲ್ಲಿ ಗಮನಿಸಬೇಕಾದ ಅಂಶ. ತುರ್ಕಿಯ ಸೈನ್ಯದಿಂದ ಮುಸ್ಲಿಮೇತರರಾದ ಎಲ್ಲ ಸೈನಿಕರನ್ನೂ ತೆಗೆದು ಹಾಕಲಾಯಿತು. ಆದರೆ, ಅರಬ್ ಸೈನಿಕರು ಹಾಗೂ ಅಧಿಕಾರಿಗಳು, ತುರ್ಕೀಯರು ಮತ್ತು ತುರ್ಕಿಸ್ತಾನಿಯರ ಜೊತೆ ಜೊತೆಗೇ ಸೇವೆಯಲ್ಲುಳಿದರು. ಟರ್ಕಿಷ್ ಶಾಲೆಗಳಲ್ಲಿ ಶಿಕ್ಷಣ ಪಡೆದ ಅರಬ್ ಅಧಿಕಾರಿ ವರ್ಗ ತುರ್ಕೀಯರಂತೆಯೇ ಮಿಲಿಟರಿ ಮತ್ತು ಸಾರ್ವಜನಿಕ ಕ್ಷೇತ್ರಗಳಲ್ಲಿ ಸೇವೆಗೈದರು. ಟರ್ಕರು ಮತ್ತು ಅರಬ್ಬರ ನಡುವೆ ಅಂಥ ಹಾನಿಕಾರಕ ಭಿನ್ನತೆ ಏನೂ ಇರಲಿಲ್ಲ; ಮತ್ತು ತುರ್ಕೀಯ ಸೇವಾ ಹುದ್ದೆಗಳಲ್ಲಿ ಟರ್ಕೀಯರು ಉನ್ನತ ಅಧಿಕಾರಕ್ಕೆ ಏರದಂತೆ ತಡೆಯುವಂಥ ಅಡಚಣೆಗಳೇನೂ ಇರಲಿಲ್ಲ. ರಾಜಕೀಯವಾಗಷ್ಟೇ ಅಲ್ಲ, ಸಾಮಾಜಿಕವಾಗಿ ಕೂಡ ಟರ್ಕೀಯರು ಅರಬ್ಬರನ್ನು ಸರಿಸಮಾನ ದೃಷ್ಟಿಯಿಂದ ನೋಡುತ್ತಿದ್ದರು. ಅಷ್ಟೇ ಅಲ್ಲದೆ, ಇವರ ನಡುವೆ ಕೊಟ್ಟುತರುವ ಪರಸ್ಪರ ಕೌಟುಂಬಿಕ ಸಂಬಂಧವೂ ಇತ್ತು. ಇಂಥ ಭ್ರಾತೃತ್ವ, ಸ್ವಾತಂತ್ರ್ಯ ಮತ್ತು ಸಮಾನತೆಯಿಂದ ತುಂಬಿದ ಟರ್ಕೀಯರ ಇಸ್ಲಾಮೀ ಭ್ರಾತೃಪ್ರೇಮದಿಂದ ಅರಬ್ಬರು ತೃಪ್ತರಾಗಿರಬೇಡವೆ? ಯಾರು ಏನೇ ಅಂದರೂ, ಅರಬ್ಬರಿಗಂತೂ ಖಂಡಿತವಾಗಿಯೂ ತೃಪ್ತಿ ಇರಲಿಲ್ಲ. ಅರಬ್ ರಾಷ್ಟ್ರೀಯತಾವಾದ ಇಸ್ಲಾಮ್ ಬಂಧವನ್ನು ತುಂಡರಿಸಿದ್ದೇ ಅಲ್ಲದೆ, ಸ್ವಾತಂತ್ರ್ಯಕ್ಕಾಗಿ ಅರಬ್ಬರು ಮುಸ್ಲಿಂ ಬಂಧುಗಳಾದ ಟರ್ಕೀಯರ ವಿರುದ್ಧವೇ ಸೆಣಸುವಂತೆ ಮಾಡಿತು. ಅರಬ್ಬರು ಗೆದ್ದರು, ಆದರೆ ಟರ್ಕಿ ಸಂಪೂರ್ಣವಾಗಿ ನೆಲಕಚ್ಚಿತು.

ಪ್ರಾರಂಭಕ್ಕೆ, ಜೆಕ್ ಜನರು ಮತ್ತು ಸ್ಲೋವಕರು ಒಂದೇ ಎಂದು ಜೆಕೊಸ್ಲೊವಕಿಯಾದಲ್ಲಿ ಪರಿಗಣಿಸಲ್ಪಟ್ಟಿದ್ದರು. ಕೆಲವೇ ವರ್ಷಗಳಲ್ಲಿ ಸ್ಲೋವಕರು ಬೇರೆ ರಾಷ್ಟ್ರಕ್ಕಾಗಿ ಹೋರಾಡತೊಡಗಿದರು. ಒಂದೇ ಗುಂಪಿಗೆ ಸೇರಿದ್ದರೂ ತಾವು ಜೆಕ್‌ನ ಒಂದು ಕವಲು ಎಂಬುದನ್ನು ಇವರು ಒಪ್ಪಲು ಸಿದ್ಧರಿರಲಿಲ್ಲ. ಅವರ ರಾಷ್ಟ್ರೀಯತಾ ವಾದದಿಂದಾಗಿ ಜೆಕ್‌ರು ಸ್ಲೋವಕರನ್ನು ಒಂದು ಪ್ರತ್ಯೇಕ ಜನಾಂಗ ಎಂದು ಬಲವಂತವಾಗಿ ಗುರುತಿಸುವಂತಾಯಿತು. ಸ್ಲೋವಕರ ರಾಷ್ಟ್ರೀಯತಾವಾದವನ್ನು ತಣ್ಣಗಾಗಿಸಲು, ಅವರ ಪ್ರತ್ಯೇಕತೆಗೆ ಇಂಬು ಕೊಡಲು ಜೆಕೊಸ್ಲೊವಕಿಯ ಪದದ ನಡುವೆ ಒಂದು ಅಡ್ಡಗೆರೆ ಚಿಹ್ನೆಯನ್ನು ಜೆಕ್‌ರು ಬಳಸಿದರು. ಜೆಕೊಸ್ಲೊವಕಿಯಾವನ್ನು ಜೆಕೊ–ಸ್ಲೊವಕಿಯಾ ಎಂದು ಬರೆಯಲು ಒಪ್ಪಿದರು. ಈ ಕೂಡುಗೆರೆಯ ಸ್ವಾಯತ್ತತೆಯಿಂದಲೂ ಸ್ಲೋವಕರ ರಾಷ್ಟ್ರೀಯತಾ ವಾದದ ಅಸಂತೃಪ್ತಿ ದೂರಾಗಲಿಲ್ಲ. ಈ ಕೂಡುಗೆರೆ ಅವರನ್ನು ಜೆಕ್ ಜನರಿಂದ ಬೇರ್ಪಡಿಸುವ ಚಿಹ್ನೆ ಎಂತೋ ಅಂತೆಯೇ ಅವರನ್ನು ಬೆಸೆಯುವ ಕೊಂಡಿಯೂ ಹೌದು. ಇದು ಅವರ ಸ್ವಾಯತ್ತತೆಯ ಚಟುವಟಿಕೆಯ ಫಲ. ಜೆಕ್ ಜನರಿಂದ ತಮ್ಮನ್ನು ಬೇರ್ಪಡಿಸುವ ಈ ಕೂಡುಗೆರೆಯ ಚಿಹ್ನೆ ಎಷ್ಟು ಸ್ವಾಗತಾರ್ಹವೋ, ಅದೇ ಚಿಹ್ನೆ ಅವರನ್ನು ಜೆಕ್ ಜನರೊಡನೆ ಬೆಸೆಯುವ ಕೊಂಡಿಯೂ ಆಗಿರುವಂಥದು. ಇದು ಸ್ಲೋವಕರಿಗೆ ಅತ್ಯಂತ ಮುಜುಗರದ ಸಂಗತಿ. ಈ ಚಿಹ್ನೆಯಿಂದ ತಮ್ಮ ಸ್ವಾಯತ್ತತೆಯನ್ನು ಗುರುತಿಸಿಕೊಂಡು ನೆಮ್ಮದಿಯ ನಿಟ್ಟುಸಿರು ಬಿಟ್ಟ ಸ್ಲೋವಕರ್, ಇನ್ನು ಮುಂದೆ ರಾಷ್ಟ್ರಕ್ಕೆ ತೃಪ್ತಿ ಹಾಗೂ ನಿಷ್ಠೆಯಿಂದ ದುಡಿಯುವುದಾಗಿ ಮಾತು ಕೊಟ್ಟಿದ್ದರು. ಆದರೆ, ಈ ಮಾತು ಕೇವಲ ಕುಯುಕ್ತಿಯದಾಗಿತ್ತು. ಅಂತಿಮಧ್ಯೇಯವೆಂದೇನೂ ಇದನ್ನು ಅವರು ಒಪ್ಪಿಕೊಂಡಿರಲಿಲ್ಲ. ಆದರೆ ಇದನ್ನು ಒಪ್ಪಿದ್ದಕ್ಕೆ ಕಾರಣವೇ ಬೇರೆ. ಮೊದಲು ಇದನ್ನು ಉಪಯುಕ್ತ ನೆಲೆಯಾಗಿ ಬಳಸಿಕೊಂಡು ಕ್ರಮೇಣ ತಮ್ಮ ಈ ಸ್ವಾಯತ್ತತೆಯನ್ನು ಸ್ವಾತಂತ್ರ್ಯವನ್ನಾಗಿ ಪರಿವರ್ತಿಸಿಕೊಳ್ಳಬೇಕೆಂಬುದು ಇವರ ಮಹತ್ವಾಕಾಂಕ್ಷೆಯಾಗಿತ್ತು. ಹೀಗಾಗಿ ಇವರ ರಾಷ್ಟ್ರೀಯತಾವಾದ ಕೇವಲ ಕೂಡುಗೆರೆಯ ಆಸರೆಯಿಂದಷ್ಟೇ ತೃಪ್ತವಾಗಲಿಲ್ಲ. ಕೂಡುಗರೆಗೆ ಬದಲಾಗಿ ದೊಡ್ಡಗೆರೆ(ಬಾರ್)ಯನ್ನು ಆಪೇಕ್ಷಿಸಲಾಯಿತು. ಅಡ್ಡಗೆರೆಯ ಬಳಕೆಯನ್ನು ಜಾರಿಗೆ ತಂದ

ಮರುಕ್ಷಣವೇ ಅದರ ಸ್ಥಳದಲ್ಲಿ, ಜೆಕ್ ಮತ್ತು ಸ್ಲೋವಕ್ ನಡುವೆ ಒಂದು ಉದ್ದಗೆರೆಯನ್ನು ಬಳಸಬೇಕೆಂದು ಒಂದು ದೊಡ್ಡ ಆಂದೋಲನವೇ ಜರುಗಿತು. ಬೇರಾವುದಕ್ಕೂ ಇವರು ಜಗ್ಗುವಂತಿರಲಿಲ್ಲವಾಗಿ ಇವರ ಕೋರಿಕೆ ಈಡೇರಲೇಬೇಕಾಯಿತು. ಇವರ ರಾಷ್ಟ್ರೀಯತಾವಾದ ಅಷ್ಟು ಪ್ರಖರವೂ, ತೀವ್ರವೂ ಆಗಿದ್ದರಿಂದ ತಲೆ ತಿನ್ನುತ್ತಿತ್ತು. ತಮ್ಮ ಪ್ರಯತ್ನದಲ್ಲಿ ಗೆಲುವು ಕಾಣದಾದ ಪಕ್ಷದಲ್ಲಿ ಅವಕ್ಕಾಗಿ ಜರ್ಮನರ ನೆರವು ಪಡೆಯಲೂ ಇವರು ಹಿಂಜರಿಯುವವರಾಗಿರಲಿಲ್ಲ.

ರಾಷ್ಟ್ರೀಯತಾವಾದದ ಭ್ರಮೆ ಒಮ್ಮೆ ತಲೆಹೊಕ್ಕಿದ್ದೇ ಆದರೆ ಅದನ್ನು ನಿಯಂತ್ರಿಸಲು ಸ್ಥಳೀಯ ಸ್ವಾಯತ್ತತೆಯಿಂದಾಗಲೀ, ಅಥವಾ ಧರ್ಮ ಬಾಂಧವ್ಯದಿಂದಾಗಲೀ ಸಾಧ್ಯವಿಲ್ಲ ಎಂಬ ಅಂಶ ಟರ್ಕಿ ಮತ್ತು ಜೆಕೊಸ್ಲೊವಕಿಯಾ ದೇಶಗಳ ವಿನಾಶದ ಕಥೆಗಳ ಆಳವಾದ ಅಧ್ಯಯನದಿಂದ ತಿಳಿದುಬರುತ್ತದೆ.

ಹಿಂದೂಗಳು ಗ್ರಹಿಸಲೇಬೇಕಾದ ಪಾಠ ಇದು. ಗ್ರೀಕರು, ಬಲ್ಕನರು ಮತ್ತು ಅರಬ್ ರಾಷ್ಟ್ರೀಯವಾದಿಗಳು ಟರ್ಕಿಷ್ ರಾಷ್ಟ್ರವನ್ನು ಒಡೆಯಬಲ್ಲರಾದರೆ, ಸ್ಲೋವಕ್ ರಾಷ್ಟ್ರೀಯವಾದಿಗಳು ಜೆಕೊಸ್ಲೊವಕಿಯಾವನ್ನು ಪದಚ್ಯುತಗೊಳಿಸಬಲ್ಲರಾದರೆ, ಹಾಗೆಯೇ ಮುಸ್ಲಿಂ ರಾಷ್ಟ್ರೀಯವಾದಿಗಳು ಭಾರತವನ್ನು ಒಡೆಯದಂತೆ ತಡೆಯಬಲ್ಲವರಾರು? ಇದು ರಾಷ್ಟ್ರೀಯತಾವಾದವನ್ನು ಅದುಮಿಟ್ಟಿದ್ದರ ಪರಿಣಾಮದ ಅನಿವಾರ್ಯ ಫಲ ಎಂಬುದನ್ನು ಇತರ ದೇಶಗಳ ಈ ನಿದರ್ಶನಗಳಿಂದ ಅರಿಯಬಹುದಾದಲ್ಲಿ ಅವರ ಅನುಭವದ ಪಾಠದಿಂದ ನಾವೇಕೆ ಲಾಭ ಪಡೆಯಬಾರದು? ಪಾಕಿಸ್ತಾನ ಮತ್ತು ಹಿಂದೂಸ್ಥಾನ ಎಂದು ಭಾರತವನ್ನು ವಿಭಜಿಸಲು ಒಪ್ಪಿ ಮುಂದಾಗುವ ದುರಂತವನ್ನೇಕೆ ತಪ್ಪಿಸಬಾರದು? ಮುಸ್ಲಿಮರು ತಾವು ಸ್ವತಂತ್ರ ಜನರೆಂದು ಘೋಷಿಸಿಕೊಳ್ಳುವ ಮೊದಲೇ ಹಿಂದೂಗಳು ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಿದೆ. ಒಂದು ವೇಳೆ ಹಿಂದೂಗಳು ಭಾರತದ ವಿಭಜನೆಯನ್ನು ಅಲ್ಲಗಳೆದರೆ, ಇವರಿಗೂ ಸಹ ದಡದ ನೀರಿನಲ್ಲಿ ನಾವೆಯನ್ನು ನಡೆಸಹೋಗಿ ಹೂತಕೊಂಡ ಟರ್ಕರು ಮತ್ತು ಜೆಕ್ ಜನರ ಪರಿಸ್ಥಿತಿಯೇ ಕಾದಿದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಸಮುದ್ರದ ನಡುವೆ ಹಡಗು ಬಿರಿಯುವುದನ್ನು ತಡೆಯುವ ಅಪೇಕ್ಷೆ ಇರುವುದಾದರೆ ಅನಾವಶ್ಯಕ ಅಥವಾ ಯಥೇಚ್ಛವಾಗಿರುವ ಸರಕನ್ನು ಹೊರಗೆಸೆದು ಹಡಗನ್ನು ಹಗುರಗೊಳಿಸಲೇಬೇಕು. ಇವರ ಹಡಗಿನ ಪ್ರಯಾಣ ಸುಖಕರವಾಗಬೇಕಿದ್ದರೆ, ಪ್ರೊ. ಟೊಯನ್‌ಬೀ ಅವರು ಹೇಳುವಂತೆ, ಕಡಿಮೆ ಬೆಲೆ ತೆತ್ತಿರುವ ಆದರೆ ಹೆಚ್ಚು ದಹ್ಯತಶಕ್ತಿಯುಳ್ಳ ಸರಕನ್ನು ಹಡಗಿನಿಂದ ಹೊರಗೆಸೆಯಲು ತೀರ್ಮಾನಿಸಬೇಕು.

## V

ಭಾರತವನ್ನು ಪಾಕಿಸ್ತಾನ ಮತ್ತು ಹಿಂದೂಸ್ಥಾನ ಎಂದು ಭಾಗವಾಗಿ ವಿಭಜಿಸಲು ಒಪ್ಪಿದರೆ ಹಿಂದೂಗಳು ನಿಜವಾಗಿ ನಷ್ಟಕ್ಕೆ ಗುರಿಯಾಗುತ್ತಾರೆಯೆ?

ಇದಕ್ಕೆ, ಮ್ಯೂನಿಚ್ ಒಪ್ಪಂದದ ಪ್ರಕಾರ ತಮ್ಮ ಪ್ರಾದೇಶಿಕ ಮೇರೆಯಲ್ಲಿ ನಷ್ಟವನ್ನುಂಡ ಜೆಕೊಸ್ಲೊವಕಿಯಾ ಸರಕಾರದ ನೈಜ ಭಾವನೆ ಏನಾಗಿತ್ತು ಎಂಬುದನ್ನು ತಿಳಿಯುವುದು ಸೂಕ್ತ. ಜೆಕೊಸ್ಲೊವಕಿಯಾದ ಪ್ರಧಾನಿ ರಾಷ್ಟ್ರದ ಜನರನ್ನುದ್ದೇಶಿಸಿದ ತನ್ನ ಸಂದೇಶದಲ್ಲಿ ಈ ಭಾವನೆಯನ್ನು ಬಹಳ ಚೆನ್ನಾಗಿ ಅಭಿವ್ಯಕ್ತಿಸಿದ್ದಾರೆ.*

---

* ಅಲೆಗ್ಸಾಂಡರ್ ಹೆಂಡನ್ ಸನ್– ಐ ವಿಟ್‌ನೆಸ್ ಇನ್ ಜೆಕೊಸ್ಲೊವಕಿಯಾ ಹರ್ರಾಪ್, ೧೯೩೯, ಪುಟ ೨೨೯–೩೨.

"ನಾಗರೀಕತೆ ಮತ್ತು ಸೈನಿಕರೆ... ನನ್ನ ಜೀವನದ ಅತ್ಯಂತ ಕಠಿಣ ಪರಿಸ್ಥಿತಿಯಲ್ಲೀಗ ನಾನಿದ್ದೇನೆ, ಭೀಕರ ನೋವಿನ ಕೆಲಸವೊಂದನ್ನು ನಾನೀಗ ಮಾಡುತ್ತಿದ್ದೇನೆ. ಇದಕ್ಕೆ ಹೋಲಿಸಿದರೆ ಸಾವೇ ಸರಾಗ. ಏಕೆಂದರೆ ನಾನು ಹೋರಾಡಿದ್ದೇನೆ. ಈ ಯುದ್ಧದಲ್ಲಿ ವಿಜಯ ಹೇಗಾಯಿತು ಎಂಬುದನ್ನು ಬಲ್ಲವನಾಗಿದ್ದೇನೆ. ಅದನ್ನೀಗ ನಿರ್ಭಿಡೆಯಿಂದ ನಿಮಗೆ ತಿಳಿಸಬೇಕು... ನಮ್ಮೆದುರಾಳಿಗಳು ಈಗ ಅವರ ಪಾರಮ್ಯ ಶಕ್ತಿಯನ್ನು ಒಪ್ಪಿ ಅವರ ಆದೇಶದಂತೆ ನಡೆಯಲು ನಮ್ಮನ್ನು ಒತ್ತಾಯಿಸುತ್ತಿದ್ದಾರೆ...

ಮ್ಯೂನಿಚ್‌ನಲ್ಲಿ ನಾಲ್ಕು ಐರೋಪ್ಯ ಶಕ್ತಿಗಳು ಒಂದಾಗಿ ಹೊಸ ಸರಹದ್ದುಗಳನ್ನು ಒಪ್ಪಿಕೊಳ್ಳುವಂತೆ ನಮ್ಮ ಮೇಲೆ ಒತ್ತಡ ಹೇರಲು ತೀರ್ಮಾನಿಸಿದವು. ಇದರಿಂದಾಗಿ ನಮ್ಮ ರಾಷ್ಟ್ರದ ಜರ್ಮನ್ ಪ್ರದೇಶಗಳನ್ನು ನಮ್ಮಿಂದ ವಾಪಸ್ಸು ಕಸಿದುಕೊಳ್ಳುವ ಪ್ರಯತ್ನ ನಡೆದಿತ್ತು. ಈ ಸಮಯದಲ್ಲಿ ನಮಗಿದ್ದ ಎರಡು ಆಯ್ಕೆ ಎಂದರೆ, ನಾಡಿನ ರಕ್ಷಣೆಗಾಗಿ ಹತಾಶೆಯಿಂದ ಹೋರಾಡಿ ದೇಶದ ಯುವಶಕ್ತಿ ಹಾಗೂ ಮಡದಿ ಮಕ್ಕಳನ್ನು ಕಳೆದುಕೊಳ್ಳುವುದು, ಇಲ್ಲವೇ ಇತಿಹಾಸದಲ್ಲೆಲ್ಲಾ ಕಾಣಸಿಗದಿರುವಂಥ ಅವರ ನಿಷ್ಕರುಣೆಯ ಕರಾರುಗಳಿಗೆ, ಬಲವಂತದ ಹೇರಿಕೆಗಳಿಗೆ ಯುದ್ಧ ಮಾಡದೆ ತಲೆಬಾಗುವುದು. ಕಡೆಗೆ ಶಾಂತಿಪಾಲನೆಗೆ ನಾವು ಶರಣಾದೆವು; ಸಂತೋಷದಿಂದ ಅದನ್ನು ಕೈಹಿಡಿದು ನಡೆಸಿದೆವು; ಆದರೆ ಅದು ನಮ್ಮ ಮೇಲೆ ತಂದ ಒತ್ತಡದ ಪರಿಯಲ್ಲಲ್ಲ.

ಇಂದು ನಮ್ಮನ್ನು ಕೈಬಿಡಲಾಗಿದೆ, ನಾವೀಗ ಏಕಾಂಗಿಯಾಗಿದ್ದೇವೆ... ದುಃಖಿತರಾಗಿದ್ದೇವೆ. ನಮ್ಮ ಪಾಲಿಗುಳಿದಿದ್ದ ಎಲ್ಲ ಸಾಧ್ಯತೆಗಳನ್ನು ಕೂಲಂಕುಷವಾಗಿ ನಿಮ್ಮ ಎಲ್ಲ ನಾಯಕರು, ಗಣರಾಜ್ಯದ ಅಧ್ಯಕ್ಷರೂ ಸೇರಿದಂತೆ ಸೈನ್ಯದ ಎಲ್ಲ ಅಧಿಕಾರಿಗಳೂ ಸೇರಿ ಪರಿಯಾಲೋಚಿಸಿದ್ದೇವೆ. ರಾಷ್ಟ್ರದ ನಿರ್ನಾಮ ಅಥವಾ ಅದರ ಸರಹದ್ದಿನ ಕೆಲವು ಭಾಗಗಳ ನಷ್ಟ ಇವೆರಡರಲ್ಲಿ ನಮ್ಮ ಜನರ ಪ್ರಾಣ ರಕ್ಷಣೆಯೇ ಪವಿತ್ರವಾದುದೆಂದು ನಾವು ಪರಿಭಾವಿಸಿದೆವು. ಇದರಿಂದಾಗಿ ಈ ದುಃಸ್ಥಿತಿಯಲ್ಲಿ ನಾವೇನೂ ಅಷ್ಟು ದುರ್ಬಲರಾಗಿಲ್ಲ ಮತ್ತೆ ನಾವು ಒಟ್ಟುಗೂಡಿ ರಾಷ್ಟ್ರವನ್ನು ಕಟ್ಟುವ ನಂಬಿಕೆ ನಮ್ಮಲ್ಲಿ ಅಚಲವಾಗಿದೆ. ಈ ಹಿಂದೆ ನಮ್ಮಿಂದ ಇದು ಆಗಾಗ ಸಾಧ್ಯವಾಗಿದೆ. ತನ್ನ ಹೊಸ ಸರಹದ್ದುಗಳಲ್ಲಿ ನಮ್ಮ ರಾಷ್ಟ್ರ ಸಮೃದ್ಧವಾಗಿ ಪುನಃ ಸ್ಥಾಪನೆಯಾಗುವುದನ್ನು ನಾವೆಲ್ಲ ನೋಡೋಣ. ನಮ್ಮ ಜನತೆಗೆ ಫಲಪ್ರದಾದ ಶಾಂತಿಯುತ ಬದುಕು ಸಾಧ್ಯವಾಗಲಿ. ನಿಮ್ಮೆಲ್ಲರ ನೆರವಿನಿಂದ ನಾವು ಮುನ್ನಡೆಯುತ್ತೇವೆ. ನಾವು ನಿಮ್ಮನ್ನು ನಂಬಿದ್ದೇವೆ, ನೀವೂ ನಮ್ಮ ಮೇಲೆ ಭರವಸೆ ಇಡಿ."

ಐತಿಹಾಸಿಕ ಭಾವನೆಯನ್ನವಲಂಬಿಸಿ ನಡೆಯಲು ಜೆಕ್ ಜನರು ತಿರಸ್ಕರಿಸಿರುವುದಕ್ಕೆ ಇದು ನಿದರ್ಶನ. ಪರಿಮಿತ ಗಡಿಗಳನ್ನು ಮತ್ತು ಪುಟ್ಟ ಜೆಕೊಸ್ಲೊವಕಿಯವನ್ನು ಉಳಿಸಿಕೊಳ್ಳಲು ಕಟ್ಟಕಡೆಗೆ ತಮ್ಮ ಸ್ವಜನರ ನಾಶಕ್ಕೂ ಇವರು ಸಿದ್ಧರಿದ್ದರು.

ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಬ್ರಿಟಿಷ್ ರಾಯಭಾರಿಯೊಡನೆ ಮಾತನಾಡುತ್ತ ಒಂದನೆಯ ಝಾರ್ ನಿಕೋಲಸ್‌ನು, ೧೮೫೩ರಲ್ಲಿ ಟರ್ಕಿಯ ಬಗೆಗಿನ ಪ್ರಚಲಿತ ದೃಷ್ಟಿಕೋನವನ್ನು ಹೀಗೆ ಅಭಿವ್ಯಕ್ತಿಸಿದ್ದಾನೆ. "ನಾವು ನಮ್ಮ ಕೈಯಲ್ಲಿ ಒಬ್ಬ ರೋಗಿಯನ್ನು– ಕಡುರೋಗಿಯನ್ನು ಹಿಡಿದಿದ್ದೇವೆ... ಈತ ಇದ್ದಕ್ಕಿದ್ದಂತೆ ಕೈಯಲ್ಲೇ ಅಸುನೀಗಬಹುದು." ಆ ದಿನದ ತರುವಾಯ ಟರ್ಕಿಯ ರೋಗ ಸಂಭವನೀಯತೆ, ಐರೋಪ್ಯ

ರೋಗಿಯೊಬ್ಬನ ನಿರೀಕ್ಷೆಯಲ್ಲಿ ಅವನೆಲ್ಲ ನೆರೆಹೊರೆ ಇದ್ದಂತೆ. ಸಾವಿನ ಸೆಳೆತದಲ್ಲಿ ಸಿಲುಕಿದ ಮನುಷ್ಯ ವಿಲೇವಾರಿ ಒಪ್ಪಂದಕ್ಕೆ ಸಹಿ ಹಾಕಿ ಕೊನೆಯುಸಿರೆಳೆದಂತೆ ಅದರ ಸರಹದ್ದುಗಳ ವಿತರಣೆಯನ್ನು ಪರಿಗಣಿಸಲಾಗಿದೆ.

ಟರ್ಕಿಯನ್ನು ವಿಘಟನ ಪ್ರಕ್ರಿಯೆಯಿಂದ ಪಾರುಮಾಡಲು ಈ ದೃಷ್ಟಿ ನಿಜಕ್ಕೂ ಸಮಂಜಸವಾದುದೆ? ಈ ನಿಟ್ಟಿನಲ್ಲಿ ಆರ್ನಾಲ್ಡ್ ಟೊಯನ್‌ಬೀ ಅವರ ವ್ಯಾಖ್ಯಾನ ಸ್ವೀಕಾರಾರ್ಹ, ಟರ್ಕಿಯನ್ನು ಇದ್ದಕ್ಕಿದ್ದಂತೆ ಸಾಯುವ ರೋಗಿಗೆ ಹೋಲಿಸಿದ ಝಾರ್ ಅವರ ವಿವರಣೆಯನ್ನು ಪರಾಮರ್ಶಿಸುತ್ತಾ ಟೊಯನ್ ಬೀ ಹೇಳುತ್ತಾರೆ:*

> **"ಝಾರ್‌ನಿಕೊಲಸ್ ಭಾವೋದ್ರೇಕಕಾರಿಯಾದ ಎರಡನೆಯ ಭಾಗದ ತನ್ನ ರೋಗ ನಿರ್ಣಯ ವಿಧಾನದಲ್ಲಿ ದಾರಿ ತಪ್ಪಿದ್ದಾರೆ. ಏಕೆಂದರೆ ಅವರು ರೋಗದ ಚಿಹ್ನೆಯ ಸ್ವರೂಪವನ್ನು ಸರಿಯಾಗಿ ಗ್ರಹಿಸಿಲ್ಲ. ಪ್ರಕೃತಿಯ ಇತಿಹಾಸದ ಬಗ್ಗೆ ತೀರ ದಡ್ಡನಾದ ವ್ಯಕ್ತಿ ಪೊರೆಕಳಚುತ್ತಿರುವ ಹಾವನ್ನು ಎಡವಿ ಅದು ಇನ್ನೆಂದೂ ಚೇತರಿಸಿಕೊಳ್ಳಲಾರದೆಂದು ದೃಢವಾಗಿ ಹೇಳಿಬಿಡುವುದು ಮನುಷ್ಯ ತನ್ನ ಚರ್ಮವನ್ನು ಕಳೆದುಕೊಳ್ಳುವಂಥ ದುರಂತ ಸಂಭವಿಸಿದಾಗ, ಆತ ಬದುಕುಳಿಯುವುದು ಸಾಧ್ಯವಿಲ್ಲ ಎಂದು ಅವರು ವಾದಿಸಬಹುದು. ಚಿರತೆ ತನ್ನ ವಾಸಸ್ಥಳವನ್ನು, ಇಥಿಯೋಪಿಯನ್ ತನ್ನ ತೊಗಲನ್ನು ಬದಲಾಯಿಸುವುದಿಲ್ಲ ಎಂಬುದು ನಿಜವೇ ಆದರೂ ಒಂದು ಹಾವು ಇವೆರಡನ್ನೂ ರೂಢಿಯಿಂದ ಸಹಜವಾಗಿ ಮಾಡುತ್ತಿರುತ್ತದೆ ಎಂಬುದನ್ನು ಹೆಚ್ಚಿನ ಅಧ್ಯಯನದಿಂದ ನಮ್ಮ ಅಪರಿಪೂರ್ಣ ಪ್ರಕೃತಿ ತಜ್ಞ ಅರ್ಥಮಾಡಿಕೊಳ್ಳಬಹುದು. ಪೊರೆ ಕಳಚುವ ಪ್ರಕ್ರಿಯೆ ಹಾವಿಗೂ ನಿಸ್ಸಂಶಯವಾಗಿ ಕಿರಿಕಿರಿಯನ್ನುಂಟುಮಾಡುವಂಥದ್ದೆ. ತಾತ್ಕಾಲಿಕವಾಗಿ ಅದು ನಿಶ್ಚೇಷ್ಟಿತವಾಗಿರುತ್ತದೆ. ಅಲ್ಲದೆ, ಈ ಪರಿಸ್ಥಿತಿಯಲ್ಲಿಯೇ ಅದು ಅಪಾಯಕಾರಿಯಾದ ತನ್ನ ಶತ್ರುಗಳಿಂದ ತಪ್ಪಿಸಿಕೊಳ್ಳಬೇಕಾಗುತ್ತದೆ. ಹೀಗಿದ್ದೂ, ಹದ್ದು, ಕಾಗೆಗಳಿಂದ ಪಾರಾಗಿ ತನ್ನ ರೂಪಾಂತರಣ ಕ್ರಿಯೆಯನ್ನು ಇದು ಪೂರೈಸುತ್ತದೆ. ಇದರಿಂದಾಗಿ ತನ್ನ ಆರೋಗ್ಯವನ್ನು ಇದು ಸುಧಾರಿಸಿಕೊಳ್ಳುವುದಷ್ಟೇ ಅಲ್ಲ, ಚರ್ಮ ಬದಲಾವಣೆಯಿಂದಾಗಿ ಹೊಸ ಯೌವ್ವನವನ್ನೇ ಪಡೆದುಕೊಳ್ಳುತ್ತದೆ. ಇದು ಟರ್ಕರ ಇತ್ತೀಚಿನ ಅನುಭವವೂ ಹೌದು. ಆದುದರಿಂದ ರೋಗಿಗೆ ಹೋಲಿಸುವುದಕ್ಕಿಂತ ಪೊರೆ ಕಳಚುವ ಹಾವಿಗೆ ಟರ್ಕರನ್ನು ಹೋಲಿಸುವುದು ಹೆಚ್ಚು ಸಮಂಜಸ."**

ಈ ದೃಷ್ಟಿಯಿಂದ, ತುರ್ಕಿಗಾದ ತನ್ನ ಅಧೀನ ಪ್ರಾಂತಗಳ ನಷ್ಟ ಅಸಂಬದ್ಧ ಗಂತಿಯನ್ನು ತೆಗೆದುಹಾಕಿ ಹೊಸ ಚರ್ಮವನ್ನು ಪಡೆದಂತೆ. ಟರ್ಕಿ ಸಹಜವಾಗಿಯೇ ಒಂದು ಸಜಾತೀಯ ರಾಷ್ಟ್ರ. ಇದಕ್ಕೆ ಯಾವುದೇ ಆಂತರಿಕ ಕ್ಷೋಭೆಯ ಭಯವಿಲ್ಲ.

ಹಿಂದೂಸ್ಥಾನದಲ್ಲಿ ಮುಸ್ಲಿಂ ಪ್ರದೇಶಗಳು ಅಸಂಬದ್ಧ ಗಂತಿಗಳಿದ್ದಂತೆ. ಹಾಗೆಯೇ ಮುಸ್ಲಿಮರ ಪಾಲಿಗೆ ಹಿಂದೂಸ್ಥಾನ. ಇವೆರಡೂ ಒಟ್ಟಿಗೆ ಸೇರಿ ಭಾರತವನ್ನು ಏಷಿಯಾ ಖಂಡದ ಮಹಾರೋಗಿಯಾಗಿಸಿವೆ. ಇವೆರಡರ ಬೆಸುಗೆಯಿಂದಾಗಿ ಭಾರತ ವಿಜಾತೀಯ ರಾಷ್ಟ್ರವಾಗಿದೆ. ಒಂದುವೇಳೆ ಪಾಕಿಸ್ತಾನ ಭಾರತದ ಭಾಗಗಳನ್ನು ಕಸಿದುಕೊಳ್ಳುವ ಅವಗುಣವನ್ನು ಹೊಂದಿದ್ದರೆ ಘರ್ಷಣೆಯ ಸ್ಥಾನದಲ್ಲಿ ಅನ್ಯೋನ್ಯತೆಯನ್ನು ಪ್ರತಿಷ್ಠಾಪಿಸುವ ಸುಗುಣ ಕೂಡ ಅದಕ್ಕಿದೆ.

---

* ಆರ್ನಾಲ್ಡ್ ಟೊಯನ್ ಬೀ – ಟರ್ಕಿ, ಪು.೧೪೧.

ಇಬ್ಭಾಗವಾದರೆ, ಒಂದೊಂದೂ ಹೆಚ್ಚು ಸಮರೂಪ ರಾಷ್ಟ್ರಗಳಾಗುತ್ತವೆ. ಈ ಎರಡು ರಾಷ್ಟ್ರಗಳ ಸಮರೂಪತೆ ಸ್ವತಃಸ್ಸಿದ್ಧವಾಗಬೇಕು. ಒಂದೊಂದಕ್ಕೂ ಸಂಸ್ಕೃತಿಯ ಐಕ್ಯತೆ ಇದೆ; ಧಾರ್ಮಿಕ ಐಕ್ಯತೆ ಇದೆ. ಪಾಕಿಸ್ತಾನಕ್ಕೆ ಭಾಷಾ ಐಕ್ಯತೆ ಕೂಡ ಇದೆ. ಹಿಂದೂಸ್ಥಾನಕ್ಕೆ ಈ ಐಕ್ಯತೆ ಇರದಿದ್ದರೆ, ಹಿಂದೂಸ್ಥಾನೀ, ಹಿಂದಿ ಅಥವಾ ಉರ್ದು ಇವುಗಳಲ್ಲಿ ಯಾವುದು ಸಾಮಾನ್ಯ ಭಾಷೆಯಾಗಬೇಕು ಎಂಬಂಥ ಗೊಂದಲವನ್ನು ಬಿಟ್ಟು, ಅಂಥದೊಂದು ಭಾಷೆಯನ್ನು ಹೊಂದುವುದು ಸಾಧ್ಯ. ಬೇರ್ಪಟ್ಟರೆ, ಒಂದೊಂದು ಪ್ರಬಲ ಸುಸಂಘಟಿತ ರಾಷ್ಟ್ರಗಳಾಗಬಲ್ಲವು. ಭಾರತಕ್ಕೆ ಒಂದು ಪ್ರಬಲ ಕೇಂದ್ರ ಸರ್ಕಾರದ ಅಗತ್ಯವಿದೆ. ಆದರೆ, ಪಾಕಿಸ್ತಾನ ಇದರ ಭಾಗವಾಗಿರುವವರೆಗೆ ಅದನ್ನು ರೂಪಿಸಿಕೊಳ್ಳಲು ಸಾಧ್ಯವಿಲ್ಲ. ೧೯೩೫ರ ಭಾರತ ಸರಕಾರದ ಕಾಯಿದೆಯಲ್ಲಿ ಅಳವಡಿಸಲಾಗಿರುವ ಸಂಯುಕ್ತ ರಾಜ್ಯದ ರಚನೆಯನ್ನು ತುಲನೆ ಮಾಡಿದರೆ ಇದರ ಪ್ರಕಾರ ರಚಿಸಲ್ಪಟ್ಟಿರುವ ಕೇಂದ್ರಸರ್ಕಾರ ಉಸಿರು ಹಿಡಿದುಕೊಂಡಿರುವ ನಿತ್ರಾಣವಾದ ಒಂದು ಶಿಥಿಲ ವ್ಯವಸ್ಥೆ ಎಂಬುದು ಗೋಚರವಾಗುತ್ತದೆ.* ಭಾರತದ ಕೇಂದ್ರ ಸರ್ಕಾರ ಗುಣ ಮತ್ತು ರಚನೆಯಲ್ಲಿ ಪ್ರಧಾನವಾಗಿ ಹಿಂದೂಗಳ ಪಕ್ಷಪಾತಿ ಎಂಬ ಭಾವನೆಯಿಂದ ಮುಸ್ಲಿಮರು ಇದರ ಅಧಿಕಾರದಿಂದ ಮುಕ್ತವಾಗಿ ತಮ್ಮದೇ ಆದ ಮುಸ್ಲಿಂ ಪ್ರಾಂತಗಳ ಸ್ವತಂತ್ರ ರಾಷ್ಟ್ರವನ್ನು ಕಟ್ಟಬೇಕೆಂದು ಬಯಸುವವರನ್ನು ಓಲೈಸುತ್ತ ಬಂದದ್ದರಿಂದ, ಈಗಾಗಲೇ ಪ್ರಸ್ತಾಪಿಸಿರುವಂತೆ, ಕೇಂದ್ರಸರ್ಕಾರ ದುರ್ಬಲವಾಗುತ್ತ ಬಂತು. ಪಾಕಿಸ್ತಾನ ಅಸ್ತಿತ್ವಕ್ಕೆ ಬಂದರೆ ಈ ಬಗೆಯ ಆಲೋಚನೆಗಳಲ್ಲಿ ಏನೂ ಹುರುಳಿರುವುದಿಲ್ಲ. ಆಗ ಹಿಂದೂಸ್ಥಾನ ರಾಷ್ಟ್ರೀಯ ಭದ್ರತೆಗೆ ಅಗತ್ಯವಾದ ಒಂದು ಪ್ರಬಲ ಕೇಂದ್ರ ಸರ್ಕಾರವನ್ನು ಮತ್ತು ಸಮರೂಪದ ಜನಸಂಖ್ಯೆಯನ್ನು ಹೊಂದಬಹುದು. ಪಾಕಿಸ್ತಾನ, ಹಿಂದೂಸ್ಥಾನದಿಂದ ಬೇರೆಯಾಗದೆ ಇದಾವುದೂ ಸಾಧಿತವಾಗುವುದಿಲ್ಲ.

◆

---

* ಈ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಬೇಕಿದ್ದರೆ, ನನ್ನ 'ಸಂಯುಕ್ತ ರಾಜ್ಯ ಇಲ್ಲವೇ ಸ್ವಾತಂತ್ರ್ಯ' ಎಂಬ ಲೇಖನ ನೋಡಿ.

# ಭಾಗ – X

# ಪಾಕಿಸ್ತಾನ ಮತ್ತು ಜಾಡ್ಯ

ಹಿಂದೂ–ಮುಸ್ಲಿಂ ಸಮಸ್ಯೆಗೆ ಎರಡು ಆಯಾಮಗಳಿವೆ. ಮೊದಲನೆಯ ಆಯಾಮ ಎಂದರೆ, ಎರಡು ವಿಭಿನ್ನ ಕೋಮುಗಳು ಪರಸ್ಪರ ಎದುರಾಗಿ ತಮ್ಮ ತಮ್ಮ ಹಕ್ಕು ಮತ್ತು ಗೌರವಗಳಿಗಾಗಿ ಹೊಂದಿಕೊಳ್ಳುವಂಥ ಸಮಸ್ಯೆ. ಎರಡನೆಯ ಸಮನ್ವಯ ವಿಷಯ ಎಂದರೆ, ಇವೆರಡರ ಇಬ್ಭಾಗ ಮತ್ತು ತಿಕ್ಕಾಟಗಳ ಫಲದಿಂದಾಗುವ ಪರಿಣಾಮ. ಇವುಗಳಲ್ಲಿ ಮೊದಲನೆಯದಾದ ಹಿಂದೂ–ಮುಸ್ಲಿಂ ಹೊಂದಾಣಿಕೆಯ ಸಮಸ್ಯೆಗೆ ಸಂಬಂಧಿಸಿದಂತೆ ಪಾಕಿಸ್ತಾನ ಯೋಜನೆಯನ್ನು ಈ ಮುಂದಿನ ಪುಟಗಳಲ್ಲಿ ಬರುವ ಚರ್ಚೆಯಲ್ಲಿ ಪ್ರಸ್ತಾಪಿಸಲಾಗಿದೆ. ಎರಡನೆಯ ವಿಷಯದ ಸಮಸ್ಯೆಗೆ ಸಂಬಂಧಿಸಿದಂತೆ ಪಾಕಿಸ್ತಾನ್ ಯೋಜನೆಯನ್ನು ಪರಿಶೀಲಿಸಲಾಗಿಲ್ಲ. ಆದಾಗ್ಯೂ, ಇಂಥ ಪರಿಶೀಲನೆಯ ಅಗತ್ಯತೆ ಇದ್ದೇ ಇದೆ. ಏಕೆಂದರೆ, ಈ ವಿಷಯ ಹಿಂದೂ–ಮುಸ್ಲಿಂ ಸಮಸ್ಯೆಗೆ ಅಮುಖ್ಯವಾದುದೇನೂ ಅಲ್ಲ. ಹಕ್ಕುಬಾಧ್ಯತೆಗಳ ಹೊಂದಾಣಿಕೆಯ ವಿಷಯದ ಸಮಸ್ಯೆಗಳಿಗಷ್ಟೇ ಸೀಮಿತಗೊಂಡರೆ ಅದು ಅಸಮಗ್ರ ದೃಷ್ಟಿ ಎನಿಸದಿದ್ದರೂ ಬಾಹ್ಯ ದೃಷ್ಟಿಯಾಗಿ ಬಿಡಬಹುದು. ಏಕೆಂದರೆ, ಅವರ ಒಟ್ಟು ಅಭಿಪ್ರಾಯವನ್ನು ಕಡೆಗಣಿಸಲು ಬರುವುದಿಲ್ಲ. ಅವರು ಒಪ್ಪಲಿ, ಬಿಡಲಿ ಸಾಮಾನ್ಯ ಚಟುವಟಿಕೆಯ ದಿಶೆಯಲ್ಲಿ ಅವರೂ ಭಾಗಿಗಳಾಗಬೇಕೆಂಬುದು ಸರಿಯಲ್ಲ. ಈ ಬಗೆಯ ಸಾಮಾನ್ಯ ಚಟುವಟಿಕೆಯ ಹಾದಿಯಲ್ಲಿ ಇಬ್ಬರು ಯೋಧರಂತೆ ಅವರು ಮುಖಾಮುಖಿಗಳಾದರೆ, ಆಗ ಅವರ ಕ್ರಿಯೆ ಮತ್ತು ಪ್ರತಿಕ್ರಿಯೆಗಳನ್ನು ಅಭ್ಯಸಿಸಬೇಕಾದ್ದು ಅನಿವಾರ್ಯ. ಏಕೆಂದರೆ, ಅವು ಎರಡು ಕೋಮುಗಳನ್ನು ಬಾಧಿಸುತ್ತವೆ. ತತ್ಫಲವಾಗಿ ಪರಿಸ್ಥಿತಿ ಹದಗೆಟ್ಟರೆ ಅದರಿಂದ ತಪ್ಪಿಸಿಕೊಳ್ಳುವ ಪ್ರಶ್ನೆ ಎದುರಾಗುತ್ತದೆ. ಇಂಥ ಒಂದು ಪರಿಸ್ಥಿತಿಯ ಅಧ್ಯಯನ ಕ್ರಿಯೆ ಮತ್ತು ಪ್ರತಿಕ್ರಿಯೆಗಳು ಉಂಟುಮಾಡುವ ಜಾಡ್ಯ ತನ್ನಿಂದ ತಾನೇ ಮೂರು ಬಗೆಯಲ್ಲಿ ಅನಾವರಣಗೊಳ್ಳುತ್ತದೆ. ೧. ಸಾಮಾಜಿಕ ಜಡತೆ, ೨. ಕೋಮು ಆಕ್ರಮಣ ಮತ್ತು, ೩. ರಾಜಕೀಯ ನಿಯತಿಯಲ್ಲಿ ರಾಷ್ಟ್ರೀಯ ಹತಾಶೆ. ಈ ಜಾಡ್ಯ ತುಂಬ ಗುರುತರವಾದುದು. ಈ ಜಾಡ್ಯಕ್ಕೆ ಪಾಕಿಸ್ತಾನ ಪರಿಹಾರವೆ? ಅಥವಾ ಅದರಿಂದ ಜಾಡ್ಯ ಉಲ್ಬಣಗೊಳ್ಳುವುದೇ? ಮುಂದಿನ ಅಧ್ಯಾಯಗಳಲ್ಲಿ ಈ ಪ್ರಶ್ನೆಗಳನ್ನು ಪರಿಗಣಿಸಲಾಗಿದೆ.

## ಅಧ್ಯಾಯ ೨೬

# ಸಾಮಾಜಿಕ ಜಡತೆ

### I

ಹಿಂದೂ ಸಮಾಜದ ಗುಣವಿಶೇಷವನ್ನು ಪ್ರತಿನಿಧಿಸುವ ಸಾಮಾಜಿಕ ಕೆಡುಕುಗಳು ಎಲ್ಲರಿಗೂ ಗೊತ್ತಿರುವಂಥವು. ಮಿಸ್ ಮೇಯೊ ಅವರ 'ಮದರ್ ಇಂಡಿಯಾ' ಕೃತಿಯ ಪ್ರಕಟಣೆಯಿಂದ ಇವು ಇನ್ನಷ್ಟು ವ್ಯಾಪಕವಾದ ಪ್ರಚಾರವನ್ನು ಪಡೆದವು. ಆದರೆ, ಈ 'ಮದರ್ ಇಂಡಿಯಾ' ಕೃತಿ ಸಾಮಾಜಿಕ ಕೆಡಕುಗಳ ನೈಜ ಬಣ್ಣವನ್ನು ಬಹಿರಂಗಪಡಿಸುವಲ್ಲಿ ಸಫಲವಾದರೂ, ಇವುಗಳ ನಿರ್ಮಾತೃಗಳನ್ನು ವಿಶ್ವರಂಗದ ಕಟಕಟೆಗೆ ಕರೆದು ತಮ್ಮ ತಪ್ಪುಗಳಿಗೆ ಸಮಜಾಯಿಷಿ ಕೊಡುವಂತೆ ಪ್ರಚೋದಿಸಿದರೂ, ಹಿಂದೂಗಳು ಈ ಸಾಮಾಜಿಕ ಕೆಡಕುಗಳ ಧೂಳಿನಲ್ಲಿ ಹೊರಳಾಡುತ್ತಿರುವ ಸಂಪ್ರದಾಯವಾದಿಗಳೆಂದೂ, ಆದರೆ ಭಾರತದಲ್ಲಿರುವ ಮುಸ್ಲಿಮರು ಹಿಂದೂಗಳಿಗೆ ಹೋಲಿಸಿದರೆ, ಇಂಥ ಸಾಂಪ್ರದಾಯಿಕ ಅನಿಷ್ಟಗಳಿಂದ ಬಿಡಿಸಿಕೊಂಡು ಪ್ರಗತಿಪಥದಲ್ಲಿರುವ ಜನ ಎಂಬಂಥ ದುರದೃಷ್ಟಕರ ಅಭಿಪ್ರಾಯವನ್ನು ವಿಶ್ವದಾದ್ಯಂತ ಮೂಡಿಸಿಬಿಟ್ಟಿದೆ. ಭಾರತದಲ್ಲಿರುವ ಮುಸ್ಲಿಮರ ಸವಾಜವನ್ನು ಹತ್ತಿರದಿಂದ ಬಲ್ಲ ಜನಕ್ಕೆ ಈ ಅಭಿಪ್ರಾಯ ಆಶ್ಚರ್ಯವನ್ನುಂಟುಮಾಡಿದೆ.

ಹಿಂದೂಗಳಲ್ಲಿರುವ ಮತ್ತು ಮುಸ್ಲಿಮರಲ್ಲಿಲ್ಲದ ಯಾವುದಾದರೂ ಸಾಮಾಜಿಕ ಕೆಡುಕು ಇದೆಯೇ ಎಂದು ಯಾರಾದರೂ ಪ್ರಶ್ನಿಸಬಹುದು.

ಬಾಲ್ಯವಿವಾಹವನ್ನೇ ತೆಗೆದುಕೊಳ್ಳಿ. ಭಾರತದ ಯಾವಯಾವ ವಿಭಿನ್ನ ಸಮುದಾಯಗಳಲ್ಲಿ ಎಷ್ಟರಮಟ್ಟಿಗೆ ಈ ಸಾಮಾಜಿಕ ಪಿಡುಗು ಕೆಲಸ ಮಾಡಿದೆ ಎಂಬುದನ್ನು, ಅಖಿಲ ಭಾರತ ಸ್ತ್ರೀ ಸ್ಮಮೇಳನವು ರೂಪಿಸಿದ 'ಬಾಲ್ಯ ವಿವಾಹ ಪದ್ಧತಿ ವಿರೋಧಿ ಸಮಿತಿ'ಯ ಕಾರ್ಯದರ್ಶಿಯು ಹೊರಡಿಸಿರುವ ಪ್ರಕಟಣೆಗೆ ತಿಳಿಸುತ್ತದೆ. ೧೯೩೧ರ ಜನಗಣತಿಯ ವರದಿಯಿಂದಾಯ್ದ ಇದಕ್ಕೆ ಸಂಬಂಧಿಸಿದ ಅಂಕಿ ಅಂಶಗಳು ಈ ಕೆಳಕಂಡಂತಿವೆ:

೦–೧೫ ವಯಸ್ಸಿನಲ್ಲಿ ಮದುವೆಯಾದ ಹೆಣ್ಣುಮಕ್ಕಳ ಸಂಖ್ಯೆ ೧೦೦೦ಕ್ಕೆ

| | ಹಿಂದೂಗಳು | ಮುಸ್ಲಿಮರು | ಜೈನರು | ಸಿಖ್ಖರು | ಕ್ರಿಶ್ಚಿಯನ್ನರು |
|---|---|---|---|---|---|
| ೧೮೮೧ | ೨೦೮ | ೧೫೩ | ೧೮೯ | ೧೭೦ | ೩೩ |
| ೧೮೯೧ | ೧೯೩ | ೧೪೧ | ೧೭೨ | ೧೪೩ | ೩೭ |
| ೧೯೦೧ | ೧೪೮ | ೧೩೧ | ೧೬೪ | ೧೦೧ | ೩೮ |
| ೧೯೧೧ | ೧೮೪ | ೧೨೩ | ೧೩೦ | ೮೮ | ೩೯ |
| ೧೯೩೧ | ೧೯೯ | ೧೮೬ | ೧೨೫ | ೮೦ | ೪೩ |

ಈ ಪಟ್ಟಿಯನ್ನು ಗಮನಿಸಿದರೆ ಬಾಲ್ಯ ವಿವಾಹಕ್ಕೆ ಸಂಬಂಧಿಸಿದಂತೆ ಮುಸ್ಲಿಮರ ಪರಿಸ್ಥಿತಿ ಹಿಂದೂಗಳಿಗಿಂತ ಉತ್ತಮವಾಗಿದೆಯೆ?

ಸ್ತ್ರೀಯರ ಸ್ಥಾನಮಾನವನ್ನು ಗಮನಿಸಿ. ಮುಸ್ಲಿಂ ಸ್ತ್ರೀಯರಿಗೆ ಕಾಯಿದೆ ಒದಗಿಸಿರುವ ಹಕ್ಕುಗಳು ಹಿಂದೂ ಸ್ತ್ರೀಯರಿಗಿಂತ, ಪಾಶ್ಚಿಮಾತ್ಯ ರಾಷ್ಟ್ರಗಳ ಸ್ತ್ರೀಯರಿಗಿಂತ ಅಧಿಕ ಸವಲತ್ತುಗಳನ್ನುಳ್ಳವು ಎಂಬುದು ಮುಸಲ್ಮಾನರ ಕೊರಗು. ಮುಸ್ಲಿಂ ಕಾನೂನು ಒದಗಿಸಿಕೊಟ್ಟಿರುವ ಕೆಲವು ಸೌಲಭ್ಯಗಳನ್ನು ಉಲ್ಲೇಖಿಸಬಹುದು.

ಮೊದಲನೆಯದಾಗಿ, ಮುಸ್ಲಿಂ ಕಾನೂನು ಸ್ತ್ರೀಯರ ವಿವಾಹಕ್ಕೆ ಇಂತಿಷ್ಟೇ ಎಂದು ವಯಸ್ಸನ್ನು ನಿಗದಿಪಡಿಸಿಲ್ಲ. ಬೇಕೆಂದಾಗ ಮದುವೆಯಾಗುವುದು ಹೆಣ್ಣಿನ ಹಕ್ಕೆಂದು ಪರಿಗಣಿಸಲಾಗಿದೆ. ಜೊತೆಗೆ ತಂದೆ ಅಥವಾ ತಾತ ನಿಂತು ಮದುವೆ ಮಾಡಿರುವಂಥ ಪ್ರಕರಣಗಳನ್ನು ಬಿಟ್ಟು, ಬಾಲ್ಯ ವಿವಾಹಕ್ಕೆ ಒಂದು ಹೆಣ್ಣು ಈಡಾಗಿದ್ದಲ್ಲಿ ಆಕೆ ವಯಸ್ಸಿಗೆ ಬಂದಾಗ ಅದನ್ನು ಪರಿತ್ಯಜಿಸುವ ಹಕ್ಕನ್ನು ಅವಳಿಗೆ ನೀಡಲಾಗಿದೆ.

ಎರಡನೆಯದಾಗಿ, ಮುಸಲ್ಮಾನರಲ್ಲಿ ಮದುವೆ ಎಂಬುದು ಒಂದು ಒಡಂಬಡಿಕೆ. ಇದು ಒಡಂಬಡಿಕೆಯಾದುದರಿಂದ ಹೆಂಡತಿಗೆ ವಿಚ್ಛೇದನ ಕೊಡುವ ಹಕ್ಕು ಗಂಡನಿಗಿರುವ ಹಾಗೆಯೇ, ಆಕೆ ಬಳಸಿಕೊಳ್ಳಬಹುದಾದಲ್ಲಿ, ವಿಚ್ಛೇದನದ ವಿಷಯದಲ್ಲಿ ಗಂಡಿನಂತೆಯೇ ತೀರ್ಮಾನ ತೆಗೆದುಕೊಳ್ಳುವ ಹಕ್ಕನ್ನು ಸುರಕ್ಷತೆಯ ದೃಷ್ಟಿಯಿಂದ ಹೆಣ್ಣಿಗೂ ಮುಸ್ಲಿಂ ಕಾನೂನು ಒದಗಿಸಿಕೊಟ್ಟಿದೆ. ಅನಿವಾರ್ಯವಾದಲ್ಲಿ ವಿಚ್ಛೇದನ ಪಡೆಯಲು ಅನುವಾಗುವಂತೆ ಮದುವೆಯ ಸಮಯದಲ್ಲಿ ಅಥವಾ ಕೆಲವು ವೇಳೆ ಆನಂತರವೂ ಒಪ್ಪಂದ ಮಾಡಿಕೊಳ್ಳಲು ಮುಸ್ಲಿಂ ಕಾಯಿದೆ ವಿವಾಹಿತ ಸ್ತ್ರೀಗೆ ಅವಕಾಶ ಕಲ್ಪಿಸಿದೆ ಎಂದೂ ವಾದಿಸಲಾಗಿದೆ.

ಮೂರನೆಯದಾಗಿ, ವಿಚ್ಛೇದನದ ಕಾರಣಕ್ಕಾಗಿ, ಗಂಡನಿಂದ ದೂರವಾಗುವ ಹೆಣ್ಣು ಒಂದು ಪ್ರಮಾಣದಲ್ಲಿ ಹಣ ಅಥವಾ ಆಸ್ತಿಯನ್ನು 'ವಧುಶುಲ್ಕ'ದ ರೂಪದಲ್ಲಿ ಗಂಡನಿಂದ ಪಡೆದುಕೊಳ್ಳುವುದನ್ನು ಮಹಮಡನ್ ಕಾನೂನು ಬೆಂಬಲಿಸುತ್ತದೆ. 'ವಧುಶುಲ್ಕ'ವನ್ನು ಮದುವೆಯ ನಂತರವೂ ನಿಗದಿಪಡಿಸಬಹುದು. ಹಾಗೊಂದು ವೇಳೆ ನಿಗದಿಪಡಿಸದಿದ್ದಲ್ಲಿ ವಿವಾಹಿತ ಸ್ತ್ರೀಗೆ ಸೂಕ್ತ ವಧುಶುಲ್ಕದ ಅರ್ಹತೆಯಿದೆ. ಸಾಮಾನ್ಯವಾಗಿ ವಧುಶುಲ್ಕದ ಹಣವನ್ನು ಎರಡು ಭಾಗವಾಗಿ ವಿಭಜಿಸಿ, ಒಂದನ್ನೂ ಕೇಳಿದಾಗ ಕೊಡುವ 'ತಗಾದೆಹಣ'ವಾಗಿಯೂ ಮತ್ತೊಂದನ್ನು ಸಾವು ಅಥವಾ ವಿಚ್ಛೇದನದಿಂದ ವಿವಾಹ ಸಂಬಂಧ ಕಡಿದುಹೋದಾಗ ಕೊಡುವ 'ವರ್ಷಾಶನಧನ'ವಾಗಿಯೂ ಇಡಬೇಕು. ವಿಧವಾಂಶದ ಆಕೆಯ ಕೋರಿಕೆಯನ್ನು ಅವಳ ಗಂಡನ ಸ್ಥಾನಮಾನದ ವಿರುದ್ಧದ ಋಣಭಾರ ಎಂದು ಪರಿಗಣಿಸಲಾಗುವುದು. ವಧುಶುಲ್ಕದ ಮೇಲೆ ಆಕೆಗೆ ಸಂಪೂರ್ಣ ಅಧಿಕಾರವಿರುತ್ತದೆ. ಏಕೆಂದರೆ, ಅದು ಆಕೆಗೆ ಆರ್ಥಿಕ ಸ್ವಾತಂತ್ರ್ಯವನ್ನು ನೀಡಬೇಕೆಂದು ಆಶಿಸಲಾಗಿದೆ. ಅದನ್ನು ಆಕೆ ಇಡುಗಂಟಾಗಿ ಇಟ್ಟುಕೊಳ್ಳಬಹುದು. ಇಲ್ಲವೇ ಅದರಿಂದ ಆದಾಯ ಬರುವಹಾಗೆ ಬಳಸಿಕೊಳ್ಳಬಹುದು. ಅದು ಆಕೆಯ ಸ್ವಂತಕ್ಕೆ ಸೇರಿದಂಥ ವಿಷಯ.

ಇಷ್ಟೆಲ್ಲ ಕಾನೂನುಗಳನ್ನು ಮುಸ್ಲಿಂ ಸ್ತ್ರೀಯ ಅನುಕೂಲಕ್ಕಾಗಿ ಮಾಡಿದ್ದರೂ, ಪ್ರಪಂಚದಲ್ಲಿಯೇ ಅತ್ಯಂತ ಅಭಾಗಿನಿ ಎಂದರೆ ಮುಸ್ಲಿಂ ಮಹಿಳೆ. ಈಜಿಪ್ಟಿನ ಮುಸ್ಲಿಂ ನಾಯಕರೊಬ್ಬರ ಮಾತಿನಲ್ಲಿಯೇ ಹೇಳುವುದಾದರೆ:

**"ಹೆಣ್ಣಿನ ಮೇಲೆ ಇಸ್ಲಾಂ ಕೀಳರಿಮೆಯ ಮುದ್ರೆಯನ್ನೊತ್ತಿದೆ. ಧರ್ಮದ ಹೆಸರಿನಲ್ಲಿ ಸಾಮಾಜಿಕ ಕಟ್ಟುಪಾಡುಗಳನ್ನು ಹೇರಿ ಆಕೆಯ ಸ್ವಂತ ಅಭಿವ್ಯಕ್ತಿಯನ್ನು, ವ್ಯಕ್ತಿತ್ವ ವಿಕಸನವನ್ನು ಹರಣ ಮಾಡಿಬಿಟ್ಟಿದೆ."**

ತಾನು ಮಗುವಾಗಿದ್ದಾಗ ಪೋಷಕರಲ್ಲದವರಿಂದ ಬಾಲ್ಯವಿವಾಹಕ್ಕೆ ಬಲಿಯಾದ ಹೆಣ್ಣು ಕನ್ಯೆಯಾದಾಗ ಅಂಥ ವಿವಾಹವನ್ನು ತಿರಸ್ಕರಿಸಬಹುದಾದ ಹಕ್ಕು ಇದ್ದರೂ ಯಾವ ಮುಸ್ಲಿಂ ಕನ್ಯೆಗೂ ಹಾಗೆ ಮಾಡುವಂಥ ಧೈರ್ಯವಿಲ್ಲ. ಮದುವೆಯ ನಂತರದಲ್ಲಿ ವಿಚ್ಛೇದನದ ಹಕ್ಕನ್ನು ಕಾಯ್ದಿರಿಸುವ ಒಪ್ಪಂದದ ಬಗೆಗೂ ಯಾವುದೇ ವಿವಾಹಿತ ಮುಸ್ಲಿಂ ಸ್ತ್ರೀಗೆ ಒಲವಿದ್ದಂತೆ ತೋರುವುದಿಲ್ಲ. 'ಒಮ್ಮೆ ವಿವಾಹವಾದ ಮೇಲೆ ಜೀವನ ಪರ್ಯಂತ ವಿವಾಹಿತೆಯಾಗಿರುವುದು' ಅವಳ ಹಣೆಬರಹ. ಎಷ್ಟೇ ಕಿರಿಕಿರಿಯುಂಟಾದರೂ ವಿವಾಹಬಂಧನದಿಂದ ಆಕೆ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಹೆಣ್ಣು ಹೀಗೆ ಅಸಹಾಯಕಳಾದರೆ ಗಂಡು ಕಾರಣಕೊಡದೆ ಅವಳನ್ನು ಬಿಟ್ಟುಬಿಡಬಹುದು. 'ತಲಾಕ್' ಎಂದು ಹೇಳಿ ಮೂರು ವಾರಗಳ ಸಂಯಮ ವ್ರತವನ್ನಾಚರಿಸಿ ಬಿಟ್ಟರೆ, ಹೆಂಡತಿಯನ್ನು ಹೊರಹಾಕಿದಂತೆಯೇ ಲೆಕ್ಕ. ಇಂಥ ಚಂಚಲ ಪ್ರವೃತ್ತಿಗೆ ತೊಡಕಾಗಿರುವ ಒಂದೇ ಅಡಚಣೆ ಎಂದರೆ ವಧುಶುಲ್ಕ ಕೊಡಬೇಕಾಗುವಂಥದು. ಒಂದುವೇಳೆ ವಿಧವಾಂಶವನ್ನು ಈಗಾಗಲೇ ಸಂದಾಯ ಮಾಡಿದ್ದರೆ ವಿಚ್ಛೇದನದ ಹಕ್ಕು ಆತನ ಇಚ್ಛಾವರ್ತಿ.

ವಿಚ್ಛೇದನದಂಥ ಸೂಕ್ಷ್ಮ ವಿಷಯದ ಬಗೆಗೆ ಗಂಡಿನ ಈ ಸ್ವೇಚ್ಛಾ ಪ್ರವೃತ್ತಿ, ಹೆಣ್ಣಿನ ಸಂತೋಷದಾಯಕ ಮುಕ್ತ ಬದುಕಿನ ಮೂಲ ಅಗತ್ಯವಾದ ಸುಭದ್ರತೆಯನ್ನೇ ಧೂಳೀಪಟ ಮಾಡಿಬಿಡುತ್ತಿದೆ. ಗಂಡಸಿಗೆ ಮುಸ್ಲಿಂ ಕಾಯಿದೆ ಒದಗಿಸಿರುವ ಈ ಬಹುಪತ್ನಿತ್ವ ಮತ್ತು ಉಪಪತ್ನಿತ್ವದ ಹಕ್ಕು ಮುಸ್ಲಿಂ ಮಹಿಳೆಯನ್ನು ಅಭದ್ರತೆಯ ಕೂಪಕ್ಕೆ ತಳ್ಳಿದೆ.

ಒಬ್ಬ ಮುಸ್ಲಿಂ ಏಕಕಾಲಕ್ಕೆ ನಾಲ್ಕು ಜನ ಹೆಂಡಿರನ್ನು ಮದುವೆಯಾಗಲು ಮಹಮಡನ್ ಲಾ ಅನುಮತಿಸಿದೆ. ಯಾವುದೇ ಗೊತ್ತಾದ ಕಾಲದಲ್ಲಿ ಒಬ್ಬ ಹಿಂದೂ ಎಷ್ಟು ಜನ ಪತ್ನಿಯರನ್ನು ಹೊಂದಿರಬೇಕು ಎಂಬ ಯಾವುದೇ ನಿರ್ಬಂಧವನ್ನು ಹೇರದ ಹಿಂದೂ ಕಾಯಿದೆಗಿಂತ ಇದು ಉತ್ತಮವೆಂದು ಎಲ್ಲೂ ಪ್ರಸ್ತಾಪವಾಗಿಲ್ಲ. ಆದರೆ ಒಬ್ಬ ಮಹಮದೀಯ ಅಧಿಕೃತ ನಾಲ್ಕು ಜನ ಪತ್ನಿಯರ ಜೊತೆಗೆ ತನ್ನ ಮಹಿಳಾ ಗುಲಾಮರ ಜೊತೆಗೂ ಸಂಬಂಧವಿಟ್ಟುಕೊಳ್ಳಲು ಮಹಮಡನ್ ಲಾ ಅವಕಾಶಕೊಟ್ಟಿದೆ. ಈ ಮಹಿಳಾ ಗುಲಾಮರೊಡನೆ ಇಟ್ಟುಕೊಳ್ಳುವ ಸಂಬಂಧಕ್ಕೆ ಯಾವುದೇ ಸಂಖ್ಯೆಯ ನಿರ್ಬಂಧವಿಲ್ಲ. ಯಾವ ಕಟ್ಟುಪಾಡಿಗೂ ಒಳಗಾಗದೆ ಅವರನ್ನು ವರಿಸಲು ಅವಕಾಶವಿದೆ.

ಬಹುಪತ್ನಿತ್ವ ಮತ್ತು ಉಪಪತ್ನಿತ್ವದಂಥ ಕೆಡಕುಗಳು ಮುಸಲ್ಮಾನ ಮಹಿಳೆಗೆ ತಂದೊಡ್ಡಿರುವ ಕುತ್ತನ್ನು ವರ್ಣಿಸುವುದು ಅಸದಳ. ಬಹುಪತ್ನಿತ್ವದ ಆಚರಣೆಯ ಅವಕಾಶ ಇದ್ದಾಕ್ಷಣ ಎಲ್ಲರೂ ಇದಕ್ಕೆ ಒಳಗಾಗುತ್ತಾರೆ ಎಂದರ್ಥವಲ್ಲ. ಆದರೂ ಇವುಗಳಿಂದ ಮುಸ್ಲಿಂ ಮಹಿಳೆ ಅಪಮಾನಕ್ಕೆ, ಅನ್ಯಾಯಕ್ಕೆ, ದೌರ್ಜನ್ಯಕ್ಕೆ, ಅಸಂತೋಷಕ್ಕೆ ತುತ್ತಾಗಿದ್ದಾಳೆ ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಇದನ್ನು ಇಸ್ಲಾಂ ಧರ್ಮದ ವಿರೋಧಿ ಏನೂ ಅಲ್ಲದ ಜಾನ್ ಜೆ ಪೋಲ್ ಅವರು ಗಮನಿಸಿರುವ ರೀತಿ ಇದು:*

---

* ಸ್ಟಡೀಸ್ ಇನ್ ಮೊಹಮಡ್ಯಾನಿಸಂ– ಪು.ಪು.೩೪–೩೫

ವಿವಾಹ ವಿಚ್ಛೇದನ ವಿಷಯದಲ್ಲಿನ ಸ್ವಾತಂತ್ರ್ಯವನ್ನು ಕೆಲವು ಮಹಮದೀಯರು ದುರುಪಯೋಗ ಪಡಿಸಿಕೊಂಡಿದ್ದಾರೆ. 'ಇಸ್ಲಾಂ ಮತ್ತು ಅದರ ಸಂಸ್ಥಾಪಕ' ಎಂಬ ತನ್ನ ಕೃತಿಯಲ್ಲಿ ಈ ವಿಷಯ ಪ್ರಸ್ತಾಪಿಸುತ್ತಾ ಸ್ಟೊಬರ್ಟ್ ಹೀಗೆ ಹೇಳಿದ್ದಾರೆ:

''ಕೆಲವು ಮಹಮದೀಯರಿಗೆ ನಿರಂತರವಾಗಿ ಹೆಂಡಿರನ್ನು ಬದಲಾಯಿಸುವುದೇ ಅಭ್ಯಾಸ. ಒಬ್ಬ ಯುವಕ ಪ್ರತೀ ಮೂರು ತಿಂಗಳಿಗೊಮ್ಮೆ ಮದುವೆಯಾಗಿ ಹೊಸ ಹೊಸ ಹೆಂಡಿರನ್ನು ತರುತ್ತ ಸುಮಾರು ಇಪ್ಪತ್ತರಿಂದ ಮೂವತ್ತು ಜನ ಪತ್ನಿಯರನ್ನು ಹೊಂದಿದ್ದ ವಿಷಯ ತಿಳಿದುಬಂದಿದೆ. ಹೀಗಾಗಿ, ಇದು ಎಲ್ಲಿಗೆ ಬಂದು ತಲುಪುತ್ತದೆ ಎಂದರೆ, ಹೆಣ್ಣುಗಳು ಅನಿಶ್ಚಿತವಾಗಿ ಒಬ್ಬನಿಂದ ಇನ್ನೊಬ್ಬನಿಗೆ ವರ್ಗಾಯಿಸಲ್ಪಡುತ್ತಾರೆ. ಹೊಸ ಗಂಡನನ್ನು, ಹೊಸ ಮನೆಯನ್ನು ಆಗಿಂದಾಗ್ಗೆ ಒಪ್ಪಿಕೊಳ್ಳುವುದು ಇವರಿಗೆ ಅನಿವಾರ್ಯವಾಗುತ್ತದೆ ಅಥವಾ ವಿವಾಹ ವಿಚ್ಛೇದನದಿಂದ ನಿರ್ಗತಿಕರಾಗಿ ಬದುಕನ್ನು ಸಾಗಿಸಲು ಕೆಟ್ಟದಾರಿಯನ್ನು ತುಳಿಯಬೇಕಾಗುತ್ತದೆ. ಕಾನೂನನ್ನು ನಿಜವಾಗಿ ಪಾಲಿಸುವುದಾದರೆ ಒಬ್ಬ ಮಹಮದೀಯ ಒಂದು ಅಥವಾ ಅತಿ ಹೆಚ್ಚು ಎಂದರೆ ನಾಲ್ಕಕ್ಕೆ ಮೀರಿ ವಿವಾಹವಾಗಕೂಡದು. ಆದರೆ ಕೆಲವು ಅಧರ್ಮೀಯ ಪ್ರವೃತ್ತಿಯ ಜನರು ವಿಚ್ಛೇದನಗಳ ಮೂಲಕ ತಮಗೆ ಬೇಕಾದಷ್ಟು ಜನ ಹೆಂಡಿರನ್ನು ತಮ್ಮ ಜೀವಿತ ಅವಧಿಯಲ್ಲಿ ಪಡೆಯುತ್ತಿರುತ್ತಾರೆ.

''ಮಹಮದೀಯನೊಬ್ಬ ನಾಲ್ಕಕ್ಕಿಂತ ಹೆಚ್ಚು ಮದುವೆಯಾಗಿಯೂ ಕಾನೂನಿನ ಚೌಕಟ್ಟಿನೊಳಗೂ ಉಳಿಯಬಹುದಾದ ಮತ್ತೊಂದು ವರ್ಗವೂ ಇದೆ. ಅದೇ ವೇಶ್ಯೆಯರೊಡನೆ ವಾಸಿಸುವಂಥದು. ಕೊರಾನ್ ಇದಕ್ಕೆ ಪರವಾನಗಿ ನೀಡಿದೆ. ನಾಲ್ವರು ಹೆಂಡಿರನ್ನು ಅನುಮತಿಸುವ 'ಸುರಾ'ದಲ್ಲಿ 'ಸೇವಕಿಯರಲ್ಲಿ ಒಬ್ಬ ಸ್ವಾಧೀನಪಡಿಸಿಕೊಳ್ಳಬಹುದಾದ್ದ'ರ ಬಗೆಗೂ ಮಾತುಗಳಿವೆ. 'ಸುರಾ ೭೦'ರಲ್ಲಿ ಸೇವಕಿಯರೊಡನೆ ಬೆರೆಯುವುದು ಪಾಪವಲ್ಲ ಎಂದೂ ಹೇಳಲಾಗಿದೆ. 'ಸೇವಕಿಯರು ತಮ್ಮ ಬಲಗೈಮೇಲೆ ಯಾವುದನ್ನು ಗಳಿಸಿಕೊಂಡಿರುತ್ತಾರೋ ಅದಕ್ಕಾಗಿ ಅವರು ನಾಚಿಕೆ ಪಡಬೇಕಾಗಿಲ್ಲ' ಎಂಬಂಥ ಮಾತುಗಳೂ ಇವೆ. ಈ ಹಿಂದೆ ಇದ್ದಂತೆ ಈಗಲೂ ಮಹಮಡನ್ ನಿವಾಸಗಳಲ್ಲಿ ಬಹುಸಂಖ್ಯೆಯ ಸೇವಕಿಯರಿದ್ದಾರೆ. ''ಲೈಫ್ ಆಫ್ ಮೊಹಮದ್'' ಎಂಬ ತಮ್ಮ ಕೃತಿಯಲ್ಲಿ ಮೂರ್ ಹೀಗೆ ಹೇಳಿದ್ದಾರೆ: ''ಎಲ್ಲಿಯವರೆಗೆ ಮಹಿಳಾಸೇವಕಿಯರೊಡನೆ ಇರಲು ಮುಸ್ಲಿಮರಿಗೆ ಮಿತಿ ಇರದ ಈ ಅನುಮತಿ ಮುಂದುವರಿಯುತ್ತದೆಯೊ, ಅಲ್ಲಿಯವರೆಗೆ ಮಹಮಡನ್ ರಾಷ್ಟ್ರಗಳಲ್ಲಿ ಗುಲಾಮಗಿರಿಯನ್ನು ಕೊನೆಗೊಳಿಸುವಂಥ ಶ್ಲಾಘನೀಯ ಪ್ರಯತ್ನದ ನಿರೀಕ್ಷೆ ಮಾಡುವಂತಿಲ್ಲ.'' ಕೊರಾನ್ ಹೀಗೆ ಗುಲಾಮಗಿರಿಗೆ ಸಂಬಂಧಿಸಿದಂತೆ ಮಾನವ ಜನಾಂಗದ ಶತ್ರುವಾಗಿದೆ. ಯಥಾ ಪ್ರಕಾರ ಹೆಣ್ಣು ಹೆಚ್ಚಿನ ನೋವಿಗೆ ತುತ್ತಾಗಿದ್ದಾಳೆ.''

ಜಾತಿ ಪದ್ಧತಿಯನ್ನೇ ಗಮನಿಸಿ. ಇಸ್ಲಾಂ, ಭ್ರಾತೃತ್ವವನ್ನು ಪ್ರತಿಪಾದಿಸುತ್ತದೆ. ಗುಲಾಮಗಿರಿ ಮತ್ತು ಜಾತಿಯ ಕಪಿಮುಷ್ಟಿಯಿಂದ ಇಸ್ಲಾಂ ಮುಕ್ತವಾಗಬೇಕೆಂಬುದು ಎಲ್ಲರ ಬಯಕೆ. ಗುಲಾಮಗಿರಿಯ ಬಗೆಗೆ ಏನೂ ಹೇಳಬೇಕಾಗಿಲ್ಲ. ಕಾನೂನಿನ ರೀತ್ಯ ಈಗ ಅದು ನಿಷೇಧಕ್ಕೊಳಗಾಗಿದೆ. ಹೀಗಿದ್ದೂ ಗುಲಾಮಗಿರಿಗೆ ಹೆಚ್ಚಿನ ಒತ್ತಾಸೆ ದೊರಕಿರುವುದು ಇಸ್ಲಾಂ ಹಾಗೂ ಮುಸಲ್ಮಾನ ರಾಷ್ಟ್ರಗಳಿಂದ.[೧] ಪ್ರವಾದಿ, ಕೊರಾನ್‌ನಲ್ಲಿ ಹೇಳಲಾಗಿರುವ ಗುಲಾಮರನ್ನು ನಡೆಸಿಕೊಳ್ಳಬೇಕಾದ ನಿಷ್ಪಕ್ಷಪಾತ ಮಾನವೀಯ ದೃಷ್ಟಿಕೋನ

---

೧. ಅದೇ ಅಧ್ಯಾಯ ೩೯

ಪ್ರಶಂಸನೀಯವಾದುದೆ. ಆದರೆ, ಈ ಮಹಾಶಾಪವನ್ನು ನಿಷೇಧಿಸಲು ಕೊರಾನ್‌ನಲ್ಲಿ ಯಾವುದೇ ಬಗೆಯ ಬೆಂಬಲವಿಲ್ಲ. ಸರ್ ಡಬ್ಲ್ಯೂ.ಮ್ಯೂರ್ ಸರಿಯಾಗಿ ಗ್ರಹಿಸಿ ಹೇಳಿರುವ ಮಾತಿದು[೧]: "...ತನ್ನ ಗುಲಾಮರನ್ನು ಬಿಡುಗಡೆ ಮಾಡಬೇಕೆಂದು ಮುಸ್ಲಿಮರ ಮೇಲೆ ಯಾವುದೇ ತಗಾದೆ ಇಲ್ಲ."

ಗುಲಾಮಗಿರಿ ಹೋಯಿತೆಂದು ಭಾವಿಸಿದರೂ, ಮುಸಲ್ಮಾನರಲ್ಲಿ ಜಾತಿ ಉಳಿದೇ ಇದೆ. ಬೆಂಗಾಲಿ ಮುಸ್ಲಿಮರ ಪ್ರಸಕ್ತ ಪರಿಸ್ಥಿತಿಯನ್ನು ಉದಾಹರಣೆಗಾಗಿ ಗಮನಿಸಬಹುದು. ಈ ಜನರ ಬಗೆಗೆ ಕೆಲವು ಕುತೂಹಲಕರವಾದ ನೈಜ ಅಂಶಗಳನ್ನು ಬೆಂಗಾಲ್, ಪ್ರಾಂತದ ೧೯೦೧ರ ಜನಗಣತಿಯ ನಿರ್ವಾಹಕರೊಬ್ಬರು ಹೀಗೆ ದಾಖಲಿಸಿದ್ದಾರೆ:

ಮಹಮಡನ್ ಜನಾಂಗವನ್ನು ಷೇಕ್, ಸಯ್ಯದ್, ಮೊಘಲ್ ಮತ್ತು ಪಠಾಣ್ ಎಂದು ನಾಲ್ಕು ಪಂಗಡಗಳಾಗಿ ಸಾಂಪ್ರದಾಯಿಕವಾಗಿ ವಿಂಗಡಿಸಿಕೊಳ್ಳುವುದು ರೂಢಿ. ಬೆಂಗಾಲ್ ಪ್ರಾಂತದ ಬಗೆಗೆ ಇವರ ಒಲವು ಅಷ್ಟಕ್ಕಷ್ಟೆ. ಅಶ್ರಾಫ್ ಅಥವಾ ಶರಾಷ್ ಮತ್ತು ಅಜ್‌ಲಾಫ್ ಎಂಬ ಎರಡು ಪ್ರಧಾನ ಸಾಮಾಜಿಕ ವಿಭಾಗಗಳನ್ನು ಮಹಮಡನ್ ಜನರು ತಮ್ಮೊಳಗೇ ಮಾಡಿಕೊಂಡಿದ್ದಾರೆ. ಅಶ್ರಾಫ್ ಎಂದರೆ 'ಕುಲೀನ' ಎಂದರ್ಥ. ಎಲ್ಲ ಸಂಶಯಾತೀತ ವಿದೇಶೀ ಸಂಜಾತರನ್ನು ಹಾಗೂ ಹಿಂದೂಗಳ ಉತ್ತಮ ಜಾತಿಗಳಿಂದ ಮತಾಂತರಗೊಂಡವರನ್ನು 'ಕುಲೀನ' ಗುಂಪು ಒಳಗೊಳ್ಳುತ್ತದೆ. ಉಳಿದೆಲ್ಲ ಮಹಮದೀಯರನ್ನು ಅಜ್‌ಲಾಫ್ ಗುಂಪು ಒಳಗೊಳ್ಳುತ್ತದೆ. ಇದರಲ್ಲಿ ವೃತ್ತಿಪರವಾದ ಗುಂಪು, ಕೆಳಸ್ತರದ ಜಾತಿಗಳಿಂದ ಮತಾಂತರಗೊಂಡವರು ಸೇರುತ್ತಾರೆ. ಇವರು 'ಅಜ್ ಲಾಫ್', 'ದರಿದ್ರರು', ಅಥವಾ 'ಕೀಳುಜನ' ಎಂಬಂಥ ಹೀನಾಯ ಮಾತುಗಳಿಂದ ಕರೆಯಲ್ಪಡುತ್ತಾರೆ. ಜೊತೆಗೆ ಇವರನ್ನು 'ಕಮೀನ' ಅಥವಾ 'ಇತಾರ್' ಎಂದೂ ಸಂಬೋಧಿಸುವುದು ರೂಢಿಯಲ್ಲಿದೆ. ಇನ್ನೂ ಕೆಲವು ಕಡೆಗಳಲ್ಲಿ ಅರ್ಜಾಲ್ ಅಥವಾ 'ಕನಿಷ್ಠರಲ್ಲಿ ಕನಿಷ್ಠ'ವಾದ ಮೂರನೆಯ ಗುಂಪೂ ಇದೆ. ಇವರೊಡನೆ ಇತರ ಪಂಗಡದ ಯಾವುದೇ ಮಹಮದೀಯ ಬೆರೆಯುವುದಿಲ್ಲ. ಇವರಿಗೆ ಮಸೀದಿ ಪ್ರವೇಶವನ್ನು, ಸಾರ್ವಜನಿಕ ಸ್ಮಶಾನ ಬಳಕೆಯನ್ನು ನಿಷೇಧಿಸಲಾಗಿದೆ.

ಹಿಂದೂಗಳಲ್ಲಿ ಕಾಣುವಂಥ ಜಾತಿ ವೈಪರೀತ್ಯದ ಮಾದರಿಯಲ್ಲೇ "ಈ ಗುಂಪುಗಳೊಳಗೆ" ಸಾಮಾಜಿಕ ಆದ್ಯತೆಯ ಹಲವಾರು ಜಾತಿಗಳಿವೆ.

I. ಅಶ್ರಾಫ್ ಅಥವಾ ಕುಲೀನ ವರ್ಗದ ಮಹಮದೀಯರು

೧. ಸೈಯ್ಯದರು
೨. ಷೇಕರು
೩. ಪಠಾಣರು
೪. ಮೊಗಲರು
೫. ಮಲ್ಲಿಕರು
೬. ಮಿರ್ಜಾಗಳು

೧. ಕೊರಾನ್, ಇಟ್ಸ್ ಕಾಂಪೋಸಿಷನ್ ಆ್ಯಂಡ್ ಟೀಚಿಂಗ್

II. ಅಜ್‌ಲಾಫ್ ಅಥವಾ ಕೆಳದರ್ಜೆಯ ಮಹಮದೀಯರು

೧. ಬೇಸಾಯಗಾರ ಷೇಕ್ ಜನರು ಮತ್ತು ಮೂಲತಃ ಹಿಂದೂಗಳಾಗಿದ್ದವರು. ಇವರು ಯಾವುದೇ ಸಕ್ರಿಯ ಗುಂಪಿಗೆ ಸೇರುವುದಿಲ್ಲ. ಜೊತೆಗೆ ಇವರನ್ನು ಅಶ್ರಾಫ್ ಗುಂಪಿಗೆ ಸೇರಿಸಿಕೊಳ್ಳಲಾಗಿಲ್ಲ. ಉದಾ. ಪಿರಲಿ ಮತ್ತು ಥಕ್ರಾಯ್.

೨. ದರ್ಜಿ, ಜೊಲಾಥ, ಫಕೀರ್ ಮತ್ತು ರಂಗ್ರೇಜ್.

೩. ಬರ್ಹಿ, ಬಾಥಿಯಾರ, ಛಿಕ್, ಚೂರಿಹಾರ್, ದಯ್, ಧವ, ಧುನಿಯಾ, ಗದ್ದಿ, ಕಲಾಲ್, ಕಸಾಯಿ, ಕುಲಕುಂಜರ, ಲಹೇರಿ, ಮಹಿಫರೂಶ್, ಮಿಲ್ಲಾ, ನಲಿಯಾ, ನಿಕಾರಿ.

೪. ಅಬ್ದುಲ್, ಬಕೊ, ಬೆದಿಯ, ಭಟ್, ಚಂಬ, ದಫಲಿ, ಧೋಬಿ, ಹಜ್ಜಂ, ಮುಚೊ, ನಾಗರ್‌ಚಿ, ನತ್, ಪನ್ವಾರಿಯ, ಮದಾರಿಯ, ತುನ್‌ತಿಯಾ.

III. ಅರ್ಜಾಲ್ ಅಥವಾ ಹೀನಾಯ ವರ್ಗ

ಭನರ್, ಹಲಾಲ್, ಖೋರ್, ಹಿಜ್ರ, ಕಸ್ಬಿ, ಲಾಲ್, ಬೇಗಿ, ಮೌಗ ಮೆಹ್ತಾರ್."

ಮುಸ್ಲಿಂ ಸಮಾಜದಲ್ಲಿ ಚಾಲ್ತಿಯಲ್ಲಿರುವ 'ಪಂಚಾಯತ್ ಪದ್ಧತಿ'ಯ ಬಗೆಗೂ ಜನಗಣತಿಯ ನಿರ್ವಹಣಾಧಿಕಾರಿ ಹೀಗೆ ಪ್ರಸ್ತಾಪಿಸಿದ್ದಾರೆ:

**"ಈ ಪಂಚಾಯತಿಯ ಅಧಿಕಾರ ಸಾಮಾಜಿಕ ಹಾಗೂ ವ್ಯಾವಹಾರಿಕ ವಿಷಯಗಳಿಗೂ ವ್ಯಾಪಿಸಿಕೊಂಡಿದೆ... ಇತರ ಸಮುದಾಯದವರೊಡನೆ ವಿವಾಹ ಸಂಬಂಧ ಹೊಂದುವುದರಿಂದುಂಟಾದ ಅಪರಾಧಗಳ ವಿಚಾರಣಾಧಿಕಾರವನ್ನು ಆಡಳಿತಾಂಗ ನಿರ್ವಹಿಸುತ್ತದೆ. ಹಿಂದೂ ಜಾತಿಗಳಂತೆ ಈ ಸಮುದಾಯಗಳೂ ಸಾಮಾನ್ಯವಾಗಿ ಸ್ವಗೋತ್ರಕ್ಕೆ ಸೇರಿದಂಥವೇ ಆಗಿರುತ್ತವೆ. ಅಂತರ ಜಾತೀಯ ವಿವಾಹ ನಿಷೇಧ ಮೇಲ್ವರ್ಗ ಮತ್ತು ಕೆಳವರ್ಗದ ಎಲ್ಲ ಜಾತಿಯ ಗುಂಪುಗಳಿಗೂ ಅನ್ವಯಿಸುತ್ತದೆ. ಉದಾಹರಣೆಗೆ 'ಧುಮ' ಜಾತಿಗೆ ಸೇರಿದ ವ್ಯಕ್ತಿ ಧುಮ ಜಾತಿಯವರನ್ನಲ್ಲದೆ ಬೇರಾರನ್ನೂ ವಿವಾಹವಾಗುವಂತಿಲ್ಲ. ಈ ಕಟ್ಟಳೆಯನ್ನು ಮೀರಿದ ತಪ್ಪಿತಸ್ಥನನ್ನು ಪಂಚಾಯಿತಿಯ ಮುಂದೆ ಹಾಜರುಪಡಿಸಿ ಅವನನ್ನು ಅಪಮಾನಕರವಾದ ರೀತಿಯಲ್ಲಿ ಜಾತಿಯಿಂದ ಹೊರಹಾಕಲಾಗುವುದು. ಇಂಥ ಒಂದು ಗುಂಪಿನ ಸದಸ್ಯ ಇನ್ನೊಂದು ಸಮುದಾಯದ ಸದಸ್ಯತ್ವವನ್ನು ಪಡೆಯುವುದು ಸಾಮಾನ್ಯವಾಗಿ ಸಾಧ್ಯವಾಗದ ಮಾತು. ಸಮಾಜದಿಂದ ಹೊರಹಾಕಿದ ಮೇಲೂ, ತನ್ನ ನೈಜ ಉದ್ಯೋಗವನ್ನು ಬಿಟ್ಟು ಕಾರಣಾಂತರದಿಂದ ಬದುಕಲೋಸ್ಕರ ಇತರ ದಾರಿಗಳನ್ನು ಅವಲಂಬಿಸಿದ್ದ ಪಕ್ಷದಲ್ಲೂ, ತಾನು ಹುಟ್ಟಿದ ಸಮುದಾಯದಲ್ಲಿದ್ದ ತನ್ನ ಹುದ್ದೆಗಳನ್ನು ಆತ ಉಳಿಸಿಕೊಳ್ಳಬಹುದು... ಜೊಲಹರಲ್ಲಿ ಸಾವಿರಾರು ಮಂದಿ ಉದ್ಯೋಗದಲ್ಲಿ ಕಸಾಯಿಗಳು, ಆದರೂ ಅವರು ಜೊಲಹರೆಂದೇ ಹೆಸರಾದವರು."**

ಇದೇ ಬಗೆಯ ವಿವರಗಳನ್ನು ಭಾರತದ ಇತರ ಪ್ರಾಂತಗಳಿಂದಲೂ ಸಂಬಂಧಪಟ್ಟ ಜನಗಣತಿ ವರದಿಗಳಿಂದ ಸಂಗ್ರಹಿಸಬಹುದು. ಆಸಕ್ತರು ಅವುಗಳನ್ನು ಪರಾಮರ್ಶಿಸಬಹುದು. ಆದರೆ ಮಹಮದೀಯರು ಜಾತ್ಯಂಧರು. ಮಾತ್ರವಲ್ಲ, ಅಸ್ಪೃಶ್ಯತೆಯನ್ನು ಆಚರಣೆಯಲ್ಲಿಟ್ಟುಕೊಂಡಿದ್ದಾರೆಂಬ ಸತ್ಯವನ್ನು ಅನಾವರಣಗೊಳಿಸಲು ಈ ಬೆಂಗಾಲೀ ಮಾಹಿತಿಯಷ್ಟೇ ಸಾಕು.

ಹೀಗೆ ಭಾರತದಲ್ಲಿ ಈ ಸಾಮಾಜಿಕ ಕೆಡಕುಗಳಿಂದ ಹಿಂದೂಗಳಷ್ಟೇ ಅಲ್ಲ, ಅಷ್ಟೇ ಪ್ರಮಾಣದಲ್ಲಿ ಮುಸ್ಲಿಮರೂ ಪೀಡಿತರಾಗಿದ್ದಾರೆ ಎಂಬುದರ ಬಗೆಗೆ ಯಾವುದೇ ಅನುಮಾನಕ್ಕೆ ಆಸ್ಪದವಿಲ್ಲ. ಹಾಗೆ ನೋಡಿದರೆ ಮುಸ್ಲಿಮರು ಹಿಂದೂಗಳಲ್ಲಿರುವಂಥ ಎಲ್ಲ ಸಾಮಾಜಿಕ ಕೆಡಕುಗಳನ್ನೊಳಗೊಂಡಿರುವುದರ ಜೊತೆಗೆ ಇನ್ನೂ ಕೆಲವನ್ನು ಹೆಚ್ಚಾಗಿ ತಮ್ಮಲ್ಲೇ ಹೊಂದಿದ್ದಾರೆ. ಇಂಥ ಮುಸ್ಲಿಮರಿಗೇ ಸೀಮಿತವಾದ ಕೆಡಕುಗಳಲ್ಲಿ ಒಂದು, ಮುಸ್ಲಿಂ ಮಹಿಳೆಯರು ಖಡ್ಡಾಯವಾಗಿ ಆಚರಿಸಬೇಕಾದ 'ಪರ್ದಾ' ಪದ್ಧತಿ.

ಪರ್ದಾ ಪದ್ಧತಿಯ ಪರಿಣಾಮದಿಂದಾಗಿ ಮುಸ್ಲಿಂ ಮಹಿಳೆಯರಲ್ಲಿ ಒಡಕುಂಟಾಗಿದೆ. ಮುಸ್ಲಿಂ ಮಹಿಳೆಯರು ಮನೆಯ ಮುಂದಣ ಕೊಠಡಿಗಳಿಗೆ, ಮೊಗಸಾಲೆಗಳಿಗೆ, ತೋಟಗಳಿಗೆ ತಲೆಹಾಕುವಂತಿಲ್ಲ. ಅವರ ಓಡಾಟ ಏನಿದ್ದರೂ ಮನೆಯ ಹಿಂಭಾಗಕ್ಕಷ್ಟೇ ಸೀಮಿತ. ದೊಡ್ಡವರಿಂದ ಚಿಕ್ಕವರಾದಿಯಾಗಿ ಮನೆಯ ಹೆಂಗಸರೆಲ್ಲ ಹಿಂಭಾಗದ ಒಂದೇ ಕೊಠಡಿಯಲ್ಲಿ ವಾಸಿಸಬೇಕು. ಇವರ ಎದುರಿನಲ್ಲಿ ಪುರುಷ ವರ್ಗಕ್ಕೆ ಸೇರಿದ ಯಾವುದೇ ಸೇವಕ ಸುಳಿಯುವಂತಿಲ್ಲ. ತನ್ನ ಗಂಡುಮಕ್ಕಳನ್ನು, ಅಣ್ಣತಮ್ಮಂದಿರನ್ನು, ತಂದೆಯನ್ನು, ಚಿಕ್ಕಪ್ಪಂದಿರನ್ನು ಮತ್ತು ಗಂಡನನ್ನು ಅಥವಾ ನಂಬಿಕೆಗೆ ಅರ್ಹನಾದ ಯಾವುದೇ ಹತ್ತಿರದ ಸಂಬಂಧಿಯನ್ನು ಮಾತ್ರ ಮುಸ್ಲಿಂ ಮಹಿಳೆ ನೋಡಲು ಅರ್ಹಳು. ಪ್ರಾರ್ಥನೆ ಮಾಡಲು ಮಸೀದಿಗೆ ಕೂಡ ಅವಳು ಹೋಗುವಂತಿಲ್ಲ. ಹೊರಗೆ ಹೋಗುವಾಗಲೆಲ್ಲ ಬುರ್ಕಾ ಧರಿಸಿಯೇ ಹೋಗಬೇಕು. ಮುಸ್ಲಿಂ ಮಹಿಳೆಯರು ಬುರ್ಕಾ ಧರಿಸಿ, ರಸ್ತೆಯಲ್ಲಿ ನಡೆಯುವುದನ್ನು ಯಾವುದೇ ವ್ಯಕ್ತಿ ಭಾರತದಲ್ಲಿ ನೋಡಬಹುದಾದ ಭೀಕರ ದೃಶ್ಯಗಳಲ್ಲೊಂದು. ಇಂಥ ವಿಚಿತ್ರತೆ ಮುಸ್ಲಿಂ ಮಹಿಳೆಯ ದೈಹಿಕ ರಚನೆಯ ಮೇಲೆ ಹಾನಿಕರ ಪರಿಣಾಮವನ್ನುಂಟುಮಾಡುತ್ತದೆ. ರಕ್ತಹೀನತೆ, ಕ್ಷಯ ಮತ್ತು ಬಾಯಿಯ ದುರ್ಗಂಧ ಮೊದಲಾದ ರೋಗಗಳಿಗೆ ಸಹಜವಾಗಿ ಇವರು ತುತ್ತಾಗುತ್ತಾರೆ. ಬೆನ್ನು ಬಾಗಿ, ಮೂಳೆಗಳು ನಿಗರಿ, ಹಸ್ತ ಮತ್ತು ಪಾದಗಳು ಬಿರುಕುಬಿಟ್ಟು ಅವರ ಶರೀರ ಅಂದಗೆಡುತ್ತದೆ. ಪಕ್ಕೆಲುಬುಗಳು, ಕಾಲುಗಳು ಮತ್ತು ಬಹುತೇಕ ಅವರ ಎಲ್ಲ ಮೂಳೆಗಳು ನೋಯಲುಪಕ್ರಮಿಸುತ್ತವೆ. ಹೃದಯ ಮಿಡಿತದ ವ್ಯತ್ಯಾಸ ಇವರಲ್ಲಿ ಸರ್ವೇ ಸಾಮಾನ್ಯ. ವಸ್ತಿಕುಹರದ ವಿರೂಪತೆಯ ಪರಿಣಾಮದಿಂದಾಗಿ ಹೆರಿಗೆ ಸಂದರ್ಭಗಳಲ್ಲಿ ಸಾವು ಸಂಭವನೀಯ. ಮುಸ್ಲಿಂ ಮಹಿಳೆಯ ಮಾನಸಿಕ ಮತ್ತು ನೈತಿಕ ಸ್ಥೈರ್ಯವನ್ನು ಪರ್ದಾ ಕುಂಠಿತಗೊಳಿಸುತ್ತದೆ. ಹೀಗೆ ಆರೋಗ್ಯಕರವಾದ ಸಾಮಾಜಿಕ ಬದುಕಿನಿಂದ ವಂಚಿತವಾದ ಇವರ ಮನಸ್ಸು ನೈತಿಕ ಅಧಃಪತನಕ್ಕೆ ಗುರಿಯಾಗುತ್ತದೆ. ಹೀಗೆ ಹೊಸ ಪ್ರಪಂಚದಿಂದ ಸಂಪೂರ್ಣವಾಗಿ ದೂರ ಉಳಿದುಬಿಡುವುದರಿಂದ ತಮ್ಮ ಮನಸ್ಸನ್ನು ಮನೆಯಲ್ಲಿ ಸಣ್ಣಪುಟ್ಟ ಕಲಹಗಳತ್ತ ಹರಿಯಬಿಡುತ್ತಾರೆ. ಇದರ ಪರಿಣಾಮದಿಂದ ಅವರ ನಡೆ–ನುಡಿಯಲ್ಲಿ ಸಂಕುಚಿತ ದೃಷ್ಟಿ ನೆಲೆಯಾಗುತ್ತದೆ.

ಹೊಸ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು ದುಸ್ತರವಾಗಿ ಇವರು ಸಮಾಜದ ಇತರ ಹೆಣ್ಣು ಮಕ್ಕಳಿಗಿಂತ ಹಿಂದೆ ಬೀಳುತ್ತಾರೆ. ಮಾನಸಿಕವಾಗಿ ಕೀಳರಿಮೆಯ ಭಾರದಿಂದ ಕುಬ್ಜರಾಗುತ್ತಾರೆ. ಜ್ಞಾನದ ಕಿರಣ ಅವರ ಪಾಲಿಗೆ ಕತ್ತಲೆಯ ಕಹಿ. ಏಕೆಂದರೆ, ಮನೆಯ ನಾಲ್ಕು ಗೋಡೆಗಳನ್ನು ದಾಟಿ ಹೋಗುವ ಯಾವುದೇ ವಿಷಯದಲ್ಲಿ ಆಸಕ್ತಿ ತಳೆಯದಂತೆ ಅವರಿಗೆ ಬೋಧಿಸಲಾಗುತ್ತದೆ. ಅದರಲ್ಲೂ ವಿಶೇಷವಾಗಿ ಪರ್ದಾಧಾರಿ ಮಹಿಳೆ, ಜೀವನದ ಯಾವುದೇ ಹೋರಾಟವನ್ನು ಎದುರಿಸಲಾರದ ಅಸಹಾಯಕಳು, ಹೇಡಿ ಹಾಗೂ ಅಸಮರ್ಥೆ. ಭಾರತದಲ್ಲಿ ಮುಸ್ಲಿಂ ಸ್ತ್ರೀಯರು ಅಪಾರ ಸಂಖ್ಯೆಯಲ್ಲಿ ಬುರ್ಕಾ ಧರಿಸುತ್ತಿರುವುದರಿಂದ ಬುರ್ಕಾ ಸಮಸ್ಯೆಯ ಆಳ, ವಿಸ್ತಾರ ಮತ್ತು ತೀವ್ರತೆಯನ್ನು ಯಾರಾದರೂ ಸುಲಭವಾಗಿ

ಗ್ರಹಿಸಬಹುದು.*

ನೈತಿಕ ನೆಲೆಗಟ್ಟಿನ ಮೇಲೆ ಬುರ್ಕಾದ ಮಹಿಳೆಯರ ಮೇಲೆ ಬೀರಿರುವ ಪರಿಣಾಮಗಳಿಗೆ ಹೋಲಿಸಿದರೆ, ಅದು ಭೌತಿಕ ಹಾಗೂ ಮಾನಸಿಕವಾಗಿ ಉಂಟುಮಾಡಿರುವ ಪರಿಣಾಮಗಳು ಏನೇನೂ ಅಲ್ಲ. ಪ್ರಾಯಶಃ ಈ ಬುರ್ಕಾದ ಮೂಲ ಸ್ತ್ರೀ ಮತ್ತು ಪುರುಷರ ಲೈಂಗಿಕ ಹಸಿವಿನಲ್ಲಿ ಹುದುಗಿರುವ ಅನುಮಾನದಲ್ಲಿರಬೇಕು. ಹೀಗಾಗಿ, ಇದರ ಉದ್ದೇಶ ಹೆಣ್ಣನ್ನು ಗಂಡಿನಿಂದ ಬೇರ್ಪಡಿಸಿ ಅಂಥ ಹಸಿವಿಗೆ ಪ್ರತಿಬಂಧವೊಡ್ಡುವುದಿರಬೇಕು. ಆದರೆ ಈ ಬುರ್ಕಾ ಮುಸಲ್ಮಾನ ಪುರುಷರ ಶೀಲ ಸ್ವಭಾವದ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡಿರುವುದರಿಂದ ಇವರ ಉದ್ದೇಶ ಸಾಧನೆ ದೂರವೇ ಉಳಿದಿದೆ. ಬುರ್ಕಾದ ಕಾರಣದಿಂದಾಗಿ ತನ್ನ ಗೃಹದ ಸ್ತ್ರೀಯರನ್ನುಳಿದು ಇತರ ಯಾವುದೇ ಹೆಂಗಸರೊಡನೆ ಹೊರಗೆ ಸಂಪರ್ಕ ಬೆಳೆಸುವುದು ಪುರುಷನಿಗೆ ಸಾಧ್ಯವಿಲ್ಲ. ಅವರೊಡನೆಯೂ ಅವನ ಸಂಪರ್ಕ ಸಾಂದರ್ಭಿಕ ಮಾತುಕತೆಗಷ್ಟೇ ಸೀಮಿತಗೊಳ್ಳುತ್ತದೆ. ಬುರ್ಕಾ ಆಚರಣೆಯಿಂದಾಗಿ ಪುರುಷನಿಗೆ ಸ್ತ್ರೀಯ ಸಂಗ, ಸಹವಾಸದ ಲಭ್ಯತೆ ಮಕ್ಕಳನ್ನು ಮತ್ತು ಮುದುಕಿಯರನ್ನು ಹೊರತುಪಡಿಸಿದರೆ ಸಿಗುವುದು ದುರ್ಲಭ. ಸ್ತ್ರೀಯರಿಂದ ದೂರ ಇರುವಂಥ ಪುರುಷನ ಈ ಏಕಾಂಗಿತನ ಆತನ ಶೀಲ ಸ್ವಭಾವದ ಮೇಲೆ ಖಂಡಿತವಾಗಿ ಕೆಟ್ಟ ಪರಿಣಾಮವನ್ನುಂಟುಮಾಡುತ್ತದೆ. ಸ್ತ್ರೀ ಪುರುಷರ ನಡುವೆ ಇಂಥ ಕಂದಕವೇರ್ಪಡಿಸುವ ಯಾವುದೇ ಸಾಮಾಜಿಕ ಪದ್ಧತಿ ಲೈಂಗಿಕವಾಗಿ ಅನಾರೋಗ್ಯಕರ, ಅಸಹಜ ಮತ್ತು ಮಾರಕ ದುರಭ್ಯಾಸಗಳಿಗೆ ದಾರಿ ಮಾಡಿಕೊಡುತ್ತದೆ ಎಂದು ಹೇಳಲು ಯಾವ ಮನೋವಿಶ್ಲೇಷಕನ ಅಗತ್ಯವೂ ಇಲ್ಲ.

ಈ ಬುರ್ಕಾದ ದುಷ್ಪರಿಣಾಮ ಮುಸ್ಲಿಂ ಸಮುದಾಯಕ್ಕಷ್ಟೇ ಸೀಮಿತಗೊಂಡಿಲ್ಲ. ಭಾರತದಲ್ಲಿ ಹಿಂದೂಗಳನ್ನು ಮುಸ್ಲಿಮರಿಂದ ಸಾಮಾಜಿಕವಾಗಿ ಬೇರ್ಪಡಿಸುವುದರಲ್ಲಿ ಇದರ ಪಾತ್ರ ಹಿರಿದಾದುದು. ಅಷ್ಟೇ ಅಲ್ಲ, ಭಾರತದ ಸಾರ್ವತ್ರಿಕ ಜೀವನದ ಒಂದು ವಿನಾಶಕಾರಿ ಪ್ರವೃತ್ತಿಯಾಗಿಯೂ ಇದು ಪರಿಣಮಿಸಿದೆ. ಈ ವಾದ ಅಸಮಂಜಸ ಎನಿಸಬಹುದು. ಏಕೆಂದರೆ ಈ ಬಗೆಯ ಬೇರ್ಪಡುವಿಕೆಗೆ ಮುಸ್ಲಿಮರ ಬುರ್ಕಾ ಪದ್ಧತಿಗಿಂತ ಹೆಚ್ಚಾಗಿ ಹಿಂದೂಗಳ ಅಮೈತ್ರೀ ಭಾವನೆ ಕಾರಣ ಎಂದೂ ವಾದಿಸುವವರು ಇದ್ದಾರೆ. ಹಿಂದೂಗಳು ಮತ್ತು ಮುಸ್ಲಿಮರ ನಡುವೆ ಸಾಮಾಜಿಕ ಸಂಪರ್ಕ ಸಾಧ್ಯವಿಲ್ಲ ಎಂದು ಹಿಂದೂಗಳು ಭಾವಿಸಿದರೆ, ಅವರ ಭಾವನೆ ಸಹಜವಾದದ್ದು. ಏಕೆಂದರೆ ಈ ಬಗೆಯ ಸಂಪರ್ಕಕ್ಕೆ ಅರ್ಥ ಬರಲು ಒಂದು ಕಡೆಯಿಂದ ಸ್ತ್ರೀಯರು ಮತ್ತೊಂದು ಕಡೆಯಿಂದ ಪುರುಷರು ಇರಬೇಕೆಂದಾಗುತ್ತದೆ.**

ಬುರ್ಕಾ ಪದ್ಧತಿ ಮತ್ತು ಅದರ ಕೆಡಕುಗಳು ಭಾರತದ ಕೆಲವು ಭಾಗಗಳಲ್ಲಿ ಹಿಂದೂಗಳಲ್ಲಿಯೂ ಕಾಣಸಿಗುತ್ತವೆ. ಆದರೆ ಮುಸ್ಲಿಮರ ಬುರ್ಕಾ ಪದ್ಧತಿಗೆ ಧಾರ್ಮಿಕ ಪಾವಿತ್ರ್ಯವಿದೆ, ಹಿಂದೂಗಳಿಗೆ ಅದಿಲ್ಲದಿರುವುದೇ

---

* ಮುಸ್ಲಿಂ ಮಹಿಳೆಯ ಪರಿಸ್ಥಿತಿಯನ್ನರಿಯಲು, ಶ್ಯಾಮ್ ಕುಮಾರ್ ನೆಹರೂ ಅವರು ಸಂಪಾದಿಸಿರುವ 'ಅವರ್ ಕಾಸ್' ಕೃತಿಯನ್ನು ನೋಡಿ.

** "ಯುರೋಪಿಯನ್ನರಲ್ಲು. ಅವರು ಬೆಲೆ ಕೊಡುವುದು, ಅವರ ಮೇಲೆ ಪ್ರಭಾವ ಬೀರುವಂಥದು ಹಿಂದೂಗಳಿಂದ ಅವರನ್ನು ಕ್ಲಬ್ಬಿಗೆ ಸೇರಿಸದ ಕಾರಣಕ್ಕಾಗಿ ತೆಗಳಿಕೆಗೆ ಒಳಗಾದ ಸಂದರ್ಭದಲ್ಲಿ ಮಾಡಿದ ವಾದ ತುಂಬ ಕುತೂಹಲಕರವಾಗಿದೆ. ಅವರು ಹೇಳುತ್ತಾರೆ: "ನಾವು ನಮ್ಮ ಹೆಂಗಸರನ್ನು ಕ್ಲಬ್ಬಿಗೆ ಕರೆತರುತ್ತೇವೆ, ನೀವು ನಮ್ಮ ಹೆಂಗಸರನ್ನು ಕ್ಲಬ್ಬಿಗೆ ಕರೆತರುವುದಾದರೆ ನಿಮಗೆ ಸ್ವಾಗತವಿದೆ. ನಿಮ್ಮ ಮಹಿಳೆಯರನ್ನು ನೀವು ನಮ್ಮ ಸಹವಾಸಕ್ಕೆ ಬಿಟ್ಟುಕೊಡಲು ತಿರಸ್ಕರಿಸಿದರೆ ನಮ್ಮ ಮಹಿಳೆಯರನ್ನು ನಿಮ್ಮ ಸಹವಾಸಕ್ಕೆ ನಾವೇಕೆ ಅನುಮತಿಸಬೇಕು? ಮೊದಲು ಅವಕಾಶವನ್ನು ಸರಿಯಾಗಿ ಇಬ್ಭಾಗಿಸಿ, ಆಮೇಲೆ ಕ್ಲಬ್ಬಿಗೆ ಪ್ರವೇಶ ಕೋರಿ."

ಪ್ರಮುಖ ವ್ಯತ್ಯಾಸ. ಬುರ್ಕಾ ಪದ್ಧತಿ ಹಿಂದೂಗಳಿಗಿಂತ ಮುಸ್ಲಿಮರ ಆಚರಣೆಯಲ್ಲಿ ಆಳವಾಗಿ ಬೇರುಬಿಟ್ಟಿದೆ. ಧಾರ್ಮಿಕ ಕಟ್ಟಳೆ ಮತ್ತು ಸಾಮಾಜಿಕ ಅಗತ್ಯಗಳ ನಡುವೆ ನಡೆವ ಅನಿವಾರ್ಯ ಸಂಘರ್ಷದ ಪರಿಣಾಮದಿಂದ ಮಾತ್ರ ಇದನ್ನು ನಿವಾರಿಸುವುದು ಸಾಧ್ಯ. ಬುರ್ಕಾ ಸಮಸ್ಯೆ ಮೂಲ ಏನೇ ಇರಲಿ, ಇದು ಭಾರತೀಯರಿಗಿಂತ ಮುಸ್ಲಿಮರಿಗೆ ತುಂಬ ಗಹನವಾದುದು. ಇದರಿಂದ ಮುಕ್ತವಾಗುವ ಯಾವುದೇ ಪ್ರಯತ್ನವನ್ನು ಮುಸ್ಲಿಮರು ಮಾಡಿದಂತೆ ತೋರುವುದಿಲ್ಲ.

ಹೀಗಾಗಿ ಭಾರತೀಯ ಮುಸ್ಲಿಂ ಸಮುದಾಯ ತನ್ನ ಸಾಮಾಜಿಕ ಜೀವನದಲ್ಲಿ ಮಾತ್ರವಲ್ಲ, ರಾಜಕೀಯ ಜೀವನದಲ್ಲಿಯೂ ಒಂದು ಬಗೆಯ ಜಡತ್ವಕ್ಕೆ ತುತ್ತಾಗಿದೆ. ಮುಸ್ಲಿಮರಿಗೆ ರಾಜಕೀಯದಲ್ಲಿ ಆಸಕ್ತಿ ಇದ್ದಂತೆ ಕಾಣುವುದಿಲ್ಲ. ಅವರ ಪ್ರಧಾನಶಕ್ತಿ ಕೇವಲ ಧಾರ್ಮಿಖವಾದುದು. ಮುಸ್ಲಿಂ ಚುನಾವಣಾ ಮೀಸಲು ಕ್ಷೇತ್ರವನ್ನು ಪ್ರತಿನಿಧಿಸಿ ಆರಿಸಿ ಬರಲು ಬಯಸುವ ಅಭ್ಯರ್ಥಿಯನ್ನು ಬೆಂಬಲಿಸಲು ಅವರು ಹಾಕುವ ನಿಬಂಧನೆಗಳಿಂದ ಇದು ಪ್ರಖರವಾಗಿ ಗೋಚರಿಸುತ್ತದೆ. ಮುಸ್ಲಿಂ ಚುನಾವಣಾ ಕ್ಷೇತ್ರ, ಅಭ್ಯರ್ಥಿಯ ಯೋಜನೆಗಳನ್ನು ಪರಿಶೀಲಿಸಿ ಬೆಂಬಲಿಸುವ ಪರಿಪಾಠವನ್ನಿಟ್ಟುಕೊಂಡಿಲ್ಲ. ಅದು ಅಭ್ಯರ್ಥಿಯಿಂದ ನಿರೀಕ್ಷಿಸುವುದು; ಆತ ತನ್ನ ಸ್ವಂತ ಖರ್ಚಿನಿಂದ ಮಸೀದಿಯ ಹಳೆ ದೀಪಗಳನ್ನು ಬದಲಾಯಿಸಿ, ಅವುಗಳ ಸ್ಥಾನದಲ್ಲಿ ಹೊಸ ದೀಪಗಳನ್ನು ಒದಗಿಸುವುದು, ಮಸೀದಿಯ ಹಳೆಯ ಹರಿದುಹೋಗಿರುವ ನೆಲಹಾಸನ್ನು ತೆಗೆಸಿ ಅದರ ಸ್ಥಳದಲ್ಲಿ ಹೊಸದನ್ನು ಹಾಕಿಸುವುದು, ಮತ್ತು ಹೆಚ್ಚೆಂದರೆ ಜೀರ್ಣಾವಸ್ಥೆಯಲ್ಲಿರುವ ಮಸೀದಿಗಳನ್ನು ರಿಪೇರಿ ಮಾಡಿಸುವುದು, ಇತ್ಯಾದಿಗಳನ್ನು ಮಾತ್ರ. ಇನ್ನು ಕೆಲವು ಕಡೆಗಳಲ್ಲಿ ಮುಸ್ಲಿಂ ಚುನಾವಣಾ ಕ್ಷೇತ್ರದ ಜನರನ್ನು ತೃಪ್ತಿಪಡಿಸಲು ಅಭ್ಯರ್ಥಿ ಪುಷ್ಕಳವಾದ ಔತಣಕೂಟ ಏರ್ಪಡಿಸುವುದು ಮತ್ತೂ ಕೆಲವು ಕಡೆಗಳಲ್ಲಿ ಓಟಿಗೆ ಇಷ್ಟೆಂದು ಹಣ ಕೊಡಲು ಒಪ್ಪಿಕೊಂಡರೆ ಸಾಕು. ಹೀಗಾಗಿ ಮುಸ್ಲಿಮರಿಗೆ ಚುನಾವಣೆ ಎಂದರೆ, ಅದು ಕೇವಲ ಹಣಕ್ಕೆ ಸಂಬಂಧಿಸಿದ ವಿಷಯ, ಕೆಲವೊಮ್ಮೆ ಅಪರೂಪಕ್ಕೆ ಅದು ಸಾಮಾನ್ಯ ಅಭಿವೃದ್ಧಿಯ ಸಾಮಾಜಿಕ ಕಾರ್ಯಕ್ರಮ ಎನಿಸಿಕೊಳ್ಳಬಹುದು ಅಷ್ಟೆ. ಮುಸ್ಲಿಂ ರಾಜಕೀಯ ಎಂದೂ ಜೀವನದ ನೈಜ ವ್ಯಾವಹಾರಿಕ ಸಮಸ್ಯೆಗಳನ್ನು ಉದಾಹರಣೆಗೆ, ಬಡವ–ಬಲ್ಲಿದ, ಬಂಡವಾಳಶಾಹಿ–ಕಾರ್ಮಿಕ ಆಸ್ತಿವಂತ–ಜೀತಗಾರ, ಪಂಡಿತ–ಪಾಮರ ಹಾಗೂ ವೈಚಾರಿಕತೆ–ಕಂದಾಚಾರ ಇವುಗಳ ನಡುವಣ ವ್ಯತ್ಯಾಸವನ್ನು ಪರಿಗಣಿಸಿಲ್ಲ. ಮುಸ್ಲಿಂ ರಾಜಕೀಯ ಕೇವಲ ಗುಮಾಸ್ತ ಬುದ್ಧಿಯದು. ಅದಕ್ಕೆ ಎದ್ದುಕಾಣುವ ಒಂದೇ ಒಂದು ವೈಪರೀತ್ಯವೆಂದರೆ ಹಿಂದೂಗಳು ಮತ್ತು ಮುಸ್ಲಿಮರ ನಡುವಣ ಅಂತರ ಮಾತ್ರ. ದಿನನಿತ್ಯದ ಬೇರಾವ ವ್ಯಾವಹಾರಿಕ ಸಮಸ್ಯೆಗೂ ಮುಸ್ಲಿಮರ ಸಮುದಾಯ ರಾಜಕೀಯದಲ್ಲಿ ಸ್ಥಾನವಿಲ್ಲ. ಅವರು ಬೆಲೆ ಕೊಡುವುದು, ಅವರ ಮೇಲೆ ಪ್ರಭಾವ ಬೀರುವಂಥದು, ಅವರು ಅಡಿಯಾಳಾಗಿ ತಲೆ ಬಾಗುವಂಥದು, ಇಡೀ ಮುಸ್ಲಿಂ ರಾಜಕೀಯ ಸಮಸ್ತವನ್ನು ನಿರಂಕುಶವಾಗಿ ನಡೆಸುವಂಥ ಏಕೈಕ ಮೂಲ ತತ್ವಕ್ಕೆ. ಆ ಮೂಲತತ್ವವೇ ಅವರ ಧರ್ಮ.

## II

ಮುಸ್ಲಿಮರಲ್ಲಿ ಅಸ್ತಿತ್ವದಲ್ಲಿರುವ ಈ ಕೆಡಕುಗಳು ತುಂಬ ವ್ಯಥೆಪಡುವಂಥವು. ಆದರೆ ಅದಕ್ಕಿಂತ ಹೆಚ್ಚಿನ ವಿಷಾದದ ಸಂಗತಿ ಎಂದರೆ ಇವುಗಳನ್ನು ನಿರ್ನಾಮಗೊಳಿಸಲು ಭಾರತೀಯ ಮುಸ್ಲಿಮರು ಸಾಮಾಜಿಕ ಬದಲಾವಣೆಯನ್ನು ತರುವಂಥ ಯಾವುದೇ ಸಂಘಟನಾತ್ಮಕ ಚಳುವಳಿಯನ್ನು ನಡೆಸದಿರುವಂಥದು. ಹಿಂದೂಗಳಲ್ಲಿಯೂ ಸಾಮಾಜಿಕ ಕೆಡಕುಗಳಿವೆ. ಆದರೆ ಸಮಾಧಾನಕರ ಸಂಗತಿ ಎಂದರೆ ಹಿಂದೂಗಳಿಗೆ

ಇಂಥ ಅನಿಷ್ಟಗಳ ಅಸ್ತಿತ್ವದ ಅರಿವಿರುವಂಥದು ಮತ್ತು ಇವುಗಳನ್ನು ತೊಡೆದುಹಾಕಲು ಕೆಲವರಾದರೂ ಕ್ರಿಯಾತ್ಮಕವಾಗಿ ಹೋರಾಡುತ್ತಿರುವುದು. ಆದರೆ ಇನ್ನೊಂದು ಕಡೆ, ಮುಸ್ಲಿಮರು ಇವುಗಳನ್ನು ಕೆಡಕುಗಳೆಂದು ಪರಿಗಣಿಸದಿರುವುದು ಮತ್ತು ಇವುಗಳ ನಿರ್ಮೂಲನಕ್ಕೆ ಯಾವುದೇ ಹೋರಾಟ ನಡೆಸದಿರುವುದು ಆಶ್ಚರ್ಯಕರ. ಕೌತುಕದ ಸಂಗತಿ ಎಂದರೆ, ಪ್ರಚಲಿತ ಆಚರಣೆಗಳಲ್ಲಿ ಯಾವುದೇ ಬದಲಾವಣೆಯನ್ನು ಅವರು ವಿರೋಧಿಸುತ್ತಿರುವುದು. ೧೯೩೦ರಲ್ಲಿ ಕೇಂದ್ರ ವಿಧಾನಸಭೆಯು ಜಾರಿಗೆ ತಂದ ಬಾಲ್ಯವಿವಾಹ ಮಸೂದೆಯನ್ನು ಮುಸ್ಲಿಮರು ವಿರೋಧಿಸಿದ್ದನ್ನು ಇಲ್ಲಿ ದಾಖಲಿಸಬಹುದು. ಈ ಮಸೂದೆಯ ಪ್ರಕಾರ ಹೆಣ್ಣಿನ ವಿವಾಹದ ವಯಸ್ಸನ್ನು ೧೪ಕ್ಕೂ ಗಂಡಿನ ವಯಸ್ಸನ್ನು ೧೮ಕ್ಕೂ ಏರಿಸಿದ್ದು ಮುಸ್ಲಿಂ ಧರ್ಮಶಾಸ್ತ್ರ ಪ್ರಮಾಣಕ್ಕೆ ವಿರೋಧವಾದ್ದೆಂದು ಇವರ ಭಾವನೆ. ಈ ಮಸೂದೆಯನ್ನು ಮುಸ್ಲಿಮರು ಅದು ಕಾಯಿದೆಯಾಗುವ ಪ್ರತಿ ಹಂತದಲ್ಲೂ ವಿರೋಧಿಸಿದ್ದೇ ಅಲ್ಲದೆ, ಅದು ನಿಯಮವಾಗಿ ಜಾರಿಗೊಂಡಾಗ ಅದರ ವಿರುದ್ಧ ನಾಗರಿಕ ಅಸಹಕಾರ ಚಳುವಳಿಯನ್ನೇ ಆರಂಭಿಸಿದರು. ಮುಸ್ಲಿಮರ ಈ ನಾಗರಿಕ ಕಾನೂನು ಭಂಗ ಚಳುವಳಿ ತೀವ್ರವಾಗಿ ಹಬ್ಬದೆ ಕಾಂಗ್ರೆಸ್ ನಾಗರಿಕ ಆಜ್ಞೋಲ್ಲಂಘನ ಚಳುವಳಿಯಲ್ಲಿ ಏಕೀಭವಿಸಿದ್ದು ಅದೃಷ್ಟಕರ ಸಂಗತಿ. ಆದರೆ, ಇದರಿಂದ ವಿದಿತವಾಗುವ ಅಂಶ ಎಂದರೆ, ಒಂದು ಸಮಾಜ ಸುಧಾರಣೆಯ ಕಟ್ಟಳೆಯನ್ನು ಮುಸ್ಲಿಮರು ಎಷ್ಟು ಪ್ರಬಲವಾಗಿ ಪ್ರತಿರೋಧಿಸಿದರು ಎಂಬುದು.

ಕೇಳಬಹುದಾದ ಒಂದು ಪ್ರಶ್ನೆ ಯಾವುದೆಂದರೆ, ಮುಸ್ಲಿಮರು ಸಮಾಜ ಸುಧಾರಣೆಯನ್ನು ಏಕೆ ವಿರೋಧಿಸುತ್ತಾರೆ? ಎಂಬುದು.

ವಿಶ್ವದಾದ್ಯಂತ ಪ್ರಗತಿರಹಿತ ಜನಾಂಗ ಎಂದರೆ, ಮುಸ್ಲಿಮರು ಎಂಬುದು ಈ ಪ್ರಶ್ನೆಗೆ ಸಾಮಾನ್ಯವಾಗಿ ಕೇಳಿಬರುವಂಥ ಉತ್ತರ. ಈ ಉತ್ತರದಲ್ಲಿ ಐತಿಹಾಸಿಕ ಸತ್ಯಾಂಶ ಅಡಗಿರುವುದು ತಿರಸ್ಕರಿಸಲಾಗದಂಥ ವಿಷಯ. ಮಹಾಚಕ್ರಾಧಿಪತ್ಯಗಳಿಗೆ ತಳಹದಿ ಹಾಕಲು ನೆರವಾದ ಮುಸ್ಲಿಮರ ಪ್ರಾರಂಭದ ಅದ್ಭುತ ಚಟುವಟಿಕೆಯ ಎದೆಗಾರಿಕೆಗೆ ಇದ್ದಕ್ಕಿದ್ದಂತೆ ಒಂದು ಬಗೆಯ ಜಡತ್ವ ಆವರಿಸಿಕೊಂಡಿತು. ಇದರಿಂದ ಅವರು ಬಿಡಿಸಿಕೊಂಡು ಎಚ್ಚೆತ್ತುಕೊಂಡಂತೆ ಕಾಣುವುದಿಲ್ಲ. ಇವರ ಜಡತ್ವಕ್ಕೆ ಕಾರಣವನ್ನು ಕಂಡುಹಿಡಿಯಲು ಕೆಲವು ಮುಸ್ಲಿಮರ ಪರಿಸ್ಥಿತಿಯನ್ನು ಅಧ್ಯಯನ ಮಾಡಲಾಗಿ ಅದರಿಂದ ತಿಳಿದುಬಂದ ಅಂಶವೇನೆಂದರೆ, ಇಸ್ಲಾಂ ಒಂದು ವಿಶ್ವಧರ್ಮ. ಇದು ಎಲ್ಲ ಜನರಿಗೆ, ಎಲ್ಲ ಕಾಲಕ್ಕೂ, ಎಲ್ಲ ಪರಿಸ್ಥಿತಿಯಲ್ಲೂ ಹೊಂದಿಕೊಳ್ಳುವಂಥದು ಎಂಬ ಮೂಲಭೂತ ಭ್ರಮೆ ಎಲ್ಲ ಮುಸ್ಲಿಮರಲ್ಲೂ ಬೇರುಬಿಟ್ಟಿದೆ. ಇದನ್ನು ಹೀಗೆ ಪ್ರತಿಪಾದಿಸಲಾಗಿದೆ:

> **"ತನ್ನ ಧರ್ಮಕ್ಕೆ ವಿಧೇಯಕವಾಗಿರುವ ಮುಸಲ್ಮಾನ ಪ್ರಗತಿಯನ್ನು ಹೊಂದಿಲ್ಲ; ಆಧುನಿಕತೆಯ ಮಹಾಪೂರದಲ್ಲಿ ತೇಲಿಹೋಗುತ್ತಿರುವ ವಿಶ್ವದಲ್ಲಿ ಈತ ನಿಶ್ಚಲವಾಗಿ ನಿಂತುಬಿಟ್ಟಿದ್ದಾನೆ. ತನ್ನ ಅಧೀನ ಪಂಗಡಗಳನ್ನು ಅಸಂಘಟಿತ ಸ್ಥಿತಿಯಲ್ಲಿ ಇಡುವುದು ಇಸ್ಲಾಂ ಧರ್ಮದ ಒಂದು ಪ್ರಧಾನ ಗುಣ. ಅಭೇದ್ಯವಾದ ರೀತಿಯಲ್ಲಿ ಇದು ಮುಸ್ಲಿಂ ಸಮಾಜವನ್ನು ಹರಳುಗಟ್ಟಿಸಿದೆ. ಯಾವುದೇ ಪರಿವರ್ತನೆಗೆ ಜಗ್ಗದ ಇದರ ಮೇಲೆ ರಾಜಕೀಯ, ಸಾಮಾಜಿಕ ಅಥವಾ ಆರ್ಥಿಕ ಬದಲಾವಣೆಗಳು ಏನೂ ಪರಿಣಾಮ ಬೀರಲಾರವು.**
>
> **ಇಸ್ಲಾಂ ಧರ್ಮದಿಂದಾಚೆಗೆ ರಕ್ಷಣೆಯಿಲ್ಲ; ಇದರ ಕಾಯಿದೆಯಿಂದಾಚೆಗೆ ಸತ್ಯವಿಲ್ಲ, ಇದರ ಆಧ್ಯಾತ್ಮಿಕ ಸಂದೇಶದಿಂದಾಚೆಗೆ ಸಂತೋಷವಿಲ್ಲ; ಎಂದು ಬೋಧಿಸಿ ತಾನಿರುವುದಕ್ಕಿಂತ ಭಿನ್ನವಾದ ಪರಿಸ್ಥಿತಿಯನ್ನು, ಇಸ್ಲಾಂ ಧರ್ಮವನ್ನು ಬಿಟ್ಟು ಬೇರೆ ಆಲೋಚನೆಯನ್ನೇ ಮಾಡಲಾರದಂಥ ಅಸಹಾಯಕ ಸ್ಥಿತಿಗೆ**

**ಮುಸ್ಲಿಮನನ್ನು ದೂಡಲಾಗಿದೆ. ಸರಿಸಾಟಿಯಿಲ್ಲದ ಪರಿಪೂರ್ಣತೆಯ ಘಟ್ಟವನ್ನು ತಾನು ಮುಟ್ಟಿರುವುದಾಗಿ ಆತ ದೃಢವಾಗಿ ನಂಬುತ್ತಾನೆ. ಏಕೆಂದರೆ, ಇಸ್ಲಾಂ ಸಿದ್ಧಾಂತದ ಪರಿಪೂರ್ಣಜ್ಞಾನದಲ್ಲಿ ನಿಜವಾದ ನಿಷ್ಠೆಯನ್ನು ಹೊಂದಿರುವುದು ತಾನು ಮಾತ್ರ ಎಂಬ ತಿಳಿವಳಿಕೆ, ಸತ್ಯ ಸಾಕ್ಷಾತ್ಕಾರವಾಗಿರುವುದು ತನ್ನೊಬ್ಬನಿಗೆ ಮಾತ್ರ. ಪರಮ ಸತ್ಯವೊಂದನ್ನು ತನ್ನ ತಿಳಿವಳಿಕೆಯನ್ನು ಮಾರ್ಪಡಿಸುವ ಬೇರೆ ಸತ್ಯವಿಲ್ಲ ಎಂಬುದವನ ತೀರ್ಮಾನ.**

**ಆಲೋಚನೆಯಲ್ಲಿ, ಭಾವನೆಯಲ್ಲಿ, ಆದರ್ಶಗಳಲ್ಲಿ, ತೀರ್ಮಾನಗಳಲ್ಲಿ ತಮ್ಮದೇ ಆದ ಏಕಮೇವ ಪ್ರಪಂಚವನ್ನು ಸೃಜಿಸಿಕೊಂಡಿರುವ ಈ ವಿಭಿನ್ನ ಬಗೆಯ ಜನಾಂಗದ ಮೇಲೆ ಮುಸ್ಲಿಮರ ಧಾರ್ಮಿಕ ಕಾಯಿದೆ ಒತ್ತಿರುವ ತಿಳಿವಳಿಕೆಯ ಮುದ್ರೆ ಅನ್ಯಾದೃಶವಾದುದು.''**

ತನ್ನ ತೀವ್ರತೆ, ವಿಧ್ವಂಸಕತೆಯಿಂದ ಎಲ್ಲ ನಾಗರಿಕ ಆಲೋಚನೆಗಳನ್ನು ಹೊಸಕಿಹಾಕುವ ಅಸಹಿಷ್ಣುತೆ ಮುಸ್ಲಿಂ ಪ್ರಪಂಚವನ್ನುಳಿದು ಬೇರಾರಿಗೂ ಗೊತ್ತಿಲ್ಲದಿರುವಂಥದು. ಹೀಗಾಗಿ ಇವರಲ್ಲಿ ಸಮಾನತೆ ಘಾಸಿಕೊಂಡಿದೆ. ಸಮಾನತೆ ಇಸ್ಲಾಂ ಬೋಧನೆಗೆ ವಿರುದ್ಧವಾಗಿದ್ದರೂ ಮುಸ್ಲಿಂ ಬಂಧುಗಳು ಇದನ್ನು ಗೌರವಿಸುವಂತೆ ಆಗ್ರಹಪೂರ್ವಕವಾಗಿ ಒತ್ತಾಯಿಸಲಾಗಿದೆ. ಇಸ್ಲಾಂ ಧರ್ಮವನ್ನು ರೆನಾನ್‌ರವರು ಗ್ರಹಿಸಿರುವ ಪರಿ ಇದು:*

"ಐಹಿಕತೆ ಮತ್ತು ಆಧ್ಯಾತ್ಮಿಕತೆಯ ಗಾಢವಾದ ಬೆಸುಗೆಯೇ ಇಸ್ಲಾಂ ಧರ್ಮ. ಇದರದು ಜಾಢ್ಯತ್ವ ತತ್ವದ ಅಧಿಪತ್ಯ. ಮಾನವತ್ವಕ್ಕೆ ತೊಡಿಸಿದ ಅತಿಭಾರದ ಸರಪಳಿ ಇದು. ಒಂದು ಧರ್ಮವಾಗಿ ಇಸ್ಲಾಂ ತನ್ನದೇ ಆದ ರಮ್ಯತೆಯನ್ನು ಹೊಂದಿದೆ. ಆದರೆ ಮಾನವತಾವಾದದ ದೃಷ್ಟಿಯಿಂದ ಯಾವಾಗಲೂ ಇದು ಅತ್ಯಂತ ಹಾನಿಕಾರಿ; ಬೆಳಕಿನ ಕಿರಣಗಳನ್ನು ದರ್ಶಿಸಲಾಗದಂತೆ ಇದು ಬುದ್ಧಿಯ ಅಂತಃ ಚಕ್ಷುಗಳನ್ನು ಮುಚ್ಚಿಬಿಟಿಟದೆ. ಮುಕ್ತ ಆಲೋಚನೆಗೆ ತೀರ ವಿಧ್ವಂಸಕವಾಗಿಯಲ್ಲದಿದ್ದರೂ ಇತರ ಧರ್ಮಗಳಿಗಿಂತ ಸಾಕಷ್ಟು ಪರಿಣಾಮಕಾರಿಯಾಗಿ ಇದು ಮಾರಕವಾಗಿದೆ. ತಾನು ಜಯಿಸಿದ ರಾಷ್ಟ್ರಗಳ ಸಾಂಸ್ಕೃತಿಕ ಕವಾಟಗಳನ್ನು ಮುಚ್ಚಿ ಹಾಕಿದೆ. ಒಬ್ಬ ಮುಸಲ್ಮಾನನಲ್ಲಿ ಗುರುತಿಸಲೇಬೇಕಾದ ಗಮನಾರ್ಹ ಗುಣ ಎಂದರೆ ಆತನ ವಿಜ್ಞಾನ ದ್ವೇಷ. ಈತನ ಪ್ರಕಾರ ವೈಜ್ಞಾನಿಕ ಸಂಶೋಧನೆ ವ್ಯರ್ಥ, ನಿಶ್ಚಲ ಮತ್ತು ಬಹುತೇಕ ಅಧಾರ್ಮಿಕ. ಏಕೆಂದರೆ, ಸಹಜ ವಿಜ್ಞಾನಗಳು ದೇವರೊಡನೆ ಸ್ಪರ್ಧೆಗಿಳಿವ ಸಾಹಸಗಾಥೆಗಳಾದರೆ; ಐತಿಹಾಸಿಕ ವಿಜ್ಞಾನಗಳು, ಅನಗತ್ಯವಾಗಿ ಇಸ್ಲಾಂ ಪೂರ್ವ ಯುಗವನ್ನು ಕೆಣಕುವ, ಬಹಿರಂಗಗೊಳಿಸುವಂಥ ಸಂಪ್ರದಾಯ ಬಾಹಿರ ಪ್ರಯತ್ನಗಳು.'' ತಮ್ಮ ಮಾತುಗಳನ್ನು ಮುಕ್ತಾಯ ಮಾಡುತ್ತ ರೆನಾನ್ ಹೀಗೆ ಹೇಳಿದ್ದಾರೆ:

**"ವಿಜ್ಞಾನ ತನ್ನ ವೈರಿ ಎಂಬ ಇಸ್ಲಾಂನ ಭಾವನೆ ಅಚಲವಾದದ್ದು. ಇದು ಹೀಗೆ ಅಚಲವಾಗಿ ಉಳಿದದ್ದು ತುಂಬಾ ಅಪಾಯಕರ. ಕೊನೆಯವರೆಗೂ ಇಸ್ಲಾಂ ತನ್ನ ಈ ಭಾವನೆಗೆ ಬದ್ಧವಾಗಿ ಉಳಿದದ್ದು ದುರದೃಷ್ಟಕರ. ಇದು ವಿಜ್ಞಾನಗಳನ್ನು ಘಾತಿಸಲು ಹೋಗಿ ತನ್ನನ್ನು ತಾನೇ ತಿವಿದುಕೊಂಡಿದೆ, ಅಲ್ಲದೆ ವಿಶ್ವದಾದ್ಯಂತ ಸಂಪೂರ್ಣ ಕೀಳರಿಮೆಯ ಅವಹೇಳನಕ್ಕೆ ತುತ್ತಾಗಿದೆ.''**

---

* ನ್ಯಾಷನಾಲಿಟಿ ಅಂಡ್ ಅದರ್ ಎಸ್ಸೇಸ್.

ಇದು ಸ್ಪಷ್ಟವಾದ ಉತ್ತರವೆಂದು ಕಂಡುಬಂದರೂ ನೈಜವಾದುದಲ್ಲ. ಇದನ್ನೇ ನೈಜವಾದುದೆಂದು ಪರಿಗಣಿಸುವುದಾದರೆ ಭಾರತದ ಹೊರಗಿರುವ ಮುಸ್ಲಿಂ ರಾಷ್ಟ್ರಗಳಲ್ಲಿ ಹೊಸ ಸೋಧನೆಗಳಿಗೆ ಅವರು ತೋರಿಸುವ ಉತ್ಸಾಹ, ಹೊಸ ಆವಿಷ್ಕಾರಗಳಿಂದ ಸಮಾಜ ಸುಧಾರಣೆ ಮಾಡಿಕೊಳ್ಳುವ ಅವರ ಅಪೇಕ್ಷೆ, ಜೊತೆಗೆ ಜೀವನದ ಎಲ್ಲ ರಂಗಗಳಲ್ಲೂ ಅವರು ಸಾಧಿಸಿರುವ ಗಮನಾರ್ಹ ವೈಜ್ಞಾನಿಕ ಪ್ರಗತಿಯ ಬಗೆಗೆ ಏನು ಹೇಳಲು ಸಾಧ್ಯ? ಉದಾಹರಣೆಗೆ ಟರ್ಕಿಯಲ್ಲಾದ ಸಮಾಜ ಸುಧಾರಣೆಯು ದಾರಿಗೆ ಅಡ್ಡ ಬರದಿರುವ ಇಸ್ಲಾಂ ಭಾರತದ ಮುಸ್ಲಿಮರ ಪ್ರಗತಿಯ ದಾರಿಯಲ್ಲಿ ಏಕೆ ಮುಳ್ಳಾಗಿ ನಿಂತಿದೆ? ಭಾರತದ ಮುಸ್ಲಿಮರ ಸಾಮಾಜಿಕ ಮತ್ತು ರಾಜಕೀಯ ಜೊತೆಗೆ ಬೇರೆ ಯಾವುದಾದರೂ ವಿಶೇಷ ಕಾರಣ ಇದ್ದಿರಲೇಬೇಕು.

ಹಾಗಾದರೆ ಆ ವಿಶೇಷವಾದ ಕಾರಣ ಯಾವುದಿರಬಹುದು? ಭಾರತೀಯ ಮುಸಲ್ಮಾನನಲ್ಲಿ ಬದಲಾವಣೆಯನ್ನು ಬಯಸುವಲ್ಲಿ ಕಂಡುಬರುವ ನೈಜ ಚೈತನ್ಯದ ಕೊರತೆಗೆ ಕಾರಣವನ್ನು, ಅವನು ಯಾವ ವಿಚಿತ್ರ ಪರಿಸ್ಥಿತಿಯಲ್ಲಿ ಭಾರತದಲ್ಲಿ ಜೀವಿಸುತ್ತಿದ್ದಾನೆ ಎಂಬುದರಿಂದ ಪತ್ತೆ ಹಚ್ಚಬಹುದೆಂದು ತೋರುತ್ತದೆ. ಈತ ಪ್ರಧಾನವಾಗಿ ಹಿಂದೂಗಳಿಂದಾವೃತವಾದ ಸಾಮಾಜಿಕ ಪರಿಸರದಲ್ಲಿ ವಾಸಿಸುತ್ತಿದಾನೆ. ಈ ಹಿಂದೂ ಪರಿಸರ ಮೌನವಾಗಿದ್ದುಕೊಂಡೇ ಅವನ ಮೇಲೆ ಯಾವಾಗಲೂ ಖಚಿತವಾದ ಆಕ್ರಮಣ ನಡೆಸುತ್ತ ಬಂದಿದೆ. ಇದು ಅವನ ಮುಸಲ್ಮಾನೀಯತೆಯನ್ನು ಶಿಥಿಲಗೊಳಿಸುವ ಸಂಚು ಎಂದವನ ಭಾವನೆ. ಈ ಬಗೆಯ ನಿಧಾನ ಶಿಥಿಲತೆಯ ವಿರುದ್ಧ ರಕ್ಷಣೆ ಪಡೆಯಲು ಇಸ್ಲಾಮಿಯವೆನಿಸಿದ್ದೆಲ್ಲವನ್ನು ಅದು ತನ್ನ ಸಮಾಜಕ್ಕೆ ಅಗತ್ಯವಿರಲೀ ಬಿಡಲೀ, ಯಾವ ಪೂರ್ವಾಪರ ವಿವೇಚನೆಯನ್ನು ಮಾಡದೆ ಅದನ್ನು ಸಂರಕ್ಷಿಸಿಕೊಳ್ಳಲು ಮುಂದಾಗುತ್ತಿದ್ದಾನೆ. ಎರಡನೆಯದಾಗಿ, ಮುಸ್ಲಿಮರು ಬದುಕುತ್ತಿರುವ ರಾಜಕೀಯ ಪರಿಸರವೂ, ಪ್ರಧಾನವಾಗಿ ಹಿಂದೂಗಳಿಂದಲೇ ಸುತ್ತುವರಿದಿರುವಂಥದು. ಹೀಗಾಗಿ ದಿನೇದಿನೇ ತಾನು ದಮನಗೊಳ್ಳುತ್ತಿರುವ ಭಾವನೆ ಅವನಲ್ಲಿ ಉಂಟಾಗುತ್ತಿವೆ. ಈ ರೀತಿಯ ರಾಜಕೀಯ ದಮನತೆ ಮುಸ್ಲಿಮರನ್ನು ದೀನವರ್ಗವನ್ನಾಗಿಸುತ್ತದೆ. ಈ ಪ್ರಜ್ಞೆ ಅವರಲ್ಲಿ ಸದಾ ಜಗೃತವಾಗಿರುವುದರಿಂದ, ಹಿಂದೂಗಳೊಡನೆ ಸಾಮಾಜಿಕ ಹಾಗೂ ರಾಜಕೀಯವಾಗಿ ಮಿಳಿತವಾಗದ ಹಾಗೆ ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಪ್ರಯತ್ನದಿಂದಾಗಿ ಭಾರತೀಯ ಮುಸಲ್ಮಾನರು ಇತರ ರಾಷ್ಟ್ರಗಳಲ್ಲಿನ ಮುಸಲ್ಮಾನರಿಗಿಂತ ಸಮಾಜ ಸುಧಾರಣೆಯ ವಿಷಯಗಳಲ್ಲಿ ಹಿಂದಾಗಿದ್ದಾರೆ ಎಂದು ತೋರುತ್ತದೆ. ಹಿಂದೂಗಳ ವಿರುದ್ಧ ಈ ಅನವರತ ಹೋರಾಟಕ್ಕೆ ತಮ್ಮ ಶಕ್ತಿಯನ್ನೆಲ್ಲ ಇವರು ವ್ಯಯಿಸುತ್ತಿರುವುದರಿಂದ, ಸ್ಥಾನಮಾನಕ್ಕಾಗಿ ಮತ್ತು ಅಧಿಕಾರಕ್ಕಾಗಿ ಹೆಣಗುತ್ತಿರುವುದರಿಂದ ಸಮಾಜ ಸುಧಾರಣೆಯ ಪ್ರಶ್ನೆಗಳನ್ನು ಇವರು ಕೈಗೆತ್ತಿಕೊಳ್ಳಲು ಸಮಯ, ಅವಕಾಶ, ಆಲೋಚನೆ ಯಾವುದೂ ಇವರಿಗೆ ಇದ್ದಂತಿಲ್ಲ. ಒಂದುವೇಳೆ ಇಂಥ ಭಾವನೆಗಳು ತಲೆ ಎತ್ತಿದರೂ ಅವು ಜಾತೀಯ ತುಡಿತದ ಒತ್ತಡಗಳಿಗೆ ಸಿಕ್ಕಿ ನಲುಗಿಹೋಗುತ್ತವೆ. ಏಕೆಂದರೆ ಹಿಂದೂಗಳ ಮತ್ತು ಹಿಂದೂಧರ್ಮದ ವಿಪತ್ತನ್ನು ಎದುರಿಸಲು ಒಗ್ಗಟ್ಟಿನಿಂದ ಇದ್ದು ತಮ್ಮ ಸಾಮಾಜಿಕ–ಧಾರ್ಮಿಕ ಸಂಘಟನೆಯನ್ನು ಯಾವುದೇ ಬೆಲೆ ತೆತ್ತು ಉಳಿಸಿಕೊಳ್ಳುವುದೇ ಇವರ ಪರಮೋದ್ದೇಶ.

ಭಾರತದ ಮುಸ್ಲಿಂ ಸಮುದಾಯದಲ್ಲಿನ ರಾಜಕೀಯ ಜಡತ್ವಕ್ಕೂ ಇದೇ ವಿವರಣೆ ಅನ್ವಯವಾಗುತ್ತದೆ. ರಾಜಕೀಯಾಧಾರದ ಮೇಲೆ ಮುಸ್ಲಿಂ ರಾಜಕಾರಣಿಗಳು ತಮ್ಮ ಜೀವನದ ವ್ಯವಹಾರಿಕ ಪರಿಗಳನ್ನು ಗುರುತಿಸಿಕೊಳ್ಳುವುದಿಲ್ಲ. ಏಕೆಂದರೆ ಇಂಥ ಕಾರಣಗಳು ಹಿಂದೂಗಳ ವಿರುದ್ಧದ ಹೋರಾಟದಲ್ಲಿ ತಮ್ಮ ಸಮುದಾಯವನ್ನು ದುರ್ಬಲಗೊಳಿಸುತ್ತವೆ ಎಂಬುದವರ ಭಾವನೆ. ಸಾಮಾಜಿಕ ನ್ಯಾಯಕ್ಕಾಗಿ ಧನವಂತರ ವಿರುದ್ಧ ಸೆಣಸಲು ಬಡ ಮುಸ್ಲಿಮರು ಬಡ ಹಿಂದೂಗಳೊಡನೆ ಸೇರುವುದಿಲ್ಲ. ಜಮೀನ್ದಾರನ ದಬ್ಬಾಳಿಕೆಯನ್ನು

ಪ್ರತಿಭಟಿಸಲು ಮುಸ್ಲಿಮ್ ಗುತ್ತಿಗೆದಾರ ಹಿಂದೂ ಗುತ್ತಿಗೆದಾರನೊಡನೆ ಬೆರೆಯುವುದಿಲ್ಲ. ಬಂಡವಾಳಶಾಹಿಯ ವಿರುದ್ಧ ಸಿಡಿದೇಳಲು ಮುಸ್ಲಿಂ ಕಾರ್ಮಿಕರು ಹಿಂದೂ ಕಾರ್ಮಿಕರೊಟ್ಟಿಗೆ ಸೇರುವುದಿಲ್ಲ. ಹೀಗೇಕೆ? ಉತ್ತರ ತೀರ ಸರಳ. ಬಡವ–ಶ್ರೀಮಂತರ ನಡುವಣ ಹೋರಾಟದಲ್ಲಿ ಬಡವರ ಪರವಾಗಿ ನಿಂತರೆ ಒಬ್ಬ ಶ್ರೀಮಂತ ಮುಸ್ಲಿಮನಿಗೆ ದ್ರೋಹ ಬಗೆದಂತೆ ಎಂಬುದು ಬಡ ಮುಸ್ಲಿಮನ ಭಾವನೆ. ಹಾಗೆಯೇ ಗುತ್ತಿಗೆದಾರ–ಜಮೀನ್ದಾರರ ಸಂಘರ್ಷದಲ್ಲಿ ಬಡಗುತ್ತಿಗೆದಾರರ ಪರವಾಗಿ ನಿಂತರೆ ಒಬ್ಬ ಮುಸ್ಲಿಂ ಜಮೀನ್ದಾರನ ವಿರುದ್ಧ ಪ್ರತಿಭಟಿಸಿದಂತೆ ಎಂಬುದು ಮುಸ್ಲಿಂ ಗುತ್ತಿಗೆದಾರನ ತಿಳಿವಳಿಕೆ. ಬಂಡವಾಳಶಾಹಿಯ ಮೇಲೆ ದಾಳಿ ಮಾಡುವ ಕೂಲಿಕಾರರ ಪರ ವಹಿಸಿದರೆ ಆಗ ಒಬ್ಬ ಮುಸ್ಲಿಂ ಬಂಡವಾಳದಾರನನ್ನು ನೋಯಿಸಿದಂತೆ ಎಂಬುದು ಮುಸ್ಲಿಂ ಕೂಲಿಕಾರನ ಅಭಿಪ್ರಾಯ. ಒಬ್ಬ ಧನವಂತ ಮುಸ್ಲಿಮನಿಗೆ, ಜಮೀನ್ದಾರನಿಗೆ ಅಥವಾ ಗಿರಣಿ ಮಾಲೀಕನಿಗೆ ನೋವನ್ನುಂಟುಮಾಡುವುದು ಮುಸ್ಲಿಂ ಧರ್ಮಕ್ಕೇ ಮಾಡುವ ಅಪಚಾರ ಎಂಬ ಪ್ರಜ್ಞೆ ಸಹಾ ಮುಸ್ಲಿಮನಲ್ಲಿ ಜಾಗ್ರೃತವಾಗಿರುತ್ತದೆ. ಏಕೆಂದರೆ, ಹೀಗೆ ತಮ್ಮವರ ವಿರುದ್ಧ ಯಾವುದೇ ಕಾರಣಕ್ಕೆ ಮಾಡುವ ಪ್ರತಿಭಟನೆ ಹಿಂದೂಗಳ ವಿರುದ್ಧವಾದ ಅವರ ಹೋರಾಟವನ್ನು ಶಿಥಿಲಗೊಳಿಸುತ್ತದೆ ಎಂಬುದು ಮುಸಲ್ಮಾನರ ಗಾಢವಾದ ನಂಬಿಕೆ.

ಮುಸ್ಲಿಂ ರಾಜಕೀಯ ಎಷ್ಟರಮಟ್ಟಿಗೆ ವಕ್ರಬುದ್ಧಿಯನ್ನು ಹೊಂದಿದೆ ಎಂಬುದನ್ನು ಭಾರತೀಯ ರಾಜ್ಯಗಳಲ್ಲಿನ ರಾಜಕೀಯ ಸುಧಾರಣೆಗಳಿಗೆ ಮುಸ್ಲಿಂ ರಾಜಕೀಯ ಧುರೀಣರು ತೋರಿದ ನಡವಳಿಕೆಯಿಂದ ಸಾಬೀತುಗೊಳಿಸಬಹುದು. ಹಿಂದೂ ರಾಜ್ಯವಾದ ಕಾಶ್ಮೀರದಲ್ಲಿ ಪ್ರಾತಿನಿಧಿಕ ಸರ್ಕಾರಕ್ಕಾಗಿ ಮುಸ್ಲಿಮರು ಮತ್ತವರ ನಾಯಕರು ಒಂದು ದೊಡ್ಡ ಆಂದೋಲನವನ್ನೇ ನಡೆಸಿದರು. ಇದೇ ಮುಸ್ಲಿಮರು ಮತ್ತು ಅವರ ನಾಯಕರು ಭಾರತದ ಇತರ ಮುಸ್ಲಿಂ ರಾಜ್ಯಗಳಲ್ಲಿ ಪ್ರಾತಿನಿಧಿಕ ಸರ್ಕಾರ ರಚಿಸಲು ಹೋದಾಗ ಭಯಂಕರವಾಗಿ ಪ್ರತಿಭಟಿಸಿದರು. ಈ ವಿಚಿತ್ರವಾದ ಇಬ್ಬಂದಿ ರಾಜಕೀಯದ ಹಿಂದೆ ಒಂದು ಸರಳ ಕಾರಣವಿದೆ. ಅದೇನೆಂದರೆ, ಹಿಂದೂ ಮತ್ತು ಮುಸ್ಲಿಮರು ಮುಖಾಮುಖಿಯಾದಾಗ, ಮುಸ್ಲಿಮರಿಗೆ ಏನು ತೊಂದರೆಯಾಗುತ್ತದೆ ಎಂಬುದಷ್ಟೇ ಈ ಎಲ್ಲ ವಿಷಯಗಳ ಹಿಂದಿರುವ ಗುಟ್ಟು. ಪ್ರಾತಿನಿಧಿಕ ಸರ್ಕಾರದಿಂದ ಮುಸ್ಲಿಮರಿಗೆ ಲಾಭವಿದೆ ಎಂದಾದರೆ, ಅದಕ್ಕಾಗಿ ಅವರು ಒತ್ತಾಯ ಮಾಡುತ್ತಾರೆ, ಹೋರಾಟ ನಡೆಸುತ್ತಾರೆ. ಕಾಶ್ಮೀರದಲ್ಲಿ ಆಡಳಿತ ಮಾಡುವವ ಒಬ್ಬ ಹಿಂದು. ಆದರೆ, ಆತನ ಪ್ರಜೆಗಳಲ್ಲಿ ಬಹುಸಂಖ್ಯಾತರು ಮುಸ್ಲಿಮರು. ಹೀಗಾಗಿ, ಇಲ್ಲಿ ಪ್ರಾತಿನಿಧಿಕ ಸರ್ಕಾರಕ್ಕಾಗಿ ಮುಸ್ಲಿಮರು ಹೋರಾಡುತ್ತಾರೆ. ಏಕೆಂದರೆ, ಕಾಶ್ಮೀರದಲ್ಲಿ ಪ್ರಾತಿನಿಧಿಕ ಸರ್ಕಾರ ಬಂದರೆ, ಒಬ್ಬ ಹಿಂದೂ ರಾಜನ ಅಧಿಕಾರ ಹೋಗಿ ಮುಸ್ಲಿಂ ಸಮುದಾಯದ ಜನರಿಗೆ ಅದು ಹಸ್ತಾಂತರಗೊಳ್ಳುತ್ತದೆ. ಇತರ ಮುಸ್ಲಿಂ ರಾಜ್ಯಗಳಲ್ಲಾದರೆ, ಆಳುತ್ತಿರುವ ಪ್ರತಿಯೊಬ್ಬ ವ್ಯಕ್ತಿ ಮುಸ್ಲಿಂ ಹಾಗೂ ಅವನ ಆಳ್ವಿಕೆಗೆ ಒಳಪಟ್ಟವರಲ್ಲಿ ಬಹುಸಂಖ್ಯಾತರು ಹಿಂದೂಗಳು. ಇಂಥ ರಾಜ್ಯಗಳಲ್ಲಿ ಪ್ರಾತಿನಿಧಿಕ ಸರ್ಕಾರ ಅಧಿಕಾರಕ್ಕೆ ಬರುವುದೆಂದರೆ, ಮುಸ್ಲಿಮರ ಕೈಯ್ಯಲ್ಲಿರುವ ಆಡಳಿತ ಹಿಂದೂ ಸಮುದಾಯದ ಜನರಿಗೆ ವರ್ಗಾಯಿಸಲ್ಪಡುತ್ತದೆ. ಇದರಿಂದಾಗಿಯೇ ಪ್ರಾತಿನಿಧಿಕ ಸರ್ಕಾರವನ್ನು ಮುಸ್ಲಿಮರು ಒಂದು ಕಡೆ ಬೆಂಬಲಿಸಿದರೆ ಮತ್ತೊಂದು ಕಡೆ ವಿರೋಧಿಸುತ್ತಾರೆ. ಒಟ್ಟಿನಲ್ಲಿ, ಮುಸ್ಲಿಮರಿಗೆ ಪ್ರಜಾಪ್ರಭುತ್ವ ಪರಿಗಣನಾರ್ಹ ಅಂಶವಲ್ಲ. ಬಹುಸಂಖ್ಯಾತರ ಈ ಪ್ರಜಾಪ್ರಭುತ್ವ ಸರಕಾರ ಹಿಂದೂಗಳ ವಿರುದ್ಧದ ಮುಸ್ಲಿಮರ ಹೋರಾಟದಲ್ಲಿ, ಮುಸ್ಲಿಮರನ್ನು ಎಷ್ಟರಮಟ್ಟಿಗೆ ಪ್ರಭಾವಿಸುತ್ತದೆ ಎಂಬುದಷ್ಟೇ ಅವರಿಗೆ ಬೇಕಾದದ್ದು. ಅದು ಅವರ ಬಲವನ್ನು ಸಂವರ್ಧಿಸುತ್ತದೆಯೋ ಇಲ್ಲ ದುರ್ಬಲಗೊಳಿಸುತ್ತದೆಯೋ? ಎಂಬುದಷ್ಟೇ ಅವರಿಗೆ ಮುಖ್ಯ. ಅದು ಅವರನ್ನು ದುರ್ಬಲಗೊಳಿಸುವುದೇ

ಆದಲ್ಲಿ ಅಂಥ ಪ್ರಜಾಪ್ರಭುತ್ವ ಅವರಿಗೆ ಬೇಕಾಗಿಲ್ಲ. ಹಿಂದೂ ಪ್ರಜೆಗಳ ಮೇಲಿನ ಮುಸ್ಲಿಂ ಅಧಿಕಾರದ ಬಿಗಿಯನ್ನು ಸಡಿಲಗೊಳಿಸುವುದರ ಬದಲು, ಎಷ್ಟೇ ಕೆಟ್ಟು ಹಾಳಾಗಿದ್ದರೂ ಮುಸ್ಲಿಂ ರಾಜ್ಯವಾಗಿಯೇ ಮುಂದುವರಿಯುವುದನ್ನು ಅವನು ಬಯಸುತ್ತಾರೆ.

ಮುಸ್ಲಿಂ ಸಮುದಾಯದ ಸಾಮಾಜಿಕ ಮತ್ತು ರಾಜಕೀಯ ಜಡತೆಯನ್ನು ಒಂದೇ ಒಂದು ಕಾರಣ ಕೊಟ್ಟು ವಿವರಿಸಬಹುದು. ಹಿಂದೂಗಳು ಮತ್ತು ಮುಸ್ಲಿಮರು ನಿರಂತರವಾಗಿ ಹೋರಾಡುತ್ತಿರಬೇಕು; ಮುಸ್ಲಿಮರ ಮೇಲೆ ಪ್ರಭುತ್ವ ಸ್ಥಾಪಿಸಲು ಹಿಂದೂಗಳು ಮತ್ತು ಹಿಂದೂಗಳ ಮೇಲೆ ತಮ್ಮ ಹಿಂದಿನ ಐತಿಹಾಸಿಕ ರಾಜ್ಯಭಾರದ ಛಾಪನ್ನು ಮತ್ತೆ ಸಂಸ್ಥಾಪಿಸಲು ಮುಸ್ಲಿಮರು ಪರಸ್ಪರ ಕತ್ತಿ ಮಸೆಯುತ್ತಿರಲಿ. ಈ ನಿರಂತರ ಸಂಘರ್ಷದಲ್ಲಿ ಶಕ್ತರಾದವರಿಗೆ ಜಯ ಲಭಿಸುತ್ತದೆ. ಇಂಥ ಬಲವರ್ಧನೆಗಾಗಿ, ತಮಗಾಗುವ ಯಾವುದೇ ವೈಯಕ್ತಿಕ ನಷ್ಟವನ್ನು ತಣ್ಣಗೆ ಸಹಿಸಿಕೊಳ್ಳುವುದು ಅನಿವಾರ್ಯ.

ಹೊರದೇಶಗಳಲ್ಲಿ ತಮ್ಮ ಸಮಾಜಗಳ ಸುಧಾರಣೆಗೆ ಮುಸ್ಲಿಮರು ಶ್ರಮಿಸುತ್ತಿದ್ದರೂ ಭಾರತದ ಮುಸ್ಲಿಮರು ಹಾಗೆ ಮಾಡಲು ನಿರಾಕರಿಸುವುದಕ್ಕೆ ಕಾರಣ, ಹೊರದೇಶಗಳ ಮುಸ್ಲಿಮರು ಇತರ ಸಮುದಾಯಗಳೊಡನೆ ಯಾವುದೇ ರಾಜಕೀಯ ಹಾಗೂ ಧಾರ್ಮಿಕ ಸಂಘರ್ಷವಿಲ್ಲದೆ ಸ್ವತಂತ್ರವಾಗಿದ್ದಾರೆ. ಆದರೆ, ಭಾರತದಲ್ಲಿರುವ ಮುಸ್ಲಿಮರ ಪದ್ಧತಿ ಹಾಗಿಲ್ಲ.

## III

ಸಮಾಜದ ಓರೆಕೋರೆಗಳನ್ನು ತಿದ್ದುವ ಅಗತ್ಯವನ್ನು ಕಡೆಗಣಿಸಿರುವ ಕಂದಾಚಾರದ ಕುರುಡುಮೋಹ ಕೇವಲ ಮುಸ್ಲಿಮರದು ಮಾತ್ರವಲ್ಲ; ಹಿಂದೂಗಳಲ್ಲಿಯೂ ಅದರ ಕಪಿಮುಷ್ಠಿ ಇದ್ದೇ ಇದೆ. ಸಾಮಾಜಿಕ ದಕ್ಷತೆಯಿಲ್ಲದೆ ಯಾವುದೇ ಕ್ಷೇತ್ರದಲ್ಲಿ ಚಿರಸ್ಥಾಯಿಯಾಗುಳಿವ ಕೆಲಸವನ್ನು ಮಾಡುವುದು ಸಾಧ್ಯವಿಲ್ಲ ಎಂಬ ತಿಳಿವಳಿಕೆ ಒಂದು ಕಾಲಕ್ಕೆ ಹಿಂದೂಗಳಲ್ಲಿತ್ತು. ಸಾಂಪ್ರದಾಯಿಕ ಕಂದಾಚಾರದ ಫಲದಿಂದ ಅಂಥ ದಕ್ಷತೆಯಿಂದ ಇಂದು ಹಿಂದೂಗಳು ವಂಚಿತರಾಗಿದ್ದಾರೆ. ಅಸೀಮ ಸಾಹಸ ಮೆರೆದು ಈ ಕಂದಾಚರಗಳನ್ನಿಂದು ಬುಡಮೇಲು ಮಾಡಬೇಕಾಗಿದೆ. ಈ ದೃಷ್ಟಿಯ ಹಿನ್ನೆಲೆಯಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಸೋಶಿಯಲ್‌ಕಾನ್ಫರೆನ್ಸ್ ಫೌಂಡೇಷನ್ ಜೊತೆಗೂಡಿ ಜನ್ಮ ತಳೆಯಿತು. ರಾಷ್ಟ್ರದ ರಾಜಕೀಯ ಸಂಸ್ಥೆಯ ಹುಳುಕುಗಳನ್ನು ಬಹಿರಂಗಪಡಿಸಲು ಕಾಂಗ್ರೆಸ್ ಶ್ರಮಿಸಿದರೆ; ಹಿಂದೂ ಸಮಾಜದ ಸಾಮಾಜಿಕ ಸಂಸ್ಥೆಗಳ ದೌರ್ಬಲ್ಯಗಳನ್ನು ಸೋಶಿಯಲ್‌ಕಾನ್ಫರೆನ್ಸ್ ಒರೆಹಚ್ಚತೊಡಗಿತು. ಕೆಲವು ಕಾಲದವರೆಗೆ ಈ ಎರಡು ಸಂಸ್ಥೆಗಳು ಒಂದೇ ದೇಹದ ಎರಡು ಅವಿಭಾಜ್ಯ ಅಂಗಗಳಂತೆ ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳ ಉನ್ನತಿಗಾಗಿ ದುಡಿದವು; ಒಂದೇ ಚಪ್ಪರದಡಿಯಲ್ಲಿ ತಮ್ಮ ವಾರ್ಷಿಕ ಚಟುವಟಿಕೆಗಳನ್ನು ವಿಶ್ಲೇಷಿಸಿಕೊಂಡವು. ಇವೆರಡೂ, ಸಮಾಜ ಸುಧಾರಣ ಪಕ್ಷ ಹಾಗೂ ರಾಜಕೀಯ ಸುಧರಣಾ ಪಕ್ಷಗಳಾಗಿ ಬೆಳೆದ ಮೇಲೆ ಕ್ರಮೇಣ ಇವುಗಳ ನಡುವೆ ತೀವ್ರತರವಾದ ಭಾವೋದ್ರಿಕ್ತ ಭಿನ್ನಾಭಿಪ್ರಾಯಗಳು ತಲೆದೋರಿದವು. ರಾಜಕೀಯ ಸುಧಾರಣಾ ಪಕ್ಷ ರಾಷ್ಟ್ರೀಯ ಕಾಂಗ್ರೆಸ್ಸನ್ನು ಮತ್ತು ಸಮಾಜ ಸುಧಾರಣಾ ಪಕ್ಷ ಸೋಶಿಯಲ್‌ಕಾನ್ಫರೆನ್ಸನ್ನು ಬೆಂಬಲಿಸಿದವು. ಹೀಗಾಗಿ, ಒಂದೇ ಸೂರಡಿಯ ಎರಡು ಅಂಗಸಂಸ್ಥೆಗಳು ಒಡೆದು ಹಗೆಯ ಎರಡು ಬೀಡಾದವು. ಸಾಮಾಜಿಕ ಸುಧಾರಣೆ, ರಾಜಕೀಯ ಸುಧಾರಣೆಗಿಂತ ಮೇಲುಗೈಯಾಗಿರಬೇಕೇ ಬೇಡವೇ ಎಂಬುದೇ ಇವರ ನಡುವಣ ವಾಗ್ವಾದದ ಗ್ರಾಸ. ಒಂದು ದಶಕದ ಕಾಲ ಇವೆರಡರ ಬಲಾಬಲ ಸಮನಾಗಿದ್ದ ಕಾರಣ ಯಾರಿಗೂ ಮೇಲುಗೈ ಸಾಧಿಸಲಾಗಲಿಲ್ಲ. ಆದರೆ ಕ್ರಮೇಣ ಸೋಶಿಯಲ್‌ಕಾನ್ಫರೆನ್ಸ್‌ನ ಅದೃಷ್ಟ ತೀವ್ರಗತಿಯಲ್ಲಿ ಕ್ಷಯಿಸುತ್ತಾ ಹೋಯಿತು. ಸೋಶಿಯಲ್

ಕಾನ್ಫರೆನ್ಸ್‌ನ ಅಧ್ಯಕ್ಷ ಪೀಠದಿಂದ ಮಹನೀಯರೊಬ್ಬರು, "ಶಿಕ್ಷಣವೇತ್ತ ಹಿಂದೂಗಳಲ್ಲಿ ಬಹುತೇಕ ಮಂದಿ ರಾಜಕೀಯ ಪ್ರಗತಿಯ ಪರವಾದ ಲಾಲಸೆಯುಳ್ಳವರು. ಇವರಿಗೆ ಸಮಾಜ ಸುಧಾರಣೆಯ ಬಗೆಗೆ ನಿರಾಸಕ್ತಿ. ಕಾಂಗ್ರೆಸ್ ಸಮಾವೇಶಗಳಿಗೆ ಇಂಥ ಮಂದಿ ಬಹಳವಾಗಿ ಸೇರುತ್ತಾರೆ. ಸೇರಲಾಗದಿದ್ದರೆ ತಮ್ಮ ಸಹಮತವನ್ನೂ ಇನ್ನೂ ಹೆಚ್ಚಾಗಿ ಅಭಿವ್ಯಕ್ತಿಸುತ್ತಾರೆ. ಆದರೆ, ಸೋಶಿಯಲ್ ಕಾನ್ಫರೆನ್ಸ್‌ಗಳಲ್ಲಿ ಭಾಗವಹಿಸುವವರ ಸಂಖ್ಯೆ ಮಾತ್ರ ತೀರಾ ಕಡಿಮೆ" ಎಂದು ವಿಷಾದಿಸಿದ್ದಾರೆ. ಜನರ ಈ ಅಸಡ್ಡೆ ಮತ್ತು ದಿವಂಗತ ಶ್ರೀ ತಿಲಕರಂಥ ರಾಜಕೀಯ ಧುರೀಣರ ವೈಷಮ್ಯದಿಂದಾಗಿ ಕ್ರಮೇಣ ರಾಜಕೀಯ ಸುಧಾರಣೆಯತ್ತ ಒಲವು ತೋರಿದ ಪಕ್ಷ ಬಲಾಢ್ಯವಾಗುತ್ತ ನಡೆದರೆ, ಸೋಶಿಯಲ್‌ಕಾನ್ಫರೆನ್ಸ್ ಪಕ್ಷ ಕಣ್ಮರೆಯಾದದ್ದೇ ಅಲ್ಲದೆ, ಜನರ ಸ್ಮೃತಿ ಪಟಲದಿಂದಲೇ ಜಾರಿಹೋಯಿತು.* ಇದರೊಟ್ಟಿಗೇ ಸಮಾಜ ಸುಧಾರಣೆ ಕೈಗೆತ್ತಿಕೊಳ್ಳುವ ಹಿಂದೂ ಸಮಾಜದ ಪ್ರೇರಕಶಕ್ತಿಯೂ ಕಮರಿಹೋಯಿತು. ಶ್ರೀ ಗಾಂಧಿಯ ನಾಯಕತ್ವದಲ್ಲಿ ಇಂದೂ ಸಮಾಜ ರಾಜಕೀಯ ಹುಚ್ಚಿನ ತವರಾಗದಿದ್ದರೂ ಖಂಡಿತವಾಗಿ ಜನ ರಾಜಕೀಯದ ಸೋಂಕಿಗೆ ತುತ್ತಾದರೂ ಅಸಹಕಾರ, ನಾಗರಿಕ ಕಾನೂನುಭಂಗ ಚಳುವಳಿ ಮತ್ತು ಸ್ವರಾಜ್ಯದ ಕೂಗು, ಜನಮನದಲ್ಲಿ ಒಮ್ಮೆ ಬೇರುಬಿಟ್ಟಿದ್ದ ಸಮಾಜ ಸುಧಾರಣೆಯ ಭಾವನೆಗಳನ್ನು ಬುಡಮೇಲು ಮಾಡಿ ತಾವು ಸ್ಥಾಪಿತಗೊಂಡವು. ರಾಜಕೀಯ ಚಳವಳಿಯ ದೊಂಬಿ ಧೂಳಿನಲ್ಲಿ ಮುಳುಗಿಹೋದ ಹಿಂದೂಗಳಿಗೆ ಪರಿಹಾರ ಕಂಡುಕೊಳ್ಳಬೇಕಾದ ಸಾಮಾಜಿಕ ಕೆಡಕುಗಳ ಪರಿವೆ ಕೂಡ ಇಲ್ಲದೆ ಹೋಯಿತು. ಇದರ ಪರಿವೆ ಇದ್ದ ಕೆಲವು ಮಂದಿ ಕೂಡ ಸಾಮಾಜಿಕ ಸುಧಾರಣೆ ರಾಜಕೀಯ ಸುಧಾರಣೆಯಷ್ಟೇ ಗಹನವಾದುದೆಂಬುದನ್ನು ನಂಬಲಿಲ್ಲ. ಒಂದುವೇಳೆ ನಂಬಿಕೆಯಿದ್ದರೂ ರಾಜಕೀಯ ಅಧಿಕಾರವನ್ನು ಮೊದಲು ಗಳಿಸಿಕೊಳ್ಳದೆ ಯಾವುದೇ ಸಮಾಜ ಸುಧಾರಣೆ ಸಾಧಿತವಾಗುವುದಿಲ್ಲ ಎಂಬ ವಾದವನ್ನು ಮುಂದುಮಾಡುತ್ತಾರೆ. ರಾಜಕೀಯ ಅಧಿಕಾರದ ಅಮಲು ಎಷ್ಟರ ಮಟ್ಟಿಗೆ ನೆತ್ತಿಗೇರಿದೆ ಎಂದರೆ ಸಮಾಜ ಸುಧಾರಣೆಯ ಪರವಾಗಿ ಪ್ರಚಾರ ಮಾಡುವುದೂ ಇದರ ಅಸಮಾಧಾನಕ್ಕೆ ಕಾರಣವಾಗುತ್ತದೆ. ಏಕೆಂದರೆ, ಹಾಗೆ ಮಾಡುವುದರಿಂದ ರಾಜಕೀಯ ಪ್ರಚಾರಕ್ಕೆ ಅಷ್ಟರಮಟ್ಟಿಗಾದರೂ ಸಮಯ ಶಕ್ತಿ ವ್ಯಯವಾಗುತ್ತದೆ ಎಂಬುದಿವರ ಆಗ್ರಹ. ಶ್ರೀ ಗಾಂಧಿಯ ಬಾತ್ಮೀದಾರನೊಬ್ಬ ಅವರಿಗೆ ಪತ್ರ ಬರೆದು ರಾಷ್ಟ್ರೀಯತಾವಾದಿಗಳ ದೃಷ್ಟಿಕೋನವನ್ನು ಕರಾರುವಾಕ್ಕಾಗಿ ಹಾಗೂ ನಿರ್ದಾಕ್ಷಿಣ್ಯವಾಗಿ ಹೀಗೆ ತಿಳಿಸಿದ್ದಾನೆ.**

> **"ರಾಜಕೀಯ ಅಧಿಕಾರವಿಲ್ಲದೆ ಯಾವುದೇ ಒಂದು ಮಹತ್ವದ ಸುಧಾರಣೆಯನ್ನು ತರುವುದು ಅಸಾಧ್ಯ ಎಂಬುದು ನಿಮಗೆ ತಿಳಿದಿಲ್ಲವೆ? ಪ್ರಸ್ತುತ ಹಣಕಾಸಿನ ಪರಿಸ್ಥಿತಿಯನ್ನು ಎದುರಿಸುವುದು ಅನಿವಾರ್ಯವಲ್ಲವೆ? ರಾಜಕೀಯ ಪುನರ್ರಚನೆಯಾಗದೆ ಯಾವುದರ ಪುನರ್ರಚನೆಯೂ ಸಾಧ್ಯವಿಲ್ಲ. ಅಕ್ಕಿ ಕುಟ್ಟುವ, ತೊಳೆಸುವ, ಸಮತೋಲನದ ಆಹಾರದ ಬಗೆಗೆ ಮಾತನಾಡುವ ಈ ಎಲ್ಲ ಕೆಲಸಗಳೂ ಬರೀ ಚಂದ್ರನ ಬೆಳದಿಂಗಳಿನಂತೆ."**

ರಾನಡೆಯ ನೇತೃತ್ವದಲ್ಲಿ ಸಾಗಿಬಂದ ಸಮಾಜ ಸುಧಾರಣಾ ಪಕ್ಷ ತನ್ನ ಕ್ಷೇತ್ರವನ್ನು ಕಾಂಗ್ರೆಸ್ಸಿಗೆ ಬಿಟ್ಟುಕೊಟ್ಟು ನಶಿಸಿಹೋಯಿತು. ಕಾಂಗ್ರೆಸ್ಸಿಗೆ ಪ್ರತಿಸ್ಪರ್ಧಿಯಾಗಿ ಇನ್ನೊಂದು ಪಕ್ಷ ಹಿಂದೂಗಳಲ್ಲಿ ತಲೆ ಎತ್ತಿತು. ಅದೇ ಹಿಂದೂಮಹಾಸಭಾ. ಇದರ ಹೆಸರನ್ನು ಕೇಳಿದ ಯಾರಾದರೂ ಇದು ಹಿಂದೂ ಸಮಾಜವನ್ನು

---

* ಹೆಚ್ಚಿನ ವಿವರಕ್ಕೆ ನನ್ನ 'ಅನಿಹಿಲೇಷನ್ ಆಫ್ ಕ್ಯಾಸ್ಟ್' ಲೇಖನ ನೋಡಿ.

** ಹರಿಜನ – ೧೧ನೇ ಜನವರಿ ೧೯೩೭

ಉದ್ಧರಿಸುವ ಒಂದು ಅಂಗಸಂಸ್ಥೆ ಎಂದು ಭಾವಿಸುವುದು ಸಹಜ. ಆದರೆ, ವಸ್ತುಸ್ಥಿತಿ ಅದಲ್ಲ. ಸಮಾಜ ಸುಧಾರಣೆ ಹಾಗೂ ರಾಜಕೀಯ ಸುಧಾರಣೆಯ ವಿಷಯಕ್ಕೂ ಕಾಂಗ್ರೆಸ್ಸಿನ ಜತೆಗಿನ ಇದರ ಪ್ರತಿ ಸ್ಪರ್ಧೆಗೂ ಏನೇನೂ ಸಂಬಂಧವಿಲ್ಲ. ಮುಸ್ಲಿಂ ಕಾರ್ಯನೀತಿಯ ಬಗೆಗೆ ಕಾಂಗ್ರೆಸ್ಸಿನೊಡನೆ ನಡೆಸಿದ ಕಿತ್ತಾಟದ ಫಲವಾಗಿಯೇ ಇದರ ಉದಯವಾದದ್ದು. ಮುಸ್ಲಿಮರ ಆಕ್ರಮಣದ ವಿರುದ್ಧ ಹಿಂದೂಗಳ ಹಕ್ಕನ್ನು ರಕ್ಷಿಸುವುದಕ್ಕಾಗಿಯೇ ಇದು ರೂಪ ತಳೆದದ್ದು. ಮುಸ್ಲಿಮರ ವಿರುದ್ಧ ಒಂದು ಸುಸಂಘಟಿತ ಹಿಂದೂ ಪಡೆಯನ್ನು ನಿರ್ಮಿಸುವುದೇ ಇದರ ಯೋಜನೆ. ಹಿಂದೂಗಳ ಹಕ್ಕನ್ನು ಸಂರಕ್ಷಿಸುವ ಒಂದು ಅಂಗ ಸಂಸ್ಥೆಯಾಗಿ ಇದರ ಸಮಯವೆಲ್ಲ ರಾಜಕೀಯವಾದ ಸ್ಥಾನಮಾನಗಳ ಮೇಲೆ ನಿಗಾ ಇಡುವುದರಲ್ಲಿಯೇ ವ್ಯಯವಾಗಿ ಹೋಯಿತು. ಹೀಗಾಗಿ, ಸಮಾಜ ಸುಧಾರಣೆಯ ಬಗೆಗೆ ಆಲೋಚಿಸಲೂ ಇದಕ್ಕೆ ವ್ಯವಧಾನವಿಲ್ಲವಾಯಿತು. ಎಲ್ಲ ಹಿಂದೂಗಳ ಏಕೀಕರಣ ಪಡೆಯೊಂದನ್ನು ರೂಪಿಸುವ ಮಹತ್ಕಾರ್ಯದಲ್ಲಿ ಇದು ತಲ್ಲೀನವಾಗಬೇಕಾಗಿರುವುದರಿಂದ, ಸಮಾಜ ಸುಧಾರಣೆಯಂಥ ವಿಷಯವನ್ನು ಕೈಗೆತ್ತಿಕೊಂಡು ತನ್ನೊಳಗೇ ಭಿನ್ನಮತ ತಲೆದೋರಲು ಅವಕಾಶ ಮಾಡಿಕೊಡುವುದು ಇದಕ್ಕೆ ಬೇಡವಾಗಿತ್ತು. ಹೀಗಾಗಿ ಹಿಂದೂಗಳ ಸಂಘಟನೆಯನ್ನು ಕಾಪಾಡಿಕೊಳ್ಳುವ ಏಕೈಕ ದೃಷ್ಟಿಯಿಂದ ಸಾಮಾಜಿಕ ಕೆಡಕುಗಳನ್ನು ಯಥಾ ಸ್ಥಿತಿಯಲ್ಲಿಯೇ ಬಿಡಲು ಹಿಂದೂಮಹಾಸಭಾ ಸಿದ್ಧವಾಗಬೇಕಾಗಿ ಬಂದದ್ದು ಅನಿವಾರ್ಯವಾಯಿತು. ಅನೇಕ ಅಸಮಾನತೆಗಳೂ ಹಾಗೂ ನ್ಯೂನತೆಗಳನ್ನು ಒಳಗೊಂಡಿರುವ ೧೯೩೫ರ ಅಧಿನಿಯಮ ರೂಪಿಸಿದ ಕೂಟವನ್ನು, ಇದು ಹಿಂದೂಗಳ ಸಂಘಟನೆಯ ದೃಷ್ಟಿಯಿಂದಲೇ ಅನಿವಾರ್ಯವಾಗಿ ಸ್ವಾಗತಿಸಬೇಕಾಯಿತು. ಇದೇ ಕಾರಣಕ್ಕಾಗಿ ತಮ್ಮ ಎಂದಿನ ಆಡಳಿತಾಧಿಕಾರದೊಡನೆ ಭಾರತ ರಾಜ್ಯಗಳು ಹಾಗೇ ಮುಂದುವರಿಯಲು ಹಿಂದೂ ಮಹಾಸಭಾ ತನ್ನ ಒಪ್ಪಿಗೆಯನ್ನು ನೀಡಿತು. "ಹಿಂದೂ ರಾಜ್ಯಗಳಲ್ಲಿ ಹಸ್ತಕ್ಷೇಪ ಮಾಡದಿರಿ" ಎಂಬುದು ಇದರ ಅಧ್ಯಕ್ಷರ ಹೋರಾಟದ ಉದ್ಘೋಷಣೆಯಾಯಿತು. ಇದು ಮುಸ್ಲಿಮರದ್ದಕ್ಕಿಂತ ವಿಚಿತ್ರ ನಡೆವಳಿಕೆ ಎನಿಸಿತು. ಹಿಂದೂರಾಜ್ಯಗಳಲ್ಲಿ ಪ್ರಾತಿನಿಧಿಕ ಸರ್ಕಾರ ಹಿಂದೂಗಳಿಗೆ ಹಾನಿಕಾರಕವಲ್ಲ. ಹಾಗಾದರೆ ಹಿಂದೂ ಮಹಾಸಭಾದ ಅಧ್ಯಕ್ಷರು ಇವನ್ನು ಪ್ರತಿಭಟಿಸಿದ್ದೇಕೆ? ಪ್ರಾಯಶಃ ಇವರು ಸಹಿಸದ ಮುಸ್ಲಿಮರಿಗೆ ಇದು ಸಹಾಯಕಾರಿಯಾಗಿದೆ ಎಂಬ ಭಾವೆಯಿಂದಿರಬೇಕು.

## IV

ಹಿಂದೂಗಳು ಮತ್ತು ಮುಸ್ಲಿಮರು ತಮ್ಮ ತಮ್ಮ ಬಲವನ್ನು ಸಂರಕ್ಷಿಸಿಕೊಳ್ಳಲು ಎಷ್ಟು ಆಳಕ್ಕೆ ಇಳಿಯಬಲ್ಲರು ಎಂಬುದನ್ನು ನಿರೂಪಿಸಲು ಕೇಂದ್ರ ಶಾಸನಸಭೆಯಲ್ಲಿ ೧೯೩೯ರ ೮ನೇ ಮುಸ್ಲಿಂ ವಿವಾಹ ರದ್ಧತಿ ಅಧಿನಿಯಮದ ಚರ್ಚೆಗಿಂತ ಬೇರೆ ನಿದರ್ಶನ ಬೇಕಿಲ್ಲ. ೧೯೩೯ಕ್ಕೆ ಮೊದಲು ಮುಸ್ಲಿಂ ಕಾಯಿದೆಯ ಕಾರಣದಿಂದಲೇ ವಿವಾಹಿತ ದಂಪತಿಗಳಲ್ಲಿ ಗಂಡು ಅಥವಾ ಹೆಣ್ಣು ಧರ್ಮ ಭ್ರಷ್ಟರಾದರೆ ಅವರ ವೈವಾಹಿಕ ಸಂಬಂಧ ವಿಸರ್ಜಿಸಲ್ಪಡುತ್ತಿತ್ತು. ವಿವಾಹಿತ ಮುಸ್ಲಿಮ್ ಮಹಿಳೆ ಮತಾಂತರಗೊಂಡರೆ ಆಕೆ ಪರಧರ್ಮದ ವ್ಯಕ್ತಿಯನ್ನು ವರಿಸಲು ಸ್ವತಂತ್ರಳಿದ್ದಳು. ಇದು ಕಳೆದ ೬೦ ವರ್ಷಗಳಿಂದ* ಭಾರತದ ನ್ಯಾಯಾಲಯವು ಎತ್ತಿಹಿಡಿದ ಶಾಸನವಾಗಿತ್ತು.

---

* ಜಬಾರೂಸ್ಟ್ ಖಾನ್ ಮತ್ತು ಆತನ ಮಡದಿಯ ಮೊಕದ್ದಮೆಯ ಬಗ್ಗೆ ಉತ್ತರ ಪಶ್ಚಿಮ ವಿಭಾಗದ ಉಚ್ಚ ನ್ಯಾಯಾಲಯ ೧೮೭೦ರಲ್ಲಿ ನೀಡಿರುವ ತೀರ್ಪೇ ಈ ನಿಟ್ಟಿನಲ್ಲಿ ತೀರ ಹಳೆಯದು.

೧೯೩೯ರ ೮ನೇ ಅಧಿನಿಯಮ ಈ ಕಾಯಿದೆಯನ್ನು ರದ್ದು ಮಾಡಿತು. ಇದರ ನಾಲ್ಕನೇ ಕಲಮಿನ ಒಕ್ಕಣೆ ಈ ರೀತಿ ಇದೆ:

> **"ವಿವಾಹಿತ ಮುಸ್ಲಿಂ ಮಹಿಳೆಯ ಇಸ್ಲಾಂ ಧರ್ಮ ಪರಿತ್ಯಾಗ ಅಥವಾ ಇಸ್ಲಾಮೇತರ ಧರ್ಮಕ್ಕೆ ಮತಾಂತರ, ಆಕೆಗೆ ವಿವಾಹ ರದ್ಧತಿಯನ್ನು ತನ್ನಿಂದ ತಾನೇ ತಂದುಕೊಡುವುದಿಲ್ಲ.**
> **ಹಾಗಾಗಬೇಕಾದ ಪಕ್ಷದಲ್ಲಿ ಈ ಬಗೆಯ ಪರಿತ್ಯಾಗ ಅಥವಾ ಮತಾಂತರದ ಅನಂತರ ತನ್ನ ವಿವಾಹ ರದ್ಧತಿಗೆ ಕಲಮ್ ೨ರಲ್ಲಿ ನಮೂದಿಸಿರುವ ಯಾವುದೇ ಆಧಾರದ ಮೇಲೆ ತೀರ್ಪು ಪಡೆಯಲು ಆಕೆ ಅರ್ಹಳಾಗಿರಬೇಕು:**
> **ಇತರ ಯಾವುದೇ ಧರ್ಮದಿಂದ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡ ನಂತರವೂ ತನ್ನ ಹಿಂದಿನ ಧರ್ಮಕ್ಕೆ ಮರಳಿದ ಪಕ್ಷದಲ್ಲಿ ಅಂತಹ ಹೆಣ್ಣಿಗೆ ಈ ಪರಿಚ್ಛೇದದಲ್ಲಿ ಮಾಡಿಕೊಟ್ಟಿರುವ ಅವಕಾಶ ಅನ್ವಯಿಸುವುದಿಲ್ಲ."**

ಈ ಅಧಿನಿಯಮದ ಪ್ರಕಾರ, ವಿವಾಹಿತ ಮುಸ್ಲಿಂ ಮಹಿಳೆಯ ದಾಂಪತ್ಯ ಅವಳು ಇನ್ನೊಂದು ಧರ್ಮಕ್ಕೆ ಮತಾಂತರಗೊಳ್ಳುವುದರಿಂದ ಕಡಿದುಹೋಗುವುದಿಲ್ಲ. ಇದರಿಂದ ಅವಳಿಗೆ ದೊರೆಯಬಹುದಾದದ್ದು ಕೇವಲ ವಿವಾಹ ವಿಚ್ಛೇದನದ ಹಕ್ಕು ಮಾತ್ರ. ಆದರೆ ಕಲಮು ೨, ಮತಾಂತರ ಅಥವಾ ಧರ್ಮ ಪರಿತ್ಯಾಗವನ್ನು ವಿವಾಹ ವಿಚ್ಛೇದನಕ್ಕೆ ಕಾರಣವಾಗಿ ಪರಿಗಣಿಸದಿರುವುದೇ ಇದರ ಹಿಂದಿರುವ ಒಳಸಂಚಿನ ಮರ್ಮ. ಅಂದರೆ, ಈ ಕಾನೂನಿನ ಪ್ರಕಾರ ಒಬ್ಬ ವಿವಾಹಿತ ಮುಸ್ಲಿಂ ಮಹಿಳೆ, ತನ್ನ ಗಂಡನ ಧಾರ್ಮಿಕ ನಂಬಿಕೆ ಅವಳಿಗೆ ಎಷ್ಟೇ ಹೇಸಿಗೆ ಎನಿಸಿದರೂ ಅವನೊಡನೆಯೇ ಬದುಕಬೇಕು ಮತ್ತು ತನ್ನ ಮನಸಾಕ್ಷಿಯಂತೆ ನಡೆದುಕೊಳ್ಳುವ ಸ್ವಾತಂತ್ರ್ಯ ಅವಳಿಗಿರುವುದಿಲ್ಲ.

ಈ ಬದಲಾವಣೆಯನ್ನು ತರಲು ಕಾರಣವಾದಂಥ ನೆಲೆಗಳನ್ನು ಪರಿಶೀಲಿಸಬೇಕಾದ್ದು ಅಗತ್ಯ. ಈ ಮಸೂದೆಯ ಸೂಚಕ ಶಾಸಕ ಖಾಜಿ ಕಜ್ಮಿ. ಈ ಬದಲಾವಣೆಯ ಪರವಾಗಿ ಬಹಳ ಚಾತುರ್ಯದಿಂದ ಮಾತನಾಡಿದ ಬಗೆ ಇದು:*

> **"ಧರ್ಮ ಪರಿತ್ಯಾಗವನ್ನು ಇತರ ಧರ್ಮಗಳಂತೆ ಇಸ್ಲಾಂ ಧರ್ಮವೂ ಒಂದು ದೊಡ್ಡ ಅಪರಾಧವೆಂದು ಪರಿಗಣಿಸಿದೆ. ಅಲ್ಲದೆ, ಇದು ದೇಶದ ವಿರುದ್ಧ ಮಾಡಲಾದ ಮಹಾಪರಾಧಕ್ಕೆ ಸಮಾನವೆಂದು ತೀರ್ಮಾನಿಸುತ್ತದೆ. ಈ ಅವಕಾಶ ಪ್ರಾಪ್ತವಾಗಿರುವುದು ಇಸ್ಲಾಂ ಧರ್ಮಕ್ಕೆ ಹೊಸದೇನೂ ಅಲ್ಲ. ಯಾವುದೇ ರಾಷ್ಟ್ರದ ಹಳೆಯ ಕಾಯಿದೆಗಳನ್ನು ಗಮನಿಸಿದರೆ, ಈ ಬಗೆಯ ಅವಕಾಶಗಳು ಅಸ್ತಿತ್ವದಲ್ಲಿದ್ದದ್ದು ಕಾನೂನು ಸಂಗ್ರಹಗಳಿಂದ ತಿಳಿದುಬರುತ್ತದೆ. ಗಂಡಸಿಗೆ ಮರಣದಂಡನೆಯಂಥ ಕಠಿಣ ಶಿಕ್ಷೆಯನ್ನು ಹೆಂಗಸಿಗೆ ಸೆರೆಮನೆವಾಸದಂಥ ಸರಳ ದಂಡನೆಯನ್ನು ವಿಧಿಸಿರುವುದು ಗೊತ್ತಾಗುತ್ತದೆ. ಇದೊಂದು ಪಾಪಕಾರ್ಯ, ಅಪರಾಧ, ಇದನ್ನು ದಂಡಿಸಲೇಬೇಕು ಎಂಬುದೇ ಮುಖ್ಯವಾಗಿ ಇದರ ಹಿಂದಿರುವ ಉದ್ದೇಶವಾಗಿತ್ತು. ಹಾಗೆಯೇ ಹೆಣ್ಣಿಗೆ ಸತೀತ್ವದ ಸ್ಥಾನವನ್ನು ನಿರಾಕರಿಸಲಾಗಿತ್ತು. ಇದರಿಂದಾಗಿ ಸ್ತ್ರೀ ಸತೀತ್ವದ ಸ್ಥಾನಮಾನಗಳ ನಷ್ಟ ಏನೇ ಅಲ್ಲದೆ ಸಮಾಜದ ಎಲ್ಲ ಗೌರವಗಳಿಂದಲೂ ವಂಚಿತಳಾಗಬೇಕಿತ್ತು. ಆಸ್ತಿಯ ಮತ್ತು**

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ ೧೯೩೯, ಸಂ. ೫, ಪು.ಪು. ೧೯೦೮–೧೧೦೧.

ಪೌರತ್ವದ ಹಕ್ಕನ್ನು ಅವಳಿಂದ ಕಸಿದುಕೊಳ್ಳಲಾಗುತ್ತಿತ್ತು. ಆದರೆ ೧೮೫೦ರ ಹೊತ್ತಿಗಾಗಲೇ ಇಲ್ಲಿ ಜಾತಿ ನ್ಯೂನತೆ ನಿವಾರಣಾ ಅಧಿನಿಯಮ ೧೮೫೦ ಎಂಬ ಅಧಿನಿಯಮ ಜಾರಿಗೊಂಡಿದ್ದನ್ನು ಕಾಣಬಹುದು. ....ಈ ಅಧಿನಿಯಮ ಧರ್ಮ ಪರಿತ್ಯಾಗದ ಕಾರಣಕ್ಕಾಗಿ ಮಹಿಳೆಯಿಂದ ಕಸಿದುಕೊಳ್ಳಲಾಗಿದ್ದ ನಾಗರಿಕ ಹಕ್ಕುಗಳನ್ನು ಮರಳಿ ದೊರಕಿಸಿ ಕೊಟ್ಟಿತು. ಇನ್ನು ಮುಂದೆ ಆಕೆ ಆಸ್ತಿಯ ಹಕ್ಕಿನಿಂದ ಅಥವಾ ಪಿತ್ರಾರ್ಜಿತ ಸ್ವತ್ತಿನ ಹಕ್ಕಿನಿಂದ ಇಲ್ಲವೇ ಇತರ ಈ ಬಗೆಯ ಯಾವುದೇ ಹಕ್ಕುಗಳಿಂದ ವಂಚಿತಳಾಗಬೇಕಿಲ್ಲ. ಈಗ ಶಾಸನಸಭೆ ಅವಳ ಸಹಾಯಕ್ಕೆ ಬರುವ ಮೂಲಕ ಹೆಣ್ಣಿಗೆ ವೈಚಾರಿಕ ಸ್ವಾತಂತ್ರ್ಯವನ್ನು, ಆಕೆ ಇಷ್ಟಪಡುವ, ನಂಬಿಕೆ ಇಡುವ ಸಂದರ್ಭವನ್ನು ಒಪ್ಪಿಕೊಳ್ಳುವ ಸ್ವೇಚ್ಛೆಯನ್ನು ಒದಗಿಸಿಕೊಟ್ಟಿದೆ. ಜೊತೆಗೆ, ಇವುಗಳನ್ನು ಆಕೆಯಿಂದ ಮುಟ್ಟುಗೋಲು ಹಾಕಿಕೊಳ್ಳುವ, ಆ ಮೂಲಕ ಆಕೆಗೆ ತೊಂದರೆಯನ್ನುಂಟುಮಾಡುವ ಮತ್ತು ಆಕೆಯ ಬದಲಾದ ಧಾರ್ಮಿಕ ನಂಬಿಕೆಯನ್ನು ನಿರ್ಬಂಧಗೊಳಿಸುವ ಷರತ್ತುಗಳನ್ನು ತೆಗೆದು ಹಾಕಲಾಯಿತು. ಇದಾದನಂತರ ಆಕೆಯ ಪತ್ನಿತ್ವದ ಬಾಧ್ಯತೆಯ ಮೇಲೆ ಎಷ್ಟರಮಟ್ಟಿಗೆ ನಿರ್ಬಂಧ ಹೇರುವ ಅಧಿಕಾರ ಉಳಿದುಕೊಂಡಿದೆ ಎಂಬುದು ಪ್ರಶ್ನೆ. ಪತ್ನಿಯಾಗಿ ಹೆಣ್ಣಿಗೆ ಸಮಾಜದಲ್ಲಿ ಗಣ್ಯ ಸ್ಥಾನವಿದೆ. ಆಕೆ ಯಾವುದೋ ಕುಟುಂಬಕ್ಕೆ ಸೇರಿದವಳಾಗಿರುತ್ತಾಳೆ. ಆಕೆಗೆ ಮಕ್ಕಳಿರುತ್ತವೆ. ಹಾಗೆಯೇ ಇನ್ನಿತರ ಸಂಬಂಧಗಳೂ ಇರಬಹುದು. ಇಂಥವಳಲ್ಲಿ ವಿಶಾಲ ಮನೋಭಾವನೆ ಉಂಟಾದರೆ, ಹಳೆಯ ಧರ್ಮದಲ್ಲಿಯೇ ಮುಂದುವರಿಯಲು ಆಕೆ ಇಷ್ಟಪಡದಿರಬಹುದು. ಹೀಗಾಗಿ, ಆಕೆ ತನ್ನ ಧರ್ಮವನ್ನು ಬದಲಾಯಿಸಿದರೆ, ನಮ್ಮ ಆಧುನಿಕ ನಿಲುವಿನ ಪ್ರಕಾರ, ಅವಳಿಗೇಕೆ ತನ್ನ ಹಳೆಯ ಗಂಡನೊಡನೆ ಬದುಕುವುದು ಅನಿವಾರ್ಯ? ಎಂದು ಒತ್ತಾಯಿಸಿ ಮತ್ತಷ್ಟು ಹಿಂಸೆಗೆ ಗುರಿಪಡಿಸಬಹುದು. ವಿಚಾರ ಸ್ವಾತಂತ್ರ್ಯವನ್ನು, ಧರ್ಮ ಸ್ವಾತಂತ್ರ್ಯವನ್ನು ಹಾಗೂ ಬೇರೆ ಬೇರೆ ಸಮುದಾಯಗಳ ನಡುವೆ ನಡೆಯುವ ಅಂತರ ಜಾತೀಯ ವಿವಾಹಗಳನ್ನು ಒಪ್ಪಿ ಅವುಗಳ ಪರವಾಗಿ ವಾದಿಸುತ್ತಿರುವ ಈ ಕಾಲದಲ್ಲಿ ವಿವಾಹಿತ ಮಹಿಳೆ, ತನ್ನ ಬದಲಾದ ನಂಬಿಕೆ ಹಾಗೂ ಧರ್ಮದ ಕಾರಣಕ್ಕಾಗಿಯೇ ತನ್ನ ಹಕ್ಕುಗಳನ್ನೆಲ್ಲ ಕಳೆದುಕೊಂಡು ಒಲ್ಲದ ಪತಿಯೊಡನೆ ಬಾಳಬೇಕೆಂಬ ನಿರ್ಬಂಧಕ್ಕೆ ಬೆಂಬಲ ಸೂಚಿಸುವುದು ಇಬ್ಬಂದಿ ವಾದವಾಗುತ್ತದೆ. ಹೀಗಾಗಿ, ಆಧುನಿಕ ದೃಷ್ಟಿಕೋನದಿಂದ ವಿವೇಚಿಸುವಾಗ, ವಿವಾಹಿತ ಮಹಿಳೆ ತನ್ನ ಗಂಡನೊಡನೆ ಸಂಬಂಧ ಕಡಿದುಕೊಳ್ಳಲು ಸ್ವಧರ್ಮ ಪರಿತ್ಯಾಗ ಅಡ್ಡಿಯಾಗಬಾರದು ಎಂಬುದನ್ನು ಬೆಂಬಲಿಸಲು ನಾನು ಹಿಂಜರಿಯುವುದಿಲ್ಲ. ಆದರೆ ಇದು ವಾದದ ಒಂದು ಮುಖ ಮಾತ್ರ.

“೧೯೩೬ರ ಪಾರ್ಸಿ ವಿವಾಹ ವಿಚ್ಛೇದನ ಅಧಿನಿಯಮದ ಪರಿಚ್ಛೇದ ೩೨ರ ಪ್ರಕಾರ ವಿವಾಹಿತ ಮಹಿಳೆ ‘ಪ್ರತಿವಾದಿ ಪಾರ್ಸಿಯಾಗಿ ಉಳಿದಿಲ್ಲ’ ಎಂಬ ಆಧಾರದ ಮೇಲೆ ವಿಚ್ಛೇದನ ಕೋರಿ ದಾವಾ ಹಾಕಬಹುದು...”

“ಇದರಿಂದ ಎರಡು ವಿಷಯಗಳು ಸ್ಪಷ್ಟವಾಗುತ್ತವೆ. ಮೊದಲನೆಯದಾಗಿ ವಿಘಟನೆಗೆ (ರದ್ಧತಿ) ಇದೊಂದು ಆಧಾರ. ಅಲ್ಲದೆ, ಇದು ಯಾವುದೇ ಧಾರ್ಮಿಕ ಆದರ್ಶ ಅಥವಾ ಧಾರ್ಮಿಕ ಭಾವಾತಿರೇಕ ಮೂಲದ್ದಲ್ಲ. ಏಕೆಂದರೆ ಮತಾಂತರಗೊಂಡ ನಂತರ ಫಿರ್ಯಾದಿಯ ಯಾವುದೇ ತಕರಾರಿಲ್ಲದೆ ಎರಡು ವರ್ಷಗಳನ್ನು ಕಳೆದರೆ ಗಂಡಿಗಾಗಲಿ ಅಥವಾ ಹೆಣ್ಣಿಗಾಗಲೀ ವಿವಾಹ ವಿಚ್ಛೇದನಕ್ಕಾಗಿ ದಾವಾ ಹೂಡುವ ಹಕ್ಕು ಉಳಿಯುವುದಿಲ್ಲ. ಎರಡನೆಯದಾಗಿ, ವಿವಾಹ ರದ್ಧತಿಯ ಹಕ್ಕನ್ನು ಹೊಂದಿರುವ ವಾದಿಯೇ, ಪ್ರತಿವಾದಿ ಮತಾಂತರಗೊಂಡಿರುವುದರ ವಿರುದ್ಧ ದೂರು ನೀಡುತ್ತಿರುವುದು... ಈ ಅಧಿನಿಯಮದ ಜೊತೆಗೆ ಇತರ ಸಮುದಾಯಗಳಿಗೆ ಸಂಬಂಧಿಸಿದಂತೆ, ಈ ಮತಾಂತರ ದೇಶೀಯ ಮತಾಂತರಗಳ ವಿವಾಹ ಬಂಧನದ ಮೇಲೆ ಯಾವ ಪ್ರಭಾವ ಬೀರಿದೆ ಎಂಬುದನ್ನು, ವಿವಾಹ ರದ್ಧತಿಯ ಅಧಿನಿಯಮ,

೧೮೮೬ರ ಅಧಿನಿಯಮ ೨೧ರಿಂದ ತಿಳಿದುಕೊಳ್ಳಬಹುದು. ಇದು ಭಾರತದ ಎಲ್ಲ ಸಮುದಾಯಗಳಿಗೂ ಅನ್ವಯಿಸುತ್ತದೆ ಮತ್ತು ಈ ಶಾಸನ, ಒಬ್ಬ ಹಿಂದೂ, ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡರೆ ಆತನ ವಿವಾಹವನ್ನು ರದ್ದುಪಡಿಸುವುದಿಲ್ಲ. ಬದಲಾಗಿ ಆತನಿಗೆ ಮತಾಂತರಗೊಂಡಿರದ ಪ್ರತಿವಾದಿ ತನ್ನ ವೈವಾಹಿತ ಜವಾಬ್ದಾರಿಗಳನ್ನು ಸರಿಯಾಗಿ ನಿರ್ವಹಿಸಿಲ್ಲ ಎಂದು ಹೇಳಲು ಕಾನೂನಿನ ಕಟ್ಟೆ ಹತ್ತುವ ಹಕ್ಕಿದೆ... ಎಂಬ ಸತ್ಯವನ್ನು ಎತ್ತಿ ಹಿಡಿದಿದೆ... ದಂಪತಿಗಳಿಗೆ ಒಂದು ವರ್ಷದಷ್ಟು ಕಾಲಾವಕಾಶ ಕೊಟ್ಟು ಅನಂತರ ಅವರಿಬ್ಬರೂ ಇತರರ ಎದುರಿನಲ್ಲಿ ಭೇಟಿಯಾಗಿ ಪರಸ್ಪರ ಮಾತಾಡಿಕೊಳ್ಳಬೇಕು ಮತ್ತು ಇವರು ಮತ್ತೆ ಪರಸ್ಪರ ದೈಹಿಕ ಸಂಬಂಧವನ್ನು ಹೊಂದುವಂತೆ ಇವರನ್ನು ಇತರರು ಪ್ರಚೋದಿಸಬೇಕು. ಇದಕ್ಕೆ ಇವರಿಬ್ಬರೂ ಸಮ್ಮತಿಸದಿದ್ದರೆ, ಇದರ ಆಧಾರದ ಮೇಲೆ ಇವರ ವಿವಾಹವನ್ನು ರದ್ದುಪಡಿಸ ಬೇಕೆಂದು ನ್ಯಾಯಾಧೀಶರು ನಿರ್ದೇಶನ ಮಾಡಿದ್ದರು. ವಿವಾಹ ಹೀಗೆ ರದ್ದಾಗುತ್ತದೆ ನಿಜ. ಆದರೆ ನಂಬಿಕೆ ಬದಲಾವಣೆಯ ಆಧಾರದ ಮೇಲಲ್ಲ... ಆದ್ದರಿಂದ ಪರಧರ್ಮ ಸ್ವೀಕಾರ ವಿವಾಹ ರದ್ದತಿಗೆ ದಾರಿ ಮಾಡಿಕೊಡಬಾರದು' ಎಂಬುದು ಭಾರತದಲ್ಲಿ ಪ್ರತಿಯೊಂದು ಸಮುದಾಯಕ್ಕೆ ಒಪ್ಪಿಗೆಯಾದ ತತ್ವ.''

ಸೈಯ್ಯದ್ ಗುಲಾಮ್ ಬಿಖ್‌ನಯ್‌ರಂಗ್, ವಿಧಾನಸಭೆಯ ಇನ್ನೊಬ್ಬ ಮುಸ್ಲಿಂ ಸದಸ್ಯ. ಈತ ಈ ಮಸೂದೆಯ ಅಗ್ರೇಸರ ಮತ್ತು ನಿಪುಣ ಯಥಾರ್ಥವಾದಿ. ಮಸೂದೆಯ ತತ್ವದ ಪರವಾಗಿ ಈತ ಹೀಗೆ ಹೇಳಿದ್ದಾನೆ:*

''ಮತಾಂತರ ತನ್ನಿಂದ ತಾನೇ ಯಾವುದೇ ವಿಳಂಬವಿಲ್ಲದೆ, ನ್ಯಾಯಾಂಗ ನಡೆವಳಿಯ ಯಾವುದೇ ಆದೇಶವಿಲ್ಲದೆ, ನ್ಯಾಯಾಲಯದ ಯಾವುದೇ ಕಟ್ಟಳೆ ಇಲ್ಲದೆ, ಅಥವಾ ಬೇರಾವುದೇ ವಿಹಿತ ಕ್ರಮವನ್ನು ಲೆಕ್ಕಿಸದೆ, ಯಾವುದೇ ಪರಿಸ್ಥಿತಿಯಲ್ಲಿ ವಿವಾಹ ಸಂಬಂಧವನ್ನು ಕೊನೆಗೊಳಿಸುತ್ತದೆ ಎಂಬುದನ್ನು ಯಾವುದೇ ಪರಿಮಿತಿ ಮತ್ತು ಮೀಸಲಾತಿ ಇಲ್ಲದೆ ದೀರ್ಘಕಾಲದವರೆಗೆ ಭಾರತದ ಬ್ರಿಟಿಷ್ ನ್ಯಾಯಾಲಯಗಳು ಎತ್ತಿ ಹಿಡಿದಿವೆ. ನ್ಯಾಯಾಲಯಗಳು ಪರಿಗಣಿಸಿದ ನಿಲುವು ಇದು. ಈಗ ಈ ನಿಟ್ಟಿನಲ್ಲಿ ಹನಾಫಿ ನ್ಯಾಯದರ್ಶಿಗಳ ಮೂರು ವಿಭಿನ್ನ ದೃಷ್ಟಿಕೋನಗಳಿವೆ. ಅವುಗಳಲ್ಲಿ ಒಂದು ಬೊಖರ ನ್ಯಾಯದರ್ಶಿಗಳಿಗೆ ಸಂಬಂಧಿಸಿ ಸ್ವೀಕರಿಸಲಾದ ದೃಷ್ಟಿಕೋನ. ಇದು ಕೂಡ ಸಮಗ್ರವಾದುದಲ್ಲ. ಬದಲಾಗಿ ಊನಗೊಂಡ ದುಃಸ್ಥಿತಿಯಲ್ಲಿದೆ. ಬೊಖರ ದೃಷ್ಟಿಕೋನ ಏನು ಎಂಬುದನ್ನು ಕಜ್ಮಿ ಮತ್ತು ಇತರ ಭಾಷಣಕಾರರು ಈಗಾಗಲೇ ಹೇಳಿದ್ದಾರೆ. ಮತಭ್ರಷ್ಟತೆಯಿಂದ ಮದುವೆ ಮುರಿದುಹೋಗುತ್ತದೆ ಎಂಬುದು ಬೊಖರ ನ್ಯಾಯದರ್ಶಿಗಳ ಅಭಿಮತ. ವಾಸ್ತವವಾಗಿ ನಾನು ಇನ್ನೂ ಹೆಚ್ಚು ನಿಖರವಾಗಿ ಹೇಳಬೇಕಾಗುತ್ತದೆ. ಏಕೆಂದರೆ, ಹಾಗೆ ಹೇಳಲು ನನಗೆ ಅಧಿಕಾರವಿದೆ. ಅದೆಂದರೆ, ಬೊಖರ ದೃಷ್ಟಿಕೋನದಿಂದ ಮದುವೆ ಮುರಿದು ಹೋಗುವುದಿಲ್ಲ, ಅಮಾನತ್ತಿಗೊಳಗಾಗುತ್ತದೆ. ವಿವಾಹ ತಾತ್ಕಾಲಿಕವಾಗಿ ರದ್ದಾಗುತ್ತದೆ. ಆದರೆ ಹೆಣ್ಣು ಪಶ್ಚಾತ್ತಾಪಪಟ್ಟು ಪುನಃ ಇಸ್ಲಾಂ ಧರ್ಮವನ್ನು ಸ್ವೀಕರಿಸುವವರೆಗೆ ಪತ್ನಿಯನ್ನು ಬಂಧನ ಅಥವಾ ಸೆರೆಯಲ್ಲಿಡಲಾಗುವುದು, ಆಮೇಲೆ ಮತ್ತೆ ಅವಳನ್ನು ತನ್ನ ಗಂಡನನ್ನೇ ಮದುವೆಯಾಗುವಂತೆ ಒಲೈಸಲಾಗುವುದು. ಏಕೆಂದರೆ, ಅವರ ವಿವಾಹ ಕೇವಲ ಅಮಾನತ್ತಿಗೊಳಗಾಗಿರುತ್ತದೆಯೇ ಹೊರತು

* ೧೯೩೮, ಸಂ. ೫, ಪು.ಪು. ೧೯೫೩–೫೫, ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್.

**ಸಂಪೂರ್ಣವಾಗಿ ರದ್ದಾಗಿರುವುದಿಲ್ಲ. ಎರಡನೆಯ ದೃಷ್ಟಿಕೋನದ ಪ್ರಕಾರ ಧರ್ಮಭ್ರಷ್ಟಳಾದ ವಿವಾಹಿತ ಮುಸ್ಲಿಂ ಮಹಿಳೆ ತನ್ನ ಗಂಡನಿಗೆ ಪತ್ನಿಯಾಗುಳಿಯಲು ಸಾಧ್ಯವಿಲ್ಲ. ಆದರೆ ಆತನ ಒಡಂಬಡಿಕೆಯ ಹೆಣ್ಣಾಗುತ್ತಾಳೆ. ಇದಕ್ಕೆ ಪೂರಕವಾದ ಇನ್ನೊಂದು ದೃಷ್ಟಿಕೋನದ ಪ್ರಕಾರ ಹೆಣ್ಣು ತನ್ನ ಮಾಜಿ ಗಂಡನಿಗೆ ಮಾತ್ರವಲ್ಲ, ಇಡೀ ಮುಸ್ಲಿಂ ಸಮುದಾಯಕ್ಕೇ ಇಟ್ಟುಕೊಂಡವಳಾಗುತ್ತಾಳೆ ಮತ್ತು ಯಾರು ಬೇಕಾದರೂ ಈಕೆಯನ್ನು ಒಡಂಬಡಿಕೆಯ ಹೆಣ್ಣಾಗಿ ಅನುಭವಿಸಬಹುದು. ಸಮರ್ ಖಂಡದ ಉಲೇಮ ಮತ್ತು ಬಲ್ಖ್ ಅವರದೇ ಮೂರನೆಯ ದೃಷ್ಟಿಕೋನ. ಇವರ ಪ್ರಕಾರ ಧರ್ಮ ಭ್ರಷ್ಟತೆಗೂ ವಿವಾಹಕ್ಕೂ ಯಾವುದೇ ಸಂಬಂಧವಿಲ್ಲ. ಹಾಗೂ ಮಹಿಳೆ ಎಂದಿನಂತೆ ತನ್ನ ಗಂಡನಿಗೆ ಪತ್ನಿಯಾಗಿ ಮುಂದುವರಿಯುತ್ತಾಳೆ– ಇವೇ ಆ ಮೂರು ದೃಷ್ಟಿಕೋನಗಳು– ನ್ಯಾಯಾಲಯಗಳು ಮೊದಲನೆಯ ಬೊಖರಾ ದೃಷ್ಟಿಕೋನದ ಒಂದು ಭಾಗವನ್ನಷ್ಟೇ ಪರಿಗಣಿಸಿ ಅದರ ಆಧಾರದ ಮೇಲೆ ಒಂದರ ಮೇಲೊಂದರಂತೆ ತೀರ್ಪುಗಳನ್ನು ಕೊಡುತ್ತ ಬಂದಿವೆ.**

**ಶಾಸನದ ಮೂಲಕ ನ್ಯಾಯ ದೋಷವನ್ನು ಸರಿಪಡಿಸಲು ನಡೆಸಿದ ಯತ್ನಕ್ಕೆ ಇದೊಂದೇ ಏಕಮೇವ ನಿದರ್ಶನವಲ್ಲ. ಇಂಥ ಇನ್ನೂ ಅನೇಕ ಮೊಕದ್ದಮೆಗಳಲ್ಲಿ ನ್ಯಾಯಲೋಪಗಳು ಅಥವಾ ನ್ಯಾಯಾಭಿಪ್ರಾಯ ಸಂಘರ್ಷಗಳು ಅಥವಾ ಕಾನೂನಿನ ಅಸ್ಪಷ್ಟತೆ ಹಾಗೂ ಸಂದಿಗ್ಧತೆಗಳು ತಲೆದೋರಿವೆ. ಇದು ಶಾಸನಸಭೆಗೆ ಚೆನ್ನಾಗಿ ಗೊತ್ತಿದೆ. ನ್ಯಾಯಸ್ಥಾನದ ದೃಷ್ಟಿಯಿಂದಾದ ದೋಷಗಳನ್ನು ಶಾಸನದಿಂದ ತಿದ್ದುವುದು ನಿರಂತರವಾಗಿ ನಡೆದೇ ಇದೆ. ಆದರೆ, ಈ ವಿಶಿಷ್ಟವಾದ ವಿಷಯದಲ್ಲಿ ತಪ್ಪುಗಳ ಪರಂಪರೆಯೇ ಸೃಷ್ಟಿಸಲ್ಪಟ್ಟು ದೋಷ ದುರಂತವೇ ನಡೆದುಹೋಗಿದೆ. ಆ ನಿಯಮಗಳನ್ನು ಪರಾಮರ್ಶಿಸಲು ಅನುವು ಮಾಡಿಕೊಡಿ ಎಂಬುದೇ ನನ್ನ ಕೋರಿಕೆ. ನನ್ನ ಚರ್ಚಿತ ಮಸೂದೆಗೆ ಅದು ಉತ್ತರವಲ್ಲ ಎಂಬುದನ್ನು ನಿಜವಾಗಿ ತೋರ್ಪಡಿಸಬೇಕಿದೆ. ಏಕೆಂದರೆ ಶ್ರೇಷ್ಠ ನ್ಯಾಯಾಲಯಗಳು ನನ್ನ ವಿರುದ್ಧ ತೀರ್ಮಾನ ತೆಗೆದುಕೊಂಡಿವೆ. ಹೀಗಾಗಿ ನಾನು ಈ ಸಭೆಗೆ ಬಂದು ಯಾವುದಾದರೂ ಒಂದು ಕಡೆಗೆ ತೀರ್ಮಾನ ತೆಗೆದುಕೊಳ್ಳಿ ಎಂದು ಕೇಳುವ ಪ್ರಮೇಯವೇ ಇಲ್ಲ.''**

ಸೂಚಿತ ಬದಲಾವಣೆಯ ಬಗೆಗೆ ಗೌರವವಿಟ್ಟುಕೊಂಡೂ, ಇದರ ಪರವಾಗಿ ನಡೆದ ವಾದಗಳು ಅಷ್ಟೇನೂ ಸತ್ಯಯುತವಾಗಿರಲಿಲ್ಲ. ಪಾರ್ಸಿಗಳ, ಕ್ರಿಶ್ಚಿಯನ್ನರ ಮತ್ತು ಮುಸ್ಲಿಮರ ನಡುವೆ ವಿವಾಹ ವಿಚ್ಛೇದನ ಕಾನೂನಿಗೆ ಸಂಬಂಧಪಟ್ಟಂತೆ ಏನಾದರೂ ಯಥಾರ್ಥವಾದುದೆಂದು ಒಮ್ಮೆ ಸ್ಥಾಪಿತವಾದರೆ, ಮುಸ್ಲಿಂ ಕಾಯಿದೆ, ಪಾರ್ಸಿಗಳ ಮತ್ತು ಕ್ರಿಶ್ಚಿಯನ್ನರ ಕಾಯಿದೆಗಳಿಗಿಂತ ಮುಂದುವರಿದದ್ದು ಎಂದಾದರೆ, ಮುಸ್ಲಿಂ ಕಾಯಿದೆಯನ್ನು ವ್ಯತ್ಯಸ್ತಗೊಳಿಸುವುದರ ಬದಲು, ಪಾರ್ಸಿಗಳು ಮತ್ತು ಕ್ರಿಶ್ಚಿಯನ್ನರ ಕಾಯಿದೆಗಳನ್ನು ಪ್ರಗತಿಯತ್ತ ಕೊಂಡೊಯ್ಯುವುದೇ ಸರಿಯಾದ ಮಾರ್ಗ. ಮುಸ್ಲಿಂ ನ್ಯಾಯದರ್ಶಿಗಳಲ್ಲಿಯೇ ಈ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ವೈಚಾರಿಕ ಪಂಥಗಳಿದ್ದರೆ, ನ್ಯಾಯಾಧೀಶನಾದವನು ಮುಸ್ಲಿಂ ಮಹಿಳೆಗೆ ಸ್ವಾಯತ್ತತೆಯನ್ನು ಕೊಡುವಂಥ, ಪ್ರಗತಿಪರ ಬೆಳಕನ್ನು ಚೆಲ್ಲುವ ದೃಷ್ಟಿಕೋನದ ಪಂಥಾಭಿಪ್ರಾಯವನ್ನು ಎತ್ತಿ ಹಿಡಿಯಬೇಕೇ ವಿನಃ, ಇದನ್ನು ತಿರಸ್ಕರಿಸಿ ಆಕೆಯನ್ನು ಒಡಂಬಡಿಕೆಯ ಹೆಣ್ಣಾಗಿ ಮಾಡುವ ಅಮಾನವೀಯ ದೃಷ್ಟಿಕೋನದ ಪಂಥಾಭಿಪ್ರಾಯಗಳನ್ನಲ್ಲ ಎಂದು ನೈರಾಂಗ್ ವಾದ ಮಾಡುತ್ತಾರೆ.

ಇದು ಹಾಗಿರಲಿ, ಈ ಕಾನೂನಿನ ವಾದವಿವಾದಗಳಿಂದ ಬದಲಾವಣೆಯ ಹಿಂದಿರುವ ಮೂಲೋದ್ದೇಶಕ್ಕೆ ಏನೂ ಬಾಧಕವಿಲ್ಲ. ಮಹಿಳೆ ನ್ಯಾಯಬಾಹಿರವಾಗಿ ಅನ್ಯಧರ್ಮಕ್ಕೆ ಮತಾಂತರಗೊಳ್ಳುವುದನ್ನು ತಡೆಗಟ್ಟುವುದೇ

ಮೂಲೋದ್ದೇಶ. ಏಕೆಂದರೆ ಮತಾಂತರಗೊಂಡ ಮಹಿಳೆ ಹಿಂದಿರುಗಿ ತನ್ನ ಮೂಲ ಸಮುದಾಯಕ್ಕೆ ಹೋಗದ ಹಾಗೆ ಹೊಸ ಸಮುದಾಯದಲ್ಲಿ ಅವಳನ್ನು ಕಟ್ಟಿಹಾಕುವ ದೃಷ್ಟಿಯಿಂದ, ಎಷ್ಟು ಬೇಗ ಸಾಧ್ಯವಾದರೆ, ಅಷ್ಟು ಬೇಗ ತರಾತುರಿಯಲ್ಲಿ ಆಕೆಯನ್ನು ಅವಳು ಸೇರಬಯಸುವ ಧರ್ಮಕ್ಕೆ ಸೇರಿದ ವ್ಯಕ್ತಿಯೊಡನೆ ವಿವಾಹ ಮಾಡಲಾಗುವುದು. ಮುಸ್ಲಿಂ ಮಹಿಳೆ ಹಿಂದೂ ಧರ್ಮಕ್ಕೂ ಮತ್ತು ಹಿಂದೂ ಸ್ತ್ರೀ ಇಸ್ಲಾಂ ಧರ್ಮಕ್ಕೂ ಮತಾಂತರಗೊಳ್ಳುವುದನ್ನು ಕೇವಲ ಸಾಮಾಜಿಕ ಹಾಗೂ ರಾಜಕೀಯ ದೃಷ್ಟಿಯಿಂದ ನೋಡುವುದಿಲ್ಲ. ಇದರ ಹಿಂದೆ ಅಪಾಯಕಾರಿಯಾದ ಭೀಕರ ದುಷ್ಪರಿಣಾಮಗಳಿವೆ. ಅರ್ಥಾತ್ ಈ ಎರಡು ಸಮುದಾಯದ ಜನಸಂಖ್ಯಾ ಸ್ಥಿಮಿತತೆಯಲ್ಲಿ ಅರಾಜಕತೆಯುಂಟಾಗುತ್ತದೆ. ಈ ಕ್ಷೋಭೆ ಒಂದು ಹೆಣ್ಣಿನ ಅಪಹರಣಕ್ಕೆ ಸಂಬಂಧಿಸಿ ಉಂಟಾಗಿರುವುದರಿಂದ ಇವನ್ನು ಕಡೆಗಣಿಸಲು ಬರುವುದಿಲ್ಲ. ಹೆಣ್ಣು ಏಕಕಾಲದಲ್ಲಿ ರಾಷ್ಟ್ರೀಯತೆಯ ಜನ್ಮಭೂಮಿ ಹಾಗೂ ಸಂರಕ್ಷಕಳಾಗಿದ್ದಾಳೆ. ಗಂಡು ಎಂದೂ ಈ ಮಟ್ಟಕ್ಕೆ ಏರಲಾರ.* ಈ ಕಾರಣದಿಂದ ಸ್ತ್ರೀಯರ ಮತ ಪರಿವರ್ತನೆ ಮತ್ತು ತರುವಾಯದ ಅವರ ವಿವಾಹಗಳನ್ನು ಸರಿಯಾಗಿಯೇ ಗೌರವಿಸಲಾಗಿದೆ. ತಮ್ಮ ಸಂಖ್ಯಾಬಲಕ್ಕೆ ಸಂಬಂಧಿಸಿದಂತೆ ಬದಲಾವಣೆಯನ್ನು ತರುವ ದೃಷ್ಟಿಯಿಂದ ಮುಸ್ಲಿಮರ ವಿರುದ್ಧ ಹಿಂದೂಗಳು ಮತ್ತು ಹಿಂದೂಗಳ ವಿರುದ್ಧ ಮುಸ್ಲಿಮರು ಸತತವಾಗಿ ಲೂಟಿ ಮಾಡುತ್ತಲೇ ಬಂದಿದ್ದಾರೆ. ಸ್ತ್ರೀ ಅಪಹರಣದಂಥ ಈ ಹೇಯವಾದ ಆಚರಣೆ ದನಗಳ್ಳತನದಷ್ಟು ಸರ್ವೇ ಸಾಮಾನ್ಯವಾಗಿ ಜರುಗುತ್ತಿದ್ದು, ಮತೀಯ ಸೌಹಾರ್ದಕ್ಕೆ ಮಾರಕವಾಗಿರುವುದರಿಂದ ಇದನ್ನು ತಡೆಯಲು ಸೂಕ್ತ ಪ್ರಯತ್ನಗಳನ್ನು ಮಾಡುವುದು ಅಗತ್ಯ. ಇದೇ ಈ ಶಾಸನದ ಹಿಂದಿರುವ ನಿಜವಾದ ಕಾರಣ. ಅಧಿನಿಯಮದ ನಾಲ್ಕನೇ ಪರಿಚ್ಛೇದದ ಎರಡು ಷರತ್ತುಗಳು ಇದಕ್ಕೆ ಪುರಾವೆಯಾಗಿವೆ. ಮೊದಲನೆಯ ಪರಿಷತ್ತಿನ ಪ್ರಕಾರ, ಮೂಲತಃ ಮುಸ್ಲಿಂ ಧರ್ಮೀಯಳಾದ ಹೆಣ್ಣನ್ನು ಹಿಂದೂಗಳು ಮತಾಂತರಗೊಳಿಸಿದರೆ, ಆಕೆ ಮತಾಂತರದ ಕಟ್ಟುಪಾಡುಗಳಿಗೆ ಒಳಗಾಗದೆ ತನ್ನ ಮಾಜಿ ಪತಿಗೇ ಬದ್ಧಳಾಗಿ ಉಳಿಯುವಂತೆ ಹಿಂದೂಗಳು ಆಕೆಯನ್ನು ಮುಸ್ಲಿಮರಿಗೆ ಬಿಟ್ಟುಕೊಡಬೇಕು. ಹಾಗೆಯೇ ಎರಡನೆಯ ಷರತ್ತಿನ ಪ್ರಕಾರ ಮುಸ್ಲಿಮರು ವಿವಾಹಿತ ಹಿಂದೂ ಸ್ತ್ರೀಯನ್ನು ಮತಾಂತರಗೊಳಿಸಿ, ಆಕೆ ಒಬ್ಬ ಮುಸಲ್ಮಾನನ್ನು ವಿವಾಹವಾದರೆ ಅಂಥ ವಿವಾಹವನ್ನು ರದ್ದುಗೊಳಿಸುವುದೇ ಅಲ್ಲದೆ, ಆಕೆ ಇಸ್ಲಾಂ ಧರ್ಮವನ್ನು ನಿರಾಕರಿಸಿದರೆ, ತನ್ನ ಮೂಲ ಹಿಂದೂ ಧರ್ಮಕ್ಕೆ ವಾಪಸ್ಸಾಗಲು ಮುಸಲ್ಮಾನರು ಆಕೆಯನ್ನು ಹಿಂದೂಗಳಿಗೆ ಬಿಟ್ಟುಕೊಡಬೇಕು. ಸಂಖ್ಯಾ ಸಮತೋಲನವನ್ನು ಕಾಯ್ದುಕೊಳ್ಳುವುದೇ ಕಾನೂನಿನಲ್ಲಾದ ಈ ಬದಲಾವಣೆಯ ಹಿಂದಿರುವ ಅಪೇಕ್ಷೆ. ಆದರೆ ಈ ಉದ್ದೇಶಕ್ಕಾಗಿ ಸ್ತ್ರೀಯ ಹಕ್ಕನ್ನು ಕಸಿದುಕೊಳ್ಳಲಾಯಿತು.

ಮುಜುಗರವನ್ನುಂಟುಮಾಡುವಂಥ ಇನ್ನೂ ಎರಡು ಅಂಶಗಳಿವೆ. ಇವುಗಳನ್ನು ಯಾರೂ ಅಷ್ಟಾಗಿ ಪರಿಗಣಿಸಿಲ್ಲ.

ತಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಒಬ್ಬರು ತರುವ ಯಾವುದೇ ಸುಧಾರಣೆಗಳನ್ನು ಇನ್ನೊಬ್ಬ ಅಸೂಯೆಯಿಂದ ಕಾಣುವುದು, ಇಂಥ ಒಂದು ಮುಜುಗರದ ಸಂಗತಿ. ಈ ಬದಲಾವಣೆಯ ಪ್ರಭಾವದಿಂದ ಪ್ರತಿಭಟನೆಯ ಸಾಮರ್ಥ್ಯ ವೃದ್ಧಿಯಾದರಂತೂ ಇದು ಅದರಲ್ಲಿ ವೈರತ್ವವನ್ನೇ ಸೃಜಿಸುತ್ತದೆ.

---

* ರಾಷ್ಟ್ರೀಯತಾವಾದದ ವಿಷಯದಲ್ಲಿ ಮಹಿಳೆಯ ಪಾತ್ರವನ್ನು ಸಾಕಷ್ಟು ಪರಿಗಣಿಸಲಾಗಿಲ್ಲ. ಈ ನಿಟ್ಟಿನಲ್ಲಿ ರೆನಾನ್ ಅವರ ಅವಲೋಕನವನ್ನು 'ಎಸ್ಸೇನ್ಸ್ ಆಫ್ ನ್ಯಾಷನ್ಯಾಲಿಟಿ' ಕೃತಿಯಲ್ಲಿ ಗಮನಿಸಿ.

ಈ ನಡೆವಳಿಕೆಯನ್ನು ಚನ್ನಾಗಿ ಪರಿಚಯಿಸುವ ಒಂದು ಕೌತುಕ ಘಟನೆಯನ್ನು ಸ್ವಾಮಿ ಶ್ರದ್ಧಾನಂದ ಅವರು, ತಮ್ಮ ಸಂಗ್ರಹ ಕೃತಿ 'ಲಿಬರೇಟರ್'*ನಲ್ಲಿ ಹೀಗೆ ಪ್ರಸ್ತಾಪಿಸಿದ್ದಾರೆ:

**" 'ರಾಷ್ಟ್ರೀಯ' ಎಂಬ ಶೀರ್ಷಿಕೆಯನ್ನು ಮೊದಲ ಹಾಗೂ ಕಡೆಯ ಬಾರಿಗೆ ಕೊಡಲಾದ ಸಾಮಾಜಿಕ ಸಮಾಲೋಚನೆಗೆ ಮಾರ್ಗದರ್ಶಕರಾಗಿ ಮಿ.ರಾನಡೆ ಇದ್ದರು. ಪ್ರಾರಂಭದಿಂದಲೂ ಇದು ಜೀವನದ ಎಲ್ಲ ರಂಗಗಳಲ್ಲೂ ಒಂದು ಹಿಂದೂ ಸಮಾಲೋಚನೆಯಾಗಿತ್ತು. ಈ ರಾಷ್ಟ್ರೀಯ ಸಾಮಾಜಿಕ ಸಮಾಲೋಚನೆಗೆ ಸೇರಿದ ಒಬ್ಬನೇ ಒಬ್ಬ ಮಹಮದೀಯ ಪ್ರತಿನಿಧಿ ಎಂದರೆ, ಬರೇಲಿಯ ಮುಫ್ತಿ ಸಾಹೇಬ್. ಸರಿ! ಒಬ್ಬ ಹಿಂದೂ ಪ್ರತಿನಿಧಿ ಹಾಗೂ ನನ್ನಿಂದ ಬಾಲ್ಯವಿಧವಾ ಪುನರ್ವಿವಾಹವನ್ನು ಬೆಂಬಲಿಸಿ ಒಂದು ನಿರ್ಣಯ ಮಂಡಿತವಾಗುವುದರೊಂದಿಗೆ ಈ ಸಮಾಲೋಚನೆ ಪ್ರಾರಂಭವಾಯಿತು. ಸನಾತನ ಪಂಡಿತರು ಇದನ್ನು ವಿರೋಧಿಸಿದರು. ಆಗ ಮುಫ್ತಿ ಮಾತನಾಡಲು ಅನುಮತಿ ಕೋರಿದರು. ದಿವಂಗತ ಬೈಜನಾಥ್ ಅವರು ನಿರ್ಣಯ ಹಿಂದೂಗಳಿಗೆ ಸಂಬಂಧಿಸಿದ್ದು ಮಾತ್ರವಾಗಿರುವುದರಿಂದ ಮುಫ್ತಿ ಸಾಹೇಬ್ ಮಾತನಾಡುವ ಅಗತ್ಯವಿಲ್ಲವೆಂದು ಹೇಳಿದರು. ಇದರಿಂದ ಮುಫ್ತಿ ಉರಿದು ಬಿದ್ದರು.**

**ತಪ್ಪಿಸಿಕೊಳ್ಳುವ ಯಾವುದೇ ಉಪಾಯ ಅಧ್ಯಕ್ಷರಿಗೆ ಹೊಳೆಯಲಿಲ್ಲ. ಹೀಗಾಗಿ ಮುಫ್ತಿ ಸಾಹೇಬರಿಗೆ ಮಾತನಾಡಲು ಅನುಮತಿಸಲಾಯಿತು. ಪುನರ್ವಿವಾಹಕ್ಕೆ ಹಿಂದೂ ಶಾಸ್ತ್ರಗಳಲ್ಲಿ ಅವಕಾಶವಿಲ್ಲದಿರುವುದರಿಂದ, ಇದಕ್ಕಾಗಿ ಒತ್ತಾಯಿಸುವುದು ಮಹಾ ಪಾಪಕರ ಎಂಬುದು ಮುಫ್ತಿ ಸಾಹೇಬರ ವಾದ. ಹಾಗೆಯೇ, ಕ್ರಿಶ್ಚಿಯನ್ನರು ಮತ್ತು ಮುಸ್ಲಿಮರ ಪುನರ್ ಮತಾಂತರದ ಬಗೆಗಿನ ನಿರ್ಣಯ ಪ್ರಸ್ತಾಪಕ್ಕೆ ಬಂದಾಗಲೂ ಮುಫ್ತಿ ಸಾಹೇಬರು, ಒಮ್ಮೆ ಹಿಂದೂ ಧರ್ಮವನ್ನು ಪೂಜಿಸಿದ ವ್ಯಕ್ತಿಯನ್ನು ಮತ್ತೆ ಸೇರಿಸಿಕೊಳ್ಳಲು ಅನುಮತಿಸುವುದು ಸಲ್ಲ ಎಂದೇ ವಾದಿಸಿದರು."**

ಇನ್ನೊಂದು ನಿದರ್ಶನ, ಅಸ್ಪೃಶ್ಯರ ಸಮಸ್ಯೆ ಬಗೆಗೆ ಮುಸ್ಲಿಮರ ವರ್ತನೆ. ದಲಿತರನ್ನು ಮುಸ್ಲಿಮರು ಯಾವಾಗಲೂ ಗುಮಾನಿಯ ಕಣ್ಣಿನಿಂದಲೇ ನೋಡುತ್ತ ಬಂದಿದ್ದಾರೆ. ಏಕೆಂದರೆ, ಹಿಂದೂ ಮತ್ತು ಮುಸ್ಲಿಮರ ನಡುವೆ ಅಸೂಯಾ ಪ್ರವೃತ್ತಿ ಬೆಳೆಯುವಲ್ಲಿ ಇವರದ್ದೂ ಕಾಣಿಕೆ ಇದೆ. ಹಿಂದೂಗಳು ದಲಿತ ವರ್ಗದವರೊಡನೆ ಹೊಂದಿಕೊಂಡದ್ದೇ ಆದರೆ, ಅವರ ಬಲ ಸಂವರ್ಧನೆಯಾಗುತ್ತದೆ ಎಂಬ ಭಯ ಮುಸ್ಲಿಮರಿಗೆ ಇದ್ದೇ ಇದೆ. ೧೯೦೯ರಲ್ಲಿ ಮುಸ್ಲಿಮರು, ಜನಗಣತಿಯಲ್ಲಿ ದಲಿತರನ್ನು ಹಿಂದೂಗಳೆಂದು ನಮೂದಿಸಬಾರದು ಎಂಬ ಸೂಚನೆಯನ್ನು ಕೊಡುವಂಥ ದುಸ್ಸಾಹಸಕ್ಕೆ ಕೈಹಾಕಿದರು. ಮಹಮದ್ ಆಲಿ ೧೯೨೩ರಲ್ಲಿ ಕಾಂಗ್ರೆಸ್ ಅಧ್ಯಕ್ಷ ಸ್ಥಾನದಿಂದ ಭಾಷಣ ಮಾಡುತ್ತ, ೧೯೦೯ರಲ್ಲಿ ಮುಸ್ಲಿಮರು ತಳೆದ ನಿಲುವಿಗಿಂತಲೂ ಬಹಳ ಮುಂದೆ ಹೋಗಿ ಹೀಗೆ ಮಾತನ್ನಾಡಿದ್ದಾರೆ:

**"ಆಲಮ್ಸ್ ಮತ್ತು ಅರಳೀಮರ ಹಾಗೂ ವಾದ್ಯ ಮೆರವಣಿಗೆಗಳ ಬಗೆಗೆ ನಡೆವ ಕಿತ್ತಾಟಗಳು ನಿಜಕ್ಕೂ**

---

* ೨೬ನೇ ಏಪ್ರಿಲ್ ೧೯೨೬.

**ಬಾಲಿಶವಾದವು; ಮತೀಯ ಚಟುವಟಿಕೆಗಳು ಅನ್ಯೋನ್ಯತೆಯಿಂದ ಹೊಂದಿಕೊಳ್ಳದಿದ್ದರೆ, ಈ ಅಸ್ನೇಹ ನಡೆವಳಿಕೆ ಆರೋಪದ ಪ್ರಶ್ನೆ ಎತ್ತಲು ಸುಲಭವಾಗಿ ದಾರಿ ಮಾಡಿಕೊಡುತ್ತದೆ. ಒಂದು ವೇಳೆ ಹಿಂದೂ ಸಮಾಜ ಈ ದಲಿತವರ್ಗದ ಜನರನ್ನು ಶೀಘ್ರವಾಗಿ ತಮ್ಮೊಳಗೆ ಸೇರ್ಪಡೆ ಮಾಡಿಕೊಳ್ಳದಿದ್ದರೆ ಇದರ ಮತಾಂತರ ಪ್ರಶ್ನೆ ತಲೆದೋರುವುದು ಸಹಜ ಕ್ರೈಸ್ತ ಧರ್ಮದ ಪ್ರಚಾರಕ ಸಂಸ್ಥೆ ಈಗಾಗಲೇ ಈ ವಿಷಯದಲ್ಲಿ ಕಾರ್ಯೋನ್ಮುಖವಾಗಿದೆ ಮತ್ತು ಇದರೊಂದಿಗೆ ಯಾರ ಘರ್ಷಣೆಯೂ ಕಂಡುಬರುತ್ತಿಲ್ಲ. ಆದರೆ ಇದೇ ಉದ್ದೇಶದಿಂದ ಒಂದು ಮುಸ್ಲಿಂ ಧರ್ಮ ಪ್ರಚಾರಕ ಸಂಸ್ಥೆ ತಲೆ ಎತ್ತಿದ ತಕ್ಷಣ ಇದರ ವಿರುದ್ಧ ಹಿಂದೂ ಪತ್ರಿಕೆಗಳು ಕಿಡಿಕಾರುವ ಎಲ್ಲ ಸಾಧ್ಯತೆಗಳೂ ಇವೆ. ದಲಿತ ವರ್ಗದವರನ್ನು ದೊಡ್ಡ ಪ್ರಮಾಣದಲ್ಲಿ ಮತಾಂತರಗೊಳಿಸಲು ಒಂದು ಮತ ಪ್ರಚಾರಕ ಸಂಸ್ಥೆಯನ್ನೇ ಕಟ್ಟುವ ಸಾಮರ್ಥ್ಯವುಳ್ಳ ಒಬ್ಬ ಪ್ರಭಾವೀ ಶ್ರೀಮಂತ ವ್ಯಕ್ತಿ. ಹಿಂದೂಗಳ ನಾಯಕರೊಡನೆ ಮಾತಾಡಿ ಒಂದು ಒಪ್ಪಂದಕ್ಕೆ ಬಂದು ಅನಂತರ ದೇಶವನ್ನು ಬೇರೆ ಬೇರೆ ಭಾಗಗಳಾಗಿ ವಿಂಗಡಿಸಿ ಅಲ್ಲಿಗೆ ಹಿಂದೂ ಮತ್ತು ಮುಸ್ಲಿಂ ಧರ್ಮ ಪ್ರಚಾರಕರನ್ನು ಕಾರ್ಯೋನ್ಮುಖರಾಗುವಂತೆ ತಿಳಿಸಿ, ಇವರು ಪ್ರತಿ ವರ್ಷವೂ ಇಲ್ಲವೇ ಅಗತ್ಯ ಬಿದ್ದಲ್ಲಿ ಇನ್ನೂ ಹೆಚ್ಚು ಸಮಯ ತೆಗೆದುಕೊಂಡಾದರೂ ಸರಿ, ತಮ್ಮ ತಮ್ಮ ಧರ್ಮಗಳಿಗೆ ಸೇರಿಸಿಕೊಳ್ಳಲು ಎಷ್ಟು ಜನರನ್ನು ಸಿದ್ಧಪಡಿಸಿದ್ದಾರೆ ಎಂಬುದರ ಅಂದಾಜು ಪಟ್ಟಿ ತಯಾರಿಸಲಿ ಎಂದು ನನಗೆ ಸೂಚಿಸಿದ್ದರು. ಎಷ್ಟು ಜನ ಈ ಕೆಲಸಕ್ಕಾಗಿ ನಿಯೋಜಿಸಲ್ಪಡುತ್ತಾರೆ ಮತ್ತು ಅದಕ್ಕಾಗಿ ಎಷ್ಟು ಹಣವನ್ನು ಈ ಸಂಸ್ಥೆಗಳು ವ್ಯಯಿಸಬೇಕಿದೆ ಎಂಬುದರ ಆಧಾರದ ಮೇಲೆ ಸಾಮಾನ್ಯವಾಗಿ ಅಂದಾಜು ಪಟ್ಟಿಗಳು ತಯಾರಾಗುತ್ತವೆ. ಇವುಗಳನ್ನು ಹಿಂದಿನ ಅವಧಿಯ ನೈಜ ಸಂಖ್ಯೆಗಳೊಡನೆ ಹೋಲಿಸಿ ಪರಿಶೀಲಿಸಬಹುದು. ಹೀಗೆ ಒಂದರೊಡನೊಂದು ಸಂಘರ್ಷಕ್ಕಿಳಿಯದೆ ಆಯಾ ಧರ್ಮ ಸ್ವತಂತ್ರವಾಗಿ ಪರಿವರ್ತನೆಯ ಕಾರ್ಯವನ್ನು ಹಮ್ಮಿಕೊಳ್ಳಬಹುದು. ಸುಧಾರಣೆಯನ್ನು ತರಬಹುದು. ಇದನ್ನು ನನ್ನ ಹಿಂದೂ ಸೋದರರು ಯಾವ ರೀತಿಯಲ್ಲಿ ಸ್ವೀಕರಿಸುತ್ತಾರೋ ಹೇಳಲಾರೆ. ಆದರೂ ಈ ಸೂಚನೆಯನ್ನು ಪ್ರಾಸ್ತಾಪಿತವಾಗಿ ಎಲ್ಲ ವಿಧೇಯತೆಯಿಂದ ಧೈರ್ಯವಾಗಿ ಅವರ ಮುಂದಿಡುತ್ತೇನೆ. ನಾನು ಇದನ್ನೆಲ್ಲ ಹೇಳುತ್ತಿರುವುದಕ್ಕೆ ಕಾರಣವಿದೆ. ನಾನು ಬರೋಡ ರಾಜ್ಯದ 'ಕಾಳಿಪ್ರಜಾ' ಜನರ ಪರಿಸ್ಥಿತಿಯನ್ನು ಮತ್ತು ಕೇಂದ್ರಾಧೀನ ಭಾಗಗಳಲ್ಲಿರುವ ಗೊಂಡರ ಪರಿಸ್ಥಿತಿಯನ್ನು ನೋಡಿ ಬಲ್ಲೆ. ಆದುದರಿಂದ ಈ ನಿಟ್ಟಿನಲ್ಲಿ ಧೈರ್ಯವಾಗಿ ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ, ಇಂಥ ಪರಿಸ್ಥಿತಿಗಳು ಅಸ್ತಿತ್ವದಲ್ಲಿರುವುದೇ ನಮಗೆಲ್ಲ ಅವಮಾನಕರ. ಹಿಂದೂಗಳು ಇವರನ್ನು ತಮ್ಮ ಸಮಾಜಕ್ಕೆ ಸೇರಿಸಿಕೊಳ್ಳದಿದ್ದರೆ, ಇತರರು ಕಡ್ಡಾಯವಾಗಿ ಸೇರಿಸಿಕೊಳ್ಳಲಿ, ಆಗ ಸಂಪ್ರದಾಯವಾಗಿ ಹಿಂದೂಗಳು ಕೂಡ ಅವರನ್ನು ಅಸ್ಪೃಶ್ಯರಂತೆ ಕಾಣುವುದು ತಪ್ಪುತ್ತದೆ. ಆದರಿದು ಮತಾಂತರಕ್ಕೆ ಕೊಟ್ಟ ಸಂಭಾವನೆಯಾಗಿ ಪರಿಣಮಿಸಬಾರದಷ್ಟೆ?"**

ಇನ್ನೊಂದು ಅಂಶ ಎಂದರೆ, ಹಿಂದೂಗಳು ಮತ್ತು ಮುಸ್ಲಿಮರು ಪರಸ್ಪರ ಮುಖಾಮುಖಿಯಾಗಿ ಯಾವುದೇ ಅಂಜಿಕೆಯಿಲ್ಲದೆ ಮಾಡಿಕೊಂಡಿರುವ 'ಸಿದ್ಧತೆಗಳು'. ಇದು ಎರಡು ವೈರಿ ರಾಷ್ಟ್ರಗಳ ನಡುವಣ ಯುದ್ಧ ಸನ್ನಾಹ ಕಾಲದ ಶಸ್ತ್ರಾಸ್ತ್ರ ಸಂಗ್ರಹ ಪೈಪೋಟಿಯಂತೆ.

ಹಿಂದೂಗಳಿಗೆ ಬನಾರಸ್ ವಿಶ್ವವಿದ್ಯಾನಿಲಯ ದಕ್ಕಿದರೆ, ಮುಸ್ಲಿಮರಿಗೆ ಅಲಿಗಡ್ ವಿಶ್ವವಿದ್ಯಾಲಯ ದಕ್ಕಲೇ ಬೇಕು. ಹಿಂದೂಗಳು ಶುದ್ಧಿ ಚಳುವಳಿ ಪ್ರಾರಂಭಿಸಿದರೆ ಮುಸ್ಲಿಮರು ತಬ್‌ಲಿಗ್ ಚಳುವಳಿಯನ್ನು ಹಮ್ಮಿಕೊಳ್ಳಲೇಬೇಕು. ಹಿಂದೂಗಳು ಸಂಗಥಾನ್ ಪ್ರಾರಂಭಿಸಿದರೆ ಇದರ ಪ್ರತಿಯಾಗಿ ಮುಸ್ಲಿಮರು

ತನ್ಜಿಮ್ ಶುರುಮಾಡಬೇಕು. ಹಿಂದೂಗಳಿಗೆ ಆರ್.ಎಸ್.ಎಸ್.[೧] ಇದ್ದರೆ, ಮುಸ್ಲಿಮರು ಇದಕ್ಕೆ ಎದುರಾಗಿ ಖಕ್ಸರ್[೨] ಪಡೆಯನ್ನು ನಿಲ್ಲಿಸಲೇಬೇಕು. ಯುದ್ಧದ ಹಾದಿಯಲ್ಲಿರುವ ರಾಷ್ಟ್ರಗಳ ಸಮಾಜದಲ್ಲಿ ಮಾತ್ರ ಗ್ರಹಿಕೆ ಮತ್ತು ದೃಢ ನಿರ್ಧಾರದಿಂದ ಯುದ್ಧ ಸಾಧನ ಮತ್ತು ಸಲಕರಣೆಗಳನ್ನು ಹೀಗೆ ಸ್ಪರ್ಧಾತ್ಮಕವಾದ ಚಟುವಟಿಕೆಯ ಮೂಲಕ ಸಂಗ್ರಹಿಸುವುದು ರೂಢಿ. ಹಿಂದೂಗಳು ತಮ್ಮನ್ನು ತುಳಿಯುತ್ತಿದ್ದಾರೆಂಬುದು ಮುಸ್ಲಿಮರ ಆತಂಕ, ಮುಸ್ಲಿಮರು ಮತ್ತೆ ನಮ್ಮನ್ನು ಗೆಲ್ಲಲು ಹವಣಿಸುತ್ತಿದ್ದಾರೆಂಬುದು ಹಿಂದೂಗಳ ಭಾವನೆ. ಹೀಗಾಗಿ ಇಬ್ಬರೂ ಸಮರ 'ಸಿದ್ಧತೆ'ಗೆ ತೊಡಗಿ ಪರಸ್ಪರ ಎಚ್ಚರಿಕೆಯಿಂದ ಕಾಯುತ್ತಿದ್ದಾರೆಂದು ಕಾಣುತ್ತದೆ.

ಈ ಬಗೆಯ ಚಟುವಟಿಕೆ ಅನಿಷ್ಟಕಾರಿಯಲ್ಲದೆ ಬೇರೇನೂ ಅಲ್ಲ. ಇದೊಂದು ವಿಷವೃತ್ತ. ಹಿಂದೂಗಳು ತಮ್ಮನ್ನು ತಾವು ಬಲಪಡಿಸಿಕೊಂಡರೆ, ಮುಸಲ್ಮಾನರು ತಾವು ನಾಶವಾದಂತೆ ಎಂದು ಭಾವಿಸಿಕೊಳ್ಳುತ್ತಾರೆ. ಇಂಥ ವಿನಾಶದಿಂದ ತಪ್ಪಿಸಿಕೊಳ್ಳಲು ಮುಸಲ್ಮಾನರು ತಮ್ಮ ಬಲವನ್ನು ವೃದ್ಧಿಸಿಕೊಳ್ಳಲು ಪ್ರಯತ್ನಿಸಿದರೆ, ಅದಕ್ಕೆ ಸರಿಸಮಾನವಾಗಿ ತಮ್ಮ ಪರಿಸ್ಥಿತಿಯೂ ಸುಧಾರಿಸಬೇಕೆಂದು ಹಿಂದೂಗಳು ಹವಣಿಸುತ್ತಾರೆ. ಹೀಗೆ ಸಿದ್ಧತೆಗಳು ನಡೆದಂತೆಲ್ಲ ಅವುಗಳ ಜೊತೆಜೊತೆಗೇ ಸಂದೇಹ, ಗೋಪ್ಯತೆ ಮತ್ತು ಸಂಪನ್ಮೂಲವೇ ವಿವೃತವಾಗಿ, ಎದ್ದು ಕಾಣುವ ಅಂಶ ಎಂದರೆ, ಪ್ರತಿಯೊಬ್ಬರೂ ಭಯದ ನೆರಳಿನಲ್ಲಿಯೇ ಸಮರ ಸಿದ್ಧತೆಗೆ ತೊಡಗಿ ಇವೆರಡು ಬಣಗಳ ನಡುವೆ 'ಯುದ್ಧ' ಅನಿವಾರ್ಯ ಎನ್ನುವಂತಾಗಿದೆ. ಆದರೆ ಈ ಸಂದರ್ಭದಲ್ಲಿ, ತಮ್ಮನ್ನು ತಾವು ಹಿಂದೂಗಳು ಮತ್ತು ಮುಸ್ಲಿಮರು ಹೇಗೆ ತೊಡಗಿಸಿಕೊಂಡಿದ್ದಾರೆಂದರೆ, ಸಹಜವಾಗಿಯೇ ಇವರಿಗೆ ತಮ್ಮೆದುರಿಗಿರುವ ಸವಾಲನ್ನೆದುರಿಸಲು ಸಿದ್ಧತೆ ನಡೆಸುವುದನ್ನು ಬಿಟ್ಟು ಬೇರಾವುದೇ ವಿಷಯಕ್ಕೆ ಗಮನ ಹರಿಸುವುದು ಬೇಕಾಗಿಲ್ಲ. ಇದು ಉಳಿವಿಗಾಗಿ ಹೋರಾಟ. ಇಲ್ಲಿ ಉಳಿವಷ್ಟೇ ಮುಖ್ಯ. ಅದರ ಸಾಧಕ ಬಾಧಕಗಳಲ್ಲ.

ಈ ಚರ್ಚೆಯಿಂದ ಎರಡು ಅಭಿಪ್ರಾಯಗಳು ನಿಷ್ಪನ್ನವಾಗುತ್ತವೆ. ಒಂದು, ಹಿಂದೂಗಳು ಮತ್ತು ಮುಸ್ಲಿಮರು ಪರಸ್ಪರ ನಾಶಕ್ಕಾಗಿ ಸದಾ ಹವಣಿಸುತ್ತಾರೆಂಬುದು. ಎರಡು, ಈ ನಾಶವನ್ನು ಉಂಟುಮಾಡಲು ಹೋಗಿ, ಎರಡೂ ಕಡೆಯವರೂ ತಮ್ಮ ಸಮಾಜಗಳಿಗೆ ಅಂಟಿರುವ ಕೆಡಕುಗಳನ್ನು ತೊಡೆದು ಹಾಕುವ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದಾರೆಂಬುದು. ಇದು ಅಪೇಕ್ಷಣೀಯ ಪರಿಸ್ಥಿತಿಯೇ; ಇದಲ್ಲವಾದರೆ, ಇದರ ಅಂತ್ಯವಾದರೂ ಹೇಗೆ?

ಸಮಾಜ ಸುಧಾರಣೆಯಲ್ಲಿ ಸಮಸ್ಯೆಗಳಿದ್ದಾಕ್ಷಣ ಅವುಗಳನ್ನು ಹಾಗೇ ಬದಿಗೊತ್ತಿಬಿಡುವುದೇ ಲೇಸೆಂದು ಎಂದೂ ಯಾರು ಹೇಳಲಾರರು. ಸಮಾಜದ ಕೆಡಕುಗಳು ಎಲ್ಲೆಲ್ಲಿವೆಯೋ, ಅವು ನೋವಿನ ಮತ್ತು ಅನ್ಯಾಯದ ಕುರುಹುಗಳಾಗಿ ಉಳಿಯುವ ಮುನ್ನ ಅವುಗಳನ್ನು ನಿರ್ಮೂಲನಗೊಳಿಸಬೇಕಾದ್ದು ಆರೋಗ್ಯವಂತ ರಾಜಕೀಯದ ಜವಾಬ್ದಾರಿ. ಎಲ್ಲೆಂದರಲ್ಲಿ ಹರಡಿರುವ ಸಾಮಾಜಿಕ ಮತ್ತು ಆರ್ಥಿಕ ಕೆಡಕುಗಳೇ ಕ್ರಾಂತಿಗಾಗಲಿ ಅಥವಾ ನಾಶಕ್ಕಾಗಲೀ ಪೋಷಕವಾಗಿರುವಂಥವು. ರಾಜಕೀಯ ಸುದಾರಣೆಗೆ ಮುನ್ನ ಸಮಾಜ ಸುಧಾರಣೆ ಆಗಬೇಕೇ ಅಥವಾ ಸಮಾಜ ಸುಧಾರಣೆಗೆ ಮುನ್ನ ರಾಜಕೀಯ ಸುಧಾರಣೆ ಆಗಬೇಕೆ ಎಂಬುದು

---

೧. ಹಿಂದೂ ಸ್ವಯಂ ಸೇವಕರ ತಂಡ, ರಾಷ್ಟ್ರೀಯ ಸೇವಕರ ಸಂಘ ಎಂಬುದರ ಸಂಕ್ಷಿಪ್ತ ರೂಪ.

೨. ಖಕ್ಸರ್, ಇದೊಂದು ಮುಸ್ಲಿಮರ ಸ್ವಯಂಸೇವಕ ತಂಡ.

ವಾದಗ್ರಸ್ತ ವಿಚಾರ. ಆದರೆ, ರಾಜಕೀಯ ಅಧಿಕಾರದ ಮೂಲಭೂತ ಧ್ಯೇಯ, ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಯನ್ನು ತರುವಂಥದು ಎಂಬುದರ ಬಗೆಗೆ ಭಿನ್ನಾಭಿಪ್ರಾಯಗಳಿರಲು ಸಾಧ್ಯವಿಲ್ಲ. ಸಮಾಜದ ಮರ್ಮಸ್ಥಾನವನ್ನೇ ನುಂಗಿ ನೊಣೆಯುತ್ತಿರುವ ಈ ಸಾಮಾಜಿಕ ಕೇಡುಗಳ ಆಕ್ರಂದನವನ್ನು ತುರ್ತಾಗಿ ನಿವಾರಿಸದಿದ್ದರೆ, ರಾಜಕೀಯ ಅಧಿಕಾರಗಳಿಗಾಗಿ ನಡೆದ ಇಡೀ ಹೋರಾಟ ವ್ಯರ್ಥ ಹಾಗೂ ನಿಷ್ಫಲವಾಗುತ್ತದೆ; ಅಲ್ಲದೆ, ಈ ಹೋರಾಟ ಬರೀ ರಾಜಕೀಯ ಅಧಿಕಾರ ಲಾಲಸೆಯದಷ್ಟೇ ಎಂಬ ಭಾವನೆಗೆ ಇಂಬು ಕೊಡುತ್ತದೆ. ಹಿಂದೂಗಳು ಮತ್ತು ಮುಸ್ಲಿಮರು ಹೇಗೋ ರಾಜಕೀಯ ಅಧಿಕಾರವನ್ನು ಪಡೆದರೆಂದು ಇಟ್ಟುಕೊಳ್ಳೋಣ. ಇವರು ತಮ್ಮ ಅಧಿಕಾರವನ್ನು ಸಮಾಜ ಸುಧಾರಣೆಯ ಉದ್ದೇಶಗಳಿಗೆ ಬಳಸುತ್ತಾರೆಂದು ನಂಬುವುದಾದರೂ ಹೇಗೆ? ಈ ನಿಟ್ಟಿನಲ್ಲಿ ಯಾವುದೇ ಭರವಸೆ ಇಡುವುದು ಕಷ್ಟ. ಎಲ್ಲಿಯವರೆಗೆ ಹಿಂದೂಗಳು ಮತ್ತು ಮುಸ್ಲಿಮರು ಪರಸ್ಪರ ವಿನಾಶಕರೆಂದು ಭಾವಿಸುತ್ತಾರೋ ಅಲ್ಲಿಯವರೆಗೂ ಅವರ ದೃಷ್ಟಿಯಲ್ಲಿ ಈ ನಾಶಕ್ಕಾಗಿ ನಡೆಸುವ ಸಿದ್ಧತೆಯಲ್ಲಿಯೇ ನೆಟ್ಟುಹೋಗಿರುತ್ತದೆ. ಹಿಂದೂಗಳ ವಿರುದ್ಧ ಮುಸಲ್ಮಾನರಲ್ಲಿ, ಮುಸಲ್ಮಾನರ ವಿರುದ್ಧ ಹಿಂದೂಗಳಲ್ಲಿ ಸಾಮಾನ್ಯ ಧೋರಣೆ ಮೈದಾಳುವ ಅಗತ್ಯತೆ ಇದೆ– ಅದು ಖಂಡಿತ ಮೈದಾಳುತ್ತದೆ. ಅಲ್ಲಿಯವರೆಗೆ ಸಾಮಾಜಿಕ ಕೆಡಕುಗಳು ಇಷ್ಟೊಂದು ಭಯಂಕರವಾಗಿದ್ದು ತುರ್ತು ಗಮನ ಹರಿಸಬೇಕಾದ ಅಗತ್ಯವಿದ್ದರೂ, ಹಿಂದೂಗಳಾಗಲೀ, ಮುಸ್ಲಿಮರಾಗಲೀ ಇವುಗಳತ್ತ ತಿರುಗಿ ನೋಡುತ್ತಿಲ್ಲ. ಇದರ ಹಿಂದಿರುವ ಸರಳವಾದ ಕಾರಣವೇನೆಂದರೆ, ಸಮಾಜ ಸುಧಾರಣೆಯ ದೃಷ್ಟಿಯಿಂದ ಕೈಗೊಳ್ಳುವ ಯಾವುದೇ ತೀರ್ಮಾನ ಜನರಲ್ಲಿ ಭಿನ್ನಾಭಿಪ್ರಾಯವನ್ನು, ಒಡಕನ್ನು, ಸೃಷ್ಟಿಸಿ ತಮ್ಮ ಸಮುದಾಯವನ್ನು ದುರ್ಬಲಗೊಳಿಸಿದರೆ ಇನ್ನೊಂದು ಸಮುದಾಯದಿಂದ ಎದುರಾಗುವ ವಿಪತ್ತನ್ನು ಬಗೆಹರಿಸುವುದು ಕಷ್ಟ ಎಂಬ ಅಭಿಪ್ರಾಯ ಎಲ್ಲಿಯವರೆಗೆ ಒಂದು ಸಮುದಾಯ ಇನ್ನೊಂದನ್ನು ವಿಪತ್ಕಾರಿ ಎಂಬ ಗುಮಾನಿಯ ದೃಷ್ಟಿಯಿಂದ ನೋಡುತ್ತಿರುತ್ತದೋ ಅಲ್ಲಿಯವರೆಗೂ ಯಾವುದೇ ಸಾಮಾಜಿಕ ಪ್ರಗತಿ ಸಾಧಿತವಾಗುವುದಿಲ್ಲ; ಸಂಪ್ರದಾಯವಾದಿತ್ವ ತನ್ನ ಉಡದ ಹಿಡಿತವನ್ನು ಆಲೋಚನೆ ಮತ್ತು ಆಚರಣೆಗಳೆರಡರ ಮೇಲೂ ಹೊಂದಿರುತ್ತದೆಯೋ ಅಲ್ಲಿಯವರೆಗೆ ಸಡಿಲಿಸುವುದಿಲ್ಲ.

ಈ ವಿಪತ್ತು ಎಲ್ಲಿಯವರೆಗೆ ಇರಬಹುದು? ಹಿಂದೂಗಳು ಮತ್ತು ಮುಸ್ಲಿಮರು ಏಕ ಸಂವಿಧಾನದಡಿಯಲ್ಲಿ ಒಂದೇ ರಾಷ್ಟ್ರದ ಪ್ರಜೆಗಳಾಗಿ ಬಾಳುವವರೆಗೂ ಖಂಡಿತವಾಗಿ ಈ ವಿಪತ್ತು ಇದ್ದೇ ಇರುತ್ತದೆ. ಇದಕ್ಕೆ, ಸಮತೋಲನವನ್ನು ವರ್ಗಾಯಿಸುವಂಥ ಸಾಧ್ಯತೆ ಇರುವ ಏಕಮೇವ ಸಂವಿಧಾನದ ಭಯ– ಮೂಲತಃ ಸಂವಿಧಾನದಿಂದ ಸ್ಥಿರಗೊಂಡಿರುವ ಸಮತೋಲನವನ್ನು ಒಂದೇ ಸ್ಥಾನದಲ್ಲಿ ಯಥಾಸ್ಥಿತಿಯಲ್ಲಿ ಯಾವುದೂ ಇಡಲಾರದು. ಇದು ಹಿಂದೂಗಳನ್ನು ಮುಸ್ಲಿಮರಿಗೆ ವಿಪತ್ಕಾರಿಯಾಗಿಯೂ ಮಾಡುತ್ತದೆ. ಇದು ಹೀಗೇ ಮುಂದುವರಿದರೆ, ನಿಸ್ಸಂಶಯವಾಗಿ ಪಾಕಿಸ್ತಾನ ಒಂದೇ ಇದಕ್ಕೇ ಪರಿಹಾರ. ವಿಪತ್ತಿಗೆ ಕಾರಣವಾಗಿರುವ ಪ್ರಮುಖ ಪರಿಸ್ಥಿತಿಯನ್ನು ಖಂಡಿತವಾಗಿಯೂ ಇದು ತೊಳೆದುಹಾಕುತ್ತದೆ. ಹಿಂದೂ ಮುಸ್ಲಿಮರ ನಡುವಣ ಗುಲಾಮಗಿರಿಯ ಮತ್ತು ಪರಸ್ಪರ ಆಕ್ರಮಣದ ಭಯವನ್ನು ಪಾಕಿಸ್ತಾನ ಮುಕ್ತಗೊಳಿಸುತ್ತದೆ. ಪಾಕಿಸ್ತಾನ ಮತ್ತು ಹಿಂದೂಸ್ಥಾನಗಳೆರಡಕ್ಕೂ ತಮ್ಮವೇ ಆದ ಬೇರೆ ಬೇರೆ ಸಂವಿಧಾನಗಳನ್ನು ಒದಗಿಸಿ ಕೊಡುವುದರಿಂದ, ದಿನನಿತ್ಯದ ಬದುಕಿನಲ್ಲಿ ಅಧಿಕಾರ ಸಮತೋಲನವನ್ನು ಕಾಪಾಡಿಕೊಳ್ಳಲು ನಿರಂತರ ಹೋರಾಟಕ್ಕೆ ಕಾರಣವಾಗಿದ್ದ ಮೂಲವನ್ನೇ ಇದು ತೆಗೆದುಬಿಡುತ್ತದೆ. ಅಲ್ಲದೆ, ಈಗ ಬಲವಂತವಾಗಿ ಬದಿಗೊತ್ತಲ್ಪಟ್ಟು ಶೈತ್ಯಾಗಾರ ಸೇರಿರುವಂಥ, ಸಾಮಾಜಿಕವಾಗಿ ಅತ್ಯಂತ ಮಹತ್ವದ ವಿಷಯವನ್ನು ತುರ್ತಾಗಿ ಕೈಗೆತ್ತಿಕೊಳ್ಳಲು ಇದು ಇವರನ್ನು ಸ್ವತಂತ್ರವಾಗಿಸುತ್ತದೆ ಮತ್ತು ತನ್ನ ಪ್ರಜೆಗಳ ಜೀವನವನ್ನು ಉತ್ತಮಗೊಳಿಸಲು ನೆರವಾಗುತ್ತದೆ.

ಪ್ರಾಯಶಃ ಸ್ವರಾಜ್ಯಕ್ಕಾಗಿ ಈ ಹೋರಾಟ ನಡೆಸುವುದರ ಹಿಂದಿರುವ ಪ್ರಮುಖ ಉದ್ದೇಶವೂ ಇದೇ ಅಲ್ಲವೆ?

ಇಂಥ ಯಾವ ವ್ಯವಸ್ಥೆಯನ್ನು ಮಾಡಿಕೊಳ್ಳದೆ, ತಮ್ಮವೆರಡೂ ಬೇರೆ ಬೇರೆ ರಾಷ್ಟ್ರಗಳೆಂಬಂತೆ ಹಿಂದೂಗಳು ಮತ್ತು ಮುಸ್ಲಿಮರು, ಎಲ್ಲಿ ಪರಸ್ಪರ ಸೋತುಹೋದೇವೋ ಎಂಬ ಭಯದಲ್ಲೇ ಪ್ರತಿಕ್ರಿಯಿಸುತ್ತಾ ಬಂದಿದ್ದಾರೆ. ಆಕ್ರಮಣಕ್ಕಾಗಿ ನಡೆಸುವ ಸಿದ್ಧತೆಗಳು ಯಾವಾಗಲೂ ಸಾಮಾಜಿಕ ಸುಧಾರಣೆಗಿಂತ ಹೆಚ್ಚು ಆದ್ಯತೆಯನ್ನು ಹೊಂದಿರುತ್ತವೆ. ಆದ್ದರಿಂದ ಈಗಾಗಲೇ ಇರುವಂಥ ಸಾಮಾಜಿಕ ಜಡತ್ವ ಹಾಗೇ ಮುಂದುವರಿಯಲೇಬೇಕು. ಇದು ತೀರ ಸಹಜವಾದುದು ಮತ್ತು ಯಾರೂ ಇದಕ್ಕಾಗಿ ಆಶ್ಚರ್ಯ ಪಡಬೇಕಾಗಿಲ್ಲ. ಇದನ್ನು, ಬರ್ನಾಡ್ ಷಾ ಗುರುತಿಸಿರುವುದು ಹೀಗೆ:

> **"ಒಂದು ಜಯಿಸಲ್ಪಟ್ಟ ರಾಷ್ಟ್ರ ಕ್ಯಾನ್ಸರ್ ಇರುವ ಒಬ್ಬ ರೋಗಿಯಂತೆ. ಅವನು ಬೇರೇನನ್ನೂ ಯೋಚಿಸುವಂತೆಯೇ ಇಲ್ಲ... ಒಬ್ಬ ಆರೋಗ್ಯವಂತ ವ್ಯಕ್ತಿ ತನ್ನ ಎಲುಬುಗಳ ಬಗೆಗೆ ಅರಿವಿಲ್ಲದಿರುವಂತೆ ಒಂದು ಸುಸ್ಥಿತಿಯಲ್ಲಿರುವ ರಾಷ್ಟ್ರ ತನ್ನ ರಾಷ್ಟ್ರೀಯತ್ವದ ಬಗೆಗೆ ಅರಿವಿಲ್ಲದಿರುತ್ತದೆ. ಒಂದು ದೇಶದ ರಾಷ್ಟ್ರೀಯತ್ವವನ್ನು ನೀವು ತುಂಡರಿಸಿದರೆ ಅದು ಪುನಃ ಇದನ್ನು ಸರಿಪಡಿಸುವುದನ್ನಲ್ಲದೆ ಬೇರೇನನ್ನೂ ಯೋಚಿಸುವುದಿಲ್ಲ. ರಾಷ್ಟ್ರೀಯತಾವಾದಿಯ ಕೋರಿಕೆಯನ್ನು ಈಡೇರಿಸುವವರೆಗೆ ಇದು ಯಾವ ಸಮಾಜ ಸುಧಾರಕನ, ತತ್ವಜ್ಞಾನಿಯ, ಬೋಧಕನ ಮಾತುಗಳಿಗೂ ಕಿವಿಗೊಡುವುದಿಲ್ಲ. ಸಮಗ್ರತೆ ಮತ್ತು ಸ್ವಾಯತ್ತತೆಯ ವ್ಯವಹಾರದ ವಿನಃ ಬೇರಾವುದೇ ವ್ಯವಹಾರಕ್ಕೆ ಅದು ಎಷ್ಟೇ ಗಹನವಾದುದಾಗಿದ್ದರೂ ಅದು ಗಮನ ಹರಿಸುವುದಿಲ್ಲ."**

ಹಿಂದೂಗಳಿಂದ ಬೇರ್ಪಡಲಿಚ್ಛಿಸುವ ಮುಸ್ಲಿಮರು ಅವರೊಡನೆ ಒಂದಾಗುವವರೆಗೆ ಮತ್ತು ಇವರು, ಪರಸ್ಪರ ಮೇಲುಗೈ ಸಾಧಿಸುವ ಸಾಧ್ಯತೆಯ ಭಯದಿಂದ ಬಿಡುಗಡೆಯಾಗದ ಹೊರತೂ ಸಾಮಾಜಿಕ ಜಡತೆಯ ಈ ಮುಜುಗರ ಮೂಲೆಗುಂಪಾಗುವುದಿಲ್ಲ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ.

♦

# ಅಧ್ಯಾಯ ೨೭

# ಕೋಮು ಆಕ್ರಮಣ

ಮುಸ್ಲಿಮರ ಬಗ್ಗೆ ಹಿಂದೂಗಳು, ಹಿಂದೂಗಳ ಬಗ್ಗೆ ಮುಸ್ಲಿಮರ ಪರಸ್ಪರ ಆಕ್ರಮಣಕಾರಿ ಧೋರಣೆಯ ಮನೋಭಾವ ಹೊಂದಿರುವುದು ಒಬ್ಬ ಸಾಮಾನ್ಯ ವೀಕ್ಷಕನಿಗೂ ಗಮನಕ್ಕೆ ಬಾರದ ಸಂಗತಿಯೇನಲ್ಲ. ಹಿಂದೂವಿನ ಆಕ್ರಮಣ ಧೋರಣೆ ಒಂದು ಹೊಸ ಹಂತವಾಗಿದ್ದು, ಅದನ್ನು ಈಗಷ್ಟೇ ರೂಢಿಗೊಳಿಸುತ್ತಿದ್ದಾನೆ. ಹಿಂದೂಗಳಿಗೆ ತುಲನೆ ಮಾಡಿದರೆ, ಮುಸ್ಲಿಮರ ಆಕ್ರಮಣ ಧೋರಣೆ ಅವರಿಗೆ ಮೂಲ ವಸ್ತುವಾಗಿದ್ದು, ಹಿಂದುವಿಗೆ ಹೋಲಿಸಿದರೆ ಅದು ತುಂಬ ಪ್ರಾಚೀನವಾಗಿದೆ. ಒಂದು ವೇಳೆ ಕಾಲಾವಕಾಶ ದೊರೆತರೆ ಈ ವಿಷಯದಲ್ಲಿ ಹಿಂದೂ, ಮುಸ್ಲಿಮನನ್ನು ಹಿಂದೆ ಹಾಕಲಾರನು ಎಂದೇನೂ ಇಲ್ಲ. ಆದರೆ ಇಂದಿನ ವಾಸ್ತವ ಸಂಗತಿಯನ್ನು ಹೇಳುವುದಾದರೆ, ಮುಸ್ಲಿಮನು ಈ ಆಕ್ರಮಣಕಾರೀ ಧೋರಣೆಯಲ್ಲಿ ಹಿಂದೂವನ್ನು ತುಂಬಾ ಹಿಂದೆಬಿಟ್ಟಿದ್ದಾನೆ.

ಕೋಮು ದಂಗೆಗಳನ್ನು ಕುರಿತ ಅಧ್ಯಾಯದಲ್ಲಿ ಮುಸ್ಲಿಮರ ಸಾಮಾಜಿಕ ಆಕ್ರಮಣ ಕುರಿತು ಸಾಕಷ್ಟು ವಿವರಿಸಲಾಗಿದೆ. ಮುಸ್ಲಿಮರ ರಾಜಕೀಯ ಆಕ್ರಮಣ ಕುರಿತು ಸಂಕ್ಷಿಪ್ತವಾಗಿ ಹೇಳುವುದು ಅಗತ್ಯ. ಯಾಕೆಂದರೆ ಈ ರಾಜಕೀಯ ಆಕ್ರಮಣ ಅಲಕ್ಷಿಸಲಾಗದ ಅಸ್ವಸ್ಥತೆಯನ್ನು ಒಡಮೂಡಿಸಿದೆ. ಮುಸ್ಲಿಮರ ಈ ರಾಜಕೀಯ ಆಕ್ರಮಣದಲ್ಲಿ ಮೂರು ಗಮನಾರ್ಹ ಸಂಗತಿಗಳಿವೆ. ಮೊದಲನೆಯದು ಸದಾ ಬೆಳೆಯುತ್ತಿರುವ ಮುಸ್ಲಿಮರ ರಾಜಕೀಯ ಬೇಡಿಕೆಗಳ ಯಾದಿ. ಇವುಗಳ ಮೂಲ ೧೮೯೨ರಷ್ಟು ಹಿಂದೆ ಹೋಗುತ್ತದೆ. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ೧೮೮೫ರಲ್ಲಿ ಸ್ಥಾಪನೆಗೊಂಡಿತು. ಅದು ಸ್ವಸರಕಾರಕ್ಕಿಂತ ಭಿನ್ನವಾದ ಉತ್ತಮ ಸರಕಾರದ ಬೇಡಿಕೆಯೊಂದಿಗೆ ಆರಂಭವಾಯಿತು. ಈ ಬೇಡಿಕೆಯ ಪ್ರತಿಕ್ರಿಯೆಯಾಗಿ ಬ್ರಿಟಿಷ್ ಸರಕಾರವು ೧೮೬೧ರ ಕಾಯಿದೆ ಪ್ರಕಾರ ಸ್ಥಾಪಿತವಾದ ಕೇಂದ್ರ ಮತ್ತು ರಾಜ್ಯ ವಿಧಾನಸಭೆಗಳ ರೀತಿ ನೀತಿಗಳಿಗೆ ಸಂಬಂಧಿಸಿ ಮುನ್ನೆಚ್ಚರಿಕೆ ನೀಡಿತು. ಕಾಂಗ್ರೆಸ್ ಚಳುವಳಿಯ ಆ ಅಪಕ್ವ ಹಂತದಲ್ಲಿ ಬ್ರಿಟಿಷ್ ಸರಕಾರಕ್ಕೆ ಅವುಗಳನ್ನು ಪೂರ್ಣ ಜನಪ್ರಿಯಗೊಳಿಸುವ ಅವಶ್ಯಕತೆ ಕಾಣಲಿಲ್ಲ. ಬರೀ ಜನಪ್ರಿಯತೆಯ ಬಣ್ಣ ಕೊಟ್ಟರೆ ಸಾಕೆಂದು ಅದು ಭಾವಿಸಿತು. ಅದರಂತೆ ಬ್ರಿಟಿಷ್ ಸಂಸತ್ತು ೧೮೯೨ರಲ್ಲಿ ಇಂಡಿಯನ್ ಕೌನ್ಸಿಲ್ ಕಾಯ್ದೆ ಪಾಸು ಮಾಡಿತು. ಈ ಕಾಯ್ದೆ ಎರಡು ಸಂಗತಿಗಳಿಗಾಗಿ ಸ್ಮರಣೀಯ. ೧೮೯೨ರ ಈ ಕಾಯ್ದೆಯ ಮೂಲಕ ಬ್ರಿಟಿಷ್ ಸರಕಾರ ಮೊಟ್ಟಮೊದಲ ಬಾರಿಗೆ ಭಾರತದಲ್ಲಿ ವಿಧಾನಸಭೆಗಳ ಸಂವಿಧಾನದ ಆಧಾರದ ಮೇಲೆ ಜನತಾ ಪ್ರಾತಿನಿಧ್ಯದ ಸಾದೃಶ್ಯ ತತ್ವವನ್ನು ಸ್ವೀಕರಿಸಿತು. ಅದು ಚುನಾವಣೆಯ ತತ್ವವಾಗಿರಲಿಲ್ಲ. ಅದು 'ನಾಮಕರಣ'ದ ತತ್ವವಾಗಿತ್ತು. ಒಬ್ಬ ವ್ಯಕ್ತಿ ನಾಮಕರಣಗೊಳ್ಳಬೇಕಾದರೆ ಆತ ವ್ಯಾಪಾರಿ ಸಂಘಗಳು, ವಿಶ್ವವಿದ್ಯಾಲಯ, ಜಿಲ್ಲಾ ಮಂಡಲಗಳು, ನಗರಸಭೆ ಮುಂತಾದ ಪ್ರಮುಖ ಸಾರ್ವಜನಿಕ ಸಂಘ ಸಂಸ್ಥೆಗಳಿಂದ ಆಯ್ಕೆಗೊಂಡಿರಬೇಕು. ಎರಡನೆಯದಾಗಿ, ಈ ಕಾಯ್ದೆಯ ಮೂಲಕವೇ ಮೊದಲ ಬಾರಿ ಭಾರತದ ರಾಜಕೀಯ ಸಂವಿಧಾನದಲ್ಲಿ ಮುಸಲ್ಮಾನರಿಗೆ ಪ್ರತ್ಯೇಕ ಪ್ರಾತಿನಿಧ್ಯ ತತ್ವ ರೂಪುಗೊಂಡಿತು.

ಈ ತತ್ವದ ಮಂಡನೆಯ ರಹಸ್ಯವು ಗೂಢವಾಗಿದೆ. ಇದರ ಪ್ರವೇಶ ಒಂದು ರಹಸ್ಯವೆನ್ನುವಷ್ಟು

ಸದ್ದಿಲ್ಲದೆ, ಯಾರಿಗೂ ಗೊತ್ತಾಗದಂತೆ ಜರುಗಿಹೋಯಿತು. ಈ ಕಾಯ್ದೆಯಲ್ಲಿ ಪ್ರತ್ಯೇಕ ಪ್ರಾತಿನಿಧ್ಯ ತತ್ವಕ್ಕೆ ಅವಕಾಶವಿಲ್ಲ. ಕಾಯ್ದೆಯಲ್ಲಿ ಅದನ್ನು ಕುರಿತು ಚಕಾರವಿಲ್ಲ. ಆದರೆ ಈ ಸಂಬಂಧ ನಿಯಮಾವಳಿ ರೂಪಿಸುವ ಹೊಣೆಯಿದ್ದ ವ್ಯಕ್ತಿಗಳಿಗೆ ಕಾಯಿದೆಯಲ್ಲಿ ಅವಕಾಶವಿಲ್ಲದಿದ್ದರೂ ಕೆಲವು ನಿರ್ದೇಶನಗಳನ್ನು ನೀಡಲಾಗಿತ್ತು. ಹಿತಾಸಕ್ತಿಗಳನ್ನು ಕಾಪಾಡಬೇಕಾದ ವರ್ಗಗಳಲ್ಲಿ ಮುಸ್ಲಿಮರಿಗೆ ಪ್ರತ್ಯೇಕ ಪ್ರಾತಿನಿಧ್ಯ ಕೊಡಬೇಕೆಂದು ನಮೂದಿಸಲಾಗಿತ್ತು.

ಇದರ ಮಂಡನೆಗೆ ಯಾರು ಹೊಣೆ ಎನ್ನುವುದು ರಹಸ್ಯವಾಗಿದೆ. ಪ್ರತ್ಯೇಕ ಪ್ರಾತಿನಿಧ್ಯದ ಯೋಜನೆ ಯಾವುದೇ ಮುಸ್ಲಿಮ್ ಸಂಘ ಸಂಸ್ಥೆಗಳ ಮೂಲಕ ಬಂದ ಬೇಡಿಕೆಯಾಗಿರಲಿಲ್ಲ. ಹಾಗಾದರೆ ಇದು ಹುಟ್ಟಿಕೊಂಡದ್ದು ಹೇಗೆ? ಇದಕ್ಕೆ ಮೂಲ ವ್ಯಕ್ತಿ ವೈಸ್‌ರಾಯ್* ಲಾರ್ಡ್ ಡಫೆರಿನ್ ಎಂದು ಹೇಳಲಾಗುತ್ತದೆ. ಆತ ೧೮೮೮ರಷ್ಟು ಹಿಂದೆಯೇ ವಿಧಾನಸಭೆಗಳಲ್ಲಿ ಪ್ರಾತಿನಿಧ್ಯದ ಪ್ರಶ್ನೆ ಕುರಿತ ವಿಚಾರದಲ್ಲಿ ಭಾರತಕ್ಕೆ ಇಂಗ್ಲೆಂಡ್ ಮಾದರಿಯ ಪ್ರಾತಿನಿಧ್ಯಕ್ಕಿಂತ ಆಸಕ್ತಿಗಳ ಆಧಾರದ ಪ್ರಾತಿನಿಧ್ಯವೇ ಸೂಕ್ತ ಎಂದು ಬಲವಾಗಿ ಪ್ರತಿಪಾದಿಸಿದ. ಲಾರ್ಡ್ ಡೆಫರಿನ್ ಈ ಬಗೆಯ ಯೋಜನೆ ಸೂಚಿಸಲು ಕಾರಣಗಳೇನಿರಬಹುದು ಎನ್ನುವ ಕುತೂಹಲ ಸಹಜವಾಗಿ ಮೂಡುತ್ತದೆ. ಈ ವಿಚಾರ ಮಾಡಲು ಕಾರಣ ಮೂರು ವರ್ಷ ಮೊದಲು ಹುಟ್ಟಿಕೊಂಡಿದ್ದ ಕಾಂಗ್ರೆಸ್ ಸಂಸ್ಥೆಯಿಂದ ಮುಸಲ್ಮಾನರನ್ನು ದೂರಿಡುವುದಾಗಿತ್ತು ಎನ್ನುವ ಸೂಚನೆಗಳು ದೊರಕುತ್ತವೆ.[೧] ಅದು ಏನೇ ಇರಲಿ, ಈ ಕಾಯ್ದೆಯಿಂದಾಗಿ ಭಾರತೀಯ ಸಂವಿಧಾನದ ಅಂಗದಲ್ಲಿ ಮೊಟ್ಟಮೊದಲ ಸಲ ಮುಸ್ಲಿಮರ ಪ್ರತ್ಯೇಕ ಪ್ರಾತಿನಿಧ್ಯ ಸೇರಿಕೊಂಡಿತು ಎನ್ನುವುದು ನಿಶ್ಚಿತ. ಈ ಕಾಯ್ದೆಯಾಗಲಿ ಅಥವಾ ನಿಯಮಾವಳಿಗಳಾಗಲಿ ಮುಸ್ಲಿಮ್ ಸಮುದಾಯ(ಮತ)ಕ್ಕೆ ಆಯ್ಕೆಯ ಹಕ್ಕನ್ನಾಗಲಿ ಅಥವಾ ನಿಗದಿತ ಸಂಖ್ಯೆಗಳ ಪ್ರಾತಿನಿಧ್ಯವನ್ನಾಗಲಿ ನೀಡಲಿಲ್ಲ. ಮುಸ್ಲಿಮರಿಗೆ ಪ್ರತ್ಯೇಕ ಪ್ರಾತಿನಿಧ್ಯದ ಹಕ್ಕನ್ನು ಮಾತ್ರ ಅದು ಕೊಡಮಾಡಿತು.

ಆರಂಭದಲ್ಲಿ ಪ್ರತ್ಯೇಕ ಪ್ರಾತಿನಿಧ್ಯದ ಸೂಚನೆ ಬ್ರಿಟಿಷ್‌ರಿಂದ ಬಂದಿತಾದರೂ, ಮುಸ್ಲಿಂ ಪ್ರತ್ಯೇಕ ರಾಜಕೀಯ ಹಕ್ಕುಗಳ ಸಾಮಾಜಿಕ ಮಹತ್ವವನ್ನು ಅರಿತುಕೊಳ್ಳದಿರಲಿಲ್ಲ. ಅದರ ಪರಿಣಾಮವಾಗಿ ೧೯೦೯ರಲ್ಲಿ ವಿಧಾನಸಭೆಯ ನಿಯಮಾವಳಿಗಳ ತಿದ್ದುಪಡಿಯ ಕಾಲಕ್ಕೆ ಅವರು ವೈಸ್‌ರಾಯ್ ಲಾರ್ಡ್ ಮಿಂಟೋ ಅವರ ಬಳಿ ಒಂದು ನಿಯೋಗ[೨] ಒಯ್ದು ಈ ಕೆಳಗಿನ ಬೇಡಿಕೆಗಳನ್ನು ಅವರ ಮುಂದಿಟ್ಟರು.

(೧) ಸಂಖ್ಯಾಬಲ, ಸಾಮಾಜಿಕ ಅಂತಸ್ತು ಮತ್ತು ಸ್ಥಳೀಯ ಪ್ರಭಾವಗಳ ಆಧಾರದ ಮೇಲೆ ಜಿಲ್ಲಾ ಮತ್ತು ಪುರಸಭೆಯ ನಿಯಮಗಳಲ್ಲಿ ಕೋಮು ಪ್ರಾತಿನಿಧ್ಯ ನೀಡಬೇಕು.

---

* ಸರ್ ಮೊಹಮ್ಮದ ಷಫಿ ಭಾಷಣ. ಮೊದಲ ಆರ್.ಟಿ.ಸಿ. ಅಲ್ಪಸಂಖ್ಯಾತ ಉಪಸಮಿತಿ ಸಭೆ (ಇಂಡಿಯನ್ ಮುದ್ರಣ), ಪು.೫೭.

೧. ರಾಜಾ ನರೇಂದ್ರನಾಥ ಭಾಷಣ ಮೊದಲ ಆರ್.ಟಿ.ಸಿ. ಅಲ್ಪಸಂಖ್ಯಾತ ಉಪಸಮಿತಿ ಸಭೆ ಸರ್ ಸೈಯ್ಯದ್ ಅಹ್ಮದ್ ದಿ.೨೮ ಡಿಸೆಂಬರ್ ೧೮೮೭ರ ಲಖನೌ ಮತ್ತು ದಿ.೧೬ ಮಾರ್ಚ್ ೧೮೮೮ರ ಮೀರತ್‌ಗಳ ತಮ್ಮ ಭಾಷಣಗಳಲ್ಲಿ ಮುಸಲ್ಮಾನರು ಕಾಂಗ್ರೆಸ್ ಸೇರಕೂಡದೆಂದು ತಿಳಿಸಿದ್ದರು. ಮಿಸ್ಟರ್ ಮೊಹಮ್ಮದ್ ಅಲಿ ತಮ್ಮ ಅಧ್ಯಕ್ಷೀಯ ಮಾತುಗಳಲ್ಲಿ ಅಂಥವು ಐತಿಹಾಸಿಕ ಭಾಷಣಗಳೆಂದು ವಿವರಿಸಿದ್ದಾರೆ.

೨. ಮಿ.ಮಹಮ್ಮದ್ ಅಲಿ ಅವರು ಕಾಂಗ್ರೆಸ್ಸಿನ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಈ ನಿಯೋಗ, ಒಂದು ಪ್ರಭಾವಶಾಲಿ ಮಹತ್ವದ ಕಾರ್ಯವೆಂದು ಹೇಳಿದರು.

(೨) ವಿಶ್ವವಿದ್ಯಾಲಯಗಳ ಆಡಳಿತ ಮಂಡಳಿಗಳಲ್ಲಿ ಮಹಮ್ಮದೀಯರಿಗೆ ಪ್ರಾತಿನಿಧ್ಯ ಕೊಡುವ ಭರವಸೆ.

(೩) ಮಹಮ್ಮದೀಯ ಜಮೀನ್ದಾರರು, ನ್ಯಾಯವಾದಿಗಳು, ವ್ಯಾಪಾರಿಗಳು ಮತ್ತು ಇತರ ಮುಖ್ಯ ಆಸಕ್ತ ಗುಂಪಿನಿಂದ ಆಯ್ದ ವ್ಯಕ್ತಿಗಳು, ತೂಕವುಳ್ಳ ವಿಶ್ವವಿದ್ಯಾಲಯ ಪದವೀಧರರು, ಜಿಲ್ಲಾ ಮತ್ತು ಪುರಸಭೆಗಳ ಸದಸ್ಯರು ಇವರೆಲ್ಲರ ಒಂದು ವಿಶೇಷ ಕೋಮು ಯಾದಿಯನ್ನು ಆಧರಿಸಿದ ಚುನಾಯಿತ ವ್ಯಕ್ತಿಗಳಿಗೆ ಪ್ರಾಂತೀಯ ಸಭೆಗಳಲ್ಲಿ ಕೋಮು ಪ್ರಾತಿನಿಧ್ಯ ನೀಡುವುದು.

(೪) ಸಾಮ್ರಾಜ್ಯಶಾಹಿ ವಿಧಾನಸಭೆಯಲ್ಲಿ ಮಹಮ್ಮದೀಯರ ಪ್ರಾತಿನಿಧ್ಯ ಅವರ ಜನಸಂಖ್ಯೆಯ ಬಲವನ್ನು ಅವಲಂಬಿಸಿ ಇರಕೂಡದು ಮತ್ತು ಮಹಮ್ಮದೀಯರು ಎಂದಿಗೂ ಪರಿಣಾಮಕಾರಿಯಾಗದ ರೀತಿಯ ಅಲ್ಪಸಂಖ್ಯಾತರಾಗಿರಕೂಡದು. ಸಾಧ್ಯವಾದಷ್ಟು ಮಟ್ಟಿಗೆ ಅವರು ಚುನಾಯಿತರಾಗಬೇಕು (ನಾಮಕರಣಕ್ಕೆ ಪ್ರತಿಯಾಗಿ), ಮತ್ತು ಈ ಚುನಾವಣೆಯ ಮತದಾರ ಯಾದಿಯಲ್ಲಿ ಮಹಮ್ಮದೀಯ ಜಮೀನ್ದಾರರು, ನ್ಯಾಯವಾದಿಗಳು, ವ್ಯಾಪಾರಿಗಳು ಪ್ರಾಂತೀಯ ಸಭೆಗಳ ಸದಸ್ಯರು ವಿಶ್ವವಿದ್ಯಾಲಯದ 'ಫೆಲೋಷಿಪ್' ಪಡೆದವರು ಸೇರಿರಬೇಕು.

೧೯೦೯ರ ಕಾಯ್ದೆಯಲ್ಲಿ ಈ ಬೇಡಿಕೆಗಳಿಗೆ ಮಂಜೂರಾತಿ ದೊರೆಯಿತು. ಈ ಕಾನೂನಿನ ಅನ್ವಯ ಮಹಮ್ಮದೀಯರಿಗೆ ಈ ಕೆಳಗಿನ ಹಕ್ಕುಗಳು ದೊರೆತವು. (೧) ತಮ್ಮ ಪ್ರತಿನಿಧಿಗಳನ್ನು ಚುನಾಯಿಸುವ ಹಕ್ಕು, (೨) ತಮ್ಮದೇ ಆದ ಪ್ರತ್ಯೇಕ ಕೋಮು ಯಾದಿಯ ಮೂಲಕ ತಮ್ಮ ಪ್ರತಿನಿಧಿಗಳನ್ನು ಚುನಾಯಿಸುವ ಹಕ್ಕು, (೩) ಜೊತೆಗೆ ಸಾರ್ವತ್ರಿಕ ಮತದಾರರ ಜೊತೆಗೂ ಮತ ಚಲಾಯಿಸುವ ಹಕ್ಕು ಮತ್ತು ಪ್ರಾತಿನಿಧ್ಯದಲ್ಲಿ ತಕ್ಕ ಗೌರವ ಸ್ಥಾನ. ೧೯೦೯ರ ಕಾಯ್ದೆ ತಿದ್ದುಪಡಿಗೆ ಅನುಗುಣವಾಗಿ ವಿಧಾನಸಭೆಗಳಲ್ಲಿ ಮುಸ್ಲಿಮರಿಗೆ ದೊರೆತ ಪ್ರಾತಿನಿಧ್ಯದ ಪ್ರಮಾಣ ಈ ಕೆಳಗಿನ ಪಟ್ಟಿಯಂತಿದೆ:

## ೧೯೫೦ರ ಕಾಯ್ದೆಯ ಪ್ರಕಾರ ಹಿಂದೂ-ಮುಸ್ಲಿಮರ ಜಾತಿವಾರು ಪ್ರಮಾಣ ತೋರಿಸುವ ವಿಧಾನಸಭೆಗಳ ರಚನೆ

| ಪ್ರಾಂತ | ೧೯೦೯ರ ಕಾಯ್ದೆ ಪ್ರಕಾರ ಗೊತ್ತು ಪಡಿಸಿದ ಗರಿಷ್ಠ ಸದಸ್ಯರ ಹೆಚ್ಚುವರಿ ಸಂಖ್ಯೆ | ನಿಯಮಾವಳಿಯ ೫ ಮತ್ತು ೧೨ನೆ ಕಾಲಮ್ ಪ್ರಕಾರ ಮಿತಗೊಳಿಸಿದ ಗರಿಷ್ಠ ಸದಸ್ಯರ ಹೆಚ್ಚುವರಿ ಸಂಖ್ಯೆ | ಅಧಿಕಾರನಾತೇ ಸದಸ್ಯರು | ನೋಂದಣಿ ಪ್ರಕಾರ (ವಿಧಾನ) ಸಭೆಗಳ ಬಲ | | | | | | | | ಕಾಲಮ್ |
|---|---|---|---|---|---|---|---|---|---|---|---|---|
| | | | | ಚುನಾಯಿತ ಸದಸ್ಯರು | | | ನಾಮಕರಣಗೊಂಡ ಸದಸ್ಯರು | | | | ಒಟ್ಟು | |
| | | | | ಒಟ್ಟು | ಮುಸ್ಲಿಮೇತರ | ಮುಸ್ಲಿಮರು | ಅಧಿಕಾರಿಗಳು | | ಅಧಿಕಾರೇತರರು | ಪರಿಣತರು | | |
| | | | | | | | ಕಾಯ್ದೆ ಅಧಿಕಾರಿಗಳು | ಇತರರು* | | | | |
| ಇಂಡಿಯಾ | ೬೦ | ೬೦ | ೮ | ೨೭ | ೨೨ | ೫ | – | ೨೮ | ೫ | – | ೩೩ | ೬೮ |
| ಮದ್ರಾಸ್ | ೫೦ | ೪೫ | ೪ | ೨೧ | ೧೯ | ೨ | ೧ | ೧೬ | ೫ | ೨ | ೨೩ | ೪೯ |
| ಬಾಂಬೆ | ೫೦ | ೪೫ | ೪ | ೨೧ | ೧೭ | ೪ | ೧ | ೧೪ | ೭ | ೨ | ೨೩ | ೪೯ |
| ಬೆಂಗಾಲ್ | ೫೦ | ೫೦ | ೪ | ೨೮ | ೨೩ | ೫ | – | ೧೬ | ೪ | ೨ | ೨೨ | ೫೪ |
| ಬಿಹಾರ | ೫೦ | ೪೧ | ೪ | ೨೧ | ೧೭ | ೪ | – | ೧೫ | ೪ | ೧ | ೩೦ | ೪೫ |
| ಯು.ಪಿ. | ೫೦ | ೪೯ | ೧ | ೨೧ | ೧೭ | ೪ | – | ೨೦ | ೬ | ೨ | ೨೮ | ೫೦ |
| ಪಂಜಾಬ್ | ೩೦ | ೨೬ | ೧ | ೮ | ೮ | ಯಾರೂ ಇಲ್ಲ | – | ೧೦ | ೬ | ೨ | ೧೮ | ೨೭ |
| ಬರ್ಮಾ | ೩೦ | ೧೭ | ೧ | ೧ | ೧ | ಯಾರೂ ಇಲ್ಲ | – | ೬ | ೮ | ೨ | ೧೬ | ೧೮ |
| ಅಸ್ಸಾಮ್ | ೩೦ | ೨೫ | ೧ | ೧೧ | ೯ | ೨ | – | ೯ | ೪ | ೧ | ೧೪ | ೨೬ |

* ೯ನೆಯ ಕಾಲಮ್ ಸಂಖ್ಯೆ ನಿಯಮಾವಳಿಗಳಿಗೆ ಅನುಗುಣವಾಗಿ ಅನುಮತಿಸಿದ ಅಧಿಕಾರಿ ಸದಸ್ಯರ ಗರಿಷ್ಠ ಮಿತಿಯನ್ನು ತೋರಿಸುತ್ತದೆ.

ಈ ಅವಕಾಶಗಳನ್ನು ಪಂಜಾಬ್ ಮತ್ತು ಮಧ್ಯಪ್ರಾಂತಗಳನ್ನುಳಿದು ಎಲ್ಲ ಪ್ರಾಂತಗಳಿಗೂ ಅನ್ವಯಿಸಲಾಯಿತು. ಅಲ್ಲಿರುವ ಮುಸಲ್ಮಾನರಿಗೆ ವಿಶೇಷ ರಕ್ಷಣೆ ಅನಗತ್ಯವೆಂದು ಭಾವಿಸಿ ಪಂಜಾಬಕ್ಕೆ ಇದನ್ನು ಅನ್ವಯಗೊಳಿಸಲಿಲ್ಲ ಮತ್ತು ಆ ಸಮಯದಲ್ಲಿ ಮಧ್ಯಪ್ರಾಂತ ವಿಧಾನಸಭೆ ಹೊಂದಿರಲಿಲ್ಲವಾದ್ದರಿಂದ ಅಲ್ಲಿ ಅದು ಅನ್ವಯಗೊಳ್ಳಲಿಲ್ಲ.

೧೯೧೬ರ ಅಕ್ಟೋಬರ್ ತಿಂಗಳಲ್ಲಿ ಸಾರ್ವಭೌಮ ವಿಧಾನಸಭೆಯ ೧೯ ಸದಸ್ಯರು ವೈಸ್‌ರಾಯ್ ಲಾರ್ಡ್ ಚೆಲ್ಮ್ಸ್ ಫೋರ್ಡ್ ಅವರಿಗೆ ಸಂವಿಧಾನದ ತಿದ್ದುಪಡಿ ಬೇಡಿಕೆಯ ಒಂದು ನಿವೇದನಾ ಪತ್ರ ಕೊಟ್ಟಿತು. ಅದರ ಬೆನ್ನ ಹಿಂದೆಯೇ ಮುಸ್ಲಿಮ್ ಕೋಮಿನ ಪರವಾಗಿ ಮುಸ್ಲಿಮರು ಅನೇಕ ಬೇಡಿಕೆಗಳಣ್ನು ಮುಂದಿಟ್ಟರು. ಈ ಬೇಡಿಕೆಗಳು.

(೧) ಪಂಜಾಬ್ ಮತ್ತು ಮಧ್ಯಪ್ರಾಂತಗಳಿಗೆ ಪ್ರತ್ಯೇಕ ಪ್ರಾತಿನಿಧ್ಯ ತತ್ವದ ವಿಸ್ತರಣೆ.

(೨) ಪ್ರಾಂತೀಯ ಮತ್ತು ಸಾರ್ವಭೌಮ ವಿಧಾನಮಂಡಲಗಳಲ್ಲಿ ಮುಸ್ಲಿಮರ ಸಂಖ್ಯಾಬಲವನ್ನು ನಿಗದಿಪಡಿಸುವುದು.

(೩) ಶಾಸನ (ವಿಧಿ) ರೂಪಿಸುವಲ್ಲಿ ಮುಸ್ಲಿಮರ ಧರ್ಮ ಮತ್ತು ಧಾರ್ಮಿಕ ಹಿತಾಸಕ್ತಿಗಳ ಮೇಲೆ ಧಕ್ಕೆ ಬಾರದಂತೆ ರಕ್ಷಣೋಪಾಯ ಕೈಕೊಳ್ಳುವುದು.

ಈ ಬೇಡಿಕೆಗಳ ಸಂಧಾನದ ಫಲವಾಗಿ ಹಿಂದೂ ಮತ್ತು ಮುಸ್ಲಿಮರ ನಡುವೆ 'ಲಕ್ನೋ ಒಡಂಬಡಿಕೆ' ಎನ್ನುವ ಒಪ್ಪಂದ ಏರ್ಪಟ್ಟಿತು. ಈ ಒಡಂಬಡಿಕೆಯ ಎರಡು ಉಪವಾಕ್ಯಗಳಿವೆ. ಒಂದು ಶಾಸನ ಪ್ರಕ್ರಿಯೆಗೆ ಸಂಬಂಧಿಸಿದ್ದು ಅದರನ್ವಯ ಒಪ್ಪಂದ ಹೀಗಿದೆ:

"ಯಾವುದೇ ಅಧಿಕಾರೇತರ ಮೂಲದ ನಿಯಮ, ಉಪವಾಕ್ಯ ಅಥವಾ ನಿರ್ಣಯದ ಮಂಡನೆಯಿಂದ ಯಾವುದೇ ಕೋಮಿನ ಮೇಲೆ ದುಷ್ಪರಿಣಾಮವಾಗುತ್ತಿದ್ದರೆ, (ಈ ಪ್ರಶ್ನೆ ವಿಧಾನಮಂಡಲದ ಆಯಾ ಕೋಮಿನ ಸದಸ್ಯರು ತೀರ್ಮಾನಿಸುವಂಥದು) ಯಾವುದೇ ಸಾರ್ವಭೌಮ ಮತ್ತು ಪ್ರಾಂತೀಯ ಸಭೆಯಲ್ಲಿ ಆಯಾ ಕೋಮಿಗೆ ಸಂಬಂಧಿಸಿದ ಮೂರು ನಾಲ್ಕಾಂಶ ಸದಸ್ಯರು ಆ ನಿಯಮವನ್ನು ಅಥವಾ ಯಾವುದೇ ಉಪವಾಕ್ಯವನ್ನು ಅಥವಾ ನಿರ್ಣಯವನ್ನು ವಿರೋಧಿಸಿದರೆ, ಅದನ್ನು ಆಲೋಚನೆಗೆ ಎತ್ತಿಕೊಳ್ಳಕೂಡದು."

ಮತ್ತೊಂದು ಉಪವಾಕ್ಯ ಮುಸ್ಲಿಮ್ ಪ್ರಾತಿನಿಧ್ಯದ ಪ್ರಮಾಣಕ್ಕೆ ಸಂಬಂಧಿಸಿದ್ದು. ಸಾರ್ವಭೌಮ ವಿಧಾನಮಂಡಲ ಕುರಿತ ಒಪ್ಪಂದ ಕಲ್ಪಿಸಿದ ಅವಕಾಶ.

"ಮೂರನೇ ಒಂದಂಶ ಇಂಡಿಯನ್ ಚುನಾಯಿತ ಸದಸ್ಯರು ಮಹಮ್ಮದೀಯರಾಗಿರಬೇಕು, ಪ್ರತ್ಯೇಕ ಮಹಮ್ಮದೀಯ ಮತದಾರರಿಂದ ಆಯ್ಕೆಗೊಂಡು ಪ್ರಾಂತೀಯ ವಿಧಾನಮಂಡಲಗಳಲ್ಲಿ ಪ್ರತಿನಿಧಿಗಳಾಗಿರಬೇಕು; ಇನ್ನುಳಿದ ಪ್ರಾಂತಗಳ ಪ್ರತ್ಯೇಕ ಮತದಾರರಿಂದ ಅಲ್ಲಲ್ಲಿ ಗೊತ್ತುಪಡಿಸಿ ಪ್ರಮಾಣಕ್ಕನುಗುಣವಾಗಿ ಆಯ್ಕೆಗೊಂಡಿರಬೇಕು.[೧] ಪ್ರಾಂತೀಯ ವಿಧಾನಮಂಡಲಗಳಲ್ಲಿ ಮುಸ್ಲಿಮ್ ಪ್ರಾತಿನಿಧ್ಯಕ್ಕೆ ಸಂಬಂಧಿಸಿ ಮುಸ್ಲಿಮ್ ಪ್ರಾತಿನಿಧ್ಯದ ಪ್ರಮಾಣ ಈ ಕೆಳಗಿನಂತಿರಬೇಕು ಎಂದು ಒಪ್ಪಂದಕ್ಕೆ ಬರಲಾಯಿತು.[೨]

---

೧. ಮಧ್ಯಪ್ರಾಂತ ವಿಧಾನಸಭೆ ೧೯೧೪ರಲ್ಲಿ ಅಸ್ತಿತ್ವಕ್ಕೆ ಬಂದಿತು.

೨. ಅಸ್ಸಾಮದಲ್ಲಿಯ ಮುಸ್ಲಿವ್ ಪ್ರಾತಿನಿಧ್ಯದ ಪ್ರವಾಣ ಯಾವುದೋ ಕಾರಣದಿಂದ ಒಪ್ಪಂದದಲ್ಲಿ ನಿರ್ಣಯವಾಗಲಿಲ್ಲ.

**ಪ್ರಾಂತೀಯ ವಿಧಾನ ಮಂಡಲಕ್ಕೆ ಚುನಾಯಿತ ಇಂಡಿಯನ್ ಸದಸ್ಯರ ಪ್ರತಿಶತ ಸಂಖ್ಯೆ**

| | |
|---|---|
| ಪಂಜಾಬ್ | ೫೦ |
| ಸಂಯುಕ್ತ ಪ್ರಾಂತ್ಯ | ೩೦ |
| ಬೆಂಗಾಲ್ | ೪೦ |
| ಬಿಹಾರ್ ಮತ್ತು ಒರಿಸ್ಸಾ | ೨೫ |
| ಮಧ್ಯಪ್ರಾಂತ | ೧೫ |
| ಮದ್ರಾಸ್ | ೧೫ |
| ಬಾಂಬೆ | ೩೩ |

ಮುಸ್ಲಿಮರಿಗೆ ಈ ಪ್ರಮಾಣದ ಸ್ಥಳಗಳ ಅನುಮತಿ ನೀಡಿದಾಗ, ೧೯೧೯ರ ಕಾನೂನಿನ ಪ್ರಕಾರ ದೊರೆತಿದ್ದ ಸಾರ್ವತ್ರಿಕ ಮತದಾರನ ದ್ವಿತೀಯ ಮತದ ಹಕ್ಕು ಕಳೆದುಹೋಯಿತು.

ಲಕ್ನೋ ಒಪ್ಪಂದವನ್ನು ಮಾಂಟೆಗೊ ಚೆಲ್ಮ್ಸ್ ಫೋರ್ಡ್ ವರದಿ ಕಟುವಾಗಿ ಟೀಕಿಸಿತು. ಆದರೆ ಅದು ಎರಡು ಪಂಗಡಗಳ ನಡುವಿನ ಒಪ್ಪಂದವಾಗಿದ್ದುದರಿಂದ ಸರಕಾರ ಮಧ್ಯೆ ಪ್ರವೇಶಿಸಿ ತನ್ನ ನಿರ್ಣಯ ಸೇರಿಸಿ ಅದನ್ನು ತಿರಸ್ಕರಿಸಬಯಸಲಿಲ್ಲ. ಸರಕಾರವು ಒಪ್ಪಂದದ ಎರಡೂ ಖಂಡಗಳನ್ನು ಒಪ್ಪಿಕೊಂಡು ೧೯೧೯ರ ಗವರ್ನಮೆಂಟ್ ಆಫ್ ಇಂಡಿಯಾ. ಕಾಯಿದೆಯಲ್ಲಿ (ಇಂಡಿಯಾ ಸರಕಾರದ ಕಾನೂನು) ಸೇರಿಸಿತು. ಶಾಸನ ಪ್ರಕ್ರಿಯೆಗೆ ಸಂಬಂಧಿಸಿದ ಪಿಂಡ ಕಂಡಿಕೆಯನ್ನು ಬೇರೊಂದು ರೂಪದಲ್ಲಿ ಪರಿಣಾಮಕಾರಿಯಾಗಿಸಲಾಯಿತು. ಶಾಸನ ಮಂಡಲದ ಸದಸ್ಯರಿಗೇ ಅದನ್ನು ವಿರೋಧಿಸುವ ಅವಕಾಶ ಕೊಡುವುದರ ಬದಲು ಯಾವುದೇ ಪಂಗಡದ ಬ್ರಿಟಿಷ್ ಭಾರತೀಯ ಪ್ರಜೆಗಳ ಧರ್ಮ ಅಥವಾ ಧಾರ್ಮಿಕ ವಿಧಿ ಪ್ರಯೋಜನಗಳ ಮೇಲೆ ಪರಿಣಾಮ ಬೀರುವ ಕಾನೂನನ್ನು ಗವರ್ನರ್ ಜನರಲ್ ಅವರ ಪೂರ್ವಾನುಮತಿಯಿಲ್ಲದೆ ಯಾವುದೇ ಸಭೆ ಅಥವಾ ಭಾರತೀಯ ವಿಧಾನಮಂಡಲದಲ್ಲಿ ಮಂಡಿಸಕೂಡದು ಎನ್ನುವ ಅವಕಾಶ ಕಲ್ಪಿಸಿಕೊಡಲಾಯಿತು.*

ಸರಕಾರದ ಅಭಿಪ್ರಾಯದಲ್ಲಿ ಪಂಜಾಬ್ ಮತ್ತು ಬೆಂಗಾಲದ ಮುಸ್ಲಿಮರಿಗೆ ಸರಿಯಾದ ನ್ಯಾಯ ದೊರೆಯಲಿಲ್ಲ ಎಂದಿದ್ದರೂ ಪ್ರಾತಿನಿಧ್ಯಕ್ಕೆ ಸಂಬಂಧಿಸಿದ ಉಪವಾಕ್ಯವನ್ನು ಸರಕಾರ ಒಪ್ಪಿಕೊಂಡಿತು.

೧೯೧೯ರ ಗವರ್ನಮೆಂಟ್ ಆಫ್ ಇಂಡಿಯಾ ಕಾಯ್ದೆ ಪ್ರಕಾರ ರಚಿತವಾದ ವಿಧಾನಮಂಡಲಗಳ ಸ್ವರೂಪದ ಹಿನ್ನೆಲೆಯಲ್ಲಿ ಈ ರಿಯಾಯಿತಿಗಳಿಂದ ಉಂಟಾದ ಪರಿಣಾಮವನ್ನು ನೋಡಬಹುದು. ಅದು ಈ ಕೆಳಗಿನಂತೆ:

---

* ಗವರ್ನಮೆಂಟ್ ಆಫ್ ಇಂಡಿಯಾ ಕಾಯ್ದೆ, ೧೯೧೯ರ ಭಾಗ ೬೭ (೨) (ಬ)

## ವಿಧಾನಮಂಡಲಗಳ (ಸ್ವರೂಪ) ರಚನೆ

| | ವಿಧಿಬದ್ಧವಾಗಿ ಅತಿ ಕಡಿಮೆ | ಚುನಾಯಿತ ಸದಸ್ಯರು | | | ನಾಮಕರಣಗೊಂಡ ಸದಸ್ಯರು | | ವಾಸ್ತವ |
|---|---|---|---|---|---|---|---|
| | | ಒಟ್ಟು | ಮುಸ್ಲಿಮರು | ಮುಸ್ಲಿಮೇತರರು | ಅಧಿಕಾರಿಗಳು | ಅಧಿಕಾರೇತರರು | |
| ೧ | ೨ | ೩ | ೪ | ೫ | ೬ | ೭ | ೮ |
| ವಿಧಾನಸಭೆ | ೧೪೫ | ೧೦೪ | ೫೨ | ೫೨ | ೨೬ | ೧೫ | ೧೪೫ |
| ರಾಜ್ಯಪರಿಷತ್ತು | ೬೦ | ೩೩ | ೧೧ | ೨೨ | ೧೭ | ೧೦ | ೬೦ |
| ಮದ್ರಾಸ ಪ್ರಾಂತೀಯ ಪರಿಷತ್ತು | ೧೧೮ | ೯೮ | ೧೩ | ೮೫ | ೧೧ | ೨೩ | ೧೩೨ |
| ಬಾಂಬೇ ಪ್ರಾಂತೀಯ ಪರಿಷತ್ತು | ೧೧೧ | ೮೬ | ೨೭ | ೫೯ | ೧೯ | ೯ | ೧೧೪ |
| ಬೆಂಗಾಲ್ ಪ್ರಾಂತೀಯ ಪರಿಷತ್ತು | ೧೨೫ | ೧೧೪ | ೩೯ | ೭೫ | ೧೬ | ೧೦ | ೧೪೦ |
| ಯು.ಪಿ. ಪ್ರಾಂತೀಯ ಪರಿಷತ್ತು | ೧೧೮ | ೧೧೦ | ೨೯ | ೭೧ | ೧೭ | ೬ | ೧೨೩ |
| ಪಂಜಾಬ್ ಪ್ರಾಂತೀಯ ಪರಿಷತ್ತು | ೮೩ | ೭೧ | ೩೨ | ೩೯ | ೧೫ | ೮ | ೯೪ |
| ಬಿಹಾರ ಪ್ರಾಂತೀಯ ಪರಿಷತ್ತು | ೯೮ | ೭೬ | ೧೮ | ೫೮ | ೧೫ | ೧೨ | ೧೦೩ |
| ಮಧ್ಯಪ್ರಾಂತ ಪ್ರಾಂತೀಯ ಪರಿಷತ್ತು | ೭೦ | ೫೫ | ೭ | ೪೮ | ೧೦ | ೮ | ೭೩ |
| ಅಸ್ಸಾಮ್ ಪ್ರಾಂತೀಯ ಪರಿಷತ್ತು | ೫೩ | ೩೯ | ೧೨ | ೨೭ | ೭ | ೭ | ೫೩ |

ಲಕ್ನೋ ಒಪ್ಪಂದದಿಂದಾಗಿ ಮುಸ್ಲಿಮರು ದೊರಕಿಸಿದ ಪ್ರಾತಿನಿಧ್ಯದ ಪ್ರಮಾಣ ಈ ಕೆಳಗಿನ ಪಟ್ಟಿಯಂತಿದೆ.[೧]

| ಶಾಸಕಾಂಗ | ಮತದಾರ ಕ್ಷೇತ್ರದ ಒಟ್ಟು ಜನಸಂಖ್ಯೆಯ ಪ್ರತಿಶತ ಮುಸ್ಲಿಮರು (೧೯೨೧ರ ಜನಗಣತಿ) | ಒಟ್ಟು ಸದಸ್ಯರ ಸಂಖ್ಯೆಯಲ್ಲಿ ಮುಸ್ಲಿಮ್ ಸದಸ್ಯರ ಪ್ರತಿಶತ | ಚುನಾಯಿತ ಒಟ್ಟು ಇಂಡಿಯನ್ ಸದಸ್ಯರಲ್ಲಿ ಆಯ್ಕೆಗೊಂಡ ಮುಸ್ಲಿಂ ಸದಸ್ಯರ ಪ್ರತಿಶತ[೨] | ಇಂಡಿಯನ್ ಸಾರ್ವತ್ರಿಕ (ಕೋಮುವಾರು) ಮತ ಕ್ಷೇತ್ರಗಳ ಚುನಾವಣೆಯ ಮೂಲಕ ನಾಮಪತ್ರ ಸಲ್ಲಿಸಿದ ಒಟ್ಟು ಸ್ಥಳಗಳ ಸಂಖ್ಯೆಯಲ್ಲಿ ಮುಸ್ಲಿಂ ಸದಸ್ಯರ ಪ್ರತಿಶತ | ಲಕ್ನೋ ಒಪ್ಪಂದದ ಪ್ರತಿಶತ |
|---|---|---|---|---|---|
| | ೧ | ೨ | ೩ | ೪ | ೫ |
| ಪಂಜಾಬ್ | ೫೫.೨ | ೪೦ | ೪೮.೫ | ೫೦ | ೫೦ |
| ಯುನೈಟೆಡ್ ಪ್ರಾವಿನ್ಸಸ್ | ೧೪.೩ | ೨೩ | ೩೦ | ೩೨.೫ | ೩೦ |
| ಬೆಂಗಾಲ್ | ೫೪.೬ | ೩೦ | ೪೦.೫ | ೪೬ | ೪೦ |
| ಬಿಹಾರ್ ಮತ್ತು ಒರಿಸ್ಸಾ | ೧೦.೯ | ೧೮.೫ | ೨೫ | ೨೭ | ೨೫ |
| ಮಧ್ಯಪ್ರಾಂತ | ೪.೪ | ೯.೫ | ೧೩ | ೧೪.೫ | ೧೫ |
| ಮದ್ರಾಸ್ | ೬.೭ | ೧೦.೫ | ೧೪ | ೧೬.೫ | ೧೫ |
| ಬಾಂಬೆ | ೧೯.೮ | ೨೫.೫ | ೩೫ | ೩೭ | ೩೩.೩ |
| ಅಸ್ಸಾಂ | ೩೨.೨ | ೩೦ | ೩೫.೫ | ೩೭.೫ | ಅವಕಾಶವಿಲ್ಲ |
| ವಿಧಾನಸಭೆ | ೨೪.೦ | ೨೬ | ೩೪ | ೩೮ | ೩೩.೩ |

೧. ೧೯೨೯, ವರದಿ ಸಂಪುಟ ೧, ಪು. ೧೯೮ ವಿಧಿಬದ್ಧ ಆಯೋಗ

೨. ಮೂರನೆಯ ಕಾಲಂದಲ್ಲಿ ವಿಶೇಷ ಮತ ಕ್ಷೇತ್ರಗಳಿಂದ ಆಯ್ಕೆಗೊಂಡ ಇಂಡಿಯನ್ ಸದಸ್ಯರು ಸೇರಿದ್ದಾರೆ. ಅಂದರೆ, ಕಾಲಕಾಲಕ್ಕೆ ಬದಲಾವಣೆ ಹೊಂದಬಹುದಾದ ವಾಣಿಜ್ಯ ವರ್ಗ. ಅದೇ ರೀತಿ ೨ನೆಯ ಕಾಲಂದಲ್ಲಿ ಅಧಿಕಾರಿ ಮತ್ತು ನಾಮಕರಣಗೊಂಡ ಅಧಿಕಾರೇತರ ಸದಸ್ಯರ ಸಂಖ್ಯೆಯಲ್ಲಿ ಕೂಡ ಆಗಾಗ ಸ್ವಲ್ಪ ಬದಲಾವಣೆಗಳು ಕಂಡುಬರಬಹುದು.

ಈ ಕೋಷ್ಟಕವು ಲಕ್ನೋ ಒಪ್ಪಂದ ಮೂಲಕ ಮುಸ್ಲಿಮರಿಗೆ ದೊರೆತ ಲಾಭ ಎಷ್ಟು ಎನ್ನುವುದನ್ನು ಸ್ಪಷ್ಟವಾಗಿ ತೋರಿಸುವುದಿಲ್ಲ. ಲಾರ್ಡ್ ಸೌತ್ ಬರೋ ಅಧ್ಯಕ್ಷರಾಗಿದ್ದ ನಾಗರಿಕ ಹಕ್ಕು ಸಮಿತಿಯ ವರದಿಯಲ್ಲಿ ಭಾರತ ಸರಕಾರ ಆ ಕಾರ್ಯ ಮಾಡಿತು.* ಈ ಕೆಳಗಿನ ಕೋಷ್ಟಕವನ್ನು ಅದರಿಂದಲೇ ಎತ್ತಿಕೊಳ್ಳಲಾಗಿದೆ. ಅದರಲ್ಲಿ ೧೯೦೯ರ ಕಾನೂನಿನ ಮೂಲಕ ಮುಸ್ಲಿಮರಿಗೆ ದೊರೆತ (ಗೌರವ) ಪ್ರಯೋಜನಕ್ಕಿಂತ ಎಷ್ಟೋ ಪಾಲು ಹೆಚ್ಚು ಪ್ರಯೋಜನವನ್ನು, ಲಕ್ನೋ ಒಪ್ಪಂದದ ಮೂಲಕ ಅವರಿಗೆ ಲಭ್ಯವಾಗಿರುವುದು ಕಂಡುಬರುತ್ತದೆ.

| | ಜನಸಂಖ್ಯೆಯ ಮುಸ್ಲಿಮ್ ಪ್ರತಿಶತ | ಸೂಚಿತ ಮುಸ್ಲಿಮ್ ಸ್ಥಳ(ಸೀಟು)ಗಳ ಪ್ರತಿಶತ | ಪ್ರತಿಶತ (೨)ರ (೧) |
|---|---|---|---|
| | (೧) | (೨) | (೩) |
| ಬೆಂಗಾಲ್ | ೫೨.೬ | ೪೦ | ೭೬ |
| ಬಿಹಾರ್ ಮತ್ತು ಒರಿಸ್ಸಾ | ೧೦.೫ | ೨೫ | ೨೩೮ |
| ಬಾಂಬೆ | ೨೦.೪ | ೩೩.೩ | ೧೬೩ |
| ಮಧ್ಯಪ್ರಾಂತ | ೪.೩ | ೧೫ | ೩೪೯ |
| ಮದ್ರಾಸ್ | ೬.೫ | ೧೫ | ೨೩೧ |
| ಪಂಜಾಬ್ | ೫೪.೮ | ೫೦ | ೯೧ |
| ಸಂಯುಕ್ತ ಪ್ರಾಂತ | ೧೪.೦ | ೩೦ | ೨೧೪ |

ಭಾರತೀಯ ಸಂವಿಧಾನ ಕಾರ್ಯ ಪದ್ಧತಿಯ ಪರಿಶೀಲನೆ ಮತ್ತು ಅಗತ್ಯ ತಿದ್ದುಪಡಿ ಸೂಚಿಸಲು ಬ್ರಿಟಿಷ್ ಸರಕಾರವು ೧೯೨೭ರಲ್ಲಿ ಸೈಮನ್ ಆಯೋಗವನ್ನು ನೇಮಿಸಿತು. ತಕ್ಷಣವೇ ಮುಸ್ಲಿಮರು ಮತ್ತಷ್ಟು ರಾಜಕೀಯ ಬೇಡಿಕೆಗಳನ್ನು ಮುಂದಿಟ್ಟರು. ಮುಸ್ಲಿಮ್ ಲೀಗ್, ಆಲ್ ಇಂಡಿಯಾ ಮುಸ್ಲಿಮ್ ಕಾನ್ಫರೆನ್ಸ್, ಆಲ್ ಪಾರ್ಟೀಜ್ ಮುಸ್ಲಿಮ್ ಕಾನ್ಫರೆನ್ಸ್, ಜಮೀಯತ್–ಉ–ಉಲೀಮಾ ಮತ್ತು ಖಿಲಾಫತ್ ಕಾನ್ಫರೆನ್ಸ್ ಮುಂತಾದ ವಿವಿಧ ಮುಸ್ಲಿಮ್ ವೇದಿಕೆಗಳ ಮುಖಾಂತರ ಈ ಬೇಡಿಕೆಗಳನ್ನು ಮಂಡಿಸಲಾಯಿತು. ಈ ಎಲ್ಲ ಬೇಡಿಕೆಗಳ ಮುಖಾಂತರ ಈ ಬೇಡಿಕೆಗಳನ್ನು ಮಂಡಿಸಲಾಯಿತು. ಈ ಎಲ್ಲ ಬೇಡಿಕೆಗಳು ಮುಖ್ಯವಾಗಿ ಒಂದೇ ಆಗಿದ್ದವು. ಆ ಎಲ್ಲ ಬೇಡಿಕೆಗಳನ್ನು ಮುಸ್ಲಿಮ್ ಲೀಗ್ ಪರವಾಗಿ ಜಿನ್ನಾ** ಅವರೇ ರೂಪಿಸಿದ್ದರೆಂದು ಹೇಳಿದರೆ ಎಲ್ಲವನ್ನು ಹೇಳಿದಂತಾಗುತ್ತದೆ.

* ೧೯೧೯ ಏಪ್ರಿಲ್ ೨೩ರಂದು ರವಾನಿಸಲಾದ ಭಾರತೀಯ ಸಂವಿಧಾನ ತಿದ್ದುಪಡಿ (ನಾಗರಿಕ ಹಕ್ಕು)ಯ ಐದನೆಯ (ವರದಿ) ಪತ್ರ, ಪು.೨೧.

** ಜಿನ್ನಾರ ೧೪ ಅಂಶಗಳೆಂದೇ ಬೇಡಿಕೆಗಳು ಖ್ಯಾತವಾಗಿವೆ. ವಾಸ್ತವವಾಗಿ ಅವು ಒಟ್ಟು ೧೫, ಮತ್ತು ಅವುಗಳನ್ನು ೧೯೨೭ರ ಮಾರ್ಚ್ ತಿಂಗಳು ದಿಲ್ಲಿಯಲ್ಲಿ ಸೇರಿದ ಹಲವಾರು ಅಭಿಪ್ರಾಯಗಳುಳ್ಳ ಮುಸ್ಲಿಮ್ ಮುಂದಾಳುಗಳ ಸಭೆಯಲ್ಲಿ ರೂಪಿಸಿ ಮಂಡಿಸಲಾಯಿತು. ಮಿ. ಜಿನ್ನಾ ಮೂಲತಃ ವಿವರಿಸಿದ ೧೪ ಅಂಶಗಳಿಗಾಗಿ ೧೯೨೯ರ ಆಲ್ ಇಂಡಿಯಾ ರಿಜಿಸ್ಟರ್ ಸಂ.೧ರ ಪು.೨೬೭ ನೋಡಿ.

ಆ ಕರಾರು ಈ ಕೆಳಗಿನಂತಿವೆ:

೧. ಸಂವಿಧಾನ ಸಂಯುಕ್ತ ಸ್ವರೂಪದ್ದಾಗಿರಬೇಕು ಮತ್ತು ಕೆಲವೊಂದು (ಶೇಷ) ಅಧಿಕಾರಗಳು ಪ್ರಾಂತಗಳ ಅಧೀನದಲ್ಲಿರಬೇಕು.

೨. ಎಲ್ಲಾ ಪ್ರಾಂತಗಳಿಗೂ ಏಕರೂಪ ಪ್ರಮಾಣದ ಸ್ವಾಯತ್ತತೆ ಮಂಜೂರಾಗಿರಬೇಕು.

೩. ಯಾವುದೇ ಪ್ರಾಂತದ ಬಹುಸಂಖ್ಯಾತರನ್ನು ಅಲ್ಪಸಂಖ್ಯಾತ ಅಥವಾ ಸಮಾನ ಸಂಖ್ಯಾತಕ್ಕೆ ತಗ್ಗಿಸದ ರೀತಿಯಲ್ಲಿ ಪ್ರತಿಯೊಂದು ಪ್ರಾಂತದ ಅಲ್ಪಸಂಖ್ಯಾತರಿಗೆ ಪರಿಣಾಮಕಾರಿ ಹಾಗೂ ತಕ್ಕ ಪ್ರಮಾಣದ ಪ್ರಾತಿನಿಧ್ಯ ದೊರಕುವ ನಿಶ್ಚಿತ ತತ್ವವನ್ನಾಧರಿಸಿ, ದೇಶದ ಎಲ್ಲ ಚುನಾಯಿತ ಸಂಸ್ಥೆ ಮತ್ತು ಶಾಸನಗಳನ್ನು ಪುನರ್ಘಟಿಸಬೇಕು.

೪. ಕೇಂದ್ರ ಶಾಸಕಾಂಗಗಳಲ್ಲಿ ಮುಸ್ಲಿಮ್ ಪ್ರಾತಿನಿಧ್ಯ ಒಂದು ಮೂರಾಂಶಕ್ಕಿಂತ ಕಡಿಮೆ ಇರಕೂಡದು.

೫. ಕೋಮು ಗುಂಪುಗಳ ಪ್ರಾತಿನಿಧ್ಯ, ಈಗಿರುವಂತೆ– ಪ್ರತ್ಯೇಕ ಮತದಾರ ಸಮುದಾಯಗಳ ಮೂಲಕ ಮುಂದುವರಿಯಬೇಕು ಮತ್ತು ಯಾವುದೇ ಕೋಮಿಗೆ, ಯಾವುದೇ ಸಮಯದಲ್ಲಿ ತನ್ನ ಪ್ರತ್ಯೇಕ ಕೋಮಿನ ಮತದಾರ ಗುಂಪನ್ನು ಸಂಯುಕ್ತ ಮತ ಸಮುದಾಯದ ಪರವಾಗಿ ತ್ಯಜಿಸುವ ಮುಕ್ತ ಅವಕಾಶವಿರಬೇಕು.

೬. ಯಾವುದೇ ಗಡಿ ಪ್ರದೇಶದ ಮರುಹಂಚಿಕೆ ಅಗತ್ಯವೆನಿಸಿದರೆ ಅದರಿಂದ ಪಂಜಾಬ್, ಬೆಂಗಾಲ ಮತ್ತು ಉತ್ತರ ಪಶ್ಚಿಮ ಪ್ರಾಂತಗಳ ಮುಸ್ಲಿಂ ಬಹುಸಂಖ್ಯೆಯ ಮೇಲೆ ಯಾವುದೇ ರೀತಿಯ ಪರಿಣಾಮ ತಟ್ಟದಂತಿರತಕ್ಕುದ್ದು.

೭. ಎಲ್ಲ ಮತಗಳಿಗೂ ಅವರ ನಂಬಿಕೆ, ಪೂಜೆ, ಆಚರಣೆ, ಪ್ರಚಾರ, ಸಮುದಾಯ ಪ್ರಜ್ಞೆ ಮತ್ತು ಶಿಕ್ಷಣ ಇತ್ಯಾದಿ ವಿಷಯಗಳಲ್ಲಿ ಸಂಪೂರ್ಣ ಧಾರ್ಮಿಕ ಸ್ವಾತಂತ್ರ್ಯವಿರಬೇಕು.

೮. ಯಾವುದೇ ಸಂಸ್ಥೆಯಲ್ಲಿ ಯಾವುದೇ ಕೋಮಿನ ಮೂರು ನಾಲ್ಕಾಂಶ ಸದಸ್ಯರು ಯಾವುದಾದರೂ ಕಾನೂನು ಅಥವಾ ಠರಾವು ಅಥವಾ ಅದರ ಯಾವುದೇ ಭಾಗವನ್ನು ತಮ್ಮ ಕೋಮಿನ ಹಿತಾಸಕ್ತಿಗಳಿಗೆ ಧಕ್ಕೆಯಾಗುತ್ತದೆ ಎಂದು ವಿರೋಧಿಸಿದರೆ ಅಂಥ ಕಾನೂನು, ನಿರ್ಣಯ ಅಥವಾ ಅದರ ಯಾವುದೇ ಭಾಗವನ್ನು ವಿಧಾನಮಂಡಲ ಅಥವಾ ಚುನಾಯಿತ ಸಂಸ್ಥೆಯಲ್ಲಿ ಅಂಗೀಕರಿಸಬಹುದು; ಇಂಥ ಸಂದರ್ಭದಲ್ಲಿ ಪರಸ್ಪರ ಒಪ್ಪಿಗೆಯಾಗುವಂಥ ಅನುಸರಣಯೋಗ್ಯವಾದ ಪರ್ಯಾಯ ಕ್ರಮಗಳನ್ನು ಕೈಕೊಳ್ಳತಕ್ಕದ್ದು.

೯. ಸಿಂಧ್ ಪ್ರದೇಶವನ್ನು ಬಾಂಬೆ ಪ್ರಾಂತದಿಂದ ಬೇರ್ಪಡಿಸತಕ್ಕದ್ದು.

೧೦. ಉತ್ತರ–ಪಶ್ಚಿಮ ಪ್ರಾಂತದ ಗಡಿ ಪ್ರದೇಶ ಮತ್ತು ಬಲೂಚಿಸ್ತಾನಗಳಲ್ಲಿ ಇತರ ಪ್ರಾಂತಗಳಂತಹ ತಿದ್ದುಪಡಿಗಳನ್ನೇ ಚಲಾವಣೆಯಲ್ಲಿ ತರತಕ್ಕದ್ದು.

೧೧. ರಾಜ್ಯ ಸರಕಾರ ಮತ್ತು ಇತರ ಸ್ವಯಮಾಡಳಿತ ಸಂಸ್ಥೆಗಳ ಸೇವೆಗಳಲ್ಲಿ, ಅಗತ್ಯ ದಕ್ಷತೆಗಳನ್ನು ಗಮನಿಸುತ್ತ, ಇತರ ಭಾರತೀಯರ ಜೊತೆ ಮುಸ್ಲಿಮರಿಗೆ ತಕ್ಕ ಪಾಲು ದೊರಕುವ ಹಾಗೆ ಸಂವಿಧಾನದಲ್ಲಿ ಅವಕಾಶವಿರತಕ್ಕದ್ದು.

೧೨. ಮುಸ್ಲಿಮ್ ಧರ್ಮ, ಸಂಸ್ಕೃತಿ, ವ್ಯಕ್ತಿಗತ ಕಾನೂನುಗಳ ಹಿತರಕ್ಷಣೆ ಮತ್ತು ಮುಸ್ಲಿಮ್ ಶಿಕ್ಷಣಕ್ಕೆ ಭಾಷೆ, ಧರ್ಮ, ವ್ಯಕ್ತಿಗಳ ಕಾನೂನುಗಳು, ಮುಸ್ಲಿಮ್ ದತ್ತಿ ಸಂಸ್ಥೆಗಳ ಸಂವರ್ಧನೆ ಮತ್ತು

ರಾಜ್ಯ ಸರಕಾರ, ಸ್ವಯಮಾಡಳಿತ ಸಂಸ್ಥೆಗಳು ನೀಡುವ ಸಹಾಯಧನದಲ್ಲಿ ಯೋಗ್ಯ ಪಾಲು ದೊರಕುವ ಅವಕಾಶಗಳನ್ನು ಸಂವಿಧಾನದಲ್ಲಿ ಅಳವಡಿಸತಕ್ಕದ್ದು.

೧೩. ಕೇಂದ್ರ ಅಥವಾ ಪ್ರಾಂತದಲ್ಲಿ ಒಂದು ಮೂರಾಂಶ ಪ್ರಮಾಣದ ಮುಸ್ಲಿಮ್ ಮಂತ್ರಿಗಳ ಸ್ಥಾನವಿಲ್ಲದೆ, ಯಾವ ಮಂತ್ರಿಮಂಡಲವನ್ನೂ ರಚಿಸತಕ್ಕದ್ದಲ್ಲ.

೧೪. ಸಂಯುಕ್ತ ಭಾರತ ಒಳಗೊಂಡ ಪ್ರಾಂತಗಳ ಏಕಾಭಿಪ್ರಾಯವಿಲ್ಲದೆ ಕೇಂದ್ರ ಶಾಸನವು ಸಂವಿಧಾನದಲ್ಲಿ ಬದಲಾವಣೆ ಮಾಡತಕ್ಕದ್ದಲ್ಲ.

೧೫. ವರ್ತಮಾನ ಪರಿಸ್ಥಿತಿಯಲ್ಲಿ ದೇಶದ ವಿವಿಧ ಶಾಸನಸಭೆ ಮತ್ತು ಇತರ ಚುನಾಯಿತ ಸಂಸ್ಥೆಗಳಲ್ಲಿ ಪ್ರತ್ಯೇಕ ಮತ ಸಮುದಾಯದ ಮೂಲಕ ಮುಸಲ್ಮಾನರ ಪ್ರಾತಿನಿಧ್ಯ ಅನಿವಾರ್ಯ; ಇದಲ್ಲದೆ ಸರ್ಕಾರ ಪ್ರತಿಜ್ಞಾಬದ್ಧವಾಗಿದ್ದು, ಮುಸ್ಲಲ್ಮಾನರನ್ನು ಅವರ ಅನುಮತಿ ಇಲ್ಲದೆ, ಈ ಹಕ್ಕಿನಿಂದ ವಂಚಿತಗೊಳಿಸುವುದು ಸಾಧ್ಯವಿಲ್ಲ; ಮತ್ತು ಎಲ್ಲಿಯವರೆಗೆ ಮೇಲೆ ನಮೂದಿಸಿದ ರೀತಿಯಲ್ಲಿ ಅವರ ಹಕ್ಕುಬಾಧ್ಯತೆ ಮತ್ತು ಹಿತಾಸಕ್ತಿಗಳ ರಕ್ಷಣೆ ಕುರಿತು ಅವರಿಗೆ ತೃಪ್ತಿಯಾಗುವುದಿಲ್ಲವೋ ಅಲ್ಲಿಯವರೆಗೆ ಅವರು ಷರತ್ತುಗಳೊಡನೆ ಅಥವಾ ಬೇಷರತ್ತಾಗಿ ಸಂಯುಕ್ತ ಮತದಾರ ಯಾದಿ ಸ್ಥಾಪನೆಗೆ ಯಾವುದೇ ವಿಧದಲ್ಲಿ ಒಪ್ಪುವುದಿಲ್ಲ.

**ಟಿಪ್ಪಣಿ:** ಅಲ್ಪಸಂಖ್ಯಾತರಾಗಿದ್ದು, ತಮ್ಮ ಜನಸಂಖ್ಯಾ ಪ್ರಮಾಣ ಮೀರಿ, ಮುಸಲ್ಮಾನರಿಗೆ ಅಧಿಕ ಪ್ರಾತಿನಿಧ್ಯ ದೊರೆತಿರುವ ಪ್ರಾಂತಗಳ ಪ್ರಶ್ನೆಯನ್ನು ಇನ್ನು ಮುಂದೆ ಆಲೋಚಿಸಬೇಕಾಗಿದೆ. ಇದು ಮುಸ್ಲಿಮ್ ಬೇಡಿಕೆಗಳ ಕ್ರೋಢೀಕೃತ ಸಾರಾಂಶ. ಇದರಲ್ಲಿ ಕೆಲವು ಹಳೆಯವಾದರೆ ಕೆಲವು ನೂತನ. ಅವುಗಳಲ್ಲಿರುವ ಪ್ರಯೋಜನ ದೊರೆಯುತ್ತಿರಲಿ ಎಂದು ಕೆಲವು ಹಳೆಯ ಬೇಡಿಕೆಗಳನ್ನು ಉಳಿಸಿಕೊಳ್ಳಲಾಗಿದೆ. ಮುಸ್ಲಿಮ್ ಸ್ಥಾನಮಾನಗಳ ಕೊರತೆಯನ್ನು ನಿವಾರಿಸಲು ಹೊಸ ಬೇಡಿಕೆಗಳನ್ನು ಕೂಡಿಸಲಾಗಿದೆ. ಅವರಲ್ಲಿದ್ದ ಹೊಸ ಬೇಡಿಕೆಗಳ ಸಂಖ್ಯೆ ಐದು: (೧) ಪಂಜಾಬ್ ಮತ್ತು ಬೆಂಗಾಲದಲ್ಲಿ ಮುಸ್ಲಿಂ ಬಹುಸಂಖ್ಯಾತಕ್ಕೆ ಅನುಗುಣ ಪ್ರಮಾಣದಲ್ಲಿ ಪ್ರಾತಿನಿಧ್ಯ ಕೊಡುವುದು, (೨) ಕೇಂದ್ರೀಯ ಮತ್ತು ಪ್ರಾಂತೀಯ ಮಂತ್ರಿಮಂಡಲಗಳಲ್ಲಿ ಒಂದು ಮೂರಾಂಶ ಪ್ರಾತಿನಿಧ್ಯ ನೀಡುವುದು, (೩) ಸರಕಾರೀ ಸೇವೆಗಳಲ್ಲಿ ಮುಸ್ಲಿಮರಿಗೆ ತಕ್ಕಷ್ಟು ಪ್ರಾತಿನಿಧ್ಯ ಕಲ್ಪಿಸುವುದು, (೪) ಬಾಂಬೇ ಸಂಸ್ಥಾನದಿಂದ ಸಿಂಧ್ ಪ್ರದೇಶ ಪ್ರತ್ಯೇಕಿಸುವುದು ಮತ್ತು ವಾಯುವ್ಯ ಗಡಿನಾಡು ಬಲೂಚಿ ಸ್ತಾನಗಳನ್ನು ಸ್ವಯಮಾಡಳಿತ ಪ್ರಾಂತಗಳ ಸ್ಥಾನಮಾನಕ್ಕೆ ಏರಿಸುವುದು, (೫) ಕೇಂದ್ರೀಯ ಸರಕಾರದ ಅಧೀನದಲ್ಲಿಯೇ ಎಲ್ಲ ಅಧಿಕಾರಗಳನ್ನು ಬಿಡುವುದಕ್ಕಿಂತ ಅವುಗಳಲ್ಲಿ ಕೆಲವನ್ನಾದರೂ ಪ್ರಾಂತೀಯ ಸರಕಾರಗಳಿಗೆ ಬಿಟ್ಟುಕೊಡುವುದು. ಇವುಗಳಲ್ಲಿ ಬಹುಶಃ ೧, ೪ ಮತ್ತು ೫ನೆಯ ಅಂಶಗಳನ್ನುಳಿದು ಎಲ್ಲವೂ ಸ್ವವಿವರಣೆಯನ್ನೊಳಗೊಂಡಿವೆ. ೧ ಮತ್ತು ೪ನೆಯ ಬೇಡಿಕೆಗಳು ನಾಲ್ಕು ಪ್ರಾಂತಗಳಲ್ಲಿ ಮಂಡಿಸುವುದಕ್ಕಾಗಿ, ಮುಸ್ಲಿಮರಿಗೆ ಕೇವಲ ಕೋಮು ಬಹುಸಂಖ್ಯೆಯಿದ್ದಲ್ಲಿ ಅದನ್ನು ವಿಧಿಬದ್ಧ ಬಹುಸಂಖ್ಯಾತಕವೆಂದು ರೂಪಿಸುವುದು; ಅದರಿಂದ ಹಿಂದೂ ಬಹುಸಂಖ್ಯಾತರಿರುವ ಇನ್ನುಳಿದ ಆರು ಪ್ರಾಂತಗಳಲ್ಲಿ ಅವರ ಪ್ರಾಬಲ್ಯಕ್ಕೆ ಪ್ರತಿಶಕ್ತಿ ನಿರ್ಮಿಸುವುದು. ಎರಡೂ ಧರ್ಮೀಯರು ತಮ್ಮ ಅಲ್ಪಸಂಖ್ಯಾತರನ್ನು ಚೆನ್ನಾಗಿ ನೋಡಿಕೊಳ್ಳುವ ಖಾತ್ರಿಗಾಗಿ ಇದನ್ನು ಒತ್ತಾಯಿಸಲಾಯಿತು. ೫ನೇ ಬೇಡಿಕೆಯ ಉದ್ದೇಶವು ಸಿಂಧ್, ವಾಯುವ್ಯ ಗಡಿನಾಡು, ಪಂಜಾಬ್ ಮತ್ತು ಬಂಗಾಳದಲ್ಲಿ ಮುಸ್ಲಿಮ್ ಆಳ್ವಿಕೆಯನ್ನು ಖಾತ್ರಿ ಮಾಡಿಕೊಳ್ಳುವುದಾಗಿತ್ತು. ಈ ಬೇಡಿಕೆಗಳನ್ನು ಹಿಂದೂಗಳು ವಿರೋಧಿಸಿದರು. ಅದು ಅಷ್ಟೊಂದು ಮಹತ್ವದ್ದಲ್ಲ. ಆದರೆ ಸೈಮನ್ ಆಯೋಗ ಕೂಡ ಅವುಗಳನ್ನು ತಿರಸ್ಕರಿಸಿದ್ದು ಮಹತ್ವದ್ದಾಗಿದೆ. ಯಾವುದೇ

ರೀತಿಯಲ್ಲಿ ಮುಸ್ಲಿಮ್ ವಿರೋಧಿಯಾಗಿರದ ಸೈಮನ್ ಆಯೋಗ ಮುಸ್ಲಿಮರ ಬೇಡಿಕೆಗಳನ್ನು ತಿರಸ್ಕರಿಸಲು ಕೆಲವು ಖಚಿತ ಕಾರಣ ನೀಡಿತು. ಅದು ಹೇಳಿದ್ದು:*

**"ಈ ಹಕ್ಕು ಬೇಡಿಕೆ, ಈಗ ಆರು ಪ್ರಾಂತಗಳಲ್ಲಿ ದೊರೆತಿರುವ ಪ್ರಾತಿನಿಧ್ಯವನ್ನು ಸಂಪೂರ್ಣ ಭದ್ರಗೊಳಿಸುವಷ್ಟು ದೂರ ವ್ಯಾಪಿಸುತ್ತದೆ; ಮತ್ತು ಅದೇ ಕಾಲಕ್ಕೆ ಬೆಂಗಾಲ್ ಮತ್ತು ಪಂಜಾಬ್‌ಗಳಲ್ಲಿ ತಮ್ಮ ಜನಸಂಖ್ಯಾ ಪ್ರಮಾಣಕ್ಕೆ ತಕ್ಕಹಾಗೆ ಪ್ರತ್ಯೇಕ ಮುಸ್ಲಿಮ್ ಮತದಾರ ಸಮೂಹದ ಆಧಾರದ ಮೇಲೆ ತಮ್ಮ ಕೋಮಿಗೆ ಲಭಿಸಿದ ಸ್ಥಳಗಳ ಪ್ರಮಾಣವನ್ನು ಅಧಿಕಗೊಳಿಸುವುದೂ ಸೇರಿದೆ. ಇದರಿಂದಾಗಿ ಎರಡೂ ಪ್ರಾಂತಗಳಲ್ಲಿಯ ಸಾರ್ವತ್ರಿಕ ಮತಕ್ಷೇತ್ರದ ಸ್ಥಳಗಳಲ್ಲಿ ಬದಲಿಸಲಾಗದಂಥ ಸ್ಥಿರ ಬಹುಮತ ದೊರಕಿದಂತಾಗುತ್ತದೆ. ಇಷ್ಟು ದೂರ (ಎಳೆಯುವುದು) ಹೋಗುವುದು ಸಾಧ್ಯವಿಲ್ಲ. ಆರೂ ಪ್ರಾಂತಗಳ ವರ್ತಮಾನದಲ್ಲಿರುವ ಸೌಲಭ್ಯ ಪ್ರಮಾಣದ ಮುಂದುವರಿಕೆ ಕೋಮುಗಳ ನಡುವೆ ಆಗಿರುವ ಪರಸ್ಪರ ಒಪ್ಪಂದವಾಗಿರದಿದ್ದಲ್ಲಿ ಈಗ ಬಂಗಾಲ್ ಮತ್ತು ಪಂಜಾಬ್‌ಗಳಲ್ಲಿ ನೇಮಿಕವಾಗಿ ಚಲಾವಣೆಯಲ್ಲಿರುವ ಸ್ಥಿತಿಯಿಂದ ದೂರ ಸರಿದು ಒಟ್ಟುಗೂಡಿಸುವುದು ಸಾಧ್ಯವಾಗಲಾರದು.**

**"ಆರೂ ಪ್ರಾಂತಗಳಲ್ಲಿ ಮಹಮ್ಮದೀಯರು ತಮಗೆ ದೊರಕಿರುವ ಗಣನೀಯ ಪ್ರಮಾಣದ ಸೌಲಭ್ಯವನ್ನು ಹಾಗೇ ಉಳಿಸಿಕೊಳ್ಳುವುದು ಮತ್ತು ಅದೇ ಕಾಲಕ್ಕೆ ಹಿಂದೂ ಮತ್ತು ಸಿಖ್‌ರ ವಿರೋಧದ ಎದುರೇ ಪಂಜಾಬ್ ಮತ್ತು ಬೆಂಗಾಲ್‌ಗಳಲ್ಲಿ ಮತದಾರರಿಗೆ ಯಾವುದೇ ಮರುವಿಚಾರಣೆಗೂ ಬರಲಾಗದಂಥ ಸ್ಥಿರವಾದ ಮುಸ್ಲಿಮ್ ಬಹುಮತವನ್ನು ಹೇರುವುದು ಪಕ್ಷಪಾತ ಮಾಡಿದಂತಾದೀತು..."**

**ಈ ವಿಷಯವಾಗಿ ಮಧ್ಯಸ್ಥಿಕೆ ವಹಿಸಲು ಬ್ರಿಟಿಷ್ ಸರಕಾರವನ್ನು ಕೇಳಿಕೊಂಡಾಗ ಅದು ಹಿಂದೂ ಮತ್ತು ಸಿಖ್ಖರ ವಿರೋಧವನ್ನು ಲೆಕ್ಕಿಸದೆ, ಮತ್ತು ಸೈಮನ್ ಆಯೋಗದ ತಿರಸ್ಕಾರವನ್ನೂ ಗಮನಿಸದೆ, ಮುಸ್ಲಿಮರ ಎಲ್ಲ ಹಳೆಯ ಮತ್ತು ಹೊಸ ಬೇಡಿಕೆಗಳಿಗೆ ಮಂಜೂರಿ ನೀಡಿತು.**

ಭಾರತ ಸರಕಾರದ ೫೨ಎ ವಿಭಾಗ, ಉಪವಿಭಾಗ (೨)ರಲ್ಲಿ ಕೊಡಮಾಡಿದ ಅಧಿಕಾರಗಳನ್ನು ಚಲಾಯಿಸಿ, ಭಾರತ ಸರಕಾರವು ೧೯೩೨ರ ಜನವರಿ ೨೫ರಂದು ಗೆಝೆಟ್ ಆಫ್ ಇಂಡಿಯಾದಲ್ಲಿ ಒಂದು ಪ್ರಕಟಣೆ[೧] ಹೊರಡಿಸಿ ವಾಯುವ್ಯ ಸರಹದ್ದು ಪ್ರಾಂತ ಗವರ್ನರ್ ಪ್ರಾಂತವೆಂದು ಪರಿಗಣಿಸುವುದಾಗಿ ಘೋಷಿಸಿತು.[೨] ಪರಿಷತ್ತಿನ ಆದೇಶದ ಪ್ರಕಾರ ಭಾರತ ಸರಕಾರದ ೧೯೩೫ರ ವಿಧಿಯ ೨೮೯ನೆ ಭಾಗದ

---

* ವರದಿ ಸಂ.೨, ಪು.೭೧.

೧. ಪ್ರಕಟಣೆ ಸಂ.ಎಫ್ ೧೭೩:೩೧ – ಆರ್ ದಿ ೨೫ ಜನವರಿ ೧೯೩೨ರ ವಿಶೇಷ ಗೆಜೆಟ್ ಆಫ್ ಇಂಡಿಯಾದಲ್ಲಿ.

೨. ಈ ಹಕ್ಕನ್ನು ತಿರಸ್ಕರಿಸಿದ ಸೈಮನ್ ಕಮೀಸನ್ ಹೀಗೆ ಹೇಳಿತು: "ಈಗ ವಾಯುವ್ಯ ಗಡಿ ಸಂಸ್ಥಾನ ಕುರಿತು ಸಂವಿಧಾನ ರೂಪಿಸುವುದು ಅಗತ್ಯವಾಗಿದೆ ಎನ್ನುವ ಬ್ರೇ ಕಮೀಟಿಯ ಧೋರಣೆಯನ್ನು ನಾವು ಸಂಪೂರ್ಣ ಒಪ್ಪುತ್ತೇವೆ... ಅದರ ಜೊತೆಗೆ ಆ ಪ್ರಾಂತದ ಸ್ಥಿತಿಗತಿ ಮತ್ತು ಭಾರತದ ಸಂರಕ್ಷಣಾ ಸಮಸ್ಯೆಗಳೊಡನೆ ಅದು ಹೊಂದಿರುವ ನಿಕಟ ಸಂಬಂಧಗಳ ಹಿನ್ನೆಲೆಯಲ್ಲಿ ಅದಕ್ಕೆ ವಿಶೇಷ ವ್ಯವಸ್ಥೆಗಳ ಅಗತ್ಯವಿದೆಯೆನ್ನುವುದನ್ನು ಒಪ್ಪುತ್ತೇವೆ. ಅವರ ಸಮರ್ಥನೆ ಹೀಗಿತ್ತು: ಮನುಷ್ಯನ ಸಿಗರೇಟು ಸೇದುವ ಸಹಜ ಹಕ್ಕು ಒಂದು ವೇಳೆ ಅವನು ಮದ್ದಿರುವ ಜಾಗೆಯಲ್ಲಿ ಕಾರ್ಯ ಮಾಡುತ್ತಿದ್ದರೆ ಅದನ್ನು ಕತ್ತರಿಸಲೇ ಬೇಕಾಗುತ್ತದೆ."– ವರದಿ ಸಂ.೨, ಕಂಡಿಕೆ, ೧೨೦–೧೨೧.

೧ನೆಯ ಉಪವಿಭಾಗ ಒಳಗೊಂಡ ಅವಕಾಶವನ್ನಾಧರಿಸಿ ೧೯೩೬ರ ಏಪ್ರಿಲ್ ೧ರಿಂದ ಸಿಂಧ್ ಪ್ರದೇಶವನ್ನು ಬಾಂಬೇಯಿಂದ ಬೇರ್ಪಡಿಸಲು ಗವರ್ನರ್ ಅವರ ಪ್ರಾಂತವೆಂದು ಘೋಷಿಸಲಾಯಿತು. ೧೯೩೪ರ ಜುಲೈ ೭ರಂದು ಭಾರತದ ಗೃಹ ಕಾರ್ಯದರ್ಶಿಯವರು ಪ್ರಕಟಿಸಿ ಜಾರಿಗೊಳಿಸಿದ ಒಂದು ನಿರ್ಣಯದ ಪ್ರಕಾರ ಮುಸ್ಲಿಮರಿಗೆ ಕೇಂದ್ರ ಮತ್ತು ಪ್ರಾಂತಗಳ 'ಸಾರ್ವಜನಿಕ ಸೇವೆ'ಗಳಲ್ಲಿ ಪ್ರತಿಶತ ೨೫ರಷ್ಟು ಪಾಲನ್ನು ನಿಗದಿಗೊಳಿಸಲಾಯಿತು. ಶೇಷಾಧಿಕಾರವು ಪ್ರಾಂತಗಳ ಅಧೀನದಲ್ಲಿರಬೇಕು ಎನ್ನುವ ಮುಸ್ಲಿಮರ ಬೇಡಿಕೆ ಒಪ್ಪಿಕೊಳ್ಳಲಾಗಿರಲಿಲ್ಲ ಎನ್ನುವುದು ನಿಜ. ಆದರೆ ಬೇರೊಂದು ಅರ್ಥದಲ್ಲಿ ಮುಸ್ಲಿಮರ ಈ ಸಂಬಂಧದ ಬೇಡಿಕೆಗಳು ಸ್ವೀಕೃತವಾಗಿದ್ದುವೆಂದೇ ಭಾವಿಸಬಹುದು. ಶೇಷಾಧಿಕಾರಗಳು ಕೇಂದ್ರದ ಅಧೀನದಲ್ಲಿರಕೂಡದು. ಬೇರೊಂದು ರೀತಿಯಲ್ಲಿ ಹೇಳುವುದಾದರೆ ಹಿಂದೂಗಳ ಅಧೀನವಾಗಿರಕೂಡದು ಎನ್ನುವುದೇ ಮುಸ್ಲಿಮರ ಬೇಡಿಕೆಗಳ ಮುಖ್ಯಾಂಶವಾಗಿತ್ತು. ಇಂಡಿಯಾ ಸರಕಾರದ ೧೯೩೫ರ ವಿಧಿಯ ೧೦೪ನೆಯ ಅಧಿನಿಯಮದಲ್ಲಿ ಶೇಷಾಧಿಕಾರಗಳು ಗವರ್ನರ್ ಜನರಲ್ ಅವರ ಅಧೀನದಲ್ಲಿದ್ದು ಅವರ ಲೋಕಾಯುಕ್ತ ವಿವೇಚನೆಗೇ ಬಿಡಲಾಗಿದೆ ಎಂದು ಹೇಳುವ ಮೂಲಕ, ಅದನ್ನೇ ಸಾಧಿಸಲಾಯಿತು. ಕೇಂದ್ರೀಯ ಮತ್ತು ಪ್ರಾಂತೀಯ ಮಂತ್ರಿಮಂಡಲ ಪ್ರತಿಶತ ೩೩ ೧/೩ ಪ್ರಾತಿನಿಧ್ಯವಿರಬೇಕೆನ್ನುವ ಬೇಡಿಕೆಯನ್ನು ಆ ಕಾಯ್ದೆಯ ಮೂಲಕ ವಿಧಿಬದ್ಧಗೊಳಿಸಲಿಲ್ಲ. ಆದರೂ ಮಂತ್ರಿಮಂಡಲಗಳಲ್ಲಿ ಮುಸ್ಲಿಂ ಪ್ರಾತಿನಿಧ್ಯದ ಹಕ್ಕನ್ನು ಬ್ರಿಟಿಷ್ ಸರಕಾರ ಒಪ್ಪಿಕೊಂಡು ಗವರ್ನರ್ ಮತ್ತು ಗವರ್ನರ್ ಜನರಲ್ ಅವರಿಗೆ ಸೂಚನಾ ಪತ್ರಗಳ ಮೂಲಕ ಅವುಗಳನ್ನು ಜಾರಿಗೊಳಿಸುವ ಅವಕಾಶ ಮಾಡಿಕೊಟ್ಟಿತು. ಪಂಜಾಬ್ ಮತ್ತು ಬಂಗಾಳಗಳಲ್ಲಿ ಅವರ ಕಾನೂನುಬದ್ಧ ಬಹುಮತ ಸಂಬಂಧಿ ಬೇಡಿಕೆಯನ್ನು 'ಕೋಮು ಐತೀರ್ಪಿನ' ಮೂಲಕ ಜಾರಿಗೆ ತರಲಾಯಿತು. ಇಡೀ ಶಾಸನಸಭಾ ಸದನದಲ್ಲಿ ಮುಸ್ಲಿಮರಿಗೆ ಕಾನೂನುಬದ್ಧ ಬಹುಮತ ನೀಡಲಾಗಲಿಲ್ಲ, ಮತ್ತು ಇತರರ ಹಿತಾಸಕ್ತಿಗಳನ್ನು ಗಮನಿಸಿದರೆ ಅಂಥದನ್ನು ನೀಡಲು ಸಾಧ್ಯವಿಲ್ಲ ಎನ್ನುವುದು ನಿಜ. ಆದರೆ, ಲಕ್ನೋ ಒಡಂಬಡಿಕೆಯ ಹಿನ್ನೆಲೆಯಲ್ಲಿ ಮುಸ್ಲಿಮ್ ಅಲ್ಪಸಂಖ್ಯಾತರಿಗೆ ದೊರೆತ ಪ್ರಯೋಜನಗಳಿಗೆ ಎಳ್ಳಷ್ಟೂ ಧಕ್ಕೆ ತಗುಲದ ಹಾಗೆ ಪಂಜಾಬ್ ಮತ್ತು ಬಂಗಾಳಗಳ ಮುಸ್ಲಿಮರಿಗೆ ಹಿಂದೂಗಳ ಪ್ರತಿಯಾಗಿ ಕಾಯ್ದೆಬದ್ಧ ಬಹುಸಂಖ್ಯಾ ಸೌಲಭ್ಯ ಕೊಡಲಾಗಿದೆ.

ಬ್ರಿಟಿಷ್ ಸರಕಾರವು ಮುಸ್ಲಿಮ್ ಕೋಮಿಗೆ ಮಂಜೂರು ಮಾಡಿದ ರಾಜಕೀಯ ಬಕ್ಷೀಸುಗಳು ಅಷ್ಟೊಂದು ಭದ್ರವಾಗಿರಲಿಲ್ಲ. ಮತ್ತು ಹಿಂದೂಗಳು ತಮ್ಮ ಮೇಲೆ ಅಥವಾ ಚಕ್ರವರ್ತಿಯ ಸರಕಾರದ ಮೇಲೆ ಒತ್ತಡ ತರುವ ಮೂಲಕ ಮಂಜೂರಿನ ನೀತಿ ನಿಯಮಗಳು ಮುಸ್ಲಿಮರಿಗೆ ಪ್ರತಿಕೂಲವಾಗುವಂತೆ ಬದಲಾಯಿಸಬಹುದು ಎನ್ನುವ ಭಯ ಮುಸ್ಲಿಮರನ್ನು ಕಾಡುತ್ತಿತ್ತು. ಈ ಬಗೆಯ ಭಯಕ್ಕೆ ಎರಡು ಕಾರಣಗಳಿದ್ದುವು. ಗಾಂಧೀಜಿ ಆಮರಣ ಉಪವಾಸ ಸತ್ಯಾಗ್ರಹದ ಒತ್ತಡದ ಮೂಲಕ ಶೋಷಿತ ವರ್ಗಗಳಿಗೆ ಸಂಬಂಧಿಸಿದ ತೀರ್ಪು ಬದಲಾಗುವಂತೆ ಮಾಡಿದ್ದು ಒಂದು.[೧] ಈ ಯಶಸ್ಸಿನಿಂದ ಪ್ರೋತ್ಸಾಹಿತರಾದ ಕೆಲವರು ಮುಸ್ಲಿಮರಿಗೆ ಸಂಬಂಧಿಸಿದ ತೀರ್ಪಿನ ಭಾಗವನ್ನು ಬದಲಾಯಿಸಲು ಚಳುವಳಿಯನ್ನೇ ಹೂಡಿದರು ಮತ್ತು ಕೆಲ ಮುಸ್ಲಿಮರು ಈ ಬಗೆಯ ಮಧ್ಯಸ್ತಿಕೆಯಲ್ಲಿ ಭಾಗಿಗಳಾಗಲು ಕೂಡ ಸಿದ್ಧರಿದ್ದರು.[೨] ಹೌಸ್

---

೧. ೧೯೩೨ ಸೆಪ್ಟೆಂಬರ್ ೨೮ರಂದು ಸಹಿ ಮಾಡಿದ ಪೂನಾ ಒಡಂಬಡಿಕೆಯಲ್ಲಿ ಇದು ಕಾರ್ಯಗತವಾಯಿತು.

೨. ಮುಸ್ಲಿಮರಿಗೆ ಸಂಬಂಧಿತ ಬಕ್ಷೀಸ್ ಭಾಗದ ಪರಿಷ್ಕರಣ ಯತ್ನಗಳಿಗಾಗಿ 'ಆಲ್ ಇಂಡಿಯಾ ರಿಜಿಸ್ಟರ್' ೧೯೩೨, ಸಂ.೨, ಪು.೨೮೧೩೧೫ ನೋಡಿ.

ಆಫ್ ಕಾಮನ್ಸ್'ದಲ್ಲಿ ಕೆಲವು ಷರತ್ತುಗಳ ಹಿನ್ನೆಲೆಯಲ್ಲಿ ಗವ್ವರ್ನ್‌ಮೆಂಟ್ ಆಫ್ ಇಂಡಿಯಾ ಮಸೂದೆಯಲ್ಲಿ ಭಾರತ ಸರಕಾರವು ಕೆಲವು ಕಂಡಿಕೆಗಳ ಉಪವಾಕ್ಯಗಳ ತಿದ್ದುಪಡಿಗೆ ಅನುಮತಿ ನೀಡಿದ್ದರ ಪರಿಣಾಮವಾಗಿ ಈ ಬಗೆಯ ಭಯಕ್ಕೆ ಮತ್ತೊಂದು ಕಾರಣವಾಗಿತ್ತು. ಇಂಥ ಭಯಗಳನ್ನು ಮತ್ತು ಮುಸ್ಲಿಮರ ಹಿತಾಸಕ್ತಿಗಳಿಗೆ ವಿರೋಧವಾಗಿ ಅವಸರವಸರವಾಗಿ ಮಾಡಲಾದ ಮಂಜೂರು ಪುನರ್ವಿಮರ್ಶಾ ತಿದ್ದುಪಡಿಗಳ ವಿರುದ್ಧ ಸಂಪೂರ್ಣ ಭದ್ರತೆ ಒದಗಿಸಲು ಅರಸೊತ್ತಿಗೆಯ ಸರಕಾರವು ಭಾರತ ಸರಕಾರಕ್ಕೆ ಈ ಕೆಳಗಿನ ಪ್ರಕಟಣೆಯ ಮೂಲಕ ಅಧಿಕಾರ ನೀಡಿತು.[೩]

**"ಸದ್ಯಕ್ಕಿರುವ ಸರಕಾರದ ಮಸೂದೆಯ ೩೦೪ನೆಯ ಖಂಡವನ್ನು (ಮೊದಲು ಮಸೂದೆಯಲ್ಲಿದ್ದ ಸಂಖ್ಯೆ ೨೮೫, ನಂತರ ಕಾಮನ್ಸ್ ಕಮಿಟಿಯಲ್ಲಿ ತಿದ್ದುಪಡಿಗೊಂಡ ಸಂಖ್ಯೆ ೨೯೯) ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವ 'ಸರಕಾರದ ಕೋಮು ತೀರ್ಪು'ನ್ನು ಆಧರಿಸಿ ಅಗತ್ಯವೆನಿಸಿದಾಗ ಸಂವೈಧಾನಿಕ ಸೌಲಭ್ಯಗಳಿಗೆ ಅನುಗುಣವಾದ ತಿದ್ದುಪಡಿ ಮಾಡುವ ಮುಕ್ತ ಅಧಿಕಾರವನ್ನು, ಕಾಮನ್ಸ್ ಸಭೆಯ ಸ್ವೀಕೃತಿಯ ಅವಧಿಯ ಸುಧಾರಣಾ ಮಸೂದೆಯ ಮೂಲಕ ಚಕ್ರವರ್ತಿಯ ಸರಕಾರಕ್ಕೆ ಕಲ್ಪಿಸುವುದು, ಸರಕಾರದ ಗಮನಕ್ಕೆ ಬಂದಿದೆ.**

**ಕೋಮು ತೀರ್ಪಿನ ವ್ಯಾವಹಾರಿಕ (ವಾಸ್ತವ) ಪರಿಣಾಮಗಳನ್ನು ಗಮನಿಸಿ, ೩೦೪ನೆಯ ಉಪವಾಕ್ಯದ ಯಾವುದೇ ಬದಲಾವಣೆಗೆ ಸಂಬಂಧಿಸಿದಂತೆ ಮಹಾಪ್ರಭು ಸರಕಾರವು ಈ ಕೆಳಗಿನ ಸಂಕ್ಷಿಪ್ತ ವಿವರಣೆ ನೀಡುವುದು ಉಚಿತವೆಂದು ಭಾವಿಸುತ್ತದೆ.**

**ಕೋಮು ತೀರ್ಪಿನಲ್ಲಿ ಒಳಗೊಂಡ ಪ್ರಶ್ನೆಗಳು ಸೇರಿದಂತೆ ಸಂವಿಧಾನ ಮತ್ತು ಶಾಸಕಾಂಗಕ್ಕೆ ಸಂಬಂಧಿಸಿದ ಬೇರೆ ಬೇರೆ ಸಂಗತಿಗಳನ್ನು ಸಕ್ರಮಗೊಳಿಸುವ, ಪರಿಷ್ಕರಿಸುವ ಸೂಚನೆಗಳನ್ನು ಹತ್ತು ವರ್ಷಗಳ ನಂತರ ಮಂಡಿಸುವ ಹಕ್ಕನ್ನು ಈ ಖಂಡದ ಮೂಲಕ ಭಾರತದ ಸರಕಾರ ಮತ್ತು ಶಾಸಕಾಂಗಗಳಿಗೆ ನೀಡಲಾಗಿದೆ.**

**ಅದಲ್ಲದೆ, ಸೂಚಿತ ತಿದ್ದುಪಡಿ ವಿಶೇಷತಃ ಅಲ್ಪಸಂಖ್ಯಾತರ ಹಿತಸಕ್ತಿಗಳ ಮೇಲೆ ಪರಿಣಾಮ ಉಂಟುಮಾಡುವಂತಿದ್ದರೆ, ಅದನ್ನು ಸಂಸತ್ತಿನಲ್ಲಿ ಮಂಡಿಸುವ ಪೂರ್ವದಲ್ಲಿ, ಗವರ್ನರ್ ಅಥವಾ ಗವರ್ನರ್–ಜನರಲ್ ಅಗತ್ಯತೆಯನ್ನು ಗಮನಿಸಿ– ಅವರ ಅಭಿಪ್ರಾಯ ಪಡೆದುಕೊಳ್ಳುವ ಕರ್ತವ್ಯವನ್ನು ಮತ್ತು ಸಂಸತ್ತು ತೆಗೆದುಕೊಳ್ಳಬಹುದಾದ ಕ್ರಮ ಕುರಿತ ತನ್ನ ಸೂಚನೆ ನೀಡುವ ಹೊಣೆಯನ್ನು ಸೆಕ್ರೆಟರಿ ಆಫ್ ಸ್ಟೇಟ್ ಅವರ ಮೇಲೆ ಹೊರಿಸುತ್ತದೆ.**

**ಈ ಕ್ರಮದಿಂದ ಉಂಟಾಗುವ ಸಂವೈಧಾನಿಕ ಸೌಲಭ್ಯಗಳ ಯಾವುದೇ ಬದಲಾವಣೆಯನ್ನು ಪರಿಷತ್ತಿನ ಒಂದು ಆಜ್ಞೆಯ ಮೂಲಕ ಕಾರ್ಯಗತಗೊಳಿಸತಕ್ಕದ್ದು. ಆದರೆ ಇಂಥ (ಆಜ್ಞೆಯ) ಕರಡು ಸಂಸತ್ತಿನ ಎರಡೂ ಸದನಗಳಲ್ಲಿ ಒಂದು ನಿರ್ಣಯದ ರೂಪದಲ್ಲಿ ಸ್ವೀಕೃತಿ ಪಡೆದಿರಬೇಕು. ಆ ಷರತ್ತು ಮಸೂದೆಯ ೩೦೫ನೆಯ ಖಂಡ ವಾಕ್ಯದಿಂದ ಸುರಕ್ಷಿತಗೊಂಡಿದೆ.**

**ಹತ್ತು ವರ್ಷ ಕಾಲಾವಧಿ ಪೂರ್ಣಗೊಳ್ಳುವುದಕ್ಕೆ ಮೊದಲೇ ಭಾರತ ಸರಕಾರ ಮತ್ತು ಶಾಸಕಾಂಗದಲ್ಲಿ (ನೆಲೆಸಿರುವವರಿಗೆ) ಈ ಇದೇ ರೀತಿಯ ಸಂವೈಧಾನಿಕ ಉಪಕ್ರಮಗಳು (ಲಭ್ಯ) ಇರುವುದಿಲ್ಲ. ಇಷ್ಟಾದರೂ ಪರಿಷತ್ತಿನ (ಸದಾ ಸಂಸತ್ತಿನ ಎರಡೂ ಸದನಗಳ ಸ್ವೀಕೃತಿ ಪಡೆಯಬೇಕು). ಸ್ವೀಕೃತಿಗಾಗಿ, ಒಂದು**

---

೩. ಈ ಪ್ರಕಟನೆಯ ದಿನಾಂಕ, ಸಿಮ್ಲಾ ಜುಲೈ ೭, ೧೯೩೫.

**ನಿರ್ಣಯದ ಮೇರೆಗೆ ರೂಪಿತವಾದ ಒಂದು ಖಂಡವಾಕ್ಯದ ಮೂಲಕ ಹತ್ತು ವರ್ಷ ಕಾಲಾವಧಿ ಪೂರ್ಣಗೊಳ್ಳುವ ಮೊದಲು ಕೂಡ (ಅಗತ್ಯವೆನಿಸಿದರೆ) ಬದಲಾವಣೆ ಮಾಡಿಕೊಳ್ಳುವ ಅಧಿಕಾರವನ್ನು ನೀಡಲಾಗಿದೆ.**

**ಮೇಲಿನ ಕಂಡಿಕೆಯಲ್ಲಿ ನಮೂದಿಸಲಾಗಿರುವ ಅಧಿಕಾರಗಳ ಅಗತ್ಯತೆಯ ಕಾರಣಗಳು ಈ ಕೆಳಗಿನಂತಿವೆ:**

**(ಅ) ಮತಾಧಿಕಾರ ಮತ್ತು ಶಾಸಕಾಂಗಗಳ ಸಂವಿಧಾನಗಳಿಗೆ ಸಂಬಂಧಿಸಿದ ಸಣ್ಣಪುಟ್ಟ ಬದಲಾವಣೆಗಳ ಅಗತ್ಯ ಯಾವ ಸಮಯದಲ್ಲಿ ತಲೆದೋರುವುದೆಂದು ಹೇಳಲು ಸಾಧ್ಯವಿಲ್ಲ ಮತ್ತು ಪರಿಷತ್ತಿನ ಸಮ್ಮತ ಕಾಯ್ದೆ ಮೂಲಕ ಇಂಥ ಬದಲಾವಣೆಗೆ ಅವಕಾಶವಿಲ್ಲದಿದ್ದರೆ ಅದೆಂದೂ ಪ್ರಯೋಜನಕಾರಿಯಾಗಲಾರದು. ಅಲ್ಲದೆ, ಕೋಮು ತೀರ್ಪಿನ ಕರಾರುಗಳಲ್ಲಿ ಇದಕ್ಕೂ ಮಹತ್ವದ ವಿಷಯಗಳಿಂದ ಪ್ರತ್ಯೇಕವಾಗಿ ಇಂಥ ಸಣ್ಣಪುಟ್ಟ ವಿವರಗಳನ್ನು ವಿದಿಬದ್ಧಗೊಳಿಸುವುದು ವ್ಯಾವಹಾರಿಕವೂ ಆಗಲಾರದು.**

**(ಬಿ) ಇಂಡಿಯಾದಲ್ಲಿ ಪರಸ್ಪರ ನಿರ್ವಿವಾದ ಏಕಾಭಿಪ್ರಾಯವುಂಟಾದಾಗ ಕೋಮು ತೀರ್ಪಿನ ಸೌಲಭ್ಯಗಳನ್ನು ಆಧರಿಸಿ ಬದಲಾವಣೆಗಳನ್ನು ಮಾಡುವುದು ಅಪೇಕ್ಷಣೀಯವಾಗಬಹುದು; ಮತ್ತು ಸಂಸತ್ತಿಗೆ ಕಾಯ್ದೆ ತಿದ್ದುಪಡಿಯ ಅವಕಾಶಗಳಿಲ್ಲದೆ ಹೋದರೆ, ಪರಸ್ಪರ ಸಮ್ಮತಿಯ ಮೇರೆಗೆ ಮಾಡಬಹುದಾದ ಬದಲಾವಣೆಗಳೂ ಪ್ರಯೋಜನಕಾರಿಯಾಗಲಾರವು.**

**ಖಂಡ ವಾಕ್ಯದಲ್ಲಿ ಮಂಜೂರಾದ ಅಧಿಕಾರವನ್ನು ಬಳಸಿಕೊಂಡು, ಕೋಮು ತೀರ್ಪಿನ ವ್ಯಾಪ್ತಿಯ ಒಳಗೆ, ಪರಸ್ಪರ ಕೋಮುಗಳ ಸಮ್ಮತಿಯಿಲ್ಲದೆ ಸಂಸತ್ತಿಗೆ ಬದಲಾವಣೆಯ ಯಾವುದೇ ಸಲಹೆ ನೀಡುವುದನ್ನು ಸಾರ್ವಭೌಮ ಸರ್ಕಾರವು ಅನುಮೋದಿಸಲಾರದು. "ಕೊನೆಯದಾಗಿ, ೩೦೫ನೆಯ ಉಪವಾಕ್ಯದ ಅವಕಾಶಗಳ ಹಿನ್ನೆಲೆಯಲ್ಲಿ, ಸಂಸತ್ತಿನ ಎರಡೂ ಸದನಗಳು ದೃಢೀಕೃತ ನಿರ್ಣಯದ ಮೂಲಕ ಅನುಮೋದಿಸದ ಹೊರತು, ೩೦೪ನೆಯ ಉಪವಾಕ್ಯದಲ್ಲಿ ನಮೂದಿತವಾದ ಯಾವುದೇ ಅಧಿಕಾರವನ್ನು ಚಲಾಯಿಸಕೂಡದು.**

ದುಂಡುಮೇಜಿನ ಪರಿಷತ್ತಿನ ಮುಂದಿಡಲಾದ ಮುಸ್ಲಿಮರ ಬೇಡಿಕೆಗಳು ಮತ್ತು ಅವುಗಳಿಗೆ ದೊರೆತ ಮನ್ನಣೆಗಳನ್ನು ಗಮನಿಸಿದರೆ, ಮುಸ್ಲಿಮರ ಎಲ್ಲ ಬೇಡಿಕೆಗಳು ಈಡೇರಿದುವು ಮತ್ತು ೧೯೩೨ರ ಒಪ್ಪಂದ ಒಂದು ಅಂತಿಮ ಒಪ್ಪಂದ ಎನ್ನುವುದು ಯಾರಿಗಾದರೂ ಹೊಳೆಯುವ ಮಾತು. ಆದರೆ ಮುಸಲ್ಮಾನರಿಗೆ ಇದರಿಂದಲೂ ತೃಪ್ತಿಯಾದಂತೆ ಕಾಣಲಿಲ್ಲ. ಮುಸ್ಲಿಮರ ಹಿತರಕ್ಷಣೆಯ ಬೇಡಿಕೆಗಳ ಹೊಸ ಯಾದಿಯೊಂದು ಆಗಲೇ ಸಿದ್ಧವಾಗಿರುವಂತೆ ತೋರಿತು. ೧೯೩೮ರಲ್ಲಿ ಜಿನ್ನಾ ಮತ್ತು ಕಾಂಗ್ರೆಸ್ ನಡುವೆ ನಡೆದ ವಾದ ವಿವಾದದಲ್ಲಿ ತಮ್ಮ ಬೇಡಿಕೆಗಳನ್ನು ಬಹಿರಂಗಗೊಳಿಸುವಂತೆ ಜಿನ್ನಾರವರನ್ನು ಕೇಳಿದಾಗ, ಅವರು ನಿರಾಕರಿಸಿದರು. ಆದರೆ ಜಿನ್ನಾ ಮತ್ತು ಪಂಡಿತ ನೆಹರೂ ನಡುವೆ ನಡೆದ ಪತ್ರವ್ಯವಹಾರಗಳಲ್ಲಿ ಈ ಬೇಡಿಕೆಗಳು ಕಂಡುಬಂದಿದ್ದು, ತಮ್ಮ ವಾದ ವಿವಾದಗಳ ಕಾಲದಲ್ಲಿ ಪಂಡಿತ ನೆಹರು ತಾವು ಜಿನ್ನಾ ಅವರಿಗೆ ಬರೆದ ಒಂದು ಪತ್ರದಲ್ಲಿ ಅವುಗಳ ಪಟ್ಟಿ ಮಾಡಿದ್ದಾರೆ. ಅವರ ಪಟ್ಟಿ ತೋರಿಸುವ ನಿರ್ಣಯಗೊಳ್ಳಬೇಕಾದ ವಾದಗ್ರಸ್ತ ವಿಷಯಗಳು ಈ ಕೆಳಗಿನಂತಿವೆ.*

---

* ಇಂಡಿಯನ್ ಆನ್ಯುವಲ್ ರಿಜಿಸ್ಟರ್, ೧೯೩೮, ೨೦.೧, ಸಂ.೧, ಪು.೩೬೯.

೧. ೧೯೨೯ರಲ್ಲಿ ಮುಸ್ಲಿಮ್ ಲೀಗ್ ರೂಪಿಸಿದ ಹದಿನಾಲ್ಕು ಅಂಶಗಳು.
೨. ಕಾಂಗ್ರೆಸ್ ಕೋಮು ಐತೀರ್ಪನ್ನು ಕುರಿತ ತನ್ನ ಎಲ್ಲ ವಿರೋಧವನ್ನು ಹಿಂದೆಗೆದುಕೊಳ್ಳತಕ್ಕದ್ದು ಮತ್ತು ಅದು ರಾಷ್ಟ್ರೀಯತೆಯ ನಿರಾಕರಣೆ ಎಂದು ವಿವರಿಸಕೂಡದು.
೩. ರಾಜ್ಯ(ಸರಕಾರ)ದ ಸೇವೆಗಳಲ್ಲಿ ಮುಸ್ಲಿಮರ ಪಾಲನ್ನು ವಿಧಿಬದ್ಧ ಕಾನೂನಿನ ಮೂಲಕ ಸಂವಿಧಾನದಲ್ಲಿ ನಿಗದಿಪಡಿಸಬೇಕು.
೪. ಮುಸ್ಲಿಮ್ ವ್ಯಕ್ತಿಗತ ಕಾನೂನು ಮತ್ತು ಸಂಸ್ಕೃತಿಗಳಿಗೆ ಶಾಸನಬದ್ಧ ಖಾತ್ರಿಯಿರತಕ್ಕದ್ದು.
೫. ಶಾಹಿದ್ ಗಂಜ್ ಮಸೀದಿಗೆ ಸಂಬಂಧಿಸಿದ ಚಳುವಳಿಯನ್ನು ಕಾಂಗ್ರೆಸ್ ತನ್ನ ಕೈಗೆತ್ತಿಕೊಳ್ಳಬೇಕು ಮತ್ತು ಅದನ್ನು ಮುಸ್ಲಿಮರು ತಮ್ಮ ವಶಕ್ಕೆ ತೆಗೆದುಕೊಳ್ಳಲು ಅನುವಾಗುವಂತೆ ತನ್ನ ನೈತಿಕ ಒತ್ತಡವನ್ನು ಬಳಸಬೇಕು.
೬. ಅಜಾನ್ ಕರೆ ಮತ್ತು ತಮ್ಮ ಇತರ ಧಾರ್ಮಿಕ ಸಮಾರಂಭಗಳನ್ನು ನೆರವೇರಿಸುವ ಹಕ್ಕುಗಳಿಗೆ ಯಾವುದೇ ನಿರ್ಬಂಧಗಳಿರಕೂಡದು.
೭. ಮುಸ್ಲಿಮರಿಗೆ ಗೋಹತ್ಯೆಯ ಸ್ವಾತಂತ್ರ್ಯವಿರಬೇಕು.
೮. ಸಧ್ಯ ಯಾವುದೇ ಪ್ರಾಂತದಲ್ಲಿರುವ ಮುಸ್ಲಿಮ್ ಬಹುಸಂಖ್ಯೆಗೆ, ಗಡಿನಾಡಿಗೆ ಸಂಬಂಧಿಸಿದ ಯಾವುದೇ ಮರುವಿಂಗಡಣೆ ಅಥವಾ ಹೊಂದಾಣಿಕೆಗಳಿಂದ ಧಕ್ಕೆಯಾಗಕೂಡದು.
೯. 'ವಂದೇಮಾತರಂ' ಗೀತೆಯನ್ನು ಬಿಟ್ಟು ಬಿಡಬೇಕು.
೧೦. ಉರ್ದು ಇಂಡಿಯಾದ ರಾಷ್ಟ್ರೀಯ ಭಾಷೆಯಾಗಬೇಕು ಎನ್ನುವುದು ಮುಸ್ಲಿಮರ ಅಪೇಕ್ಷೆ ಮತ್ತು ಅದಕ್ಕಾಗಿ ಉರ್ದುವಿನ ಬಳಕೆಗೆ ಯಾವುದೇ ಆತಂಕ ಅಥವಾ ಧಕ್ಕೆಗಳುಂಟಾಗದಂತೆ ಶಾಸನಬದ್ಧ ರೂಪದ ಭರವಸೆಯನ್ನು ಅವರು ಬಯಸುತ್ತಾರೆ.
೧೧. 'ಕೋಮು ಐತೀರ್ಪಿ'ನಲ್ಲಿ ನಮೂದಿತವಾಗಿರುವ ಮತದಾರಯಾದಿ ಹಾಗೂ ಜನಸಂಖ್ಯಾಬಲದ ತತ್ವಗಳನ್ನಾಧರಿಸಿ, ಸ್ಥಳೀಯ ಸಂಸ್ಥೆಗಳಲ್ಲಿ ಮುಸ್ಲಿಮ್ ಪ್ರಾತಿನಿಧ್ಯವಿರಬೇಕು.
೧೨. ತ್ರಿವರ್ಣ ಧ್ವಜವನ್ನು ಬದಲಾಯಿಸಬೇಕು ಅಥವಾ ಮುಸ್ಲಿಮ್ ಲೀಗ್ ಧ್ವಜಕ್ಕೆ ಸಮಾನ ಮಹತ್ವ ಕೊಡಬೇಕು.
೧೩. ಮುಸ್ಲಿಮ್ ಲೀಗ್‌ನ್ನು ಇಂಡಿಯನ್ ಮುಸ್ಲಿಮರ ಒಂದು ಅಧಿಕೃತ ಮತ್ತು ಪ್ರಾತಿನಿಧಿಕ ಸಂಘಟನೆ ಎಂದು ಮಾನ್ಯವಾಗಬೇಕು.
೧೪. ಸಮ್ಮಿಶ್ರ ಮಂತ್ರಿಮಂಡಲಗಳನ್ನು ರಚಿಸಬೇಕು.

ಈ ಹೊಸ ಪಟ್ಟಿಯಿಂದ ಮುಸ್ಲಿಮರ ಬೇಡಿಕೆಗಳಿಗೆ ಕೊನೆ ಇದೆ ಎಂದೇ ಗೊತ್ತಾಗುವುದಿಲ್ಲ. ಒಂದು ವರ್ಷದ ಅವಧಿಯಲ್ಲಿ– ಅಂದರ ೧೯೩೮ ಮತ್ತು ೧೯೩೯– ಪ್ರತಿಯೊಂದರಲ್ಲೂ ಪ್ರತಿಶತ ೫೦ರಷ್ಟು ಪಾಲು ಕೇಳುವ ಗಟ್ಟಿಯಾದ ಮತ್ತೊಂದು ಬೇಡಿಕೆಯನ್ನು ಸೇರಿಸಲಾಗಿದೆ. ಹೊಸ ಬೇಡಿಕೆಗಳ ಈ ಪಟ್ಟಿಯಲ್ಲಿ ಹೊಣೆಗೇಡಿತನದ್ದೆಂದು ಹೇಳಲಾಗದಿದ್ದರೂ, ಮೇಲ್ನೋಟಕ್ಕೇ ಕೆಲವು ಅತಿ ಮತ್ತು ಅಸಾಧ್ಯವೆನ್ನುವುದು ಎದ್ದು ಕಾಣುತ್ತವೆ. ಉದಾಹರಣೆಗಾಗಿ ಐವತ್ತು–ಐವತ್ತರ ಬೇಡಿಕೆ ಮತ್ತು ಉರ್ದು, ಇಂಡಿಯಾದ ರಾಷ್ಟ್ರಭಾಷೆಯೆಂದು ಮನ್ನಿಸುವ ಬೇಡಿಕೆಯನ್ನು ನೋಡಬಹುದು. ೧೯೨೯ರಲ್ಲಿ ಮುಸ್ಲಿಮರು ವಿಧಾನಸಭೆಗಳ ಸ್ಥಳ ನೀಡಿಕೆಯಾಗುವಾಗ, ಬಹುಸಂಖ್ಯಾತರನ್ನು ಅಲ್ಪಸಂಖ್ಯಾತ ಅಥವಾ ಸಮಸಂಖ್ಯಾತಕ್ಕೆ ಇಳಿಸಕೂಡದು ಎಂದು ಒತ್ತಾಯಿಸಿದರು. ಇದು ತಮ್ಮಿಂದಲೇ ಪ್ರತಿಪಾದಿತವಾದ

ತತ್ವ. ಅದನ್ನು ಈಗ ಕೈಬಿಡುವ ಬೇಡಿಕೆ; ಅದರಿಂದಾಗಿ ಬಹುಸಂಖ್ಯಾತರನ್ನು ಸಮಸಂಖ್ಯಾತರ ಪ್ರಮಾಣಕ್ಕೆ ಇಳಿಸಲಾಯಿತು. ೧೯೨೯ರಲ್ಲಿ ಮುಸ್ಲಿಮರು, ಇತರ ಅಲ್ಪಸಂಖ್ಯಾತರಿಗೂ ತಮ್ಮ (ಮುಸ್ಲಿಮರ) ರೀತಿಯಲ್ಲಿಯೇ ರಕ್ಷಣೆ ಲಭ್ಯವಾಗಬೇಕು ಎಂದು ಸಮ್ಮತಿಸಿದರು. ಮುಸ್ಲಿಮ್ ಮತ್ತು ಇತರ ಅಲ್ಪಸಂಖ್ಯಾತರ ನಡುವೆ ಇದ್ದ ಒಂದೇ ಒಂದು ವ್ಯತ್ಯಾಸವೆಂದರೆ ರಕ್ಷಣೆಗೆ ಸಂಬಂಧಿಸಿದ್ದು. ತಮ್ಮ ರಾಜಕೀಯ ಮಹತ್ವದ ಹಿನ್ನೆಲೆಯಲ್ಲಿ, ಇತರ ಅಲ್ಪಸಂಖ್ಯಾತರಿಗೆ ದೊರಕಿದ ಪ್ರಮಾಣಕ್ಕಿಂತ ಅಧಿಕ ಪ್ರಮಾಣದ ರಕ್ಷಣೆಯ ಹಕ್ಕು ತಮಗೆ ದೊರೆಯಬೇಕೆಂದು ಕೇಳಿದರು. ಇತರ ಅಲ್ಪಸಂಖ್ಯಾತರ ಸಮರ್ಥ ರಕ್ಷಣೆಯ ಅಗತ್ಯತೆಯನ್ನು ಮುಸ್ಲಿಮರು ಎಂದೂ ನಿರಾಕರಿಸಲಿಲ್ಲ. ಆದರೆ ಪ್ರತಿಶತ ೫೦ರ ತಮ್ಮ ಹೊಸ ಬೇಡಿಕೆಯಿಂದಾಗಿ ಮುಸ್ಲಿಮರು, ಬಹುಸಂಖ್ಯಾತ ಹಿಂದೂಗಳನ್ನು ಅಲ್ಪಸಂಖ್ಯಾತರನ್ನಾಗಿಸುವುದಲ್ಲದೆ, ಇತರ ಅಲ್ಪಸಂಖ್ಯಾತರ ರಾಜಕೀಯ ಹಕ್ಕುಗಳಿಗೂ ಕತ್ತರಿ ಹಾಕುತ್ತಿದ್ದಾರೆ. ಈಗ ಮುಸ್ಲಿಮರು ಹಿಟ್ಲರ್‌ನ ಭಾಷೆಯನ್ನು ಆಡುತ್ತಿದ್ದಾರೆ ಮತ್ತು ಹಿಟ್ಲರ್ ಜರ್ಮನಿಯಲ್ಲಿ ವರ್ತಿಸುವ ಹಾಗೆ ಇವರೂ ತಮಗೆ ಸೂರ್ಯಗ್ರಹದಲ್ಲಿ ಸ್ಥಾನ ದೊರೆಯಬೇಕು ಎನ್ನುತ್ತಿದ್ದಾರೆ. ಏಕೆಂದರೆ, ಅವರ ಪ್ರತಿಶತ ೫೦ರ ಬೇಡಿಕೆಯು ಇತರ ಅಲ್ಪಸಂಖ್ಯಾತರನ್ನು ಯಾವ ಗಣನೆಗೂ ತೆಗೆದುಕೊಳ್ಳದೆ, ತಮಗಾಗಿಯೇ ಡಾಯಿಷ್ ಲ್ಯಾಂಡ್ ಯಬರ್ ಆಪ್ಲಸ್ (ಜರ್ಮನ್ ರಾಷ್ಟ್ರಗೀತೆ) ಮತ್ತು ತಿಬೆನ್ರಾಯ್ (ಸೂರ್ಯನ ಕೆಳಗೆ ಒಂದು ನೆಲೆ) ಕೇಳುವ ಹಕ್ಕಿಗಿಂತ ಯಾವ ರೀತಿಯಲ್ಲೂ ಬೇರೆಯಾಗಿಲ್ಲ.

ಉರ್ದು ಇಂಡಿಯಾದ ರಾಷ್ಟ್ರಭಾಷೆಯೆಂದು ಮಾನ್ಯವಾಗಬೇಕೆನ್ನುವ ಅವರ ಬೇಡಿಕೆ ಕೂಡ ಅಷ್ಟೇ ಅತಿಯಾದುದು. ಉರ್ದು ಇಂಡಿಯಾದ ತುಂಬ ಮಾತಾಡುವ ಭಾಷೆಯಾಗಿಲ್ಲ. ಅಷ್ಟೇ ಅಲ್ಲ, ಅದು ಎಲ್ಲ ಮುಸಲ್ಮಾನರ ಭಾಷೆ ಕೂಡ ಆಗಿಲ್ಲ. ೬೮ ಮಿಲಿಯನ್ ಮುಸ್ಲಿಮರಲ್ಲಿ* ೨೮ ಮಿಲಿಯ ಜನ ಉರ್ದು ಮಾತಾಡುತ್ತಾರೆ. ಉರ್ದು ರಾಷ್ಟ್ರೀಯ ಭಾಷೆಯಾಗಬೇಕು ಎನ್ನುವ ಸೂಚನೆಯ ಅರ್ಥ ೨೮ ಮಿಲಿಯ ಮುಸ್ಲಿಮರಾಡುವ ಭಾಷೆಯನ್ನು (ವಿಶೇಷತಃ) ೪೦ ಮಿಲಿಯ ಮುಸ್ಲಿಮರ ಮೇಲೆ ಮತ್ತು ಸಾರ್ವತ್ರಿಕವಾಗಿ ೩೨೨ ಮಿಲಿಯನ್ ಭಾರತೀಯರ ಮೇಲೆ ಹೇರಬೇಕು ಎಂದಾಯಿತು.

ಹೀಗೆ ಸಂವಿಧಾನದ ಪರಿಷ್ಕಾರ ಸೂಚನೆಗಳು ಬಂದಾಗಲೆಲ್ಲ ಮುಸ್ಲಿಮರು ತಮ್ಮ ಹೊಸ ರಾಜಕೀಯ ಬೇಡಿಕೆಗಳೊಂದಿಗೆ ಸಿದ್ಧ. ಮುಸ್ಲಿಮರ ಈ ಬಗೆಯ ಅನಿಶ್ಚಿತ ಬೇಡಿಕೆಗಳ ವಿಸ್ತರಣೆಗೆ ಬ್ರಿಟಿಷ್ ಸರಕಾರದ ಅಧಿಕಾರವೊಂದೇ ನಿರ್ಬಂಧಕ ಶಕ್ತಿ; ಮತ್ತು ಹಿಂದೂ ಮುಸಲ್ಮಾನರ ನಡುವೆ ತಲೆದೋರುವ ಯಾವುದೇ ವಾದ ವಿವಾದಕ್ಕೆ ಅದೇ ಅಂತಿಮ ತೀರ್ಪುಗಾರ. ಈ ಹೊಸ ಬೇಡಿಕೆಗಳ ವಾದಗ್ರಸ್ತತೆಯ ತೀರ್ಪಿಗಾಗಿ ಬ್ರಿಟಿಷರ ಮಧ್ಯಸ್ಥಿಕೆ ಕೋರಿದಾಗ ಅವರು ಮುಸ್ಲಿಮರ ಪರ ನಿರ್ಣಯ ಕೊಡುವುದಿಲ್ಲ ಎಂದು ವಿಶ್ವಸನೀಯವಾಗಿ ಯಾರು ಹೇಳಬಲ್ಲರು? ಮುಸ್ಲಿಮರು ಹೆಚ್ಚು ಹೆಚ್ಚು ಬೇಡಿದಷ್ಟೂ ಬ್ರಿಟಿಷರು ಅವರಿಗೆ ಸ್ಥಳಾವಕಾಶ ಕಲ್ಪಿಸಿ ಕೊಡುತ್ತಿರುವಂತಿದೆ. ಏನಿದ್ದರೂ ಮುಸ್ಲಿಮರಿಗೆ ಸ್ವತಃ ಅವರೇ ಕೇಳಿದ್ದಕ್ಕಿಂತ ಹೆಚ್ಚಿನ ಅವಕಾಶಗಳನ್ನು ಬ್ರಿಟಿಷರು ಕೊಡುವ ಅಪೇಕ್ಷೆ ಹೊಂದಿರುವುದು ಈ ಹಿಂದಿನ ಅನುಭವಗಳಿಂದ ಎದ್ದುಕಾಣುತ್ತದೆ. ಇಂಥ ಎರಡು ಉದಾಹರಣೆಗಳನ್ನು ಎತ್ತಿ ಹೇಳಬಹುದು.

ಇವುಗಳಲ್ಲಿ ಒಂದು ಲಕ್ನೋ ಒಡಂಬಡಿಕೆಗೆ ಸಂಬಂದಿಸಿದ್ದು. ಬ್ರಿಟಿಷ್ ಸರಕಾರ ಈ ಒಡಂಬಡಿಕೆಯನ್ನು ಒಪ್ಪುವುದೋ ಇಲ್ಲವೋ ಎನ್ನುವ ಪ್ರಶ್ನೆಯಿತ್ತು. ಬಹಳ ಮಹತ್ವದ ಕಾರಣಗಳಿಗಾಗಿ, ಮಾಂಟೆಗೊ ಚೆಲ್ಮ್ಸ

---

* ಈ ಅಂಕಿಸಂಖ್ಯೆಗಳು ೧೯೨೧ರ ಜನಗಣತಿಯನ್ನು ಆಧರಿಸಿವೆ.

ಫೋರ್ಡ್ ವರದಿಯ ಕೃತಿಕಾರರು ಅದನ್ನು ಒಪ್ಪುವ ಇಚ್ಛೆ ಹೊಂದಿರಲಿಲ್ಲ. ಲಕ್ನೋ ಒಡಂಬಡಿಕೆಯಿಂದಾಗಿ ಮುಸ್ಲಿಮರಿಗೆ ಮಂಜೂರಾದ ಪ್ರಯೋಜನ ಕುರಿತು ಆ ಸಂಯುಕ್ತ ವರದಿಯ ಲೇಖಕರು ಹೀಗೆ ಅಭಿಪ್ರಾಯಪಟ್ಟಿದ್ದರು.[೧]

**"ಈಗ ದೊರೆತಿರುವ ಇಂಥ ಪ್ರತಿಷ್ಠಿತ ಸ್ಥಾನಮಾನ ಆಕ್ಷೇಪಣೆಗೆ ಎಡೆಮಾಡಿಕೊಡುತ್ತದೆ. ಇನ್ನು ಮೇಲೆ ಯಾವುದೇ ಕೋಮು ಪ್ರತ್ಯೇಕ ಪ್ರಾತಿನಿಧ್ಯದ ಹಕ್ಕು ಕೇಳಿದರೆ, ಅದನ್ನು ಕೇವಲ ಮುಸ್ಲಿಮೇತರ ಸ್ಥಳಗಳ ಕಡಿತ ಮಾಡಿ ಅಥವಾ ಮುಸ್ಲಿಮ್ ಮತ್ತು ಮುಸ್ಲಿಮೇತರ ಇಬ್ಬರಿಗೂ ನೀಡಿದ ಸ್ಥಳ ಪ್ರಮಾಣಗಳ ಕಡಿತದಿಂದ ಕೊಡಬೇಕಾಗುತ್ತದೆ; ಮತ್ತು ಅನುಸರಿಸಬೇಕಾದ ಪ್ರಕ್ರಿಯೆ ಕುರಿತು ಹಿಂದೂ–ಮುಸ್ಲಿಮರು ಒಂದೇ ಬಗೆಯ ಅಭಿಪ್ರಾಯ ಹೊಂದಲಾರರು. ಈ ವಿವರಣೆಯ ಕಾರಣದಿಂದಾಗಿ, ಮಹಮ್ಮದೀಯರಿಗೆ ಪ್ರತ್ಯೇಕ ಪ್ರಾತಿನಿಧ್ಯ ಕಾಪಾಡಿಕೊಂಡು ಬರುವ ವಿಷಯದಲ್ಲಿ, ಇತರ (ಕೋಮುಗಳ) ಹಿತಾಸಕ್ತಿಗಳ ಮೇಲೆ ಯಾವುದೇ ಧಕ್ಕೆಯುಂಟಾಗದು ಎಂದು ಖಚಿತಗೊಳ್ಳುವವರೆಗೆ ಮತ್ತು ಅವರಿಗೆ ಸರಿಯಾದ ಅವಕಾಶ ಲಭ್ಯವಾಗುವವರೆಗೆ, ನಮ್ಮ ಮುಂದಿರುವ ಈ ಪ್ರಸ್ತಾವನೆ ಕುರಿತ ನಮ್ಮ ಸಮ್ಮತಿಯನ್ನು ಅನಿವಾರ್ಯವಾಗಿ ಕಾಯ್ದಿರಿಸಲಾಗಿದೆ."**

ಲಕ್ನೋ ಒಡಂಬಡಿಕೆಯ ಈ ಗುರುತರ ದೋಷವನ್ನು ಕಡೆಗಣಿಸಿ, ಬೆಂಗಾಲ್ ಮುಸ್ಲಿಮರಿಗೆ ಸಂಬಂಧಿಸಿದಂತೆ ಮಾತ್ರ ಒಡಂಬಡಿಕೆಯ ಷರತ್ತುಗಳನ್ನು ತಿದ್ದಬೇಕು ಎಂದು ಗವರ್ನಮೆಂಟ್ ಆಫ್ ಇಂಡಿಯಾ ತನ್ನ ಪತ್ರದ ಮೂಲಕ ಶಿಫಾರಸು ಮಾಡಿತು. ಅದು ನೀಡಿದ ಕಾರಣಗಳು ಅಚ್ಚರಿಯುಂಟುಮಾಡುತ್ತವೆ. ಅದರ ಹೀಗಿತ್ತು:

**"ಬೆಂಗಾಲದ ಮಹಮ್ಮದೀಯರಿಗೆ ಅವರು (ಒಡಂಬಡಿಕೆಯ ಕರ್ತೃಗಳು) ನೀಡಿರುವ ಪ್ರಾತಿನಿಧ್ಯ ಅಸಮರ್ಪಕ ಎನ್ನುವುದು ಸ್ಪಷ್ಟ.[೨] ಕಾಂಗ್ರೆಸ್–ಲೀಗ್ ಒಪ್ಪಂದ ರೂಪುಗೊಳ್ಳುತ್ತಿದ್ದಾಗ ಪೂರ್ವ ಬೆಂಗಾಲದ ಮಹಮ್ಮದೀಯ ಜನತೆಯ ಹಕ್ಕುಗಳ ಮೇಲೆ ಸಮರ್ಪಕ ಒತ್ತು ಕೊಡಲಾಯಿತೋ ಇಲ್ಲವೋ ಎನ್ನುವುದು ಪ್ರಶ್ನಾರ್ಹವಾಗಿದೆ. ಅವರು ಹಿಂದುಳಿದವರು, ದುರ್ಬಲರು ಎನ್ನುವುದು ಸುಸ್ಪಷ್ಟ. ೧೯೧೨ರಲ್ಲಿ ಆದ ಪ್ರಾಂತ ವಿಭಜನೆ ಅವರಿಗೊಂದು ತೀವ್ರ ನಿರಾಶೆ. ಈಗ ಅವರ ಹಿತಾಸಕ್ತಿಗಳನ್ನು ಉದಾರವಾಗಿ ಸಂರಕ್ಷಿಸದಿದ್ದರೆ ಗುರುತಿಸುವಲ್ಲಿ ತಪ್ಪಿದರೆ ನಾವು ಮತ್ತು ಅದಕ್ಕೂ ಅಧಿಕವಲ್ಲದ ರೀತಿಯಲ್ಲಿ ಅವರಿಗೆ ೩೪ ಸ್ಥಳಗಳ ಬದಲು ೪೪ ಸ್ಥಳಗಳನ್ನು (ಒಡಂಬಡಿಕೆಗನುಗುಣವಾಗಿರುವ ಅವರ ಪಾಲು) ಗೊತ್ತುಪಡಿಸಬೇಕು.**

ಇಂಡಿಯಾ ಸರಕಾರವು ಬಂಗಾಳದ ಮುಸ್ಲಿಮರಿಗಾಗಿ ತೋರಿದ ಈ ಉತ್ಸುಕತೆಯಲ್ಲಿ ಬ್ರಿಟಿಷ್ ಸರಕಾರ ಪಾಲುದಾರವಾಗಿರಲಿಲ್ಲ. ಒಂದು ಒಪ್ಪಂದದ ಪರಿಣಾಮವಾಗಿ, ಬೆಂಗಾಲ ಮುಸ್ಲಿಮರಿಗೆ

೧. ಮಾಂಟೆಗೊ–ಚೆಲ್ಮ್ಸ್ ಫೋರ್ಡ್ ವರದಿ, ೧೯೧೮, ಕಂಡಿಕೆ ೧೬೩.

೨. ಪಂಜಾಬ್ ಪ್ರಾಂತಕ್ಕೂ ಅನ್ಯಾಯವಾಗಿದೆಯೆಂದು ಭಾರತ ಸರಕಾರ ಭಾವಿಸಿತು. ಆದರೆ ಬಂಗಾಲದ ಹಾಗೆ ವಿಭಜನೆಯ ಅನಿರ್ಣಿತೆಯ ವಿಶೇಷ ಸಮಸ್ಯೆ ಅಲ್ಲಿರಲಿಲ್ಲವಾದ ಕಾರಣ ಆ ಪ್ರಾಂತದ ಜನರು, ಒಡಂಬಡಿಕೆಯ ತೀರ್ಪಿಗೆ ಅನುಗುಣವಾಗಿ ಪ್ರಾತಿನಿಧ್ಯ ಕುರಿತ ಯಾವುದೇ ಹೆಚ್ಚಿನ ಪ್ರಸ್ತಾವನೆಗಳನ್ನು ಮುಂದೊಡ್ಡಲಿಲ್ಲ.

ಕೊಡಮಾಡಿರುವ ಸ್ಥಳ ಸಂಖ್ಯೆಯ ವಿಷಯದಲ್ಲಿ, ಅದೂ ಒಪ್ಪಂದದ ಯಥಾರ್ಥತೆಯ ಬಗ್ಗೆ ವ್ಯಾಜ್ಯವಿಲ್ಲದಿರುವಾಗ ಅದನ್ನು ವೃದ್ಧಿಗೊಳಿಸಲು ತಲೆ ಹಾಕುವುದು ಸರಿಯಲ್ಲ. ಹಾಗೆ ಮಾಡಿದ್ದಾದರೆ, ಬ್ರಿಟಿಷ್ ಸರಕಾರ ವಿಶಿಷ್ಟ ಭಾವನೆ ಹೊಂದಿದ್ದು ಯಾವುದೋ ವಿಶೇಷ ಕಾರಣಕ್ಕಾಗಿ ಮುಸ್ಲಿಮರ ಸ್ನೇಹಿತನಾಗಿದೆ ಎನ್ನುವ ಅಭಿಪ್ರಾಯ ಜನರಲ್ಲಿ ಮೂಡಬಹುದು ಎನ್ನುವುದು ಅದರ (ಬ್ರಿಟಿಷ್ ಸರಕಾರ) ಅನಿಸಿಕೆಯಾಗಿತ್ತು. ಬೆಂಗಾಲ ಮತ್ತು ಪಂಜಾಬದ ಮುಸ್ಲಿಮರಿಗೆ ಒಡಂಬಡಿಕೆಯಲ್ಲಿ ಅವರ ಜನಸಂಖ್ಯಾ ಪ್ರಮಾಣಕ್ಕೆ ಅನುಗುಣವಾಗಿ ಯಾಕೆ ಸ್ಥಳಗಳನ್ನು ಕೊಡಮಾಡಲಿಲ್ಲ ಎನ್ನುವ ಸಂಗತಿಯನ್ನು, ಭಾರತ ಸರಕಾರವು ಅವರಿಗೆ ಅಧಿಕ ಸ್ಥಳ ನೀಡಬೇಕು ಎಂದು ಸೂಚಿಸುವಾಗ ಮರೆತುಬಿಟ್ಟಿತು. ಒಂದು ಕೋಮು ರಾಜಕೀಯ ರಕ್ಷಣೆಗೆ ಅರ್ಹವಲ್ಲ ಎನ್ನುವ ತತ್ವ ಲಕ್ನೋ ಒಡಂಬಡಿಕೆಯ ಆಧಾರವಾಗಿತ್ತು. ಅದೀಗ ಗಾಳಿಗೆ ತೂರಲ್ಪಟ್ಟಿದೆ. ಒಂದುವೇಳೆ ಕೋಮು ಅಲ್ಪಸಂಖ್ಯಾತವಾಗಿದ್ದರೆ, ಆಗ ಅದು ರಾಜಕೀಯ ರಕ್ಷಣೆಗೆ ಯೋಗ್ಯವಾದುದು. ಇದು ಲಕ್ನೋ ಒಡಂಬಡಿಕೆಯ ಆಧಾರತತ್ವವಾಗಿತ್ತು. ಪಂಜಾಬ್ ಮತ್ತು ಬೆಂಗಾಲಗಳಲ್ಲಿ ಮುಸ್ಲಿಮ್ ಕೋಮು ಅಲ್ಪಸಂಖ್ಯಾತವಾಗಿರಲಿಲ್ಲ. ಆ ಕಾರಣದಿಂದಾಗಿ ಅಲ್ಪಸಂಖ್ಯಾತವಾಗಿದ್ದ ಪ್ರಾಂತಗಳಲ್ಲಿ ಅವರಿಗೆ (ಮುಸ್ಲಿಮ್) ದೊರೆತ ಅದೇ ಬಗೆಯ ರಾಜಕೀಯ ರಕ್ಷಣೆಗೆ ಅವರು ಈ ಪ್ರಾಂತಗಳಲ್ಲೂ (ಪಂಜಾಬ ಮತ್ತು ಬೆಂಗಾಲ) ಅರ್ಹವಾಗಿರಲಿಲ್ಲ. ಪಂಜಾಬ್ ಮತ್ತು ಬೆಂಗಾಲ್‌ಗಳಲ್ಲಿ ತಾವು ಬಹುಸಂಖ್ಯಾತರಾಗಿರುವುದನ್ನು ಕಡೆಗಣಿಸಿ, ತಮಗೆ ಪ್ರತ್ಯೇಕ ಮತದಾರ ಅಂಗದ ಅಗತ್ಯತೆಯಿದೆ ಎಂದು ಭಾವಿಸಿದರೂ ಒಡಂಬಡಿಕೆಯ ಹಿನ್ನೆಲೆಯಲ್ಲಿದ್ದ ತತ್ವಕ್ಕನುಗುಣವಾಗಿ, ಅಲ್ಪಸಂಖ್ಯಾತರಾದಾಗ ಮಾತ್ರ ಅವರು ಅಂಥ ಸೌಲಭ್ಯಕ್ಕೆ ಅರ್ಹರಾಗುತ್ತಾರೆ (ಕಾರಣ) ಅವರು ಅಲ್ಪಸಂಖ್ಯಾತ ಸ್ಥಳಗಳಿಗೆ ಒಪ್ಪಿ, ಆ ಅರ್ಹತೆ ಪಡೆದರು. ಬೆಂಗಾಲ್ ಮತ್ತು ಪಂಜಾಬದಲ್ಲಿಯ ಮುಸ್ಲಿಮರು ತಮ್ಮ ಜನಸಂಖ್ಯೆಯನ್ನು ಆಧರಿಸಿ ಬಹುಸಂಖ್ಯಾತ ಸ್ಥಳ ಪಡೆಯದಿದ್ದುದಕ್ಕೆ ಇದೇ ಮುಖ್ಯ ಕಾರಣ.*

ಬಂಗಾಳದ ಮುಸ್ಲಿಮರಿಗೆ ಅವರು ಕೇಳಿದುದಕ್ಕಿಂತ ಹೆಚ್ಚಿಗೆ ಕೊಡಬೇಕೆನ್ನುವ ಭಾರತ ಸರಕಾರದ ಪ್ರಸ್ತಾವನೆ ಬಿದ್ದುಹೋಯಿತು. ಆದರೆ, ಅವರು ಹೀಗೆ ಮಾಡಬಯಸಿದ್ದರು ಎನ್ನುವುದು ಮಾತ್ರ ಅವರ ಒಲವುಗಳಿಗೆ ಸಾಕ್ಷಿಯಾಗಿ ಉಳಿಯುತ್ತದೆ.

ಮಧ್ಯಸ್ಥಿಕೆಗಾರನಾಗಿದ್ದ ಬ್ರಿಟಿಷ್ ಸರಕಾರ ಮುಸ್ಲಿಮರಿಗೆ ಅವರು ಕೇಳಿದ್ದಕ್ಕಿಂತ ಹೆಚ್ಚಿಗೆ ಕೊಟ್ಟರು ಎನ್ನುವ ಎರಡನೆಯ ಸಂದರ್ಭವೆಂದರೆ ೧೯೩೨ರಲ್ಲಿ ಅವರಿತ್ತ (ಕಮ್ಯೂನಲ್ ಡಿಸಿಷನ್) ಕೋಮು ನಿರ್ಣಯ. ಮೊಹಮ್ಮದ್ ಷಫಿ ದುಂಡುಮೇಜು ಪರಿಷತ್ತಿನ ಅಲ್ಪಸಂಖ್ಯಾತ ಉಪಸಮಿತಿಯಲ್ಲಿ ಎರಡು

---

* ಒಡಂಬಡಿಕೆಗೆ ಭಾಗೀದಾರರಾದ ಮುಸ್ಲಿಮರಿಗೆ ಈ ವಿಷಯವು ನಿಸ್ಸಂಶಯವಾಗಿ ಚೆನ್ನಾಗಿ ತಿಳಿದಿತ್ತು. ಭಾರತ ಸರಕಾರದ ೧೯೧೯ರ ಮಸೂದೆ ನೇಮಕ ಮಾಡಿದ ಸಂಯುಕ್ತ ಆಯ್ಕೆ ಸಮಿತಿಯ ಮುಂದೆ ಸಾಕ್ಷೀದಾರರಾಗಿ ೩೮೦೮ನೆಯ ಪ್ರಶ್ನೆಗೆ ನೀಡಿದ ಉತ್ತರ ಹೀಗಿದೆ: "ಬೆಂಗಾಲ ಸ್ಥಾನ ಹೀಗಿತ್ತು: ಬೆಂಗಾಲದಲ್ಲಿ ಮುಸ್ಲಿಮರು ಬಹುಸಂಖ್ಯಾತರಾಗಿದ್ದಾರೆ ಮತ್ತು ಬಹುಸಂಖ್ಯಾತ ಯಾವುದೇ ಗುಂಪು ಅಥವಾ ಕೋಮು ಪ್ರತ್ಯೇಕ ಮತದಾರ ಅಂಗ ಹೊಂದಲು ಅರ್ಹವಾಗುವುದಿಲ್ಲ. ಅಲ್ಪಸಂಖ್ಯಾತ ರಕ್ಷಣೆಗಾಗಿ ಪ್ರತ್ಯೇಕ ಮತದಾರ ಅಂಗವಿರುತ್ತದೆ ಎನ್ನುವ ವಾದ ಮುಂದಿಡಲಾಗಿತ್ತು. ಸಂಖ್ಯಾದೃಷ್ಟಿಯಿಂದ ನಾವು ಬಹುಸಂಖ್ಯಾತರೆನ್ನುವ ಪ್ರತಿವಾದ ಪೂರಾ ಸತ್ಯ. ಆದರೆ ಮತದಾರರಾಗಿ ಬೆಂಗಾಲ್‌ದಲ್ಲಿ – ಬಡತನ ಹಿಂದುಳಿಯುವಿಕೆ ಇತ್ಯಾದಿ ಕಾರಣಗಳಿಂದ ನಾವು ಅಲ್ಪಸಂಖ್ಯಾತರೇ. ಆಯಿತು, ಹಾಗಾದರೆ ಪ್ರತಿಶತಃ ೪೦ ನಿರ್ದಿಷ್ಟಪಡಿಸಿ. ಯಾಕೆಂದರೆ ನಿಮ್ಮನ್ನು ಪರೀಕ್ಷೆಗೆ ಈಡು ಮಾಡಿದರೆ ನಿಮಗೆ ಪ್ರತಿಶತಃ ೪೦ ಲಭ್ಯವಾಗದು. ನೀವು ಮತದಾರರೆಂದು ಅರ್ಹರಾಗುವುದಿಲ್ಲ. ಹಾಗಾದರೆ ನಮಗೆ ಇತರ ಪ್ರಾಂತಗಳಲ್ಲಿ ಪ್ರಯೋಜನಗಳಿದ್ದುವು.

ಬೇರೆ ಬೇರೆ ಪ್ರಸ್ತಾವನೆಗಳನ್ನು ಮುಂದಿಟ್ಟರು. ೧೯೩೧, ಜನವರಿ ೬ರ ತಮ್ಮ ಭಾಷಣದಲ್ಲಿ ಸರ್ ಮೊಹಮ್ಮದ್ ಷಫಿ ಕೋಮು ತೀರ್ಪಿಗೆ ಆಧಾರವೆಂದು ಈ ಕೆಳಗಿನ ಪ್ರಸ್ತಾವನೆಯನ್ನು ಮಂಡಿಸಿದರು: (ದುಂಡುಮೇಜು ಪರಿಷತ್ತಿನ ಅಲ್ಪಸಂಖ್ಯಾತ ಉಪಸಮಿತಿಯ ಮೊದಲ ಸಭೆ: ಇಂಡಿಯನ್ ಸಂಪುಟ ಪು.೯೬) "ನಾವು ಸಂಯುಕ್ತ ಮತದಾರ ಅಂಗಗಳನ್ನು ಈ ಕೆಳಗಿನ ಕರಾರುಗಳ ಮೇಲೆ ಒಪ್ಪಿಕೊಳ್ಳಲು ಸಿದ್ಧರಿದ್ದೇವೆ. ಮೊದಲನೆಯದಾಗಿ, ಮುಸಲ್ಮಾನರು ಬಹುಸಂಖ್ಯಾತ ಪ್ರಾಂತಗಳಲ್ಲಿ ಹೊಂದಿರುವ ಹಕ್ಕುಗಳು ಹಾಗೆಯೇ ಮುಂದುವರೆಯಬೇಕು. ಪಂಜಾಬ್ ಮತ್ತು ಬೆಂಗಾಲ್‌ಗಳಲ್ಲಿ ಅವರು ಜನಸಂಖ್ಯಾ ಪ್ರಮಾಣವನ್ನಾಧರಿಸಿ, ಎರಡು ಪ್ರತ್ಯೇಕ ಪ್ರಾತಿನಿಧ್ಯ ಮತ್ತು ಮತದಾರ ಅಂಗಗಳಿರಬೇಕು. ಮೌಲಾನಾ ಮೊಹಮ್ಮದ್ ಅಲಿ ಅವರ ಷರತ್ತುಗಳನ್ನೊಳಗೊಂಡ ಸ್ಥಳಗಳ ರಕ್ಷಣೆಯ ತತ್ವ ಪಾಲಿಸಲ್ಪಡಬೇಕು" (ಮಹಮ್ಮದಲಿಯವರ ಸೂತ್ರ, ಸಂಯುಕ್ತ ಮತದಾರ ಅಂಗಗಳ ಪರವಾಗಿತ್ತು ಮತ್ತು ಆರಕ್ಷಿತ ಸ್ಥಳಗಳಿಗೆ ಸಂಬಂಧಿಸಿದಂತೆ ಯಾವುದೇ ಅಭ್ಯರ್ಥಿ, ತನ್ನ ಕೋಮಿನ ಪ್ರತಿಶತ ೪೦ ಮತ್ತು ಇತರ ಕೋಮಿನ ಕನಿಷ್ಠ ಪ್ರತಿಶತ ಐದರಿಂದ ಹತ್ತು ಮತ ಗಳಿಸದ ಹೊರತು ಅವನು ಆಯ್ಕೆಯಾಗಿದ್ದಾನೆಂದು ಸಾರಕೂಡದು ಎನ್ನುವ ಅಭಿಪ್ರಾಯ ಹೊಂದಿತ್ತು).

೧೯೩೧ ಜನವರಿ ಹದಿನಾಲ್ಕರ ಅದೇ ಸಭೆಯ ಮುಂದೆ, ತಮ್ಮ ಭಾಷಣದಲ್ಲಿ ಅವರ ನಿವೇದನೆ ಬೇರೆಯದಾಗಿತ್ತು. ಅವರು ಹೇಳಿದರು:

> **"ಇವೊತ್ತು ನಾನು ಈ ನಿವೇದನೆ ಮಾಡಲು ಅಧಿಕಾರಸ್ಥನಾಗಿದ್ದೇನೆ: ಪಂಜಾಬಿನ ಮುಸಲ್ಮಾನರಿಗೆ, ಇಡೀ ಸದನದ ಒಟ್ಟು ಸಂಖ್ಯೆಯಲ್ಲಿ ಪ್ರತಿಶತ ೪೯ ಸ್ಥಾನಗಳು ಕೋಮು ಮತದಾರ ಕ್ಷೇತ್ರಗಳ ಮೂಲಕ ಲಭ್ಯವಾಗಬೇಕು ಮತ್ತು ಅವರು ಹುಟ್ಟುಹಾಕಬೇಕೆಂದಿರುವ ಹೊಸ ವಿಶೇಷ ಮತ ಕ್ಷೇತ್ರದಲ್ಲಿ ಸ್ಪರ್ಧಿಸುವ ಸ್ವಾತಂತ್ರ್ಯ ಅವರಿಗಿರಬೇಕು; ಅಲ್ಪಸಂಖ್ಯಾತ ಪ್ರಾಂತಗಳಿಗೆ ಸಂಬಂಧಿಸಿ, ಈಗಿರುವಂತೆ ಪ್ರತ್ಯೇಕ ಮತದಾರರ ಅಂಗಗಳ ಮೂಲಕ ದೊರಕುವ ಲಾಭ ಮುಂದುವರೆಯಬೇಕು ಮತ್ತು ಸಿಂಧ್ ಪ್ರಾಂತದ ನಮ್ಮ ಹಿಂದೂ ಸೋದರರಿಗೆ, ಉತ್ತರ–ಪಶ್ಚಿಮ (ವಾಯುವ್ಯ) ಗಡಿನಾಡು ಪ್ರಾಂತದ ಹಿಂದೂ ಸಿಖ್ ಸೋದರರಿಗೆ, ಅದೇ ರೀತಿಯ ಸೌಲಭ್ಯಗಳನ್ನು ಕೊಡಮಾಡಬೇಕು. ಮುಂದೆ, ಯಾವುದೇ ಒಂದು ಸಮಯದಲ್ಲಿ ಯಾವುದೇ ರಾಜ್ಯ ಶಾಸನ ಸಭೆ ಅಥವಾ ಕೇಂದ್ರ ಶಾಸನ ಮಂಡಲದ ಯಾವುದೇ ಕೋಮಿನ ಮೂರನೇ ಒಂದಂಶ ಪ್ರತಿನಿಧಿಗಳು ಕೋಮುವಾರು ಮತದ ಕ್ಷೇತ್ರಗಳನ್ನು ಬಿಟ್ಟು ಸಂಯುಕ್ತ ಮತದಾರ ಕ್ಷೇತ್ರಗಳ ರಚನೆಗೆ ಅಪೇಕ್ಷಿಸಿದರೆ ಅಂದಿನಿಂದ ಸಂಯುಕ್ತಮತದಾರ ಕ್ಷೇತ್ರಗಳು ಅಸ್ತಿತ್ವಕ್ಕೆ ಬರಬೇಕು."**

ಎರಡೂ ಪ್ರಸ್ತಾವನೆಗಳ ನಡುವಿನ ವ್ಯತ್ಯಾಸ ಸ್ಪಷ್ಟವಿದೆ: "ವಿಧಿಬದ್ಧ ಬಹುಸಂಖ್ಯಾತತೆ ಜೊತೆಗೂಡಿದರೆ, ಸಂಯುಕ್ತ ಮತದಾರ ಕ್ಷೇತ್ರ; ಒಂದು ವೇಳೆ ಕಾನೂನುಬದ್ಧ ಬಹುಸಂಖ್ಯಾತತೆ ತಿರಸ್ಕೃತವಾದರೆ ಪ್ರತ್ಯೇಕ ಮತದಾರರ ಕ್ಷೇತ್ರಗಳ ಜೊತೆ ಅಲ್ಪಸಂಖ್ಯಾತ ಸ್ಥಳಗಳು." ಬ್ರಿಟಿಷ್ ಸರಕಾರ ಮೊದಲನೆಯ ಬೇಡಿಕೆಯಿಂದ ವಿಧಿಬದ್ಧ ಬಹುಸಂಖ್ಯಾತತೆ ಮತ್ತು ಎರಡನೆಯದರಿಂದ ಪ್ರತ್ಯೇಕ ಮತದಾರ ಕ್ಷೇತ್ರ ಹೀಗೆ ಮುಸ್ಲಿಮರು ಎರಡನ್ನೂ ಕೇಳದಿದ್ದರೂ ಎರಡು ಸೌಲಭ್ಯಗಳನ್ನು ಕೂಡಿಸಿಯೇ ಅವರಿಗೆ ನೀಡಿತು. ಎರಡನೇ ವಿಚಾರವೆಂದರೆ, ಹಿಂದೂಗಳ ದೌರ್ಬಲ್ಯವನ್ನು ಸ್ವಪ್ರಯೋಜನಕ್ಕಾಗಿ ಶೋಷಿಸುವುದು ಮುಸ್ಲಿಮರ ಧೋರಣೆಯಲ್ಲಿ ಗಮನಾರ್ಹ ಸಂಗತಿಯಾಗಿದೆ. ಹಿಂದೂಗಳು ಯಾವುದಕ್ಕಾದರೂ ಆಕ್ಷೇಪಣೆಯೆತ್ತಿದರೆ ಅದನ್ನೇ ಒತ್ತಾಯಿಸುವುದು ಮತ್ತು ಹಿಂದೂಗಳು ಪರ್ಯಾಯವಾಗಿ ಇತರ ರಿಯಾಯಿತಿಗಳನ್ನು ತೋರಿಸಿದಾಗ ಮಾತ್ರ ತಮ್ಮ

ಒತ್ತಾಯವನ್ನು ಬಿಟ್ಟುಕೊಡುವುದು ಮುಸ್ಲಿಮರ ಧೋರಣೆಯಾಗಿರುವಂತೆ ತೋರುತ್ತದೆ. ಉದಾಹರಣೆಯಾಗಿ ಸಂಯುಕ್ತ ಮತ ಕ್ಷೇತ್ರ ಮತ್ತು ಪ್ರತ್ಯೇಕ ಮತ ಕ್ಷೇತ್ರದ ಪ್ರಶ್ನೆಯನ್ನು ನೋಡಬಹುದು. ನನಗೆ ತಿಳಿದ ಮಟ್ಟಿಗೆ, ಹಿಂದೂಗಳು ಸಂಯುಕ್ತ ಮತ ಕ್ಷೇತ್ರಕ್ಕಾಗಿ ಹೋರಾಡಿದ್ದು– ವಿಶೇಷತಃ ಮುಸ್ಲಿಮರು ಅಲ್ಪಸಂಖ್ಯಾತರಾಗಿರುವ ಪ್ರಾಂತಗಳಲ್ಲಿ– ತೀರಾ ಮೂರ್ಖತನ. ಸಂಯುಕ್ತ ಮತಕ್ಷೇತ್ರವು ರಾಷ್ಟ್ರೀಯತೆಗೆ ಎಂದೂ ತೃಪ್ತಿಕರ ಆಧಾರವಾಗಲಾರದು. ರಾಷ್ಟ್ರೀಯತೆಯೆನ್ನುವುದು ರಾಜಕೀಯ ಸಂಬಂಧ ಅಥವಾ ನಗದು ಸಂಬಂಧದ ವಸ್ತುವಲ್ಲ; ಏಕೆಂದರೆ ಐಕ್ಯತೆ ಕೇವಲ ಬಾಹ್ಯ ವಸ್ತುಗಳ ಲೆಕ್ಕಾಚಾರದಿಂದ ಸಾಧಿಸುವುದಲ್ಲ. ತಮ್ಮ ತಮ್ಮದೇ ವಿಭಿನ್ನ ಜೀವನ ಧೋರಣೆ ರೀತಿಗಳನ್ನು ಒಳನೀತಿಗಳನ್ನು ರೂಪಿಸಿಕೊಂಡು ಬಾಳುವ ಎರಡು ಕೋಮುಗಳು, ಐದು ವರ್ಷಕ್ಕೊಂದು ಸಲ ಚುನಾವಣೆಯಲ್ಲಿ ಮತ ನೀಡುವುದಕ್ಕಾಗಿ ಒಂದು ದಿನ ಒಗ್ಗಟ್ಟಾಗುವುದರಿಂದ ಅದರಲ್ಲಿ ಐಕ್ಯತೆ ಸಾಧಿಸಲಾರದು. ಸಂಯುಕ್ತ ಮತ ಕ್ಷೇತ್ರ ಪದ್ಧತಿ, ಅಲ್ಪಸಂಖ್ಯಾತರನ್ನು ಬಹುಸಂಖ್ಯಾತರ ದಾಸ್ಯಕ್ಕೆ ಈಡು ಮಾಡಬಹುದು. ಆದರೆ, ಇದಾವುದೂ ತನ್ನಷ್ಟಕ್ಕೆ ತಾನೇ ರಾಷ್ಟ್ರೀಯತೆಯನ್ನು ಒಡಮೂಡಿಸಲಾರದು. ಏನಿದ್ದರೂ ಹಾಗೆ ಇರಲಿ. ಯಾಕೆಂದರೆ, ಹಿಂದೂಗಳು ಸಂಯುಕ್ತ ಮತ ಸಮುದಾಯಕ್ಕೆ ಒತ್ತಾಯಿಸುತ್ತಿದ್ದಾರೆ. ಮುಸ್ಲಿಮರು ಪ್ರತ್ಯೇಕ ಮತ ಸಮುದಾಯಕ್ಕೆ ಒತ್ತಾಯಿಸುತ್ತಿದ್ದಾರೆ. ಈ ಬಗೆಯ ಒತ್ತಾಯ ಕೇವಲ ಒಂದು ಕೊಡುಕೊಳ್ಳುವ ವ್ಯವಹಾರ ಎನ್ನುವುದು ಮಿ. ಜಿನ್ನಾರು ಸೂಚಿಸಿದ ೧೪[೧] ಅಂಶಗಳಿಂದ ಮತ್ತು ೧೯೨೭ ಡಿಸೆಂಬರ್ ೩೦ರಂದು ಕಲ್ಕತ್ತಾದಲ್ಲಿ ಆಲ್ ಇಂಡಿಯಾ ಮುಸ್ಲಿಮ್ ಲೀಗ್ ಸ್ವೀಕರಿಸಿದ ನಿರ್ಣಯದಿಂದ[೨] ಗೋಚರವಾಗುತ್ತದೆ. ಸಿಂಧ್ ಪ್ರಾಂತದ ಪ್ರತ್ಯೇಕತೆ ಮತ್ತು ವಾಯುವ್ಯ ಗಡಿ ಪ್ರಾಂತಕ್ಕೆ ಸ್ವಯಮಾಡಳಿತ ಪ್ರಾಂತದ ಸ್ಥಾನಮಾನ ನೀಡಿಕೆಗಾಗಿ ಹಿಂದೂಗಳು ಸಮ್ಮತಿಸಿದಾಗ ಮಾತ್ರ ಮುಸಲ್ಮಾನರು ತಮ್ಮ ಪ್ರತ್ಯೇಕ ಮತ ಸಮುದಾಯದ ಬೇಡಿಕೆಯನ್ನು ಬಿಟ್ಟು ಕೊಡುತ್ತಾರೆ.[೩] ಮುಸಲ್ಮಾನರು ಪ್ರತ್ಯೇಕ ಮತಕ್ಷೇತ್ರವು ಮಹತ್ವದ್ದೆಂದು ಪರಿಗಣಿಸಲಿಲ್ಲ. ಅವರು ತಮ್ಮ ಇತರ ಹಕ್ಕುಗಳ ಪ್ರಾಪ್ತಿಗಾಗಿ ಅವುಗಳನ್ನು (ಸಂಯುಕ್ತ ಮತ ಕ್ಷೇತ್ರ) ಒಂದು ಉತ್ತಮ ಕೊಳುಕೊಡುವ ವ್ಯವಹಾರವೆಂದು ಭಾವಿಸಿದರು.

ಗೋಹತ್ಯೆ ಮಾಡುವ ಮತ್ತು ಮಸೀದೆಗಳ ಮುಂದೆ ಸಂಗೀತ ವಾದನ ನಿಲ್ಲಿಸುವ ಮುಸ್ಲಿಮರ ಒತ್ತಾಯ ಅವರ ಸ್ವಾರ್ಥಕ್ಕಾಗಿ– ಶೋಷಣೆ ಮನೋಭಾವದ ಸ್ಪಷ್ಟ ನಿದರ್ಶನವಾಗಿದೆ. ಮುಸ್ಲಿಮ್ ಕಾಯ್ದೆ, ಬಲಿ ಕೊಡುವುದಕ್ಕಾಗಿ ಗೋಹತ್ಯೆಯನ್ನೇ ಒತ್ತಾಯಿಸುವುದಿಲ್ಲ. ಮತ್ತು ಹಜ್ ಯಾತ್ರೆಗೆ ಹೋದ ಯಾವುದೇ ಮುಸಲ್ಮಾನ ಮೆಕ್ಕಾ ಅಥವಾ ಮದೀನಾದಲ್ಲಿ ಆಕಳ ಬಲಿ ಕೊಡುವುದಿಲ್ಲ. ಆದರೆ ಭಾರತದಲ್ಲಿ ಮಾತ್ರ ಇತರ ಯಾವುದೇ ಪ್ರಾಣಿ ಬಲಿಯಿಂದ ಅವರಿಗೆ ತೃಪ್ತಿಯಿಲ್ಲ. ಎಲ್ಲ ಮುಸ್ಲಿಮ್ ದೇಶಗಳಲ್ಲಿಯೂ ಮಸೀದೆಯ ಮುಂದೆ ಯಾವ ಆಕ್ಷೇಪಣೆಯಿಲ್ಲದ ಸಂಗೀತ ವಾದ್ಯ ನುಡಿಸಬಹುದು. ವಾದ್ಯ ನುಡಿಸುವುದು ತಮ್ಮ ಹಕ್ಕು ಎಂದು ಹಿಂದೂಗಳು ವಾದಿಸುವ ಒಂದೇ ಒಂದು ಕಾರಣಕ್ಕಾಗಿ ಇಂಡಿಯಾದ ಮುಸಲ್ಮಾನರು ಅದರ ತಡೆಯಾಗಬೇಕೆಂದು ಒತ್ತಾಯಿಸುತ್ತಾರೆ.

---

೧. ಜಿನ್ನಾ ಸೂಚಿಸಿದವುಗಳಲ್ಲಿ ೧೫ನೆಯ ಅಂಶ ನೋಡಿ.

೨. ಆ ನಿರ್ಣಯ ಮತ್ತು ಅದರ ಮೇಲೆ ಮಾಡಲಾದ ಬರ್ಕತ್ ಅಲಿ ಭಾಷಣಕ್ಕಾಗಿ ಇಂಡಿಯನ್ ಕ್ವಾರ್ಟರ್ಲೀ ರಿಜಿಸ್ಟರ್ ೧೯೨೭, ಸಂ.೨, ಪು.೪೪೭–೪೮ ನೋಡಿ.

೩. ದುರಾದೃಷ್ಟದ ಸಂಗತಿಯೆಂದರೆ ಮುಸಲ್ಮಾನರಿಗೆ ರಿಯಾಯಿತಿಗಳು ದೊರೆತರೂ ಹಿಂದೂಗಳಿಗೆ ಸಂಯುಕ್ತ ಮತ ಸಮುದಾಯಗಳ ಸೌಲಭ್ಯ ಸಿಗಲಿಲ್ಲ.

ಗಮನಿಸಬೇಕಾದ ಮೂರನೇ ಅಂಶವೆಂದರೆ, ರಾಜಕೀಯದಲ್ಲಿ ಕೂಟತಂತ್ರ ಅನುಸರಿಸುವುದು ಮುಸ್ಲಿಮರ ಮತ್ತೊಂದು ಗಮನಾರ್ಹ ಅಂಶವಾಗಿದೆ. ಆಗಾಗ ತಲೆದೋರುವ ದಂಗೆಗಳು, ಅವರ ರಾಜಕೀಯದ ಒಂದು ನಿರ್ಧರಿತ ವ್ಯೂಹವಾಗಿರುವುದರ ಸ್ಪಷ್ಟ ಸೂಚನೆಯಾಗಿದೆ. ಸುಡೆಟೆನ್ ಜರ್ಮನ್ನರು ಜೆಕ್ಸ್ (ಜನ)ರ ವಿರುದ್ಧ ಅನುಸರಿಸಿದ ಹಾದಿಗಳನ್ನೇ ಇವರೂ ಪ್ರಜ್ಞಾಪೂರ್ವಕವಾಗಿ ಮತ್ತು ಉದ್ದೇಶಪೂರ್ವಕವಾಗಿ ಅನುಸರಿಸುತ್ತಿರುವ ಹಾಗಿದೆ.[೧] ಮುಸ್ಲಿಮರು ಆಕ್ರಮಣಕಾರಿಗಳಾಗಿರುವವರೆಗೆ ಹಿಂದೂಗಳು ತಟಸ್ಥರಾಗಿದ್ದರು. ಹೀಗಾಗಿ ಪರಸ್ಪರ ತಿಕ್ಕಾಟದಲ್ಲಿ ಮುಸ್ಲಿಮರಿಗಿಂತ ಹಿಂದೂಗಳಿಗೇ ಹೆಚ್ಚು ನಷ್ಟವಾಯಿತು. ಆದರೆ ಈ ಸ್ಥಿತಿ ಹಾಗೇ ಉಳಿಯಲಿಲ್ಲ. ಹಿಂದೂಗಳೂ ಪ್ರತೀಕಾರ ಮಾಡುವುದನ್ನು ಕಲಿತಿದ್ದಾರೆ. ತಾವೂ ಮುಸಲ್ಮಾನನಿಗೆ ಚೂರಿ ಹಾಕಲು ಅನುತಾಪ ತೋರುವುದಿಲ್ಲ. ಈ ಪ್ರತೀಕಾರ ಮನೋಭಾವ ಕೂಟದೊಂಬಿಗೆ ಪ್ರತಿಕೂಟದೊಂಬಿಯನ್ನು ಹುಟ್ಟುಹಾಕಿದೆ.

ಈ ಸಮಸ್ಯೆಯ ಪರಿಹಾರಕ್ಕಾಗಿ ಸಂಬಂಧಪಟ್ಟವರೆಲ್ಲರೂ ಗಂಭೀರವಾಗಿ ಚಿಂತಿಸಬೇಕಾಗಿದೆ. ಮುಸಲ್ಮಾನರನ್ನು ಒರೆಸಿಹಾಕಲು ಮತ್ತು, ಅವರಿಗೆ ಬುದ್ಧಿ ಕಲಿಸಲು ಹಿಂದೂಗಳು ಒಮ್ಮೆ ದೃಢ ನಿಶ್ಚಯ ಮಾಡಬೇಕಾಗಿದೆ ಎನ್ನುವ ಸರಳ ಮನಸ್ಸಿನ ಹಿಂದೂ ಮಹಾಸಭೆಯು ಬಹುದಿನಗಳಿಂದ ಅಪೇಕ್ಷಿಸುವ ಸ್ವಾತಂತ್ರ್ಯದ ಗುರಿ ಸಾಧಿಸಲಾರದು. ಕಾರಣ ಕೆಲವು ರಾಜಕೀಯ ರಿಯಾಯಿತಿ ಇತ್ಯಾದಿಗಳಿಂದ ಅವರನ್ನು ಸಹಿಸುತ್ತ ಒಲಿಸಿಕೊಳ್ಳಬೇಕು ಎನ್ನುವ ಕಾಂಗ್ರೆಸ್ ಹಿಂದೂ ರಾಷ್ಟ್ರೀಯವಾದಿಗಳೂ ಇದ್ದಾರೆ. ಐಕ್ಯತೆ ಹಿಂದೂ ಮಹಾಸಭೆಯ ಹಾದಿಯಾಗಿಲ್ಲ. ಪ್ರತಿಯಾಗಿ ಅದು ಪ್ರಗತಿಗೆ ಅಡ್ಡಿಯಾಗಿದೆ. 'ಹಿಂದೂಸ್ತಾನ ಹಿಂದೂಗಳಿಗಾಗಿ' ಎನ್ನುವ ಹಿಂದೂ ಮಹಾಸಭೆಯ ಅಧ್ಯಕ್ಷರ ಉದ್ಘೋಷ ಬರೀ ಅಹಂಕಾರದ್ದಷ್ಟೇ ಅಲ್ಲ, ಮೂರ್ಖತನದ ಮಾತಾಗಿದೆ. ಏನಿದ್ದರೂ ಈಗ ಮುಂದಿರುವ ಪ್ರಶ್ನೆ: ಕಾಂಗ್ರೆಸ್‌ನ ಹಾದಿ ಸರಿಯಾದ ಹಾದಿಯೇ ಎನ್ನುವುದು. ನನಗೆ ತಿಳಿದಮಟ್ಟಿಗೆ ಕಾಂಗ್ರೆಸ್ ಎರಡು ವಿಷಯಗಳನ್ನು ಸ್ಪಷ್ಟವಾಗಿ ಗ್ರಹಿಸುವಲ್ಲಿ ತಪ್ಪಿದೆ. ಮೊದಲನೆಯದಾಗಿ, ಕಾಂಗ್ರೆಸ್ ಪಕ್ಷ ತುಷ್ಟೀಕರಣ ಮತ್ತು ಒಪ್ಪಂದಗಳ ನಡುವಿನ ವ್ಯತ್ಯಾಸವನ್ನು ತಿಳಿದುಕೊಳ್ಳದಿರುವುದು ಅದರ ಮಹತ್ವದ ತಪ್ಪು. ತುಷ್ಟೀಕರಣ ಎಂದರೆ, ತನ್ನ ರೋಷದ ಗಳಿಗೆಯಲ್ಲಿ ಮುಗ್ಧ ಜೀವಿಗಳನ್ನು ಬಲಿಗೊಟ್ಟು ಅವರನ್ನು ಕೊಲೆಗೈಯ್ಯುವ, ಅವರ ಮೇಲೆ ಅತ್ಯಾಚಾರವೆಸಗಿ, ಮನೆ ಮಾರುಗಳಿಗೆ ಕೊಳ್ಳಿಯಿಟ್ಟು ಲೂಟಿಮಾಡುವವನ ದುಷ್ಕೃತ್ಯಗಳನ್ನು ಉಪೇಕ್ಷಿಸಿ ಅಂಥ ಆಕ್ರಮಣಕಾರನನ್ನು ಕೊಂಡುಕೊಳ್ಳುವುದು ಎಂದರ್ಥ. ಆದರೆ ಒಪ್ಪಂದವೆಂದರೆ ಹಾಗಲ್ಲ. ಅದು ಯಾವುದೇ ಗುಂಪು ದಾಟಲಾಗದ ಸೀಮಾರೇಖೆಗಳನ್ನು ಎಳೆಯುತ್ತದೆ. ತುಷ್ಟೀಕರಣದ ಆಕ್ರಮಣಕಾರನ ಆಕಾಂಕ್ಷೆ ಮತ್ತು ಬೇಡಿಕೆಗಳಿಗೆ ಪರಿಮಿತಿಯಿಲ್ಲ. ತೀರ್ಮಾನಕ್ಕೆ ಒಂದು ಪರಿಮಿತಿ ಎನ್ನುವುದಿರುತ್ತದೆ. ರಿಯಾಯಿತಿಯಿಂದಾಗಿ ಮುಸ್ಲಿಮರ ಆಕ್ರಮಣಕಾರೀ ಧೋರಣೆ ಅಧಿಕಗೊಳ್ಳುತ್ತಲೇ ಹೋಗಿರುವುದನ್ನು ಗ್ರಹಿಸದಿರುವುದು ಕಾಂಗ್ರೆಸ್ ಪಕ್ಷದ ಎರಡನೆಯ ತಪ್ಪು. ಇದರಲ್ಲಿ ಅತಿ ಕೆಟ್ಟದೆಂದರೆ ಮುಸ್ಲಿಮರು, ಈ ರಿಯಾಯಿತಿಗಳನ್ನು ಹಿಂದೂಗಳ ಸೋಲಿನ ಸಂಕೇತವೆಂದೂ, ಪ್ರತಿರೋಧವೊಡ್ಡುವ ಮಾನಸಿಕ ಶಕ್ತಿಯ ಅಭಾವವೆಂದೂ ಅರ್ಥೈಸುವುದು. ಹಿಟ್ಲರನನ್ನು ಸಂತುಷ್ಟಗೊಳಿಸುತ್ತ

---

೧. ಆಲ್ ಇಂಡಿಯಾ ಮುಸ್ಲಿಂ ಲೀಗ್‌ದ ಕರಾಚಿ ಸಭೆಯಲ್ಲಿ ಮಿ.ಜಿನ್ನಾ ಮತ್ತು ಸರ್ ಅಬ್ದುಲ್ಲಾ ಹಾರೂನ್ ಇಬ್ಬರೂ ಇಂಡಿಯಾದ ಮುಸ್ಲಿಮರನ್ನು ಮುಸ್ಲಿಂ ಜಗತ್ತಿನ 'ಸುಡೆಟೆನ್'ರಿಗೆ ಹೋಲಿಸಿ, ಸುಡೆಟೆನ್ ಜರ್ಮನ್ ಜನರು ಜೆಕೋಸ್ಲೋವಾಕಿಯಾದವರಿಗೆ ಏನು ಗತಿ ಒದಗಿಸಿದರೊ ಅದನ್ನೇ ಮಾಡುವ ಸಾಮರ್ಥ್ಯವನ್ನು ಇವರೂ (ಮುಸಲ್ಮಾನರು) ಪಡೆದಿದ್ದಾರೆ ಎಂದು ಹೇಳಿದರು.

ಹೋದ ಅವನ ಜೊತೆಗಿನ ಇತರ ಶಕ್ತಿಗಳು ಅನುಭವಿಸಿದ ದುರ್ಭರ ಪರಿಣಾಮದ ಹಾಗೆಯೇ ಹಿಂದೂಗಳ ಈ ಸಂತುಷ್ಟಗೊಳಿಸುವ ನೀತಿ ಕೂಡ ಅವರನ್ನು ಒಂದು ಭಯಾನಕ ಸ್ಥಿತಿಗೆ ಸಿಲುಕಿಸುತ್ತದೆ. ಇದು ಮತ್ತೊಂದು ಅಸ್ವಸ್ಥತೆ; ಸಾಮಾಜಿಕ ಜಡತೆಗಿಂತ ತೀಕ್ಷ್ಣವಾದ ಅಸ್ವಸ್ಥತೆ. ಸಂತುಷ್ಟಗೊಳಿಸುವ ನೀತಿ ಪರಿಸ್ಥಿತಿಯನ್ನು ಮತ್ತಷ್ಟು ಉಗ್ರಗೊಳಿಸುತ್ತದೆ. ಒಂದು ತೀರ್ಮಾನಕ್ಕೆ ಬರುವುದೊಂದೇ ಅದಕ್ಕಿರುವ ಪರಿಹಾರ. ಪಾಕಿಸ್ತಾನ (ರಚನೆ) ಒಂದು ತೀರ್ಮಾನವಾಗುವುದಾದರೆ ಅದು ವಿಚಾರ ಯೋಗ್ಯ. ಇಂಥ ಒಂದು ತೀರ್ಮಾನಕ್ಕೆ ಬರುವುದಾದರೆ ಅದರಿಂದಾಗಿ ನಿರಂತರ ಸಮಾಧಾನಪಡಿಸುವ ನೀತಿಯ ಅಗತ್ಯವಿರುವುದಿಲ್ಲ. ಶಾಂತಿ ಸಮಾಧಾನ ಬಯಸುವ ಎಲ್ಲರೂ ಅದನ್ನು ಸ್ವಾಗತಿಸಬೇಕು. ಯಾಕೆಂದರೆ ನಿರಂತರ ರಾಜಕೀಯ ದಾಹದ ಪರಿಣಾಮವಾಗಿ ಒಡಮೂಡುವ ಅಭದ್ರತೆಗಿಂತ ಇಂಥ ಒಂದು ತೀರ್ಮಾನಕ್ಕೆ ಬರುವುದು ಮೇಲು.

♦

# ಅಧ್ಯಾಯ ೨೮

# ರಾಷ್ಟ್ರೀಯ ಹತಾಶೆ

## I

ನಿಮ್ಮ ರಾಷ್ಟ್ರಕ್ಕೆ ನೀವು ಬಯಸುವ ಅತ್ಯುನ್ನತ ಭಾಗ್ಯ ಯಾವುದು ಎಂದು ಒಬ್ಬ ಭಾರತೀಯನನ್ನು ಕೇಳಿದರೆ ಅವನ ಉತ್ತರ ಏನಿರಬಹುದು? ಈ ಪ್ರಶ್ನೆ ಮಹತ್ವದ್ದಾಗಿದ್ದು ಅದಕ್ಕೆ ಉತ್ತರ ಬೋಧಪ್ರದವಾಗಿರದೆ ಬೇರೆಯಾಗಲು ಸಾಧ್ಯವಿಲ್ಲ.

ತನ್ನ ರಾಷ್ಟ್ರದ ಬಗ್ಗೆ ಅಭಿಮಾನ ತಾಳಿರುವ ಒಬ್ಬ ಅಪ್ಪಟ ಭಾರತೀಯನ ಇತರ ವಿಷಯಗಳ ಸಮಾನತೆಯ ಜೊತೆಗೆ ಉತ್ತರವು ನಿಸ್ಸಂದೇಹವಾಗಿ 'ಒಂದು ಸಮಗ್ರ ಸ್ವತಂತ್ರ ಭಾರತವೇ, ಭಾರತದ ಭಾಗ್ಯ ಕುರಿತ ನನ್ನ ಆದರ್ಶ' ಎನ್ನುವುದಾಗಿರುತ್ತದೆ. ಹಿಂದೂಗಳು ಮತ್ತು ಮುಸಲ್ಮಾನರು ಎಲ್ಲಿಯವರೆಗೆ ಈ ಆದರ್ಶವನ್ನು ಒಪ್ಪಿಕೊಳ್ಳುವುದಿಲ್ಲವೋ, ಅಲ್ಲಿಯವರೆಗೆ ಈ ಆದರ್ಶ ಒಂದು ಪವಿತ್ರ ಇಚ್ಛೆಯಾಗಿ ಉಳಿಯುವುದೇ ಹೊರತು, ಒಂದು ನಿಶ್ಚಿತ ರೂಪ ತಾಳುವುದಿಲ್ಲ. ಇದೇನು ಕೇವಲ ಒಂದು ಪವಿತ್ರ ಇಚ್ಛೆಯೋ ಅಥವಾ ಎಲ್ಲರೂ ಕೂಡಿ ಸಾಧಿಸಬೇಕಾಗಿರುವ ಗುರಿಯೋ?

ವೃತ್ತಿ ರಾಜಕೀಯದ ಉದ್ದೇಶಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಸ್ವಾತಂತ್ರ್ಯವೇ ಭಾರತದ ರಾಜಕೀಯ ಉತ್ಕ್ರಾಂತಿಯ ಗುರಿಯಾಗಿದೆ ಎಂದು ಎಲ್ಲ ಪಕ್ಷಗಳೂ ಒಮ್ಮತದಿಂದ ಉದ್ಘೋಷಿಸಿರುವಂತೆ ತೋರುತ್ತದೆ. ಭಾರತದ ರಾಜಕೀಯ ಸ್ವಾತಂತ್ರ್ಯ ಸಾಧನೆ ತಮ್ಮ ಗುರಿಯಾಗಿದೆ ಎಂದು ಸಾರಿದ ಮೊದಲ ಪಕ್ಷ ಕಾಂಗ್ರೆಸ್ ೧೯೨೭ರ ಡಿಸೆಂಬರ್ ತಿಂಗಳು ಮದ್ರಾಸ್‌ನಲ್ಲಿ ಜರುಗಿದ ಸಭೆಯಲ್ಲಿ ಸಮಗ್ರ ರಾಷ್ಟ್ರೀಯ ಸ್ವಾತಂತ್ರ್ಯವೇ ಭಾರತೀಯರ ಗುರಿಯಾಗಿದೆ ಎನ್ನುವ ಕಾಂಗ್ರೆಸ್ ಮತಾಭಿಪ್ರಾಯವನ್ನು ಒಂದು ವಿಶೇಷ ನಿರ್ಣಯದ* ಮೂಲಕ ವಿವರಿಸಲಾಯಿತು. ೧೯೩೭ರವರೆಗೂ ಹಿಂದೂ ಮಹಾಸಭೆಯು, ಹೊಣೆಗಾರ ಸರಕಾರವೇ ಭಾರತದ ರಾಜಕೀಯ ಉತ್ಕ್ರಾಂತಿಯ ಗುರಿಯಾಗಿದೆ, ಅದರಿಂದ ತಾನು ತೃಪ್ತ ಎಂದು ಹೇಳುತ್ತ ಬಂದಿತು. ೧೯೩೭ರವರೆಗೂ ಅದು ತನ್ನ ರಾಜಕೀಯ ಅಭಿಪ್ರಾಯದಲ್ಲಿ ಬದಲಾವಣೆ ಹೊಂದಿರಲಿಲ್ಲ. ೧೯೩೭ರ ಅಹಮ್ಮದಾಬಾದ್ ಅಧಿವೇಶನದಲ್ಲಿ ಅದು ಇಂಡಿಯಾಕ್ಕೆ 'ಪೂರ್ಣ ಸ್ವರಾಜ್ಯ' ಬೇಕು ಎನ್ನುವ ತನ್ನ ನಂಬಿಕೆ ಅಂದರೆ ಪೂರ್ಣ ಸ್ವಾತಂತ್ರ್ಯ ಬೇಡಿಕೆಯನ್ನು ಸ್ಪಷ್ಟವಾಗಿ ಸಾರಿತು. ಮುಸ್ಲಿಮ್ ಲೀಗ್ ೧೯೧೨ರಲ್ಲಿ ಇಂಡಿಯಾದಲ್ಲಿ ಹೊಣೆಗಾರ ಸರಕಾರ ಸ್ಥಾಪನೆ ತನ್ನ ರಾಜಕೀಯ ಅಭಿಪ್ರಾಯವಾಗಿದೆ ಎಂದು ಸಾರಿತು. ೧೯೩೭ರಲ್ಲಿ ಅದು ಕೂಡ ತನ್ನ ಅಭಿಪ್ರಾಯ ಬದಲಿಸಿ, ಹೊಣೆಗಾರ ಸರಕಾರ

* ಮದ್ರಾಸ್‌ನಲ್ಲಿ ಕಾಂಗ್ರೆಸ್ ಮತಾಭಿಪ್ರಾಯವನ್ನು ಬದಲಿಸಿರಲಿಲ್ಲ. ಲಾಹೋರದಲ್ಲಿ ೧೯೨೯ರ ಡಿಸೆಂಬರ್ ೩೧ರಂದು ಕಾಂಗ್ರೆಸ್ ಅಧಿವೇಶನದಲ್ಲಿ ಅದನ್ನು ಬದಲಿಸಲಾಯಿತು. ಮದ್ರಾಸ್ ಅಧಿವೇಶನದಲ್ಲಿ ಸ್ವಾತಂತ್ರ್ಯ ಪರವಾದ ನಿರ್ಣಯವನ್ನು ಮಾತ್ರ ಸ್ವೀಕರಿಸಲಾಯಿತು. ಕಲ್ಕತ್ತಾದ ೧೯೨೮ರ ಡಿಸೆಂಬರ್ ಕಾಂಗ್ರೆಸ್ ಅಧಿವೇಶನದಲ್ಲಿ ಇಬ್ಬರೂ (ಮಹಾತ್ಮ ಗಾಂಧಿ ಮತ್ತು ಕಾಂಗ್ರೆಸ್ ಅಧ್ಯಕ್ಷ) ಬ್ರಿಟಿಷ್ ಸರಕಾರ ೧೯೨೯ ಡಿಸೆಂಬರ್ ೩೧ರ ಮಧ್ಯರಾತ್ರಿಯ ಹೊತ್ತಿಗೆ ಭಾರತದ ರಾಜ್ಯ(ಶಾಸನ)ದ ಸ್ಥಾನಮಾನ ಕೊಟ್ಟರೆ ಆಗ ತಾವು ಒಪ್ಪಿಕೊಳ್ಳಲು ಸಿದ್ಧ ಎಂದು ತಾವೇ ಸಾರಿದರು.

ಸ್ಥಾಪನೆಯಿಂದ ಸ್ವಾತಂತ್ರ್ಯ ಸಾಧನೆ ತನ್ನ ಗುರಿ ಎಂದು ಹೇಳಿ, ತಾನೂ ಕಾಂಗ್ರೆಸ್ ಮತ್ತು ಹಿಂದೂ ಮಹಾಸಭೆಗಳ ಜೊತೆಗೂಡಿತು.

ಸ್ವಾತಂತ್ರ್ಯವೆಂದರೆ, ಬ್ರಿಟಿಷ್ ಸಾಮ್ರಾಜ್ಯಶಾಹಿಯಿಂದ ಬಿಡುಗಡೆ ಎಂದು ಈ ಮೂರೂ ರಾಜಕೀಯ ಪಕ್ಷಗಳು ವಿವರಿಸಿದವು. ಆದರೆ ಬ್ರಿಟಿಷ್ ಸಾಮ್ರಾಜ್ಯಶಾಹಿಯ ನೊಗದ ಬಿಡುಗಡೆಯ ಒಪ್ಪಂದವಷ್ಟೇ ಸಾಕಾಗದು. ಸ್ವತಂತ್ರ ಭಾರತದ ರಕ್ಷಣಾ ನಿರ್ವಹಣೆ ಕುರಿತು ಕೂಡ ಒಂದು ಒಪ್ಪಂದವಿರಲೇಬೇಕು. ಈ ಕಾರಣಕ್ಕಾಗಿ ಭಾರತ ಕೇವಲ ಬ್ರಿಟಿಷರಿಂದ ಮುಕ್ತಗೊಂಡು ಸ್ವತಂತ್ರವಾಗಿರುವುದು ಎಂದಷ್ಟೇ ಅಲ್ಲ, ಯಾವುದೇ ವಿದೇಶೀ ಶಕ್ತಿಯಿಂದ ಕೂಡ ಅದರ ಸ್ವಾತಂತ್ರ್ಯಕ್ಕೆ ಧಕ್ಕೆ ಬಾರದ ಹಾಗೆ ನೋಡಿಕೊಳ್ಳುವಂತೆ ಒಂದು ಒಪ್ಪಂದವಾಗಲೇಬೇಕು. ನಿಜವಾಗಿ ಬ್ರಿಟಿಷ್‌ರಿಂದ ಸ್ವಾತಂತ್ರ್ಯ ಗಳಿಸುವುದಕ್ಕಿಂತ (ಈ ರಾಷ್ಟ್ರದ) ಸ್ವಾತಂತ್ರ್ಯ ರಕ್ಷಣೆಯ ಕರಾರು ಹೆಚ್ಚು ಮಹತ್ವದ್ದಾಗಿದೆ. ಆದರೆ, ಈ ಮಹತ್ವದ ಒಪ್ಪಂದದ ಬಗ್ಗೆ ಏಕಾಭಿಪ್ರಾಯವಿದ್ದಂತೆ ತೋರುವುದಿಲ್ಲ. ಏನೇ ಆದರೂ ಈ ಒಂದು ಅಂಶ ಕುರಿತು ಮುಸ್ಲಿಮರ ಧೋರಣೆ ಅಷ್ಟೊಂದು ನಿಶ್ಚಿತವಾಗಿಲ್ಲ. ಮುಸ್ಲಿಮ್ ಮುಂದಾಳುಗಳ ಹೇಳಿಕೆಗಳಿಂದ ಈ ಮಾತು ಸ್ಪಷ್ಟ ಕರಾರನ್ನು ಅವರು ಒಪ್ಪಿಕೊಳ್ಳುವುದಿಲ್ಲ. ಈ ಕೆಳಗೆ ಅಂಥ ಎರಡು ಹೇಳಿಕೆಗಳನ್ನು ಉದಾಹರಿಸುತ್ತೇನೆ.

೧೯೨೫ರಲ್ಲಿ ಲಾಹೋರದ ಒಂದು ಸಭೆಯಲ್ಲಿ ಡಾ. ಕಿಚಲ್ಯೂ ಹೀಗೆ ನುಡಿದರು:[೧]

> **"ಖಿಲಾಫತ್ ಕಮಿಟಿಯು ಜೀವ ತುಂಬುವವರೆಗೆ, ಕಾಂಗ್ರೆಸ್ ನಿರ್ಜೀವವಾಗಿತ್ತು. ಖಿಲಾಫತ್ ಕಮಿಟಿ ಅದನ್ನು ಸೇರಿದ ಬಳಿಕ, ಕಳೆದ ನಲವತ್ತು ವರ್ಷಗಳಲ್ಲಿ ಹಿಂದೂ ಕಾಂಗ್ರೆಸ್‌ಗೆ ಸಾಧ್ಯವಾಗದಿದ್ದುದನ್ನು ಅದು ಸಾಧಿಸಿತು. ಕಾಂಗ್ರೆಸ್ ಏಳು ಕೋಟಿ ಅಸ್ಪೃಶ್ಯರನ್ನು ಉದ್ಧರಿಸುವ ಕಾರ್ಯವನ್ನು ಕೂಡ ಮಾಡಿತು. ಕೇವಲ ಹಿಂದೂಗಳಿಗಾಗಿ ಈ ಕಾರ್ಯ ಮಾಡಲಾಗಿದ್ದರೂ ಅದಕ್ಕಾಗಿ ಹಣ ಮಾತ್ರ ಕಾಂಗ್ರೆಸ್‌ದಿಂದ ಖರ್ಚು ಮಾಡಲಾಯಿತು. ನನ್ನ ಮತ್ತು ನನ್ನ ಮುಸ್ಲಿಮ್ ಸೋದರರ ಹಣವನ್ನು ನೀರಿನಂತೆ ಬಳಸಲಾಯಿತು. ಅದಕ್ಕೆ ಧೀರ ಮುಸ್ಲಿಮರು ಆಕ್ಷೇಪಿಸಲಿಲ್ಲ. ಹೀಗಿರುವಾಗ ಕಾಂಗ್ರೆಸ್ ಅಥವಾ ಹಿಂದೂಗಳದಾಗಿರದ ಹಣವನ್ನು ಮುಸಲ್ಮಾನರು ತಂಜೀಮ್ ಕಾರ್ಯಕ್ಕಾಗಿ ಬಳಸಬೇಕೆಂದರೆ ಅದಕ್ಕೆ ಹಿಂದೂಗಳೇಕೆ ಜಗಳ ತೆಗೆಯಬೇಕು?**
>
> **ಒಂದುವೇಳೆ ನಾವು ಬ್ರಿಟಿಷರನ್ನು ಈ ದೇಶದಿಂದ ಹೊರಹಾಕಿ ಸ್ವರಾಜ್ಯ ಸ್ಥಾಪಿಸಿದ ಬಳಿಕ ಆಫ್ಘಾನ್ ಅಥವಾ ಇತರ ಮುಸ್ಲಿಮರು ಭಾರತದ ರಕ್ಷಣೆಗಾಗಿ ನಮ್ಮ ಮಕ್ಕಳನ್ನೂ ಬಲಿಗೊಡುತ್ತೇವೆ. ಆದರೆ, ಕೇಳಿ, ಜನಪ್ರಿಯ ಹಿಂದೂ ಸೋದರರೇ ಲಕ್ಷ್ಯಗೊಟ್ಟು ಕೇಳಿ. ನಮ್ಮ ತಂಜೀಮ್ ಚಳುವಳಿಗೆ ನೀವು ಆತಂಕವೊಡ್ಡಿದರೆ ನಮ್ಮ ಹಕ್ಕುಗಳನ್ನು ನಮಗೆ ಕೊಡದಿದ್ದರೆ, ಆಗ ನಾವು ಆಫ್ಘಾನ್ ಅಥವಾ ಇತರ ಮುಸಲ್ಮಾನ್ ಶಕ್ತಿಗಳ ಜೊತೆಗೂಡಿ ಹೋರಾಡಿ ಈ ದೇಶದಲ್ಲಿ ನಮ್ಮ ಆಳಿಕೆಯನ್ನು ಸ್ಥಾಪಿಸುತ್ತೇವೆ."**

೧೯೩೯ರ ಜನವರಿ ೨೭ರಂದು ಸಿಲ್ಲತ್‌ದ ಒಂದು ಭಾಷಣದಲ್ಲಿ ಮೌಲಾನಾ ಆಝಾದ್[೨] ಸುಬಹಾನಿ ವ್ಯಕ್ತಗೊಳಿಸಿದ ಭಾವನೆಗಳು ಗಮನಾರ್ಹವಾಗಿವೆ: ಒಬ್ಬ ಮೌಲಾನಾ ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ಆಝಾದ್ ಸುಬಹಾನಿ ಹೀಗೆ ಹೇಳಿದರು:

---

೧. 'ಥ್ರೂ ಇಂಡಿಯನ್ ಅಯ್ಸ್', ಟೈಮ್ಸ್ ಆಫ್ ಇಂಡಿಯಾ, ದಿ.೧೪.೩.೧೯೨೫.

೨. ಅವರ ಭಾಷಣದ ಬಂಗಾಲಿ ರೂಪ 'ಆನಂದ ಬಝಾರ್' ಪತ್ರಿಕೆಯಲ್ಲಿ ಪ್ರಕಟವಾಯಿತು. ನನಗಾಗಿ ಅವರ ಇಂಗ್ಲಿಷ್ ಅನುವಾದ ಮಾಡಿಕೊಟ್ಟವರು ಹಿಂದುಸ್ತಾನ್ ಸ್ಟ್ಯಾಂಡರ್ಡ್ ಪತ್ರಿಕೆಯ ಸಂಪಾದಕರು.

"ಭಾರತದಿಂದ ಇಂಗ್ಲಿಷ್‌ರನ್ನು ತೊಲಗಿಸುವುದಕ್ಕೆ ಅನುಕೂಲವಾಗಿರುವ ಯಾವನೇ ಒಬ್ಬ ಪ್ರಮುಖ ನಾಯಕನೆಂದರೆ ಅದು ನಾನೇ. ಇಷ್ಟಾದರೂ ಮುಸ್ಲಿಂ ಲೀಗ್ ಪರವಾಗಿ ಇಂಗ್ಲಿಷ್ ಜನರ ಜೊತೆ ಹೋರಾಡಬಾರದು ಎನ್ನುವುದು ನನ್ನ ಅಪೇಕ್ಷೆ. ನಮ್ಮ ಹೋರಾಟವಿರುವುದು, ಬಹುಸಂಖ್ಯಾತ ನಮ್ಮ ವೈರಿ ೨೨ ಕೋಟಿ ಹಿಂದೂಗಳ ಜೊತೆ. ಕೇವಲ ನಾಲ್ಕೂವರೆ ಕೋಟಿ ಇಂಗ್ಲಿಷ್ ಜನ ಶಕ್ತಿಶಾಲಿಗಳಾಗಿ ಬಹುಮಟ್ಟಿಗೆ ಇಡೀ ಜಗತ್ತನ್ನೇ ನುಂಗಿದ್ದಾರೆ. ಒಂದುವೇಳೆ, ಶಿಕ್ಷಣ, ಬುದ್ಧಿಶಕ್ತಿ ಮತ್ತು ಶ್ರೀಮಂತಿಕೆಯಲ್ಲಿ ಅಷ್ಟೇ ಪ್ರಗತಿಪರರಾಗಿರುವ ೨೨ ಕೋಟಿ ಹಿಂದೂಗಳು ಬಲಿಷ್ಠರಾದರೆ ಆಗ ಈ ಹಿಂದೂಗಳು ಮುಸ್ಲಿಮ್ ಇಂಡಿಯಾವನ್ನು ನುಂಗಿ, ಕ್ರಮೇಣ ಈಜಿಪ್ಟ್, ತುರ್ಕಿ, ಕಾಬುಲ್, ಮಕ್ಕಾ, ಮದೀನಾ ಮತ್ತು ಇತರ ಯಾಜುಜ್–ಮಾಜುಜ್ ಮೊದಲಾದ ಮುಸ್ಲಿಮ್ ರಾಜ್ಯಗಳನ್ನೂ ನುಂಗಿಹಾಕುತ್ತಾರೆ. (ಪ್ರಪಂಚದ ಪ್ರಳಯಕ್ಕೆ ಮೊದಲು ಅವರು ಪೃಥ್ವಿಯ ಮೇಲೆ ಕಾಣಿಸಿಕೊಳ್ಳುತ್ತಾರೆ ಮತ್ತು ಸಿಕ್ಕದ್ದನ್ನೆಲ್ಲ ಕಬಳಿಸುತ್ತಾರೆ ಎಂದು ಕುರಾನ್‌ನಲ್ಲಿ ವಿವರಿಸಲಾಗಿದೆ.)

ಇಂಗ್ಲಿಷ್ ಜನ ಕ್ರಮೇಣ ದುರ್ಬಲರಾಗುತ್ತಿದ್ದಾರೆ... ಅವರು ಇಷ್ಟರಲ್ಲಿಯೇ ಭಾರತ ಬಿಟ್ಟುಹೋಗುತ್ತಾರೆ. ಕಾರಣ ಈಗಿನಿಂದಲೇ ಇಸ್ಲಾಮದ ಕಡುವೈರಿ ಹಿಂದೂಗಳ ವಿರುದ್ಧ ಹೋರಾಡದಿದ್ದರೆ, ಅವರನ್ನು ದುರ್ಬಳಗೊಳಿಸದಿದ್ದರೆ, ಅವರು ಇಂಡಿಯಾದಲ್ಲಿ ರಾಮರಾಜ್ಯ ಸ್ಥಾಪಿಸುತ್ತಾರೆ. ಅಷ್ಟೇ ಅಲ್ಲ, ಕ್ರಮೇಣ ಇಡೀ ಪ್ರಪಂಚದ ತುಂಬ ಹಬ್ಬಿಬಿಡುತ್ತಾರೆ. ಅವರನ್ನು (ಹಿಂದೂಗಳ) ಬಲಶಾಲಿ ಅಥವಾ ದುರ್ಬಲಗೊಳಿಸುವುದು ೯ ಕೋಟಿ ಭಾರತೀಯ ಮುಸ್ಲಿಮರನ್ನೇ ಅವಲಂಬಿಸಿದೆ. ಆದ್ದರಿಂದ ಮುಸ್ಲಿಮ್ ಲೀಗ್ ಸೇರಿ ತಮ್ಮ ಹೋರಾಟ ಮುಂದುವರೆಸುವುದು ಪ್ರತಿ ನಿಷ್ಠಾವಂತ ಮುಸ್ಲಿಮನ ಅಗತ್ಯ ಕರ್ತವ್ಯವಾಗಿದೆ. ಆಗ ಇಲ್ಲಿ ಹಿಂದೂಗಳು ಭದ್ರಗೊಳ್ಳಲು ಸಾಧ್ಯವಾಗಲಾರದು ಮತ್ತು ಇಂಗ್ಲಿಷ್ ಜನ ಇಲ್ಲಿಂದ ತೊಲಗಿದ ಕೂಡಲೇ ನಮಗೆ ಇಂಡಿಯಾದಲ್ಲಿ ಮುಸ್ಲಿಮ್ ಆಡಳಿತ ಸ್ಥಾಪಿಸುವುದು ಸುಲಭವಾಗಬಹುದು.

ಎಚ್ಚರ! ಕಾಂಗ್ರೆಸ್ ಮೌಲ್ವಿಗಳ ಬಲೆಗೆ ಬೀಳಬೇಡಿ; ಯಾಕೆಂದರೆ ೨೨ ಕೋಟಿ ಹಿಂದೂ ವೈರಿಗಳ ಕೈಯಲ್ಲಿ ಮುಸ್ಲಿಮ್ ಪ್ರಪಂಚ ಎಂದೂ ಸುರಕ್ಷಿತವಾಗಿರದು."

ಆನಂದ ಬಝಾರ ಪತ್ರಿಕೆಯ ವರದಿಗಾರ ಕೊಟ್ಟಿರುವ ಭಾಷಣದ ಮುಖ್ಯಾಂಶದಂತೆ, ಮೌಲಾನ ಆಜಾದ್ ಸುಬಹಾನಿ, ಕಾಂಗ್ರೆಸ್ (ಅಧಿಕಾರವಿರುವ) ಪ್ರಾಂತಗಳಲ್ಲಿ ಮುಸ್ಲಿಮರ ಮೇಲಾದ ಅನೇಕ ದಬ್ಬಾಳಿಕೆಯ ಕಾಲ್ಪನಿಕ ಸಂಗತಿಗಳನ್ನು ವಿವರಿಸಿದರು:

"ಕಾಂಗ್ರೆಸ್, ಪ್ರಾಂತೀಯ ಸ್ವಯಮಾಡಳಿತ ಪದ್ಧತಿಯನ್ನು ಸ್ವೀಕರಿಸಿ, ಮಂತ್ರಿಮಂಡಲ ರಚಿಸಿದ ಬಳಿಕ, ಹಿಂದೂ ಪ್ರಭಾವಿತ ಕಾಂಗ್ರೆಸ್ ಕೈಯಲ್ಲಿ ಮುಸ್ಲಿಮ್ ಹಿತಾಸಕ್ತಿಗಳು ಸುರಕ್ಷಿತವಾಗಿಲ್ಲ ಎಂದು ಅನ್ನಿಸಿತು. ಆದರೆ ಹಿಂದೂ ನಾಯಕರು ಅದರ ಬಗ್ಗೆ ನಿರ್ಲಕ್ಷ್ಯ ತಾಳಿದ್ದರಿಂದ ಅವರು (ಮೌಲಾನಾ ಆಜಾದ್ ಸುಬಹಾನಿ) ಕಾಂಗ್ರೆಸ್ ಬಿಟ್ಟು ಲೀಗ್ ಸೇರಿದರು. ಕಾಂಗ್ರೆಸ್ ಮಂತ್ರಿಮಂಡಲದ ಬಗೆಗೆ ಅವರಿಗಿದ್ದ ಭಯ ನಿಜವಾಯಿತು. ಭವಿಷ್ಯದ ಸಾಧನೆಯನ್ನು ರಾಜಕಾರಣ ಎಂದು ಕರೆಯಲಾಗಿದೆ. ಆದ್ದರಿಂದ ಅವರೊಬ್ಬ ದೊಡ್ಡ ರಾಜಕಾರಣಿ. ಇಂಡಿಯಾ ಸ್ವತಂತ್ರವಾಗುವ ಮೊದಲೇ ಹಿಂದೂಗಳ ಜೊತೆ ಬಲವಂತವಾಗಿಯಾಗಲಿ ಅಥವಾ ಸ್ನೇಹದಿಂದಾಗಲಿ ಒಂದು ರೀತಿಯ ಒಪ್ಪಂದ ಏರ್ಪಡಬೇಕೆಂದು ಅವರು ಆಲೋಚಿಸುತ್ತಿದ್ದರು. ಇಲ್ಲವಾದರೆ, ೭೦೦ ವರ್ಷಗಳವರೆಗೆ ಮುಸ್ಲಿಮರ ದಾಸ್ಯದಲ್ಲಿದ್ದ ಹಿಂದೂಗಳು, ಮುಸ್ಲಿಮರನ್ನು ಗುಲಾಮರನ್ನಾಗಿ ಮಾಡುವರು."

ಮುಸ್ಲಿಮರ ಮನಸ್ಸಿನಲ್ಲಿ ಏನಿದೆ ಎನ್ನುವುದನ್ನು ಹಿಂದೂಗಳು ಅರಿತಿದ್ದಾರೆ ಮತ್ತು ಹಿಂದೂಗಳನ್ನು ಗುಲಾಮರನ್ನಾಗಿಸಲು, ಮುಸ್ಲಿಮರು, ಸ್ವಾತಂತ್ರ್ಯ(ಸಂದರ್ಭ)ವನ್ನು ಬಳಸಿಕೊಳ್ಳಬಹುದು ಎನ್ನುವ ಭೀತಿಯು ಅವರಿಗಿದ್ದೇ (ಹಿಂದೂಗಳಿಗೆ) ಇದೆ. ಇದರ ಪರಿಣಾಮವಾಗಿ ಸ್ವಾತಂತ್ರ್ಯ ಪ್ರಾಪ್ತಿಯನ್ನು ಇಂಡಿಯಾದ ರಾಜಕೀಯ ಉತ್ಕ್ರಾಂತಿಕ ಗುರಿಯೆಂದು ಭಾವಿಸುವಲ್ಲಿ ಉದಾಸೀನರಾಗಿದ್ದಾರೆ. ಇವು ನಿರ್ಣಾಯಕ ಶಕ್ತಿಯಿಲ್ಲದರ ಅಂಜಿಕೆಗಳಲ್ಲ. ಪ್ರತಿಯಾಗಿ, ಸ್ವಾತಂತ್ರ್ಯ ಸಾಧನೆಯ ಅರಿವು ಮೂಡಿಸಿಕೊಂಡ ಹಿಂದೂಗಳು ವ್ಯಕ್ತಪಡಿಸಿದ ದಿಗಿಲುಗಳಾಗಿರದೆ, ಮುಸ್ಲಿಮ್ ನಾಯಕರ ಸಂಪರ್ಕದಲ್ಲಿ ಬಂದ, ಸಮರ್ಥ ನಿರ್ಣಾಯಕ ಬುದ್ಧಿಯುಳ್ಳವರು ವ್ಯಕ್ತಪಡಿಸಿದ ಅಭಿಪ್ರಾಯವಾಗಿದೆ:

ಮಿಸೆಸ್ ಆ್ಯನಿಬೆಸೆಂಟ್ ಹೀಗೆ ಹೇಳುತ್ತಾರೆ:*

> **"ಇಂಡಿಯಾದ ಮಹಮ್ಮದೀಯರನ್ನು ಕುರಿತು ಮತ್ತೊಂದು ಗಂಭೀರ ಪ್ರಶ್ನೆಯೇಳುತ್ತದೆ. ಒಂದುವೇಳೆ ಹಿಂದೂ ಮುಸ್ಲಿಮರ ಸಂಬಂಧಗಳು ಲಖ್ನೌದ ದಿನಮಾನಗಳಲ್ಲಿದ್ದ ಹಾಗೆಯೇ ಇದ್ದಿದ್ದರೆ, ಇದು ಅಷ್ಟೊಂದು ತುರ್ತಾದ ಪ್ರಶ್ನೆಯಾಗುತ್ತಿರಲಿಲ್ಲ. ಅಲ್ಲಿಗೂ ಅದು ಇಂದಲ್ಲ ನಾಳೆ ಸ್ವತಂತ್ರ ಭಾರತದಲ್ಲಿ ಖಂಡಿತವಾಗಿ ಏಳಬಹುದಾದ ಪ್ರಶ್ನೆಯೇ. ಆದರೆ ಖಿಲಾಫತ್ ಚಳವಳಿಯ ಬಳಿಕ ಪರಿಸ್ಥಿತಿ ಬದಲಾಗಿದೆ; ಮತ್ತು ಖಿಲಾಫತ್ ಧರ್ಮಯುದ್ಧದ ಪ್ರೋತ್ಸಾಹ, ಭಾರತದ ಮೇಲಾದ ಅನೇಕ ಗಾಯಗಳಲ್ಲಿ ಒಂದಾಗಿದೆ. ಗತವರ್ಷಗಳ ಹಾಗೆಯೇ 'ಅಪನಂಬಿಗರ' (ಹಿಂದೂಗಳ) ವಿರುದ್ಧದ ದ್ವೇಷ ನಿರ್ಲಜ್ಜವಾಗಿ ಬೆತ್ತಲೆಯಾಗಿ ಪುಟಿದೆದ್ದಿದೆ. ವಾಸ್ತವ ರಾಜಕಾರಣಕ್ಕೆ, ಹಳೆಯ ಮುಸ್ಲಿಮ್ ಖಡ್ಗದ ಧರ್ಮ ಪುನರುಜ್ಜೀವನಗೊಂಡ ಮಾರ್ಗದರ್ಶಿ (ಧೋರಣೆ)ಯಾಗಿರುವುದನ್ನು ನಾವು ಕಂಡಿದ್ದೇವೆ. ಶತಮಾನಗಳಿಂದ ಮರೆತು ಹೋಗಿದ್ದ ಜಜೀರುತ್ ಅರಬ್ ಅಂದರೆ ಅರೇಬಿಯಾ ದ್ವೀಪ ಅದು ಕೇವಲ ನಮಗೆ ಮಾತ್ರ ಮೀಸಲು; ಅದರ ಮೇಲೆ ತಮಗೆ ಮಾತ್ರ ಹಕ್ಕಿದೆ; ಆ ಪವಿತ್ರ ಭೂಮಿಯ ಮೇಲೆ ಮುಸ್ಲಿಮೇತರರು ಕಾಲಿಟ್ಟು ಅದನ್ನು ಅಪವಿತ್ರಗೊಳಿಸಲು ನಾವು ಎಂದೂ ಬಿಡುವುದಿಲ್ಲ ಎನ್ನುವ ಹಳೆಯ ಮನೋಭಾವ ರಭಸದಿಂದ ತಲೆಯೆತ್ತಿರುವುದನ್ನು ಕಂಡಿದ್ದೇವೆ. ಒಂದುವೇಳೆ ಆಫ್ಘಾನರು ಇಂಡಿಯಾದ ಮೇಲೆ ದಾಳಿ ಮಾಡಿದರೆ, ತಾವು ಅವರ ಜೊತೆಗೂಡಿ, ತಮ್ಮ ಮಾತೃಭೂಮಿಯ ಮೇಲೆ ದಾಳಿ ಮಾಡಿದ ವೈರಿಗಳ ವಿರುದ್ಧ ಹೋರಾಡುವ ಹಿಂದೂಗಳನ್ನು ಕೊಲ್ಲುತ್ತೇವೆ ಎನ್ನುವ ಮುಸ್ಲಿಮ್ ನಾಯಕರ ಉದ್ಘೋಷಗಳನ್ನು ಕೇಳಿದ್ದೇವೆ. ಮುಸಲ್ಮಾನರ ಪ್ರಥಮ ನಿಷ್ಠೆ, ಇಸ್ಲಾಮೀ ದೇಶಗಳಿಗೇ ಹೊರತು ನಮ್ಮ ಮಾತೃಭೂಮಿಗೆ ಅಲ್ಲ ಎನ್ನುವುದನ್ನು ಸ್ಪಷ್ಟವಾಗಿ ಕಂಡಿದ್ದೇವೆ. 'ದೇವರ ಸಾಮ್ರಾಜ್ಯ' ಸ್ಥಾಪನೆ ಅವರ ಅತ್ಯಂತ ಪ್ರೀತಿಯ ಆಕಾಂಕ್ಷೆಯಾಗಿರುವುದನ್ನು ತಿಳಿದಿದ್ದೇವೆ. ಅವರ ದೇವರು ಎಲ್ಲವನ್ನೂ ಪ್ರೀತಿಸುವ ವಿಶ್ವಪಿತನಲ್ಲ; ತನ್ನ ಆಜ್ಞೆಗಳನ್ನು ಪ್ರತಿಬಿಂಬಿಸುವ (ಹೋಲುವ) ಮುಸಲ್ಮಾನ. ಅದ್ಭುತಗಳ ಪರಿಣಾಮವಾಗಿ ಮೂಡಿದ ಪ್ರವಾದಿಯೊಬ್ಬನ ರೂಪ (ಅವರ ದೇವರು); ಪ್ರಾಚೀನ ಮುಸ್ಲಿಮರಂತೆಯೇ ಕಾದಾಡುತ್ತಿದ್ದ ಪ್ರಾಚೀನ ಹಿಬ್ರೂಗಳು ಕಂಡುಕೊಂಡ ಯೇಹೋವ (ತಮ್ಮ) ಪ್ರವಾದಿ ಕೊಟ್ಟ (ಆಜ್ಞೆ) ಧರ್ಮ ಪಾಲಿಸುವವರು ಇವರ ದೃಷ್ಟಿಯಲ್ಲಿ ವಿಶ್ವಾಸಾರ್ಹರಲ್ಲ. ದೇವರು ತನ್ನ ಆಜ್ಞೆಗಳನ್ನು ಒಬ್ಬ (ಪ್ರವಾದಿ) ಮಾನವನ ಮೂಲಕ ನೀಡಿದ ಎನ್ನುವ ಸಿದ್ಧಾಂತಗಳಿಂದ ಇಂದು ಪ್ರಪಂಚ ದೂರ ಸರಿದಿದೆ–ಸಾಗಿದೆ. ತಮ್ಮ ಪ್ರತ್ಯೇಕ ಪ್ರವಾದಿ ನೀಡಿದ(ಆಜ್ಞೆ) ಕಾಯಿದೆಗಳು ತಾವು ವಾಸಿಸುವ ಯಾವುದೇ ರಾಜ್ಯದ ಕಾಯದೆಗಳಿಗಿಂತ ಉನ್ನತವಾದುವು;**

---

* ದಿ ಫ್ಯೂಚರ್ ಆಫ್ ಇಂಡಿಯನ್ ಪಾಲಿಟಿಕ್ಸ್ ಪುಟಗಳು ೩೦೧–೩೦೫.

ಮತ್ತು ತಾವು ಅವುಗಳನ್ನೇ ಪಾಲಿಸತಕ್ಕದ್ದು ಎಂದು ಹೇಳುವ ಮುಸ್ಲಿಮ್ ನಾಯಕರ ಹಕ್ಕು ಸಾಧನೆ, ನಾಗರಿಕ ವ್ಯವಸ್ಥೆಗೆ ಮತ್ತು ರಾಜ್ಯದ ಭದ್ರತೆಗೆ ಮಾರಕವಾಗಿದೆ. ಅವರ ಸ್ವಾಮಿನಿಷ್ಠೆಯ ಕೇಂದ್ರ ರಾಷ್ಟ್ರನಿಷ್ಠೆಗೆ ಹೊರತಾಗಿರುವುದರಿಂದ ಅವರು ದುಷ್ಟ ನಾಗರಿಕರಾಗುತ್ತಾರೆ. ಮುಸ್ಲಿಮರ ಪ್ರಮುಖ ನಾಯಕರಾದ ಮೌಲಾನಾ ಮಹಮ್ಮದ ಅಲಿ ಮತ್ತು ಷೌಕತ್ ಅಲಿ ಸಾರುವ ಧೋರಣೆಗಳನ್ನು ಅವರು ಪುರಸ್ಕರಿಸುತ್ತಿರುವವರೆಗೂ ಅವರನ್ನು ಇತರ ಸಹ ನಾಗರಿಕರು ನಂಬಲು ಸಾಧ್ಯವಿಲ್ಲ. ಭಾರತ ಸ್ವತಂತ್ರವಾದರೆ, ತಮ್ಮ ಪ್ರವಾದಿಯ ಹೆಸರಿನಲ್ಲಿ (ಅವರನ್ನೂ) ಚಿತ್ತಾಕರ್ಷಕವಾಗಿ ಮೊರೆಯಿಡುವವರನ್ನು ಅನುಸರಿಸುವ ತಿಳಿಗೇಡಿ ಮುಸ್ಲಿಮ್ ಸಮುದಾಯ, ಭಾರತ ಸ್ವಾತಂತ್ರ್ಯಕ್ಕೆ ತೀವ್ರ ಕಂಟಕಪ್ರಾಯವಾಗುತ್ತದೆ. ಆಫ್ಘಾನಿಸ್ತಾನ್, ಬಲೂಚಿಸ್ತಾನ್, ಪರ್ಶಿಯಾ, ಇರಾಕ್, ಅರೇಬಿಯಾ, ತುರ್ಕೀ, ಈಜಿಪ್ಟ್ ಮತ್ತು ಇದೇ ರೀತಿ ಸೆಂಟ್ರಲ್ ಏಶಿಯಾದ ಮುಸಲ್ಮಾನ ಗುಂಪುಗಳಿಗೆ ಸ್ವಾಮಿನಿಷ್ಠರಾಗಿ, ಇಂಡಿಯಾ ದೇಶವನ್ನು ಇಸ್ಲಾಂ ಅಧಿಪತ್ಯಕ್ಕೆ ಒಳಪಡಿಸಲು ಮುಂದಾಗುವರು; ಬ್ರಿಟಿಷ್ ಇಂಡಿಯಾದಲ್ಲಿರುವ ಎಲ್ಲ ರಾಜ್ಯಗಳ ನೆರವನ್ನು ಪಡೆದು ಭಾರತದಲ್ಲಿ ಮುಸಲ್ಮಾನ ಆಡಳಿತ ಸ್ಥಾಪಿಸುವರು. ಇಂಡಿಯಾದ ಮುಸ್ಲಿಮರು ತಮ್ಮ ಮಾತೃಭೂಮಿಗೆ ನಿಷ್ಠರಾಗಿದ್ದಾರೆಂದು ನಮ್ಮ ಅನಿಸಿಕೆಯಾಗಿತ್ತು; ಮತ್ತು ಮುಸಲ್ಮಾನರಲ್ಲಿ (ಕೋಮುವಾದಿ ಭಾವನೆ) ಪ್ರಚೋದನೆ ತಡೆಗಟ್ಟಲು ಕೆಲವು ಸುಶಿಕ್ಷಿತ ಮುಸ್ಲಿಮ್ ಗುಂಪು ಯತ್ನಿಸುತ್ತಿದೆ ಎಂದು ಇಂದಿಗೂ ನಮ್ಮ ನಂಬಿಕೆ; ಆದರೆ ಅಂಥವರು ಕೆಲವರೇ ಇರುವುದರಿಂದ, ಅಂಥ ಪ್ರಭಾವಶಾಲಿ ಪ್ರತಿರೋಧ ಒಡ್ಡಲಾರರು, ಮತ್ತು ಅಂಥವರು ಧರ್ಮದ್ರೋಹಿಗಳೆಂದು ಅವರನ್ನು ಕೊಲ್ಲಲಾಗುವುದು. ಇಸ್ಲಾಮ್ ಆಡಳಿತ ಎನ್ನುವುದನ್ನು ಮಲಬಾರ್ ಕಲಿಸಿಕೊಟ್ಟಿದೆ; ಮತ್ತು ನಮಗೆ ಪುನಃ ಭಾರತದಲ್ಲಿ ಖಿಲಾಫತ್ ರಾಜ್ಯದ ಮತ್ತೊಂದು ಮಾದರಿಯನ್ನು ಕಾಣುವ ಇಷ್ಟವಿಲ್ಲ. ಮೋಪ್ಲಾ ಸಮುದಾಯದ ಬಗ್ಗೆ ಮಲಬಾರ್ ಹೊರಗಿನ ಮುಸ್ಲಿಮರಿಗೆ ಎಷ್ಟೊಂದು ಸಹಾನುಭೂತಿಯಿತ್ತು ಎನ್ನುವುದು ಅವರ ಸಹಕೋಮಿನವರು ಮಾಡಿದ ರಕ್ಷಣಾ ಸಂಬಂಧಿ ಕ್ರಮಗಳೇ ಸಾಕ್ಷಿ. ಜೊತೆಗೆ ಸ್ವತಃ ಮಿ. ಗಾಂಧಿ ಅಭಿಪ್ರಾಯ: ಅವರ ಈ ರೀತಿಯ ವರ್ತನೆಗೆ ಅವರು ನಂಬಿದ ಧರ್ಮ ಮತ್ತು ಅದರ ಧಾರ್ಮಿಕ ಕಲಿಕೆಯೇ ಕಾರಣ, ಇತ್ಯಾದಿ ಮಾತು ಬೇರೆ. ಆ ಮಾತು ನನಗೆ ನಿಜವೆಂದು ತೋರುವುದಿಲ್ಲ. ಯಾರ ಧರ್ಮ ಕೊಲೆ, ಸುಲಿಗೆ, ಅತ್ಯಾಚಾರ, ಬೆಂಕಿಯಿಡುವುದು ಅಥವಾ ಇತರರು ತಮ್ಮ ವಂಶಗತವಾಗಿ ನಂಬಿದ ಧರ್ಮ ತ್ಯಜಿಸಿ ತಮ್ಮ ಧರ್ಮಕ್ಕೆ ದ್ರೋಹ ಬಗೆಯಲು ಒಪ್ಪದವರನ್ನು ದೇಶದಿಂದ ಹೊರದಬ್ಬಬೇಕು ಇತ್ಯಾದಿಗಳನ್ನು ಬೋಧಿಸುತ್ತದೆಯೋ ಅಂಥ ಜನರಿಗೆ ನಾಗರಿಕ ದೇಶದಲ್ಲಿ ಸ್ಥಾನವಿಲ್ಲ; (ಶಾಲೆಯ ಪಠ್ಯ, ಬೋಧೆ ಮತ್ತು ಉದಾತ್ತ ನೀತಿ ಆದರ್ಶಗಳಲ್ಲಿ ಅದೂ ಕಟ್ಟುನಿಟ್ಟಾದ ಕಣ್ಗಾವಲಿನಲ್ಲಿ ಕೆಲವು ಧಾರ್ಮಿಕ ತತ್ವಗಳನ್ನು ಕಲಿಸುವ ವಿನಾಯಿತಿಯಿರಬಹುದು). ತಮ್ಮ ಆ ದೇವರು ಜನರನ್ನು– ವಿಶೇಷತಃ ಹಣವುಳ್ಳ ಪ್ರವಾಸಿಗಳನ್ನು– ಕೊಲ್ಲಲು ಆಜ್ಞೆಯಿತ್ತಿದ್ದಾನೆಂದು ಆ ಠಕ್ಕರ ನಂಬಿಕೆ. ಈ ಬಗೆಯ 'ದೇವರ ಕಾನೂನುಗಳು', ನಾಗರಿಕ ದೇಶದ ಕಾನೂನುಗಳನ್ನು ನಾಶ ಮಾಡಲು ಅವಕಾಶ ಕೊಡಕೂಡದು ಮತ್ತು ಇಪ್ಪತ್ತನೆಯ ಶತಮಾನದ (ನಾಗರಿಕ) ಜನ ಈ ಬಗೆಯ ಮಧ್ಯಕಾಲೀನ ಧೋರಣೆ ಅನುಸರಿಸುವವರಿಗೆ ಎಲ್ಲ ಸರಿಯಾದ ತಿಳುವಳಿಕೆಯನ್ನು ನೀಡಬೇಕು, ಇಲ್ಲ ಗಡೀಪಾರು ಮಾಡಬೇಕು. ಅವರ ಸ್ಥಾನ, ತಮ್ಮ ಅಭಿಪ್ರಾಯಗಳಿಗೆ ಸಹಮತವಿರುವ ದೇಶಗಳಲ್ಲಿ; ಅಲ್ಲಿ ಅವರು ಭಿನ್ನಾಭಿಪ್ರಾಯ ಹೊಂದಿರುವವರ ವಿರುದ್ಧ ಈ ಬಗೆಯ ಕ್ರಮ(ವಾದ) ಕೈಕೊಳ್ಳಬಹುದು. ಉದಾಹರಣೆಗೆ ಬಹಳ ಹಿಂದೆ ಪರ್ಶಿಯಾದಲ್ಲಿ ಪಾರ್ಶಿಗಳ ಬಗ್ಗೆ ಮತ್ತು ನಮ್ಮ ಕಾಲದಲ್ಲಿಯೇ ಬಹಾಯಿಗಳ ಬಗೆಗೆ ನಿಜ ಸಂಗತಿಯೆಂದರೆ ಕಟ್ಟಾ ಸಂಪ್ರದಾಯವಾದಿ ಮುಸ್ಲಿಮರ ಆಳಿಕೆಯಿರುವ ದೇಶಗಳಲ್ಲಿ

ಮುಸ್ಲಿಮ್ ಪಂಗಡಗಳಿಗೆ ರಕ್ಷಣೆಯಿಲ್ಲ. ಇಂಡಿಯಾದಲ್ಲಿ ಬ್ರಿಟಿಷ್ ಆಳ್ವಿಕೆ, ಎಲ್ಲ ಪಂಗಡಗಳ ಸ್ವಾತಂತ್ರ್ಯವನ್ನು ರಕ್ಷಿಸಿದೆ. ಅಲ್ಪಸಂಖ್ಯಾತರಾಗಿರುವ ಕಡೆ ಅವರೆಲ್ಲರನ್ನು ಸಾಮಾಜಿಕ ಬಹಿಷ್ಕಾರದಿಂದ ರಕ್ಷಿಸಲು ಸಾಧ್ಯವಿಲ್ಲವಾದರೂ ಬ್ರಿಟಿಷ್ ಆಳ್ವಿಕೆಯಲ್ಲಿ ಷಿಯಾ, ಸುನ್ನಿ, ಸೂಫಿ, ಬಹಾಯಿ ಮುಂತಾದ ಎಲ್ಲ ಪಂಗಡಗಳು ಸುರಕ್ಷಿತವಾಗಿವೆ. ಮುಸ್ಲಿಮ್ ಆಳರಸರೇ ಇರುವ ರಾಜ್ಯಗಳಲ್ಲಿ ವಾಸಿಸುವ ಮುಸಲ್ಮಾನರಿಗಿಂತ ಬ್ರಿಟಿಷ್ ಆಳ್ವಿಕೆಗೆ ಒಳಪಟ್ಟ (ರಾಜ್ಯಗಳ) ಮುಸಲ್ಮಾನರು ಹೆಚ್ಚು ಸ್ವತಂತ್ರರಾಗಿದ್ದಾರೆ. ಒಂದು ಸ್ವತಂತ್ರ ಭಾರತ ಕುರಿತು ಆಲೋಚಿಸುವಾಗ ಮಹಮ್ಮದೀಯರ ಆಳ್ವಿಕೆಯ ವಿಪತ್ತುಗಳನ್ನು ಕುರಿತು ವಿವೇಚಿಸಬೇಕಾಗುತ್ತದೆ.''

ಲಾಲಾ ಲಜಪತರಾಯ್ ಅವರು ಮಿ. ಸಿ.ಆರ್.ದಾಸ್ ಅವರಿಗೆ ಬರೆದ ಒಂದು ಪತ್ರದಲ್ಲಿ* ಇದೇ ಬಗೆಯ ಭೀತಿ ವ್ಯಕ್ತಗೊಳಿಸಲಾಗಿದೆ.

''ಇತ್ತೀಚೆಗೆ ಮತ್ತೊಂದು ಅಂಶ ನನ್ನನ್ನು ಹೆಚ್ಚಾಗಿ ಕಾಡುತ್ತಿದೆ. ಅದನ್ನು ಕುರಿತು ನೀವು ಗಂಭೀರವಾಗಿ ಆಲೋಚಿಸಬೇಕೆಂದು ನನ್ನ ಅಪೇಕ್ಷೆ. ಅದೆಂದರೆ ಮಹಮ್ಮದೀಯರ ಐಕ್ಯತೆ. ಕಳೆದ ಆರು ತಿಂಗಳ ಕಾಲಾವಧಿಯಲ್ಲಿ ನಾನು ಮುಸ್ಲಿಮ್ ಇತಿಹಾಸ ಮತ್ತು ಮುಸ್ಲಿಮ್ ಕಾಯ್ದೆಗಳ ಅಧ್ಯಯನ ಮಾಡಿದ್ದೇನೆ. ನನಗೆ ತಿಳಿದಂತೆ ಹೇಳುವುದಾದರೆ, ಅದು ಸಾಧ್ಯವೂ ಇಲ್ಲ, ವ್ಯಾವಹಾರಿಕವೂ ಅಲ್ಲ. ಅಸಹಕಾರ ಚಳವಳಿಯಲ್ಲಿ ಕಂಡುಬಂದ ಮಹಮ್ಮದೀಯ ನಾಯಕರ ಪ್ರಾಮಾಣಿಕತೆಯನ್ನು ಒಪ್ಪಿಕೊಂಡರು ಕೂಡ, ಅವರ ಧರ್ಮ ಆ ಬಗೆಯ ಕ್ರಮವನ್ನು ಬಲವಾಗಿ ನಿಷೇಧಿಸುತ್ತದೆ ಎಂದು ನನ್ನ ಭಾವನೆ. ನಾನು ನಿಮಗೆ ಕಲ್ಕತ್ತಾದಲ್ಲಿ ಹಕೀಮ ಹಜ್ಮಲ್ ಖಾನ್ ಮತ್ತು ಡಾ. ಕಿಚ್ಲ್ಯೂ ಅವರ ಜೊತೆ ನಡೆಸಿದ ಸಂಭಾಷಣೆಯ ವರದಿ ಮಾಡಿದ ನೆನಪಿರಬಹುದು. ಹಿಂದೂಸ್ತಾನದಲ್ಲಿ ಹಕೀಮ್ ಸಾಹೇಬರಿಗಿಂತ ಶ್ರೇಷ್ಠ ಮಹಮ್ಮದೀಯನಿಲ್ಲ. ಆದರೆ ಯಾವುದೇ ನಾಯಕನಿಗೆ ಕುರಾನ್ (ಆಜ್ಞೆ) ಮೀರಲು ಸಾಧ್ಯವೇ? ಮುಸ್ಲಿಮ್ ಕಾನೂನು ಓದಿ ಅರ್ಥ ಮಾಡಿಕೊಳ್ಳುವಲ್ಲಿ ನಾನು ತಪ್ಪಿರಬಹುದೆಂದು ಆಶಿಸುತ್ತೇನೆ; ಮತ್ತು ಹಾಗೆಂದು ಯಾರಾದರೂ ನನಗೆ ಮನವರಿಕೆ ಮಾಡಿಕೊಟ್ಟರೆ ಅದಕ್ಕಿಂತ ಹೆಚ್ಚಿನ ನೆಮ್ಮದಿ ಬೇರಾವುದೂ ಇರಲಾರದು. ಒಂದುವೇಳೆ ನನ್ನ ತಿಳುವಳಿಕೆ ಸರಿಯೆಂದಾದರೆ ಆಗ ನಾವು ಬ್ರಿಟಿಷರ ವಿರುದ್ಧ ಒಂದಾಗಬಹುದಾದರೂ, ಬ್ರಿಟಿಷರು ಹಿಂದುಸ್ತಾನವನ್ನು ಆಳಿದ ರೀತಿಯಲ್ಲಿ ನಾವು ಆಳಲಾರೆವು. ಹಿಂದುಸ್ತಾನದಲ್ಲಿ ಪ್ರಜಾಪ್ರಭುತ್ವದ ತಳಹದಿಯ ಮೇಲೆ ನಾವು ಶಾಸನ ನಡೆಸಲಾರೆವು. ಹಾಗಾದರೆ ಇದಕ್ಕೆ ಪರಿಹಾರವೇನು? ಹಿಂದುಸ್ತಾನದಲ್ಲಿರುವ ಏಳುಕೋಟಿ ಜನರಿಗೆ ನಾನು ಅಂಜಿಲ್ಲ; ಆದರೆ, ಹಿಂದುಸ್ತಾನದ ಏಳು ಕೋಟಿ ಜೊತೆಗೆ ಆಫ್ಘಾನಿಸ್ತಾನ್, ಸೆಂಟ್ರಲ್ ಏಶಿಯಾ, ಅರೇಬಿಯಾ, ಮೆಸೊಪೊಟೆಮಿಯಾ, ತುರ್ಕಿ ಮುಂತಾದ ದೇಶಗಳ ಸುಸಜ್ಜಿತ ಸೇನೆಯನ್ನು ನಿರೋಧಿಸುವುದು ಕಷ್ಟ. ಹಿಂದೂ ಮುಸ್ಲಿಮ್ ಐಕ್ಯತೆ ಅಪೇಕ್ಷಣೀಯ ಮತ್ತು ಅಗತ್ಯ ಎನ್ನುವುದನ್ನು ನಾನು ಪ್ರಾಮಾಣಿಕವಾಗಿ ನಂಬಿದ್ದೇನೆ. ಮುಸ್ಲಿಮ್ ನಾಯಕರನ್ನು ಸಂಪೂರ್ಣ ನಂಬಲು ಕೂಡ ನಾನು ಸಿದ್ಧ. ಆದರೆ, ಕುರಾನ್ ಮತ್ತು ಹದಿಸ್ ಆಜ್ಞೆಗಳ ಗತಿಯೇನು? ಆ ನಾಯಕರು ಅವುಗಳನ್ನು ಮೀರಲಾರರು. ಹಾಗಾದರೆ ಇದು ನಮ್ಮ ಅಂತ್ಯಕಾಲವೇ? ಅಲ್ಲ ಎಂದು ನನ್ನ ಅನಿಸಿಕೆ. ಸುಶಿಕ್ಷಿತ ಮತ್ತು ಬುದ್ಧಿವಂತ ನಾಯಕರು ಈ ವಿಷಮತೆಗೆ ಒಂದು ಪರಿಹಾರವನ್ನು ಕಂಡುಹಿಡಿಯುತ್ತಾರೆ ಎಂದು ಆಶಿಸುತ್ತೇನೆ.''

---

* ಇಂದ್ರಪ್ರಕಾಶ್ ಅವರ 'ಲೈಫ್ ಆಫ್ ಸಾವರ್‌ಕರ್' ಕೃತಿಯಲ್ಲಿ ಉಲ್ಲೇಖಿತ.

೧೯೨೪ರಲ್ಲಿ 'ಬೆಂಗಾಲೀ' ಪತ್ರಿಕೆಯ ಸಂಪಾದಕ, ಕವಿ ಡಾ. ರವೀಂದ್ರನಾಥ ಠಾಕೂರರ ಜೊತೆ ಒಂದು ಸಂದರ್ಶನ ನಡೆಸಿದ. ಆ ಸಂದರ್ಶನದ ವರದಿ ಹೀಗಿದೆ.*

> **"...ಕವಿಯ ದೃಷ್ಟಿಯಲ್ಲಿ ಹಿಂದೂ ಮಹಮ್ಮದೀಯರ ಐಕ್ಯವನ್ನು ಅಸಾಧ್ಯಗೊಳಿಸುವ ಮತ್ತೊಂದು ಮಹತ್ವದ ಅಂಶವೆಂದರೆ, ಮಹಮ್ಮದೀಯರ ರಾಷ್ಟ್ರಪ್ರೇಮ ಯಾವುದೇ ಒಂದು ದೇಶಕ್ಕೆ ಸೀಮಿತವಾಗಿಲ್ಲದಿರುವುದು. ತಾವು ಅನೇಕ ಮಹಮ್ಮದೀಯರನ್ನು ಯಾವುದೇ ಮುಚ್ಚುಮರೆಯಿಲ್ಲದೆ, ಯಾವುದೇ ಶಕ್ತಿ ಇಂಡಿಯಾದ ಮೇಲೆ ದಾಳಿ ಮಾಡಿದರೆ, ಆಗ ನೀವು ನಿಮ್ಮ ಹಿಂದೂ ಮಿತ್ರರ ಜೊತೆಗೂಡಿ ಸರ್ವರಿಗೂ ಸೇರಿದ ಈ ದೇಶವನ್ನು ಕಾಪಾಡಲು ಹೋರಾಡುತ್ತೀರೋ ಇಲ್ಲವೋ ಎಂದು ಕೇಳಿದಾಗ ತಮಗೆ ಅವರಿಂದ ತೃಪ್ತಿಕರವಾದ ಉತ್ತರ ದೊರೆಯಲಿಲ್ಲ. ಯಾವ ದೇಶದವನೇ ಆಗಿರಲಿ, ಯಾವುದೇ ಪರಿಸ್ಥಿತಿಯಲ್ಲಿ ಒಬ್ಬ ಮಹಮ್ಮದೀಯ ಮತ್ತೊಬ್ಬ ಮಹಮ್ಮದೀಯ ಶಕ್ತಿಯ ವಿರುದ್ಧ ಹೋರಾಡುವುದಕ್ಕೆ ಸಮ್ಮತಿಯಿಲ್ಲವೆಂದು ಮಿ.ಮಹಮ್ಮದ್ ಆಲಿಯಂಥ ವ್ಯಕ್ತಿಗಳು ನಿಶ್ಚಿತವಾಗಿ ಸಾರಿದರೆಂದು ತಾವು ಖಚಿತಗೊಳಿಸುವುದಾಗಿ ಅವರು ವಿವರಿಸಿದರು."**

## II

ಒಂದುವೇಳೆ ಸ್ವಾತಂತ್ರ್ಯ ಅಸಾಧ್ಯ ಎನ್ನುವುದಾದರೆ, ಬ್ರಿಟಿಷ್ ಸಾಮ್ರಾಜ್ಯದ ಕಕ್ಷೆಯೊಳಗೇ ಆಂತರಿಕ ಪ್ರಭುತ್ವದ ಸ್ಥಾನಮಾನ ಹೊಂದಿರುವ ಇಂಡಿಯಾ ರಚನೆಗೆ ಒಬ್ಬ ಅಪ್ಪಟ ಭಾರತೀಯನ ಸಮ್ಮತಿಯಿದೆ. ಇಂಥ ಭವಿತವ್ಯದಿಂದ ಯಾರಿಗೆ ತೃಪ್ತಿ? ಆಂತರಿಕ ಪ್ರಭುತ್ವ ಸ್ಥಾನಮಾನದ ಇಂಡಿಯಾ ಪ್ರಾಪ್ತಿಗೆ ಹಿಂದೂಗಳು ಒಪ್ಪುವುದು ಖಚಿತವಾದರೂ, ಮುಸಲ್ಮಾನರಿಗೆ ಇದರಿಂದ ಎಂದೂ ತೃಪ್ತಿಯಾಗಲಾರದು ಎಂದು ನನ್ನ ಖಂಡಿತ ಅನಿಸಿಕೆ. ಈ ಬಗೆಯ ಅಭಿಪ್ರಾಯ ಭಾರತೀಯರಿಗೆ ಮತ್ತು ಇಂಗ್ಲಿಷ್ ಜನರ ಕಿವಿಗೆ ಕರ್ಕಶವೆನಿಸಬಹುದು. ಕಾಂಗ್ರೆಸ್ (ಪಕ್ಷ) ಸ್ವಾತಂತ್ರ್ಯಕ್ಕಾಗಿ ತನ್ನ ಆಗ್ರಹದಲ್ಲಿ ಹೆಚ್ಚು ಗದ್ದಲ ಮಾಡುತ್ತಿರುವುದರಿಂದ, ಹಿಂದೂಗಳು ಸ್ವಾತಂತ್ರ್ಯದ ಪರವಾಗಿ ಮತ್ತು ಮುಸ್ಲಿಮರು ಆಂತರಿಕ ಪ್ರಭುತ್ವ ಸ್ಥಾನಮಾನದ ಪರವಾಗಿದ್ದಾರೆ ಎನ್ನುವ ಭಾವನೆ ಉಂಟಾಗಿದೆ. ಈ ಬಗೆಯ ಭಾವನೆ ಇಂಗ್ಲಿಷ್ ಜನರ ಮನಸ್ಸಿನ ಮೇಲೆ ಎಷ್ಟು ಪ್ರಭಾವಶಾಲಿಯಾಗಿ ಮೂಡಿತ್ತು ಮತ್ತು ಕಾಂಗ್ರೆಸ್ ಎತ್ತಿದ ಸ್ವಾತಂತ್ರ್ಯ ಮತ್ತು ಸಾಲ ನಿರಾಕರಣೆಯ ಅವಳಿ ಕೂಗುಗಳಿಂದ ಹಿಂದೂಗಳ ಹಿತಾಸಕ್ತಿ ಮತ್ತು ಹಕ್ಕುಗಳಿಗೆ ಎಂಥ ಧಕ್ಕೆಯುಂಟಾಯಿತು ಎನ್ನುವುದು ಆರ್.ಟಿ.ಸಿ.ಯಲ್ಲಿ ಹಾಜರಿದ್ದವರಿಗೆಲ್ಲ ಸ್ಪಷ್ಟವಾಗಿ ತಿಳಿಯಿತು. ಈ ಕೂಗುಗಳನ್ನು ಕೇಳಿದ ಬ್ರಿಟಿಷರು ಹಿಂದೂಗಳನ್ನು ಬ್ರಿಟಿಷರ ಮತ್ತು ಮುಸ್ಲಿಮರ ವೈರಿಗಳೆಂದೂ ಮತ್ತು ಸ್ವಾತಂತ್ರ್ಯವನ್ನಾಗಲಿ ಸಾಲ ನಿರಾಕರಣೆಯನ್ನಾಗಲಿ ಕೇಳದ ಮುಸ್ಲಿಮರನ್ನು ತಮ್ಮ ಮಿತ್ರರೆಂದೂ ಭಾವಿಸಿದರು. ಪ್ರತಿಜ್ಞೆ ಕೈಕೊಂಡ ಕಾಂಗ್ರೆಸ್ ಧೋರಣೆಯ ಹಿನ್ನೆಲೆಯಲ್ಲಿ ಈ ಅನಿಸಿಕೆ ಎಷ್ಟೇ ಸತ್ಯವೆನಿಸಿದರೂ ಅದು ಕೇವಲ ಅಪಪ್ರಚಾರದಿಂದ ಉಂಟಾದ ಸುಳ್ಳು ಪರಿಣಾಮ. ಏಕೆಂದರೆ ಹಿಂದೂಗಳ ಹೃದಯ ಪ್ರಭುತ್ವದ ಸ್ಥಾನಮಾನಕ್ಕಾಗಿ ಮತ್ತು ಮುಸ್ಲಿಮರ ಹೃದಯ ಸ್ವಾತಂತ್ರ್ಯಕ್ಕಾಗಿ ಪರಿತಪಿಸುತ್ತದೆ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಈ ವಿಷಯಕ್ಕೆ ಸಂಬಂಧಿಸಿ ಸಾಕಷ್ಟು ನಿದರ್ಶನಗಳನ್ನು ಕೊಡಬಹುದು.

---

* ಥ್ರೂ ಇಂಡಿಯನ್ ಅಯ್ಸ್, ದಿ.೧೮.೪.೧೯೨೪ರ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಿಂದ ಉದ್ಧೃತ.

೧೯೨೧ರಲ್ಲಿ ಮೊಟ್ಟಮೊದಲು ಸ್ವಾತಂತ್ರ್ಯದ ಪ್ರಶ್ನೆ ಎತ್ತಲಾಗಿತ್ತು. ಆ ವರ್ಷ ಅಹಮದಾಬಾದ್ ನಗರದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಭಾರತೀಯ ರಾಷ್ಟ್ರೀಯ ಖಿಲಾಫತ್ ಮಹಾಸಭೆ ಮತ್ತು ಅಖಿಲ ಭಾರತ ಮುಸ್ಲಿಮ್ ಲೀಗ್‌ಗಳು ತಮ್ಮ ವಾರ್ಷಿಕಾಧಿವೇಶನ ನೆರವೇರಿಸಿದುವು. ಪ್ರತಿ ಸಂಸ್ಥೆಯೂ ತಮ್ಮ ಸಭೆಗಳಲ್ಲಿ ಸ್ವಾತಂತ್ರ್ಯದ ಪರವಾಗಿ ನಿರ್ಣಯ ಮಂಡಿಸಿತು. ಕಾಂಗ್ರೆಸ್, ಖಿಲಾಫತ್ ಅಧಿವೇಶನ ಮತ್ತು ಮುಸ್ಲಿಂ ಲೀಗ್‌ಗಳಿಂದ ಆ ನಿರ್ಣಯಕ್ಕೊದಗಿದ ದುರ್ಗತಿ, ಆಸಕ್ತಿ ಹುಟ್ಟಿಸುವಂಥದಾಗಿದೆ.

ಕಾಂಗ್ರೆಸ್ ಪಕ್ಷದ ಚುನಾಯಿತ ಅಧ್ಯಕ್ಷ ಸಿ.ಆರ್.ದಾಸ್ ಅವರನ್ನು ಸರಕಾರ ಅಧಿವೇಶನ ಆರಂಭಗೊಳ್ಳುವ ಮೊದಲೇ ಬಂಧಿಸಿದ್ದರಿಂದ ಅವರ ಬದಲು ಹಕೀಮ್ ಹಜ್ಮಲ್ ಖಾನ್ ಹಂಗಾಮಿಯಾಗಿ ಕಾರ್ಯ ನಿರ್ವಹಿಸಿದರು. ಕಾಂಗ್ರೆಸ್ ಅಧಿವೇಶನದಲ್ಲಿ ಮೌಲಾನಾ ಹಜರತ್ ಮೊಹಾನಿ ಅವರು ಕಾಂಗ್ರೆಸ್ ಅಭಿಪ್ರಾಯದ ಬದಲಾವಣೆಗೆ ಆಗ್ರಹಿಸಿ ನಿರ್ಣಯ ಮಂಡಿಸಿದರು. ಆ ನಿರ್ಣಯಕ್ಕೆ ಸಂಬಂಧಿಸಿದ ನಡವಳಿಕೆಗಳ ಸಾರಾಂಶ ಈ ಕೆಳಗಿನಂತಿದೆ:*

> **"ಸಂಪೂರ್ಣ ಸ್ವಾತಂತ್ರ್ಯ ಕುರಿತ ನಿರ್ಣಯವನ್ನು ಮಂಡಿಸಿದ ಮೌಲಾನಾ ಹಜರತ್ ಮೊಹಾನಿ ಉರ್ದು ಭಾಷೆಯಲ್ಲಿ ಒಂದು ಸುದೀರ್ಘವಾದ ಆವೇಶಪೂರ್ಣ ಭಾಷಣ ಮಾಡಿದರು. ಕಳೆದ ವರ್ಷವೇ ನಮಗೆ ಪಂಜಾಬ್ ಮತ್ತು ಖಿಲಾಫತ್ ಸಂಬಂಧಿಸಿದ ಅನ್ಯಾಯಗಳ ಪರಿಹಾರ ಮತ್ತು ಸ್ವರಾಜ್ಯ ಕುರಿತು ಭರವಸೆ ದೊರೆತಿದ್ದು ಆ ದಿಸೆಯಲ್ಲಿ ಆಗಿರುವ ಸಾಧನೆ ಸೊನ್ನೆಯೆಂದು ಅವರು ಹೇಳಿದರು. ಕಾರಣ ಆ ಸೂಚನೆಗಳಿಗೆ ಅಂಟಿಕೊಂಡಿರುವುದು ಪ್ರಯೋಜನಕಾರಿಯಲ್ಲ. ಒಂದುವೇಳೆ ಬ್ರಿಟಿಷ್ ಕಾಮನ್‌ವೆಲ್ತ್ ಅಥವಾ ಬ್ರಿಟಿಷ್ ಸಾರ್ವಭೌಮತ್ವದ ಕಕ್ಷೆಯಲ್ಲಿದ್ದುಕೊಂಡೂ ತಮಗೆ ಸ್ವಾತಂತ್ರ್ಯ ಪ್ರಾಪ್ತಿಯಿಲ್ಲ ಎಂದಾದರೆ, ಆಗ ಅಗತ್ಯವೆನಿಸಿದರೆ ಅದನ್ನು ಮೀರಿ ಹೋಗಲು ಕೂಡ ಹಿಂಜರಿಯಬಾರದೆಂದು ಅವರು ಸೂಚಿಸಿದರು. ಲೋಕಮಾನ್ಯ ತಿಲಕರ ಶಬ್ದಗಳಲ್ಲಿ ಹೇಳುವುದಾದರೆ 'ಸ್ವಾತಂತ್ರ್ಯ ನಮ್ಮ ಜನ್ಮಸಿದ್ಧ ಹಕ್ಕು' ಮತ್ತು ಮಾತು ಮತ್ತು ಕೃತಿ ಸ್ವಾತಂತ್ರ್ಯದ ಈ ಪ್ರಾಥಮಿಕ ಹಕ್ಕನ್ನು ಕೂಡ ನಿರಾಕರಿಸುವ ಯಾವುದೇ ಸರಕಾರ ಜನತೆಯ ವಿಧೇಯತೆಗೆ ಯೋಗ್ಯವಿಲ್ಲ. ಜನ್ಮಸಿದ್ಧ ಸ್ವಾತಂತ್ರ್ಯಕ್ಕೆ, ಸಾರ್ವಭೌಮ ವಸಾಹತುಶಾಹಿಯ ಕಕ್ಷೆಯೊಳಗಿನ ಸ್ವಯಮಾಡಳಿತ, ಸ್ವಯಂ ಪ್ರಭುತ್ವಗಳು ಪರ್ಯಾಯವಾಗಲಾರವು. ಮಿ.ಚಿತ್ತರಂಜನದಾಸ್, ಪಂಡಿತ ಮೋತಿಲಾಲ್ ನೆಹರೂ, ಲಾಲ ಲಜಪತ್ ರಾಯ್ ಮುಂತಾದ ಪ್ರಮುಖರನ್ನು ಜೈಲಿಗೆ ತಳ್ಳುವ ಸರಕಾರ ಜನತೆಯಿಂದ ಗೌರವ ಪಡೆಯುವ ಎಲ್ಲ ಹಕ್ಕುಗಳನ್ನು ಕಳೆದುಕೊಂಡಿದೆ. ಈ ಒಂದು ವರ್ಷ ಕಾಲಾವಧಿಯ ಅಂತ್ಯ ಕೂಡ ಅವರಿಗೆ (ಜನರಿಗೆ) ಸ್ವರಾಜ್ಯ ತಂದುಕೊಟ್ಟಿಲ್ಲವಾದುದರಿಂದ ಅವರಿಗಿರುವ ಒಂದೇ ಒಂದು ಮಾರ್ಗವೆಂದರೆ, ಎಲ್ಲ ವಿದೇಶೀ ಶಕ್ತಿಗಳ ನಿಯಂತ್ರಣದಿಂದ ಮುಕ್ತವಾದ ಸ್ವಾತಂತ್ರ್ಯ ಪ್ರಾಪ್ತಿ ಆ ನಿರ್ಣಯ ಹೀಗಿದೆ:**
>
> **"ಎಲ್ಲ ನ್ಯಾಯಸಮ್ಮತ ಮತ್ತು ಶಾಂತಿಯುತ ಮಾರ್ಗಗಳ ಮೂಲಕ ಎಲ್ಲ ವಿದೇಶೀ ನಿಯಂತ್ರಣದಿಂದ ಮುಕ್ತವಾದ ಸ್ವರಾಜ್ಯ ಅಥವಾ ಸ್ವಾತಂತ್ರ್ಯ ಸಾಧನೆ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಗುರಿಯಾಗಿದೆ."**

ಅನೇಕ ಪ್ರತಿನಿಧಿಗಳು ಈ ನಿರ್ಣಯದ ಪರವಾಗಿ ಮಾತಾಡಿದ ಬಳಿಕ ಮಿ.ಗಾಂಧಿ ಇದನ್ನು ವಿರೋಧಿಸಲು ಮುಂದಾದರು. ನಿರ್ಣಯವನ್ನು ವಿರೋಧಿಸುತ್ತ ಮಿ.ಗಾಂಧಿ ಹೇಳಿದರು:

---

* ದಿ ಇಂಡಿಯನ್ ಆನ್ಯುವಲ್ ರಿಜಿಸ್ಟರ್ ೧೯೨೨, ಅನುಬಂಧ, ಪು.೬೪೬೬ ನೋಡಿ.

"ಮಿತ್ರರೆ,, ಹಜರತ್ ಮೊಹಾನಿಯವರ ಸೂಚನೆ ಕುರಿತು ನಾನು ಹಿಂದಿಯಲ್ಲಿ ಕೆಲವೇ ಮಾತು ಆಡಿದ್ದೇನೆ. ಇಂಗ್ಲಿಷ್‌ನಲ್ಲಿ ವಿವರಿಸುತ್ತೇನೆ. ಆ ಸೂಚನೆಯನ್ನು ನೀವೆಲ್ಲ ಇಷ್ಟು ಹಗುರಾಗಿ ಭಾವಿಸಿರುವುದು ನನಗೆ ನೋವು ಉಂಟುಮಾಡಿದೆ. ಅದರಲ್ಲಿ ಹೊಣೆಗಾರಿಕೆಯ ಅಭಾವವಿರುವುದರಿಂದ ನನಗೆ ನೋವಾಗಿದೆ. ಜವಾಬ್ದಾರಿಯುತ ಸ್ತ್ರೀ ಪುರುಷರಾಗಿ ಆಲೋಚಿಸಬೇಕು. ಕಲ್ಕತ್ತಾ ಮತ್ತು ನಾಗಪುರದ ದಿನಮಾನಗಳಷ್ಟು ಹಿಂದೆ ಹೋಗಿ, ಇದೀಗ ಒಂದು ಗಂಟೆಯ ಮೊದಲು ನಾವು ಮಾಡಿದ್ದನ್ನು ನೆನಪಿಸಿಕೊಳ್ಳಬೇಕು. ಖಿಲಾಫತ್ ಮತ್ತು ಪಂಜಾಬದ ಅನ್ಯಾಯಗಳಿಗೆ ಅಂತಿಮ ತೀರ್ಮಾನ, ಕೆಲವು ನಿಶ್ಚಿತ ಸಾಧನೆಗಳ ಮೂಲಕ ಸಾಮ್ರಾಜ್ಯಶಾಹಿಯಿಂದ ಜನತೆಗೆ ಅಧಿಕಾರದ ಹಸ್ತಾಂತರ ಮುಂತಾದ ಗಂಭೀರ ವಿಚಾರಗಳನ್ನೊಳಗೊಂಡ ಒಂದು ನಿರ್ಣಯವನ್ನು ಒಂದು ಗಂಟೆಯ ಮೊದಲು ಕೈಗೊಂಡಿದ್ದೇವೆ. ಈಗ ಅದನ್ನೆಲ್ಲ ನಿಮ್ಮ ಮನಸ್ಸಿನಿಂದ ಇಡಿಯಾಗಿ ಅಳಿಸಿಹಾಕಿ, ಒಂದು ಪೊಳ್ಳು ಸಮಸ್ಯೆಯನ್ನು ಎತ್ತಿಕೊಂಡು ಇಂಡಿಯನ್ ಪರಿಸರದ ಮಧ್ಯೆ ಒಂದು ಬಾಂಬ್ ಷೆಲ್ ಸಿಡಿಸಬೇಕೆಂದು ಮಾಡಿದ್ದೀರೋ? ಹಿಂದಿನ ನಿರ್ಣಯಕ್ಕೆ (ಪರವಾಗಿ) ಮತ ಹಾಕಿದವರು ಈ ನಿರ್ಣಯ ಎತ್ತಿಕೊಂಡು ಮತ ಹಾಕುವ ಮೊದಲು ಐವತ್ತು ಬಾರಿ ಆಲೋಚಿಸಿರಿ. ನಾವು ಎಲ್ಲಿದ್ದೇವೆ ಎನ್ನುವುದರ ಅರಿವೇ ನಮಗಿಲ್ಲ ಎಂದು, ಪ್ರಪಂಚದ ವಿಚಾರವಂತರು ನಮ್ಮನ್ನು ಆರೋಪಿಸಬಹುದು. ನಮ್ಮ ಪರಿಮಿತಿಗಳೂ ನಮಗೆ ತಿಳಿದಿರಲಿ. ಹಿಂದೂ ಮತ್ತು ಮುಸಲ್ಮಾನರಲ್ಲಿ ಸಂಪೂರ್ಣ ಐಕ್ಯತೆಯುಂಟಾಗಲಿ. 'ಹೌದು, ಹಿಂದೂ–ಮುಸ್ಲಿಮ್ ಐಕ್ಯತೆ ಭಾರತೀಯ ರಾಷ್ಟ್ರೀಯತೆಯ ಒಂದು ಬೇರ್ಪಡಿಸಲಾಗದ (ಅವಿಭಾಜ್ಯ) ಅಂಶವಾಗಿದೆ ಎಂದು ವಿಶ್ವಾಸದಿಂದ ಹೇಳಬಲ್ಲವರು ಯಾರಾದರೂ ಇದ್ದಾರೆಯೇ? ಇದೇ ಮಧ್ಯಾಹ್ನ ಪಾರ್ಸಿ, ಪಂಜಾಬಿ, ಕ್ರಿಶ್ಚಿಯನ್ ಮತ್ತು ಜ್ಯೂ ಗುಂಪುಗಳ ಜನ ಮಾತಾಡಿದ್ದನ್ನು ಕೇಳಿದ್ದೀರಿ; ಈಗ ನೀವು ಮಂಡಿಸುವ ವಿಚಾರಗಳನ್ನು ಅವರೇ ವಿರೋಧಿಸುವುದಿಲ್ಲ ಎಂದು ಹೇಳುವವರು ಯಾರಾದರೂ ಇದ್ದಾರೆಯೇ? ಯಾವುದಾದರೂ ಹೆಜ್ಜೆಯಿಡುವ ಮೊದಲು ಐವತ್ತು ಸಲ ಆಲೋಚಿಸಿರಿ. ಇಂಥದು ನಿಮಗೆ ಸಾರ್ಥದ ಯಶ ತರುವುದರ ಬದಲು ಚಿಕಿತ್ಸೆ ಸಾಧ್ಯವಾಗದ ಗಾಯವನ್ನುಂಟುಮಾಡೀತು. ಮೊದಲು ನಮ್ಮ ಶಕ್ತಿಯನ್ನು ಒಟ್ಟುಗೂಡಿಸೋಣ; ಮೊದಲು ನಮ್ಮ ಅಂತರಂಗವನ್ನು ಅರಿತುಕೊಳ್ಳೋಣ. ನಮಗೆ ಗೊತ್ತಿರದ ನೀರಿನ ಆಳಕ್ಕೆ ಇಳಿಯುವುದು ಬೇಡ; ಮಿ.ಹಜರತ್ ಮೊಹಾನಿ ಅವರ ಈ ಸೂಚನೆ ನಮ್ಮನ್ನು ಅರಿಯದ ಆಳಕ್ಕೆ ಕೊಂಡೊಯ್ಯುತ್ತದೆ. ಒಂದೇ ಒಂದು ಗಂಟೆಯ ಮೊದಲು ನೀವು ಸ್ವೀಕರಿಸಿದ ಸೂಚನೆಯಲ್ಲಿ ನಿಮಗೆ ನಂಬಿಕೆಯಿದ್ದರೆ ಈ ಪ್ರಸ್ತಾವನೆಯನ್ನು ತಿರಸ್ಕರಿಸುವಂತೆ ತುಂಬ ವಿಶ್ವಾಸದಿಂದ ನಿಮ್ಮಲ್ಲಿ ಕೇಳಿಕೊಳ್ಳುತ್ತೇನೆ. ನಿಮ್ಮ ಮುಂದಿರುವ ಈ ಪ್ರಸ್ತಾವನೆಯನ್ನು ಕೆಲವೇ ಕ್ಷಣಗಳ ಮುಂಚೆ ನೀವು ಸ್ವೀಕರಿಸಿದ ಪ್ರಸ್ತಾಪದ ಎಲ್ಲ ಪರಿಣಾಮವನ್ನು ಅಳಿಸಿಹಾಕುತ್ತದೆ. ಮನುಷ್ಯ ಇಷ್ಟು ಸರಳವಾಗಿ ಬೇಕಾದಾಗ ತನ್ನ ಅಭಿಪ್ರಾಯಗಳನ್ನು (ಆಲೋಚನೆ) ಬದಲಿಸುವುದು ಅಂದರೆ ಅವೇನು ಮೈಮೇಲೆ ಹಾಕಿಕೊಳ್ಳುವ ಬಟ್ಟೆಗಳೇ? ವಿಚಾರಗಳಿಗಾಗಿ ಜನ ಸಾಯುತ್ತಾರೆ ಮತ್ತು ವಿಚಾರಗಳಿಂದಾಗಿಯೇ ಜನ ಯುಗದಿಂದ ಯುಗಕ್ಕೆ ಜೀವಂತವಾಗಿರುತ್ತಾರೆ. ನಾಗಪುರದಲ್ಲಿ ಸುದೀರ್ಘ ಚರ್ಚೆ ಆಲೋಚನೆಗಳ ಬಳಿಕ ಸ್ವೀಕರಿಸಿದ ವಿಚಾರಗಳನ್ನು (ಈಗ) ಬದಲಿಸುತ್ತೀರಾ? ಆ ಅಭಿಪ್ರಾಯಗಳನ್ನು ನೀವು ಸ್ವೀಕರಿಸಿದಾಗ ಅದರಲ್ಲಿ ಒಂದು ವರ್ಷದ ಕಾಲಮಿತಿಯ ಪ್ರಸ್ತಾಪವಿರಲಿಲ್ಲ. ಇದೊಂದು ವ್ಯಾಪಕ ವಿಚಾರ. ಅದು ದುರ್ಬಲರನ್ನು ಸಬಲರನ್ನು ಎಲ್ಲರನ್ನೂ ಒಳಗೊಳ್ಳುತ್ತದೆ. ಒಂದುವೇಳೆ ನೀವು ಮೌಲಾನಾ ಹಜರತ್ ಮೊಹಾನಿಯವರ ಸೀಮಿತ ದೃಷ್ಟಿಯ ಪ್ರಸ್ತಾವನೆಯನ್ನು ಒಪ್ಪಿಕೊಂಡರೆ ಅದರಿಂದ ನಿಮ್ಮೊಳಗೇ ಇರುವ ಅತಿ ದುರ್ಬಲರನ್ನೂ

ರಕ್ಷಿಸುವ ಗೌರವವನ್ನು ನೀವು ನಿರಾಕರಿಸಿದಂತಾಗುತ್ತದೆ. ಏಕೆಂದರೆ ನಿಮ್ಮ ಸೋದರರಲ್ಲಿಯೇ ಅತಿ ದುರ್ಬಲರಾದವರನ್ನು ಗಮನಿಸುವುದಿಲ್ಲ. ಆದ್ದರಿಂದ ಅವರ ಪ್ರಸ್ತಾವನೆಯನ್ನು ನೀವು ತಿರಸ್ಕರಿಸಬೇಕೆಂದು ನಾನು ವಿಶ್ವಾಸಪೂರ್ವಕವಾಗಿ ನಿಮ್ಮಲ್ಲಿ ಕೇಳಿಕೊಳ್ಳುತ್ತೇನೆ.''

ನಿರ್ಣಯವನ್ನು ಮತಕ್ಕೆ ಹಾಕಿದಾಗ ಅದು ಬಿದ್ದುಹೋಯಿತೆಂದು ಸಾರಲಾಯಿತು.

ಆಲ್‌ಇಂಡಿಯಾ ಖಿಲಾಫತ್ ಅಧಿವೇಶನದ ಸಭೆಯ ಅಧ್ಯಕ್ಷತೆಯನ್ನು ಕೂಡ, ಹಕೀಮ್ ಆಜ್ಮಲ್‌ಖಾನ್ ವಹಿಸಿದ್ದರು. ಈ ಅಧಿವೇಶನದ ವಿಷಯ ಸಮಿತಿಯಲ್ಲಿ ಸಹ, ಸ್ವಾತಂತ್ರ್ಯದ ಪರವಾಗಿ ಒಂದು ನಿರ್ಣಯವನ್ನು ಮಂಡಿಸಲಾಯಿತು ಎನ್ನುವುದು ಸ್ಪಷ್ಟವಾಗುತ್ತದೆ. ಆ ವರದಿಯ ಸಾರಾಂಶ ಹೀಗಿದೆ:*

''ಮಾರನೆಯ ದಿನ ರಾತ್ರಿ ಹನ್ನೊಂದು ಗಂಟೆಗೆ ಅಧಿವೇಶನವನ್ನು ಮುಂದೂಡುವ ಮೊದಲು ಅಧ್ಯಕ್ಷ ಹಕೀಮ್ ಅಜ್ಮಲ್ ಖಾನ್, ಅಧಿವೇಶನದ ವಿಷಯ ಸಮಿತಿಯು ಆಜಾದ್ ಸುಬಹಾನಿ ಪ್ರಸ್ತಾವಿಸಿದ ಮತ್ತು ಮಿ.ಹಜರತ್ ಮೊಹಾನಿ ಅನುಮೋದಿಸಿದ ಸೂಚನೆಯನ್ನು ಚರ್ಚಿಸಿ, ಎಲ್ಲ ಮಹಮ್ಮದೀಯರು ಮತ್ತು ಇತರ ಕೋಮಿನವರು (ಕೂಡಿ) ಬ್ರಿಟಿಷ್ ಸಾಮ್ರಾಜ್ಯವನ್ನು ನಾಶಮಾಡಿ ಸಂಪೂರ್ಣ ಸ್ವಾತಂತ್ರ್ಯ ಪ್ರಾಪ್ತಿಯ ಸಾಹಸದಲ್ಲಿ ತೊಡಗುವಂತೆ ಕೇಳಿಕೊಳ್ಳುವ ನಿರ್ಣಯವೊಂದನ್ನು ಬಹುಮತದಿಂದ ಸ್ವೀಕರಿಸಲಾಗಿದೆ ಎಂದು ಸಾರಿದರು. ಈ ನಿರ್ಣಯದ ವಿವರಣೆ: ಬ್ರಿಟಿಷ್ ಸರಕಾರದ ಇಂದಿನ ಹಟಮಾರಿ ನೀತಿ ಧೋರಣೆಯನ್ನು ನೋಡಿದರೆ, ಬ್ರಿಟಿಷ್ ಸಾರ್ವಭೌಮತ್ವ, ಜಜೀರುಲ್ ಅರಬ್ ಮತ್ತು ಇಸ್ಲಾಮೀ ಪ್ರಪಂಚ, ಮುಸ್ಲಿಮೇತರರ ಪ್ರಭಾವ ಮತ್ತು ನಿಯಂತ್ರಣಗಳಿಂದ ಪೂರ್ಣ ಮುಕ್ತರಾಗುವ ಅನುಮತಿ ನೀಡುವರೆಂದು ನಿರೀಕ್ಷಿಸಲಾಗದು. ಅಂದರೆ ಶರೀಯತ್ ಬೇಡಿಕೆಗಳ ಮೂಲಕ ಖಿಲಾಫತ್ ಸ್ವರೂಪದ ಶಾಶ್ವತ ಸುರಕ್ಷಿತತೆ ದೊರಕಿಸುವುದು ಸಾಧ್ಯವಾಗದು. ಕಾರಣ ಖಿಲಾಫತ್‌ದ ಶಾಶ್ವತ ಸುರಕ್ಷಿತತೆ ಮತ್ತು ಇಂಡಿಯಾದ ಅಭಿವೃದ್ಧಿಗಾಗಿ ಬ್ರಿಟಿಷ್ ಸಾಮ್ರಾಜ್ಯ ನಾಶಪಡಿಸಲು ಯತ್ನಿಸುವುದು ಅಗತ್ಯ. ಮುಸ್ಲಿಮರು ಇಂಡಿಯಾದ ಇತರ ನಿವಾಸಿಗಳ ಜೊತೆಗೂಡಿ ಈ ಪ್ರಯತ್ನ ಮುಂದುವರಿಸಬೇಕೆನ್ನುವುದು ಈ ಅಧಿವೇಶನದ ಧೋರಣೆ ಮತ್ತು ಸ್ವರಾಜ್ಯವನ್ನು ಕುರಿತು ಇಂಡಿಯಾದ ಇತರ ನಿವಾಸಿಗಳು ತಾಳಿರುವ ಅಭಿಪ್ರಾಯ. ಅಂದರೆ, ಸಂಪೂರ್ಣ ಸ್ವಾತಂತ್ರ್ಯವೇ ನಮ್ಮ ಅಭಿಪ್ರಾಯವೂ ಆಗಿದೆ. ಮತ್ತು ಇಂಡಿಯಾದ ಇತರ ನಿವಾಸಿಗಳು ಇದಕ್ಕೆ ಸಹಮತವುಳ್ಳವರಾಗಿದ್ದಾರೆ ಎಂದು ಆಶಿಸಲಾಗಿದೆ. ೧೯೨೧ರ ಡಿಸೆಂಬರ್ ೨೭ರಂದು ಎರಡನೆಯ ದಿನ ಅಧಿವೇಶನ ಮತ್ತೆ ಕಾರ್ಯಕಲಾಪ ಮುಂದುವರೆದಾಗ ಸ್ವಾತಂತ್ರ್ಯ ಕುರಿತ ಈ ನಿರ್ಣಯದ ಬಗೆಗೆ ಜನರಲ್ಲಿ ಭಿನ್ನಾಭಿಪ್ರಾಯ ಮೂಡಿದ್ದು ಕಂಡುಬಂದಿತು. ಮಿ.ಹಜರತ್ ಮೊಹಾನಿ ಅವರು ಬ್ರಿಟಿಷ್ ಸಾರ್ವಭೌಮತ್ವದ ನಾಶ ಮತ್ತು ಸ್ವಾತಂತ್ರ್ಯ ಪ್ರಾಪ್ತಿ ತಮ್ಮ ಗುರಿ ಎಂದು ಸಾರುವ ನಿರ್ಣಯವನ್ನು ಮಂಡಿಸಲು ಮುಂದಾದಾಗ, ಖಿಲಾಫತ್ ವಿಷಯ ಸಮಿತಿಯ ಸದಸ್ಯರೊಬ್ಬರು ಅದನ್ನು ಇನ್ನೂ ಪರಿಶೀಲಿಸಬೇಕೆಂದು ಆಕ್ಷೇಪವೆತ್ತಿದರು. ತಮ್ಮ ಸಮಿತಿಯ ಶಾಸನಕ್ಕನುಗುಣವಾಗಿ, ಬದಲಾವಣೆಗೊಂಡ ಯಾವುದೇ ನಿರ್ಣಯ, ವಿಷಯ ಸಮಿತಿಯಲ್ಲಿ ಬಹುಮತದಿಂದ ಸ್ವೀಕೃತವಾಗದ ಹೊರತು ಒಪ್ಪಿಕೊಳ್ಳಲಾಗುವುದಿಲ್ಲ.

---

* ದಿ ಇಂಡಿಯನ್ ಆನ್ಯುವಲ್ ರಿಜಿಸ್ಟರ್ ೧೯೨೨, ಅನುಬಂಧ ಪು. ೧೩೩–೩೪

**“ಅಧ್ಯಕ್ಷ ಹಕೀಮ್ ಅಜ್ಮಲ್‌ಖಾನ್ ಅವರು ಈ ಆಕ್ಷೇಪಣೆಯನ್ನು ಎತ್ತಿಹಿಡಿದು, ಸ್ವಾತಂತ್ರ್ಯದ ಸೂಚನೆ ಕ್ರಮಬಾಹಿರವೆಂದು ತಮ್ಮ ತೀರ್ಪು ನೀಡಿದರು.”**

**“ಮಿ.ಹಸರತ್ ಮೊಹಾನಿ ಇದಕ್ಕೆ ಬಲವಾಗಿ ಪ್ರತಿಭಟಿಸುತ್ತ, ಇದೇ ಸದಸ್ಯರು ಇದೇ ಬಗೆಯ ಸೂಚನೆಯನ್ನು ವಿಷಯ ಸಮಿತಿಯ ಮುಂದೆ ತಂದಾಗ, ಅಧ್ಯಕ್ಷರು ಅದಕ್ಕೆ ಅನುಮತಿ ನೀಡಲಿಲ್ಲ. ಆದರೆ ಬಹಿರಂಗಾಧಿವೇಶನದಲ್ಲಿ ಅನುಮತಿಸಿದ್ದಾರೆ. ಇದರಿಂದಾಗಿ, ಸ್ವರಾಜ್ಯವೆಂದರೆ ಪೂರ್ಣ ಸ್ವಾತಂತ್ರ್ಯ ಎಂದು ತಮ್ಮ ಅಧಿವೇಶನ ಸಾರಬೇಕೆಂದು ಬಯಸಿರುವಾಗ, ಅಧ್ಯಕ್ಷರು ಆ ಸೂಚನೆ ಕ್ರಮಬಾಹಿರವೆಂದು ತೀರ್ಪು ನೀಡುವ ಸಂಚು ಹೂಡಿದ್ದಾರೆಂದು ಕಟುವಾಗಿ ನುಡಿದರು.”**

ಮೌಲಾನಾ ಹಸರತ್ ಮೊಹಾನಿ, ಆಲ್ ಇಂಡಿಯಾ ಮುಸ್ಲಿಂ ಲೀಗ್‌ದ ಅಧ್ಯಕ್ಷರಾಗಿದ್ದರು. ಆ ನಿರ್ಣಯಕ್ಕೆ ಸಂಬಂಧಿಸಿದ ಲೀಗ್ ನಡವಳಿಕೆಗಳ ಸಂಕ್ಷಿಪ್ತ ವರದಿ ಹೀಗಿದೆ:

**“೧೯೨೧ರ ಡಿಸೆಂಬರ್ ೩೧ರಂದು ಬೆಳಗಿನ ೯ ಗಂಟೆಗೆ ಮುಸ್ಲಿಂ ಲೀಗ್ ಸಭೆ ಸೇರಿತು. ಕೆಲವು ನಿರ್ವಿವಾದ ನಿರ್ಣಯಗಳ ಸ್ವೀಕೃತಿಯ ನಂತರ ಅಧ್ಯಕ್ಷ ಹಸರತ್ ಮೊಹಾನಿ, ಪ್ರಶಂಸೆಯ ಚಪ್ಪಾಳೆಗಳ ಉದ್ಘೋಷಿಸುತ್ತ, ಸ್ವಾತಂತ್ರ್ಯ ಪ್ರಾಪ್ತಿ ಮತ್ತು ಬ್ರಿಟಿಷ್ ಸಾರ್ವಭೌಮತ್ವದ ವಿನಾಶಕ್ಕೆ ಸಂಬಂಧಿಸಿದಂತೆ ತಾವು ಮಂಡಿಸಿದ ನಿರ್ಣಯವನ್ನು ವಿಷಯ ಸಮಿತಿ ತಿರಸ್ಕರಿಸಿದೆ; ಅದು ಲೀಗ್‌ದ ಬಹುಸಂಖ್ಯಾತ ಅಭಿಪ್ರಾಯವನ್ನು ಪ್ರತಿನಿಧಿಸುವ ಅಂತಿಮ ತೀರ್ಮಾನವೆಂದು ಪರಿಗಣಿಸಲಾಗುವುದು. ಆದರೆ ಆ ವಿಷಯ ಅತ್ಯಂತ ಮಹತ್ವದ್ದಾಗಿರುವುದರಿಂದ ಅದನ್ನು ಮತಕ್ಕೆ ಹಾಕದೆ ಆ ನಿರ್ಣಯದ ಮೇಲೆ ಚರ್ಚೆ ನಡೆಯಲು ತಾವು ಅನುಮತಿ ನೀಡುವುದಾಗಿ ನುಡಿದರು. ನಿರ್ಣಯದ ಮೇಲೆ ಚರ್ಚೆ ನಡೆಯಲು ತಾವು ಅನುಮತಿ ನೀಡುವುದಾಗಿ ನುಡಿದರು.**

**ವಿಷಯ ಸಮಿತಿಯಲ್ಲಿ ಆ ನಿರ್ಣಯವನ್ನು ಮಂಡಿಸಿದ ಮಿ.ಅಜಾದ್ ಸೊಬಹಾನಿ ಅವರೇ ಲೀಗ್ ಅಧಿವೇಶನದಲ್ಲಿಯೂ ಅದನ್ನು ಮಂಡಿಸಿದರು. ಅಹಿಂಸೆ ಮತ್ತು ಅಸಹಕಾರ ಮೂಲಕ ತಮ್ಮ ಹೋರಾಟ ಮುಂದುವರೆಸುವುದು– ಅದೊಂದೇ ತಮಗೆ ತೆರೆದಿರುವ ದಾರಿ. ಅದಕ್ಕಾಗಿ ಹಿಂದೂ ಮುಸ್ಲಿಮ್ ಐಕ್ಯ ಅತ್ಯಗತ್ಯ; ಮತ್ತು ಈ ದೃಷ್ಟಿಯಿಂದ ಕಾಂಗ್ರೆಸ್ ಪಕ್ಷ ಮಿ.ಗಾಂಧಿಯವರಿಗೆ ಎಲ್ಲ ಅಧಿಕಾರ, ನಾಯಕತ್ವ ವಹಿಸಿಕೊಟ್ಟಿರುವುದು ಎಲ್ಲ ದೃಷ್ಟಿಯಿಂದ ಯೋಗ್ಯವಾಗಿದೆ. ಯಾಕೆಂದರೆ ಮಿ.ಗಾಂಧಿ ಅದಕ್ಕೆ ಸಮರ್ಥ ವ್ಯಕ್ತಿ. ಅವರು ಕೂಡ ಇಂಡಿಯಾ ಮತ್ತು ಮುಸ್ಲಿಮ್ ಜಗತ್ತಿಗೆ ಬ್ರಿಟಿಷ್ ಸಾಮ್ರಾಜ್ಯ ಅತಿ ದೊಡ್ಡ ಅಪಾಯವೆಂದೂ, ಬ್ರಿಟಿಷರ ಮುಂದೆ ಸ್ವಾತಂತ್ರ್ಯದ ಒಂದು ಸಮರ್ಪಕ ಆದರ್ಶ ಮಂಡನೆಯ ಮೂಲಕ ಅದನ್ನು (ಬ್ರಿಟಿಷ್ ಸಾಮ್ರಾಜ್ಯ) ನಾಶಗೊಳಿಸಲೇಬೇಕೆಂದು ನಂಬಿದ್ದಾರೆ.**

**ಮಿ.ಆಜಾದ್ ಸೊಬಹಾನಿ ಅವರ ಬಳಿಕ, ಅನೇಕರು ಭಾಷಣ ಮಾಡಿ ಅವರ ಧೋರಣೆಯನ್ನು ಬೆಂಬಲಿಸಿದರು.**

**ಕಾಂಗ್ರೆಸ್ ಇಡದ ಹೆಜ್ಜೆಯನ್ನು ಲೀಗ್ ಇಡುವುದು ಬೇಡ ಎನ್ನುವುದು ಅಧ್ಯಕ್ಷರ ತೀರ್ಪಿಗೆ ಕಾರಣ ಎಂದು ಅನರಬಲ್ ಮಿ.ರಜಾ ಅಲಿ ಸಾರಿದರು. ತಮ್ಮ ಮಾತಿನ ಅರ್ಥವನ್ನು ತಿಳಿದುಕೊಳ್ಳದೇ ಅವರು ದೊಡ್ಡ ದೊಡ್ಡ ಮಾತನಾಡಿ ವಿರೋಧದ ಧ್ವನಿಯಲ್ಲಿ ಸಭಿಕರನ್ನು ಎಚ್ಚರಿಸಿದರು. ಸಧ್ಯ ಸ್ವಾತಂತ್ರ್ಯ ದೊರೆತರೂ ಇಂಡಿಯಾಕ್ಕೆ ಅದನ್ನು ನಿರ್ವಹಿಸುವ ಸಾಮರ್ಥ್ಯವಿಲ್ಲ ಎಂದು ಪ್ರತಿಪಾದಿಸಿದರು.**

**ಉದಾಹರಣೆಗೆ ನಾಳೆ ಬ್ರಿಟಿಷರು (ಇಂಡಿಯಾ) ಬಿಟ್ಟುಹೋದರೆ ತಮ್ಮ ಕಮಾಂಡರ್–ಇನ್ ಚೀಫ್**

**ಯಾರಾಗುತ್ತಾರೆ ಎಂದು ಕೇಳಿದರು. (ಸಭಿಕರಿಂದ ಒಂದು ಧ್ವನಿ, 'ಅನ್ವರ್ ಪಾಷಾ'). ಯಾವುದೇ ವಿದೇಶೀಯನನ್ನು ನಾವು ಎಂದೂ ಸಹಿಸಲಾರೆವು ಎಂದು ಭಾಷಣಕಾರ ಖಡಾಖಂಡಿತವಾಗಿ ಸಾರಿದರು. ತನಗೆ ಬೇಕಾಗಿರುವುದು ಇಂಡಿಯನ್ ಕಮಾಂಡರ್–ಇನ್–ಚೀಫ್ ಎಂದು ಹೇಳಿದರು.**

೧೯೨೩ರ ಮಾರ್ಚ್ ತಿಂಗಳು ಕಾಕಿನಾಡಾದಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದಲ್ಲಿ ಪುನಃ ಸ್ವಾತಂತ್ರ್ಯದ ಪ್ರಶ್ನೆಯನ್ನು ಮಂಡಿಸಲಾಯಿತು. ಆದರೆ ಅಲ್ಲಿಯೂ ಯಶ ದೊರಕಲಿಲ್ಲ.

೧೯೨೪ರಲ್ಲಿ ಕಾಂಗ್ರೆಸ್ಸಿನ ಬೆಳಗಾಂವಿ ಅಧಿವೇಶನದ ಅಧ್ಯಕ್ಷತೆ ವಹಿಸಿದ ಮಿ.ಗಾಂಧಿ ನುಡಿದರು:

**"ನನ್ನ ದೃಷ್ಟಿಯಲ್ಲಿ, ಒಂದು ವೇಳೆ ಬ್ರಿಟಿಷರು ತಾವು ಆಡುತ್ತಿರುವಂತೆ ಮಾಡುವುದಾದರೆ, ನಮ್ಮ– ಸ್ವಾತಂತ್ರ್ಯ ಪ್ರಾಪ್ತಿ– ಸಮತೆಗೆ ಪ್ರಾಮಾಣಿಕವಾಗಿ ಸಹಾಯ ಮಾಡುವುದಾದರೆ, ಬ್ರಿಟಿಷರ ಸಂಬಂಧಗಳನ್ನು ಸಂಪೂರ್ಣ ಕತ್ತರಿಸಿಕೊಳ್ಳುವುದಕ್ಕಿಂತ, ಅದು ನಮ್ಮ ಬಹು ದೊಡ್ಡ ಗೆಲುವು ಆದೀತು. ಕಾರಣ ಬ್ರಿಟಿಷ್ ಸಾಮ್ರಾಜ್ಯದ ಒಳಗಿದ್ದುಕೊಂಡೇ ಸ್ವರಾಜ್ಯ ಪ್ರಾಪ್ತಿಗಾಗಿ ನನ್ನ ಯತ್ನ ಮುಂದುವರೆಸುತ್ತೇನೆ. ಆದರೆ ಬ್ರಿಟನ್‌ದವರದೇ ಆದ ತಪ್ಪುಗಳಿಂದಾಗಿ ಏನಾದರೂ ಅಗತ್ಯವೆನಿಸಿದರೆ ಅವರ ಜೊತೆಗಿನ ಎಲ್ಲ ಸಂಪರ್ಕ– ಸಂಬಂಧಗಳನ್ನು ಕಡಿದುಕೊಳ್ಳಲು ಎಂದೂ ಹಿಂದೆಮುಂದೆ ನೋಡುವುದಿಲ್ಲ. ಹೀಗೆ, ನಾನು ಪ್ರತ್ಯೇಕವಾಗುವ ಭಾರವನ್ನು ಬ್ರಿಟಿಷ್ ಜನತೆಯ ಮೇಲೆ ಹಾಕಬಯಸುತ್ತೇನೆ."**

೧೯೨೫ರಲ್ಲಿ ಮಿ.ಸಿ.ಆರ್.ದಾಸ್ ಪುನಃ ಈ ವಿಷಯ ಎತ್ತಿಕೊಂಡರು. ಆ ವರ್ಷದ ಮೇ ತಿಂಗಳು ಬೆಂಗಾಲ್ ಪ್ರಾಂತೀಯ ಅಧಿವೇಶನದ ತಮ್ಮ ಭಾಷಣದಲ್ಲಿ, ಆಂತರಿಕ ಪ್ರಭುತ್ವದ ಸ್ಥಾನಮಾನಕ್ಕೆ ತುಲನೆ ಮಾಡಿದಾಗ ಸ್ವಾತಂತ್ರ್ಯ ಪ್ರಾಪ್ತಿಯ ವಿಚಾರ ಕೆಳಮಟ್ಟದ್ದು ಎನ್ನುವುದನ್ನು ಉದ್ದೇಶಪೂರ್ವಕವಾಗಿ ಎತ್ತಿ ತೋರಿಸಿ ಆ ಧೋರಣೆಗೆ ಪೆಟ್ಟು ಬೀಳುವಂತೆ ವಿವರಿಸಿದರು.

**"...ನನ್ನ ವಿಚಾರದಲ್ಲಿ ಸ್ವರಾಜ್ಯಕ್ಕಿಂತ ಸ್ವಾತಂತ್ರ್ಯ ಒಂದು ಸಂಕುಚಿತ ಆದರ್ಶ. ಅದು ದಾಸ್ಯದ ನಿರಾಕರಣೆಯಾಗಿರುವುದು ನಿಜ; ಆದರೆ, ಅದು ತನ್ನಷ್ಟಕ್ಕೆ ತಾನೇ ಅದು ಒಂದು ನಿಶ್ಚಿತ ಆದರ್ಶವಾಗಲಾರದು. ಸ್ವಾತಂತ್ರ್ಯ ಎನ್ನುವುದು ಸ್ವರಾಜ್ಯಕ್ಕೆ ಅನುಗುಣವಾಗಿಲ್ಲ ಎಂದು ನಾನು ಒಂದು ಕ್ಷಣದ ಮಟ್ಟಿಗೂ ಸೂಚಿಸುತ್ತಿಲ್ಲ. ಆದರೆ ನಮಗೆ ಅಗತ್ಯವಾಗಿರುವುದು ಕೇವಲ ಸ್ವಾತಂತ್ರ್ಯವಲ್ಲ; ಸ್ವರಾಜ್ಯ ಸ್ಥಾಪನೆ. ನಮ್ಮ ಗತಿಗೆ ನಮ್ಮನ್ನು ಬಿಟ್ಟು ಬ್ರಿಟಿಷರು ಇಲ್ಲಿಂದ ತೊಲಗಿ ಇಂಡಿಯಾ ಸ್ವತಂತ್ರವಾಗಬಹುದು. ಆದರೆ, ಅದರಿಂದ, ನಾನು ತಿಳಿದುಕೊಂಡಿರುವ ಸ್ವರಾಜ್ಯ, ಅವಕಾಶ ದೊರೆಯಲಾರದು. ನಾನು ಗಯಾದಲ್ಲಿಯ ನನ್ನ ಅಧ್ಯಕ್ಷ ಭಾಷಣದಲ್ಲಿ ಎತ್ತಿ ತೋರಿಸಿದಂತೆ, ಎದ್ದುಕಾಣುವ ಪರಸ್ಪರ ವಿರೋಧೀ ಅಂಶಗಳಿಂದ ಕೂಡಿದ ಇಂಡಿಯಾದ ಜನಸಮುದಾಯವನ್ನು ಸಂಯೋಜಿಸುವುದು ಒಂದು ಕುತೂಹಲಕಾರಿ ಅಷ್ಟೇ ಅಲ್ಲ, ಸಂಕೀರ್ಣ ಸಮಸ್ಯೆಯಾಗಿದೆ. ಈ ಸಂಯೋಜನೆಯ ಕಾರ್ಯ ಒಂದು ಸುದೀರ್ಘ ಪ್ರಕ್ರಿಯೆ. ಆಯಾಸಕರ ಪ್ರಕ್ರಿಯೆಯೂ ಆಗಿರಬಹುದು; ಆದರೆ ಅದಿಲ್ಲದೆ ಸ್ವರಾಜ್ಯ ಸಾಧ್ಯವಾಗದು...**

**ಎರಡನೆಯದಾಗಿ ಸ್ವಾತಂತ್ರ್ಯ, ಸ್ವರಾಜ್ಯದ ಸತ್ವವಾದ ಶಿಸ್ತಿನ ವಿಚಾರ ಒದಗಿಸುವುದಿಲ್ಲ. ನಾನು ವಿವರಿಸಿದ ಸಂಯೋಜನೆಯ ಕಾರ್ಯ ಎಂದರೆ, (ಆ) ಸ್ಪಷ್ಟ ಸ್ಥಾಪನೆ. ಆದರೆ ನಮ್ಮ ಕಲ್ಪಿತ ಶೋಧನೆಯ ಸ್ಥಾಪನೆಯನ್ನು ಕುರಿತು ನಮ್ಮಲ್ಲಿ ಸಪಷ್ಟ ತಿಳುವಳಿಕೆ ಇರಬೇಕು. ಅದು ನಮ್ಮ ಇಂಡಿಯಾ ಜನತೆಯ ಸ್ವಭಾವ, ಬುದ್ಧಿಶಕ್ತಿ**

ಮತ್ತು ಪರಂಪರೆಗಳಿಗೆ ಅನುಗುಣವಾಗಿರಬೇಕು. ನನಗೆ ತಿಳಿದಂತೆ ಸ್ವರಾಜ್ಯದಿಂದ ಧ್ವನಿತವಾಗುವುದು, ಪ್ರಥಮತಃ ಇಂಡಿಯಾದ ಜನತೆಯ ವಿವಿಧ ಬಗೆಯ ಅಂಶಗಳನ್ನು (ಏಕಮುಖವಾಗಿ) ಸ್ಥಿರೀಕರಿಸುವ ಕಾರ್ಯವಿಧಾನಕ್ಕೆ ಅಗತ್ಯವಾದ ಸ್ವಾತಂತ್ರ್ಯ; ಎರಡನೆಯದಾಗಿ ಈ ಕಾರ್ಯ ಸಾವಿರ ವರ್ಷದಷ್ಟು ಹಿಂದೆ ಹೋಗದೆ, ನಮ್ಮ ರಾಷ್ಟ್ರದ ಪ್ರತಿಭಾಶಕ್ತಿ, ಸ್ವಭಾವ ಇತ್ಯಾದಿಗಳ ಬೆಳಕಿನಲ್ಲಿ, ರಾಷ್ಟ್ರೀಯ ಸ್ತರದ ಮೇಲೆ ಪ್ರಗತಿಪರ ಹೆಜ್ಜೆಗಳನ್ನಿಡುವುದು.

ಮೂರನೆಯದಾಗಿ ನಮ್ಮ ಮುಂದಿರುವ ಕಾರ್ಯನಿರ್ವಹಣೆಗೆ ಯಾವುದೇ ವಿದೇಶೀ ಶಕ್ತಿಯಿಂದ ಅಡ್ಡಿಯಾಗಕೂಡದು. ಹಾಗಾದರೆ, ನಾನು ಕರೆಯುವ ಸ್ವರಾಜ್ಯದ ಆದರ್ಶ ವಿಚಾರವನ್ನು ಖಚಿತಗೊಳಿಸುವುದು ಅಗತ್ಯ. ಕೇವಲ ಸ್ವಾತಂತ್ರ್ಯ ಎನ್ನುವುದು ಸ್ವರಾಜ್ಯದ ನಿರಾಕರಣೆಯಾದೀತು. ಸ್ವಾತಂತ್ರ್ಯ ಕುರಿತು ನಿಮ್ಮ ರಾಷ್ಟ್ರೀಯ ಆದರ್ಶವೇನು ಎಂದು ನಮ್ಮನ್ನು ಕೇಳಿದರೆ, ಅದಕ್ಕಿರುವ ಒಂದೇ ಒಂದು ಉತ್ತರ ಸ್ವರಾಜ್ಯ. 'ಹೋಮ್ ರೂಲ್ ಅಥವಾ (ಸ್ವಪ್ರಭುತ್ವ) 'ಸೆಲ್ಫ್ ಗವರ್ನಮೆಂಟ್' ನನಗೆ ಇಷ್ಟವಿಲ್ಲ. ಬಹುಶಃ ನಾನು ವಿವರಿಸುವ ಸ್ವರಾಜ್ಯ ಅವೆರಡನ್ನೂ ಒಳಗೊಳ್ಳುತ್ತದೆ. ಏನೇ ಆದರೂ ನನ್ನ ಸಂಸ್ಕೃತಿ 'ಪ್ರಭುತ್ವ' ಎನ್ನುವ ಶಬ್ದಕ್ಕೇ ವಿರೋಧಿಯಾಗಿದೆ. ಅದು ದೇಶೀಯ ಪ್ರಭುತ್ವವಾಗಿರಲಿ ಅಥವಾ ವಿದೇಶೀ ಪ್ರಭುತ್ವವಾಗಿರಲಿ.

ಆ ಬಳಿಕ ಬರುವ ಪ್ರಶ್ನೆ: ಈ ಆದರ್ಶ ಸಾಧನೆ ಸಾಮ್ರಾಜ್ಯದ ಕಕ್ಷೆಯೊಳಗೋ ಅಥವಾ ಅದರಾಚೆಗೋ? ಎನ್ನುವುದು. ಒಂದುವೇಳೆ ಸಾಮ್ರಾಜ್ಯ ನಮ್ಮ ಹಕ್ಕುಗಳನ್ನು ಮನ್ನಿಸಿದರೆ ಆಗ ಅದು ಸಾಮ್ರಾಜ್ಯದ ಕಕ್ಷೆಯೊಳಗೇ: ಮನ್ನಿಸದಿದ್ದರೆ ಸಾಮ್ರಾಜ್ಯದ–ಕಕ್ಷೆಯ–ಆಚೆಗೇ ಎನ್ನುವುದು ಕಾಂಗ್ರೆಸ್ ಪಕ್ಷ ಯಾವಾಗಲೂ ನೀಡಿರುವ ಉತ್ತರ. ನಮ್ಮ ಬದುಕನ್ನು ನಾವೇ ಬಾಳುವ, ಒಂದು ಸದವಕಾಶ, ಅಂದರೆ ಸಮ್ಮತದ ಪ್ರತ್ಯಕ್ಷೀಕರಣಕ್ಕೆ, ಆತ್ಮವಿಕಾಸಕ್ಕೆ ಮತ್ತು ಸಮ್ಮತದ–ಆತ್ಮ–ಸಂತೃಪ್ತಿ ಸಮೃದ್ಧಿಗಳಿಗೆ ಒಂದು ಅವಕಾಶ. ನಮ್ಮ ಬದುಕನ್ನು ಬಾಳುವುದು ಮುಖ್ಯ ಪ್ರಶ್ನೆ. ಒಂದುವೇಳೆ ಸಾಮ್ರಾಜ್ಯವು ನಮ್ಮ ರಾಷ್ಟ್ರೀಯ ಜೀವನದ ಬೆಳವಣಿಗೆ ಮತ್ತು ವಿಕಾಸಗಳಿಗೆ ಸಾಕಷ್ಟು ಆಸ್ಪದ ಮಾಡಿಕೊಟ್ಟರೆ, ಸಾಮ್ರಾಜ್ಯದ (ಕಕ್ಷೆಯೊಳಗಿನ) ವಿಚಾರಕ್ಕೆ ಪ್ರಾಶಸ್ತ್ಯ ನೀಡಬೇಕು. ಅದಕ್ಕೆ ಪ್ರತಿಯಾಗಿ, ಒಂದು ವೇಳೆ ಸಾಮ್ರಾಜ್ಯ, ಜಗನ್ನಾಥನ ತೇರಿನಂತೆ, ನಮ್ಮ ಬದುಕನ್ನು ತುಳಿಯುತ್ತ, ಅಟ್ಟಹಾಸದ ವೇಗದಲ್ಲಿ ಮುನ್ನಡೆದರೆ, ಆಗ ಸಾಮ್ರಾಜ್ಯ ಕಕ್ಷೆಯ ಹೊರಗೆ, ಸ್ವರಾಜ್ಯ ಸ್ಥಾಪನೆಯ ವಿಚಾರ ನ್ಯಾಯಸಮ್ಮತ.

ನಿಜವಾಗಿ, ಸಾಮ್ರಾಜ್ಯ (ಕಕ್ಷೆಯೊಳಗಿನ) ವಿಚಾರ ಅನೇಕ ಪ್ರಯೋಜನಕಾರಿ ಸ್ಪಷ್ಟ ತಿಳುವಳಿಕೆ ನೀಡುತ್ತದೆ. ಸಂಸ್ಥಾನದ ಸ್ಥಾನಮಾನವೆಂದರೆ, ಯಾವುದೇ ಅರ್ಥದಲ್ಲಿ ದಾಸ್ಯ ಭಾವ ಅಲ್ಲ. ಅದು, ಸಾಮ್ರಾಜ್ಯದ ಸಹಕಾರದಿಂದ ಭೌತಿಕ ಪ್ರಯೋಜನಕ್ಕಾಗಿ ಪರಸ್ಪರ ಸಮ್ಮತಿಯಿಂದ ಮಾಡಿಕೊಳ್ಳುವ ಒಂದು (ವಿಶೇಷವಾಗಿರುವ) ಒಪ್ಪಂದ. ಮುಕ್ತ ಒಪ್ಪಂದದಲ್ಲಿ, ಬೇರೆಯಾಗುವ ಹಕ್ಕು ಕೂಡ ಅಗತ್ಯವಾಗಿ ಸೇರಿರುತ್ತದೆ. ಯುದ್ಧ ಪೂರ್ವದಲ್ಲಿ, ಅದು ಸಾಮ್ರಾಜ್ಯ ಅಥವಾ ಅದರ ಘಟಕಗಳು ಕೂಡಿರುವ ಒಂದು ಕೂಟ (ಸಂಘ) ಎಂದು ನಂಬಲಾಗಿತ್ತು. ಆಧುನಿಕ ಪರಿಸ್ಥಿತಿಗಳಲ್ಲಿ, ಬ್ರಿಟಿಷ್ ಸಾಮ್ರಾಜ್ಯವೆಂದು ಕರೆಸಿಕೊಳ್ಳುವ ವಿವಿಧ ರಾಷ್ಟ್ರಗಳ ಒಕ್ಕೂಟದಲ್ಲಿ, ಅದರ ಪ್ರತಿಯೊಂದು ಘಟಕಕ್ಕೂ ರಕ್ಷಣೆಯನ್ನು ಒದಗಿಸಬೇಕಾಗುತ್ತದೆ. ಕಾರಣ ಯಾವುದೇ ರಾಜ್ಯ ಡೊಮಿನಿಯನ್ ಸ್ಥಾನಮಾನ ಹೊಂದಿ ತನ್ನಷ್ಟಕ್ಕೆ ತಾನೆ ಪ್ರತ್ಯೇಕವಾಗಿ ಬಾಳಲಾರದು ಎನ್ನುವುದನ್ನು ಸ್ಪಷ್ಟವಾಗಿ ಗ್ರಹಿಸಲಾಗಿದೆ. ಅದೇ ಕಾಲಕ್ಕೆ ಪ್ರತಿ ರಾಷ್ಟ್ರಕ್ಕೆ ಸ್ವಂತಿಕೆಯನ್ನು ಅರ್ಥ ಮಾಡಿಕೊಳ್ಳುವ, ತನ್ನ ಅಭಿವೃದ್ಧಿ ಮಾಡಿಕೊಂಡು ತನ್ನ ಧ್ಯೇಯಗಳನ್ನು ಸಾಧಿಸಿಕೊಳ್ಳುವ ಹಕ್ಕು

**ಕೂಡ ಅದಕ್ಕಿರುತ್ತದೆ. ಆದ್ದರಿಂದ ಇದರಲ್ಲಿ ನಾನು ವಿವರಿಸುವ ಸ್ವರಾಜ್ಯದ ಎಲ್ಲ ಅಂಶಗಳೂ ಅಭಿವ್ಯಕ್ತವಾಗುತ್ತವೆ.**

**ತನ್ನ ಆಳವಾದ ಆಧ್ಯಾತ್ಮಿಕ ಮಹತ್ವದಿಂದಾಗಿ ಈ ವಿಚಾರ ನನಗೆ ವಿಶೇಷ ಆಕರ್ಷಕವಾಗಿದೆ. ನನಗೆ, ವಿಶ್ವಶಾಂತಿಯಲ್ಲಿ ಅಂತಿಮವಾಗಿ ವಿಶ್ವದ ಸಂಘಟನೆಯಲ್ಲಿ ನಂಬಿಕೆಯಿದೆ; ಮತ್ತು ನನ್ನ ವಿಚಾರದಲ್ಲಿ ಬ್ರಿಟಿಷ್ ಸಾಮ್ರಾಜ್ಯವೆಂದು ಕರೆಯಲಾಗುವ ವಿವಿಧ ರಾಷ್ಟ್ರಗಳ ಬೃಹತ್ ಒಕ್ಕೂಟ (ಕಾಮನ್‌ವೆಲ್ತ್ ಆಫ್ ನೇಷನ್ಸ್)– ಪ್ರತಿಯೊಂದೂ ತನ್ನ ವಿಶಿಷ್ಟ ಜೀವನ, ವಿಶಿಷ್ಟ ನಾಗರಿಕತೆ, ವಿಶಿಷ್ಟ ಮಾನಸಿಕ ದೃಷ್ಟಿಧೋರಣೆ ಹೊಂದಿರುವ ಅನೇಕ ಜನಾಂಗಗಳ ಒಂದು ಸಂಯುಕ್ತ ಕೂಟ– ಒಬ್ಬ ಪರಿಣಿತ ರಾಜನೀತಿಜ್ಞನ ಮಾರ್ಗದರ್ಶನದಲ್ಲಿ ಕಾರ್ಯ ಮಾಡಿದರೆ, ಎಂದೂ ಕಲ್ಪಿಸಲಾಗದ, ಇಡೀ ಪ್ರಪಂಚವನ್ನು ಅಖಂಡವಾಗಿ ಹೆಣೆದು ಒಟ್ಟು ಮಾನವ ಜನಾಂಗವನ್ನು ಒಂದುಗೂಡಿಸಬೇಕಾಗಿರುವ ದಿಸೆಯತ್ತ ಮಹತ್ತರವಾದ ಕಾಣಿಕೆ ಸಲ್ಲಿಸುವಲ್ಲಿ ಯಾವ ಸಂದೇಹವೂ ಇಲ್ಲ. ಆದರೆ, ಅದರ ಕರ್ಣಧಾರತ್ವವನ್ನು ಒಬ್ಬ ನುರಿತ ರಾಜನೀತಿಜ್ಞ ವಹಿಸಿದಾಗ ಮಾತ್ರ ಅದು ಸಾಧ್ಯ. ಈ ವಿಚಾರದ ವಿಕಾಸಕ್ಕಾಗಿ ಘಟಕ ರಾಷ್ಟ್ರಗಳು ಬಹಳಷ್ಟು ತ್ಯಾಗ ಮಾಡಬೇಕಾಗುತ್ತದೆ; ಮತ್ತು ಜನತೆಯ ಒಳಿತಿಗಾಗಿ ಸರ್ವಾಧಿಕಾರೀ ವಿಕೃತ ಮುಖವುಳ್ಳ ಸಾಮ್ರಾಜ್ಯ (ಕಕ್ಷೆಯೊಳಗಿನ) ವಿಚಾರವನ್ನು ತ್ಯಜಿಸಬೇಕಾಗುತ್ತದೆ. ಕಾಮನ್ ವೆಲ್ತ್‌ದ ಒಳಗೆ ಇದ್ದುಕೊಂಡೇ, ಇಂಡಿಯಾ ಸ್ವಾತಂತ್ರ್ಯ ಪ್ರಾಪ್ತಿಯ ಯತ್ನ ಮುಂದುವರೆಸುವುದು ಮತ್ತು ತನ್ಮೂಲಕ ಮಾನವತೆಯ ಕಲ್ಯಾಣ ಸಾಧನೆಗಾಗಿ ಸೇವೆ ಮಾಡುವುದು ನನ್ನ ದೃಷ್ಟಿಯಲ್ಲಿ, ಇಂಡಿಯಾಕ್ಕೂ ಒಳ್ಳೆಯದು; ವಿಶ್ವಕ್ಕೂ ಒಳ್ಳೆಯದು.''**

ಮಿ.ದಾಸ್ ಅವರು ಸ್ವಾತಂತ್ರ್ಯಕ್ಕಿಂತ ಡೊಮೊನಿಯನ್ ಸ್ಥಾನಮಾನವೇ ಮೇಲು ಎಂದು ಒತ್ತಾಯಿಸಿದರಲ್ಲದೆ, ಇಂಡಿಯಾದ ರಾಜಕೀಯ ವಿಕಾಸಕ್ಕೆ ಸಂಬಂಧಿಸಿದಂತೆ ಅಧಿವೇಶನದಲ್ಲಿ ಈ ಕೆಳಗಿನ ಗೊತ್ತುವಳಿ ಸ್ವೀಕೃತಗೊಳಿಸಿದರು:

**"೧. ಸ್ವರಾಜ್ಯದ ರಾಷ್ಟ್ರೀಯ ಆದರ್ಶದಲ್ಲಿ, ಇಂಡಿಯಾ ರಾಷ್ಟ್ರ ತನ್ನ ಬದುಕನ್ನು ತಾನು ಬೇಕಾದಂತೆ ಬಾಳುವ ಹಕ್ಕು, ಸ್ವಂತಿಕೆಯನ್ನು ಅರಿತುಕೊಳ್ಳುವ ಸದವಕಾಶ, ಸ್ವವಿಕಾಸ ಮತ್ತು ಆತ್ಮಸಂತೃಪ್ತಿ ಮತ್ತು ಭಾರತ ರಾಷ್ಟ್ರವನ್ನು ರೂಪಿಸುವ ವಿವಿಧ ಅಂಶಗಳನ್ನು ಕ್ರೋಢೀಕರಿಸುವಲ್ಲಿ ಯಾವುದೇ ಬಾಹ್ಯ ಪ್ರಭಾವಗಳಿಂದ ಅಡ್ಡಿ ಆತಂಕವಿಲ್ಲದಂಥ ಕಾರ್ಯ ಸ್ವಾತಂತ್ರ್ಯಗಳು ಒಳಗೊಳ್ಳುತ್ತವೆ.**

**"೨. ಒಂದುವೇಳೆ ಬ್ರಿಟಿಷ್ ಸಾಮ್ರಾಜ್ಯ, ಸ್ವರಾಜ್ಯ ಸಾಪೇಕ್ಷತೆಯ ಹಕ್ಕಿಗೆ ಅಡ್ಡಬಾರದೆ ಮನ್ನಣೆ ನೀಡಿದರೆ ಮತ್ತು ಇಂಥ ಹಕ್ಕುಗಳನ್ನು ಪರಿಣಾಮಕಾರಿಯಾಗಿಸಲು ಅಗತ್ಯವಾದ ತ್ಯಾಗ ಮಾಡುವ ಭರವಸೆ ನೀಡುವುದಾದರೆ, ಬ್ರಿಟಿಷ್ ಕಾಮನ್‌ವೆಲ್ತ್‌ದ ಒಳಗಿದ್ದುಕೊಂಡೇ ತನ್ನ ಸ್ವರಾಜ್ಯ ಪಡೆಯಬೇಕು ಎಂದು ಈ ಅಧಿವೇಶನ ಭಾರತಕ್ಕೆ ಕರೆ ಕೊಡುತ್ತದೆ.''**

ಈ ಅಧಿವೇಶನದುದ್ದಕ್ಕೂ ಮಿ.ಗಾಂಧಿ ಹಾಜರಿದ್ದರು ಎನ್ನುವುದು ಗಮನಾರ್ಹ. ಆದರೆ ಅವರಿಂದ ಅಸಮ್ಮತಿಯ ಒಂದು ಮಾತು ಕೂಡ ಕೇಳಿ ಬರಲಿಲ್ಲ. ಪ್ರತಿಯಾಗಿ ಮಿ.ದಾಸ್ (ಅವರ) ನಿಲುವನ್ನು ಅವರು ಅನುಮೋದಿಸಿದರು.

ಈ ಸಂಗತಿಗಳ ಬೆಳಕಿನಲ್ಲಿ, ಹಿಂದೂಗಳು ಡೊಮಿನಿಯನ್ ಸ್ಥಾನಮಾನದ ಪರ ಮತ್ತು

ಮುಸ್ಲಿಮರು ಸ್ವಾತಂತ್ರ್ಯಪರ ಇರುವುದನ್ನು ಕುರಿತು ಯಾರಿಗೆ ಸಂದೇಹ ಬಂದೀತು? ಇಷ್ಟಾದರೂ ಯಾವುದಾದರೂ ಸಂದೇಹ ಉಳಿದಿದ್ದರೆ, ಅದನ್ನು ೧೯೨೮ರ ನೆಹರೂ ಕಮಿಟಿಯ ವರದಿಯ ಬಗೆಗೆ ಮುಸ್ಲಿಮರಲ್ಲಿ ಒಡಮೂಡಿದ ಪ್ರತಿಧ್ವನಿಗಳು ಪೂರ್ಣವಾಗಿ ಕರಗಿಸಲೇಬೇಕು. ಇಂಡಿಯಾದ ಸಂವಿಧಾನ ರೂಪಿಸಲು ಕಾಂಗ್ರೆಸ್ ನೇಮಿಸಿದ ನೆಹರೂ ಸಮಿತಿ, ಇಂಡಿಯಾದ ಸಂವಿಧಾನಕ್ಕೆ ಪ್ರಭುತ್ವ ಸ್ಥಾನಮಾನವನ್ನೇ ಆಧಾರವಾಗಿಟ್ಟುಕೊಂಡು, ಸ್ವಾತಂತ್ರ್ಯದ ವಿಚಾರವನ್ನು ತಿರಸ್ಕರಿಸಿತು. ನೆಹರೂ (ಸಮಿತಿ) ವರದಿಯನ್ನು ಕುರಿತು ಕಾಂಗ್ರೆಸ್ ಮತ್ತು ಮುಸ್ಲಿಮ್ ರಾಜಕೀಯ ಸಂಘಟನೆಗಳು ತಾಳಿದ ಧೋರಣೆ ಬೋಧಪ್ರದವಾಗಿದೆ.

ಕಾಂಗ್ರೆಸ್ ಪಕ್ಷ ೧೯೨೮ರಲ್ಲಿ ಜರುಗಿಸಿದ ಕಲ್ಕತ್ತಾದ ತನ್ನ ಅಧಿವೇಶನದಲ್ಲಿ ಮಿ.ಗಾಂಧಿ ಮಂಡಿಸಿದ ಈ ಕೆಳಗಿನ ಕರಾರುಗಳನ್ನು ಒಳಗೊಂಡ ಒಂದು ನಿರ್ಣಯವನ್ನು ಅಂಗೀಕರಿಸಿತು.

> **"ಸರ್ವಪಕ್ಷ ಸಮಿತಿಯ ವರದಿ ಶಿಫಾರಸು ಮಾಡಿದ ಸಂವಿಧಾನವನ್ನು ಪರಿಶೀಲಿಸಿದ ಕಾಂಗ್ರೆಸ್, ಅದು ಇಂಡಿಯಾದ ರಾಜಕೀಯ ಮತ್ತು ಕೋಮುವಾರು ಸಮಸ್ಯೆಗಳ ಪರಿಹಾರಕ್ಕೆ ನೀಡಿದ ದೊಡ್ಡ ಕಾಣಿಕೆಯೆಂದು (ಭಾವಿಸಿ) ಸ್ವಾಗತಿಸುತ್ತದೆ; ಮತ್ತು ಅದರ ಸಲಹೆಗಳ ತಾತ್ವಿಕ ಐಕ್ಯಮತಕ್ಕಾಗಿ ಸಮಿತಿಯನ್ನು ಅಭಿನಂದಿಸುತ್ತದೆ; ಮದ್ರಾಸ್ ಕಾಂಗ್ರೆಸ್ (ಅಧಿವೇಶನ) ಅಂಗೀಕರಿಸಿದ ಸಂಪೂರ್ಣ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ನಿರ್ಣಯಕ್ಕೆ ಬದ್ಧವಾಗಿದ್ದುಕೊಂಡೇ ಸಮಿತಿಯು ರೂಪಿಸಿದ ಸಂವಿಧಾನವನ್ನು ರಾಜಕೀಯ ಪ್ರಗತಿಯ– ವಿಶೇಷತಃ ದೇಶದ ಪ್ರಮುಖ ಪಕ್ಷಗಳಲ್ಲಿ ವ್ಯಾಪಕ ಪ್ರಮಾಣದ ಸಮ್ಮತಿಯನ್ನು ಪ್ರಾತಿನಿಧ್ಯ ಪಡೆದಿರುವುದರಿಂದ– ಒಂದು ಮಹತ್ತರವಾದ ಹೆಜ್ಜೆ ಎಂದು ತಿಳಿದು, ಸ್ವೀಕರಿಸುತ್ತದೆ.**
>
> **ಒಂದು ವೇಳೆ ೧೯೨೯ರ ಡಿಸೆಂಬರ್ ೩೧ರ ಒಳಗೆ ಬ್ರಿಟಿಷ್ ಪಾರ್ಲಿಮೆಂಟ್ ಇದನ್ನು ಒಪ್ಪಿಕೊಂಡರೆ, ಈ ಅಧಿವೇಶನ, ತುರ್ತು ರಾಜಕೀಯ ಪರಿಸ್ಥಿತಿಯ ನಿರ್ಬಂಧವಿಟ್ಟು ಸಂವಿಧಾನವನ್ನು, ಅದರ ಸಮಗ್ರ ರೂಪದಲ್ಲಿ ಅಂಗೀಕರಿಸುತ್ತದೆ; ಆದರೆ ಆ ಮಿತಿಯ ಒಳಗೆ ಅದನ್ನು ಒಪ್ಪಿಕೊಳ್ಳದಿದ್ದರೆ, ಅಥವಾ ಅದಕ್ಕೂ ಮೊದಲೇ ಅದನ್ನು ತಿರಸ್ಕರಿಸಿದರೆ ಆಗ ಕಾಂಗ್ರೆಸ್ ಪಕ್ಷ ತಾನು ಕೈಗೊಳ್ಳುವ– ಕರನಿರಾಕರಣೆ ಇತ್ಯಾದಿ ಸ್ವರೂಪದ ನಿರ್ಣಯಗಳನ್ನು ಆಧರಿಸಿ, ರಾಷ್ಟ್ರವ್ಯಾಪೀ ಅಹಿಂಸೆ, ಅಸಹಕಾರದ ಆಂದೋಲನ ಸಂಘಟಿಸುವ ಸಲಹೆ ನೀಡಬಹುದು. ಈ ಮೇಲಿನ ವಿವರಣೆಗೆ ಅನುಗುಣವಾಗಿಯೇ ಕಾಂಗ್ರೆಸ್ ಪಕ್ಷದ ಹೆಸರಿನಲ್ಲಿ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಪ್ರಚಾರ ಕಾರ್ಯ ನಡೆಯತಕ್ಕುದ್ದು: ಇದಕ್ಕೆ ಹೊರತಾದ ಯಾವುದರಿಂದಲೂ (ಈ ಕಾರ್ಯಕ್ಕೆ) ಅಡೆತಡೆಯಾಗಲಾರದು."**

ಹಿಂದೂಗಳ ಅಭಿಪ್ರಾಯ ಸಂಪೂರ್ಣ ಸ್ವಾತಂತ್ರ್ಯದ ಪರವಾಗಿರದೆ ಡೊಮಿನಿಯನ್ ಸ್ಥಾನಮಾನಕ್ಕೆ ಪರವಾಗಿದೆಯೆನ್ನುವುದು ಇದರಿಂದ ಸ್ಪಷ್ಟ. ಈ ಅಭಿಪ್ರಾಯಕ್ಕೆ ಕೆಲವು ಅಪವಾದಗಳಿರಬಹುದು. ೧೯೨೭ರ ಕಾಂಗ್ರೆಸ್ ನಿರ್ಣಯದ ಗತಿಯೇನು ಎಂದು ಪ್ರಶ್ನಿಸಬಹುದು. ೧೯೨೭ರ ಮದ್ರಾಸ್ ಕಾಂಗ್ರೆಸ್ ಅಧಿವೇಶನದಲ್ಲಿ, ಪಂಡಿತ ಜವಹರಲಾಲ್ ನೆಹರೂ ಮಂಡಿಸಿದ ಈ ಕೆಳಗಿನ ನಿರ್ಣಯವನ್ನು ಅಂಗೀಕರಿಸಿದ್ದು ನಿಜ:

> **"ಸಮಗ್ರ ರಾಷ್ಟ್ರೀಯ ಸ್ವಾತಂತ್ರ್ಯವೇ ಇಂಡಿಯಾ ಜನತೆಯ ಗುರಿಯಾಗಿದೆ ಎಂದು ಈ (ಕಾಂಗ್ರೆಸ್) ಅಧಿವೇಶನ ಉದ್ಘೋಷಿಸುತ್ತದೆ."**

ಆದರೆ ಈ ನಿರ್ಣಯ ಕಾಂಗ್ರೆಸ್‌ನಲ್ಲಿರುವ ಹಿಂದೂಗಳ ನಿಜವಾದ ಮನಸ್ಸಿನ ಧ್ವನಿಯಾಗಲಿ ಎನ್ನುವ ವಾದವನ್ನು ಬೆಂಬಲಿಸುವ ಸಾಕಷ್ಟು ಸಾಕ್ಷ್ಯಾಧಾರವಿದೆ.

ಒಂದು ಅಚ್ಚರಿ ಎನ್ನುವಂತೆ ಈ ನಿರ್ಣಯ ಸೂಚಿತವಾಯಿತು. ೧೯೨೭ರ ಅಧಿವೇಶನದ ಅಧ್ಯಕ್ಷ ಡಾ. ಅನ್ಸಾರಿಯವರ ಭಾಷಣದಲ್ಲಿ[೧] ಇದರ ಸೂಚನೆಯಿರಲಿಲ್ಲ. ಸ್ವಾಗತ ಸಮಿತಿಯ ಅಧ್ಯಕ್ಷರು[೨] ಈ ನಿರ್ಣಯ ಕುರಿತು ಒಂದು ತುರ್ತು ಜರೂರಿನ ವಿಷಯವೆಂದು ಮಾತಾಡದೆ ಅದು ಒಂದು ಸಹಜ ಆಕಸ್ಮಿಕ ಎನ್ನುವ ರೀತಿಯಲ್ಲಿ ಮಾತಾಡಿದರು.

ಆ ನಿರ್ಣಯದ ಬಗ್ಗೆ ಪೂರ್ವಾಲೋಚನೆಯಿರಲಿಲ್ಲ. ಅದು ಒಂದು ಸಂಚಿನ ಫಲವಾಗಿತ್ತು ಮತ್ತು ಮೂರು ಸಂಗತಿಗಳಿಂದಾಗಿ ಆ ಸಂಚು ಯಶಸ್ವಿಯಾಗಿತ್ತು.

ಮೊದಲನೆಯದಾಗಿ ಕಾಂಗ್ರೆಸ್ ಪಕ್ಷದಲ್ಲಿ ಪಂಡಿತ ಮೋತೀಲಾಲ್ ನೆಹರೂ ಮತ್ತು ಮಿ. ಗಾಂಧಿ, ವಿಶೇಷತಃ ಪಂಡಿತ್ ಮೋತೀಲಾಲ್ ಅವರ ಪ್ರಾಬಲ್ಯವನ್ನು ವಿರೋಧಿಸುವ ಒಂದು ಪಂಗಡವಿತ್ತು. ಪಂಡಿತ್ ಮೋತೀಲಾಲ್ ಅವರ ರಾಜಕೀಯ ಸ್ಪರ್ಧಿ ಮಿ.ಶ್ರೀನಿವಾಸ ಅಯ್ಯಂಗಾರ್ ಈ ಗುಂಪಿನ ನಾಯಕ. ಈ ಗುಂಪು, ಪಂ. ಮೋತೀಲಾಲ್ ಮತ್ತು ಮಿ. ಗಾಂಧಿಯವರ ಪ್ರತಿಷ್ಠೆ ಮತ್ತು ಶಕ್ತಿಗಳನ್ನು ನಾಶಪಡಿಸುವಂಥ ಒಂದು ಯೋಜನೆಗಾಗಿ ನಿಜವಾಗಿ ಮಧ್ಯಮ ಮಾರ್ಗಗಾಮಿಗಳಾಗಿದ್ದಾರೆನ್ನುವುದನ್ನು ಎತ್ತಿ ತೋರಿಸಿ, ಜನರನ್ನು ತಮ್ಮ ಕಡೆಗೆ ಸೆಳೆದುಕೊಳ್ಳಲು ಇದೊಂದೇ ಮಾರ್ಗವೆಂದು ಈ ಗುಂಪು ಅರಿತಿತ್ತು. ಯಾಕೆಂದರೆ, ಮಧ್ಯಮಮಾರ್ಗ ಪಾಪಕರ ಎಂದು ಕಾಂಗ್ರೆಸ್ ಪಕ್ಷ ಪರಿಗಣಿಸುತ್ತಿದ್ದುದರಿಂದ ಈ ಯೋಜನೆಗೆ ಗೆಲುವು ನಿಶ್ಚಿತ ಎಂದು ಈ ಗುಂಪಿನ ಅನಿಸಿಕೆಯಾಗಿತ್ತು. ಪಂ. ಮೋತೀಲಾಲ್ ಮತ್ತು ಗಾಂಧಿ ಅವರು ಡೊಮಿನಿಯನ್ ಸ್ಥಾನಮಾನದ ಪರವಾಗಿರುವುದನ್ನು ತಿಳಿದೂ ಸ್ವಾತಂತ್ರ್ಯ ಇಂಡಿಯಾದ ಗುರಿ ಎನ್ನುವ ತಮ್ಮ ಸೂಚನೆಯನ್ನು ಮುಂದಿಟ್ಟು ಅದನ್ನು ಒಂದು ಯುದ್ಧಕ್ಷೇತ್ರವನ್ನಾಗಿ ಪರಿವರ್ತಿಸಿದರು. ಎರಡನೆಯದಾಗಿ, ಕಾಂಗ್ರೆಸ್ ಪಕ್ಷದಲ್ಲಿ, ವಿಠ್ಠಲಭಾಯಿ ಪಟೇಲ್ ನಾಯಕತ್ವದ ಮತ್ತೊಂದು ಪಂಗಡವಿತ್ತು. ಈ ಪಂಗಡ ಐರಿಷ್ ಸಿನ್ನಫಿಯನ್ ಪಕ್ಷದೊಂದಿಗೆ ಸಂಪರ್ಕವಿಟ್ಟುಕೊಂಡಿದ್ದು, ಇಂಡಿಯಾದ ಹೋರಾಟದ ನೆರವಿಗಾಗಿ ಪ್ರಚಾರ ಮಾಡುತ್ತಿತ್ತು. ಭಾರತೀಯರು ಸ್ವಾತಂತ್ರ್ಯವೇ ತಮ್ಮ ಗುರಿ ಎಂದು ಸಾರದ ಹೊರತು ಐರಿಷ್ ಸಿನ್ನಿಫಿಯನ್ ಪಕ್ಷ ಯಾವುದೇ ಬಗೆಯ ಸಹಾಯ ನೀಡಲು ಉತ್ಸುಕವಾಗಿರಲಿಲ್ಲ. ಕಾರಣ ಐರಿಷ್

---

೧. ಡಾ. ಅನ್ಸಾರಿ ತಮ್ಮ ಭಾಷಣದಲ್ಲಿ ಈ ವಿಷಯ ಕುರಿತು ಹೇಳಿದ್ದು ಇಷ್ಟೆ:

"ಸಂವಿಧಾನದ ಅಂತಿಮ ರೂಪ ಏನೇ ಇರಲಿ, ಸ್ವಲ್ಪಮಟ್ಟಿಗೆ ನಿಶ್ಚಿತವಾಗಿ ಹೇಳಬಹುದಾದ ಒಂದು ಮಾತೆಂದರೆ ಆ ಸಂವಿಧಾನ, ಈಗಿರುವ ಇಂಡಿಯನ್ ಸಂಸ್ಥಾನಗಳು ರಾಷ್ಟ್ರರಕ್ಷಣೆ, ವಿದೇಶ ವ್ಯವಹಾರಗಳ ವಿಧಿಬದ್ಧತೆ ಮತ್ತು ಎಲ್ಲರ ಹಿತಾಸಕ್ತಿಗಳ ಆದ್ಯತೆ ಇತ್ಯಾದಿಗಳಲ್ಲಿ ತಮ್ಮ ಪಾಲಿನ ಹೊಣೆ ಹೊತ್ತು ಸ್ವತಂತ್ರ ಘಟಕಗಳಾಗಿ ಕಾರ್ಯ ನಿರ್ವಹಿಸುವ ಒಂದು ಸಂಯುಕ್ತ ರಾಜ್ಯದ ಮಾದರಿಯದಾಗಿರುತ್ತದೆ."– ದಿ ಇಂಡಿಯನ್ ಕ್ವಾರ್ಟರ್ಲಿ ರಿಜಿಸ್ಟರ್, ಸಂ.೨, ಪು.೩೭೨.

೨. ಮಿ.ಮುತ್ತುರಂಗ ಮುದಲಿಯಾರ್ ಹೀಗೆ ನುಡಿದರು:

"ಒಂದು ವೇಳೆ ಪಾರ್ಲಿಮೆಂಟ್ ಇಂದಿನ ತನ್ನ ಪ್ರತ್ಯೇಕತೆಯ ಮನೋಭಾವದಲ್ಲಿಯೇ ಮುಂದುವರಿದರೆ ಇಂಡಿಯಾ ಸಾಮ್ರಾಜ್ಯದಿಂದ ಬೇರ್ಪಡಬೇಕೆಂದು, ನಾವು ತೀವ್ರತರ ಪ್ರಚಾರ ನಿಶ್ಚಯವಾಗಿ ಕೈಗೊಳ್ಳಲೇಬೇಕು ಎನ್ನುವುದನ್ನು ಅವರಿಗೆ ಮನದಟ್ಟು ಮಾಡಿಕೊಡಬೇಕು. ಭಾರತೀಯ ರಾಷ್ಟ್ರೀಯತೆಯನ್ನು ಪರಿಣಾಮಕಾರಿಯಾಗಿ ಖಂಡಿತಗೊಳಿಸುವ ಕಾಲ ಬಂದಾಗ ಇಂಗ್ಲೆಂಡ್ ಅರಸರ ಚಕ್ರಾಧಿಪತ್ಯದ ಬಂಧನಕ್ಕೂ ಒಳಗಾಗದ ಒಂದು ಸ್ವತಂತ್ರ ರಾಷ್ಟ್ರೀಯತೆ ಸಾಧನೆ ಭಾರತೀಯರ ಆಕಾಂಕ್ಷೆಯಾಗಿರುತ್ತದೆ. ಇಂಗ್ಲಿಷ್ ರಾಜನೀತಿಜ್ಞರು ಈ ಸಂಗತಿಯನ್ನು ಅಗತ್ಯವಾಗಿ ಗಮನಿಸಬೇಕು. ಅವರು ನಮ್ಮನ್ನು ನಿರಾಶೆಯತ್ತ ತಳ್ಳದಿರಲಿ."– ಅದೇ, ಪು.೨೪೬.

ನೆರವು ಪಡೆಯುವುದಕ್ಕಾಗಿ ಈ ಗುಂಪು, ಡೊಮಿನಿಯನ್ ಸ್ಥಾನಮಾನದಿಂದ ಸ್ವಾತಂತ್ರ್ಯಕ್ಕೆ (ತಮ್ಮ ಗುರಿ) ಬದಲಿಸುವ ಕಾರ್ಯದಲ್ಲಿ ಆತುರಗೊಂಡಿತ್ತು. ಈ ಸಂಗತಿಗಳಿಗೆ ಸೇರಿಕೊಂಡ ಮೂರನೆಯ ಸಂಗತಿಯೆಂದರೆ ಸೈಮನ್ ಆಯೋಗ ನೇಮಕ ಸಂದರ್ಭದಲ್ಲಿ ಆಗ ಇಂಡಿಯಾದ ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದ ಲಾರ್ಡ್ ಬರ್ಕೆನ್‌ಹೆಡ್ ಮಾಡಿದ ಭಾಷಣ. ಅವರು ತಮ್ಮ ಭಾಷಣದಲ್ಲಿ ಸಂವಿಧಾನ ಸಿದ್ಧಗೊಳಿಸುವಲ್ಲಿದ್ದ ಭಾರತೀಯರ ಅಸಾಮರ್ಥ್ಯವನ್ನು ವಿಡಂಬಿಸಿದ್ದರು. ಭಾರತದ ರಾಜಕಾರಣಿಗಳು ಆ ಭಾಷಣ ತಮಗಾದ ಬಹು ದೊಡ್ಡ ಅವಮಾನವೆಂದು ಭಾವಿಸಿದ್ದರು. ಈ ಮೂರೂ ಸಂಗತಿಗಳು ಕೂಡಿ ಈ ಪ್ರಸ್ತಾವದ ಅಂಗೀಕಾರಕ್ಕೆ ಹೊಣೆಯಾಗಿದ್ದುವು. ನಿಜವಾಗಿ, ದೇಶದ ರಾಜಕೀಯ ಗುರಿಯ ವಿವರಣೆಗಿಂತ ಹೆಚ್ಚಾಗಿ, ಲಾರ್ಡ್ ಬರ್ಕೆನ್‌ಹೆಡ್ ಅವರಿಗೆ ತಕ್ಕ ಉತ್ತರ ಕೊಡುವುದೇ ಈ ನಿರ್ಣಯ ಸ್ವೀಕಾರದ ಉದ್ದೇಶವಾಗಿತ್ತು[೧] ಮತ್ತು ಲಾರ್ಡ್ ಬರ್ಕೆನ್‌ಹೆಡ್ ಅವರು ಭಾರತೀಯರ ವಿರುದ್ಧ ಬಳಸಿದ ಅಸೌಮ್ಯ ಭಾಷೆ ಹುಟ್ಟುಹಾಕಿದ ಬಿರುಗಾಳಿಯ ಪರಿಣಾಮದ ತೀವ್ರತೆಗೆ, ಮಿ. ಗಾಂಧಿ, ಪಂಡಿತ್ ಮೋತಿಲಾಲ್ ನೆಹರೂ, ಕೂಡಲೇ ಖಂಡಿಸಿ ತಕ್ಕ ಉತ್ತರ ಕೊಡುವ ಸಾಮರ್ಥ್ಯವಿದ್ದರೂ, ಹಾಗೆ ಮಾಡುವುದಕ್ಕಿಂತ ಸುಮ್ಮನಿರುವುದೇ ಹೆಚ್ಚು ಜಾಣತನವೆಂದು ಭಾವಿಸಿದರು.

ಈ ಪ್ರಸ್ತಾವನೆ ಕಾಂಗ್ರೆಸ್‌ನಲ್ಲಿರುವ ಹಿಂದೂಗಳ ನಿಜವಾದ ಭಾವನೆಗಳನ್ನು ಧ್ವನಿಸುತ್ತಿರಲಿಲ್ಲ ಎನ್ನುವುದು ಮಾತ್ರ ನಿಸ್ಸಂದೇಹ. ಇಲ್ಲವಾದರೆ ೧೯೨೭ರ ಮದ್ರಾಸ್ ಅಧಿವೇಶನ ಸ್ವೀಕರಿಸಿದ ಸಂವಿಧಾನೀಯ ರಚನೆಗೆ ಡೊಮಿನಿಯನ್ ಸ್ಥಾನಮಾನ ಆಧಾರ ಎನ್ನುವ ಪ್ರಸ್ತಾವನೆಯನ್ನು ನೆಹರೂ ಸಮಿತಿ ಹೇಗೆ ತಿರಸ್ಕರಿಸಿತು ಎಂದು ವಿವರಿಸುವುದು ಸಾಧ್ಯವಾಗುವುದಿಲ್ಲ. ಅಥವಾ ಪ್ರಸ್ತಾವನೆ ಒಳಗೊಂಡಿರುವಂತೆ ಒಂದುವೇಳೆ ೧೯೨೭ರಲ್ಲಿ ಸ್ವಾತಂತ್ರ್ಯವೇ ತಮ್ಮ ನಿಜವಾದ ಬೇಡಿಕೆಯೆಂದು ಕಾಂಗ್ರೆಸ್ ಪಕ್ಷ ನಿಜವಾಗಿ ಒಪ್ಪಿಕೊಂಡಿದ್ದರೆ ಅದು ಮತ್ತೆ ೧೯೨೮ರಲ್ಲಿ ಪ್ರಭುತ್ವ ಸ್ಥಾನಮಾನದ ಪ್ರಸ್ತಾವನೆಯನ್ನು ಹೇಗೆ ಸ್ವೀಕರಿಸಿತು ಎಂದು ವಿವರಿಸುವುದು ಕೂಡ ಸಾಧ್ಯವಾಗುವುದಿಲ್ಲ.[೨] ಪ್ರಸ್ತಾವನೆಯು ಒಳಗೊಂಡ, ಒಂದು ವೇಳೆ ೧೯೨೯ರ ಡಿಸೆಂಬರ್ ೩೧ನೆಯ ತಾರೀಖಿನ ಒಳಗೆ ಡೊಮಿನಿಯನ್ ಸ್ಥಾನಮಾನ ನೀಡಿದರೆ ಅದನ್ನು ಕಾಂಗ್ರೆಸ್ ಸ್ವೀಕರಿಸುತ್ತದೆ; ಇಲ್ಲವಾದರೆ ಅದು ಆ ಸ್ಥಾನಮಾನದಿಂದ ಸ್ವಾತಂತ್ರ್ಯಕ್ಕೆ ತನ್ನ ನಿಷ್ಠೆ ಬದಲಿಸುವುದು ಎನ್ನುವ ವಾಕ್ಯಾಂಗ ಕೇವಲ ಮುಖ ಉಳಿಸಿಕೊಳ್ಳುವ ತಂತ್ರವಾಗಿತ್ತೇ ಹೊರತು ಅದು ನಿಜವಾದ ಮನಸ್ಸಿನ ಪರಿವರ್ತನೆಯ ಧ್ವನಿಯನ್ನು ಒಳಗೊಂಡಿರಲಿಲ್ಲ. ಏಕೆಂದರೆ, ಒಂದು ದೇಶದ ರಾಜಕೀಯ ಭವಿಷ್ಯಕ್ಕೆ ಸಂಬಂಧಿಸಿದ ಆಳವಾದ ವಿಚಾರಗಳಲ್ಲಿ ಒಂದು ಕಾಲದ ಧೋರಣೆಯೇ ನಿರಂತರವಾಗಿ ಉಳಿಯಲಾರದು.

ಕಾಂಗ್ರೆಸ್ ಪಕ್ಷ ತನ್ನ ೧೯೨೭ರ ಪ್ರಸ್ತಾವನೆಗೇ ಅಂಟಿಕೊಳ್ಳದೆ ಸ್ವಾತಂತ್ರ್ಯದ ತನ್ನ ನಂಬಿಗೆಯನ್ನು ತ್ಯಜಿಸಿ ಡೊಮಿನಿಯನ್ ಸ್ಥಾನಮಾನದಲ್ಲಿ ವಿಶ್ವಾಸವಿಡುತ್ತ ಬಂದಿತು. ಕಾಂಗ್ರೆಸ್ ಪಕ್ಷದ ಅಧಿಕೃತ ವಕ್ತಾರ

---

೧. ಅಹಂಕಾರದ ಈ ಪ್ರಸ್ತಾವನೆಯನ್ನು ಅನುಮೋದಿಸಿದ ಶ್ರೀ ಸಾಂಬಮೂರ್ತಿ ಹೀಗೆ ನುಡಿದರು:

"ಲಾರ್ಡ್ ಬರ್ಕೆನ್‌ಹೆಡ್ ನೀಡಿರುವ ಆಹ್ವಾನಕ್ಕೆ ಈ ಪ್ರಸ್ತಾವನೆಯೊಂದೇ ತಕ್ಕ ಉತ್ತರ."

–ದಿ ಇಂಡಿಯನ್ ಕ್ವಾರ್ಟರ್ಲಿ ರಿಜಿಸ್ಟರ್ ೧೯೨೭, ಸಂ.೨, ಪು.೩೮೧.

೨. ಈ ಪ್ರಸ್ತಾವನೆಯನ್ನು ಮಂಡಿಸಿದ ಪಂಡಿತ ಜವಹರಲಾಲ್ ನೆಹರೂ ಹೀಗೆ ನುಡಿದರು:

"ಕಾಂಗ್ರೆಸ್ ಪಕ್ಷ ಪೂರ್ಣ ಸ್ವಾತಂತ್ರ್ಯಕ್ಕೆ ಬದ್ಧವಾಗಿದೆ ಎಂದು ಸಾರುತ್ತದೆ. ಇದಕ್ಕೂ ಕಡಿಮೆಯಿಲ್ಲದ ಗುರಿ ಒಪ್ಪುವ ಯಾರಿಗೇ ಆಗಲಿ ಕಾಂಗ್ರೆಸ್ ಪಕ್ಷದ ಬಾಗಿಲು ತೆರೆದಿದೆ."

–ಇಂಡಿಯನ್ ಕ್ವಾರ್ಟರ್ಲಿ ರಿಜಿಸ್ಟರ್ ೧೯೨೭, ಸಂ.೨, ಪು.೩೮೧.

ಮಿ. ಗಾಂಧಿ ಅವರು ಕಾಲಕಾಲಕ್ಕೆ ನೀಡುತ್ತ ಬಂದ ಅಭಿಪ್ರಾಯಗಳು ಈ ಮಾತಿಗೆ ಸಾಕಷ್ಟು ಆಧಾರ ಒದಗಿಸುತ್ತವೆ. ೧೯೨೯ರ ಬಳಿಕ ಈ ವಿಷಯಕ್ಕೆ ಸಂಬಂಧಿಸಿದ ಮಿ. ಗಾಂಧಿಯವರ ಅಭಿಪ್ರಾಯಗಳನ್ನು ಗಮನಿಸಿದ ಯಾರೇ ಆಗಲಿ, ಸ್ವಾತಂತ್ರ್ಯ ಕುರಿತ ಪ್ರಸ್ತಾಪನೆಯ ಬಗೆಗೆ ಗಾಂಧೀಜಿ ಸಂತುಷ್ಟರಾಗಿರಲಿಲ್ಲ ಎನ್ನುವುದು ಸ್ಪಷ್ಟಗೊಳ್ಳುತ್ತದೆ; ಮತ್ತು ಅಂದಿನಿಂದ ಅವರು ಕಾಂಗ್ರೆಸ್ ಪಕ್ಷ ಮರಳಿ ಪ್ರಭುತ್ವ ಸ್ಥಾನದ ಧೋರಣೆಯತ್ತ ಪರಿಚಯಿಸುವುದು ಅಗತ್ಯವೆಂದು ಭಾವಿಸಿದರು. ಅವರು ಅದರ ವ್ಯಾಖ್ಯೆ ನೀಡುವಂಥ ಒಂದು ಮೃದು ಪ್ರಕ್ರಿಯೆಯಿಂದ ತಮ್ಮ ಕಾರ್ಯ ಆರಂಭಿಸಿದರು. ಮೊದಲು, ಸ್ವಾತಂತ್ರ್ಯದಿಂದ ಸ್ವಾತಂತ್ರ್ಯದ (ತತ್ವ) ಸಾರಕ್ಕೆ ಉದ್ದೇಶವನ್ನು ರೂಪಾಂತರಿಸಲಾಯಿತು. ಸ್ವಾತಂತ್ರ್ಯದ–ತತ್ವ–ಸಾರದಿಂದ ಮತ್ತೆ ಅದನ್ನು ಸಮಾನ ಸಹಭಾಗಿತ್ವಕ್ಕೆ ಇಳಿಸಲಾಯಿತು; ಮತ್ತೆ ಸಮಾನ ಸಹಭಾಗಿತ್ವದಿಮದ ಪುನಃ ಅದನ್ನು ಅದರ ಮೂಲ–ಸ್ವರೂಪ–ಸ್ಥಾನಕ್ಕೆ ಮರಳಿ ತರಲಾಯಿತು. ೧೯೩೭ರಲ್ಲಿ ಮಿ. ಗಾಂಧಿ ಇಂಗ್ಲಿಷ್ ಜನತೆಯ ತಿಳುವಳಿಕೆಗಾಗಿ ಈ ಕೆಳಗಿನ ಪತ್ರವನ್ನು ಮಿ. ಪೊಲಕ್ ಅವರಿಗೆ ಕೊಟ್ಟಾಗ ಈ (ಪ್ರಕ್ರಿಯೆಯ) ಒಂದು ಸುತ್ತು (ಚಕ್ರ) ಪೂರ್ಣಗೊಂಡಿತು:

> **"೧೯೩೧ರ ದುಂಡು ಮೇಜಿನ ಪರಿಷತ್ತಿನಲ್ಲಿ ಮಂಡಿಸಿದ ಅಭಿಪ್ರಾಯವನ್ನೇ ಇಂದಿಗೂ ನಾನು ತಾಳಿದ್ದೇನೆಯೇ ಎನ್ನುವುದು ನಿಮ್ಮ ಪ್ರಶ್ನೆ. ನನ್ನ ಮಟ್ಟಿಗೆ ಹೇಳುವುದಾದರೆ, ವೆಸ್ಟ್ ಮಿನಿಸ್ಟರ್ ನಿಬಂಧನೆಗನುಗುಣವಾಗಿ– ಅಂದರೆ ಬೇಕಾದಾಗ ಪ್ರತ್ಯೇಕವಾಗುವ ಹಕ್ಕು ಲಭ್ಯವಾದರೆ (ಭಾರತಕ್ಕೆ) ಇಂಡಿಯಾಕ್ಕೆ ಡೊಮಿನಿಯನ್ ಅಂತಸ್ತು ನೀಡುವುದಾದಲ್ಲಿ ಅದಕ್ಕೆ ನಿಸ್ಸಂಕೋಚವಾಗಿ ನನ್ನ ಒಪ್ಪಿಗೆಯಿದೆ ಎಂದು ನಾನು ಅಂದು ಹೇಳಿದ್ದೆ. ಇಂದು ಕೂಡ ಅದನ್ನೇ ಪುನಃ ಹೇಳುತ್ತಿದ್ದೇನೆ."***

ನೆಹರೂ ವರದಿಯ ನಿರಾಕರಣೆಗಾಗಿ, ಮುಸ್ಲಿಂ ಸಂಘಟನೆಗಳು ನೀಡಿರುವ ಅಭಿಪ್ರಾಯ ಮತ್ತು ಸಬೂಬುಗಳು ಕುತೂಹಲಕಾರಿಯಾಗಿವೆ. ಈ ಕಾರಣಗಳು ಪೂರಾ ಅನಿರೀಕ್ಷಿತವಾಗಿವೆ. ನೆಹರೂ ವರದಿ ಪ್ರತ್ಯೇಕ ಮತದಾನ ವ್ಯವಸ್ಥೆಯ ರದ್ಧತಿ ಸೂಚಿಸುವುದರಿಂದ, ಮುಸ್ಲಿಮ್ ಲೀಗ್‌ದಂತಹ ಕೆಲವು ಮುಸ್ಲಿಮ್ ಸಂಘಟನೆಗಳು ಅದನ್ನು ತಿರಸ್ಕರಿಸುವುದಾಗಿ ಹೇಳಿದವು. ಆದರೆ ಖಿಲಾಫತ್ ಮಹಾಸಭೆ ಅಥವಾ ಜಮಾಅತ್–ಉಲ್–ಉಲೇಮಾ ಈ ಎರಡು ಸಂಘಟನೆಗಳು ಮಾಡಿದ ಈ ವರದಿಯ ಖಂಡನೆಗೆ ಖಂಡಿತವಾಗಿ ಇದು ಕಾರಣವಾಗಿರಲಿಲ್ಲ. ಕಾಂಗ್ರೆಸ್ ಜೊತೆಗಿದ್ದ ಈ ಮುಸ್ಲಿಮ್ ಸಂಘಟನೆಗಳು ಆ ಪಕ್ಷ ಹಾಯ್ದುಹೋದ ಅಸಹಕಾರ ಮತ್ತು ಸವಿನಯ ಕಾನೂನುಭಂಗ ಚಳುವಳಿಯ ಅಗ್ನಿಪರೀಕ್ಷೆಯ ಮೂಲಕವೇ ಹಾಯ್ದುಹೋದವು; ಮತ್ತು ಮುಸ್ಲಿಮ್ ಸಮುದಾಯದ ರಾಜಕೀಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ, ಆ ಸಮುದಾಯದ ನಿಜವಾದ ಅಭಿಪ್ರಾಯಗಳನ್ನು ತಮ್ಮ ಹೇಳಿಕೆಗಳ ಮೂಲಕ ಇತರ ಯಾವುದೇ ಮುಸ್ಲಿಮ್ ಸಂಘಟನೆಗಿಂತ ಹೆಚ್ಚು ಸಮರ್ಥವಾಗಿ ಪ್ರತಿಪಾದಿಸಿದ್ದು ಎಂದರೆ ಈ ಎರಡು ಸಂಘಟನೆಗಳೇ.

---

* ಟೈಮ್ಸ್ ಆಫ್ ಇಂಡಿಯಾ, ೧.೨.೧೯೩೭. ಹೊಸ ಸಂವಿಧಾನದ ಬೆಳಕಿನಲ್ಲಿ ಆಯ್ಕೆಗೊಂಡ ಪ್ರಾಂತೀಯ ಸಭೆಗಳ ಹೊಸ ಸದಸ್ಯರನ್ನೊಳಗೊಂಡ ೨೦ ಮಾರ್ಚ್ ೧೯೩೭ರ ದಿಲ್ಲಿಯ ರಾಷ್ಟ್ರೀಯ ಅಧಿವೇಶನದ ಸ್ವಾತಂತ್ರ್ಯಪರ ಘೋಷಣೆಗೆ ಮಹತ್ವ ಉಳಿಯಲಿಲ್ಲ. ಆದರೆ ಕ್ವಿಟ್ ಇಂಡಿಯಾ ಚಳವಳಿಯನ್ನು ಹುಟ್ಟುಹಾಕಿರುವುದರಿಂದ ಈಗ ಅವರಿಗೆ ಸ್ವಾತಂತ್ರ್ಯದಲ್ಲಿ ನಂಬಿಕೆಯಿದೆಯೆಂದು ಹೇಳಬಹುದು.

೧೯೨೮ರಲ್ಲಿ ಜರುಗಿದ ಕಲ್ಕತ್ತಾ ಅಖಿಲ ಭಾರತ ಖಿಲಾಫತ್ ಅಧಿವೇಶನದ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಮೌಲಾನಾ ಮೊಹಮ್ಮದಲಿ ಅವರು ನೆಹರೂ ವರದಿಯ ನಿರಾಕರಣೆಯ ಕಾರಣಗಳನ್ನು ಹೀಗೆ ಸ್ಪಷ್ಟಪಡಿಸಿದರು:

"ನಾನು ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಮತ್ತು ಅದರ ಕಾರ್ಯಕಾರೀ ಸಮಿತಿಯ, ಅಖಿಲ ಭಾರತ ಮುಸ್ಲಿಮ್ ಲೀಗ್‌ದ ಸದಸ್ಯನಾಗಿದ್ದೆ ಮತ್ತು ಇಡೀ ಮುಸ್ಲಿಮ್ ಸಮುದಾಯದ ಮುಖ್ಯ ಗಮನ ಸೆಳೆಯುವುದಕ್ಕಾಗಿ ಸಮಕಾಲೀನ ಮಹತ್ವದ ರಾಜಕೀಯ ಸಮಸ್ಯೆಗಳನ್ನು ಕುರಿತ ತನ್ನ ಅಭಿಪ್ರಾಯಗಳನ್ನು ವ್ಯಕ್ತಗೊಳಿಸಲು ಖಿಲಾಫತ್ ಅಧಿವೇಶನಕ್ಕೆ ಬಂದಿದ್ದೇನೆ.

* * *

"ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ಬೇಕು; ಮತ್ತು ಅದರಲ್ಲಿ ಜಾತೀಯತೆ ಇರುವುದಿಲ್ಲ ಎಂದು ಅವರು ಸರ್ವ ಪಕ್ಷಗಳ ಸಭೆಯಲ್ಲಿ ಹೇಳಿದ್ದರು. ಆದರೂ ಪ್ರತಿ ಕ್ಷಣಕ್ಕೂ ಅವರನ್ನು ಕಾಡಿಸಲಾಯಿತು. ಅವರ ಭಾಷಣದುದ್ದಕ್ಕೂ ಹೆಜ್ಜೆ ಹೆಜ್ಜೆಗೆ ಆತಂಕ ಉಂಟುಮಾಡಲಾಯಿತು.

* * *

"ನೆಹರೂ ವರದಿಯ ಪ್ರಸ್ತಾವನೆಯಲ್ಲಿ ದಾಸ್ಯಬಂಧನದ ಒಪ್ಪಿಗೆಯಿತ್ತು... ಸ್ವಾತಂತ್ರ್ಯ ಮತ್ತು ಡೊಮಿನಿಯನ್ ಸ್ಥಾನಮಾನಗಳು ತೀರ ಭಿನ್ನ ಭಿನ್ನ ಸಂಗತಿಗಳು...

* * *

"ನೀವು ನಿಮ್ಮ ರಾಷ್ಟ್ರೀಯತೆಯ ಜಂಬ ಕೊಚ್ಚಿಕೊಳ್ಳುತ್ತ ಜಾತೀಯತೆಯನ್ನು ಖಂಡಿಸುವಾಗ ನಾನು ಕೇಳುತ್ತೇನೆ. ಜಗತ್ತಿನಲ್ಲಿ ನಿಮ್ಮ ಇಂಡಿಯಾದಂಥ ನಿಮ್ಮ ರಾಷ್ಟ್ರೀಯತೆಯ – ಒಂದೇ ಒಂದು ದೇಶವನ್ನು ನನಗೆ ತೋರಿಸಿ.

* * *

"ನೀವು ಪ್ರತಿದಿನ ತಪ್ಪು ಸಿದ್ಧಾಂತ, ನೀತಿರಹಿತ ಪರಿಕಲ್ಪನೆ ಮತ್ತು ತಪ್ಪು ಆಲೋಚನೆಗಳನ್ನು ಒಳಗೊಂಡು, ನಿಮ್ಮ ಸಂವಿಧಾನದಲ್ಲಿ ಒಪ್ಪಂದ ಮಾಡಿಕೊಳ್ಳುತ್ತೀರಿ; ಆದರೆ, ನೀವು ಪ್ರತ್ಯೇಕ ಮತ ಪದ್ಧತಿ, ಮೀಸಲು ಸ್ಥಳಗಳನ್ನೊಳಗೊಂಡು ನಮ್ಮ ಜಾತೀಯವಾದಿಗಳ ಜೊತೆ ಒಪ್ಪಂದ ಮಾಡಿಕೊಳ್ಳುವುದಿಲ್ಲ. ಜನಸಂಖ್ಯೆಯ ಪ್ರತಿಶತಃ ಇಪ್ಪತ್ತೈದು ನಮ್ಮ ಭಾಗ. ಆದರೂ ವಿಧಾನಸಭೆಯಲ್ಲಿ ಪ್ರತಿಶತಃ ೩೩ರಷ್ಟನ್ನು ನಮಗೆ ನೀವು ಕೊಡುವುದಿಲ್ಲ. ನೀವು ಯಹೂದಿಯಂತೆ, ಬನಿಯಾನಂತೆ. ಆದರೆ ಇಂಗ್ಲಿಷರಿಗೆ ನಿಮ್ಮ ಪ್ರಭುತ್ವದ ಸ್ಥಾನಮಾನ ಕೊಡುತ್ತೀರಿ."

ಅಧಿವೇಶನ, ಈ ಕೆಳಗಿನ ಒಂದು ಚಿಕ್ಕ ಸಮರ್ಥ ನಿರ್ಣಯ ಅಂಗೀಕರಿಸಿತು:
**"ಸಂಪೂರ್ಣ ಸ್ವಾತಂತ್ರ್ಯವೇ ನಮ್ಮ ಗುರಿ ಎಂದು ಈ ಅಧಿವೇಶನ ಮತ್ತೊಮ್ಮೆ ಸಾರುತ್ತದೆ."**

೧೯೩೧ರಲ್ಲಿ ಅಲಹಾಬಾದ್‌ನಲ್ಲಿ ಜರುಗಿದ ಜಮೀಯತ್–ಉಲ್–ಉಲೇಮಾ ಅಧಿವೇಶನ ಅಧ್ಯಕ್ಷರಾಗಿ ಮೌಲಾನಾ ಹಜ್ರತ್ ಮೊಹಾನಿ ನೆಹರೂ ವರದಿಯನ್ನು ಖಂಡಿಸಿ ಅದೇ ಕಾರಣ ನೀಡಿದರು. ಅವರ ಆಯ್ದ ಮಾತುಗಳೇನೂ ಕಡಿಮೆ ಮರ್ಮಭೇದಿಯಾಗಿರಲಿಲ್ಲ. ಮೌಲಾನಾ ಹೇಳಿದರು:*

**"ಇಂಡಿಯಾ ಕುರಿತ ನನ್ನ ರಾಜಕೀಯ ನಂಬುಗೆ ಈಗ ಎಲ್ಲರಿಗೂ ಚೆನ್ನಾಗಿ ಗೊತ್ತಾಗಿದೆ. ಸಂಪೂರ್ಣ ಸ್ವಾತಂತ್ರ್ಯಕ್ಕಿಂತ ಕಡಿಮೆಯಾದ ಯಾವುದನ್ನೂ ನಾನು ಒಪ್ಪಲಾರೆ. ಅದು ಕೂಡ ಸಂಯುಕ್ತ ಸಂಸ್ಥಾನ ಅಥವಾ ಸೋವಿಯತ್ ರಶ್ಯಾ ಮಾದರಿಯಲ್ಲಿರಬೇಕು. ಅದರಲ್ಲಿ (೧) ಪ್ರಜಾಪ್ರಭುತ್ವ, (೨) ಸಂಯುಕ್ತ (ಒಳಾಡಳಿತ ಸ್ವತಂತ್ರ) ಮತ್ತು, (೩) ಕೇಂದ್ರ ಮುಕ್ತ ಧೋರಣೆಗಳಿದ್ದು, ಅಲ್ಪಸಂಖ್ಯಾತ ಮುಸ್ಲಿಮರ ಹಕ್ಕುಗಳು ಸುರಕ್ಷಿತವಾಗಿವೆ.**

**ದಿಲ್ಲಿಯ ಜಮೀಯತ್–ಉಲ್–ಉಲೇಮಾ ಕೆಲಕಾಲ ಸಂಪೂರ್ಣ ಸ್ವಾತಂತ್ರ್ಯ ಪ್ರಣಾಲಿಗಾಗಿ ಉಪವಾಸ ಕೈಕೊಂಡಿತು. ಇದೇ ಕಾರಣಕ್ಕಾಗಿ, ಸಂಯುಕ್ತ ಸ್ವರೂಪದ ಬದಲು ಏಕಾತ್ಮಕ ಸಂವಿಧಾನ ಸೂಚಿಸಿದ ನೆಹರೂ ವರದಿಯನ್ನು ನಿರಾಕರಿಸಿತು. ಲಾಹೋರ ಅಧಿವೇಶನದ ಸಭೆಯಲ್ಲಿ ಕಾಂಗ್ರೆಸ್ ಪಕ್ಷ ಮಹಾತ್ಮಾ ಗಾಂಧಿಯ ಸೂಚನೆಯ ಮೇರೆಗೆ ರಾವಿ ನದಿಯಲ್ಲಿ ನೆಹರೂ ವರದಿಯ ಜಲಸಮಾಧಿಯಾಗಿ, ಸಂಪೂರ್ಣ ಸ್ವಾತಂತ್ರ್ಯದ ಪ್ರಸ್ತಾವ ಅವಿರೋಧವಾಗಿ ಸ್ವೀಕೃತಗೊಂಡಾಗ, ದಿಲ್ಲಿಯ ಜಮೀಯತ್ ಕಾಂಗ್ರೆಸ್ ಪಕ್ಷದೊಂದಿಗೆ ಸಹಕರಿಸುವ ಸಾಹಸ ಮಾಡಿತು. ಅದು ಕೈಗೊಂಡ ನಾಗರೀಕ ಕಾನೂನು ಭಂಗ ಚಳವಳಿ ಮುಂತಾದ ಕಾರ್ಯಕ್ರಮಗಳಲ್ಲಿ– ಹಿಂದೂ ಅಥವಾ ಮುಸ್ಲಿಂ ಯಾರೇ ಇರಲಿ, ಇದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವೆಂದು ನಂಬಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿತು.**

**ಆದರೆ ದುರಾದೃಷ್ಟಕರವಾಗಿ ಗಾಂಧೀಜಿ ತಮ್ಮ ಮಾತಿನಿಂದ ಹಿಂದೆ ಸರಿದರು. (೧) ಜೈಲಿನಲ್ಲಿರುವಾಗಲೇ ಬ್ರಿಟಿಷ್ ಪತ್ರಿಕೋದ್ಯಮಿ ಮಿ. ಸ್ಲೊಕೊಂಬ್ ಎದುರು, ತನ್ನ ದೃಷ್ಟಿಯಲ್ಲಿ ಸಂಪೂರ್ಣ ಸ್ವಾತಂತ್ರ್ಯವೆಂದರೆ ಕೇವಲ ಸ್ವಾತಂತ್ರ್ಯದ ತಾತ್ವಿಕ ಸಾರ ಎಂದು ನುಡಿದರು. (೨) ಇದೂ ಅಲ್ಲದೆ, ಒಪ್ಪಂದದ ತಮ್ಮ ಅಪೇಕ್ಷೆಯನ್ನು ತಿಳಿಸಿದಾಗ ಜೈಲಿನಿಂದ ಬಿಡುಗಡೆಯಾದ ಕೂಡಲೆ ಸಂಪೂರ್ಣ ಸ್ವಾತಂತ್ರ್ಯದ ಬದಲು ಅವರು 'ಪೂರ್ಣ ಸ್ವರಾಜ್' ಎನ್ನುವ ಭ್ರಾಮಕ ಪದ ರೂಪಿಸಿದರು. 'ಪೂರ್ಣ ಸ್ವರಾಜ್ಯ'ದಲ್ಲಿ ಬ್ರಿಟಿಷ್ ಸಂಬಂಧಗಳು ಕಡಿದುಹೋಗಲು ಅವಕಾಶವಿಲ್ಲ ಎಂದು ಬಹಿರಂಗವಾಗಿ ಸಾರಿದರು. (೩) ಲಾರ್ಡ್ ಇರ್ವಿನ್ ಜೊತೆ ರಹಸ್ಯ ಒಪ್ಪಂದ ಮಾಡಿಕೊಳ್ಳುವ ಮೂಲಕ ಅವರು ಖಂಡಿತವಾಗಿ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಅಧೀನವಾದ ಮಾದರಿ ಡೊಮಿನಿಯನ್ ಸ್ಥಾನಮಾನದ ಧೋರಣೆ ತಾಳಿದರು.**

**"ಈ ಬದಲಾವಣೆಗಳು ಉಂಟಾದ ಬಳಿಕ ದಿಲ್ಲಿಯ ಜಮೀಯತ್ ಮಹಾತ್ಮಾಗಾಂಧಿಯವರನ್ನು ಕುರುಡಾಗಿ ಬೆಂಬಲಿಸುವುದರ ಬದಲು ವಿರೋಧಿಸಬೇಕಿತ್ತು. ಮತ್ತು ಮುಂಬೈಯಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ತನ್ನ ಈ ಸೂತ್ರದ ಮೂಲಕ ನೆಹರೂ ವರದಿಯ ಪುನರುಜ್ಜೀವನಗೊಳಿಸುವುದನ್ನು ತಿರಸ್ಕರಿಸಬೇಕಿತ್ತು."**

---

* ದಿ ಇಂಡಿಯನ್ ಕ್ವಾರ್ಟರ್ಲಿ ರಜಿಸ್ಟರ್, ೧೯೩೧, ಸಂ.೨, ಪು.೨೩೮–೩೯.

"ಆದರೆ 'ಪೂರ್ಣಸ್ವರಾಜ್ಯ'ದ ಕಲ್ಪನೆ 'ಸಂಪೂರ್ಣ ಸ್ವಾತಂತ್ರ್ಯ' ನೀತಿಗಿಂತ ಅತಿ ಕೆಟ್ಟದು ಎನ್ನುವುದರ ಅರಿವಿದ್ದಾಗಲೂ ದಿಲ್ಲಿಯ ಜಮಾಅತ್–ಉಲ್–ಉಲೇಮಾ ಯಾವ ಕಾರಣಗಳಿಂದಾಗಿ ಈ ಧೋರಣೆಗೆ ಸಮ್ಮತಿಸಿದರು ಎನ್ನುವುದು ಗೊತ್ತಾಗುವುದಿಲ್ಲ. ಇದಕ್ಕಿರುವ ಒಂದೇ ಒಂದು ವಿವರಣೆಯೆಂದರೆ, ಗಾಂಧೀಜಿ ಡೊಮಿನಿಯನ್ ಸ್ಥಾನಮಾನ ಒಪ್ಪಿಕೊಂಡಿದ್ದರು ಕೂಡ, ಬ್ರಿಟಿಷ್ ಸಾಮ್ರಾಜ್ಯದಿಂದ ಭಾರತೀಯರ ಪ್ರತ್ಯೇಕತೆಯ ಹಕ್ಕನ್ನು ಅವರಿಗೆ ಕೊಡಲು ಬ್ರಿಟನ್ ಒಪ್ಪಿಕೊಳ್ಳಬೇಕು ಎನ್ನುವುದು. ಡೊಮಿನಿಯನ್ ಸ್ಥಾನಮಾನವನ್ನು ಗಾಂಧೀಜಿ ಒಪ್ಪಿಕೊಂಡಿದ್ದರೂ ಕೂಡ, ಬ್ರಿಟಿಷ್ ಸಾಮ್ರಾಜ್ಯದಿಂದ ಭಾರತೀಯರು ಬೇರೆಯಾಗುವ ಹಕ್ಕನ್ನು (ರೈಟ್ ಆಫ್ ಸೆಸೆಶನ್) ಬ್ರಿಟನ್ ಮನ್ನಿಸಬೇಕೆಂದು ಅವರು ಇನ್ನೂ ಒತ್ತಾಯಪಡಿಸುತ್ತಿರುವುದು ಇಂಥ ವಿಶ್ವಾಸ ತಳೆಯಲು ಇರುವ ಒಂದೇ ಕಾರಣವೆಂದು ಹೇಳಲಾಗುತ್ತಿದೆ. ಮೊದಲೇ ಘೋಷಿಸಲಾದ ಪೂರ್ಣ ಸ್ವರಾಜ್ಯ(ಕಂಪ್ಲೀಟ್ ಇಂಡಿಪೆಂಡೆನ್ಸ್)ಕ್ಕಿಂತ, ಈ ಹಕ್ಕಿಗಾಗಿ ಒತ್ತಾಯಪಡಿಸುವುದು ಹೆಚ್ಚು ಅರ್ಥಪೂರ್ಣವಲ್ಲವೆಂಬುದು ಅತ್ಯಂತ ಸ್ಪಷ್ಟವಾದರೂ ಕೂಡ ಹಾಗೆ ಒತ್ತಾಯ ಮಾಡಲಾಯಿತು. ಬೇರೆ ಶಬ್ದಗಳಲ್ಲಿ ಹೇಳಬೇಕೆಂದರೆ, ಮಹಾತ್ಮಾಗಾಂಧೀಜಿಯವರ ಒಂದೇ ಕೊನೆಯ ಗುರಿಯಾದ ಸಂಪೂರ್ಣ ಸ್ವರಾಜ್ಯಕ್ಕಾಗಿ ಮಹತ್ವ ಕೊಟ್ಟಿದ್ದು ಸಾರ್ವಭೌಮತ್ವದ ಸ್ಥಾನಮಾನದ ಬೇಡಿಕೆಗೆ ಬ್ರಿಟಿಷ್ ಸರಕಾರ ಒಪ್ಪಿಕೊಳ್ಳುವಂತೆ ಮಾಡುವುದಕ್ಕಾಗಿಯೇ ಆಗಿದ್ದಿತು. ಅದೇ ರೀತಿಯಲ್ಲಿ, ಅತ್ಯಧಿಕ ಪ್ರಮಾಣದ ರಾಜಕೀಯ ಹಕ್ಕುಗಳನ್ನು ಬ್ರಿಟಿಷರಿಂದ ಕಸಿದುಕೊಳ್ಳುವುದಕ್ಕಾಗಿಯೇ, ಕಾಂಗ್ರೆಸ್ ಧುರೀಣರು ಪ್ರತ್ಯೇಕವಾಗುವ ಹಕ್ಕನ್ನು ಪಡೆಯಲು ಒತ್ತಾಯ ತಂದರು. ತಮ್ಮನ್ನು ಬ್ರಿಟಿಷರು ಮಿತಿಮೀರಿ ನಿರಾಸೆಗೊಳಿಸಲಿಕ್ಕಿಲ್ಲವೆಂಬ ಭಾವನೆ ಅವರಿಗಿದ್ದಿತು. ಹಾಗಲ್ಲದಿದ್ದರೆ, ಒಂದುವೇಳೆ ಈ ಬೇರ್ಪಡುವ ಹಕ್ಕನ್ನು (ರೈಟ್ ಆಫ್ ಸೆಸೆಶನ್) ಭಾರತೀಯರಿಗೆ ಕೊಟ್ಟರೂ ಕೂಡ ಅದನ್ನು ಎಂದೂ ಕಾರ್ಯರೂಪಕ್ಕೆ ತರಲಾಗುವುದಿಲ್ಲವೆಂಬುದನ್ನು ಗಾಂಧೀಜಿ ಮತ್ತು ಅವರ ಅನುಯಾಯಿಗಳು ಚೆನ್ನಾಗಿ ತಿಳಿದುಕೊಂಡಿದ್ದರು. ನನ್ನ ಈ ಪ್ರತಿಪಾದನೆಯ ಸಂಶಯದ ಆಧಾರದ ಮೇಲೆ ನಿರ್ಭರವಾಗಿದೆಯೆಂದೂ, ಬ್ರಿಟಿಷ್ ಸಾಮ್ರಾಜ್ಯದಿಂದ ಭಾರತವು ಬೇರ್ಪಡಬೇಕೆಂದು ಅವಶ್ಯಕತೆ ಇದ್ದಾಗ, ಕಾಂಗ್ರೆಸ್ ಘೋಷಿಸುವುದೆಂದೂ ಯಾರಾದರೂ ಅಭಿಪ್ರಾಯಪಟ್ಟರೆ, ಬ್ರಿಟಿಷ್‌ರ ಸಂಬಂಧ ತಪ್ಪಿದ ನಂತರ ಭಾರತ ಸರಕಾರದ ಸ್ವರೂಪ ಹೇಗಿರುವುದೆಂಬುದನ್ನು ನನಗೆ ತಿಳಿಸಲು ಅವರನ್ನು ಕೇಳುವೆ. ಯಾರೂ ನಿರಂಕುಶ ಪ್ರಭುತ್ವವನ್ನು ಊಹಿಸಲಾರರೆಂಬುದು ಸ್ಪಷ್ಟವಾಗಿದೆ. ಪ್ರಜಾಪ್ರಭುತ್ವವು, ಅದು ಏಕೀಕೃತ (ಯೂನಿಟರಿ) ರೂಪವನ್ನು ಪಡೆದಿರಲಿ ಇಲ್ಲವೇ ಸಂಯುಕ್ತ ರಾಜ್ಯ(ಫೆಡರಲ್)ಗಳ ಸ್ವರೂಪವನ್ನೇ ಪಡೆದಿರಲಿ, ಕೇಂದ್ರಾಭಿಗಾಮಿ (ಸೆಂಟ್ರಿಪೆಟಲ್) ಆಗಿದ್ದರೆ ಅದು ಹಿಂದೂ ಸಾಮ್ರಾಜ್ಯಕ್ಕಿಂತ ಭಿನ್ನವಾಗಲಾರದು. ಅಂಥ ಪ್ರಭುತ್ವವನ್ನು ಮುಸಲ್ಮಾನರು ಯಾವ ಸ್ಥಿತಿಯಲ್ಲಿಯೂ ಒಪ್ಪಿಕೊಳ್ಳಲಾರರು. ಈಗ ಉಳಿದುದು ಒಂದೇ ವಿಧದ ಪ್ರಭುತ್ವ– ಬ್ರಿಟೀಷರ ಸಂಬಂಧದಿಂದ ಸಂಪೂರ್ಣವಾಗಿ ದೂರವಾದ ಮೇಲೆ ಸ್ವರಾಜ್ಯಾಧಿಕಾರವುಳ್ಳ ಪ್ರಾಂತ್ಯಗಳು ಮತ್ತು ಸಂಸ್ಥಾನಗಳುಳ್ಳ ಭಾರತವು ಅಮೇರಿಕೆಯ ಸಂಯುಕ್ತ ಸಂಸ್ಥಾನಗಳ ಪ್ರಜಾಪ್ರಭುತ್ವ (ಯುನೈಟೆಡ್ ಸ್ಟೇಟ್ಸ್ ರಿಪಬ್ಲಿಕ್) ಇಲ್ಲವೇ ಸೋವಿಯತ್ ರಶಿಯಾ ದೇಶದ ಮಾದರಿಯಲ್ಲಿ ಕೇಂದ್ರದಿಂದ ದೂರ ಹೋಗುವಂಥ ಸಂಯುಕ್ತ ಗಣರಾಜ್ಯಗಳ ಪ್ರಭುತ್ವ (ಯುನೈಟೆಡ್ ಸೆಂಟ್ರಿಫ್ಯೂಗಲ್ ಡೆಮೊಕ್ರೆಟಿಕ್ ಗವರ್ನಮೆಂಟ್)ವನ್ನು ಪಡೆಯುವುದು. ಆದರೆ ಇದು ಮಹಾಸಭಾ ಪಕ್ಷಪಾತಿಯಾದ ಕಾಂಗ್ರೆಸ್ಸಿಗೆ ಇಲ್ಲವೇ ಮಹಾತ್ಮಾ ಗಾಂಧೀಜಿಯವರಂಥ ಬ್ರಿಟನ್ ಪ್ರಿಯರಿಗೆ ಎಂದೂ ಸ್ವೀಕಾರಾರ್ಹವೆನ್ನಿಸಲಾರದು. ದಿಲ್ಲಿಯ ಜಮಾಅತ್–ಉಲ್–ಉಲೇಮಾ ಸಂಪೂರ್ಣ ಸ್ವರಾಜ್ಯದ ಬೇಡಿಕೆಯಿಂದ ಕೈತೊಳೆದುಕೊಂಡ

**ನಂತರ ತನ್ನಷ್ಟಕ್ಕೆ ತಾನೇ ನಿರರ್ಥಕಗೊಳಿಸಿಕೊಂಡಿದೆ. ಕಾನ್ಪುರ, ಲಖನೋ, ಮೊದಲಾದ ಸ್ಥಳಗಳ ಉಲೇಮಾಗಳು ಮಾತ್ರ ತಮ್ಮ ನಿರ್ಧಾರಕ್ಕೆ ಇನ್ನೂ ಅಂಟಿಕೊಂಡಿದ್ದು, ದೈವೇಚ್ಛೆ ಇದ್ದರೆ, ಹಾಗೆಯೇ ಮುಂದುವರೆಯುವರು. ಸಂಪೂರ್ಣ ಸ್ವರಾಜ್ಯವನ್ನು ಪಡೆಯುವುದು ಸದ್ಯಕ್ಕೆ ಸಾಧ್ಯವೇ ಇಲ್ಲದಿದ್ದಾಗ, ಅದರ ಬಗೆಗೆ ಮಾತನಾಡುವುದೂ ನಿರರ್ಥಕವೆಂದು ದುರ್ಬಲ ಮನಸ್ಸಿನ ಕೆಲವರು ಈ ಅತ್ಯುಚ್ಚ ಆದರ್ಶವನ್ನು ಕುರಿತು ವಾದಿಸುವರು. ಅದರಲ್ಲಿ ನಿರರ್ಥಕವಾದುದೇನೂ ಇಲ್ಲ; ಅಷ್ಟೇ ಅಲ್ಲದೇ ಅದು ಸಂಪೂರ್ಣ ಅವಶ್ಯಕವಾದುದೆಂದು ಅಂಥವರಿಗೆ ನಾವು ಸ್ಪಷ್ಟಪಡಿಸಬಯಸುತ್ತೇವೆ. ಏಕೆಂದರೆ ಪರಮೋಚ್ಚ ಆದರ್ಶವನ್ನು ನಾವು ನಮ್ಮ ಕಣ್ಣೆದುರಿಗೆ ಇಟ್ಟುಕೊಳ್ಳದಿದ್ದರೆ ಅದನ್ನು ನಾವು ಬಿಡುವ ಸಂಭವವಿದೆ.**

**"ಆದುದರಿಂದ ಡೊಮಿನಿಯನ್ ಸ್ಥಾನಮಾನವನ್ನು ನಾವು ಎಲ್ಲ ಸಂದರ್ಭಗಳಲ್ಲಿಯೂ ವಿರೋಧಿಸತಕ್ಕದ್ದು. ಅದು ನಮ್ಮ ಅಂತಿಮ ಗುರಿಯ ಒಂದು ಭಾಗವೂ ಕೂಡ ಅಲ್ಲ. ನಮ್ಮ ಚರಮೋದ್ದೇಶಕ್ಕೆ ಅದು ವಿರುದ್ಧವಾದುದೂ ವಿಪರೀತವಾದುದೂ ಆಗಿದೆ. ಗಾಂಧೀಜಿ ಇಂಗ್ಲೆಂಡಿಗೆ ಹೋದರೆ, ಹಾಗೂ ಯಾವುದೇ ಭದ್ರತೆಯೊಡನೆ ಇಲ್ಲವೇ ಭದ್ರತೆ ಇಲ್ಲದೆಯೇ ಯಾವುದೇ ರೂಪದ ಡೊಮಿನಿಯನ್ ಸ್ಥಾನಮಾನವನ್ನು ಕೊಟ್ಟು ದುಂಡುಮೇಜಿನ ಪರಿಷತ್ತು ಯಶಸ್ವಿಯಾಗಿ ಮುಕ್ತಾಯಗೊಂಡರೆ ಸಂಪೂರ್ಣ ಸ್ವರಾಜ್ಯದ ಆದರ್ಶವು ಸಂಪೂರ್ಣ ಮಾಯವಾಗಿ ಹೋಗುವುದಲ್ಲದೇ, ಮುಂದೆ ಭವಿಷತ್ತಿನಲ್ಲಿ ಸುದೀರ್ಘ ಕಾಲದವರೆಗೆ ಯಾವ ರೀತಿಯಲ್ಲಿಯೂ ಅದನ್ನು ಪುನಃ ಆಲೋಚಿಸುವುದಕ್ಕೂ ಸಾಧ್ಯವಾಗಲಾರದು."**

ಅಖಿಲ ಭಾರತ ಖಿಲಾಫತ್ ಪರಿಷತ್ತು (ಆಲ್ ಇಂಡಿಯಾ ಖಿಲಾಫತ್ ಕಾನ್ಫರೆನ್ಸ್) ಮತ್ತು ಜಮಾಅತ್–ಉಲ್–ಉಲೇಮಾ– ಇವು ಸ್ಪಷ್ಟವಾಗಿ ಬ್ರಿಟಿಷ್ ವಿರೋಧಿಯಾದ ಅತಿರೇಕ ಧೋರಣೆಯನ್ನು ತಳೆದ ಸಂಸ್ಥೆಗಳಾಗಿವೆ. ಆದರೆ ಅಖಿಲ ಭಾರತ ಮುಸ್ಲಿಮ್ ಪರಿಷತ್ (ಆಲ್ ಇಂಡಿಯಾ ಮುಸ್ಲಿಮ್ ಕಾನ್ಫರೆನ್ಸ್) ನಿಶ್ಚಿತವಾಗಿಯೂ ಅತಿರೇಕ ಧೋರಣೆಯನ್ನು ಹೊಂದಿದವರ ಇಲ್ಲವೇ ಬ್ರಿಟಿಷ್ ವಿರೋಧಿ ಮುಸಲ್ಮಾನರ ಸಂಸ್ಥೆಯಾಗಿರುವುದಿಲ್ಲ. ಆದರೂ ಕೂಡ ಅದರ ಉತ್ತರ ಪ್ರದೇಶ ಶಾಖೆಯ ದಿನಾಂಕ ೪.೧೧.೧೯೨೮ರಂದು ಕಾನ್ಪುರದಲ್ಲಿ ನಡೆದ ತನ್ನ ಅಧಿವೇಶನದಲ್ಲಿ ಈ ಕೆಳಗಿನ ಗೊತ್ತುವಳಿಯನ್ನು ಪಾಸುಮಾಡಿದೆ:

**"ಸರ್ವ ಪಕ್ಷಗಳ ಉತ್ತರ ಪ್ರದೇಶ ಸಮಾವೇಶದ ಅಭಿಪ್ರಾಯದಲ್ಲಿ ಸಂಯುಕ್ತ ಗಣರಾಜ್ಯ (ಫೆಡರಲ್ ರಿಪಬ್ಲಿಕ್)ದ ರೂಪವನ್ನು ನಿಶ್ಚಿತವಾಗಿಯೂ ಪಡೆಯುವ ಸಂಪೂರ್ಣ ಸ್ವರಾಜ್ಯದ ಪರವಾಗಿಯೇ ಭಾರತದ ಮುಸಲ್ಮಾನರಿದ್ದಾರೆ."**

ಗೊತ್ತುವಳಿಯನ್ನು ಮಂಡಿಸಿದ ಮಹನೀಯರ ಅಭಿಪ್ರಾಯದಲ್ಲಿ, ಇಸ್ಲಾಮ್ ಯಾವಾಗಲೂ ಸ್ವಾತಂತ್ರ್ಯವನ್ನೇ ಬೋಧಿಸಿದೆ ಹಾಗೂ ಆ ಕಾರಣದಿಂದಾಗಿ, ಒಂದುವೇಳೆ ಅವರು ಸಂಪೂರ್ಣ ಸ್ವರಾಜ್ಯದ ವಿರೋಧಿಗಳಾದರೆ, ತಮ್ಮ ಧಾರ್ಮಿಕ ಕರ್ತವ್ಯ ನಿರ್ವಹಣೆಯಲ್ಲಿ ತಪ್ಪಿದಂತೆಯೇ ಆಗುವುದು. ಆ ವಕ್ತಾರನ ಖಚಿತ ವಿಚಾರದಲ್ಲಿ, ಭಾರತದ ಮುಸಲ್ಮಾನರು ಬಡವರಾದರೂ ಕೂಡ ಭೂಮಿಯ ಮೇಲಿನ ಇತರ ಎಲ್ಲ ಜನಾಂಗದವರಿಗಿಂತಲೂ ಅಧಿಕ ಪ್ರಮಾಣದಲ್ಲಿ ಇಸ್ಲಾಮ್ ತತ್ತ್ವಗಳನ್ನು ಅನುಷ್ಠಾನದಲ್ಲಿ ತರತಕ್ಕ ನಿಷ್ಠೆಯುಳ್ಳವರಾಗಿದ್ದಾರೆ.

ಈ ಸಮ್ಮೇಳನದಲ್ಲಿ ಮೌಲಾನಾ ಆಜಾದ್ ಸುಭಾನಿ ಅವರು ಪರಿಷತ್ತು ಸಂಪೂರ್ಣ ಸ್ವರಾಜ್ಯದ

ಪರವಾಗಿದೆ ಎಂಬುದನ್ನು ಘೋಷಿಸತಕ್ಕದ್ದೆಂಬ ಸೂಚನೆಯನ್ನು ತಂದಾಗ ವಿಷಯ ನಿಯಾಮಕ ಸಮಿತಿಯಲ್ಲಿ ಸ್ವಲ್ಪಮಟ್ಟಿಗೆ ಕುತೂಹಲಕರವಾದ ಘಟನೆಯೊಂದು ಜರಗಿತು.*

ಖಾನ್ ಬಹಾದ್ದುರ್ ಮಸೂದುಲ್ ಹಸನ್ ಮತ್ತು ಇತರ ಕೆಲವು ಮಹನೀಯರು ಇಂಥ ಘೋಷಣೆಯನ್ನು ವಿರೋಧಿಸಿದರು. ಅವರ ಅಭಿಪ್ರಾಯದಲ್ಲಿ ಇಂಥ ಘೋಷಣೆ ಮುಸಲ್ಮಾನರ ನಿಜವಾದ ಹಿತಕ್ಕೆ ಧಕ್ಕೆಯನ್ನು ಉಂಟುಮಾಡಬಹುದಾಗಿದೆ. ಈ ಮಾತನ್ನು ಕೇಳುತ್ತಲೇ ಜವನಿಕೆಯ ಅಂತಸ್ತಿನಲ್ಲಿದ್ದು (ಪರ್ದಾ ಗ್ಯಾಲರಿ) ಅನೇಕ ಜನ ಮಹಿಳೆಯರು ಲಿಖಿತ ವಿವರಣೆಯೊಂದನ್ನು ಸಭೆಯ ಅಧ್ಯಕ್ಷರಿಗೆ ಕಳಿಸಿಕೊಟ್ಟರು. ಪುರುಷರು ಸಂಪೂರ್ಣ ಸ್ವರಾಜ್ಯದ ಗುರಿಯ ಪರವಾಗಿ ನಿಲ್ಲಲು ಧೈರ್ಯ ಮಾಡದಿದ್ದರೆ, ಸ್ತ್ರೀಯರು ಜವನಿಕೆಯ ಮರೆಯಿಂದ ಹೊರಗೆ ಬರುವವರಲ್ಲದೇ ಸ್ವಾತಂತ್ರ್ಯ ಸಮರದಲ್ಲಿ ಧೈರ್ಯದಿಂದ ತಮ್ಮ ಕರ್ತವ್ಯವನ್ನು ನಿರ್ವಹಿಸುವರು ಎಂದು ಆ ವಿವರಣೆಯಲ್ಲಿ ಉಲ್ಲೇಖಿಸಲಾಗಿದ್ದಿತು.

## III

ತಮ್ಮ ಅಂತಿಮ ಉದ್ದೇಶದಲ್ಲಿನ ವ್ಯತ್ಯಾಸಗಳ ಹೊರತಾಗಿಯೂ ಹಿಂದೂ–ಮುಸಲ್ಮಾನರಿಬ್ಬರೂ, ಒಂದೇ ಜನಾಂಗವಾಗಿ, ಒಂದೇ ಸಂವಿಧಾನದ ರಾಜಕೀಯ ನಿಯಂತ್ರಣಗಳಿಗೆ ಒಳಪಟ್ಟು, ಒಂದೇ ದೇಶದಲ್ಲಿ ಇರುವಂತೆ ಒತ್ತಾಯಪಡಿಸುವ ಒಂದು ಪ್ರಯತ್ನವೂ ನಡೆದಿದೆ. ಈ ಪ್ರಯತ್ನ ಫಲಕಾರಿಯಾಗಿದೆ ಎಂದೂ, ಇದಕ್ಕೆ ಮುಸಲ್ಮಾನ ಬಾಂಧವರನ್ನು ಒಪ್ಪಿಸಲಾಗಿದೆ ಎಂದು ಊಹಿಸಿದರೂ ಕೂಡ, ಸಂವಿಧಾನ ಭಂಗವಾಗದೆಂಬ ಬಗ್ಗೆ ಯಾವ ಭರವಸೆ ಇದೆ?

ಲೋಕಸತ್ತಾತ್ಮಕ ಸರಕಾರದ ಯಶಸ್ವಿಯಾದ ಕಾರ್ಯನಿರ್ವಹಣೆಯ ಹಲವು ನಿಯಂತ್ರಣಗಳ ಅಸ್ತಿತ್ವವನ್ನು ತನ್ನಷ್ಟಕ್ಕೆ ತಾನೇ ಒಳಗೊಂಡಿರುತ್ತದೆ. ಇಂಥ ಕಟ್ಟುನಿಟ್ಟುಗಳು, ನಿಯಂತ್ರಣಗಳು, ಅಸ್ತಿತ್ವದಲ್ಲಿ ಇದ್ದರೆ ಮಾತ್ರ ಪ್ರಜಾಸತ್ತಾತ್ಮಕ ಪ್ರಭುತ್ವವು ಆಳವಾಗಿ ಬೇರು ಬಿಡಬಲ್ಲರು. ದಿವಂಗತ ಲಾರ್ಡ್ ಬ್ಯಾಲ್‌ಫೋರ್ ಅವರು, ೧೯೨೫ನೆಯ ಇಸ್ವಿಯಲ್ಲಿ ತಮ್ಮ ಸಹೋದರನ ಪುತ್ರಿ ಬಲ್‌ಯಾಂಕೀ ಡಗ್‌ಡೇಲ್ ಅವರೊಡನೆ ಅರಬ್ ದೇಶದ ಜನರ ರಾಜಕೀಯ ಭವಿಷತ್ತನ್ನು ಕುರಿತು ಚರ್ಚಿಸುವಾಗ ಇಂಥ ಒಂದು ಕಟ್ಟುಪಾಡಿನ ಬಗೆಗೆ ಉಲ್ಲೇಖಿಸಿದರು. ತಮ್ಮ ಈ ಮಾತುಕತೆಯ ಸಂದರ್ಭದಲ್ಲಿ ಅವರು ಹೀಗೆ ಹೇಳಿದರು:

> **" 'ಪ್ರಜಾಪ್ರತಿನಿಧಿ ಸರಕಾರ'ದ ಮೂಲಭೂತ ತತ್ತ್ವಗಳು ಹೇಗಿರಬೇಕೆಂಬ ಬಗೆಗೆ ಕಿಂಚಿತ್ತಾದರೂ ಖಚಿತ ತಿಳಿವಳಿಕೆ ಇಲ್ಲದೆ, ರಾಷ್ಟ್ರಗಳ ಮುಖ್ಯಸ್ಥರ ತಲೆಯಲ್ಲಿ ಈ ವಿಚಾರಗಳು ಬಂದಿವೆ. ಇದು ಭಾಗಶಃ ಬ್ರಿಟಿಷ್ ಸಾಮ್ರಾಜ್ಯದ ಮತ್ತು ಅಮೇರಿಕಾ ದೇಶದವರ ದೋಷವಾಗಿದೆ. ಈ ಆರೋಪದಿಂದ ಅವರನ್ನು ನಾವು ಬಿಡುಗಡೆ ಮಾಡಲಾರೆವು. ವಿವರಿಸಲು ಇದು ಸುಲಭವಲ್ಲ. ಆ್ಯಂಗ್ಲೋ–ಸ್ಯಾಕ್ಸನ್ ಜನಾಂಗದವರು ಬಹಳ ಕೆಟ್ಟ ಶಬ್ದಗಳಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಮಾಡುತ್ತಾರೆ. ಇದರ ಬಗೆಗೆ ವಿವರಣೆ ಮಾಡುವುದು ಅವಶ್ಯವಾಗಿದೆ ಎಂಬ ವಿಚಾರ ಹೊಳೆಯಲಾರದಷ್ಟು ಬಹಳ ಚೆನ್ನಾಗಿ ನಮ್ಮಷ್ಟಕ್ಕೆ ನಾವು ಇದನ್ನು ಬಲ್ಲವರಾಗಿದ್ದೇವೆ. ಬ್ರಿಟಿಷ್ ಪ್ರಜಾಪ್ರತಿನಿಧಿ ಸರಕಾರವು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವಂತೆ ಮಾಡುವ ಮನೋಗತ ಅಭಿಪ್ರಾಯದಲ್ಲಿಯೇ ಅದರ ಸಾರಸರ್ವಸ್ವವು ಅಡಗಿದೆಯಲ್ಲದೆ ಬ್ರಿಟಿಷ್ ಸಂವಿಧಾನದ ಮೇಲೆ ಬರೆದ ಯಾವುದೇ ಗ್ರಂಥದಲ್ಲಿ ಇದು ಉಲ್ಲೇಖಗೊಂಡಿರುವುದನ್ನು**

---

* ದಿ ಇಂಡಿಯನ್ ಕ್ವಾರ್ಟರ್ಲೀ ರಜಿಸ್ಟರ್ ೧೯೨೮; ಸಂಪುಟ ೨, ಪುಟ ೪೨೫.

**ನೀವು ಕಾಣಬಹುದೆಂಬ ಬಗೆಗೆ ನನಗೆ ಅನುಮಾನವಿದೆ. ಅದನ್ನು ನಾವು ಕೇವಲ ಊಹಿಸುತ್ತೇವೆ; ಕಲ್ಪನೆ ಮಾಡುತ್ತೇವೆ. ಹಾಗೂ ತನ್ನಷ್ಟಕ್ಕೇ ನಿರ್ಭರವಾಗಿರುವ ವಿಷಯವನ್ನು, ಅಂಥ ಪ್ರಭುತ್ವ ಪದ್ಧತಿಯನ್ನು, ಕೂಲಂಕುಷವಾಗಿ ವಿವರಿಸುವುದರಲ್ಲಿಯೇ ನಾವು ಶತಮಾನಗಳನ್ನು ಕಳೆದಿದ್ದೇವೆ. ಅದು ನಮ್ಮ ಆಂತರ್ಯದಲ್ಲಿ ಎಷ್ಟು ಗಾಢವಾಗಿ ವ್ಯಾಪಿಸಿದೆ ಎಂದರೆ, ಅದು ನಮ್ಮ ಗಮನಕ್ಕೆ ಬರುವುದೇ ಇಲ್ಲ. ಆದರೆ ಇದು ಇತರರಿಗೆ ಸ್ಪಷ್ಟವಾಗಿ ತಿಳಿಯುವುದಿಲ್ಲ. ಈ ಜನಾಂಗದವರು– ಭಾರತೀಯರು, ಈಜಿಪ್ತ ದೇಶದವರು ಹಾಗೂ ಇನ್ನು ಅನೇಕರು– ನಮ್ಮ ವಿದ್ಯೆಯನ್ನು ಕಲಿಯುತ್ತಾರೆ. ಅವರು ನಮ್ಮ ಇತಿಹಾಸವನ್ನು, ನಮ್ಮ ತತ್ತ್ವಶಾಸ್ತ್ರವನ್ನು ಮತ್ತು ರಾಜ್ಯಶಾಸ್ತ್ರವನ್ನು ಓದುತ್ತಾರೆ. ಪ್ರಜಾಸತ್ತಾತ್ಮಕವಾಗಿ ವಿರೋಧಿಸುವ ನಮ್ಮ ಪದ್ಧತಿಗಳನ್ನು ಅವರು ಕಲಿತುಕೊಳ್ಳುತ್ತಾರೆ. ಸಂದರ್ಭ ಬಂದಾಗ, ನಮ್ಮ ಎಲ್ಲ ಲೋಕಸತ್ತಾತ್ಮಕ ಪಕ್ಷಗಳು ಸರಕಾರದ ಯಂತ್ರವು ನಿಲ್ಲಲಾರದೆಂಬ ನಿಶ್ಚಯಾತ್ಮಕ ಧೋರಣೆಯನ್ನು ತಳೆಯುವುವು. ಇದನ್ನು ಯಾರೂ ವಿವರವಾಗಿ ಹೇಳಿ ಕಲಿಸುವುದಿಲ್ಲ. ವೆಲ್ಲಿಂಗ್ಟನ್ನದ ಡ್ಯೂಕರು ಹೇಳಿದಂತೆ 'ಅರಸನ ಸರಕಾರವು ಮುನ್ನಡೆಯುತ್ತಲೇ ಇರಬೇಕು.' ಅವರ ಅಭಿಪ್ರಾಯದಲ್ಲಿಯ ವೈಚಿತ್ರ್ಯವೆಂದರೆ; ವಿರೋಧಪಕ್ಷಗಳ ಕಾರ್ಯವು ಸರಕಾರದ ನಿರ್ವಹಣೆಯನ್ನು ಸ್ಥಗಿತಗೊಳಿಸುವುದೇ ಆಗಿದೆ ಎಂಬುದು. ಹಾಗೆ ನೋಡಿದರೆ, ಇದು ಯಾವುದೂ ಸುಲಭವಾದುದಲ್ಲ; ಎಲ್ಲವೂ ನಿರಾಶೆಯ ಸ್ಥಿತಿಯಲ್ಲಿರುವುದು.''[೧]**

ಇಂಗ್ಲೆಂಡಿನ ವಿರೋಧ ಪಕ್ಷಗಳು ಸರಕಾರದ ಯಂತ್ರವನ್ನು ಸ್ಥಗಿತಗೊಳಿಸುವ ಮಟ್ಟಕ್ಕೆ ಏಕೆ ಹೋಗುವುದಿಲ್ಲವೆಂದು ಕೇಳಿದಾಗ,

**''ನಮ್ಮ ಸಂಪೂರ್ಣ ರಾಜಕೀಯ ವ್ಯವಸ್ಥೆಯು ಮೂಲಭೂತವಾಗಿ ಅಭಿನ್ನವಾಗಿದೆ ಎಂಬ ಪೂರ್ವ ಕಲ್ಪನೆಯುಳ್ಳದ್ದಾಗಿದೆ''**

ಎಂದು ಅವರು ಹೇಳಿದರು.

ಹೆರಾಲ್ಡ್ ಜೆ ಲಾಸ್ಕಿ ಅವರು ಬ್ಯಾಲ್‌ಫೋರ್ ಅವರ ಈ ಅಭಿಪ್ರಾಯಗಳನ್ನು ಸಾರಾಂಶ ರೂಪದಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಲೋಕಸತ್ತಾತ್ಮಕ ಸರಕಾರವು ಯಶಸ್ವಿಯಾಗಿ ಕಾರ್ಯ ನಿರ್ವಹಿಸಬೇಕಾದರೆ ಎಂಥ ಪರಿಸ್ಥಿತಿಯ ಅವಶ್ಯಕತೆ ಇದೆ? ಇದಕ್ಕೆ ಹೀಗೆ ಉತ್ತರಿಸಿದ್ದಾರೆ:

**''ಮೂಲಭೂತ ತತ್ತ್ವಗಳ ಬಗೆಗೆ ವಿವಿಧ ರಾಜಕೀಯ ಪಕ್ಷಗಳು ಎಷ್ಟರ ಮಟ್ಟಿಗೆ ಏಕಾಭಿಪ್ರಾಯ ಹೊಂದಿವೆ ಎಂಬುದರ ಮೇಲೆ ಲೋಕಸತ್ತಾತ್ಮಕ ಸರಕಾರದ ಸಾಮರ್ಥ್ಯವನ್ನು ಖಚಿತವಾಗಿ ಅಳೆಯಬಹುದು.''[೨]**

ಪ್ರಜಾಪ್ರತಿನಿಧಿ ಸರಕಾರದ ವ್ಯವಸ್ಥೆಯು ಯಶಸ್ವಿಯಾಗಿ ಕಾರ್ಯ ನಿರ್ವಹಿಸಲು ಬೇಕಾದ ಪರಿಸ್ಥಿತಿಯ ಬಗೆಗೆ ಉಲ್ಲೇಖಿಸಿದ ನಂತರ, ಈ ಪರಿಸ್ಥಿತಿ ಭಾರತದಲಿಯೂ ಇದೆಯೇ ಎಂಬುದನ್ನು ಪರಿಶೀಲಿಸುವುದು ಯೋಗ್ಯವಾಗಿದೆ.

ಪ್ರಜಾಪ್ರತಿನಿಧಿ ಸರಕಾರವು ಕಾರ್ಯ ನಿರ್ವಹಿಸುವಂತೆ ಮಾಡಬೇಕೆನ್ನುವ ಭಾವನೆ ಹಿಂದೂಗಳು

---

೧. ಡಗ್‌ಡೇಲ್ಸ್ ಬ್ಯಾಲ್‌ಫೋರ್ (ಹುಚಿನ್‌ಸನ್); ಸಂಪುಟ ೨, ಪುಟ ೩೬೩–೬೪

೨. ಪಾರ್ಲಿಮೆಂಟರಿ ಗವರ್ನಮೆಂಟ್ ಇನ್ ಇಂಗ್ಲೆಂಡ್, ಪುಟ ೩೭

ಮತ್ತು ಮುಸಲ್ಮಾನರು ಇಬ್ಬರಲ್ಲಿಯೂ ಇದೆ ಎಂದು ಎಷ್ಟರಮಟ್ಟಿಗೆ ನಾವು ಹೇಳಬಲ್ಲೆವು? ಪ್ರತಿನಿಧಿ ಮತ್ತು ಜವಾಬ್ದಾರಿ ಸರಕಾರದ ನಿರರ್ಥಕತೆ ಮತ್ತು ಅಸಾಮರ್ಥ್ಯವನ್ನು ಸಿದ್ಧಪಡಿಸಲು, ಸರಕಾರದ ವ್ಯವಸ್ಥೆಯನ್ನು ಸ್ಥಗಿತಗೊಳಿಸುವ ಇಚ್ಛೆ ಎರಡರಲ್ಲಿ ಒಂದು ಪಕ್ಷದವರಾದರೂ ವ್ಯಕ್ತಮಾಡಿದರೆ, ಅಷ್ಟೇ ಸಾಕಾಗುವುದು. ಇಂಥ ಅಪೇಕ್ಷೆಯಷ್ಟೇ ಸಾಕಾಗಿರುವಾಗ, ಇದು ಹಿಂದೂಗಳಲ್ಲಿ ಇದೆಯೇ ಮುಸಲ್ಮಾನರಲ್ಲಿ ಇದೆಯೇ ಎಂಬುದನ್ನು ತಿಳಿಯಬೇಕಾದುದು ಅಷ್ಟು ಮಹತ್ವದ್ದೆನಿಸುವುದಿಲ್ಲ. ಹಿಂದೂಗಳಿಗಿಂತ ಮುಸಲ್ಮಾನರು ಹೆಚ್ಚು ಸ್ಪಷ್ಟವಾಗಿ ಮಾತನಾಡುವ ಸ್ವಭಾವದವರಾಗಿರುವುದರಿಂದ, ಹಿಂದೂ ಜನರ ಮನಸ್ಸನ್ನು ಅರಿಯುವುದಕ್ಕಿಂತಲೂ ಹೆಚ್ಚು ಅಧಿಕವಾಗಿ ಮುಸಲ್ಮಾನರ ಮನಸ್ಸನ್ನು ಅರಿಯಬಹುದಾಗಿದೆ. ಮುಸಲ್ಮಾನರ ರಾಜಕೀಯ ನಡೆವಳಿಕೆಯ ಮೇಲೆ ಪ್ರಭಾವ ಬೀರುವ ಇಸ್ಲಾಂ ಧರ್ಮದ ಮೂಲಭೂತ ಸಿದ್ಧಾಂತಗಳನ್ನೂ ಹಾಗೂ ಭಾರತೀಯ ಸರಕಾರದ ಬಗೆಗೆ ಮುಸ್ಲಿಮ್ ಸಮಾಜವು ತಳೆದ ಧೋರಣೆಯ ಮೇಲೆ ಪರಿಣಾಮ ಬೀರುವ ಪ್ರಮುಖ ಮುಸಲ್ಮಾನ ಧುರೀಣರು ವ್ಯಕ್ತಪಡಿಸಿದ ವಿಚಾರಗಳನ್ನೂ ಗಣನೆಗೆ ತೆಗೆದುಕೊಂಡಾಗ, ಮುಸ್ಲಿಮ್ ಸಮಾಜದ ಮನಸ್ಸು ಒಟ್ಟಾಗಿ ಹೇಗೆ ವರ್ತಿಸುತ್ತದೆ ಮತ್ತು ಯಾವ ಕಾರಣಗಳಿಂದಾಗಿ ಅದು ಜೋಲಾಡಬಹುದಾಗಿದೆ ಎನ್ನುವುದು ಸ್ಪಷ್ಟವಾಗಿ ಗೊತ್ತಾಗುವುದು. ಬ್ಯಾಲ್ ಫೋರ್ ಅವರು ಸ್ವಯಂಸಿದ್ಧವೆಂದು ತಿಳಿದ ಪರಿಸ್ಥಿತಿ ಭಾರತದಲ್ಲಿ ಇದೆ ಎಂದು ಹೇಳಬಹುದೇ? ಎಂಬುದನ್ನು, ಘಟನೆಗಳನ್ನು ಪ್ರಶಾಂತವಾಗಿ ಗ್ರಹಿಸಬಲ್ಲವರು, ತಮ್ಮಷ್ಟಕ್ಕೆ ತಾವೇ ನಿರ್ಣಯಿಸಲೆಂದು, ಇಂಥ ಕೆಲವು ಇಸ್ಲಾಂ ಧರ್ಮ ಸಿದ್ಧಾಂತಗಳನ್ನೂ ಮತ್ತು ಕೆಲವರು ಮುಸಲ್ಮಾನ ಧುರೀಣರ ದೃಷ್ಟಿಕೋನವನ್ನೂ ಇಲ್ಲಿ ಕೆಳಗೆ ಕೊಡಲಾಗಿದೆ.

ಇಸ್ಲಾಂ ಧರ್ಮದ ಸಿದ್ಧಾಂತಗಳಲ್ಲಿ ಗಮನಿಸಬೇಕಾದ ಒಂದು ತತ್ತ್ವವಿದೆ. ಆ ತತ್ತ್ವದ ಪ್ರಕಾರ, ಮುಸಲ್ಮಾನರ ಆಳ್ವಿಕೆಗೆ ಒಳಪಡದ ದೇಶದಲ್ಲಿ, ಮುಸ್ಲಿಂ ಕಾನೂನು ಮತ್ತು ಆ ದೇಶದ ಕಾನೂನು ಇವುಗಳ ಮಧ್ಯೆ ಮಸೆದಾಟ ಉಂಟಾದರೆ, ಆ ದೇಶದ ಕಾನೂನನನ್ನು ಹಿಂದುಳಿಸಿ ಮುಸ್ಲಿಂ ಕಾನೂನು ಬಳಕೆಯಲ್ಲಿ ಬರತಕ್ಕದ್ದು ಮತ್ತು ಆದೇಶದ ಕಾನೂನನ್ನು ಉಲ್ಲಂಘಿಸಿ ಮುಸ್ಲಿಂ ಕಾನೂನನ್ನು ಪಾಲಿಸುವ ಮುಸಲ್ಮಾನನ ವರ್ತನೆ ನ್ಯಾಯಸಮ್ಮತವಾದುದಾಗಿದೆ.

೧೯೨೧ನೆಯ ಇಸ್ವಿಯಲ್ಲಿ ಸರಕಾರವು ತಮ್ಮ ಮೇಲೆ ಆರೋಪಗಳನ್ನು ಹೊರಿಸಿ ಕರಾಚಿಯ ನ್ಯಾಯಾಲಯದಲ್ಲಿ ವ್ಯಾಜ್ಯವನ್ನು ಹೂಡಿದಾಗ ಮೌಲಾನಾ ಮೊಹಮ್ಮದ ಅಲಿ ಅವರು ಕರಾಚಿಯಲಿ ನಿಯಂತ್ರಕ ನ್ಯಾಯಾಧೀಶರ ಎದುರಿಗೆ ಉತ್ತರ ರೂಪದಲ್ಲಿ ನೀಡಿದ ವಿವರಣೆಯಲ್ಲಿ, ಇಂಥ ಪ್ರಕರಣಗಳ ಸಂದರ್ಭದಲ್ಲಿ ಮುಸಲ್ಮಾನರ ಕರ್ತವ್ಯವೇನು ಎಂಬುದನ್ನು ಬಹಳ ಚೆನ್ನಾಗಿ ಉಲ್ಲೇಖಿಸಿದ್ದಾರೆ. ೧೯೨೧ನೆಯ ಇಸ್ವಿ ಜುಲೈ ೮ನೆಯ ತಾರೀಖಿನ ದಿನ ಮೊಹಮ್ಮದ ಅಲಿ ಅವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಖಿಲಾಫತ್ ಸಮ್ಮೇಳನ ಕರಾಚಿಯಲ್ಲಿ ನಡೆದು, ಆ ಸಮ್ಮೇಳನದಲ್ಲಿ ಮೊಹಮ್ಮದ ಅಲಿ ಅವರೇ ಮಂಡಿಸಿದ ಗೊತ್ತುವಳಿಯೊಂದು ಪಾಸಾಗಿದ್ದು, ಆ ಗೊತ್ತುವಳಿಯನ್ನು ಆಧರಿಸಿ ನ್ಯಾಯಾಲಯದಲ್ಲಿ ಈ ಪ್ರಕರಣ ವಿಚಾರಣೆಗೆ ಬಂದಿದ್ದಿತು. ಆ ಗೊತ್ತುವಳಿ ಈ ಕೆಳಗಿನಂತೆ ಇದೆ:

> **"ಈ ಕ್ಷಣ ಒಬ್ಬ ಮುಸಲ್ಮಾನರು ಬ್ರಿಟಿಷ್ ಸೈನ್ಯದಲ್ಲಿ ಮುಂದುವರೆಯುವುದು, ಇಲ್ಲವೇ ಸೈನ್ಯದಲ್ಲಿ ಹೊಸದಾಗಿ ಸೇರುವುದು, ಇಲ್ಲವೇ ಇತರರು ಸೈನ್ಯದಲ್ಲಿ ಸೇರುವಂತೆ ಪ್ರೇರೇಪಿಸುವುದು, ಪ್ರತಿಯೊಂದು ವಿಧದಲ್ಲಿಯೂ ಧಾರ್ಮಿಕವಾಗಿ ಕಾನೂನಿಗೆ ವಿರುದ್ಧವಾದುದಾಗಿದೆ ಎಂದು ಈ ಸಭೆ ಸ್ಪಷ್ಟವಾಗಿ ಘೋಷಿಸುತ್ತದೆ. ಮತ್ತು ಈ ಧಾರ್ಮಿಕ ಕಟ್ಟಳೆಗಳು ಸೈನ್ಯದಲ್ಲಿರುವ ಪ್ರತಿಯೊಬ್ಬನಿಗೂ ಮನದಟ್ಟಾಗುವಂತೆ**

**ತಿಳಿಸಿ ಹೇಳುವುದು ಸಾಮಾನ್ಯವಾಗಿ ಎಲ್ಲ ಮುಸಲ್ಮಾನರ, ಅದರಲ್ಲಿಯೂ ವಿಶೇಷವಾಗಿ ಉಲೇಮಾಗಳ ಕರ್ತವ್ಯವಾಗಿದೆ.''**

ಇಂಡಿಯನ್ ಪೀನಲ್ ಕೋಡ್ ೧೩೧ನೆಯ ವಿಧಿಯೊಡನೆ ಸೇರಿಸಿದ ೧೨೦–ಬಿ ವಿಭಾಗ ಹಾಗೂ ಇಂಡಿಯನ್ ಪೀನಲ್ ಕೋಡ್ ೧೧೪ನೆಯ ವಿಧಿಯೊಡನೆ ಸೇರಿಸಿದ ೫೦೫ನೆಯ ವಿಭಾಗ ಮತ್ತು ೧೧೭ನೆಯ ವಿಧಿಯೊಡನೆ ಸೇರಿಸಿದ ೫೦೫ನೆಯ ವಿಭಾಗ– ಇವುಗಳಡಿಯಲ್ಲಿ ಮೌಲಾನಾ ಮೊಹಮ್ಮದ ಅಲಿ ಅವರೊಡನೆ ಇತರ ಆರು ಜನರ ಮೇಲೆ ಮೊಕದ್ದಮೆ ಹೂಡಲಾಯಿತು.[೧] ಮೌಲಾನಾ ಮೊಹಮ್ಮದ ಅಲಿ ಅವರು ತಾವು ಅಪರಾಧಿಗಳಲ್ಲವೆಂದು ವಾದಿಸಿ ಅದರ ಸಮರ್ಥನೆಗಾಗಿ ಹೀಗೆ ಹೇಳಿದ್ದರು:[೨]

**''ಕೊನೆಗೆ– ಈ ಬೆಲೆಯುಳ್ಳ ಮೊಕದ್ದಮೆಯ ಅರ್ಥವಾದರೂ ಏನು? ಯಾರ ದೋಷಾರೋಪಣೆಯನ್ನು ನಾವು ದೃಷ್ಟಿಯಲ್ಲಿಟ್ಟುಕೊಳ್ಳಬೇಕು? ನಾವು ಎಂದರೆ ಭಾರತದ ಮುಸಲ್ಮಾನರು ಮತ್ತು ಹಿಂದೂಗಳು. ಒಬ್ಬ ಮುಸಲ್ಮಾನನಾಗಿ ನಾನು ಮಾತನಾಡಬೇಕೆಂದರೆ– ನಾನು ಒಂದುವೇಳೆ ಸಮ್ಯಕ್ ಮಾರ್ಗದಿಂದ ಪರಾಙ್ಮುಖನಾಗಿದ್ದರೆ, ನನ್ನ ಅಂಥ ಪರಾಙ್ಮುಖತೆಯನ್ನು– ನನ್ನ ತಪ್ಪನ್ನು– ನನಗೆ ಮನವರಿಕೆ ಮಾಡುವ ಒಂದೇ ಒಂದು ವಿಧಾನವೆಂದರೆ ನನ್ನ ಪ್ರವೃತ್ತಿ ಪವಿತ್ರ ಕುರಾನ್ ಷರೀಫ್ ಆಜ್ಞೆಯಂತೆ ಇದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸುವುದಾಗಿದೆ. ಇಲ್ಲವೇ ಅಂತಿಮ ಪ್ರವಾದಿ– ಅವರ ಮೇಲೆ ಪರಮ ಶಾಂತಿ ಹಾಗೂ ದೇವರ ಕೃಪೆ ಇರಲಿ– ಮಹಾನುಭಾವರ ಅಧಿಕೃತ ಆಚರಣೆಯ ಸಂಪ್ರದಾಯಕ್ಕೆ ಅನುಗುಣವಾಗಿ ಇದೆಯೇ ಇಲ್ಲವೇ ಎಂಬುದನ್ನು ಪರೀಕ್ಷಿಸುವುದಾಗಿದೆ ಅಥವಾ ಇಸ್ಲಾಮ್ ಧರ್ಮದ ಈ ಎರಡು ಪ್ರಮುಖ ಮೂಲಗಳ ಮೇಲೆ ಆಧಾರಿತ ಇಂದಿನ ಮತ್ತು ಹಿಂದಿನ ಅಂಗೀಕೃತ ಮುಸಲ್ಮಾನ ಧರ್ಮಗುರುಗಳ ಧಾರ್ಮಿಕ ಘೋಷಣೆಯನ್ವಯ ಇದೆಯೇ ಇಲ್ಲವೇ ಎಂಬುದನ್ನು ವಿಶ್ಲೇಷಿಸುವುದಾಗಿದೆ. ತಾನು ಪೈಶಾಚಿಕ (ಸೆಟಾನಿಕ್) ಸರಕಾರವೆಂದು ಕರೆಸಿಕೊಳ್ಳಬಯಸದ ಪ್ರಭುತ್ವವೊಂದು ಇಂದು ನನ್ನ ಮೇಲೆ ಹೂಡಿರುವ ಮೊಕದ್ದಮೆಗೆ ಕಾರಣವಾದ ನನ್ನ ಖಚಿತ ವರ್ತನೆಯು, ಪ್ರಸ್ತುತ ಪರಿಸ್ಥಿತಿಯಲ್ಲಿ ಇಂಥ ನಿರ್ದಾಕ್ಷಿಣ್ಯ ಪರಿಶೀಲನೆಯನ್ನು ಅಪೇಕ್ಷಿಸುತ್ತದೆ.**

**''ಒಂದುವೇಳೆ, ಯಾವುದರಿಂದ ನಾನು ಪರಾಙ್ಮುಖವಾಗಿದ್ದೇನೆಯೋ ಅದು, ನನ್ನ ಪರಾಙ್ಮುಖತೆಯ ಕಾರಣದಿಂದಾಗಿಯೇ ಘೋರ ಪಾಪವಾಗಿಯೋ, ಹಾಗೂ ನಾನು ಅದರಿಂದ ಪರಾಙ್ಮುಖನಾಗದೇ ಇದ್ದಾಗಲೂ ಕೂಡ ಅದು ಅಪರಾಧವಾಗಿದೆಯೋ, ಹಾಗಿದ್ದರೆ ಅಂಥ ಪರಿಸ್ಥಿತಿಯಲ್ಲಿ ನಾನು ನನ್ನಷ್ಟಕ್ಕೆ ಈ ದೇಶದಲ್ಲಿ ಸುರಕ್ಷಿತವಾಗಿದ್ದೇನೆಂದು ಭಾವಿಸುವುದಾದರೂ ಹೇಗೆ?**

**''ಆ ಅಳತೆಗೋಲಿನಿಂದ ನೋಡಿದರೆ ನಾನು ಪಾಪಾತ್ಮನಾಗಲಿ ಇಲ್ಲವೇ ಅಪರಾಧಿಯಾಗಲಿ ಆಗಿರಲೇಬೇಕಾಗಿರುವುದು... ಇಸ್ಲಾಂ ಧರ್ಮವು ಒಂದೇ ಒಂದು ಸಾರ್ವಭೌಮತ್ವವನ್ನು ಮಾತ್ರ ಅಂಗೀಕರಿಸಿದೆ– ಅದುವೇ ಪರಮಾತ್ಮನ ಸಾರ್ವಭೌಮತ್ವ. ಅದು ಸರ್ವಶ್ರೇಷ್ಠವೂ ಸರ್ವತಂತ್ರ ಸ್ವತಂತ್ರವೂ ಸ್ವಯಂಪೂರ್ಣವೂ ಮತ್ತು ಸರ್ವ ಸಮರ್ಥವೂ ಆಗಿದೆ...''**

---

೧. ತುಂಬ ಆಶ್ಚರ್ಯಕರ ವಿಷಯವೆಂದರೆ ಈ ಆರು ಜನರಲ್ಲಿ ಒಬ್ಬರು ಶ್ರೀ ಶಾರದಾ ಪೀಠದ ಜಗದ್ಗುರು ಶ್ರೀ ಶಂಕರಾಚಾರ್ಯರು.

೨. ದಿ ಟ್ರಾಯಲ್ ಆಫ್ ಅಲಿ ಬ್ರದರ್ಸ್– ಆರ್.ವಿ.ಥಾಂದಾನಿ; ಪುಟ ೬೯–೭೧.

**"ಒಬ್ಬ ಮುಸಲ್ಮಾನನು– ಅವನು ನಾಗರಿಕ ಸೇವೆಯಲ್ಲಿರಲಿ ಇಲ್ಲವೇ ಸೈನಿಕನಾಗಿರಲಿ, ಮುಸ್ಲಿಂ ಆಡಳಿತದಲ್ಲಿರಲಿ ಇಲ್ಲವೇ ಮುಸ್ಲಿಮೇತರ ಆಡಳಿತದಡಿಯಲ್ಲಿರಲಿ– ಒಂದೇ ವಿಧದ ವಿಧೇಯತೆಯನ್ನು, ನಿಷ್ಠೆಯನ್ನು, ಪರಿಪಾಲಿಸತಕ್ಕವನಾಗಿರುತ್ತಾನೆ. ಅವನು ಆ ಬಗೆಗೆ ಪವಿತ್ರ ಕುರಾನ್ ಷರೀಫದಿಂದ ಆಜ್ಞಪ್ತನಾಗಿರುತ್ತಾನೆ. ಆ ಆದೇಶದ ಪ್ರಕಾರ ಆತನು ದೇವರಿಗೆ ವಿಧೇಯನಾಗಿರತಕ್ಕದ್ದು; ತನ್ನ ಪ್ರವಾದಿಗೆ ವಿಧೇಯನಾಗಿರತಕ್ಕದ್ದು; ಹಾಗೂ ಮುಸಲ್ಮಾನರ ಪ್ರಮುಖರಲ್ಲಿಯೇ ಅಧಿಕಾರದಲ್ಲಿದ್ದ ಮಹನೀಯರಿಗೆ ವಿಧೇಯನಾಗಿರತಕ್ಕದ್ದು. ಕೊನೆಗೆ ಉಲ್ಲೇಖಿಸಿರುವ ಈ ಪ್ರಮುಖರು ನಿಶ್ಚಿತವಾಗಿಯೂ ಪ್ರವಾದಿಗಳ ಉತ್ತರಾಧಿಕಾರಿಗಳಾಗಿರುವರು ಅಥವಾ ಅಂಥ ಸಮರ್ಪಣ ಭಾವದ ಧರ್ಮಗುರುಗಳ ಸರ್ವೋಚ್ಚ ಸೇನಾನಾಯಕ(ಕಮಾಂಡರ್ ಆಫ್ ದಿ ಫೇತ್‌ಫುಲ್)ರಾಗಿರುತ್ತಾರೆ... ಭಾವೈಕ್ಯತೆಯ ಈ ಧರ್ಮತತ್ವ ಬೋಧೆಯು ಯಾರಾದರೂ ದುರಜ್ಞೇಯ ತತ್ವಜ್ಞಾನಿಗಳಿಂದ ಸಾಂಗೋಪಾಂಗವಾಗಿ ವಿವರಿಸಲ್ಪಡುವ ಗಣಿತ ಸೂತ್ರವಾಗಿರುವುದಿಲ್ಲ. ಅದು ಸುಶಿಕ್ಷಿತ ಇಲ್ಲವೇ ಅಶಿಕ್ಷಿತ ಪ್ರತಿಯೊಬ್ಬ ಮುಸಲ್ಮಾನನ ನಿತ್ಯಾಚರಣೆಯ ನಂಬಿಕೆಯಾಗಿದೆ. ಮುಸಲ್ಮಾನರು ಇದಕ್ಕಿಂತ ಮೊದಲೂ ಕೂಡ ಇಲ್ಲಿ ಮತ್ತು ಇತರ ಕಡೆಗಳಲ್ಲಿ ಸಹ ಮುಸಲ್ಮಾನೇತರ ಅಧಿಪತ್ಯದ ಸಂಯಮಿಗಳಾದ ಅಧೀನ ಪ್ರಜೆಗಳೆನಿಸಿ ಬದುಕಿದ್ದಾರೆ. ಆದರೆ ಅವರು ಪಾಲಿಸುತ್ತ ಬಂದ ಪರಿವರ್ತಿಸಲಾಗದ ನಿಯಮವೊಂದಿದೆ; ಅದು ಯಾವಾಗಲೂ ಇದ್ದೇ ಇದೆ. ಅದೆಂದರೆ: ಪವಿತ್ರ ಕುರಾನ್ ಧರ್ಮ ಗ್ರಂಥವು ಸ್ಪಷ್ಟವಾದ ಭಾಷೆಯಲ್ಲಿ ವ್ಯಕ್ತಪಡಿಸಿರುವಂತೆ 'ಸಮಸ್ತ ವಿಶ್ವವನ್ನಾಳುವ ಸಾರ್ವಭೌಮ'ನಾದ ಪರಮಾತ್ಮನ ಆಜ್ಞೆಗಳ ಉಲ್ಲಂಘನೆಯನ್ನೊಳಗೊಳ್ಳದ, ಸಮದೃಷ್ಟಿಯ ತಮ್ಮ ಒಡೆಯರ ಆಜ್ಞೆ ಮತ್ತು ಕಾನೂನುಗಳನ್ನು ಮಾತ್ರ ಮುಸಲ್ಮಾನನಾದವನು ಪರಿಪಾಲಿಸುವನು! ಅತಿ ಸ್ಪಷ್ಟವಾದ, ತುಂಬ ಕಟ್ಟುನಿಟ್ಟಾದ, ವಿಧೇಯತೆಯ ಈ ಪರಿಮಿತಿಗಳು ಕೇವಲ ಮುಸ್ಲಿಮೇತರ ಆಳ್ವಿಕೆಯ ಅಧಿಕಾರ ವ್ಯಾಪ್ತಿಯನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡು ರೂಪಿಸಲ್ಪಟ್ಟಿಲ್ಲ. ತದ್ವಿರುದ್ಧವಾಗಿ, ಅವು ಸರ್ವ ಸಾಮಾನ್ಯವಾಗಿ ಅನ್ವಯಿಸಲ್ಪಡುವ, ಯಾವುದೇ ರೀತಿಯಲ್ಲಿ ಹಿಗ್ಗಿಸಲಾಗದ ಕುಗ್ಗಿಸಲಾಗದ, ತತ್ತ್ವಗಳಾಗಿವೆ."**

ಸುಭದ್ರ ಸರಕಾರವನ್ನು ಬಯಸುವ ಯಾರಿಗಾದರೂ ಇದು ಭಯವನ್ನುಂಟುಮಾಡತಕ್ಕದ್ದಾಗಿದೆ. ಆದರೆ ಒಂದು ದೇಶ ಮುಸಲ್ಮಾನರಿಗೆ ಮಾತೃಭೂಮಿಯಾದಾಗ ಮತ್ತು ಅದು ಮಾತೃಭೂಮಿಯಾಗದೇ ಇದ್ದಾಗ ಅನ್ವಯಿಸುವಂತೆ ಆಜ್ಞಾಪಿಸಲಾದ ಮುಸ್ಲಿಮ್ ಸಿದ್ಧಾಂತಕ್ಕೆ ಇದು ಏನೂ ಅಲ್ಲ. ಮುಸಲ್ಮಾನ್ ಧರ್ಮ ತತ್ತ್ವ ಕಾನೂನಿನನ್ವಯ (ಮುಸ್ಲಿಮ್ ಕೆನನ್ ಲಾ) ಈ ಜಗತ್ತು ಎರಡು ಶಿಬಿರಗಳಲ್ಲಿ ವಿಭಜಿತವಾಗಿದೆ. ಒಂದು ಇಸ್ಲಾಮ್ ಧರ್ಮವಲಯ. ಇದಕ್ಕೆ 'ದಾರ್–ಉಲ್–ಇಸ್ಲಾಮ್' (ಅಬೋಡ್ ಆಫ್ ಇಸ್ಲಾಮ್) ಎಂದೂ, ಇನ್ನೊಂದು– 'ಯುದ್ಧವಲಯ', 'ದಾರ್–ಉಲ್–ಹರ್ಬ್' (ಅಬೋಡ್ ಆಫ್ ವಾರ್) ಎಂದೂ ಕರೆಯಲ್ಪಡುತ್ತಿವೆ. ಮುಸಲ್ಮಾನರೇ ಆಳುತ್ತಿರುವ ದೇಶವು ದಾರುಲ್ ಇಸ್ಲಾಮ್ ಎನ್ನಿಸುವುದು. ಮುಸಲ್ಮಾನರು ಕೇವಲ ಅಲ್ಲಿ ವಾಸಿಸುತ್ತಿದ್ದು ಅದನ್ನು ಅವರು ಆಳುವವರಾಗಿರದಿದ್ದರೆ ಅದು ದಾರುಲ್ ಹರ್ಬ್ ಎನ್ನಿಸುವುದು. ಮುಸ್ಲಮಾನರ ಧರ್ಮ ತತ್ತ್ವ ಕಾನೂನು ಹೀಗಿರುವುದರಿಂದ, ಭಾರತವು ಹಿಂದೂ ಜನರಿಗೆ ಮತ್ತು ಮುಸಲ್ಮಾನರಿಗೆ ಇಬ್ಬರಿಗೂ ಸರ್ವಸಾಮಾನ್ಯ ಮಾತೃಭೂಮಿ ಆಗಲು ಸಾಧ್ಯವಿಲ್ಲ. ಅದು ಮುಸಲ್ಮಾನರ ದೇಶ ಮಾತ್ರ ಆಗಬಹುದು. ಆದರೆ 'ಹಿಂದೂ ಜನರು ಮತ್ತು ಮುಸಲ್ಮಾನರು ಸಮಾನಸ್ಕಂಧರಾಗಿ ವಾಸಿಸುವ ದೇಶ' ಮಾತ್ರ ಆಗಲಿಕ್ಕೆ ಸಾಧ್ಯವಿಲ್ಲ. ಇನ್ನೂ ಹೆಚ್ಚಿನ ವಿಚಾರವೆಂದರೆ ಮುಸಲ್ಮಾನರಿಂದ ಆಳಲ್ಪಡುತ್ತಿದ್ದಾಗ ಅದು ಕೇವಲ ಮುಸಲ್ಮಾನರ ದೇಶವಾಗುವುದು; ಆದರೆ ಮುಸ್ಲಿಮೇತರ ಅಧಿಪತ್ಯಕ್ಕೆ

ಒಳಗಾದ ಕ್ಷಣವೇ ಈ ದೇಶವು ಮುಸಲ್ಮಾನರ ದೇಶವಾಗಿ ಉಳಿಯುವುದಿಲ್ಲ. ಆಗ ಅದು ದಾರುಲ್ ಇಸ್ಲಾಮ್ ಎಂಬುದಕ್ಕೆ ಬದಲಾಗಿ ದಾರುಲ್ ಹರ್ಬ್ ಆಗಿಬಿಡುವುದು.

ಇದು ಕೇವಲ ಗ್ರಾಂಥಿಕ ಇಲ್ಲವೇ ಶಾಸ್ತ್ರೀಯ ದೃಷ್ಟಿಕೋನವೆಂದು ಊಹಿಸತಕ್ಕದ್ದಲ್ಲ. ಇದು ಕ್ರಿಯಾತ್ಮಕ ಶಕ್ತಿಯಾಗಬಲ್ಲ ಸಾಮರ್ಥ್ಯವನ್ನು ಪಡೆದಿದೆ. ಮುಸಲ್ಮಾನರ ನಡತೆಯ ಮೇಲೆ, ಆಚರಣೆಯ ಮೇಲೆ ಪ್ರಭಾವ ಬೀರಬಲ್ಲ ಸಾಮರ್ಥ್ಯವನ್ನು ಪಡೆದಿದೆ. ಬ್ರಿಟಿಷರು ಹಿಂದೂಸ್ಥಾನವನ್ನು ಆಕ್ರಮಿಸಿದಾಗ ಇದು ಮುಸಲ್ಮಾನರ ನಡೆವಳಿಕೆಯ ಮೇಲೆ ಗಾಢವಾದ ಪ್ರಭಾವ ಬೀರಿದ್ದಿತು. ಆಂಗ್ಲರ ಆಕ್ರಮಣವು ಹಿಂದೂ ಜನರ ಮನಸ್ಸಿನಲ್ಲಿ ಯಾವ ಪರಿತಾಪವನ್ನೂ ಉಂಟುಮಾಡಿರಲಿಲ್ಲ. ಆದರೆ ಮುಸಲ್ಮಾನರ ಮಟ್ಟಿಗೆ ಕೂಡಲೇ ಪ್ರತಿಕ್ರಿಯೆ ಕಾಣಿಸಿಕೊಂಡು, ಭಾರತವು ಮುಸಲ್ಮಾನರ ವಾಸಸ್ಥಳವಾಗಲು ಇನ್ನು ಮೇಲೆ ಯೋಗ್ಯ ದೇಶವಾಗಿದೆಯೇ ಎಂಬ ಪ್ರಶ್ನೆ ಅವರಲ್ಲಿ ಉದ್ಭವಿಸುವಂತೆ ಮಾಡಿತು. ಮುಸ್ಲಿಮ್ ಸಮಾಜದಲ್ಲಿ, ಭಾರತವು ದಾರುಲ್ ಹರ್ಬ್ ಆಗಿದೆಯೇ ಇಲ್ಲವೇ ದಾರುಲ್ ಇಸ್ಲಾಮ್ ಆಗಿದೆಯೇ ಎಂಬಂಥ ಚರ್ಚೆ ಪ್ರಾರಂಭವಾಯಿತು. ಈ ಮಾತಿನ ವಿಚಾರ ವಿಮರ್ಶೆ ಅರ್ಧ ಶತಮಾನದವರೆಗೆ ಮುಂದುವರೆಯಿತೆಂದು ಡಾ. ಟೈಟಸ್ ಅವರು ಹೇಳುತ್ತಾರೆ. ಅತ್ಯುಗ್ರವಾದಿಗಳಲ್ಲಿ ಕೆಲವರು, ಸೈಯದ್ ಅಹಮ್ಮದ್ ಎಂಬವರ ನಾಯಕತ್ವದಲ್ಲಿ ಸಂಘಟಿತರಾಗಿ, ನಿಜವಾಗಿಯೇ ಧರ್ಮಯುದ್ಧವನ್ನು ಘೋಷಿಸಿದರಲ್ಲದೇ, ಮುಸಲ್ಮಾನ ಅರಸರ ಕೈಯಲ್ಲಿರುವ ದೇಶಗಳಿಗೆ ಒಕ್ಕಲು (ಹಿಜ್ರತ್) ಹೋಗಬೇಕಾದ ಅನಿವಾರ್ಯತೆಯನ್ನು ಕುರಿತು ಪ್ರಚಾರ ಮಾಡಿದರು. ಈ ಪ್ರತಿಭಟನೆಯನ್ನು ಅವರು ಭಾರತದ ಎಲ್ಲ ಭಾಗಗಳಿಗೂ ಕೊಂಡೊಯ್ದರು.

ಅಲೀಗಢ ಚಳವಳಿಯ ಮೂಲ ಪುರುಷರಾದ ಸರ್ ಸೈಯದ್ ಅಹಮ್ಮದ್ ಖಾನ್ ಅವರು, ಬ್ರಿಟಿಷರ ಅಧಿಪತ್ಯಕ್ಕೆ ಒಳಪಟ್ಟ ಭಾರತವು ಮುಸಲ್ಮಾನರ ಆಳ್ವಿಕೆಯ ಅಧೀನವಾಗಿಲ್ಲವೆಂಬ ಕಾರಣದಿಂದ ಮಾತ್ರ ಮುಸ್ಲಿಮ್ ಬಾಂಧವರು ಅದನ್ನು 'ದಾರುಲ್ ಹರ್ಬ್' ಎಂದು ಪರಿಗಣಿಸಕೂಡದೆಂದು, ಭಾರತ ಮುಸಲ್ಮಾನರ ಮನವೊಲಿಸಬೇಕಾದರೆ, ತಮ್ಮ ಸರ್ವ ಚಾತುರ್ಯವನ್ನೂ ಸಮಸ್ತದಕ್ಷತೆಯನ್ನೂ ಉಪಯೋಗಿಸಬೇಕಾಯಿತು. ಮುಸಲ್ಮಾನರು ತಮ್ಮ ಧಾರ್ಮಿಕ ವಿಧಿ ವಿಧಾನಗಳನ್ನು, ಸಂಸ್ಕಾರ ಶಿಷ್ಟಾಚಾರಗಳನ್ನು ಅವಿಚ್ಛಿನ್ನವಾಗಿ ನಡೆಸಿಕೊಂಡು ಹೋಗಲು ಭಾರತದಲ್ಲಿ ಸಂಪೂರ್ಣ ಸ್ವತಂತ್ರರಾಗಿರುವುದರಿಂದ ಇದನ್ನು 'ದಾರುಲ್ ಇಸ್ಲಾಮ್' ಎಂದೇ ಪರಿಭಾವಿಸಬೇಕೆಂದು ಅವರು ಮುಸಲ್ಮಾನರಿಗೆ ಒತ್ತಾಯದಿಂದ ಹೇಳಿದರು. ದೇಶಾಂತರ ಮಾಡುವ ಚಳವಳಿಯು ಆ ಕಾಲಕ್ಕೆ ಸಂಪೂರ್ಣ ಸ್ಥಗಿತಗೊಂಡಿತು.

ಆದರೆ ಭಾರತ (ಇಂಡಿಯಾ) ದಾರುಲ್ ಹರ್ಬ್ ಎನ್ನುವ ಸಿದ್ಧಾಂತವನ್ನು ಬಿಟ್ಟು ಕೊಡಲಾಗಿರಲಿಲ್ಲ. ೧೯೨೦-೨೧ರ ಸುಮಾರು ಖಿಲಾಫತ್ ಚಳವಳಿ ನಡೆಯುತ್ತಿದ್ದ ಕಾಲದಲ್ಲಿ ಮುಸ್ಲಿಮ್ ದೇಶಾಭಿಮಾನಿಗಳು ಪುನಃ ಈ ತತ್ವ ಬೋಧಿಸಿದರು. ಈ ಚಳವಳಿ ಬಹುತೇಕ ಮುಸ್ಲಿಮ್ ಸಮುದಾಯವನ್ನು ಸೆಳೆಯಿತು. ಅನೇಕರು ಇಸ್ಲಾಮ್ ಕಾಯ್ದೆ ಕಾನೂನುಗಳನ್ನು ಅನುಸರಿಸಿ ಕಾರ್ಯ ಮಾಡಲು ಸಿದ್ಧರಾದರು. ಅಷ್ಟೇ ಅಲ್ಲ, ಕೆಲವರಂತೂ ಇಂಡಿಯಾದಲ್ಲಿ ತಮ್ಮ ನೆಲೆಗಳನ್ನು ತ್ಯಜಿಸಿ ಆಫ್ಘಾನಿಸ್ತಾನಕ್ಕೆ ಹೋದರು.

ದಾರುಲ್ ಹರ್ಬ್ ತಮ್ಮನ್ನು ಒಳಗೊಂಡಿದೆ ಎಂದು ಭಾವಿಸಿದ ಮುಸಲ್ಮಾನರಿಗೆ ಇದರಿಂದ ಪಾರಾಗಲು ಹಿಜರತ್ ಒಂದು ದಾರಿಯಾಗಿರಲಿಲ್ಲ ಎನ್ನುವುದನ್ನು ಕೂಡ ಹೇಳಬೇಕಾಗುತ್ತದೆ. ಇಸ್ಲಾಮ್ ತತ್ತ್ವ ಮತ್ತೊಂದು ಮಹತ್ವದ ಕಾಯ್ದೆ 'ಜಿಹಾದ್'. ಅದರ ಪ್ರಕಾರ ಮುಸಲ್ಮಾನ ಆಳರಸ, ಇಡೀ ಜಗತ್ತು ತನ್ನ ಅಧೀನವಾಗುವ ಹಾಗೆ ಆಳಬೇಕು. ಜಗತ್ತು 'ದಾರುಲ್ ಇಸ್ಲಾಮ್' (ಇಸ್ಲಾಮ ನಎಲೆವೀಡು) ಮತ್ತು 'ದಾರುಲ್ ಹರ್ಬ್' (ಯುದ್ಧದ ನೆಲೆವೀಡು) ಎಂದು ಎರಡು ಗುಂಪುಗಳಲ್ಲಿ ವಿಭಾಗಗೊಂಡಿದೆ. ಹೀಗಾಗಿ ಎಲ್ಲ ದೇಶಗಳು ಈ

ಒಂದಲ್ಲ ಒಂದು ಗುಂಪಿಗೆ ಸೇರಿವೆ; ತಾಂತ್ರಿಕವಾಗಿ, ಸಾಮರ್ಥ್ಯವುಳ್ಳ ಮುಸಲ್ಮಾನ ಅರಸನ ಕರ್ತವ್ಯವೆಂದರೆ ದಾರುಲ್ ಹರ್ಬ್ ದೇಶವನ್ನು 'ದಾರುಲ್ ಇಸ್ಲಾಮ್' ಆಗಿ ಪರಿವರ್ತಿಸುವುದು. ಇಂಡಿಯಾದಲ್ಲಿ ಮುಸಲ್ಮಾನರು ಹಿಜರತ್ ಅನುಸರಿಸಿರುವ ಉದಾಹರಣೆಗಳಿರುವ ಹಾಗೆ ಅವರು 'ಜಿಹಾದ್' ಉದ್ಘೋಷಿಸಲು ಕೂಡ ಹಿಂಜರಿಯದಿರುವ ಉದಾಹರಣೆಗಳೂ ಇವೆ. ಸೂಕ್ಷ್ಮವಾಗಿ ಪರಿಶೀಲಿಸಿದರೆ ೧೮೫೭ರ ದಂಗೆ ಯಾವುದೇ ರೀತಿಯಿಂದ ನೋಡಿದರೂ- ಅದು ನಿಜವಾಗಿ ಬ್ರಿಟಿಷರ ವಿರುದ್ಧ ಮುಸಲ್ಮಾನರು ಸಾರಿದ 'ಜಿಹಾದ್' (ಧರ್ಮಯುದ್ಧ) ಆಗಿತ್ತು. ಅದು ಮುಸಲ್ಮಾನರ ಪಾಲಿಗೆ ಸರ್ ಸೈಯ್ಯದ್ ಅಹಮ್ಮದ್ ಬೋಧಿಸಿದ ಧೋರಣೆಗಳ ಫಲವಾಗಿತ್ತು. ಅವರ ಬೋಧೆಯನ್ನು ವಿವರಿಸುವುದಾದರೆ: ಅನೇಕ ದಶಕಗಳವರೆಗೆ ಬ್ರಿಟಿಷರ ಆಳ್ವಿಕೆಯಿಂದಾಗಿ ಇಂಡಿಯಾ ದೇಶ ಒಂದು 'ದಾರುಲ್ ಹರ್ಬ್' ದೇಶವಾಗಿದೆ. ಅದಕ್ಕಾಗಿ ಈ ದಂಗೆ; ಮುಸಲ್ಮಾನರ ಈ ದಂಗೆ ಇಂಡಿಯಾ ದೇಶವನ್ನು ಪುನಃ ದಾರುಲ್ ಇಸ್ಲಾಮ್ ದೇಶವಾಗಿ ಪರಿವರ್ತನೆಗೊಳಿಸುವ ಪ್ರಯತ್ನವಾಗಿತ್ತು. ತೀರ ಇತ್ತೀಚಿನ ಉದಾಹರಣೆಯೆಂದರೆ ೧೯೧೯ರಲ್ಲಿ ಆಫ್ಘಾನಿಸ್ಥಾನ ಇಂಡಿಯಾದ ಮೇಲೆ ಮಾಡಿದ ದಾಳಿ. ಅದು ಇಂಡಿಯಾದ ಮುಸಲ್ಮಾನರಿಂದಲೇ ಯೋಜಿಸಲ್ಪಟ್ಟಿತ್ತು. ಖಿಲಾಫತ್ ಚಳವಳಿಗಾರರ ಮೂಲಕ ನಡೆದ ಈ ದಾಳಿ ಬ್ರಿಟಿಷ್ ಸರಕಾರದ ಮೇಲಿನ ವೈರವನ್ನು ಸಾಧಿಸಿ- ಆಫ್ಘಾನಿಸ್ಥಾನದ ನೆರವಿನಿಂದ- ಇಂಡಿಯಾ ದೇಶವನ್ನು ಬಂಧಮುಕ್ತಗೊಳಿಸುವ ಗುರಿ ಹೊಂದಿತ್ತು.* ಈ ದಾಳಿಯ ಉದ್ದೇಶ, ಪರಿಣಾಮದಲ್ಲಿ ಭಾರತದ ಬಿಡುಗಡೆಯಾಗಿತ್ತೊ ಅಥವಾ ಅದನ್ನು ಪುನಃ ಅಧೀನಗೊಳಿಸುವುದಾಗಿತ್ತೋ ಹೇಳಲು ಬಾರದು. ಏಕೆಂದರೆ ಈ ದಾಳಿಗೆ (ಪರಿಣಾಮದಲ್ಲಿ) ಸೋಲುಂಟಾಯಿತು. ಈ ಅಂಶವನ್ನು ಬಿಟ್ಟು ವಿಚಾರಿಸಿದರೂ ವಾಸ್ತವದಲ್ಲಿ ಇಂಡಿಯಾ ಪ್ರತ್ಯೇಕವಾಗಿ ಮುಸ್ಲಿಮ್ ಆಳ್ವಿಕೆಗೆ ಒಳಪಡದಿದ್ದರೂ ಅದು 'ದಾರುಲ್ ಹರ್ಬ್' ದೇಶ ಮತ್ತು ಮುಸಲ್ಮಾನರು ತಮ್ಮ ಇಸ್ಲಾಮ್ ತತ್ವಕ್ಕೆ ಅನುಗುನವಾಗಿ 'ಜಿಹಾದ್' ಸಾರಿದ್ದು ನ್ಯಾಯಸಮ್ಮತವಾಗಿತ್ತು. ಅವರು 'ಜಿಹಾದ್' ಉದ್ಘೋಷ ಮಾಡಬಹುದು, ಅಷ್ಟೇ ಅಲ್ಲ 'ಜಿಹಾದ್' ಯಶಸ್ವಿಗೊಳಿಸಲು ವಿದೇಶೀ ಮುಸ್ಲಿಮ್ ಶಕ್ತಿ 'ಜಿಹಾದ್' ಸಾರುವುದಾದರೆ ಅದರ ಯತ್ನದ ವಿಜಯಕ್ಕಾಗಿ ಸಹಾಯ ಕೂಡ ಮಾಡಬಹುದು. ಈ ವಿಷಯವನ್ನು ಮಹಮ್ಮದ್ ಅಲಿ ನ್ಯಾಯಾಲಯದ ಸದಸ್ಯರ ಎದುರು ಮಾಡಿದ ತಮ್ಮ ಭಾಷಣದಲ್ಲಿ ಸ್ಪಷ್ಟವಾಗಿ ವಿವರಿಸಿದರು. ಮಿ. ಮಹಮ್ಮದ್ ಅಲಿ ಹೀಗೆ ಹೇಳಿದರು:

> **"ಆದರೆ ಸರಕಾರಕ್ಕೆ ನಮ್ಮ ಶ್ರದ್ಧೆಯ ನಿಜ ಸ್ವರೂಪ ತಿಳಿದಿಲ್ಲ ಎನ್ನುವುದು ಸ್ಪಷ್ಟ ಮತ್ತು ಅದು ನಮ್ಮ ಶ್ರದ್ಧೆಯ ಸಾಮಾನ್ಯ ಅನುಕೂಲತೆಗಳೂ ಸೇರಿದಂತೆ ಎಲ್ಲ ಬಗೆಯ ಕಾರ್ಯ-ಕ್ರಿಯೆಗಳನ್ನು ಕೇವಲ ದೈನಂದಿನ-ವಾಸ್ತವಿಕ-ಕ್ರಿಯೆಗಳ ಗುಣಲಕ್ಷಣಗಳೆಂದೇ ಭಾವಿಸಲಾಗುತ್ತದೆ. ಆದರೆ, ಒಂದು ಸಂಗತಿಯನ್ನು ಸ್ಪಷ್ಟಪಡಿಸಲೇಬೇಕು. ಅದೆಂದರೆ: ಒಬ್ಬ 'ಶ್ರದ್ಧಾವಂತ' ಅಧಿಕ ಮನಗಾಣಿಸುವ ಸಾಕ್ಷಾಧಾರಗಳಿಲ್ಲದ ಹೊರತು ಮತ್ತೊಬ್ಬ ಶ್ರದ್ಧಾವಂತನ ವಿರುದ್ಧ ತೀರ್ಪು ನೀಡಲು ಇಸ್ಲಾಮ್ ಧರ್ಮ ಅನುಮತಿ ನೀಡುವುದಿಲ್ಲ ಮತ್ತು ನಮ್ಮ ಮುಸ್ಲಿಮ್ ಸೋದರರು ತಮ್ಮ (ಧರ್ಮ) ಅನುಮತಿ ಶ್ರದ್ಧೆಯ ರಕ್ಷಣೆಗಾಗಿ ಶಸ್ತ್ರಾಸ್ತ್ರ ಎತ್ತಿಲ್ಲ ಮತ್ತು ನಿರುದ್ದೇಶವಾಗಿ ಆಕ್ರಮಣ ಮಾಡಿದ ಅಪರಾಧಕ್ಕೆ ಒಳಗಾಗಿಲ್ಲ ಎನ್ನುವುದನ್ನು ಖಚಿತಪಡಿಸಿದ ಹೊರತು ನಾವು ಅದರ ವಿರುದ್ಧ ಹೋರಾಡುವುದಿಲ್ಲ. (೧೯೧೯ರಲ್ಲಿ ಬ್ರಿಟಿಷ್ ಮತ್ತು ಆಫ್ಗಾನಿಸ್ತಾನದ**

---

* ಈ ಕುತೂಹಲಕಾರಿ ಹಾಗೂ ಭಯಾನಕ ಸಂಗತಿಯನ್ನು ಮತ್ತು ಅದರಲ್ಲಿ ಶ್ರೀ ಗಾಂಧಿಯವರ ಪಾತ್ರವನ್ನು ಶ್ರೀ ಕರಂದಿಕರ್‌ರವರು ಆ ವರ್ಷದ ಮರಾಠಾ ಪತ್ರಿಕೆಯಲ್ಲಿ ಬರೆದ ಲೇಖನ ಮಾಲೆಯಲ್ಲಿ ಸವಿಸ್ತಾರವಾಗಿ ಬರೆದಿರುತ್ತಾರೆ.

ನಡುವೆ ನಡೆದ ಯುದ್ಧಕ್ಕೆ ಸಂಬಂಧಿಸಿದ ಹೇಳಿಕೆ) ಈಗ ನಮ್ಮ ನಿಲುವು ಹೇಗಿದೆ. ಅಮೀರರ ಹುಚ್ಚುತನ, ದ್ವೇಷಗಳ ಬಗ್ಗೆ ಹೆಚ್ಚು ಆಧಾರಗಳಿಲ್ಲದೆ ಮುಸಲ್ಮಾನರೂ ಸೇರಿದಂತೆ ಇರುವ ನಮ್ಮ ಇಂಡಿಯನ್ ಸೈನಿಕರು ನಮ್ಮ ಪ್ರೇರಣೆ ಮತ್ತು ಸಹಾಯಗಳಿಂದ ಮೊದಲು ಅಫ್ಘಾನಿಸ್ತಾನದ ಮೇಲೆ ಏರಿಹೋಗಿ ಅದನ್ನು ಆಕ್ರಮಿಸಿಕೊಳ್ಳುವುದು, ಆ ಬಳಿಕ ಹೆಚ್ಚು ಕಳವಳ ಉದ್ವೇಗಗಳಿಗೆ ಬಲಿಯಾಗುವುದು ನಮಗೆ ಬೇಕಿಲ್ಲ.

ಆದರೆ ಇದಕ್ಕೆ ಪ್ರತಿಯಾಗಿ ಘನತೆವೆತ್ತ ಅಮೀರ್ ಅವರಿಗೆ ಇಂಡಿಯಾ ಮತ್ತು ಅದರ ಜನತೆಯ ಹಗೆತನವಿಲ್ಲ ಎಂದಾದರೆ, ಮತ್ತು ಸೆಕ್ರೆಟರಿ ಆಫ್ ಸ್ಟೇಟ್ ಸಾರ್ವಜನಿಕವಾಗಿ ಹೇಳಿದಂತೆ ಅಮೀರರ ಉದ್ದೇಶ ಮಹಮ್ಮದೀಯರ ಜಗತ್ತಿನಲ್ಲಿ ಹರಡಿರುವ ಅಶಾಂತಿಗೆ ಸಂಬಂಧಿಸಿದೆಯೆನ್ನುವುದಾದರೆ ಮತ್ತು ಅವರೇ ಬಹಿರಂಗವಾಗಿ ತಿಳಿಸಿರುವಂತೆ ಅದು ಪಾರಸ್ಪರಿಕ ಅನುಕಂಪಕ್ಕಾಗಿ ಎನ್ನುವುದನ್ನು ಗಮನಿಸಿದರೆ ಅವರ ಧೋರಣೆ ಮುಸ್ಲಿಮರು ಹಿಜರತ್ ಕ್ರಮ ಕೈಕೊಳ್ಳುವಂತೆ ಮುಸ್ಲಿಮರ ಮೇಲೆ ಒತ್ತಡ ತಂದ ಅವರ ಧಾರ್ಮಿಕ ಉದ್ದೇಶಕ್ಕೆ ಅನುಗುಣವಾಗಿದೆ. ದುರ್ಬಲಾಗಿರಲಿ, ಸಬಲರಾಗಿರಿಲಿ ಯಾರೇ ಆದರೂ ತಮ್ಮ ತಮ್ಮ ಪರಿಮಿತ ಸಾಧನೆಗಳನ್ನು ಆಧರಿಸಿ ಜಿಹಾದ್ ಸಾರುವುದೊಂದೇ ಪರ್ಯಾಯ ಕ್ರಮ: ತಮ್ಮ ಎದುರಾಳಿ ಶಕ್ತಿಶಾಲಿಯಾಗಿದ್ದರೂ ಇದು ಅನುಸರಿಸಬೇಕಾದದ್ದೆ. ಘನತೆವೆತ್ತ ಅಮೀರರು ಈ ಬಗೆಯ ಒತ್ತಡಕ್ಕೆ ಒಳಗಾಗಿರಬೇಕು. ಅಧಿಕ ಬಲ ಮತ್ತು ಅತ್ಯಧಿಕ ಸೈನ್ಯಗಳನ್ನು ನಂಬಿದವರ ಕ್ರಮವನ್ನು ಅಮೀರರು ಒಂದು ಆಹ್ವಾನವೆಂದು ಸ್ವೀಕರಿಸಿದ್ದರೆ, ಮತ್ತು ಖಿಲಾಫತ್, 'ಜಿಹಾದ್' ಸಾರಿದ ಮುಸಲ್ಮಾನರ ವಿರುದ್ಧ ಯುದ್ಧ ಮಾಡಿ ಅದರ ಮೂಲಕ (ಪರಿಣಾಮ) ತೀರ್ಮಾನ ಕೈಕೊಳ್ಳುವ ನಿಲುವು ತಾಳಿದ್ದರೆ, ಜಜೀರುಲ್–ಅರಬ್ ಮತ್ತು ಇತರ ಪವಿತ್ರ ಸ್ಥಳಗಳನ್ನು ಅಕ್ರಮವಾಗಿ ಆಕ್ರಮಿಸಿ, ಇಸ್ಲಾಮ್ ಮತೀಯರನ್ನು ದುರ್ಬಲಗೊಳಿಸುವ ಮತ್ತು ಭೇದಭಾವ ಪ್ರಚೋದಿಸುವ, ನಮ್ಮ ಪೂರ್ಣ ಸ್ವಾತಂತ್ರ್ಯ ಪ್ರತಿಪಾದನೆಯನ್ನು ವಿರೋಧಿಸುವ ಶಕ್ತಿಗಳ ದಮನಕ್ಕಾಗಿ ನಡೆದ ಯತ್ನ ಎಂದು ಭಾವಿಸಬೇಕು. ಆಗ ಇಸ್ಲಾಮ್ ಕಾಯ್ದೆ ಕಟ್ಟಳೆ ಸ್ಫುಟವಾಗಿ ಹೇಳುವುದೇನೆಂದರೆ, ಮೊದಲನೆಯದಾಗಿ ಮುಸಲ್ಮಾನ ಯಾವುದೇ ಸ್ಥಿತಿಯಲ್ಲಿ ಯಾರಿಗೂ ಯಾವುದೇ ಬಗೆಯ ಸಹಾಯ ನೀಡಕೂಡದು. ಎರಡನೆಯದಾಗಿ ನನ್ನ ಪ್ರದೇಶದಲ್ಲಿ 'ಜಿಹಾದ್' ಕ್ರಮ ಅನುಸರಿಸುವ ಪ್ರಸಂಗ ಬಂದರೆ, ಆ ಪ್ರದೇಶದ ಪ್ರತಿಯೊಬ್ಬ ಮುಸಲ್ಮಾನ ಮುಜಹದೀನರ ಹೋರಾಟ ಸೇರಬೇಕು ಮತ್ತು ತಮಗೆ ಸಾಧ್ಯವಿದ್ದ ಅತಿ ಹೆಚ್ಚಿನ ನೆರವು ನೀಡಬೇಕು.

"ಹೀಗೆ ಇಸ್ಲಾಮ್ ಕಾಯ್ದೆ ಸ್ಪಷ್ಟವಾಗಿದೆ, ನಿರ್ವಿವಾದವಾಗಿದೆ. ಮುಸಲ್ಮಾನೇತರ ಶಕ್ತಿ ಆಳುತ್ತಿರುವಾಗ ಮತ್ತು ನಮ್ಮ ವಿರುದ್ಧ 'ಜಿಹಾದ್' ಸಾರಲ್ಪಟ್ಟಾಗ ಮುಸಲ್ಮಾನ ಪ್ರಜೆಯ ಧಾರ್ಮಿಕ ಕರ್ತವ್ಯವೇನು ಎನ್ನುವುದನ್ನು ನಮ್ಮನ್ನು ಕೇಳಿದ ಪರಿಶೀಲನಾ ಸಭೆಗೆ ಸ್ಪಷ್ಟಪಡಿಸಿದ್ದೇವೆ. ಇದು ಆಗಿನ್ನೂ ಸರಹದ್ದಿನಲ್ಲಿ ಯಾವುದೇ ಗಲಭೆಯ ಸುಳಿವಿಲ್ಲದಿದ್ದಾಗ ಮತ್ತು ಅಮೀರ ಅವರು ಇನ್ನೂ ಬದುಕಿದ್ದಾಗಲೇ."

ಪ್ರಾದೇಶಿಕ ಸಂಬಂಧಗಳನ್ನು ಇಸ್ಲಾಮ್ ಧರ್ಮವು ಅಂಗೀಕರಿಸುವುದಿಲ್ಲವೆಂಬುದು ಈ ವಿಷಯಕ್ಕೆ ಸಂಬಂಧಿಸಿದಂತೆ ಗಮನಿಸಬೇಕಾದ ಮೂರನೆಯ ಸಿದ್ಧಾಂತವಾಗಿದೆ. ಇದರ ಸಂಬಂಧಗಳು ಸಾಮಾಜಿಕ ಮತ್ತು ಧಾರ್ಮಿಕ ಸ್ವರೂಪವನ್ನು ಪಡೆದಿರುವುದರಿಂದ ಪ್ರಾದೇಶಿಕ ಪರಿಮಿತಿಯನ್ನು ಇದು ಮೀರಿ ನಿಂತಿದೆ. ಇಲ್ಲಿ ಪುನಃ ಮೌಲಾನಾ ಮೊಹಮ್ಮದ್ ಅಲಿ ಅವರು ಅತ್ಯಂತ ಶ್ರೇಷ್ಠ ಸಾಕ್ಷಿಯಾಗಿದ್ದಾರೆ. ಕರಾಚಿಯ ಸೆಶನ್ಸ್ ಕೋರ್ಟಿನ ಮುಂದೆ ಅವರನ್ನು ಹಾಜರುಪಡಿಸಿದಾಗ ನ್ಯಾಯಾಧೀಶರ ಮುಂದೆ ಮೊಹಮ್ಮದ್ ಅಲಿ ಅವರು ಹೀಗೆ ಹೇಳಿದರು:

**"ಇತ್ತೀಚೆಗೆ ಶೋಧ ಮಾಡಿರುವಂತೆ ಒಂದು ವಿಷಯವನ್ನು ನಾವು ಸ್ಪಷ್ಟವಾಗಿ ಹೇಳಬೇಕಾಗಿದೆ. ನಾವು ಈಗ ಮಾತಾಡಲು ಉದ್ದೇಶಿಸಿರುವ ಸಿದ್ಧಾಂತವು ಮುಸ್ಲಿಮೇತರ– ಅದರಲ್ಲಿಯೂ ವಿಶೇಷವಾಗಿ ಅಧಿಕಾರಿಗಳ– ಸಮೂಹಗಳಲ್ಲಿ ಅರಿತುಕೊಳ್ಳಬೇಕಾದಷ್ಟು ಅರಿತುಕೊಳ್ಳಲ್ಪಟ್ಟಿರುವುದಿಲ್ಲ. ಕೆಲವು ಸಿದ್ಧಾಂತಗಳಲ್ಲಿ ಮಾತ್ರ ನಂಬಿಕೆ ಇಟ್ಟು, ಆ ನಂಬಿಕೆಗೆ ತಕ್ಕಂತೆ ತಾನೇ ನಡೆಯುವುದರಲ್ಲಿ ಮಾತ್ರ ಒಬ್ಬ ಮುಸಲ್ಮಾನ ಧರ್ಮವು ಸೀಮಿತವಾಗಿರುವುದಿಲ್ಲ. ಅವನು, ಯಾವುದೇ ಒತ್ತಡಕ್ಕೆ ಆಸ್ಪದ ಕೊಡದೇ, ಕೊನೆಯವರೆಗೂ ತನ್ನ ಸಂಪೂರ್ಣ ಸಾಮರ್ಥ್ಯವನ್ನು ಉಪಯೋಗಿಸಿ, ನಿಶ್ಚಿತಪಡಿಸಿದ ಶ್ರದ್ಧೆ ಹಾಗೂ ಆಚರಣೆಗಳನ್ನು ಅನುವರ್ತಿಸುವಂತೆ ಶ್ರಮಿಸತಕ್ಕದ್ದು. ಪವಿತ್ರವಾದ ಕುರಾನ್ ಷರೀಫ್ ಗ್ರಂಥದಲ್ಲಿ ಈ ಆಚರಣೆಗೆ 'ಅಮರಿಬಿಲ್ ಮಾರೂಫ್' ಮತ್ತು 'ನಹಿ ಅನಿಲ್‌ಮುಂಕರ್' ಎಂದು ಕರೆಯಲಾಗುತ್ತಿದೆ. ಪರಮ ಪೂಜ್ಯ ಪ್ರವಾದಿಗಳ ಸಂಪ್ರದಾಯದ ಕೆಲವು ವಿಶಿಷ್ಟ ಅಧ್ಯಾಯಗಳು ಇಸ್ಲಾಂ ಧರ್ಮದ ಈ ಅತ್ಯಾವಶ್ಯಕ ಸಿದ್ಧಾಂತಕ್ಕೆ ಸಂಬಂಧಿಸಿವೆ. ಏಕೆಂದರೆ ಒಂದು ಅರ್ಥದಲ್ಲಿ ಅವನು ಪಾಲಕನಾಗಿದ್ದಾನೆ. ಏಕೆಂದರೆ ಮುಸಲ್ಮಾನನಾದವನು ಬೇರೆಯವರು ಒಳ್ಳೆಯದನ್ನು ಮಾಡುವಂತೆ, ಹಾಗೂ ದುರ್ಮಾರ್ಗದಿಂದ ದೂರವಿರುವಂತೆ ಬೋಧಿಸಬೇಕು. ಹಾಗೆ ಬೋಧಿಸದಿದ್ದರೆ ಆತನಿಗೆ ಒಂದು ಅರ್ಥದಲ್ಲಿ ಮೋಕ್ಷವೇ ದೊರಕುವುದಿಲ್ಲ. ಇಸ್ಲಾಂ ಧರ್ಮದ ಮುಜಾಹಿದ್ ಆದವನೊಡನೆ ಇನ್ನೊಬ್ಬ ಮುಸಲ್ಮಾನನು ಯುದ್ಧ ಮಾಡುವುದು ಅನಿವಾರ್ಯವಾದರೆ ಅವನು ಪ್ರಜ್ಞಾವಂತ ಪ್ರತಿರೋಧಿಯಾಗಿರಬೇಕಷ್ಟೇ ಅಲ್ಲ, ಅವನಿಗೆ ತನ್ನ ಮೋಕ್ಷದ ಬಗೆಗೆ ಕಾಳಜಿ ಇದ್ದರೆ, ತನ್ನ ಹಾಗೆ ತನ್ನ ಸಹೋದರರೂ ಕೂಡ ಅದೇ ರೀತಿ ಪ್ರತಿರೋಧ ಒಡ್ಡಬೇಕೆಂದು ಹೇಳಲೇಬೇಕು. ತನಗೆ ಯಾವ ವಿಧದ ತೊಂದರೆ ಉಂಟಾದರೂ ಕೂಡ ಅವನು ಹೀಗೆ ಮಾಡಬೇಕಾಗುವುದು. ಹಾಗೆ ಮಾಡಿದರೆ ಮಾತ್ರ ಅವನು ಸ್ವಂತದ ಮೋಕ್ಷಕ್ಕೆ ಬಾಧ್ಯಸ್ತನಾಗುವನು. ಹಾಗೆ ಮಾಡುವವರೆಗೆ ಅವನಿಗೆ ಮೋಕ್ಷ ಸಿಗುವುದಿಲ್ಲ. ಇದು ನಮ್ಮ ಹಾಗೆ ಇತರ ಎಲ್ಲ ಮುಸಲ್ಮಾನರ ನಂಬಿಗೆಯಾಗಿದೆ. ಈ ಸಿದ್ಧಾಂತಕ್ಕೆ ಅನುಗುಣವಾಗಿಯೇ ಮನಃಪೂರ್ವಕ ನಾವು ನಡೆಯಬಯಸುತ್ತೇವೆ. ಈ ತತ್ವವನ್ನು ಆಚರಿಸಲು ಇರಬೇಕಾದ ಸ್ವಾತಂತ್ರ್ಯವನ್ನು ನಮಗೆ ನಿರಾಕರಿಸಿದರೆ, ಈ ಸ್ವಾತಂತ್ರ್ಯಕ್ಕೆ ಆಸ್ಪದವಿಲ್ಲದ ದೇಶದಲ್ಲಿ ಇಸ್ಲಾಂ ಧರ್ಮವು ಸುರಕ್ಷಿತವಾಗಿರುವುದಿಲ್ಲವೆಂಬ ನಿರ್ಣಯಕ್ಕೆ ನಾವು ಬರಬೇಕಾಗುವುದು."**

ಇದು ಇಸ್ಲಾಂ ಧರ್ಮಪರವಾದ ಆಚರಣೆಯ (ಪಾನ್–ಇಸ್ಲಾಮಿಸಮ್) ತಳಹದಿಯಾಗಿದೆ. ಭಾರತದಲ್ಲಿರುವ ಪ್ರತಿಯೊಬ್ಬ ಮುಸಲ್ಮಾನನೂ ತಾನು 'ಮೊಟ್ಟಮೊದಲು ಮುಸಲ್ಮಾನ, ಅನಂತರ ಭಾರತೀಯ' ಎಂದು ಭಾವಿಸಲು ಈ ತತ್ತ್ವವೇ ಕಾರಣವಾಗುತ್ತದೆ. ಭಾರತೀಯ ಮುಸಲ್ಮಾನನು ಭಾರತದ ಅಭ್ಯುದಯಕ್ಕಾಗಿ ಇಷ್ಟೊಂದು ಸಣ್ಣ ಪ್ರಮಾಣದಲ್ಲಿ ಏಕೆ ಭಾಗಿಯಾಗುತ್ತಾನೆ, ಮುಸ್ಲಿಮ್ ದೇಶಗಳಿಗಾಗಿ ತನ್ನ ಜೀವನವನ್ನೆಲ್ಲ[೧] ಏಕೆ ಸವೆಸಿದ್ದಾನೆ, ಅವನಲ್ಲಿ ಮುಸ್ಲಿಮ್ ದೇಶಗಳಿಗೆ ಅಗ್ರ ಪ್ರಾಶಸ್ತ್ಯವಿದ್ದು, ಭಾರತಕ್ಕೆ ದ್ವಿತೀಯ ಸ್ಥಾನವೇಕೆ ಇದೆ ಎಂಬುದನ್ನು ಅವನ ಈ ಭಾವನೆಗಳು ಸ್ಪಷ್ಟವಾಗಿ ಹೇಳುತ್ತವೆ.

೧. ಮೊದಲನೆಯ ಬಾಲ್ಕನ್ ಯುದ್ಧ ಪ್ರಾರಂಭವಾದ ೧೯೧೨ನೆಯ ಇಸ್ವಿ ಮತ್ತು ಯುರೋಪಿಯನ್ ಪ್ರಭುತ್ವಗಳ ಸಂಗಡ ತುರ್ಕಸ್ತಾನ ಶಾಂತಿಯನ್ನು ಸ್ಥಾಪಿಸಿದ ೧೯೨೨ನೆಯ ಇಸ್ವಿ ಇವುಗಳ ಮಧ್ಯೆ ಭಾರತದ ಮುಸಲ್ಮಾನರು ಭಾರತದ ರಾಜಕೀಯ ವಿದ್ಯಮಾನಗಳ ಬಗೆಗೆ ಎಷ್ಟು ಮಾತ್ರವೂ ಕಾಳಜಿ ವಹಿಸಲಿಲ್ಲ. ತುರ್ಕಸ್ಥಾನ ಮತ್ತು ಅರಬ ಸ್ಥಾನಗಳ ವಿದ್ಯಮಾನಗಳಲ್ಲಿಯೇ ಸಂಪೂರ್ಣ ಮುಳುಗಿಹೋಗಿದ್ದರು.

ಮಹಾಪ್ರಭುಗಳಾದ ಆಗಾಖಾನರು ಅದನ್ನು ಹೀಗೆ ಸಮರ್ಥಿಸುತ್ತಾರೆ:[೧]

**'ಆಧ್ಯಾತ್ಮಿಕ ಭ್ರಾತೃತ್ವ ಮತ್ತು ಪ್ರವಾದಿಯ ಮಕ್ಕಳ ಒಗ್ಗಟ್ಟು ಎಂಬ ತತ್ವದ ಪ್ರಕಾರ, ಪ್ರತಿಯೊಬ್ಬ ಪ್ರಾಮಾಣಿಕ ಹಾಗೂ ತತ್ತ್ವನಿಷ್ಠ ಮುಸಲ್ಮಾನನು ಈ ನಿಜ ಮತ್ತು ನ್ಯಾಯವಾದ ಇಸ್ಲಾಮ್ ಧರ್ಮಪರ ಆಚರಣೆಗೆ ಬದ್ಧನಾಗಿರುತ್ತಾನೆ. ಫಾರಸಿ ಮತ್ತು ಅರಬ್ ಸಂಸ್ಕೃತಿಯ, ಆಳವಾದ ಹಾಗೂ ಅವ್ಯಾಹತವಾದ ಮೂಲಭೂತ ತತ್ತ್ವ ಇದಾಗಿದ್ದು, ಈ ಸಂಸ್ಕೃತಿಯು ಕೂಡ, ಮೊದಲನೆಯ ಅಧ್ಯಾಯದಲ್ಲಿ 'ಇಸ್ಲಾಮರ' (ಇಸ್ಲಾಮಿಕ್) ಎಂದು ನಾವು ಹೆಸರು ಕೊಟ್ಟಿರುವ ನಾಗರಿಕತೆಯ ಬಹು ದೊಡ್ಡ ಪರಿವಾರಕ್ಕೆ ಸೇರಿದುದಾಗಿದೆ. ಚೀನ ದೇಶದಿಂದ ಮೊರೋಕ್ಕೋ ದೇಶದವರೆಗೆ, ಪೋಲ್ಯಾಂಡಿನಿಂದ ಸಿಂಗಪೂರದವರೆಗೆ, ಎಲ್ಲ ಕಡೆಗೆ ಇರುವ ಇಂಥ ಧರ್ಮನಿಷ್ಠ ಬಂಧುಗಳಿಗಾಗಿ ಔದಾರ್ಯ ಮತ್ತು ಸದ್ಭಾವನೆಯುಳ್ಳವರಾಗಿರಬೇಕೆಂಬ ಗರ್ಭಿತಾರ್ಥ ಇದರಲ್ಲಿದೆ. ಇಸ್ಲಾಮ್ ಸಾಹಿತ್ಯದಲ್ಲಿ, ಅದರ ರಮಣೀಯ ಕಲಾಕೃತಿಗಳಲ್ಲಿ, ಅದರ ಮನೋಹರ ಶಿಲ್ಪದಲ್ಲಿ, ಅದರ ಪರಮಾನಂದಕರ ಕಾವ್ಯಗಳಲ್ಲಿ ಶಾಶ್ವತವಾದ ಅಭಿರುಚಿ ಇರಬೇಕೆಂಬುದು ಇದರ ಅರ್ಥವಾಗಿದೆ. ನಿಜವಾದ ಪರಿವರ್ತನೆ ಎಂದು ಕೂಡ ಇದರ ಅಭಿಪ್ರಾಯವಾಗಿದೆ. ಮೂಲಭೂತ ಹಾಗೂ ಪರಿಶುದ್ಧ ಧಾರ್ಮಿಕ ಶ್ರದ್ಧೆಯನ್ನು ಪುನಃ ಗಳಿಸುವುದು, ಮುಕ್ತಿ ಪ್ರಮಾಣಪೂರ್ವಕ ಚರ್ಚೆ ಹಾಗೂ ಬೋಧೆಯ ಮೂಲಕ ಮನವೊಲಿಸುವುದು, ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ಆಧ್ಯಾತ್ಮಿಕ ಶಕ್ತಿ ಸಾಮರ್ಥ್ಯಗಳು ಉದ್ಭವಿಸುವಂತೆ ಮಾಡುವುದು, ಮಾನವ ಜನಾಂಗಕ್ಕೆ ಕಲ್ಯಾಣವನ್ನು ಉಂಟುಮಾಡುವ ಕಾರ್ಯಗಳಲ್ಲಿ ತೊಡಗುವುದು– ಇವೇ ಆ ಪರಿವರ್ತನೆಯನ್ನು ತರುವ ಮಾರ್ಗಗಳಾಗಿವೆ. ಸಹಜವಾದ ಹಾಗೂ ಯೋಗ್ಯ ಆಧ್ಯಾತ್ಮಿಕ ಚಳವಳಿಯ ಧರ್ಮ ಪ್ರವರ್ತಕರನ್ನೂ ಮತ್ತು ಅವರ ಬೋಧನೆಯನ್ನೂ ಹಾಗೂ ಎಲ್ಲ ದೇಶಗಳಲ್ಲಿರುವ ಅವರ ಮಕ್ಕಳನ್ನು ತುರ್ಕಸ್ಥಾನ ಇಲ್ಲವೇ ಅಫ್ಘಾನಿಸ್ಥಾನ, ಭಾರತ ಇಲ್ಲವೇ ಇಜಿಪ್ತ್ ಈ ದೇಶವಾಸಿಗಳಿಗೆ ಪ್ರಿಯರನ್ನಾಗಿ, ಆತ್ಮೀಯರನ್ನಾಗಿ ಮಾಡುವುದು. ಕಾಶಗಾರ್ ಇಲ್ಲವೇ ಸಾರೋಜೇವೋಗಳ ಮುಸಲ್ಮಾನ ಬಂಧುಗಳು ವಾಸಿಸುವ ಸ್ಥಳಗಳಲ್ಲಿ ಪ್ರಖರವಾದ ಬರ ಬಿದ್ದಿರಲಿ, ಸರ್ವನಾಶ ಮಾಡುವ ಘೋರ ಅಗ್ನಿ ದುರಂತವಿರಲಿ, ದಿಲ್ಲಿಯಲ್ಲಿ ಇಲ್ಲವೇ ಕೈರೋದಲ್ಲಿ ವಾಸಿಸುವ ಮುಸಲ್ಮಾನರಿಂದ ತಕ್ಷಣವೇ ಅನುಕಂಪವನ್ನು ವಾಸ್ತವಿಕ ನೆರವನ್ನೂ ಹೇರಳವಾಗಿ ತಂದುಕೊಡುವುದು ಇಸ್ಲಾಮ್ ಧರ್ಮದ ನಿಜವಾದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಒಗ್ಗಟ್ಟು ನಿರಂತರ ವರ್ಧಿಸತಕ್ಕದ್ದು. ಏಕೆಂದರೆ ಅದು ಪ್ರವಾದಿಯ ಅನುಯಾಯಿಗಳಿಗೆ ಅವರ ಅಂತರಾತ್ಮನ ಜೀವನದ ತಳಹದಿಯಾಗಿದೆ.''**

ಈ ಆಧ್ಯಾತ್ಮಿಕ ಇಸ್ಲಾಮ್ ಧರ್ಮಪರ ಆಚರಣೆಯು ಒಂದು ವೇಳೆ ಇಸ್ಲಾಮ್ ಪರವಾದ ರಾಜಕೀಯ ವ್ಯವಹಾರದಲ್ಲಿಯೂ ಪ್ರಕಟವಾಗಲು ತವಕಿಸುತ್ತಿದ್ದರೆ, ಅದು ಸಹಜವಾದುದಲ್ಲವೆಂದು ಹೇಳಲಿಕ್ಕೆ ಸಾಧ್ಯವಿಲ್ಲ. ಆಗಾಖಾನ್ ಅವರು ಈ ಕೆಳಗೆ ಉಲ್ಲೇಖಿಸಿದಂತೆ ಹೇಳುವಾಗ, ಅವರ ಮನಸ್ಸಿನಲ್ಲಿ ಬಹುಶಃ ಇದೇ ಭಾವನೆ ಇದ್ದಿರಬೇಕೆಂದು ಕಾಣುತ್ತದೆ.*

---

೧. ಇಂಡಿಯಾ ಇನ್ ಟ್ರ್ಯಾಂಜಿಶನ್, ಪುಟ ೧೫೭.

* ಇಂಡಿಯಾ ಇನ್ ಟ್ರ್ಯಾಂಜಿಶನ್, ಪುಟ ೧೫೭.

‘‘ಪರ್ಶಿಯಾ, ಅಫಘಾನಿಸ್ತಾನ್ ಮತ್ತು ಬಹುಶಃ ಅರಬಸ್ಥಾನ್ ಇವುಗಳು, ತಕ್ಷಣವಾಗಲಿ, ತಡವಾಗಿಯೇ ಆಗಲಿ, ಯಾವುದೇ ದೊಡ್ಡ ಭೂಖಂಡ ಪ್ರಭುತ್ವದ (ಕಾಂಟಿನೆಂಟಲ್ ಪವರ್)– ಅದು ಜರ್ಮನಿಯಾಗಬಹುದು, ಇಲ್ಲವೇ ರಷಿಯಾ ವಿಭಜಿತವಾದ ನಂತರ ರೂಪಗೊಳ್ಳುವ ಅಧಿಪತ್ಯವಾಗಬಹುದು, ಇಲ್ಲವೇ ಅತ್ಯಂತ ಆತ್ಮೀಯ ಆಪ್ತ–ಸಂಬಂಧ ಹೊಂದಿದ ಭಾರತ ಚಕ್ರಾಧಿಪತ್ಯವಾಗಬಹುದು– ಕಕ್ಷೆಯಲ್ಲಿ ಒಂದಾಗಿ ಬೆಳೆದು ಬಾಳತಕ್ಕದ್ದೆಂಬುದನ್ನು ಅಂಗೀಕರಿಸುವುದು ಭಾರತೀಯ ದೇಶಭಕ್ತರಿಗೆ ಬಿಟ್ಟ ವಿಷಯವಾಗಿದೆ. ಸಣ್ಣ ರಾಜ್ಯಗಳು ಬಲಶಾಲಿಯಾದ ನೆರೆಯ ರಾಜ್ಯಗಳೊಡನೆ ಸಮೀಪದ ಸಂಬಂಧ ಹೊಂದುವಂತೆ ಪ್ರೇರೇಪಿಸುವ ಜಾಗತಿಕ ಶಕ್ತಿಗಳು ಇಲ್ಲಿಯವರೆಗೆ ಯೂರೋಪ್ ಖಂಡದಲ್ಲಿ ಹೆಚ್ಚಾಗಿ ಕಾಣಿಸಿಕೊಂಡಿವೆಯಾದರೂ, ಇನ್ನು ಮೇಲೆ ಏಶಿಯಾ ಖಂಡದಲ್ಲಿಯೂ ಕೂಡ ತಮ್ಮ ಅಸ್ತಿತ್ವ ಅನಿವಾರ್ಯವಾಗಿದೆ ಎಂಬುದನ್ನು ಇತರರು ತಿಳಿಯುವಂತೆ ಮಾಡಬಹುದು. ಬಲಾಢ್ಯ ಹಾಗೂ ಬಹುಶಃ ವಿರೋಧಿಗಳಾದ ನೆರೆಯ ರಾಷ್ಟ್ರಗಳು ತನ್ನ ಮೇಲೆ ಕಣ್ಣಿಡುವ ಸಂಭಾವ್ಯತೆಯನ್ನೂ, ಅದರ ಫಲಸ್ವರೂಪವಾಗಿ ತನಗೊದಗಬಹುದಾದ ಅತ್ಯಧಿಕ ಸೈನ್ಯ ವ್ಯವಸ್ಥೆಯ ಭಾರವನ್ನೂ ಒಪ್ಪಿಕೊಳ್ಳುತ್ತಿದ್ದರೆ, ಭಾರತವು ತನ್ನ ನೆರೆಯ ಮುಸ್ಲಿಮ್ ದೇಶಗಳನ್ನು ಪರಸ್ಪರ ಹಿತರಕ್ಷಣೆ ಹಾಗೂ ಸದ್ಭಾವನೆಯ ಬಂಧನಗಳ ಆಧಾರದ ಮೇಲೆ ತನ್ನೆಡೆಗೆ ಆಕರ್ಷಿಸಲು ಅಲಕ್ಷ್ಯ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

‘‘ಒಂದೇ ವಾಕ್ಯದಲ್ಲಿ ಹೇಳಬೇಕೆಂದರೆ, ಸಮೃದ್ಧ ಹಾಗೂ ಅಭಿವೃದ್ಧಿಶೀಲ ಸಂಘಟನೆಯ ಮಾರ್ಗವು ಭಾರತ ಒಕ್ಕೂಟದ ಆಧಾರದ ಮೇಲೆ ಇರತಕ್ಕದ್ದಾಗಿದ್ದು, ಅದರ ಪ್ರತಿಯೊಂದು ಸದಸ್ಯ ದೇಶವೂ ತನ್ನ ವೈಯಕ್ತಿಕ ಹಕ್ಕುಗಳನ್ನು ನಿರ್ವಹಿಸಲು ಸಮರ್ಥವಾಗಿರಬೇಕು; ತನ್ನ ಐತಿಹಾಸಿಕ ವೈಶಿಷ್ಟ್ಯಗಳನ್ನೂ ಸಹಜವಾದ ಪ್ರಯೋಜನಗಳನ್ನೂ ಕಾಪಾಡಿಕೊಳ್ಳುವಂತಿರಬೇಕು; ಹಾಗಿದ್ದೂ ಸಾಮೂಹಿಕ ರಕ್ಷಣಾ ವ್ಯವಸ್ಥೆ, ಪರದೇಶಗಳಿಂದ ಒದಗಬಹುದಾದ ತೊಂದರೆಗಳಿಂದ ತಾವು ಸುರಕ್ಷಿತವಾಗಿರಲು ಕೇಂದ್ರೀಕೃತ ಪ್ರಯತ್ನ, ಬಲಿಷ್ಠ ದೇಶಗಳು ಆರ್ಥಿಕ ವ್ಯವಹಾರ ದುರುಪಯೋಗಪಡಿಸುವುದನ್ನು ನಿಯಂತ್ರಿಸುವ ಸಂಯೋಜನೆ– ಇವುಗಳನ್ನು ಹೊಂದಿರಬೇಕು. ಇಂಥ ಸಂಯುಕ್ತ ಭಾರತವು (ಫೆಡರಲ್ ಇಂಡಿಯಾ) ಸಿಲೋನ್ (ಶ್ರೀಲಂಕಾ) ದೇಶವು ಕೂಡಲೇ ತನ್ನ ನಿಜವಾದ ಮಾತೃದೇವತೆಯ ಬಾಹುಬಂಧನಕ್ಕೆ ಒಳಪಡುವಂತೆ ಮಾಡುವುದಲ್ಲದೇ ನಾವು ಸೂಚಿಸಿರುವ ಇತರ ಪರಿಣಾಮಗಳು ಗೋಚರವಾಗತೊಡಗುವವು. ನ್ಯಾಯ ಹಾಗೂ ಸ್ವಾತಂತ್ರ್ಯಗಳ ಆಧಾರದ ಮೇಲೆ ಮತ್ತು ಪ್ರತಿಯೊಂದು ಜನಾಂಗವನ್ನು ಪ್ರತಿಯೊಂದು ಧರ್ಮವನ್ನು, ಪ್ರತಿಯೊಂದು ಐತಿಹಾಸಿಕ ಘಟಕವನ್ನು ಅಂಗೀಕರಿಸುವುದರ ಮೂಲಕ, ನಾವು ಅತ್ಯಂತ ವ್ಯಾಪಕ ಹಾಗೂ ಆಳವಾದ ತಳಹದಿಯ ಮೇಲೆ ‘ಬೃಹತ್ ಸಂಯುಕ್ತ ದಕ್ಷಿಣ ಏಶಿಯಾ ರಾಷ್ಟ್ರ ಸಂಘ’ (ಗ್ರೇಟ್ ಸೌಥ್ ಏಶಿಯಾಟಿಕ್ ಫೆಡರೇಶನ್)ವನ್ನು ಕಟ್ಟಬಹುದು.

‘‘ಪರ್ಶಿಯಾ ಮತ್ತು ಆಫ್ಘಾನಿಸ್ಥಾನ್ ದೇಶಗಳು ಹೊಸ ಕಾಲ ಧರ್ಮಕ್ಕನುಗುಣವಾಗಿ ಹಮ್ಮಿಕೊಳ್ಳುವ ತಮ್ಮ ಅಭಿವೃದ್ಧಿ ಕಾರ್ಯಗಳಿಗಾಗಿ ಸಹಾಯ ಸಲ್ಲಿಸುವ ಪ್ರಾಮಾಣಿಕ ನೀತಿಯನ್ನು ಅನುಸರಿಸಿದರೆ ಭಾರತಕ್ಕೆ ವಾಯುವ್ಯ (ನಾರ್ಥ್–ವೆಸ್ಟ್) ದಿಕ್ಕಿನಲ್ಲಿ ಜರ್ಮನಿ, ಯುಗೋಸ್ಲಾವ್, ತರ್ಕಸ್ಥಾನ್ ಇಲ್ಲವೇ ಮಂಗೋಲ್ ದೇಶಗಳು ನಾಶಪಡಿಸಲು ಎಂದೂ ನಿರೀಕ್ಷಿಸಲಾಗದಂಥ ಎರಡು ನೈಸರ್ಗಿಕ ಭದ್ರಕೋಟೆಗಳು ಪ್ರಾಪ್ತವಾದಂತಾಗುವವು. ಪ್ರತಿಯೊಂದು ಪ್ರಾಂತಕ್ಕೂ ನಿಜವಾದ ಸ್ವಾಯತ್ತತೆ, ಸಂಸ್ಥಾನಗಳಿಗೆ ಆಂತರಿಕ ವ್ಯವಹಾರಗಳಲ್ಲಿ ಸ್ವಾತಂತ್ರ್ಯದ ಭರವಸೆ, ನಿಜಾಮರ ಅಧೀನದಲ್ಲಿ ಬೇರಾರ್ ಸಹಿತವಾದ ಹೈದರಾಬಾದ್

**ಸಂಸ್ಥಾನಕ್ಕೆ ಉನ್ಮುಕ್ತ ಪುನರುತ್ಥಾನ– ಇವುಗಳಿಗೆ ಅವಕಾಶ ಕಲ್ಪಿಸಿ, ಅತ್ಯಂತ ಸುವ್ಯವಸ್ಥೆಯ ಸಂಯುಕ್ತ ರಾಜ್ಯಗಳ ಕೇಂದ್ರ ಪ್ರಭುತ್ವದ ಆದರ್ಶದ ಮಾದರಿಯನ್ನು ಒದಗಿಸುವ ಭಾರತದ ಅಧಿಪತ್ಯಕ್ಕೆ ಸಹಜವಾಗಿಯೇ ಅವೆರಡೂ ದೇಶಗಳು ಆಕರ್ಷಿತಗೊಳ್ಳುವವು. ಭಾರತದಲ್ಲಿ ಆ ದೇಶಗಳು ಸ್ವಾತಂತ್ರ್ಯ ಮತ್ತು ಕಾಯಿದೇ ಸುವ್ಯವಸ್ಥೆ, ಸ್ವಾಯತ್ತತೆ ಮತ್ತು ಸಾರ್ವಭೌಮಿಕ ಕೇಂದ್ರಪ್ರಭುತ್ವವನ್ನು ಕೂಡ ಕಾಣುವವಲ್ಲದೇ, ಸೂರ್ಯನು ಎಂದೂ ಯಾವ ಸಾಮ್ರಾಜ್ಯದ ಮೇಲೆ ಮುಳುಗುವುದಿಲ್ಲವೋ ಆ ಬೃಹತ್ ಚಕ್ರಾಧಿಪತ್ಯದ ವಿಪುಲ ಹಾಗೂ ನಿಸ್ಸೀಮ ಬೆಂಬಲ ಮತ್ತು ಸದ್ಭಾವನೆಯ ಪೋಷಣೆಯುಳ್ಳ ಆಂತರಿಕ ಸ್ವರಾಜ್ಯದ ಮುಂದುವರಿಕೆಯ ಭರವಸೆಯನ್ನೀಯುವ ಒಕ್ಕೂಟದ ಸೌಲಭ್ಯವನ್ನು ಮೆಚ್ಚಿಕೊಳ್ಳುವವು. ಮೆಸೋಪೊಟ್ಯಾಮಿಯಾ ಮತ್ತು ಅರೇಬಿಯಾ ದೇಶಗಳ ಬಗೆಗೆ ಬ್ರಿಟಿಷರು ಹೊಂದಿರುವ ಸಂಬಂಧವು ಯಾವುದೇ ಹೆಸರನ್ನು ಪಡೆದಿದ್ದರೂ ಕೂಡ ನಾನು ಪ್ರತಿಪಾದಿಸುವ ನೀತಿಯು ಅದು ಹೆಚ್ಚು ಸಮರ್ಥವಾಗುವಂತೆ ಮಾಡುವುದು.''**

ದಕ್ಷಿಣ ಏಶಿಯಾ ಸಂಯುಕ್ತ ರಾಜ್ಯ ಸಂಘ (ದಿ ಸೌಥ್ ಏಶಿಯಾಟಿಕ್ ಫೆಡರೇಶನ್)ವು ಭಾರತದ ಒಳಿತಿಗಿಂತಲೂ ಹೆಚ್ಚಾಗಿ ಅರೇಬಿಯಾ, ಮೆಸೋಪೊಟ್ಯಾಮಿಯಾ ಮತ್ತು ಆಫ್ಘಾನಿಸ್ತಾನ್‌ಗಳಂಥ ಮುಸ್ಲಿಮ್ ದೇಶಗಳ ಒಳಿತಿಗಾಗಿ ಇದ್ದಿತು.* ಭಾರತವನ್ನು ಬಿಟ್ಟು ಇತರ ಮುಸ್ಲಿಮ್ ದೇಶಗಳ ಹಿತಚಿಂತನೆಯಿಂದಲೇ ಭಾರತೀಯ ಮುಸಲ್ಮಾನರ ವಿಚಾರಗಳು ಅತ್ಯಂತ ಸಹಜವಾಗಿ ತುಂಬಿಕೊಂಡಿವೆ ಎಂಬುದನ್ನು ಇದು ತೋರಿಸುತ್ತದೆ.

ಅಧಿಕಾರಕ್ಕೆ ವಿಧೇಯತೆಯನ್ನು ತೋರಿಸುವ ಆಧಾರದ ಮೇಲೆ ಸರಕಾರದ ಅಸ್ತಿತ್ವವಿದೆ. ಹಿಂದೂಗಳ ಮತ್ತು ಮುಸಲ್ಮಾನರ ಸ್ವರಾಜ್ಯವನ್ನು ಸ್ಥಾಪಿಸಲು ಆತುರರಾಗಿರುವವರು, ಯಾವ ತತ್ತ್ವದ ಮೇಲೆ ಇಂಥ ವಿಧೇಯತೆ ಅವಲಂಬಿತವಾಗಿದೆ ಹಾಗೂ ಸಾಮಾನ್ಯ ಸ್ಥಿತಿಯಲ್ಲಿ ಮತ್ತು ಆಪತ್ಕಾಲದಲ್ಲಿ ಇಂಥ ವಿಧೇಯತೆ ಹೇಗೆ ಅಭಿವ್ಯಕ್ತಗೊಳ್ಳುವುದು ಎಂಬುದನ್ನು ತಿಳಿದುಕೊಳ್ಳುವ ವ್ಯವಧಾನ ಉಳ್ಳವರಾಗಿರುವುದಿಲ್ಲ. ಇದು ಅತ್ಯಂತ ಮಹತ್ವದ ಪ್ರಶ್ನೆಯಾಗಿದೆ. ಏಕೆಂದರೆ, ವಿಧೇಯತೆ ಕುಸಿದ ಸಂದರ್ಭದಲ್ಲಿ ಸ್ವರಾಜ್ಯವೆಂದರೆ ಕೂಡಿ ಕೆಲಸ ಮಾಡುವುದಲ್ಲದೆ, ಕೈಕೆಳಗೆ ಕೆಲಸ ಮಾಡುವುದಿಲ್ಲ. ಆದರ್ಶದ ಅರ್ಥದಲ್ಲಿ ಅದು ಹಾಗಿರಬಹುದು.

---

* ಈ ದಕ್ಷಿಣ ಏಶಿಯಾ ಸಂಯುಕ್ತ ರಾಷ್ಟ್ರ ಸಂಘವು ಅಸ್ತಿತ್ವದಲ್ಲಿ ಬಂದಿದ್ದರೆ ಎಷ್ಟೊಂದು ಭಯಂಕರವೆನಿಸುತ್ತಿತ್ತು; ಹಿಂದೂ ಜನರು ತುಂಬಾ ಪೀಡಿತ ಅಲ್ಪಸಂಖ್ಯಾತರ ಸ್ಥಾನಮಾನಕ್ಕೆ ಇಳಿಯುತ್ತಿದ್ದರು. 'ದಿ ಇಂಡಿಯನ್ ಆ್ಯನ್ಯುಅಲ್ ರಿಜಿಸ್ಟರ್' ಹೀಗೆ ಹೇಳುತ್ತದೆ: "ಭಾರತದ ಮುಸ್ಲಿಮ್ ಸಮಾಜದಲ್ಲಿ ಬ್ರಿಟಿಶ್ ಸಾರ್ವಭೌಮತ್ವವನ್ನು ಬೆಂಬಲಿಸುವ ಜನರು ಆಂಗ್ಲ–ಮುಸ್ಲಿಮ್ ಬಾಂಧವ್ಯವನ್ನು ಬಲಪಡಿಸಲು ಸಂಘವೊಂದನ್ನು ರೂಪಿಸುವಲ್ಲಿ ತೀವ್ರ ಪ್ರಯತ್ನಶೀಲರಾಗಿದ್ದಾರೆ. ದಕ್ಷಿಣ ಏಶಿಯಾ ಖಂಡದಲ್ಲಿ ಅರಬ್ ದೇಶದಿಂದ ಮಲಯ ದ್ವೀಪ ಸಮೂಹದವರೆಗೆ ಇದರ ವಿಸ್ತಾರವಿರಬೇಕೆಂಬುದು ಅವರ ಅಪೇಕ್ಷೆ. ಅಲ್ಲಿ ಈಗ ಮುಸಲ್ಮಾನರು ವ್ಯಾಪಾರದ ಮಳಿಗೆಗಳಲ್ಲಿ ಕಿರಿಯ ಪಾಲುಗಾರರಾಗಿದ್ದು, ಸದ್ಯೋಭವಿಷ್ಯದಲ್ಲಿ ಹಿರಿಯ ಪಾಲುಗಾರರಾಗುವ ಅಪೇಕ್ಷೆಯುಳ್ಳವರಾಗಿದ್ದಾರೆ. ಯುದ್ಧ ಕಾಲದಲ್ಲಿ ಮಹಾಮಾನ್ಯ ಆಗಾಖಾನ್ ಅವರು ಪ್ರಕಟಿಸಿದ "ಇಂಡಿಯಾ ಇನ್ ಟ್ರ್ಯಾಂಜಿಶನ್ (ಸಂಕ್ರಮಣ ಕಾಲದ ಭಾರತ)" ಎಂಬ ಗ್ರಂಥದಲ್ಲಿ ನಾವು ಇಂಥ ಯೋಜನೆಯ ಸೂಚನೆಯನ್ನು ಹುಡುಕತಕ್ಕದ್ದು, ಈ ಯೋಜನೆಯ ಪ್ರಕಾರ ಭಾರತವು ಅಧೀನ ಘಟಕವಾಗಿ ಇರಬಹುದಾದ 'ದಕ್ಷಿಣ ಏಶಿಯಾ ಸಂಯುಕ್ತ ರಾಷ್ಟ್ರ ಸಂಘವೊಂದನ್ನು' ಸ್ಥಾಪಿಸುವ ಉದ್ದೇಶವಿದ್ದಿತು. ಯುದ್ಧಾನಂತರ ವಿನ್ ಸ್ಟನ್ ಚರ್ಚಿಲ್ ಮಹನೀಯರು ಬ್ರಿಟಿಷ್ ಮಂತ್ರಿ ಮಂಡಳದಲ್ಲಿ ವಸಾಹತುಗಳಿಗಾಗಿ 'ಸೆಕ್ರೆಟರಿ ಆಫ್ ಸ್ಟೇಟ್' ಆಗಿದ್ದಾಗ, ಆಗಲೇ ಸಿದ್ಧವಾಗಿಯೇ ಇದ್ದ 'ಮಧ್ಯಪೂರ್ವ ಸಾಮ್ರಾಜ್ಯ'ದ (ಆಫ್ ಎ ಮಿಡಲ್ ಈಸ್ಟರ್ನ್ ಎಂಪೈರ್) ಯೋಜನೆಯೊಂದನ್ನು 'ಮಧ್ಯಪೂರ್ವ ಇಲಾಖೆ'ಯ ಪತ್ರಾಗಾರ(ಅರ್ಕೈವ್ಸ್)ದಲ್ಲಿ ಕಂಡರು. –'ಇಂಡಿಯಾ ಇನ್ ಹೋಮ್ ಪಾಲಿಸಿ', '೯೩೮, ಸಂಪುಟ ೨, ಪರಿಚ್ಛೇದ, ಪುಟ ೪೮.

ಆದರೆ ವ್ಯಾವಹಾರಿಕ ಮತ್ತು ನಿತ್ಯ ಜೀವನದ ಕ್ರಮದ ಈ ಜಗತ್ತಿನಲ್ಲಿ, ಒಂದೇ ಪ್ರಾತಿನಿಧಿಕ ಪ್ರಭುತ್ವದ ಅಡಿಯಲ್ಲಿ ತರಲಾದ ವಿವಿಧ ಶಕ್ತಿಗಳು ಸಂಖ್ಯೆಯಲ್ಲಿ ಅಸಮವಾಗಿದ್ದರೆ, ಸಣ್ಣ ಘಟಕವು ದೊಡ್ಡ ಘಟಕದ ಅಡಿಯಲ್ಲಿ ಕಾರ್ಯ ನಿರ್ವಹಿಸಬೇಕಾಗುವುದಲ್ಲದೇ, ಹಾಗೆ ಅದು ದೊಡ್ಡ ಘಟಕ(ಸೆಕ್ಷನ್)ದ ಅಡಿಯಲ್ಲಿ ಕೆಲಸ ಮಾಡುತ್ತಿದೆಯೋ ಇಲ್ಲವೋ ಎಂಬುದು, ಅದು ಎಷ್ಟರಮಟ್ಟಿಗೆ ಪ್ರಮುಖ ವಿಭಾಗದ ಪ್ರಭುತ್ವದ ಅಧಿಕಾರಕ್ಕೆ ಅಧೀನವಾಗಿ ನಡೆಯುತ್ತಿದೆ ಎಂಬುದರ ಮೇಲೆ ಅವಲಂಬಿತವಾಗಿದೆ. ಈ ವಿಷಯವು ಎಷ್ಟರ ಮಟ್ಟಿಗೆ ಸ್ವರಾಜ್ಯದ ಯಶಸ್ಸಿಗೆ ಅವಶ್ಯವೆನಿಸಿದೆ ಎಂದರೆ, ಬ್ಯಾಲ್ ಫೋರ್ ಅವರು ಪಕ್ಷಗಳು ಮೂಲಭೂತವಾಗಿ ಏಕತೆಯನ್ನು ಪಡೆದಿರುವುದರ ಮೇಲೆ ಅದರ ಯಶಸ್ಸು ಅವಲಂಬಿತವಾಗಿದೆ ಎಂದು ಹೇಳುವಾಗ ಸತ್ಯದ ಒಂದು ಅಂಶವನ್ನು ಮಾತ್ರ ಹೇಳಿದ್ದಾರೆಂದು ಭಾವಿಸಬಹುದಾಗಿದೆ. ಸ್ವರಾಜ್ಯದ ಯಾವುದೇ ಯೋಜನೆಯು ಯಶಸ್ವಿಯಾಗಬೇಕಾದರೆ ಸರಕಾರದ ಅಧಿಕಾರಕ್ಕೆ ವಿಧೇಯತೆಯನ್ನು ತೋರಿಸುವುದು ಅಷ್ಟೇ ಮಹತ್ವದ ಅಂಶವಾಗಿದೆ ಎಂಬುದನ್ನು ಗಮನಿಸಲು ಆತನಿಗೆ ಸಾಧ್ಯವಾಗದೇ ಹೋಗಿದೆ.

ಪ್ರಜಾಸತ್ತಾತ್ಮಕ ಪ್ರಭುತ್ವದ ಯಶಸ್ವೀ ನಿರ್ವಹಣೆಗಾಗಿ ಅವಶ್ಯವಾಗಿ ಅಸ್ತಿತ್ವದಲ್ಲಿರಬೇಕಾದ ಈ ಎರಡನೆಯ ಕರಾರಿನ ಪ್ರಾಮುಖ್ಯತೆಯನ್ನು ಕುರಿತು ಜೇಮ್ಸ್ ಬ್ರೈಸ್ ಮಹನೀಯರು ಚರ್ಚಿಸಿದ್ದಾರೆ.* ರಾಜಕೀಯ ಏಕತೆಯ ತಳಹದಿಯನ್ನು ಕುರಿತು ಹೇಳುವಾಗ, ಅಧಿಪತ್ಯವನ್ನು ಕಟ್ಟುವುದರಲ್ಲಿ ಸೈನಿಕ ಶಕ್ತಿ ಬಹಳಷ್ಟು ಉಪಯೋಗಕ್ಕೆ ಬಂದಿರಬಹುದಾದರೂ, ಅನೇಕ ಕಾರಣಗಳಲ್ಲಿ ಸೈನ್ಯಶಕ್ತಿಯೂ ಒಂದು ಕಾರಣವೆನ್ನಿಸಿದೆ. ಅಲ್ಲದೇ, ಅದು ಅತೀ ಮುಖ್ಯ ಕಾರಣವೇನೂ ಆಗಲಾರದು. ರಾಜಕೀಯ ಸಂಘಟನೆಗಳನ್ನು ಸೃಷ್ಟಿಸಲು, ರೂಪಿಸಲು, ವಿಸ್ತರಿಸಲು ಮತ್ತು ಒಂದನ್ನೊಂದನ್ನು ಜೋಡಿಸಲು ಸೈನ್ಯಶಕ್ತಿಗಿಂತ ಅಧಿಕ ಮುಖ್ಯವಾದುದೆಂದರೆ ಆಜ್ಞಾಪಾಲನೆ. ಒಂದು ಪ್ರಭುತ್ವಕ್ಕೆ ವಿಧೇಯತೆಯನ್ನು ತಾವಾಗಿಯೇ ತೋರಿಸುವ ಮತ್ತು ಅದರ ಆಜ್ಞೆಗಳನ್ನು ಅನುಶಾಸನಗಳನ್ನು ಮಾನ್ಯ ಮಾಡಿ ಅನುಸರಿಸುವ ಪ್ರವೃತ್ತಿಯು ನಾಗರಿಕರ ಕೆಲವು ವೈಯಕ್ತಿಕ ಹಾಗೂ ಸಾಮುದಾಯಿಕ ಮಾನಸಿಕ ಗುಣಗಳ ಮೇಲೆ ಅವಲಂಬಿಸಿದೆ. ಬ್ರೈಸ್ ಅವರ ಪ್ರಕಾರ ಆಲಸ್ಯ, ದಾಕ್ಷಿಣ್ಯ, ಅನುಕಂಪ, ಭಯ ಮತ್ತು ವಿವೇಕ– ಈ ಗುಣಗಳು ಒಂದೇ ವಿಧದ ಮೌಲ್ಯವನ್ನು ಹೊಂದಿರುವುದಿಲ್ಲ. ಆದರೆ ಅವುಗಳು ತಮ್ಮ ಪ್ರಾಮುಖ್ಯತೆಯಲ್ಲಿ ನಿಶ್ಚಿತವಾಗಿಯೂ ಪರಸ್ಪರ ಸಂಬಂಧವನ್ನು ಹೊಂದಿದ್ದು, ಆಜ್ಞಾಪಾಲನೆಯ ಮನೋಧರ್ಮವನ್ನು ಸೃಷ್ಟಿಸಲು ಕಾರಣೀಭೂತ ಆಗಿವೆ. ಬ್ರೈಸ್ ಅವರು ಸೂತ್ರೀಕರಿಸಿದ ಪ್ರಕಾರ, ಆಜ್ಞಾಪಾಲನೆಯ ಒಟ್ಟು ಮೊತ್ತವನ್ನು ವಿಶ್ಲೇಷಿಸಿದರೆ ಪ್ರತಿಶತಃ ಪ್ರಮಾಣವು ಆಲಸ್ಯ ಮತ್ತು ದಾಕ್ಷಿಣ್ಯ ಇಲ್ಲವೇ ಅನುಕಂಪಗಳಿಗೆ ಇರುವುದಕ್ಕಿಂತಲೂ ಭಯ ಮತ್ತು ವಿವೇಕಗಳಿಗೆ ಅನುಕ್ರಮರಾಗಿ ತುಂಬ ಕಡಿಮೆಯಾಗಿದೆ. ಈ ದೃಷ್ಟಿಕೋನದ ಪ್ರಕಾರ ದಾಕ್ಷಿಣ್ಯ ಇಲ್ಲವೇ ಅನುಕಂಪ ಈ ಎರಡು ಗುಣಗಳು ಅತ್ಯಧಿಕ ಶಕ್ತಿಶಾಲಿಯಾಗಿದ್ದು ಪ್ರಭುತ್ವದ ಸ್ವಾಮ್ಯಕ್ಕೆ ಜನರು ಅಧೀನರಾಗಿರುವತ್ತ ಒಲವನ್ನು ಹುಟ್ಟಿಸುತ್ತವೆ.

ರಾಷ್ಟ್ರದ ಮೂಲಭೂತ ತತ್ತ್ವಗಳ ಬಗೆಗೆ ರಾಜಕೀಯ ಪಕ್ಷಗಳಲ್ಲಿ ಏಕಾಭಿಪ್ರಾಯ– ಒಗ್ಗಟ್ಟು– ಎಷ್ಟು ಮುಖ್ಯವೋ, ಸರಕಾರದ ಭದ್ರತೆಗಾಗಿ, ಸರಕಾರದ ಸಾರ್ವಭೌಮಾಧಿಕಾರಕ್ಕೆ ತಾವಾಗಿಯೇ ವಿಧೇಯರಾಗಿ ನಡೆದುಕೊಳ್ಳುವ ಮನಸ್ಸು ಕೂಡ ಅವುಗಳಿಗೆ ಅಷ್ಟೇ ಮುಖ್ಯವಾದುದು. ರಾಷ್ಟ್ರವನ್ನು ರಕ್ಷಣೆ ಮಾಡಿಕೊಂಡು ಹೋಗಲಿಕ್ಕೆ ವಿಧೇಯತೆಯ ಮಹತ್ವವನ್ನು ಪ್ರಶ್ನಿಸುವುದು ಯಾವುದೇ ಸ್ವಸ್ಥಬುದ್ಧಿಯ ವ್ಯಕ್ತಿಗೆ ಅಸಾಧ್ಯವಾದುದು.

---

* ಸ್ಟಡೀಸ್ ಇನ್ ಹಿಸ್ಟರಿ ಆ್ಯಂಡ್ ಜ್ಯೂರಿಸ್ಪ್ರೂಡೆನ್ಸ್, ಸಂಪುಟ ೧, ಪ್ರಬಂಧ ೧.

ನಾಗರಿಕ ಅವಿಧೇಯತೆ (ಸಿವಿಲ್ ಡಿಸ್‌ಒಬಿಡಿಯನ್ಸ್) ಇಲ್ಲವೇ ನಾಗರಿಕ ಅಸಹಕಾರದಲ್ಲಿ ನಂಬಿಕೆಯನ್ನಿಡುವುದು ಅರಾಜಕತೆಯಲ್ಲಿ ನಂಬಿಕೆಯನ್ನಿಟ್ಟಂತೆಯೇ ಆಗುತ್ತದೆ.

ಹಿಂದೂ ಜನರಿಂದ ತುಂಬಿದ ಹಾಗೂ ಅವರಿಂದ ನಿಯಂತ್ರಿಸಲ್ಪಟ್ಟ ಒಂದು ಸರಕಾರದ ಅಧಿಕಾರಕ್ಕೆ ಮುಸಲ್ಮಾನರು ಎಷ್ಟರಮಟ್ಟಿಗೆ ವಿಧೇಯರಾಗಿರಬಲ್ಲರು? ಈ ಪ್ರಶ್ನೆಗೆ ಉತ್ತರಕ್ಕಾಗಿ ಬಹಳಷ್ಟು ಹುಡುಕುವ ಅವಶ್ಯಕತೆ ಇಲ್ಲ. ಮುಸಲ್ಮಾನರಿಗೆ ಹಿಂದೂ ಜನರು 'ಕಾಫಿರ್' ಎನಿಸುವರು.* ಒಬ್ಬ ಕಾಫಿರನು ಗೌರವ ತೋರಿಸಲು ಅರ್ಹ ವ್ಯಕ್ತಿಯಲ್ಲ. ಅವನು ನೀಚನಾಗಿ ಹುಟ್ಟಿ ಸ್ಥಾನಮಾನರಹಿತನಾಗಿರುವನು. ಆದುದರಿಂದಲೇ ಒಬ್ಬ ಕಾಫಿರನು ಆಳುತ್ತಿರುವ ದೇಶವು ಮುಸಲ್ಮಾನನೊಬ್ಬನಿಗೆ 'ದಾರುಲ್ ಹರ್ಬ್' (ಅಬೋಡ್ ಆಫ್ ವಾರ್) ಎನ್ನಿಸುವುದು. ಹೀಗಿರುವಾಗ, ಹಿಂದೂ ಜನರ ಸರಕಾರಕ್ಕೆ ಮುಸಲ್ಮಾನರು ವಿಧೇಯರಾಗಿರುವುದಿಲ್ಲವೆಂಬುದನ್ನು ಸಿದ್ಧಪಡಿಸಲು ಇನ್ನೂ ಹೆಚ್ಚಿನ ಪುರಾವೆಗಳ ಅವಶ್ಯಕತೆ ಇರುವುದಿಲ್ಲ. ಒಂದು ಸರಕಾರಕ್ಕೆ ವಿಧೇಯರಾಗಿ ನಡೆದುಕೊಳ್ಳಲು ಇರಬೇಕಾದ ಮೂಲಭೂತ ಗುಣಗಳೆನ್ನಿಸಿದ 'ದಾಕ್ಷಿಣ್ಯ' ಮತ್ತು 'ಅನುಕಂಪ' ಈ ಗುಣಗಳು ಸಹಜವಾಗಿ ಅಸ್ತಿತ್ವದಲ್ಲಿ ಇಲ್ಲ. ಇನ್ನು ಪುರಾವೆಗಳೇ ಬೇಕಾಗಿದ್ದರೆ ಅವುಗಳಿಗೆ ಕೊರತೆ ಏನೂ ಇಲ್ಲ. ಪುರಾವೆಗಳು ಎಷ್ಟು ವಿಪುಲವಾಗಿವೆ ಎಂದರೆ ಯಾವುದನ್ನು ಹಿಡಿಯಬೇಕು, ಯಾವುದನ್ನು ಬಿಡಬೇಕು ಎಂಬುದೇ ಸಮಸ್ಯೆಯಾಗುತ್ತದೆ.

ಖಿಲಾಫತ್ ಚಳವಳಿ ಘೋರವಾಗಿ ನಡೆಯುತ್ತಿರುವಾಗ ಮುಸಲ್ಮಾನರಿಗೆ ಹಿಂದೂ ಜನರು ಸಾಕಷ್ಟು ಸಹಾಯ ಮಾಡುತ್ತಿದ್ದರು; ಆದರೆ ಆಗ ಕೂಡ ಮುಸಲ್ಮಾನರು ಹೋಲಿಕೆಯಲ್ಲಿ ಹಿಂದೂ ಜನರು ತಮಗಿಂತ ನೀಚ ಹಾಗೂ ಅಧಮ ಜನಾಂಗಕ್ಕೆ ಸೇರಿದವರೆಂಬುದನ್ನು ಮರೆಯಲಿಲ್ಲ. 'ಇನಸಾಫ್' ಎನ್ನುವ ಖಿಲಾಫತ್ ಚಳವಳಿಯ ಪತ್ರಿಕೆಯಲ್ಲಿ ಒಬ್ಬ ಮುಸಲ್ಮಾನನ್ನು ಹೀಗೆ ಬರೆದಿರುವನು.[೧]

> **"ಸ್ವಾಮಿ ಮತ್ತು ಮಹಾತ್ಮಾ ಎಂಬುದರ ಅರ್ಥವೇನು? ಮುಸಲ್ಮಾನರು ತಮ್ಮ ಭಾಷಣದಲ್ಲಿ ಇಲ್ಲವೇ ಲೇಖನದಲ್ಲಿ ಮುಸ್ಲಿಮೇತರರನ್ನು ಕುರಿತು ಈ ಶಬ್ದಗಳನ್ನು ಉಪಯೋಗಿಸಬಹುದೇ? ಸ್ವಾಮಿ ಎಂದರೆ 'ಒಡೆಯ' ಮತ್ತು ಮಹಾತ್ಮಾ ಎಂದರೆ 'ಪರಮೋಚ್ಚ ಆಧ್ಯಾತ್ಮಿಕ ಸಾಮರ್ಥ್ಯವನ್ನು ಹೊಂದಿದವನು' ಎಂದು ಅರ್ಥ. ಇದು 'ರೂಹ-ಎ-ಅಜಮ್' ಎಂಬುದಕ್ಕೆ ಸಮಾನವಾದುದು ಮತ್ತು 'ಸರ್ವಾಧಿಕ ಆತ್ಮವೆನಿಸುವುದು."**

ಮುಸಲ್ಮಾನ ಆಧ್ಯಾತ್ಮಿಕ ಮಹಾಪುರುಷರು, ಮುಸಲ್ಮಾನೇತರರನ್ನು ಮುಸಲ್ಮಾನರು ಇಂಥ ಘನಗೌರವದ ಮತ್ತು ಅಧಿಕ ಮರ್ಯಾದೆಯ ಉಪಾಧಿಗಳಿಂದ ಸಂಬೋಧಿಸುವುದು ಕಾಯಿದೆ ಪ್ರಕಾರ ಸರಿಯಾದುದೇ ಎಂಬುದನ್ನು ಅಧಿಕೃತ 'ಫತ್ವಾ' ಮೂಲಕ ನಿರ್ಣಯಿಸಬೇಕೆಂದು ಆತನು ಹೇಳಿರುವನು.

ದಿಲ್ಲಿಯಲ್ಲಿ ಹಕೀಮ್ ಅಜಮಲ್ ಖಾನ್ ಅವರು ನಡೆಯಿಸುತ್ತಿರುವ 'ತಿಬ್ಬಿ ಕಾಲೇಜ್ ಆಫ್ ಯಾನಾನಿ ಮೆಡಿಸಿನ್' ಈ ಮಹಾವಿದ್ಯಾಲಯದಲ್ಲಿ ೧೯೨೪ನೆಯ ಇಸ್ವಿಯಲ್ಲಿ ಮಹಾತ್ಮಾ ಗಾಂಧೀಜಿಯವರು ಜೈಲಿನಿಂದ ಬಿಡುಗಡೆಯಾದಾಗ ಸಂತೋಷವನ್ನು ವ್ಯಕ್ತಮಾಡಲು ಸಮಾರಂಭವೊಂದನ್ನು ಏರ್ಪಡಿಸಲಾಯಿತು.

* 'ಕಾಫಿರ್' ಎಂದು ಕರೆಯಿಸಿಕೊಂಡಾಕ್ಷಣ ಮನಸ್ಸಿನಲ್ಲಿ ನೊಂದುಕೊಳ್ಳುವ ಹಕ್ಕು ಹಿಂದೂ ಜನರಿಗೆ ಇರುವುದಿಲ್ಲ. ಅವರು ಮುಸಲ್ಮಾನರನ್ನು ಮ್ಲೇಚ್ಛರೆಂದೇ ಸಂಬೋಧಿಸುವರು. ಮ್ಲೇಚ್ಛರೆಂದರೆ ಜೊತೆಗೆ ಸೇರಲು ಅನರ್ಹರು ಎಂದರ್ಥ.

೧. ದಿನಾಂಕ ೧೧.೩.೧೯೨೪ರ 'ಟೈಮ್ಸ್ ಆಫ್ ಇಂಡಿಯಾ' ದಿನಪತ್ರಿಕೆಯಲ್ಲಿ 'ಥ್ರೂ ಇಂಡಿಯನ್ ಆಯ್ಸ್' ಎಂಬ ಲೇಖನ ನೋಡಿ.

ಆಗ ನಡೆದ ಘಟನೆಯೊಂದು ಗಮನಾರ್ಹವಾಗಿದೆ.[೧] ಇದಕ್ಕೆ ಸಂಬಂಧಿಸಿದ ವರದಿಯ ಪ್ರಕಾರ, ಒಬ್ಬ ಹಿಂದೂ ವಿದ್ಯಾರ್ಥಿಯು ಮಹಾತ್ಮಾ ಗಾಂಧೀಜಿಯವರನ್ನು ಹಜರತ್ ಈಸಾ (ಜೀಸಸ್) ಅವರಿಗೆ ಹೋಲಿಸಿ ಮಾತನಾಡಿದನು. ಇದು ಮುಸಲ್ಮಾನರ ಭಾವನೆಗಳಿಗೆ ಉಂಟಾದ ಧರ್ಮದ್ರೋಹವೆಂದು ಬಗೆದು ಎಲ್ಲ ಮುಸಲ್ಮಾನ ವಿದ್ಯಾರ್ಥಿಗಳು ಕ್ರೋಧತಪ್ತರಾಗಿ ಗದ್ದಲ ಮಾಡಿದರಲ್ಲದೇ ಆ ಹಿಂದೂ ವಿದ್ಯಾರ್ಥಿಯನ್ನು ದಂಡಿಸಲು ಸಿದ್ಧರಾಗಿ ಬೆದರಿಸಿದರು. ಅಲ್ಲಿಯ ಮುಸಲ್ಮಾನ ಪ್ರೊಫೆಸರರೂ ಕೂಡ, ತಮ್ಮ ಭಾವನೆಗಳಿಗೆ ಉಂಟಾದ ಆಘಾತವನ್ನು ಪ್ರತಿಭಟಿಸುವ ಸಹಧರ್ಮೀಯರ ಜೊತೆಗೆ ಸೇರಿದರೆಂದು ವರದಿಯಾಗಿದೆ.

೧೯೨೩ನೆಯ ಇಸ್ವಿಯಲ್ಲಿ ಮೊಹಮ್ಮದ ಅಲಿ ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿದ್ದರು. ಈ ಸಂದರ್ಭದ ತಮ್ಮ ಭಾಷಣದಲ್ಲಿ ಅವರು ಗಾಂಧೀಜಿಯವರನ್ನು ಕುರಿತು ಈ ಕೆಳಗಿನಂತೆ ಹೇಳಿದರು:

> **"ಮಹಾತ್ಮಾಜಿ ಅವರ ಉಪದೇಶಗಳನ್ನು ಮತ್ತು ಇತ್ತೀಚೆಗೆ ಅವರ ವೈಯಕ್ತಿಕ ಕಷ್ಟದ ಅನುಭವಗಳನ್ನು ಜೀಸಸ್ಸನ (ಅವರ ಮೇಲೆ ಶಾಂತಿ ಇರಲಿ) ಉಪದೇಶ ಮತ್ತು ಕಷ್ಟದ ಅನುಭವಗಳಿಗೆ ಅನೇಕರು ಹೋಲಿಸಿದ್ದಾರೆ... ಯೇಸುವು ಜಗತ್ತಿನಲ್ಲಿ ಸುಧಾರಣೆಗಳನ್ನು ತರಬೇಕೆಂದು ಅಪೇಕ್ಷಿಸಿದಾಗ ಸುಧಾರಣೆಯ ವಿಧಾನವನ್ನು ಆಯ್ಕೆ ಮಾಡಿಕೊಳ್ಳಬೇಕಾಯಿತು... ಕಷ್ಟಸಹಿಷ್ಣುತೆ ಮತ್ತು ವೈರಾಗ್ಯ ಇವುಗಳ ಮೂಲಕ ಸರ್ವ–ಸಾಮರ್ಥ್ಯ ಪಡೆಯುವುದು ಮತ್ತು ಆತ್ಮಶುದ್ಧಿಯ ಮೂಲಕ ಗೆಲ್ಲುವುದು– ಇವು ಮಾನವನ ಆದಿ ಸಂತಾನವೆನಿಸಿದ ಆಯಬೆಲ್ ಮತ್ತು ಕೇನ್ ಅವರ ಕಾಲದಿಂದ ಬಲ್ಲ ವಿಧಾನಗಳಾಗಿವೆ...**
>
> **"ಅದು ಹಾಗೆ ಇರಲಿ, ಆದರೆ ಅದು ಮಹಾತ್ಮಾಗಾಂಧೀಜಿಯವರ ವೈಶಿಷ್ಟ್ಯ ಕೂಡ ಆಗಿದೆ. ನಮ್ಮ ಕಾಲದಲ್ಲಿ ಇಂಥ ಮಹಾಪುರುಷನನ್ನು ಸಾರ್ವಜನಿಕ ಜೀವನದಲ್ಲಿ ನೆಮ್ಮದಿಯನ್ನು ತರಬಯಸಿದ ಶಾಂತಿದೂತನನ್ನು ಶಾಂತಿ ಭಂಗಗೊಳಿಸುವ ಮನುಷ್ಯನೆಂದು ದಂಡಿಸುವುದು ಹಾಗೂ ದ್ರೋಹಿ (ಫೆಲಾನ್) ಎಂದು ಪರಿಗಣಿಸುವುದು ಒಂದು ಕ್ರಿಶ್ಚಿಯನ್ ಸರಕಾರಕ್ಕೆ ಮಾತ್ರ ಮೀಸಲಾಗಿತ್ತೆಂದು ತೋರುತ್ತದೆ. (ನಾಚಿಕೆಗೇಡು... ನಾಚಿಕೆಗೇಡು). ಮಹಾತ್ಮಾಗಾಂಧೀಜಿ ಬರುವುದಕ್ಕಿಂತ ಮೊದಲು ಭಾರತದಲ್ಲಿದ್ದ ರಾಜಕೀಯ ಪರಿಸ್ಥಿತಿ ಜೀಸಸ್ ಬರುವುದಕ್ಕಿಂತ ಮೊದಲು ಇದ್ದ ಜೂಡಿಯ ಪರಿಸ್ಥಿತಿಯನ್ನು ಹೋಲುತ್ತಿತ್ತು. ಭಾರತದಲ್ಲಿಯ ಆ ಸಮಸ್ಯೆಗಳಿಗೆ ಗಾಂಧೀಜಿ ಸೂಚಿಸಿದ ಪರಿಹಾರ ಮಾರ್ಗಗಳು ಯೇಸುವು ಮೊದಲು ಸೂಚಿಸಿದ್ದ ಮಾರ್ಗಗಳೇ ಆಗಿವೆ. ಕಷ್ಟಗಳನ್ನು ಸಹಿಸುತ್ತ ಆತ್ಮಶುದ್ಧಿಯನ್ನು ಪಡೆಯುವುದು; ಸರಕಾರದ ಜವಾಬ್ದಾರಿಗಳನ್ನು ನಿರ್ವಹಿಸಲು ನೈತಿಕ ಸಿದ್ಧತೆಯನ್ನು ಮಾಡುವುದು, ಸ್ವರಾಜ್ಯಕ್ಕಿಂತ ಮೊದಲು ವೈಯಕ್ತಿಕ ಜೀವನದಲ್ಲಿ ಶಿಸ್ತನ್ನು ಪಡೆಯುವುದು– ಇವು ಮಹಾತ್ಮಾಜಿ ಉಪದೇಶಿಸಿದ ತತ್ತ್ವಸಾರವಾಗಿದ್ದಿತು. ಅಹಮ್ಮದಾಬಾದಿನ ಕಾಂಗ್ರೆಸ್ ಅಧಿವೇಶನದಲ್ಲಿ ಮುಕ್ತಾಯಗೊಂಡ ವರ್ಷದಲ್ಲಿ ಜೀವಿಸಿದ ಸುದೈವಿಗಳಾದ ನಮ್ಮಲ್ಲಿ ಹಲವರು, ಇಂಥ ಅಪಾರ ಮನುಷ್ಯ ಕೋಟಿಯ ವಿಚಾರಗಳಲ್ಲಿ, ಭಾವನೆಗಳಲ್ಲಿ, ನಡೆನುಡಿಯಲ್ಲಿ ಎಂಥ ತ್ವರಿತ ಹಾಗೂ ಗಮನಾರ್ಹ ಬದಲಾವಣೆಗಳನ್ನು ಅವರು ಉಂಟುಮಾಡಿದರೆಂಬುದನ್ನು ಪತ್ರತ್ಯಕ್ಷ ಕಂಡಿದ್ದೇವೆ."**

---

೧. ೨೧.೩.೧೯೨೪ರ 'ಟೈಮ್ಸ್ ಆಫ್ ಇಂಡಿಯಾ' ದಿನಪತ್ರಿಕೆಯಲ್ಲಿ 'ಥ್ರೂ ಇಂಡಿಯನ್ ಐಸ್' ಎಂಬ ಲೇಖನವನ್ನು ನೋಡಿರಿ.

ಒಂದು ವರ್ಷದ ನಂತರ, ಅಲೀಗಢ್ ಮತ್ತು ಅಜಮೀರ್‌ಗಳಲ್ಲಿ ಮೊಹಮ್ಮದ್ ಅಲಿ ಅವರು ಮಾತನಾಡುತ್ತ ಹೀಗೆ ಹೇಳಿದರು:

**"ಗಾಂಧೀಜಿ ಅವರ ನಡಾವಳಿಯು ಎಷ್ಟೇ ಶುದ್ಧವಾಗಿದ್ದರೂ, ಧರ್ಮದ ದೃಷ್ಟಿಯಿಂದ ಶುದ್ಧವಲ್ಲದ ನಡತೆಯ ಯಾವನಾದರೂ ಮುಸಲ್ಮಾನನಿಗಿಂತ, ಕಡಿಮೆಯವರಾಗಿ ನನಗೆ ಅವರು ತೋರಲೇಬೇಕು."**

ಈ ಮಾತುಗಳು ಭಯಂಕರ ಗೊಂದಲವನ್ನು ಉಂಟುಮಾಡಿದವು. ಮಹಾತ್ಮಾ ಗಾಂಧೀಜಿಯವರ ಬಗೆಗೆ ಬಹಳಷ್ಟು ಗೌರವವನ್ನು ಮೊಹಮ್ಮದ್ ಆಲಿ ಅವರು ಹೊಂದಿದವರಾದುದರಿಂದ, ಈ ರೀತಿ ಸಂಕುಚಿತ ಹಾಗೂ ತಿರಸ್ಕಾರದ ಭಾವನೆ ವ್ಯಕ್ತಮಾಡಿದುದನ್ನು ಅನೇಕರು ನಂಬಲಿಲ್ಲ. ಲಖನೋದಲ್ಲಿ ಅಮೀನಾಬಾದ್ ಪಾರ್ಕ್‌ನಲ್ಲಿ ಮೊಹಮ್ಮದ್ ಅಲಿ ಅವರು ಭಾಷಣ ಮಾಡುತ್ತಿದ್ದಾಗ, ಅವರು (ಗಾಂಧೀಜಿಯವರ ಬಗೆಗೆ) ವ್ಯಕ್ತಮಾಡಿದರೆನ್ನಲಾದ ಭಾವನೆಗಳು ನಿಜವಾಗಿ ಅವರವೇ? ಎಂದು ಅವರನ್ನು ಕೇಳಲಾಯಿತು. ಎಷ್ಟು ಮಾತ್ರವೋ ಹಿಂಜರಿಯದೇ ಇಲ್ಲವೇ ನೋವಿಲ್ಲದೇ ಮೊಹಮ್ಮದ್ ಅಲಿ ಅವರು ಹೀಗೆ ಉತ್ತರ ಕೊಟ್ಟರು:[೧]

**"ಹೌದು, ನನ್ನ ಧರ್ಮ ಮತ್ತು ಸಂಪ್ರದಾಯದ ಪ್ರಕಾರ, ಒಬ್ಬ ವ್ಯಭಿಚಾರಿ (ಅಡಲ್ಟರಸ್) ಹಾಗೂ ಪತಿತ ಮುಸಲ್ಮಾನನು ಗಾಂಧಿಯವರಿಗಿಂತ ಶ್ರೇಷ್ಠ ಎಂಬ ಅಭಿಪ್ರಾಯ ನನ್ನದಾಗಿದೆ."**

ಮೊಹಮ್ಮದ್ ಅಲಿ ಅವರು ಕಾಫಿರರಾದ ಗಾಂಧೀಜಿಯವರನ್ನು ಜೀಸಸ್ಸನ ಸರಿಸಮಾನ ಸ್ಥಾನದಲ್ಲಿ ನಿಲ್ಲಿಸಿ ಮಾತನಾಡಿ ದಾಕ್ಷಿಣ್ಯ ತೋರಿದುದರಿಂದ ಎಲ್ಲ ಸಂಪ್ರದಾಯಬದ್ಧ ಮುಸಲ್ಮಾನರು ಅದು ಅಪರಾಧವೆಂದು ಬಗೆದುದರಿಂದ ಮೊಹಮ್ಮದ ಅಲಿಯವರು ತಮ್ಮ ಮೊದಲಿನ ಅಭಿಪ್ರಾಯವನ್ನು ಬದಲಿಸಬೇಕಾಯಿತೆಂದು ಆಗ ಸೂಚಿಸಲಾಯಿತು.[೨] ಒಬ್ಬ ಕಾಫಿರನನ್ನು ಹೀಗೆ ಪ್ರಶಂಸಿಸುವುದು ಮುಸ್ಲಿಮ್ ಧರ್ಮಶಾಸ್ತ್ರದ ಪ್ರಕಾರ ವರ್ಜ್ಯವಾಗಿದೆ.

೧೯೨೮ನೆಯ ಇಸ್ವಿಯಲ್ಲಿ ಹಿಂದೂ–ಮುಸಲ್ಮಾನರ ಸಂಬಂಧಗಳ ಬಗೆಗಿನ ಪ್ರಣಾಲಿಕೆಯಲ್ಲಿ ಖ್ವಾಜಾ ಹಸನ್ ನಿಜಾಮಿ ಅವರು ಹೀಗೆ ಘೋಷಿಸಿದರು.*

**"ಮುಸಲ್ಮಾನರು ಹಿಂದೂ ಜನರಿಗಿಂತ ಬೇರೆ ಆಗಿದ್ದಾರೆ. ಅವರು ಹಿಂದೂ ಜನರೊಡನೆ ಕೂಡಿರಲಾರರು. ಘೋರ ಯುದ್ಧಗಳನ್ನು ಮಾಡಿ ಮುಸಲ್ಮಾನರು ಭಾರತವನ್ನು ಜಯಿಸಿದರು; ಇಂಗ್ಲೀಷರು ಅವರಿಂದ ಭಾರತವನ್ನು ತೆಗೆದುಕೊಂಡರು. ಮುಸಲ್ಮಾನರು ಒಂದು ಸಮಗ್ರ ರಾಷ್ಟ್ರವಾಗಿದ್ದಾರೆ ಮತ್ತು ಅವರೇ ಭಾರತದ ಒಡೆಯರಾಗುವರು. ಅವರು ತಮ್ಮ ಸ್ವಂತಿಕೆಯನ್ನು ಎಂದೂ ಬಿಟ್ಟುಕೊಡುವವರಲ್ಲ. ಅವರು ನೂರಾರು ವರ್ಷಗಳವರೆಗೆ ಭಾರತವನ್ನು ಆಳಿದ್ದಾರೆ. ಆದುದರಿಂದ ದೇಶದ ಮೇಲೆ ಪರಂಪರೆಯಿಂದ ಬಂದ ಹಕ್ಕು ಅವರಿಗಿದೆ. ಜಗತ್ತಿನಲ್ಲಿ ಹಿಂದೂಗಳು ಅಲ್ಪಸಂಖ್ಯೆಯ ಸಮುದಾಯವೆನಿಸಿದ್ದಾರೆ. ಅವರೆಂದೂ ಪರಸ್ಪರ ವಿನಾಶಕ ವ್ಯಾಜ್ಯಗಳಿಂದ ಮುಕ್ತರಾಗಿಲ್ಲ. ಗಾಂಧಿಯವರನ್ನು ಅವರು ನಂಬುತ್ತಾರೆ; ಆಕಳನ್ನು ಪೂಜಿಸುತ್ತಾರೆ. ಇನ್ನೊಂದು ಜನಾಂಗದವರ ನೀರನ್ನು ಕುಡಿದರೆ ಅವರು ದೂಷಿತರಾಗುತ್ತಾರೆ. ಹಿಂದೂ**

---

೧. 'ಥ್ರೂ ಇಂಡಿಯನ್ ಐಸ್'– ಟೈಮ್ಸ್ ಆಫ್ ಇಂಡಿಯಾ, ದಿನಾಂಕ ೨೧.೩.೧೯೨೪.

೨. 'ಥ್ರೂ ಇಂಡಿಯನ್ ಐಸ್'– ಟೈಮ್ಸ್ ಆಫ್ ಇಂಡಿಯಾ, ದಿನಾಂಕ ೨೬.೪.೧೯೨೪.

* ದಿನಾಂಕ ೧೪.೩.೧೯೨೪ರ 'ಟೈಮ್ಸ್ ಆಫ್ ಇಂಡಿಯಾ, ದಿನಾಂಕ ೨೬.೪.೧೯೨೪.

**ಜನರು ಸ್ವರಾಜ್ಯದ ಬಗೆಗೆ ಕಾಳಜಿ ವಹಿಸುವುದಿಲ್ಲ. ಅದಕ್ಕಾಗಿ ಅವರಿಗೆ ಸಮಯವೇ ಇಲ್ಲ. ತಮ್ಮ ಆಂತರಿಕ ಕ್ಷುದ್ರ ಬಡಿದಾಟಗಳಲ್ಲಿಯೇ ಅವರು ಮುಂದುವರಿಯಲಿ. ಮನುಷ್ಯರ ಮೇಲೆ ಆಳ್ವಿಕೆ ಮಾಡಲು ಅವರಲ್ಲಿ ಯಾವ ಸಾಮರ್ಥ್ಯವಿದೆ? ಮುಸಲ್ಮಾನರು ಹಿಂದೆಯೂ ಆಳಿದ್ದಾರೆ ಮತ್ತು ಮುಂದೆಯೂ ಆಳುವರು.''**

ಹಿಂದೂಗಳಿಗೆ ವಿಧೇಯರಾಗಿರುವುದು ದೂರ ಉಳಿಯಿತು– ಹಿಂದೂ ಜನರ ಸಂಗಡ ಪುನಃ ಕಣಕ್ಕಿಳಿಯಲು ಪ್ರಯತ್ನಿಸುತ್ತಿರುವಂತೆ ಮುಸಲ್ಮಾನರು ತೋರುತ್ತಿರುವರು. ೧೭೬೧ನೆಯ ಇಸ್ವಿಯಲ್ಲಿ ನಡೆದ ಪಾಣಿಪತ್ ಮೂರನೆಯ ಯುದ್ಧದಲ್ಲಿ ನಿಜವಾಗಿ ಗೆದ್ದವರು ಯಾರು ಎಂಬ ಬಗೆಗೆ ೧೯೨೬ನೆಯ ಇಸ್ವಿಯಲ್ಲಿ ವಾದ ವಿವಾದವೊಂದು ಹುಟ್ಟಿಕೊಂಡಿತು. ಅಹಮ್ಮದ್‌ಶಾಹ್ ಅಬ್ದಾಲಿಯ ಹತ್ತಿರ ಒಂದು ಲಕ್ಷ ಸೈನಿಕರಿದ್ದುದರಿಂದ ಹಾಗೂ ಮರಾಠರ ಹತ್ತಿರ ನಾಲ್ಕರಿಂದ ಆರು ಲಕ್ಷಗಳ ಸಂಖ್ಯೆಯ ಸೈನಿಕರಿದ್ದುದರಿಂದ ಮುಸಲ್ಮಾನರು ಗೆದ್ದವರು ತಾವೇ ಎಂದು ಪ್ರಬಲವಾಗಿ ವಾದಿಸಿದರು. ಆದರೆ ಹಿಂದೂ ಜನರು ಗೆದ್ದವರು ತಾವೇ ಎಂದು ಉತ್ತರಿಸಿದರು. ಅದು ಮುಸಲ್ಮಾನರು ದಾಳಿಗಳನ್ನು ತಡೆದುದರಿಂದ ವಿಜಯ ತಮ್ಮದೆಂದರು. ಸೋಲಿಸಿದವರಿಗೆ ಗೆಲುವು ಎಂದರು. ಹಿಂದೂ ಜನರ ಕೈಯಲ್ಲಿ ಸೋಲನ್ನು ಒಪ್ಪಿಕೊಳ್ಳಲು ಮುಸಲ್ಮಾನರು ಸಿದ್ಧರಿರಲಿಲ್ಲ ಮತ್ತು ಹಿಂದೂಗಳಿಗಿಂತ ತಾವು ಯಾವಾಗಲೂ ಶ್ರೇಷ್ಠರೆಂದು ಸಾಧಿಸಿದರು. ಹಿಂದೂ ಜನರ ಮೇಲೆ ಸಾರ್ವಜನಿಕ ಶ್ರೇಷ್ಠತೆ ಮುಸಲ್ಮಾನರದೆಂಬುದನ್ನು ಸಿದ್ಧಪಡಿಸಲು, ನಜೀಬಾಬದವ ಮೌಲಾನಾ ಅಕಬರ್ ಶಾಹ್ ಖಾನ್ ಎಂಬವರು ತುಂಬ ಗಾಂಭೀರ್ಯದಿಂದ, ನಿರ್ಣಾಯಕರ ಕರಾರುಗಳ ಮೇಲೆ ಹಿಂದೂಗಳು ಮತ್ತು ಮುಸಲ್ಮಾನರು ಪಾಣಿಪತ್ತದ ಅದೇ ವಿಧಿನಿಯುಕ್ತ ರಣರಂಗದಲ್ಲಿ ನಾಲ್ಕನೆಯ ಯುದ್ಧ ಮಾಡಬೇಕೆಂದು ಸೂಚಿಸಿದರು. ಈ ಮೌಲಾನಾ ಅವರು ಪಂಡಿತ ಮದನಮೋಹನ ಮಾಲವೀಯರವರಿಗೆ ಈ ಕೆಳಗಿನ ಮಾತುಗಳಲ್ಲಿ ಆಹ್ವಾನವೊಂದನ್ನು ಪ್ರಕಟಿಸಿದರು.[೧]

**''ಮಾಲವಿಯವರೇ– ಪಾಣಿಪತ್ತದ ಪರಿಣಾಮವನ್ನು ಸುಳ್ಳುಮಾಡಲು ನೀವು ಹೊರಟಿದ್ದರೆ, (ಅದನ್ನು ನಿರ್ಣಯಿಸಲು) ಒಂದು ಸುಲಭ ಮತ್ತು ಶ್ರೇಷ್ಠ ಮಾರ್ಗವನ್ನು ನಾನು ನಿಮಗೆ ತೋರಿಸುತ್ತೇನೆ. ನಿಮ್ಮ ಪ್ರಖ್ಯಾತ ಪ್ರಭಾವವನ್ನು ಉಪಯೋಗಿಸಿರಿ ಮತ್ತು ಅಧಿಕಶರಿಗಳಿಂದ ಯಾವ ಆತಂಕವೂ ಇಲ್ಲದಂಥ ನಾಲ್ಕನೆಯ ಪಾಣಿಪತ್ ಯುದ್ಧ ಮಾಡಲು ಅನುಮತಿ ದಯಪಾಲಿಸುವಂತೆ ಬ್ರಿಟಿಷ್ ಸರಕಾರದ ಮನವೊಲಿಸಿರಿ.**

**ಹಿಂದೂ ಮತ್ತು ಮುಸಲ್ಮಾನರು ವೀರತನದಿಂದ ಹಾಗೂ ಯುದ್ಧೋತ್ಸಾಹದಿಂದ ತುಲನಾತ್ಮಕ ಪರೀಕ್ಷೆಗೆ ನಿಲ್ಲುವ... ವ್ಯವಸ್ಥೆಯನ್ನು ಮಾಡಲು ನಾನು ಸಿದ್ಧನಿದ್ದೇನೆ... ಭಾರತದಲ್ಲಿ ಏಳು ಕೋಟಿ ಜನ ಮುಸಲ್ಮಾನರಿದ್ದು, ಈ ಏಳು ಕೋಟಿ ಜನ ಮುಸಲ್ಮಾನರನ್ನು ಪ್ರತಿನಿಧಿಸುವ ಏಳುನೂರು ಜನ ಮುಸಲ್ಮಾನರನ್ನು ಕರೆದುಕೊಂಡು ನಿಶ್ಚಿತ ದಿನದಂದು ನಾನು ಪಾಣಿಪತ್ ಮೈದಾನಕ್ಕೆ ಬರುತ್ತೇನೆ ಮತ್ತು ಹಿಂದೂ ಜನರು ಇಪ್ಪತ್ತೆರಡು ಕೋಟಿ ಇರುವುದರಿಂದ ಎರಡುಸಾವಿರ ಎರಡು ನೂರು ಹಿಂದೂಗಳೊಡನೆ ಅಲ್ಲಿಗೆ ಬರುವುದನ್ನು ನಿಮಗೆ ಬಿಡುತ್ತೇನೆ. ತೋಪುಗಳನ್ನು, ಮಶಿನ್ ಗನ್‌ಗಳನ್ನು ಇಲ್ಲವೇ ಬಾಂಬುಗಳನ್ನು ಉಪಯೋಗಿಸದೇ ಇರುವುದು ಯೋಗ್ಯವಾದುದಾಗಿದೆ; ಕೇವಲ ಖಡ್ಗಗಳು, ಈಟಿ–ಬರ್ಚಿಗಳು, ಬಿಲ್ಲು–ಬಾಣಗಳು ಮತ್ತು**

---

೧. ದಿನಾಂಕ ೨೦.೬.೧೯೨೬ರ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ.

**ಕಠಾರಿಗಳು ಉಪಯೋಗಿಸಲ್ಪಡಬೇಕು. ನೀವು ಹಿಂದೂ ಅತಿಥೇಯರ ಮುಖ್ಯ ಸೇನಾಪತಿಯ ಸ್ಥಾನವನ್ನು ಸ್ವೀಕರಿಸುವುದು ಸಾಧ್ಯವಾಗದಿದ್ದರೆ ನೀವು, ಅದನ್ನು ಸದಾಶಿವರಾಯನ ಇಲ್ಲವೇ ವಿಶ್ವಾಸರಾಯನ ಯಾರಾದರೂ ವಂಶಸ್ಥರಿಗೆ ವಹಿಸಿಕೊಡಬಹುದು[೧]. ಇದು ಆ ವಂಶಸ್ಥರಿಗೆ ತಮ್ಮ ಪೂರ್ವಜರು ೧೭೬೧ನೆಯ ಇಸ್ವಿಯಲ್ಲಿ ಅನುಭವಿಸಿದ ಸೋಲಿಗೆ ಪ್ರತಿಯಾಗಿ ಸೇಡು ತೀರಿಸಿಕೊಳ್ಳುವ ಅವಕಾಶವನ್ನು ಒದಗಿಸುವುದು. ಆದರೆ ಹೇಗೇ ಆದರೂ ನೀವು ವೀಕ್ಷಕರಾಗಿ ಅವಶ್ಯ ಬರಬೇಕು. ಏಕೆಂದರೆ, ಈ ಯುದ್ಧದ ಪರಿಣಾಮಗಳನ್ನು ನೋಡಿದ ಮೇಲೆ ನಿಮ್ಮ ದೃಷ್ಟಿಕೋನವನ್ನು ನೀವು ಬದಲಿಸಿಕೊಳ್ಳಬಹುದು ಹಾಗೂ ಆಮೇಲೆ ದೇಶದಲ್ಲಿ ಈಗ ಇರುವ ವೈಮನಸ್ಸು ಹಾಗೂ ಜಗಳಗಳಿಗೆ ಕೊನೆಯುಂಟಾಗುವುದು... ಉಪಸಂಹಾರದಲ್ಲಿ– ನಾನು ಅಲ್ಲಿಗೆ ಕರೆತರುವ ಏಳುನೂರು ಜನರಲ್ಲಿ ಪಠಾಣರು ಇಲ್ಲವೇ ಅಫಘನರು, ನೀವು ಅವರಿಂದ ಪ್ರಾಣಭಯ ಉಳ್ಳವರಾಗಿರುವುದರಿಂದ, ಇರಲಾರರು. ಹೀಗೆ ನಾನು, ಧರ್ಮ ತತ್ತ್ವಗಳಂತೆ ಆಚರಣೆಯುಳ್ಳವರಾದ ಒಳ್ಳೆಯ ಕುಟುಂಬಕ್ಕೆ ಸೇರಿದ ಭಾರತೀಯ ಮುಸಲ್ಮಾನರನ್ನು ಮಾತ್ರ ಕರೆತರುವೆನು."**

## IV

ಹಿಂದೂ–ಮುಸಲ್ಮಾನರ ಧಾರ್ಮಿಕ ನಂಬುಗೆಗಳು, ಸಾಮಾಜಿಕ ಒಲವುಗಳು ಮತ್ತು ಚರಮ ಧ್ಯೇಯಗಳು ಹಾಗೂ ಅವರ ಸಾಂಪ್ರದಾಯಿಕ ಮತ್ತು ರಾಜಕೀಯ ಪ್ರವೃತ್ತಿಗಳು ಹೀಗೆ ಇವೆ. ಈ ಧಾರ್ಮಿಕ ನಂಬುಗೆಗಳು, ಸಾಮಾಜಿಕ ಒಲವುಗಳು, ಚರಮ ಗುರಿಗಳ ಬಗೆಗೆ ದೃಷ್ಟಿಕೋನ ಇವುಗಳು ಒಂದೇ ಆಗಿರಲಿ, ಇಲ್ಲವೇ ವಿಭಿನ್ನವಾಗಿರಲಿ, ಕಾರ್ಯ ನಿರ್ವಹಿಸುವ ಮಾರ್ಗವನ್ನು ನಿರ್ಧರಿಸುವ ಧ್ಯೇಯೋದ್ದೇಶ ತತ್ತ್ವವನ್ನು ಪ್ರತಿನಿಧಿಸುತ್ತವೆ. ಹಿಂದೂ ಮತ್ತು ಮುಸಲ್ಮಾನರು ಒಂದೇ ರಾಷ್ಟ್ರವಾಗಿ ಇಲ್ಲವೇ ಒಂದೇ ರಾಷ್ಟ್ರದ ಹೊಂದಿಕೆಯ ಮನೋಭಾವದ ಎರಡು ಭಾಗಗಳಾಗಿ ಕೂಡ ಇರಲು ಸಾಧ್ಯವಾಗದಷ್ಟು ಭಿನ್ನ ಪ್ರವೃತ್ತಿಗಳನ್ನು ಪಡೆದಿವೆ ಎಂಬುದು ಈವರೆಗಿನ ನಮ್ಮ ಅನುಭವವಾಗಿದೆ. ಈ ವಿಭಿನ್ನ ಪ್ರವೃತ್ತಿಗಳು ಎಷ್ಟರಮಟ್ಟಿಗೆ ತೀಕ್ಷ್ಣವಾಗಿವೆ ಎಂದರೆ, ಕೇವಲ ಅವೆರಡನ್ನೂ ವಿಂಗಡಿಸುವುದೇ ಮಾತ್ರವಲ್ಲದೇ ಅವೆರಡೂ ಯುದ್ಧಕ್ಕೆ ತೊಡಗಿರುವಂತೆ ಮಾಡಬಲ್ಲವು. ಈ ಬಿನ್ನಾಭಿಪ್ರಾಯಗಳು ಶಾಶ್ವತ ಸ್ವರೂಪದವಾಗಿದ್ದು, ಹಿಂದೂ–ಮುಸಲ್ಮಾನ ಸಮಸ್ಯೆಯು ಎಂದೆಂದಿಗೂ ಉಳಿಯುವಂತೆ ಇದೆ. ಹಿಂದೂ–ಮುಸಲ್ಮಾನರು ಒಂದೇ ಆಗಿದ್ದಾರೆ ಎಂದಾಗಲೀ, ಅವರು ಈಗ ಒಂದೇ ಆಗಿರದಿದ್ದರೂ ಆಮೇಲೆ ಒಂದಾಗುವರು ಎಂದಾಗಲೀ, ಈ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸುವುದು ವ್ಯರ್ಥ ಶ್ರಮವಾಗಿದೆ. ಝೆಕೋಸ್ಲೋವಾಕಿಯಾದಲ್ಲಿ ಆಗಿರುವಷ್ಟೇ ಇಲ್ಲಿಯೂ ವ್ಯರ್ಥವೆಂದು ಸಿದ್ಧವಾಗಿದೆ. ತದ್ವಿರುದ್ಧವಾಗಿ, ಎಷ್ಟೇ ಅಸಮಾಧಾನಕರವಾಗಿದ್ದರೂ, ಕೆಲವು ಸತ್ಯ ಸಂಗತಿಗಳು ಭಿನ್ನಾಭಿಪ್ರಾಯಕ್ಕೆ ಎಡೆಕೊಡಲಾರದಂತೆಯೇ ಇವೆ ಎಂಬುದನ್ನು ಒಪ್ಪಿಕೊಳ್ಳುವ ಸಮಯ ಈಗ ಬಂದಿದೆ.

---

೧. ಮೂರನೆಯ ಪಾಣಿಪತ್ ಯುದ್ಧದಲ್ಲಿ ಸದಾಶಿವರಾವ್ ಮತ್ತು ವಿಶ್ವಾಸರಾವ್ ಇಬ್ಬರೂ ಹಿಂದೂ ಸೈನ್ಯದ ಅಧಿಪತಿಗಳಾಗಿದ್ದರು.

ಮೊಟ್ಟ ಮೊದಲನೆಯದಾಗಿ, ಹಿಂದೂ ಜನರು ಮತ್ತು ಮುಸಲ್ಮಾನರಲ್ಲಿ ಒಗ್ಗಟ್ಟನ್ನು ಉಂಟು ಮಾಡಬೇಕೆಂಬ ಬಗೆಗೆ ಸಾಧ್ಯವಿದ್ದ ಎಲ್ಲ ಪ್ರಯತ್ನಗಳನ್ನೂ ಮಾಡಲಾಗಿದೆ ಮತ್ತು ಆ ಪ್ರಯತ್ನಗಳೆಲ್ಲವೂ ವಿಫಲಗೊಂಡಿವೆ ಎಂಬುದನ್ನು ಒಪ್ಪಿಕೊಳ್ಳಲೇಬೇಕು.

೧೯೦೯ನೆಯ ಇಸ್ವಿಯಿಂದಲೇ ಇಂಥ ಪ್ರಯತ್ನಗಳ ಇತಿಹಾಸ ಪ್ರಾರಂಭವಾಗಿದೆ ಎಂದು ಹೇಳಬಹುದು. ಮುಸಲ್ಮಾನ ಪ್ರತಿನಿಧಿಗಳ ಬೇಡಿಕೆಗಳನ್ನು, ಬ್ರಿಟಿಷರು ಅವುಗಳಿಗೆ ಒಪ್ಪಿಗೆಯನ್ನಿತ್ತರೆ, ಹಿಂದೂ ಜನರು ಕೂಡ ಅವುಗಳನ್ನು ಒಪ್ಪಿಕೊಂಡರು. ಹಾಗೆ ಒಪ್ಪಿಕೊಂಡವರಲ್ಲಿ ಗೋಖಲೆಯವರೇ ಪ್ರಮುಖರು. ಅಂಥ ಒಪ್ಪಿಗೆಯನ್ನಿತ್ತ ಕಾರಣಕ್ಕಾಗಿ ಅನೇಕ ಹಿಂದೂ ಜನರು ಭಿನ್ನ ಮತದಾರರ ತತ್ತ್ವಕ್ಕೆ ಒಪ್ಪಿಕೊಂಡಿದ್ದಾರೆಂದು ಅವರನ್ನು ದೂಷಿಸಹತ್ತಿದ್ದಾರೆ. ಒಪ್ಪಿಕೊಳ್ಳದೇ ಇರುವುದು ಬುದ್ಧಿವಂತಿಕೆಯ ಲಕ್ಷಣವಲ್ಲವೆಂಬುದನ್ನು ಅವರ ಟೀಕಾಕಾರರು ಮರೆಯುತ್ತಾರೆ. ಏಕೆಂದರೆ ಮೊಹಮ್ಮದ್ ಅಲಿ ಅವರು ಈ ಬಗೆಗೆ ಚೆನ್ನಾಗಿಯೇ ಹೇಳಿದ್ದಾರೆ.

> **"...ವಿರೋಧಾಭಾಸವೆಂಬಂತೆ ಗೋಚರಿಸಿದರೂ, ಪ್ರತ್ಯೇಕ ಮತದಾರರ ಸಮೂಹವನ್ನು ಸೃಷ್ಟಿಸುವುದರಿಂದ ಹಿಂದೂ–ಮುಸಲ್ಮಾನ ಬಾಂಧವ್ಯವು ಬೇಗನೇ ಸಾಧ್ಯವಾಗುವುದಕ್ಕೆ ಕಾರಣವಾಗಿದೆ. ಎಷ್ಟೇ ನಿಯಂತ್ರಿತವಾಗಿದ್ದರೂ, ಭಾರತೀಯರಿಗೆ ನಿಜವಾಗಿ ಮತದಾನದ ಹಕ್ಕನ್ನು ಮೊಟ್ಟ ಮೊದಲನೆಯ ಸಲ ಕೊಡಲಾಗುತ್ತಿದೆ. ಒಂದು ವೇಳೆ ಹಿಂದೂ–ಮುಸಲ್ಮಾನರು, ಬ್ರಿಟಿಷರು ಆಗಮಿಸಿದಾಗಿನಿಂದ ಇರುವಂತೆಯೇ ಇನ್ನು ಇದ್ದರೆ ಹಾಗೂ ಆಗಾಗ ಒಬ್ಬರನ್ನೊಬ್ಬರು ದ್ವೇಷಿಗಳಂತೆ ಕಂಡರೆ, ಸಮ್ಮಿಶ್ರ ಮತದಾರ ಕ್ಷೇತ್ರಗಳು ಅಂತರ್ ಜಾತೀಯ ಜಗಳಗಳಿಗೆ ಅತ್ಯುತ್ತಮ ರಣರಂಗಗಳಾಗಿ ಪರಿಣಮಿಸುವವು. ಅಷ್ಟೇ ಅಲ್ಲದೆ, ಎರಡೂ ಸಮಾಜಗಳನ್ನು ಬೇರ್ಪಡಿಸುವ ಅಂತರವು ಇನ್ನೂ ಹೆಚ್ಚು ಹೆಚ್ಚು ಆಗುವುದಕ್ಕೆ ಕಾರಣವಾಗುವುವು. ಚುನಾವಣೆಗೆ ನಿಂತ ಪ್ರತಿಯೊಬ್ಬ ಅಭ್ಯರ್ಥಿಯೂ ತನಗೆ ಮತ ನೀಡಬೇಕೆಂದು ತನ್ನ ಸಮಾಜದವರಲ್ಲಿ ವಿನಂತಿ ಮಾಡಿಕೊಳ್ಳಬೇಕಾಗುವುದು. ತನಗೆ ಎದುರಾಳಿಯಾದ ಸಮಾಜದ ಬಗೆಗೆ ಹೊಂದಿರುವ ದುರ್ಭಾವನೆಯ ಘನಿಷ್ಠತೆಯ ಆಧಾರದ ಮೇಲೆ ತಾನು ಮತವನ್ನು ಕೇಳುವ ಹಕ್ಕನ್ನು ಪ್ರತಿಪಾದಿಸುವನು. 'ತನ್ನ ಸಮಾಜದ ಅಭ್ಯುದಯಕ್ಕಾಗಿಯೇ ತನಗೆ ಮತ ಕೊಡಬೇಕು' ಎನ್ನುವಂಥ ಸೂತ್ರವನ್ನು ಎಷ್ಟೇ ಮರೆಯಲ್ಲಿ ಆದರೂ ಮುಂದಿಡುವನು. ಈ ಮಾರ್ಗ ಒಳ್ಳೆಯದಲ್ಲವೆಂಬುದಷ್ಟೇ ಅಲ್ಲ, ಒಂದಕ್ಕೊಂದು ಸರಿಜೋಡಿಯಲ್ಲದ ಸಮಾಜಗಳು ಚುನಾವಣೆಯಲ್ಲಿ ಎದುರಾದರೆ ಅದರ ಪರಿಣಾಮವು ಇನ್ನೂ ಕೆಟ್ಟದಾಗುವುದು. ತನ್ನ ಅಭ್ಯರ್ಥಿಯನ್ನು ಗೆಲ್ಲಿಸಲು ಅಸಮರ್ಥವಾದ ಸಮಾಜವು, ಗೆದ್ದ ಎದುರಾಳಿಯಾದ ಸಮಾಜದ ಬಗೆಗೆ ಇನ್ನೂ ಅಧಿಕ ಪ್ರಮಾಣದ ಮತ್ಸರವನ್ನು ಬೆಳೆಯಿಸಿಕೊಳ್ಳುವುದು ಅನಿವಾರ್ಯವಾಗುವುದು. ಎರಡೂ ಸಮಾಜಗಳ ಸಂಬಂಧಗಳು ಕತ್ತರಿಸಲ್ಪಟ್ಟದ್ದರಿಂದ, ಚುನಾವಣೆಯ ಅವಧಿಯಲ್ಲಿ ಯಾವುದೇ ರಾಜಕೀಯ ತತ್ತ್ವಗಳು ಪ್ರಾಮುಖ್ಯತೆಯನ್ನು ಪಡೆಯುವ ಸಂಭವವಿರುವುದಿಲ್ಲ. ಬೇರೆ ಬೇರೆ ಮತಕ್ಷೇತ್ರಗಳ ನಿರ್ಮಾಣವು ಅಂತರ್ ಜಾತೀಯ ಯುದ್ಧಗಳನ್ನು ತಡೆಯುವಲ್ಲಿ ಸಾಕಷ್ಟು ನೆರವಾಗಿದೆ. ಅಂತರ್ ಜಾತೀಯ ಮತ್ಸರಗಳು ಉಲ್ಬಣಗೊಂಡಾಗ, ಜಾತೀಯ ಮತಕ್ಷೇತ್ರಗಳಿಂದಲೂ ಕೂಡ ಆರಿಸಿ ಬರುವ ಸಂಭವವಿರುವ ಜನರು, ತಮ್ಮ ವಿರೋಧೀ ಗುಂಪಿನ ಬಗೆಗೆ ದುರ್ಭಾವನೆ ಹೊಂದಿದವರೇ ಆಗಿರುವರು. ವಿಸ್ಮರಣೆ ಇಲ್ಲದೇ ಈ ಮಾತನ್ನು ಹೇಳಿದ್ದೇನೆ."**

ಆದರೆ ೧೯೦೯ನೆಯ ಇಸ್ವಿಯಲ್ಲಿ ಹಿಂದೂ ಜನರು ಪ್ರತ್ಯೇಕ ಮತಕ್ಷೇತ್ರಗಳ ಪರವಾಗಿ ತೋರಿದ ಔದಾರ್ಯವು ಹಿಂದೂ–ಮುಸ್ಲಿಮ್ ಒಗ್ಗಟ್ಟಿನ ರೂಪದ ಪರಿಣಾಮವನ್ನು ಪಡೆಯಲಿಲ್ಲ. ಆಮೇಲೆ ಲಖನೋ

ಒಪ್ಪಂದ ೧೯೧೬ರಲ್ಲಿ ಬಂದಿತು. ಈ ಒಪ್ಪಂದದನ್ವಯ ಪ್ರತಿಯೊಂದು ವಿಷಯದ ಬಗೆಗೂ ಮುಸಲ್ಮಾನರು ಸಂತೃಪ್ತರಾಗಿರುವಂತೆ ನಡೆದುಕೊಂಡರು. ಆದರೂ ಕೂಡ ಇಬ್ಬರಲ್ಲಿ ಅದು ಯಾವುದೇ ಒಗ್ಗಟ್ಟನ್ನು ಹುಟ್ಟಿಸಲಿಲ್ಲ. ಆರು ವರ್ಷಗಳ ನಂತರ, ಹಿಂದೂ-ಮುಸ್ಲಿಮ್ ಜನರಲ್ಲಿ ಒಗ್ಗಟ್ಟನ್ನು ಹುಟ್ಟಿಸುವ ಇನ್ನೊಂದು ಪ್ರಯತ್ನ ನಡೆಯಿತು. ೧೯೨೩ನೆಯ ಇಸ್ವಿಯ ಮಾರ್ಚ್ ತಿಂಗಳಲ್ಲಿ 'ಅಖಿಲ ಭಾರತ ಮುಸ್ಲಿಮ್ ಲೀಗ್' ಲಖನೋದಲ್ಲಿ ನಡೆಸಿದ ತನ್ನ ವಾರ್ಷಿಕ ಸಮ್ಮೇಳನದಲ್ಲಿ ಒಂದು ಗೊತ್ತುವಳಿಯನ್ನು ಪಾಸು ಮಾಡಿ,* ಭಾರತದಲ್ಲಿರುವ ವಿವಿಧ ಸಮಾಜಗಳಲ್ಲಿ, ಪಂಥಗಳಲ್ಲಿ ಒಗ್ಗಟ್ಟು ಮತ್ತು ಒಂದೇ ಭಾವನೆ ಉಂಟಾಗುವ ರೀತಿಯಲ್ಲಿ ರಾಷ್ಟ್ರೀಯ ಒಪ್ಪಂದವೊಂದನ್ನು ಪ್ರಸ್ಥಾಪಿಸಲು ಒತ್ತಾಯಪಡಿಸಿತಲ್ಲದೇ, ಇತರ ಸಂಸ್ಥೆಗಳು ನಿಯಮಿಸುವ ಸಮಿತಿಗಳೊಡನೆ ಸಹಕರಿಸಲು ಮತ್ತೊಂದು ಸಮಿತಿಯನ್ನೇ ರಚಿಸಿತು. 'ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್' ೧೯೨೩ನೆಯ ಇಸ್ವಿಯ ಸೆಪ್ಟೆಂಬರ್ ತಿಂಗಳಲ್ಲಿ ದಿಲ್ಲಿಯಲ್ಲಿ ಮೌಲಾನಾ ಅಬ್ದುಲ್ ಕಲಮ್ ಆಜಾದ್ ಅವರ ಅಧ್ಯಕ್ಷತೆಯಲ್ಲಿ ಸೇರಿದ್ದಾಗ, ಲೀಗ್ ವ್ಯಕ್ತಮಾಡಿದ್ದ ಭಾವನೆಗಳಿಗೆ ಸ್ಪಂದಿಸಿ ಒಂದು ಗೊತ್ತುವಳಿಯನ್ನು ಪಾಸು ಮಾಡಿತು. ಕಾಂಗ್ರೆಸ್ಸು, ಸಂವಿಧಾನವನ್ನು ಪರಿಷ್ಕರಿಸಲು ಮತ್ತು ರಾಷ್ಟ್ರೀಯ ಒಪ್ಪಂದದ ಕರಡನ್ನು ಸಿದ್ಧಪಡಿಸಲು, ಎರಡು ಸಮಿತಿಗಳನ್ನು ರಚಿಸಿತು. ಭಾರತ ರಾಷ್ಟ್ರೀಯ ಒಪ್ಪಂದ (ಇಂಡಿಯನ್ ನ್ಯಾಶನಲ್ ಪ್ಯಾಕ್ಟ್)ದ ಮೇಲಿನ ಸಮಿತಿಯ ವರದಿಗೆ ಡಾ. ಅನ್ಸಾರಿ ಮತ್ತು ಲಾಲಾ ಲಜಪತರಾಯ ಅವರು ಸಹಿ ಹಾಕಿದ್ದರು;[೧] ಮತ್ತು ಅದನ್ನು ೧೯೨೩ರಲ್ಲಿ ಕೋಕೋನಾಡಾದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರಸ್ತುತಪಡಿಸಲಾಯಿತು. ಅದೇ ಸಮಯದಲ್ಲಿಯೇ 'ಭಾರತ ರಾಷ್ಟ್ರೀಯ ಒಪ್ಪಂದ'ವನ್ನು ರೂಪಿಸುವುದರ ಜೊತೆಗೆ, ಬಂಗಾಲ್ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ಶ್ರೀ ಸಿ.ಆರ್.ದಾಸ್ ಅವರ ಸ್ಫೂರ್ತಿಯ ಮೇರೆಗೆ ಬಂಗಾಲದ ಮುಸಲ್ಮಾನರ ಸಂಗಡ 'ಬಂಗಾಲ ಒಪ್ಪಂದ'[೨] ಸಿದ್ಧವಾಯಿತು. 'ಭಾರತ ರಾಷ್ಟ್ರೀಯ ಒಪ್ಪಂದ' ಮತ್ತು 'ಬಂಗಾಲ ಒಪ್ಪಂದ' ಇವೆರಡೂ ಕಾಂಗ್ರೆಸ್ ವಿಷಯ ನಿಯಾಮಕ ಸಮಿತಿಯ ಸಭೆಯ ಮುಂದೆ ಚರ್ಚೆಗೆ ಬಂದವು.[೩] ಬಂಗಾಲ ಒಪ್ಪಂದ ೬೭೮- ವಿರುದ್ಧ ೪೫೮ ಮತಗಳಿಂದ ತಿರಸ್ಕರಿಸಲ್ಪಟ್ಟಿತು. 'ರಾಷ್ಟ್ರೀಯ ಒಪ್ಪಂದಕ್ಕೆ ಸಂಬಂಧಿಸಿದಂತೆ, ಕಾಂಗ್ರೆಸ್ ತಾನು ಸಿದ್ಧಪಡಿಸಿದ ಒಪ್ಪಂದದ ಕರಡಿನ ಬಗೆಗೆ ಹೆಚ್ಚಿನ ಅಭಿಪ್ರಾಯಗಳನ್ನು ಸಮಿತಿಯು ಸಂಗ್ರಹಿಸಬೇಕೆಂದೂ ಮತ್ತು ತಮ್ಮ ವರದಿಯನ್ನು ಅಖಿಲ ಭಾರತ ಕಾಂಗ್ರೆಸ್ ಮಹಾಸಭೆಯ ಪರಿಶೀಲನೆಗಾಗಿ ೩೧.೩.೧೯೨೪ರವರೆಗೆ ಕಳಿಸಿಕೊಡಬೇಕೆಂದೂ ಗೊತ್ತುವಳಿಯೊಂದನ್ನು ಪಾಸುಮಾಡಿದೆ.[೪] ಆದರೆ ಸಮಿತಿಯು ಈ ವಿಷಯದಲ್ಲಿ ಇದಕ್ಕಿಂತ ಹೆಚ್ಚಿಗೆ ಮುಂದುವರಿಯಲಿಲ್ಲ. ಏಕೆಂದರೆ ಬಂಗಾಲ ಒಪ್ಪಂದದ ಬಗೆಗೆ ಹಿಂದೂ ಜನರ ಭಾವನೆಗಳು ಎಷ್ಟರಮಟ್ಟಿಗೆ ತೀಕ್ಷ್ಣವಾಗಿದ್ದವೆಂದರೆ, ಲಾಲಾ ಲಜಪತರಾಯರ ಪ್ರಕಾರ ಸಮಿತಿಯ ಪರಿಶ್ರಮಕ್ಕನುಗುಣವಾಗಿ

---

* ಲೀಗಿನ ಈ ಗೊತ್ತುವಳೀಯ ಪೂರ್ತಿ ಪಾಠಕ್ಕಾಗಿ "ಇಂಡಿಯನ್ ಆ್ಯನ್ಯುಅಲ್ ರಿಜಿಸ್ಟರ್-೧೯೨೩" ಇದರ ಸಮಪುಟದ ೩೫೫-೩೬೬ನೆಯ ಪುಟಗಳನ್ನು ನೋಡಿರಿ.

೧. ಬೆಂಗಾಲ್ ಪ್ಯಾಕ್ಟ್ವಿವರಗಳಿಗಾಗಿ ೧೯೨೩ರ ಇಂಡಿಯನ್ ನ್ಯಾಶನಲ್ ರಜಿಸ್ಟ್ರರ್, ಸಂಪುಟ ೧, ಪುಟ ೧೨೭.

೨. ಒಪ್ಪಂದದ ವಿವರಗಳ ಕರಡು ಹಾಗೂ ವರದಿಯ ಬಗ್ಗೆ ಇಂಡಿಯನ್ ನ್ಯಾಶನಲ್ ರಿಜಿಸ್ಟ್ರರ್, ೧೯೨೩, ಸಂಪುಟ ೨, ಪುರವಣಿ, ಪುಟ ೧೦೪-೧೦೮.

೩. ಈ ಎರಡು ಒಪ್ಪಂದಗಳ ಮೇಲಿನ ಚರ್ಚೆಯ ಬಗೆಗೆ ಇಂಡಿಯನ್ ನ್ಯಾಶನಲ್ ರಿಜಿಸ್ಟರ್, ೧೯೨೩, ಸಂಪುಟ ೨, ಪುರವಣಿ, ಪುಟ ೧೨೧-೧೨೭.

೪. ಗೊತ್ತುವಳಿಗಾಗಿ ಇಂಡಿಯನ್ ನ್ಯಾಶನಲ್ ರಜಿಸ್ಟರ್, ೧೯೨೩, ಸಂ.೨, ಪುಟ ೧೨೨ ನೋಡಿರಿ.

ಮುಂದುವರಿಯಲು ಕಾಲ ಪಕ್ವರಾಗಿರಲಿಲ್ಲ. ಅಲ್ಲದೆ, ಆಗ ಗಾಂಧೀಜಿಯವರು ಕೂಡ ಜೈಲಿನಿಂದ ಬಿಡುಗಡೆ ಮಾಡಲ್ಪಟ್ಟರಾದುದರಿಂದ ಅವರೇ ಈ ವಿಷಯವನ್ನು ಕೈಗೆತ್ತಿಕೊಳ್ಳುವರೆಂದು ಆಲೋಚಿಸಲಾಯಿತು. ಈ ಕಾರಣದಿಂದ ಡಾ. ಅನ್ಸಾರಿ ಅವರು ತಾವು ಸಂಗ್ರಹಿಸಿದ ಮಾಹಿತಿಯನ್ನು ಅಖಿಲ ಭಾರತ ಕಾಂಗ್ರೆಸ್ ಸಭೆಗೆ ಒಪ್ಪಿಸಿ ಸಮಾಧಾನಪಟ್ಟುಕೊಂಡರು.

ಗಾಂಧೀಜಿಯವರು ಜೈಲಿನಿಂದ ಹೊರಗೆ ಬರುತ್ತಲೇ ಸೂತ್ರಗಳನ್ನು ತಮ್ಮ ಕೈಗೆ ತೆಗೆದುಕೊಂಡರು. ೧೯೨೪ನೆಯ ಇಸ್ವಿಯಲ್ಲಿ ಅನೌಪಚಾರಿಕವಾಗಿ ಮುಂಬಯಿಯಲ್ಲಿ ಚರ್ಚಿಸಲಾಯಿತು. ಈ ಮಾತುಕತೆಗಳ ಪರಿಣಾಮವಾಗಿ, ಎಲ್ಲ ಪಕ್ಷಗಳ ಸಮ್ಮೇಳನವೊಂದನ್ನು ರೂಪಿಸಲಾಯಿತಲ್ಲದೇ ಒಗ್ಗಟ್ಟನ್ನು ಉಂಟುಮಾಡಲು ಸಮಿತಿಯೊಂದನ್ನು ರಚಿಸಲಾಯಿತು. ಸಮ್ಮೇಳನವು ನಿಜವಾಗಿಯೇ ಸರ್ವಪಕ್ಷಗಳ ಸಮ್ಮೇಳನವಾಯಿತು; ಅದರಲ್ಲಿ ಕಾಂಗ್ರೆಸ್, ಹಿಂದೂ ಮಹಾಸಭಾ, ಜಸ್ಟೀಸ್ ಪಾರ್ಟೀ, ಲಿಬರಲ್ ಫೆಡರೇಶನ್, ಇಂಡಿಯನ್ ಕ್ರಿಶ್ಚನ್ಸ್, ಮುಸ್ಲಿಮ್ ಲೀಗ್ ಮೊದಲಾದ ಪಕ್ಷಗಳಿಂದ ಪ್ರತಿನಿಧಿಗಳನ್ನು ಆರಿಸಿಕೊಳ್ಳಲಾಗಿದ್ದಿತು. ೨೩.೧.೧೯೨೫ರಂದು, ಸರ್ವಪಕ್ಷಗಳ ಸಮ್ಮೇಳನದಿಂದ ನಿಯುಕ್ತಗೊಂಡ ಸಮಿತಿಯ ಸಭೆ ದಿಲ್ಲಿಯ 'ವೆಸ್ಟರ್ನ್ ಹೋಟೆಲ್'ನಲ್ಲಿ ನಡೆಯಿತು.* ಗಾಂಧೀಜಿಯವರು ಅಧ್ಯಕ್ಷತೆ ವಹಿಸಿದ್ದರು. ಜನವರಿ ೨೪ನೆಯ ತಾರೀಖಿನ ದಿವಸ ಈ ಸಮಿತಿಯು, (ಅ) ಎಲ್ಲ ಪಕ್ಷಗಳು ಕಾಂಗ್ರೆಸ್ ಸೇರಲು ಅನುಕೂಲವಾಗುವಂತೆ ಶಿಫಾರಸುಗಳನ್ನು ರೂಪಿಸುವುದಕ್ಕಾಗಿ, (ಬ) ಎಲ್ಲಾ ಸಮಾಜಗಳ, ಜನಾಂಗಗಳ ಹಾಗೂ ಉಪವಿಭಾಗಗಳ ಪ್ರಾತಿನಿಧ್ಯ ಸ್ವರಾಜ್ಯದ ಅಡಿಯಲ್ಲಿ ವಿಧಾನ ಸಭೆಗಳಲ್ಲಿ ಹಾಗೂ ಇತರ ಚುನಾಯಿತ ಮಂಡಳಗಳಲ್ಲಿ ಇರುವಂತೆ ಒಂದು ಯೋಜನೆಯನ್ನು ರೂಪಿಸುವುದಕ್ಕಾಗಿ ಮತ್ತು ಸೇವೆ(ನೌಕರಿ)ಗಳಲ್ಲಿ ಕಾರ್ಯಕೌಶಲಕ್ಕೆ ಬಾಧೆಯುಂಟಾಗದಂತೆ ವಿವಿಧ ಸಮಾಜಗಳ ನ್ಯಾಯಯುತ ಹಾಗೂ ತಕ್ಕ ಪ್ರಾತಿನಿಧ್ಯ ದೊರಕಿಸಲು ಅತ್ಯುತ್ತಮ ವಿಧಾನವನ್ನು ಶಿಫಾರಸು ಮಾಡುವುದಕ್ಕಾಗಿ ಮತ್ತು (ಕ) ದೇಶದ ಇಂದಿನ ಅವಶ್ಯಕತೆಗಳನ್ನು ಪೂರೈಸುವ ರೀತಿಯಲ್ಲಿ ಸ್ವರಾಜ್ಯದ ಯೋಜನೆಯೊಂದನ್ನು ಸಿದ್ಧಪಡಿಸುವುದಕ್ಕಾಗಿ, ನಲ್ವತ್ತು ಜನ ಪ್ರತಿನಿಧಿಗಳಿರುವ ಉಪಸಮಿತಿಯೊಂದನ್ನು ರಚಿಸಿತು. ೧೫.೨.೧೯೨೫ರಂದು ಇಲ್ಲವೇ ಅದಕ್ಕಿಂತ ಮೊದಲು ವರದಿಯನ್ನು ಸಲ್ಲಿಸುವಂತೆ ಸಮಿತಿಗೆ ಸೂಚಿಸಲಾಯಿತು. ಈ ಕೆಲಸವು ಬೇಗನೇ ಆಗಲೆಂಬ ದೃಷ್ಟಿಯಿಂದ, ಮುಖ್ಯ ಸಮಿತಿಗೆ ಸಮುದಾಯಗಳ ಪ್ರಾತಿನಿಧ್ಯ ಯೋಜನೆಯನ್ನು ರೂಪಿಸುವ ಕೆಲಸವನ್ನು ಬಿಟ್ಟು ಕೆಲವರು ಸದಸ್ಯರು ಸ್ವರಾಜ್ಯ ಯೋಜನೆಯ ರೂಪರೇಷೆಯನ್ನು ತಯಾರಿಸಲು ತಮ್ಮದೇ ಆದ ಸಣ್ಣ ಸಮಿತಿಯನ್ನು ರಚಿಸಿಕೊಂಡರು. ಅದನ್ನು ಸರ್ವ ಪಕ್ಷಗಳ ಸಾಮಾನ್ಯ ಸಮಿತಿಯ ಪರಿಶೀಲನೆಗೆ ಒಪ್ಪಿಸಿತು. ಕೋಮುಗಳ ಪ್ರಾತಿನಿಧಿತ್ವದ ಯೋಜನೆಯನ್ನು ಸಿದ್ಧಪಡಿಸಲು ನೇಮಿಸಿದ ಉಪಸಮಿತಿಯು ೧.೩.೧೯೨೫ರಂದು ದಿಲ್ಲಿಯಲ್ಲಿ ಸಭೆ ಸೇರಿ ಯಾವ ನಿರ್ಣಯಕ್ಕೂ ಬರಲಾಗದೇ ಅನಿರ್ದಿಷ್ಟ ಅವಧಿಯವರೆಗೆ ಮುಂದೆ ಹಾಕಲ್ಪಟ್ಟಿತು. ಲಾಲಾ ಲಜಪತರಾಯರು ಮತ್ತು ಇತರ ಹಿಂದೂ ಜನರ ಪ್ರತಿನಿಧಿಗಳು ಈ ಉಪಸಮಿತಿಯ ಸಭೆಗೆ ಬರಲಾಗಲಿಲ್ಲವೆಂಬುದೇ ಇದಕ್ಕೆ ಕಾರಣವಾಯಿತು. ಮಹಾತ್ಮಾಗಾಂಧೀಜಿ ಮತ್ತು ಪಂಡಿತ ಮೋತಿಲಾಲ್ ನೆಹರೂ ಈ ಕೆಳಗಿನಂತೆ ಪ್ರಕಟಣೆ ಕೊಟ್ಟರು:

**"ಶ್ರೀಯುತರಾದ ಜಯಕರ, ಶ್ರೀನಿವಾಸ ಅಯ್ಯಂಗಾರ್ ಮತ್ತು ಜಯರಾಮದಾಸ ಅವರು ಉಪಸ್ಥಿತರಾಗಲು ಸಾಧ್ಯವಾಗದ ಕಾರಣಕ್ಕಾಗಿ ಲಾಲಾ ಲಜಪತರಾಯರು ಸಭೆಯನ್ನು ಮುಂದೆ ಹಾಕಲು ಕೇಳಿದ್ದರು. ತಮ್ಮ**

---

* ಸಮಿತಿಯ ನಡೆವಳಿಕೆಗಳಿಗಾಗಿ, ಇಂಡಿಯನ್ ಕ್ವಾರ್ಟರ್ಲೀ ರಿಜಿಸ್ಟರ್–೧೦೨೫ರ ಪ್ರಥಮ ಸಂಪುಟದ ೬೬–೭೭ನೆಯ ಪುಟಗಳನ್ನು ನೋಡಿರಿ.

**ಜವಾಬ್ದಾರಿಯ ಮೇಲೆಯೇ ಸಭೆಯನ್ನು ಮುಂದೆ ಹಾಕಲು ನಮಗೆ ಸಾಧ್ಯವಿರಲಿಲ್ಲ. ಮುಂದೆ ಹಾಕುವ ವಿಷಯವನ್ನು ಸಭೆಯಲ್ಲಿಯೇ ಇಡೋಣವೆಂದು ಲಾಲಾ ಲಜಪತರಾಯ ಅವರಿಗೆ ತಿಳಿಸಿದೆವು. ತತ್ಪರಿಣಾಮವಾಗಿ ಹಾಗೆ ಮಾಡಲಾಯಿತು. ಆದರೆ ಲಾಲಾ ಲಜಪತರಾಯರ ಮತ್ತು ಅವರು ತಿಳಿಸಿದ ಮಹನೀಯರ ಅನುಪಸ್ಥಿತಿಯಷ್ಟೇ ಅಲ್ಲದೇ ಇತರರ ಉಪಸ್ಥಿತಿಯೂ ನಿರ್ಣಯಕ್ಕೆ ಬರಲು ಸಾಕಾಗುತ್ತಿರಲಿಲ್ಲ. ಹಾಗಲ್ಲದೇ ಯಾವುದೇ ನಿಶ್ಚಿತ ನಿರ್ಣಯಕ್ಕೆ ಬರಲು, ನಮ್ಮ ಅಭಿಪ್ರಾಯದಲ್ಲಿ, ತಕ್ಕಷ್ಟು ಕಾಗದಪತ್ರಗಳಿರಲಿಲ್ಲ. ಹಾಗೂ ಸದ್ಯೋ ಭವಿಷ್ಯತ್ತಿನಲ್ಲಿ ಯಾವುದೇ ನಿರ್ಣಯಕ್ಕೆ ಬರುವ ಸಾಧ್ಯತೆ ಇರಲಿಲ್ಲ...''**

ಈ ಪ್ರಕಟಣೆಗೆ ಸಂಬಂಧಿಸಿದ ಮಹನೀಯರ ಮನಸ್ಸಿನ ಸ್ಥಿತಿಯನ್ನು ನಿಜವಾಗಿಯೂ ಸ್ವಲ್ಪದರಲ್ಲಿ ವ್ಯಕ್ತಮಾಡಿದೆ ಎಂಬುದರಲ್ಲಿ ಸಂದೇಹವಿಲ್ಲ. ಹಿಂದೂ ಜನರ ಪ್ರತಿನಿಧಿಯಾಗಿ ಸಮಿತಿಯಲ್ಲಿದ್ದ ದಿವಂಗತ ಲಾಲಾ ಲಜಪತರಾಯರು ಅಲಹಾಬಾದದ 'ಲೀಡರ್' ಪತ್ರಿಕೆಯಲ್ಲಿ ಲೇಖನ ಬರೆದು, ಹೊಸ ಒಪ್ಪಂದಕ್ಕಾಗಿ ಈಗಲೇ ಅವಸರ ಮಾಡಬೇಕಾದುದೇನೂ ಇಲ್ಲವೆಂದೂ ಮತ್ತು ಕೆಲವು ಪ್ರಾಂತಗಳಲ್ಲಿರುವ ಹಿಂದೂ ಜನರ ಅಧಿಕ ಸಂಖ್ಯೆ ಹಾಗೂ ಇತರ ಪ್ರಾಂತಗಳಲ್ಲಿರುವ ಮುಸಲ್ಮಾನರ ಅಧಿಕ. ಸಂಖ್ಯೆ– ಇವುಗಳು ಮಾತ್ರ ಹಿಂದೂ–ಮುಸಲ್ಮಾನರಲ್ಲಿ ಒಗ್ಗಟ್ಟನ್ನು ತರಬಲ್ಲವೆಂಬುದನ್ನು ಒಪ್ಪಲು ಅವರು ನಿರಾಕರಿಸಿದರು.

ಹಿಂದೂ–ಮುಸಲ್ಮಾನರ ಒಗ್ಗಟ್ಟಿನ ವಿಷಯವನ್ನು ೧೯೨೭ನೆಯ ಇಸ್ವಿಯಲ್ಲಿ ಪುನಃ ತೆಗೆದುಕೊಳ್ಳಲಾಯಿತು. ೧೯೧೬ನೆಯ ಇಸ್ವಿಯಲ್ಲಿ ನಡೆದು ಲಖನೋ ಒಪ್ಪಂದವಾಗಿ ಸಫಲಗೊಂಡ ಮಾಂಟ್ಯಗೂ–ಚಲ್ಮ್ಸ ಫರ್ಡ್ ವಿಚಾರಣೆಗಿಂತ ಮೊದಲು ಮಾಡಲಾಗಿದ್ದ, ಪ್ರಯತ್ನದಂತೆ ಇದೂ ಯಶಸ್ವಿಯಾಗುವುದೆಂಬ ಆಶೆಯಿಂದ ಸೈಮನ್ ಕಮೀಶನ್ ವಿಚಾರಣೆಗಿಂತ ಸ್ವಲ್ಪ ಮೊದಲು ಈ ಪ್ರಯತ್ನವನ್ನು ಮಾಡಲಾಗಿದ್ದಿತು. ಪ್ರಾರಂಭದಲ್ಲಿ, ೨೦.೩.೧೯೨೭ರಂದು ಪ್ರಮುಖ ಮುಸಲ್ಮಾನರ ಸಮ್ಮೇಳನವೊಂದು ದಿಲ್ಲಿಯಲ್ಲಿ ನಡೆದು ಅದರಲ್ಲಿ ಮುಸಲ್ಮಾನರಿಗೆ ಪ್ರಯೋಜನಕಾರಿಯಾದ ಕೆಲವು ಕ್ರಮಗಳನ್ನು ಸೂಚಿಸಲಾಯಿತು.[೧] 'ದಿಲ್ಲಿಯ ಸೂಚನೆಗಳು' ಎಂದೇ ಕರೆಯಲಾಗುವ ಈ ಸೂಚನೆಗಳನ್ನು ೧೯೨೭ ಡಿಸೆಂಬರದಲ್ಲಿ ಮದ್ರಾಸಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಪರಿಶೀಲಿಸಲಾಯಿತು. ಬೇರೆ ಸಂಘಟನೆಗಳು ನೇಮಿಸುವ ಅದೇ ರೀತಿಯ ಸಮಿತಿಗಳೊಡನೆ ಸಮಾಲೋಚಿಸಿ ಭಾರತಕ್ಕೆ ಸ್ವರಾಜ್ಯ ಸಂವಿಧಾನವೊಂದನ್ನು ರೂಪಿಸಲು ಕಾರ್ಯಕಾರಿ ಸಮಿತಿಗೆ ಅಧಿಕಾರ ನೀಡಿ ಕಾಂಗ್ರೆಸ್ ಅದೇ ಸಮಯಕ್ಕೆ ಗೊತ್ತುವಳಿಯೊಂದನ್ನು ಪಾಸು ಮಾಡಿತು.[೨] ದಿ ಲಿಬರಲ್ ಫೆಡರೇಶನ್ ಮತ್ತು ಮುಸ್ಲಿಮ್ ಲೀಗ್, ತಮ್ಮ ಪ್ರತಿನಿಧಿಗಳನ್ನು ಅದರ ಕಾರ್ಯಕ್ಕೆ ತೊಡಗಲು ಸೂಚಿಸಿ ನೇಮಕ ಮಾಡಿ ಅದೇ ರೀತಿಯ ಗೊತ್ತುವಳಿಗಳನ್ನು ಪಾಸು ಮಾಡಿದವು. ತಮ್ಮ ವಕ್ತಾರರನ್ನು ಕಳಿಸುವಂತೆ ಇತರ ಸಂಘಟನೆಗಳಿಗೆ ಭಿನ್ನಹ ಮಾಡಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಕರೆ ನೀಡಿತು. 'ಸರ್ವಪಕ್ಷಗಳ ಸಮ್ಮೇಳನ'ವು ಆ ಸಮಿತಿಯನ್ನು ಹಾಗೆ ಕರೆಯಿತು.[೩] ದಿನಾಂಕ

---

೧. ಈ ಸೂಚನೆಗಳನ್ನು 'ಇಂಡಿಯನ್ ಕ್ವಾರ್ಟರ್ಲೀ ರಿಜಿಸ್ಟರ್'– ೧೯೨೭ರ ಪ್ರಥಮ ಸಂಪುಟದ ೩೩ನೆಯ ಪುಟದಲ್ಲಿ ನೋಡಬಹುದು. ಇದೇ ಸೂಚನೆಗಳು ಆಮೇಲೆ ಜಿನ್ನಾರವರ ೧೪ ಅಂಶಗಳಿಗೆ ಆಧಾರವಾದವು.

೨. ಈ ಸೂಚನೆಗಳ ಬಗೆಗೆ ಕಾಂಗ್ರೆಸ್ ಗೊತ್ತುವಳಿಯನ್ನು ಇಂಡಿಯನ್ ಕ್ವಾರ್ಟರ್ಲೀ ರಿಜಿಸ್ಟರ್– ೧೯೨೭ರ ದ್ವಿತೀಯ ಸಂಪುಟದ ೩೭೭–೩೭೮ನೆಯ ಪುಟಗಳನ್ನು ನೋಡಿರಿ.

೩. ಸರ್ವ ಪಕ್ಷ ಸಮ್ಮೇಳನದ ಮೂಲ, ಇತಿಹಾಸ ಮತ್ತು ರಚನೆ ಇವುಗಳಿಗಾಗಿ ಮತ್ತು ವರದಿಯ ಮೂಲ ಪಾಠಕ್ಕಾಗಿ 'ಇಂಡಿಯನ್ ಕ್ವಾರ್ಟರ್ಲೀ ರಿಜಿಸ್ಟರ್–೧೯೨೮, ಸಂಪುಟ ೧, ಪುಟ ೧–೧೪೨ರವರೆಗೆ ನೋಡಿರಿ.

೧೨.೨.೧೯೨೮ರಂದು ತನ್ನ ಸಭೆ ಕರೆದು ಸಂವಿಧಾನವನ್ನು ರೂಪಿಸಲು ಉಪಸಮಿತಿಯೊಂದನ್ನು ನೇಮಿಸಿತು. ಈ ಸಮಿತಿಯು ಸಂವಿಧಾನದ ಕರಡಿನ ಜೊತೆಗೆ ಒಂದು ವರದಿಯನ್ನೂ ಸಿದ್ಧಪಡಿಸಿತು– ಇದು 'ನೆಹರು ವರದಿ' ಎಂದೇ ಪ್ರಸಿದ್ಧಿಯಾಗಿದೆ. ಈ ವರದಿಯನ್ನು ಕಾಂಗ್ರೆಸ್ ಅಧಿವೇಶನಕ್ಕೆ ಸ್ವಲ್ಪ ಮೊದಲು, ಕಲಕತ್ತಾದಲ್ಲಿ ದಿನಾಂಕ ೨೨.೧೨.೧೯೨೮ರಂದು ಡಾ. ಅನ್ಸಾರಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸರ್ವ ಪಕ್ಷಗಳ ಸಮ್ಮೇಳನದ ಸಭೆಯಲ್ಲಿ ಇಡಲಾಯಿತು. ಈ ಸಮಾವೇಶವು ೧.೧.೧೯೨೯ರಂದು ಅನಿಯಮಿತ ಅವಧಿಯವರೆಗೆ, ಯಾವ ಸಮಸ್ಯೆಯ ಬಗೆಗೂ– ಜಾತೀಯತೆಯ ಪ್ರಶ್ನೆಯ ಮೇಲೆ ಕೂಡ– ಯಾವ ಒಮ್ಮತವೂ ಬಾರದೇ, ಮುಂದೆ ಹಾಕಲ್ಪಟ್ಟಿತು.

ಇದು ಆಶ್ಚರ್ಯಕ್ಕೆ ಬಹುಶಃ ಎಡೆಮಾಡಿಕೊಟ್ಟಿತು– ಏಕೆಂದರೆ, ಮುಸಲ್ಮಾನರ ಸೂಚನೆಗಳ ಮತ್ತು ನೆಹರೂ ಸಮಿತಿಯು ಮಾಡಿದ ವರದಿಯಲ್ಲಿಯ ಸೂಚನೆಗಳ ಮಧ್ಯದಲ್ಲಿರುವ ವ್ಯತಿರಿಕ್ತ ಅಂಶಗಳು ವಾಸ್ತವಿಕವಾಗಿರಲಿಲ್ಲ. ಈ ವಿಷಯವು 'ಸರ್ವ ಪಕ್ಷಗಳ ಸಮಾವೇಶ'ದಲ್ಲಿ ತಾವು ತಂದ ತಿದ್ದುಪಡಿಗಳನ್ನು ಸಮರ್ಥಿಸುತ್ತ ಶ್ರೀ ಜಿನ್ನಾರವರು ಮಾಡಿದ ಭಾಷಣದಲ್ಲಿ ಸ್ಪಷ್ಟವಿದೆ.* ನೆಹರೂ ಸಮಿತಿಯ ವರದಿಯಲ್ಲಿ ನಾಲ್ಕು ತಿದ್ದುಪಡಿಗಳಾಗಬೇಕೆಂದು ಶ್ರೀ ಜಿನ್ನಾ ಬಯಸಿದರು. ಕೇಂದ್ರ ವಿಧಾನ ಮಂಡಲದಲ್ಲಿ ನೂರಕ್ಕೆ ೩೩ ೧/೩ರಷ್ಟು ಪ್ರಾತಿನಿಧ್ಯ ಮುಸಲ್ಮಾನರಿಗೆ ಇರಬೇಕೆಂಬ ಬೇಡಿಕೆಗೆ ಸಂಬಂಧಿಸಿದ ತಮ್ಮ ಮೊದಲನೆಯ ತಿದ್ದುಪಡಿಯ ಮೇಲೆ ಮಾತನಾಡುತ್ತ ಶ್ರೀ ಜಿನ್ನಾ ಹೀಗೆ ಹೇಳಿದರು:

**"ತಾವು ಮುಂದಿಡುವ ಯೋಜನೆಯ ಪ್ರಕಾರ ಕೇಂದ್ರ ವಿಧಾನ ಮಂಡಳದಲ್ಲಿ ಮುಸಲ್ಮಾನರು ೧/೩ರಷ್ಟು ಹಾಗೂ ಬಹುಶಃ ಅದಕ್ಕಿಂತ ಹೆಚ್ಚು ಸ್ಥಾನ ಪಡೆಯುವರೆಂದು 'ನೆಹರೂ ವರದಿ'ಯಲ್ಲಿ ಹೇಳಲಾಗಿದೆ. ಮತ್ತು ಪಂಜಾಬ, ಬಂಗಾಲ ಪ್ರಾಂತ್ಯಗಳು ತಮ್ಮ ಜನಸಂಖ್ಯೆಯ ಪ್ರಮಾಣಕ್ಕಿಂತ ಬಹಳಷ್ಟ ಅಧಿಕ ಸ್ಥಾನ ಪಡೆಯುವವೆಂದು ಪ್ರತಿಪಾದಿಸಲಾಗುತ್ತಿದೆ. ನಮ್ಮ ಅನಿಸಿಕೆ ಹೀಗಿದೆ. ಮುಸಲ್ಮಾನರು ಒಂದು ಮೂರಾಂಶದಷ್ಟು ಸ್ಥಳಗಳನ್ನು ಪಡೆದರೆ, ಮುಸಲ್ಮಾನರು ಅಲ್ಪಸಂಖ್ಯಾತರಾಗಿರುವ ಪ್ರಾಂತಗಳಿಗೆ ನೀವು ಅನುಸರಿಸುವ ವಿಧಾನವು ಸಮಂಜಸವಾಗಲಾರದು: 'ಏಕೆಂದರೆ ಕೇಂದ್ರ ವಿಧಾನ ಮಂಡಲದಲ್ಲಿ ಪಂಜಾಬ ಮತ್ತು ಬಂಗಾಲಗಳು ತಮ್ಮ ಜನಸಂಖ್ಯೆಯ ಆಧಾರದ ಮೇಲೆ ಇನ್ನೂ ಅಧಿಕ ಸ್ಥಾನಗಳನ್ನು ಪಡೆಯುವವು. ಎಂದರೆ, ಶ್ರೀಮಂತರಿಗೆ ನೀವು ಹೆಚ್ಚು ಹೆಚ್ಚು ಕೊಟ್ಟಂತೆಯೂ ಮತ್ತು ಬಡವರನ್ನು ಜನಸಂಖ್ಯೆಯ ಮಟ್ಟಿಗೂ ಇಟ್ಟಂತೆ ಆಗುವುದು. ಇದು ತರ್ಕಬದ್ಧವಾಗಿರುವಂತೆ ತೋರಬಹುದು. ಆದರೆ, ಇದು ಬುದ್ಧಿವಂತಿಕೆಯಲ್ಲ...**

**"ಆದುದರಿಂದ, ನೆಹರೂ ವರದಿಯು ಸೂಚಿಸುವಂತೆ, ಮುಸಲ್ಮಾನರು ೧/೩ ಇಲ್ಲವೇ ಅದಕ್ಕಿಂತ ಹೆಚ್ಚಿಗೆ ಪಡೆಯಲಿದ್ದರೆ, ಪಂಜಾಬ ಮತ್ತು ಬಂಗಾಲಗಳಿಗೆ ಅಧಿಕವಾಗಿ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಹೆಚ್ಚಿಗೆ ಇರುವ ಆರು ಇಲ್ಲವೇ ಏಳು ಸ್ಥಳಗಳನ್ನು ಬಹಳ ಅಲ್ಪಸಂಖ್ಯಾತರಾಗಿರುವ ಮದ್ರಾಸ್ ಮತ್ತು ಮುಂಬಯಿಗಳಂಥ ಪ್ರಾಂತ್ಯಗಳಲ್ಲಿ ಹಂಚಿಹಾಕಲಿ; ಏಕೆಂದರೆ ಒಂದುವೇಳೆ ಸಿಂಧ್ ಪ್ರಾಂತ್ಯವು ಬೇರೆ ಮಾಡಲ್ಪಟ್ಟರೆ ಮುಂಬಯಿ ಪ್ರಾಂತ್ಯವು ನೂರಕ್ಕೆ ಎಂಟರಷ್ಟಕ್ಕೆ ಮಾತ್ರ ಬಂದು ನಿಲ್ಲುವುದು. ಕಡಿಮೆ ಪ್ರಮಾಣದ ಅಲ್ಪಸಂಖ್ಯಾತರಿರುವ ಇತರ ಪ್ರಾಂತಗಳು ನಮ್ಮಲ್ಲಿ ಇವೆ. ಒಂದು ಮೂರಾಂಶವನ್ನು ನಿಶ್ಚಿತಪಡಿಸಿರಿ. ಆದರೆ, ಅದನ್ನು ತಮಗೆ ಸರಿಹೋಗುವಂತೆ ಮುಸಲ್ಮಾನರು ಹಂಚಿಕೊಳ್ಳುವಂತೆ ಆಗಲಿ**

* ಇಂಡಿಯನ್ ಕ್ವಾರ್ಟರ್ಲೀ ರಿಜಿಸ್ಟರ್– ೧೯೨೮, ಸಂಪುಟ ೧, ಪುಟ ೧೨೩–೧೨೪ ನೋಡಿರಿ.

**ಎಂದು ನಾವು ಹೇಳುತ್ತಿರುವುದು ಇದೇ ಕಾರಣಕ್ಕಾಗಿ ಆಗಿದೆ.''**

ಅವರ ಎರಡನೆಯ ತಿದ್ದುಪಡಿಯ ಪಂಜಾಬ ಮತ್ತು ಬಂಗಾಲಗಳಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಸ್ಥಳಗಳ ಮೀಸಲಾತಿಗೆ– ಎಂದರೆ ಕಾಯಿದೇ ಪ್ರಕಾರ ಸಿದ್ಧವಾದ ಬಹುಸಂಖ್ಯಾತರ ಹಕ್ಕಿಗೆ ಸಂಬಂಧಿಸಿದುದಾಗಿದೆ. ಈ ವಿಷಯವಾಗಿ ಶ್ರೀ ಜಿನ್ನಾ ಹೀಗೆ ಹೇಳಿರುವರು:

**''ದಿಲ್ಲಿಯ ಸೂಚನೆಗಳು ಎಂದೇ ಕರೆಯಲಾಗುವ ಸೂಚನೆಗಳು, ೧೯೨೭ನೆಯ ಇಸ್ವಿಯ ಮಾರ್ಚ್ ತಿಂಗಳಲ್ಲಿ ಕೆಲವರು ಮುಸಲ್ಮಾನ ನಾಯಕರಿಂದ ಹೊರಹೊಮ್ಮಿದ ಮೂಲ ಸೂಚನೆಗಳೇ ಆಗಿವೆ ಎಂಬುದು ನಿಮಗೆ ನೆನಪಿರಬಹುದು. ಅವುಗಳನ್ನು ಮುಂಬಯಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆ, ಮದ್ರಾಸ್ ಕಾಂಗ್ರೆಸ್ ಹಾಗೂ ಕಲಕತ್ತಾದಲ್ಲಿ ನಡೆದ ಮುಸ್ಲಿಮ್ ಲೀಗ್ ಸಭೆಗಳು ಪರಾಮರ್ಶಿಸಿ ಸೂಚನೆಯ ಈ ಭಾಗವನ್ನಾದರೂ, ಬಹಳ ಚೆನ್ನಾಗಿ ಅನುಮೋದಿಸಿವೆ. ನಾನು ವಿವರವಾದ ಪ್ರತಿಪಾದನೆಯಲ್ಲಿ ತೊಡಗುತ್ತಿಲ್ಲ. ಇದೆಲ್ಲವೂ ನಿಜವಾಗಿ ಒಂದು ಸಿದ್ಧಾಂತದಲ್ಲಿ ಪರ್ಯವಸಾನ ಹೊಂದುತ್ತದೆ– ಅಂದರೆ, ಪಂಜಾಬ ಮತ್ತು ಬಂಗಾಲಗಳಲ್ಲಿ ಮುಸಲ್ಮಾನರು ಬಹುಸಂಖ್ಯಾತರಾಗಿ ಇರುವರಾದರೂ ಕೂಡ ಅವರು ಮತದಾನ ಮಾಡುವ ಸಾಮರ್ಥ್ಯ ಅವರ ಜನಸಂಖ್ಯೆಯ ಅನುಪಾತಕ್ಕೆ ಅನುಗುಣವಾಗಿ ಇಲ್ಲ. ಹಲವು ಕಾರಣಗಳಲ್ಲಿ ಅದೂ ಒಂದು. ನೆಹರೂ ವರದಿಗೆ ಪರ್ಯಾಯ ವ್ಯವಸ್ಥೆ ದೊರಕಿದೆ ಮತ್ತು ಒಂದು ವೇಳೆ ಪ್ರೌಢ ಮತದಾನ ವ್ಯವಸ್ಥೆ ಜಾರಿಯಲ್ಲಿ ಬಂದರೆ ಮೀಸಲಾತಿ ಅವಶ್ಯವಿಲ್ಲವೆಂದು ಅವರು ಹೇಳುತ್ತಾರೆ; ಆದರೆ ಅದು ಜಾರಿಯಲ್ಲಿ ಬಾರದಿದ್ದರೆ, ಅಂಥ ಸ್ಥಿತಿಯಲ್ಲಿ ಪಂಜಾಬ ಮತ್ತು ಬಂಗಾಲಗಳಲ್ಲಿಯ ಮುಸಲ್ಮಾನರಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಇರತಕ್ಕದ್ದೆಂಬುದನ್ನೂ ಆದರೆ ಅವರು ಹೆಚ್ಚಿನ ಸ್ಥಳಗಳನ್ನು ದೊರಕಿಸುವ ಹಕ್ಕು ಪಡೆಯುವುದಿಲ್ಲವೆಂಬುದನ್ನೂ ನಿಸ್ಸಂಶಯವಾಗಿ ಅರಿಯಬಯಸುತ್ತೇವೆ.''**

ಅವರ ಮೂರನೆಯ ತಿದ್ದುಪಡಿಯು, ನೆಹರೂ ಸಮಿತಿಯು ಕೇಂದ್ರ ಸರಕಾರಕ್ಕೆ ನೀಡಿದ ಶೇಷ ಅಧಿಕಾರಗಳಿಗೆ ಸಂಬಂಧಿಸಿದೆ. ಪ್ರಾಂತೀಯ ಸರಕಾರಗಳಿಗೆ ಆ ಅಧಿಕಾರಗಳನ್ನು ನೀಡಬೇಕೆಂಬ ತಮ್ಮ ತಿದ್ದುಪಡಿಯನ್ನು ಮಂಡಿಸುತ್ತ ಶ್ರೀಯುತ ಜಿನ್ನಾ ಅವರು ಹೀಗೆ ಪ್ರತಿಪಾದಿಸಿದ್ದಾರೆ:

**''ಮಹನೀಯರೇ, ಇದು ಕೇವಲ ಸಂವೈಧಾನಿಕ ಪ್ರಶ್ನೆಯಾಗಿದೆ ಹಾಗೂ ಇದಕ್ಕೂ ಜಾತೀಯತೆಗೂ ಯಾವ ಸಂಬಂಧವೂ ಇಲ್ಲ. ನಮ್ಮ ದೃಢ ನಿಶ್ಚಯ ಇದಾಗಿದೆ– ಮುಸಲ್ಮಾನರು ಜಾತಿಯ ಹಿನ್ನೆಲೆಯಲ್ಲಿಯೇ ಆಲೋಚಿಸುತ್ತಾರೆಂದು ಹಿಂದೂ ಜನರು ಅನ್ನುವರೆಂಬುದು ನನಗೆ ಗೊತ್ತಿದೆ– ಈ ಪ್ರಶ್ನೆಯನ್ನು ಲಕ್ಷ್ಯಪೂರ್ವಕ ಪರಿಶೀಲಿಸಿದರೆ, ಶೇಷ ಅಧಿಕಾರಗಳು ಪ್ರಾಂತ್ಯಗಳ ಬಳಿಯೇ ಇರಬೇಕೆಂಬುದು ನಮ್ಮ ನಿಲುವು; ಇದು ನಮ್ಮ ನಿಶ್ಚಲ ದೃಷ್ಟಿಕೋನವಾಗಿದೆ.''**

ಅವರ ನಾಲ್ಕನೆಯ ತಿದ್ದುಪಡಿಯು ಸಿಂಧ್ ಪ್ರಾಂತ್ಯವನ್ನು ಬೇರ್ಪಡಿಸುವ ವಿಷಯಕ್ಕೆ ಸಂಬಂಧಿಸಿದ್ದಾಗಿದೆ. ನೆಹರೂ ಸಮಿತಿಯು ಸಿಂಧ್ ಪ್ರಾಂತ್ಯ ಬೇರ್ಪಡಿಸುವ ಬಗೆಗೆ ಒಪ್ಪಿದ್ದಿತು; ಆದರೆ ''ವರದಿಯಲ್ಲಿ ನಿರೂಪಿಸಿದಂಥ ವ್ಯವಸ್ಥೆಯ ಸ್ಥಾಪನೆಯ ನಂತರ ಮಾತ್ರ'' ಅದು ಬೇರ್ಪಡಬೇಕು ಎನ್ನುವ ಒಂದು ಅವಕಾಶಕ್ಕೆ ಕಟ್ಟುಹಾಕಿದ್ದಿತು. ಈ ಅವಕಾಶದ ಕರಾರನ್ನು ಕಿತ್ತುಹಾಕಬೇಕೆಂದು ಮಂಡಿಸುತ್ತ ಶ್ರೀ ಜಿನ್ನಾ ಅವರು ಹೀಗೆ ಹೇಳಿದರು:

**"ಈ ತೊಂದರೆ ಉಂಟಾಗಬಹುದೆಂದು ನಮಗೆ ಅನ್ನಿಸುತ್ತಿದೆ... ಮುಂದಿನ ಆರು ತಿಂಗಳಲ್ಲಿ, ಒಂದು ವರ್ಷದಲ್ಲಿ, ಎರಡು ವರ್ಷಗಳಲ್ಲಿ, ಈ ಸಂವಿಧಾನದಡಿಯಲ್ಲಿ ಸರಕಾರ ಸ್ಥಾಪಿತವಾಗುವುದಕ್ಕಿಂತ ಮೊದಲೇ ಸಿಂಧ್ ಪ್ರಾಂತ್ಯ ಬೇರ್ಪಡಬೇಕೆಂದು ಸರಕಾರವು ಅಪೇಕ್ಷಿಸಿದ ಪಕ್ಷದಲ್ಲಿ 'ಅದು ನಮಗೆ ಬೇಕಾಗಿಲ್ಲ' ಎಂದು ಮುಸಲ್ಮಾನರು ಹೇಳಬೇಕಾಗುವುದೇ?... ಈ ವಾಕ್ಯ–ಖಂಡ ಇರುವವರೆಗೆ, ಈ ಸಂವಿಧಾನದನ್ವಯ ಒಂದೇವೇಳೆ ಒಂದು ಸರಕಾರ ಸ್ಥಾಪಿತವಾಗುವತನಕ ಸಿಂಧ್ ಪ್ರಾಂತ್ಯ ಬೇರ್ಪಡಬೇಕೆಂಬುದನ್ನು ಮುಸಲ್ಮಾನರು ವಿರೋಧಿಸತಕ್ಕದ್ದೆಂಬುದೇ ಇದರ ಅರ್ಥವಾಗಿದೆ. ಈ ಶಬ್ದಗಳನ್ನು ಕಿತ್ತುಹಾಕಬೇಕೆಂದು ನಾವು ಹೇಳುತ್ತೇವೆ ಮತ್ತು ಉತ್ತರ–ಪಶ್ಚಿಮ ಸರಹದ್ದು ಪ್ರಾಂತ್ಯವನ್ನು ಕುರಿತು ನೀವು ಇಂಥ ಸೂಚನೆ ಮಾಡಿರುವುದಿಲ್ಲವೆಂಬ ತಥ್ಯದ ಆಧಾರದ ಮೇಲೆ ನಾನು ನನ್ನ ವಾದವನ್ನು ಸಮರ್ಥಿಸುತ್ತೇನೆ... ಲಖನೋದಲ್ಲಿ ಸಹಿ ಮಾಡಿದ ಪಕ್ಷಗಳು ಮಾಡಿಕೊಂಡ ಒಪ್ಪಂದವನ್ನು ಗೊತ್ತುವಳಿಯ ದಾಖಲೆ ಮಾಡಿರುವುದರಿಂದ ಸಮಿತಿಯು ತಾನು ಒಪ್ಪಿಕೊಳ್ಳಲು ಸಾಧ್ಯವಿಲ್ಲವೆಂದು ಹೇಳುತ್ತದೆ. ಸಮಿತಿಯ ಸದಸ್ಯರಿಗೆ ತುಂಬ ಬೆಂಬಲಿಸುತ್ತ ಅದು ಅಧಿಕೃತ ಆಧಾರವಲ್ಲವೆಂದು ನಾನು ಹೇಳುವ ಸಾಹಸ ಮಾಡುತ್ತೇನೆ... ಈ ಅಧಿವೇಶನದಲ್ಲಿ, ನಾವು ಇದಕ್ಕೆ ಬಾಧ್ಯರಾಗಿದ್ದೇವೆಯೇ? ಕೆಲವು ವ್ಯಕ್ತಿಗಳ ಮಧ್ಯದಲ್ಲಿ ಒಪ್ಪಂದವಾಗಿ ಒಂದು ವಿಶಿಷ್ಟ ಗೊತ್ತುವಳಿ ಪಾಸಾಗಿದೆ ಎಂಬ ಕಾರಣದಿಂದ ಅದಕ್ಕೆ ನಾವು ಬದ್ಧವಾಗುತ್ತೇವೆಯೇ?"**

ಹಿಂದೂಗಳು ಮತ್ತು ಮುಸಲ್ಮಾನರ ಮಧ್ಯದ ಕಂದರವು ಯಾವುದೇ ರೀತಿಯಲ್ಲಿ ಅಗಲವಾಗಿರಲಿಲ್ಲವೆಂಬುದನ್ನು ಈ ಗೊತ್ತುವಳಿಗಳು ತೋರಿಸುತ್ತವೆ. ಆದರೆ, ಇಷ್ಟನ್ನು ಕೂಡ ಜೋಡಿಸುವ ಅಪೇಕ್ಷೆ ಇರಲಿಲ್ಲ. ಯಾವುದನ್ನು ಹಿಂದೂಗಳು ಮತ್ತು ಮುಸಲ್ಮಾನರು ಮಾಡಲು ಸಾಧ್ಯವಾಗಲಿಲ್ಲವೋ, ಅದನ್ನು ಬ್ರಿಟಿಷ್ ಸರಕಾರವು ಮಾಡಬೇಕಾಯಿತು ಮತ್ತು ಹಾಗೆ ಅವರು 'ಕಮ್ಯುನಲ್ ಅವಾರ್ಡ್ (ಕೋಮು ತೀರ್ಪು) ಮೂಲಕ ಮಾಡಿದರು.

ಹಿಂದೂಗಳು ಮತ್ತು ದಲಿತ ವರ್ಗಗಳ ಮಧ್ಯದಲ್ಲಿ, ಒಗ್ಗಟ್ಟನ್ನು ಉಂಟುಮಾಡುವುದಕ್ಕಾಗಿ, ಆದ 'ಪುಣೆ ಒಪ್ಪಂದ'ವು ಮತ್ತೊಮ್ಮೆ ಚಾಲನೆಯನ್ನು ಕೊಟ್ಟಿತು.* ೧೯೩೨ನೆಯ ಇಸ್ವಿಯ ನವೆಂಬರ್ ಮತ್ತು ಡಿಸೆಂಬರ್ ತಿಂಗಳುಗಳ ಅವಧಿಯಲ್ಲಿ ಹಿಂದೂಗಳು ಮತ್ತು ಮುಸಲ್ಮಾನರು ಒಂದು ಒಪ್ಪಂದಕ್ಕೆ ಬರಲು ಬಹಳ ಪ್ರಯತ್ನ ಮಾಡಿದರು. ಮುಸಲ್ಮಾನರು ತಮ್ಮ ಸರ್ವಪಕ್ಷಗಳ ಸಮ್ಮೇಳನಗಳಲ್ಲಿ ಒಂದು ಕಡೆಗೆ ಸೇರಿದರು ಮತ್ತು ಹಿಂದೂಗಳು, ಮುಸಲ್ಮಾನರು ಹಾಗೂ ಶಿಖರು 'ಒಗ್ಗಟ್ಟಿನ ಸಮ್ಮೇಳನ' (ಯೂನಿಟಿ ಕಾನ್‌ಫರೆನ್ಸ್)ಗಳಲ್ಲಿ ಪರಸ್ಪರ ಸೇರಿದರು. ಸೂಚನೆಗಳು ಮತ್ತು ಪ್ರತಿಸೂಚನೆಗಳು ಮಂಡಿಸಲ್ಪಟ್ಟವು. ಆದರೆ ಕೋಮುತೀರ್ಪನ್ನು 'ಒಪ್ಪಂದ'ವೊಂದರಿಂದ ಬದಲಿಸುವ ಈ ವಿಚಾರ ವಿನಿಮಯಗಳಿಂದ ಯಾವ ನಿರ್ಣಯಕ್ಕೂ ಬರಲು ಸಾಧ್ಯವಾಗಲಿಲ್ಲ ಹಾಗೂ ಇಪ್ಪತ್ತುಮೂರು ಸಲ ಸಮಿತಿಯ ಸಭೆಗಳು ನಡೆದ ನಂತರ ಕೊನೆಗೆ ಈ ಪ್ರಯತ್ನಗಳನ್ನೇ ಕೈಬಿಡಲಾಯಿತು.

ರಾಜಕೀಯ ಸಮಸ್ಯೆಗಳನ್ನು ಕುರಿತು ಏಕಾಭಿಪ್ರಾಯವನ್ನು ಮೂಡಿಸುವ ಈ ಪ್ರಯತ್ನಗಳನ್ನು ನಡೆಯುತ್ತಿದ್ದಂತೆಯೇ, ಸಾಮಾಜಿಕ ಹಾಗೂ ಧಾರ್ಮಿಕ ಸಮಸ್ಯೆಗಳ ಬಗೆಗೂ ಒಮ್ಮತ ಸಾಧಿಸುವ

---

* ಈ ಪ್ರಯತ್ನಗಳ ವಿವರಗಳಿಗಾಗಿ 'ಇಂಡಿಯನ್ ಕ್ವಾರ್ಟರ್ಲೀ ರಿಜಿಸ್ಟರ್–೧೯೩೨, ಸಂಪುಟ ೨, ಪುಟ ೨೯೬ ನೋಡಿರಿ.

ಪ್ರಯತ್ನಗಳು ಜೊತೆ ಜೊತೆಗೇ ನಡೆಯುತ್ತಿದ್ದವು. ಅವುಗಳೆಂದರೆ: (೧) ಗೋಹತ್ಯೆ, (೨) ಮಸೀದಿಗಳ ಮುಂದೆ ವಾದ್ಯ ನುಡಿಸುವುದು ಮತ್ತು (೩) ಭಿನ್ನಾಭಿಪ್ರಾಯಗಳಿರುವ ಮತಾಂತರಗಳು.

ಈ ದಿಸೆಯಲ್ಲಿ ೧೯೨೩ನೆಯ ಇಸ್ವಿಯಲ್ಲಿಯೇ ಪ್ರಥಮ ಪ್ರಯತ್ನಗಳು ನಡೆದವು. ಆಗ 'ಭಾರತೀಯ ರಾಷ್ಟ್ರೀಯ ಒಪ್ಪಂದ' (ಇಂಡಿಯನ್ ನ್ಯಾಷನಲ್ ಪ್ಯಾಕ್ಟ್)ವನ್ನು ಸೂಚಿಸಲಾಯಿತು. ಅದು ಯಶಸ್ವಿಯಾಗಲಿಲ್ಲ. ಗಾಂಧೀಜಿಯವರು ಆಗ ಜೈಲಿನಲ್ಲಿದ್ದರು.

೫ನೆಯ ಫೆಬ್ರವರಿ ೧೯೨೪ರಂದು ಗಾಂಧೀಜಿಯವರ ಬಿಡುಗಡೆಯಾಯಿತು. ಹಿಂದೂ–ಮುಸಲ್ಮಾನ ಐಕ್ಯಕ್ಕಾಗಿ ತಾವು ಮಾಡಿದ್ದ ಕಾರ್ಯವನ್ನು ನಾಶ ಮಾಡಿರುವುದನ್ನು ನೋಡಿ, ಹಿಂದೂ–ಮುಸ್ಲಿಮರ ಮಧ್ಯದಲ್ಲಿ ನಡೆದ ಮರಣಾಂತಿಕ ದಂಗೆಗಳಿಗಾಗಿ ನೈತಿಕವಾಗಿ ತಾವೇ ಹೊಣೆಗಾರರೆಂದು ಭಾವಿಸಿ, ಗಾಂಧೀಜಿಯವರು ಇಪ್ಪತ್ತೊಂದು ದಿನಗಳ ಉಪವಾಸ ಕೈಗೊಳ್ಳಲು ನಿರ್ಧರಿಸಿದ್ದರು. ಎಲ್ಲ ಸಮಾಜಗಳ ಪ್ರಮುಖ ಭಾರತೀಯರನ್ನು ಒಂದು 'ಏಕತಾ ಸಮ್ಮೇಳನ'ದಲ್ಲಿ ಒಂದುಗೂಡಿಸಲು ಉಪವಾಸದ ಕಾಲವನ್ನು ಉಪಯೋಗಿಸಲಾಯಿತು.* ಆ ಸಮ್ಮೇಳನಕ್ಕೆ ಕಲಕತ್ತಾ ಮಹಾನಗರದ ಪ್ರಮುಖರೂ ಆಗಮಿಸಿ ಭಾಗವಹಿಸಿದ್ದರು. ೧೯೨೪ನೆಯ ಇಸ್ವಿಯ ಸೆಪ್ಟೆಂಬರ್ ೨೬ನೆಯ ತಾರೀಖಿನಿಂದ ಅಕ್ಟೋಬರ್ ೨ನೆಯ ತಾರೀಖಿನ ಮಧ್ಯದಲ್ಲಿ ಈ ಸಮ್ಮೇಳನವು ಸುದೀರ್ಘ ಅವಧಿಯ ಸಭೆಗಳನ್ನು ನಡೆಸಿತು. ಧರ್ಮ ಹಾಗೂ ಆತ್ಮಸಾಕ್ಷಿಯ ಸ್ವಾತಂತ್ರ್ಯವನ್ನು ಕಾರ್ಯರೂಪಕ್ಕೆ ತರುವ ಹಾಗೂ ತೀಕ್ಷ್ಣವಾದ ಪ್ರೇರಣೆ ಇದ್ದಾಗಲೂ ಆ ದಾರಿಯಿಂದ ದೂರ ಸರಿಯದ ತಮ್ಮ ಸಂಪೂರ್ಣ ಪ್ರಯತ್ನವನ್ನು ಉಪಯೋಗಿಸಲು ಸಮ್ಮೇಳನದ ಸದಸ್ಯರು ಪ್ರತಿಜ್ಞೆ ಮಾಡಿದರು. ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಒಂದು ಕೇಂದ್ರ ರಾಷ್ಟ್ರೀಯ ಪಂಚಾಯತ್' ನಿಯಮಿಸಲ್ಪಟ್ಟಿತು. ಧಾರ್ಮಿಕ ಶ್ರದ್ಧೆಯನ್ನುಹೊಂದಲು ಮತ್ತು ವ್ಯಕ್ತಮಾಡಲು, ಧಾರ್ಮಿಕ ಆಚರಣೆಯನ್ನು ನಡೆಸಲು ಪೂಜಾ ಸ್ಥಾನಗಳ ಪಾವಿತ್ರ್ಯವನ್ನು ಕಾಪಾಡಲು, ಮತ್ತು ಗೋಹತ್ಯೆ ಹಾಗೂ ಮಸೀದಿಗಳ ಮುಂದೆ ವಾದ್ಯ ಬಾರಿಸುವುದಕ್ಕೆ ಅವರು ಅನುಸರಿಸಬೇಕಾದ ಇತಿಮಿತಿಗಳ ವಿವರಗಳನ್ನು ಪಡೆಯಲು, ಸಮ್ಮೇಳನವು ಕೆಲವು ಮೂಲಭೂತ ಹಕ್ಕುಗಳನ್ನು ನಿರೂಪಿಸಿತು. ಈ 'ಏಕತಾ ಸಮ್ಮೇಳನವು' ಎರಡೂ ಸಮಾಜಗಳ ಮಧ್ಯದಲ್ಲಿ ಶಾಂತಿಯನ್ನು ತರಲಿಲ್ಲ. ದೈನಂದಿನ ಧರ್ಮ–ಕರ್ಮವಾಗಿದ್ದ ದಂಗೆಗಳಲ್ಲಿ ಇದು ಕೇವಲ ತಾತ್ಕಾಲಿಕ ತಾಟಸ್ಥ್ಯವನ್ನು ಉಂಟುಮಾಡಿತು. ಆದರೆ ೧೯೨೫ ಮತ್ತು ೧೯೨೬ನೆಯ ಇಸ್ವಿಯ ವರ್ಷಗಳ ಮಧ್ಯದಲ್ಲಿ ಹಿಂದೆಂದೂ ಕಾಣದಂಥ ತೀಕ್ಷ್ಣತೆ ಹಾಗೂ ದಾಷ್ಟ್ಯದಿಂದ ಕೂಡಿದ ದಂಗೆಗಳು ಪುನಃ ಪ್ರಾರಂಭವಾದವು. ಈ ದಂಗೆಗಳಿಂದಾಗಿ ನೋವನ್ನು ಅನುಭವಿಸಿದ ಆಗಿನ ಭಾರತದ ವೈಸ್‌ರಾಯ್ ಆಗಿದ್ದ ಲಾರ್ಡ್ ಇರ್‌ವಿನ್ ಅವರು, ಕೇಂದ್ರ ವಿಧಾನಮಂಡಲದಲ್ಲಿ ದಿನಾಂಕ ೨೯.೮.೧೯೨೭ರಂದು ಮಾಡಿದ ತಮ್ಮ ಭಾಷಣದಲ್ಲಿ, ಎರಡೂ ಸಮಾಜಗಳು ದಂಗೆಗಳನ್ನು ನಿಲ್ಲಿಸಿ ಪರಸ್ಪರ ಶಾಂತಿ ಹಾಗೂ ಸೌಹಾರ್ದತೆ ನೆಲೆಸುವಂತೆ ಮಾಡಬೇಕೆಂದು ಕೇಳಿಕೊಂಡರು. ಶಾಂತಿ–ಸೌಹಾರ್ದತೆ ನೆಲೆಸಲು ಮಾಡಿದ ಲಾರ್ಡ್ ಇರ್‌ವಿನ್ ಅವರ ಎಚ್ಚರಿಕೆಯ ಮಾತುಗಳ ನಂತರ ಇನ್ನೊಂದು 'ಏಕತಾ ಸಮ್ಮೇಳನ' ನಡೆಯಿತು. ಅದು 'ಷಿಮ್ಲಾ ಏಕತಾ ಸಮ್ಮೇಳನ'ವೆಂದೇ ಹೆಸರು ಪಡೆದಿದೆ.** ಈ 'ಏಕತಾ ಸಮ್ಮೇಳನ'ವು ೩೦.೮.೧೯೨೭ನೆಯ ತಾರೀಖಿನಂದು ಸಭೆ ಸೇರಿತು. ಹಾಗೂ ಸಮಾಧಾನಕರವಾದ ಒಪ್ಪಂದಕ್ಕೆ ಬರಲು ನಡೆಸಿರುವ ಪ್ರಯತ್ನಗಳು ಸಫಲವಾಗಲು ನಾಯಕರಿಗೆ ಎರಡೂ ಸಮಾಜಗಳು

---

* ಪಟ್ಟಾಭಿ ಸೀತಾರಾಮಯ್ಯನವರ 'ಹಿಸ್ಟರಿ ಆಫ್ ದಿ ಕಾಂಗ್ರೆಸ್' ಪುಟ ೫೩೨.

** ಈ ಸಮ್ಮೇಳನದ ನಡೆವಳಿಕೆಗಾಗಿ 'ಇಂಡಿಯನ್ ಕ್ವಾರ್ಟರ್ಲೀ ರಿಜಿಸ್ಟರ್', ಸಂಪುಟ ೨, ಪುಟ ೩೯ರಿಂದ ೫೦ರವರೆಗೆ ನೋಡಿರಿ.

ಬೆಂಬಲ ನೀಡಬೇಕೆಂದು ಬಿನ್ನಹ ಮಾಡಿ 'ವಿನಂತಿ'ಯೊಂದನ್ನು ಬಿಡುಗಡೆ ಮಾಡಲಾಯಿತು. ಏಕತಾ ಸಮ್ಮೇಳನವು ಒಂದು ಏಕತಾ ಸಮಿತಿಯನ್ನು ನಿಯಮಿಸಿತು. ಈ ಸಮಿತಿಯು ಶ್ರೀ ಎಂ.ಎ. ಜಿನ್ನಾ ಅವರ ಅಧ್ಯಕ್ಷತೆಯಲ್ಲಿ ದಿನಾಂಕ ೧೬ರಿಂದ ೨೨ನೆಯ ಸೆಪ್ಟೆಂಬರ್ ೧೯೨೭ರವರೆಗೆ ಸಭೆ ನಡೆಸಿತು. ಗೋಹತ್ಯೆ ಹಾಗೂ ಮಸೀದಿಗಳ ಮುಂದೆ ವಾದ್ಯ ನುಡಿಸುವ ವಿಷಯಗಳನ್ನೊಳಗೊಂಡ ಯಾವ ಪ್ರಮುಖ ಸಮಸ್ಯೆಗಳ ಬಗೆಗೂ ಒಂದು ನಿರ್ಣಯಕ್ಕೆ ಬರಲಾಗಲಿಲ್ಲ. ಹಾಗೂ ಸಮಿತಿಯ ಮುಂದಿದ್ದ ಇತರ ಸಮಸ್ಯೆಗಳ ವಿಷಯವನ್ನು ಕೈಗೆತ್ತಿಕೊಳ್ಳಲೇ ಇಲ್ಲ. ಸಮಿತಿಯು ಒಡೆಯಬಹುದೆಂದು ಕೆಲವರು ಸದಸ್ಯರು ಭಾವಿಸಿದರು. ಮುಂದೆ ಅನುಕೂಲವಾದ ಯಾವುದೇ ದಿನಾಂಕದಂದು ಪುನಃ ಸಮಿತಿಯ ಸಭೆಯನ್ನು ಕರೆಯತಕ್ಕದ್ದೆಂದು ಹಿಂದೂ ಸದಸ್ಯರು ಒತ್ತಾಯಪಡಿಸಿದರು. ಸಮಿತಿಯ ಮುಸಲ್ಮಾನ ಸದಸ್ಯರು ಮೊದಲು ಬೇರೆ ಬೇರೆ ಅಭಿಪ್ರಾಯ ಹೊಂದಿದ್ದರು. ಆದರೆ ಕೊನೆಗೆ ಸಮಿತಿಯನ್ನು ಒಡೆಯಲು ಒಪ್ಪಿಕೊಂಡರು ಮತ್ತು ಒಂದುವೇಳೆ ವಿಶಿಷ್ಟ ಹನ್ನೊಂದು ಜನ ಸದಸ್ಯರು ಆರು ವಾರಗಳ ಅವಧಿಯಲ್ಲಿ ಮನವಿಯನ್ನು ಸಲ್ಲಿಸಿದರೆ, ಸಭೆಯನ್ನು ಕರೆಯಬೇಕೆಂದು ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಂಡರು. ಇಂಥ ಮನವಿಯು ಮತ್ತೆಂದೂ ಬರಲಿಲ್ಲ ಮತ್ತು ಸಮಿತಿಯ ಸಭೆಯನ್ನು ಮತ್ತೆಂದೂ ಕರೆಯಲಿಲ್ಲ.

ಷಿಮ್ಲಾ ಸಮ್ಮೇಳನವು ಅಯಶಸ್ವಿಯಾದ ಮೇಲೆ, ಆಗ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಶ್ರೀ ಶ್ರೀನಿವಾಸ ಅಯ್ಯಂಗಾರ ಅವರು, ಹಿಂದೂ–ಮುಸಲ್ಮಾನರ ವಿಶೇಷ ಸಮ್ಮೇಳನವೊಂದನ್ನು ಏರ್ಪಡಿಸಿ ಅದರ ಸಭೆಯನ್ನು ದಿನಾಂಕ ೨೭ ಮತ್ತು ೨೮ನೆಯ ಅಕ್ಟೋಬರ್ ೧೯೨೭ರಂದು ಕಲಕತ್ತಾ ಮಹಾನಗರದಲ್ಲಿ ಕರೆದರು. ಕಲಕತ್ತಾ ಏಕತಾ ಸಮ್ಮೇಳನ ಎಂದು ಹೆಸರಾಗಿದೆ.[೧] ಈ ಸಮ್ಮೇಳನವು ಮೂರು ಅತ್ಯಂತ ತೀಕ್ಷ್ಣ ಪ್ರಶ್ನೆಗಳನ್ನು ಕುರಿತು ಕೆಲವು ಗೊತ್ತುವಳಿಗಳನ್ನು ಪಾಸುಮಾಡಿತು. ಆದರೆ, ಈ ಗೊತ್ತುವಳಿಗಳಿಗೆ, ಹಿಂದೂ ಮಹಾಸಭೆಯೇ ಆಗಲಿ, ಮುಸ್ಲಿಂ ಲೀಗ್ ಆಗಲಿ ಸಮ್ಮೇಳನಕ್ಕೆ ತಮ್ಮ ಪ್ರತಿನಿಧಿಗಳನ್ನು ಕಳಿಸದೇ ಇದ್ದುದರಿಂದ, ಬೆಂಬಲವೇ ಇಲ್ಲದಂತಾಯಿತು.

**ಹಿಂದೂ–ಮುಸಲ್ಮಾನ ಒಗ್ಗಟ್ಟು ಒಂದು ಆದರ್ಶವೆಂದೂ, ಅದನ್ನು ಕೇವಲ ಸಾಧಿಸಲೇಬೇಕೆಂಬುದಷ್ಟೇ ಅಲ್ಲ, ಅದನ್ನು ಸಾಧಿಸುವುದು ಸಾಧ್ಯವಿದೆ ಎಂದು ಹೇಳುವ ಸಾಧ್ಯತೆ ಒಂದು ಸಮಯದಲ್ಲಿ ಇದ್ದಿತು. ಅದನ್ನು ಸಾಧಿಸುವುದಕ್ಕಾಗಿ ಪ್ರಮುಖರು ಸಾಕಷ್ಟು ಶ್ರಮಿಸುತ್ತಿಲ್ಲವೆಂದು ಆರೋಪಿಸಲಾಗಿತ್ತು. ಹಿಂದೂ–ಮುಸಲ್ಮಾನ ಒಗ್ಗಟ್ಟಿಗಾಗಿ ಆವರೆಗೆ ಯಾವ ವಿಶಿಷ್ಟ ಪ್ರಯತ್ನವನ್ನೂ ಮಾಡದೇ ಇದ್ದ ಮೌಲಾನಾ ಮೊಹಮ್ಮದ್ ಅಲಿ ಅವರು ಕೂಡ ೧೯೧೧ನೆಯ ಇಸ್ವಿಯಲ್ಲಿ ಇಂಥ ಅಭಿಪ್ರಾಯ ವ್ಯಕ್ತಮಾಡಿದ್ದರು. 'ಕಾಮ್ರೇಡ್' ಪತ್ರಿಕೆಯಲ್ಲಿ ೧೪.೧.೧೯೧೧ನೆಯ ತಾರೀಖಿನಂದು ಬರೆಯುತ್ತ ಶ್ರೀ ಮೊಹಮ್ಮದ ಅಲಿ ಅವರು ಹೀಗೆ ಹೇಳಿದ್ದಾರೆ:[೨]**

**"ಭಾರತವು ಒಗ್ಗಟ್ಟಿನಿಂದ ಇದೆ ಎಂಬ ಕೂಗಿನಲ್ಲಿ ನಮಗೆ ವಿಶ್ವಾಸವಿಲ್ಲ. ಒಂದು ವೇಳೆ ಭಾರತವು ಒಗ್ಗಟ್ಟಿನಿಂದ ಇದ್ದಿದ್ದರೆ ಈ ವರ್ಷ ಕಾಂಗ್ರೆಸ್ಸಿನ ಪೂಜ್ಯ ಅಧ್ಯಕ್ಷರನ್ನು ದೂರದ ಮನೆಯಿಂದ ಎಳೆಯುವ ಅವಶ್ಯಕತೆ ಎಲ್ಲಿ ಇತ್ತು? ಮೃಷ್ಟಾನ್ನ ಭೋಜನವನ್ನು ಕೇವಲ ಕಲ್ಪನೆ ಮಾಡುವುದರಿಂದ ಹಸಿವಿನ ಮೊನಚಾದ ಧಾರೆಯು ಮೊಂಡವಾಗಲಾರದು. ತೀಕ್ಷ್ಣರೂಪದ ದೇಶಭಕ್ತಿಯ ಅಂತರಾಳದಲ್ಲಿ ಸೂಕ್ಷ್ಮರೂಪದ ತನ್ನ**

೧. ಸಮ್ಮೇಳನದ ನಡೆವಳಿಕೆಗಾಗಿ, ಇಂಡಿಯನ್ ಕ್ವಾರ್ಟರ್ಲೀ ರಜಿಸ್ಟರ್, ಸಂಪುಟ ೧, ಪುಟ ೫೦ರಿಂದ ೫೮ರವರೆಗೆ ನೋಡಿರಿ.

೨. ೧೯೨೩ರಲ್ಲಿ ಕೊಕೋನಾಡಾದಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷೀಯ ಭಾಷಣದಲ್ಲಿ ಉಲ್ಲೇಖಿತವಾಗಿದೆ.

**ರಸಾಯನದ ಮೂಲಕ ಹೊಕ್ಕು ಭಯಾನಕವಾದ ರೀತಿಯಲ್ಲಿ ವೇಷಾಂತರ ಮಾಡುವ ಕಾಪಟ್ಯದಲ್ಲಿ ಇನ್ನೂ ನಮಗೆ ಕಡಿಮೆ ವಿಶ್ವಾಸವಿದೆ. ನಾವು ಚೆನ್ನಾಗಿ ಪ್ರೀತಿಸುವ, ತುಂಬ ಭಯಪಡುವ, ಅತಿ ಕಡಿಮೆ ವಿಶ್ವಾಸಪಡುವ ವ್ಯಕ್ತಿಯು ಅಸಹಿಷ್ಣು ಆದರ್ಶವಾದಿಯಾಗಿರುತ್ತಾನೆ. ಬೈರನ್‌ನನ್ನು ಕುರಿತು ಗಯತೆ, ಅವನು ತುಂಬ ವಿಲಕ್ಷಣ ಕವಿ ಎಂದೂ, ಆದರೆ ಪ್ರತಿಸ್ಪಂಧಿಸಿದಾಗ ಅವನು ಶಿಶುವಾಗುತ್ತಾನೆ ಎಂದೂ ಹೇಳಿದ್ದಾನೆ. ಒಳ್ಳೆಯದು– ನಾವೂ, ಅತ್ಯುತ್ಕೃಷ್ಟ ಆದರ್ಶಗಳನ್ನೂ ಅತ್ಯಧಿಕ ಅಸಹಿಷ್ಣುತೆಯನ್ನು ಹೊಂದಿರುವಂಥ ಮನುಷ್ಯನ ಬಗೆಗೆ ಉತ್ತಮವಾದುದನ್ನಾಗಲಿ, ಕೆಟ್ಟದ್ದನ್ನಾಗಲಿ ವಿಚಾರ ಮಾಡುವುದಿಲ್ಲ. ತುಂಬ ಒಳ್ಳೆಯ ಅರ್ಥಪೂರ್ಣ ಹಾಗೂ ದುಷ್ಟಮೂಲದಿಂದ ಸೃಷ್ಟಿಯಾದ ಎಷ್ಟೋ ಪ್ರಯತ್ನಗಳು ಕೂಡ ಈ ವಿಕ್ಷಿಪ್ತ ಭೂಮಿಗೆ ಒಗ್ಗಟ್ಟನ್ನು ತರುವುದರಲ್ಲಿ ಸೋತಿದೆ. ಆದುದರಿಂದ ಮತ್ತೊಂದು ದುರ್ನಿರ್ಣಯ ಮೂಲಕ ಪ್ರಯತ್ನದ ಸಮಾಧಿಗೆ ಕಡಿಮೆ ಬೆಲೆಯ ಸುಗಂಧರಹಿತ ಭಾವನಾ ಕುಸುಮಗಳನ್ನು ಕೂಡ ನಾವು ಮೀಸಲಾಗಿ ಇಡುವುದಕ್ಕೆ ಸಾಧ್ಯವಾಗುವುದಿಲ್ಲ. ಕನ್ನಡಿಯ ಒಡೆದ ತುಂಡುಗಳನ್ನು ಅಂಟು ಹಚ್ಚಿ ಜೋಡಿಸಿ, ಅಸಮರ್ಪಕ ಪರಿಣಾಮವನ್ನು ನೋಡಿ ಕೂಗುವ ಇಲ್ಲವೇ ಅದನ್ನು ಮಾಡಿದ ಅಶುದ್ಧ ವಸ್ತುಗಳನ್ನು ದೂಷಿಸುವ ತಪ್ಪುಗಳನ್ನು ನಾವು ಹಚ್ಚಿ ಜೋಡಿಸಿ, ಅಸಮರ್ಪಕ ಪರಿಣಾಮವನ್ನು ನೋಡಿ ಕೂಗುವ ಇಲ್ಲವೇ ಅದನ್ನು ಮಾಡಿದ ಅಶುದ್ಧ ವಸ್ತುಗಳನ್ನು ರೂಪಿಸುವ ತಪ್ಪುಗಳನ್ನು ನಾವು ಮಾಡಲಾರೆವು. ಬೇರೆ ಶಬ್ದಗಳಲ್ಲಿ ಹೇಳಬೇಕೆಂದರೆ, ಎಷ್ಟೇ ಕರಾಳವೂ ದುಷ್ಟ ಮನಸ್ಸಿನಿಂದ ಕೂಡಿದುದೂ ಆಗಿದ್ದರೂ, ಸತ್ಯ ಸಂಗತಿಗಳನ್ನು ಗೌರವಿಸುತ್ತೇವೆ ಮತ್ತು ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸಲು ಪ್ರಯತ್ನಿಸುವೆವು. ಅನನುಕೂಲ ನೈಜತೆಗಳ ಮೇಲೆ ಕಳಂಕವನ್ನು ಹಚ್ಚುವುದು ದುರ್ಬಲ ಮುತ್ಸದ್ದಿತನವಾಗಿದೆ. ಹಾಗೂ ಐಕ್ಯತೆಯನ್ನು ತಡೆಯುವ ಆಳವಾಗಿ ಬೇರುಬಿಟ್ಟ ಪೂರ್ವದೂಷಿತ ಮತಿಗಳ ಮತ್ತು ವಿಭಜಿಸುವ ಆಶ್ಚರ್ಯಕರ ಮತಭೇದಗಳ ಪ್ರಾಮಾಣಿಕ ಹಾಗೂ ಸ್ಪಷ್ಟ ಅಂಗೀಕಾರವು ಐಕ್ಯತೆಯನ್ನು ಸಾಧಿಸುವಲ್ಲಿ ಕಡಿಮೆ ಯಶಸ್ವಿ ಎಂದು ಭಾವಿಸಲಾಗದು.''**

ಈ ಮೂವತ್ತು ವರ್ಷಗಳ ಇತಿಹಾಸವನ್ನು ಹಿಂತಿರುಗಿ ನೋಡಿದರೆ, ಹಿಂದೂ–ಮುಸಲ್ಮಾನ ಐಕ್ಯತೆಯನ್ನು ಸಾಧಿಸಲಾಗಿದೆಯೇ ಎಂದು ಯಾರಾದರೂ ಕೇಳಬಹುದು. ಅದನ್ನು ಸಾಧಿಸಲು ಪ್ರಯತ್ನ ಮಾಡಲಾಗಿಲ್ಲವೇ? ಇನ್ನೂ ಏನಾದರೂ ಪ್ರಯತ್ನ ಮಾಡುವುದು ಉಳಿದಿದೆಯೇ? ಹಿಂದೂ–ಮುಸಲ್ಮಾನರಲ್ಲಿ ಒಗ್ಗಟ್ಟನ್ನು ಸಾಧಿಸಲಾಗಿಲ್ಲವೆಂಬುದನ್ನು ಕಳೆದ ಮೂವತ್ತು ವರ್ಷಗಳ ಇತಿಹಾಸವು ಹೇಳುತ್ತದೆ. ಅದಕ್ಕೆ ಪ್ರತಿಯಾಗಿ ಈಗ ಅವರಿಬ್ಬರಲ್ಲಿ– ಆ ಎರಡೂ ಸಮಾಜಗಳಲ್ಲಿ– ಅತಿ ಹೆಚ್ಚಿನ ಒಡಕು ಉಂಟಾಗಿರುತ್ತದೆ. ಈಗಾಗಲೇ ಪ್ರಾಮಾಣಿಕವಾದ ಹಾಗೂ ಅನಿರ್ಬಂಧಿತವಾದ ಪ್ರಯತ್ನಗಳನ್ನು ಆ ದಿಶೆಯಲ್ಲಿ ಮಾಡುತ್ತಲೇ ಬರಲಾಗಿದೆ. ಈ ಅಂಥ ಒಕ್ಕಟ್ಟನ್ನು ಸಾಧಿಸಲು ಒಂದು ಪಕ್ಷವು ಇನ್ನೊಂದು ಪಕ್ಷಕ್ಕೆ ಸಂಪೂರ್ಣ ಶರಣಾಗತವಾಗುವುದರ ಹೊರತಾಗಿ ಬೇರೆ ಮಾರ್ಗವೇ ಇಲ್ಲದಂತಾಗಿದೆ. ಆಶಾವಾದಿಯಾಗಿ ಇರುವುದನ್ನು ಬೆಳೆಯಿಸಿಕೊಳ್ಳಲಾರದ ಸ್ವಭಾವವನ್ನು ಹೊಂದಿದ ಯಾರಾದರೊಬ್ಬರು, ಅದನ್ನು ಸಮರ್ಥಿಸಿಕೊಳ್ಳುವ ಅವಶ್ಯಕತೆ ಇಲ್ಲದಿದ್ದರೂ, ಹಿಂದೂ–ಮುಸಲ್ಮಾನರ ಒಗ್ಗಟ್ಟು ಉಂಟಾಗಲು ಶ್ರಮಿಸುವುದು ಮೃಗಜಲವಾಗಿದೆ ಎಂದೂ ಮತ್ತು ಅದನ್ನು ಈಗ ಕೈಬಿಡಬೇಕೆಂದೂ ಅಂದದ್ದಾದರೆ, ಅಂಥವರು ನಿರಾಶಾವಾದಿಗಳೆಂದೂ ಅಥವಾ ತಾಳ್ಮೆ ಇಲ್ಲದ ಆದರ್ಶವಾದಿಗಳೆಂದೂ ಕರೆಯಲು ಯಾರೂ ಧೈರ್ಯ ಮಾಡಲಾರರು. ತಾವು ಹಿಂದೆ ಮಾಡಿದ ಎಲ್ಲ ಪ್ರಯತ್ನಗಳೂ ದುರಂತವಾಗಿ ಕೊನೆಗೊಂಡಿರುವುದರಿಂದ, ತಾವು ಈ ನಿಷ್ಫಲ ಪ್ರಯತ್ನದಲ್ಲಿ ತೊಡಗಿ

ಮುಂದುವರೆಯುವರೋ ಹೇಗೆ ಎಂಬುದನ್ನು ಇಲ್ಲವೇ ಒಗ್ಗಟ್ಟನ್ನು ಸಾಧಿಸುವ ಪ್ರಯತ್ನವನ್ನೇ ಬಿಟ್ಟು ಬೇರೆ ತಳಹದಿಯ ಮೇಲೆ ಬಗೆಹರಿಸಲು ತೊಡಗಬೇಕೇ ಎಂಬುದನ್ನು ಹೇಳಬೇಕಾದುದು ಹಿಂದೂ ಜನರಿಗೇ ಬಿಟ್ಟ ವಿಷಯವಾಗಿದೆ.

ಎರಡನೆಯ ವಿಷಯವೆಂದರೆ ಮುಸಲ್ಮಾನರು ವಿಚಾರ ಮಾಡುವ ರೀತಿಯ ಸಂಪೂರ್ಣ ಕ್ರಾಂತಿಕಾರ ಬದಲಾವಣೆ ಹೊಂದಿದೆ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳತಕ್ಕದ್ದು. ಅದು ಎಷ್ಟರಮಟ್ಟಿಗೆ ಸಂಪೂರ್ಣ ಕ್ರಾಂತಿಯ ಬದಲಾವಣೆ ಹೊಂದಿದೆ ಎಂಬುದು ಅವರಲ್ಲಿ ಕೆಲವರ ಈ ಮೊದಲಿನ ಘೋಷಣೆಗಳನ್ನು ಅನುಲಕ್ಷಿಸಿದರೆ ನಮಗೆ ಗೊತ್ತಾಗುತ್ತದೆ. ಅಂಥವರು 'ದ್ವಿ–ರಾಷ್ಟ್ರ ತತ್ತ್ವ'ವನ್ನು ಒತ್ತಾಯಪಡಿಸುತ್ತಾರೆ. ಹಾಗೂ ಹಿಂದೂ–ಮುಸಲ್ಮಾನ ಸಮಸ್ಯೆಗೆ 'ಪಾಕಿಸ್ತಾನ' ನಿರ್ಮಾಣ ಆಗುವುದೊಂದೇ ಪರಿಹಾರವೆಂದು ನಂಬುತ್ತಾರೆ. ಅಂಥ ಜನರಲ್ಲಿ ಶ್ರೀ ಜಿನ್ನಾ ಅವರು ಅತ್ಯಂತ ಮುಂದುವರೆದವರೆಂಬುದನ್ನು ನಾವೆಲ್ಲರೂ ಒಪ್ಪಿಕೊಳ್ಳಲೇಬೇಕು. ಹಿಂದೂ–ಮುಸಲ್ಮಾನ ಪ್ರಶ್ನೆಯ ಬಗೆಗೆ ಅವರ ದೃಷ್ಟಿಯಲ್ಲಿ ಕ್ರಾಂತಿ ಎಂಬುದು ಅಲ್ಲಾಡಿಸುವಂಥದಿಲ್ಲದಿದ್ದರೆ ಆಘಾತಕರವಾಗಿದೆ ಎಂದು ಹೇಳಬಹುದು. ಈ ಕ್ರಾಂತಿಯ ಸ್ವರೂಪ, ವೈಶಿಷ್ಟ್ಯ ಮತ್ತು ವಿಸ್ತಾರವನ್ನು ಅರಿಯಬೇಕಾದರೆ ಈ ವಿಷಯಕ್ಕೆ ಸಂಬಂಧಿಸಿದಂತೆ ಅವರ ಹಿಂದಿನ ಹೇಳಿಕೆಗಳನ್ನು ಅರಿಯುವುದು ಅವಶ್ಯವಾಗಿದೆ. ಅವುಗಳನ್ನು ಅವರ ಇಂದಿನ ಹೇಳಿಕೆಗಳೊಡನೆ ಹೋಲಿಸಿ ನೋಡಲು ಸಾಧ್ಯವಾಗುವುದು.

೧೯೦೬ನೆಯ ಇಸ್ವಿಯಲ್ಲಿ ಮುಸಲ್ಮಾನ ಸಮಾಜದ ಧುರೀಣರು ಲಾರ್ಡ್ ಮಿಂಟೋ ಅವರನ್ನು ಭೇಟಿ ಆಗಿ ಮುಸಲ್ಮಾನರಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರ ಬೇಕೆಂದು ಕೇಳಿದಾಗ ನೀಡಿದ ಹೇಳಿಕೆಗಳಿಂದ ಜನರ ಹಿಂದಿನ ಘೋಷಣೆಗಳ ಅಧ್ಯಯನವನ್ನು ಚೆನ್ನಾಗಿ ಪ್ರಾರಂಭಿಸಬಹುದು. ಶ್ರೀ ಜಿನ್ನಾ ಅವರು ಆಗಿನ ಪ್ರತಿನಿಧಿಗಳ ತಂಡದ ಸದಸ್ಯರಾಗಿರಲಿಲ್ಲವೆಂಬುದು ಗಮನಿಸಬೇಕಾದ ವಿಷಯ. ಪ್ರತಿನಿಧಿಗಳ ತಂಡದಲ್ಲಿ ಸೇರಲು ಅವರಿಗೆ ಆಮಂತ್ರಣ ಕೊಟ್ಟಿರಲೇ ಇಲ್ಲವೋ ಅಥವಾ ಆಮಂತ್ರಣ ಕೊಟ್ಟಿದ್ದರೂ ಅದರಲ್ಲಿ ಅವರು ಭಾಗವಹಿಸಲಿಲ್ಲವೋ ಎಂಬುದು ಗೊತ್ತಾಗಲಿಲ್ಲ. ಆದರೆ ಮುಸಲ್ಮಾನರಿಗೆ ಪ್ರತ್ಯೇಕ ಪ್ರಾತಿನಿಧ್ಯ ಬೇಕೆಂಬುದರ ಬಗೆಗೆ– ೧೯೦೮ರಲ್ಲಿ ಆ ಚರ್ಚೆ ಪ್ರಾರಂಭವಾದಾಗ– ಜಿನ್ನಾರವರು ತಮ್ಮ ಬೆಂಬಲವನ್ನು ನೀಡಲಿಲ್ಲವೆಂಬುದು ಸತ್ಯ ಸಂಗತಿ ಆಗಿದೆ.

೧೯೧೮ನೆಯ ಇಸ್ವಿಯಲ್ಲಿ, ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲ್ ಸದಸ್ಯತ್ವಕ್ಕೆ ರೌಲೆಟ್ ಬಿಲ್ಲನ್ನು ವಿರೋಧಿಸಿ ಅವರು ರಾಜೀನಾಮೆಯನ್ನು ಸಲ್ಲಿಸುತ್ತ ಜಿನ್ನಾ ಹೀಗೆ ಹೇಳಿದರು:

> **"ಈಗ ಇರುವ ಪರಿಸ್ಥಿತಿಯಲ್ಲಿ ಕೌನ್ಸಿಲ್‌ನಲ್ಲಿ ಇರುವುದರಿಂದ ನಮ್ಮ ಜನರಿಗೆ ನನ್ನಿಂದ ಯಾವ ಉಪಯೋಗವೂ ಇಲ್ಲವೆಂದು ನನಗೆ ಅನ್ನಿಸುತ್ತಿದೆ. ಕೌನ್ಸಿಲ್ ಚೇಂಬರ್‌ದಲ್ಲಿ ಜನತೆಯ ಪ್ರತಿನಿಧಿಗಳ ಅಭಿಪ್ರಾಯಕ್ಕೆ ಮತ್ತು ಕೌನ್ಸಿಲ್ ಹೊರಗೆ ಜನತೆಯ ಭಾವನೆಗಳಿಗೆ ಅನಿಸಿಕೆಗಳಿಗೆ ಸಂಪೂರ್ಣ ಅನಾದರ ತೋರಿಸುತ್ತಿರುವ ಸರಕಾರದೊಡನೆ, ಆತ್ಮಗೌರವಕ್ಕೆ ಅನುಗುಣವಾಗಿ ಇಲ್ಲದುದರಿಂದ, ಸಹಕಾರವು ಸಾಧ್ಯವಿಲ್ಲವಾಗಿದೆ."**

ಆಗ ಗಂಭೀರವಾಗಿ ಚರ್ಚಿಸಲ್ಪಡುತ್ತಿದ್ದಂಥ 'ಭಾರತ ಸರಕಾರದ ಸುಧಾರಣೆ ಮಸೂದೆ'ಯ ಮೇಲೆ ಸಂಸತ್ತಿನಿಂದ ನೇಮಿಸಲ್ಪಟ್ಟ ಜಂಟಿ ಆಯ್ಕೆ ಸಮಿತಿಯ ಮುಂದೆ ಶ್ರೀ ಜಿನ್ನಾ ೧೯೧೯ನೆಯ ಇಸ್ವಿಯಲ್ಲಿ ಸಾಕ್ಷಿಯನ್ನು ನುಡಿದರು. ಹಿಂದೂ–ಮುಸಲ್ಮಾನ ಸಮಸ್ಯೆಯ ಮೇಲೆ, ಸಮಿತಿಯ ಸದಸ್ಯರ ಪ್ರಶ್ನೆಗಳಿಗೆ ಈ ಕೆಳಗಿನ ಅಭಿಪ್ರಾಯವನ್ನು ಅವರು ವ್ಯಕ್ತ ಮಾಡಿದರು:

ಮೇಜರ್ ಆರ್ಮ್ಸ್ ಬಿ. ಗೋರ್ ಅವರಿಂದ ಪರಿಶೀಲನೆ

ಪ್ರಶ್ನೆ ೩೮೦೬– ಮುಸ್ಲಿಮ್ ಲೀಗಿನ ಪರವಾಗಿ, ಎಂದರೆ ವ್ಯಾಪಕವಾಗಿ ಬೆಳೆದ ಹಾಗೂ ಭಾರತದಲ್ಲಿ ಒಂದೇ ಮುಸಲ್ಮಾನರ ಸಂಸ್ಥೆಯ ಪರವಾಗಿ ನೀವು ಇಲ್ಲಿ ಆಗಮಿಸಿದ್ದೀರಿ ಅಲ್ಲವೇ?

ಉತ್ತರ: ಹೌದು.

ಪ್ರಶ್ನೆ ೩೮೦೭– ಪ್ರಶ್ನೆಗಳಿಗೆ ಕೊಟ್ಟ ನಿಮ್ಮ ಉತ್ತರಗಳಲ್ಲಿಯಾಗಲಿ, ಇಲ್ಲವೇ ಇಂದು ಮುಂಜಾನೆಯ ನಿಮ್ಮ ಪ್ರಾರಂಭದ ಭಾಷಣದಲ್ಲಾಗಲೀ ಹಿಂದೂಸ್ಥಾನದಲ್ಲಿ ಮುಸಲ್ಮಾನರ ವಿಶೇಷ ಹಕ್ಕುಗಳ ಬಗೆಗೆಯಾಗಲೀ ನೀವು ಯಾವ ಉಲ್ಲೇಖವನ್ನೂ ಮಾಡಿರುವುದಿಲ್ಲವೆಂಬ ತಥ್ಯವು ನನಗೆ ಬಹಳ ಆಶ್ಚರ್ಯವನ್ನುಂಟುಮಾಡಿದೆ. ನೀವು ಏನನ್ನೂ ಹೇಳಬಾರದೆಂಬ ಇಚ್ಛೆಯು ಅದಕ್ಕೆ ಕಾರಣವೇ?

(ಉತ್ತರ)– ಹಾಗೇನೂ ಇಲ್ಲ. ಸೌಥ್ ಬರೋ ಸಮಿತಿಯವರು ಅದನ್ನು ಒಪ್ಪಿಕೊಂಡಿದ್ದಾರೆ ಎಂದು ನಾನು ಭಾವಿಸಿದ್ದೇನೆ ಮತ್ತು ಸಮಿತಿಯ ಸದಸ್ಯರು ನಮಗೆ ಬೇಕಾದ ಪ್ರಶ್ನೆಗಳನ್ನು ಹಾಕಲಿ ಎಂಬುದು ನನ್ನ ಅಭಿಪ್ರಾಯವಾಗಿತ್ತು. ಇದೇ ಇದಕ್ಕೆ ಕಾರಣ. ಲಖನೋ ಒಪ್ಪಂದದಲ್ಲಿ ನಾನು ಬಹಳ ಮುಖ್ಯ ಪಾತ್ರವನ್ನು ವಹಿಸಿದ್ದೇನೆ. ಆ ಸಂದರ್ಭದಲ್ಲಿ ನಾನು ಮುಸಲ್ಮಾನರ ಪ್ರತಿನಿಧಿಯಾಗಿದ್ದೆನು.

ಪ್ರಶ್ನೆ ೩೮೦೯– ಅಖಿಲ ಭಾರತ ಮುಸ್ಲಿಂ ಲೀಗ್ ಪರವಾಗಿ, ಭಾರತ ಸರಕಾರದ ಸೂಚನೆಯನ್ನು ತಿರಸ್ಕರಿಸಬೇಕೆಂದು ಈ ಸಮಿತಿಯನ್ನು ನೀವು ಕೇಳುತ್ತಿದ್ದೀರಿ ಅಲ್ಲವೇ?

ಉತ್ತರ– ಬಂಗಾಲ ಪ್ರಾಂತಕ್ಕೆ ಸಂಬಂಧಿಸಿದಂತೆ ಭಾರತ ಸರಕಾರದ ಸೂಚನೆಯನ್ನು ತಿರಸ್ಕರಿಸಲು ನಿಮ್ಮನ್ನು ಕೇಳಬೇಕೆಂದು ನಾನು ಅಧಿಕಾರ ಪಡೆದಿದ್ದೇನೆ. (ಹಾಗೆಂದರೆ– ಲಖನೋ ಒಪ್ಪಂದದ ಪ್ರಕಾರ ಬಂಗಾಲದ ಮುಸಲ್ಮಾನರಿಗೆ ಕೊಟ್ಟಿರುವುದಕ್ಕಿಂತಲೂ ಹೆಚ್ಚಿನ ಪ್ರಾತಿನಿಧ್ಯವನ್ನು ಅವರಿಗೆ ಕೊಡುವುದಕ್ಕಾಗಿ).

ಪ್ರಶ್ನೆ ೩೮೧೦– ಭಾರತದ ದೃಷ್ಟಿಯಿಂದ ನೀವು ಮಾತಾಡುತ್ತಿರುವುದಾಗಿ ಹೇಳಿದಿರಿ. ನಿಜವಾಗಿ ನೀವು ಭಾರತದ ರಾಷ್ಟ್ರೀಯವಾದಿಗಳಾಗಿ ಮಾತನಾಡುತ್ತಿದ್ದೀರಾ?

ಉತ್ತರ– ಹೌದು. ಹಾಗೆ ನಾನು ಮಾತನಾಡುತ್ತಿದ್ದೇನೆ.

ಪ್ರಶ್ನೆ ೩೮೧೧– ಈ ವಿಚಾರಗಳಿರುವುದರಿಂದ, ಮುಸಲ್ಮಾನ ಸಮಾಜದವರು ಪ್ರತ್ಯೇಕ ಕೋಮುವಾದಿ ಪ್ರಾತಿನಿಧಿತ್ವವನ್ನು ಬೇಗ ಕೈಬಿಡುವರೆಂದು ನೀವು ಭಾವಿಸುವಿರಾ?

ಉತ್ತರ– ಹಾಗೆ ನಾನು ಭಾವಿಸುತ್ತೇನೆ.

ಪ್ರಶ್ನೆ ೩೮೧೨– ಸಾಧ್ಯವಾದಷ್ಟು ಬೇಗನೇ ಹಿಂದೂಗಳು ಮತ್ತು ಮುಸಲ್ಮಾನರು ರಾಜಕೀಯ ಜೀವನದಲ್ಲಿ ಯಾವ ವ್ಯತ್ಯಾಸವೂ ಇಲ್ಲದೇ ಇರುವಂತಾಗಬೇಕೆಂದು ನೀವು ಆಲೋಚಿಸುತ್ತಿದ್ದೀರಿ ಎಂದು ಅರ್ಥವಲ್ಲವೇ?

ಉತ್ತರ– ಹೌದು. ಆ ಯೋಗಾಯೋಗ ಬಂದರೆ, ಅದಕ್ಕಿಂತ ಹೆಚ್ಚಿನ ಸಂತೋಷ ನನಗೆ ಇನ್ನೇನೂ ಇರಲಾರದು.

ಪ್ರಶ್ನೆ ೩೮೧೩– ಹಿಂದೂಸ್ಥಾನದಲ್ಲಿರುವ ಮುಸಲ್ಮಾನರು ಕೇವಲ ಹಿಂದೂಸ್ಥಾನದಲ್ಲಿ ಅಷ್ಟೇ ಅಲ್ಲ, ಹಿಂದೂಸ್ಥಾನದ ಹೊರಗೂ ಕೂಡ, ಅನೇಕ ರೀತಿಯ ವಿಶೇಷ ರಾಜಕೀಯ

ಹಿತಾಸಕ್ತಿಗಳನ್ನು ಹೊಂದಿದ್ದಾರೆಂದೂ, ಅವುಗಳನ್ನು ಅವರು ಪ್ರತ್ಯೇಕ ಮುಸಲ್ಮಾನ ಸಮಾಜ– ಮುಸಲ್ಮಾನ್ ಸಮುದಾಯ– ಎಂಬುದಾಗಿ ಯಾವಾಗಲೂ ಒತ್ತಾಯಪೂರ್ವಕ ಪಡೆಯಲು ಆತುರರಾಗಿರುತ್ತಾರೆ ಎನ್ನುವುದು ಸತ್ಯ ಸಂಗತಿ ಎಂದು ನೀವು ಪರಿಗಣಿಸುವುದಿಲ್ಲವಲ್ಲವೇ?

ಉತ್ತರ– ಇದರಲ್ಲಿ ಎರಡು ವಿಷಯಗಳಿವೆ. ಮುಸಲ್ಮಾನರು ತಮಗೆ ವಿಶೇಷ ಹಿತಾಸಕ್ತಿಯ ವಿಷಯಗಳು ಎಂದು ಕರೆಯಬಹುದಾದ– ಐಹಿಕ ವಿಷಯಗಳು– ಹಿಂದೂಸ್ಥಾನದಲ್ಲಿ ನಿಜವಾಗಿ ಬಹಳ ಕಡಿಮೆ ಇವೆ.

ಪ್ರಶ್ನೆ ೩೮೧೪– ನಿಜವಾಗಿ– ನಾನು ಕೇವಲ ಅವುಗಳ ಉಲ್ಲೇಖ ಮಾಡುತ್ತಿದ್ದೇನಷ್ಟೇ?

ಉತ್ತರ– ಆದುದರಿಂದಲೇ ನಾನು, ಪ್ರತ್ಯೇಕ ಮತದಾರ ಕ್ಷೇತ್ರಗಳು ಇಲ್ಲದಂತೆ ಆಗುವ ಸಮಯ ಬಹಳ ದೂರವೇನಿಲ್ಲವೆಂದು, ನಿಜವಾಗಿ ಆಶಿಸುತ್ತೇನೆ.

ಪ್ರಶ್ನೆ ೩೮೧೫– ಅದೇ ಸಮಯಕ್ಕೆ, ಭಾರತದಲ್ಲಿರುವ ಮುಸಲ್ಮಾನರು ಭಾರತ ಸರಕಾರದ ವಿದೇಶ ನೀತಿಯಲ್ಲಿ ವಿಶೇಷ ಅಭಿರುಚಿಯನ್ನು ತೋರಿಸುತ್ತಾರೆ ಅಲ್ಲವೇ?

ಉತ್ತರ– ಹೌದು, ಅವರು ತೋರಿಸುತ್ತಾರೆ; ಇಲ್ಲ, ಏಕೆಂದರೆ ನೀವು ಮಾಡಬೇಕೆಂದಿರುವುದು ತುಂಬ ತೀಕ್ಷ್ಣ ಅಭಿರುಚಿಯನ್ನು ರೂಪಿಸತಕ್ಕಂಥದಾಗಿದ್ದು, ಅವರಲ್ಲಿ ಅಧಿಕ ಜನರು ಅತ್ಯಂತ ತೀಕ್ಷ್ಣ ಭಾವನೆಗಳನ್ನೂ ಮತ್ತು ಬಹಳ ದೃಢವಾದ ಅಭಿಪ್ರಾಯಗಳನ್ನೂ ಹೊಂದಿದವರಾಗಿದ್ದಾರೆ.

ಪ್ರಶ್ನೆ ೩೮೧೬– ನೀವು, ಮುಸಲ್ಮಾನ ಸಮಾಜದ ಪರವಾಗಿ ಮಾತನಾಡುತ್ತ, ಒಂದು ಮತದಾರ ಕ್ಷೇತ್ರಕ್ಕೆ ಹಿಂದೂಸ್ಥಾನ ಸರಕಾರವನ್ನೇ ಹೆಚ್ಚು ಜವಾಬ್ದಾರವೆಂದು ಮಾಡಲು ಆತುರರಾಗಿರುವುದಕ್ಕೆ, ಇರುವ ಕಾರಣಗಳಲ್ಲಿ ಒಂದಾಗಿದೆಯೇ?

ಉತ್ತರ– ಇಲ್ಲ.

ಪ್ರಶ್ನೆ ೩೮೧೭– ಹಿಂದೂಸ್ಥಾನವು ಬ್ರಿಟಿಷ್ ಸಾಮ್ರಾಜ್ಯದಲ್ಲಿಯೇ ಅವಿರೋಧವಾಗಿ ಉಳಿದು ತನಗಾಗಿ ಒಂದು ವಿದೇಶ ನೀತಿಯನ್ನು ಹೊಂದುವುದು ಮತ್ತು ಲಂಡನ್‌ದಲ್ಲಿ ತಮ್ಮ ಸಚಿವರು ಸಲಹೆ ಕೊಟ್ಟಂತೆ ಅಲ್ಲಿಯ ಸಾರ್ವಭೌಮರು ಇನ್ನೊಂದು ವಿದೇಶಿ ನೀತಿಯನ್ನು ಹೊಂದುವುದು ಸಾಧ್ಯವಿದೆ ಎಂದು ನೀವು ವಿಚಾರಿಸಿದ್ದೀರಾ?

ಉತ್ತರ– ಇದನ್ನು ನಾನು ಸ್ಪಷ್ಟಪಡಿಸುತ್ತೇನೆ. ಇದು ವಿದೇಶ ನೀತಿಯ ವಿಷಯ ಅಲ್ಲವೇ ಅಲ್ಲ. ಇದು ತಮಗೆ ಅತ್ಯಂತ ಕಷ್ಟಮಯ ಸ್ಥಿತಿ ಎಂದು ಹಿಂದೂಸ್ಥಾನದ ಮುಸಲ್ಮಾನರ ಭಾವನೆಯಾಗಿದೆ. ಆಧ್ಯಾತ್ಮಿಕವಾಗಿ ಸುಲ್ತಾನರು ಇಲ್ಲವೇ ಖಲೀಫ್ ಅವರು ಮುಸಲ್ಮಾನರ ವರಿಷ್ಠರು.

ಪ್ರಶ್ನೆ ೩೮೧೮– ಒಂದೇ ಸಮಾಜಕ್ಕೆ?

ಉತ್ತರ– ಸುನ್ನೀ ಪಂಥಕ್ಕಾಗಿ, ಆದರೆ ಅದು ಬಹಳ ದೊಡ್ಡ ಸಮುದಾಯ. ಭಾರತದಲ್ಲಿಯೇ ಅತ್ಯಂತ ಅಧಿಕ ಪ್ರಮಾಣದಲ್ಲಿರುವ ಸಮಾಜವದು. ಖಲೀಫರು ಒಬ್ಬರೇ ಮಾತ್ರ ನಮ್ಮ ನಂಬುಕೆಯಂತೆ ಎಲ್ಲ ಪವಿತ್ರ ಧಾರ್ಮಿಕ ಸ್ಥಳಗಳ ಒಡೆತನದ ಹಕ್ಕನ್ನು ಪಡೆದವರಾಗಿದ್ದಾರೆ. ಇತರ ಯಾರಿಗೂ ಇಂಥ ಹಕ್ಕು ಇರುವುದಿಲ್ಲ. ಆಟೋಮನ್

ಸಾಮ್ರಾಜ್ಯದಿಂದ ಈ ಪವಿತ್ರ ಸ್ಥಳಗಳು ಬೇರ್ಪಡಿಸಲ್ಪಡಬಾರದೆಂದೂ, ಅವುಗಳು ಸುಲ್ತಾನರ ಅಧಿಪತ್ಯದಲ್ಲಿಯೇ ಆಟೋಮನ್ ಸಾಮ್ರಾಜ್ಯದಲ್ಲಿ ಉಳಿಯತಕ್ಕದೆಂಬುದೂ, ಮುಸಲ್ಮಾನರ ಅತ್ಯಂತ ತೀಕ್ಷ್ಣ ಭಾವನೆಯಾಗಿದೆ.

ಪ್ರಶ್ನೆ ೩೮೯– ಸುಧಾರಣಾ ಮಸೂದೆಯನ್ನು ಬಿಟ್ಟು ವಿದೇಶ ನೀತಿಯ ಬಗೆಗೆ ಮಾತನಾಡಲು ನಾನು ಬಯಸುವುದಿಲ್ಲ.

ಉತ್ತರ– ವಿದೇಶ ನೀತಿಗೆ ಇದು ಸಂಬಂಧಿಸಿಲ್ಲವೆಂದು ನನ್ನ ಅನಿಸಿಕೆಯಾಗಿದೆ. ಹಿಂದೂಸ್ಥಾನದಲ್ಲಿ ಇರುವ ಮುಸಲ್ಮಾನರು, ಜಗತ್ತಿನ ತುಂಬ ಇರುವ ಮುಸಲ್ಮಾನರಿಗೆ ಸಂಬಂಧಿಸಿದಂತೆ, ವಿದೇಶ ನೀತಿಯ ಬಗೆಗೆ ವಿಶಿಷ್ಟವಾದ ಧೋರಣೆಯನ್ನು ತಳೆಯುವರೇ ಎಂಬ ನಿಮ್ಮ ಮಾತಿಗೆ ಅನುಗುಣವಾಗಿ ಇದನ್ನು ಹೇಳುತ್ತಿದ್ದೇನೆ.

ಪ್ರಶ್ನೆ ೩೯೦– ಹಿಂದೂಸ್ಥಾನ ಸರಕಾರದ ವಿದೇಶ ನೀತಿಯ ಮೇಲೆ ತಮ್ಮ ದೃಷ್ಟಿಕೋನದ ಪರಿಣಾಮವನ್ನು ಬೀರಲು ಕೇಂದ್ರ ಸರಕಾರವನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳಬೇಕೆಂಬ ಉದ್ದೇಶ ಅವರಿಗೆ ಇದೆಯೇ? ಎಂಬುದು ನನ್ನ ವಿಚಾರವಾಗಿದೆ.

ಉತ್ತರ– ಇಲ್ಲ.

ಮಿಸ್ಟರ್ ಬೆನ್ನೆಟ್ ಅವರಿಂದ ಪರಿಶೀಲನೆ:

ಪ್ರಶ್ನೆ ೩೮೫– ಅಂಥ ಘಟನೆಗಳು (ಎಂದರೆ ಜಾತೀಯ ದಂಗೆಗಳು) ನಡೆದಾಗ ಕಾಯಿದೆ ಹಾಗೂ ಸುವ್ಯವಸ್ಥೆಯ ಜವಾಬ್ದಾರಿಯು ಸರಕಾರದ ಆಡಳಿತ ವಿಭಾಗಕ್ಕೆ ಇದ್ದರೆ ಅನುಕೂಲಕರವಲ್ಲವೇ?

ಉತ್ತರ– ನನ್ನನ್ನು ಕೇಳಿದರೆ, ಹಾಗೇ ಆಗುವುದಿಲ್ಲವೆಂದು ನನ್ನ ಅಭಿಪ್ರಾಯ. ನೀವು ಅಂದಂತೆ, ಅಪ್ರಿಯ ವಿಷಯಗಳನ್ನು ಆಳವಾಗಿ ಚರ್ಚಿಸುವ ಇಚ್ಛೆ ನಮಗಿಲ್ಲ.

ಪ್ರಶ್ನೆ ೩೮೬– ನಾನು ಈ ಪ್ರಶ್ನೆಯನ್ನು ಕೇಳುತ್ತಿರುವುದು ಹಳೆಯ ತೊಂದರೆಗಳನ್ನು ಪುನಃ ತಂದುಕೊಳ್ಳುವುದಕ್ಕಾಗಿ ಅಲ್ಲ. ನಾನು ಅವುಗಳನ್ನು ಮರೆಯಬಹುದೇ?

ಉತ್ತರ– ನೀವು ನನ್ನನ್ನು ಕೇಳಿದರೆ, ಈ ದಂಗೆಗಳು ಹೆಚ್ಚಾಗಿ ತಪ್ಪು ತಿಳಿವಳಿಕೆಯ ಮೇಲೆ ಆಧಾರಿತವಾಗಿವೆ ಹಾಗೂ ಪೋಲೀಸರು ಒಂದಲ್ಲ ಒಂದು ಪಕ್ಷವನ್ನು ಬೆಂಬಲಿಸುವುದರಿಂದ ಮತ್ತು ಅದು ಒಂದಲ್ಲ ಒಂದು ಪಕ್ಷವನ್ನು ಕೋಪಕ್ಕೆ ಗುರಿ ಮಾಡುವುದರಿಂದ ಸಂಭವಿಸಿದೆ. ಹಿಂದೂಸ್ಥಾನದ ಸಂಸ್ಥಾನಗಳಲ್ಲಿ ಹಿಂದೂ–ಮುಸಲ್ಮಾನರ ದಂಗೆಗಳು ಅಪರೂಪವಾಗಿ ಸಂಭವಿಸುವುದನ್ನು ನೀವು ಕೇಳುವಿರೆಂಬುದು ನನಗೆ ಗೊತ್ತಿದೆ. ಹೆಸರನ್ನು ಉಲ್ಲೇಖಿಸದೇ ಒಂದು ವಿಷಯವನ್ನು ನಾನು ಸಮಿತಿಯ ಮುಂದೆ ಹೇಳಬಯಸುತ್ತೇನೆ. 'ಇಂಥ ಸಂದರ್ಭದಲ್ಲಿ ನೀವು ಹೇಗೆ ನಿಯಂತ್ರಿಸುತ್ತೀರಿ?' ಎಂದು ಆಳುವ ಒಬ್ಬ ರಾಜಕುಮಾರರನ್ನು ನಾನು ಕೇಳಿದೆ. ಏನಾದರೂ ಇಂಥ ಘಟನೆ ಸಂಭವಿಸುತ್ತಲೇ, ಇದು ಪೋಲೀಸರಿಂದಲೇ ಪ್ರಾರಂಭವಾಗಿದೆ ಎಂದು ತಪ್ಪದೇ ತಿಳಿದುಕೊಳ್ಳುತ್ತೇವೆ. ಪೋಲೀಸರು ಒಂದಲ್ಲ ಒಂದು ಪಕ್ಷವನ್ನು ಬೆಂಬಲಿಸಿರುವುದರಿಂದಲೇ ಅದು ನಡೆದಿರುತ್ತದೆ. ಅದಕ್ಕೆ ಒಂದೇ ಒಂದು ಪರಿಹಾರವನ್ನು ನಾವು ಕಂಡುಕೊಂಡಿದ್ದೇವೆ.

ಘಟನೆಯ ಬಗೆಗೆ ನಮಗೆ ಗೊತ್ತಾದ ಕೂಡಲೇ ಆ ಸ್ಥಳದಿಂದ ಅಲ್ಲಿಯ ಪೊಲೀಸ್ ಅಧಿಕಾರಿಯನ್ನು ಸ್ಥಳಾಂತರಿಸುತ್ತೇವೆ. ಅಲ್ಲಿಗೆ ಅದು ಮುಗಿದುಹೋಗುತ್ತದೆ ಎಂದು ಅವರು ಉತ್ತರಿಸಿದರು.

ಪ್ರಶ್ನೆ ೩೮೫೫– ಅದು ಉಪಯುಕ್ತ ಮಾಹಿತಿಯಾಗಿದೆ. ಆದರೆ ನಿಜಸ್ಥಿತಿ ಏನೆಂದರೆ– ಇವು ಅಂತರ್ ಜನಾಂಗೀಯ ದಂಗೆಗಳಾಗಿವೆ. ಒಂದು ಕಡೆಗೆ ಹಿಂದೂ ಜನಾಂಗದವರಿದ್ದರೆ ಇನ್ನೊಂದು ಕಡೆಗೆ ಮೊಹಮ್ಮದೀಯ ಜನಾಂಗದವರಿದ್ದಾರೆ. ಇವುಗಳಲ್ಲಿ ಯಾವುದೇ ಒಂದು ಜನಾಂಗದ ಪ್ರತಿನಿಧಿಯಾದ ಮಂತ್ರಿಗಳೊಬ್ಬರು ಕಾಯಿದೇ ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳುವ ಜವಾಬ್ದಾರಿಯನ್ನು ಹೊತ್ತುಕೊಂಡರೆ ಇದು ಅನುಕೂಲಕರವಾಗಬಹುದಲ್ಲವೇ?

ಉತ್ತರ– ನಿಶ್ಚಿತವಾಗಿ.

ಪ್ರಶ್ನೆ ೩೮೫೬– ನಿಶ್ಚಿತವಾಗಿ ಇದು ಒಳ್ಳೆಯದಲ್ಲವೇ?

ಉತ್ತರ– ಇದಕ್ಕಿಂತ ಭಿನ್ನವಾಗಿ ನಾನು ವಿಚಾರಿಸಿದರೆ ನಾನು ನನ್ನ ಮೇಲೆಯೇ ಪ್ರತಿಕ್ಷೇಪ ಮಾಡಿಕೊಂಡಂತಾಗಬಹುದು. ನಾನೇ ಮಂತ್ರಿಯಾಗಿದ್ದರೆ, ಯಾವುದು ಸತ್ಯವಾದುದೋ, ಯಾವುದು ನ್ಯಾಯವಾದುದೋ ಅದನ್ನು ಬಿಟ್ಟು ಬೇರೆ ಯಾವುದೂ ನನ್ನ ಮುಂದೆ ನಡೆಯಲಾರದೆಂದು ಧೈರ್ಯದಿಂದ ಹೇಳುತ್ತಿದ್ದೆ.

ಪ್ರಶ್ನೆ ೩೮೫೭– ನೀವು ಇನ್ನೊಂದು ಪಕ್ಷಕ್ಕೆ ನ್ಯಾಯಕ್ಕಿಂತಲೂ ಹೆಚ್ಚಿನದನ್ನು ಮಾಡಬಲ್ಲಿರಿ ಎಂಬುದನ್ನು ನಾನು ತಿಳಿದುಕೊಳ್ಳಬಲ್ಲೆ. ಹಾಗಿದ್ದರೂ ಕೂಡ ದಲಿತ ಪಕ್ಷ ಎಂದು ಕರೆಯಬಹುದಾದದ್ದೂ ಇದೆ. ನಿಷ್ಪಕ್ಷಪಾತತನ ಇದೆ ಎಂಬುದಿಷ್ಟೇ ಅಲ್ಲ. ಸಾರ್ವಜನಿಕರು ಹೊಂದಬಹುದಾದ, ಸ್ವಲ್ಪ ಸಂಶಯದ ಭಾವನೆಯನ್ನು ಬೆಳೆಸಿಕೊಳ್ಳಬಹುದಾದ, ವಿಚಾರ ಅದರಲ್ಲಿದೆಯಲ್ಲವೇ?

ಉತ್ತರ– ಒಂದು ಇಲ್ಲವೇ ಇನ್ನೊಂದು ಪಕ್ಷಕ್ಕೆ ಸಂಬಂಧಿಸಿದಂತೆ, ಅವರಿಗೆ ಅನ್ಯಾಯ ಮಾಡಲಾಗಿದೆ ಎಂಬುದು, ಇಲ್ಲವೇ ಆ ನ್ಯಾಯವನ್ನು ಒದಗಿಸಲಾಗುವುದಿಲ್ಲವೆಂಬುದು, ನಿಮ್ಮ ಮಾತಿನ ಅರ್ಥವೇ?

ಪ್ರಶ್ನೆ ೩೮೫೮– ಹೌದು, ಅದು ವಿಷಯಕ್ಕೆ ಸಂಬಂಧಿಸಿದುದಕ್ಕಿಂತ ಬೇರೆಯಾದ ಭಾಗವಾಗಿದೆಯೇ?

ಉತ್ತರ– ನನ್ನ ಉತ್ತರ ಹೀಗಿದೆ: ಈ ತೊಂದರೆಗಳು ಶೀಘ್ರವಾಗಿ ಮಾಯವಾಗುತ್ತಲಿವೆ. ಕೇವಲ ಇತ್ತೀಚೆಗೆ ಕೂಡ, ಮುಂಬಯಿಯ, ಠಾಣಾ ಜಿಲ್ಲೆಯಾದ್ಯಂತ, ಮೇಲಿನಿಂದ ಕೆಳಗಿನವರೆಗೆ ಪ್ರತಿಯೊಬ್ಬ ಅಧಿಕಾರಿಯೂ ಭಾರತೀಯನಾಗಿದ್ದನು. ಒಬ್ಬನಾದರೂ ಮುಸಲ್ಮಾನನಿದ್ದನೆಂದು ನನಗೆ ಅನ್ನಿಸುವುದಿಲ್ಲ. ಎಲ್ಲರೂ ಹಿಂದೂ ಜನರೇ. ಆದರೂ ಒಂದಾದರೂ ಆರೋಪವನ್ನು ನಾನು ಕೇಳಲಿಲ್ಲ. ಇತ್ತೀಚೆಗೆ ಅದು ಹಾಗೆಯೇ ಆಗಿದೆ. ಈಗ ನೀವು ನನಗೆ ಸೂಚಿಸುತ್ತಿರುವಂಥ ಭಾವನೆಗಳು ಹತ್ತು ವರ್ಷಗಳ ಹಿಂದೆ ಆ ಭಾವನೆಗಳಿದ್ದವೆಂಬುದನ್ನು ನಿಮ್ಮೊಡನೆ ನಾನು ತುಂಬ ಒಪ್ಪಿಕೊಳ್ಳುತ್ತೇನೆ. ಆದರೆ ಈಗ ಅದು ಮಾಯವಾಗುತ್ತಿದೆ.

ಲಾರ್ಡ್ ಇಸ್ಲಿಂಗ್ಟನ್ ಅವರಿಂದ ಪರಿಶೀಲನೆ

ಪ್ರಶ್ನೆ ೩೮೯೨– ಮುಸಲ್ಮಾನರು ಹಿಂದೂ ಜನರೊಡನೆ ನಮ್ಮ ಪ್ರಾತಿನಿಧ್ಯ ಇಟ್ಟುಕೊಳ್ಳುವುದಕ್ಕಾಗಿ ಸ್ಥಾಪಿಸಬೇಕೆಂದಿರುವ ಮತ್ತು ಈಗ ಸ್ಥಾಪಿತವಾಗಿರುವ ಜಾತೀಯ ಪ್ರಾತಿನಿಧ್ಯವನ್ನು ತೆಗೆದುಹಾಕಲು ಕೆಲವು ವರ್ಷಗಳಲ್ಲಿ ನಿಮಗೆ ಸಾಧ್ಯವಾಗಬಹುದೆಂದು, ಮೇಜರ್ ಅಮ್ಸ್ ಬಿ ಗೋರ್ ಅವರಿಗೆ ಉತ್ತರ ಕೊಡುತ್ತ ನೀವು ಇದೀಗ ಹೇಳಿದಿರಿ. ಹಾಗೆ ಆಗುವುದನ್ನು ನೋಡಬೇಕೆಂಬುದು ನಿಮ್ಮ ಅಪೇಕ್ಷೆ ಎಂದು ಹೇಳಿದಿರಿ. ಘಟನೆಗಳು ಸಫಲತೆಯ ಸಂತೋಷದ ಆ ಸ್ಥಿತಿಯನ್ನು ಎಷ್ಟು ಬೇಗ ಮುಟ್ಟಬಹುದೆಂಬುದು ನಿಮ್ಮ ಅಭಿಪ್ರಾಯವಾಗಿದೆ.

ಉತ್ತರ– ನಾನು ನಿಮಗೆ ನಿಜಸಂಗತಿಯನ್ನು ಮಾತ್ರ ತಿಳಿಸಬಲ್ಲೆನು. ಅದಕ್ಕಿಂತ ಹೆಚ್ಚಿಗೆ ಏನನ್ನೂ ನಾನು ಹೇಳಲಾರೆ. ಇದನ್ನು ಹೇಳುವುದರಿಂದ ನಿಮಗೆ ಸ್ವಲ್ಪಮಟ್ಟಿಗೆ ಅದರ ಕಲ್ಪನೆ ಬರುವುದು. ೧೯೧೩ನೆಯ ಇಸ್ವಿಯಲ್ಲಿ ಆಗ್ರಾ ಮುಸಲ್ಮಾನರಿಗಾಗಿ ಪ್ರತ್ಯೇಕ ಮತದಾರ ಕ್ಷೇತ್ರಗಳು ಇರಬೇಕೆಂಬುದಕ್ಕೆ ಒತ್ತಾಯಪಡಿಸಬೇಕೋ ಬೇಡವೋ ಎಂಬುದನ್ನು ಆಗ ಪರೀಕ್ಷೆಗೆ ಇಟ್ಟೆವು. ಈ ಬಗೆಗೆ ಭಿನ್ನಾಭಿಪ್ರಾಯ ಕಂಡುಬಂದಿತು. ಈ ಭಿನ್ನಾಭಿಪ್ರಾಯವು ಪ್ರಾಂತ್ಯಗಳ ಆಧಾರದ ಮೇಲೆ ಇದ್ದುದಾಗಿದೆ. ಪ್ರತಿಯೊಂದು ಪ್ರಾಂತ್ಯವನ್ನು ಕೇವಲ ಕೆಲವು ಮಾತುಗಳು ಮಾತ್ರ ಪ್ರತಿನಿಧಿಸುತ್ತಿವೆ ಮತ್ತು ಭಿನ್ನಾಭಿಪ್ರಾಯವು ಪ್ರತ್ಯೇಕ ಮತದಾರ ಕ್ಷೇತ್ರವನ್ನು ಕೇಳದೇ ಇರುವುದಕ್ಕೆ ೪೦ ಮತಗಳು ಅನುಕೂಲವಾಗಿ ಬಂದಿದೆ ಹಾಗೂ ಇನ್ನು ೮೦– ನನಗೆ ಖಚಿತವಾದ ಸಂಖ್ಯೆ ನೆನಪಿಲ್ಲ– ಪ್ರತ್ಯೇಕ ಮತದಾರ ಕ್ಷೇತ್ರವನ್ನು ಪಡೆಯುವುದಕ್ಕೆ ಬೆಂಬಲ ಸೂಚಿಸಿ ಬಂದಿವೆ. ಇದು ನಡೆದದ್ದು ೧೯೧೩ನೆಯ ಇಸ್ವಿಯಲ್ಲಿ. ಆಗಿನಿಂದ ಈ ವಿಷಯವನ್ನು ಬೇರೆ ಬೇರೆ ಮುಸಲ್ಮಾನ ಧುರೀಣರೊಡನೆ ಚರ್ಚೆ ಮಾಡುವ ಸುಸಂದರ್ಭ ನನಗೆ ಬಂದಿದೆ. ಅವರು ಈ ಬಗೆಗೆ ತಮ್ಮ ದೃಷ್ಟಿಕೋನವನ್ನು ಬದಲಾಯಿಸುತ್ತಲಿದ್ದಾರೆ. ನಾನು ಖಚಿತ ಅವಧಿಯನ್ನು ನಿಮಗೆ ಕೊಡಲಾರೆ. ಆದರೆ ಈ ಸ್ಥಿತಿ ಬಹಳ ದಿನ ಇರಲಿಕ್ಕಿಲ್ಲವೆಂದು ನನ್ನ ತಿಳಿವಳಿಕೆ. ಬಹುಶಃ ಇನ್ನೊಮ್ಮೆ ನಡೆಯುವ ವಿಚಾರಣೆಯ ಕಾಲಕ್ಕೆ ಖಚಿತವಾಗಿ ಗೊತ್ತಾಗಬಹುದು.

ಪ್ರಶ್ನೆ ೩೮೯೩– ಮುಂದಿನ ವಿಚಾರಣೆಯ ಕಾಲಕ್ಕೆ, ಸಮಗ್ರತೆಯಲ್ಲಿ ತಮ್ಮನ್ನು ಸೇರಿಸಬೇಕೆಂದು ಕೇಳುವರೆಂಬುದು ನಿಮ್ಮ ವಿಚಾರವೇ?

ಉತ್ತರ– ಹೌದು. ಮುಂದಿನ ವಿಚಾರಣೆಯ ಕಾಲಕ್ಕೆ ಆ ವಿಷಯವಾಗಿ ಏನಾದರೂ ಹೊರಬೀಳಬಹುದೆಂಬುದು ನನ್ನ ವಿಚಾರ.

ಮುಸ್ಲಿಮ್ ಲೀಗಿನ ಪಕ್ಷ ವಹಿಸಿ ಸಾಕ್ಷಿಯ ಸ್ಥಾನಮಾನದಿಂದ ಶ್ರೀ ಜಿನ್ನಾ ಅವರು ವಿಚಾರಣೆಯ ಎದುರಿಗೆ ಬಂದಿದ್ದರೂ ಕೂಡ ಅವರು ತಾವು ಮುಸ್ಲಿಮ್ ಲೀಗಿನ ಸದಸ್ಯರಾಗಿರುವಿಕೆಯು ದೇಶದಲ್ಲಿ ತಾವು ಇತರ ರಾಜಕೀಯ ಸಂಸ್ಥೆಗಳಿಗೆ ವಿಶ್ವಾಸದಿಂದ ನಡೆದುಕೊಳ್ಳುವಲ್ಲಿ ಅಡ್ಡಿಯನ್ನು ಉಂಟುಮಾಡಲು ಅವಕಾಶ ಕೊಡಲಿಕ್ಕಿಲ್ಲ. ಮುಸ್ಲಿಮ್ ಲೀಗಿನ ಸದಸ್ಯರಾಗಿರುವುದರ ಜೊತೆಗೆ ಶ್ರೀ ಜಿನ್ನಾ 'ಹೋಮ್ ರೂಲ್ ಲೀಗ್' ಮತ್ತು 'ಕಾಂಗ್ರೆಸ್' ಇವುಗಳ ಸದಸ್ಯರೂ ಆಗಿದ್ದರು. 'ಜಂಟಿ ಸಂಸದೀಯ ಸಮಿತಿ'ಯ ಮುಂದೆ ಸಾಕ್ಷಿ ನುಡಿಯುವಾಗ ಅವರು ಹೇಳಿದಂತೆ, ಕಾಂಗ್ರೆಸ್ಸಿನ ಜೊತೆಗೆ ಎಲ್ಲರಿಗೆ ಗೊತ್ತಿರುವಂತೆಯೇ

ಭಿನ್ನಾಭಿಪ್ರಾಯವಿದ್ದರೂ, ಮುಸ್ಲಿಮ್ ಲೀಗಿನ ಜೊತೆಗೆ ಭಿನ್ನಾಭಿಪ್ರಾಯವಿದ್ದರೂ, ಮತ್ತು ಹೋಮ್ ರೂಲ್ ಲೀಗ್ ತಳೆದಿರುವ ಹಲವು ಅಭಿಪ್ರಾಯಗಳನ್ನು ತಾವು ಒಪ್ಪದೇ ಇದ್ದರೂ, ಆ ಮೂರೂ ಸಂಘಟನೆಗಳ ಸದಸ್ಯರಾಗಿಯೇ ಅವರಿದ್ದರು. ಖಿಲಾಫತ್ ಚಳವಳಿಯ ಮುಸಲ್ಮಾನರ ಜೊತೆಗೆ ಅವರು ಇಟ್ಟುಕೊಂಡಿರುವ ಸಂಬಂಧ ಅವರು ಸ್ವತಂತ್ರ ಅಭಿಪ್ರಾಯದವರಾಗಿದ್ದರೂ ರಾಷ್ಟ್ರೀಯ ವಿಚಾರವಾದಿಗಳೆಂಬುದನ್ನು ಅದು ತೋರಿಸುತ್ತದೆ. ೧೯೨೦ನೆಯ ಇಸ್ವಿಯಲ್ಲಿ ಮುಸಲ್ಮಾನರು ಖಿಲಾಫತ್ ಸಮ್ಮೇಳನವನ್ನು ಸಂಘಟಿಸಿದರು. ಅದು ಎಂಥ ಸಮರ್ಥ ಸಂಸ್ಥೆಯಾಯಿತೆಂದರೆ ೧೯೨೪ನೆಯ ಇಸ್ವಿಯವರೆಗೆ ಮುಸ್ಲಿಮ್ ಲೀಗ್ ಉತ್ಸಾಹಗುಂದಿದ ಸಂಘವಾಗಿ ನಿಸ್ತೇಜಗೊಂಡಿತು. ಈ ವರ್ಷದಲ್ಲಿ, ಯಾವ ಮುಸಲ್ಮಾನ ನಾಯಕನೂ ಖಿಲಾಫತ್ ಸಮ್ಮೇಳನದ ಸದಸ್ಯನಾಗಿರದೇ ಇದ್ದರೆ ಮುಸಲ್ಮಾನ ವೇದಿಕೆಯಿಂದ ಮುಸಲ್ಮಾನ ಸಮಾಜವನ್ನು ಕುರಿತು ಭಾಷಣ ಮಾಡುತ್ತಿರಲಿಲ್ಲ. ಮುಸಲ್ಮಾನರು ಮುಸಲ್ಮಾನರೊಡನೆ ಭೇಟಿಯಾಗಲು, ಸಂಪರ್ಕ ಇಟ್ಟುಕೊಳ್ಳಲು, ಅದೊಂದೇ ಒಂದು ವೇದಿಕೆಯಾಗಿದ್ದಿತು. ಹಾಗಿದ್ದರೂ ಶ್ರೀ ಜಿನ್ನಾ ಅವರು 'ಖಿಲಾಫತ್ ಸಮ್ಮೇಳನ'ವನ್ನು ಸೇರಲು ನಿರಾಕರಿಸಿದರು. ಆಗ ಯಾವ ಹಳೆಯ ಧಾರ್ಮಿಕ ಕಟ್ಟಳೆಗಳ ತೀಕ್ಷ್ಣತೆ ಇಲ್ಲದಿರುವ ಒಬ್ಬರೇ ಒಬ್ಬ ಶಾಸನಬದ್ಧ ಮುಸಲ್ಮಾನರು ಇವರಾಗಿದ್ದರೆಂಬ ತಥ್ಯವೇ ಇದಕ್ಕೆ ನಿಸ್ಸಂಶಯವಾಗಿ ಕಾರಣವಾಗಿದ್ದಿತು. ಆದರೆ ಈಗ ಆ ತೀಕ್ಷ್ಣತೆ ಅಧಿಕವಾಗಿದೆ ಎಂದು ಅವರು ಹೇಳುತ್ತಾರೆ. 'ಖಿಲಾಫತ್' ಸೇರದಿರಲು ಅವರಿಗೆ ನಿಜವಾದ ಕಾರಣವೇನಿದ್ದಿತೆಂದರೆ, ಭಾರತದ ಮುಸಲ್ಮಾನರು ಭಾರತದ ಹೊರಗಿನ ವಿದೇಶಗಳ– ಮುಸಲ್ಮಾನರ ವ್ಯವಹಾರಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬಾರದೆಂದು ಜಿನ್ನಾ ಬಯಸುತ್ತಿದ್ದರು.

ಕಾಂಗ್ರೆಸ್ ಸಂಸ್ಥೆಯು ಅಸಹಕಾರ, ಕಾನೂನುಭಂಗ ಮತ್ತು ಕೌನ್ಸಿಲ್‌ಗಳ ಬಹಿಷ್ಕಾರ– ಈ ಮಾರ್ಗಗಳನ್ನು ಅನುಸರಿಸಹತ್ತಿದ ನಂತರ ಶ್ರೀ ಜಿನ್ನಾ ಕಾಂಗ್ರೆಸ್ಸನ್ನು ಬಿಟ್ಟುಬಿಟ್ಟರು. ಅವರು ಕಾಂಗ್ರೆಸ್ಸಿನ ಟೀಕಾಕಾರರಾದರು; ಆದರೆ ಅವರು ಅದನ್ನು ಎಂದೂ ಹಿಂದೂ ಸಂಘಟನೆ ಎಂದು ಆರೋಪಿಸಲಿಲ್ಲ. ಅವರ ವಿರೋಧಿಗಳು ಒಮ್ಮೆ ಇಂಥ ಆರೋಪವನ್ನು ಅವರ ಮೇಲೆ ಹೊರಿಸಿದಾಗ ಅದನ್ನು ಅವರು ಪ್ರತಿಭಟಿಸಿದರು. ಆ ಕಾಲದಲ್ಲಿ ಶ್ರೀ ಜಿನ್ನಾ ಅವರು 'ಟೈಮ್ಸ್ ಆಫ್ ಇಂಡಿಯಾ' ಇಂಗ್ಲೀಷ್ ದಿನಪತ್ರಿಕೆಯ ಸಂಪಾದಕರಿಗೆ ಬರೆದ ಒಂದು ಪತ್ರ ಇದೆ: ಈ ಪತ್ರವು ಜಿನ್ನಾರವರು ಕಾಂಗ್ರೆಸ್ಸಿನ ಬಗೆಗೆ ಈಗ ತಳೆದಿರುವ ಅಭಿಪ್ರಾಯಕ್ಕೂ, ಎಂಥ ವಿಚಿತ್ರ ವ್ಯತ್ಯಾಸ ಇದೆ ಎಂಬುದನ್ನು ತೋರಿಸಿ ಕೊಡುತ್ತದೆ. ಆ ಪತ್ರವು ಕೆಳಗಿನಂತೆ ಇದೆ:

**"ಸಂಪಾದಕರು, 'ಟೈಮ್ಸ್ ಆಫ್ ಇಂಡಿಯಾ' ಅವರಿಗೆ–**

**ಮಾನ್ಯರೆ,**

**ಕಾಂಗ್ರೆಸ್ಸನ್ನು 'ಒಂದು ಹಿಂದೂ ಸಂಘಟನೆ' ಎಂದು ಖಂಡಿಸಿದ್ದೇನೆ ಎಂಬುದಾಗಿ 'ಬ್ಯಾಂಕರ್' ಎಂಬ ನಿಮ್ಮ ಪ್ರತಿನಿಧಿಯು ಅಕ್ಟೋಬರ್ ೧ನೆಯ ತಾರೀಖಿನ ನಿಮ್ಮ ಸಂಚಿಕೆಯ ಎರಡನೆಯ ಅಂಕಣದಲ್ಲಿ ಬರೆದಿದ್ದಾರೆ. ನಾನು ಹೀಗೆ ಹೇಳಿದೆನೆಂದು ಒಂದಕ್ಕಿಂತ ಹೆಚ್ಚು ಸಲ ನೀವು ಪ್ರಕಟಿಸಿದ್ದು, ಈಗ ಪುನಃ ಹಾಗೆ ಉಲ್ಲೇಖಿಸಲಾಗಿದೆ. ಇದನ್ನು ನಾನು ಪ್ರತಿಭಟಿಸಲು ಪುನಃ ಬಯಸುತ್ತೇನೆ. ನಿಮ್ಮ ಪತ್ರಿಕೆಯಲ್ಲಿ ಹೀಗೆ ಪ್ರಕಟವಾದ ಕೂಡಲೇ ನನ್ನ ಭಾಷಣದ ಬಗೆಗೆ ತಪ್ಪು ಅಭಿಪ್ರಾಯ ನೀಡುವ ಈ ವರದಿಯನ್ನು ನಾನು ಸಾರ್ವಜನಿಕವಾಗಿ ತಿದ್ದಿದೆ. ಆದರೆ ನಿಮ್ಮ ಪತ್ರಿಕೆಯಲ್ಲಿ ಆ ವಿಷಯವು ಪ್ರಕಟಗೊಳ್ಳಲಿಲ್ಲ. ಆದಕಾರಣ, ಈ ಪತ್ರವನ್ನು ಪ್ರಕಟಿಸುವ ಕೃಪೆ ಮಾಡಬೇಕೆಂದು ನಾನು ಈಗ ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ."**

ಖಿಲಾಫತ್ ಬಿರುಗಾಳಿಯು ಬೀಸಿ ಹೋದ ನಂತರ ಮತ್ತು ಮುಸಲ್ಮಾನರು ಭಾರತದ ಆಂತರಿಕ ರಾಜಕಾರಣಕ್ಕೆ ಮರಳುವ ಅಪೇಕ್ಷೆಯನ್ನು ವ್ಯಕ್ತಮಾಡಿದ ನಂತರ, ಮುಸ್ಲಿಮ್ ಲೀಗ್ ಪುನಶ್ಚೇತನ ಪಡೆಯಿತು. ೧೯೨೪ನೆಯ ಇಸ್ವಿಯ ಡಿಸೆಂಬರ್ ೩೦ನೆಯ ತಾರೀಖಿನಂದು ಮುಂಬಯಿಯಲ್ಲಿ ಜನಾಬ ರಜಾ ಅಲಿ ಅವರ ಅಧ್ಯಕ್ಷತೆಯಲ್ಲಿ ನಡೆದ ಲೀಗ್ ಅಧಿವೇಶನವು ಚೇತೋಹಾರಿಯಾಗಿದ್ದಿತು. ಶ್ರೀ ಜಿನ್ನಾ ಮತ್ತು ಶ್ರೀ ಮೊಹಮ್ಮದ್ ಅಲಿ ಇಬ್ಬರೂ ಅದರಲ್ಲಿ ಭಾಗವಹಿಸಿದ್ದರು.[೧]

ಲೀಗಿನ ಈ ಅಧಿವೇಶನದಲ್ಲಿ ಒಂದು ಗೊತ್ತುವಳಿಯನ್ನು ಮಂಡಿಸಲಾಯಿತು. ಬೇರೆ ಬೇರೆ ರಾಜಕೀಯ ಪ್ರತಿನಿಧಿಗಳು ದಿಲ್ಲಿಯಲ್ಲಾಗಲೀ ಬೇರೆ ಯಾವುದಾದರೂ ಕೇಂದ್ರ ಸಂಘ-ಸಂಸ್ಥೆಗಳ ಪ್ರತಿನಿಧಿಗಳು ದಿಲ್ಲಿಯಲ್ಲಾಗಲೀ ಬೇರೆ ಯಾವುದಾದರೂ ಕೇಂದ್ರ ಸ್ಥಳದಲ್ಲಾಗಲೀ ಸಭೆ ಸೇರಿ ಮುಸ್ಲಿಮ್ ಸಮಾಜದ ಅವಶ್ಯಕತೆಗಳನ್ನು ಪೂರೈಸಬಲ್ಲ ಒಂದು ಒಗ್ಗಟ್ಟಿನ ಮತ್ತು ಸ್ವಷ್ಟ ವ್ಯಾವಹಾರಿಕ ಕಾರ್ಯಕ್ರಮವನ್ನು ರೂಪಿಸುವರೆಂಬ ವಿಶ್ವಾಸವನ್ನು ಆ ಗೊತ್ತುವಳಿ ವ್ಯಕ್ತಮಾಡಿತು. ಆ ಗೊತ್ತುವಳಿಯನ್ನು ವಿವರಿಸುತ್ತ ಹೀಗೆ ಹೇಳಿದರು:[೨]

> **"ಇದರ ಉದ್ದೇಶ ಮುಸ್ಲಿಮ್ ಸಮುದಾಯವನ್ನು ಸಂಘಟಿಸುವುದೇ ಆಗಿದೆ. ಹಿಂದೂ ಸಮಾಜದೊಡನೆ ಜಗಳಾಡುವುದಕ್ಕಾಗಿ ಅಲ್ಲ; ಮಾತೃಭೂಮಿಯ ಸೇವೆಗಾಗಿ ಅವರೊಡನೆ ಒಗ್ಗಟ್ಟನಿಂದಿರಲು ಮತ್ತು ಸಹಕರಿಸಲು. ಒಮ್ಮೆ ತಾವು ಸಂಘಟಿತರಾದರೆ ಹಿಂದೂ ಮಹಾಸಭಾದ ಸಂಗಡ ಕೂಡ ತಾವು ಸಹಕರಿಸಿ ಕೆಲಸ ಮಾಡಲು ಸಾಧ್ಯವಾಗಬಹುದು ಮತ್ತು ಆ ಮೂಲಕ ಹಿಂದೂ-ಮುಸಲ್ಮಾನರು ಅಣ್ಣ-ತಮ್ಮಂದಿರೆಂಬುದನ್ನು ಘೋಷಿಸಲಾಗುವುದು.**

ಮುಸಲ್ಮಾನ ಸಮಾಜದ ರಾಜಕೀಯ ಬೇಡಿಕೆಗಳನ್ನು ರೂಪಿಸಲು ೩೩ ಜನ ಮುಸಲ್ಮಾನ ಧುರೀಣರ ಸಮಿತಿಯೊಂದನ್ನು ನೇಮಿಸುವುದಕ್ಕಾಗಿ ಅದೇ ಅಧಿವೇಶನದಲ್ಲಿ ಬೇರೊಂದು ಗೊತ್ತುವಳಿಯನ್ನು ಕೂಡ ಲೀಗ್ ಪಾಸುಮಾಡಿತು. ಶ್ರೀ ಜಿನ್ನಾ ಅವರೇ ಗೊತ್ತುವಳಿಯನ್ನು ಮಂಡಿಸಿದರು. ಗೊತ್ತುವಳಿಯನ್ನು ಮಂಡಿಸಿ ಜಿನ್ನಾರವರು:

> **"ಲೀಗಿನ ವೇದಿಕೆಯ ಮೇಲೆ ತಾವು ಒಬ್ಬ ಕೋಮುವಾದಿಯಾಗಿ ನಿಂತ ಆರೋಪವನ್ನು ಖಂಡಿಸಿದರು. ತಾವು ಎಂದಿನಂತೆ ರಾಷ್ಟ್ರೀಯವಾದಿಯಾಗಿಯೇ ಇರುವುದಾಗಿ ಭರವಸೆ ಇತ್ತರು. ವೈಯಕ್ತಿಕವಾಗಿ ತಮಗೆ ಯಾವ ಸಂಕೋಚವೂ ಆಗಿರುವುದಿಲ್ಲ. ದೇಶದ ವಿಧಾನಸಭೆಗಳಲ್ಲಿ ಅತ್ಯುತ್ತಮ ಹಾಗೂ ಸಮರ್ಥ ಜನರು ಪ್ರತಿನಿಧಿಸಬೇಕೆಂದು ಅವರು ಅಪೇಕ್ಷಿಸಿದರು. (ಚೆನ್ನಾಗಿದೆ, ಚೆನ್ನಾಗಿದೆ ಎಂಬ ಕೂಗು ಹಾಗೂ ಸಂತೋಷವನ್ನು ವ್ಯಕ್ತಮಾಡುವುದು.) ಆದರೆ ದುರ್ದೈವದಿಂದ ಅವರ ಮುಸ್ಲಿಮ್ ದೇಶ ಬಂಧುಗಳು ತಾವು ಮುಂದುವರಿದಷ್ಟು ಮುಂದುವರಿಯುತ್ತಿಲ್ಲ. ತಾವು ಆ ಪರಿಸ್ಥಿತಿಯನ್ನು ಕಣ್ಣು ಮುಚ್ಚಿಕೊಂಡು ನೋಡಲು ಸಾಧ್ಯವಿಲ್ಲ ನಿಜಸ್ಥಿತಿ ಏನೆಂದರೆ, ವಿಧಾನಸಭೆಗಳಲ್ಲಿ ಮತ್ತು ದೇಶದ ನಾಗರಿಕ ಸೇವೆಗಳಲ್ಲಿ**

---

೧. ಶ್ರೀ ಮೊಹಮ್ಮದ್ ಅಲಿ ಅವರು ಕೋಕೋನಾಡಾದಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷೀಯ ಭಾಷಣದಲ್ಲಿ 'ಶ್ರೀ ಜಿನ್ನಾ ಮರಳಿ ನಮ್ಮ ಕಡೆಗೆ ಬೇಗ ಬರುತ್ತಾರೆ' ಎಂದು ಹೇಳಿದರು (ನಗೆ). ನಾಸ್ತಿಕನಾದವನು ಕಾಫಿರನಾಗುತ್ತಾನೆ, ಕಾಫಿರ್ ಆದವನು ನಾಸ್ತಿಕನಾಗುತ್ತಾನೆ; ಹಾಗೆಯೇ ಶ್ರೀ ಜಿನ್ನಾ ಕಾಂಗ್ರೆಸ್ಸಿನಲ್ಲಿದ್ದಾಗ ಆ ದಿನಗಳಲ್ಲಿ ನಾನು ಅವರ ಜೊತೆಗಿರಲಿಲ್ಲ; ನಾನು ಕಾಂಗ್ರೆಸ್ಸಿನಲ್ಲಿಯೂ ಮುಸ್ಲಿಮ್ ಲೀಗಿನಲ್ಲಿಯೂ ಇದ್ದಾಗ ನನ್ನಿಂದ ಅವರು ದೂರವಾಗಿದ್ದರು. ಒಂದು ದಿನ ನಾವಿಬ್ಬರೂ ಒಂದುಗೂಡುತ್ತೇವೆ ಎಂಬ ವಿಶ್ವಾಸ ನನಗಿದೆ (ನಗೆ).

೨. ದಿನಾಂಕ ೧.೧.೧೯೨೫ರ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ವರದಿಯಿಂದ.

**ಪ್ರತ್ಯೇಕ ಪ್ರಾತಿನಿಧಿತ್ವ ಬೇಕೆಂದು ಕೇಳುವ ಮುಸಲ್ಮಾನರ ಸಂಖ್ಯೆಯು ಅತ್ಯಧಿಕವಾಗಿದೆ. ಮತೀಯ ಸಾಮರಸ್ಯ ಇರಬೇಕೆಂದು ಅವರು ಮಾತನಾಡುತ್ತಿದ್ದರು; ಆದರೆ ಆ ಸಾಮರಸ್ಯ ಎಲ್ಲಿದ್ದಿತು? ಒಂದು ಸೂಕ್ತ ಒಪ್ಪಂದಕ್ಕೆ ಬರುವುದರ ಮೂಲಕ ಅದನ್ನು ಸಾಧಿಸಬೇಕಾಗಿದ್ದಿತು. ತಮ್ಮ ಸಹಧರ್ಮೀಯರು ಸ್ವರಾಜ್ಯಕ್ಕಾಗಿ ಕಾದಾಡಲು ಸಿದ್ಧರಾಗಿರುವರೆಂಬುದನ್ನು ನಾನು ಬಲ್ಲೆ. ಆದರೆ, ಅವರು ಕೆಲವು ಭದ್ರತೆಗಳನ್ನು ಬಯಸುತ್ತಾರೆ. ತಮ್ಮ ದೃಷ್ಟಿಕೋನ ಹೇಗೇ ಇದ್ದರೂ, ವ್ಯಾವಹಾರಿಕ ರಾಜಕಾರಣಿಯಾಗಿ ಸಂದರ್ಭದ ವಿವರಗಳನ್ನು ಅರಿತುಕೊಳ್ಳುವುದು ಅವಶ್ಯವೆಂಬುದನ್ನು ಅವರು ಬಲ್ಲರು. ಒಗ್ಗಟ್ಟಿಗೆ ಸಮಾಜಗಳು ತಾವೇ ತೊಡಕಾಗುವುದಿಲ್ಲ. ಆದರೆ ಎರಡೂ ಸಮಾಜಗಳಲ್ಲಿಯ ಕೆಲವು ಉಡಾಳ ಜನರು ಇದಕ್ಕೆ ಕಾರಣರಾಗಿರುವರು."**

ದುಷ್ಟ ಜನರನ್ನು ಪ್ರಕಟಣೆಯಲ್ಲಿ ಸಾಧ್ಯವಾಷ್ಟು ಕಠೋರವಾದ ಭಾಷೆಯಲ್ಲಿ ನಿಂದಿಸಲು ಅವರು ಹೀಗೆ ಹಿಂಜರಿಯಲಿಲ್ಲ. ಇಂಥ ಭಾಷೆಯ ತುಂಬ ಕಳಕಳಿಯು ರಾಷ್ಟ್ರೀಯ ಮನೋಧರ್ಮದ ವ್ಯಕ್ತಿಗಳಿಂದ ಮಾತ್ರ ಬರಲು ಸಾಧ್ಯ. ೨೪ನೆಯ ಮೇ ೧೯೨೪ರಂದು ಲಾಹೋರಿನಲ್ಲಿ ನಡೆದ ಮುಸ್ಲಿಮ್ ಲೀಗ್ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿ ಅವರು ಹೀಗೆ ಹೇಳಿದರು.*

**"ನಾವು ಸ್ವತಂತ್ರ ವ್ಯಕ್ತಿಗಳಾಗಬೇಕಾದರೆ ನಾವು ಒಗ್ಗಟ್ಟಿನಿಂದ ಇರಬೇಕು. ಒಂದುವೇಳೆ ನಾವು ಪರಕೀಯ ಚಕ್ರಾಧಿಪತ್ಯದ ಗುಲಾಮರಾಗಿಯೇ ಮುಂದುವರೆಯಬೇಕಾದರೆ ಹಾಗೂ ಚಿಕ್ಕ ಚಿಕ್ಕ ವಿಷಯಗಳಲ್ಲಿ ನಮ್ಮ ವೃಥಾಭಿಮಾನವನ್ನು ಸಂತೃಪ್ತಪಡಿಸಿಕೊಳ್ಳಬಯಸಿದರೆ, ಇಂಗ್ಲೀಷರೇ ನಮ್ಮಿಬ್ಬರ ಮಧ್ಯಸ್ಥರಾಗುವರು."**

೧೯೨೫ರಲ್ಲಿ ಮತ್ತು ೧೯೨೮ರಲ್ಲಿ ಎರಡು ಸಲ ನಡೆದ ಸರ್ವಪಕ್ಷಗಳ ಸಮ್ಮೇಳನಗಳಲ್ಲಿ ಹಿಂದೂ-ಮುಸ್ಲಿಮ್ ಸಮಸ್ಯೆಯನ್ನು ಜೋಡು ಮತಕ್ಷೇತ್ರಗಳ ತಳಹದಿಯ ಮೇಲೆ ಬಗೆಹರಿಸಲು ಶ್ರೀ ಜಿನ್ನಾ ಸಿದ್ಧರಾಗಿದ್ದರು. ೧೯೨೭ನೆಯ ಇಸ್ವಿಯಲ್ಲಿ ಮುಸ್ಲಿಂ ಲೀಗ್ ವೇದಿಕೆಯ ಮೇಲಿಂದ ಸಾರ್ವಜನಿಕವಾಗಿ ಅವರು ಹೀಗೆ ಹೇಳಿದರು:[೧]

**"ನಾನು ಪ್ರತ್ಯೇಕ ಮತಕ್ಷೇತ್ರಗಳಿಗೆ ಬದ್ಧನಾಗಿದ್ದವನಲ್ಲ. ಆದರೂ ನಾನು ಹೇಳಲೇಬೇಕಾದ ಮಾತೊಂದಿದೆ: ಆದರೆ ಅತ್ಯಧಿಕ ಸಂಖ್ಯೆಯ ಮುಸಲ್ಮಾನರು ದೃಢವಾಗಿ ಮತ್ತು ಪ್ರಾಮಾಣಿಕವಾಗಿ ಇದೊಂದೇ ತಮ್ಮ ಸುರಕ್ಷತೆಗೆ ಇರುವ ಪದ್ಧತಿ ಎಂದು ನಂಬಿದ್ದಾರೆ."**

೧೯೨೮ನೆಯ ಇಸ್ವಿಯಲ್ಲಿ ಶ್ರೀ ಜಿನ್ನಾ, ಸೈಮನ್ ಕಮೀಶನ್ ಬಹಿಷ್ಕಾರಕ್ಕಾಗಿ ಕಾಂಗ್ರೆಸ್ಸಿನೊಡನೆ ಸೇರಿದ್ದರು. ಹಿಂದೂ-ಮುಸಲ್ಮಾನರು ಒಂದು ಒಪ್ಪಂದಕ್ಕೆ ಬರಲು ಸಾಧ್ಯವಾಗಲಿಲ್ಲ; ಆದರೂ ಜಿನ್ನಾ ಹೀಗೆ ಮಾಡಿದರು. ಮುಸ್ಲಿಂ ಲೀಗ್ ಇಬ್ಭಾಗವಾಗಬಹುದೆಂಬುದನ್ನು ಅರಿತೂ ಜಿನ್ನಾ ಹೀಗೆ ಮಾಡಿದರು. ದುಂಡುಮೇಜಿನ ಪರಿಷತ್ತು ಎಂಬ ಹಡಗು ಜಾತೀಯತೆಯ ಬಂಡೆಗಲ್ಲಿಗೆ ಬಡಿದು ನುಚ್ಚುನೂರು ಆಗಬಹುದಿದ್ದಾಗ ಕೂಡ, ಶ್ರೀ ಜಿನ್ನಾರವರು ತಮಗೆ ಜಾತಿವಾದಿ ಎಂದು ಕರೆಯುವುದನ್ನು ಪ್ರತಿಭಟಿಸಿದರು.

---

* ಕ್ವಾರ್ಟರ್ಲೀ ರಿವ್ಯೂ-೧೯೨೪, ಸಂಪುಟ ೧, ಪುಟ ೬೫೮ ನೋಡಿರಿ.

೧. ಇಂಡಿಯನ್ ಕ್ವಾರ್ಟರ್ಲೀ ರಿವ್ಯೂ-೧೯೨೭, ಸಂಪುಟ ೧, ಪುಟ ೩೭ ನೋಡಿರಿ.

ಅಂಥ ಪರಿಣಾಮಗಳಿಗೆ ತಾವು ಕಾರಣರೆಂಬುದನ್ನು ಅಲ್ಲಗಳೆದು, ಜಾತೀಯ ಸಮಸ್ಯೆಯನ್ನು ಬ್ರಿಟಿಷರ ಮಧ್ಯಸ್ಥಿಕೆಯಿಂದ ಬಿಡಿಸಿಕೊಳ್ಳುವುದಕ್ಕಿಂತ ಪರಸ್ಪರರು ಅರಿತು ಒಪ್ಪಿಕೊಂಡು ಬಿಡಿಸಿಕೊಳ್ಳುವುದೇ ಮೇಲೆಂದು ಹೇಳಿದರು. ದಿನಾಂಕ ೮.೮.೧೯೩೧ರಂದು ಅಲಹಾಬಾದಿನಲ್ಲಿ ನಡೆದ ಉತ್ತರ ಪ್ರದೇಶ ಮುಸ್ಲಿಮ್ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತ ಶ್ರೀ ಜಿನ್ನಾ ಹೀಗೆ ಹೇಳಿದರು:[೧]

**"ನಾನು ನಿಮಗೆ ಹೇಳಬೇಕಾದ ಮೊಟ್ಟ ಮೊದಲನೆಯ ವಿಷಯವೇನೆಂದರೆ, ಮುಸಲ್ಮಾನರು ಒಗ್ಗಟ್ಟಿನಿಂದ ಇರುವುದು ಸಂಪೂರ್ಣವಾಗಿ ಅವಶ್ಯವೂ ಅತಿ ಮುಖ್ಯವೂ ಆಗಿದೆ. ನಿಮ್ಮ ಎಲ್ಲ ಮತಭೇದಗಳನ್ನೂ ದೇವರ ಸಲುವಾಗಿ ಮುಚ್ಚಿಹಾಕಿರಿ ಮತ್ತು ಈ ಪರಸ್ಪರ ವಿಘಾತುಕ ಯುದ್ಧವನ್ನು ಸ್ಥಗಿತಗೊಳಿಸಿರಿ. ಈ ವಿಷಯವನ್ನು, ಡಾ. ಅನ್ಸಾರಿ, ಡಾ. ಟಿ.ಎಂ.ಕೆ. ಕ್ಷೇರವಾನಿ, ಮೌಲಾನಾ ಅಬ್ದುಲ್ ಕಲಮ್ ಆಜಾದ್ ಮತ್ತು ಡಾ. ಸೈಯದ್ ಮೊಹಮದ್ ಅವರ ಹತ್ತಿರ ತುಂಬ ಘೋರವಾಗಿ ಒತ್ತಾಯಪಡಿಸಿದ್ದೇನೆ ಮತ್ತು ನನ್ನ ಸಾಮರ್ಥ್ಯ ಮೀರಿ ಪ್ರತಿಪಾದಿಸಿದ್ದೇನೆ. ಯಾವ ಭಿನ್ನಾಭಿಪ್ರಾಯಗಳೇ ಇರಲಿ, ನಮ್ಮನಮ್ಮೊಳಗೆ ಯಾವುದೇ ರೀತಿಯ ಮನವರಿಕೆಗಳಿರಲಿ, ಆದರೆ ನಮ್ಮ ನಮ್ಮೊಳಗೆ ನಾವು ಜಗಳಾಡುವ ಸಮಯವಿದಲ್ಲ. ಈ ಶುಭ ಸಂಗತಿಯನ್ನು ನಾನು ಭಾರತದ ಸಮುದ್ರದ ದಡವನ್ನು ಬಿಡುವ ಮೊದಲೇ ಕೇಳುವೆನೆಂಬ ವಿಶ್ವಾಸ ನನಗಿದೆ.**

**ನಿಮಗೆ ನಾನು ಹೇಳಬಯಸಿದ ಇನ್ನೊಂದು ವಿಷಯ ಇದೆ. ಪತ್ರಿಕಾರಂಗದ ಕೆಲವರಿದ್ದಾರೆ. ಹಿಂದೂ ಜನರಲ್ಲಿ ಕೆಲವರಿದ್ದಾರೆ. ಅವರು ಅನೇಕ ರೀತಿಯಲ್ಲಿ ನನ್ನ ಬಗೆಗೆ ಸತತವಾಗಿ ತಪ್ಪು ಅಭಿಪ್ರಾಯಗಳನ್ನು ಹರಡುತ್ತಾರೆ. ಇಂದು ಮುಂಜಾನೆ ನಾನು ಗಾಂಧೀಜಿ ಅವರ ಭಾಷಣವನ್ನು ಓದುತ್ತಿದ್ದೆ. ಹಿಂದೂ ಜನರನ್ನೂ ಮತ್ತು ಮುಸಲ್ಮಾನರನ್ನೂ ಒಂದೇ ರೀತಿಯಲ್ಲಿ ಪ್ರೀತಿಸುತ್ತೇನೆಂದು ಗಾಂಧೀಜಿ ಅವರು ಹೇಳಿದ್ದಾರೆ. ಈ ವೇದಿಕೆಯ ಮೇಲೆ ನಿಂತು ಪುನಃ ಸ್ಪಷ್ಟವಾಗಿ ಹೇಳಬಯಸುತ್ತೇನೆ; ನಾನೂ ಕೂಡ ಹಾಗೆಯೇ ಇದ್ದೇನೆಂದು ನಾನು ಪ್ರತಿಪಾದಿಸದೇ ಇದ್ದರೂ, ಪ್ರಾಮಾಣಿಕವಾಗಿ ಮತ್ತು ವಿಶ್ವಾಸಾರ್ಹತೆಯಿಂದ, ಎರಡೂ ಸಮಾಜಗಳಲ್ಲಿ ಸಮಾನ ಅವಕಾಶಗಳಿರಬೇಕೆಂದು ಬಲವಾಗಿ ಪ್ರತಿಪಾದಿಸುತ್ತೇನೆ."**

ಮುಂದುವರೆದು ಶ್ರೀ ಜಿನ್ನಾ ಹೀಗೆ ಹೇಳಿದರು:

**"ಅತ್ಯಂತ ಪ್ರಮುಖ ವಿಷಯದ ಬಗೆಗೆ– ನನ್ನ ಮನಸ್ಸಿನಲ್ಲಿ ಹಿಂದೂ–ಮುಸಲ್ಮಾನ ಒಪ್ಪಂದವೇ ಅದು ಆಗಿದೆ– ನಾನು ನಿಮಗೆ ಎಲ್ಲ ಹೇಳಬೇಕಾದುದೇನೆಂದರೆ– ಹಿಂದೂ ಜನರು ಪಂಜಾಬ್ ಮತ್ತು ಬಂಗಾಲ ಪ್ರಾಂತ್ಯಗಳಲ್ಲಿ ಮುಸಲ್ಮಾನರು ಬಹುಸಂಖ್ಯಾತರೆಂಬುದನ್ನು ಒಪ್ಪಿಕೊಳ್ಳತಕ್ಕದ್ದು ಹಾಗೂ ಇಷ್ಟನ್ನು ಒಪ್ಪಿಕೊಂಡರೆ, ಅಲ್ಪ ಕಾಲದಲ್ಲಿಯೇ ಒಂದು ಒಪ್ಪಂದಕ್ಕೆ ಬರಬಹುದಾಗಿದೆ.**

**"ಉದ್ಭವಿಸುವ ಮುಂದಿನ ಸಮಸ್ಯೆ– ಪ್ರತ್ಯೇಕ ಮತಕ್ಷೇತ್ರವಿರಬೇಕೋ ಇಲ್ಲವೇ ಸಂಯುಕ್ತವಾಗಿರಬೇಕೋ ಎಂಬುದು. ನಿಮ್ಮಲ್ಲಿ ಬಹಳ ಜನರಿಗೆ ಗೊತ್ತಿರುವಂತೆ, ಪಂಜಾಬ ಮತ್ತು ಬಂಗಾಲ ಪ್ರಾಂತ್ಯಗಳಲ್ಲಿ ಬಹುಮತವನ್ನು ಒಪ್ಪಿಕೊಂಡರೆ ಸಂಯುಕ್ತ ಚುನಾವಣಾ ಕ್ಷೇತ್ರದ ಆಧಾರದ ಮೇಲೆಯೇ ನಾವು ಒಪ್ಪಂದಕ್ಕೆ ಬರಬೇಕೆಂಬುದಕ್ಕೆ ನಾನು ವೈಯಕ್ತಿಕವಾಗಿ ಪ್ರಾಶಸ್ತ್ಯವನ್ನೀಯುತ್ತೇನೆ. (ಶ್ರೋತೃಗಳು ಸಂತೋಷ ವ್ಯಕ್ತಮಾಡಿದರು). ಆದರೆ, ಮುಸಲ್ಮಾನರಲ್ಲಿ ಬಹು ದೊಡ್ಡ ಸಮುದಾಯವು– ಮುಸಲ್ಮಾನರಲ್ಲಿ**

---

೧. ದಿ ಇಂಡಿಯನ್ ಕ್ವಾಟರ್ಲೀ ರಿಜಿಸ್ಟರ್ ೧೯೩೧, ಸಂಪುಟ ೨, ಪುಟ ೨೩೦–೨೩೧.

ಬಹುಸಂಖ್ಯಾತರು– ಪ್ರತ್ಯೇಕ ಚುನಾವಣಾ ಕ್ಷೇತ್ರ ಬೇಕೆಂಬ ಅಭಿಪ್ರಾಯಕ್ಕೆ ಅಂಟಿಕೊಂಡಿದ್ದಾರೆಂದು ನಾನು ನಂಬುತ್ತೇನೆ; ಅದು ನನಗೆ ಗೊತ್ತಿದೆ. ಪ್ರತ್ಯೇಕ ಚುನಾವಣಾ ಕ್ಷೇತ್ರದ ತಳಹದಿಯ ಮೇಲೆಯೇ ಆದರೂ ಒಂದು ಒಪ್ಪಂದಕ್ಕೆ ನಾವು ಬರಬೇಕೆಂಬುದು ನನ್ನ ನಿಲುವು ಆಗಿದೆ. ಏಕೆಂದರೆ, ನಾವು ಹೊಸ ಸಂವಿಧಾನವನ್ನು ರೂಪಿಸಿದಾಗ, ಹಿಂದೂಗಳು ಮುಸಲ್ಮಾನರೂ ಅವಿಶ್ವಾಸ, ಸಂಶಯ ಮತ್ತು ಭಯಗಳಿಂದ ಮುಕ್ತರಾದಾಗ, ಅವರು ಸ್ವಾತಂತ್ರ್ಯವನ್ನು ಪಡೆದಾಗ, ಆ ಸಂದರ್ಭಕ್ಕೆ ತಕ್ಕಂಥ ಪ್ರಬುದ್ಧತೆ ನಮ್ಮಲ್ಲಿ ಬರುತ್ತದೆ ಮತ್ತು ಬಹಳ ಜನರು ನಾವು ಭಾವಿಸುವುದಕ್ಕಿಂತ ಮೊದಲೇ ಪ್ರತ್ಯೇಕ ಚುನಾವಣಾ ಕ್ಷೇತ್ರಗಳು ಹೋಗಿಬಿಡುತ್ತವೆ ಎಂಬುದು ನನ್ನ ವಿಶ್ವಾಸವಾಗಿದೆ.

“ಆದುದರಿಂದ, ಮೊಟ್ಟಮೊದಲ ಮುಸಲ್ಮಾನರಲ್ಲಿ ಒಪ್ಪಂದ ಮತ್ತು ಶಾಂತಿ–ಸಮಾಧಾನ ನೆಲೆಸಬೇಕೆಂಬುದು ನನ್ನ ಅಭಿಮತ. ಹಾಗೆಯೇ ಹಿಂದೂಗಳು ಮತ್ತು ಮುಸಲ್ಮಾನರಲ್ಲಿ ಒಪ್ಪಂದ ಮತ್ತು ಶಾಂತಿ–ಸಮಾಧಾನ ಇರಬೇಕೆಂಬುದು ನನ್ನ ಅಭಿಮತ; ವೈರಿಯು ನಮ್ಮಿಬ್ಬರ ಬಾಗಿಲ ಬಳಿಯೇ ಇರುವುದರಿಂದ ಇದು ಪ್ರತಿಪಾದನೆಗೆ ಸಮಯವಲ್ಲ; ಪ್ರಚಾರ ಕಾರ್ಯಕ್ಕೆ ಸಮಯವಲ್ಲ; ಎರಡೂ ಸಮುದಾಯಗಳ ಭಾವನೆಗಳನ್ನು ಕೆಡಿಸುವುದಕ್ಕೆ ಕಹಿಗೊಳಿಸುವುದಕ್ಕೆ ಇದು ಸಮಯವಲ್ಲ. ಯಾವ ಅನುಮಾನವಿಲ್ಲದೇ ನಾನು ಹೇಳುತ್ತೇನೆ– ಹಿಂದೂ–ಮುಸ್ಲಿಮ್ ಸಮಸ್ಯೆಯನ್ನು ಪರಿಹರಿಸದೇ ಇದ್ದರೆ ಬ್ರಿಟಿಷರು ಮಧ್ಯಸ್ಥಿಕೆ ವಹಿಸಬೇಕಾಗುತ್ತದೆ ಎಂಬುದರಲ್ಲಿ ನನಗೆ ಯಾವ ಸಂಶಯವೂ ಇಲ್ಲ ಮತ್ತು ಮಧ್ಯಸ್ಥಿಕೆ ವಹಿಸುವವರು ಅಧಿಕಾರ ಹಾಗೂ ರಾಜಸತ್ತೆಯ ಮುಖ್ಯ ಸಾರವನ್ನು ತನ್ನ ಕಡೆಗೆ ಇಟ್ಟುಕೊಳ್ಳುತ್ತಾರೆ. ಆದುದರಿಂದ ಜನರು ನನ್ನನ್ನು ದೂಷಿಸುವುದಿಲ್ಲವೆಂದು ನಾನು ಭಾವಿಸುತ್ತೇನೆ. ಗಾಂಧೀಜಿಯವರಂತೂ, ಮುಸಲ್ಮಾನರು ಕೇಳಿದುದನ್ನೆಲ್ಲ ಕೊಡಲು ಅಪೇಕ್ಷಿಸುವುದಾಗಿ ಸ್ವತಃ ಹೇಳಿದ್ದಾರೆ. ಆದರೆ ಮುಸಲ್ಮಾನರಿಗೆ ಹದಿನಾಲ್ಕು ಅಂಶಗಳಲ್ಲಿ ಕೇಳಿರುವುದನ್ನು ಕೊಟ್ಟುಬಿಡಿರೆಂದು ನಾನು ಹಿಂದೂಗಳನ್ನು ಕೇಳಿರುವುದೇ ನನ್ನ ಅಪರಾಧವಾಗಿದೆ. ಇದು ಗಾಂಧೀಜಿಯವರು ಕೊಡಬಯಸಿರುವ ‘ಖಾಲಿಚೆಕ್’ಗಿಂತ ತುಂಬಾ ಕಡಿಮೆಯಾದ ಬೇಡಿಕೆಯಾಗಿದೆ. ನಾನು ‘ಖಾಲಿ ಚೆಕ್’ ಕೇಳುವ ಇಚ್ಛೆಯವನಾಗಿಲ್ಲ. ಹದಿನಾಲ್ಕು ಅಂಶಗಳ ಬೇಡಿಕೆಯನ್ನು ಏಕೆ ಒಪ್ಪಿಕೊಳ್ಳುತ್ತಿಲ್ಲ? ‘ನಮಗೆ ಖಾಲಿ ಚೆಕ್ ಕೊಡಿರಿ’ ಎಂದು ಪಂಡಿತ ಜವಹರಲಾಲ ನೆಹರೂ ಹೇಳಿದಾಗ, ‘ನಮಗೆ ಖಾಲಿ ಚೆಕ್ ಕೊಡಿರಿ; ನಾವು ಸ್ವದೇಶಿ ಲೆಕ್ಕಣಿಕೆಯಿಂದ ಸ್ವದೇಶಿ ಕಾಗದದ ಮೇಲೆ ಸಹಿ ಮಾಡುತ್ತೇವೆ’ ಎಂದು ಸರದಾರ ವಲ್ಲಭಭಾಯಿ ಪಟೇಲರು ಹೇಳಿದಾಗ, ಅವರು ಜಾತೀಯವಾದಿಗಳಾಗುವುದಿಲ್ಲ; ನಾನು ಜಾತೀಯವಾದಿಯಾಗಿದ್ದೇನೆ. ಪ್ರತಿಯೊಬ್ಬರನ್ನೂ ತಪ್ಪಾಗಿ ತೋರಿಸಬೇಡಿರೆಂದು ನಾನು ಹಿಂದೂಗಳಿಗೆ ಹೇಳುತ್ತೇನೆ. ನಮ್ಮ ದೇಶದ ಕೋಟಿ ಕೋಟಿ ಜನರಿಗೆ ಶಾಂತಿ ಹಾಗೂ ಸಂತೋಷಗಳನ್ನು ತರುವ ರೀತಿಯಲ್ಲಿ ಸಮಸ್ಯೆಯನ್ನು ಬಗೆಹರಿಸುವ ಸ್ಥಿತಿಯಲ್ಲಿ ನಾವು ಇನ್ನೂ ಇದ್ದೇವೆ ಎಂದು ನಾನು ನಂಬಿದ್ದೇನೆ. ಇನ್ನೊಂದು ಹೆಚ್ಚಿನ ವಿಷಯವನ್ನು ನಾನು ನಿಮಗೆ ಹೇಳಬಯಸಿದ್ದೇನೆ; ಮತ್ತು ಈಗಾಗಲೇ ಹೇಳಿದ್ದೇನೆ. ದುಂಡುಮೇಜಿನ ಪರಿಷತ್ತು ನಡೆದ ಸಮಯದ ವಿಷಯ. ಅದು ಈಗ ತೆರೆದ ಪುಸ್ತಕ. ಅದನ್ನು ಓದಬೇಕೆನ್ನುವ ಯಾರಾದರೂ ತಾವೇ ತಿಳಿದುಕೊಳ್ಳಬಹುದು. ನಾನು ಒಂದು– ಒಂದೇ– ತತ್ತ್ವವನ್ನು ಪ್ರತಿಪಾದಿಸಿದೆನು. ನಾನು ಮುಂಬಯಿಯ ಸಮುದ್ರತೀರವನ್ನು ಬಿಡುವಾಗ ಜನರಿಗೆ ಹೇಳಿದೆ: ಹಿಂದೂಸ್ಥಾನದ ಹಿತರಕ್ಷಣೆ ನನಗೆ ಪರಮ ಪಾವನವಾದುದು. ಪರಿಷತ್ತಿನ ಕಾರ್ಯಕಲಾಪ ವಿವರಣೆಯನ್ನು ಓದಿದರೆ ತಿಳಿಯುತ್ತದೆ– ನಾನು ಜಂಭ ಕೊಚ್ಚಿಕೊಳ್ಳುತ್ತಿಲ್ಲ. ಏಕೆಂದರೆ ನನ್ನ ಕರ್ತವ್ಯವನ್ನು ನಾನು ಮಾಡಿದ್ದೇನೆ– ನಾನು ಮಾತು ಕೊಟ್ಟಂತೆ ವಿಧೇಯತೆಯಿಂದ ವಿಶ್ವಾಸದಿಂದ ಸಂಪೂರ್ಣವಾಗಿ ನನ್ನ ಕಾರ್ಯವನ್ನು ನಿರ್ವಹಿಸಿದ್ದೇನೆ;

> **ಹಾಗೂ ಕಾಂಗ್ರೆಸ್ ಇಲ್ಲವೇ ಶ್ರೀ ಗಾಂಧೀಜಿ ನಾನು ಬಡಿದಾಡಿದುದಕ್ಕಿಂತಲೂ ಹೆಚ್ಚಿಗೆ ಏನನ್ನಾದರೂ ದೊರಕಿಸಿದರೆ, ಅವರನ್ನು ನಾನು ಅಭಿನಂದಿಸುತ್ತೇನೆ.**
> **ಉಪಸಂಹಾರದಲ್ಲಿ ಶ್ರೀ ಜಿನ್ನಾ ಹೇಳಿದರು: ಅವರು ಒಂದು ಒಪ್ಪಂದಕ್ಕೆ ಬರಲೇಬೇಕು; ಆ ಮೂಲಕ ಆತ್ಮೀಯರಾಗಬೇಕು; ಆದುದರಿಂದಲೇ ನಡೆಯಬಹುದಾದ ಗೊತ್ತುವಳಿಯಲ್ಲಿ ಉದಾರತೆಯನ್ನು, ಬುದ್ಧಿವಂತಿಕೆಯನ್ನು, ಪ್ರತಿಪಕ್ಷದ ಮನಸ್ಸು ಗೆಲ್ಲುವಿಕೆಯನ್ನು ತೋರಿಸಬೇಕೆಂದು ಮುಸಲ್ಮಾನರಲ್ಲಿ ಬಿನ್ನಹ ಮಾಡಿಕೊಂಡರು."**

ಮುಸ್ಲಿಮ್ ಧ್ಯೇಯ ಧೋರಣೆಯಲ್ಲಿ ಆದ ಇನ್ನೊಂದು ಪರಿವರ್ತನೆಯ ಬಗೆಗೆ ಸ್ಪಷ್ಟಪಡಿಸಲು, ಶ್ರೀ ಜಿನ್ನಾ ಅವರ ಈಗಿನ ಅನುಯಾಯಿಯೂ, ಪಾಕಿಸ್ತಾನ ಅಸ್ತಿತ್ವದಲ್ಲಿ ಬರಬೇಕೆಂಬ ವಿಷಯದ ಗಂಭೀರ ಪ್ರತಿಪಾದಕರೂ ಆದ ಶ್ರೀ ಬರ್ಕತ್ ಅಲಿ ಅವರು, ಒಮ್ಮೆ ತಳೆದಿದ್ದ ಅಭಿಪ್ರಾಯವನ್ನು ಇಲ್ಲಿ ನಮೂದಿಸಬಯಸುತ್ತೇನೆ:

ಸೈಮನ್ ಕಮೀಶನ್ನಿನ ಸಂಗಡ ಸಹಕರಿಸುವ ಬಗೆಗೆ ಮುಸ್ಲಿಮ್ ಲೀಗ್ ಇಬ್ಭಾಗವಾದಾಗ, ಸಯ್ಯದ್ ಮೊಹಮ್ಮದ್ ಷಫಿ ಅವರ ನಾಯಕತ್ವದಲ್ಲಿ ಒಂದು ಭಾಗವು ಸಹರಿಸಬೇಕೆಂಬ ಅಭಿಪ್ರಾಯ ತಳೆಯಿತು; ಇನ್ನೊಂದು ಭಾಗವು ಶ್ರೀ ಜಿನ್ನಾ ಅವರ ನಾಯಕತ್ವದಲ್ಲಿ ಕಾಂಗ್ರೆಸ್ಸಿನ ಬಹಿಷ್ಕಾರ ಯೋಜನೆಯನ್ನು ಬೆಂಬಲಿಸಿತು. ಶ್ರೀ ಬರ್ಕತ್ ಅಲಿ ಅವರು ಮುಸ್ಲಿಮ್ ಲೀಗಿನ ಜಿನ್ನಾ ಬೆಂಬಲಿಗರ ಗುಂಪನ್ನು ಸೇರಿದ್ದರು. ಮುಸ್ಲಿಮ್ ಲೀಗಿನ ಈ ಎರಡೂ ಪಕ್ಷಗಳು ೧೯೨೮ನೆಯ ಇಸ್ವಿಯಲ್ಲಿ ಎರಡು ಬೇರೆ ಬೇರೆ ಸ್ಥಳಗಳಲ್ಲಿ ತಮ್ಮ ತಮ್ಮ ವಾರ್ಷಿಕ ಸಮ್ಮೇಳನಗಳನ್ನು ನಡೆಯಿಸಿದರು. ಷಫಿ ಅವರ ಪಕ್ಷವು ಕಲಕತ್ತಾದಲ್ಲಿ ಸಭೆ ನಡೆಸಿತು. ಪಂಜಾಬ ಮುಸ್ಲಿಮ್ ಲೀಗಿನ ಕಾರ್ಯದರ್ಶಿಯಾಗಿದ್ದ ಶ್ರೀ ಬರ್ಕತ್ ಅಲಿ ಅವರು ಶ್ರೀ ಜಿನ್ನಾ ಪಕ್ಷದ ಮುಸ್ಲಿಮ್ ಲೀಗಿನ ಕಲಕತ್ತಾ ಸಮ್ಮೇಳನದಲ್ಲಿ ಭಾಗವಹಿಸಿ, ಜಾತೀಯ ಒಪ್ಪಂದಕ್ಕೆ ಸಂಬಂಧಿಸಿದ ಗೊತ್ತುವಳಿಯನ್ನು ಮಂಡಿಸಿದರು. ಸಂಯುಕ್ತ ಚುನಾವಣಾ ಕ್ಷೇತ್ರವು ಈ ಒಪ್ಪಂದದ ಆಧಾರವಾಗಿ ಸೂಚಿತವಾಗಿದ್ದಿತು. ಗೊತ್ತುವಳಿಯನ್ನು ಮಂಡಿಸುತ್ತ ಈ ಬರ್ಕತ್ ಅಲಿ ಹೀಗೆ ಹೇಳಿದರು:[೧]

> **'ಮುಸ್ಲಿಮ್ ಲೀಗಿನ ಇತಿಹಾಸದಲ್ಲಿ ಮೊಟ್ಟ ಮೊದಲನೆಯ ಸಲ ದೃಷ್ಟಿಕೋನದಲ್ಲಿ ಬದಲಾವಣೆ ಯುಂಟಾಗಿದೆ. ಈ ಬದಲಾವಣೆಯ ಮೂಲಕ, ಪ್ರತ್ಯೇಕ ಚುನಾವಣಾ ಕ್ಷೇತ್ರದ ತತ್ತ್ವಕ್ಕೆ ವಿರೋಧಿಸುತ್ತಿದ್ದ ನಮ್ಮ ಹಿಂದೂ ದೇಶ ಬಾಂಧವರಿಗೆ, ನಮ್ಮ ಸ್ನೇಹಹಸ್ತವನ್ನು ನೀಡುತ್ತಿದ್ದೇವೆ."**

೧೯೨೮ನೆಯ ಇಸ್ವಿಯಲ್ಲಿ ಡಾ. ಅನ್ಸಾರಿ ಅವರ ನಾಯಕತ್ವದಲ್ಲಿ ರಾಷ್ಟ್ರೀಯ ಪಕ್ಷವೊಂದು ರಚನೆಗೊಂಡಿತು.[೨] ರಾಷ್ಟ್ರೀಯ ನ್ಯಾಷನಲಿಸ್ಟ್ ಮುಸ್ಲಿಂ ಪಾರ್ಟಿ (ರಾಷ್ಟ್ರೀಯ ಮುಸ್ಲಿಂ ಪಕ್ಷ), ಮುಸ್ಲಿಂ ಲೀಗಿನ ಜಿನ್ನಾ ಬಣದ ಒಂದು ಮುನ್ನಡೆಯಾಗಿತ್ತು. ಅದು ನೆಹರೂ ವರದಿಯನ್ನು ಇದ್ದಕ್ಕಿದ್ದಂತೆ ಜಿನ್ನಾ ಒತ್ತಾಯಪಡಿಸುತ್ತಿದ್ದ ಭಾಗಗಳ ಯಾವುದೇ ತಿದ್ದುಪಡಿ ಇಲ್ಲದೆ ಕೂಡ ಸಿದ್ಧವಾಗಿತ್ತು. ಆದರೆ ಜಿನ್ನಾ ಬಣದ ಜೊತೆಗಿದ್ದ ಬರಕತ್ ಅಲಿ ಕಟ್ಟಾ ರಾಷ್ಟ್ರೀಯವಾದಿಯಾಗಿಲ್ಲ ಎನ್ನುವ ಮಾತಿನಿಂದಾಗಿ ೧೯೨೭ರಲ್ಲಿ ಜಿನ್ನಾ

---

೧. ದಿ ಇಂಡಿಯನ್ ಕ್ವಾರ್ಟರ್ಲೀ ರಜಿಸ್ಟರ್, ೧೯೨೭, ಸಂಪುಟ ೨, ಪುಟ ೪೪೮

೨. ದಿ ಇಂಡಿಯನ್ ಕ್ವಾರ್ಟರ್ಲೀ ರಜಿಸ್ಟರ್, ೧೯೨೯, ಸಂಪುಟ ೨, ಪುಟ ೩೫೦.

ಬಣ ತ್ಯಜಿಸಿ ಡಾ. ಅನ್ಸಾರಿ ಅವರ ರಾಷ್ಟ್ರೀಯ ಮುಸ್ಲಿಮ್ ಪಕ್ಷ (ನ್ಯಾಷನಲಿಸ್ಟ್ ಮುಸ್ಲಿಮ್ ಪಾರ್ಟಿ) ಸೇರಿದರು. ಬರಕತ್ ಅಲಿ ಆಗ ಎಂಥ ರಾಷ್ಟ್ರೀಯವಾದಿಗಳಾಗಿದ್ದರು ಎನ್ನುವುದು ೧೯೩೦ರ[೧] ಅಲಹಾಬಾದ್ ಆಲ್ ಇಂಡಿಯಾ ಮುಸ್ಲಿಮ್ ಲೀಗ್ ವಾರ್ಷಿಕಾಧಿವೇಶನದ ಕಾಲಕ್ಕೆ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸರ್ ಮೊಮ್ಮದ್ ಇಕ್ಬಾಲ್ ಮಂಡಿಸಿದ ಇಂಡಿಯಾ ವಿಭಜನೆಯ ಯೋಜನೆಯನ್ನು ಉಗ್ರವಾಗಿ ಮತ್ತು ಬಲವಾಗಿ ಖಂಡಿಸಿದುದರ ಮೇಲಿಂದ ಗೊತ್ತಾಗುತ್ತದೆ; ಮತ್ತೆ ಈಗ ಜಿನ್ನಾ ಮತ್ತು ಬರಕತ್ ಅಲಿ ಕೂಡಿಯೇ ಅದೇ ಸಂಗತಿಯನ್ನು ಪಾಕಿಸ್ತಾನದ ಹೆಸರಿನಲ್ಲಿ ಪ್ರತಿಪಾದಿಸುತ್ತಿದ್ದಾರೆ. ೧೯೩೧ರ ಲಾಹೋರದಲ್ಲಿ ಜರುಗಿದ ಪಂಜಾಬ್ ನ್ಯಾಷನಲಿಸ್ಟ್ ಮುಸ್ಲಿಮ್ ಕಾನ್‌ಫರೆನ್ಸ್ (ಪಂಜಾಬ ರಾಷ್ಟ್ರೀಯ ಮುಸ್ಲಿಮ್ ಅಧಿವೇಶನ) ಜರುಗಿತು. ಬರಕತ್ ಅಲಿ ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷರಾಗಿದ್ದರು. ಅಂದು ಪಾಕಿಸ್ತಾನ ಕುರಿತ ಅವರ ಧೋರಣೆಗಳು ಗಮನಾರ್ಹವಾಗಿವೆ.[೧] ತಮ್ಮ ಪಕ್ಷದ ರಾಜಕೀಯ ನಂಬಿಕೆ ಮತ್ತು ದೃಢ ನಿಲುವನ್ನು ಸ್ಪಷ್ಟವಾಗಿ ಮತ್ತೆ ಮತ್ತೆ ವಿವರಿಸಿದ ಅಂದಿನ ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷ ಮಲಿಕ್ ಬರಕತ್ ಅಲಿ ಅಧಿವೇಶನದಲ್ಲಿ ಆಡಿದ ಮಾತು ಹೀಗಿವೆ:

**“ಇಂಡಿಯಾದ ಸಂಪೂರ್ಣ ಸ್ವಾತಂತ್ರ್ಯ ಮತ್ತು ಘನತೆಯಲ್ಲಿ ನಮಗೆ ದೃಢ ವಿಶ್ವಾಸವಿದೆ ಮತ್ತು ಅದೇ ನಮ್ಮ ಮೊದಲ ಹಾಗೂ ಕೊನೆಯ ನಂಬಿಕೆಯಾಗಿದೆ. ನಮ್ಮ ಜನ್ಮಭೂಮಿ ಮತ್ತು ನಮ್ಮ ಎಲ್ಲ ಪ್ರಿಯ ಬಂಧು ಬಾಂಧವರ ಸ್ನೇಹಿತರ ಪ್ರೀತಿ ಗೌರವಗಳಿಂದ ಹೆಣೆದುಕೊಂಡಿರುವ ನೆಲೆವೀಡಾಗಿರುವ ಇಂಡಿಯಾ ನಮ್ಮ ಆಶೆ ಆಕಾಂಕ್ಷೆಗಳ ಅತ್ಯುನ್ನತ ಸ್ಥಾನ. ನಾವು ಮೊದಲು ಮುಸಲ್ಮಾನರು ಆ ಬಳಿಕ ಇಂಡಿಯನ್ನರು ಎನ್ನುವ ಅಜ್ಞಾನಿಗಳ ಭಾವನೆಗಳನ್ನು ಕೆರಳಿಸುವ ಕೆಲವರ ಪಾಪಮಯ ಪ್ರಚಾರವನ್ನು ತಿರಸ್ಕರಿಸುತ್ತೇವೆ. ನಮ್ಮ ದೃಷ್ಟಿಯಲ್ಲಿ ಇದು ಕೇವಲ ಪೊಳ್ಳು ಮತ್ತು ಅರ್ಥವಿಲ್ಲದ ಘೋಷಣೆ. ಅಷ್ಟೇ ಅಲ್ಲ, ಕಿಡಿಗೇಡಿತನದ್ದು ಕೂಡ ಆಗಿದೆ. ಇಂಡಿಯಾದ ಶ್ರೇಷ್ಠ ಮತ್ತು ಚಿರಂತನ ಹಿತಾಸಕ್ತಿ ಶ್ರೇಯಸ್ಸುಗಳಿಗೆ ವಿರೋಧಿಯಾದ ಮತ್ತು ಯಾವುದೇ ಬಗೆಯ ಆತಂಕಕಾರಿಯಾದಂಥ ಭಾವನೆಗಳುಳ್ಳ ಶ್ರೇಷ್ಠ ಹಿತಾಸಕ್ತಿಯಿಂದೊಡಗೂಡಿದ ಬೇರೆ ಇಸ್ಲಾಮ್ ಪರಿಕಲ್ಪನೆ ಕೂಡ ಸಾಧ್ಯವಿಲ್ಲ. ಇಂಡಿಯಾ ಮತ್ತು ಇಂಡಿಯಾದಲ್ಲಿ ಇಸ್ಲಾಮ್ ಪರಿಕಲ್ಪನೆ ಕೂಡ ಸಾಧ್ಯವಿಲ್ಲ. ಇಂಡಿಯಾ ಮತ್ತು ಇಂಡಿಯಾದಲ್ಲಿ ಇಸ್ಲಾಮ್ ಎರಡೂ ಒಂದೇ. ಯಾವ ಧೋರಣೆ ರಾಜಕೀಯ ಆರ್ಥಿಕ, ಸಾಮಾಜಿಕ ಮತ್ತು ನೈತಿಕ ದೃಷ್ಟಿಯಿಂದ ಕೂಡ ಸ್ವಾಭಾವಿಕವಾಗಿ ಇಂಡಿಯಾಕ್ಕೆ ಹಿತಕಾರಿಯೋ, ಶ್ರೇಯಸ್ಕರವೋ ಅದು ಇಸ್ಲಾಮೀಯರಿಗೂ ಕೂಡ ಶ್ರೇಯಸ್ಕರವೇ. ಆದ್ದರಿಂದ ಯಾವ ರಾಜಕಾರಣಿಗಳು ಇಂಡಿಯಾದ ಶ್ರೇಯೋಭಿವೃದ್ಧಿ ಮತ್ತು ಇಸ್ಲಾಮ್ ಕುರಿತು ವಿರುದ್ಧ ನೀತಿ ತಾಳುತ್ತಾರೆಯೋ ಅವರು ಸುಳ್ಳು ಸಾರುವ ಪ್ರವಾದಿಗಳು ಅಷ್ಟೇ ಅಲ್ಲ, ಮೂಲತಃ ಇಸ್ಲಾಮದ ವೈರಿಗಳು ಕೂಡ. ಮತ್ತೆ ಹೇಳುವುದಾದರೆ, ಇಂಡಿಯಾದ ಹೊರಗಿರುವ– ಅಂದರೆ ತುರ್ಕರು, ಈಜಿಪ್ತೀಯರು ಅಥವಾ ಅರಬ್ಬೀಯರು– ನಮ್ಮ ಸೋದರ ಮುಸಲ್ಮಾನ ಜನ ಸಮುದಾಯದ ಬಗೆಗೆ ನಮ್ಮ ಅನುಕಂಪ ಎಷ್ಟೇ ಇರಲಿ ಅದು ಒಂದು ಉದಾತ್ತ ಆರೋಗ್ಯಕರ ಭಾವನೆಯೇ ಹೊರತು ನಮ್ಮ ಅನುಕಂಪ ಅಥವಾ ಸಹಾನುಭೂತಿ ಇಂಡಿಯಾದ ಅತ್ಯಗತ್ಯ ಹಿತಾಸಕ್ತಿಗಳಿಗೆ ಧಕ್ಕೆ ತರುವ ರೀತಿಯಲ್ಲಿ ಕಾರ್ಯ ಮಾಡಲು ಸಾಧ್ಯವಿಲ್ಲ. ಆ ದೇಶದ ಮುಸ್ಲಿಮರ ಜೊತೆಗಿನ ನಮ್ಮ ಸಹಾನುಭೂತಿ, ಇಂಡಿಯಾದ ಮೂಲದ ಇದನ್ನು ಆಧರಿಸಿದ ಚಿಲುಮೆಯಾಗಿದ್ದರೆ ಮಾತ್ರ ಅದಕ್ಕೆ ಬೆಲೆಯಿದೆ. ಸಂದರ್ಭ ಒದಗಿ**

೧. ಅವರ ಭಾಷಣಕ್ಕಾಗಿ ನೋಡಿ: ಇಂಡಿಯನ್ ಆ್ಯನ್ಯುವಲ್ ರಿಜಿಸ್ಟರ್, ೧೯೩೦, ಸಂಪುಟ ೨, ಪುಟ ೩೩೪–೩೪೫.
೨. ಇಂಡಿಯನ್ ಆ್ಯನ್ಯುವಲ್ ರಿಜಿಸ್ಟರ್, ೧೯೩೧, ಸಂಪುಟ ೨, ಪುಟ ೨೩೪–೨೩೫.

ಬಂದರೆ– ದೇವರು ಅಂಥ ಪ್ರಸಂಗ ತರದಿರಲಿ– ಯಾವುದೇ ವಿದೇಶೀ ಮುಸ್ಲಿಮ್ ಶಕ್ತಿ ಇಂಡಿಯಾ ದೇಶವನ್ನು ಗುಲಾಮಗಿರಿಗೆ ತಳ್ಳುವ, ಅದರ ಜನತೆಯ ಸ್ವಾತಂತ್ರ್ಯವನ್ನು ಕಬಳಿಸುವ ಯತ್ನ ಮಾಡಿದ್ದೇ ಆದರೆ, ಅಂಥ ಯಾವುದೇ ವ್ಯಾಪಕ ಮುಸ್ಲಿಮ್ ಶಕ್ತಿಯೂ ಇಂಡಿಯಾದ ಮುಸ್ಲಿಮೇತರರ ಜೊತೆ ಇಂಡಿಯಾದ ಮುಸ್ಲಿಮರು ಹೆಗಲಿಗೆ ಹೆಗಲು ಕೊಟ್ಟು ಅದರ ಸ್ವಾತಂತ್ರ್ಯ ರಕ್ಷಣೆಗಾಗಿ ಪ್ರಾಣವನ್ನೂ ಪಣಕ್ಕಿಟ್ಟು ಹೋರಾಡುವುದನ್ನು ತಡೆಗಟ್ಟಲಾರದು.

ಕಾರಣ, ಈ ವಿಷಯವಾಗಿ ಯಾವುದೇ ಮುಸ್ಲಿಮೇತರ ವಲಯದಲ್ಲಿ ಯಾವುದೇ ತಪ್ಪು ತಿಳಿವಳಿಕೆ ಇರಕೂಡದು. ಸಂಕುಚಿತ ಮನೋಭಾವದ ಕೆಲವು ಹಿಂದೂ ರಾಜಕಾರಣಿಗಳು ಉತ್ತರ–ಪಶ್ಚಿಮ ರಹದಾರಿಗಳ ಮೂಲಕ ಇಂಡಿಯಾಕ್ಕೆ ಇಸ್ಲಾಮೀ ಶಕ್ತಿಗಳಿಂದ ಅಪಾಯವಿರುವ ಕುರಿತು ಸದಾ ಅದೊಂದೇ ವಿಷಯದ ಅಪಸ್ವರ ಎತ್ತುತ್ತಲೇ ಇರುವುದರ ಅರಿವು ನನಗಿದೆ. ಆದರೆ ಈ ರೀತಿಯ ಅಭಿಪ್ರಾಯ ಮತ್ತು ಈ ಬಗೆಯ ಭಯಗಳಿಗೆ ಯಾವ ಆಧಾರವೂ ಇಲ್ಲ; ಮತ್ತು ಮೂಲಭೂತವಾಗಿ ಹಾಗೆ ಭಾವಿಸುವುದೂ ತಪ್ಪು. ಮುಸ್ಲಿಮ್ ಇಂಡಿಯಾ, ಇಂಡಿಯಾದ ಸ್ವಾತಂತ್ರ್ಯ ರಕ್ಷಣೆಗೆ ಮುಸ್ಲಿಮೇತರ ಜನರಷ್ಟೇ ನಿಷ್ಠೆಯಿಂದ ಹೋರಾಡಲು ಸಿದ್ಧ. ಆಕ್ರಮಣಕಾರ ಇಸ್ಲಾಮೀಯ ಮತಾನುಯಾಯಿ ಆಗಿದ್ದರೂ ಈ ಮಾತು ಅಚಲ.

ಮತ್ತು ನಾವು ಸ್ವತಂತ್ರ ಇಂಡಿಯಾದಲ್ಲಿ ಅಷ್ಟೇ ಅಲ್ಲ, ಅಖಂಡ ಇಂಡಿಯಾದಲ್ಲಿ ನಂಬಿಕೆಯುಳ್ಳವರಾಗಿದ್ದೇವೆ. ಆ ಇಂಡಿಯಾ ಹಿಂದೂಗಳ ಅಥವಾ ಸಿಖ್ಖರದ್ದಾಗಲಿ, ಆ ಜಾತಿಯದ್ದಾಗಲಿ ಆಗಿರದೆ, ಸರ್ವ ಜನತೆಯ ಇಂಡಿಯಾ ಆಗಿರುತ್ತದೆ. ಇದು ನಮ್ಮ ಅಚಲ ಶ್ರದ್ಧೆಯಾಗಿರುವುದರಿಂದ, ಹಿಂದೂ ಅಥವಾ ಮುಸ್ಲಿಮ್ ಇಂಡಿಯಾ ಎನ್ನುವ ಇಂಡಿಯಾದ ವಿಭಜನೆಗೆ ನಾವು ಭಾಗೀದಾರರಾಗುವುದಿಲ್ಲ ಎಂದು ಅದನ್ನು ತಿರಸ್ಕರಿಸುತ್ತೇವೆ. ಹಿಂದೂ ಮತ್ತು ಮುಸ್ಲಿಂ ಇಂಡಿಯಾದ ಪರಿಕಲ್ಪನೆ ಆಯಾ ಪಕ್ಷಗಳ ಜಾತ್ಯಂಧರಿಗೆ ಎಷ್ಟೇ ರೋಚಕವಾಗಿರಲಿ, ಅವರಲ್ಲಿ ಎಷ್ಟೇ ಬಗೆಯ ಉನ್ಮಾದದ ಅಲೆಗಳನ್ನು ಹುಟ್ಟಿಸಲಿ, ಅದನ್ನು ನಾವು ಎತ್ತರದ ದನಿಯಲ್ಲಿ ವಿರೋಧಿಸುತ್ತೇವೆ. ಅದು ಕೇವಲ ಅವ್ಯವಹಾರಿಕ ಮತ್ತು ತುಚ್ಛ ಎಂದಷ್ಟೇ ಅಲ್ಲ, ಆಧುನಿಕ ಇಂಡಿಯಾದ ಎಲ್ಲ ರಾಜಕೀಯ ಚಟುವಟಿಕೆಗಳ ಉದಾತ್ತತೆಗೆ ಸಾವಿನ ಗಂಟೆ ಆಗಿದೆ. ಇದೆಲ್ಲದರ ಜೊತೆ ಅದು ಇಂಡಿಯಾದ ಪ್ರಮುಖ ಚಾರಿತ್ರಿಕ ಪರಂಪರೆಗೆ ಕೂಡ ವಿರುದ್ಧವಾಗಿದೆ ಎಂದು ಅದನ್ನು ನಾವು ವಿರೋಧಿಸುತ್ತೇವೆ.

ಅಶೋಕ ಮತ್ತು ಚಂದ್ರಗುಪ್ತರ ಕಾಲದಲ್ಲಿ ಇಂಡಿಯಾ ಅಖಂಡವಾಗಿತ್ತು. ಕಾಲಾನಂತರ ಹಿಂದೂಗಳಿಂದ ಮುಸಲ್ಮಾನ ಆಳರಸರ ಕೈಗೆ ಹಸ್ತಾಂತರಗೊಂಡಾಗ ಕೂಡ ಅಷ್ಟೇ ಮತ್ತು ನಾವು ನಮ್ಮ ಸ್ವಾತಂತ್ರ್ಯದ ಗುರಿ ಸಾಧಿಸಿದಾಗ ಕೂಡ ಇಂಡಿಯಾ ಅಖಂಡವಾಗಿ ಉಳಿಯುತ್ತದೆ. ಅಲ್ಲಿ ಝಗಝಗಿಸುವ ಬೆಳಕು ಕೇವಲ ಭವ್ಯತೆಯ ಬಾಹ್ಯ ಪ್ರಕಾಶವಾಗಿರದೆ ಅದು ನೇರವಾಗಿ ನಮ್ಮ ಮುಖಗಳಿಂದ ಸ್ಫುರಿಸುವ ಸ್ವಪ್ರಕಾಶವಾಗಿರುತ್ತದೆ.

ಇತ್ತೀಚೆಗೆ ಸರ್ ಮೊಹಮ್ಮದ್ ಇಕ್ಬಾಲ್ ಲೀಗ್ ವೇದಿಕೆಯ ಮೇಲಿಂದ ತಮ್ಮ ಅಧ್ಯಕ್ಷೀಯ ಮಾತುಗಳಲ್ಲಿ– ಅದೂ ಲೀಗ್ ವಾಸ್ತವವಾಗಿ ಮತ್ತು ಮುಕ್ತ ಇಸ್ಲಾಮ್ ಸಮುದಾಯದ ಪ್ರಾತಿನಿಧಿಕ ಸ್ವರೂಪ ಕಳೆದುಕೊಂಡ ಸಮಯದಲ್ಲಿ– ವಿಭಾಜಿತ ಇಂಡಿಯಾದ ಪರಿಕಲ್ಪನೆಯನ್ನು ಪ್ರಸ್ತಾಪಿಸಿದರು. ಸರ್ ಮೊಹಮ್ಮದ್ ಇಕ್ಬಾಲ್ ಆ ತಮ್ಮ ಧೋರಣೆಯನ್ನು ಬಿಟ್ಟುಕೊಟ್ಟಿರುತ್ತಾರೆ ಎಂದು ಹೇಳಲು ಸಂತೋಷವಾಗುತ್ತದೆ. ಆದ್ದರಿಂದ ಆ ಮಾತು ನಾಳಿನ ಇಂಡಿಯಾ ಕುರಿತ ಇಸ್ಲಾಮ್ ಪರಿಕಲ್ಪನೆ ಎಂದು ಯಾರೂ ಭ್ರಮಿಸಕೂಡದು.

ಯಾವುದೇ ವಿವೇಕವುಳ್ಳ ವ್ಯಕ್ತಿ ಪ್ರತಿಪಾದಿಸಬಾರದಂಥ ಈ ಬಗೆಯ ವಿಚಾರವನ್ನ ಒಂದು ವೇಳೆ ಡಾಕ್ಟರ್ ಸರ್ ಮೊಹಮ್ಮದ್ ಇಕ್ಬಾಲ್ ಮುಂದುವರಿಸಿದ್ದರೆ ಅದನ್ನು ನಾನು ನಿರ್ಭಿಡೆಯಿಂದ ಬಲವಾಗಿ ವಿರೋಧಿಸುತ್ತಿದ್ದೆ. ಏಕೆಂದರೆ ಅದು ನಾಳಿನ ಉದಯೋನ್ಮುಖ ಇಸ್ಲಾಮ್ ಪ್ರತಿಭೆ ಮತ್ತು ಅಂತರಾತ್ಮಕ್ಕೆ ಅನ್ಯವಾದ ವಿಚಾರ ಮತ್ತು ಈ ಧೋರಣೆಯನ್ನು ಇಂದು ದೃಢೀಕರಿಸಲು ನನಗೆ ಹೆಮ್ಮೆಯೆನಿಸುತ್ತದೆ. ಇಂಡಿಯಾ ಮತೀಯ ಪ್ರಾಂತಗಳಲ್ಲಿ ಇಬ್ಭಾಗವಾಗಕೂಡದು. ಅಷ್ಟೇ ಅಲ್ಲ, ಹಿಂದುತ್ವ ಮತ್ತು ಇಸ್ಲಾಮ್ ಎರಡೂ ಇಂಡಿಯಾದ ಸೀಮೆಯೊಳಗೇ ಪರಸ್ಪರ ಕೂಡಿ ಬಾಳಬೇಕು ಮತ್ತು ಯಾವುದೇ ಸಣ್ಣ ತುಂಡುಗಳನ್ನೂ ಮಾಡದೆ ಡಾ. ಇಕ್ಬಾಲರ ಮುಸ್ಲಿಂ ಇಂಡಿಯಾ ಮತ್ತು ಹಿಂದೂ ಇಂಡಿಯಾದ ಪರಿಕಲ್ಪನೆಯಂತೆ ಇರುವ ಪಂಜಾಬನ್ನು ವಿಭಜಿಸಬೇಕೆಂಬ ಕೆಲವು ಸಿಖ್ಖ್ ಕೋಮುವಾದಿಗಳ ಕುಟಿಲ ಪ್ರಸ್ತಾಪ. ನಾನು ಇದುವರೆಗೂ ಹಿಂದೂ–ಮುಸ್ಲಿಂ ಐಕ್ಯತೆ ಸಂಬಂಧಿಸಿದಂತೆ ನಡೆದ ಪ್ರಯತ್ನಗಳ ಮತ್ತು ಮುಸ್ಲಿಮ್ ನಾಯಕರ ಮನಸ್ಸಿನಲ್ಲಿ ಹೊಸ ಆದರ್ಶವೊಂದರ ಆವಿಷ್ಕಾರ ಕುರಿತ ಖಚಿತ ಸೋಲುಗಳನ್ನು ಎತ್ತಿ ತೋರಿಸುವ ಪ್ರಯತ್ನ ಮಾಡಿದೆ. ವರ್ತಮಾನದ ಸಂದರ್ಭದಲ್ಲಿ ಮತ್ತೊಂದು ಸಂಗತಿಯನ್ನು ಕೂಡ ಚರ್ಚಿಸಬೇಕಾಗಿದೆ. ಅದು ಪ್ರಸ್ತುತ ಮತ್ತು ಸಮಾಲೋಚನೆಯ ಮೇಲೆ ಗಮನಾರ್ಹ ಪರಿಣಾಮ ಬೀರುವಂಥದಾಗಿದೆ; ಅದೆಂದರೆ:

ಒಂದು ಸ್ವತಂತ್ರ ಮತ್ತು ಅಖಂಡ ಇಂಡಿಯಾದಲ್ಲಿ ಜನತೆ ಯಾವ ತಾರತಮ್ಯವೂ ಇಲ್ಲದೆ, ಚುನಾಯಿತ ಪ್ರತಿನಿಧಿಗಳಿಂದ ಮಾಡಲಾದ ಕಾನೂನುಗಳ ರಕ್ಷಣೆಯನ್ನು ಸಮಾನ ರೀತಿಯಲ್ಲಿ ಪಡೆಯುವ ಮತ್ತು ವಯಸ್ಕ ಮತದಾನ, ಜಂಟಿ ಚುನಾಯಕ ಸಮುದಾಯಗಳ ಆಧಾರದ ಮೇಲೆ ನಿಂತಂತಹ ನಿಜವಾದ ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಕಾನೂನುಗಳನ್ನು ನಿಷ್ಪಕ್ಷಪಾತವಾಗಿ ಜಾರಿಗೊಳಿಸುವ ಕರ್ತವ್ಯ ಹೊಂದಿದ ಮತ್ತು ದೂರದ ಸಂಸತ್ತಿಗೆ ಬದಲಾಗಿ ನಾಡಿನ ಜನತೆಯಿಂದಲೇ ಚುನಾಯಿತರಾದ ಪ್ರತಿನಿಧಿಗಳಿಗೆ ಜವಾಬ್ದಾರಿಯಾದ ಆಡಳಿತ ವ್ಯವಸ್ಥೆಗಳಿಂದ ಕೂಡಿದಂತಹ ವ್ಯಾಪಕ ನೀತಿಯನ್ನು ನಿರೂಪಿಸುವಾಗ ಅದರ ಎಲ್ಲಾ ವಿವರಗಳನ್ನು ನಿಮ್ಮ ಮುಂದೆ ಇಡಬೇಕೆಂದು ನೀವು ನಿರೀಕ್ಷಿಸಲಾರಿರಿ ಮತ್ತು ರಾಷ್ಟ್ರೀಯ ಮುಸ್ಲಿಂ ಪಕ್ಷದ ಧ್ಯೇಯೋದ್ದೇಶ್ಯಗಳ ಮೇಲಣ ನನ್ನ ವಿಚಾರಗಳನ್ನು ಇಲ್ಲಿಗೇ ಮುಗಿಸಬೇಕೆಂದು ನನಗೆನ್ನಿಸುವುದಿಲ್ಲ. ಏಕೆಂದರೆ ಇದು ವ್ಯಾಪಕವಾಗಿ ಚರ್ಚಿಸಲಾಗುತ್ತಿರುವ ಜಂಟಿ ಅಥವಾ ಪ್ರತ್ಯೇಕ ಚುನಾಯಕ ಸಮುದಾಯದ ಪ್ರಶ್ನೆ ಯಾವ ಸಾರ್ವಜನಿಕನೂ ಅದನ್ನು ಕಡೆಗಣಿಸಲು ಸಾಧ್ಯವಿಲ್ಲದಷ್ಟು ಮಹತ್ವದ್ದಾಗಿದೆ.

ಪ್ರತ್ಯೇಕ ಚುನಾಯಕ ಸಮುದಾಯದ ಉಪಯುಕ್ತತೆ ಏನೇ ಇದ್ದರೂ, ಕೃತಕವಾಗಿ ನಿರ್ಮಿತವಾದ ಆಸ್ತಿ ಆಧಾರಿತ ಮತದಾನ ಪದ್ಧತಿಯು ಒಂದು ಪ್ರಾಂತ್ಯದ ಬಹುಸಂಖ್ಯಾತರನ್ನು ಅಲ್ಪಸಂಖ್ಯಾತರನ್ನಾಗಿ ಮಾರ್ಪಡಿಸುವಷ್ಟು ಪ್ರಭಾವ ಹೊಂದಿರುವಾಗ, ಮತ್ತು ಕೋಮು ದ್ವೇಷ ಅತ್ಯಂತ ಗಾಢವಾಗಿರುವಾಗ, ಸಾರ್ವತ್ರಿಕ ಅವಿಶ್ವಾಸ, ಅಪನಂಬಿಕೆಗಳು ಇಡೀ ವಾತಾವರಣವನ್ನೇ ಕಲುಷಿತಗೊಳಿಸುವಾಗ ಇಂಡಿಯಾದ ಇಂದಿನ ವಾತಾವರಣದಲ್ಲಿ ಮತ್ತು ಭವಿಷ್ಯದ ಇಂಡಿಯಾದಲ್ಲಿ ಪ್ರತ್ಯೇಕ ಚುನಾಯಕ ಸಮುದಾಯಗಳಿರಲೇಕೂಡದು.”

ರಾಷ್ಟ್ರೀಯತೆ, ಪ್ರತ್ಯೇಕ ಚುನಾಯಕ ಸಮುದಾಯ ಮತ್ತು ಪಾಕಿಸ್ತಾನದ ಬಗ್ಗೆ ಇವು ಶ್ರೀ ಜಿನ್ನಾ ಮತ್ತು ಬರ್ಕತ್ ಆಲಿಯವರ ಅಭಿಪ್ರಾಯಗಳಾಗಿದ್ದವು. ಇವೇ ಸಮಸ್ಯೆಗಳ ಬಗ್ಗೆ ಅವರು ಈಗ ಹೊಂದಿರುವ ವಿಚಾರಗಳು ಎಷ್ಟು ವಿರುದ್ಧವಾಗಿವೆ.

ಇಲ್ಲಿಯವರೆಗೆ ನಾನು ಹಿಂದೂ–ಮುಸಲ್ಮಾನ ಏಕತೆಯನ್ನು ಸಾಧಿಸುವ ಪ್ರಯತ್ನಗಳು ಎಷ್ಟು ವಿಫಲವಾಗಿವೆ ಮತ್ತು ಇತ್ತೀಚೆಗೆ ಮುಸಲ್ಮಾನ ಮುಖಂಡರ ಮನಸ್ಸಿನಲ್ಲಿ ಹುಟ್ಟಿರುವ ಒಂದು ಹೊಸ ಆದರ್ಶದ ಕಲ್ಪನೆಯನ್ನು ಎತ್ತಿ ತೋರಿಸುವ ಪ್ರಯತ್ನ ಮಾಡಿದ್ದೇನೆ. ಈಗಿನ ಸಂದರ್ಭದಲ್ಲಿ ನಾನು ಚರ್ಚಿಸಬೇಕಾಗಿರುವ ಮೂರನೆಯ ಸಂಗತಿಯೊಂದಿದೆ. ಅದು ಪ್ರಸ್ತುತವಾಗಿದೆಯಲ್ಲದೆ, ಈ ಸಮಾಲೋಚನೆಯ ಮೇಲೆ ಗಮನಾರ್ಹ ಪರಿಣಾಮ ಬೀರುವಂತಹುದಾಗಿದೆ. ಅದೆಂದರೆ, ಮುಸ್ಲಿಂ ಧ್ಯೇಯೋದ್ದೇಶ್ಯದ ಹಿಂದೆ ಯಾವುದೇ ರಾಜಕೀಯ ದಾರ್ಶನಿಕನು ಒಪ್ಪಿಕೊಳ್ಳಬಹುದಾದ ನ್ಯಾಯಯುತ ಸಮರ್ಥನೆ ಇದೆಯೇ?

ಪಾಕಿಸ್ತಾನ (ಪರಿಕಲ್ಪನೆ) ನ್ಯಾಯಸಮ್ಮತವಾದುದಲ್ಲ ಎಂದು ಅನೇಕ ಹಿಂದೂಗಳ ಅಭಿಪ್ರಾಯವಿರುವಂತೆ ತೋರುತ್ತದೆ. ಒಂದುವೇಳೆ ನಾವು ಪಾಕಿಸ್ತಾನ (ಪರಿಕಲ್ಪನೆ) ಸಿದ್ಧಾಂತಕ್ಕೆ ಸೀಮಿತವಾಗಿ ಆಲೋಚಿಸಿದರೆ ಇದು ಖಂಡಿತವಾಗಿ ಬಹು ದೊಡ್ಡ ತಪ್ಪು ಧೋರಣೆ ಎನ್ನುವುದರಲ್ಲಿ ಸಂದೇಹವಿಲ್ಲ. ಪಾಕಿಸ್ತಾನ ಸಿದ್ಧಾಂತದ ನ್ಯಾಯಬದ್ಧತೆ, ಒಂದು ರಾಷ್ಟ್ರ ಮತ್ತು ಒಂದು ಜಾತಿ ಇವೆರಡರ ನಡುವಣ ವ್ಯತ್ಯಾಸವನ್ನು ಅವಲಂಬಿಸಿದೆ. ಮೊದಲನೆಯದು ತೌಲನಿಕವಾಗಿ ಅದು ಕೇವಲ ಇತ್ತೀಚೆಗೆ ಒಪ್ಪಿಕೊಳ್ಳುತ್ತಿರುವ ಪರಿಕಲ್ಪನೆಯಾಗಿದೆ. ರಾಜಕೀಯ ಪರಿಣತರು ದೀರ್ಘ ಕಾಲದವರೆಗೆ ಮುಖ್ಯವಾಗಿ ಎರಡು ಪ್ರಶ್ನೆ ಕುರಿತು ಚರ್ಚೆ ಮಾಡುತ್ತ ಬಂದರು. ಕೇವಲ ಬಹುಸಂಖ್ಯಾತ ಬಲದಿಂದಾಗಿ ಪಡೆಯುವ ಅಲ್ಪಸಂಖ್ಯಾತರನ್ನು ಆಳುವ ಅವರ ಹಕ್ಕು ಎಷ್ಟರಮಟ್ಟಿಗೆ ತಾರ್ಕಿಕವೆಂದು ಒಪ್ಪಿಕೊಳ್ಳಬಹುದು ಮತ್ತು ಸರಕಾರದ ಯಥಾರ್ಥತೆ (ಕ್ರಮಬದ್ಧತೆ) ಎಷ್ಟರಮಟ್ಟಿಗೆ ಆಳಿಸಿಕೊಳ್ಳುವವರ ಸಮ್ಮತಿಯನ್ನು ಅವಲಂಬಿಸಿರಬಹುದು. ಆಳಿಸಿಕೊಳ್ಳುವವರ ಸಮ್ಮತಿಯ ಮೇಲೆ ಸರಕಾರದ ಯಾತ್ರಾರ್ಥತೆಯ ಅವಲಂಬನೆಯನ್ನು ವಾದಿಸುವವರು ಕೂಡ ಕೇವಲ ತಮ್ಮ ವಾದದ ಗೆಲುವಿನಿಂದ ಸಂತೃಪ್ತರಾದರೇ ಹೊರತು, ಆ ಸಂಗತಿ ಕುರಿತು ದೀರ್ಘ ಆಲೋಚನೆ ಮಾಡುವ ಅಗತ್ಯತೆಯನ್ನು ಮನಗಾಣಲೇ ಇಲ್ಲ. 'ಆಳಿಸಿಕೊಳ್ಳುವ' ಸಮುದಾಯದ ಒಳಗೇ ಇರುವ ಗುಂಪುಗಳ ವ್ಯತ್ಯಾಸ ಕುರಿತು ಚಿಂತನೆ ನಡೆಸಬೇಕೆಂದು ಅವರಿಗೆ ಹೊಳೆಯಲಿಲ್ಲ. ಆಳಿಸಿಕೊಳ್ಳುವವರ ಗುಂಪುಗಳು ಒಂದು ಜಾತಿಯೋ (ವಿವಿಧ ಜಾತಿ) ಅಥವಾ ಅದೊಂದು ರಾಷ್ಟ್ರವೋ? ಅದು ಯಾವ ರೂಪ ತಾಳುತ್ತದೆ ಎನ್ನುವ ವಿಷಯ ಅವರಿಗೆ ಮಹತ್ವದ್ದಾಗಿ ತೋರಲೇ ಇಲ್ಲ. ಪರಿಸ್ಥಿತಿಯ ಒತ್ತಡಗಳಿಂದಾಗಿ ರಾಜಕೀಯ ಪರಿಣತರು ಅನಿವಾರ್ಯವಾಗಿ ಈ ವ್ಯತ್ಯಾಸವನ್ನು ಒಪ್ಪಿಕೊಳ್ಳಬೇಕಾಯಿತು. ಎರಡನೆಯದಾಗಿ, ಇದು ಯಾವುದೇ ಭೇದವಿಲ್ಲದಂಥ ಕೇವಲ ವ್ಯತ್ಯಾಸ ಅಲ್ಲ. ಇದೊಂದು ಸತ್ವಶಾಲಿ ವ್ಯತ್ಯಾಸ ಮತ್ತು ಈ ಭೇದ ಪರಿಣಾಮದಲ್ಲಿ ಮೂಲಭೂತವಾಗಿದೆ. ಒಂದು ಮತೀಯ ಗುಂಪು ಮತ್ತು ಒಂದು ರಾಷ್ಟ್ರದ ನಡುವಿನ ವ್ಯತ್ಯಾಸ ಮೂಲಭೂತವಾದುದು. ಕಾಯ್ದೆಬದ್ಧವಾಗಿ ಸ್ಥಾಪನೆಗೊಂಡ ಸರಕಾರದ ಮೂಲಕ ರಾಜಕೀಯ ತಜ್ಞರು ಮತೀಯ ಗುಂಪು ಮತ್ತು ರಾಷ್ಟ್ರಕ್ಕೆ ಕೊಡಮಾಡುವ ರಾಜಕೀಯ ಹಕ್ಕುಗಳಲ್ಲಿ ವ್ಯತ್ಯಾಸವಿರುವುದು ಸ್ಪಷ್ಟ. ಮತೀಯ ಗುಂಪಿಗೆ ಕೋಮು ಬಂಡಾಯದ ಹಕ್ಕು ನೀಡಲು ಅವರು (ರಾಜಕೀಯ ತಜ್ಞ) ಸಿದ್ಧ. ಆದರೆ, ಒಂದು (ಜನಾಂಗ) ರಾಷ್ಟ್ರಕ್ಕೆ ಅದನ್ನು ಛಿದ್ರಗೊಳಿಸುವ ಹಕ್ಕು ಬಿಟ್ಟುಕೊಡಲು ಅವರು ಒಪ್ಪುತ್ತಾರೆ. ಈ ಎರಡರ ನಡುವಿನ ಮೂಲಭೂತ ವ್ಯತ್ಯಾಸ ಸ್ಪಷ್ಟ. ಸರಕಾರದ ದೃಷ್ಟಿಧೋರಣೆ ರೀತಿ ನೀತಿಗಳ ಬದಲಾವಣೆಗಳಿಗೆ ಮಾತ್ರ ಬಂಡಾಯವಾದಿಗಳ ಹಕ್ಕು ಸೀಮಿತವಾಗಿದೆ. ಆದರೆ, ಸರಕಾರವನ್ನು ಕಿತ್ತೊಗೆಯುವ ಹಕ್ಕು ಬಂಡಾಯದ ಹಕ್ಕಿಗಿಂತ ಬಲಶಾಲಿಯಾಗಿದ್ದು, ಒಂದು ರಾಜ್ಯದ ಜನಸಮುದಾಯ ತಾನು ನೆಲೆಸಿರುವ ಪ್ರಾದೇಶಿಕ ಅಂಗದ ಜೊತೆಗೇ ಆ ರಾಜ್ಯದಿಂದ ಪ್ರತ್ಯೇಕಗೊಳ್ಳುವ ಹಕ್ಕು ಪಡೆಯುವಷ್ಟು ವ್ಯಾಪಕವಾಗಿದೆ. ಈ ವ್ಯತ್ಯಾಸದ ವಾಸ್ತವ ಆಧಾರವೇನು ಎನ್ನುವುದು ಆಶ್ಚರ್ಯಕರವಾಗಿದೆ. ಈ ವಿಷಯವನ್ನು ಚರ್ಚಿಸಿದ

ರಾಜ್ಯಶಾಸ್ತ್ರ ಲೇಖಕರು ಒಂದು ಮತೀಯ ಗುಂಪಿನ ಬಂಡಾಯದ* ಹಕ್ಕುನ್ಯಾಯಸಮ್ಮತ ಎನ್ನುವುದಕ್ಕೆ ಆ ವ್ಯತ್ಯಾಸದ ವಿವರಣೆ ಹೀಗಿದೆ: ಒಂದು ಸಮಾಜಕ್ಕೆ ತನ್ನ ಹಿತರಕ್ಷಣೆಯ ಹಕ್ಕಿದೆ, ಒಂದು (ಜನಾಂಗ) ರಾಷ್ಟ್ರಕ್ಕೆ ಪ್ರತ್ಯೇಕತೆಯ ಹಕ್ಕಿದೆ. ಈ ವ್ಯತ್ಯಾಸ ಏಕಕಾಲಕ್ಕೆ ಸ್ಪಷ್ಟ ಮತ್ತು ಅಪತ್ಕಾರಿ. ಆದರೆ ಈ ವಿಚಾರವಾದಿಗಳು ಯಾಕೆ ಬಂಡಾಯಗಾರರ ಹಕ್ಕು ಸೀಮಿತ ಮತ್ತು ಯಾಕೆ ಇತರರ ಹಕ್ಕು (ಸರಕಾರವನ್ನು) ವಿಧಗೊಳಿಸುವಷ್ಟು ವ್ಯಾಪಕ ಎನ್ನುವುದಕ್ಕೆ ಕಾರಣ ನೀಡುವುದಿಲ್ಲ; ಅಥವಾ ಅದರ ಬರವಣಿಗೆಯಲ್ಲಿ ಅಂಥ ಯಾವ ಸ್ಪಷ್ಟತೆಗಳೂ ಕಾಣುವುದಿಲ್ಲ. ಆದರೆ ಈ ವ್ಯತ್ಯಾಸ ಏಕೆ ಹುಟ್ಟಿಕೊಂಡಿತು ಎನ್ನುವುದನ್ನು ತಿಳಿದುಕೊಳ್ಳಲು ಕುತೂಹಲಕಾರಿ, ಬೋಧಪ್ರದ ನನಗೆ ತಿಳಿದಂತೆ ಈ ವ್ಯತ್ಯಾಸದ ಕಾರಣಗಳು ಅಂತಿಮ ಅದೃಷ್ಟ(ದೈವ)ದ ಪ್ರಶ್ನೆಗಳಿಗೆ ಸಂಬಂಧಪಟ್ಟಿವೆ.** ಯಾವುದೇ ರಾಜ್ಯ ಕೆಲವು ಜಾತಿ ಶ್ರೇಣಿಗಳನ್ನು ಒಳಗೊಂಡಿರುತ್ತದೆ. ಇಲ್ಲ, ಕೆಲವು ಪರಂಪರೆಯ ಜನಾಂಗಗಳನ್ನು ಒಳಗೊಂಡಿರುತ್ತದೆ. ಅನೇಕ ಪರಂಪರೆಯ ಸಮುದಾಯಗಳುಳ್ಳ ರಾಜ್ಯದಲ್ಲಿ ಒಂದು ಮತ್ತೊಂದು ಸಮುದಾಯದ ವಿರುದ್ಧ ಹೋರಾಟಕ್ಕೆ ಸಜ್ಜಾಗಬಹುದು. ಆದರೆ ಅವರು ತಮ್ಮ ಅಂತಿಮ ಅದೃಷ್ಟಕ್ಕೆ ಸಂಬಂಧಿಸಿದಂತೆ ಏಕಾಭಿಪ್ರಾಯವುಳ್ಳವರಾಗಿರಬಹುದು. ಅನೇಕ ಜನಾಂಗಗಳಿಂದ ಕೂಡಿದ ರಾಜ್ಯದಲ್ಲಿ ಒಂದು ಜನಾಂಗ ಮತ್ತೊಂದು ಜನಾಂಗದ ವಿರುದ್ಧವಾದಾಗ ಈ ವೈರ ಅಂತಿಮ

---

* ಸಿಜ್ ವಿಕ್ ಈ ಕೆಲವು ಮಾತುಗಳಲ್ಲಿ ಅದನ್ನು ಸಮರ್ಥಿಸುತ್ತಾನೆ: "...ಬಹು ಮಹತ್ವದ ಸಮಸ್ಯೆಯ ಸಂದರ್ಭದಲ್ಲಿ, ದಾಸ್ಯದ ಕೇಡುಗಳಿಗಿಂತ ಬಂಡಾಯದ ಹಾನಿ ಕೆಲಮಟ್ಟಿಗೆ ಮೇಲು ಎಂದುಹೇಳಬಹುದು. ಬಂಡುಕೋರರು ದೈಹಿಕವಾಗಿ ದುರ್ಬಲರಾಗಿದ್ದಾಗಲೂ ಬಂಡಾಯ ಕೆಲವು ಸಲ ಬೇಡಿಕೆಗಳ ಪೂರೈಕೆಗಳಿಗೆ ಪ್ರೇರಕವಾಗಬಹುದು. ಅವರ ಕಾರ್ಯ ಚಟುವಟಿಕೆಗಳಿಂದ ಉಂಟಾದ ಆಘಾತದ ತೀವ್ರತೆ ಬಹುಸಂಖ್ಯಾತರಲ್ಲಿ ತಿಳುವಳಿಕೆ ಮೂಡಿಸಬಹುದು. ಅಂಥದೇ ಕಾರಣಗಳಿಗಾಗಿ ಒಪ್ಪಂದದ ಮೂಲಕ ಪುನಃ ಘಟಿಸಬಹುದಾದ ಸಂಘರ್ಷದ ಸಾಧ್ಯತೆಯನ್ನು ಊಹಿಸಬಹುದು. ಸಂಕ್ಷಿಪ್ತದಲ್ಲಿ ಹೇಳುವುದಾದರೆ ಪ್ರಜಾಪ್ರಭುತ್ವ ಅಥವಾ ಇತರ ಯಾವುದೇ ಬಗೆಯ ಸರಕಾರ ಪದ್ಧತಿಯಲ್ಲಿ ಸಂವಿಧಾನಾತ್ಮಕವಾಗಿ ನೀಡಿದ ಅತ್ಯುನ್ನತ ಹಕ್ಕು ಹೊಂದಿರುವ ಜನತೆಗೆ, ಅಸ್ತವ್ಯಸ್ತತೆಯನ್ನು ಪ್ರಚೋದಿಸುವ ಭಯ ಒಂದು ಆರೋಗ್ಯಕರ ನಿರ್ಬಂಧವಾಗಿ ಕಾರ್ಯ ಮಾಡಬಹುದು... ಕಾರಣ ಬಹುತರ ಜನಪ್ರಿಯ ಆಳ್ವಿಕೆಗಳಲ್ಲಿ ಬಂಡಾಯ ಒಂದು ನೈತಿಕ ಹಕ್ಕಾಗಿ ಸ್ಥಾಪಿತಗೊಳ್ಳಬೇಕು ಎನ್ನುವುದನ್ನು ನಾನು ಎತ್ತಿ ಹಿಡಿಯುತ್ತೇನೆ. (ಎಲೆಮೆಂಟ್ಸ್ ಆಫ್ ಪೊಲಿಟಿಕ್ಸ್ ೧೯೨೯, ಪು.೬೪೬–೪೭.)

** (ಸರಕಾರ ಕಿತ್ತೊಗೆಯುವ ಹಕ್ಕು ಕುರಿತು ಸಿಜ್‌ವಿಕ್ ನೀಡುವ ವಿವರಣೆ ಹೀಗಿದೆ: "...ಆಳಿಸಿಕೊಳ್ಳುವವರ ಸಮ್ಮತಿಯನ್ನು ಆಧರಿಸಿರುವುದು ಕಾಯ್ದೆಬದ್ಧ ಸರಕಾರ ಎನ್ನುವ ಅಭಿಪ್ರಾಯ ತಾಳಿರುವ ಕೆಲವರು ಈ ಊಹೆಯಿಂದ ಹಿಂಜರಿಯುವಂತೆ ತೋರುವುದಿಲ್ಲ. ಒಂದು ರಾಜ್ಯದ ಬಹುಸಂಖ್ಯಾತರ ಆಳುವ ಹಕ್ಕನ್ನು ಸಮರ್ಥಿಸುವಂತೆ, ಅದೇ ಕಾಲಕ್ಕೆ ಈ ಹಕ್ಕಿನಿಂದ ವಂಚಿತರಾದ ಅಲ್ಪಸಂಖ್ಯಾತರಿಗೆ ಹೊಸ ಪ್ರತ್ಯೇಕ ರಾಜ್ಯ ಸ್ಥಾಪನೆಯ ಹಕ್ಕು ನೀಡುವಂತೆ ತೋರುತ್ತದೆ; ಆದರೆ ಅವರು ತಾವು ವಾಸವಾಗಿರುವ ರಾಜ್ಯದ ಒಂದು ಪ್ರದೇಶದಲ್ಲಿ ನಿರಂತರವಾಗಿ ಬಹುಸಂಖ್ಯಾತರಾಗಿರಬೇಕು... ನನಗೆ ತಿಳಿದ ಮಟ್ಟಿಗೆ (ಸರಕಾರ) ಕಿತ್ತೊಗೆಯುವ ಹಕ್ಕಿನ ಮೂಲಕ ಇಡೀ ಜನಸಮುದಾಯದ ನಿಜವಾದ ಹಿತಾಸಕ್ತಿಗಳ ಸಂವರ್ಧನೆ ಸಾಧ್ಯ ಎಂದು ತೋರಿಸುವ ಕೆಲವು ಸಂಗತಿಗಳಿವೆ. ಉದಾ: ಒಂದು ರಾಜ್ಯದ ಯಾವುದೇ ಪ್ರದೇಶ ಸುದೀರ್ಘವಾಗಿ ಹರಡಿದ ಸಮುದ್ರ ಅಥವಾ ಇತರ ಭೌಗೋಳಿಕ ಭೌತಿಕ ಕಾರಣಗಳಿಂದ ದೀರ್ಘ ಕಾಲ ಬೇರ್ಪಟ್ಟು ಪರಸ್ಪರ ಭಾಗಗಳ ಆಂತರಿಕ ಸಂವಹನ ಕ್ರಿಯೆ ಸ್ಥಗಿತಗೊಂಡಾಗ, ಮತ್ತು ಜನಾಂಗ, ಧರ್ಮ, ಗತಚರಿತ್ರೆ ಅಥವಾ ವರ್ತಮಾನದ ಸಾಮಾಜಿಕ ಸ್ಥಿತಿಗತಿಗಳು ಪರಸ್ಪರ ಭಿನ್ನವಾದಾಗ ಸಂವೈಧಾನಿಕ ಮತ್ತು ಸರಕಾರದ ಹಸ್ತಕ್ಷೇಪಗಳ ಬೆಳಕಿನಲ್ಲಿ ಸಂಬಂಧಿಸಿದ ನಿವಾಸಿಗಳ ಬೇಡಿಕೆ ಮತ್ತು ಅಗತ್ಯತೆಗಳು ಭಿನ್ನವಾಗುತ್ತವೆ. ಇಂಥ ಸಂದರ್ಭಗಳಲ್ಲಿ ಆಂತರಿಕ ವಿಷಯಗಳಿಗೆ ಸಂಬಂಧಿಸಿ ಒಂದು ಸಾರ್ವತ್ರಿಕ ಸರಕಾರ, ಮತ್ತು ಅದೇ ಕಾಲಕ್ಕೆ ಅಗತ್ಯವೆನಿಸಿದರೆ ತೀರ ಭಿನ್ನವಾದ ತಮ್ಮ ದೈನಂದಿನ ಇತರ ಸಂಬಂಧಗಳ ಸಂಘಟನೆಯ ಕಾರ್ಯನಿರ್ವಹಣೆಗಳಿಗಾಗಿ ವಿಶೇಷ ಗಮನ ಕೊಡುವ ಒಳ ಆಡಳಿತ ಕ್ರಮ ರೂಪಿಸಿಕೊಳ್ಳುವುದು ಅಗತ್ಯ. ಆದರೆ, ಆಗ ಒಳಜಗಳಗಳು ಹೆಚ್ಚಾಗಬಹುದು; ಸೈನ್ಯಶಕ್ತಿಯ ನೆರವಿನಿಂದ ಒಂದು ಸಮತೋಲನ ನೀತಿ ಕಾಯ್ದೆಕೊಳ್ಳುವ ಸಾಧ್ಯತೆ ಉಂಟಾಗಬಹುದು. ಇಂಥ ಸಂದರ್ಭಗಳಲ್ಲಿ ಭಾವುಕತೆ, ಚಾರಿತ್ರಿಕ ದೇಶಭಕ್ತಿ ಅಥವಾ ರಾಷ್ಟ್ರದ ಹಕ್ಕನ್ನು ಕುರಿತ ಯಾವುದೇ ಅಭಿಮಾನ ಅಪೇಕ್ಷಣೀಯವಾಗದು; ಒಳಗೊಳಗೆ ಸೌಹಾರ್ದವಿಲ್ಲದ ವಿವಿಧ ಭಾಗಗಳ ಶಾಂತಿಯುತ ಸಹಜ ವಿಭಜನೆಗೆ ಅಡ್ಡಿಯಾಗಕೂಡದು. (ಎಲೆಮೆಂಟ್ಸ್ ಆಫ್ ಪೊಲಿಟಿಕ್ಸ್, ೧೯೨೯, ಪು.೬೪೮–೪೯).

ಅದೃಷ್ಟದಲ್ಲಿ ಮುಂದುವರೆಯದಿರಬಹುದು. ಇದು, ಒಂದು ಸಮುದಾಯ ಮತ್ತು ಜನಾಂಗಗಳ ನಡುವಿನ ವ್ಯತ್ಯಾಸ; ಮತ್ತು ಈ ವ್ಯತ್ಯಾಸ ಅವರವರ ರಾಜಕೀಯ ಹಕ್ಕುಗಳ ವಿವರಣೆಯಾಗಿದೆ. ಈ ವಿವರಣೆಯಲ್ಲಿ ಯಾವುದೇ ಹೊಸತನ ಅಥವಾ ಸ್ವೋಪಜ್ಞತೆಯಿಲ್ಲ. ಯಾಕೆ ಸಮುದಾಯ (ಜಾತಿ) ಒಂದು ವಿಧದ ಹಕ್ಕು ಪಡೆದಿದೆ ಮತ್ತು ಜನಾಂಗ ಬೇರೆ ವಿಧದ ಹಕ್ಕು ಪಡೆದಿದೆ ಎನ್ನುವುದು ಕೇವಲ ಬೇರೆ ರೀತಿಯ ವಿವರಣೆಯಾಗಿದೆ. ಒಂದು ಜಾತಿಗೆ (ಸಮುದಾಯಕ್ಕೆ) ಅದರಲ್ಲಿ ತೃಪ್ತಿಯಿರುವುದರಿಂದ ಬಂಡಾಯ ಅದರ ಹಕ್ಕು. ಅದಕ್ಕೆ ಬೇಕಾಗಿರುವುದು ಸರಕಾರದ ಸ್ವರೂಪ ಮತ್ತು ವಿಧಾನದಲ್ಲಿ ಪರಿವರ್ತನೆ ಮಾತ್ರ. ಅಂತಿಮ ಅದೃಷ್ಟದ ವಿಷಯದಲ್ಲಿ ಅದರ ಜಗಳವಿಲ್ಲ. ಒಂದು ಜನಾಂಗಕ್ಕೆ ಬರೀ ಸರಕಾರದ ಪರಿವರ್ತನೆಯಲ್ಲಿ ತೃಪ್ತಿಯಿಲ್ಲದಿರುವುದರಿಂದ ಅದಕ್ಕೆ ಸರಕಾರವನ್ನು ಕಿತ್ತೊಗೆಯುವ ಹಕ್ಕು ಬೇಕು. ಅದರ ಜಗಳ ಅಂತಿಮ ಅದೃಷ್ಟದ ಸಮಸ್ಯೆಗೆ (ಕೆಲವೊಮ್ಮೆ) ಸಂಬಂಧಿಸಿರಬಹುದು. ಅವರನ್ನು ಬಂಧಿಸಿರುವ ಅಸಹಜ ಬಂಧನ ಕಳಚುವವರೆಗೆ ಅವರಿಗೆ ತೃಪ್ತಿಯಾಗದಿದ್ದರೆ ಅವರ ದೂರದೃಷ್ಟಿಯ ವಿವೇಕ ಮತ್ತು ನೈತಿಕತೆ ಕೂಡ, ಬಂಧನಗಳು ಕರಗುವುದನ್ನು ಬಯಸುತ್ತವೆ; ಮತ್ತು ಪ್ರತಿಯೊಬ್ಬರು ಮುಕ್ತವಾಗಿ ತಮ್ಮ ತಮ್ಮ ಅದೃಷ್ಟ ಸಾಧನೆಯಲ್ಲಿ ತೊಡಗಬಹುದು.

## V

ಮುಸ್ಲಿಂ ಆದರ್ಶಗಳು ಪೂರ್ಣ ಪರಿವರ್ತನೆಗೆ ಒಳಗಾಗಿರುವುದು ಮತ್ತು ಹಿಂದೂ ಮುಸ್ಲಿಂ ಐಕ್ಯತೆಯ ಪ್ರಯತ್ನಗಳು ವಿಫಲವಾದುದನ್ನು ಒಪ್ಪಿಕೊಳ್ಳುವುದು ಅಗತ್ಯವಾಗಿರುವಂತೆ ಈ ಬಗೆಯ ಪರಿಣಾಮದ ಕಾರಣಗಳನ್ನು ಅರಿಯುವುದು ಕೂಡ ಅಷ್ಟೇ ಅಗತ್ಯವಾಗಿದೆ. ಬ್ರಿಟಿಷರ ಒಡೆದು ಆಳುವ ನೀತಿ ಮುಸ್ಲಿಮ್ ಆದರ್ಶಗಳ ತೀವ್ರ ಪರಿವರ್ತನೆಗೆ ಮತ್ತು ಐಕ್ಯತೆಯ ಪ್ರಯತ್ನದ ವಿಫಲತೆಗೆ ಕಾರಣ ಎಂದು ಹಿಂದೂಗಳ ಹೇಳಿಕೆ. ಇದರಲ್ಲಿ ಯಾವ ಅಚ್ಚರಿಯೂ ಇಲ್ಲ. ಐರಿಷ್ ಮನೋಭೂಮಿಕೆಯುಳ್ಳ ಹಿಂದೂಗಳು ಸರಕಾರವನ್ನು ವಿರೋಧಿಸುವ ರಾಜಕೀಯ ದೃಷ್ಟಿಯನ್ನೇ ಬೆಳೆಸಿಕೊಂಡು ಬಂದಿದ್ದು ಕೆಟ್ಟ ಹವಾಮಾನವೂ ಸೇರಿದಂತೆ ಪ್ರತಿಯೊಂದಕ್ಕೂ ಸರಕಾರವನ್ನು ದೂಷಿಸಲು ಸದಾ ಸಿದ್ಧ. ಆದರೆ ಹಿಂದೂಗಳಿಗೆ ಪ್ರಿಯವಾದ ಈ ಧೋರಣೆಯನ್ನು ತಿರಸ್ಕರಿಸುವ ಸಮಯ ಈಗ ಬಂದಿದೆ. ಯಾಕೆಂದರೆ ಅವರು ಎರಡು ಬಹು ಮುಖ್ಯ ಪರಿಸ್ಥಿತಿಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಮೊದಲನೆಯದಾಗಿ ಬ್ರಿಟಿಷರಲ್ಲಿ ಒಡೆದು ಆಳುವ ನೀತಿಯಿದೆಯೆಂದು ಒಪ್ಪಿಕೊಂಡರೂ ವಿಭಜನೆಯನ್ನು ಸಾಧ್ಯಗೊಳಿಸುವ ಅಂಶಗಳಿಲ್ಲದೆ ಅವರು ತಮ್ಮ ನೀತಿಯಲ್ಲಿ ಯಶಸ್ವಿಯಾಗಲಾರರು. ಅಲ್ಲದೆ, ಅವರ ಈ ನೀತಿ ಇಷ್ಟು ದೀರ್ಘ ಕಾಲ ಯಶ ಪಡೆಯಬೇಕಾದರೆ, ಅಂಥ ವಿಭಜನೆಯ ಅಂಶಗಳು (ಈ ಜನಸಮುದಾಯದ ಒಳಗೇ) ಸ್ಥಿರವಾಗಿವೆ ಮತ್ತು ಅವು ತಾತ್ಪೂರ್ತಿಕ ಅಥವಾ ಕೃತ್ರಿಮ ಅಂಶಗಳಲ್ಲ. ಎರಡನೆಯದಾಗಿ, ಈ ಆದರ್ಶಗಳ ಪರಿವರ್ತನೆಯನ್ನು ಪ್ರತಿನಿಧಿಸುವ ಮಿ. ಜಿನ್ನಾ ಬ್ರಿಟಿಷರ ಕೈಗೊಂಬೆಯೆಂದು ಅವರ ಎಂಥ ವೈರಿ ಕೂಡ ಅವರನ್ನು ಸಂದೇಹಿಸಲು ಸಾಧ್ಯವಿಲ್ಲ. ಆತ ಸ್ವಾಭಿಪ್ರಾಯ ಕೇಂದ್ರಿತನಾಗಿರಬಹುದು. ಯಾವುದೇ ಮುಸುಕಿಲ್ಲದ ಅಹಂಕಾರಿಯಾಗಿರಬಹುದು. ಬಹುಶಃ ಈ ಬಗೆಯ ಕಾರಣಗಳಿಂದಾಗಿ ಆತ ದ್ವಿತೀಯ ಸ್ಥಾನ ಪಡೆದು ಇತರರ ಜೊತೆ ಸಾರ್ವಜನಿಕ ಉದ್ದೇಶಕ್ಕಾಗಿ ಕಾರ್ಯ ಮಾಡಲು ಸಿದ್ಧವಿಲ್ಲದಿರಬಹುದು. ಆತನಲ್ಲಿ ಅತ್ಯಧಿಕ ವಿಚಾರಗಳಿಲ್ಲದಿರಬಹುದು. ಹಾಗೆ ನೋಡಿದರೆ ಆತನಲ್ಲಿ ಅಂಥ ವಿಶೇಷವೇನಿಲ್ಲ; ಆದರೆ ಆತನ ಟೀಕಾಕಾರರು ಆತನ ತಲೆ ಖಾಲಿ, ಇತರರ ವಿಚಾರಗಳೇ ಆತನ ತಲೆಯಲ್ಲಿ ತುಂಬಿವೆ ಇತ್ಯಾದಿಯಾಗಿ ಭಾವಿಸುತ್ತಾರೆ. ಅಂಥ ವಿಶೇಷ

ಸತ್ವವಿಲ್ಲದೆಯೂ ಆತ ಖ್ಯಾತನಾಗಿರಬಹುದು; ಪ್ರಸಿದ್ಧಿ ಪಡೆದಿರಬಹುದು. ಅದೇ ಕಾಲಕ್ಕೆ ಇಂಡಿಯಾದಲ್ಲಿ 'ಶುದ್ಧ ಚಾರಿತ್ರ' ಎನ್ನುವ ವಿಶೇಷಣಕ್ಕೆ ಯೋಗ್ಯನಾದ ಯಾವನಾದರೊಬ್ಬ ರಾಜಕಾರಣಿ ಇದ್ದಾನೆ ಎಂದು ಹೇಳುವುದು ಸಂದೇಹಾಸ್ಪದ. ಬ್ರಿಟಿಷ್ ಸರಕಾರದ ಜೊತೆಗಿನ ತನ್ನ ಸಂಬಂಧಗಳನ್ನು ಅರಿತ ಯಾವುದೇ ವ್ಯಕ್ತಿ ತಾನು ಅವರ ವಿರೋಧಿಯಾಗಿರದಿದ್ದರೂ, ಸದಾ ಅವರ ಟೀಕಾಕಾರ ಎನ್ನುವ ಮಾತನ್ನು ಒಪ್ಪಿಕೊಳ್ಳುತ್ತಾನೆ.

ಆತನನ್ನು ಯಾರೊಬ್ಬರೂ ಕೊಳ್ಳಲಾರರು ಎಂದೂ ಕೂಲಿ ಸಿಪಾಯಿಯಾಗಲಾರ ಎಂಬುದು ಆತನ ಖ್ಯಾತಿ. ಜಿನ್ನಾ ಸಾಹೇಬನ ಭಾವ ಪರಿವರ್ತನೆಯನ್ನು ಬೆಲೆಗಟ್ಟುವಲ್ಲಿ ಸಾಂಪ್ರದಾಯಿಕ ಹಿಂದೂ ವ್ಯಾಖ್ಯಾನ ಸೋಲುತ್ತದೆ.

ಹಾಗಾದರೆ ಈ ದುರಂತ ಸಂಗತಿಗಳಿಗೆ, ಈ ಐಕ್ಯತಾ ಪ್ರಯತ್ನದ ಸೋಲಿಗೆ, ಈ ಮುಸ್ಲಿಂ ಭಾವಪರಿವರ್ತನೆಗೆ ನಿಜವಾದ ಕಾರಣವೇನು? ಹಿಂದೂಗಳು ಮತ್ತು ಮುಸ್ಲಿಮರ ಮಧ್ಯೆ ಭಿನ್ನಾಭಿಪ್ರಾಯ ಮಾತ್ರವೇ ಇಲ್ಲ ಎಂದು ಗ್ರಹಿಸಲು ವಿಫಲವಾಗಿರುವುದೇ ಹಿಂದೂ ಮುಸ್ಲಿಂ ಐಕ್ಯತಾ ವೈಫಲ್ಯದ ನಿಜವಾದ ಕಾರಣ. ಇವರ ಮಧ್ಯೆ ಇರುವ ವೈರವನ್ನು ಕೇವಲ ಭೌತವಸ್ತು ನಿಮಿತ್ತ ಎಂದು ಅರ್ಥೈಸಬಾರದು. ಅದು ಅನೇಕ ಕಾರಣಗಳಿಂದ ಒಡಮೂಡಿದೆ. ಅದರ ಮೂಲ ಚಾರಿತ್ರಿಕ, ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಪರಂಪರಾಗತ ವೈರದಲ್ಲಿದೆ. ರಾಜಕೀಯ ವೈರ ಅದರ ಪ್ರತಿಬಿಂಬವಷ್ಟೆ. ಇವುಗಳೆಲ್ಲ ಸೇರಿ ಅತೃಪ್ತಿಯ ಆಳವಾದ ನದಿಯಾಗಿ ಹರಿದು, ಈ ಎಲ್ಲ ಮೂಲಗಳ ಕ್ರಮಬದ್ಧ ಸರಬರಾಜನಿಂದ ಪುಷ್ಟಗೊಂಡು, ಗಮ್ಯಸ್ಥಾನದ ತುದಿಗೇರಿ, ಸಾಮಾನ್ಯ ಕಾಲುವೆಗಳ ಮೂಲಕ ಕೋಡಿ ಬೀಳುತ್ತದೆ. ಬೇರೆ ಮೂಲದಿಂದ ಹರಿದು ಬರುವ ಯಾವುದೇ ನೀರಿನ ಪ್ರವಾಹ, ಅದು ಎಷ್ಟೇ ಶುದ್ಧವಾಗಿದ್ದರೂ ಸಹ, ಮುಖ್ಯ ನದಿಯನ್ನು ಕೂಡಿದ ಕೂಡಲೇ, ಅದರ ಬಣ್ಣವನ್ನು ಬದಲಾಯಿಸಿ ಶಕ್ತಿಯನ್ನು ಉಡುಗಿಸುವ ಬದಲು, ಮುಖ್ಯ ಪ್ರವಾಹದಲ್ಲಿ ತಾನೇ ಇಲ್ಲವಾಗುತ್ತದೆ. ಈ ಪ್ರವಾಹ ತಂದು ಅಡಕುವ ವೈರದ ಮೆಕ್ಕಲು ಮಣ್ಣು ನಿತ್ಯವೂ ಆಳವೂ ಆಗುತ್ತಾ ಹೋಗುತ್ತದೆ. ಎಲ್ಲಿಯವರೆಗೆ ಈ ಮೆಕ್ಕಲು ಮಣ್ಣು ಶೇಖರವಾಗುತ್ತಾ ಹೋಗುವುದೋ, ಎಲ್ಲಿಯವರೆಗೆ ಈ ವಿರೋಧ ಅವಿರತವಾಗಿ ಸಾಗುವುದೋ ಅಲ್ಲಿಯವರೆಗೆ ಹಿಂದೂ ಮುಸ್ಲಿಮರ ನಡುವಿನ ವೈರ ಐಕ್ಯತೆಗೆ ದಾರಿ ಮಾಡಿಕೊಡಬೇಕು ಎಂದು ನಿರೀಕ್ಷಿಸುವುದು ಅಸಹಜ, ಅಸ್ವಾಭಾವಿಕ.

ತುರ್ಕಿ ಸಾಮ್ರಾಜ್ಯದಲ್ಲಿನ ಕ್ರೈಸ್ತರು ಮತ್ತು ಮುಸ್ಲಿಮರಂತೆ ಭಾರತದಲ್ಲಿನ ಹಿಂದೂಗಳು ಮತ್ತು ಮುಸ್ಲಿಮರು ಪರಸ್ಪರ ಶತ್ರುಗಳಂತೆ ಅನೇಕ ರಂಗಗಳಲ್ಲಿ ಎದುರಾಗುವರು. ಆ ಕಾದಾಟದ ಫಲಿತಾಂಶ ಹಲವಾರು ಬಾರಿ ಅವರನ್ನು ದಮನವೆಸಗಿದವರು ಮತ್ತು ದಮನಕ್ಕೊಳಗಾದವರು ಎಂಬ ಸಂಬಂಧಕ್ಕೆ ದೂಡಿಬಿಡುತ್ತದೆ. ಯಾವುದೇ ಪಕ್ಷ ಗೆಲ್ಲಲಿ, ಎರಡೂ ಪಕ್ಷಗಳ ಮಧ್ಯೆ ದೊಡ್ಡ ಕಂದಕ ಏರ್ಪಡುತ್ತದೆ. ಮೊಗಲರ ಮುಂದಾಳತ್ವದಲ್ಲಾಗಲೀ ಅಥವಾ ಬ್ರಿಟಿಷರ ಮುಂದಾಳತ್ವದಲ್ಲಾಗಲೀ ಬಲಾತ್ಕಾರದ ಅವರ ರಾಜಕೀಯ ಐಕ್ಯ, ಅನೇಕ ಅನ್ಯ ಪ್ರಸಂಗಗಳಲ್ಲಿ ಆದಂತೆ, ಸಾವಯವ ಐಕ್ಯತೆಗೆ ಕುಪ್ಪಳಿಸುವ ಬದಲು, ಅವರ ನಡುವಿನ ಪರಸ್ಪರ ವೈರವನ್ನು ವೃದ್ಧಿಗೊಳಿಸಿದೆ. ಮತಧರ್ಮಗಳಾಗಲೀ ಅಥವಾ ಸಾಮಾಜಿಕ ನೀತಿನಿಯಮಗಳಾಗಲೀ ಈ ಕಂದಕಕ್ಕೆ ಸೇತುವೆ ಕಟ್ಟಲಾರವು. ಎರಡೂ ಮತಶ್ರದ್ಧೆಗಳೂ ಪರಸ್ಪರ ಪ್ರತ್ಯೇಕ. ಒಳ್ಳೆಯ ಸಾಮಾಜಿಕ ನಡೆನುಡಿಯ ದೃಷ್ಟಿಯಿಂದ ಯಾವುದೇ ಬಗೆಯ ಸಾಮರಸ್ಯವನ್ನು ಹೊಸದಾಗಿ ಹುಟ್ಟು ಹಾಕಿದರೂ, ಒಳಗಿನ ಗರ್ಭ ಮತ್ತು ಕೇಂದ್ರ ಭಾಗದಲ್ಲಿ ಅವು ಬದ್ಧ ವೈರತ್ವದಿಂದ ಕೂಡಿರುತ್ತವೆ. ನಿರ್ಮೂಲನ ಮಾಡಲಾರದೆ ಶತಮಾನಗಳು ಸೋಲೊಪ್ಪಿಕೊಳ್ಳುವಂಥ ವಂಶಪಾರಂಪರಿಕ ದ್ವೇಷ ಅವರಿಬ್ಬರ ಮಧ್ಯೆ ಇರುವಂತೆ ತೋರುತ್ತದೆ. ಮತೀಯ ಸುಧಾರಣೆಯ ಮುಂದಾಳುಗಳಾದ ಅಕ್ಬರ್ ಮತ್ತು ಕಬೀರ್

ಭಿನ್ನ ಮತಶ್ರದ್ಧೆಗಳನ್ನು ಒಂದುಗೂಡಿಸಲು ಪ್ರಯತ್ನಗಳನ್ನು ಮಾಡಿದ್ದರೂ ಸಹ, ಪ್ರತಿಯೊಂದು ಪಕ್ಷದ ಹಿಂದೆ ನೀತಿ ಶಾಸ್ತ್ರದ ವಾಸ್ತವ್ಯಗಳು ಇನ್ನೂ ಉಳಿದಿವೆ; ಗಣಿತಾತ್ಮಕ ನುಡಿಗಟ್ಟಿನಲ್ಲಿ ಹೇಳುವುದಾದರೆ, ಯಾವುದೂ ಬದಲಿಸಲಾರದು ಅಥವಾ ಯಾವುದೂ ಪೂರ್ಣಾಂಕಗಳು ಸಮಾನ ಭೇದವನ್ನು ಹೊಂದುವಂತೆ ಮಾಡಲಾರದು. ಯಾವುದೇ ಕ್ಷೋಭೆ ಅಥವಾ ಆಘಾತವನ್ನುಂಟುಮಾಡದೆ ಒಬ್ಬ ಹಿಂದು, ಹಿಂದೂಮತದಿಂದ ಕ್ರೈಸ್ತ ಮತಕ್ಕೆ ಹೋಗಬಹುದು. ಆದರೆ ಕೋಮು ಗಲಭೆಯನ್ನುಂಟುಮಾಡದೆ, ವಿತ್ತೋದ್ರೇಕವನ್ನುಂಟುಮಾಡದೆ, ನಿಜವಾಗಿಯೂ ಅವನು ಹಿಂದೂ ಮತದಿಂದ ಇಸ್ಲಾಂ ಮತಕ್ಕೆ ಹೋಗಲಾರ. ಮುಸಲ್ಮಾನರಿಂದ ಹಿಂದೂಗಳನ್ನು ಬೇರ್ಪಡಿಸಿರುವ ದ್ವೇಷದ ಆಳ ಅಗಲವನ್ನು ಅದು ಸೂಚಿಸುತ್ತದೆ. ಮತ ಶ್ರದ್ಧೆಯ ವಿಷಯದಲ್ಲಿ ಹಿಂದೂ ಮತ್ತು ಇಸ್ಲಾಂ ಧರ್ಮಗಳು ಹಿಂದೂಗಳನ್ನು ಹಾಗು ಮುಸ್ಲಿಮರನ್ನು ಬೇರೆ ಬೇರೆ ಇಟ್ಟಿರುವಂತೆಯೇ, ಅವುಗಳು ಅವರ ಸಾಮಾಜಿಕ ಸಮೀಕರಣವನ್ನೂ ಸಹ ತಡೆಹಿಡಿದಿಟ್ಟಿವೆ. ಹಿಂದೂಗಳು ಮತ್ತು ಮುಸ್ಲಿಮರ ಮಧ್ಯೆ ಅಂತರಧರ್ಮೀಯ ವಿವಾಹ ಜರುಗುವುದನ್ನು ಹಿಂದೂ ಧರ್ಮ ನಿಷೇಧಿಸಿರುವುದು ಎಲ್ಲರಿಗೂ ತಿಳಿದ ವಿಷಯವೇ. ಈ ಸಣ್ಣತನ ಹಿಂದೂಮತದ ಅವಗುಣ ಮಾತ್ರವೇ ಅಲ್ಲ; ಇಸ್ಲಾಂ ಮತವೂ ತನ್ನ ಸಾಮಾಜಿಕ ನೀತಿನಿಯಮಗಳಲ್ಲಿ ಸಮಾನ ಸಣ್ಣತನವುಳ್ಳದ್ದು. ಹಿಂದೂಗಳು ಮತ್ತು ಮುಸ್ಲಿಮರ ಮಧ್ಯದ ಅಂತರಧರ್ಮೀಯ ವಿವಾಹವನ್ನು ಅದೂ ಸಹ ನಿಷೇಧಿಸುತ್ತದೆ. ಈ ಎಲ್ಲ ಸಾಮಾಜಿಕ ಕಾಯಿದೆಗಳಿಂದ ಸಾಮಾಜಿಕ ಸಮೀಕರಣ ಸಾಧ್ಯವಿಲ್ಲ. ಪರಿಣಾಮವಾಗಿ ರೀತಿ ಮಾರ್ಗಗಳ, ವಿಧಿವಿಧಾನಗಳ, ದೃಷ್ಟಿಧೋರಣೆಗಳ ಸಾಮಾಜೀಕರಣವಾಗಲು, ಹರಿತ ತುದಿಗಳನ್ನು ಮೊಂಡುಗೊಳಿಸುವುದಾಗಲೀ, ಯುಗಯುಗಗಳ ವಕ್ರತೆಗಳನ್ನು ಸರಿಪಡಿಸುವುದಾಗಲೀ ಸಾಧ್ಯವಿಲ್ಲ.

ಹಿಂದೂಗಳು ಮತ್ತು ಮುಸ್ಲಿಮರ ಮಧ್ಯೆ ಕೀವು ಸುರಿಯುವ ಹುಣ್ಣು ಮುಕ್ತವಾಗಿ ವೃದ್ಧಿಗೊಳ್ಳಲು ಜವಾಬ್ದಾರಿಯಾಗಿರುವ ಹಿಂದೂ ಹಾಗೂ ಇಸ್ಲಾಂ ಮತಗಳಲ್ಲಿ ಇನ್ನೂ ಬೇಕಾದಷ್ಟು ದೋಷಗಳಿವೆ. ಹಿಂದೂ ಧರ್ಮ ಜನಗಳನ್ನು ಬೇರ್ಪಡಿಸಿತು ಎಂದೂ, ವೈದೃಶ್ಯವಾಗಿ ಇಸ್ಲಾಂ ಧರ್ಮ ಜನರನ್ನು ಒಂದುಗೂಡಿಸಿತು ಎಂದೂ ಹೇಳಲಾಗುತ್ತದೆ. ಇದು ಆಂಶಿಕ ಸತ್ಯ ಮಾತ್ರ. ಏಕೆಂದರೆ, ಇಸ್ಲಾಂ ಧರ್ಮ ಬೆಸೆಯುವಷ್ಟು ನಿರ್ದಾಕ್ಷಿಣ್ಯವಾಗಿ ಬೇರ್ಪಡಿಸುತ್ತದೆ. ಇಸ್ಲಾಂ ಒಂದು ಪರಿಮಿತ ಸಂಸ್ಥೆ. ಅದು ಮುಸ್ಲಿಮರು ಮತ್ತು ಮುಸ್ಲಿಮೇತರರ ಮಧ್ಯೆ ಮಾಡುವ ಭೇದಗಣನೆ ತೀರ ವಾಸ್ತವ, ತೀರ ಸ್ಪಷ್ಟ, ತೀರ ದೂರ ಮಾಡುವ ಭೇದ. ಇಸ್ಲಾಮಿನ ಭ್ರಾತೃತ್ವ ಇಡೀ ಮಾನವ ಕುಲದ ಭ್ರಾತೃತ್ವವಲ್ಲ. ಮುಸ್ಲಿಮರ ಭ್ರಾತೃತ್ವ ಕೇವಲ ಮುಸ್ಲಿಮರಿಗೆ ಮಾತ್ರ ಭ್ರಾತೃಭಾವ ಉಂಟು. ಆದರೆ, ಸಂಸ್ಥೆಯ ಒಳಗಿನವರಿಗೆ ಮಾತ್ರ ಅದರ ಪ್ರಯೋಜನ ಸೀಮಿತವಾಗಿರುತ್ತದೆ. ಸಂಸ್ಥೆಯ ಹೊರಗಿರುವವರಿಗೆ ತಿರಸ್ಕಾರ ಮತ್ತು ದ್ವೇಷಗಳನ್ನು ಬಿಟ್ಟು ಬೇರೇನೂ ಇಲ್ಲ. ಇಸ್ಲಾಮಿನ ಎರಡನೆಯ ಅಪಜಯವೆಂದರೆ ಅದರ ಸಾಂಘಿಕ ಸ್ವತಂತ್ರ ಸರ್ಕಾರ ವ್ಯವಸ್ಥೆ; ಅದು ಸ್ಥಳೀಯ ಸ್ವತಂತ್ರ ಸರ್ಕಾರಕ್ಕೆ ಅಸಂಗತವಾದದ್ದು. ಏಕೆಂದರೆ, ಮುಸ್ಲಿಂ ರಾಜನಿಷ್ಠೆ ತನ್ನ ದೇಶದ ತನ್ನ ವಾಸಸ್ಥಾನದ ಮೇಲೆ ಅವಲಂಬಿತವಾಗಿರುವುದಿಲ್ಲ. ಬದಲಾಗಿ ತಾನು ಯಾವ ಮತಶ್ರದ್ಧೆಗೆ ಬದ್ಧನೋ ಅದರ ಮೇಲೆ ಅವಲಂಬಿತವಾಗಿರುತ್ತದೆ. ಮುಸ್ಲಿಮನಿಗೆ "ಇಬಿ ಬೆನೆ ಇಬಿ ಪೆಟ್ರಿಯಾ" ಚಿಂತನಾತೀತ. ಎಲ್ಲಿ ಇಸ್ಲಾಂ ಧರ್ಮದ ಆಡಳಿತವಿರುತ್ತದೋ, ಅದು ಅವರದೇ ದೇಶವಾಗಿರುತ್ತದೆ. ಬೇರೆ ಮಾತಿನಲ್ಲಿ ಹೇಳುವುದಾದರೆ ಇಸ್ಲಾಂ ಧರ್ಮ ನಿಜವಾದ ಮುಸ್ಲಿಮನನ್ನು ಭಾರತ ತನ್ನ ಮಾತೃಭೂಮಿಯೆಂದು ಭಾವಿಸಲು ಬಿಡುವುದಿಲ್ಲ. ಹಿಂದೂವನ್ನು ತನ್ನ ಬಂಧುಬಳಗ ಎಂದು ಭಾವಿಸಲು ಬಿಡುವುದಿಲ್ಲ. ಬಹುಶಃ ಇದೇ ಕಾರಣಕ್ಕಾಗಿಯೋ ಏನೋ ಮಹಾಭಾರತೀಯನಾಗಿಯೂ ಪಕ್ಕಾ ಮುಸ್ಲಿಮನಾದ ಮೌಲಾನ ಮಹಮ್ಮದಾಲಿ, ಸತ್ತ ಮೇಲೆ

ತನ್ನನ್ನು ಭಾರತಕ್ಕಿಂತ ಜೆರೊಸಲೆಮ್ಮಿನಲ್ಲಿ ಮಣ್ಣು ಮಾಡಬೇಕೆಂದು ಅಪೇಕ್ಷಿಸಿದ್ದು.

ಮುಸ್ಲಿಂ ಮುಂದಾಳುಗಳ ಸೈದ್ಧಾಂತಿಕ ಬದಲಾವಣೆಯ ನೈಜ ವಿವರಣೆಯನ್ನು ಅವರ ಅಭಿಪ್ರಾಯದಲ್ಲಾದ ಅಪ್ರಾಮಾಣಿಕ ಮಾರ್ಗಾಂತರ ಎಂದು ಆರೋಪಿಸಬೇಕಿಲ್ಲ. ಅದು ಹೊಸ ನಿಯತಿಯತ್ತ ಬೆರಳು ತೋರುವ, ಪಾಕಿಸ್ತಾನ ಎಂಬ ಹೊಸ ಹೆಸರಲ್ಲಿ ಸಂಕೇತಗೊಳ್ಳುವ ಹೊಸ ಕಾಣ್ಕೆಯ ಬೆಳಗು ಎಂದು ತೋರುತ್ತದೆ. ಮೊದಲ ಬಾರಿಗೆ ಮುಸ್ಲಿಮರು ನವನಿಯತಿಯ ನವಾರಾಧನೆಯನ್ನು ಪ್ರಾರಂಭಿಸಿದರೆಂದು ಕಾಣುತ್ತದೆ. ಆದರೆ, ನಿಜಸ್ಥಿತಿ ಅದಲ್ಲ. ಆರಾಧನೆ ಹೊಸದು ಅಷ್ಟೆ; ಏಕೆಂದರೆ ಅವರ ಹೊಸ ನಿಯತಿಯ ಸೂರ್ಯ ಇದುವರೆಗೂ ಮೋಡದಲ್ಲಿ ಅಡಗಿಕೊಂಡಿದ್ದವನು ಈಗ ಹೊರ ಬಂದಿದ್ದಾನೆ. ತನ್ನೆಲ್ಲ ಪ್ರಖರ ಕಾಂತಿಯನ್ನು ಹೊರಹೊಮ್ಮಿಸುತ್ತ. ಈ ನವ ನಿಯತಿಯ ಸೂಜಿಗಲ್ಲು ಮುಸ್ಲಿಮರನ್ನು ತನ್ನತ್ತ ಸೆಳೆದುಕೊಳ್ಳದೆ ಬಿಡದು. ಅದರ ಸೆಳೆತ ಎಷ್ಟು ಜೋರು ಎಂದರೆ, ಜಿನ್ನಾರಂಥ ವ್ಯಕ್ತಿಯೂ ಕೂಡ ತೀವ್ರವಾದ ತತ್ತರಕ್ಕೊಳಗಾಗಿ, ಅದರ ರಭಸವನ್ನು ತಡೆಯಲು ಶಕ್ತನಾಗಲಿಲ್ಲ. ಭಾರತದ ಭೂಪಟದ ಮೇಲೆ ಈ ನಿಯತಿ ತಾನಾಗಿಯೇ ಮೂರ್ತರೂಪದಲ್ಲಿ ಹರಡಿಕೊಳ್ಳತೊಡಗಿತ್ತು. ಭೂಪಟದತ್ತ ಕಣ್ಣು ಹಾಯಿಸಿದ ಯಾರಿಗಾದರೂ ಅದು ಕಾಣದಿರದು. ದೈವಾನುಗ್ರಹದಿಂದ ಮುಸ್ಲಿಮರಿಗೆಂದೇ ಉದ್ದೇಶಪೂರ್ವಕವಾಗಿ ರಚನೆಗೊಂಡ ಪ್ರತ್ಯೇಕ ರಾಷ್ಟ್ರೀಯ ಸಂಸ್ಥಾನದಂತೆ ಅದು ವಿರಾಜಿಸುತ್ತಿದೆ. ಈ ನವ ನಿಯತಿಯನ್ನು ಸುಲಭವಾಗಿ ಯೋಜಿಸಿ, ಒಂದು ಮೂರ್ತ ರೂಪ ಕೊಡಬಹುದು. ಆಗ ಅದು ಆಕರ್ಷಕವೂ ಆಗುತ್ತದೆ. ಏಕೆಂದರೆ ಮುಸ್ಲಿಂ ಬಾಂಧವರನ್ನೆಲ್ಲ ಒಂದು ಇಸ್ಲಾಂ ರಾಜ್ಯದಲ್ಲಿ ಒಂದುಗೂಡಿಸುವ ಮುಸ್ಲಿಂ ಕಲ್ಪನೆಯನ್ನು ನಿಜಗೊಳಿಸುವ ಸಾಧ್ಯತೆಗಳ ಅನಾವರಣ ಮಾಡಿದಂತಾಗುತ್ತದೆ; ಬೇರೆ ಬೇರೆ ದೇಶಗಳಲ್ಲಿ ವಾಸಿಸುವ ಮುಸ್ಲಿಮರು ತಮ್ಮ ತಮ್ಮ ದೇಶಗಳ ರಾಷ್ಟ್ರೀಯತೆಯನ್ನು ಒಪ್ಪಿಕೊಳ್ಳುವ ಅಪಾಯದಿಂದ ತಪ್ಪಿಸಿದಂತಾಗುತ್ತದೆ; ಅದರಿಂದ ಮಹಮ್ಮದೀಯ ಭ್ರಾತೃತ್ವದಲ್ಲಿ ಛಿದ್ರತೆಗೆ ಅವಕಾಶ ಕಲ್ಪಿಸಿದಂತಾಗುತ್ತದೆ.* ಹಿಂದೂಸ್ತಾನದಿಂದ ಪಾಕಿಸ್ತಾನ ಬೇರೆಯಾದ ಮೇಲೆ ಇರಾನ್, ಇರಾಕ್, ಅರೇಬಿಯಾ, ಟರ್ಕಿ ಮತ್ತು ಈಜಿಪ್ಟ್ ದೇಶಗಳು ಒಟ್ಟಿಗೆ ಸೇರಿ ಮುಸ್ಲಿಂ ದೇಶಗಳ ಸಂಯುಕ್ತ ಸಂಸ್ಥಾನವನ್ನು ರೂಪಿಸಿಕೊಂಡು ಕಾನ್‌ಸ್ಟಾಂಟಿನೋಪಲ್‌ನಿಂದ ಹಿಡಿದು ಲಾಹೋರಿನವರೆಗೆ ಒಂದು ಮಹಮ್ಮದೀಯ ರಾಜ್ಯವನ್ನು ಸ್ಥಾಪಿಸುವ ಯೋಜನೆಯುಂಟು. ಈ ನವನಿಯತಿಯ ಹೊಳಪಿಗೆ ಆಕರ್ಷಗೊಳ್ಳದ ಮತ್ತು ಹಿಂದೂಸ್ತಾನದ ಸುವ್ಯವಸ್ಥಿತ ರಚನೆಯಲ್ಲಿ ಮುಸ್ಲಿಮರ ಸ್ಥಾನದ ಬಗೆಗೆ ದೃಷ್ಟಿಯನ್ನು ಸಂಪೂರ್ಣ ಬದಲಾಯಿಸಿಕೊಳ್ಳದ ಮುಸಲ್ಮಾನ ನಿಜವಾಗಿಯೂ ಮೂರ್ಖನಿರಬೇಕು.

ಇಷ್ಟು ಸ್ಫುಟವಾಗಿ ಗೋಚರಿಸುವ ನಿಯತಿಯನ್ನು ಪಡೆಯಲು ಮುಸ್ಲಿಮರು ಇಷ್ಟು ದೀರ್ಘಕಾಲ ತೆಗೆದುಕೊಂಡದ್ದು ಒಂದು ರೀತಿಯಲ್ಲಿ ವಿಸ್ಮಯವನ್ನುಂಟುಮಾಡುತ್ತದೆ. ೧೯೨೩ನೆಯ ಇಸವಿಗೂ ಮುಂಚೆಯೇ ಕೆಲವರಿಗಾದರೂ ಮುಸ್ಲಿಮರ ಅಂತಿಮ ನಿಯತಿ ಇದೇ ಎಂದು ತಿಳಿದಿತ್ತು ಎಂಬುದಕ್ಕೆ ಆಧಾರವಿದೆ. ಇದಕ್ಕೆ ಪೂರಕವಾಗಿ, ವಾಯುವ್ಯ ಗಡಿನಾಡು ಸಮಿತಿಯ ಮುಂದೆ ಖಾನ್ ಸಾಹೇಬ್ ಸರ್ದಾರ್ ಎಂ. ಗುಲ್‌ಖಾನ್ ಸಾಕ್ಷೀಧಾರನಾಗಿ ನೀಡಿದ ಪ್ರಮಾಣವನ್ನು ಪರಾಮರ್ಶೆಗಾಗಿ ಸೂಚಿಸಬಹುದು. ವಾಯುವ್ಯ ಗಡಿನಾಡು ಪ್ರಾಂತ್ಯದ ನೆಲೆಗೊಂಡ ಜಿಲ್ಲೆಗಳು ಮತ್ತು ಬುಡಕಟ್ಟು ಜನರ ಪ್ರದೇಶದ ಮಧ್ಯೆ ಆಡಳಿತಾತ್ಮಕ

---

* ಸರ್ ಮಹಮದ್ ಇಕ್ಬಾಲ್ ಮುಸ್ಲಿಮೇತರ ರಾಜ್ಯಗಳಲ್ಲಿ– ಭಾರತದ ಮುಸಲ್ಮಾನರನ್ನೂ ಸೇರಿಸಿಕೊಂಡು– ಮಾತೃದೇಶದ ಮಮತೆ ಎಂಬ ಅರ್ಥದಲ್ಲಿ ಮುಸಲ್ಮಾನರ ರಾಷ್ಟ್ರೀಯ ಭಾವನೆಯನ್ನು ಖಂಡಿಸಿದ್ದಾರೆ.

ಸಂಬಂಧ ಹಾಗೂ ಪಂಜಾಬಿನ ಜೊತೆ ನೆಲೆಗೊಂಡ ಜಿಲ್ಲೆಗಳ ಸೇರ್ಪಡೆಯ ಸಾಧ್ಯತೆಗಳನ್ನು ವರದಿ ಮಾಡಲು ಭಾರತ ಸರ್ಕಾರ ಸರ್ ಡೆನ್ನಿಸ್ ಬ್ರೇ ಅಧ್ಯಕ್ಷತೆಯಲ್ಲಿ ಆ ಸಮಿತಿಯನ್ನು ಅದೇ ವರ್ಷ ನೇಮಕ ಮಾಡಿತ್ತು. ಎನ್.ಎಂ. ಸಮರ್ಥ್ ಎಂಬ ಸದಸ್ಯರನ್ನುಳಿದು ಸಮಿತಿಯ ಬೇರಾವ ಸದಸ್ಯನೂ ಗುಲ್‌ಖಾನನ ಪ್ರಮಾಣದ ಪ್ರಾಮುಖ್ಯತೆಯನ್ನು ಅರಿತುಕೊಳ್ಳಲಿಲ್ಲ. ಸಮರ್ಥ್ ಮಾತ್ರ ತನ್ನ ಅಲ್ಪಸಂಖ್ಯಾತರ ವರದಿಯಲ್ಲಿ ಅದರತ್ತ ಎಲ್ಲರ ಗಮನ ಸೆಳೆದರು. ಅವರ ವರದಿಯಿಂದ ತೆಗೆದುಕೊಂಡ ಕೆಳಗಿನ ಉಲ್ಲೇಖಗಳು ಮುಸ್ಲಿಮರ ನವನಿಯತಿಯ ವಿಕಾಸದ ಇತಿಹಾಸದಲ್ಲಿರುವ ಕತ್ತಲಮೂಲೆಯ ಮೇಲೆ ಬೆಳಕು ಚೆಲ್ಲುತ್ತವೆ.* ಸಮರ್ಥ್ ಹೇಳುತ್ತಾರೆ:

> **"ವೈಯಕ್ತಿಕ ಜ್ಞಾನ ಮತ್ತು ಅನುಭವದ ಆಧಾರದಿಂದ ವಾಯುವ್ಯ ಗಡಿನಾಡು ಪ್ರಾಂತ್ಯ ಮತ್ತು ಸ್ವತಂತ್ರ ಪ್ರದೇಶಗಳ ಬಗೆಗೆ ಮಾತ್ರವಲ್ಲ, ಬಲೂಚಿಸ್ಥಾನ, ಪರ್ಷಿಯಾ, ಆಫ್ಘಾನಿಸ್ಥನಗಳ ಬಗೆಗೂ ಮಾತಾಡುವ ಹಕ್ಕು ತನಗಿದೆ ಎಂದು ಸಮಿತಿಯ ಮುಂದೆ ಈ ಸಾಕ್ಷೀಧಾರನ ಹಾಗೆ ಬೇರೆ ಯಾವ ಸಾಕ್ಷಿದಾರನೂ ವಾದಿಸಲಿಲ್ಲ. ತಾನು "ಅಧ್ಯಕ್ಷ, ಇಸ್ಲಾಮಿಕ್ ಅಂಜುಮಾನ್, ದೇರಾ ಇಸ್ಮಾಯಿಲ್ ಖಾನ್' ಎಂದು ಸ್ವಂತ ಯೋಗ್ಯತೆಯಿಂದ ಸಮಿತಿಯ ಮುಂದೆ ಸಾಕ್ಷಿದಾರನಾಗಿ ಹಾಜರಾದುದು ಗಮನಾರ್ಹ. ನಾನು ಈ ಸಾಕ್ಷಿದಾರ(ಖಾನ್ ಸಾಹೇಬ್ ಸರ್ಧಾರ್ ಮಹಮದ್ ಗುಲ್ ಖಾನ್)ನನ್ನು ಕೇಳಿದೆ: 'ಈಗ ಒಂದು ಪಕ್ಷ ಗಡಿನಾಡು ಪ್ರಾಂತ್ಯದ ಪ್ರಜಾ ಸರ್ಕಾರವನ್ನು ಸಿಂಧ್ ಸರ್ಕಾರದ ಮಾದರಿಯಂತೆಯೇ ರೂಪಿಸಿದರೆ, ಆಗ ಈ ಪ್ರಾಂತ್ಯ ಪಂಜಾಬಿನ ಅವಿಭಾಜ್ಯ ಅಂಗವಾಗುವುದು, ಸಿಂಧ್ ಬೊಂಬಾಯಿ ಅಧಿಪತ್ಯದ ಅವಿಭಾಜ್ಯ ಅಂಗವಾಗಿರುವಂತೆ, ಇದಕ್ಕೆ ಏನು ಹೇಳುವಿರಿ?' ಮಾರುತ್ತರದ ಅವಧಿಯಲ್ಲಿ ಆತ ಕೆಳಗಿನ ನೇರ ಉತ್ತರ ಕೊಟ್ಟ: 'ಇಸ್ಲಾಂ ಧರ್ಮದ ಅನುಸಾರ ಮತ್ತು ಮಹಮ್ಮದೀಯ ಕಲ್ಪನೆಯಾದ ಜನಾಂಗಗಳ ಸಂಘದ ಪ್ರಕಾರ ನಾನು ಅದರ ವಿರುದ್ಧ.' ಈ ಉತ್ತರದ ಆಧಾರದ ಮೇಲೆ, ನಾನು ಇನ್ನೂ ಕೆಲವು ಪ್ರಶ್ನೆಗಳನ್ನು ಹಾಕಿದೆ. ಅವುಗಳಿಗೆ ಆತ ಮುಚ್ಚುಮರೆಮಾಡದೆ ನಿರ್ಭೀತಿಯಿಂದ ಬಿಚ್ಚುನುಡಿಯ ಮಾರುತ್ತರ ಕೊಟ್ಟ. ಕೆಳಗೆ ಸಮಂಜಸ ಭಾಗಗಳನ್ನು ಉದ್ಧರಿಸಿದ್ದೇನೆ:**

ಪ್ರ– ನಿಮ್ಮ ಅಂಜುಮಾನ್ ಹಿಂದಿರುವ ಭಾವನೆ ಸಮಸ್ತ ಮಹಮದೀಯ ಸಂಘಟನೆಯ ಭಾವನೆ. ಆ ಇಸ್ಲಾಂ 'ಜನಾಂಗಗಳ ಒಕ್ಕೂಟ'ವಾಗಿರುವುದರಿಂದ ಪಂಜಾಬಿನೊಡನೆ ಈ ಪ್ರಾಂತ್ಯವನ್ನು ವಿಲೀನಗೊಳಿಸುವುದು ಹಾನಿಕಾರಕ, ಅವಿಚಾರಕ, ನಿಮ್ಮೊಡನೆ ಯೋಚಿಸುವ ಎಲ್ಲರ ಬೆನ್ನಿಗೆ ಈ ಭಾವನೆ ಬೆನ್ನೆಲುಬಾಗಿದೆ ಅಲ್ಲವೆ?

ಉ– ಹೌದು, ಅದಕ್ಕೆ ನಾನಿನ್ನೂ ಕೊಂಚ ಸೇರಿಸಬೇಕು. 'ಹಿಂದೂ ಮುಸ್ಲಿಂ ಐಕ್ಯತೆ ಎಂದೂ ನಿಜವಾಗಲಾರದು, ಅದು ತೀರ್ಮಾನವಾದ ಸಂಗತಿ ಎಂದು ಯಾವತ್ತಿಗೂ ಹೇಳಲಾಗದು. ಈ ಪ್ರಾಂತ್ಯ ಪ್ರತ್ಯೇಕವಾಗಿ, ಇಸ್ಲಾಂ ಮತ್ತು ಬ್ರಿಟನ್ನಿನ ಪ್ರಜಾಪ್ರಭುತ್ವದ ಮಧ್ಯೆ ಸಂಬಂಧ ಸೇತುವೆಯಾಗಿ ಉಳಿಯಬೇಕು' ಎಂಬುದು ಅವರ ಭಾವನೆ. ನಿಜ ಹೇಳುವುದಾದರೆ, ಅವರು ನನ್ನ ಅಭಿಪ್ರಾಯ ಕೇಳಿದಾಗ– ನಾನು ಅಂಜುಮಾನಿನ ಒಬ್ಬ ಸದಸ್ಯನಾಗಿ, ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ– ನಾವು ಬಹುತೇಕ ಹಿಂದೂಗಳು

---

* ವಾಯುವ್ಯ ಗಡಿನಾಡು ವಿಚಾರಣಾ ಸಮಿತಿಯ ವರದಿ, ೧೯೨೪, ಪು.೧೨೨–೨೩.

ಮತ್ತು ಮುಸ್ಲಿಮರ ಪ್ರತ್ಯೇಕತೆಯನ್ನು ಎದುರು ನೋಡುತ್ತಿದ್ದೇವೆ. ದಕ್ಷಿಣಕ್ಕೆ ಇಪ್ಪತ್ತು ಮೂರು ಕೋಟಿ ಹಿಂದೂಗಳು, ಉತ್ತರಕ್ಕೆ ಎಂಟು ಕೋಟಿ ಮುಸ್ಲಿಮರು. ಕನ್ಯಾಕುಮಾರಿಯಿಂದ ಆಗ್ರಾದವರೆಗಿನ ಸಮಗ್ರ ಭಾಗವನ್ನು ಹಿಂದೂಗಳಿಗೆ ಕೊಡಿ. ಆಗ್ರಾದಿಂದ ಪೆಷಾವರ್‌ವರೆಗಿನ ಸಮಗ್ರ ಭಾಗವನ್ನು ಮುಸ್ಲಿಮರಿಗೆ ಕೊಡಿ. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ದೇಹಾಂತರ ಎಂದು ನನ್ನ ಅಭಿಪ್ರಾಯ. ಇದು ಪರಸ್ಪರ ವಿನಿಮಯದ ಕಲ್ಪನೆ. ಇದು ಮಹಾತ್ಮ ವಿನಾಶದ ಕಲ್ಪನೆಯಲ್ಲ, ಪ್ರಸ್ತುತದಲ್ಲಿ ಕ್ರಾಂತಿಕಾರಕತೆ ಖಾಸಗಿ ಆಸ್ತಿಯ ಒಡೆತನವನ್ನು ರದ್ದುಪಡಿಸಿದೆ; ಅದು ಎಲ್ಲವನ್ನೂ ರಾಷ್ಟ್ರೀಕರಣಗೊಳಿಸಿದೆ. ಇದು ಮಾತ್ರ ವಿನಿಮಯಕ್ಕೆ ಸಂಬಂಧವುಳ್ಳ ಕಲ್ಪನೆಯಾಗಿದೆ. ಬಹುಶಃ ಕಾರ್ಯಸಾಧ್ಯವಾಗದಂಥದು. ಆದರೆ ಇದು ಕಾರ್ಯಸಾಧ್ಯವಾಗುವ ಪಕ್ಷದಲ್ಲಿ ನಾವು ಬೇರೆಯದಕ್ಕಿಂತ ಇದನ್ನು ಇಷ್ಟಪಡುತ್ತೇವೆ.

ಪ್ರ– ಪಂಜಾಬಿನೊಡನೆ ವಿಲೀನವಾಗುವಂತೆ ಬಲಾತ್ಕರಿಸುವ ಪ್ರಬಲವಾದ ಭಾವನೆ ಇದಲ್ಲವೆ?

ಉ– ನಿಜವಾಗಿ ಹೌದು.

* * *

ಪ್ರ– ನೀವು ಇಸ್ಲಾಂ ದೇಶಗಳ ಒಕ್ಕೂಟವನ್ನು ಪ್ರಸ್ತಾಪಿಸಿದಾಗ, ರಾಜಕೀಯ ದೃಷ್ಟಿಗಿಂತ ಮತೀಯ ದೃಷ್ಟಿಯೇ ನಿಮ್ಮ ಮನಸ್ಸಿನಲ್ಲಿ ಪ್ರಮುಖರಾಗಿತ್ತೆಂದು ನಂಬುತ್ತೇನೆ– ಸರಿಯೆ?

ಉ– ಸಹಜವಾಗಿ ರಾಜಕೀಯ ದೃಷ್ಟಿ– ಅಂಜುಮಾನ್ ರಾಜಕೀಯ ಪ್ರೇರಿತ. ಸಹಜವಾಗಿ, ಪ್ರಾರಂಭದಲ್ಲಿ ಮಹಮ್ಮದೀಯವಾದುದೆಲ್ಲವೂ ಮತೀಯ. ಆದರೆ ನಿಜವಾಗಿ ಅಂಜುಮಾನ್ ರಾಜಕೀಯ ಸಂಘ.

* * *

ಪ್ರ– ನಾನು ಅಂಜುಮಾನ್ ಬಗ್ಗೆ ಹೇಳುತ್ತಿಲ್ಲ, ಮುಸಲ್ಮಾನರ ಬಗ್ಗೆ ಹೇಳುತ್ತಿದ್ದೇನೆ. ಇಸ್ಲಾಂ ದೇಶಗಳ ಒಕ್ಕೂಟದ ಬಗೆಗೆ ಮುಸಲ್ಮಾನರ ಅಭಿಪ್ರಾಯವೇನು? ಅವರ ಮನಸ್ಸಿನಲ್ಲಿ ಪ್ರಮುಖವಾಗಿರುವುದೇನು, ಮತೀಯ ದೃಷ್ಟಿಯೇ? ಅಥವಾ ರಾಜಕೀಯ ದೃಷ್ಟಿಯೇ? ಎಂದು ನಾನು ತಿಳಿಯಬಯಸುತ್ತೇನೆ.

ಉ– ಇಸ್ಲಾಂ, ನೀವು ತಿಳಿದಿರುವ ಹಾಗೆ, ಮತೀಯವೂ ಹೌದು, ರಾಜಕೀಯವೂ ಹೌದು.

ಪ್ರ– ಆದ್ದರಿಂದ ರಾಜಕೀಯ ಮತ್ತು ಧರ್ಮ ಒಂದರೊಳಗೊಂದು ಕೂಡಿವೆಯೆ?

ಉ– ಹೌದು, ಖಂಡಿತವಾಗಿ.

* * *

ಆಫ್ಘಾನಿಸ್ಥಾನ ಮತ್ತು ಹಿಂದೂಸ್ಥಾನದ ಹೊರಗಿರುವ ಬೇರೆ ಮುಸ್ಲಿಂ ದೇಶಗಳೊಡನೆ ಪಠಾಣರ ಆಂತರಿಕ ಸಂಬಂಧವಿರುವುದರಿಂದ, ಪಂಜಾಬಿನೊಡನೆ ವಾಯುವ್ಯ ಗಡಿನಾಡು ಪ್ರಾಂತ್ಯದ ವಿಲೀನವನ್ನು ನಿರಾಕರಿಸಿ ಪ್ರತ್ಯೇಕ ಪಠಾಣ ಪ್ರಾಂತ್ಯವನ್ನು ನೆನಪಿನಲ್ಲಿ ಉಳಿಯುವಂತೆ ಮಾಡುವುದು ಎಷ್ಟು ಅಪಾಯಕರ ಎಂಬುದನ್ನು ತೋರಿಸುವ ಸೀಮಿತ ಉದ್ದೇಶದಿಂದ ಶ್ರೀ ಸಮರ್ಥ್ ಈ ಪ್ರಮಾಣವನ್ನು ಬಳಸಿಕೊಂಡಿದ್ದಾರೆ. ೧೯೨೩ಕ್ಕೂ ಮುಂಚೆಯೇ ಪಾಕಿಸ್ತಾನ ಹಂಚಿಕೆಯ ಕಲ್ಪನೆ ಹುಟ್ಟುಪಡೆದುಕೊಂಡಿತ್ತು ಎಂಬುದನ್ನು ಈ ಪ್ರಮಾಣ ರುಜುವಾತುಪಡಿಸುತ್ತದೆ.

೧೯೨೪ರಲ್ಲಿ ಬೊಂಬಾಯಿಯಲ್ಲಿ ಸಮಾವೇಶಗೊಂಡಿದ್ದ ಮುಸ್ಲಿಂ ಒಕ್ಕೂಟದ ಅಧಿವೇಶನದಲ್ಲಿ ಶ್ರೀಯುತ ಮಹಮ್ಮದಾಲಿ ವಾಯುವ್ಯ ಗಡಿನಾಡು ಪ್ರಾಂತ್ಯಕ್ಕೆ ಮಾಂಟೆಗೊ ಚೆಲ್ಮ್ಸ್ ಫೋರ್ಡ್ ಸುಧಾರಣೆಗಳನ್ನು

ವಿಸ್ತರಿಸಬೇಕು ಎಂಬ ಗೊತ್ತುವಳಿಯ ಬಗ್ಗೆ ಮಾತಾಡುತ್ತಾ 'ಹಿಂದೂಸ್ತಾನದೊಡನೆ ವಿಲೀನವಾಗಬೇಕೋ? ಅಥವಾ ಕಾಬೂಲಿನೊಡನೆ ವಿಲೀನವಾಗಬೇಕೋ?' ಎಂಬುದನ್ನು ನಿರ್ಧರಿಸಲು ಗಡಿನಾಡು ಪ್ರಾಂತ್ಯದ ಮುಸ್ಲಿಮರಿಗೆ ಸ್ವಯಂನಿರ್ಣಯಾಧಿಕಾರವನ್ನು ನೀಡಬೇಕು ಎಂದು ಸೂಚಿಸಿದನೆಂದು ತಿಳಿದುಬರುತ್ತದೆ.[೧] ಕಾನ್‌ಸ್ಟಾಂಟಿನೋಪಲ್‌ನಿಂದ ದೆಹಲಿಗೆ ನೇರಗೆರೆಯನ್ನು ಎಳೆದರೆ, ಅದು ಶಹರಾನಪುರದವರೆಗೆ ಮಹಮ್ಮದೀಯ ಮೊಗಸಾಲೆಯನ್ನು ಅನಾವರಣ ಮಾಡುತ್ತದೆ ಎಂದು ಯಾರೋ ಆಂಗ್ಲನೊಬ್ಬ ಹೇಳಿದ್ದನೆಂಬುದನ್ನು ಆತ ಉದಾಹರಿಸಿದ್ದಾನೆ. ಶ್ರೀಯುತ ಸಮರ್ಥ್ ಸೂಚಿಸಿರುವ ಸಾಕ್ಷೀದಾರನ ಪ್ರಮಾಣದಿಂದ ಶ್ರೀಯುತ ಮಹಮ್ಮದಾಲಿಗೆ ಇಡೀ ಪಾಕಿಸ್ತಾನದ ಯೋಜನೆ ಗೊತ್ತಿರಲು ಸಾಧ್ಯ ಎಂಬುದು ಸೂಚಿತವಾಗುತ್ತದೆ. ಹಾಗೆಯೇ ಆತ ಎಚ್ಚರದಪ್ಪಿದ ಕ್ಷಣದಲ್ಲಿ, ಸಾಕ್ಷೀದಾರ ಹೇಳಲು ಮರೆತ– ಆಫ್ಘಾನಿಸ್ಥಾನದೊಡನೆ ಪಾಕಿಸ್ತಾನವನ್ನು ಅಂತಿಮವಾಗಿ ಸೇರಿಸಬೇಕೆಂಬ ವಿಷಯವನ್ನು ಪ್ರಕಟಿಸಿ ಬಿಟ್ಟಿದ್ದಾನೆ.

೧೯೨೪ರಿಂದ ೩೦ರವರೆಗೆ ಈ ಹಂಚಿಕೆಯ ನಿಟ್ಟಿನಲ್ಲಿ ಮುಸ್ಲಿಮರು ಏನನ್ನೂ ಹೇಳಲೂ ಇಲ್ಲ, ಮಾಡಲೂ ಇಲ್ಲ. ಮುಸ್ಲಿಮರು ಅದನ್ನು ಹೂತುಬಿಟ್ಟರೆಂದು ತೋರುತ್ತದೆ. ಆದರೆ ಪಾರಂಪರಿಕ ಏಕರಾಷ್ಟ್ರ ಸಿದ್ಧಾಂತದ ಆಧಾರದ ಮೇಲೆ, ವಿಭಜನೆಯಿಂದ ಮಹತ್ವ ಪಡೆದುಕೊಳ್ಳುವ ರಕ್ಷಣೋಪಾಯಗಳ ಬಗೆಗೆ ಹಿಂದೂಗಳೊಡನೆ ಮಾತುಕತೆ ನಡೆಸಿದರು. ಆದರೆ ೧೯೩೦ರಲ್ಲಿ ದುಂಡು ಮೇಜಿನ ಪರಿಷತ್ತು ನಡೆಯುತ್ತಿರುವಾಗ, ಅದು ಪಾಕಿಸ್ತಾನದ ಯೋಜನೆಯನ್ನು ಆದರಿಸುವಂತೆ ಮಾಡಲು, ಕೆಲವು ಮುಸ್ಲಿಮರು ತಾವೇ ಒಂದು ಸಮಿತಿಯನ್ನು ಮಾಡಿಕೊಂಡು, ಅದರ ಕೇಂದ್ರ ಕಾರ್ಯಸ್ಥಾನವನ್ನು ಲಂಡನ್ನಿನಲ್ಲಿ ಸ್ಥಾಪಿಸಿಕೊಂಡಿದ್ದರು. ಈ ಸಮಿತಿಯು ಪಾಕಿಸ್ತಾನವನ್ನು ಬೆಂಬಲಿಸುವಂತೆ ಕರಪತ್ರಗಳನ್ನು ಹಾಗೂ ಸುತ್ತೋಲೆಗಳನ್ನು ಮುದ್ರಿಸಿ ದುಂಡು ಮೇಜು ಪರಿಷತ್ತಿನ ಸದಸ್ಯರಿಗೆಲ್ಲ ಕಳಿಸಿಕೊಟ್ಟಿತು. ಆಗಲೂ ಕೂಡ ಅದರ ಬಗ್ಗೆ ಯಾರೂ ಆಸ್ಥೆ ವಹಿಸಲಿಲ್ಲ. ದುಂಡುಮೇಜು ಪರಿಷತ್ತಿನ ಮುಸ್ಲಿಂ ಸದಸ್ಯರೂ ಸಹ ಯಾವ ರೀತಿಯಿಂದಲೂ ಅದನ್ನು ಪ್ರೋತ್ಸಾಹಿಸಲಿಲ್ಲ.[೨]

ಪ್ರಾರಂಭದಲ್ಲಿ ಮುಸ್ಲಿಮರು ಈ ನವನಿಯತಿ ನಿಜವಾಗಲಾರದ ಕೇವಲ ಕನಸೆಂದು ಭಾವಿಸಿರಲು ಸಾಧ್ಯ. ಆಮೇಲೆ ಅದು ನಿಜವಾಗಲು ಸಾಧ್ಯ ಎಂದು ಭಾವಿಸಿದಾಗ ಅದರ ಬಗ್ಗೆ ಯಾವುದೇ ತಕರಾರನ್ನು ಎತ್ತಲಿಲ್ಲ. ಏಕೆಂದರೆ ಆ ಹಂಚಿಕೆಗೆ ಅನುಮತಿ ನೀಡುವಂತೆ ಹಿಂದೂಗಳನ್ನಾಗಲೀ ಬ್ರಿಟಿಷರನ್ನಾಗಲೀ ಬಲಾತ್ಕರಿಸಲು ತಾವು ಸಾಕಷ್ಟು ಸಂಘಟಿತರಾಗಲಿಲ್ಲ ಎಂದು ಯೋಚಿಸಿರಲು ಸಾಧ್ಯ. ದುಂಡು ಮೇಜು ಪರಿಷತ್ತಿನಲ್ಲಿ ಮುಸ್ಲಿಮರು ಪಾಕಿಸ್ತಾನಕ್ಕಾಗಿ ಏಕೆ ಒತ್ತಾಯಿಸಲಿಲ್ಲ ಎಂಬುದನ್ನು ವಿವರಿಸಲು ಕಷ್ಟ. ಪ್ರಾಯಶಃ

---

೧. ಪರಾಮರ್ಶೆಗೆ ನೋಡಿ: ೧೯೨೫ ಏಪ್ರಿಲ್ ೧೧ರಲ್ಲಿ ಕಲ್ಕತ್ತದಲ್ಲಿ ಸಮಾವೇಶಗೊಂಡಿದ್ದ ಹಿಂದೂ ಮಹಾಸಭಾ ಅಧಿವೇಶನದಲ್ಲಿ ಮಾಡಿದ ಲಾಲಾ ಲಜಪತರಾಯರ ಅಧ್ಯಕ್ಷೀಯ ಭಾಷಣ. ಇಂಡಿಯನ್ ಕ್ವಾರ್ಟರ್ಲೀ ರಿಕಾರ್ಡ್, ೧೯೨೫, ಸಂಪುಟ ೧, ಪುಟ ೩೭೯.

೨. ಒಂದು ಸರ್ವಾನ್ವಯ ಕೇಂದ್ರ ಸರ್ಕಾರದ ವಿರೋಧವೇ ಪಾಕಿಸ್ತಾನ ಯೋಜನೆಯ ಪ್ರಮುಖ ಲಕ್ಷಣ ಎನ್ನುವುದಾದರೆ, ಆಗ ಅದನ್ನು ಹೆಸರಿಸದೆಯೇ ಬೆಂಬಲಿಸಿದ ದುಂಡು ಮೇಜು ಪರಿಷತ್ತಿನ ಏಕಮೇವ ಸದಸ್ಯರೆಂದರೆ ಸರ್ ಮಹಮದ್ ಇಕ್ಬಾಲ್; ದುಂಡು ಮೇಜು ಪರಿಷತ್ತಿನ ಮೂರನೇ ಅಧಿವೇಶನದಲ್ಲಿ ಈತ ಹಿಂದೂಸ್ತಾನಕ್ಕೆ ಕೇಂದ್ರ ಸರ್ಕಾರವಿರಬಾರದೆಂದೂ, ಎಲ್ಲ ಪ್ರಾಂತ್ಯಗಳೂ ಸ್ವಯಮಾಧಿಕಾರವುಳ್ಳ ಸ್ವತಂತ್ರ ಅಧಿಪತ್ಯಗಳಾಗಿ ಲಂಡನ್ನಿನ ಸೆಕ್ರೆಟರಿ ಆಫ್ ಸ್ಟೇಟ್‌ನೊಂದಿಗೆ ಸಂಪರ್ಕ ಹೊಂದಿರಬೇಕೆಂದೂ ತನ್ನ ಅಭಿಪ್ರಾಯ ವ್ಯಕ್ತಪಡಿಸಿದ.

ಈ ಯೋಜನೆ ಬ್ರಿಟಿಷರಿಗೆ ಕೋಪ ಹುಟ್ಟಿಸುತ್ತದೆ* ಎಂದು ಅವರು ಭಾವಿಸಿರಬೇಕು. ಹಿಂದೂಗಳು ಹಾಗೂ ಮುಸ್ಲಿಮರ ನಡುವಿನ ಹದಿನಾಲ್ಕು ಅಂಶಗಳ ವಿವಾದದ ತೀರ್ಮಾನಕ್ಕಾಗಿ ಬ್ರಿಟಿಷರನ್ನು ಓಲೈಸಬೇಕಾಗಿದ್ದುದರಿಂದ ಪಕ್ಕಾ ರಾಜನೀತಿಜ್ಞರಾದ ಮುಸ್ಲಿಮರು, ಬಿಸ್ಮಾರ್ಕನ ಹೇಳಿಕೆಯಾದ 'ರಾಜಕೀಯ ಯಾವಾಗಲೂ ಶಕ್ಯತೆಯ ಕ್ರೀಡೆ' ಎಂಬುದನ್ನು ಸಂಪೂರ್ಣವಾಗಿ ಮನಗಂಡು, ಹದಿನಾಲ್ಕು ಅಂಶಗಳ ವಿವಾದದ ಬಗೆಗೆ ತಮ್ಮ ಪರವಾಗಿ ಬ್ರಿಟಿಷರ ತೀರ್ಮಾನವಾಗುವವರೆಗೆ ಪ್ರತಿಭಟನೆಯ ಬೆದರಿಕೆ ಹಾಕಬಾರದೆಂದು ಸಾವಧಾನದಿಂದ ಕಾಯಲು ಇಷ್ಟಪಟ್ಟರು.

ಪಾಕಿಸ್ತಾನ ಯೋಜನೆಯನ್ನು ಮುಂದಿಡಲು ನಿಧಾನ ಮಾಡಿದ್ದಕ್ಕೆ ಬೇರೊಂದು ಕಾರಣವೂ ಇದೆ. ತೀರ ಇತ್ತೀಚಿನವರೆಗೂ ಮುಸ್ಲಿಮರಿಗೆ ಪಾಕಿಸ್ತಾನ ಸ್ಥಾಪನೆಗಿರುವ ತಾತ್ತ್ವಿಕ ಸಮರ್ಥನೆ ಗೊತ್ತಿರಲಿಲ್ಲ ಎಂಬುದು ಹೆಚ್ಚು ಸಂಭವನೀಯ. ಎಷ್ಟೇ ಹೇಳಿದರೂ ಹಿಂದೂಸ್ತಾನದ ರಾಜಕೀಯ ಚದುರಂಗ ಮಣೆಯ ಮೇಲೆ ಪಾಕಿಸ್ತಾನದ ನಡಿಗೆ ಅಲ್ಪವಾದುದಲ್ಲ; ಅದು ರಾಷ್ಟ್ರ ವಿಭಜನೆಯನ್ನು ಒಳಗೊಂಡಿರುವುದರಿಂದ ಅತಿ ಮಹತ್ವದ ನಡಿಗೆಯೇ. ಅದರ ವಕೀಲಿ ವಹಿಸಲು ಮುನ್ನುಗ್ಗುವ ಸಾಹಸಕ್ಕೆ ಕೈ ಹಾಕಿದ ಯಾವ ಮುಸ್ಲಿಮನಿಗಾದರೂ ಅಂಥ ಹಾನಿಕಾರಕ ಯೋಜನೆಯನ್ನು ಬೆಂಬಲಿಸಲು ಇರುವಂತಹ ನೈತಿಕ ಮತ್ತು ಸಾತ್ತ್ವಿಕ ಸಮರ್ಥನೆಯಾದರೂ ಏನು ಎಂಬ ಪ್ರಶ್ನೆಯನ್ನು ಕೇಳಲಾಗುತ್ತಿತ್ತು. ಪಾಕಿಸ್ತಾನದ ಪ್ರತ್ಯೇಕ ಅಸ್ತಿತ್ವಕ್ಕಿರುವ ತಾತ್ತ್ವಿಕ ಸಮರ್ಥನೆಯಾದರೂ ಏನು ಎಂಬುದನ್ನು ಕಂಡುಕೊಳ್ಳದಿರುವುದರ ಕಾರಣ ಅಷ್ಟೇ ಸಮಪ್ರಮಾಣದಲ್ಲಿ ಅರ್ಥವಾಗುವಂಥದು, ಅದಕ್ಕಾಗಿಯೆ ಮುಸ್ಲಿಂ ನಾಯಕರು ಹಿಂದೂಸ್ತಾನದ ಮುಸ್ಲಿಮರನ್ನು ಕುರಿತು ಒಂದು ಕೋಮು ಅಥವಾ ಅಲ್ಪಸಂಖ್ಯಾತರು ಎಂದು ಹೇಳುತ್ತಾ ಬಂದಿದ್ದಾರೆ. ಅವರು ಎಂದೂ ಮುಸ್ಲಿಮರನ್ನು ಜನಾಂಗ ಎಂದು ಹೇಳಿಲ್ಲ. ಕೋಮು ಮತ್ತು ಜನಾಂಗದ ನಡುವಿನ ಭಿನ್ನತೆ ತೀರಾ ತೆಳುವು, ಅದು ಬೇರೆ ರೀತಿಯಾದರೂ ಸಹ, ಎಲ್ಲ ಸಂದರ್ಭಗಳಲ್ಲೂ ಅಷ್ಟು ಗಮನಾರ್ಹ ವಿಷಯವಾಗುವುದಿಲ್ಲ. ಪ್ರತಿಯೊಂದು ರಾಷ್ಟ್ರವೂ ಹೆಚ್ಚೂ ಕಡಿಮೆ ಸಂಘಟಿತ ರಾಷ್ಟ್ರ. ಬಹುತೇಕ ರಾಷ್ಟ್ರಗಳಲ್ಲಿ ಭಾಷೆಗಳು, ಧಾರ್ಮಿಕ ನಿಯಮಗಳು ಮತ್ತು ಸಾಮಾಜಿಕ ಪದ್ಧತಿಗಳಲ್ಲಿ ವ್ಯತ್ಯಾಸವಿರುವ, ಸಡಿಲ ಸೇರ್ಪಡೆಯ ತಂಡಗಳಿಂದ ಸಮುದಾಯವಾಗಿ ಮಾರ್ಪಟ್ಟ ಭಾರೀ ವೈವಿಧ್ಯತೆಯ ಜನಸಂಖ್ಯೆ ಇರುತ್ತದೆ. ಯಾವುದೇ ರಾಷ್ಟ್ರ ಎಂದೂ ಏಕಸಮಾಜವಾಗಿರುವುದಿಲ್ಲ. ಎಲ್ಲವನ್ನೂ ಒಳಗೊಂಡಿರುವುದಿಲ್ಲ. ಯೋಚನೆ ಹಾಗೂ ಕ್ರಿಯೆಯ ವ್ಯಾಪಕ ಒಡಲಾಗಿರುವುದಿಲ್ಲ. ಪರಿಸ್ಥಿತಿ ಹೀಗಿರುವಾಗ ಒಂದು ಗುಂಪು– ಜನಾಂಗ ಎಂದು ಕರೆಸಿಕೊಳ್ಳುವ ಅಂಶಗಳು ತನ್ನೊಳಗೆ ಅಡಕವಾಗಿದ್ದರೂ ಸಹ– ತಪ್ಪಾಗಿ ತನಗೆ ತಾನೇ ಒಂದು ಕೋಮು ಎಂದು ಕರೆದುಕೊಳ್ಳುತ್ತದೆ. ಎರಡನೆಯದಾಗಿ, ಈಗಾಗಲೇ ಪ್ರಸ್ತಾಪಿಸಿರುವಂತೆ, ಜನಾಂಗ ಎಂದು ಕರೆಸಿಕೊಳ್ಳಲು ಬೇಕಾದ ಎಲ್ಲ ಅಂಶಗಳು ಇದ್ದರೂ ಸಹ, ಜನರು ರಾಷ್ಟ್ರೀಯ ಪ್ರಜ್ಞೆಯನ್ನು ಗರ್ಭೀಕರಿಸಿಕೊಳ್ಳದೆ ಇರಬಹುದು.

ಮತ್ತೆ ಅಲ್ಪಸಂಖ್ಯಾತರ ಹಕ್ಕುಗಳು ಮತ್ತು ರಕ್ಷಣೆಗಳ ಈ ವ್ಯತ್ಯಾಸ ಅಮುಖ್ಯ. ಅಲ್ಪಸಂಖ್ಯಾತರು ಒಂದು ಸಮುದಾಯವಾಗಿರಲಿ ಅಥವಾ ಒಂದು ದೇಶವಾಗಿರಲಿ ಅವರು ಅಲ್ಪಸಂಖ್ಯಾತರೇ. ಅಮುಖ್ಯ ಜನಾಂಗದ ಕ್ಷೇಮಕ್ಕಾಗಿ ಕೈಗೊಳ್ಳುವ ರಕ್ಷಣೆಗಳಿಗೂ, ಲಭ್ಯ ದೇಶರಕ್ಷಣೆಗೂ  ಅಂಥ ಹೆಚ್ಚಿನ ವ್ಯತ್ಯಾಸವೇನೂ

* ಅದರ ವಿರೋಧವಾಗಿದ್ದ ಬ್ರಿಟಿಷ್ ಅಧಿಕಾರಿಗಳೊಂದಿಗೆ ಖಾಸಗಿಯಾಗಿ ಚರ್ಚಿಸಿದರೆಂದು ಹೇಳಲಾಗುತ್ತಿದೆ. ಅವರ ಅಸಂತೋಷವನ್ನು ಕಟ್ಟಿಕೊಳ್ಳಬೇಕಾಗಬಹುದೆಂಬ ಭಯದಿಂದ ಮುಸ್ಲಿಮರು ಅದಕ್ಕೆ ಒತ್ತಾಯಿಸಲಿಲ್ಲವೆಂಬುದು ಸಾಧ್ಯ.

ಇರುವುದಿಲ್ಲ. ಬಹುಸಂಖ್ಯಾತರ ದಬ್ಬಾಳಿಕೆಯ ವಿರುದ್ಧ ರಕ್ಷಣೆಯನ್ನು ಕೇಳಿದಾಗ, ಅಲ್ಪಸಂಖ್ಯಾತರ ಮೇಲೆ ಬಹುಸಂಖ್ಯಾತರ ದಬ್ಬಾಳಿಕೆಯ ಸಾಧ್ಯತೆ ಒಮ್ಮೆ ಸ್ಥಾಪಿತವಾದಾಗ, ರಕ್ಷಣೆಗಳನ್ನು ಕೇಳಿದ ಅಲ್ಪಸಂಖ್ಯಾಥರು ಒಂದು ಜಾತಿಯೇ ಅಥವಾ ಜನಾಂಗವೇ ಎಂಬುದು ಅಗಣ್ಯವಾಗುತ್ತದೆ. ಕೋಮು ಮತ್ತು ಜನಾಂಗದ ಮಧ್ಯೆ ಭಿನ್ನತೆ ಇಲ್ಲವೆಂದಲ್ಲ. ನಿಜವಾಗಿ ವ್ಯತ್ಯಾಸ ಭಾರೀ ದೊಡ್ಡದೇ. ಒಂದು ಕೋಮು, ಬೇರೆ ಮುಖ್ಯ ಅಥವಾ ಅಮುಖ್ಯ ಕೋಮುಗಳೊಡನೆ ಎಷ್ಟೇ ಭಿನ್ನವಾಗಿದ್ದರೂ, ಎಷ್ಟೇ ವಿರೋಧವಾಗಿದ್ದರೂ, ಎಲ್ಲರ ಅಂತಿಮ ಹಣೆಪಾಡಿನ ದೃಷ್ಟಿಯಿಂದ, ಅದು ಉಳಿದವುಗಳೊಡನೆ ಒಂದಾಗಿ ಬಿಡುತ್ತದೆ– ಎಂದು ಸಂಗ್ರಹಿಸಿ ಹೇಳಬಹುದು. ಮತ್ತೊಂದು ಸಂದರ್ಭ ಯೋಚಿಸಿದರೆ, ಜನಾಂಗ, ರಾಷ್ಟ್ರದ ಅನ್ಯ ಘಟಕಗಳಿಂದ ಭಿನ್ನವಷ್ಟೇ ಅಲ್ಲ, ರಾಷ್ಟ್ರದ ಬೇರೆ ಘಟಕಾಂಶಗಳು ಆದರಿಸುವ ಅಂತಿಮ ವಿಧಿಗೆ ವಿರುದ್ಧವಾದ ಭಿನ್ನ ವಿಧಿಯನ್ನು ನಂಬುತ್ತದೆ ಹಾಗೂ ಪೋಷಿಸುತ್ತದೆ. ಈ ವ್ಯತ್ಯಾಸ ನನಗೆ ಗಂಭೀರವಾಗಿ ತೋರುತ್ತದೆ. ನನಗೆ ನಾನೇ ಹೇಳಿಕೊಳ್ಳುವುದಾದರೆ, ಜನಾಂಗದಿಂದ ಕೋಮನ್ನು ಪ್ರತ್ಯೇಕಿಸುವ ಒಂದು ಪರೀಕ್ಷೆಯಾಗಿ ಅದನ್ನು ಸ್ವೀಕರಿಸಲು ನಾನು ಹಿಂದುಮುಂದು ನೋಡಲಾರೆ. ಯಾವ ಜನರು, ಭಿನ್ನಾಭಿಪ್ರಾಯಗಳಿದ್ದಾಗ್ಯೂ, ತಮಗೂ ತಮ್ಮ ವಿರೋಧಿಗಳಿಗೂ ಸಮಾನ ವಿಧಿಯನ್ನು ಅಂಗೀಕರಿಸುವರೋ ಅವರು ಕೋಮು ಎನ್ನಿಸಿಕೊಳ್ಳುತ್ತಾರೆ. ಯಾವ ಜನರು, ಉಳಿದವರಿಂದ ಭಿನ್ನರಾಗಿರುತ್ತಾರೋ ಹಾಗೂ ಉಳಿದವರು ಅಂಗೀಕರಿಸಿದ ವಿಧಿಯನ್ನು ತಾವು ಅಂಗೀಕರಿಸಲು ನಿರಾಕರಿಸುತ್ತಾರೋ ಅವರು ಜನಾಂಗ ಎನ್ನಿಸಿಕೊಳ್ಳುತ್ತಾರೆ. ಹಿಂದೂಗಳಿಗೆ ಸಂಬಂಧಿಸಿದಂತೆ ಅಸ್ಪೃಶ್ಯರು, ಕ್ರೈಸ್ತರು ಮತ್ತು ಪಾರ್ಸಿಗಳು ಏತಕ್ಕೆ ಕೋಮು ಎನ್ನಿಸಿಕೊಳ್ಳುತ್ತಾರೆ ಮತ್ತು ಏತಕ್ಕೆ ಮುಸ್ಲಿಮರು ಜನಾಂಗ ಎನ್ನಿಸಿಕೊಳ್ಳುತ್ತಾರೆ ಎಂಬುದರ ವಿವರಣೆ ಸಮಾನ ವಿಧಿಯ ಸ್ವೀಕಾರ ಅಥವಾ ಅಸ್ವೀಕಾರವನ್ನು ಅವಲಂಬಿಸಿರುತ್ತದೆ. ಹೀಗೆ ರಾಷ್ಟ್ರ ಶರೀರದ ಸಾಮರಸ್ಯದ ದೃಷ್ಟಿಯಿಂದ ವ್ಯತ್ಯಾಸ ಹೆಚ್ಚು ಸಜೀವ ಲಕ್ಷಣವಾಗಿದೆ– ಅಂತಿಮ ವಿಧಿಯಲ್ಲಿ ವ್ಯತ್ಯಾಸವೂ ಒಂದು ಎಂಬಂತೆ. ಈ ವ್ಯತ್ಯಾಸದ ಕ್ರಿಯಾತ್ಮಕ ಲಕ್ಷಣ ನಿರಾಕರಿಸಲಾಗದಂಥದು. ಅದು ಪಟ್ಟುಹಿಡಿದರೆ, ರಾಷ್ಟ್ರವನ್ನು ಚೂರುಚೂರಾಗಿ ಸೀಳಿ ಹಾಕುವ ಪರಿಣಾಮವನ್ನು ಪಡೆಯದಿರದು. ಆದರೆ, ರಕ್ಷಣಾವಿಧಾನಗಳಿಗೆ ಸಂಬಂಧಿಸಿದಂತೆ ಜನಾಂಗ ಮತ್ತು ಕೋಮುಗಳ ಮಧ್ಯೆ ಯಾವುದೇ ಬಗೆಯ ವ್ಯತ್ಯಾಸವಿರಲಾರದು. ಜನಾಂಗ ಪಡೆದಷ್ಟೆ ಹಕ್ಕುಗಳು ಮತ್ತು ರಕ್ಷಣೆಗಳನ್ನು ಕೋಮೂ ಪಡೆಯಲು ಅರ್ಹವಾಗಿದೆ.

ಪಾಕಿಸ್ತಾನದ ಅಸ್ತಿತ್ವಕ್ಕೆ ತಾತ್ತ್ವಿಕ ಸಮರ್ಥನೆಯನ್ನು ಕಂಡುಕೊಳ್ಳುವಲ್ಲಿ ತಡವಾದದ್ದರ ನಿಜವಾದ ಕಾರಣವೆಂದರೆ ಮುಸ್ಲಿಂ ನಾಯಕರು ಮುಸ್ಲಿಮರ ಬಗೆಗೆ ಮಾತಾಡುವಾಗಲೆಲ್ಲ 'ಮುಸ್ಲಿಂ ಕೋಮು, ಅಲ್ಪಸಂಖ್ಯಾತ ಮುಸ್ಲಿಮರು' ಎಂದು ಹಾಡಿದ್ದೇ ಹಾಡುವ ಚಾಳಿಗೆ ಅಂಟಿಕೊಂಡಿರುವುದು. ಈ ಪರಿಭಾಷೆಯ ಬಳಕೆ ಅವರನ್ನು ತಪ್ಪು ದಾರಿಗೆ ಎಳೆದೊಯ್ದಿದೆ ಮತ್ತು ನಿರ್ಜೀವ ಅಂತ್ಯಕ್ಕೆ ತಂದಿಟ್ಟಿದೆ. ಅವರು ತಮ್ಮನ್ನು ತಾವೇ ಅಲ್ಪಸಂಖ್ಯಾತ ಕೋಮು ಎಂದು ಒಪ್ಪಿಕೊಂಡಿರುವುದರಿಂದ, ರಕ್ಷಣೆ ಕೇಳುವುದರ ಹೊರತು ತಮಗೆ ಬೇರೇನೂ ಉಳಿದಿಲ್ಲ ಎಂದು ಅವರು ಭಾವಿಸಿದ್ದಾರೆ ಮತ್ತು ಅರ್ಧ ಶತಮಾನದಿಂದ ತಮ್ಮನ್ನು ತಾವು ಆ ವಾಸ್ತವಕ್ಕೆ ಬಂಧಿಸಿಕೊಂಡಿದ್ದಾರೆ. ತಾವು ಅಲ್ಪಸಂಖ್ಯಾತರು ಎಂದು ಅಂಗೀಕರಿಸುವಲ್ಲಿಗೇ ನಿಲ್ಲಬೇಕಾಗಿಲ್ಲ ಎಂಬುದು ಅವರ ತಲೆಗೆ ಹೊಳೆದಿದ್ದರೆ, ಅಲ್ಪಸಂಖ್ಯಾತ ಜನಾಂಗಕ್ಕೂ ಅಲ್ಪಸಂಖ್ಯಾತ ಕೋಮಿಗೂ ಇರುವ ವ್ಯತ್ಯಾಸವನ್ನು ತೋರಿಸಲು ಇನ್ನೂ ಮುಂದಕ್ಕೆ ಸಾಗಿದ್ದರೆ, ಪಾಕಿಸ್ತಾನದ ತಾತ್ತ್ವಿಕ ಸಮರ್ಥನೆಯನ್ನು ಕಂಡುಕೊಳ್ಳುವ ದಾರಿಗೆ ಬಂದು ಸೇರಿದಂತಾಗುತ್ತಿತ್ತು. ಅಂಥ ಸಂದರ್ಭದಲ್ಲಿ ಪಾಕಿಸ್ತಾನ, ತನ್ನೆಲ್ಲ ಸಂಭವನೀಯತೆಯಿಂದ, ಇದಕ್ಕಿಂತ ಮೊದಲೇ ಅಸ್ತಿತ್ವ ಪಡೆದುಕೊಳ್ಳುತ್ತಿತ್ತು.

ಅದೆಲ್ಲ ಹಾಗಿರಲಿ, ಮುಸ್ಲಿಮರು ಸಂಪೂರ್ಣ ಪರಿವರ್ತನೆಗೆ ಒಳಗಾದರು. ಆ ಪರಿವರ್ತನೆ ಅಪರಾಧಿ ಪ್ರೇರಣೆಯಿಂದ ಉಂಟಾದುದಲ್ಲ; ತಮ್ಮ ನಿಜವಾದ ಅಂತಿಮ ವಿಧಿ ಯಾವುದೆಂದು ಕಂಡುಕೊಂಡದ್ದರಿಂದ ಉಂಟಾದದ್ದು ಎಂಬ ಸತ್ಯ ಉಳಿದುಕೊಳ್ಳುತ್ತದೆ. ಕೆಲವರಿಗೆ ಈ ಅನಿರೀಕ್ಷಿತ ಪರಿವರ್ತನೆ ಆಘಾತವನ್ನುಂಟುಮಾಡಿರಬಹುದು. ಕಳೆದ ಇಪ್ಪತ್ತು ವರ್ಷಗಳಿಂದ ಹಿಂದೂ ಮುಸ್ಲಿಂ ರಾಜಕೀಯ ಶಿಕ್ಷಣವನ್ನು ಅಭ್ಯಾಸ ಮಾಡಿದವರಿಗೆ ಎರಡಾಗಿ ಭಾಗವಾಗುವ ಈ ಪರಿವರ್ತನೆ, ಹಾದಿ ಹಿಡಿದು ಬರುತ್ತಿತ್ತು ಎಂಬ ಭಾವನೆಯನ್ನು ಒಪ್ಪಿಕೊಳ್ಳದೆ ಇರಲಾಗುವುದಿಲ್ಲ. ಹಿಂದೂ ಮುಸ್ಲಿಂ ರಾಜಕೀಯ ಮಾರ್ಗವನ್ನು ದುರಂತ ಮತ್ತು ನಿಮಿತ್ತಗಳ ಸಮಾನಾಂತರತೆಯಿಂದ ಗುರುತಿಸಲಾಗಿದೆ. ಹಿಂದೂಗಳು ಮತ್ತು ಮುಸ್ಲಿಮರು ಸಮಾನಾಂತರ ಪಥಗಳಲ್ಲಿ ಹೆಜ್ಜೆ ಹಾಕುತ್ತಾ ಬಂದಿದ್ದಾರೆ. ಒಂದೇ ದಿಕ್ಕಿನಲ್ಲಿ ಸಾಗಿದ್ದಾರೆ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಒಂದೇ ರಸ್ತೆಯಲ್ಲಿ ಮಾತ್ರ ಪ್ರಯಾಣಿಸಿಲ್ಲ. ೧೮೮೫ರಲ್ಲಿ ಬ್ರಿಟಿಷರ ವಿರುದ್ಧ ಭಾರತೀಯರ ರಾಜಕೀಯ ಹಕ್ಕುಗಳನ್ನು ಎತ್ತಿ ಹಿಡಿದು ಸಮರ್ಥಿಸಲು ಹಿಂದೂಗಳು ಕಾಂಗ್ರೆಸ್ಸನ್ನು ಪ್ರಾರಂಭಿಸಿದರು. ಕಾಂಗ್ರೆಸ್ ಸೇರುವಂತೆ ಹಿಂದೂಗಳು ಪುಸಲಾಯಿಸಿದರೂ ಮುಸ್ಲಿಮರು ಮರುಳಾಗದೆ ಅದನ್ನು ತಿರಸ್ಕರಿಸಿದರು. ೧೮೮೫ರಿಂದ ೧೯೦೬ರವರೆಗಿನ ಅವಧಿಯಲ್ಲಿ ಮುಸ್ಲಿಮರು ಹಿಂದೂ ರಾಜಕೀಯ ಪ್ರವಾಹದ ಹೊರಗೇ ಉಳಿದರು. ೧೯೦೬ರಲ್ಲಿ ಮುಸ್ಲಿಂ ಕೋಮು ರಾಜಕೀಯ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾದ ಅವಶ್ಯಕತೆಯನ್ನು ಮನಗಂಡಿತು. ಆಗಲೂ ಕೂಡ, ಮುಸ್ಲಿಂ ರಾಜಕೀಯ ಜೀವನ ಪ್ರವಹಿಸಲು ತಮ್ಮದೇ ಆದ ಪ್ರತ್ಯೇಕ ಕಾಲುವೆಯನ್ನು ತೋಡಿದರು. ಮುಸ್ಲಿಂ ಲೀಗ್ ಎಂಬ ಪ್ರತ್ಯೇಕ ರಾಜಕೀಯ ಸಂಘ ಈ ಪ್ರವಾಹವನ್ನು ನಿಯಂತ್ರಿಸುತ್ತಿತ್ತು. ಮುಸ್ಲಿಂ ಲೀಗ್ ಸ್ಥಾಪನೆಯಾದಾಗಿನಿಂದಲೂ ಮುಸ್ಲಿಂ ರಾಜಕೀಯದ ಪ್ರವಾಹ ಈ ಪ್ರತ್ಯೇಕ ಕಾಲುವೆಯಲ್ಲಿ ಹರಿಯಿತು. ಕೆಲವು ಅಪೂರ್ವ ಸಂದರ್ಭಗಳನ್ನುಳಿದು ಕಾಂಗ್ರೆಸ್ ಮತ್ತು ಲೀಗ್ ಪ್ರತ್ಯೇಕವಾಗಿಯೇ ಜೀವಿಸಿದವು; ಪ್ರತ್ಯೇಕವಾಗಿಯೇ ಕೆಲಸ ಮಾಡಿದವು. ಅವರ ಉದ್ದೇಶಗಳು ಮತ್ತು ಮನೋಭಿಪ್ರಾಯಗಳು ಯಾವಾಗಲೂ ಒಂದಾಗುತ್ತಿರಲಿಲ್ಲ. ಒಂದರ ನೆರಳು ಮತ್ತೊಂದರ ಮೇಲೆ ಬೀಳದಿರಲೆಂದು ಒಂದೇ ಜಾಗದಲ್ಲಿ ವಾರ್ಷಿಕ ಅಧಿವೇಶನಗಳು ಜರುಗದಂತೆ ನೋಡಿಕೊಳ್ಳುತ್ತಿದ್ದರು. ಕಾಂಗ್ರೆಸ್ ಮತ್ತು ಲೀಗ್ ಪರಸ್ಪರ ಸಂಧಿಸಿಲ್ಲ ಎಂದು ಇದರರ್ಥವಲ್ಲ. ಮಾತುಕತೆಗಾಗಿ ಎರಡೂ ಸಂಧಿಸಿವೆ; ಕೆಲವು ವೇಳೆ ಸಫಲವಾಗಿವೆ, ಹೆಚ್ಚಿನ ವೇಳೆ ವಿಫಲವಾಗಿವೆ. ೧೯೧೬ರಲ್ಲಿ ಲಖನೌನಲ್ಲಿ ಅವರು ಸಂಧಿಸಿದ್ದರು. ಅವರ ಪ್ರಯತ್ನಕ್ಕೆ ಸಫಲತೆಯ ಕಿರೀಟ ಲಭಿಸಿತ್ತು. ೧೯೨೫ರಲ್ಲಿ ಅವರು ಸಂಧಿಸಿದ್ದರು, ಸಫಲರಾಗಲಿಲ್ಲ. ೧೯೨೮ರಲ್ಲಿ ಮುಸ್ಲಿಮರ ಒಂದು ಗುಂಪು ಕಾಂಗ್ರೆಸ್ಸನ್ನು ಸಂಧಿಸಲು ಸಿದ್ಧವಾಗಿತ್ತು. ಇನ್ನೊಂದು ಗುಂಪು ಸಂಧಿಸಲು ನಿರಾಕರಿಸಿತು. ಅದು ಬ್ರಿಟಿಷರನ್ನು ಅವಲಂಬಿಸಲು ಒಲವು ತೋರಿತು. ಮುಖ್ಯಾಂಶವೆಂದರೆ ಅವರು ಸಂಧಿಸಿದರು. ಆದರೆ ಒಂದಾಗಲಿಲ್ಲ. ಖಿಲಾಫತ್ ಚಳುವಳಿಯ ಸಂದರ್ಭದಲ್ಲಿ ಮಾತ್ರ ಎರಡೂ ಕಾಲುವೆಗಳ ಜಲ ತಮ್ಮ ಪೂರ್ವನಿರ್ಧರಿತ ಮಾರ್ಗವನ್ನು ಬಿಟ್ಟು ಒಂದು ಪ್ರವಾಹದಂತೆ ಒಂದೇ ಕಾಲುವೆಯಲ್ಲಿ ಹರಿಯಿತು. ದೇವರೇ ಕೂಡಿಸಿದ ಈ ನೀರನ್ನು ಯಾವುದೂ ಬೇರೆ ಮಾಡಲಾರದು ಎಂದು ನಂಬಲಾಗಿತ್ತು. ಆದರೆ ಆ ನಂಬಿಕೆ ಸುಳ್ಳಾಯಿತು. ಆ ಎರಡೂ ಜಲಗಳ ರಚನೆಯಲ್ಲಿ ಏನೋ ಇದ್ದು, ತಮ್ಮ ತಮ್ಮ ಪ್ರತ್ಯೇಕತೆಗಾಗಿ ಬಲಾತ್ಕರಿಸುತ್ತವೆ ಎಂಬುದು ತಿಳಿಯಿತು. ಆ ಪ್ರವಾಹಗಳು ಸಂಗಮಿಸಿದ ಕೆಲವು ವರ್ಷಗಳ ಒಳಗೇ ಮತ್ತು ಖಿಲಾಫತ್ ಚಳುವಳಿಯ ಧಾತು ಕಣ್ಮರೆಯಾದ ಕೂಡಲೇ ಒಂದು ಪ್ರವಾಹದ ನೀರು ಇನ್ನೊಂದು ಪ್ರವಾಹದ ನೀರಿನಿಂದ ಹಾಜರಾತಿಗೆ ತೀವ್ರವಾಗಿ ಪ್ರತಿಕ್ರಿಯಿಸಿತು. ಒಬ್ಬರ ದೇಹಕ್ಕೆ ವಿದೇಶೀಯ ವಸ್ತು ಪ್ರವೇಶಿಸಿದ ಕೂಡಲೇ ಪ್ರತಿಕ್ರಿಯೆ

ಪ್ರಾರಂಭವಾಗುವಂತೆ. ಒಂದೊಂದು ಮತ್ತೊಂದನ್ನು ಹೊರ ಹಾಕಿ ಪ್ರತ್ಯೇಕವಾಗಲು ಒಲವು ತೋರಲಾರಂಭಿಸಿದವು. ಪರಿಣಾಮವೆಂದರೆ, ಯಾವಾಗ ಆ ಪ್ರವಾಹಗಳು ಬೇರೆಯಾಗಲು ಹವಣಿಸಿದವೋ, ಆಗ ಅವು ತಾಳ್ಮೆಗೆಟ್ಟು ವೇಗದಿಂದ ಮತ್ತು ಪೂರ್ವನಿರ್ಧರಿತ ಹಿಂಸಾರಭಸದಿಂದ– ಪ್ರವಾಹಕ್ಕೆ ಸಂಬಂಧಿಸಿದಂತೆ ಅಂಥ ಭಾಷೆಯನ್ನು ಬಳಸಬಹುದಾದರೆ– ಒಂದರ ವಿರುದ್ಧ ಮತ್ತೊಂದು ಗುದ್ದಾಡಿ ಬೇರೆಯಾಗಲು ಪ್ರಯತ್ನಿಸಿದವು. ಆಮೇಲೆ ಅವು ತಮ್ಮ ತಮ್ಮ ಕಾಲುವೆಗಳಲ್ಲಿ ಮೊದಲಿಗಿಂತ ಹೆಚ್ಚು ಘೋರವಾಗಿ ಹಾಗೂ ಪರಸ್ಪರ ಹೆಚ್ಚು ದೂರವಾಗಿ ಹರಿಯತೊಡಗಿದವು. ಆ ಎರಡು ಪ್ರವಾಹಗಳು ಕ್ಷಣಿಕವಾಗಿ ಜೊತೆಯಾಗಿ ತಂಗಿದ್ದ ಮಡುವಿನಿಂದ ಹೊರನೆಗೆದ ವೇಗ ಮತ್ತು ರಭಸದಿಂದ, ತಾವು ಮೊದಲು ಹರಿಯುತ್ತಿದ್ದ ಪಾತ್ರದ ಮಾರ್ಗವನ್ನೇ ಬದಲಾಯಿಸಿಬಿಟ್ಟವು. ಒಂದು ಕಾಲದಲ್ಲಿ ಅವುಗಳ ಮಾರ್ಗ ಸಮಾನಾಂತರವಾಗಿತ್ತು. ಈಗ ಅವು ವಿರುದ್ಧವಾಗಿವೆ. ಒಂದು ಮೊದಲಿನಂತೆ ಪೂರ್ವದಿಕ್ಕಿಗೆ ಹರಿಯುತ್ತಿದೆ. ಇನ್ನೊಂದು, ವಿರುದ್ಧ ಮಾರ್ಗದಲ್ಲಿ ಪಶ್ಚಿಮದತ್ತ ಹರಿಯಲು ಪ್ರಾರಂಭಿಸಿದೆ. ಈ ವಿಶಿಷ್ಟ ರೂಪಕ ಭಾಷೆಗೆ ಯಾವುದೇ ಅಪಸ್ವರದ ಸಾಧ್ಯತೆಯ ಹೊರತಾಗಿ, ಇದು ಹಿಂದೂ–ಮುಸ್ಲಿಂ ರಾಜಕೀಯ ಚರಿತ್ರೆಯ ತಪ್ಪು ವ್ಯಾಖ್ಯಾನವೆಂದು ಮಾತ್ರ ಹೇಳಲು ಸಾಧ್ಯವಿಲ್ಲ ಎಂಬುದು ನನ್ನ ಖಚಿತವಾದ ನಂಬಿಕೆ. ಯಾರಾದರೂ ಈ ಸಾದೃಶ್ಯದವನ್ನು ಮನಸ್ಸಿನಲ್ಲಿ ಗ್ರಹಿಸಿಕೊಂಡಿದ್ದರೆ, ಅವರಿಗೆ ಗೊತ್ತಾಗುತ್ತದೆ– ಪರಿವರ್ತನೆ ಹಠಾತ್ತಾಗಿ ಸಂಭವಿಸಿದ್ದಲ್ಲ ಎಂದು. ಏಕೆಂದರೆ ಪರಿವರ್ತನೆಯನ್ನು ವಿಪ್ಲವ ಎನ್ನುವುದಾದರೆ, ಹಿಂದೂ–ಮುಸ್ಲಿಂ ರಾಜಕೀಯದ ಸಾದೃಶ್ಯ ಅಥವಾ ಸಮಾನಾಂತರತೆ ಆ ವಿಪ್ಲವದ ವಿಕಾಸವನ್ನು ಗುರುತಿಸುತ್ತದೆ. ಮುಸ್ಲಿಂ ರಾಜಕೀಯ ಸಮಾನಾಂತರ ಮಾರ್ಗದಲ್ಲಿ ನಡೆಯಬೇಕು, ಅದು ಹಿಂದೂ ರಾಜಕೀಯ ಪ್ರವಾಹದಲ್ಲಿ ಒಂದಾಗಿ ಬಿಡಬಾರದು ಎಂಬುದು ಆಧುನಿಕ ಭಾರತ ಇತಿಹಾಸದ ವಿಸ್ಮಯಕಾರಕ ಸಂಗತಿ. ಹೀಗೆ ತಾವೇ ಪ್ರತ್ಯೇಕ ಗುಂಪಾಗಿದ್ದರೂ ಮುಸ್ಲಿಮರು ನಿಗೂಢ ಭಾವನೆಯಿಂದ ಪ್ರಚೋದಿತರಾಗಿದ್ದಾರೆ; ಆದರೆ ಅದರ ಮೂಲವನ್ನು ವಿವರಿಸಲು ಅಸಮರ್ಥರಾಗಿದ್ದಾರೆ; ತಮಗೆ ಕಾಣದ ಅದೃಶ್ಯ ಹಸ್ತವೊಂದರಿಂದ ಮಾರ್ಗದರ್ಶಿತರಾಗಿದ್ದಾರೆ; ಹಿಂದೂಗಳಿಂದ ಬೇರೆಯಾಗಿರಬೇಕೆಂಬ ಅದರ ನಿರ್ದೇಶನವನ್ನು ಪಾಲಿಸುತ್ತಾ ಬಂದಿದ್ದಾರೆ. ಈ ನಿಗೂಢ ಭಾವನೆ ಮತ್ತು ಅದೃಶ್ಯ ಹಸ್ತ ಬೇರೇನೂ ಆಗಿರದೆ, ಪಾಕಿಸ್ತನವೆಂಬ ಸಂಕೇತ ರೂಪದಲ್ಲಿ ಅವರಿಗೆ ಕಾಣದಂತೆ ಅವರೊಳಗೇ ಕೆಲಸ ಮಾಡುತ್ತಾ ಬಂದ ಅವರ ಪೂರ್ವ ನಿಯೋಜಿತ ನಿಯತಿ. ಹೀಗೆ ನೋಡಿದರೆ ಪಾಕಿಸ್ತಾನ ಕಲ್ಪನೆಯಲ್ಲಿ ಯಾವುದೇ ಹೊಸತನವೂ ಇಲ್ಲ, ಅನಿರೀಕ್ಷಿತತೆಯೂ ಇಲ್ಲ. ಸಂಭವಿಸಿದ ಒಂದೇ ಒಂದು ಸಂಗತಿ ಎಂದರೆ, ಯಾವುದು ಅಸ್ಪಷ್ಟವಾಗಿತ್ತೊ, ಅದು ಈಗ ಉಜ್ವಲತೆಯಿಂದ ಸುಸ್ಪಷ್ಟವಾದದ್ದು ಮತ್ತು ಯಾವುದಕ್ಕೆ ಹೆಸರಿರಲಿಲ್ಲವೋ ಅದು ಈಗ ಹೆಸರನ್ನು ಪಡೆದದ್ದು.

## VI

ಪೂರ್ಣ ಚರ್ಚೆಯನ್ನು ಸಮಾರೋಪಗೊಳಿಸಿ ಹೇಳುವುದಾದರೆ ಸಮಗ್ರ ಭಾರತವೆಂಬುದು ಸ್ವತಂತ್ರ ಭಾರತದೊಡನೆ ಅಥವಾ ಭಾರತ ಪ್ರಭುತ್ವದೊಡನೆ ಅಸಂಗತವಾಗುತ್ತದೆ ಎಂದು ತೋರುತ್ತದೆ. ಭಾರತ ಒಂದು ಸಮಗ್ರ ರಾಷ್ಟ್ರ ಎಂಬುದರ ಕಾಲಬುಡದಲ್ಲಿಯೇ ಅದರ ಭವಿಷ್ಯತ್ತಿನ ಬಗೆಗೆ ಸ್ವಾತಂತ್ರ್ಯದ ಎಲ್ಲ ಆಸೆ ಭರವಸೆಗಳು ಭಗ್ನಗೊಂಡದ್ದು ವಿರಾಜಿಸುತ್ತದೆ. ರಾಷ್ಟ್ರೀಯ ವಿಧಿಯನ್ನು ಸ್ವಾತಂತ್ರ್ಯದ ಪರಿಭಾಷೆಯಲ್ಲಿ ಗ್ರಹಿಸಿದರೆ ಹತಾಶೆ ಸಂಭವಿಸುತ್ತದೆ, ಏಕೆಂದರೆ ಹಿಂದೂಗಳು ಆ ಮಾರ್ಗವನ್ನು ಅನುಸರಿಸುವುದಿಲ್ಲ. ಅವರು ಅನುಸರಿಸದೆ ಇರುವುದಕ್ಕೆ ಕಾರಣವಿದೆ. ಹಿಂದೂಗಳ ಮೇಲೆ ಮುಸ್ಲಿಮರ ಪ್ರಾಬಲ್ಯದ ಸ್ಥಾಪನೆ ಆ

ಮಾರ್ಗದಲ್ಲಡಗಿದೆ ಎಂದು ಅವರು ಭಯಪಡುತ್ತಾರೆ. ಮುಸ್ಲಿಮರ ಸ್ವಾತಂತ್ರ್ಯ ಚಳುವಳಿ ಮುಗ್ಧವಾದುದಲ್ಲ ಎಂದು ಹಿಂದೂಗಳ ಗ್ರಹಿಕೆ. ಬ್ರಿಟಿಷ್ ಸಾಮ್ರಾಜ್ಯದ ರಕ್ಷಾಕವಚದಿಂದ ಹಿಂದೂಗಳನ್ನು ಹೊರಗೆಳೆದು ಬಯಲು ಪಾಲು ಮಾಡಲು ಅದನ್ನು ಬಳಸಿಕೊಳ್ಳಬಹುದು; ಅಮೇಲೆ ಅಕ್ಕಪಕ್ಕದ ಮುಸ್ಲಿಂ ದೇಶಗಳೊಡನೆ ಬಾಂಧವ್ಯ ಬೆಳೆಸಿ ಅವರ ಸಹಾಯದಿಂದ ತಮ್ಮನ್ನು ದಾಸ್ಯಕ್ಕೀಡುಮಾಡಬಹುದು. ಏಕೆಂದರೆ ಮುಸ್ಲಿಮರಿಗೆ ಸ್ವಾತಂತ್ರ್ಯ ಅಂತಿಮ ಗುರಿಯಲ್ಲ. ಅದು ಮುಸ್ಲಿಂ ರಾಜ್ಯ ಸ್ಥಾಪನೆಗೆ ಸಾಧನಮಾರ್ಗ ಅಷ್ಟೆ. ಅಧಿಪತ್ಯ ಸ್ಥಾನಮಾನದ ಪರಿಭಾಷೆಯಲ್ಲಿ ರಾಷ್ಟ್ರೀಯ ವಿಧಿಯನ್ನು ಗ್ರಹಿಸಿದರೂ ಪ್ರತಿಕೂಲ ಪರಿಸ್ಥಿತಿ ತಪ್ಪಿದ್ದಲ್ಲ. ಏಕೆಂದರೆ ಮುಸ್ಲಿಮರು ಅದಕ್ಕೆ ಬದ್ಧರಾಗಲು ನಿರಾಕರಿಸುತ್ತಾರೆ. ಆಧಿಪತ್ಯದ ಸ್ಥಾನಮಾನದಿಂದ 'ಒಬ್ಬ ವ್ಯಕ್ತಿಗೆ ಒಂದೇ ಮತ, ಒಂದು ಮತಕ್ಕೆ ಒಂದೇ ಮೌಲ್ಯ' ಎಂಬ ಸಿದ್ಧಾಂತದ ಲಾಭ ಬಳಸಿಕೊಂಡು ಹಿಂದೂಗಳು ತಮ್ಮ ಮೇಲೆ ಹಿಂದೂ ರಾಜ್ಯವನ್ನು ಹೇರಿಬಿಡುತ್ತಾರೆ ಎಂದು ಅವರಿಗೆ ಭಯ. ಮುಸ್ಲಿಮರಿಗೆ ಹೆಚ್ಚಿನ ಮಹತ್ವ ಕೊಡುವುದರ ಮೂಲಕ ಈ ಸಿದ್ಧಾಂತದ ಲಾಭವನ್ನು ಎಷ್ಟೇ ಮೊಟಕುಗೊಳಿಸಿದರೂ 'ಹಿಂದೂಗಳಿಂದ, ಹಿಂದೂಗಳ ಸರ್ಕಾರ' ಮತ್ತು ಆದ್ದರಿಂದ ಹಿಂದೂಗಳಿಗಾಗಿ ಎಂಬ ಫಲಿತಾಂಶ ತಪ್ಪದು. ಭಾರತ ಸಮಗ್ರ ರಾಷ್ಟ್ರವಾಗುಳಿಯಬೇಕು ಎಂದು ಒತ್ತಾಯ ಮಾಡಿದರೆ, ಅದರ ವಿಧಿಯ ಬಗೆಗಿನ ಸಂಪೂರ್ಣ ಭಾರತದ ಹಣೆಯ ಬರಹವೂ ಆಗುತ್ತದೆ ಎಂದು ತೋರುವುದು.

ಸಮಗ್ರ ಭಾರತವೆಂಬುದು ಹೋರಾಡಬೇಕಾದ ಅಮೂಲ್ಯ ಆದರ್ಶವೇ ಎಂಬ ಪ್ರಶ್ನೆ ವಿಚಾರಯೋಗ್ಯ. ಪ್ರಥಮವಾಗಿ ಭಾರತ ಸಮಗ್ರ ಅಖಂಡವಾಗುಳಿದರೂ ಅದು ಎಂದೂ ಸಾವಯವ ಸಮಗ್ರೀಕರಣದ ಅಖಂಡತೆಯಾಗುವುದಿಲ್ಲ. ಭಾರತ ಹೆಸರಿಗೆ ಮಾತ್ರ ಒಂದು ಎಂದು ಕರೆಸಿಕೊಳ್ಳಬಹುದು. ಆದರೆ ವಾಸ್ತವವಾಗಿ ಅದು ಬಲಾತ್ಕಾರದಿಂದ ಮತ್ತು ಕೃತಕತೆಯಿಂದ ಸೇರ್ಪಡೆಯಾದ ಹಿಂದೂಸ್ತಾನ ಮತ್ತು ಪಾಕಿಸ್ತಾನ ಎಂಬ ಎರಡು ಪ್ರತ್ಯೇಕ ದೇಶಗಳು. ಎರಡು ಜನಾಂಗ ಸಿದ್ಧಾಂತದ ಒತ್ತಿನಲ್ಲಿ ಇದು ವಿಶೇಷವಾದ ಸತ್ಯ. ಈಗಿರುವಂತೆ ಐಕ್ಯತೆಯ ಕಲ್ಪನೆ ಭಾರತಭೂಮಿಯ ವಾಸ್ತವ ಸತ್ಯದ ಮೇಲೆ ಕನಿಷ್ಠ ಹಿಡಿತವನ್ನು ಹೊಂದಿದೆ, ತಾನು ವಾಸಿಸುವ ಪ್ರದೇಶದಲ್ಲಿ ತನ್ನ ದೃಷ್ಟಿ ಬಂಧಿತವಾಗಿರುವ ಸಾಮಾನ್ಯ ಭಾರತೀಯನ ಮೇಲೆ– ಹಿಂದೂವಾಗಿರಲಿ, ಮುಸ್ಲಿಮನಾಗಿರಲಿ– ಕನಿಷ್ಠ ಆಕರ್ಷಣೆಯನ್ನು ಬೀರಿದೆ. ಆದರೆ ಎರಡೂ ಕಡೆಯ ಭಾವನಾತ್ಮಕ ಮತ್ತು ನಿರ್ವಂಚನಾತ್ಮಕ ಮನಸ್ಸಿನವರಿಗೆ ಇದು ಇಷ್ಟವೇ ಆಗುತ್ತದೆ. ಎರಡು ಜನಾಂಗ ಸಿದ್ಧಾಂತ ಐಕ್ಯತೆಯ ಭಾವುಕ ಆಕಾಂಕ್ಷೆಯ ಬೆಳವಣಿಗೆಗೆ ಅವಕಾಶವನ್ನೇ ನೀಡುವುದಿಲ್ಲ. ರಾಷ್ಟ್ರ ಶರೀರದಲ್ಲಿ ದ್ವೈತ ಸಾಂಕ್ರಾಮಿಕ ವಿಷಯದ ಹರಡುವಿಕೆ ಒಂದಲ್ಲ ಒಂದು ದಿನ ಬಲವಂತದ ಐಕ್ಯತೆಯ ವಿಸರ್ಜನೆಗೆ ಸಾವು ಬದುಕಿನ ಹೋರಾಟದ ಕರೆಕೊಡುವ ಮನಃಸ್ಥಿತಿಯನ್ನು ಉಂಟುಮಾಡಿಯೇ ಮಾಡುತ್ತದೆ. ಯಾವುದಾದರೂ ಉನ್ನತ ಶಕ್ತಿಯ ಕಾರಣದಿಂದ ವಿಸರ್ಜನೆ ಸಂಭವಿಸದಿದ್ದರೆ, ಭಾರತಕ್ಕೆ ಖಂಡಿತವಾಗಿ ಒಂದು ಗತಿ ಆಗಿಯೇ ಆಗುತ್ತದೆ– ಅದೆಂದರೆ, ಈ ಮುಂದುವರಿದ ಐಕ್ಯತೆ ಭರತಭೂಮಿಯ ಚೈತನ್ಯದ ಜೀವರಸವನ್ನು ಬತ್ತಿಸುತ್ತಾ ಹೋಗುತ್ತದೆ, ಹೊಂದಿಕೆಯನ್ನು ಸಡಿಲಿಸುತ್ತಾ ಹೋಗುತ್ತದೆ, ಪ್ರಜೆಗಳ ಪ್ರೇಮವಿಶ್ವಾಸಗಳ ಮೇಲಿರುವ ಹಿಡಿತವನ್ನು ನಿರ್ಬಲಗೊಳಿಸುತ್ತಾ ಹೋಗುತ್ತದೆ, ನೈತಿಕ ಮತ್ತು ಭೌತಿಕ ಸಾಧನ ಸಂಪತ್ತುಗಳ ಬಳಕೆಯನ್ನು ತಪ್ಪಿಸುತ್ತಾ, ಬೆಳವಣಿಗೆಯನ್ನು ವಿಳಂಬ ಮಾಡುತ್ತಾ ಹೋಗುತ್ತದೆ. ಭಾರತ ರಕ್ತಹೀನ ರೋಗಿಷ್ಠ ದೇಶವಾಗುವುದು– ಸಮಾಧಿ ಮಾಡದಿದ್ದರೂ ಸತ್ತಿರುವಂಥ, ಪೇಲವವಾದ ಜೀವಂತ ಹೆಣ.

ಈ ಬಲವಂತ ಐಕ್ಯದ ಎರಡನೆಯ ಅನನುಕೂಲವೆಂದರೆ, ಹಿಂದೂ–ಮುಸ್ಲಿಂ ತೀರ್ಮಾನಕ್ಕೆ ಅಡಿಪಾಯವನ್ನು ಕಂಡುಕೊಳ್ಳುವ ಅವಶ್ಯಕತೆ. ಈ ನಿಟ್ಟಿನಲ್ಲಿ ಒಂದು ತೀರ್ಮಾನಕ್ಕೆ ಬರುವುದು ಎಷ್ಟು ಕಷ್ಟ

ಎಂಬುದನ್ನು ಯಾರಿಗೂ ತಿಳಿಯ ಹೇಳಬೇಕಾಗಿಲ್ಲ. ಭಾರತವನ್ನು ಹಿಂದೂಸ್ತಾನ ಮತ್ತು ಪಾಕಿಸ್ತಾನಗಳನ್ನಾಗಿ ವಿಭಜಿಸುವುದರ ಹೊರತು, ಈ ವಿಭಜನೆ ಸಾಮರಸ್ಯವಾಗಿ ಜರುಗಬೇಕೆಂಬ ದೃಷ್ಟಿಯಿಂದ ಈಗಾಗಲೇ ಕೊಟ್ಟಿರುವುದಕ್ಕಿಂತ– ಇನ್ನೇನು ಕೊಡಲು ಸಾಧ್ಯ. ದೇಶದ ಉಳಿದ ಆಸಕ್ತಿಗಳಿಗೆ ನೋವಾಗದ ಹಾಗೆ? ಅದನ್ನು ಊಹಿಸಿಕೊಳ್ಳುವುದೂ ಕಷ್ಟ. ತೊಂದರೆಗಳೇನೇ ಇರಲಿ, ಈ ಬಲವಂತದ ಐಕ್ಯ ಮುಂದುವರಿದರೆ, ಜಾತಿ ಸಂಘರ್ಷದ ತೀರ್ಮಾನವಾಗದ ಹೊರತು ಭಾರತಕ್ಕೆ ರಾಜಕೀಯ ಉತ್ಕರ್ಷ ಅಸಾಧ್ಯ ಎಂಬುದನ್ನು ಇಲ್ಲವೆನ್ನಲಾಗುವುದಿಲ್ಲ. ನಿಜವಾಗಿ ಕೋಮುವಾರಿನ ತೀರ್ಮಾನ– ಇನ್ನು ಮೇಲೆ ಹಿಂದೂಗಳು ಮತ್ತು ಮುಸ್ಲಿಮರನ್ನು ಎರಡು ಜನಾಂಗಗಳೆಂದು ಪರಿಗಣಿಸಬೇಕಾಗಿರುವುದರಿಂದ ಅಂತರಾಷ್ಟ್ರೀಯ ತೀರ್ಮಾನವೆಂದೇ ಹೇಳಬೇಕು– ಈ ಬಲವಂತ ಕೂಟದ ಯೋಜನೆಯ ಅಧೀನದಲ್ಲಿ ಉಳಿಯುತ್ತದೆ, ರಾಜಕೀಯ ಮುನ್ನಡೆಯ ಪ್ರತಿಯೊಂದು ಪೂರ್ವ ನಿದರ್ಶನ ಶರತ್ತಾಗಿ.

ಈ ಬಲವಂತ ರಾಜಕೀಯ ಐಕ್ಯದ ಮೂರನೆಯ ಅನನುಕೂಲವೂ ಇದೆ. ಅದು ಮೂರನೆಯ ಪಕ್ಷದ ರಾಜಕೀಯವನ್ನು ವಿಸರ್ಜಿಸಲಾರದು. ಮೊದಲನೆಯದಾಗಿ ಸಂವಿಧಾನ, ಅದು ಅಸ್ತಿತ್ವಕ್ಕೆ ಬಂದರೆ, ಪರಸ್ಪರ ಸಂಶಯ ಮತ್ತು ಅವಿಶ್ವಾಸಗಳುಳ್ಳ ದೇಶಗಳ ಸಂಯುಕ್ತ ಸಾಮ್ರಾಜ್ಯ ಮಾದರಿಯದು. ವಿವಾದ ಸಂದರ್ಭಗಳಲ್ಲಿ ವಿನಂತಿಸಿಕೊಳ್ಳಲು, ಅವರು ತಮ್ಮ ಒಪ್ಪಿಗೆಯಿಂದಲೇ ಮೂರನೆಯ ಪಕ್ಷದ ಹಾಜರಾತಿಯನ್ನು ಇಚ್ಛಿಸುತ್ತಾರೆ. ಏಕೆಂದರೆ, ಪರಸ್ಪರರಲ್ಲಿರುವ ಸಂಶಯ ಮತ್ತು ಅವಿಶ್ವಾಸ ಸಂಬಂಧ, ಮಾತುಕತೆಯ ಮೂಲಕ ಪರಿಹಾರ ಕಂಡುಕೊಳ್ಳಲು ಎರಡು ಜನಾಂಗಗಳ ಮಧ್ಯೆ ಅಡ್ಡಿಯುಂಟುಮಾಡುತ್ತದೆ. ಹಿಂದೆ ಬ್ರಿಟಿಷರನ್ನು ವಿರೋಧಿಸುವಾಗಿನ ಐಕ್ಯತೆಯನ್ನು ಸಹ– ಅದು ಎಷ್ಟೆಲ್ಲ ಜನರ ಹೃದಯಗಳನ್ನು ಹಿಗ್ಗಿಸುತ್ತಿತ್ತು!– ಭವಿಷ್ಯತ್ ಕಾಲದಲ್ಲಿ ಭಾರತ ಹೊಂದಿರಲಾರದು. ಏಕೆಂದರೆ ಬ್ರಿಟಿಷರ ವಿರುದ್ಧ ಸದಾ ಸಂಘಟಿತರಾಗಿರುತ್ತಿದ್ದ ಎರಡು ಜನಾಂಗಗಳು ಮೊದಲಿಗಿಂತ ಹೆಚ್ಚಾಗಿ ಈಗ ಪರಸ್ಪರ ವಿರುದ್ಧವಾಗಿವೆ. ಎರಡನೆಯದಾಗಿ ಸಂವಿದಾನದ ಅಡಿಪಾಯ ಹಿಂದೂ ಮುಸ್ಲಿಮರ ಮಧ್ಯದ ವಿವಾದದ ಇತ್ಯರ್ಥವಾಗಿರುವುದರಿಂದ, ಅಂಥ ಸಂವಿಧಾನದ ಯಶಸ್ವಿಕಾರ್ಯಕ್ಕಾಗಿ ಸಾಕಷ್ಟು ಶಸ್ತ್ರಸಜ್ಜಿತ ಸೇನೆಯುಳ್ಳ ಮೂರನೆಯ ಪಕ್ಷದ ಹಾಜರಾತಿ ಸಂಗಮ ಇತ್ಯರ್ಥದ ದೃಷ್ಟಿಯಿಂದ ಆವಶ್ಯಕ.

ನಿಜವಾಗಿ ಇದೆಲ್ಲದರ ಅರ್ಥ ರಾಜಕೀಯ ವಿಧಿಯ ಸೋಲು. ಅದನ್ನು ಹಿಂದೂ ಮುಸ್ಲಿಮರಿಬ್ಬರು ಮನಸ್ಸಿನಲ್ಲಿ ಧ್ಯಾನಿಸುತ್ತಿರುವುದಾಗಿ ಹೇಳಿಕೊಳ್ಳುತ್ತಾರೆ. ಅದು ಬೇಗನೆ ಪೂರೈಕೆಯಾಗುವುದನ್ನು ಮನಸಾರೆ ಬಯಸುತ್ತಾರೆ. ಮತ್ತಿನ್ನೇನನ್ನು ನಿರೀಕ್ಷಿಸಲಾದೀತು– ಎರಡು ವಿರುದ್ಧ ಜನಾಂಗಗಳು ಒಂದು ದೇಶ ಮತ್ತು ಒಂದು ಸಂವಿಧಾನದ ವಕ್ಷಸ್ಥಲದಲ್ಲಿ ಬಂಧಿತರಾಗಿರುವಾಗ?

ಈ ಕತ್ತಲ ದೃಷ್ಟಿಪಥದೊಡನೆ, ಹಿಂದೂಸ್ತಾನ ಮತ್ತು ಪಾಕಿಸ್ತಾನವಾಗಿ ಭಾರತ ಇಬ್ಭಾಗವಾದ ಮೇಲೆ ಮೂಡುವ ದೃಷ್ಟಿಪಥವನ್ನು ಹೋಲಿಸಿ ನೋಡಿ. ಪ್ರತಿಯೊಂದು ತನಗೆ ತಾನೇ ನಿಗದಿಪಡಿಸಿಕೊಳ್ಳುವ ವಿಧಿಯ ಪೂರೈಕೆಗೆ ವಿಭಜನೆ ದಾರಿ ಮಾಡಿಕೊಡುತ್ತದೆ. ತಮ್ಮ ಪಾಕಿಸ್ತಾನಕ್ಕೆ ಸ್ವಾತಂತ್ರ್ಯ ಬೇಕೋ ಅಥವಾ ಒಳ ಆಧಿಪತ್ಯದ ಸ್ಥಾನಮಾನ ಬೇಕೋ ಎಂಬುದನ್ನು– ತಮಗೆ ಯಾವುದು ಸರಿ ಎನ್ನಿಸುತ್ತದೋ ಅದನ್ನು– ಆಯ್ಕೆ ಮಾಡಿಕೊಳ್ಳಲು ಮುಸ್ಲಿಮರು ಸ್ವತಂತ್ರರು. ಹಿಂದೂಸ್ತಾನಕ್ಕೆ ಸ್ವತಂತ್ರ ರಾಷ್ಟ್ರದ ಸ್ಥಾನಮಾನ ಬೇಕೋ ಅಥವಾ ಒಳ ಆಧಿಪತ್ಯದ ಸ್ಥಾನಮಾನ ಬೇಕೋ ಎಂಬುದನ್ನು– ತಮ್ಮ ಪರಿಸ್ಥಿತಿಗೆ ಯಾವುದು ಸರಿ ಎಂದು ಯೋಚಿಸುತ್ತಾರೋ ಅದನ್ನು– ಆಯ್ಕೆ ಮಾಡಿಕೊಳ್ಳಲು ಹಿಂದೂಗಳು ಸ್ವತಂತ್ರರು. ಮುಸ್ಲಿಮರು ಹಿಂದೂ ರಾಜ್ಯದ ದುಃಸ್ವಪ್ನದಿಂದ ಪಾರಾಗುವರು. ಹೀಗೆ ರಾಜಕೀಯ ಮುನ್ನಡೆಯ ಮಾರ್ಗ ಇಬ್ಬರಿಗೂ

ಸುಗಮವಾಗುವುದು. ಗುರಿ ಭಗ್ನವಾದೀತೆಂಬ ಭಯ, ಈಡೇರಿಕೆಯ ಭರವಸೆಗೆ ಜಾಗ ಮಾಡಿಕೊಟ್ಟಿದೆ. ಭಾರತ ಒಂದು ಸಮಗ್ರ ಅಖಂಡ ರಾಷ್ಟ್ರವಾಗಿ ರಾಜಕೀಯ ಏಳ್ಗೆಯನ್ನು ಸಾಧಿಸಲು ಬಯಸಿದರೆ, ಕೋಮು ಇತ್ಯರ್ಥ ಪೂರ್ವದರ್ಶನದ ಅವಶ್ಯಕ ಶರತ್ತಾಗಿ ಉಳಿಯಬೇಕಾಗುತ್ತದೆ. ಆದರೆ ಹಿಂದೂಸ್ತಾನ ಮತ್ತು ಪಾಕಿಸ್ತಾನಗಳು ಪೂರ್ವ ನಿದರ್ಶನ ಸ್ಥಿತಿಯ ತೀವ್ರ ಅಡೆತಡೆಗಳಿಂದ ಮುಕ್ತವಾಗಿವೆ. ಒಂದು ಪಕ್ಷ ಅಲ್ಪಸಂಖ್ಯಾತರೊಡನೆ ಕೋಮು ಇತ್ಯರ್ಥ ಪೂರ್ವನಿದರ್ಶನ ಸ್ಥಿತಿಯಾಗಿ ಉಳಿದರೂ ಸಹ, ಅದನ್ನು ಈಡೇರಿಸುವುದು ಕಷ್ಟವಾಗಲಾರದು. ಪ್ರತಿಯೊಬ್ಬರ ಮಾರ್ಗ ಅಡಚಣೆಗಳಿಂದ ತೆರವಾಗಿದೆ. ಪಾಕಿಸ್ತಾನಕ್ಕಿರುವ ಬೇರೊಂದು ಅನುಕೂಲವನ್ನು ಇಲ್ಲಿ ಹೆಸರಿಸಬೇಕು. ಹಿಂದೂಗಳು ಮತ್ತು ಮುಸ್ಲಿಮರ ಮಧ್ಯೆ ಒಂದು ಬಗೆ ವಿರೋಧ ಹೊಗೆಯಾಡುತ್ತಿದ್ದು, ಅದನ್ನು ಬಗೆಹರಿಸದಿದ್ದರೆ ಭಾರತದ ಶಾಂತಿ ಮತ್ತು ಉತ್ಕರ್ಷಕ್ಕೆ ಭಂಗ ಬರುತ್ತದೆ ಎಂಬುದನ್ನು ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿದೆ. ಆದರೆ ಪ್ರದರ್ಶನಕ್ಕೆ ಸಾರ್ವಜನಿಕ ರಂಗಭೂಮಿ ಇದ್ದಾಗ ಉಂಟಾಗುವಷ್ಟು ಕಿರುಕುಳ ತಂಟೆತಕರಾರುಗಳು, ಪರಸ್ಪರ ವೈಷಮ್ಯದ ಅಸ್ತಿತ್ವದಿಂದ ಉಂಟಾಗುವುದಿಲ್ಲ ಎಂಬ ಸತ್ಯವನ್ನು ಅರ್ಥ ಮಾಡಿಕೊಂಡಿಲ್ಲ. ಸಾರ್ವಜನಿಕ ರಂಗಭೂಮಿಯೇ ಈ ವೈಷಮ್ಯದ ಕ್ರಿಯೆಗೆ ಕರೆ ನೀಡುತ್ತದೆ. ಆದರೆ ಅದಷ್ಟೇ ಅಲ್ಲ, ಸಮಾನ ಆಸಕ್ತಿಯ ಅಂಕಗಳಲ್ಲಿ ಭಾಗವಹಿಸಲು ಎಲ್ಲರಿಗೂ ಕರೆ ಕೊಟ್ಟಾಗ, ತಮ್ಮಲ್ಲಿ ಅಂತರ್ಗತವಾಗಿರುವ ವೈಷಮ್ಯದ ಪ್ರದರ್ಶನವಲ್ಲದೆ ಮತ್ತೇನು ಸಂಭವಿಸಲು ಸಾಧ್ಯ? ಹಿಂದೂಗಳು ಮತ್ತು ಮುಸ್ಲಿಮರ ಅವಿಶ್ವಾಸದ ಮೂಲವಾದ ಸಾಮಾಜಿಕ ನಾಟಕಕ್ಕೆ ರಂಗಭೂಮಿಯನ್ನೇ ಬಿಡದಿರುವುದರಿಂದ ಪಾಕಿಸ್ತಾನ ಯೋಜನೆಗೆ ಅನುಕೂಲವಾಗಿ ಪರಿಣಮಿಸಿದೆ. ಅನೇಕ ವರ್ಷಗಳ ಕಾಲ ಭಾರತವನ್ನು ಹರಿದು ಚಿಂದಿ ಮಾಡಿ ಶಾಂತಿಸಮಾಧಾನವನ್ನು ಕಲಕಿದ ಯಾತನೆಯ ಭಯ ಇಂದು ಹಿಂದೂಸ್ತಾನ ಮತ್ತು ಪಾಕಿಸ್ತಾನಗಳಿಗಿಲ್ಲ. ಅಂತ್ಯದ ಆದರೆ ಅಲ್ಪವಲ್ಲದ ವಿಷಯವೆಂದರೆ ಶಾಂತಿಯನ್ನು ಕಾಪಾಡಲು ಇದ್ದ ಮೂರನೆಯ ಪಕ್ಷದ ವಿಸರ್ಜನೆಯ ಅವಶ್ಯಕತೆ. ಬಲವಂತ ಐಕ್ಯತೆಯ ಕಾರಣದಿಂದಾಗಿ ಒಂದು ಇನ್ನೊಂದರ ಮೇಲೆ ಹೇರುತ್ತಿದ್ದ ಅಡ್ಡಿ–ಆತಂಕಗಳು ಮಾಯವಾಗುವುದರ ಜತೆಗೆ ಹಿಂದೂಸ್ತಾನ ಮತ್ತು ಪಾಕಿಸ್ತಾನಗಳು ಒಳಗಿನ ಬಿರುಕುಗಳ ಭಯವಿಲ್ಲದೆ, ಸುಭದ್ರ ದೇಶಗಳಾಗಿ ಬೆಳೆಯಬಹುದು. ಒಂದು ಅಖಂಡತತೆಯ ಅಂಗಗಳಾಗಿ ಮುಟ್ಟಲಾರದ್ದನ್ನು ಈಗ ಎರಡು ಪ್ರತ್ಯೇಕ ಘಟಕಗಳಾಗಿ ತಮ್ಮ ತಮ್ಮ ವಿಧಿ ಅಥವಾ ಗಂತವ್ಯಗಳನ್ನು ಸುಲಭವಾಗಿ ಮುಟ್ಟಬಹುದು.

ಸಮಗ್ರ ಭಾರತವನ್ನು ಇಷ್ಟಪಡುವವರು ೧೯೨೩ರಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿ ಶ್ರೀಯುತ ಮಹಮದಾಲಿ ಹೇಳಿದ್ದನ್ನು ಗಮನಿಸಬೇಕು. ಭಾರತೀಯ ಐಕ್ಯತೆಯನ್ನು ಕುರಿತು ಮಾತಾಡುತ್ತಾ ಇದನ್ನು ಹೇಳಿದರು:

> **"ತಪ್ಪು ದಾರಿಗೆಳೆಯುವ ಈ ವಿರೋಧದ ಐಕ್ಯತೆಗೆ ಬದಲಾಗಿ ಯಾವುದಾದರೂ ಬೇರೊಂದು ಹೊಸ ಶಕ್ತಿ, ವಿಶಾಲ ಭರತಖಂಡವನ್ನು ಒಗ್ಗೂಡಿಸಿದ ಹೊರತು, ಅದು ಭೌಗೋಳಿಕ ತಪ್ಪು ಹೆಸರಾಗುಳಿಯುತ್ತದೆ."**

ಉಪಯೋಗಿಸಿಕೊಳ್ಳದೆ ಬಿಟ್ಟಿರುವ ಯಾವುದಾದರೂ ಹೊಸ ಶಕ್ತಿ ಇದೆಯೇ? ಎಲ್ಲ ಶಕ್ತಿಗಳೂ ವಿಫಲವಾದ ಮೇಲೆ ಕಾಂಗ್ರೆಸ್ಸು– ಅದು ಇಂದಿನ ಸರ್ಕಾರವಾದ ಮೇಲೆ– ಸಮೂಹ ಸಂಪರ್ಕದ ಯೋಜನೆಯಲ್ಲಿ ಹೊಸ ಶಕ್ತಿಯನ್ನು ಕಂಡುಕೊಂಡಿತು. ಮುಸ್ಲಿಂ ನಾಯಕರನ್ನು ನಿರ್ಲಕ್ಷಿಸಿ ಅಥವಾ ಉಪಾಯದಿಂದ ಹಳ್ಳಕ್ಕೆ ಕೆಡವಿ ಹಿಂದೂ–ಮುಸ್ಲಿಮರ ಮಧ್ಯೆ ರಾಜಕೀಯ ಐಕ್ಯತೆಯನ್ನು ಮೂಡಿಸಲು

ಉದ್ದೇಶಿಸಲಾಗಿತ್ತು. ಸಾರಾಂಶದಲ್ಲಿ ಅದು "ಕನ್‌ಸರ್ವೇಟಿವ್ ಅಥವಾ ಟೋರಿ ಚಿನ್ನ"ದಿಂದ ಲೇಬರ್ ಪಕ್ಷವನ್ನು ಕೊಂಡುಕೊಳ್ಳಲು ಬ್ರಿಟಿಷ್ ಕನ್‌ಸರ್ವೇಟಿವ್ ಪಕ್ಷದವರು ಕೈಗೊಂಡ ತಂತ್ರವಾಗಿತ್ತು. ಆ ತಂತ್ರ ವ್ಯರ್ಥವಾಗಿದ್ದಷ್ಟೇ ತಂಟೆತಕರಾರಿನದೂ ಆಗಿತ್ತು. ಅಮೂಲ್ಯವಾದ ಎಷ್ಟೋ ವಸ್ತುಗಳಿವೆ, ಅವುಗಳ ಬೆಲೆಯನ್ನರಿತ ಯಾವ ಒಡೆಯನೂ ಅವುಗಳನ್ನು ಪರಭಾರೆ ಮಾಡುವುದಿಲ್ಲ, ಹಾಗೆ ಮಾಡುವಂತೆ ಅವನ ಕಣ್ಣಿಗೆ ಮಣ್ಣೆರಚುವ ತಂತ್ರ ಅಸಮಾಧಾನ ಮತ್ತು ಕಹಿಯನ್ನು ಉಂಟುಮಾಡುತ್ತದೆ ಎಂಬುದನ್ನು ಕಾಂಗ್ರೆಸ್ ಮರೆಯಿತು. ಸಮಾಜ ಜೀವನದಲ್ಲಿ ರಾಜಕೀಯಾಧಿಕಾರ ತುಂಬ ಬೆಲೆಯುಳ್ಳ ವಸ್ತು–ವಿಶೇಷವಾಗಿ ಅದರ ಸ್ಥಾನ ನಿರಂತರ ವಿರೋಧಕ್ಕೆ ಗುರಿಯಾಗಿದ್ದರೆ, ಅಂಥ ವಿರೋಧವನ್ನು ಎದುರಿಸಿ ಸಮಾಜ ತನ್ನ ಸ್ಥಾನಮಾನವನ್ನು ಕಾಪಾಡಿಕೊಳ್ಳಬೇಕಾಗಿದೆ. ಅದನ್ನು ಕಾಪಾಡಿಕೊಳ್ಳಬೇಕಾದರೆ ರಾಜಕೀಯಾಧಿಕಾರ ಏಕೈಕ ಸಾಧನ. ಸುಳ್ಳು ಪ್ರಚಾರದಿಂದ, ತಪ್ಪು ಪ್ರಾತಿನಿಧ್ಯದಿಂದ ಅಥವಾ ಅಧಿಕಾರ ಮತ್ತು ಚಿನ್ನದ ಪ್ರಲೋಭನೆಯಿಂದ ಅದನ್ನು ಬಿಟ್ಟುಕೊಡುವಂತೆ ಮಾಡುವ ಯಾವುದೇ ಪ್ರಯತ್ನ ಸಮಾಜವನ್ನು ನಿರಾಯುಧವನ್ನಾಗಿ ಮಾಡುವುದಕ್ಕೆ, ಅದರ ಬಂದೂಕುಗಳನ್ನು ತಣ್ಣಗಾಗುವಂತೆ ಮಾಡುವುದಕ್ಕೆ, ನಿಷ್ಕ್ರಿಯ ಹಾಗೂ ಅಡಿಯಾಳನ್ನಾಗಿ ಮಾಡುವುದಕ್ಕೆ ಸಮಾನವಾದದ್ದು. ಐಕ್ಯತೆಯನ್ನು ಮೂಡಿಸುವ ಮಾರ್ಗ ಅದಾಗಿರಬಹುದು. ಆದರೆ, ಆ ಮಾರ್ಗ ಹೇಯವಾದದ್ದು. ಏಕೆಂದರೆ, ಅದು ಸುಳ್ಳು ಮತ್ತು ಕ್ರೂರ ವಿಧಾನಗಳಿಂದ ವಿರೋಧವನ್ನು ದಮನ ಮಾಡಲು ಪ್ರಯತ್ನಿಸುತ್ತದೆ. ಯಾವುದೇ ಐಕ್ಯತೆಯನ್ನು ಅದು ಮೂಡಿಸಲಾರದು. ಉದ್ರೇಕವನ್ನು, ಕಹಿಯನ್ನು ಮತ್ತು ದ್ವೇಷವನ್ನು ಮಾತ್ರ ಅದು ಮೂಡಿಸಬಲ್ಲದು.* ಸಮೂಹ ಸಂಪರ್ಕದ ಮೂಲಕ ಕಾಂಗ್ರೆಸ್ ಮಾಡಿದ್ದು ಇದನ್ನೇ. ಈ ಹುಚ್ಚು ಸಮೂಹ ಸಂಪರ್ಕದ ಯೋಜನೆ ಪಾಕಿಸ್ತಾನದ ಉದಯಕ್ಕೆ ಸಾಕಷ್ಟು ಕಾರಣವಾಯಿತು ಎಂಬುದರಲ್ಲಿ ಅನುಮಾನವಿಲ್ಲ.

ಸಮೂಹ ಸಂಪರ್ಕವನ್ನು ರಾಜಕೀಯ ಮೀಟುಗೋಲಾಗಿ ಅಳವಡಿಸಿಕೊಂಡದ್ದು ದೌರ್ಭಾಗ್ಯ. ಅದನ್ನು ಸಾಮಾಜಿಕ ಐಕ್ಯತೆಗೆ ಹೆಚ್ಚು ಸಫಲ ಶಕ್ತಿಯಾಗಿ ಬಳಸಿಕೊಳ್ಳಬಹುದಾಗಿತ್ತು ಎಂದು ಹೇಳಬಹುದು. ಆದರೆ ಹಿಂದೂಗಳನ್ನು ಮತ್ತು ಮುಸ್ಲಿಮರನ್ನು ಪ್ರತ್ಯೇಕಿಸಿದ ಸಾಮಾಜಿಕ ಗೋಡೆಯನ್ನು ಅದು ಒಡೆಯಬಲ್ಲುದೆ? ಇಬ್ಬರನ್ನೂ ಒಟ್ಟುಗೂಡಿಸುವ ಸಾಮಾಜಿಕ ಕಟ್ಟು ಇಲ್ಲದಿರುವುದು. ಇಬ್ಬರ ಮಧ್ಯೆ ಸಹಭೋಜನವಿಲ್ಲ, ವಿವಾಹ ಸಂಬಂಧವಿಲ್ಲ. ಅವರು ಇವುಗಳನ್ನು ಪ್ರಾರಂಭಿಸುವರೆ? ಅವರ ಹಬ್ಬ

---

* ಸ್ವಸ್ಥ ಮನಸ್ಸಿನ ಶ್ರೀಯುತ ಅಬ್ದುಲ್ ರೆಹಮಾನ್ ೧೯೩೫ರ ಡಿಸೆಂಬರ್ ೩೦ರಂದು ಅಲಿಘರ್‌ನಲ್ಲಿ ಜರುಗಿದ ಮುಸ್ಲಿಂ ಲೀಗಿನ ಅಧಿವೇಶನದಲ್ಲಿ ಭಾಷಣ ಮಾಡುತ್ತಾ ಹಿಂದೂಗಳ ಮುಕ್ತಿ ಮತ್ತು ತಂತ್ರಗಳು ಉಂಟು ಮಾಡಿದ ಕಹಿಗೆ ಅಭಿವ್ಯಕ್ತಿ ನೀಡಿದ್ದಾರೆ. ಅಲ್ಲಿ ಅವರು "ಶುದ್ದಿ, ಸಂಘಟನೆ ರೂಪದಲ್ಲಿ ಮುಸ್ಲಿಂ ಜನರ ಮೇಲೆ ನಡೆದ ಆಕ್ರಮಣಗಳು, ಹಿಂದೂ ಮಹಾಸಭಾದ ಚಳವಳಿಗಳು ಮತ್ತು ಲಾಲಾಲಜಪತರಾಯ್ ಹಾಗೂ ಸ್ವಾಮಿ ಶ್ರದ್ಧಾನಂದರಂಥ ರಾಜಕಾರಣಿಗಳ ಚಟುವಟಿಕೆಗಳ ಬಗೆಗೆ ವ್ಯಥೆಪಟ್ಟು" ಹೀಗೆ ಹೇಳಿದ್ದಾರೆ– ಸ್ಪೇನಿನವರು ತಮ್ಮ ದೇಶದಿಂದ ಮೂರ್ಸ್ ಜನಾಂಗವನ್ನು ಹೊರಕ್ಕೆ ಅಟ್ಟಿದಂತೆ ಭಾರತದಿಂದ ಮುಸ್ಲಿಮರನ್ನು ಹೊರಗಟ್ಟಬೇಕೆಂದು ಹಿಂದೂ ನಾಯಕರಲ್ಲಿ ಕೆಲವರು ಸಾರ್ವಜನಿಕವಾಗಿ ಘೋಷಿಸಿದ್ದಾರೆ. ಮುಸ್ಲಿಮರು ಅತ್ಯಧಿಕ ಸಂಖ್ಯೆಯಲ್ಲಿರುವುದರಿಂದ ಹಿಂದೂ ಮಿತ್ರರು ಒಂದು ಗುಟುಕಿನಲ್ಲಿ ಅವರನ್ನು ನುಂಗಲು ಸಾಧ್ಯವಿಲ್ಲ. ಕೃತಕ ಸ್ಥಿತಿಯಲ್ಲಿ ನಾವು ಜೀವಿಸುತ್ತಿದ್ದೇವೆ ಎಂಬುದನ್ನು ಒಪ್ಪಿಕೊಳ್ಳಬೇಕು. ಹಿಂದೂಗಳು ಹೆಚ್ಚು ಅನುಕೂಲ ಸ್ಥಿತಿಯಲ್ಲಿದ್ದಾರೆ. ಇಂಗ್ಲಿಷರು ಸಹ ಅವರ ವಿಷಪೂರಿತ ಪ್ರಚಾರಕ್ಕೆ ಹೆದರಬೇಕಾದುದನ್ನು ಗ್ರಹಿಸಿದ್ದಾರೆ. ಹಿಂದೂ ರಾಜಕೀಯ ಮತಕ್ಕೆ ವಂತಿಗೆ ನೀಡಿದವರನ್ನುಳಿದು ಸಾರ್ವಜನಿಕ ಸ್ಥಾನದ ಶ್ರೇಷ್ಠ ಮುಸ್ಲಿಮರನ್ನು ಸಾಧ್ಯವಾದ ಎಲ್ಲ ವಿಧಾನಗಳಿಂದಲೂ ತೃಣೀಕರಿಸುವುದರಲ್ಲಿ ಹಿಂದೂಗಳು ನಿಪುಣರು. ತಮ್ಮ ಭವಿಷ್ಯವನ್ನು ಹಿಂದೂಗಳಿಗೆ ಒತ್ತೆ ಇಡಬಾರದೆಂದು ಮತ್ತು ಸಾಧ್ಯವಾದ ಎಲ್ಲ ಕ್ರಮಗಳನ್ನು ಆತ್ಮರಕ್ಷಣೆಗೆ ಅಳವಡಿಸಿಕೊಳ್ಳಬೇಕೆಂಬುದನ್ನು ಮುಸ್ಲಿಮರಿಗೆ ಹಿಂದೂಗಳು ಮನದಟ್ಟು ಮಾಡಿದ್ದರೆ– ತಮ್ಮ ಪ್ರಚೋದನಾತ್ಮಕ ಹಾಗೂ ಆಕ್ರಮಣಾತ್ಮಕ ನಡೆನುಡಿಗಳಿಂದ. ಆಲ್ ಇಂಡಿಯ ರಿಜಿಸ್ಟರ್ ೧೯೨೫, ಸಂಪುಟ ೨, ೩೫೬.

ಹರಿದಿನಗಳು ಭಿನ್ನ. ಅವುಗಳನ್ನು ಅನುಸರಿಸಲು ಅಥವಾ ಅವುಗಳಲ್ಲಿ ಭಾಗಿಯಾಗಲು ಹಿಂದೂಗಳನ್ನು ಪ್ರೇರೇಪಿಸುವರೆ? ಅವರ ಧಾರ್ಮಿಕ ಭಾವನೆಗಳು ಪರಸ್ಪರ ವಿರುದ್ಧ ಮಾತ್ರವಲ್ಲ, ಅಸಂಗತವೂ ಕೂಡ. ಆದ್ದರಿಂದ ಧಾರ್ಮಿಕ ವೇದಿಕೆಯ ಮೇಲೆ ಒಬ್ಬರ ಆಗಮನವೆಂದರೆ ಇನ್ನೊಬ್ಬರ ನಿರ್ಗಮನ. ಅವರ ಸಂಸ್ಕೃತಿಗಳು ಭಿನ್ನ; ಅವರ ಸಾಹಿತ್ಯ ಮತ್ತು ಇತಿಹಾಸಗಳು ಭಿನ್ನ. ಅವರು ಪರಸ್ಪರ ಭಿನ್ನ ಮಾತ್ರವಲ್ಲ, ಜಿಗುಪ್ಸೆ ತಾಳುವಂಥವರು. ಅಸಹ್ಯ ಮತ್ತು ಓಕರಿಕೆ ಉಂಟುಮಾಡತಕ್ಕವರು. ಜೀವನದ ಚಿರಸ್ಥಾಯಿ ಮೂಲಗಳಿಂದ ಒಸರುವ ಒರತೆಯೊಂದರಲ್ಲಿ ಅವರಿಬ್ಬರೂ ನೀರು ಕುಡಿಯುವಂತೆ ಯಾರಾದರೂ ಮಾಡಬಲ್ಲರೆ? ಸಂಧಿಸುವ ಸಾಮಾನ್ಯ ನೆಲೆಗಟ್ಟಿಲ್ಲ. ಯಾರೊಬ್ಬರನ್ನೂ ಸಂಸ್ಕಾರಗೊಳಿಸಲು ಸಾಧ್ಯವಿಲ್ಲ. ಅವರು ಸಾಮಾನ್ಯ ಸಾಂಸ್ಕೃತಿಕ ಮತ್ತು ಭಾವನಾತ್ಮಕ ಜೀವನವನ್ನು ಹಂಚಿಕೊಳ್ಳುವುದು ಹಾಗಿರಲಿ, ಸಾಕಷ್ಟು ದೈಹಿಕ ಸಂಪರ್ಕವೂ ಸಹ ಇಲ್ಲವಾಗಿದೆ. ಅವರು ಒಟ್ಟಿಗೆ ಜೀವಿಸುವುದಿಲ್ಲ. ಹಿಂದೂಗಳು ಮತ್ತು ಮುಸ್ಲಿಮರು ತಮ್ಮದೇ ಆದ ಪ್ರತ್ಯೇಕ ಪ್ರಪಂಚದಲ್ಲಿ ವಾಸಿಸುತ್ತಾರೆ, ಯಾವ ಪ್ರಾಂತ್ಯಗಳಲ್ಲಿ ಹಿಂದೂಗಳು ಅಧಿಕ ಸಂಖ್ಯೆಯಲ್ಲಿರುತ್ತಾರೋ ಅಂಥ ಕಡೆ ಹಿಂದೂಗಳು ಹಳ್ಳಿಗಳಲ್ಲಿಯೂ ಮುಸ್ಲಿಮರು ಪಟ್ಟಣಗಳಲ್ಲಿಯೂ ವಾಸಿಸುತ್ತಾರೆ. ಯಾವ ಪ್ರಾಂತ್ಯಗಳಲ್ಲಿ ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿರುತ್ತಾರೋ ಅಂಥ ಕಡೆ ಮುಸ್ಲಿಮರು ಹಳ್ಳಿಗಳಲ್ಲಿಯೂ, ಹಿಂದೂಗಳು ಪಟ್ಟಣಗಳಲ್ಲಿಯೂ ವಾಸಿಸುತ್ತಾರೆ. ಅವನು ಎಲ್ಲಿಯೇ ಜೀವಿಸಲಿ, ಪ್ರತ್ಯೇಕವಾಗಿಯೇ ಜೀವಿಸುತ್ತಾರೆ. ಪ್ರತಿಯೊಂದು ಪಟ್ಟಣ ಪ್ರತಿಯೊಂದು ಹಳ್ಳಿಗಳಲ್ಲೂ ಹಿಂದೂ ಕೇರಿಗಳು, ಮುಸ್ಲಿಂ ಕೇರಿಗಳು ಇರುತ್ತದೆ; ಮೇಲಾಗಿ ಅವು ಪರಸ್ಪರ ಸಂಪೂರ್ಣ ಪ್ರತ್ಯೇಕವಾಗಿರುತ್ತವೆ. ಸಾರ್ವಜನಿಕ ಸಹಭಾಗಿತ್ವದ ಸಂತತ ಆವರ್ತನೆ ಇಲ್ಲ. ಅವರು ವ್ಯಾಪಾರಕ್ಕಾಗಿ ಸಂಧಿಸುತ್ತಾರೆ ಅಥವಾ ಕೊಲೆ ಮಾಡಲು ಸಂಧಿಸುತ್ತಾರೆ. ಒಬ್ಬರು ಮತ್ತೊಬ್ಬರಿಗೆ ಉಪಕಾರ ಮಾಡಲು ಅಥವಾ ಸ್ನೇಹಿತರಾಗಲು ಸಂಧಿಸುವುದಿಲ್ಲ. ವ್ಯಾಪಾರಕ್ಕಾಗಿ ಕರೆಯಿಲ್ಲದಿದ್ದರೆ ಅಥವಾ ಕೊಲೆಗಾಗಿ ಕರೆಯಿಲ್ಲದಿದ್ದರೆ ಭೇಟಿಯಾಗುವುದನ್ನು ನಿಲ್ಲಿಸುತ್ತಾರೆ. ಶಾಂತಿ ಇದ್ದಾಗ, ಹಿಂದೂ ಕೇರಿಗಳು ಮತ್ತು ಮುಸ್ಲಿಂ ಕೇರಿಗಳು ಎರಡು ವಿದೇಶೀಯ ವಸತಿಗಳಂತೆ ಇರುತ್ತವೆ. ಯುದ್ಧ ಘೋಷಣೆಯಾದ ಕ್ಷಣದಲ್ಲೇ ವಸತಿಗಳು ಶಸ್ತ್ರಸಜ್ಜಿತ ಶಿಬಿರಗಳಾಗಿ ಬಿಡುತ್ತವೆ. ಶಾಂತಿಯ ಅವಧಿಗಳು ಮತ್ತು ಯುದ್ಧದ ಅವಧಿಗಳು ಸಂಕ್ಷಿಪ್ತ. ಆದರೆ, ಎರಡರ ನಡುವಣ ಕಾಲ ನಿರಂತರ ಉದ್ವೇಗದ್ದು. ಇಂಥ ಅಡ್ಡಗಟ್ಟೆಯ ವಿರುದ್ಧ ಸಮೂಹ ಸಂಪರ್ಕ ಏನು ಮಾಡಬಲ್ಲುದು? ಅಡ್ಡಗಟ್ಟೆಯನ್ನು ದಾಟಿ ಇನ್ನೊಂದು ಪಕ್ಷಕ್ಕೂ ಹೋಗಲಾರದು; ಕಿಂಚಿತ್ತು ಸಾವಯವ ಐಕ್ಯತೆಯನ್ನು ಮೂಡಿಸಲಾರದು.

♦

# ಭಾಗ – XI

ಪಾಕಿಸ್ತಾನ ಪ್ರಶ್ನೆಯ ಬಗೆಗೆ ಹಿಂದಿನ ಪುಟಗಳಲ್ಲಿ ಪ್ರಸ್ತಾಪಿಸಿರುವುದನ್ನು ಕುರಿತು ಬೇರೆ ಬೇರೆ ಜನರು ಬೇರೆಬೇರೆಯಾಗಿ ಯೋಚಿಸಿದ್ದಾರೆ. ನಾನು ವಿಷಯದ ಎರಡು ಮಗ್ಗುಲುಗಳನ್ನು ಮತ್ತು ಅದರಿಂದ ಉದ್ಭವಿಸುವ ಸಮಸ್ಯೆಗಳನ್ನು ಕುರಿತಂತೆ ಮಾತ್ರ ಹೇಳಿರುವೆನೆಂದೂ, ಯಾವುದರ ಬಗ್ಗೆಯೂ ತನ್ನ ವೈಯಕ್ತಿಕ ಅಭಿಪ್ರಾಯಗಳನ್ನು ಅಭಿವ್ಯಕ್ತಿಸಿಲ್ಲವೆಂದೂ ಒಂದು ಗುಂಪಿನ ಜನ ಆಪಾದಿಸಿದ್ದಾರೆ. ಇದು ಸರಿಯಲ್ಲ, ಹಿಂದಿನ ಭಾಗಗಳನ್ನು ಓದಿದ ಯಾರೇ ಆದರೂ, ಎಲ್ಲವುಗಳ ಮೇಲಲ್ಲದಿದ್ದರೂ, ನಿಜವಾಗಿ ಅನೇಕ ಪ್ರಶ್ನೆಗಳಿಗೆ ನನ್ನ ಅಭಿಪ್ರಾಯಗಳನ್ನು ತೀರಾ ಇತ್ಯಾತ್ಮಕ ಪರಿಭಾಷೆಯಲ್ಲಿ ವ್ಯಕ್ತಪಡಿಸಿರುವೆ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ನಿರ್ದಿಷ್ಟವಾಗಿ ವಿವಾದದ ಎರಡು ಪ್ರಮುಖ ಅಂಶಗಳನ್ನು ಸೂಚಿಸಬೇಕಾಗಿದೆ. ಒಂದು, ಮುಸ್ಲಿಮರು ಜನಾಂಗವೆ? ಎರಡು, ಪಾಕಿಸ್ತಾನಕ್ಕಾಗಿ ಅವರ ವಾದವುಂಟೆ? ಭಿನ್ನ ರೀತಿಯ ಟೀಕೆಯ ದಾರಿ ಹಿಡಿದ ಬೇರೆ ಜನರು ಇದ್ದಾರೆ. ವೈಯಕ್ತಿಕ ಅಭಿಪ್ರಾಯಗಳನ್ನು ಅಭಿವ್ಯಕ್ತಿಸುವಲ್ಲಿ ನಾನು ಸೋತಿದ್ದೇನೆ ಎಂದು ಅವರು ಆಪಾದನೆ ಮಾಡುವುದಿಲ್ಲ. ನಾನು ತೀರ್ಮಾನಗಳಿಗೆ ಬರುವಾಗ ಬರಿಯ ಪ್ರಮೇಯಗಳನ್ನು– ಅವುಗಳ ಪ್ರಯೋಗ ಪರಮಶ್ರೇಷ್ಠ ಎನ್ನುವಂತೆ– ಅವಲಂಬಿಸಿರುವೆನೆಂದೂ ಅಪವಾದಗಳನ್ನು ಒಪ್ಪಿಕೊಳ್ಳುವುದಿಲ್ಲವೆಂದೂ ಅವರು ಆಪಾದಿಸುತ್ತಾರೆ. ನನಗೆ ಹೇಳಿದರು: "ನಿಮ್ಮ ತೀರ್ಮಾನಗಳನ್ನು ತೀರಾ ಅನಿರ್ದಿಷ್ಟ ಪರೀಭಾಷೆಯಲ್ಲಿ ಹೇಳಿಲ್ಲವೆ? ಅನಿರ್ದಿಷ್ಟ ಸೂಚನೆ, ಶರತ್ತುಗಳಿಗೆ ಮತ್ತು ಮಿತಿಗಳಿಗೆ ಒಳಗಾಗುವುದಿಲ್ಲವೆ? ಸಂಕ್ಷಿಪ್ತ ಹಾಗೂ ನಿರ್ಲಕ್ಷ್ಯ ಮಾದರಿಯಲ್ಲಿ ಕೆಲವು ಕ್ಲಿಷ್ಟ ಸಮಸ್ಯೆಗಳನ್ನು ವಿಲೇವಾರಿ ಮಾಡಿಲ್ಲವೆ? ನ್ಯಾಯಯುತ ಹಾಗೂ ಶಾಂತಿಯುತ ಮಾರ್ಗದಲ್ಲಿ ಹೇಗೆ ಪಾಕಿಸ್ತಾನವನ್ನು ಅಸ್ತಿತ್ವಕ್ಕೆ ತರಬಹುದು ಎಂಬುದನ್ನು ತೋರಿಸಿದ್ದೀರಾ?" ಈ ಟೀಕೆಯೂ ಸಹ ಸಂಪೂರ್ಣ ಸರಿಯಲ್ಲ. ನಾನು ಈ ಅಂಶಗಳನ್ನು ವಿಚಾರ ಮಾಡದೆ ಬಿಟ್ಟಿದ್ದೇನೆ ಎಂದು ಹೇಳುವುದು ಸರಿಯಲ್ಲ. ಅವುಗಳ ಪ್ರಸ್ತಾಪ ಸಂಕ್ಷಿಪ್ತವಾಗಿರಬಹುದು, ಚೆಲ್ಲಾಪಿಲ್ಲಿಯಾಗಿರಬಹುದು. ಹಾಗಿದ್ದರೂ, ಈ ಟೀಕೆಗಳಲ್ಲಿ ಹೆಚ್ಚು ಬಲವಿದೆ ಮತ್ತು ಈ ಕೊರತೆಯನ್ನು ತುಂಬಿಕೊಳ್ಳಲು ಕರ್ತವ್ಯಬದ್ಧನಾಗಿದ್ದೇನೆ ಎಂಬುದನ್ನು ಒಪ್ಪಿಕೊಳ್ಳಲು ಸಿದ್ಧ. ಆದ್ದರಿಂದ ಕೆಳಗಿನ ವಿಷಯಗಳ ಪರಿಗಣನೆಗೆ ಈ ಭಾಗ ತನ್ನ ಲಕ್ಷ್ಯವನ್ನು ಮೀಸಲಾಗಿರಿಸಿದೆ:–

೧. ಪಾಕಿಸ್ತಾನವನ್ನು ಕುರಿತ ಮುಸ್ಲಿಂ ವಾದಕ್ಕೆ ಬಾಧೆ ತಟ್ಟುವಂಥ ಪರಿಮಿತ ವಿಚಾರಗಳು ಯಾವುವು?

೨. ಪಾಕಿಸ್ತಾನದ ಸಮಸ್ಯೆಗಳೇನು? ಅವುಗಳಿಗೆ ಪರಿಹಾರವೇನು?

೩. ಪಾಕಿಸ್ತಾನದ ವಿಷಯವನ್ನು ತೀರ್ಮಾನಿಸುವ ಅಧಿಕಾರ ಯಾರಿಗಿದೆ?

# ಅಧ್ಯಾಯ ೨೯

# ಪಾಕಿಸ್ತಾನ ಇರಬೇಕೆ?

## I

ಹಿಂದೆ ಪ್ರಸ್ತಾಪಿತವಾದ ಎಲ್ಲರೊಡನೆ ಸಂದೇಹವಾದಿ, ರಾಷ್ಟ್ರೀಯವಾದಿ, ಸಂಪ್ರದಾಯವಾದಿ ಮತ್ತು ಹಳೆಯ ಕಾಲದ ಭಾರತೀಯ ಕೇಳದೆ ಇರುವುದಿಲ್ಲ– "ಪಾಕಿಸ್ತಾನ ಇರಬೇಕೆ?" ಅಂಥ ಭಾವವನ್ನು ಯಾರೂ ಲಘುವಾಗಿ ಎಣಿಸಲಾರರು. ಏಕೆಂದರೆ ಪಾಕಿಸ್ತಾನದ ಸಮಸ್ಯೆ ನಿಜವಾಗಿ ತುಂಬ ಗಂಭೀರ. ಇದು ಮುಸ್ಲಿಮರು ಮತ್ತು ಅವರ ಮುಂದಾಳುಗಳಿಗೆ ಹಾಕಬೇಕಾದ ಪ್ರಸ್ತುತ ಹಾಗೂ ನ್ಯಾಯಯುತ ಪ್ರಶ್ನೆ ಮಾತ್ರವಲ್ಲ, ಪ್ರಮುಖವೂ ಹೌದು ಎಂಬುದನ್ನು ಒಪ್ಪಿಕೊಳ್ಳಬೇಕು. ತಮ್ಮನ್ನು ಎಂದೂ ಸುಲಭವಾಗಿ ಪಕ್ಕಕ್ಕೆ ದೂಡಲಾರರು ಎಂಬ ಜೋರಿನಲ್ಲಿ ಪಾಕಿಸ್ತಾನದ ವಿವಾದದ ಇತಿಮಿತಿಗಳು ಗಣನೀಯವಾಗುತ್ತವೆ ಎಂಬ ವಾಸ್ತವದಲ್ಲಿ ಅದರ ಪ್ರಾಮುಖ್ಯತೆ ಅಡಗಿದೆ. ಈ ಇತಿಮಿತಿಗಳನ್ನು ಕುರಿತ ಬರಿಯ ಹೇಳಿಕೆಯಷ್ಟೇ ಸಾಕು, ಅವರ ಜೋರನ್ನು ಮನಗಾಣಲು. ಅದು ಅವರ ಮುಖದ ಮೇಲೆ ದೊಡ್ಡಕ್ಷರಗಳಲ್ಲಿ ಲಿಖಿತವಾಗಿದೆ. ಹೀಗಿರುವಾಗ, ಪಾಕಿಸ್ತಾನದ ಪರವಾಗಿ ವಿಧಿರೂಪದ ಅಗತ್ಯವನ್ನು ಸಂಸ್ಥಾಪಿಸಲು ಮುಸ್ಲಿಮರ ಮೇಲೆ ರುಜುವಾತಿನ ಭಾರ ಅಧಿಕವಾಗಿದೆ. ನಿಜವಾಗಿ ಪಾಕಿಸ್ತಾನದ ವಿವಾದ ಅಥವಾ ಸರಳವಾಗಿ ಹೇಳುವುದಾದರೆ ಭಾರತವನ್ನು ವಿಭಜಿಸುವುದು ತುಂಬ ಗಂಭೀರ ಸ್ವಭಾವದ್ದು. ಮುಸ್ಲಿಮರು ರುಜುವಾತಿನ ಭಾರವನ್ನು ನಿರ್ವಹಿಸುವುದಷ್ಟೇ ಅಲ್ಲ, ಅಂತರಾಷ್ಟ್ರೀಯ ನ್ಯಾಯಪೀಠದ ಅಂತಸ್ಸಾಕ್ಷಿ ತೃಪ್ತಿಪಡುವಂತೆ ಆ ಸ್ವಭಾವದ ಸಾಕ್ಷ್ಯಾಧಾರಗಳನ್ನು ಒದಗಿಸಬೇಕು– ತಮ್ಮ ಮೊಕದ್ದಮೆಯನ್ನು ಗೆಲ್ಲುವ ಮೊದಲು. ಈ ಎಲ್ಲ ಇತಿಮಿತಿಗಳ ಬೆಳಕಿನಲ್ಲಿ ಪಾಕಿಸ್ತಾನದ ಪ್ರಸಂಗವು ಹೇಗಿದೆ ಎಂಬುದನ್ನು ನಾವು ನೋಡೋಣ.

## II

ಭಾರತದ ಮುಸ್ಲಿಂ ಜನಸಂಖ್ಯೆಯ ಸಾಕಷ್ಟು ಪ್ರಮಾಣವು ಕೆಲವು ನಿರ್ದಿಷ್ಟ ಪ್ರದೇಶಗಳಲ್ಲಿ ಕೇಂದ್ರೀಕೃತವಾಗಿರುವುದರಿಂದ ಮತ್ತು ಭಾರತದ ಉಳಿದ ವಿಭಾಗದಿಂದ ಅದನ್ನು ಸುಲಭವಾಗಿ ಬೇರ್ಪಡಿಸಲು ಸಾಧ್ಯವಾಗುವುರಿಂದ ಪಾಕಿಸ್ತಾನ ಇರಬೇಕೆ? ಮುಸ್ಲಿಂ ಜನಸಂಖ್ಯೆ ಕೆಲವು ನಿರ್ದಿಷ್ಟ ಪ್ರದೇಶಗಳಲ್ಲಿ, ಒಪ್ಪಿಕೊಂಡಿರುವಂತೆ, ಸಾಂದ್ರವಾಗಿ ನೆಲೆಗೊಂಡಿರಬಹುದು ಮತ್ತು ಈ ಪ್ರದೇಶಗಳನ್ನು ಬೇರ್ಪಡಿಸಲು ಸುಲಭ ಸಾಧ್ಯವಾಗಬಹುದು. ಆದರೆ ಅದರಿಂದ ಆಗುವುದೇನು? ಈ ಪ್ರಶ್ನೆಯನ್ನು ಪರಿಶೀಲಿಸುವಾಗ, ನಿಸರ್ಗವು ಭಾರತವನ್ನು ಒಂದು ಪ್ರತ್ಯೇಕ ಭೌಗೋಳಿಕ ಘಟಕವನ್ನಾಗಿ ಮಾಡಿದೆ ಎಂಬ ಮೂಲಭೂತ ಸತ್ಯವನ್ನು ಮರೆಯಬಾರದು. ಭಾರತೀಯರು ಸಾಮಾನ್ಯವಾಗಿ ಜಗಳವಾಡುತ್ತಾರೆ. ಅವರು ಜಗಳವನ್ನು ಯಾವಾಗ ನಿಲ್ಲಿಸುತ್ತಾರೆ ಎಂದು ಯಾರೂ ಭವಿಷ್ಯವನ್ನು ಹೇಳಲಾರರು. ಸತ್ಯವನ್ನು ಒಪ್ಪಿಕೊಂಡರೆ, ಅದು ಏನನ್ನು ಸೂಚಿಸುತ್ತದೆ? ಭಾರತೀಯರು ಜಗಳಗಂಟಿ ಜನರು ಎಂದು ಮಾತ್ರ. ಆದರೆ, ಭಾರತ ಒಂದು ಪ್ರತ್ಯೇಕ ಭೌಗೋಳಿಕ ಘಟಕ ಎಂಬ ಸತ್ಯವನ್ನು ಅದು ನಾಶ ಮಾಡಲಾರದು. ಅದರ ಐಕ್ಯತೆ ಪ್ರಕೃತಿಯಷ್ಟೇ

ಪ್ರಾಚೀನ. ಈ ಭೌಗೋಳಿಕ ಘಟಕದ ಒಳಗೆ ಅಖಂಡವಾಗಿ ವ್ಯಾಪಿಸಿಕೊಂಡ ಸಾಂಸ್ಕೃತಿಕ ಐಕ್ಯತೆ ಅನಾದಿ ಕಾಲದಿಂದಲೂ ಇದೆ. ಈ ಸಾಂಸ್ಕೃತಿಕ ಐಕ್ಯತೆ ರಾಜಕೀಯ ಮತ್ತು ಜನಾಂಗೀಯ ವಿಭಾಗಗಳನ್ನು ಪ್ರತಿಭಟಿಸಿದೆ. ಹೇಗಾದರೂ ಕಳೆದ ನೂರೈವತ್ತು ವರ್ಷಗಳಿಂದ ಎಲ್ಲ ಸಂಸ್ಥೆಗಳು– ಸಾಂಸ್ಕೃತಿಕ, ರಾಜಕೀಯ, ಆರ್ಥಿಕ, ಕಾನೂನು, ಆಡಳಿತ– ಒಂದು ಏಕರೂಪದ ಚೈತನ್ಯ ಲಂಘಕದ ಮೇಲೆ ಕೆಲಸ ಮಾಡುತ್ತಾ ಬಂದಿವೆ. ಪಾಕಿಸ್ತಾನವನ್ನು ಕುರಿತ ಯಾವುದೇ ಚರ್ಚೆಯಲ್ಲಿ ಪ್ರಾರಂಭದ ಪ್ರಮುಖ ಅಂಶ ಅದು ನಿರ್ವಹಣ ಅಂಶವಲ್ಲದಿದ್ದರೂ ಸಹ– ಭಾರತದ ಮೂಲಭೂತ ಐಕ್ಯತೆಯೇ ಎಂಬ ಸತ್ಯವನ್ನು ಮರೆಯಬಾರದು. ಏಕೆಂದರೆ ಪ್ರತ್ಯೇಕಿಸಿ ತೋರಿಸಬೇಕಾದ ವಿಭಜನೆಯ ಎರಡು ವಿವಾದಗಳಿವೆ ಎಂಬ ಸತ್ಯವನ್ನು ಗ್ರಹಿಸಬೇಕಾದ ಅವಶ್ಯಕತೆಯಿದೆ. ಅಗಲಿಕೆಗೆ ಮುನ್ನ ಇದ್ದಂತಹ ಸ್ಥಿತಿ ಪ್ರಾರಂಭಿಕ ಪ್ರಮುಖ ಅಂಶವಾಗಿರುವ ಮೊದಲನೆಯ ವಿವಾದದಲ್ಲಿ, ಹಿಂದೆ ಪ್ರತ್ಯೇಕವಾಗಿದ್ದ, ಕಾಲಕ್ರಮೇಣ ಒಟ್ಟಾಗಿ ಸೇರಿದ ಭಾಗಗಳ ವಿಸರ್ಜನೆಯೇ ವಿಂಗಡಣೆ. ಈ ವಿವಾದ ಇನ್ನೊಂದರಿಂದ ಪೂರ್ಣ ಭಿನ್ನ. ಅದರಲ್ಲಿ ಐಕ್ಯತೆಯೇ ಯಾವಾಗಲೂ ಪ್ರಾರಂಭಿಕ ಅಂಶ, ಪರಿಣಾಮವಾಗಿ ಇಂಥ ವಿವಾದದಲ್ಲಿ ವಿಂಗಡಣೆ ಎಂದರೆ ಒಂದು ಪ್ರತ್ಯೇಕ ಅಖಂಡ ಭೂ ಪ್ರದೇಶವನ್ನು ಪ್ರತ್ಯೇಕ ಭಾಗಗಳನ್ನಾಗಿ ಕತ್ತರಿಸಿ ಕೊಡುವುದು. ಎಲ್ಲಿ ಪ್ರಾರಂಬಿಕ ಪ್ರಮುಖ ಅಂಶ ಒಂದು ಭೂಪ್ರದೇಶದ ಐಕ್ಯತೆಯಾಗಿರುವುದಿಲ್ಲವೋ ಅಂದರೆ ಮೊದಲು ಐಕ್ಯತೆ ಇದ್ದು ಈಗ ಅನೈಕ್ಯತೆ ಇದೆಯೋ, ಅಲ್ಲಿ ವಿಂಗಡಣೆ– ಅದು ಮೂಲಕ್ಕೆ ಹಿಂದಿಗುರುವಂಥದು– ಮಾನಸಿಕ ಆಘಾತವನ್ನುಂಟುಮಾಡುವುದಿಲ್ಲ. ಆದರೆ ಭಾರತದಲ್ಲಿ ಪ್ರಾರಂಭಿಕ ಪ್ರಮುಖ ಅಂಶ ಐಕ್ಯತೆ. ಮುಸ್ಲಿಮರಲ್ಲಿ ಕೆಲವರು ಅತೃಪ್ತಿಗೊಂಡಿದ್ದಾರೆ ಎಂಬ ಒಂದು ಕಾರಣಕ್ಕಾಗಿಯೇ ಈಗ ಅದರ ಐಕ್ಯತೆಯನ್ನೇಕೆ ಹಾಳು ಮಾಡಬೇಕು? ಪ್ರಾಗೈತಿಹಾಸಿಕ ಕಾಲದಿಂದಲೂ ಒಂದು ಪ್ರತ್ಯೇಕ ಅಖಂಡ ಘಟಕವಾಗಿರುವ ಅದನ್ನು ಏಕೆ ಚೂರುಚೂರು ಮಾಡಬೇಕು?

## III

ಹಿಂದೂಗಳು ಮತ್ತು ಮುಸ್ಲಿಮರ ಮಧ್ಯೆ ಕೋಮು ವೈಷಮ್ಯವಿದೆ ಎಂಬ ಕಾರಣಕ್ಕಾಗಿ ಪಾಕಿಸ್ತಾನವಿರಬೇಕೆ? ಕೋಮು ದ್ವೇಷವಿದೆ ಎಂಬುದನ್ನು ಯಾರೂ ನಿರಾಕರಿಸಲಾರರು. ಹೇಗಾದರೂ ಪ್ರಶ್ನೆ ಇರುವುದು, ಒಂದು ದೇಶದೊಳಗೆ, ಒಂದು ಸಂವಿಧಾನದಡಿ ಜೊತೆಯಾಗಿ ಬಾಳಲು ಇಷ್ಟವಿಲ್ಲ ಎನ್ನುವಂಥದೆ ಈ ವೈಷಮ್ಯ? ಖಂಡಿತವಾಗಿಯೂ ೧೯೩೭ರವರೆಗೆ ಜೊತೆಯಾಗಿ ಬಾಳುವ ಇಚ್ಛೆ ಇಲ್ಲದಿರಲಿಲ್ಲ. ೧೯೩೫ರಲ್ಲಿ ಭಾರತ ಸರ್ಕಾರ ಕಾಯಿದೆಯ ಪೂರ್ವಸಿದ್ಧತೆಗಳ ಸೂತ್ರೀಕರಣವಾಗುವ ಅವಧಿಯಲ್ಲಿ, ಹಿಂದೂ ಮುಸ್ಲಿಮರಿಬ್ಬರೂ ಒಂದು ದೇಶದೊಳಗೆ, ಒಂದು ಸಂವಿಧಾನದಡಿ ಜೊತೆಯಾಗಿ ಬಾಳಬೇಕು ಎಂಬ ದೃಷ್ಟಿಯನ್ನು ಒಪ್ಪಿಕೊಂಡಿದ್ದರು ಮತ್ತು ಕಾಯಿದೆ ಅಂಗೀಕಾರಕ್ಕೆ ಮುನ್ನಿನ ಮಾತುಕತೆಗಳಲ್ಲಿ ಭಾಗವಹಿಸಿದ್ದರು. ೧೯೨೦ರಿಂದ ೧೯೩೫ರ ಅವಧಿಯಲ್ಲಿ ಭಾರತದಲ್ಲಿ ಕೋಮು ಭಾವನೆಯ ಸ್ಥಿತಿ ಹೇಗಿತ್ತು? ಹಿಂದಿನ ಪುಟಗಳಲ್ಲಿ ದಾಖಲಾಗಿರುವಂತೆ, ೧೯೨೦ರಿಂದ ೧೯೪೫ರವರೆಗಿನ ಭಾರತ ಇತಿಹಾಸವೆಂದರೆ ಕೋಮು ಘರ್ಷಣೆಯ ಸುದೀರ್ಘ ಕತೆ. ಅದರಲ್ಲಿ ಪ್ರಾಣಹಾನಿ ಹಾಗೂ ಆಸ್ತಿ ಹಾನಿ ಅತೀ ನಾಚಿಕೆಗೇಡಿನ ಮಟ್ಟ ಮುಟ್ಟಿತ್ತು. ೧೯೩೫ರಲ್ಲಿ ಭಾರತ ಸರ್ಕಾರ ಕಾಯಿದೆಯ ಅಂಗೀಕಾರಕ್ಕಿಂತ ಹಿಂದಿನ ೧೫ ವರ್ಷಗಳ ಅವಧಿಯ ಕೋಮು ಪರಿಸ್ಥಿತಿ ಉಲ್ಬಣಾವಸ್ಥೆ ತಲುಪಿದ್ದ ಹಾಗೆ ಹಿಂದೆಂದೂ ತಲುಪಿರಲಿಲ್ಲ. ಆದಾಗ್ಯೂ, ಈ ವೈರದ ಸುದೀರ್ಘ ಕತೆ, ಹಿಂದೂಗಳು ಮತ್ತು ಮುಸ್ಲಿಮರು ಒಂದು ದೇಶದೊಳಗೆ ಮತ್ತು ಒಂದು ಸಂವಿಧಾನದ ಕೆಳಗೆ ಬದುಕಲು ಮನಸ್ಸು ಮಾಡಿದ್ದನ್ನು ತಡೆಯಲಿಲ್ಲ. ಈಗ

ಕೋಮು ದ್ವೇಷವನ್ನು ಇಷ್ಟೊಂದು ದೊಡ್ಡದು ಮಾಡುತ್ತಿದ್ದಾರೇಕೆ?

ಕೋಮು ವೈರವಿರುವುದು ಭಾರತ ದೇಶದಲ್ಲಿ ಮಾತ್ರವೆ? ಕೆನಡಾದ ಸ್ಥಿತಿಯೇನು? ಕೆನಡಾದ ಇಂಗ್ಲಿಷರು ಮತ್ತು ಫ್ರೆಂಚರ ಸಂಬಂಧವನ್ನು ಕುರಿತು ಅಲೆಕ್ಸಾಂಡರ್ ಬ್ರಾಡಿ* ಏನು ಹೇಳಿದ್ದಾನೆ ಎಂಬುದನ್ನು ಗಮನಿಸಿ:

> "ಮೂಲದ ನಾಲ್ಕು ಪ್ರಾಂತ್ಯಗಳಲ್ಲಿ, ಮೂರು– ನೋವಾಸ್ಕಾಟಿಯಾ, ನ್ಯೂ ಬ್ರನ್ಸ್‌ವಿಕ್ ಮತ್ತು ಆಂಟಾರಿಯೋ– ಬಹುಮಟ್ಟಿಗೆ ಆಂಗ್ಲೊಸ್ಯಾಕ್ಸನ್ ಮೂಲ ಹಾಗೂ ಪದ್ಧತಿಗಳನ್ನುಳ್ಳ ಜನಸಂಖ್ಯೆಯನ್ನು ಹೊಂದಿವೆ. ಮೂಲದಲ್ಲಿ ಇದು ಅಮೆರಿಕಾ ಕ್ರಾಂತಿಯ ಉಪಪದಾರ್ಥ. ಕಿರುಕುಳದಿಂದಾಗಿ ಉತ್ತರಕ್ಕೆ ವಲಸೆ ಹೋದ ಸಂಯುಕ್ತ ಸಾಮ್ರಾಜ್ಯದ ೫೦,೦೦೦ ರಾಜನಿಷ್ಠರು ಕಾಡೊಳಗೆ ಬೀಡುಬಿಟ್ಟರು; ಅವರಿಂದ ಸ್ಥಾಪಿತವಾದವು ಈ ವಲಸೆ ನಗರಗಳು. ಅಮೆರಿಕ ಕ್ರಾಂತಿಗೆ ಮುನ್ನ ನೋವಾಸ್ಕಾಟಿಯಾ ಸಾಕಷ್ಟು ಸಂಖ್ಯೆಯಲ್ಲಿ ಸಕಾಚ್ ಮತ್ತು ಅಮೆರಿಕ ನಿವಾಸಿಗಳನ್ನು ಬರಮಾಡಿಕೊಂಡಿತ್ತು. ಕ್ರಾಂತಿಯ ನಂತರ ಎಲ್ಲ ವಲಸೆ ನಗರಗಳಲ್ಲೂ ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡುಗಳಿಂದ ಬಂದ ವಲಸೆಗಾರರಾದ ರಾಜನಿಷ್ಠ ವಸತಿಗಳು ಬಲಗೊಂಡವು."

* * *

> "ಕ್ವಿಬೆಕ್ ಪ್ರಾಂತ್ಯ ತೀರಾ ಭಿನ್ನ. ೧೮೬೭ರಲ್ಲಿ ಫ್ರೆಂಚ್ ಕೆನಡಾ, ಬ್ರಿಟಿಷ್ ಜನಾಂಗಗಳಿಂದ, ಜನಾಂಗ, ಭಾಷೆ ಮತ್ತು ಮತಗಳ ಅಡ್ಡಗಟ್ಟೆಗಳಿಂದ ವಿಚ್ಛೇದನಗೊಂಡು, ತನ್ನಷ್ಟಕ್ಕೆ ತಾನು ಒಂದು ಸಾಂಸ್ಕೃತಿಕ ಘಟಕವಾಗಿತ್ತು. ಅದರ ಜೀವನ ಭಿನ್ನ ಮಾದರಿಯಲ್ಲಿ ಸಾಗಿತು. ಮಧ್ಯಯುಗದ ತೀವ್ರತೆಯ ಕ್ಯಾಥೊಲಿಕ್ ಮತದಿಂದ ಪ್ರಚೋದನೆಗೊಂಡು, ಮಿಶ್ರಿತ ಪೂರಿಟಾನ್ ಮತವನ್ನು, ಅಧಿಕವಾಗಿ ಕ್ವಾಲಿನ್ ಮತೀಯವಾಗಿದ್ದ ಪಾರಮಾರ್ಥಿಕತೆಯ ಪ್ರೊಟೆಸ್ಟಾಂಟ್ ಮತವನ್ನು ಅದು ಅರೆಕೊರೆ ಸಹಾನುಭೂತಿಯಿಂದ ಸಮೀಕ್ಷಿಸಿತು. ಎರಡು ಜನಾಂಗಗಳ ಮತೀಯ ನಂಬಿಕೆಗಳು ಧ್ರುವಗಳಷ್ಟು ಅಂತರ. ಸಾಮಾಜಿಕ ಮನೋಭಾವದಲ್ಲಿ– ಧಾರ್ಮಿಕವಾಗಿ ಸದಾ ಹಾಗಿರದಿದ್ದರೂ– ಇಂಗ್ಲಿಷ್ ಪ್ರೊಟೆಸ್ಟಾಂಟ್ ಮತ್ತು ಪ್ರಜಾಪ್ರಭುತ್ವ, ವಾಸ್ತವತೆ ಮತ್ತು ಆಧುನಿಕತೆಗಳತ್ತ ತುಡಿಯುತ್ತಿತ್ತು. ಫ್ರೆಂಚ್ ಕ್ಯಾಥೊಲಿಕ್, ಮತ ಪ್ರಾಚೀನವಾದುದಕ್ಕೆ ಮಾನ್ಯತೆ, ಪಿತೃಪ್ರಾಯತೆ ಮತ್ತು ಆದರ್ಶಪ್ರಾಯತೆಗಳತ್ತ ವಾಲಿತು."

* * *

> "೧೮೯೭ರಲ್ಲಿ ಫ್ರೆಂಚ್ ಕೆನಡಾ ಏನಾಗಿತ್ತೋ, ಬಹುಮಟ್ಟಿಗೆ ಇವತ್ತಿಗೂ ಅದೇ ರೀತಿ ಉಳಿದಿದೆ. ಅದು ಇನ್ನೂ ಇಂಗ್ಲಿಷ್ ಪ್ರಾಂತ್ಯಗಳ ಕಿಂಚಿತ್ ಹಿಡಿತವಿದ್ದ ನಂಬಿಕೆಗಳನ್ನು, ಪದ್ಧತಿಗಳನ್ನು ಮತ್ತು ಸಂಸ್ಥೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಧ್ಯಾನಿಸುತ್ತಿದೆ. ವಿಶಿಷ್ಟ ಆಲೋಚನೆ, ಆವೇಶ ಮತ್ತು ತನ್ನದೇ ಆದ ಮುಖ್ಯ

---

* ಕೆನಡಾ– ಅಧ್ಯಾಯ ೧

ಮೌಲ್ಯಗಳನ್ನು ಅದು ಪಡೆದಿದೆ. ಉದಾಹರಣೆಗೆ ವಿವಾಹ ಮತ್ತು ವಿಚ್ಛೇದನದ ಬಗೆಗೆ ಅವರ ಮನೋಧರ್ಮ, ಕೆನಡಾದ ಉಳಿದ ಭಾಗದ ಪ್ರಬಲರ ದೃಷ್ಟಿಗೆ ಮಾತ್ರವಲ್ಲ, ಆಂಗ್ಲೊಸ್ಯಾಕ್ಸನ್ ಉತ್ತರ ಅಮೇರಿಕಾದ ಉಳಿದ ಭಾಗದ ಪ್ರಬಲರ ದೃಷ್ಟಿಗೆ ವಿರುದ್ಧವಾದದ್ದು.''

* * *

''ಕೆನಡಾದ ದೊಡ್ಡ ನಗರ ಮಾಂಟ್ರಿಯಲ್‌ನಲ್ಲಿ ಎರಡು ಜನಾಂಗಗಳ ಮಧ್ಯದ ಅಪರೂಪದ ವ್ಯವಹಾರ ಸಂಬಂಧವನ್ನು ಸಚಿತ್ರಗೊಳಿಸಲಾಗಿದೆ. ಜನಸಂಖ್ಯೆಯಲ್ಲಿ ಶೇ. ೬೩ ಫ್ರೆಂಚರು ಮತ್ತು ಶೇ ೨೮ ಬ್ರಿಟಿಷರು. ಇಲ್ಲಿ, ಎಲ್ಲಾದರೂ ಸರಿ, ಒಡನಾಟಕ್ಕೆ ಸಾಕಷ್ಟು ಅವಕಾಶವಿದೆ. ಆದರೆ ನಿಜವಾಗಿ ಅವರು ದೂರದೂರವೇ ಉಳಿದಿದ್ದಾರೆ– ವ್ಯಾಪಾರ ಮತ್ತು ರಾಜಕೀಯ ಅವರನ್ನು ಬಲವಂತವಾಗಿ ಒಂದುಗೂಡಿಸುವುದನ್ನು ಬಿಟ್ಟರೆ ಅವರಿಗೆ ತಮ್ಮದೇ ಆದ ವಾಸಸ್ಥಾನದ ವಿಭಾಗಗಳಿವೆ. ತಮ್ಮದೇ ಆದ ಅಂಗಡಿ ಮುಂಗಟ್ಟುಗಳ ಕೇಂದ್ರಗಳಿವೆ. ಇಬ್ಬರಲ್ಲಿ ಜನಾಂಗಿಕ ಬಿಗಿದೋರಣೆಗೆ ಹೆಸರಾದವರೆಂದರೆ ಇಂಗ್ಲಿಷರು.''

* * *

''ಇಂಗ್ಲಿಷ್ ಮಾತನಾಡುವ ಮಾಂಟ್ರಿಯಲ್‌ನ ನಿವಾಸಿಗಳು ಒಟ್ಟಿನಲ್ಲಿ ಫ್ರೆಂಚ್ ಮಾತನಾಡುವ ಸಹಪೌರರನ್ನು ಅರಿತುಕೊಳ್ಳಲಾಗಲೀ, ಅವರ ಭಾಷೆಯನ್ನು ಕಲಿಯಲಾಗಲೀ, ಅವರ ಪದ್ಧತಿ ಪರಂಪರೆಗಳನ್ನು ಮತ್ತು ಉತ್ತಮ ಉದ್ದೇಶಗಳನ್ನು ಅರ್ಥ ಮಾಡಿಕೊಳ್ಳಲಾಗಲೀ, ಅವರ ಗುಣಾವಗುಣಗಳನ್ನು ಸೂಕ್ಷ್ಮ ಕಣ್ಣಿನಿಂದ ಮತ್ತು ಸಹಾನುಭೂತಿಯ ಮನಸ್ಸಿನಿಂದ ನಿರೀಕ್ಷಿಸುವುದಾಗಲೀ ಯಾವುದೇ ಪ್ರಯತ್ನವನ್ನು ಮಾಡಿಲ್ಲ. ಈ ಎರಡು ಜನಾಂಗಗಳ ಪ್ರತ್ಯೇಕತೆ ಭಾಷೆಯ ಅಡ್ಡಗೋಡೆಯಿಂದ ಪ್ರಚೋದಿತವಾಗಿದೆ. ೧೯೨೧ರ ಜನಗಣತಿ ಬಹಿರಂಗಪಡಿಸಿದ ನಿಜಸಂಗತಿಯಲ್ಲಿ ಸೂಚಿತಾರ್ಥದ ನಿಧಿ ಇದೆ. ಎಂದರೆ, ಶೇ. ೫೦ರಷ್ಟಿರುವ ಫ್ರೆಂಚ್ ಮೂಲದ ಜನ ಇಂಗ್ಲಿಷ್ ಮಾತನಾಡಲು ಅಸಮರ್ಥರು. ಮಾಂಟ್ರಿಯಲ್‌ನಲ್ಲೂ ಕೂಡ ಶೇ. ೨೦ರಷ್ಟಿರುವ ಬ್ರಿಟಿಷರು ಫ್ರೆಂಚನ್ನು ಮಾತನಾಡಲಾರರು ಮತ್ತು ಶೇ. ೩೪ರಷ್ಟಿರುವ ಫ್ರೆಂಚರು ಇಂಗ್ಲೀಷನ್ನು ಮಾತನಾಡಲಾರರು. ಸಮಾನ ಭಾಷೆಯ ಅಭಾವ ಎರಡು ಜನಾಂಗಗಳ ಮಧ್ಯದ ಬಿರುಕನ್ನು ಉಳಿಸಿಕೊಂಡು ಬಂದಿದೆ ಮತ್ತು ಬೆಸುಗೆಯನ್ನು ತಪ್ಪಿಸಿದೆ.
ಸಹವಾಸದ ಮಹತ್ವವೆಂದರೆ ಅದು ಸರ್ಕಾರದ ಉಪಕರಣವನ್ನು ಒದಗಿಸಿತು. ಅದು ಫ್ರೆಂಚರನ್ನು, ತಮ್ಮ ವಿಶಿಷ್ಟ ರಾಷ್ಟ್ರೀಯ ಬದುಕನ್ನು ಉಳಿಸಿಕೊಂಡೆ, ಬ್ರಿಟಿಷರೊಡನೆ ಸಂತುಷ್ಟ ಪಾಲುದಾರರಾಗಲು ಮತ್ತು ಕೆನಡಾ ಅತೀತ ರಾಷ್ಟ್ರೀಯತೆಯನ್ನು ಪಡೆದು, ತಮ್ಮ ಸ್ವಂತ ಸಮೂಹದಿಂದ ಸಮಗ್ರ ಅಧಿಪತ್ಯದವರೆಗೂ ವಿಸ್ತರಿಸಲು ಶಕ್ತರನ್ನಾಗಿಸಿತು.''

* * *

''ಕೆನಡಾದಲ್ಲಿ ಸಂಯುಕ್ತ ಪದ್ಧತಿ ಯಶಸ್ವಿಯಾಗಿ ವಿಶಾಲ ರಾಷ್ಟ್ರೀಯತೆಗೆ ದಾರಿ ತೆರೆದಾಗ, ಅದು ಪ್ರಾಯೋಜಿಸಿದ ಸಹಕಾರ, ಕೆಲವು ಸಾರಿ, ಫ್ರೆಂಚ್ ಮತ್ತು ಬ್ರಿಟಿಷರ ಮಧ್ಯದ ಅಭಿಪ್ರಾಯದ ರಭಸ

> ಘರ್ಷಣೆಯಿಂದ ತೀವ್ರ ದಣಿವಿಗೆ ಈಡಾಗುತ್ತಿತ್ತು. ಖಂಡಿತವಾಗಿ ಆಗಾಗ್ಗೆ ಅತೀತ ರಾಷ್ಟ್ರೀಯತೆ ದುರ್ಬಲ ನೆರಳಿನ ಮಟ್ಟಕ್ಕೆ ಇಳಿಯುತ್ತಿತ್ತು.''

ದಕ್ಷಿಣ ಆಫ್ರಿಕಾದ ಪಾಡೇನು? ಬೋಯರ್ಸ್ ಮತ್ತು ಬ್ರಿಟಿಷರ ಮಧ್ಯದ ಸಂಬಂಧವನ್ನು ಅರಿಯದವರೆಲ್ಲ ಶ್ರೀಯುತ ಈ.ಎಚ್. ಬ್ರೂಕ್ಸ್* ಏನು ಹೇಳಿದ್ದಾರೋ ಅದನ್ನು ಪರಿಶೀಲಿಸಲಿ:

> ''ದಕ್ಷಿಣ ಆಫ್ರಿಕಾದ ಎರಡು ಬಿಳಿಯ ಜನಾಂಗಗಳಿಗೂ ದಕ್ಷಿಣ ಆಫ್ರಿಕಾದ ರಾಷ್ಟ್ರೀಯತೆ ಎಷ್ಟು ಸಮಾನವಾಗಿದೆ? ನಿಜವಾಗಿ, ದಕ್ಷಿಣ ಆಫ್ರಿಕಾದಲ್ಲಿ ಆಫ್ರಿಕಾನ್ನರ ನೈಜ ಮತ್ತು ತೀವ್ರ ರಾಷ್ಟ್ರೀಯತೆ ಇದೆ. ಆದರೆ ಅದು ಸಾಮಾನ್ಯವಾಗಿ ಒಂದು ಬಿಳಿಯ ಜನಾಂಗಕ್ಕೆ ಸೀಮಿತವಾದ ಭಾವನೆ. ಆಫ್ರಿಕನ್ ಭಾಷಾಪ್ರೇಮದಿಂದ ಅದಕ್ಕೆ ಸಾಕಷ್ಟು ಮಹತ್ವದ ವೈಲಕ್ಷ್ಯಣ್ಯವನ್ನು ಕೊಡಲಾಯಿತು. ಆ ಆಫ್ರಿಕನ್ ಭಾಷೆ ಮೂಲತಃ ಹಾಲೆಂಡಿನಿಂದ ಬಂದು ಮೊದಲು ನೆಲೆನಿಂತವರ ಭಾಷೆ; ಅದು ಕಾಲದ ಗತಿಶೀಲತೆಯನ್ನು ಅಧಿಕಪ್ರಮಾಣದಲ್ಲಿ ಮತ್ತು ಹುಗುನಾಟ್ ಹಾಗೂ ಜರ್ಮನ್ ಪ್ರಭಾವದಿಂದ ಕಡಿಮೆ ಪ್ರಮಾಣದಲ್ಲಿ ಬದಲಾವಣೆಗೊಂಡಿತು. ಆಫ್ರಿಕಾನ್ನರ ರಾಷ್ಟ್ರೀಯತೆ ಪ್ರತ್ಯೇಕವಾಗಿರಲು ಬಯಸುತ್ತದೆ; ಎಲ್ಲ ವಿಧದಲ್ಲೂ ದಕ್ಷಿಣ ಆಫ್ರಿಕಾದ ನಿಷ್ಠಾವಂತ ಪುತ್ರನಾದರೂ, ಇಂಗ್ಲಿಷ್ ಮಾತನಾಡುವ ಮನುಷ್ಯನಿಗೆ ಅಲ್ಲಿ ಪ್ರಾಮುಖ್ಯತೆ ಇಲ್ಲ.''

* * *

> ''ಇವತ್ತು ದಕ್ಷಿಣ ಆಫ್ರಿಕಾ ದೇಶವೆಂಬುದು ಇದೆಯೇ?
> ''ದಕ್ಷಿಣ ಆಫ್ರಿಕಾದ ಜೀವನದಲ್ಲಿ, ಇತ್ಯಾತ್ಮಕ ಉತ್ತರದ ವಿರುದ್ಧ, ಹೋರಾಡುವ ಅಂಶಗಳಿವೆ.''

* * *

> ಇಂಗ್ಲಿಷ್ ಮಾತನಾಡುವ ದಕ್ಷಿಣ ಆಫ್ರಿಕನ್ನರಲ್ಲಿ ರಾಷ್ಟ್ರೀಯ ಐಕ್ಯತೆಯ ಗುರಿಯನ್ನು ಅಡ್ಡಿಪಡಿಸುವಂಥ ಅನೇಕ ಒಲವುಗಳು ಕಂಡುಬರುತ್ತವೆ. ಜನಾಂಗದ ಎಲ್ಲ ಮಹದ್ಗುಣಗಳ ಜೊತೆಯಲ್ಲಿ ಒಂದು ಪ್ರಧಾನ ಕೊರತೆಯೂ ಇದೆ– ಕಲ್ಪನಾಶಕ್ತಿಯ ಅಭಾವ, ಇನ್ನೊಬ್ಬನ ಸ್ಥಾನದಲ್ಲಿ ತನ್ನ ಆತ್ಮವನ್ನಿಟ್ಟು ಪರ್ಯಾಲೋಚಿಸುವ ಕಷ್ಟ. ಭಾಷೆಯ ಪ್ರಶ್ನೆಯಲ್ಲಿ ಇದು ಸ್ಫುಟವಾಗಿ ಬಹಿರಂಗವಾಗುವಂತೆ ಬೇರೆಲ್ಲೂ ಆಗುವುದಿಲ್ಲ. ೩೧ರ ಇತ್ತೀಚಿನವರೆಗೂ ವ್ಯಾಪಾರೋದ್ದೇಶದಿಂದ (ಪ್ರಜಾಸೇವಾ ಇಲಾಖೆಯ ಅಧಿಕಾರಿಗಳಂತೆ) ಹೆಚ್ಚೂ ಕಡಿಮೆ ಬಲವಂತವಾಗಿ ಕಲಿಯುವರನ್ನುಳಿದು, ತೌಲನಿಕವಾಗಿ ಇಂಗ್ಲಿಷ್ ಮಾತನಾಡುವ ಕೆಲವೇ ದಕ್ಷಿಣ ಆಫ್ರಿಕನ್ನರು, ಆಫ್ರಿಕನ್ ಭಾಷೆಯನ್ನು ಅಭ್ಯಸಿಸಿದ್ದಾರೆ; ಇನ್ನೂ ಕೆಲವರು ಸಂಭಾಷಣೆಯಲ್ಲಿ ಮಾತ್ರ ಬಳಸಿದ್ದಾರೆ. ವಿಪರ್ಯಾಯ ಪ್ರಮಾಣದ ಅಸಹನೆಯಿಂದ ನೋಡಿದ್ದಾರೆ. ಹೆಚ್ಚು ಜನ

---

* ದಿ ಪೊಲಿಟಿಕಲ್ ಫ್ಯೂಚರ್ ಆಫ್ ಸೌತ್ ಆಫ್ರಿಕಾ, ೧೯೨೭.

**ಕೇವಲ ಸಹನೆಯಿಂದ, ತಮ್ಮ ಮನಸ್ಥಿತಿಗನುಗುಣವಾಗಿ ಉದ್ರೇಕ ಅಥವಾ ತಮಾಷೆಯಿಂದ ನೋಡಿದ್ದಾರೆ.''**

ಇದೇ ಅಂಶದ ಮೇಲೆ ಬೇರೊಬ್ಬರ ಸಾಕ್ಷ್ಯವನ್ನು ಆಲಿಸಬಹುದು. ಆತ ಶ್ರೀಯುತ ಮ್ಯಾನ್‌ಫ್ರೆಡ್ ನಾಥನ್.* ದಕ್ಷಿಣ ಆಫ್ರಿಕಾದ ಬೋಯರ್ಸ್ ಮತ್ತು ಬ್ರಿಟಿಷರ ಮಧ್ಯೆ ಇರುವ ಸಂಬಂಧದ ಬಗ್ಗೆ ಆತ ಹೀಗೆ ಹೇಳುತ್ತಾನೆ:

**''ಮುಖ್ಯವಾಗಿ ಅವರಿಬ್ಬರೂ ಪ್ರೊಟೆಸ್ಟಾಂಟ್ ಮತದವರು. ಧಾರ್ಮಿಕ ಭಿನ್ನಾಭಿಪ್ರಾಯಗಳು ಹೆಚ್ಚು ಗಣನೆಗೆ ಬಾರದಿರುವುದರಿಂದ, ಈಚಿನ ದಿನಗಳಲ್ಲಿ ಇದು ಹೆಚ್ಚು ಪ್ರಾಮುಖ್ಯವೆನ್ನಿಸುವುದಿಲ್ಲ. ವಾಣಿಜ್ಯ ವ್ಯವಹಾರಗಳಲ್ಲಿ ಅವರು ಮುಕ್ತವಾಗಿ ಪರಸ್ಪರ ವ್ಯವಹರಿಸುತ್ತಾರೆ.''**

* * *

**''ಇಷ್ಟಾದರೂ, ಬಿಳಿ ಜನರ ಎರಡು ದೊಡ್ಡ ಗುಂಪುಗಳ ಮಧ್ಯೆ ಇಲ್ಲಿಯವರೆಗೆ ಸಂಪೂರ್ಣ ಮುಕ್ತ ಒಡನಾಟವಿತ್ತು ಎಂದು ನಿಜವಾಗಿ ಹೇಳಲಾಗುವುದಿಲ್ಲ. ವಿಶಾಲ ನಗರ ಪ್ರದೇಶಗಳಲ್ಲಿ ವಾಸ ಮಾಡುವ ಜನ ಪ್ರಮುಖವಾಗಿ ಇಂಗ್ಲಿಷರು; ಈ ಪಟ್ಟಣ ವಾಸಿಗಳಿಗೆ ಗ್ರಾಮಾಂತರ ಜನತೆಯ ಬದುಕಿನ ರೀತಿನೀತಿಯ ಬಗ್ಗೆ ಏನೇನೂ ತಿಳಿದಿಲ್ಲ ಎಂಬುದು ಇದಕ್ಕೆ ಭಾಗಶಃ ಕಾರಣ ಎಂದು ಸೂಚಿಸಲಾಗುತ್ತದೆ. ಆದರೆ ಗ್ರಾಮಾಂತರ ಪ್ರದೇಶದ ಊರುಗಳಲ್ಲೂ, ನಿಯಮದಂತೆ, ಬೋಯರ್ಸ್ ಪ್ರವಾಸಿಗರಿಗೆ ಅಧಿಕ ಪ್ರಮಾಣದ ಸ್ನೇಹ ಶೀಲತೆಯನ್ನೂ ಆದರಣೀಯತೆಯನ್ನೂ ತೋರಿಸಿದರೂ ಸಹ ಎರಡು ಗುಂಪುಗಳ ಮಧ್ಯೆ ಹೆಚ್ಚು ಸಾಮಾಜಿಕ ಒಡನಾಟವಿಲ್ಲ– ವ್ಯಾಪಾರ ಅಥವಾ ವೃತ್ತಿ ಸಂಬಂಧ ಮತ್ತು ಸಹಕಾರ ಬೇಕಾಗಿರುವ ಧರ್ಮಾರ್ಥದ ಅಥವಾ ಸಾರ್ವಜನಿಕ ಸಾಮಾಜಿಕ ಸಮಾರಂಭಗಳಲ್ಲಿ ಕೂಡುವುದರ ಹೊರತು.''**

ಕೋಮು ದ್ವೇಷವಿರುವುದು ಭಾರತದ ಒಂದೇ ಕಡೆ ಮಾತ್ರವಲ್ಲ ಎಂಬುಂದು ಸ್ಪಷ್ಟ. ರಾಜಕೀಯ ಐಕ್ಯತೆಯಿಂದ ಇಂಗ್ಲಿಷರೊಡನೆ ಬದುಕಲು ಕೆನಡಾದ ಫ್ರೆಂಚರಿಗೆ ಜಾತಿ ದ್ವೇಷ ಅಡ್ಡಬರದಿರುವಾಗ, ಡಚ್ಚರೊಡನೆ ರಾಜಕೀಯ ಐಕ್ಯತೆಯಿಂದ ಬದುಕಲು ದಕ್ಷಿಣ ಆಫ್ರಿಕಾದ ಇಂಗ್ಲಿಷರಿಗೆ ಅದು ಅಡ್ಡ ಬರದಿರುವಾಗ, ಜರ್ಮನರೊಡನೆ ರಾಜಕೀಯ ಐಕ್ಯತೆಯಿಂದ ಬದುಕಲು ಸ್ವಿಟ್ಜರ್‌ಲೆಂಡಿನ ಇಟಾಲಿಯನ್ನರು ಮತ್ತು ಫ್ರೆಂಚರಿಗೆ ಅದು ಅಡ್ಡ ಬರದಿರುವಾಗ, ಭಾರತದ ಹಿಂದೂಗಳು ಮತ್ತು ಮುಸ್ಲಿಮರು ಬಂದು ಸಂವಿಧಾನದ ಅಡಿಯಲ್ಲಿ ಜೊತೆಯಾಗಿ ಬದುಕಲು ಅದೇಕೆ ಅಸಾಧ್ಯವಾಗುತ್ತದೆ?

---

* ದಿ ಸೌತ್ ಆಫ್ರಿಕನ್ ಕಾಮನ್ ವೆಲ್ತ್, ಪು.೩೬೫.

## IV

ಮುಸ್ಲಿಮರು ಬಹುಸಂಖ್ಯಾತ ಕಾಂಗ್ರೆಸ್‌ನಲ್ಲಿ ನಂಬಿಕೆ ಕಳೆದುಕೊಂಡಿದ್ದಾರೆ ಎಂಬ ಕಾರಣಕ್ಕಾಗಿ ಪಾಕಿಸ್ತಾನ ಬೇಕೆ? ಎರಡು ವರ್ಷ ಮೂರು ತಿಂಗಳು ಕಾಂಗ್ರೆಸ್ಸು ಅಧಿಕಾರದಲ್ಲಿದ್ದಾಗ ಹಿಂದೂಗಳಿಂದ ನಡೆದ ದಬ್ಬಾಳಿಕೆ ಮತ್ತು ದಮನನೀತಿಗೆ, ಕಾಂಗ್ರೆಸ್ ಮಂತ್ರಿಮಂಡಲ ಅದನ್ನು ಕಂಡೂ ಕಾಣದಂತಿದ್ದುದಕ್ಕೆ ಕೆಲವು ಉದಾಹರಣೆಗಳನ್ನು ಕೊಟ್ಟು ಮುಸ್ಲಿಮರು ತಮ್ಮ ಅಪನಂಬಿಕೆಯನ್ನು ಸಮರ್ಥಿಸಿಕೊಳ್ಳುತ್ತಾರೆ. ದೌರ್ಭಾಗ್ಯವೆಂದರೆ ಜಿನ್ನಾಸಾಹೇಬ್ ಈ ಕುಂದುಕೊರತೆಗಳ ಬಗ್ಗೆ ವಿಚಾರಣೆ ನಡೆಸಬೇಕೆಂದು ತನ್ನ ಹಕ್ಕು ಕೇಳಿಕೆಯಲ್ಲಿ ರಾಜಸಮಿತಿಯನ್ನು ಒತ್ತಾಯಿಸಲಿಲ್ಲ. ಆತ ಹಾಗೆ ಮಾಡಿದ್ದರೆ, ಈ ಆರೋಪಗಳಲ್ಲಿ ಯಾವ ಸತ್ಯವಿದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬಹುದಿತ್ತು. ಮುಸ್ಲಿಂ ಲೀಗ್ ಸಮಿತಿಗಳ ವರದಿ*ಯಲ್ಲಿ ಕೊಟ್ಟಿರುವ ಹಾಗೆ, ಆ ಸಂಗತಿಗಳನ್ನೆಲ್ಲ ಸೂಕ್ಷ್ಮವಾಗಿ ಪರಿಶೀಲಿಸಿದರೆ, ಆಪಾದನೆಗಳಲ್ಲಿ ಸ್ವಲ್ಪ ಹುರುಳಿರಬಹುದು. ಆದರೆ ಹೆಚ್ಚಿನ ಪ್ರಮಾಣದ್ದು ಅತಿಶಯೋಕ್ತಿ ಎಂಬ ಪರಿಣಾಮ ಓದುಗನ ಮೇಲೆ ಉಂಟಾಗುತ್ತದೆ. ಸಂಬಂಧಿಸಿದ ಕಾಂಗ್ರೆಸ್ ಮಂತ್ರಿಮಂಡಲಗಳು ಆಪಾದನೆಗಳನ್ನು ನಿರಾಕರಿಸಿ ಹೇಳಿಕೆ ನೀಡಿವೆ. ಕಾಂಗ್ರೆಸ್ ಅಧಿಕಾರದಲ್ಲಿದ್ದ ಎರಡು ವರ್ಷ ಮೂರು ತಿಂಗಳ ಅವಧಿಯಲ್ಲಿ ರಾಜತಂತ್ರಜ್ಞತೆಯನ್ನು ತೋರಿಸದೆ ಇರಬಹುದು, ಅಲ್ಪಸಂಖ್ಯಾತರಲ್ಲಿ ನಂಬಿಕೆಯನ್ನು ಪ್ರಚೋದಿಸದೆ ಇರಬಹುದು, ಅವರನ್ನು ತುಳಿಯಲು ಮಾತ್ರ ಪ್ರಯತ್ನಿಸಲಿಲ್ಲ. ಆದರೆ ಭಾರತವನ್ನು ವಿಭಜಿಸುವುದಕ್ಕೆ ಇದು ಕಾರಣವಾಗಬಲ್ಲುದೆ? ಕಳೆದ ವರುಷ ಕಾಂಗ್ರೆಸ್ಸನ್ನು ಬೆಂಬಲಿಸಿದ ಮತದಾರರು ಬುದ್ಧಿವಂತರಾಗಿದ್ದಾರೆ ಮತ್ತು ಈ ಸಾರಿ ಕಾಂಗ್ರೆಸ್ಸನ್ನು ಬೆಂಬಲಿಸುವುದಿಲ್ಲ ಎಂದು ಭರವಸೆ ಇಟ್ಟುಕೊಳ್ಳಲು ಸಾಧ್ಯವಿಲ್ಲವೆ? ಹಾಗಾಗದೆ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬಂದರೆ, ತಾನು ಮಾಡಿದ ತಪ್ಪುಗಳಿಂದ ಅದು ಲಾಭ ಪಡೆಯುತ್ತದೆ, ತಂಟೆತಕರಾರಿನ ಕಾರ್ಯನೀತಿಯನ್ನು ಪರಿಷ್ಕರಿಸುತ್ತದೆ ಮತ್ತು ಅದರ ಪರಿಣಾಮವಾಗಿ ತನ್ನ ಭೂತಕಾಲದ ನಡೆನುಡಿಯಿಂದ ಉಂಟಾಗಿದ್ದ ಭಯವನ್ನು ಉಪಶಮನಗೊಳಿಸುತ್ತದೆ ಎಂದು ಭಾವಿಸಬಾರದೇಕೆ?

## V

ಮುಸ್ಲಿಮರು ಒಂದು ರಾಷ್ಟ್ರ ಎಂಬ ಕಾರಣಕ್ಕಾಗಿ ಪಾಕಿಸ್ತಾನ ಬೇಕೆ? ಇಡೀ ವಿಶ್ವವೇ ರಾಷ್ಟ್ರೀಯತೆಯ ಕೆಡುಕುಗಳ ವಿರುದ್ಧ ಹಪಹಪಿಸುವ ಮತ್ತು ಯಾವುದಾದರೂ ರೀತಿಯ ಅಂತಾರಾಷ್ಟ್ರೀಯ ಸಂಸ್ಥೆಯ ಆಶ್ರಯವನ್ನು ಅಪೇಕ್ಷಿಸುವ ಸಂದರ್ಭದಲ್ಲಿ ಶ್ರೀ ಜಿನ್ನಾ ಅವರು ಮುಸ್ಲಿಮ್ ರಾಷ್ಟ್ರೀಯತೆಯ ಉಪಾಸಕನೂ ಮುಂದಾಳುವೂ ಆಗಿರುವುದು ಒಂದು ದುರಂತ. ಜಿನ್ನಾ ಸಾಹೇಬರ ಮನಸ್ಸನ್ನು ಮುಸ್ಲಿಂ ರಾಷ್ಟ್ರೀಯತೆಯ ಬಗೆಗಿನ ತಮ್ಮ ನವಾನ್ವೇಷಣೆಯ ನಂಬಿಕೆ ಎಷ್ಟು ಪ್ರಬಲವಾಗಿ ಆಕ್ರಮಿಸಿಬಿಟ್ಟಿದೆಯೆಂದರೆ, ಅಂಗಗಳು ಕುಸಿಯುವ ಸಮಾಜಕ್ಕೂ, ಅಂಗಗಳು ಕೇವಲ ಸಡಿಲಗೊಂಡಿರುವ ಸಮಾಜಕ್ಕೂ ವ್ಯತ್ಯಾಸವಿದೆ ಎಂಬುದನ್ನು ಸ್ವಸ್ಥ ಮನಸ್ಸಿನ ಯಾವ ವ್ಯಕ್ತಿಯೂ ಇದನ್ನು ಅಲಕ್ಷಿಸಲಾರ– ಒಪ್ಪಿಕೊಳ್ಳಲಿಕ್ಕೂ ಸಿದ್ಧವಿಲ್ಲ. ಯಾವಾಗ

---

* ಈ ವಿಷಯದ ಬಗ್ಗೆ, ಕಾಂಗ್ರೆಸ್ ಪ್ರಾಂತ್ಯಗಳಲ್ಲಿ ಮುಸ್ಲಿಮರ ಕಷ್ಟನಷ್ಟಗಳ ವಿಚಾರಣೆಗೆ ಅಖಿಲ ಭಾರತ ಮುಸ್ಲಿಂ ಲೀಗ್ ನೇಮಿಸಿದ್ದ ವಿಚಾರಣಾ ಸಮಿತಿಯ ವರದಿಯನ್ನು– ಪೀರ್ ಪುರ್ ವರದಿ ಎಂದು ಜನಪ್ರಿಯವಾಗಿರುವುದನ್ನು– ಅವಲೋಕಿಸಿ. ಬಿಹಾರದ ಮುಸ್ಲಿಮರ ಕಷ್ಟನಷ್ಟಗಳ ವಿಚಾರಣೆ ಮಾಡಿದ ಬಿಹಾರ ಪ್ರಾಂತ್ಯ ಮುಸ್ಲಿಮ್ ಲೀಗಿನ ವರದಿಯನ್ನು, ಬಿಹಾರ ಸರ್ಕಾರದ ವಾರ್ತಾಧಿಕಾರಿ, ವರದಿಯಲ್ಲಿದ್ದ ಆರೋಪಗಳಿಗೆ ಉತ್ತರಿಸಲು ನೀಡಿದ ಪತ್ರಿಕಾ ಸುದ್ದಿಯನ್ನು ಪ್ರಕಟಿಸಿರುವ ೧೩.೩.೩೯ರ ಅಮೃತಬಜಾರ್ ಪತ್ರಿಕೆ ಓದಿ.

ಸಮಾಜ ಕುಸಿಯುತ್ತಾ ಹೋಗುತ್ತದೋ– ಎರಡು ಜನಾಂಗಗಳ ಸಿದ್ಧಾಂತ, ಸಮಾಜ ಮತ್ತು ದೇಶದ ಇತ್ಯಾತ್ಮಕ ಕುಸಿತವಾಗುತ್ತದೆ– ಕಾರ್ಲೈಲ್ ಹೇಳುವ 'ಸಾವಯವ ತಂತುಗಳು' ಇಲ್ಲವೆಂಬ ಸತ್ಯಕ್ಕೆ ಸಾಕ್ಷ್ಯವಾಗುತ್ತದೆ. ಅಂದರೆ, ಅಂಗಗಳನ್ನು ಒಟ್ಟಿಗೆ ಬಂಧಿಸುವ ಪ್ರಾಣಾಧಾರ ಶಕ್ತಿಗಳನ್ನು ತುಂಡುತುಂಡಾಗಿ ಕತ್ತರಿಸಲಾಗಿದೆ ಎಂದು ಅರ್ಥವಾಗುತ್ತದೆ. ಅಂಥ ಸಂದರ್ಭಗಳಲ್ಲಿ ಕುಸಿತತೆಗಾಗಿ ಕೇವಲ ವ್ಯಥೆ ಪಡಬಹುದು. ಅದನ್ನು ತಡೆಯಲಾಗುವುದಿಲ್ಲ. ಆದಾಗ್ಯೂ, ಅಲ್ಲಿ ಅಂಥ ಸಾವಯವ ತಂತುಗಳು ಜೀವಂತವಾಗಿವೆಯೋ, ಅದನ್ನು ನೋಡದೆಯೇ ಉದ್ದೇಶಪೂರ್ವಕವಾಗಿ ಸಮಾಜ ಮತ್ತು ದೇಶದ ಕುಸಿತವನ್ನು ವೇಗಗೊಳಿಸುವುದು– ಮುಸ್ಲಿಮರು ಮಾಡುತ್ತಿರುವಂತೆ ತೋರುತ್ತಿರುವ ಕಾರ್ಯ– ಅಪರಾಧವೇ ಸರಿ. ಮುಸ್ಲಿಮರು ಭಿನ್ನ ಜನಾಂಗವಾಗಲು ಇಚ್ಛಿಸಿದರೆ, ಮೊದಲಿಂದಲೂ ಆಗಿದ್ದೇವೆ ಎಂಬ ಕಾರಣಕ್ಕಾಗಿ ಅಲ್ಲ, ಈಗ ಆಗಬೇಕು ಎಂಬ ಕಾರಣಕ್ಕಾಗಿ, ಮುಸಲ್ಮಾನರಲ್ಲಿ ಬಹಳಷ್ಟು ಇದೆ, ಅವರು ಮನಸ್ಸು ಮಾಡಿದರೆ, ಒಂದು ಜನಾಂಗವಾಗಿ ಅವರನ್ನು ಮಿಡಿಯಬಹುದು. ಆದರೆ ಹಿಂದೂಗಳಿಗೂ, ಮುಸ್ಲಿಮರಿಗೂ ಸಮಾನವಾಗಿರುವ ಅಂಶವನ್ನು ಅಭಿವೃದ್ಧಿಗೊಳಿಸಿದರೆ, ಅದು ಅವರನ್ನು ಒಂದು ಜನಾಂಗವಾಗಿ ಎರಕ ಹೊಯ್ಯಲು ಶಕ್ತವಾಗಬಲ್ಲುದು ಎಂಬುದು ಸಾಕಾಗದೆ? ಇಬ್ಬರಿಗೂ ಸಮಾನವಾದ ಅನೇಕ ರೀತಿನೀತಿಗಳು, ನುಡಿನಡಾವಳಿಗಳು, ಆಚರಣೆಗಳು ಮತ್ತು ಸಂಪ್ರದಾಯಗಳು ಇವೆ ಎಂಬುದನ್ನು ಯಾರೂ ಇಲ್ಲವೆನ್ನಲಾರರು. ಇವುಗಳಲ್ಲಿ ಯಾವುದಕ್ಕೆ ಒತ್ತು ಕೊಡಬೇಕೆಂಬುದು ಪ್ರಶ್ನೆ. ಸಮಾನಾಂಶಗಳ ಮೇಲೆ ಒತ್ತು ಹಾಕಿದರೆ, ಭಾರತದಲ್ಲಿ ಎರಡು ರಾಷ್ಟ್ರಗಳ ಅನಿವಾರ್ಯತೆಯನ್ನು ಸಾರುತ್ತದೆ. ಭಾರತೀಯರು ಕೇವಲ ಜನರು, ರಾಷ್ಟ್ರಾಂಗ ಎನ್ನಿಸಿಕೊಳ್ಳಲಾರರು ಎಂಬುದೇ ಜಿನ್ನಾ ಸಾಹೇಬರನ್ನು ಮುನ್ನಡೆಸುವ ದೃಷ್ಟಿ ಎಂದು ತೋರುತ್ತದೆ. ಇದನ್ನು ಅನುಸರಿಸಿ ಬ್ರಿಟಿಷ್ ಲೇಖಕರ ಸಾಲು ಭಾರತೀಯರನ್ನು ಕುರಿತು ಹೇಳುವಾಗ ಹಿಂದೂಸ್ತಾನದ ಜನರು ಎಂದು ಹೇಳುತ್ತಾ, ಹಿಂದೂ ಜನಾಂಗ ಎಂದು ಹೇಳುವುದನ್ನು ಬಿಟ್ಟರು. ಭಾರತೀಯರು ಕೇವಲ ಜನತೆ, ರಾಷ್ಟ್ರವಲ್ಲ ಎಂದು ಒಪ್ಪಿಬಿಡೋಣ. ಅದರಿಂದ ಏನಾದ ಹಾಗಾಯಿತು? ಮಹಾ ಸಂಸ್ಥಾರೂಪದ ವ್ಯಕ್ತಿಗಳಂತೆ ಜನಾಂಗಗಳ ಉದಯವಾಗುವ ಮುನ್ನ ಇದ್ದದ್ದು ಜನರು ಮಾತ್ರ ಎಂದು ಇತಿಹಾಸ ದಾಖಲಿಸುತ್ತದೆ. ಭಾರತೀಯರು ಜನರಲ್ಲದೆ ಬೇರೆ ಅಲ್ಲ ಎಂದು ಹೇಳಿದರೆ ನಾಚಿಕೆ ಪಡಬೇಕಾದ್ದು ಏನೂ ಇಲ್ಲ. ಭಾರತದ ಜನ– ಅವರು ಬಯಸಿದರೆ– ಒಂದು ಜನಾಂಗವಾಗುವುದಿಲ್ಲ ಎಂದು ಹತಾಶರಾಗಬೇಕಾದ ಕಾರಣವಿಲ್ಲ. ಏಕೆಂದರೆ, ಡಿಸ್ರೇಲಿ ಹೇಳಿದಂತೆ, ಜನಾಂಗ ಒಂದು ಕಲಾಕೃತಿ ಮತ್ತು ಕಾಲಕೃತಿ. ಹಿಂದೂಗಳು ಮತ್ತು ಮುಸಲ್ಮಾನರು ತಮ್ಮನ್ನು ಒಟ್ಟಿಗೆ ಸೇರಿಸುವ ಸಂಗತಿಗಳಿಗೆ ಒತ್ತುಕೊಡಲು ಮತ್ತು ತಮ್ಮನ್ನು ಅಗಲಿಸುವ ಸಂಗತಿಗಳನ್ನು ಮರೆಯಲು ಮನಸ್ಸು ಮಾಡಿದರೆ, ಕಾಲಕ್ರಮೇಣ ಅವರು ಜನಾಂಗವಾಗಿ ಬೆಳೆಯಲಾರರು ಎಂಬುದಕ್ಕೆ ಕಾರಣವೇ ಇಲ್ಲ. ಅವರ ರಾಷ್ಟ್ರೀಯತೆ ಫ್ರೆಂಚರ ಹಾಗೆ ಅಥವಾ ಜರ್ಮನರ ಹಾಗೆ ಅಷ್ಟು ಸಂಪೂರ್ಣಯುಕ್ತವಾಗಿಲ್ಲದೆ ಇರಬಹುದು, ಒಪ್ಪಿಕೊಳ್ಳೋಣ. ಅವರು ಸಮಾನ ಸಮಸ್ಯೆಗಳ ಮೇಲೆ ಸಮಾನ ಮನಸ್ಸನ್ನು ರೂಢಿಸಿಕೊಳ್ಳಬಹುದು. ರಾಷ್ಟ್ರೀಯತೆಯ ಹುಮ್ಮಸ್ಸು ಉತ್ಪಾದಿಸುವ ಆ ಮೊತ್ತಕ್ಕೆ ಹೆಚ್ಚು ಬೆಲೆಯುಂಟು. ಭಿನ್ನತೆಯ ಮೇಲೆಯೇ ಒತ್ತು ಕೊಟ್ಟು ಪರಸ್ಪರ ಬಂಧಿಸುವ ಶಕ್ತಿಗಳನ್ನು ಸಂಪೂರ್ಣವಾಗಿ ಅಲಕ್ಷಿಸುವುದು ಮುಸ್ಲಿಂ ಲೀಗಿಗೆ ಸರಿಯೆ? ಎರಡು ಜನಾಂಗಗಳು ಅಸ್ತಿತ್ವಕ್ಕೆ ಬಂದರೆ ಅದು ಪೂರ್ವ ಸಂಕಲ್ಪಿತ ಎಂಬ ಕಾರಣಕ್ಕಾಗಿ ಅಲ್ಲ ಎಂಬುದನ್ನು ಮರೆಯಬಾರದು. ಅದು ಉದ್ದೇಶಪೂರ್ವಕ ಸಂಚಿನ ಫಲ.

ನಾನು ಹೇಳಿದ ಹಾಗೆ ಭಾರತದ ಮುಸ್ಲಿಮರು ಇನ್ನೂ 'ವಾಸ್ತವ' ಅಥವಾ 'ಶಾಸನಾಧಾರ' ಪರಿಭಾಷೆಯ ಅರ್ಥದಲ್ಲಿ ರಾಷ್ಟ್ರ ಎನ್ನಿಸಿಕೊಳ್ಳುವುದಿಲ್ಲ. ಆದರೆ ರಾಷ್ಟ್ರವಾಗಿ ಮಾರ್ಪಡಿಸುವ ಅಂಶಗಳು ಅವರಲ್ಲಿವೆ

ಎಂದು ಮಾತ್ರ ಹೇಳಬಹುದು. ಭಾರತದ ಮುಸ್ಲಿಮರು ಒಂದು ರಾಷ್ಟ್ರ ಎಂದು ಒಪ್ಪಿಕೊಂಡರೂ, ಎರಡು ಜನಾಂಗಗಳಿರುವ ದೇಶ ಭಾರತ ಮಾತ್ರವೆ? ಕೆನಡಾದ ಪರಿಸ್ಥಿತಿ ಏನು? ಕೆನಡಾದಲ್ಲಿ ಎರಡು ಜನಾಂಗಗಳು– ಇಂಗ್ಲಿಷರು ಮತ್ತು ಫ್ರೆಂಚರು– ಇವೆ ಎಂಬುದು ಎಲ್ಲರಿಗೂ ಗೊತ್ತು. ದಕ್ಷಿಣ ಆಫ್ರಿಕಾದಲ್ಲಿ ಎರಡು ರಾಷ್ಟ್ರಗಳು– ಇಂಗ್ಲಿಷರು ಮತ್ತು ಡಚ್ಚರು– ಇಲ್ಲವೆ? ಸ್ವಿಟ್ಜರ್‌ಲೆಂಡಿನ ಸ್ಥಿತಿಯೇನು? ಸ್ವಿಟ್ಜರ್‌ಲೆಂಡಿನಲ್ಲಿ ಮೂರು ಜನಾಂಗಗಳು– ಜರ್ಮನ್ನರು, ಫ್ರೆಂಚರು ಮತ್ತು ಇಟಾಲಿಯನ್ನರು ಇವೆ ಎಂಬುದು ಯಾರಿಗೆ ಗೊತ್ತಿಲ್ಲ? ಕೆನಡಾದ ಫ್ರೆಂಚರು ತಾವು ಪ್ರತ್ಯೇಕ ರಾಷ್ಟ್ರವೆಂದು ವಿಭಜನೆಗೆ ಒತ್ತಾಯಿಸಿದರೆ? ತಾವು ಬೋಯರುಗಳಿಗಿಂತ ವಿಶಿಷ್ಟ ರಾಷ್ಟ್ರವೆಂದು ದಕ್ಷಿಣ ಆಫ್ರಿಕಾದ ಇಂಗ್ಲಿಷರು ಭಾಗಕ್ಕಾಗಿ ಹಕ್ಕು ಚಲಾಯಿಸಿದರೆ? ಜರ್ಮನ್ನರು, ಫ್ರೆಂಚರು ಮತ್ತು ಇಟಾಲಿಯನ್ನರು ತಾವು ಒಂದು ದೇಶದ ಪ್ರಜೆಗಳಂತೆ ಒಂದು ಸಂವಿಧಾನದಡಿಯಲ್ಲಿ ಬದುಕಿದರೆ ತಮ್ಮ ವಿಶಿಷ್ಟ ಸಂಸ್ಕೃತಿಗಳನ್ನು ಕಳೆದುಕೊಳ್ಳುತ್ತೇವೆ ಎಂದು ಎಂದಾದರೂ ಭಾವಿಸಿದರೆ? ಪ್ರತಿಯಾಗಿ, ಈ ಎಲ್ಲ ವಿಶಿಷ್ಟ ಜನಾಂಗಗಳು ತಮ್ಮ ರಾಷ್ಟ್ರೀಯತೆಯನ್ನು ಮತ್ತು ವಿಶಿಷ್ಟ ಸಂಸ್ಕೃತಿಗಳನ್ನು ಕಳೆದುಕೊಳ್ಳುತ್ತೇವೆ ಎಂಬ ಭಯವಿಲ್ಲದೆ, ಒಂದು ದೇಶದ ಒಳಗೆ ಒಂದು ಸಂವಿಧಾನದ ಕೆಳಗೆ ಒಟ್ಟಾಗಿ ಬರುವುದರಲ್ಲಿ ತೃಪ್ತಿಪಟ್ಟರು. ಕೆನಡಾದ ಫ್ರೆಂಚರು, ಇಂಗ್ಲಿಷರೊಡನೆ ಜೀವಿಸಿ ತಮ್ಮ ಫ್ರೆಂಚ್ ತನವನ್ನು ಕಳೆದುಕೊಳ್ಳಲಿಲ್ಲ. ದಕ್ಷಿಣ ಆಫ್ರಿಕಾದ ಇಂಗ್ಲಿಷರು ಬೋಯರುಗಳೊಡನೆ ಬದುಕಿ ತಮ್ಮ ಇಂಗ್ಲಿಷ್ ತನವನ್ನು ಕಳೆದುಕೊಳ್ಳಲಿಲ್ಲ. ಸಮಾನ ದೇಶ ಮತ್ತು ಸಮಾನ ಸಂವಿಧಾನಕ್ಕೆ ಸಮಾನ ರಾಜನಿಷ್ಠೆಯಿದ್ದರೂ ಜರ್ಮನರು, ಫ್ರೆಂಚರು ಮತ್ತು ಇಟಾಲಿಯನ್ನರು ವಿಶಿಷ್ಟ ಜನಾಂಗಗಳಾಗಿ ಉಳಿದರು. ಸ್ವಿಟ್ಜರ್‌ಲೆಂಡಿನ ವಿಷಯ ಹೆಚ್ಚು ಗಮನಾರ್ಹ. ಅದು ಬೇರೆ ದೇಶಗಳಿಂದ ಸುತ್ತುವರಿಯಲ್ಪಟ್ಟಿದೆ. ಆ ಬೇರೆ ದೇಶಗಳ ಜನಾಂಗಗಳು ಸ್ವಿಟ್ಜರ್‌ಲೆಂಡಿನ ಜನಾಂಗಗಳೊಡನೆ ಹತ್ತಿರದ ಮತೀಯ ಮತ್ತು ಜನಾಂಗಿಕ ಸಂಬಂಧಗಳನ್ನು ಹೊಂದಿವೆ. ಈ ಸಂಬಂಧಗಳನ್ನು ವಿರೋಧಿಸದೆ ಸ್ವಿಟ್ಜರ್‌ಲೆಂಡಿನ ಜನಾಂಗಗಳು ಮೊದಲು ಸ್ವಿಟ್ಜರ್‌ಲೆಂಡಿನವರು ಮತ್ತು ಅನಂತರ ಜರ್ಮನರು, ಇಟಾಲಿಯನ್ನರು ಮತ್ತು ಫ್ರೆಂಚರು.

ಕೆನಡಾದಲ್ಲಿ ಫ್ರೆಂಚರ, ದಕ್ಷಿಣ ಆಫ್ರಿಕಾದಲ್ಲಿ ಇಂಗ್ಲಿಷರ ಮತ್ತು ಸ್ವಿಟ್ಜರ್‌ಲೆಂಡಿನಲ್ಲಿ ಫ್ರೆಂಚರ ಮತ್ತು ಇಟಾಲಿಯನ್ನರ ಅನುಭವವನ್ನ ಕೊಟ್ಟಾಗ, ಭಾರತದಲ್ಲಿ ಬೇರೆ ರೀತಿಯಾಗಿ ಏಕಿರಬೇಕು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಹಿಂದೂಗಳು ಮತ್ತು ಮುಸ್ಲಿಮರು ಎರಡು ಜನಾಂಗಗಳು ಎಂದು ಭಾವಿಸಿದರೂ, ಅವರೇಕೆ ಒಂದು ದೇಶದೊಳಗೆ ಮತ್ತು ಒಂದು ಸಂವಿಧಾನದ ಕೆಳಗೆ ಬದುಕಬಾರದು? ಎರಡು ಜನಾಂಗ ಸಿದ್ಧಾಂತದ ಉದಯ ವಿಂಗಡನೆಯನ್ನೇಕೆ ಅವಶ್ಯವನ್ನಾಗಿ ಮಾಡಬೇಕು? ಹಿಂದೂಗಳೊಡನೆ ಬಾಳಿದರೆ ಮುಸ್ಲಿಮರು ಏಕೆ ತಮ್ಮ ಜನಾಂಗವನ್ನು ಹಾಗೂ ಜನಾಂಗದ ಸಂಸ್ಕೃತಿಯನ್ನು ಕಳೆದುಕೊಳ್ಳುತ್ತೇವೆ ಎಂದು ಹೆದರಬೇಕು? ಮುಸ್ಲಿಮರು ಬೇರೆಯಾಗಲು ಬಯಸಿದರೆ, "ಹಿಂದೂಗಳು ಮತ್ತು ಮುಸ್ಲಿಮರ ಮಧ್ಯೆ ಸಮಾನವಾದ ಅಂಶ ಬಹಳಷ್ಟು ಇದೆ. ಭಾಗವಾಗದ ಹೊರತು, ಹಿಂದೂಗಳೊಡನೆ ಮುಂದುವರಿಯುವ ಸಾಮಾಜಿಕ ಸಂಪರ್ಕದಿಂದಾಗಿ ಮುಸ್ಲಿಮರೊಡನೆ ಉಳಿದಿರುವ ಅಲ್ಪಸ್ವಲ್ಪ ಇಸ್ಲಾಮಿಕ್ ಸಂಸ್ಕೃತಿಯೂ ಕಾಲಕ್ರಮೇಣ ಇಲ್ಲವಾಗುತ್ತದೆ; ಪರಿಣಾಮವಾಗಿ, ಭಾರತದಲ್ಲಿ ಎರಡು ಜನಾಂಗಗಳಿಗೆ ಬದಲಾಗಿ, ಒಂದು ಜನಾಂಗ ಬೆಳೆಯತೊಡಗುತ್ತದೆ ಎಂದು ಮುಸ್ಲಿಮರು ಭಯಪಡುತ್ತಾರೆ" ಎಂದು ಸಿನಿಕನು ಸರಿಯಾಗಿಯೇ ಸಮಾರೋಪಗೊಳಿಸುತ್ತಾನೆ. ಮುಸ್ಲಿಂ ರಾಷ್ಟ್ರೀಯತೆ ಇಷ್ಟು ದುರ್ಬಲವಾಗಿದ್ದರೆ, ಭಾಗವಾಗುವ ಉದ್ದೇಶ ಕೃತಕವಾಗುತ್ತದೆ ಮತ್ತು ಪಾಕಿಸ್ತಾನ ಬೇಕೆಂಬ ವಾದ ತನ್ನ ಬುನಾದಿಯನ್ನೇ ಕಳೆದುಕೊಳ್ಳುತ್ತದೆ.

## V

ಸ್ವರಾಜ್ಯವು ಹಿಂದೂರಾಜ್ಯವಾಗಿಬಿಡುತ್ತದೆ ಎಂಬ ಕಾರಣಕ್ಕಾಗಿ ಪಾಕಿಸ್ತಾನ ಬೇಕೆ? ಈ ಕೂಗಿನಿಂದ ಮುಸ್ಲಿಮರು ಸುಲಭವಾಗಿ ಪರವಶರಾಗಿದ್ದಾರೆ. ಅದರೊಳಗೆ ಇರುವ ತಪ್ಪುಗಳನ್ನು ಬಹಿರಂಗಪಡಿಸುವುದು ಅವಶ್ಯಕ.

ಮೊದಲಿಗೆ, ಹಿಂದೂರಾಜ್ಯಕ್ಕೆ ಮುಸ್ಲಿಮರ ಆಕ್ಷೇಪಣೆ ಆತ್ಮಸಾಕ್ಷಿಯದೆ ಅಥವಾ ರಾಜಕೀಯದ್ದೆ? ಅದು ಆತ್ಮಸಾಕ್ಷಿಯ ಆಕ್ಷೇಪಣೆಯಾದರೆ, ಯಾರಾದರೂ ಹೇಳಬಹುದಾದದ್ದು ಇಷ್ಟೆ: ಅದು ತುಂಬ ವಿಸ್ಮಯವೂ ವಿಲಕ್ಷಣವೂ ಆದ ಆತ್ಮಸಾಕ್ಷಿಯ ಪ್ರಭೇದ. ಲಂಗುಲಗಾಮಿಲ್ಲದ, ನಿಗ್ರಹವಿಲ್ಲದ ಹಿಂದೂರಾಜರ ಹಿಂದೂ ರಾಜ್ಯಗಳಲ್ಲಿ ವಾಸಿಸುತ್ತಿರುವ ಲಕ್ಷಾಂತರ ಮುಸ್ಲಿಮರು ಭಾರತದಲ್ಲಿದ್ದಾರೆ. ಮುಸ್ಲಿಮರಾಗಲೀ ಅಥವಾ ಮುಸ್ಲಿಂ ಲೀಗಾಗಲೀ ಅದರ ಬಗ್ಗೆ ಯಾವುದೇ ಆಕ್ಷೇಪಣೆಯನ್ನೆತ್ತಿಲ್ಲ. ಒಮ್ಮೆ ಮುಸ್ಲಿಮರು ಬ್ರಿಟಿಷ್ ರಾಜ್ಯಕ್ಕೆ ಆತ್ಮಸಾಕ್ಷಿಯ ಆಕ್ಷೇಪಣೆ ಮಾಡಿದ್ದರು. ಈಗ ಅದಕ್ಕೆ ಅವರ ಆಕ್ಷೇಪಣೆ ಇಲ್ಲ ಮಾತ್ರವಲ್ಲ, ಅದರ ಪಕ್ಕಾ ಬೆಂಬಲಿಗರಾಗಿದ್ದಾರೆ. ಬ್ರಿಟಿಷ್ ರಾಜ್ಯ ಅಥವಾ ಬಲ ಕುಗ್ಗದ ಹಿಂದೂರಾಜರ ಹಿಂದೂರಾಜ್ಯಗಳಿಗೆ ಆಕ್ಷೇಪಣೆ ಇಲ್ಲದಿದ್ದರೂ, ಹಿಂದೂ ರಾಜ್ಯವಾಗುತ್ತದೆ ಎಂಬ ಆಧಾರದ ಮೇಲೆ ಬ್ರಿಟಿಷ್ ಇಂಡಿಯಾದ ಸ್ವರಾಜ್ಯಕ್ಕೆ ಆಕ್ಷೇಪಣೆ ಉಂಟು. ಏಕೆಂದರೆ ಅದಕ್ಕೆ ನಿಗ್ರಹ ಮತ್ತು ಸಮತೂಕ ಇರುವುದಿಲ್ಲ ಎಂಬುದು ಅವರ ಧೋರಣೆ. ಈ ತರ್ಕದ ಬೆನ್ನು ಹತ್ತುವುದು ಬಹಳ ಕಷ್ಟ.

ಹಿಂದೂ ರಾಜ್ಯದ ಬಗೆಗಿನ ರಾಜಕೀಯ ಆಕ್ಷೇಪಣೆಗಳು ಬಗೆಬಗೆಯ ನೆಲಗಟ್ಟಿನ ಮೇಲೆ ನಿಂತಿವೆ. ಹಿಂದೂ ಸಮಾಜ ಪ್ರಜಾಪ್ರಭುತ್ವಾತ್ಮಕ ಸಮಾಜವಲ್ಲ ಎಂಬುದು ಮೊದಲನೆಯ ಆಕ್ಷೇಪಣೆ. ನಿಜ, ಅದು ಅಲ್ಲ. ಮತಾಂತರದಿಂದ ಮಹತ್ವ ಪಡೆದ ಹಿಂದೂ ಸಮಾಜದ ಸುಧಾರಣೆಗಾಗಿ ಕೈಗೊಂಡ ವಿವಿಧ ಚಳುವಳಿಗಳಲ್ಲಿ ಮುಸ್ಲಿಮರು ಭಾಗವಹಿಸಿದ್ದರೆ ಎಂದು ಕೇಳುವುದು ಸರಿಯಲ್ಲ. ಹಿಂದೂ ಸಮಾಜದ ಅಪ್ರಜಾಪ್ರಭುತ್ವಾತ್ಮಕ ವರ್ತನೆ ಹೆತ್ತ ಕೆಡಕುಗಳಿಂದ ನೊಂದವರು ಮುಸ್ಲಿಮರು ಮಾತ್ರವೆ ಎಂದು ಕೇಳುವುದು ತಪ್ಪಲ್ಲ. ಹಿಂದೂ ಸಮಾಜದ ಅಪ್ರಜಾಪ್ರಭುತ್ವಾತ್ಮಕ ವರ್ತನೆಯು ಕೆಟ್ಟ ಪರಿಣಾಮಗಳನ್ನು ಲಕ್ಷಾಂತರ ಮಂದಿ ಶೂದ್ರರು ಮತ್ತು ಅಬ್ರಾಹ್ಮಣರು ಅಥವಾ ಲಕ್ಷಾಂತರ ಮಂದಿ ಅಸ್ಪೃಶ್ಯರು ಅನುಭವಿಸುತ್ತಾ ನರಳಿಲ್ಲವೆ? ಹಿಂದೂ ಆಳುವ ವರ್ಗವೊಂದನ್ನುಳಿದು– ಈ ಆಳುವ ವರ್ಗ ಹಿಂದೂ ಮೇಲ್ಜಾತಿಯವರಿಂದ ತುಂಬಿಕೊಂಡಿವೆ. ಒಟ್ಟು ಹಿಂದೂ ಜನಸಂಖ್ಯೆಯ ಶೇಕಡ ಹತ್ತರಷ್ಟು ಈ ಜನರಿದ್ದಾರೆ– ವಿದ್ಯೆಯಿಂದ, ಸಾರ್ವಜನಿಕ ಸೇವೆಯ ನೌಕರಿಯಿಂದ, ರಾಜಕೀಯ ಸುಧಾರಣೆಗಳಿಂದ ಯಾರು ತಾನೇ ಪ್ರಯೋಜನ ಪಡೆದಿದ್ದಾರೆ? ಹಿಂದೂ ರಾಜಕೀಯವನ್ನು ನಿಯಂತ್ರಿಸುವ ಹಿಂದೂ ಆಳುವ ವರ್ಗ, ಶೂದ್ರರು ಮತ್ತು ಅಸ್ಪೃಶ್ಯರ ಹಕ್ಕು ಮತ್ತು ಆಸಕ್ತಿಗಳನ್ನು ರಕ್ಷಿಸುವುದಕ್ಕಿಂತ ಹೆಚ್ಚಾಗಿ ಮುಸ್ಲಿಮರ ಹಕ್ಕು ಮತ್ತು ಆಸಕ್ತಿಗಳನ್ನು ರಕ್ಷಿಸಲು ಹೆಚ್ಚು ಗಮನ ನೀಡಿಲ್ಲವೆ? ಅಸ್ಪೃಶ್ಯರಿಗೆ ರಾಜಕೀಯ ರಿಯಾಯಿತಿ ನೀಡುವುದರ ಬಗೆಗೆ ವಿರೋಧಿಸಲು ಸಂಕಲ್ಪಿಸಿದ ಗಾಂಧಿಯೇ ಮುಸ್ಲಿಮರ ಪರವಾಗಿ ಖಾಲಿ ಚೆಕ್ಕಿಗೆ ರುಜು ಹಾಕಲು ಸಿದ್ಧರಾಗಲಿಲ್ಲವೆ? ನಿಜವಾಗಿ, ಹಿಂದೂ ಆಳುವ ವರ್ಗ, ಶೂದ್ರರು ಮತ್ತು ಅಸ್ಪೃಶ್ಯರೊಡನೆ ಅಧಿಕಾರ ಹಂಚಿಕೊಳ್ಳುವುದಕ್ಕಿಂತ ಮುಸ್ಲಿಮರೊಡನೆ ಅಧಿಕಾರ ಹಂಚಿಕೊಳ್ಳಲು ಹೆಚ್ಚು ತರಾತುರಿಯಲ್ಲಿ ಇದ್ದರೆಂದು ತೋರುತ್ತದೆ. ಖಂಡಿತವಾಗಿ, ಹಿಂದೂ ಸಮಾಜದ ಅಪ್ರಜಾಪ್ರಭುತ್ವಾತ್ಮಕ ವರ್ತನೆಯ ಬಗ್ಗೆ ಆಕ್ಷೇಪ ಎತ್ತಲು ಮುಸ್ಲಿಮರಿಗೆ ಕಮ್ಮಿ ಆಧಾರವಿದೆ ಎಂದೇ ಹೇಳಬೇಕು.

ಹಿಂದೂ ರಾಜ್ಯಕ್ಕೆ ಮುಸ್ಲಿಮರ ಆಕ್ಷೇಪಣೆಯ ಬೇರೊಂದು ಆಧಾರ– ಹಿಂದೂಗಳದು ಬಹುಸಂಖ್ಯಾತ ಕೋಮು ಮತ್ತು ಮುಸ್ಲಿಮರದು ಅಲ್ಪಸಂಖ್ಯಾತ ಕೋಮು ಎಂಬುದು. ಸತ್ಯ, ಆದರೆ ಇಂಥ ಸ್ಥಿತಿ ಅಸ್ತಿತ್ವದಲ್ಲಿರುವುದು ಭಾರತದಲ್ಲಿ ಮಾತ್ರವೆ? ಭಾರತದ ಸ್ಥಿತಿಗತಿಗಳನ್ನು ಕೆನಡಾ, ದಕ್ಷಿಣ ಆಫ್ರಿಕಾ ಮತ್ತು ಸ್ವಿಟ್ಜರ್‌ಲೆಂಡಿನ ಸ್ಥಿತಿಗತಿಗಳೊಡನೆ ಹೋಲಿಸಿ ನೋಡೋಣ. ಮೊದಲು ಜನಸಂಖ್ಯೆಯ ಹಂಚಿಕೆಯನ್ನು ತೆಗೆದುಕೊಳ್ಳೋಣ. ಕೆನಡಾ[1]ದಲ್ಲಿ ೧೦,೩೭೬,೭೮೬ ಜನಸಂಖ್ಯೆಯಲ್ಲಿ ಫ್ರೆಂಚರು ೨,೯೨೭,೯೯೦ ಮಾತ್ರ. ದಕ್ಷಿಣ ಆಫ್ರಿಕಾ[2]ದಲ್ಲಿ ಡಚ್ಚರ ಜನಸಂಖ್ಯೆ ೧,೧೨೦,೭೭೦ ಮತ್ತು ಇಂಗ್ಲಿಷರ ಜನಸಂಖ್ಯೆ ೭೮೩,೦೭೧ ಮಾತ್ರ. ಸ್ವಿಟ್ಜರ್‌ಲೆಂಡಿನಲ್ಲಿ[3] ಒಟ್ಟು ೪,೦೬೬,೪೦೦ ಜನಸಂಖ್ಯೆಯಲ್ಲಿ ಜರ್ಮನರು ೨,೯೭೪,೩೧೩, ಫ್ರೆಂಚರು ೮೩೧,೦೯೭ ಮತ್ತು ಇಟಾಲಿಯನ್ನರು ೨೪೭,೦೩೪.

ಬಹುಸಂಖ್ಯಾತ ಕೋಮಿನ ರಾಜ್ಯದಲ್ಲಿ ಚಿಕ್ಕ ಜನಾಂಗಗಳು ಯಾವುದೇ ಭಯವಿಲ್ಲದೆ ಇರಬಹುದೆಂಬುದನ್ನು ಇದು ಸೂಚಿಸುತ್ತದೆ. ಅಂಥ ಭಾವನೆ ಅವರಿಗೆ ತೀರಾ ವಿದೇಶೀಯ. ಇದು ಏಕೆ ಹೀಗೆ? ಆಳ್ವಿಕೆ ಮತ್ತು ಅಧಿಕಾರ ಕೇಂದ್ರಗಳಲ್ಲಿ– ಶಾಸನ ಸಭೆ ಮತ್ತು ಕಾರ್ಯಶಾಖೆ– ಬಹುಸಂಖ್ಯಾತ ಜನಾಂಗಗಳು ಪಾರಮ್ಯ ಪಡೆಯಲು ಸಾಧ್ಯವಿಲ್ಲ ಎಂಬುದು ಕಾರಣವೆ? ಅದಕ್ಕೆ ತೀರಾ ವಿರುದ್ಧ. ದುರದೃಷ್ಟವೆಂದರೆ ಸ್ವಿಟ್ಜರ್‌ಲೆಂಡ್, ಕೆನಡಾ ಮತ್ತು ದಕ್ಷಿಣ ಆಫ್ರಿಕಾಗಳಲ್ಲಿ ಬೇರೆ ಬೇರೆ ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತ ಜನಾಂಗಗಳು ಹೊಂದಿರುವ ಪ್ರಾತಿನಿಧ್ಯದ ನಿಜವಾದ ಹರವನ್ನು ತೋರಿಸಲು ಅಂಕಿ ಅಂಶಗಳು ದೊರಕುವುದಿಲ್ಲ. ಭಾರತದಲ್ಲಿರುವ ಹಾಗೆ, ಕೋಮುವಾರು ಸ್ಥಾನ ಮೀಸಲಾತಿ ಅಲ್ಲಿ ಇಲ್ಲದಿರುವುದೇ ಅದಕ್ಕೆ ಕಾರಣ. ಪ್ರತಿಯೊಂದು ಕೋಮೂ ತಾನು ಗೆಲ್ಲುವಷ್ಟು ಸ್ಥಾನಗಳನ್ನು ಸಾಮಾನ್ಯ ಸ್ಪರ್ಧೆಯಲ್ಲಿ ಗೆಲ್ಲಬೇಕು. ಒಟ್ಟು ಜನಸಂಖ್ಯೆಗೂ ಶಾಸನ ಸಭೆಯ ಒಟ್ಟು ಸ್ಥಾನಗಳಿಗೂ ಇರುವ ಭಾಜ್ಯ ಭಾಜಕ ಸಂಬಂಧದ ಆಧಾರದ ಮೇಲೆ ಪ್ರತಿಯೊಂದು ಜನಾಂಗ ಪಡೆಯಬಲ್ಲ ಸಂಭವನೀಯ ಸ್ಥಾನಗಳ ಸಂಖ್ಯೆಯನ್ನು ತುಂಬ ಸುಲಭವಾಗಿ ಲೆಕ್ಕ ಹಾಕಬಹುದು. ಈ ಆಧಾರದ ಮೇಲೆ ಮುಂದುವರಿದರೆ ನಾವು ಕಾಣುವುದೇನು? ಸ್ವಿಟ್ಜರ್‌ಲೆಂಡಿನಲ್ಲಿ ಕೆಳಮನೆಯ ಒಟ್ಟು ಪ್ರತಿನಿಧಿಗಳ ಸಂಖ್ಯೆ ೧೮೭. ಅವುಗಳಲ್ಲಿ ಜರ್ಮನರು ೧೩೮, ಫ್ರೆಂಚರು ೪೨ ಮತ್ತು ಇಟಾಲಿಯನ್ನರು ೭ ಸ್ಥಾನಗಳನ್ನು ಗೆಲ್ಲುವ ಸಾಧ್ಯತೆ ಇದೆ. ದಕ್ಷಿಣ ಆಫ್ರಿಕಾದ ಒಟ್ಟು ೧೫೩ ಸ್ಥಾನಗಳಲ್ಲಿ, ಇಂಗ್ಲಿಷರು ೬೨ ಮತ್ತು ಡಚ್ಚರು ೯೪ ಸ್ಥಾನಗಳನ್ನು ಗೆಲ್ಲುವ ಸಾಧ್ಯತೆ ಇದೆ. ಕೆನಡಾದಲ್ಲಿ ಒಟ್ಟು ಸ್ಥಾನಗಳು ೨೪೫. ಇವುಗಳಲ್ಲಿ ಫ್ರೆಂಚರಿಗೆ* ೬೫ ಮಾತ್ರ. ಈ ಆಧಾರದ ಮೇಲೆ ಈ ಎಲ್ಲ ದೇಶಗಳಲ್ಲಿಯೂ ಬಹುಸಂಖ್ಯಾತ ಜನಾಂಗಗಳು ಅಲ್ಪಸಂಖ್ಯಾತ ಜನಾಂಗಗಳ ಮೇಳೆ ಪಾರಮ್ಯ ಸ್ಥಾಪಿಸುವ ಸಾಧ್ಯತೆ ಇದೆ ಎಂಬುದು ಸ್ಫಟಿಕ ಸ್ಪಷ್ಟ. ನಿಜವಾಗಿ, ಶಾಸನಾನುಸಾರ ಮಾತಾಡುವಷ್ಟು ದೂರ ಒಬ್ಬ ಹೋಗಬಹುದು ಮತ್ತು ವಸ್ತುಸ್ಥಿತಿಯಂತೆ ಕೆನಡಾದಲ್ಲಿ ಫ್ರೆಂಚರು ಇಂಗ್ಲಿಷ್ ರಾಜ್ಯದ ಅಧೀನದಲ್ಲಿ ಬದುಕುತ್ತಾರೆ, ದಕ್ಷಿಣ ಆಫ್ರಿಕಾದಲ್ಲಿ ಡಚ್ಚರ ಅಧೀನದಲ್ಲಿ ಇಂಗ್ಲಿಷರು ಮತ್ತು ಸ್ವಿಟ್ಜರ್‌ಲೆಂಡಿನಲ್ಲಿ ಜರ್ಮನ್ ರಾಜ್ಯ ಅಧೀನದಲ್ಲಿ ಫ್ರೆಂಚರು ಮತ್ತು ಇಟಾಲಿಯನ್ನರು ಬದುಕುತ್ತಾರೆ. ಆದರೆ ವಾಸ್ತವ ಸ್ಥಿತಿ ಏನು? ಕೆನಡಾದ ಫ್ರೆಂಚ್ ಜನರು ತಾವು ಇಂಗ್ಲಿಷ್ ರಾಜ್ಯದ ಅಧೀನದಲ್ಲಿ ಬದುಕುವುದಿಲ್ಲವೆಂದು ಕೂಗು ಹಾಕುತ್ತಾರೇನು?

---

೧. ಕೆನಡಾ ಇಯರ್ ಬುಕ್, ೧೯೩೬

೨. ಸೌತ್ ಆಫ್ರಿಕಾ ಇಯರ್ ಬುಕ್, ೧೯೪೧

೩. ಸ್ಟೇಟ್ಸ್ ಮನ್ಸ್ ಇಯರ್ ಬುಕ್, ೧೯೪೧

* ಕ್ಯುಬೆಕ್ ಪ್ರಾಂತ್ಯಕ್ಕೆ ಅಷ್ಟು

ದಕ್ಷಿಣ ಆಫ್ರಿಕಾದಲ್ಲಿ ಇಂಗ್ಲಿಷ್ ಜನ ತಾವು ಡಚ್ ರಾಜ್ಯದಲ್ಲಿ ಬದುಕುವುದಿಲ್ಲವೆಂದು ಕೂಗು ಹಾಕುತ್ತಾರೇನು? ಸ್ವಿಟ್ಜರ್‌ಲೆಂಡಿನಲ್ಲಿ ಫ್ರೆಂಚರ್ ಮತ್ತು ಇಟಾಲಿಯನ್ನರು ತಾವು ಜರ್ಮನ್ ರಾಜ್ಯದಲ್ಲಿ ಬದುಕುವುದಿಲ್ಲವೆಂದು ತಕರಾರು ಎತ್ತುವರೇನು? ಹಾಗಾದರೆ ಮುಸ್ಲಿಮರೇಕೆ ಹಿಂದೂರಾಜ್ಯದ ವಿರುದ್ಧ ಕೂಗು ಹಾಕುತ್ತಾರೆ?

ಹಿಂದೂ ರಾಜ್ಯ ಜಾತಿಯ ಆಧಿಕ್ಯವಿಲ್ಲದ ಆಳ್ವಿಕೆಯಾಗಿರಬೇಕು ಎಂದು ಸೂಚಿಸಲಾಗಿದೆಯೆ? ಬಹುಸಂಖ್ಯಾತ ಹಿಂದೂಗಳ ಸಂಭವನೀಯ ದಬ್ಬಾಳಿಕೆಯ ವಿರುದ್ಧ ಮುಸಲ್ಮಾನರಿಗೆ ರಕ್ಷಣೆಗಳನ್ನು ಒದಗಿಸಿಲ್ಲವೆ? ಕೆನಡಾದಲ್ಲಿ ಫ್ರೆಂಚರಿಗೆ, ದಕ್ಷಿಣ ಆಫ್ರಿಕಾದಲ್ಲಿ ಇಂಗ್ಲಿಷರಿಗೆ ಮತ್ತು ಸ್ವಿಟ್ಜರ್‌ಲೆಂಡಿನಲ್ಲಿ ಫ್ರೆಂಚರು ಹಾಗೂ ಇಟಾಲಿಯನ್ನರಿಗೆ ಕೊಟ್ಟಿರುವ ರಕ್ಷಣೆಗಳಿಗಿಂತ ಭಾರತದಲ್ಲಿ ಮುಸಲ್ಮಾನರಿಗೆ ಕೊಟ್ಟಿರುವ ರಕ್ಷಣೆಗಳು ಹೆಚ್ಚು ವಿಶಾಲ ಹಾಗೂ ಉತ್ತಮವಾಗಿಲ್ಲವೆ? ರಕ್ಷಣೆಗಳ ಪಟ್ಟಿಯಿಂದ ಒಂದೇ ಒಂದು ವಿಷಯವನ್ನು ತೆಗೆದುಕೊಳ್ಳೋಣ. ಶಾಸನ ಸಭೆಗಳ ಪ್ರಾತಿನಿಧ್ಯದಲ್ಲಿ ಮುಸ್ಲಿಮರಿಗೆ ಅಧಿಕ ಪ್ರಮಾಣದ ಮಹತ್ವವನ್ನು ಕೊಟ್ಟಿಲ್ಲವೇನು? ಕೆನಡಾ, ದಕ್ಷಿಣ ಆಫ್ರಿಕಾ ಮತ್ತು ಸ್ವಿಟ್ಜರ್‌ಲೆಂಡಿನಲ್ಲಿ ಕೊಟ್ಟಿರುವ ಮಹತ್ವ ಗೊತ್ತಾಗುವುದೇನು? ಮುಸ್ಲಿಮರಿಗೆ ಕೊಟ್ಟ ಈ ಮಹತ್ವದ ಪರಿಣಾಮವೇನು? ಶಾಸನಸಭೆಯಲ್ಲಿ ಹಿಂದೂ ಬಹುಸಂಖ್ಯಾತತೆಯನ್ನು ಇದು ಕಡಿಮೆ ಮಾಡುವುದಿಲ್ಲವೇನು? ಕಡಿಮೆ ಮಾಡುವುದರ ಮಟ್ಟ ಯಾವುದು? ಬ್ರಿಟಿಷ್ ಇಂಡಿಯಾಕ್ಕೆ ಮಾತ್ರ ನಮ್ಮನ್ನು ಸೀಮಿತ ಮಾಡಿಕೊಂಡು ಅಧಿಪತ್ಯ ಕ್ಷೇತ್ರಗಳಿಗೆ ಕೇಂದ್ರ ಶಾಸನ ಸಭೆಯ ಕೆಳಮನೆಯಲ್ಲಿ ಕೊಟ್ಟ ಪ್ರಾತಿನಿಧ್ಯವನ್ನು– ಹಿಂದೂಗಳು ಮತ್ತು ಮುಸ್ಲಿಮರಿಗೆ– ಗಣನೆಗೆ ತೆಗೆದುಕೊಂಡಾಗ, ಒಟ್ಟು ೧೮೭ ಸ್ಥಾನಗಳ ಪೈಕಿ ಹಿಂದೂಗಳಿಗೆ ೧೦೫ ಮತ್ತು ಮುಸ್ಲಿಮರಿಗೆ ೮೭ ಸ್ಥಾನಗಳು. ಈ ಅಂಕಿಅಂಶಗಳನ್ನು ಕೊಟ್ಟ ಮೇಲೆ ಯಾರಾದರೂ ಕೇಳಲೇಬೇಕಾಗುತ್ತದೆ– ಹಿಂದೂ ರಾಜ್ಯದ ಭಯ ಎಲ್ಲಿದೆ? ಎಂದು.

ಹಿಂದೂ ರಾಜ್ಯ ನಿಜವಾಗಿ ಬಂದರೆ, ಈ ದೇಶಕ್ಕೆ ದೊಡ್ಡ ಹಾನಿ. ಹಿಂದೂಗಳು ಏನಾದರೂ ಹೇಳಲಿ. ಸ್ವಾತಂತ್ರ್ಯ, ಸಮಾನತೆ ಮತ್ತು ಸೌಹಾರ್ದತೆಗಳಿಗೆ ಹಿಂದೂಮತ ಗಂಡಾಂತರಕಾರಿ. ಲೆಕ್ಕಾಚಾರದಿಂದ ಅದು ಪ್ರಜಾಪ್ರಭುತ್ವಕ್ಕೆ ಅಸಂಗತ. ಹೇಗಾದರೂ ಹಿಂದೂರಾಜ್ಯವನ್ನು ತಡೆಯಬೇಕು. ಆದರೆ ಅದಕ್ಕೆ ಪ್ರತಿಯಾಗಿ ಪಾಕಿಸ್ತಾನ ರೋಗಪರಿಹಾರಕ ಮದ್ದೆ? ದೇಶದಲ್ಲಿರುವ ಬೇರೆ ಬೇರೆ ಜಾತಿಗಳ ಪರಸ್ಪರ ಶಕ್ತಿಯಲ್ಲಿ ಗಣನೀಯ ಅಸಮ ಪ್ರಮಾಣ. ಇರುವುದೇ ಜಾತಿ ರಾಜ್ಯದ ಸಾಧ್ಯತೆಗೆ ಕಾರಣವಾಗುತ್ತದೆ. ಮೇಲೆ ಹೇಳಿರುವಂತೆ, ಕೆನಡಾ, ದಕ್ಷಿಣ ಆಫ್ರಿಕಾ ಮತ್ತು ಸ್ವಿಟ್ಜರ್‌ಲೆಂಡುಗಳಲ್ಲಿ ಈ ಅಸಮ ಪ್ರಮಾಣವನ್ನು ಹೆಚ್ಚಾಗಿ ಗುರುತಿಸಿರುವಂತೆ ಭಾರತದಲ್ಲಿ ಗುರುತಿಸಿಲ್ಲ. ಆದರೂ ಕೂಡ ಕೆನಡಾದಲ್ಲಿ ಬ್ರಿಟಿಷ್ ರಾಜ್ಯವಿಲ್ಲ. ದಕ್ಷಿಣ ಆಫ್ರಿಕಾದಲ್ಲಿ ಕಡಚ್ ರಾಜ್ಯವಿಲ್ಲ. ಸ್ವಿಟ್ಜರ್‌ಲೆಂಡಿನಲ್ಲಿ ಜರ್ಮನ್ ರಾಜ್ಯವಿಲ್ಲ. ತಮ್ಮ ದೇಶಗಳಲ್ಲಿ ಬಹುಸಂಖ್ಯಾತ ಕೋಮಿನವರ ರಾಜ್ಯ ಸ್ಥಾಪನೆಯಾಗದಂತೆ ತಡೆಗಟ್ಟುವಲ್ಲಿ ಫ್ರೆಂಚರು, ಇಂಗ್ಲಿಷರು ಮತ್ತು ಇಟಾಲಿಯನ್ನರು ಹೇಗೆ ಯಶಸ್ವಿಯಾದರು? ಖಂಡಿತವಾಗಿ ವಿಂಗಡಣೆಯಿಂದಲ್ಲ, ಹಾಗಾದರೆ ಅವರು ಹಿಡಿದ ಮಾರ್ಗ ಯಾವುದು? ರಾಜಕೀಯದಲ್ಲಿ ಕೋಮು ಪಕ್ಷಗಳಿಗೆ ಬಹಿಷ್ಕಾರ ಹಾಕುವುದೇ ಅವರ ವಿಧಾನ, ಕೆನಡಾ, ದಕ್ಷಿಣ ಆಫ್ರಿಕಾ ಅಥವಾ ಸ್ವಿಟ್ಜರ್‌ಲೆಂಡುಗಳಲ್ಲಿ ಯಾವ ಕೋಮುಗಳೂ ಪ್ರತ್ಯೇಕ ಕೋಮು ಪಕ್ಷಗಳನ್ನು ಸ್ಥಾಪಿಸಲು ಎಂದೂ ಯೋಚಿಸಿಲ್ಲ. ಕೋಮು ಪಕ್ಷಗಳನ್ನು ವಿರೋಧಿಸುವಲ್ಲಿ ಮುಂದಾಳತ್ವ ವಹಿಸಿದವರು ಅಲ್ಪಸಂಖ್ಯಾತ ಜನಾಂಗಗಳು ಎಂಬುದನ್ನು ಮುಖ್ಯವಾಗಿ ಗಮನಿಸಬೇಕು. ತಾವು ಕೋಮು ರಾಜಕೀಯ ಪಕ್ಷಗಳನ್ನು ಸ್ಥಾಪಿಸಿದರೆ, ಬಹುಸಂಖ್ಯಾತ ಕೋಮಿನವರೂ ಕೋಮು ಪಕ್ಷಗಳನ್ನು ಸ್ಥಾಪಿಸುತ್ತಾರೆ ಮತ್ತು ಕೋಮು ರಾಜ್ಯವನ್ನು ಸ್ಥಾಪಿಸುವುದು ಬಹುಸಂಖ್ಯಾತರಿಗೆ ಸುಲಭ ಸಾಧ್ಯವಾಗುತ್ತದೆ ಎಂಬುದನ್ನು ಅವರು ತಿಳಿದಿದ್ದಾರೆ. ಅದು ಆತ್ಮರಕ್ಷಣೆಯ ಕೆಟ್ಟ ಮಾರ್ಗ. ಏಕೆಂದರೆ, ತಮ್ಮ ಸಿಡಿಗುಂಡಿನಿಂದ ತಾವೇ

ಸಿಡಿದು ಹೋಗುತ್ತೇವೆ ಎಂಬ ಸಂಪೂರ್ಣ ಅರಿವಿದ್ದುದರಿಂದ ಅಲ್ಪಸಂಖ್ಯಾತ ಜನಾಂಗಗಳು ಕೋಮು ರಾಜಕೀಯ ಪಕ್ಷಗಳನ್ನು ಸ್ಥಾಪಿಸಲು ವಿರೋಧಿಸಿದರು.

ಮುಸ್ಲಿಮರು ಹಿಂದೂ ರಾಜ್ಯವನ್ನು ತಪ್ಪಿಸಲು ಈ ವಿಧಾನವನ್ನು ಯೋಚಿಸಿದರೆ? ಅದನ್ನು ತಪ್ಪಿಸಲು ಎಷ್ಟು ಸುಲಭವಾದ ಮಾರ್ಗ ಇದು ಎಂದು ಅವರು ಗಮನಿಸಿದ್ದಾರೆಯೆ? ಮುಸ್ಲಿಂ ಲೀಗಿನ ಸದ್ಯದ ನಿಲುವು ಎಷ್ಟು ವ್ಯರ್ಥ ಹಾಗೂ ಹಾನಿಕರ ಎಂದು ಯೋಚಿಸಿದ್ದಾರೆಯೆ? ಹಿಂದು ಮಹಾಸಭಾ ಮತ್ತು ಅದರ ಘೋಷಣೆಯಾದ ಹಿಂದುತ್ವ ಹಾಗೂ ಹಿಂದೂರಾಜ್ಯದ ವಿರುದ್ಧ ಮುಸ್ಲಿಮರು ಗಳ್ಳು ಹಾಕುತ್ತಿದ್ದಾರೆ. ಆದರೆ ಇದಕ್ಕೆ ಹೊಣೆಗಾರರು ಯಾರು? ಹಿಂದೂ ಮಹಾಸಭಾ ಮತ್ತು ಹಿಂದೂ ರಾಜ್ಯಗಳು, ಮುಸ್ಲಿಂ ಲೀಗಿನ ಸ್ಥಾಪನೆಯ ಮೂಲಕ ತಮ್ಮ ಮೇಲೆ ತಾವೇ ತಂದುಕೊಂಡ ತಪ್ಪಿಸಿಕೊಳ್ಳಲಾಗದ ಪಾಪ ಪ್ರತೀಕಾರ ದೇವತೆ. ಅದು ಕ್ರಿಯೆಗೆ ಪ್ರತಿಕ್ರಿಯೆ. ಒಂದು ಮತ್ತೊಂದಕ್ಕೆ ತಾಯಿಯಾಯಿತು. ಮುಸ್ಲಿಂ ಲೀಗಿನ ಮೂಲೋತ್ಪಾಟನ ಮತ್ತು ಹಿಂದೂಗಳು ಹಾಗೂ ಮುಸ್ಲಿಮರಿಂದ ಕೂಡಿದ ಮಿಶ್ರ ಪಕ್ಷವನ್ನು ಸ್ಥಾಪಿಸುವುದು ಹಿಂದೂರಾಜ್ಯದ ದೆವ್ವವನ್ನು ಹೂಳಲಿರುವ ಏಕೈಕ ಪರಿಣಾಮಕಾರೀ ಮಾರ್ಗವೇ ಹೊರತು, ಪಾಲಾಗುವುದಲ್ಲ. ಎಲ್ಲಿಯವರೆಗೆ ಸಂವಿಧಾನಾತ್ಮಕ ರಕ್ಷಣಾ ಪ್ರಶ್ನೆಯ ಬಗೆಗೆ ಭಿನ್ನಾಭಿಪ್ರಾಯ ಮುಂದುವರಿಯುವುದೋ ಅಲ್ಲಿಯವರೆಗೆ, ನಿಜವಾಗಿ, ಮುಸ್ಲಿಮರಿಗಾಗಲೀ ಮತ್ತು ಬೇರೆ ಅಲ್ಪಸಂಖ್ಯಾತ ಪಕ್ಷಗಳಿಗಾಗಲೀ ಕಾಂಗ್ರೆಸ್ ಅಥವಾ ಹಿಂದೂ ಮಹಾಸಭಾ ಸೇರಲು ಸಾಧ್ಯವಾಗುವುದಿಲ್ಲ. ಈ ಪ್ರಶ್ನೆ ತೀರ್ಮಾನವಾಗುತ್ತದೆ, ತೀರ್ಮಾನವಾಗಲೇಬೇಕು. ಈ ತೀರ್ಮಾನ ಮುಸ್ಲಿಮರು ಮತ್ತು ಅನ್ಯ ಅಲ್ಪಸಂಖ್ಯಾತರಿಗೆ ಬೇಕಾದ ರಕ್ಷಣೆಗಳನ್ನು ಒದಗಿಸುವುದರಲ್ಲಿ ಸಫಲತೆ ಪಡೆಯುತ್ತದೆ ಎಂಬ ಪೂರ್ಣ ಭರವಸೆ ಇದೆ. ನಾವು ನಿಷ್ಠೆಯಿಂದ ಬಯಸುವ ಈ ನೆರವೇರಿಕೆ ಒಮ್ಮೆ ಸಿದ್ಧಿಸಿದರೆ, ಪಕ್ಷದ ಮರು ಹೊಂದಾಣಿಕೆಯ ದಾರಿಯಲ್ಲಿ ಯಾವುದೂ ಅಡ್ಡ ಬರಲಾರದು. ಕಾಂಗ್ರೆಸ್ ಮತ್ತು ಹಿಂದೂ ಮಹಾಸಭಾವನ್ನು ಒಡೆದು, ಹಿಂದೂಗಳು ಮತ್ತು ಮುಸ್ಲಿಮರು ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಯ ಅಂಗೀಕೃತ ಕಾರ್ಯಕ್ರಮದ ಆಧಾರದ ಮೇಲೆ ಮಿಶ್ರ ರಾಜಕೀಯ ಪಕ್ಷ ಸ್ಥಾಪಿಸಿದರೆ, ಹಿಂದೂ ರಾಜ್ಯ ಅಥವಾ ಮುಸ್ಲಿಂ ರಾಜ್ಯ ಅಸ್ತಿತ್ವಕ್ಕೆ ಬರುವ ಅಪಾಯವನ್ನು ತಪ್ಪಿಸಬಹುದು. ಭಾರತದಲ್ಲಿ ಹಿಂದೂ ಮತ್ತು ಮುಸ್ಲಿಮರ ಮಿಶ್ರಪಕ್ಷದ ಸ್ಥಾಪನೆ ಕಷ್ಟವಾಗಲು ಸಾಧ್ಯವಿಲ್ಲ. ಹಿಂದೂ ಸಮಾಜದಲ್ಲಿರುವ ಅನೇಕ ಕೆಳಪಂಗಡಗಳ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಅಗತ್ಯಗಳು ಬಹುತೇಕ ಮುಸ್ಲಿಮರ ಸ್ಥಿತಿಗೆ ಸರಿಸಮಾನವಾಗಿವೆ; ಶತಶತಮಾನಗಳಿಂದ ತಮ್ಮ ಸಾಮಾನ್ಯ ಮಾನವ ಹಕ್ಕುಗಳನ್ನು ನಿರಾಕರಿಸಿ ಅದರಿಂದ ವಂಚಿತರನ್ನಾಗಿ ಮಾಡಿರುವ ಹಿಂದೂ ಮೇಲ್ಜಾತಿಯವರೊಡನೆ ಕೂಡುವುದಕ್ಕಿಂತ ಸಮಾನೋದ್ದೇಶಗಳ ಸ್ಥಾಪನೆಗೆ ಮುಸ್ಲಿಮರೊಡನೆ ಕೂಡಿ ಸಮಾನ ಮೊಕದ್ದಮೆ ಹೂಡಲು ಹೆಚ್ಚು ಸಿದ್ಧರಾಗಿದ್ದಾರೆ. ಅಂಥ ಮಾರ್ಗ ಅನುಸರಿಸುವುದು ಸಾಹಸವಾಗಲಾರದು. ಆ ನಿಟ್ಟಿನ ದಾರಿ ಹೆಚ್ಚು ಜನ ಹೆಜ್ಜೆ ಹಾಕಿರುವ ದಾರಿಯೇ. ಎಲ್ಲ ಪ್ರಾಂತ್ಯಗಳಲ್ಲದಿದ್ದರೂ, ಹೆಚ್ಚಿಗೆ ಪ್ರಾಂತ್ಯಗಳಲ್ಲಿ ೧೯೨೦ರಿಂದ ೧೯೩೭ರವರೆಗೆ 'ಮಾಂಟೆಗೊ ಚೆಮ್ಸ್ ಫೋರ್ಡ್ ಸುಧಾರಣೆಗಳು' ಯೋಜನೆಯಡಿಯಲ್ಲಿ ಮುಸ್ಲಿಮರು, ಅಬ್ರಾಹ್ಮಣರು ಮತ್ತು ದೀನದಲಿತ ವರ್ಗಗಳು ಒಟ್ಟಾಗಿ ಕೂಡಿ ಒಂದು ತಂಡದ ಸದಸ್ಯರಂತೆ ಸುಧಾರಣಾ ಕೆಲಸ ಮಾಡಿದ್ದು ನಿಜವಲ್ಲವೆ? ಹಿಂದೂಗಳು ಮತ್ತು ಮುಸ್ಲಿಮರಲ್ಲಿ ಕೋಮು ಸೌಹಾರ್ದತೆಯನ್ನು ಸಾಧಿಸುವ, ಹಿಂದೂ ರಾಜ್ಯದ ಅಪಾಯವನ್ನು ಮೂಲೋತ್ಪಾಟನ ಮಾಡುವ ತುಂಬ ಸಫಲ ಮಾರ್ಗ ಇಲ್ಲಿದೆ, ಶ್ರೀಯುತ ಜಿನ್ನಾ ಈ ದಾರಿಯನ್ನು ಅನುಸರಿಸಬಹುದಾಗಿತ್ತು. ಅದರಲ್ಲಿ ಯಶಸ್ವಿಯಾಗಲು ಜಿನ್ನಾಗೆ ಅದು ಕಷ್ಟವೂ ಆಗುತ್ತಿರಲಿಲ್ಲ. ನಿಜವಾಗಿ ಜಿನ್ನಾ ಅಂಥ ಸಂಯುಕ್ತ ಜಾತ್ಯತೀತ ಪಕ್ಷದ ಸ್ಥಾಪನೆಗೆ

ಪ್ರಯತ್ನಿಸಿದರೆ, ಯಶಸ್ಸಿನ ಎಲ್ಲ ಅವಕಾಶಗಳನ್ನು ತನ್ನತ್ತ ಪಡೆದುಕೊಂಡ ಏಕೈಕ ವ್ಯಕ್ತಿಯಾಗುತ್ತಿದ್ದನು. ಸಂಘಟಿಸಲು ಆತನಿಗೆ ಶಕ್ತಿಯಿತ್ತು. ರಾಷ್ಟ್ರೀಯವಾದಿ ಎಂಬ ಖ್ಯಾತಿ ಇತ್ತು. ಸಮಾನ ಮನೋಧರ್ಮದ ಹಿಂದೂಗಳು ಮತ್ತು ಮುಸ್ಲಿಮರ ಸಂಯುಕ್ತ ಪಕ್ಷಕ್ಕೆಂದು ಒಂದೇ ಒಂದು ಕರೆಯನ್ನು ನೀಡಿದ್ದರೆ ಸಾಕಿತ್ತು, ಕಾಂಗ್ರೆಸ್ಸನ್ನು ವಿರೋಧಿಸುತ್ತಿದ್ದ ಅನೇಕ ಹಿಂದೂಗಳು ಜಿನ್ನಾನ ಸುತ್ತಮುತ್ತ ಮುತ್ತಿಗೆ ಹಾಕಿದಂತೆ ಘೇರಾಯಿಸುತ್ತಿದ್ದರು. ಆದರೆ ಶ್ರೀಯುತ ಜಿನ್ನಾ ಮಾಡಿದ್ದೇನು? ೧೯೩೭ರಲ್ಲಿ ಶ್ರೀಯುತ ಜಿನ್ನಾ ಮುಸ್ಲಿಂ ರಾಜಕೀಯಕ್ಕೆ ಪ್ರವೇಶಿಸಿದನು. ಕೆಲವು ವರ್ಷಗಳ ಪೂರ್ವದಲ್ಲಾಗಿದ್ದರೆ ಅದರ ಉತ್ತರ ಕ್ರಿಯೆಯಲ್ಲಿ ಭಾಗವಹಿಸಲು ಸಂತೋಷಿಸುತ್ತಿದ್ದ ಜಿನ್ನಾನೇ ಸಾಕಷ್ಟು ವಿಸ್ಮಯಗೊಳಿಸುವಂತೆ ಸಾಯುತ್ತಾ ಕೊಳೆಯುತ್ತಾ ಇದ್ದ ಮುಸ್ಲಿಂ ಲೀಗಿಗೆ ಚೈತನ್ಯ ತುಂಬಿದನು. ಅಂಥ ಜಾತಿ ರಾಜಕೀಯ ಪಕ್ಷ ಪ್ರಾರಂಭಿಸಿದ್ದು ಎಷ್ಟೇ ವಿಷಾದಕರವಾದದ್ದಾದರೂ ಅದರಲ್ಲಿ ಒಂದು ನೆಮ್ಮದಿಯ ಅಂಶವಿದೆ. ಅದೇನೆಂದರೆ ಜಿನ್ನಾನ ನಾಯಕತ್ವ. ಜಿನ್ನಾನ ನಾಯಕತ್ವದಲ್ಲಿ ಲೀಗ್ ಬರಿಯ ಕೋಮುಪಕ್ಷವಾಗಿಯೇ ಉಳಿಯಲಾರದು ಎಂದು ಪ್ರತಿಯೊಬ್ಬರೂ ಭಾವಿಸಿದರು. ತನ್ನೆರಡು ವರ್ಷಗಳ ಹೊಸ ಜೀವನಗತಿಯ ಅವಧಿಯಲ್ಲಿ ಲೀಗ್ ಮಂಜೂರು ಮಾಡಿದ ಗೊತ್ತುವಳಿಗಳು, ಮುಸ್ಲಿಮರು ಮತ್ತು ಹಿಂದೂಗಳ ಮಿಶ್ರ ರಾಜಕೀಯ ಪಕ್ಷವಾಗಿ ಅದು ಅಭಿವೃದ್ಧಿಗೊಳ್ಳಬಹುದು ಎಂಬುದಕ್ಕೆ ಸೂಚನೆ ನೀಡುತ್ತದೆ. ೧೯೩೭ರ ಅಕ್ಟೋಬರ್‌ನಲ್ಲಿ ಲಖನೌನಲ್ಲಿ ನಡೆದ ಈಗಿನ ವಾರ್ಷಿಕ ಅಧಿವೇಶನದಲ್ಲಿ ಒಟ್ಟು ೧೫ ಗೊತ್ತುವಳಿಗಳು ಮಂಜೂರಾದವು. ಈ ಸಂಬಂಧದಲ್ಲಿ ಕೆಳಗಿನ ಎರಡು ಗೊತ್ತುವಳಿಗಳು ವಿಶೇಷ ಆಸಕ್ತಿಗಳು ಕೆರಳಿಸುವಂಥವು.

ಗೊತ್ತುವಳಿ ಸಂಖ್ಯೆ: ೭

> **"೧೯೩೫ರ ಭಾರತ ಸರ್ಕಾರದ ಶಾಸನ ಪತ್ರವನ್ನೂ, ಅದರ ಹಿಂದಿರುವ ಸ್ಫೂರ್ತಿಯನ್ನು ಮತ್ತು ಆಜ್ಞೆಗಳ ವಿಧಿಬದ್ಧವಾದ ದಸ್ತಾವೇಜನ್ನೂ ಕಣ್ಣಿಗೆ ಎದ್ದು ಕಾಣುವಂತೆ ಉಲ್ಲಂಘನೆ ಮಾಡಿ, ಕೆಲವು ಪ್ರಾಂತ್ಯಗಳನ್ನು ಕಾಂಗ್ರೆಸ್ ಪಕ್ಷಗಳು ಮಂತ್ರಿಮಂಡಲ ರಚಿಸುವುದನ್ನು ಅಖಿಲ ಭಾರತ ಮುಸ್ಲಿಂ ಲೀಗಿನ ಇಂದಿನ ಸಭೆ ಪ್ರತಿಭಟಿಸುತ್ತದೆ ಮತ್ತು ನಿಷೇಧಿಸುತ್ತದೆ. ಮುಸ್ಲಿಮರ ಹಾಗೂ ಉಳಿದ ಪ್ರಮುಖ ಅಲ್ಪಸಂಖ್ಯಾತರ ಹಿತರಕ್ಷಣೆಗಾಗಿ ರಾಜ್ಯಪಾಲರು ತಮಗೆ ವಹಿಸಿರುವ ವಿಶೇಷಾಧಿಕಾರಿಗಳನ್ನು ಚಲಾಯಿಸಲು ವಿಫಲರಾಗಿರುವುದನ್ನು ಖಂಡಿಸುತ್ತದೆ."**

ಗೊತ್ತುವಳಿ ಸಂಖ್ಯೆ:೮

> **"ಸಂವಿಧಾನದಲ್ಲಿ ಮುಸ್ಲಿಮರ ಮತ್ತು ಉಳಿದ ಅಲ್ಪಸಂಖ್ಯಾತರ ಹಕ್ಕುಗಳು ಮತ್ತು ಆಸಕ್ತಿಗಳನ್ನು ಸಂಪೂರ್ಣವಾಗಿ ಹಾಗೂ ಪರಿಣಾಮಕಾರಿಯಾಗಿ ಸಂರಕ್ಷಿಸುವ ಮುಕ್ತ ಪ್ರಜಾಪ್ರಭುತ್ವಾತ್ಮಕ ದೇಶಗಳ 'ಸಂಯುಕ್ತ ರಾಜ್ಯ' ರೂಪದಲ್ಲಿ ಪೂರ್ಣ ಸ್ವಾತಂತ್ರ್ಯವನ್ನು ಭಾರತವನ್ನು ಸ್ಥಾಪಿಸುವುದೇ ಅಖಿಲ ಭಾರತ ಮುಸ್ಲಿಂ ಲೀಗಿನ ಗುರಿ ಎಂದು ನಿರ್ಣಯಿಸಲಾಗಿದೆ."**

೧೯೩೮ರ ಡಿಸೆಂಬರ್‌ನಲ್ಲಿ ಪಾಟ್ನಾದಲ್ಲಿ ನಡೆದ ಲೀಗಿನ ಮುಂದಿನ ವಾರ್ಷಿಕ ಅಧಿವೇಶನದಲ್ಲಿ ಸಮಾನ ಸಂಖ್ಯೆಯ ಗೊತ್ತುವಳಿಗಳು ಮಂಜೂರಾದವು. ಗೊತ್ತುವಳಿ ಸಂಖ್ಯೆ: ೧೦ ಗಮನಾರ್ಹವಾದುದು. ಅದು ಕೆಳಗಿನಂತಿದೆ:

**“೧೯೩೫ರ ಭಾರತ ಸರ್ಕಾರದ ಶಾಸನದಲ್ಲಿ ಅಡಕವಾಗಿರುವ ಸಂಯುಕ್ತ ರಾಜ್ಯ ಯೋಜನೆ ಸ್ವೀಕಾರಾರ್ಹವಲ್ಲ. ಆದರೆ ಕಾಲಕಾಲಕ್ಕೆ ಆದ ಅಥವಾ ಆಗುವ ಹೆಚ್ಚಿನ ಬೆಳವಣಿಗೆಯ ದೃಷ್ಟಿಯಿಂದ, ಮುಸ್ಲಿಮರ ಮತ್ತು ಇತರ ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ರಕ್ಷಿಸುವ ಸಮಂಜಸ ಪರ್ಯಾಯ ಸಾಧ್ಯತೆಯನ್ನು ಕಂಡುಕೊಳ್ಳುವ ದೃಷ್ಟಿಯಿಂದ ಅಗತ್ಯವಾದ ಮಾರ್ಗವನ್ನು ಹಿಡಿಯಲು ಅಖಿಲ ಭಾರತ ಮುಸ್ಲಿಂ ಲೀಗಿನ ಅಧ್ಯಕ್ಷರಿಗೆ ಅಧಿಕಾರ ನೀಡುತ್ತದೆ ಎಂದು ಮುಸ್ಲಿಂ ಲೀಗ್ ಮತ್ತೆ ತನ್ನ ಅಭಿಪ್ರಾಯವನ್ನು ಪುನರುಚ್ಚರಿಸುತ್ತದೆ.”**

ಈ ಎಲ್ಲ ಗೊತ್ತುವಳಿಗಳಿಂದ ಜಿನ್ನಾ ಮುಸ್ಲಿಮರ ಮತ್ತು ಮುಸ್ಲಿಮೇತರ ಅಲ್ಪಸಂಖ್ಯಾತರ ಮಧ್ಯೆ ಸಮಾನರಂಗ ಸ್ಥಾಪನೆಯ ಪರವಾಗಿದ್ದನೆಂದು ಗೊತ್ತಾಗುತ್ತದೆ. ದೌರ್ಭಾಗ್ಯವೆಂದರೆ ಈ ಗೊತ್ತುವಳಿಗಳ ಬೆನ್ನಿಗಿದ್ದ ಮನೋವೈಶಾಲ್ಯ ಹಾಗೂ ರಾಜನೀತಿಜ್ಞತೆ ಬಹಳ ಕಾಲ ಉಳಿಯಲಿಲ್ಲ. ೧೯೪೦ರಲ್ಲಿ ಜಿನ್ನಾ ಅಂತರಲಾಗ ಹಾಕಿದ; ಪಾಕಿಸ್ತಾನದ ಪರವಾಗಿ ಕುಪ್ರಸಿದ್ಧ ಗೊತ್ತುವಳಿಯನ್ನು ಹೊರಡಿಸಿ, ಅಪಾಯಕರವೂ ಆಪತ್ಕಾರವೂ ಆದ ಮುಸ್ಲಿಮರ ಪ್ರತ್ಯೇಕತಾ ಕಾರ್ಯನೀತಿಯ ರೂಪರೇಷೆಗಳನ್ನು ಪ್ರಕಟಿಸಿದ. ಈ ಪ್ರತ್ಯೇಕತೆಗೆ ಕಾರಣಗವೇನು? ಮುಸ್ಲಿಮರು ಒಂದು ಜನಾಂಗ, ಜಾತಿಯಲ್ಲ ಎಂಬ ಅಭಿಪ್ರಾಯ ಬದಲಾವಣೆಯಲ್ಲದೆ, ಬೇರೇನೂ ಕಾರಣವಿಲ್ಲ. ಮುಸ್ಲಿಮರು ಒಂದು ಜನಾಂಗವೇ ಅಥವಾ ಜಾತಿಯೇ ಎಂಬ ಪ್ರಶ್ನೆಯ ಬಗೆಗೆ ಯಾರೂ ಜಗಳ ಮಾಡಬೇಕಾದ ಅಗತ್ಯವಿಲ್ಲ. ಮುಸ್ಲಿಮರು ಒಂದು ಜನಾಂಗ ಎಂಬ ವಾಸ್ತವಾಂಶ, ರಾಜಕೀಯ ಪ್ರತ್ಯೇಕತೆಯನ್ನು ಸುರಕ್ಷಿತ ಮತ್ತು ಸುಖದಾಯಕ ಕಾರ್ಯನೀತಿಯನ್ನಾಗಿ ಹೇಗೆ ಮಾಡುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಯಾರಿಗಾದರೂ ತುಂಬ ಕಷ್ಟವಾಗುತ್ತದೆ. ದುರದೃಷ್ಟವೆಂದರೆ ಈ ಕಾರ್ಯನೀತಿಯಿಂದ ತಮಗೆ ಜಿನ್ನಾ ಎಂಥ ಅಪಕಾರ ಮಾಡಿದರು ಎಂಬುದನ್ನು ಮುಸ್ಲಿಮರು ಅರ್ಥ ಮಾಡಿಕೊಳ್ಳಲಿಲ್ಲ. ಆದರೆ, ಮುಸ್ಲಿಂ ಲೀಗನ್ನು ಮುಸ್ಲಿಮರ ಏಕೈಕ ಸಂಘಟನಾ ಸಂಸ್ಥೆಯನ್ನಾಗಿ ಮಾಡಿದ್ದರಿಂದ ಜಿನ್ನಾ ಸಾಧಿಸಿದ್ದೇನು ಎಂಬುದನ್ನು ಮುಸ್ಲಿಮರು ವಿಚಾರ ಮಾಡಲಿ. ಅವನು ಅಧೀನ ಪಾತ್ರವನ್ನು ವಹಿಸಬೇಕಾದ ಸಂಭಾವ್ಯತೆಯನ್ನು ತಪ್ಪಿಸಲು ಅದು ಸಹಾಯ ಮಾಡಿತು ಎನ್ನಬಹುದು. ಏಕೆಂದರೆ ಮುಸ್ಲಿಂ ಶಿಬಿರದ ಒಳಗೆ ಯಾವಾಗಲೂ ತನಗೇ ಅಗ್ರಸ್ಥಾನ ಎಂಬುದು ಅವನಿಗೆ ಖಾತ್ರಿ. ಆದರೆ, ಲೀಗ್ ಈ ಪ್ರತ್ಯೇಕತಾ ಯೋಜನೆಯ ಮೂಲಕ ಮುಸ್ಲಿಮರನ್ನು ಹಿಂದೂ ರಾಜ್ಯದಿಂದ ಪಾರು ಮಾಡಲು ಭರವಸೆ ಇಟ್ಟುಕೊಂಡ ಬಗೆ ಹೇಗೆ? ಮುಸ್ಲಿಮರು ಅಲ್ಪಸಂಖ್ಯೆಯಲ್ಲಿರುವ ಪ್ರಾಂತ್ಯಗಳಲ್ಲಿ ಹಿಂದೂ ರಾಜ್ಯ ಸ್ಥಾಪನೆಯನ್ನು ಪಾಕಿಸ್ತಾನ ತಪ್ಪಿಸುವುದೆ? ತಪ್ಪಿಸಲಾರದು ಎಂಬುದು ಸ್ಪಷ್ಟ. ಪಾಕಿಸ್ತಾನವಾದರೆ, ಮುಸ್ಲಿಮರು ಅಲ್ಪಸಂಖ್ಯೆಯಲ್ಲಿರುವ ಪ್ರಾಂತ್ಯಗಳಲ್ಲಿ ಆಗುವಂಥದು ಇದೇ. ಅಖಿಲ ಭಾರತ ಅವಲೋಕನ ತೆಗೆದುಕೊಳ್ಳಿ. ಹಿಂದೂಸ್ತಾನದಲ್ಲಿ ಉಳಿದಿರುವ ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ಕೇಂದ್ರದಲ್ಲಿ ಹಿಂದೂರಾಜ್ಯ ಸ್ಥಾಪನೆಯಾಗುವುದನ್ನು ಪಾಕಿಸ್ತಾನ ನಿವಾರಿಸಬಲ್ಲುದೆ? ಸಾಧ್ಯವಿಲ್ಲ ಎಂಬುದು ಸ್ಪಷ್ಟ. ಆಗ ಪಾಕಿಸ್ತಾನದಿಂದೇನು ಪ್ರಯೋಜನವಾಗುತ್ತದೆ? ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿರುವ ಪ್ರಾಂತ್ಯಗಳಲ್ಲಿ ಹಿಂದೂ ರಾಜ್ಯವನ್ನು ತಡೆಗಟ್ಟುವುದು ಮತ್ತು ಅಲ್ಲಿ ಹಿಂದೂ ರಾಜ್ಯ ಎಂದೆಂದೂ ಆಗಗೊಡದಿರುವುದು ಮಾತ್ರ! ಬೇರೆ ಮಾತಿನಲ್ಲಿ ಹೇಳುವುದಾದರೆ, ಮುಸ್ಲಿಮರು ಎಲ್ಲಿ ಅಧಿಕ ಸಂಖ್ಯೆಯಲ್ಲಿರುವರೋ ಅವರಿಗೆ ಪಾಕಿಸ್ತಾನ ಬೇಕಿಲ್ಲ. ಏಕೆಂದರೆ, ಅಲ್ಲಿ ಹಿಂದೂರಾಜ್ಯದ ಭಯವಿಲ್ಲ. ಎಲ್ಲಿ ಅವರು ಅಲ್ಪಸಂಖ್ಯೆಯಲ್ಲಿರುವರೋ ಆ ಪ್ರಾಂತ್ಯ ಮುಸ್ಲಿಮರಿಗೆ ನಿಷ್ಪ್ರಯೋಜಕ. ಏಕೆಂದರೆ ಸಪಾಕಿಸ್ತಾನವಿರಲಿ ಅಥವಾ ಅಪಾಕಿಸ್ತಾನವಿರಲಿ ಅವರು ಹಿಂದೂ ರಾಜ್ಯವನ್ನು ಎದುರಿಸಲೇಬೇಕು. ಮುಸ್ಲಿಂ ಲೀಗಿನ ರಾಜಕೀಯಕ್ಕಿಂತ ಹೆಚ್ಚು ವ್ಯರ್ಥವಾದ ರಾಜಕೀಯ

ಇರಬಲ್ಲುದೆ? ಅಲ್ಪಸಂಖ್ಯಾತ ಮುಸ್ಲಿಮರಿಗೆ ಸಹಾಯ ಮಾಡಲು ಮುಸ್ಲಿಂ ಲೀಗ್ ಸಹಾಯ ಮಾಡಿತು; ಆಮೇಲೆ ಬಹುಸಂಖ್ಯಾತ ಮುಸ್ಲಿಮರ ಹಿತವನ್ನು ಸಮರ್ಥಿಸುತ್ತಾ ಕೊನೆ ಮಾಡಿತು. ಮುಸ್ಲಿಂ ಲೀಗಿನ ಮೂಲ ಗುರಿಯಲ್ಲಿ ಎಂಥ ವ್ಯತಿರಿಕ್ತತೆ! ಭವ್ಯತೆಯ ಶಿಖರದಿಂದ ಹಾಸ್ಯಾಸ್ಪದ ಪಾತಾಳಕ್ಕೆ ಪತನ! ಹಿಂದೂರಾಜ್ಯದ ವಿರುದ್ಧ ರೋಗನಿವಾರಕ ಮದ್ದಾಗಿ ಪಾಕಿಸ್ತಾನ ಹೆಚ್ಚು ನಿಷ್ಪ್ರಯೋಜಕ.

## VII

ನನಗೆ ಹೊಳೆದ ಪಾಕಿಸ್ತಾನ ಪರವಾದ ಮುಸ್ಲಿಂ ವಾದದ ಕೆಲವು ದೌರ್ಬಲ್ಯಗಳು ಇವು. ನನಗೆ ಹೊಳೆಯದಿರುವ ಇನ್ನೂ ಕೆಲವು ಇರಬಹುದು. ಆದರೆ ಈಗಿರುವ ಪಟ್ಟಿ ಹೆಚ್ಚು ಭಯಂಕರವಾಗಿದೆ. ಅವುಗಳನ್ನು ಎದುರಿಸಲು ಮುಸ್ಲಿಮರು ಸೂಚಿಸುವ ಬಗೆ ಯಾವುದು? ಈ ಪ್ರಶ್ನೆ ಮುಸ್ಲಿಮರಿಗೆ, ನನಗಲ್ಲ. ಈ ವಿಷಯದ ವಿದ್ಯಾರ್ಥಿಯಾಗಿ ಈ ದೌರ್ಬಲ್ಯಗಳನ್ನು ವಿವರಿಸಿ ಮುಂದುವರಿಯುವುದು ನನ್ನ ಕರ್ತವ್ಯ. ಅದನ್ನು ನಾನು ಮಾಡಿದ್ದೇನೆ. ನಾನು ಉತ್ತರಿಸುವಂಥದು ಮತ್ತೇನೂ ಇಲ್ಲ.

ಅವುಗಳ ಪ್ರಸ್ತಾವನೆ ಇಲ್ಲದೆ ಈ ಚರ್ಚೆ ಅಪೂರ್ಣವಾಗುತ್ತದೆ ಎನ್ನಿಸುವಂಥ ಇನ್ನೆರಡು ಪ್ರಮುಖ ಪ್ರಶ್ನೆಗಳಿವೆ. ಈ ಪ್ರಶ್ನೆಗಳ ಉದ್ದೇಶ ನನ್ನ ಹಾಗೂ ನನ್ನ ಟೀಕಾಕಾರರ ಮಧ್ಯದ ನೆಲಗಟ್ಟನ್ನು ನಿರ್ಮಲಗೊಳಿಸುವುದು. ಈ ಪ್ರಶ್ನೆಗಳಲ್ಲಿ ಒಂದನ್ನು, ಟೀಕಾಕಾರರಲ್ಲಿ ಕೇಳುವ ಅಧಿಕಾರ ನನಗಿದೆ; ಎರಡನೆಯದನ್ನು, ನನ್ನನ್ನು ಕೇಳುವ ಅಧಿಕಾರ ಟೀಕಾಕಾರರಿಗಿದೆ.

ಈಗ ಮೊದಲನೆಯ ಪ್ರಶ್ನೆಯನ್ನು ಎತ್ತಿಕೊಳ್ಳೋಣ. ಟೀಕಾಕಾರರನ್ನು ಏನು ಕೇಳಬೇಕೆಂದು ನನಗನ್ನಿಸುತ್ತದೆ ಎಂದರೆ, ಈ ದೌರ್ಬಲ್ಯಗಳ ಹೇಳಿಕೆಯಿಂದ ಅವರು ಯಾವ ಪ್ರಯೋಜನವನ್ನು ನಿರೀಕ್ಷಿಸುತ್ತಾರೆ? ಪಾಕಿಸ್ತಾನದ ಗುಣಾವಗುಣಗಳ ಮೇಲಿನ ವಿವಾದದಲ್ಲಿ ಮುಸ್ಲಿಮರು ಸೋತರೆ ಪಾಕಿಸ್ತಾನ ಕಲ್ಪನೆಯನ್ನು ತ್ಯಜಿಸಬೇಕು ಎಂದವರು ನಿರೀಕ್ಷಿಸುತ್ತಾರೆಯೆ? ನಿಜವಾಗಿ ಅದು ಈ ವಿವಾದವನ್ನು ಬಗೆಹರಿಸಲು ನಾವು ಹಿಡಿಯುವ ಮಾರ್ಗದ ಮೇಲೆ ಅವಲಂಬಿತವಾಗಿರುತ್ತದೆ. ಹಿಂದಿನ ಕಾಲದಲ್ಲಿ ಕ್ರೈಸ್ತಧರ್ಮ ಪ್ರಚಾರಕರು ಹಿಂದೂಗಳೊಳಗಿಂದ ಮತಾಂತರಿಗಳನ್ನು ಗಳಿಸಿಕೊಳ್ಳಲೋಸ್ಕರ ಪ್ರಾರಂಭಿಸಿದ ಕ್ರಮವನ್ನೇ ಹಿಂದೂಗಳು ಮತ್ತು ಮುಸ್ಲಿಮರು ಅನುಸರಿಸಬಹುದು. ಈ ಕ್ರಮದ ಅನುಸಾರವಾಗಿ ಕ್ರೈಸ್ತಧರ್ಮ ಪ್ರಚಾರಕ ಮತ್ತು ಬ್ರಾಹ್ಮಣನ ಮಧ್ಯೆ ವಿವಾದಕ್ಕೆ ಒಂದು ದಿನವನ್ನು ಗೊತ್ತುಪಡಿಸಲಾಯ್ತು. ಅದು ಸಾರ್ವಜನಿಕರಿಗೂ ತೆರೆದಿತ್ತು. ಮೊದಲನೆಯವನು ಕ್ರೈಸ್ತ ಧರ್ಮವನ್ನು ಪ್ರತಿನಿಧಿಸುತ್ತಿದ್ದ. ಎರಡನೆಯವನು ತಾನು ಹಿಂದೂ ಧರ್ಮದ ಮುಂದಾಳೆಂದು ಭರವಸೆ ನೀಡುತ್ತಾ ಯಾರು ತನ್ನ ಧರ್ಮದ ವಿರುದ್ಧದ ಮೊಕದ್ದಮೆಯನ್ನು ಎದುರಿಸಲು ಸೋಲುತ್ತಾನೋ ಅವನು ಇನ್ನೊಬ್ಬನ ಧರ್ಮವನ್ನು ಅಂಗೀಕರಿಸಲು ಬದ್ಧನಾಗಿರಬೇಕು ಎಂಬ ಶರತ್ತನ್ನು ಹಾಕಿದ. ವಿವಾದವನ್ನು ಬಗೆಹರಿಸುವ ಅಂಥ ವಿಧಾನವನ್ನು, ಪಾಕಿಸ್ತಾನ ಸಮಸ್ಯೆಯ ಬಗೆಗೆ ಹಿಂದೂಗಳು ಮತ್ತು ಮುಸ್ಲಿಮರು ಅಂಗೀಕರಿಸಿದರೆ, ಈ ದೌರ್ಬಲ್ಯಗಳ ಸೂತ್ರ ಪ್ರದರ್ಶನದಲ್ಲಿ ಕೊಂಚ ಉಪಯೋಗವಾದೀತು. ವಿವಾದವನ್ನು ಬಗೆಹರಿಸುವ ಇನ್ನೊಂದು ವಿಧಾನ ಇದೆಯೆಂಬುದನ್ನು ಮರೆಯಬಾರದು. ಅದನ್ನು "ಜಾನ್ಸನೀಯ ವಿಧಾನ" ಎಂದು ಕರೆಯಬಹುದು– ಬಿಷಪ್ ಬರ್ಕಲಿ ಅವರ ತರ್ಕವನ್ನು ಎದುರಿಸಲು ಡಾ. ಜಾನ್ಸನ್ ಅಳವಡಿಸಿಕೊಂಡ ರೀತಿ ಅದಾದ್ದರಿಂದ ಈ ಹೆಸರು ಬಂದಿದೆ. "ಭೌತವನ್ನು ಅಸ್ತಿತ್ವರಹಿತ, ವಿಶ್ವದ ಪ್ರತಿಯೊಂದು ಆದರ್ಶ ಕೇವಲ ಕಾಲ್ಪನಿಕ ಅಥವಾ ಮಾಯೆ' ಎಂಬ ಬಿಷಪ್ ಬರ್ಕಲಿ ಸಿದ್ಧಾಂತ, ಕೇವಲ ಚಾತುರ್ಯದಿಂದ ಕಲ್ಪಿಸಿದ ಕುತರ್ಕ, ಆದರೆ ಅದನ್ನು ಗಣಿಸುವುದು

ಅಸಾಧ್ಯವಾಗುತ್ತದೆ" ಎಂದು ಬಾಸ್ವೆಲ್ ಡಾ. ಜಾನ್ಸನ್‌ಗೆ ಹೇಳಿದಾಗ, ಡಾ. ಜಾನ್ಸನ್ ತಾನು ಪುಟ ಹಾರುವಂತೆ ತನ್ನ ಕಾಲಿನಿಂದ ದೊಡ್ಡದೊಂದು ಕಲ್ಲಿಗೆ ಅಧಿಕ ಬಲದಿಂದ ಒದೆಯುತ್ತಾ 'ಹೀಗೆ ನಾನದನ್ನು ಗಣಿಸುತ್ತೇನೆ' ಎಂದು ಹೇಳಿದ್ದನ್ನು ಬಾಸ್ವೆಲ್ ದಾಖಲಿಸಿದ್ದಾನೆ. ತರ್ಕ ಮತ್ತು ಸಕಾರಣ ಸಮರ್ಥನೆಗಳ ಪರೀಕ್ಷಾ ವಿಧಾನದಿಂದ ಪಾಕಿಸ್ತಾನದ ವಾದವನ್ನು ಬಗೆಹರಿಸಿಕೊಳ್ಳಲು ಮುಸ್ಲಿಮರು ವಿಚಾರವಂತರ ರೀತಿಯಲ್ಲಿ ಒಪ್ಪಿಕೊಂಡರೆ ಇದು ಸಾಧ್ಯವಾಗಬಹುದು. ಆದರೆ ಮುಸ್ಲಿಮರು ಡಾ. ಜಾನ್ಸನ್ ಅವರ ವಿಧಾನವನ್ನು ಅನುಸರಿಸಿ "ಹಾಳಾಗಲಿ ನಿಮ್ಮ ತರ್ಕ! ನಮಗೆ ಪಾಕಿಸ್ತಾನ ಬೇಕು' ಎಂದು ಹೇಳಿದರೆ ನಾನು ಆಶ್ಚರ್ಯ ಪಡುವುದಿಲ್ಲ. ಅಂಥ ಸಂದರ್ಭದಲ್ಲಿ ಪಾಕಿಸ್ತಾನದ ವಾದ ಬಿದ್ದುಹೋಗಲು ಕಲ್ಪಿಸಿದ ಮಿತಿಗಳ ಮೇಲಿನ ಭರವಸೆ ಉಪಯೋಗಕ್ಕೆ ಬರುವುದಿಲ್ಲ ಎಂಬುದನ್ನು ಟೀಕಾಕಾರ ಅರ್ಥ ಮಾಡಿಕೊಳ್ಳಬೇಕು. ಆದ್ದರಿಂದ ಪಾಕಿಸ್ತಾನದ ಬಗೆಗಿನ ತಕರಾರುಗಳ ತರ್ಕದ ಆಧಾರದ ಮೇಲೆ ಹೆಚ್ಚು ಉತ್ಸುಕನಾಗಿರುವುದರಿಂದ ಏನೂ ಪ್ರಯೋಜನವಿಲ್ಲ.

ಟೀಕಾಕಾರರು ನನ್ನನ್ನು ಕೇಳಲು ಅಧಿಕಾರವಿರುವ ಪ್ರಶ್ನೆಯತ್ತ ತಿರುಗೋಣ, ಪಾಕಿಸ್ತಾನ ಸಮಸ್ಯೆಯ ಬಗ್ಗೆ ನಾನು ವಿವರಿಸಿರುವ ಆಕ್ಷೇಪಣೆಗಳ ಬೆಳಕಿನಲ್ಲಿ ನನ್ನ ಸ್ಥಾನವೇನು? ನನ್ನ ನಿಲುವಿನ ಬಗೆಗೆ ನನಗೆ ಯಾವುದೇ ಅನುಮಾನಗಳಿಲ್ಲ. ಮುಂದಿನ ಅಧ್ಯಾಯಗಳಲ್ಲಿ ವಿವರಿಸಿರುವಂತೆ, ಮುಸ್ಲಿಮರು ಪಾಕಿಸ್ತಾನ ಬೇಕೆಂದು ಒಲವು ತೋರಿದರೆ, ಕೆಲವು ಶರತ್ತುಗಳಿಗೆ ಒಳಪಡಿಸಿ, ಅವರಿಗೆ ಅದನ್ನು ಕೊಟ್ಟುಬಿಡಬೇಕು ಎಂಬುದು ನನ್ನ ದೃಢ ನಿಲುವು. ನನ್ನ ಟೀಕಾಕಾರರು ನನ್ನ ಅದೃಢತೆಗಾಗಿ ನಿಂದಿಸುತ್ತಾರೆ ಮತ್ತು ಇಂಥ ವಿಶೇಷ ತೀರ್ಮಾನಕ್ಕೆ– ವಿಶೇಷ ಏಕೆಂದರೆ 'ಪಾಕಿಸ್ತಾನ ಪರವಾದ ಮುಸ್ಲಿಮರ ವಾದದಲ್ಲಿ ಏನೇನೂ ಹುರುಳಿಲ್ಲ, ನಿಷ್ಕರುಣ ವಿಧಿಯ ಶಾಸನಸಂಜಾತ ಬಲಾತ್ಕಾರ ಶಕ್ತಿಯ ಸಾಗಣೆಯ ವಿನಾ' ಎಂಬ ಹಿಂದಿನ ಅಧ್ಯಾಯದಲ್ಲಿ ಅಭಿವ್ಯಕ್ತವಾದ ನನ್ನ ದೃಷ್ಟಿಯಿಂದಾಗಿ– ಕಾರಣಗಳನ್ನು ನೀಡಲು ಒತ್ತಾಯಿಸುತ್ತಾರೆ ಎಂದು ನನಗೆ ಗೊತ್ತು. ಪಾಕಿಸ್ತಾನ ಪರವಾದ ಮುಸ್ಲಿಂ ವಾದದಲ್ಲಿರುವ ದೌರ್ಬಲ್ಯಗಳನ್ನು ಕುರಿತು ನಾನು ಹೇಳಿದ ಯಾವುದನ್ನೂ ವಾಪಸ್ಸು ತೆಗೆದುಕೊಳ್ಳುವುದಿಲ್ಲ. ಆದಾಗ್ಯೂ ಮುಸ್ಲಿಮರು ಪಾಕಿಸ್ತಾನ ಬೇಕೇಬೇಕೆಂದರೆ ಅದನ್ನು ಅವರಿಗೆ ಕೊಡುವುದರ ಹೊರತು ಪಾರಾಗುವ ಬೇರೆ ಮಾರ್ಗವಿಲ್ಲ. ಈ ತೀರ್ಮಾನಕ್ಕೆ ನನ್ನನ್ನು ಕೊಂಡೊಯ್ದ ಕಾರಣಗಳಲ್ಲಿ 'ಪಾಕಿಸ್ತಾನ ತರ್ಕದ ಪ್ರಾಬಲ್ಯವಾಗಲೀ ಅಥವಾ ದೌರ್ಬಲ್ಯವಾಗಲೀ ಒಂದು ಕಾರಣವಾಗಿರುವುದಿಲ್ಲ' ಎಂಬುದನ್ನು ಹೇಳಲು ನಾನು ಹಿಂದುಮುಂದು ನೋಡುವುದಿಲ್ಲ. ಸಮಸ್ಯೆಯನ್ನು ನಿರ್ಧರಿಸಬೇಕಾದ ಎರಡು ನಿಯಂತ್ರಕ ಅಂಶಗಳು ನನ್ನ ತೀರ್ಮಾನದಲ್ಲಿವೆ. ಮೊದಲನೆಯದು ಭಾರತದ ರಕ್ಷಣೆ. ಎರಡನೆಯದು ಮುಸ್ಲಿಮರ ಭಾವನೆ. ನಾನು ಅವರನ್ನೇಕೆ ನಿರ್ಣಾಯಕ ಎಂದು ಭಾವಿಸುತ್ತೇವೆ ಮತ್ತು ನನ್ನ ಅಭಿಪ್ರಾಯದಲ್ಲಿ ಹೇಗೆ ಅವರು ಪಾಕಿಸ್ತಾನ ಪರವಾಗಿದ್ದಾರೆ ಎಂಬುದನ್ನು ನಾನು ಹೇಳುತ್ತೇನೆ.

ಮೊದಲನೆಯದನ್ನು ಮೊದಲು ನೋಡೋಣ. ಸ್ವಾತಂತ್ರ್ಯವನ್ನು ಗಳಿಸುವುದು ಮುಖ್ಯವಲ್ಲ. ಆದರೆ ಅದನ್ನು ಉಳಿಸಿಕೊಳ್ಳಲು ಬೇಕಾದ ಸಾಧನ ಮಾರ್ಗಗಳನ್ನು ಹೊಂದುವುದು ಮುಖ್ಯ ಎಂಬುದನ್ನು ಯಾರೂ ಅಲಕ್ಷಿಸಲಾರರು. ದೇಶದ ಸ್ವಾತಂತ್ರ್ಯದ ಅಂತಿಮ ಆಧಾರವೆಂದರೆ ಬಲಶಾಲಿಯಾದ ಸೈನ್ಯ– ಎಲ್ಲ ಕಾಲದಲ್ಲಿಯೂ ಮತ್ತು ಯಾವುದೇ ಸಂಭವನೀಯ ಘಟನೆಯಲ್ಲಿ ದೇಶಕ್ಕಾಗಿ ಹೋರಾಡುತ್ತದೆ ಎಂಬ ನಂಬಿಕೆಗೆ ಪಾತ್ರವಾದ ಸೈನ್ಯ. ಭಾರತದ ಸೈನ್ಯ ಅವಶ್ಯವಾಗಿ ಹಿಂದೂಗಳು ಮತ್ತು ಮುಸ್ಲಿಮರಿಂದ ಕೂಡಿದ ಮಿಶ್ರ ಸೈನ್ಯವಾಗಿರುತ್ತದೆ. ವಿದೇಶೀಯ ಪ್ರಭುತ್ವ ಭಾರತದ ಮೇಲೆ ಆಕ್ರಮಣ ಮಾಡಿದರೆ,

ಸೈನ್ಯದಲ್ಲಿರುವ ಮುಸ್ಲಿಮರು ಭಾರತದ ರಕ್ಷಣೆಗೆ ನಿಲ್ಲುವರೆಂದು ನಂಬಬಹುದೆ? ಆಕ್ರಮಣಕಾರರು ಅವರ ಸಹಮತೀಯರು ಎಂದಿಟ್ಟುಕೊಳ್ಳೋಣ. ಮುಸ್ಲಿಂ ಸೈನಿಕರು ಆಕ್ರಮಣಕಾರರೊಂದಿಗೆ ಶಾಮೀಲಾಗುತ್ತಾರೋ ಅಥವಾ ಅವರ ವಿರುದ್ಧ ಸೆಣಸಾಡಿ ಭಾರತವನ್ನು ರಕ್ಷಿಸುವರೊ? ಇದು ತುಂಬ ನಿರ್ಣಾಯಕ ಪ್ರಶ್ನೆ. ಖಚಿತವಾಗಿ ಈ ಪ್ರಶ್ನೆಗೆ ಉತ್ತರ, ಸೈನ್ಯದಲ್ಲಿರುವ ಮುಸ್ಲಿಮರಿಗೆ ಪಾಕಿಸ್ತಾನದ ಬುನಾದಿಯಾದ ದ್ವಿರಾಷ್ಟ್ರ ಸಿದ್ಧಾಂತರೋಗದ ಸೋಂಕು ಎಷ್ಟರಮಟ್ಟಿಗೆ ಆವರಿಸಿದೆ ಎಂಬುದನ್ನು ಅವಲಂಬಿಸಿದೆ. ಅವರು ಸೋಂಕಿಗೆ ಈಡಾಗಿದ್ದರೆ, ಆಗ ಭಾರತದ ಸೈನ್ಯ ಸುಕ್ಷೇಮವಾಗಲಾರದು. ಭಾರತ ಸ್ವಾತಂತ್ರ್ಯದ ಪೋಷಕಶಕ್ತಿಯಾಗಿರುವುದರ ಬದಲು ಅದಕ್ಕೆ ವಿಪತ್ತಿನ ಭೀತಿ ಬಿತ್ತುವ ಭಯೋತ್ಪಾದಕ ಹಾಗೂ ಅಂತಸ್ಥ ಆಪತ್ಕಾರಕ ಶಕ್ತಿಯಾಗಿ ಬಿಡುತ್ತದೆ. ಭಾರತದ ರಕ್ಷಣೆಗೋಸ್ಕರವಾಗಿಯೇ ಪಾಕಿಸ್ತಾನವಾಗುವುದನ್ನು ತಿರಸ್ಕರಿಸುತ್ತಿದ್ದೇವೆ ಎಂದು ಕೆಲವರು ಬ್ರಿಟಿಷರು ವಾದಿಸಿದ್ದನ್ನು ಕೇಳಿದಾಗ ನಾನು ದಿಗ್ಭ್ರಮೆಗೊಂಡದ್ದನ್ನು ಒಪ್ಪಿಕೊಳ್ಳುತ್ತೇನೆ. ಕೆಲವರು ಹಿಂದೂಗಳು ಕೂಡ ಇದೇ ರಾಗವನ್ನು ಹಾಡುತ್ತಾರೆ. ಭಾರತ ಸ್ವಾತಂತ್ರ್ಯದ ನಿರ್ಣಾಯಕ ಅಂಶ ಯಾವುದೂ ಎಂಬುದರ ಅರಿವು ಅವರಿಗಿಲ್ಲದಿರಬೇಕು ಅಥವಾ ಸ್ವತಂತ್ರ ದೇಶವೊಂದು ತನ್ನ ರಕ್ಷಣೆಗೆ ತಾನೇ ಜವಾಬುದಾರಿ ಎಂದು ಭಾವಿಸದೆ, ಬ್ರಿಟಿಷರ ಅಧೀನದಲ್ಲಿದ್ದು, ಯಾವುದೇ ಆಕ್ರಮಣ ಸಂಭವಿಸಿದಲ್ಲಿ ಅವರಿಂದ ರಕ್ಷಣೆ ಪಡೆಯಬೇಕೆಂದು ಭಾವಿಸಿರಬೇಕು ಎಂದು ಚಿಂತಿಸಿದೆ. ಇದು ಹತಾಶೆಯಿಂದಾದ ದರ್ಶನದ ತಪ್ಪು ಕೋನ. ಭಾರತ ಇಬ್ಭಾಗವಾಗದಿದ್ದರೆ, ಬ್ರಿಟಿಷರು ಭಾರತವನ್ನು ಚೆನ್ನಾಗಿ ರಕ್ಷಿಸಬಲ್ಲರೆ ಎಂಬುದು ಪ್ರಶ್ನೆಯಲ್ಲ. ಸ್ವತಂತ್ರ ಭಾರತವನ್ನು ರಕ್ಷಿಸಲು ಭಾರತೀಯರು ಶಕ್ತರಾಗಿರುವರೆ ಎಂಬುದು ಪ್ರಶ್ನೆ. ಅದಕ್ಕೆ ಉತ್ತರವಿಷ್ಟೆ: ಭಾರತೀಯರು ಸ್ವತಂತ್ರ ಭಾರತವನ್ನು ಒಂದೇ ಒಂದು ಶರತ್ತಿನ ಆಧಾರದ ಮೇಲೆ ರಕ್ಷಿಸಬಲ್ಲರು– ಪಾಕಿಸ್ತಾನದ ವಿಷದಿಂದ ಸೋಂಕುಗೊಳ್ಳದೆ ಭಾರತದ ಸೈನ್ಯ ರಾಜಕೀಯರಹಿತವಾಗಿ ಉಳಿದಿರಬೇಕು ಎಂಬುದೇ ಆ ಶರತ್ತು. ಸ್ವರಾಜ್ಯದ ವಿಷಯವನ್ನು ಚರ್ಚಿಸುವಾಗ ಸೈನ್ಯದ ವಿಷಯವನ್ನು ಪ್ರಸ್ತಾಪಿಸದೆಯೇ ಮುಂದುವರಿಯುವ ಮೂರ್ಖ ಸ್ವಭಾವ ಈ ದೇಶದಲ್ಲಿ ಬೆಳೆದಿರುವುದರ ವಿರುದ್ಧ ನಾನು ಭಾರತೀಯರನ್ನು ಎಚ್ಚರಿಸಬೇಕಾಗಿದೆ. ಭಾರತದ ಸ್ವಾತಂತ್ರ್ಯಕ್ಕೆ ಹೆಚ್ಚು ಗಂಡಾಂತರಕಾರಿಯಾದದ್ದು ರಾಜಕೀಯ ಸೈನ್ಯ ಎಂಬುದನ್ನು ಅರ್ಥ ಮಾಡಿಕೊಳ್ಳದ ವೈಫಲ್ಯಕ್ಕಿಂತ ಅಧಿಕ ಮಾರಕವಾದದ್ದು ಮತ್ತೊಂದಿಲ್ಲ. ಸೈನ್ಯ ಇರದಿರುವುದಕ್ಕಿಂತ ಇದು ಹೆಚ್ಚು ಅಪಾಯಕಾರಿ. ದಂಗೆಕೋರ ಹಾಗೂ ಪ್ರತಿಭಟನಾ ಶಕ್ತಿಗಳು ಯುದ್ಧಕ್ಕೆ ಆಹ್ವಾನ ನೀಡಿದಾಗ, ಸರ್ಕಾರ ದೇಶದೊಳಗಡೆ ತನ್ನ ಅಧಿಕಾರ ಚಲಾಯಿಸಲು ಪೋಷಣೆ ನೀಡುವ ಅಂತಿಮ ದಂಡಶಕ್ತಿ ಸೈನ್ಯದ್ದು ಎಂಬ ಸತ್ಯ ಅಷ್ಟೇ ಮುಖ್ಯವಾದದ್ದು. ತತ್ಕಾಲದ ಸರ್ಕಾರ ಘೋಷಿಸಿದ ಕಾರ್ಯನೀತಿಯನ್ನು ಮುಸ್ಲಿಮರ ಒಂದು ತಂಡ ತೀವ್ರವಾಗಿ ವಿರೋಧಿಸಿತು ಎಂದು ಭಾವಿಸೋಣ. ತತ್ಕಾಲದ ಸರ್ಕಾರ ತನ್ನ ಕಾರ್ಯನೀತಿಯನ್ನು ಅನುಷ್ಠಾನಕ್ಕೆ ತರಲು ಸೈನ್ಯವನ್ನು ಬಳಸಿಕೊಳ್ಳಬೇಕಾದ ಅನಿವಾರ್ಯತೆ ಬಿತ್ತು ಎಂದು ಇಟ್ಟುಕೊಳ್ಳೋಣ. ತನ್ನ ಆಜ್ಞೆಯನ್ನು ಪಾಲಿಸಲು ಮತ್ತು ಮುಸ್ಲಿಂ ದಂಗೆಕೋರರನ್ನು ಗುಂಡಿಟ್ಟು ಕೊಲ್ಲಲು ಸರ್ಕಾರ ಸೈನ್ಯದಲ್ಲಿರುವ ಮುಸ್ಲಿಮರನ್ನು ಅವಲಂಬಿಸಬಲ್ಲುದೆ? ಇದು ಮತ್ತೆ ದ್ವಿರಾಷ್ಟ್ರ ಸಿದ್ಧಾಂತದ ಸೋಂಕು ಎಷ್ಟರಮಟ್ಟಿಗೆ ಸೈನ್ಯದಲ್ಲಿರುವ ಮುಸ್ಲಿಮರಿಗೆ ಆವರಿಸಿದೆ ಎಂಬುದನ್ನು ಅವಲಂಬಿಸಿರುತ್ತದೆ. ಆ ಸೋಂಕು ತಗುಲಿದ್ದರೆ, ಭಾರತ ಸುಕ್ಷೇಮವಾದ ಹಾಗೂ ಸುರಕ್ಷಿತವಾದ ಸರ್ಕಾರವನ್ನು ಹೊಂದಲಾರದು.

ಎರಡನೆಯ ನಿಯಂತ್ರಕ ಅಂಶದತ್ತ ಹೊರಳಿ ನೋಡಿದರೆ ರಾಜಕೀಯದಲ್ಲಿ ಭಾವನೆ ಒಂದು ಶಕ್ತಿ ಎಂಬುದಕ್ಕೆ ಹಿಂದೂಗಳು ಹೆಚ್ಚು ಬೆಲೆಯನ್ನು ಕೊಡುವುದಿಲ್ಲ. ಮುಸ್ಲಿಮರ ವಿರುದ್ಧ ಗೆಲುವು ಸಾಧಿಸಲು ಎರಡು ಆಧಾರಗಳ ಮೇಲೆ ಅವಲಂಬಿತರಾಗಿದ್ದಾರೆ ಎಂದು ತೋರುತ್ತದೆ. ಹಿಂದೂಗಳು ಮತ್ತು ಮುಸ್ಲಿಮರು

ಎರಡು ಜನಾಂಗಗಳಾಗಿದ್ದರೂ ಕೂಡ, ಒಂದು ದೇಶದೊಳಗೆ ಅವರು ಜೀವಿಸಬಲ್ಲರು ಎಂಬುದು ಮೊದಲನೆಯದು. ಸ್ಪಷ್ಟ ತರ್ಕಕ್ಕಿಂತ ಹೆಚ್ಚಾಗಿ ಪ್ರಬಲ ಭಾವನೆಯ ಅಸ್ತಿಭಾರದ ಮೇಲೆ ಪಾಕಿಸ್ತಾನ ಪರ ಮೊಕದ್ದಮೆ ನಿಂತಿದೆ ಎಂಬುದು ಎರಡನೆಯದು. ಇಂಥ ತರ್ಕಗಳಿಂದ ಹಿಂದೂಗಳು ಎಷ್ಟು ಕಾಲ ತಮ್ಮನ್ನು ತಾವೇ ಮೂರ್ಖರನ್ನಾಗಿಸಿಕೊಳ್ಳುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಮೊದಲನೆಯ ತರ್ಕಕ್ಕೆ ಪೂರ್ವನಿದರ್ಶನವಿಲ್ಲದೆ ಇಲ್ಲ ಎಂಬುದು ಸತ್ಯ. ಅದೇ ಸಮಯದಲ್ಲಿ ಅದರ ಮೌಲ್ಯ ತುಂಬ ಪರಿಮಿತವಾದದ್ದು ಎಂದು ಅರ್ಥ ಮಾಡಿಕೊಳ್ಳಲು ಹೆಚ್ಚಿನ ಬುದ್ಧಿವಂತಿಕೆ ಬೇಕಾಗಿಲ್ಲ. ಎರಡು ಜನಾಂಗಗಳು ಮತ್ತು ಒಂದು ದೇಶ ಎಂಬುದು ಸುಂದರವಾದ ವಿಹಿತ ಹೇಳಿಕೆ. ಧರ್ಮ ಬೋಧೆ ಒಳಗೊಂಡ ಆಕರ್ಷಣೆಯನ್ನೇ ಅದೂ ಒಳಗೊಂಡಿದೆ. ಅದು ಮುಸ್ಲಿಂ ನಾಯಕರ ಪರಿವರ್ತನೆಯಲ್ಲಿ ಪರ್ಯಾವಸಾನವಾಗಬಹುದು. ಆದರೆ ಅದನ್ನು ಧರ್ಮಬೋಧೆಯಂತೆ ಹೇಳುವುದಕ್ಕೆ ಬದಲಾಗಿ ಮುಸ್ಲಿಮರು ವಿಧೇಯತೆಯಿಂದ ಅನುಸರಿಸಬೇಕೆಂದು ಅದನ್ನೊಂದು ಆಜ್ಞೆಯಂತೆ ಜಾರಿಗೊಳಿಸಿದರೆ, ಯಾವುದೇ ಸ್ಪಷ್ಟ ಮನಸ್ಸಿನ ವ್ಯಕ್ತಿ ಒಪ್ಪಿಕೊಳ್ಳದ ಹುಚ್ಚು ಯೋಜನೆಯಾಗುವುದು ಸಹಜ. ನಿಜವಾಗಿ ಅದು ಸ್ವರಾಜ್ಯದ ಮೂಲೋದ್ದೇಶವನ್ನೇ ವಿಫಲಗೊಳಿಸುತ್ತದೆ. ಎರಡನೆಯ ತರ್ಕ ಅಷ್ಟೇ ಮೂರ್ಖತನದ್ದು. ಪಾಕಿಸ್ತಾನ ಪರವಾದ ಮುಸ್ಲಿಂವಾದ ಭಾವನೆಯ ಮೇಲೆ ಸ್ಥಾಪನೆಗೊಂಡಿರುವುದು ಅದರ ದುರ್ಬಲಾಂಶ ಎಂಬುದು ಸತ್ಯಕ್ಕೆ ದೂರ. ಅದು ನಿಜವಾಗಿ ಅದರ ಪ್ರಬಲಾಂಶ, ಸಂವಿಧಾನದ ಕಾರ್ಯಸಾಧ್ಯತೆ ಸಿದ್ಧಾಂತದ ವಿಷಯವಲ್ಲ ಎಂದು ತಿಳಿಯಲು ರಾಜಕೀಯದ ಆಳವಾದ ಪರಿಜ್ಞಾನದ ಅಗತ್ಯ ಬೇಕಾಗಿಲ್ಲ. ಅದು ಭಾವನೆಯ ವಿಷಯ. ಉಡುಪಿನ ಹಾಗೆ, ಸಂವಿಧಾನ ಹೊಂದಿಕೆಯಾಗಬೇಕು; ಹಾಗೆಯೇ ಚೆಂದವೆನಿಸಬೇಕು. ಸಂವಿಧಾನ ಪ್ರಿಯವಾಗದಿದ್ದರೆ, ಅದು ಎಷ್ಟೇ ನಿರ್ದುಷ್ಟವಾಗಿದ್ದರೂ, ಅದು ಕೆಲಸ ಮಾಡಲಾರದು. ದೃಢ ಸಂಕಲ್ಪಿತ ವರ್ಗದ ಪ್ರಬಲ ಭಾವನೆಗಳಿಗೆ ವಿರುದ್ಧವಾಗಿ ಕೆಲಸ ಮಾಡುವ ಸಂವಿಧಾನವನ್ನು ಹೊಂದುವುದು ಒಂದು ರೀತಿಯಲ್ಲಿ ದಂಗೆಗೆ ಸ್ವಾಗತ ನೀಡುವಂತಾಗದಿದ್ದರೂ ವಿಪತ್ತಿಗೆ ಕರೆಕೊಟ್ಟಂತಾಗುತ್ತದೆ.

ಸುಭದ್ರ ಸೈನ್ಯವಿದೆಯೆಂದು ಶಸ್ತ್ರಸಜ್ಜಿತ ಸೈನಿಕರಿಂದ ಪ್ರಭುತ್ವ ನಡೆಸುವುದು ಜನರನ್ನು ಆಳುವ ಸ್ವಾಭಾವಿಕ ವಿಧಾನವಲ್ಲ ಎಂಬುದನ್ನು ಹಿಂದೂಗಳು ಇನ್ನೂ ಅರ್ಥ ಮಾಡಿಕೊಂಡಿಲ್ಲ. ಸೇನೆ ರಾಷ್ಟ್ರ ಶರೀರದ ಮದ್ದು ಎಂಬುದನ್ನು ಯಾರೂ ಅಲ್ಲಗಳೆಯಲಾರರು. ರಾಷ್ಟ್ರಶರೀರ ಕಾಯಿಲೆಗೆ ತುತ್ತಾದಾಗ ಅದನ್ನು ಬಳಸಬೇಕು. ಆದರೆ ಸೇನೆ ರಾಷ್ಟ್ರ ಶರೀರದ ಮದ್ದು ಆಗಿರುವ ಕಾರಣದಿಂದಲೇ, ಅದನ್ನು ಅದರ ದಿನನಿತ್ಯದ ಆಹಾರವಾಗಲು ಅವಕಾಶ ನೀಡಬಾರದು. ನಿಜವಾಗಿ ಹೇಳುವುದಾದರೆ ರಾಷ್ಟ್ರಶರೀರ ಸ್ವಾಭಾವಿಕ ಕ್ರಿಯೆಯ ಜಲದ ಕಣ್ಣುಗಳಂತೆ ಕೆಲಸ ಮಾಡಬೇಕು. ರಾಷ್ಟ್ರ ಶರೀರದ ಅಂಗರಚನೆಯಲ್ಲಿ ಪಾಲ್ಗೊಂಡಿರುವ ಭಿನ್ನ ಭಿನ್ನ ಅಂಗಗಳು ಒಟ್ಟಾಗಿ ಕೆಲಸ ಮಾಡಲು ಮತ್ತು ಉಚಿತ ರೀತಿಯಲ್ಲಿ ರಚನೆಗೊಂಡ ಪ್ರಭುಶಕ್ತಿ ಹೊರಡಿಸಿದ ಕಾನೂನು ಹಾಗೂ ಆಜ್ಞೆಗಳನ್ನು ಪರಿಪಾಲಿಸಲು ಒಪ್ಪಿದಾಗ ಮಾತ್ರ ಇದು ಘಟಿಸಲು ಸಾಧ್ಯ. ಎಲ್ಲ ಪ್ರಾಂತ್ಯಗಳು ಅವಶ್ಯವಾಗಿ ಮುಸ್ಲಿಮರ ಹಿತಾಸಕ್ತಿಗಳನ್ನು ಕಾಪಾಡಬೇಕು ಎಂಬುದನ್ನು ಸಂಯುಕ್ತ ಭಾರತದ ಹೊಸ ಸಂವಿಧಾನ ಒಳಗೊಂಡಿದೆ ಎಂದು ಭಾವಿಸೋಣ. ಆದರೆ "ನಿಮ್ಮ ರಕ್ಷಣೆಗಳಿಗೆ ದೊಡ್ಡ ನಮಸ್ಕಾರ. ನಿಮ್ಮಿಂದ ಆಳಿಸಿಕೊಳ್ಳಲು ನಮಗೆ ಇಷ್ಟವಿಲ್ಲ" ಎಂದು ಮುಸಲ್ಮಾನರು ಹೇಳಿದರೆಂದು ಭಾವಿಸೋಣ– ಏನಾಗಬಹುದು? ಹಿಂದೂ ಬಂದೂಕಿನ ತುದಿ ಅಲಗಿನ ಬಳಕೆಯಿಂದ ಮುಸ್ಲಿಮರ ಒಡಲಿಂದ ವಿಧೇಯತೆಯನ್ನು ಕಕ್ಕಿಸಲು ಹಿಂದೂಗಳು ಸಿದ್ಧರಾಗಿರುವರೆ? ಸ್ವರಾಜ್ಯವೆನ್ನುವುದು ಜನರ ಸೇವೆ ಮಾಡಲು ಸಿಕ್ಕಿರುವ ಒಂದು ಸದವಕಾಶವೆ? ಅಥವಾ ಮುಸ್ಲಿಮರನ್ನು ನಿಗ್ರಹಿಸಲು ಹಿಂದೂಗಳಿಗೆ ಮತ್ತು ಹಿಂದೂಗಳನ್ನು ನಿಗ್ರಹಿಸಲು

ಮುಸ್ಲಿಮರಿಗೆ ಸಿಕ್ಕಿರುವ ಸದವಕಾಶವೆ? ಸ್ವರಾಜ್ಯ ಎಂಬುದು ಜನರ ಸರ್ಕಾರ, ಜನರಿಂದಾದ ಸರ್ಕಾರ, ಜನರಿಗಾಗಿ ಇರುವ ಸರ್ಕಾರ. ಇದು ಸ್ವರಾಜ್ಯದ ಸಮರ್ಥನ ಕಾರಣ ಮತ್ತು ಸ್ವರಾಜ್ಯಕ್ಕಿರುವ ಔಚಿತ್ಯ ಸಾಧನ. ಹಿಂದೂಗಳು ಮತ್ತು ಮುಸ್ಲಿಮರು ಪರಸ್ಪರರ ವಿರುದ್ಧ ಸಂಚು ಮಾಡುವುದರಲ್ಲಿ, ಒಬ್ಬರು ಮತ್ತೊಬ್ಬರನ್ನು ನಿಗ್ರಹಿಸಲು ಹಂಚಿಕೆ ಹಾಕುವುದರಲ್ಲಿ ಸದಾ ನಿರತವಾಗಿರುವ ಯುಗವನ್ನು ಸ್ವರಾಜ್ಯ ಒಳಗೆ ಪ್ರವೇಶ ಮಾಡಿಸಿದರೆ, ಅಂಥ ಸ್ವರಾಜ್ಯ ನಮಗೇಕೆ ಬೇಕು? ಅಂಥ ಸ್ವರಾಜ್ಯ ಅಸ್ತಿತ್ವಕ್ಕೆ ಬರಲು ಪ್ರಜಾ ಪ್ರಭುತ್ವಾತ್ಮಕ ರಾಷ್ಟ್ರಗಳು ಏಕೆ ಅವಕಾಶ ನೀಡಬೇಕು? ಅದು ಉರಲು, ಮೋಸ ಮತ್ತು ವಕ್ರ.

ಅನೇಕ ಬಗೆಯ ಪರ್ಯಾಯಗಳ ನಡುವೆ ಆಯ್ಕೆ ಮಾಡಿಕೊಳ್ಳಲು ಬಲಾತ್ಕರಿಸುವ ಸನ್ನಿವೇಶದಲ್ಲಿ ನಾವಿದ್ದೇವೆ ಎಂಬ ಅರಿವು ಮುಸ್ಲಿಮೇತರರಿಗೆ ಇದ್ದಂತೆ ತೋರುವುದಿಲ್ಲ. ಅವುಗಳನ್ನು ನಾನು ಹೇಳಬಯಸುತ್ತೇನೆ. ಮೊದಲಿಗೆ ಭಾರತದ ಸ್ವಾತಂತ್ರ್ಯ ಮತ್ತು ಭಾರತದ ಐಕ್ಯತೆಗಳ ಮಧ್ಯೆ ಅವರು ಆಯ್ಕೆ ಮಾಡಿಕೊಳ್ಳಬೇಕು. ಮುಸ್ಲಿಮೇತರರು ಭಾರತದ ಐಕ್ಯತೆಯ ಮೇಲೆ ಒತ್ತಾಯ ಹಾಕಿದರೆ, ಭಾರತದ ಶೀಘ್ರ ಸ್ವಾತಂತ್ರ್ಯ ಸಿದ್ಧಿಯನ್ನು ಗಂಡಾಂತರಕ್ಕೀಡುಮಾಡುತ್ತಾರೆ. ಎರಡನೆಯ ಆಯ್ಕೆ ಭಾರತವನ್ನು ರಕ್ಷಿಸುವ ಖಚಿತ ಮಾರ್ಗಕ್ಕೆ ಸಂಬಂಧಿಸಿದೆ. ಸ್ವತಂತ್ರ ಮತ್ತು ಸಂಯುಕ್ತ ಭಾರತದಲ್ಲಿ ಅವರು ಅಭಿವೃದ್ಧಿ ಹೊಂದಲು ಮುಸ್ಲಿಮರ ಮೇಲೆ ಅವಲಂಬಿತರಾಗಬಹುದು; ಇಬ್ಬರ ಸಮಾನ ಸ್ವಾತಂತ್ರ್ಯಗಳನ್ನು ಕಾಪಾಡಿಕೊಳ್ಳಲು ಅವಶ್ಯವಾದ ಇಚ್ಛೆಯನ್ನು ಮುಸ್ಲಿಮೇತರರೊಡನೆ ಸೇರಿಕೊಂಡು ರೂಢಿಸಿಕೊಳ್ಳಬಹುದು ಅಥವಾ ಭಾರತವನ್ನು ಇಬ್ಭಾಗ ಮಾಡಿ, ಮುಸ್ಲಿಂ ಭಾರತದ ಕ್ಷೇಮಕ್ಕೆ ರಕ್ಷಣೆಯ ಹೊಣೆಯನ್ನು ಮುಸ್ಲಿಮರಿಗೆ ವಹಿಸಲು ಮತ್ತು ಮುಸ್ಲಿಮೇತರ ಭಾರತದ ಕ್ಷೇಮಕ್ಕೆ ರಕ್ಷಣೆಯ ಹೊಣೆಯನ್ನು ಮುಸ್ಲಿಮೇತರರಿಗೆ ವಹಿಸಲು ಭರವಸೆ ನೀಡುವುದು ಉತ್ತಮವೆಂದು ಭಾವಿಸಬಹುದು.

ಮೊದಲಿಗೆ, ನಾನು ಭಾರತದ ಐಕ್ಯತೆಗಿಂತ ಭಾರತದ ಸ್ವಾತಂತ್ರ್ಯವನ್ನು ಇಷ್ಟಪಡುತ್ತೇನೆ. ಪ್ರಪಂಚದ ಯಾವ ಮೂಲೆಯಲ್ಲೇ ಆಗಲಿ, ಕಂಡುಬರುವ ಹೆಚ್ಚು ನಂಬಲರ್ಹ ರಾಷ್ಟ್ರೀಯವಾದಿಗಳಲ್ಲಿ ಮುಖ್ಯರೆನ್ನಿಸಿದ ಸಿನ್ ಫಿನ್ನರುಗಳು, ಭಾರತೀಯರಿಗೆ ಎದುರಾದ ಸಮಾನ ಪರ್ಯಾಯಗಳು ಎದುರಾದಾಗ, ಐರ್ಲೆಂಡಿನ ಐಕ್ಯತೆಗಿಂತ ಐರ್ಲೆಂಡಿನ ಸ್ವಾತಂತ್ರ್ಯವನ್ನು ಆಯ್ಕೆ ಮಾಡಿಕೊಂಡರು. ವಿಭಜನೆಯಾಗುವುದಕ್ಕೆ ವಿರೋಧಿಸುವ ಮುಸ್ಲಿಮೇತರರು, ಒಂದು ಕಾಲದಲ್ಲಿ ಫಿನ್ನರುಗಳ ಉಪಾಧ್ಯಕ್ಷರಾಗಿದ್ದ ರೆವರೆಂಡ್ ಮೈರೇತ ಒಪ್ಲಾನಗನ್, ಐರ್ಲೆಂಡಿನ ವಿಭಜನೆಯ ವಿಷಯದ ಮೇಲೆ ಐರಿಷ್ ರಾಷ್ಟ್ರೀಯವಾದಿಗಳಿಗೆ ಹೇಳಿದ ಬುದ್ಧಿವಾದದಿಂದ ಲಾಭ ಪಡೆಯಬಹುದು. ರೆವರೆಂಡ್ ಫಾದರ್ ಹೇಳುತ್ತಾರೆ:

> **"ನಾವು ಉಲ್‌ಸ್ಟರಿನ ಸಂಯುಕ್ತ ಭಾಗಗಳನ್ನು ಹೊರ ಹಾಕುವುದಕ್ಕೆ ಒಪ್ಪಿಕೊಳ್ಳುವುದಕ್ಕಿಂತ ಸ್ವರಾಜ್ಯವನ್ನು ತಿರಸ್ಕರಿಸಿದರೆ, ಪ್ರಪಂಚದ ಮುಂದಿಡಲು ನಮಗೆ ಯಾವ ವಾದ ಉಳಿದಿದೆ? ಐರ್ಲೆಂಡು ನಿರ್ದಿಷ್ಟ ಭೌಗೋಳಿಕ ಸರಹದ್ದುಗಳನ್ನುಳ್ಳ ದ್ವೀಪ ಎಂದು ನಾವು ತೋರಿಸಬಹುದು. ತಮ್ಮದೇ ಆದ ನಿರ್ದಿಷ್ಟ ಭೌಗೋಳಿಕ ಗಡಿಗಳನ್ನುಳ್ಳ ಅನೇಕ ದ್ವೀಪಗಳ ಜನಾಂಗಗಳಿಗೆ ನಾವು ವಿನಂತಿಸಿಕೊಳ್ಳುತ್ತಿದ್ದರೆ ಆಗ ನಮ್ಮ ತರ್ಕ ಸರಿ ಎನ್ನಬಹುದು. ಆದರೆ ನಾವು, ಬದಲಾದ ಗಡಿಗಳಿಂದ, ಭೂಖಂಡದ ದೇಶಗಳಿಗೆ ವಿನಂತಿಸಿಕೊಳ್ಳುತ್ತಿರುವುದರಿಂದ ತರ್ಕಕ್ಕೆ ಯಾವುದೇ ರೀತಿಯ ಶಕ್ತಿ ಇರುವುದಿಲ್ಲ. ರಾಷ್ಟ್ರೀಯ ಮತ್ತು ಭೌಗೋಳಿಕ ಸರಹದ್ದುಗಳು ಎಂದಾದರೂ ಕೂಡುವುದು ದುರ್ಲಭ. ಭೂಗೋಳ ಸ್ಪೇನ್ ಮತ್ತು ಪೋರ್ಚುಗಲ್ಲುಗಳನ್ನು ಒಂದು ದೇಶವನ್ನಾಗಿ ಮಾಡಿದೆ. ಇತಿಹಾಸ ಎರಡನ್ನಾಗಿ ಮಾಡಿದೆ. ಭೂಗೋಳ ನಾರ್ವೆ ಮತ್ತು ಸ್ವೀಡನ್‌ಗಳನ್ನು ಒಂದು ದೇಶವನ್ನಾಗಿ ಮಾಡಲು ತನ್ನ ಕೈಲಾದುದನ್ನೆಲ್ಲಾ ಮಾಡಿದೆ;**

**ಅವುಗಳನ್ನು ಎರಡು ಮಾಡುವುದರಲ್ಲಿ ಇತಿಹಾಸ ಯಶಸ್ವಿಯಾಗಿದೆ. ಉತ್ತರ ಅಮೆರಿಕದ ಭೂಖಂಡದ ಮೇಲಿರುವ ಅನೇಕ ದೇಶಗಳ ಬಗ್ಗೆ ಭೂಗೋಳ ಹೇಳುವಂಥದು ಏನೂ ಇಲ್ಲ; ಇತಿಹಾಸ ಅದನ್ನು ಅಖಂಡಗೊಳಿಸಿದೆ. ಯೂರೋಪಿನ ಭೌತಿಕ ಭೂಪಟದಿಂದ ರಾಜಕೀಯ ಭೂಪಟವನ್ನು ರಚಿಸಲು ಯಾರಾದರೂ ಪ್ರಯತ್ನಿಸಿದರೆ ಅವನು ತಾನಾಗಿಯೇ ಕತ್ತಲೆಯಲ್ಲಿ ತಡಕಾಡಬೇಕಾಗುತ್ತದೆ. ಐರ್ಲೆಂಡನ್ನು ಒಂದು ದೇಶವನ್ನಾಗಿ ಮಾಡಲು ಭೂಗೋಳ ತುಂಬ ಕಷ್ಟಪಟ್ಟಿದೆ; ಇತಿಹಾಸ ಅದರ ವಿರುದ್ಧ ಕೆಲಸ ಮಾಡಿದೆ. ಐರಲೆಂಡಿನ ದ್ವೀಪ ಮತ್ತು ಐರ್ಲೆಂಡಿನ ರಾಷ್ಟ್ರೀಯ ಘಟಕ ನಿಜವಾಗಿ ಒಂದುಗೂಡುವುದಿಲ್ಲ. ಕೊನೆಯ ವಿಶ್ಲೇಷಣೆಯಲ್ಲಿ ಜನಗಳ ಇಷ್ಟವೇ ರಾಷ್ಟ್ರೀಯತೆಯ ಒರೆಗಲ್ಲು.''**

ಈ ಮಾತುಗಳು ಆಳವಾದ ವಾಸ್ತವ ಪ್ರಜ್ಞೆಯಿಂದ ಒಡಮೂಡಿವೆ; ಭಾರತೀಯರಾದ ನಮಗೆ ಈ ಪ್ರಜ್ಞೆಯ ಕೊರತೆ ಇದೆ– ಶೋಚನೀಯವಾಗಿ.

ಎರಡನೆಯ ವಿಷಯದ ಬಗ್ಗೆ, ಎರಡಕ್ಕೂ ರಕ್ಷಣೆಯನ್ನು ಒದಗಿಸುವ ಹೆಚ್ಚು ನಿಸ್ಸಂದೇಹವಾದ ಮತ್ತು ಸುಭದ್ರವಾದ ಮಾರ್ಗವೆಂದು ಭಾರತವನ್ನು ಮುಸ್ಲಿಂ ಭಾರತ ಹಾಗೂ ಮುಸ್ಲಿಮೇತರ ಭಾರತ ಎಂದು ವಿಭಜಿಸುವುದನ್ನು ನಾನು ಇಷ್ಟಪಡುತ್ತೇನೆ. ಎರಡು ಪರ್ಯಾಯಗಳಲ್ಲಿ ಇದು ನಿಜವಾಗಿ ಸುಕ್ಷೇಮವಾದದ್ದು. ಮುಕ್ತ ಮತ್ತು ಸಂಯುಕ್ತ ಭಾರತದ ದ್ವಿರಾಷ್ಟ್ರ ಸಿದ್ಧಾಂತದ ಸೋಂಕಿನಿಂದ ಉದ್ಭವಿಸುವ ಮುಸ್ಲಿಂ ಸೈನಿಕರ ವಿಶ್ವಾಸಾರ್ಹತೆಯ ಬಗೆಗಿನ ನನ್ನ ದಿಗಿಲು ಕೇವಲ ಕಾಲ್ಪನಿಕ ಎಂದಾಗ ಕಾದಾಟವಾಗುತ್ತದೆ ಎಂಬುದು ನನಗೆ ಗೊತ್ತು. ಅದು ನಿಸ್ಸಂದೇಹವಾಗಿ ಸತ್ಯ. ನನ್ನ ಆಯ್ಕೆಯ ಗಂಭೀರತೆಯ ವಿರುದ್ಧ ಅದು ಪ್ರತಿಭಟಿಸಿ ನಿಲ್ಲಲಾರದು. ನನ್ನದು ತಪ್ಪಾಗಿರಬಹುದು. ಆದರೆ, 'ತುಂಬ ವಿಶ್ವಾಸಾರ್ಹ ಭದ್ರತೆಯಿಂದ ಹಾಳಾಗುವುದಕ್ಕಿಂತ ದೊಡ್ಡ ಅವಿಚಾರ ನಂಬಿಕೆಗಾಗಿ ಅಪಹಾಸ್ಯಕ್ಕೀಡಾಗುವುದು ಮೇಲು' ಎಂಬ ಬರ್ಕನ ಮಾತುಗಳನ್ನು ಯಾವ ವೈರುದ್ಯದ ಭಯವೂ ಇಲ್ಲದೆ ಹೇಳಬಲ್ಲೆ. ವಿಷಯಗಳನ್ನು ಅದೃಷ್ಟದ ಪಾಲಿಗೆ ಬಿಡಲು ನನಗೆ ಇಷ್ಟವಿಲ್ಲ. ಭಾರತದ ರಕ್ಷಣೆಯಂಥ ಮುಖ್ಯ ವಿಷಯವನ್ನು ಅದೃಷ್ಟದ ಕೈಗೊಪ್ಪಿಸುವುದು ಎದ್ದು ಕಾಣುವ ಅಪರಾಧದ ದೋಷಯುಕ್ತ ಕಾರ್ಯವಾಗುತ್ತದೆ.

ಬಲಾತ್ಕಾರಕ್ಕೀಡಾದ ಹೊರತು ಪಾಕಿಸ್ತಾನ ಪರವಾದ ಮುಸ್ಲಿಮರ ಒತ್ತಾಯಕ್ಕೆ ಯಾರೂ ಒಪ್ಪಿಕೊಳ್ಳಲಾರರು. ಅದೇ ಸಮಯದಲ್ಲಿ ಅನಿವಾರ್ಯವಾದುದನ್ನು ಧೈರ್ಯ ಮತ್ತು ವ್ಯವಹಾರ ಜ್ಞಾನದಿಂದ ಎದುರಿಸದಿರುವುದು ತಪ್ಪಾಗುತ್ತದೆ. ಅಖಂಡವನ್ನು ರಕ್ಷಿಸಿಕೊಳ್ಳಬೇಕೆಂಬ ವ್ಯರ್ಥ ಪ್ರಯತ್ನದಲ್ಲಿ, ಉಳಿಸಿಕೊಳ್ಳಬೇಕಾದ ಖಂಡವನ್ನು ಕಳೆದುಕೊಳ್ಳುವುದು ಅಷ್ಟೇ ತಪ್ಪಾಗುತ್ತದೆ.

ಪಾಕಿಸ್ತಾನದ ವಿಷಯದ ಬಗ್ಗೆ ಮುಸ್ಲಿಮರು ಶರಣಾಗದಿದ್ದರೆ, ಪಾಕಿಸ್ತಾನ ಸ್ಥಾಪನೆ ಅನಿವಾರ್ಯ ಎಂದು ನಾನೇಕೆ ಗ್ರಹಿಸಿದೆ ಎಂಬುದಕ್ಕೆ ಇವುಗಳೆಲ್ಲ ಕಾರಣಗಳು. ನನ್ನ ಮಟ್ಟಿಗೆ ಹೇಳುವುದಾದರೆ, ಏಕೈಕ ಮುಖ್ಯ ಪ್ರಶ್ನೆ ಇದು: ಪಾಕಿಸ್ತಾನ ಪಡೆಯಲು ಮುಸ್ಲಿಮರು ಸಂಕಲ್ಪಿಸಿರುವರೆ? ಅಥವಾ ಪಾಕಿಸ್ತಾನ ಬರಿಯ ಕೂಗೇ? ಹಾದು ಹೋಗುವ ಚಿತ್ತವೃತ್ತಿ ಮಾತ್ರವೆ? ಅಥವಾ ಅದು ಅವರ ಶಾಶ್ವತ ಆಶೋತ್ತರವನ್ನು ಪ್ರತಿನಿಧಿಸುತ್ತದೆಯೆ? ಇದರ ಮೇಲೆ ಭಿನ್ನಾಭಿಪ್ರಾಯಗಳಿರಬಹುದು. ಮುಸ್ಲಿಮರು ಪಾಕಿಸ್ತಾನವನ್ನು ಬಯಸುತ್ತಾರೆ ಎಂಬುದು ಒಮ್ಮೆ ನಿಶ್ಚಿತವಾದರೆ, ಅದರ ಧಾತುವನ್ನು ಅವರಿಗೆ ಕೊಟ್ಟುಬಿಡುವುದು ವಿವೇಕದ ಮಾರ್ಗ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

♦

# ಅಧ್ಯಾಯ ೩೦

# ಪಾಕಿಸ್ತಾನದ ಸಮಸ್ಯೆಗಳು

## I

ಭಾರತ ಹಿಂದೂಸ್ತಾನ ಮತ್ತು ಪಾಕಿಸ್ತಾನಗಳಾಗಿ ವಿಭಜನೆಗೊಂಡಾಗ ಉದ್ಭವಿಸುವ ಅನೇಕ ಸಮಸ್ಯೆಗಳಲ್ಲಿ ಕೆಳಗಿನ ಮೂರು ಸಮಸ್ಯೆಗಳು ಮುಖ್ಯವಾದುವು:–

೧. ಸದ್ಯದ ಭಾರತ ಸರ್ಕಾರದ ಆರ್ಥಿಕ ಆಸ್ತಿಪಾಸ್ತಿ ಮತ್ತು ಹೊಣೆಗಾರಿಕೆಗಳ ಹಂಚಿಕೆಯ ಸಮಸ್ಯೆ.

೨. ಪ್ರದೇಶಗಳ ಗಡಿ ನಿರ್ಣಯದ ಸಮಸ್ಯೆ

೩. ಪಾಕಿಸ್ತಾನದಿಂದ ಹಿಂದೂಸ್ಥಾನಕ್ಕೆ ಮತ್ತು ಹಿಂದೂಸ್ಥಾನದಿಂದ ಪಾಕಿಸ್ತಾನಕ್ಕೆ ಪ್ರಜೆಗಳನ್ನು ವರ್ಗಾಯಿಸುವ ಸಮಸ್ಯೆ.

ಈ ಸಮಸ್ಯೆಗಳಲ್ಲಿ ಮೊದಲನೆಯದು ಆನುಷಂಗಿಕ. ಅಂದರೆ ಸಂಬಂಧಪಟ್ಟ ಪಕ್ಷಗಳು ಭಾರತವನ್ನು ಭಾಗ ಮಾಡಿಕೊಳ್ಳಲು ಒಪ್ಪಿದಾಗ ಮಾತ್ರ ಅದರ ವಿಚಾರ ಪ್ರಸ್ತುತವಾಗುತ್ತದೆ. ಉಳಿದೆರಡು ಸಮಸ್ಯೆಗಳು ಭಿನ್ನ ನೆಲಗಟ್ಟಿನ ಮೇಲೆ ನಿಂತಿವೆ. ನ್ಯಾಯಯುತ ತೀರ್ಮಾನ ಸಾಧ್ಯವಾಗಿ ತಮಗೆ ತೃಪ್ತಿಯಾದ ಹೊರತು ಅನೇಕ ಜನ ಪಾಕಿಸ್ತಾನಕ್ಕೆ ಮನಸ್ಸು ಮಾಡುವುದಿಲ್ಲ ಎಂಬ ಅರ್ಥದಲ್ಲಿ ಅವು ಪಾಕಿಸ್ತಾನ ಸ್ಥಾಪನೆಯ ಪೂರ್ವಭಾವಿ ಸ್ಥಿತಿಗಳಾಗುತ್ತವೆ. ಆದ್ದರಿಂದ ಪಾಕಿಸ್ತಾನದ ಕೊನೆಯ ಎರಡು ಸಮಸ್ಯೆಗಳಿಗೆ ಮಾತ್ರ ನನ್ನ ವಿಚಾರವನ್ನು ಸೀಮಿತ ಮಾಡಿಕೊಳ್ಳುತ್ತೇನೆ.

## II

ಪಾಕಿಸ್ತಾನದ ಸರಹದ್ದನ್ನು ಕುರಿತಂತೆ ಮುಸ್ಲಿಂ ಲೀಗಿನಿಂದ ಸ್ಪಷ್ಟವಾದ ಮತ್ತು ಅಧಿಕೃತವಾದ ನಿರೂಪಣೆ ಇಲ್ಲಿಯವರೆಗೆ ನಮಗೆ ಬಂದಿಲ್ಲ. ದೇಶದ ರಾಜಕೀಯ ವಾತಾವರಣ ಹದಗೆಡುವಂತೆ ಪಾಕಿಸ್ತಾನ ಪರವಾದ ಜಂಝಾವಾತ ಪ್ರಚಾರವನ್ನು ಕೈಗೊಂಡ ಶ್ರೀಯತ ಜಿನ್ನಾ ಸೂಚಿತ ಪಾಕಿಸ್ತಾನದ ಗಡಿಗಳ ವಿವರಣೆಯನ್ನು ತನ್ನ ಟೀಕಾಕಾರರಿಗೆ ತಿಳಿಸುವುದು ಸರಿ ಎಂದು ಯೋಚಿಸುವ ಗೋಜಿಗೇ ಹೋಗಲಿಲ್ಲವೆಂಬುದು ಹಿಂದೂಗಳು ಮಾಡಿದ ಆರೋಪಗಳಲ್ಲೊಂದು. ಮೊದಲಿಂದಲೂ ಜಿನ್ನಾ ಹೇಳುತ್ತಾ ಬರುತ್ತಿರುವುದು, ಪಾಕಿಸ್ತಾನ ಸರಹದ್ದನ್ನು ಕುರಿತ ಯಾವುದೇ ಚರ್ಚೆ ಈಗ ಅಪಕ್ವ; ಪಾಕಿಸ್ತಾನದ ತತ್ವ ಒಪ್ಪಿತವಾದಾಗ, ಅದರ ಗಡಿಗಳ ಚರ್ಚೆ ಪ್ರಸ್ತುತವಾಗುತ್ತದೆ ಎಂಬುದೇ ಆಗಿದೆ. ಅದು ಒಳ್ಳೆಯ ಅಲಂಕಾರಿಕ ಉತ್ತರವಾಗಿರಬಹುದು. ಆದರೆ, ಆ ಸಮಸ್ಯೆಗೆ ಒಂದು ಶಾಂತಿಯುತ ಪರಿಹಾರವನ್ನು ಪಕ್ಷಾತೀತರಾಗಿ ಕಂಡುಹಿಡಿದು ಸಹಾಯ ಮಾಡಲು ತವಕದಿಂದಿದ್ದವರಿಗೆ ಅದು ನಿಜವಾಗಿಯೂ ಸಹಾಯ ಮಾಡಲಿಲ್ಲ, ಒಬ್ಬ ವ್ಯಕ್ತಿ ಪಾಕಿಸ್ತಾನ ತತ್ವಕ್ಕೆ ಬದ್ಧನಾದರೆ, ತಾನು ಸೂಚಿಸುವ ಪಾಕಿಸ್ತಾನ ಯೋಜನೆಯನ್ನು ಒಪ್ಪಿಕೊಂಡೇ ಒಪ್ಪಿಕೊಳ್ಳುತ್ತಾನೆ ಎಂಬ ಭಾವನೆಯಲ್ಲಿ ಜಿನ್ನಾ ಇದ್ದನೆಂದು ತೋರುತ್ತದೆ. ಇದಕ್ಕಿಂತ ದೊಡ್ಡ ತಪ್ಪು ಮತ್ತೊಂದಿಲ್ಲ. ಭಾರತದ

ಇಬ್ಭಾಗವೇ ಪ್ರಧಾನ ಉದ್ದೇಶವಾಗಿರುವ ಪಾಕಿಸ್ತಾನ ತತ್ವವನ್ನು ಒಬ್ಬ ವ್ಯಕ್ತಿ ಒಪ್ಪಬಹುದು. ಆದರೆ ಹೇಗೆ ಈ ತಪ್ಪದ ಅಂಗೀಕಾರ ಒಬ್ಬ ವ್ಯಕ್ತಿಯನ್ನು ಜಿನ್ನಾನ ಪಾಕಿಸ್ತಾನ ಯೋಜನೆಗೆ ಬದ್ಧನನ್ನಾಗಿಸುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ. ನಿಜವಾಗಿ, ಯಾವುದೇ ಪಾಕಿಸ್ತಾನ ಯೋಜನೆ ಅವನಿಗೆ ತೃಪ್ತಿ ನೀಡದಿದ್ದರೆ, ಅವನು ಪಾಕಿಸ್ತಾನ ತತ್ವದ ಪರವಾಗಿದ್ದರೂ, ಪಾಕಿಸ್ತಾನದ ಯಾವುದೇ ರೂಪವನ್ನು ವಿರೋಧಿಸಲು ಅವರು ಸ್ವತಂತ್ರ. ಆದ್ದರಿಂದಲೇ ಪಾಕಿಸ್ತಾನದ ಯೋಜನೆ ಮತ್ತು ಪಾಕಿಸ್ತಾನದ ತತ್ವ ಎರಡೂ ತುಂಬ ಭಿನ್ನ ಪ್ರಸ್ತಾಪಗಳು. ಈ ದೃಷ್ಟಿಯಲ್ಲಿ ಯಾವುದೇ ತಪ್ಪಿಲ್ಲ. ದೃಷ್ಟಾಂತದ ಮೂಲಕ ಹೇಳುವುದಾದರೆ ಸ್ವನಿರ್ಣಯಾಧಿಕಾರ ಆಸ್ಫೋಟ ವಸ್ತು ಇದ್ದು ಹಾಗೆ. ಸನ್ನಿವೇಶದ ಅವಸರ ಮತ್ತು ಅಗತ್ಯ ಸಮರ್ಥಿಸಿದರೆ ಅದರ ಬಳಕೆಗೆ ತಾತ್ವಿಕವಾಗಿ ಯಾರಾದರೂ ಒಪ್ಪಬಹುದು. ಆದರೆ ಸ್ಫೋಟಿಸಲು ಉದ್ದೇಶಿಸಿರುವ ಪ್ರದೇಶ ಯಾವುದು ಎಂಬುದನ್ನು ಮೊದಲು ತಿಳಿಯದೆ ಸಿಡಿಮದ್ದಿನ ಬಳಕೆಗೆ ಯಾರೂ ಒಪ್ಪಿಗೆ ನೀಡಲಾರರು. ಸಿಡಿಮದ್ದು ಸಮಗ್ರ ರಚನೆಯನ್ನೇ ಸ್ಫೋಟಿಸುವುದಾದರೆ ಅಥವಾ ಅದರ ಅನ್ವಯವನ್ನು ನಿರ್ದಿಷ್ಟ ಭಾಗಕ್ಕೆ ಸೀಮಿತಗೊಳಿಸಲು ಸಾಧ್ಯವಾಗದಿದ್ದರೆ ಆತ ಆ ಸಿಡಿಮದ್ದನ್ನು ಪ್ರಯೋಗಿಸಲು ನಿರಾಕರಿಸಬಹುದು; ಸಮಸ್ಯೆಯ ಪರಿಹಾರಕ್ಕೆ ಕೆಲವು ಬೇರೆ ಮಾರ್ಗಗಳನ್ನು ಇಷ್ಟಪಡಬಹುದು. ಆದ್ದರಿಂದ ಪಾಕಿಸ್ತಾನ ತತ್ವದ ಮೂರ್ತರೂಪ ಸಾಧನೆಗೆ ಸರಹದ್ದಿನ ನಿರ್ದೇಶನ ಪೂರ್ವಭಾವಿ ಅಗತ್ಯವಾಗಿ ತೋರುತ್ತದೆ. ಪಾಕಿಸ್ತಾನದ ಪ್ರಾಮಾಣಿಕ ಮುಂದಾಳು ಪಾಕಿಸ್ತಾನ ಯೋಜನೆಯ ಆವಶ್ಯಕ ವಿವರಗಳನ್ನು ಸಾರ್ವಜನಿಕರಿಂದ ಮುಚ್ಚಿಡಬಾರದು ಎಂಬುದು ಅಷ್ಟೇ ಅಗತ್ಯ. ಪಾಕಿಸ್ತಾನದ ಸರಹದ್ದನ್ನು ಪ್ರಕಟಿಸಲು ನಿರಾಕರಿಸಿದ ಸಂದರ್ಭದಲ್ಲಿ ಜಿನ್ನಾನಂಥ ರಾಜನೀತಿಜ್ಞ ತೋರಿದ ಅವಿಧೇಯತೆ ಮತ್ತು ಹಟಮಾರಿತನ ಅಕ್ಷಮ್ಯ. ಅಷ್ಟಾದರೂ ಪಾಕಿಸ್ತಾನದ ಪ್ರಶ್ನೆಯನ್ನು ಬಗೆಹರಿಸಲು ಆಸಕ್ತಿಯುಳ್ಳವರು, ಶ್ರೀಯುತ ಜಿನ್ನಾ ಪೂರ್ಣ ವಿವರ ಅನುಗ್ರಹಿಸುವವರೆಗೆ, ಕಾಯಬೇಕಾದ ಅಗತ್ಯವಿಲ್ಲ. ಕೆಲವು ಭಾವನೆಗಳ ಆಧಾರದ ಮೇಲೆ ಒಬ್ಬರು ಮಾತ್ರ ವಿಚಾರವನ್ನು ಮುಂದುವರಿಸಬೇಕಾಗಿದೆ. ಈ ವಿಚಾರದಲ್ಲಿ ಪಶ್ಚಿಮ ಪಾಕಿಸ್ತಾನದ ಗಡಿ ವಾಯುವ್ಯ ಗಡಿನಾಡು, ಪಂಜಾಬ್, ಸಿಂಧ್ ಮತ್ತು ಬಲೂಚಿಸ್ಥಾನ ಪ್ರಾಂತ್ಯಗಳ ಈಗಿನ ಗಡಿಗಳಾಗಿರಬೇಕೆಂದು ಮತ್ತು ಪೂರ್ವ ಪಾಕಿಸ್ತಾನದ ಗಡಿ ಅಸ್ಸಾಮಿನ ಜಿಲ್ಲೆಗಳನ್ನೊಳಗೊಂಡಂತೆ ಈಗಿನ ಬಂಗಾಳ ಪ್ರಾಂತ್ಯ ಗಡಿಗಳಾಗಿರಬೇಕೆಂದು ಮುಸ್ಲಿಂ ಲೀಗ್ ಇಷ್ಟಪಡುತ್ತದೆ ಎಂದು ನಾನು ಭಾವಿಸುತ್ತೇನೆ.

## III

ಆದ್ದರಿಂದ ಪರಿಗಣಿಸಬೇಕಾದ ಪ್ರಶ್ನೆ: ಇದು ನ್ಯಾಯಯುತ ಹಕ್ಕು ಬಾಧ್ಯತೆಯೆ? ಈ ಹಕ್ಕು ಬಾಧ್ಯತೆ ಸ್ವನಿರ್ಣಯಾಧಿಕಾರದ ತತ್ತ್ವದ ಮೇಲೆ ಮೂಡಿದ್ದು ಎಂದು ಹೇಳಲಾಗುತ್ತಿದೆ. ಈ ಹಕ್ಕು ಬಾಧ್ಯತೆಯ ನ್ಯಾಯನೀತಿಯನ್ನು ಬೆಲೆಗಟ್ಟಲು ಶಕ್ತರಾಗಬೇಕಾದರೆ ಸ್ವನಿರ್ಣಯಾಧಿಕಾರ ತತ್ತ್ವದ ವ್ಯಾಪ್ತಿ ಮತ್ತು ಪರಿಮಿತಿಗಳ ಸ್ಪಷ್ಟ ಪರಿಜ್ಞಾನದ ಅಗತ್ಯವಿದೆ. ದೌರ್ಭಾಗ್ಯವೆಂದರೆ, ಅಂಥ ಪರಿಜ್ಞಾನದ ಸಂಪೂರ್ಣ ಅಭಾವವಿರುವಂತೆ ತೋರುತ್ತದೆ. ಆದ್ದರಿಂದ ಈ ಪ್ರಶ್ನೆಯಿಂದ ಪ್ರಾರಂಭಿಸುವ ಅಗತ್ಯವಿದೆ: ಈ ಸ್ವನಿರ್ಣಯಾಧಿಕಾರ ತತ್ತ್ವದ ವಾಸ್ತವ ಹಾಗೂ ಶಾಸನಾನುಸಾರವಾದ ಸೂಚ್ಯಾರ್ಥವೇನು? ಕೆಲವು ವರ್ಷಗಳಿಂದೀಚೆಗೆ ಸ್ವನಿರ್ಣಯಾಧಿಕಾರ ಸಂಭಾಷಣೆ ಚಲಾವಣೆಗೆ ಬಂದಿದೆ. ಆದರೆ ಅದು ಇನ್ನೂ ಹಳೆಯದಾದ ಬೇರೊಂದನ್ನು ವಿವರಿಸುತ್ತದೆ. ಸ್ವನಿರ್ಣಯಾಧಿಕಾರದ ಅಭಿಪ್ರಾಯ ಕಲ್ಪನೆ ಎರಡು ವಿಭಿನ್ನ ಮಾರ್ಗಗಳ ಮೂಲಕ ಅಭಿವೃದ್ಧಿಗೊಂಡಿದೆ. ೧೯ನೆಯ ಶತಮಾನದಲ್ಲಿ ಸ್ವನಿರ್ಣಯಾಧಿಕಾರವೆಂದರೆ ಜನತೆಯ ಇಷ್ಟಕ್ಕೆ ಅನುಸಾರವಾಗಿ ಒಂದು ಬಗೆಯ ಸರ್ಕಾರವನ್ನು ಸ್ಥಾಪಿಸುವ ಹಕ್ಕು. ಎರಡನೆಯದಾಗಿ ಸ್ವನಿರ್ಣಯಾಧಿಕಾರವೆಂದರೆ ಯಾವ ಬಗೆಯ

ಸರ್ಕಾರವೆಂಬುದನ್ನು ಗಣನೆಗೆ ತೆಗೆದುಕೊಳ್ಳದೆ ವಿದೇಶೀಯ ಜನಾಂಗದಿಂದ ರಾಷ್ಟ್ರೀಯ ಸ್ವಾತಂತ್ರ್ಯವನ್ನು ಪಡೆಯುವ ಹಕ್ಕು. ಪಾಕಿಸ್ತಾನ ಪರವಾದ ಚಳುವಳಿ ಸ್ವನಿರ್ಣಯಾಧಿಕಾರದ ಎರಡನೆಯ ದೃಷ್ಟಿಗೆ ಸಂಬಂಧಿಸಿದೆ.

ಪಾಕಿಸ್ತಾನದ ಈ ದೃಷ್ಟಿಗೆ ಚರ್ಚೆಯನ್ನು ಸೀಮಿತಗೊಳಿಸಿಕೊಂಡರೆ, ಸ್ವನಿರ್ಣಯಾಧಿಕಾರಕ್ಕೆ ಸಂಬಂಧಿಸಿದಂತೆ ಕೆಳಗಿನ ಅಂಶಗಳನ್ನು ಗಮನದಲ್ಲಿ ಇಟ್ಟುಕೊಳ್ಳುವುದು ಅವಶ್ಯವೆಂದು ನನಗೆ ತೋರುತ್ತದೆ.

ಮೊದಲಿಗೆ, ಜನರಿಂದ ಸ್ವನಿರ್ಣಯಾಧಿಕಾರ ನಡೆಯಬೇಕು. ಇದು ಹೆಸರಿಸಲು ಅವಶ್ಯವಿಲ್ಲದಷ್ಟು ಸರಳ. ಆದರೆ ಅದನ್ನು ಒತ್ತಿ ಹೇಳುವುದು ಅಗತ್ಯವಾಗಿದೆ. ಮುಸ್ಲಿಂ ಲೀಗ್ ಮತ್ತು ಹಿಂದೂ ಮಹಾಸಭೆಗಳೆರಡೂ ಸ್ವನಿರ್ಣಯಾಧಿಕಾರದ ವಿಷಯದಲ್ಲಿ 'ಅಂಗೈ ಮುಂಗೈ ಮಾಡುವ, ಮುಂಗೈ ಅಂಗೈ ಮಾಡುವ' ಆಟದಲ್ಲಿ ತೊಡಗಿದಂತೆ ತೋರುತ್ತದೆ. ಒಂದು ಪ್ರದೇಶದ ಜನರು ಮುಸ್ಲಿಮರಾಗಿರುವುದರಿಂದ, ಅದನ್ನು ಪಾಕಿಸ್ತಾನಕ್ಕೆ ಸೇರಿಸಬೇಕೆಂದು ಮುಸ್ಲಿಂ ಲೀಗಿನ ವಾದ. ಒಂದು ಪ್ರದೇಶದ ಬಹುಸಂಖ್ಯಾತ ಪ್ರಜೆ ಮುಸ್ಲಿಮೇತರರಾಗಿದ್ದರೂ, ಆಡಳಿತ ನಡೆಸುವವನು ಮುಸ್ಲಿಮನಾದುದರಿಂದ ಅದೂ ಪಾಕಿಸ್ತಾನಕ್ಕೆ ಸೇರ್ಪಡೆಯಾಗಬೇಕೆಂಬುದು ಅದರ ವಾದ. ಭಾರತದಲ್ಲಿ ಸ್ವನಿರ್ಣಯಾಧಿಕಾರದ ಉಪಯೋಗವನ್ನು ಮುಸ್ಲಿಂ ಲೀಗ್ ಕೇಳುತ್ತದೆ. ಅದೇ ಸಮಯದಲ್ಲಿ ಪ್ಯಾಲೆಸ್ಟೈನಿಗೆ ಸ್ವನಿರ್ಣಯಾಧಿಕಾರದ ಅನ್ವಯವನ್ನು ವಿರೋಧಿಸುತ್ತದೆ. ಕಾಶ್ಮೀರದ ಬಹುಸಂಖ್ಯಾತ ಜನರು ಮುಸ್ಲಿಮರಾದುದರಿಂದ ಅದು ಮುಸ್ಲಿಂ ರಾಜ್ಯ ಎಂದು ಲೀಗ್ ವಾದಿಸುತ್ತದೆ; ಹೈದರಾಬಾದಿನ ದೊರೆ ಮುಸ್ಲಿಮನಾದುದರಿಂದ ಅದೂ ಪಾಕಿಸ್ತಾನಕ್ಕೆ ಸೇರಬೇಕೆಂದು ವಾದಿಸುತ್ತದೆ. ಅದೇ ರೀತಿ ಒಂದು ಪ್ರದೇಶದ ಜನರು ಮುಸ್ಲಿಮೇತರರಾದ್ದರಿಂದ ಅದು ಹಿಂದೂಸ್ತಾನದೊಳಗೆ ಸೇರ್ಪಡೆಯಾಗಬೇಕೆಂಬುದು ಹಿಂದೂಮಹಾಸಭಾದ ವಾದ. ಒಂದು ಪ್ರದೇಶದ ಬಹುಸಂಖ್ಯಾತ ಜನರು ಮುಸ್ಲಿಮರಾಗಿದ್ದರೂ ಅದರ ದೊರೆ ಹಿಂದೂವಾಗಿರುವುದರಿಂದ ಅದನ್ನು ಹಿಂದೂಸ್ತಾನದ ಭಾಗವಾಗಿಸಬೇಕೆಂದು ವಾದಿಸಲು ಮುಂದೆ ಬಂದಿದೆ. ಅಂಥ ವಿಚಿತ್ರ ಮತ್ತು ವಿವಾದಾತ್ಮಕವಾದಗಳಿಗೆ ಕಾರಣವೆಂದರೆ ಎರಡು ಪಕ್ಷಗಳಲ್ಲಿ– ಹಿಂದೂಗಳು ಮತ್ತು ಮುಸ್ಲಿಮರು– ಪ್ರತಿಯೊಂದು ಸ್ವನಿರ್ಣಯಾಧಿಕಾರವೆಂದರೆ ಏನೆಂದು ಅರ್ಥ ಮಾಡಿಕೊಳ್ಳದಿರುವುದು ಅಥವಾ ತಾವು ನಿರತರಾಗಿರುವ ಸಂಘಟನಾತ್ಮಕ ಆಧಿಪತ್ಯ ಲೂಟಿಯನ್ನು ಮುಂದುವರಿಸಲು ತಮಗೆ ಅನುವಾಗುವ ಹಾಗೆ ಸ್ವನಿರ್ಣಯಾಧಿಕಾರ ತತ್ತ್ವವನ್ನು ವಿಕೃತಗೊಳಿಸುವುದರಲ್ಲಿ ಮಗ್ನವಾಗಿರುವುದು. ಪ್ರದೇಶಗಳ ಪುನರ್ವ್ಯವಸ್ಥೆಯ ಪ್ರಶ್ನೆ ಪ್ರಸ್ತಾಪಕ್ಕೆ ಬಂದಾಗ ಜನರಿಗೆ ಸ್ವನಿರ್ಣಯಾಧಿಕಾರ ಏನನ್ನು ಒಳಗೊಂಡಿದೆ ಎಂಬ ಖಚಿತ ಅಭಿಪ್ರಾಯವಿಲ್ಲದಿದ್ದರೆ ಮತ್ತು ತತ್ತ್ವಕ್ಕೆ ಅವಲಂಬನವಾಗಿ ನಿಲ್ಲುವ ಹಾಗೂ ಪರಿಣಾಮ ಯಾವುದೇ ಬಗೆಯದಾಗಿರಲಿ ಸ್ವೀಕರಿಸುವ ಪ್ರಾಮಾಣಿಕತೆ ಇಲ್ಲದಿದ್ದರೆ ಭಾರತ ಭಾರೀ ಗೊಂದಲದ ಸ್ಥಿತಿಗೆ ಈಡಾಗಬೇಕಾಗುತ್ತದೆ. ಆದ್ದರಿಂದಲೇ 'ಸ್ವನಿರ್ಣಯಾಧಿಕಾರ ಎಂಬುದು ಜನರಿಂದ ಆಗುವ ನಿರ್ಣಯ, ಬೇರೆ ಯಾರಿಂದಲೂ ಅಲ್ಲ' ಎಂಬುದು ತೀರ ಸರಳ– ಸರಳ ಎಂದು ಹೇಳಬೇಕಾದ ಅಗತ್ಯವಿಲ್ಲ– ಎಂದು ಪರಿಗಣಿತವಾಗಿದ್ದರೂ, ಇಲ್ಲಿ ಒತ್ತು ಕೊಟ್ಟು ಹೇಳಿರುವುದು.

ಗಮನಿಸಬೇಕಾದ ಎರಡನೆಯ ಅಂಶವೆಂದರೆ ವಿನಿಯೋಗಿಸುವ ಸ್ವನಿರ್ಣಯಾಧಿಕಾರ ತತ್ತ್ವದ ಆಜ್ಞಾರೂಪ ಸತ್ತ್ವದ ಮಟ್ಟ. ಶ್ರೀಯುತ ಓಕಾನರ್ ಹೇಳಿರುವಂತೆ:*

---

* ಹಿಸ್ಟರಿ ಆಫ್ ಐರ್ಲೆಂಡ್, ಸಂ.೨

> **"ಸ್ವನಿರ್ಣಯಾಧಿಕಾರ ತತ್ತ್ವ ವಿಶ್ವವ್ಯಾಪಿ ತತ್ತ್ವ ಅಲ್ಲವೇ ಅಲ್ಲ. ಅದರ ಬಗ್ಗೆ ಹೇಳಬಹುದಾದದ್ದು ಎಂದರೆ, ಸಾಮಾನ್ಯವಾಗಿ ಅದೊಂದು ಸುಗಮ ಕಾರ್ಯನೀತಿ, ನ್ಯಾಯದ ನೆಲಗಟ್ಟಿನ ಮೇಲೆ ಸ್ಥಾಪನೆಗೊಂಡಿದೆ. ಜನರ ಸ್ವಂತ ಸಂಪ್ರದಾಯದಂತೆ ಅದು ಸೌಹಾರ್ದತೆ, ಶಾಂತಿ ಮತ್ತು ಪ್ರಗತಿಗಾಗಿ ಶ್ರಮಿಸುತ್ತದೆ. ಆದರೆ ಸಂದರ್ಭ ಸನ್ನಿವೇಶಗಳಿಗೆ ಶರಣಾಗಬೇಕಾಗುತ್ತದೆ; ಅದರಲ್ಲೂ ಪ್ರಮಾಣ ಮತ್ತು ಭೌಗೋಳಿಕ ಸ್ಥಿತಿಗಳು ತುಂಬ ಮುಖ್ಯ. ಒಬ್ಬನ ವ್ಯವಹಾರ ಜ್ಞಾನ ಅಥವಾ ನ್ಯಾಯ ನೀತಿಯ ಪ್ರಜ್ಞೆ ಅಥವಾ ಒಬ್ಬ ಬೆಂತಾಮೈಟ್ ಹೇಳಲು ಬಯಸುವ 'ಅಧಿಕ ಸಂಖ್ಯೆಯ ಅಧಿಕ ಒಳ್ಳಿತು' ಎಂಬವುಗಳ ಅನ್ವಯದಿಂದ ಮಾತ್ರ, ಸನ್ನಿವೇಶಗಳ ವಿರುದ್ಧ ನಿಯಮ ಗೆಲ್ಲಬೇಕೋ ಅಥವಾ ನಿಯಮದ ವಿರುದ್ಧ ಸನ್ನಿವೇಶಗಳು ಗೆಲ್ಲಬೇಕೋ ಎಂಬುದು ನಿರ್ಧಾರವಾಗಬಲ್ಲುದು. ಈ ಎಲ್ಲ ಮೂರೂ, ಸರಿಯಾಗಿ ಅರ್ಥ ಮಾಡಿಕೊಂಡರೆ, ಒಂದೇ ವಸ್ತು ಅಭಿವ್ಯಕ್ತಿಸುವ ಭಿನ್ನ ವಿಧಾನಗಳಷ್ಟೆ. ವಿಶಿಷ್ಟವಾದವನ್ನು ಬಗೆಹರಿಸಲು ಭಾರೀ ಕಷ್ಟಗಳು ಉದ್ಭವಿಸಬಹುದು. ಒಂದು ಬಗೆಯ ವಾಸ್ತವಾಂಶಗಳೂ ಇವೆ, ಮತ್ತೊಂದು ಬಗೆಯ ವಾಸ್ತವಾಂಶಗಳೂ ಇವೆ. ಒಂದು ಬಗೆಯ ವಾಸ್ತವಾಂಶಗಳು ಕೆಲವು ಮನಸ್ಸುಗಳಿಗೆ ವಿಶೇಷವಾಗಿ ರುಚಿಸಬಹುದು. ಇನ್ನೂ ಕೆಲವಕ್ಕೆ ಕೊಂಚ ಅಥವಾ ಏನೂ ಆಗದಿರಬಹುದು. ಸಮಸ್ಯೆ ತೂಕ ಮಾಡಿ ನೋಡಲಾಗದಂಥ ರೀತಿಯದಾಗಿರಬಹುದು. ಅಂದರೆ ಮಾನವ ಸಮೂಹ ಒಪ್ಪಿಕೊಳ್ಳುವ ನಿರ್ದಿಷ್ಟ ನಿರ್ಣಯವಾಗಲು ಸಾಧ್ಯವಾಗದಿರಬಹುದು. ಒಂದು ಜನಾಂಗ ಇನ್ನೊಂದು ಜನಾಂಗದ ಸ್ವನಿರ್ಣಯಾಧಿಕಾರದಲ್ಲಿ ತಲೆ ಹಾಕುವುದು ತಪ್ಪು ಎಂದು ಹೇಳುವುದಕ್ಕಿಂತ ಸರಿ ಎಂದು ಹೇಳಲು ಸಾಧ್ಯವಾಗದಂತಹ ವಿವಾದಗಳಿವೆ. ಅದು ಅಭಿಪ್ರಾಯದ ಸಂಗತಿ. ಆದರೆ ಈ ಬಗ್ಗೆ ನಿಷ್ಠ ಮತ್ತು ನಿಷ್ಪಕ್ಷಪಾತ ಮನಸ್ಸುಗಳು ಭಿನ್ನವಾಗಬಹುದು."**

ಇದು ಏಕೆ ಹೀಗೆ ಎಂಬುದಕ್ಕೆ ಎರಡು ಕಾರಣಗಳಿವೆ. ಮೊದಲನೆಯದಾಗಿ ಜನಾಂಗ ಪವಿತ್ರವಾದ ಮತ್ತು ಶ್ರೇಷ್ಠವಾದ ತತ್ತ್ವವಲ್ಲ; ಉಳಿದೆಲ್ಲ ಪರಿಗಣನೆಯನ್ನು ತಿರಸ್ಕರಿಸಿ ಅದಕ್ಕೆ ನಿರುಪಾಧಿಕ ವಿಧಿರೂಪ ಎಂಬ ಸ್ವಭಾವವನ್ನು ಕೊಡಲಾಗುವುದಿಲ್ಲ. ಎರಡನೆಯದಾಗಿ ಭಿನ್ನ ಜನಾಂಗದ ರಕ್ಷಣೆ ಮತ್ತು ನಿರ್ವಹಣೆಗಾಗಿ ವಿಘಟನೆ ಅಷ್ಟು ಅವಶ್ಯಕವಲ್ಲ.

ಸ್ವನಿರ್ಣಯಾಧಿಕಾರ ವಿಷಯದ ಸಂಬಂಧವಾಗಿ ಪರಿಗಣಿಸಬೇಕಾದ ಮೂರನೆಯ ಅಂಶವೊಂದಿದೆ. ಜನಾಂಗಕ್ಕಾಗಿ ಸ್ವನಿರ್ಣಯಾಧಿಕಾರ ಸಾಂಸ್ಕೃತಿಕ ಸ್ವಾತಂತ್ರ್ಯದ ರೂಪ ಧರಿಸಬಹುದು ಅಥವಾ ಪ್ರಾದೇಶಿಕ ಸ್ವಾತಂತ್ರ್ಯದ ರೂಪ ಧರಿಸಬಹುದು. ಅದು ಧರಿಸುವ ರೂಪ ಜನಸಂಖ್ಯೆಯ ಪ್ರಾದೇಶಿಕ ಭೂ ವಿನ್ಯಾಸದ ಮೇಲೆ ಅವಲಂಬಿತವಾಗಿರುತ್ತದೆ. ಜನಾಂಗ, ಉಳಿದ ವಿಷಯಗಳೆಲ್ಲ ಸಮಾನವಾಗಿದ್ದು, ಬೇರ್ಪಡಿಸುವ ಮತ್ತು ಪಕ್ಕದ ಪ್ರದೇಶಗಳಲ್ಲಿ ವಾಸಿಸುತ್ತಿದ್ದರೆ, ಅದನ್ನು ಪ್ರಾದೇಶಿಕ ಸ್ವಾತಂತ್ರ್ಯ ಸಂಗತಿಯನ್ನಾಗಿ ಗುರುತಿಸಬಹುದು. ಆದರೆ, ಎಲ್ಲಿ ಬಿಡಿಸಿಕೊಳ್ಳಲಾಗದ ಸಿಕ್ಕಿನಿಂದ ಜನಾಂಗಗಳು ಮಿಶ್ರಣಗೊಂಡಿವೆಯೋ ಆ ಪ್ರದೇಶಗಳು ಸುಲಭವಾಗಿ ಬೇರ್ಪಡಿಸಲಾರದಂಥವು. ಆಗ ಅವರು ಸಾಂಸ್ಕೃತಿಕವಾಗಿ ಅರ್ಹರಾಗಿರುತ್ತಾರೆ. ಈ ಬಗೆಯ ಪರಿಸ್ಥಿತಿಯಲ್ಲಿ ಪ್ರಾದೇಶಿಕ ಪ್ರತ್ಯೇಕತೆ ಅಸಾಧ್ಯ. ಅವರು ಒಟ್ಟಿಗೆ ಜೀವಿಸಬೇಕಾಗುತ್ತದೆ. ಅವರಿಗಿಂತ ಬೇರೊಂದು ಪರ್ಯಾಯವೆಂದರೆ ವಲಸೆ ಹೋಗುವುದು.

## IV

ಸ್ವನಿರ್ಣಯಾಧಿಕಾರ ಕಲ್ಪನೆಯ ವ್ಯಾಪ್ತಿ ಮತ್ತು ಪರಿಮಿತಿಗಳನ್ನು ವಿವರಿಸಿರುವುದರಿಂದ ನಾವೀಗ ಪಾಕಿಸ್ತಾನದ ಸರಹದ್ದು ಪ್ರಶ್ನೆಯತ್ತ ಮುಂದುವರಿಯಬಹುದು. ಸದ್ಯ ಇರುವ ಸರಹದ್ದೇ ಪಾಕಿಸ್ತಾನದ ಸರಹದ್ದಾಗಬಹುದೆಂದು ಮುಸ್ಲಿಂ ಲೀಗಿನ ವಾದ, ಈ ಎಲ್ಲ ಪರಿಗಣನೆಗಳ ಬೆಳಕಿನಲ್ಲಿ, ಎಷ್ಟರಮಟ್ಟಿಗೆ ಸಲ್ಲುತ್ತದೆ? ಈ ಪ್ರಶ್ನೆಗೆ ಉತ್ತರ ನನಗೆ ಸ್ಪಷ್ಟವಾಗಿ ತೋರುತ್ತಿದೆ. ಸಮಸ್ಯೆಯನ್ನು ಭೌಗೋಳಿಕ ಭೂ ವಿನ್ಯಾಸ ಬಗೆಹರಿಸುತ್ತದೆಂದು ತೋರುತ್ತದೆ. ಯಾವುದೇ ಬಗೆಯ ವಿಶೇಷ ವಿನಂತಿಯ ಅಗತ್ಯವಿಲ್ಲ. ವಾಯುವ್ಯ ಗಡಿ ಪ್ರದೇಶ, ಬಲೂಚಿಸ್ಥಾನ ಮತ್ತು ಸಿಂಧ್‌ಗಳಲ್ಲಿ ಹಿಂದೂಗಳು ಮತ್ತು ಮುಸ್ಲಿಮರು ಸಂಮಿಶ್ರವಾಗಿದ್ದಾರೆ. ಈ ಪ್ರದೇಶಗಳಲ್ಲಿ ಹಿಂದೂಗಳ ಪ್ರಾದೇಶಿಕ ಪ್ರತ್ಯೇಕತೆಯ ವಾದ ಅಸಾಧ್ಯವೆಂದು ತೋರುತ್ತದೆ. ಅವರು ಸಾಂಸ್ಕೃತಿಕ ಸ್ವಾತಂತ್ರ್ಯ ಮತ್ತು ಸುಭದ್ರತೆ ಸಾಧಿಸುವ ರಾಜಕೀಯ ರಕ್ಷಣೆಗಳಿಂದ ಸಂತೃಪ್ತರಾಗಿ ಉಳಿಯಬೇಕಾಗುತ್ತದೆ. ಪಂಜಾಬ್ ಮತ್ತು ಬಂಗಾಳ ಸಮಸ್ಯೆ ಭಿನ್ನ ನೆಲಗಟ್ಟಿನ ಮೇಲೆ ನಿಂತಿದೆ. ಈ ಎರಡು ಪ್ರಾಂತ್ಯಗಳಲ್ಲಿ ಹಿಂದೂಗಳಲ್ಲಿ ಮತ್ತು ಮುಸ್ಲಿಮರು ವಾಸ ಮಾಡುವ ಭೂವಿನ್ಯಾಸ ಉಳಿದ ಮೂರು ಪ್ರಾಂತ್ಯಗಳಲ್ಲಿ ಕಾಣುವುದಕ್ಕಿಂತ ಭಿನ್ನ ಎಂಬುದು ಭೂಪಟದ ಮೇಲೆ ಕಣ್ಣು ಹಾಯಿಸಿದರೆ ಗೊತ್ತಾಗುತ್ತದೆ. ವಾಯುವ್ಯ ಗಡಿ ಪ್ರದೇಶ, ಬಲೂಚಿಸ್ಥಾನ ಮತ್ತು ಸಿಂಧ್‌ಗಳಲ್ಲಿರುವಂತೆ ಪಂಜಾಬ್ ಮತ್ತು ಬಂಗಾಳಗಳ ಮುಸ್ಲಿಮೇತರರು ಸಣ್ಣ ದ್ವೀಪಗಳಲ್ಲಿ ವಾಸ ಮಾಡುತ್ತಿಲ್ಲ– ಸುತ್ತಮುತ್ತಲೂ ಅಧಿಕ ಮುಸ್ಲಿಂ ಜನಸಂಖ್ಯೆಯ ಭೂಪ್ರದೇಶದಿಂದ ಆವೃತಗೊಂಡು, ಬಂಗಾಳ ಮತ್ತು ಪಂಜಾಬ್‌ಗಳಲ್ಲಿ ಬೇರ್ಪಡಿಸುವ ಮತ್ತು ಪಕ್ಕಪಕ್ಕದಲ್ಲಿರುವ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದಾರೆ. ಸದ್ಯದ ಪಂಜಾಬ್ ಮತ್ತು ಬಂಗಾಳಗಳ ಸರಹದ್ದುಗಳು ಪಶ್ಚಿಮ ಪಾಕಿಸ್ತಾನ ಮತ್ತು ಪೂರ್ವ ಪಾಕಿಸ್ತಾನಗಳ ಗಡಿಗಳಾಗಿ ಮುಂದುವರಿಯಬೇಕು ಎಂಬ ಮುಸ್ಲಿಂ ಲೀಗಿನ ವಾದವನ್ನು ಒಪ್ಪಿಕೊಳ್ಳಲು, ಈ ಪರಿಸ್ಥಿತಿಗಳಲ್ಲಿ ಕಾರಣವೇ ಇಲ್ಲ.

ಈ ಚರ್ಚೆಯಿಂದ ಎರಡು ತೀರ್ಮಾನಗಳು ಉದ್ಭವಿಸುತ್ತವೆ. ಒಂದನೆಯದು, ಪಂಜಾಬ್ ಮತ್ತು ಬಂಗಾಳಗಳ ಮುಸ್ಲಿಮೇತರರು ತಾವು ವಾಸಿಸುತ್ತಿರುವ ಸ್ಥಳಗಳ ಪ್ರಾದೇಶಿಕ ವಿಂಗಡನೆಯ ಮೂಲಕ ಪಾಕಿಸ್ತಾನದಿಂದ ಹೊರತಾಗಿ ಉಳಿಯುವ ಸಾಧ್ಯತೆ ಇದೆ. ಎರಡನೆಯದು, ವಾಯವ್ಯಗಡಿ ಪ್ರದೇಶ, ಬಲೂಚಿಸ್ಥಾನ ಮತ್ತು ಸಿಂಧ್‌ಗಳ ಮುಸ್ಲಿಮೇತರರು ಹೊರತಾಗಿ ಉಳಿಯುವ ಪರಿಸ್ಥಿತಿ ಇಲ್ಲ– ಸಾಂಸ್ಕೃತಿಕ ಸ್ವಾತಂತ್ರ್ಯ ಮತ್ತು ರಾಜಕೀಯ ರಕ್ಷಣೆಗಳ ಅರ್ಹತೆಯನ್ನುಳಿದು, ಇದೇ ವಿಷಯವನ್ನು ಬೇರೆ ಮಾತಿನಲ್ಲಿ ಹೇಳುವುದಾದರೆ, ವಾಯುವ್ಯಗಡಿ ಪ್ರದೇಶ, ಬಲೂಚಿಸ್ಥಾನ ಮತ್ತು ಸಿಂಧ್‌ಗಳ ಸರಹದ್ದುಗಳು ಮೊದಲಿದ್ದಂತೆಯೇ ಮುಂದುವರಿಯಬೇಕು ಎಂಬ ಮುಸ್ಲಿಂ ಲೀಗಿನ ವಾದದ ಒತ್ತಾಯವನ್ನು ವಿರೋಧಿಸಲಾಗುವುದಿಲ್ಲ. ಆದರೆ ಪಂಜಾಬ್ ಮತ್ತು ಬಂಗಾಳಗಳ ವಿಷಯದಲ್ಲಿ ಅಂಥ ಕೇಳಿಕೆ ಅಸಿಂಧು; ಈ ಪ್ರಾಂತ್ಯಗಳ ಮುಸ್ಲಿಮೇತರರು, ಅವರು ಇಷ್ಟಪಟ್ಟರೆ, ಈ ಎರಡು ಪ್ರಾಂತ್ಯಗಳ ಗಡಿರೇಖೆಗಳನ್ನು ಹೊಸದಾಗಿ ಬರೆದು, ತಾವು ವಾಸವಾಗಿರುವ ಪ್ರದೇಶವನ್ನು ಪ್ರತ್ಯೇಕಗೊಳಿಸಬೇಕೆಂಬ ಹಕ್ಕನ್ನು ಮುಂದಿಡಬಹುದು.

## V

ಹೊಸದಾಗಿ ಗಡಿರೇಖೆಗಳನ್ನು ಗುರುತಿಸಬೇಕೆಂಬ ಪಂಜಾಬ್ ಮತ್ತು ಬಂಗಾಳಗಳ ಮುಸ್ಲಿಮೇತರ ಅಲ್ಪಸಂಖ್ಯಾತರ ವಾದವನ್ನು, ನ್ಯಾಯಯುತವಾದ ಬೇಡಿಕೆಯೆಂದು ಮುಸ್ಲಿಂ ಲೀಗ್ ಗೌರವಿಸಬಹುದೆಂದು ಯಾರಾದರೂ ಯೋಚಿಸಬಹುದು. ಮಾರ್ಚ್ ೧೯೪೦ರಲ್ಲಿ ಮುಸ್ಲಿಂ ಲೀಗ್ ಹೊರಡಿಸಿರುವ ಲಾಹೋರ್

ಗೊತ್ತುವಳಿಯಲ್ಲಿ ಹೊಸದಾಗಿ ಗಡಿರೇಖೆಗಳನ್ನು ಗುರುತಿಸುವ ಸಾಧ್ಯತೆ ಅಡಕವಾಗಿದೆ. ಗೊತ್ತುವಳಿ ಹೇಳುತ್ತದೆ:–

**"ಭೌಗೋಳಿಕವಾಗಿ ಹತ್ತಿರವಿರುವ ಘಟಕಗಳನ್ನು ಪ್ರದೇಶಗಳನ್ನಾಗಿ ಗಡಿ ಗುರುತಿಸಿ ರೂಪುವೊಂಡ ಸಂಪೂರ್ಣ ಸ್ವತಂತ್ರ ರಾಜ್ಯಗಳ ಸ್ಥಾಪನೆಯನ್ನು ಅವಶ್ಯವಾದರೆ ಪ್ರಾದೇಶಿಕ ಮರುಹೊಂದಾಣಿಕೆಗಳಿಂದ ರಚಿಸಬಹುದು. ಭಾರತದ ವಾಯುವ್ಯ ಮತ್ತು ಪೂರ್ವವಲಯಗಳಲ್ಲಿರುವಂತೆ, ಅಧಿಕ ಸಂಖ್ಯೆಯ ಮುಸ್ಲಿಮರಿರುವ ಪ್ರದೇಶಗಳನ್ನು ಒಟ್ಟುಗೂಡಿಸಿ. 'ಮುಸ್ಲಿಮರ ಮುಕ್ತ ರಾಜಕೀಯ ಮಾತೃಭೂಮಿ' ಎಂಬಂತೆ ಸ್ವತಂತ್ರ ರಾಜ್ಯಗಳಾಗಿ ರಚಿಸಬೇಕು. ಅದರೊಳಗಿರುವ ರಚನಾಘಟಕಗಳು ಸ್ವಯಮಧಿಕಾರವುಳ್ಳವೂ ಸರ್ವಸ್ವತಂತ್ರವೂ ಆಗಿರಬೇಕು."**

ಕಿಪ್ಸ್ ಸೂಚನೆಗಳ ಬಗೆಗೆ ಮುಸ್ಲಿಂ ಲೀಗ್ ಹೊರಡಿಸಿದ ಗೊತ್ತುವಳಿಯಿಂದ ಯಾರಾದರೂ ಇದನ್ನು ಓದಿದರೆ ಗೊತ್ತಾಗುವುದು– ಇದು ಲೀಗಿನ ನಿಲುವಾಗಿ ಮುಂದುವರಿದಿದೆ ಎಂಬುದು ಸ್ಪಷ್ಟ. ಆದರೆ ಶ್ರೀಯುತ ಜಿನ್ನಾ ತನ್ನ ದೃಷ್ಟಿಯನ್ನು ಬದಲಾಯಿಸಿದ್ದಾರೆ ಎಂಬುದಕ್ಕೆ ಸೂಚನೆಗಳಿವೆ. ಜಲಂದರ್‌ನಲ್ಲಿ ೧೯೪೨ನೇ ಇಸವಿ ನವೆಂಬರ್ ೧೬ರಂದು ನಡೆದ ಸಾರ್ವಜನಿಕ ಸಭೆಯಲ್ಲಿ ಶ್ರೀಯುತ ಜಿನ್ನಾ ಕೆಳಗಿನಂತೆ ಹೇಳಿದರೆಂದು ಗೊತ್ತಾಗಿದೆ:–

"ಉದ್ದೇಶಪೂರ್ವಕವಾಗಿ ಮೂಢ ಜನತೆಯನ್ನು ತಬ್ಬಿಬ್ಬುಗೊಳಿಸಿ ದಾರಿ ತಪ್ಪಿಸುವ ಇತ್ತೀಚಿನ ಕುತಂತ್ರ– ಕುತಂತ್ರವಿಲ್ಲದೆ ಬೇರೆ ಅಲ್ಲ– ವೆಂದರೆ, ಆತ್ಮ ಸ್ವನಿರ್ಣಯಾಧಿಕಾರದ ಹಕ್ಕನ್ನು ಕೇವಲ ಮುಸ್ಲಿಮರಿಗೆ ಮಾತ್ರ ಏಕೆ ಸೀಮಿತಗೊಳಿಸಬೇಕು? ಏಕೆ ಉಳಿದ ಕೋಮುಗಳಿಗೂ ಅದನ್ನು ವಿಸ್ತರಿಸಬಾರದು? ಎಲ್ಲರಿಗೂ ಸ್ವನಿರ್ಣಯಾಧಿಕಾರದ ಹಕ್ಕು ಇದೆ ಎಂದು ಹೇಳಿ ಮತ್ತೆ ಅವರು ಹೇಳುತ್ತಾರೆ: ಪಂಜಾಬನ್ನು ಅನೇಕ ಚೂರುಗಳಾಗಿ ಭಾಗ ಮಾಡಬಹುದು; ಹಾಗೆಯೇ ವಾಯುವ್ಯ ಗಡಿನಾಡು ಪ್ರಾಂತ್ಯ ಮತ್ತು ಸಿಂಧ್‌ಗಳನ್ನು ಸಹ. ಹೀಗೆ ನೂರಾರು ಪಾಕಿಸ್ತಾನಗಳು ಮೂಡಲಿವೆ.

**ಉಪರಾಷ್ಟ್ರೀಯ ಗುಂಪುಗಳು**

**ಭಾರತದಾದ್ಯಂತ ಇರುವ ಎಲ್ಲ ಕೋಮುಗಳೂ ಸ್ವನಿರ್ಣಯಾಧಿಕಾರದ ಹಕ್ಕನ್ನು ಹೊಂದಿವೆ ಎಂಬ ಈ ಹೊಸ ಸೂತ್ರದ ಲೇಖಕ ಯಾರು? ಅದು ಬೃಹದಾಕಾರದ ಅಜ್ಞಾನ ಅಥವಾ ಕುಚೇಷ್ಟೆ ಮತ್ತು ಕುತಂತ್ರ. ಅವರಿಗೆ ಉತ್ತರ ಕೊಡುತ್ತೇನೆ. ಮುಸ್ಲಿಮರು ಸ್ವನಿರ್ಣಯಾಧಿಕಾರದ ಹಕ್ಕನ್ನು ಕೇಳುತ್ತಿರುವುದು ಏಕೆಂದರೆ, ತಮ್ಮ ಮಾತೃಭೂಮಿ ಎನಿಸಿದ ಪ್ರದೇಶದಲ್ಲಿ ಅವರು ಒಂದು ಜನಾಂಗ ತಂಡ ಮತ್ತು ಅವರಿರುವ ವಲಯಗಳಲ್ಲಿ ಬಹುಸಂಖ್ಯಾತರು. ಜನಾಂಗ ತಂಡಗಳು ಎಲ್ಲ ಕಡೆ ಚೆಲ್ಲಾಪಿಲ್ಲಿಯಾಗಿ ಹರಡಿಕೊಂಡಿದ್ದಾಗ ಅವರಿಗೆ ರಾಜ್ಯ ಕೊಟ್ಟದ್ದನ್ನು ಇತಿಹಾಸದಲ್ಲಿ ಎಲ್ಲಿಯಾದರೂ ಕೇಳಿ ಬಲ್ಲಿರಾ? ಅವರಿಗೆ ರಾಜ್ಯ ಕೊಡಿಸಲು ಎಲ್ಲಿಗೆ ಹೋಗುತ್ತೀರಾ? ಹಾಗಾದ ಪಕ್ಷದಲ್ಲಿ ಸಂಯುಕ್ತ ಪ್ರಾಂತ್ಯಗಳಲ್ಲಿ ಮುಸ್ಲಿಮರು ಶೇ. ೧೪ ಮಾತ್ರ. ಅವರಿಗೇಕೆ ರಾಜ್ಯವಿರಬಾರದು? ಸಂಯುಕ್ತ ಪ್ರಾಂತ್ಯಗಳಲ್ಲಿ ಇರುವ ಮುಸ್ಲಿಮರು ಜನಾಂಗ ತಂಡವಲ್ಲ; ಅವರು ಚೆಲ್ಲಾಪಿಲ್ಲಿಯಾಗಿ ಚೆದುರಿದ್ದಾರೆ. ಆದ್ದರಿಂದ ಸಂವಿಧಾನಾತ್ಮಕ ಭಾಷೆಯಲ್ಲಿ ಅವರನ್ನು ಉಪಜನಾಂಗ ಗುಂಪು ಎಂದು ಕರೆಯಬಹುದು. ಯಾವುದೇ ನಾಗರಿಕ ಸರ್ಕಾರ ಅಲ್ಪಸಂಖ್ಯಾತರಿಗೆ ಒದಗಿಸುವ ಸೌಲಭ್ಯಕ್ಕಿಂತ ಹೆಚ್ಚಾಗಿ ಅವರು ಬೇರೇನನ್ನೂ ನಿರೀಕ್ಷಿಸುವಂತಿಲ್ಲ. ನನ್ನ ನಿಲುವನ್ನು ಸ್ಪಷ್ಟಪಡಿಸುತ್ತೇನೆ**

**ಎಂದು ಭಾವಿಸಿದ್ದೇನೆ. ಮುಸ್ಲಿಮರು ಉಪಜನಾಂಗದ ಗುಂಪಲ್ಲ. ಸ್ವನಿರ್ಣಯಾಧಿಕಾರದ ಹಕ್ಕಿನ ಅನುಷ್ಠಾನ ಅವರ ಜನ್ಮಸಿದ್ಧ ಹಕ್ಕು.**

ಶ್ರೀಯುತ ಜಿನ್ನಾ ಪೂರ್ಣವಾಗಿ ಉದ್ದೇಶವನ್ನು ಬಿಟ್ಟು ಸಾಗಿದ್ದಾರೆ. ಅವರ ಟೀಕಾಕಾರರು ಎತ್ತಿದ ಪ್ರಶ್ನೆ ಸಾಮಾನ್ಯ ಮುಸ್ಲಿಮೇತರ ಅಲ್ಪಸಂಖ್ಯಾತರನ್ನು ಕುರಿತದ್ದಲ್ಲ. ಪಂಜಾಬ್ ಮತ್ತು ಬಂಗಾಳಗಳ ಮುಸ್ಲಿಮೇತರರರನ್ನು ಕುರಿತದ್ದು. ಅಡಕವೂ, ಬೇರ್ಪಡಿಸಲು ಸುಲಭಸಾಧ್ಯವೂ ಆದ ಪ್ರದೇಶದಲ್ಲಿ ವಾಸ ಮಾಡುವ ಮುಸ್ಲಿಮೇತರ ಅಲ್ಪಸಂಖ್ಯಾತರ ವಾದವನ್ನು ಶ್ರೀಯುತ ಜಿನ್ನಾ ತನ್ನ ಉಪಜನಾಂಗ ಸಿದ್ಧಾಂತದ ಪ್ರಕಾರ, ಬರ್ಖಾಸ್ತು ಮಾಡಲು ಸೂಚಿಸುವರೆ? ಹಾಗಾದ ಪಕ್ಷದಲ್ಲಿ, ಅವರ ಸೂಚನೆಗಿಂತ ಅನಾಗರಿಕವಾದದ್ದು ಪ್ರಪಂಚದ ರಾಜಕೀಯ ಸಾಹಿತ್ಯದಲ್ಲಿ ಕಾಣುವುದು ತುಂಬಾ ಕಷ್ಟ ಎಂದು ಯಾರಾದರೂ ಹೇಳಲೇಬೇಕಾಗುತ್ತದೆ. ಉಪಜನಾಂಗದ ಕಲ್ಪನೆ ಕೇಳದೇ ಇರುವಂಥದು. ಅದು ಬುದ್ಧಿವಂತಿಕೆಯ ಕಲ್ಪನೆ ಮಾತ್ರವಲ್ಲ, ಅಸಂಬದ್ಧವಾದ ಕಲ್ಪನೆಯೂ ಸಹ. ಉಪಜನಾಂಗ ಸಿದ್ಧಾಂತದ ಅಂತರಾರ್ಥವೇನು? ನಾನು ಅದರ ತೊಡಕುಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದರೆ, ಬೇರ್ಪಡಿಸಲು ಸಾಧ್ಯವಿದ್ದರೂ ತಾನು ಯಾವ ಜನಾಂಗಕ್ಕೆ ಸೇರಿದ್ದೋ ಅದರಿಂದ ಅದನ್ನು ಬೇರ್ಪಡಿಸಬಾರದು ಎಂಬುದು ಅವರ ಅರ್ಥ. ಅಂದರೆ ಜನಾಂಗ ಮತ್ತು ಉಪಜನಾಂಗಗಳ ನಡುವಿನ ಸಂಬಂಧ, ಮನುಷ್ಯ ಮತ್ತು ಅವನ ಚರಾಸ್ತಿಗಳ ನಡುವೆ ಇರುವ ಅಥವಾ ಆಸ್ತಿ ಮತ್ತು ಹಕ್ಕು ಬಾಧ್ಯತೆಗಳ ಮಧ್ಯೆ ಇರುವ ಸಂಬಂಧಗಳಿಗಿಂತ ಹೆಚ್ಚಿನದೇನೂ ಅಲ್ಲ. ಚರಾಸ್ತಿಗಳು ಒಡೆಯನನ್ನು ಹಿಂಬಾಲಿಸುತ್ತದೆ, ಹಕ್ಕು ಬಾಧ್ಯತೆಗಳು ಆಸ್ತಿಯನ್ನು ಹಿಂಬಾಲಿಸುತ್ತವೆ, ಹಾಗೆಯೇ ಉಪಜನಾಂಗ ಜನಾಂಗವನ್ನು ಹಿಂಬಾಲಿಸುತ್ತದೆ. ಜಿನ್ನಾರ ತರ್ಕದಲ್ಲಿ ಸಮರ್ಥನೆಯ ಸರಪಳಿ ಇದೆ. ಆದರೆ, ಪಂಜಾಬ್ ಮತ್ತು ಬಂಗಾಳಗಳ ಹಿಂದೂಗಳು, ಅದೇ ಪ್ರಾಂತ್ಯಗಳ ಮುಸ್ಲಿಮರು, ಅವರನ್ನು ತರುಬಲು ಇಷ್ಟಪಡುವ ಕಡೆಗೆ ಹೋಗುವ ಚರಾಸ್ತಿಗಳು ಎಂದು ಶ್ರೀಯುತ ಜಿನ್ನಾ ಗಂಭೀರವಾಗಿ ವಾದಿಸಲು ಇಷ್ಟಪಡುವರೆ? ಯಾವನೇ ವಿವೇಕವುಳ್ಳ ಮನುಷ್ಯ ಅಂಥ ಅಸಹ್ಯಕರ ವಾದದಿಂದ ಸಂತೋಷಗೊಳ್ಳಲಾರನು. ಅದು ತರ್ಕರಹಿತ ವಾದವು ಹೌದು. ಜಿನ್ನಾರಂಥ ಪರಿಪಕ್ವ ವಕೀಲನಿಗೆ ಅದರಲ್ಲಿರುವ ತರ್ಕರಾಹಿತ್ಯವನ್ನು ಗ್ರಹಿಸುವುದು ಕಷ್ಟವೇನಲ್ಲ. ಸಂಖ್ಯಾದೃಷ್ಟಿಯಿಂದ ಚಿಕ್ಕ ಜನಾಂಗ, ಸಂಖ್ಯಾದೃಷ್ಟಿಯಿಂದ ದೊಡ್ಡ ಜನಾಂಗದ ಸಂಬಂಧದಲ್ಲಿ ಉಪಜನಾಂಗ ಎನ್ನಿಸಿಕೊಳ್ಳುವುದಾದರೆ ಮತ್ತು ಪ್ರಾದೇಶಿಕ ಪ್ರತ್ಯೇಕತೆಯ ಹಕ್ಕು ಇಲ್ಲದಾದರೆ, ಭಾರತವನ್ನು ಅಖಂಡವಾಗಿ ತೆಗೆದುಕೊಂಡ ಹಿಂದೂಗಳು ಜನಾಂಗವೆಂದೂ ಮುಸ್ಲಿಮರು ಉಪಜನಾಂಗವೆಂದೂ, ಆ ಪ್ರಯುಕ್ತ ಅವರಿಗೆ ಸ್ವನಿರ್ಣಯಾಧಿಕಾರದ ಹಕ್ಕಾಗಲೀ ಅಥವಾ ಪ್ರಾದೇಶಿಕ ಪ್ರತ್ಯೇಕತೆಯ ಹಕ್ಕಾಗಲೀ ಇಲ್ಲ ಎಂದು ಹೇಳಬಹುದಲ್ಲವೆ?

ಪಾಕಿಸ್ತಾನದ ಪ್ರಾಮಾಣಿಕತೆಯ ಬಗೆಗೆ ಆಗಲೇ ಕೆಲ ಪ್ರಮಾಣದ ಸಂದೇಹ ಉಂಟಾಗಿದೆ. ಸರಿಯಾಗಿಯೋ ಅಥವಾ ತಪ್ಪಾಗಿಯೋ ಪಾಕಿಸ್ತಾನದ ಬಸಿರು ಕೃತ್ರಿಮವಾದುದು ಎಂದು ಹೆಚ್ಚು ಜನರು ಸಂದೇಹಪಡುತ್ತಿದ್ದಾರೆ. ಅದು ಎರಡು ಉದ್ದೇಶಗಳನ್ನು ಇಟ್ಟುಕೊಂಡಿದೆ ಎಂದು ಅವರು ಭಾವಿಸುತ್ತಾರೆ; ಒಂದು, ತಕ್ಷಣದ್ದು, ಇನ್ನೊಂದು ಆತ್ಯಂತಿಕವಾದದ್ದು. ತತ್ಕ್ಷಣದ ಉದ್ದೇಶ ನೆರೆಹೊರೆಯ ಮುಸ್ಲಿಂ ದೇಶಗಳೊಡನೆ ಸೇರಿ ಮುಸ್ಲಿಂ ಸಂಯುಕ್ತ ರಾಜ್ಯವನ್ನು ಸ್ಥಾಪಿಸುವುದು. ಅಂತಿಮ ಉದ್ದೇಶ, ಮುಸ್ಲಿಂ ಸಂಯುಕ್ತ ರಾಜ್ಯ ಭಾರತದ ಮೇಲೆ ಆಕ್ರಮಣ ನಡೆಸಿ ಗೆಲ್ಲುವುದು ಅಥವಾ ಅದಕ್ಕಿಂತ ಹೆಚ್ಚಾಗಿ ಮತ್ತೆ ಹಿಂದೂಗಳನ್ನು ಒಲಿಸಿಕೊಂಡು ಭಾರತದಲ್ಲಿ ಮುಸ್ಲಿಂ ರಾಜ್ಯವನ್ನು ಮತ್ತೆ ಸ್ಥಾಪಿಸುವುದು. ಪಾಕಿಸ್ತಾನ ಒತ್ತೆಯಾಳುಗಳ ಸಂಚಿನ ತುತ್ತತುದಿಯೆಂದೂ, ತಮ್ಮ ತಗಾದೆಯ ಹಿಂದೆ ಅವರನ್ನು ಇರಿಸಿಕೊಂಡು, ಪ್ರತ್ಯೇಕ ಮುಸ್ಲಿಂ

ಪ್ರಾಂತ್ಯಗಳ ಸ್ಥಾಪನೆಗಾಗಿ ಶ್ರೀಯುತ ಜಿನ್ನಾ ತನ್ನ ಹದಿನಾಲ್ಕು ಅಂಶಗಳನ್ನು ಮುಂದಿಟ್ಟರೆಂದೂ ಕೆಲವರು ಭಾವಿಸುತ್ತಾರೆ. ಮುಸ್ಲಿಮರ ಮನಸ್ಸನ್ನು ಅಳೆಯುವುದಾಗಲೀ, ಪಾಕಿಸ್ತಾನದ ತಗಾದೆಯ ಹಿಂದಿರುವ ವಾಸ್ತವ ಉದ್ದೇಶಗಳನ್ನು ತಲುಪುವುದಾಗಲೀ ಯಾರಿಗೂ ಸಾಧ್ಯವಾಗಲಾರದು. ಪಾಕಿಸ್ತಾನದ ಹಿಂದೂ ವಿರೋಧಿಗಳು 'ಮುಸ್ಲಿಮರ ವಾಸ್ತವ ಉದ್ದೇಶಗಳು ತೋರಿಕೆಯ ಉದ್ದೇಶಗಳಿಗಿಂತ ಭಿನ್ನ' ಎಂದು ಸಂಶಯಪಟ್ಟರೆ, ಅವುಗಳನ್ನು ಗಮನಕ್ಕೆ ತಂದುಕೊಂಡು ಅದಕ್ಕನುಗುಣವಾಗಿ ಯೋಜನೆ ರೂಪಿಸಿಕೊಳ್ಳಬೇಕು. ಅವರು ಪಾಕಿಸ್ತಾನವನ್ನು ವಿರೋಧಿಸಲಾಗುವುದಿಲ್ಲ. ಏಕೆಂದರೆ, ಅದರ ಹಿಂದಿನ ಉದ್ದೇಶಗಳು ಕೆಟ್ಟವು. ಆದರೆ, ಜಿನ್ನಾರನ್ನು ಕೇಳುವ ಅಧಿಕಾರ ಅವರಿಗುಂಟು. ಪಾಕಿಸ್ತಾನದೊಳಗೆ ಕೋಮು ಸಮಸ್ಯೆಯನ್ನು ಏಕೆ ಹುಟ್ಟುಹಾಕಲು ಬಯಸುತ್ತೀರಿ? ಪಾಕಿಸ್ತಾನದ ಹಿಂದಿನ ಉದ್ದೇಶಗಳು ಎಷ್ಟೇ ವಿಷಪೂರಿತವಾಗಿರಲಿ, ಕನಿಷ್ಠ ಪಕ್ಷ ಒಂದು ಗುಣವನ್ನಾದರೂ ಅದು ಹೊಂದಿರಬೇಕು. ತನ್ನೊಳಗೆ ಕೋಮು ಸಮಸ್ಯೆಯನ್ನು ಹೊಂದದೆ ಇರುವುದು ಪಾಕಿಸ್ತಾನದ ಆದರ್ಶವಾಗಬೇಕು. ಯಾರಾದರೂ ಪಾಕಿಸ್ತಾನದಿಂದ ನಿರೀಕ್ಷಿಸುವ ಗುಣಗಳಲ್ಲಿ ಕನಿಷ್ಠವಾದದ್ದು ಇದು. ಭಾರತದ ಮಾದರಿಯಲ್ಲೇ ಪಾಕಿಸ್ತಾನವೂ ಕೂಡ ಕೋಮು ಸಮಸ್ಯೆಯಿಂದ ಬಾಧೆಗೀಡಾಗುವುದಾದರೆ ಪಾಕಿಸ್ತಾನವಾದರೂ ಏಕೆ ಬೇಕು? ಕೋಮು ಸಮಸ್ಯೆಯಿಂದ ಪಾರಾಗುವುದಾದರೆ ಮಾತ್ರ ಅದನ್ನು ಸ್ವಾಗತಿಸಬಹುದು. ಒಬ್ಬರ ವಿರುದ್ಧ ಒಬ್ಬರನ್ನು ಪ್ರಚೋದಿಸದ, ಅಲ್ಪಸಂಖ್ಯಾತರು ಎಂಬ ಭೇದ ಭಾವವಿರದ ಮಾನವಕುಲ ರಾಜ್ಯವಾಗುವಂತೆ ಸರಹದ್ದುಗಳನ್ನು ವ್ಯವಸ್ಥೆಗೊಳಿಸುವುದೊಂದೇ ಅದರ ನಿವಾರಣೆಗಿರುವ ಏಕೈಕ ಮಾರ್ಗ. ಅದೃಷ್ಟವಶಾತ್ ಜಿನ್ನಾ ಅವಕಾಶ ಕೊಟ್ಟರೆ ಮಾತ್ರ ಅದನ್ನು ಮಾನವಕುಲ ರಾಜ್ಯವನ್ನಾಗಿ ಮಾಡಬಹುದು. ದುರಾದೃಷ್ಟವೆಂದರೆ ಜಿನ್ನಾ ಅದನ್ನು ವಿರೋಧಿಸಿದರು. ಅದರೊಳಗೆ ಸಂಶಯದ ಮೂಲಕಾರಣ ಅಡಗಿದೆ. ಜಿನ್ನಾ ಅದನ್ನು ಹೋಗಲಾಡಿಸುವ ಬದಲು, ಜನಾಂಗ ಮತ್ತು ಉಪಜನಾಂಗ ಎಂಬ ಹಾಸ್ಯಾಸ್ಪದ, ತರ್ಕರಹಿತ ಮತ್ತು ಕೃತ್ರಿಮ ಭಿನ್ನತೆಗಳ ಮೂಲಕ ಇನ್ನೂ ಆಳಗೊಳಿಸಿದರು.

ಅಂಥ ಹಾಸ್ಯಾಸ್ಪದ ಮತ್ತು ತರ್ಕರಹಿತ ಸೂಚನೆಗಳ ಅವಲಂಬನದಿಂದ ಅಸಮರ್ಥನೀಯವಾದದನ್ನು ಸಮರ್ಥಿಸುವುದಕ್ಕಿಂತ ಮತ್ತು ನ್ಯಾಯಯುತವಾದುದನ್ನು ವಿರೋಧಿಸುವುದಕ್ಕಿಂತ, ಉಲ್‌ಸ್ಟರ್ ಸರಹದ್ದುಗಳ ಗಡಿ ನಿರ್ಣಯದ ವಿಷಯದಲ್ಲಿ ಸರ್ ಎಡ್ವರ್ಡ್ ಕಾರ್ಸನ್ ಏನು ಮಾಡಿದನೋ ಅದನ್ನು ಜಿನ್ನಾ ಮಾಡಿದ್ದರೆ ಅದು ಹೆಚ್ಚು ಉತ್ತಮವಾಗಿರುತ್ತಿರಲಿಲ್ಲವೆ? ಐರಿಷ್ ಸ್ವರಾಜ್ಯ ಪ್ರಶ್ನೆ ಎಷ್ಟೆಲ್ಲ ವ್ಯತ್ಯಾಸಗಳ ಮೂಲಕ ಅಸ್ತಿತ್ವಕ್ಕೆ ಬಂದಿತು ಎಂದು ತಿಳಿದಿರುವ ಎಲ್ಲರಿಗೂ ಈ ಸಂಗತಿ ಗೊತ್ತು. ೧೯೧೧ರ ಸೆಪ್ಟೆಂಬರ್ ೨೩ರಂದು ನಡೆದ ಕ್ರೈಗಾವನ್ ಸಭೆಯಲ್ಲಿ ಸರ್ ಎಡ್ವರ್ಡ್ ಕಾರ್ಸನ್ ಉಲ್‌ಸ್ಟರ್‌ನಲ್ಲಿ ಎಂದಿಗೂ ಸ್ವರಾಜ್ಯ ಸರ್ಕಾರವಿರುವುದಿಲ್ಲ, ಸಾಮ್ರಾಜ್ಯ ಶಾಸನಮಂಡಲಿಯ ಸರ್ಕಾರವಿರುತ್ತದೆ ಅಥವಾ ಉಲ್‌ಸ್ಟರ್ ಸರ್ಕಾರವಿರುತ್ತದೆ' ಎಂಬ ಕಾರ್ಯನೀತಿಯನ್ನು ರೂಪಿಸಿದ ಎಂಬುದು. ೧೯೧೧ ಸೆಪ್ಟೆಂಬರ್ ೨೫ರಂದು ಬೆಲ್‌ಫಾಸ್ಟಿನಲ್ಲಿ ನಡೆದ ಸಂಯುಕ್ತ ಸಭೆಯಲ್ಲಿ– ಉಲ್‌ಸ್ಟರ್ ಐಕ್ಯವಾದಿ ಪರಿಷತ್ತು, ಪ್ರದೇಶ ರಾಜಕೀಯ ಸಂಘದ ಆಡಳಿತ ಮಂಡಲಿ ಮತ್ತು ಐಕ್ಯವಾದಿ ಕೂಟಗಳ ಪ್ರತಿನಿಧಿಗಳು ಅದರಲ್ಲಿ ಭಾಗವಹಿಸಿದ್ದರು– ಈ ಕಾರ್ಯನೀತಿಯನ್ನೊಳಗೊಂಡ ಗೊತ್ತುವಳಿಯನ್ನು ಹೊರಡಿಸಲಾಯಿತು. ಸ್ವರಾಜ್ಯ ಸರ್ಕಾರದ ಮಸೂದೆ ಮಂಜೂರಾತಿಯ ದಿನ ಉಲ್ ಸ್ಟರಿನ ಹಂಗಾಮಿ ಸರ್ಕಾರ ಅಸ್ತಿತ್ವಕ್ಕೆ ಬರಬೇಕಾಗಿದ್ದಿತು. ಈ ಕಾರ್ಯನೀತಿಯ ಮುಖ್ಯ ವೈಶಿಷ್ಟ್ಯವೆಂದರೆ ಉಲ್‌ಸ್ಟರ್ ಜನತೆಯ ಅಧೀನಕ್ಕೊಳಪಟ್ಟ ಎಲ್ಲ ಜಿಲ್ಲೆಗಳ ಅಧಿಕಾರ ವ್ಯಾಪ್ತಿಯನ್ನು ಹಂಗಾಮಿ ಸರ್ಕಾರಕ್ಕೆ ವಹಿಸಿಕೊಡುವುದು.

ಉಲ್‌ಸ್ಟರಿನ ಸಮಗ್ರ ಆಡಳಿತ ವಿಭಾಗವನ್ನು ಒಳಗೊಳ್ಳುವುದೇ 'ಅವರ ಹಿಡಿತಕ್ಕೆ ಒಳಪಟ್ಟ ಜಿಲ್ಲೆಗಳು' ಎಂಬ ವಾಕ್ಯಭಾಗದ ನಿಸ್ಸಂದೇಹವಾದ ಅರ್ಥ. ಈ ಉಲ್‌ಸ್ಟರಿನ ಆಡಳಿತ ವಿಭಾಗ ಒಂಬತ್ತು ಪ್ರದೇಶಗಳನ್ನೊಳಗೊಂಡಿದೆ. ಅವುಗಳಲ್ಲಿ ಮೂರು ತುಂಬಿತುಳುಕುವ ಕ್ಯಾಥೊಲಿಕ್ಕರದು. ಇದರ ಅರ್ಥ ಉಲ್‌ಸ್ಟರಿನ ಅಧೀನದಲ್ಲಿ ಮೂರು ಕ್ಯಾಥೊಲಿಕ್‌ರ ಪ್ರದೇಶಗಳನ್ನು, ಅವರ ಇಷ್ಟಕ್ಕೆ ವಿರುದ್ಧವಾಗಿ, ಶಾಶ್ವತವಾಗಿ ತಡೆ ಹಿಡಿದಿಟ್ಟುಕೊಳ್ಳುವುದು. ಆದರೆ ಕೊನೆಯಲ್ಲಿ ಸರ್ ಎಡ್‌ವರ್ಡ್ ಕಾರ್ಸನ್ ಮಾಡಿದ್ದೇನು? ತುಂಬಿತುಳುಕುವ ಕ್ಯಾಥೊಲಿಕರಿಂದ ಕೂಡಿದ ಮೂರು ಜಿಲ್ಲೆಗಳು ಉಲ್‌ಸ್ಟರಿಗೆ ಹೊರೆಯಾಗುತ್ತದೆ ಎಂಬುದನ್ನು ಕಂಡುಕೊಳ್ಳಲು ಸರ್ ಎಡ್ವರ್ಡ್ ಕಾರ್ಸನ್‌ನಿಗೆ ಹೆಚ್ಚು ಕಾಲ ಬೇಕಾಗಲಿಲ್ಲ. ನಷ್ಟಗಳನ್ನು ಖೋತಮಾಡುವ, ಉಲ್‌ಸ್ಟರಿನ ಸುಭದ್ರತೆಯನ್ನು ಸೂಚಿಸುವ ಘೋಷಣೆಯೊಂದಿಗೆ ಹೊರಬಂದ– ನಿಜವಾದ ನಾಯಕನ ಎಲ್ಲ ಧೈರ್ಯ ಪ್ರದರ್ಶಿಸುತ್ತ ೧೯೨೦ರ ಮೇ ೧೮ರಂದು ಪ್ರಜಾಪ್ರತಿನಿಧಿ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ತಾನು ಕೇವಲ ಆರು ಪ್ರದೇಶಗಳೊಂದಿಗೆ ತೃಪ್ತಿಪಟ್ಟುಕೊಳ್ಳುತ್ತೇನೆ ಎಂಬುದಕ್ಕೆ ಕಾರಣಗಳನ್ನು ನೀಡುವ ಅಂದಿನ ಸಂದರ್ಭದ ಭಾಷಣ ಉದ್ಧರಣಯೋಗ್ಯ. ಇದು ಅವನು ಹೇಳಿದ್ದು:–*

> **"ಹೆಚ್ಚು ಕಡಿಮೆ ಪಾದ್ರಿಯಾಡಳಿತದ ಒಂದು ಪ್ರಾಂತ್ಯವಾದ ಮೇಲೆ ಮತ್ತೊಂದು, ಒಂದು ಪಟ್ಟಣ ಭೂಭಾಗವಾದ ಮೇಲೆ ಮತ್ತೊಂದು– ಹೀಗೆ ಇಡೀ ವಿಷಯಾಂತರಾಳವನ್ನು ಪ್ರವೇಶಿಸಿ ತವಕ ಆತಂಕಗಳ ಕ್ಷಣಗಂಟೆ ದಿನಗಳನ್ನು ವಿನಿಯೋಗಿಸಿ ಆಲೋಚನೆ ಮಾಡಿಯಾದ ಮೇಲೆ 'ಡೊನೇಗಲ್, ಕಾವೆನ್ ಮತ್ತು ಮೊನಾಗನ್ ಸರ್ಕಾರಕ್ಕೆ ಜವಾಬುದಾರಿಯಾಗಿ ನಿಂತು ಬೆಲ್‌ಫಾಸ್ಟ್‌ನಲ್ಲಿ ಶಾಸನ ಸಭೆಯನ್ನು ಯಶಸ್ವಿಯಾಗಿ ಪ್ರಾರಂಭಿಸಲು ನಮಗೆ ಅವಕಾಶವೇ ಇಲ್ಲ' ಎಂಬ ನಿರ್ಣಯಕ್ಕೆ ಬಂದದ್ದು ಸತ್ಯ. ನಾವು ಇಲ್ಲಿಗೆ ಬರುವುದು ಮತ್ತು ನಾವಿದನ್ನು ಮಾಡುವ ಸ್ಥಿತಿಯಲ್ಲಿದ್ದೇವೆ ಎಂದು ನಟಿಸುವುದು ನಿಜಕ್ಕೂ ವ್ಯರ್ಥ. ಸ್ವಾಭಾವಿಕವಾಗಿ ಸಾಧ್ಯವಾದಷ್ಟು ಹೆಚ್ಚು ಪ್ರದೇಶವನ್ನು ಹೊಂದಬೇಕೆಂದು ನಾವು ಬಯಸಬೇಕು. ಅದು ಭೂ ಅಪಹರಣದ ಪದ್ಧತಿ. ಸ್ಥಾಪನೆಗೊಂಡ ಅನೇಕ ಸರ್ಕಾರಗಳ ಅಧಿಕಾರ ವ್ಯಾಪ್ತಿಯನ್ನು ವಿಸ್ತರಿಸಬೇಕೆಂಬ ಬಯಕೆ ಎಲ್ಲ ದೇಶಗಳಲ್ಲೂ ಇರುವಂಥದು. ಈ ಮೂರು ಪ್ರಾಂತ್ಯಗಳಿಗೆ ಲಗಾಮು ಹಾಕಿ ಸಜ್ಜು ಮಾಡಿ, ಸರ್ಕಾರ ರಚನೆಯ ಸವಾರಿಗೆ ಹೊರಟರೆ, ಕೆಳಕ್ಕೆ ಬಿದ್ದು ಸೋಲನುಭವಿಸುತ್ತೇವೆ ಎಂಬುದು ನಮಗೆ ಗೊತ್ತು."**

ಇವು ಬುದ್ಧಿವಂತಿಕೆಯ, ಸೂಕ್ಷ್ಮ ವಿವೇಚನೆಯ ಮತ್ತು ಎದೆಗಾರಿಕೆಯ ಮಾತುಗಳು. ಇವು ಅಭಿವ್ಯಕ್ತಗೊಂಡ ಸನ್ನಿವೇಶಕ್ಕೂ, ಪಾಕಿಸ್ತಾನ ತತ್ತ್ವದ ಅನ್ವಯದಿಂದ ಪಂಜಾಬ್ ಮತ್ತು ಬಂಗಾಳಗಳಲ್ಲಿ ಮುಂದೆ ಮಾಡಬಹುದಾದ ಸನ್ನಿವೇಶಕ್ಕೂ ಹತ್ತಿರದ ಸಾದೃಶ್ಯವಿದೆ. ಮುಸ್ಲಿಂ ಲೀಗ್ ಮತ್ತು ಜಿನ್ನಾ ಪ್ರಶಾಂತ ಪಾಕಿಸ್ತಾನವನ್ನು ಬಯಸುವುದಾದರೆ ಆ ಮಾತುಗಳನ್ನು ಮನಸ್ಸಿಗೆ ತಂದುಕೊಳ್ಳಲು ಮರೆಯಬಾರದು. ಸುಭದ್ರ ರಕ್ಷಣೆಗಳಿಂದ ಸಂತೃಪ್ತರಾಗಿ ಎಂದು ಪಂಜಾಬ್ ಮತ್ತು ಬಂಗಾಳಗಳ ಮುಸ್ಲಿಮೇತರ ಅಲ್ಪಸಂಖ್ಯಾತರಿಗೆ ಹೇಳುವುದರಿಂದ ಪ್ರಯೋಜನವಿಲ್ಲ. ಹಿಂದೂ ಬಹುಸಂಖ್ಯಾತರ ಸರ್ವಾಧಿಕಾರದ ವಿರುದ್ಧ ಸುಭದ್ರ ರಕ್ಷಣೆಗಳಿಂದ ಸಂತೃಪ್ತರಾಗಿರಲು ಮುಸ್ಲಿಮರು ತಯಾರಿಲ್ಲದಿರುವಾಗ, ಮುಸ್ಲಿಂ ಬಹುಸಂಖ್ಯಾತರ ಸರ್ವಾಧಿಕಾರದ ವಿರುದ್ಧ ಸುಭದ್ರ ರಕ್ಷಣೆಗಳಿಂದ

---

* ಹನ್ಸರ್ಡ್ (ಹೌಸ್ ಆಫ್ ಕಾಮನ್ಸ್) ೧೯೨೦, ಸಂ. ೧೨೯ ಪು. ೧೩೧೫.

ಸಂತೃಪ್ತರಾಗಿರಿ ಎಂದು ಹಿಂದೂ ಅಲ್ಪಸಂಖ್ಯಾತರನ್ನೇಕೆ ಕೇಳಬೇಕು? "ನಿಮ್ಮ ರಕ್ಷಣೆಗಳಿಗೆ ಧಿಕ್ಕಾರ, ನಿಮ್ಮಿಂದ ಆಳಿಸಿಕೊಳ್ಳಲು ನಮಗೆ ಇಷ್ಟವಿಲ್ಲ" ಎಂದು ಮುಸ್ಲಿಮರು ಹಿಂದೂಗಳಿಗೆ ಹೇಳಬಲ್ಲರಾದರೆ, ಸಂರಕ್ಷಣೆಯನ್ನು ಪಡೆದು ಸಂತೃಪ್ತರಾಗಿರಿ ಎಂಬ ಮುಸ್ಲಿಮರ ಆಹ್ವಾನಕ್ಕೆ ಪಂಜಾಬ್ ಮತ್ತು ಬಂಗಾಳಗಳ ಹಿಂದೂಗಳು– ರೆಡ್ಮಂಡ್ ವಿರುದ್ಧ ಕಾರ್ಸನ್ ಬಳಸಿದ ಯುಕ್ತಿ– ಆ ಯುಕ್ತಿಯ ಉಕ್ತಿಯಿಂದಲೇ ಉತ್ತರವನ್ನು ಹಿಂದಿರುಗಿಸಿಯಾರು!

ಪಾಕಿಸ್ತಾನ ಸಮಸ್ಯೆಯ ಶಾಂತಿಯುತ ಪರಿಹಾರಕ್ಕೆ ಕೊಂಡೊಯ್ಯುವ ಲೆಕ್ಕಾಚಾರದ ವರ್ತನೆ ಇದಲ್ಲ. ಕತ್ತಿ ಝಳಪಿಸುವುದು ಅಥವಾ ಜೋರು ಮಾಡುವುದು ಸಾಕಾಗದು, ಮೊದಲನೆಯದಾಗಿ ಇದು ಇಬ್ಬರಾಡುವ ಆಟ. ಎರಡನೆಯದಾಗಿ ಶಸ್ತ್ರಾಸ್ತ್ರಗಳು ಶಕ್ತಿದ್ಯೋತಕವಾಗಿರಬಹುದು. ಆದರೆ ಶಸ್ತ್ರಗಳನ್ನು ಹೊಂದಿರುವುದಷ್ಟೇ ಸಾಕಾಗದು. ರೂಸೋ ಹೇಳಿರುವಂತೆ:

"ಅತಿ ಸಮರ್ಥ ಎಂದೂ ಶಾಶ್ವತ ಒಡೆಯನಾಗಿ ಉಳಿಯುವಷ್ಟು ಶಕ್ತಿವಂತನಾಗಿರುವುದಿಲ್ಲ– ಬಲವನ್ನು ನ್ಯಾಯವನ್ನಾಗಿ ಮತ್ತು ವಿಧೇಯತೆಯನ್ನು ಕರ್ತವ್ಯವನ್ನಾಗಿ ಮಾರ್ಪಡಿಸಿದ ಹೊರತು." ನೀತಿಶಾಸ್ತ್ರದ ನಿಯಮಗಳು ಮಾತ್ರ ಬಲವನ್ನು ನ್ಯಾಯವನ್ನಾಗಿ ಮತ್ತು ವಿಧೇಯತೆಯನ್ನು ಕರ್ತವ್ಯವನ್ನಾಗಿ ಪರಿವರ್ತಿಸಬಲ್ಲವು. ಪಾಕಿಸ್ತಾನದ ವಾದ ನೀತಿ ನಿಯಮಗಳ ಮೇಲೆ ಸ್ಥಾಪಿತವಾಗುವಂತೆ ಲೀಗ್ ನೋಡಿಕೊಳ್ಳಬೇಕು.

## IV

ಗಡಿಗಳ ಸಮಸ್ಯೆ ಕುರಿತಂತೆ ಇಷ್ಟಾಯಿತು. ಹೊಸದಾಗಿ ಗಡಿರೇಖೆಗಳನ್ನು ಎಳೆದ ಮೇಲೂ ಪಾಕಿಸ್ತಾನದಲ್ಲಿ ಉಳಿಯಬೇಕಾದ ಅಲ್ಪಸಂಖ್ಯಾತರ ಸಮಸ್ಯೆಯತ್ತ ನಾನೀಗ ತಿರುಗುತ್ತೇನೆ. ಅವರ ಹಿತವನ್ನು ರಕ್ಷಿಸುವ ಎರಡು ವಿಧಾನಗಳಿವೆ.

ಮೊದಲನೆಯದು ಅಲ್ಪಸಂಖ್ಯಾತರ ರಾಜಕೀಯ ಮತ್ತು ಸಾಂಸ್ಕೃತಿಕ ಹಕ್ಕುಗಳ ರಕ್ಷಣೆಗೆ ಸಂವಿಧಾನದಲ್ಲಿ ಸುಭದ್ರತೆಯನ್ನು ಒದಗಿಸುವುದು. ಭಾರತೀಯರಿಗೆ ಇದು ಸುಪರಿಚಿತ ವಿಷಯ. ಅದರ ಮೇಲೆ ವಿಸ್ತಾರವಾಗಿ ಹೇಳಹೋಗುವುದು ಅನಗತ್ಯ.

ಎರಡನೆಯದು ಪಾಕಿಸ್ತಾನದಿಂದ ಹಿಂದೂಸ್ತಾನಕ್ಕೆ ಅವರ ವರ್ಗಾವಣೆಗೆ ಅವಕಾಶ ಕಲ್ಪಿಸುವುದು. ಅನೇಕ ಜನ ಈ ಪರಿಹಾರವನ್ನು ಇಷ್ಟಪಡುತ್ತಾರೆ ಮತ್ತು ಸಿದ್ಧರಾಗಿದ್ದಾರೆ. ಜನತೆಯ ವಿನಿಮಯ ಸಾಧ್ಯವೆಂದು ಪಾಕಿಸ್ತಾನ ಒಪ್ಪಿಕೊಳ್ಳಬೇಕಾಗಿದೆ. ಆದರೆ ಅವರು ಇದನ್ನು ತತ್ತರಗೊಳಿಸುವ ಹಾಗೂ ತಬ್ಬಿಬ್ಬುಗೊಳಿಸುವ ಸಮಸ್ಯೆ ಎಂದು ಪರಿಗಣಿಸಿದ್ದಾರೆ. ಇದು ನಿಸ್ಸಂದೇಹವಾಗಿ ಭೀತಿಯಾಘಾತ ಮನಸ್ಸಿನ ಚಿಹ್ನೆ. ಶಾಂತಿ ಹಾಗೂ ಸ್ವಸ್ಥ ಮನಸ್ಸಿನಿಂದ ವಿಷಯವನ್ನು ಮನನ ಮಾಡಿದರೆ, ಸಮಸ್ಯೆ ತತ್ತರ ಉಂಟುಮಾಡುವಂಥದೂ ಅಲ್ಲ, ತಬ್ಬಿಬ್ಬುಗೊಳಿಸುವಂಥದೂ ಅಲ್ಲ ಎಂಬುದು ಗೊತ್ತಾಗುತ್ತದೆ.

ಸಮಸ್ಯೆಯ ಆಯಾಮಗಳ ವಿವೇಚನೆಯೊಂದಿಗೆ ಪ್ರಾರಂಭಿಸೋಣ. ಈ ವರ್ಗಾವಣೆ ಯಾವ ಪ್ರಮಾಣದಲ್ಲಿ ಆಗುತ್ತದೆ? ಪ್ರಮಾಣವನ್ನು ನಿರ್ಧರಿಸುವಾಗ ಮೂರು ಪರಿಗಣನೆಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾದದ್ದು ಅನಿವಾರ್ಯ. ಮೊದಲನೆಯದಾಗಿ ಪಂಜಾಬ್ ಮತ್ತು ಬಂಗಾಳಗಳ ಗಡಿರೇಖೆಗಳನ್ನು ಹೊಸದಾಗಿ ಗುರುತಿಸಿದರೆ, ಈ ಎರಡೂ ಪ್ರಾಂತ್ಯಗಳಿಗೆ ಸಂಬಂಧಿಸಿದಂತೆ, ಜನತೆಯ ವರ್ಗಾವಣೆಯ ಪ್ರಶ್ನೆ ಉದ್ಭವಿಸುವುದೇ ಇಲ್ಲ. ಎರಡನೆಯದಾಗಿ ಹಿಂದೂಸ್ತಾನದಲ್ಲಿ ವಾಸವಾಗಿರುವ ಮುಸ್ಲಿಮರು ಪಾಕಿಸ್ತಾನಕ್ಕೆ ವಲಸೆ ಹೋಗಲು ಉದ್ದೇಶಿಸಿಲ್ಲ, ಮುಸ್ಲಿಂ ಲೀಗ್ ಅವರ ವರ್ಗಾವಣೆಗೆ ಒಪ್ಪುವುದೂ ಇಲ್ಲ. ಮೂರನೆಯದಾಗಿ

ವಾಯುವ್ಯ ಗಡಿನಾಡು ಪ್ರಾಂತ್ಯ, ಸಿಂಧ್ ಮತ್ತು ಬಲೂಚಿಸ್ಥಾನಗಳಲ್ಲಿರುವ ಹಿಂದೂಗಳು ವಲಸೆ ಹೋಗಲು ಇಷ್ಟಪಡುವುದಿಲ್ಲ. ಈ ಸಂಭವನೀಯ ಭಾವನೆಗಳು ನಿಜವಾದರೆ, ಜನತೆಯ ವರ್ಗಾವಣೆಯ ಸಮಸ್ಯೆ, ತತ್ತರಗೊಳಿಸುವ ಸಮಸ್ಯೆಯಾಗುವುದು ದೂರವಾಗಿಯೇ ಉಳಿಯಿತು. ನಿಜವಾಗಿ ಇದು ಎಷ್ಟು ಸಣ್ಣ ವಿಷಯವೆಂದರೆ, ಇದನ್ನು ಒಂದು ಸಮಸ್ಯೆ ಎಂದು ಪರಿಗಣಿಸಬೇಕಾದ ಪ್ರಮೇಯವೇ ಇಲ್ಲ.

ಸಮಸ್ಯೆಯಾಗುವುದು ಎಂದು ಭಾವಿಸಿಕೊಂಡರೆ, ಅದು ತಬ್ಬಿಬ್ಬುಗೊಳಿಸುವ ಸಮಸ್ಯೆಯೆ ಬಗೆಹರಿಸಲು ಅಸಾಧ್ಯವಾದ ಸಮಸ್ಯೆಯಲ್ಲ ಎಂದು ಅನುಭವ ತೋರಿಸಿದೆ. ಈ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಲು, ರಾಜಕೀಯ ಸ್ಥಿತ್ಯಂತರದ ಕಾರಣದಿಂದ ಒಬ್ಬ ವ್ಯಕ್ತಿ ಒಂದು ಪ್ರದೇಶದಿಂದ ಮತ್ತೊಂದಕ್ಕೆ ವಲಸೆ ಹೋಗುವ ದಾರಿಯಲ್ಲಿ ಉದ್ಭವಿಸಬಹುದಾದ ಕಷ್ಟಸಾಧ್ಯತೆಗಳು ಯಾವುವು ಎಂಬ ಪ್ರಶ್ನೆಯೊಡನೆ ಪ್ರಾರಂಭಿಸುವುದು ಒಳ್ಳೆಯದು. ಈ ಕೆಳಗಿನವು ಕಣ್ಣಿಗೆ ಎದ್ದು ಕಾಣುವಂಥವು (೧) ಜನತೆಯ ವರ್ಗಾವಣೆಯನ್ನು ಸುಗಮಗೊಳಿಸಲು ಮತ್ತು ಕಾರ್ಯರೂಪಕ್ಕೆ ತರಲು ಯಂತ್ರೋಪಕರಣಗಳು, (೨) ವಲಸೆಯ ವಿರುದ್ಧ ಸರ್ಕಾರದ ನಿಷೇಧ, (೩) ವಲಸೆ ಹೋಗುವ ಕುಟುಂಬದ ಸಾಮಾನು ಸರಂಜಾಮುಗಳ ಮೇಲೆ ಸರ್ಕಾರ ಭಾರಿ ತೆರಿಗೆ ವಿಧಿಸುವುದು, (೪) ವಲಸೆ ಹೋಗುವ ಕುಟುಂಬಗಳು ತಮ್ಮ ಜೊತೆಯಲ್ಲಿ ತಮ್ಮ ಸ್ಥಿರಾಸ್ತಿಯನ್ನು ಕೊಂಡೊಯ್ಯಲು ಅಸಾಧ್ಯವಾಗಿರುವುದು, (೫) ವಲಸೆ ಹೋಗುವ ಕುಟುಂಬಗಳ ಆಸ್ತಿಯ ಬೆಲೆಯನ್ನು ಅನ್ಯಾಯವಾಗಿ ಇಳಿಸುವ ದೃಷ್ಟಿಯಿಂದ, ಅನ್ಯಾಯ ಚಾಳಿಯ ಮೂಲವನ್ನು ನಿವಾರಿಸುವುದರಲ್ಲಿ ಆಗುವ ಕಷ್ಟ, (೬) ಮಾರ್ಕೆಟ್ಟಿನಲ್ಲಿ ವಸ್ತುವನ್ನು ಮಾರುವಾಗ ಅದರ ನಿಜಬೆಲೆ ತಿಳಿಯದೆ, ನಷ್ಟವನ್ನು ಲಾಭವಾಗಿಸಿಕೊಳ್ಳಲು ಭೀತಿ, (೭) ಹೊರಡಲಿರುವ ದೇಶದಿಂದ ವಲಸೆ ಹೋಗುವ ಕುಟುಂಬಗಳಿಗೆ ಪಾವತಿಯಾಗದೆ ಉಳಿದಿರುವ ವಿಶ್ರಾಂತಿ ವೇತನ ಮತ್ತು ಇತರ ವೆಚ್ಚಗಳನ್ನು ಪಡೆಯುವಲ್ಲಿನ ಕಷ್ಟ, (೮) ಯಾವ ದೇಶದ ನಾಣ್ಯದಲ್ಲಿ ಬಟವಾಡೆ ಆಗಬೇಕು ಎಂದು ನಿರ್ಧರಿಸುವಲ್ಲಿನ ಕಷ್ಟ– ಈ ಕಷ್ಟಗಳನ್ನು ನಿವಾರಿಸಿದರೆ ಜನತೆಯ ವರ್ಗಾವಣೆಯ ಹಾದಿ ಸುಗಮವಾಗುತ್ತದೆ.

ಮೊದಲ ಮೂರು ಸಂಕಷ್ಟಗಳನ್ನು ಸುಲಭವಾಗಿ ನಿವಾರಿಸಿಕೊಳ್ಳಬಹುದು– ಪಾಕಿಸ್ತಾನ ಹಿಂದೂಸ್ಥಾನ ದೇಶಗಳೆರಡೂ ಕರಾರಿಗೆ ಒಪ್ಪಿ, ಈ ಕೆಳಕಂಡಂತಹ ಶರತ್ತಿನ ಲಿಖಿತ ಕಾನೂನನ್ನು ಅಳಪಡಿಸಿಕೊಂಡಾಗ:

> **"ಸಮಾನ ಸಂಖ್ಯೆಯ ಪ್ರತಿನಿಧಿಗಳಿರುವ ಆಯೋಗವೊಂದನ್ನು ನೇಮಕ ಮಾಡಲು ಪಾಕಿಸ್ತಾನ ಮತ್ತು ಹಿಂದೂಸ್ತಾನ ದೇಶಗಳೆರಡೂ ಒಪ್ಪಿದ ಆಯೋಗದ ಅಧ್ಯಕ್ಷರಾಗುವವರು ಎರಡೂ ರಾಷ್ಟ್ರಗಳಿಗೆ ಸೇರದ ವ್ಯಕ್ತಿಯಾಗಿರಬೇಕೆಂದು ಇಬ್ಬರೂ ಒಪ್ಪಿಕೊಂಡಿದ್ದಾರೆ.**
>
> **ಆಯೋಗದ ಮತ್ತು ಅದರ ಸಮಿತಿಗಳ ನಿರ್ವಹಣೆ ಮತ್ತು ಕಾರ್ಯಾಚರಣೆಯ ವೆಚ್ಚವನ್ನು ಎರಡು ದೇಶಗಳೂ ಸಮಾನ ಪ್ರಮಾಣದಲ್ಲಿ ಭರಿಸಬೇಕು.**
>
> **ಹಿಂದೂಸ್ತಾನ ಮತ್ತು ಪಾಕಿಸ್ತಾನ ಸರ್ಕಾರಗಳೆರಡೂ 'ಕುಲದ ಅಲ್ಪಸಂಖ್ಯಾತ'ರಿಗೆ ಸೇರಿದ ಎಲ್ಲರಿಗೂ ವಲಸೆ ಹೋಗುವ ಸಂಬಂಧದ ಇಷ್ಟಾನಿಷ್ಟದ ಅಭಿವ್ಯಕ್ತಿ ಹಕ್ಕನ್ನು ಮಂಜೂರು ಮಾಡಲು ಇದೀಗ ಒಪ್ಪಿಕೊಂಡಿದೆ.**
>
> **ಮೇಲೆ ಸೂಚಿಸಿರುವ ಎರಡೂ ದೇಶಗಳ ಸರ್ಕಾರಗಳು, ಈ ಹಕ್ಕಿನ ಚಲಾವಣೆಗೆ ಎಲ್ಲ ವಿಧದಲ್ಲು ಸಹಕರಿಸಿ, ವಲಸೆ ಸ್ವಾತಂತ್ರ್ಯಕ್ಕೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಅಡ್ಡಿ–ಆತಂಕಗಳನ್ನು ನಡುವೆ ತಂದೊಡ್ಡುವುದಿಲ್ಲವೆಂದು ಹೊಣೆ ಹೊತ್ತಿವೆ. ವಲಸೆ ಸ್ವಾತಂತ್ರ್ಯಕ್ಕೆ ವಿರುದ್ಧವಾದ ಎಲ್ಲ ಕಾಯಿದೆ ನಿಬಂಧನೆಗಳು ಶೂನ್ಯಪ್ರಾಯವೆಂದು ಪರಿಗಣಿಸಲಾಗುತ್ತದೆ."**

ಒಪ್ಪಂದದ ಖಂಡಗಳಲ್ಲಿ ಈ ಕೆಳಗಿನ ಶರತ್ತುಗಳನ್ನು ಸೇರಿಸಿ ಆಸ್ತಿ ವರ್ಗಾವಣೆಗೆ ಸಂಬಂಧಿಸಿದ ನಾಲ್ಕು ಮತ್ತು ಐದನೆಯ ತೊಂದರೆಗಳನ್ನು ಸಮರ್ಥವಾಗಿ ಎದುರಿಸಬಹುದು:

**"ಯಾರು ಈ ನಿಬಂಧನೆಗಳ ಅನುಸರಣೆಯಿಂದ ವಲಸೆ ಹೋಗುವ ಹಕ್ಕಿನ ಉಪಯೋಗ ಪಡೆಯಲು ನಿರ್ಧರಿಸುತ್ತಾರೋ ಅವರು ತಮ್ಮೊಡನೆ ಕೊಂಡೊಯ್ಯಲು ಅಥವಾ ಯಾವುದೇ ರೀತಿಯ ಚರಾಸ್ತಿಯನ್ನು ಸಾಗಿಸಿಕೊಂಡು ಹೋಗಲು ಸುಂಕವನ್ನು ಕೊಡಬೇಕಾಗಿಲ್ಲ.**

ಸ್ಥಿರಾಸ್ತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಮುನ್ನೇರ್ಪಾಡುಗಳಿಗೆ ಅನುಗುಣವಾಗಿ ಆಯೋಗ ಅದನ್ನು ವಿಲೇವಾರಿ ಮಾಡಬಹುದು.

**೧. ವಲಸೆ ಹೋಗುವವನ ಸ್ಥಿರಾಸ್ತಿಯ ಬೆಲೆಯನ್ನು ಅಂದಾಜು ಮಾಡಲು ಆಯೋಗ ಒಂದು ತಜ್ಞರ ಸಮಿತಿಯನ್ನು ನೇಮಕ ಮಾಡಬೇಕು. ಆಸಕ್ತಿ ಇರುವ ವಲಸೆಗಾರ ತಾನು ಆಯ್ಕೆ ಮಾಡಿದ ಪ್ರತಿನಿಧಿಯನ್ನು ಸಮಿತಿಯಲ್ಲಿ ಸೇರಿಸಬಹುದು.**

**೨. ವಲಸೆಗಾರನ ಸ್ಥಿರಾಸ್ತಿಯ ವಿಕ್ರಯಕ್ಕಾಗಿ ಆಯೋಗ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು."**

ವೆಚ್ಚ ತುಂಬಿಕೊಡುವುದಕ್ಕೆ ಸಂಬಂಧಿಸಿದ ಇತರ ತೊಂದರೆಗಳನ್ನು– ನಷ್ಟ, ವಿಶ್ರಾಂತಿ ವೇತನ ಮತ್ತು ವೆಚ್ಚಗಳ ಬಟವಾಡೆ, ಯಾವ ನಾಣ್ಯದಲ್ಲಿ ಬಟವಾಡೆಯಾಗಬೇಕು ಎಂಬುದರ ನಿಗದಿ ಇತ್ಯಾದಿ– ಎದುರಿಸಲು ಕರಾರಿನ ಕೆಳಗಿನ ನಿಬಂಧನೆಗಳು ಸಾಕು:

**೧. "ವಲಸೆಗಾರನ ಸ್ಥಿರಾಸ್ತಿಯ ಅಂದಾಜು ಬೆಲೆಗೂ ಮತ್ತು ವಿಕ್ರಯದ ಬೆಲೆಗೂ ಇರುವ ವ್ಯತ್ಯಾಸವನ್ನು ನಿರ್ಗಮನ ದೇಶದ ಸರ್ಕಾರ ಆಯೋಗಕ್ಕೆ ಸಲ್ಲಿಸಬೇಕು– ಆಯೋಗ ಆ ಪರಿಣಾಮದ ಕೊರತೆಯನ್ನು ಪ್ರಕಟಿಸಿದ ಕೂಡಲೇ. ಈ ಬಟವಾಡೆಯ ೧/೪ ಭಾಗವನ್ನು ಹಣದ ರೂಪದಲ್ಲಿಯೂ ೩/೪ ಭಾಗವನ್ನು ಚಿನ್ನ ಅಥವಾ ಅಲ್ಪಾವಧಿಯ ಚಿನ್ನದ ಕರಾರು ಪತ್ರಗಳ ಮೂಲಕ ಸಲ್ಲಿಸಬೇಕು.**

**೨. ಮೇಲೆ ನಿರ್ಧರಿಸಿದಂತೆ ವಲಸೆಗಾರರ ಸ್ಥಿರಾಸ್ತಿಯ ಬೆಲೆಯನ್ನು ಆಯೋಗ ಮುಂಗಡವಾಗಿ ಕೊಡಬಹುದು.**

**೩. ಸದ್ಯದ ಕರಾರಿನ ಸಹಿ ಆದ ತಾರೀಖಿನಲ್ಲಿ ವಲಸೆಗಾರ ಪಡೆದ ಎಲ್ಲ ನಾಗರಿಕ ಅಥವಾ ಸೈನಿಕ ವಿಶ್ರಾಂತಿ ವೇತನಗಳನ್ನು ಸಾಲಗಾರ ಸರ್ಕಾರದ ಸ್ವಂತ ವೆಚ್ಚದಲ್ಲಿ ಬಂಡವಾಳವಾಗಿ ತೊಡಗಿಸಬೇಕು. ಅದರ ಮೊತ್ತವನ್ನು ಆಯೋಗಕ್ಕೆ ನೀಡಬೇಕು– ಅದರ ಒಡೆಯರುಗಳ ಲೆಕ್ಕಕ್ಕೆ.**

**೪. ಆಯೋಗದಲ್ಲಿ ಆಸಕ್ತಿಯುಳ್ಳ ವಲಸೆಗೆ ಸಹಕರಿಸಲು ಅಗತ್ಯವಾದ ಸಹಾಯನಿಧಿಯನ್ನು ಮುಂಗಡವಾಗಿ ಕೊಡಬಹುದು."**

ಜನತೆಯ ವರ್ಗಾವಣೆಗೆ ಸಂಬಂಧಪಟ್ಟ ಕಷ್ಟಗಳನ್ನು ನಿವಾರಿಸಿಕೊಳ್ಳಲು ಈ ಪೂರ್ವಸಿದ್ಧತೆಗಳು ಸಾಕಾಗುವುದಿಲ್ಲವೆ? ಅವಶ್ಯವಾಗಿ ಕೆಲವು ಕಷ್ಟಗಳಿವೆ. ಆದರೆ ಅವುಗಳೂ ಕೂಡ ದಾಟಲಾರದಂಥವಲ್ಲ. ಅವು ಕಾರ್ಯನೀತಿಯ ಪ್ರಶ್ನೆಯನ್ನೊಳಗೊಂಡಿವೆ. ಮೊದಲನೆಯ ಪ್ರಶ್ನೆ: ಜನತೆಯ ವರ್ಗಾವಣೆ

ಕಡ್ಡಾಯವಾಗಿರಬೇಕೆ ಅಥವಾ ಇಚ್ಛಾಪೂರ್ವಕವಾಗಿರಬೇಕೆ? ಎರಡನೆಯ ಪ್ರಶ್ನೆ: ರಾಜ್ಯ ನೆರವಿನ ವರ್ಗಾವಣೆ ಎಲ್ಲರಿಗೂ ಮುಕ್ತವಾದದ್ದು ಎಂದು ಘೋಷಿಸುವುದು ಸರಿಯೆ ಅಥವಾ ಒಂದು ವಿಶಿಷ್ಟ ವರ್ಗದ ಜನಗಳಿಗೆ ಮಾತ್ರ ಸೀಮಿತವೆ? ಮೂರನೆಯ ಪ್ರಶ್ನೆ: ನಿರ್ದಿಷ್ಟವಾಗಿ ಸ್ಥಿರಾಸ್ತಿಯ ಮಾರಾಟದ ನಷ್ಟವನ್ನು ಲಾಭವಾಗಿಸುವ ಸಂಬಂಧದಲ್ಲಿ ಎಷ್ಟುಕಾಲ ಸರ್ಕಾರ ಈ ಮುನ್ನೇರ್ಪಾಡುಗಳ ಜವಾಬ್ದಾರಿಯಿಂದ ಬಂಧಿತವಾಗಿ ಇರಬೇಕಾಗುತ್ತದೆ? ಈ ಅವಕಾಶಗಳನ್ನು ಒಂದು ಕಾಲಮಿತಿಗೆ ಒಳಪಡಿಸಬೇಕೆ ಅಥವಾ ಜವಾಬ್ದಾರಿ ಅನಿರ್ದಿಷ್ಟ ಕಾಲ ಮುಂದುವರಿಯಬೇಕೆ?

ಮೊದಲ ಪ್ರಶ್ನೆಗೆ ಸಂಬಂಧಿಸಿದಂತೆ ಎರಡೂ ಸಾಧ್ಯ; ಎರಡೂ ಅನುಷ್ಠಾನಗೊಂಡ ದೃಷ್ಟಾಂತಗಳಿವೆ. ಗ್ರೀಸ್ ಮತ್ತು ಬಲ್ಗೇರಿಯಾ ದೇಶಗಳ ಮಧ್ಯೆ ಜನತೆಯ ವರ್ಗಾವಣೆ ಸ್ವಪ್ರೇರಣೆಯ ಆಧಾರದ ಮೇಲೆ ನಡೆಯಿತು; ಗ್ರೀಸ್ ಮತ್ತು ಟರ್ಕಿಗಳ ನಡುವೆ ಕಡ್ಡಾಯದ ಆಧಾರದ ಮೇಲೆ ನಡೆಯಿತು. ಕಡ್ಡಾಯ ವರ್ಗಾವಣೆ ಮೇಲುನೋಟಕ್ಕೆ ತಪ್ಪು ಎಂದು ಯಾರಿಗಾದರೂ ಅನ್ನಿಸುತ್ತದೆ. ಒಬ್ಬನಿಗೆ ಇಷ್ಟವಿಲ್ಲದಿದ್ದಾಗ ಅವನ ಅನುವಂಶೀಯ ನೆಲೆಯನ್ನು ಬದಲಾಯಿಸು ಎಂದು ಬಲಾತ್ಕರಿಸುವುದು ಸರಿಯಾದದ್ದಲ್ಲ– ಅಲ್ಲಿನ ಅವನ ವಾಸದ ಮುಂದುವರಿಕೆಯಿಂದಾಗಿ ದೇಶದ ಶಾಂತಿಸುಸ್ಥಿತಿಗಳ ವಿಪತ್ತಿಗೊಳಗಾಗುವ ಸಂಭವ ಇದ್ದ ಹೊರತು ಅಥವಾ ಅವನ ಹಿತದ ದೃಷ್ಟಿಯಿಂದಲೇ ವರ್ಗಾವಣೆ ಅಗತ್ಯ ಎನ್ನಿಸಿದ ಹೊರತು ಅಥವಾ ಅವನ ಹಿತದ ದೃಷ್ಟಿಯಿಂದಲೇ ವರ್ಗಾವಣೆ ಅಗತ್ಯ ಎನ್ನಿಸಿದ ಹೊರತು, ವರ್ಗಾವಣೆ ಮಾಡುವವರು ಅದನ್ನು ಅಡಚಣೆ ಮತ್ತು ನಷ್ಟಗಳು ಉಂಟಾಗದ ಹಾಗೆ ಮಾಡಬೇಕಾಗಿದೆ. ಆದ್ದರಿಂದ ವರ್ಗಾವಣೆಯನ್ನು ಬಲಾತ್ಕರಿಸಬಾರದು ಎಂಬುದು ನನ್ನ ಅಭಿಪ್ರಾಯ. ವರ್ಗಾವಣೆಗೆ ಇಚ್ಛೆ ವ್ಯಕ್ತಪಡಿಸಿದವರಿಗೂ ಅದು ಮುಕ್ತವಾಗಿರಬೇಕು.

ಎರಡನೆಯ ಪ್ರಶ್ನೆಗೆ ಸಂಬಂಧಿಸಿದಂತೆ, ರಾಜ್ಯನೆರವಿನ ವರ್ಗಾವಣೆ ಯೋಜನೆಯ ಉಪಯೋಗವನ್ನು ಪಡೆಯಲು ಅಲ್ಪಸಂಖ್ಯಾತ ಸದಸ್ಯರಿಗೆ ಮಾತ್ರ ಅವಕಾಶ ಇರಬೇಕೆಂಬುದು ಸ್ಪಷ್ಟ. ಆದರೆ, ಆ ನಿರ್ಬಂಧವೂ ಸಹ, ಈ ಯೋಜನೆಯ ಲಾಭ ಪಡೆಯಬಾರದ ಎಲ್ಲರನ್ನೂ ಹೊರಗಿಡಲು ಸಾಕಾಗದಿರಬಹುದು. ಕುಲಸಂಬಂಧವಾದ ಅಥವಾ ಮತೀಯವಾದ ಭಿನ್ನಾಭಿಪ್ರಯಗಳು ಪಕ್ಷಪಾತ ಮಾಡುವುದಕ್ಕೆ ಅಥವಾ ಬಲಿಪಶು ಮಾಡುವುದಕ್ಕೆ ತೊಡಗುವ ಕಾರಣದಿಂದ, ಕೆಲವು ನಿರ್ದಿಷ್ಟ ಅಲ್ಪಸಂಖ್ಯಾತರಿಗೆ ಅದನ್ನು ಸೀಮಿತಗೊಳಿಸಬೇಕು.

ಮೂರನೆಯ ಪ್ರಶ್ನೆ ಮುಖ್ಯವಾದುದು, ಗಂಭೀರ ಅಭಿಪ್ರಾಯ ಭೇದಕ್ಕೆ ಅವಕಾಶ ನೀಡುವ ಸಂಭವ ಇರುವಂಥದು. ನ್ಯಾಯಯುತವಾಗಿ ಈ ವಿಷಯವನ್ನು ಅವಲೋಕಿಸಿದರೆ, ಸರ್ಕಾರದ ಖರ್ಚಿನಲ್ಲಿ ವಲಸೆ ಹೋಗುವ ಅವಕಾಶವನ್ನು ಅನಿರ್ದಿಷ್ಟ ಅವಧಿಯವರೆಗೆ ಮುಕ್ತವಾಗಿರಿಸಬೇಕು ಎಂದು ಸರ್ಕಾರವನ್ನು ಬಲಾತ್ಕರಿಸುವುದು ಪೂರ್ಣ ಅವಿವೇಕ ಎನ್ನಬಹುದು. ಮೇಲಿನ ಉಲ್ಲೇಖಿತ ನಿರ್ಬಂಧನೆಗಳಲ್ಲಿರುವ ರಾಜ್ಯ ನೆರವಿನ ವಲಸೆ ಯೋಜನೆಯ ಅವಕಾಶಗಳ ಉಪಯೋಗವನ್ನು ಒಬ್ಬ ವ್ಯಕ್ತಿ ಪಡೆಯುವುದಿದ್ದರೆ ಅವನು ವಲಸೆ ಹೋಗುವ ಇಚ್ಛೆಯನ್ನು ನಿಗದಿತ ಅವಧಿಯಲ್ಲಿ ವ್ಯಕ್ತಗೊಳಿಸಿ ಅನುಷ್ಠಾನಕ್ಕೆ ತರಬೇಕು; ಅವಧಿ ಮುಗಿದ ಮೇಲೆ ವಲಸೆ ಹೋಗಲು ನಿರ್ಧರಿಸಿದರೆ ಅವನು ವಲಸೆ ಹೋಗಲು ಸ್ವತಂತ್ರ. ಆದರೆ, ರಾಜ್ಯದ ನೆರವಿಲ್ಲದೆ ತನ್ನ ಖರ್ಚಿನಲ್ಲಿ ಮಾತ್ರ ಹೋಗಬೇಕು ಎಂದು ಹೇಳುವುದರಲ್ಲಿ ಯಾವುದೇ ಅನ್ಯಾಯವಿಲ್ಲ. ರಾಜ್ಯನೆರವಿನ ಹಕ್ಕನ್ನು ಆ ರೀತಿ ಮಿತಿಗೊಳಪಡಿಸುವುದರಲ್ಲಿ ಯಾವುದೇ ಪಕ್ಷಪಾತವಿಲ್ಲ. ರಾಜ್ಯ ನೆರವು ಯೋಜನೆಯ ಅವಿಭಾಜ್ಯ ಅಂಗವಾಯಿತು. ಏಕೆಂದರೆ ವಲಸೆ, ರಾಜಕೀಯ ಸ್ಥಿತ್ಯಂತರದ

ಸಂಘಟಿತ ಪರಿಣಾಮ, ವೈಯಕ್ತಿಕ ನಾಗರಿಕರಿಗೆ ಅದರ ಮೇಲೆ ಯಾವುದೇ ಹಿಡಿತವಿರುವುದಿಲ್ಲ. ಆದರೆ ವಲಸೆ, ರಾಜಕೀಯ ಸ್ಥಿತ್ಯಂತರದ ಫಲವಾಗಿಲ್ಲದೆ ಇರಬಹುದು. ಅದು ಬೇರೆ ಕಾರಣಗಳಿಂದ ಆಗಿರಬಹುದು. ಹಾಗೆ ಆಗಿದ್ದರೆ, ವಲಸೆಗಾರನಿಗೆ ನೀಡುವ ನೆರವು ರಾಜ್ಯಕ್ಕೆ ನಿರ್ಬಂಧಕ ಶಕ್ತಿಯಾಗಲಾರದು. ವಲಸೆ ರಾಜಕೀಯ ಕಾರಣಗಳಿಂದಲೋ ಅಥವಾ ಖಾಸಗಿ ಕಾರಣಗಳಿಂದಲೋ ಎಂಬುದನ್ನು ನಿರ್ಧರಿಸಲು ಇರುವ ಏಕೈಕ ಮಾರ್ಗವೆಂದರೆ ಒಂದು ನಿರ್ದಿಷ್ಟ ವೇಳೆಗೆ ಅದನ್ನು ಬದ್ಧಗೊಳಿಸಬೇಕು. ರಾಜಕೀಯ ಸ್ಥಿತ್ಯಂತರ ಜರುಗಿದ ನಿರ್ದಿಷ್ಟ ಅವಧಿಯಲ್ಲಿ ಅದು ನಡೆದರೆ ಅದನ್ನು ರಾಜಕೀಯ ಕಾರಣದ ವಲಸೆ ಎಂದು ಭಾವಿಸಬಹುದು. ಆ ನಿರ್ದಿಷ್ಟ ಅವಧಿ ಮುಗಿದ ಮೇಲೆ ಜರುಗಿದ್ದನ್ನು ಖಾಸಗಿ ಕಾರಣದ್ದು ಎಂದು ಭಾವಿಸಬಹುದು. ಇದರಲ್ಲಿ ಅನ್ಯಾಯ ಏನೇನೂ ಇಲ್ಲ. ಪೂರ್ವ ಭಾವನೆಯ ಅದೇ ನಿಬಂಧನೆ ನಾಗರಿಕ ಸೇವೆಯ ಅಧಿಕಾರಿಗಳ ವಿಷಯಕ್ಕೂ ಅನ್ವಯವಾಗುತ್ತದೆ. ರಾಜಕೀಯ ಸ್ಥಿತ್ಯಂತರವಾದಾಗ ಆ ಅಧಿಕಾರಿಗಳು ಕ್ಲುಪ್ತ ಅವಧಿಯಲ್ಲಿ ನಿವೃತ್ತರಾಗಿದ್ದರೆ, ಸಮಪ್ರಮಾಣವಾದ ವಿಶ್ರಾಂತಿವೇತನ ಅವರಿಗೆ ಲಭ್ಯವಾಗುತ್ತದೆ. ಆದರೆ ಕ್ಲುಪ್ತ ಅವಧಿ ಮುಗಿದ ಮೇಲೆ ಅವರು ನಿವೃತ್ತರಾದರೆ, ಆ ಸೌಲಭ್ಯ ಲಭಿಸುವುದಿಲ್ಲ.

ನಾನು ಹೇಗಿರಬೇಕೆಂದು ಸೂಚಿಸಿರುವೆನೋ ಹಾಗೆ ಈ ವಿಷಯಗಳ ಕಾರ್ಯನೀತಿ ಇರುವುದಾದರೆ, ಕರಾರಿನಲ್ಲಿ ಈ ಕೆಳಕಂಡ ನಿಬಂಧನೆಗಳನ್ನು ಸೇರಿಸಿ ಅದನ್ನು ಅನುಷ್ಠಾನಕ್ಕೆ ತರಬಹುದು.

> **"ಈ ಕರಾರಿನ ಪ್ರಕಾರ ೧೮ ವರ್ಷಗಳ ಮೇಲ್ಪಟ್ಟ ವಯಸ್ಸಿನ ಅಲ್ಪಸಂಖ್ಯಾತ ಕುಲಕ್ಕೆ ಸೇರಿದ ಯಾವ ವ್ಯಕ್ತಿಗಾದರೂ ಇಚ್ಛಾಪೂರ್ವಕ ವಲಸೆಯ ಹಕ್ಕನ್ನು ಜಾರಿಗೊಳಿಸಬಹುದು.**
>
> **ಆಯೋಗದ ಎದುರು ಮಾಡಿದ ಪ್ರಕಟಣೆಯೇ, ಹಕ್ಕನ್ನು ಜಾರಿಗೊಳಿಸಲು ಸಾಕಷ್ಟು ಇಚ್ಛಾಸಾಕ್ಷ್ಯವಾಗುತ್ತದೆ. ಹೆಂಡತಿಯನ್ನು ಜೊತೆಯಲ್ಲಿ ಕರೆದುಕೊಂಡು ಹೋಗುವ ಆಯ್ಕೆ ಗಂಡನದು; ತಮ್ಮ ೧೮ ವರ್ಷಗಳ ಕೆಳಪಟ್ಟ ಮಕ್ಕಳು ಅಥವಾ ಅಪ್ರಾಪ್ತ ವಯಸ್ಸಿನ ಪಾಲಿತರನ್ನು ಕರೆದೊಯ್ಯುವ ಆಯ್ಕೆ ತಂದೆತಾಯಿಗಳದು ಅಥವ ಪೋಷಕರದು.**
>
> **ಕರಾರು ಸಹಿಯಾದ ತಾರೀಖಿನಿಂದ ೫ ವರ್ಷಗಳ ಅವಧಿಯೊಳಗೆ ವಲಸೆ ಹೋಗುವ ಆಯ್ಕೆಯನ್ನು ಜಾರಿಗೆ ತರದಿದ್ದರೆ, ಈ ಕರಾರು ಒದಗಿಸುವ ಸೌಲಭ್ಯದ ಹಕ್ಕು ಇಲ್ಲವಾಗುತ್ತದೆ.**
>
> **ಆಯೋಗ ಕಾರ್ಯಪ್ರವೃತ್ತವಾದ ತಾರೀಖಿನಿಂದ ೫ ವರ್ಷಗಳ ಅವಧಿ ಮುಗಿದ ಮೇಲೆ ಆರು ತಿಂಗಳ ಒಳಗಾಗಿ ಆಯೋಗದ ಕಾರ್ಯ ಕಲಾಪಗಳನ್ನು ಸ್ಥಗಿತಗೊಳಿಸಲಾಗುತ್ತದೆ."**

ವೆಚ್ಚದ ಬಗ್ಗೆ? ವರ್ಗಾವಣೆ ಕಡ್ಡಾಯವಾದಾಗ ಮಾತ್ರ ವೆಚ್ಚದ ಪ್ರಶ್ನೆ ಮುಖ್ಯವಾಗುತ್ತದೆ. ಸ್ವಪ್ರೇರಣೆಯ ವರ್ಗಾವಣೆ ಯೋಜನೆ ರಾಜ್ಯಕ್ಕೆ ಭಾರೀ ಆರ್ಥಿಕ ಹೊರೆಯಾಗುವುದಿಲ್ಲ. ಜನರು ಸ್ವಾತಂತ್ರ್ಯಕ್ಕಿಂತ ತಮ್ಮ ಆಸ್ತಿಪಾಸ್ತಿಯನ್ನು ಇಷ್ಟಪಡುತ್ತಾರೆ. ಅನೇಕರು ತಾವು ವಾಸಿಸುವ ಮೂಲಸ್ಥಳವನ್ನು ಬದಲಾಯಿಸುವ ಬದಲು ರಾಜಕೀಯ ಮುಖಂಡರ ಕೈಕೆಳಗೆ ದಬ್ಬಾಳಿಕೆ ಸಹಿಸಲು ಮುಂದಾಗುತ್ತಾರೆ. ಆಡಮ್ ಸ್ಮಿತ್ ಹೇಳಿದಂತೆ ಎಲ್ಲ ಸರಕುಗಳಲ್ಲಿ ಮನುಷ್ಯ ತುಂಬ ಕಷ್ಟವಾದ ಸರಕು– ಸಾಗಿಸಲು. ಆದ್ದರಿಂದ ವೆಚ್ಚ ಯಾರನ್ನೂ ಭಯ ಪಡಿಸುವುದಿಲ್ಲ.

ಅದರ ಕಾರ್ಯದ ಬಗ್ಗೆ? ಯೋಜನೆ ಹೊಸದಲ್ಲ. ಪರೀಕ್ಷೆಗೊಳಗಾಗಿ ಅದು ಕಾರ್ಯಶೀಲ ಎಂದು ಗೊತ್ತಾಗಿದೆ. ಕೊನೆಯ ಯೂರೋಪು ಯುದ್ಧವಾದ ಮೇಲೆ ಗ್ರೀಸ್ ಮತ್ತು ಬಲ್ಗೇರಿಯಾ ಮಧ್ಯೆ ಹಾಗೂ

ಟರ್ಕಿ ಮತ್ತು ಗ್ರೀಸ್ ಮಧ್ಯೆ ಜನತೆಯ ವರ್ಗಾವಣೆ* ಮಾಡಬೇಕಾದಾಗ ಇದನ್ನು ಅನುಷ್ಠಾನಕ್ಕೆ ತರಲಾಯಿತು. ಅದು ಕೆಲಸ ಮಾಡಿದೆ, ಪರೀಕ್ಷೆಗೆ ಒಳಗಾಗಿದೆ ಮತ್ತು ಕಾರ್ಯಸಾಧ್ಯ ಎಂದು ಗೊತ್ತಾಗಿದೆ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ನಾನು ರೂಪರೇಷೆ ಹಾಕಿರುವ ಯೋಜನೆ, ಆ ಯೋಜನೆಯ ಪ್ರತಿ. ಅದು ಹೆಚ್ಚು ಯಶಸ್ವಿಯಾಗಿ ಕಾರ್ಯಗತವಾಯಿತು ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಎಲ್ಲಿಯೋ ಯಶಸ್ವಿಯಾದದ್ದು ಭಾರತದಲ್ಲೂ ಯಶಸ್ವಿಯಾಗುತ್ತದೆ ಎಂದು ನಿರೀಕ್ಷಿಸಬಹುದು.

ಪಾಕಿಸ್ತಾನದ ಸಮಸ್ಯೆ ಸುಲಭದ್ದೇನೂ ಅಲ್ಲ. ಆದರೆ ತತ್ವಕ್ಕೆ ಅವಕಾಶ ಕಲ್ಪಿಸುವಷ್ಟು ಮತ್ತು ಅದರ ನೀತಿನಿಯಮಗಳನ್ನು ಒಪ್ಪಿಕೊಳ್ಳುವಷ್ಟು ಅದು ಕಷ್ಟಕರವಾಗಿರಲಿಲ್ಲ. ಹೃದಯ ವಿದ್ರಾವಕ ಎಂಬ ಕಾರಣದಿಂದ ಮಾತ್ರ ಅದು ತೊಂದರೆಯದು. ಅದರ ಸಮಸ್ಯೆಗಳನ್ನು ಕುರಿತು ಅಥವಾ ಪರಿಹಾರಗಳನ್ನು ಕುರಿತು ಯೋಚಿಸಲು ಯಾರೂ ಇಷ್ಟಪಡುವುದಿಲ್ಲ. ಏಕೆಂದರೆ ಅದರ ಮೂಲ ಕಲ್ಪನೆಯೇ ಯಾತನೆಯದು. ಒಮ್ಮೆ ಭಾವನೆಯನ್ನು ಹೊರಹಾಕಿದರೆ, ಪಾಕಿಸ್ತಾನವಾಗಬೇಕೆಂದು ನಿರ್ಧರಿಸಿದರೆ, ಅದರಿಂದ ಉದ್ಭವವಾಗುವ ಸಮಸ್ಯೆಗಳು ತತ್ತರಗೊಳಿಸುವುದೂ ಇಲ್ಲ, ತಬ್ಬಿಬ್ಬುಗೊಳಿಸುವುದೂ ಇಲ್ಲ.

◆

* ಜನತೆಯ ವರ್ಗಾವಣೆಯ ಪ್ರಶ್ನೆಯ ಬಗೆಗೆ ಹೆಚ್ಚು ಮಾಹಿತಿಯನ್ನು ಬಯಸುವವರು ಹೆಚ್ಚು ಪ್ರಯೋಜನಕ್ಕಾಗಿ ಈ ಪುಸ್ತಕ ನೋಡಿ: "ದಿ ಎಕ್ಸ್‌ಛೇಂಜ್ ಆಫ್ ಮೈನಾರಿಟೀಸ್" ಬಲ್ಗೇರಿಯಾ ಗ್ರೀಸ್ ಮತ್ತು ಟರ್ಕಿ ಲೇಖಕ– ಸ್ಟೀಫನ್ ಪಿ.ಲಡಾಸ್ (ಮ್ಯಾರ್) ೧೯೩೨.

## ಅಧ್ಯಾಯ ೩೧

# ನಿರ್ಧರಿಸುವವರು ಯಾರು?

ಪಾಕಿಸ್ತಾನ ಪ್ರಶ್ನೆಗೆ ಎರಡು ಮುಖಗಳಿವೆ. ಒಂದು ಹಿಂದೂಮುಖ, ಮತ್ತೊಂದು ಮುಸ್ಲಿಂ ಮುಖ. ಇದನ್ನು ತಪ್ಪಿಸಲು ಸಾಧ್ಯವಿಲ್ಲ. ದೌರ್ಭಾಗ್ಯವೆಂದರೆ ಇಬ್ಬರ ಮನೋಧರ್ಮವೂ ವೈಚಾರಿಕತೆಯಿಂದ ದೂರ. ಇಬ್ಬರೂ ಭಾವನೆಯಲ್ಲಿ ಹೂತುಹೋಗಿದ್ದಾರೆ. ಭಾವನೆಯ ಪದಗಳು ಎಷ್ಟು ದಪ್ಪ ಎಂದರೆ ಈಗ ವಿಚಾರ ಅಲ್ಲಿ ನಾಟಿಕೊಳ್ಳುವುದಕ್ಕೆ ತುಂಬ ಕಷ್ಟವಾಗುತ್ತದೆ. ಈ ವಿರೋಧದ ಭಾವನೆಗಳು ಒಣಗಿಹೋಗುತ್ತವೆಯೇ ಅಥವಾ ಇನ್ನೂ ದಟ್ಟವಾಗುತ್ತವೆಯೋ, ವೇಳೆ ಮತ್ತು ಸಂದರ್ಭಗಳು ಮಾತ್ರ ಅದನ್ನು ಹೇಳಬಲ್ಲವು. ಹಿಮ ಕರಗುವುದಕ್ಕೆ ಭಾರತೀಯರು ಎಷ್ಟು ಕಾಲ ಕಾಯಬೇಕೋ ಯಾರೂ ಭವಿಷ್ಯ ಹೇಳಲಾರರು. ಆದರೆ ಹಿಮ ಕರಗುವವರೆಗೆ ಸ್ವಾತಂತ್ರ್ಯವನ್ನು ಶೀತಶೇಖರಣೆಯಲ್ಲಿ ಇಡಬೇಕು ಎಂಬುದಂತೂ ನಿಶ್ಚಿತ. ಪಾಕಿಸ್ತಾನ ತನ್ನ ಆದರ್ಶವನ್ನು ಹಾಗೂ ಶಾಶ್ವತ ಪರಿಹಾರವನ್ನು ಕಂಡುಕೊಳ್ಳುವ ತನಕ, ಭಾರತದ ಸ್ವಾತಂತ್ರ್ಯವನ್ನು ಅನಿರ್ದಿಷ್ಟಕಾಲ ಮುಂದೂಡುವುದಕ್ಕೆ ಭಾರತದ ಅನೇಕ ವಿಚಾರವಂತ ಜನ ಪೂರ್ಣ ವಿರೋಧವಾಗಿದ್ದಾರೆ ಎಂಬುದು ಖಚಿತ. ನಾನು ಅವರಲ್ಲೊಬ್ಬ. ಪಾಕಿಸ್ತಾನ ಒಂದು ಸೋಗಾಗಿರದೆ ಸಮಸ್ಯೆಯಾಗಿದ್ದರೆ, ಅದಕ್ಕೆ ಪರಿಹಾರವನ್ನು ಕಂಡುಕೊಳ್ಳದೆ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಗ್ರಹಿಸಿದವರಲ್ಲಿ ನಾನೊಬ್ಬ. ಅನಿವಾರ್ಯವಾದುದನ್ನು ಎದುರಿಸಬೇಕು ಎಂದು ನಂಬಿದವರಲ್ಲಿ ನಾನೊಬ್ಬ. ಯಾರೇ ಆಗಲಿ ತನ್ನ ತಲೆಯನ್ನು ಮರಳಲ್ಲಿ ಹುದುಗಿಕೊಂಡು, ಸುತ್ತಮುತ್ತ ನಡೆಯುತ್ತಿರುವುದನ್ನು– ಅದರ ಸದ್ದು ತನ್ನ ಭಾವನೆಗಳನ್ನು ಗಾಯಗೊಳಿಸುತ್ತದೆಂದು– ಗಮನಕ್ಕೆ ತೆಗೆದುಕೊಳ್ಳಲು ನಿರಾಕರಿಸುವುದರಿಂದ ಏನೂ ಪ್ರಯೋಜನವಿಲ್ಲ. ನಿರ್ಣಯದ ಗಳಿಗೆ ಬರುವ ಮುಂಚೆಯೇ ಒಬ್ಬ ತನಗೆ ಆ ಶಕ್ತಿಯಿದ್ದರೆ, ಪರಿಹಾರದೊಂದಿಗೆ ಸಿದ್ಧನಾಗಿರಬೇಕು ಎಂದು ನಂಬಿದವರಲ್ಲಿ ನಾನೂ ಒಬ್ಬ. ಒಬ್ಬರು ನದಿಯನ್ನು ದಾಟಲೇಬೇಕಾಗುತ್ತದೆ ಎಂದು ತಿಳಿದ ಮೇಲೆ ಅದಕ್ಕೆ ಸೇತುವೆ ಕಟ್ಟುವುದು ವಿವೇಕದ ಲಕ್ಷಣ.

ಪಾಕಿಸ್ತಾನದ ಪ್ರಧಾನ ಸಮಸ್ಯೆ: ಪಾಕಿಸ್ತಾನ ಇರಬೇಕೆ ಅಥವಾ ಇರಬೇಡವೆ ಎಂದು ಯಾರು ನಿರ್ಧರಿಸಬಲ್ಲರು? ಕಳೆದ ಮೂರು ವರ್ಷಗಳಿಂದಲೂ ಈ ವಿಷಯದ ಮೇಲೆ ನಾನು ಯೋಚನೆ ಮಾಡಿದ್ದೇನೆ; ಈ ಪ್ರಶ್ನೆಗೆ ಸರಿಯಾದ ಉತ್ತರವೆಂಬಂತೆ ಕೆಲವು ತೀರ್ಮಾನಗಳಿಗೆ ಬಂದಿದ್ದೇನೆ. ಈ ಸಮಸ್ಯೆಯ ಪರಿಹಾರದಲ್ಲಿ ಆಸಕ್ತಿಯುಳ್ಳ ಬೇರೆಯವರೊಡನೆ ನನ್ನ ತೀರ್ಮಾನಗಳನ್ನು ಹಂಚಿಕೊಳ್ಳಬೇಕೆಂದಿದ್ದೇನೆ– ಅವುಗಳನ್ನು ಇನ್ನೂ ಹೆಚ್ಚಿಗೆ ಪರಿಶೋಧಿಸಬಹುದೆಂದು, ನನ್ನ ತೀರ್ಮಾನಗಳಿಗೆ ಖಚಿತತೆಯನ್ನು ಕೊಡಲು, ಶಾಸನಸಭೆಯ ಶಾಸನರೂಪದಲ್ಲಿ ಅವುಗಳನ್ನು ಮುಂದಿಟ್ಟರೆ ಉದ್ದೇಶ ಸಫಲವಾಗಿ ಈಡೇರುತ್ತದೆಂದು ನಾನು ಭಾವಿಸಿದ್ದೇನೆ. ಕೆಳಗಿನದು ನನ್ನ ತೀರ್ಮಾನಗಳನ್ನು ಒಳಗೊಂಡ ಶಾಸನದ ಕರಡುಪ್ರತಿ:–

## ಭಾರತ ಸರ್ಕಾರದ (ಪ್ರಾರಂಭಿಕ ಅವಕಾಶಗಳ) ಶಾಸನ

ಪಾರಮಾರ್ಥಿಕ ಮತ್ತು ಪ್ರಾಪಂಚಿಕ ಶ್ರೀಮಂತ ಸದಸ್ಯರ ಹಾಗೂ ಸಾಮಾನ್ಯರ ಸಲಹೆ ಮತ್ತು ಒಪ್ಪಿಗೆಗಳಿಂದ, ಹಾಲಿ ನೆರೆದಿರುವ ಸಂಸತ್ತಿನಲ್ಲಿ ಘನತೆವೆತ್ತ ಮಹಾಪ್ರಭುಗಳ ಅಧಿಕಾರದಲ್ಲಿ ಇದು ಶಾಸನವಾಗಿ ಕೆಳಕಂಡಂತಿದೆ:–

೧. (ಅ) ಈ ಸಂಬಂಧವಾಗಿ ನಿಯತಗೊಂಡ ತಾರೀಖಿನಿಂದ ಆರು ತಿಂಗಳೊಳಗೆ ವಾಯುವ್ಯ ಗಡಿನಾಡು, ಬಂಗಾಳ, ಪಂಜಾಬ್, ಸಿಂಧ್ ಪ್ರಾಂತ್ಯಗಳ ಶಾಸನಸಭೆಗಳ ಅಧಿಕ ಸಂಖ್ಯೆಯ ಮುಸ್ಲಿಂ ಸದಸ್ಯರು 'ಪ್ರಮುಖವಾದ ಮುಸ್ಲಿಂ ಪ್ರದೇಶಗಳನ್ನು ಬ್ರಿಟಿಷ್ ಭಾರತದಿಂದ ಪ್ರತ್ಯೇಕಗೊಳಿಸಬೇಕು' ಎಂಬ ಗೊತ್ತುವಳಿಯನ್ನು ಜಾರಿಗೊಳಿಸಿದರೆ, ಘನತೆವೆತ್ತ ಮಹಾಪ್ರಭುಗಳು, ಆ ಪ್ರಶ್ನೆಯ ಮೇಲೆ ಆ ಪ್ರದೇಶಗಳ ಮುಸ್ಲಿಂ ಮತ್ತು ಮುಸ್ಲಿಮೇತರ ಮತದಾರರ ಅಭಿಮತಕ್ಕಾಗಿ ಚುನಾವಣೆ ನಡೆಸತಕ್ಕದ್ದು. ಹಾಗೆಯೇ ಈ ಶಾಸನ ತತ್ವಕ್ಕನುಸಾರವಾಗಿ ಬಲೂಚಿಸ್ಥಾನದಲ್ಲೂ ನಡೆಸತಕ್ಕದ್ದು.

(ಆ) ಈ ಪ್ರಾಂತ್ಯಗಳಲ್ಲಿ ಮತದಾರರಿಗೆ ಪ್ರಶ್ನೆಯನ್ನು ಈ ಕೆಳಕಂಡ ರೂಪದಲ್ಲಿ ಕಳಿಸಬೇಕು:–

(೧) ಬ್ರಿಟಿಷ್ ಭಾರತದಿಂದ ಪ್ರತ್ಯೇಕಗೊಳ್ಳಲು ನೀನು ಪರವಾಗಿದ್ದೀಯಾ?

(೨) ಪ್ರತ್ಯೇಕತೆಗೆ ನೀನು ವಿರೋಧವಾಗಿದ್ದೀಯಾ?

(ಇ) ಚುನಾವಣೆಯಲ್ಲಿ ಮುಸ್ಲಿಂ ಮತದಾರರ ಹಾಗೂ ಮುಸ್ಲಿಮೇತರ ಮತದಾರರ ಮತಗಳನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳಬೇಕು.

೨. (ಅ) ಮತದಾನದ ಫಲಿತಾಂಶದ ಮೇಲೆ, ಅಧಿಕ ಸಂಖ್ಯೆಯ ಮುಸ್ಲಿಂ ಮತದಾರರು ಪ್ರತ್ಯೇಕತೆಯ ಪರವಾಗಿ ಮತ್ತು ಅಧಿಕ ಸಂಖ್ಯೆಯ ಮುಸ್ಲಿಮೇತರ ಮತದಾರರು ಪ್ರತ್ಯೇಕತೆಯ ವಿರುದ್ಧವಾಗಿ ಇರುವುದು ಕಂಡುಬಂದರೆ, ಘನತೆವೆತ್ತ ಮಹಾಪ್ರಭು ತಮ್ಮ ಅಧಿಕಾರವನ್ನು ಘೋಷಿಸಿ, ಗಡಿ ಆಯೋಗವನ್ನು ನೇಮಿಸಬೇಕು– ಈ ಪ್ರಾಂತ್ಯಗಳ ಅಧಿಕಸಂಖ್ಯೆಯ ಮುಸ್ಲಿಂ ನಿವಾಸಿಗಳಿರುವ ಜಿಲ್ಲೆಗಳನ್ನು ಮತ್ತು ಪ್ರದೇಶಗಳನ್ನು ಪಟ್ಟಿ ಮಾಡುವ ಉದ್ದೇಶದಿಂದ. ಅಂಥ ಜಿಲ್ಲೆ ಮತ್ತು ಪ್ರದೇಶಗಳನ್ನು ತಪ್ಸೀಲು (ಷೆಡ್ಯುಲ್ಡ್) ಜಿಲ್ಲೆಗಳೆಂದು ಕರೆಯಬೇಕು.

(ಆ) ಅಂಥ ಜಿಲ್ಲೆಗಳನ್ನು ಸಾಮೂಹಿಕವಾಗಿ ಪಾಕಿಸ್ತಾನವೆಂದು ಹೆಸರಿಸಬೇಕು. ಉಳಿದ ಬ್ರಿಟಿಷ್ ಭಾರತವನ್ನು ಹಿಂದೂಸ್ತಾನ್ ಎಂದು ಹೆಸರಿಸಬೇಕು. ವಾಯುವ್ಯದಲ್ಲಿರುವ ತಪ್ಸೀಲು ಜಿಲ್ಲೆಗಳನ್ನು ಪಶ್ಚಿಮ ಪಾಕಿಸ್ತಾನವೆಂದೂ ಈಶಾನ್ಯದಲ್ಲಿರುವ ಜಿಲ್ಲೆಗಳನ್ನು ಪೂರ್ವ ಪಾಕಿಸ್ತಾನವೆಂದೂ ಕರೆಯಬೇಕು.

೩. (ಅ) ಪರಸ್ಪರ ಒಪ್ಪಿಗೆಯಿಂದಲೋ ಅಥವಾ ಮಧ್ಯಸ್ಥಗಾರನ ತೀರ್ಪಿನಿಂದಲೋ ಗಡಿ ಆಯೋಗದ ಶೋಧನೆಗಳು ಅಂತಿಮಗೊಂಡ ಮೇಳೆ, ಘನತೆವೆತ್ತ ಮಹಾಪ್ರಭುಗಳು ತಪ್ಸೀಲು ಜಿಲ್ಲೆಗಳ ಮತದಾರರಿಗೆ ಮತ್ತೊಂದು ಮತದಾನಕ್ಕೆ ಅವಕಾಶ ಕಲ್ಪಿಸಬೇಕು.

(ಆ) ಮತದಾರರಿಗೆ ಕೊಡುವ ಪ್ರಶ್ನೆಗಳ ಮಾದರಿ ಕೆಳಕಂಡಂತೆ ಇರಬೇಕು:

(೧) ತತ್ ಕ್ಷಣದಿಂದಲೇ ನೀವು ಪ್ರತ್ಯೇಕತೆಯ ಪರವಾಗಿದ್ದೀರಾ?

(೨) ತತ್ ಕ್ಷಣದಿಂದಲೇ ನೀವು ಪ್ರತ್ಯೇಕತೆಯ ವಿರುದ್ಧವಿದ್ದೀರಾ?

೪. (ಅ) ತತ್ ಕ್ಷಣದಿಂದಲೇ ಪ್ರತ್ಯೇಕತೆಯ ಪರವಾಗಿ ಬಹುಮತವಿದ್ದರೆ, ಘನತೆವೆತ್ತ ಮಹಾಪ್ರಭುಗಳು ಎರಡು ಸಂವಿಧಾನಗಳನ್ನು– ಪಾಕಿಸ್ತಾನಕ್ಕೊಂದು. ಹಿಂದೂಸ್ತಾನಕ್ಕೊಂದು– ಸಿದ್ಧಪಡಿಸಲು ಏರ್ಪಾಡು ಮಾಡುವುದು ನ್ಯಾಯಬದ್ಧವಾಗಿರುತ್ತದೆ.

(ಆ) ಆ ಸಂಬಂಧವಾಗಿ ಘೋಷಣೆಯ ಮೂಲಕ ನೇಮಕ ಮಾಡಿದ ದಿನದಿಂದ ಪಾಕಿಸ್ತಾನ ಮತ್ತು ಹಿಂದೂಸ್ತಾನಗಳು ಎರಡು ಪ್ರತ್ಯೇಕ ರಾಷ್ಟ್ರಗಳಂತೆ ಕೆಲಸ ಮಾಡಲು ತೊಡಗುತ್ತವೆ.

(ಇ) ತತ್ ಕ್ಷಣದಿಂದಲೇ ಪ್ರತ್ಯೇಕತೆಯ ವಿರುದ್ಧ ಬಹುಮತವಿದ್ದರೆ, ಬ್ರಿಟಿಷ್ ಭಾರತ ಅಖಂಡ ಎಂಬಂತೆ ಒಂದು ಸಂವಿಧಾನ ರೂಪಿಸಲು ಏರ್ಪಾಡನ್ನು ಘನತೆವೆತ್ತ ಮಹಾಪ್ರಭುಗಳು ಮಾಡುವುದು ನ್ಯಾಯಬದ್ಧವಾಗಿರುತ್ತದೆ.

೫. ಘನತೆವೆತ್ತ ಮಹಾಪ್ರಭು ಅಖಂಡ ಬ್ರಿಟಿಷ್ ಭಾರತದ ಹೊಸ ಸಂವಿಧಾನವನ್ನು ಅಥವಾ ಪಾಕಿಸ್ತಾನ ಮತ್ತು ಹಿಂದೂಸ್ತಾನಗಳಿಗೆ ಸಂಬಂಧಿಸಿದ ಎರಡು ಪ್ರತ್ಯೇಕ ಸಂವಿಧಾನಗಳನ್ನು ಜಾರಿಗೊಳಿಸಲು ನೇಮಕ ಮಾಡಿದ ತಾರೀಖಿನಿಂದ ಹತ್ತು ವರ್ಷಗಳು ಕಳೆಯುವ ತನಕ, ಮೊದಲು ಪ್ರಸ್ತಾಪಿತವಾದ ಕೊನೆಯ ವಿಭಾಗದ ಕೆಳಗೆ ತತ್ ಕ್ಷಣದಿಂದಲೇ ಮತದಾನ ಪ್ರತ್ಯೇಕತೆಯ ವಿರುದ್ಧವಿದ್ದರೆ, ಪಾಕಿಸ್ತಾನದ ಪ್ರತ್ಯೇಕತೆಗೆ ವಿಧಿಗನುಸಾರವಾದ ಸೂಚನೆಯನ್ನಾಗಲೀ ಮತ್ತು ಮೊದಲು ಪ್ರಸ್ತಾಪಿತವಾದ ಕೊನೆಯ ವಿಭಾಗದ ಕೆಳಗೆ ಮತದಾನ ತತ್ ಕ್ಷಣದಿಂದಲೇ ಪ್ರತ್ಯೇಕತೆಯ ಪರವಾಗಿದ್ದರೆ, ಹಿಂದೂಸ್ತಾನದೊಳಗೆ ಪಾಕಿಸ್ತಾನದ ವಿಲೀನಕ್ಕೆ ವಿಧಿಗನುಸಾರವಾದ ಸೂಚನೆಯನ್ನಾಗಲೀ ಹೊರಡಿಸಲು ಮನಸ್ಸು ಮಾಡಬಾರದು.

೬. (ಅ) ನಾಲ್ಕನೆಯ ವಿಭಾಗದ ಕೆಳಗೆ ಎರಡು ಪ್ರತ್ಯೇಕ ಸಂವಿಧಾನಗಳು ಅಸ್ತಿತ್ವಕ್ಕೆ ಬರುವ ಸಂದರ್ಭದಲ್ಲಿ ಘನತೆವೆತ್ತ ಪ್ರಭು ಕೂಡಲೇ, ನೇಮಕ ದಿನದ ತರುವಾಯವೇ ಭಾರತ ಮಂತ್ರಾಲೋಚನಾ ಮಂಡಲಿಯನ್ನು ಸ್ಥಾಪಿಸಬೇಕು– ಅಖಂಡ ಬ್ರಿಟಿಷ್ ಭಾರತಕ್ಕೆ ಸಂಭವನೀಯ ಸಂವಿಧಾನ ಸ್ಥಾಪನೆಯ ದೃಷ್ಟಿಯಿಂದ; ಪಾಕಿಸ್ತಾನ ಮತ್ತು ಹಿಂದೂಸ್ತಾನಗಳ ಶಾಸನಸಭೆಗಳು ಮತ್ತು ಸರ್ಕಾರಗಳ ಮಧ್ಯೆ ಸೌಹಾರ್ದಯುತ ಕಾರ್ಯವನ್ನು ಜಾರಿಗೊಳಿಸುವ ದೃಷ್ಟಿಯಿಂದ; ಅಖಂಡ ಬ್ರಿಟಿಷ್ ಭಾರತವನ್ನು ಬಾಧಿಸುವ ವಿಷಯಗಳ ಸಂಬಂಧದಲ್ಲಿ ಪರಸ್ಪರ ಒಡನಾಟ ಮತ್ತು ಸಮಾನತೆಗಳನ್ನು ಉಳಿಸಿಕೊಂಡು ಹೋಗುವ ದೃಷ್ಟಿಯಿಂದ; ಸಾರ್ವಜನಿಕ ಸೇವೆಯ ಆಡಳಿತ ಅಖಂಡ ಬ್ರಿಟಿಷ್ ಭಾರತದಲ್ಲಿ ಸಮಾನವಾದ ಆಳ್ವಿಕೆಗೊಳಪಡಬೇಕು ಎಂದು ಎರಡೂ ಲೋಕಸಭೆಗಳು ಪರಸ್ಪರ ಒಪ್ಪಿರುವುದನ್ನು ಅನುಷ್ಠಾನ ಯೋಗ್ಯವನ್ನಾಗಿ ಮಾಡುವ ದೃಷ್ಟಿಯಿಂದ ಅಥವಾ ಈ ಶಾಸನದ ಗುಣವಿಶೇಷದಿಂದ ಹಾಗೆ ಅವು ಆಳ್ವಿಕೆಗೊಳ್ಳಬೇಕು ಎಂಬ ದೃಷ್ಟಿಯಿಂದ.

(ಆ) ಇನ್ನು ಮುಂದೆ ಒದಗಿಸುವ ವಿಷಯ, ಭಾರತ ಮಂತ್ರಾಲೋಚನ ಮಂಡಲಿ ಒಬ್ಬ ಅಧ್ಯಕ್ಷನನ್ನು ಹಾಗೂ ೪೦ ಜನ ಸದಸ್ಯರನ್ನು ಒಳಗೊಂಡಿರುತ್ತದೆ. ಘನತೆವೆತ್ತ ಮಹಾಪ್ರಭುಗಳ ಸೂಚನೆಗಳ ಅನುಸಾರ ಅಧ್ಯಕ್ಷರನ್ನು ನಾಮಕರಣ ಮಾಡಲಾಗುತ್ತದೆ. ನಲವತ್ತು ಜನ ಸದಸ್ಯರಲ್ಲಿ ಇಪ್ಪತ್ತು ಜನ ಪಾಕಿಸ್ತಾನವನ್ನು ಪ್ರತಿನಿಧಿಸಿದರೆ ಮತ್ತಿಪ್ಪತ್ತು ಜನ ಹಿಂದೂಸ್ತಾನವನ್ನು ಪ್ರತಿನಿಧಿಸಿದ್ದಾರೆ.

(ಇ) ಹಿಂದೂಸ್ತಾನ ಮತ್ತು ಪಾಕಿಸ್ತಾನಗಳ ಲೋಕಸಭೆಯ ಕೆಳಮನೆಗಳ ಸದಸ್ಯರು ಭಾರತ ಮಂತ್ರಾಲೋಚನಾ ಮಂಡಲಿಯ ಸದಸ್ಯರನ್ನು ಮತದಾನದ ಮೂಲಕ ಆರಿಸಿ ಕಳಿಸುತ್ತಾರೆ– ಎರಡೂ ಕಡೆಯವರು.

(ಈ) ಭಾರತ ಮಂತ್ರಾಲೋಚನಾ ಮಂಡಲಿಯ ಸದಸ್ಯರ ಚುನಾವಣೆ ಪಾಕಿಸ್ತಾನ ಮತ್ತು ಹಿಂದೂಸ್ತಾನಗಳ ಶಾಸನಸಭೆಗಳ ಪ್ರಪ್ರಥಮ ಕರ್ತವ್ಯವಾಗಿರುತ್ತದೆ.

(ಉ) ಮಂತ್ರಾಲೋಚನಾ ಮಂಡಲಿಯ ಸದಸ್ಯ, ತಾನು ಆರಿಸಿ ಬಂದ ಪಾಕಿಸ್ತಾನ ಅಥವಾ ಹಿಂದೂಸ್ತಾನ ಶಾಸನ ಸಭೆಯ ಸದಸ್ಯತ್ವ ಮುಗಿದ ಮೇಲೆ, ಮಂಡಲಿಯ ಸದಸ್ಯತ್ವ ರದ್ದಾಗುತ್ತದೆ. ಪಾಕಿಸ್ತಾನ ಅಥವಾ ಹಿಂದೂಸ್ತಾನದ ಶಾಸನ ಸಭೆಗಳು ವಿಸರ್ಜನೆಗೊಂಡಿದ್ದಾಗ, ಮಂತ್ರಾಲೋಚನಾ ಮಂಡಲಿಯ ಸದಸ್ಯರು ಇನ್ನೊಂದು ಚುನಾವಣೆ ಆಗುವ ತನಕ ಸದಸ್ಯರಾಗಿ ಮುಂದುವರಿಯಬಹುದು; ಚುನಾವಣೆಯಾದ ಮೇಲೆ ಮರು ಆಯ್ಕೆ ಆಗದಿದ್ದರೆ ನಿವೃತ್ತರಾಗಬೇಕು.

(ಊ) ಮಂತ್ರಾಲೋಚನಾ ಮಂಡಲಿಯ ಅಧ್ಯಕ್ಷ ಪ್ರತಿಯೊಂದು ಸಭೆಯ ಅಧ್ಯಕ್ಷತೆಯನ್ನು ತಾನು ಹಾಜರಿರುವಾಗ ವಹಿಸೇಕು. ಪರ ವಿರುದ್ಧ ಸಮನಾದ ಮತಗಳಿದ್ದಾಗ ಅಧ್ಯಕ್ಷರು ಮತ ಚಲಾಯಿಸಬಹುದು; ಉಳಿದಂತೆ ಮತ ಚಲಾಯಿಸುವಂತಿಲ್ಲ.

(ಋ) ಮಂತ್ರಾಲೋಚನಾ ಮಂಡಲಿಯ ಪ್ರಥಮ ಸಭೆಯನ್ನು ಅಧ್ಯಕ್ಷರು ನಿಯಮಿತ ಮಾಡಿದ ವೇಳೆ ಮತ್ತು ಸ್ಥಳದಲ್ಲಿ ನಡೆಸಲಾಗುವುದು.

(ೠ) ಸದಸ್ಯರ ಸಂಖ್ಯೆಯಲ್ಲಿ ಕೊರತೆ ಇದ್ದರೂ ಮಂಡಲಿ ಕಾರ್ಯ ನಿರ್ವಹಿಸಬಹುದು. ಮಂಡಲಿಯ ಅವಶ್ಯ ಸಂಖ್ಯೆ (ಕೋರಂ) ಹದಿನೈದು ಜನ.

(ಎ) ಮೇಲೆ ಪ್ರಸ್ತಾಪಿತವಾಗಿರುವ ವಿಷಯದಂತೆ, ಸಮಿತಿಗಳಿಗೆ ಅಧಿಕಾರವಹಿಸಿ ಕೊಡುವುದನ್ನೊಳಗೊಂಡಂತೆ ಮಂಡಲಿಯು ತನ್ನದೇ ಆದ ಕ್ರಮವನ್ನು ಜಾರಿ ಗೊಳಿಸಬಹುದು.

(ಏ) ಹಿಂದೂಸ್ತಾನ ಮತ್ತು ಪಾಕಿಸ್ತಾನಗಳ ಶಾಸನಸಭೆಗಳು ಹೊರಡಿಸುವ ಸದೃಶ ಶಾಸನಗಳಿಂದ ಭಾರತ ಮಂತ್ರಾಲೋಚನಾ ಮಂಡಲಿಯ ಸಂವಿಧಾನ ಕಾಲಕಾಲಕ್ಕೆ ಬದಲಾವಣೆ ಗೊಳ್ಳಬಹುದು. ಶಾಸನಗಳು ಎಲ್ಲರಿಗೂ ಅಥವಾ ಶಾಸನ ಸಭೆಯ ಮತದಾರರಿಂದ ಚುನಾಯಿತರಾದ ಮಂತ್ರಾಲೋಚನಾ ಮಂಡಲಿಯ ಯಾವ ಸದಸ್ಯರಿಗಾದರೂ ವಿಧಿಸಬಹುದು. ಅನೇಕ ಜನ ಚುನಾಯಿತ ಸದಸ್ಯರು ಹಿಂದಿರುಗಿ ಬರುವ ಚುನಾವಣಾ ಕ್ಷೇತ್ರಗಳನ್ನು ಮತ್ತು ಅನೇಕ ಕ್ಷೇತ್ರಗಳಿಂದ ಹಿಂದಿರುಗಿ ಬರುವ ಸದಸ್ಯರ ಸಂಖ್ಯೆಯನ್ನು ಮತ್ತು ಚುನಾವಣೆಯ ವಿಧಾನವನ್ನು ನಿರ್ಧರಿಸಬಹುದು.

೨. (ಅ) ಪಾಕಿಸ್ತಾನ ಮತ್ತು ಹಿಂದೂಸ್ತಾನ ಶಾಸನಸಭೆಗಳು ಸದೃಶ ಶಾಸನಗಳಿಂದ, ಶಾಸನಸಭೆ ಮತ್ತು ಸರ್ಕಾರಗಳ ಯಾವುದೇ ಅಧಿಕಾರವನ್ನು ಭಾರತ ಮಂತ್ರಾಲೋಚನಾ ಮಂಡಲಿಗೆ ವಹಿಸಿಕೊಡಬಹುದು. ಆ ರೀತಿ ವಹಿಸಿಕೊಟ್ಟ ಅಧಿಕಾರ ಮಂಡಲಿಯಿಂದ ಹೇಗೆ ಜಾರಿಗೊಳ್ಳಬೇಕು ಎಂಬ ವಿಧಾನವನ್ನು ಶಾಸನಗಳು ನಿಗದಿಪಡಿಸುತ್ತವೆ.

(ಆ) ಹೊಸ ಸಂವಿಧಾನ ಜಾರಿಗೊಳ್ಳಲು ನಿಯಮಿತವಾದ ದಿನದಿಂದ, ರೈಲು ಮಾರ್ಗ ಮತ್ತು ಜಲಮಾರ್ಗಗಳಿಗೆ ಸಂಬಂಧಿಸಿದಂತೆ ಕಾನೂನು ಮಾಡುವ ಅಧಿಕಾರ ಭಾರತ ಮಂತ್ರಾಲೋಚನಾ ಮಂಡಲಿಗೆ ಇರುತ್ತದೆಯೇ ವಿನಾ ಪಾಕಿಸ್ತಾನ ಮತ್ತು ಹಿಂದೂಸ್ತಾನಗಳಿಗಿರುವುದಿಲ್ಲ. ನಿರ್ಮಾಣದ ಕೆಲಸಗಳಾಗಬೇಕಾದ ಸ್ಥಳಗಳು ಪೂರ್ಣವಾಗಿ ಪಾಕಿಸ್ತಾನ ಅಥವಾ ಹಿಂದೂಸ್ತಾನಗಳಲ್ಲಿದ್ದರೂ ಸಹ, ನಿರ್ಮಾಣ, ವಿಸ್ತರಣೆ ಅಥವಾ ರೈಲು ಮಾರ್ಗ, ಜಲಮಾರ್ಗಗಳ ಅಭಿವೃದ್ಧಿ ಮೊದಲಾದವುಗಳ ಅಧಿಕಾರ ನೀಡುವ ಕಾನೂನುಗಳನ್ನು ಪಾಕಿಸ್ತಾನ ಮತ್ತು ಹಿಂದೂಸ್ತಾನದ ಶಾಸನ ಸಭೆಗಳು ಮಾಡಲು ಈ ಒಳವಿಭಾಗದ ಯಾವುದೂ ಅಡ್ಡಿಯಾಗುವುದಿಲ್ಲ ಎಂಬ ಪಕ್ಷದಲ್ಲಿ.

(ಇ) ಮಂಡಲಿಯು ಪಾಕಿಸ್ತಾನ ಮತ್ತು ಹಿಂದೂಸ್ತಾನಗಳ ಯೋಗಕ್ಷೇಮಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳ ಬಗೆಗೆ ವಿಚಾರ ಮಾಡಬಹುದು. ತಮಗೆ ಸರಿಯೆಂದು ತೋರಿದ ಸಲಹೆಗಳನ್ನು ಗೊತ್ತುವಳಿಗಳ ಮೂಲಕ ಸೂಚಿಸಬಹುದು. ಆದರೆ, ಆ ರೀತಿ ಕೊಟ್ಟ ಸಲಹೆಗಳಿಗೆ ಶಾಸನದ ಪರಿಣಾಮವಿರುವುದಿಲ್ಲ.

(ಈ) ಹಿಂದೂಸ್ತಾನ ಮತ್ತು ಪಾಕಿಸ್ತಾನಗಳು ಪ್ರತ್ಯೇಕವಾಗಿ ಅವುಗಳನ್ನು ನಿರ್ವಹಿಸುವ ಅವಶ್ಯಕತೆಯನ್ನು ತಪ್ಪಿಸುವ ದೃಷ್ಟಿಯಿಂದ, ಎರಡು ದೇಶಗಳ ಶಾಸನಸಭೆಗಳು ಸದೃಶ ಶಾಸನಗಳನ್ನು ಹೊರಡಿಸಿ, ಅಖಿಲ ಭಾರತ ವ್ಯಾಪ್ತಿಯ ವಿಷಯದ ಆಡಳಿತವನ್ನು ಭಾರತ ಮಂತ್ರಾಲೋಚನಾ ಮಂಡಲಿಗೆ ವಹಿಸಿಕೊಡಬೇಕೆಂದು ಬುದ್ಧಿವಾದ ಹೇಳುವ ಶಿಫಾರಸ್ಸುಗಳನ್ನು ಮಂಡಲಿ ಮಾಡುವುದು ನ್ಯಾಯಯುತವಾಗಿದೆ.

(ಉ) ಪ್ರತಿಯೊಂದು ಶಾಸನಸಭೆಯೂ ಯಾವಾಗ ಬೇಕಾದರೂ ತನ್ನ ಶಾಸನದ ಮೂಲಕ ಭಾರತ ಮಂತ್ರಾಲೋಚನಾ ಮಂಡಲಿಗೆ ವಹಿಸಿಕೊಟ್ಟಿರುವ ಅಧಿಕಾರವನ್ನು ಕಿತ್ತುಕೊಳ್ಳ ಬಹುದಾದುದರಿಂದ ಮಂಡಲಿಯ ಸಂಬಂಧಪಟ್ಟ ಅಧಿಕಾರಗಳು ಜಾರಿಗೊಳ್ಳಲು ಅನರ್ಹವಾಗುತ್ತವೆ; ಆದರೆ, ಅದೇ ಅಧಿಕಾರಗಳು ಬ್ರಿಟಿಷ್ ಭಾರತದ ಭಾಗಗಳಲ್ಲಿ ತಮ್ಮ ತಮ್ಮ ಅಧಿಕಾರವಲಯ ಒಳಗೆ ಪಾಕಿಸ್ತಾನ ಮತ್ತು ಹಿಂದೂಸ್ತಾನಗಳ ಶಾಸನಸಭೆ ಮತ್ತು ಸರ್ಕಾರಗಳಿಂದ ಜಾರಿಗೊಳ್ಳಲು ಅರ್ಹವಾಗುತ್ತವೆ. ಆದರೆ ಮಂಡಲಿ ತನ್ನ ಕೈಯೊಳಗಿರುವ ಅಥವಾ ವಶದಲ್ಲಿರುವ ನಿಧಿಗಳ ಹೊಂದಾಣಿಕೆ ವ್ಯವಸ್ಥೆಯನ್ನೊಳ ಗೊಂಡಂತೆ ವರ್ಗಾವಣೆ ಜಾರಿಗೊಳಿಸಲು ಅವಶ್ಯವಾದ ಕ್ರಮಗಳನ್ನು ತೆಗೆದುಕೊಳ್ಳ ಬಹುದು.

೮. (ಅ) ವಿಭಾಗ ನಾಲ್ಕರ (ಇ)ನಲ್ಲಿ ಪ್ರಸ್ತಾಪಿತವಾಗಿರುವಂತೆ ಬ್ರಿಟಿಷ್ ಭಾರತದ ಸಂವಿಧಾನದ ಆಚರಣೆಗೆ ತೊಡಗಿದಂದಿನಿಂದ ಹತ್ತು ವರ್ಷಗಳ ಅಂತ್ಯದಲ್ಲಿ ಘನತೆವೆತ್ತ ಮಹಾಪ್ರಭುಗಳಿಗೆ, ತಪ್ಸೀಲು ಜಿಲ್ಲೆಗಳನ್ನು ಪ್ರತಿನಿಧಿಸಲು ಪ್ರಾಂತ್ಯ ಹಾಗೂ ಕೇಂದ್ರ ಶಾಸನಸಭೆಗಳ ಅಧಿಕ ಸಂಖ್ಯೆಯ ಮುಸ್ಲಿಂ ಸದಸ್ಯರು ಹಿಂದೂಸ್ತಾನದಿಂದ ಪಾಕಿಸ್ತಾನವನ್ನು ಪ್ರತ್ಯೇಕಿಸುವ ಸಂಬಂಧದಲ್ಲಿ ಮತದಾನ ನಡೆಸಬೇಕೆಂದು ಒತ್ತಾಯಿಸುವ ಮನವಿ ಸಲ್ಲಿಸಿದರೆ, ಮತದಾನ ನಡೆಸಲು ಮಹಾಪ್ರಭು ಕ್ರಮ ಕೈಗೊಳ್ಳಬೇಕು.

(ಆ) ಮತದಾರರಿಗೆ ಕೊಡುವ ಪ್ರಶ್ನೆಗಳ ಮಾದರಿ ಈ ಕೆಳಕಂಡಂತೆ ಇರಬೇಕು:–

(೧) ಹಿಂದೂಸ್ತಾನದಿಂದ ಪಾಕಿಸ್ತಾನವನ್ನು ಬೇರ್ಪಡಿಸುವುದರ ಪರವಾಗಿ ನೀವಿದ್ದೀರಾ?

(೨) ಹಿಂದೂಸ್ತಾನದಿಂದ ಪಾಕಿಸ್ತಾನವನ್ನು ಬೇರ್ಪಡಿಸುವುದರ ವಿರುದ್ಧ ನೀವಿದ್ದೀರಾ?

೯. ಮತದಾನದ ಫಲಿತಾಂಶ ಪ್ರತ್ಯೇಕತೆಯ ಪರವಾಗಿದ್ದರೆ ಘನತೆವೆತ್ತ ಮಹಾಪ್ರಭುಗಳು ಆಪ್ತ ಸಚಿವ ಮಂಡಲಿಯ ಸಲಹೆಯ ಮೇಲೆ ಹೊರಟ ಆಜ್ಞೆಯನ್ನು ಘೋಷಿಸಿ, ಅದರ ಸಂಬಂಧವಾಗಿ ನೇಮಕವಾದ ದಿನದಿಂದ ಪಾಕಿಸ್ತಾನ ಬ್ರಿಟಿಷ್ ಭಾರತದ ಅಂಗವೆಂಬುದು ರದ್ದಾಗುತ್ತದೆ ಮತ್ತು ಮಂತ್ರಾಲೋಚನಾ ಮಂಡಲಿಯನ್ನು ವಿಸರ್ಜನೆ ಮಾಡುತ್ತದೆ ಎಂದು ಹೇಳುತ್ತದೆ ಶಾಸನಾನುಸಾರವಾಗಿರುತ್ತದೆ.

೧೦. (ಅ) ವಿಭಾಗ ನಾಲ್ಕರಲ್ಲಿ ಪ್ರಸ್ತಾಪಿತವಾಗಿರುವ ಸನ್ನಿವೇಶಗಳ ಹಿನ್ನೆಲೆಯಲ್ಲಿ ಎರಡು ಸಂವಿಧಾನಗಳು ಅಸ್ತಿತ್ವಕ್ಕೆ ಬಂದಾಗ, ಪಾಕಿಸ್ತಾನ ಪ್ರತ್ಯೇಕ ರಾಷ್ಟ್ರ ಎಂಬುದು ರದ್ದಾಗುವುದು ಮತ್ತು ಹಿಂದೂಸ್ತಾನದ ಭಾಗವೆಂದು ರೂಪುಗೊಳ್ಳುವುದು ಎಂದು ಆಪ್ತಸಚಿವ ಮಂಡಲಿಯ ಸಲಹೆಯ ಮೇಲೆ ಹೊರಟ ಆಜ್ಞೆಯನ್ನು ಘನತೆವೆತ್ತ ಮಹಾಪ್ರಭು ಘೋಷಿಸುವುದು ಶಾಸನಾನುಸಾರವಾಗಿರುತ್ತದೆ. ಪಾಕಿಸ್ತಾನಕ್ಕೆ ಪ್ರತ್ಯೇಕ ಸಂವಿಧಾನ ಪ್ರಾರಂಭವಾದಂದಿನಿಂದ ಹತ್ತು ವರ್ಷಗಳು ಕಳೆಯುವ ತನಕ ಅಂಥ ಯಾವ ಆಜ್ಞೆಯನ್ನೂ ಮಾಡುವುದಿಲ್ಲ ಎಂದ ಪಕ್ಷದಲ್ಲಿ; ವಿಭಾಗ ಹತ್ತರ (ಆ)ದಲ್ಲಿ ಅವುಗಳಿಗೆ ಅವಕಾಶ ಕಲ್ಪಿಸಿರುವಂತೆ, ಪಾಕಿಸ್ತಾನ ಮತ್ತು ಹಿಂದೂಸ್ತಾನಗಳ ಜನಪ್ರಿಯ ಶಾಸನಸಭೆಗಳು ರಚನಾಭಾಗವಾದ ಶಾಸನಗಳನ್ನು ಜಾರಿಗೊಳಿಸಿದ ಹೊರತು ಅಂಥ ಯಾವುದೇ ಘೋಷಣೆ ಮಾಡುವುದಿಲ್ಲ ಎಂದ ಪಕ್ಷದಲ್ಲಿ.

(ಆ) ಪಾಕಿಸ್ತಾನ ಮತ್ತು ಹಿಂದೂಸ್ತಾನಗಳ ಜನಪ್ರಿಯ ಶಾಸನಸಭೆಗಳು, 'ಮೂರನೆಯ ಪಠನ'*ದಲ್ಲಿ ಸಂಪೂರ್ಣ ಬಹುಮತದ ಸದಸ್ಯರಿಂದ ಒಡಂಬಟ್ಟ ಸದೃಶ ಶಾಸನಗಳಿಂದ, (ಇನ್ನು ಮುಂದೆ ರಚಿನಭಾಗವಾದ ಶಾಸನಗಳು ಎಂದು ಸೂಚಿಸಲಾಗುತ್ತದೆ.) ಭಾರತ ಮಂತ್ರಾಲೋಚನಾ ಮಂಡಲಿಯ ಸ್ಥಾನದಲ್ಲಿ 'ಸಂಯುಕ್ತ ಭಾರತದ ಶಾಸನಸಭೆ'ಯನ್ನು ಸ್ಥಾಪಿಸಬಹುದು. ಅದರ ಸದಸ್ಯರ ಸಂಖ್ಯೆ, ಅದರ ಸದಸ್ಯರು ನೇಮಕವಾಗುವ ಅಥವಾ ಚುನಾಯಿತರಾಗುವ ವಿಧಾನ, ಅನೇಕ ಚುನಾಯಿತ ಸದಸ್ಯರು ಹಿಂದಿರುಗಿ ಹೋಗಬೇಕಾದ ಚುನಾವಣಾ ಕ್ಷೇತ್ರಗಳು, ಅನೇಕ ಚುನಾವಣಾ ಕ್ಷೇತ್ರಗಳಿಂದ ಹಿಂದಿರುಗಬೇಕಾದ ಸದಸ್ಯರ ಸಂಖ್ಯೆ, ನೇಮಕಾತಿಯ ಅಥವಾ ಚುನಾವಣೆಯ ವಿಧಾನ ಮತ್ತು ಎರಡು ಮನೆಗಳು ಪರಸ್ಪರ ಒಂದು ಮತ್ತೊಂದಕ್ಕೆ ಒದಗಿಸಿಕೊಂಡಿರುವ ಸಂಬಂಧಗಳನ್ನು ನಿಗದಿಪಡಿಸ ಬಹುದು.

೧೧. (ಅ) ಪಾಕಿಸ್ತಾನ ಮತ್ತು ಹಿಂದೂಸ್ತಾನಗಳ ಸಂಯೋಗದ ದಿನದಂದು ಭಾರತ ಮಂತ್ರಾಲೋಚನಾ ಮಂಡಲಿಯ ಅಸ್ತಿತ್ವ ರದ್ದಾಗುತ್ತದೆ. ಚಲಾಯಿಸಬಹುದಾದ ಅದರ ಎಲ್ಲಾ ಅಧಿಕಾರಗಳು

---

* ಶಾಸನ ಸಭೆಯಲ್ಲಿ ಮಸೂದೆ ಕಾನೂನಾಗುವ ವಿಧಾನದ ಕೊನೆಯ ಹಂತ ಇದು. ಶಾಸನ ಸಭೆಯಲ್ಲಿ ತರುವುದಕ್ಕೆ ಅನುಮತಿಗಾಗಿ ಮೊದಲನೆಯ ಪಠನ; ಮುಖ್ಯ ತತ್ತ್ವಗಳ ಅಂಗೀಕಾರಕ್ಕಾಗಿ ಎರಡನೆಯ ಪಠನ ಸಮಿತಿಯವರು ಮಾಡಿದ ತಿದ್ದುಪಾಟುಗಳ ಅಂಗೀಕಾರಕ್ಕಾಗಿ ಮೂರನೆಯ ಪಠನ– ಈ ಟಿಪ್ಪಣಿ ಅನುವಾದಕನದು.

ಭಾರತದ ಶಾಸನ ಸಭೆ ಮತ್ತು ಸರ್ಕಾರಕ್ಕೆ ವರ್ಗಾಯಿಸಲ್ಪಡುತ್ತವೆ.

(ಆ) ಪಾಕಿಸ್ತಾನ ಮತ್ತು ಹಿಂದೂಸ್ತಾನಗಳ ಶಾಸನ ಸಭೆ ಮತ್ತು ಸರ್ಕಾರಗಳ ಅಸ್ತಿತ್ವ ರದ್ದಾಗುವುದರಿಂದ, ತೆರಿಗೆಗೆ ಸಂಬಂಧಿಸಿದ ಎಲ್ಲ ಅಧಿಕಾರಗಳನ್ನು ಒಳಗೊಂಡಂತೆ, ಅವುಗಳ ಎಲ್ಲ ಅಧಿಕಾರಗಳು ಮತ್ತು ಕರ್ತವ್ಯಗಳು ಬ್ರಿಟಿಷ್ ಭಾರತದ ಶಾಸನಸಭೆ ಮತ್ತು ಸರ್ಕಾರಕ್ಕೆ ವರ್ಗಾವಣೆಗೊಳ್ಳುತ್ತವೆ.

೧೨. (ಅ) ಶಾಸನಸಭೆಗಳಿಗೆ ಸದಸ್ಯರನ್ನು ಚುನಾಯಿಸುವ ಮತದಾರರ ಮತದಾನದ ರೀತಿಯಲ್ಲಿಯೇ ಮತದ ಮೂಲಕ ಈ ಶಾಸನದ ಚೌಕಟ್ಟಿನಲ್ಲಿ ಮತದಾನ ನಡೆಸಬೇಕು. ಘನತೆವೆತ್ತ ಮಹಾಪ್ರಭು ಮತದಾನ ನಡೆಸುವ ಉದ್ದೇಶದಿಂದ ಚುನಾವಣಾ ಕಾಯಿದೆಗಳ ಬಗ್ಗೆ ಆಜ್ಞೆಗಳನ್ನು ಹೊರಡಿಸಬೇಕು.

(ಆ) ಒಂದಕ್ಕಿಂತ ಹೆಚ್ಚು ಸ್ಥಳಗಳಲ್ಲಿ ನೋಂದಾವಣೆಗೊಂಡಿದ್ದರೂ ಮತದಾರ, ಮತದಾನದಲ್ಲಿ ಒಂದು ಬಾರಿಗಿಂತ ಹೆಚ್ಚು ಬಾರಿ ಮತ ಚಲಾಯಿಸುವಂತಿಲ್ಲ.

(ಇ) ಮತದಾರನೆಂದರೆ ವಾಯುವ್ಯ ಗಡಿನಾಡು, ಪಂಜಾಬ್, ಸಿಂಧ್, ಬಂಗಾಳ ಮತ್ತು ಬಲೂಚಿಸ್ಥಾನಗಳಲ್ಲಿ ವಾಸವಾಗಿರುವ ಪ್ರತಿಯೊಬ್ಬ ಹೆಣ್ಣು ಮತ್ತು ಗಂಡು.

೧೩. ಇದನ್ನು ಭಾರತೀಯ (ಪ್ರಾರಂಭಿಕ ಅವಕಾಶಗಳ) ಶಾಸನ, ೧೯೪೪ ಎಂದು ಕರೆಯಬಹುದು.

ಈ ಸ್ಥೂಲ ರೂಪದ ಶಾಸನದಲ್ಲಿ ನಾನು ಅಳವಡಿಸಲು ಯತ್ನಿಸಿರುವ ತೀರ್ಮಾನಗಳನ್ನು ಓದುಗ ಗ್ರಹಿಸಲು ಮತ್ತು ಅನುಸರಿಸಲು ದೀರ್ಘ ವಿವರಣೆಯ ಅಗತ್ಯವಿದೆ ಎಂದು ನಾನು ಭಾವಿಸುವುದಿಲ್ಲ. ಸೂಚನೆಗಳ ಎದ್ದು ಕಾಣುವ ಕೆಲವು ಲಕ್ಷಣಗಳನ್ನು ನಾನು ಬೆಳಕಿಗೆ ತಂದರೆ ಬಹುಶಃ ಅದು ಪ್ರಯೋಜನಕ್ಕೆ ಬರಬಹುದು. ಏಕೆಂದರೆ ಅವುಗಳನ್ನು ಕ್ರಿಪ್ಸ್ ಸೂಚನೆಗಳೊಂದಿಗೆ ಹೋಲಿಸಿ ಅನುಷ್ಠಾನಗೊಳಿಸಲು ಶಾಸನಸಭೆಯ ಯೋಜಿತ ಲಿಖಿತ ಕಾನೂನು ಉದ್ದೇಶಿಸಿದೆ.

ನನ್ನ ಅಭಿಪ್ರಾಯದಲ್ಲಿ ಪಾಕಿಸ್ತಾನ ಪ್ರಶ್ನೆಯನ್ನು ರದ್ದುಗೊಳಿಸದೆ ಬ್ರಿಟಿಷ್ ಶಾಸನಸಭೆ ಒಡನೆಯೇ ಮುಂದುವರಿದು ಒಳ ಆಧಿಪತ್ಯದ ಸ್ಥಾನಮಾನ ಅಥವಾ ಸ್ವಾತಂತ್ರ್ಯವನ್ನು ಅನುಗ್ರಹಿಸುವ ಶಾಸನ ಜಾರಿಗೊಳಿಸಲು ಒಪ್ಪಿಕೊಳ್ಳುವುದಾಗಲೀ, ಭಾರತೀಯರು ಹಾಗೆ ಕೇಳುವುದಾಗಲೀ ಪ್ರಯೋಜನವಿಲ್ಲದ್ದು. ಪಾಕಿಸ್ತಾನ ವಿಷಯವನ್ನು ಪೂರ್ವಸಿದ್ಧತೆಯ ವಿಷಯವೆಂದು ಪರಿಗಣಿಸಿ ಒಂದಲ್ಲ ಒಂದು ವಿಧದಿಂದ ಅದನ್ನು ರದ್ದುಗೊಳಿಸಬೇಕು. ನಾನು ಸೂಚಿಸಿರುವ ಶಾಸನವನ್ನು "ಭಾರತ ಸರ್ಕಾರದ (ಪೂರ್ವಸಿದ್ಧತೆಯ ಕಟ್ಟುಪಾಡುಗಳ) ಶಾಸನ" ಎಂದು ಕರೆದದ್ದು ಇದೇ ಕಾರಣದಿಂದ. ಪಾಕಿಸ್ತಾನದ ವಿಷಯ ಸ್ವನಿರ್ಣಯಾಧಿಕಾರದ ಪ್ರಶ್ನೆಯಾಗಿರುವುದರಿಂದ ಜನರ ಇಷ್ಟಗಳ ಮೇಲೆ ಅದು ತೀರ್ಮಾನವಾಗಬೇಕು. ಪ್ರಮುಖವಾದ ಮುಸ್ಲಿಂ ಪ್ರಾಂತ್ಯಗಳಲ್ಲಿ ಮುಸ್ಲಿಂ ಮತ್ತು ಮುಸ್ಲಿಮೇತರರ ಮತದಾನ ತೆಗೆದುಕೊಳ್ಳಲು ನಾನು ಸೂಚಿಸಿದ್ದು ಇದಕ್ಕಾಗಿಯೇ. ಅಧಿಕ ಸಂಖ್ಯೆಯ ಮುಸ್ಲಿಮರು ಪ್ರತ್ಯೇಕತೆಯ ಪರವಾಗಿದ್ದರೆ ಮತ್ತು ಅಧಿಕ ಸಂಖ್ಯೆಯ ಮುಸ್ಲಿಮೇತರರು ಪ್ರತ್ಯೇಖತೆಯ ವಿರುದ್ಧವಿದ್ದರೆ ಪ್ರದೇಶಗಳ ಗಡಿರೇಖೆ ಗುರುತಿಸುವ ಕ್ರಮ ಕೈಗೊಳ್ಳಬೇಕು– ಕುಲಸಂಬಂಧವಾದ ಮತ್ತು ಸಾಂಸ್ಕೃತಿಕವಾದ ಮಾರ್ಗದಲ್ಲಿ ಅಧಿಕ ಸಂಖ್ಯೆಯ ಮುಸ್ಲಿಮೇತರರು ಇರುವ ಜಿಲ್ಲೆಗಳಿಂದ, ಅಧಿಕ ಸಂಖ್ಯೆಯ ಮುಸ್ಲಿಮರಿರುವ ಜಿಲ್ಲೆಗಳನ್ನು ಬೇರ್ಪಡಿಸಲು ಸಾಧ್ಯವಾದ ಕಡೆಗಳಲ್ಲೆಲ್ಲ ಪ್ರಾಂತ್ಯಗಳ ಸರಹದ್ದಿನ ಗೆರೆಯನ್ನು ಹೊಸದಾಗಿ ಎಳೆದು. ಈ ಉದ್ದೇಶಕ್ಕಾಗಿ ಗಡಿ ಆಯೋಗದ ಅವಶ್ಯಕತೆ ಇದೆ. ಆದ್ದರಿಂದ

ಶಾಸನದಲ್ಲಿ ಗಡಿ ಆಯೋಗಕ್ಕೆ ಅವಕಾಶ ಕಲ್ಪಿಸಬೇಕು. ಗಡಿ ಆಯೋಗದ ತನ್ನ ರಚನೆಯಲ್ಲಿ ಅಂತರ್ರಾಷ್ಟ್ರೀಯವಾಗಿದ್ದರೆ ಹೆಚ್ಚು ಒಳ್ಳೆಯದು.

ಮುಸ್ಲಿಮರ ಮತ್ತು ಮುಸ್ಲಿಮೇತರರ ಪ್ರತ್ಯೇಕ ಪ್ರಜಾನಿರ್ಧಾರದ ಯೋಜನೆ ಎರಡು ತತ್ತ್ವಗಳ ಮೇಲೆ ಆಧಾರಿತವಾಗಿದೆ. ಅದನ್ನು ನಾನು ಮೂಲಭೂತವಾದುದು ಎಂದು ಗಣಿಸಿದ್ದೇನೆ. ಮೊದಲನೆಯದೆಂದರೆ ಬಹುಸಂಖ್ಯಾತರ ದಬ್ಬಾಳಿಕೆಯ ವಿರುದ್ಧ ಅಲ್ಪಸಂಖ್ಯಾತರು ತಮ್ಮ ರಕ್ಷಣೆಗಾಗಿ ಸುಭದ್ರಕ್ರಮಗಳಿಗೆ ಒತ್ತಾಯ ಮಾಡುವುದು. ಪೂರ್ವಭಾವಿ ಶರತ್ತಾಗಿ ಅವುಗಳನ್ನು ಕೇಳಬಹುದು. ಆದರೆ ಅಂತಿಮ ಉದ್ದೇಶದ ಪ್ರಶ್ನೆಗಳನ್ನು ತೀರ್ಮಾನಿಸುವ ಬಹುಸಂಖ್ಯಾತರ ಹಕ್ಕನ್ನು ಬಹಿಷ್ಕರಿಸುವ ಹಕ್ಕು ಅಲ್ಪಸಂಖ್ಯಾತರಿಗಿಲ್ಲ. ಪಾಕಿಸ್ತಾನ ಸ್ಥಾಪನೆಯ ಸಂಬಂಧವಾಗಿ ನಾನು ಮುಸ್ಲಿಮರಿಗೆ ಮಾತ್ರ ಪ್ರಜಾನಿರ್ಧಾರವನ್ನು ಸೀಮಿತಗೊಳಿಸಿದ್ದು ಈ ಕಾರಣಕ್ಕಾಗಿಯೇ. ಎರಡನೆಯದೆಂದರೆ ಬಹುಸಂಖ್ಯಾತ ಕೋಮು ತನ್ನ ಆಜ್ಞೆಗಳಿಗೆ ಅಲ್ಪಸಂಖ್ಯಾತ ಕೋಮು ಶರಣಾಗಬೇಕು ಎಂದು ವಾದಿಸುವಂತಿಲ್ಲ. ರಾಜಕೀಯ ಅಲ್ಪಸಂಖ್ಯಾತರನ್ನು ಆಳುವ ಅವಕಾಶ ರಾಜಕೀಯ ಬಹುಸಂಖ್ಯಾತರಿಗೆ ಮಾತ್ರ ಉಂಟು. ಭಾರತದಲ್ಲಿ ಈ ತತ್ತ್ವ ಪರಿವರ್ತನೆಗೊಂಡಿದೆ. ಇಲ್ಲಿ ಅಲ್ಪಸಂಖ್ಯಾತ ಕೋಮು ಕೆಲವು ಸುಭದ್ರತೆಗಳನ್ನು ಪಡೆದು, ಬಹುಸಂಖ್ಯಾತ ಕೋಮಿನ ಅಧೀನದಲ್ಲಿರುತ್ತದೆ. ಆದರೆ ಇದು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಮಹತ್ವದ ಸಾಮಾನ್ಯ ಪ್ರಶ್ನೆಗೆ ಸಂಬಂಧಿಸಿದಂತೆ ಮಾತ್ರ. ಆದರೆ ಸಂವಿಧಾನಾತ್ಮಕ ಲಕ್ಷಣ ಹೊಂದಿರುವ ವಿಷಯದಲ್ಲಿ ಅಲ್ಪಸಂಖ್ಯಾತ ಕೋಮಿನ ಮೇಲೆ ಬಹುಸಂಖ್ಯಾತ ಕೋಮು ಆಜ್ಞೆ ಚಲಾಯಿಸುವ ಹಕ್ಕನ್ನು ಅದು ಬಿಟ್ಟುಕೊಟ್ಟಿಲ್ಲ, ಎಂದೂ ಬಿಟ್ಟುಕೊಡುವುದೂ ಇಲ್ಲ. ಈ ಕಾರಣಕ್ಕಾಗಿಯೇ ಮುಸ್ಲಿಮೇತರರಿಗೆ ಮಾತ್ರ ಪ್ರತ್ಯೇಕ ಪ್ರಜಾನಿರ್ಧಾರದ ಅವಕಾಶವನ್ನು ನಾನು ಕಲ್ಪಿಸಿದ್ದೇನೆ– ಅವರು ಪಾಕಿಸ್ತಾನಕ್ಕೆ ಹೋಗಲು ಬಯಸುತ್ತಾರೋ ಅಥವಾ ಹಿಂದೂಸ್ತಾನಕ್ಕೆ ಬರಲು ಬಯಸುತ್ತಾರೋ ಎಂಬುದನ್ನು ನಿರ್ಧರಿಸಲು.

ಪ್ರದೇಶಗಳ ಗಡಿರೇಖೆಯನ್ನು ಗುರುತಿಸುವ ಕಾರ್ಯವನ್ನು ಗಡಿ ಆಯೋಗ ಮಾಡಿದ ಮೇಲೆ, ಅನೇಕ ಬಗೆಯ ಸಾಧ್ಯತೆಗಳು ಮೂಡಬಹುದು. ಪಾಕಿಸ್ತಾನ ಸರಹದ್ದಿನ ಗಡಿರೇಖೆ ಗುರುತಿಸುವುದನ್ನು ಮುಸ್ಲಿಮರು ನಿಲ್ಲಿಸಬಹುದು. ಕಟ್ಟಕಡೆಗೆ ಪಾಕಿಸ್ತಾನದ ತತ್ತ್ವ ಅಂಗೀಕಾರವಾಯಿತಲ್ಲ ಎಂದು ಸಂತೃಪ್ತರಾಗಬಹುದು– ಅದೇ ಗಡಿ ನಿರ್ಣಯದ ಅರ್ಥವೆಂದು. ಮುಸ್ಲಿಮರು ಬರಿ ಗಡಿ ನಿರ್ಣಯದಿಂದ ಸಂತೃಪ್ತರಾಗಿಲ್ಲವೆಂದೂ, ಪಾಕಿಸ್ತಾನ ಸಂಸ್ಥಾಪನೆಯ ದಿಕ್ಕಿನಲ್ಲಿ ಮುಂದುವರಿಯಲು ಬಯಸಿದ್ದಾರೆಂದೂ ಭಾವಿಸಿದರೆ, ಅವರಿಗೆ ಎರಡು ಮಾರ್ಗಗಳು ತೆರೆದಿವೆ. ಅವರು ಕೂಡಲೇ ಪಾಕಿಸ್ತಾನ ಸ್ಥಾಪನೆಯನ್ನು ಬಯಸಬಹುದು ಅಥವಾ ಹತ್ತು ವರ್ಷಗಳ ಅವಧಿಯವರೆಗೆ ಸಾಮಾನ್ಯ ಕೇಂದ್ರ ಸರ್ಕಾರದ ಅಧೀನದಲ್ಲಿ ವಾಸಿಸಲು ಮತ್ತು ಹಿಂದೂಗಳನ್ನು ಪರೀಕ್ಷೆಗೊಳಪಡಿಸಲು ಒಪ್ಪಿಕೊಳ್ಳಬಹುದು. ಅಲ್ಪಸಂಖ್ಯಾತರು ತಮ್ಮನ್ನು ನಂಬಬಹುದು ಎಂದು ತೋರಿಸಿಕೊಳ್ಳುವ ಅವಕಾಶ ಹಿಂದೂಗಳ ಪಾಲಿಗಿದೆ. ಹಿಂದೂ ರಾಜ್ಯದ ಬಗೆಗೆ ತಮ್ಮ ಭಯ ಎಷ್ಟು ಸಮಂಜಸ ಅಥವಾ ಸಮರ್ಥನೀಯ ಎಂಬುದನ್ನು ಮುಸ್ಲಿಮರು ಅನುಭವದಿಂದ ಅರಿತುಕೊಳ್ಳುತ್ತಾರೆ. ಇನ್ನೊಂದು ಸಾಧ್ಯತೆಯೂ ಉಂಟು. ಕೂಡಲೇ ಪ್ರತ್ಯೇಕಗೊಳ್ಳಬೇಕೆಂದು ನಿರ್ಧರಿಸಿದ ಪಾಕಿಸ್ತಾನದ ಮುಸ್ಲಿಮರು, ಸ್ವಲ್ಪ ಕಾಲದ ನಂತರ ಅದರ ಬಗೆಗೆ ಜಿಗುಪ್ಸೆ ಹುಟ್ಟಿ, ಹಿಂದಕ್ಕೆ ಬಂದು ಹಿಂದೂಸ್ತಾನದಲ್ಲಿ ಒಂದಾಗಿ ಸೇರಿಕೊಂಡು ಒಂದು ಜನಾಂಗದಂತೆ ಏಕೈಕ ಸಂವಿಧಾನಕ್ಕೆ ಬದ್ಧವಾಗಿರಲು ಇಷ್ಟಪಡಬಹುದು.

ಇನ್ನೂ ಕೆಲವು ಸಾಧ್ಯತೆಗಳಿವೆ ಎಂದು ನನಗೆ ತೋರುತ್ತದೆ. ನನ್ನ ಅಭಿಪ್ರಾಯದ ಪ್ರಕಾರ, ಈ ಸಾಧ್ಯತೆಗಳನ್ನು ಕಾಲ ಮತ್ತು ಸನ್ನಿವೇಶಗಳಿಗೆ ತೆರೆದಿಡಬೇಕು– ಅವುಗಳ ಪ್ರಭಾವವನ್ನು ಹೊಂದಲು. ನೀವು

ಭಾರತದ ಅಂಗವೆಂದು ಉಳಿಯಲು ಬಯಸಿದರೆ ಆಗ ನೀವು ಎಂದಿಗೂ ಹೊರಹೋಗುವಂತಿಲ್ಲ ಅಥವಾ ನೀವು ಹೋಗಲು ಬಯಸಿದರೆ ಆಗ ನೀವು ಎಂದಿಗೂ ಹಿಂದಿರುಗಿ ಬರುವಂತಿಲ್ಲ ಎಂದು ಮುಸ್ಲಿಮರಿಗೆ ಹೇಳುವುದು ತಪ್ಪೆಂದು ನನಗೆ ತೋರುತ್ತದೆ. ನನ್ನ ಯೋಜನೆಯಲ್ಲಿ ಬಾಗಿಲನ್ನು ತೆರೆದಿಟ್ಟಿದ್ದೇನೆ ಮತ್ತು ಎರಡು ಸಾಧ್ಯತೆಗಳಿಗೂ ಅವಕಾಶ ನೀಡಿದ್ದೇನೆ– ಶಾಸನ (೧)ರಲ್ಲಿ ಹತ್ತು ವರ್ಷಗಳ ಒಳಗೆ ಸೇರ್ಪಡನೆಗೆ; ಶಾಸನ (೨)ರಲ್ಲಿ ಹತ್ತು ವರ್ಷಗಳ ನಂತರ ಬೇರ್ಪಡೆಗೆ ಮತ್ತು ಅದಾದ ಮೇಲೆ ಸೇರ್ಪಡೆಗೆ, ಪ್ರತಿಯೊಂದರ ಕಡೆಗೂ ನನಗೆ ಬಲವಾದ ಆಧಾರಗಳಿಲ್ಲದಿದ್ದರೂ ಸಹ ನಾನು ವೈಯಕ್ತಿಕವಾಗಿ ಎರಡನೆಯ ಪರ್ಯಾಯವನ್ನು ಇಷ್ಟಪಡುತ್ತೇನೆ. ಮುಸ್ಲಿಮರು ಪಾಕಿಸ್ತಾನದ ಅನುಭವವನ್ನು ಪಡೆಯಬೇಕು ಎಂಬುದು ಹೆಚ್ಚು ಒಳ್ಳೆಯದು. ಪಾಕಿಸ್ತಾನದ ಅನುಭವವಾದ ಮೇಲಿನ ಸೇರ್ಪಡೆ ಹೆಚ್ಚು ಸುಭದ್ರ ಹಾಗೂ ಶಾಶ್ವತ. ಕೂಡಲೇ ಪಾಕಿಸ್ತಾನ ಅಸ್ತಿತ್ವಕ್ಕೆ ಬರುವ ಪಕ್ಷದಲ್ಲಿ, ಪೂರ್ಣ ಖಂಡತುಂಡವಾದ, ಹರಿತವಾದ ಮತ್ತು ಸಮಗ್ರವಾದ ಪ್ರತ್ಯೇಕತೆಯಾಗಬಾರದು ಎಂಬುದು ತುಂಬ ಅವಶ್ಯವೆಂದು ನನಗೆ ತೋರುತ್ತದೆ. ಮನಸ್ಸು ಕೆಡಿಸುವಿಕೆಯ ಬೆಳವಣಿಗೆಯನ್ನು ಮತ್ತು ಮರುಸೇರ್ಪಡೆಯ ಅವಕಾಶಗಳನ್ನು ತಡೆಗಟ್ಟುವುದನ್ನು ತಪ್ಪಿಸಲು ಪಾಕಿಸ್ತಾನ ಮತ್ತು ಹಿಂದೂಸ್ತಾನಗಳ ಮಧ್ಯೆ ಸಜೀವ ಸಂಪರ್ಕವನ್ನು ಕಾಪಾಡಿಕೊಳ್ಳುವುದು ಅವಶ್ಯ. ಭಾರತ ಮಂತ್ರಾಲೋಚನಾ ಮಂಡಲಿ ಅದೇ ರೀತಿ ತನ್ನ ಶಾಸನದಲ್ಲಿ ಅದಕ್ಕೆ ಅವಕಾಶವನ್ನು ಕಲ್ಪಿಸಿದೆ. ಸಂಯುಕ್ತ ಸಾಮ್ರಾಜ್ಯವೆಂದು ತಪ್ಪಾಗಿ ಭಾವಿಸಬಾರದು. ಅದು ಸಂಧಿಸಂಬಂಧವೂ ಸಹ ಅಲ್ಲ. ಒಂದು ಸಂವಿಧಾನದ ಕೆಳಗೆ ಅವೆರಡೂ ಒಂದಾಗುವ ತನಕ ಪಾಕಿಸ್ತಾನವನ್ನು ಹಿಂದೂಸ್ತಾನಕ್ಕೆ ಸಂಪರ್ಕಿಸುವ ಕೂಡಿಕೊಂಡಿರುವಂತೆ ಕೆಲಸ ಮಾಡುವುದಕ್ಕಿಂತ ಹೆಚ್ಚಾಗಿ ಬೇರೇನೂ ಉದ್ದೇಶ ಅದಕ್ಕಿಲ್ಲ.

ನನ್ನ ಯೋಜನೆ ಇಂಥದು. ಅದು ಕೋಮುವಾರು ಸರ್ವಪ್ರಜಾಭಿಪ್ರಾಯದ ಮೇಲೆ ಆಧಾರಿತವಾಗಿದೆ. ಯೋಜನೆ ಹೊಂದಿಕೊಳ್ಳುವಂಥ ಮನೋಭಾವದ್ದು. ಹಿಂದೂ ಭಾವನೆ ಅದಕ್ಕೆ ವಿರುದ್ಧವಾಗಿದೆ ಎಂಬ ವಾಸ್ತವವನ್ನು ಅದು ಗಮನಕ್ಕೆ ತಂದುಕೊಂಡಿವೆ. ಪಾಕಿಸ್ತಾನಕ್ಕಾಗಿ ಮುಸ್ಲಿಮರ ಕೇಳಿಕೆ ಕೇವಲ ಹಾದುಹೋಗುವ ಚಿತ್ತವೃತ್ತಿ ಎಂಬ ವಾಸ್ತವವನ್ನೂ ಅದು ಮನಗಂಡಿದೆ. ಯೋಜನೆ ವಿವಾಹ ವಿಚ್ಛೇದನವಲ್ಲ. ಅದು ಕೇವಲ ನ್ಯಾಯಾಧಿಪತಿಯ ಆಜ್ಞೆಯಂತೆ ಆದ ಗಂಡಹೆಂಡಿರ ಪ್ರತ್ಯೇಕ ವಾಸ. ಅದು ಹಿಂದೂಗಳಿಗೆ ಕಾಲಾವಧಿ ಕೊಟ್ಟಿದೆ. ನ್ಯಾಯಯುತ ಆಳ್ವಿಕೆಗಾಗಿ ತಮ್ಮನ್ನು ಆಧಾರಸಹಿತವಾಗಿ ನಂಬಬಹುದೆಂದು ತೋರಿಸಲು ಅದನ್ನು ಉಪಯೋಗಿಸಿಕೊಳ್ಳಬಹುದು. ಪಾಕಿಸ್ತಾನವನ್ನು ಪರೀಕ್ಷೆಗೊಡ್ಡಲು ಅದು ಮುಸ್ಲಿಮರಿಗೆ ವಾಯಿದೆ ಕೊಟ್ಟಿದೆ.

ನನ್ನ ಸೂಚನೆಗಳನ್ನು ಸರ್ ಸ್ಟಾಫೋರ್ಡ್ ಕ್ರಿಪ್ಸ್‌ನ ಸೂಚನೆಗಳ ಜೊತೆ ಹೋಲಿಸುವುದು ವಿಹಿತ. ಸೂಚನೆಗಳನ್ನು ಧಾರಾವಾಹಿ ಕಥೆಯಂತೆ ಭಾಗಭಾಗಗಳಲ್ಲಿ ಕೊಡಲಾಗಿದೆ. ೧೯೪೨ರ ಮಾರ್ಚ್ ೨೯ರಂದು ಹೊರಡಿಸಿದ ಕರಡು ಪ್ರತಿಯ ಪ್ರಕಟಣೆ ಈ ಕೆಳಗಿನದನ್ನು ಮಾತ್ರ ಒಳಗೊಂಡಿದೆ:

> **"ಆದ್ದರಿಂದ ಘನತೆವೆತ್ತ ಮಹಾಪ್ರಭುಗಳ ಸರ್ಕಾರ ಕೆಳಕಂಡ ಷರತ್ತುಗಳನ್ನು ಹಾಕಿದೆ.**
>
> **(ಅ) ದ್ವೇಷಾಸೂಯೆಗಳು ನಿಲುಗಡೆಯಾದ ಕೂಡಲೇ, ಭಾರತಕ್ಕೆ ಹೊಸ ಸಂವಿಧಾನವನ್ನು ರೂಪಿಸುವ ಹೊಣೆ ಹೊರಿಸಿದ ಚುನಾಯಿತ ಮಂಡಲಿಯ ವ್ಯವಸ್ಥೆಗೆ ಇಲ್ಲಿಂದ ಮುಂದೆ ವಿವರಿಸುವ ವಿಧಾನದಲ್ಲಿ ಕ್ರಮ ಕೈಗೊಳ್ಳಬೇಕು.**
>
> **(ಆ) ಸಂವಿಧಾನ ರಚನಾ ಮಂಡಲಿಯಲ್ಲಿ ಭಾರತದ ರಾಜ್ಯಗಳು ಸಹಭಾಗಿಯಾಗುವುದಕ್ಕೆ ಈ ಕೆಳಗೆ ವಿವರಿಸಿರುವಂತೆ ಅವಕಾಶ ಮಾಡಿಕೊಡಬೇಕು.**

**(ಇ) ಹೀಗೆ ರೂಪಿತವಾದ ಸಂವಿಧಾನವನ್ನು ಕೂಡಲೇ ಅಂಗೀಕರಿಸಿ ಅನುಷ್ಠಾನಗೊಳಿಸಲು ಘನತೆವೆತ್ತ ಮಹಾಪ್ರಭುಗಳ ಸರ್ಕಾರ ಕೈಗೆತ್ತಿಕೊಂಡಿದೆ– ಇದಕ್ಕೆ ಮಾತ್ರ ಬದ್ಧವಾಗಿ (೧) ಬ್ರಿಟಿಷ್ ಭಾರತದ ಯಾವುದೇ ಪ್ರಾಂತ್ಯ ತನ್ನ ಸಂವಿಧಾನಾತ್ಮಕ ಸ್ಥಾನದ ಉಳಿವಿಗೆ ಹೊಸ ಸಂವಿಧಾನವನ್ನು ಒಪ್ಪಿಕೊಳ್ಳಲು ಸಿದ್ಧವಾಗಿರದಿದ್ದರೆ, ಆನಂತರದ ಅಂಗೀಕಾರಕ್ಕೆ ಅವಕಾಶವನ್ನು ಕಲ್ಪಿಸಬೇಕು– ಹಾಗೆ ಅದು ನಿರ್ಧಾರವನ್ನು ಕೈಗೊಂಡರೆ, ಹಾಗೆ ಒಪ್ಪದಿರುವ ಪ್ರಾಂತ್ಯಗಳ ಜೊತೆ, ಅವರು ಹಾಗೆ ಇಷ್ಟಪಟ್ಟರೆ, ಘನತೆವೆತ್ತ ಮಹಾಪ್ರಭುಗಳ ಸರ್ಕಾರ, ಅವುಗಳಿಗೆ ಭಾರತದ ಕೇಂದ್ರ ವಲಯದಂತೆ ಸಮಾನ ಸ್ಥಾನಮಾನಗಳನ್ನು ಕೊಟ್ಟು, ಇಲ್ಲಿ ನಮೂದಿಸಲ್ಪಟ್ಟಿರುವುದಕ್ಕೆ ಸದೃಶವಾದ ಕ್ರಮಗಳಿಂದ ಹೊಸ ಸಂವಿಧಾನದಲ್ಲಿ ಒಪ್ಪಿಗೆ ನೀಡಲು ಸಿದ್ಧವಾಗಿರುತ್ತದೆ.''**

ಸೇರ್ಪಡೆಯ ಅಥವಾ ಬೇರ್ಪಡೆಯ ವಿವರಗಳನ್ನು ಅವರ ಪ್ರಸಾರ ಭಾಷಣದಲ್ಲಿ ಕೊಡಲಾಗಿದೆ. ಅವುಗಳು ಕೆಳಗಿನ ಶರತ್ತುಗಳಂತಿವೆ:

**''ಸಂವಿಧಾನ ರಚನಾ ಮಂಡಲಿ ತನ್ನ ಉದ್ದೇಶದಂತೆ ಅಖಂಡ ಭಾರತಕ್ಕೆ– ಅಂದರೆ ಬ್ರಿಟಿಷ್ ಭಾರತಕ್ಕೆ– ಒಂದು ಸಂವಿಧಾನವನ್ನು ರೂಪಿಸುತ್ತದೆ, ಸೇರಿಕೊಳ್ಳಲು ನಿರ್ಧರಿಸುವ ಭಾರತದ ರಾಜ್ಯಗಳೊಂದಿಗೆ ಕೂಡಿಕೊಂಡು.**

**ಆದರೆ ತುಂಬ ಸರಳವಾದ ಈ ವಾಸ್ತವವನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ಅದೇ ಆವರಣವನ್ನು ಪ್ರವೇಶಿಸಲು ವಿರೋಧ ವ್ಯಕ್ತಪಡಿಸುವ ಅನೇಕ ಜನರನ್ನು ನೀವು ಒಪ್ಪಿಸಲು ಇಷ್ಟಪಟ್ಟರೆ, ಒಮ್ಮೆ ಅವರು ಒಳಗೆ ಹೋದರೆ, ಹೊರಗೆ ಬರಲು ದಾರಿಯೇ ಇಲ್ಲ, ಅವರು ಅಲ್ಲಿ ಎಂದೆಂದಿಗೂ ಬಂಧಿತರಾಗಿರುತ್ತಾರೆ ಎಂದು ಅವರಿಗೆ ಹೇಳುವುದು ಅವಿವೇಕವಾಗುತ್ತದೆ.**

**ಅವರು ಒಳಗೆ ಹೋಗಬಹುದು. ಒಂದು ಸಮಾನ ನಿರ್ಧಾರಕ್ಕೆ ಬರಲು ತಮಗೆ ಸಾಧ್ಯವಾಗುವುದಿಲ್ಲ ಎಂದು ಅವರಿಗೆ ಅನ್ನಿಸಿದರೆ ಬೇರೆ ಬಾಗಿಲಿನಿಂದ ಅವರು ಹೊರ ಹೋಗುವುದಕ್ಕೆ ಅಡ್ಡಿಪಡಿಸುವಂಥದು ಯಾವುದೂ ಅಲ್ಲಿಲ್ಲ. ತಮಗೆ ಒಪ್ಪಿಗೆಯಾಗದಿದ್ದರೆ ತಾವು ಸ್ವತಂತ್ರರಾಗಿ ಹೊರಹೋಗಬಹುದು ಎಂಬ ಜ್ಞಾನ ಅವರಿಗಿದ್ದರೆ ಅವರೆಲ್ಲ ಒಳಹೋಗುವ ಸಂಭವವುಂಟು.**

**ಸರಿ, ಭಾರತದ ಪ್ರಾಂತ್ಯಗಳಿಗೆ ನಾವು ಹೇಳಬೇಕಾದದ್ದು ಇದು. ಸಾಮಾನ್ಯ ಸಂವಿಧಾನವನ್ನು ರೂಪಿಸಲು ಒಟ್ಟಾಗಿ ಬನ್ನಿ. ನಿಮ್ಮ ಚರ್ಚೆ ಮತ್ತು ಸಂವಿಧಾನದ ರಚನಾ ಸಭೆಯ ಎಲ್ಲ ಆದಾನಪ್ರದಾನಗಳಿಂದ ನಿಮ್ಮ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಿಕೊಳ್ಳಲು ಸಾಧ್ಯವಾಗಲಿಲ್ಲ ಎಂದು ನಿಮಗೆ ಅನ್ನಿಸಿದರೆ, ಸಂವಿಧಾನದಿಂದ ಕೆಲವು ಪ್ರಾಂತ್ಯಗಳು ಇನ್ನೂ ಸಂತೃಪ್ತಗೊಳ್ಳದಿದ್ದರೆ ಅಂಥ ಪ್ರಾಂತ್ಯಗಳು ಹೊರಗೆ ಹೋಗಬಹುದು; ಒಳಗೇ ಉಳಿಯಬಹುದು, ಕೇಂದ್ರಕ್ಕಿರುವ ಹಾಗೆ ಅದೇ ಮಟ್ಟದ ಸ್ವರಾಜ್ಯ ಮತ್ತು ಸ್ವಾತಂತ್ರ್ಯಗಳು ಅವರಿಗೆ ಸಿಗುತ್ತವೆ. ಅಂದರೆ ಪೂರ್ಣ ಸ್ವರಾಜ್ಯ ಸಿಕ್ಕುತ್ತದೆ.''**

ಈ ವಿಚಾರದ ಪೂರ್ಣ ಚಿತ್ರಣಕ್ಕಾಗಿ ಪತ್ರಿಕಾಗೋಷ್ಠಿಯಲ್ಲಿ ಇನ್ನು ವಿವರಗಳನ್ನು ಸೇರಿಸಲಾಯಿತು. ಪ್ರಾಂತ್ಯಗಳ ಸೇರ್ಪಡೆ ಅಥವಾ ಬೇರ್ಪಡೆಯ ಯೋಜನೆಯನ್ನು ವಿವರಿಸುತ್ತಾ ಸರ್ ಸ್ಟಾಫ್ಫೋರ್ಡ್ ಕ್ರಿಪ್ಸ್ ಹೇಳಿದರು:

**''ರಾಜ್ಯವ್ಯವಸ್ಥಾ ಸಭೆಯ ನಡೆವಳಿಕೆಗಳ ಅಂತ್ಯದಲ್ಲಿ, ಯಾವುದಾದರೂ ಪ್ರಾಂತ್ಯ ಅಥವಾ ಪ್ರಾಂತ್ಯಗಳು ಹೊಸ ಸಂವಿಧಾನವನ್ನು ಒಪ್ಪಿಕೊಂಡು ಕೇಂದ್ರವನ್ನು ಸೇರಲು ಇಷ್ಟಪಡದಿದ್ದರೆ ಹೊರಗುಳಿಯಲು**

**ಸ್ವತಂತ್ರ– ಆ ಪ್ರಾಂತ್ಯದ ಪ್ರಾಂತೀಯ ಸಭೆ ಶೇ. ೬೦ಕ್ಕಿಂತ ಕಡಿಮೆಯಿರದ ಗಣನೀಯ ಪ್ರಮಾಣದ ಮತಗಳಿಂದ ಸೇರ್ಪಡೆಯ ವಿರುದ್ಧ ನಿರ್ಣಯ ತೆಗೆದುಕೊಂಡ ಪಕ್ಷದಲ್ಲಿ, ಅದು ಶೇ. ೮೦ಕ್ಕಿಂತ ಕಡಿಮೆಯಿದ್ದರೆ ಜನರ ಇಷ್ಟವನ್ನು ಖಾತ್ರಿಪಡಿಸಿಕೊಳ್ಳಲು, ಅಲ್ಪಸಂಖ್ಯಾತರು ಸಮಗ್ರ ಪ್ರಾಂತ್ಯದ ಪ್ರಜಾಭಿಪ್ರಾಯಕ್ಕೆ ಒತ್ತಾಯಿಸಬಹುದು. ಪ್ರಜಾಭಿಪ್ರಾಯದ ಸಂಬಂಧದಲ್ಲಿ ಸ್ವಲ್ಪ ಬಹುಮತವಿದ್ದರಷ್ಟೇ ಸಾಕು. ಸೇರ್ಪಡೆ ಸಂಪೂರ್ಣಗೊಳ್ಳಲು ಸಂಬಂಧಪಟ್ಟ ಪ್ರಾಂತೀಯ ಸಭೆಯ ಇತ್ಯಾತ್ಮಕ ಮತವಿರಬೇಕು ಎಂದು ಸರ್ ಸ್ಟಾಫೋರ್ಡ್ ಸ್ಪಷ್ಟಪಡಿಸಿದ್ದಾರೆ. ಸೇರಲು ಬಯಸದ ಪ್ರಾಂತ್ಯ ಇಷ್ಟಪಟ್ಟರೆ, ಪ್ರತ್ಯೇಕ ರಾಜ್ಯವ್ಯವಸ್ಥಾ ಸಭೆಯ ಮೂಲಕ ಪ್ರತ್ಯೇಕ ಸಂಘದೊಡನೆ ಸೇರಬಹುದು. ಆದರೆ, ಅಂಥ ಸಂಘವನ್ನು ಕಾರ್ಯಸಾಧ್ಯವನ್ನಾಗಿ ಮಾಡುವುದಕ್ಕೆ ಅವುಗಳು ಭೌಗೋಳಿಕವಾಗಿ ಪಕ್ಕಪಕ್ಕದಲ್ಲಿ ಇರಬೇಕು.''**

ನನ್ನ ಯೋಜನೆಗೂ ಸರ್ ಸ್ಟಾಫೋರ್ಡ್ ಕ್ರಿಪ್ಸ್‌ರವರ ಯೋಜನೆಗೂ ಇರುವ ಮುಖ್ಯ ವ್ಯತ್ಯಾಸ ಎದ್ದು ಕಾಣುವಂಥದ್ದು. ಸೇರ್ಪಡೆ ಅಥವಾ ಬೇರ್ಪಡೆಯ ವಿಷಯವನ್ನು ನಿರ್ಧರಿಸುವುದಕ್ಕೆ, ಬೇರೆ ಮಾತಿನಲ್ಲಿ ಹೇಳುವುದಾದರೆ, ಪಾಕಿಸ್ತಾನ ಇರಬಹುದು ಅಥವಾ ಇಲ್ಲದಿರಲೂಬಹುದು. ಸರ್ ಸ್ಟಾಫೋರ್ಡ್ ಕ್ರಿಪ್ಸ್ ಪ್ರಾಂತ್ಯವನ್ನು ನಿರ್ಣಯಾತ್ಮಕ ಘಟಕವನ್ನಾಗಿ ತೆಗೆದುಕೊಂಡಿದ್ದಾರೆ. ನಾನು ಕೋಮನ್ನು ನಿರ್ಣಯಾತ್ಮಕ ಘಟಕವನ್ನಾಗಿ ತೆಗೆದುಕೊಂಡಿದ್ದೇನೆ. ಕ್ರಿಪ್ಸ್ ತಪ್ಪು ಮೂಲವನ್ನು ಅನುಸರಿಸಿದರು ಎಂದು ನನ್ನ ದೃಢ ನಂಬಿಕೆ. ವಿವಾದದ ವಿಷಯಗಳು ಅಂತರ್ ಪ್ರಾಂತೀಯವಾಗಿದ್ದರೆ, ಪ್ರಾಂತ್ಯ ಉಚಿತವಾದ ಘಟಕ ಆಗಬಲ್ಲುದು. ಉದಾಹರಣೆಗೆ ತೆರಿಗೆಯ ವಿತರಣೆ, ನೀರಿನ ವಿತರಣೆ ಮೊದಲಾದ ವಿವಾದದ ವಿಷಯಗಳಿಗೆ ಸಂಬಂಧಿಸಿದಂತೆ ಅಖಂಡ ಪ್ರಾಂತ್ಯ ಅಥವಾ ಆ ಪ್ರಾಂತ್ಯದ ವಿಶಿಷ್ಟ ಬಹುಸಂಖ್ಯಾತರು ತೀರ್ಮಾನಿಸುವ ಹಕ್ಕನ್ನು ಪಡೆದಿದ್ದಾರೆ ಎಂಬುದನ್ನು ಯಾರಾದರೂ ಅರ್ಥ ಮಾಡಿಕೊಳ್ಳಬಹುದು. ಆದರೆ ಪಾಕಿಸ್ತಾನದ ವಿವಾದ, ಒಂದೇ ಪ್ರಾಂತ್ಯದ ಎರಡು ಕೋಮುಗಳು ಭಾಗಿಯಾಗಿರುವ ಅಂತರ್ ಕೋಮಿನ ಸಮಸ್ಯೆ. ಸಮಾನ ರಾಜಕೀಯ ಜೀವನದಲ್ಲಿ ಜೊತೆಯಾಗಿ ಸಹಕರಿಸಲು ಎರಡು ಕೋಮುಗಳು ಯಾವ ಶರತ್ತಿನ ಮೇಲೆ ಒಪ್ಪಿಕೊಳ್ಳುತ್ತವೆ ಎಂಬುದು ವಿವಾದದ ವಾದಾಂಶವಲ್ಲ. ವಿವಾದ ಇನ್ನೂ ಆಳಕ್ಕೆ ಹೋಗಿದೆ, ಸಮಾನ ರಾಜಕೀಯ ಜೀವನದಲ್ಲಿ ಜೊತೆಯಾಗಿ ಸಹಕರಿಸಲು ಕೋಮುಗಳು ಸಿದ್ಧವಾದರೂ ಆಗಿವೆಯೇ ಎಂಬ ಪ್ರಶ್ನೆಯನ್ನು ಎತ್ತುತ್ತವೆ. ಅದರ ಅಂತಸ್ಸಾರದಲ್ಲಿ ಕೋಮು ಭಿನ್ನಾಭಿಪ್ರಾಯವಿದೆ ಮತ್ತು ಕೋಮುವಾರು ಜನಾಭಿಪ್ರಾಯದಿಂದ ಮಾತ್ರ ಅದು ತೀರ್ಮಾನವಾಗಬಲ್ಲುದು.

## IV

ನಾನು ಸೂಚಿಸಿರುವ ಪರಿಹಾರ ಸ್ವೋಪಜ್ಞವಾದದ್ದು ಎಂದು ನಾನು ವಾದಿಸುವುದಿಲ್ಲ. ಅದರ ಅಡಿಯಲ್ಲಿರುವ ಕಲ್ಪನೆಗಳು ಮೂರು ಮೂಲಗಳಿಂದ ತೆಗೆದುಕೊಂಡಂಥವು– ಒಂದು, ಹೊರೇಸ್ ಪ್ಲಂಕೆಟ್ ಅಧ್ಯಕ್ಷತೆ ವಹಿಸಿದ್ದ ಐರಿಷ್ ಐಕ್ಯತಾ ಸಮ್ಮೇಳನದ ಮೂಲದಿಂದ; ಎರಡು, ಶ್ರೀಯುತ ಅಸ್ಕ್ವಿತನ ಸ್ವರಾಜ್ಯ ಪರಿವರ್ತನ ಮಸೂದೆಯ ಮೂಲದಿಂದ; ಮೂರು, ೧೯೨೦ರ ಐರ್ಲೆಂಡ್ ಸರ್ಕಾರದ ಶಾಸನದ ಮೂಲದಿಂದ. ಪಾಕಿಸ್ತಾನದ ಸಮಸ್ಯೆಯ ಬಗೆಗಿನ ನನ್ನ ಪರಿಹಾರ, ವಿವೇಕಗಳ ಸಂಗಮದ ಫಲ ಎಂಬುದು ಗೊತ್ತಾಗುತ್ತದೆ. ಅದು ಸ್ವೀಕಾರಾರ್ಹವೆ? ಪಾಕಿಸ್ತಾನ ಪ್ರಶ್ನೆಯ ಸುತ್ತ ಅಬ್ಬರಿಸುತ್ತಿರುವ ಸಂಘರ್ಷವನ್ನು ಬಗೆಹರಿಸಲು ನಾಲ್ಕು ದಾರಿಗಳಿವೆ. ಮೊದಲನೆಯದು: ಬ್ರಿಟಿಷ್ ಸರ್ಕಾರ ನಿರ್ಣಾಯಕ ಪ್ರಭುತ್ವಶಕ್ತಿಯಾಗಿ

ಕೆಲಸ ಮಾಡಬೇಕು, ಎರಡನೆಯದು: ಹಿಂದೂಗಳು ಮತ್ತು ಮುಸ್ಲಿಮರು ಒಪ್ಪಬೇಕು, ಮೂರನೆಯದು: ಪಂಚಾಯಿತಿಯ ಅಂತರ್ ರಾಷ್ಟ್ರೀಯ ಮಂಡಲಿಗೆ ಈ ವಾದಾಂಶವನ್ನು ಸಲ್ಲಿಸುವುದು. ನಾಲ್ಕನೆಯದು: ರಾಷ್ಟ್ರಾಂತರ್ಯುದ್ಧದಿಂದ ಬಗೆಹರಿಸಿಕೊಳ್ಳಲು ಯತ್ನಿಸುವುದು.

ಭಾರತ ಇಂದು ರಾಜಕೀಯ ಹುಚ್ಚಾಸ್ಪತ್ರೆಯಾಗಿದ್ದರೂ ಸಹ ಸಮಸ್ಯೆಗಳು ಅಂತರ್ಯುದ್ಧದ ಮಟ್ಟ ಮುಟ್ಟಲು ಅವಕಾಶ ಕೊಡದಿರುವಂಥ ಸ್ವಸ್ಥ ಮನಸ್ಸಿನ ಸಾಕಷ್ಟು ಜನ ದೇಶದಲ್ಲಿದ್ದಾರೆ ಎಂಬ ಭರವಸೆ ನನಗಿದೆ. ಮುಂದೆ ರಾಜಕೀಯ ನಾಯಕರ ಮಧ್ಯೆ ಆಗುವ ಒಪ್ಪಂದದಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಖಿಲ ಭಾರತೀಯ ಕಾಂಗ್ರೆಸ್ ಸಮಿತಿಯು ಶ್ರೀಯುತ ಜಗತ್ ನಾರಾಯಣಲಾಲ್ ಅವರು ಕಳಿಸಿದ ಸೂಚನೆಯನ್ನು ವಿವೇಚಿಸಲು ೧೯೪೨ರ ಏಪ್ರಿಲ್‌ನಲ್ಲಿ ಅಲಹಾಬಾದಿನಲ್ಲಿ ಸಭೆ ಸೇರಿ ಪಾಕಿಸ್ತಾನದ ಸೂಚನೆಯನ್ನು ಆಧರಿಸಬಾರದೆಂದು ತೀರ್ಮಾನಿಸಿತು.* ಸಮಸ್ಯೆಯನ್ನು ಬಗೆಹರಿಸುವ ಇನ್ನೆರಡು ಮಾರ್ಗಗಳನ್ನು ಬಿಟ್ಟಿದ್ದೇವೆ. ಒಂದು, ಸಂಬಂಧಪಟ್ಟ ಜನರಿಂದ; ಮತ್ತೊಂದು, ಅಂತರ್ ರಾಷ್ಟ್ರೀಯ ಮಧ್ಯಸ್ಥಿಕೆಯಿಂದ. ನಾನು ಸಲಹೆ ಮಾಡಿದ ಮಾರ್ಗ ಇದು. ಮೊದಲನೆಯದನ್ನು ನಾನು ಇಷ್ಟಪಡುತ್ತೇನೆ. ಅನೇಕ ಕಾರಣಗಳಿಗಾಗಿ ಇದೊಂದೇ ಸರಿಯಾದ ಮಾರ್ಗವೆಂದು ನನಗೆ ತೋರುತ್ತದೆ. ವಿವಾದವನ್ನು ಬಗೆಹರಿಸಲು ನಾಯಕರು ಸೋತಿರುವುದರಿಂದ, ತೀರ್ಮಾನಕ್ಕಾಗಿ ಅದನ್ನು ಜನಗಳ ಬಳಿಗೆ ಕೊಂಡೊಯ್ಯುವ ಕಾಲ ಬಂದಿದೆ. ನಿಜವಾಗಿ, ಒಂದು ಸರ್ಕಾರದಿಂದ ಮತ್ತೊಂದು ಸರ್ಕಾರಕ್ಕೆ ಜನರ ನಿಷ್ಠೆಯ ವರ್ಗಾವಣೆ ಹಾಗೂ ಪ್ರದೇಶಗಳ ವಿಂಗಡಣೆಯಂಥ ವಾದಾಂಶ, ರಾಜಕೀಯ ಧುರೀಣರಿಂದ ಹೇಗೆ ತೀರ್ಮಾನವಾದೀತು ಎಂಬುದು ಕಲ್ಪನಾತೀತ. ಅಂಥ ಸಂಗತಿಗಳನ್ನು ನಿಸ್ಸಂದೇಹವಾಗಿ ಆಕ್ರಮಣಕಾರರು ಬಗೆಹರಿಸುತ್ತಾರೆ. ಏಕೆಂದರೆ ಸಮರವಿಜಯ ಅವರಿಗೆ ಸರ್ವಾಧಿಕಾರವನ್ನೂ ನೀಡುತ್ತದೆ ತಮಗನಿಸಿದ್ದನ್ನು ಸೋತ ಜನರ ಮೇಲೆ ಹೇರಲು, ಆದರೆ ನಾವು ಅಂಥ ನ್ಯಾಯಬಾಹಿರ ಸ್ಥಿತಿಯಲ್ಲಿ ಕೆಲಸ ಮಾಡುತ್ತಿಲ್ಲ. ಸಂವಿಧಾನಾತ್ಮಕ ಕ್ರಮಗಳು ತಡೆರಹಿತವಾಗಿ ಸಾಗುವ ಸ್ವಾಭಾವಿಕ ಕಾಲದಲ್ಲಿ ರಾಜಕೀಯ ನಾಯಕರ ಅಭಿಪ್ರಾಯಗಳು ಯಾವುದೇ ಪರಿಣಾಮವನ್ನು ಹೊಂದಲಾರವು– ಸರ್ವಾಧಿಕಾರಿಯ ಅಧಿಕಾರಗಳು ಹೊಂದಿರುವಂತೆ. ಅದು ಪ್ರಜಾಪ್ರಭುತ್ವದ ಆಳ್ವಿಕೆಗೆ ವಿರೋಧವಾದದ್ದು. ಕಾರ್ಯಸೂಚಿಯಲ್ಲಿ ಸೇರಿಸಲು ಯೋಗ್ಯವೆಂದು ಪರಿಗಣಿಸುವುದೇ ರಾಜಕೀಯ ನಾಯಕರ ಅಭಿಪ್ರಾಯಗಳಿಗೆ ದೊರಕುವ ಹೆಚ್ಚಿನ ಬೆಲೆ. ಜನರಿಂದ ಸಮಸ್ಯೆ ತೀರ್ಮಾನವಾಗಬೇಕಾದ ಅನಿವಾರ್ಯತೆಯನ್ನು ಅವರು ಸ್ಥಳಾಂತರಿಸಲಾರರು ಅಥವಾ ನಿವಾರಿಸಲಾರರು. ಕ್ರಿಪ್ಸ್ ತೆಗೆದುಕೊಂಡ ನಿಲುವು ಇದು. ಆದರೆ ಮುಸ್ಲಿಂ ಲೀಗ್ ತೆಗೆದುಕೊಂಡ ನಿಲುವೆಂದರೆ, ಪಾಕಿಸ್ತಾನವಿರಲಿ, ಏಕೆಂದರೆ ಲೀಗ್ ಅದನ್ನು ಹೊಂದಲು ನಿರ್ಧರಿಸಿದೆ ಎಂಬುದಷ್ಟೇ. ಕ್ರಿಪ್ಸ್ ಸೂಚನೆಗಳು ಸರಿಯಾಗಿಯೇ ಆ ನಿಲುವನ್ನು ನಿರಾಕರಿಸಿವೆ. ಪಾಕಿಸ್ತಾನವನ್ನು ಒಂದು ಪ್ರಸ್ತಾಪವಾಗಿ ಪರಿಗಣಿಸಬೇಕು ಎಂದು ಸೂಚಿಸುವ ಹಕ್ಕನ್ನು ಮಾತ್ರ ಹೊಂದುವಷ್ಟರಮಟ್ಟಿಗೆ ಕ್ರಿಪ್ಸ್ ಸೂಚನೆಗಳು ಮುಸ್ಲಿಂ ಲೀಗನ್ನು

---

* ಗೊತ್ತುವಳಿಯ ವಿಷಯ ಕೆಳಕಂಡಂತಿದೆ:

"ಸಂಯುಕ್ತದಿಂದ ಅಥವಾ ಕೇಂದ್ರದಿಂದ ಪ್ರತ್ಯೇಕಗೊಳ್ಳುವ ಪ್ರದೇಶ ಘಟಕಕ್ಕೆ ಅಥವಾ ಅಂಗಭಾಗವಾದ ರಾಜ್ಯಕ್ಕೆ ಸ್ವಾತಂತ್ರ್ಯ ಕೊಡುವುದರ ಮೂಲಕ ಭಾರತವನ್ನು ಛಿದ್ರಗೊಳಿಸುವ ಯಾವುದೇ ಸಲಹೆ ರಾಜ್ಯಗಳ ಮತ್ತು ಪ್ರಾಂತ್ಯಗಳ ಹಾಗೂ ಅಖಂಡ ದೇಶದ ಜನರ ಹಿತಾಸಕ್ತಿಗಳನ್ನು ಹಾನಿಗೊಳಿಸುತ್ತದೆ ಎಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಭಾವಿಸುತ್ತದೆ. ಆದ್ದರಿಂದಲೇ ಅಂಥ ಯಾವುದೇ ಸೂಚನೆಗೆ ಕಾಂಗ್ರೆಸ್ ಬರುವುದಿಲ್ಲ."

ಮಾನ್ಯತೆ ಮಾಡಿದೆ ಅಷ್ಟೆ. ತೀರ್ಮಾನಿಸುವ ಹಕ್ಕನ್ನು ಅದಕ್ಕೆ ಕೊಟ್ಟಿಲ್ಲ; ಬಹುಸಂಖ್ಯಾತ ಜನರ ಸಜೀವ ಒಪ್ಪಿಗೆಯನ್ನು ಕೊಂಡೊಯ್ಯಬಾರದೆಂಬ ಕಾಂಗ್ರೆಸ್‌ನಂಥ ಅಖಿಲ ಭಾರತ ಸಂಸ್ಥೆಯ ನಿರ್ಧಾರ– ಕೂಡಲೇ ಪಾಕಿಸ್ತಾನ ಪ್ರಶ್ನೆಯಿಂದ ಬಾಧೆಗೊಳಗಾದರೂ– ಸಮಸ್ಯೆಯನ್ನು ಪರಿಹಾರದತ್ತ ಕೊಂಡೊಯ್ಯಲಾರದು ಎಂಬುದನ್ನು ಅದು ಮನಗಂಡಿಲ್ಲವೆಂದು ತೋರುತ್ತದೆ. ಪಂಜಾಬ್ ಅಥವಾ ಬಂಗಾಳದ ಜನರು ಅದನ್ನು ವಿರೋಧಿಸಿದರೆ, ಗಾಂಧಿಯವರಾಗಲೀ ಅಥವಾ ರಾಜಗೋಪಾಲಚಾರಿಯಾಗಲೀ ಒಪ್ಪುವುದರಿಂದ ಅಥವಾ ಪಾಕಿಸ್ತಾನವನ್ನು ಕೊಡಲು ಅಖಿಲ ಭಾರತ ಕಾಂಗ್ರೆಸ್ ಸಮಿತಿ ನಿರ್ಧರಿಸಿದ್ದರಿಂದ ಯಾವ ಪ್ರಯೋಜನವೂ ಆಗಲಾರದು. ನಿಜವಾಗಿ ಹೇಳಬೇಕೆಂದರೆ 'ಪಾಕಿಸ್ತಾನವಿರಲಿ' ಎಂದು ಹೇಳಲು, ಅದು ಮುಂಬೈ ಅಥವಾ ಮದ್ರಾಸಿನ ಜನರ ವ್ಯವಹಾರವೇ ಅಲ್ಲ. ಆ ಪ್ರದೇಶಗಳಲ್ಲಿ ವಾಸಿಸುವ ಜನರಿಂದ ಅದು ತೀರ್ಮಾನವಾಗಬೇಕು. ಏಕೆಂದರೆ ರಾಜಕೀಯ ಮತ್ತು ಆರ್ಥಿಕ ಪದ್ಧತಿಯಲ್ಲಾದ ತೀವ್ರವಾದ, ಕ್ರಾಂತಿಕಾರಕವಾದ ಮತ್ತು ಮೂಲಭೂತವಾದ ಬದಲಾವಣೆಗಳು ಪರಿಣಾಮಗಳನ್ನು ಅವರು ಸಹಿಸಬೇಕಾಗಿದೆ– ಅವರ ಬದುಕು ಮತ್ತು ಭಾಗ್ಯಗಳು ಬಹಳ ವರ್ಷಗಳಿಂದ ಆ ಪ್ರದೇಶಕ್ಕೆ ಬಿಗಿಯಾಗಿ ಬಂಧಿಸಲ್ಪಟ್ಟಿರುವುದರಿಂದ ಪಾಕಿಸ್ತಾನದ ಪ್ರದೇಶಗಳಲ್ಲಿ ಜನರ ನಿರ್ಧಾರವನ್ನು ಗಣನೆಗೆ ತೆಗೆದುಕೊಳ್ಳುವುದೇ ಪಾಕಿಸ್ತಾನ ಸಮಸ್ಯೆಯನ್ನು ಬಗೆಹರಿಸಲಿರುವ ಕ್ಷೇಮಕರವಾದ ಹಾಗೂ ಸಂವಿಧಾನಾತ್ಮಕವಾದ ವಿಧಾನವೆಂದು ನನಗೆ ತೋರುತ್ತದೆ.

ಆದರೆ ಜನಮತ ಗಣನೆಯಿಂದ ಪಾಕಿಸ್ತಾನ ಪ್ರಶ್ನೆಯ ಪರಿಹಾರ ಸಾಧ್ಯವಾಗುತ್ತದೆ ಎಂಬುದು ಎಷ್ಟೇ ಆಕರ್ಷಕವಾಗಿ ಕಂಡರೂ ಸಂಬಂಧಿತರಿಗೆ ಅದು ಅಷ್ಟು ಹಿತವಾಗಿ ಕಾಣುವುದಿಲ್ಲ. ಮುಸ್ಲಿಂ ಲೀಗ್ ಕೂಡ ಅದರ ಬಗ್ಗೆ ಹೆಚ್ಚು ಉತ್ಸಾಹಶಾಲಿಯಾಗಿಲ್ಲ. ಸಲಹೆ ಅಭದ್ರ ಎಂಬ ಕಾರಣಕ್ಕಾಗಿ ಅಲ್ಲ. ಬದಲಿಗೆ ಆಕರ್ಷಕವಾಗಿರುವ ಬೇರೊಂದು ಪರಿಹಾರವಿರುವುದೇ ನಿಜಸಂಗತಿ. ತನ್ನ ಸಾರ್ವಭೌಮ ಅಧಿಕಾರದಿಂದ ಪಾಕಿಸ್ತಾನ ಸ್ಥಾಪನೆ ಮಾಡಬೇಕೆಂದು ಬ್ರಿಟಿಷ್ ಸರ್ಕಾರಕ್ಕೆ ಅದು ಕರೆ ನೀಡುತ್ತದೆ. ಜನರ ಒಪ್ಪಿಗೆಯ ಪರಿಹಾರ ಸೂತ್ರಕ್ಕಿಂತ ಈ ಪರಿಹಾರ ಸೂತ್ರವನ್ನು ಏಕೆ ಇಷ್ಟಪಟ್ಟವೆಂಬುದು ತೀರಾ ಸರಳ. ಪ್ರಜಾನಿರ್ಧಾರದಲ್ಲಿರುವಷ್ಟು ಅನಿಶ್ಚಯತೆಗಳೂ ಮತ್ತು ವಿಸ್ತಾರವಾದ ಕಾರ್ಯ ವಿಧಾನಗಳೂ ಅದರಲ್ಲಿಲ್ಲದಿರುವುದೇ ಕಾರಣ. ಅದನ್ನು ಏಕೆ ಇಷ್ಟಪಟ್ಟರು ಎಂಬುದಕ್ಕೆ ಬೇರೊಂದು ಕಾರಣವೂ ಇದೆ. ಏನೆಂದರೆ, ಅದಕ್ಕೆ ಪೂರ್ವ ನಿದರ್ಶನ ಉಂಟು. ಅದು ಐರಿಷ್‌ನ ಪೂರ್ವನಿದರ್ಶನ. ಬ್ರಿಟಿಷ್ ಸರ್ಕಾರ ತನ್ನ ಪರಮಾಧಿಕಾರ ಬಲದಿಂದ ಐರ್ಲೆಂಡನ್ನು ಭಾಗ ಮಾಡಿ ಉಲ್‌ಸ್ಟರ್ ಸ್ಥಾಪಿಸಿದಂತೆ, ಭಾರತವನ್ನು ಭಾಗ ಮಾಡಿ ಪಾಕಿಸ್ತಾನವನ್ನು ಸ್ಥಾಪಿಸಬಾರದೇಕೆ? ಎಂಬುದು ಲೀಗಿನ ವಾದ.

ಬ್ರಿಟಿಷ್ ಪಾರ್ಲಿಮೆಂಟು ವಿಶ್ವದಲ್ಲೇ ಶ್ರೇಷ್ಠವಾದ ಸರ್ವೋಚ್ಚ ಶಾಸನ ಸಂಸ್ಥೆ. ಇಂಗ್ಲಿಷ್ ಸಂವಿಧಾನದ ಬಗೆಗೆ ಬರೆದ ಫ್ರೆಂಚ್ ಲೇಖಕ ಡಿಲಾಹೋಮ್ 'ಗಂಡನ್ನು ಹೆಣ್ಣನ್ನಾಗಿ ಮತ್ತು ಹೆಣ್ಣನ್ನು ಗಂಡನ್ನಾಗಿ ಮಾಡುವುದನ್ನುಳಿದು' ಬ್ರಿಟಿಷ್ ಪಾರ್ಲಿಮೆಂಟು ಮಾಡಲಾರದಂಥದು ಯಾವುದೂ ಇಲ್ಲ ಎಂದು ಅಭಿಪ್ರಾಯಪಡುತ್ತಾನೆ. ತನ್ನ ಅಧಿಪತ್ಯ ವ್ಯವಹಾರಗಳ ಮೇಲಿನ ಬ್ರಿಟಿಷ್ ಪಾರ್ಲಿಮೆಂಟಿನ ಪರಮಾಧಿಕಾರ ವೆಸ್ಟ್‌ಮಿನಿಸ್ಟರ್ ನಿಬಂಧನೆಯಿಂದ ಸೀಮಿತಗೊಂಡಿದ್ದರೂ ಸಹ, ಭಾರತಕ್ಕೆ ಸಂಬಂಧಿಸಿದ ಮಟ್ಟಿಗೆ ಅಪರಿಮಿತವಾಗಿಯೇ ಇದೆ. ಐರ್ಲೆಂಡಿನ ವಿಷಯದಲ್ಲಿ ಮಾಡಿದಂತೆ ಭಾರತವನ್ನು ವಿಭಾಗ ಮಾಡಲು ಮುಂದುವರಿಯುವ ಬ್ರಿಟಿಷ್ ಪಾರ್ಲಿಮೆಂಟನ್ನು ತಡೆಯುವ ಕಾನೂನು ಯಾವುದೂ ಇಲ್ಲ. ಅದು ಮಾಡಬಲ್ಲುದು. ಆದರೆ ಮಾಡುವುದೆ? ಇದು ಅಧಿಕಾರದ ಪ್ರಶ್ನೆಯಲ್ಲ, ಇಷ್ಟದ ಪ್ರಶ್ನೆ.

ಐರ್ಲೆಂಡಿನ ಪೂರ್ವ ನಿದರ್ಶನವನ್ನು ಬ್ರಿಟಿಷ್ ಸರ್ಕಾರ ಅನುಸರಿಸಬೇಕು ಎಂದು ಒತ್ತಾಯಿಸುವವರು,

ಐರ್ಲೆಂಡನ್ನು ಭಾಗ ಮಾಡಲು ಬ್ರಿಟಿಷ್ ಸರ್ಕಾರವನ್ನು ಮುಂದೆ ಕೊಂಡೊಯ್ದದ್ದು ಯಾವುದು ಎಂದು ಪ್ರಶ್ನಿಸಿಕೊಳ್ಳಬೇಕು. ಬ್ರಿಟಿಷ್ ಸರ್ಕಾರದ ಮನಸ್ಸಾಕ್ಷಿ, ಅವರು ಹಿಡಿದ ಮಾರ್ಗದ ಮಂಜೂರಾತಿಗೆ ಕೊಂಡೊಯ್ದಂತೆ ಅಥವಾ ಶರಣಾಗಬೇಕಾದ ಸನ್ನಿವೇಶಗಳಿಂದ ಅದು ಅವರ ಮೇಲೆ ಹೇರಲ್ಪಟ್ಟಿತೆ? ಐರ್ಲೆಂಡಿನ ವಿಂಗಡಣೆ ಮನಸ್ಸಾಕ್ಷಿಯಿಂದ ಮಂಜೂರಾದುದಲ್ಲ, ಸನ್ನಿವೇಶಗಳ ಬಲಾತ್ಕಾರದಿಂದ ಆದದ್ದು ಎಂದು ಐರಿಷ್ ಸ್ವರಾಜ್ಯ ಇತಿಹಾಸದ ವಿದ್ಯಾರ್ಥಿ ಒಪ್ಪಿಕೊಳ್ಳಲೇಬೇಕಾಗುತ್ತದೆ. ಐರಿಷ್ ವಿವಾದಕ್ಕೆ ಸಂಬಂಧಿಸಿದ ಯಾವ ಪಕ್ಷಕ್ಕೂ ಐರಿಷ್‌ನ ವಿಂಗಡಣೆಯ ಬಯಕೆ ಇರಲಿಲ್ಲ ಎಂಬುದನ್ನು ಕೆಲವು ವೇಳೆ ಸರಿಯಾಗಿ ಅರ್ಥ ಮಾಡಿಕೊಳ್ಳುವುದಿಲ್ಲ. ಉಲ್‌ಸ್ಟರ್ ನಾಯಕನಾದ ಕಾರ್ಸನ್‌ಗೂ ಇಷ್ಟವಿರಲಿಲ್ಲ. ಕಾರ್ಸನ್ ಪ್ರಜಾಸರ್ಕಾರಕ್ಕೆ (ಹೋಂ ರೂಲ್) ವಿರೋಧವಾಗಿದ್ದ. ಆದರೆ, ವಿಭಜನೆಯ ಪರವಾಗಿರಲಿಲ್ಲ. ಹೋಂ ರೂಲನ್ನು ವಿರೋಧಿಸುವುದು ಮತ್ತು ಐರ್ಲೆಂಡಿನ ಸಮಗ್ರತೆಯನ್ನು ರಕ್ಷಿಸುವುದು ಅವನ ಪ್ರಮುಖ ನಿಲುವಾಗಿತ್ತು. ಹೋಂ ರೂಲಿನ ಹೇರಿಕೆಯ ವಿರುದ್ಧ ದ್ವಿತೀಯ ಶ್ರೇಣಿಯ ರಕ್ಷಣೋಪಾಯವಾಗಿ ಮಾತ್ರ ವಿಭಜನೆಗೆ ಒತ್ತಾಯಿಸಿದ. ಕಾಮನ್ಸ್ ಸಭೆಯ ಒಳಗೆ ಮತ್ತು ಹೊರಗೆ ಅವನು ಮಾಡಿದ ಭಾಷಣಗಳಿಂದ ಅದು ಸ್ಪಷ್ಟವಾಗುತ್ತದೆ. ಬೇರೊಂದು ಅಸ್‌ಕ್ವಿತನ ಸರ್ಕಾರ ವಿಭಜನೆಗೆ ಅಷ್ಟೇ ವಿರೋಧವಾಗಿತ್ತು. ೧೯೧೨ರಲ್ಲಿ ಐರಿಷ್ ಹೋಂ ರೂಲ್ ಮಸೂದೆಯನ್ನು ಕುರಿತ ಕಾಮನ್ಸ್ ಸಭೆಯ ನಡೆವಳಿಕೆಗಳಿಂದ ಇದು ಗೊತ್ತಾಗುತ್ತದೆ. ಮಸೂದೆಯ ಮುನ್ನೇಮಕಗಳಿಂದ ಉಲ್‌ಸ್ಟರನ್ನು ಹೊರತುಪಡಿಸಬೇಕೆಂಬ ಎರಡು ತಿದ್ದುಪಡಿಗಳನ್ನು ತರಲಾಯಿತು. ಒಂದು: ಶ್ರೀಯುತ ಅಗರ್ ರಾರ್ಬಟ್ಸ್‌ನಿಂದ ಸಮಿತಿಯ ವೇದಿಕೆಯಲ್ಲಿ; ಎರಡು: ಅವರ ಮೂರನೆಯ ಪಠಣದಲ್ಲಿ ಕಾರ್ಸನ್‌ನಿಂದ. ಎರಡು ಬಾರಿಯೂ ಸರ್ಕಾರ ವಿರೋಧಿಸಿತು. ತಿದ್ದುಪಡಿಗಳು ಬಿದ್ದುಹೋದವು. ಐರ್ಲೆಂಡಿನ ಶಾಶ್ವತ ವಿಭಜನೆಯನ್ನು ೧೯೨೦ರಲ್ಲಿ ಶ್ರೀಯುತ ಲಾಯ್ಡ್ ಜಾರ್ಜ್ ತನ್ನ ಸರ್ಕಾರದ ಐರ್ಲೆಂಡ್ ಶಾಸನದ ಮೂಲಕ ಜಾರಿಗೊಳಿಸಿದ ಐರ್ಲೆಂಡಿನ ವಿಭಜನೆಯ ವಿಷಯ ಪ್ರಸ್ತಾಪಕ್ಕೆ ಬಂದದ್ದು ಇದು ಮೊದಲನೆಯ ಸಲ ಎಂದು ಅನೇಕರು ಯೋಚಿಸಿದರು. ಇದಕ್ಕೆ ಕಾರಣವೆಂದರೆ ಸಮ್ಮಿಶ್ರ ಸರ್ಕಾರದ ನಾಮಕಾವಸ್ಥೆ ಮುಖ್ಯಸ್ಥನಾಗಿ ಲಾಯ್ಡ್ ಜಾರ್ಜ್ ಇದ್ದಾಗ ಸಂಪ್ರದಾಯ ಐಕ್ಯತಾವಾದಿಗಳ ದಬ್ಬಾಳಿಕೆ ಬಹಳವಿತ್ತು. ತನ್ನ ಸಮ್ಮಿಶ್ರ ಸರ್ಕಾರದ ಪ್ರಬಲ ಪಕ್ಷದ ಪ್ರಭಾವಕ್ಕೆ ಶ್ರೀಯುತ ಲಾಯ್ಡ್ ಜಾರ್ಜ್ ಬಲಿಯಾದ ಎಂಬುದು ನಿಜವಿರಬಹುದು. ಆದರೆ ೧೯೨೦ರಲ್ಲಿ ಮೊದಲ ಬಾರಿಗೆ ವಿಭಜನೆಯ ವಿಚಾರ ಪ್ರಸ್ತಾಪಕ್ಕೆ ಬಂತು ಎಂಬುದು ನಿಜವಲ್ಲ. ಉದಾರ ಪಕ್ಷ (ಲಿಬರಲ್ ಪಾರ್ಟಿ) ಬದಲಾವಣೆಗೊಳ್ಳಲಿಲ್ಲ ಮತ್ತು ಸಾಧ್ಯ ಪರಿಹಾರವೆಂದು ವಿಭಜನೆಯನ್ನು ಸಮರ್ಥಿಸುವ ತನ್ನ ಸಿದ್ಧತೆಯನ್ನೂ ತೋರಗೊಡಲಿಲ್ಲ ಎಂಬುದೂ ನಿಜವಲ್ಲ. ವಾಸ್ತವ ಸಂಗತಿ ಎಂದರೆ ಶ್ರೀಯುತ ಲಾಯ್ಡ್ ಜಾರ್ಜನ ಶಾಸನ ಬರುವುದಕ್ಕಿಂತ ಆರು ವರ್ಷಗಳ ಮುಂಚೆಯೇ ಅಸ್‌ಕ್ವಿತನ ಸರ್ಕಾರ– ಶುದ್ಧಾಂಗವಾಗಿ ಲಿಬರಲ್ ಸರ್ಕಾರ ಅಸ್ತಿತ್ವದಲ್ಲಿದ್ದಾಗ ೧೯೧೪ರಲ್ಲಿ ಈ ವಿಭಜನೆ, ಪರಿಹಾರವೆಂದು ಪ್ರಸ್ತಾಪಕ್ಕೆ ಬಂತು. ಅಸ್‌ಕ್ವಿತನ ಲಿಬರಲ್ ಸರ್ಕಾರ ತನ್ನ ನಿಲುವನ್ನು ಬದಲಾಯಿಸಲು ಕಾರಣವಾದ ಸಂಗತಿಗಳ ಪರೀಕ್ಷೆಯಿಂದ ಮಾತ್ರ ಐರ್ಲೆಂಡಿನ ವಿಭಜನೆಗೆ ತನ್ನನ್ನು ದೂಡಿದ ನಿಜವಾದ ಕಾರಣವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ. ಲಿಬರಲ್ ಸಕಾರದ ನಿಲುವಿನ ಬದಲಾವಣೆಗೆ ಕಾರಣವಾದ ಸಂಗತಿ ಎಂದರೆ ೧೯೧೪ರ ಮಾರ್ಚ್‌ನಲ್ಲಿ ಸಂಭವಿಸಿದ– ಸಾಧಾರಣವಾಗಿ ಅದನ್ನು "ಕರ್‍ರಾಗ್ ಘಟನೆ" ಎಂದು ಹೆಸರಿಸಲಾಗುತ್ತದೆ– ಸೈನಿಕ ಬಿಕ್ಕಟ್ಟು ಎಂಬುದು ನನ್ನ ದೃಢ ನಿಲುವು. "ಕರ್‍ರಾಗ್ ಘಟನೆ" ಎಂದರೆ ಏನು? ಅಸ್‌ಕ್ವಿತನ ಸರ್ಕಾರದ ಕಾರ್ಯ ನೀತಿಯಲ್ಲಿ ಬದಲಾವಣೆ ತರುವಲ್ಲಿ ಅದು ಎಂಥ ನಿರ್ಣಾಯಕ ಪಾತ್ರ ವಹಿಸಿತು ಎಂಬುದನ್ನು ವಿವರಿಸಲು ಕೆಲವು ಸಂಗತಿಗಳು ಸಾಕು.

ಅನುಕೂಲ ಬಿಂದುವಿನಿಂದ ಆರಂಭ ಮಾಡುವುದಾದರೆ, ಐರಿಷ್ ಪ್ರಜಾಸರ್ಕಾರ ಮಸೂದೆ (ಐರಿಷ್ ಹೋಮ್ ರೂಲ್ ಬಿಲ್) ೧೯೧೩ರ ಕೊನೆಯ ಭಾಗದಲ್ಲಿ ತನ್ನ ಎಲ್ಲ ಘಟ್ಟಗಳ ಮೂಲಕ ಹಾದು ಬಂದಿತ್ತು. ಚುನಾಯಕ ಸಮುದಾಯದ ಸಲಹೆ ಇಲ್ಲದೆ ಶ್ರೀ ಅಸ್‌ಕ್ವಿತ್ ಮುಂದುವರಿಯುತ್ತಿದ್ದಾನೆಂದು ಅವನನ್ನು ತರಾಟೆಗೆ ತೆಗೆದುಕೊಂಡು ಪ್ರತಿಭಟಿಸಿದಾಗ, ಇನ್ನೊಂದು ಸಾಮಾನ್ಯ ಚುನಾವಣೆ ನಡೆಯುವವರೆಗೂ ಈ ಶಾಸನವನ್ನು ಜಾರಿಗೊಳಿಸುವುದಿಲ್ಲ ಎಂದು ವಾಗ್ದಾನ ಮಾಡಬೇಕಾಯಿತು. ಸಾಮಾನ್ಯ ಸಂದರ್ಭವಾಗಿದ್ದರೆ, ಯುದ್ಧ ಸಂಭವಿಸದಿದ್ದರೆ, ೧೯೧೫ರಲ್ಲಿ ಸಾಮಾನ್ಯ ಚುನಾವಣೆ ನಡೆದುಹೋಗುತ್ತಿತ್ತು. ಆದರೆ ಉಲ್‌ಸ್ಟರ್ ಜನತೆ ಸಾಮಾನ್ಯ ಚುನಾವಣೆಯಲ್ಲಿ ಭಾಗವಹಿಸಲು ತಯಾರಿರಲಿಲ್ಲ. ಆದ್ದರಿಂದ ಹೋಂ ರೂಲನ್ನು ವಿರೋಧಿಸಲು ಸಕ್ರಿಯ ಕ್ರಮಗಳನ್ನು ಕೈಗೊಳ್ಳಲಾರಂಭಿಸಿದರು. ಅವರು ತಮ್ಮ ಸಾಧನಗಳನ್ನು ಮತ್ತು ವಿಧಾನಗಳನ್ನು ಆಯ್ಕೆ ಮಾಡಿಕೊಳ್ಳುವುದರಲ್ಲಿ ತುಂಬ ಎಚ್ಚರಿಕೆಯ ಕಟ್ಟುನಿಟ್ಟಿನ ಜನರಲ್ಲ, ರಾಜನ ನಿಷ್ಠಾವಂತ ಪ್ರಜೆಗಳಾಗಿ ಉಳಿಯಲು ತಮ್ಮನ್ನು ಅಡ್ಡಿಪಡಿಸುತ್ತಿರುವ ಸರ್ಕಾರದ ವಿರುದ್ಧ ಹೋರಾಡುತ್ತಿದ್ದೇವೆ ಎಂಬ ಆಕರ್ಷಕ ಭಂಗಿಯಲ್ಲಿ, ಅವರನ್ನು ದುಷ್ಟರು ಮತ್ತು ನಾಚಿಕೆಗೆಟ್ಟವರು ಎಂದು ಕರೆಯಲು ಯಾರೂ ಹಿಂದು ಮುಂದು ನೋಡದಂಥ ಮಾರ್ಗವನ್ನು ಆಶ್ರಯಿಸಿದರು. ಉಲ್‌ಸ್ಟರ್ ಜನತೆ ಹೋಂ ರೂಲನ್ನು ಬೀಳಿಸಲು ನಂಬಿಕೊಂಡಿರುವ ಮ್ಯಾಗಿನೊಟ್ ಮಾರ್ಗವೊಂದಿದೆ. ಅದು ಶ್ರೀಮಂತರ ಸಭೆ. ಆದರೆ ೧೯೧೧ರ ಶಾಸನದಿಂದ ಈ ಶ್ರೀಮಂತರ ಸಭೆ ಇತ್ತ ಸುಭದ್ರವೂ ಅಲ್ಲದ, ಅತ್ತ ಉನ್ನತವೂ ಅಲ್ಲದ, ಗೋಳುಗರೆಯುವ ಗೋಡೆಯಾಗಿ ಉಳಿಯಿತು. ನಂಬಿಕೊಳ್ಳುವ ರಕ್ಷಣಾಮಾರ್ಗ ನಿಂತುಹೋಯಿತು. ಶ್ರೀಮಂತರ ಸಭೆಯ ನಿರಾಕರಣೆಯನ್ನು ಲೆಕ್ಕಿಸದೆ ಮಸೂದೆ ಅಂಗೀಕೃತವಾಗಬಹುದೆಂದು ತಿಳಿದು, ಮುಂದಿನ ಚುನಾವಣೆಯಲ್ಲಿ ಅಸ್‌ಕ್ವಿತ್ ಜಯಗಳಿಸಬಹುದೆಂದು ಭಾವಿಸಿ, ಉಲ್‌ಸ್ಟರ್ ಜನರು ಹತಾಶರಾದರು. ಬೇರೊಂದು ರಕ್ಷಣಾಮಾರ್ಗ ಹುಡುಕಾಡಲಾರಂಭಿಸಿದರು. ಅದನ್ನು ಅವರು ಸೈನ್ಯದಲ್ಲಿ ಕಂಡರು. ಯೋಜನೆ ಎರಡು ಬಗೆಯದಾಗಿತ್ತು. ಉಲ್‌ಸ್ಟರ್ ವಿರುದ್ಧ ಬಳಸಲು ಸೈನ್ಯ ಅಸ್ತಿತ್ವದಲ್ಲಿಲ್ಲ ಎಂದು ರುಜುವಾತುಪಡಿಸುವಂತೆ, ವಾರ್ಷಿಕ ಸೈನ್ಯ ಶಾಸನವನ್ನು ಶ್ರೀಮಂತರ ಸಭೆ ತಡೆಹಿಡಿಯಬೇಕೆಂಬ ಹಂಚಿಕೆಯನ್ನು ಅದು ಒಳಗೊಂಡಿತ್ತು. ಎರಡನೆಯ ಹಂಚಿಕೆಯಿಂದಲೇ, ಐರ್ಲೆಂಡಿನ ಮೇಲೆ ಹೋಂ ರೂಲನ್ನು ಹೇರಲು ಸರ್ಕಾರ ಸೈನ್ಯ ಬಳಕೆಯ ನಿರ್ಧಾರವನ್ನು ಕೈಗೊಂಡರೆ, ಆಗ ಅದನ್ನು ತಿರಸ್ಕರಿಸುವಂತೆ ಸೈನ್ಯವನ್ನು ಸಿದ್ಧಗೊಳಿಸುವ ದೃಷ್ಟಿಯಿಂದ "ಆ ಹೋಂ ರೂಲ್ (ಪ್ರಜಾ ಸರ್ಕಾರ) ಹೋಂ ರೂಲೇ ಎಂಬ ತಮ್ಮ ಪ್ರಚಾರವನ್ನು ಸೈನ್ಯದಲ್ಲಿ ಹರಡತೊಡಗಿದ್ದ. ಎರಡನೆಯದನ್ನು ಸುಲಭವಾಗಿ ಕಾರ್ಯಗತಗೊಳಿಸುವುದರಲ್ಲಿ ಅವರು ಸಫಲರಾದುದರಿಂದ, ಮೊದಲನೆಯದು ಅನವಶ್ಯಕವಾಯಿತು. ೧೯೧೪ರಲ್ಲಿ "ಕರ್‍ರಾಗ್ ಘಟನೆ" ಸಂಭವಿಸಿದಾಗ ಅದು ಸ್ಪಷ್ಟವಾಯಿತು. ಐರ್ಲೆಂಡಿನ ಕೆಲವು ಸೈನಿಕ ಠಾಣ್ಯಗಳು ಐಕ್ಯತಾವಾದಿ ಸ್ವಯಂಸೇವಕರಿಂದ ಧಾಳಿಗೊಳಗಾಗುವ ಸಂಭವ ಇತ್ತು ಎಂದು ಸರ್ಕಾರ ಅನುಮಾನಿಸಲು ಕಾರಣಗಳಿವೆ. ಮಾರ್ಚ್ ಇಪ್ಪತ್ತರಂದು ಐರ್ಲೆಂಡಿನ ಪ್ರಧಾನ ಸೇನಾಧಿಪತಿಯಾದ ಸರ್ ಆರ್ಥರ್ ಪಗೆಟ್‌ಗೆ ಆ ಠಾಣ್ಯಗಳ ರಕ್ಷಣೆಗೆ ಕ್ರಮ ಕೈಗೊಳ್ಳಬೇಕೆಂದು ಆಜ್ಞೆಯನ್ನು ರವಾನಿಸಲಾಯಿತು. ಅವನ ಮಾರುತ್ತರ ಕೇವಲ ಒಂದು ತಂತಿ ಸಂದೇಶ– ಅಧಿಕಾರಿಗಳು ಅದನ್ನು ನಡೆಸಲು ಸಿದ್ಧರಿಲ್ಲವೆಂದೂ, ತಮ್ಮ ತಮ್ಮ ನಿಯೋಜಿತಾಧಿಕಾರಕ್ಕೆ ರಾಜೀನಾಮೆ ಕೊಡುತ್ತಿರುವರೆಂದೂ, ಜನರೂ ಇದನ್ನು ತಿರಸ್ಕರಿಸುವ ಭಯವಿದೆಯೆಂದೂ ಆ ಸಂದೇಶದ ಸಾರಾಂಶ. ಜನರಲ್ ಸರ್ ಹ್ಯೂಬರ್ಟ್ ಗೋಫ್ ಐಕ್ಯತಾವಾದಿಗಳ ವಿರುದ್ಧ ಕೆಲಸ ಮಾಡಲು ನಿರಾಕರಿಸಿದ; ಉಳಿದವರು ಅವನನ್ನು ಅನುಸರಿಸಿದರು. ಸೈನ್ಯ

ರಾಜಕೀಯಕ್ಕೆ* ಒಳಗಾಯಿತು, ಅಲ್ಲ ಪಕ್ಷಪಾತಕ್ಕೊಳಗಾಯಿತು ಎಂದು ಸರ್ಕಾರ ಮನಗಂಡಿತು. ಅದು ದಿಗಿಲುಗೊಂಡು 'ವಿವೇಕವು ಪರಾಕ್ರಮದ ಉತ್ತಮಾಂಶ' ಎಂಬ ಸುಪ್ರಸಿದ್ಧ ಸಾರ್ವತ್ರಿಕ ತತ್ತ್ವದಿಂದ ಪ್ರಚೋದಿತವಾಗಿ ವಿಭಜನೆಯ ಪರವಾಗಿ ನಿರ್ಧಾರ ಕೈಗೊಂಡಿತು. ಅಸ್‌ಕ್ವಿತ್‌ನ ನಿಲುವಿನ ಬದಲಾವಣೆಗೆ ಕಾರಣವಾದದ್ದು ಮನಸ್ಸಾಕ್ಷಿಯಲ್ಲ. ಸೈನ್ಯ ದಂಗೆಯೆದ್ದೀತು ಎಂಬ ಭೀತಿ. ಆ ಭೀತಿ ಎಷ್ಟು ಭಯಂಕರವಾಗಿತ್ತೆಂದರೆ ಆಮೇಲೆ ಯಾರೂ ಸೈನ್ಯವನ್ನು ಪ್ರಶ್ನಿಸುವ, ಹೋಂ ರೂಲನ್ನು ಹೇರುವ ಧೈರ್ಯ ಮಾಡಲಿಲ್ಲ– ವಿಭಜನೆ ಹೊರತು.

ಘನತೆವೆತ್ತ ಮಹಾಪ್ರಭುಗಳ ಸರ್ಕಾರ ಐರ್ಲೆಂಡಿನಲ್ಲಿ ಮಾಡಿದ್ದನ್ನು ಭಾರತದಲ್ಲಿ ಪುನರಾವೃತ್ತಿ ಮಾಡಬಲ್ಲುದೆ? ಪ್ರಶ್ನೆಗೆ ಉತ್ತರಿಸಲು ನಾನು ಅಸಮರ್ಥ. ಆದರೆ ಎರಡು ಸಂಗತಿಗಳನ್ನು ನಾನು ಹೇಳಬಯಸುತ್ತೇನೆ. ಮೊದಲನೆಯ ಸಂಗತಿ ಐರ್ಲೆಂಡಿನ ವಿಭಜನೆಯ ಪರಿಣಾಮಗಳೇನು ಎಂಬುದನ್ನು ಘನತೆವೆತ್ತ ಮಹಾಪ್ರಭುಗಳ ಸರ್ಕಾರ ಚೆನ್ನಾಗಿ ಅರ್ಥ ಮಾಡಿಕೊಂಡಿದೆ. ಐರಿಷಿನ ಸ್ವತಂತ್ರ ರಾಜ್ಯ, ಗ್ರೇಟ್ ಬ್ರಿಟನ್ನಿನ ಬದ್ಧವೈರದ ಶತ್ರುವಾಯಿತು. ದ್ವೇಷಕ್ಕೆ ಎಲ್ಲೆ ಇಲ್ಲ. ವಿಭಜನೆ ತೀರ್ಮಾನಗೊಂಡ ಸತ್ಯವಾಗಿ ಉಳಿಯುವವರೆಗೆ, ವಿಭಜನೆಯಿಂದುಂಟಾದ ಗಾಯ ಎಂದಿಗೂ ಮಾಯುವುದಿಲ್ಲ. ಐರ್ಲೆಂಡಿನ ವಿಭಜನೆ ನೈತಿಕವಾಗಿ ಸಮರ್ಥಿಸಲಾಗದ್ದು ಎಂದೂ ಹೇಳಲಾಗುವುದಿಲ್ಲ. ಅಷ್ಟೇ ಮಟ್ಟಿಗೆ ಅದು ಜನತೆಯ ಅಂಗೀಕಾರದಿಂದಾದ ಫಲಿತಾಂಶವಲ್ಲ, ಉಚ್ಚತಮ ಶಕ್ತಿಯಿಂದಾದ್ದು ಎಂದೂ ಹೇಳಲಾಗುವುದಿಲ್ಲ. ಮ್ಯಾಕ್‌ಬೆತ್ತನಿಂದಾದ ಡಂಕನನ ಕೊಲೆಯಷ್ಟೇ ಅದು ಕೆಟ್ಟದ್ದು. ಘನತೆವೆತ್ತ ಮಹಾಪ್ರಭುಗಳ ಸರ್ಕಾರದ ಮೇಲೆ ಉಳಿಯುವ ರಕ್ತಕಲೆಗಳು ಶ್ರೀಮತಿ ಮ್ಯಾಕಬೆತಳ ಮೇಲೆ ಉಳಿದ ಕಲೆಗಳಷ್ಟೇ ಘೋರವಾಗಿರುತ್ತವೆ. ಅದರಿಂದಲೇ "ಅರೇಬಿಯಾದ ಸಮಸ್ತ ಪರಿಮಳ ಪುಂಜ" ಆ ದುರ್ವಾಸನೆಯನ್ನು ಹೋಗಲಾಡಿಸಲು ವಿಫಲವಾಯಿತು ಎಂದು ಶ್ರೀಮತಿ ಮ್ಯಾಕ್‌ಬೆತ್ ಹೇಳಿದ್ದು. ಘನತೆವೆತ್ತ ಮಹಾಪ್ರಭುಗಳ ಸರ್ಕಾರ ಇನ್ನೊಂದು ವಿಭಜನೆಯ ಸಾಹಸ ಕಾರ್ಯದ ಅನುಷ್ಠಾನಕ್ಕೆ ಜವಾಬ್ದಾರಿಯಾಗಲು ಇಷ್ಟಪಡುವುದಿಲ್ಲ ಎಂಬುದು ಸ್ಪಷ್ಟ– ಪ್ಯಾಲೆಸ್ಟೈನಿನ ಯೆಹೂದ್ಯ–ಅರಬರ ಸಮಸ್ಯೆಯ ಬಗ್ಗೆ ಅದು ಅನುಸರಿಸಿದ ಕಾರ್ಯನೀತಿಯಿಂದ ಅದು ತನಿಖೆಗಾಗಿ ಪೀಲ್ ಆಯೋಗವನ್ನು ನೇಮಕ ಮಾಡಿತು. ಆಯೋಗ ಪ್ಯಾಲೆಸ್ಟೈನಿನ ವಿಭಜನೆಗೆ ಶಿಫಾರಸ್ಸು ಮಾಡಿತು. ಬಿಕ್ಕಟ್ಟನ್ನು ಬಗೆಹರಿಸುವ ಭರವಸೆಯ ಮಾರ್ಗವದು ಎಂಬಂತೆ ಸರ್ಕಾರ ಅದನ್ನು ತಾತ್ತ್ವಿಕವಾಗಿ ಒಪ್ಪಿಕೊಂಡಿತು.** ಅರಬರ ಮೇಲೆ ಅಂಥ ಪರಿಹಾರವನ್ನು ಹೇರುವುದರ ಗುರುತ್ವ ಶಕ್ತಿ ಏನು ಎಂಬುದನ್ನು ಅರ್ಥ ಮಾಡಿಕೊಂಡ ಸರ್ಕಾರ ಕೂಡಲೇ ಬೇರೊಂದು ರಾಯಲ್ ಆಯೋಗವನ್ನು ಉಡ್ ಹೆಡ್ ಆಯೋಗವೆಂಬ ಹೆಸರಿನ ನೇಮಕ ಮಾಡಿದಾಗ ಅದು ವಿಭಜನೆಯನ್ನು ಖಂಡಿಸಿತು ಹಾಗೂ ಭಯಂಕರ

---

* ಈ ವಿಷಯದ ಬಗ್ಗೆ ಮೇಜರ್ ಜನರಲ್ ಸರ್ ಸಿ.ಇ. ರಾಲ್‌ವೆಲ್ಲ "ಲೈಫ್ ಆಫ್ ಫೀಲ್ಡ್ ಮಾರ್ಷಲ್ ಸರ್ ಹೆನ್ರಿ ವಿಲ್ಸನ್" ಎಂಬ ಗ್ರಂಥ ನೋಡಿ, ಸಂ.೧, ಅಧ್ಯಾಯ ೯, ಉಲ್‌ಸ್ಟರ್ ಮತ್ತು ಸೈನ್ಯದ ಬಗೆಗಿನ "ಪಾರ್ಲಿಮೆಂಟರಿ ಡಿಟೇಲ್ಸ್ (ಹೌಸ್ ಆಫ್ ಲಾರ್ಡ್ಸ್)" ೧೯೧೪, ಸಂ. ೧೫, ಪು. ೯೮೮–೧೦೧೭ ಎಂಬುದನ್ನೂ ನೋಡಿ. 'ಕರ್‍ರಾಗ್ ಘಟನೆ'ಗೂ ಬಹಳ ಹಿಂದೆಯೇ ಉಲ್‌ಸ್ಟರ್ ಜನ ಸೈನ್ಯಯದ ಮನಸ್ಸನ್ನು ಗೆದ್ದಿತ್ತು ಎಂಬುದು ಗೊತ್ತಾಗುತ್ತದೆ. ಆರು ವರ್ಷಗಳ ಕಾಲ ಹೋಂ ರೂಲಿನಿಂದ ಉಲ್‌ಸ್ಟರನ್ನು ಹೊರಗಿಡುವ ತಿದ್ದುಪಡಿ ಮಸೂದೆಯನ್ನು ತರಲು ೧೯೧೩ರಲ್ಲಿ ಅಸ್‌ಕ್ವಿತ್ ನಿರ್ಧರಿಸಿದ್ದು ಏಕೆಂದರೆ ಸೈನ್ಯ ಉಲ್‌ಸ್ಟರಿಗೆ ಹೋಗಿದ್ದರೂ, ಹೋಂ ರೂಲನ್ನು ಹೇರಲು ಅದನ್ನು ಬಳಸಲಾಗುತ್ತಿಲ್ಲ.

** ನೋಡಿ: ಪಾರ್ಲಿಮೆಂಟರಿ ಡಿಬೇಟ್ಸ್ (ಹೌಸ್ ಆಫ್ ಕಾಮನ್ಸ್) ೧೯೩೮–೩೯, ಸಂ. ೩೪೧, ಪು. ೧೯೮೭–೨೧೦೭, ಇದನ್ನೂ ನೋಡಿ ಹೌಸ್ ಆಫ್ ಲಾರ್ಡ್ಸ್ ೧೯೩೬–೩೭, ಸಂ. ೧೦೬, ಪು. ೫೯–೬೭೪.

ಸ್ಥಿತಿಯಿಂದ ಬಿಡಿಸಿಕೊಳ್ಳಲು ತವಕಿಸುತ್ತ ಸರ್ಕಾರಕ್ಕೆ ಸುಲಭ ದಾರಿಯೊಂದನ್ನು ತೆರೆಯಿತು. ಐರ್ಲೆಂಡಿನ ವಿಭಜನೆ ಅನುಸರಿಸಲು ಯೋಗ್ಯವಾದ ಪೂರ್ವನಿದರ್ಶನವಲ್ಲ. ಅದೊಂದು ಘೋರಘಟನೆ– ತ್ಯಜಿಸಬೇಕಾದದ್ದು. ಅದು ಎಚ್ಚರಿಕೆಯೇ ವಿನಾ ಉದಾಹರಣೆಯಲ್ಲ. ಘನತೆವೆತ್ತ ಮಹಾಪ್ರಭುಗಳ ಸರ್ಕಾರ ಮುಸ್ಲಿಂ ಲೀಗಿನ ಅಪ್ಪಣೆಯ ಮೇರೆಗೆ ತನ್ನ ಅಧಿಕಾರ ಬಲದಿಂದಲೇ ಭಾರತವನ್ನು ವಿಭಜಿಸುವುದು ಎಂಬುದರ ಬಗ್ಗೆ ನನಗೆ ಪೂರ್ಣ ಸಂದೇಹವಿದೆ.

ಘನತೆವೆತ್ತ ಮಹಾಪ್ರಭುಗಳ ಸರ್ಕಾರ ಏಕೆ ಮುಸ್ಲಿಂ ಲೀಗಿಗೆ ಮನ್ನಣೆಪಡಿಸಬೇಕು? ಉಲ್‌ಸ್ಟರಿನ ವಿಷಯದಲ್ಲಿ ರಕ್ತ ಸಂಬಂಧವಿತ್ತು. ಆದ್ದರಿಂದಲೇ ಬ್ರಿಟಿಷ್ ರಾಜಕಾರಣಿಗಳ ಪ್ರಬಲ ತಂಡ ಉಲ್‌ಸ್ಟರಿನ ಪಕ್ಷವನ್ನು ವಹಿಸಿಕೊಂಡಿತು. ಈ ರಕ್ತಸಂಬಂಧವೇ ಲಾರ್ಡ್ ಕರ್ಜನ್‌ನನ್ನು ಹೀಗೇ ಹೇಳುವಂತೆ ಮಾಡಿದ್ದು– "ಹಾಲಿ ಇರುವ ಗಂಡನೊಡನೆ ವಿವಾಹ ವಿಚ್ಛೇದನ ಮಾಡಿಕೊಳ್ಳಬೇಕೆಂದು ನೀವು ಒತ್ತಾಯಿಸುತ್ತಿದ್ದೀರಿ. ಅವನಿಗೆ ಅಪನಂಬಿಕಸ್ಥಳಲ್ಲ; ಬೇರೊಬ್ಬನನ್ನು ಮದುವೆಯಾಗಲೂ ನೀವು ಬಲಾತ್ಕರಿಸುತ್ತೀರಿ. ಅವನನ್ನು ಆಕೆ ಮನಸಾರೆ ದ್ವೇಷಿಸುತ್ತಾಳೆ. ಅವನೊಡನೆ ಬಾಳುವೆ ಮಾಡಲು ಇಷ್ಟವಿಲ್ಲ." ಮಹಾಪ್ರಭು ಸರ್ಕಾರಕ್ಕೆ ಮುಸ್ಲಿಂ ಲೀಗಿಗೂ ಅಂಥ ರಕ್ತಸಂಬಂಧವಿಲ್ಲ. ಮಹಾಪ್ರಭು ಸರ್ಕಾರ ತನ್ನ ಪಕ್ಷ ವಹಿಸಬೇಕೆಂದು ಮುಸ್ಲಿಂ ಲೀಗ್ ನಿರೀಕ್ಷಿಸುವುದು ವ್ಯರ್ಥ ಹಾರೈಕೆ.

ನಾನು ಹೇಳಬೇಕಾದ ಮತ್ತೊಂದು ವಿಷಯವೆಂದರೆ ತನ್ನ ಇಂಡಿಯಾ ವಿಭಜನೆಯ ಉದ್ದೇಶವನ್ನು ಈಡೇರಿಸಿಕೊಳ್ಳಲು ಸಾರ್ವಭೌಮ ಸರ್ಕಾರದ ಅಧಿಕಾರ ಪ್ರಯೋಗವನ್ನು ಇಚ್ಛಿಸುವುದು ಮುಸ್ಲಿಮ್ ಲೀಗಿನ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ನನ್ನ ಅಭಿಪ್ರಾಯದಲ್ಲಿ ವಿಭಜನೆಯ ನಂತರ ಪಾಕಿಸ್ಥಾನ ಮತ್ತು ಹಿಂದೂಸ್ಥಾನಗಳು ಪರಸ್ಪರ ಅಸೂಯೆಗಳಲ್ಲದೆ ಎರಡು ಮಿತ್ರ ರಾಷ್ಟ್ರಗಳಾಗಿ ಮುಂದುವರಿಯಬೇಕೆಂಬ ಉದ್ದೇಶವಿದ್ದರೆ ಪಾಕಿಸ್ತಾನವನ್ನು ಪಡೆಯುವುದಕ್ಕಿಂತ ಮುಖ್ಯವಾದುದು ಪಾಕಿಸ್ಥಾನವನ್ನು ಪಡೆಯಲು ಅನುಸರಿಸುವ ಪ್ರಕ್ರಿಯೆಯೇ ಆಗಿದೆ.

ಈ ಉದ್ದೇಶದ ಈಡೇರಿಕೆಗೆ ಚೆನ್ನಾಗಿ ಹೊಂದಿಕೊಳ್ಳುವ ಕ್ರಮ ಯಾವುದು? ಒಂದು ಕೋಮಿಗೆ ವಿಜಯವೂ ಮತ್ತೊಂದು ಕೋಮಿಗೆ ಅಪಮಾನವೂ ಆಗದಿರುವಂಥ ಕ್ರಮ ಎಲ್ಲರಿಗೂ ಒಪ್ಪಿಗೆಯಾದದ್ದು. ಎರಡು ಪಕ್ಷಗಳಿಗೂ ಗೌರವಾರ್ಹವಾದ ಶಾಂತಿಯ ವಿಧಾನ ಅದಾಗಿರಬೇಕು. ಈ ಗುರಿ ಮುಟ್ಟಲು ಜನಾಭಿಪ್ರಾಯದ ನಿರ್ಣಯಕ್ಕಿಂತ ಉತ್ತಮವಾದ ಬೇರೊಂದು ಪರಿಹಾರವಿದೆ ಎಂದು ನನಗೆ ಅನ್ನಿಸುವುದಿಲ್ಲ. ಯಾವುದು ಉತ್ತಮ ಮಾರ್ಗ ಎಂಬ ನನ್ನ ಸಲಹೆ ನೀಡಿದ್ದೇನೆ. ಬೇರೆಯವರೂ ತಮ್ಮ ಸಲಹೆಗಳೊಂದಿಗೆ ಮುಂದೆ ಬರಲಿ. ನನ್ನದು ಉತ್ತಮೋತ್ತಮ ಎಂದು ನಾನು ಹೇಳುವುದಿಲ್ಲ. ಆದರೆ ಸಲಹೆ ಯಾವುದಾದರೂ ಆಗಿರಲಿ, ಈ ಸಮಸ್ಯೆಯ ಪರಿಹಾರಕ್ಕೆ ಒಳ್ಳೆಯ ವಿವೇಕ ಹಾಗೂ ಹೊಣೆಗಾರಿಕೆ ಅಡಿಪಾಯವಾಗದ ಹೊರತು, ಅದು ಕೀವಾದ ಹುಣ್ಣಾಗಿ ಉಳಿಯುತ್ತದೆ.

♦

# ಹಿನ್ನುಡಿ

ಇಲ್ಲಿಗೆ ನನ್ನ ಮಾತನ್ನು ಮುಕ್ತಾಯಗೊಳಿಸಬೇಕೆಂದಿದ್ದೇನೆ. ಏಕೆಂದರೆ ವಿಷಯದ ಬಗೆಗೆ ನಾನು ಹೇಳಬಹುದಾದುದನ್ನೆಲ್ಲ ಹೇಳಿ ಆಯಿತು ಎಂದು ನನಗನಿಸುತ್ತಿದೆ. ಕಾನೂನಿನ ಭಾಷೆಯಲ್ಲಿ ಹೇಳುವುದಾದರೆ, ನನ್ನ ಆಮೂಲಾಗ್ರ ವಾದವನ್ನು ಪರಿಸಮಾಪ್ತಿಗೊಳಿಸಲಾಯಿತು. ಇದನ್ನು ಸುದೀರ್ಘವಾಗಿ ಮಾಡಿರುತ್ತೇನೆ ಎಂದೂ ನಾನು ವಾದಿಸಬಹುದು. ಹೀಗೆ ವಾದಿಸಿದ್ದಾಗ, ವಿಕ್ಟೋರಿಯನ್ ವಕೀಲರಿಗೆ ಬಹುಪ್ರಿಯವಾಗಿರುವ ವಾದ ಪ್ರತಿವಾದ, ಪ್ರತ್ಯುತ್ತರ–ಖಂಡನೆ, ಪ್ರತ್ಯುತ್ತರಕ್ಕೆ ಉತ್ತರ–ಖಂಡನೆಗೆ ಪ್ರತಿಖಂಡನೆ– ಇತ್ಯಾದಿಗಳನ್ನು ಬಳಸಿ ಎರಡೂ ಕಡೆಯವರು ವಿರೋಧಿಗಳ ಮೇಲೆ ಧಾಳಿ ಹೂಡುವ ಶೈಲಿಯನ್ನು ನಾನು ಬಳಸಿದ್ದೇನೆ. ಪಾಕಿಸ್ತಾನದ ಪರ ಮತ್ತು ವಿರೋಧ ಏನೇನು ಕಾರಣಗಳು ಇವೆ ಎಂಬುದನ್ನು ಸಂಪೂರ್ಣವಾಗಿ ಮುಂದಿಡಬೇಕೆಂಬ ಉದ್ದೇಶದಿಂದ ಬೇಕೆಂದೇ ನಾನು ಹೀಗೆ ಮಾಡಿರುವುದು. ಈವರೆಗಿನ ಪುಟಗಳಲ್ಲಿರುವುದು ಈ ಕಾರಣಗಳ ಮತ್ತು ವಾದದ ಲಿಖಿತರೂಪ. ಅಲ್ಲಿರುವ ವಸ್ತುಸಂಗತಿಗಳೆಲ್ಲ ನನ್ನ ಅತ್ಯುತ್ತಮ ತಿಳಿವಳಿಕೆ ಮತ್ತು ನಂಬಿಕೆಯ ಮಟ್ಟಕ್ಕೆ ಸತ್ಯವಾದಂಥವು. ನನಗೆ ದೊರಕಿರುವ ಫಲಿತಗಳನ್ನು ಸಹ ನಾನು ಕೊಟ್ಟಿರುತ್ತೇನೆ. ಈಗ ನಮ್ಮ ಫಲಿತಗಳನ್ನು ಕೊಡಬೇಕಾದದ್ದು ಹಿಂದೂಗಳ ಮತ್ತು ಮುಸ್ಲಿಮರ ಕರ್ತವ್ಯ.

ಚರ್ಚೆಗೆ ಒಳಗಾದ ವಿಷಯಗಳನ್ನು ಸ್ಪಷ್ಟವಾಗಿ ಮುಂದಿಟ್ಟರೆ ಈ ಕೆಲಸದಲ್ಲಿ ಅವರಿಗೆ ಸಹಾಯ ಮಾಡಿದಂತಾಗಬಹುದು. ನಾನು ಮುಂದಿಟ್ಟ ಕಾರಣ ಮತ್ತು ವಾದಗಳಲ್ಲಿ ಈ ಕೆಳಗಿನ ವಿಷಯಗಳು ಅಗತ್ಯವಾದಂಥವು ಎಂದು ಕಾಣುತ್ತವೆ:

(೧) ಭಾರತ ರಾಜಕೀಯ ಮುನ್ನಡೆಗೆ ಹಿಂದೂ–ಮುಸ್ಲಿಂ ಒಗ್ಗಟ್ಟು ಅಗತ್ಯವೇ? ಅಗತ್ಯವೆಂದಾದರೆ, ಹಿಂದೂಗಳು ಮತ್ತು ಮುಸ್ಲಿಮರು ಎರಡು ಭಿನ್ನ ರಾಷ್ಟ್ರಗಳು ಎಂಬ ಹೊಸ ತತ್ತ್ವದ ವಿರೋಧವನ್ನು ತಡೆದು ಈ ಒಗ್ಗಟ್ಟು ವಾಸ್ತವ ರೂಪವನ್ನು ಪಡೆಯುವುದು ಸಾಧ್ಯವೇ?

(೨) ಹಿಂದೂ–ಮುಸ್ಲಿಂ ಏಕತೆ ಸಾಧ್ಯವೆಂದಾದರೆ, ಅದನ್ನು ಸಾಧಿಸುವ ವಿಧಾನ ಒಪ್ಪಂದವೇ, ಶಮನ ನೀತಿಯೇ?

(೩) ಶಮನ ನೀತಿಯಿಂದ ಇದನ್ನು ಸಾಧಿಸುವುದು ಎಂದಾದರೆ, ಮುಸ್ಲಿಮರ ಮನಃಪೂರ್ವಕ ಸಹಕಾರವನ್ನು ಪಡೆಯುವುದಕ್ಕೋಸ್ಕರ, ಇತರ ಹಿತಾಸಕ್ತಿಗಳಿಗೆ ಧಕ್ಕೆ ಬಾರದಂತೆ ಅವರಿಗೆ ಕೊಡಬಹುದೆಂದು ಹೇಳುವ ರಿಯಾಯಿತಿಗಳು ಯಾವುವು?

(೪) ಒಪ್ಪಂದದ ಮೂಲಕ ಇದನ್ನು ಸಾಧಿಸಬೇಕೆಂದಾದರೆ, ಆ ಒಪ್ಪಂದದ ನಿಬಂಧನೆಗಳು ಯಾವುವು? (i) ಪಾಕಿಸ್ತಾನ ಮತ್ತು ಹಿಂದೂಸ್ತಾನ ಎಂದು ಭಾರತವನ್ನು ವಿಭಜಿಸುವುದು ಅಥವಾ (ii) ಶಾಸಕಾಂಗ, ಕಾರ್ಯಾಂಗ ಹಾಗೂ ಸೇವೆಗಳಲ್ಲಿ ಅರ್ಧ– ಅರ್ಧ ಭಾಗ– ಇವೆರಡೇ ಪರ್ಯಾಯಗಳು ಸಾಧ್ಯವೆಂದಾದರೆ, ಯಾವ ಆಯ್ಕೆ ಹೆಚ್ಚು ಉತ್ತಮ?

(೫) ಬ್ರಿಟಿಷರಿಂದ ಸ್ವಾತಂತ್ರ್ಯವನ್ನು ಪಡೆದದ್ದೇ ಎಂದು ಇಟ್ಟುಕೊಂಡರೆ ಮತ್ತು ಭಾರತ ಅಖಂಡವಾಗಿ ಒಂದಾಗಿ ಉಳಿದರೆ, ತನ್ನ ಸ್ವಾತಂತ್ರ್ಯಕ್ಕೋಸ್ಕರ ಹಿಂದೂ–ಮುಸ್ಲಿಂ ಎರಡೂ ಗುಂಪುಗಳನ್ನು ಭಾರತ ನಂಬಬಹುದೇ?

(೬) ಪ್ರಸ್ತುತವಾಗಿ ಕಾಣಿಸಿಕೊಳ್ಳುತ್ತಿರುವ ಹಿಂದೂ–ಮುಸ್ಲಿಮರ ನಡುವಿನ ವಿರೋಧವನ್ನು ಮತ್ತು ಎರಡು ಪ್ರತ್ಯೇಕ ರಾಷ್ಟ್ರಗಳು ಇವು ಎಂದು ಬೇರ್ಪಡಿಸುವ ಹಾಗೂ ಇವುಗಳ ಅಂತಿಮ ಉದ್ದೇಶ ಹಾಗೂ ಗುರಿಗಳು ಪರಸ್ಪರ ವಿರೋಧವಾಗಿವೆ ಎಂದು ಪ್ರತಿಪಾದಿಸುವ ಹೊಸ ತತ್ತ್ವಸಂಚಯವನ್ನು ಗಮನದಲ್ಲಿಟ್ಟುಕೊಂಡು, ಇವೆರಡು ರಾಷ್ಟ್ರಗಳಿಗೆ ಒಂದೇ ಸಂವಿಧಾನವನ್ನು ಕಟ್ಟುವುದು ಸಾಧ್ಯವೇ? ಹೀಗೆ ಮಾಡುವುದರಿಂದ ಇವರು ಈ ಸಂವಿಧಾನವನ್ನು ಸ್ಥಗಿತಗೊಳಿಸಲು ಒಪ್ಪದೆ ಅದನ್ನು ಕಾರ್ಯಗತಗೊಳಿಸುವ ಇಚ್ಛೆಯನ್ನು ತೋರ್ಪಡಿಸುವರೆ?

(೭) ಎರಡು ರಾಷ್ಟ್ರಗಳ ಸಿದ್ಧಾಂತ ಶಾಶ್ವತವಾಗಿ ಉಳಿಯುವಂಥದ್ದೇ ಎಂದು ಇಟ್ಟುಕೊಂಡರೆ, ಒಂದೇ ಘಟಕವಾಗಿರುವ ಭಾರತ ಒಂದೇ ಗುರಿಯಲ್ಲಿ ಒಂದೇ ಶ್ರದ್ಧೆಯಿಂದ ಭದ್ರವಾಗಿ ಸಂಘಟಿತವಾಗಿರುವ ಬಲವಾದ ಮತ್ತು ಒಗ್ಗಟ್ಟಿನ ರಾಷ್ಟ್ರವಾಗಿ ವರ್ಧಿಸಲು ಅಸಮರ್ಥವಾಗಿ ಆಂತರಿಕ ಏಕತೆ ಇಲ್ಲದ ಒಂದು ಸುಸಾಂಗತ್ಯರಹಿತ ದೇಶವಾಗಲಿಕ್ಕಿಲ್ಲವೇ? ಹೀಗಾದರೆ, ಭಾರತ ಒಂದು ನಿಶ್ಶಕ್ತ ಹಾಗೂ ರೋಗಗ್ರಸ್ತ ದೇಶವಾಗಿ ಬ್ರಿಟಿಷರ ಅಥವಾ ಇತರ ಯಾವುದೇ ವಿದೇಶೀ ಶಕ್ತಿಯ ಶಾಶ್ವತ ಆಧಿಪತ್ಯಕ್ಕೆ ಸುಲಭವಾಗಿ ಒಳಗಾಗಲಿಕ್ಕಿಲ್ಲವೆ?

(೮) ಭಾರತ ಒಂದು ಒಗ್ಗಟ್ಟಾದ ದೇಶವಾಗಿರುವುದು ಅಸಾಧ್ಯವಾಗಿರುವ ಪಕ್ಷದಲ್ಲಿ ಸುಸಾಂಗತ್ಯರಹಿತ ಏಕತೆಯನ್ನು ಅದರ ಸಹಜ ಭಾಗಗಳನ್ನಾಗಿ– ಎಂದರೆ, ಪಾಕಿಸ್ತಾನ ಮತ್ತು ಹಿಂದೂಸ್ತಾನಗಳನ್ನಾಗಿ– ಶಾಂತಿಯುತವಾಗಿ ವಿಭಜಿಸುವುದರಲ್ಲಿ ಭಾರತೀಯರು ಸಹಾಯ ಮಾಡುವುದೇ ಕ್ಷೇಮವಲ್ಲವೇ?

(೯) ಹಿಂದೂಗಳು ಮತ್ತು ಮುಸ್ಲಿಮರು ಮುಂದೆ ಎಂದಾದರೂ ಒಂದಾಗಿ, ಒಂದೇ ರಾಷ್ಟ್ರದ ಸದಸ್ಯರಾಗಿ ಮತ್ತು ಒಂದೇ ತಾಯ್ನಾಡಿನ ಪುತ್ರರಾಗಿ ಇರುತ್ತಾರೆ ಎಂಬ ಹುಸಿ ಆಶಾಭಾವನೆಯಿಂದ ಭಾರತವನ್ನು ಒಂದೇ ಅವಿಭಕ್ತ ದೇಶವನ್ನಾಗಿ ಉಳಿಸುವ ವ್ಯರ್ಥ ಪ್ರಯತ್ನಕ್ಕಿಂತ, ಒಂದು ಮುಸ್ಲಿಂ ರಾಷ್ಟ್ರ ಪಾಕಿಸ್ತಾನದಲ್ಲಿಯೂ, ಒಂದು ಹಿಂದೂ ರಾಷ್ಟ್ರ ಹಿಂದೂಸ್ತಾನದಲ್ಲಿಯೂ ನೆಲೆಸಿದ್ದು– ಇವೆರಡು ಸ್ವತಂತ್ರ ರಾಷ್ಟ್ರಗಳ ಬೆಳವಣಿಗೆಗೆ ಅಗತ್ಯವಿದ್ದದ್ದೆಲ್ಲವನ್ನು ಪೂರೈಸುವುದು ಉತ್ತಮವಲ್ಲವೇ?

ಈ ಮೊದಲಿನ ಪುಟಗಳಲ್ಲಿರುವ ಮಾಹಿತಿಗಳ ಸಹಾಯದಿಂದ ಒಬ್ಬ ಭಾರತೀಯ ಈ ವಿಷಯಗಳನ್ನು ಸಂಪೂರ್ಣವಾಗಿ ಅರಿತು, ವಿಚಾರ ಮಾಡಿ ತನ್ನ ಸ್ವಂತ ತೀರ್ಮಾನಕ್ಕೆ ಬರುವುದರಲ್ಲಿ ಯಾವ ಅಡ್ಡಿಯೂ ಇರಲಾರದು. ಇದ್ದರೆ ಇವಿಷ್ಟೇ: (೧) ಚಾರಿತ್ರಿಕ ದೇಶಪ್ರೇಮದ ಒಂದು ಹುಸಿಭಾವ, (೨) ತಮಗೇ ಮೀಸಲಿದ್ದ ಭೂಪ್ರದೇಶದ ಮಾಲೀಕತ್ವದ ಒಂದು ಹುಸಿ ಕಲ್ಪನೆ, ಮತ್ತು (೩) ಸ್ವಂತ ಯೋಚನೆಯಲ್ಲಿ ತೊಡಗಲು ಅನಿಚ್ಛೆ. ಇವುಗಳಲ್ಲಿ ಕೊನೆಯದನ್ನು ನಿವಾರಿಸುವುದು ಅತ್ಯಂತ ಹೆಚ್ಚು ಕಷ್ಟಕರವಾದುದು. ದುರದೃಷ್ಟವಶಾತ್ ಭಾರತದಲ್ಲಿ ಯೋಚನೆ ಮಾಡುವುದೇ ವಿರಳ, ಸ್ವತಂತ್ರ ಯೋಚನೆ ಇನ್ನೂ ವಿರಳ. ಹಿಂದೂಗಳ ವಿಚಾರದಲ್ಲಿ ಇದು ವಿಶೇಷವಾಗಿ ನಿಜವಾಗಿರುವಂಥದು. ಅದಕ್ಕೋಸ್ಕರವೇ ಈ ಕೃತಿಯ ತರ್ಕದ ಬಹುಭಾಗ ಅವರನ್ನು ಉದ್ದೇಶಿಸಿ ಇರುವಂಥದು. ಇದಕ್ಕೆ ಕಾರಣಗಳು ಸುವೇದ್ಯ. ಹಿಂದೂಗಳು ಬಹುಸಂಖ್ಯಾತರು. ಬಹುಸಂಖ್ಯಾತರು ಆಗಿರುವುದರಿಂದ ಅವರ ಅಭಿಪ್ರಾಯಗಳಿಗೆ ಬೆಲೆ ಇರಲೇಬೇಕು. ಅವರು ಒಡ್ಡುವ ಬೌದ್ಧಿಕ ಅಥವಾ ಭಾವಾತ್ಮಕ ಆಕ್ಷೇಪಗಳನ್ನು ನಿವಾರಿಸಲು ಪ್ರಯತ್ನ ಮಾಡದಿದ್ದರೆ, ಶಾಂತಿಯುತ ಪರಿಹಾರದ ಸಾಧ್ಯತೆ ಕಡಿಮೆಯೇ. ಅಂದರೆ ನನ್ನ ವಾದದ ಇಷ್ಟೊಂದು ದೊಡ್ಡ ಭಾಗ ಅವರನ್ನು ಉದ್ದೇಶಿಸಿರಬೇಕಾದರೆ ಕೆಲವು ವಿಶೇಷ ಕಾರಣಗಳಿವೆ– ಇವು ಇತರರಿಗೆ ಅಷ್ಟು ಸುಲಭವಾಗಿ

ವೇದ್ಯವಾಗದೆ ಹೋಗಬಹುದು. ತಮ್ಮ ಸಹ–ಧರ್ಮಾನುಯಾಯಿಗಳ ಭವಿಷ್ಯದ ಮಾರ್ಗದರ್ಶಕರಾಗಿರುವ ಹಿಂದೂಗಳು, ಕಾರ್ಲೈಲ್ ಹೇಳಿದಂಥ "ನೋಡುವಂಥ ಚಕ್ಷು"ವನ್ನು ಕಳೆದುಕೊಂಡಿದ್ದಾರೆ ಎಂದೂ, ಕೆಲವು ಪೊಳ್ಳು ಭ್ರಮೆಗಳ ಥಳಕಿನಲ್ಲಿ ಇವರು ನಡೆಯುತ್ತಿದ್ದಾರೆಂದೂ ನನಗನಿಸುತ್ತಿದೆ. ಇದರಿಂದ ಹಿಂದೂಗಳಿಗೆಯೇ ಕಠೋರವಾಗಲಿರುವ ಪರಿಣಾಮಗಳು ಉದ್ಭವಿಸುವುವು ಎಂಬುದು ನನ್ನ ಶಂಕೆ. ಹಿಂದೂಗಳು ಕಾಂಗ್ರೆಸಿನ ಹಿಡಿತದಲ್ಲಿದ್ದಾರೆ, ಕಾಂಗ್ರೆಸ್ ಗಾಂಧಿಯವರ ಹಿಡಿತದಲ್ಲಿದೆ. ಕಾಂಗ್ರೆಸಿಗೆ ಯುಕ್ತವಾದ ನಾಯಕತ್ವವನ್ನು ಗಾಂಧಿಯವರು ಕೊಟ್ಟಿರುವರು ಎಂದು ಹೇಳಲಾಗದು. ಎರಡು ನೆಪಗಳಲ್ಲಿ ಆಶ್ರಯ ಪಡೆದು ಗಾಂಧಿಯವರು ಕೊಟ್ಟಿರುವುದು ಎಂದು ಹೇಳಲಾಗದು. ಎರಡು ನೆಪಗಳಲ್ಲಿ ಆಶ್ರಯ ಪಡೆದು ವಿಷಯಗಳನ್ನು ಎದುರಿಸದೆ ತಪ್ಪಿಸಿಕೊಳ್ಳಲು ಗಾಂಧಿಯವರು ಮೊದಲು ಹವಣಿಸಿದರು. ಭಾರತದ ವಿಭಜನೆ ಒಂದು ನೈತಿಕ ತಪ್ಪೆಂದೂ ಒಂದು ಪಾಪವೆಂದೂ– ಇದಕ್ಕೆ ಎಂದೆಂದಿಗೂ ತಾನು ಶಾಮೀಲಾಗಲಾರೆನೆಂದೂ ಹೇಳಲಾರಂಭಿಸಿದರು. ಈ ವಾದ ವಿಚಿತ್ರವಾದುದು. ಭಾರತ ವಿಭಜನೆಯ ಸಮಸ್ಯೆಯನ್ನು ಎದುರಿಸುವ ಒಂದೇ ದೇಶವಲ್ಲ, ಪ್ರಾಕೃತಿಕ ಮತ್ತು ಚಾರಿತ್ರಿಕ ಅಂಶಗಳನ್ನು ಆಧರಿಸಿದ ಗಡಿಗಳನ್ನು ರಾಷ್ಟ್ರೀಯ ಅಂಶಗಳನ್ನು ಆಧರಿಸಿದ ಗಡಿಗಳನ್ನಾಗಿ ವ್ಯತ್ಯಾಸಗೊಳಿಸುವ ಸಮಸ್ಯೆಯನ್ನು ಎದುರಿಸುವ ಒಂದೇ ದೇಶವಲ್ಲ. ಪೋಲೆಂಡಿನ ವಿಭಜನೆ ಮೂರಾವರ್ತಿ ಆಯಿತು ಮತ್ತು ಪುನಃ ವಿಭಜನೆ ಆಗಲಾರದೆಂದು ಯಾರೂ ಖಾತರಿಯಾಗಿ ಹೇಳಲಾರರು. ಕಳೆದ ೧೫೦ ವರ್ಷಗಳಲ್ಲಿ ವಿಭಜನೆಗೆ ಒಳಗಾಗದ ಯೂರೋಪಿನ ದೇಶಗಳು ಕೆಲವೇ ಕೆಲವು. ಒಂದು ದೇಶದ ವಿಭಜನೆ ನೈತಿಕವೂ ಅಲ್ಲ, ಅನೈತಿಕವೂ ಅಲ್ಲ ಎಂಬುದನ್ನು ಇದು ತೋರಿಸುತ್ತದೆ. ಇದಕ್ಕೂ ನೈತಿಕತೆಗೂ ಸಂಬಂಧವಿಲ್ಲ. ಇದೊಂದು ಸಾಮಾಜಿಕ, ರಾಜಕೀಯ ಅಥವಾ ಸೈನ್ಯಾಚರಣೆಯ ಪ್ರಶ್ನೆ. ಪಾಪದ ಕಲ್ಪನೆಗೆ ಇದರಲ್ಲಿ ಸ್ಥಾನವಿಲ್ಲ.

ತಮ್ಮ ಎರಡನೇ ಆಶ್ರಯವಾಗಿ ಗಾಂಧಿಯವರು ಹೇಳುವುದೇನೆಂದರೆ, ಮುಸ್ಲಿಮರನ್ನು ಮುಸ್ಲಿಂ ಲೀಗ್ ಪ್ರತಿನಿಧಿಸುತ್ತಿಲ್ಲ ಮತ್ತು ಪಾಕಿಸ್ತಾನವೆಂದರೆ ಜಿನ್ನಾ ಅವರ ಕಲ್ಪನಾಸೃಷ್ಟಿಯಷ್ಟೇ. ಮುಸ್ಲಿಂ ಜನಸ್ತೋಮದ ಮೇಲೆ ಜಿನ್ನಾ ಅವರ ಪ್ರಭಾವ ದಿನೇ ದಿನೇ ಹೇಗೆ ವರ್ಧಿಸುತ್ತಿದೆ ಮತ್ತು ಸಮರಸಿದ್ಧತೆಗೆ ತನ್ನ ಎಲ್ಲ ಬೆಂಬಲಿಗರನ್ನು ಮತ್ತು ಶಕ್ತಿಗಳನ್ನು ಅವರು ಹೇಗೆ ಅಣಿಗೊಳಿಸುತ್ತಿದ್ದಾರೆ ಎಂಬುದನ್ನು ಕಾಣದಷ್ಟು ಗಾಂಧಿಯವರು ಕುರುಡರಾದರು. ಹೇಗೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಜಿನ್ನಾ ಅವರು ಯಾವತ್ತೂ ಜನಸ್ತೋಮಗಳ ನಾಯಕರಾಗಿರಲಿಲ್ಲ. ಜನಜಂಗುಳಿಯನ್ನು ಅವರು ಅಪನಂಬಿಕೆಯಿಂದಲೇ ಕಂಡಿದ್ದರು.* ರಾಜಕೀಯ ಅಧಿಕಾರದಿಂದ ಅವರನ್ನು ಹೊರಗಿಡಲು ಮತದಾನದ ಹಕ್ಕನ್ನು ಉನ್ನತ ವರ್ಗಕ್ಕೆ ಸೀಮಿತಗೊಳಿಸಬೇಕೆಂದು ಅವರು ನಂಬಿದ್ದರು. ಜಿನ್ನಾ ಅವರು ಶ್ರದ್ಧಾವಂತ, ದೈವಭಕ್ತಿಯುಳ್ಳ ಅಥವಾ ಇಸ್ಲಾಂ ಧರ್ಮವನ್ನು ಒಪ್ಪಿ ಆಚರಿಸುವ ಮುಸ್ಲಿಮರೆಂದು ಯಾವತ್ತೂ ಪರಿಗಣಿತರಾಗಿರಲಿಲ್ಲ. ಎಂ.ಎಲ್.ಎ. ಆಗಿ ಪ್ರಮಾಣವಚನ ಸ್ವೀಕರಿಸುವ ಸಂದರ್ಭದಲ್ಲಿ ಮತ್ತು ಸ್ವೀಕರಿಸುವಾಗ ಕೊರಾನನ್ನು ಹಣೆಗೊತ್ತಿಕೊಂಡದ್ದಲ್ಲದೆ, ಕೊರಾನಿನ ವಿಷಯದ ಬಗೆಗಾಗಲಿ, ಅದರ ವಿಶಿಷ್ಟ ಧರ್ಮಸಿದ್ಧಾಂತಗಳ ಬಗೆಗಾಗಲಿ ಅವರು ಹೆಚ್ಚೇನು ತಲೆಕೆಡಿಸಿಕೊಂಡಂತೆ ಕಾಣುವುದಿಲ್ಲ. ಕುತೂಹಲದಿಂದಾಗಲಿ, ಧಾರ್ಮಿಕ

* ಕಾಂಗ್ರೆಸ್ ಸದಸ್ಯತ್ವವನ್ನು ಮೆಟ್ರಿಕ್ಯುಲೇಶನ್ ಪಾಸ್ ಮಾಡಿದವರಿಗೆ ಮಾತ್ರ ಸೀಮಿತಗೊಳಿಸಬೇಕೆಂದು ಜಿನ್ನಾ ಅವರ ಅಭಿಪ್ರಾಯವಾಗಿತ್ತು ಎಂದು ಪಂಡಿತ್ ಜವಹರಲಾಲ್ ನೆಹರು ಅವರು ತಮ್ಮ ಆತ್ಮಚರಿತ್ರೆಯಲ್ಲಿ ಹೇಳುತ್ತಾರೆ.

ಶ್ರದ್ಧೆಯಿಂದಾಗಲಿ ಅವರು ಯಾವುದೇ ಮಸೀದಿಗೆ ಆಗಾಗ ಹೋಗುತ್ತಿದ್ದರು ಎಂಬುದು ಸಂದೇಹದ ವಿಚಾರ. ಮುಸ್ಲಿಂ ಜನಸಮೂಹದ ಸಭೆಗಳಲ್ಲಿ– ಅವು ಧಾರ್ಮಿಕವಿರಲಿ ಅಥವಾ ರಾಜಕೀಯವಿರಲಿ– ಜಿನ್ನಾ ಅವರು ಇರುತ್ತಿರಲೇ ಇಲ್ಲ. ಈಗಲಾದರೋ ಜಿನ್ನಾ ಅವರಲ್ಲಿ ಸಂಪೂರ್ಣ ಬದಲಾವಣೆಯೇ ಆಗಿದೆ. ಈಗ ಅವರು ಜನಸಮೂಹಗಳ ವ್ಯಕ್ತಿಯಾಗಿದ್ದಾರೆ. ಮೊದಲಿದ್ದಂತೆ ಅವನ್ನು ಮೀರಿ ನಿಂತವರಲ್ಲ ಅವರು, ಜನಸಮೂಹಗಳಲ್ಲಿ ಈಗ ಅವರೂ ಒಬ್ಬರು. ಜನರೇ ಈಗ ಜಿನ್ನಾ ಅವರನ್ನು ತಮ್ಮ ಮೇಲೇರಿಸಿ, ಖಾಯಿ–ಏ–ಅಜಾಮ್ ಎಂದು ಅವರನ್ನು ಕರೆಯುತ್ತಾರೆ. ಈ ಜಿನ್ನಾ ಅವರು ಇಸ್ಲಾಂ ಧರ್ಮವನ್ನು ನಂಬುತ್ತಾರೆ. ಮಾತ್ರವಲ್ಲ, ಈ ಧರ್ಮಕ್ಕೋಸ್ಕರ ಪ್ರಾಣವನ್ನು ತೆರಲೂ ಸಿದ್ಧರಿದ್ದಾರೆ. ಈಗ, ಕೇವಲ 'ಕಲಮಾ', ಅಷ್ಟೇ ಅಲ್ಲ, ಅದಕ್ಕಿಂತ ಹೆಚ್ಚಿನ ವಿಷಯಗಳನ್ನು ಇಸ್ಲಾಂ ಬಗೆಗೆ ತಿಳಿದುಕೊಂಡಿದ್ದಾರೆ. ಈಗ 'ಖುತ್ಬಾ' ಕೇಳಲು ಅವರು ಮಸೀದಿಗೆ ಹೋಗುತ್ತಾರೆ. ಈದ್ ಪ್ರಾರ್ಥನಾ ಸಭೆಯಲ್ಲಿ ಭಾಗವಹಿಸಲು ಸಂತೋಷಪಡುತ್ತಾರೆ. ದೋಂಗ್ರಿ ಮತ್ತು ನಲ್ ಬಜಾರ್‌ಗಳಿಗೆ ಮೊದಲು ಹೆಸರಿಂದಷ್ಟೇ ಪರಿಚಿತರಾಗಿದ್ದ ಜಿನ್ನಾ ಅವರು, ಈಗ ಅಲ್ಲಿ ಸಾಕ್ಷಾತ್ ಹಾಜರಿರುವುದರಿಂದ ಪರಿಚಿತರು. ಮುಂಬೈನಲ್ಲಿ ನಡೆಯುವ ಪ್ರತಿಯೊಂದು ಮುಸ್ಲಿಂ ಸಭೆಯಲ್ಲಿ ಅಲ್ಲಾ–ಹೋ–ಅಕ್ಬರ್ ಮತ್ತು ಖಾಯಿ–ಎ–ಅಜಾಮ್ ಜಿಂದಾಬಾದ್– ಈ ಘೋಷಣೆಗಳು ಆದಿಯಲ್ಲಿ ಇಲ್ಲವೇ ಅಂತ್ಯದಲ್ಲಿ ಇರುತ್ತವೆ. ಈ ವಿಷಯದಲ್ಲಿ ಜಿನ್ನಾ ಅವರು ಫ್ರಾನ್ಸಿನ ರಾಜ, ನಾಲ್ಕನೇ ಹೆನ್ರಿಯನ್ನು ಅನುಕರಿಸಿದ್ದಾರೆ, ಅಷ್ಟೇ (ಈತನು ಇಂಗ್ಲೆಂಡಿನ ಮೊದಲನೆಯ ಚಾರ್ಲ್ಸ್ ರಾಜನ ದುರ್ದೈವಿ ಮಾವ). ಹೆನ್ರಿಯ ಧರ್ಮ ಹ್ಯೂಗ್‌ನಾಟ್ ಧರ್ಮವಾಗಿತ್ತು. ಆದರೆ ಪ್ಯಾರಿಸಿನ ಕೆಥೋಲಿಕ್ ಚರ್ಚಿನಲ್ಲಿ ಪೂಜೆಯನ್ನು ಕೇಳಲು ಅವನು ಹಿಂಜರಿಯಲಿಲ್ಲ. ಪ್ಯಾರಿಸಿನ ಬಲಾಢ್ಯ ಬೆಂಬಲವನ್ನು ಗಳಿಸಲು ತನ್ನ ಹ್ಯೂಗ್‌ನಾಟ್ ಧರ್ಮವನ್ನು ಬದಲಾಯಿಸಿ ಪೂಜೆಯನ್ನು ಕೇಳಲು ಹೋಗುವುದು ತಾನು ತೆರಬೇಕಾದ ಬಹಳ ಕಡಿಮೆಯ ಬೆಲೆ ಎಂದು ಅವನು ತಿಳಿದಿದ್ದನು. ನಾಲ್ಕನೇ ಹೆನ್ರಿಯ ಪಾಲಿಗೆ ಪ್ಯಾರಿಸಿನ ಬೆಲೆ ಕೇವಲ ಒಂದು ಪೂಜೆಯಾಗಿದ್ದಂತೆ, ದೋಂಗ್ರಿ ಮತ್ತು ನಲ್ ಬಜಾರ್‌ನ ಬೆಲೆಯೂ ಅಂಥವೇ ಕಾರಣಗಳಿಗೋಸ್ಕರ, ಜಿನ್ನಾ ಅವರಿಗೆ ಒಂದೇ ಒಂದು ಪೂಜೆಯಾಯಿತು. ಇದೊಂದು ಯುಕ್ತಿ, ಜನಸಂಘಟನೆಯ ತಂತ್ರ. ಬೌದ್ಧಿಕತೆಯಿಂದ ಮೂಢನಂಬಿಕೆಯ ಮಟ್ಟಕ್ಕೆ ಜಿನ್ನಾ ಅವರ ಅವನತಿ ಇದು ಎಂದು ಪರಿಗಣಿಸಿದರೂ, ಅವರ ಜೊತೆ ಅವರು ಪ್ರತಿಪಾದಿಸುವ ನಿಲುವು ನಂಬಿಕೆಗಳೂ ಅವನತಿಗೊಳ್ಳುತ್ತಿವೆ ಎಂಬುದಂತೂ ನಿಜ. ಇಂಥ ಅವನತಿಯಿಂದಲೇ ಅವರ ನಿಲುವು ನಂಬಿಕೆಗಳು ಮುಸ್ಲಿಂ ಸಮಾಜದ ಎಲ್ಲಾ ವಿವಿಧ ಸ್ತರಗಳಲ್ಲಿ ಹರಡಿ, ಅದರ ಮಾನಸಿಕ ಚೌಕಟ್ಟಿನ ಒಂದು ಅವಿಭಾಜ್ಯ ಅಂಗವಾಗಿ ಪರಿಣಮಿಸಿವೆ. ಇದು ಅತ್ಯಂತ ಸ್ಪಷ್ಟವಾಗಿ ಗೋಚರವಾಗುತ್ತಿರುವ ವಿಷಯ. ಗಾಂಧಿಯವರ ಅಸಾಧಾರಣ ನಿಲುವಿಗೆ ಇರುವಂಥ ಏಕೈಕ ಆಧಾರವೆಂದರೆ ರಾಷ್ಟ್ರೀಯ ಮುಸಲ್ಮಾನರು ಎಂದೆನಿಸಿಕೊಳ್ಳುವವರ ಅಸ್ತಿತ್ವ. ಮುಸ್ಲಿಂ ಲೀಗಿಗೆ ಸೇರುವ ಮುಸಲ್ಮಾನ ಕೋಮಿನವರಿಗೂ ರಾಷ್ಟ್ರೀಯ ಮುಸಲ್ಮಾನರಿಗೂ ನಿಜವಾದ ವ್ಯತ್ಯಾಸ ಏನಿದೆ ಎಂಬುದನ್ನು ಗುರುತಿಸುವುದು ಕಷ್ಟ. ಮುಸ್ಲಿಂ ಲೀಗಿನಿಂದ ತಮ್ಮನ್ನು ಬೇರ್ಪಡಿಸುವಂಥ ಮತ್ತು ಕಾಂಗ್ರೆಸಿನ ಜೊತೆ ತಾವು ಹಂಚಿಕೊಂಡಿರುವಂಥ ಭಾವ, ಉದ್ದೇಶ ಮತ್ತು ಧೋರಣೆಗಳ ಒಂದು ಸಂಚಯ ಇವರಿಗಿದೆ ಎಂಬುದು ಅತ್ಯಂತ ಸಂದೇಹಾಸ್ಪದವಾಗಿದೆ. ಹಾಗೆ ಹೇಳಬೇಕಾದರೆ, ಇವೆರಡು ಗುಂಪುಗಳ ನಡುವೆ ವ್ಯತ್ಯಾಸವೇ ಇಲ್ಲವೆಂದೂ ಕಾಂಗ್ರೆಸಿಗೆ ಸೇರಿರುವ ರಾಷ್ಟ್ರೀಯ ಮುಸ್ಲಿಮರು ಮುಸ್ಲಿಂ ಕೋಮಿನವರ ಒಂದು ಸರಹದ್ದಿನ ಠಾಣೆಯಷ್ಟೇ ಎಂದೂ ಹಲವು ಕಾಂಗ್ರೆಸಿಗರು ಭಾವಿಸುತ್ತಾರೆ ಎಂದು ಆಪಾದಿಸಲಾಗಿದೆ. ಕಾಂಗ್ರೆಸ್ ಮತ್ತು ರಾಷ್ಟ್ರೀಯ ಮುಸಲ್ಮಾನರು ಅಂಗೀಕರಿಸಿದ ನಿರ್ಣಯದ ವಿರೋಧವನ್ನು

ಲೆಕ್ಕಿಸದೆ ಕೋಮು ತೀರ್ಪು ಮುಸ್ಲಿಮರಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರವನ್ನು ಕೊಟ್ಟಾಗ ರಾಷ್ಟ್ರೀಯ ಮುಸಲ್ಮಾನರ ನಾಯಕ, ಡಾ. ಅನ್ಸಾರಿಯವರು ಈ ತೀರ್ಪನ್ನು ವಿರೋಧಿಸಲು ಒಪ್ಪಲಿಲ್ಲ ಎಂಬುದನ್ನು ನೆನೆದರೆ ನಮ್ಮ ಅಭಿಪ್ರಾಯದಲ್ಲಿ ತಥ್ಯಾಂಶ ಇಲ್ಲದಿಲ್ಲವೆಂಬುದು ವೇದ್ಯವಾಗುವುದು. ಇನ್ನೂ ಹೇಳಬೇಕೆಂದರೆ, ಮುಸಲ್ಮಾನರ ನಡುವೆ ಮುಸ್ಲಿಂ ಲೀಗಿನ ಪ್ರಭಾವದ ಹೆಚ್ಚಳ ಎಷ್ಟಾಗಿದೆ ಎಂದರೆ, ಲೀಗನ್ನು ವಿರೋಧಿಸಿದ ಹಲವು ಮುಸ್ಲಿಮರು ಈಗ ಲೀಗಿನಲ್ಲಿ ಒಂದು ಸ್ಥಾನವನ್ನು ಹುಡುಕಿ ಬರಬೇಕಾಗಿದೆ ಅಥವಾ ಲೀಗಿನ ಜೊತೆ ಸಂಧಾನ ಮಾಡಬೇಕಾಗಿದೆ. ದಿವಂಗತ ಸರ್ ಸಿಕಂದರ್ ಹಯಾತ್ ಖಾನ್ ಮತ್ತು ಬಂಗಾಳದ ದಿವಂಗತ ಪ್ರಧಾನಿ ಫಜ್ಲುಲ್ ಹಕ್ ಅವರ ವರ್ತನೆಯಲ್ಲಾದ ತಿರುವು ಮುರುವುಗಳನ್ನು ಗಣನೆಗೆ ತೆಗೆದುಕೊಂಡ ಯಾರಾದರೂ ಈ ವಿಷಯ ಸತ್ಯವೆಂಬುದನ್ನು ಒಪ್ಪಬೇಕು. ೧೯೩೭ರಲ್ಲಿ ಜಿನ್ನಾ ಅವರು ಮುಸ್ಲಿಂ ಲೀಗನ್ನು ಪುನಶ್ಚೇತನಗೊಳಿಸಲು ಪ್ರಯತ್ನಿಸಿದಾಗ, ಸರ್ ಸಿಕಂದರ್ ಮತ್ತು ಫಜ್ಲುಲ್ ಹಕ್ ಇಬ್ಬರೂ ತಮ್ಮ ಪ್ರಾಂತ್ಯಗಳಲ್ಲಿ ಲೀಗಿನ ಶಾಖೆಗಳನ್ನು ತೆರೆಯುವುದನ್ನು ವಿರೋಧಿಸಿದ್ದರು. ಈ ವಿರೋಧವನ್ನು ಕಡೆಗಣಿಸಿ ಬಂಗಾಳ ಮತ್ತು ಪಂಜಾಬಿನಲ್ಲಿ ಲೀಗಿನ ಶಾಖೆಗಳನ್ನು ಪ್ರಾರಂಭಿಸಿದಾಗ ಅಲ್ಲಿಂದ ಒಂದೇ ಒಂದು ವರ್ಷದ ಅವಧಿಯೊಳಗೆ ಇಬ್ಬರೂ ಕಡ್ಡಾಯಕ್ಕೊಳಗಾಗಿ ಈ ಶಾಖೆಗಳನ್ನು ಸೇರಿದರು. ಅಪಹಾಸ್ಯ ಮಾಡಲು ಬಂದವನು ಪ್ರಾರ್ಥನೆ ಮಾಡಲು ತಳುವಿದಂತೆ ಇದಾಯಿತು. ಲೀಗಿನ ವಿಜಯವನ್ನು ಸಾಧಿಸಿತೋರಿಸಲು ಇದಕ್ಕಿಂತ ಹೆಚ್ಚು ಪ್ರಬಲ ಪುರಾವೆಯ ಅಗತ್ಯವಿಲ್ಲವೆಂದು ಕಾಣುತ್ತದೆ.

ಹೀಗಿದ್ದರೂ, ಒಂದು ಒಪ್ಪಂದಕ್ಕೆ ಬರುವ ದೃಷ್ಟಿಯಿಂದ ಜಿನ್ನಾ ಮತ್ತು ಲೀಗಿನ ಜೊತೆ ವ್ಯವಹಾರ ಮಾಡುವುದನ್ನು ಬಿಟ್ಟು, ಗಾಂಧಿಯವರು ಬೇರೆಯೇ ದಿಕ್ಕಿನಲ್ಲಿ ನಡೆದರು. ೧೯೪೨ರ ಆಗಸ್ಟ್ ೮ರಂದು ಪ್ರಸಿದ್ಧ ಕ್ವಿಟ್ ಇಂಡಿಯ ಗೊತ್ತುವಳಿಯನ್ನು ಕಾಂಗ್ರೆಸ್ ಅಂಗೀಕರಿಸುವಂತೆ ಮಾಡಿದರು. ಈ ಕ್ವಿಟ್ ಇಂಡಿಯಾ ಗೊತ್ತುವಳಿ, ಮೊತ್ತ ಮೊದಲನೆಯದಾಗಿ, ಬ್ರಿಟಿಷ್ ಸರಕಾರಕ್ಕೆ ಒಂದು ಸವಾಲಾಗಿತ್ತು. ಅದರ ಜೊತೆಯಲ್ಲಿ ಅಲ್ಪಸಂಖ್ಯಾತರ ಪ್ರಶ್ನೆಯ ಚರ್ಚೆಯಲ್ಲಿ ಬ್ರಿಟಿಷ್ ಸರಕಾರದ ಹಸ್ತಕ್ಷೇಪವನ್ನು ಕೊನೆಗಾಣಿಸುವ ಪ್ರಯತ್ನವೂ ಅದಾಗಿತ್ತು. ಹೀಗೆ ಮಾಡುವುದರಿಂದ ಈ ಸಮಸ್ಯೆಯನ್ನು ತಮಗೆ ಅನುಕೂಲವಾದಂತೆ ಮತ್ತು ತಮಗೆ ಸರಿಯೆನಿಸಿದಂತೆ ಬಗೆಹರಿಸಲು ಕಾಂಗ್ರೆಸ್ಸಿಗೆ ಮುಕ್ತಾವಕಾಶ ಕೊಡುವ ಪ್ರಯತ್ನವಾಗಿತ್ತು ಈ ಗೊತ್ತುವಳಿ. ವಾಸ್ತವವಾಗಿ, ಉದ್ದೇಶದಿಂದಲ್ಲವಾಗಿದ್ದರೂ, ಮುಸ್ಲಿಮರನ್ನು ಮತ್ತು ಇತರ ಅಲ್ಪಸಂಖ್ಯಾತರನ್ನು ಉಪೇಕ್ಷಿಸುವುದರ ಮೂಲಕ ಸ್ವಾತಂತ್ರ್ಯವನ್ನು ಪಡೆಯುವ ಪ್ರಯತ್ನ ಅದಾಗಿತ್ತು. ಆದರೆ, ಕ್ವಿಟ್ ಇಂಡಿಯಾ ಚಳುವಳಿ ಒಂದು ಬೃಹದಪಜಯವಾಗಿ ಪರಿಣಮಿಸಿತು. ಅದೊಂದು ಹುಚ್ಚು ಸಾಹಸವಾಗಿದ್ದು, ಅತ್ಯಂತ ಪೈಶಾಚಿಕರೂಪವನ್ನು ತಾಳಿತು. ವೈರಿಯನ್ನು ಸಂಪೂರ್ಣವಾಗಿ ನಿರ್ನಾಮ ಮಾಡಹೊರಟ ಈ ಧಾಳಿಯಲ್ಲಿ ಕೊಲೆ, ಬೆಂಕಿ ಮತ್ತು ದರೋಡೆಗೆ ಬಲಿಯಾದವರು ಭಾರತೀಯರು, ಈ ಕೃತ್ಯಗಳನ್ನು ಮಾಡಿದವರು ಕಾಂಗ್ರೆಸ್ಸಿಗರು. ಸೋತುಹೋದ ಗಾಂಧಿಯವರು, ಮಾರ್ಚ್ ೧೯೪೩ರಲ್ಲಿ ಜೈಲಿನಲ್ಲಿದ್ದಾಗ ಬಿಡುಗಡೆ ಪಡೆಯುವ ಉದ್ದೇಶದಿಂದ ಇಪ್ಪತ್ತೊಂದು ದಿನಗಳ ಉಪವಾಸವನ್ನು ಆರಂಭಿಸಿದರು. ಅದರಲ್ಲಿಯೂ ಸೋತ ಮೇಲೆ, ಕಾಯಿಲೆ ಬಿದ್ದರು. ಅವರ ದೇಹಸ್ಥಿತಿ ಇಳಿಮುಖವಾಗುತ್ತಿದೆ ಎಂದು ಕೇಳಿದ ಬ್ರಿಟಿಷ್ ಸರಕಾರ, ತಮ್ಮ ವಶದಲ್ಲಿರುವಾಗ ಗಾಂಧಿಯವರು ಸತ್ತರೆ ತಮಗೆ ಅಪಕೀರ್ತಿ ಎಂಬ ಭಯದಿಂದ ಅವರನ್ನು ಬಿಡುಗಡೆ ಮಾಡಿದರು. ಜೈಲಿನಿಂದ ಹೊರಬಂದಾಗ ತಾನು ಮತ್ತು ಕಾಂಗ್ರೆಸ್ ಒಂದು ಅವಕಾಶವನ್ನು ಕಳೆದುಕೊಂಡರಷ್ಟೆ ಅಲ್ಲದೆ, ಅವಕಾಶಗಳಿರುವ ಮಾರ್ಗವನ್ನೂ ಕಳೆದುಕೊಂಡು ದಿಕ್ಕೆಟ್ಟವು ಎಂದು ಅವರಿಗೆ ಗೊತ್ತಾಯಿತು. ಕ್ವಿಟ್ ಇಂಡಿಯಾ ಗೊತ್ತುವಳಿಯ ಅನಂತರದ ಚಳವಳಿಯ ಅಪಜಯದ

ಮತ್ತು ಚಳವಳಿಯ ಸಂದರ್ಭದ ಹಿಂಸಾಚಾರದ ದೆಸೆಯಿಂದ ದೇಶದ ಪ್ರಧಾನ ರಾಜಕೀಯ ಪಕ್ಷವೆಂಬ ಗೌರವವನ್ನು ಕಾಂಗ್ರೆಸ್ ಕಳೆದುಕೊಂಡಿತ್ತು. ಈ ಗೌರವವನ್ನು ಮರಳಿ ಪಡೆಯಲು ಮತ್ತು ಪೂರ್ವಸ್ಥಿತಿಯನ್ನು ಪುನಃ ಸಂಪಾದಿಸಲು ಗಾಂಧಿಯವರು ವೈಸ್‌ರಾಯ್ ಜೊತೆಯಲ್ಲಿ ಸಂಧಾನವನ್ನು ಆರಂಭಿಸಿದರು. ಈ ಪ್ರಯತ್ನಕ್ಕೂ ಭಂಗ ಬಂದಾಗ, ಗಾಂಧಿಯವರು ಜಿನ್ನಾ ಅವರ ಸಹಾಯ ಕೇಳಿದರು. ೧೯೪೪ರ ಜುಲೈ ೧೭ರಂದು ಜಿನ್ನಾ ಅವರಿಗೆ ಕಾಗದ ಬರೆದು, ಅವರನ್ನು ಭೇಟಿ ಮಾಡುವ ಮತ್ತು ಕೋಮು ಸಮಸ್ಯೆಯನ್ನು ಚರ್ಚಿಸಬೇಕೆಂಬ ತಮ್ಮ ಅಪೇಕ್ಷೆಯನ್ನು ವ್ಯಕ್ತಪಡಿಸಿದರು. ಮುಂಬಯಿಯಲ್ಲಿ ತಮ್ಮ ಮನೆಯಲ್ಲಿ ಗಾಂಧಿಯವರನ್ನು ಭೇಟಿಯಾಗಲು ಜಿನ್ನಾ ಅವರು ಒಪ್ಪಿದರು. ಭೇಟಿ ೧೯೪೪ರ ಸೆಪ್ಟೆಂಬರ್ ೯ರಂದು ನಡೆಯಿತು. ಕೊನೆಗೂ ಗಾಂಧಿಯವರಿಗೆ ವಿವೇಕೋದಯವಾಗಿ, ಅದುವರೆಗೆ ಕಣ್ಣ ಮುಂದೆ ನೇರವಾಗಿ ಪ್ರಕಾಶಿಸುತ್ತಿರುವ, ಆದರೆ ತಾನು ನೋಡಲು ಅದುವರೆಗೆ ನಿರಾಕರಿಸಿದ, ಬೆಳಕನ್ನು ಕಂಡುಕೊಳ್ಳಲು ಅವರು ಒಪ್ಪಿದುದು ಒಳ್ಳೆಯ ವಿಷಯ ಎನ್ನಬೇಕು.

೧೯೪೪ರ ಏಪ್ರಿಲ್‌ನಲ್ಲಿ ಜಿನ್ನಾ ಅವರಿಗೆ ಹೇಳಿದಂತೆ ರಾಜಗೋಪಾಲಾಚಾರಿಯಾರ್ ಅವರು ಒಪ್ಪಲು ಸಿದ್ಧವಿದ್ದ ಅಂಶಗಳ ಆಧಾರದ ಮೇಳೆ ಗಾಂಧಿ–ಜಿನ್ನಾ ಇವರ ಚರ್ಚೆ ನಡೆಯಿತು. ರಾಜಗೋಪಾಲಾಚಾರಿಯಾರ್ ಹೇಳುತ್ತಿದ್ದ, ನಂಬಲು ಹೆಚ್ಚು ಕಡಿಮೆ ಅಸಾಧ್ಯವೇ* ಆಗಿರುವಂಥ ಒಂದು ಕಥೆಯ ಪ್ರಕಾರ, ಈ ಅಂಶಗಳನ್ನು ಅವರು ಗಾಂಧಿಯವರೊಡನೆ (ಗಾಂಧಿಯವರು ಜೈಲಿನಲ್ಲಿ ಉಪವಾಸ ಮಾಡುತ್ತಿದ್ದಾಗ) ಚರ್ಚಿಸಿದ್ದರು ಮತ್ತು ಇವುಗಳಿಗೆ ಗಾಂಧಿಯವರು ಪೂರ್ಣ ಸಮ್ಮತಿಯನ್ನು ಕೊಟ್ಟಿದ್ದರು. ಸಾಮಾನ್ಯವಾಗಿ ಸಿ.ಆರ್. ಸೂತ್ರವೆಂದು ನಿರ್ದೇಶಿಸಲ್ಪಟ್ಟ ರಾಜಗೋಪಾಲಾಚಾರಿಯಾರ್ ಅವರ ಸೂತ್ರದ ಪಾಠ ಕೆಳಕಂಡಂತೆ ಇದೆ:

(೧) ಸ್ವತಂತ್ರ ಭಾರತವನ್ನು ಸ್ಥಾಪಿಸುವುದಕ್ಕೆ ಸಂಬಂಧಿಸುವ ಈ ಕೆಳಗೆ ನಮೂದಿಸಿರುವ ನಿಬಂಧನೆಗಳಿಗೆ ಒಳಪಟ್ಟು, ಸ್ವಾತಂತ್ರ್ಯ ಬೇಕೆಂದು ಒತ್ತಾಯಿಸುವ ಭಾರತದ ಹೇಳಿಕೆಯನ್ನು ಮುಸ್ಲಿಂ ಲೀಗ್ ಬೆಂಬಲಿಸುತ್ತದೆ. ಸಂಕ್ರಮಣ ಅವಧಿಯಲ್ಲಿ ಮಧ್ಯಂತರ ತಾತ್ಕಾಲಿಕ ಸರಕಾರವನ್ನು ರಚಿಸುವಲ್ಲಿ ಕಾಂಗ್ರೆಸಿನ ಜೊತೆ ಲೀಗ್ ಸಹಕರಿಸುವುದು.

(೨) ಯುದ್ಧ ಮುಗಿದ ಮೇಲೆ, ಮುಸ್ಲಿಂ ಜನಸಂಖ್ಯೆ ನಿಚ್ಚಳ ಬಹುಸಂಖ್ಯೆಯಲ್ಲಿ ಇರುವ ಪೂರ್ವ ಮತ್ತು ವಾಯುವ್ಯ ಭಾರತದಲ್ಲಿ ಒಂದಕ್ಕೊಂದು ಹೊಂದಿ ಇರುವ ಜಿಲ್ಲೆಗಳ ಗಡಿಗಳನ್ನು ನಿರ್ಧರಿಸಲು ಒಂದು ಆಯೋಗವನ್ನು ರಚಿಸಬೇಕು. ಹೀಗೆ ಬೇರ್ಪಡಿಸಲ್ಪಟ್ಟ ಪ್ರದೇಶಗಳ ಎಲ್ಲ ನಿವಾಸಿಗಳು ವಯಸ್ಕರ ಮತ ಚಲಾವಣೆಯ ಹಕ್ಕಿನಂತೆ, ಅಥವಾ ಇತರ ಯಾವುದೇ ಕಾರ್ಯ ಸಾಧ್ಯವಾದ  ಮತ ಚಲಾವಣೆಯ ರೀತಿಯಲ್ಲಿ ನಡೆಯಲಿರುವ ಜನಮತದ ಆಧಾರದ ಮೇಲೆ ಹಿಂದೂಸ್ತಾನದಿಂದ ಬೇರ್ಪಡುವ ವಿಷಯ ಅಂತಿಮವಾಗಿ ತೀರ್ಮಾನವಾಗಬೇಕು. ಹಿಂದೂಸ್ತಾನದಿಂದ ಬೇರ್ಪಟ್ಟ ಒಂದು ಸಾರ್ವಭೌಮ ರಾಜ್ಯವನ್ನು ಸ್ಥಾಪಿಸಬೇಕೆಂದು ಬಹುಮತೀಯರು ತೀರ್ಮಾನಿಸಿದರೆ, ಅಂಥ ತೀರ್ಮಾನವನ್ನು ಕಾರ್ಯಗತಗೊಳಿಸತಕ್ಕದ್ದು. ಹೀಗೆ ಮಾಡುವಾಗ ಇವೆರಡರಲ್ಲಿ ತಮಗೆ ಬೇಕಾದ ರಾಜ್ಯವನ್ನು ಆರಿಸುವ ಗಡಿಪ್ರದೇಶಗಳ ಹಕ್ಕಿಗೆ ಬಾಧೆ ಇರಬಾರದು.

---

* ಈ ಸೂತ್ರವನ್ನು ಗಾಂಧಿಯವರ ಜೊತೆ ೧೯೪೩ರ ಮಾರ್ಚ್ ತಿಂಗಳಲ್ಲಿ ಚರ್ಚಿಸಿ ಆಗಿತ್ತು. ಆದರೆ, ಏಪ್ರಿಲ್ ೧೯೪೪ರವರೆಗೆ ಜಿನ್ನಾ ಅವರಿಗೆ ಇದನ್ನು ತಿಳಿಸಿರಲಿಲ್ಲ.

(೩) ಮತದಾನ ನಡೆಸುವ ಮೊದಲು ಎಲ್ಲ ಪಕ್ಷಗಳಿಗೆ ತಮ್ಮ ತಮ್ಮ ದೃಷ್ಟಿಕೋನವನ್ನು ಮುಂದಿಟ್ಟು ಪ್ರತಿಪಾದಿಸುವ ಅವಕಾಶವಿರತಕ್ಕದ್ದು.

(೪) ವಿಭಜನೆಯಾಗಲಿರುವ ಸಂದರ್ಭದಲ್ಲಿ ರಕ್ಷಣೆ, ವಾಣಿಜ್ಯ, ಸಂಪರ್ಕ, ಇವುಗಳನ್ನು ಸುರಕ್ಷಿತವಾಗಿ ಉಳಿಸಲು ಮತ್ತು ಇತರ ಅಗತ್ಯ ಉದ್ದೇಶಗಳಿಗೋಸ್ಕರ ಬೇಕಾಗುವ ಒಪ್ಪಂದಗಳನ್ನು ಎರಡೂ ಕಡೆಯವರು ಮಾಡತಕ್ಕದ್ದು.

(೫) ಜನಸ್ತೋಮದ ವರ್ಗಾವಣೆ ಜನರ ಸ್ವಂತ ಇಚ್ಛೆಯ ಮೇರೆಗೆ ಮಾತ್ರ ನಡೆಯತಕ್ಕದ್ದು.

(೬) ಭಾರತವನ್ನು ಆಳಲು ಬೇಕಾಗಿರುವ ಸಂಪೂರ್ಣ ಅಧಿಕಾರವನ್ನು ಮತ್ತು ಜವಾಬ್ದಾರಿಯನ್ನು ಬ್ರಿಟನ್ ವರ್ಗಾಯಿಸಿದರೆ ಮಾತ್ರ ಈ ನಿಬಂಧನೆಗಳು ಅನ್ವಯಿಸುವುವು.

ಸೆಪ್ಟೆಂಬರ್ ೯ರಂದು ಆರಂಭವಾದ ಮಾತುಕತೆಗಳು ೧೮ ದಿನಗಳವರೆಗೆ ನಡೆದಿದ್ದು ೨೭ನೇ ಸೆಪ್ಟೆಂಬರ್‌ವರೆಗೆ ನಡೆದವು. ಅದೇ ದಿನ ಅವು ವಿಫಲವಾದವು ಎಂದು ಘೋಷಿಸಲಾಯಿತು. ವಿವಿಧ ಜನರ ಮನಸ್ಸುಗಳಲ್ಲಿ ಈ ವೈಫಲ್ಯವು ಹಲವು ಬಗೆಯ ಪ್ರತಿಕ್ರಿಯೆಯನ್ನು ಉಂಟುಮಾಡಿತು. ಕೆಲವರಿಗೆ ಸಂತೋಷವಾಯಿತು. ಇನ್ನು ಕೆಲವರಿಗೆ ಅಸಂತೋಷವಾಯಿತು. ಆದರೆ ಮಾತುಕತೆಗಳು ನಡೆಯುವ ಸ್ವಲ್ಪ ಮೊದಲು ಇಬ್ಬರೂ ಮೇಲುಗೈಯನ್ನು ಪಡೆಯುವ ಹೋರಾಟದಲ್ಲಿ ತಮ್ಮನ್ನು ವಿರೋಧಿಸುವವರ ಕೈಯಲ್ಲಿ ಸೋಲನ್ನನುಭವಿಸಿದ್ದು– ಗಾಂಧಿ ಬ್ರಿಟಿಷರ ಕೈಯಲ್ಲಿ, ಜಿನ್ನಾ ಪಂಜಾಬಿನಲ್ಲಿ, ಯೂನಿಯನಿಸ್ಟರ ಕೈಯಲ್ಲಿ– ತಮ್ಮ ವಿಶ್ವಾಸಾರ್ಹತೆಯನ್ನು ಬಹಳ ಮಟ್ಟಿಗೆ ಕಳೆದುಕೊಂಡಿದ್ದರಿಂದ, ಒಂದು ಪರಿಹಾರವನ್ನು ಏರ್ಪಡಿಸಲು ತಕ್ಕಮಟ್ಟಿನ ರಚನಾತ್ಮಕ ಪ್ರಯತ್ನಗಳನ್ನು ಇಬ್ಬರೂ ಮಾಡುತ್ತಾರೆ ಎಂದು ಬಹುತೇಕ ಜನ ನಿರೀಕ್ಷಿಸಿದ್ದರು. ಅವರ ವ್ಯಕ್ತಿಗಳಲ್ಲಿರುವ ದೋಷಗಳಿಂದ ಈ ವಿಫಲತೆ ಸಂಭವಿಸಿದ್ದಿರಬಹುದು. ಆದರೆ ಸಿ.ಆರ್. ಸೂತ್ರದ ಕೆಲವು ಮೂಲಭೂತ ಹುಳುಕುಗಳನ್ನು ಗಮನಿಸಿದರೆ, ಈ ವಿಫಲತೆ ಅನಿವಾರ್ಯವಾಗಿತ್ತೆಂದು ಹೇಳಬೇಕಾಗುತ್ತದೆ. ಮೊದಲನೆಯದಾಗಿ, ಈ ಸೂತ್ರದಲ್ಲಿ ಕೋಮು ಪ್ರಶ್ನೆಯನ್ನು ರಾಜಕೀಯ ಪ್ರಶ್ನೆಯ ಜೊತೆಯಲ್ಲಿ ಬಿಡಿಸಲಾರದ ರೀತಿಯಲ್ಲಿ ಗಂಟು ಹಾಕಲಾಗಿತ್ತು. ರಾಜಕೀಯ ಇತ್ಯರ್ಥ ಇಲ್ಲದಿದ್ದರೆ ಕೋಮುವಾರು ಇತ್ಯರ್ಥವೂ ಇಲ್ಲ– ಈ ತಂತ್ರದ ಮೇಲೆ ಸಿ.ಆರ್. ಸೂತ್ರ ಮುಂದುವರಿಯುತ್ತಿತ್ತು. ಈ ಸೂತ್ರ ಒಂದು ಪರಿಹಾರವನ್ನು ಸೂಚಿಸಲಿಲ್ಲ. ಜಿನ್ನಾ ಅವರನ್ನು ಒಂದು ಒಪ್ಪಂದಕ್ಕೆ ಬರುವಂತೆ ಅದು ಆಹ್ವಾನಿಸಿತು– "ಸ್ವಾತಂತ್ರ್ಯವನ್ನು ಪಡೆಯಲು ನೀವು ನಮಗೆ ಸಹಾಯ ಮಾಡಿದರೆ, ಪಾಕಿಸ್ತಾನದ ನಿಮ್ಮ ಬೇಡಿಕೆಯನ್ನು ನಾವು ಸಂತೋಷದಿಂದ ಪರಿಗಣಿಸುವೆವು." ಸ್ವಾತಂತ್ರ್ಯವನ್ನು ಪಡೆಯಬೇಕಾದರೆ, ಇದೊಂದು ಅತ್ಯುತ್ತಮ ವಿಧಾನ ಎಂಬ ಕಲ್ಪನೆ ರಾಜಗೋಪಾಲಾಚಾರಿಯಾರ್ ಅವರಿಗೆ ಎಲ್ಲಿ ಸಿಕ್ಕಿತು ಎಂಬುದು ನನಗೆ ತಿಳಿಯುತ್ತಿಲ್ಲ. ಪರಕೀಯರಿಂದ ತಮ್ಮ ಸ್ವಾತಂತ್ರ್ಯವನ್ನು ರಕ್ಷಿಸುವುದಕ್ಕೋಸ್ಕರ ನೆರೆ ರಾಜಕುಮಾರರಿಗೆ ತಮ್ಮ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಟ್ಟು ನಂಟುತನ ಬೆಳೆಸಿದ್ದ ಪ್ರಾಚೀನ ಭಾರತದ ಹಿಂದೂ ರಾಜರಿಂದ ಅವರು ಈ ಕಲ್ಪನೆಯನ್ನು ಎರವಲು ಪಡೆದಿದ್ದಿರಬಹುದು. ಇಂಥ ನಂಟಸ್ಥಿಕೆಯಿಂದ ಒಳ್ಳೆಯ ಗಂಡನಾಗಲಿ, ಬಾಳುವ ರಾಜಕೀಯ ಮಿತ್ರನಾಗಲಿ ಲಭಿಸುತ್ತಿರಲಿಲ್ಲ ಎಂಬುದನ್ನು ರಾಜಗೋಪಾಲಾಚಾರಿಯಾರ್ ಮರೆತರು. ಸ್ವಾತಂತ್ರ್ಯವನ್ನು ಪಡೆಯುವುದಕ್ಕೋಸ್ಕರ ಕೊಟ್ಟ ಸಹಾಯವನ್ನು ಅವಲಂಬಿಸಿ ಕೋಮುವಾರು ಪ್ರಶ್ನೆಯನ್ನು ಇತ್ಯರ್ಥಗೊಳಿಸುವುದು ಈ ಬಗೆಯ ಒಂದು ವಿಷಯವನ್ನು ನಿರ್ವಹಿಸುವ ಬಹಳ ಅವಿವೇಕದ ಒಂದು ರೀತಿ. ಕೋಮುವಾರು ಗಾಳವನ್ನು ಹಾಕಿ ಒಂದು ಪಕ್ಷವನ್ನು

ತನ್ನ ಬಲೆಯೊಳಗೆ ಎಳೆಯುವ ಇನ್ನೊಂದು ಪಕ್ಷದ ಕಾರ್ಯವೈಖರಿಯಿದು. ಸಿ.ಆರ್. ಸೂತ್ರದಲ್ಲಿ ಕೋಮುವಾರು ಒಪ್ಪಂದವು ಬಿಕರಿಗಿಟ್ಟ ಒಂದು ಸರಕಾಯಿತು.

ಸಿ.ಆರ್. ಸೂತ್ರದ ಎರಡನೇ ದೋಷವೆಂದರೆ, ಒಪ್ಪಂದವಾದ ಪಕ್ಷದಲ್ಲಿ, ಆ ಒಪ್ಪಂದವನ್ನು ಕಾರ್ಯಗತಗೊಳಿಸಲು ಯೋಜಿಸಲಾದ ಕಾರ್ಯವಿಧಾನ. ತಾತ್ಕಾಲಿಕ ಸರಕಾರ ಈ ಕೆಲಸ ಮಾಡಬೇಕೆಂದು ಸಿ.ಆರ್. ಸೂತ್ರ ಸಲಹೆ ಮಾಡುತ್ತದೆ. ಈ ಸಲಹೆಯನ್ನು ಮುಂದಿಡುವಾಗ ರಾಜಗೋಪಾಲಚಾರಿಯಾರ್ ಅವರು ಎರಡು ತೊಡಕುಗಳನ್ನು ಗಮನಿಸಲಿಲ್ಲ. ಅವರು ಗಮನಿಸದ ಮೊದಲನೇ ಅಂಶವೆಂದರೆ ತಾತ್ಕಾಲಿಕ ಸರಕಾರವನ್ನು ರಚಿಸಿದ ಕೂಡಲೆ, ಕಾನೂನಿನ ಪರಿಭಾಷೆಯಲ್ಲಿ, ಕರಾರು ಮಾಡಿಕೊಳ್ಳುವ ಪಕ್ಷಗಳ ವಚನಗಳು ಸಮವರ್ತಿ ವಚನಗಳಾಗಿ ಉಳಿಯುವುದಿಲ್ಲ ಎಂಬುದು. ಪೂರೈಸಲ್ಪಟ್ಟ ವಚನ ಒಂದು ಕಡೆಯಿದ್ದು, ಪೂರೈಸಬೇಕಾದ ವಚನ ಇನ್ನೊಂದು ಕಡೆ ಇರುವಂಥ ಒಂದು ಪ್ರಕರಣ ಇದಾಗುತ್ತದೆ. ತಾತ್ಕಾಲಿಕ ಸರಕಾರವನ್ನು ಸ್ಥಾಪಿಸಲು ಒಪ್ಪುವುದರ ಮೂಲಕ, ಸ್ವಾತಂತ್ರ್ಯವನ್ನು ಪಡೆಯಲು ಕಾಂಗ್ರೆಸಿಗೆ ನೆರವಾಗುತ್ತೇವೆ ಎಂಬ ತನ್ನ ವಚನವನ್ನು ಲೀಗ್ ಕಾರ್ಯಗತಗೊಳಿಸಿದಂತಾಗುತ್ತದೆ. ಆದರೆ ಪಾಕಿಸ್ತಾನವನ್ನು ಅಸ್ತಿತ್ವಕ್ಕೆ ತರಲು ಕಾಂಗ್ರೆಸ್ ಕೊಟ್ಟ ವಚನ ಪೂರೈಸಲು ಯೋಗ್ಯವಾದ ಸ್ವರೂಪದ್ದಾಗಿ ಉಳಿಯುತ್ತದೆ. ಎರಡೂ ಕಡೆಯ ವಚನಗಳು ಸಮವರ್ತಿಯಾಗಿರಲೇಬೇಕೆಂದು ನ್ಯಾಯವಾಗಿಯೇ ಹೇಳುವ ಜಿನ್ನಾ ಅವರು ಒಪ್ಪಂದದ ಇಂಥ ಸ್ಥಿತಿಯಲ್ಲಿ ತಾನಿರಲು ಸಮ್ಮತಿಸುತ್ತಾರೆ ಎಂಬುದನ್ನು ಸರ್ವಥಾ ನಿರೀಕ್ಷಿಸಲಾಗದು. ರಾಜಗೋಪಾಲಾಚಾರಿಯಾರ್ ಗಮನಿಸದ ಎರಡನೇ ತೊಡಕೆಂದರೆ, ತಾತ್ಕಾಲಿಕ ಸರಕಾರ ಕಾಂಗ್ರೆಸ್ ಕೊಟ್ಟ ವಚನವನ್ನು ಕಾರ್ಯಗತಗೊಳಿಸಲಿಲ್ಲವಾದರೆ, ಮುಂದೇನು? ಅದನ್ನು ಜಾರಿಗೊಳಿಸುವವರು ಯಾರು? ಯಾವುದೇ ಮೇಲಧಿಕಾರಕ್ಕೆ ಒಳಪಡದ ಸಾರ್ವಭೌಮ ಸರಕಾರವಾಗಿ ತಾತ್ಕಾಲಿಕ ಸರಕಾರ ಸ್ಥಾಪಿತವಾಗಲಿದೆ. ಒಪ್ಪಂದವನ್ನು ಜಾರಿಗೊಳಿಸಲು ಅದಕ್ಕೆ ಇಷ್ಟವಿಲ್ಲದ ಪಕ್ಷದಲ್ಲಿ, ದಂಗೆಯೇಳುವುದೊಂದೇ ಮುಸ್ಲಿಮರಿಗೆ ಉಳಿದಿರುವ ಮಾರ್ಗ. ಹೀಗೆ ಸಂವಿಧಾನವನ್ನು ರೂಪಿಸಲು ಮತ್ತು ಪಾಕಿಸ್ತಾನವನ್ನು ಸೃಷ್ಟಿಸಲು ತಾತ್ಕಾಲಿಕ ಸರಕಾರವನ್ನು ಕರ್ತೃವನ್ನಾಗಿ ಮಾಡಬೇಕೆಂಬುದನ್ನು ಯಾರೂ ಒಪ್ಪಲಾರರು. ಅದೊಂದು ಪ್ರಲೋಭನೆಯ ಉಪಾಯ ಪರಿಹಾರವಲ್ಲ. ಬ್ರಿಟಿಷ್ ಭಾರತದ ರಾಷ್ಟ್ರೀಯ ಜೀವನದ ಪ್ರಮುಖರು ಒಪ್ಪಿರುವ ಉಪಬಂಧಗಳನ್ನು ಒಳಗೊಂಡ ಪಾರ್ಲಿಮೆಂಟಿನ ಅಧಿನಿಯಮದ ಮೂಲಕ ಸಂವಿಧಾನಾತ್ಮಕ ಬದಲಾವಣೆಗಳನ್ನು ತಂದೊಡ್ಡುವುದೇ ಇದನ್ನು ನೆರವೇರಿಸಲು ಇರುವ ಏಕೈಕ ಮಾರ್ಗ.

ಸಿ.ಆರ್. ಸೂತ್ರದಲ್ಲಿ ಮೂರನೆಯ ದೋಷವೊಂದಿದೆ. ರಕ್ಷಣೆ, ವಿದೇಶನೀತಿ, ಸೀಮಾ ಸುಂಕ– ಇಂಥ ಸಾಮಾನ್ಯಾಸಕ್ತಿಗಳು ಎನ್ನಲಾದುದನ್ನು ಸಂರಕ್ಷಿಸಲು ಇರಬೇಕೆಂದು ಗೊತ್ತುಪಡಿಸಿದ ಕೌಲನ್ನು ಕುರಿತದ್ದು. ಇಲ್ಲಿಯೂ ಸುವೇದ್ಯವಾಗಿರುವ ತೊಡಕುಗಳ ಅರಿವು ರಾಜಗೋಪಾಲಾಚಾರಿಯಾರ್ ಅವರಿಗೆ ಇದ್ದಂತೆ ತೋರುವುದಿಲ್ಲ. ಸಾಮಾನ್ಯಾಸಕ್ತಿಯ ವಿಷಯಗಳನ್ನು ಸಂರಕ್ಷಿಸುವುದು ಹೇಗೆ? ನನಗೆ ಕಾಣಿಸುವಂಥವು ಎರಡೇ ದಾರಿಗಳು: ಒಂದನೆಯದು, ಈ ವಿಷಯಗಳಲ್ಲಿ ಶಾಸಕಾಂಗದ ಮತ್ತು ಕಾರ್ಯಾಂಗದ ಅಧಿಕಾರವಿದ್ದ ಒಂದು ಕೇಂದ್ರ ಸರಕಾರವಿರುವುದು. ಎಂದರೆ, ಪಾಕಿಸ್ತಾನ ಮತ್ತು ಹಿಂದೂಸ್ತಾನ ಸಾರ್ವಭೌಮ ರಾಜ್ಯಗಳಾಗುವುದಿಲ್ಲ. ಜಿನ್ನಾ ಅವರು ಇದಕ್ಕೆ ಸಮ್ಮತಿಸುವರೋ? ಇಲ್ಲವೆಂಬುದು ಸ್ಪಷ್ಟವೇ ಇದೆ. ಇನ್ನೊಂದು ದಾರಿ ಎಂದರೆ ಪಾಕಿಸ್ತಾನ ಮತ್ತು ಹಿಂದೂಸ್ತಾನಗಳನ್ನು ಸಾರ್ವಭೌಮ ರಾಜ್ಯಗಳನ್ನಾಗಿ ಮಾಡಿ, ಸಾಮಾನ್ಯಾಸಕ್ತಿಗಳಿಗೆ ಸಂಬಂಧಿಸುವ ಒಂದು ಕೌಲಿನ ಮೂಲಕ ಅವೆರಡನ್ನು ಸೇರಿಸುವುದು. ಆದರೆ,

ಕೌಲಿನ ಷರತ್ತುಗಳನ್ನು ಪಾಲಿಸುವಂತೆ ಮಾಡಲು ಇರುವ ನಿರ್ಬಂಧವೇನು? ಡೊಮಿನಿಯನ್ ಸ್ಥಿತಿಯಲ್ಲಿದ್ದರೂ ಪಾಕಿಸ್ತಾನ ಸಾರ್ವಭೌಮ ರಾಜ್ಯವಾದರೆ ಈ ಕೌಲನ್ನು ಯಾವಾಗ ಬೇಕೆಂದರೆ ಆಗ ನಿರಾಕರಿಸಬಹುದು. ಸೂತ್ರದ ಈ ಕಲಮಿನ ಕರಡನ್ನು ಸಿದ್ಧಪಡಿಸುವಲ್ಲಿ ೧೯೨೨ರ ಆಂಗ್ಲೊ-ಐರಿಷ್ ಕೌಲು ರಾಜಗೋಪಾಲಾಚಾರಿಯಾರ್ ಅವರಿಗೆ ಪ್ರೇರಣೆಯಾಗಿತ್ತು ಎಂಬುದು ವೇದ್ಯವೇ ಇದೆ. ಆದರೆ, ಐರ್ಲೆಂಡಿಗೆ ಡೊಮಿನಿಯನ್ ಸ್ಥಾನಮಾನ ಇಲ್ಲದವರೆಗೆ ಈ ಕೌಲು ಬಾಳಿತು. ಡೊಮಿನಿಯನ್ ಅಂತಸ್ತು ಪಡೆದದ್ದೇ ಐರ್ಲೆಂಡ್ ಈ ಕೌಲನ್ನು ನಿರಾಕರಿಸಿತು. ಆಗ ಬ್ರಿಟಿಷ್ ಪಾರ್ಲಿಮೆಂಟ್ ಮೌನವಾಗಿ ನಿಂತು ನಕ್ಕಿತಷ್ಟೇ. ಏಕೆಂದರೆ ಇನ್ನು ತನ್ನಿಂದ ಮಾಡಲಾಗುವಂಥದ್ದು ಏನೂ ಇಲ್ಲವೆಂದು ಅದಕ್ಕೆ ತಿಳಿದಿತ್ತು– ಈ ಸತ್ಯಸಂಗತಿಯನ್ನು ರಾಜಗೋಪಾಲಾಚಾರಿಯಾರ್ ಮರೆತರು.

ಮಾತುಕತೆಗಳು ವಿಫಲವಾದುದಕ್ಕೆ ಹೆಚ್ಚೇನು ಚಿಂತೆ ಪಡಬೇಕಾಗಿಲ್ಲ. ಆದರೆ ವಿಷಾದದ ಸಂಗತಿ ಎಂದರೆ, ಮಾತುಕತೆಗಳು ವಿಫಲವಾದುದರಿಂದ ಜಿನ್ನಾ ಅವರು ಖಾಸಗಿ ಮಾತುಕತೆಗಳಲ್ಲಿ ಸುಮಾರು ದಿಟ್ಟವಾಗಿಯೇ ಚರ್ಚಿಸುತ್ತಿದ್ದು, ಬಹಿರಂಗವಾಗಿ ಜಾಗರೂಕ ಮೌನದಲ್ಲೇ ಉಳಿಸಿದ್ದ ಕೆಲವು ಪ್ರಶ್ನೆಗಳ ಬಗೆಗೆ ಸ್ಪಷ್ಟ ಕಲ್ಪನೆ ನಮಗೆ ಸಿಕ್ಕಿತು ಎಂಬುದು. ಈ ಪ್ರಶ್ನೆಗಳು ಇವು: (೧) ಪಾಕಿಸ್ತಾನವನ್ನು ಒಪ್ಪುವುದಕ್ಕೆ ಮುಸ್ಲಿಂ ಲೀಗಿನ ನಿರ್ಣಯ ಕಾರಣವೇ?, (೨) ಮುಸ್ಲಿಮರಿಗೆ– ಎಂದರೆ ಮುಸ್ಲಿಂ ಲೀಗ್ ಬೇರೆ, ಮುಸ್ಲಿಮರು ಬೇರೆ ಎಂದು ಪರಿಗಣಿಸಿದಾಗ– ಈ ವಿಷಯದಲ್ಲಿ ಏನನ್ನಾದರೂ ಹೇಳುವಂಥ ಹಕ್ಕು ಇಲ್ಲವೇ? (೩) ಪಾಕಿಸ್ತಾನದ ಗಡಿಗಳು ಯಾವುವು? ಇವು ಪಂಜಾಬ ಮತ್ತು ಬಂಗಾಳದ ಈಗಿನ ಆಡಳಿತದ ಗಡಿಗಳೇ? ಅಥವಾ ಜನಾಂಗೀಯ ಗಡಿಗಳೇ? (೪) ಲಾಹೋರ್ ನಿರ್ಣಯದಲ್ಲಿದ್ದ "ಅಗತ್ಯವೆಂದೆನಿಸುವ ಪ್ರಾದೇಶಿಕ ಹೊಂದಾಣಿಕೆಗಳಿಗೆ ಒಳಪಟ್ಟು"– ಈ ಪದಗಳ ಅರ್ಥವೇನು? ಲೀಗಿನ ಮನಸ್ಸಿನಲ್ಲಿದ್ದ ಈ ಪ್ರಾದೇಶಿಕ ಹೊಂದಾಣಿಕೆಗಳು ಯಾವುವು? (೫) ಲಾಹೋರ್ ನಿರ್ಣಯದ ಕೊನೆಯ ಭಾಗದಲ್ಲಿ ಬರುವ "ಅಂತಿಮವಾಗಿ" ಪದದ ಅರ್ಥವೇನು? ಪಾಕಿಸ್ತಾನ ಸ್ವಾತಂತ್ರ್ಯ ಮತ್ತು ಸಾರ್ವಭೌಮ ರಾಜ್ಯವಾಗಿ ಇರದ ಒಂದು ಸಂಕ್ರಮಣ ಕಾಲ ಇರುತ್ತದೆ ಎಂದು ಲೀಗಿನ ಆಲೋಚನೆಯಲ್ಲಿತ್ತೇ? (೬) ಜಿನ್ನಾ ಅವರ ಸಲಹೆಯಂತೆ ಆಡಳಿತ ಗಡಿಗಳು ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನದ ಗಡಿಗಳಾಗಬೇಕು ಎಂದಾದರೆ, ಪರಿಶಿಷ್ಟ ಜಾತಿಯವರು, ಅಥವಾ ಹೀಗೆ ಹೇಳಬಹುದಾದರೆ, ಪಂಜಾಬ ಮತ್ತು ಬಂಗಾಳದ ಮುಸ್ಲಿಮೇತರರು ಜಿನ್ನಾ ಅವರ ಪಾಕಿಸ್ತಾನಕ್ಕೆ ಸೇರಬೇಕೇ, ಬೇಡವೇ ಎಂಬುದನ್ನು ಜನಮತದಿಂದ ತೀರ್ಮಾನಿಸಲು ಜಿನ್ನಾ ಬಿಡುವರೇ? ಪಂಜಾಬ ಮತ್ತು ಬಂಗಾಳದ ಮುಸ್ಲಿಮೇತರ ಜನಮತದ ಫಲಿತಾಂಶವನ್ನು ಗೌರವಿಸಲು ಜಿನ್ನಾ ಅವರು ಸಿದ್ಧರಿದ್ದಾರೆಯೇ? (೭) ಯು.ಪಿ. (ಸಂಯುಕ್ತ ರಾಜ್ಯಗಳು) ಮತ್ತು ಬಿಹಾರದ ಮೂಲಕ ಹಾದುಹೋಗುವ ಮತ್ತು ಪೂರ್ವ ಹಾಗೂ ಪಶ್ಚಿಮ ಪಾಕಿಸ್ತಾನಗಳಲ್ಲಿ ಸೇರಿಸುವಂಥ ಒಂದು ಭೂಪಟ ಜಿನ್ನಾ ಅವರಿಗೆ ಬೇಕೇ? ಜಿನ್ನಾ ಅವರಿಗೆ ನೇರವಾದ ಪ್ರಶ್ನೆಗಳನ್ನು ಹಾಕಿ ದ್ವಂದ್ವಾರ್ಥವಿಲ್ಲದ ಉತ್ತರಗಳನ್ನು ಪಡೆದಿದ್ದರೆ ಬಹಳ ಪ್ರಯೋಜನವಾಗುತ್ತಿತ್ತು. ಆದರೆ ಇಂಥ ಪ್ರಶ್ನೆಗಳನ್ನು ಜಿನ್ನಾ ಅವರ ಜೊತೆ ನೇರವಾಗಿ ಎದುರಿಸುವುದನ್ನು ಬಿಟ್ಟು, ಸಿ.ಆರ್. ಸೂತ್ರ ಮತ್ತು ಲೀಗಿನ ಲಾಹೋರ್ ನಿರ್ಣಯ ಮೂಲತಃ ಒಂದೇ ಎಂದು ಸಾಧಿಸುವುದರಲ್ಲಿ ಗಾಂಧಿಯವರು ಎಲ್ಲಾ ಹೊತ್ತನ್ನು ವ್ಯಯಿಸಿದರು– ಹೀಗೆ ಮಾಡಿದ್ದು ಅಬದ್ಧವಲ್ಲವೆಂದಾದರೆ, ಜಾಣತನದ ಒಂದು ವ್ಯವಹಾರವಾಗಿತ್ತಷ್ಟೆ. ಹೀಗಾದುದರಿಂದ ಈ ಪ್ರಶ್ನೆಗಳನ್ನು ಸ್ಪಷ್ಟಗೊಳಿಸುವುದಕ್ಕೆ ತನಗೆ ಲಭಿಸಿದ್ದ ಅತ್ಯುತ್ತಮ ಅವಕಾಶವನ್ನು ಗಾಂಧಿ ಅವರು ಕಳೆದುಕೊಂಡರು.

ಈ ಮಾತುಕತೆಗಳ ಅನಂತರ, ಆಟ ಮುಗಿದ ಮೇಲೆ ಕ್ರಿಕೆಟ್ ಆಡುವವರು ಮಾಡುವಂತೆ, ಇನ್ನು ಮುಂದೆ ಮಾಡಬೇಕಾದುದು ಏನೂ ಇಲ್ಲ ಎಂಬಂತೆ, ಗಾಂಧಿ ಮತ್ತು ಜಿನ್ನಾ ತಮ್ಮ ತಮ್ಮ ಪೆವಿಲಿಯನ್‌ಗಳಿಗೆ ಹಿಂದಿರುಗಿದ್ದಾರೆ. ಪುನಃ ಅವರು ಭೇಟಿಯಾಗುವರೇ? ಆಗುವುದಾದರೆ ಯಾವಾಗ ಎಂಬುದರ ಬಗೆಗೆ ಸೂಚನೆ ಇಲ್ಲ. ಹಾಗಿದ್ದರೆ, ಮುಂದೇನು? ಎಂಬ ಪ್ರಶ್ನೆ ಅವರನ್ನು ಕಾಡುವಂತೆ ತೋರುವುದಿಲ್ಲ. ಹೀಗಿದ್ದರೂ ಚರ್ಚಿಸಲು ನಿರಾಕರಿಸುವ ಈ ಪ್ರಶ್ನೆಯನ್ನು ಬಗೆಹರಿಸಿದ ಭಾರತ ರಾಜಕೀಯವಾಗಿ ಹೇಗೆ ಮುಂಬರಿಯುವುದು ಎಂಬುದನ್ನು ಊಹಿಸುವುದು ಕಷ್ಟ. ಭಿನ್ನಾಭಿಪ್ರಾಯ ತಾಳುವುದೇ ಪರಿಹಾರ ಎಂದು ತೀರ್ಮಾನಿಸಿ ಬಗೆಹರಿಸುವಂಥ ಪ್ರಶ್ನೆಗಳ ವರ್ಗಕ್ಕೆ ಸೇರುವಂಥ ಪ್ರಶ್ನೆ ಇದಲ್ಲ. ಉತ್ತರವನ್ನು ಖಂಡಿತಾ ಕಂಡುಕೊಳ್ಳಲೇಬೇಕಾದ ಪ್ರಶ್ನೆಯಿದು. ಇದು ಒಪ್ಪಂದದಿಂದ ಅಥವಾ ಮಧ್ಯಸ್ಥಿಕೆಯಿಂದ ಆಗತಕ್ಕದ್ದು. ಒಪ್ಪಂದದಿಂದಾದರೆ ಅದು ಮಾತುಕತೆಯ ಮೂಲಕ ಆಗಬೇಕು– ಕೊಳುಕೊಡೆಯ ಮೂಲಕವಲ್ಲದೆ, ಒಂದು ಪಕ್ಷ ಇನ್ನೊಂದು ಪಕ್ಷಕ್ಕೆ ಶರಣಾಗುವುದರ ಮೂಲಕವಲ್ಲ. ಅದು ಒಪ್ಪಂದವಲ್ಲ, ಹೇರುವಿಕೆ, ಕ್ರಮೇಣ ವಿವೇಕ ಮೇಲುಗೈಯಾಗಿ ಎರಡು ಪಕ್ಷಗಳು ಒಂದು ಒಪ್ಪಂದಕ್ಕೆ ಬರುವುದು ಸಾಧ್ಯ. ಆದರೆ ಒಪ್ಪಂದವೆಂದರೆ ಬಹಳ ನಿಧಾನವಾದ ಒಂದು ಕಾರ್ಯರೀತಿಯಾಗಬಹುದು. ವಿವೇಕಕ್ಕೆ ಮನ್ನಣೆ ಸಿಗಬೇಕಾದರೆ ಬಹಳ ಕಾಲ ಹಿಡಿಯಬಹುದು. ಎಷ್ಟು ಕಾಲ ಎಂದು ಹೇಳಲಿಕ್ಕಾಗದು. ಭಾರತದ ರಾಜಕೀಯ ಸ್ವಾತಂತ್ರ್ಯ ಅತ್ಯಂತ ತುರ್ತಿನ ಅಗತ್ಯವಾಗಿದೆ. ಅದನ್ನು ಮುಂದೂಡಲಿಕ್ಕಾಗದು, ಹೀಗಿದ್ದರೂ ಕೋಮು ಸಮಸ್ಯೆಯನ್ನು ಬಗೆಹರಿಸದೆ ಅದನ್ನು ತ್ವರಿತಗೊಳಿಸಲೂ ಆಗದು. ಅದು ಒಪ್ಪಂದವನ್ನು ಅವಲಂಬಿಸುವಂತೆ ಮಾಡಿದರೆ ಅದರ ಪರಿಹಾರವನ್ನು ಅನಿರ್ದಿಷ್ಟ ಕಾಲ ಮುಂದೂಡಿದಂತಾಗುತ್ತದೆ. ಬೇರೊಂದು ಶೀಘ್ರ ವಿಧಾನವನ್ನು ಕಂಡುಕೊಳ್ಳಬೇಕು. ಒಂದು ಅಂತರ್‌ರಾಷ್ಟ್ರೀಯ ಮಂಡಳಿಯ ಮೂಲಕ ನಡೆಸುವ ಮಧ್ಯಸ್ಥಿಕೆಯೇ ಈಗಿರುವುದರಲ್ಲಿ ಉತ್ತಮ ಪರಿಹಾರ ಎಂದು ನನಗನಿಸುತ್ತದೆ. ಅಲ್ಪಸಂಖ್ಯಾತರ ಸಮಸ್ಯೆಯಲ್ಲಿ ವಿವಾದಕ್ಕೊಳಗಾದ ವಿಷಯಗಳನ್ನು– ಪಾಕಿಸ್ತಾನವೂ ಸೇರಿದಂತೆ– ಈ ಮಂಡಳಿಗೆ ಒಪ್ಪಿಸಬೇಕು. ಬ್ರಿಟಿಷ್ ಸಾಮ್ರಾಜ್ಯದ ಹೊರಗಿನ ದೇಶಗಳಿಂದ ಆರಿಸಿದ ವ್ಯಕ್ತಿಗಳು ಈ ಮಂಡಳಿಯಲ್ಲಿರಬೇಕು. ಭಾರತದ ಪ್ರತಿಯೊಂದು ಶಾಸನಬದ್ಧ ಅಲ್ಪಸಂಖ್ಯಾತರು– ಮುಸ್ಲಿಮರು, ಪರಿಶಿಷ್ಟ ಜಾತಿಯವರು, ಸಿಖ್ಖರು, ಭಾರತೀಯ ಕ್ರೈಸ್ತರು– ಈ ಮಧ್ಯಸ್ಥಿಕಾಮಂಡಳಿಗೆ ನಾಮ ನಿರ್ದೇಶಿತನನ್ನು ಆರಿಸುವಂತೆ ಅವರನ್ನು ಕೇಳಿಕೊಳ್ಳಬೇಕು. ಈ ಅಲ್ಪಸಂಖ್ಯಾತರು ಹಾಗೂ ಹಿಂದೂಗಳು ತಮ್ಮ ಬೇಡಿಕೆಗಳನ್ನು ಸಮರ್ಥಿಸಲು ಈ ಮಂಡಳಿಯ ಮುಂದೆ ಹಾಜರಾಗತಕ್ಕದ್ದು ಮತ್ತು ಮಂಡಳಿಯ ತೀರ್ಪನ್ನು ಒಪ್ಪಲು ಬದ್ಧರಾಗತಕ್ಕದ್ದು. ಬ್ರಿಟಿಷರು ಈ ಕೆಳಗಿನ ಆಶ್ವಾಸನೆಗಳನ್ನು ಕೊಡತಕ್ಕದ್ದು:

(೧) ಕೋಮು ಇತ್ಯರ್ಥಕ್ಕೂ ತಮಗೂ ಯಾವ ಸಂಬಂಧವೂ ಇಲ್ಲವೆಂದು, ಅದು ಒಪ್ಪಂದಕ್ಕೆ ಅಥವಾ ಒಂದು ಮಧ್ಯಸ್ಥಿಕಾಮಂಡಳಿಗೆ ಬಿಟ್ಟ ವಿಷಯವೆಂದು.

(೨) ಕೋಮು ಪ್ರಶ್ನೆಗೆ ಸಂಬಂಧಿಸಿದಂತೆ ಮಧ್ಯಸ್ಥಿಕಾಮಂಡಳಿಯ ತೀರ್ಪನ್ನು ಭಾರತ ಸರಕಾರದ ಅಧಿನಿಯಮದಲ್ಲಿ ಅಂತರ್ಗತಗೊಳಿಸುವುದರ ಮೂಲಕ ಅದನ್ನು ಕಾರ್ಯಗತಗೊಳಿಸುವೆವು ಎಂದು.

(೩) ಅಂತರ್‌ರಾಷ್ಟ್ರೀಯ ಮಧ್ಯಸ್ಥಿಕಾಮಂಡಳಿಯ ಐತೀರ್ಪಿನ ಮೂಲಕ ಭಾರತದ ಅಲ್ಪಸಂಖ್ಯಾತರ ವಿಷಯದಲ್ಲಿ ತಮಗಿರುವ ಕರ್ತವ್ಯವನ್ನು ತಾವು ಸಾಕಷ್ಟು ಪ್ರಮಾಣದಲ್ಲಿ ನೆರವೇರಿಸಿದ ಹಾಗಾಯಿತು ಎಂದು ಪರಿಗಣಿಸುವರೆಂದು ಮತ್ತು ಭಾರತಕ್ಕೆ ಡೊಮಿನಿಯನ್ ಸ್ಥಾನಮಾನ ಕೊಡಲು ಒಪ್ಪುತ್ತೇವೆ ಎಂದು.

ಈ ಕಾರ್ಯವಿಧಾನದಲ್ಲಿ ಹಲವು ಅನುಕೂಲಗಳಿವೆ. ಕೋಮು ಸಮಸ್ಯೆಯನ್ನು ಬಗೆಹರಿಸಲು ತಮ್ಮಿಂದಾಗುತ್ತಿರಲಿಲ್ಲವೆಂಬುದಕ್ಕೆ ಕಾಂಗ್ರೆಸ್ ಮುಂದಿಡುವ ಕಾರಣವನ್ನು– ಕೋಮು ಇತ್ಯರ್ಥದಲ್ಲಿ ಬ್ರಿಟಿಷರ ಹಸ್ತಕ್ಷೇಪವನ್ನು– ಇದು ತೆಗೆದುಹಾಕುತ್ತದೆ. ಕಾಂಗ್ರೆಸ್ ಸೂಕ್ತವೆಂದು ಭಾವಿಸಿದ್ದಕ್ಕಿಂತ ಸ್ವಲ್ಪ ಹೆಚ್ಚನ್ನು ಬ್ರಿಟಿಷರ ಕೈಯಿಂದ ಅಲ್ಪಸಂಖ್ಯಾತರು ಪಡೆಯುವ ಸಾಧ್ಯತೆ ಯಾವಾಗಲೂ ಇದೆಯಾದುದರಿಂದ, ಕಾಂಗ್ರೆಸ್ ಜೊತೆಯಲ್ಲಿ ಒಪ್ಪಂದವನ್ನು ಮಾಡಲು ಅಲ್ಪಸಂಖ್ಯಾತರಿಗೆ ಇಷ್ಟವಿಲ್ಲವೆಂದು ಆಪಾದಿಸಲಾಗಿದೆ. ಈ ಸಲಹೆಯ ಇನ್ನೊಂದು ಅನುಕೂಲ ಹೀಗಿದೆ: ಸಂವಿಧಾನಕ್ಕೆ ಅಲ್ಪಸಂಖ್ಯಾತರ ಒಪ್ಪಿಗೆ ಬೇಕು ಎಂದು ವಿಧಿಸುವ ಮೂಲಕ ಭಾರತದ ಸಂವಿಧಾನಾತ್ಮಕ ಪ್ರಗತಿಗೆ ಸಂಬಂಧಿಸಿದಂತೆ ಅಲ್ಪಸಂಖ್ಯಾತರ ಕೈಯಲ್ಲಿ ಬ್ರಿಟಿಷ್ ಸರಕಾರ ವೀಟೊ ಅಧಿಕಾರವನ್ನು ಕೊಟ್ಟಿದೆ ಎಂಬ ಕಾಂಗ್ರೆಸಿನ ಆಕ್ಷೇಪವನ್ನು ಇದು ತೆಗೆದುಹಾಕುತ್ತದೆ. ಬ್ರಿಟಿಷ್ ಸರಕಾರದ ಕೈಯಲ್ಲಿ ಕೇವಲ ಉಪಕರಣಗಳಂತೆ ವರ್ತಿಸುವವರು ಎಂಬ ಕಾಂಗ್ರೆಸಿನ ಸಂದೇಹಕ್ಕೆ ಅಲ್ಪಸಂಖ್ಯಾತರು ಒಳಗಾಗಿರುವುದರಿಂದ ಅವರು ನ್ಯಾಯಯುತವಲ್ಲದ ಕಾರಣಗಳಿಗೋಸ್ಕರ ಒಪ್ಪಿಗೆಯನ್ನು ತಡೆಹಿಡಿಯಬಹುದು ಅಥವಾ ಒಪ್ಪಿಗೆಯನ್ನು ತಡೆಹಿಡಿಯುವಂತೆ ಬ್ರಿಟಿಷ್ ಸರಕಾರ ಅವರನ್ನು ಒಡಂಬಡಿಸಬಹುದು ಎಂದು ದೂರಲಾಗಿದೆ. ಈ ದೂರಿಗೆ ಸಂಬಂಧಿಸುವ ಎಲ್ಲ ಕಾರಣಗಳನ್ನು ಅಂತರ್ ರಾಷ್ಟ್ರೀಯ ಮಧ್ಯಸ್ಥಿಕೆ ನಿವಾರಿಸುತ್ತದೆ. ಅಲ್ಪಸಂಖ್ಯಾತರ ಕಡೆಯಿಂದ ಇದಕ್ಕೆ ಆಕ್ಷೇಪ ಇರಬಾರದು. ತಮ್ಮ ಒತ್ತಾಯಪೂರ್ವಕ ಬೇಡಿಕೆಗಳು ನಿಷ್ಪಕ್ಷಪಾತವೂ ನ್ಯಾಯಬದ್ಧವೂ ಆಗಿದ್ದಲ್ಲಿ, ಅಂತರ್ ರಾಷ್ಟ್ರೀಯ ಮಧ್ಯಸ್ಥಿಕಾಮಂಡಳಿಗೆ ಇವರು ಹೆದರಬೇಕಿಲ್ಲ. ಮಧ್ಯಸ್ಥಿಕೆಗೆ ಒಳಪಡಬೇಕು ಎನ್ನುವುದರಲ್ಲಿ ಪಕ್ಷಪಾತವೇನೂ ಇಲ್ಲ. ಯಾವುದೇ ವ್ಯಕ್ತಿ ತನ್ನ ಪ್ರಕರಣದಲ್ಲಿ ತಾನೇ ತೀರ್ಪುಗಾರನಾಗಬಾರದೆಂಬ ನ್ಯಾಯನಿಯಮಗಳ ಪ್ರಸಿದ್ಧ ಸೂತ್ರವನ್ನು ಇದು ಅನುಸರಿಸುತ್ತದೆ. ಅಲ್ಪಸಂಖ್ಯಾತರ ವಿಷಯದಲ್ಲಿ ಇದಕ್ಕೊಂದು ಅಪವಾದ ಕಲ್ಪಿಸಲು ಯಾವುದೇ ಕಾರಣವಿಲ್ಲ. ಒಂದು ವ್ಯಕ್ತಿಗೆ ಹೇಗೋ ಹಾಗೆಯೇ ಅಲ್ಪಸಂಖ್ಯಾತರಿಗೂ ತನ್ನ ಸ್ವಂತ ಪ್ರಕರಣದಲ್ಲಿ ತಾವೇ ನ್ಯಾಯ ನಿರ್ಣಯ ಮಾಡುತ್ತೇವೆ ಎಂದು ಹಕ್ಕು ಸಾಧಿಸಲು ಆಗದು. ಬ್ರಿಟಿಷ್ ಸರಕಾರದ ವಿಷಯವೇನು? ಬ್ರಿಟಿಷ್ ಸರಕಾರದ ಕಡೆಯಿಂದಲೂ ಈ ಯೋಜನೆಯ ಯಾವುದೇ ಭಾಗಕ್ಕೆ ಆಕ್ಷೇಪಣೆ ಬರಬೇಕಾದ ಕಾರಣ ನನಗೆ ತೋರುವುದಿಲ್ಲ. ಕೋಮುತೀರ್ಪು ಬ್ರಿಟಿಷರ ಮೇಲೆ ಹೆಚ್ಚಿನ ಅಪಕೀರ್ತಿಯನ್ನು ತಂದಿದೆ. ಯಾವುದೇ ರಿಯಾಯಿತಿ ಬರದ ಕಾರ್ಯಭಾರ ಅದಾಗಿತ್ತು. ಅದರಿಂದ ಬಿಡಿಸಿಕೊಳ್ಳುವುದು ಬ್ರಿಟಿಷರಿಗೆ ಸಂತೋಷವನ್ನು ತರಬೇಕು. ಇನ್ನು ಸಾರ್ವಭೌಮತ್ವವನ್ನು ಬಿಟ್ಟುಕೊಡುವ ತನಕ ಕೆಲವು ಸಮುದಾಯಗಳ ರಕ್ಷಣೆ ಮತ್ತು ಸುಭದ್ರತೆ ತಮ್ಮಲ್ಲಿ ನ್ಯಾಸವಾಗಿದ್ದುದರಿಂದ ಅವುಗಳ ಬಗೆಗೆ ಸಾಕಷ್ಟು ಸಮರ್ಪಕ ವ್ಯವಸ್ಥೆ ಮಾಡುವ ಕರ್ತವ್ಯವನ್ನು ತಾವು ನಿರ್ವಹಿಸಬೇಕೆನ್ನುವ ಬ್ರಿಟಿಷರ ತಿಳಿವಳಿಕೆಯನ್ನು ಕುರಿತಂತೆ ಇಷ್ಟನ್ನು ಹೇಳಬಹುದು: ಇಂಥ ರಕ್ಷಣೆಗೆ ಬೇಕಾಗಿರುವ ಕ್ರಮಗಳನ್ನು ಅಂತರ್ ರಾಷ್ಟ್ರೀಯ ಮಧ್ಯಸ್ಥಿಕಾಮಂಡಳಿಯ ಐತೀರ್ಪಿನಲ್ಲಿ ಅಂತರ್ಗತಗೊಳಿಸುವುದಕ್ಕಿಂತ ಹೆಚ್ಚೇನನ್ನು ಈ ಸಮುದಾಯಗಳು ಕೇಳುವುದು ಸಾಧ್ಯ? ಈ ಮಂಡಳಿಯ ಐತೀರ್ಪನ್ನು ಕಾರ್ಯಗತಗೊಳಿಸುವಲ್ಲಿ ಬ್ರಿಟಿಷ್ ಸರಕಾರಕ್ಕೆ ಕಷ್ಟವನ್ನು ತಂದೊಡ್ಡಬಹುದಾದಂಥ ಒಂದೇ ಒಂದು ಪ್ರಸಂಗ ಸಂಭವಿಸಬಹುದು. ವಿವಾದವಿರುವ ಪಕ್ಷಗಳ ಪೈಕಿ ಒಂದು ಪಕ್ಷ ತನ್ನ ವಿಷಯವನ್ನು ಮಧ್ಯಸ್ಥಿಕೆಗೆ ಒಪ್ಪಿಸದಿದ್ದರೆ ಅಂಥ ಪ್ರಸಂಗ ಉದ್ಭವಿಸುವುದು ಸಾಧ್ಯ. ಅಂಥ ಸಂದರ್ಭದಲ್ಲಿ ಈ ಪ್ರಶ್ನೆ ಏಳುತ್ತದೆ: ಆ ಪಕ್ಷಕ್ಕೆ ವಿರೋಧವಾಗಿ ಐತೀರ್ಪನ್ನು ಬ್ರಿಟಿಷ್ ಸರಕಾರ ಜಾರಿಗೆ ತರುವುದು ಸಮರ್ಥನೀಯವೇ? ಅಂಥ ಪಕ್ಷಕ್ಕೆ ವಿರೋಧವಾಗಿ ಬ್ರಿಟಿಷ್ ಸರಕಾರ, ಸಂಪೂರ್ಣವಾಗಿ ನ್ಯಾಯವಾಗಿಯೇ, ಐತೀರ್ಪನ್ನು ಜಾರಿಗೊಳಿಸಲು ಹೊರಡಬಹುದು ಎಂದು ಹೇಳುವುದರಲ್ಲಿ ನನಗೆ ಯಾವ ಅಡ್ಡಿಯೂ ಕಾಣುವುದಿಲ್ಲ.

ಕೊನೆಗೂ ಮಧ್ಯಸ್ಥಿಕೆಗೆ ತನ್ನ ವಿಷಯವನ್ನು ಒಪ್ಪಿಸಲು ನಿರಾಕರಿಸುವ ಪಕ್ಷದ ಸ್ಥಾನಮಾನವೇನು? ಇದಕ್ಕೆ ಉತ್ತರ, ಅಂಥ ಪಕ್ಷ ಆಕ್ರಮಣವನ್ನು ಎಸಗುವ ಪಕ್ಷವೆಂದೇ. ಆಕ್ರಮಣ ಮಾಡುವವನನ್ನು ನಿರ್ವಹಿಸುವುದು ಹೇಗೆ? ಅವನ ಮೇಲೆ ನಿರ್ಬಂಧಗಳನ್ನು ವಿಧಿಸುವ ಮೂಲಕ. ಆಕ್ರಮಣ ಮಾಡುವವನ ಮೇಲೆ ನಿರ್ಬಂಧಗಳನ್ನು ವಿಧಿಸುವುದಕ್ಕೆ ಇನ್ನೊಂದು ಹೆಸರೆಂದರೆ ಮಧ್ಯಸ್ಥಿಕೆಗೆ ಒಪ್ಪದ ಪಕ್ಷಕ್ಕೆ ವಿರೋಧವಾಗಿ ಮಧ್ಯಸ್ಥಿಕಾಮಂಡಳಿಯ ಐತೀರ್ಪನ್ನು ಜಾರಿಗೊಳಿಸುವುದೇ. ಸಂದರ್ಭ ಬಂದರೆ ಇಂಥ ಕಾರ್ಯವಿಧಾನವನ್ನು ಅನುಸರಿಸಲು ಬ್ರಿಟಿಷ್ ಸರಕಾರ ಮುಜುಗರ ಪಡಬೇಕಾಗಿಲ್ಲ. ಏಕೆಂದರೆ ಪ್ರಸಿದ್ಧವಾಗಿ ಮನ್ನಣೆ ಪಡೆದ ಕಾರ್ಯ ವಿಧಾನವಿದು. ಇದಕ್ಕೆ ಲೀಗ್ ಆಫ್ ನೇಷನ್ಸ್‌ನ ಸಮ್ಮತಿಯ ಮುದ್ರೆಯಿದೆ. ಅಬಿಸೀನಿಯದೊಡನೆ ತನಗಿರುವ ವಿವಾದವನ್ನು ಮಧ್ಯಸ್ಥಿಕೆಗೆ ಒಪ್ಪಿಸಲು ನಿರಾಕರಿಸಿದ ಮುಸೊಲಿನಿ ವಿರುದ್ಧ ಲೀಗ್ ಆಫ್ ನೇಷನ್ಸ್ ಈ ಸೂತ್ರವನ್ನು ರೂಪಿಸಿತ್ತು. ನಾನು ಪ್ರತಿಪಾದಿಸಿದುದೆಲ್ಲ ಈ ಸಮಸ್ಯೆಗೆ ಪರಿಹಾರ ಆಗದೆ ಹೋಗಬಹುದು. ಹಾಗಿದ್ದರೆ, ಮುಂದೇನು? ಬೇರೆ ಇನ್ನೇನು ಪರಿಹಾರವಾಗಬಲ್ಲುದು ಎಂಬುದು ನನಗೆ ತಿಳಿದಿಲ್ಲ. ಈ ಸಮಸ್ಯೆಗೆ ಪರಿಹಾರವಿಲ್ಲದೆ ಭಾರತಕ್ಕೆ ಸ್ವಾತಂತ್ರ್ಯವಿರಲಾರದು ಎಂಬುದಷ್ಟೇ ನನಗೆ ತಿಳಿದಿರುವಂಥದು. ಈ ಪರಿಹಾರ ನಿರ್ಣಾಯಕವಾಗಿರಬೇಕು, ಅದು ಕ್ಷಿಪ್ರವಾಗಿ ಲಭಿಸಬೇಕು, ಸಂಬಂಧಪಡುವ ಎಲ್ಲ ಪಕ್ಷಗಳಿಗೆ ತೃಪ್ತಿಯನ್ನುಂಟುಮಾಡುವಂಥದಾಗಿರಬೇಕು.

♦

# ಅನುಬಂಧಗಳು

# ಅನುಬಂಧಗಳ ಪಟ್ಟಿ


| | | |
|---|---|---|
| I | ಭಾರತದ ಕೋಮು ಜನಸಂಖ್ಯೆ ... | ೭೮೫ |
| II | ಬ್ರಿಟಿಷ್ ಭಾರತದ ಪ್ರಾಂತ್ಯಗಳಲ್ಲಿ ಅಲ್ಪಸಂಖ್ಯಾತರ ಜನಸಂಖ್ಯೆಯ ಕೋಮುವಾರು ಪ್ರಸಾರ ... | ೭೮೬ |
| III | ರಾಜ್ಯಗಳಲ್ಲಿ ಅಲ್ಪಸಂಖ್ಯಾತರ ಜನಸಂಖ್ಯೆಯ ಕೋಮುವಾರು ಪ್ರಸಾರ ... | ೭೮೮ |
| IV | ಪಂಜಾಬಿನಲ್ಲಿ ಜಿಲ್ಲಾವಾರು ಜನಸಂಖ್ಯೆಯ ಕೋಮುವಾರು ಪ್ರಸಾರ ... | ೭೯೦ |
| V | ಬಂಗಾಳದಲ್ಲಿ ಜಿಲ್ಲಾವಾರು ಜನಸಂಖ್ಯೆಯ ಕೋಮುವಾರು ಪ್ರಸಾರ ... | ೭೯೨ |
| VI | ಅಸ್ಸಾಮಿನಲ್ಲಿ ಜಿಲ್ಲಾವಾರು ಜನಸಂಖ್ಯೆಯ ಕೋಮುವಾರು ಪ್ರಸಾರ ... | ೭೯೪ |
| VII | ವಾಯುವ್ಯ ಗಡಿಪ್ರಾಂತ್ಯದಲ್ಲಿ ಜಿಲ್ಲಾವಾರು ಮುಸ್ಲಿಂ ಜನಸಂಖ್ಯೆಯ ದಾಮಾಷಾ ... | ೭೯೫ |
| VIII | ವಾಯುವ್ಯ ಗಡಿ ಪ್ರಾಂತ್ಯದಲ್ಲಿ ಪಟ್ಟಣವಾರು ಮುಸ್ಲಿಂ ಜನಸಂಖ್ಯೆಯ ದಾಮಾಷಾ ... | ೭೯೬ |
| IX | ಸಿಂಧ್‌ನಲ್ಲಿ ಜಿಲ್ಲಾವಾರು ಮುಸ್ಲಿಂ ಜನಸಂಖ್ಯೆಯ ದಾಮಾಷಾ ... | ೭೯೮ |
| X | ಸಿಂಧ್‌ನಲ್ಲಿ ಪಟ್ಟಣವಾರು ಮುಸ್ಲಿಂ ಜನಸಂಖ್ಯೆಯ ದಾಮಾಷಾ ... | ೭೯೯ |
| XI | ಭಾರತದಲ್ಲಿ ಮುಸ್ಲಿಮರು ಆಡುವ ಭಾಷೆಗಳು ... | ೮೦೧ |
| XII | ೧೯೦೬ರಲ್ಲಿ ಲಾರ್ಡ್ ಮಿಂಟೊ ಅವರಿಗೆ ಮುಸ್ಲಿಮರು ಒಪ್ಪಿಸಿದ ಮನವಿ ಮತ್ತು ಅದಕ್ಕೆ ಉತ್ತರ ... | ೮೦೨ |
| XIII | ಭಾರತ ಸರಕಾರ ಅಧಿನಿಯಮ, ೧೯೩೫– ಇದರನ್ವಯ ಪ್ರತಿಪ್ರಾಂತೀಯ ಶಾಸನಸಭೆಯ ಕೆಳಮನೆಯಲ್ಲಿ ಸ್ಥಾನಗಳ ಹಂಚಿಕೆ ... | ೮೧೭ |
| XIV | ಭಾರತ ಸರ್ಕಾರ ಅಧಿನಿಯಮ ೧೯೩೫– ಇದರನ್ವಯ ಪ್ರತಿ ಪ್ರಾಂತೀಯ ಶಾಸನ ಸಭೆಯ ಮೇಲ್ಮನೆಯಲ್ಲಿ ಸ್ಥಾನಗಳ ಹಂಚಿಕೆ ... | ೮೧೯ |
| XV | ಭಾರತ ಸರಕಾರ ಅಧಿನಿಯಮ, ೧೯೩೫– ಇದರನ್ವಯ ಬ್ರಿಟಿಷ್, ಭಾರತದ ಸಂಯುಕ್ತ ಶಾಸನಸಭೆಯ ಕೆಳಮನೆಯಲ್ಲಿ ಪ್ರಾಂತ್ಯವಾರು ಮತ್ತು ಕೋಮುವಾರು ಸ್ಥಾನಗಳ ಹಂಚಿಕೆ ... | ೮೨೦ |
| XVI | ಭಾರತ ಸರಕಾರ ಅಧಿನಿಯಮ, ೧೯೩೫– ಇದರನ್ವಯ ಬ್ರಿಟಿಷ್ ಭಾರತದ ಸಂಯುಕ್ತ ಶಾಸನಸಭೆಯ ಮೇಲ್ಮನೆಯಲ್ಲಿ ಪ್ರಾಂತ್ಯವಾರು ಮತ್ತು ಕೋಮುವಾರು ಸ್ಥಾನಗಳ ಹಂಚಿಕೆ ... | ೮೨೨ |
| XVII | ಭಾರತ ಸರಕಾರ ಅಧಿನಿಯಮ, ೧೯೩೫– ಇದರನ್ವಯ ಸಂಯುಕ್ತ ಶಾಸನಸಭೆಯ ಕೆಳಮನೆ ಮತ್ತು ಮೇಲ್ಮನೆಯಲ್ಲಿ ಭಾರತೀಯ ರಾಜ್ಯಗಳಿಗೆ ಸ್ಥಾನಗಳ ಹಂಚಿಕೆ ... | ೮೨೩ |

XVIII ಕೋಮು ತೀರ್ಪು ... ೭೩೦
XIX ಪೂರಕ ಕೋಮು ತೀರ್ಪು ... ೭೩೯
XX ಪೂನಾ ಒಪ್ಪಂದ ... ೭೪೦
XXI ಭಾರತ ಸರಕಾರ ಅಧಿನಿಯಮ, ೧೯೩೫– ಇದರನ್ವಯ ಪ್ರಾಂತೀಯ ಶಾಸನಸಭೆಯಲ್ಲಿ ಅಲ್ಪಸಂಖ್ಯಾತರ ಪ್ರಾತಿನಿಧ್ಯವನ್ನು ಕುರಿತ ತೌಲನಿಕ ಪಟ್ಟಿ ... ೭೪೨
XXII ಭಾರತ ಸರಕಾರ ಅಧಿನಿಯಮ, ೧೯೩೫– ಇದರನ್ವಯ ಕೇಂದ್ರ ಶಾಸನಸಭೆಯಲ್ಲಿ ಅಲ್ಪಸಂಖ್ಯಾತರ ಪ್ರಾತಿನಿಧ್ಯವನ್ನು ಕುರಿತ ತೌಲನಿಕ ಪಟ್ಟಿ ... ೭೪೫
XXIII ಸೇವೆಗಳಲ್ಲಿ ಅಲ್ಪಸಂಖ್ಯಾತರ ಪ್ರಾತಿನಿಧ್ಯವನ್ನು ಕುರಿತಂತೆ ೧೯೩೪ರ ಭಾರತ ಸರಕಾರ ನಿರ್ಣಯ ... ೭೪೬
XXIV ಸೇವೆಗಳಲ್ಲಿ ಪರಿಶಿಷ್ಟ ಜಾತಿಯವರ ಮೀಸಲಾತಿಯನ್ನು ಕುರಿತಂತೆ ೧೯೪೩ರ ಭಾರತ ಸರಕಾರ ನಿರ್ಣಯ ... ೭೫೨
XXV ಕ್ರಿಪ್ಸ್ ಸಲಹಾಸೂತ್ರಗಳು ... ೭೫೬

## ನಕಾಶೆಗಳು

೧. ಪಂಜಾಬಿನಲ್ಲಿ ಹಿಂದೂ ಮತ್ತು ಮುಸ್ಲಿಂ ಪ್ರದೇಶಗಳು ೭೩೯
೨. ಬಂಗಾಳ ಮತ್ತು ಅಸ್ಸಾಂನಲ್ಲಿ ಹಿಂದೂ ಮತ್ತು ಮುಸ್ಲಿಂ ಪ್ರದೇಶಗಳು ೭೬೧
೩. ಪಾಕಿಸ್ತಾನ ಮತ್ತು ಹಿಂದೂಸ್ತಾನವಾಗಿ ವಿಭಜಿಸಲ್ಪಟ್ಟ ಬ್ರಿಟಿಷ್ ಇಂಡಿಯಾ ೭೬೩

# ಅನುಬಂಧ I
# ಭಾರತದ ಕೋಮುವಾರು ಜನಸಂಖ್ಯೆ

| ಕೋಮು | ಬ್ರಿಟಿಷ್ ಭಾರತ | ಭಾರತೀಯ ಸಂಸ್ಥಾನಗಳು ಮತ್ತು ಏಜೆನ್ಸಿಗಳು | ಜುಮ್ಲಾ |
|---|---|---|---|
| ೧. ಹಿಂದೂಗಳು | ೧೫೦,೮೯೦,೧೪೬ | ೫೫,೨೨೭,೧೮೦ | ೨೦೬,೧೧೭,೩೨೬ |
| ೨. ಮುಸ್ಲಿಮರು | ೭೯,೩೯೮,೫೦೩ | ೧೨,೯೫೯,೫೯೩ | ೯೨,೦೫೮,೦೯೬ |
| ೩. ಪರಿಶಿಷ್ಟ ಜಾತಿಗಳು* | ೩೯,೯೨೦,೮೦೭ | ೮,೮೯೨,೩೭೩ | ೪೮,೮೧೩,೧೮೦ |
| ೪. ಬುಡಕಟ್ಟುಗಳು | ೧೬,೭೧೩,೨೫೬ | ೮,೭೨೮,೨೩೩ | ೨೫,೪೪೧,೩೮೯ |
| ೫. ಬುಡಕಟ್ಟುಗಳು | ೪,೧೬೫,೦೯೭ | ೧,೫೨೬,೩೫೦ | ೫,೬೯೧,೪೪೭ |
| ೬. ಕ್ರೈಸ್ತರು: | | | |
| (i) ಭಾರತೀಯ ಕ್ರೈಸ್ತರು | ೧,೬೫೫,೯೧೨ | ೧,೪೧೩,೮೦೮ | ೩,೦೬೯,೭೯೦ |
| (ii) ಆಂಗ್ಲೋ–ಇಂಡಿಯನರು | ೧೧೩,೯೩೬ | ೨೬,೪೮೬ | ೧೪೦,೪೨೨ |
| (iii) ಇತರರು | ೭೫,೭೫೧ | ೭,೭೦೮ | ೧,೪೪೯,೨೮೬ |
| ೭. ಜೈನರು | ೫೭೮,೩೭೨ | ೮೭೦,೯೧೪ | ೧,೪೪೯,೨೮೬ |
| ೮. ಬೌದ್ಧರು | ೧೬೭,೪೧೩ | ೮೪,೫೯೦ | ೨೩೨,೦೦೩ |
| ೯. ಪಾರಸಿಗಳು | ೧೦೧,೯೬೮ | ೧೨,೯೨೨ | ೧೧೪,೮೯೦ |
| ೧೦. ಯೆಹೂದ್ಯರು | ೧೯,೩೨೭ | ೩,೧೫೩ | ೨೨,೪೮೦ |
| ೧೧. ಇತರರು | ೩೭೧,೪೦೩ | ೩೮,೪೭೪ | ೪೦೯,೮೭೭ |
| ಜುಮ್ಲಾ | ೨೯೪,೧೭೧,೯೬೧ | ೮೯,೪೭೧,೭೮೪ | ೩೮೩,೬೪೩,೭೪೫ |

* ಭಾರತ ಸರಕಾರದ ಅಧಿನಿಯಮ, ೧೯೩೫– ಇದರನ್ವಯ ಅಸ್ಪೃಶ್ಯರಿಗೆ ಕೊಟ್ಟಿರುವ ಶಾಸನಬದ್ಧ ಪದನಾಮವಿದು.

**ಗಮನಿಸಿ:** ಬ್ರಿಟಿಷ್ ಭಾರತ ಮತ್ತು ಭಾರತೀಯ ಸಂಸ್ಥನಗಳು– ಇವೆರಡಕ್ಕೂ ಸಂಬಂಧಿಸಿದ ಪರಿಶಿಷ್ಟ ಜಾತಿಗಳ ಸಂಖ್ಯೆಗಳು ಸರಿಯಾದ ಒಟ್ಟು ಸಂಖ್ಯೆಗಳಲ್ಲ. ಅಜ್ಮೀರ್ ಮೆರ್ ವಾರಾ (ಬ್ರಿಟಿಷ್ ಭಾರತ) ಮತ್ತು ಗ್ವಾಲಿಯರ್ ರಾಜ್ಯಕ್ಕೆ ಸಂಬಂಧಿಸಿದ ಸಂಖ್ಯೆಗಳು ಒಟ್ಟು ಮೊತ್ತದಲ್ಲಿ ಸೇರಿಲ್ಲ. ೧೯೪೧ರ ಜನಗಣತಿ ವರದಿಗಳಲ್ಲಿ ಈ ಸಂಖ್ಯೆಗಳು ಕಾಣಿಸುವುದಿಲ್ಲ.

## ಅನುಬಂಧ II

## ಬ್ರಿಟಿಷ್ ಭಾರತದ ಪ್ರಾಂತ್ಯಗಳಲ್ಲಿ ಅಲ್ಪಸಂಖ್ಯಾತರ ಜನಸಂಖ್ಯೆಯ ಕೋಮುವಾರು ಪ್ರಸಾರ

| ಪ್ರಾಂತ್ಯಗಳು | ಒಟ್ಟು ಜನಸಂಖ್ಯೆ | ಮುಸ್ಲಿಮರು | | ಪರಿಶಿಷ್ಟ ಜಾತಿಗಳು | | ಭಾರತೀಯ ಕ್ರೈಸ್ತರು | | ಸಿಖ್ಖರು | |
|---|---|---|---|---|---|---|---|---|---|
| | | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇಕಡಾವಾರು |
| ೧. ಅಜ್ಮೀರ್–ಮೆರ್‌ವಾರಾ | ೫೮೩,೬೯೩ | ೮೯,೮೯೯ | ೧೫.೪ | ಇಲ್ಲ | ... | ೩,೮೯೫ | .೮ | ೮೬೭ | .೧೫ |
| ೨. ಅಂಡಮಾನ್ ನಿಕೋಬಾರ್ | ೩೩,೭೬೮ | ೮,೦೦೫ | ೨೩.೭ | ಇಲ್ಲ | ... | ೭೭೯ | ೨.೩ | ೭೪೪ | ೨.೨ |
| ೩. ಅಸ್ಸಾಂ | ೧೦,೨೦೪,೭೩೩ | ೩,೪೪೨,೪೭೯ | ೩೩.೭ | ೬೭೬,೨೯೧ | ೬.೬ | ೩೭,೭೫೦ | .೪ | ೩,೪೬೪ | ೦.೩ |
| ೪. ಬ್ರಿಟಿಷ್ ಬಲುಚಿಸ್ತಾನ್ | ೫೦೧,೬೩೧ | ೪೩೮,೯೩೦ | ೮೭.೫ | ೫,೧೦೨ | ೧.೦ | ೨,೬೩೩ | .೫ | ೧೧,೯೧೮ | ೨.೩ |
| ೫. ಬಂಗಾಳ | ೬೦,೩೦೬,೫೨೫ | ೩೩,೦೦೫,೪೩೪ | ೫೪.೭ | ೭.೮೭೮.೯೭೦ | ೧೩.೦ | ೧೧೦.೯೨೩ | .೨ | ೧೬.೨೮೧ | .೦೩ |
| ೬. ಬಿಹಾರ್* | ೩೬,೩೪೦,೧೫೧ | ೪,೭೧೬,೩೧೪ | ೧೨.೯ | ೪,೮೪೦,೩೭೯ | ೧೩.೩ | ೨೪.೬೯೩ | .೦೭ | ೮.೦೧೧ | .೦೪ |
| ೭. ಮುಂಬೈ | ೨೦,೮೪೯,೮೪೦ | ೧,೯೨೦,೩೬೮ | ೯.೨ | ೧,೮೫೫,೧೪೮ | ೮.೯ | ೩೩೮,೮೧೨ | ೧.೬ | ೮.೦೧೧ | .೦೪ |
| ೮. ಕೇಂದ್ರ ಪ್ರಾಂತ್ಯಗಳು ಮತ್ತು ಬೆರಾರ್** | ೧೬,೮೧೩,೫೮೪ | ೭,೮೩,೬೯೭ | ೪.೭ | ೩,೦೫೧,೪೧೩ | ೧೮.೧ | ೪೮,೨೬೦ | ೦.೩ | ೧೪,೯೯೬ | .೦೯ |
| ೯. ಕೊಡಗು | ೧೬೮,೭೨೬ | ೧೪,೭೮೦ | ೮.೮ | ೨೫,೭೪೦ | ೧೫.೩ | ೩,೩೦೯ | ೨.೦ | ಇಲ್ಲ | ... |
| ೧೦. ದೆಹಲಿ | ೯೧೭,೯೩೯ | ೩೦೪,೯೭೧ | ೩೩.೨ | ೧೨೧,೬೯೩ | ೧೩.೩ | ೧೦.೪೯೪ | ೧.೧ | ೧೬,೧೫೭ | ೧.೮ |
| ೧೧. ಮದರಾಸು | ೪೯,೩೪೧,೪೫೨ | ೩,೮೯೬,೪೯೨ | ೭.೯ | ೮,೦೬೮,೪೯೨ | ೧೬.೬ | ೨,೦೦೧,೦೮೨ | ೪.೦೬ | ೪೧೮,೦೦೧ | ... |
| ೧೨. ವಾಯುವ್ಯ ಗಡಿ ಪ್ರಾಂತ್ಯ | ೩,೦೩೮,೦೬೭ | ೨,೭೮೮,೭೯೭ | ೯೧.೮ | ಇಲ್ಲ | ... | ೫,೪೨೬ | .೨ | ೫೭,೯೮೯ | ೧.೯ |
| ೧೩. ಒರಿಸ್ಸಾ | ೮,೭೨೮,೫೪೪ | ೧೪೬,೩೦೧ | ೧.೭ | ೧,೨೩೮,೧೭೧ | ೧೪.೨ | ೨೬,೫೮೪ | .೩ | ೨೩೨ | .೦೦೩ |
| ೧೪. ಪಂಜಾಬ್ | ೨೮,೪೧೮,೮೧೯ | ೧೬,೨೧೭,೨೪೨ | ೫೭.೦ | ೧,೨೪೮,೬೩೫ | ೪.೪ | ೪೮೬,೦೩೮ | ೧.೭ | ೩,೭೫೭,೪೦೧ | ೧೩.೨ |
| ೧೫. ಪಂತ್ ಪಿಪ್ಲೋಡಾ | ೫,೨೬೭ | ೨೫೧ | ೪.೮ | ೯೧೮ | ೧೭.೪ | ೨೧೬ | ೪.೧ | ಇಲ್ಲ | ... |

| ಪ್ರಾಂತ್ಯಗಳು | ಒಟ್ಟು ಜನಸಂಖ್ಯೆ | ಮುಸ್ಲಿಮರು | | ಪರಿಶಿಷ್ಟ ಜಾತಿಗಳು | | ಭಾರತೀಯ ಕ್ರೈಸ್ತರು | | ಸಿಖ್ಖರು | |
|---|---|---|---|---|---|---|---|---|---|
| | | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇಕಡಾವಾರು |
| ೧೬. ಸಿಂಧ್ | ೪,೨೨೯,೨೨೧ | ೩,೦೫೪,೬೩೫ | ೭೨.೨ | ೧೯೧,೬೩೪ | ೪.೫ | ೧೩,೨೩೨ | .೩ | ೩೧,೦೧೧ | .೭ |
| ೧೭. ಸಂಯುಕ್ತ ಪ್ರಾಂತ್ಯಗಳು*** | ೫೫,೦೨೦,೬೧೭ | ೮,೪೧೬,೩೦೮ | ೧೫.೩ | ೧೧,೭೧೭,೧೫೮ | ೨೧.೩ | ೧೩೧,೩೨೭ | .೨ | ೨೩೨,೪೪೫ | .೪ |
| ಜುಮ್ಲಾ | ೨೯೫,೫೦೨,೯೩೫ | ೭೯,೩೪೪,೮೬೩ | ೨೬.೯ | ೪೦,೯೧೯,೭೪೪ | ೧೩.೯ | ೩,೨೪೫,೪೫೩ | ೧.೦ | ೪,೧೧೫,೧೪೭ | ೧.೦ |
| * ಬಿಹಾರ್ | ೨೮,೮೨೩,೮೦೨ | ೪,೧೬೮,೪೭೦ | ೧೪.೪ | ೩,೯೧೯,೬೧೯ | ೧೩.೬ | ೧೨,೬೫೧ | .೦೪ | ೩,೨೦೪ | .೦೧ |
| ** ಚೋಟಾ ನಾಗಪುರ | ೭,೫೧೬,೩೪೯ | ೫೪೭,೮೪೪ | ೭.೩ | ೪೨೦,೭೬೦ | ೫.೬ | ೧೨,೦೪೨ | .೨ | ೧೦,೦೦೯ | .೧ |
| ಸಿ.ಪಿ. (ಕೇಂದ್ರಪ್ರಾಂತ್ಯಗಳು) | ೧೩,೨೦೮,೭೧೮ | ೪೪೮,೫೨೮ | ೩.೪ | ೨,೩೫೯,೮೩೬ | ೧೭.೯ | ೪೨,೧೩೫ | .೩ | ೧೨,೭೬೬ | .೧ |
| ** ಬೆರಾರ್ | ೩,೯೦೪,೮೬೬ | ೩೩೫,೧೬೯ | ೯.೩ | ೬೯೧,೫೭೭ | ೧೯.೨ | ೬,೧೨೫ | .೨ | ೨,೨೩೦ | .೧ |
| *** ಆಗ್ರಾ | ೪೦,೯೦೬,೧೪೭ | ೬,೨೩೧,೦೬೨ | ೧೫.೨ | ೮,೦೧೮,೮೦೩ | ೧೯.೬ | ೧೨೦,೫೪೯ | .೩ | ೨೨೬,೦೯೬ | .೫ |
| ಔಧ್ | ೧೪,೧೧೪,೪೭೦ | ೨,೧೮೫,೨೪೬ | ೧೫.೫ | ೩,೬೯೮,೩೫೫ | ೨೬.೨ | ೧೦,೭೭೮ | .೦೮ | ೬,೩೪೯ | .೦೫ |

# ಅನುಬಂಧ III

## ಭಾರತೀಯ ಸಂಸ್ಥಾನಗಳಲ್ಲಿ ಅಲ್ಪಸಂಖ್ಯಾತರ ಜನಸಂಖ್ಯೆಯ ಕೋಮುವಾರು ಪ್ರಸಾರ

| ರಾಜ್ಯಗಳು ಮತ್ತು ಏಜೆನ್ಸಿಗಳು | ಒಟ್ಟು ಜನಸಂಖ್ಯೆ | ಮುಸ್ಲಿಮರು | | ಪರಿಶಿಷ್ಟ ಜಾತಿಗಳು | | ಭಾರತೀಯ ಕ್ರೈಸ್ತರು | | ಸಿಖ್ಖರು | |
|---|---|---|---|---|---|---|---|---|---|
| | | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇಕಡಾವಾರು |
| ೧. ಅಸ್ಸಾಂ | ೭,೨೫,೬೫೫ | ೩೩,೬೬೨ | ೪.೪ | ೨೬೫ | ೦.೦೪ | ೨೫,೯೧೩ | ೩.೬ | ೩೮೧ | .೦೫ |
| ೨. ಬಲೂಚಿಸ್ತಾನ | ೩೫೬,೨೦೩ | ೩೪೬,೨೫೧ | ೯೭.೨ | ೬೫ | ೦.೦೨ | ೪೦ | .೦೧ | ೧೨೬ | .೦೪ |
| ೩. ಬರೋಡ | ೨,೮೫೫,೦೧೦ | ೨೨೩,೬೧೦ | ೭.೮ | ೨೩೦,೭೯೪ | ೮.೧ | ೯,೧೮೨ | .೩ | ೫೬೬ | .೦೨ |
| ೪. ಬಂಗಾಳ | ೨,೧೪೪,೮೨೯ | ೩೭೨,೧೧೩ | ೧೭.೩ | ೨೬೯,೭೯೪ | ೧೨.೬ | ೫೬೪ | .೦೩ | ೨೮ | .೦೦೧ |
| ೫. ಕೇಂದ್ರ ಭಾರತ | ೭,೫೦೬,೪೨೭ | ೪೩೯,೮೫೦ | ೫.೯ | ೧,೯೨೭,೦೦೯ | ೧೩.೭ | ೭,೫೮೨ | .೧ | ೨,೭೩೧ | .೦೪ |
| ೬. ಚತ್ತೀಸಗಢ | ೪,೦೫೦,೦೦೦ | ೨೮,೭೭೩ | ೦.೭ | ೪೮೩,೧೩೨ | ೧೧.೯ | ೧೧,೮೨೦ | .೩ | ೫೦೭ | .೦೧ |
| ೭. ಕೊಚಿನ್ | ೧,೪೨೨,೮೭೫ | ೧೦೯,೧೮೮ | ೭.೭ | ೧೪೧,೧೫೪ | ೯.೯ | ೩೯೯,೩೯೪ | ೨೮.೧ | ೯ | ... |
| ೮. ಡೆಕ್ಕನ್ ಮತ್ತು ಕೊಲ್ಲಾಪುರ | ೨,೭೮೫,೪೨೮ | ೧೮೨,೦೩೬ | ೬.೫ | ೩೦೬,೮೯೮ | ೧೧.೦ | ೧೭,೨೩೬ | .೬ | ೨೨ | .೦೦೧ |
| ೯. ಗುಜರಾತ | ೧,೪೫೮,೭೦೨ | ೫೮,೦೦೦ | ೩.೯ | ೫೫,೨೦೪ | ೩.೮ | ೪,೨೧೫ | .೩ | ೧೮೨ | .೦೧ |
| ೧೦. ಗ್ವಾಲಿಯರ್ | ೪,೦೦೬,೧೫೯ | ೨೪೦,೯೦೩ | ೬.೦ | ... | ... | ೧,೩೫೨ | .೦೩ | ೨,೩೪೨ | .೦೬ |
| ೧೧. ಹೈದರಾಬಾದ್ | ೧೬,೩೩೮,೫೩೪ | ೨,೦೯೭,೪೭೫ | ೧೨.೮ | ೨,೯೨೮,೦೪೮ | ೧೭.೯ | ೨೧೫,೯೮೯ | ೧.೩ | ೫,೩೩೦ | .೦೩ |
| ೧೨. ಕಾಶ್ಮೀರ ಮತ್ತು ಸಾಮಂತ ರಾಜ್ಯಗಳು | ೪,೦೨೧,೬೧೬ | ೩,೦೭೩,೫೪೦ | ೭೬.೪ | ೧೧೩,೪೬೪ | ೨.೮ | ೩,೦೭೯ | .೦೮ | ೬೫,೯೦೩ | ೧.೬ |
| ೧೩. ಮದರಾಸು | ೪೯೮,೭೫೪ | ೩೦,೨೬೩ | ೬.೦೦ | ೮೩,೭೩೪ | ೧೬.೮ | ೨೦,೮೦೬ | ೪.೨ | ೫ | ... |
| ೧೪. ಮೈಸೂರು | ೭,೩೨೯,೧೪೦ | ೪೮೫,೨೩೦ | ೬.೬ | ೧,೪೦೫,೦೬೭ | ೧೯.೨ | ೯೮,೫೮೦ | ೧.೩ | ೨೬೯ | .೦೦೪ |
| ೧೫. ವಾಯುವ್ಯ ಗಡಿ ಪ್ರಾಂತ್ಯ | ೪೬,೨೬೭ | ೨೨,೦೬೮ | ೪೭.೭ | ಇಲ್ಲ | ೧೯.೨ | ೫೭೧ | ೧.೨ | ೪,೪೭೨ | ೯.೧ |

| ರಾಜ್ಯಗಳು ಮತ್ತು ಏಜೆನ್ಸಿಗಳು | ಒಟ್ಟು ಜನಸಂಖ್ಯೆ | ಮುಸ್ಲಿಮರು | | ಪರಿಶಿಷ್ಟ ಜಾತಿಗಳು | | ಭಾರತೀಯ ಕ್ರೈಸ್ತರು | | ಸಿಖ್ಖರು | |
|---|---|---|---|---|---|---|---|---|---|
| | | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇಕಡಾವಾರು |
| ೧೬. ಒರಿಸ್ಸಾ | ೩,೦೨೩,೭೩೧ | ೧೪,೩೫೫ | ೦.೪೭ | ೩೫೨,೦೮೮ | ... | ೨,೨೪೯ | .೦೭ | ೧೫೧ | .೦೦೫ |
| ೧೭. ಪಂಜಾಬ್ | ೫,೫೦೩,೫೫೪ | ೫,೫೦೩,೫೫೪ | ೪೦.೯ | ೩೪೯,೯೬೨ | ೧೧.೬ | ೬,೯೫೨ | .೧ | ೧,೩೪೨,೬೮೫ | ೨೪.೪ |
| ೧೮. ಪಂಜಾಬ್ ಹಿಲ್ | ೧,೦೯೦,೬೪೪ | ೧,೦೯೦,೬೪೪ | ೪.೩ | ೨೩೮,೭೭೪ | ೬.೪ | ೧೮೮ | .೦೨ | ೧೭,೭೩೯ | ೧.೬ |
| ೧೯. ರಾಜಪುತಾನಾ | ೧೩,೬೭೦,೨೦೮ | ೧೩,೬೭೦,೨೦೮ | ೯.೫ | ... | ... | ೪,೩೪೯ | .೦೩ | ೮೧,೮೯೬ | .೬ |
| ೨೦. ಸಿಕ್ಕಿಂ | ೧೨೧,೫೨೦ | ೧೨೧,೫೨೦ | ೦.೦೭ | ೭೬ | ೦೬ | ೩೪ | .೦೩ | ೧ | ... |
| ೨೧. ಟ್ರಾವಂಕೂರು | ೬,೦೭೦,೦೧೮ | ೬,೦೭೦,೦೧೮ | ೭.೨ | ೩೯೫,೯೫೨ | ೬.೫ | ೧,೯೫೮,೪೯೧ | ೩೨.೩ | ೩೧ | ... |
| ೨೨. ಯು.ಪಿ. | ೯೨೮,೪೭೦ | ೯೨೮,೪೭೦ | ೨೯.೫ | ೧೫೨,೯೨೭ | ೧೬.೫ | ೧,೨೮೧ | .೧ | ೭೩೧ | .೦೮ |
| ೨೩. ಪಶ್ಚಿಮ ಭಾರತ | ೪,೯೦೪,೧೫೬ | ೪,೯೦೪,೧೫೬ | ೧೨.೨ | ೩೫೮,೦೩೮ | ೭.೩ | ೩,೧೦೫ | .೦೬ | ೨೩೯ | .೦೦೫ |
| **ಜುಮ್ಲಾ** | **೯೧,೮೧೦,೫೭೧** | **೧೫,೭೩೩,೧೩೩** | **೧೬.೫೯** | **೮,೮೯೨,೩೭೩** | **೯.೭** | **೨,೭೯೪,೯೫೯** | **೩.೧** | **೧,೫೨೬,೪೫೦** | **೧.೭** |

# ಅನುಬಂಧ IV
## ಪಂಜಾಬಿನಲ್ಲಿ ಜಿಲ್ಲಾವಾರು ಜನಸಂಖ್ಯೆಯ ಕೋಮುವಾರು ಪ್ರಸಾರ

| ಜಿಲ್ಲೆಗಳು | ಒಟ್ಟು ಜನಸಂಖ್ಯೆ | ಮುಸ್ಲಿಮರು | | ಪರಿಶಿಷ್ಟ ಜಾತಿಗಳು | | ಭಾರತೀಯ ಕ್ರೈಸ್ತರು | | ಸಿಖ್ಖರು | | ಹಿಂದೂಗಳು | |
|---|---|---|---|---|---|---|---|---|---|---|---|
| | | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇ.ವಾರು | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇಕಡಾವಾರು |
| ೧. ಹಿಸ್ಸಾರ್ | ೧,೦೦೬,೭೦೯ | ೨೮೫,೨೦೮ | ೨೮.೩ | ೧೨೮,೨೪೦ | ೧೨.೭ | ೧,೨೩೫ | .೧ | ೬೦,೭೩೧ | ೬.೦ | ೫೨೪,೬೦೨ | ೫೨.೧ |
| ೨. ರೋಹ್‌ತಾಕ್ | ೯೫೬,೩೯೯ | ೧೬೬,೫೬೯ | ೧೭.೪ | ೧೩೫,೧೦೩ | ೧೪.೧ | ೧,೦೨೬ | .೧ | ೧,೪೬೬ | .೨ | ೬೪೫,೩೭೧ | ೫೭.೫ |
| ೩. ಗುರ್‌ಗಾಂವ್ | ೮೫೧,೪೫೮ | ೨೮೫,೯೯೨ | ೩೩.೬ | ೧೧೯,೨೫೦ | ೧೪.೦ | ೧,೪೫೭ | .೨ | ೬೩೭ | .೦೭ | ೪೪೧,೩೭೧ | ೫೧.೮ |
| ೪. ಕರ್ನಾಲ್ | ೯೯೪,೫೭೫ | ೩೦೪,೩೪೬ | ೩೦.೬ | ೧೩೬,೭೧೩ | ೧೩.೭ | ೧,೨೨೩ | .೧ | ೧೯,೮೮೭ | ೨.೦ | ೫೨೯,೫೮೮ | ೫೩.೨ |
| ೫. ಅಂಬಾಲಾ | ೮೪೭,೭೪೫ | ೨೬೮,೯೯೯ | ೩೧.೭ | ೧೨೪,೦೦೬ | ೧೪.೬ | ೪,೮೯೨ | .೬ | ೧೫೩,೫೪೩ | ೧೮.೧ | ೨೮೮,೬೫೨ | ೩೪.೦ |
| ೬. ಸಿಮ್ಲಾ | ೩೮,೫೭೬ | ೭,೦೨೨ | ೧೮.೨ | ೭,೦೯೨ | ೧೮.೪ | ೫೦೮ | ೧.೩ | ೧,೦೩೨ | ೨.೭ | ೨೨,೩೭೪ | ೫೮.೦ |
| ೭. ಕಾಂಗ್ರಾ | ೮೯೯,೩೭೭ | ೪೩,೨೪೯ | ೪.೮ | ೧೨೧,೬೨೨ | ೧೩.೫ | ೫೯೦ | .೦೭ | ೪,೮೦೯ | .೫ | ೭೨೫,೯೦೯ | ೮೦.೭ |
| ೮. ಹೊಶಿಯಾರ್ ಪುರ್ | ೧,೧೭೦,೩೨೩ | ೩೮೦,೭೫೯ | ೩೨.೫ | ೧೭೦,೮೫೫ | ೧೪.೬ | ೬,೦೬೦ | .೫ | ೧೯೮,೧೯೪ | ೧೬.೫ | ೪೧೩,೮೩೭ | ೩೫.೪ |
| ೯. ಜಲ್ಲಂದರ್ | ೧,೧೨೭,೧೯೦ | ೫೦೯,೮೦೪ | ೪೫.೨ | ೧೫೪,೪೩೧ | ೧೩.೭ | ೫,೯೭೧ | .೫ | ೨೯೮,೭೪೪ | ೨೬.೫ | ೧೫೬,೫೭೯ | ೧೩.೯ |
| ೧೦. ಲುಧಿಯಾನಾ | ೮೧೮,೬೧೫ | ೩೦೨,೪೮೨ | ೩೬.೯ | ೬೮,೪೬೯ | ೮.೪ | ೧,೬೩೨ | .೨ | ೩೪೧,೧೭೫ | ೪೧.೭ | ೧೦೬,೨೪೬ | ೧೨.೯ |
| ೧೧. ಫರೋಜ್‌ಪುರ್ | ೧,೪೨೩,೦೭೬ | ೬೪೧,೪೪೮ | ೪೫.೧ | ೭೩,೫೦೪ | ೫.೧ | ೧೧,೦೩೧ | .೮ | ೪೭೯,೪೮೬ | ೩೩.೭ | ೨೧೬,೨೨೯ | ೧೫.೨ |
| ೧೨. ಲಾಹೋರ್ | ೧,೬೯೫,೩೭೫ | ೧,೦೨೭,೭೭೨ | ೬೦.೬ | ೩೨,೭೩೫ | ೧.೯ | ೬೭,೬೮೬ | ೪.೦ | ೩೧೦,೮೪೫ | ೧೮.೩ | ೨೫೨,೦೦೪ | ೧೪.೯ |
| ೧೩.ಅಮೃತ್‌ಸರ್ | ೧,೪೧೩,೮೭೬ | ೬೫೭,೬೯೫ | ೪೬.೫ | ೨೨,೭೫೦ | ೧.೬ | ೨೫,೩೩೦ | ೧.೮ | ೫೧೦,೮೪೫ | ೩೬.೧ | ೧೯೪,೭೨೭ | ೧೩.೮ |
| ೧೪. ಗುರ್‌ದಾಸ್‌ಪುರ್ | ೧,೧೫೩,೮೭೬ | ೫೮೯,೯೨೩ | ೫೧.೧ | ೪೫,೮೩೯ | ೪.೦ | ೪೦,೨೬೨ | ೪.೪ | ೨೨೧,೨೫೧ | ೧೯.೨ | ೨೪೪,೯೩೫ | ೨೧.೨ |
| ೧೫. ಸಿಯಾಲ್ ಕೋಟ್ | ೧,೧೫೩,೫೧೧ | ೭೩೯,೨೧೮ | ೬೨.೧ | ೬೫,೩೫೪ | ೫.೫ | ೭೩,೮೪೬ | ೬.೨ | ೧೩೯,೪೦೯ | ೧೧.೭ | ೧೬೫,೯೬೯ | ೧೩.೯ |
| ೧೬. ಗುಜ್ರಾನ್ ವಾಲ್ಲಾ | ೯೧೨,೨೩೫ | ೬೪೨,೭೦೬ | ೭೦.೫ | ೭,೪೮೫ | .೮ | ೬೦,೩೮೦ | ೬.೬ | ೯೯,೧೩೯ | ೧೦.೯ | ೧೦೦,೬೩೦ | ೧೧.೦ |

| ಜಿಲ್ಲೆಗಳು | ಒಟ್ಟು ಜನಸಂಖ್ಯೆ | ಮುಸ್ಲಿಮರು | | ಪರಿಶಿಷ್ಟ ಜಾತಿಗಳು | | ಭಾರತೀಯ ಕ್ರೈಸ್ತರು | | ಸಿಖ್ಖರು | | ಹಿಂದೂಗಳು | |
|---|---|---|---|---|---|---|---|---|---|---|---|
| | | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇ.ವಾರು | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇಕಡಾವಾರು |
| ೧೭. ಶಖುಪುರ | ೮೫೨,೫೦೮ | ೫೪೨,೬೦೯ | ೬೩.೬ | ೨೨,೪೩೮ | ೨.೬ | ೫೯,೯೮೫ | ೭.೦ | ೧೬೦,೭೦೬ | ೧೮.೯ | ೬೬,೭೪೪ | ೭.೮ |
| ೧೮. ಗುಜರಾತ್ | ೧,೧೦೪,೯೫೨ | ೯೪೫,೬೦೯ | ೮೫.೬ | ೪,೬೨೧ | .೪ | ೪,೩೯೧ | .೪ | ೭೦,೨೩೩ | ೬.೩ | ೮೦.೦೨೨ | ೭.೨ |
| ೧೯. ಶಾಹಪುರ್ | ೯೯೮,೯೨೧ | ೮೩೫,೯೧೮ | ೮೩.೬ | ೯,೬೯೩ | ೧.೦ | ೧೨,೬೯೦ | ೧.೩ | ೪೮,೦೪೬ | ೪.೮ | ೯೨,೪೭೯ | ೯.೨ |
| ೨೦. ಝೀಲಮ್ | ೬೨೯,೬೫೮ | ೫೬೩,೦೩೩ | ೮೯.೪ | ೭೭೧ | .೧ | ೭೩೦ | .೧ | ೨೪,೬೮೦ | ೩೯ | ೪೦,೧೧೭ | ೬.೪ |
| ೨೧. ರಾವಲ್‌ಪಿಂಡಿ | ೭೮೫,೨೩೧ | ೬,೨೮,೧೯೩ | ೮೦.೦ | ೪,೨೩೩ | .೫ | ೪,೨೧೨ | .೫ | ೬೪,೧೨೭ | ೮.೨ | ೭೮,೨೪೫ | ೧೦.೦ |
| ೨೨. ಅಟ್ಟೋಕ್ | ೬೭೫,೮೭೨ | ೬೧೧,೧೨೮ | ೯೦.೪ | ೧,೦೧೫ | .೧ | ೫೦೪ | .೦೯ | ೨೦,೧೦೨ | ೩.೦ | ೪೨,೧೯೪ | ೬.೨ |
| ೨೩. ಮಿಯಾನ್‌ವಾಲಿ | ೫೦೬,೨೧ | ೪೩೬,೨೬೦ | ೮೬.೧ | ೧,೦೦೮ | .೨ | ೩೨೪ | .೦೬ | ೬,೮೬೫ | ೧.೩ | ೬೧,೮೦೬ | ೧೨೨ |
| ೨೪. ಮೊಂಟ್‌ಗೊಮರಿ | ೧,೩೨೯,೧೦೩ | ೯೧೮,೫೬೪ | ೬೯.೧ | ೪೩,೪೫೬ | ೩.೨ | ೨೪,೧೦೧ | ೧.೯ | ೧೭೫,೦೬೪ | ೧೩.೨ | ೧೬೭,೫೧೦ | ೧೨.೬ |
| ೨೫. ಲ್ಯಾಲ್‌ಪೂರ್ | ೧,೩೯೬,೩೦೫ | ೮೭೭,೫೧೮ | ೬೨.೮ | ೬೮,೨೨೨ | ೪.೯ | ೫೧,೬೯೪ | ೩.೭ | ೨೬೨,೭೩೭ | ೧೮.೮ | ೧೩೫,೬೩೭ | ೯.೭ |
| ೨೬. ಝೂಂಗ್ | ೮೨೧,೬೩೧ | ೬೭೮,೭೩೬ | ೮೨.೬ | ೧,೯೪೩ | .೨ | ೭೪೪ | .೧ | ೧೨,೨೩೮ | ೧.೫ | ೧೨೭,೯೪೬ | ೧೫.೬ |
| ೨೭. ಮುಲ್ತಾನ್ | ೧,೪೮೪,೩೩೩ | ೧,೧೫೭,೯೧೧ | ೭೮.೦ | ೨೪,೫೩೦ | ೧.೭ | ೧೩,೨೭೦ | .೯ | ೬೧,೬೨೮ | ೪.೧ | ೨೨೫,೩೪೨ | ೧೫.೨ |
| ೨೮. ಮುಜಾಫರ್‌ಗಡ್ | ೭೧೨,೮೪೯ | ೬೧೬,೦೭೪ | ೮೬.೪ | ೨,೬೯೧ | .೪ | ೨೧೮ | .೦೩ | ೫,೯೯೨ | .೮ | ೮೭,೯೫೨ | ೧೨೩ |
| ೨೯. ದರಾಗಜಿಖಾನ್ | ೫೮೧,೩೫೦ | ೫೧೨,೬೭೮ | ೮೮.೧ | ೧,೦೫೯ | .೨ | ೪೬ | .೦೧ | ೧,೦೭೨ | .೨ | ೬೬,೩೪೮ | ೧೧.೪ |
| ೩೦. ಸೀಮೋತ್ತರ ಪ್ರದೇಶ | ೪೦,೨೪೬ | ೪೦,೦೮೪ | ೯೯.೬ | ... | ... | ಇಲ್ಲ | ... | ೨ | ... | ೧೬೦ | .೪ |
| | **೨೮,೪೧೮,೮೨೦** | **೧೬,೨೧೭,೨೪೨** | **೫೭.೧** | **೧,೫೯೨,೩೨೦** | **೫.೬** | **೪೮೬,೦೩೮** | **೧.೭** | **೩,೭೫೭,೪೦೧** | **೧೩.೨** | **೬,೩೦೧,೭೩೭** | **೨೨.೨** |

## ಅನುಬಂಧ V

## ಬಂಗಾಳದಲ್ಲಿ ಜಿಲ್ಲಾವಾರು ಜನಸಂಖ್ಯೆಯ ಕೋಮುವಾರು ಪ್ರಸಾರ

| ರಾಜ್ಯಗಳು ಮತ್ತು ಏಜೆನ್ಸಿಗಳು | ಒಟ್ಟು ಜನಸಂಖ್ಯೆ | ಮುಸ್ಲಿಮರು | | ಪರಿಶಿಷ್ಟ ಜಾತಿಗಳು | | ಹಿಂದೂಗಳು | | ಭಾರತೀಯ ಕ್ರೈಸ್ತರು | |
|---|---|---|---|---|---|---|---|---|---|
| | | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇಕಡಾವಾರು |
| ೧. ಬರ್ದ್ವಾನ್ | ೧,೮೯೦,೭೩೨ | ೩೩೬,೬೬೫ | ೧೭.೮ | ೪೩೦,೩೦೦ | ೨೨.೮ | ೯೬೩,೫೨೦ | ೫೧.೦ | ೩,೨೮೦ | .೨ |
| ೨. ಬಿರ್‌ಭೂಮ್ | ೧,೦೪೮,೩೧೭ | ೨೮೭,೩೧೦ | ೨೭.೪ | ೨೮೦,೨೫೪ | ೨೬..೭ | ೪೦೬,೧೮೨ | ೩೮.೮ | ೩೪೪ | .೦೩ |
| ೩. ಬಂಕೂರ | ೧,೨೮೯,೩೧೭ | ೫೫,೫೬೪ | ೪.೩ | ೩೫೫,೨೯೦ | ೨೭.೫ | ೭೨೩,೨೮೯ | ೫೬.೧ | ೧,೨೧೬ | .೧ |
| ೪. ಮಿಡ್ನಾಪೂರ್ | ೩,೧೯೦,೬೪೭ | ೨೪೬,೫೫೯ | ೭.೭ | ೩೨೯,೦೬೬ | ೧೦.೬ | ೨,೩೪೨,೮೯೭ | ೭೩.೪ | ೩,೮೩೪ | .೧ |
| ೫. ಹೂಗ್ಲಿ | ೧,೩೭೭,೭೨೯ | ೨೦೭,೦೭೭ | ೧೫.೦ | ೨೪೫,೮೧೦ | ೧೭.೮ | ೮೫೩,೭೩೪ | ೬೧.೯ | ೫೪೩ | .೦೪ |
| ೬. ಹೌರಾ | ೧,೪೯೦,೩೦೪ | ೨೯೬,೩೨೫ | ೧೯.೯ | ೧೮೪,೩೧೮ | ೧೨.೪ | ೧,೦೦೦,೫೪೮ | ೬೭.೧ | ೯೯೪ | .೦೬ |
| ೭. ೨೩–ಪರಗಣಗಳು | ೩,೫೩೬,೩೮೬ | ೧,೧೪೮,೧೮೦ | ೩೨.೫ | ೭೪೩,೩೯೭ | ೨೧.೦ | ೧,೫೬೬,೫೮೯ | ೪೪.೩ | ೨೦,೮೨೩ | .೬ |
| ೮. ಕಲಕತ್ತಾ | ೨,೧೦೮,೮೯೧ | ೪೯೭,೪೯೧ | ೨೩.೬ | ೫೫.೨೨೮ | ೨.೬ | ೧,೪೨೬,೨೮೪ | ೭೦.೦ | ೧೬,೪೩೧ | .೮ |
| ೯. ನಾದಿಯಾ | ೧,೭೫೯,೮೪೬ | ೧,೦೭೮,೦೦೭ | ೬೧.೩ | ೧೪೩,೬೮೨ | ೮.೨ | ೫೧೪,೨೬೮ | ೨೯.೨ | ೧೦,೭೪೯ | .೬ |
| ೧೦. ಮುರ್ಶಿದಾಬಾದ್ | ೧,೬೪೦,೫೩೦ | ೯೨೭,೭೪೭ | ೫೬.೬ | ೧೬೭,೧೮೪ | ೧೦.೨ | ೫೧೭,೮೦೩ | ೩೧.೬ | ೩೯೪ | .೦೨ |
| ೧೧. ಖುಲ್ನಾ | ೧,೯೪೩,೨೧೮ | ೯೫೯,೧೭೨ | ೪೯.೪ | ೪೭೦,೫೫೦ | ೨೪.೨ | ೫೦೭,೧೪೩ | ೨೬.೧ | ೩,೫೩೮ | .೨ |
| ೧೨. ರಾಜಶಾಹಿ | ೧,೫೭೧,೭೫೦ | ೧,೧೭೩,೨೮೫ | ೭೪.೬ | ೭೫,೬೫೦ | ೪.೮ | ೨೫೩,೫೮೦ | ೧೬.೧ | ೧,೧೬೬ | .೦೭ |
| ೧೩. ದಿನಾಜ್‌ಪುರ್ | ೧,೯೨೬,೮೩೩ | ೯೬೩.೨೪೬ | ೫೦.೨ | ೩೯೯,೪೧೦ | ೨೦.೭ | ೩೭೫,೨೧೨ | ೧೯.೫ | ೧,೪೪೮ | .೦೭ |
| ೧೪. ಜಲ್‌ಪೈಗುರಿ | ೧,೦೮೯,೫೧೩ | ೨೫೧,೪೬೦ | ೨೩.೧ | ೩೨೫,೫೦೪ | ೨೯.೯ | ೨೨೬,೧೪೩ | ೨೦.೮ | ೨,೫೮೯ | .೨ |
| ೧೫. ಡಾರ್ಜೀಲಿಂಗ್ | ೩೭೬,೩೯೬ | ೯,೧೨೫ | ೨.೪ | ೨೮,೯೨೨ | ೭.೭ | ೧೪೯,೫೭೪ | ೩೯.೭ | ೨,೫೮೯ | .೭ |
| ೧೬. ರಂಗ್‌ಪುರ್ | ೨,೮೭೭,೮೪೭ | ೨,೦೫೫,೧೮೬ | ೭೧.೪ | ೪೯೫,೪೬೨ | ೧೭.೨ | ೩೦೭,೩೮೭ | ೧೦.೭ | ೩೮೯ | .೦೧ |

| ರಾಜ್ಯಗಳು ಮತ್ತು ಏಜೆನ್ಸಿಗಳು | ಒಟ್ಟು ಜನಸಂಖ್ಯೆ | ಮುಸ್ಲಿಮರು | | ಪರಿಶಿಷ್ಟ ಜಾತಿಗಳು | | ಹಿಂದೂಗಳು | | ಭಾರತೀಯ ಕ್ರೈಸ್ತರು | |
|---|---|---|---|---|---|---|---|---|---|
| | | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇಕಡಾವಾರು |
| ೧೭. ಬೊಗ್ರಾ | ೧,೨೬೦,೪೬೩ | ೧,೦೫೭,೯೦೨ | ೮೩.೯ | ೬೧,೩೦೩ | ೪.೯ | ೧೨೬,೨೨೯ | ೧೦.೦ | ೨೮೬ | .೦೨ |
| ೧೮. ಪಬ್ನ | ೧,೭೦೫,೦೭೨ | ೧,೩೧೩,೯೬೮ | ೭೭.೧ | ೧೧೪,೭೩೮ | ೬.೭ | ೨೬೯,೦೧೭ | ೧೫.೮ | ೨೮೫ | .೦೨ |
| ೧೯. ಮಾಲ್ಡಾ | ೧,೨೩೨,೬೧೮ | ೬೯೯,೯೪೫ | ೫೬.೭ | ೭೫,೫೩೫ | ೬.೧ | ೩೯೦,೧೪೩ | ೩೧.೬ | ೪೬೬ | .೦೪ |
| ೨೦. ಡಾಕ್ಕಾ | ೪,೨೨೨,೧೪೩ | ೨,೮೪೧,೨೬೧ | ೬೭.೩ | ೪೦೯,೯೦೫ | ೯.೭ | ೯೫೦,೨೨೭ | ೨೨.೫ | ೧೫,೮೪೬ | .೪ |
| ೨೧. ಮೈಮೆನ್‌ಸಿಂಗ್ | ೬,೦೨೩,೭೫೮ | ೪,೬೬೪,೫೪೮ | ೭೭.೪ | ೩೪೦,೬೭೬ | ೫.೭ | ೯೫೫,೯೬೨ | ೧೫.೯ | ೨,೩೨೨ | .೦೪ |
| ೨೨. ಫರಿದ್‌ಪುರ್ | ೨,೮೮೮,೮೦೩ | ೧,೮೭೧,೩೩೬ | ೬೪.೪ | ೫೨೭,೪೯೬ | ೧೮.೩ | ೪೭೮,೭೪೨ | ೧೬.೬ | ೯,೫೪೯ | .೩ |
| ೨೩. ಬಕಾರ್‌ಗಂಜ್ | ೩,೫೪೯,೦೧೦ | ೨,೫೬೭,೦೨೭ | ೭೨.೩ | ೪೨೭,೬೬೭ | ೧೨.೧ | ೪೮೦,೯೬೨ | ೧೩.೬ | ೯,೩೫೭ | .೨ |
| ೨೪. ತಿಪ್ಪೇರ | ೩,೮೬೦,೧೩೯ | ೨,೯೭೫,೯೦೧ | ೭೭.೧ | ೨೨೭,೬೪೩ | ೫.೯ | ೬೫೨,೩೧೮ | ೧೬.೯ | ೪೨೮ | .೦೧ |
| ೨೫. ನವಕಾಲಿ | ೨,೨೧೭,೪೦೨ | ೧,೮೦೩,೯೩೭ | ೮೧.೩ | ೮೧,೮೧೭ | ೩.೭ | ೩೩೦,೪೯೪ | ೧೪.೯ | ೫೩೫ | .೦೨ |
| ೨೬. ಚಿತ್ತಗೊಂಗ್ | ೨,೧೫೩,೨೯೬ | ೧,೬೦೫,೧೮೩ | ೭೪.೫ | ೫೭,೦೨೪ | ೨.೬ | ೪೦೧,೦೫೦ | ೧೮.೬ | ೩೯೫ | .೦೨ |
| ೨೭. ಚಿತ್ತಗೊಂಗ್ ಪರ್ವತ ಪ್ರದೇಶಗಳು | ೨೪೭,೦೫೩ | ೭,೨೭೦ | ೨.೯ | ೨೮೩ | .೧ | ೪,೫೯೮ | ೧.೯ | ೬೦ | .೦೨ |
| ೨೮. ಜೆಸ್ಸೂರ್ | ೧,೮೨೮,೨೧೬ | ೧,೧೦೦,೭೧೩ | ೬೦.೨ | ೩೧೪,೮೫೬ | ೧೭.೨ | ೪೦೬,೨೨೩ | ೨೨.೨ | ೧,೦೫೭ | .೦೬ |
| **ಜುಮ್ಲಾ** | **೬೦,೩೦೬,೫೨೫** | **೩೩,೦೦೫,೪೩೪** | **೫೪.೭** | **೭,೩೭೮,೯೭೦** | **೧೨.೨** | **೧೭,೬೩೦,೦೫೪** | **೨೯.೩** | **೧೧೦,೯೨೩** | **.೨** |

## ಅನುಬಂಧ VI

## ಅಸ್ಸಾಮಿನಲ್ಲಿ ಜಿಲ್ಲಾವಾರು ಜನಸಂಖ್ಯೆಯ ಕೋಮುವಾರು ಪ್ರಸಾರ

| ಜಿಲ್ಲೆಗಳು | ಒಟ್ಟು ಜನಸಂಖ್ಯೆ | ಮುಸ್ಲಿಮರು | | ಪರಿಶಿಷ್ಟ ಜಾತಿಗಳು | | ಭಾರತೀಯ ಕ್ರೈಸ್ತರು | | ಸಿಖ್ಖರು | | ಹಿಂದೂಗಳು | |
|---|---|---|---|---|---|---|---|---|---|---|---|
| | | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇ.ವಾರು | ಜನಸಂಖ್ಯೆ | ಶೇಕಡಾವಾರು | ಜನಸಂಖ್ಯೆ | ಶೇಕಡಾವಾರು |
| ೧. ಕಚೌಹಾರ್ | ೬೪೧,೧೮೧ | ೨೩೨,೯೫೦ | ೩೬.೩ | ೫೧,೯೬೧ | ೮.೧ | ೩,೭೪೪ | .೬ | ... | ... | ೧೭೩,೮೫೫ | ೨೭.೧ |
| ೨. ಸೈಲ್ಹೆಟ್ | ೩,೧೧೬,೬೦೨ | ೧,೮೯೨,೧೧೭ | ೬೦.೭ | ೩೬೪,೫೧೦ | ೧೧.೭ | ೨,೫೯೦ | .೦೮ | ... | ... | ೭೮೫,೦೦೪ | ೨೫.೨ |
| ೩. ಖಾಸಿ ಮತ್ತು ಜಂತಿಯ ಗುಡ್ಡಗಳು | ೧೧೮,೬೬೫ | ೧,೫೫೫ | ೧.೩ | ೬೩ | .೦೫ | ೧೨೦ | .೧ | ... | ... | ೧೨,೬೭೬ | ೧೦.೭ |
| ೪. ನಾಗಾ ಗುಡ್ಡಗಳು | ೧೮೯,೬೪೧ | ೫೩೧ | ೨ | ೪೫ | .೦೨ | ೯ | ... | ... | ... | ೪,೧೫೩ | ೨.೨ |
| ೫. ಲುಶಾಯಿ ಗುಡ್ಡಗಳು ಅಸ್ಸಾಂ ಕಣಿವೆ | ೧೫೨,೭೮೬ | ೧೦೧ | .೦೬ | ೨೨ | .೦೧ | ... | ... | ... | ... | ೨,೪೨೫ | ೧.೬ |
| ೬. ಗೋಲ್‌ಪಾರಾ | ೧,೦೧೪,೨೮೫ | ೪೬೮,೯೨೪ | ೪೬.೨ | ೨೩,೪೩೪ | ೨.೩ | ೨೬೯ | .೦೨ | ... | ... | ೨೮೨,೭೮೯ | ೨೭.೯ |
| ೭. ಕಾಮರೂಪ | ೧,೨೬೪,೨೦೦ | ೩೬೧,೫೨೨ | ೩೯.೧ | ೫೯,೦೯೨ | ೪.೭ | ೧,೦೩೮ | .೦೮ | ... | ... | ೬೩೭,೪೫೭ | ೫೦.೪ |
| ೮. ದಾರಾಂಗ್ | ೭೩೬,೭೯೧ | ೧೨೦,೯೯೫ | ೧೬.೪ | ೧೯,೪೭೫ | ೨.೬ | ೬,೩೬೭ | .೮ | ... | ... | ೩೨೮,೨೮೩ | ೪೪.೬ |
| ೯. ನೌಗೊಂಗ್ | ೭೧೦,೮೦೦ | ೨೫೦,೧೧೩ | ೩೫.೨ | ೫೯,೨೧೪ | ೮.೩ | ೪,೦೪೯ | .೬ | ... | ... | ೨೨೯,೧೩೭ | ೩೨.೨ |
| ೧೦. ಶಿಬ್‌ಸಾಗರ್ | ೧,೦೭೪,೭೪೧ | ೫೧,೭೬೯ | ೪.೮ | ೫೦,೧೮೪ | ೪.೭ | ೧೫,೨೬೮ | ೧.೪ | ... | ... | ೫೯೩,೦೦೭ | ೫೫.೨ |
| ೧೧. ಲಕ್ಷ್ಮಿಪುರ್ | ೮೯೪,೮೪೨ | ೪೪,೫೭೯ | ೫.೦ | ೪೩,೫೨೭ | ೪.೯ | ೩,೭೮೬ | .೪ | ... | ... | ೪೫೭,೫೦೯ | ೫೧.೧ |
| ೧೨. ಗಾರೂ ಗುಡ್ಡಗಳು | ೨೩೩,೫೬೯ | ೧೦,೩೯೮ | ೪.೫ | ೭೮೯ | .೩ | ೧ | ... | ... | ... | ೧೩,೫೧೮ | ೫.೮ |
| ೧೩. ಸಾದಿಯ ಗಡಿಪ್ರದೇಶ | ೬೦,೧೧೮ | ೮೬೪ | ೧.೪ | ೩,೯೯೧ | ೬.೬ | ೪೮೬ | .೮ | ... | ... | ೧೪,೬೦೫ | ೨೪.೩ |
| ೧೪. ಬಲಿಪಾರಾ ಗಡಿಪ್ರದೇಶ | ೬,೫೧೨ | ೬೧ | .೯ | ೭೪ | ೧.೧ | ೨೩ | .೪ | ... | ... | ೨,೫೧೪ | ೩೮.೬ |
| ಜುಮ್ಲಾ | **೧೦,೨೦೪,೭೩೩** | **೩,೪೪೨,೪೭೯** | **೩೩.೭** | **೬೭೫,೨೯೧** | **೬.೬** | **೩೭,೭೫೦** | **.೪** | **೩,೪೬೪** | **.೦೩** | **೩,೫೩೬,೯೩೨** | **೩೪.೬** |

# ಅನುಬಂಧ VII
# ವಾಯುವ್ಯ ಗಡಿ ಪ್ರಾಂತ್ಯ

## ಜಿಲ್ಲಾವಾರು ಮುಸ್ಲಿಂ ಜನಸಂಖ್ಯೆಯ ದಾಮಾಷಾ

| ಜಿಲ್ಲೆಗಳು | ಒಟ್ಟು ಜನಸಂಖ್ಯೆ | ಒಟ್ಟು ಮುಸ್ಲಿಂ ಜನಸಂಖ್ಯೆ | ಒಟ್ಟು ಜನಸಂಖ್ಯೆಯಲ್ಲಿ ಮುಸ್ಲಿಮರ ಶೇಕಡಾವಾರು | ಒಟ್ಟು ಮುಸ್ಲಿಮೇತರ ಜನಸಂಖ್ಯೆ | ಒಟ್ಟು ಜನಸಂಖ್ಯೆಯಲ್ಲಿ ಮುಸ್ಲಿಮೇತರ ಶೇಕಡಾವಾರು |
|---|---|---|---|---|---|
| ಹಜಾರಾ | ೭೯೬,೨೩೦ | ೭೫೬,೦೦೪ | ೯೪.೯ | ೪೦,೨೨೬ | ೫.೧ |
| ಮರ್ದಾನ್ | ೫೦೬,೫೩೯ | ೪೮೩,೫೭೫ | ೯೬.೫ | ೪೨,೯೬೪ | ೪.೫ |
| ಪೇಶಾವರ್ | ೮೫೧,೮೩೩ | ೭೬೯,೫೮೯ | ೯೦.೪ | ೮೨,೨೪೪ | ೯.೬ |
| ಕೋಹಾತ್ | ೨೮೯,೪೦೪ | ೨೬೬,೨೨೪ | ೯೨.೦ | ೨೩,೧೮೦ | ೮.೦ |
| ಬನ್ನು | ೨೯೫,೯೩೦ | ೨೫೭,೬೪೮ | ೮೭.೧ | ೩೮,೨೮೨ | ೧೨.೯ |
| ಡಿ.ಐ.ಖಾನ್ | ೨೯೮,೧೩೧ | ೨೫೫,೭೫೭ | ೮೫.೮ | ೪೨,೩೭೪ | ೧೪.೨ |

# ಅನುಬಂಧ VIII
# ವಾಯುವ್ಯ ಗಡಿ ಪ್ರಾಂತ್ಯ

## ಪಟ್ಟಣಗಳಲ್ಲಿ ಮುಸ್ಲಿಮೇತರ ಜನಸಂಖ್ಯೆಗೆ ಮುಸ್ಲಿಮರ ದಾಮಾಷಾ

ಕೆ = ಕೆಂಟೋನ್‌ಮೆಂಟ್, ಮು = ಮುನಿಸಿಪಾಲಿಟಿ, ಅ.ಪ್ರ. = ಅಧಿಸೂಚಿತ ಪ್ರದೇಶ

| ಜಿಲ್ಲಾವಾರು ಪಟ್ಟಣಗಳು | | ಒಟ್ಟು ಜನಸಂಖ್ಯೆ | ಒಟ್ಟು ಮುಸ್ಲಿಂ ಜನಸಂಖ್ಯೆ | ಒಟ್ಟು ಜನಸಂಖ್ಯೆಯಲ್ಲಿ ಮುಸ್ಲಿಮರ ಶೇಕಡಾವಾರು | ಒಟ್ಟು ಮುಸ್ಲಿಮೇತರ ಜನಸಂಖ್ಯೆ | ಒಟ್ಟು ಜನಸಂಖ್ಯೆಯಲ್ಲಿ ಮುಸ್ಲಿಮೇತರ ಶೇಕಡಾವಾರು |
|---|---|---|---|---|---|---|
| ೧ | | ೨ | ೩ | ೪ | ೫ | ೬ |
| **ಹಜಾರಾ** | | | | | | |
| ೧. ಅಬ್ಬೊತಾಬಾದ್ | ಕೆ | ೧೩,೮೬೬ | ೩,೩೩೧ | ೨೪ | ೧೦,೫೩೫ | ೭.೬ |
| ೨. ಅಬ್ಬೊತಾಬಾದ್ | ಮು | ೧೩,೫೫೮ | ೮,೮೬೧ | ೬೬.೧ | ೪,೯೭ | ೩೩.೯ |
| ೩. ಹರಿಪುರ್ | ಮು | ೯,೩೨೨ | ೫,೧೭೪ | ೫೫.೫ | ೪,೧೪೮ | ೪೪.೫ |
| ೪. ಬಾಫ್ಘಾ | ಅ.ಪ್ರ | ೭,೯೮೮ | ೭,೧೬೬ | ೮೯.೭ | ೮೨೨ | ೧೦.೩ |
| ೫. ನವಾನ್‌ಶೆಹ್ರ್ | ಅ.ಪ್ರ | ೬,೪೧೪ | ೫,೦೭೫ | ೭೯.೧ | ೧,೩೩೯ | ೨೦.೯ |
| ೬. ಕೊಟ್ ನಜಿಬುಲ್ಲಾ | | ೫,೩೦೫ | ೪,೨೨೮ | ೭೯.೫ | ೨,೦೮೭ | ೨೦.೫ |
| ೭. ಮೆನ್ ಸೆಹ್ರಾ | | ೧೦,೨೧೭ | ೮,೧೪೧ | ೭೯.೭ | ೧,೦೭೬ | ೨೦.೩ |
| **ಮರ್ದಾನ್** | | | | | | |
| ೮. ಮರ್ದಾನ್ | ಮು | ೩೯,೨೦೦ | ೨೮,೯೪ | ೭೩.೯ | ೧೦,೨೦೬ | ೨೬.೧ |
| ೯. ಮರ್ದಾನ್ | ಕೆ | ೩,೨೯೪ | ೧,೩೦೭ | ೩೯.೭ | ೧,೯೮೭ | ೬೦.೩ |
| **ಪೇಶಾವರ್** | | | | | | |
| ೧೦. ಪೇಶಾವರ್ | ಮು | ೧೩೦,೯೬೭ | ೧೦೪,೬೫೦ | ೩೯.೯ | ೨೬,೩೧೭ | ೨೦.೧ |
| ೧೧. ಪೇಶಾವರ್ | ಕೆ | ೪೨,೪೫೩ | ೧೮,೩೨೨ | ೪೩.೨ | ೨೪,೧೩೧ | ೫೬.೩ |
| ೧೨. ನೌಶೆರಾ | ಅ.ಪ್ರ | ೧೭,೪೯೧ | ೧೬,೯೭೭ | ೯೭ | ೫೧೫ | ೩ |
| ೧೩. ನೌಶೆರಾ | ಕೆ | ೨೬,೫೩೧ | ೧೧,೨೫೬ | ೪೨.೪ | ೧೫,೨೭೫ | ೫೭.೬ |

| ೧ | | ೨ | ೩ | ೪ | ೫ | ೬ |
|---|---|---|---|---|---|---|
| ೧೪. ರಿಸಾಲ್‌ಪುರ್ | ಕೆ | ೯,೦೦೯ | ೩,೫೦೬ | ೩೮.೯ | ೫,೫೦೩ | ೬೧.೧ |
| ೧೫. ಚೆರಾತ್ | ಕೆ | ೩೩೭ | ೨೭೦ | ೮೦.೧ | ೬೭ | ೧೯.೯ |
| ೧೬. ಚೆರ್ಸಾದಾ | | ೧೬,೯೪೫ | ೧೫,೭೪೭ | ೯೨.೯ | ೧,೧೯೮ | ೭.೧ |
| ೧೭. ಉತಮಂಜಾಯ್ | | ೧೦,೧೨೯ | ೯,೭೬೮ | ೯೬.೪ | ೩೬೧ | ೩.೬ |
| ೧೮. ತಾಂಗಿ | | ೧೨,೯೦೬ | ೧೨,೪೫೬ | ೯೬.೫ | ೪೫೦ | ೩.೫ |
| ೧೯. ಪರಾಂಗ್ | | ೧೩,೪೯೬ | ೧೩,೪೯೪ | ೯೯.೯ | ೨ | ... |
| **ಕೊಹಾಂತ್** | | | | | | |
| ೨೦. ಕೋಹಾತ್ | ಮು | ೩೪,೩೧೬ | ೨೭,೮೬೮ | ೮೧.೨ | ೬,೪೪೮ | ೧೮.೮ |
| ೨೧. ಕೋಹಾತ್ | ಕೆ | ೧೦,೬೬೧ | ೪,೨೪೩ | ೩೯.೮ | ೬,೪೧೮ | ೬೦.೨ |
| ೨೨. ಬನ್ನು | | | | | | |
| ೨೩. ಬನ್ನು | | ೩೩,೨೧೦ | ೮,೫೦೭ | ೨೫.೬ | ೨೪,೭೦೩ | ೭೪.೪ |
| ೨೪. ಲಕ್ಕಿ | ಅ.ಪ್ರ | ೫,೨೯೪ | ೨,೧೮೯ | ೪೧.೪ | ೩,೧೦೫ | ೫೮.೬ |
| | | ೧೦,೧೪೧ | ೫,೮೮೩ | ೫೮.೦ | ೪,೨೫೮ | ೪೨.೦ |
| **ದೆರಾ ಇಸ್ಮಾಯ್ಲ್ ಖಾನ್** | | | | | | |
| ೨೫. ಡಿ.ಐ.ಖಾನ್ | ಮು | ೪೯,೨೩೮ | ೨೫,೪೪೩ | ೫೧.೭ | ೨೩,೭೯೫ | ೪೮.೩ |
| ೨೬. ಡಿ.ಐ.ಖಾನ್ | ಮು | ೨,೦೬೮ | ೯೮೧ | ೪೭.೪ | ೧,೦೮೭ | ೫೨.೬ |
| ೨೭. ಕುಲಾಚಿ | | ೮,೮೪೦ | ೬,೬೧೦ | ೭೪.೮ | ೨,೨೩೦ | ೨೫.೨ |
| ೨೮. ತೌಕ್ | ಅ.ಪ್ರ | ೯,೦೮೯ | ೫,೫೩೧ | ೬೦.೮ | ೩,೫೫೮ | ೩೯.೨ |

# ಅನುಬಂಧ IX
# ಸಿಂಧ್

## ಜಿಲ್ಲಾವಾರು ಮುಸ್ಲಿಂ ಜನಸಂಖ್ಯೆಯ ಪ್ರಸಾರ

| ಜಿಲ್ಲೆಗಳು | ಒಟ್ಟು ಜನಸಂಖ್ಯೆ | ಒಟ್ಟು ಮುಸ್ಲಿಂ ಜನಸಂಖ್ಯೆ | ಒಟ್ಟು ಜನಸಂಖ್ಯೆಯಲ್ಲಿ ಮುಸ್ಲಿಮರ ಶೇಕಡಾವಾರು | ಒಟ್ಟು ಮುಸ್ಲಿಮೇತರ ಜನಸಂಖ್ಯೆ | ಒಟ್ಟು ಜನಸಂಖ್ಯೆಯಲ್ಲಿ ಮುಸ್ಲಿಮೇತರ ಶೇಕಡಾವಾರು |
|---|---|---|---|---|---|
| ದಾದು | ೩೮೯,೩೮೦ | ೩೨೯,೯೯೧ | ೮೪.೭ | ೫೯,೩೮೯ | ೧೫.೩ |
| ಹೈದರಾಬಾದ್ | ೭೫೮,೭೪೮ | ೫೦೭,೬೨೦ | ೬೬.೯ | ೨೫೧,೧೨೮ | ೩೩.೧ |
| ಕರಾಚಿ | ೭೧೩,೯೦೦ | ೪೫೭,೦೩೫ | ೬೪.೦ | ೨೫೬,೮೬೫ | ೩೬.೦ |
| ಲಾರ್ಕಾನಾ | ೫೧೧,೨೦೮ | ೪೧೮,೫೪೩ | ೮೧.೯ | ೯೨,೬೬೫ | ೧೮.೧ |
| ನವಾಬ್‌ಶಾ | ೫೮೪,೧೭೮ | ೪೩೬,೪೧೪ | ೭೪.೭ | ೧೪೭,೭೬೪ | ೨೫.೩ |
| ಸುಕ್ಕುರ್ | ೬೯೨,೫೫೬ | ೪೯೧,೬೩೪ | ೭೧.೦ | ೨೦೦,೯೨೨ | ೨೯.೦ |
| ತಾರ್‌ಪರ್ಕಾರ್ | ೫೮೧,೦೦೪ | ೨೯೨,೦೨೫ | ೫೦.೩ | ೨೮೮,೯೭೯ | ೪೯.೭ |
| ಮೇಲಿನ ಸಿಂಧ್ ಸರಹದ್ದು | ೩೦೪,೦೩೪ | ೨೭೫,೦೬೩ | ೯೦.೫ | ೨೮,೯೭೧ | ೦೯.೫ |
| **ಜುಮ್ಲಾ*** | **೪,೫೫೩,೦೦೮** | **೨೭೫,೦೬೩** | **೯೦.೫** | **೧,೩೨೬,೬೮೩** | **೨೯.೩** |

* ಇದು ಖೈಲ್‌ಪುರ್ ಸಂಸ್ಥಾನದ ಜನಸಂಖ್ಯೆಯನ್ನು ಹೊರತಾಗಿದೆ.

# ಅನುಬಂಧ X
# ಸಿಂಧ್

## ಪಟ್ಟಣಗಳಲ್ಲಿ ಮುಸ್ಲಿಮೇತರ ಜನಸಂಖ್ಯೆಗೆ ಮುಸ್ಲಿಮರ ದಾಮಾಷಾ

ಮು = ಮುನಿಸಿಪಾಲಿಟಿ; ಸಿ.ಕೆ. = ಸಿವಿಲ್ ಕೆಂಟೋನ್‌ಮೆಂಟ್;
ಮಿ.ಕೆ. = ಮಿಲಿಟರಿ ಕೆಂಟೋನ್‌ಮೆಂಟ್

| ಜಿಲ್ಲಾವಾರು ಪಟ್ಟಣಗಳು | ಒಟ್ಟು ಜನಸಂಖ್ಯೆ | ಒಟ್ಟು ಮುಸ್ಲಿಂ ಜನಸಂಖ್ಯೆ | ಒಟ್ಟು ಜನಸಂಖ್ಯೆಯಲ್ಲಿ ಮುಸ್ಲಿಮರ ಶೇಕಡಾವಾರು | ಒಟ್ಟು ಮುಸ್ಲಿಮೇತರ ಜನಸಂಖ್ಯೆ | ಒಟ್ಟು ಜನಸಂಖ್ಯೆಯಲ್ಲಿ ಮುಸ್ಲಿಮೇತರ ಶೇಕಡಾವಾರು |
|---|---|---|---|---|---|
| ೧ | ೨ | ೩ | ೪ | ೫ | ೬ |
| **ದಾದು** | | | | | |
| ೧. ದಾದು ಮು | ೧೦,೯೯೬ | ೫,೨೭೯ | ೪೮ | ೫,೭೧೭ | ೫೨.೦ |
| ೨. ಕೊತ್ರಿ ಮು | ೯,೯೯೬ | ೫,೧೩೭ | ೫೧.೫ | ೪,೮೪೨ | ೪೮.೫ |
| ೩. ಮುಂಜ್ಹಂಡ್ ಮು | ೩,೦೨೫ | ೧,೦೫೩ | ೩೪.೮ | ೧,೯೭೨ | ೬೫.೨ |
| ೪. ಶೆಹ್ವಾನ್ ಮು | ೪,೩೬೪ | ೨,೨೧೮ | ೫೦.೮ | ೨,೧೪೬ | ೪೯.೨ |
| **ಹೈದರಾಬಾದ್** | | | | | |
| ೫. ಹಾಲಾ ಮು | ೭,೯೬೦ | ೫,೦೪೨ | ೬೩.೩ | ೨,೯೧೮ | ೩೬.೭ |
| ೬. ಹೈದರಾಬಾದ್ ಮು | ೧,೨೭,೫೨೧ | ೩೧,೯೮೩ | ೨೫.೧ | ೯೫,೫೩೮ | ೭೪.೯ |
| ೭. ಹೈದರಾಬಾದ್ ಸಿ.ಕೆ. | ೫,೨೫೫ | ೨,೬೬೭ | ೫೦.೭ | ೨,೫೮೮ | ೪೯.೩ |
| ೮. ಹೈದರಾಬಾದ್ ಮಿ.ಕೆ. | ೧,೯೧೭ | ೧,೪೧೯ | ೭೪ | ೪೯೮ | ೨೬ |
| ೯. ಮತಿಯಾರಿ ಮು | ೫,೯೧೦ | ೪,೩೩೯ | ೭೩.೪ | ೧,೫೭೧ | ೨೬.೬ |
| ೧೦. ನಸರ್ ಪುರ್ ಮು | ೩,೮೧೦ | ೨,೩೩೧ | ೬೧.೨ | ೧,೪೭೯ | ೩೮.೮ |
| ೧೧. ತಂದೊ ಅಲಹ್ಯರ್ ಮು | ೮,೪೦೬ | ೮,೪೦೬ | ೨೦.೧ | ೬,೭೧೬ | ೭೯.೯ |
| ೧೨. ತಂದೊ ಮೊಹಮದ್ ಖಾನ್ ಮು | ೮,೭೧೮ | ೨,೯೦೨ | ೩೩.೩ | ೫,೮೧೬ | ೬೬.೭ |

| ೧ | | ೨ | ೩ | ೪ | ೫ | ೬ |
|---|---|---|---|---|---|---|
| **ಕರಾಚಿ** | | | | | | |
| ೧೩. ಕರಾಚಿ | ಮು | ೩೫೮,೪೯೨ | ೧,೫೨,೩೬೫ | ೪೨.೫ | ೨,೦೬,೧೨೭ | ೫೭.೫ |
| ೧೪. ಕರಾಚಿ | ಸಿ.ಕೆ. | ೫,೮೫೪ | ೮೯೫ | ೧೫.೩ | ೪,೯೫೯ | ೮೪.೭ |
| ೧೫. ದೈಗ್‌ರೋಡ್ | ಸಿ.ಕೆ. | ೨,೮೮೧ | ೧,೧೭೨ | ೪೦.೭ | ೧,೭೦೯ | ೫೯.೩ |
| ೧೬. ಮನೊರ | ಸಿ.ಕೆ. | ೨,೫೩೩ | ೯೩೨ | ೩೬.೮ | ೧,೬೦೧ | ೬೩.೨ |
| ೧೭. ಕರಾಚಿ | ಮಿ.ಕೆ. | ೧೫,೮೯೫ | ೭,೦೬೩ | ೪೪.೪ | ೮,೮೩೨ | ೫.೫೬ |
| ೧೮. ತಟ್ಟಾ | ಮು | ೮,೨೬೨ | ೪,೧೯೮ | ೫೦.೮ | ೪,೦೬೪ | ೪೯.೨ |
| **ಲಾರ್ಕಾನಾ** | | | | | | |
| ೧೯. ಕಂಬಾರ್ | ಮು | ೧೧,೬೮೧ | ೬,೨೯೭ | ೫೩.೧ | ೫,೩೮೪ | ೪೬.೯ |
| ೨೦. ಲಾರ್ಕಾನಾ | ಮು | ೨೦,೩೯೦ | ೭,೮೩೪ | ೩೮.೪ | ೧೨,೫೫೬ | ೬೧.೬ |
| ೨೧. ರತೆದೆರೊ | ಮು | ೯,೯೨೫ | ೨,೩೯೩ | ೨೪.೧ | ೭,೫೩೨ | ೭೫.೯ |
| **ನವಾಬ್‌ಶಾ** | | | | | | |
| ೨೨. ನವಾಬ್‌ಶಾ | ಮು | ೧೭,೫೦೯ | ೪,೪೨೦ | ೨೫.೩ | ೧೩,೦೮೯ | ೭೪.೭ |
| ೨೩. ಶಾಹಬಾದ್‌ಪುರ್ | ಮು | ೧೧,೭೮೬ | ೧,೮೯೮ | ೧೬.೧ | ೯,೮೮೮ | ೮೩.೯ |
| ೨೪. ತಂದೊ ಅದಂ | ಮು | ೧೭,೨೩೩ | ೨,೯೯೪ | ೧೭.೪ | ೧೪,೨೩೯ | ೮೨.೬ |
| **ಸುಕ್ಕುರ್** | | | | | | |
| ೨೫. ಘುರಿ ಯಸಿನ್ | ಮು | ೮,೩೯೭ | ೨,೮೯೫ | ೩೪.೫ | ೫,೫೦೨ | ೬೫.೫ |
| ೨೬. ಘೋಟ್ಕಿ | ಮು | ೫,೨೩೬ | ೧,೫೩೩ | ೨೯.೩ | ೩,೭೦೩ | ೭೦.೭ |
| ೨೭. ರೋಹರಿ | ಮು | ೧೪,೭೨೧ | ೪,೧೩೨ | ೨೮.೭ | ೧೦,೫೮೯ | ೭೧.೯ |
| ೨೮. ಶಿಕಾರ್‌ಪುರ್ | ಮು | ೬೭,೭೪೬ | ೨೧,೭೭೫ | ೩೨.೧ | ೪೫,೯೭೧ | ೬೭.೯ |
| ೨೯. ಸುಕ್ಕುರ್ | ಮು | ೬೬,೪೬೬ | ೧೮,೧೫೨ | ೨೭.೩ | ೪೮,೩೧೪ | ೭೨.೭ |
| **ತಾರಾ ಪರ್ಕಾರ್** | | | | | | |
| ೩೦. ಮಿರ್ ಪುರ್ಖಾನ್ | ಮು | ೧೯,೫೯೧ | ೫,೦೮೬ | ೨೫.೯ | ೧೪,೫೦೫ | ೭೪.೧ |
| ೩೧. ಉಮರ್ ಕೋಟ್ | ಮು | ೪,೨೭೫ | ೯೮೬ | ೨೨.೯ | ೩,೨೮೯ | ೭೭.೧ |
| **ಮೇಲಿನ ಸಿಂಧ್ ಸರಹದ್ದು** | | | | | | |
| ೩೨. ಜಕೋಬಾಬಾದ್ | ಮು | ೨೧,೫೮೮ | ೯,೭೭೪ | ೪೫.೩ | ೧,೮೧೪ | ೫೪.೭ |

# ಅನುಬಂಧ XI
# ಭಾರತದಲ್ಲಿ ಮುಸ್ಲಿಮರು ಬಳಸುವ ಭಾಷೆಗಳು, ಪ್ರಾಮುಖ್ಯಾನುಸಾರ

## (೧೯೨೧ರ ಜನಗಣತಿಯಲ್ಲಿದ್ದಂತೆ)

| | |
|---|---|
| ಉರ್ದು (ಪಶ್ಚಿಮದ ಹಿಂದಿ) | ೨೦,೭೯೧,೦೦೦ |
| ಬಂಗಾಳಿ | ೨೩,೯೯೫,೦೦೦ |
| ಪಂಜಾಬಿ | ೭,೭೦೦,೦೦೦ |
| ಸಿಂಧಿ | ೨,೯೧೨,೦೦೦ |
| ಕಾಶ್ಮೀರೀ (ಮತ್ತು ಪರಿವಾರದ ಭಾಷೆಗಳು) | ೧,೫೦೦,೦೦೦ |
| ಪುಷ್ಟು | ೧,೪೬೦,೦೦೦ |
| ಗುಜರಾತಿ | ೧,೪೦೦,೦೦೦ |
| ತಮಿಳು | ೧,೨೫೦,೦೦೦ |
| ಮಲಯಾಳಂ | ೧,೧೦೭,೦೦೦ |
| ತೆಲುಗು | ೭೫೦,೦೦೦ |
| ಒರಿಯಾ | ೪೦೦,೦೦೦ |
| ಬಲೂಚಿ | ೨೨೪,೦೦೦ |
| ಬ್ರಾಹೂಯಿ | ೧೨೨,೦೦೦ |
| ಅರಾಬಿಕ್ | ೪೨,೦೦೦ |
| ಪರ್ಶಿಯನ್ | ೨೨,೦೦೦ |
| ಇತರ ಭಾಷೆಗಳು | ೫,೦೬೦,೦೦೦ |
| **ಜುಮ್ಲಾ** | **೬೮,೭೭೫,೦೦೦** |

# ಅನುಬಂಧ XII

ಘನ ಲಾರ್ಡ್ ಮಿಂಟೊ, ವೈಸರಾಯ್ ಹಾಗೂ ಭಾರತದ ಗವರ್ನರ್ ಜನರಲ್– ಇವರಿಗೆ ಸಿಮ್ಲಾದಲ್ಲಿ ೧ನೇ ಅಕ್ಟೋಬರ್ ೧೯೦೬ರಂದು ಭಾರತದ ಮುಸ್ಲಿಂ ಸಮುದಾಯದ ಪ್ರತಿನಿಧಿಗಳ ನಿಯೋಗ ಸಲ್ಲಿಸಿದ ಮನವಿ.*

## ಮನವಿ

"ಮಹಾಪ್ರಭುಗಳ ಸನ್ನಿಧಾನದಲ್ಲಿ ವಿಜ್ಞಾಪನೆಗಳು:– ನನಗೆ ಕೊಡಲಾಗಿರುವ ಅನುಮತಿಯನ್ನು ಉಪಯೋಗಿಸಿಕೊಂಡು, ಈ ಕೆಳಗೆ ಸಹಿ ಮಾಡಿರುವ ನಾವು– ಎಂದರೆ ಭಾರತದ ವಿವಿಧ ಭಾಗಗಳಲ್ಲಿ ಬಹುಸಂಖ್ಯೆಯಲ್ಲಿರುವ ಮಹಾರಾಜರ ಮಹಮ್ಮದೀಯ ಪ್ರಜೆಗಳ ಪ್ರತಿನಿಧಿಗಳಾಗಿರುವ ಶ್ರೀಮಂತರು, ಜಾಗೀರ್‌ದಾರರು, ತಾಲೂಕುದಾರರು, ವಕೀಲರು, ವರ್ತಕರು ಹಾಗೂ ಇತರರು– ತಮ್ಮ ಅನುಕೂಲದ ಅವಹಾಹನೆಗೆಂದು ಒಪ್ಪಿಸಬೇಕೆಂದಿರುವ ಈ ಕೆಳಗಿನ ಮನವಿಯೊಡನೆ ತಮ್ಮನ್ನು ಕಾಣಲು ವಿನಮ್ರವಾಗಿ ಬಂದಿರುತ್ತೇವೆ.

ವಿಶಾಲ ಭೂಖಂಡವಾಗಿರುವ ಭಾರತದ ಜನಸಂಖ್ಯೆಯಲ್ಲಿರುವ ಭಿನ್ನ ಭಿನ್ನ ಜನಾಂಗಗಳನ್ನೊಳಗೊಂಡ

* ಭಾರತದ ಚರಿತ್ರೆಯಲ್ಲಿ ಈ ದಾಖಲೆಗೆ ಒಂದು ವಿಶೇಷ ಪ್ರಾಮುಖ್ಯ ಹಾಗೂ ಅರ್ಥಪೂರ್ಣತೆ ಇದೆ. ಭಾರತದ ಆಡಳಿತದಲ್ಲಿ ಮುಸ್ಲಿಮರನ್ನು ಅನುಕೂಲಕರವಾಗಿ ಪಕ್ಷಪಾತದಿಂದ ನಡೆಸಿಕೊಳ್ಳುವ ಬ್ರಿಟಿಷರ ಧೋರಣೆಯ ಆರಂಭವನ್ನು ಇದು ಸೂಚಿಸುತ್ತದೆ. ಈ ಧೋರಣೆ ಮುಸ್ಲಿಮರನ್ನು ಕಾಂಗ್ರೆಸಿನಿಂದ ದೂರಸೆಳೆಯುವ ಮತ್ತು ಹಿಂದೂ ಮತ್ತು ಮುಸಲ್ಮಾನರ ನಡುವೆ ಒಡಕನ್ನೂ ಮುಗ್ಗಟ್ಟನ್ನೂ ಉಂಟುಮಾಡುವ ಉದ್ದೇಶವನ್ನು ಪಡೆದಿತ್ತೆಂದು ಆಪಾದಿಸಲಾಗಿದೆ. ಮೌಲಾನಾ ಮಹಮ್ಮದ್ ಅಲಿ ಅವರು ಕಾಂಗ್ರೆಸಿನ ಅಧ್ಯಕ್ಷರಾಗಿ ಮಾಡಿದ ಭಾಷಣದ ಒಂದು ಹೇಳಿಕೆಯ ದೆಸೆಯಿಂದ ಭಾರತೀಯರ ಮನಸ್ಸಿನಲ್ಲಿ ದಕ್ಕೆ ಸ್ವಲ್ಪ ಕುಖ್ಯಾತಿಯೂ ಅಂಟಿದೆ. (ಈ ಮನವಿಯನ್ನು ಬ್ರಿಟಿಷರೇ ವ್ಯವಸ್ಥೆಗೊಳಿಸಿದ್ದರು ಎಂಬ ಅರ್ಥದಲ್ಲಿ) ಈ ಹೇಳಿಕೆಯಲ್ಲಿ "ಅದೊಂದು ಹೇಳಿ ಮಾಡಿಸಿದ ಕಾರ್ಯ" ಎಂದು ಅವರು ಹೇಳಿದ್ದರು. ಈ ಕಾರಣದಿಂದ ಮನವಿಯ ಪಾಠವನ್ನೂ ಲಾರ್ಡ್ ಮಿಂಟೊ ಕೊಟ್ಟ ಉತ್ತರವನ್ನೂ ಅರಿತುಕೊಳ್ಳಲು ಹಲವು ಭಾರತೀಯರಿಗೆ ಬಹಳ ಕುತೂಹಲವಿತ್ತು. ಇವನ್ನು ಸಂಪಾದಿಸಲು ನಾನು ದೀರ್ಘಶೋಧ ನಡೆಸಿದ್ದೆ. ಆ ಕಾಲದಲ್ಲಿ ಗಣ್ಯರಾಗಿದ್ದ ವಯಸ್ಸಾದ ಹಲವು ಮುಸ್ಲಿಮ್ ರಾಜಕಾರಣಿಗಳನ್ನು ಸಹ ಇವುಗಳ ಒಂದು ಪ್ರತಿಗಾಗಿ ನಾನು ಸಂಪರ್ಕಿಸಿದ್ದೆ. ಆದರೆ ಅವು ಯಾರ ಬಳಿಯಲ್ಲಿಯೂ ಇರಲಿಲ್ಲ ಮತ್ತು ಅವು ಎಲ್ಲಿ ಸಿಗಬಹುದೆಂದು ಅವರಿಗೆ ತಿಳಿದಿರಲಿಲ್ಲ. ಅಂದಿನ ವೃತ್ತ ಪತ್ರಿಕೆಗಳಲ್ಲಿ ಮನವಿಯ ಪಾಠ ಮತ್ತು ಉತ್ತರ ಪ್ರಕಟವಾದಂತೆ ತೋರುವುದಿಲ್ಲ. ಅಷ್ಟರಲ್ಲಿ ನನ್ನ ಸ್ನೇಹಿತ ರಜ ಅಲಿ, ಎಂ.ಎಲ್.ಎ. (ಕೇಂದ್ರ)– ಇವರು ಸಂಗ್ರಹಿಸಿ ಇಟ್ಟಿದ್ದ, ಆಗ ಲಕ್ನೊ ನಗರದಲ್ಲಿ ಪ್ರಕಟವಾಗುತ್ತಿದ್ದ ಮತ್ತು ಬಹಳ ಹಿಂದೆಯೇ ಪ್ರಕಟಣೆ ನಿಲ್ಲಿಸಿದ್ದ 'ಇಂಡಿಯನ್ ಡೇಯ್ಲಿ ಟೆಲೆಗ್ರಾಫ್'ನ ಕೆಲವು ಹಾಳೆಗಳಲ್ಲಿ ಅಚ್ಚಾದ ಮನವಿಯ ಮತ್ತು ಉತ್ತರದ ಪೂರ್ಣ ಪಾಠದ ಒಂದು ಪ್ರತಿ ಅದೃಷ್ಟವಶಾತ್ ನನಗೆ ಸಿಕ್ಕಿತು. ಈ ಹಾಳೆಗಳನ್ನು ಎರವಲು ಕೊಟ್ಟಿದ್ದಕ್ಕೆ ಸರ್ ರಜ ಅಲಿ ಅವರಿಗೆ ನಾನು ಕೃತಜ್ಞನಾಗಿದ್ದೇನೆ. ಭಾರತದ ಬ್ರಿಟಿಷ್ ಆಳ್ವಿಕೆಯಲ್ಲಿ ಈ ದಾಖಲೆ ಒಂದು ಚಾರಿತ್ರಿಕ ಘಟನೆಯನ್ನು ಸೂಚಿಸುತ್ತಿರುವುದರಿಂದ, 'ಇಂಡಿಯನ್ ಡೇಯ್ಲಿ ಟೆಲಿಗ್ರಾಫ್'ನ ಸಿಂಮ್ಲಾ ವರದಿಗಾರ ಪತ್ರಿಕೆಯ ೩ ಅಕ್ಟೋಬರ್ ೧೯೦೬ರ ಸಂಚಿಕೆಯಲ್ಲಿ ಪ್ರಕಟಿಸಿದ ಸಮಾರಂಭದ ಕೆಲವು ವಿವರಗಳನ್ನು ಇಲ್ಲಿ ಪುನರ್ ಮುದ್ರಿಸುವುದು ಆಸಕ್ತಿಯ ವಿಷಯವಾಗಬಹುದು. ವರದಿ:–

"ಘನ ವೈಸರಾಯರಿಗೆ ಮನವಿ ಸಲ್ಲಿಸಲಿರುವ ಮಹಮ್ಮದೀಯ ಸಮುದಾಯದ ಪ್ರತಿನಿಧಿಗಳು ವೈಸರಾಯರ ನಿವಾಸದ ಬಾಲ್‌ರೂಮಿನಲ್ಲಿ ಈ ಹೊತ್ತು ಬೆಳಿಗ್ಗೆ ೧೧ ಘಂಟೆಗೆ ಸರಿಯಾಗಿ ಸೇರಿದರು. ಅವರ ಸಂಖ್ಯೆ ಮೂವತ್ತೈದು. ವೈಸರಾಯರ ಆಸನಕ್ಕೆ ಮುಖವಾಡಿ ಲಾಳಾಕೃತಿಯಲ್ಲಿ ಅವರು ಕೂತುಕೊಂಡಿದ್ದರು. ಸರಿಯಾಗಿ ೧೧ ಘಂಟೆಗೆ, ಸಿಬ್ಬಂದಿಯನ್ನು ಮುಂದುಮಾಡಿ ವೈಸರಾಯರು ಕೊಠಡಿಯನ್ನು ಪ್ರವೇಶಿಸಲು, ಅವರನ್ನು ಸ್ವಾಗತಿಸಲು ಎಲ್ಲರೂ ಎದ್ದು ನಿಂತರು. ಆಗಾಖಾನ್ ಅವರು ಸ್ವತಃ ವೈಸರಾಯರನ್ನು ಎಲ್ಲರ ಬಳಿ ಕರೆದೊಯ್ದು ಪರಿಚಯ ಮಾಡಿಕೊಟ್ಟರು. ತದನಂತರ ಪಾಟಿಯಾಲಾದ ಖಲೀಫರು ಮನವಿಯನ್ನು

ಹಾಗೂ ಭಿನ್ನಭಿನ್ನ ಧರ್ಮಾನುಚರಣೆಗೆ ಸೇರಿರುವ ಕೋಟ್ಯಾನುಕೋಟಿ ಜನರಿಗೆ ಬ್ರಿಟಿಷ್ ಆಳ್ವಿಕೆ ದಯಪಾಲಿಸಿದ ಗಣನೆಗೆ ಮೀರಿದ ಪ್ರಯೋಜನಗಳನ್ನು ನಾವು ಸಂಪೂರ್ಣವಾಗಿ ಅರಿತಿರುತ್ತೇವೆ ಹಾಗೂ ಮೆಚ್ಚುತ್ತೇವೆ: ಈಗ ನಮ್ಮ ಪಾಲಿಗೆ ಲಭಿಸಿರುವ ಶಾಂತಿ, ಭದ್ರತೆ, ವೈಯಕ್ತಿಕ ಸ್ವಾತಂತ್ರ್ಯ ಹಾಗೂ ಧರ್ಮಾಚರಣೆಯ ಸ್ವಾತಂತ್ರ್ಯಗಳಿಗೋಸ್ಕರ ನಾವು ನ್ಯಾಯವಾಗಿಯೇ ಕೃತಜ್ಞರಾಗಿದ್ದೇವೆ. ಅದಲ್ಲದೆ, ವಿವೇಕಯುತ ಹಾಗೂ ವಿಶೇಷ ತಿಳಿವಳಿಕೆಯುಳ್ಳಂಥ ಸರಕಾರದ ಕಡೆಯಿಂದ ಈ ಪ್ರಯೋಜನಗಳು ಹೆಚ್ಚುತ್ತಾ ಹೋಗುವುವೆಂದೂ, ರಾಷ್ಟ್ರಗಳ ಸೌಹಾರ್ದಯುತ ಸಭೆಯಲ್ಲಿ ಭಾರತ ಇನ್ನು ಮುಂದೆ ಹೆಚ್ಚುಹೆಚ್ಚಾದ ಗಣ್ಯಸ್ಥಾನವನ್ನು ಪಡೆಯುವುದು ಎಂದೂ ನಿರೀಕ್ಷಿಸಲು ನಮಗೆ ಎಲ್ಲಾ ನ್ಯಾಯವಾದ ಕಾರಣಗಳೂ ಇವೆ.

ಭಾರತದ ಪ್ರಗತಿಯ ಬಹಳ ಮುಖ್ಯ ಗುಣವಾಗಿರುವ ಜನಾಂಗೀಯ ಮತ್ತು ಧಾರ್ಮಿಕ ವೈವಿಧ್ಯಕ್ಕೆ ಯಾವಾಗಲೂ ಸೂಕ್ತ ಗಮನವನ್ನಿತ್ತು, ಈ ದೇಶದ ಜನರ ಹಿತಾಸಕ್ತಿಗಳಿಗೆ ಸಂಬಂಧಿಸುವ ಅಂಶಗಳಲ್ಲೆಲ್ಲಾ ಅವರ ಅಭಿಪ್ರಾಯಗಳಿಗೆ ಮತ್ತು ಅಪೇಕ್ಷೆಗಳಿಗೆ ಮೊದಲಿನಿಂದಲೂ ಹೆಚ್ಚು ಹೆಚ್ಚು ಗೌರವವನ್ನು ಸಾಧ್ಯವಾದಷ್ಟು ಮಟ್ಟಿಗೆ ಕೊಡುತ್ತಾ ಬಂದಿರುವುದು ಭಾರತಕ್ಕೆ ಸಂಬಂಧಿಸುವ ಬ್ರಿಟಿಷ್ ಧೋರಣೆಯ ಅತ್ಯಂತ ಮುಖ್ಯ ವೈಶಿಷ್ಟ್ಯಗಳಲ್ಲಿ ಒಂದಾಗಿದೆ.

## ನಮ್ಮ ಸಮುದಾಯದ ಹಕ್ಕಿನಿಂದ ಮುಂದಿಡುವ ಕೋರಿಕೆಗಳು

ದೇಶದ ವಿವಿಧ ಭಾಗಗಳ ಪ್ರಮುಖ ಸಮುದಾಯಗಳ ಪ್ರಭಾವಿ ಸದಸ್ಯರೊಡನೆ ರಹಸ್ಯವಾಗಿ ಮತ್ತು ಗಮನ ಸೆಳೆಯದಂಥ ರೀತಿಯಲ್ಲಿ ಸಮಾಲೋಚನೆ ನಡೆಸುವ ಮೂಲಕ ಆರಂಭಗೊಂಡು, ಸಾರ್ವಜನಿಕ ರಂಗದ ಮುಖ್ಯ ವಿಷಯಗಳಲ್ಲಿ ತೆಗೆದುಕೊಂಡ ಕ್ರಮಗಳ ಬಗೆಗಿನ ಟೀಕೆ ಮತ್ತು ಅಭಿಪ್ರಾಯಗಳನ್ನು

---

ಸಲ್ಲಿಸಲು ಅನುಮತಿ ಕೇಳಿದರು. ಆಗ ಆಗಾಖಾನ್ ಅವರು ಮುಂದೆ ಬಂದು, ಇತರರೆಲ್ಲರು ನಿಂತುಕೊಂಡಿರಲು ವೈಸರಾಯರತ್ತ ಮುಖಮಾಡಿ ಮನವಿಯನ್ನು ಓದಿದರು."

ನಿಯೋಗದಲ್ಲಿದ್ದವರು: ಘನಾ ಆಗಾ ಸರ್ ಸುಲ್ತಾನ್ ಮಹಮದ್ ಶಾಹ ಆಗಾ ಖಾನ್, ಜಿ.ಸಿ.ಐ.ಇ. (ಮುಂಬೈ), ಶಾಹಜಾದಾ ಭಕ್ತಿಯಾರ್ ಶಾ.ಓ.ಐ.ಇ. ಮೈಸೂರು ಕುಟುಂಬದ ಮುಖ್ಯಸ್ಥರು, ಕಲ್ಕತ್ತಾ; ಸನ್ಮಾನ್ಯ ಮಲಿಕ್ ಉಮರ್ ಹಯತ್ ಖಾನ್, ಸಿ.ಐ.ಇ. ಲೆಫ್ಟನೆಂಟ್, ೧೭ನೇ ಪ್ರಿನ್ಸ್ ಆಫ್ ವೇಲ್ಸ್ ತಿವಾನಾ ಲಾನ್ಸರ್ಸ್, ತಿವಾನಾ, ಶಾಹಪುರ್ (ಪಂಜಾಬ್), ಸನ್ಮಾನ್ಯ ಖಾನ್ ಬಹದೂರ್ ಮಿಯಾನ್ ಮೊಹಮದ್ ಶಾಹ ದಿನ್, ಬಾರ್–ಎಟ್–ಲಾ, ಲಾಹೋರ್; ಸನ್ಮಾನ್ಯ ಮೌಲ್ವಿ ಶರ್ಫುದ್ದಿನ್, ಬಾರ್–ಎಟ್–ಲಾ, ಪಟ್ನಾ; ಖಾನ್ ಬಹದೂರ್ ಸೈಯದ್ ನವಾಬ್ ಅಲಿ ಚೌಧುರಿ, ಮೈಮೆನ್ ಸಿಂಘ್ (ಪೂರ್ವ ಂಗಾಳ); ನವಾಬ್ ಬಹದೂರ್ ಸೈಯದ್ ಅಮಿರ್ ಹುಸನ್ ಖಾನ್, ಸಿ.ಐ.ಇ. ಕಲ್ಕತ್ತಾ; ನಜೀರ್ ಹುಸ್ಸೇನ್ ಖಾನ್ ಖಯಾಲ್, ಕಲ್ಕತ್ತಾ; ಖಾನ್ ಬಹದೂರ್ ಮಿರ್ಜಾ ಶುಜಾತ್ ಅಲಿ ಬೇಗ್; ಪರ್ಷಿಯನ್ ಕಾನ್ಸಲ್–ಜನರಲ್, ಮುರ್ಶಿದಾಬಾದ್, ಕಲ್ಕತ್ತಾ (ಬಂಗಾಳ); ಸೈಯದ್ ಅಲಿ ಇಮಾಮ್, ಬಾರ್–ಎಟ್–ಲಾ, ಪಟ್ನಾ (ಬಿಹಾರ್); ನಾಬ್ ಸರ್ಫ್ರಾಜ್ ಹುಸ್ಸೇನ್ ಖಾನ್, ಪಟ್ನಾ (ಬಿಹಾರ್); ಖಾನ್ ಬಹದೂರ್ ಅಹ್ಮದ್ ಮೊಹಿಯುದ್ದಿನ್ ಖಾನ್, ಕರ್ನಾಟಕ ಕುಟುಂಬದ ಸ್ಟಿಪೆಂಡಿಯರಿ (ಮದರಾಸು); ಮೌಲ್ವಿ ರಫಿಯುದ್ದಿನ್ ಅಹ್ಮದ್, ಬಾರ್–ಎಟ್–ಲಾ (ಮುಂಬೈ); ಇಬ್ರಾಹಿಮ್ ಭಾಯಿ ಅದಾಮ್ ಜಿ ಪೀರ್ ಭಾಯಿ, ಜನರಲ್ ಮರ್ಚೆಂಟ್ (ಮುಂಬೈ); ಶ್ರೀ ಅಬ್ದುರ್ ರಹೀಂ, ಬಾರ್–ಎಟ್–ಲಾ, ಕಲ್ಕತ್ತಾ; ಸೈಯದ್ ಅಲ್ಲಾದ್ ಶಾಹ, ವಿಶೇಷ ನ್ಯಾಯಾಧೀಶರು ಮತ್ತು ಉಪಾಧ್ಯಕ್ಷರು, ಜಮೀನುದಾರರ ಸಂಘ, ಖೈರ್ ಪೂರ್ (ಸಿಂಧ್); ಮೌಲಾನಾ ಎಚ್.ಎಮ್. ಮಲಕ್, ಮೆಹ್ದಿ ಬಜ್ ಬೊಹ್ರಾ ಮುಖ್ಯಸ್ಥರು, ನಾಗಪುರ (ಕೇಂದ್ರ ಪ್ರಾಂತ್ಯಗಳು); ಮುಶಿರ್–ಉದ್–ದೌಲ ಮಮ್ ತಜಲ್=ಉಲ್–ಮುಲ್ಕ್ ಖಾನ್ ಬಹದೂರ್ ಖಲೀಫ ಸೈಯದ್ ಮೊಹಮದ್ ಹುಸೇನ್, ಸದಸ್ಯರು, ರಾಜ್ಯಮಂಡಳಿ, ಪಾಟಿಯಲಾ (ಪಂಜಾಬ್); ಖಾನ್ ಬಹದೂರ್ ಕರ್ನಲ್ ಅಬ್ದುಲ್ ಮಜೀದ್ ಖಾನ್, ವಿದೇಶಮಂತ್ರಿ, ಪಾಟಿಯಾಲಾ (ಪಂಜಾಬ್); ಖಾನ್ ಬಹದೂರ್ ಖ್ವಾಜಾ ಕುಸುಫ್ ಶಾಹ, ಗೌರವ ನ್ಯಾಯಾಧೀಶರು, ಅಮತಸರ (ಪಂಜಾಬ್); ಮಿಯಾನ್ ಮಹಮದ್ ಶಫಿ, ಬಾರ್–ಎಟ್–ಲಾ, ಲಾಹೋರ್ (ಪಂಜಾಬ್); ಶೇಕ್

ಅಧಿಕಾರದಲ್ಲಿದ್ದವರಿಗೆ ತಿಳಿಸಲು ಮಾನ್ಯತೆ ಪಡೆದಿದ್ದ ರಾಜಕೀಯ ಅಥವಾ ವಾಣಿಜ್ಯ ಸಂಘಸಂಸ್ಥೆಗಳಿಗಿರುವ ಹಕ್ಕಿಗೆ ನೀಡಿರುವ ಮನ್ನಣೆಯ ಮೂಲಕ ಮತ್ತು ಕ್ರಮೇಣ, ಮುನಿಸಿಪಾಲಿಟಿಗಳಲ್ಲಿ, ಜಿಲ್ಲಾ ಮಂಡಳಿಗಳಲ್ಲಿ ಮತ್ತು ಎಲ್ಲದಕ್ಕೂ ಹೆಚ್ಚಾಗಿ ದೇಶದ ಶಾಸನಸಭೆಗಳಲ್ಲಿ ಜನರ ನೇರ ಪ್ರತಿನಿಧಿಗಳ ಚುನಾವಣೆ ಮತ್ತು ನಾಮನಿರ್ದೇಶನಗಳ ಮೂಲಕ ಈ ತತ್ತ್ವ ಹಂತಹಂತವಾಗಿ ವಿಸ್ತರಿಸಲ್ಪಟ್ಟಿತು. ಈ ಕೊನೆಯ ಕ್ರಮವನ್ನು ಇನ್ನಷ್ಟು ವಿಸ್ತರಿಸುವ ಉದ್ದೇಶದಿಂದ ತಾವು ನೇಮಿಸಿದ ಸಮಿತಿಯೊಂದು ಇದೀಗ ಅದನ್ನು ಪರಿಶೀಲಿಸಲಿದೆ ಎಂದು ನಮಗೆ ತಿಳಿದುಬಂದಿದೆ. ಹೀಗೆ ವಿಸ್ತರಣೆಗೊಂಡ ಪ್ರಾತಿನಿಧ್ಯದಲ್ಲಿ ನಿಷ್ಪಕ್ಷಪಾತಯುತ ಪಾಲನ್ನು ಪಡೆಯಲು ನಮಗಿರುವ ಹಕ್ಕನ್ನು ಮತ್ತು ನಮ್ಮ ಸಮುದಾಯದ ಹಿತಾಸಕ್ತಿಗಳಿಗೆ ಸಂಬಂಧಿಸುವ ಇನ್ನು ಕೆಲವು ಮುಖ್ಯ ವಿಷಯಗಳನ್ನು ಕುರಿತಂತೆ ನಾವು ಪ್ರಸ್ತುತ ಸಂದರ್ಭದಲ್ಲಿ ಮಹಾಪ್ರಭುಗಳನ್ನು ಉದ್ದೇಶಿಸಿ ಸಲ್ಲಿಸಲು ಬಂದಿರುತ್ತೇವೆ.

## ಇದುವರೆಗಿನ ಸಂಪ್ರದಾಯಗಳು

೧೯೦೧ನೇ ವರ್ಷದ ಜನಗಣತಿಯ ಪ್ರಕಾರ, ಭಾರತದ ಮಹಮ್ಮದೀಯರ ಸಂಖ್ಯೆ ಅರವತ್ತೆರಡು ಮಿಲಿಯಕ್ಕೂ ಹೆಚ್ಚು, ಎಂದರೆ ಮಹಾರಾಜರ ಭಾರತೀಯ ಡೊಮಿನಿಯನ್‌ಗಳ ಒಟ್ಟು ಜನಸಂಖ್ಯೆಯ ನಾಲ್ಕರಲ್ಲಿ ಒಂದನೇ ಭಾಗದ ಮತ್ತು ಐದರಲ್ಲಿ ಒಂದನೇ ಭಾಗದ ನಡುವೆ ಇರುವಂಥದ್ದು. ಸರ್ವಚೇತನವಾದಿಗಳು ಮತ್ತು ಇತರ ಸಣ್ಣಪುಟ್ಟ ಧರ್ಮದವರು ಎಂದು ವರ್ಗೀಕರಿಸಲ್ಪಟ್ಟ ಭಾಗಗಳ ಅನಾಗರೀಕ ಜನರ

---

ಗಲಾಮ್ ಸದಿಕ್, ಅಮೃತಸರ (ಪಂಜಾಬ್); ಹಕೀಂ ಮೊಹಮದ್ ಅಜ್ಮಲ್ ಖಾನ್, ದೆಹಲಿ (ಪಂಜಾಬ್), ಮುನ್ಶಿ ಇಹ್ತಿಶಮ್ ಅಲಿ, ಜಮೀನ್ ದಾರ್ ಮತ್ತು ರೈಸ್, ಕೆಕೊರಿ (ಔಧ್); ಸೈಯದ್ ನಬಿ ಉಲ್ಲಾ, ಬಾರ್–ಎಟ್–ಲಾ, ರೈಸ್ ಕರ, ಜಿಲ್ಲೆ ಅಲ್ಲಾಹಾಬಾದ್; ಮೌಲ್ವಿ ಸೈಯದ್ ಕರಾಮತ್ ಹುಸ್ಸೇನ್, ಬಾರ್–ಎಟ್–ಲಾ, ಅಲ್ಲಾಹಾಬಾದ್; ಸೈಯದ್ ಅಬ್ದುಲ್, ರಾಊಫ್, ಬಾರ್–ಎಟ್–ಲಾ, ಅಲ್ಲಾಹಾಬಾದ್; ಮುನ್ಶಿ ಅಬ್ದುರ್ ಸಲಾಮ್ ಖಾನ್, ರಿಟೈರ್ಡ್ ಸಬ್ ಜಡ್ಜ್, ರಾಮಪುರ್; ಖಖಾನ್ ಬಹದೂರ್ ಮೊಹಮದ್ ಮುಜಾಮ್ಮಿಲ್ ಉಲ್ಲಾ ಖಾನ್, ಜಮೀನ್ ದಾರ್, ಕಾರ್ಯದರ್ಶಿ, ಜಮೀನ್‌ದಾರರ ಸಂಘ, ಸಂಯುಕ್ತ ಪ್ರಾಂತ್ಯಗಳು ಮತ್ತು ಜಂಟಿ ಕಾರ್ಯದರ್ಶಿ, ಎಂ.ಎ.ಓ. ಕಾಲೇಜ್ ಟ್ರಸ್ಟೀಸ್ ಅಲಿಗಢ್; ಹಜಿ ಮೊಹಮದ್ ಇಸ್ಮಾಯಿಲ್ ಖಾನ್, ಜಮೀನ್ ದಾರ್, ಅಲಿಗಢ್; ಶಾಹಬ್ ಜದಾಸ್ ಅಫ್ತಾಬ್ ಅಹ್ಮದ್ ಖಾನ್, ಬಾರ್–ಎಟ್–ಲಾ, ಅಲಿಗಢ್; ಮೌಲ್ವಿ ಮುಶ್ತಾಕ್ ಹುಸ್ಸೇನ್, ರೈಸ್, ಅಮ್ರೋಹ, ಸಂಯುಕ್ತ ಪ್ರಾಂತ್ಯಗಳು; ಮೌಲ್ವಿ ಹಬಿಬುಲ್ ರಹಮಾನ್ ಖಾನ್, ಜಮೀನ್ ದಾರ್, ಭಿಖಾನ್ ಪೂರ್, ಸಂಯುಕ್ತ ಪ್ರಾಂತ್ಯಗಳು; ನವಾಬ್ ಸೈಯದ್ ಸರ್ದಾರ್ ಅಲಿ ಖಾನ್, ದಿವಂಗತ ನವಾಬ್ ಸರ್ದಾರ್ ದಿಲೇರ್–ಉಲ್–ಮುಲ್ಕ್ ಬಹದೂರ್, ಸಿ.ಐ.ಇ., ಹೈದರಾಬಾದ್ (ಡೆಕ್ಕನ್)– ಇವರ ಮಗ; ಮೌಲ್ವಿ ಸೈಯದ್ ಮಹ್ದೀ ಅಲ್ಲಿ ಖಾನ್ (ಮುಹ್ಸಿನ್–ಉಲ್–ಮುಲ್ಕ್), ಗೌರವ ಕಾರ್ಯದರ್ಶಿ, ಎಂ.ಎ.ಓ. ಕಾಲೇಜ್, ಅಲಿಗಢ್, ಎತಾವಾ, ಸಂಯುಕ್ತ ಪ್ರಾಂತ್ಯಗಳು.

ಈ ಕೆಳಗಿನ ಮಹನೀಯರು ಮನವಿಯನ್ನು ಸಲ್ಲಿಸುವಾಗ ಹಾಜರಿರಲು ಉದ್ದೇಶಿಸಿದ್ದರೂ, ಅನಾರೋಗ್ಯ ಅಥವಾ ಇತರ ಕಾರಣಗಳಿಂದ ಹಾಜರಿರಲಿಲ್ಲ– ಸನ್ಮಾನ್ಯ ನವಾಬ್ ಖ್ವಾಜಾ ಸಲಿಮುಲ್ಲಾ, ಡಾಕ್ಕಾದ ನವಾಬರು; ಸನ್ಮಾನ್ಯ ನವಾಬ್ ಹಾಜಿ ಮೊಹಮದ್ ಫತೇ ಅಲಿಖಾನ್, ಖಾಜೆಲ್ ಬಾಶ್, ಲಾಹೋರ್; ಸನ್ಮಾನ್ಯ ಸೈಯದ್ ಜೈಮಲ್–ಎದ್ರೊಸ್, ಸೂರತ್, ಖಾನ್ ಬಹದೂರ್ ಕಾಸಿಮ್ ಮಿರ್ ಫಯಾಸುದ್ದಿನ್ ಪೀರ್ ಜಾದಾಹ, ಬ್ರೋಚ್; ಖಾನ್ ಬಹದೂರ್ ರಾಜಾ ಜಹಾನ್ ದಾದ್, ಹಜಾರಾ, ಶೇಕ್ ಶಾಹಿದ್ ಹುಸೇನ್, ಲಕ್ನೊ.

'ಟೆಲಿಗ್ರಾಫ್'ನ ವರದಿಗಾರ ಮುಂದುವರಿಯುತ್ತಾ ಹೀಗೆ ಹೇಳುತ್ತಾರೆ:– ಲೇಡಿ ಮಿಂಟೊ, ಲೇಡಿ ಎಲಿಯಟರು ಹಾಗೂ ಸನ್ಮಾನ್ಯ ಶ್ರೀಮತಿ ಹೆವೆಟ್ ಅವರು ಸಮಾರಂಭದಲ್ಲಿ ಹಾಜರಿದ್ದರು.

ಮನವಿಯನ್ನು ಅರ್ಪಿಸುವ ಇಂದಿನ ಸಮಾರಂಭದಲ್ಲಿ ಹೆಚ್ಚಿನ ಪ್ರತಿನಿಧಿಗಳು ಯುರೋಪಿಯನ್ ಉಡುಗೆಯಲ್ಲಿದ್ದು, ವಿಶಿಷ್ಟ

ಭಾಗವನ್ನು, ಹಾಗೂ ಕಟ್ಟುನಿಟ್ಟಾಗಿ ಹೇಳುವುದಾದರೆ ಹಿಂದೂಗಳಲ್ಲದಿದ್ದರೂ ಹಿಂದೂಗಳೆಂದು ವರ್ಗೀಕರಿಸಲ್ಪಟ್ಟವರನ್ನು ಬಿಟ್ಟರೆ, ಎಂದೂ ಬಹುಮತೀಯರಿಗೆ ಸಂಬಂಧಿಸಿದಂತೆ ಮಹಮ್ಮದೀಯರ ಅನುಪಾತ ಇನ್ನೂ ಹೆಚ್ಚಾಗುತ್ತದೆ. ಆದುದರಿಂದ, ವಿಸ್ತರಿಸಲ್ಪಟ್ಟ ಅಥವಾ ಸೀಮಿತಗೊಳಿಸಲ್ಪಟ್ಟ ಪ್ರಾತಿನಿಧ್ಯದ ಯಾವುದೇ ವ್ಯವಸ್ಥೆಯಲ್ಲಿ, ಅದಷ್ಟನ್ನೇ ಪರಿಗಣಿಸಿದರೆ, ರಶಿಯಾವನ್ನು ಉಳಿದು ಇತರ ಯಾವುದೇ ಪ್ರಥಮ ದರ್ಜೆಯ ಯುರೋಪಿಯನ್ ರಾಷ್ಟ್ರದ ಒಟ್ಟು ಜನಸಂಖ್ಯೆಗಿಂತ ಹೆಚ್ಚು ಸಂಖ್ಯೆಯಲ್ಲಿರುವ ಒಂದು ಸಮುದಾಯ ರಾಜ್ಯದ ಒಂದು ಮುಖ್ಯ ಅಂಶವೆನಿಸಿ ಸಾಕಷ್ಟು ಮಾನ್ಯತೆಯನ್ನು ಪಡೆಯಬೇಕೆಂದು ಹಕ್ಕಿನಿಂದ ಕೋರುವುದು ನ್ಯಾಯವಾಗಿದೆ ಎಂದು ನಿವೇದಿಸಲು ಬಯಸುತ್ತೇವೆ.

ಮಹಾಪ್ರಭುಗಳ ಅನುಮತಿಯಿಂದ ಇನ್ನೊಂದು ಹೆಜ್ಜೆ ಮುಂದೆ ಹೋಗಿ, ಯಾವುದೇ ಬಗೆಯ ಪ್ರತ್ಯಕ್ಷ ಅಥವಾ ಪರೋಕ್ಷ ಪ್ರಾತಿನಿಧ್ಯದಲ್ಲಿ ಮತ್ತು ಅವರ ಸ್ಥಾನಮಾನ ಹಾಗೂ ಶಕ್ತಿಯ ಮೇಲೆ ಪ್ರಭಾವ ಬೀರುವ ಇತರ ಎಲ್ಲಾ ರೀತಿಗಳಲ್ಲಿ ಮಹಮ್ಮದೀಯ ಸಮುದಾಯಕ್ಕೆ ಕೊಡುವ ಸ್ಥಾನ ಅವರ ಸಂಖ್ಯಾಬಲಕ್ಕೆ ಮಾತ್ರವಲ್ಲ, ಅವರ ರಾಜಕೀಯ ಗಣ್ಯತೆಗೂ, ಸಾಮ್ರಾಜ್ಯದ ರಕ್ಷಣೆಗೆ ಅವರು ನೀಡುವ ಕೊಡುಗೆಯ ಮೌಲ್ಯಕ್ಕೂ ಅನುಗುಣವಾಗಿರಬೇಕು ಎಂದು ನಾವು ಒತ್ತಾಯಿಸುತ್ತೇವೆ. ಈ ವಿಷಯದಲ್ಲಿ, ಒಂದು ನೂರು ವರ್ಷಗಳಿಗಿಂತ ಸ್ವಲ್ಪ ಹಿಂದಿನ ಅವಧಿಯಲ್ಲಿ ಅವರು ಭಾರತದಲ್ಲಿ ಹೊಂದಿದ್ದ ಸ್ಥಾನಮಾನವನ್ನು– ಈ ಸ್ಥಾನಮಾನದ ಸಂಪ್ರದಾಯಗಳು ಸಹಜವಾಗಿ ಅವರ ಮನಸ್ಸಿನಲ್ಲಿ ಇನ್ನೂ ಹಸಿಯಾಗಿವೆ– ಮಹಾಪ್ರಭುಗಳು ಸೂಕ್ತಪ್ರಮಾಣದಲ್ಲಿ ಪರಿಭಾವಿಸಲಿದ್ದಾರೆ ಎಂದು ನಾವು ನಂಬುತ್ತೇವೆ.

ತಮ್ಮ ಆಳರಸರ ನ್ಯಾಯಪ್ರಜ್ಞೆಯ ಮೇಲೆ ಮತ್ತು ನಿಷ್ಪಕ್ಷಪಾತಯುತವಾದ ಅವರ ವ್ಯವಹಾರ ರೀತಿಯ ಮೇಳೆ ಭಾರತದ ಮಹಮ್ಮದೀಯರು ಯಾವಾಗಲೂ ದೃಢವಾದ ನಂಬಿಕೆಯನ್ನು ಇಟ್ಟಿದ್ದಾರೆ. ಇದರ ಪರಿಣಾಮವಾಗಿ ತಮ್ಮ ಹಕ್ಕಿನ ಕೋರಿಕೆಗಳನ್ನು ಪಡೆಯಲು ಮುಜುಗರ ಉಂಟುಮಾಡುವಂಥವು ಎಂದೆನಿಸಬಹುದಾದ ಯಾವುದೇ ವಿಧಾನಗಳನ್ನು ಅವರು ಬಳಸಿಲ್ಲ. ಇಂಥ ಶ್ರೇಷ್ಠ ಹಾಗೂ ಕಾಲಾನುಕಾಲದಿಂದ ಗೌರವಾನ್ವಿತ ಸಂಪ್ರದಾಯವನ್ನು ಬಿಟ್ಟು ಭವಿಷ್ಯತ್ತಿನಲ್ಲಿ ಭಾರತದ ಮಹಮ್ಮದೀಯರು ಬೇರೆ ದಾರಿ

---

ಗುರುತಾಗಿ ತಲೆಗೆ ತುರ್ಕಿ ಟೋಪಿಯನ್ನು ಹಾಕಿದ್ದರು. ಆದರೆ ಪಾಟಿಯಾಲದ ಪ್ರತಿನಿಧಿಗಳು, ಲೆಫ್ಟನೆಂಟ್ ಸನ್ಮಾನ್ಯ ಮಲಿಕ್ ಉಮರ್ ಹಯತ್ ಖಾನ್, ಖಾನ್ ಬಹದೂರ್ ಅಲಿ ಚೌಧರಿ, ಖಾನ್ ಬಹದೂರ್ ಅಹ್ಮದ್ ಮೊಹಿಯುದ್ದಿನ್ ಖಾನ್, ಮತ್ತು ಇನ್ನು ಕೆಲವರು ಭಾರತೀಯ ಉಡುಪಿನಲ್ಲಿದ್ದರು; ಇನ್ನು ಕೆಲವರು ಚಿನ್ನದ ಕಲಾಪತ್ತಿನ ಸಮವಸ್ತ್ರದಲ್ಲಿದ್ದರು. ಘನತೆವೆತ್ತ ವೈಸರಾಯ್ ಅವರು ಪ್ರಾತಃ ಕಾಲದ ಉಡುಪಿನಲ್ಲಿದ್ದು, ತನ್ನ ನಿಲುವಂಗಿಯ ಮೇಲೆ ಸ್ಟಾರ್ ಆಫ್ ಇಂಡಿಯಾ ಎಂಬ ಗೌರವ ವರ್ಗದ ಲಾಂಛನವನ್ನು ಧರಿಸಿದ್ದರು.

ವೈಸರಾಯ ನಿವಾಸದಲ್ಲಿ ಉದ್ಯಾನೋಪಹಾರ

ಇಂದು ಅಪರಾಹ್ನ ವೈಸರಾಯರ ನಿವಾಸದ ಪ್ರಾಂಗಣದಲ್ಲಿ ಒಂದು ಉದ್ಯಾನೋಪಹಾರವನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ಮಹಮ್ಮದೀಯ ಪ್ರತಿನಿಧಿಗಳನ್ನು ವೈಸರಾಯರು ಸ್ವಾಗತಿಸಿ ಒಬ್ಬೊಬ್ಬ ಪ್ರತಿನಿಧಿಯ ಜೊತೆ ವೈಯಕ್ತಿಕವಾಗಿ ಮಾತನಾಡಿದರು.

ಹಣಕಾಸು ಕಾರ್ಯದರ್ಶಿಯಾಗಿರುವ ಸನ್ಮಾನ್ಯ ಶ್ರೀ ಬೇಕರ್ ಅವರು ಮಹಮ್ಮದೀಯ ನಿಯೋಗದ ಬಂಗಾಳದ ಈ ಕೆಳಗಿನ ಮಹನೀಯರನ್ನು ನಾಳೆ ಮಧ್ಯಾಹ್ನದ ಭೋಜನಕ್ಕೆ ಆಹ್ವಾನಿಸಿದ್ದಾರೆ:–

ನವಾಬ್ ಅಮಿರ್ ಹೊಸೈನ್, ಮಿರ್ಜಾ ಶುಜತ್ ಅಲಿ, ನವಾಬ್ ನಸರ್ ಹೊಸ್ಸೈನ್, ಸನ್ಮಾನ್ಯ ಶುರ್ಫುದ್ದಿನ್ ಮತ್ತು ಅಲಿ ಇಮಾಮ್.

ಹಿಡಿಯಬಾರದೆಂಬುದು ನಮ್ಮ ಅತ್ಯಂತ ಕಳಕಳಿಯ ಅಪೇಕ್ಷೆಯಾಗಿದೆ. ಹೀಗಿದ್ದರೂ, ಇತ್ತೀಚಿನ ಕೆಲವು ಘಟನೆಗಳು ಹಲವು ಭಾವೋದ್ವೇಗಗಳನ್ನು– ವಿಶೇಷತಃ ಮಹಮ್ಮದೀಯರ ತರುಣ ತಲೆಮಾರಿನಲ್ಲಿ– ಹೊಡೆದೆಬ್ಬಿಸಿವೆ. ವಿಶಿಷ್ಟ ಸನ್ನಿವೇಶಗಳಲ್ಲಿ ಹಾಗೂ ವಿಶಿಷ್ಟ ಸಂದರ್ಭಗಳಲ್ಲಿ ಈ ಭಾವೋದ್ವೇಗಗಳು ಅತಿರೇಕರಹಿತ ಬುದ್ಧಿವಾದವನ್ನೂ ಸಂಯಮಿ ಮಾರ್ಗದರ್ಶನವನ್ನೂ ಸುಲಭವಾಗಿ ಮೀರಿಹೋಗುವ ಸಾಧ್ಯತೆ ಉಂಟು.

ಆದುದರಿಂದ ಭಾರತದ ಎಲ್ಲಾ ಭಾಗಗಳಲ್ಲಿರುವ ನಮ್ಮ ಅನೇಕಾನೇಕ ಸಹ–ಧರ್ಮಾನುಯಾಯಿಗಳ ಅಭಿಪ್ರಾಯಗಳನ್ನು ಮತ್ತು ಅಪೇಕ್ಷೆಗಳನ್ನು ಜಾಗರೂಕವಾಗಿ ಪರಿಭಾವಿಸಿದ ಮೇಲೆ, ಮಹಾಪ್ರಭುಗಳಿಗೆ ಸಲ್ಲಿಸುವ ಈ ಅಹವಾಲುಗಳನ್ನು ಮಹಾಪ್ರಭುಗಳು ಮನಃಪೂರ್ವಕವಾಗಿ, ಗಮನವಿಟ್ಟು ಪರಿಶೀಲಿಸುವಂತೆ ದಯಮಾಡಬೇಕು ಎಂದು ಪ್ರಾರ್ಥಿಸುತ್ತೇವೆ.

## ಯುರೋಪಿಯನ್ ಪ್ರಾತಿನಿಧಿಕ ಸಂಸ್ಥೆಗಳು

ಯುರೋಪಿಯನ್ ಮಾದರಿಯ ಪ್ರಾತಿನಿಧಿಕ ಸಂಸ್ಥೆಗಳು ಭಾರತೀಯರಿಗೆ ಹೊಚ್ಚಹೊಸವು ಎಂದು ಮೊದಲೇ ಹೇಳಿದರೆ ಮಹಾಪ್ರಭುಗಳು ನಮ್ಮನ್ನು ಕ್ಷಮಿಸುವರು ಎಂದು ನಾವು ಭಾವಿಸುತ್ತೇವೆ; ವಾಸ್ತವವಾಗಿ, ಭಾರತದಲ್ಲಿರುವ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಸ್ಥಿತಿಗತಿಗಳಿಗೆ ಅವುಗಳನ್ನು ಯಶಸ್ವಿಯಾಗಿ ಹೊಂದಿಸಿಕೊಳ್ಳಬೇಕಾದರೆ ಅತ್ಯಂತ ಹೆಚ್ಚಿನ ಜಾಗರೂಕತೆಯ, ಮುಂದಾಲೋಚನೆಯ ಮತ್ತು ಎಚ್ಚರಿಕೆಯ ಅಗತ್ಯವಿದೆ ಎಂದು ನಮ್ಮ ಸಮುದಾಯದ ಹೆಚ್ಚು ಚಿಂತನಶೀಲ ಜನರಲ್ಲಿ ಅನೇಕರು ಪರಿಗಣಿಸುತ್ತಾರೆ. ಇಂಥ ಜಾಗರೂಕತೆ ಮತ್ತು ಎಚ್ಚರ ಇಲ್ಲದಿದ್ದರೆ ಅವುಗಳನ್ನು ಬಳಸಿಕೊಳ್ಳುವುದರಿಂದ, ಅನೇಕ ಅನರ್ಥಗಳ ಜೊತೆಗೆ, ರಾಷ್ಟ್ರೀಯ ಹಿತಾಸಕ್ತಿಗಳನ್ನು ಅನುಕಂಪೆಯಿಲ್ಲದ ಒಂದು ಬಹುಮತೀಯರ ಸಂಪೂರ್ಣ ಅಧೀನದಲ್ಲಿ ಬಿಟ್ಟಂತಾಗುವುದು. ಆದರೆ, ಕಾಲಾನುಕಾಲದಿಂದ ತಮ್ಮದಾಗಿರುವ ಸಂಪ್ರದಾಯಗಳಿಗೆ ಮತ್ತು ಸಹಜ ಪ್ರವೃತ್ತಿಗಳಿಗೆ ಅನುಗುಣವಾಗಿ ನಮ್ಮ ಆಳರಸರು ಈ ಸಂಸ್ಥೆಗಳಿಗೆ ದೇಶದ ಆಡಳಿತದಲ್ಲಿ ಹೆಚ್ಚು ಹೆಚ್ಚು ಪ್ರಮುಖ ಸ್ಥಾನವನ್ನು ಕೊಡುವುದು ಅಗತ್ಯ ಎಂದು ಕಂಡುಕೊಂಡಿದ್ದರಿಂದ, ಮಹಮ್ಮದೀಯರಾದ ನಾವು, ನಮ್ಮ ಸ್ವಂತ ರಾಷ್ಟ್ರೀಯ ಹಿತಾಸಕ್ತಿಗಳ ದೃಷ್ಟಿಯಿಮದ ನಮ್ಮ ಆಳರಸರ ಧೋರಣೆಗಳು ಉಂಟುಮಾಡಿದ ಪರಿಸ್ಥಿತಿಯಲ್ಲಿ ಭಾಗವಹಿಸದೆ ಇನ್ನೂ ಬೇರೆಯಾಗಿ ಉಳಿಯುವುದು ನ್ಯಾಯವಾದ ವರ್ತನೆಯಾಗಲಾರದು. ಆದುದರಿಂದ, ಇದುವರೆಗೆ ಭಾರತದ ಮಹಮ್ಮದೀಯರು ಅನುಭೋಗಿಸುತ್ತಿದ್ದ ಪ್ರಾತಿನಿಧ್ಯ ನಮಗೆ ಲಭಿಸಿರುವುದು ಮಹಾಪ್ರಭುಗಳ ಮತ್ತು ಈ ಹುದ್ದೆಯಲ್ಲಿ ತಮ್ಮ ಕೀರ್ತಿವಂತ ಪೂರ್ವಾಧಿಕಾರಿಗಳಾಗಿದ್ದವರ ನ್ಯಾಯ ಹಾಗೂ ನಿಷ್ಪಕ್ಷಪಾತಪ್ರಜ್ಞೆಯ ಕಾರಣದಿಂದ, ಹಾಗೂ ಶಾಸನಸಭೆಗಳಿಗೆ ಮಹಮ್ಮದೀಯ ಸದಸ್ಯರನ್ನು ಹೆಚ್ಚುಕಡಿಮೆ ಯಾವಾಗಲೂ ನಾಮನಿರ್ದೇಶನ ಮಾಡಿದ್ದ ಸ್ಥಳೀಯ ಸರಕಾರಗಳ ಮುಖ್ಯಸ್ಥರ ದೆಸೆಯಿಂದ ಎಂಬುದನ್ನು ಕೃತಜ್ಞತಾಪೂರ್ವಕವಾಗಿ ಒಪ್ಪಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ಆದರೂ, ಹೀಗೆ ನಮಗೆ ಕೊಡಮಾಡಿದ ಪ್ರಾತಿನಿಧ್ಯ ನಮ್ಮ ಅಗತ್ಯಗಳಿಗೆ ಸಾಕಷ್ಟು ಪ್ರಮಾಣದದ್ದಾಗಿರಲಿಲ್ಲವೆಂದೂ, ನಾಮನಿರ್ದೇಶಿತರು ಯಾರನ್ನು ಪ್ರತಿನಿಧಿಸಲೆಂದು ಹೇಳದೆ ವಿಧಿಯಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಇಂಥ ಒಂದು ಸ್ಥಿತಿ ಬಹುಶಃ ಅನಿವಾರ್ಯವಾಗಿತ್ತು. ಏಕೆಂದರೆ, ವೈಸರಾಯ್ ಮತ್ತು ಸ್ಥಳೀಯ ಸರಕಾರಗಳಿಗೆಂದು ಮೀಸಲಿರಿಸಿದ್ದ ನಾಮನಿರ್ದೇಶನಗಳ ಸಂಖ್ಯೆ ಅವಶ್ಯಕವಾಗಿ ತೀವ್ರ ಮಿತಿಗೊಳಪಟ್ಟಿದ್ದು ಒಂದೆಡೆಯಾದರೆ, ಇನ್ನೊಂದೆಡೆ, ಜನಪ್ರಿಯ ಆಯ್ಕೆಯ ದಿಕ್ಕನ್ನು ಅರಿತುಕೊಳ್ಳುವ ವಿಶ್ವಾಸಾರ್ಹ ವಿಧಾನದ ಅನುಪಸ್ಥಿತಿಯಲ್ಲಿ, ನಿಜಕ್ಕೂ ಪ್ರಾತಿನಿಧಿಕ ವ್ಯಕ್ತಿಗಳನ್ನು ಆಯ್ಕೆ ಮಾಡುವ ಕೆಲಸವೂ ಅತ್ಯಂತ ಕಷ್ಟದಾಯಕವಾಗಿತ್ತು.

## ಚುನಾವಣೆಯ ಫಲಿತಾಂಶಗಳು

ಚುನಾವಣೆಯ ಫಲಿತಾಂಶಗಳನ್ನು ಕುರಿತು ಹೇಳುವುದಾದರೆ, ಈಗಿರುವ ಚುನಾಯಕಾ ಸಂಸ್ಥೆಗಳು, ಈಗಿರುವ ಸ್ಥಿತಿಯಲ್ಲಿ, ಯಾವುದೇ ಒಬ್ಬ ಮಹಮ್ಮದೀಯ ಅಭ್ಯರ್ಥಿಯ ಹೆಸರನ್ನು ಸರಕಾರದ ಅನುಮೋದನೆಗೆ ಕಳಿಸಿ ಕೊಡುವುದು ತೀರಾ ಅಸಂಭವವೆನಿಸುತ್ತದೆ: ಇಂಥ ಅಭ್ಯರ್ಥಿ ಬಹುಮತೀಯರೊಡನೆ ಎಲ್ಲಾ ಮುಖ್ಯ ವಿಷಯಗಳ ಬಗೆಗೆ ಒಮ್ಮನಸ್ಸಿನವನಾಗಿದ್ದರೆ ಮಾತ್ರ ಇದು ಸಾಧ್ಯ. ತಮ್ಮ ಬಹುಸಂಖ್ಯೆಯ ಪೂರ್ಣ ಪ್ರಯೋಜನ ಪಡೆಯಲು, ಮತ್ತು ತಮ್ಮ ಸಮುದಾಯದ ವ್ಯಕ್ತಿಗಳನ್ನೇ ಅಥವಾ ಆ ವ್ಯಕ್ತಿಗಳು ಹಿಂದೂಗಳಲ್ಲದಿದ್ದರೆ, ಬರಲಿರುವ ಚುನಾವಣೆಗಳಲ್ಲಿ ತಾವು ಪುನಃ ಆಯ್ಕೆಗೊಳ್ಳಲು ಯಾವ ಹಿಂದೂ ಬಹುಸಂಖ್ಯಾತರ ಸಹಕಾರವನ್ನು ಆಶ್ರಯಿಸಬೇಕೋ ಆ ಹಿಂದೂಗಳ ಇಷ್ಟಕ್ಕೆ ಅನುಗುಣವಾಗಿ ಮತ ಹಾಕುವಂಥವರನ್ನು ಮಾತ್ರ ಆರಿಸುವ ನಮ್ಮ ಮುಸ್ಲಿಮೇತರ ಸಹ–ಪ್ರಜೆಗಳ ಅಭೀಷ್ಟವನ್ನು ತಪ್ಪು ಎಂದು ನಾವು ತಿಳಿದುಕೊಳ್ಳುವುದು ನ್ಯಾಯವಾಗದು. ನಮಗೂ ನಮ್ಮ ಹಿಂದೂ ದೇಶ–ಬಾಂಧವರಿಗೂ ಸಾಮಾನ್ಯವಾಗಿರುವ ಮತ್ತು ಮುಖ್ಯವಾಗಿರುವ ಹಲವು ಹಿತಾಸಕ್ತಿಗಳು ಇವೆ ಎಂಬುದು ನಿಜ. ಈ ಹಿತಾಸಕ್ತಿಗಳ ಶಕ್ತ ಸಮರ್ಥಕರು– ಅವರು ಯಾವ ರಾಷ್ಟ್ರದವರೇ ಆಗಲಿ– ಇವುಗಳನ್ನು ರಕ್ಷಿಸುವುದಕ್ಕೋಸ್ಕರ ನಮ್ಮ ಶಾಸನಸಭೆಗಳಲ್ಲಿ ಹಾಜರಿರುತ್ತಾರೆ ಎಂಬುದನ್ನು ನೋಡುತ್ತಿರುವುದು ನಮಗೆ ಯಾವಾಗಲೂ ಒಂದು ಅತೀವ ತೃಪ್ತಿಯ ವಿಷಯವಾಗಿ ಇರುವುದು.

## ಒಂದು ಪ್ರತ್ಯೇಕ ಸಮುದಾಯ

ಹೀಗಿದ್ದರೂ, ನಾವು ಮಹಮ್ಮದೀಯರು ಒಂದು ಪ್ರತ್ಯೇಕ ಹಾಗೂ ವಿಶಿಷ್ಟ ಸಮುದಾಯವೆಂಬುದನ್ನೂ, ಈ ಸಮುದಾಯಕ್ಕೆ ತನ್ನದೇ ಆಗಿದ್ದು ಇತರರ ಜೊತೆ ಹಂಚಿಕೊಂಡಿರದ ಹೆಚ್ಚುವರಿ ಹಿತಾಸಕ್ತಿಗಳಿವೆಯೆಂಬುದನ್ನೂ, ಇದುವರೆಗೆ ಸೂಕ್ತ ಪ್ರಮಾಣದ ಪ್ರಾತಿನಿಧ್ಯ ಸಿಗದಿದ್ದುದರಿಂದ ಈ ಹಿತಾಸಕ್ತಿಗಳಿಗೆ ಧಕ್ಕೆ ಬಂದಿದೆ ಎಂಬುದನ್ನೂ ಅಲ್ಲಗಳೆಯಲಾಗದು. ಮಹಮ್ಮದೀಯರು ಸ್ಪಷ್ಟವಾಗಿ ಜನಸಂಖ್ಯೆಯ ಬಹುಭಾಗದಲ್ಲಿರುವ ಪ್ರಾಂತ್ಯಗಳಲ್ಲಿಯೂ, "ಲೆಕ್ಕಕ್ಕೆ ಬಾರದಷ್ಟು ಅಲ್ಪಪ್ರಮಾಣದ ರಾಜಕೀಯ ಅಂಶಗಳು ಇವರು, ಇವರನ್ನು ಅವಗಣಿಸುವುದು ಪಕ್ಷಪಾತವೇನಾಗುವುದಿಲ್ಲ" ಎಂಬಂತೆ ಅವರನ್ನು ನಡೆಸಿಕೊಂಡಿದ್ದಾರೆ. ಪಂಜಾಬಿನಲ್ಲಿ, ಸ್ವಲ್ಪಮಟ್ಟಿಗೆ ಹೀಗಾಗಿದೆ, ಆದರೆ ಹೆಚ್ಚು ಪ್ರಮಾಣದಲ್ಲಿ ಸಿಂಧ್ ಮತ್ತು ಪೂರ್ವ ಬಂಗಾಳದಲ್ಲಿ ಹೀಗಾಗಿದೆ.

ಪ್ರತಿನಿಧಿಗಳ ಚುನಾವಣೆಗೆ ಸಂಬಂಧಿಸಿದಂತೆ ನಮ್ಮ ಅಭಿಪ್ರಾಯಗಳನ್ನು ಸೂತ್ರೀಕರಿಸುವ ಮೊದಲು, ಒಂದು ಸಮುದಾಯದ ರಾಜಕೀಯ ಪ್ರಾಮುಖ್ಯ ಸಮುದಾಯದ ಸದಸ್ಯರು ರಾಜ್ಯದ ಸೇವೆಯಲ್ಲಿ ಪಡೆದಿರುವ ಸ್ಥಾನಮಾನವನ್ನು ಬಹಳವಾಗಿ ಅವಲಂಬಿಸಿ ಬಲವಾಗುತ್ತಿದೆ ಅಥವಾ ಹಿನ್ನಡೆಯುತ್ತದೆ ಎಂಬುದನ್ನು ಹೇಳಬಯಸುತ್ತೇವೆ. ಮಹಮ್ಮದೀಯರ ವಿಷಯದಲ್ಲಿ ದುರದೃಷ್ಟವಶಾತ್ ಆದಂತೆ, ಆ ಸಮುದಾಯಕ್ಕೆ ಈ ಬಗೆಯ ಪ್ರಾತಿನಿಧ್ಯ ಸಾಕಷ್ಟು ಪ್ರಮಾಣದಲ್ಲಿ ಇಲ್ಲವಾದರೆ, ನ್ಯಾಯವಾಗಿ ಅವರಿಗೆ ಸಿಗಬೇಕಾದ ಪ್ರತಿಷ್ಠೆ ಪ್ರಭಾವಗಳು ಅವರ ಪಾಲಿಗೆ ನಷ್ಟವಾಗುತ್ತದೆ.

## ಸರಕಾರಿ ಸೇವೆಯಲ್ಲಿ ನೇಮಕಾತಿ

ಆದುದರಿಂದ ಎಲ್ಲ ಭಾರತೀಯ ಪ್ರಾಂತ್ಯಗಳ ಗೆಜೆಟ್ಟೆಡ್ ಹಾಗೂ ಅಧೀನ ಮತ್ತು ಲಿಪಿಕ (ಗುಮಾಸ್ತಿಕೆಯ) ಸೇವೆಗಳಲ್ಲಿ ಒಂದು ಸೂಕ್ತ ದಾಮಾಷಾದ ಮಹಮ್ಮದೀಯರು ಯಾವಾಗಲೂ ಇರತಕ್ಕದೆಂದು ವ್ಯವಸ್ಥೆ ಮಾಡುವಂತೆ ಸರಕಾರ ಅನುಗ್ರಹಿಸಬೇಕೆಂದು ಪ್ರಾರ್ಥಿಸುತ್ತೇವೆ. ಇಂಥ ಅರ್ಥ ಬರುವ ಆಜ್ಞೆಗಳನ್ನು ಕೆಲವು ಪ್ರಾಂತ್ಯಗಳಲ್ಲಿ ಸ್ಥಳೀಯ ಸರಕಾರ ಕೆಲವೊಮ್ಮೆ ಹೊರಡಿಸಿದೆಯಾದರೂ ಅರ್ಹ ಮಹಮ್ಮದೀಯರು ಇಲ್ಲವೆಂಬ ಕಾರಣವನ್ನು ಮುಂದೊಡ್ಡಿ ಈ ಆಜ್ಞೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದುದಿಲ್ಲ. ಈ ಆಪಾದನೆ, ಒಂದು ಕಾಲದಲ್ಲಿ ಅದು ಎಷ್ಟೇ ಸತ್ಯವಾಗಿದ್ದರೂ, ಈಗ ಸತ್ಯವಲ್ಲದ ಆಪಾದನೆಯಾಗಿದೆ ಎಂದು ನಾವು ಬಿನ್ನವಿಸಿಕೊಳ್ಳುತ್ತೇವೆ. ತಮ್ಮನ್ನು ನೇಮಕ ಮಾಡುವ ಉದ್ದೇಶದ ಕೊರತೆ ಇಲ್ಲದ ಕಡೆಗಳಲ್ಲೆಲ್ಲಾ, ಅರ್ಹ ಮಹಮ್ಮದೀಯರ ಪೂರೈಕೆ ಬೇಡಿಕೆಗೆ ಸಮಾನವಾಗಿದೆ ಎಂದು ಮಹಾಪ್ರಭುಗಳಿಗೆ ಆಶ್ವಾಸನೆ ನೀಡಲು ನಮಗೆ ಸಾಧ್ಯವಾಗುತ್ತಿದೆ ಎಂಬುದು ಸಂತೋಷದ ಸಂಗತಿ.

## ಸ್ಪರ್ಧಾತ್ಮಕ ಅಂಶ

ಆದರೆ, ಅರ್ಹ ಮಹಮ್ಮದೀಯ ಅಭ್ಯರ್ಥಿಗಳ ಸಂಖ್ಯೆ ಹೆಚ್ಚಿರುವುದರಿಂದ, ಹೆಚ್ಚು ಉತ್ತಮ ಅರ್ಹತೆಗಳಿಗೆ ಮೊದಲನೇ ಅವಕಾಶ ಕೊಡಬೇಕೆಂಬ ಕಾರಣವನ್ನು ಮುಂದೊಡ್ಡಿ ಅವರನ್ನು ನಿರಾಕರಿಸುವಂಥ ಒಂದು ಪ್ರವೃತ್ತಿ, ದುರದೃಷ್ಟವಶಾತ್ ಗೋಚರವಾಗುತ್ತಿದೆ. ಇದರಿಂದ ಸ್ಪರ್ಧಾತ್ಮಕತೆಯನ್ನು ಅದರ ಅತ್ಯಂತ ಕೆಟ್ಟ ರೂಪದಲ್ಲಿ ತಂದಿಟ್ಟಂತಾಗುತ್ತದೆ. ಎಲ್ಲಾ ಅಧಿಕೃತ ಪ್ರಭಾವ ಒಂದೇ ವರ್ಗದವರ ಏಕಸ್ವಾಮ್ಯಕ್ಕೆ ಒಳಪಡುವುದು ರಾಜಕೀಯವಾಗಿ ಯಾವ ಅರ್ಥವನ್ನು ಪಡೆಯುತ್ತದೆ ಎಂಬುದರ ಕಡೆ ಮಹಾಪ್ರಭುಗಳ ಗಮನವನ್ನು ಸೆಳೆಯಲು ಅನುಮತಿ ಕೊಡಬೇಕು. ಇದೇ ಸಂದರ್ಭದಲ್ಲಿ ತಮ್ಮ ಸಮುದಾಯದಲ್ಲಿ ವಿದ್ಯಾಭ್ಯಾಸ ಚಳವಳಿ ಆರಂಭವಾದಂದಿನಿಂದ ಮಹಮ್ಮದೀಯ ಶಿಕ್ಷಣತಜ್ಞರು ವ್ಯಕ್ತಿತ್ವವನ್ನು ವಿಕಾಸಗೊಳಿಸಲು ವಿಶೇಷ ಶ್ರಮವನ್ನು ವಹಿಸಿದರು ಎಂಬುದನ್ನೂ ಹೇಳಬೇಕೆಂದೆನಿಸುತ್ತದೆ. ಉತ್ತಮ ಸರಕಾರಿ ನೌಕರರನ್ನು ತಯಾರು ಮಾಡುವುದರಲ್ಲಿ ಇದು ಕೇವಲ ಬೌದ್ಧಿಕ ಚುರುಕಿಗಿಂತ ಹೆಚ್ಚು ಮಹತ್ವದ್ದು ಎಂದು ಭಾವಿಸುವ ಧೈರ್ಯ ನಮಗಿದೆ.

## ನ್ಯಾಯಪೀಠದಲ್ಲಿ ಮಹಮ್ಮದೀಯರು

ಉಚ್ಚ ನ್ಯಾಯಾಲಯಗಳಿಗೂ ಮುಖ್ಯ ನ್ಯಾಯಾಲಯಗಳಿಗೂ ಇನ್ನೂ ಹೆಚ್ಚಾಗಿ ಮಹಮ್ಮದೀಯ ನ್ಯಾಯಾಧೀಶರನ್ನು ನೇಮಿಸುತ್ತಿಲ್ಲ ಎಂಬ ವಿಚಾರದಲ್ಲಿ ಭಾರತದ ಎಲ್ಲಾ ಭಾಗಗಳಲ್ಲಿರುವ ಹೆಚ್ಚಿನ ಮಹಮ್ಮದೀಯರು ಅಸಂತುಷ್ಟರಾಗಿದ್ದಾರೆ ಎಂದು ನಿವೇದಿಸುವ ಧೈರ್ಯ ತೆಗೆದುಕೊಳ್ಳುತ್ತೇವೆ. ಈ ನ್ಯಾಯಾಲಯಗಳು ಸ್ಥಾಪನೆಯಾದ ಮೇಲೆ ಕೇವಲ ಮೂವರೇ ಮಹಮ್ಮದೀಯ ವಕೀಲರು ಈ ಸನ್ಮಾನ್ಯ ಹುದ್ದೆಗಳಲ್ಲಿದ್ದರು. ಮೂವರೂ ನ್ಯಾಯಪೀಠದಲ್ಲಿ ತಾವು ಪಡೆದ ನೇಮಕಾತಿಯನ್ನು ಸಂಪೂರ್ಣವಾಗಿ ಸಮರ್ಥಿಸುವ ರೀತಿಯಲ್ಲಿ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಇಂಥ ಯಾವುದೇ ನ್ಯಾಯಾಲಯದ ಪೀಠದಲ್ಲಿ ಒಬ್ಬರೇ ಒಬ್ಬ ಮಹಮ್ಮದೀಯ ನ್ಯಾಯಾಧೀಶರೂ ಇಲ್ಲ, ಆದರೆ ಜನಸಂಖ್ಯೆಯಲ್ಲಿ ಮಹಮ್ಮದೀಯ ದಾಮಾಷಾ ಅತ್ಯಧಿಕವಾಗಿರುವ ಕಲಕತ್ತೆಯ ಉಚ್ಚ ನ್ಯಾಯಾಲಯದಲ್ಲಿ ಮೂವರು ಹಿಂದೂ ನ್ಯಾಯಾಧೀಶರೂ, ಮಹಮ್ಮದೀಯರು ಜನಸಂಖ್ಯೆಯಲ್ಲಿ ಬಹುಮತೀಯರಾಗಿರುವ ಪಂಜಾಬಿನ ಮುಖ್ಯನ್ಯಾಯಾಲಯದಲ್ಲಿ ಇಬ್ಬರು ಹಿಂದೂ ನ್ಯಾಯಾಧೀಶರೂ ಇದ್ದಾರೆ. ಆದುದರಿಂದ, ಪ್ರತಿಯೊಂದು ಉಚ್ಚ ನ್ಯಾಯಾಲಯದ

ಹಾಗೂ ಮುಖ್ಯ ನ್ಯಾಯಾಲಯದ ಪೀಠದಲ್ಲಿ ಒಬ್ಬ ಮಹಮ್ಮದೀಯ ನ್ಯಾಯಾಧೀಶನನ್ನು ನೇಮಿಸಬೇಕು ಎಂಬ ನಮ್ಮ ಕೋರಿಕೆ ಅತಿಯಾದುದಲ್ಲ. ಈ ನೇಮಕಾತಿಗಳಿಗೆ ಅರ್ಹರಾಗಿರುವ ಮಹಮ್ಮದೀಯ ವಕೀಲರು ಒಂದು ಪ್ರಾಂತ್ಯದಲ್ಲಿ ಇಲ್ಲವಾದರೆ, ಇನ್ನೊಂದರಲ್ಲಿ ಸಿಕ್ಕಿಯೇ ಸಿಗುತ್ತಾರೆ. ಇದಲ್ಲದೆ, ಈ ನ್ಯಾಯಾಲಯಗಳ ಪೀಠದಲ್ಲಿ ಮಹಮ್ಮದೀಯ ಕಾನೂನಿನಲ್ಲಿ ವೈದುಷ್ಯವಿದ್ದ ಒಬ್ಬ ನ್ಯಾಯಾಧೀಶರು ಇದ್ದರೆ, ನ್ಯಾಯನಿರ್ವಹಣೆ ಬಹಳಷ್ಟು ಬಲಗೊಳ್ಳುವುದು ಎಂದು ನಿವೇದಿಸಲು ಅನುಮತಿ ಕೇಳುತ್ತೇವೆ.

## ಮುನಿಸಿಪಲ್ ಪ್ರಾತಿನಿಧ್ಯ

ಸ್ಥಳೀಯರ ಆರೋಗ್ಯ, ಕ್ಷೇಮ, ಶೈಕ್ಷಣಿಕ ಅಗತ್ಯಗಳು ಮತ್ತು ಧಾರ್ಮಿಕ ಕಾಳಜಿಗಳಿಗೆ ಸಹ ಸಂಬಂಧಿಸುವ ಪ್ರಮುಖ ಸ್ಥಳೀಯ ಹಿತಾಸಕ್ತಿಗಳನ್ನು ಮುನಿಸಿಪಲ್ ಮತ್ತು ಜಿಲ್ಲಾ ಮಂಡಳಿಗಳು ನಿರ್ವಹಿಸಬೇಕಾದುದರಿಂದ– ಇತರ ಮೇಲ್ಮಟ್ಟದ ವಿಚಾರಗಳನ್ನು ಪ್ರಸ್ತಾಪಿಸುವ ಮೊದಲು– ಇವುಗಳಲ್ಲಿ ಮಹಮ್ಮದೀಯರ ಸ್ಥಾನವೇನು ಎಂಬುದರ ಬಗೆಗೆ ತಮ್ಮ ಗಮನವನ್ನು ಹರಿಸುವಂತೆ ವಿಜ್ಞಾಪಿಸಿದರೆ ತಾವು ನಮ್ಮನ್ನು ಕ್ಷಮಿಸುವಿರಿ ಎಂದು ನಂಬಿದ್ದೇವೆ. ಈ ಸಂಸ್ಥೆಗಳು ಸ್ವಯಂ ಆಡಳಿತದ ಏಣಿಯಲ್ಲಿ ಮೊದಲಿನ ಮೆಟ್ಟಿಲುಗಳು ಎಂದು ಹೇಳಬಹುದು. ಪ್ರಾತಿನಿಧ್ಯದ ತತ್ತ್ವ ಜನರ ಅಂತರಂಗಕ್ಕೆ ಆಪ್ತವಾಗಿ ಬೋಧೆಯಾಗುವುದು ಈ ಸಂಸ್ಥೆಗಳಲ್ಲೇ. ಹೀಗಿದ್ದರೂ, ಈ ಮಂಡಳಿಗಳಲ್ಲಿ ಮಹಮ್ಮದೀಯರ ಸ್ಥಾನವನ್ನು, ಸದ್ಯದಲ್ಲಂತೂ, ಸರ್ವೇಸಾಧಾರಣವಾಗಿ ಅನ್ವಯವಾಗಬಲ್ಲ ಯಾವುದೇ ನಿರ್ದೇಶಕ ತತ್ತ್ವ ನಿಯಂತ್ರಿಸುತ್ತಿಲ್ಲ; ಈ ಸಂಬಂಧದಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ವಾಡಿಕೆಗಳು ನಡೆಯುತ್ತಿವೆ. ಉದಾಹರಣೆಗೆ, ಅಲಿಗಢ್ ಮುನಿಸಿಪಾಲಿಟಿಯಲ್ಲಿ ಆರು ವಾರ್ಡುಗಳಿದ್ದು, ಒಂದೊಂದು ವಾರ್ಡು ಒಬ್ಬ ಹಿಂದೂ ಮತ್ತು ಒಬ್ಬ ಮಹಮ್ಮದೀಯ ಕಮೀಷನರನ್ನು ಆರಿಸುತ್ತದೆ. ಪಂಜಾಬ ಮತ್ತು ಇತರೆಡೆ ಹಲವು ಮುನಿಸಿಪಾಲಿಟಿಗಳಲ್ಲಿ ಈ ಕ್ರಮ ಜಾರಿಯಲ್ಲಿದೆ ಎಂದು ನಮಗೆ ತಿಳಿದು ಬಂದಿದೆಯಾದರೂ, ಅನೇಕ ಸ್ಥಳಗಳಲ್ಲಿ ಮಹಮ್ಮದೀಯ ತೆರಿಗೆದಾರರು ಸಾಕಷ್ಟು ಪ್ರಮಾಣದಲ್ಲಿ ಪ್ರತಿನಿಧಿಸಲ್ಪಟ್ಟಿಲ್ಲ. ಆದುದರಿಂದ, ಮುನಿಸಿಪಲ್ ಮತ್ತು ಜಿಲ್ಲಾ ಮಂಡಳಿಗಳಲ್ಲಿ ಹಿಂದೂಗಳಿಗೆ ಮತ್ತು ಮಹಮ್ಮದೀಯರಿಗೆ ಸಲ್ಲತಕ್ಕಂಥ ಸ್ಥಾನಗಳ ಸಂಖ್ಯೆಯನ್ನು ಸ್ಥಳೀಯ ಪ್ರಾಧಿಕಾರ ಯಾವಾಗಲೂ, ಕಡ್ಡಾಯವಾಗಿ ನಿಗದಿಪಡಿಸತಕ್ಕದ್ದು ಎಂದೂ ಮತ್ತು ಹೀಗೆ ಮಾಡುವಾಗ ಎರಡೂ ಸಮುದಾಯಗಳ ಜನಸಂಖ್ಯೆ, ಸಾಮಾಜಿಕ ಸ್ಥಾನಮಾನ, ಸ್ಥಳೀಯ ಪ್ರಭಾವ ಮತ್ತು ವಿಶೇಷ ಅವಶ್ಯಕತೆಗಳಿಗೆ ಅನುಗುಣವಾಗಿ ಈ ದಾಮಾಷಾ ನಿಗದಿಯಾಗಬೇಕು ಎಂದೂ ನಾವು ನಮ್ರವಾಗಿ ಸಲಹೆ ಮಾಡುತ್ತೇವೆ. ಎರಡೂ ಸಮುದಾಯಗಳ ಸಾಪೇಕ್ಷ ಪ್ರಮಾಣ ಅಧಿಕೃತವಾಗಿ ನಿಗದಿಯಾದ ಮೇಲೆ, ಪಂಜಾಬಿನ ಕೆಲವು ಪಟ್ಟಣಗಳಲ್ಲಿ ಇರುವಂತೆ, ತಮ್ಮ ಸ್ವಂತ ಪ್ರತಿನಿಧಿಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಆರಿಸಲು ಎರಡೂ ಸಮುದಾಯಗಳಿಗೆ ಸ್ವಾತಂತ್ರ್ಯವಿರಬೇಕು.

## ವಿಶ್ವವಿದ್ಯಾನಿಲಯಗಳ ಅಧಿಸದಸ್ಯರು

ಭಾರತದ ವಿಶ್ವವಿದ್ಯಾನಿಲಯಗಳ ಸೆನೆಟ್ ಮತ್ತು ಸಿಂಡಿಕೇಟ್‌ಗಳ ವಿಷಯದಲ್ಲೂ ಹೀಗೆಯೇ ಮಾಡತಕ್ಕದ್ದು ಎಂದು ಸಲಹೆ ಮಾಡಬಯಸುತ್ತೇವೆ. ಎಂದರೆ, ಸಾಧ್ಯವಾದಷ್ಟು ಮಟ್ಟಿಗೆ, ಎರಡೂ ಸಭೆಗಳಲ್ಲಿ ಮಹಮ್ಮದೀಯರಿಗೆ ಹಕ್ಕು ಇರುವ ಪ್ರತಿನಿಧಿಗಳ ಸಂಖ್ಯೆಯ ಅಧಿಕೃತ ಘೋಷಣೆಯೊಂದು ಇರಬೇಕು.

## ಪ್ರಾಂತೀಯ ಪರಿಷತ್ತುಗಳಿಗೆ ನಾಮನಿರ್ದೇಶನ

ನಮ್ಮ ದೇಶದ ಶಾಸನಸಭೆಗಳಲ್ಲಿ ನಮ್ಮ ಪ್ರಾತಿನಿಧ್ಯದ ಪ್ರಶ್ನೆಯನ್ನು ನಾವೀಗ ಎತ್ತಿಕೊಳ್ಳುತ್ತಿದ್ದೇವೆ. ಈ ಮನವಿಯ ೫ನೇ ಪರಿಚ್ಛೇದದಲ್ಲಿ ನಾವು ವಿನಮ್ರವಾಗಿ ಸೂಚಿಸಿದ ಮುಖ್ಯ ಪರಿಭಾವನೆಗಳಿಗೆ ಸೂಕ್ತ ಗಮನ ಕೊಟ್ಟು ಮುನಿಸಿಪಾಲಿಟಿ ಮತ್ತು ಜಿಲ್ಲಾ ಮಂಡಳಿಗಳಲ್ಲಿದ್ದಂತೆ ಪ್ರಾಂತೀಯ ಮಂಡಳಿಗಳಲ್ಲೂ ಮಹಮ್ಮದೀಯ ಪ್ರತಿನಿಧಿಗಳಿಗೆ ಹಕ್ಕು ಇರುವ ಸ್ಥಾನಗಳ ಸಂಖ್ಯೆಯನ್ನು ನಿಗದಿ ಮಾಡಿ ಘೋಷಿಸತಕ್ಕದ್ದು ಎಂದು ಬಹಳ ವಿನಯದಿಂದ ನಾವು ಸಲಹೆ ಮಾಡುತ್ತೇವೆ. ಹೀಗೆ ನಿಗದಿಮಾಡಿದ ಸಂಖ್ಯೆಯ ಸದಸ್ಯರನ್ನು ಆರಿಸಲು ಪ್ರಮುಖ ಮಹಮ್ಮದೀಯ ಜಮೀನುದಾರರು, ವಕೀಲರು, ವರ್ತಕರು, ಇತರ ಮುಖ್ಯ ಹಿತಾಸಕ್ತಿಗಳ ಪ್ರತಿನಿಧಿಗಳು, ಸಾಕಷ್ಟು ಗುಣಮಟ್ಟವಿರುವ– ಎಂದರೆ, ಸುಮಾರು ಐದು ವರ್ಷಗಳಷ್ಟು ಕಾಲ ಅಸ್ತಿತ್ವದಲ್ಲಿರುವ– ವಿಶ್ವವಿದ್ಯಾನಿಲಯಗಳ ಪದವೀಧರರು– ಇವರನ್ನು ಒಳಗೊಂಡ ಚುನಾಯಿಕಾ ಸಭೆಗಳನ್ನು ರಚಿಸಬೇಕು. ತಮ್ಮ ಸರಕಾರ ಈ ವಿಷಯಗಳಲ್ಲಿ ಮಾಡಲಿದ್ದ ಪ್ರಕ್ರಿಯಾನಿಯಮಗಳಿಗನುಸಾರವಾಗಿ, ಗೊತ್ತುಪಡಿಸಿದ ಸಂಖ್ಯೆಯಲ್ಲಿ ಸದಸ್ಯರನ್ನು ಆರಿಸುವ ಹಕ್ಕು ಈ ಸಭೆಗಳಿಗೆ ಇರಬೇಕು.

## ವೈಸರಾಯರ ಪರಿಷತ್ತು

ಇಂಪೀರಿಯಲ್ ಶಾಸನ ಪರಿಷತ್ತಿನಲ್ಲಿ ಮಹಮ್ಮದೀಯ ಹಿತಾಸಕ್ತಿಗಳಿಗೆ ಸೂಕ್ತ ಪ್ರಾತಿನಿಧ್ಯ ಸಿಗುವುದು ಅತ್ಯಂತ ಪ್ರಧಾನ ವಿಷಯವಾಗಿದೆ. ಇದಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಸಲಹೆಗಳನ್ನು ಮಾಡಲು ಅನುಮತಿ ಕೇಳುತ್ತೇವೆ: (೧) ಪರಿಷತ್ತಿನ ಕೇಡರ್‌ನಲ್ಲಿ ಮಹಮ್ಮದೀಯ ಪ್ರತಿನಿಧಿಗಳ ದಾಮಾಷಾವನ್ನು ಅವರ ಸಮುದಾಯದ ಸಂಖ್ಯಾಬಲದ ಆಧಾರದ ಮೇಲೆ ನಿಗದಿಪಡಿಸಬಾರದು, ಮತ್ತು ಹೇಗಿದ್ದರೂ, ಮಹಮ್ಮದೀಯ ಪ್ರತಿನಿಧಿಗಳು ಅಶಕ್ತ ಅಲ್ಪಸಂಖ್ಯಾತರಾಗಬಾರದು; (೨) ಸಾಧ್ಯವಾದಷ್ಟು ಮಟ್ಟಿಗೆ, ನಾಮನಿರ್ದೇಶನಕ್ಕಿಂತ, ಚುನಾವಣೆಯ ಮೂಲಕವೇ ನೇಮಕಾತಿ ನಡೆಯಬೇಕು; (೩) ಮಹಮ್ಮದೀಯ ಜಮೀನುದಾರರು, ವಕೀಲರು, ವರ್ತಕರು ಮತ್ತು ಮಹಾಪ್ರಭುಗಳ ಸರಕಾರ ತರುವಾಯ ನಿಗದಿಮಾಡಲಿರುವ ಮಟ್ಟದ ಸ್ಥಾನಮಾನದ ಇತರ ಮುಖ್ಯ ಹಿತಾಸಕ್ತಿಗಳ ಪ್ರತಿನಿಧಿಗಳು, ಪ್ರಾಂತೀಯ ಪರಿಷತ್ತುಗಳ ಮಹಮ್ಮದೀಯ ಸದಸ್ಯರು, ಮತ್ತು ವಿಶ್ವವಿದ್ಯಾನಿಲಯಗಳ ಮಹಮ್ಮದೀಯ ಅಧಿಸದಸ್ಯರು– ಇವರಿಗೆ ಮಹಮ್ಮದೀಯ ಸದಸ್ಯರನ್ನು ಆರಿಸುವ ಅಧಿಕಾರವನ್ನು ಕೊಡತಕ್ಕದ್ದು. ಇದಕ್ಕೆ ಸಂಬಂಧಿಸಿದಂತೆ ಮಹಾಪ್ರಭುಗಳ ಸರಕಾರ ವಿಧಿಸಲಿರುವ ಪ್ರಕ್ರಿಯೆಗೆ ಅನುಗುಣವಾಗಿ ಈ ಅಧಿಕಾರವನ್ನು ಅವರು ಚಲಾಯಿಸತಕ್ಕದ್ದು.

## ಕಾರ್ಯನಿರ್ವಾಹಕ ಪರಿಷತ್ತು

ವೈಸರಾಯರ ಕಾರ್ಯನಿರ್ವಾಹಕ ಪರಿಷತ್ತಿಗೆ ಒಬ್ಬರು ಅಥವಾ ಇಬ್ಬರು ಭಾರತೀಯ ಸದಸ್ಯರನ್ನು ನೇಮಿಸುವ ಸಾಧ್ಯತೆ ಇದೆ ಎಂಬುದಾಗಿ ಈಚೆಗೆ ಒಂದು ಕಲ್ಪನೆ ಜನಜನಿತವಾಗುತ್ತಿದೆ. ಇಂಥ ನೇಮಕಗಳನ್ನು ಮಾಡುವ ಪಕ್ಷದಲ್ಲಿ, ಈ ಸಂಬಂಧದಲ್ಲಿ ಮಹಮ್ಮದೀಯರ ಹಕ್ಕಿನ ಬೇಡಿಕೆಗಳನ್ನು ಕಡೆಗಣಿಸಬಾರದೆಂದು ನಾವು ವಿನಂತಿಸುತ್ತೇವೆ. ಈ ಘನ ಸಭೆಯಲ್ಲಿ ಅತ್ಯಂತ ಸಮರ್ಥವಾಗಿ ಸೇವೆ ಸಲ್ಲಿಸಲು ಅರ್ಹರಿರುವ ಹಲವು ಮಹಮ್ಮದೀಯರು ದೇಶದಲ್ಲಿದ್ದಾರೆ ಎಂದು ಧೈರ್ಯವಾಗಿ ನಾವು ಹೇಳಬಲ್ಲೆವು.

## ಒಂದು ಮಹಮ್ಮದೀಯ ವಿಶ್ವವಿದ್ಯಾಲಯ

ನಮ್ಮ ರಾಷ್ಟ್ರೀಯ ಹಿತದ ಮೇಲೆ ತೀವ್ರ ಪ್ರಭಾವ ಬೀರಲಿರುವ ಒಂದು ವಿಚಾರದ ಬಗೆಗೆ ಮಹಾಪ್ರಭುಗಳನ್ನು ಉದ್ದೇಶಿಸಿ ಮಾತನಾಡಲು ಅನುಮತಿ ಕೋರುತ್ತೇವೆ. ಒಂದು ಸಮುದಾಯವಾಗಿ ನಮ್ಮ ಆಶೋತ್ತರಗಳು ಮತ್ತು ಭವಿಷ್ಯತ್ತಿನ ನಮ್ಮ ಪ್ರಗತಿ ನಮ್ಮ ಧಾರ್ಮಿಕ ಮತ್ತು ಬೌದ್ಧಿಕ ಜೀವನ ಕೇಂದ್ರವಾಗಲಿರುವ ಒಂದು ಮಹಮ್ಮದೀಯ ವಿಶ್ವವಿದ್ಯಾನಿಲಯದ ಸ್ಥಾಪನೆಯನ್ನು ಬಹುಮಟ್ಟಿಗೆ ಅವಲಂಬಿಸಿವೆ ಎಂದು ನಮಗೆ ಮನವರಿಕೆಯಾಗಿದೆ. ಆದುದರಿಂದ ನಮ್ಮ ಸಮುದಾಯಕ್ಕೆ ಬಹಳ ಆಳವಾದ ಆಸಕ್ತಿಯಿರುವ ಈ ಕೆಲಸದಲ್ಲಿ ನಮಗೆ ಸಹಾಯವಾಗುವಂಥ ಕ್ರಮಗಳನ್ನು ಮಹಾಪ್ರಭುಗಳು ತೆಗೆದುಕೊಳ್ಳಬೇಕು ಎಂದು ವಿನಮ್ರವಾಗಿ ಪ್ರಾರ್ಥಿಸುತ್ತೇವೆ.

ಈ ಮನವಿಯನ್ನು ಮುಕ್ತಾಯಗೊಳಿಸುವಾಗ, ಮಹಾಪ್ರಭುಗಳಿಗೆ ಈ ಆಶ್ವಾಸನೆಯನ್ನು ನೀಡಲು ಬಯಸುತ್ತೇವೆ. ಭಾರತೀಯ ವಿದ್ಯಮಾನಗಳ ಸದ್ಯದ ಸ್ಥಿತಿಯಲ್ಲಿ ಮಹಾ ಪ್ರಭುಗಳು ಮಹಮ್ಮದೀಯ ಪ್ರಜೆಗಳಿಗೆ ಈ ಮನವಿಯಲ್ಲಿ ಹೇಳಿದಂಥ ರೀತಿಯಲ್ಲಿ ಸಹಾಯ ಮಾಡುವುದರ ಮೂಲಕ, ಇವರು ಸಿಂಹಾಸನಕ್ಕೆ ಅಚಲ ನಿಷ್ಠೆಯಿಂದಿರುವಂತೆ ಮಾಡಿದಂತಾಗುವುದು, ಮತ್ತು ಇವರ ರಾಜಕೀಯ ಮುನ್ನಡೆ ಮತ್ತು ರಾಷ್ಟ್ರೀಯ ಪುರೋಭಿವೃದ್ಧಿಗೆ ಬುನಾದಿಯನ್ನು ಹಾಕಿದಂತಾಗುವುದು. ಬರಲಿರುವ ಹಲವು ತಲೆಮಾರುಗಳವರೆಗೆ ಇವರ ವಂಶಜರು ಮಹಾಪ್ರಭುಗಳ ಹೆಸರನ್ನು ಕೃತಜ್ಞತಾಭಾವದಿಂದ ಸ್ಮರಿಸಿಕೊಳ್ಳುವರು. ಈ ನಮ್ಮ ವಿನಂತಿಗಳನ್ನು ಮಹಾಪ್ರಭುಗಳು ಸೂಕ್ತವಾಗಿ ಪರಿಭಾವಿಸುವ ಔದಾರ್ಯವನ್ನು ತೋರಿಸುವುದು ಎಂದು ನಾವು ನಂಬಿದ್ದೇವೆ. ಮಹಾಪ್ರಭುಗಳ ಅತ್ಯಂತ ವಿಧೇಯ ಹಾಗೂ ದೀನ ಸೇವಕರೆಂದು ಈಗ ಹಸ್ತಾಕ್ಷರ ಮಾಡುವ ಗೌರವವನ್ನು ನಾವು ಪಡೆದಿದ್ದೇವೆ.

ಲಾರ್ಡ್ ಮಿಂಟೊ ಅವರ ಉತ್ತರ

## ಮಹಮ್ಮದೀಯ ಆಶೋತ್ತರಗಳನ್ನು ಅರ್ಥ ಮಾಡಿಕೊಳ್ಳುವುದು

ಮನವಿಯನ್ನು ಸಲ್ಲಿಸಿದ ಬಳಿಕ, ವೈಸರಾಯರು ಎದ್ದು, ಅತ್ಯಂತ ಸಹಾನುಭೂತಿಯ ಒಂದು ಉತ್ತರವನ್ನು ಓದಿ ಹೇಳಿದರು. ಮೆಚ್ಚಿಕೆಯ ಉದ್ಗಾರಗಳಿಂದಲೂ "ಕೇಳಿ, ಕೇಳಿ" ಎಂಬ ಕೂಗುಗಳಿಂದಲೂ ನಿಯೋಗದ ಸದಸ್ಯರು ಪದೇ ಪದೇ ಉತ್ತರವನ್ನು ತಡೆಗಟ್ಟಿದರು. ಅದರಲ್ಲೂ, ಈ ಮಹಾಸಾಮ್ರಾಜ್ಯದ ವಿವಿಧ ಧಾರ್ಮಿಕ ನಂಬಿಕೆಗಳನ್ನು ಯಾವುದೇ ಚುನಾವಣಾ ವ್ಯವಸ್ಥೆ ಮಾನ್ಯ ಮಾಡಬೇಕು ಎಂಬುದರಲ್ಲಿ ನಿಯೋಗದ ಅಭಿಪ್ರಾಯವನ್ನು ಸಂಪೂರ್ಣವಾಗಿ ತಾನು ಒಪ್ಪುತ್ತಿರುವುದಾಗಿಯೂ, ತಮ್ಮ ಅಧೀನಕ್ಕೆ ಒಪ್ಪಿಸಲ್ಪಟ್ಟ ವಿವಿಧ ಸಮುದಾಯಗಳ ರಾಜಕೀಯ ಹಕ್ಕುಗಳನ್ನು ಬ್ರಿಟಿಷ್ ಸರಕಾರ ಇದುವರೆಗೆ ರಕ್ಷಿಸಿದಂತೆ ಇನ್ನು ಮುಂದೆಯೂ ರಕ್ಷಿಸುವುದೆಂದು ವೈಸರಾಯರು ಹೇಳಿದಾಗಲಂತೂ ಈ ಹರ್ಷೋದ್ಗಾರಗಳು ಅತಿಶಯವಾಗಿದ್ದವು. ಇಷ್ಟೊಂದು ಸಂಖ್ಯೆಯಲ್ಲಿ ಪ್ರತಿನಿಧಿಗಳಾಗಿರುವ ವ್ಯಕ್ತಿಗಳನ್ನು ಭೇಟಿ ಮಾಡುವ ಅವಕಾಶವನ್ನು ತನಗೆ ಕಲ್ಪಿಸಿ ಕೊಟ್ಟಿದ್ದಕ್ಕೆ ನಿಯೋಗಕ್ಕೆ ವಂದನೆಗಳನ್ನು ಅರ್ಪಿಸಿ, ವೈಸರಾಯರು ತಮ್ಮ ಮಾತನ್ನು ಮುಗಿಸಿದರು.

**ವೈಸರಾಯರು ಹೇಳಿದ್ದೇನೆಂದರೆ:–**

ಘನತೆವೆತ್ತವರೇ, ಮತ್ತು ಮಹನೀಯರೇ, ನಿಮ್ಮ ಮನವಿಯಲ್ಲಿ ಅಂತರ್ಗತವಾಗಿರುವ ಹಲವು

ಪರಿಭಾವನೆಗಳಿಗೆ ಉತ್ತರ ಕೊಡಲು ಪ್ರಯತ್ನಿಸುವ ಮೊದಲು, ಸಿಮ್ಲಾಕ್ಕೆ ಹಾರ್ದಿಕವಾಗಿ ನಿಮ್ಮನ್ನು ಸ್ವಾಗತಿಸಲು ನನಗೆ ನೀವು ಅವಕಾಶ ನೀಡಬೇಕು. ಇಂದು ನೀವಿಲ್ಲಿರುವುದು ವಿಶೇಷವಾಗಿ ಅರ್ಥಗರ್ಭಿತವಾಗಿದೆ. ನೀವು ನನಗೆ ಸಲ್ಲಿಸಿದ ಈ ದಸ್ತಾವೇಜಿಗೆ ಶ್ರೀಮಂತರು, ಹಲವು ರಾಜ್ಯಗಳ ಮಂತ್ರಿಗಳು, ಹಿರಿಯ ಜಮೀನುದಾರರು, ವರ್ತಕರು ಮತ್ತು ಮಹಾಪ್ರಭುಗಳ ಇತರ ಹಲವು ಪ್ರಜೆಗಳು ಸಹಿ ಹಾಕಿದ್ದಾರೆ. ಭಾರತದಲ್ಲಿರುವ ಪ್ರೌಢ ತಿಳಿವಳಿಕೆಯುಳ್ಳ ಮುಸ್ಲಿಂ ಸಮುದಾಯದ ಅಭಿಪ್ರಾಯಗಳನ್ನೂ ಆಶೋತ್ತರಗಳನ್ನೂ ಅಭಿವ್ಯಕ್ತಗೊಳಿಸುವಂಥದ್ದು ಎಂಬುದರಿಂದ ನಿಮ್ಮ ನಿಯೋಗದ ಪ್ರಾತಿನಿಧಿಕ ಸ್ವರೂಪವನ್ನು ನಾನು ಸ್ವಾಗತಿಸುತ್ತೇನೆ. ನೀವು ಹೇಳಿದ್ದೆಲ್ಲವೂ ಒಂದು ಪ್ರಾತಿನಿಧಿಕ ಸಮಷ್ಠಿಯಿಂದ ಹೊರಟು ಬಂದಿರುವುದು ಎಂದು ಭಾವಿಸಿದ್ದೇನೆ. ಈ ಸಮಷ್ಠಿಯ ಅಭಿಪ್ರಾಯಗಳು ಭಾರತದ ಈಗಿನ ರಾಜಕೀಯ ಸ್ಥಿತಿಗತಿಗಳ ಪ್ರಬುದ್ಧ ಪರಿಭಾವನೆಯನ್ನು ಆಧರಿಸಿವೆಯೆಂದೂ, ಚದುರಿರುವ ಸಣ್ಣ ಸ್ಥಳಗಳಲ್ಲಿರುವ ಕ್ಷುಲ್ಲಕ ವೈಯಕ್ತಿಕ ಅಥವಾ ರಾಜಕೀಯ ರಾಗದ್ವೇಷಗಳಿಗೆ ಈ ಸಮಷ್ಠಿಯಲ್ಲಿ ಎಡೆಯಿಲ್ಲವೆಂದೂ ನಾನು ಭಾವಿಸಿದ್ದೇನೆ. ಇಸ್ಲಾಂ ಧರ್ಮದ ಅನುಯಾಯಿಗಳ ನ್ಯಾಯವಾದ ಉದ್ದೇಶಗಳನ್ನೂ, ನಮ್ಮ ಸಾಮ್ರಾಜ್ಯದ ರಾಜಕೀಯ ಚರಿತ್ರೆಯಲ್ಲಿ ಭಾಗಿಗಳಾಗಲು ಅವರಿಗಿರುವ ಸಂಕಲ್ಪವನ್ನೂ ಅರ್ಥಮಾಡಿಕೊಂಡು ಮೆಚ್ಚಿಗೆ ವ್ಯಕ್ತಪಡಿಸಲು ನನಗೆ ಈ ಅವಕಾಶ ನೀಡಿದ್ದಕ್ಕೆ ನಾನು ನಿಮಗೆ ಋಣಿಯಾಗಿದ್ದೇನೆ.

ಈ ವಿಸ್ತಾರ ಭೂಖಂಡದ ಜನತೆಯಲ್ಲಿರುವ ಹಲವು ಧಾರ್ಮಿಕ ನಂಬಿಕೆಗಳ ಹಲವು ಜನಾಂಗಗಳು ಬ್ರಿಟಿಷ್ ಆಡಳಿತದಿಂದ ಪಡೆದ ಅನುಕೂಲಗಳನ್ನು ನೀವು ಗುರುತಿಸಿ ಮೆಚ್ಚಿಗೆಯನ್ನು ಅಭಿವ್ಯಕ್ತಿಗೊಳಿಸಿದುದು, ನಿಮ್ಮ ವೈಸರಾಯನಾಗಿರುವ ನನಗೆ ಹೆಮ್ಮೆಯ ವಿಷಯವಾಗಿದೆ. ಬ್ರಿಟಿಷ್ ಆಡಳಿತದಿಂದ ಭಾರತಕ್ಕೆ ದೊರಕಿದ ವೈಯಕ್ತಿಕ ಸ್ವಾತಂತ್ರ್ಯ, ಧರ್ಮಾಚರಣೆಯ ಸ್ವಾತಂತ್ರ್ಯ ಮತ್ತು ಸರ್ವೇಸಾಮಾನ್ಯವಾಗಿರುವ ಶಾಂತಿ, ಆಶಾದಾಯಕ ಭವಿಷ್ಯತ್ತು– ಇವುಗಳ ಬಗೆಗೆ ಕೃತಜ್ಞತಾಭಾವವನ್ನು, ಜಯಿಸುವ ಮತ್ತು ಆಳುವ ಒಂದು ಜನಾಂಗದ ವಂಶಜರಾದ ನೀವೇ, ಸ್ವತಃ ನನಗೆ ಈ ಹೊತ್ತು ತಿಳಿಸಿದ್ದೀರಿ.

## ಇದುವರೆಗಿನ ಸಹಾಯ

ಸರಕಾರಿ ಸೇವೆಗೆ ಬೇಕಿರುವ ಅರ್ಹತೆ ಪಡೆಯುವಂತೆ ಮಹಮ್ಮದೀಯರಿಗೆ ನೆರವಾಗಲು ಬ್ರಿಟಿಷರು ಮಾಡಿದ ಮೊದಲ ಪ್ರಯತ್ನಗಳನ್ನು ಅವಲೋಕಿಸುವುದು ಆಸಕ್ತಿಯ ವಿಷಯ. ೧೭೮೨ರಲ್ಲಿ ವಾರನ್ ಹೇಸ್ಟಿಂಗ್ಸ್ ಅವರು ಕಲ್ಕತ್ತಾ ಮದರಸಾವನ್ನು ಸ್ಥಾಪಿಸಿದರು– ಇದರ ವಿದ್ಯಾರ್ಥಿಗಳು ಹಿಂದೂಗಳ ಜೊತೆಯಲ್ಲಿ ಹೆಚ್ಚು ಸರಿಸಮಾನರಾಗಿ ಸರಕಾರಿ ಉದ್ಯೋಗಗಳಿಗೋಸ್ಕರ ಸ್ಪರ್ಧಿಸಲು ಸಾಧ್ಯವಾಗಬೇಕೆಂಬುದೇ ಇದರ ಗುರಿಯಾಗಿತ್ತು. ೧೮೧೧ರಲ್ಲಿ ನನ್ನ ಪೂರ್ವಾಧಿಕಾರಿಯಾಗಿದ್ದ ಲಾರ್ಡ್ ಲಿಟ್ಟನ್ ಅವರು ಮದರಸಾದಲ್ಲಿ ಸುಧಾರಣೆಗಳನ್ನು ಮಾಡಬೇಕೆಂದೂ ಭಾರತದಲ್ಲೆಲ್ಲಾ ಇತರ ಸ್ಥಳಗಳಲ್ಲಿ ಮಹಮ್ಮದೀಯ ಕಾಲೇಜುಗಳನ್ನು ಸ್ಥಾಪಿಸಬೇಕೆಂದೂ ಬಲವಾಗಿ ಪ್ರತಿಪಾದಿಸಿದರು. ತರುವಾಯದ ವರ್ಷಗಳಲ್ಲಿ ಮಹಮ್ಮದೀಯ ಸಂಘದವರ ಪ್ರಯತ್ನಗಳ ದೆಸೆಯಿಂದ ಮಹಮ್ಮದೀಯ ಸಮುದಾಯದ ವಿದ್ಯಾಭ್ಯಾಸದ ಪರಿಸ್ಥಿತಿಯನ್ನು ಮತ್ತು ಸರಕಾರಿ ಸೇವೆಯಲ್ಲಿ ಅವರ ನೇಮಕಾತಿಯನ್ನು ಕುರಿತಂಥ ೧೮೮೫ರ ಸರಕಾರಿ ನಿರ್ಣಯ ಅಂಗೀಕೃತವಾಯಿತು. ಇತ್ತ, ಮಹಮ್ಮದೀಯ ವಿದ್ಯಾಕ್ಷೇತ್ರದ ಪ್ರಯತ್ನಗಳ ಶೃಂಗವಾಗಿ ಅಲಿಗಢ್ ಕಾಲೇಜು ಅಸ್ತಿತ್ವಕ್ಕೆ ಬಂತು– ಮಹಾನುಭಾವರೂ ವಿಶಾಲಮನಸ್ಕರೂ ಆಗಿರುವ ಸರ್ ಸೈಯದ್ ಅಹ್ಮದ್ ಖಾನ್ ಅವರು ಈ ಶ್ರೇಷ್ಠ ಸಂಸ್ಥೆಯನ್ನು ತನ್ನ ಸಹ–ಧರ್ಮಾನುಯಾಯಿಗಳಿಗೆ ಸಮರ್ಪಿಸಿದ್ದಾರೆ.

## ಅಲಿಗಡ್ ಕಾಲೇಜು

ಜುಲೈ ೧೮೭೭ರಲ್ಲಿ ಲಾರ್ಡ್ ಲಿಟ್ಟನ್ ಅವರು ಅಲಿಗಡ್‌ನ ಶಂಕುಸ್ಥಾಪನೆ ಮಾಡುತ್ತಿದ್ದಾಗ, ಸರ್ ಸೈಯದ್ ಅಹ್ಮದ್ ಖಾನ್ ಅವರು ವೈಸರಾಯರನ್ನು ಉದ್ದೇಶಿಸಿ, ಈ ಸ್ಮರಣೀಯ ಮಾತುಗಳನ್ನು ಹೇಳಿದರು: "ತಮ್ಮಿಂದ ನನಗೆ ಸಂದ ವೈಯಕ್ತಿಕ ಗೌರವ ಒಂದು ಮಹಾ ಸತ್ಯದ ಆಶ್ವಾಸನೆಯನ್ನು ನನಗೆ ಕೊಡುತ್ತದೆಯಲ್ಲದೆ, ಕೇವಲ ವೈಯಕ್ತಿಕ ಕೃತಜ್ಞತೆಗಿಂತ ಹೆಚ್ಚು ಉನ್ನತವಾಗಿರುವ ಭಾವಗಳು ನನ್ನಲ್ಲಿ ಸ್ಫುರಿಸುವಂತೆ ಮಾಡುತ್ತದೆ. ಬ್ರಿಟಿಷ್ ಆಡಳಿತವನ್ನು ಈ ಸಮಾರಂಭದಲ್ಲಿ ಪ್ರತಿನಿಧಿಸುವ ತಾವು, ನಮ್ಮ ಶ್ರಮದ ಬಗೆಗೆ ಸಹಾನುಭೂತಿಯುಳ್ಳವರಾಗಿದ್ದೀರಿ ಎಂಬ ಆಶ್ವಾಸನೆ ನನಗೆ ಬೋಧೆಯಾಗುತ್ತಾ ಇದೆ. ಈ ಆಶ್ವಾಸನೆ ಬಹಳ ಮೌಲಿಕವಾದುದು ಹಾಗೂ ಅತ್ಯಂತ ಆನಂದದಾಯಕವಾದುದು. ಅನೇಕ ವರ್ಷಗಳಿಂದ, ಮತ್ತು ಈಗಲೂ ನನ್ನ ಜೀವನದ ಏಕೈಕ ಗುರಿಯಾಗಿದ್ದ ಈ ಕೆಲಸ ಒಂದೆಡೆಯಲ್ಲಿ ನನ್ನ ಸ್ವಂತ ದೇಶಬಾಂಧವರ ಶಕ್ತಿಗಳನ್ನು ಹೊಡೆದೆಬ್ಬಿಸಿರುವುದು ಮತ್ತು ಇನ್ನೊಂದೆಡೆ ನಮ್ಮ ಬ್ರಿಟಿಷ್ ಸಹ–ಪ್ರಜೆಗಳ ಅನುಕಂಪೆಯನ್ನು ಮತ್ತು ಆಳರಸರ ಬೆಂಬಲವನ್ನು ಪಡೆದಿರುವುದು ನಮ್ಮ ಜೀವಿತಾವಧಿಯ ಈ ಕಾಲದಲ್ಲಿ ನನಗೆ ವಿಶೇಷ ಸಾಂತ್ವನ ನೀಡುವ ವಿಷಯವಾಗಿದೆ. ಇದರ ಫಲವಾಗಿ ನಾನಿನ್ನೂ ಬದುಕಿರಬಹುದಾದ ಕೆಲವೇ ಕೆಲವು ವರ್ಷಗಳು ಕಳೆದಾಗ ಮತ್ತು ನಾನಿನ್ನು ನಿಮ್ಮ ಜೊತೆ ಇಲ್ಲದಿದ್ದಾಗ, ಈ ಕಾಲೇಜು ಇನ್ನೂ ಉಚ್ಛ್ರಾಯ ಸ್ಥಿತಿಯಲ್ಲಿರುವುದು. ನನ್ನ ಜೀವನದ ನಿಯಂತ್ರಕ ಭಾವಗಳಾಗಿರುವ ದೇಶಪ್ರೇಮ, ಬ್ರಿಟಿಷ್ ಆಡಳಿತಕ್ಕೆ ನಿಷ್ಠಾಭಾವ, ಆ ಆಡಳಿತದ ಫಲಗಳ ಬಗೆಗೆ ಮೆಚ್ಚುಗೆಯ ಮತ್ತು ಕೃತಜ್ಞತೆಯ ಭಾವ, ನಮ್ಮ ಬ್ರಿಟಿಷ್ ಸಹ–ಪ್ರಜೆಗಳ ಜೊತೆ ಪ್ರಾಮಾಣಿಕ ಮೈತ್ರಿ– ಇವುಗಳನ್ನು ನನ್ನಲ್ಲಿರುವಷ್ಟೇ ಪ್ರಮಾಣದಲ್ಲಿ ನನ್ನ ದೇಹಬಾಂಧವರಿಗೆ ಈ ಕಾಲೇಜು ಬೋಧಿಸುವುದು."

## ಸರ್ ಸೈಯದ್ ಅವರ ಪ್ರಭಾವ

ಅಲಿಗಢ್ ತನ್ನ ಪಾಲಿನ ಕೀರ್ತಿಯನ್ನು ಸಂಪಾದಿಸಿದೆ. ಅಲಿಗಢ್‌ನ ವಿದ್ಯಾರ್ಥಿಗಳು ತಮ್ಮ ಸ್ವಂತ ಧರ್ಮದ ತತ್ವಗಳಲ್ಲಿ ಭದ್ರವಾಗಿ ಬೇರೂರಿದ್ದು, ನಿಷ್ಠೆ ಮತ್ತು ದೇಶಪ್ರೇಮದ ಪಾಠಗಳನ್ನು ಆಳವಾಗಿ ರೂಢಿಸಿಕೊಂಡಿದ್ದು, ಬದುಕಿನ ರಂಗದಲ್ಲಿ ಹೋರಾಡಲು ಹೋಗಿದ್ದಾರೆ. ವಿಷಮವಾಗಿರುವ ಅಂಶಗಳು ಭಾರತದ ರಾಜಕೀಯ ಭವಿಷ್ಯತ್ತಿನಲ್ಲಿ ಈಗಿರುವಷ್ಟು ಪ್ರಮಾಣದಲ್ಲಿರುವಾಗ, ಸರ್ ಸೈಯದ್ ಅಹ್ಮದ್ ಖಾನ್ ಅವರ ಪ್ರೇರಣೆ ಮತ್ತು ಅಲಿಗಢ್‌ನ ಬೋಧನೆಗಳು ಮಹಮ್ಮದೀಯ ಚರಿತ್ರೆಯ ಹೆಗ್ಗಳಿಕೆಯಲ್ಲಿ ಹಾಗೂ ನಿಮ್ಮ ಮನವಿಯಲ್ಲಿ ಧಾರಾಳವಾಗಿ ಅಭಿವ್ಯಕ್ತಗೊಂಡ ನಿಷ್ಠೆಯಲ್ಲಿ, ವಿವೇಕದಲ್ಲಿ ಹಾಗೂ ನಿರ್ದುಷ್ಟ ತರ್ಕದಲ್ಲಿ ವಿಶೇಷವಾಗಿ ಪ್ರಕಾಶಿಸುತ್ತವೆ. ಆದರೆ, ಮಹನೀಯರೆ, ನಿಮ್ಮ ಆಳರಸರ ನ್ಯಾಯಪ್ರಜ್ಞೆ ಹಾಗೂ ನಿಷ್ಪಕ್ಷಪಾತ ವ್ಯವಹಾರದಲ್ಲಿ ನಿಮಗಿರುವ ನಂಬಿಕೆ ಪ್ರಾಮಾಣಿಕವಾಗಿದ್ದರೂ, "ಅತಿರೇಕರಹಿತ ಬುದ್ಧಿವಾದವನ್ನೂ ಸಂಯಮೀ ಮಾರ್ಗದರ್ಶನವನ್ನೂ ಮೀರಿ ಹೋಗುವ" ಭಾವೋದ್ವೇಗಗಳನ್ನು ತರುಣ ತಲೆಮಾರಿನ ಮಹಮ್ಮದೀಯರಲ್ಲಿ "ಇತ್ತೀಚಿನ ಕೆಲವು ಘಟನೆಗಳು" ಕೆರಳಿಸಿವೆ ಎಂದು ನೀವು ಹೇಳುತ್ತಿದ್ದೀರಿ.

## ಪೂರ್ವ ಬಂಗಾಳದಲ್ಲಿ ನಮ್ಮ ಧೋರಣೆ

ಪೂರ್ವ ಬಂಗಾಳ ಮತ್ತು ಅಸ್ಸಾಮಿನ ವಿದ್ಯಾಮಾನಗಳನ್ನು ಕುರಿತು ಚರ್ಚಿಸುವ ಉದ್ದೇಶ ಈಗ ನನಗಿಲ್ಲ. ಆದರೂ, ತಮಗೆ ಹೊಸತಾಗಿರುವ, ಮತ್ತು ಅನಿವಾರ್ಯವಾಗಿ ಹಲವು ತಪ್ಪು ಕಲ್ಪನೆಗಳಿಗೆ

ಎಡೆಮಾಡಿಕೊಟ್ಟಂಥ ಪರಿಸ್ಥಿತಿಗಳಲ್ಲಿ ಹೊಸ ಪ್ರಾಂತ್ಯದ ಮಹಮ್ಮದೀಯ ಸಮುದಾಯ ತೋರ್ಪಡಿಸಿದ ಸೌಮ್ಯ ಸಂಯಮಗಳಿಗೋಸ್ಕರ ಅವರನ್ನು ವಂದಿಸಿದರೆ, ಮತ್ತು ಬಂಗಾಳಿ ಆಶೋತ್ತರಗಳಲ್ಲಿ ಪ್ರಾಮಾಣಿಕವಾಗಿ ಏನೇನಿದೆಯೋ ಅವುಗಳ ಬಗೆಗೆ ಅನುಕಂಪೆಯನ್ನು ತಾಳಿದರೆ ಯಾರೂ ಬೇಸರ ಪಡಲಿಕ್ಕಿಲ್ಲ ಎಂದು ನಾನು ಭಾವಿಸುತ್ತೇನೆ. ಎಲ್ಲಕ್ಕಿಂತಲೂ ಮಿಗಿಲಾಗಿ, ಹೊಸ ಪ್ರಾಂತ್ಯದ ವಿದ್ಯಮಾನಗಳ ಬಗೆಗೆ (ಈ ಪ್ರಾಂತ್ಯದ ಭವಿಷ್ಯ ಈಗ ಭದ್ರವಾಗಿದೆ ಎಂದು ನನ್ನ ನಂಬಿಕೆ) ನಾನು ಮತ್ತು ಸರಕಾರ ಅನುಸರಿಸಿದ ಕಾರ್ಯರೀತಿಗೆ ಕಾರಣ ಆ ಪ್ರಾಂತ್ಯಗಳ ಈಗಿನ ಮತ್ತು ಭವಿಷ್ಯತ್ತಿನ ಜನಸಮುದಾಯಗಳಿಗೆ, ಜನಾಂಗ ಮತ್ತು ಧರ್ಮದ ಭೇದಭಾವವಿಲ್ಲದೆ, ಇಡಿಯಾಗಿ ಅತ್ಯಂತ ಹಿತಕರವಾದುದು ಏನು ಎಂದು ತೋರಿತೋ ಅದೇ ಆಗಿತ್ತು ಎಂಬುದನ್ನು ನೀವು ನಂಬಬೇಕು ಎಂದು ನಾನು ನಿಮ್ಮನ್ನು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ, ಪೂರ್ವ ಬಂಗಾಳ ಮತ್ತು ಅಸ್ಸಾಮಿನ ಮಹಮ್ಮದೀಯ ಸಮುದಾಯದ ನಿಷ್ಠೆಯನ್ನು ಮೆಚ್ಚಿಕೊಳ್ಳುವುದರಲ್ಲಿ ಮತ್ತು ಅವರ ಹಿತಾಸಕ್ತಿಗಳನ್ನು ರಕ್ಷಿಸುವಲ್ಲಿ ಬ್ರಿಟಿಷ್ ನ್ಯಾಯದ ಮತ್ತು ನಿಷ್ಪಕ್ಷಪಾತಭಾವದ ಮೇಲೆ ಇದುವರೆಗೆ ಇದ್ದಷ್ಟೇ ದೃಢವಾಗಿ ಈ ಸಮುದಾಯ ನಂಬಿಕೆಯನ್ನಿಡಬೇಕು ಎಂದೂ ನೀವು ನಂಬಬೇಕು ಎಂದು ನಾನು ನಿಮ್ಮನ್ನು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ, ಪೂರ್ವ ಬಂಗಾಲ ಮತ್ತು ಅಸ್ಸಾಮಿನ ಮಹಮ್ಮದೀಯ ಸಮುದಾಯದ ನಿಷ್ಠೆಯನ್ನು ಮೆಚ್ಚಿಕೊಳ್ಳುವುದರಲ್ಲಿ ಮತ್ತು ಅವರ ಹಿತಾಸಕ್ತಿಗಳನ್ನು ರಕ್ಷಿಸುವಲ್ಲಿ ಬ್ರಿಟಿಷ್ ನ್ಯಾಯದ ಮತ್ತು ನಿಷ್ಪಕ್ಷಪಾತಭಾವದ ಮೇಲೆ ಇದುವರೆಗೆ ಇದ್ದಷ್ಟೇ ದೃಢವಾಗಿ ಈ ಸಮುದಾಯ ನಂಬಿಕೆಯನ್ನಿಡಬೇಕು ಎಂದೂ ನೀವು ನಂಬಬೇಕು ಎಂದು ನಿಮ್ಮನ್ನು ಕೇಳಿಕೊಳ್ಳುತ್ತೇನೆ.

## ಭಾರತದಲ್ಲಿ ಅಶಾಂತಿ

ಮಹನೀಯರೆ, ರಾಜಕೀಯ ವಾತಾವರಣದಲ್ಲೆಲ್ಲ ಅನೇಕ ಬದಲಾವಣೆಗಳು ಸಂಭವಿಸುವ ಹೊತ್ತಿನಲ್ಲಿ ನನ್ನನ್ನು ಉದ್ದೇಶಿಸಿ ಮನವಿಯನ್ನು ಸಲ್ಲಿಸಿದ್ದೀರಿ. ಇವುಗಳ ಅಸ್ತಿತ್ವವನ್ನು ಅಲ್ಲಗಳೆಯುವುದು ಹುಚ್ಚುತನ ಎಂದು ನಮಗೆಲ್ಲರಿಗೂ ಅನಿಸುತ್ತದೆ. ಭಾರತಕ್ಕೆ ಅಪರಿಚಿತವಾಗಿರುವ ಆಶಾಭಾವಗಳು ಮತ್ತು ಆಕಾಂಕ್ಷೆಗಳು ತಮ್ಮ ಅಸ್ತಿತ್ವದ ಅರಿವನ್ನು ಈಗ ಮಾಡಿಕೊಡುತ್ತಿವೆ. ಅವುಗಳನ್ನು ಅಲ್ಲಗಳೆಯಲೂ ಆಗದು– ಹಾಗೆ ಮಾಡಲು ಅಪೇಕ್ಷಿಸುವುದೇ ತಪ್ಪಾಗುವುದು. ಆದರೆ ಇಷ್ಟೆಲ್ಲ ಅಶಾಂತಿಗೆ ಕಾರಣವೇನು? ದುರಾಡಳಿತಕ್ಕೆ ಒಳಪಟ್ಟ ಕೋಟಿಗಟ್ಟಲೆ ಜನರ ಅಸಂತೃಪ್ತಿಯಾಗಲಿ,– ಹೀಗೆಂದು ಪ್ರಾಮಾಣಿಕವಾಗಿ ಹೇಳಹೊರಟವರಿಗೆ ಸವಾಲು ಹಾಕಲು ನಾನು ಸಿದ್ದನಿದ್ದೇನೆ– ಅಸಂತುಷ್ಟ ಜನತೆಯ ದಂಗೆಯಾಗಲಿ ಇದಕ್ಕೆ ಕಾರಣವಲ್ಲ.

## ಪಾಶ್ಚಾತ್ಯ ವಿದ್ಯಾಭ್ಯಾಸದ ಫಲಗಳು

ಇದಕ್ಕೆ ಕಾರಣ ವಿದ್ಯಾಭ್ಯಾಸದ ಬೆಳವಣಿಗೆ. ಈ ಬೆಳವಣಿಗೆಯಲ್ಲಿ ಇದಿನ್ನೂ ಜನಸ್ತೋಮದ ಅತ್ಯಂತ ಸಣ್ಣ ಪಾಲು ಮಾತ್ರ ಭಾಗವಹಿಸಿದೆ. ಇದರ ಬೀಜವನ್ನು ಮೊತ್ತಮೊದಲಲ್ಲಿ ಬ್ರಿಟಿಷ್ ಆಡಳಿತ ಬಿತ್ತಿತು, ಈಗ ಅದರ ಫಲವನ್ನು ಪೋಷಿಸಿ, ಅದಕ್ಕೆ ಸರಿಯಾದ ದಿಕ್ಕನ್ನು ಕೊಡಲು ಬ್ರಿಟಿಷ್ ಆಡಳಿತ ಪ್ರಯತ್ನಿಸುತ್ತಿದೆ. ನಾವೀಗ ಕೊಯ್ಯುವ ಫಸಲಿನಲ್ಲಿ ಹಲವು ಕಳೆಗಿಡಗಳು ಇರಬಹುದು. ನಾವು ಬಿತ್ತಿರುವ ಪಾಶ್ಚಾತ್ಯ ಧಾನ್ಯ ಭಾರತದ ಜನರ ಅಗತ್ಯಗಳಿಗೆ ಸಂಪೂರ್ಣವಾಗಿ ಅನುಗುಣವಾಗಿರದೆ ಹೋಗಬಹುದು. ಆದರೆ, ವರ್ಷಗಳು ಕಳೆದಂತೆ, ವಿದ್ಯಾಭ್ಯಾಸದ ಬೆಳೆ ಹೆಚ್ಚುತ್ತಾ ಹೋಗುವುದು, ಮತ್ತು ಅದು ಕೊಡುವ ಪೋಷಕಾಂಶದ ಆರೋಗ್ಯಕರ ಸ್ಥಿತಿ ಅದರ ಫಲಗಳನ್ನು ಎಷ್ಟು ಎಚ್ಚರಿಕೆಯಿಂದ ನಿರ್ವಹಿಸಲಾಗುವುದು ಮತ್ತು ಹಂಚಲಾಗುವುದು

ಎಂಬುದರ ಮೇಲೆ ಹೋಗುವುದು. ಮಹನೀಯರೇ, "ಯುರೋಪಿಯನ್ ಮಾದರಿಯ ಪ್ರಾತಿನಿಧಿಕ ಸಂಸ್ಥೆಗಳು ಬಾರತದ ಜನರಿಗೆ ಹೊಚ್ಚ ಹೊಸತಾಗಿವೆ" ಎಂದೂ, ಅಥವಾ ಅವುಗಳನ್ನು ಇಲ್ಲಿ ಬಳಕೆಗೆ ತರುವುದರಲ್ಲಿ ಅತ್ಯಂತ ಹೆಚ್ಚಿನ ಯೋಚನೆ ಮತ್ತು ಜಾಗರೂಕತೆಯ ಅಗತ್ಯವಿದೆ ಎಂದೂ ನನಗೆ ನೀವು ಹೇಳಬೇಕಾದರೆ ಕ್ಷಮಾಯಾಚನೆ ಮಾಡಬೇಕಿಲ್ಲ. ಪೌರ್ವಾತ್ಯ ಜನಾಂಗಗಳ ಅನುವಂಶೀಯ ಪ್ರವೃತ್ತಿಗಳ ಮತ್ತು ಸಂಪ್ರದಾಯಗಳ ನಡುವೆ ಪಾಶ್ಚಾತ್ಯ ಜಗತ್ತಿನ ಇಡೀ ರಾಜಕೀಯ ಯಂತ್ರವನ್ನು ಬರಮಾಡುವುದು ನನಗೆ ಬಹಳ ದೂರವಾದ ಮಾತು. ಪಾಶ್ಚಾತ್ಯ ಚಿಂತನೆಯ ವಿಸ್ತಾರ, ಪಾಶ್ಚಾತ್ಯ ನಾಗರಿಕತೆಯ ಬೋಧನೆಗಳು, ಬ್ರಿಟಿಷ್ ವೈಯಕ್ತಿಕತೆಯ ಸ್ವಾತಂತ್ರ್ಯ– ಇವುಗಳಿಂದ ಭಾರತದ ಜನತೆಗೆ ಆಗಬೇಕಾದುದು ಬಹಳಷ್ಟು ಇದೆ. ಆದರೆ ಇವುಗಳ ಜೊತೆಗೆ ರಾಜಕೀಯ ರೀತಿಗಳನ್ನು ಒಪ್ಪಲೇಬೇಕೆಂಬುದರ ಬಗೆಗೆ ಕಾರ್ಯಸಾಧ್ಯವಲ್ಲದ ಒಂದು ಒತ್ತಾಯವನ್ನು ತರಬಾರದು ಎಂಬುದು, ನಿಮ್ಮ ಹಾಗೆ, ನನ್ನ ಅನಿಸಿಕೆಯೂ ಹೌದು.

## ಮಹಮ್ಮದೀಯರ ರಾಜಕೀಯ ಭವಿಷ್ಯ

ಮಹನೀಯರೇ, ರಾಜಕೀಯ ಭವಿಷ್ಯದ ಬಗೆಗೆ ನಿಮ್ಮ ನಿಲುವನ್ನೇ ಈಗ ಪ್ರಸ್ತಾಪಿಸುವೆನು; ಇದು ನೀವು ಪ್ರತಿನಿಧಿಸುವ ಮಹಮ್ಮದೀಯ ಸಮುದಾಯದ ನಿಲುವು. ಸಾರ್ವಜನಿಕ ಆಗುಹೋಗುಗಳಲ್ಲಿ ನಿಮ್ಮ ಸಮುದಾಯ ಹಕ್ಕಿನಿಂದ ಕೇಳುತ್ತಿರುವ ಷರತ್ತುಗಳನ್ನು ಮತ್ತು ಪಾಲನ್ನು ಕುರಿತು ವಿವರವಾಗಿ ನಿಮ್ಮ ಜೊತೆ ವಿಚಾರ ಮಾಡಲು ನನಗೆ ಆಗುತ್ತಿಲ್ಲ ಎಂಬುದು ನಿಮಗೆ ಅರ್ಥವಾಗುತ್ತಿದೆ ಎಂದು ನಾನು ಭಾವಿಸಿದ್ದೇನೆ. ಕೆಲವು ಸ್ಥೂಲಾಂಶಗಳನ್ನು ಮಾತ್ರ ನಾನು ಈಗ ಚರ್ಚಿಸಬಹುದು. ನಿಮಗೆ ತಿಳಿದಿರುವಂತೆ, (ಪ್ರಾತಿನಿಧ್ಯದ?) ಮಂಡನೆಯ ಪ್ರಶ್ನೆಯನ್ನು ಪರಿಶೀಲಿಸಲು ನಾನು ಇತ್ತೀಚೆಗೆ ನೇಮಿಸಿದ ಸಮಿತಿಯ ಮುಂದೆ, ನೀವು ಎತ್ತಿದ ಪ್ರಶ್ನೆಗಳು ಈಗ ಇವೆ. ನಿಮ್ಮ ಮನವಿಯನ್ನು ಅವರಿಗೆ ಒಪ್ಪಿಸಲಾಗುವಂತೆ ನಾನು ಎಚ್ಚರ ವಹಿಸುವೆನು. ಅದೇ ಹೊತ್ತಿನಲ್ಲಿ, ಸಮಿತಿಯ ವರದಿಗೆ ಯಾವುದೇ ಬಗೆಯಲ್ಲಿ ತೊಡಕನ್ನುಂಟುಮಾಡದೆ, ನಿಮ್ಮ ಮಾತುಗಳ ಸ್ಥೂಲಭಾವಕ್ಕೆ ಉತ್ತರಿಸಲು ನನಗೆ ಸಾಧ್ಯವಾಗುವುದು ಎಂದು ನಾನು ನಂಬಿದ್ದೇನೆ.

## ಪ್ರಾತಿನಿಧ್ಯದ ಪ್ರಶ್ನೆ

ನಾನು ಅರ್ಥಮಾಡಿಕೊಂಡಂತೆ, ನಿಮ್ಮ ಮನವಿಯ ಸಾರಾಂಶ ಇಷ್ಟು: ಮುನಿಸಿಪಾಲಿಟಿ, ಜಿಲ್ಲಾ ಮಂಡಳಿ ಅಥವಾ ಶಾಸನ ಪರಿಷತ್ತು– ಇವುಗಳಲ್ಲಿ ಯಾವುದಕ್ಕಾದರೂ ಸಂಬಂಧಿಸುವ ಯಾವುದೇ ಪ್ರಾತಿನಿಧ್ಯ ವ್ಯವಸ್ಥೆಯಲ್ಲಿ ಚುನಾವಣಾ ವ್ಯವಸ್ಥೆಯನ್ನು ಹೊಸದಾಗಿ ಸೇರಿಸಲು ಅಥವಾ ಹೆಚ್ಚಿಸಲು ಉದ್ದೇಶಿಸುವಾಗ, ಮಹಮ್ಮದೀಯ ಸಮುದಾಯಕ್ಕೆ, ಒಂದು ಸಮುದಾಯವಾಗಿ ಪ್ರಾತಿನಿಧ್ಯ ದೊರಕಬೇಕು. ಈಗ ರಚಿತವಾಗಿರುವಂತೆ, ಹಲವು ಸಂದರ್ಭಗಳಲ್ಲಿ ಚುನಾಯಕಾ ಸಭೆಗಳು ಮಹಮ್ಮದೀಯ ಅಭ್ಯರ್ಥಿಯನ್ನು ಆರಿಸಿ ಕಳಿಸುತ್ತವೆ ಎಂದು ನಿರೀಕ್ಷಿಸಬಾರದು ಎಂದೂ, ಒಂದು ವೇಳೆ, ಅಚಾನಕವಾಗಿ, ಅವರು ಮಹಮ್ಮದೀಯ ಅಭ್ಯರ್ಥಿಯನ್ನು ಆರಿಸಿದ್ದೇ ಆದರೆ, ಆಗ ಅವನು ತನ್ನನ್ನು ಆರಿಸಿದ, ಮತ್ತು ತನ್ನ ಸಮುದಾಯಕ್ಕೆ ವಿರೋಧವಾಗಿರುವ ಬಹುಮತೀಯರ ಅಭಿಪ್ರಾಯಕ್ಕೆ ತನ್ನ ಅಭಿಪ್ರಾಯವನ್ನು ಬಲಿಕೊಟ್ಟರೆ ಮಾತ್ರ ಅದು ಸಾಧ್ಯವೆಂದೂ, ಅಂಥ ಸಂದರ್ಭದಲ್ಲಿ ಅವನು ತನ್ನ ಸಮುದಾಯವನ್ನು ಪ್ರತಿನಿಧಿಸುವುದೇ ಇಲ್ಲವೆಂದೂ ನೀವು ಹೇಳಿದಿರಿ. ನಿಮ್ಮ ಸಮುದಾಯದ ರಾಜಕೀಯ ಪ್ರಾಮುಖ್ಯ ಹಾಗೂ ಸಾಮ್ರಾಜ್ಯಕ್ಕೆ ಅದು ಸಲ್ಲಿಸಿದ ಸೇವೆ– ಇವೆರಡರಲ್ಲೂ ನಿಮ್ಮ ಸಮುದಾಯದ ಸಂಖ್ಯಾಬಲದ ಕಾರಣದಿಂದ ನಿಮ್ಮನ್ನು ವಿಶ್ವ ಗೌರವದಿಂದ

ಪರಿಭಾವಿಸಬೇಕೆಂಬುದು ಹಕ್ಕಿನಿಂದ ಕೇಳಬಹುದಾದ ನಿಮ್ಮ ಕೋರಿಕೆ ಎಂದು ನೀವು ನ್ಯಾಯವಾಗಿಯೇ ಹೇಳುತ್ತಿದ್ದೀರಿ. ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯವನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ; ದಯವಿಟ್ಟು ನನ್ನನ್ನು ತಪ್ಪು ತಿಳಿದುಕೊಳ್ಳಬಾರದು. ಸಮುದಾಯಗಳ ಪ್ರಾತಿನಿಧ್ಯವನ್ನು ಯಾವ ಸಾಧನಗಳ ಮೂಲಕ ಸಾಧಿಸಬಹುದು ಎಂಬುದನ್ನು ಸೂಚಿಸಲು ನಾನು ಪ್ರಯತ್ನಿಸುತ್ತಿಲ್ಲ. ಆದರೆ ಈ ಭೂಖಂಡದ ಜನತೆಯಲ್ಲಿರುವ ಧಾರ್ಮಿಕ ನಂಬಿಕೆಗಳನ್ನು ಮತ್ತು ಸಂಪ್ರದಾಯಗಳನ್ನು ಗಣನೆಗೆ ತೆಗೆದುಕೊಳ್ಳದೆ ವೈಯಕ್ತಿಕ ಮತಚಲಾವಣೆಯ ಹಕ್ಕನ್ನು ಕೊಡುವ ಯಾವುದೇ ಚುನಾವಣಾ ಪ್ರಾತಿನಿಧ್ಯಕ್ಕೆ ಭಾರತದಲ್ಲಿ ಹಾನಿಕರವಾದ ಸೋಲು ಉಂಟಾಗುವುದು ಎಂದು ನೀವು ನಂಬಿದಷ್ಟೇ ಗಾಢವಾಗಿ ನಾನೂ ನಂಬುತ್ತೇನೆ. ಭಾರತದ ಬೃಹತ್ ಜನಸ್ತೋಮಗಳಿಗೆ ಪ್ರಾತಿನಿಧಿಕ ಸಂಸ್ಥೆಗಳ ಜ್ಞಾನವಿಲ್ಲ. ಮಹನೀಯರೇ, ಸ್ವಯಂ–ಆಡಳಿತ ಏಣಿಯ ಮೊದಲ ಮೆಟ್ಟಲುಗಳು ಮುನಿಸಿಪಲ್ ಮತ್ತು ಜಿಲ್ಲಾಮಂಡಳಿಗಳಲ್ಲಿ ಇವೆಯೆಂದೂ, ಜನರ ಹಂತಹಂತದ ರಾಜಕೀಯ ಶಿಕ್ಷಣವನ್ನು ಈ ದಿಸೆಯಲ್ಲಿ ನಾವು ಹುಡುಕಬೇಕೆಂದೂ ನೀವು ಹೇಳಿರುವುದು ನನಗೆ ಒಪ್ಪಿಗೆಯಾಗಿದೆ.

## ಒಂದು ಆಶ್ವಾಸನೆ

ಸದ್ಯಕ್ಕೆ, ನನಗೆ ಸಂಬಂಧಪಡುವ ಯಾವುದೇ ಆಡಳಿತ ಪುನರ್ವ್ಯವಸ್ಥೆಯಲ್ಲಿ, ಒಂದು ಸಮುದಾಯವಾಗಿ ಮಹಮ್ಮದೀಯ ಸಮುದಾಯದ ರಾಜಕೀಯ ಹಕ್ಕುಗಳಿಗೆ ಮತ್ತು ಹಿತಾಸಕ್ತಿಗಳಿಗೆ ರಕ್ಷಣೆ ಇರುವುದು ಎಂದು ಮಹಮ್ಮದೀಯ ಸಮುದಾಯ ಧೈರ್ಯವಾಗಿರಬೇಕು ಎಂದಷ್ಟೇ ನಾನು ಹೇಳಬಲ್ಲೆ. ಮಹಾಪ್ರಭುಗಳ ಭಾರತೀಯ ಸಾಮ್ರಾಜ್ಯದ ಜನತೆಯಲ್ಲಿರುವ ಅಸಂಖ್ಯಾತರ ರಾಷ್ಟ್ರೀಯ ಸಂಪ್ರದಾಯಗಳನ್ನು ಮತ್ತು ಧಾರ್ಮಿಕ ನಂಬಿಕೆಗಳನ್ನು, ಇದುವರೆಗೆ ಮಾಡಿದಂತೆ, ಬ್ರಿಟಿಷ್ ರಾಜ್ ಗೌರವಿಸುವುದು ಎಂಬುದರ ಬಗೆಗೆ ನೀವೂ ಭಾರತದ ಜನರೂ ದೃಢ ನಂಬಿಕೆ ಇಡಬಹುದೆಂದೂ ಹೇಳಬಲ್ಲೆ.

ಘನತೆವೆತ್ತವರೇ, ಮತ್ತು ಮಹನೀಯರೇ, ಇಷ್ಟೊಂದು ಪ್ರಸಿದ್ಧ ಹಾಗೂ ಪ್ರಾತಿನಿಧಿಕ ಮಹಮ್ಮದೀಯರನ್ನು ಭೇಟಿಯಾಗುವ ಒಂದು ವಿಶಿಷ್ಟ ಅವಕಾಶವನ್ನು ಈ ನಿಯೋಗ ನನ್ನಲ್ಲಿ ಕಲ್ಪಿಸಿಕೊಟ್ಟದ್ದಕ್ಕೆ ನಿಮಗೆ ನಾನು ಕೃತಜ್ಞನಾಗಿದ್ದೇನೆ. ಬಹುದೂರದಿಂದ ನೀವು ಇಲ್ಲಿಗೆ ಬರುವಂತೆ ಮಾಡಿದ ನಿಮ್ಮ ಉತ್ಸಾಹ ಹಾಗೂ ಸಾರ್ವಜನಿಕ ವಿಚಾರಗಳಲ್ಲಿ ನಿಮಗಿರುವ ಆಸಕ್ತಿಯನ್ನು ನಾನು ಬಹುವಾಗಿ ಮೆಚ್ಚಿದ್ದೇನೆ. ಸಿಮ್ಲಾಕ್ಕೆ ನಿಮ್ಮ ಭೇಟಿ ಅನಿವಾರ್ಯವಾಗಿ ಇಷ್ಟು ಅಲ್ಪಾವಧಿಯದಾಯಿತು ಎಂದು ಮಾತ್ರ ವಿಷಾದಿಸುತ್ತೇನೆ.

# ಅನುಬಂಧ - XIII

## ಭಾರತ ಸರಕಾರ ಕಾಯ್ದೆ, ೧೯೩೫ - ಇದರಾನ್ವಯ ಪ್ರತಿ ಪ್ರಾಂತೀಯ ಶಾಸನ ಸಭೆಯ ಕೆಳಮನೆಯಲ್ಲಿ ಸ್ಥಾನಗಳ ಹಂಚಿಕೆ

| ಪ್ರಾಂತ್ಯ | ಸಾಮಾನ್ಯ ಸ್ಥಾನಗಳು | | | | | | | | | | | | | ಮಹಿಳೆಯರಿಗೆ ಸ್ಥಾನಗಳು | | | | |
|---|---|---|---|---|---|---|---|---|---|---|---|---|---|---|---|---|---|---|
| | ಒಟ್ಟು ಸ್ಥಾನಗಳು | ಒಟ್ಟು ಸಾಮಾನ್ಯ ಸ್ಥಾನಗಳು | ಪರಿಶಿಷ್ಟ ಜಾತಿಗಳಿಗೆ ಮೀಸಲಿಟ್ಟ ಸಾಮಾನ್ಯ ಸ್ಥಾನಗಳು | ಹಿಂದುಳಿದ ಪ್ರದೇಶಗಳ ಮತ್ತು ಬುಡಕಟ್ಟುಗಳ ಪ್ರತಿನಿಧಿಗಳಿಗೆ ಮೀಸಲಿಟ್ಟ ಸ್ಥಾನಗಳು | ಸಿಖ್ಖರಿಗೆ ಸ್ಥಾನಗಳು | ಮಹಮ್ಮದೀಯರಿಗೆ ಸ್ಥಾನಗಳು | ಆಂಗ್ಲೋ-ಇಂಡಿಯನರಿಗೆ ಸ್ಥಾನಗಳು | ಯುರೋಪಿಯನರಿಗೆ ಸ್ಥಾನಗಳು | ಭಾರತೀಯ ಕ್ರೈಸ್ತರಿಗೆ ಸ್ಥಾನಗಳು | ವಾಣಿಜ್ಯ, ಕೈಗಾರಿಕೆ, ಗಣಿ ಉದ್ಯಮ ಮತ್ತು ತೋಟಗಳ ಪ್ರತಿನಿಧಿಗಳಿಗೆ ಸ್ಥಾನಗಳು | ಜಮೀನುದಾರರ ಸ್ಥಾನಗಳು | ವಿಶ್ವವಿದ್ಯಾಲಯದ ಸ್ಥಾನಗಳು | ಕಾರ್ಮಿಕ ಪ್ರತಿನಿಧಿಗಳಿಗೆ ಸ್ಥಾನಗಳು | ಸಾಮಾನ್ಯ | ಸಿಖ್ | ಮಹಮ್ಮದೀಯ | ಆಂಗ್ಲೋ-ಇಂಡಿಯನ್ | ಭಾರತೀಯ ಕ್ರೈಸ್ತ |
| | ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ | ೧೪ | ೧೫ | ೧೬ | ೧೭ | ೧೮ |
| ಮದರಾಸು | ೨೧೫ | ೧೪೬ | ೩೦ | ೧ | .. | ೨೮ | ೨ | ೩ | ೮ | ೬ | ೬ | ೧ | ೬ | ೬ | .. | ೧ | .. | ೧ |
| ಮುಂಬೈ | ೧೭೫ | ೧೧೪ | ೧೫ | ೧ | .. | ೨೯ | ೨ | ೩ | ೩ | ೭ | ೨ | ೧ | ೭ | ೫ | .. | ೧ | .. | .. |
| ಬಂಗಾಳ | ೨೫೦ | ೭೮ | ೩೦ | .. | .. | ೧೧೭ | ೩ | ೧೧ | ೨ | ೧೯ | ೫ | ೨ | ೮ | ೨ | .. | ೨ | ೧ | .. |
| ಸಂಯುಕ್ತ ಪ್ರಾಂತ್ಯಗಳು | ೨೨೮ | ೧೪೦ | ೨೦ | .. | .. | ೬೪ | ೧ | ೨ | ೨ | ೩ | ೬ | ೧ | ೩ | ೪ | .. | ೨ | .. | .. |
| ಪಂಜಾಬ | ೧೭೫ | ೪೨ | ೮ | .. | ೩೧ | ೮೪ | ೧ | ೧ | ೨ | ೧ | ೫ | ೧ | ೩ | ೧ | ೧ | ೨ | .. | .. |
| ಬಿಹಾರ | ೧೫೨ | ೮೬ | ೧೫ | ೭ | .. | ೩೯ | ೧ | ೨ | ೧ | ೪ | ೪ | ೧ | ೩ | ೩ | .. | ೧ | .. | .. |
| ಕೇಂದ್ರ ಪ್ರಾಂತ್ಯಗಳು ಮತ್ತು ಬೆರಾರ್ | ೧೧೨ | ೮೪ | ೨೦ | ೧ | .. | ೧೪ | ೧ | ೧ | .. | ೨ | ೩ | ೧ | ೨ | ೩ | .. | .. | .. | .. |
| ಅಸ್ಸಾಂ | ೧೦೮ | ೪೭ | ೭ | ೯ | .. | ೩೪ | .. | ೧ | ೧ | ೧೧ | .. | .. | ೪ | ೧ | .. | .. | .. | .. |
| ವಾಯವ್ಯ ಗಡಿ ಪ್ರಾಂತ್ಯ | ೫೦ | ೯ | .. | .. | ೩ | ೩೬ | .. | .. | .. | .. | ೨ | .. | .. | .. | .. | .. | .. | .. |

| | ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ | ೧೪ | ೧೫ | ೧೬ | ೧೭ | ೧೮ |
|---|---|---|---|---|---|---|---|---|---|---|---|---|---|---|---|---|---|---|
| ಒರಿಸ್ಸಾ | ೬೦ | ೪೪ | ೬ | ೫ | .. | ೪ | .. | .. | ೧ | ೧ | ೨ | .. | ೧ | ೨ | .. | .. | .. | .. |
| ಸಿಂಧ್ | ೬೦ | ೧೮ | .. | .. | .. | ೩೩ | .. | ೨ | .. | ೨ | ೨ | .. | ೧ | ೧ | .. | ೧ | .. | .. |

ಮುಂಬೈಯಲ್ಲಿ ಸಾಮಾನ್ಯ ಸ್ಥಾನಗಳ ಪೈಕಿ ಏಳನ್ನು ಮರಾಠರಿಗೆ ಮೀಸಲಿಡತಕ್ಕದ್ದು.
ಪಂಜಾಬಿನಲ್ಲಿ ಜಮೀನುದಾರರ ಸ್ಥಾನಗಳ ಪೈಕಿ ಒಂದನ್ನು ಒಬ್ಬ ಸುಮಾನ್‌ದಾರನಿಂದ ಭರ್ತಿ ಮಾಡತಕ್ಕದ್ದು.
ಅಸ್ಸಾಂ ಮತ್ತು ಒರಿಸ್ಸಾಗಳಲ್ಲಿ ಮಹಿಳೆಯರಿಗೆ ಮೀಸಲಿಟ್ಟ ಸ್ಥಾನಗಳು ಬೇ-ಕೋಮು ಸ್ಥಾನಗಳಾಗತಕ್ಕದ್ದು

# ಅನುಬಂಧ - XIV

## ಭಾರತ ಸರಕಾರ ಕಾಯ್ದೆ, ೧೯೩೫ – ಇದರನ್ವಯ ಪ್ರತಿ ಪ್ರಾಂತೀಯ ಶಾಸನ ಸಭೆಯ ಮೇಲ್ಮನೆಯಲ್ಲಿ ಸ್ಥಾನಗಳ ಹಂಚಿಕೆ

| ಪ್ರಾಂತ್ಯ | ಒಟ್ಟು ಸ್ಥಾನಗಳು | ಸಾಮಾನ್ಯ ಸ್ಥಾನಗಳು | ಮಹಮ್ಮದೀಯರಿಗೆ ಸ್ಥಾನಗಳು | ಯುರೋಪಿಯನರಿಗೆ ಸ್ಥಾನಗಳು | ಭಾರತೀಯ ಕ್ರೈಸ್ತರಿಗೆ ಸ್ಥಾನಗಳು | ಶಾಸನಸಭೆಯ ಅಸೆಂಬ್ಲಿಯಿಂದ ಭರ್ತಿಮಾಡತಕ್ಕ ಸ್ಥಾನಗಳು | ಗವರ್ನರರಿಂದ ಭರ್ತಿ ಮಾಡತಕ್ಕ ಸ್ಥಾನಗಳು |
|---|---|---|---|---|---|---|---|
| ಮದರಾಸು | ೫೪ಕ್ಕೆ ಕಡಿಮೆಯಿಲ್ಲದಷ್ಟು<br>೫೬ಕ್ಕೆ ಹೆಚ್ಚಿಲ್ಲದಷ್ಟು | ೩೫ | ೭ | ೧ | ೩ | .. | ೮ಕ್ಕೆ ಕಡಿಮೆಯಿಲ್ಲದಷ್ಟು<br>೧೦ಕ್ಕೆ ಹೆಚ್ಚಿಲ್ಲದಷ್ಟು |
| ಮುಂಬೈ | ೨೯ಕ್ಕೆ ಕಡಿಮೆಯಿಲ್ಲದಷ್ಟು<br>೩೦ಕ್ಕೆ ಹೆಚ್ಚಿಲ್ಲದಷ್ಟು | ೨೦ | ೫ | ೧ | .. | .. | ೩ಕ್ಕೆ ಕಡಿಮೆಯಿಲ್ಲದಷ್ಟು<br>೪ಕ್ಕೆ ಹೆಚ್ಚಿಲ್ಲದಷ್ಟು |
| ಬಂಗಾಳ | ೬೩ಕ್ಕೆ ಕಡಿಮೆಯಿಲ್ಲದಷ್ಟು<br>೬೫ಕ್ಕೆ ಹೆಚ್ಚಿಲ್ಲದಷ್ಟು | ೧೦ | ೧೭ | ೩ | .. | ೨೭ | ೬ಕ್ಕೆ ಕಡಿಮೆಯಿಲ್ಲದಷ್ಟು<br>೮ಕ್ಕೆ ಹೆಚ್ಚಿಲ್ಲದಷ್ಟು |
| ಸಂಯುಕ್ತ ಪ್ರಾಂತ್ಯಗಳು | ೫೮ಕ್ಕೆ ಕಡಿಮೆಯಿಲ್ಲದಷ್ಟು<br>೬೦ಕ್ಕೆ ಹೆಚ್ಚಿಲ್ಲದಷ್ಟು | ೩೪ | ೧೭ | ೧ | .. | .. | ೬ಕ್ಕೆ ಕಡಿಮೆಯಿಲ್ಲದಷ್ಟು<br>೮ಕ್ಕೆ ಹೆಚ್ಚಿಲ್ಲದಷ್ಟು |
| ಬಿಹಾರ್ | ೨೯ಕ್ಕೆ ಕಡಿಮೆಯಿಲ್ಲದಷ್ಟು<br>೩೦ಕ್ಕೆ ಹೆಚ್ಚಿಲ್ಲದಷ್ಟು | ೯ | ೪ | ೧ | .. | ೧೨ | ೩ಕ್ಕೆ ಕಡಿಮೆಯಿಲ್ಲದಷ್ಟು<br>೪ಕ್ಕೆ ಹೆಚ್ಚಿಲ್ಲದಷ್ಟು |
| ಅಸ್ಸಾಂ | ೨೧ಕ್ಕೆ ಕಡಿಮೆಯಿಲ್ಲದಷ್ಟು<br>೨೨ಕ್ಕೆ ಹೆಚ್ಚಿಲ್ಲದಷ್ಟು | ೧೦ | ೬ | ೨ | .. | .. | ೩ಕ್ಕೆ ಕಡಿಮೆಯಿಲ್ಲದಷ್ಟು<br>೪ಕ್ಕೆ ಹೆಚ್ಚಿಲ್ಲದಷ್ಟು |

# ಅನುಬಂಧ - XV

## ಭಾರತ ಸರಕಾರ ಕಾಯ್ದೆ,೧೯೩೫ - ಇದರಾನ್ವಯ ಬ್ರಿಟಿಷ್ ಭಾರತದ ಸಂಯುಕ್ತ ಶಾಸನ ಸಭೆಯ ಕೆಳಮನೆಯಲ್ಲಿ ಸ್ಥಾನಗಳ ಹಂಚಿಕೆ

| ಪ್ರಾಂತ್ಯ | ಒಟ್ಟು ಸ್ಥಾನಗಳು | ಸಾಮಾನ್ಯ ಸ್ಥಾನಗಳು: ಒಟ್ಟು ಸಾಮಾನ್ಯ ಸ್ಥಾನಗಳು | ಸಾಮಾನ್ಯ ಸ್ಥಾನಗಳು: ಪರಿಶಿಷ್ಟ ಜಾತಿಗಳಿಗೆ ಮೀಸಲಿಟ್ಟ ಸಾಮಾನ್ಯ ಸ್ಥಾನಗಳು | ಸಿಖ್ಖರಿಗೆ ಸ್ಥಾನಗಳು | ಮಹಮ್ಮದೀಯರಿಗೆ ಸ್ಥಾನಗಳು | ಆಂಗ್ಲೋ ಇಂಡಿಯನ್ನರಿಗೆ ಸ್ಥಾನಗಳು | ಯುರೋಪಿಯನ್ನರಿಗೆ ಸ್ಥಾನಗಳು | ಭಾರತೀಯ ಕ್ರೈಸ್ತರಿಗೆ ಸ್ಥಾನಗಳು | ವಾಣಿಜ್ಯ ಮತ್ತು ಕೈಗಾರಿಕೆಗಳ ಪ್ರತಿನಿಧಿಗಳಿಗೆ ಸ್ಥಾನಗಳು | ಜಮೀನುದಾರರ ಸ್ಥಾನಗಳು | ಕಾರ್ಮಿಕರ ಪ್ರತಿನಿಧಿಗಳಿಗೆ ಸ್ಥಾನಗಳು | ಮಹಿಳೆಯರಿಗೆ ಸ್ಥಾನಗಳು |
|---|---|---|---|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ |
| ಮದರಾಸು | ೩೭ | ೧೯ | ೪ | .. | ೮ | ೧ | ೧ | ೨ | ೨ | ೧ | ೧ | ೨ |
| ಮುಂಬೈ | ೩೦ | ೧೩ | ೨ | .. | ೬ | ೧ | ೧ | ೧ | ೩ | ೧ | ೨ | ೨ |
| ಬಂಗಾಲ | ೩೭ | ೧೦ | ೩ | .. | ೧೭ | ೧ | ೧ | ೧ | ೩ | ೧ | ೨ | ೧ |
| ಸಂಯುಕ್ತ ಪ್ರಾಂತ್ಯಗಳು | ೩೭ | ೧೯ | ೩ | .. | ೧೨ | ೧ | ೧ | ೧ | .. | ೧ | ೧ | ೧ |
| ಪಂಜಾಬ | ೩೦ | ೬ | ೧ | ೬ | ೧೪ | .. | ೧ | ೧ | .. | ೧ | .. | ೧ |
| ಬಿಹಾರ | ೩೦ | ೧೬ | ೨ | .. | ೯ | .. | ೧ | ೧ | .. | ೧ | ೧ | ೧ |
| ಕೇಂದ್ರ ಪ್ರಾಂತ್ಯಗಳು ಮತ್ತು ಬೆರಾರ್ | ೧೫ | .. | ೨ | .. | ೩ | .. | .. | .. | .. | ೧ | ೧ | ೧ |

| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ |
|---|---|---|---|---|---|---|---|---|---|---|---|---|
| ಅಸ್ಸಾಂ | ೧೦ | ೪ | ೧ | .. | ೩ | .. | ೧ | ೧ | .. | .. | ೧ | .. |
| ವಾಯವ್ಯ ಗಡಿ ಪ್ರಾಂತ್ಯ | ೫ | ೧ | .. | .. | ೪ | .. | .. | .. | .. | .. | .. | .. |
| ಒರಿಸ್ಸಾ | ೫ | ೪ | ೧ | .. | ೧ | .. | .. | .. | .. | .. | .. | .. |
| ಸಿಂಧ್ | ೫ | ೧ | .. | .. | ೩ | .. | ೧ | .. | .. | .. | .. | .. |
| ಬ್ರಿಟಿಷ್ ಬಲುಚಿಸ್ತಾನ್ | ೧ | .. | .. | .. | ೧ | .. | .. | .. | .. | .. | .. | .. |
| ದೆಹಲಿ | ೨ | ೧ | .. | .. | ೧ | .. | .. | .. | .. | . | .. | .. |
| ಆಜ್ಮೀರ್-ಮೇರ್‌ವಾರಾ | ೧ | ೧ | .. | .. | .. | .. | .. | .. | .. | .. | .. | .. |
| ಕೊಡಗು | ೧ | ೧ | .. | .. | .. | .. | .. | .. | .. | .. | .. | .. |
| ಪ್ರಾಂತ್ಯೇತರ ಸ್ಥಾನಗಳು | ೪ | .. | .. | .. | . | .. | .. | .. | ೩ | .. | ೧ | .. |
| ಜುಮ್ಲಾ | ೨೫೦ | ೧೦೫ | ೧೯ | ೬ | ೮೨ | ೪ | ೮ | ೮ | ೧೧ | ೭ | ೧೦ | ೯ |

## ಅನುಬಂಧ XVI

### ಭಾರತ ಸರಕಾರ ಕಾಯ್ದೆ ೧೯೩೫ – ಇದರನ್ವಯ ಬ್ರಿಟಿಷ್ ಭಾರತದ ಸಂಯುಕ್ತ ಶಾಸನಸಭೆಯ ಮೇಲ್ಮನೆಯಲ್ಲಿ ಸ್ಥಾನಗಳ ಹಂಚಿಕೆ

| ಪ್ರಾಂತ್ಯ ಮತ್ತು ಸಮುದಾಯ | ಒಟ್ಟು ಸ್ಥಾನಗಳು | ಸಾಮಾನ್ಯ ಸ್ಥಾನಗಳು | ಪರಿಶಿಷ್ಟ ಜಾತಿಗಳಿಗೆ ಸ್ಥಾನಗಳು | ಸಿಖ್ಖರಿಗೆ ಸ್ಥಾನಗಳು | ಮಹಮ್ಮ-ದೀಯರಿಗೆ ಸ್ಥಾನಗಳು | ಮಹಿಳೆ-ಯರಿಗೆ ಸ್ಥಾನಗಳು |
|---|---|---|---|---|---|---|
| ೧ | ೨ | ೩ | ೪ | ೫ | ೬ | ೭ |
| ಮದರಾಸು | ೨೦ | ೧೪ | ೧ | .. | ೪ | ೧ |
| ಮುಂಬೈ | ೧೬ | ೧೦ | ೧ | .. | ೪ | ೧ |
| ಬಂಗಾಳ | ೨೦ | ೮ | ೧ | .. | ೧೦ | ೧ |
| ಸಂಯುಕ್ತ ಪ್ರಾಂತ್ಯಗಳು | ೨೦ | ೧೧ | ೧ | .. | ೭ | ೧ |
| ಪಂಜಾಬ | ೧೬ | ೩ | .. | ೪ | ೮ | ೧ |
| ಬಿಹಾರ್ | ೧೬ | ೧೦ | ೧ | .. | ೪ | ೧ |
| ಕೇಂದ್ರ ಪ್ರಾಂತ್ಯಗಳು ಮತ್ತು ಬೆರಾರ್ | ೮ | ೬ | ೧ | .. | ೧ | .. |
| ಅಸ್ಸಾಂ | ೫ | ೩ | .. | .. | ೨ | .. |
| ವಾಯವ್ಯಗಡಿ ಪ್ರಾಂತ್ಯ | ೫ | ೧ | .. | .. | ೪ | .. |
| ಒರಿಸ್ಸಾ | ೫ | ೪ | .. | .. | ೧ | .. |
| ಸಿಂಧ್ | ೫ | ೨ | .. | .. | ೩ | .. |
| ಬ್ರಿಟಿಷ್ ಬಲೂಚಿಸ್ತಾನ್ | ೧ | .. | .. | .. | ೧ | .. |
| ದೆಹಲಿ | ೧ | ೧ | .. | .. | .. | .. |
| ಅಜ್ಮೀರ್-ಮೆರ್‌ವಾರಾ | ೧ | ೧ | .. | .. | .. | .. |
| ಕೊಡಗು | ೧ | ೧ | .. | .. | .. | .. |
| ಆಂಗ್ಲೊ-ಇಂಡಿಯನರು | ೧ | .. | .. | .. | .. | .. |
| ಯುರೋಪಿಯನರು | ೭ | .. | .. | .. | .. | .. |
| ಭಾರತೀಯ ಕ್ರೈಸ್ತರು | ೨ | .. | .. | .. | .. | .. |
| ಜುಮ್ಲಾ | ೧೫೦ | ೭೫ | ೬ | ೪ | ೪೯ | ೬ |

## ಅನುಬಂಧ XVII

**ಭಾರತ ಸರಕಾರ ಕಾಯ್ದೆ ೧೯೩೫ - ಇದರಾನ್ವಯ ಸಂಯುಕ್ತ ಶಾಸನಸಭೆಯ ಕೆಳಮನೆ ಮತ್ತು ಮೇಲ್ಮನೆಯಲ್ಲಿ ಭಾರತೀಯ ರಾಜ್ಯಗಳಿಗೆ ಸ್ಥಾನಗಳ ಹಂಚಿಕೆ.**

| ರಾಜ್ಯಗಳು ಮತ್ತು ರಾಜ್ಯಗಳ ಗುಂಪುಗಳು | ರಾಜ್ಯ ಪರಿಷತ್ತಿನಲ್ಲಿ ಸ್ಥಾನಗಳ ಸಂಖ್ಯೆ | ರಾಜ್ಯಗಳು ಮತ್ತು ರಾಜ್ಯಗಳ ಗುಂಪುಗಳು | ಸಂಯುಕ್ತ ಅಸೆಂಬ್ಲಿಯಲ್ಲಿ ಸ್ಥಾನಗಳ ಸಂಖ್ಯೆ | ಜನಸಂಖ್ಯೆ |
|---|---|---|---|---|
| ೧ | ೨ | ೩ | ೪ | ೫ |
| ವಿಭಾಗ I | | ವಿಭಾಗ I | | |
| ಹೈದರಾಬಾದ್ | ೫ | ಹೈದರಾಬಾದ್ | ೧೬ | ೧೪,೪೩೬,೧೪೨ |
| ವಿಭಾಗ II | | ವಿಭಾಗ II | | |
| ಮೈಸೂರು | ೩ | ಮೈಸೂರು | ೭ | ೬,೫೫೭,೩೦೨ |
| ವಿಭಾಗ III | | ವಿಭಾಗ III | | |
| ಕಾಶ್ಮೀರ | ೩ | ಕಾಶ್ಮೀರ | ೪ | ೩,೬೪೬,೨೪೩ |
| ವಿಭಾಗ IV | | ವಿಭಾಗ IV | | |
| ಗ್ವಾಲಿಯರ್ | ೩ | ಗ್ವಾಲಿಯರ್ | ೪ | ೩,೫೨೩,೦೭೦ |
| ವಿಭಾಗ V | | ವಿಭಾಗ V | | |
| ಬರೋಡ | ೩ | ಬರೋಡ | ೩ | ೨,೪೪೩,೦೦೭ |
| ವಿಭಾಗ VI | | ವಿಭಾಗ VI | | |
| ಕಲಾಟ್ | ೨ | ಕಲಾಟ್ | ೧ | ೩೪೨,೧೦೧ |
| ವಿಭಾಗ VII | | ವಿಭಾಗ VII | | |
| ಸಿಕ್ಕಿಂ | ೧ | ಸಿಕ್ಕಿಂ | .. | ೧೦೯,೮೦೮ |
| ವಿಭಾಗ VIII | | ವಿಭಾಗ VIII | | |
| ೧. ರಾಮಪುರ್ | ೧ | ೧. ರಾಮಪುರ್ | ೧ | ೪೬೫,೨೨೫ |
| ೨. ಬನಾರಸ್ | ೧ | ೨. ಬನಾರಸ್ | ೧ | ೩೯೧,೨೭೨ |
| ವಿಭಾಗ IX | | ವಿಭಾಗ IX | | |
| ೧. ಟ್ರಾವಂಕೂರ್ | ೨ | ೧. ಟ್ರಾವಂಕೂರ್ | ೫ | ೫,೦೯೫,೯೭೩ |
| ೨. ಕೊಚಿನ್ | ೨ | ೨. ಕೊಚಿನ್ | ೧ | ೧,೨೦೫,೦೧೬ |
| ೩. ಪುದುಕೊಟ್ಟೈ<br>ಬಂಗನಪಳ್ಳೆ<br>ಸಂಡೂರ್ } | ೧ | ೩. ಪುದುಕೊಟ್ಟೈ<br>ಬಂಗನಪಳ್ಳೆ<br>ಸಂಡೂರ್ } | ೧ | ೪೦೦,೫೯೪<br>೩೯,೨೧೮<br>೧೩,೫೮೩ |

## ಅನುಬಂಧ XVII (ಮುಂದುವರಿದುದು)

| ೧ | ೨ | ೩ | ೪ | ೫ |
|---|---|---|---|---|
| ವಿಭಾಗ X | | ವಿಭಾಗ X | | |
| ೧. ಉದಯಪುರ್ | ೨ | ೧. ಉದಯಪುರ್ | ೨ | ೧,೫೬೬,೯೧೦ |
| ೨. ಜೈಪುರ್ | ೨ | ೨. ಜೈಪುರ್ | ೩ | ೨,೬೩೧,೭೭೫ |
| ೩. ಜೋಧ್‌ಪುರ್ | ೨ | ೩. ಜೋಧ್‌ಪುರ್ | ೨ | ೨,೧೨೫,೯೮೨ |
| ೪. ಬಿಕಾನೆರ್ | ೨ | ೪. ಬಿಕಾನೆರ್ | ೧ | ೯೩೬,೨೧೮ |
| ೫. ಅಲ್ವಾರ್ | ೧ | ೫. ಅಲ್ವಾರ್ | ೧ | ೭೪೯,೭೫೧ |
| ೬. ಕೋಟಾ | ೧ | ೬. ಕೋಟಾ | ೧ | ೬೮೫,೮೦೪ |
| ೭. ಭರತ್‌ಪುರ್ | ೧ | ೭. ಭರತ್‌ಪುರ್ | ೧ | ೪೮೬,೯೫೪ |
| ೮. ತೋಂಕ್ | ೧ | ೮. ತೋಂಕ್ | ೧ | ೩೧೭,೩೬೦ |
| ೯. ಧೋಲ್‌ಪುರ್ | ೧ | ೯. ಧೋಲ್‌ಪುರ್ | ೧ | ೨೫೪,೯೮೬ |
| ೧೦. ಕಾರಾಪ್ಲಿ | ೧ | ಕಾರಾಪ್ಲಿ | ೧ | |
| ೧೧. ಬುಂದಿ | ೧ | ೧೦. ಬುಂದಿ | ೧ | ೨೧೬,೭೨೨ |
| ೧೨. ಸಿರೋಹಿ | ೧ | ಸಿರೋಹಿ | | ೨೧೬,೫೨೮ |
| ೧೩. ಡುಂಗಾರ್‌ಪುರ್ | ೧ | ೧೧. ಡುಂಗಾರ್‌ಪುರ್ | ೧ | ೨೨೭,೫೪೪ |
| ೧೪. ಬನ್ಸ್‌ವಾರಾ | ೧ | ಬನ್ಸ್‌ವಾರಾ | | ೨೬೦,೬೭೦ |
| ೧೫. ಪರ್ತಾಬ್‌ಗಢ್ } | ೧ | ೧೨. ಪರ್ತಾಬ್‌ಗಢ್ } | ೧ | ೭೬,೫೩೯ |
| ಝಲಾವಾರ್ } | | ಝಲಾವಾರ್ } | | ೧೦೭,೮೯೦ |
| ೧೬. ಜೈಸಲ್ಮೇರ್ | ೧ | ೧೩. ಜೈಸಲ್ಮೇರ್ } | ೧ | ೭೬,೨೫೫ |
| ಕಿಶನ್‌ಗಢ್ | ೧ | ಕಿಶನ್‌ಗಢ್ } | | ೮೫,೭೪೪ |
| ವಿಭಾಗ XI | | ವಿಭಾಗ XI | | |
| ೧. ಇಂಡೋರ್ | ೨ | ೧. ಇಂಡೋರ್ | ೨ | ೧,೮೨೫,೦೮೯ |
| ೨. ಭೋಪಾಲ್ | ೨ | ೨. ಭೋಪಾಲ್ | ೧ | ೭೨೯,೯೫೫ |
| ೩. ರೇವಾ | ೨ | ೩. ರೇವಾ | ೨ | ೧,೫೮೭,೪೪೫ |
| ೪. ದಾತಿಯಾ } | ೧ | ೪. ದಾತಿಯಾ } | ೧ | ೧೫೮,೮೩೪ |
| ೫. ಒರ್ಛಾ } | | ಒರ್ಛಾ } | | ೩೧೪,೬೬೧ |
| ೬. ಧಾರ್ | ೧ | ೫. ಧಾರ್ | | ೨೪೩,೪೩೦ |
| ೭. ದೇವಾಸ್(ಸೀನಿಯರ್) } | ೧ | ದೇವಾಸ್(ಸೀನಿಯರ್) | ೧ | ೮೩,೩೨೧ |
| ದೇವಾಸ್(ಜೂನಿಯರ್) } | | ದೇವಾಸ್(ಜೂನಿಯರ್) | | ೭೦,೫೧೩ |
| ೮. ಜಒರಾ | ೧ | ೬. ಜಒರಾ | ೧ | ೧೦೦,೧೬೬ |

## ಅನುಬಂಧ XVII (ಮುಂದುವರಿದುದು)

| ೧ | ೨ | ೩ | ೪ | ೫ |
|---|---|---|---|---|
| ವಿಭಾಗ XI (ಮುಂದುವರಿದುದು) | | ವಿಭಾಗ XI (ಮುಂದುವರಿಬುದು) | | |
| ರಟ್ ಲಾಮ್ | | ರಟ್ ಲಾಮ್ | | ೧೦೭,೩೨೧ |
| ೯. ಪನ್ನಾ | } | ೭. ಪನ್ನಾ | } | ೨೧೨,೧೩೦ |
| ಸಂತಾರ್ | ೧ | ಸಂತಾರ್ | ೧ | ೩೩,೩೦೭ |
| ಅಜೈಗಢ್ | | ಅಜೈಗಢ್ | | ೮೫,೮೯೫ |
| ೧೦. ಬಿಜಾವರ್ | } | ೮. ಬಿಜಾವರ್ | } | ೧೧೫,೮೫೨ |
| ಚರ್ಖಾರಿ | ೧ | ಚರ್ಖಾರಿ | ೧ | ೧೨೦,೩೫೧ |
| ಛತಾರ್ ಪುರ್ | | ಛತಾರ್ ಪುರ್ | | ೧೬೧,೨೬೭ |
| ೧೧. ಬಜನಿ | } | ೯. ಬಜನಿ | } | ೧೯,೧೩೨ |
| ನಾಗೊಡ್ | ೧ | ನಾಗೊಡ್ | ೧ | ೭೪,೫೮೯ |
| ಮಲ್ಹಾರ್ | | ಮಲ್ಹಾರ್ | | ೬೮,೯೯೧ |
| ಬರೌಂಢ್ | | ಬರೌಂಢ್ | | ೧೬,೦೭೧ |
| ೧೨. ಬರ್ವಾನಿ | } | ೧೦. ಬರ್ವಾನಿ | } | ೧೪೧,೧೧೦ |
| ಅಲಿರಾಜ್ ಪುರ್ | ೧ | ಅಲಿರಾಜ್ ಪುರ್ | ೧ | ೧೦೧,೯೬೩ |
| ಶಾಹಪುರ್ | | ಶಾಹಪುರ್ | | ೫೪,೨೩೩ |
| ೧೩. ಝಾಬುಅ | } | ೧೧. ಝಾಬುಅ | } | ೧೪೫,೫೨೨ |
| ಸೈಲಾನ | ೧ | ಸೈಲಾನ | ೧ | ೩೫,೨೨೩ |
| ಸಿತಾಮಾಉ | | ಸಿತಾಮಾಉ | | ೨೮,೪೨೨ |
| ೧೪. ರಾಜ್ ಗಢ್ | } | ೧೨. ರಾಜ್ ಗಢ್ | } | ೧೩೪,೮೯೧ |
| ನರಸಿಂಗಢ್ | ೧ | ನರಸಿಂಗಢ್ | ೧ | ೧೧೩,೮೭೩ |
| ಖಿಲ್ಚಿಪುರ್ | | ಖಿಲ್ಚಿಪುರ್ | | ೪೫,೫೮೩ |
| ವಿಭಾಗ XII | | ವಿಭಾಗ XII | | |
| ೧. ಕಚ್ಛ್ | ೧ | ೧. ಕಚ್ಛ್ | ೧ | ೫೧೪,೩೦೭ |
| ೨. ಇದಾರ್ | ೧ | ೨. ಇದಾರ್ | ೧ | ೨೬೨,೬೬೦ |
| ೩. ನವನಗರ್ | ೧ | ೩. ನವನಗರ್ | ೧ | ೪೦೯,೧೯೨ |
| ೪. ಭಾವ್ ನಗರ್ | ೧ | ೪. ಭಾವ್ ನಗರ್ | ೧ | ೫೦೦,೨೭೪ |
| ೫. ಜುನಾಗಢ್ | ೧ | ೫. ಜುನಾಗಢ್ | ೧ | ೫೪೫,೧೫೨ |
| ೬. ರಾಜ್ ಪಿಪ್ಲಾ | } ೧ | ೬. ರಾಜ್ ಪಿಪ್ಲಾ | } ೧ | ೨೦೬,೧೧೪ |
| ಪಲನ್ ಪುರ್ | | ಪಲನ್ ಪುರ್ | | ೨೬೪,೧೭೯ |
| ೭. ಧ್ರಂಗಧ್ರ | } ೧ | ೭. ಧ್ರಂಗಧ್ರ | } ೧ | ೮೮,೯೬೧ |
| ಗೊಂದಾಲ್ | | ಗೊಂದಾಲ್ | | ೨೦೫,೮೪೬ |

## ಅನುಬಂಧ XVII (ಮುಂದುವರಿದುದು)

| | ೧ | ೨ | | ೩ | ೪ | ೫ |
|---|---|---|---|---|---|---|
| | ವಿಭಾಗ XII (ಮುಂದುವರಿದುದು) | | | ವಿಭಾಗ XII (ಮುಂದುವರಿದುದು) | | |
| ೮. | ಪೋರ್‌ಬಂದರ್ | ೧ | ೮. | ಪೋರ್‌ಬಂದರ್ | ೧ | ೧೧೫,೬೭೩ |
| | ಮೋರ್ವಿ | | | ಮೋರ್ವಿ | | ೧೧೩,೦೨೩ |
| ೯. | ರಧಾನ್‌ಪುರ್ | | ೯. | ರಧಾನ್‌ಪುರ್ | | ೭೦,೫೩೦ |
| | ವಂಕಾನೇರ್ | ೧ | | ವಂಕಾನೇರ್ | ೧ | ೪೪,೨೫೯ |
| | ಪಲಿತಾನಾ | | | ಪಲಿತಾನಾ | | ೬೨೪,೧೫೦ |
| ೧೦. | ಕ್ಯಾಂಬೇ | | ೧೦. | ಕ್ಯಾಂಬೇ | | ೮೭,೭೦೧ |
| | ಧರಾಮ್‌ಪುರ್ | ೧ | | ಧರಾಮ್‌ಪುರ್ | ೧ | ೧೧೨,೦೩೧ |
| | ಬಲಸಿನೋರ್ | | | ಬಲಸಿನೋರ್ | | ೫೨,೫೨೭ |
| ೧೧. | ಬರಿಯಾ | | ೧೧. | ಬರಿಯಾ | | ೧೫೯,೪೨೯ |
| | ಛೋಟಾ ಉದೇಪುರ್ | ೧ | | ಛೋಟಾ ಉದೇಪುರ್ | ೧ | ೧೪೪,೬೪೦ |
| | ಸಂತ್ | | | ಸಂತ್ | | ೮೩,೫೩೧ |
| | ಲುನವಾಡಾ | | | ಲುನವಾಡಾ | | ೯೫,೧೬೨ |
| ೧೨. | ಬನಾರಾ | | ೧೨. | ಬನಾರಾ | | ೪೮,೮೩೯ |
| | ಸಚಿನ್ | ೧ | | ಸಚಿನ್ | ೧ | ೨೨,೧೦೭ |
| | ಜವ್ವಾರ್ | | | ಜವ್ವಾರ್ | | ೫೭,೨೬೧ |
| | ದಾಂತಾ | | | ದಾಂತಾ | | ೨೬,೧೯೬ |
| ೧೩. | ಧ್ರೋಲ್ | | ೧೩. | ಧ್ರೋಲ್ | | ೨೭,೬೩೯ |
| | ಲಿಂಬ್ಡಿ | ೧ | | ಲಿಂಬ್ಡಿ | ೧ | ೪೦,೦೮೮ |
| | ವಧ್ವಾನ್ | | | ವಧ್ವಾನ್ | | ೪೨,೬೦೨ |
| | ರಾಜ್‌ಕೋಟ್ | | | ರಾಜ್‌ಕೋಟ್ | | ೭೫,೫೪೦ |
| | ವಿಭಾಗ XIII | | | ವಿಭಾಗ XIII | | |
| ೧. | ಕೋಲಾಪುರ್ | ೨ | ೧. | ಕೋಲಾಪುರ್ | ೧ | ೯೫೭,೧೩೭ |
| ೨. | ಸಾಂಗಲಿ | ೧ | ೨. | ಸಾಂಗಲಿ | ೧ | ೨೫೮,೪೪೨ |
| | ಸಾವಂತವಾಡಿ | | | ಸಾವಂತವಾಡಿ | | ೨೩೦,೫೮೯ |
| ೩. | ಜಂಜಿರಾ | | ೩. | ಜಂಜಿರಾ | | ೧೧೦,೩೭೯ |
| | ಮುಧೋಳ್ | ೧ | | ಮುಧೋಳ್ | ೧ | ೬೨,೮೩೨ |
| | ಭೋರ್ | | | ಭೋರ್ | | ೧೪೧,೫೪೬ |
| ೪. | ಜಮಖಂಡಿ | | ೪. | ಜಮಖಂಡಿ | | ೧೧೪,೨೭೦ |
| | ಮೀರಜ್(ಸೀನಿಯರ್) | ೧ | | ಮೀರಜ್(ಸೀನಿಯರ್) | ೧ | ೯೩,೯೩೮ |
| | ಮೀರಜ್(ಜೂನಿಯರ್) | | | ಮೀರಜ್(ಜೂನಿಯರ್) | | ೪೦,೬೮೪ |

## ಅನುಬಂಧ XVII (ಮುಂದುವರಿದುದು)

| ೧ | ೨ | ೩ | ೪ | ೫ |
|---|---|---|---|---|
| ವಿಭಾಗ XIII (ಮುಂದುವರಿದುದು) | | ವಿಭಾಗ XIII (ಮುಂದುವರಿದುದು) | | |
| ಕುರುಂದ್‌ವಾಡ್(ಸೀನಿಯರ್) | | ಕುರುಂದ್‌ವಾಡ್(ಸೀನಿಯರ್) | | ೪೪,೨೦೪ |
| ಕುರುಂದ್‌ವಾಡ್ (ಜೂನಿಯರ್) | | ಕುರುಂದ್‌ವಾಡ್(ಜೂನಿಯರ್) | | ೭೫,೫೪೦ |
| ೫. ಅಕಾಲ್‌ಕೋಟ್ | | ೫. ಅಕಾಲ್‌ಕೋಟ್ | | ೯೨,೬೦೫ |
| ಫಾಲ್ಟಾನ್ | | ಫಾಲ್ಟಾನ್ | | ೫೮,೭೬೧ |
| ಜಾತ್ | ೧ | ಜಾತ್ | ೧ | ೯೧,೦೯೯ |
| ಔಂಧ್ | | ಔಂಧ್ | | ೭೬,೫೦೭ |
| ರಾಂದುರ್ಗ್ | | ರಾಂದುರ್ಗ್ | | ೩೫,೪೫೪ |
| ವಿಭಾಗ XIV | | ವಿಭಾಗ XIV | | |
| ೧. ಪಾಟಿಯಾಲಾ | ೨ | ೧. ಪಾಟಿಯಾಲಾ | ೨ | ೧,೬೨೫,೫೨೦ |
| ೨. ಭವಾಲ್‌ಪುರ್ | ೨ | ೨. ಭವಾಲ್‌ಪುರ್ | ೧ | ೯೮೪,೬೧೨ |
| ೩. ಖೈರ್‌ಪುರ್ | ೧ | ೩. ಖೈರ್‌ಪುರ್ | ೧ | ೨೨೭,೧೮೩ |
| ೪. ಕಪುರ್‌ತಲಾ | ೧ | ೪. ಕಪುರ್‌ತಲಾ | ೧ | ೩೧೬,೭೫೭ |
| ೫. ಜಿಂದ್ | ೧ | ೫. ಜಿಂದ್ | ೧ | ೩೨೪,೬೭೬ |
| ೬. ನಾಭಾ | ೧ | ೬. ನಾಭಾ | ೧ | ೨೮೭,೫೭೪ |
| | | ೭. ತೇಹ್ರಿ-ಗಢ್ ವಾಲ್ | ೧ | ೩೪೯,೫೭೩ |
| ೭. ಮಂಡಿ | | ೮. ಮಂಡಿ | | ೨೦೭,೪೬೫ |
| ಬಿಲಾಸ್‌ಪುರ್ | ೧ | ಬಿಲಾಸ್‌ಪುರ್ | ೧ | ೧೦೦,೯೯೪ |
| ಸುಕೇತ್ | | ಸುಕೇತ್ | | ೫೮,೪೦೮ |
| ೮. ತೇಹ್ರಿ-ಗಢ್‌ವಾಲ್ | | ೯. ಸಿರ್ಮೂರ್ | | ೧೪೮,೫೬೮ |
| ಸಿರ್ಮೂರ್ | ೧ | ಚಂಬಾ | ೧ | ೧೪೬,೮೭೦ |
| ಚಂಬಾ | | | | |
| ೯. ಫರೀದ್‌ಕೋಟ್ | | ೧೦. ಫರೀದ್‌ಕೋಟ್ | | ೧೬೪,೩೦೪ |
| ಮಲೇರ್‌ಕೊಟ್ಲಾ | ೧ | ಮಲೇರ್‌ಕೊಟ್ಲಾ | ೧ | ೮೩,೦೭೨ |
| ಲೊಹಾರು | | ಲೊಹಾರು | | ೨೩,೩೩೮ |
| ವಿಭಾಗ XV | | ವಿಭಾಗ XV | | |
| ೧. ಕೂಚ್ ಬಿಹಾರ್ | ೧ | ೧. ಕೂಚ್ ಬಿಹಾರ್ | ೧ | ೫೯೦,೮೮೬ |
| ೨. ತ್ರಿಪುರ | ೧ | ೨. ತ್ರಿಪುರ | ೧ | ೩೮೨,೪೫೦ |
| ಮಣಿಪುರ್ | | ಮಣಿಪುರ್ | ೧ | ೪೪೫,೬೦೬ |

## ಅನುಬಂಧ XVII (ಮುಂದುವರಿದುದು)

| | ೧ | ೨ | | ೩ | ೪ | ೫ |
|---|---|---|---|---|---|---|
| | ವಿಭಾಗ XVI | | | ವಿಭಾಗ XVI | | |
| ೧. | ಮಯೂರ್‌ಭಂಜ್ | ೧ | ೧. | ಮಯೂರ್‌ಭಂಜ್ | ೧ | ೮೮೯,೬೦೩ |
| | ಸೋನೆಪುರ್ | | ೨. | ಸೋನೆಪುರ್ | ೧ | ೨೩೭,೯೨೦ |
| ೨. | ಪಾಟ್ನ | | ೩. | ಪಾಟ್ನ | ೧ | ೫೬೬,೯೨೪ |
| | ಕಲಹಂದಿ | | ೪. | ಕಲಹಂದಿ | ೧ | ೫೧೩,೭೧೬ |
| ೩. | ಕೆಯೋಂಝಾರ್ | | ೫. | ಕೆಯೊಂಝಾರ್ | ೧ | ೪೬೦,೬೦೯ |
| | ಢೆಂಕನಾಲ್ | ೧ | ೬. | ಗಂಗ್‌ಪುರ್ | ೧ | ೩೫೬,೬೭೪ |
| | ನಯಗಢ್ | | ೭. | ಬಸ್ತಾರ್ | ೧ | ೫೨೪,೭೨೧ |
| | ತಲ್ಚರ್ | | ೮. | ಸುರ್ಗುಜಾ | ೧ | ೫೦೧,೯೩೯ |
| | ನೀಲ್ಗಿರಿ | | | | | |
| ೪. | ಗಂಗ್‌ಪುರ್ | | ೯ | ಢೆಂಕನಾಲ್ | | ೨೮೪,೩೨೬ |
| | ಬಾಮ್ರಾ | | | ನಯಗಢ್ | | ೧೪೨,೪೦೬ |
| | ಸೆರಾಯ್ ಕೆಲಾ | ೧ | | ಸೆರಾಯ್ ಕೆಲಾ | | ೧೪೩,೫೨೫ |
| | ಬೌಧ್ | | | ಬೌದ್ | ೩ | ೧೩೫,೨೪೮ |
| | ಬೊನಾಯ್ | | | ತಲ್ಚೆರ್ | | ೬೯,೭೦೨ |
| | | | | ನೀಲ್ಗಿರಿ | | ೮೦,೧೮೬ |
| | | | | ನೀಲ್ಗಿರಿ | | ೬೮,೫೯೪ |
| | | | | ಬಾಮ್ರಾ | | ೧೫೧,೦೪೭ |
| ೫. | ಬಸ್ತಾರ್ | | | | | |
| | ಸುರ್ಗುಜಾ | ೧ | | | | |
| | ರಾಯ್‌ಗಢ್ | | | | | |
| | ನಂದಗಾಂವ | | | | | |
| ೬. | ಖೈರ್‌ಗಢ್ | | ೧೦. | ರಾಯಗಢ್ | | ೨೭೭,೫೬೯ |
| | ಜಶ್‌ಪುರ್ | ೧ | | ಖೈರಾಗಢ್ | | ೧೫೭,೪೦೦ |
| | ಕಾಂಕೇರ್ | | | ಜಶ್‌ಪುರ್ | | ೧೯೩,೬೯೮ |
| | ಕೊರೆಯ | | | ಕಾಂಕೇರ್ | ೩ | ೧೩೬,೧೦೧ |
| | ಸಾರಂಗಢ್ | | | ಸಾರಂಗಢ್ | | ೧೨೮,೯೬೭ |
| | | | | ಕೊರೆಯ | | ೯೦,೮೮೬ |
| | | | | ನಂದಗಾಂವ | | ೧೩೨,೩೮೦ |

## ಅನುಬಂಧ XVII (ಮುಂದುವರಿದುದು)

| ೧ | ೨ | ೩ | ೪ | ೫ |
|---|---|---|---|---|
| ವಿಭಾಗ XVII | | ವಿಭಾಗ XVII | | |
| ಮೇಲಿನ ಯಾವುದೇ ವಿಭಾಗಗಳಲ್ಲಿ ಹೇಳಿರದ ಆದರೆ ಈ ಪರಿಶಿಷ್ಟದ ಈ ಭಾಗದ ೧೨ನೇ ಪರಿಚ್ಛೇದದಲ್ಲಿ ನಮೂದಿಸಲ್ಪಟ್ಟ ರಾಜ್ಯಗಳು | ೨ | ಮೇಲಿನ ಯಾವುದೇ ವಿಭಾಗಗಳಲ್ಲಿ ಹೇಳಿರದ, ಆದರೆ ಈ ಪರಿಶಿಷ್ಟದ ಈ ಭಾಗದ ೧೨ನೇ ಪರಿಚ್ಛೇದದಲ್ಲಿ ನಮೂದಿಸಲ್ಪಟ್ಟ ರಾಜ್ಯಗಳು | | ೫೩,೦೪೭,೧೭೫ |
| ಈ ಕೋಷ್ಟಕದಲ್ಲಿರುವ ರಾಜ್ಯಗಳ ಒಟ್ಟು ಜನಸಂಖ್ಯೆ. | | | | ೭೮,೯೯೬,೮೪೪ |

# ಅನುಬಂಧ XVIII
# ಮಹಾಪ್ರಭುಗಳ ಸರಕಾರದ ಕೋಮುತೀರ್ಪು – ೧೯೩೨*

೧. 'ದುಂಡುಮೇಜಿನ ಸಭೆಯ ಎರಡನೇ ಅಧಿವೇಶನದ ಅನಂತರ, ಡಿಸೆಂಬರ್ ೧ರಂದು ಮಹಾರಾಜ ಪ್ರಭುಗಳ ಸರಕಾರದ ಪರವಾಗಿ ಪ್ರಧಾನ ಮಂತ್ರಿಗಳು ಕೊಟ್ಟ ಹೇಳಿಕೆಯಲ್ಲಿ (ಅನಂತರ, ಶೀಘ್ರದಲ್ಲೇ, ಈ ಹೇಳಿಕೆಯನ್ನು ಪಾರ್ಲಿಮೆಂಟಿನ ಎರಡೂ ಸದನಗಳು ಅನುಮೋದಿಸಿದವು), ದುಂಡುಮೇಜಿನ ಸಭೆಯಲ್ಲಿ ಇತ್ಯರ್ಥಗೊಳಿಸಲಾಗದ ಕೋಮು ಪ್ರಶ್ನೆಗಳ ಬಗೆಗೆ ಎಲ್ಲ ಪಕ್ಷಗಳಿಗೆ ಒಪ್ಪಿಗೆಯಾಗುವ ಒಂದು ಒಪ್ಪಂದಕ್ಕೆ ಭಾರತದಲ್ಲಿರುವ ಸಮುದಾಯಗಳಿಗೆ ಬರಲು ಆಗದಿದ್ದ ಪಕ್ಷದಲ್ಲಿ, ಈ ಕಾರಣಕ್ಕೋಸ್ಕರ ಭಾರತದ ಸಂವಿಧಾನಾತ್ಮಕ ಪ್ರಗತಿ ನಿಲುಗಡೆಗೆ ಬರಬಾರದು ಎಂಬುದು ಮಹಾರಾಜಪ್ರಭುಗಳ ಸರಕಾರದ ದೃಢ ನಿಶ್ಚಯ ಎಂಬ ಅಂಶವನ್ನು ಸ್ಪಷ್ಟಪಡಿಸಲಾಗಿತ್ತು. ಅಂಥ ಸಂದರ್ಭದಲ್ಲಿ ಸರಕಾರವೇ ಒಂದು ತಾತ್ಕಾಲಿಕ ಯೋಜನೆಯನ್ನು ರೂಪಿಸಿ ಅದನ್ನು ಅಳವಡಿಸುವ ಮೂಲಕ ಈ ಅಡ್ಡಿಯನ್ನು ನಿವಾರಿಸುವುದು ಎಂದೂ ಸ್ಪಷ್ಟಪಡಿಸಲಾಗಿತ್ತು.

೨. ಒಮ್ಮತಕ್ಕೆ ಬರಲು ಸಮುದಾಯಗಳು ವಿಫಲರಾಗಿದ್ದುದರಿಂದ ಹೊಸ ಸಂವಿಧಾನವನ್ನು ರಚಿಸುವ ಯೋಜನೆಯ ಪ್ರಗತಿಗೆ ಅಡ್ಡಿಯುಂಟಾಗುತ್ತಿದೆ ಎಂಬುದು ಕಳೆದ ಮಾರ್ಚ ೧೯ರಂದು ಮಹಾಪ್ರಭುಗಳ ಸರಕಾರಕ್ಕೆ ವರದಿಯಾಯಿತು. ಇದರಿಂದ ಉದ್ಭವಿಸುವ ಕಠಿಣ ಹಾಗೂ ವಿವಾದಾತ್ಮಕ ಪ್ರಶ್ನೆಗಳ ಜಾಗರೂಕ ಮರುಪರಿಶೀಲನೆಯಲ್ಲಿ ತಾವು ತೊಡಗಿರುವುದಾಗಿ ಸರಕಾರ ಆಗ ಹೇಳಿತು. ಹೊಸ ಸಂವಿಧಾನದಲ್ಲಿ ಅಲ್ಪಸಂಖ್ಯಾತರ ಸ್ಥಾನವೇ ಎಂಬುದಕ್ಕೆ ಸಂಬಂಧಿಸುವ ಸಮಸ್ಯೆಗಳ ಕೆಲವಾದರೂ ಅಂಶಗಳ ಮೇಲೆ ತೀರ್ಮಾನ ಕೈಗೊಳ್ಳದಿದ್ದರೆ, ಸಂವಿಧಾನವನ್ನು ರಚಿಸುವುದರಲ್ಲಿ ಇನ್ನು ಪ್ರಗತಿ ಸಾಧ್ಯವಿಲ್ಲ ಎಂದು ಸರಕಾರಕ್ಕೆ ಈಗ ತೃಪ್ತಿಕರವಾಗಿ ತಿಳಿದು ಬಂದಿದೆ.

೩. ಇದಕ್ಕೆ ಅನುಗುಣವಾಗಿ, ಕೆಳಗೆ ಸೂಚಿಸಲಾದ ಯೋಜನೆಯನ್ನು ಜಾರಿಗೊಳಿಸಲು ಬೇಕಾದ ಉಪಬಂಧಗಳನ್ನು ಯಥಾಕಾಲದಲ್ಲಿ ಪಾರ್ಲಿಮೆಂಟಿನಲ್ಲಿ ಮಂಡಿಸಲಾಗುವ ಭಾರತೀಯ ಸಂವಿಧಾನಕ್ಕೆ ಸಂಬಂಧಿಸುವ ಪ್ರಸ್ತಾಪಗಳಲ್ಲಿ ಸೇರಿಸಬೇಕೆಂದು ಮಹಾಪ್ರಭುಗಳ ಸರಕಾರ ತೀರ್ಮಾನಿಸಿದೆ. ಈ ಯೋಜನೆಯ ವ್ಯಾಪ್ತಿ ಪ್ರಾಂತೀಯ ಶಾಸನಸಭೆಗಳಲ್ಲಿ ಬ್ರಿಟಿಷ್ ಭಾರತೀಯ ಸಮುದಾಯಗಳ ಪ್ರಾತಿನಿಧ್ಯಕ್ಕೋಸ್ಕರ ಮಾಡಬೇಕಾಗುವ ವ್ಯವಸ್ಥೆಗಷ್ಟೇ, ಉದ್ದೇಶಪೂರ್ವಕವಾಗಿ ಸೀಮಿತವಾಗಿದೆ. ಕೇಂದ್ರದ ಶಾಸನಸಭೆಗಳಲ್ಲಿ ಪ್ರಾತಿನಿಧ್ಯದ ಪ್ರಶ್ನೆಯ ಚರ್ಚೆ, ಕೆಳಗೆ ೨೦ನೇ ಪರಿಚ್ಛೇದದಲ್ಲಿ ಹೇಳಿದ ಕಾರಣದಿಂದ, ಮುಂದಕ್ಕೆ ಹಾಕಲ್ಪಟ್ಟಿದೆ. ಸಂವಿಧಾನವನ್ನು ರಚಿಸಬೇಕಾದರೆ ಅಲ್ಪಸಂಖ್ಯಾತರಿಗೆ ಬಹಳ ಮಹತ್ತ್ವದವು ಎನಿಸಿರುವ ಹಲವಾರು ಸಮಸ್ಯೆಗಳ ಬಗೆಗೆ ತೀರ್ಮಾನ

---

* ಪಾರ್ಲಿಮೆಂಟರಿ ಪೇಪರ್ (ಕಮ್ಯಾಂಡ್ ೪೧೪೭), ೧೯೩೨, ಅಧಿಕೃತವಾಗಿ ಇದನ್ನು 'ಕೋಮು ನಿರ್ಣಯ' ಎಂದು ಕರೆಯಲಾಗಿದೆ.

ತೆಗೆದುಕೊಳ್ಳುವುದು ಅಗತ್ಯವೆಂಬುದನ್ನು ಅರ್ಥಮಾಡಿಕೊಂಡಿಲ್ಲವಾದುದರಿಂದ ಈ ಯೋಜನೆಯ ವ್ಯಾಪ್ತಿಯನ್ನು ಸೀಮಿತಗೊಳಿಸಲು ತೀರ್ಮಾನಿಸಲಾಯಿತು ಎಂಬುದು ಇದರರ್ಥವಲ್ಲ. ಪ್ರಾತಿನಿಧ್ಯದ ರೀತಿ ಮತ್ತು ದಾಮಾಷಾವನ್ನು ಕುರಿತಂಥ ಮೂಲಭೂತ ಪ್ರಶ್ನೆಗಳ ಬಗೆಗೆ ಇತ್ಯರ್ಥವನ್ನು ಒಮ್ಮೆ ಮಾಡಿ ಆದ ಮೇಲೆ, ಅಗತ್ಯವಿದ್ದಷ್ಟು ಗಮನವನ್ನು ಇನ್ನೂ ಪಡೆಯದ ಇತರ ಕೋಮು ಸಮಸ್ಯೆಗಳ ಬಗೆಗೆ ಒಂದು ಕಾರ್ಯಸಾಧ್ಯ ರೀತಿಯ ತೀರ್ಮಾನವನ್ನು ತಾವೇ ತೆಗೆದುಕೊಳ್ಳಲು, ತದನಂತರ, ಸಮುದಾಯಗಳಿಗೆ ಸಾಧ್ಯವಾಗಬಹುದೆಂಬ ಆಶಾಭಾವದ ಮೇಲೆ ಹೀಗೆ ತೀರ್ಮಾನಿಸಲಾಯಿತು.

೪. ತಮ್ಮ ತೀರ್ಮಾನವನ್ನು ಪರಿಷ್ಕರಿಸುವ ಉದ್ದೇಶದಿಂದ ಆರಂಭಿಸಲಾದ ಯಾವುದೇ ಮಾತುಕತೆಗಳಲ್ಲಿ ನಾವು ಭಾಗಿಯಾಗಲು ಆಗುವುದಿಲ್ಲವೆಂದೂ, ಈ ತೀರ್ಮಾನವನ್ನು ಮಾರ್ಪಾಟುಗೊಳಿಸುವ ಉದ್ದೇಶದ, ಮತ್ತು ಸಂಬಂಧಪಟ್ಟ ಎಲ್ಲ ಪಕ್ಷಗಳ ಬೆಂಬಲವಿಲ್ಲದ, ಯಾವುದೇ ಮನವಿಗೆ ಗಮನಕೊಡಲು ತಾವು ತಯಾರಿಲ್ಲವೆಂದೂ ಸ್ಪಷ್ಟವಾಗಿ ತಿಳಿದುಕೊಳ್ಳತಕ್ಕದ್ದು ಎಂದು ಮಹಾಪ್ರಭುಗಳ ಸರಕಾರ ಅಪೇಕ್ಷಿಸುತ್ತದೆ. ಆದರೆ ಸರ್ವಸಮ್ಮತಿಯುಳ್ಳ ಒಂದು ಒಪ್ಪಂದಕ್ಕೆ, ಅದು ಸುದೈವದಿಂದ ಸಂಭವಿಸುವುದಾದರೆ, ತಮ್ಮ ಕಡೆಯಿಂದ ಮುಕ್ತಾವಕಾಶವಿರಬೇಕು ಎಂಬುದು ಅದರ ಇಚ್ಛೆಯಾಗಿದೆ. ಆದುದರಿಂದ, ಹೊಸತಾದ ಒಂದು ಭಾರತ ಸರಕಾರ ಅಧಿನಿಯಮ ಕಾನೂನಾಗಿ ಜಾರಿಯಾಗುವ ಮೊದಲು, ಗವರ್ನರರ ಒಂದು ಅಥವಾ ಹೆಚ್ಚಿನ ಪ್ರಾಂತ್ಯಗಳಲ್ಲಿ, ಅಥವಾ ಇಡೀ ಬ್ರಿಟಿಷ್ ಭಾರತದಲ್ಲಿ ಒಂದು ಕಾರ್ಯಸಾಧ್ಯ ಪರ್ಯಾಯ ಯೋಜನೆ ಸಂಬಂಧಪಟ್ಟ ಎಲ್ಲಾ ಸಮುದಾಯಗಳಲ್ಲಿ ಪರಸ್ಪರ ಸಮ್ಮತಿಯನ್ನು ಪಡೆದಿದೆ ಎಂದು ತಮಗೆ ತೃಪ್ತಿಕರವಾಗಿ ತಿಳಿದುಬಂದರೆ, ಅಂಥ ಪರ್ಯಾಯವನ್ನು ಈಗ ವಿಶದಪಡಿಸಲಾಗುವ ಉಪಬಂಧಗಳಲ್ಲಿ ಸೇರಿಸತಕ್ಕದ್ದು ಎಂದು ಪಾರ್ಲಿಮೆಂಟಿಗೆ ಶಿಫಾರಸು ಮಾಡಲು ಅದು ಸಿದ್ಧವಾಗಿದೆ.

೫. ಗವರ್ನರರ ಪ್ರಾಂತ್ಯಗಳ ಶಾಸನಸಭೆಗಳಲ್ಲಿ ಅಥವಾ ಮೇಲ್ಮನೆ ಇದ್ದ ಕಡೆ ಕೆಳಮನೆಯಲ್ಲಿ, ಸ್ಥಾನಗಳ ಹಂಚಿಕೆಯನ್ನು ಲಗತ್ತಿಸಿದ ಪಟ್ಟಿಯಲ್ಲಿ* ತೋರಿಸಿದಂತೆ ಮಾಡಲಾಗುವುದು.

೬. ಇಡೀ ಪ್ರಾಂತ್ಯವನ್ನು ಒಳಗೊಳ್ಳುವ (ವಿಶೇಷ ಸಂದರ್ಭಗಳಲ್ಲಿ "ಹಿಂದುಳಿದ" ಎಂದು ಚುನಾವಣಾ ಪ್ರದೇಶದಿಂದ ಹೊರತುಪಡಿಸಿದ ಭಾಗಗಳು ಇದರಲ್ಲಿ ಸೇರುವುದಿಲ್ಲ) ಪ್ರತ್ಯೇಕ ಕೋಮುವಾರು ಚುನಾವಣಾ ಕ್ಷೇತ್ರಗಳಲ್ಲಿ ಮತದಾರರು ಮತಚಲಾಯಿಸುವ ಮೂಲಕ ಮಹಮ್ಮದೀಯ, ಯುರೋಪಿಯನ್, ಮತ್ತು ಸೀಖ್ ಕ್ಷೇತ್ರಗಳಿಗೆಂದು ಗೊತ್ತುಪಡಿಸಿದ ಸ್ಥಾನಗಳಿಗೆ ಚುನಾವಣೆ ನಡೆಯತಕ್ಕದ್ದು.

ಹತ್ತು ವರ್ಷಗಳ ಅನಂತರ, ಸಂಬಂಧಪಟ್ಟ ಸಮುದಾಯಗಳ ಸಮ್ಮತಿಯೊಡನೆ ಈ ಚುನಾವಣಾ ವ್ಯವಸ್ಥೆಯನ್ನು– ಮತ್ತು ಕೆಳಗೆ ಹೇಳಿರುವ ಇವರ ಅಂಥವೇ ವ್ಯವಸ್ಥೆಗಳನ್ನು– ಪರಿಷ್ಕರಿಸುವ ಅಧಿಕಾರವಿರುವಂತೆ ಸಂವಿಧಾನದಲ್ಲಿಯೇ ಅವಕಾಶವನ್ನು ಕಲ್ಪಿಸತಕ್ಕದ್ದು. ಮೇಲೆ ಹೇಳಿದ ಸಮ್ಮತಿಯನ್ನು ತಿಳಿದುಕೊಳ್ಳಲು ಸೂಕ್ತ ವಿಧಾನಗಳನ್ನು ರೂಪಿಸತಕ್ಕದ್ದು.

---

* ೩೭೦ನೇ ಪುಟವನ್ನು ನೋಡಿ.

೭. ಮಹಮ್ಮದೀಯ, ಸಿಖ್, ಭಾರತೀಯ ಕ್ರೈಸ್ತ (ಕೆಳಗೆ, ೧೦ನೇ ಪರಿಚ್ಛೇದ ನೋಡಿ) ಮತ್ತು ಆಂಗ್ಲೊ–ಇಂಡಿಯನ್ (ಕೆಳಗೆ, ೧೧ನೇ ಪರಿಚ್ಛೇದ ನೋಡಿ) ಕ್ಷೇತ್ರದಲ್ಲಿ ಮತದಾರರಾಗದೆ ಇರುವ ಎಲ್ಲಾ ಅರ್ಹ ಮತದಾರರು ಸಾಮಾನ್ಯ ಕ್ಷೇತ್ರದಲ್ಲಿ ಮತದಾನ ಮಾಡುವ ಹಕ್ಕನ್ನು ಪಡೆದಿರುತ್ತಾರೆ.

೮. ಮುಂಬಯಿಯ ಕೆಲವು ವಿಶಿಷ್ಟ ಆಯ್ದ ಬಹುಸದಸ್ಯ ಸಾಮಾನ್ಯ ಕ್ಷೇತ್ರಗಳಲ್ಲಿ ಏಳು ಸ್ಥಾನಗಳನ್ನು ಮರಾಠಿಗರಿಗೆ ಮೀಸಲಿಡತಕ್ಕದ್ದು.

೯. "ನಿಮ್ನ ವರ್ಗಗಳ" ಸದಸ್ಯರಲ್ಲಿ ಮತ ಚಲಾಯಿಸಲು ಹಕ್ಕು ಇರುವವರು ಸಾಮಾನ್ಯ ಕ್ಷೇತ್ರದಲ್ಲಿ ಮತದಾನ ಮಾಡತಕ್ಕದ್ದು. ಆದರೆ ಇದೊಂದೇ ಸಾಧನದ ಮೂಲಕ, ಇನ್ನೂ ಸುಮಾರು ಕಾಲದವರೆಗೆ, ಈ ವರ್ಗಗಳಿಗೆ ಶಾಸನಸಭೆಗಳಲ್ಲಿ ಸಾಕಷ್ಟು ಪ್ರಾತಿನಿಧ್ಯ ಸಿಗುವುದು ಅಸಂಭವನೀಯವಾದುದರಿಂದ, ಕೋಷ್ಟಕದಲ್ಲಿ ತೋರಿಸಿದಂತೆ ಇವರಿಗೆ ಕೆಲವು ವಿಶೇಷ ಸ್ಥಾನಗಳನ್ನು ಗೊತ್ತುಪಡಿಸಲಾಗುವುದು. "ನಿಮ್ನ ವರ್ಗಗಳ" ಸದಸ್ಯರಲ್ಲಿ ಚುನಾಯಕಾ ಅರ್ಹತೆಯುಳ್ಳ ಸದಸ್ಯರಿಗೆ ಮಾತ್ರ ಮತದಾನ ಮಾಡಲು ಹಕ್ಕು ಇರುವ ವಿಶೇಷ ಕ್ಷೇತ್ರಗಳಿಂದ ಈ ಸ್ಥಾನಗಳನ್ನು ಚುನಾವಣೆಯ ಮೂಲಕ ಭರ್ತಿಮಾಡತಕ್ಕದ್ದು. ಇಂಥ ವಿಶೇಷ ಕ್ಷೇತ್ರದಲ್ಲಿ ಮತ ಚಲಾಯಿಸುವ ಯಾವುದೇ ವ್ಯಕ್ತಿಗೆ, ಮೇಲೆ ಹೇಳಿದಂತೆ, ಸಾಮಾನ್ಯ ಕ್ಷೇತ್ರದಲ್ಲೂ ಮತ ಚಲಾಯಿಸುವ ಹಕ್ಕು ಇರುವುದು. ನಿಮ್ನ ವರ್ಗಗಳು ಅತ್ಯಂತ ಹೆಚ್ಚು ಸಂಖ್ಯೆಯಲ್ಲಿರುವ ಆಯ್ದ ಪ್ರದೇಶಗಳಲ್ಲಿ ಈ ವಿಶೇಷ ಕ್ಷೇತ್ರಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ; ಮದರಾಸನ್ನು ಉಳಿದು, ಇತರೆಡೆ ಇವು ಇಡೀ ಪ್ರಾಂತ್ಯವನ್ನು ಆವರಿಸಬಾರದು.

ಬಂಗಾಳದ ಕೆಲವು ಸಾಮಾನ್ಯ ಕ್ಷೇತ್ರಗಳಲ್ಲಿ ಮತದಾರರ ಪೈಕಿ ಬಹುಸಂಖ್ಯೆಯಲ್ಲಿರುವವರು ನಿಮ್ನ ವರ್ಗದವರಾಗಿರುವ ಸಾಧ್ಯತೆ ಇದೆ. ಇದಕ್ಕನುಗುಣವಾಗಿ, ಹೆಚ್ಚಿನ ಪರಿಶೀಲನೆ ಆಗುವವರೆಗೆ, ಈ ಪ್ರಾಂತ್ಯದಲ್ಲಿ ವಿಶೇಷ ನಿಮ್ನವರ್ಗ ಕ್ಷೇತ್ರಗಳಿಂದ ಆರಿಸಿ ಬರಬೇಕಾದ ಸದಸ್ಯರ ಸಂಖ್ಯೆಯನ್ನು ಇನ್ನೂ ನಿಗದಿಪಡಿಸಲಿಲ್ಲ. ಬಂಗಾಳ ಶಾಸನಸಭೆಯಲ್ಲಿ ನಿಮ್ನ ವರ್ಗದವರಿಗೆ ಸಿಗುವ ಸ್ಥಾನಗಳು ೧೦ಕ್ಕಿಂತ ಕಡಿಮೆಯಾಗಿರಬಾರದು ಎಂದು ಉದ್ದೇಶಿಸಲಾಗಿದೆ.

ಮತದಾರರಾಗುವ ಅರ್ಹತೆಯನ್ನು ಮೊದಲೇ ಪಡೆದಿದ್ದು, ಪ್ರತಿಯೊಂದು ಪ್ರಾಂತ್ಯದಲ್ಲಿ ವಿಶೇಷ ನಿಮ್ನವರ್ಗ ಕ್ಷೇತ್ರಗಳಲ್ಲಿ ಮತ ಹಾಕುವ ಹಕ್ಕು ಇರುವವರು ಯಾರು ಎಂಬುದರ ಕರಾರುವಾಕ್ಕಾದ ವ್ಯಾಖ್ಯೆಯನ್ನು ಇನ್ನೂ ಖಚಿತಪಡಿಸಲಿಲ್ಲ. ಇದನ್ನು, ಸಾಮಾನ್ಯವಾಗಿ, ಫ್ರಾಂಚೈಸ್ ಸಮಿತಿಯ ವರದಿಯಲ್ಲಿ ಪ್ರತಿಪಾದಿಸಲ್ಪಟ್ಟ ಸ್ಥೂಲ ನಿಯಮಗಳ ಆಧಾರದ ಮೇಲೆ ಮಾಡಲಾಗುವುದು. ಅಸ್ಪೃಶ್ಯತೆಯ ಸ್ಥೂಲ ಮಾನದಂಡಗಳನ್ನು ಅವಲಂಬಿಸಿದ ವ್ಯಾಖ್ಯೆ ಒಂದು ಪ್ರಾಂತ್ಯದ ವಿಶಿಷ್ಟ ಪರಿಸ್ಥಿತಿಗಳಿಗೆ ಕೆಲವು ವಿಷಯಗಳಲ್ಲಿ ಸೂಕ್ತವಾಗದೆ ಹೋಗುವ ಸಂದರ್ಭವಿರುವ ಕೆಲವು ಉತ್ತರ ಭಾರತದ ಪ್ರಾಂತ್ಯಗಳಲ್ಲಿ ಮಾತ್ರ ಮಾರ್ಪಾಟುಗಳ ಅಗತ್ಯವಿರಬಹುದು.

ಒಂದು ನಿರ್ದಿಷ್ಟ ಅವಧಿಗಿಂತ ಹೆಚ್ಚು ಕಾಲ ಈ ವಿಶೇಷ ನಿಮ್ನ ವರ್ಗ ಕ್ಷೇತ್ರಗಳ ಅಗತ್ಯವಿರುವುದಿಲ್ಲ ಎಂದು ಮಹಾಪ್ರಭುಗಳ ಸರಕಾರದ ಅಭಿಪ್ರಾಯ. ೬ನೇ ಪರಿಚ್ಛೇದದಲ್ಲಿ ಹೇಳಿರುವ ಚುನಾವಣಾ ಪರಿಷ್ಕರಣದ ಅಧಿಕಾರಾನ್ವಯ ಇವುಗಳನ್ನು ಆಗಲೇ ರದ್ದುಪಡಿಸದಿದ್ದ ಪಕ್ಷದಲ್ಲಿ, ೨೦ ವರ್ಷಗಳ ಅನಂತರ ಈ ಕ್ಷೇತ್ರಗಳನ್ನು ಕೊನೆಗೊಳಿಸಲು ಸಂವಿಧಾನದಲ್ಲಿ ಅವಕಾಶ ಕಲ್ಪಿಸಲು ಅದು ಉದ್ದೇಶಿಸಿದೆ.

೧೦. ಪ್ರತ್ಯೇಕ ಕೋಮು ಕ್ಷೇತ್ರಗಳಲ್ಲಿ ಮತದಾರರು ಮತಚಲಾಯಿಸುವ ಮೂಲಕ ಭಾರತೀಯ ಕ್ರೈಸ್ತರಿಗೆಂದು ಗೊತ್ತುಪಡಿಸಿದ ಸ್ಥಾನಗಳಿಗೆ ಚುನಾವಣೆಯನ್ನು ನಡೆಸತಕ್ಕದ್ದು. ಬಹುಶಃ, ಮದರಾಸು ಒಂದನ್ನು ಬಿಟ್ಟು, ಉಳಿದೆಡೆ ಒಂದು ಪ್ರಾಂತ್ಯವನ್ನು ಇಡಿಯಾಗಿ ಒಳಗೊಳ್ಳುವ ಭಾರತೀಯ ಕ್ರೈಸ್ತ ಕ್ಷೇತ್ರಗಳನ್ನು ನಿರ್ಮಿಸುವುದು, ವಾಸ್ತವ ವ್ಯಾವಹಾರಿಕ ಅಡ್ಡಿಗಳ ದೆಸೆಯಿಂದ, ಹೆಚ್ಚುಕಡಿಮೆ ಖಂಡಿತವಾಗಿಯೇ, ಅಸಾಧ್ಯವೆಂದು ತೋರುತ್ತದೆ. ಇದಕ್ಕೆ ಅನುಗುಣವಾಗಿ, ಒಂದು ಪ್ರಾಂತ್ಯದ ಒಂದೋ, ಎರಡೋ ಆಯ್ದ ಪ್ರದೇಶಗಳಲ್ಲಿ ಭಾರತೀಯ ಕ್ರೈಸ್ತರ ಕ್ಷೇತ್ರವನ್ನು ನಿರ್ಮಿಸಬೇಕಾಗುವುದು. ಈ ಪ್ರದೇಶಗಳ ಭಾರತೀಯ ಕ್ರೈಸ್ತರು ಸಾಮಾನ್ಯ ಕ್ಷೇತ್ರದಲ್ಲಿ ಮತ ಚಲಾಯಿಸಬಾರದು. ಈ ಪ್ರದೇಶಗಳ ಹೊರಗಿರುವ ಭಾರತೀಯ ಕ್ರೈಸ್ತ ಮತದಾರರು ಸಾಮಾನ್ಯ ಕ್ಷೇತ್ರಗಳಲ್ಲಿ ಮತಚಲಾಯಿಸತಕ್ಕದ್ದು. ಭಾರತೀಯ ಕ್ರೈಸ್ತರು ಹೆಚ್ಚಿನ ಪ್ರಮಾಣದಲ್ಲಿ ಬುಡಕಟ್ಟು ಜನಾಂಗಗಳಿಗೆ ಸೇರಿರುವಂಥ ಬಿಹಾರ ಮತ್ತು ಒರಿಸ್ಸಾದಲ್ಲಿ ವಿಶೇಷ ವ್ಯವಸ್ಥೆಗಳನ್ನು ಮಾಡುವ ಅಗತ್ಯವಿರಬಹುದು.

೧೧. ಪ್ರತ್ಯೇಕ ಕೋಮು ಚುನಾವಣಾ ಕ್ಷೇತ್ರದಲ್ಲಿ ಮತದಾರರು ಮತಚಲಾಯಿಸುವ ಮೂಲಕ ಆಂಗ್ಲೊ–ಇಂಡಿಯನ್ನರಿಗೆಂದು ಗೊತ್ತುಪಡಿಸಿದ ಸ್ಥಾನಗಳಿಗೆ ಚುನಾವಣೆಯನ್ನು ನಡೆಸತಕ್ಕದ್ದು. ಅಂಚೆಯ ಮೂಲಕ ಮತದಾನದ ವ್ಯವಸ್ಥೆಯನ್ನು ಅಳವಡಿಸಿ, ಮತ್ತು ಉದ್ಭವಿಸಬಹುದಾದ ವಾಸ್ತವ ಅಡಚಣೆಗಳ ಪರಿಶೀಲನೆಗೆ ಒಳಪಟ್ಟು, ಆಂಗ್ಲೊ–ಇಂಡಿಯನ್ ಕ್ಷೇತ್ರಗಳು ಪ್ರತಿಯೊಂದು ಪ್ರಾಂತ್ಯವನ್ನು ಇಡಿಯಾಗಿ ಒಳಗೊಳ್ಳಬೇಕೆಂದು ಉದ್ದೇಶಿಸಲಾಗಿದೆ. ಆದರೆ ಈ ವಿಷಯದಲ್ಲಿ ಅಂತಿಮ ತೀರ್ಮಾನವನ್ನು ಇನ್ನೂ ತೆಗೆದುಕೊಂಡಿಲ್ಲ.

೧೨. ಹಿಂದುಳಿದ ಪ್ರದೇಶಗಳ ಪ್ರತಿನಿಧಿಗಳಿಗೆ ಗೊತ್ತುಪಡಿಸಿದ ಸ್ಥಾನಗಳನ್ನು ಭರ್ತಿಮಾಡುವ ರೀತಿ ಇನ್ನು ಪರಿಶೀಲನೆಯಲ್ಲಿದೆ. ಈ ಪ್ರದೇಶಗಳಿಗೆ ಸಂಬಂಧಿಸಿದಂತೆ ಮಾಡಲಿರುವ ಸಂವಿಧಾನಾತ್ಮಕ ವ್ಯವಸ್ಥೆಗಳ ಬಗೆಗೆ ಅಂತಿಮ ನಿರ್ಧಾರ ತೆಗೆದುಕೊಳ್ಳುವವರೆಗೆ, ಹೀಗೆ ಗೊತ್ತುಪಡಿಸಿದ ಸ್ಥಾನಗಳ ಸಂಖ್ಯೆಯನ್ನು ತಾತ್ಕಾಲಿಕ ಎಂದು ಪರಿಗಣಿಸತಕ್ಕದ್ದು.

೧೩. ಹೊಸ ಶಾಸನ ಸಭೆಗಳಲ್ಲಿ ಮಹಿಳಾ ಸದಸ್ಯರು, ಕನಿಷ್ಠ ಪಕ್ಷ, ಒಂದು ಚಿಕ್ಕ ಸಂಖ್ಯೆಯಲ್ಲಿಯಾದರೂ ಇರಬೇಕೆನ್ನುವುದನ್ನು ಮಹಾಪ್ರಭುಗಳ ಸರಕಾರ ತೀವ್ರ ಮಹತ್ವದ ವಿಷಯವೆಂದು ಪರಿಗಣಿಸುತ್ತದೆ. ಮಹಿಳೆಯರಿಗೆಂದೇ ಪ್ರತ್ಯೇಕವಾಗಿ ಗೊತ್ತುಪಡಿಸಿದ ಒಂದು ನಿರ್ದಿಷ್ಟ ಸಂಖ್ಯೆಯ ಸ್ಥಾನಗಳನ್ನು ಉಂಟುಮಾಡದಿದ್ದರೆ, ಈ ಗುರಿಯನ್ನು ತಲುಪುವುದು ಅಸಾಧ್ಯವೆಂದು ಮೊದಲೇ ಸರಕಾರ ಅಭಿಪ್ರಾಯಪಡುತ್ತದೆ. ಒಂದೇ ಸಮುದಾಯದಿಂದ ಪ್ರಮಾಣಮೀರಿ ಮಹಿಳಾ ಸದಸ್ಯರನ್ನು ತೆಗೆದುಕೊಳ್ಳಬಾರದೆಂಬುದೂ ಮುಖ್ಯವಾಗಿದೆ ಎಂದೂ ಅದು ಅಭಿಪ್ರಾಯಪಡುತ್ತದೆ. ಈ ಅಪಾಯವನ್ನು ತಪ್ಪಿಸುವಂಥ, ಮತ್ತು ಪ್ರಾತಿನಿಧ್ಯದ ಬಗೆಗೆ ಅಳವಡಿಸಲು ಅಗತ್ಯವೆಂದೆನಿಸಿದ ಯೋಜನೆಯ ಶೇಷಭಾಗಕ್ಕೆ ಸುಸಂಗತವಾಗಿರುವ ಒಂದು ವ್ಯವಸ್ಥೆಯನ್ನು ಕಂಡುಹಿಡಿಯುವುದರಲ್ಲಿ ಅದು ಯಶಸ್ವಿಯಾಗಿಲ್ಲ– ವಿಶೇಷ ಮಹಿಳಾಕ್ಷೇತ್ರದ ಚುನಾಯಕರನ್ನು ಒಂದೇ ಸಮುದಾಯಕ್ಕೆ ಸೀಮಿತಗೊಳಿಸುವುದಷ್ಟನ್ನೇ ಮಾಡಲು* ಅದಕ್ಕೆ ಸಾಧ್ಯವಾಯಿತು. ಇದಕ್ಕೆ ಅನುಗುಣವಾಗಿ,

* ಒಂದು ಅಪವಾದವನ್ನು ಬಿಟ್ಟು ನೋಡಿ ಅನುಬಂಧ XVI ಕೋಷ್ಟಕದ ಟಿಪ್ಪಿ (ಇ)

ಕೋಷ್ಟಕದಲ್ಲಿ ತೋರಿಸಿದಂತೆ, ವಿಶೇಷ ಮಹಿಳಾ ಸ್ಥಾನಗಳನ್ನು ವಿವಿಧ ಸಮುದಾಯಗಳ ನಡುವೆ ನಿರ್ದಿಷ್ಟವಾಗಿ ವಿಂಗಡಿಸಲಾಗಿದೆ. ಈ ವಿಶೇಷ ಕ್ಷೇತ್ರಗಳಲ್ಲಿ ಬಳಸಬೇಕಾದ ಖಚಿತ ಚುನಾವಣಾ ಕಾರ್ಯರೀತಿಗಳು ಇನ್ನೂ ಪರಿಶೀಲನೆಯಲ್ಲಿವೆ.

೧೪. ಕಾರ್ಮಿಕರಿಗೆಂದು ಗೊತ್ತುಪಡಿಸಿದ ಸ್ಥಾನಗಳನ್ನು ಬೇ–ಕೋಮುವಾರು ಕ್ಷೇತ್ರಗಳಿಂದ ಭರ್ತಿಮಾಡತಕ್ಕದ್ದು. ಚುನಾವಣಾ ವ್ಯವಸ್ಥೆಗಳನ್ನು ಇನ್ನೂ ನಿರ್ಧರಿಸಿಲ್ಲ; ಆದರೆ, ಹೆಚ್ಚಿನ ಪ್ರಾಂತ್ಯಗಳಲ್ಲಿ ಕಾರ್ಮಿಕರ ಕ್ಷೇತ್ರಗಳು ಭಾಗಶಃ ಟ್ರೇಡ್ ಯೂನಿಯನ್‌ಗಳನ್ನೂ, ಭಾಗಶಃ ಫ್ರಾಂಚೈಸ್ ಸಮಿತಿ ಶಿಫಾರಸು ಮಾಡಿದಂಥ ವಿಶೇಷ ಕ್ಷೇತ್ರಗಳನ್ನು ಒಳಗೊಳ್ಳುವುವು.

೧೫. ವಾಣಿಜ್ಯ ಮತ್ತು ಕೈಗಾರಿಕೆ, ಗಣಿ ಮತ್ತು ಬೆಳೆಗೆ ನಿಗದಿಪಡಿಸಲಾದ ವಿಶೇಷ ಸ್ಥಾನಗಳನ್ನು ಛೇಂಬರ್ ಆಫ್ ಕಾಮರ್ಸ್ ಮತ್ತು ವಿವಿಧ ಸಂಘಗಳ ಮುಖಾಂತರ ತುಂಬ ಬೇಕು. ಈ ಸ್ಥಾನಗಳಿಗಾಗಿ ಮಾಡಬೇಕಾದ ಚುನಾವಣಾ ಏರ್ಪಾಟುಗಳು ಮಾಡಬೇಕಾಗಿರುವ ತನಿಖೆಯನ್ನವಲಂಬಿಸುವುದು.

೧೬. ಜಮೀನುದಾರರಿಗೆಂದು ಗೊತ್ತುಪಡಿಸಿದ ವಿಶೇಷ ಸ್ಥಾನಗಳನ್ನು ವಿಶೇಷ ಜಮೀನುದಾರರ ಕ್ಷೇತ್ರಗಳಿಂದ ಚುನಾವಣೆಯ ಮೂಲಕ ಭರ್ತಿ ಮಾಡತಕ್ಕದ್ದು.

೧೭. ವಿಶ್ವವಿದ್ಯಾನಿಲಯಗಳ ಸ್ಥಾನಗಳಿಗೆ ಚುನಾವಣೆಯಲ್ಲಿ ಯಾವ ವಿಧಾನವನ್ನು ಅನುಸರಿಸಬೇಕು ಎಂಬುದು ಇನ್ನೂ ಪರಿಶೀಲನೆಯಲ್ಲಿದೆ.

೧೮. ಪ್ರಾಂತೀಯ ಶಾಸನ ಸಭೆಗಳಲ್ಲಿ ಪ್ರಾತಿನಿಧ್ಯವನ್ನು ಕುರಿತ ಈ ಪ್ರಶ್ನೆಗಳನ್ನು ಮಹಾಪ್ರಭುಗಳ ಸರಕಾರ ಇತ್ಯರ್ಥ ಮಾಡುವಲ್ಲಿ ಸಾಕಷ್ಟು ವಿವರಗಳನ್ನು ಪ್ರಸ್ತಾಪಿಸದೆ ಇರಲಿಕ್ಕಾಗಲಿಲ್ಲ. ಹೀಗಿದ್ದರೂ, ಕ್ಷೇತ್ರಗಳ ಸೀಮಾ ನಿರ್ಣಯದ ಕೆಲಸ ಉಳಿದಿದೆ. ಇದನ್ನು ಭಾರತದಲ್ಲಿ ಆದಷ್ಟು ಬೇಗನೆ ಆರಂಭಿಸಬೇಕೆಂದು ಉದ್ದೇಶಿಸಲಾಗಿದೆ.

ಕೆಲವು ಸಂದರ್ಭಗಳಲ್ಲಿ ಈಗ ಕೊಟ್ಟಿರುವ ಸ್ಥಾನಗಳ ಸಂಖ್ಯೆಯನ್ನು ಕಿಂಚಿತ್ ವ್ಯತ್ಯಾಸಗೊಳಿಸಿದರೆ ಕ್ಷೇತ್ರಗಳ ಸೀಮಾ ನಿರ್ಣಯಕ್ಕೆ ಮುಖ್ಯ ಸುಧಾರಣೆಗಳು ಒದಗುವ ಸಾಧ್ಯತೆ ಇದೆ. ಸಮುದಾಯಗಳ ನಡುವಣ ಅವಶ್ಯಕ ಸಮತೋಲನವನ್ನು ಮೂಲಭೂತವಾಗಿ ಬಾಧಿಸದಿದ್ದರೆ, ಇಂಥ ಸಣ್ಣಪುಟ್ಟ ಬದಲಾವಣೆಗಳನ್ನು, ಇಂಥ ಉದ್ದೇಶಕ್ಕೋಸ್ಕರ ಮಾಡುವ ಹಕ್ಕನ್ನು ಮಹಾಪ್ರಭುಗಳ ಸರಕಾರ ಕಾದಿರಿಸುತ್ತದೆ. ಆದರೆ ಬಂಗಾಳ ಮತ್ತು ಪಂಜಾಬಗಳಲ್ಲಿ ಇಂಥ ಬದಲಾವಣೆಗಳನ್ನು ಮಾಡಲಾಗುವುದಿಲ್ಲ.

೧೯. ಪ್ರಾಂತ್ಯಗಳಲ್ಲಿ ಎರಡನೇ ಸದನದ ಸಂರಚನೆ ಹೇಗಿರಬೇಕು ಎಂಬುದಕ್ಕೆ ಸಂವಿಧಾನಾತ್ಮಕ ಚರ್ಚೆಗಳಲ್ಲಿ, ಇದುವರೆಗೆ, ಸಾಪೇಕ್ಷವಾಗಿ ಅಲ್ಪ ಗಮನ ಸಂದಿದೆ. ಯಾವ ಪ್ರಾಂತ್ಯದಲ್ಲಿ ಎರಡನೇ ಸದನ ಇರಬೇಕು ಎಂಬುದನ್ನು ತೀರ್ಮಾನಿಸುವ ಅಥವಾ ಅವುಗಳ ಸಂರಚನೆಗೆ ಒಂದು ಸೂತ್ರವನ್ನು ರೂಪಿಸುವ ಮೊದಲು ಈ ವಿಷಯಕ್ಕೆ ಇನ್ನೂ ಹೆಚ್ಚಿನ ಗಮನ ಸಲ್ಲತಕ್ಕದ್ದು. ಒಂದು ಪ್ರಾಂತ್ಯದ ಮೇಲ್ಮನೆಯ ಸಂರಚನೆ, ಕೆಳಮನೆಯ ಸಂರಚನೆಯಲ್ಲಿ ಸ್ಥಾಪಿಸಲ್ಪಟ್ಟ ಸಮುದಾಯಗಳ ಸಮತೋಲನಕ್ಕೆ ಯಾವುದೇ ಮೂಲಾಂಶದಲ್ಲಿ ಭಂಗವನ್ನುಂಟುಮಾಡಬಾರದು ಎಂದು ಮಹಾಪ್ರಭುಗಳ ಸರಕಾರ ಭಾವಿಸುತ್ತದೆ.

೨೦. ಕೇಂದ್ರದ ಶಾಸನಸಭೆಯ ಗಾತ್ರ ಮತ್ತು ಸಂರಚನೆಯ ಪ್ರಶ್ನೆಯನ್ನು ಪ್ರಸ್ತಾಪಿಸಲು ಮಹಾಪ್ರಭುಗಳ

ಸರಕಾರ ಈಗ ಉದ್ದೇಶಿಸಿಲ್ಲ. ಏಕೆಂದರೆ, ಇದರಲ್ಲಿ ಸೇರಿಕೊಂಡ ಹಲವು ಪ್ರಶ್ನೆಗಳಲ್ಲಿ, ಇನ್ನೂ ಹೆಚ್ಚಿನ ಚರ್ಚೆ ಅಗತ್ಯವಿರುವ, ಭಾರತೀಯ ರಾಜ್ಯಗಳ ಪ್ರಾತಿನಿಧ್ಯದ ಪ್ರಶ್ನೆಯೂ ಸೇರಿದೆ. ಈ ಶಾಸನ ಸಭೆಯ ಸಂರಚನೆಯನ್ನು ಪರಿಶೀಲಿಸುವಾಗ, ಅದರೊಳಗೆ ಸಾಕಷ್ಟು ಪ್ರಾತಿನಿಧ್ಯ ಪಡೆಯಲು ಎಲ್ಲಾ ಸಮುದಾಯಗಳು ಮಂಡಿಸುವ ಹಕ್ಕಿನ ಕೋರಿಕೆಯನ್ನು ಅದು ಖಂಡಿತವಾಗಿ ಪರಿಶೀಲಿಸುವುದು.

೨೧. ಹಣಕಾಸು ಪೂರೈಕೆಯ ಒಂದು ತೃಪ್ತಿಕರ ಮಾರ್ಗವನ್ನು ಕಂಡುಹಿಡಿಯಲು ಸಾಧ್ಯವಾಧರೆ, ಸಿಂಧನ್ನು ಒಂದು ಪ್ರತ್ಯೇಕ ಪ್ರಾಂತ್ಯವನ್ನಾಗಿ ಮಾಡಬೇಕೆಂಬುದನ್ನು ಮಹಾಪ್ರಭುಗಳ ಸರಕಾರ ತತ್ವಶಃ ಅಂಗೀಕರಿಸಿದೆ. ಹಣಕಾಸಿನ ಈ ಸಮಸ್ಯೆಗಳನ್ನು ಹಣಕಾಸಿನ ಫೆಡರಲ್ ವ್ಯವಸ್ಥೆಗೆ ಸಂಬಂಧಿಸಿದಂತೆ ಇನ್ನೂ ಪುನರ್ ಪರಿಶೀಲಿಸಬೇಕಾದುದರಿಂದ, ಈ ಹಂತದಲ್ಲಿ, ಮುಂಬೈ ಪ್ರೆಸಿಡೆನ್ಸಿಯಷ್ಟರ ಮತ್ತು ಸಿಂಧ್‌ಗಳ ಪ್ರತ್ಯೇಕ ಶಾಸನಸಭೆಗಳ ಯೋಜನೆಗಳ ಜೊತೆಗೆ, ಈಗಿರುವಂಥ ಮುಂಬೈ ಪ್ರಾಂತ್ಯದ ಶಾಸನಸಭೆಗೆ ಸಂಬಂಧಿಸುವ ಅಂಕಿಗಳನ್ನು ಸೇರಿಸುವುದು ಹೆಚ್ಚು ಸೂಕ್ತ ಎಂದು ಮಹಾಪ್ರಭುಗಳ ಸರಕಾರ ಭಾವಿಸಿದೆ.

೨೨. ಬಿಹಾರ್ ಮತ್ತು ಒರಿಸ್ಸಾಗಳಿಗೆ ಕೊಟ್ಟಿರುವ ಅಂಕಿಗಳು ಈಗಿರುವ ಪ್ರಾಂತ್ಯಕ್ಕೆ ಸಂಬಂಧಿಸುವಂಥವು. ಒರಿಸ್ಸಾವನ್ನು ಪ್ರತ್ಯೇಕವಾದ ಪ್ರಾಂತ್ಯವನ್ನಾಗಿ ಸ್ಥಾಪಿಸುವ ಪ್ರಶ್ನೆ ಇನ್ನೂ ಪರಿಶೀಲನೆಯಲ್ಲಿದೆ.

೨೩. ಬೆರಾರ್ ಸೇರಿಸುವ ಕೇಂದ್ರ ಪ್ರಾಂತ್ಯಗಳ ಶಾಸನಸಭೆಗೆ ಸಂಬಂಧಿಸುವ ಅಂಕಿಗಳನ್ನು ಕೋಷ್ಟಕದಲ್ಲಿ ಸೇರಿಸಿರುವುದರಿಂದ, ಬೆರಾರ್‌ನ ಭವಿಷ್ಯತ್ತಿನ ಸಂವಿಧಾನಾತ್ಮಕ ಸ್ಥಾನಮಾನಗಳ ಬಗೆಗೆ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಅರ್ಥಮಾಡಿಕೊಳ್ಳಲಾಗದು.

ಲಂಡನ್,
ಆಗಸ್ಟ್ ೪, ೧೯೩೨.

## ಅನುಬಂಧ - XVIII (ಮುಂದುವರಿದುದು)

### ಪ್ರಾಂತೀಯ ಶಾಸನಸಭೆಗಳಲ್ಲಿ (ಕೆಳಮನೆಗೆ ಸಂಬಂಧಿಸಿದಂತೆ ಮಾತ್ರ) ಸ್ಥಾನಗಳ ಹಂಚಿಕೆ

| ಪ್ರಾಂತ್ಯ | ಸಾಮಾನ್ಯ | ನಿಮ್ನವರ್ಗಗಳು | ಹಿಂದುಳಿದ ಪ್ರದೇಶಗಳಿಂದ ಪ್ರತಿನಿಧಿಗಳು | ಸಿಖ್ | ಮಹಮ್ಮದೀಯ | ಭಾರತೀಯ ಕ್ರೈಸ್ತರು | ಆಂಗ್ಲೋ ಇಂಡಿಯನ್ | ಯುರೋಪಿಯನ್ | ವಾಣಿಜ್ಯ ಮತ್ತು ಕೈಗಾರಿಕೆ, ಗಣಿ ಉದ್ಯಮ ಮತ್ತು ಬೆಳೆಗಳು, ವಿಶೇಷ | ಜಮೀನುದಾರರು ವಿಶೇಷ | ವಿಶ್ವವಿದ್ಯಾನಿಲಯ ವಿಶೇಷ | ಕಾರ್ಮಿಕರು ವಿಶೇಷ | ಜುಮ್ಲಾ |
|---|---|---|---|---|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ | ೧೪ |
| ಮದರಾಸು | ೧೩೪ (೬ ಮಹಿಳೆಯರು ಸೇರಿದಂತೆ) | ೧೮ | ೧ | ೦ | ೨೯ (೧ ಮಹಿಳೆ ಸೇರಿದಂತೆ) | ೯ (೧ ಮಹಿಳೆ ಸೇರಿದಂತೆ) | ೨ | ೩ | ೬ | ೬ | ೧ | ೬ | ೨೧೫ |
| ಮುಂಬೈ (ಸಿಂಧ್ ಸೇರಿದಂತೆ) | ೯೭(ಬಿ) (೫ ಮಹಿಳೆಯರು ಸೇರಿದಂತೆ) | ೧೦ | ೧ | ೦ | ೬೩ (೧ ಮಹಿಳೆ ಸೇರಿದಂತೆ) | ೩ | ೨ | ೪ | ೮ | ೩ | ೧ | ೮ | ೨೦೦ |
| ಬಂಗಾಳ | ೮೦(ಸಿ) (೨ ಮಹಿಳೆಯರು ಸೇರಿದಂತೆ) | (ಸಿ) | ೦ | ೦ | ೧೧೯ (೨ ಮಹಿಳೆಯರು ಸೇರಿದಂತೆ) | ೨ | ೪ (೧ ಮಹಿಳೆ ಸೇರಿದಂತೆ) | ೧೧ | ೧೯ | ೫ | ೨ | ೮ | ೨೫೦ |
| ಸಂಯುಕ್ತ ಪ್ರಾಂತ್ಯಗಳು | ೧೩೨ (೪ ಮಹಿಳೆಯರು ಸೇರಿದಂತೆ) | ೧೨ | ೦ | ೦ | ೬೬ (೨ ಮಹಿಳೆಯರು ಸೇರಿದಂತೆ) | ೨ | ೧ | ೨ | ೩ | ೫ | ೧ | ೩ | ೨೨೮ |

| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ | ೧೪ |
|---|---|---|---|---|---|---|---|---|---|---|---|---|---|
| ಪಂಜಾಬ | ೪೩ (೧ ಮಹಿಳೆ ಸೇರಿದಂತೆ) | ೦ | ೦ | ೩೨ (೧ ಮಹಿಳೆ ಸೇರಿದಂತೆ) | ೮೬ (೨ ಮಹಿಳೆಯರು ಸೇರಿದಂತೆ) | ೨ | ೧ | ೧ | ೧ | ೫(ಡಿ) | ೧ | ೩ | ೧೭೫ |
| ಬಿಹಾರ್ ಮತ್ತು ಒರಿಸ್ಸಾ | ೯೯ (೩ ಮಹಿಳೆ ಯರು ಸೇರಿದಂತೆ) | ೭ | ೮ | ೦ | ೪೨ (೧ ಮಹಿಳೆ ಸೇರಿದಂತೆ) | ೨ | ೧ | ೨ | ೪ | ೪ | ೧ | ೪ | ೧೭೫ |
| ಕೇಂದ್ರ ಪ್ರಾಂತ್ಯಗಳು (ಬೆರಾರ್ ಸೇರಿದಂತೆ) | ೭೭ (೩ ಮಹಿಳೆಯರು ಸೇರಿದಂತೆ) | ೧೦ | ೧ | ೦ | ೧೪ | ೦ | ೧ | ೧ | ೨ | ೩ | ೧ | ೨ | ೧೧೨ |
| ಅಸ್ಸಾಂ | ೪೪ (೧ ಮಹಿಳೆ ಸೇರಿದಂತೆ) (ಇ) | ೪ | | ೦ | ೩೪ | ೧ | ೦ | ೧ | ೧೧ | | ೦ | ೪ | ೧೦೮ |
| ವಾಯವ್ಯ ಗಡಿ ಪ್ರಾಂತ್ಯ | ೯ | ೦ | ೦ | ೩ | ೩೬ | ೦ | ೦ | ೦ | ೦ | ೨ | ೦ | ೦ | ೫೦ |
| ಮುಂಬೈ (ಸಿಂಧನ್ನು ಹೊರತುಪಡಿಸಿ) | ೧೦೯(ಬಿ) (೫ ಮಹಿಳೆಯರು ಸೇರಿದಂತೆ) | ೧೦ | ೧ | ೦ | ೩೦ (೧ ಮಹಿಳೆ ಸೇರಿದಂತೆ) | ೩ | ೨ | ೩ | ೭ | ೨ | ೧ | ೭ | ೧೭೫ |

| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ | ೧೪ |
|---|---|---|---|---|---|---|---|---|---|---|---|---|---|
| ಸಿಂಧ್ | ೧೯ (೧ ಮಹಿಳೆ ಸೇರಿದಂತೆ) | ೦ | ೦ | ೦ | ೩೪ (೧ ಮಹಿಳೆ ಸೇರಿದಂತೆ) | ೦ | ೦ | ೨ | ೨ | ೨ | ೦ | ೧ | ೬೦ |

(ಎ) ಈ ಸ್ಥಾನಗಳನ್ನು ಭರ್ತಿಮಾಡುವ ಚುನಾಯಕ ಸಭೆಗಳಲ್ಲಿ ಪ್ರಧಾನವಾಗಿ ಯುರೋಪಿಯನರೇ ಅಥವಾ ಪ್ರಧಾನವಾಗಿ ಭಾರತೀಯರೇ ಇರುವುದಿಲ್ಲವಾದರೂ, ಅವುಗಳ ಸಂರಚನೆಯನ್ನು ಶಾಸನಬದ್ಧವಾಗಿ ನಿಗದಿಪಡಿಸತಕ್ಕದ್ದಲ್ಲ. ಆದುದರಿಂದ, ಒಂದೊಂದು ಪ್ರಾಂತ್ಯದಿಂದ ಎಷ್ಟು ಯುರೋಪಿಯನರು ಮತ್ತು ಎಷ್ಟು ಭಾರತೀಯರು ಆಯ್ಕೆಯಾಗುವರು ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಆದರೆ, ಆರಂಭದಲ್ಲಿ, ಈ ಸಂಖ್ಯೆ, ಹೆಚ್ಚು ಕಡಿಮೆ, ಹೀಗಿರುವುದು ಎಂದು ನಿರೀಕ್ಷಿಸಬಹುದು; ಮದ್ರಾಸು, ೪ ಯು. (ಯುರೋಪಿಯನರು), ೨ ಭಾ (ಭಾರತೀಯರು), ಮುಂಬೈ (ಸಿಂಧ್ ಸೇರಿದಂತೆ), ೫ ಯು, ೩ ಭಾ. ಬಂಗಾಳ, ೧೪ ಯು, ೫ಭಾ, ಸಂಯುಕ್ತ ಪ್ರಾಂತ್ಯಗಳು, ೨ ಯು, ೧ ಭಾ, ಪಂಜಾಬ, ೧ ಭಾ., ಬಿಹಾರ್ ಮತ್ತು ಒರಿಸ್ಸಾ, ೨ ಯು, ೨ ಭಾ, ಕೇಂದ್ರ ಪ್ರಾಂತ್ಯಗಳು (ಬೆರಾರ್ ಸೇರಿದಂತೆ), ೧ ಯು, ೧ ಭಾ., ಅಸ್ಸಾಂ, ೮ ಯು, ೩ ಭಾ., ಮುಂಬೈ, ಸಿಂಧನ್ನು ಹೊರತುಪಡಿಸಿ, ೪ ಯು, ೩ ಭಾ., ಸಿಂಧ್, ೧ ಯು, ೧ ಭಾ.

(ಬಿ) ಇವುಗಳಲ್ಲಿ ೭ ಸ್ಥಾನಗಳನ್ನು ಮರಾಠರಿಗೆ ಮೀಸಲಿಡತಕ್ಕದ್ದು.

(ಸಿ) ಕೋಷ್ಟಕದ ೯ನೇ ಪರಿಚ್ಛೇದದಲ್ಲಿ ವಿವರಿಸಿದಂತೆ, ಬಂಗಾಳದಲ್ಲಿ ನಿಮ್ನ ವರ್ಗಗಳ ವಿಶೇಷ ಸ್ಥಾನಗಳು ಎಷ್ಟೆಂದು ಇನ್ನೂ ನಿಗದಿಮಾಡಿಲ್ಲ - ಇವುಗಳ ಸಂಖ್ಯೆ ೧೦ಕ್ಕಿಂತ ಹೆಚ್ಚಿರುವುದಿಲ್ಲ. ನಿಮ್ನ ವರ್ಗಗಳ ವಿಶೇಷ ಸ್ಥಾನಗಳ ಸಂಖ್ಯೆಯನ್ನು ೮೦ರಿಂದ ಕಳೆದರೆ ಸಿಗುವ ಸಂಖ್ಯೆಯೇ ಸಾಮಾನ್ಯ ಸ್ಥಾನಗಳ ಸಂಖ್ಯೆ.

(ಡಿ) ಈ ಸ್ಥಾನಗಳಲ್ಲಿ ಒಂದು ಸ್ಥಾನ ತುಮಾನ್ ದಾರನ ಸ್ಥಾನ. ಜಮೀನುದಾರರ ೪ ಸ್ಥಾನಗಳನ್ನು ಜಂಟಿ ಚುನಾಯಕ ಸಭೆಗಳಿರುವ ವಿಶೇಷ ಕ್ಷೇತ್ರಗಳಿಂದ ಭರ್ತಿಮಾಡತಕ್ಕದ್ದು. ಚುನಾಯಕ ಸಭೆಯ ಪ್ರಸಾರವನ್ನು ಗಮನಿಸಿದರೆ, ಆಯ್ಕೆಗೊಳ್ಳುವ ಸದಸ್ಯರು ಹೀಗಿರುವುದು ಸಂಭಾವ್ಯ, ಹಿಂದೂ, ೧ ಸಿಖ್ ೧, ಮತ್ತು ಮಹಮ್ಮದೀಯರು ೨.

(ಇ) ಈ ಮಹಿಳಾಸ್ಥಾನವನ್ನು ಶಿಲ್ಲೊಂಗಿನಲ್ಲಿ ಬೇ-ಕೋಮುವಾರು ಕ್ಷೇತ್ರದಿಂದ ಭರ್ತಿಮಾಡತಕ್ಕದ್ದು.

# ಅನುಬಂಧ XIX
# ಪೂರಕ ಕೋಮುತೀರ್ಪು*

“ಆ ಮೇಲೆ, ಕೇಂದ್ರದಲ್ಲಿ ಸಮುದಾಯಗಳ, ವಿಶೇಷವಾಗಿ ಮುಸ್ಲಿಂ ಸಮುದಾಯದ ಪ್ರಾತಿನಿಧ್ಯದ ಪ್ರಶ್ನೆ ಇತ್ತು. ಈ ವಿಷಯದಲ್ಲಿ– ನಾನಿದನ್ನು ಹಲವು ಬಾರಿ ಪರೋಕ್ಷವಾಗಿ ಈಗಾಗಲೇ ಹೇಳಿದ್ದೇನೆ ಎಂದು ನನ್ನ ಕಲ್ಪನೆ– ಮುಸ್ಲಿಂ ಸಮುದಾಯಕ್ಕೆ ಶೇಕಡಾ ೩೩ ೧/೩ರಷ್ಟು ಪ್ರಾತಿನಿಧ್ಯ ಇರತಕ್ಕದ್ದು ಎಂದು ಸರಕಾರ ಭಾವಿಸುತ್ತದೆ ಎಂದು, ನನಗನಿಸುವ ಮಟ್ಟಕ್ಕೆ, ಸ್ಪಷ್ಟವಾಗಿ ಹೇಳಬಲ್ಲೆ. ಭಾರತೀಯ ಭಾರತದಲ್ಲಿ ಇದು ಸಂಬಂಧಪಟ್ಟ ಸಮುದಾಯಗಳ ಮತ್ತು ರಾಜರ ನಡುವೆ ವ್ಯವಸ್ಥೆಗೊಳ್ಳಬೇಕಾದ ವಿಷಯ. ಆದರೆ, ಈ ಪ್ರಶ್ನೆಯಲ್ಲಿ ಬ್ರಿಟಿಷ್ ಸರಕಾರದ ಪಾತ್ರ ಎಷ್ಟಿದೆಯೋ ಅಷ್ಟರಮಟ್ಟಿಗೆ, ಭವಿಷ್ಯತ್ತಿನಲ್ಲಿ ಸ್ಥಾನಗಳ ಹಂಚಿಕೆಗೆ ಸಂಬಂಧಿಸುವ ಈ ಪಕ್ಷಗಳ ನಡುವಣ ವ್ಯವಸ್ಥೆ ಆದಷ್ಟು ಸುಲಭವಾಗುವಂತೆ ನಾವು ನಮ್ಮ ಸತ್ಸಂಬಂಧಗಳನ್ನು ಉಪಯೋಗಿಸಲು ಸದಾ ಸಿದ್ಧರಿದ್ದೇವೆ.”

---

* ಕೇಂದ್ರ ಸರಕಾರದಲ್ಲಿ ಶೇಕಡಾ ೩೩ ೧/೩ರಷ್ಟು ಪ್ರಾತಿನಿಧ್ಯ ದೊರಕಬೇಕೆಂಬ ಮುಸ್ಲಿಮರ ಹಕ್ಕಿನ ಕೋರಿಕೆಯ ಬಗೆಗೆ ಮಹಾಪ್ರಭುಗಳ ಕೋಮುತೀರ್ಪು (ಅನುಬಂಧ XVIII) ಯಾವುದೇ ತೀರ್ಮಾನವನ್ನು ಕೊಡಲಿಲ್ಲ. ಡಿಸೆಂಬರ್ ೨೪, ೧೯೩೨ರಂದು ಮೂರನೇ ದುಂಡುಮೇಜಿನ ಸಭೆಯಲ್ಲಿ ಕೊಟ್ಟ ಹೇಳಿಕೆಗಳಲ್ಲಿ ಈ ಹಕ್ಕು ಸಾಧನೆಯ ಬಗೆಗಿನ ಮಹಾಪ್ರಭುಗಳ ಸರಕಾರದ ತೀರ್ಮಾನವನ್ನು ಭಾರತದ ಸೆಕ್ರೆಟರಿ ಆಫ್ ಸ್ಟೇಟ್‌ರವರು ಪ್ರಕಟಿಸಿದರು.

# ಅನುಬಂಧ XX
# ಪೂನಾ ಒಪ್ಪಂದ*

೧. ಪ್ರಾಂತೀಯ ಶಾಸನ ಸಭೆಗಳಲ್ಲಿರುವ ಸಾಮಾನ್ಯ ಚುನಾವಣಾ ಸ್ಥಾನಗಳ ಪೈಕಿ ಈ ಕೆಳಕಂಡಂತೆ ನಿಮ್ನವರ್ಗಗಳಿಗೆ ಸ್ಥಾನಗಳನ್ನು ಮೀಸಲಿಡತಕ್ಕದ್ದು:–

ಮದರಾಸು ೩೦; ಸಿಂಧ್ ಸೇರಿದಂತೆ ಮುಂಬೈ ೧೫; ಪಂಜಾಬ ೮; ಬಿಹಾರ್ ಮತ್ತು ಒರಿಸ್ಸಾ ೧೮; ಕೇಂದ್ರ ಪ್ರಾಂತ್ಯಗಳು ೨೦; ಅಸ್ಸಾಂ ೭; ಬಂಗಾಳ ೩೦; ಸಂಯುಕ್ತ ಪ್ರಾಂತ್ಯಗಳು ೨೦; ಜುಮ್ಲಾ ೧೪೮.

ಈ ಅಂಕಿಗಳು ಪ್ರಧಾನ ಮಂತ್ರಿಗಳ ತೀರ್ಮಾನದಲ್ಲಿ ಘೋಷಿಸಲ್ಪಟ್ಟ ಪ್ರಾಂತೀಯ ಪರಿಷತ್ತುಗಳ ಒಟ್ಟು ಸದಸ್ಯಸಂಖ್ಯೆಯನ್ನು ಆಧರಿಸಿವೆ.

೨. ಈ ಸ್ಥಾನಗಳಿಗೆ ಚುನಾವಣೆ, ಜಂಟಿ ಚುನಾಯಕಾ ಸಭೆಗಳಿಂದ, ಕೆಳಗಿನ ಕಾರ್ಯವಿಧಾನಗಳಿಗೆ ಒಳಪಟ್ಟು, ನಡೆಯತಕ್ಕದ್ದು;

ಒಂದು ಕ್ಷೇತ್ರದ ಸಾಮಾನ್ಯ ಮತದಾರರ ಪಟ್ಟಿಯಲ್ಲಿ ನೋಂದಾಯಿತ ನಿಮ್ನವರ್ಗಗಳ ಎಲ್ಲ ಸದಸ್ಯರು ಸೇರಿ ಒಂದು ಚುನಾಯಕಾ ಸಭೆಯಾಗುವುದು. ಈ ಸಭೆ ಒಂದೊಂದು ಮೀಸಲು ಸ್ಥಾನಕ್ಕೆ ನಿಮ್ನವರ್ಗಗಳಿಗೆ ಸೇರಿರುವ ನಾಲ್ಕು ಅಭ್ಯರ್ಥಿಗಳ ಪಟ್ಟಿಯನ್ನು ಏಕಮತ ವಿಧಾನದಿಂದ ಆರಿಸುವುದು. ಇಂಥ ಪ್ರಾಥಮಿಕ ಚುನಾವಣೆಯಲ್ಲಿ ಅತಿಹೆಚ್ಚು ಸಂಖ್ಯೆಯಲ್ಲಿ ಮತಗಳಿಸುವ ನಾಲ್ವರು ಸಾಮಾನ್ಯ ಚುನಾಯಕಾ ಸಭೆಯ ಚುನಾವಣೆಗೆ ಅಭ್ಯರ್ಥಿಗಳಾಗುವರು.

೩. ಇದೇ ರೀತಿಯಲ್ಲಿ, ಮೇಲೆ ಎರಡನೇ ಪರಿಚ್ಛೇದದಲ್ಲಿ ಹೇಳಿದಂತೆ, ಪ್ರಾಂತೀಯ ಶಾಸನಸಭೆಗಳಲ್ಲಿ ನಿಮ್ನವರ್ಗದವರ ಪ್ರಾತಿನಿಧ್ಯಕ್ಕೆ ಕಲ್ಪಿಸಲಾದ ಜಂಟಿ ಚುನಾಯಕಾ ಸಭೆಗಳ ತತ್ತ್ವದ ಮೇಲೆ ಕೇಂದ್ರ ಶಾಸನ ಸಭೆಯಲ್ಲಿ ನಿಮ್ನ ವರ್ಗದವರಿಗೆ ಪ್ರಾತಿನಿಧ್ಯ ಲಭಿಸತಕ್ಕದ್ದು.

೪. ಕೇಂದ್ರ ಶಾಸನ ಸಭೆಯಲ್ಲಿ ಭಾರತದ ಸಾಮಾನ್ಯ ಚುನಾಯಕಾ ಸಮಷ್ಟಿಗೆ ಗೊತ್ತುಪಡಿಸಿದ ಸ್ಥಾನಗಳ ಶೇಕಡಾ ಹದಿನೆಂಟರಷ್ಟನ್ನು ನಿಮ್ನವರ್ಗದವರಿಗೆಂದು ಆ ಶಾಸನಸಭೆಯಲ್ಲಿ ಮೀಡಲಿಡತಕ್ಕದ್ದು.

೫. ಇಲ್ಲಿ, ಈ ಮೊದಲು ಹೇಳಿದಂಥ ಕೇಂದ್ರ ಮತ್ತು ಪ್ರಾಂತೀಯ ಶಾಸನಸಭೆಗಳಿಗೆ ಚುನಾಯಿತರಾಗಲು ಅಭ್ಯರ್ಥಿಗಳ ಪಟ್ಟಿಯನ್ನು ಪ್ರಾಥಮಿಕ ಚುನಾವಣೆಯ ಮೂಲಕ ಸಿದ್ಧಪಡಿಸುವ ಕ್ರಮ, ಕೆಳಗಿನ ಆರನೇ ಪರಿಚ್ಛೇದದ ಉಪಬಂಧಗಳನ್ವಯ, ಪರಸ್ಪರ ಒಪ್ಪಿಗೆಯಿಂದ, ಅಷ್ಟರಲ್ಲೇ ಕೊನೆಗೊಳ್ಳದಿದ್ದ ಪಕ್ಷದಲ್ಲಿ, ಮೊದಲ ಹತ್ತು ವರ್ಷಗಳು ಕಳೆದಾಗ ಕೊನೆಗೊಳ್ಳುವುದು.

೬. ಒಂದರಿಂದ ನಾಲ್ಕನೇ ಪರಿಚ್ಛೇದಗಳಲ್ಲಿ ಹೇಳಿರುವಂಥ, ಪ್ರಾಂತೀಯ ಮತ್ತು ಕೇಂದ್ರೀಯ ಶಾಸನಸಭೆಯಲ್ಲಿ ಮೀಸಲು ಸ್ಥಾನಗಳ ಮೂಲಕ ನಿಮ್ನವರ್ಗದವರಿಗೆ ಪ್ರಾತಿನಿಧ್ಯ ಕೊಡುವ ವ್ಯವಸ್ಥೆ, ಒಪ್ಪಂದಕ್ಕೆ ಸಂಬಂಧಪಟ್ಟ ಸಮುದಾಯಗಳು ಪರಸ್ಪರ ಒಪ್ಪಿಗೆಯಿಂದ ಈ ವ್ಯವಸ್ಥೆಯನ್ನು ಕೊನೆಗೊಳಿಸುವವರೆಗೆ ಮುಂದುವರಿಯುವುದು.

---

* ಇದಕ್ಕೆ ಸೆಪ್ಟೆಂಬರ್, ೨೫, ೧೯೩೨ರಂದು ಹಸ್ತಾಕ್ಷರ ಮಾಡಲಾಯಿತು.

೭. ಕೇಂದ್ರ ಮತ್ತು ಪ್ರಾಂತೀಯ ಶಾಸನಸಭೆಗಳಿಗೆ ನಿಮ್ನವರ್ಗದವರು ಮತ ಚಲಾಯಿಸುವ ಹಕ್ಕು ಲೋತಿಯನ್ ಸಮಿತಿಯ ವರದಿಗೆ ಅನುಗುಣವಾಗಿರುವುದು.

೮. ಸ್ಥಳೀಯ ಸಂಸ್ಥೆಗಳಿಗೆ ಚುನಾಯಿತರಾಗುವ ಅಥವಾ ಸಾರ್ವಜನಿಕ ಸೇವೆಗಳಲ್ಲಿ ನೇಮಕವಾಗುವ ವಿಷಯದಲ್ಲಿ, ನಿಮ್ನ ವರ್ಗಗಳಿಗೆ ಸೇರಿರುವ ಕಾರಣದಿಂದ ಯಾರಿಗೂ ಅಸಮರ್ಥತೆ ಅಥವಾ ಅನರ್ಹತೆ ಇರತಕ್ಕದ್ದಲ್ಲ. ಈ ಸಂಬಂಧದಲ್ಲಿ ಸಾರ್ವಜನಿಕ ಸೇವೆಗಳಲ್ಲಿ ನೇಮಕಾತಿಗೆ ನಿಗದಿಪಡಿಸಿದ ವಿದ್ಯಾರ್ಹತೆಯ ನಿಬಂಧನೆಗೆ ಒಳಪಟ್ಟು, ನಿಮ್ನವರ್ಗದವರಿಗೆ ನ್ಯಾಯಯುತ ಪ್ರಾತಿನಿಧ್ಯವನ್ನು ಒದಗಿಸಿಕೊಡಲು ಎಲ್ಲಾ ಪ್ರಯತ್ನಗಳನ್ನು ಮಾಡತಕ್ಕದ್ದು.

೯. ಪ್ರತಿಯೊಂದು ಪ್ರಾಂತ್ಯದಲ್ಲಿ, ವಿದ್ಯಾಭ್ಯಾಸದ ಅನುದಾನದಿಂದ ಸಾಕಷ್ಟು ಪ್ರಮಾಣದ ಒಂದು ಮೊಬಲಗನ್ನು ನಿಮ್ನ ವರ್ಗದ ಸದಸ್ಯರಿಗೆ ವಿದ್ಯಾ ಸವಲತ್ತುಗಳನ್ನು ಒದಗಿಸಿಕೊಡುವುದಕ್ಕೆ ಗೊತ್ತುಪಡಿಸತಕ್ಕದ್ದು.

# ಅನುಬಂಧ - XXI

## ಭಾರತ ಸರಕಾರ ಕಾಯ್ದೆ, ೧೯೩೫ - ಇದರಾನ್ವಯ ಪ್ರಾಂತೀಯ ಶಾಸನಸಭೆಗಳಲ್ಲಿ ಅಲ್ಪಸಂಖ್ಯಾತರ ಪ್ರಾತಿನಿಧ್ಯ

### I. ಕೆಳಮನೆ

| ಪ್ರಾಂತ್ಯ | ಒಟ್ಟು ಸ್ಥಾನಗಳು ಗೊತ್ತು ಪಡಿಸಲಾದ ಸ್ಥಾನಗಳು | ಮುಸ್ಲಿಮರು | | | ಪರಿಶಿಷ್ಟ ಜಾತಿಗಳು | | | ಭಾರತೀಯ ಕ್ರೈಸ್ತರು | | | ಸೀಖರು | | |
|---|---|---|---|---|---|---|---|---|---|---|---|---|---|
| | | ಕಾಯ್ದೆಯನ್ವಯ ಗೊತ್ತುಪಡಿಸಿದ ಸ್ಥಾನಗಳು | ಜನಸಂಖ್ಯೆಯ ಆಧಾರದ ಮೇಲೆ ಸಿಗಬೇಕಾದ ಸ್ಥಾನಗಳು | ಹೆಚ್ಚುವರಿ + ಅಥವಾ ಕೊರತೆ - | ಕಾಯ್ದೆಯನ್ವಯ ಗೊತ್ತುಪಡಿಸಿದ ಸ್ಥಾನಗಳು | ಜನಸಂಖ್ಯೆಯ ಆಧಾರದ ಮೇಲೆ ಸಿಗಬೇಕಾದ ಸ್ಥಾನಗಳು | ಹೆಚ್ಚುವರಿ + ಅಥವಾ ಕೊರತೆ - | ಕಾಯ್ದೆಯನ್ವಯ ಗೊತ್ತುಪಡಿಸಿದ ಸ್ಥಾನಗಳು | ಜನಸಂಖ್ಯೆಯ ಆಧಾರದ ಮೇಲೆ ಸಿಗಬೇಕಾದ ಸ್ಥಾನಗಳು | ಹೆಚ್ಚುವರಿ + ಅಥವಾ ಕೊರತೆ - | ಕಾಯ್ದೆಯನ್ವಯ ಗೊತ್ತುಪಡಿಸಿದ ಸ್ಥಾನಗಳು | ಜನಸಂಖ್ಯೆಯ ಆಧಾರದ ಮೇಲೆ ಸಿಗಬೇಕಾದ ಸ್ಥಾನಗಳು | ಹೆಚ್ಚುವರಿ + ಅಥವಾ ಕೊರತೆ - |
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ | ೧೪ |
| ಮದರಾಸು | ೨೧೫ | ೨೯ | ೧೭ | +೧೨ | ೩೦ | ೩೫ | -೫ | ೯ | ೯ | .. | ಏನೂ ಇಲ್ಲ | ಏನೂ ಇಲ್ಲ | .. |
| ಮುಂಬೈ | ೧೭೫ | ೩೦ | ೧೬ | +೧೪ | ೧೫ | ೧೬ | -೧ | ೩ | ೩ | .. | ಏನೂ ಇಲ್ಲ | ಏನೂ ಇಲ್ಲ | .. |
| ಬಂಗಾಳ | ೨೫೦ | ೧೧೯ | ೧೩೭ | -೧೮ | ೩೦ | ೩೩ | -೩ | ೩ | ಏನೂ ಇಲ್ಲ | +೩ | ಏನೂ ಇಲ್ಲ | ಏನೂ ಇಲ್ಲ | .. |

| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ | ೧೪ |
|---|---|---|---|---|---|---|---|---|---|---|---|---|---|
| ಸಂಯುಕ್ತ ಪ್ರಾಂತ್ಯಗಳು | ೨೨೮ | ೬೬ | ೩೫ | +೩೧ | ೨೦ | ೪೯ | -೨೯ | ೨ | ಏನೂ ಇಲ್ಲ | +೨ | ಏನೂ ಇಲ್ಲ | ೧ | -೧ |
| ಪಂಜಾಬ್ | ೧೭೫ | ೮೬ | ೧೦೦ | -೧೪ | ೮ | ೮ | .. | ೨ | ೩ | -೧ | ೩೨ | ೨೩ | +೯ |
| ಬಿಹಾರ್ | ೧೫೨ | ೪೦ | ೨೦ | +೨೦ | ೧೫ | ೨೦ | -೫ | ೧ | ಏನೂ ಇಲ್ಲ | +೧ | ಏನೂ ಇಲ್ಲ | ಏನೂ ಇಲ್ಲ | .. |
| ಕೇಂದ್ರ ಪ್ರಾಂತ್ಯಗಳು ಮತ್ತು ಬೆರಾರ್ | ೧೧೨ | ೧೪ | ೫ | +೯ | ೨೦ | ೨೦ | .. | ಏನೂ ಇಲ್ಲ | ಏನೂ ಇಲ್ಲ | .. | ಏನೂ ಇಲ್ಲ | ಏನೂ ಇಲ್ಲ | .. |
| ಅಸ್ಸಾಂ | ೧೦೮ | ೩೪ | ೩೬ | -೨ | ೭ | ೭ | .. | ೧ | ಏನೂ ಇಲ್ಲ | +೧ | ಏನೂ ಇಲ್ಲ | ಏನೂ ಇಲ್ಲ | .. |
| ವಾಯವ್ಯ ಗಡಿ ಪ್ರಾಂತ್ಯ | ೫೦ | ೩೬ | ೪೬ | -೧೦ | ಏನೂ ಇಲ್ಲ | .. | .. | ಏನೂ ಇಲ್ಲ | ಏನೂ ಇಲ್ಲ | .. | ೩ | ೧ | ೨ |
| ಒರಿಸ್ಸಾ | ೬೦ | ೪ | ೧ | +೩ | ೬ | ೯ | -೩ | ೧ | ಏನೂ ಇಲ್ಲ | +೧ | ಏನೂ ಇಲ್ಲ | ಏನೂ ಇಲ್ಲ | .. |
| ಸಿಂಧ್ | ೬೦ | ೩೪ | ೪೩ | -೯ | ಏನೂ ಇಲ್ಲ | ೩ | -೩ | ಏನೂ ಇಲ್ಲ | ಏನೂ ಇಲ್ಲ | .. | ಏನೂ ಇಲ್ಲ | ಏನೂ ಇಲ್ಲ | .. |
| ಜುಮ್ಲಾ | ೧೫೮೫ | ೪೯೨ | ೪೫೬ | +೩೬ | ೧೫೧ | ೨೦೦ | -೪೯ | ೨೨ | ೧೫ | -೭ | ೩೫ | ೨೫ | +೧೦ |

| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ | ೧೪ |
|---|---|---|---|---|---|---|---|---|---|---|---|---|---|
| **II ಮೇಲ್ಮನೆ** | | | | | | | | | | | | | |
| ಮದರಾಸು | ೫೬ | ೭ | ೪ | +೩ | ಏನೂ ಇಲ್ಲ | ೯ | -೯ | ೩ | ೨ | +೧ | ಏನೂ ಇಲ್ಲ | ಏನೂ ಇಲ್ಲ | .. |
| ಮುಂಬೈ | ೩೦ | ೫ | ೩ | +೨ | ಏನೂ ಇಲ್ಲ | ೩ | -೩ | ಏನೂ ಇಲ್ಲ | ಏನೂ ಇಲ್ಲ | .. | ಏನೂ ಇಲ್ಲ | ಏನೂ ಇಲ್ಲ | .. |
| ಬಂಗಾಳ | ೬೫ | ೧೭ | ೩೬ | -೧೯ | ಏನೂ ಇಲ್ಲ | ೮ | -೮ | ಏನೂ ಇಲ್ಲ | ಏನೂ ಇಲ್ಲ | .. | ಏನೂ ಇಲ್ಲ | ಏನೂ ಇಲ್ಲ | .. |
| ಸಂಯುಕ್ತ ಪ್ರಾಂತ್ಯಗಳು | ೬೦ | ೧೭ | ೯ | +೮ | ಏನೂ ಇಲ್ಲ | ೧೩ | -೧೩ | ಏನೂ ಇಲ್ಲ | ಏನೂ ಇಲ್ಲ | .. | ಏನೂ ಇಲ್ಲ | ಏನೂ ಇಲ್ಲ | .. |
| ಬಿಹಾರ್ | ೩೦ | ೪ | ೪ | .. | ಏನೂ ಇಲ್ಲ | ೪ | -೪ | ಏನೂ ಇಲ್ಲ | ಏನೂ ಇಲ್ಲ | .. | ಏನೂ ಇಲ್ಲ | ಏನೂ ಇಲ್ಲ | .. |
| ಅಸ್ಸಾಂ | ೨೨ | ೧೦ | ೭ | +೩ | ಏನೂ ಇಲ್ಲ | ೧ | -೧ | ಏನೂ ಇಲ್ಲ | ಏನೂ ಇಲ್ಲ | .. | ಏನೂ ಇಲ್ಲ | ಏನೂ ಇಲ್ಲ | .. |
| ಜುಮ್ಲಾ | ೨೬೩ | ೬೦ | ೬೩ | -೩ | ಏನೂ ಇಲ್ಲ | ೩೮ | -೩೮ | ೩ | ೨ | +೧ | ಏನೂ ಇಲ್ಲ | ಏನೂ ಇಲ್ಲ | .. |

# ಅನುಬಂಧ - XXI

## ಭಾರತ ಸರಕಾರ ಕಾಯ್ದೆ, ೧೯೩೫ - ಇದರಾನ್ವಯ ಪ್ರಾಂತೀಯ ಶಾಸನಸಭೆಗಳಲ್ಲಿ ಅಲ್ಪಸಂಖ್ಯಾತರ ಪ್ರಾತಿನಿಧ್ಯ

## I. ಕೆಳಮನೆ

| ಪ್ರಾಂತ್ಯ | ಒಟ್ಟು ಸ್ಥಾನಗಳು (ಗೊತ್ತು ಪಡಿಸಲಾದ ಸ್ಥಾನಗಳು) | ಮುಸ್ಲಿಮರು | | | ಪರಿಶಿಷ್ಟ ಜಾತಿಗಳು | | | ಭಾರತೀಯ ಕ್ರೈಸ್ತರು | | | ಸೀಖರು | | |
|---|---|---|---|---|---|---|---|---|---|---|---|---|---|
| | | ಕಾಯ್ದೆಯನ್ವಯ ಗೊತ್ತುಪಡಿಸಿದ ಸ್ಥಾನಗಳು | ಜನಸಂಖ್ಯೆಯ ಆಧಾರದ ಮೇಲೆ ಸಿಗಬೇಕಾದ ಸ್ಥಾನಗಳು | ಹೆಚ್ಚುವರಿ+ ಅಥವಾ ಕೊರತೆ - | ಕಾಯ್ದೆಯನ್ವಯ ಗೊತ್ತುಪಡಿಸಿದ ಸ್ಥಾನಗಳು | ಜನಸಂಖ್ಯೆಯ ಆಧಾರದ ಮೇಲೆ ಸಿಗಬೇಕಾದ ಸ್ಥಾನಗಳು | ಹೆಚ್ಚುವರಿ+ ಅಥವಾ ಕೊರತೆ - | ಕಾಯ್ದೆಯನ್ವಯ ಗೊತ್ತುಪಡಿಸಿದ ಸ್ಥಾನಗಳು | ಜನಸಂಖ್ಯೆಯ ಆಧಾರದ ಮೇಲೆ ಸಿಗಬೇಕಾದ ಸ್ಥಾನಗಳು | ಹೆಚ್ಚುವರಿ+ ಅಥವಾ ಕೊರತೆ - | ಕಾಯ್ದೆಯನ್ವಯ ಗೊತ್ತುಪಡಿಸಿದ ಸ್ಥಾನಗಳು | ಜನಸಂಖ್ಯೆಯ ಆಧಾರದ ಮೇಲೆ ಸಿಗಬೇಕಾದ ಸ್ಥಾನಗಳು | ಹೆಚ್ಚುವರಿ+ ಅಥವಾ ಕೊರತೆ - |
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ | ೧೪ |
| ಮದರಾಸು | ೨೧೫ | ೨೯ | ೧೭ | +೧೨ | ೩೦ | ೩೫ | -೫ | ೯ | ೯ | .. | ಏನೂ ಇಲ್ಲ | ಏನೂ ಇಲ್ಲ | .. |
| ಮುಂಬೈ | ೧೭೫ | ೩೦ | ೧೬ | +೧೪ | ೧೫ | ೧೬ | -೧ | ೩ | ೩ | .. | ಏನೂ ಇಲ್ಲ | ಏನೂ ಇಲ್ಲ | .. |
| ಬಂಗಾಳ | ೨೫೦ | ೧೧೯ | ೧೩೭ | -೧೮ | ೩೦ | ೩೩ | -೩ | ೩ | ಏನೂ ಇಲ್ಲ | +೩ | ಏನೂ ಇಲ್ಲ | ಏನೂ ಇಲ್ಲ | .. |

# ಅನುಬಂಧ XXIII

# ಸೇವೆಗಳಲ್ಲಿ ಕೋಮುವಾರು ಪ್ರಾತಿನಿಧ್ಯ ಭಾರತ ಸರಕಾರದ ನಿರ್ಣಯ*

ಸಿಬ್ಬಂದಿ
ಜುಲೈ ೪, ೧೯೩೪

### ಪ್ರಕರಣ I – ಸಾಮಾನ್ಯ

ಕ್ರಮಾಂಕ ಎಫ್. ೧೪/೧೭–ಬಿ/೩೩ ಶಾಸನ ಸಭೆಗಳಲ್ಲಿ ಕೊಟ್ಟ ಆಶ್ವಾಸನೆಗಳಿಗೆ ಅನುಗುಣವಾಗಿ, ಕೋಮು ಅಸಮಾನತೆಗಳನ್ನು ಸರಿಪಡಿಸುವುದಕ್ಕೋಸ್ಕರ ಸರಕಾರಿ ಸೇವೆಯ ನೇರ ನೇಮಕಾತಿಗಳಲ್ಲಿ ಒಂದು ನಿರ್ದಿಷ್ಟ ಶೇಕಡಾಂಶವನ್ನು ಮೀಸಲಿಡುವ, ೧೯೨೫ರಿಂದ ಅನುಷ್ಠಾನದಲ್ಲಿರುವ ಧೋರಣೆಯನ್ನು ಸರಕಾರ ಜಾಗರೂಕತೆಯಿಂದ ಪುನರ್ ಪರಿಶೀಲಿಸಿದೆ. ಸಾರ್ವಜನಿಕ ಸೇವೆಗಳಲ್ಲಿ ಮುಸ್ಲಿಮರಿಗೆ ಹೆಚ್ಚು ಪ್ರಾತಿನಿಧ್ಯವನ್ನು ಕೊಡುವ ಉದ್ದೇಶದಿಂದ, ಮುಖ್ಯವಾಗಿ, ಈ ಧೋರಣೆಯನ್ನು ಅಂಗೀಕರಿಸಲಾಯಿತಾದರೂ, ನೇಮಕಾತಿಗಳಲ್ಲಿ ಸಿಗಬೇಕಾದ ಸೂಕ್ತ ಪಾಲನ್ನು ಇವರಿಗೆ ಒದಗಿಸುವುದರಲ್ಲಿ ಇದು ವಿಫಲವಾಗಿದೆ ಎಂಬುದಾಗಿ ಮನವಿಗಳು ಬಂದಿವೆ. ಮುಸ್ಲಿಮರಿಗೆ ನಿರ್ದಿಷ್ಟ ಸಂಖ್ಯೆಯ ಹುದ್ದೆಗಳನ್ನು ಮೀಸಲಿಡದಿದ್ದರೆ ಈ ಸ್ಥಿತಿಯನ್ನು ಸರಿಪಡಿಸಲಿಕ್ಕಾಗದು ಎಂದೂ ವಾದಿಸಲಾಗಿದೆ. ವಿಶೇಷವಾಗಿ, ರೇಲ್ವೇ ಸೇವೆಗಳಲ್ಲಿರುವ, ಅದರಲ್ಲೂ ಜನತೆಯಲ್ಲಿ ಶೇಕಡಾವಾರು ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಮರು ಇರುವ ಪ್ರದೇಶಗಳನ್ನು ಹಾದುಹೋಗುವ ರೇಲ್ವೇಗಳಲ್ಲಿರುವ, ಮುಸ್ಲಿಮರ ಅಲ್ಪ ಸಂಖ್ಯೆಯ ಕಡೆ ಗಮನವನ್ನು ಸೆಳೆಯಲಾಗಿದೆ.

ಪರಿಸ್ಥಿತಿಯ ಪುನರ್ ಪರಿಶೀಲನೆಯಿಂದ ಈ ದೂರು ಸಾಧಾರಣವಾದುದೆಂದು ವ್ಯಕ್ತವಾಗಿದೆ. ಸೇವೆಗಳಲ್ಲಿ ಮುಸ್ಲಿಮರ ಸ್ಥಾನವನ್ನು ಉತ್ತಮಗೊಳಿಸುವ ಉದ್ದೇಶದಿಂದ ನೌಕರಿಭರ್ತಿಗೆ ಸಂಬಂಧಿಸಿದ ನಿರ್ದೇಶನಗಳನ್ನು ಪರಿಷ್ಕರಿಸಬೇಕೆಂದು ನಾವು ಮಾಡಿದ ವಿಚಾರಣೆಗಳಿಂದ ಸರಕಾರಕ್ಕೆ ತೃಪ್ತಿಕರವಾಗಿ ತಿಳಿದುಬಂದಿದೆ.

೨. ಈ ಸ್ಥೂಲ ಪ್ರಶ್ನೆಯನ್ನು ಪರಿಗಣಿಸುವಾಗ ಆಂಗ್ಲೊ–ಇಂಡಿಯನ್ನರ, ಅಧಿವಾಸಿತ ಯೂರೋಪಿಯನ್ನರ ಮತ್ತು ನಿಮ್ನವರ್ಗಗಳ ಹಕ್ಕುಕೋರಿಕೆಗಳನ್ನು ಸರಕಾರ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಸಾರ್ವಜನಿಕ ಸೇವೆಯ ಕೆಲವು ನಿರ್ದಿಷ್ಟ ಶಾಖೆಗಳ ಹೆಚ್ಚಿನ ಶೇಕಡಾಂಶವನ್ನು ಆಂಗ್ಲೊ–ಇಂಡಿಯನ್ನರು ಯಾವಾಗಲೂ ಪಡೆದಿದ್ದರು. ಈ ಸಮುದಾಯ ಈ ಉದ್ಯೋಗವನ್ನು ಅವಲಂಬಿಸಿರುವ ಪ್ರಮಾಣವನ್ನು ಗಮನದಲ್ಲಿಟ್ಟಾಗ, ತ್ವರಿತ ಗತಿಯಲ್ಲಿ

* ಗೆಜೆಟ್ ಆಫ್ ಇಂಡಿಯಾ, ಭಾಗ ೧, ಜುಲೈ ೭, ೧೯೩೪

ಇವರು ಸದ್ಯದ ಹುದ್ದೆಗಳನ್ನು ಬಿಡಬೇಕಾದಂಥ, ಮತ್ತು ಇದರಿಂದ ಈ ಸಮುದಾಯದ ಆರ್ಥಿಕ ಸಂರಚನೆ ಹಿಂಸಾತ್ಮಕವಾಗಿ ವಿಘಟಿಸಲು ಕಾರಣವಾಗುವಂಥ ಯಾವುದೇ ಬೆಳವಣಿಗೆಗೆ ಬರಲಿರುವ ಹೊಸ ಪರಿಸ್ಥಿತಿಯಲ್ಲಿ ಅವಕಾಶ ಕೊಡದಿರಲು ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬುದು ಎಲ್ಲರಿಗೂ ಒಪ್ಪಿಗೆಯಾದ ವಿಷಯವಾಗಿದೆ. ಆಂಗ್ಲೊ–ಇಂಡಿಯನ್ನನ್ನು ಮತ್ತು ಅಧಿವಾಸಿತ ಯುರೋಪಿಯನ್ನರನ್ನು ನಿರ್ದಿಷ್ಟ ಕಾರ್ಯರೂಪಕೊಡುವ ಉದ್ದೇಶದಿಂದ ರೂಪಿತವಾಗಿದೆ.

೩. ನಿಮ್ನವರ್ಗದವರಿಗೆ ಸಂಬಂಧಪಟ್ಟಂತೆ ಸಾರ್ವಜನಿಕ ಸೇವೆಗಳಲ್ಲಿ ಇವರಿಗೆ ನಿಷ್ಪಕ್ಷಪಾತವಾದ ಪ್ರಮಾಣದ ಪ್ರಾತಿನಿಧ್ಯವನ್ನು ದೊರಕಿಸಲು ನ್ಯಾಯವಾಗಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬುದು ಸರ್ವರಿಗೂ ಸಮ್ಮತವಾದ ಅಂಶವಾಗಿದೆ. ಈ ವಿಷಯದಲ್ಲಿ ಸವರ್ಣೀಯ ಹಿಂದೂಗಳ ಅಭಿಪ್ರಾಯವನ್ನು ವಿಧ್ಯುಕ್ತವಾಗಿ ೧೯೩೨ರ ಪೂನಾ ಒಪ್ಪಂದದಲ್ಲಿ ಪ್ರತಿಪಾದಿಸಲಾಗಿದ್ದು, ಈ ವಾದವನ್ನು ಒಪ್ಪುವುದರ ಮೂಲಕ ಮಹಾಪ್ರಭುಗಳ ಸರಕಾರ ಈ ವಿಷಯವನ್ನು ಸೂಕ್ತವಾಗಿ ಗಣನೆಗೆ ತೆಗೆದುಕೊಂಡಿತು. ಈ ವರ್ಗಗಳು ಸಾಧಿಸಿರುವ ಸಾಮಾನ್ಯ ವಿದ್ಯಾಭ್ಯಾಸದ ಮಟ್ಟವನ್ನು ಗಮನಿಸಿ, ಇಡಿಯಾಗಿ ಹಿಂದೂಗಳಿಗೆ ಲಭ್ಯವಿರುವ ನೌಕರಿಗಳ ಸಂಖ್ಯೆಯಲ್ಲಿ ಒಂದು ನಿರ್ದಿಷ್ಟ ಶೇಕಡಾಂಶವನ್ನು ಇವರಿಗೆ ಮೀಸಲಿಡುವುದರಿಂದ ಯಾವ ಪ್ರಯೋಜನವನ್ನೂ ಸಾಧಿಸಿದಂತಾಗುವುದಿಲ್ಲವೆಂದು ಭಾರತ ಸರಕಾರದ ತಿಳಿವಳಿಕೆ. ಆದರೆ, ಸೂಕ್ತ ಅರ್ಹತೆಯಿದ್ದ ನಿಮ್ನ ವರ್ಗಗಳ ಅಭ್ಯರ್ಥಿಗಳಿಗೆ ಮುಕ್ತ ಸ್ಪರ್ಧೆಯಲ್ಲಿ ಉತ್ತೀರ್ಣರಾಗಲು ಆಗುವುದಿಲ್ಲ ಎಂಬುದೊಂದೇ ಕಾರಣದ ದೆಸೆಯಿಂದ ಅವರು ನೇಮಕಾತಿಯ ನ್ಯಾಯಯುತ ಅವಕಾಶವನ್ನು ಕಳೆದುಕೊಳ್ಳದ ಹಾಗೆ ನೋಡಿಕೊಳ್ಳಬೇಕೆಂದು ಸರಕಾರ ಉದ್ದೇಶಿಸಿದೆ.

೪. ಮೇಲೆ ಹೇಳಿರದ ಅಲ್ಪಸಂಖ್ಯಾತರ ಸಮುದಾಯಗಳ ಸ್ಥಾನವನ್ನೂ ಸರಕಾರ ಎಚ್ಚರದಿಂದ ಪರಿಗಣಿಸಿದೆ. ಅವರಿಗೂ ಈಗಿರುವಂತೆ, ಸೇವೆಗಳಲ್ಲಿ ಯುಕ್ತ ಪ್ರಮಾಣದ ಪ್ರಾತಿನಿಧ್ಯದ ಅವಕಾಶವನ್ನು ಈ ಹೊಸ ನಿಯಮಗಳು ಕಲ್ಪಿಸಿಕೊಡಲಿವೆ ಎಂದು ಸರಕಾರಕ್ಕೆ ತೃಪ್ತಿಕರವಾಗಿ ತಿಳಿದುಬಂದಿದೆ.

## ಪ್ರಕರಣ II – ನಿಯಮಗಳ ವ್ಯಾಪ್ತಿ

೫. ಕೆಳಗೆ ವಿಧಿಸಲ್ಪಟ್ಟ ನಿಯಮಗಳ ಪರಿಪಾಲನೆಯನ್ನು ಗಮನಿಸಲು ಸಾಧ್ಯವಾಗುವಂತೆ ವಾರ್ಷಿಕ ವರದಿಯನ್ನು ಕಳಿಸುವಂತೆ ಭಾರತ ಸರಕಾರ ಆಜ್ಞಾಪಿಸಲಿದೆ.

೬. ಈ ಗುರಿಗಳನ್ನು ಸಾಧಿಸುವ ಉದ್ದೇಶದಿಂದ ಸೆಕ್ರೆಟರಿ ಆಫ್ ಸ್ಟೇಟ್‌ರವರ ಸಮ್ಮತಿಯೊಡನೆ ಭಾರತ ಸರಕಾರ ಅಂಗೀಕರಿಸಿದ ನಿಯಮಗಳನ್ನು ಕೆಳಗೆ ವಿವರಿಸಲಾಗಿದೆ. ಇವು ನೇರ ನೌಕರಿ ಭರ್ತಿಗೆ ಮಾತ್ರ ಸಂಬಂಧಿಸುತ್ತವೆ. ಬಡ್ತಿಯ ಮೂಲಕ ನೌಕರಿ ಭರ್ತಿಗೆ ಇವು ಅನ್ವಯಿಸುವುದಿಲ್ಲ– ಇದನ್ನು, ಈಗಿರುವಂತೆ, ಗುಣಾರ್ಹತೆಯ ಮೇಲೆ ಮಾತ್ರ ಮಾಡುವುದನ್ನು ಮುಂದುವರಿಸತಕ್ಕದ್ದು. ಭಾರತ ಸರಕಾರದ ಆಡಳಿತಾತ್ಮಕ ನಿಯಂತ್ರಣಕ್ಕೆ ಒಳಪಟ್ಟ ಇಂಡಿಯನ್ ಸಿವಿಲ್ ಸರ್ವಿಸ್, ಕೇಂದ್ರ ಸೇವೆಗಳು, ಕ್ಲಾಸ್ I ಮತ್ತು ಕ್ಲಾಸ್ II ಮತ್ತು ಅಧೀನ ಸೇವೆಗಳಿಗೆ– ಉನತ ತಾಂತ್ರಿಕ ಅಥವಾ ವಿಶೇಷ ಅರ್ಹತೆ ಬೇಕಾಗಿರುವ ಕೆಲವು ಸೇವೆಗಳನ್ನು ಮತ್ತು

ಹುದ್ದೆಗಳನ್ನು ಹೊರತುಪಡಿಸಿ– ಇವು ಅನ್ವಯಿಸುತ್ತವೆ. ಬರ್ಮಾ ಪ್ರಾಂತ್ಯದಲ್ಲಿ ಈ ಸೇವೆಗಳ ನೌಕರಿ ಭರ್ತಿಗೆ ಈ ನಿಯಮಗಳು ಅನ್ವಯಿಸುವುದಿಲ್ಲ. ರೇಲ್ವೇಗಳ ವಿಚಾರದಲ್ಲಿ, ಕೆಳಮಟ್ಟದ ಸೇವಕರು ಅಥವಾ ಕಾರ್ಮಿಕರು ಅಲ್ಲದಿರುವ ಎಲ್ಲಾ ಹುದ್ದೆಗಳಿಗೆ, ಸರಕಾರದ ಆಡಳಿತದಲ್ಲಿರುವ ನಾಲ್ಕು ರೇಲ್ವೇಗಳಲ್ಲಿ, ಇವು ಅನ್ವಯಿಸುತ್ತವೆ. ಕಂಪೆನಿ ಆಡಳಿತದ ರೇಲ್ವೇಗಳ ಸೇವೆಗಳಲ್ಲಿ ಇಂಥವೇ ನಿಯಮಗಳನ್ನು ಅನುಷ್ಠಾನಕ್ಕೆ ತರಬೇಕೆಂದು ಆಡಳಿತಗಳನ್ನು ಕೇಳಿಕೊಳ್ಳಲಾಗುವುದು.

### ಪ್ರಕರಣ III – ಅಖಿಲ ಭಾರತ ಮಟ್ಟದಲ್ಲಿ ನೌಕರಿ ಭರ್ತಿಯಾಗುವ ಸೇವೆಗಳಿಗೆ ಸಂಬಂಧಿಸಿದ ನಿಯಮಗಳು

೭(೧) ಅಖಿಲ ಭಾರತ ಮಟ್ಟದಲ್ಲಿ ಭರ್ತಿಯಾಗುವ ಇಂಡಿಯನ್ ಸಿವಿಲ್ ಸರ್ವಿಸ್ ಮತ್ತು ಕೇಂದ್ರ ಹಾಗೂ ಅಧೀನ ಸೇವೆಗಳ ವಿಷಯದಲ್ಲಿ ಈ ಕೆಳಗಿನ ನಿಯಮಗಳನ್ನು ಪಾಲಿಸತಕ್ಕದ್ದು:–

(i) ಭಾರತೀಯರಿಂದ ನೇರ ನೌಕರಿ ಭರ್ತಿಮಾಡಲ್ಪಡುವ ಎಲ್ಲಾ ಹುದ್ದೆಗಳಲ್ಲಿ ಶೇಕಡಾ ೨೫ರಷ್ಟನ್ನು ಮುಸ್ಲಿಮರಿಗೂ ಶೇಕಡಾ ೮ ೧/೩ರಷ್ಟನ್ನು ಇತರ ಅಲ್ಪಸಂಖ್ಯಾತರಿಗೂ ಮೀಸಲಿಡತಕ್ಕದ್ದು.

(ii) ಮುಕ್ತ ಸ್ಪರ್ಧೆಯಿಂದ ನೌಕರಿ ಭರ್ತಿ ಮಾಡುವ ಸಂದರ್ಭದಲ್ಲಿ ಮುಸ್ಲಿಮರಿಗೆ ಮತ್ತು ಇತರ ಅಲ್ಪಸಂಖ್ಯಾತ ಸಮುದಾಯಗಳಿಗೆ ಈ ಶೇಕಡಾಂಶಗಳಿಗಿಂತ ಕಡಿಮೆ ಸಂಖ್ಯೆ ದೊರಕಿದರೆ, ನಾಮ ನಿರ್ದೇಶನದ ಮೂಲಕ ಈ ಶೇಕಡಾಂಶಗಳನ್ನು ಭರ್ತಿ ಮಾಡತಕ್ಕದ್ದು; ಮುಸ್ಲಿಮರಿಗೆ ತಮ್ಮ ಮೀಸಲು ಶೇಕಡಾಂಶಕ್ಕಿಂತ ಹೆಚ್ಚು ಲಭಿಸಿತೆಂದಾದರೆ, ಇತರ ಅಲ್ಪಸಂಖ್ಯಾತರಿಗೆ ಮೀಸಲಿಟ್ಟ ಶೇಕಡಾಂಶವನ್ನು ಕಡಿಮೆಗೊಳಿಸಲಾಗದು; ಇತರ ಅಲ್ಪಸಂಖ್ಯಾತರಿಗೆ ಮೀಸಲಿಟ್ಟ ಶೇಕಡಾಂಶಕ್ಕಿಂತ ಹೆಚ್ಚು ಅವರಿಗೆ ಲಭಿಸಿದರೆ, ಮುಸ್ಲಿಮರಿಗೆ ಮೀಸಲಿಟ್ಟ ಶೇಕಡಾಂಶವನ್ನು ಕಡಿಮೆಗೊಳಿಸಲಾಗದು.

(iii) ಮುಕ್ತ ಸ್ಪರ್ಧೆಯಲ್ಲಿ ಇತರ ಅಲ್ಪಸಂಖ್ಯಾತರಿಗೆ ತಮಗೆ ಮೀಸಲಿಟ್ಟ ಶೇಕಡಾಂಶಕ್ಕಿಂತ ಕಡಿಮೆ ಲಭಿಸಿದರೆ, ಮತ್ತು ನಾಮ ನಿರ್ದೇಶನಕ್ಕೆ ಸೂಕ್ತ ಅರ್ಹತೆಯ ಅಭ್ಯರ್ಥಿಗಳು ಸಿಗದೆ ಹೋದರೆ, ಶೇಕಡಾ ೮ ೧/೩ರ ಶೇಷಭಾಗವನ್ನು ಮುಸ್ಲಿಮರು ಪಡೆಯಬಹುದು.

(iv) ಇತರ ಅಲ್ಪಸಂಖ್ಯಾತರಿಗೆ ಮೀಸಲಿಟ್ಟ ೮ ೧/೩ ಶೇಕಡಾಂಶವನ್ನು ಯಾವುದೇ ನಿಗದಿತ ದಾಮಾಷಾದಲ್ಲಿ ಅವರವರ ನಡುವೆ ಪುನಃ ಹಂಚತಕ್ಕದ್ದಲ್ಲ.

(v) ಎಲ್ಲಾ ಸಂದರ್ಭಗಳಲ್ಲಿ ಒಂದು ಕನಿಷ್ಠ ವಿದ್ಯಾರ್ಹತೆಯನ್ನು ವಿಧಿಸಲಾಗುವುದು, ಮತ್ತು ಮೀಸಲಾತಿ ಈ ಷರತ್ತಿಗೆ ಒಳಪಡುವುದು.

(vi) ನಿಮ್ನವರ್ಗದವರಿಗೆ ನಿಷ್ಪಕ್ಷಪಾತದ ಪ್ರಾತಿನಿಧ್ಯವನ್ನು ದೊರಕಿಸುವ ಉದ್ದೇಶದಿಂದ, ಒಂದು ಸಾರ್ವಜನಿಕ ಸೇವೆಗೆ ಸ್ಪರ್ಧೆಯ ಮೂಲಕ ನೌಕರಿ ಭರ್ತಿ ಮಾಡಲಾಗಿದ್ದರೂ, ಆ ಸೇವೆಯಲ್ಲಿ ಸೂಕ್ತ ವಿದ್ಯಾರ್ಹತೆ ಇದ್ದ ಈ ವರ್ಗಗಳ ಸದಸ್ಯರನ್ನು ನಾಮನಿರ್ದೇಶನ ಮಾಡಬಹುದು. ನಾಮನಿರ್ದೇಶನದ ಮೂಲಕ ನೇಮಕಾತಿಗೊಂಡ ಈ ವರ್ಗಗಳ ಸದಸ್ಯರನ್ನು, ಮೇಲೆ (i)ನೇ ಪರಿಚ್ಛೇದದಲ್ಲಿ ಹೇಳಿದ ಶೇಕಡಾಂಶದ ಒಳಗೆ ಪರಿಗಣಿಸತಕ್ಕದ್ದಲ್ಲ.

(೨) ಅಖಿಲ ಭಾರತ ಮಟ್ಟದಲ್ಲಿ ನೌಕರಿ ಭರ್ತಿಯಾಗುವ ರೇಲ್ವೇಗಳ ಗೆಜೆಟೆಡ್ ಹುದ್ದೆಗಳಲ್ಲಿರುವ ಆಂಗ್ಲೊ–ಇಂಡಿಯನ್ನರ ಮತ್ತು ಅಧಿವಾಸಿತ ಯುರೋಪಿಯನರ ಪ್ರಶ್ನೆಗೆ, ಈ ನಿರ್ಣಯದ ೨ನೇ ಪರಿಚ್ಛೇದದಲ್ಲಿ ಕೊಟ್ಟಿರುವ ಕಾರಣಕ್ಕೋಸ್ಕರ, ಭಾರತ ಸರಕಾರ ವಿಶೇಷ ಗಮನವನ್ನು

ಕೊಟ್ಟಿದೆ. ಈ ಹುದ್ದೆಗಳಲ್ಲಿ ಈಗಿರುವ ಪ್ರಾತಿನಿಧ್ಯವನ್ನು ಇವರು, ಹೆಚ್ಚುಕಡಿಮೆ, ಉಳಿಸಿಕೊಳ್ಳಬೇಕಾದರೆ, ಆಂಗ್ಲೋ–ಇಂಡಿಯನ್ನರಿಗೆ ಮತ್ತು ಅಧಿವಾಸಿತ ಯುರೋಪಿಯನ್ನರಿಗೆ, ಭಾರತೀಯ ಸಮುದಾಯಗಳಿಗೆ ಲಭ್ಯವಿರಬಹುದಾದ ಒಟ್ಟು ಹುದ್ದೆಗಳ ಶೇಕಡಾ ೯ರಷ್ಟು ಹುದ್ದೆಗಳ ಅಗತ್ಯವಿದೆ. ಈಗಿರುವಂತೆ, ನೇರ ನೌಕರಿ ಭರ್ತಿಯಿಂದ ಮತ್ತು ಬಡ್ತಿಯಿಂದ ಈ ಹುದ್ದೆಗಳ ಶೇಕಡಾ ೯ಕ್ಕಿಂತ ಹೆಚ್ಚನ್ನು ಈ ಸಮುದಾಯ ಪಡೆಯುತ್ತಿದೆ ಎಂದು ಸರಕಾರಕ್ಕೆ ತೃಪ್ತಿಕರವಾಗಿ ತಿಳಿದುಬಂದಿದೆ. ಈ ಪರಿಸ್ಥಿತಿಯಲ್ಲಿ ಈಗ, ಯಾವುದೇ ವಿಶೇಷ ಮೀಸಲಾತಿಯ ಅಗತ್ಯವಿಲ್ಲವೆಂದು ತೀರ್ಮಾನಿಸಲಾಗಿದೆ. ಈ ಸಮುದಾಯಕ್ಕೆ ಸಿಗುವ ಹುದ್ದೆಗಳು ಶೇಕಡಾ ೯ಕ್ಕಿಂತ ಕಡಿಮೆಯಾದರೆ, ಮತ್ತು ಹಾಗೆಂದು ತೋರಿಸಲಾದರೆ, ಅವರ ನ್ಯಾಯಯುತ ಹಿತಾಸಕ್ತಿಗಳನ್ನು ಕಾಪಾಡಲು ನೇರ ನೌಕರಿಭರ್ತಿಯಲ್ಲಿ ಯಾವ ಹೊಂದಾಣಿಕೆಗಳನ್ನು ಮಾಡುವ ಅಗತ್ಯವಿದೆ ಎಂಬುದನ್ನು ಪರಿಗಣಿಸಲಾಗುವುದು.

**ಪ್ರಕರಣ IV – ಸ್ಥಳೀಯವಾಗಿ ನೌಕರಿ ಭರ್ತಿಯಾಗುವ ಸೇವೆಗಳಿಗೆ ನಿಯಮಗಳು**

(೮) ಅಖಿಲ ಭಾರತ ಮಟ್ಟದಲ್ಲಿರದೆ, ಸ್ಥಳೀಯ ಮಟ್ಟದಲ್ಲಿ ನೌಕರಿ ಭರ್ತಿಯಾಗುವ ಎಲ್ಲಾ ಸೇವೆಗಳ ವಿಷಯದಲ್ಲಿ ಉದಾಹರಣೆಗೆ ರೇಲ್ವೇ, ಅಂಚೆ ಮತ್ತು ತಂತಿ ಇಲಾಖೆ, ಕಸ್ಟಮ್ಸ್ ಸೇವೆ, ಆಯಕರ ವಿಭಾಗ, ಇತ್ಯಾದಿಗಳಲ್ಲಿ ಅಧೀನ ಹುದ್ದೆಗಳಿಗೆ ಮೇಲೆ ವಿಧಿಸಲ್ಪಟ್ಟ ಸ್ಥೂಲ ನಿಯಮಗಳು, ಕೆಳಗಿನ ಮಾರ್ಪಾಟುಗಳಿಗೆ ಒಳಪಟ್ಟು ಅನ್ವಯಿಸುವುವು.

i) ಭಾರತದಲ್ಲಿ ಇಡಿಯಾಗಿ ಮುಸ್ಲಿಮರಿಗೆ ನಿಗದಿಯಾದ ಶೇಕಡಾ ೨೫ರಷ್ಟು, ಮತ್ತು ಇತರ ಅಲ್ಪಸಂಖ್ಯಾತರಿಗೆ ಶೇಕಡಾ ೮ ೧/೩ರಷ್ಟು ಮೀಸಲಾತಿಯನ್ನು ಹೀಗೆ ಲೆಕ್ಕಮಾಡತಕ್ಕದ್ದು; ಆಯಾಪ್ರದೇಶದ ಜನಸಂಖ್ಯೆಯಲ್ಲಿ ಮುಸ್ಲಿಮರ ಮತ್ತು ಇತರ ಅಲ್ಪಸಂಖ್ಯಾತರ ದಾಮಾಷವನ್ನು, ಮತ್ತು ಪ್ರದೇಶದ ಸ್ಥಳೀಯ ಸರಕಾರ ಅಂಗೀಕರಿಸಿದ ನೌಕರಿಭರ್ತಿಯ ನಿಯಮಗಳನ್ನು ಅನುಲಕ್ಷಿಸಿ ಒಂದೊಂದು ರೇಲ್ವೇಗೆ, ಅಥವಾ ಸ್ಥಳೀಯ ಪ್ರದೇಶಕ್ಕೆ, ಅಥವಾ ವೃತ್ತಕ್ಕೆ ಒಂದು ಶೇಕಡಾಂಶವನ್ನು ನಿಗದಿಪಡಿಸತಕ್ಕದ್ದು.

(ii) ರೇಲ್ವೆ, ಅಂಚೆ ಮತ್ತು ತಂತಿ ಇಲಾಖೆ ಹಾಗೂ ಕಸ್ಟಮ್ಸ್ ಸೇವೆ– ಇವುಗಳಲ್ಲಿ ಈಗ ಆಂಗ್ಲೊ–ಇಂಡಿಯನ್ನರ ಮತ್ತು ಅಧಿವಾಸಿತ ಯುರೋಪಿಯನ್ನರ ಸಮುದಾಯ ಪ್ರಧಾನವಾಗಿ ಕೆಲಸ ಮಾಡುತ್ತಿರುವುದರಿಂದ, ಮೇಲೆ ೨ನೇ ಪರಿಚ್ಛೇದದಲ್ಲಿ ಹೇಳಿದಂಥ ನೀತಿಯನ್ನು ಜಾರಿಗೆ ತರಬೇಕಾದರೆ, ಕೆಳಗೆ ನಿಕಟಾನಂತರದ ಪರಿಚ್ಛೇದದಲ್ಲಿ ಹೇಳಿರುವಂಥ ವಿಶೇಷ ಉಪಬಂಧಗಳ ಅಗತ್ಯವಿದೆ.

೯(೧)(ಅ) ರೇಲ್ವೇಯಲ್ಲಿ ಈಗ ಆಂಗ್ಲೊ–ಇಂಡಿಯನ್ ಮತ್ತು ಅಧಿವಾಸಿತ ಯುರೋಪಿಯನ್ ಸಮುದಾಯ ಶೇಕಡಾ ೮.೮ರಷ್ಟು ಅಧೀನ ಹುದ್ದೆಗಳಲ್ಲಿದೆ. ಅವರು ಪಡೆದಿರುವ ಸ್ಥಾನವನ್ನು ಸುರಕ್ಷಿತವಾಗಿಡಲು ನೇರ ನೌಕರಿ ಭರ್ತಿಯಾಗುವ ಎಲ್ಲಾ ಹುದ್ದೆಗಳಲ್ಲಿ ಶೇಕಡಾ ೮ರಷ್ಟನ್ನು ಈ ಸಮುದಾಯದ ಸದಸ್ಯರಿಗೆ ಮೀಸಲಿಡತಕ್ಕದ್ದು ಈ ಒಟ್ಟು ಶೇಕಡಾಂಶವನ್ನು ಇವೆರಡು ವಿಧಾನಗಳ ಮೂಲಕ ಲೆಕ್ಕಮಾಡತಕ್ಕದ್ದು (i) ಈಗ ಕೆಲಸದಲ್ಲಿರುವ ಈ ಸಮುದಾಯದ ಸಂಖ್ಯೆಯನ್ನು ಅನುಲಕ್ಷಿಸಿ, ಒಂದೊಂದು ರೇಲ್ವೇಗೆ ಒಂದು ಪ್ರತ್ಯೇಕ ಶೇಕಡಾಂಶವನ್ನು ಗೊತ್ತುಪಡಿಸುವುದು,

ಮತ್ತು (ii) ರೇಲ್ವೇ ಸೇವೆಯ ಒಂದೊಂದು ಶಾಖೆ ಅಥವಾ ವಿಭಾಗಕ್ಕೆ ಒಂದು ಪ್ರತ್ಯೇಕ ಶೇಕಡಾಂಶವನ್ನು ಗೊತ್ತುಪಡಿಸುವುದು: ಇದರಿಂದ ಆಂಗ್ಲೊ–ಇಂಡಿಯನ್ನರು ಈಗ ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಮಾಡುತ್ತಿರುವ, ಉದಾಹರಣೆಗೆ, ಮೆಕ್ಯಾನಿಕಲ್ ಇಂಜಿನಿಯರಿಂಗ್, ಸಿವಿಲ್ ಇಂಜಿನಿಯರಿಂಗ್, ಮತ್ತು ಸಂಚಾರ ವಿಭಾಗಗಳಲ್ಲಿ, ಅವರು ಕೆಲಸಗಳಲ್ಲಿ ಮುಂದುವರಿಯಲು ಸಾಧ್ಯವಾಗುವುದು.ಅಧೀನ ಸೇವೆಗಳಲ್ಲಿ ಮೇಲಿನ ದರ್ಜೆಯ ಹುದ್ದೆಗಳನ್ನು ಮೀಸಲಿಡಲಾಗದು. ಈ ದರ್ಜೆಗಳಿಗೆ ಬಡ್ತಿಯನ್ನು, ಈಗಿರುವಂತೆ, ಕೇವಲ ಗುಣಾರ್ಹತೆಯೊಂದನ್ನೇ ಆಧರಿಸಿ ಕೊಡಲಾಗುವುದು.

(ಬಿ) ಮುಸ್ಲಿಮರಿಗೆ ಕೊಟ್ಟಿರುವ ಶೇಕಡಾ ೨೫ರಷ್ಟು ಮತ್ತು ಆಂಗ್ಲೊ–ಇಂಡಿಯನ್ನರಿಗೆ ಕೊಟ್ಟಿರುವ ಶೇಕಡಾ ೮ರಷ್ಟು ಮೀಸಲಾತಿಯ ದೆಸೆಯಿಂದ, ಇವೆರಡು ಸಮುದಾಯಗಳಿಗೆ ಹೊರತಾದ ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ರಕ್ಷಿಸುವ ಉದ್ದೇಶದಿಂದ ಇದುವರೆಗೆ ಎಲ್ಲಾ ಅಲ್ಪಸಂಖ್ಯಾತರಿಗೆ ಒಟ್ಟಾಗಿ ಅಂಗೀಕರಿಸಲಾದ ೩೩ ೧/೩ ಶೇಕಡಾಂಶವನ್ನು ಹೆಚ್ಚಿಸುವುದು ಅಗತ್ಯವಾಗುತ್ತದೆ. ಆದುದರಿಂದ ನೇರ ನೌಕರಿ ಭರ್ತಿಯಾಗುವ ಹುದ್ದೆಗಳಲ್ಲಿ ಶೇಕಡಾ ೬ರಷ್ಟನ್ನು ಅವರಿಗೋಸ್ಕರ ಮೀಸಲಿಡಬೇಕೆಂದು ತೀರ್ಮಾನಿಸಲಾಗಿದೆ– ಅಷ್ಟು ಶೇಕಡಾಂಶದ ಹುದ್ದೆಗಳನ್ನು, ಸುಮಾರಾಗಿ, ಈ ಸಮುದಾಯಗಳ ಸದಸ್ಯರು ಈಗ ಪಡೆದಿರುತ್ತಾರೆ. ಈ ಒಟ್ಟು ಮೀಸಲಾತಿಯನ್ನು ಪ್ರಸ್ತುತ ನಿರ್ಣಯದ ೮(೧)ನೇ ಪರಿಚ್ಛೇದದಲ್ಲಿ ನಿಗದಿಪಡಿಸಲಾದ ರೀತಿಯಲ್ಲಿ ಲೆಕ್ಕಮಾಡತಕ್ಕದ್ದು, ಅಲ್ಪಸಂಖ್ಯಾತ ಸಮುದಾಯಗಳೊಳಗೆ ಇದನ್ನು ಪುನಃ ವಿಂಗಡಿಸಲಾಗದು.

(೨) ಅಂಚೆ ಮತ್ತು ತಂತಿ ಇಲಾಖೆಯಲ್ಲಿ ಈಗ ಆಂಗ್ಲೊ–ಇಂಡಿಯನ್ನರು ಮತ್ತು ಅಧಿವಾಸಿತ ಯುರೋಪಿಯನರು ಎಲ್ಲಾ ಅಧೀನ ಹುದ್ದೆಗಳಲ್ಲಿ ಸುಮಾರು ಶೇಕಡಾ ೨.೨ರಷ್ಟನ್ನು ಪಡೆದಿರುತ್ತಾರೆ. ಈ ಸಮುದಾಯದ ಹಿತಾಸಕ್ತಿಗಳನ್ನು ರಕ್ಷಿಸಲು ರೇಲ್ವೇಗಳಲ್ಲಿ ಅನುಸರಿಸಲಾದ ಸೂತ್ರಗಳನ್ನು ಇಲ್ಲಿಯೂ ಅನುಸರಿಸಲಾಗುವುದು. ಈ ಸಮುದಾಯದ ಸದಸ್ಯರು ಸೇರಲು ಸಾಧ್ಯವೆಂದು ಸಾಮಾನ್ಯವಾಗಿ ನಿರೀಕ್ಷಿಸಬಹುದಾದ ಶಾಖೆಗಳ, ವಿಭಾಗಗಳ ಅಥವಾ ವರ್ಗಗಳ ಶೇಕಡಾ ೫ರಷ್ಟನ್ನು ಇವರಿಗೆಂದು ಮೀಸಲಿಟ್ಟರೆ, ಇದರ ಪರಿಣಾಮವಾಗಿ ಈಗ ತಾವು ಪಡೆದಿರುವ ಅಧೀನ ಹುದ್ದೆಗಳ ಶೇಕಡಾಂಶಕ್ಕಿಂತ ಸ್ವಲ್ಪ ಕಡಿಮೆ ಪ್ರಮಾಣದ ಶೇಕಡಾಂಶವನ್ನು ಇವರು ಪಡೆದಂತಾಗುತ್ತದೆ ಎಂದು ಕಂಡು ಹಿಡಿಯಲಾಗಿದೆ. ಆಂಗ್ಲೊ–ಇಂಡಿಯನ್ನರಿಗೆಂದು ವಿಶೇಷ ಮೀಸಲಾತಿ ಇರುವ ವಿಭಾಗಗಳಲ್ಲಿ ಅಥವಾ ಶಾಖೆಗಳಲ್ಲಿ, ಈಗ ಇವುಗಳಲ್ಲಿ ಇತರ ಅಲ್ಪಸಂಖ್ಯಾತರು ಪಡೆದಿರುವಷ್ಟು ಅಧೀನ ಹುದ್ದೆಗಳ ಶೇಕಡಾಂಶಕ್ಕೆ ಸರಿಸಮಾನಾಗಿರುವಷ್ಟು ಶೇಕಡಾಂಶವನ್ನು ಅವರಿಗೆ ಮೀಸಲಿಡತಕ್ಕದ್ದು. ಹೀಗಿದ್ದರೂ, ಮುಸ್ಲಿಮೇತರ ಇತರ ಅಲ್ಪಸಂಖ್ಯಾತರ ಸಮುದಾಯಗಳಿಗೆ ಮತ್ತು ಆಂಗ್ಲೊ–ಇಂಡಿಯನರಿಗೆ ಇರುವ ಒಟ್ಟು ಮೀಸಲಾತಿ ಶೇಕಡಾ ೮ ೧/೩ಕ್ಕಿಂತ ಕಡಿಮೆಯಾಗತಕ್ಕದ್ದಲ್ಲ.

(೩) ಮುಖ್ಯ ಬಂದರುಗಳಲ್ಲಿರುವ ಮೌಲ್ಯನಿರ್ಣಾಯಕ ವಿಭಾಗದಲ್ಲಿಯೂ, ಉನ್ನತ ಪ್ರತಿಬಂಧಕ ಸೇವೆಯಲ್ಲಿಯೂ ಆಂಗ್ಲೊ–ಇಂಡಿಯನ್ನರು ಈಗ ಹೆಚ್ಚಿನ ಸಂಖ್ಯೆಯಲ್ಲಿ ಕೆಲಸದಲ್ಲಿದ್ದಾರೆ. ಮೊದಲಿನ ವಿಭಾಗಕ್ಕೆ ವಿಶೇಷ ತಾಂತ್ರಿಕ ಅರ್ಹತೆಗಳು ಬೇಕಾಗಿರುವುದರಿಂದ, ಪ್ರಸ್ತುತ ನಿರ್ಣಯದ ೬ನೇ ಪರಿಚ್ಛೇದದಲ್ಲಿ ಹೇಳಿದಂಥ ಸ್ಥೂಲ ತತ್ತ್ವಗಳಿಗನುಗುಣವಾಗಿ, ಈ ನಿಯಮಗಳ ಜಾರಿಗೆ

ಈ ವಿಭಾಗ ಒಳಪಡುವುದಿಲ್ಲ. ಪ್ರತಿಬಂಧಕ ಸೇವೆಯಲ್ಲಿ ವಿಶೇಷ ಅರ್ಹತೆಗಳ ಅಗತ್ಯವಿದೆ, ಮತ್ತು ಆಂಗ್ಲೋ–ಇಂಡಿಯನರಿಗೆ ಹುದ್ದೆಗಳನ್ನು ಮೀಸಲಿಡುವ ಈಗಿನ ನೌಕರಿಭರ್ತಿಯ ವ್ಯವಸ್ಥೆಯನ್ನು ಅಲ್ಲಿ ಮುಂದುವರಿಸಲಾಗುವುದು.

ಆದೇಶ: ಎಲ್ಲಾ ಸ್ಥಳೀಯ ಸರಕಾರಗಳಿಗೆ ಹಾಗೂ ಆಡಳಿತಗಳಿಗೆ ಮತ್ತು ಭಾರತ ಸರಕಾರದ ವಿವಿಧ ಇಲಾಖೆಗಳಿಗೆ, ಮಾಹಿತಿಗೋಸ್ಕರ (ಮತ್ತು ಮಾರ್ಗದರ್ಶನಕ್ಕೋಸ್ಕರ) ಈ ನಿರ್ಣಯವನ್ನು ತಿಳಿಸತಕ್ಕದೆಂದೂ ಭಾರತ ಗೆಜೆಟ್‌ನಲ್ಲಿ ಇದನ್ನು ಪ್ರಕಟಿಸತಕ್ಕದ್ದೆಂದೂ ಆದೇಶಿಸಲಾಗಿದೆ.

**ಎಂ.ಜಿ.ಹ್ಯಾಲ್ಲೆಟ್**
ಕಾರ್ಯದರ್ಶಿ, ಭಾರತ ಸರಕಾರ

## ಅನುಬಂಧ XXIV

# ಸೇವೆಗಳಲ್ಲಿ ಪರಿಶಿಷ್ಟ ಜಾತಿಗಳ ಕೋಮುವಾರು ಪ್ರಾತಿನಿಧ್ಯವನ್ನು ಕುರಿತ ಭಾರತ ಸರಕಾರ ನಿರ್ಣಯ ೧೯೪೩

ಗೃಹ ಇಲಾಖೆ

ನಿರ್ಣಯ

ನವದೆಹಲಿ, ಆಗಸ್ಟ್, ೧೧, ೧೯೪೩

೧. ಕ್ರಮಾಂಕ ೨೩/೫/೪೨ – ಇಎಸ್‌ಟಿಎಸ್ (ಎಸ್) – ೧೯೪೨ರಲ್ಲಿ ಕೇಂದ್ರ ಶಾಸನ ಸಭೆಯಲ್ಲಿ ಕೊಟ್ಟ ಆಶ್ವಾಸನೆಗೆ ಅನುಗುಣವಾಗಿ, ತಮ್ಮ ಆಡಳಿತಾತ್ಮಕ ನಿಯಂತ್ರಣದಲ್ಲಿರುವ ಸೇವೆಗಳಲ್ಲಿ ನಿಮ್ನವರ್ಗಗಳ– ಈಚೆಗೆ, ಭಾರತ ಸರಕಾರ ಕಾಯ್ದೆ, ೧೯೩೫ರಲ್ಲಿ ಇವರನ್ನು 'ಪರಿಶಿಷ್ಟ ಜಾತಿಗಳು' ಎಂದು ಕರೆಯಲಾಗಿದೆ– ಪ್ರಾತಿನಿಧ್ಯದ ಬಗೆಗೆ ೧೯೩೪ರಿಂದೀಚೆಗೆ ತಾನು ಅನುಸರಿಸಿದ ನೀತಿಯನ್ನು ಭಾರತ ಸರಕಾರ ಜಾಗರೂಕತೆಯಿಂದ ಪರಿಶೀಲಿಸಿದೆ. ಎಫ್ ೧೪/೧೭–ಬಿ/೩೩ ಕ್ರಮಾಂಕದ ಜುಲೈ ೪, ೧೦೩೪ ದಿನಾಂಕ ತನ್ನ ನಿರ್ಣಯದಲ್ಲಿ ಈ ವರ್ಗಗಳು ಆಗ ಪಡೆದಿರುವ ಸಾಮಾನ್ಯ ವಿದ್ಯಾಭ್ಯಾಸದ ಮಟ್ಟವನ್ನು ಲಕ್ಷಿಸಿದರೆ, ಹುದ್ದೆಗಳ ಒಂದು ನಿರ್ದಿಷ್ಟ ಶೇಕಡಾಂಶವನ್ನು ಇವರಿಗೋಸ್ಕರ ಮೀಸಲಿಡುವುದರಿಂದ ಯಾವುದೇ ಖಚಿತ ಪ್ರಯೋಜನ ಆಗಲಾರದು ಎಂದು ಭಾವಿಸಿರುವುದಾಗಿ ಸರಕಾರ ಹೇಳಿತು. ಆದರೂ, ಪರಿಶಿಷ್ಟ ಜಾತಿಗಳಿಗೆ ನ್ಯಾಯಯುತ ಪ್ರಾತಿನಿಧ್ಯವನ್ನು ದೊರಕಿಸಿಕೊಡುವುದಕ್ಕೋಸ್ಕರ, ಈ ವರ್ಗಗಳ ಸದಸ್ಯರಲ್ಲಿ ಸೂಕ್ತ ಅರ್ಹತೆಯಿದ್ದವರನ್ನು ಒಂದು ಸಾರ್ವಜನಿಕ ಸೇವೆಗೆ (ಆ ಸೇವೆಗೆ ಮುಕ್ತ ಸ್ಪರ್ಧೆಯ ಮೂಲಕ ನೌಕರಿಭರ್ತಿ ಮಾಡಲಾಗುವುದಾದರೂ) ನಾಮನಿರ್ದೇಶನ ಮಾಡತಕ್ಕದ್ದೆಂದು ನಿರ್ದೇಶಿಸಿತು. ಸಾರ್ವಜನಿಕ ಸೇವೆಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಹೆಚ್ಚಿನ ಪ್ರಾತಿನಿಧ್ಯವನ್ನು ಒದಗಿಸಲು ಅಲ್ಲಿಂದೀಚೆಗೆ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಆದರೆ, ಈ ವಿಷಯದಲ್ಲಿ ಇದುವರೆಗೆ ಲಭಿಸಿದ ಫಲಿತಾಂಶ ಗಣನೀಯವಾಗಿರುವುದಿಲ್ಲ. ಸೂಕ್ತ ಅರ್ಹತೆ ಇರುವ ಅಭ್ಯರ್ಥಿಗಳು ಸಿಗುವುದರಲ್ಲಿ ಇರುವ ತೊಂದರೆ ಈ ಪರಿಸ್ಥಿತಿಗೆ ಕಾರಣವೆಂದು ಭಾರತ ಸರಕಾರ ಒಪ್ಪುತ್ತಿದೆಯಾದರೂ, ಹುದ್ದೆಗಳ ಒಂದು ನಿರ್ದಿಷ್ಟ ಶೇಕಡಾಂಶವನ್ನು ಮೀಸಲಿಟ್ಟರೆ, ಇದರಿಂದ ಉತ್ತಮ ಅರ್ಹತೆಗಳನ್ನು ಸಂಪಾದಿಸುವುದಕ್ಕೆ ಮತ್ತು ಈ ಮೂಲಕ ವಿವಿಧ ಸರಕಾರಿ ಹುದ್ದೆಗಳಿಗೆ ಮತ್ತು ಸೇವೆಗಳಿಗೆ ತಮ್ಮನ್ನು ಅರ್ಹಗೊಳಿಸುವುದಕ್ಕೆ ಈ ಜಾತಿಗಳ ಅಭ್ಯರ್ಥಿಗಳಿಗೆ ಅಗತ್ಯವಿರುವ ಪ್ರಚೋದನೆ ಕೊಟ್ಟಂತಾಗುವುದು ಎಂದು ಅದು ಈಗ ಅಭಿಪ್ರಾಯಪಡುತ್ತದೆ. ವಯೋಮಿತಿಯಲ್ಲಿ ಇಳಿತ ಹಾಗೂ ನಿಗದಿತ ಶುಲ್ಕದಲ್ಲಿ ರಿಯಾಯಿತಿಗಳೂ ಪರಿಶಿಷ್ಟ ಜಾತಿಗಳ ಸದಸ್ಯರ ಅರ್ಹ ಅಭ್ಯಥಿಗಳನ್ನು ಪಡೆಯಲು ಸಹಾಯಕವಾಗಬಹುದೆಂದು

ನಂಬಲಾಗಿದೆ. ಇದಕ್ಕೆ ಅನುಗುಣವಾಗಿ ಕೆಳಗೆ ೪ನೇ ಪರಿಚ್ಛೇದದಲ್ಲಿ ಹೇಳಿರುವ ನಿಯಮಗಳನ್ನು ವಿಧಿಸಲು ಭಾರತ ಸರಕಾರ ತೀರ್ಮಾನಿಸಿದೆ.

೨. ಪರಿಶಿಷ್ಟ ಜಾತಿಗಳ ಜನಸಂಖ್ಯೆಯು ಈಗಿರುವ ಮೀಸಲಾತಿರಹಿತ ಹುದ್ದೆಗಳಲ್ಲಿ ಪಾಲನ್ನು ಪಡೆಯುವ ಹಕ್ಕು ಇರುವ ಇತರ ಸಮುದಾಯಗಳ ಜನಸಂಖ್ಯೆಗೆ ಪಡೆದಿರುವ ದಾಮಾಷದ ಆಧಾರದ ಮೇಲೆ, ಅಂಥ ಒಟ್ಟು ಹುದ್ದೆಗಳ ಶೇಕಡಾ ೧೨.೭೫ರಷ್ಟಕ್ಕೆ ಪರಿಶಿಷ್ಟ ಜಾತಿಗಳಿಗೆ ಹಕ್ಕು ಇರತಕ್ಕದ್ದು. ಆದರೆ ಜನಸಂಖ್ಯೆಯ ಆಧಾರದ ಮೇಲೆ ತಮಗೆ ಹಕ್ಕಿರುವ ಪೂರ್ಣ ಸಂಖ್ಯೆಯನ್ನು ಭರ್ತಿ ಮಾಡುವಷ್ಟು ಪ್ರಮಾಣದಲ್ಲಿ ಪರಿಶಿಷ್ಟ ಜಾತಿಗಳ ಸಾಕಷ್ಟು ಸಂಖ್ಯೆಯ ಅಭ್ಯರ್ಥಿಗಳು ಸಿಗುವ ವಿಚಾರ ಅಸಂಭವನೀಯ. ಆದುದರಿಂದ, ಸದ್ಯಕ್ಕೆ ತುಸು ಕಡಿಮೆ ಶೇಕಡಾಂಶವನ್ನು, ಎಂದರೆ ೮ ೧/೩ರಷ್ಟನ್ನು, ಮೀಸಲಿಟ್ಟರೆ ಸಾಕು ಎಂಬ ತೀರ್ಮಾನಕ್ಕೆ ಭಾರತ ಸರಕಾರ ಬಂದಿದೆ. ಈ ವರ್ಗಗಳಿಂದ ಅರ್ಹ ಅಭ್ಯರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿ ಸಿಗುತ್ತಾರೆ ಎಂದು ಕಂಡುಬಂದ ಕೂಡಲೇ ಈ ಶೇಕಡಾಂಶವನ್ನು ಹೆಚ್ಚಿಸುವ ಪ್ರಶ್ನೆಯನ್ನು ಪರಿಶೀಲಿಸಲು ಯೋಚಿಸಲಾಗಿದೆ.

೩. ಕೆಳಗೆ ಹೇಳಿರುವ ನಿಯಮಗಳು ಕೇವಲ ನೌಕರಿಭರ್ತಿಗೆ ಮಾತ್ರ ಅನ್ವಯಿಸುವುವು. ಬಡ್ತಿಯ ಮೂಲಕ ಆಗುವ ನೌಕರಿಭರ್ತಿಗೆ ಅವು ಅನ್ವಯಿಸುವುದಿಲ್ಲ– ಈ ನೌಕರಿಭರ್ತಿಯನ್ನು ಈಗಿರುವಂತೆ, ಕೋಮುಪರ್ಯಾಲೋಚನೆಗೆ ಸಂಬಂಧವಿಲ್ಲದೆ ಮಾಡುವ ಕ್ರಮ ಮುಂದುವರಿಯುವುದು. ಸರಕಾರದ ಕ್ರಮಾಂಕ ಎಫ್. ೧೪/೧೭–ಬಿ/೩೩ ದಿನಾಂಕ ಜುಲೈ ೪, ೧೯೩೪ರ ನಿರ್ಣಯದ ಕೋಮುವಾರು ಪ್ರಾತಿನಿಧ್ಯದ ಆದೇಶದ ವ್ಯಾಪ್ತಿಯಿಂದ ಹೊರಗಿಡಲ್ಪಟ್ಟ ಉನ್ನತ ತಾಂತ್ರಿಕ ಅಥವಾ ವಿಶೇಷ ಅರ್ಹತೆ ಬೇಕಾಗಿರುವ ಕೆಲವು ಸೇವೆಗಳನ್ನು ಮತ್ತು ಹುದ್ದೆಗಳನ್ನು ಹೊರತುಪಡಿಸಿ, ಭಾರತ ಸರಕಾರದ ಆಡಳಿತಾತ್ಮಕ ನಿಯಂತ್ರಣಕ್ಕೆ ಒಳಪಡುವ ಕೇಂದ್ರ ಸೇವೆಗಳಿಗೆ (ಕ್ಲಾಸ್ I ಮತ್ತು ಕ್ಲಾಸ್ II) ಮತ್ತು ಅಧೀನ ಸೇವೆಗಳಿಗೆ ಈ ನಿಯಮಗಳು ಅನ್ವಯಿಸುವುವು. ರೇಲ್ವೇಗಳ ವಿಚಾರದಲ್ಲಿ, ಕೆಳದರ್ಜೆಯ ಸೇವಕರ ಮತ್ತು ಕಾರ್ಮಿಕರ ಹುದ್ದೆಗಳನ್ನುಳಿದು, ಇತರ ಎಲ್ಲಾ ಹುದ್ದೆಗಳಿಗೆ ಇವು ಅನ್ವಯವಾಗುವುವು. ಕಂಪೆನಿ ಆಡಳಿತದ ರೇಲ್ವೇಗಳು ಇಂಥವೇ ನಿಯಮಗಳನ್ನು ಅನುಷ್ಠಾನಕ್ಕೆ ತರಬೇಕೆಂದು ಆಡಳಿತಗಳನ್ನು ಕೇಳಿಕೊಳ್ಳಲಾಗುವುದು.

೪. ಆದುದರಿಂದ, ಸಾರ್ವಜನಿಕ ಸೇವೆಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಹೆಚ್ಚು ಉತ್ತಮ ಪ್ರಾತಿನಿಧ್ಯವನ್ನು ದೊರಕಿಸುವುದಕ್ಕೋಸ್ಕರ, ಇನ್ನು ಮುಂದೆ, ಈ ಕೆಳಗಿನ ನಿಯಮಗಳನ್ನು ಪಾಲಿಸತಕ್ಕದ್ದು:–

೧. ಅಖಿಲ ಭಾರತ ಮಟ್ಟದಲ್ಲಿ, ನೌಕರಿ ಭರ್ತಿಯಾಗುವ ಕೇಂದ್ರ ಮತ್ತು ಅಧೀನ ಸೇವೆಗಳಲ್ಲಿ ಭಾರತೀಯರ ನೇರ ನೌಕರಿಭರ್ತಿಯ ಮೂಲಕ ತುಂಬಲಾಗುವ ಎಲ್ಲಾ ಹುದ್ದೆಗಳ ಶೇಕಡಾ ೮ ೧/೩ರಷ್ಟನ್ನು ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ಮೀಸಲಿಡತಕ್ಕದ್ದು.

೨. ಅಖಿಲಭಾರತ ಮಟ್ಟದಲ್ಲಿರದೆ, ಸ್ಥಳೀಯ ಪ್ರದೇಶ ಅಥವಾ ವೃತ್ತಗಳು ನೌಕರೀಭರ್ತಿ ಮಾಡುವ ಸೇವೆಗಳಲ್ಲಿ ಎಂದರೆ, ರೇಲ್ವೇಗಳು, ಅಂಚೆ ಮತ್ತು ತಂತಿ ಇಲಾಖೆ, ಕಸ್ಟಮ್ಸ್ ಸೇವೆಗಳು, ಆಯಕರ ವಿಭಾಗ– ಇವುಗಳಲ್ಲಿರುವ ಅಧೀನ ಹುದ್ದೆಗಳಲ್ಲಿ, ಭಾರತಕ್ಕೆ ಇಡಿಯಾಗಿ ಪರಿಶಿಷ್ಟ ಜಾತಿಗಳಿಗೆಂದು ಗೊತ್ತುಪಡಿಸಿ ೮ ೧/೩ ಶೇಕಡಾಂಶದ ಒಟ್ಟು ಮೀಸಲಾತಿಯನ್ನು ಆಯಾ

ಪ್ರದೇಶ ಅಥವಾ ವೃತ್ತದಲ್ಲಿರುವ ಪರಿಶಿಷ್ಟ ಜಾತಿಗಳ ಜನಸಂಖ್ಯೆಯನ್ನು ಆಯಾ ಪ್ರದೇಶ ಅಥವಾ ವೃತ್ತದ ಸ್ಥಳೀಯ ಸರಕಾರ ಅಂಗೀಕರಿಸಿದ ನೌಕರಿಭರ್ತಿಯ ನಿಯಮಗಳನ್ನೂ ಗಣನೆಗೆ ತೆಗೆದುಕೊಂಡು ಒಂದೊಂದು ಸ್ಥಳೀಯ ಪ್ರದೇಶ ಅಥವಾ ವೃತ್ತಕ್ಕೆ ಒಂದು ಶೇಕಡಾಂಶವನ್ನು ನಿಗದಿಪಡಿಸುವುದರ ಮೂಲಕ ಲೆಕ್ಕ ಮಾಡತಕ್ಕದ್ದು.

೩. ಮುಕ್ತಸ್ಪರ್ಧೆಯ ಮೂಲಕ ನೌಕರಿ ಭರ್ತಿ ಮಾಡುವಾಗ, ಪರಿಶಿಷ್ಟ ಜಾತಿಗಳ ಅಭ್ಯರ್ಥಿಗಳಿಗೆ ತಮಗೆ ಮೀಸಲಿಟ್ಟ ಹುದ್ದೆಗಳಿಗಿಂತ ಕಡಿಮೆ ಸಂಖ್ಯೆಯ ಹುದ್ದೆಗಳು ಲಭಿಸಿದರೆ, ಆ ವ್ಯತ್ಯಾಸವನ್ನು, ಸಾಧ್ಯವಾದರೆ, ಆ ಜಾತಿಗಳ ಸೂಕ್ತ ಅರ್ಹತೆಯುಳ್ಳ ಅಭ್ಯರ್ಥಿಗಳ ನಾಮನಿರ್ದೇಶನದ ಮೂಲಕ ಸರಿದೂಗಿಸಬೇಕು.

೪. ಮುಕ್ತ ಸ್ಪರ್ಧೆಯಲ್ಲಿ ಪರಿಶಿಷ್ಟ ಜಾತಿಗಳ ಅಭ್ಯರ್ಥಿಗಳಿಗೆ ತಮಗೆ ಮೀಸಲಿಟ್ಟ ಹುದ್ದೆಗಳಿಗಿಂತ ಕಡಿಮೆ ಸಂಖ್ಯೆಯ ಹುದ್ದೆಗಳು ಲಭಿಸಿದರೆ, ಮತ್ತು ನಾಮನಿರ್ದೇಶನಕ್ಕೋಸ್ಕರ ಈ ಜಾತಿಗಳ ಅರ್ಹ ಅಭ್ಯರ್ಥಿಗಳು ದುರ್ಲಭವಾದರೆ, ಅಥವಾ ಸಾಕಷ್ಟು ಸಂಖ್ಯೆಯಲ್ಲಿ ಸಿಗದಿದ್ದರೆ, ಅಂಥ ಅಭ್ಯರ್ಥಿಗಳಿಗೆಂದು ಮೀಸಲಿಟ್ಟ ಉಳಿದ ಹುದ್ದೆಗಳನ್ನು ಮೀಸಲಾತಿರಹಿತ ಹುದ್ದೆಗಳೆಂದು ಪರಿಗಣಿಸತಕ್ಕದ್ದು; ಆದರೆ ಸರಿಪ್ರಮಾಣದ ಸಂಖ್ಯೆಯ ಹುದ್ದೆಗಳನ್ನು ಮೇಲೆ ಹೇಳಿರುವ (೧)ನೇ ಅಥವಾ (೨)ನೇ ಪರಿಚ್ಛೇದಾನ್ವಯ ಆ ವರ್ಷದಲ್ಲಿ ಅವರಿಗೋಸ್ಕರ ಮೀಸಲಿಡತಕ್ಕದ್ದು.

೫. ಪುನಃ, (೪)ನೇ ಪರಿಚ್ಛೇದಾನ್ವಯ ಹಿಂದಿನ ವರ್ಷದಿಂದ ಮುಂದಕ್ಕೆ ಸಾಗಿಸಲ್ಪಟ್ಟ ಹುದ್ದೆಗಳನ್ನು ಭರ್ತಿಮಾಡಲು ಪರಿಶಿಷ್ಟ ಜಾತಿಗಳು ಸೂಕ್ತ ಅರ್ಹತೆಯುಳ್ಳ ಅಭ್ಯರ್ಥಿಗಳು ಸಿಗದಿದ್ದರೆ, ಅವರಿಂದ ಭರ್ತಿಯಾಗದೆ ಉಳಿದವುಗಳನ್ನು ಮೀಸಲಾತಿರಹಿತ ಹುದ್ದೆಗಳೆಂದು ಪರಿಗಣಿಸತಕ್ಕದ್ದು.

೬. ಎಲ್ಲಾ ಸಂದರ್ಭಗಳಲ್ಲಿ ಒಂದು ಕನಿಷ್ಠ ಅರ್ಹತೆಯ ಮಟ್ಟವನ್ನು ವಿಧಿಸಲಾಗುವುದು, ಮತ್ತು ಮೀಸಲಾತಿ ಈ ಷರತ್ತಿಗೆ ಒಳಪಡುವುದು.

೭. ಒಂದು ಸೇವೆಗೆ ಅಥವಾ ಹುದ್ದೆಗೆ ನೇಮಕವಾಗಲು ನಿಗದಿಯಾದ ಗರಿಷ್ಠ ವಯೋಮಿತಿಯನ್ನು ಪರಿಶಿಷ್ಟ ಜಾತಿಗಳಿಗೆ ಸೇರಿರುವ ಅಭ್ಯರ್ಥಿಗಳ ವಿಚಾರದಲ್ಲಿ ಮೂರು ವರ್ಷಗಳಷ್ಟು ಹೆಚ್ಚಿಸಲಾಗುವುದು.

೮. ಯಾವುದೇ ಪರೀಕ್ಷೆಗೆ ಅಥವಾ ಆಯ್ಕೆಗೆ ಪ್ರವೇಶ ಪಡೆಯಲು ನಿಗದಿಯಾದ ಶುಲ್ಕವನ್ನು, ಪರಿಶಿಷ್ಟ ಜಾತಿಗಳಿಗೆ ಸೇರಿದ ಅಭ್ಯರ್ಥಿಗಳ ವಿಚಾರದಲ್ಲಿ, ನಾಲ್ಕರಲ್ಲಿ ಒಂದನೇ ಭಾಗಕ್ಕೆ ಇಳಿಸತಕ್ಕದ್ದು.

೯. ಮೇಲಿನ ನಿಯಮಗಳಲ್ಲಿ ಅಂತರ್ಗತವಾಗಿರುವ ಆದೇಶಗಳು ಮೂರು ತಿಂಗಳು ಅಥವಾ ಹೆಚ್ಚುಕಾಲ ಇರುವ ತಾತ್ಕಾಲಿಕ ಹುದ್ದೆಗಳಿಗೂ ಅನ್ವಯಿಸುವುವು– ಸರಕಾರಿ ಸೇವೆಯಲ್ಲಿ ಖಾಯಂ ಉದ್ಯೋಗದಲ್ಲಿ ಇಲ್ಲದ ವ್ಯಕ್ತಿಗಳು ತಾತ್ಕಾಲಿಕವಾಗಿ ಕೆಲಸ ಮಾಡುವ ಖಾಯಂ ಹುದ್ದೆಗಳು ಇವುಗಳಲ್ಲಿ ಸೇರುತ್ತವೆ.

೧೦. ಈ ನಿಯಮಗಳ ಅರ್ಥದಲ್ಲಿ ಒಂದು ವ್ಯಕ್ತಿ ಪರಿಶಿಷ್ಟ ಜಾತಿಗಳ ಸದಸ್ಯನೆಂದು ಪರಿಗಣಿತನಾಗಬೇಕಾದರೆ, ಅವನು ಸೇರಿರುವ ಜಾತಿ, ಭಾರತ ಸರಕಾರ (ಪರಿಶಿಷ್ಟ ಜಾತಿಗಳು) ಆದೇಶ, ೧೯೩೬– ಇದರನ್ವಯ, ಅವನು ಮತ್ತು ಅವನ ಕುಟುಂಬ, ಸಾಮಾನ್ಯವಾಗಿ, ವಾಸಿಸುತ್ತಿರುವ ಪ್ರದೇಶಕ್ಕೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿಯೆಂದು ಘೋಷಿಸಲ್ಪಟ್ಟಿರಬೇಕು.

ಆದೇಶ– ಎಲ್ಲಾ ಮುಖ್ಯ ಕಮಿಷನರ್‌ಗಳಿಗೆ, ಭಾರತ ಸರಕಾರದ ವಿವಿಧ ಇಲಾಖೆಗಳಿಗೆ, ಇಂಟೆಲಿಜೆನ್ಸ್ ಬ್ಯುರೋವಿನ ನಿರ್ದೇಶಕರಿಗೆ, ಮತ್ತು ಸಂಯುಕ್ತ ಲೋಕಸೇವಾ ಆಯೋಗಕ್ಕೆ, ಮಾಹಿತಿ ಮತ್ತು ಮಾರ್ಗದರ್ಶನಕ್ಕೋಸ್ಕರ; ರಾಜಕೀಯ ವಿಭಾಗ, ಮಹಾರಾಜರ ಹಣಕಾಸು ಇಲಾಖೆ, ಗವರ್ನರ್ ಜನರಲ್ ಅವರ ಕಾರ್ಯದರ್ಶಿ (ಸಾರ್ವಜನಿಕ), ಗವರ್ನರ್–ಜನರಲ್ ಅವರ ಕಾರ್ಯದರ್ಶಿ (ಸುಧಾರಣೆ), ಗವರ್ನರ್–ಜನರಲ್ ಅವರ ಕಾರ್ಯದರ್ಶಿ (ಅಪ್ಪ), ಶಾಸನ ಸಭಾ ವಿಭಾಗ, ಸಂಯುಕ್ತ ನ್ಯಾಯಾಲಯ, ಮಹಾಪ್ರಭುಗಳಾದ ವೈಸರಾಯರ ಮಿಲಿಟರಿ ಸೆಕ್ರೆಟರಿ, ಮತ್ತು ಎಲ್ಲಾ ಪ್ರಾಂತೀಯ ಸರಕಾರಗಳಿಗೆ, ಮಾಹಿತಿಗೋಸ್ಕರ ಈ ನಿರ್ಣಯದ ಒಂದು ಪ್ರತಿಯನ್ನು ಕಳಿಸಿಕೊಡತಕ್ಕದ್ದೆಂದೂ, ಈ ನಿರ್ಣಯವನ್ನು ಗೆಜೆಟ್ ಆಫ್ ಇಂಡಿಯಾದಲ್ಲಿ ಪ್ರಕಟಿಸತಕ್ಕದ್ದೆಂದೂ ಆದೇಶಿಸಲಾಗಿದೆ.

**ಇ. ಕಾನ್‌ರಾನ್‌ಸ್ಮಿತ್**
ಕಾರ್ಯದರ್ಶಿ

## ಅನುಬಂಧ XXV

# ಕ್ರಿಪ್ಸ್ ಸಲಹಾಸೂತ್ರಗಳು

## ಮಾರ್ಚ್ ನಾಯಕರೊಂದಿಗೆ ಚರ್ಚೆಗೆ ಸಿದ್ಧಪಡಿಸಿದ ಕರಡು ಘೋಷಣೆ

ಭಾರತದ ಭವಿಷ್ಯದ ಬಗೆಗೆ ಮಾಡಲಾದ ವಾಗ್ದಾನಗಳನ್ನು ನಡೆಸಿಕೊಡುವ ಬಗೆಗೆ ಈ ದೇಶದಲ್ಲಿ ಮತ್ತು ಭಾರತದಲ್ಲಿ ಅಭಿವ್ಯಕ್ತಗೊಂಡಿರುವ ಆತಂಕಗಳನ್ನು ಗಣನೆಗೆ ತೆಗೆದುಕೊಂಡು, ಭಾರತದ ಸ್ವಯಂ ಆಡಳಿತವನ್ನು ಆಗಗೊಡಲು ವಿಧಿಸಲು ಮಹಾಪ್ರಭುಗಳ ಸರಕಾರ ತೀರ್ಮಾನಿಸಿದೆ. ಇದರ ಉದ್ದೇಶ ಇಷ್ಟು; ಯುನೈಟೆಡ್ ಕಿಂಗ್‌ಡಮ್ ಮತ್ತು ಇತರ ಡೊಮಿನಿಯನ್‌ಗಳ ಜೊತೆ, ಇವೆಲ್ಲರಿಗೆ ಸಾಮಾನ್ಯಾಂಶ ವಾಗಿರುವ ಸಿಂಹಾಸನದ ಬಗೆಗಿನ ನಿಷ್ಠೆಯ ಮೂಲಕ ಸಂಬಂಧವಿರಿಸಿಕೊಂಡಂಥ, ಆದರೆ ಪ್ರತಿಯೊಂದು ವಿಷಯದಲ್ಲೂ ಇವುಗಳಿಗೆ ಸಮಾನವಾಗಿದ್ದು ಯಾವುದೇ ರೀತಿಯಲ್ಲಿ ಆಂತರಿಕ ಅಥವಾ ವಿದೇಶ ವಿಚಾರಗಳಲ್ಲಿ ಅಧೀನವಾಗಿರದ ಡೊಮಿನಿಯನ್ ಆಗಿ ಭಾರತೀಯ ಒಕ್ಕೂಟವನ್ನು ಸೃಷ್ಟಿಸುವುದು.

ಆದುದರಿಂದ ಮಹಾಪ್ರಭುಗಳ ಸರಕಾರ ಈ ಕೆಳಕಂಡಂತೆ ಘೋಷಿಸುತ್ತದೆ.

(a) ಯುದ್ಧ ಮುಗಿದ ಕೂಡಲೆ ಭಾರತಕ್ಕೆ ಹೊಸ ಸಂವಿಧಾನವನ್ನು ರಚಿಸುವ ಜವಾಬ್ದಾರಿಯನ್ನು ವಹಿಸಿಕೊಡಲಾದ ಒಂದು ಚುನಾಯಿತ ಸಭೆಯನ್ನು ಭಾರತದಲ್ಲಿ, ಇನ್ನು ಮುಂದೆ ಹೇಳಲಾದ ವಿಧಾನದಲ್ಲಿ ಉಂಟುಮಾಡಲು ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(b) ಭಾರತೀಯ ರಾಜ್ಯಗಳು ಸಂವಿಧಾನವನ್ನು ರಚಿಸುವ ಸಭೆಯಲ್ಲಿ ಭಾಗವಹಿಸಲು, ಕೆಳಗೆ ಹೇಳಿರುವ ರೀತಿಯಲ್ಲಿ, ಅವಕಾಶವನ್ನು ಕಲ್ಪಿಸತಕ್ಕದ್ದು.

(c) ಹೀಗೆ ರಚಿಸಲಾದ ಸಂವಿಧಾನವನ್ನು ಒಪ್ಪಿ ಅದನ್ನು ತತ್‌ಕ್ಷಣ ಕಾರ್ಯ ರೂಪಕ್ಕಿಳಿಸಲು ಮಹಾಪ್ರಭುಗಳ ಸರಕಾರ, ಕೆಳಗಿನ ಈ ಅಂಶಗಳಿಗೆ ಒಳಪಟ್ಟು, ಬದ್ಧವಾಗಿದೆ.

(i) ಈ ಹೊಸ ಸಂವಿಧಾನವನ್ನು ಒಪ್ಪಲು ಸಿದ್ಧವಿಲ್ಲದ ಬ್ರಿಟಿಷ್ ಭಾರತದ ಯಾವುದೇ ಪ್ರಾಂತ್ಯಕ್ಕೆ ತನ್ನ ಈಗಿನ ಸಂವಿಧಾನಾತ್ಮಕ ಸ್ಥಾನಮಾನಗಳನ್ನು ಉಳಿಸಿಕೊಳ್ಳಲು ಹಕ್ಕಿದೆ; ತರುವಾಯ, ಅದು ಹಾಗೆ ನಿರ್ಧರಿಸಿದರೆ, ಭಾರತೀಯ ಒಕ್ಕೂಟವನ್ನು ಸೇರಲು ಅದಕ್ಕೆ ಅವಕಾಶವನ್ನು ಕಲ್ಪಿಸತಕ್ಕದ್ದು.


ಸೇರಲು ಸಮ್ಮತಿಸದ ಇಂಥ ಪ್ರಾಂತ್ಯಗಳ ಜೊತೆಯಲ್ಲಿ, ಅವುಗಳಿಗೆ ಭಾರತೀಯ ಒಕ್ಕೂಟಕ್ಕೆ ಸಮಾನವಾದ ಸ್ಥಾನಮಾನಗಳನ್ನು ಕೊಡುವ ರೀತಿಯಲ್ಲಿ ರೂಪಿಸಲ್ಪಟ್ಟ ಒಂದು ಹೊಸ ಸಂವಿಧಾನವನ್ನು ಕುರಿತು ಒಪ್ಪಂದ ಮಾಡಲು ಮಹಾಪ್ರಭುಗಳ ಸರಕಾರ ಸಿದ್ಧವಿದೆ.

(ii) ಮಹಾಪ್ರಭುಗಳ ಸರಕಾರ ಮತ್ತು ಸಂವಿಧಾನ ರಚಿಸುವ ಸಭೆ, ಚರ್ಚೆ ಮಾಡಿ ಒಪ್ಪಂದಕ್ಕೆ ಬರುವ ಒಂದು ಕೌಲಿಗೆ ರುಜು ಹಾಕುವುದು; ಬ್ರಿಟಿಷರಿಂದ ಭಾರತೀಯರಿಗೆ ಜವಾಬ್ದಾರಿಯನ್ನು ಸಂಪೂರ್ಣವಾಗಿ ವರ್ಗಾಯಿಸುವಾಗ ಉದ್ಭವಿಸುವ ಎಲ್ಲಾ ಅಗತ್ಯ ವಿಚಾರಗಳನ್ನು ಈ ಕೌಲು ಒಳಗೊಳ್ಳುವುದು; ಜನಾಂಗಿಕ ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ರಕ್ಷಣೆಗೆ, ಮಹಾಪ್ರಭುಗಳ


ಸರಕಾರ ಕೊಟ್ಟಿರುವ ಆಶ್ವಾಸನೆಗಳನ್ವಯ, ಈ ಕೌಲಿನಲ್ಲಿ ಕ್ರಮಗಳನ್ನು ನಿಗದಿಮಾಡಲಾಗುವುದು; ಆದರೆ, ಭವಿಷ್ಯತ್ತಿನಲ್ಲಿ ಬ್ರಿಟಿಷ್ ಕಾಮನ್‌ವೆಲ್ತಿನ ಇತರ ಸದಸ್ಯ ರಾಜ್ಯಗಳೊಡನೆ ತನ್ನ ಸಂಬಂಧವನ್ನು ನಿರ್ಧರಿಸಲು ಯಾವುದೇ ನಿರ್ಬಂಧವನ್ನು ಇದು ವಿಧಿಸಲಾಗುವುದು.


(d) ಯುದ್ಧ ಮುಗಿಯುವ ಮೊದಲು ಭಾರತೀಯ ಅಭಿಪ್ರಾಯದ ನೇತಾರರು ಬೇರೊಂದು ತೀರ್ಮಾನಕ್ಕೆ ಬರದಿದ್ದರೆ, ಸಂವಿಧಾನವನ್ನು ನಿರ್ಮಿಸುವ ಸಭೆಯನ್ನು ಈ ಬಗೆಯಲ್ಲಿ ರಚಿಸತಕ್ಕದ್ದು:–
ಯುದ್ಧ ಮುಗಿದ ಕೂಡಲೆ ಅಗತ್ಯವಾಗಲಿರುವ ಪ್ರಾಂತೀಯ ಚುನಾವಣೆಗಳ ಫಲಿತಾಂಶ ಗೊತ್ತಾದದ್ದೇ, ಪ್ರಾಂತೀಯ ಶಾಸನಸಭೆಗಳ ಕೆಳಮನೆಗಳ ಇಡೀ ಸದಸ್ಯತ್ವ, ಒಂದು ಏಕೈಕ ಚುನಾಯಕಾ ಸಭೆಯ ಹಾಗೆ ವರ್ತಿಸಿ, ಪ್ರಾಂತೀಯ ಪ್ರಾತಿನಿಧ್ಯ ವ್ಯವಸ್ಥೆಗೆ ಅನುಗುಣವಾಗಿ ಸಂವಿಧಾನ ರಚಿಸುವ ಸಭೆಯನ್ನು ಚುನಾಯಿಸಲು ಉದ್ಯುಕ್ತವಾಗತಕ್ಕದ್ದು. ಈ ಹೊಸ ಸಭೆಯ ಸಂಖ್ಯೆ ಚುನಾಯಕಾ ಸಭೆಯ ೧/೧೦ ಇರತಕ್ಕದ್ದು. ತಮ್ಮ ಒಟ್ಟು ಜನಸಂಖ್ಯೆಗೆ ಒಂದು ನಿರ್ದಿಷ್ಟ ಪ್ರಮಾಣದಲ್ಲಿರುವ, ಎಂದರೆ ಇಡಿಯಾಗಿ ಬ್ರಿಟಿಷ್ ಭಾರತದ ಪ್ರತಿನಿಧಿಗಳು ಒಟ್ಟು ಜನಸಂಖ್ಯೆಗೆ ಇದ್ದ ದಾಮಾಷಾದಲ್ಲಿಯೇ ಮತ್ತು ಅವೇ ಅಧಿಕಾರಗಳನ್ನು ಪಡೆದಿರುವ ಪ್ರತಿನಿಧಿಗಳನ್ನು ನೇಮಿಸಲು ಭಾರತೀಯ ರಾಜ್ಯಗಳನ್ನು ಆಹ್ವಾನಿಸಲಾಗುವುದು.

(e) ಈಗ ಭಾರತ ಎದುರಿಸುತ್ತಿರುವ ವಿಷಮಕಾಲದಲ್ಲಿ, ಮತ್ತು ಹೊಸ ಸಂವಿಧಾನ ರೂಪಿತವಾಗುವ ತನಕ, ತಮ್ಮ ಜಾಗತಿಕ ಯುದ್ಧದ ಪರಿಶ್ರಮದ ಒಂದು ಭಾಗವಾಗಿ ಮಹಾಪ್ರಭುಗಳ ಸರಕಾರ ಭಾರತದ ರಕ್ಷಣೆಯ ಜವಾಬ್ದಾರಿಯನ್ನು ಅನಿವಾರ್ಯವಾಗಿ ಹೊತ್ತುಕೊಳ್ಳಬೇಕು ಮತ್ತು ಅದರ ನಿಯಂತ್ರಣ ಮತ್ತು ನಿರ್ದೇಶನವನ್ನು ತನ್ನ ವಶದಲ್ಲಿ ಉಳಿಸಬೇಕು. ಆದರೆ ಭಾರತದ ಸೈನಿಕ, ನೈತಿಕ ಹಾಗೂ ಭೌತಿಕ ಸಂಪನ್ಮೂಲಗಳನ್ನು ಅತ್ಯುತ್ತಮ ಪ್ರಮಾಣ ಮತ್ತು ರೀತಿಯಲ್ಲಿ ವ್ಯವಸ್ಥೆಗೊಳಿಸುವ ಹೊಣೆಯನ್ನು, ಭಾರತದ ಜನರ ಸಹಕಾರದೊಂದಿಗೆ, ಭಾರತ ಸರಕಾರವೇ ತೆಗೆದುಕೊಳ್ಳತಕ್ಕದ್ದು. ಭಾರತೀಯ ಜನತೆಯ ಪ್ರಧಾನ ವಿಭಾಗಗಳ ನಾಯಕರು ತತ್‌ಕ್ಷಣವೇ ಮತ್ತು ಪರಿಣಾಮಕಾರಿಯಾಗಿ ತಮ್ಮ ದೇಶದ, ಕಾಮನ್‌ವೆಲ್ತಿನ ಮತ್ತು ಸಂಯುಕ್ತರಾಷ್ಟ್ರಗಳ ಕಾರ್ಯಾಲೋಚನೆಗಳಲ್ಲಿ ಭಾಗವಹಿಸಬೇಕೆಂದು ಮಹಾಪ್ರಭುಗಳ ಸರಕಾರ ಅಪೇಕ್ಷಿಸುತ್ತದೆ ಮತ್ತು ಅವರನ್ನು ಆಹ್ವಾನಿಸುತ್ತದೆ. ಹೀಗೆ ಮಾಡುವುದರಿಂದ ಭಾರತದ ಬರಲಿರುವ ಸ್ವಾತಂತ್ರ್ಯಕ್ಕೆ ಅತ್ಯಗತ್ಯ ಹಾಗೂ ಮೂಲಭೂತ ವಾಗಿರುವ ಒಂದು ಜವಾಬ್ದಾರಿಯನ್ನು ನಿರ್ವಹಿಸುವುದರಲ್ಲಿ ಕ್ರಿಯಾಶೀಲವಾಗಿಯೂ ರಚನಾತ್ಮಕವಾಗಿಯೂ ಸಹಾಯ ಮಾಡಲು ಅವರಿಗೆ ಸಾಧ್ಯವಾಗುವುದು.


ಪಂಜಾಬ್
ಕಾಶ್ಮೀರ
ಸಂಯುಕ್ತ ಪ್ರಾಂತ್ಯ
ರಾಜಪುತಾನ
ವಾಯವ್ಯ ಪ್ರಾಂತ್ಯ
ಅಫ್ಘಾನಿಸ್ತಾನ
ಬಲೂಚಿಸ್ತಾನ
ಸಿಂಧ್
ಉಲ್ಲೇಖ
ಹಿಂದೂ ಪ್ರಾಂತ್ಯ
ಮುಸ್ಲಿಂ ಪ್ರಾಂತ್ಯ

ಬಂಗಾಳ ಮತ್ತು ಅಸ್ಸಾಂ


ನೇಪಾಲ್
ಸಿಕ್ಕಿಮ್
ಭೂತಾನ್
ಲಕ್ಕಿಪುರ್
ಶಿಬ್‌ಸಾಗರ್
ದಾರಾಂಗ್
ನಾಗಾ ಬೆಟ್ಟಗಳು
ನೌಗಾಂಗ್
ಜಲಪೈಗುರಿ
ಗೋಲ್ಪಾರ
ಕೂಚ್‌ಬಿಹಾರ್
ಗಾರೊ ಬೆಟ್ಟಗಳು
ಖಾಸಿ ಮತ್ತು ಜಂತ್ರಿಯ ಬೆಟ್ಟಗಳು
ದಿನಾಜಪುರ
ರಂಗಪುರ
ಬಿಹಾರ್ ಮತ್ತು ಒರಿಸ್ಸಾ
ಮಾಲ್ಡಾ
ಬೊಗ್ರಾ
ಮೈಮೆನ್‌ಸಿಂಗ್
ಸೈಲ್ಹೆಟ್
ಕಾಚರ್
ಮಣಿಪುರ
ಬರ್ಮಾ
ರಾಜಶಾಹಿ
ಮುರ್ಶಿದಾ ಬಾದ್
ಪಬ್ನ
ಢಾಕಾ
ತಿಪ್ಪೇರ ರಾಜ್ಯ
ಲುಶಾಯಿ ಬೆಟ್ಟಗಳು
ನಾದಿಯಾ
ಫರೀದ್‌ಪುರ್
ತಿಪ್ಪೇರ
ಜೆಸ್ಸೂರ್
ಸುರ್‌ದ್ವಾನ್
ನವ್ಖಾಲ್
ಬಂಕೂರ
ಹೂಗ್ಲಿ
೨೪ ಪರಗಣಗಳು
ಖುಲ್ನಾ
ಕಲ್ಕತ್ತಾ
ಬಕಾರ್‌ಗಂಜ್
ಮಿಡ್ನಾಪೂರ್
ಬಂಗಾಳ ಕೊಲ್ಲಿ
ಚಿತ್ತಗೊಂಗ್
ಚಿತ್ತಗೊಂಗ್ ಪರ್ವತ ಪ್ರದೇಶ
ಉಲ್ಲೇಖ
ಹಿಂದೂ ಪ್ರಾಂತ್ಯ
ಮುಸ್ಲಿಂ ಪ್ರಾಂತ್ಯ


ಭಾರತ
ಉಲ್ಲೇಖ
ಹಿಂದೂ ಪ್ರಾಂತ್ಯ
ಮುಸ್ಲಿಂ ಪ್ರಾಂತ್ಯ
ಅಫ್ಘಾನಿಸ್ತಾನ್
ಪರ್ಶಿಯಾ
ಕಾಶ್ಮೀರ
ಪಂಜಾಬ್
ಬಲೂಚಿಸ್ತಾನ
ದೆಹಲಿ
ರಾಜಪುತಾನಾ
ಸಂಯುಕ್ತ ಪ್ರಾಂತ್ಯ
ನೇಪಾಳ
ಭೂತಾನ್
ಅಸ್ಸಾಂ
ಚೀನಾ
ಕರಾಚಿ
ಸಿಂಧ್
ಬಿಹಾರ್
ಬಂಗಾಲ
ಕಲ್ಕತ್ತಾ
ಬರ್ಮಾ
ಕೇಂದ್ರ ಪ್ರಾಂತ್ಯ
ಒರಿಸ್ಸಾ
ಬಾಂಬೆ
ಅರಬ್ಬಿ ಸಮುದ್ರ
ಹೈದರಾಬಾದ್
ಬಂಗಾಳ ಕೊಲ್ಲಿ
ಸಿಯಾಮ್
ಗೋವಾ
ಮೈಸೂರು
ಮದರಾಸು
ಅಂಡಮಾನ್ ದ್ವೀಪಗಳು
ಸಿಲೋನ್

# ವಿಷಯ ಸೂಚಿ


ಅಂಕೋಲ ೩೯೧
ಅಂಗವನ ೪೧
ಅಂಗೀರಸ ೯೦, ೯೨, ೯೩, ೧೨೩, ೨೦೦
ಅಂಜಂತಿ ೩೩೫
ಅಂಜುಮಾನ್ ೭೦೧, ೭೦೨
ಅಂತ್ಯವಾಸಯಿನರು ೨೧೦
ಅಂತ್ಯವಾಸಿನ್ ೨೬೨, ೨೭೧, ೨೭೨, ೩೬೧, ೩೬೪, ೩೬೫, ೩೬೬, ೩೭೩
ಅಂಬಟ್ಟನ್ ೨೯೮
ಅಂಬರೀಷ ೧೧೮, ೧೨೭, ೧೪೮, ೧೪೯, ೨೦೦
ಅಂಬಷ್ಠ್ಯ ೧೨೨
ಅಂಬಾಲಾ ೪೭೯, ೫೩೧
ಅಂಬುರ್ಬಿಯವ್ ೨೪೬
ಅಂಬ್ರವಾಲಿಯಾ ೨೪೬
ಅಂಶುಮತ್ ೧೧೮
ಅಂಶುಮಾನ ೧೧೮
ಅಕೋಲ ೨೫೬
ಅಕ್ಟನ್ ೪೦೩, ೪೦೪
ಅಕ್ಬರ್ ೩೯೭, ೪೨೩, ೪೨೬, ೪೨೮, ೫೧೪, ೫೫೭, ೬೬೮, ೬೯೮, ೭೭೨
ಅಗಮುದಯ್ಯನ್ ೨೯೮
ಅಗಸ್ತ್ಯ ೭೭, ೧೫೯, ೧೬೦
ಅಗ್ನಿಕುಲ ೧೮೬, ೧೮೮
ಅಗ್ನೇರ್ವರ್ಮ ೩೨೫
ಅಗ್ನ್ಯಧೇಯ ೧೭೮
ಅಗ್ರಹಾಯಣಿ ೧೭೮
ಅಗ್ರಾಯಣ ೧೭೮
ಅಘಮರ್ಶನ ೨೦೦
ಅಚ್ಛವಕ ೨೫, ೩೪೦
ಅಚ್ರೆಡಾ ೪೧೬
ಅಜಮ್ ೬೬೫
ಅಜಮಲ್ ೬೬೫
ಅಜಮೀರ್ ೬೬೬
ಅಜರು ೧೨೬
ಅಜಾದ್ ೬೪೦
ಅಜಾನ್ ೬೨೨
ಅಜಾಮ್ ೭೭೨
ಅಜಾಮಿಧ ೧೧೯, ೧೨೦
ಅಜಾಮಿಳ ೨೦೦
ಅಜಿತ್ಯ ೧೨೩
ಅಜಿಲ ೨೫೧
ಅಜ್ಮಲ್ ೬೩೯
ಅಜ್ಮಲ್‌ಖಾನ್ ೬೪೦
ಅಜ್ಮೀರ ೩೯೧, ೪೨೨, ೪೩೩, ೪೩೬, ೪೫೩
ಅಜ್‌ಲಾಫ್ ೫೮೫, ೫೮೬
ಅಝಿ ೧೦೨, ೧೦೩
ಅತ್ರವಣ ೧೬
ಅತ್ರಿ ೯೦, ೯೨, ೯೩, ೧೫೬, ೧೫೭, ೨೬೨, ೩೭೩
ಅತ್ರಿಸ್ಮೃತಿ ೩೭೩
ಅಥರ್ವನ್ ೧೯, ೨೪
ಅಥರ್ವವೇದ ೨೧, ೨೪, ೩೨, ೮೧, ೧೩೨, ೧೩೮, ೧೩೯, ೨೮೪
ಅಥಿರ್ ೪೨೩
ಅದಾಲಿಯ ೫೬೬
ಅದಿತಿ ೧೭, ೮೧, ೯೨
ಅದಿಬೀಜ ೮೭
ಅದ್ವಿಜ ೨೬, ೨೭
ಅದ್ವೈತ ೩೪೬
ಅಧಿಗ್ರು ೩೩೯
ಅನಂತಶಯನಂ ೪೪೮
ಅನಗ್ನಿತ್ರ ೭೦

ಅನಾಟೋಲಿಯ ೫೬೩
ಅನಾಸ ೭೦, ೭೧
ಅನಿಂದ್ರ ೭೦
ಅನಿಲ ೧೧೮
ಅನಿಲ್‌ಮುಂಕರ್ ೬೬೦
ಅನು ೧೨೫
ಅನುಷ್ಟುಪ್ ೨೪, ೩೦
ಅನ್ವರ್ ೬೪೧
ಅನ್ಸಾರಿ ೫೨೨, ೬೪೫, ೬೭೧, ೬೭೩, ೬೮೯, ೬೯೧, ೭೭೩
ಅನ್ಹಾಲ್ವಾರ ೪೨೧
ಅಪಾಕಿಸ್ತಾನ ೭೨೯
ಅಪ್ತೋರ್ಯಾಮ ೧೭೮
ಅಪ್ರಿಡಿಸರು ೫೨೯
ಅಫ್ಘಾನಿಸ್ತಾನ ೪೮೫, ೪೮೮, ೬೬೧
ಅಫ್ರಿಡಿಸ್ ೫೨೯, ೫೩೦
ಅಬಿಸೀನಿಯ ೭೮೦
ಅಬುಲ್ ೪೬೮
ಅಬ್ದಲಿ ೪೧೯
ಅಬ್ದಾಲಿ ೪೧೭, ೪೨೮, ೬೬೮
ಅಬ್ದುಲ್ ೫೧೫, ೫೧೬, ೫೨೨, ೫೩೮, ೫೩೯, ೫೮೬, ೬೭೧, ೬೮೯
ಅಬ್ರಂಭ ೭೦
ಅಭಿರಾಮ್ ೨೮೨
ಅಭೀರ ೧೦೧
ಅಮದನ್ ೨೫೨
ಅಮನ್ ೫೧೯
ಅಮರಿಬಿಲ್ ೬೬೦
ಅಮರೇಂದ್ರನಾಥ ೪೪೬, ೪೫೦
ಅಮರೋಹಿ ೨೫೭
ಅಮೀನಾಬಾದ್ ೬೬೭
ಅಮೀರ ೪೫೮, ೫೧೩, ೫೧೪, ೬೫೮, ೬೫೯
ಅಮೃತಸರ ೫೩೩, ೫೩೯
ಅಮೃತ್‌ಸರ್ ೫೩೪
ಅಮೆರಿಕ ೨೪೨, ೩೯೮, ೬೫೦, ೬೫೨, ೭೧೭, ೭೧೮, ೭೩೫
ಅಮೇಠಿ ೫೨೧
ಅಮೈತ್ರೀ ೫೮೮
ಅಮ್ಸ್ ಬಿ ಗೋರ್ ೬೮೪
ಅಯೋಧ್ಯೆ ೯೧, ೯೨, ೧೪೩, ೧೪೮, ೨೦೬, ೫೩೬
ಅಯ್ಯಂಗಾರ್ ೧೦೩, ೪೪೮, ೬೪೫, ೬೭೨, ೬೭೮
ಅರಕನ್ ೪೩೦
ಅರಣ್ಯಪರ್ವ ೮೮
ಅರಬ್ ೫೬೬, ೫೬೯, ೫೭೪, ೫೭೫, ೬೩೩, ೬೩೯, ೬೫೨, ೬೫೯, ೬೬೧
ಅರಬಸ್ಥಾನ್ ೬೬೧
ಅರೇಬಿಯಾ ೫೬೪, ೬೩೩, ೬೩೪, ೬೩೫, ೬೬೩, ೭೦೦, ೭೬೬
ಅರ್ಜಾಲ್ ೫೮೫, ೫೮೬
ಅರ್ಜುನ ೨೦೩, ೨೦೪
ಅರ್ಫಿಡಿ ೫೩೦
ಅರ್ಷಿಶೇಣ ೨೦೦
ಅಲ್ ೪೧೮, ೪೨೮, ೪೩೦
ಅಲಂಗಿರಿ ೪೨೩
ಅಲಹಾಬಾದ್ ೧೬೯, ೨೮೮, ೪೨೩, ೪೮೬, ೫೦೭, ೫೦೮, ೫೨೪, ೫೩೯, ೬೪೯, ೬೭೩, ೬೮೮, ೬೯೧, ೭೬೨
ಅಲಿ ೩೮೭, ೪೭೩, ೫೧೬, ೬೬೭
ಅಲಿಖಾನ್ ೫೫೭
ಅಲೀ ೧೨೬
ಅಲೀಗಢ್ ೪೨೪, ೫೨೫, ೬೦೩, ೬೫೭, ೬೬೬, ೮೦೯, ೮೧೨, ೮೧೩
ಅಲೆಕ್ಸಾಂಡರ್ ೧೦೧, ೪೧೬, ೭೧೭
ಅಲ್ಗಿಯರ್ಸ್ ೫೬೪
ಅಲ್ಜಿಯನ್ನರು ೫೬೫

ಅಲ್ಫೈನ್ ೯೬
ಅಲ್ಲಾವುದ್ದೀನ ೪೨೬, ೪೨೭
ಅಲ್ಲಾಹ್ ೫೧೪
ಅಲ್‌ಸಾಸ್ ೪೨೯
ಅವಜಿ ೧೮೬, ೧೯೦
ಅವಧ್ ೧೭೦
ಅವನ್ಸ್ ೩೯೬
ಅವೆಸ್ತಾ ೭೭, ೭೮, ೭೯, ೧೦೨, ೧೦೩, ೧೩೨, ೧೬೬
ಅಶೋಕ ೩೨೯, ೩೩೦, ೩೩೨
ಅಶ್ರಾಫ್ ೫೮೫, ೫೮೬
ಅಶ್ವ ೩೦, ೬೮, ೧೨೭
ಅಶ್ವತ್ಥ ೧೪೪
ಅಶ್ವತ್ಥಾಮ ೨೮೬
ಅಶ್ವಮೇಧ ೧೨೭, ೨೦೫
ಅಶ್ವಯುಜಿ ೧೭೮
ಅಶ್ವಲಾಯನ ೧೬೨
ಅಶ್ವಿನಿ ೨೯, ೭೫, ೯೨, ೧೦೭, ೧೦೮
ಅಶ್ವಿನೀಕುಮಾರ ೧೦೦, ೧೦೭, ೧೨೨, ೧೨೭
ಅಸಂಗೆಲ್ ೫೭೨
ಅಸಚ್‌ಶೂದ್ರ ೨೧೨
ಅಸತ್ ೮೭
ಅಸನ್ಸೋಲ್ ೫೩೪, ೫೩೯
ಅಸೋಡಿ ೨೫೨
ಅಸ್‌ಕ್ವಿತ್ ೭೬೧, ೭೬೪, ೭೬೫, ೭೬೬
ಅಸ್ಸಾಂ ೨೫೮, ೨೯೦, ೩೮೭, ೩೮೯, ೩೯೧, ೪೩೩, ೪೩೪, ೪೩೫, ೪೩೬, ೪೫೩, ೪೬೧, ೪೭೧, ೪೮೦, ೪೯೯, ೫೩೪, ೭೩೭, ೮೧೩, ೮೧೪
ಅಸ್ಸಾಮೀಸ್ ೩೯೧
ಅಹಮದ್ ೪೧೭, ೪೯೯, ೪೨೮, ೫೧೦
ಅಹಮದಾಬಾದ್ ೨೫೩, ೩೯೧, ೫೧೬, ೬೩೦, ೬೩೭, ೬೬೬
ಅಹಮದಾಬಾದಿ ೫೦೦
ಅಹಮ್ಮದ್ ೬೫೭, ೬೫೮
ಅಹಮ್ಮದ್‌ಸಾಹ್ ೬೬೮
ಅಹರಾರ್ಸ್ ೪೦೬
ಅಹಲ್ಯಾ ೧೧೯
ಅಹಲ್ಯೆ ೧೫೮
ಅಹಿಂದೂ ೪೯೮
ಅಹಿರ್ ೪೩೮
ಅಹಿವಿತ್ರ ೨೮೫
ಅಹುನ ೭೭
ಅಹುನವತಿ ೭೭, ೭೮
ಅಹುರತ್‌ಕೇಶ ೭೮
ಅಹುರಿ ೭೮
ಅಹೇರಿ ೨೫೪
ಅಹ್ಮದ್ ೪೪೮, ೪೮೮, ೮೧೨, ೮೧೩
ಅಹ್‌ರಾರ್ ೪೦೭
ಆಂಗೀರಸ ೨೦೦
ಆಂಗ್ಲ ೪೯೨, ೪೯೪, ೬೫೭, ೭೦೨
ಆಂಗ್ಲೊಸ್ಯಾಕ್ಸನ್ ೭೧೭, ೭೧೮
ಆಂಗ್ಲೋ ೩೯೩, ೩೯೪, ೪೯೩, ೭೭೭, ೮೩೨, ೮೩೩, ೮೪೬, ೮೪೭, ೮೪೮, ೮೪೯, ೮೫೦, ೮೫೧
ಆಂಟಾರಿಯೋ ೭೧೭
ಆಂಧ್ರ ೩೯೨
ಆಂಧ್ರದೇಶ ೨೮೭
ಆಕ್ಸಸ್ ೪೩೨
ಆಗಾಖಾನ್ ೩೦೭, ೬೬೦, ೬೬೧
ಆಗ್ರಾ ೫೩೪, ೫೩೭, ೭೦೧
ಆಫ್ಘನ್ ೪೫೮
ಆಜಾದ್ ೪೬೮, ೫೫೮, ೫೫೯, ೫೬೧, ೫೬೨, ೬೩೨, ೬೩೯, ೬೪೦, ೬೫೧, ೬೭೧, ೬೮೯
ಆಜ್ಮಲ್‌ಖಾನ್ ೬೩೯
ಆಝಾದ್ ೬೩೧

ಆಝಿ ೧೦೨
ಆಟೋಮನ್ ೬೮೨
ಆಡಮ್ ೭೪೯
ಆತ್ರೇಯ ೩೩೪, ೩೩೫, ೩೩೬, ೩೩೭, ೩೩೮, ೩೩೯, ೩೪೦, ೩೪೧, ೩೪೨
ಆದಿತ್ಯ ೨೯, ೩೧, ೮೧, ೮೨, ೯೧, ೯೨, ೧೯೭, ೩೨೧
ಆದಿಪರ್ವ ೧೪೯, ೧೫೭, ೧೯೭, ೨೦೧, ೨೦೨, ೨೦೫
ಆಪದ್ಧರ್ಮಶಾಸ್ತ್ರ ೧೮೦
ಆಪದ್ಧರ್ಮಸೂತ್ರ ೧೦೪
ಆಪಸ್ತಂಭ ೧೪, ೩೪, ೩೫, ೩೬, ೩೮, ೩೯, ೪೩, ೨೬೨, ೩೨೨, ೩೨೩, ೩೨೪, ೩೨೬, ೩೫೦, ೩೬೧
ಆಫ್ಘನ್ ೪೧೯, ೪೫೭, ೪೫೮, ೪೫೯, ೪೮೭, ೪೯೪, ೫೧೩, ೬೩೧, ೬೩೩
ಆಫ್ಘಾನಿಸ್ತಾನ ೪೧೫, ೪೧೬, ೪೨೮, ೪೩೨, ೪೪೧, ೪೫೭, ೪೫೮, ೪೫೯, ೪೮೫, ೪೮೭, ೪೮೮, ೪೯೪, ೫೧೧, ೫೧೨, ೫೧೩, ೫೧೪, ೬೩೪, ೬೩೫, ೬೫೭, ೬೫೮, ೬೫೯, ೬೬೧, ೬೬೨, ೬೬೩, ೭೦೧, ೭೦೨, ೭೦೩
ಆಫ್ರೋರ್ಯಮಾನ್ ೨೪
ಆಫ್ರಿಕನ್ ೫೬೬, ೭೧೯, ೭೨೦
ಆಫ್ರಿಕಾ ೯೭, ೨೪೩, ೪೦೨, ೪೦೩, ೫೬೪, ೫೬೫, ೫೬೬, ೭೧೯, ೭೨೦, ೭೨೩, ೭೨೫, ೭೨೬
ಆಫ್ರಿಕಾಂಡರ ೭೧೯
ಆಮ್‌ಫರ್ ೫೩೫
ಆಮ್ಸ್ ೬೮೦
ಆ್ಯಂಗ್ಲೋ ೬೫೨
ಆ್ಯಂಟೋನಿ ೫೫೦
ಆಯಜ್ಯು ೭೦
ಆಯಜ್ವನ್ ೭೦
ಆಯಬೆಲ್ ೬೬೬
ಆಯುಸ್ ೯೩
ಆ್ಯನಿಬೆಸೆಂಟ್ ೫೦೮, ೬೩೩
ಆರಟ್ಟ ೨೯೧
ಆರುಂತುಟಿಯಾ ೨೫೧
ಆರುಷಿ ೯೦
ಆರ್ಕ್‌ಟಿಕ್ ೬೫, ೬೬, ೬೭, ೬೮
ಆರ್ಥರ್ ೪೫೬, ೭೬೫
ಆರ್ನಾಲ್ಡ್ ೫೭೭
ಆರ್ಮೀನಿಯನ್ ೪೬೯
ಆರ್ಮೇನಿಯಾ ೯೫
ಆರ್ಯ ೧೮, ೧೯, ೨೦, ೨೪, ೨೭, ೫೮, ೬೨, ೬೩, ೬೪, ೬೫, ೬೮, ೬೯, ೭೦, ೭೧, ೭೨, ೭೩, ೭೪, ೭೫, ೭೬, ೭೭, ೭೯, ೮೦, ೮೧, ೯೫, ೯೬, ೯೭, ೯೮, ೯೯, ೧೦೧, ೧೦೩, ೧೦೪, ೧೦೫, ೧೦೬, ೧೦೮, ೧೦೯, ೧೧೧, ೧೧೨, ೧೨೧, ೧೨೫, ೧೨೬, ೧೨೮, ೧೩೦, ೧೩೧, ೧೩೩, ೧೩೪, ೧೪೧, ೧೭೫, ೧೭೬, ೨೧೬, ೨೧೭, ೨೮೧, ೨೮೨, ೨೮೩, ೨೮೪, ೨೮೫, ೨೯೩, ೨೯೪, ೨೯೫, ೨೯೬, ೨೯೮, ೩೦೧, ೩೦೨, ೩೦೩, ೩೨೧, ೩೨೨, ೩೨೩, ೩೨೬, ೩೬೫
ಆರ್ಯದೇವತೆ ೧೦೪
ಆರ್ಯನ್ ೬೪, ೧೦೨, ೧೨೬, ೧೩೪, ೧೭೬, ೧೭೮, ೧೮೦, ೧೮೧, ೧೮೬
ಆರ್ಯಭಾಷೆ ೬೨, ೬೫
ಆರ್ಯಮಾನ ೧೨೮
ಆರ್ಯವರ್ಣ ೧೦೪, ೧೦೫
ಆರ್ಯಸಮಾಜ ೧೬೨, ೧೭೩, ೧೮೦, ೪೯೯
ಆರ್ಯಾವರ್ತ ೪೨೮, ೪೯೩
ಆರ್ಯೇತರ ೯೯, ೧೦೧, ೧೦೪, ೧೦೫, ೧೦೬, ೧೦೮, ೧೧೨, ೧೩೦, ೧೭೫, ೧೭೭, ೧೭೮, ೨೮೫
ಆರ್ವಾಲ ೨೪೬

ಆಲನೋ ೪೦೧
ಆಲವ್ಸ್ ೬೦೨
ಆಲಿ ೫೨೧, ೫೨೨, ೬೯೪
ಆಲ್ಡರ್ ೬೪
ಆಲ್ಲೂದರು ೨೭೬
ಆಲ್ಲೂದೆ ೨೭೬
ಆಲ್ಲೂರರು ೨೭೭
ಆಲ್ವೈನ್ ೬೧, ೯೫, ೯೬, ೯೭
ಆಶ್ ೬೪
ಆಸಿಟಿಯನ್ನರು ೬೫
ಆಸಿಟೀಸರು ೬೫
ಆಸ್ಟ್ರಿಯ ೫೦೨, ೫೦೩, ೫೦೫, ೫೪೬, ೫೬೪, ೫೬೫
ಆಸ್ಟ್ರೇಲಿಯಾ ೨೪೨, ೨೪೪
ಇಂಗ್ಲಿಷ್ ೨೬೭, ೪೧೧, ೪೯೫, ೪೯೮, ೬೩೨, ೬೩೬, ೬೩೮, ೬೪೭, ೭೧೭, ೭೧೮, ೭೧೯, ೭೨೩, ೭೨೫, ೭೨೬, ೭೬೩
ಇಂಗ್ಲೀಷರು ೧೧೩, ೨೬೭, ೨೭೫, ೪೮೯, ೪೯೪, ೬೪೮, ೬೬೭, ೬೮೬, ೬೮೮, ೭೧೭, ೭೧೮, ೭೨೦, ೭೨೩, ೭೨೫, ೭೨೬
ಇಂಗ್ಲೆಂಡ್ ೨೬೭, ೩೯೮, ೪೩೮, ೪೯೧, ೪೯೪, ೪೯೮, ೫೪೬, ೫೬೪, ೬೦೮, ೬೫೧, ೬೫೩, ೭೭೨
ಇಂಡಿಯನ್ ೩೯೩, ೩೯೪, ೪೪೭, ೪೯೨, ೪೯೩, ೫೦೮, ೬೦೭, ೬೧೧, ೬೧೨, ೬೨೨, ೬೨೬, ೬೩೭, ೬೩೮, ೬೪೧, ೬೫೫, ೬೫೯, ೬೭೧, ೬೭೨, ೬೭೬, ೬೯೨, ೮೩೨, ೮೩೩, ೮೪೬, ೮೪೭, ೮೪೮, ೮೪೯, ೮೫೦, ೮೫೧
ಇಂದ್ರ ೧೯, ೨೧, ೨೯, ೩೦, ೭೦, ೭೧, ೭೨, ೮೦, ೯೧, ೧೦೩, ೧೦೭, ೧೦೮, ೧೧೭, ೧೨೨, ೧೨೪, ೧೨೫, ೧೨೬, ೧೨೭, ೧೨೮, ೧೩೦, ೧೪೭, ೧೪೮, ೧೪೯, ೧೫೮, ೧೫೯, ೧೬೦, ೧೬೩, ೨೦೪, ೨೮೫, ೨೯೩, ೩೨೩, ೩೭೬
ಇಂದ್ರಾಗ್ನಿ ೧೨, ೨೧
ಇಂದ್ರಾಣಿ ೧೫೮, ೧೫೯
ಇಕ್ಬಾಲ್ ೩೮೭, ೪೭೭, ೬೯೧, ೬೯೩
ಇಕ್ಷ್ವಾಕು ೯೧, ೯೨, ೧೪೯, ೧೫೩, ೧೫೪, ೧೬೧, ೧೯೭, ೨೦೬
ಇಜಿಡೋರ ೧೪೦
ಇಟಲಿ ೭೫, ೧೪೦, ೨೪೭, ೪೧೬, ೪೯೮, ೫೪೬, ೫೫೦, ೫೬೫, ೫೬೬, ೫೬೭
ಇಟಾಲಿಯನ್ ೭೨೦, ೭೨೩, ೭೨೫, ೭೨೬
ಇಡಾ ೮೩
ಇತಾರ್ ೫೮೫
ಇತಿಹಾದ ೪೧೯
ಇಥಿಯೋಪಿಯನ್ ೫೭೭
ಇನಸಾಫ ೬೬೫
ಇಮಥಿಯನ್ ೪೧೬
ಇಮಮಗ್ನೋ ೩೨೬
ಇರಾಕ್ ೫೬೬, ೬೩೪, ೭೦೦
ಇರಾನ್ ೧೬, ೬೫, ೧೦೨, ೭೦೦
ಇರಾನಿಯನ್ ೬೪, ೭೭, ೧೦೨, ೧೭೬, ೨೮೫
ಇರ್ವಿನ್ ೫೩೦, ೬೪೯, ೬೭೭
ಇಲಾಮ್ ೫೧೬
ಇಸ್ಮಾಯಿಲ್ ೩೮೮, ೭೦೧
ಇಸ್ಲಾಂ ೪೧೭, ೪೧೮, ೪೨೦, ೪೨೨, ೪೨೪, ೪೨೫, ೪೨೭, ೪೨೮, ೪೨೯, ೪೫೮, ೪೮೫, ೪೮೬, ೪೮೮, ೪೮೯, ೪೯೩, ೫೧೧, ೫೧೨, ೫೧೬, ೫೧೯, ೫೨೩, ೫೨೪, ೫೩೩, ೫೪೪, ೫೫೫, ೫೬೯, ೫೭೩, ೫೭೪, ೫೮೩, ೫೮೪, ೫೯೦, ೫೯೧, ೫೯೨, ೫೯೭, ೫೯೯, ೬೦೧, ೬೩೨, ೬೩೩, ೬೩೪, ೬೩೯, ೬೫೧, ೬೫೪, ೬೫೫, ೬೫೬, ೬೫೭, ೬೫೮, ೬೫೯, ೬೬೦, ೬೬೧, ೬೯೨, ೬೯೩, ೬೯೮, ೬೯೯, ೭೦೦, ೭೦೧, ೭೦೨, ೭೭೧, ೭೭೨, ೮೧೨

ಇಸ್ಲಾಮಿಕ್ ೬೬೧, ೭೦೧, ೭೨೩
ಇಸ್ಲಾಮಿಸಮ್ ೬೬೦
ಇಸ್ಲಾಮೇತರ ೫೯೭
ಇಸ್ಲಿಂಗ್ಟನ್ ೬೮೪
ಇಳಾ ೬೧, ೮೩, ೯೧, ೯೨, ೯೩, ೧೯೭, ೩೪೧
ಇಳಾದೇವಿ ೨೦೭
ಇಳಾರಾಜ ೧೯೭
ಈಜಿಪ್ಟ್ ೧೨, ೧೬, ೨೪೬, ೫೬೩, ೫೬೪, ೫೬೫, ೫೬೬, ೫೮೨, ೬೩೨, ೬೩೪, ೬೫೩, ೬೬೧, ೬೯೨, ೭೦೦
ಈದ್ ೫೨೬, ೫೩೧, ೫೩೬, ೭೭೨
ಈಶಾನ್ಯಭಾರತ ೪೩೯
ಈಶ್ವರ ೯೩
ಈಶ್ವರವಾದ ೪೮೯
ಈಸಾ ೬೬೫
ಉಕ್ಥ್ಯ ೨೪, ೧೭೮
ಉಗಾಂಡ ೨೪೩, ೨೪೫
ಉಗ್ರಸೇನ ೧೨೩
ಉಚಥ ೧೨೬
ಉಚಲೋರೆ ೨೭೬
ಉಜ್‌ಫಲ್ವಿ ೯೬
ಉಡುಪಿ ೨೪೭
ಉತ್ ೪೧೮
ಉತ್ಕಲ ೨೮೯, ೩೯೧
ಉತ್ತರಪ್ರದೇಶ ೩೯೫, ೩೯೬
ಉತ್ತರಭಾರತ ೪೧೫
ಉದ್ ೪೨೨, ೪೨೪, ೪೨೫
ಉದಕ್ಸೇನ ೧೧೯
ಉದ್ಯೋಗಪರ್ವ ೧೫೮
ಉಪನಿಷತ್ತು ೨೩, ೨೫, ೧೦೦, ೧೦೭, ೨೮೪, ೩೪೬, ೩೬೫
ಉರಗಪುರ ೨೮೭
ಉರ್ದು ೬೨೨, ೬೨೩
ಉಲ್ ೪೦೬, ೪೦೭, ೫೧೯, ೫೨೩, ೬೪೭, ೬೪೯, ೬೫೦, ೬೫೧, ೬೫೬, ೭೪೩
ಉಲೀಮಾ ೬೧೫
ಉಲೇಮಾ ೪೦೬, ೪೦೭, ೬೦೦, ೬೪೭, ೬೪೯, ೬೫೦, ೬೫೧, ೬೫೪
ಉಲ್‌ಸ್ಟರ್ ೭೩೪, ೭೪೩, ೭೪೪, ೭೬೩, ೭೬೪, ೭೬೫, ೭೬೭
ಉಶೀನ ೧೨೭, ೨೦೦
ಉಷನಸ್ ೯೩
ಉಷೆ ೮೬
ಉಷ್ಟ್ರವೈತಿ ೭೮
ಉಷ್ಟ್ರಪಕ್ಷಿ ೧೦೦
ಋಕ್ಷ ೧೨೦
ಋಗ್ವೇದ ೧೧, ೧೭, ೧೮, ೧೯, ೨೦, ೨೧, ೨೨, ೨೪, ೨೮, ೨೯, ೩೦, ೬೩, ೬೮, ೬೯, ೭೦, ೭೧, ೭೫, ೭೬, ೭೭, ೮೦, ೮೧, ೮೭, ೯೭, ೯೯, ೧೦೩, ೧೦೪, ೧೦೫, ೧೦೭, ೧೧೦, ೧೧೧, ೧೧೭, ೧೨೦, ೧೨೧, ೧೨೩, ೧೨೬, ೧೨೭, ೧೨೮, ೧೨೯, ೧೩೦, ೧೩೧, ೧೩೨, ೧೩೪, ೧೩೫, ೧೩೬, ೧೩೭, ೧೩೮, ೧೩೯, ೧೪೦, ೧೪೧, ೧೫೨, ೧೫೩, ೧೫೫, ೧೬೩, ೨೦೦, ೨೦೧, ೨೧೨, ೨೧೩, ೨೧೫, ೨೧೬, ೨೧೭, ೨೮೪, ೨೮೫, ೨೮೬, ೨೯೩, ೩೨೧, ೩೨೨, ೩೨೫, ೩೨೬, ೩೭೧, ೪೯೩
ಋಗ್ವೇದೀಯ ೧೩೦, ೨೮೪
ಋತುಪರ್ಣ ೧೧೮, ೧೨೦
ಋತೇಯು ೧೧೮
ಋತ್ವಿಜ ೨೫, ೧೫೫, ೩೨೩
ಋಷತಿ ೭೫
ಋಷಭ ೧೨೦, ೨೦೦
ಎಕೋಜಿ ೧೭೧
ಎಕ್ಸಿರ್ಸಿಟಸ್ ೨೪೭
ಎಡಿಯಾಯನ್ ೨೯೮

ಎಡ್ವರ್ಡ್ ೪೯೭, ೭೪೩, ೭೪೪
ಎರೆಯಪ್ಪ ೨೮೯
ಎರ್ನಾಡ್ ೫೨೩
ಎವರ್ಸ್ಲಿ ೫೬೮
ಏಕದೇವ ೪೨೨
ಏಡೆನ್ ೪೭೫
ಏಶಿಯಾ ೨೫೯, ೬೩೪, ೬೩೫, ೬೬೨, ೬೬೩
ಏಶಿಯಾಟಿಕ್ ೧೧೩, ೬೬೨, ೬೬೩
ಏಷಿಯಾಟಿಕ್ ೫೬೫
ಏಷ್ಯಾ ೬೪, ೭೨, ೭೩, ೭೪, ೯೬, ೨೯೪, ೪೨೫, ೫೬೩, ೫೬೪, ೫೬೬, ೫೬೭, ೫೭೭
ಐಂದ್ರಗ್ನಿ ೧೧೨
ಐತ್ತರೇಯ ೪೯, ೧೨೨
ಐಬಕ್ ೪೨೨
ಐರ್ ೬೭೭
ಐರಾವತ ೩೭೮
ಐರಿಷ್ ೨೭೬, ೪೧೦, ೪೪೨, ೬೪೫, ೬೯೭, ೭೩೪, ೭೪೩, ೭೬೧, ೭೬೩, ೭೬೪, ೭೬೫, ೭೬೬, ೭೭೭
ಐರೋಪ್ಯ ೭೨, ೭೩, ೭೪, ೭೫, ೯೬, ೧೩೪, ೪೦೪, ೪೪೦, ೪೭೨, ೫೧೨, ೫೨೬, ೫೭೩, ೫೭೬
ಐರ್ಲೆಂಡ್ ೭೫, ೨೭೪, ೨೭೬, ೨೭೭, ೨೭೮, ೪೪೨, ೪೬೫, ೭೧೭, ೭೩೪, ೭೩೫, ೭೬೧, ೭೬೩, ೭೬೪, ೭೬೫, ೭೬೬, ೭೬೭, ೭೭೭
ಐಲೂಷ ೧೦೭
ಐಲ್ಟೆ ೨೭೬
ಐಸಾಕ್ ೬೪
ಒಟ್ಟೋಮನ್ ೫೬೩, ೫೬೮
ಒಡಿಸ್ಸಾ ೨೫೮, ೨೫೯, ೫೨೮
ಒಪ್ಲಾನಗನ್ ೭೩೪
ಒರಿಯಾ ೩೯೧
ಒರಿಸ್ಸಾ ೨೫೯, ೨೮೬, ೩೯೨, ೪೩೪, ೪೩೫, ೪೩೬, ೪೫೩, ೪೬೧, ೪೮೦, ೫೩೪, ೫೩೬, ೬೧೨, ೮೩೩, ೮೩೫
ಓಕ್ ೬೪, ೪೨೯, ೪೩೦
ಓಕಾನರ್ ೭೩೮
ಓಗಿಲ್ ೪೪೭, ೪೪೮, ೪೪೯, ೪೫೦, ೪೫೧, ೪೫೨
ಓಝಾ ೨೫೭
ಓರಾಂವೊ ೨೫೩
ಓರಿಯಾನ್ ೧೬೭
ಓಲ್ಡನ್‌ಬರ್ಗ್ ೨೧೫
ಓಲ್ಡ್‌ಹ್ಯಾಮ್ ೨೯೦, ೨೯೩
ಔದ್ ೪೧೨, ೪೩೭, ೪೩೮
ಔಥೇಲಿಯ ೨೫೬, ೨೫೮
ಔರಂಗಜೇಬ್ ೪೦೦, ೪೨೩, ೪೯೨, ೪೯೭
ಕಂಕಿನಾರ ೫೨೪
ಕಂಜಿರ ೨೫೪
ಕಂದ್ರ ೨೫೩
ಕಂಧ್ ೨೫೩
ಕಂಧ ೨೫೩
ಕಕೇಯು ೧೧೮
ಕಕೇಶಿಯನ್ ೬೪, ೬೫
ಕಚಿನ್ ೪೪೫
ಕಜ್ಮಿ ೫೯೭, ೫೯೯
ಕಟಕ್ ೩೯೧
ಕಟ್ಟುನಾಯಕನ್ ೨೫೨
ಕಠ ೧೩೮, ೧೩೯
ಕಠಕ ೨೧೭
ಕಡಚ್ ೭೨೬
ಕಡನ್ ೨೫೨
ಕಣಿಕರ್ ೨೯೮
ಕಣಿಗಲ ೩೩೮
ಕಣ್ಣಾನೂರು ೫೩೬
ಕಣ್ವ ೭೬, ೧೧೮, ೧೧೯, ೨೦೦

ಕಣ್ವಾಯನ ೧೧೮
ಕದಿರ ೨೫೩
ಕದ್ರೂ ೯೦
ಕನಕ್ಕನ್ ೨೫೧
ಕನೌಜ ೪೨೫
ಕನ್‌ಕಿರಾಹ್ ೫೨೫
ಕನ್ಯಾಕುಮಾರಿ ೨೯೫, ೭೦೧
ಕನ್ಸ್ವಾ ೨೯೧
ಕಪರಿಯ ೨೫೪
ಕಪಾಲಸೂಚಿ ೫೯
ಕಪಿಲಾ ೯೦
ಕಪೂರಿಯ ೨೫೩
ಕಪೋತ ೩೩೦
ಕಫ್ಘಾ ೫೬೩
ಕಬೀರ್ ೬೯೮
ಕಮಡ ೫೭೩
ಕಯಿಂಖಿನಿ ೪೪೫
ಕರಂಜ ೧೨೨
ಕರವೀರಮಠ ೧೯೩
ಕರಾಚಿ ೨೮೭, ೩೮೯, ೫೩೮, ೬೫೪, ೬೫೯
ಕರಿಂಪಲನ್ ೨೫೨
ಕರೂಷ ೯೧, ೯೨, ೯೩, ೧೯೭
ಕರೆಂಗ ೨೫೩
ಕರ್ಜನ್ ೩೮೮, ೩೮೯, ೭೬೭
ಕರ್ನಾಟಕ ೨೯೭, ೨೯೮, ೩೯೨
ಕರ್ನೂಲ್ ೫೩೫
ಕರ್ರಾಗ್ ೭೬೪, ೭೬೫
ಕರ್ವಾಲ ೨೫೪
ಕಲಬರ್ಝು ೨೫೪
ಕಲಮಾ ೭೭೨
ಕಲಾ ೧೫೬
ಕಲಾಲ್ ೫೮೬
ಕಲ್ಕತ್ತ ೧೧೩, ೧೭೦, ೧೭೧, ೩೮೯, ೩೯೧, ೪೬೮, ೫೦೬, ೫೦೭, ೫೨೫, ೫೨೬, ೫೨೭, ೫೩೨, ೫೪೦, ೬೨೭, ೬೩೫, ೬೩೮, ೬೪೪, ೬೪೭, ೬೭೭, ೬೭೮, ೬೯೧, ೮೦೮, ೮೧೨
ಕಲ್ಮಷಪಾದ ೧೪೯, ೨೦೫, ೨೦೬, ೨೦೮
ಕವಶ ೧೦೭, ೧೨೫, ೧೨೬
ಕವೋರಾ ೨೫೩
ಕಶ ೯೩, ೯೪
ಕಶ್ಯಪ ೯೦, ೯೧, ೯೨, ೧೧೭, ೧೨೩, ೨೦೦, ೨೦೭, ೩೩೮
ಕಷೇತ್ರ ೮೩೨
ಕಸ್ಪಿ ೫೮೬
ಕಸ್ಥ ೨೫೩
ಕಸ್ಯ ೧೧೯
ಕಾಂಗ್ರಾ ೨೯೨, ೩೯೬
ಕಾಂಗ್ರೆಸ್ ೩೯೦, ೩೯೧, ೩೯೨, ೩೯೩, ೪೦೫, ೪೦೬, ೪೦೭, ೪೦೮, ೪೦೯, ೪೧೦, ೪೧೧, ೪೮೬, ೪೯೦, ೪೯೭, ೪೯೮, ೫೦೧, ೫೦೬, ೫೦೭, ೫೦೮, ೫೦೯, ೫೧೦, ೫೧೨, ೫೧೬, ೫೧೭, ೫೧೮, ೫೨೦, ೫೨೩, ೫೩೩, ೫೩೪, ೫೩೫, ೫೩೬, ೫೪೫, ೫೫೯, ೫೯೦, ೫೯೪, ೫೯೫, ೫೯೬, ೬೦೨, ೬೦೭, ೬೦೮, ೬೨೧, ೬೨೨, ೬೨೪, ೬೨೮, ೬೩೦, ೬೩೧, ೬೩೨, ೬೩೬, ೬೩೭, ೬೪೦, ೬೪೧, ೬೪೨, ೬೪೪, ೬೪೫, ೬೪೬, ೬೪೭, ೬೪೮, ೬೪೯, ೬೫೦, ೬೬೬, ೬೭೧, ೬೭೨, ೬೭೩, ೬೭೫, ೬೭೮, ೬೮೫, ೬೮೬, ೬೮೮, ೬೯೦, ೬೯೧, ೭೦೬, ೭೧೦, ೭೧೧, ೭೨೧, ೭೨೭, ೭೨೮, ೭೬೨, ೭೬೩, ೭೭೧, ೭೭೨, ೭೭೩, ೭೭೪, ೭೭೬, ೭೭೮, ೭೭೯
ಕಾಂಡ್ರಾ ೨೫೮
ಕಾಂಪಿಲ್ಯ ೧೧೯
ಕಾಕಸಸ್ ೬೫
ಕಾಕಿನಾಡಾ ೬೪೧

ಕಾಜಿ ೩೯೬
ಕಾಟಿಯಾ ೨೫೭, ೨೫೮
ಕಾತ್ಯಾಯನ ೧೦೭, ೩೬೧
ಕಾನ್ಪುರ ೫೩೫, ೫೩೬, ೫೩೯, ೫೪೦, ೬೫೦, ೬೫೧
ಕಾನ್ಯಕುಬ್ಜ ೨೦೪, ೨೯೩
ಕಾನ್‌ರಾನ್‌ಸ್ಮಿತ್ ೮೫೫
ಕಾನ್ಸ್ಟಂಟಾಯಿನ್ ೧೪೦
ಕಾನ್‌ಸ್ಟಂಟಿನೋಪಲ್ ೫೬೩, ೫೬೫, ೫೬೬, ೭೦೦, ೭೦೨
ಕಾಪು ೨೯೭
ಕಾಫಿರ್ ೫೧೯, ೬೬೫, ೬೬೭
ಕಾಬಾ ೫೨೩
ಕಾಬೂಲು ೪೧೫, ೪೨೮, ೪೮೮, ೬೩೨, ೭೦೨
ಕಾಮನ್‌ವೆಲ್ತ್ ೬೪೩, ೮೫೭
ಕಾಮ್ಯೇಷ್ಟಿ ೩೨೩
ಕಾಯರೋ ೬೬೧
ಕಾಯಸ್ಥ ೧೬೯, ೧೭೦, ೧೮೨, ೧೯೦, ೧೯೧, ೧೯೩, ೧೯೪
ಕಾರ್ಕೋಟಕ ೨೯೧
ಕಾರ್ಡೈಲ್ ೪೧೦
ಕಾರ್ಪ್ಸ್ ೪೪೯
ಕಾರ್ಲೈಲ್ ೭೨೨, ೭೭೧
ಕಾರ್ಸನ್ ೭೪೩, ೭೪೪, ೭೪೫, ೭೬೪
ಕಾಲಿಂಜರ್ ೪೨೫
ಕಾಲ್ಡ್‌ವೆಲ್ ೨೯೪
ಕಾವೆನ್ ೭೪೪
ಕಾಶಗಾರ್ ೬೬೧
ಕಾಶಿ ೧೪೫, ೧೮೪, ೧೯೦, ೪೨೩
ಕಾಶಿಪುರ ೫೪೦
ಕಾಶೀರಾಜ ೯೪
ಕಾಶ್ಮೀರ ೨೯೧, ೨೯೨, ೨೯೫, ೪೧೫, ೪೯೪, ೫೯೩, ೭೩೮
ಕಾಶ್ಯಪ ೩೨, ೯೦, ೯೧
ಕಾಸಿ ೪೧೧, ೪೨೭
ಕಾಸಿಂ ೪೦೦, ೪೧೯, ೪೨೦
ಕಿಂಗ್‌ಡಮ್ ೮೫೬
ಕಿಚಲ್ಯೂ ೬೩೧
ಕಿಚ್ಚಿಪಾಳ್ಯಂ ೫೩೪
ಕಿಜ್ಜೈ ೫೧೪
ಕಿಪ್ಸ್ ೭೪೧
ಕಿಮರಾ ೩೯೮
ಕಿರ ೪೨೬
ಕಿರಾಟೆ ೨೯೨
ಕಿಶ್ ೭೮
ಕಿಶೆನ್ ೧೭೦
ಕಿಶೋರ್ ೫೩೩
ಕೀರಗ್ರಾಮ ೨೯೨
ಕೀರರು ೨೯೨
ಕೀರಾ ೨೯೨
ಕೀಲ್‌ಹಾರ್ನ್ ೨೯೨
ಕೀವಾದ ೭೬೭
ಕುಡುಂಬನ್ ೨೫೧
ಕುತುಬ್ ೪೨೨, ೪೨೪, ೪೨೫
ಕುತ್‌ಬಾ ೪೧೭
ಕುನ್ಬಿ ೨೯೭
ಕುಮಾರ್ ೪೫೨
ಕುವಹೌನ್ ೪೩೮, ೪೩೯, ೪೪೩, ೪೪೪
ಕುಮ್ಹಾರ ೨೫೭
ಕುಯಿಖೆಲ್ ೫೨೯
ಕುರರಿಯಾ ೨೫೫
ಕುರಾನ್ ೪೨೨, ೪೮೮, ೫೧೬, ೫೧೯, ೫೮೪, ೫೮೫, ೬೩೨, ೭೭೧
ಕುರಿಚ್ಚನ್ ೨೫೨
ಕುರುಮನ್ ೨೫೨
ಕುರುವನ್ ೨೫೧

ಕುರ್ಹ ೨೯೭
ಕುಲಥನ್ ೨೫೨
ಕುವೇರನಾಗ ೨೮೬
ಕುಶಂಬ ೧೨೦
ಕುಶಾಗ್ರ ೧೨೦
ಕುಶಾನ ೧೮೭, ೨೮೮
ಕುಶಿಕ ೧೨೭, ೧೫೨, ೧೫೪, ೨೦೦
ಕುಸುಮ್ ೫೪೪
ಕುಸುಮ ೩೧೨, ೫೪೪
ಕೂರ್ಗ್ ೪೩೪
ಕೃತವೀರ್ಯ ೨೦೨, ೨೦೩
ಕೃತಾಕ ೧೨೦
ಕೃತ್ವಿ ೧೧೯
ಕೃಪ ೨೦೦
ಕೃಷ್ಣಯಜುರ್ವೇದ ೧೩೯
ಕೃಷ್ಣಯೋನಿ ೭೧
ಕೃಷ್ಣವರ್ಣ ೭೦
ಕೃಷ್ಣವರ್ಮ ೨೮೬
ಕೃಷ್ಣಾ ೧೭೦
ಕೃಷ್ಣಾಜಿನ ೧೬೨
ಕೆಡೆಟ್ ೪೪೭
ಕೆನಡಾ ೪೦೨, ೪೦೩, ೪೪೨, ೪೯೨, ೭೧೭, ೭೧೮, ೭೧೯, ೭೨೦, ೭೨೩, ೭೨೫, ೭೨೬
ಕೆನಡಿಯನ್ ೪೪೨
ಕೆಮಲ್ ೫೬೬
ಕೆಲ್ಟರು ೬೨
ಕೆಲ್ಟಿಕ್ ೬೧, ೬೨, ೯೬
ಕೇನ್ ೬೬೬
ಕೇರರು ೨೯೨
ಕೇರಳೀಯ ೨೯೨
ಕೇಶಿನಿ ೧೧೭, ೧೧೮
ಕೈಬರ್ಟ ೨೫೩
ಕೈರಾ ೨೫೩
ಕೊಂಪಿತಾಲಿಯ ೨೪೬
ಕೊಡಗು ೪೩೪
ಕೊಲ್ಫ ೨೫೨
ಕೊಲ್ಜ ೨೫೨
ಕೊಲ್ಹಾಪುರ ೧೯೨, ೧೯೩
ಕೋಕೋನಾಡಾ ೬೭೧
ಕೋಚ ೨೫೩
ಕೋಟಲ್ ೫೩೦
ಕೋತಲ ೨೫೪
ಕೋಮಿತಿಯಾ ೨೪೭
ಕೋಸಲ ೨೮೮, ೩೨೭
ಕೋಹತ್ ೩೮೮, ೫೨೦, ೫೨೪, ೫೨೫
ಕೌಟಿಲ್ಯ ೧೧೯
ಕೌರ ೨೫೩
ಕೌಲ ೫೬೬
ಕೌಲಿಗೆ ೮೫೬
ಕೌಶಿಕ ೧೨೭
ಕೌಶಿತಕಿ ೧೫೬
ಕ್ಯಾಥೊಲಿಕ್ ೫೫೧, ೫೫೨, ೭೧೭, ೭೪೪, ೭೭೨
ಕ್ಯಾನರಾ ೨೫೩
ಕ್ಯಾನಿಂಗ್ ೩೮೮
ಕ್ಯಾಸ್ಪಿಯನ್ ೬೪
ಕ್ಯುರಾಮನ್ ೫೬೩
ಕ್ಯೂರನ್ ೪೧೦
ಕ್ರಿಪ್ಸ್ ೭೫೭, ೭೫೯, ೭೬೦, ೭೬೧, ೭೬೨, ೮೫೬
ಕ್ರಿಯೆಳ ೬೫೮
ಕ್ರಿಶ್ಚಿಯನ್ ೫೦, ೧೭೮, ೩೦೭, ೫೧೮, ೫೧೯, ೫೩೩, ೫೪೩, ೫೫೧, ೫೫೨, ೫೬೪, ೫೬೯, ೫೭೩, ೫೮೧, ೫೯೯, ೬೦೦, ೬೦೨, ೬೩೮, ೬೬೬, ೬೭೨
ಕ್ರುಂಬ ೨೯೭, ೨೯೮
ಕ್ರೂಕ್ ೧೮೭
ಕ್ರೈಗಾವನ್ ೭೪೩

ಕ್ರೈಸ್ತ ೪೫೩, ೪೯೯, ೫೦೫, ೬೯೮, ೭೦೫, ೭೭೮, ೮೩೩
ಕ್ರೈಸ್ತಧರ್ಮ ೭೩೦
ಕ್ರೈಸ್ತಮತ ೫೧, ೨೮೨
ಕ್ರೈಸ್ತೇತರ ೫೦
ಕ್ರೋಸಿಯ ೫೬೭
ಕ್ಲಿಬೆಕ್ ೭೧೭
ಕ್ವಾಲಿನ್ ೭೧೭
ಕ್ಷಾತ್ರಧರ್ಮ ೧೪೪, ೧೯೪
ಕ್ಷಾತ್ರವೃದ್ಧ ೯೩
ಕ್ಷಾಮಡಾಮರ ೪೩
ಕ್ಷೀರವಾನಿ ೬೮೯
ಕ್ಷೈತನೇ ೧೦೨
ಖಂಗರ್ ೨೫೭
ಖಂಗರ್ತಕ ೩೩೧
ಖಂಡಮಲ ೨೫೯
ಖಕ್ಸರ್ ೬೦೪
ಖತಿಕ ೨೫೩, ೨೫೪, ೨೫೫
ಖತ್ರಿ ೨೯೬
ಖನ್ನಾ ೫೧೬
ಖಪಾಟ್ನಾ ೧೭೦
ಖಯ್ಯಾಮ ೫೧೬, ೫೩೮, ೫೩೯
ಖರಗ್‌ಪುರ ೫೩೨
ಖರೋಟ ೨೫೪
ಖರ್ವಾರ ೨೫೪
ಖಲೀಫ ೬೮೨
ಖಲೀಫತ್ ೭೦೬
ಖಲ್ಪ ೨೫೨
ಖಲ್ಸಾ ೪೩೮
ಖಸ್ನಾದಾರ ೫೩೦
ಖಾದಿಯಾನ ೪೮೮
ಖಾನ್ ೩೮೮, ೪೪೯, ೪೫೧, ೪೫೨, ೫೪೧, ೬೩೫, ೬೩೭, ೬೩೯, ೬೫೨, ೬೫೭, ೬೬೫, ೬೬೮, ೭೦೦, ೭೦೧, ೭೭೩, ೮೧೨, ೮೧೩
ಖಾಯಿ ೭೭೨
ಖಾರವ ೧೮೭
ಖಾಸಿಂ ೪೧೬, ೪೧೭
ಖಿಲಾಫತ್ ೪೫೮, ೪೫೯, ೪೮೮, ೫೦೪, ೫೦೫, ೫೦೬, ೫೦೭, ೫೦೮, ೫೦೯, ೫೧೦, ೫೧೧, ೫೧೨, ೫೧೩, ೫೧೭, ೫೧೮, ೫೧೯, ೫೨೦, ೫೨೩, ೬೧೫, ೬೩೧, ೬೩೩, ೬೩೪, ೬೩೭, ೬೩೮, ೬೩೯, ೬೪೭, ೬೪೮, ೬೫೧, ೬೫೪, ೬೫೭, ೬೫೮, ೬೫೯, ೬೬೫, ೬೮೫, ೬೮೬, ೭೦೬
ಖಿಲ್ಜಿ ೪೨೦
ಖುತ್ಬಾ ೭೭೨
ಖುಸ್ರು ೪೨೨
ಖೈಬರ್ ೫೨೯, ೫೩೦
ಖೊಂಡಮಾ ೨೫೯
ಖೋರ್ ೫೮೬
ಖೋರಿ ೨೫೪
ಖ್ನುಮು ೧೨
ಖ್ರೈಸರ ೫೫೦
ಖ್ವಾಜಾ ೬೬೭
ಗಂಗಾ ೬೯, ೮೮, ೧೧೮, ೨೮೯, ೨೯೨, ೩೭೮, ೪೩೭
ಗಂಗಾಜಲ ೧೪೭
ಗಂಗಾನದಿ ೮೮, ೧೮೬, ೧೮೭, ೨೯೦, ೪೩೭
ಗಂಗಾಪುಪೂಟಕ ೩೩೦
ಗಂಜ್ ೫೩೩, ೫೩೭, ೬೨೨
ಗಂಜಾಮ್ ೨೫೯
ಗಂಢಿಲ ೨೫೫
ಗಗಾಭಟ್ಟ ೧೮೪, ೧೮೮, ೧೮೯, ೧೯೦, ೧೯೧, ೧೯೪
ಗಣೇಶ ೧೪೪, ೫೩೬
ಗದ್ದಾಲಿ ೪೪೪, ೪೪೬

ಗದ್ದಿ ೫೮೬
ಗದ್ವಾಲ್ ೪೩೮, ೪೩೯, ೪೪೩, ೪೪೬
ಗಬ್ಗೆ ೫೨೧
ಗಯತೆ ೬೭೮
ಗಯಾ ೬೪೧
ಗರೀಸ್ ೫೬೪
ಗರೊ ೨೫೩
ಗರೋಡೆ ೨೫೨
ಗರ್ಗ ೧೧೯, ೨೦೦
ಗಲ್ಫ್ ೫೬೬
ಗಾಂಧಾರ ೨೯೩
ಗಾಂಧಿ ೩೯೦, ೪೮೬, ೪೮೭, ೫೦೫, ೫೦೬, ೫೦೮, ೫೦೯, ೫೧೦, ೫೧೧, ೫೧೨, ೫೧೩, ೫೧೪, ೫೧೫, ೫೧೬, ೫೧೭, ೫೧೮, ೫೧೯, ೫೨೦, ೫೨೧, ೫೨೨, ೫೨೩, ೫೪೩, ೫೪೫, ೫೯೫, ೬೧೯, ೬೪೦, ೬೪೫, ೬೪೭, ೬೪೯, ೬೫೦, ೬೫೧, ೬೬೫, ೬೬೬, ೬೬೭, ೬೭೧, ೬೭೨, ೬೭೬, ೬೭೭, ೬೮೯, ೬೯೦, ೭೨೪, ೭೬೩, ೭೭೧, ೭೭೨, ೭೭೩, ೭೭೪, ೭೭೭
ಗಾಂವತಾಣ ೨೭೫
ಗಾಗ್ರಾ ೨೫೫
ಗಾಥಾ ೭೭, ೭೮, ೭೯
ಗಾಧಿ ೧೫೨, ೧೫೫, ೨೦೦, ೨೦೪
ಗಾಬ್ರಿಯೆಲ್ ೩೩೩
ಗಾಯತ್ರೀ ೧೫೩, ೧೬೪, ೧೭೪, ೧೮೦, ೩೩೩
ಗಾಯತ್ರೀಮಂತ್ರ ೧೬೪
ಗಾಯಿಪುರ ೫೩೬
ಗಾರ್ಗ್ಯ ೧೧೯
ಗಾರ್ಫಗ್ನಾನ ೭೫
ಗಾರ್ಧಿಯಾಸಿನ್ ೫೪೦
ಗಾಲ್ಟಾಸರು ೯೬
ಗಾಹ್ ೫೪೦, ೫೪೨
ಗೀಗರ್ ೬೪
ಗೀರೋತ್ ೩೯೬
ಗುಜರ್ ೧೮೭, ೧೮೮
ಗುಜರಾತ್ ೩೯೧, ೩೯೨, ೪೯೫, ೫೨೫
ಗುಜರಾತಿ ೩೯೧, ೩೯೬, ೫೪೭
ಗುಪ್ತ ೧೮೭, ೨೮೬, ೨೮೮, ೩೫೦, ೩೭೯, ೩೮೦
ಗುರಗಾಂವ ೫೩೧
ಗುರುದ್ವಾರ ೫೩೭
ಗುಲ್ ೭೦೧
ಗುಲಾತ್ ೩೯೬
ಗುಲ್‌ಖಾನ್ ೭೦೦
ಗುಲ್ಬರ್ಗ ೫೨೧, ೫೨೪
ಗುವಕ ೨೮೬
ಗುವಲ ೨೫೪
ಗುಹು ೩೨೪
ಗೂಜರ್ ೪೩೮, ೪೪೫
ಗೂರ್ಖಾ ೪೩೮, ೪೩೯, ೪೪೪, ೪೪೫, ೪೪೬, ೪೫೩, ೪೫೬
ಗೂರ್ಜರ ೨೮೮
ಗೃತ್ಸ ೨೦೦
ಗೃತ್ಸಮ ೯೩
ಗೃಹ್ಯಸೂತ್ರ ೧೬೨, ೩೨೩, ೩೨೪, ೩೨೬
ಗೆಜೆಟ್ ೬೧೮, ೮೫೧
ಗೊಡಗಲಿ ೨೫೨, ೨೫೮
ಗೊಡರಿ ೨೫೨, ೨೫೮
ಗೊಪ್ರಿ ೨೫೩
ಗೋಖಲೆ ೬೭೦
ಗೋಫ್ನ ೩೨೪, ೩೪೭
ಗೋತಮ ೩೨೭
ಗೋದ್ರ ೨೫೮
ಗೋಪಾಲ ೧೨೫
ಗೋಪೂಜೆ ೩೪೬, ೩೫೦, ೩೫೧
ಗೋಫ್ ೭೬೫

ಗೋಬಿಂದ್ ೪೯೨
ಗೋವಿಂದಪುರ ೫೪೪, ೫೪೫
ಗೋಸಂಗಿ ೨೫೧
ಗೋಸರ್ಜಿ ೫೪೧, ೫೪೨
ಗೋಳಿಬಾರ್ ೫೩೯
ಗೌತಮ ೧೦೮, ೧೬೦
ಗೌತಮೀಪುತ್ರ ೨೮೬
ಗೌಹತಿ ೩೯೧
ಗೌಳಿ ೨೪೩
ಗ್ರವಾಮಿನ್ ೫೬೨
ಗ್ರಿಫಿಥ್ಸ್ ೧೩೦
ಗ್ರೀಕ್ ೧೬, ೬೧, ೬೨, ೬೪, ೨೪೬, ೪೧೬, ೪೭೮, ೪೯೩, ೫೬೪, ೫೬೬, ೫೭೬, ೫೭೫
ಗ್ರೀಸ್ ೨೪೭, ೪೧೬, ೪೭೨, ೪೯೩, ೫೬೪, ೫೬೫, ೫೬೬, ೭೪೮, ೭೫೦
ಘರಮಿ ೨೫೪
ಘಸಿ ೨೫೨, ೨೫೪
ಘಸ್ನಿ ೪೧೮, ೪೧೯, ೪೨೦, ೪೨೧, ೪೨೨, ೪೨೫, ೪೨೮
ಘಸ್ನಿಮಹಮ್ಮದ ೪೧೬, ೪೧೭
ಘಾಸಿಖಾನ್ ೩೮೯
ಘುರ್ಯೆ ೨೯೬
ಘುಸುರಿಯಾ ೨೫೮
ಘೃತೇಯು ೧೧೮
ಘೋರಿ ೪೧೭, ೪೧೮, ೪೧೯, ೪೨೨, ೪೨೮
ಘೋರ್ಕಿ ೫೪೦
ಘೋಷ್ ೧೭೦
ಚಂಡೇಲರು ೧೮೭
ಚಂದ್ ೫೧೫
ಚಂದ್ರ ೧೨, ೧೮೭, ೨೮೯
ಚಂದ್ರಗುಪ್ತ ೩೫೦, ೪೧೫, ೬೯೩
ಚಂದ್ರವಂಶಿ ೨೦೦
ಚಂದ್ರಿಕ ೨೯೩
ಚಂಪಾವತಿ ೨೮೭
ಚಂಬಲ್ ೨೯೧
ಚಂಬಾರ ೨೫೨
ಚಕ್ಕಲಿಯನ ೨೫೧
ಚಕ್ಕಳಿಯನ್ ೩೧೧
ಚಟುಕುಲ ೨೮೭
ಚಟ್ಟೋಪಾಧ್ಯಾಯ ೪೪೬, ೪೫೦
ಚಡರ ೨೫೬
ಚಮಾರ ೨೫೪, ೨೫೫, ೨೫೬, ೨೫೮, ೨೯೭, ೨೯೮
ಚರಿಕಾರ್ ೪೧೫
ಚಾಂದೋಲ್ ೫೧೦
ಚಾಂದ್‌ರಾಯ್ ೪೨೦
ಚಾರುದತ್ತ ೩೧೨
ಚಾರುದತ್ತು ೩೧೩
ಚಾರುಮಾನ್ ೨೯೮
ಚಾಲುಕ್ಯ ೧೮೮
ಚಾಹಮಾನ ೨೮೬
ಚಿಟ್ಟಗಾಂಗ್ ೩೮೯
ಚಿತ್ತರಂಜನದಾಸ್ ೬೩೭
ಚಿನ್ ೪೪೫
ಚಿರಿಣಿ ೮೮
ಚೀನಾ ೩೪೮, ೩೪೯, ೩೮೦, ೪೧೫, ೪೯೩
ಚೀನಾಬ್ ೨೯೨
ಚುಹರ ೨೫೨
ಚುಹ್ರಾ ೨೫೨, ೨೫೫
ಚೂರಿಹಾರ್ ೫೮೬
ಚೂಹ್ರಾ ೨೯೬, ೨೯೮
ಚೆಂಗೇಸ್‌ಖಾನ್ ೪೧೭
ಚೆಕೊಸ್ಲೊವಾಕಿಯಾ ೫೬೭, ೫೭೧, ೫೭೨
ಚೆಮ್ಸ್ ೭೦೨, ೭೨೭
ಚೆರು ೨೯೨
ಚೆರುಮ ೨೫೧

ಚೆಲಮ್ಸ್ ೬೨೩
ಚೆಲ್ಮ್ಸ್ ೬೧೧, ೬೧೨
ಚೇರ ೨೯೦, ೨೯೧, ೨೯೨
ಚೇರಮಂಡಲ ೨೯೦
ಚೋಳ ೨೮೬, ೨೯೦
ಚೋಳವಂಶ ೨೮೬
ಚೌಧುರಿ ೧೭೦, ೨೮೭, ೨೮೮, ೩೯೬, ೪೩೭, ೪೩೯, ೪೪೪, ೪೪೫, ೪೪೯, ೪೫೨, ೪೫೩
ಚೌಪಾಲ ೨೫೫
ಚೌರಿಚಾರಾ ೫೨೦
ಚೌಹಾಣ ೧೮೮, ೨೫೬
ಚ್ಯವನ ೧೦೭, ೧೦೮, ೧೧೯, ೧೨೦, ೧೨೨
ಚ್ವಾಂಗ್ ೩೮೦
ಛನಲ ೨೫೫
ಛಾಯಾಮನ ೧೨೫, ೧೨೬
ಛಿಂದವಾರ ೨೫೬, ೨೫೭, ೨೫೮
ಛೋಗಾ ೫೧೦
ಜಂಝಾವಾತ ೭೩೬
ಜಕ್ ೫೬೮, ೫೭೦, ೫೭೧
ಜಖ್ಖೊ ೫೬೭
ಜಗನ್ನಾಥ ೬೪೨
ಜಜೀರುತ್ ೬೩೩
ಜಜೀರುಲ್ ೬೩೯, ೬೫೯
ಜತ್ ೫೭೪
ಜನಮೇಜಯ ೧೧೮
ಜನಾನ ೫೬೮
ಜಪಾನಿ ೪೯೮
ಜಬ್ಬಲ್ಪುರ ೨೫೬, ೨೫೭, ೩೯೧
ಜಮದಗ್ನಿ ೨೦೪, ೨೦೫
ಜಮಶಿದ್ ೧೦೨
ಜಮಾಅತ್ ೬೪೭, ೬೫೦, ೬೫೧
ಜಮಾಲಿ ೩೯೬
ಜಮೀಯತ್ ೬೧೫, ೬೪೯
ಜಮ್‌ಶಿದ್ ೧೦೨
ಜಯದ್ರಥ ೧೧೯
ಜಯಪಾಲ ೪೨೦
ಜಯರಾಮದಾಸ ೬೭೨
ಜರಾಸಂಧ ೧೨೦
ಜರೂಸಲಿಮ್ ೫೬೬
ಜರ್ಮನ್ ೬೨, ೯೭, ೪೦೧, ೪೭೩, ೪೭೪, ೪೯೪, ೪೯೭, ೫೪೯, ೫೬೮, ೫೬೯, ೫೭೦, ೫೭೨, ೫೭೫, ೫೭೬, ೬೨೩, ೬೨೮, ೭೧೯, ೭೨೦, ೭೨೨, ೭೨೩, ೭೨೫, ೭೨೬
ಜರ್ಮನಿ ೬೪, ೯೮, ೪೨೯, ೪೬೯, ೪೭೩, ೪೯೪, ೪೯೭, ೪೯೮, ೫೪೬, ೫೪೮, ೫೬೭, ೫೬೯, ೬೨೩, ೬೬೨
ಜರ್ವಿಡನ್ ೭೮
ಜಲಂದರ್ ೭೪೧
ಜಲಾಲಾಬಾದ್ ೪೧೫
ಜಲೇಯು ೧೧೮
ಜವಹರಲಾಲ್ ೬೪೪, ೬೯೦
ಜಸ್ಟಿನಿಯನ್ ೫೨
ಜಾಂಗ್ ೩೯೬
ಜಾಂಬುವುಲು ೨೫೧
ಜಾಗೀರ್‌ದಾರ ೫೫೬, ೮೦೨
ಜಾಟ್ ೩೦೦, ೪೪೪, ೫೭೩
ಜಾನ್ಸನ್ ೭೩೦, ೭೩೧
ಜಾನ್ಸನೀಯ ೭೩೦
ಜಾಬಾಲಿ ೯೧, ೧೮೨, ೧೮೩
ಜಾಮಾ ೪೨೨
ಜಾಮಿಯತ್ ೪೦೬, ೪೦೭
ಜಾರ್ ೪೬೯
ಜಾರ್ಜ್ ೪೩೧, ೪೫೬, ೭೬೪
ಜಾಲಿಯಾ ೨೫೮
ಜಾಸ್ ೫೫೬
ಜಿಕ್ ೫೭೪

ಜಿಕೊ ೫೭೧
ಜಿನ್ನಾ ೫೦೦, ೬೧೫, ೬೨೧, ೬೨೭, ೬೭೪, ೬೭೫, ೬೭೭, ೬೮೦, ೬೮೫, ೬೮೬, ೬೮೭, ೬೮೮, ೬೮೯, ೬೯೦, ೬೯೧, ೬೯೪, ೬೯೭, ೭೦೦, ೭೨೧, ೭೨೨, ೭೨೭, ೭೨೮, ೭೨೯, ೭೩೬, ೭೩೭, ೭೪೧, ೭೪೨, ೭೪೩, ೭೪೪, ೭೭೧, ೭೭೨, ೭೭೩, ೭೭೪, ೭೭೫, ೭೭೬, ೭೭೭, ೭೭೮
ಜಿಮ್ಸ್ ೬೭೩
ಜಿಯಾಉದ್ದಿನ್ ೪೪೮
ಜಿರ್ಗಾ ೫೩೦
ಜಿಸಿಯಾ ೪೨೬
ಜಿಹಾದ್ ೬೫೭, ೬೫೮, ೬೫೯
ಜೀವರಾಮ್ ೫೩೯
ಜೀಸಸ್ ೬೬೬
ಜುನಾಗಢ ೨೮೮
ಜೂನಿನಂದು ೧೮೯
ಜೆಂಡ್ ೧೦೨, ೧೦೩
ಜೆಕ್ ೪೦೧, ೪೭೮, ೫೬೯, ೫೭೦, ೫೭೧, ೫೭೨, ೫೭೪, ೫೭೫, ೫೭೬
ಜೆಕೊ ೫೭೪
ಜೆಕೊಸ್ಲೊವಾಕಿಯಾ ೪೭೩, ೪೯೭, ೫೦೩, ೫೪೬, ೫೬೩, ೫೬೭, ೫೬೮, ೫೬೯, ೫೭೦, ೫೭೧, ೫೭೨, ೫೭೩, ೫೭೪, ೫೭೫, ೫೭೬, ೬೬೯
ಜೆರೊಸಲೆಂ ೬೯೯
ಜೆಸಿಯಾ ೪೨೮
ಜೇಮ್ಸ್ ೫೪೯, ೫೫೦, ೬೬೪
ಜೇಸಸ್ ೬೬೫
ಜೇಸಸ್ಸನ ೬೬೭
ಜೇಹದ್ ೫೧೯
ಜೈಮಿನಿ ೧೦೭, ೧೭೮
ಜೊಲಹ ೫೮೬
ಜೊಲಾಥ ೫೮೬
ಜ್ಯಾಕನಾಹಕ್ಕಿ ೩೩೧
ಜ್ಯೂ ೬೩೮
ಜ಼ೆಂಡ್ ೧೦೨
ಝುಂಝೂವಾತ ೧೪೮
ಝುಂಟು ೧೩೨
ಝುಕ್ಕಕೆಲ್ ೫೨೯
ಝುರತುಷ್ಟ್ರ ೭೭, ೭೮, ೭೯
ಝೂರ್ ೫೭೬, ೫೭೭
ಝೂರ್‌ನಿಕೊಲಸ್ ೫೭೭
ಝೂಲೊ ೨೫೩, ೨೫೮
ಝೆಂಡ್ ೭೭
ಝೆಂಡ ೭೯
ಝೆಂಡಾ ೧೦೩
ಝೆಕ್ ೪೯೭
ಝೋಹಕ್ ೧೦೨
ಟರ್ಕ್ ೫೬೪, ೫೬೪, ೫೬೫, ೫೬೬, ೫೬೭, ೫೬೮, ೫೭೩, ೫೭೪, ೫೭೫, ೫೭೭
ಟರ್ಕಿ ೪೬೯, ೪೮೮, ೫೦೨, ೫೦೩, ೫೦೪, ೫೦೬, ೫೪೬, ೫೬೩, ೫೬೪, ೫೬೫, ೫೬೬, ೫೬೮, ೫೬೯, ೫೭೩, ೫೭೬, ೫೭೭, ೫೯೨, ೭೪೮
ಟರ್ಕಿಷ್ ೫೬೩, ೫೬೪, ೫೬೫, ೫೬೬, ೫೬೭, ೫೬೮, ೫೬೯, ೫೭೪, ೫೭೫
ಟಾಗೋರ್ ೩೯೩
ಟಾಡ್ ೨೯೧, ೨೯೨
ಟಾಯನ್ ೪೦೨
ಟಾಯನ್ಬೀ ೪೧೫
ಟಾರ್ಟರ್ ೪೧೯
ಟಾಲೋಗೋ ೨೭೬
ಟಿರೆಲ್ ೧೭೦
ಟಿಸೊ ೫೭೦, ೫೭೨
ಟೀಪು ೪೯೨

ಟುಲಿಯಸ್ ೫೫
ಟೆನೆಗ್ರೋ ೫೬೬
ಟೆಬ್ರಿಜೊಂಡ್ ೫೬೩
ಟೇಲರ್ ೬೪
ಟೈಟಸ್ ೪೨೦, ೪೨೨, ೪೨೪, ೪೨೫, ೪೨೬, ೬೫೭
ಟೊಪಿನಾರ್ಡ್ ೯೬
ಟೊಯನ್ ೫೭೩, ೫೭೭
ಟೊಯನ್‌ಬೀ ೫೭೩, ೫೭೫, ೫೭೭
ಟೋರಿ ೭೧೦
ಟ್ಯುಟಾನಿಕ್ ೬೧, ೬೪
ಟ್ಯೂನಿಸಿಯನ್ ೫೬೫
ಟ್ಯೂನಿಸ್ಸನ್ನು ೫೬೪
ಟ್ರಿಪೊಲಿ ೪೧೬, ೫೬೪, ೫೬೫
ಟ್ರಿಯನಾನ್ ೫೬೭
ಟ್ಯೂನಿಸ್ ೫೬೪
ಠಾಕೂರ್ ೬೩೬
ಡಗ್‌ಡೇಲ್ ೬೫೨
ಡಚ್ ೧೮೯, ೭೨೦, ೭೨೩, ೭೨೫, ೭೨೬
ಡನೂಬಿಯನ್ ೫೬೪
ಡಫರೀನ್ ೪೪೭, ೬೦೮
ಡಮಾಸ್ಕಸ್ ೫೬೬
ಡಮೋಕ್ಷೇಷಿಯನ್ ೫೫೦
ಡಯೋಕ್ಲೇಷಿಯನ್ ೫೫೧
ಡರ್ಕ್‌ಹೀಮ್ ೩೫೩
ಡರ್‌ಹಾಮ್ ೪೨೫
ಡಾಕಾ ೩೮೯
ಡಾಗಿ ೨೫೫
ಡಾನುಬೆ ೫೬೪
ಡಾಯಿಷ್ ೬೨೩
ಡಾಲ್‌ಹೌಸಿ ೩೮೮, ೪೩೮
ಡಿಯೇರಿ ೨೪೪
ಡಿಲಾಹೋಮ್ ೭೬೩
ಡಿಸ್ರೇಲಿ ೭೨೨
ಡುಗ್ಲಾ ೨೫೮
ಡೆನ್ನಿಸ್ ೭೦೦
ಡೆಹ್ರಾಡೂನ್ ೫೩೫
ಡೇವಿಸ್ ೪೩೧, ೪೩೨
ಡೊಂಬೊ ೨೫೨
ಡೊನೇಗಲ್ ೭೪೪
ಡೊಮಿನಿಯನ್ ೮೦೪, ೮೫೬
ಡೊಮೊನಿಯನ್ ೬೪೩
ಡೋಗ್ರಾ ೪೩೮, ೪೪೪
ಡೋಮ ೧೭೦, ೨೫೪, ೨೫೫, ೨೫೬, ೨೫೯
ಡೋಹರ ೨೫೬
ಡ್ಯುರಂಡ್ ೪೩೨
ಡ್ಯೂಕರು ೬೫೩
ತಂಜಾವೂರು ೧೭೧, ೩೧೧
ತಂಜೀಮ್ ೬೩೧
ತಕಬೀರ್ ೪೧೭
ತಕ್ತಿ ೫೨೩
ತಕ್ಷಪ ೨೦೦
ತಕ್ಷಿಲಾ ೪೧೫
ತನ್ಜಿಮ್ ೬೦೩
ತನ್ಯಾಸೀದ್ರ ೧೩೦
ತಪಸ್ ೯೦
ತಬಖತ್ ೪೨೦
ತಮಿಳುನಾಡು ೩೯೧
ತರ್ಕರು ೫೦೫
ತರ್ಕವಾಗೀಶ ೨೯೪
ತರ್ಕಸ್ಥಾನ್ ೬೬೨
ತಲಾಕ್ ೫೮೩
ತಾಂಡ್ಯ ೧೦೪
ತಾಖಾ ೨೯೧
ತಾಖ್ಯ ೨೯೧, ೨೯೨
ತಾಜಿಕ್ ೯೬

ತಾಝಿಯಾ ೫೩೪
ತಾಪನೆರ್ ೯೬
ತಾರ್ದೆ ೩೩೩
ತಿಬೆನ್ನಾಯ್ ೬೨೩
ತಿಬ್ದಿ ೬೬೫
ತಿಮಲಿ ೨೫೩
ತಿಯಾರ ೨೫೪
ತಿಯ್ಯನ್ ೨೯೮
ತಿರುಚಂದೂರು ೫೩೩
ತಿರುವಳ್ಳುವರ್ ೨೫೨
ತಿರುವಾಂಕೂರು ೨೯೦, ೨೯೮
ತಿರ್‌ಹಟ್ ೨೫೫
ತಿಲಕ್ ೬೫, ೬೬, ೬೭, ೬೮, ೧೬೬, ೧೬೭, ೨೯೧, ೫೯೫, ೬೩೭
ತಿಷ್ಟುಪ್ ೨೪
ತಿಷ್ಯ ೩೩೦
ತೀರ್ಥಂಕರು ೩೪೮
ತುನ್‌ತಿಯಾ ೫೮೬
ತುರೇನಿಯನ್ನರು ೬೨
ತುರ್ಯೆಹ ೨೫೪
ತುರ್ಕ ೪೯೨, ೪೯೪, ೫೦೪, ೫೦೫, ೫೦೬, ೫೧೩, ೫೭೩, ೬೯೨
ತುರ್ಕಿ ೪೦೧, ೪೭೮, ೫೦೪, ೫೦೫, ೫೦೭, ೫೦೮, ೫೦೯, ೫೧೧, ೫೧೨, ೫೧೩, ೫೨೦, ೫೬೮, ೫೭೩, ೫೭೪, ೫೭೭, ೬೩೨, ೬೩೪, ೬೩೫, ೬೯೮
ತುರ್ಕಿಸ್ತಾನ ೪೯೪, ೫೭೪, ೬೬೧
ತುರ್ವಶ ೧೨೪, ೧೨೬
ತುರ್ವಸ ೨೧, ೧೨೨, ೧೨೯
ತೃತ್ಸು ೧೨೩, ೧೨೪, ೧೨೫, ೧೨೬, ೧೨೯, ೧೩೦, ೧೩೧
ತೆನಸ್ಸೆರಿಮ್ ೪೩೦
ತೇಷಾಂ ೧೩೦
ತೈತ್ತಿರೀಯ ೨೯, ೩೨, ೮೧, ೮೪, ೯೯, ೧೩೫, ೧೩೮, ೧೩೯, ೧೪೧, ೨೧೬, ೩೨೩
ತೈತ್ತಿರೀಯಸಂಹಿತೆ ೧೫೫
ತೈತ್ತಿರೀಯಾರಣ್ಯಕ ೮೬
ತೈಮೂರ್ ೪೧೭, ೪೧೮, ೪೧೯, ೪೨೪
ತೊಂಗ ೨೪೩
ತೊಂಗದೇಶ ೨೪೫
ತೌರ್ವಸ ೨೧೨
ತ್ರಯ್ಯಾರುಣ ೧೧೯
ತ್ರಸದಸ್ಯು ೧೨೪, ೧೨೮
ತ್ರಿತ್ಸು ೧೨೩, ೨೦೧
ತ್ರಿವೃತ ೨೪, ೩೦
ತ್ರಿವೇದ ೬೯
ತ್ರಿಶಂಕು ೧೪೩, ೧೪೪, ೧೫೩, ೧೫೪
ತ್ರಿಶಿರ ೧೨೭, ೨೦೦
ತ್ರಿಷ್ಟುಪ್ ೩೦, ೩೫
ತ್ವಷ್ಟ ೨೮
ತ್ವಷ್ಟ್ರೀಯ ೧೨೭
ತ್ವೇಷ ೫೩೮, ೫೪೨
ತ್ವೇಷಮಯ ೫೨೬
ತ್ಸಾಂಗ್ ೨೯೧, ೩೮೦
ಥಕ್ರಾಯ್ ೫೮೬
ಥರ್ಮಿನೆಲಿಯಾ ೨೪೬
ಥರ್ಸ್ಟನ್ ೨೯೭
ಥಾಮಸ್ ೩೪೮
ಥಿಯೇಡರ್ ೪೩೯
ಥಿಯೋಡರ್ ೪೫೮
ಥೇಶಾಯ್ ೭೮
ಥೋಟಿ ೨೫೨
ಥ್ರಾಸ್ ೫೬೩, ೫೬೬
ದಕ್ಷ ೧೭, ೯೦, ೯೧, ೯೨, ೧೯೭
ದಖ್ಖನ್ ೪೪೫
ದಖ್ಖನಿ ೪೪೫

ದತ್ತಾತ್ರೇಯ ೨೦೩
ದಧೀಚಿ ೧೦೦, ೨೦೦
ದಫಲಿ ೫೮೬
ದಯಾನಂದಜೀ ೪೯೫
ದಯಾಲ ೧೭೦
ದಶರಥ ೭೬
ದಶರಾಜ ೧೨೩, ೧೨೪, ೧೨೯, ೧೫೫
ದಶರಾಜ್ಞಯುದ್ಧ ೧೨೩
ದಶಹೋತ್ರಿ ೮೫
ದಾಕ್ಷಾಯಣಿ ೧೯೭
ದಾಕ್ಷಾಯಿಣಿ ೯೧
ದಾತಾನ್ ೨೮೨
ದಾನವೇಶ್ವರ ೧೦೨, ೧೫೨
ದಾಮಾಷಾ ೮೦೮, ೮೧೦, ೮೩೧, ೮೪೮, ೮೪೯, ೮೫೩, ೮೫೭
ದಾಸ್ ೧೭೨, ೩೭೩, ೫೨೦, ೬೩೫, ೬೩೭, ೬೪೩, ೬೭೧
ದಾಸ ೫೮, ೬೯, ೭೦, ೭೧, ೭೨, ೭೩, ೭೪, ೭೭, ೭೯, ೮೦, ೯೭, ೯೯, ೧೦೦, ೧೦೩, ೧೦೪, ೧೧೦, ೧೨೧, ೧೪೬, ೨೫೨, ೨೮೪, ೨೮೫, ೨೯೬, ೩೦೧, ೩೦೨, ೩೦೩, ೩೨೭
ದಾಸಿ ೧೪೫
ದಿಗ್‌ಬೋಯ್ ೫೩೪
ದಿನಾಜಪುರ ೩೮೯
ದಿಯಾಲ್ ೩೯೬
ದಿಲೀಪ ೧೧೮
ದಿಲ್ಲಿ ೫೦೬, ೫೦೮, ೬೪೯, ೬೫೦, ೬೬೧, ೬೬೫, ೬೭೧, ೬೭೨, ೬೭೩, ೬೭೪, ೬೮೭
ದಿವೋದಾಸ ೧೦೪, ೧೧೭, ೧೧೯, ೧೨೦, ೧೨೧, ೧೨೨, ೧೨೭, ೧೨೯, ೨೦೦
ದಿಶಮ್ ೩೬೫
ದೀಕ್ಷಿತ ೩೪೨
ದೀಕ್ಷಿತರ್ ೨೮೯
ದೀರ್ಘತಮಸ್ ೭೬, ೯೪
ದುಬ್ಬಾ ೩೧೦
ದುಮ್ನಾ ೨೫೫
ದುರ್ಗೆ ೨೫೬, ೨೫೭, ೩೭೮
ದುರ್ಹ್ಯು ೧೨೯
ದುಷ್ಯಂತ ೧೧೮, ೧೩೦
ದುಸಧ ೨೫೫
ದೃಢಧನುಷ್ ೧೧೯
ದೃಢನೇಮಿ ೧೧೯
ದೃಹ್ಯು ೧೨೫
ದೆಬುಲ್ ೪೧೯
ದೆಹಲಿ ೩೯೧, ೪೨೨, ೪೨೮, ೪೩೪, ೪೪೫, ೪೫೧, ೪೬೮, ೫೧೫, ೫೨೦, ೫೨೧, ೫೨೪, ೫೨೭, ೫೨೮, ೫೩೬, ೫೫೮, ೭೦೨
ದೇಬುಲ್ ೪೧೭
ದೇರಾ ೩೮೮, ೭೦೧
ದೇವಕ ೧೨೬
ದೇವಗಿರಿ ೨೮೬
ದೇವಯಾನ ೧೯
ದೇವರತ ೨೦೦
ದೇವರಾಜ ೨೦೦
ದೇವವಾತ ೧೨೦
ದೇವವ್ರತ ೧೧೭
ದೇವೆಂದ್ರ ೨೫೨
ದೇಶಮುಖ್ ೪೫೧
ದೊಬ್ರುದ್ವಾ ೫೬೪
ದೋಂಗ್ರಿ ೭೭೨
ದೋಆಬ್ ೪೩೭
ದೋಭಾ ೨೫೮
ದೋಮ್ ೨೫೩, ೨೯೭
ದೋಯಿ ೨೫೩
ದೌಷ್ಯಂತೀ ೧೩೦
ದ್ಯಾವಾಪೃಥಿವೀ ೨೮೫

ದ್ರಾವಿಡ ೯೫, ೨೮೧, ೨೮೨, ೨೮೩, ೨೮೪, ೨೮೯, ೨೯೦, ೨೯೧, ೨೯೨, ೨೯೩, ೨೯೪, ೨೯೫, ೨೯೬, ೨೯೮, ೩೦೦, ೩೦೧
ದ್ರಾವಿಡಪೂರ್ವ ೨೯೬
ದ್ರಾವಿಡೇತರ ೨೮೩
ದ್ರುಹ್ಯು ೨೧, ೧೨೫, ೧೨೬
ದ್ವಾತ್ರಿಮ ೨೮೭
ದ್ವಿಮಿಢ ೧೧೯
ದ್ವೈತ ೭೦೮
ಧತ್ತಾ ೪೨೩
ಧನಬಾದ್ ೨೫೫, ೫೩೪
ಧಾರವಾಡ ೩೯೧
ಧುನಿಯಾ ೫೮೬
ಧುಪಿ ೨೫೮
ಧುಮ ೫೮೬
ಧೃತಿಮತ್ ೧೧೯
ಧೃಷ್ಟದ್ಯುಮ್ನ ೧೨೦
ಧೃಷ್ಣು ೧೯೭
ಧೃಹ್ಯು ೧೨೪
ಧೆಸ್ಸಿಲಿ ೫೬೪
ಧೋಬಾ ೨೫೩
ಧೋಮ ೨೫೪
ಧೋಲಿ ೨೫೮
ಧ್ರುವ ೬೭
ಧ್ರುವಸೇನ ೨೮೮
ಧ್ವಂಶ ೨೦೪
ನಂದನ ೧೦೮
ನಗರ್ಚಿ ೨೫೭
ನಜೀಬಾಬ ೬೬೮
ನತ್ ೨೫೪, ೫೮೬
ನದಿರ್ ೪೮೫
ನಭ ೮೬
ನಭಗ ೯೨, ೯೩, ೧೧೮, ೧೯೭
ನಭಗೌಶ್ಲ ೧೯೭
ನಭಾಗ ೯೧
ನಭೋಮಂಡಲ ೧೪೪
ನಮಸುದ್ರ ೨೫೪
ನರಸಿಂಗಪುರ ೨೫೭
ನರಿಷ್ಯಂತ ೯೧, ೯೨
ನರ್ಮದಾ ೨೮೯
ನಹುಶ ೧೯೭
ನಹುಷ ೨೧, ೯೩, ೧೫೮, ೧೫೯, ೧೬೦, ೧೬೧, ೨೦೧
ನಳ ೧೧೮
ನಳಿನಿ ೧೧೯
ನಾಕಪುರ ೪೯೭
ನಾಗಕುಲ ೨೮೬, ೨೮೭
ನಾಗದೇವತೆ ೨೮೫, ೨೯೦, ೨೯೧
ನಾಗದ್ವೀಪ ೨೯೦
ನಾಗನಾಡ ೨೯೦
ನಾಗಪುರ ೨೫೬, ೨೫೭, ೨೫೮, ೩೯೧, ೫೧೯, ೫೨೪, ೫೨೮, ೫೩೩, ೬೩೮
ನಾಗಪೂಜೆ ೨೯೦, ೨೯೨
ನಾಗಭಟ್ಟ ೨೮೮
ನಾಗರ್ ೫೮೬
ನಾಗರಕೋಯಿಲ್ ೨೯೦
ನಾಗರಲಿಪಿ ೪೯೫
ನಾಗರಿ ೨೮೫, ೨೮೭, ೨೯೨, ೨೯೫, ೪೯೪, ೪೯೫
ನಾಗರು ೨೮೫, ೨೮೭, ೨೮೮, ೨೮೯, ೨೯೩, ೨೯೪, ೨೯೮
ನಾಗರ್ಚಿ ೨೫೯
ನಾಗವಂಶಿ ೨೮೯
ನಾಗಸೇನ ೨೮೮
ನಾಗಾತ್ತರ ೨೮೯
ನಾಗಾರಾಧನೆ ೨೯೨

ನಾಗೇಸಿಯ ೨೫೪
ನಾಜಿ ೪೬೯
ನಾಥನ್ ೭೨೦
ನಾಥುರ್ ೫೧೬, ೫೩೮
ನಾದಿರ್ ೪೧೯
ನಾದಿರ್‌ಷಹ ೪೧೭, ೪೨೮
ನಾನಕ್ ೫೧೫
ನಾನ್ಯ ೧೦೮
ನಾಮಸುದ್ರಾ ೨೫೮
ನಾಯರ್ ೨೯೧, ೨೯೮
ನಾಯ್ಡು ೫೪೫
ನಾರದ ೯೧, ೧೦೮, ೧೨೨, ೧೨೩, ೨೬೨, ೩೦೧, ೩೭೩
ನಾರದಸ್ಮೃತಿ ೪೭, ೩೦೨, ೩೭೩
ನಾರಾಯಣ ೧೩೦, ೧೭೦, ೩೭೭, ೪೪೯
ನಾರಾಯಣಲಾಲ್ ೭೬೨
ನಾರ್ಡಿಕ ೯೭
ನಾರ್ತ್ ೩೮೮, ೪೩೧, ೬೬೨
ನಾರ್ಮನ್ ೫೭೨
ನಾರ್ವೆ ೭೩೪
ನಿಕಾರಿ ೫೮೬
ನಿಕೋಮಿಡಿಯಾ ೫೫೧
ನಿಕೋಲಸ್ ೫೭೬
ನಿಜಾಮ್ ೫೨೪, ೫೫೭, ೬೬೨, ೬೬೭
ನಿಲ್ಫಾಮಾರಿ ೫೩೩
ನಿಶದ ೨೦೮, ೨೦೯
ನೀಥೂರಾಮಲ್ ೫೧೬
ನೀಪ ೧೧೯
ನೀಲ ೧೧೯
ನೀಲಕಂಠ ೧೧೦, ೩೧೨
ನೀಲಮಣಿ ೩೭೭
ನೃಗ ೯೨
ನೃಪಂಜಯ ೧೧೯
ನೆಜ್ದ್ ೫೬೬
ನೆಹರೂ ೫೦೮, ೫೨೦, ೬೨೧, ೬೩೭, ೬೪೪, ೬೪೫, ೬೪೬, ೬೪೭, ೬೪೮, ೬೪೯, ೬೭೨, ೬೭೩, ೬೭೪, ೬೭೫, ೬೯೦, ೬೯೧
ನೇಪಾಳ ೨೯೧, ೨೯೩, ೪೩೮, ೪೩೯, ೪೮೫
ನೇವಾರ ೨೯೧
ನೇವಿಯ ೪೪೭
ನೇಶ್ತರ ೩೪೦
ನೇಷ್ಟ್ರಿ ೨೫
ನೈಗೇಯ ೧೩೭
ನೈರಾಂಗ್ ೬೦೦
ನೈರೀತ ೯೦
ನೌಶ್ಯಾತ ೧೯೭
ನ್ಯೂಝಿಲೆಂಡ್ ೨೪೫
ಪಂಚದಶ ೩೦
ಪಂಚದಶಸ್ತೋಮ ೨೪
ಪಂಚಮಹಲ್ ೨೫೩
ಪಂಚವಿಂಶ ೩೪, ೧೧೧
ಪಂಚಶಾರದೀಯ ೩೨೩
ಪಂಚಾಲ ೧೮೨, ೧೯೪
ಪಂಜಾಬ್ ೨೫೫, ೩೮೬, ೩೮೭, ೩೮೮, ೩೯೧, ೩೯೫, ೩೯೬, ೪೧೫, ೪೧೬, ೪೧೭, ೪೩೩, ೪೩೪, ೪೩೫, ೪೩೬, ೪೩೮, ೪೩೯, ೪೪೩, ೪೪೪, ೪೪೫, ೪೪೮, ೪೫೦, ೪೫೩, ೪೫೬, ೪೫೯, ೪೬೦, ೪೬೨, ೪೬೬, ೪೬೭, ೪೬೮, ೪೭೦, ೪೭೧, ೪೭೩, ೪೭೪, ೪೭೭, ೪೭೯, ೪೮೧, ೫೨೪, ೫೨೭, ೫೨೮, ೫೩೨, ೫೩೫, ೫೩೬, ೫೩೭, ೬೧೧, ೬೧೨, ೬೧೬, ೬೧೭, ೬೧೮, ೬೧೯, ೬೨೫, ೬೨೬, ೬೩೭, ೬೩೮, ೬೭೪, ೬೭೫, ೬೮೯, ೬೯೧, ೬೯೪, ೭೩೭, ೭೪೦, ೭೪೧, ೭೪೨, ೭೪೪, ೭೪೫, ೭೫೨, ೭೫೭, ೭೬೩, ೭೭೭, ೮೦೯, ೮೩೪
ಪಗೆಟ್ ೭೬೫

ಪಟಲ ೫೭೩, ೫೯೫
ಪಟೇಲ್ ೬೪೫
ಪಟೇಲ ೬೯೦
ಪಟ್ನಿ ೨೫೮
ಪಠಾಣ ೪೪೩, ೪೫೬, ೫೮೫, ೭೦೨
ಪಣಿಯನ್ ೨೫೧
ಪಣೊ ೨೫೯
ಪತಂಜಲಿ ೧೦೧
ಪದ್ಮಪತ್ರ ೮೬
ಪದ್ಮಪುರಾಣ ೧೬೮
ಪದ್ಮಾವತಿ ೨೮೭
ಪನೊ ೨೫೨
ಪನ್ನಿಯಂಡಿ ೨೫೧
ಪನ್ವಾರಿ ೫೮೬
ಪಮನ್ ೫೪೧
ಪಮನಮಲ್ ೫೪೧
ಪಮಿದಿ ೨೫೯
ಪರಮಾನಂದ್ ೪೦೦
ಪರಮೇಷ್ಠಿ ೨೯, ೮೬
ಪರಯ್ಯಾ ೨೫೧, ೨೮೧, ೨೮೨, ೨೯೭, ೨೯೮, ೩೧೦, ೩೧೧
ಪರಶುರಾಮ ೧೬೯, ೨೦೩, ೨೦೪, ೨೦೭
ಪರಾಶರ ೧೧೭, ೧೮೧, ೧೮೨, ೨೦೬, ೨೦೮
ಪರಿಧ್ರುವ ೬೬, ೬೭
ಪರುಷ್ಣಿ ೧೨೫
ಪರುಷ್ಣಿನದಿ ೧೨೪
ಪರ್ಧಿ ೨೫೭
ಪರ್ವನ್ ೨೫೧
ಪರ್ವನಸ್ಥಳೀಪಾಕ ೧೭೮
ಪರ್ಷಿಯನ್ ೧೦೨, ೧೦೩, ೪೧೧, ೪೮೫, ೫೬೬
ಪರ್ಷಿಯಾ ೬೩೪, ೬೬೧, ೬೬೨, ೭೦೧
ಪಲಾಶ ೧೯೪, ೩೩೫
ಪಲಿಯ ೨೫೩
ಪಲ್ಲನ್ ೨೫೧, ೩೧೧
ಪಲ್ಲೈ ೨೯೮
ಪಶ್ಚಿಮಬಂಗಾಳ ೩೮೯
ಪಸೇನದಿ ೨೧೫, ೩೨೭
ಪಹ್ಲವಿ ೭೮
ಪಳಮಾವು ೨೫೫
ಪಾಂಚಾಲ ೧೧೯, ೨೧೨, ೨೯೭
ಪಾಂಚಾಲ್ಯ ೨೦೧
ಪಾಂಡ್ಯ ೨೯೦, ೨೯೩, ೨೯೪
ಪಾಕಸ್ತಾನ ೪೩೨, ೪೭೦, ೪೮೮
ಪಾಕಿಸ್ತಾನ ೩೮೭, ೩೮೮, ೩೮೯, ೩೯೦, ೩೯೨, ೩೯೩, ೪೧೫, ೪೨೮, ೪೩೦, ೪೩೧, ೪೩೩, ೪೩೪, ೪೩೫, ೪೩೬, ೪೪೧, ೪೫೯, ೪೬೦, ೪೬೧, ೪೬೨, ೪೬೯, ೪೭೦, ೪೭೧, ೪೭೩, ೪೭೪, ೪೭೫, ೪೭೬, ೪೭೭, ೪೭೮, ೪೭೯, ೪೮೧, ೪೮೫, ೪೮೬, ೫೦೦, ೫೦೧, ೫೫೩, ೫೫೪, ೫೫೫, ೫೫೮, ೫೫೯, ೫೬೦, ೫೬೨, ೫೬೩, ೫೭೫, ೫೭೭, ೫೭೮, ೫೭೯, ೬೦೫, ೬೨೯, ೬೮೦, ೬೯೧, ೬೯೨, ೬೯೪, ೬೯೫, ೬೯೯, ೭೦೦, ೭೦೨, ೭೦೩, ೭೦೪, ೭೦೫, ೭೦೭, ೭೦೮, ೭೦೯, ೭೧೦, ೭೧೧, ೭೧೩, ೭೧೫, ೭೧೬, ೭೨೧, ೭೨೩, ೭೨೪, ೭೨೬, ೭೨೯, ೭೩೦, ೭೩೧, ೭೩೨, ೭೩೩, ೭೩೫, ೭೩೬, ೭೩೭, ೭೩೮, ೭೪೦, ೭೪೧, ೭೪೨, ೭೪೩, ೭೪೪, ೭೪೫, ೭೪೬, ೭೫೦, ೭೫೧, ೭೫೨, ೭೫೩, ೭೫೪, ೭೫೫, ೭೫೬, ೭೫೭, ೭೫೮, ೭೫೯, ೭೬೧, ೭೬೨, ೭೬೩, ೭೬೭, ೭೬೯, ೭೭೦, ೭೭೧, ೭೭೫, ೭೭೬, ೭೭೭, ೭೭೮
ಪಾಟ್ನಾ ೧೭೨, ೨೫೫, ೩೯೧, ೭೨೮
ಪಾಣಿನಿ ೬೨
ಪಾಣಿಪತ್ ೪೧೭, ೫೩೯, ೬೬೮
ಪಾತರಿ ೨೫೪

ಪಾನಿಪತ್ ೬೬೮
ಪಾನೋಆಕಿಲ್ ೫೪೦
ಪಾಪ್ಮಾಸಿಣಿ ೩೬೫
ಪಾಬ್ನಾ ೩೮೯
ಪಾಮಿಡಿ ೨೫೧
ಪಾಮಿರ್ ೯೬
ಪಾರಮಾರ ೧೮೮, ೨೮೬, ೨೮೯
ಪಾರ್ಟೀಜ್ ೬೧೫
ಪಾರ್ಸಿ ೭೮, ೪೯೩, ೪೯೯, ೫೯೮, ೬೦೦, ೬೩೪, ೬೩೮
ಪಾವರ್ ೬೬೧
ಪಾಷ ೫೬೬
ಪಾಷಾ ೬೪೧
ಪಾಳ್ಮೆ ೧೮೨
ಪಿಂಗಳೆ ೧೮೩, ೧೯೦
ಪಿಜವನ ೧೧೬, ೧೨೦, ೧೨೧, ೧೨೭, ೨೦೦
ಪಿಪ್ರು ೧೦೦
ಪಿಪ್ಸೆರಾ ೩೮೯
ಪಿರಲಿ ೫೮೬
ಪಿರುನಂಗ್ಡಿ ೫೨೩
ಪೀಜವನ ೧೧೭, ೧೨೧, ೧೨೩, ೧೬೧
ಪೀಟರ್ಸ್‌ಬರ್ಗ್ ೫೭೬
ಪೀರ್ ೩೯೭
ಪೀರರ್ ೩೯೬
ಪೀಲ್ ೪೫೪, ೪೫೫, ೭೬೬
ಪುಂಜ ೭೬೬
ಪುಂಸವನ ೧೭೭
ಪುಥಿರೈವನನ್ ೨೫೧
ಪುರ್ ೫೪೦
ಪುರ ೧೧೫
ಪುರಂಜನು ೧೧೯
ಪುರು ೨೧, ೧೧೮, ೧೨೦, ೧೨೪, ೧೨೬, ೧೨೭, ೧೨೮, ೧೨೯, ೨೦೨, ೨೫೫
ಪುರುಕುತ್ಸ ೧೨೪, ೧೨೭, ೧೨೮, ೨೦೦
ಪುರುಮಿಢ ೧೧೯
ಪುರುಷಸೂಕ್ತ ೧೫, ೧೬, ೨೧, ೨೬, ೨೮, ೨೯, ೩೦, ೧೩೪, ೧೩೬, ೧೩೭, ೧೩೮, ೧೩೯, ೧೪೦, ೧೪೧, ೨೧೭
ಪುರುಷೋತ್ತಮ ೨೫, ೧೧೭
ಪುರೂರವ ೯೧, ೯೩, ೧೫೨, ೧೫೭, ೧೫೮, ೧೯೭, ೨೦೦, ೨೦೧
ಪುಲಯನ್ ೨೫೧
ಪುಲಸ್ತ್ಯ ೯೦, ೯೨
ಪುಲಹ ೯೦, ೯೨
ಪುಲಿ ೩೭೨
ಪುಲುಮಾವಿ ೨೮೭
ಪುಶಾನ ೧೬೩
ಪುಷ್ಕರ ೧೪೮, ೩೧೬, ೩೭೩
ಪುಷ್ಕರಿನ್ ೧೧೯
ಪುಷ್ಪವತ್ ೧೨೦
ಪುಷ್ಪವತ ೧೨೦
ಪುಷ್ಯಮಿತ್ರ ೩೭೩, ೩೭೪
ಪೂಂಜ್ ೪೧೫
ಪೂನಾ ೪೫೧, ೫೩೯
ಪೂರಿಟಾನ್ ೭೧೭
ಪೂರ್ನಿಯ ೨೫೫
ಪೂರ್‌ಬಿಯಾ ೪೫೪
ಪೂರ್ವಆಫ್ರಿಕೆ ೨೪೨
ಪೂರ್ವಪಾಕಿಸ್ತಾನ ೪೩೪
ಪೂರ್ವಬಂಗಾಳ ೩೮೯, ೪೭೪
ಪೂರ್ವರುಮೇನಿಯಾ ೫೬೪
ಪೂಲ್ ೫೬೪
ಪೂಲೆ ೪೨೧, ೪೨೬
ಪೂಶನ್ ೩೧
ಪೂಷನ್ ೨೯, ೮೭, ೩೨೩
ಪೃಥುಸೇನ ೧೧೯

ಪೃಥ್ವಿ ೨೮, ೧೨೨, ೧೨೩, ೧೨೪, ೧೨೫, ೧೨೭, ೧೨೮, ೧೩೫, ೧೪೮, ೨೦೭, ೩೨೧, ೬೩೨
ಪೃಥ್ವಿರಾಜ ೪೦೦
ಪೃಶತ ೧೨೦
ಪೃಶದಶ್ವ ೨೦೦
ಪೃಶಾಧ್ರ ೯೧, ೯೨, ೯೩, ೧೯೭
ಪೆಟ್ರಿಯಾ ೬೯
ಪೆನಲ್ ೬೫೫
ಪೆರ್ನ ೨೫೫
ಪೆಲ್ಲಾ ೪೧೬
ಪೆವಿಲಿಯನ್ ೭೭೮
ಪೆಶ್‌ಕರಿ ೫೫೬
ಪೆಷಾವರ್ ೩೮೮, ೩೯೧, ೪೧೫, ೫೨೯, ೫೩೦, ೫೩೬, ೭೦೧
ಪೆಷ್ಟಿಯಾಡ್ಯನ್ ೧೦೨
ಪೇಶ್ವೆ ೧೯೨, ೪೯೨
ಪೈಂಡ ೨೫೧, ೨೫೯
ಪೈಗಂಬರ್ ೫೨೯
ಪೈಗಂಬರ ೫೨೯, ೫೩೩, ೫೩೭, ೫೩೮
ಪೈಗಾಸ್ ೫೫೬
ಪೈಜವ ೧೧೨, ೧೧೪, ೧೧೫, ೧೧೬, ೧೧೭, ೧೨೦, ೧೨೧, ೧೨೮, ೨೧೪, ೨೧೫, ೨೧೬
ಪೈಡಿ ೨೫೧
ಪೈದಿ ೨೫೯
ಪೊಲಕ್ ೬೪೭
ಪೋತಾರ ೩೪೦
ಪೋತ್ರಿಯ ೨೫
ಪೋಪ್ ೧೪೦, ೪೧೯
ಪೋರಿಕಲ್ ೫೩೫
ಪೋರ್ಚುಗಲ್ ೪೯೮, ೭೩೪
ಪೋರ್ಡ್ ೭೦೨
ಪೋಲೆಂಡ್ ೪೯೩, ೪೯೭, ೫೦೫, ೭೭೧
ಪೌಂಜಲಕ ೧೧೪
ಪೌತ್ವ ೪೯೬
ಪೌರ್ವ ೧೬೬
ಪೌರ್ವ ೧೨೯
ಪೌಲ್ಕಸ ೩೭೧
ಪೌಷ್ಣ ೩೨೪
ಪ್ಯಾರಿಸ್ ೭೭೨
ಪ್ಯಾಲಸ್ಟೈನ್ ೪೭೭, ೪೭೮, ೪೯೨, ೪೯೩, ೫೬೪, ೫೬೬, ೭೩೮, ೭೬೬
ಪ್ಯೂನಿಕ್ ೨೪೬
ಪ್ರಚಿನ್ವತ್ ೧೧೮
ಪ್ರಣೀತಾ ೩೨೬
ಪ್ರತರ್ದನ ೧೨೭, ೨೦೦, ೨೦೪
ಪ್ರತಾಪ್ ೪೦೦, ೪೯೨
ಪ್ರತಾಪಸಿಂಹ ೧೯೨, ೧೯೩, ೧೯೪
ಪ್ರಸ್ತೋತರ ೩೪೦
ಪ್ರಸ್ತೋತ್ರಿ ೨೫
ಪ್ರಾಗ್ ೫೭೦, ೫೭೨
ಪ್ರಾಚೇತನ ೯೨
ಪ್ರಾಚೇತಸ ೯೦
ಪ್ರೋ ೧೩೭
ಪ್ಲಂಕೆಟ್ ೭೬೧
ಪ್ಲೀಸ್ಟೋಸೀನ್ ೬೭
ಪ್ಲೆಟೂ ೫೩೮
ಪ್ಲೇಟೋ ೧೬
ಫಕೀರ್ ೫೧೯, ೫೮೬
ಫಜ್ಲುಲ್ ೪೬೮, ೭೭೩
ಫತ್ವಾ ೬೬೫
ಫರಿದಪುರ ೩೮೯
ಫಸಿ ೪೧೫
ಫಾರಸಿ ೬೬೧
ಫಾಸ್ಟರ್ ೭೪
ಫಾಹಿಯಾನ್ ೩೭೫, ೩೭೯, ೩೮೦
ಫಿಜಿ ೨೪೫

ಫಿನ್ನರು ೭೩೪
ಫಿರೋಜಾಬಾದ್ ೫೩೯
ಫಿರೋಜ್‌ಷಾ ೪೨೨, ೪೨೪
ಫೂತುಹತ್ ೪೨೨
ಫೆಗೊಸ್ ೬೪
ಫೆನಲಾ ೪೦೪
ಫೆಲಾನ್ ೬೬೬
ಫೇಗ್ ೬೪
ಫೊಗಾಟ ೨೯೭
ಫೋರ್ಡ್ ೬೧೧, ೬೧೨, ೬೨೪, ೭೨೭
ಫ್ಯೂಧಿರ ೨೭೫, ೨೭೬, ೨೭೭
ಫ್ಯೂರರು ೨೭೬
ಫ್ರವರ ೭೯
ಫ್ರಾಂಕ್ ೨೬೭
ಫ್ರಾಂಟಿಯರ್ ೪೩೧
ಫ್ರಾನ್ಸ್ ೭೫, ೨೬೭, ೪೦೦, ೪೦೧, ೪೨೯, ೪೯೮, ೫೪೬, ೫೬೪, ೫೬೫, ೫೬೭, ೭೭೨
ಫ್ರೆಂಚ್ ೨೬೭, ೩೩೩, ೩೭೪, ೪೦೧, ೪೦೨, ೪೦೩, ೪೦೪, ೪೨೯, ೫೬೪, ೭೧೭, ೭೧೮, ೭೧೯, ೭೨೦, ೭೨೨, ೭೨೩, ೭೨೫, ೭೨೬, ೭೬೩
ಫ್ರೆಂಚೈಸ್ ೮೩೨, ೮೩೪
ಫ್ರೆಡರಿಕ್ ೪೪೧, ೪೫೫
ಬಂಗಾಲ್ ೬೧೮, ೬೭೧
ಬಂಗಾಳ ೧೧೩, ೧೬೯, ೧೭೦, ೨೫೩, ೨೮೮, ೨೯೭, ೩೮೬, ೩೮೭, ೩೮೯, ೩೯೦, ೩೯೧, ೩೯೩, ೩೯೫, ೩೯೬, ೪೩೩, ೪೩೪, ೪೩೫, ೪೩೬, ೪೩೭, ೪೪೧, ೪೫೩, ೪೫೪, ೪೫೫, ೪೬೧, ೪೬೨, ೪೬೬, ೪೬೭, ೪೬೮, ೪೬೯, ೪೭೧, ೪೭೩, ೪೭೪, ೪೭೫, ೪೭೭, ೪೭೯, ೪೮೦, ೪೮೧, ೪೮೨, ೪೯೪, ೫೧೫, ೫೨೪, ೫೨೭, ೫೨೮, ೫೩೩, ೫೩೪, ೫೩೬, ೫೪೩, ೫೪೪, ೬೧೭, ೬೧೯, ೬೨೪, ೬೨೫, ೬೭೧, ೬೭೪, ೬೭೫, ೬೮೧, ೬೮೯, ೭೩೭, ೭೪೦, ೭೪೨, ೭೪೪, ೭೪೫, ೭೫೨, ೭೫೭, ೭೬೩, ೭೭೩, ೭೭೭, ೮೦೭, ೮೧೩, ೮೧೪, ೮೩೨, ೮೩೪
ಬಂಗಾಳಿ ೧೧೩, ೧೭೦, ೪೩೭, ೪೪೬, ೫೪೭
ಬಂಸ್ಪೋರ ೨೫೪
ಬಕುಡ ೨೫೧
ಬಕೊ ೫೮೬
ಬಕ್ರೀದ್ ೫೩೧, ೫೩೪, ೫೩೬
ಬಕ್ಷ್ ೫೪೧
ಬಗರ್ಜಿ ೫೪೧
ಬಜಗಿ ೨೫೪
ಬಜನಿಯ ೨೫೪
ಬಝಿಗ ೨೫೫
ಬಟಾಮ್ ೫೬೪
ಬಟ್ಟಡ ೨೫೧
ಬಥೊಂಗಾ ೨೪೩
ಬದರಿ ೮೮, ೪೪೬
ಬನಸ್ಪೋರ ೨೫೮
ಬನಾರಸ್ ೧೬೯, ೧೭೧, ೫೦೮, ೫೩೩, ೫೩೪, ೫೩೬, ೫೩೯
ಬನಿಯಾ ೪೮೭, ೬೪೮
ಬನ್ಮನುಸ ೨೫೪
ಬನ್ಸೋರ ೨೫೮
ಬಭ್ರುವಿನ ೩೪೧
ಬರಕತ್ ೬೯೧, ೬೯೨
ಬರದ್ವಾನ್ ೧೧೩
ಬರಾರ ೨೫೫
ಬರಿಕಿ ೨೫೧
ಬರೇಲಿ ೫೨೮, ೬೦೨
ಬರೋ ೬೧೫, ೬೮೧
ಬರೋಡ ೬೦೩
ಬರ್ಕತ್ ೬೯೧, ೬೯೪

ಬರ್ಕ್ ೭೩೫
ಬರ್ಕೆನ್‌ಹೆಡ್ ೬೪೬
ಬರ್ಖತ್ ೫೧೬
ಬರ್ಗಂಡಿ ೪೦೧
ಬರ್ಚ್ ೬೪
ಬರ್ಚೆಗಳು ೬೬೮
ಬರ್ನಾಡ್ ೬೦೬
ಬರ್ಮಾ ೪೩೦, ೪೩೫, ೪೩೬, ೪೩೯, ೪೪೩, ೪೪೫, ೪೭೫, ೮೪೮
ಬರ್ಲಿನ್ ೫೬೪, ೫೭೨
ಬಲರಾಮ ೩೭೭
ಬಲಾಕಾ ೩೩೧
ಬಲೂಚಿಸ್ಥಾನ ೩೮೯, ೪೩೩, ೪೩೫, ೪೩೬, ೪೬೦, ೪೬೮, ೪೭೪, ೬೧೬, ೬೧೭, ೬೩೪, ೭೦೧, ೭೩೭, ೭೪೦, ೭೪೬, ೭೫೨, ೭೫೭
ಬಲ್ಕನರು ೫೭೫
ಬಲ್ಫ್ ೬೦೦
ಬಲ್ಗೇರಿಯನ್ ೪೧೬, ೪೭೮, ೫೬೪, ೫೬೯
ಬಲ್ಗೇರಿಯಾ ೪೭೨, ೫೬೩, ೫೬೪, ೫೬೫, ೫೬೬, ೭೪೮, ೭೫೦
ಬಲ್ಡಾನ್ ೨೫೬
ಬಲ್ಯಾಂಕೀ ೬೫೨
ಬವುರಿ ೨೫೧
ಬಸೋರ ೨೫೪, ೨೫೬
ಬಸ್ತರ್ ೨೮೯
ಬಹಾದ್ದುರ್ ೬೫೨
ಬಹಾಯಿ ೬೩೪
ಬಹೇಲಿ ೨೫೩, ೨೫೪
ಬಹ್ನಾ ೨೫೬
ಬಹ್ವಾಶ್ವ ೧೧೯, ೧೨೦
ಬಳ್ಳಾರಿ ೨೮೭
ಬಾಂಜ್ರಾ ೨೫೫
ಬಾಂದರ ೨೫೬
ಬಾಕಡ ೨೫೨
ಬಾಗಲ್ಪುರ ೨೫೫, ೫೨೪
ಬಾಗ್ದಿ ೨೫೩
ಬಾಗ್ದಾದ್ ೪೧೬, ೫೬೩, ೫೬೬
ಬಾಣ ೩೭೬, ೩೭೯
ಬಾಥಿಯಾ ೫೮೬
ಬಾದ್ ೪೨೩
ಬಾಪ್ ೭೨
ಬಾಬರ್ ೪೧೭, ೪೧೯
ಬಾಬಾ ೩೯೬
ಬಾಬಾಸಾಹೇಬ ೧೯೩
ಬಾರಾಸಿಂಗಾ ೩೩೦
ಬಾರ್ಕರ್ ೪೦೨
ಬಾರ್ಥ ೪೦೧
ಬಾರ್ಥೆಲೋಮಿಯಾ ೫೨೪
ಬಾರ್ಹಸ್ಪತ್ಯ ೩೦
ಬಾಲಕೃಷ್ಣ ೨೯೧
ಬಾಲಘಾಟ ೨೫೬, ೨೫೭
ಬಾಲಿಯಾ ೫೩೩, ೫೩೫
ಬಾಲ್ಕನ್ ೫೬೪, ೫೬೫, ೫೬೬, ೫೬೯
ಬಾಲ್‌ಫಾಟ್ ೨೫೬
ಬಾಲ್ಮೀಕಿ ೨೫೪, ೨೫೫
ಬಾವರಿ ೨೫೫, ೨೫೮
ಬಾವುರೊ ೨೫೯
ಬಾಸ್ವೆಲ್ ೭೩೧
ಬಾಹ್ಲೀಕ ೨೯೩
ಬಾಳಾಜಿ ೧೮೬, ೧೯೦, ೧೯೧
ಬಿಂಝು ೨೫೩
ಬಿಂದ್ ೨೫೩
ಬಿಂಬಸಾರ ೨೧೫
ಬಿರ್ಲಿನ್ ೫೭೨
ಬಿಲಾಸಪುರ ೨೫೬, ೨೫೭
ಬಿಲ್ಲವ ೨೯೭

ಬಿಲ್ವಮರ ೩೩೫
ಬಿಷಪ್ ೧೪೦, ೭೩೦
ಬಿಷ್ಣು ೧೭೦
ಬಿಸ್ಮಾರ್ಕ ೫೪೯, ೭೦೩
ಬಿಹಾರ್ ೧೬೯, ೧೭೧, ೨೫೫, ೨೯೬, ೨೯೭, ೨೯೮, ೩೯೧, ೩೯೨, ೩೯೫, ೪೨೦, ೪೩೩, ೪೩೫, ೪೩೬, ೪೩೭, ೪೩೯, ೪೪೬, ೪೫೩, ೪೬೧, ೫೨೫, ೫೨೮, ೫೩೪, ೫೩೬, ೫೩೭, ೬೧೨, ೭೭೭, ೮೩೩, ೮೩೫
ಬೀಯಾಸ್ ೨೯೧
ಬೀರರ್ ೪೫೩
ಬುಖರೆಷ್ಟ್ ೫೬೬
ಬುದ್ಧ ೧೩, ೩೨೭, ೩೪೮, ೩೪೯, ೩೫೦
ಬುಧ ೯೩
ಬುರ್ಕಾ ೫೮೭, ೫೮೮, ೫೮೯
ಬುಲಂದ್ ೫೩೫
ಬುಲ್ಡಾನ ೨೫೭
ಬೂಲರ್ ೩೬೪, ೩೭೩, ೩೭೪
ಬೂಸ್ರಾ ೫೬೩
ಬೃತ್ತಿಯಾಲಬನಿಯಾ ೨೫೮
ಬೃಹದಿಶು ೧೧೯
ಬೃಹದುಕ್ಥ ೨೦೦
ಬೃಹದ್ರಥ ೧೨೦, ೩೭೩, ೩೭೪
ಬೃಹದ್ವಸು ೧೧೯
ಬೃಹಲ್ ೨೮೮
ಬೃಹಸ್ಪತಿ ೧೭, ೯೩, ೧೦೪, ೧೧೮, ೧೫೮, ೧೫೯, ೧೬೪
ಬೃಹಸ್ಪತಿಸ್ಮೃತಿ ೪೧
ಬೆಂಗಾಳಿ ೧೧೩, ೨೫೪, ೨೫೫, ೩೯೧, ೫೮೫, ೫೮೬, ೬೧೨, ೬೧೬, ೬೧೭, ೬೧೮, ೬೨೪, ೬೨೫, ೬೨೬, ೬೩೬, ೬೪೧
ಬೆಂತಾಮೈಟ್ ೭೩೯
ಬೆಝುವಾಡ ೫೧೪
ಬೆಟ್ಟಿಯಾ ೫೨೮
ಬೆಡಿಯ ೨೫೩
ಬೆನಬನ್ಸಿ ೨೫೪
ಬೆನಾರಸ್ ೬೦೩
ಬೆನೆ ೬೯
ಬೆನ್ನೆಟ್ ೬೮೩
ಬೆನ್ಫೆ ೬೪
ಬೆರಾರ್ ೬೬೨, ೮೩೫
ಬೆರಾರ ೨೫೬, ೨೫೭, ೨೫೮
ಬೆಲೂಚಿ ೩೮೭
ಬೆಲೂಚಿಸ್ಥಾನ ೩೮೬, ೩೮೯
ಬೆಲ್ಗ್ರೇಡ್ ೫೬೩
ಬೆಲ್ದಾರ ೨೫೩, ೨೫೪
ಬೆಲ್‌ಫಾಸ್ಟ್ ೭೪೩, ೭೪೪
ಬೆಲ್ಲರ ೨೫೧
ಬೆಸ್ತ ೨೯೭
ಬೆಸ್ಸರೇಬಿಯಾ ೫೬೪
ಬೆಳಗಾಂವಿ ೬೪೧
ಬೆಳವಲ್ಕರ್ ೧೪೧
ಬೇಗಿ ೫೮೬
ಬೇಗೂರಿನ ೨೮೯
ಬೇರಾರ್ ೩೯೧, ೪೫೧
ಬೇರ್ಯ ೨೫೪
ಬೈಗರಿ ೨೫೧
ಬೈಜಂಟೈನ್ ೫೬೩
ಬೈಜನಾಥ್ ೨೯೨, ೬೦೨
ಬೈತಿ ೨೫೩
ಬೈಬರ್ ೪೪೧
ಬೈಬಲ್ ೧೩
ಬೈರ ೨೫೧
ಬೈರನ್ ೬೭೮
ಬೊಖರಾ ೫೪೯, ೬೦೦
ಬೊನೆಡಿಂಗ್ಸ ೨೭೬

ಬೊಸ್ನಿಯಾ ೫೬೪
ಬೊಹೆಮಿಯಾ ೪೦೧, ೫೬೭
ಬೋಗವತಿ ೨೮೯
ಬೋಗ್ರಾ ೩೮೯
ಬೋಯರ್ಸ್ ೭೧೯, ೭೨೦
ಬೋರಿಯ ೨೫೪
ಬೋಸ್ನಿಯಾ ೫೬೪, ೫೬೫
ಬೌದ್ಧ ೧೮೬, ೩೦೭, ೩೧೨, ೩೧೩, ೩೧೪, ೩೧೭, ೩೪೬, ೩೪೭, ೩೪೮, ೩೪೯, ೩೫೦, ೩೭೪, ೪೧೬, ೪೨೮, ೪೯೯
ಬೌದ್ಧಮತ ೩೧೪, ೩೧೭, ೩೪೭, ೩೪೯
ಬೌದ್ಧರಾಜ ೩೭೪
ಬೌಧಾಯನ ೩೪, ೧೦೮, ೧೦೯, ೧೬೬, ೩೨೪, ೩೬೭
ಬೌಧಾಯನಸೂತ್ರ ೧೭೬
ಬೌರಿ ೨೫೩
ಬ್ಯಾಬಿಲಾನಿ ೧೦೨
ಬ್ಯಾಬಿಲೋನಿಯಾ ೬೨
ಬ್ಯಾಲ್ ೬೫೪, ೬೬೪
ಬ್ಯಾಲ್‌ಫೋರ್ ೬೫೨, ೬೫೩
ಬ್ಯೂಹ್‌ಲರ್ ೧೦೮
ಬ್ರನ್ಸ್‌ವಿಕ್ ೭೧೭
ಬ್ರಹ್ಮ ೧೯, ೩೧, ೩೨, ೯೦, ೯೧, ೯೨, ೯೩, ೧೩೫, ೧೪೮, ೧೫೧, ೧೬೩, ೧೭೫, ೧೯೩, ೨೯೪, ೩೪೦, ೩೭೮
ಬ್ರಹ್ಮಘ್ನ ೧೭೪
ಬ್ರಹ್ಮದ ೨೯, ೯೨
ಬ್ರಹ್ಮದತ್ತ ೧೧೯
ಬ್ರಹ್ಮದೇವರ್೯೪
ಬ್ರಹ್ಮದ್ವಿಷ ೭೦
ಬ್ರಹ್ಮನ್ ೩೦
ಬ್ರಹ್ಮರ್ಷಿ ೧೨೨, ೧೫೦, ೧೫೧, ೧೫೪, ೧೫೯
ಬ್ರಹ್ಮಲೋಕ ೧೫೭
ಬ್ರಹ್ಮಸಮಾಜ ೪೯೯
ಬ್ರಹ್ಮಸ್ವ ೨೦೦
ಬ್ರಹ್ಮಹತ್ಯೆ ೧೫೨, ೩೫೦
ಬ್ರಹ್ಮಾದಿ ೯೩
ಬ್ರಹ್ಮೋಪನಿಷತ್ತು ೧೬೬
ಬ್ರಾಡಿ ೭೧೭
ಬ್ರಾಹುಈ ೨೯೪
ಬ್ರಿಟನ್ ೭೫, ೪೫೭, ೫೬೭, ೬೪೧, ೬೫೦, ೭೦೧, ೭೧೭, ೭೬೬, ೭೭೫
ಬ್ರಿಟಿಷ್ ೧೯೩, ೩೮೮, ೩೮೯, ೪೦೨, ೪೦೩, ೪೦೯, ೪೧೦, ೪೧೧, ೪೧೨, ೪೩೭, ೪೩೮, ೪೪೦, ೪೪೨, ೪೫೬, ೪೫೭, ೫೦೩, ೫೦೮, ೫೧೦, ೫೧೯, ೫೪೭, ೫೪೮, ೬೦೮, ೬೨೩, ೬೩೧, ೬೩೫, ೬೩೬, ೬೪೦, ೬೪೧, ೬೫೦, ೬೫೭, ೬೫೮, ೬೬೩, ೬೬೯, ೬೭೦, ೬೮೮, ೬೯೦, ೬೯೭, ೬೯೮, ೭೦೩, ೭೦೬, ೭೦೯, ೭೧೮, ೭೧೯, ೭೨೦, ೭೩೨, ೭೬೯, ೭೭೦, ೭೭೫, ೭೭೮, ೭೭೯, ೮೧೨, ೮೫೬
ಬ್ರಿರೆ ೨೭೬
ಬ್ರೂಕ ೩೮೮
ಬ್ರೂಕ್ಸ್ ೫೭೨, ೭೧೯
ಬ್ರೂನೆಟ್ ೭೫
ಬ್ರೆಹಾನ್ ೨೭೪
ಬ್ರೇ ೭೦೦
ಬ್ರೈಸ್ ೫೪೯, ೫೫೦, ೫೫೧, ೫೫೨, ೬೬೪
ಭಂಡರಾ ೨೫೬, ೨೫೭
ಭಂಡಾರ ೬೪
ಭಂಡಾರಾ ೨೫೬, ೨೫೭
ಭಂಡಾರ್ಕರ್ ೧೮೮, ೩೮೦
ಭಂತು ೨೫೪
ಭಂಬಿ ೨೫೨
ಭಗೀರಥ ೧೧೮
ಭಟ್ ೫೮೬

ಭಟಿಯ ೨೫೩
ಭನರ್ ೫೮೬
ಭರತ ೧೧೫, ೧೧೮, ೧೧೯, ೧೨೯, ೧೩೦, ೧೩೧, ೧೫೩, ೨೦೧, ೨೦೨, ೨೦೮, ೨೧೨
ಭರತಖಂಡ ೯೭, ೭೧೦
ಭರಶಿವ ೨೮೬, ೨೮೮
ಭಲಂದ ೨೦೦
ಭಲ್ಲಟ ೧೧೯
ಭವದೇವ ೨೮೯
ಭವನಮನರ ೧೧೯
ಭವನಾಗ ೨೮೬
ಭಾಖುತ ೩೯೦, ೩೯೩, ೪೧೫, ೪೪೧
ಭಾಗಲ್ವುರ ೫೩೬
ಭಾಗವತ ೧೩೦
ಭಾಗೀರಥಿ ೧೧೮
ಭಾರತ್ ೫೧೫
ಭಾರತೀಕರಣ ೪೪೩
ಭಾರದ್ವಾಜ ೧೧೮, ೧೨೨
ಭಾಲನಸ್ ೧೨೬
ಭಾವನ್ ೩೯೬
ಭಿಲ್ಲಮ ೩೬೫
ಭಿಲ್ಲವ ೨೯೭
ಭೀಷ್ಮ ೧೧೧
ಭುವನನ ೧೨೩
ಭುವನೇಶ್ವರ ೨೮೯
ಭೂತಾನಾಂಪತಿ ೨೯
ಭೂಮಲಿ ೨೫೩
ಭೂಮಾರಿ ೨೫೮
ಭೂಮಿಕಾ ೪೯
ಭೂಯಿಯಾ ೨೫೩, ೨೫೪, ೨೫೯
ಭೃಗು ೯೦, ೧೨೨, ೧೨೪, ೧೪೮, ೨೦೦, ೨೦೨, ೨೦೩, ೨೦೮
ಭೋಜೇಂದ್ರ ೪೪೯
ಭೋಜ್‌ಪುರ ೪೩೭
ಭೋಟ ೨೯೩
ಭೌಯ ೨೫೫
ಭ್ಯೂಯ ೨೫೫
ಮಂಗ್ ೨೫೮
ಮಂಗನ್ ೨೫೮
ಮಂಗಳ ೨೪೭
ಮಂಗೋಲ್ ೯೫, ೫೬೩, ೬೬೨
ಮಂಫ್ವಾರ ೨೫೨
ಮಂಝಿಲ್ ೫೪೦
ಮಂಡ್ಯ ೨೯೭
ಮಂಡ್ಲಾ ೨೫೬, ೨೫೭
ಮಂಧಾತ್ರಿ ೧೨೭
ಮಂಯಿಲ್ ೫೪೨
ಮಕಾಡೆ ೧೪
ಮಕ್ಕ ೫೨೩
ಮಕ್ಕಾ ೬೩೨
ಮಗಧ ೧೨೦, ೩೭೩
ಮಘವಲ್ ೨೫೨
ಮಚತ್ ೫೬೨
ಮಜೇರಿಕಾ ೨೮೭
ಮಜ್ಡ ೭೯
ಮಝುವರ ೨೫೪
ಮತ್ತಾ ೫೩೫
ಮತ್ಸ್ಯಪುರಾಣ ೨೦೦
ಮಥುರೆ ೧೭೧, ೨೮೭, ೩೭೫
ಮದನಮೋಹನ ೬೬೮
ಮದರ್ ೫೮೧
ಮದರಾಸ ೮೧೨, ೮೩೨
ಮದಾರಿ ೨೫೯, ೫೮೬
ಮದೀನ ೪೨೧, ೬೨೭, ೬೩೨
ಮದ್ರಾಸ್ ೧೦೯, ೧೭೧, ೧೭೨, ೨೫೧, ೨೫೯, ೨೯೭, ೩೯೧, ೩೯೨, ೩೯೫, ೪೩೬, ೪೩೭,

೪೪೦, ೪೪೧, ೪೪೩, ೪೪೪, ೪೪೬, ೪೪೮, ೪೫೩, ೪೫೫, ೪೫೬, ೪೬೦, ೪೮೦, ೪೯೯, ೫೧೪, ೫೧೮, ೫೩೩, ೫೩೪, ೫೩೬, ೫೩೭, ೫೩೯, ೫೪೭, ೬೧೨, ೬೩೦, ೬೪೪, ೬೪೬, ೬೭೩, ೬೭೪, ೬೭೫, ೭೬೩

ಮಧ್ಯಮಾಂಗಿರಸ ೨೬೨, ೩೭೩

ಮನಭೂಮ ೨೫೫

ಮನಸ್ಸು ೧೧೮

ಮನು ೧೯, ೨೧, ೮೨, ೮೮, ೯೧, ೯೨, ೯೩, ೧೩೦, ೧೬೧, ೧೮೧, ೨೪೯, ೨೮೪, ೨೯೪, ೩೧೨, ೩೩೧, ೩೩೨, ೩೪೫, ೩೬೭, ೩೭೨, ೩೭೩

ಮನುಭೂಮ ೨೫೫

ಮನುವೈವಸ್ವತ ೨೦೦

ಮನುಸ್ಮೃತಿ ೧೭೦, ೨೦೯, ೨೧೦, ೨೪೮, ೩೪೪, ೩೭೩

ಮನೋತಾ ೩೪೦

ಮನ್ಯಮಾನ ೧೨೬

ಮಮತಾ ೧೧೮

ಮರಾಠಾ ೧೭೧, ೧೭೧, ೧೮೨, ೧೮೩, ೨೯೭, ೩೦೦, ೪೧೭, ೪೪೦, ೪೪೩, ೪೪೪, ೪೪೬, ೪೪೮, ೪೫೧, ೬೬೮

ಮರಾಠಿ ೩೯೧, ೩೯೬, ೮೩೨

ಮರಿಜ ೨೫೫

ಮರೀಚಿ ೯೦, ೯೧

ಮರುತ ೧೯, ೩೧, ೧೧೭, ೧೧೮, ೧೨೩, ೧೨೫, ೧೨೮

ಮರೇಚ ೨೫೫

ಮಲ್ ೫೧೬, ೫೩೮, ೫೪೧

ಮಲಬಾರ್ ೨೯೦, ೫೧೭, ೫೧೮, ೫೨೩, ೬೩೪

ಮಲಯ ೨೪೩, ೩೭೮

ಮಲಯಾಳ ೨೯೮, ೩೯೧

ಮಲಸರ್ ೨೫೨

ಮಲಿಕ್ ೬೯೨

ಮಲೈಯಾಲಿ ೨೯೮

ಮಲ್ಲಹ ೨೫೩

ಮಲ್ಲಿಕ ೫೮೫

ಮವಿಲನ್ ೨೫೨

ಮಸಲ್ಮಾನರು ೪೪೪

ಮಸೀದಿ ೪೧೭, ೪೨೨, ೪೨೫, ೫೩೭, ೫೮೭, ೫೮೯, ೬೨೨, ೬೨೭, ೭೭೨

ಮಸೂದುಲ್ ೬೫೨

ಮಹಜರ್ ೫೪೧, ೫೪೪

ಮಹದಿ ೪೮೮

ಮಹಮಡನ್ ೫೮೨, ೫೮೩, ೫೮೪, ೫೮೫

ಮಹಮದ್ ೩೮೭, ೪೦೦, ೪೧೬, ೪೧೭, ೪೮೬, ೫೧೪, ೫೨೯, ೬೦೨, ೭೦೧

ಮಹಮದಾಲಿ ೭೧೦

ಮಹಮ್ಮದ್ ೪೧೭, ೪೧೮, ೪೧೯, ೪೨೦, ೪೨೫, ೬೫೮

ಮಹಮ್ಮದ ೪೧೬, ೪೧೭, ೪೧೮, ೪೧೯, ೪೨೦, ೪೨೧, ೪೨೨, ೪೨೫, ೪೨೮, ೬೨೬, ೬೩೪, ೬೩೬

ಮಹಮ್ಮದಾಲಿ ೬೯೯, ೭೦೨, ೭೦೩

ಮಹಮ್ಮದೀಯ ೫೦೪, ೫೦೫, ೫೦೬, ೫೧೧, ೫೧೨, ೫೧೮, ೫೧೯, ೫೨೭, ೫೮೩, ೫೮೪, ೫೮೫, ೫೮೬, ೬೦೨, ೬೦೯, ೬೧೧, ೬೧೮, ೬೨೪, ೬೩೩, ೬೩೫, ೬೩೬, ೬೩೯, ೬೫೯, ೬೮೪, ೭೦೧, ೭೦೨, ೮೦೪, ೮೦೫, ೮೦೬, ೮೦೭, ೮೦೮, ೮೦೯, ೮೧೦, ೮೧೨, ೮೧೩, ೮೧೫, ೮೧೬

ಮಹರ್ ೨೫೩

ಮಹಾನಾರಾಯಣ ೨೫

ಮಹಾಭಾರತ ೯೦, ೧೦೧, ೧೧೦, ೧೧೧, ೧೧೨, ೧೧೩, ೧೧೪, ೧೧೬, ೧೧೭, ೧೨೦, ೧೨೧, ೧೨೮, ೧೩೦, ೧೪೯, ೧೫೧, ೧೫೭, ೧೫೮,

೧೮೭, ೧೯೭, ೨೦೧, ೨೦೨, ೨೦೩, ೨೦೫,
೨೦೬, ೨೦೭, ೨೦೮, ೨೧೪, ೨೧೫, ೨೧೬,
೨೧೭, ೨೯೪, ೩೬೫
ಮಹಾರ್ ೨೫೮, ೨೭೨, ೨೯೭, ೩೦೦, ೩೫೫,
೩೫೬
ಮಹಾರಾಷ್ಟ್ರ ೨೮೭, ೩೯೨, ೫೪೭
ಮಹಾರಾಷ್ಟ್ರೀಯ ೫೪೭
ಮಹಾವೀರ್ಯ ೧೧೯
ಮಹಾಶೋವ ೧೭೦
ಮಹಾಸ್ವಾಮಿ ೩೭೬
ಮಹಿಫರೂಶ್ ೫೮೬
ಮಹಿಷಾಸುರ ೩೭೮
ಮಹೀದಿ ೪೨೧
ಮಹುರಿ ೨೫೯
ಮಹೂರ್ ೫೪೧
ಮಹ್ಲಿ ೨೫೩
ಮಾಂಗ್ ೨೫೬
ಮಾಂಗ ೨೫೨
ಮಾಂಜೆರಿಯ ೫೧೮
ಮಾಂಟೆಗೂಚೆಮ್ಸ್ ೪೬೭
ಮಾಂಟೆಗೊ ೫೪೮
ಮಾಂಟ್ರಿಯಲ್ ೭೧೮
ಮಾಂಧಾತೃ ೨೦೦
ಮಾಂಧಾತ್ರಿ ೨೦೦
ಮಾಗಣಿ ೧೭೧
ಮಾಜುಜ್ ೬೩೨
ಮಾಡ್ಗಿ ೨೫೭
ಮಾತೃಹತ್ಯೆ ೨೦೪, ೩೫೦
ಮಾಥೆರೋ ೫೪೦
ಮಾದಾರಿ ೨೫೧
ಮಾಧವ ೧೮೨
ಮಾನ್‌ಟೆನೆಗ್ರೊ ೫೬೪, ೫೬೫
ಮಾರಿಸನ್ ೪೫೮, ೪೫೯
ಮಾರೀಚಿ ೨೮, ೧೫೭
ಮಾರೂಫ್ ೬೬೦
ಮಾರ್ಕಂಡೇಯ ೧೪೪
ಮಾರ್ಕಂಡೇಯಪುರಾಣ ೧೦೧
ಮಾರ್ಟಿನ್ ೫೭೧
ಮಾರ್ತಾಂಡ ೧೭, ೯೧
ಮಾರ್ವಿನ್ ೫೫೧
ಮಾಲವಿ ೬೬೮
ಮಾಲೊ ೨೫೩, ೨೫೮
ಮಾಲ್ಡಾ ೩೮೯
ಮಾಲ್ದೀವಿಯಾ ೫೬೫
ಮಾಸಿಡೋನಿಯಾ ೫೬೬
ಮಾಸ್‌ದಾರ ೫೫೬
ಮಾಹರ ೨೫೭
ಮಾಳ್ವ ೨೫೬, ೨೫೭
ಮಿಂಟೋ ೩೦೭
ಮಿಟ್ಟರ್ ೧೭೦
ಮಿತ್ರಸಹ ೧೧೮, ೧೨೦
ಮಿತ್ರಾ ೧೫೧
ಮಿತ್ರಾಯು ೧೧೯, ೧೨೦
ಮಿಥಿಲರಸ ೨೦೦
ಮಿನ್ ೪೨೧
ಮಿನಾರ್ ೪೨೨
ಮಿನಿಮು ೫೨
ಮಿನಿಮಾದಿಗ ೨೫೨
ಮಿಯಾನ್ ೪೫೨
ಮಿರ್ಜಾ ೪೮೮, ೫೮೫
ಮಿರ್ಝಾಪುರ್ ೫೩೪
ಮಿಲ್ ೪೦೪
ಮಿಲಯ ೬೨೩
ಮಿಲಾನ್ ೫೫೧
ಮಿಲ್ಲತ್ ೪೭೩
ಮಿಲ್ಲಾ ೫೮೬

ಮಿಸೋಪೊಟ್ಯಾಮಿಯಾ ೬೬೩
ಮಿಹ್ರ ೩೯೭
ಮೀಮಾಂಸೆ ೧೩೬
ಮೀರ್ ೫೪೦, ೫೫೭
ಮೀರತ್ ೨೫೪
ಮುಂಬೈ ೧೭೧, ೧೭೨, ೨೫೨, ೨೯೭, ೩೯೫, ೫೨೮, ೫೩೧, ೫೩೨, ೫೩೩, ೫೩೯, ೬೪೯, ೬೭೨, ೬೭೪, ೬೭೫, ೬೮೪, ೬೮೬, ೬೯೦, ೭೬೩, ೭೭೨, ೭೭೪, ೮೩೨, ೮೩೫
ಮುಖೊ ೫೮೬
ಮುಜಹದೀನ ೬೫೯
ಮುಜಾಹಿದ್ ೪೧೯, ೬೬೦
ಮುದಲಿಯಾರ್ ೫೨೩
ಮುದಿಯಾನಿಯಾ ೫೬೬
ಮುದ್ಗಲ ೧೧೯, ೨೦೦
ಮುಫ್ತಿ ೬೦೨
ಮುಲಚಿ ೨೫೯
ಮುಲಸ್ಮಾನ ೫೨೦
ಮುಲಾಜೂ ೪೬೦
ಮುಲಾನಿಕಾ ೨೮೭
ಮುಲ್ತಾನ್ ೪೧೫, ೪೨೦, ೪೨೧, ೪೨೩, ೫೨೪, ೫೨೮
ಮುಲ್ಲರ್ ೩೨, ೩೩, ೯೬, ೧೩೬, ೧೩೯, ೧೪೦, ೧೪೧, ೧೭೬
ಮುಲ್ಲಾ ೫೨೯
ಮುಸಲ್ಮಾನೀಯತೆ ೫೯೨
ಮುಸಲ್ಮಾನೇತರ ೬೫೬, ೬೫೯, ೬೬೫
ಮುಸಹರ ೨೫೪, ೨೫೫
ಮುಸೊಲಿನಿ ೭೮೦
ಮುಸ್ಲಿಂಲೀಗ್ ೫೫೯, ೫೬೨
ಮುಸ್ಲಿಮೇತರ ೪೭೩, ೪೭೫, ೪೭೮, ೪೭೯, ೫೦೫, ೫೭೩, ೬೨೪, ೬೩೩, ೬೩೯, ೬೫೫, ೬೫೬, ೬೫೯, ೬೬೫, ೬೯೨, ೬೯೩, ೬೯೯, ೭೨೯, ೭೩೪, ೭೩೫, ೭೩೮, ೭೪೦, ೭೪೨, ೭೪೪, ೭೫೨, ೭೫೭, ೭೫೮, ೭೭೭, ೮೦೭, ೮೫೦
ಮುಸ್ಲಿಮ್‌ಕರಣ ೩೯೭
ಮುಹಮ್ಮದ್ ೪೧೯, ೪೨೪
ಮೂಯಿರ್ ೨೯೩
ಮೂರ್ ೧೬೧, ೫೮೪
ಮೃಗಶಿರ ೧೬೬
ಮೃಚ್ಛಕಟಿಕ ೩೧೨
ಮೃಡವಾಕ್ ೨೯೩
ಮೆಕಾರ್ಟಿನ್ ೫೬೯
ಮೆಕಾರ್ಟಸೆ ೫೬೭
ಮೆಕಾಲೆ ೪೧೧
ಮೆಕೆಂಜೀ ೩೧೧
ಮೆಕ್ಕಾ ೬೨೭
ಮೆಕ್ಕಾಕ್ಯೂ ೪೨೧
ಮೆಡಿಟರೇನಿಯನ್ ೭೫, ೯೫, ೯೬, ೯೭, ೫೬೪, ೫೬೬
ಮೆಸಿಡೋನಿಯಾ ೪೧೬
ಮೆಸೊಪೊಟೆಮಿಯಾ ೬೩೫
ಮೆಸ್ಸಾಯ ೪೮೮
ಮೆಹಮೂದ ೧೬೯
ಮೆಹರೂಮಲ್ ೫೪೧
ಮೆಹ್ತಾ ೨೫೬, ೨೫೮, ೨೫೯
ಮೆಹ್ತಾರ್ ೫೮೬
ಮೆಹ್ತೋರ್ ೨೫೩
ಮೆಹ್ರಾ ೨೫೮
ಮೇಖಲಾ ೧೬೪
ಮೇಧತಿಥಿ ೧೧೮
ಮೇಧನ ೨೦೦
ಮೇಧಾತಿಥಿ ೧೦೮, ೧೧೯, ೩೬೪
ಮೇನ್ ೨೭೫
ಮೇಯೊ ೫೮೧

ಮೇವಾಡ ೧೮೬, ೧೮೬, ೧೯೦, ೩೯೧, ೪೩೩, ೪೩೬, ೪೫೩
ಮೈಕೆಲ್ ೭೪
ಮೈತಿರ ೮೧೩
ಮೈತ್ರಾಯಣಿ ೩೪, ೧೧೧, ೧೩೮, ೧೩೯, ೨೧೭
ಮೈತ್ರಾವರುಣ ೩೪೦
ಮೈತ್ರೇಯ ೩೧೨, ೩೧೩
ಮೈದಿ ೭೮
ಮೈನ್ಯು ೭೮, ೧೦೨
ಮೈನ್ಯುತಸ್ತಂ ೧೬೬
ಮೈಮೆನ್ ೩೮೯, ೫೩೩
ಮೈರೇತ ೭೩೪
ಮೊಂಫೀರ ೫೩೪
ಮೊಂಟಾಗೊ ೬೧೨, ೬೨೩, ೬೭೩, ೭೦೨, ೭೨೭
ಮೊಗಲ ೪೧೭, ೪೧೯, ೪೨೬, ೫೮೫, ೬೯೮
ಮೊನಾಗನ್ ೭೪೪
ಮೊಪ್ರಾ ೫೨೪
ಮೊಪ್ಲಾ ೫೧೯
ಮೊಮ್ಮದ್ ೬೯೧
ಮೊರಾದಾಬಾದ್ ೫೨೪
ಮೊರಾವಿಯಾ ೫೬೭
ಮೊರೊಕ್ಕೊ ೫೬೫, ೬೬೧
ಮೊಲಾನಾ ೬೫೯
ಮೊಲ್‌ಡಾವಿಯಾ ೫೬೪
ಮೊಸೆಲ್ ೫೬೩
ಮೊಹಚ್ಜ್ ೫೬೩
ಮೊಹಮ್ಮದ್ ೫೨೧, ೫೨೨, ೫೮೪, ೬೨೫, ೬೨೬, ೬೫೪, ೬೫೫, ೬೫೯, ೬೬೬, ೬೬೭, ೬೭೦, ೬೭೮, ೬೮೬, ೬೮೯, ೬೯೧, ೬೯೩
ಮೊಹಮ್ಮದಲಿ ೬೪೮
ಮೊಹರಮ್ ೫೨೪, ೫೨೭, ೫೨೮, ೫೩೨, ೫೩೪, ೫೩೬
ಮೊಹಾಇ ೬೩೭
ಮೋಹಾನಿ ೫೧೯, ೬೩೭, ೬೩೮, ೬೩೯, ೬೪೦, ೬೪೯
ಮೋಂಫೀರ ೨೫೫
ಮೋಂಫೀರ್ ೫೩೯
ಮೋತಿಲಾಲ್ ೫೦೮, ೬೩೭, ೬೪೫, ೬೪೬, ೬೭೨
ಮೋಪ್ರಾ ೬೩೪
ಮೋಪ್ಲಾ ೫೧೭, ೫೧೮, ೫೧೯, ೫೨೦, ೫೨೩
ಮೋರೋಪಂತ ೧೮೩, ೧೯೦
ಮೋಹೇಶ್ವರ ೨೮೮
ಮೌರ್ಯ ೩೭೩, ೩೭೪
ಮೌಲಾನ ೪೮೬, ೫೧೯, ೬೩೨, ೬೯೯
ಮೌಲ್ವಿ ೩೯೭, ೬೩೨
ಮೌಸಲ ೩೨೪
ಮ್ಯಾಕ್‌ಬೆತ್ ೭೬೬
ಮ್ಯಾಕ್‌ಮನ್ ೪೩೧
ಮ್ಯಾಕ್ಸ್‌ಮುಲ್ಲರ್ ೬೧, ೬೨, ೬೩, ೭೧, ೧೦೦
ಮ್ಯಾಗಿನೊಟ್ ೭೬೫
ಮ್ಯಾಗ್ನನ್ ೭೫
ಮ್ಯಾಗ್ಯಾರ್ಸ್ ೪೦೧
ಮ್ಯಾನ್‌ಫ್ರೆಡ್ ೭೨೦
ಮ್ಯಾಸಿಡೋನಿಯಾ ೫೬೩, ೫೬೬
ಮ್ಯೂನಿಚ್ ೫೬೭, ೫೭೦, ೫೭೫, ೫೭೬
ಮ್ಯೂರ್ ೫೮೫
ಮ್ಲೇಚ್ಛರ ೨೯೪
ಯಕ್ಷರಾಜ ೩೭೮
ಯಕ್ಷರು ೧೨೬, ೨೦೪
ಯಕ್ಷು ೧೨೬
ಯಜುರ್ವೇದ ೨೮, ೨೯, ೩೨, ೮೧, ೧೩೫, ೧೩೮, ೧೩೯, ೨೧೬
ಯಜುಸ್ ೨೪
ಯಜುಸ್ಸೂ ೧೨
ಯಜ್ಞದೇವತೆ ೩೩೬, ೩೩೭
ಯದುಗಳು ೨೧, ೧೨೨, ೧೨೯

ಯಧಜಿತ್ ೨೦೦
ಯಬರ್ ೬೨೩
ಯಮ ೧೦೨
ಯಮಧರ್ಮ ೧೪೭
ಯಮನ್ ೫೬೩
ಯಮರಾಜ ೧೦೨
ಯಮುನಾ ೬೯, ೧೨೬, ೩೭೭, ೩೭೮, ೪೩೭
ಯಯಾತಿ ೨೦೪
ಯವ್‌ರಾಯ ೭೮
ಯಸ್ನ ೧೦೨, ೧೦೩
ಯಸ್ಮ ೪೯
ಯಹೂದಿ ೧೮, ೫೧, ೫೯, ೪೬೯, ೪೭೭, ೪೭೮, ೬೪೮
ಯಹೂದ್ಯ ೪೭೭
ಯಾಕೂಬ್ ೫೧೮
ಯಾಕ್ವ ೨೯೦
ಯಾಜುಜ್ ೬೩೨
ಯಾಜ್ಞವಲ್ಕ್ಯ ೮೪, ೨೬೨, ೩೦೨, ೩೦೩, ೩೨೬, ೩೪೫, ೩೫೦, ೩೬೧
ಯಾಸ್ಕ ೨೧, ೭೭, ೭೮, ೭೯, ೧೧೬, ೧೧೭
ಯುಗೋಸ್ಲಾವ್ ೬೬೨
ಯುಧಾಮಶ್ರೌಷ್ಟಿ ೧೨೩
ಯುಧಿಷ್ಠಿರ ೧೧೦, ೧೧೧, ೨೯೪
ಯುಧ್ಯಮಧಿ ೧೧೭
ಯುಪಿ ೪೪೪
ಯುರೇಶಿಯಾ ೬೫
ಯುರೋಪ್ ೬೧, ೬೪, ೬೫, ೭೫, ೨೫೯, ೪೯೭, ೫೬೫
ಯುರೋಪಿಯನ್ ೪೮೫, ೫೬೮, ೮೦೫, ೮೦೬, ೮೧೫, ೮೩೧, ೮೪೭, ೮೪೮, ೮೪೯, ೮೫೦
ಯುವನಾಶ್ವ ೨೦೦
ಯುವಾ ೩೩೬
ಯುವಾನ್ ೩೮೦
ಯೂನಿಟರಿ ೬೫೦
ಯೂನಿಯನ್ ೮೩೪
ಯೂಪ ೩೨೭, ೩೩೫, ೩೩೬
ಯೂರೋಪ್ ೬೦, ೭೨, ೯೬, ೯೭, ೩೦೮, ೪೦೦, ೪೫೮, ೫೬೩, ೫೬೪, ೫೬೫, ೫೬೬, ೫೭೩, ೬೬೨, ೭೩೫, ೭೭೧
ಯೂರೋಪಿಯನ್ ೭೫, ೫೬೬, ೫೬೭, ೫೬೯, ೭೫೦, ೮೪೬
ಯೆನ್ ೩೪೮, ೩೮೦
ಯೆನ್ಡಬು ೪೩೦
ಯೆಷ್ಟ್ ೧೬೬
ಯೆಹೂದಿ ೪೯
ಯೆಹೂದ್ಯ ೭೬೬
ಯೇಸು ೬೬೬
ಯೇಹೋವ ೬೩೩
ರಂಗಪುರ ೩೮೯
ರಂಗೀಲಾ ೫೧೫, ೫೨೯, ೫೩೩
ರಂಗ್ರೇಜ್ ೫೮೬
ರಂತಿದೇವ ೧೧೯
ರಂತಿನರ ೧೧೮
ರಂಭ ೯೩
ರಘುನಾಥ ೧೯೩
ರಘುನಾಥಪುರ ೨೫೫
ರಘುವೀರ ೧೦೮
ರಜನಿ ೫೪೪
ರಜಪುಟಾಣ ೪೪೪
ರಜಪೂತ ೧೮೬, ೧೮೭, ೧೯೦, ೪೩೮, ೪೪೦, ೪೪೩, ೪೪೪, ೪೪೫, ೪೪೮
ರಝ್ಝುರ್ ೨೫೮
ರಣಜಿತ್‌ಸಿಂಗ್ ೪೩೮
ರತ್ನವತಿ ೨೮೯
ರಥೇಸ್ತರ ೧೬
ರವಿಷೇಣ ೧೬೮

ರವೀಂದ್ರನಾಥ ೬೩೬
ರಷೀದ್ ೫೧೫
ರಷ್ಯ ೩೦೮, ೪೫೭, ೪೬೯, ೪೯೭, ೫೪೮, ೫೬೪, ೫೬೫, ೬೪೯, ೬೫೦, ೬೬೨, ೮೦೫
ರಷ್ಯನ್ ೬೫, ೪೯೭
ರಸೂಲ್ ೫೧೫, ೫೨೯, ೫೩೩
ರಾಜ್ ೫೧೫, ೮೧೬
ರಾಜಗೋಪಾಲಚಾರಿ ೭೬೩
ರಾಜಗೋಪಾಲಾಚಾರಿಯಾರ್ ೭೭೪, ೭೭೫, ೭೭೬, ೭೭೭
ರಾಜನ್ ೨೦೬
ರಾಜಪಾಲ್ ೫೩೩
ರಾಜಪುಟಾಣ ೧೮೬, ೧೮೬, ೧೮೭, ೪೩೫, ೪೩೮, ೪೪೪, ೪೪೫
ರಾಜಪೂತ ೧೮೭, ೧೮೮
ರಾಜರತ್ನ ೩೭೬
ರಾಜವಂಶಿ ೨೫೩
ರಾಜಸೂಯಯಾಗ ೧೪೪
ರಾಜಾ ೧೧೭, ೪೧೭
ರಾಜಾರಾಮ ೧೯೨
ರಾಜಾಸ್ಥಾನ ೩೪೭
ರಾಜೇಂದ್ರ ೨೮೬
ರಾಜೋರಿ ೪೧೫
ರಾಣಿಯಾರ್ ೨೫೧
ರಾಥ್ ೧೩೩
ರಾಥೋಡರು ೧೮೭
ರಾಧಾಕುಮುದ್ ೩೩೨
ರಾಧಾಕೃಷ್ಣ ೫೩೯
ರಾಧಾವಲ್ಲಭ ೫೪೪, ೫೪೫
ರಾನಡೆ ೫೯೫, ೬೦೨
ರಾನಿತಾಲ್ ೩೯೬
ರಾಬರ್ಟ್ ೪೪೦, ೫೭೨
ರಾಬರ್ಟ್ಸ್ ೪೫೬
ರಾಮ ೭೬, ೯೧, ೯೨
ರಾಮಗಂಜ್ ೨೮೯
ರಾಮಚಂದ್ರ ೫೩೬
ರಾಮಚರಿತ ೨೮೯
ರಾಮಜಿ ೧೯೨
ರಾಮದಾಸಿ ೨೫೫
ರಾಮಪಾಲ ೨೮೯
ರಾಮಲೀಲಾ ೫೨೫
ರಾಮಾಯಣ ೧೫೩, ೨೯೦
ರಾಮೇಶ್ವರ ೪೯೪
ರಾಯ್ ೧೧೨, ೧೧೩, ೨೮೭, ೨೮೮, ೪೫೨, ೪೫೩, ೬೩೭
ರಾಯಕೋಟ ೨೮೬
ರಾಯಗಡ ೧೮೪, ೧೯೧
ರಾಯಪುರ ೨೫೬, ೨೫೭, ೨೫೮
ರಾಬರ್ಟ್ಸ್ ೭೬೪
ರಾವ್ ೬೪೧
ರಾವತ ೨೫೪
ರಾವಲ್ಪಿಂಡಿ ೫೩೩
ರಾವಿ ೬೪೯
ರಿಪ್ಲಿ ೫೯, ೬೦, ೬೩, ೬೫, ೭೫, ೯೬
ರಿಭುಕ್ಷಣ ೧೯
ರಿಷಭ ೧೩೦
ರಿಷಾವತ ೨೦೭
ರಿಸಾಲಾ ೫೨೯, ೫೩೦
ರೀಸ್ಲೆ ೯೫, ೨೯೭, ೩೦೦
ರುಚಿರಾಶ್ವ ೧೧೯
ರುಥೇನಿಯಾ ೫೬೭
ರುದ್ರ ೧೯, ೨೯, ೩೧, ೯೨, ೩೨೧, ೩೨೩
ರುಮೇನಿಯಾ ೫೬೪, ೫೬೫, ೫೬೬
ರೂಸೋ ೭೪೫
ರೂಹ ೬೬೫
ರೆಡ್ಮಂಡ್ ೭೪೫

ರೆನಾನ್ ೫೪೯, ೫೯೧
ರೆಹಮತ್ ೩೮೭
ರೆಹಮದ್ ೩೮೭
ರೆಹಮಾನ್ ೫೨೨
ರೇನಾನ್ ೩೯೮, ೪೦೦
ರೈಕ್ವ ೧೦೭
ರೈಭ್ಯ ೨೦೪
ರೈಸ್ ೨೮೧, ೨೮೩, ೨೮೪, ೨೯೬, ೨೯೮, ೩೦೧
ರೋಮ್ ೧೬, ೫೦, ೫೧, ೫೨, ೫೩, ೫೪, ೫೫, ೫೬, ೫೭, ೮೭, ೧೪೦, ೨೪೭, ೪೧೬, ೫೫೦, ೫೫೧
ರೋಮನ್ ೫೧, ೫೨, ೬೨, ೨೪೬, ೨೫೦, ೫೫೦, ೫೫೧, ೫೫೨
ರೋಹರಿ ೫೪೦
ರೋಹಿತಾಶ್ವ ೧೨೭, ೧೪೭, ೨೦೦
ರೋಹಿಲಖಂಡ ೨೫೪, ೪೩೮
ರೌದ್ರಾಶ್ವ ೧೧೮
ರೌಲೆಟ್ ೫೦೪, ೬೮೦
ಲಂಘಕ ೭೧೬
ಲಂಡನ್ ೪೪೦, ೫೬೫, ೬೮೨, ೭೦೩, ೮೩೫
ಲಕ್ನೋ ೩೮೭, ೩೯೧, ೪೬೬, ೪೬೮, ೫೦೯, ೫೧೦, ೫೨೪, ೫೨೫, ೬೧೧, ೬೧೨, ೬೧೪, ೬೧೫, ೬೧೯, ೬೨೩, ೬೨೪, ೬೨೫, ೬೩೩, ೬೫೦, ೬೬೭, ೬೭೦, ೬೭೩, ೬೭೬, ೬೮೧
ಲಜಪತರಾಯ್ ೬೩೫, ೬೩೭, ೬೭೧, ೬೭೨, ೬೭೩
ಲಹೋರ ೨೫೩
ಲಾಂಡಿ ೫೩೦
ಲಾಕನು ೨೮೮
ಲಾಖಿಪುರಂ ೫೩೪
ಲಾಡ್ ೩೮೮
ಲಾಯ್ಡ್ ೭೬೪
ಲಾಲ್ ೫೧೫, ೫೮೬
ಲಾಲ ೪೮೫, ೪೮೬, ೪೮೭, ೪೮೮, ೬೩೭
ಲಾಲಬೇಗಿ ೨೫೪, ೨೫೫, ೨೫೮
ಲಾಲಾ ೪೮೮, ೬೩೫, ೬೭೧, ೬೭೨, ೬೭೩
ಲಾಸನ್ನೆ ೫೬೬
ಲಾಸ್ಕಿ ೬೫೩
ಲಾಹೋರ್ ೨೮೮, ೩೮೫, ೩೯೧, ೪೧೫, ೪೧೭, ೪೨೮, ೪೮೫, ೫೧೦, ೫೧೬, ೫೨೪, ೫೨೮, ೫೨೯, ೫೩೩, ೫೩೬, ೫೩೭, ೫೩೮, ೬೩೧, ೬೪೯, ೬೮೮, ೬೯೧, ೭೦೦, ೭೪೦, ೭೭೭
ಲಿಂಕನ್ ೪೮೨
ಲಿಗುರಿಯಾ ೭೫
ಲಿಚ್ಛವಿ ೨೯೧
ಲಿಟ್ಟನ್ ೩೮೮, ೩೮೯, ೮೧೨, ೮೧೩
ಲೀಗ್ ೪೦೬, ೪೦೭, ೪೫೯, ೪೭೦, ೪೯೦, ೫೦೯, ೫೧೦, ೫೫೮, ೫೬೨, ೬೨೨, ೬೩೭, ೬೪೦, ೬೪೭, ೬೪೮, ೭೨೨, ೭೨೮, ೭೨೯, ೭೩೬, ೭೬೨, ೭೬೭, ೭೭೨, ೭೭೩
ಲುಪರ್ಕಿ ೨೪೬
ಲುಸ್ತ್ರಾತಿಯೊ ೨೪೬, ೨೪೭
ಲೆಫ್ಟಿನೆಂಟ್ ೪೫೫
ಲೆವೆಂಟ್ ೫೬೪
ಲೇಬರ್ ೭೧೦
ಲೇಸೋ ೪೬೦
ಲೊರೇನ್ ೪೨೮, ೪೨೯, ೪೩೦
ಲೋಧ ೨೫೩
ಲೋಮೆವ್ ೪೦೧
ಲ್ಯಾಟಿನ್ ೫೨, ೬೪
ಲ್ಯಾನ್ಸ್ ೩೮೯
ಲ್ಯಾಸನ್ ೧೦೧
ವಂಕಾರ್ ೨೫೩
ವಂದೇಮಾತರಂ ೬೨೨
ವಜೀರ ೫೬೮
ವಜ್ರಾಯುಧ ೧೨೫, ೧೨೬

ವಜ್ರಿಯೆ ೭೧
ವಧುಶುಲ್ಕ ೫೮೨, ೫೮೩
ವಧ್ರ್ಯಶ್ವನ ೧೨೨
ವನದೇವತೆ ೩೭೮
ವನಪರ್ವ ೧೫೮, ೨೦೩
ವಲ್ಲಭಬಾಯಿ ೬೯೦
ವಲ್ಲವನ್ ೨೫೨
ವಲ್ಲಾಚಿ ೫೬೫
ವಲ್ಲಾಬಿಯಾ ೫೬೪
ವಲ್ಲುರಾಣಾ ೫೨೩
ವವ್‌ರಾಯ ೭೮
ವಸಂತಸೇನೆ ೩೧೨, ೩೧೩
ವಸಾಹ ೧೧೯
ವಸಿಷ್ಠ ೧೪, ೩೫, ೩೭, ೪೫, ೯೧, ೧೧೭, ೧೨೧, ೧೨೨, ೧೨೩, ೧೨೪, ೧೪೨, ೧೪೩, ೧೪೪, ೧೪೭, ೧೪೯, ೧೫೦, ೧೫೧, ೧೫೨, ೧೫೩, ೧೫೪, ೧೫೫, ೧೫೬, ೧೬೦, ೧೭೬, ೧೮೧, ೧೯೬, ೨೦೧, ೨೦೨, ೨೦೫, ೨೦೬, ೨೦೮, ೨೬೨, ೩೬೧, ೩೬೬, ೩೬೭
ವಸು ೩೧, ೯೨, ೩೨೧
ವಸುಮನಸ್ ೧೨೭
ವಸುಮಾನಸ ೨೦೦
ವಹಿಸ್ಟೈಸ್ಟಿಶ್ ೭೯
ವಾಜಪತಿ ೩೩೭
ವಾಜರತ್ನ ೧೨೨
ವಾಜಶ್ರವಸ್ ೨೦೦
ವಾಜಸ್ ೧೯
ವಾಜಸನೇಯ ೩೭೧, ೩೭೨
ವಾಜಸನೇಯಿ ೨೮, ೨೯, ೧೦೫, ೧೦೬, ೧೩೭, ೧೩೮, ೩೨೨
ವಾಜಿ ೧೨೫
ವಾತ್ಸ್ಯಾಯನ ೩೭೯
ವಾಯುಪುರಾಣ ೧೦೧
ವಾಯುರಥ ೨೦೪
ವಾರನ್ ೮೧೨
ವಾರೆಸ್ ೪೫೫
ವಾರ್ಧಾ ೨೫೬
ವಾಲ್ಟರ್ಸ್ ೩೪೮
ವಾಸಿನ್ ೩೬೬
ವಾಸಿಷ್ಠ ೧೨೪, ೧೫೪
ವಾಸ್ತ್ರ್ಯ ೧೬
ವಿಂಧ್ಯ ೧೦೧
ವಿಕ್ಟೋರಿಯನ್ ೭೬೯
ವಿಕ್ರೀತ ೯೨
ವಿಜಯವಾಡ ೫೧೪
ವಿಜ್ಞಾನೇಶ್ವರ ೩೦೩
ವಿಠೊಲಿಯ ೨೫೩
ವಿಠ್ಠಲಭಾಯಿ ೬೪೫
ವಿದರ್ಭ ೧೧೭, ೩೯೧
ವಿದಿಶಾ ೨೮೭
ವಿದುರ ೨೯೪
ವಿದುರಥ ೨೦೭
ವಿಧಾತ್ರಿ ೯೦
ವಿನ್ಸೆಂಟ್ ೧೮೬, ೩೩೧, ೩೫೦
ವಿಪಾಶಾ ೧೫೦
ವಿರಾಟ್ ೧೨, ೧೩, ೩೭೩
ವಿರಿಣಿ ೯೦
ವಿಲಿಯಮ್ ೧೮೭
ವಿವಂಘವಂತ ೧೦೨
ವಿವಂಶಸ್ ೧೦೨
ವಿವಸ್ವತ ೧೯೭
ವಿಶಾಖಪಟ್ಟಣ ೨೫೯
ವಿಶಾಲಸಮುದ್ರ ೪೩೨
ವಿಶ್ವಂತರ ೪೯
ವಿಶ್ವಕರ್ಮ ೨೮, ೧೨೩
ವಿಶ್ವಕ್ರೈಸ್ತ ೫೧

ವಿಶ್ವಕ್ಸೇನ ೧೧೯
ವಿಶ್ವಜಿತ್ ೧೧೯
ವಿಶ್ವದೇವ ೩೦
ವಿಶ್ವನಾಥ ೪೨೩
ವಿಶ್ವಾಮಿತ್ರ ೧೧೬, ೧೨೧, ೧೨೭, ೧೪೨, ೧೪೩, ೧೪೪, ೧೪೫, ೧೪೬, ೧೪೭, ೧೪೮, ೧೪೯, ೧೫೦, ೧೫೧, ೧೫೨, ೧೫೪, ೧೫೫, ೧೮೧, ೨೦೦, ೨೦೧, ೨೦೪, ೨೧೦
ವಿಶ್ವೇದೇವರು ೩೧
ವಿಷಾನಿನ್ ೧೨೬
ವಿಷ್ಣು ೨೫, ೩೨೩, ೩೨೮
ವಿಷ್ಣುಪುರಾಣ ೧೯, ೨೪, ೯೩, ೧೦೦, ೧೦೧, ೧೧೭, ೧೨೦, ೧೪೪, ೧೫೨, ೧೬೦
ವಿಷ್ಣುಸ್ಮೃತಿ ೩೬, ೩೮, ೪೧, ೪೫, ೧೧೧
ವಿಸ್ಪೆಂಗ್ ೭೮
ವೀಟೊ ೭೭೯
ವೀಬರ್ ೧೨೧, ೧೩೨, ೧೩೩, ೧೩೭
ವೀರಕೂರ್ಚ ೨೮೬
ವೂಡ್ ೪೪೦
ವೃತ್ರ ೧೨೭, ೧೨೮, ೧೫೮, ೩೨೩
ವೃತ್ರಾಸುರ ೧೫೮
ವೆಂಕೋಜಿ ೧೭೧
ವೆಂಡಿಡಾಡ್ ೭೮
ವೆಟ್ಟುವನ್ ೨೫೨
ವೆಲೇರಿಯನ್ ೫೫೦
ವೆಲ್ಸ್ಫೋರ್ಡ್ ೫೪೮
ವೆಲ್ಲಿಂಗ್ಟನ್ ೬೫೩
ವೆಲ್ಲೈ ೨೯೮
ವೆಲ್ಲೋರಿ ೫೩೪
ವೆಸ್ಟನ್ ೫೪೦, ೫೪೨
ವೆಸ್ಟ್‌ಮಿನಿಸ್ಟರ್ ೪೯೧
ವೇಣ ೯೧, ೧೫೬, ೧೫೭, ೧೬೧, ೧೯೭, ೨೦೧
ವೇದವ್ಯಾಸರು ೨೬೨, ೩೧೬, ೩೭೩
ವೇದಶ್ರವಸ್ ೨೦೦
ವೇಲ್ಸ್ ೭೫, ೨೭೪, ೨೭೫, ೨೭೬, ೨೭೭, ೨೭೮, ೩೯೩
ವೈಕೋಮ್ ೫೧೮
ವೈತ್ರ ೧೦೦
ವೈಥಿ ೭೭
ವೈವಸ್ವತ ೯೧, ೧೯೭
ವೈಶಂಪಾಯನ ೨೫, ೯೦, ೩೭೬, ೩೭೯
ವೈಶಾಲಿ ೨೯೧, ೩೪೮
ವೈಶ್ಯ ೧೨, ೧೭, ೨೭, ೩೦, ೩೨, ೩೫, ೩೯, ೪೦, ೪೩, ೪೪, ೪೫, ೪೬, ೪೮, ೪೯, ೯೩, ೧೩೨, ೧೬೨, ೧೭೪, ೨೦೦, ೨೦೧, ೨೧೪, ೩೦೨, ೩೦೩, ೩೬೬
ವೈಶ್ಯವರ್ಗ ೧೩೫
ವೈಷ್ಣವ ೩೨೮, ೫೫೨
ವೈಸ್‌ರಾಯ್ ೫೦೭, ೫೦೮, ೫೦೯, ೮೧೦, ೮೧೧, ೮೧೨, ೮೧೩, ೮೫೫
ವೋಲ್ಗಾ ೬೬೧
ಶಂಕರಾಚಾರ್ಯರು ೧೯೩
ಶಂಬರ ೧೨೬
ಶಂಬಳ ೧೦೦
ಶಕ ೧೮೭
ಶಕಾರ ೩೧೩
ಶಕುಂತಲೆ ೧೩೦
ಶಚೀರಮಣ ೧೬೦
ಶತದ್ರೂ ೧೫೦
ಶತಪಥ ೩೧, ೩೪, ೮೨, ೧೩೫, ೧೪೧, ೨೧೨, ೨೧೬, ೨೧೭, ೨೮೫, ೨೯೩, ೩೨೧, ೩೨೨, ೩೨೬
ಶತಪಥಬ್ರಾಹ್ಮಣ ೧೩೨
ಶತಾನೀಕ ೧೨೨
ಶಮೀ ೩೨೫
ಶರತ್ ೧೩೭, ೩೭೮

ಶರದ್ವತ್ ೨೦೦
ಶರಾಷ್ ೫೮೫
ಶರೀಯತ್ ೬೩೯
ಶರ್ಮಾ ೫೧೬
ಶರ್ಯಾತ ೧೨೨
ಶಲ್ಯಪರ್ವ ೧೫೧
ಶಶಿಪ್ರಭಾ ೨೮೬, ೨೮೯
ಶಹಬಾದ್ ೪೩೭
ಶಹರ್ ೫೩೫
ಶಹರಾನಪುರ ೭೦೨
ಶಹಾನ ೩೯೬
ಶಾಂತಿದೂತ ೬೬೬
ಶಾಂತಿಪರ್ವ ೧೦೨, ೧೧೧, ೧೧೨, ೧೧೪, ೧೧೬, ೧೨೧, ೧೨೮, ೨೦೭, ೨೬೨, ೩೬೫
ಶಾನನ್ ೨೯೮
ಶಾರಿಯತ್ ೩೯೬, ೪೧೧
ಶಾಹ್ ೩೯೭, ೬೬೮
ಶಾಹಿ ೫೧೯
ಶಾಹಿದ್ ೬೨೨
ಶಾಹೂ ೧೯೨, ೧೯೩
ಶಿಂಥವ ೨೫೨
ಶಿಗ್ರು ೧೨೬
ಶಿನ್ಯು ೧೨೬
ಶಿಬಿ ೧೨೭, ೨೦೦
ಶಿವ ೧೪೫, ೩೨೮, ೩೭೭
ಶಿವಕಂದ ೨೮೭
ಶಿವಾಜಿ ೧೭೧, ೧೮೩, ೧೮೪, ೧೮೫, ೧೮೬, ೧೮೮, ೧೮೯, ೧೯೦, ೧೯೧, ೧೯೨, ೧೯೩, ೧೯೪, ೪೦೦, ೪೯೨
ಶುಕ್ ೧೦೦
ಶುಕ ೧೧೯
ಶುಕ್ಲಯಜುರ್ವೇದ ೨೯, ೧೩೭
ಶುನಶ್ಶೇಪ ೧೪೮, ೧೪೯
ಶುಷ್ನ ೧೦೦
ಶೂದ್ರಕ ೩೭೬
ಶೂದ್ರೋಪಿ ೧೧೪
ಶೂಯರು ೧೬
ಶೂರದೇವಭಕ್ತರು ೫೧೭
ಶೆಣ್ವ ೨೫೨
ಶೆನ್ವಿ ೨೯೭
ಶೈವ ೩೨೮, ೫೫೨
ಶೈವ್ಯಾ ೧೪೪, ೧೪೫
ಶೋಶಿನಾಥ ೧೭೦
ಶೌನಕ ೨೦೦
ಶ್ರೀಗಂಧ ೩೭೮
ಶ್ರೀನಾಗ ೨೮೮
ಶ್ರೀನಿವಾಸ ಅಯ್ಯಂಗಾರ್ ಪಿ.ಟಿ. ೬೮, ೧೦೩
ಶ್ರೀಪುರ ೨೮೮
ಶ್ರೀಲಂಕಾ ೬೬೨
ಶ್ರುತಶ್ರವಸ್ ೧೨೦
ಶ್ರೌತಯಜ್ಞ ೩೭
ಶ್ರೌತಸೂತ್ರ ೧೦೭
ಶ್ವಪಚರ ೨೧೦, ೨೬೫
ಶ್ವಪಾಕರು ೩೭೩
ಶ್ವಾನೌ ೩೨೫
ಷಡ್ಗುರುಶಿಷ್ಯ ೧೫೫
ಷಫಿ ೬೨೫, ೬೨೬, ೬೯೧
ಷರಿಯತ್ ೪೮೮
ಷರೀಫ್ ೬೫೫, ೬೫೬, ೬೬೦
ಷಹಜಹಾನ ೪೨೩
ಷಹಜಹಾನ್‌ಪುರ ೫೨೪
ಷಹಾ ೪೮೫
ಷಹಾನಾಮಹ್ ೪೨೩
ಷಹಾಬಾದ್ ೫೩೪
ಷಹೀದ್ ೫೩೭
ಷಾ ೭೦೬

ಷಿಕಾರ್ ೫೪೦
ಷಿಕಾರ್‌ಪುರ ೫೩೯, ೫೪೧
ಷಿನ್‌ವಾರಿ ೫೨೯, ೫೩೦
ಷಿಮ್ಲಾ ೬೭೭, ೬೭೮
ಷಿಯಾ ೬೩೫
ಷೆಲ್ ೬೩೮
ಷೇಕ್ ೫೮೫, ೫೮೬
ಷೇವಾಪೇಟ್ ೫೩೪
ಷೋಡಶಸ್ತೋಮ ೧೭೫
ಷೋಡಶಿನ್ ೧೭೮
ಷೌಕತ್ ೫೧೪, ೬೩೪
ಸಂಕ್ಯೆ ೪೪೬
ಸಂಗಥಾನ್ ೬೦೩
ಸಂಗಮನೇರ್ ೩೬೫
ಸಂಗಲಾ ೪೧೫
ಸಂತಾಲ ೨೫೪
ಸಂತಿ ೧೧೯
ಸಂಪರ ೧೧೯
ಸಂಬನ್ ೨೫೧
ಸಂಬಲಪುರ ೨೫೯, ೩೮೯
ಸಂಭಾಜಿ ೧೯೨, ೧೯೩
ಸಂಭಾಲ್ ೫೨೧
ಸಂಸಿ ೨೫೪, ೨೫೫
ಸಂಸ್ಕಾರಗಣಪತಿ ೧೦೬, ೨೧೭
ಸಐನ್ಯ ೬೫೪
ಸಕಾಚ್ ೭೧೭
ಸಗರ ೧೧೭, ೧೧೮, ೧೨೦
ಸಚ್‌ಶೂದ್ರ ೨೧೨
ಸಟ್ಲೆಜ್ ೨೯೧, ೨೯೨, ೪೧೫, ೪೩೨
ಸತ್ ೮೭
ಸತಾರಾ ೧೯೩
ಸತ್ನಾಮಿ ೨೫೬, ೨೫೯
ಸತ್ಯಧೃತ ೧೨೦
ಸತ್ಯಧೃತಿ ೧೧೯
ಸತ್ಯಮೂರ್ತಿ ೪೪೭, ೪೪೮, ೪೪೯, ೪೫೦, ೪೫೨
ಸತ್ಯವತಿ ೨೦೪
ಸತ್ಯವ್ರತ ೧೪೨, ೧೪೩
ಸತ್ರಸಹ ೨೧೨
ಸತ್ರಾಜಿತ ೧೨೨
ಸತ್ಸಾಂಗ್ ೩೪೮
ಸನತ್ಕುಮಾರ ೧೫೭
ಸಪಾಕಿಸ್ತಾನ ೭೨೯
ಸಪಾರಿ ೨೫೧, ೨೫೮
ಸಪ್ತರ್ಷಿ ೨೯, ೮೯, ೧೫೯
ಸಪ್ತಸಿಂಧುಷು ೬೯
ಸಪ್ರು ೪೫೨
ಸಫ್ರೂ ೪೫೨, ೫೦೮
ಸಬಲೌ ೩೨೫
ಸಮನ್ ೪೮೫
ಸಮರ್ ೬೦೦
ಸಮರ್ಥ ೭೦೦, ೭೦೧, ೭೦೨, ೭೦೩
ಸಮುದ್ರಗುಪ್ತ ೨೮೮
ಸಮ್ಯಕ್ ೬೫೫
ಸಮ್ಯತಿ ೧೧೮
ಸಯಾಂಗಳ ೨೮೭
ಸಯ್ಯದ್ ೫೮೫, ೬೯೧
ಸರನ್ ೫೩೪
ಸರಮಾ ೩೨೫
ಸರಯತಿ ೯೧
ಸರಸ್ವತಿವಿಲಾಸ ೩೬೫
ಸರಸ್ವತೀ ೧೫೧, ೧೫೨, ೪೯೫
ಸರಾ ೨೯೧
ಸರಾಜ್ ೨೯೨
ಸರೈ ೨೯೦, ೨೯೨
ಸರೇರ ೨೫೫
ಸರ್ಧಾರ್ ೭೦೧

ಸರ್ಫ್ ೫೫೬
ಸರ್ಬೀಯಾ ೫೬೪, ೫೬೫, ೫೬೬
ಸರ್ಯಾ ೨೯೧, ೨೯೨
ಸರ್ಯಾತಿ ೯೨, ೧೯೭
ಸರ್ವಿಯಸ್ ೫೫
ಸರ್ವಿಯಾ ೫೬೩
ಸಲಾಯಿ ೨೪೭
ಸಲೀಂದ್ರ ೨೯೧
ಸಲೋನಿಕಾ ೪೦೧, ೫೬೩, ೫೬೬
ಸವಲ್ಪ ೫೭೨
ಸವಾರ್ಟನ್ ೩೯೯
ಸವಿತೃ ೧೬೩
ಸವಿತ್ರಿ ೧೬೩
ಸವಿತ್ರಿಕ ೧೭೪
ಸವಿತ್ರಿಪತಿತ ೧೭೪
ಸಸಾಲ್ಕ ೩೩೧
ಸಸೆಕ್ಸ್ ೫೩೮
ಸಸ್ಮ ೧೦೨
ಸಾಂಗ್ಲಿ ೧೯೩
ಸಾಂಚಿಸ್ತೂಪ ೩೫೦
ಸಾನ್‌ಚಿಂಗ್ ೩೪೮, ೩೪೯
ಸಾಮನ್ ೩೦
ಸಾಯಣಾಚಾರ್ಯ ೭೧, ೧೨೮, ೨೧೭, ೨೯೩
ಸಾರಮೇಯೌ ೩೨೫
ಸಾರೋಜೀವೋ ೬೬೧
ಸಾಲಂಕಾಯನ ೨೦೦
ಸಾಲಾರ್‌ಜಂಗ್ ೫೫೬
ಸಾವರ್ಕರ್ ೪೮೮, ೪೮೯, ೪೯೦, ೪೯೨, ೪೯೫, ೪೯೬, ೪೯೭, ೪೯೯, ೫೦೦, ೫೦೧, ೫೦೨, ೫೦೩
ಸಾವಿತ್ರಿ ೧೪, ೩೫, ೧೬೪
ಸಾವಿತ್ರಿಕ ೧೭೪, ೧೭೫
ಸಿಂಗ್ ೩೮೯, ೩೯೬, ೪೯೨
ಸಿಂಗಪೂರ ೬೬೧
ಸಿಂಡಿಕೇಟ್ ೮೧೯
ಸಿಂಧ್ ೨೯೪, ೩೮೬, ೩೮೭, ೩೮೮, ೩೮೯, ೩೯೧, ೪೧೨, ೪೧೬, ೪೧೭, ೪೨೦, ೪೩೩, ೪೬೦, ೪೬೨, ೪೬೭, ೪೬೮, ೪೭೧, ೪೭೨, ೪೭೩, ೪೭೪, ೪೮೦, ೪೯೯, ೫೨೭, ೫೩೩, ೫೩೬, ೬೧೬, ೬೧೭, ೬೧೯, ೬೨೬, ೬೨೭, ೬೭೪, ೬೭೫, ೭೦೧, ೭೩೭, ೭೪೦, ೭೪೧, ೭೪೬, ೭೫೨, ೭೫೭, ೮೦೭, ೮೩೫
ಸಿಂಧಿ ೩೯೧, ೪೯೯
ಸಿಂಧುದ್ವೀಪ ೧೧೮, ೧೨೭
ಸಿಂಧುಪುರ ೪೧೫
ಸಿಂಧುರಾಜ ೨೮೬, ೨೮೯
ಸಿಂಧುವಿಪ ೨೦೦
ಸಿಂಧೂ ೮೦, ೯೫, ೨೧೬, ೨೯೪, ೩೮೮, ೩೮೯, ೪೧೫, ೪೩೧, ೪೩೨, ೪೯೩
ಸಿಂಧೂಕ್ಷಿತ ೧೨೭, ೨೦೦
ಸಿಂಧೂನದಿ ೪೩೨
ಸಿಂಫ್ ೫೩೩
ಸಿಕಂದರ್ ೪೫೧, ೭೭೩
ಸಿಕಂದರಾಬಾದ್ ೫೩೯
ಸಿಕಂದರ್‌ಹಾಯತ್ ೪೪೯
ಸಿಖ್ಖರು ೩೦೦, ೪೨೮, ೪೩೦, ೪೩೭, ೪೩೮, ೪೩೯, ೪೪೦, ೪೪೩, ೪೪೪, ೪೪೫, ೪೪೬, ೪೪೮, ೪೫೩, ೪೫೪, ೪೫೬, ೪೫೮, ೪೮೧, ೫೨೬, ೫೨೮, ೫೩೭, ೫೩೮, ೫೩೯, ೫೮೧, ೬೧೮, ೬೨೬, ೬೯೩, ೬೯೪
ಸಿಟ್‌ಹಟ್ ೪೮೧
ಸಿಡ್ನಿ ೫೭೨
ಸಿತಿ ೨೦೦
ಸಿಥಿಯನ್ನರು ೯೫
ಸಿನ್ ೭೩೪
ಸಿನಿಕನು ೭೨೩

ಸಿನ್ನಿಫಿಯನ್ ೬೪೫
ಸಿಮ್ರಿಕ್ ೨೭೬, ೨೭೮
ಸಿಮ್ರು ೨೭೮
ಸಿಮ್ಲಾ ೮೦೨, ೮೧೨, ೮೧೬
ಸಿಯಾನಿ ೨೫೭, ೨೫೮
ಸಿಯಾಲ ೨೫೯
ಸಿರಾಜ್ ೪೨೧
ಸಿರಿಯಾ ೫೬೩, ೫೬೪, ೫೬೬
ಸಿಲೋನ್ ೨೮೭, ೨೯೦, ೬೬೨
ಸಿಲ್ಲತ್ ೬೩೧
ಸಿಸೋದಿಯಾ ೧೮೬, ೧೮೮, ೧೯೦
ಸೀಖ್ ೮೩೧, ೮೩೨
ಸೀಖ ೪೯೯
ಸೀಖರು ೪೯೯, ೭೭೮
ಸೀಜರ್ ೫೫೨
ಸೀಭಾಮ್ ೨೭೫, ೨೭೭
ಸೀಮಂತೋನ್ನಯನ ೧೭೭
ಸೀಮುಖಾ ೯೦
ಸುಂಗ ೩೭೩, ೩೭೪
ಸುಂದೂರಿ ೧೭೦
ಸುಕನ್ಯಾ ೧೦೭
ಸುಕ್ಕೂರ್ ೫೩೩, ೫೪೦, ೫೪೧, ೫೪೨
ಸುಕ್‌ಥಣಕರ್ ೧೧೩
ಸುಡೆಟೆನ್ ೬೨೮
ಸುತೋ ೧೩೦
ಸುದಾಸ ೮೦, ೧೧೬, ೧೧೭, ೧೧೮, ೧೧೯, ೧೨೦, ೧೨೧, ೧೨೨, ೧೨೩, ೧೨೪, ೧೨೫, ೧೨೬, ೧೨೭, ೧೨೮, ೧೨೯, ೧೩೦, ೧೩೧, ೧೪೨, ೧೫೫, ೧೫೬, ೧೬೧, ೧೭೬, ೧೯೭, ೨೦೦, ೨೦೧, ೨೦೫, ೨೦೭, ೨೦೮, ೨೧೪, ೨೧೫, ೨೧೬, ೨೧೭
ಸುದ್ಯುಮ್ನ ೯೩
ಸುಧನ್ವನ್ ೧೨೦
ಸುಧಮ್ನ ೧೧೮
ಸುಧಾನುಶನ ೧೨೦
ಸುನಹೋತ್ರ ೯೩
ಸುನೀತ ೧೫೬
ಸುನ್ನೀ ೬೮೨
ಸುನ್ರಿ ೨೫೪
ಸುಪರ್ದಿನ ೫೬೬
ಸುಪುಕ್ಕೂರ್ ೫೪೧
ಸುಬಹಾನಿ ೬೩೧, ೬೩೨, ೬೩೯
ಸುಬೇದರ ೪೪೮
ಸುಬ್ರಹ್ಮಣ್ಯ ೩೪೧
ಸುಭಾನಿ ೬೫೧
ಸುಲ್ತಾನ್ ೪೨೨, ೪೨೪, ೪೨೬, ೪೨೭, ೫೦೪, ೫೫೭, ೫೬೬, ೫೬೮, ೬೮೨
ಸುವರ್ಚಸ್ ೨೦೦
ಸುವಾಸಃ ೩೩೬
ಸುವೇದ್ಯ ೭೭೦, ೭೭೬
ಸುಶಾಂತ ೪೧೨
ಸುಶೀಲ್ ೪೫೨
ಸೂಕೂಲ್ ೫೭೧
ಸೂಫಿ ೬೩೫
ಸೂಫೆನ್ ೩೪೯
ಸೂರಡಿ ೫೯೪
ಸೂರತ್ ೨೫೩
ಸೂರ್ಯವಂಶ ೯೩, ೨೧೪, ೨೯೨
ಸೂರ್ಯವಂಶಜ ೧೪೬
ಸೂರ್ಯವಂಶಿ ೨೦೦
ಸೆಂತೂರಿಯಾ ೨೪೭
ಸೆಕ್ಯೂಲರ್ ೩೫೨, ೩೫೩
ಸೆಕ್ಸನ್ ೬೬೩
ಸೆಟಾನಿಕ್ ೬೫೫
ಸೆನಾರ್ಟರು ೧೩೧
ಸೆಪೆಲ ೨೫೫

ಸೆಮಿಟಿಕ್ ೬೪
ಸೆಮ್ಮನ್ ೨೫೧
ಸೆಯಾನಿ ೨೫೬
ಸೆಯೋರಿ ೨೯೦
ಸೆರ್ಬರು ೫೪೯
ಸೆರ್ಬಿಯಾ ೫೬೪, ೫೬೫
ಸೆಲ್ಟ್ ೬೪೨
ಸೆವ್ರಸ್ ೫೬೬
ಸೆವ್ರೆಸ್ ೫೬೬
ಸೆಶನ್ಸ್ ೬೫೯
ಸೆಸೆಶನ್ ೬೫೦
ಸೇಂದ್ರಕ ೨೮೯
ಸೇನಜಿತ್ ೧೧೯
ಸೇಲಂ ೫೩೪
ಸೇಲು ೬೭೨
ಸೇವರಾಜ್ ೨೯೧, ೨೯೨
ಸೈಪ್ರಸ್ ೫೬೪
ಸೈಮೆನ್ ೬೮೮
ಸೈಯ್ಯದ್ ೫೮೫, ೫೪೯, ೬೫೮
ಸೊಫ್ತಾಗ್ರಾಮ ೫೩೧
ಸೊಬಹಾನಿ ೬೪೦
ಸೊಲ್ಲಾಪುರ ೫೨೫
ಸೋಕ್ತಿ ೪೯೬
ಸೋಧಿ ೩೯೬
ಸೋನ್ ೨೯೭
ಸೋಫಿಯಾ ೫೩೧
ಸೋಫ್ತಾ ೫೩೧, ೫೩೨
ಸೋಮ ೨೧, ೩೦, ೭೬, ೯೩, ೩೪೨
ಸೋಮಕ ೧೧೯, ೧೨೦
ಸೋಮನಾಥ ೪೨೧
ಸೋಮನಾಥದೇವ ೪೨೧
ಸೋಮಪಾನ ೩೪
ಸೋಮಯಜ್ಞ ೩೪೧
ಸೋಮಯಾಗ ೧೭೮
ಸೋಮರಸ ೪೯, ೮೫, ೧೦೭, ೧೦೮
ಸೋಮಲತೆ ೩೭
ಸೋಮಾಪಿ ೧೨೦
ಸೋಮ್ಯಾನಾಮ್ ೩೨೬
ಸೋರಿಂಗೋಯ್ ೨೮೭
ಸೋವಿಯತ್ ೬೪೯, ೬೫೦
ಸೋಶಿಯಲ್‌ಕಾನ್ಫರೆನ್ಸ್ ೫೯೪, ೫೯೫
ಸೋಹಾಗಪುರ ೨೫೭, ೨೫೮
ಸೌಗೋರ ೨೫೬, ೨೫೭
ಸೌತ್ ೬೧೫
ಸೌತ್ರಮಣಿ ೧೭೮, ೩೨೪
ಸೌಥ್ ೬೬೨, ೬೬೩, ೬೮೧
ಸೌದಾಸ ೧೧೮, ೧೧೯, ೧೨೦, ೧೫೫, ೧೫೬, ೨೦೬, ೨೦೭, ೨೦೮
ಸೌನಕ ೯೩
ಸ್ಕಂದ ೨೮೬, ೨೮೭
ಸ್ಕಂದಗುಪ್ತ ೨೮೮, ೩೫೦
ಸ್ಕಾಂಡಿನೇವಿಯನ್ ೬೨, ೭೫
ಸ್ಕಾಟ್ಲೆಂಡ್ ೭೫
ಸ್ಕ್ವಾಡ್ರನ್ಸ್ ೪೪೯
ಸ್ಟರಿನ ೭೪೩
ಸ್ಟಾನ್ಲಿ ೨೮೧
ಸ್ಟಾಫೋರ್ಡ್ ೭೫೯, ೭೬೦, ೭೬೧
ಸ್ಟೀಫನನ ೪೦೧
ಸ್ಟೆಂಟ ೭೮
ಸ್ಟೇಟ್ ೪೭೬, ೮೪೭
ಸ್ಟೇಟ್ಸ್ ೬೫೦
ಸ್ಟೋಬರ್ಟ್ ೫೮೪
ಸ್ಪಾನಿಷ್ ೩೯೮
ಸ್ಪಾರ್ಟನ್ ೨೪೪
ಸ್ಪೆಂಟ ೭೮
ಸ್ಪೇನ್ ೩೯೮, ೭೩೪

ಸ್ಮಿತ್ ೧೮೬, ೩೩೧, ೩೩೨, ೩೫೦, ೭೪೯
ಸ್ಮಿರ್ನಾವನ್ನಾ ೫೬೬
ಸ್ಮೈರ್ನ ೪೦೧
ಸ್ಯಾಕ್ಸನ್ ೬೫೨
ಸ್ಯಾಪರ್ಸ್ ೪೪೧
ಸ್ಯಾಲಿಸ್ ೪೬೫
ಸ್ರೀ ೪೫೨
ಸ್ರುವಸ್ ೩೨೫
ಸ್ಲವೊನಿಯ ೫೬೭
ಸ್ಲಾವ್ ೬೨, ೪೦೧
ಸ್ಲೊವಕ್ ೫೭೧
ಸ್ಲೊವತ್ ೫೭೧
ಸ್ಲೊವರ್ ೫೭೦
ಸ್ಲೊಕೊಂಬ್ ೬೪೯
ಸ್ಲೋವಕ್ ೫೬೯, ೫೭೦, ೫೭೧, ೫೭೨, ೫೭೪, ೫೭೫
ಸ್ಲೋವಕರ್ ೫೬೯, ೫೭೦, ೫೭೧, ೫೭೨, ೫೭೪
ಸ್ಲೋವಾಕಿಯನ್ ೫೭೦
ಸ್ಲೋವಾಕಿಯಾ ೫೬೭, ೫೬೯, ೫೭೦, ೫೭೧, ೫೭೨, ೫೭೪
ಸ್ವರ್ ೨೪
ಸ್ವರಾಜ್ ೬೪೯
ಸ್ವಿಟ್ಜರ್‌ಲೆಂಡ್ ೩೯೮, ೪೨೮, ೭೨೦, ೭೨೩, ೭೨೫, ೭೨೬
ಸ್ವೀಡನ್ ೭೩೪
ಸ್ವೋವಸ್ಯಾಸ ೮೬
ಹಂಗೇರಿ ೪೯೩, ೫೪೬, ೫೬೭
ಹಂಗೇರಿಯನ್ ೫೬೩, ೫೬೭, ೫೭೦
ಹಕ್ ೭೭೩
ಹಕೀಮ್ ೪೨೮, ೬೩೫, ೬೩೭, ೬೩೯, ೬೪೦, ೬೬೫
ಹಭಾ ೫೭೨
ಹಜ್ ೪೨೧, ೬೨೭
ಹಜರತ್ ೫೧೯, ೬೬೫
ಹಜಾರೀಲಾಲ್ ೧೭೦
ಹಜ್ಜಂ ೫೮೬
ಹಜ್ಜಾಜ್ ೪೧೭, ೪೧೮
ಹಜ್ಮಲ್ ೬೩೫, ೬೩೭
ಹಝುರತ್ ೫೧೦
ಹದಿಸ್ ೪೦೦, ೬೩೫
ಹನಾಫಿ ೫೯
ಹಮೀಮ್ ೬೩೯
ಹಮೋಮ ೧೬೬
ಹಯತ್ ೭೭೩
ಹಯಶಿರಸ್ ೨೦೩
ಹರದತ್ತ ೧೦೮
ಹರಪ್ಪ ೯೫
ಹರಬ್ ೫೧೯, ೫೨೩
ಹರಿನಾರಾಯಣ ೧೪೭
ಹರಿನಾರು ೨೫
ಹರಿವಂಶ ೨೫, ೨೬, ೧೪೨, ೧೫೬
ಹರಿವರ್ಮದೇವ ೨೮೯
ಹರಿಶ್ಚಂದ್ರ ೧೪೪, ೧೪೫, ೧೪೬, ೧೪೭
ಹರೇಂದ್ರ ೫೪೪
ಹರ್ಜಿಗೋವಿ ೫೬೪, ೫೬೫
ಹರ್ಡಾ ೨೫೭
ಹರ್‌ದಯಾಳ್ ೪೮೫, ೪೮೬, ೪೮೭, ೪೮೮
ಹರ್ಬ್ ೬೫೬, ೬೫೭, ೬೫೮, ೬೬೫
ಹರ್ಬರ್ಟ್ ೯೫
ಹರ್ಯಾಶ್ವ ೧೧೯, ೨೦೦
ಹರ್ಷ ೨೮೬
ಹರ್‌ಸೆಲ್ಫ್ ೫೭೦
ಹಲಸಾರ ೨೫೨
ಹಲಾಲ್ ೫೮೬
ಹಲ್ಲೀರ ೨೫೨
ಹವಿರ್ ೧೭೮, ೩೯

ಹಸನ್ ೪೧೮, ೫೧೮, ೬೫೨, ೬೬೭
ಹಸರತ್ ೬೩೭, ೬೩೮, ೬೩೯, ೬೪೦
ಹಸ್ತಿನಾಪುರ ೧೧೯
ಹಸ್ರತ್ ೬೪೯
ಹಸ್ಲಾ ೨೫೧, ೨೫೨
ಹಾಪ್ಸ್‌ಬರ್ಗ್ ೪೦೧
ಹಾಮಿಘಾ ೪೨೭
ಹಾರ್ಟನ್ಸಿಯನ್ ೫೫
ಹಿಂದ್ ೪೯೩
ಹಿಂದುತ್ವ ೧೮೭, ೪೧೦, ೪೮೮, ೪೮೯, ೪೯೯, ೬೯೩, ೭೨೭
ಹಿಂದೂಡಮ್ ೪೮೮, ೪೮೯
ಹಿಂದೂತ್ವ ೧೮೭, ೪೯೨, ೫೦೩, ೫೨೨
ಹಿಂದೂಧರ್ಮ ೧೮೭, ೨೮೧, ೪೧೯, ೫೯೨
ಹಿಂದೂನೆಸ್ ೪೮೯
ಹಿಂದೂಮತ ೩೪೬, ೩೫೦, ೪೮೬, ೬೯೮, ೬೯೯, ೭೨೬
ಹಿಂದೂಮಹಾಸಭಾ ೫೯೫, ೫೯೬, ೭೩೮
ಹಿಂದೂಮುಖ ೭೫೧
ಹಿಂದೂಯೇತರ ೪೬೧, ೪೯೩, ೫೧೮
ಹಿಂದೂರಾಜ್ಯ ೫೯೬, ೭೨೪, ೭೨೬, ೭೨೭, ೭೨೯, ೭೩೦
ಹಿಂದೂರಾಷ್ಟ್ರ ೪೯೦
ಹಿಂದೂಸ್ಥಾನೀ ೪೩೮, ೪೪೬, ೫೭೮
ಹಿಜರತ್ ೫೨೩, ೬೫೭, ೬೫೮, ೬೫೯
ಹಿಜ್ರ ೫೮೬
ಹಿಟ್ಲರ್ ೫೭೨, ೬೨೩, ೬೨೯
ಹಿಬ್ರ್ಯೂ ೨೪೭, ೬೩೩
ಹಿಮವತ್ ೮೯
ಹಿಯಾಜ್ ೫೬೩
ಹಿರಣ್ಯಕೇಶಿ ೩೨೪
ಹಿರಣ್ಯಗರ್ಭ ೯೨
ಹಿರಣ್ಯನಾಭ ೧೧೯
ಹಿರಾ ೨೫೮
ಹುಗುನಾಟ್ ೭೧೯
ಹೂಯನ್ ೩೮೦
ಹೂಯನ್‌ತ್ಸಾಂಗ್ ೪೧೫, ೪೧೬, ೪೩೦
ಹೆಡ್ಜಜ್ ೫೬೬
ಹೆನ್ರಿ ೨೭೪, ೨೭೫, ೭೭೨
ಹೆಯ್ನ್ಸ್ ೪೪೧
ಹೆರಾಲ್ಡ್ ೬೫೩
ಹೇಸ್ಟಿಂಗ್ಸ್ ೮೧೨
ಹೇನ್ಸ್ ೪೫೫
ಹೇಸಲ್ ೬೪
ಹೈದರ್ ೪೫೨
ಹೈದರಾಬಾದ್ ೪೩೫, ೫೫೫, ೫೫೭, ೫೫೮, ೬೬೨, ೭೩೮
ಹೈನದ ೨೪೩
ಹೈರತೇ ೫೩೧
ಹೈವ ೨೯೩
ಹೈಹಯ ೨೦೩, ೨೦೪, ೨೦೭, ೨೦೮
ಹೊರೇಸ್ ೭೬೧
ಹೊಶಾಂಗಬಾದ ೨೫೬, ೨೫೭
ಹೋತಾ ೩೩೬
ಹೋತಾರ ೩೩೫, ೩೩೬, ೩೩೭, ೩೩೯, ೩೪೦, ೩೪೧
ಹೋತೃ ೧೯, ೨೫, ೧೬೬
ಹೋತ್ರಿ ೯೨
ಹೌಗ್ ೧೬೬
ಹೌರಾ ೫೨೭
ಹ್ಯಪಾರಗಮ್ ೧೩೦
ಹ್ಯಾಲ್ಲೆಟ್ ೮೫೧
ಹ್ಯೂ ೨೯೧, ೩೪೮
ಹ್ಯೂಗ್‌ನಾಟ್ ೭೭೨
ಹ್ಯೂಬರ್ಟ್ ೭೬೫


*******